ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ.

I. P. 5/24.
I. A. 81/25.

ಪಿ. ರಂಗಪ್ಪ ಕಮ್ತಿ ಅರ್ಜಿದಾರ.

ಮತ್ತು

1 ವೆಂಕಟ್ರಾಯ ಬಾಳಿಗ
2 ಪೆರಗುತ್ತು ಶ್ರೀನಿವಾಸ ಪ್ರಭು ಮತ್ತು ಕಂಪೆನಿ
3 ಮಾದವ ಬಾಳಿಗ
4 ಚಂದು ಬಾಳಿಗ
5 ನರಸಿಂಹ ಭಂಡಾರಿ
} ರೆಸ್ಪೊಂಡೆಂಟರು.

ಮೇಲ್ಕಂಡ ಕೋರ್ಟಿನಲ್ಲಿ ಡಿಸ್‌ಚಾರ್ಜಿಗೆ ಅರ್ಜಿ ದಾಖಲುಮಾಡುವರೆ 6 ತಿಂಗಳ ಪುರ್ಸತು ಕೊಡಬೇಕಾಗಿ ಅರ್ಜಿದಾರನು ದಾಖಲುಮಾಡಿದ I. A. 81/25ನೇ ಅರ್ಜಿ ಮೇಲೆ ತಾ. 30—4—26ರ ಒಳಗೆ ಡಿಸ್‌ಚಾರ್ಜಿಗೆ ಅರ್ಜಿ ದಾಖಲುಮಾಡಬೇಕೆಂತ ತಾರೀಕು 31—10—1925ರಲ್ಲು ಹುಕುಂ ಆಗಿರುತ್ತದೆ.

Mangalore, 4—11—1925 | M. Ramakrishnachar, *Vakil for Petitioner.*

The Canara Bank Ltd., Mangalore,
ದಿ. ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನು ವಾಯಿದೆಗೆ ಕೊಡದೆ ಇರುವುದರಿಂದ ಸದರಿಯವರು ತಮ್ಮಿಂದ ಬಹಾ ಅಸಲು ಬಡ್ಡಿ ಐವೇಜುಗಳನ್ನು ಇದೇ ತಾ. 20-11-25ನೇ ಶುಕ್ರವಾರದ ಒಳಗೆ ತಂದು ಕೊಡದೆ ಇದ್ದರೆ ಸದರಿ ಅಡ ಎಟ್ಟ ಆಭರಣಗಳನ್ನು ಇದೇ ತಾರೀಕು 24—11—25ನೇ ಮಂಗಳವಾರ ಮಧ್ಯಾಹ್ನ 12 ಘಂಟೆ ಹೊತ್ತಿಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂಮಾಡಲಾಗುವುದು.

ಐವೇಜು ಪಡಕೊಂಡವರ ಹೆಸರು.	ಪಡಕೊಂಡ ತಾರೀಕು.	ಪಡೆದ ಐವೇಜು	ಏಲಂ ತಾರೀಕು ವರೆಗೆ ಬಹಾ ಬಡ್ಡಿ ವಗೈರೆ.
ಗುಡ್ಡಪ್ಪ ಭಂಡಾರಿ	19-3-24	ರೂ. 500	30-3-7
ಅದ್ದಬ್ಯಾರಿ	4-9-24	„ 80	5-12-9
ಅಕ್ಕಂಮ್ಮಾ	10-4-22	„ 50	2-3-8
ಕೆ. ವರದರಾವ್	13-5-22	„ 60	3-7-0
ಹಾದುದಕುಟ್ಟಿ	16-8-25	„ 40	2-8-7
ಅಬ್ದುಲ್ಲಾ	24-10-22	„ 330	7-14-5

ಮತ್ತು ಈ ನೋಟೀಸಿನ ಖರ್ಚು ಸಹಾ.

Canara Bank, Ltd. Mangalore. 4—11—1925 | **K. Venkat Rao.** *Secretary.*

— ಚತುರ್ಥ ಜಿಲ್ಲಾ ಪರಿಷತ್ತು. —

ರಾಜಕೀಯ ಚಳವಳಿಯ ಪ್ರಸಾರಕ್ಕಾಗಿ ಸ್ಥಾಪಿಸಲ್ಪಟ್ಟ ಈ ಸಂಸ್ಥೆಯು ನಾಲ್ಕು ವರ್ಷಗಳಿಂದ ನಡೆದಿದೆ. ಮೂರು ಅಧಿವೇಶನಗಳು ನಡೆದವು ...

[illegible]

ವಿದ್ಯಾರ್ಥಿಗಳೂ ನಂತರದ ೫ ತಿಂಗಳುಗಳಲ್ಲಿ ೩೧ ಮಂದಿ ವಿದ್ಯಾರ್ಥಿಗಳೂ ರೂ. ೪೧೬-೧೦-೦ ಧನಸಹಾಯವನ್ನು ಹೊಂದುವಂತೆ ಸ್ಥಾಪಿಸಿರುವುದರಿಂದ ಮಹಾಶಯರೆಲ್ಲರಿಗೂ ಈ ಮೂಲಕ ವಂದನೆಗಳನ್ನು ಅರ್ಪಿಸುತ್ತೇನೆ. ವರದಿಯ ವರ್ಷದಲ್ಲಿ ದೀಪಾವಳಿ ಸಂದರ್ಭದಲ್ಲಿ ಸಂಗ್ರಹಿಸಿದ ಹಣವಲ್ಲದೆ ಪುತ್ತೂರು ಕೃಷಿಕರ ಸಹಕಾರ ಸಂಘದವರು ತಮ್ಮ ಸಾರ್ವಜನೋಪಯೋಗ ನಿಧಿಯಿಂದ ರೂ. ೬೪-೧೩-೦ನ್ನು ಉದಾರ ಬುದ್ಧಿಯಿಂದ ಈ ಫಂಡಿಗೆ ಕೊಟ್ಟು ಸಹಾಯ ಮಾಡಿ ಇತರ ಸಹಕಾರಿ ಸಂಘಗಳಿಗೆ ಮಾರ್ಗದರ್ಶಕರಾಗಿದ್ದಾರೆಂಬುದನ್ನು ಸೂಚಿಸಲು ಸಂತೋಷಪಡುತ್ತೇನೆ. ... (Charity Fund) ...

[illegible]

— ಆಯವ್ಯಯ ಪತ್ರಿಕೆ. —

[illegible]

ನವೋಪುರ ಶಿವರಾವ್, ಪುತ್ತೂರು ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ.

ದಕ್ಷಿಣ ಆಫ್ರಿಕದ ಎಂಟಿ ಏಶ್ಯಾಟಿಕ್ ಬಿಲ್ಲಿನ ಕುರಿತು ಬಿಶೋಪ್ ಫಿಶರ್‌ರು ಹೇಳುವ ಮಾತು.

[illegible]

ದಕ್ಷಿಣ ಆಫ್ರಿಕದಲ್ಲಿ ನೆಟಿವ್ಸರನ್ನು ಕಾಣುವ ರೀತಿ.

[illegible]

ವಿವಿಧ ವಿಷಯಗಳು.

ಸೋಲಾಪುರದಲ್ಲಿ ಹಿಂದೂ ಮಹಮ್ಮದೀಯರಲ್ಲಿ ನಡೆದ ಗಲಾಟೆ.

ಕಳೆದ ಬುಧವಾರ ಸೋಲಾಪುರದಲ್ಲಿ ಹಿಂದುಗಳ ಏಕಾದಶಿ ಉತ್ಸವವು ನೆರವೇರಲಿಕ್ಕಿತ್ತು. ಆ ಸಮಯದಲ್ಲಿ ಉತ್ಸವದ ಮೆರವಣಿಗೆಯು ಮಹಮ್ಮದೀಯರ ಒಂದು ಮಸೀದಿಯನ್ನು ದಾಟಿ ಹೋಗಬೇಕಾಗಿತ್ತು. ಆ ಸಮಯದಲ್ಲಿ ಹಿಂದುಗಳು ಮಹಮ್ಮದೀಯರು ಮಸೀದಿಯಲ್ಲಿ ಪ್ರಾರ್ಥನೆ ಮಾಡುವುದನ್ನು ಕಂಡು ಸುಮಾರು ೧೦೦ ಗಜ ದೂರದಲ್ಲೆ ನಿಂತಿದ್ದರು. ...

[illegible]

ಹಿಂದೂಸ್ಥಾನದ ಹೊಸ ವೈಸರಾಯರವರು.

[illegible]

ಹಿಂದೂ ಸಮಾಜವು.

[illegible]

ಸ್ಫುಟ ವಿಚಾರಗಳು.

ಹಳೇ ವ್ಯಾಸರಾಯರು

ಲೋರ್ಡ ರೀಡಿಂಗ್ ಸಾಹೇಬರು ಸ್ವದೇಶಕ್ಕೆ ತೆರಳುವರು. ಅವರ ವ್ಯಾಸರಾಯ ಪದವಿಯ ಅವಧಿಯು ಇನ್ನು ಕೆಲವು ತಿಂಗಳುಗಳಲ್ಲೇ ತೀರಿತು. ರೀಡಿಂಗ್ ಸಾಹೇಬರು ಹಿಂದುಸ್ಥಾನದ ಇತಿಹಾಸದಲ್ಲಿ ವಿಶೇಷ ಸಂದಿಗ್ಧ ಸಮಯದಲ್ಲಿ ಹಿಂದುಸ್ಥಾನ ...

[illegible]

ಹೊಸ ವೈಸರಾಯರು

[illegible]

ಹಿಂದೂಮುಸಲ್ಮಾನ ಜಗಳಗಳು

[illegible]

ಶ್ರೀಯುತ ಕೇಳ್ಕರರ ವಿಜಯ

[illegible]

ಸ್ವರಾಜ್ಯಪಕ್ಷದ ಬಲವೆಲ್ಲಿ?

[illegible]

ಸ್ವರಾಜ್ಯಪಕ್ಷವನ್ನು ಮಾನಿಸುವರು? ಸ್ವರಾಜ್ಯಪಕ್ಷದ ಕಾರ್ಯಕ್ರಮವೇ ಅವರಿಗೆ ಈ ಬಲವನ್ನು ಕೊಟ್ಟಿದೆ. ಹಲವರು ಹೇಳುವರು, ತಾಂಬೆಯವರ ನೇಮಕದಿಂದ ಸರಕಾರವು ಸ್ವರಾಜ್ಯಪಕ್ಷವನ್ನು ಮಾನಿಸಿದೆ; ಈ ಸಂದರ್ಭವನ್ನು ಕಳೆದುಕೊಳ್ಳದೆ ಸಹಕಾರಕ್ಕೆ ಆರಂಭಿಸಿ ದೇಶದ ಉದ್ಧಾರವಾಗಬೇಕೆಂದು. ಆದರೆ ಹೀಗೆ ಹೇಳುವುದು ವಸ್ತುಸ್ಥಿತಿಯ ಜ್ಞಾನವಿಲ್ಲದೆ ಅಥವಾ ಬೇಕೆಂತಲೇ ಪಕ್ಷವನ್ನು ಹಾಳುಮಾಡುವ ಬಗ್ಗೆ ಎಂದು ವಿಚಾರ ...

[illegible]

ಸ್ವರಾಜ್ಯ ಪಕ್ಷದ ಕಾರ್ಯನಿರ್ವಾಹಕ ಸಭೆ

[illegible]

ದಿಂದ ತಳ್ಳಿಹಾಕಿ ಅವರು ಬಿಟ್ಟುಹೋಗಬೇಕೆಂಬುದು ಇದರ ಉದ್ದೇಶವಿತ್ತು. ಇದು ಪಕ್ಷದ ಶಿಸ್ತಿನ ರಕ್ಷಣೆಗೆ ಅವಶ್ಯವಿತ್ತು. ಆದರೆ ಬೀರಾರ ಸ್ವರಾಜ್ಯ ಪಕ್ಷದವರು ಇದನ್ನು ಮಾನಿಸದೆ, ಸ್ವೇಚ್ಛೆಯಿಂದ ಮಿ| ತಾಂಬೆಯವರನ್ನು ಹೊರಗೆ ಹೋಗಲು ಬಿಟ್ಟಿದ್ದನ್ನು ನೋಡಿದರೆ ಬೀರಾರ ಪಕ್ಷವೂ ದ್ರೋಹವನ್ನು ಎಣಿಸಿಯದೋ ಎಂದು ಊಹಿಸಬೇಕಾಗುವುದು. ಸ್ವರಾಜ್ಯ ಪಕ್ಷವು ತಮ್ಮನ್ನು ಪುನಃ ಸುಸಂಘಟಿಸಿಕೊಳ್ಳುವುದು ಅವಶ್ಯ.

ಮದ್ರಾಸ ಮ್ಯುನಿಸಿಪಾಲಿಟಿಗೆ ಸ್ವರಾಜ್ಯ ಪಕ್ಷದ ಅಧ್ಯಕ್ಷರು

[illegible]

ಹಿಂದೂ ರಿಲಿಜಿಯಸ್ ಎಂಡೋಮೆಂಟಿಗೆ ಬೇಕಾಗಿರುವ ಸಾಲ

[illegible]

ಮೈಸೂರು ಮಹಾರಾಜರವರ ಶ್ರೀ ಕಾವೇರಿ ಯಾತ್ರೆ

[illegible]

ಅನುಕ್ರಮಣಿಕೆ.

ಅಗ್ರಲೇಖ:— ಪುಟಗಳು.
ಚುನಾವಣೆಗಳ ಹಾವಳಿ ೬
ಸ್ವಟಿಪ್ಪಣಿಗಳು ೫
ವರ್ತಮಾನಸಂಗ್ರಹಗಳು—
ವಿದೇಶ—ಒಳದೇಶ ವರ್ತಮಾನ ೭
ದಕ್ಷಿಣ ಕನ್ನಡ-ಬಾಯಾರು, ಅರಳ, ಮೂಡ್ನೂರುಮರಕಂಜ, ಉಪ್ಪಿನಂಗಡಿ, ಪೊಳಲಿ, ಮೂಲ್ಕಿ ೮
ಮಂಗಳೂರು ೮
ಕೌನ್ಸಿಲು ಒಫ್ ಸ್ಟೇಟಿನ ಚುನಾವಣೆ ೯
ಸ್ತ್ರೀರಿಣಿಯರು ೯
ವಿವಿಧ ವಿಷಯ ೯

ಸ್ವದೇಶಾಭಿಮಾನಿ.

ಶಕ ೧೮೪೬ ಕಾರ್ತಿಕ ಬ। ೬ಯು ಶುಕ್ರವಾರ

ಚುನಾವಣೆಗಳ ಹಾವಳಿ.

ದೇಶದಲ್ಲಿ ಅನೇಕ ರೂಪದಲ್ಲಿ ನಡೆಯುವ ಚುನಾವಣೆಗಳ ಪರಿಸ್ಥಿತಿಯನ್ನು ನೋಡಿದರೆ, ಈ ಚುನಾವಣೆಗಳಲ್ಲಿ ನಾಯಕರಾಗಿ ನಟಿಸುವ ಉಮೇದ್ವಾರರ ವಿಷಯದಲ್ಲಿ ಉತ್ತಮ ಅಭಿಪ್ರಾಯಗಳು ಕಾಣಬರುವುದಿಲ್ಲ. ಹೊರತೋರಿಕೆಗೆ, ಚುನಾವಣೆಗೆ ನಿಂತ ಉಮೇದ್ವಾರರು ವಿಶಾಲ ಜನತೆಯ ಮುಂದೆ, ಜನತೆಯ ಸೇವೆಯ ಉಚ್ಚ ಆಶಯದಿಂದ, ಅವರ ವಿಧೇಯ ಆಜ್ಞಾವರ್ತಿಗಳಾಗಿ, ಅವರ ಸರ್ವ ತರದ ಉಜ್ಜೀವನದ ಸೂತ್ರಗಳನ್ನು ವಹಿಸಲ್ಪಡಲು ಭಿಕ್ಷಾರ್ಥಿಗಳಾಗಿ, ಮುಂದೆ ಬಂದ ವಿನಯವಂತರಾದ ದೇಶಪ್ರೇಮಿಗಳಾಗಿರುವರು. ಅವರ ಚುನಾವಣೆಯ ಪತ್ರವಾದರೂ ತಮ್ಮ ಆ ಔದಾರ್ಯದ, ಆ ಜನತಾಪ್ರೇಮದ, ಆ ಸೇವಾಸಾಮರ್ಥ್ಯದ ಜಾಹೀರಾತಿಯನ್ನು ಕೊಡತಕ್ಕದ್ದಾಗಿದೆ. ಅನೇಕ ಬಾರಿ ಈ ವಿನಂತಿ ಪತ್ರಿಕೆಯು, ವ್ಯಾಪಾರದಲ್ಲಿಯೇ ಆಸಕ್ತರಾಗಿ, ಲಾಭವನ್ನೇ ಸತೃಷ್ಣನಯನರಾಗಿ ನೋಡುವ ಸಾಹುಕಾರರ ಜ್ಯಾಹೀರಾತನ್ನು ಕೂಡ ನಾಚಿಸುವಂತಿರುತ್ತಿದೆ. ಪರಂತು ಅನೇಕ ಕಡೆಗಳಲ್ಲಿ ಈ ಚುನಾವಣೆಯ ಪತ್ರಿಕೆಗಳು ವ್ಯಕ್ತಿಯ ನಿಜಗುಣವನ್ನು ತೋರಿಸುವುದಕ್ಕಿಂತಲೂ, ಜನತೆಯ ಮೋಹವನ್ನೇ ಲಕ್ಷಿಸುವಂತಹವುಗಳಾಗಿವೆ.

ಚುನಾವಣೆಯ ಸಮಯದಲ್ಲಿ ಉಮೇದ್ವಾರರು ಎಂತಹ ಸಾಧನವನ್ನೂ ಉಪಯೋಗಿಸಲು ಹಿಂಜರಿಯುವುದಿಲ್ಲ. ಉಮೇದ್ವಾರರೆಂದರೆ ನಾಗರಿಕರೆನ್ನಿಸಿಕೊಳ್ಳುವವರು; ತಮ್ಮ ಜನತಾವಿಭಾಗದ ಅಗ್ರ ಧುರೀಣರೆನ್ನಿಸಿಕೊಳ್ಳುವವರು; ಕ್ಷಮತಾಶಾಲಿಗಳು; ಆದರ್ಶಜೀವಿಗಳು. ಪರಂತು ಕಾರ್ಯತಃ ಇದಾವ ಚಿಹ್ನೆಯೂ ತೋರುವುದಿಲ್ಲ. ಚುನಾವಣೆಯಲ್ಲಿ ಅತಿ ಹೇಯವಾದ, ಸಮಾಜಕ್ಕೆ ಅಹಿತಕರವಾದ, ಸಮಾಜದ ನ್ಯಾಯವಾದ ಅನ್ಯೋನ್ಯವನ್ನು ಒಡೆದಿಡುವ ಸಾಧನೆಗಳನ್ನೂ ಈ ಉಮೇದ್ವಾರರು ನಡಿಸುವುದುಂಟು. ಜಾತಿಭಾವನೆಗಳ ನೆನಪು, ವೈಯಕ್ತಿಕ ದ್ವೇಷ, ಜಾತಿ, ಮತಭೇದ ಇವುಗಳನ್ನು ಈ ಚುನಾವಣೆಯಲ್ಲಿ ಮುಂದಿರಿಸಿ, ಉಮೇದ್ವಾರರು ತಮ್ಮ ಉದ್ದೇಶವನ್ನು ಪೂರ್ತಿಗೈಯ್ಯಲು ಪ್ರಯತ್ನಿಸುವರು. ದುಡ್ಡಿನ ಪ್ರಾಬಲ್ಯವೂ, ದಾಕ್ಷಿಣ್ಯದ ಒತ್ತಾಯವೂ ಈ ಸಮಯದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡುವುವು.

ಚುನಾವಣೆಗಳು ಆಗಿಹೋಗುವುವು. ಆದರೆ ಚುನಾವಣೆಗಳ ಪರಿಣಾಮವು ಸಮಾಜದ ಮೇಲೆ ಉಳಿದೇ ಇರುವುದು. ವರ್ಷವರ್ಷವೂ ಒಂದರ ಮೇಲಾಗಿ ಒಂದು ನಡೆಯುವ ಚುನಾವಣೆಯಲ್ಲಿ ಸಮಾಜ ವಿಶೃಂಖಲನದ ಕಾರ್ಯವು ಅವಿರೋಧವಾಗಿ ನಡೆಯುತ್ತ ಹೋಗುವುದು.

ದೇಶ ಸೇವಕರ, ಜನತೆಯ ಧುರೀಣರ ಈ ದುಸ್ಸಾಧನೆಗಳು ಇಲ್ಲಿಯೇ ಅಂತ್ಯಹೊಂದುವುದಿಲ್ಲವೆಂಬುದೇ ಮತ್ತಷ್ಟು ಸಂತಾಪಕರವಾದ ಪರಿಸ್ಥಿತಿಯಾಗಿದೆ. ಚುನಾವಣೆ ಹೊಂದಿದ ಮೇಲೂ, ವಿಷಭಾವನೆಗಳನ್ನು ತೆಗೆದುಕೊಂಡೇ ಚುನಾಯಿಸಲ್ಪಟ್ಟ ಹಲವು ಉಮೇದ್ವಾರರು ಆಯಾ ಸಂಸ್ಥೆಗಳನ್ನು ಸೇರುತ್ತಿರುವರೆಂದು, ಆಗಾಗ ಲೆಕ್ಕವಿಲ್ಲದೆ ದಾಖಲಾಗುವ ಈ ಚುನಾವಣೆಯ ಸಂಬಂಧವಾದ ವ್ಯಾಜ್ಯಗಳೂ, ಅವುಗಳ ಸಂಖ್ಯೆಯೂ ತೋರಿಸುತ್ತಿವೆ.

ಮುಖ್ಯವಾಗಿ ಡಿಸ್ಟ್ರಿಕ್ಟ್ ಬೋರ್ಡು, ತಾಲೂಕು ಬೋರ್ಡು ಮತ್ತು ಮ್ಯುನಿಸಿಪಾಲಿಟಿಗಳ ಚುನಾವಣೆಗಳ ಪರಿಣಾಮವು ಬಹಳ ಹಾನಿಕರವಾಗಿದೆ. ಈ ಸ್ವಾರ್ಥಮಯ ವಾತಾವರಣವು ಸಮಾಜದ ಸಂದು ಮೂಲೆಗಳನ್ನು ಪ್ರವೇಶಿಸಿ, ಜಾತಿಗಳನ್ನೂ, ಮತ್ತುಗಳನ್ನೂ ಕಟ್ಟುತ್ತಿರುವುದಲ್ಲದೆ, ಜಾತಿ ಜಾತಿಗಳೊಳಗಿನ ಭೇದಭಾವವನ್ನು ಮತ್ತಷ್ಟು ವೃದ್ಧಿಪಡಿಸುತ್ತಿದೆ. ಕೌನ್ಸಿಲು ಚುನಾವಣೆಗಳಲ್ಲಿ ಕೂಡ ಈ ಸಂಗಡ ಪಂಗಡಗಳೊಳಗಿನ ಭೇದ, ವ್ಯಕ್ತಿ ವ್ಯಕ್ತಿಗಳೊಳಗಿನ ಭೇದ ಮುಂತಾದ ಭೇದ ಭಾವಗಳು ತೀಕ್ಷ್ಣತೆ ಹೊಂದುತ್ತಿವೆ.

ಚುನಾಯಿಸಲ್ಪಟ್ಟ ಮೇಲೂ ಕೂಡ ಈ ವಿದ್ವೇಷದ ಭಾವನೆಯು ಆರುವುದಿಲ್ಲ. ಅನೇಕ ಕಡೆಗಳಲ್ಲಿ ಲೋಕಲ್ ಬೋರ್ಡುಗಳ ಸಮ್ಮಿಲನವು, ಆ ಬೋರ್ಡು ಯಾವ ವಿಶಾಲ ಜನತೆಯ ಪ್ರಾತಿನಿಧ್ಯವನ್ನು ವಹಿಸಿಯದೊ, ಅದರ ಕಡೆಗಿನ ಕರ್ತವ್ಯಗಳನ್ನು ಸಾಧಿಸುವ ಬದಲಿಗೆ, ಈ ವೈಯಕ್ತಿಕ ಮತ್ಸರಗಳ, ಸ್ವಾರ್ಥದ ಮತ್ತು ಪಕ್ಷಪಾತದ ಕಾದಾಟದ ರಂಗಭೂಮಿಯಾಗಿ ಪರಿಣಮಿಸುತ್ತಿದೆ. ಅಲ್ಲದೆ ಪರಸ್ಪರ ಮೇಲ್ಮೆಯನ್ನೂ ಹೊಂದುವ ಬಗ್ಗೆ ಕೋರ್ಟಿನಲ್ಲಿ ವ್ಯಾಜ್ಯಗಳೂ ನಡಿಯುತ್ತಿವೆ.

ಕಳೆದ ಬಾರಿಯ ಕಾಸರಗೋಡು ತಾಲೂಕು ಬೋರ್ಡು ಈ ಬಾರಿಯ ಕಾರ್ಕಳ ಮತ್ತು ಉಡುಪಿ ತಾಲೂಕು ಬೋರ್ಡು, ಜನತೆಯ ಪ್ರತಿನಿಧಿಗಳ ಸ್ವಾರ್ಥಮಯ ಸ್ಪರ್ಧೆಯ ಹತ್ತಿರದ ಉದಾಹರಣೆಗಳಾಗಿವೆ. ಅಲ್ಲದೆ, ಇತರ ಜಿಲ್ಲೆಗಳಲ್ಲೂ ಇದೇ ರೀತಿಯಾಗಿ ತೋರಿಬರುವ ದುರ್ಘಟನೆಗಳು ದೈನಿಕ ಪತ್ರಿಕೆಗಳಲ್ಲಿ ಪ್ರತಿ ದಿನವೆಂಬಂತೆ ತೋರಿಬರುತ್ತಿವೆ.

ಲೋಕಲ್ ಬೋರ್ಡುಗಳ ಆಡಳಿತೆಯು ಫಲಪ್ರದವಾಗಿಯೂ, ಸುರಸವಾಗಿಯೂ, ನಡೆಯಬೇಕಾದರೆ, ಜನರ ಪ್ರತಿನಿಧಿಗಳೊಳಗೆ ಖಾಸಗಿ ಮೈತ್ರಿ ಇಲ್ಲದಿದ್ದರೂ, ಜನತೆಯ ಸಮಸ್ಯೆಗಳ ವಿಷಯದಲ್ಲಿ ಅನ್ಯೋನ್ಯ ಭಾವವಿರಬೇಕು. ಅಭಿನ್ನಾಭಿಪ್ರಾಯಗಳು ಇಂಬಾರದೆಂದಲ್ಲ. ಪರಂತು ಉದ್ದೇಶವು ಜನರ ಒಳ್ಳಿತಾಗಿರುವಾಗ, ಈ ಭಿನ್ನಾಭಿಪ್ರಾಯವು ಪ್ರತಿನಿಧಿಗಳ ವೈಮನಸ್ಸಿಗೆ ಕಾರಣವಾಗಬಾರದು. ಆದರೆ ಬೌದ್ಧರು ದೊಣ್ಣೆ ಹಿಡಿದು ಮತಪ್ರಸಾರ ಮಾಡುವಂತೆ, ಭಜಕರು ಪರಸ್ಪರ ಜಗಳವಾಡಿ ಶ್ರದ್ಧೆ ತೋರಿಸುವಂತೆ, ಈ ಪ್ರತಿನಿಧಿಗಳು ವೈಮನಸ್ಸನ್ನು ತಾಳಿ ಜನತೆಯ ಹಿತಶೋಧನೆಯಲ್ಲಿ ನಿರತರಾಗುವರು! ಇಂತವರು ಮಾಡಬಲ್ಲರೇನು?

ಲೋಕಲ್ ಬೋರ್ಡುಗಳ ಕಾರ್ಯನಿರ್ವಾಹಕತೆಯು ಅಧ್ಯಕ್ಷರ ಮೇಲಿದೆ; ಆ ಮೇಲೆ ಉಪಾಧ್ಯಕ್ಷರ ಮೇಲೆ ಆ ಜವಾಬ್ದಾರಿ ಇದೆ. ಈ ಇಬ್ಬರು ಜನತೆಯ ಸೇವೆಗಾಗಿ ಆರಿಸಲ್ಪಟ್ಟವರು. ಆದರೆ ಈ ಇಬ್ಬರೊಳಗೇನೇ ಹಲವು ಬಾರಿ ಅನ್ಯೋನ್ಯವಿರುವುದಿಲ್ಲ. ಅಧ್ಯಕ್ಷ ಉಪಾಧ್ಯಕ್ಷರೊಳಗೆ ಅನೇಕ ಕಡೆಗಳಲ್ಲಿ ಕ್ಲೇಶಭಾವವು ಇರುವುದು. ಈ ತರದ ಭಾವನೆಯುಳ್ಳವರಿಂದ ಜನಸೇವೆಯು ಹೆಚ್ಚು ನಡೆಯಲಾರದು. ಅಧ್ಯಕ್ಷರೂ, ಉಪಾಧ್ಯಕ್ಷರೂ, ಸೇರಿದರೆ, ಅವರೊಳಗೆ ಅನ್ಯೋನ್ಯವಿದ್ದರೆ ಬೋರ್ಡುಗಳ ಆಡಳಿತವು ಸುಲಭವೂ, ಸತ್ಪರಿಣಾಮವುಳ್ಳದ್ದೂ ಆಗುವುದು.

ಇನ್ನು ಆರಿಸಲ್ಪಟ್ಟವರು ಮತ್ತು ಆರಿಸಲ್ಪಡದವರು, ಇವರೊಳಗೆ ವ್ಯಾಜ್ಯಗಳು ಏಳುವುದುಂಟು. ಒಂದು ಚುನಾವಣೆಗೆ ಹಲವರು ನಿಂತಲ್ಲಿ, ಒಬ್ಬನೇ ಚುನಾಯಿಸಲ್ಪಡುವನು. ಬಾಕಿಯವರು ಹೇಗೂ ವಿಫಲ ಮನೋರಥರಾಗಲೇಬೇಕು. ಒಂದು ಬಾರ ಒಬ್ಬನು ಆರಿಸಲ್ಪಟ್ಟರೆ, ಅನಾವಶ್ಯಕ ವ್ಯಾಜ್ಯಗಳನ್ನು ಹೂಡಿ ಅವನ ಚುನಾವಣೆಗಳನ್ನು ರದ್ದುಪಡಿಸಲು ಪ್ರಯತ್ನಿಸಿ, ತನ್ನ ಹಣವನ್ನೂ ಸಮಯವನ್ನೂ, ಪ್ರತಿಸ್ಪರ್ಧಿಯ ಹಣವನ್ನೂ, ಸಮಯವನ್ನೂ, ಬೋರ್ಡಿನ ಕೆಲಸಗಳನ್ನೂ ವ್ಯರ್ಥಪಡಿಸುವುದಕ್ಕಿಂತ, ಅವನನ್ನು ಅವನಿಚ್ಛೆಯಂತೆ ಆ ಗೌರವವನ್ನು ಅನುಭವಿಸಲು ಬಿಡಬಾರದೇಕೆ? ಚುನಾವಣೆಯ ಕೋಲಾಹಲ ತಮ್ಮ ಕಲಹಗಳ ಅವಶೇಷವನ್ನು ಮತ್ತೂ ಮುಂದೆ ಕೊಂಡೊಯ್ಯುವ ಬದಲು, ಆ ಯುದ್ಧರಂಗದಲ್ಲಿಯೇ ಸಮಾಪ್ತಿ ಹೊಂದಿಸುವುದು ಯೋಗ್ಯವೂ ಯುಕ್ತಿಯುಕ್ತವೂ ಆಗಿದೆ.

ಮುಖ್ಯವಾಗಿ ನಮ್ಮ ವಿದ್ಯಾವಂತರೂ, ನಾಗರಿಕರೂ ಕೂಡ ಜನಸೇವೆಯ ಮಹತ್ವವನ್ನು ತಿಳಿಯುವುದಿಲ್ಲ. ಅದರಿಂದ ಗೌರವವಿದೆ ಮತ್ತು ಅಧಿಕಾರವಿದೆ ಎಂಬ ಮನೋಭಾವದಿಂದ ... ಇದೇ ಅತೀ ದುಃಖದ ವಿಷಯ. ಜನರು ಕೊಟ್ಟ ಅಧಿಕಾರದಿಂದ ಜನರನ್ನು ಪೀಡಿಸಬಹುದೆಂಬುದೇ ಅವರಿಗೆ ಆಕರ್ಷಕ ವಿಷಯವಾಗಿ ತೋರುತ್ತಿದೆ. ಮತ್ತು ಖಾಸಗಿಯಾಗಿ ಯಾವುದೊಂದು ಉತ್ತಮವಾದ ಪ್ರಜೆಗಳಿಗೆ ಹಿತಕರವಾದ ವಿಷಯಕ್ಕಾಗಿಯಾದರೂ ಒಂದು ಪೈ ಕೂಡ ಖರ್ಚುಮಾಡದವನು ಈ ಚುನಾವಣೆಗಳಿಗಾಗಿ ಲೆಕ್ಕವಿಲ್ಲದಷ್ಟು ಹಣವನ್ನು ವ್ಯರ್ಥಪಡಿಸುವನು.

ಚುನಾವಣೆಗಳ ಈ ತರದ ಕಠಿಣ ಪರಿಸ್ಥಿತಿಯನ್ನು ಸಾಮಾನ್ಯವಾಗಿ ಉತ್ತಮ ತರದ ರಾಜಕೀಯ ಪಕ್ಷಗಳನ್ನು ಕಟ್ಟಿ ಸುಧಾರಿಸಬಹುದು. ಒಬ್ಬ ವ್ಯಕ್ತಿಯು ಬಂದು—ನನಗೆ ಓಟು ಕೊಡು—ಎಂದು ಒಬ್ಬರಿಗೆ ಅಧಿಕಾರದಿಂದಲೂ, ಒಬ್ಬರಿಗೆ ದಾಕ್ಷಿಣ್ಯದ ಕಾರಣದಿಂದಲೂ, ಒಬ್ಬರಿಗೆ ಜಾತಿಯ ಅಭಿಮಾನದಿಂದಲೂ, ಮತ್ತೊಬ್ಬರಿಗೆ ಲಂಚದ ಪ್ರಭಾವದಿಂದಲೂ ಕೇಳುವುದಕ್ಕಿಂತ, ನಾನು ಇಂತಹ ಪಕ್ಷದವನು. ನನ್ನ ಕಾರ್ಯಕ್ರಮವು ಇಂತಹದ್ದು. ನನಗೆ ಓಟುಕೊಡಿರಿ—ಎಂದು ಕೇಳುವುದು ಉತ್ತಮವೆಂದು ನಮ್ಮ ಭಾವನೆ. ಇದರಿಂದ ಧ್ಯೇಯ ಧ್ಯೇಯಗಳೊಳಗೆ, ಸೂತ್ರ ಸೂತ್ರಗಳೊಳಗೆ ಸ್ಪರ್ಧೆಯು ನಡಿಯುವುದು. ವ್ಯಕ್ತಿಯು ಬರಿ ಛಾಯೆ ಮಾತ್ರ ನಿಜರೂಪವನ್ನು ಪಕ್ಷವು ಧರಿಸುತ್ತದೆ. ಚುನಾವಣೆಗಳ ಹಾವಳಿಯು ಇದರಿಂದ ಕಡಿಮೆಯಾಗುವುದೆಂದು ಹೇಳಲಾಗುವುದಿಲ್ಲ. ಆದರೆ ವ್ಯಕ್ತಿಯ ಬದಲಿಗೆ ಸೂತ್ರಬದ್ಧವಾದ ಪಕ್ಷಗಳು ಮುಂದೆ ಬರುವುದರಿಂದ ಸಮಾಜದ ಮೇಲಿನ ದುಷ್ಪರಿಣಾಮವನ್ನು ಬಹುಮಟ್ಟಿಗೆ ತಗ್ಗಿಸಬಹುದು. ಮತದಾರರಿಗೂ ಮತದ ಬೆಲೆಯು ತಿಳಿಯುವುದು. ಮತ್ತು ನಿಜವಾದ ರಾಜಕೀಯ ವಿದ್ಯಾಭ್ಯಾಸವು ಈ ಮೂಲಕ ಜನತೆಗೆ ದೊರಕುವುದು.

ಇನ್ನೊಂದು ಸೋದೋಮ ಪಟ್ಟಣ!

ಲೀಗ್ ಒಫ್ ನೇಶನ್ಸಿನ ಅಧೀನವಾಗಿ ಫ್ರಾನ್ಸ ದೇಶಕ್ಕೆ ಸಿರಿಯಾ ಪ್ರದೇಶವೂ, ಇಂಗ್ಲೀಷರಿಗೆ ಮೆಸೊಪೊಟೆಮಿಯಾ ಪ್ರದೇಶವೂ "ಮೆಂಡೇಟ" (Mandate) ಎಂಬ ಕ್ರಮದಿಂದ ಪಾಲಿಸಲಿಕ್ಕೆ ಸಿಕ್ಕಿತು. ತಮ್ಮನ್ನೇ ತಾವು ಆಳಿಕೊಳ್ಳಲು ತಿಳಿಯದ ರಾಜ್ಯಗಳನ್ನು ಚೆನ್ನಾಗಿ ಆಳಿ, ಅವುಗಳ ಜನರು ಸುಖವಾಗಿರುವಂತೆ ಮಾಡಿ, ಅವರಿಗೆ ವಿದ್ಯೆ, ನಾಗರಿಕತೆ, ವಿಜ್ಞಾನ ಇತ್ಯಾದಿಗಳನ್ನು ಕಲಿಸಿ ಅವರನ್ನು ಉದ್ಧರಿಸಬೇಕೆಂಬುದು ತತ್ವವಾಗಿದೆ. ಆದರೆ ಯಾವ ರಾಜ್ಯಗಳು ಈ ರಕ್ಷಣೆಯ ಭಾರವನ್ನು ಹೊರುವರೊ ಅವುಗಳು ತಮಗೆ ಸಿಕ್ಕಬಹುದಾದ ಲಾಭವನ್ನು ಮಾತ್ರವೇ ನೋಡಿ ಆ ಲಾಭಕ್ಕಾಗಿ ತಾವು ರಕ್ಷಣೆಮಾಡಬೇಕಾಗಿರುವ ಜನರನ್ನು ಪೀಡಿಸುವರು. ಇಂಗ್ಲೀಷರ ಮೆಸೊಪೊಟೋಮಿಯದ ಪರಿಪಾಲನೆಯ ಕ್ರಮವು ಕಲಂಕಹೀನವಾದುದಲ್ಲ. ಆದರೆ ಸ್ವಾರ್ಥಪಿಶಾಚದ ಪರಮಾವಧಿಯು ಸಿರಿಯಾದಲ್ಲಿ ತೋರಿಕೆಗೆ ಬಂತು. ಅಲ್ಲಿ ಡ್ರುಸ್ ಎಂಬ ಜನರು ತಮ್ಮ ಸ್ವಾತಂತ್ರ್ಯವನ್ನು ಸಾಧಿಸುತ್ತ ದಂಗೆಯೆದ್ದಿದ್ದರು. ದಮಸ್ಕಸ ಪಟ್ಟಣವು ಈ ದಂಗೆ ಖೋರರೊಡನೆ ಸಹಕರಿಸುತ್ತಿದೆಯೆಂದು, ಅಲ್ಲಿದ್ದ ವಿಲಾಯತಿ ಜನರನ್ನು ಮುಂಜಾಗ್ರತೆ ಕೊಟ್ಟು ಹೊರತಂದು, ಉಳಿದವರಿಗೆ ಯಾವ ಸೂಚನೆಯನ್ನೂ ಕೊಡದೆ, ವಿಮಾನಗಳ ಮೂಲಕ ಮೇಲಿಂದಲೂ, ಗುಂಡುಗಳ ಮೂಲಕ ಸುತ್ತಲಿಂದಲೂ ಬೆಂಕಿಯ ಮಳೆಯನ್ನು ಸುರಿಸಿದರು. ಸೋದೋಮ ಪಟ್ಟಣಕ್ಕೆ ದೇವರು ಶಿಕ್ಷೆಸಿದ್ದಾದರೆ, ದಮಸ್ಕಸ ಪಟ್ಟಣವನ್ನು ಫ್ರೆಂಚರು ಶಿಕ್ಷಿಸಿದರು! ಈ ಭಯಂಕರ ಅಗ್ನಿ ವರ್ಷಣದಿಂದ ೧೩,೦೦೦ ಜನರು ನಾಶವಾದರಂತೆ! ೧,೭೦,೦೦೦ ಜನರಿದ್ದ ಪಟ್ಟಣವನ್ನು ಮುಂಜಾಗ್ರತೆಯಿಲ್ಲದೆ ನಾಶಮಾಡಿದುದನ್ನು ನೋಡಿದರೆ ವಿಲಾಯತಿಯ ರಬರ್ಬರ ಮಾನಸಿಕತೆಯು ವ್ಯಕ್ತವಾಗುವುದು. ಡಾಯರನಿಗಿಂತಲೂ ಕಠಿಣವಾದ ಪ್ರವೃತ್ತಿಗಳು ಇರುವುವೆಂಬುದು ಆಲೋಚಿಸಲು ಕೂಡ ಅಸಹ್ಯವಾಗುತ್ತಿದೆ. ಸಿರಿಯಾದೇಶಕ್ಕೆ ಗವರ್ನರನಾಗಿದ್ದ ಜನರಲ್ ಸರ್ರೈಲನನ್ನು ಫ್ರೆಂಚ ಸರಕಾರವು ಹಿಂದೆ ಕರೆದುಕೊಂಡಿದೆ. ಲೀಗ್ ಒಫ್ ನೇಶನ್ಸ ರಕ್ಷಣೆಗಾಗಿ ಕೊಟ್ಟ ಜನರ ಮಹಾ ವಿನಾಶವನ್ನು ನೋಡಿ ಏನು ಮಾಡಬಿಡಿಯೊ ನೋಡಬಿಡಿ! ಲೀಗ್, ಇದಿಯೇ ಫ್ರೆಂಚ್ ಮತ್ತು ಇಂಗ್ಲೀಷರ ಕೈಯೊಳಗೆ ಮಾತ್ರವೇ ಇರುವಾಗ ಏನು ಆದೀತೆಂದು ನಾವು ಯೋಚಿಸಬಹುದು.

ವಿದೇಶ ವರ್ತಮಾನ.

—ಲಂಡನ್ ಪಟ್ಟಣದ ನೋರ್ತವೆಲ್ಲ ಎಂಬಲ್ಲಿ ವಿದ್ಯುಚ್ಛಕ್ತಿಯನ್ನುಂಟುಮಾಡುವ ಕಾರ್ಯಾಲಯದಲ್ಲಿ ಒಂದು ಭಯಂಕರವಾದ ಅವಘಡ ಸಂಭವಿಸಿತು. ಕಾರ್ಯಾಲಯಕ್ಕೆ ಸಂಬಂಧಪಟ್ಟ ಜಲಸಂಗ್ರಹ ಸ್ಥಳದಿಂದ, ೧೫೦ ಮಿಲಿಯ ಗೆಲನ ನೀರು ಸ್ಫೋಟಿಸಿ ಸಮೀಪದ ಗ್ರಾಮದ ಅನೇಕ ಮನೆ, ಅಂಗಡಿ, ಸಂತೆ ಮುಂತಾದವುಗಳು ನಾಶವಾದವು. ಮಾತ್ರವಲ್ಲದೆ ೧೬ ಮಂದಿ ಮನುಷ್ಯರೂ ನೀರಿನ ಪಾಲಾದರು.

—ದೊಸ್ಮೆ ಕಾವೆ ಜರಗಿದ ಲಂಡನಿನ ಮುನ್ಸಿಪಲ್ ಚುನಾವಣೆಯಲ್ಲಿ, ಲೇಬರ್ ಪಾರ್ಟಿಯ ಉಮೇದ್ವಾರರೇ ಹೆಚ್ಚಾಗಿ ಆರಿಸಲ್ಪಟ್ಟಿರುವರು.

—ವೆಂಬ್ಲಿಯ ಬ್ರಿಟಿಷ್ ಸಾಮ್ರಾಜ್ಯದ ವಸ್ತುಪ್ರದರ್ಶನಾ ಶಾಲೆಯು ಹಿಂದುದೇಶದ ಶಾಖೆಯ ಕೊನೆಯ ಸಮಾರಂಭವು ಕೊನೆಗೊಂಡಿತು. ಸರ್. ವಿಲಿಯಮ್‌ರವರು ಈ ಶಾಖೆಯ ಕಾರ್ಯದರ್ಶಿಯವರಾದ ಸರ್. ಎ. ಚಾಟರ್ಜಿಯವರ ಉತ್ಕೃಷ್ಟದ ಕೆಲಸವನ್ನು ಸ್ತುತಿಸಿ ಅನೇಕರಿಗೆ ಬಹುಮಾನ ಪತ್ರಗಳನ್ನೂ, ಪದಕಗಳನ್ನೂ ಕೊಟ್ಟಿರುವರು. ಹಿಂದುದೇಶದ ಇಬ್ಬರು ಶಿಲ್ಪಿಯರು ತಾವು ಮಾಡಿದ ತಾಜಮಹಲ ಚಿತ್ರಗಳನ್ನು ಪ್ರದರ್ಶಿಸಿ ಯುರೋಪಿಯನರನ್ನು ಆಶ್ಚರ್ಯಗೊಳಿಸಿರುವರು.

—ಫ್ರೆಂಚರು ಸಿರಿಯಾ ದೇಶದ ದಮಸ್ಕಸ್ ಪಟ್ಟಣವನ್ನು ಲಗ್ಗೆ ಹತ್ತಿ, ದೇಶದ ನಾನಾ ಭಾಗಗಳಲ್ಲಿ ನಾಶವನ್ನುಂಟುಮಾಡಿರುವರು. ೩೫,೦೦೦ ಕ್ರೈಸ್ತರೂ, ಹೆಚ್ಚಿನ ಜನರು ಮಸ್ಜಿದುಗಳಲ್ಲಿ ಬಚ್ಚಿ ಹತ್ತಾರದರು. ಸಾವಿರಾರು ಜನರು ಅನಾಥರಾಗಿರುವರು. ಸೆಂಟ್ರಲ್ ಬಿಲಾಫತ್ ಕಮಿಟಿಯವರು ಸಹಾಯಕ್ಕೆ ಮುಂದುವರಿದಿರುವರು.

—ಪ್ಯಾರಿಸ್ ನಗರದಲ್ಲಿರುವ ೩೨ ವರ್ಷ ವಯಸ್ಸಿನ ಯೌವನಸ್ಥನೊಬ್ಬನು ೭-೮ ಶೀಶೆಗಳ ನೀರನ್ನು ಒಂದೇ ವೇಳೆ ಕುಡಿದು ತನ್ನ ಬಾಯಿಯಿಂದ ಸುಮಾರು ೭ ಅಡಿ ಎತ್ತರವಾಗಿ ಆ ನೀರನ್ನೆಲ್ಲಾ ಬೇಕಾದಾಗ, ಕಾರುವ ಸ್ವಭಾವವುಳ್ಳವನಾಗಿರುವನು. ಈತನು ತನ್ನ ಜಠರವನ್ನು ವಿಸ್ತರಿಸಲೂ ಸಂಕುಚಿಸಲೂ ಶಕ್ತಿಯುಳ್ಳವನಾಗಿರುವನು.

—ರಷ್ಯಾ ದೇಶದಲ್ಲಿರುವ ಅತ್ಯಂತ ಸೋಜಿಗದ ಸಂಗತಿಯು ಐದು ವರ್ಷದ ಒಬ್ಬ ಹುಡುಗನು ಒಬ್ಬ ಬಲಿಷ್ಠನಾದ ಯೌವನಸ್ಥನ ಶಕ್ತಿ ಸಾಮರ್ಥ್ಯವುಳ್ಳವನಾಗಿ ಸಭೆಗಳಲ್ಲಿ ವಿರಾಜಿಸುವನು. ಬರ್‌ಲಿನ್ ದೇಶದ ಟಿನ್‌ಕ್ವಿನ್ ಎಂಬ ಐದು ವರ್ಷದ ಬಾಲಕನು ಸಹಸ್ರಾರು ಜನರಿಂದ ಕೂಡಿದ ಸಭೆಗಳಲ್ಲಿ ಗಂಟೆಗಟ್ಟಲೆಯಾಗಿ ಧಾರವಾಹಿಕ ವಿಚಾರಗಳನ್ನು ಕುರಿತು ಉಪನ್ಯಾಸ ಮಾಡಬಲ್ಲನು. ಇವನ ಉಪನ್ಯಾಸಗಳು ನಡೆಯುವ ಸ್ಥಳಕ್ಕೆ ಜನರನ್ನು ಸಾಗಿಸಲು ಸ್ಪೆಶಲ್ ಟ್ರೈನುಗಳೂ, ಜನರ ಸಮ್ಮರ್ದನೆಯನ್ನೂ ನೋಡಿಕೊಳ್ಳುವುದಕ್ಕೆ ಪೋಲೀಸ್ ಸಿಬ್ಬಂದಿಯೂ ಹೋಗಬೇಕಾಗಿದೆ.

—ಪ್ಯಾರಿಸ್‌ನಲ್ಲಿ ರೋಮನ್ ರೋಲಾಂಡ್‌ರವರೊಂದಿಗೆ ಗಾಂಧಿಯವರ ತತ್ವಗಳನ್ನೆಲ್ಲ ಅಭ್ಯಾಸಿಸುತ್ತಿದ್ದ ಮಿಸ್ ಮ್ಯಾಡಿಲೀನ್ ಸ್ಲೇಡ್ ಎಂಬಾಕೆಯು ಮಹಾತ್ಮರನ್ನು ಸನ್ಮಾನಿಸುವರೆಂದು ಭಾವಿಸಿ ಅವರ ಸೇವಾ ಶಿಕ್ಷಾಪ್ರೇರಣನ್ನು ನಾಡಿಕೆಂದು ಅವರ ತತ್ವಗಳನ್ನು ಮುಂದುವರಿಸಲು ಹಿಂದುಸ್ಥಾನಕ್ಕೆ ಹೊರಟಿರುವರು.

—ಜಿ. ಐ. ಪಿ. ರೈಲ್ವೆ ಕಂಪೆನಿಯವರು ಮುಂಬಾಯಿಯಲ್ಲಿ ಸುಮಾರು ೩೦೦ ಮೈಲು ವಿಸ್ತೀರ್ಣಕ್ಕೆ ವಿದ್ಯುಚ್ಛಕ್ತಿ ರೈಲ್ವೆ ಕೆಲಸವನ್ನು ಇಂಗ್ಲೆಂಡಿನ ಬ್ರಿಟಿಷ್ ಕಂಪೆನಿಯವರಿಗೆ ಕಂಟ್ರಾಕ್ಟಿಗೆ ಕೊಟ್ಟಿರುವರು.

—ದಕ್ಷಿಣ ಆಫ್ರಿಕದ ಹಿಂದುಗಳು ಒಂದು ರೌಂಡ್‌ಟೇಬಲ್ ಕೊನ್ಫರೆನ್ಸನ್ನು ಕೂಡಿಸಲಿಕ್ಕಿರುವರು. ಈ ಕೊನ್ಫರೆನ್ಸಿಗೆ ಇಂಡಿಯಾ ಸರಕಾರದವರೂ, ಮತ್ತು ದಕ್ಷಿಣ ಆಫ್ರಿಕ ಸರಕಾರದವರೂ ಕೂಡ ಬರಬೇಕೆಂದು ತಿಳಿಸಿರುವರು.

ಒಳದೇಶ ವರ್ತಮಾನ.

—ವಿಧವಾ ವಿವಾಹ ಪರಿಷತ್ತು ಇದೇ ತಿಂಗಳ ತಾ. ೧೫ರಲ್ಲಿ, ಜಲಂಧರ ಜಿಲ್ಲೆಯಲ್ಲಿ ಸ್ವಾಮಿ ಶ್ರದ್ಧಾನಂದರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಮಿಗಳು ವೇದಕಾಲದಲ್ಲಿದ್ದಂತೆ ಈಗಲೂ ಪ್ರೌಢ ವಿವಾಹವನ್ನು ರೂಢಿಗೆ ತರಬೇಕೆಂದು ತಮ್ಮ ಭಾಷಣದಲ್ಲಿ ಹೇಳಿರುವರು.

—ಕರ್ನಾಟಕದ ನಟ ಶಿರೋಮಣಿ ಶ್ರೀಯುತ ಎ. ವಿ. ವರದಾಚಾರ್ಯರವರು ದೇಹಾಲಸ್ಯದ ಮತ್ತು ವೃದ್ಧಾಪ್ಯದ ನಿಮಿತ್ತ ರಂಗಭೂಮಿಯನ್ನು ಬಿಟ್ಟು ವಿಶ್ರಾಂತಿ ಹೊಂದುತ್ತಿರುವರು.

—ಉದಾರ ದಾನ:-ಗುಬ್ಬಿ ನಾಟಕ ಮಂಡಳಿಯ ಮಾಲಕರಾದ ಶ್ರೀ ವೀರಣ್ಣನವರು ಹುಬ್ಬಳ್ಳಿಯ ವೀರಶೈವ ಮಂಡಳಿಗೆ ರೂ. ೧,೦೦೦, ಧಾರವಾಡದ ಕರ್ನಾಟಕ ಪ್ರೌಢ ವಿದ್ಯಾಶಾಲೆಗೆ ರೂ. ೧೦೦೦, ಪ್ಲೇಗಿನ ಉಪದ್ರವ ನಿವಾರಣ ಫಂಡಿಗೆ ರೂ. ೫೦೦, ಬೆಂಗಳೂರಿನ ಶ್ರೀ ಅಂಜನೇಯ ಜೋತಿಷಾಲಯಕ್ಕೆ ರೂ. ೫೦೦ ದಾನವಾಗಿ ಕೊಟ್ಟಿರುವರು. ನಮ್ಮಲ್ಲಿ ಹೊಣ್ಣಾರು ಇತ್ತ ಗಮನಿಸಲಿ!

—ಲಾರ್ಡ ರೀಡಿಂಗರ ನಂತರ ಹಿಂದೂಸ್ಥಾನದ ವೈಸರಾಯರಾಗಲು ಮಿ. ಇ. ಎಫ್. ಎಲ್. ವುಡ್ ಇವರು ನೇಮಕಹೊಂದಿರುವರು.

—ಅಮೃತಸರದಲ್ಲಿ ಒಬ್ಬ ಮಹಮ್ಮದೀಯನ ಅಂಗಡಿಯಲ್ಲಿ ಮಿಠಾಯಿಯನ್ನು ತಿಂದ ೧೧ ಜನ ಮಹಮ್ಮದೀಯರು ಅಸ್ವಸ್ಥರಾದರು. ಇವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸರಿಯಾದ ಚಿಕಿತ್ಸೆಯನ್ನು ಕೊಡಲು, ಇವರ ಪೈಕಿ ೧೦ ಜನರು ಸ್ವಸ್ಥರಾದರೆಂದೂ ಒಬ್ಬನು ಇನ್ನೂ ಅಸ್ವಸ್ಥನಾಗಿರುವನೆಂದೂ ತಿಳಿದುಬರುತ್ತದೆ.

—ಮದ್ರಾಸಿನಲ್ಲಿ ಗೋಖಲೆ ಹಾಲನ್ನು ಕಟ್ಟಲು ಡಾಕ್ಟರ್ ಬೆಸೆಂಟ್ ಮ್ಯಾಡಮರು ೩ ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ.

—ಮಹಾರಾಜ ಹರಿಸಿಂಗರವರು ಕಾಶ್ಮೀರದ ಪಟ್ಟಕ್ಕೆ ಏರುವರು.

—ದಿಲ್ಲಿಯಲ್ಲಿಯ ವೈಸರಾಯರ ಎಕ್ಸಿಕ್ಯುಟಿವ್ ಕೌನ್ಸಿಲಿನ ಮೆಂಬರರಾದ ಬಿ. ಎನ್. ಶರ್ಮಾರು ಕೌನ್ಸಿಲಿನ ಸ್ಥಾನಕ್ಕೆ ರಾಜಿನಾಮೆ ಕೊಟ್ಟ ಸಮ್ಮಂದ ಅವರ ಬದಲಿಗೆ ಎಸ್. ಆರ್. ದಾಸರವರನ್ನು ನೇಮಕಮಾಡಿರುವರು.

—ಟಿನ್‌ವಲ್ಲಿನ ಡಿಸ್ಟ್ರಿಕ್ಟ ಬೋರ್ಡಿನವರು ಅಲ್ಲಿಯ ಜಿಲ್ಲಾ ಕಲೆಕ್ಟರವರ ಹತ್ತಿರ ಶಾಲೆಯ ಅಂಗಡಿಗಳನ್ನು ಕಟ್ಟು ಮಾಡಬೇಕೆಂದು ಮನವಿ ಮಾಡಿಕೊಂಡಿದ್ದರು. ಇವನ್ನು ಅಲ್ಲಿಯ ಕಲೆಕ್ಟರರವರು ಕಟ್ಟು ಮಾಡುವ ಸಾಧ್ಯತೆಯಿಲ್ಲವೆಂದುದಾಗಿ ಬೋರ್ಡಿನವರಿಗೆ ತಿಳಿಸಿದ್ದಾರೆ.

—ಲೇಡಿ ರೀಡಿಂಗರು ತಮ್ಮ ಶಸ್ತ್ರಕ್ರಿಯೆಯು ಮುಗಿದು, ಈಗ ಸೌಖ್ಯದಲ್ಲಿದ್ದಾರೆಂದು ತಿಳಿದುಬರುತ್ತದೆ.

—ಕಲ್ಕತೆಯ ಹತ್ತಿಯ ಗಿರಣಿಯಾಳುಗಳ ಬಗ್ಗೆ ಇತ್ತ ಸರಕಾರ ಒಂದು ಸಾವಿರ ರೂಪಾಯಿ ಕಟ್ಟತಕ್ಕ ಕಾರಕೋಶಗಳಿಗೆ ಒಟ್ಟುಗೂಡಿಸಿರುವರು. ಇದಲ್ಲದೆ ಇಂಗ್ಲೆಂಡ ಮತ್ತು ಇತರ ಕಡೆಗಳಿಂದಲೂ ಸಹ ಸುಮಾರು ೫೦೦ ಪೌಂಡು ಧನಸಹಾಯವು ಸಹ ಅಲ್ಲಿಯವರಿಂದ ಮಾಡಲ್ಪಟ್ಟಿದೆ. ಸಂಗ್ರಹಿಸಿದ ಹಣವನ್ನು ಮುಷ್ಕರ ಹಾಕಿದ ಗಿರಣಿಯಾಳುಗಳ ಬಗ್ಗೆ ಉಪಯೋಗಿಸಬೇಕೆಂದು ನಿಶ್ಚಯಿಸಿದೆ.

—ಶರದ್‌ಪುರಿನಲ್ಲಿ ದೆಂಗೆಯನ್ನು ನಡೆಸಿದ ೧೬ ಜನ ಜಹಾರವರಿಗೆ ಪಾಠಿ ಶಿಕ್ಷೆಯನ್ನು ವಿಧಿಸಿರುವರು.

—ಅಲಹಾಬಾದಿನಲ್ಲಿ ಒಬ್ಬ ವಕೀಲನು ತನ್ನ ಕಕ್ಷಿಗಾರನ ಹಣವನ್ನು ದುರುಪಯೋಗ ಮಾಡಿರುವುದಕ್ಕಾಗಿ ಅವರ ವಕೀಲ ಹುದ್ದೆಯನ್ನು ರದ್ದುಮಾಡಿರುವರು.

—ಶ್ರೀಮತಿ ಸರೋಜಿನಿ ದೇವಿಯವರು ಪಂಜಾಬ ಪ್ರಾಂತಿಕ ಪರಿಷತ್ತಿನಲ್ಲಿ ಹಿಂದೂ ಮುಸಲ್ಮಾನರನ್ನುದ್ದೇಶಿಸಿ ಮಾಡಿದ ಭಾಷಣವು ಗ್ರಾಹ್ಯವಾಗಿರುವುದು. ಹಿಂದುಗಳಲ್ಲಿ ಸ್ವಧರ್ಮ ರಕ್ಷಣೆಯ ಬಗ್ಗೆ ಧೈರ್ಯ ಅತ್ಯಂತದ್ದಾದಿ ಗುಣಗಳು ಇಲ್ಲವೆಂದೂ ಮುಸಲ್ಮಾನರಲ್ಲಿ ಸಹಿಷ್ಣುತೆಯಿಲ್ಲವೆಂದೂ ಪ್ರತಿಪಾದಿಸಿ ರಾಷ್ಟ್ರೋದ್ಧಾರಕ್ಕಿಂತ ಸಮತಾಭಾವವೇ ಮೇಲಾದುದೆಂದೂ, ಸಮಾಜಗಳಲ್ಲಿ ಕಲಹವನ್ನೆಬ್ಬಿಸುವ ಮುಖಂಡರನ್ನು ಬಹಿಷ್ಕರಿಸಬೇಕೆಂದೂ ಸರೋಜಿನಿಯವರು ಸಾರಿದ್ದಾರೆ. ಆದರೆ ದುರಾಗ್ರಹಿಗಳಿಗೆ ಇದು ಸೇರುವದೆಂತು?

—ಮಹಾತ್ಮಾಜಿಯವರ ಕಚ್ಛದ ಪ್ರವಾಸವು ಉತ್ಸಾಹಜನಕವಾಗಿದೆ. ಕಚ್ಛದ ಮಹಾರಾಜರೊಡನೆ ಅವರ ಸಂಭಾಷಣೆಯಾಯಿತು. ಅಲ್ಲಿಯ ವರ್ತಕರು ದೇಶಬಂಧು ಸ್ಮಾರಕಫಂಡಿಗೆ ೧೦ ಸಾವಿರ ರೂಪಾಯಿಗಳನ್ನೂ ಗೋರಕ್ಷಣಾಫಂಡಿಗೆ ೩೫೦೦ ರೂಪಾಯಿಗಳನ್ನೂ ಅರ್ಪಣ ಮಾಡಿದರು. ಕೊಯರಾ ಎಂಬಲ್ಲಿ ಎಂಬಲ್ಲಿ ೩೫೦೦ ರೂ.ಗಳ ಗಂಟನ್ನು ಅವರಿಗೆ ಅರ್ಪಿಸಿದರು. ಶೇಠ ವಾಲಜಿ ಶಿಕ್ಷಾ ಇವರು ದೇಶಬಂಧು ಸ್ಮಾರಕಫಂಡಿಗೆ ೨ ಸಾವಿರ ಹಾಗೂ ಗೋರಕ್ಷಣೆಗೆ ಒಂದು ಸಾವಿರ ರೂ. ಗಳನ್ನೂ, ಶೇಟ ಪ್ರೇಮಚಂದಜಿ ಇವರು ೫೦೦ ರೂಪಾಯಿಗಳನ್ನು ಕೊಟ್ಟರು. ಅಸ್ಪೃಶ್ಯತೆ, ಖಾದಿ, ಗೋರಕ್ಷಣೆಗಳ ವಿಷಯದಲ್ಲಿ ಅವರ ವ್ಯಾಖ್ಯಾನವು ನಡೆದಿದೆ.

—ಘಟ್ಟದ ಕೆಳಗಣ ಇಬ್ಬರು ಬ್ರಾಹ್ಮಣರು ೧೪—೧೫ ವರ್ಷದ ಒಬ್ಬ ಹುಡುಗನನ್ನು ಯಲ್ಲಾಪೂರ ತಾಲೂಕಿನ ಒಂದು ಅಡವಿಯಲ್ಲಿ ಸನ್ಯಾಸಿಯನ್ನಾಗಿ ಮಾಡಿ ಅವನು ಒಂದು ಪ್ರಸಿದ್ಧ ಮಠದ ಸನ್ಯಾಸಿಯೆಂದು ಜನರನ್ನು ಮೋಸಗೊಳಿಸಿ ಸತ್ಕಾರ ಪಡೆದು ಸ್ವಾರ್ಥಸಾಧಿಸಿಕೊಳ್ಳುತ್ತಿದ್ದರೆಂದೂ ತುಸು ದಿನಗಳಲ್ಲೇ ಈ ಗುಟ್ಟು ಹೊರಬಿತ್ತೆಂದೂ ಎಲ್ಲ ಕಡೆಗೆ ದಟ್ಟವಂತಿ ಹಬ್ಬಿದ್ದು ವಿಶ್ವಸನೀಯವಾಗಿದೆ. ಇದು ನಿಜವಾದರೆ ಇಂತಹ ದುಷ್ಕರ್ಮವನ್ನು ಶೋಧಿಸುವುದು ಸಮಾಜದ ದೃಷ್ಟಿಯಿಂದ ಹಿತಕರವಾಗುವುದು.

—ಮಥುರೇ ಪಟ್ಟಣದಲ್ಲಿ ಸೇರಿದ ಮಹಿಳಾ ಪರಿಷತ್ತಿನಲ್ಲಿ ದೇಶಾಭಿಮಾನಿಗಳಾದ ಹಿಂದಿಗಳೆಲ್ಲರೂ ತಮ್ಮ ಮಕ್ಕಳನ್ನು ರಾಷ್ಟ್ರೀಯ ಶಾಲೆಗೆ ಕಳುಹಿಸಬೇಕೆಂದೂ ಎಲ್ಲರೂ ಖಾದಿಯನ್ನೇ ಧರಿಸಬೇಕೆಂದೂ ಸ್ವರಾಜ್ಯ ಸಾಧನೆಗೆ ವಹಿಳೆಯರೆಲ್ಲರೂ ಒಕ್ಕಟ್ಟಿನಿಂದ ಪ್ರಯತ್ನಿಸಬೇಕೆಂದೂ, ಬಾಲ ವಿವಾಹ ಅಸ್ಪೃಶ್ಯತೆಗಳನ್ನು ನಿವಾರಿಸಬೇಕೆಂದೂ ನಿರ್ಣಯ ಮಾಡಿರುತ್ತಾರೆ. ಮಹಿಳೆಯರ ಮುಂಜಾಗರಣೆಗಾದರೂ ಕಿವಿಗೊಡುವರೆ?

—ದೇಶಬಂಧು ಸಿ. ಆರ್. ದಾಸರವರ ೫೬ನೇ ಜನ್ಮದಿವಸವು ಇದೇ ನವಂಬರ ತಾ. ೬ನೇ ಶುಕ್ರವಾರ ಜರಗಲಿಕ್ಕಿದೆ.

—ಚಿಂದಂಬರಿನ ಮುನ್ಸಿಫಲ್ ಚೆಯರ್‌ಮೆನರಿಗೆ ಕೆಲವು ಮೋಸಕರವಾದ ಕೆಲಸಗಳನ್ನು ಮಾಡಿದ ಆರೋಪದ ಮೇಲೆ ಇವರನ್ನು ಕೈದು ಮಾಡುವರೆ ಹುಕುಂ ಕೊಟ್ಟಿರುವರೆಂದು ತಿಳಿದು ಬರುತ್ತದೆ.

—ಟರ್ಕಿಯ ಗವರ್ನರರಾದ ಫಕರುದ್ದೀನ್ ಪಾಶಾ ಎಂಬವರು ಕಾಬೂಲಿನ ಪ್ರಯಾಣಕ್ಕೆ ಹೊರಟ, ವಾಗ ಲಾಹೋರಿನಲ್ಲಿ ಒಂದು ಸೀಸೋನ್ ಎಂಬ ಊಟದ ಹೋಟೇಲಿನಲ್ಲಿ ಉಳಕೊಂಡಿದ್ದರು. ಆ ಸಮಯದಲ್ಲಿ ಸೌತ್ ಇಂಡಿಯನ್ ರೈಲ್ವೆಕಂಪೆನಿಯ ಒಬ್ಬ ಎಕ್ಸಿಕ್ಯುಟಿವ್ ಇಂಜಿನಿಯರನು ಅವರ ಕೆಲವು ಚಿನ್ನಾಭರಣಗಳನ್ನೂ ಮತ್ತು ಕೆಲವು ಹಣಗಳನ್ನೂ ಕಳವು ಮಾಡಿದ್ದನು. ಅದ್ದರಿಂದ ಇವನನ್ನು ಕೈದುಮಾಡಿರುವರು; ಇವನು ಕೋರ್ಟಿನವರಿಗೆ ತನ್ನ ಸ್ಟೇಟ್‌ಮೆಂಟನ್ನು ಕೊಡುವಾಗ ತನಗೆ ಈಗ ಕೆಲಸವಿಲ್ಲದೆ ಇದ್ದುದರಿಂದಲೂ ಮತ್ತು ತಾನು ತನ್ನ ಹೆಂಡತಿ ಮಕ್ಕಳನ್ನು ಸಾಕುವದು ಬಹಳ ಕಷ್ಟವಾದ್ದರಿಂದಲೂ ಈ ಕಳವು ಮಾಡಲು ಕಾರಣವೆಂದು ತಿಳಿಸಿರುವನು.

—ಯು ಪಿ ಟ್ರೈನ್ ಡಕಾಯಿತಿಯ ಸಮ್ಮಂಧ ಇನ್ನೂ ಮೂವರನ್ನು ಕೈದು ಮಾಡಿರುವರು. ಇವರ ಪೈಕಿ ಒಬ್ಬರನ್ನು ಕಲ್ಕತ್ತೆಯಲ್ಲಿಯೂ, ಮತ್ತೊಬ್ಬರನ್ನು ಕಾನ್ಪುರಿನಲ್ಲಿಯೂ ನಂತರ ಉಳಿದ ಇನ್ನೊಬ್ಬನನ್ನು ಬನಾರಸಿನಲ್ಲಿಯೂ ಹಿಡಿದಿರುವರು.

—ಲಕ್ನೋನಲ್ಲಿ ಪ್ರೂಡಾ ಸಂಗಡದವರಿಗೆ ಒಂದು ಚೀಫ್ ಕೋರ್ಟನ್ನು ಅಲ್ಲಿಯ ಗವರ್ನರವರಿಂದ ತೆರೆಯಲ್ಪಟ್ಟಿತು.

—ಜೋಧಪುರದ ಮಹಾರಾಜರವರು ತಮ್ಮ ವಿಲಾಯತಿ ಪ್ರಯಾಣವನ್ನು ೧೮ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ಕೊನೆಗಾಣಿಸಿದರು. ಮಹಾರಾಜರ ರಾಜ್ಯದಲ್ಲಿ ವಿದ್ಯಾಭ್ಯಾಸಕ್ಕಾಗಿ ವರ್ಷಕ್ಕೆ ಸರಾಸರಿ ೨ ಲಕ್ಷ ರೂಪಾಯಿ ವೆಚ್ಚವಾದರೆ ಮಹಾರಾಜರ ವಿಲಾಯತಿ ಗಾಡಿಗಳ ಖರ್ಚು ೩ ಲಕ್ಷ ರೂಪಾಯಿಯಾಗಿರುವುದು!

ದಕ್ಷಿಣ ಕನ್ನಡ.

ಬಾಯಾರು:— ಇದೇ ಕಳೆದ ತಾ. ೨೭-೧೦-೨೫ರಲ್ಲು ಬಾಯಾರು ಗ್ರಾಮದ ಪಳ್ಳತ್ತಿಪಡ್ಪಿನಲ್ಲಿರುವ ಮಾವಿನಕ್ಕಾಡಿ ಕೃಷ್ಣಭಟ್ಟರಿಂಬವರು ತನ್ನ ತೋಟದಲ್ಲಿನ ಅಡಿಕೆಯು ಕಳ್ಳರಿಂದ ಕದಿಯಲ್ಪಡುತ್ತದೆಂಬದನ್ನು ಕೆಲವು ಜನರಿಂದ ಕಾವಲುಮಾಡಿಸುತ್ತಿದ್ದರು, ಕಳ್ಳರ ಹೆಜ್ಜೆ ಅನ್ವೇಷಿಸಿದರೂ ಎಂಬಂತೆ ಮೇಲೆ ಹೇಳಿದ ತಾ. ೨೭ನೇ ರಾತ್ರಿ ಬಂದ ಮುವರನ್ನು, ಕಳ್ಳರು ಅಡಿಕೆ ತೆಗೆದು ಗೋಣಿಗಳಿಗೆ ತುಂಬಿಸುವಾಗ ಹಿಡಿದರು. ಅವರು ಹೆಚ್ಚುಕೊಂಡು ಹೋಗುವಾಗ ಅವರ ಕೈಯಲ್ಲಿದ್ದ ಅಡಿಕೆಯ ಗೋಣಿಗಳನ್ನು ಅವರನ್ನು ಹಿಡಿದವರು ಹಿಂಬಾಲಿಸಿ ಹಿಂದಿನಿಂದ ಹೊಡೆದರು. ಕಳ್ಳರಿಗೆ ಏಟುಗಳು ಸಂದರ್ಭ ಸಿಕ್ಕಿದ್ದರಿಂದ ಗೋಣಿಗಳನ್ನು ತಲೆಯಿಂದ ಕೆಳಗೆ ಹಾಕಿ ಎದುರಿಸಿ ನಿಂತರು. ಕಾವಲಿನವರಿಗೆ ಮತ್ತು ಕಳ್ಳರಿಗೆ ಸ್ವಲ್ಪ ಹೊತ್ತು ಹೊಡೆದಾಟವಾಗಿ ಕಳ್ಳರು ಬಹಳ ಸಾಹಸದಿಂದ ಹಿಡಿಯಲ್ಪಟ್ಟರು. ಅವರನ್ನು ಬಾಲ್ಕಾಣಿನಲ್ಲಿ ಇಡು ಕೂಡಿ ಈ ವರ್ತ ಕೋಟೆಗೆ ಬಿಟ್ಟದ್ದು ಒಡೆಯ ಸಲಿದಂತ ತಿಳಿದುಬಂದಿರುತ್ತದೆ. ತಾ. ೨೮ನೇ ಬೆಳಿಗ್ಗೆ ಕಳ್ಳರನ್ನು ಸ್ಥಳೀಯ ಪೊಲೀಸರು ಬಾಯಾರು ಪಂಚಾಯತಿಗೆ ಹಾಜರುಪಡಿಸಿದರು. ಪ್ರೆಸಿಡೆಂಟರು ಕಳ್ಳರ ಹೇಳಿಕೆಯನ್ನೂ ಶ್ರೀಯುತ ಕೃಷ್ಣಭಟ್ಟರ ಫಿರ್ಯಾದನ್ನೂ ತೆಗೆದುಕೊಂಡನಂತರ ಕಳ್ಳರನ್ನು ಬಿಡಲಾಯಿತು. ಕಳವು ತುಂಬಾ ನಡಿಯುತ್ತಿರುವ ಈ ಊರಲ್ಲಿ ಎಲ್ಲರೂ ಇದೇ ರೀತಿ ಪ್ರಯತ್ನಿಸಿದೆಂದರೆ ಕಳವು ನಾಶವಾಗುವುದರಲ್ಲಿ ಸಂಶಯವಿಲ್ಲ.

ಅರಳ:— ಇಲ್ಲಿನ ಮೂಲರ ಪಟ್ಟಿಪ ಚಂದ್ರನಾಥಬಸ್ತಿ ಹಾಯರ್ ಎಲಿಮೆಂಟರಿ ಶಾಲೆಯ ವರ್ಷಾವಧಿ ಪರೀಕ್ಷೆಯು ಕಳೆದ ಒಕ್ಟೋಬರ್ ತಿಂಗಳ ೩೦ನೇ ವಾರದಲ್ಲಿ ಡಿ. ಇನ್ಸ್‌ಪೆಕ್ಟರ್ ಮ। ರಾ। ಕೆ. ಮಂಗೇಶರಾಯರಿಂದ ನಡೆಸಲ್ಪಟ್ಟಿತು. ಮಕ್ಕಳ ಸಂಖ್ಯೆಯ ಅಭಿವೃದ್ಧಿ ಮೆನೇಜರ್ ಮ। ರಾ। ಪಿ. ಅನಂತಯ್ಯ ಸೆಟ್ಟಿರವರ ಶ್ರದ್ಧೆ, ಉಪಾಧ್ಯಾಯರ ಉತ್ಸಾಹ, ಬಡಗಿ ಕೆಲಸ, ಚಾಪೆ ಹೆಣೆಯುವ ಕೆಲಸ ಮೊದಲಾದುವುಗಳನ್ನು ನೋಡಿ ಪರೀಕ್ಷಕರು ತುಂಬಾ ತೃಪ್ತರಾದರು.

ತರುವಾಯ ಪರೀಕ್ಷಕರ ಅಧ್ಯಕ್ಷತೆಯಲ್ಲಿ, ಹಳ್ಳಿಯ ಸುಧಾರಣೆ ಎಂಬ ವಿಷಯವನ್ನು ಕುರಿತು ಮೇಲಿನ ತರಗತಿಯವರಿಂದ ಉಪನ್ಯಾಸಗಳು ಮಾಡಲ್ಪಟ್ಟವು. ಹೆಡ್‌ಮಾಸ್ತರ್, ಎಚ್. ಮಹಾಲಿಂಗ ಭಟ್ಟರವರು ಅನ್ನಕ್ಷರ ಗುಣಕಥನಗಳನ್ನು ಸ್ಥಾಪಿಸಿದ ತರುವಾಯ ಒಂದು ಗ್ರೂಪು ಫೋಟೊ ತೆಗೆಯಲಾಯಿತು. ಈ ಶಾಲೆಯಲ್ಲಿ ಮ। ರಾ। ಡೆಪ್ಯುಟಿ ಇನ್ಸ್‌ಪೆಕ್ಟರರವರು ಒಂದು ಉಪಾಧ್ಯಾಯ ಸಂಘವನ್ನು ಸ್ಥಾಪಿಸುವರೆ ಯೋಚನೆ ಮಾಡುತ್ತಿರುವರು.

ಮೂಡ್ನೂರುಮರಕಂಜ:— ಈ ಗ್ರಾಮದ ಕುದರೆಕೋಡಿ ರಾಮಯ್ಯ ಗೌಡರಲ್ಲಿ ತಾ. ೩೧-೧೦-೨೫ನೇ ಶನಿವಾರ ಹಗಲು ಘಂಟೆ ೩ಕ್ಕೆ ಡಿ. ಕೆ. ಗೌಡ ವಿದ್ಯಾಸಂಘದ ೩ನೇ ಆಡಳಿತ ಸಭೆ ಜರಗಿತು. ಸಭೆಯಲ್ಲಿ ಆಡಳಿತ ಮಂಡಳಿಯವರು ಆರು ಮಂದಿ ಹಾಜರಿದ್ದಲ್ಲದೆ ಸುಮಾರು ೨೫ ಮಂದಿ ಸ್ವಜಾತಿ ಮಹನೀಯ ಗೃಹಸ್ಥರು ಕೂಡ ದಯಮಾಡಿದ್ದರು. ಆಡಳಿತ ಮೆಂಬರರು ಕೂಡ ಆಯಾಯ ಪ್ರಾಂತದ ಮೆಂಬರರಿಂದ ವಸೂಲುಮಾಡಿ ತಂದಿರುವ ರೂಪಾಯಿ ೯೫ ಬಂದುದಲ್ಲದೆ ಅಲ್ಲಿ ಕೂಡಿದ ಮಹನೀಯರಿಂದ ರೂಪಾಯಿ ೩೦೦ರ ವಾಗ್ದಾನದ ಮನವಿಪತ್ರಗಳು ಕೂಡ ಬಂದಿರುತ್ತವೆ.

ಪುತ್ತೂರು ಹೈಸ್ಕೂಲಲ್ಲಿ ಕಲಿಯುವ ವಿದ್ಯಾರ್ಥಿಗಳ ಬಗ್ಗೆ ಈಗ ತತ್ಕಾಲಕ್ಕೆ ವಿದ್ಯಾರ್ಥಿಭವನಕ್ಕಾಗಿ ರೂಪಾಯಿ ೩೦೦೦ ಸಾವಿರಕ್ಕೆ ಮಂಜಲ್ಪಡ್ಪಿನಲ್ಲಿ ಒಂದು ಕಟ್ಟೋಣ ಹಿತ್ತಲುಸಮೇತ ಈಗ ಕೊಂಡುಕೊಂಡಿದ್ದಾಗ್ಯೂ ಕ್ರಮೇಣ ಹೈಸ್ಕೂಲಿನ ಸಮೀಪವೇ ಭವನ ಕಟ್ಟಿಸಬೇಕಾದುದರಿಂದ ಶ್ರೀಮಾನ್ ಭೃತ್ಯಯ್ಯ ಸೆಟ್ಟಿ ಬಂಟ್ಸ ಹೈಸ್ಕೂಲ್ ಸಮೀಪದಲ್ಲಿರುವ ೭೦ ಸೆಂಟ್ಸ ಜಾಲಸ್ಥಳವನ್ನು ಮೂಲಗೇಣಿಗೆ ಪಡೆಕೊಳ್ಳುವುದಾಗಿ ನಿರ್ಣಯವಾಗಿರುತ್ತದೆ.

ತಾ. ೨೮-೧೧-೨೫ನೇ ಶನಿವಾರ ಹಗಲು ಘಂಟೆ ೧ಕ್ಕೆ ಬಡಮಂಗ್ಲ ಗ್ರಾಮದ ಮರ್ದೂರು ವೋಂಟಿಪ್ಪ ಗೌಡರ ಭವನದಲ್ಲಿ ಮುಂದಿನ ಆಡಳಿತ ಸಭೆ ಜರಗುವುದಾಗಿ ನಿರ್ಣಯವಾಗಿರುವುದರಿಂದ ಸಂಘದ ಮೆಂಬರರೂ ಹಿತಚಿಂತಕರೂ ಸರ್ವರೂ ದಯಮಾಡಿ ಬರಬೇಕಾಗಿ ಸಂಣ್ಣಯ್ಯ ಪಟೇಲರ ವಿನಂತಿ.

ಉಪ್ಪಿನಂಗಡಿ:— ಉಪ್ಪಿನಂಗಡಿ ತಾಲೂಕಿನಲ್ಲಿ ಜಾನುವಾರು ರೋಗವು ದಿವಸಹೋಗುತ್ತ ಹಬ್ಬುತ್ತಾ ಬಂದು ಅನೇಕ ದನಕರುಗಳು ಸತ್ತುಹೋದವು. ಇದಕ್ಕೋಸ್ಕರ ಕುಲಗುಂದದಲ್ಲಿ ಜರಗಲಿಕ್ಕಿರುವ ಜಾನುವಾರ ಸಂತೆಯನ್ನು ಜರಗಿಸತಕ್ಕದ್ದೆಂದು ಜಿಲ್ಲಾ ಕಲೆಕ್ಟರ ದೊರೆಗಳು ಆಜ್ಞಾಪಿಸಿದ್ದಾರೆ. ಆದರೂ ಈ ಸಂತೆಗೆ ಮೈಸೂರು ಕಡೆಯಿಂದ ಗೌಡರು ಪ್ರತಿ ವರ್ಷದ ರೂಢಿಯಂತೆ ಅನೇಕ ಆಕಳುಗಳನ್ನು ತೆಗೆದುಕೊಂಡು ಬರುವ ಸಂಭವವುಂಟು. ಅದಪ್ರಯುಕ್ತ ಈ ಇಲಾಖೆಗೆ ಸಂಬಂಧಪಟ್ಟ ನೌಕರ ಸಾಹೇಬರು ಮುಂಜಾಗ್ರತೆಯನ್ನು ತೆಗೆದುಕೊಂಡು ಆ ರೋಗವನ್ನು ಜಿಲ್ಲೆಯ ಬೇರೆ ತಾಲೂಕುಗಳಲ್ಲಿ ಹರಡದ ಹಾಗೆ ಮಾಡುವರೆಂದು ಬರವಸವಿದೆ.

ಪೊಳಲಿ:— ಶ್ರೀಮನ್ಮಹಾದೇವದೇವೋತ್ತಮ ಪೊಳಲಿ ಶ್ರೀ ರಾಜರಾಜೇಶ್ವರಿ ಕೃಪಾಪೋಷಿತ ಭಜನಾಮಂಡಲಿಯವರಿಂದ ಪ್ರಾರಂಭಿಸಿ ಪ್ರತಿ ಕಾರ್ತೀಕ ಶು ೧ ದಾರಭ್ಯ ಶ್ರೀ ದೇವಿ ಸನ್ನಿಧಿಯಲ್ಲಿ ನಡಿಸಿ ಬರತಕ್ಕ ೧೧ನೇ ವರ್ಷದ ಕಾರ್ತಿಕ ಭಜನೋತ್ಸವವು ಇದೇ ಪೌರ್ಣಿಮೆಯು ಶನಿವಾರ ಏನೊಂದೂ ನ್ಯೂನಾತಿರಿಕ್ತಗಳಿಲ್ಲದೆ ಬಹು ವಿಜೃಂಭಣೆಯಿಂದ ನೆರವೇರಿತೆಂದೂ ಈ ಮಧ್ಯರಾತ್ರೆ ನಗರಭಜನೆ ಸಮಯ ರಾ। ಚೇರದ ಅನಂತಯ್ಯನವರ ಮನೆಯ ಕುರುಚಿನ ಮುಂದೆ ಸುಮಾರು ೨೫ ಅಡಿ ಕೀಳದ ಗಡೆಯಲ್ಲಿ ತೂಗಿದ ಗೂಡುದೀಪದಲ್ಲಿ ಇಟ್ಟ ಕಿರಾಸಿನ್ ಎಂಬು ಒಮ್ಮೆಯೇ ಬೆಂಕಿಹಿಡಿದು ಆಕಾಶದೊಡೆ ಭಸ್ಮವಾಗಿಬಿಡುವುದೋ ಎಂದೆಲ್ಲರೂ ಘಾಬರಿಯಿಂದಿರುವಾಗ ಅಂಜಬೇಡಿರೆಂದು ಜನರನ್ನು ಸಂತೈಸಿ ಭಜನೆಮಾಡುತ್ತಿರುವಾಗ ಅಗ್ನಿಯು ಒಂದೊಂದು ಕಡಿದಾದರೂ ಗೂಡಿಗೆ ತಾಗದೆ ಅದನ್ನಿಟ್ಟ ಅಡಿಯ ದಬ್ಬೆಗಳು ಮಾತ್ರ ಸುಟ್ಟು ಇಡೀ ಕೆಂಡದ ಉಂಡೆಯೇ ಭಕ್ತಿಕೋಟದ ಗಾಗಿಯೋ ಎಂಬಹಾಗೆ ಪರಮೇಶ್ವರಯ್ಯನವರ ಎದೆಯಮೇಲೆ ಬಿತ್ತು. ಆದರೆ ಸ್ವಲ್ಪವಾದರೂ ಉರಿತಾಗದೆ ದೇವಿಪ್ರಸಾದ ಪುಷ್ಪವೃಷ್ಟಿ ಎಂಬಂತೆ ಪುಡಿಪುಡಿಯಾಗಿ ನೆಲಕ್ಕುದುರಿದುದರಿಂದ ಎಲ್ಲರೂ ನಾಮಮಹಿಮೆಯನ್ನು ಪರಮಾನಂದದಿಂದ ಹೊಗಳುತ್ತಿದ್ದರೆಂದು ಕೇಳುವುದರೊಡನೆ ಅವಶ್ಯಕ ಪ್ರಯೋಜನದಲ್ಲಿ ಕಂಡ ಕೆಲ ದೃಷ್ಟಾಂತಗಳ ದೆಸೆಯಿಂದ ಇನ್ನು ಮುಂದಿನ ದೀಪಾವಳಿವರೆಗೆ ಲೋಕಕ್ಕೆ ಅತಿ ದುಸ್ತರವಾದ ಗಂಡಾಂತರಗಳಿವೆ ಎಂಬ ಭಯವಾಗುವುದಾದುದರಿಂದ ಪ್ರತಿಯೊಬ್ಬನು ಆಯಾ ಮಹಾನುಭಾವ ದೇವರ ಧ್ಯಾನನಿಷ್ಠನಾಗಿ ಬರತಕ್ಕ ವಿಪತ್ತಿನಿಂದ ಪಾರಾಗಿಕೊಳ್ಳಬೇಕೆಂದೂ, ಸರ್ವಾದಿ ಶಕ್ತಿ ಮಹಾದೇವಿಯು ಸರ್ವರನ್ನುಕ್ಷೇಮದಿಂದ ಕಾಪಾಡಲೆಂದೂ ಪ್ರಾರ್ಥಿಸಿಕೊಳ್ಳುತ್ತೇವೆ. ಇತಿ, ಸಂ.

ಮೂಲ್ಕಿ:— ಇಲ್ಲಿಯ ಶ್ರೀ ರಾಮಕೃಷ್ಣ ಧರ್ಮವೈದ್ಯಶಾಲಾ ಮಠದ ಅಕ್ಟೋಬರ ತಿಂಗಳ ರಿಪೋರ್ಟು. ಈ ತಿಂಗಳಲ್ಲಿ ಹಳೆ ರೋಗಿಗಳ ಸಂಖ್ಯೆ ೬೬, ಹೊಸ ರೋಗಿಗಳ ಸಂಖ್ಯೆ ೯೯೩, ಒಟ್ಟು ಸಂಖ್ಯೆ ೩೫೯, ದಿನ್ನನ ಹಾಜರು ೩೫೦, ದಿನಸರಿಯ ಸರಾಸರಿ ಹಾಜರಿ ೬೬, ಹೆಚ್ಚಾಗಿ ಚಿಕಿತ್ಸೆ ಹೊಂದಿದ ರೋಗಗಳು—ಭಗಂದರ, ಜ್ವರ, ಕಾಸ, ಕ್ರಿಮಿರೋಗ, ಪ್ರದರ, ಚರ್ಮರೋಗ, ವ್ರಣ, ಅಜೀರ್ಣ.

ಮಂಗಳೂರು.

ಇದೇ ಕಳೆದ ತಾರೀಕು ೧ನೇ ಆಶ್ವಯಾದ ದಿನ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಈ ವರ್ಷ ಬಿ. ಎ., ಎಫ್. ಎ. ಮತ್ತು ಸ್ಕೂಲ್ ಫ್ಯಾನಲ್ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದ ಬಿಲ್ಲವ ಸಮಾಜದ ತರುಣರನ್ನು ಸತ್ಕರಿಸುವ ಬಗ್ಗೆ ಶ್ರೀ ಶಿವಭಕ್ತಿಯೋಗ ಸಂಘದ ಸಭೆಯು ನೆರದಿತ್ತು. ಸುಮಾರು ೩೦೦ ಜನರು ಸಭೆಗೆ ಬಂದಿದ್ದರು. ಈ ವಿದ್ಯಾರ್ಥಿಗಳು ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ನಡೆಯುತ್ತಿದ್ದ ಉತ್ಸವ ಸಮಾರಾಧನೆಗಳ ಸಮಯದಲ್ಲಿ ಶ್ರದ್ಧಾಪೂರ್ವಕ ಮಾಡಿರುವ ಕೆಲಸಗಳನ್ನು ಶ್ಲಾಘಿಸಿ, ಅವರು ಇನ್ನು ಮುಂದಕ್ಕೆ ತಮ್ಮ ಜೀವನಕ್ಷೇತ್ರದಲ್ಲಿ ಅನುಸರಿಸಿ ನಡೆಯಬೇಕಾದ ಕ್ರಮಗಳನ್ನು ಸೂಚಿಸಿ ಮತು ತಮ್ಮ ಸಮಾಜಾಭಿವೃದ್ಧಿಗೆ ಹ್ಯಾಗೆ ಪ್ರಯತ್ನಿಸಬಹುದೆಂಬ ರೀತಿಯನ್ನು ಬೋಧಿಸಿ ಸಭಿಕರ ಪೈಕಿ ಕೆಲವರು ಭಾಷಣವನ್ನಿತ್ತರು. ವಿದ್ಯಾರ್ಥಿಗಳು ಇದಕ್ಕೆ ಯೋಗ್ಯವಾದ ಉತ್ತರಗಳನ್ನು ಕೊಟ್ಟು, ಸಭಿಕರು ಈ ರೀತಿ ತಮ್ಮನ್ನು ಸತ್ಕರಿಸಿದ ಬಗ್ಗೆ ಕೃತಜ್ಞತಾ ವಂದನೆಗಳನ್ನರ್ಪಿಸಿದ ನಂತರ ಅಂದಿನ ಸಭಾಧ್ಯಕ್ಷ ರಾ। ಎಚ್. ಕೊರಗಪ್ಪನವರು ತರುಣರಿಗೆ ಹಿತೋಪದೇಶಪರವಾದ ಭಾಷಣದಿಂದ ತರುಣರನ್ನೂ ನೆರೆದ ಸಭಿಕರನ್ನೂ ಆನಂದಗೊಳಿಸಿದರು. ನೆರದ ಸಭಿಕರಿಗೆ ಫಲಾಹಾರಾದಿ ಸತ್ಕಾರಗಳು ನಡೆದ ತರುವಾಯ ಸಭೆಯು ಕೊನೆಗೊಂಡಿತು.

ಅಂದಿನ ಸಭೆಗೆ ದಯಮಾಡಿಸಿದ್ದ ಮುಂಬಾಯಿಯ ರಾ। ಬಿ. ಆರ್. ಕಕೇರರು ವಿದ್ಯಾರ್ಥಿವೇತನ ಫಂಡಿಗೆ ಕೊಟ್ಟ ಸಹಾಯಧನ ರೂಪಾಯಿ ಹತ್ತನ್ನು ಅತ್ಯಾದರದಿಂದ ಸ್ವೀಕರಿಸಿ, ಶ್ರೀ ಶಿವಭಕ್ತಿಯೋಗ ಸಂಘದವರು ವಿದ್ಯಾರ್ಥಿಗಳ ಪರವಾಗಿ ಅವರಿಗೆ ಕೃತಜ್ಞತಾಪರವಾದ ಧನ್ಯವಾದಗಳನ್ನು ಅರ್ಪಿಸುತ್ತಾರೆ ಎಂದು ರಾ। ಎಚ್. ಕೊರಗಪ್ಪನವರು ತಿಳಿಸುತ್ತಾರೆ.

ಕಳೆದ ತಿಂಗಳ ಅಂತ್ಯವಾಗುವ ವಾರದಲ್ಲಿ ಇಲ್ಲಿಯ ಮುನ್ಸಿಪಾಲಿಟಿಯಲ್ಲಿ ೨೮ ಮರಣಗಳೂ ೪೧ ಜನನಗಳೂ ಆಗಿವೆ. ಜನನಗಳಲ್ಲಿ ೨೨ ಗಂಡು ೯ ಹೆಣ್ಣು. ಪ್ಲೇಗಿನಿಂದ ೨ ಮರಣಗಳು ಆಗಿವೆ.

ಪುತ್ತೂರಿನ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರರಾಗಿದ್ದ ಶ್ರೀ। ಟಿ. ರಾಮರಾಯರು ತನ್ನ ಕೆಲಸದಿಂದ ರಿಟೈರಾಗಿರುತ್ತಾರೆ.

ರುಜಾರಿಯೋ ಸೆಕೆಂಡರಿ ಶಾಲೆಯ ವಾರ್ಷಿಕ ವರ್ಧಂತಿಯು ಮ। ರಾ। ರಾ। ನೆಲ್ಲಿಕಾಯಿ ವೆಂಕಟ್ರಾಯರವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶಾಲಾ ವರದಿಯನ್ನೋದಿದ ನಂತರ ಇಂಗ್ಲಿಷ್ ಮತ್ತು ಕನ್ನಡ ನಾಟಕಗಳು ವಿದ್ಯಾರ್ಥಿಗಳಿಂದ ಮನೋಹರವಾಗಿ ಅಭಿನಯಿಸಲ್ಪಟ್ಟವು.

ಡಿಸ್ಟ್ರಿಕ್ಟ್ ರಿಜಿಸ್ಟ್ರಾರರಾಗಿ ನೇಮಿಸಲ್ಪಟ್ಟಿರುವ ವಿ. ಯಸ್ ಜೆಡೆ'ಸರ ಸ್ಥಳದಲ್ಲಿ ಜೊಯಿಂಟ್ ರಿಜಿಸ್ಟ್ರಾರರಾಗಿ ವಿ। ಯಮ್। ಶಾಮರಾಯರು ನೇಮಕ ಹೊಂದಿರುವರು.

ರಜೆಯಲ್ಲಿದ್ದ ವಿ। ಯಸ್। ಯಸ್। ವಾಟ್ಸರವರು ಇಲ್ಲಿಯ ಹೆಡ್ ಪೋಸ್ಟ್ ಮಾಸ್ಟರರಾಗಿ ಕಳದ ತಿಂಗಳ ಅಂತ್ಯದಲ್ಲಿ ಪರ್ಮನೆಂಟಾಗಿ ಕೆಲಸ ಪಡೆದು ಚಾರ್ಜು ವಹಿಸಿಕೊಂಡಿರುವರು.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಮಂಗಳೂರು ಇಲ್ಲಿಯ ಈ ಧರ್ಮಾಶ್ರಮದಲ್ಲಿ ಕಳದ ಒಕ್ಟೋಬರ ತಿಂಗಳಲ್ಲಿ ೭೬೯ ಜನರು ಚಿಕಿತ್ಸೆ ಹೊಂದಿದರು. ಪ್ರತಿ ದಿವಸದ ಸರಾಸರಿ ಹಾಜರು ೯೩. ಸಪ್ಟಂಬರ ತಿಂಗಳಿಗಿಂತ ಈ ತಿಂಗಳಲ್ಲಿ ೧೧೫ ಜನರು ಹೆಚ್ಚಾಗಿ ಚಿಕಿತ್ಸೆ ಹೊಂದಿರುತ್ತಾರೆ.

ಕರ್ನಾಟಕ ತಿಲಕ ವಿದ್ಯಾಲಯದ ಪೇದೆಯಾಗಿದ್ದ ಯನ್ ಸೋಮಯ್ಯನನ್ನು ತಾ. ೫—೧೧—೧೯೨೫ರಲ್ಲಿ ಕೆಲಸದಿಂದ ನಿವೃತ್ತಿಮಾಡಿದೆಯೆಂದೂ ಮತ್ತು ಆತನ ಕೈಯಲ್ಲಿ ತಾಲೂಕು ಕಮಿಟಿ ಬಗ್ಗೆ ಮುಷ್ಟಿಫಂಡು ವಂತಿಗೆ ವಗೈರೆ ಕೊಡಬಾರದಾಗಿ ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯರು ವಿಜ್ಞಾಪಿಸಿಕೊಳ್ಳುತ್ತಾರೆ.

ಕೌನ್ಸಿಲ್ ಒಫ್ ಸ್ಟೇಟಿನ ಚುನಾವಣಿ.

(ಲೇ. ಶ್ರೀಯುತ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು)

೫ ವರ್ಷಗಳ ಹಿಂದೆ ಅಖಿಲಭಾರತರಾಷ್ಟ್ರೀಯಸಭೆಯು ಕೌನ್ಸಿಲ್ ಬಹಿಷ್ಕಾರ ತತ್ವವನ್ನು ಮಂಜೂರು ಮಾಡಿದ ಭರದಲ್ಲಿ ಸ್ಥಾಪಿತವಾದ ಕೌನ್ಸಿಲ್ ಅಫ್‌ಸ್ಟೇಟಿನ ಅವಧಿಯು ಇಂದು ಸಂದುಹೋಯಿತು. ಆ ಗತಿಸಿದ ಕೌನ್ಸಿಲ್‌ಮೆಂಬರರೊಳಗೆ ಅನೇಕರು ತಾವು ಸರಕಾರದ ದತ್ತಪುತ್ರರೆಂದೇ ಭಾವಿಸಿ ಕೆಲಸ ಮಾಡುವುದರಲ್ಲಿ ಕೀರ್ತಿಹೊಂದ ಅಲಂಕಾರ ಪುರುಷರಾಗಿದ್ದರು. ಈ 'ಹಾಮು ಬಸವಣ್ಣ'ರು ಸರಕಾರದ ಪ್ರತಿಯೊಂದು ಸ್ವಾರ್ಥಾಕಾಂಕ್ಷೆಗಳಿಗೂ ತಲೆದೂಗುವುದರಲ್ಲಿ ಬಹಳ ಸಮರ್ಥರಾಗಿದ್ದರು. ಅವರಲ್ಲಿ ಹಲವರು ಕೇವಲ ತಮ್ಮ ದೇಶದ ಭ್ರಾತೃಭಗಿನಿಯರನ್ನು ಸಹಸ್ರಗಟ್ಟಲೆಯಾಗಿ ಘೋರಕಾರಾಗಾರಕ್ಕೆ ದೂಡುವ ಕಠೋರವಿಚಾರಕ್ಕೆ ಸಮ್ಮತಿಯಿತ್ತ ಪುಣ್ಯಾತ್ಮ ಪೂಜ್ಯ (O) ದೇಶಭಕ್ತರಾಗಿದ್ದಾರೆ.

ಪವಿತ್ರ ಕ್ಷೇತ್ರದಲ್ಲಿರಲಿಕ್ಕೆ ಪಾತ್ರನಾದ ಲೋಕವಂದ್ಯ ಏಸುಕ್ರಿಸ್ತನಂತಹ ಅಹಿಂಸಾತ್ಮ ಮಹಾತ್ಮಾಗಾಂಧಿಗಳಿಗೆ ತುರಂಗರಂಗವೆಂದು ಅಪ್ಪಣೆಯಾಯಿತು! ರಾಜಪದವಿಗೆ ಯೋಗ್ಯನಾಗಿದ್ದ ಆ ಬಂಗಾಳದ ಹೆಬ್ಬುಲಿ ದೇಶಬಂಧು ದಾಸರಿಗೆ ಬಂಧನದ ಕಂದರವೆಂದು ಆಜ್ಞೆಯಾಯಿತು! ದೇಶಸೇವೆಯಲ್ಲಿ ಜೀರ್ಣಕಾಯನಾಗಿರುವ ಲಾಲಾಜಿಯವರಿಗೆ ಕಾರಾಗೃಹವಾಸವೆಂದು ಅನುಜ್ಞೆಯಾಯಿತು! ಅರಮನೆಯಲ್ಲಿರಲಿಕ್ಕೆ ಯೋಗ್ಯನಾದ ನೆಹರುಗಳಿಗೆ ಸೆರೆಮನೆಯೆಂದು ವಿಧಿಯಾಯಿತು! ಉಪ್ಪಿನ ಸಮುದ್ರದಲ್ಲೆ ತನ್ನ ಪಾದಗಳನ್ನು ಮಾರ್ಜಿಸಿಕೊಳ್ಳುತ್ತಿರುವ ಭಾರತಮಾತೆಯ ಮಕ್ಕಳು ತಿನ್ನುವ ಉಪ್ಪಿನ ಮೇಲೆ ಒಪ್ಪದ ಕರವೇ ಮಂಜೂರಾಯಿತು! ಸಾರಾಂಶ: ಈ ಗತಿಸಿದ—ಕೌನ್ಸಿಲ್‌ಕಾಲದಲ್ಲಿ ಇಂತಹ ಅಘೋರಕೃತ್ಯಗಳನೇಕವಾಗಿಹೋದವು!

ಕೇಂದ್ರಕೌನ್ಸಿಲಿನಲ್ಲಿ ಪಾಸಾದ ದೇಶಹಿತದ ಅಲ್ಪ ಠರಾವುಗಳೂ ಮೇಲಿನ ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ನಾಪಾಸಾದವು. ಕೌನ್ಸಿಲಿನೊಳಗೆ ಕಾದಾಡಿ ಸರಾಜ್ಯಾಭಿಲಾಷೆಯನ್ನು ಪೂರೈಸಿಕೊಳ್ಳಬೇಕೆಂದು ಸ್ವರಾಜ್ಯಪಕ್ಷೀಯರ ಅಪೇಕ್ಷೆಯಿರುತ್ತದೆ. ಆದುದರಿಂದ ಮುನ್ಸಿಪಲ್ ಕೌನ್ಸಿಲಿನಿಂದ—ಕೌನ್ಸಿಲ್ ಆಫ್ ಸ್ಟೇಟ್ ವರೆಗಿನ ಪ್ರತಿಯೊಂದು ರಾಜಕೀಯಾಡಳಿತೆಯ ಸಂಸ್ಥೆಗಳಿಗೂ ತಮ್ಮ ಪ್ರತಿನಿಧಿಗಳನ್ನು ಕಳುಹಿಸಲಿಕ್ಕೆ ಸ್ವರಾಜ್ಯಪಕ್ಷೀಯರು ಪ್ರಯತ್ನಿಸುತ್ತಿರುವರು. ಎಸೆಂಬ್ಲಿಯಲ್ಲಿ ಸ್ವರಾಜ್ಯಪಕ್ಷದ ಪ್ರತಿನಿಧಿಯಾದ ವಿ. ಜೆ. ಪಟೇಲರೇ ಅಧ್ಯಕ್ಷರಾಗಿದ್ದಾರೆ. ಅಲ್ಲದೆ ಅನೇಕ ಪ್ರಾಂತಗಳ ನ್ಯಾಯವಿಧಾಯಕ ಸಭೆಗಳಿಗೆ ಬಹುಪಕ್ಷವಾಗಿ ಸ್ವರಾಜ್ಯಪಕ್ಷೀಯರೇ ಚುನಾವಣೆ ಹೊಂದಿದ್ದಾರೆ.

ಈ ಕೌನ್ಸಿಲುಗಳಲ್ಲಿ ದೇಶಕ್ಕೆ ಉಪಕಾರವನ್ನು ಮಾಡುವುದಕ್ಕೆ ಹೆಚ್ಚಿನ ಸಂದರ್ಭಗಳಿಲ್ಲವಾದರೂ ಅಪಕಾರವನ್ನಾದರೂ ಮಾಡದಿರಬಹುದು. ಈಗಿನ ಸರಕಾರದ ಅಂತರಂಗವನ್ನು ತಿಳಿಯುವುದಕ್ಕೂ ಅವಕಾಶವಿರುವುದು. ಇವುಗಳಲ್ಲಿ ರಾಜ್ಯಾಡಳಿತೆಯ ಶಿಕ್ಷಣವನ್ನು ಹೊಂದಿದರೆ—ಭಾವೀಸ್ವರಾಜ್ಯಕಾರ್ಯಭಾರಕ್ಕೆ ಸ್ವಲ್ಪಮಟ್ಟಿಗೆ ಅನುಕೂಲವಾಗಲೂಬಹುದು. ಇದೇ ತಿಂಗಳ

ತಾ. ೨೦ಕ್ಕೆ ಆ ದೊಡ್ಡ ಕೌನ್ಸಿಲ್ ಅಫ್ ಸ್ಟೇಟಿನ ಚುನಾವಣೆಯು ನಡೆಯಲಿಕ್ಕಿದೆ. ಭರತಖಂಡದ ಸಮಸ್ತ ಪ್ರಾಂತದ ಉಮೇದ್ವಾರರ ನಾಮಾವಳಿಯೂ ಪ್ರಕಟವಾಗಿದೆ. ಸ್ವರಾಜ್ಯಪಕ್ಷೀಯರು ತಮ್ಮ ಉಮೇದ್ವಾರರನ್ನು ನಿಲ್ಲಿಸಿರುವರು. ಈ ಸಂದರ್ಭದಲ್ಲಿ ಮತದಾರರು ಚೆನ್ನಾಗಿ ವಿಚಾರಮಾಡಿ ತಮ್ಮ ತಮ್ಮ ಮತಗಳನ್ನು ಉಪಯೋಗಿಸಬೇಕಾಗಿದೆ. ಎಂದರೆ ನಿಜವಾದ ದೇಶಸೇವಕರನ್ನು ಆರಿಸಿ ಮತಕೊಡುವುದು ಅವಶ್ಯವಾಗಿರುತ್ತದೆ.

'ಅಖಿಲಭಾರತ ಸೂತ್ರಸಂಘ' ಮತ್ತು 'ಗೋಪಾಲಕ ಸಂಘ'ಗಳಲ್ಲಿ ತಾನು ಕೆಲಸಮಾಡುತ್ತಿರುವೆನೆಂದು ಸದ್ಯಕ್ಕೆ ರಾಷ್ಟ್ರೀಯ ಸಭೆಯ ಸೂತ್ರವನ್ನು ಸ್ವರಾಜ್ಯಪಕ್ಷಿಗಳ ಕೈಗೊಪ್ಪಿಸಿ, ಮಹಾತ್ಮರು ಖಾದಿಪ್ರಚಾರ ಮತ್ತು ಗೋಕುಲೋದ್ಧಾರ ಕಾರ್ಯದಲ್ಲಿ ಮಗ್ನರಾಗಿರುವರು.

ಸನ್ಮಾನ್ಯ ನೆಹರು ಮೊದಲಾದವರ ವಿನಂತಿಯನ್ನು ನೋಡಿರಿ! ಸ್ವರಾಜ್ಯಪಕ್ಷದ ಜನಕರಾದ ಆ ದೇಶಬಂಧು ದಾಸರನ್ನು ನೋಡಿರಿ! ಸ್ವರಾಜ್ಯಪಕ್ಷದ ಈ ಧೋರಣಕ್ಕೆ ಒಪ್ಪಿಗೆಕೊಟ್ಟಿರುವ ರಾಷ್ಟ್ರಸಭೆಯನ್ನು ನೋಡಿರಿ! ಆರ್ತಳಾದ ಭಾರತಮಾತೆಯ ದುರ್ಗತಿಯನ್ನು ನೋಡಿರಿ! ಮತದಾರರು ಸ್ವರಾಜ್ಯಪಕ್ಷೀಯರಿಗೆ ಇದೊಂದು ಸಂದರ್ಭವನ್ನು ಕೊಟ್ಟು, ಬೆಂಬಲವಾಗಿ ನಿಂತು, ಸ್ವರಾಜ್ಯರಥವು ಮುಂದ ರಿಯುವ ರೀತಿಯನ್ನು ನೋಡಿರಿ!

ಮುಖ್ಯವಾಗಿ ಕರ್ನಾಟಕ ದೇಶದ ಮತದಾರರು ನಿಜವಾಗಿ ಕೆಲಸ ಮಾಡುವ ದೇಶಸೇವಕರೇ ಕೌನ್ಸಿಲ್ ಆಫ್ ಸ್ಟೇಟನ್ನು ಪ್ರವೇಶಿಸುವಂತೆ ಸಹಕರಿಸಿ, ಭಾರತೋನ್ನತಿಯನ್ನು ಬಯಸಿ, ತಮ್ಮ ತಮ್ಮ ಕರ್ತವ್ಯಗಳನ್ನು ಪೂರೈಸುವುದು ಧರ್ಮಪಂಥವಾಗಿರುವುದಲ್ಲವೆ?

ಶ್ರೀಮಾನ್ ನಂದಳಿಕೆ ಲಕ್ಷ್ಮೀನಾರಣಯ್ಯ
(ಮುದ್ದಣ) ೧೮೭೯—೧೯೦೧.

ಪ್ರಾಕ್ತನ ವಿಮರ್ಶ ವಿಚಕ್ಷಣ ರಾವಬಹದ್ದೂರ್ ಆರ್. ನರಸಿಂಹಾಚಾರ್ಯ, ಎಂ. ಎ. ಎಂ. ಆರ್. ಎ. ಎಸ್.

ಈತನು ಬ್ರಾಹ್ಮಣನು, ಇವನ ಪೂರ್ವಿಕರು ಪಾಣಾಳಿಗಳು, ಎಂದರೆ ದೇವಸ್ಥಾನದಲ್ಲಿ ಕಟ್ಟಿಗೆಕೋಲು ಹಿಡಿವ ಕೆಲಸವುಳ್ಳ ಶಿವಬ್ರಾಹ್ಮಣರು. ಈತನು ಉಡುಪಿ ತಾಲೂಕು ನಂದಳಿಕೆಯಲ್ಲಿ ೧೮೭೯ರಲ್ಲಿ (ಶುಕ್ಲ ಸಂ॥ ಸೋಮವಾರ ಸ್ವಾತಿ ನಕ್ಷತ್ರ) ಹುಟ್ಟಿದನು. ನಂದಳಿಕೆಯೇ ಪರಂಪರೆಯಾಗಿ ಇವನ ಕುಟುಂಬದವರ ವಾಸಸ್ಥಳ. ಇವನ ತಂದೆ ಪಾಣಾಳಿ ತಿಮ್ಮಯ್ಯ (ಜನನ ೧೮೩೯.) ತಾಯಿ ಮಹಾಲಕ್ಷ್ಮಿ (ಜನನ ೧೮೫೪.) ಚಿಕ್ಕಪ್ಪಂದಿರು ರಾಮಪ್ಪ, ರಂಗಣ್ಣಯ್ಯ; ಸೋದರತ್ತೆ ಇಂದಮ್ಮ; ಸಹೋದರರು (ತಮ್ಮಂದಿಯರು) ಶಿವರಾಮಯ್ಯ, ರಾಮಕೃಷ್ಣ; ಹೆಂಡತಿ ಕಮಲಾಬಾಯಿ. ತಂದೆಗೆ ೩೦ ವರ್ಷ ತಾಯಿಗೆ ೧೫ ವರ್ಷ ವಯಸ್ಸಾಗಿದ್ದಾಗ ಈತನು ಜನಿಸಿದನು. ಬಾಲ್ಯದಲ್ಲಿ ಈತನನ್ನು ತಂದೆತಾಯಿಗಳು ಮುದ್ದಣ ಎಂದು ಕರೆಯುತ್ತಿದ್ದರು. ಚಿಕ್ಕ ವಯಸ್ಸಿನಲ್ಲಿ ಈತನು ನಂದಳಿಕೆಯಲ್ಲಿ ಮೂರೂರು ಚರಡಪ್ಪಯ್ಯನವರು ಸ್ಥಾಪಿಸಿದ್ದ ಪಾಠಶಾಲೆಯಲ್ಲಿ ನಂದಳಿಕೆ ದೇವರಾಯರು, ಸಿದ್ದು ಸೆಟ್ಟಿ, ಬಾಬು, ಕೆ. ರಾಮಚಂದ್ರಯ್ಯ, ತೇಜಪ್ಪ ಸೆಟ್ಟಿ ಕೃಷ್ಣ ಭಟ್ಟ ಮೊದಲಾದ ಸಹಪಾಠಿಗಳೊಡನೆ ವ್ಯಾಸಂಗಮಾಡುತ್ತಿದ್ದನು. ಅನಂತರ ಟ್ರೈನಿಂಗ್ ಸ್ಕೂಲಿಗೆ ಸೇರಿ ತನ್ನ ೧೮ನೆಯ ವಯಸ್ಸಿನಲ್ಲಿ ಪರೀಕ್ಷೆಯಲ್ಲಿ ತೇರ್ಗಡೆಯಾದಲು ಆ ಸ್ಕೂಲು ಹೆಡ್ಮಾಸ್ಟರು ಕಸರತನ್ನು (Gymnastics) ಕಲಿಸುವುದಕ್ಕಾಗಿ ಮದರಾಸಿಗೆ ಕಳುಹಿಸಿಕೊಟ್ಟರು. ಕಸರತ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ೧೦ ರೂಪಾಯಿ ಸಂಬಳಕ್ಕೆ ಕಸರತ್ತನ್ನು ಕಲಿಸುವ ಉಪಾಧ್ಯಾಯನಾಗಿ ಉಡುಪಿಗೆ ಹೋದನು.

ಉಡುಪಿಯಲ್ಲಿದ್ದಾಗ ಅಲ್ಲಿಯೇ ಉಪಾಧ್ಯಾಯರಾಗಿದ್ದ ಅನೇಕ ಗ್ರಂಥಕರ್ತರಾಗಿದ್ದ ಮಳಲಿ ಸುಬ್ಬರಾಯರ ಪರಿಚಯವುಂಟಾಯಿತು. ಇವರ ಸಹವಾಸದಿಂದ ಈತನಿಗೆ ಕಾವ್ಯಪರಿಚಯವೂ ಕವಿತೆಯಲ್ಲಿ ರುಚಿಯೂ ಉಂಟಾದುವು. ಅವರಂತೆಯೇ ತಾನೂ ಅವರ ಸಹಾಯದಿಂದ ಗ್ರಂಥರಚನೆ ಮಾಡಬೇಕೆಂಬ ಕುತೂಹಲವು ಹುಟ್ಟಿತು. ಈತನು ಮೊತ್ತಮೊದಲು ೧೮೯೫ರಲ್ಲಿ ತನ್ನ ೧೬ನೆಯ ವಯಸ್ಸಿನಲ್ಲಿ "ಕುಮಾರವಿಜಯ"ವೆಂಬ ಯಕ್ಷಗಾನವನ್ನು ಬರೆದು ತನ್ನ ಗುರುವೆನಿಸಿದ ಮಳಲಿ ಸುಬ್ಬರಾಯರಿಗೆ ಅರ್ಪಿತಮಾಡಿದನು. ಈ ಗ್ರಂಥವು ಅಚ್ಚಾಗಿದೆ ಬಳಿಕ "ರತ್ನಾವತೀ ಕಲ್ಯಾಣ"ವೆಂಬ ಮತ್ತೊಂದು ಯಕ್ಷಗಾನವನ್ನು ಬರೆದು ಅದನ್ನು ನಂದಳಿಕೆಯಲ್ಲಿ ಪಾಠಶಾಲೆಯನ್ನು ಸ್ಥಾಪಿಸಿದ ಮೂರೂರು ಚರಡಪ್ಪಯ್ಯನವರಿಗೆ ಅರ್ಪಿಸಿದನು ಇದೂ ಅಚ್ಚಾಗಿದೆ; ೧೮೯೯ರಲ್ಲಿ ಮಳಲಿ ಸುಬ್ಬರಾಯರಿಗೆ ಕುಂದಾಪುರಕ್ಕೆ ವರ್ಗವಾಯಿತು. ಆದರೂ ಇಬ್ಬರಿಗೂ ಕಾಗದಪತ್ರಗಳು ನಡೆಯುತ್ತಲೇ ಇದ್ದವು. ೧೮೯೩ರಲ್ಲಿ ಲಕ್ಷ್ಮೀನಾರಾಯಣಯ್ಯನಿಗೂ ಕುಂದಾಪುರಕ್ಕೆ ೧೫ ರೂಪಾಯಿ ಸಂಬಳಕ್ಕೆ ವರ್ಗವಾದುದರಿಂದ ಗುರುಶಿಷ್ಯರು ಇಬ್ಬರೂ ಪುನಃ ಸೇರಲು ಅವಕಾಶವಾಯಿತು. ಈ ವರ್ಷ ೧೮೯೩ರಲ್ಲಿಯೇ ೨೫ ವರ್ಷ ವಯಸ್ಸಿನಲ್ಲಿ ಲಕ್ಷ್ಮೀನಾರಣಪ್ಪನಿಗೆ ಮದುವೆಯಾಯಿತು. ಈತನ ಹೆಂಡತಿ ಕಮಲಾಬಾಯಿ ಎಂಬಾಕೆಯು ಮೈಸೂರ ಸೀಮೆಯವಳು—ಶಿವಮೊಗ್ಗ ಡಿಸ್ಟ್ರಿಕ್ಟ್ ಕೂಡ್ಲಕೆರೆ ಮಾಗಣೆ ಕಾಗೆಕೋಡಮಗ್ಗಿ ಗ್ರಾಮದ ನಾರಣಪಯ್ಯನವರ ಮಗಳು.

ಈತನು ೧೮೯೩ರಲ್ಲಿ 'ಅದ್ಭುತ ರಾಮಾಯಣ'ವನ್ನು ಬರೆಯಲಾರಂಭಿಸಿ ೧೮೯೪ರಲ್ಲಿ ಮುಗಿಸಿದಂತೆ ತಿಳಿಯುತ್ತದೆ. ಇವನ ಹಸ್ತಾಕ್ಷರದ ಈ ಗ್ರಂಥದ ಪ್ರತಿಯಿಂದ ಗ್ರಂಥವು ವಿಜಯ ಶಕವೆಂದೂ ೧೮೯೪ರಲ್ಲಿ ಮುಗಿದುದೆಂದೂ ಸ್ಪಷ್ಟವಾಗುತ್ತದೆ. ಸುಮಾರು ಇದೇ ಸಮಯದಲ್ಲಿ "ಶ್ರೀರಾಮ ಪಟ್ಟಾಭಿಷೇಕ"ದ ಕೆಲವು ಭಾಗಗಳನ್ನು ಬರೆದು ಅದ್ಭುತ ರಾಮಾಯಣವು ಪೂರೈಸಿದ ಮೇಲೆ ಆ ಗ್ರಂಥವನ್ನೂ ಸುಮಾರು ೧೮೯೫ರಲ್ಲಿ ಮುಗಿಸಿದಂತೆ ತೋರುತ್ತದೆ. ಇದನ್ನು ತನ್ನ ತಾಯಿಯಾದ ಮಹಾಲಕ್ಷ್ಮಿಯ ಹೆಸರಿನಲ್ಲಿ ಬರೆದನು. ಅನಂತರ ಮಳಲಿ ಸುಬ್ಬರಾಯರಲ್ಲಿ ಸಂಸ್ಕೃತ 'ರಾಮಾಶ್ವಮೇಧ'ವನ್ನು ಓದಿ ಅದನ್ನು ಕನ್ನಡ ಗದ್ಯರೂಪವಾಗಿ ಬರೆದು ೧೮೯೬ನೆಯ ಅಕ್ಟೋಬರ ೧೪ಕ್ಕೆ ಪೂರೈಸಿದಂತೆ ಆತನ ಸ್ವಹಸ್ತಾಕ್ಷರದ ಕರಡುಪ್ರತಿಯಿಂದ ತಿಳಿಯುತ್ತದೆ. ಇದನ್ನು ತನ್ನ ಬಾಲ್ಯದ ಮುದ್ದಣನೆಂಬ ಹೆಸರಿನಲ್ಲಿ ಬರೆದನು. ಸುಮಾರು ಇದೇ ಕಾಲದಲ್ಲಿ 'ಕುಸವಿಜಯ' ಎಂಬ ಗ್ರಂಥವನ್ನು ಬರೆಯಬೇಕೆಂಬ ಉದ್ದೇಶವುಂಟಾಯಿತು. ಆದರೆ ೧೮೯೭ನೆಯ ಕೊನೆಯ ಭಾಗದಲ್ಲಿ ಕನ್ನಡಪಂಡಿತನಾಗಿ ಉಡುಪಿ ಮಿಶನ್ ಸ್ಕೂಲಿಗೆ ಹೋದುದರಿಂದ ಮಳಲಿ ಸುಬ್ಬರಾಯರಲ್ಲಿ ಮೂಲಸಂಸ್ಕೃತ ಗ್ರಂಥಗಳನ್ನು ಓದಲು ಅವಕಾಶವಿಲ್ಲದೆ ಹೋಗಿ ಆ ಉದ್ದೇಶವು ನೆರವೇರಲಿಲ್ಲ. ಮೇಲೆ ಹೇಳಿದ ಗ್ರಂಥಗಳಲ್ಲದೆ ಇನ್ನೂ ಕೆಲವು ಗ್ರಂಥಗಳನ್ನು ಈತನು ಬರೆದಂತೆ ತಿಳಿಯುತ್ತದೆ. 'ಭಗವದ್ಗೀತೆ'ಯನ್ನು ಭಾಮಿನೀಷಟ್ಪದಿಯಲ್ಲಿಯೂ 'ಕರ್ನಾಟಕ ರಾಮಾಯಣ'ವನ್ನು ವಾರ್ಧಕಷಟ್ಪದಿಯಲ್ಲಿಯೂ ಈತನು ಬರೆದನೆಂದು ಈತನ ಕೈಬರಹದ ಪ್ರತಿಯನ್ನು ನೋಡಿದ್ದ ಉಡುಪಿಯ ಅಂಗಾರ ಸೆಟ್ಟರು ಹೇಳುತ್ತಿದ್ದರು.

ಆದರೆ ಈ ಪ್ರತಿ ದೊರೆತಿಲ್ಲ. 'ಕಾಮಶಾಸ್ತ್ರ'ವೆಂಬ ಮತ್ತೊಂದು ಗ್ರಂಥವನ್ನು ಈತನು ಬರೆದುದಾಗಿ ತಿಳಿಯುತ್ತದೆ. ಇದರ ಕೈಬರಹದ ಪ್ರತಿ ಕೆನರಾ ಹೈಸ್ಕೂಲ್ ಹೆಡ್ಮಾಸ್ಟರ್ ಪದ್ಮನಾಭಯ್ಯನವರ ವಶದಲ್ಲಿದೆ ಎಂದು ಲಕ್ಷ್ಮೀನಾರಾಯಣಯ್ಯನ ತಮ್ಮ ಶಿವರಾಮಯ್ಯನು ಹೇಳುತ್ತಿದ್ದನು. ಈ ಶಿವರಾಮಯ್ಯನು ಚಿತ್ರಬ್ರಾಂಚ್ ಫೋಸ್ಟ್‌ಮಾಸ್ಟರಾಗಿದ್ದನು. ಲಕ್ಷ್ಮೀನಾರಣಯ್ಯನಿಗೆ ಮೂವತ್ತು ವರ್ಷದ ವಯಸ್ಸಿನಲ್ಲಿ ೧೮೯೮ರಲ್ಲಿ ಒಬ್ಬ ಮಗನು ಹುಟ್ಟಿದನು. ಈ ಮಗನ ಹೆಸರು ರಾಧಾಕೃಷ್ಣ; ಮತ್ತೊಂದು ಹೆಸರು ಬಾಬುರಾವ್. ಲಕ್ಷ್ಮೀನಾರಾಯಣಯ್ಯನು ೧೯೦೧ನೆಯ ಫೆಬ್ರವರಿ ೧೫ (ಶಾರ್ವರಿ ಸಂವತ್ಸರದ ಮಾಘ ಬಹುಳ ಏಕಾದಶಿ ಶುಕ್ರವಾರ) ಉಡುಪಿಯಲ್ಲಿ ಅಕಾಲಮೃತ್ಯುವಿಗೆ ತುತ್ತಾಗಿ ೩೩ನೆಯ ವಯಸ್ಸಿನಲ್ಲಿಯೇ ಕೈಲಾಸವಾಸಿಯಾದನು.

(ಮ। ಮಾಸ್ತಿ ವೆಂಕಟೇಶಯ್ಯಂಗಾರ್, ಎಂ. ಎ.,)

ಈ ಕಾವ್ಯವನ್ನು (ರಾಮಾಶ್ವಮೇಧ) ಓದುತ್ತಿದ್ದರೆ ಮುದ್ದಣ ಕವಿಯು, ಕನ್ನಡಭಾಷೆಯಲ್ಲಿ ಮಾತ್ರವಲ್ಲ ಪ್ರಪಂಚದ ಇನ್ನು ಯಾವ ಭಾಷೆಯಲ್ಲಾದರೂ ಕವಿಗೋಷ್ಠಿಯ ಅಗ್ರಸ್ಥಾನದಲ್ಲಿ ಒಂದಕ್ಕೆ ಅಧಿಕಾರಿಯೆಂದು ವಾಚಕರಿಗೆ ತೋರುವುದು. ಪ್ರಕೃತಿ ಸೌಂದರ್ಯದ ವರ್ಣನೆಯಲ್ಲಿ ಈತನು ಕಾಳಿದಾಸ ಶೇಕ್ಸ್‌ಪಿಯರರಿಗಿಂತ ಬಹಳ ಕಡಿಮೆಯಾದವನಲ್ಲ. ಪುರಾಣ ಪಾತ್ರಗಳ ಸ್ವಭಾವ ನಿರೂಪಣದಲ್ಲಿ ಈತನಿಗೆ ಶ್ಲಾಘನೀಯವಾದ ಔಚಿತ್ಯಜ್ಞಾನವಿದೆ. ಇವನ ಕನ್ನಡ ಶೈಲಿಯ ಸೊಗಸಿಗೆ ರಸ್ಕಿನ್ ಡಿಕ್ವಿನ್ಸಿಗಳ ಇಂಗ್ಲಿಷ್ ಶೈಲಿಯ ಸೊಗಸಿಗೆ ಸಮಾನವಾಗುತ್ತದೆ. ಇಂಥ ಕವಿಯನ್ನು ಪಡೆದದ್ದು ಕರ್ನಾಟಕದ ಸೌಭಾಗ್ಯ. ಇಂಥ ಕವಿಯನ್ನು ಅಷ್ಟು ಚಿಕ್ಕ ವಯಸ್ಸಿನಲ್ಲಿ ಕಳೆದುಕೊಂಡದ್ದು ಕನ್ನಡಿಗರೆಲ್ಲರ ದುರ್ದೈವ. ಇಂಥ ಕವಿಯು ಜೀವಂತನಾಗಿದ್ದಾಗ ಅವನನ್ನು ಸರಿಯಾಗಿ ಕಾಣದೆ ಅವನ ಯೋಗ್ಯತೆ ಏನೆಂದು ಕಂಡು ಹಿಡಿಯಲಾರದೆ ಇದ್ದದ್ದು ಕರ್ನಾಟಕರ ಅನಭಿಜ್ಞತೆಯನ್ನು ತೋರಿಸುತ್ತದೆ. ಮುದ್ದಣ ಕವಿಯು ಸಾಮಾನ್ಯವಾಗಿ ಹುಟ್ಟಿ ಸಾಮಾನ್ಯವಾಗಿ ಬೆಳೆದು ಎಲ್ಲೋ ಒಂದು ಮೂಲೆಯಲ್ಲಿ ತನ್ನ ದಿನಗಳನ್ನು ಕಳೆದು ದಿವಂಗತನಾದನು. ಆದರೆ ಆತನ ಕಾವ್ಯದ ಸೌಂದರ್ಯ ಸೌರಭ್ಯಗಳನ್ನು ನೋಡಿದರೆ ಅವನ ಆತ್ಮವು ಎಷ್ಟು ಸಂಸ್ಕಾರದಿಂದ ಎಷ್ಟರ ಮಟ್ಟಿಗೆ ಉತ್ತೀರ್ಣವಾಗಿ ಅವನ ಜನರ ಇನ್ನೆಂತಹ ಪೂಜೆಗೆ ಅರ್ಹವಾಗಿತ್ತೆಂದು ನಮಗೆ ತಿಳಿದಿರುವುದು. ಮುದ್ದಣ ಕವಿಯ ಚರಿತೆಯನ್ನೂ ಅವನ ಕಾವ್ಯವನ್ನೂ ಕುರಿತು ಯೋಚಿಸುವವರಿಗೆ ನಮ್ಮ ಜನಾಂಗದ ಉತ್ತಮ ಜೀವನವೆಲ್ಲದರ ಪ್ರತಿನಿಧಿಯಂತೆ ತೋರುವ ಈತನ ವಿಷಯದಲ್ಲಿ ವರ್ಡ್ಸ್‌ವರ್ತ್ ಎಂಬ ಆಂಗ್ಲೇಯ ಕವಿಯು ಮಿಲ್ಟನ್ ಮಹಾಕವಿಯ ವಿಷಯದಲ್ಲಿ ಹೇಳಿದ ಕೆಲವು ಮಾತುಗಳನ್ನು Poet! thou shouldest be living at his hour: *India* hath need of thee: ಎಂದು ಉಂಟಾಗಿ ಹೇಳೋಣವೆಂದು ತೋರುವುದು.

[ವಿಶ್ವಕರ್ನಾಟಕ]

—; ಸ್ತ್ರೀರಿಣಿಯರು. :—

ಮದರಾಸ್ ಪಟ್ಟಣದಲ್ಲಿ ಬಹಿರಂಗವಾಗಿ ದೇಹ ವಿಕ್ರಯದಿಂದ ಜೀವಿಸತಕ್ಕ ಹೆಂಗಸರು ೯೧೧ ಜನಗಳಿರುತ್ತಾರೆಂಬದಾಗಿಯೂ, ಬೊಂಬಾಯಿನಲ್ಲಿ ಇಂಥ ಹೆಂಗಸರು ೫,೦೦೦ ಜನಗಳಿರುತ್ತಾರೆಂಬದಾಗಿಯೂ, ಏಕಾಂತವಾಗಿ ವ್ಯಭಿಚಾರದಿಂದ ಜೀವಿಸತಕ್ಕವರು ಸುಮಾರು ೩೦-೪೦ ಸಾವಿರ ಜನಗಳಿರುತ್ತಾರೆಂಬದಾಗಿಯೂ, ವ್ಯಭಿಚಾರದಲ್ಲಿ ಆಸಕ್ತರಾದ ಗಂಡಸರೂ ಕೂಡ ಹೀಗೆಯೇ ವಿಶೇಷವಾಗಿರುವರೆಂಬದಾಗಿಯೂ, ಗಂಡಸರಲ್ಲಿಯೂ ಹೆಂಗಸರಲ್ಲಿಯೂ ಇದಕ್ಕೆ ಸಹಾಯಮಾಡತಕ್ಕವರ ಸಂಖ್ಯೆಯು ಬಹಳ ಹೆಚ್ಚಾಗಿರುವುದಾಗಿಯೂ ರಿಕ್ಷಾ ಗಾಡಿಗಳವರು ಪ್ರಾಯಶವಾಗಿ ಈ ಕೆಲಸಕ್ಕೆ ಸಹಾಯಮಾಡುವರೆಂಬದಾಗಿಯೂ ತಿಳಿಯಬರುತ್ತದೆ. ಈ ವ್ಯಾಪಾರವನ್ನು ನಿಲ್ಲಿಸುವುದಕ್ಕೆ ಮದರಾಸ್ ಮತ್ತು ಬೊಂಬಾಯಿ ಗವರ್ನಮೆಂಟುಗಳಲ್ಲಿ ಕಾನೂನುಗಳನ್ನು ಮಾಡಬೇಕೆಂದು ಪ್ರಯತ್ನಮಾಡುತ್ತಲಿರುವರು. ಹಿಂದೂ ಯುವತಿಯರ ಶರಣಾಲಯವೆಂದು ಒಂದು ಆಲಯವು ಮದರಾಸಿನಲ್ಲಿ ಶ್ರೀಮತಿ ಆದಿನಿಧೂರ್ ತಿಲಕಮ್ಮನವರಿಂದ ಪ್ರತಿಷ್ಠಿಸಲ್ಪಟ್ಟಿರುವುದು. ಸ್ತ್ರೀಯರು ಜೀವನಕ್ಕಾಗಿ ಇಂಥಾ ಅಕೃತ್ಯಗಳನ್ನು ಮಾಡದೆ ಸ್ವಶಕ್ತಿಯಿಂದ ಜೀವಿಕೆಯನ್ನು ಸಂಪಾದಿಸಿಕೊಳ್ಳುವ ಏರ್ಪಾಡುಗಳು ಮಾಡುತ್ತಲಿರುವವು. ವ್ಯಭಿಚಾರಿಗಳಾದ ಸ್ತ್ರೀಪುರುಷರಿಬ್ಬರಿಗೂ ಶಿಕ್ಷೆಯನ್ನು ಮಾಡುವ ಏರ್ಪಾಡುಗಳು ನಡಿಯುತ್ತಲಿರುವವು. ಇದಕ್ಕಾಗಿ ವಿಜಿಲೆನ್ಸ್ ಕಮಿಟಿಗಳು ಏರ್ಪಾಡಾಗಿರುವವು. ವಿವಾಹವನ್ನು ಮಾಡಿಕೊಂಡು ಗೌರವದಿಂದ ಬದುಕುವುದು ಹೇಗೆ ಸ್ತ್ರೀಪುರುಷರಿಬ್ಬರಿಗೂ ಶ್ರೇಯಸ್ಕರವಾದದ್ದೋ, ವಿಷಯಾಸಕ್ತರಾಗಿ ಸ್ತ್ರೀಪುರುಷ ಧರ್ಮಗಳನ್ನು ಉಲ್ಲಂಘಿಸಿ ನಡೆಯುವುದರಿಂದ ಅರ್ಥಹಾನಿ, ಮಾನಹಾನಿ, ಪ್ರಾಣಹಾನಿಗಳು ಹೇಗಾಗುವುವೋ ಅದನ್ನು ತೋರಿಸಿ, ಪಾತಿವ್ರತ್ಯದಿಂದಲೂ ಏಕಪತ್ನೀವ್ರತದಿಂದಲೂ ಇಹಪರಗಳೆರಡನ್ನೂ ಹೇಗೆ ಸಾಧಿಸಬಹುದೋ ಅದನ್ನು ಪ್ರಚಾರ ಮಾಡುವ ಏರ್ಪಾಡುಗಳು ಈ ಭರತಖಂಡದ ಅನೇಕ ದೇಶಗಳಲ್ಲಿ ಪ್ರಚಾರಕ್ಕೆ ಬರುತ್ತಲಿವೆ.

(ಸಾಧ್ವಿ)

Advertisers Note.

A SPECIAL ISSUE OF SPECIALIMPORTANCE
AND
Concetrated interest with wide circulation.

This is your Opportunity.

Our fortnightly paper, THE SARASWATH will appear in the beginning of December, in a most attractive special issue printed on glaze paper, art paper bound and profusely illustrated.

ADVERTISE & REAP THE BENEFITS OF VERNACULAR ADVERTISEMENT.
RATES MODERATE.

Apply:— **Secretary,**
THE SARASWATH,
UDIPI.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಶುಂಕುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀಮಿತ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತುತವಾದ ಗರ್ಭಕೋಶವನ್ನು ಬಂದರೂ ದಿವಸಗಳಲ್ಲೇ ಅಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೆ ಪುನಃ ಪಡೆಯುವಳು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಥರ್ಗ ಕೋಶದ ವ್ಯಥಾ (ಶೂಲೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾದರ್ಶ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲ್ಕು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ನೋಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.



ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಅಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವರಿಗೆ ಮಾತ್ರ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯೆಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ಕಳಬೀದಿ, ಮಂಗಳೂರು.

Free! Free!! Free!!

ಪ್ರಸಿದ್ಧವಾದ
"ಕಾಮಶಾಸ್ತ್ರ"

ಈಗಲೆ ತಯಾರಾಗಿದೆ.
ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಆತಂಕನಿಗ್ರಹ ಔಷಧಾಲಯ,
26 ಬತ್ರಿಡ್ಜೆ, (ಪೋಸ್ಟ್ ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ ಎಸ್. ಪಿ. ಆಚಾರ್ಯ ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಕುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ!
ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್,

ಮಹಾಲಕ್ಷ್ಮಿ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು.	ಅಥವಾ	ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ

ವಜ್ರಾಂಗ-ಬಿಂದು

ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣವಾಗಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿಯವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿನಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ವಾಭಾವಿಕ ಹೋಗುವ ಧಾತು ಬಂದಾಗುತ್ತದೆ. ಹಿಂದ ಅನ್ನವು ಜೀರ್ಣವಾಗಿ ಮಲವು ಸಂಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೨—೦—೦.
ಇವರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖಾಲಾಸೆ ತಿಳಕೊಳ್ಳಬಹುದು.
ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ರ. ಮ್ಯಾನೇಜರ, ಕೆ. ಎಸ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಬ್ಯಾಡಗಿ. (ಜಿಲ್ಲಾ ಧಾರವಾಡ)

The Canara Public Conveyance Co., Ltd, Mangalore.

(Established 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು —
- ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರು
- ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
- ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
- ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
- ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯು ಮಂಗಳೂರು — ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು — ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯು ಮಂಗಳೂರು — ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,

The Canara Public Conveyance Co., Ltd, Mangalore. S. K

IF OUR MODERN REGULATOR
18 Carat Rolled gold Wrist Watch
Are Purchased at a time, we give
AS A SPECIAL OFFER



The best Decorative wall clock our Modern Regulator made with last wall nut case.

FOR RS. TEN

RS. TEN ONLY

18 Carat Rolled gold wrist watch equal to size of a four annas size. Best mechanism supplied with full leather strap.

IF Separately—The Modern Regulator clock Rs. 5
Required—18 ct. Rolled gold wrist watch Rs. 7

ONLY A FEW IN STOCK

Write Now:— CAPTAIN WATCH COY
P. B. 265 MADRAS.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ವಾರ್ಷಿಕ ರೂ. ೧—೮—೦; ಬಿಡಿಪತ್ರಿಕೆ ಒಂದಕ್ಕೆ ರೂ. ೦—೨—೦ ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ' ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ' ೨೭೩ ತಂಬುಚೆಟ್ಟಿ ಬೀದಿ, ಮದ್ರಾಸ್.

ಶುದ್ಧ ರೇಶ್ಮೆಯ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಬರ್ ರೇಶ್ಮೆ ಮಡಿಗಳು, ಸಾದಾ ಮಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಸಾಲಿಗ್ರಾಮ, ಶಾಲ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಪೂಜೆಯ ಸಾಮಾನುಗಳು ಮತ್ತು ಇನ್ನು ಅನೇಕ ಸಾಮಾನುಗಳ ವಿ. ಪಿ. ಮೂಲಕ ಕಳುಹಿಸಲ್ಪಡುವವು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ

ಮತ್ತು ಕಂಪೆನಿ, ಕಾಶಿ [illegible]

ಆಯುರ್ವೇದ ಶಾಸ್ತ್ರಿ ಅಪ್ಪಾವಧಾನಿ,

ರಾ. ವೇ. ಸುಬ್ಬರಾವ್, ಯ್ಯ. ಜಿ. ಯು. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧಿ, ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನರಿದ್ದವರನ್ನು ಬಲವಂತರನ್ನಾಗಿ ಮಾಡುವದು. [illegible] ಇಲ್ಲವೆ ಮೂತ್ರದೊಂದಿಗೆ ಹೋಗುವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 6 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನು, ಸಂತತಿ ಲಾಭವನ್ನು ಹೊಂದುವರು. ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಉಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲೀಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,

28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ಸ್ಥಳ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು — ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನು ದಾರ್ಢ್ಯತೆಯನ್ನು ಉಂಟುಮಾಡುವದು. [illegible] ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು [illegible] ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್, ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. [illegible] ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಕಂಡಿತವಾಗಿ ತೋರಬಹುದು. [illegible] ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

[illegible] ಮಿಸ್ರಿ, ಬೆಂಗಳೂರು ಸಿಟಿ. | ಡಿ. ಮನ್ನಾಲಾಲ್, ಡಿಲ್ಲಿ ಸೇಟಿರ್ ಡಾಕ್ಟರ್. ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Registered: No. M. 498.

ಚಂದಾನಿರ್ಣಯ:— ವರ್ಷ ಒಂದಕ್ಕೆ ರೂಪಾಯಿ 2—0—0. | ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ | ಗರದ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತ ೧೯. ಮಂಗಳೂರು, ತಾರೀಕು ೧೨ನೇ ಶುಕ್ರವಾರ ನವಂಬರ ೧೯೨೬. ಸಂಚಿಕೆ ೪೬.

The Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. ಹೆಡ್ ಆಫೀಸು: ಉಡುಪಿ. | Branch: COONDAPOOR. ಶಾಖೆ: ಕುಂದಾಪುರ.

ಚಂದಾ ಹಾಕಿ ಒಪ್ಪಿದ ಮೂಲಧನ	ರೂ. 2,25,000—0—0.
ವಸೂಲುಕೊಟ್ಟ ಮೂಲಧನ	ರೂ. 1,71,875—9—11.
ಕ್ಷೇಮನಿಧಿ ವ ಇತರ ಫಂಡುಗಳು	ರೂ. 64,700—0—0.
ಠೇವಣಾತಿಗಳು	ರೂ. 4,83,945—2—9.

— ವಿನಿಯೋಗ —

ಗವರ್ನಮೆಂಟು ಪ್ರಾಮಿಸರಿ ನೋಟಿನ ಮೇಲೆ	ರೂ. 35,800—0—0.
ಡಿಮಾಂಡು ನೋಟು ವ ಬಿಲ್ಲುಗಳ ಮೇಲೆ	ರೂ. 5,92,445—9—4.
ಚಿನ್ನಾಭರಣ ಮುಂತಾದ ಭದ್ರತೆಸೊತ್ತುಗಳ ಮೇಲೆ	ರೂ. 1,11,658—8—6

ಈ ಕೆಳಗಿನ ಠೇವಣಾತಿಗಳನ್ನು ಅಂಗೀಕರಿಸುವುದಲ್ಲದೆ ಇತರ ಬ್ಯಾಂಕುಗಳ ಮೇಲಣ ಹುಂಡಿ ಚೆಕ್ಕುಗಳನ್ನು, ಸಾಹುಕಾರಿ ಹುಂಡಿಗಳನ್ನು ವಸೂಲು ಮಾಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡಿಸಲ್ಪಡುವವು.

ಠೇವಣಾತಿಗಳು.

ನಿರಖು ಠೇವಣಾತಿಗಳು:— ಸಾ. ಸೆ. 5½ ರಿಂದ 7½ ವರೆಗಿನ ಬಡ್ಡಿಯನ್ನು ಪ್ರತಿ 3 ತಿಂಗಳಿಗೊಮ್ಮೆ ತೆರುವ ಅನುಕೂಲ ವ ಲಾಭದಾಯಕವಾದ ಶರ್ತುಗಳ ಮೇಲೆಯೂ

ಕೊಂಚ ಅವಧಿ ಠೇವಣಾತಿಗಳು:— 1 ತಿಂಗಳ ನಂತರ 15 ದಿವಸಗಳ ನೋಟೀಸಿಗೊಳಪಟ್ಟು ಹಿಂತೆಗೆಯಬಹುದಾದ ಠೇವಣಾತಿಗಳನ್ನು ಸಾ. ಸೆ. 5ರ ದರದ ಬಡ್ಡಿ ನಡೆದ ದಿನಗಳಿಗೆ ಕೊಡುವ ಶರ್ತದಿಂದಲೂ

ಚಾಲ್ತಿ ಠೇವಣಾತಿಗಳು:— ದಿನಂಪ್ರತಿ ಇರುವ ಶಿಲ್ಕಿನ ಮೇಲೆ ಸಾ. ಸೆ. 3ರಂತೆ ಬಡ್ಡಿ ತೆರುವ ಶರ್ತದ ಮೇಲೂ

ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳು:— ಸಾ. ಸೆ. 4½ರ ಬಡ್ಡಿಯ ಮೇಲೂ

ಸಂಚಯ ಠೇವಣಾತಿಗಳು:— ಮಕ್ಕಳ ವಿದ್ಯಾಭ್ಯಾಸ, ಉಪನಯನ, ವಿವಾಹ ಮುಂತಾದ ಶುಭಕಾರ್ಯಗಳಿಗೆ ಅನುಕೂಲವಾಗಿ ನಿಶ್ಚಯಿಸಿದಂತೆ ತಿಂಗಳು 1ರ ರೂಪಾಯಿ 1ರಂತೆ 13—24—45—84—132 ತಿಂಗಳುಗಳಿಗೆ ಪಾವತಿಸುತ್ತಕೊಂಡು ಕಂತುಗಳ ಅವಧಿ ಮುಗಿದ ಮೂರು ತಿಂಗಳಲ್ಲಿ ಆಯಾಯ ಅವಧಿಮೇರೆಗೆ ರೂ. 13—8—0, ರೂ. 25—8—0, ರೂ. 50, ರೂ. 102—8—0 ಮತ್ತು 182—8—0ನ್ನು ಅದೇ ಮೇರೆಗೆ ತಿಂಗಳು 1ರ ರೂಪಾಯಿ 1ರ ಗುಣಿತವೃದ್ಧಿ ಮೊಬಲಗನ್ನು ಕೆಟ್ಟಲ್ಲಿ ಆಯಾಯ ಮೊಬಲಿಗೆ ಅದೇ ಗುಣವೃದ್ಧಿ ಮೊಬಲಗನ್ನು ತೆರುವ ಶರ್ತದ ಮೇಲೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಸೆಕ್ರೆಟರಿಯವರಿಂದ ತಿಳಿಯಬಹುದು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು, ಉಡುಪಿ, ತಾ 30—6—1926. | ನಯಂಪಳ್ಳಿ ಆನಂದರಾವ್, ಸೆಕ್ರೆಟರಿ ಮತ್ತು ಒಫಿಶಿಯೇಟಿಂಗ್ ಮೆನೇಜರ್.

ಮೂರು ದಿವಸಗಳಲ್ಲಿ ಗುಣಕಾಣದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] **ಅಗಸ್ತ್ಯ** [ನೋಡಿ ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಜಿಸ್ಟರ್ ಆದದ್ದು)

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೋಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಹಲವತ್ತೆಂಟು ದಿವಸಕ್ಕೆ ಸಾಕಾಗುವುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಯಿರಿ.

ವಿಳಾಸ:— ಕೋಮಣ್ಣ ನಾರಾಯಣ ಶೇಟ್, [illegible], ಗೋಕರ್ಣ, [illegible], (ಉ. ಕ.)

:ಪಂಡಿತ ಬಿ. ರಾಮಕೃಷ್ಣ ಬಾಳಿಗರ:

50 ವರ್ಷ ಅನುಭವದ ಸಿದ್ಧೌಷಧಗಳು

ಮಹಾ ಮದನಕಾಮೇಶ್ವರಿ ಲೇಹ— ಇದನ್ನು ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನು, ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನು ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನು, ಪುಷ್ಟಿಯನ್ನು, ಪುರುಷತ್ವವನ್ನು, ವೀರ್ಯಸ್ತಂಭನವನ್ನು ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಅಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಅಬಾಲವೃದ್ಧರೂ ಸೇವಿಸಬಹುದು.

48 ದಿನಗಳ ವರೆಗೆ ಸಾಕಾಗುವ ಲೇಹ ಸೇರು ೧ರ ರೂ. 3—0—0.

ಬೃಹತ್ ಶಾರಿವ್ಯಾದಿ ರಸಾಯನ— ಇದು ಖಾತ್ರಿಯಿಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನು, ಖಜ್ಜಿ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನು, ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನು ಮತ್ತು ಹೆಂಗಸರ ಪ್ರದರ ರೋಗಗಳನ್ನು ಖಾತ್ರಿಯಿಂದ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೀ ರೂ. 1—9—0.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

ಮಂಗಳೂರು ಏಜಂಟರು:— ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ತೇರುಬೀದಿ, ಮಂಗಳೂರು.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ತಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:— ಮೂರು ಸರ್ತಿ ತಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. | 109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ— ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ತಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಅವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:— ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:— ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪದಲ್ಲಿರುವ ಮಳಿಗೆ,) ಮಂಗಳೂರು.

ಈ ದೇಶದ ಪ್ರಖ್ಯಾತವಾದ ನೇಯಿಗೆಯ ಕೇಂದ್ರಸ್ಥಳಗಳಾದ— ಬನಾರಿಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, [illegible] ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, ಪೇಟ್ಟು, ರೇಶ್ಮೆ ಸೀರೆಗಳು, [illegible] ಸೀರೆಗಳು, [illegible] ರೇಶ್ಮೆ ಸೀರೆಗಳು, [illegible] ಸೀರೆಗಳು, ರೇಶ್ಮೆ ಮಡಿಗಳು, [illegible] ಉಪಯೋಗದ ಸೀರೆಗಳು [illegible] ಶರ್ಟಿಂಗ್. ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ನೇಯ್ದ—

[illegible]

[illegible]

ಶರ್ತ— ನಗದಿ ರೂಪಾಯಿ 50ಕ್ಕೆ ಮೀರಿದ [illegible] 6¼ರ, ರೂ. 50ರಿಂದ 250ರವರೆಗೆ [illegible] 10%, ರೂ. 250 ರಿಂದ 1000ಕ್ಕೆ 12½% [illegible]

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಕಮ ... ... ೨-೦-೦.

೧೨ ಪ್ಯಾಕೆಟ್ ನಾಟ ತರಕಾರಿ ಬೀಜಗಳು ೧೨ ರಕಮ ... ... ೧-೧೨-೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಕಮಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಗಿಗೆ, ವಿ. ಪಿ. ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು. ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜಿಸ್ಟಿಕ್ ನರ್‌ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮ್ಯೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟ್ಟು ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಬಿ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ. ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ನಾಣ್ಯದಂತಿದ್ದು ವ್ಯಾಪಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದವಾದದ್ದಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳತಕ್ಕದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಡೆದು ವಾಸಿಯಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಪತ್ರ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾರಿಷ್ಟವು ... ...
(6) ಷಟ್ಪಂಚಾಶತ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಪ್ಪವಿಕ್ಲಾಲರ ಮಂಗಳಾಷ್ಟಕಗಳು ... ...
(10) ಕಾಲನಿರ್ಣಯವಿಭ್ಯೋಯಮ್ ಗ್ರಂಥ ... ...
(11) ಸವ್ಯಾಖ್ಯಾನ ಕಾಲಾಮೃತ... ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣದಾಸಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(1[illegible]) [illegible] ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀಕ್ಷಾಶ್ವಮೇಧ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷಾಗೃಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಜ ಕಥೆ ... ...
(26) „ [illegible] ಚರಿತ್ರೆ ... ...
(27) „ ದುಶ್ಯಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮ ... ...
(5) ಪ್ರಬಂಧ ಮುಕ್ತಾವಳಿ ... ...
(1) ಹರಿಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ಯಾಪನೆಯ ಹಾಡು ... ...
(6) ಯಕ್ಷಗಾನ ಗೀತ ಹಾಡು ... ...
(7) ಕನಕದಾಸ ಕಬೀರದಾಸರ ಕೀರ್ತನೆಗಳು
(8) ಬೀಗರ ಹಾಡು ... ...
(9) ಭಜನೆಯ ಪದಗಳು ... ...

ಪುಸ್ತಕಗಳು ದೊರೆಯುವ ಸ್ಥಳ:— ಶಾರದಾ ಛಾಪಖಾನೆ,
ರಥ ಬೀದಿ, ಮಂಗಳೂರು.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಕಾರ್ತಿಕ ಬ। ೧೩ ಶನಿವಾರದಿಂದ ಕ್ರೋಧನ ಸಂವತ್ಸರದ ಮಾರ್ಗಶಿರ ಶು। ೪ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ವೃಶ್ಚಿಕ ಮಾಸ.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಯೋಗನಾಮ	ಸೂರ್ಯ ಉ.	ಸೂರ್ಯ ಅಸ್ತ.
14	ಶನಿ	೧೩	೨೧.೩೨	ಚಿತ್ರಾ	೩೧.೩೨	೨೯	6 31	6. 1
15	ರವಿ	೧೪	೨೦.೨೯	ಸ್ವಾತಿ	೩೧.೨೮	೩೦	6 32	6. 0
16	ಸೋಮ	●	೧೮.೩೨	ವಿಶಾಖಾ	೩೦.೪೬	೧	6.32	6. 0
17	ಕುಜ	೧	೧೫.೧೬	ಅನುರಾಧಾ	೨೯.೨	೨	6.33	6. 0
18	ಬುಧ	೨	೧೧.೧೪	ಜ್ಯೇಷ್ಠ	೨೬.೩೨	೩	6.33	6. 0
19	ಗುರು	೩	೬.೩೨	ಮೂಲ	೨೩.೧೬	೪	6.34	6. 0
20	ಶುಕ್ರ	೪	೧. ೨	ಪೂ. ಷಾ.	೧೯.೩೨	೫	6.34	6. 0

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Temperature. ಉಷ್ಣ (ಕಾವು) Minimum ಕಡಿಮೆ	Rainfall. ಮಳೆ ದಿವಸದ ಮಳೆ	Rainfall. ಮಳೆ ಜುಮಲಾ ಮಳೆ.
6	95—2	74—0	—	—
7	92—7	74—6	—	—
8	91—6	77—3	—	—
9	91—3	76—8	—	—
10	95—2	79—3	—	—
11	87—3	77—5	—	—
12	91—4	73—7	1—40	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ.
ಮಸ್ಕತಿ	8—10	9— 4
ಗುಡ್ಡು ...	8— 1	8— 6
ರಾಶಿ ಸುಗ್ಗಿ ...	7— 4	8— 2
ಅವ್ವಲ್ ಬೆಳ್ತಿಗೆ ...	8—12	9— 8
ಗುಡ್ಡು ಬೆಳ್ತಿಗೆ ...	8— 0	8— 4
ರಂಗೂನು ಬೆಳ್ತಿಗೆ ಗೋಣಿ ೧ ...	13— 8	14— 8
ಗೋದಿ ಗೋಣಿ ೧ಕ್ಕೆ ...	17— 8	19— 0
ಹುರುಳಿಗೋಣಿ ೧ಕ್ಕೆ ...	9— 0	9— 8
ಕಡಲೆಗೋಣಿ ೧ಕ್ಕೆ ...	12— 8	13— 8
ತೊಗರಿಗೋಣಿ ೧ಕ್ಕೆ ...	13— 0	13— 8
ತೊಗರಿಬೇಳೆ ಗೋಣಿ ೧ಕ್ಕೆ ...	16— 0	20— 0
ಉದ್ದುಗೋಣಿ ೧ಕ್ಕೆ ...	16— 8	17— 0
ಹೆಸರುಗೋಣಿ ೧ಕ್ಕೆ ...	14— 8	15— 8
ಊರು ಬೆಲ್ಲ ಖಂಡಿ ೧ಕ್ಕೆ ...	57— 8	60— 0
ಉಪ್ಪು ಗೋಣಿ ೧ಕ್ಕೆ ...	4— 0	4— 8
ಕೊಬ್ರಿ ಖಂಡಿ ೧ಕ್ಕೆ ...	120— 0	125— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	48— 0	—
ಎಳ್ಳಿಂಡಿ ಖಂಡಿ ೧ಕ್ಕೆ ...	42— 8	—
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8—12	10— 0
ಎಳ್ಳೆಣ್ಣೆ ಮಣ ೧ಕ್ಕೆ ...	8— 0	11— 0
ಚಿದಂಬ ಎಣ್ಣೆ ಡಬ್ಬಿಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮಣ ೧ಕ್ಕೆ ...	4— 2	4— 4
ಊರ ಮೆಣಸಿನಕಾಯಿ ಮಣ ೧ಕ್ಕೆ ...	7— 0	—
ಸಾಸಿವೆ ಮುಡಿ ೧ಕ್ಕೆ ...	8—12	—
ಕೊತ್ತಂಬರಿ ಮುಡಿ ೧ಕ್ಕೆ ...	3—14	4— 0
ಕಾಫಿ ಖಂಡಿ ೧ಕ್ಕೆ ...	345— 0	400— 0
ಚಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	280— 0	300— 0
ಕಾಳುಮೆಣಸು ಖಂಡಿ ೧ಕ್ಕೆ ...	260— 0	265—
ಯಾಲಕ್ಕಿ ದುಡ ೧ಕ್ಕೆ ...	100—0	—
ಗೇರುಬೀಜ ಮುಡಿ ೧ಕ್ಕೆ ...	4—12	—
ಕಚ್ಛಾ ಖಂಡಿ ೧ಕ್ಕೆ ...	45— 0	65— 0
ಜಾಂಮ್ಬು ಹಣ್ಣು ಮಣ ೧ಕ್ಕೆ ...	16-10	16—12
ತಾಮ್ರ ಪಾತ್ರಗಳು ಮಣ ೧ಕ್ಕೆ ...	21— 0	—
ಚೀನಿ ಬೆಳ್ಳಿ ಸೇರು ೧ಕ್ಕೆ ...	18—10	
ಹಿತ್ತಾಳಿ ತಗಡು ಮಣ ೧ಕ್ಕೆ ...	16— 8	
ಪವನು	18— 7	

ವಸಂತ.

ಕನ್ನಡಿಗರ! | ಕಣ್ಮಣಿಯು!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . . ವಸಂತ
ಸಮಾಜಸುಧಾರಕನೆಂದರೆ . . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರಾನ್ ¼ ಪುಟ ಸ್ಯಾಜಿನ) ಪುಟಗಳನ್ನು ಒಳ್ಳೆಗೊಂಡ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ಕಾವ್ಯ ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2—8—0.
„ ಸ್ಥಳೀಕರಿಗೆ ... „ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾದಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ತ್ವರೆ ಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್, ಗಣಪತಿರಾವ್ ಐಗಳ್ – ಗ್ರಂಥಕರ್ತರು.
ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು

ಮಾರಾಟಕ್ಕೆ ಸಿದ್ಧವಿದೆ.

ಆಮುಲ್ನಾಮ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—12—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

Advertisers Note.

A SPECIAL ISSUE OF SPECIAL IMPORTANCE. AND Concetrated interest with wide circulation.

This is your Opportunity.

Our fortnightly paper, **THE SARASWATH** will appear in the beginning of December, in a most attractive special issue printed on glaze paper, art paper bound and profusely illustrated.

ADVERTISE & REAP THE BENEFITS OF VERNACULAR ADVERTISEMENT.

RATES MODERATE.

Apply:— **Secretary,**
THE SARASWATH,
UDIPI.

ನೋಟೀಸು.

ಕಾಸರಗೋಡ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
ಪೊ. ಪಿ. ನಂಬ್ರ 167/1925.

1. ಬೇಕಲ್ ನರಸಿಂಹರಾವ್
2. ವಾಸುದೇವರಾವ್
3. ಕ್ರಿಷ್ಣರಾವ್

} ಬೇಕಲ್ ನಾಗೇಶ ರಾಯನ ಮಕ್ಕಳು ಕಾಸರಗೋಡು ಕಸಬಾ } ಅರ್ಜಿದಾರರು.

ಸದರಿ ಅರ್ಜಿದಾರರ ತಂದೆ ಬೇಕಲ್ ನಾಗೇಶ ರಾಯರು ತಾರೀಕು 22—6—1925ರಲ್ಲು ಕಾಸರಗೋಡು ಕಸಬೆಯಲ್ಲಿ ಮೃತಪಟ್ಟಿರುವದರಿಂದ ಸದರಿ ಮೃತಗೆ ಬಹ ಸಾಲವನ್ನು ವಸೂಲು ಮಾಡುವರೆ ತಮಗೆ ವಾರಿಸಿ ಸರ್ಟಿಫಿಕೇಟು ಕೊಡಿಸಬೇಂಕೆಂತ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯು ತಾರೀಕು 1—12—1925ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನ್ನಿಖೆ ಬಗ್ಗೆ ಇಡೋಣಾಗಿರುತ್ತದೆ. ಆಕ್ಷೇಪ ಇದ್ದವರು ಆ ದಿವಸ ಕೋರ್ಟಿಗೆ ಮನವಿ ಮಾಡಿಕೊಳ್ಳಬಹುದು.

ತಾ. 9—11—'25 } **H. Srinivas Kamath,**
ಕಾಸರಗೋಡು. } *Pleader for petitioners.*

ಪ್ರಕಟಣೆ.

ಮಂಗಳೂರು ತಾಲೂಕು ಕೋಟೆ ಮತಸ್ಥಾಪನೆಗಳ ಕಮಿಟಿ ಚಕ್ಕಂದಿಗೆ ಒಳಪಟ್ಟ ಎಲ್ಲಾ ಸ್ಥಾಪನೆಗಳ ಮೊಕ್ತೇಸರರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ ಮದ್ರಾಸ್ ಹಿಂದೂ ಮತಸ್ಥಾಪನೆಗಳ ಕಮಿಶನರ್ ಬೋರ್ಡು ಆಫೀಸಿನಿಂದ ಎಲ್ಲಾ ಸ್ಥಾಪನೆಗಳಿಗೆ ಕೊಡಲ್ಪಟ್ಟ ಮೆಮೋರೆಂಡಂ ನಂಬ್ರ 45/27—4—'25 ಮತ್ತು 105/2—5—'25ನೇ ಹುಕುಮುಗಳಂತೆ ತ್ರಯ್ ಲಿಸ್ಟುಗಳನ್ನು ತೆಗೆದು ಕಳುಹಬೇಕೆಂದು ನಂಬ್ರ 2080/28—7—'25ನೇ ಮೆಮೊರೆಂಡಂ ನಮ್ಮ ಆಫೀಸಿಗೆ ತಲಪಿರುವದರಿಂದ ಪ್ರತಿಯೊಂದು ದೇವಳ ಮೊಕ್ತೇಸರರು ದೇರಿಮಾಡದೆ ಲಿಸ್ಟುಗಳನ್ನು ತಯಾರಿಸಿ ಮಂಗಳೂರು ತಾಲೂಕು ಕೋಟೆಮತಸ್ಥಾಪನೆಗಳ ಕಮಿಟಿ ಮೆಂಬರರ ಆಫೀಸು ಪೋಳಲಿಗೆ ಕಳುಹುಹಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಮೊಕ್ಕಾಂ ಪೋಳಲಿ, } ಬಿ. ಯಸ್. ಪರಮೇಶ್ವರಯ್ಯ,
ತಾ. 9—11—'25. } ಕಮಿಟಿ ಮೆಂಬರರ ಬಗ್ಗೆ.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೋಕೆಟ್ ಡ್ಯೆರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡ್ಯೆರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡ್ಯೆರಿ . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡ್ಯೆರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡ್ಯೆರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಾಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ನೋಟೀಸು.

೧೯೨೫ನೇ ಇಸ್ವಿ ಅಕ್ಟೋಬರ ತಾರೀಕು ೯ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಮಾಡಿದ ಪ್ರಕಾರ ಈ ಕೆಳಗೆ ಕಾಣಿಸಿದ ಅಸಾಮಿಯುವರ ಬಾಬ್ತು ನಗಗಳು ಮಿಜಾರ ಗಣೇಶಪ್ಯೆರ ಆಫೀಸಿನ ಎದುರು ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಐವೇಜಿನಲ್ಲಿ ಈ ಕೆಳಗೆ ಕಾಣಿಸಿದ ಪ್ರಕಾರ ಅಸ್ಲು ಬಡ್ಡಿ ಮತ್ತು ಇತರ ಕರ್ಚು ಸಹಾ ಕಳದು ಕಮ್ಮಿ ಬೀಳುವ ಐವೇಜಿನ ವಿವರವು ಈ ಕೆಳಗೆ ಕಾಣಿಸಿದ ಪ್ರಕಾರ ಆಯಾಯ ಅಸಾಮಿಯುವರು ಕಮ್ಮಿ ಬಿದ್ದ ಐವೇಜು ಸ್ವದೇಶಾಭಿಮಾನಿ ತಲ್ಪಿದ ಮತ್ತು ನಿನ್ನೆ ತಾರೀಕಿಗೆ ಬಿಟ್ಟು ರಿಜಿಸ್ತ್ರಿ ನೋಟೀಸಿನ ಮೇರೆಗೆ ೧ ಹಪ್ತೆ ವಳಗೆ ಯಾವ ವಿಧದಿಂದಲೂ ಹಣ ಪಾವತಿಮಾಡುವರೆ ತಪ್ಪಿದರೆ ಆ ವಿಷಯದಲ್ಲಿ ನಾನು ಮಾಡುವ ದಾವೆಯ ಸಕಲ ಕರ್ಚಿಗೆ ಆಯಾಯ ಅಸಾಮಿಯುರು ಜವಾಬ್ದಾರರಾಗಿರುತ್ತಾರೆ.

ಹೆಸರು	ಏಲಮಿನಿಂದ ಹುಟ್ಟಿಬಂದ ಐವಜು
ಕಜೆಕಾರ ಪಟೇಲ ಅನಂತಯ್ಯ ಕೊಂಡೆ ನಗ ೧ ಏಲಂ ಆಗಿ ಹುಟ್ಟಿಬಂದ ಮೊಬಲಗು ರೂಪಾಯಿ	207—0—0 ಈ ಮೊದಲು ಬಡ್ಡಿ ಲೆಕ್ಕಕ್ಕೆಬಂದ ರೂ, 10, ಕೂಡಾ ರೂ, 217
ಉಳ್ಳಾಬೆಟ್ಟು ಗ್ರಾಮದಲ್ಲಿರುವ ಅಬ್ಬು ಯಾನೆ ಶೀಕಮ್ ಬ್ಯಾರಿ ಐಟಮ್ 3 ಏಲಂ ಆಗಿ ಬಂದ ಮೊಬಲಗು	372—8—0
ಮೇಲಿನ ಅಸಾಮಿ ಮಗ ಬಾವ ಯಾನೆ ಮೊಹಮ್ಮದ ಬ್ಯಾರಿಯು ಐಟಮ್ 1 ಏಲಂ ಆಗಿ ಬಂದ ಮೊಬಲಗು ರೂ.	73—0—0
ಮಳವೂರ ಇದ್ದಿನ ಬ್ಯಾರಿ ಐಟಮ್ 2ರ ಬಾಬ್ತು ಚಿನ್ನ ಬೆಳ್ಳಿ ನಗಗಳು ಏಲಂ ಆಗಿ ಹುಟ್ಟಿ ಬಂದ ಮೊಬಲಗು ರೂಪಾಯಿ	454—1—0

ಅಸ್ಲು ಬಡ್ಡಿ ಕೂಡಾ ರೂಪಾಯಿ ಮತ್ತು ಇತರ ಕರ್ಚು ಕೂಡಾ	ಬಾಕಿ ಬರತಕ್ಕ ಮೊಬಲಗು
217—10—8	0—10—8
559—4—0	266—12—0
100—4—0	27—4—0
613—12—0	159—11—0

ಮಿಜಾರ ತಿಮ್ಮಪ್ಪಪ್ಯೆ ರುಜು.

ಪ್ರಕಟಣೆ.

ಕರ್ನಾಟಕ ತಿಲಕವಿದ್ಯಾಲಯವನ್ನು ಹೇಗೆ ಮತ್ತು ಎಲ್ಲಿ ಮುಂದರಿಸತಕ್ಕದ್ದು ಎಂದು ನಿರ್ಣಯಿಸುವರೆ ಮತ್ತು ಅಗತ್ಯ ಇರುವ ಇತರ ಕೆಲಸ ನಡಿಸುವರೆ ಮಂಗಳೂರು ತಾಲೂಕು ಕಾಂಗ್ರೆಸು ಕಮ್ಮಿಟಿಯ ಮಹಾ ಸಭೆಯು ತಾ. ೨೯—೧೧—'೨೫ನೇ ಅಪರಾಹ್ನ ಘಂಟೆ ೪ಕ್ಕೆ ಮಂಗಳೂರಲ್ಲಿ ಕರ್ನಾಟಕ ತಿಲಕವಿದ್ಯಾಲಯದಲ್ಲಿ ಜರಗುವುದು. ಸದಸ್ಯರೆಲ್ಲರೂ ತಪ್ಪದೆ ಬರಬೇಕಾಗಿ ವಿನಂತಿ.

ಮಂಗಳೂರು ತಾಲೂಕು ಬೋರ್ಡು ಕಾಂಗ್ರೆಸು ಕಛೇರಿ, ತಾ. ೧೨-೧೧-'೨೫. } ಎ. ಭೋಜರಾಯ, ಕಾರ್ಯದರ್ಶಿ.

ಕರ್ಣಾಟಕ ಸಾಹಿತ್ಯ ಪರಿಷತ್ತು.

I. ಸರ್ಗ೧೯೨೫ನೆಯ ಇಸವಿ ನವಂಬರು ೨೨ನೆಯ ತಾರೀಕು ಭಾನುವಾರು ಪ್ರಾತಃಕಾಲ ೮||೦ ಗಂಟೆಗೆ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಕಲ ಸದಸ್ಯರ ಅಸಾಧಾರಣ ಅಧಿವೇಶನವು ಮುಂದೆ ಹೇಳುವ ವಿಷಯುಗಳನ್ನು ಚರ್ಚಿಸುವುದಕ್ಕಾಗಿ ಬಳ್ಳಾರಿಯಲ್ಲಿ ಜರಯುವುದು:—

(೧). ಅಂಧ್ರ, [illegible]

(೨). ಕರ್ನಾಟಕ ವಿಶ್ವವಿದ್ಯಾಲಯದ ವಿಚಾರ.

(೩). [illegible]

II. ಈ ಅಧಿವೇಶನಕ್ಕೆ ಬರತಕ್ಕ ಪರಿಷತ್ತಿನ ಸದಸ್ಯರ ಪ್ರಯಾಣದ ರೈಲ್ವೆ ವೆಚ್ಚವನ್ನು ಇಂಟರ್‌ಮಿಾಡಿಯಟ್ ತರಗತಿಯ ಛಾರ್ಜಿಗೆ ಮಿಾರದಂತೆ ಪರಿಷತ್ತು ವಹಿಸಬಹುದೆಂದೂ ಇದಕ್ಕಾಗಿ ೩೦೦ ರೂಪಾಯಿಗಳನ್ನು ತೆಗೆದಿಡಬೇಕೆಂದೂ ಕಾರ್ಯನಿರ್ವಾಹಕ ಮಂಡಳಿಯವರು ತೀರ್ಮಾನಿಸಿರುತ್ತಾರೆ.

III. ಈ ಸಭೆಗೆ ಬರತಕ್ಕ ಸದಸ್ಯರು ತಾವು ಯಾವ ರೈಲಿನಲ್ಲಿ ಯಾವಾಗ ಬಳ್ಳಾರಿಗೆ ಬರುವರೆಂಬುದನ್ನೂ, ಯಾವ ಅನುಕೂಲ್ಯಗಳು ಬೇಕೆಂಬುದನ್ನೂ ಮ|| ರಾ|| ಗಳಾದ ಬಿ. ಭೀಮರಾಯರು, ಬಿ. ಎ., ಬಿ. ಎಲ್., ಮತ್ತು ಕೆ. ಗುರುರಾಜಾಚಾರ್ಯರು, ಬಿ. ಎ., ಬಿ. ಎಲ್., ವಕೀಲರು, ಬಳ್ಳಾರಿ—ಇವರಿಗೆ ೮ ದಿನ ಮುಂಚಿತವಾಗಿ ತಿಳಿಸಬೇಕು.

IV. ಈ ಅಧಿವೇಶನದಲ್ಲಿ ನಿರ್ಣಯಿಸಬೇಕಾದ ವಿಷಯಗಳು ಬಹಳ ಮಹತ್ವವುಳ್ಳವುಗಳಾದುದರಿಂದ ಪರಿಷತ್ತಿನ ಸದಸ್ಯರು ಹೆಚ್ಚು ಮಂದಿ ಅಧಿವೇಶನಕ್ಕೆ ಬರುವರೆಂದು ನಿರೀಕ್ಷಿಸಲಾಗಿದೆ.

ಶಂಕರಪುರ, ಬೆಂಗಳೂರು, ತಾ. 5-11-1925. } ಬೆಳ್ಳಾವೆ ವೆಂಕಟನಾರಾಯಣಪ್ಪ, ಗೌರವ ಕಾರ್ಯದರ್ಶಿ.

ಚಿತ್ರದುರ್ಗದ ತಾಲೋಕು ದೊಡ್ಡಸಿದ್ದವ್ವನಹಳ್ಳಿ ಪಂಚಮರೆಂಬ ಮಾತಂಗವರ್ಗದ ಜನಗಳು ಮಾಂಸಹಾರವನ್ನು ಬಿಟ್ಟರು.

ಅವರು ನಮಗೆ ಬರೆದುಕಳಿಸಿರುವ ರಿಪೋರ್ಟು ಈ ಕೆಳಗೆ ಕಂಡ ಪ್ರಕಾರ ಇರುತ್ತದೆ.—

ಮಹನೀಯರೆ, ತಾವು ಕಳುಹಿಸಿಕೊಟ್ಟ ಪುಸ್ತಕಗಳೂ ಹಸ್ತಪತ್ರಿಕೆಗಳೂ ತಲ್ಪಿದವು. ನಾವುಗಳು ತಾ. ೧೨-೧೦-'೨೫ನೇ ಸೋಮವಾರ ಇದೇ ಗ್ರಾಮದಲ್ಲಿ ಮ|| ರಾ|| ಗೋವಿಂದ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಮಿಾಟಿಂಗು ನಡೆಯಿಸಿ ತಾವು ಕಳುಹಿಸಿದ ಪುಸ್ತಕ ಮತ್ತು ಹಸ್ತಪತ್ರಿಕೆಗಳನ್ನು ಅವರಿಂದ ಓದಿಸಿ ಕೇಳಿ ಸಕಲ ವಿಷಯವನ್ನು ತಿಳಿದುಕೊಂಡೆವು. ನಾವುಗಳು ಈಗ ಎರಡು ವರ್ಷದ ಲಾಗಾಯಿತು ಪಂಚಮಾ ಕಾನ್ಫರೆನ್ಸು ಆದಾಗಿನಿಂದ ಪ್ರಾಣಿಗಳ ಹತ್ಯವನ್ನು ನಿಲ್ಲಿಸಿದ್ದೇವೆ ಮತ್ತು ನಮ್ಮ ಲಗ್ನಗಳಲ್ಲಿ ಪ್ರಾಣಿಗಳನ್ನು ಕೊಲ್ಲುವ ಹಿಂದಿನ ದುಷ್ಟ ಪದ್ಧತಿಯನ್ನು ನಿಲ್ಲಿಸಿ ನಮ್ಮ ಅಜುಬಾಜು ಗ್ರಾಮಗಳಲ್ಲಿಯೂ ನಮ್ಮ ಬಂಧುವರ್ಗದ ಗ್ರಾಮಗಳಲ್ಲಿಯೂ ಪ್ರಾಣಿಗಳ ಕೊಲೆಗೆ ಅವಕಾಶವಿಲ್ಲದಂತೆ ಮಾಡಿರುತ್ತೇವೆ. ಅಲ್ಲದೆ ಈ ದಿವಸದ ಮಿಾಟಿಂಗಿನಲ್ಲಿ ಮ|| ರಾ|| ಗೋವಿಂದರೆಡ್ಡಿಯವರು ಮಾದಕ ಪದಾರ್ಥಗಳ ಸೇವನೆಯಿಂದಲೂ ಮಾಂಸಹಾರದಿಂದಲೂ ಆಗತಕ್ಕ ಅನರ್ಥಗಳನ್ನು ಬಹಳ ವಿಶದವಾಗಿ ತಿಳುಹಿಸಿದರು ಮತ್ತು ಯಾರಾದರು ತಿಳುವಳಿಕೆ ಇಲ್ಲದೆ ಮದ್ಯಪಾನ ಮಾಡಿದರೂ ಪ್ರಾಣಿಹತ್ಯಮಾಡಿದರೂ ಪುನಃ ತಿಳುವಳಿಕೆ ಹೇಳಲಾಗುತ್ತೆ. ತಿಳುವಳಿಕೆ ಕೇಳಿದವರ ಪೈಕಿ ಯಾರಾದರೂ ಪ್ರಾಣಿಗಳ ಹಿಂಸೆ ಮತ್ತು ಮಧುಪಾನಮಾಡಿದರೆ ನಮ್ಮ ಕುಲಕ್ಕೂ ಕುಲಗುರುಸ್ವಾಮಿಗಳಿಗೂ, ಇಪ್ಪತ್ತೈದು ಇಪ್ಪತ್ತೈದು ರೂಪಾಯಿಗಳಂತೆ ದಂಡಕೊಡತಕ್ಕದ್ದೆಂದು ಮಿಾಟಿಂಗಿನಲ್ಲಿ ತೀರ್ಮಾನವಾಗಿರುತ್ತೆ. ಶ್ರೀಮನ್‌ಮಹಾರಾಜ ನಿರಂಜನ ಜಗದ್ಗುರು ಮುರಘರಾಜೇಂದ್ರ ಮಹಾಸ್ವಾಮಿಗಳವರು ಹಿಂದೆ ಈ ಗ್ರಾಮಕ್ಕೆ ದಯಮಾಡಿಸಿದ್ದಾಗ ಪ್ರಾಣಿಗಳ ಹತ್ಯ ಮತ್ತು ಮಾದಕ ಪದಾರ್ಥಗಳ ಸೇವನೆಯಿಂದಾಗುವ ಅನರ್ಥವನ್ನು ಚನ್ನಾಗಿ ವಿವರಿಸಿ ಅಪ್ಪಣೆಕೊಡಿಸಿದ್ದುದಲ್ಲದೆ ಪ್ರಾಣಿಗಳ ಕೊಲೆಗೆ ಯಾರೂ ಅವಕಾಶಕೊಡದಂತೆ ತಿಳುಹಿಸಿ ಆಶೀರ್ವಾದಕ್ಕಾಗಿ ಹಸ್ತಪತ್ರಿಕೆಯನ್ನು ದಯಪಾಲಿಸಿರುತ್ತಾರೆ. ಸದರಿ ಪತ್ರಿಕೆಯನ್ನು ಸಭೆಯ ಅಧ್ಯಕ್ಷರ ಮುಖಾಂತರ ಓದಿಸಿ ತಿಳಿದುಕೊಂಡೆವು ಮತ್ತು ಈ ಗ್ರಾಮಗಳಲ್ಲಿ ನಾವು ಮಾರೀಜಾತ್ರೆಯಲ್ಲಿ ಕೋಣ ಕುರಿಗಳ ಕೊಲೆಮಾಡುವ ಪದ್ಧತಿಯನ್ನು ನಿಲ್ಲಿಸಿರುತ್ತೇವೆ. ಈ ಸಭೆಗೆ ದಯಮಾಡಿಸಿದ್ದ ಮ|| ರಾ|| ಭೀಮರೆಡ್ಡಿಯವರು ಅಹಿಂಸೆಯ ವಿಷಯವಾಗಿ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ ನಮಗೆಲ್ಲಾ ಚನ್ನಾಗಿ ತಿಳುವಳಿಕೆ ಹೇಳಿದರು ಮತ್ತು ನಮ್ಮ ಸ್ಕೂಲ್ ಮಾಸ್ಟರ್ ಎಸ್. ಓಬಯ್ಯನವರು ಎಂಟಾವಾಕಾಲಪಟ್ಟೆಲ್ಲಾ ತಾವು ಕಳುಹಿಸಿದ ಪುಸ್ತಕ ಮತ್ತು ಹಸ್ತಪತ್ರಿಕೆಯನ್ನು ಓದಿ ಪ್ರತಿಯೊಬ್ಬರಿಗೂ ತಿಳುಹಿಸುತ್ತೇವೆಂತ ವಾಗ್ದಾನಮಾಡಿರುತ್ತಾರೆ.

ಮಹನೀಯರೇ, ಗಾಡಾಂಧಕಾರವಾದ ನಿದ್ರೆಯಿಂದ ಮೈಮರೆತು ಘೋರಕೃತ್ಯವನ್ನು ಮಾಡುತ್ತಾ ಇದ್ದ ಪಂಚಮ ಜನಗಳನ್ನು ಉದ್ಧರಿಸುತ್ತಾ ಇರುವ ಗೋರಕ್ಷಕ ಸಂಘದ ಮಹನೀಯರಿಗೆ ನಾವು ತುಂಬಾ ಕೃತಜ್ಞರಾಗಿರುತ್ತೇವೆ. ತಮ್ಮ ಸಂಘದಲ್ಲಿ ತಯಾರಾಗತಕ್ಕ ಹೊಸ ಪುಸ್ತಕಗಳನ್ನೂ ಹಸ್ತಪತ್ರಿಕೆಗಳನ್ನೂ ಇದೇ ರೀತಿ ಇನ್ನು ಮುಂದೆಯಾದರೂ ದಯಪಾಲಿಸುತ್ತಾ ನಮ್ಮನ್ನು ಕೃತಾರ್ಥರನ್ನಾಗಿ ಮಾಡುತ್ತಾರೆಂತ ಪ್ರಾರ್ಥಿಸುತ್ತೇವೆ.

ಈ ರಿಪೋರ್ಟಿಗೆ ಸದರಿ ಗ್ರಾಮದ ೧೪ ಜನ ಪಂಚಮರು ರುಜುಮಾಡಿರುತ್ತಾರೆ.

(ಪಂಚಮವರ್ಗದ ಅಟಿದ ಬೆಸ್ತಪ್ಪನವರಿಗೆ ಸಂಘದಿಂದ ಕಳುಹಿಸಿದ ಪುಸ್ತಕ ಮತ್ತು ಹಸ್ತಪತ್ರಿಕೆಗಳ ಸಹಾಯದಿಂದ ಮೇಲ್ಕಂಡ ವಿಷಯಗಳು ಬರೆದಿರುತ್ತವೆ.

ಪ್ರಕಾಶಕ— ಕಾರ್ಯದರ್ಶಿ,
ಪ್ರಾಣಿದಯಾ ಜ್ಞಾನಪ್ರಸಾರಕ ಸಂಘ,
ದಾವಣಗೆರೆ.

ಅಧಿಕಸಂತೋಷದಿಂದ ಉಂಟಾಗುವ ಅನರ್ಥಗಳು.

ಡಾಕ್ಟರ್ ಎಡ್ವರ್ಡ್ ಸಂಡಾಲ್‌ಸ್ಕಿ ಎಂಬವರು, ಈ ಮೇಲ್ಕಂಡ ವಿಷಯವಾಗಿ ಹೀಗೆ ಬರೆದಿರುವರು. "ಅಧಿಕಚಿಂತೆ ಅಥವಾ ಮನೋವ್ಯಾಧಿಯು ಮನುಷ್ಯನ ಶರೀರಾರೋಗ್ಯವನ್ನು ಹೇಗೆ ಕೆಡಿಸುವುದೋ, ಅದಕ್ಕಿಂತಲೂ ಹೆಚ್ಚಾದ ಮತ್ತು ಅಕಸ್ಮಿತವಾದ ವಿಪತ್ತು ಅಧಿಕಸಂತೋಷದಿಂದಲೂ ಆಗುವುದು. ಆದರೆ ಪ್ರಪಂಚದಲ್ಲಿ ಮನುಷ್ಯನಿಗೆ ದುಃಖ, ಚಿಂತೆ, ಭಯ, ಕ್ರೋಧ ಮುಂತಾದುವುಗಳು ನಿತ್ಯವಾಗಿರುವಂತೆ, ಸಂತೋಷವೆಂಬುದು ಹೆಚ್ಚು ಕಾಲ ನಿಲ್ಲುವುದಿಲ್ಲ. ಇದರಿಂದ ಮಿತಿಮಿಾರಿದ ಸಂತೋಷದಿಂದ ಉಂಟಾಗುವ ಅಪಾಯಗಳು ಅಷ್ಟಾಗಿ ಜನಗಳ ಗಮನಕ್ಕೆ ಬಂದಿಲ್ಲ. ಈ ಕಾರಣದಿಂದಲೇ ಚಿಂತೆ, ಕ್ರೋಧ, ಮುಂತಾದುವುಗಳೇ ಅಪಾಯಕಾರಣವೆಂದು ಜನಗಳ ನಂಬಿಕೆ. "ಚಿಂತೆಯೇ ಮುಪ್ಪು, ಸಂತೋಷವೇ ಯೌವನ"ವೆಂಬ ಸಾಮತಿಯು, ಸಂತೋಷವೆಂಬುದು ಸಾಧಾರಣ ಪ್ರಮಾಣದಲ್ಲಿದ್ದರೆ ಮಾತ್ರವೇ ಅನ್ವಯಿಸುವುದೇ ಹೊರತು ಬೇರೆಯಲ್ಲ. ಇದಕ್ಕೆ ಹಲವು ಉದಾಹರಣೆಗಳುಂಟು.

ಸೋಫೋಕಲ್ಸ್ ಎಂಬವನು, ಶೋಕರಸಪೂರ್ಣವಾದ ಒಂದು ಗ್ರಂಥವನ್ನು ತನ್ನ ವಾರ್ಧಕದೆಸೆಯಲ್ಲಿ ರಚಿಸಿದನು. ಅದು ಲೋಕಪ್ರಖ್ಯಾತವಾಗಿ ಎಲ್ಲೆಲ್ಲಿಯೂ ಆತನ ಬುದ್ಧಿಕೌಶಲ್ಯವು ಶ್ಲಾಘಿಸಲ್ಪಡುತ್ತಿತ್ತು. ತನ್ನ ವಿಶೇಷಖ್ಯಾತಿಯನ್ನು ಕೇಳುತ್ತ ಕೇಳುತ್ತ, ಆವನಿಗೆ ಮಿತಿಮಿಾರಿದ ಸಂತೋಷವುಂಟಾಗಿ, ಆ ಸಂತೋಷದಿಂದಲೇ ಅವನು ಅಕಸ್ಮಾತ್ತಾಗಿ ಮರಣಹೊಂದಿದನೆಂದು ಗ್ರೀಕ್ ದೇಶದ ಒಂದು ಚರಿತ್ರೆಯಲ್ಲಿದೆ.

ಚಿಲಾನ್ ಎಂಬವನೊಬ್ಬನು, ಹೀಗೆಯೇ ಒಂದಾನೊಂದು ಆಟದ ಪಂದ್ಯದಲ್ಲಿ, ತನ್ನ ಮಗನು ಜಯಹೊಂದಿ, ದೊಡ್ಡ ಬಹುಮಾನವನ್ನು ಪಡೆದನೆಂದು ಕೇಳಿದೊಡನೆ, ಅತಿ ಸಂತೋಷದಿಂದ ಬಂದು ತನ್ನ ಮಗನನ್ನು ಆಲಿಂಗಿಸಿಕೊಂಡು ಹಾಗೆಯೇ ಪ್ರಾಣವನ್ನು ಬಿಟ್ಟನಂತೆ.

ದೊಡ್ಡ ಮನೆತನಕ್ಕೆ ಸೇರಿದ ಪೋಲಿಕ್ರೇಟಾ ಎಂಬ ಹೆಂಗಸೊಬ್ಬಳು, ತನಗೆ ಅಕಸ್ಮಾತ್ತಾಗಿ ದೊರೆತ ಅಪರಿಮಿತವಾದ ಐಶ್ವರ್ಯವನ್ನು ನೋಡಿ ಸಂತೋಷದಿಂದ ಹಾಗೆಯೇ ಪ್ರಾಣವನ್ನುಬಿಟ್ಟುದಾಗಿ ಅರಿಸ್ಟಾಟಲ್ ಎಂಬವನ ಲೇಖನವಿದೆ, ಒಬ್ಬ ಮುದುಕಿಯು, ತನ್ನ ಮಗನು ಯುದ್ಧರಂಗದಲ್ಲಿ ಸತ್ತುದನ್ನು ಕೇಳಿ ದುಃಖಸಾಗರದಲ್ಲಿ ಮುಳಗಿ ಸಂಕಟಪಡುತ್ತಿದ್ದಾಗ, ಅದು ನಿಜವಲ್ಲವೆಂದು ತಿಳಿದುಬಂದಿತು. ಒಡನೆಯೇ ಅವಳು ಆ ಸಂತೋಷವನ್ನು ತಡೆಯಲಾರದೆ ಪ್ರಾಣಬಿಟ್ಟುದಾಗಿ ಲಿಲೀ ಎಂಬವನು ಹೇಳಿರುವನು.

ಈಚೀಚೆಗೆ ಕೂಡ, ಜುರ್ವಿನ್‌ಷಿಯರ್ ಡಾಲ್ಟಾ ಎಂಬವನು, ಕಾಸಿನ್‌ಕಾ ಎಂಬ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ತನಗೆ ಅನುಕೂಲವಾದ ತೀರ್ಪು ದೊರೆತುದನ್ನು ಕೇಳಿದೊಡನೆ ತಾನು ದೈವ ಪ್ರಾರ್ಥನೆಯನ್ನು ಮಾಡುತ್ತಿದ್ದ ಸ್ಥಿತಿಯಲ್ಲಿಯೇ ಪ್ರಾಣವನ್ನು ನೀಗಿದುದಾಗಿ ಕೇಳುವೆವು. ಲಿಯೋ ಎಂಬ ವೀರನೊಬ್ಬನು ತನಗೆ ಶತ್ರುಗಳಾದ ಫ್ರೆಂಚರ ಮೇಲೆಯುದ್ಧಮಾಡಿ, ತನ್ನ ಸೈನಿಕರು ಜಯಹೊಂದಿದರೆಂಬ ಸಂತೋಷ ವಾರ್ತೆಯನ್ನು ಕೇಳಿ ಮೃತಿಹೊಂದಿದನಂತೆ.

ಜೀವನಕ್ಕೆ ಸಾಲದೆ ಕಷ್ಟಪಡುತ್ತಿದ್ದ ಪಾದ್ರಿಯೊಬ್ಬನಿಗೆ, ಅಕಸ್ಮಾತ್ತಾಗಿ ದೊಡ್ಡ ಸಂಪತ್ತು ಲಭಿಸಿತೆಂದೂ, ಅದನ್ನು ಹೇಗೆ ಉಪಯೋಗಿಸಬೇಕೆಂದೂ ತಿಳಿಯದೆ ಅವನು ಸ್ವಲ್ಪಹೊತ್ತು ದಿಗ್ಭ್ರಮೆ ಹಿಡಿದಂತೆ ನಿಂತಿದ್ದು, ಕೊನೆಗೆ ತನ್ನ ಮನೆಗೆ ಬಂದು ಬಾಗಿಲು ತೆಗೆಯುವುದಕ್ಕಾಗಿ ಬಂದ ತನ್ನ ಹೆಂಡತಿಗೆ ಆ ವೃತ್ತಾಂತವನ್ನು ತಿಳಿಸುವ ಸಂಭ್ರಮದಲ್ಲಿ, ಮಾತಾಡಲಾರದೆ ಮೂರ್ಛೆಬಿದ್ದು, ತಿರುಗಿ ಚೇತರಿಸಿಕೊಳ್ಳಲೇ ಇಲ್ಲವೆಂದೂ ಡಾಕ್ಟರ್ ಟುಕ್ ಎಂಬವರು ತಮ್ಮ ವೈದ್ಯಗ್ರಂಥದಲ್ಲಿ ಬರೆದಿರುವರು.

ಆದುದರಿಂದ ಅಧಿಕ ಸಂತೋಷವು ಆಕಸ್ಮಿಕ ಮರಣಕಾರಿಯೆಂಬುದು ಸುಳ್ಳಲ್ಲ. ಈ ಅಭಿಪ್ರಾಯಗರ್ಭವಾಗಿಯೇ ನಮ್ಮಲ್ಲಿ ಯಾವನಾದರೂ ಒಬ್ಬನು ಅತಿ ಸಂತೋಷದಿಂದ ಬಹಳ ನಗಾಡುತ್ತಿರುವಾಗ, ಇತರರು ಅವನಿಗೆ "ಮರಣಸಂತೋಷ"ವೆಂದು ಹಾಸ್ಯಮಾಡುವುದುಂಟು. ಕೋಪ, ತಾಪ, ಚಿಂತಾದಿ ಮನೋವಿಕಾರಗಳು ಅಪಾಯಕಾರಣವಾಗಿರುವಂತೆಯೇ ಸಂತೋಷವೂ ಮಿತಿಮಿಾರಿದರೆ ಹಾನಿಕರವು. ಇದರಿಂದಲೇ "ಸಮದುಃಖ ಸುಖದ್ವಂದ್ವ" ಎಂಬಂತೆ ಮನೋವಿಕಾರರಹಿತರಾದ ಮಹರ್ಷಿಗಳು ಚಿರಜೀವಿಗಳಾಗಿ ಇದ್ದರೆಂಬುದರಲ್ಲಿ ಸಂದೇಹವಿಲ್ಲ, ಯಾವವಿಧವಾದ ಉದ್ವೇಗವೇ ಆಗಲಿ, ಮನಸ್ಸನ್ನಾವರಿಸಿದರೆ, ಅದರಿಂದ ಪೀಡಿತವಾಗುವ ದೇಹಾವಯವಗಳೆಂಬ ಯಂತ್ರಸಾಧನಗಳು, ಆ ಯಂತ್ರವು ತಟ್ಟನೆ ನಿಂತುಹೋಗುವ ಹಾಗೆ ಮಾಡುವುದು ಆಶ್ಚರ್ಯವಲ್ಲ. ಆಕಸ್ಮಿಕವಾಗಿ ಮಿತಿಮಿಾರಿದ ಸಂತೋಷವು ಮನಸ್ಸಿಗೆ ತೋರಿದರೆ, ಅದರಿಂದ ರಕ್ತದ ಚಲನವು ಬಹಳ ಉದ್ರೇಕಹೊಂದಿ, ಮೆದುಳಿನ ರಕ್ತನಾಳವು ಕಿತ್ತುಹೋಗುವುದರಿಂದುಂಟಾಗುವ ಆಕಸ್ಮಿಕ ಮೂರ್ಛೆಗೆ ಕಾರಣವಾಗುವುದೆಂದು ಹಾಲರ್ ಎಂಬವರು ತಮ್ಮ ಮನಶ್ಶಾಸ್ತ್ರವೆಂಬ ಪುಸ್ತಕದಲ್ಲಿ ಬರೆದಿರುವರು. ಇದಕ್ಕೆ ಅನೇಕ ನಿದರ್ಶನಗಳು ಅನುಭವಸಿದ್ಧವಾಗಿಯೂ ತಿಳಿದಿವೆ. ನಮಗೆ ಸಂತೋಷವೋ ಅಥವಾ ದುಃಖವೋ ಮೊದಲು ಯಾವ ಅವಯವಗಳಿಂದ ಅನುಭವಕ್ಕೆ ಬರುವುದೋ, ಅದೇ ಅವಯವಗಳ ಮೂಲವಾಗಿ ಕೊನೆಗೆ ಅಪಾಯವೂ ಏರ್ಪಡುವುದು. ಈ ವಿಚಾರವನ್ನು [illegible] ಎಂಬವರು ತಮ್ಮ ಪುಸ್ತಕದಲ್ಲಿ ಸವಿಸ್ತಾರವಾಗಿ ಬರೆದಿರುವರು.

ಅಧಿಕಸಂತೋಷದಿಂದ ಪ್ರಜ್ಞೆತಪ್ಪಿ ಮೂರ್ಛೆಬರುವುದು ಅನೇಕ ಕಡೆ ಸಹಜವು, ಇಂತಹ ಸ್ಥಿತಿಯಲ್ಲಿ, ರಕ್ತನಾಡಿಗಳಲ್ಲಿ, ರಕ್ತದ ಒತ್ತುವಿಕೆಯ ವೇಗವು ಹೆಚ್ಚುವುದು. ಈ ವೇಗವು ಸಹಜ ಪ್ರಕೃತಿಗೆ ವಿರುದ್ಧವಾಗಿ ಕೆಲಸ ಮಾಡಿ ಹಾನಿಯಲ್ಲಿ ಪರ್ಯವಸಿತವಾಗುವುದು.

ಅಧಿಕಸಂತೋಷದ ಪರಿಣಾಮಗಳನ್ನು ಇನ್ನೂ ಚೆನ್ನಾಗಿ ಪರಿಶೋಧಿಸುವುದು ಈಗಿನ ಶಾಸ್ತ್ರಶೋಧನೆಗಳಲ್ಲಿ ಬಹಳ ಮುಖ್ಯ ವಿಷಯವೆಂದು ತೋರಿದೆ. ಆದರೂ ಈ ಭಾಗದಲ್ಲಿ ಇನ್ನೂ ತೃಪ್ತಿಕರವಾದ ಗ್ರಂಥಗಳು ಹೊರಕ್ಕೆ ಬಾರದುದು ಶೋಚನೀಯವಾಗಿದೆ.

ಒಬ್ಬ ಮನುಷ್ಯನಿಗೆ ಕೋಪವನ್ನಾಗಲಿ, ಭಯವನ್ನಾಗಲಿ, ದುಃಖವನ್ನಾಗಲಿ ಹುಟ್ಟಿಸುವಷ್ಟು ಸುಲಭವಾಗಿ, ಅವನ ಮನಸ್ಸಿಗೆ ಸಂತೋಷವನ್ನು ಹುಟ್ಟಿಸುವುದು ಸಾಧ್ಯವಲ್ಲ. ಆದರೆ ಮಿತಿಮಿಾರಿದ ಸಂತೋಷದಿಂದ ಮರಣಕ್ಕೀಡಾದ ಮನುಷ್ಯನ ಶವವನ್ನು ಕೊಯ್ದು ಪರೀಕ್ಷಿಸಿ ನೋಡಿದರೆ, ಬಹಳ ಚಮತ್ಕಾರವಾದ ವಿಷಯಗಳು ತೋರಬರುವುವು. ಅಧಿಕಸಂತೋಷದಿಂದ ಮನುಷ್ಯದೇಹದೊಳಗಿನ ಬೇರೆ ಬೇರೆ ಅವಯವಗಳಲ್ಲಿ ಏರ್ಪಡುವ ಬದಲಾವಣೆಗಳನ್ನು [illegible]

[illegible]

(ಅ. ಚಂದ್ರಿಕೆ) [illegible]

ಮಂಗಳೂರು.

ಸ್ವಾಮಿ ಶ್ರದ್ಧಾನಂದ ಸನ್ಯಾಸಿಯವರು ಬರುವ ಆದಿತ್ಯವಾರ ಸಾಯಂಕಾಲ ಇಲ್ಲಿಗೆ ಬರುವ ವಾರ್ತೆ ಇತ್ತು. ಆದರೆ ಅವರು ಕಣ್ಣಾನ್ನೂರಿನಲ್ಲಿ ಅಗತ್ಯ ಕೆಲಸದ ಸಂಬಂಧ ಒಂದು ದಿವಸ ನಿಲ್ಲಬೇಕಾದ್ದರಿಂದ ಇಲ್ಲಿಗೆ ತಾ. ೧೭ನೇ ಮಂಗಳವಾರ ಬೆಳಿಗ್ಗೆ ೯-೩೦ ಗಂಟೆಗೆ ಶಟಲ್ ಟ್ರೈನಿನಲ್ಲಿ ಬರುವರು. ಅದೇ ದಿವಸ ಸಾಯಂಕಾಲ ಗಣಪತಿ ಹೈ ಸ್ಕೂಲಿನಲ್ಲಿ ಅವರು ಹಿಂದೂ ಸಂಘಟನದ ಕುರಿತು ಉಪನ್ಯಾಸ ಕೊಡುವರು. ಎಲ್ಲರಿಗೂ ಸ್ವಾಗತವಿದೆ. ತಾ. ೧೮ನೇ ಬುಧವಾರ ಮೈಲ್ ಬಂಡಿಯಲ್ಲಿ ಮದ್ರಾಸಿಗೆ ಹೊರಟು ಹೋಗುವರು.

ನಾಳೆ ದಿನ ಇಲ್ಲಿಯ ಪೋಲೀಸ್ ಲೈನು ಮೈದಾನಿನಲ್ಲಿ ಪೋಲೀಸರ ಪಂದ್ಯಾಟಗಳು ಜರಗಲಿಕ್ಕಿರುವುದು.

ಪ್ರೊಬೇಶನರಿ ಇನ್ಸ್‌ಪೆಕ್ಟರಾಗಿ ನೇಮಕಪಟ್ಟ ಸಿಸಿಲ್ ಪಿಂಟೋರವರು ಮಂಗಳೂರಿಗೆ ಕೆಲಸದ ಮೇಲೆ ಹಾಜರಾಗಿರುತ್ತಾರೆ.

ಕಾರ್ಕಳದಲ್ಲಿ ದೇವಕಮ್ಮ ಎಂಬ ಹೆಂಗಸನ್ನು ಕೊಂದ ಆರೋಪಣೆಯ ಮೇಲೆ ಇಬ್ಬರಿಗೆ ಜನ್ಮ ಟಾಪು ಶಿಕ್ಷೆ ವಿಧಿಸಿತ್ತು. ಆದರೆ ಹೈ ಕೋರ್ಟಿಗೆ ಅಪೀಲು ಮಾಡಿದ್ದಲ್ಲಿ ಅಪಾದಿತರ ಮೇಲೆ ಸಾಕ್ಷಿ ಸರಿಯಾಗಿಲ್ಲವೆಂದು ಸಜೆಯನ್ನು ತೆಗೆದು ಹಾಕಿರುವರು.

ಇಲ್ಲಿಯ ಡೆಪ್ಯುಟಿ ಕಲೆಕ್ಟರರಾಗಿರುವ ಎ. ಸಿ. ವೂಡ್ ಹೌಸರಿಗೆ ಹತ್ತು ದಿವಸದ ಕೆಜುವಲ್ ಲೀವ್ ಕೊಡೋಣಾಗಿದೆ. ಇವರ ಬದಲಿಗೆ ಟ್ರೆಜರಿ ಡಿಪ್ಯುಟಿ ಕಲೆಕ್ಟರರು ಛಾರ್ಜಿನಲ್ಲಿರುವರು.

ಜಿಲ್ಲಾ ಕಲೆಕ್ಟರವರು ಇದೇ ತಿಂಗಳ ತಾ. ೧೬ಕ್ಕೆ ಪುತ್ತೂರು, ಬೆಳ್ಳಾರೆ, ಸುಳ್ಯ ಅತ್ತಕಡೆ ಸರ್ಕೀಟನ್ನು ಬೆಳಸಿ ತಾ ೩೦ಕ್ಕೆ ಹಿಂತಿರಳುವರು.

ತಲಚೇರಿ, ಬಡಗರ, ಕಣ್ಣಾನ್ನೂರು, ಈ ಬಂದರುಗಳಲ್ಲಿ ಕಠಿಣವಾದ ಬಿರುಗಾಳಿಯ ಸಂಬಂಧ ೬ ನಗಗಳು ಒಡೆದು ಹೋಗಿ ಅವುಗಳಲ್ಲಿರುವ ೪೬ ಜನರನ್ನು (Philadelphia) ಎಂಬ ಸ್ಟೀಮರಿನವರು ಇವರನ್ನು ನೀರಿನಿಂದ ಎತ್ತಿ ತೆಗೆದು ನಿನ್ನೆ ದಿವಸ ಸುಮಾರು ೧೦ ಘಂಟೆ ಸಮಯಕ್ಕೆ ಇಲ್ಲಿಯ ಬಂದರಿನಲ್ಲಿ ಇಳಿಸಿರುವರು. ಸದರಿ ಮಚುವೆಗಳ ೧೬ ಜನ ಖಲಾಸಿಗಳು ಕಾಣದೆ ಹೋಗಿದ್ದಾರಂತೆ ಮತ್ತು ಮಲಬಾರ ಅತ್ತಕಡೆ ಅನೇಕ ನಗಗಳು ನಾಶವಾಗಿದೆಯೆಂದು ವರ್ತಮಾನವಿದೆ.

ತಾ. ೭ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನ್ಸಿಪಾಲಿಟಿಯೊಳಗೆ ೧೮ ಮರಣಗಳೂ, ಮತ್ತು ೩೬ ಜನನಗಳು ಇದರ ಪೈಕಿ ಗಂಡು ೧೬, ಹೆಣ್ಣು ೨೦.

— ಗೋವಧೆ. —

(ಲೇಖಕ: ಪುಣಚೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು)

ಸುಮಾರು ಹತ್ತು ಮಿಲಿಯ ಗೋವುಗಳನ್ನು ಹಿಂಸಾಪೇಕ್ಷೆಯ ಮನುಷ್ಯರ ಆಹಾರಕ್ಕಾಗಿ ಜೀವದಲ್ಲಿಯೇ ಕಡಿಯುತ್ತಾರೆ! ಸುಮಾರು ಹತ್ತು ಲಕ್ಷ ಜಾನುವಾರಗಳನ್ನು ಪ್ರಾಣದಲ್ಲೆ ಕೊಂದು ಮಾಂಸವನ್ನು ಪರದೇಶಕ್ಕೆ ಕಳುಹಿಸುತ್ತಾರೆ!! ಸುಮಾರು ಹತ್ತು ವರ್ಷದ ಹಿಂದೆ ಕಸಾಯಿ ಅಂಗಡಿಗಳು ಇದ್ದುದಕ್ಕಿಂತ ಈಗ ಎಪ್ಪತ್ತುಪಾಲು ಹೆಚ್ಚಾಗಿವೆ!!! ಅಂತೂ ಇಂತೂ— ಮಾಂಸಾಹಾರಿಗಳಾದ ನರಹುಲಿಗಳ ಭಕ್ಷ್ಯಕ್ಕಾಗಿ,— ಲಾಭದಾಸೆಯಿಂದ ಪರದೇಶಕ್ಕೆ ರವಾನಿಸುವ ಮಾಂಸಕ್ಕಾಗಿ,— ಮಾನವಾಸುಕಲ್ಪದ ವಿವಿಧ ವಸ್ತು ರಚನೆಯ ಚರ್ಮಕ್ಕಾಗಿ— ಈ ಪುಣ್ಯಭೂಮಿಯಲ್ಲಿ ಪ್ರತಿ ವರ್ಷವೂ ಅಸಂಖ್ಯಾತವಾಗಿ ಗೋವಧೆಗಳಾಗುತ್ತಿವೆ. ಆ ಪಶುರಕ್ತಪ್ರವಾಹದಿಂದ ಭಾರತ ಭೂದೇವಿಯು ಅಶುದ್ಧಳಾಗಿದ್ದಾಳೆ! ಗೋಮಾತೆಯ ರುಧಿರಧಾರೆಯಿಂದ ಭೂಮಾತೆಯೂ ಸಕಳಂಕಳಾಗಿ ಅನಾಥಳಾಗಿ ನರಳುತ್ತಿದ್ದಾಳೆ!!!

ಕರುಣಾಲವಾಲ ಗೋಪಾಲ! ಹೇ ನಂದಿವಾಹನ! ಈ ಪುಣ್ಯಭೂಮಿಯಲ್ಲಿ—ಈ ಧರ್ಮಸಾಮ್ರಾಜ್ಯದಲ್ಲಿ— ಇಂತಹ ಪಾಪಮಯವಾದ ಅಧರ್ಮಕಾರ್ಯವನ್ನುನೋಡುವಂತಾಯಿತೆ! ಪಶುಪತೀ! ಕಣ್ಣೆನಲ್ಲಿ ರಕ್ತವಿಲ್ಲದ ಮನುಷ್ಯರ ಈ ದೈತ್ಯಕೃತ್ಯವು—ಈ ಗೋಹತ್ಯವು ಎಷ್ಟು ಭಯಾನಕವಾಗಿರುವುದು? ಗೋವ್ವತ್ಸಗಳನ್ನು ಚೆನ್ನಾಗಿ ಹೊಡೆದು ಬೇಕಾದಂತೆ ದುಡಿಸಿಕೊಂಡು, ಅವುಗಳ ಬೆವರು ಕಣ್ಣೀರು,—ರಕ್ತಗಳಿಂದ ಬೆಳೆದು ರಸಭರಿತವಾದ ದವಸಧಾನ್ಯಗಳನ್ನು ತಿಂದು ತೇಗುವ ರೈತಬಂಧುಗಳೇ—ದಯಾರಹಿತರಾಗಬೇಡಿರಿ. ಕರುವಿಗೆ ಸಹಾ ಕೊಡದೆ ನೆತ್ತರು ಸುರಿಯುವ ತನಕ ಕರದು ಗೋಕ್ಷೀರದಿಂದ ಬೆಳೆದು ದೃಢಕಾಯರಾದ ಕೋಮಲ ಭಗಿನಿಯರೇ! ಕಠೋರಚಿತ್ತರಾಗಬೇಡಿರಿ. ಹೆತ್ತ ತಾಯ ಮೊಲೆಹಾಲಿಂದಲೂ ಅಧಿಕವಾಗಿ ತನ್ನ ಸವಿಹಾಲನಿತ್ತು, ನಮ್ಮನ್ನು ವೃದ್ಧಿಗೆ ತರುವ ಕಾರ್ಯದಲ್ಲೇ ಮುಪ್ಪನ್ನು ವಹಿಸಿದ ಆ ಗೋಮಾತೆಯು ಹಿಂದೆ ನಮಗೆ ಮಾಡಿದ ಪ್ರಾಣಪ್ರದವಾದ ಅಸಾಧಾರಣವಾದ ಉಪಕಾರಗಳೆಲ್ಲವನ್ನೂ ಒಮ್ಮಿಂದೊಮ್ಮೆಯೇ ಮರೆತು ಕೃತಘ್ನರಾಗಿ ನಾಲ್ಕಾರು ರೂಪಾಯಿಗಳ ಆಸೆಗಾಗಿ, ನಿರ್ದಾಕ್ಷಿಣ್ಯಚಿತ್ತರಾಗಿ ಅವುಗಳ ಕೊರಳನ್ನು ಕಟುಕರ ಕೈಯಲ್ಲಿ ಕೊಡಬಹುದೆ? ನಮ್ಮನ್ನು ಸಾಕಿ ಸಲಹುವ ತಾಯಿತಂದೆಗಳಂತೆ ಪೋಷಿಸುವ ಗೋವ್ವತ್ಸಗಳನ್ನು ವೃದ್ಧಾಪ್ಯದಲ್ಲಿ ಕಟುಕರ ಖಡ್ಗಕ್ಕೀಡುಮಾಡಬಹುದೆ? ಹೆತ್ತ [illegible]? ನಮ್ಮನ್ನು ಪೋಷಿಸಿದ ಎರಡನೆಯ ಮಾತೆಯೇ ಆದ ಗೋಮಾತೆಯನ್ನು ಕೊಲ್ಲಬಹುದೆ? ಕೊಲ್ಲಿಸಬಹುದೆ? ಗೋವಧೆಗೆ ಅನುಕೂಲವಾಗಿರುವುದು ದುಷ್ಕಾರ್ಯಕಳವೆಂಬುದು ಶಾಸ್ತ್ರಸಿದ್ಧಾಂತವಲ್ಲವೆ? ಧನವೇ ಧನವು ಗೋಧನವರ್ಧನವೇ ಭೂಧನವರ್ಧನವು ಎಂದಮೇಲೆ ಈ ಸ್ವರ್ಣಭೂಮಿಯು ಇಂದಿನ ಬಡತನಕ್ಕೆ ಗೋಧನವು ಕ್ಷಯವಾಗಿರುವುದೂ ಒಂದು ಕಾರಣವಾಗಿದೆ. ಗೋಮಾತೆಯ ಉದ್ಧಾರವಾಗದೆ ಭೂಮಾತೆಯು ಉದ್ಧಾರವಾಗಲಾರದು. ಆದರಲ್ಲಿಯೂ ಕೃಷಿಪ್ರಧಾನವಾದ [illegible]

[illegible]

ಮನುಷ್ಯ ವರ್ಗಾಯ ಮಾಡುವ ಪುಣ್ಯಜೀವಿಯು ಪ್ರಾಣಿಕೋ! ಅದು ಕೊಡುತ್ತಿರುವ ಹಿಂದೊಂದು ವಸ್ತುವಿನ ಗ್ರಂಥಗಳನ್ನೇ ಬರೆಯಬಹುದು. ಸೊಸ್ಟ್ಯದ ಅತ್ಯುಪಯುಕ್ತವಾಗಿರುವ ಹಾಲು, ಮೊಸರು, ಬೆ ಗೋಮಯ, ಗೋಮೂತ್ರಾದಿ ಅನೇಕ ಪ್ರಯೋಜ ಕುಲದಿಂದಲೇ ಲಭಿಸುವವು. ಗದ್ದೆಯ ವಿಧಾನ್ಯದ ವ್ಯಾಪಾರಕ್ಕೂ, ಯಂತ್ರದಿಂದ ನೀರೆತ್ತಲಿಕ್ಕೂ, ಆಲೆ ಎಳೆಯಲಿಕ್ಕೂ ಬಂಡಿಯನ್ನೆಳೆಯಲಿಕ್ಕೂವನ ಯಾತ್ರೆಯನ್ನು ಸಾಗಿಸಲು ಅತ್ಯಗತ್ಯವಾದ ಸಹಾಯಕವೇ ಅವಶ್ಯವಾಗಿದೆ. ಇಂತಹ ಪಾವನ ಗೋ ಎನ್ನೊಂದು ವರ್ಣಿಸಲಿ!

ಉಳಿದಾಗ ಮಹಾ ಗೋಕುಲದ ಉಪಕಾರವು ಅಪಾರವಾಗಿರುತ್ತದೆ. ಗೋರೋಜನ, ಹಣೆಗೆ, ಗುಟ್ಟಿ, ಹಿಡಿಗಳಿಗೆ ಬೆರಸು, ಪಾದರಕ್ಷೆ, ತಿದಿ, ದೋಲು, ಮೃದಂಗಾದಿವಾದ್ಯಯಾಗಿ ತನ್ನ ಸರ್ವಸ್ವವನ್ನು ಮನುಷ್ಯನಿಗೆ ಕಟ್ಟಾಗಿಯೆ ಆಡಿಸುವ ಈ ಸಾಧು ಪಶುಪ್ರಾಣಿಯೂ ಲೋಕಕ್ಕೆ ಮಾಡುವ ಉಪಕಾರಗಳಿಗೆ ಪ್ರತಿಂ ಕೃತಜ್ಞರಾಗಿರುವುದನ್ನು ಬಿಟ್ಟು—ಅಯ್ಯೋ!—ಕೃತಗಳನ್ನು ಚಿತ್ರವಧೆ ಮಾಡಿ ಕೊಲ್ಲುವ ನಿರ್ದಯ ಶನವ ದ್ವಾಳ್ವೃತ್ತಿಯನ್ನು ದಯಾಮಯಳಾದ ಗೋಪಾಲ ಸಹಿಸಿಕೊಂಡಾಳು? ಕೃಪಾಳು!

ಹಿಂದೂ, ಮುಸ್ಲಿಂ, ಕ್ರಿಶ್ಚನೆಂಬ ಭೇದಾಭೇದವಿಲ್ಲದೆ ನಿಷ್ಪಕ್ಷಪಾತನಿಯು ಸಕಲರಿಗೂ ಏಕಪ್ರಕಾರವಾಗಿ ಪ್ರಸನ್ನಳಾಕೃತಿಯಾಗಿ— ಹರಿ ಹರಿ! ಗೋವಧೆಯನ್ನು ನಕ್ಕುರುವ ಹಿಂದೂ ಮತಾವಲಂಬಿಗಳೇ ಗೋಮಾತೆರಾಶಿ ಧಾರೆಯ ಬಾಯಿಗೆ ಬಲಿಗೊಟ್ಟು, ಧ್ವಂಸವ ತಿರುಗುವುದೆಂದರೆ ಇನ್ನು ಈ ದ ಅನ್ಯಮತಾನುಯಗೋಹತ್ಯದ ಅಕೃತ್ಯವನ್ನು ದೂರಿ ಫಲವೇನು?

ಗೋವಿಗೆ ಆ ಐಯನೇ ಹಿಂದೊಮ್ಮೆ ತನ್ನ ಕೈಹಿಡಿಯಲ್ಲಿದ್ದ ದನ; ತಾನು ಹಿಂದೆಮಾಡಿದ ಗೋಹತ್ಯಕಾಗಿ ಪಶ್ಚಾತ್ತಪ ಪಶುಪ್ರಾಣಿಯು ಪಡತಲದಲ್ಲಿ ಪ್ರಾಣವನ್ನು ಆ 'ಗೋವಿನ ಕಥೆ'ಯನ್ನು ಅರಿಯದವನಾರು? ಹಿ ಬಾಂಧವರು ಆ ಮಹೋಗ್ರವಾಕ್ಯನಿಂದಲೂ ಕಣ್ಣಾಣಿಯಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿಸಬಲ್ಲ'ಶಾಸ್ತ್ರ'ವನ್ನು ಪ್ರಯೋಗಿಸಬಹುದೆ?

ದೇಶಬಂಧುಗಳೆ! ಕುಪ್ಪಾದ ಪ್ರಾಣಿಯೂದ ಪಶುವಿಗೆ ಏಕಕ್ಕಾಗಿ ಏನು? ಆ ಧರ್ಮಶಾಸ್ತ್ರದಲ್ಲಿ ಪೂಜ್ಯಳಾದ ಗೋದೇವಿಯಿಂದ ಬಲ್ಲೆಸಿರುವರು? ಆ ಪುರಾಣಗಳಲ್ಲಿ ವಿಟನ್ನು ಏಕಕ್ಕೆ ಮನೋಹರವಾಗಿ ವರ್ಣಿಸಿರುವರು(ಶ್ರೇಷ್ಠ ನಿಗಳಾದ) ಬ್ರಾಹ್ಮಣರಿಗೆ ಗೋದಾನವನ್ನು ದೇಕೆ? ಕಲ್ಯಾಣೋತ್ಸವದಲ್ಲಿ ದಂಪತಿಗಳಿಗೆ ಕೆಂದು ಮಾಡಿರುವುದೇಕೆ? ಭೋಜನಸಮಾರಂಭದ'ಗ್ರಾಸ'ವನ್ನು ತೆಗೆದಿಡುವುದೇಕೆ? ಪ್ರಯಾಣ ಸಮಯದ ಶುಭಶಕುನವೆನ್ನುವದೇಕೆ? ವರ್ಷಕ್ಕೊಮ್ಮೆಯನ್ನು ಅಬ್ಬರದಿಂದ ಆಚರಿಸಬೇಕೆನ್ನುವುದೇಕೆ? ದುಸವಗಳನ್ನು ಪೂಜಿಸುವುದೇಕೆ? ಕಾಮಧೇನುವುಪೋಷಿಸುವುದೇಕೆ? ಆಲೋಚಿಸಿರಿ! ಪರಿಯಾಲೋ!

ರಘುವಂಶ ತಿಲಕನು ನಂದಿನಿಯ ಕೃಪಾಕಟಾಕ್ಷ ವೀಕ್ಷಣಕ್ಕೆ ಸಾಹಸವನ್ನು ಮಾಡಿದನು? ಅರಿತಿಮಿರಮಿತ್ರ ವಿಶ್ವಾಮಿತ್ರನಲ್ಲಿಂದ ಕಾಮಧೇನು ವನ್ನೊಯ್ಯಬೇಕೆಂದು ಬಿಡನು? ಲೋಕಾಭಿರಾಮ ಬಲ ರಾಮನು ತನ್ನ ಹತ್ಯವಾಯಿತೆಂದು ತಿಳಿದು ಆ ಪಾಪ ಪರಿಹಾರವನ್ನು ವಹಿಸಿಕೊಂಡನು? ರಾಧಾಮೋಹನನು. ಗೋವಿ ಎಷ್ಟು ಶ್ರಮವನ್ನು ಸಹಿಸಿಕೊಂಡನು? 'ಗೋಬ್ರಾಹ್ಮಣ'ರಕ್ಷಾಗ್ರದಲ್ಲಿ ಎಷ್ಟು ಉತ್ಸಾಹವನುಳವನ್ನು ಶಿವಾಜಿ ಮಹಾರಾಜನು ಗೋರಕ್ಷಣೆವನಾಗಿದ್ದನು? ಇಂತಹ ಚಿರಸ್ಮರಣೀಯ ಪುರಾತನಮಹಾಪುರುಷರು, ದಧೀಚಿ ಮೊದಲಾದ ಧೀರೋದಾತ್ತಭೂಮಿಯಲ್ಲಿ ಹುಟ್ಟಿದ ಇಂದಿನ ಹಿಂದೀಯರುಗಳನ್ನು ಕರಾಲದಿಂದ ಕರಕರನೆ ಕತ್ತರಿಸಿ, ಮರೆಂದರೆ—ದೈವವೇ!—ಅದು ಕೇಳುವ ಕಾಲ ಬಂದಿ

ಭೂತದಯಾತ್ಮಿಕ ಭಾ

ಜ್ವಲಿತರವಾಗುವರಾ ।
ಹುಲಿಮಚ್ಚಿ ಗೆಂಬಾ ॥
ಮಲೆತು ಮಥಾ ।
ಫಲದ ಗೋಕ್ಷಿವ ॥

ಆ ಅಹಿಂಸಾತ್ಮ ಮಹಾತ್ಮಾ ಗಾಂಧಿಗಳಗೋರಕ್ಷಣೆಯೇ ಹಿಂದೂ ಧರ್ಮದ ಮುಖ್ಯ ಕೈ ಜಾತಿಯ ವಿಕಾಸದಲ್ಲಿ ಗೋರಕ್ಷಣೆಯು ಒಂದು ಚಮತ್ಕಾರಪೂರ್ಣವಾದ ಸಂಗತಿಯಾಗಿದೆ. ಸ ಸ್ವಭಾವಿಕ ಮರ್ಯಾದೆಗಿಂತ ಹೆಚ್ಚು ಮೇಲೆ

ಈ ಪ್ರಕಾರದ ಮಹಾತ್ಮರ ಭಗಿ[illegible] ಪ್ರಯತ್ನವನ್ನು ನೋಡಿ 'ಪ್ರಾಣಿದಯಾ ಜ್ಞಾನ ಪ್ರಸಾರಕ ಸಂಘ'ದ ಆಗಾಮಿನ 'ಗೋಸೇವಕ' ನಂತಹ ವಿಖ್ಯಾತ ಪತ್ರಿಕೆ ಸಂಸ್ಥೆ'ಗಳಿಗೆ ಸಹಾಯಕರಾಗಿರಿ! ಗೋವಂಶವನ್ನುದ್ಧರಿಸಿರಿ!

"ಗವಾಂದೃಷ್ಟ್ವಾ ಪ್ರದ[illegible] ।
ಪ್ರದಕ್ಷಿಣೀಕೃ[illegible] ॥ ೧ ॥
ಸರ್ವಧರ್ಮ[illegible] ।
[illegible] ॥ ೨ ॥

ರಾಷ್ಟ್ರೀಯ ಶಿಕ್ಷಣ.

ನಾನು ಇತ್ತೀಚೆಗೆ 'ಯಂಗ್ ಇಂಡಿಯ'ದಲ್ಲಿ ಖಾದಿ, ಅಸ್ಪೃಶ್ಯತೆ ಮತ್ತು ಹಿಂದು-ಮುಸಲ್ಮಾನ ಐಕ್ಯದ ವಿಷಯ ಯಾವಾಗಲೂ ಬರೆಯುತ್ತೇನಾದರೂ ರಾಷ್ಟ್ರೀಯ ಶಿಕ್ಷಣದ ಸಂಬಂಧ ಒಂದು ಶಬ್ದವನ್ನಾದರೂ ಬರೆಯುವುದಿಲ್ಲವೆಂದು ಕೆಲವು ರಾಷ್ಟ್ರೀಯ ಶಿಕ್ಷಣ ಪ್ರೇಮಿಗಳು ಖೈದಿಹಾರಿನಲ್ಲಿ ನನ್ನ ಮೇಲೆ ಆರೋಪವನ್ನು ತಂದರು. ಈ ಮಾತು ನಿಜವಾದರೂ, ಹಿಂದೂಸ್ಥಾನದ ಅತ್ಯಂತ ವಿಶಾಲವಾದ ವಿದ್ಯಾಪೀಠದೊಡನೆ ನನಗೆ ಗಹನವಾದ ಸಂಬಂಧವಿರುವುದರಿಂದ ಆರೋಪವು ಸಕಾರಣವಾಗಿಲ್ಲ. ನಾನು ಇಂದು ರಾಷ್ಟ್ರೀಯ ಶಿಕ್ಷಣದ ವಿಷಯ ಲೇಖಗಳನ್ನು ಬರೆಯುವುದರಿಂದ ಅದಕ್ಕೆ ಯಾವ ಸಹಾಯವೂ ಆಗುವಂತಿಲ್ಲ. ಈಗಿರುವ ರಾಷ್ಟ್ರೀಯ ಶಿಕ್ಷಣದ ಸಂಸ್ಥೆಗಳನ್ನು ಯೋಗ್ಯ ರೀತಿಯಲ್ಲಿ ನಡೆಸುವುದರ ಮೇಲೆಯೇ ಅದರ ಮುಂದಿನ ಪ್ರಗತಿಯು ನಿರ್ಧರವಾಗಿದೆ. ಸರಕಾರಿ ವಿದ್ಯಾಲಯಗಳಲಿ ತಮ್ಮ ಅಶಕ್ತತೆ, ವ್ಯಾಮೋಹ ಅಥವಾ ಅಶ್ರದ್ಧೆಯ ಮೂಲಕ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳೊಡನೆ ಇಂದು ಶಾಲಾ ಬಹಿಷ್ಕಾರ ಮಾಡಲಿಕ್ಕೆ ಪ್ರಾರ್ಥಿಸುವ ಅವಶ್ಯಕತೆಯಿಲ್ಲ; ಏಕೆಂದರೆ ಅವರು ಅದರ ಗುಣದೋಷಗಳನ್ನು ಈ ಮೊದಲೇ ಅರಿತಿರುವರು. ಶಿಕ್ಷಕರ ಚಾರಿತ್ರ್ಯ ಮತ್ತು ಯೋಗ್ಯತೆಯ ಬಲದಿಂದ ರಾಷ್ಟ್ರೀಯ ಸಂಸ್ಥೆಗಳನ್ನು ಅಧಿಕ ದೃಢ ಮತ್ತು ಲೋಕಪ್ರಿಯ ಮಾಡುವುದೇ ಅವರ ಅಶಕ್ತತೆ, ವ್ಯಾಮೋಹ ಮತ್ತು ಅಶ್ರದ್ಧೆಯನ್ನು ದೂರ ಮಾಡುವುದಕ್ಕೆ ಏಕಮಾತ್ರ ಉಪಾಯವಾಗಿರುತ್ತದೆ.

ಅನೇಕ ಶಾಲೆಗಳ ಉಪಾಧ್ಯಾಯರು ತಮ್ಮ ಶಾಲೆಗಳ ಪರವಾಗಿ ನಾನು 'ಯಂಗ್ ಇಂಡಿಯ'ದಲ್ಲಿ ವಿಜ್ಞಾಪನೆಗಳನ್ನು ಕೊಡಬೇಕೆಂದಾಗಲಿ, ಅವರ ವಿನಂತಿಪತ್ರಗಳ ಮೇಲೆ ನಾನು ಸಹಿಮಾಡಬೇಕೆಂದಾಗಲಿ, ಯಾಚಿಸುವರು. ಕೆಲವು ಅತ್ಯುತ್ತಮ ಸಂಸ್ಥೆಗಳನ್ನು ದುರ್ಲಕ್ಷಿಸುವ ಅಪವಾದವನ್ನು ಹೊರಬೇಕಾಗುವುದಾದರೂ ನಾನು ಈ ಮೋಹದಿಂದ ದೂರವಿರಬೇಕು. ಶಾಲೆಗಳ ಶೀಘ್ರ ಸಂದರ್ಶನದ ಕಾಲಕ್ಕೆ ನನ್ನ ಮನಸ್ಸಿಗೆ ಕೆಟ್ಟ ಅಭಿಪ್ರಾಯವಾದರೆ ಅದರಿಂದ ಯಾವ ಸಂಸ್ಥೆಗೂ ಹಾನಿಯಾಗಬಾರದು; ಅಥವಾ ತಪ್ಪುಗ್ರಹಿಕೆಯಿಂದ ಒಳ್ಳೇ ಅಭಿಪ್ರಾಯವಾದರೆ ಅದರಿಂದ ಯಾವ ಅಯೋಗ್ಯ ಸಂಸ್ಥೆಗೂ ಪ್ರತಿಷ್ಠೆಯು ದೊರೆಯಬಾರದು. ಯಾವದೇ ಯೋಗ್ಯ ಸಂಸ್ಥೆಯಾದರೂ ಸಹಾಯ ದೊರೆಯದೆ ನಷ್ಟವಾಗಬಾರದೆಂದು ನನ್ನ ದೃಢ ವಿಶ್ವಾಸ. ಯಾವುದಾದರೂ ಸಂಸ್ಥೆಯು ನಷ್ಟವಾದರೆ ಅದರಲ್ಲಿ ಶಿಕ್ಷಕರಿಗೆ ಶ್ರದ್ಧೆಯಿಲ್ಲದಿರುವುದು ಅಥವಾ ಜನರ ಚಿತ್ತವನ್ನು ಅಪಹರಿಸುವ ಯಾವ ಗುಣವಾದರೂ ಇಲ್ಲದಿರುವುದೇ ಕಾರಣಗಳಾಗಿವೆ. ಇದೇ ಯೋಗ್ಯ ವಿದ್ಯಾಲಯಗಳ ಪರೀಕ್ಷೆಯ ಸಮಯವಾಗಿದೆ. ದೊಡ್ಡ ದೊಡ್ಡ ವಿಘ್ನ ಮತ್ತು ಬಾಧೆಗಳನ್ನೆದುರಿಸುತ್ತಿರುವ ಹಾಗೂ ತಮಗೆ ಅವಶ್ಯಕತೆಗಳು ದೊರೆಯದಿದ್ದರೂ ತಮ್ಮಲ್ಲಿ ಮತ್ತು ತಮ್ಮ ಉದ್ದೇಶದಲ್ಲಿ ಸಂಪೂರ್ಣ ಶ್ರದ್ಧೆಯಿಂದ ಶಿಕ್ಷಕರಿರುವ ಶಾಲೆಶಾಲೆಗಳು ಇಂದು ಹಿಂದೂಸ್ಥಾನದಲ್ಲಿವೆ. ಇವುಗಳಿಗೆ ಕೊನೆಯಲ್ಲಿ ಯಶಸ್ಸು ದೊರೆಯದಿರಲಾರದು. ಜನರು ಇಂಥ ಸಂಸ್ಥೆಗಳನ್ನು ಅಧ್ಯಯನ ಮಾಡಿ ಯೋಗ್ಯ ಕಂಡರೆ ಸಹಾಯ ಮಾಡಬೇಕೆಂದು ನನ್ನ ಮತವು.

ಅನೇಕ ಶಾಲೆಗಳಲ್ಲಿ ನೂಲುವುದು ಇಂದಿನ ರೂಢಿಯಾಗಿದೆಯೆಂದು ಮಾತ್ರ ಇಟ್ಟಿರುವುದನ್ನು ನಾನು ನೋಡಿರುವೆನು. ಇದರಿಂದ ನೂಲುವುದಕ್ಕೂ ವಿದ್ಯಾರ್ಥಿಗಳಿಗೂ ಅನ್ಯಾಯಮಾಡಿದಂತಾಗುವುದು. ನೂಲುವುದು ಅವಶ್ಯಕ ಮತ್ತು ಅನಿವಾರ್ಯವೆಂದಾದರೆ ಅದನ್ನು ಇತರ ವಿಷಯುಗಳಂತೆಯೇ ಶಾಸ್ತ್ರೀಯ ರೀತಿಯಲ್ಲಿ ಕಲಿಸಬೇಕು. ರಾಟೆಗಳು ಯಾವಾಗಲೂ ಕೆಲಸಮಾಡಲು ಯೋಗ್ಯವಿರಬೇಕು. ಪ್ರತಿ ದಿವಸ ವಿದ್ಯಾರ್ಥಿಗಳು ನೂಲುವುದರಲ್ಲಿ ಮಾಡುವ ಪ್ರಗತಿಯನ್ನು ಪರೀಕ್ಷಿಸಬೇಕು. ಇಷ್ಟೆಲ್ಲ ಆಗಬೇಕಾದರೆ ಎಲ್ಲ ಶಿಕ್ಷಕರಿಗೂ ನೂಲುವ ಕಲೆಯು ಚೆನ್ನಾಗಿ ಬರುತ್ತಿರಬೇಕು. ಅದಕ್ಕಾಗಿಯೇ ಪ್ರತ್ಯೇಕ ಪ್ರವೀಣನನ್ನಿಡುವುದು ಹಣದ ದುರುಪಯೋಗವು. ಶ್ರದ್ಧೆಯುಳ್ಳ ಉಪಾಧ್ಯಾಯರು ಎರಡೇ ತಿಂಗಳಲ್ಲಿ ನೂಲುವುದರಲ್ಲಿ ಪ್ರವೀಣರಾಗಬಹುದು. ವಿದ್ಯಾರ್ಥಿಗಳಿಗೆ ಮನೆಯಲ್ಲಿ ನೂಲುವುದಕ್ಕೆ ರಾಟೆಯ ಉಪಯೋಗವನ್ನು ಕಲಿಸುತ್ತಿದ್ದರೂ ಶಾಲೆಯಲ್ಲಿ ನೂಲುವುದಕ್ಕೆ ರಾಟೆಯ ಉಪಯೋಗವನ್ನು ಕಲಿಸುತ್ತಿದ್ದರೂ ಶಾಲೆಯಲ್ಲಿ ನೂಲುವುದಕ್ಕೆ 'ತಕ್ಲಿ'ಯೇ ಒಳ್ಳೇಯದು, ಒಬ್ಬೊಬ್ಬರು ನೂರು ಗಜದಂತೆ ೫೦ ಹುಡುಗರು ರಾಟೆಯಲ್ಲಿ ದಿವಸಕ್ಕೆ ೫೦೦೦ ಗಜ ನೂಲು ತೆಗೆಯುವುದರ ಬದಲಿಗೆ ಪ್ರತಿ ಒಬ್ಬರು ೩೫ ಗಜ ಮಾತ್ರವಾದರೂ ೫೦ ಹುಡುಗರು 'ತಕ್ಲಿ'ಯಲ್ಲಿ ದಿವಸಕ್ಕೆ ೧೭೫೦ ಗಜ ನೂಲು ತೆಗೆಯುವುದೇ ಒಳ್ಳೇಯದು.

(ಸತ್ಯಾಗ್ರಹೀ) ಮೋ° ಕ° ಗಾಂಧೀ.

ಪತ್ರವ್ಯವಹಾರ.

ಗಂಧರ್ವ ಗಾಯನ ಶಾಲೆ.

ನಮ್ಮ ಜಿಲ್ಲೆಯಲ್ಲಿ ಮಂಗಳೂರು ಮುಖ್ಯ ಪಟ್ಟಣದಲ್ಲಿ ಇತ್ತೀಚೆಗೆ ವಿವಿಧ ವಿದ್ಯಾರ್ಜನೆಗೆ ತವರು ಮನೆಯಾಗಿ ಅನೇಕ ವಿದ್ಯಾರ್ಥಿಗಳು ಶಿಕ್ಷಣ ಹೊಂದುತ್ತಿರುವರು. ಈ ಜನಕ ಮಣಿಗೆ ಬದ್ಧರುವ ಯಕ್ಷಗಾನವು ಪುನರ್ಜೀವನ ಹೊಂದುವ ಸಂಭಗಳೂ ತೋರುತ್ತ ಬರುತ್ತಿವೆ. ಜಿಲ್ಲೆಯ ಅನೇಕ ಭಾಗಗಳಲ್ಲಿ ಅವಕ್ಕೆ ಈಗೀಗ ಪುಷ್ಟಿಕೊಡುತ್ತಾ ಬರುತ್ತಿರುವರು. ಯಕ್ಷಗಾನವೂ ಸಂಪೂರ್ಣವಾಗಿ ಅಡಗಿ ಬಿದ್ದಿತ್ತು ಎಂತ ಹೇಳಕಾರಣವಿಲ್ಲ. ಯಾಕೆಂದರೆ ದಶಾವತಾರ ಎಂಬ ಆಟವು ಆಗಾಗ್ಗೆ ಚಿಗುರು ಹುಟ್ಟಿಸುತ್ತಿರುವ ಈ ಗಾನವು ಹಳ್ಳಿನಾಡುಗಳಲ್ಲಿ ಅಲ್ಲಲ್ಲಿ ಜೀವಕಳೆ ಹೊಂದುತ್ತಿರುವವು. ಗಂಧರ್ವಗಾನವು ಹಾಗಲ್ಲ. ಅರಸುಮಕ್ಕಳಂತೆ ತಮ್ಮ ಭವ ಮಾನ ಸ್ಥಾನ ಬಿಟ್ಟು ತಿರುಗಾಡಲಾರವು. ಈ ಗಾನಕ್ಕೆ ಪಟ್ಟಣಗಳಲ್ಲಿ ಒಬ್ಬೊಬ್ಬರು ಪುಷ್ಟಿ ಕೊಟ್ಟು ಅಲ್ಲಲ್ಲಿ ಅಪರೂಪವಾಗಿ ಹುಟ್ಟಿ ಸಾಯುವದುಂಟು. ಈ ಗಂಧರ್ವ ಗಾನವು ಬಾಳಿ ಬದುಕಿ ಜನರಲ್ಲಿ ಬೋಧನೆಗೆ ಬರಬೇಕಾದರೆ ಪ್ರತ್ಯೇಕವಾಗಿ ಸರ್ಕಾರದವರು ಕ್ರಮದಿಂದ ನಡಿಸುವ ಒಂದು ಏರ್ಪಾಟಿನ ಶಾಲೆ ಇರಬೇಕು. ಈ ಗಾನವನ್ನು ಏನೂ ಅರಿಯದ ಒಂದೆರಡು ವರ್ಷದ ಮಗು ಕೂಡ ತೊಟ್ಟಿಲಲ್ಲಿ ಮಲಗಿಕೊಂಡು ಜೋ ಜೋ ಹಾಡುವ ಜೋಗುಳವನ್ನು ಮೌನದಿಂದ ಕೇಳಿ ಪವಡಿಸುತ್ತಿರುವವು. ಮಕ್ಕಳಿಗೆ ಇದಕ್ಕಿಂತ ಪ್ರಿಯವಾದದ್ದು ಯಾವದೂ ಇಲ್ಲ. ಕೆಲವು ಮಕ್ಕಳು ಎಲ್ಲಿಯಾದರೂ ವಾದ್ಯಗಳನ್ನು ಬಾರಿಸುತ್ತಿದ್ದರೂ, ಗಾನಮಾಡುತ್ತಿದ್ದರೂ ಕೇಳಿದೊಡನೆ ಅನ್ಯರ ಪ್ರೇರಣೆ ಇಲ್ಲದೆ ಕೈಕಾಲುಗಳನ್ನು ಅಲ್ಲಾಡಿಸುವವು, ಕುಣಿಯುವವು, ಹಾರುವವು, ಕೈಯಿಂದ ತಾಳತಟ್ಟುವವು. ಹಾಗಾದರೆ ಗಂಧರ್ವಗಾನ ಎಷ್ಟು ಅಮೌಲ್ಯವಾದದೆಂದು ಮಗುವೇ ಸಾಕ್ಷಿ. ಇದು ನಾವು ಪ್ರತ್ಯಕ್ಷವಾಗಿ ಕಂಡ ವಿಷಯವಾಗಿದೆ. ಈ ವಿಧವಾದ ಸ್ವಭಾವವಾಗಿದೆ. ಇದಕ್ಕೆ ಪ್ರೋತ್ಸಾಹಕೊಡುವ ತಮ್ಮನ್ನಾಳುವವರ ಕರ್ತವ್ಯವಾಗಿದೆ. ಆದುದರಿಂದ ಶಾಲೆಗಳಲ್ಲಿ ಇದೊಂದು ವಿಷಯಕ್ಕೆ ಗಮನಕೊಡುವದು ಅಗತ್ಯವಾಗಿದೆ. ಮೊದಲಾಗಿ ಈ ನೋಟವು ಸಾಧ್ಯವಾಗಬೇಕಾದರೆ ಟ್ರೈನಿಂಗ್ ಶಾಲೆಯಲ್ಲಿ ಈ ವಿದ್ಯೆಯಲ್ಲಿ ಪಾಂಡಿತ್ಯಹೊಂದಿದವನೊಬ್ಬನನ್ನು ನೇಮಿಸಿ ಪ್ರತಿ ಒಬ್ಬನಿಗೆ ಇಂತಿಷ್ಟು ಗಂಟೆಯಿಂದ ಇಂತಿಷ್ಟು ಗಂಟೆ ವರೆಗೆ ಕಲಿಸುವದೆಂತ ಟ್ಯಾಮ್ ಟೇಬಲಲ್ಲಿ ಸೇರಿಸಬೇಕು. ಈ ವಿದ್ಯೆಯು ಒಂದು ಕ್ರಮವನ್ನು ಅನುಸರಿಸಿ ವ್ಯಾಕರಣದಂತೆ ಇದೆ. ಈ ವಿದ್ಯೆಯನ್ನು ಕ್ರಮದಲ್ಲಿ ಕಲಿತರೆ ಮೈಸೂರಿನವನೂ ಮಂಗಳೂರಿನವನೂ ಒಂದೇ ವಿದ್ಯಾ ಸಾಹಿತಿಯಲ್ಲಿ ಒಂದೇ ಸಮನಾಗಿ ಬಾರಿಸಬಹುದು. ಇಂಥಾ ಗಾನದ ಪದಗಳು ಸಹಜವಾಗಿ ಗಂಡಸರಲ್ಲಾಗಲಿ ಹೆಂಗಸರಲ್ಲಾಗಲಿ ನಮ್ಮ ನಮ್ಮ ಮನೆಗಳಲ್ಲಿ ಯಾವದೊಂದು ಕೆಲಸ ಮಾಡುವಾಗಲೂ, ಹೆಂಗಸರು ಮಕ್ಕಳನ್ನು ಆಡಿಸುವಾಗಲೂ ಪದರೂಪವಾದ ಮಾತುಗಳನ್ನಾಡಿ ಹಾಡುವರು, ಕೆಲವರು ಬಾಯಿಗೆ ಬಂದದ್ದನ್ನು ರಾಗದಿಂದ ಹಾಡುತ್ತಿರುವದೂ ಉಂಟು. ಪೂರ್ವದಲ್ಲಿ ಹಿಂದು ರಾಜರು ತಮ್ಮ ರಾಜ್ಯದಲ್ಲಿ ಇದಕ್ಕೆ ಉತ್ತೇಜನಕೊಡುತ್ತಿದ್ದರು. ಆದುದರಿಂದ ಜಿಲ್ಲಾ ಎಜ್ಯುಕೇಶನಲ್ ಆಫೀಸರರು ಶಾಲೆಗಳಲ್ಲಿ ಕ್ರಮವಾಗಿ ಕಲಿತವರಿಂದ ರಾಗದ ಮಟ್ಟನ್ನೂ, ತಾಳದ ಮಟ್ಟನ್ನೂ ಕಲಿಸುವ ಏರ್ಪಾಡು ಮಾಡಿದರೆ ಪಾಠದಲ್ಲಿ ಸೋತ ಮನಸ್ಸು ಆಟದಲ್ಲಿ ಪುನರ್ಜೀವನವಾಗುವಂತೆ ರಾಗದಲ್ಲಿ ಉಲ್ಲಾಸಗೊಳಿಸುತ್ತಿರುವದು.

ಒಬ್ಬ ಗಾನಪ್ರಿಯ.

ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಇನ್ನಾದರೂ ಬಡ ರೈತರ ಪರವಾಗಿ ಚರ್ಚಿಸತಕ್ಕ ಮುಖ್ಯ ವಿಷಯಗಳು.

ಕಳೆದ ಒಕ್ಟೋಬರ ತಿಂಗಳ ತಾ. ೨೩ನೇ 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ತಾ. ೨೮ಕ್ಕೆ ಜರಗುವ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸತಕ್ಕ ಅನೇಕ ವಿಷಯಗಳನ್ನು ನೋಡಿ ತುಂಬಾ ಆನಂದಭರಿತರಾದೆವು. ಆದರೆ 'ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ' ಎನ್ನುವ ಮಾತಿನಂತೆ ಅದರಲ್ಲಿ ಬರೆದಿರುವ ಠರಾವುಗಳೆಲ್ಲಾ ಪೇಟೆ ಪಟ್ಟಣವಾಸಿಗಳ ಪ್ರಯೋಜನಾರ್ಥವಲ್ಲದೆ ಹಳ್ಳಿಯ ಜನರ ಸಂಕಷ್ಟಗಳ ನಿವಾರಣೆಯ ಕುರಿತು ಯಾವದೊಂದೂ ವಿಷಯವೂ ತೋರದೆ ಹೋದುದನ್ನು ನೋಡಿ ತುಂಬಾ ಬೇಜಾರಕ್ಕೆ ಆಸ್ಪದವಾಯಿತು. ಆದರೆ ಹಳ್ಳಿ ಜನರ ಸಂಕಷ್ಟಗಳು ವರ್ಗದಾರರುಗಳಲ್ಲದೆ ಪೇಟೆ ನಿವಾಸಿಗಳಿಗೆ ಗೊತ್ತಿರಲು ಕಾರಣವೂ ಇಲ್ಲ. ಆದರೆ ನಮ್ಮ ಜಿಲ್ಲೆಯ ಜನರ ಪರವಾಗಿ ಕೌನ್ಸಿಲು ಮೆಂಬರಿಕೆಗಳಿಗೆ ಹೋದಂತಹ ಮಹನೀಯರು ಓಟಿನ ಕಾಲದಲ್ಲಿ ಪ್ರಯತ್ನಿಸುವಂತೆ ಒಂದು ವರ್ಷದಲ್ಲಿ ನಾಲ್ಕು ತಿಂಗಳ ಕಾಲವನ್ನು ಹಳ್ಳಿ ಜನರ ಪರವಾಗಿ ಉಪಯೋಗಿಸಿದ್ದರೆ ಅವರು ಬಹುಮಾನಕ್ಕೂ, ಬಕ್ಕಿಗೂ, ಮೆಂಬರರಾದುದಲ್ಲದೆಂತ ರೈತರು [illegible] ನಾವು ಕೃತಾರ್ಥರಾಗುತ್ತಿದ್ದೆವು. ಅಲ್ಲವೆ?

ಸಭೆಯಲ್ಲಿ ಚರ್ಚಿಸ ಬೇಕಾದ ಮುಖ್ಯ ವಿಷಯಗಳು.

(೧) ಫಾರೆಸ್ಟು ಬವುಂಡರಿ ಲೈನುಗಳ ಒಳಗೆ ಇರುವಂತಹ ಮೈದಾನುಗಳಲ್ಲಿ (Grazing Grounds) ಜಾನುವಾರು ಮೇಯಿಸಲು ಈಗ ಧಾಸು ಒಂದರ ೬ ಮತ್ತು ೧೦ ಆಣೆಗಳಂತೆ ವಸೂಲು ಮಾಡುತ್ತಾರೆ. ಇದನ್ನು ಮನ್ನಾಪಡಿಸಬೇಕು. ಫಾರೆಸ್ಟು ಸರ್ವೆ ಕಾಲದಲ್ಲಿ ಫೀಸಿಲ್ಲದೆ ಜಾನುವಾರು ಮೇವಿಗೆ ಅಂತಹ ಮೈದಾನಗಳನ್ನು ಬಿಡುತ್ತೇವೆಂದು ರೈತರಿಗೆ ಬಾಯಿದೆರೆ ವಾಗ್ದಾನಮಾಡಿರುತ್ತಾರೆ. ಆದರೆ ಈಗ ಫರ್ಮಾಯಿಲ್ಲದೆ ಸದರಿ ಬವುಂಡರಿ ಒಳಗಿರುವ ಸ್ಥಳಗಳಿಗೆ ಜಾನುವಾರುಗಳು ಹೋಗಕೂಡದೆಂದು ಹುಕುಮು ಜಾರಿಗೆ ತಂದಿರುತ್ತಾರೆ. ಇದನ್ನು ಆಲೋಚಿಸಿ ನೋಡಿದರೆ 'ಓದುವುದು ಶಾಸ್ತ್ರ ಇಕ್ಕುವುದು ಗಾಳ' ಎನ್ನುವ ಮಾತಿನಂತೆ ಆಯಿತು. ಇನ್ನಾದರೂ ಈ ವಿಷಯದಲ್ಲಿ [illegible]ಚಿಸುವಂತೆ ಸಂಬಂಧಪಟ್ಟ ಅಧಿಕಾರರಲ್ಲಿಯೂ, ಕೌನ್ಸಿಲು ಮೆಂಬರರಲ್ಲಿಯೂ ನಮ್ಮ ಅರಿಕೆಯು.

(೨) ಫಾರೆಸ್ಟು ಸರ್ವೆ ಕಾಲದಲ್ಲಿ ವರ್ಗದಾರರ 'ಹಕ್ಕಿಗೆ' ಸೇರಿದಂತಹ ಕಾನ ಸ್ಥಳಗಳನ್ನು 'ಬಜಾರಿಗೆ' ಮಾಡಿರುತ್ತಾರೆ. ಇದಕ್ಕೆ ರೈತರು ಅಕ್ಷೇಪಣೆ ಹೇಳದ್ದಕ್ಕೆ ಎಕ್ರೆ ಒಂದರ ಒಂದು ರೂಪಾಯಿಯ ಪ್ರಕಾರ [illegible] ಕೊಟ್ಟು ಕೊಡದೆಯೂ ಬಲಾತ್ಕಾರದಿಂದ ಲೈನು ಒಳಗೆ ಸೇರಿಸಿರುತ್ತಾರೆ. ಹೊಲದ ಪೈರನ್ನು ಕಾಪಾಡಲು 'ಬೇಲಿ' ಅಟ್ಟುವುದು. [illegible] ಹೋಗಿ ಪೈರನ್ನು ತಿನ್ನಲು ಪ್ರಾರಂಭಿಸಿದ ಪಕ್ಷದಲ್ಲಿ ಕೇಳುವವರು ಯಾರು? ಇದರಂತೆಯೇ ನಮ್ಮ [illegible] ಸರಕಾರದವರು ಮಾಡುವ ತಪ್ಪು [illegible]

ಕೇಳುವರು? ಇನ್ನಾದರೂ ಕಾಡು ಬೆಳೆಯುವ ಬದಲಿಗೆ ಅಂತಹ ಸ್ಥಳಗಳನ್ನು ರೈತರಿಗೆ ಕೊಡಿಸಿ ಕೊಡಿಸಬೇಕಾಗಿ ನಮ್ಮ ಅರಿಕೆಯು. ಅಲ್ಲದೆ ರಿಜರ್ವ ಕಾಡಿನೊಳಗೆ ಬೇಸಾಯಕ್ಕೆ ಅತಿ ಒಳ್ಳೆಯ ಅನೇಕ ಬಾಗಾಯಿತು, ನಂಜ, ಮತ್ತು ಪುಂಜ ಮಾಡಬಹುದಾದ ಸ್ಥಳಗಳಿರುತ್ತವೆ. ಅವುಗಳನ್ನು ರೈತರ ಉಪಯೋಗಕ್ಕೆ ಕೊಡಿಸಿದರೆ ತುಂಬಾ ಅನುಕೂಲವಾಗುತ್ತಿತ್ತು.

(೩) ಫಾರೆಸ್ಟು ಡಿಪಾರ್ಟುಮೆಂಟಿನವರು ಆನೆಗಳ ಹಾವಳಿ ಇರುವಂತಹ ಜಾಗೆಗಳಲ್ಲಿ ಅವುಗಳನ್ನು ಹಿಡಿಸುವ ಏರ್ಪಾಡು ಮಾಡಿಸುವುದಿಲ್ಲ. ಅವುಗಳು ಕೊಡುವ ಉಪದ್ರವನ್ನು ಸಹಿಸುವುದು ಅಸದಳವು. ರೈತರ ಗದ್ದೆ, ಹೊಲಗಳಿಗೆ ಬಂದು ಆಗುವ ನಷ್ಟಕ್ಕೆ ಸರ್ಕಾರದವರು 'ಕಿಸ್ತಿ'ಯಲ್ಲಿ ರಿಯಾಯತಿ ತೋರಿಸುವುದಿಲ್ಲ. ಒಂದು ವೇಳೆ ಹೊಲಗದ್ದೆ ಮತ್ತು ತೋಟಕ್ಕೆ ಆನೆಗಳು ಬಂದಾಗ ರೈತರು ಅದರಿಂದಾಗುವ ನಷ್ಟವನ್ನು ಸಹಿಸಲಾರದೆ ಗುಂಡುಹೊಡೆದು ಬಿಡುತ್ತಾರೆ. ಅಂತಹ ಆನೆಗಳು ಒಂದು ವೇಳೆ ರಿಜರ್ವಿನಲ್ಲಿ ಹೋಗಿ ಬಿದ್ದು ಸತ್ತರೆ, ರೈತರ ಮೇಲೆ ತಪ್ಪು ಹೊರಿಸಲು ಪ್ರಯತ್ನಿಸುತ್ತಾರೆ. ಇದು ನ್ಯಾಯವೆ? ಇನ್ನಾದರೂ ಈ ವಿಷಯದಲ್ಲಿ ಅವರು ಆಲೋಚಿಸುವಂತೆ ಏರ್ಪಾಡಾಗಬೇಕು.

(೪) ಇಂಗ್ಲೀ ಇಲಾಖೆಯವರು ಈಗ ಉಪ್ಪಿನಂಗಡಿ ತಾಲೋಕಿನ ನಾಲ್ಕೂರು ಬ್ಲೋಕಿನಲ್ಲಿ 'ಕೂಪು' ಎಂಬುದಾಗಿ ಮರಗಳನ್ನು ಬೆಳೆಯಿಸುವ ಏರ್ಪಾಡಿನಲ್ಲಿದ್ದಾರೆ. ಆದರೆ ಇವರು ಈಗ ಮಾಡಿಸುವ ಕೆಲಸವು ವ್ಯರ್ಥವೆಂದು ಹೇಳಲು ಅಡ್ಡಿ ಇಲ್ಲ. ಈ ವಿಷಯಗಳನ್ನು ಸರ್ವದಾ ಈ ಪ್ರಾಂತ್ಯದಲ್ಲಿ ವಾಸಿಸುವ ಅನುಭವಜ್ಞರು ಹೇಳಿದರೆ ಸದರಿ ಡಿಪಾರ್ಟಮೆಂಟಿನ ಉದ್ಯೋಗಸ್ಥರು 'ಇದರ ವಿಷಯ ನಿಮಗೇನು ಅನುಭವವಿದೆ! ನಾವಾದರೋ 'ಡಿಗ್ರಿ'ಗಳನ್ನು ಪಡೆದು ಬಂದಿರುತ್ತೇವೆ' ಎಂಬುದಾಗಿ ತಿರಸ್ಕರಿಸಿ ಬಿಡುವರು. ಇದರಂತೆಯೇ ಮಂಗಳೂರು ಮಡಿಕೇರಿ ರಸ್ತೆಯಲ್ಲಿ ಸಂಪಾಜೆಗೆ ಸಮೀಪ 'ಚೈಲಿ' ಎನ್ನುವ ಸ್ಥಳದಲ್ಲಿ 'ಡಿಗ್ರಿ' ಹೊಂದಿದಂತಹ ಧಿಕ್ಕಾರದಿಂದ ಸಾಧಾರಣ ಮೂರು ಸಾವಿರ ರೂಪಾಯಿ ಮಣ್ಣುಪಾಲಾಯಿತು! ಇಂತಹ ಸರಕಾರದ ಉದ್ಯೋಗಸ್ಥರು ಮಾಡುವ ತಪ್ಪನ್ನು ಯಾರೂ ಕೇಳಲಿಕ್ಕಿಲ್ಲವೇ? ಆ ಸ್ಥಳದಲ್ಲಿ ಈಗ 'ಡಿಗ್ರಿ' ಪಡೆಯದಂತಹ ಜಮೀನ್ದಾರರ ಅನುಭವಕ್ಕೆ ಸರಿಯಾಗಿ ಮಾಡಿಸಿದ ಹೊಸ ಖರ್ಚಿನ ರಸ್ತೆಯಲ್ಲಿ ದೊಡ್ಡ ದೊಡ್ಡ ಬಸ್ಸುಗಳು ಸಹಾ ಹೋಗಿ ಬರುತ್ತವೆ. ಇದರಂತೆಯೇ ಮೇಲಿನ ವಿಷಯಕ್ಕೂ ಹಣ ವೆಚ್ಚ ಮಾಡಿದರೆ ಬರುವ ಪ್ರಯೋಜನವು ಕಾಡುಗಳಿಂದ 'ಬೀಳು' ಕಡಿಸಬೇಕಲ್ಲದೆ ಮರಗಳ ಅಡಿಯಲ್ಲಿರುವ ಕಾಡುಗಳನ್ನು ತೆಗಿಸುವುದು ಒಳ್ಳೆಯದಲ್ಲ! ಮತ್ತು ಕಾಡಿನಲ್ಲಿ ಸಾಧಾರಣ ಹದಿನಾರು ಅಡಿಗಳ ದೂರದಲ್ಲಿ ಮೂರು ಫೀಟು ಅಗಲವಿರುವಂತಹ ತುಂಬಾ ಲೈನುಗಳನ್ನು ಕಡಿಸಲು ತೊಡಗಿದ್ದಾರೆ. ಇದರಿಂದ ಕಾಡಿನೊಳಗೆ 'ನೆಟ್ಟಗೆ' ಬೆಳೆಯುವಂತಹ 'ಕಿರಾಲ' 'ಭೋಗಿ' ಸಸಿಗಳು ಬಿಸಿಲು ಬಿದ್ದು 'ಗೇರು ಬೀಜ' ಮರದಂತೆ ಬೆಳೆಯ ತೊಡಗಿದ್ದು ಕಂಡದ್ದವ ಹತ್ತಿರ 'ದೊಡ್ಡ ಕಾನ'ದಲ್ಲಿ ಈ ಮುಂಚೆ ತಯಾರಿಸಿದ 'ಕೂಪಿ'ನಿಂದ ತಿಳಿಯಬಂದೀತು. ಬಡ ರೈತರಿಂದ ಜಾನ್ವಾರು ಫೀಸೆಂದು ಹಣ ವಸೂಲು ಮಾಡಿ ಹೀಗೆ ವ್ಯರ್ಥ ವ್ಯಯಮಾಡುವುದರಿಂದ ಉಂಟಾಗುವ ಸುಕೃತಫಲಗಳೇನು? ಇದಕ್ಕೆ ಬದಲಾಗಿ ಜಾನ್ವಾರು ಮೇವಿಗೆ ಫರ್ಮಾಟು ರದ್ದುಮಾಡಿ ಮೇವಿಗೆ ಯೋಗ್ಯವಾದ ಸ್ಥಳಗಳನ್ನು ಬಿಟ್ಟುಕೊಟ್ಟರೆ ಅದರ ನಮ್ಮ ಜಿಲ್ಲೆಯಿಂದ 'ಜಗಳ' ನೆತ್ತರು ಹೀರುವಂತೆ ಪ್ರತಿವರ್ಷವೂ ಮೈಸೂರು ದೇಶಿಕರು ಜಾನ್ವಾರನ್ನು ವಿಕ್ರಯಿಸಿ ಹಣ ಲಕ್ಷಗಟ್ಟಲೆಯಲ್ಲಿ ಕೊಂಡುಹೋಗಲಾರರು. ಈ ಮೇಲೆ ಬರೆದ ವಿಷಯಗಳಲ್ಲಿ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಆಲೋಚಿಸಿ ನಮ್ಮ ಕೋರಿಕೆಯನ್ನು ಈಡೇರಿಸುವರೆಂತಲೂ, ಕೌನ್ಸಿಲ್ ಮೆಂಬರರು ಆಲೋಚಿಸದೆ ಎಂದಿಗೂ ಇರಲಾರರೆಂತಲೂ ನಮ್ಮ ನಂಬುಗೆಯು.

ವರ್ಗದಾರ.

ಮಹಾಶಯ!

ಸ್ವದೇಶಾಭಿಮಾನಿಯ (ತಾ. ೨೩-೧೦-'೨೫)ರ೩ನೇ ಸಂಚಿಕೆಯಲ್ಲಿ 'ಲೋಕಲ್ ಬೋರ್ಡುಗಳ ಮೆಂಬರರು' ಎಂಬ ಶಿರೋಲೇಖನದಿಂದ ಬರೆದಿರುವ ತಮ್ಮ ವಿಚಾರವನ್ನು ಓದಿ, ಪುನಃ ಓದಿ ಆ ಕುರಿತು ನನ್ನ ಅಭಿಪ್ರಾಯವನ್ನು ತಮ್ಮ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕುತೂಹಲಪಟ್ಟೆನು. ತಾವು ತಮ್ಮ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಬರೆದಿರುವಂತೆ, ಒಂದರ ಹಿಂದೆ ಒಂದು ಹೀಗೆ ಮೂರು ಮೀಟಿಂಗಿಗೆ ಹಾಜರು ಆಗದಿರುವ ಮೆಂಬರರನ್ನು ಲೋಕಲ್ ಬೋರ್ಡು ಕ್ರಮವಿದೆಯೆಂಬ ಕಾರಣದಿಂದ ಬೋರ್ಡು ಸಭೆಯಲ್ಲಿ ಆರಿಸಲು ಪಿತ್ಯ ಮೆಂಬರರು ತಮ್ಮ ಅನುಕೂಲ ಮತಕೊಡುವದಾದರೂ ಬೋರ್ಡುಗಳ ಕರ್ತವ್ಯಸಾಧನಕ್ಕೆ ಗೌರವವಲ್ಲವೆಂಬುದೇನೊ ನಿಜವೇ. ಅಂಥಾ ಮೆಂಬರರು ಸಾರ್ವಜನಿಕ ಹಿತದ ಪರವಾಗಿ ಕೆಲಸ ಮಾಡಲು ನಿಜವಾಗಿಯೂ ಅಶಕ್ತರೇ. ಆದರೆ ಇದರಂತೆ ಕಳೆದ ಡಿಸ್ಟ್ರಿಕ್ಟ ಬೋರ್ಡು ಮೀಟಿಂಗಿನಲ್ಲಿ ಮೂರು ಮೀಟಿಂಗಿಗೆ ಹಾಜರು ಆಗದವರನ್ನು ಪುನಃ ಚುನಾವಣೆ ಮಾಡಿಲ್ಲವೆಂದೂ, ಕಳೆದ ಸಾರಿ ಆರಿಸಿದವರು ಒಂದೇ ಸಾರಿ ಗೈರುಹಾಜರು ಆದವರೆಂದೂ, ಲೋಕಲ್ ಬೋರ್ಡು ಕ್ರಮದಂತೆ ಮೂರು ತಿಂಗಳಲ್ಲಿ ಹಾಜರು ಆಗದವರೆಂತ ಉಲ್ಲೇಖವಿರುವುದರಿಂದ ಎರಡನೇ ಸಾರಿ ಹಾಜರು ಆಗದವರು ಎರಡನೇ ಸಾರಿ ತಮ್ಮ ಹಕ್ಕನ್ನು ಕಳೆದುಕೊಳ್ಳುವರೆಂದೂ, ಅಂಥವರನ್ನು ಮೀಟಿಂಗಿನಲ್ಲಿಯೇ ಪುನಃ ಆರಿಸುವುದು ನ್ಯಾಯವೆಂದೂ ಎಂಥಾ ಸಾರ್ವಜನಿಕ ಕೆಲಸದಲ್ಲಿ ಪ್ರೇಮವುಳ್ಳವನಾದಾಗ್ಯೂ ಒಂದೂ ಸಾರಿ ತಪ್ಪದೆ ಇರಲು ಸಾಧ್ಯವಿಲ್ಲವೆಂದೂ, ದೇಹಾಲಸ್ಯಾದಿ ಸಂಸಾರಿಕ ತಾಪತ್ರಯಗಳಿಂದ ಸರ್ವರನ್ನೂ ಬಿಟ್ಟಿಲ್ಲವೆಂದೂ ಒಂದೇ ಸಾರಿ ತಪ್ಪಿದವನನ್ನು ಹೊರತಳ್ಳುವುದು ನ್ಯಾಯವಲ್ಲವೆಂದೂ ಇದರಿಂದ ಸಾರ್ವಜನಿಕ ಹಿತವಾಗದೆ ಅಹಿತವೇ ಆಗುವದೆಂದೂ ಈ ಎಲ್ಲಾ ಕಾರಣಗಳನ್ನು ವಿಚಾರಮಾಡಿಯೇ ಕಳೆದ ಸಾರಿ ಡಿಸ್ಟ್ರಿಕ್ಟ ಬೋರ್ಡು ನ್ಯಾಯಸಮ್ಮತವಾದುದನ್ನೆ ಮಾಡಿಯದೆಂದೂ ನಾನು ಅಭಿಪ್ರಾಯಪಡುತ್ತೇನೆ.

ಸಜ್ಜನ ವಿಧೇಯ,

ಅವನಾಸೆಬೈಲು ಕೃಷ್ಣರಾಯ ಕೊಡಿಗಿ.

ಡಿಸ್ಟ್ರಿಕ್ಟ ಬೋರ್ಡು ಮೆಂಬರ್.

ಡಿಸ್ಟ್ರಿಕ್ಟ ಬೋರ್ಡಿನ ಗೈರು ಹಾಜರಾದ ಮೆಂಬರರ ಪುನಃ ಚುನಾವಣೆಯು ಯೋಗ್ಯ ವಿಚಾರ ಪೂರ್ವಕ ಮಾಡಿದ್ದೆಂದು, ಡಿಸ್ಟ್ರಿಕ್ಟ ಬೋರ್ಡು ಮೆಂಬರರು ಪ್ರತಿಪಾದಿಸಿದ್ದನ್ನು ನೋಡಿ ನಮಗೆ ಸಂತೋಷವಾಯಿತು. ಎಲ್ಲಾ ಲೋಕಲ್ ಬೋರ್ಡುಗಳೂ, ಮ್ಯುನಿಸಿಪಾಲಿಟಿಗಳೂ, ಮುಂದೆಯೂ ಹಾಗೆಯೇ ತಮ್ಮ [illegible]ರವನ್ನುಪಯೋಗಿಸುವರೆಂದು ಆಶಿಸುವೆವು. (ಸಂ!)

ಪುತ್ತೂರು ಬೋರ್ಡು ಹೈಸ್ಕೂಲಿನಲ್ಲಿ ಕಲಿಯುವ ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಸ್ಥಾಪಿಸಲ್ಪಟ್ಟಿರುವ ದೀಪಾವಳಿ ಫಂಡು.

ಪುತ್ತೂರು ಬೋರ್ಡು ಹೈಸ್ಕೂಲಿನಲ್ಲಿ ಕಲಿಯುವ ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಸ್ಥಾಪಿಸಲ್ಪಟ್ಟಿರುವ ದೀಪಾವಳಿ ಫಂಡಿನ ಒಂಭತ್ತನೆಯ ವರ್ಷದ ವರದಿಯನ್ನು ಈ ಮೊದಲೇ ಪತ್ರಗಳ ಮುಖಾಂತರ ವಾಚಕ ಮಹಾಶಯರ ಮುಂದಿಟ್ಟಿರುವೆನು. ಈ ಫಂಡಿನಲ್ಲಿ ಸರಕು ಶೇರುಗಳಲ್ಲಿ ರೂ. ೩೦೦೦ ಮೂಲಧನವಾಗಿದೆಯೆಂದೂ, ವರದಿ ವರ್ಷದಲ್ಲಿ ರೂ. ೧೯೬-೧೧-೦ ವಿದ್ಯಾರ್ಥಿವೇತನಕ್ಕಾಗಿಯೂ, ರೂ. ೩೩-೮-೯ ಉಚಿತಾರ್ಥವಾಗಿ ಕೊಟ್ಟ ಪಠ್ಯಪುಸ್ತಕಗಳಿಗಾಗಿಯೂ ವೆಚ್ಚವಾಗಿದೆಯೆಂದು ಅದರಿಂದ ಕಾಣುವುದಷ್ಟೆ. ನಾಲ್ಕೈದು ವರ್ಷಗಳಿಂದ ಪುತ್ತೂರು ಪೇಟೆಯಿಂದಲೂ ನೆರೆಗ್ರಾಮಗಳಿಂದಲೂ ಮಾತ್ರ ದೀಪಾವಳಿ ಸಂದರ್ಭದಲ್ಲಿ ಧನ ಸಂಗ್ರಹವನ್ನು ಮಾಡುತ್ತಿದ್ದೆವು. ಈ ಸಾರಿ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಆರೇಳು ಪಂಗಡವಾಗಿ ಉಪ್ಪಿನಂಗಡಿ ತಾಲೂಕಿನ ಅನೇಕ ಗ್ರಾಮಗಳಿಗೆ ಹೋಗಿ ಬಹಳವಾಗಿ ಶ್ರಮಪಟ್ಟಿರುವರು. ಇದರಿಂದ ಶ್ರಮದ ಫಲವಾಗಿ ಮೇಲಿನ ತಾರೀಕು ವರೆಗೆ ರೂ. ೧೯೩-೩-೧ ಜಮೆಯಾಗಿರುವುದು, ಬಡ ವಿದ್ಯಾರ್ಥಿಗಳಿಗಾಗಿ ಇವರು ಪಟ್ಟ ಶ್ರಮವು ಸ್ತುತ್ಯರ್ಹವಾದುದು. ಅಪರಿಚಿತರಾದ ಇವರಿಗೆ ದಾರಿಯಲ್ಲಿ ಅಲ್ಲಲ್ಲಿ ಊಟ ಉಪಚಾರವನ್ನು ಒದಗಿಸಿಕೊಟ್ಟು ಧನಸಂಗ್ರಹ ವಿಷಯದಲ್ಲಿ ಸಹಾಯಮಾಡಿದ ಎಲ್ಲಾ ಮಹನೀಯರಿಗೂ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ. ಧನಸಹಾಯ ಮಾಡಿದ ಮಹಾಶಯರ ಹೆಸರನ್ನು ಅವರು ಕೊಟ್ಟ ಐವೇಜನ್ನೂ ಕೆಳಗೆ ಪ್ರಕಟಿಸುವೆನು. ಸ್ಥಳಸಂಕೋಚದ ದೆಸೆಯಿಂದ ಎಲ್ಲರ ಹೆಸರನ್ನೂ ಇಲ್ಲಿ ಪ್ರಕಟಿಸಲು ಸಾಧ್ಯವಾಗದಿದ್ದುದಕ್ಕೆ ಅಂಥವರು ದಯವಿಟ್ಟು ಮನ್ನಿಸಬೇಕಾಗಿ ಅಪೇಕ್ಷೆ.

ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ರೂ. ೪೦, ಕಾಟೂರು ವಿಷ್ಣುಮಯ್ಯನವರು, ಗುಂಡಿ ನಾರಾಯಣ ಪದ್ಮನಾಭ ಪಾಡಿಲ್‌ಕಾರರು, ರೂ. ೧೨ರಂತೆ, ಕಂಜರ್ಪಣೆ ವೆಂಕಟ್ರಮಣಯ್ಯ ರೂ. ೧೦, ಎಣ್ಮಾರು ಕಟ್ಟದ ಮನೆ ಪಟೇಲ ಸಂಕಪ್ಪಯ್ಯಗಳು ರೂ. ೮, ಕಾಚಿಲ ಸುಬ್ರಾಯರು ನಾರಾಯಣ ಭಟ್ಟ ಬಿಡೇಯವರು ರೂ. ೬ ರಂತೆ, ಉಬರದ್ಕ ತಿಮ್ಮಪ್ಪಯ್ಯ ಭಟ್ಟರು, ನಾರಣಕಜೆ ನಾರಾಯಣಯ್ಯ, ಶಿವಣ್ಣ ಕೋಳತ್ತಾಯರು, ನೆಲ್ಲಿಕುಂಜೆ ಕೃಷ್ಣಯ್ಯ, ಮಂಗಲಪಾಡಿ ಗಣಪಯ್ಯ, ಕೆದಿಲ ನಾರಣಪ್ಪಯ್ಯ, ನೆಟ್ಟಾರು ಸುಬ್ಬಣ್ಣಯ್ಯ, ಬಿ. ವೆಂಕಟಕೃಷ್ಣರಾಯರು, ಎಮ್. ಆರ್. ಚಂದ್ರನವರು, ವಿಟ್ಲ ಶ್ರೀನಿವಾಸ ಪಡ್ಡಿಲ್ಲಾಯ, ಸುಬ್ರಹ್ಮಣ್ಯ ಶ್ರೀ ವಿಶ್ವಜ್ಞ ತೀರ್ಥ ಶ್ರೀಪಾದಂಗಳು, ಪುಲ್ಲಡ್ಕ ಕೆ. ಸುಬ್ರಾಯರು, ಮುಳ್ಯ ಬಾಗಿಲು ವೆಂಕಟ್ರಮಣಯ್ಯ, ಪುಚ್ಚಪಾಡಿ ಗೋಪಾಲಯ್ಯ, ನಡುಮನೆ ಗೋವಿಂದಯ್ಯ, ಬಾಕಿಲಂಗಡಿ ಇಸ್ಮಾಯಿಲ್ ಬ್ಯಾರಿ; ಮೊಗರ ದೊಡ್ಡಮನೆ ನಾರಣಪ್ಪಯ್ಯ, ಗಬ್ಬಿಲಡ್ಕ ವಿಷ್ಣುಮಯ್ಯ ಕರ್ವಜೆ ಮಹಾಲಿಂಗ ಜೋಯಿಸರು, ಬರ್ಕಾಯ ಭಟ್ಟ, ವಿಶ್ವೇಶ್ವರ ಭಟ್ಟರು, ಬೆಳಗಜೆ ತಿಮ್ಮಪ್ಪಯ್ಯ, ಕೋಡಿಂಬಾಡಿ ಮಂಜಪ್ಪ ಶೆಟ್ಟರು, ಬಜಕೆರೆ ಸಾಲು ಕೃಷ್ಣಭಟ್ಟ ಬಿಡೆಯವರು, ಮುದಲಾಜೆ ಜನಾರ್ದನ ಭಟ್ಟ, ಕೆ. ಎನ್. ಜೋಯಿಸುಬ್ಬಯ್ಯರು, ಸವ್ಣೂರ ಶಿವರಾಯರು, ಎಮ್. ಶಿವರಾಯರು, ರೂಪಾಯಿ ೫ ರಂತೆ.

ರೂ. ೫ಕ್ಕಿಂತ ಕಡಿಮೆ ಕೊಟ್ಟವರ ವಸೂಲುಗಳು ಕೂಡಿ ಜುಮ್ಲಾ ರೂಪಾಯಿ ೧೧೩-೩-೧೦

M. RAMAN NAMBYAR,
Headmaster,
For Secretary,
Puttur Educational Society

ವಿವಿಧ ವಿಷಯಗಳು.

ಮೌಲಾನಾ ಆಜದರ ಅಭಿಪ್ರಾಯ,

ಓಲ್ ಇಂಡಿಯಾ ಯುನಿಟಿ ಕಾನ್ಫರೆನ್ಸಿನಲ್ಲಿ ಪಾಸಾದ ಠರಾವಿನಂತೆ ಮುಸಲ್ಮಾನರ ಮಸೀದಿಗಳಲ್ಲಿ ತಮ್ಮ ಪ್ರಾರ್ಥನೆ ಮಾಡುತ್ತಿರುವಾಗ್ಗೆ ಹಿಂದುಗಳು ಮಸೀದಿಯ ಹತ್ತಿರ ವಾದ್ಯಗಳನ್ನು ಮಾಡಿದರೆ ಅವರಿಗೆ ತೊಂದರೆಯಾಗುತ್ತದೆಯಾಗಿಯೂ ಮತ್ತು ಮುಸಲ್ಮಾನರು ದನಗಳನ್ನು ಕೊಂದರೆ ಅದು ಹಿಂದುಮತಕ್ಕೆ ವಿರೋಧವಾದುದಾಗಿ ಈ ಎರಡು ಪ್ರಶ್ನೆಗಳನ್ನು ಯುನಿಟಿ ಕಾನ್ಫರೆನ್ಸಿನಲ್ಲಿ ತಕ್ಕ ವ್ಯವಸ್ಥೆಗೆ ತರಬೇಕೆಂದು ಪಾಸಾದಂತೆ ಹಿಂದೂ ಮುಸಲ್ಮಾನರ ಮುಖಂಡರು ಯಾವ ತರದ ಪ್ರಯತ್ನಗಳನ್ನು ತೆಗೆದುಕೊಳ್ಳದೆ ಇದ್ದ ಕಾರಣವು ತನಗೆ ತಿಳಿಯುವುದಿಲ್ಲವಾಗಿಯೂ, [illegible] ಮತ್ತು ಪಂಡಿತ ಮೋತಿಲಾಲಜಿಯವರು ನಾಗಪೂರಿನಲ್ಲಿ ನಿರ್ಣಯಿಸಿದಂತೆ ಇತರ ಕಡೆಗಳಲ್ಲಿ ಸಹ ಏನೊಂದೂ ಪ್ರಯತ್ನಗಳು ಕಾಣುವುದಿಲ್ಲ. ಆದುದರಿಂದ ಯುನಿಟಿ ಕಾನ್ಫರೆನ್ಸಿನಲ್ಲಿ ಸೇರಿದ ಮುಖಂಡರೆಲ್ಲರೂ ಈ ಎರಡು ಪ್ರಶ್ನೆಗಳ ಕುರಿತು ತಕ್ಕ ವ್ಯವಸ್ಥೆಯನ್ನು ಕೇಳುತ್ತಾರೊ ಇಲ್ಲವೊ ಎಂಬ ಸಂಗತಿಯನ್ನು ತಿಳಿಸಬೇಕಾಗಿಯೂ ಮತ್ತು ಅದಷ್ಟು ಐಕ್ಯದಿಂದ ತಕ್ಕ ಸಾಧನೆಯನ್ನು ಮಾಡಬೇಕಾಗಿ ಮನವಿ ಮಾಡಿಕೊಂಡಿರುವರು. ಈ ವಿಷಯ ಓಲ್ ಇಂಡಿಯಾ ಕೊಂಗ್ರೆಸ್ ಪಾರ್ಟಿಯ ಪ್ರೆಸಿಡೆಂಟರಾದ ಮಹಾತ್ಮಾ ಗಾಂಧಿಯವರನ್ನು ಯುನಿಟಿ ಕಾನ್ಫರೆನ್ಸಿನಲ್ಲಿ ಪಾಸಾದ ಎರಡು ಠರಾವುಗಳನ್ನು ಯಾವ ರೀತಿಯಲ್ಲಿ ನಡವಳಿಗೆ ತರಬಹುದೆಂದು ಕೇಳಿಕೊಂಡಿರುವರು.

ಶ್ರೀ! ಶ್ರೀನಿವಾಸ ಅಯ್ಯಂಗಾರರ ರಾಜಮಹೇಂದ್ರಿಯ ಭಾಷಣ.

ಸ್ವರಾಜ್ಯ ಪಾರ್ಟಿಯ ಮುಖಂಡರಾದ ಶ್ರೀಯುತ ಶ್ರೀನಿವಾಸ ಅಯ್ಯಂಗಾರರು ರಾಜಮಹೇಂದ್ರಿಗೆ ಹೋಗಿರುವರು. ಇವರಿಗೆ ಅಲ್ಲಿಯ ಸ್ವರಾಜ್ಯ ಪಾರ್ಟಿಯವರು ತಕ್ಕ ಸನ್ಮಾನವನ್ನಿತ್ತರು. ಇವರು ರಾಜಮಹೇಂದ್ರಿಯಿಂದ ಕಾಕೇರು ಎಂಬಲ್ಲಿ ತೋಟದಿನಲ್ಲಿ ಹೋಗಿ ಅಲ್ಲಿ ಕೂಡಿದ ಒಕ್ಕಲಿಗರಿಗೆ ಒಂದು ಭಾಷಣವನ್ನು ಕೊಟ್ಟರು. ಇವರು ತಮ್ಮ ಭಾಷಣದಲ್ಲಿ ಹೆಚ್ಚಾಗಿ ಸ್ವರಾಜ್ಯ ಪಾರ್ಟಿಯವರ ಕಡೆಯಿಂದ ಅಲ್ಲಿಯ ಪಂಚಾಯತರನ್ನು ಚುನಾಯಿಸಬೇಕೆಂದೂ, ಇನ್ನು ಸಧ್ಯದಲ್ಲಿಯೇ ಆಗಲಿಕ್ಕಿರುವ ಪಂಚಾಯತರ ಚುನಾವಣೆಗೆ ಸ್ವರಾಜ್ಯ ಪಾರ್ಟಿಯ ಮೆಂಬರರನ್ನು ಆರಿಸಿ ಅವರಿಗೇನೇ ವೋಟನ್ನು ಕೊಡಬೇಕಾಗಿ ಹೇಳಿರುವರು. ಕಾಕೇರಿನ ಜನರನ್ನು ಎಂಬವರು ತಮ್ಮ ಓಟುಗಳನ್ನೆಲ್ಲಾ ಸ್ವರಾಜ್ಯ ಪಾರ್ಟಿಯ ಮೆಂಬರರಿಗೆ ಕೊಡಬೇಕೆಂದೂ ಅಲ್ಲಿ ನೆರೆದ ಒಕ್ಕಲಿಗರಿಗೆಲ್ಲಾ ಹೇಳಿದರು. ಅಲ್ಲಿಂದ ಅಯ್ಯಂಗಾರರು ರಾಜಮಹೇಂದ್ರಿಗೆ ಬಂದು ಅಲ್ಲಿ ನೆರೆದಿದ್ದ ಸಭೆಗೆ ಚಿತ್ತಯಿಸಿ ಒಂದು ಭಾಷಣವನ್ನು ಕೊಟ್ಟರು. ಅಲ್ಲಿಯ ಸ್ವರಾಜ್ಯಪಾರ್ಟಿಯವರಿಂದ ತಮಿಳು ಭಾಷೆಯಲ್ಲಿ ಪ್ರಕಟವಾಗುವ 'ಚಿತ್ತರಂಜನ' ಎಂಬ ವಾರಪತ್ರಿಕೆಯ ವಿಷಯ ತಮ್ಮ ಒಳ್ಳೆ ಅಭಿಪ್ರಾಯವನ್ನು ಕೊಟ್ಟು ಆ ಪತ್ರಿಕೆಗೆ ತಕ್ಕ ಸಹಾಯವನ್ನು ಮಾಡಬೇಕೆಂದು ಸಭೆಗೆ ನೆರೆದವರಿಗೆಲ್ಲ ಹೇಳಿದರು. ಅನಂತರ ಸ್ವರಾಜ್ಯ ಪಾರ್ಟಿಯಲ್ಲಿ ಏನೊಂದೂ ಬದಲಾವಣೆಯಾಗಲಿಲ್ಲವೆಂದೂ ಮತ್ತು [illegible] ಎಕ್ಸಿಕ್ಯುಟಿವ್ ಕೌನ್ಸಿಲರ ಸಿದ್ಧ ಮಿನಿಸ್ಟರ ಸಿದ್ಧ ವಹಿಸಿಕೊಂಡರೂ ಅದು ಸ್ವರಾಜ್ಯಪಾರ್ಟಿಯವರ ಬಲ ಬಿದ್ದಿದೆಂದೂ ಅನ್ಯಾಯವಾಗುವುದಿಲ್ಲವೆಂದೂ ಮಿನಿಸ್ಟರ್ ಸಿದ್ಧಗಳನ್ನು ಸ್ವರಾಜ್ಯ ಪಾರ್ಟಿಯವರು ಒಪ್ಪಿಕೊಳ್ಳುವುದು ಜಾಗರೂಕರು. ಇಂಥ ಕೃತ್ಯಗಳು ಒದಗಿದ ಪಕ್ಷಕ್ಕೆ ಏಕ್ಯ ಅಂಗಗಳಿಲ್ಲವೆಂದು ಹೇಳಿರುವರು.

ಸ್ಫುಟವಿಚಾರಗಳು.

ಮದ್ಯಪಾನ ನಿಷೇಧ.

ಕಳೆದ ತಾ. ೩ರಲ್ಲು ಮದ್ರಾಸಿನಲ್ಲಿ ಹಿಂದೂ ಮದ್ಯಪಾನ ನಿಷೇಧ ಸಭೆಯು ಕೂಡಿತ್ತು. ಮಂಜೂರಾದ ಠರಾವುಗಳಲ್ಲಿ, ಗಡಂಗುಗಳ ಸಂಖ್ಯೆಯನ್ನೂ, ಸ್ಥಳವನ್ನೂ, ನಿರ್ಣಯಿಸುವ ಹಕ್ಕನ್ನು ಸರಕಾರವು ಸ್ಥಳೀಕ ಸ್ವರಾಜ್ಯ ಸಂಸ್ಥೆಗಳಿಗೆನೇ ಬಿಟ್ಟುಕೊಡಬೇಕು ಎಂಬುದು ಮುಖ್ಯವಾಗಿತ್ತು.

ಗಡಂಗುಗಳ ಸ್ಥಳವನ್ನು ನಿಶ್ಚಯಿಸುವುದರ ವಿಷಯವಾಗಿ ಅನೇಕ ಕಡೆಗಳಲ್ಲಿ ವಾದ ಹುಟ್ಟಿಯದೆ. ಅಂತಹವುಗಳಲ್ಲಿ ಮಂಗಳೂರು ಮ್ಯುನಿಸಿಪಾಲಿಟಿಯೂ ಒಂದು. ಮದ್ಯಪಾನ ನಿಷೇಧಕ್ಕಾಗಿ ಜನರು ಹೂಡಿದ ಚಳವಳವನ್ನೆಲ್ಲಾ ಸರಕಾರವು ರಾಷ್ಟ್ರೀಯ ಚಳವಳಿಗಳಂತೆಯೇ ನೋಡಿ ನಾಶಪಡಿಸಲು ಆತುರರಾದುದು ಹಿಂದೀ ದೌರ್ಭಾಗ್ಯ. ವಿಲಾಯತಿಯ ಪ್ರಮುಖರೂ ಸ್ವಾತಂತ್ರ್ಯ ಪ್ರಿಯರೂ ಆದ ಅಮೇರಿಕೆಯರ ಕೂಡ ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧಿಸಿ ಈಗ ಅದರ ಸತ್ಪರಿಣಾಮವನ್ನು ಅನುಭವಿಸುತ್ತಾರೆ. ಆದರೆ ಇಂಗ್ಲೀಷರು, ಪ್ರಜಾ ಜನರು ಒತ್ತಾಯಮಾಡಿದರೂ ಕೂಡ ಮದ್ಯಪಾನ ನಿಷೇಧವಂತಿರಲಿ, ಅದರ ಹಾವಳಿಯನ್ನು ತಡೆಕಟ್ಟುವಲ್ಲಿ ಕೂಡ ಸಹಕಾರಿಗಳಾಗುವುದಿಲ್ಲ. ಮದ್ಯಪಾನ ಅಫೀಮು ಇತ್ಯಾದಿ ಅಮಲುಗಳಿಂದ ಸರಕಾರಕ್ಕೆ ಲಾಭವಾಗುವ ಅತಿಯಾದ ಸುಂಕವೇ ಅವರನ್ನು ಈ ರೀತಿ ಪ್ರೇರಿಸುತ್ತಿದೆ.

ಗಡುಂಗುಗಳನ್ನು ಪಟ್ಟಣದ ಮಧ್ಯದಲ್ಲಾಗಲಿ, ಹೆಚ್ಚಿನ ಜನಸಂಚಾರವಿರುವ ಸ್ಥಳಗಳಲ್ಲಾಗಲಿ ಇಡಿಸುವುದರಿಂದ ಜನರಿಗೆ ಬಹಳ ಅಪಾಯವಿರುವುದು ಎಲ್ಲರಿಗೂ ಅನುಭವವಾದುದು. ಕುಡುಕತನದ ಅಭ್ಯಾಸವನ್ನು ಹೆಚ್ಚು ಮಾಡಲಿಕ್ಕೂ, ಕಲಹಗಳನ್ನು ಹೆಚ್ಚಿಸಲಿಕ್ಕೂ ಈ ಗಡಂಗುಗಳು ಕಾರಣಗಳಾಗುತ್ತಿವೆ. ಈ ಹಾನಿಯನ್ನು ತಿಳಿದೂ ಸರಕಾರವು ಜನತೆಯ ಆಶಯವನ್ನು ಹಠಸಾಧನೆಯಿಂದ ನಿರೋಧಿಸುತ್ತಿದೆ. ಮಂಗಳೂರು ಮ್ಯುನಿಸಿಪಾಲಿಟಿಯ ಈ ವಿಷಯವಾದ ಎರಡು ಠರಾವುಗಳು ವ್ಯರ್ಥವಾದುವು. ಸರಕಾರವು ಯಾರಿಗೆ ಲಕ್ಷ್ಯಕೊಡುವುದೊ!

ಮದ್ಯಪಾನ.

ಮದ್ಯಪಾನವನ್ನು ಕೇವಲ ಶೂದ್ರಾದಿಗಳು ಮಾಡುತ್ತಿದ್ದು ಮೇಲು ಜಾತಿಯವರು ಮದ್ಯಪಾನವೆಂದರೆ ಅಸಹ್ಯಪಡುತ್ತಿದ್ದರು. ಅಲ್ಲದೆ ಜಾತಿಬಹಿಷ್ಕಾರದ ಭಯವೂ ಮದ್ಯಪಾನ ಪ್ರಸಾರ ಹೊಂದದಂತೆ ಮಾಡಿದ್ದಿತು. ಆದರೆ ಈಗಿನ ಕಾಲದಲ್ಲಿ ಬ್ರೇಂಡಿಗೆ ಗೌರವ ಉಂಟಾಗಿ, ಜಾತಿಬಹಿಷ್ಕಾರ ಇಡುವವರಿಗೇನೇ ಬೆದರಿಕೆಯಾಗುವ ಈ ಕಾಲದಲ್ಲಿ ಜನರಿಗೆ ಸ್ವೇಚ್ಛೆಯಂತೆ ನಡೆಯಲು ಸುಲಭವಾಗಿದೆ. ಅನೇಕ ಮೇಲ್ಜಾತಿಯವರು ಮದ್ಯಪಾನದಲ್ಲಿ ಲೋಲರಾಗಿರುತ್ತಾರೆ. ಮೊದಲು ಮೊದಲು ಇದು ಅಂತರಂಗದಲ್ಲಿಯೇ ನಡೆಯುತ್ತಿತ್ತಾದರೂ ಇತ್ತೀಚೆಗೆ ಬಹಿರಂಗವಾಗಿಯೇ ಈ ಮದ್ಯಪಾನವು ನಡೆಯುತ್ತಿದೆ. ಮದ್ಯಪಾನವು ಹಲವು ವರ್ಷಗಳ ಹಿಂದೆ ಇದ್ದುದಕ್ಕಿಂತಲೂ ಈಗ ಹೆಚ್ಚಾಗಿಯದೆ ಎನ್ನಬಹುದು. ಸರಕಾರದ ಹಾನಿಕರವಾದ ಧೋರಣವೇ ಇದರ ಕಾರಣವೆನ್ನಬೇಕು. "ಯಥಾ ರಾಜಾ ತಥಾ ಪ್ರಜಾ" ಎಂಬ ನಾಣ್ನುಡಿಯು ಎಂದೆಂದಿಗೂ ನಿಜವಾದುದು. ಎಸೆಂಬ್ಲಿಯಲ್ಲಿ ಮದ್ಯಪಾನ [illegible]ಕ್ಕಾಗಿ ತಂದ ಠರಾವನ್ನೂ, ಉಪಸೂಚನೆಗಳನ್ನೂ ಸರಕಾರವು ಸಂಪೂರ್ಣವಾಗಿ ನಿಷೇಧಿಸಿಯದೆ; ಮತ್ತು ಈ ನಿರೋಧದಲ್ಲಿ ಯಾವುದರೂ ಮಂಜೂರಾಗಿ ಹೋದ ಮದ್ಯಪಾನದ ನಿಷೇಧ ಠರಾವನ್ನು ಸರಕಾರವು ಮಾನಿಸಿಲ್ಲ.

ಹಿಂದೂಮಹಾಸಭೆ.

ಪಂಡಿತ ಮದನಮೋಹನ ಮಾಲವೀಯರ ಅಧ್ಯಕ್ಷತೆಯಲ್ಲಿ ಹಿಂದೂ ಮಹಾಸಭೆಯ ಕಾರ್ಯಕಾರಿ ಮಂಡಳಿಯು ಡಿಲ್ಲಿಯಲ್ಲಿ ಕಳೆದ ತಾ. ೩ನೇ ದಿನ ಕೂಡಿತ್ತು. ಇದರ ಉದ್ದೇಶವು, ಆಗಾಗ ಹಿಂದೂ-ಮುಸಲ್ಮಾನರ ಕಲಹಗಳಿಂದ ದೇಶದಲ್ಲಿ ಉಂಟಾದ ಪರಿಸ್ಥಿತಿಯನ್ನು ವಿಚಾರಿಸುವುದಿತ್ತು. ಸಭೆಯು ಬಹಿರಂಗವಿರಲಿಲ್ಲ.

ದೇಶದಲ್ಲಿ ಮುಸಲ್ಮಾನರೆಲ್ಲರೊಳಗೆ ಒಂದು ತರದ ಮತ್ಸರಭಾವವು ಬೇರೂರಿದಂತೆ ಕಾಣುತ್ತಿದೆ. ಡಿಲ್ಲಿ ಮುಂತಾದ ಪ್ರಮುಖ ಸ್ಥಳಗಳಿಂದ ಮುಸಲ್ಮಾನ ಅರ್ಚಕರು ದೇಶದ ಇತರ ಭಾಗಗಳಿಗೆ ಹೋಗಿ ವಿಷದ ಬೀಜವನ್ನು ಬಿತ್ತುತ್ತಿರುವಂತೆ ತೋರುತ್ತದೆ. ಕೋಲಾಪುರದ ಘಟನೆಯು ಅಂತಹ ಪ್ರಚಾರ ಕಾರ್ಯದ ಪರಿಣಾಮವಾಗಿದ್ದಿತು. ಕೋಲಾಪುರದಲ್ಲಿ ಹಿಂದುಗಳು ಏಕಾದಶೀ ದಿವಸ ಶ್ರೀ ವಿಠ್ಠಲನೊಡನೆ ಮೆರವಣಿಗೆಯನ್ನು ತೆಗೆದುಕೊಂಡು ಹೋಗುವುದಿತ್ತು. ಮಾರ್ಗದಲ್ಲಿ ಒಂದು ಮಸೀದಿಯೂ ಇದ್ದಿತು. ವರ್ಷವರ್ಷವೂ ಈ ಮೆರವಣಿಗೆಯು ನಿರಾತಂಕವಾಗಿ ನಡೆಯುತ್ತಿದ್ದಿತು. ಈ ವರ್ಷ ಕಾನಪುರದ ಒಬ್ಬ ಮೌಲ್ವಿಯವರು ಮುಸಲ್ಮಾನರಲ್ಲಿ ಆವೇಶವನ್ನು ತುಂಬಿಸಿದರು. ಮೆರವಣಿಗೆಯು ಮಸೀದಿಯ ಹತ್ತಿರ ಬಂದಿತು. ಮುಸಲ್ಮಾನ ಭಾವನೆಯನ್ನು ಗೌರವಿಸಲಿಕ್ಕಾಗಿ, ಅವರ ಪ್ರಾರ್ಥನೆಯ ಕಳೆಯಲೆಂದು ೧॥ ಘಂಟೆ ಅಲ್ಲಿ ಕಾದು ನಿಂತಿತು. ಆ ಮೇಲೆ ಹೊರಟಿತು. ಆದರೆ ಈ ೧॥ ಘಂಟೆಯಲ್ಲಿ ಮುಸಲ್ಮಾನರು ಪ್ರಾರ್ಥಿಸುವ ಬದಲಿಗೆ ಮೆರವಣಿಗೆಯನ್ನು ಹ್ಯಾಗೆ ಕೆಡಿಸುವುದೆಂದು ಆಲೋಚಿಸಿದರು. ಮೆರವಣಿಗೆ ಹೊರಟ ಕೂಡಲೆ ಅದರ ಮೇಲೆ ಬಿದ್ದರು. ಜಗಳ ಕಟ್ಟಿತು. ಪೋಲೀಸರು ಗುಂಡು ಹಾರಿಸಬೇಕಾಯಿತು.

ಇದೇ ರೀತಿಯಲ್ಲಿಯೂ, ಇನ್ನು ಅನೇಕ ರೀತಿಯಲ್ಲಿಯೂ ಮುಸಲ್ಮಾನರು ಜಗಳ ಪ್ರಾರಂಭಿಸುವರಾಗಿ ತಿಳಿದು ಬರುತ್ತಿದೆ. ಹಿಂದೂಗಳ ಸೌಮ್ಯತನವು ಲೋಕವಿಶ್ರುತವಾದುದು. ಅಲ್ಲಲ್ಲಿಂದ ಬಂದ ಕಲಹಗಳ ವಾರ್ತೆಯೂ ಮುಸಲ್ಮಾನರ ಪ್ರಾವೇಶಿಕ ಕೃತ್ಯಗಳನ್ನೇ ಸೂಚಿಸುತ್ತಿದೆ. ಮಾತ್ರವಲ್ಲದೆ, ಹುಡುಗಿಯರ ಮತ್ತು ಹುಡುಗರ ಕಳವು, ಇತ್ಯಾದಿಗಳೂ ಮುಸಲ್ಮಾನರ ಕೈಯಿಂದ ನಡೆಯುತ್ತಿರುವ ವಿಷಯಗಳೂ ತಿಳಿದುಬರುತ್ತಿವೆ.

ಈ ಪರಿಸ್ಥಿತಿಯನ್ನು ವಿಚಾರಿಸಲಿಕ್ಕೆ ಕಾಂಗ್ರೆಸ್ಸು ಧೈರ್ಯಪಡುವುದಿಲ್ಲ. ಮುಸಲ್ಮಾನರಿಗೆ ಕೋಪವಾಗುವುದೆಂಬ ಹೆದರಿಕೆಯಿಂದ ಹಿಂದೂ ರಾಜಕೀಯ ಧುರೀಣರು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟಪಡಿಸುವುದಿಲ್ಲ. ಈ ಕೆಲಸಕ್ಕೆ ಹಿಂದೂ ಮಹಾಸಭೆಯೇ ಮುಂದರಿಯಬೇಕಾಗಿದೆ. ಮುಸಲ್ಮಾನ ಧುರೀಣರೂ ಖಿಲಾಫತ ಕಮಿಟಿಯೂ ಈ ಪರಿಸ್ಥಿತಿಯನ್ನು ಸುಧಾರಿಸುವುದಿಲ್ಲ. ಆದುದರಿಂದ ಹಿಂದೂ ಮಹಾ ಸಭೆಯ ಕಾರ್ಯಕಾರಿ ಮಂಡಳಿಯು ಡಿಲ್ಲಿಯಲ್ಲಿ ಕೂಡಿದ್ದು ಅತ್ಯುತ್ತಮವಾಯಿತು. ಆದರೆ ಯಾವ ತರದಲ್ಲಿ ಅದು ತನ್ನ ಕರ್ತವ್ಯವನ್ನು ಪೂರೈಸುವುದು ಎಂಬುದನ್ನು ನೋಡಲಿದೆ. ಸತ್ಯಾಗ್ರಹವನ್ನು ಹೂಡುವ ಸೂಚನೆಯುಂಟಾಗಿದೆ ಎಂದು ತಿಳಿಯುತ್ತೇವೆ. ಸತ್ಯಾಗ್ರಹಕ್ಕೆ ತಯಾರಿಯೂ, ಜನಸಂಖ್ಯೆಯೂ ಹೆಚ್ಚು ಬೇಕು. ಕಾರ್ಯತಃ ಸಾಧ್ಯವೆಂದಾದರೆ ಅದೇ ಉತ್ತಮವಾದುದು. ಆದರೆ ಮಹಾತ್ಮಾ ಗಾಂಧಿಯವರು ಹೇಳಿದಂತೆ ಸತ್ಯಾಗ್ರಹವಲ್ಲದಿದ್ದರೂ, ಇತರ ಉಪಾಯದಿಂದಾದರೂ ಹಿಂದೂಗಳು ತಮ್ಮ ಹಕ್ಕು ಸಾಧನೆಗಳನ್ನು ನಡಿಸಲೇ ಬೇಕು.

ಸ್ವರಾಜ್ಯಪಕ್ಷದ ಧೋರಣ, ನೆಹರುರವರ ಸ್ಪಷ್ಟೀಕರಣ

ಪಂಡಿತ ಮೋತಿಲಾಲ ನೆಹರುರವರು ಮುಂಬಾಯಿಯಲ್ಲಿ ಭಾಷಣಗಳನ್ನು ಕೊಟ್ಟು ಸ್ವರಾಜ್ಯಪಕ್ಷದ ಧೋರಣವನ್ನು ಸ್ಪಷ್ಟಪಡಿಸಿದರು. ಮಂಡಳಾ ಧೋರಣವು ಅತ್ತಿತ್ತ ಅಲುಗುತ್ತಿದ್ದಾಗ, ಮನಸ್ಸಿನಲ್ಲಿ ಒಂದು, ಕಾರ್ಯದಲ್ಲಿ ಒಂದು, ರಹಸ್ಯದಲ್ಲಿ ಒಂದು, ಹೀಗೆ ವಿಶ್ವಾಸ ಕೆಡುವಂತೆ ಕೆಲವು ಘಟನೆಗಳು ನಡೆಯುತ್ತಿರುವದಾಗಿ ಅಭಯಂಕರರು ಕಳೆದ ಮಧ್ಯಪ್ರಾಂತ ಸ್ವರಾಜ್ಯಪಕ್ಷದ ಸಭೆಯಲ್ಲಿ ಹೇಳಿ, ಸ್ವರಾಜ್ಯ ಪಕ್ಷದ ಸದಸ್ಯರ ದೃಢತೆಯ ಅಭಾವವನ್ನು ತೋರಿದ್ದಾಗ ಪಂಡಿತ ನೆಹರುರವರು, ಶ್ಲೇಷವಿಲ್ಲದೆ ಸ್ಪಷ್ಟವಾಗಿ ಆ ಧೋರಣವನ್ನು ವ್ಯಕ್ತಪಡಿಸಿದುದು ಸಾಮಯಿಕವಾಯಿತು. ಸರಕಾರವೂ ಸ್ವರಾಜ್ಯಪಕ್ಷದ ಆಶಯಗಳನ್ನು ಮೆಚ್ಚಿಸದಿದ್ದರೆ, ಹೊಸ ಕಾರ್ಯಕ್ರಮವನ್ನು ರೂಪಿಸಿ ಸರಕಾರಕ್ಕೆ ಪಾಠವನ್ನು ಕಲಿಸುವರಾಗಿ ಒಂದು ಸೂಚನೆಯನ್ನು ಪಂಡಿತರು ಕೊಟ್ಟಿರುವರು; ಅಲ್ಲದೆ ಸವಿನಯ ಕಾನೂನು ಭಂಗದ ತಯಾರಿಯನ್ನು ಮಾಡುವ ಧೈರ್ಯವನ್ನು ಪ್ರೇರಿಸಿರುವರು.

ಸ್ವರಾಜ್ಯಪಕ್ಷದ ಈಗಿನ ಧೋರಣದಿಂದ ಅನೇಕರು ಪ್ರಯೋಜನವೇ ಇಲ್ಲವೆನ್ನುವರು. ಆದರೆ ಸರಕಾರವು ಪ್ರಜೆಗಳ ನಿರಂತರ ನಿರೋಧವನ್ನು ಸಹಿಸಬಲ್ಲುದೆಂಬುದನ್ನು ನಾವು ಕಲ್ಪಿಸಲಾರೆವು. ಎಷ್ಟೇ ಶಕ್ತಿಮಾನವಾದ ಸರಕಾರವಾದರೂ ಈ ನಿರಂತರ ನಿರೋಧಕ್ಕೆ ಬಗ್ಗಲೇ ಬೇಕು. ಖಂಡಿತವೇ ಬಗ್ಗುವುದು. ಮಾತ್ರ ಪ್ರಜೆಗಳು ಖಂಡಿತ ನಿರ್ಧಾರ ಉಳ್ಳವರೂ, ಕೌನ್ಸಿಲ್ ಸದಸ್ಯರೂ ನಿಶ್ಚಲರು ಆಗಿರಬೇಕು.

ಒಂದು ಪಕ್ಷಕ್ಕೆ ಈ ನಿರಂತರ ನಿರೋಧದ ಧೋರಣವು ಸರಕಾರವನ್ನು ಬಗ್ಗಿಸಲು ಕಾರ್ಯಕಾರಿಯಾಗದಿದ್ದರೂ, ಜನತೆಯೊಳಗೆ ಉತ್ಸಾಹವನ್ನೂ, ಕಾದುವ ಮನಸ್ಸನ್ನೂ ಪ್ರೇರಿಸಿ ಜನತೆಯ ಲಕ್ಷ್ಯವನ್ನು ರಾಜಕೀಯ ಆಶಯದ ಕಡೆಗೆ ಕೇಂದ್ರೀಕರಿಸಬಲ್ಲುದು. ಮುಂದಿನ ರಾಜಕೀಯ ಉತ್ಕ್ರಾಂತಿಗಾಗಿ ಜನತೆಯನ್ನು ಸಿದ್ಧಪಡಿಸಿದಂತೆ ಆಗುವುದು. ಆದರೆ ರಿಪ್ರೊನ್ಸಿವ್ ಕೊ-ಒಪರೇಶನ್ ಆಗಲಿ, ಸರಕಾರ ಸ್ವೀಕಾರದಿಂದ, ರಾಜಕೀಯ ಉತ್ಸಾಹವೇ ಮುರಿದು ಜನತೆಯೊಳಗೆ ಸ್ವರಾಜ್ಯದ ಆಶಯವೇ ಕಡಿಮೆಯಾಗುವಂತೆಯೂ ಆಗಬಹುದು.

ಅಸ್ಪೃಶ್ಯತೆ ಮತ್ತು ಸ್ವಾಮಿ ಶ್ರದ್ಧಾನಂದರು.

ಅಸ್ಪೃಶ್ಯತಾ ಸಮಸ್ಯೆಯು ದಿನಗಳೆದಷ್ಟಕ್ಕೆ ಬೆಳೆಯುತ್ತಾ ಬರುತ್ತಿದೆ; ಅಲ್ಲದೆ ಅಸ್ಪೃಶ್ಯತಾ ನಿರೋಧವೂ ಬಲಪಡುತ್ತಾ ಬರುತ್ತಿದೆ. ಅನೇಕ ಕಡೆಗಳಲ್ಲಿ ಅಸ್ಪೃಶ್ಯತೆಯ ಕಳಂಕವನ್ನು ತೆಗೆದು ಹಾಕಲು ಪ್ರಯತ್ನಗಳು ನಡೆಯುತ್ತಿವೆ. ಅಲ್ಲದೆ ಕೆಲವು ಕಡೆಗಳಲ್ಲಿ ಜಗಳಗಳುಂಟಾಗಿ, ಖೂನಿ ಕೂಡ ನಡೆದು ಸಮಸ್ಯೆಯು ಮತ್ತಷ್ಟು ಗಡುತರವಾಗಿ ಮಾಡಲ್ಪಟ್ಟಿವೆ. ಅಸ್ಪೃಶ್ಯ ಬಂಧುಗಳು ಇಡೀ ಹಿಂದೂಸ್ಥಾನದಲ್ಲಿ, ೩೩ ಕೋಟಿ ಜನರೊಳಗೆ ೭॥ ಕೋಟಿ ಜನರಿರುವರು. ಅಂದರೆ ಶೇ ೨೦ ಪಾಲು ಅಸ್ಪೃಶ್ಯರಿದ್ದಾರೆ. ಇವರನ್ನು ಹಿಂದೂ ಸಮಾಜವು ಕುತ್ತಿಗೆಗೆ ಕೈ ಹಾಕಿ ದೂಡುವುದನ್ನು ನೋಡಿದರೆ ಪಶ್ಚಾತ್ತಾಪಪಡಬೇಕಾಗಿದೆ. ಒಂದು ಕಡೆಯಿಂದ ಮುಸಲ್ಮಾನರು ತಾವಾಗಿ ಹಿಂದೂಗಳ ಬಲವನ್ನು ಮುರಿಯಲೆತ್ನಿಸುವಾಗ, ಇನ್ನೊಂದು ಕಡೆ ಕ್ರಿಸ್ತೀಯರು ಹಿಂದೂ ಸಂಖ್ಯೆಯನ್ನು ಅಳಿಸಿ ತಮ್ಮ ಸಂಖ್ಯೆಯನ್ನು ಬೆಳಸಲೆತ್ನಿಸುವಾಗ, ಅಂತರ್ಭಾಗದಿಂದ ಹಿಂದುಗಳು ತಾವಾಗಿ ತಮ್ಮ ಸಂಖ್ಯೆಯನ್ನು ಕಡಿಮೆಮಾಡಿಕೊಳ್ಳುವ ಆತ್ಮಘಾತುಕ ಸಾಂಪ್ರದಾಯವನ್ನು ಹಿಡಿದು ಮತಶ್ರದ್ಧೆಯನ್ನು ತೋರಿಸಿ ಅವಿವೇಕವನ್ನು ಪ್ರಕಟಿಸುವುದನ್ನು ನೋಡಿದರೆ ದುಃಖವಾಗುತ್ತದೆ.

ಸ್ವಾಮಿ ಶ್ರದ್ಧಾನಂದರು ಹಿಂದೂಗಳ ಅಗ್ರ ಧುರೀಣರು. ಹಿಂದೂ ಸಂಖ್ಯಾಬಲದ ಪ್ರಯೋಜನವನ್ನು ಅವರು ಚೆನ್ನಾಗಿ ತಿಳಿದುಕೊಂಡಿರುವರು. ಮತ್ತು ಹಿಂದೂಗಳ ಬಲವನ್ನು ಬೆಳಸಲಿಕ್ಕೆ ಅವಿಶ್ರಾಂತವಾಗಿ ಕೆಲಸಮಾಡುತ್ತಿರುವರು. ಆರ್ಯಸಮಾಜದ ದೀಕ್ಷೆಯಿಂದ ಸಮಗ್ರ ಭಾರತವನ್ನು ಸಂಚರಿಸಿ, ಸಮಸ್ತ ಹಿಂದೂಗಳಲ್ಲಿ ಚೇತನವನ್ನು ಊದುವ ಈ ಮಹಾತ್ಮರು ಅಸ್ಪೃಶ್ಯತೆಯ ಪರಿಣಾಮವನ್ನು ತಿಳಿದುಕೊಂಡು, ಅಂತಹ ದುರವಸ್ಥೆಯು ಹಿಂದೂ ಸಮಾಜಕ್ಕೆ ತಪ್ಪಿದಂತೆ, ಸಾಹಸದಿಂದ ಪ್ರಯತ್ನಿಸುವರು. ಸ್ವಾಮಿಯವರು ಕೆಲವು ದಿನಗಳ ಹಿಂದೆ ಮದರಾಸಿಗೆ ಬಂದಿರುವರು. ಅಲ್ಲಿ ಅಸ್ಪೃಶ್ಯತೆಯ ವಿಷಯವಾಗಿ ಉಪನ್ಯಾಸಕೊಟ್ಟು ಅಲ್ಲಿಂದ ಪಾಲ್ಘಾಟಿಗೆ ಹೋಗುವರು. ಪಾಲ್ಘಾಟಿನಲ್ಲಿ ಅಲ್ಲಿಯ ಅಸ್ಪೃಶ್ಯರಾದ ಎಳುವಾ ಜನರಿಗೂ ಬ್ರಾಹ್ಮಣರಿಗೂ ಕಲಹವಾಗಿದೆ. ಅಲ್ಲಿ ಸಮಾಧಾನಮಾಡಲು ಹೋಗುವರು.

ಅಸ್ಪೃಶ್ಯರೂ ಕೂಡ ಜನಾಂಗದಲ್ಲಿ ಶತಮಾನಗಳಿಂದ ಬೆಳೆದು ಬಂದ ಈ ಸಾಂಪ್ರದಾಯವನ್ನು ಥಟ್ಟನೆ ಒಡೆಯಲು ಪ್ರಯತ್ನಿಸಿದರೆ ಅದರಿಂದ ಇತ್ತಂಡದವರಿಗೂ ಬಾಧಕವಿದೆ. ತಮ್ಮ ಅಸ್ಪೃಶ್ಯತೆಯನ್ನು ತೆಗೆದುಹಾಕಲಿಕ್ಕೆ ಕೆಲವು ಈಗಿನ ನಾಗರಿಕವೆನ್ನುವ ಸಾಧನಗಳನ್ನು ಉಪಯೋಗಿಸಲು ಪ್ರಯತ್ನಿಸುವುದು ವಿಷಾದಕರ. ಹೋಟೆಲಿನಲ್ಲಿ ಹೋಗುವುದು ಇತ್ಯಾದಿ ನಾಗರಿಕ ಆಚರಣೆಗಳು ಜೀವನವನ್ನು ಕಷ್ಟತರವಾಗಿ ಮಾಡುವಂತಹವುಗಳಾಗಿವೆಯೇ ಹೊರತು, ಅವುಗಳಿಂದ ಉನ್ನತಿ ಸಾಧನೆಯಿಲ್ಲ. ಅಸ್ಪೃಶ್ಯ ಜಾಗ್ರತೆಯಿಂದ ತಮ್ಮ ಸುಧಾರಣೆಯನ್ನು ಕಲ್ಪಿಸಿಕೊಳ್ಳಬೇಕು.

ಅಸ್ಪೃಶ್ಯರ ಬೆಂಬಲವಾಗುವ ಸುಧಾರಕರೂ ಜಾಗರೂಕತೆಯಿಂದ ಈ ಕೆಲಸವನ್ನು ಕೈಕೊಳ್ಳಬೇಕು. ಆದಷ್ಟು ನಿರಾತಂಕ ಉಪಾಯಗಳಿಂದ ಉದ್ದಿಷ್ಟವನ್ನು ಸಾಧಿಸಬೇಕು. ಪತಿತ ಸ್ಥಿತಿಯಿಂದ ಥಟ್ಟನೆ ಉನ್ನತಿಗೆ ಏರುವ ಈ ಪ್ರಯತ್ನದಲ್ಲಿ ಅಸ್ಪೃಶ್ಯರೊಳಗೆ ಪ್ರತಿ ಕ್ರಿಯಾಫಲವಾಗಿ ಅಹಂಭಾವವುಂಟಾಗದಂತೆ ನೋಡುವುದು. ಇವರ ಆದ್ಯ ಕರ್ತವ್ಯವಿದೆ.

ಸೊಳ್ಳೆಗಳನ್ನು ನಿವಾರಿಸತಕ್ಕ ಒಂದು ಜಾತಿಯ ಗಿಡ.

ಸೊಳ್ಳೆಗಳನ್ನಡಗಿಸುವ ವಿಷಯದಲ್ಲಿ ಬಹು ದಿನಗಳಿಂದ ಉಪಾಯಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದ [illegible] 'ಖಾರಾಚಿನ್ನಿಕಾ' ಎಂಬ ಒಂದು ಜಾತಿಯ [illegible]ಯನ್ನು ನೀರಿನಲ್ಲಿಡುವುದರಿಂದ, ಸೊಳ್ಳೆಗಳು ಅಲ್ಲಿ ಬೆಳೆಯುವುದೇ ಇಲ್ಲವೆಂದು ನಿರ್ಧರಿಸಿರುವನು. ಇದನ್ನು [illegible]ವಕ್ಕಾಗಿ, ಅವನು ಬೇರೆ ಬೇರೆ ನೀರಿನಲ್ಲಿ ಬೇರೆ ಬೇರೆ ವಯಸ್ಸಿನ [illegible]ರುವ ಸೊಳ್ಳೆಗಳನ್ನೂ, ಆ ಮೊಟ್ಟೆಗಳನ್ನೂ ಒಂದು [illegible] ಸೇರಿಸಿ ನೋಡಿರುವನು. [illegible] ಯಲ್ಲಿರುವ ಸೊಳ್ಳೆಗಳೂ ಅಲ್ಲಿ ಮುಂದೆ [illegible] ಅಲ್ಲಿಯೇ ಸಾಯುತ್ತಿದ್ದವು. ಇದರಿಂದ ಈ ಮೊಟ್ಟೆಯೂ, ಸೊಳ್ಳೆಯೂ ಒಂದೇ ಸ್ಥಳದಲ್ಲಿರುವುದು ಸಾಧ್ಯವೇ ಇಲ್ಲವೆಂದೂ, ಸೊಳ್ಳೆಗಳ ಹಾವಳಿಯನ್ನು ನಿರ್ಮೂಲ ಮಾಡುವುದಕ್ಕೆ ಇದಕ್ಕಿಂತಲೂ ಉತ್ತಮವಾದ ಬೇರೆ [illegible]ವಿಲ್ಲವೆಂದೂ, ಅವನು ಅನುಭವದಿಂದ ತಿಳಿದು ಬರೆದಿರುವನು. (ಆ. ಪತ್ರಿಕೆ) ([illegible])

ಪತ್ರವ್ಯವಹಾರ.

ಗಂಧರ್ವ ಗಾಯನ ಶಾಲೆ.

ನಮ್ಮ ಜಿಲ್ಲೆಯಲ್ಲಿ ಮಂಗಳೂರು ಮುಖ್ಯ ಪಟ್ಟಣದಲ್ಲಿ ಇತ್ತೀಚೆಗೆ ವಿವಿಧ ವಿದ್ಯಾರ್ಜನೆಗೆ ತವರು ಮನೆಯಾಗಿ ಅನೇಕ ವಿದ್ಯಾರ್ಥಿಗಳು ಶಿಕ್ಷಣ ಹೊಂದುತ್ತಿರುವರು. ಈ ತನಕ ಮೂಲೆಗೆ ಬಿದ್ದಿರುವ ಯಕ್ಷಗಾನವು ಪುನರ್ಜೀವನ ಹೊಂದುವ ಸಂಘಗಳಾಗುತ್ತ ಬರುತ್ತಿವೆ. ಜಿಲ್ಲೆಯ ಅನೇಕ ಭಾಗಗಳಲ್ಲಿ ಅವಕ್ಕೆ ಈಗೀಗ ಪುಷ್ಟಿಕೊಡುತ್ತಾ ಬರುತ್ತಿರುವರು. ಯಕ್ಷಗಾನವೂ ಸಂಪೂರ್ಣವಾಗಿ ಅದಿಗೆ ಬಿದ್ದಿತ್ತು ಎಂತ ಹೇಳಕಾರಣವಿಲ್ಲ. ಯಾಕೆಂದರೆ ದಶಾವತಾರ ಎಂಬ ಆಟವು ಆಗಾಗ್ಗೆ ಚಿಗುರು ಹುಟ್ಟಿಸುತ್ತಿರುವ ಈ ಗಾನವು ಹಳ್ಳಿನಾಡುಗಳಲ್ಲಿ ಅಲ್ಲಲ್ಲಿ ಜೀವಕಳೆ ಹೊಂದುತ್ತಿರುವವು. ಗಂಧರ್ವಗಾನವು ಹಾಗಲ್ಲ. ಅರಸುಮಕ್ಕಳಂತೆ ತಮ್ಮ ಘನ ಮಾನ ಸ್ಥಾನ ಬಿಟ್ಟು ತಿರುಗಾಡಲಾರವು. ಈ ಗಾನಕ್ಕೆ ಪಟ್ಟಣಗಳಲ್ಲಿ ಒಬ್ಬಿಬ್ಬರು ಪುಷ್ಟಿ ಕೊಟ್ಟು ಅಲ್ಲಲ್ಲಿ ಅಪರೂಪವಾಗಿ ಹುಟ್ಟಿ ಸಾಯುವದುಂಟು. ಈ ಗಂಧರ್ವ ಗಾನವು ಬಾಳಿ ಬದುಕಿ ಜನರಲ್ಲಿ ಬೋಧನೆಗೆ ಬರಬೇಕಾದರೆ ಪ್ರತ್ಯೇಕವಾಗಿ ಸರ್ಕಾರದವರು ಕ್ರಮದಿಂದ ನಡಿಸುವ ಒಂದು ಏರ್ಪಾಟಿನ ಶಾಲೆ ಇರಬೇಕು. ಈ ಗಾನವನ್ನು ಏನೂ ಅರಿಯದ ಒಂದೆರಡು ವರ್ಷದ ಮಗು ಕೂಡ ತೊಟ್ಟಿಲಲ್ಲಿ ಮಲಗಿಕೊಂಡು ಜೋ ಜೋ ಹಾಡುವ ಜೋಗುಳವನ್ನು ಮೌನದಿಂದ ಕೇಳಿ ಸವಿಸುತ್ತಿರುವವು. ಮಕ್ಕಳಿಗೆ ಇದಕ್ಕಿಂತ ಪ್ರಿಯವಾದದ್ದು ಯಾವದೂ ಇಲ್ಲ. ಕೆಲವು ಮಕ್ಕಳು ಎಲ್ಲಿಯಾದರೂ ವಾದ್ಯಗಳನ್ನು ಬಾರಿಸುತ್ತಿದ್ದರೂ, ಗಾನಮಾಡುತ್ತಿದ್ದರೂ ಕೇಳಿದೊಡನೆ ಅನ್ಯರ ಪ್ರೇರಣೆ ಇಲ್ಲದೆ ಕೈಕಾಲುಗಳನ್ನು ಅಲ್ಲಾಡಿಸುವವು, ಕುಣಿಯುವವು, ಹಾರುವವು, ಕೈಯಿಂದ ತಾಳತಟ್ಟುವವು. ಹಾಗಾದರೆ ಗಂಧರ್ವಗಾನ ಎಷ್ಟು ಅಮೌಲ್ಯವಾದದೆಂದು ಮಗುವೇ ಸಾಕ್ಷಿ. ಇದು ನಾವು ಪ್ರತ್ಯಕ್ಷವಾಗಿ ಕಂಡ ವಿಷಯವಾಗಿದೆ. ಈ ವಿಧವಾದ ಸ್ವೈಚ್ಛಸ್ವಭಾವವಾಗಿದೆ. ಇದಕ್ಕೆ ಪ್ರೋತ್ಸಾಹಕೊಡುವ ತಮ್ಮನ್ನಾಳುವವರ ಕರ್ತವ್ಯವಾಗಿದೆ. ಆದುದರಿಂದ ಶಾಲೆಗಳಲ್ಲಿ ಇದೊಂದು ವಿಷಯಕ್ಕೆ ಗಮನಕೊಡುವದು ಅಗತ್ಯವಾಗಿದೆ. ಮೊದಲಾಗಿ ಈ ಕೋಟಿವು ಸಾಧ್ಯವಾಗಬೇಕಾದರೆ ಟ್ರೈನಿಂಗ್ ಶಾಲೆಯಲ್ಲಿ ಈ ವಿದ್ಯೆಯಲ್ಲಿ ಪಾಂಡಿತ್ಯಹೊಂದಿದವನೊಬ್ಬನನ್ನು ನೇಮಿಸಿ ಪ್ರತಿ ಒಬ್ಬನಿಗೆ ಇಂತಿಷ್ಟು ಗಂಟೆಯಿಂದ ಇಂತಿಷ್ಟು ಗಂಟೆ ವರೆಗೆ ಕಲಿಸುವದೆಂತ ಟೈಮ್ ಟೇಬಲಲ್ಲಿ ಸೇರಿಸಬೇಕು. ಈ ವಿದ್ಯೆಯು ಒಂದು ಕ್ರಮವನ್ನು ಅನುಸರಿಸಿ ವ್ಯಾಕರಣದಂತೆ ಇದೆ. ಈ ವಿದ್ಯೆಯನ್ನು ಕ್ರಮದಲ್ಲಿ ಕಲಿತರೆ ಮೈಸೂರಿನವನೂ ಮಂಗಳೂರಿನವನೂ ಒಂದೇ ವಿದ್ಯಾ ಸಾಹಿತೆಯಲ್ಲಿ ಒಂದೇ ಸಮಾನವಾಗಿ ಬಾರಿಸಬಹುದು. ಇಂಥಾ ಗಾನದ ಪದಗಳು ಸಹಜವಾಗಿ ಗಂಡಸರಲ್ಲಾಗಲಿ ಹೆಂಗಸರಲ್ಲಾಗಲಿ ನಮ್ಮ ನಮ್ಮ ಮನೆಗಳಲ್ಲಿ ಯಾವದೊಂದು ಕೆಲಸ ಮಾಡುವಾಗಲೂ, ಹೆಂಗಸರು ಮಕ್ಕಳನ್ನು ಆಡಿಸುವಾಗಲೂ ಪದರೂಪವಾದ ಮಾತುಗಳನ್ನಾಡಿ ಹಾಡುವರು, ಕೆಲವರು ಬಾಯಿಗೆ ಬಂದದ್ದನ್ನು ರಾಗದಿಂದ ಹಾಡುತ್ತಿರುವದೂ ಉಂಟು. ಪೂರ್ವದಲ್ಲಿ ಹಿಂದು ರಾಜರು ತಮ್ಮ ರಾಜ್ಯದಲ್ಲಿ ಇದಕ್ಕೆ ಉತ್ತೇಜನಕೊಡುತ್ತಿದ್ದರು. ಆದುದರಿಂದ ಜಿಲ್ಲಾ ಎಜ್ಯುಕೇಶನಲ್ ಆಫೀಸರರು ಶಾಲೆಗಳಲ್ಲಿ ಕ್ರಮವಾಗಿ ಕಲಿತವರಿಂದ ರಾಗದ ಮಟ್ಟನ್ನೂ, ತಾಳದ ಮಟ್ಟನ್ನೂ ಕಲಿಸುವ ಏರ್ಪಾಡು ಮಾಡಿದರೆ ಪಾಠದಲ್ಲಿ ಸೋತ ಮನಸ್ಸು ಆಟದಲ್ಲಿ ಪುನರ್ಜೀವನವಾಗುವಂತೆ ರಾಗದಲ್ಲಿ ಉಲ್ಲಾಸಗೊಳಿಸುತ್ತಿರುವದು.

ಒಬ್ಬ ಗಾನಪ್ರಿಯ.

ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಇನ್ನಾದರೂ ಬಡ ರೈತರ ಪರವಾಗಿ ಚರ್ಚಿಸತಕ್ಕ ಮುಖ್ಯ ವಿಷಯಗಳು.

ಕಳೆದ ಒಕ್ಟೋಬರ ತಿಂಗಳ ತಾ. ೨೩ನೇ 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ತಾ. ೨೮ಕ್ಕೆ ಜರಗುವ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸತಕ್ಕ ಅನೇಕ ವಿಷಯಗಳನ್ನು ನೋಡಿ ತುಂಬಾ ಆನಂದಭರಿತರಾದೆವು. ಆದರೆ 'ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ' ಎನ್ನುವ ಮಾತಿನಂತೆ ಅದರಲ್ಲಿ ಬರೆದಿರುವ ಠರಾವುಗಳೆಲ್ಲಾ ಪೇಟೆ ಪಟ್ಟಣವಾಸಿಗಳ ಪ್ರಯೋಜನಾರ್ಥವಲ್ಲದೆ ಹಳ್ಳಿಯ ಜನರ ಸಂಕಷ್ಟಗಳ ನಿವಾರಣೆಯ ಕುರಿತು ಯಾವುದೊಂದೂ ವಿಷಯವೂ ತೋರದೆ ಹೋದುದನ್ನು ನೋಡಿ ತುಂಬಾ ಬೇಜಾರಕ್ಕೆ ಆಸ್ಪದವಾಯಿತು. ಆದರೆ ಹಳ್ಳಿ ಜನರ ಸಂಕಷ್ಟಗಳು ವರ್ಗದಾರರಿಗಲ್ಲದೆ ಪೇಟೆ ನಿವಾಸಿಗಳಿಗೆ ಗೊತ್ತಿರಲು ಕಾರಣವೂ ಇಲ್ಲ. ಆದರೆ ನಮ್ಮ ಜಿಲ್ಲೆಯ ಜನರ ಪರವಾಗಿ ಕೌನ್ಸಿಲು ಮೆಂಬರಿಕೆಗಳಿಗೆ ಹೋದಂತಹ ಮಹನೀಯರು ಓಟಿನ ಕಾಲದಲ್ಲಿ ಪ್ರಯತ್ನಿಸುವಂತೆ ಒಂದು ವರ್ಷದಲ್ಲಿ ನಾಲ್ಕು ತಿಂಗಳ ಕಾಲವನ್ನು ಹಳ್ಳಿ ಜನರ ಪರವಾಗಿ ಉಪಯೋಗಿಸಿದ್ದರೆ ಅವರು ಬಹುಮಾನಕ್ಕೂ, [illegible], ಮೆಂಬರರಾದುದಲ್ಲದೆಂತ ರೈತರು [illegible] ವಾಗುತ್ತಿತ್ತು. ನಾವು ಕೃತಾರ್ಥರಾಗುತ್ತಿದ್ದೆವು. ಅಲ್ಲವೇ?

ಸಭೆಯಲ್ಲಿ ಚರ್ಚಿಸ ಬೇಕಾದ ಮುಖ್ಯ ವಿಷಯಗಳು.

(೧) ಫಾರೆಸ್ಟು ಬವುಂಡರಿ ಲೈನುಗಳ ಒಳಗೆ ಇರುವಂತಹ ಮೈದಾನುಗಳಲ್ಲಿ (Grazing Grounds) ಜಾನುವಾರು ಮೇಯಿಸಲು ಈಗ ರಾಸು ಒಂದರ ೬ ಮತ್ತು ೧೦ ಆಣೆಗಳಂತೆ ವಸೂಲು ಮಾಡುತ್ತಾರೆ. ಇದನ್ನು ಮನ್ನಾಪಡಿಸಬೇಕು. ಫಾರೆಸ್ಟು ಸರ್ವೆ ಕಾಲದಲ್ಲಿ ಫೀಸಿಲ್ಲದೆ ಜಾನುವಾರು ಮೇವಿಗೆ ಅಂತಹ ಮೈದಾನಗಳನ್ನು ಬಿಡುತ್ತೇವೆಂದು ರೈತರಿಗೆ ಬಾಯಿದೆರೆ ವಾಗ್ದಾನಮಾಡಿರುತ್ತಾರೆ. ಆದರೆ ಈಗ ಫರ್ಮಿಟಿಲ್ಲದೆ ಸದರಿ ಬವುಂಡರಿ ಒಳಗಿರುವ ಸ್ಥಳಗಳಿಗೆ ಜಾನುವಾರುಗಳು ಹೋಗಕೂಡದೆಂದು ಹುಕ್ಕುಮು ಜಾರಿಗೆ ತಂದಿರುತ್ತಾರೆ. ಇದನ್ನು ಆಲೋಚಿಸಿ ನೋಡಿದರೆ 'ಓದುವದು ಶಾಸ್ತ್ರ ಇಕ್ಕುವದು ಗಾಳ' ಎನ್ನುವ ಮಾತಿನಂತೆ ಆಯಿತು. ಇನ್ನಾದರೂ ಈ ವಿಷಯದಲ್ಲಿ ಆಲೋಚಿಸುವಂತೆ ಸಂಬಂಧಪಟ್ಟ ಆಫೀಸರರಲ್ಲಿಯೂ, ಕೌನ್ಸಿಲು ಮೆಂಬರರಲ್ಲಿಯೂ ನಮ್ಮ ಅರಿಕೆಯು.

(೨) ಫಾರೆಸ್ಟು ಸರ್ವೆ ಕಾಲದಲ್ಲಿ ವರ್ಗದಾರರ 'ಪಟ್ಟಿಗೆ' ಸೇರಿದಂತಹ ಕಾನ ಸ್ಥಳಗಳನ್ನು 'ರಿಜರ್ವಾಗಿ' ಮಾಡಿರುತ್ತಾರೆ. ಇದಕ್ಕೆ ರೈತರು ಆಕ್ಷೇಪಣೆ ಹೇಳದ್ದಕ್ಕೆ ಎಕ್ರೆ ಒಂದರ ಒಂದು ರೂಪಾಯಿಯ [illegible] ಕೊಟ್ಟು ಕೊಡದೆಯೂ ಬಲಾತ್ಕಾರದಿಂದ [illegible] ಒಳಗೆ ಸೇರಿಸಿರುತ್ತಾರೆ. ಹೊಲದ ಪೈರನ್ನು ಕಾಪಾಡಲು 'ಬೇಲಿ' ಕಟ್ಟುವುದು. [illegible] 'ಬೇಲಿ'ಯೆ ಹೋಗಿ ಪೈರನ್ನು ತಿನ್ನಲು ಪ್ರಾರಂಭಿಸಿದ ಪಕ್ಷದಲ್ಲಿ ಕೇಳುವವರು ಯಾರು? ಇದರಂತೆಯೇ ನಮ್ಮ [illegible] ಸರಕಾರದವರು ಮಾಡುವ ತಪ್ಪನ್ನು ಯಾರು ಕೇಳುವರು? ಇನ್ನಾದರೂ ಕಾಡು ಬೆಳೆಯುವ ಬದಲಿಗೆ ಅಂತಹ ಸ್ಥಳಗಳನ್ನು ರೈತರಿಗೆ ಕೊಡಿಸಿ ಕೊಡಿಸಬೇಕಾಗಿ ನಮ್ಮ ಅರಿಕೆಯು. ಅಲ್ಲದೆ ರಿಜರ್ವ ಕಾಡಿನೊಳಗೆ ಬೇಸಾಯಕ್ಕೆ ಅತಿ ಒಳ್ಳೆಯ ಅನೇಕ ಬಾಗಾಯತು, ನಂಜ, ಮತ್ತು ಪುಂಜ ಮಾಡಬಹುದಾದ ಸ್ಥಳಗಳಿರುತ್ತವೆ. ಅವುಗಳನ್ನು ರೈತರ ಉಪಯೋಗಕ್ಕೆ ಕೊಡಿಸಿದರೆ ತುಂಬಾ ಅನುಕೂಲವಾಗುತ್ತಿತ್ತು.

(೩) ಫಾರೆಸ್ಟು ಡಿಪಾರ್ಟಮೆಂಟಿನವರು ಆನೆಗಳ ಹಾವಳಿ ಇರುವಂತಹ ಜಾಗೆಗಳಲ್ಲಿ ಅವುಗಳನ್ನು ಹಿಡಿಸುವ ಏರ್ಪಾಡು ಮಾಡಿಸುವುದಿಲ್ಲ. ಅವುಗಳು ಕೊಡುವ ಉಪದ್ರವನ್ನು ಸಹಿಸುವುದು ಅಸದಳವು. ರೈತರ ಗದ್ದೆ, ಹೊಲಗಳಿಗೆ ಬಂದು ಆಗುವ ನಷ್ಟಕ್ಕೆ ಸರ್ಕಾರದವರು 'ಕಿರ್ವೆ'ಯಲ್ಲಿ ರಿಯಾಯತಿ ತೋರಿಸುವುದಿಲ್ಲ. ಒಂದು ವೇಳೆ ಹೊಲಗದ್ದೆ ಮತ್ತು ತೋಟಕ್ಕೆ ಆನೆಗಳು ಬಂದಾಗ ರೈತರು ಅದರಿಂದಾಗುವ ನಷ್ಟವನ್ನು ಸಹಿಸಲಾರದೆ ಗುಂಡುಹೊಡೆದು ಬಿಡುತ್ತಾರೆ. ಅಂತಹ ಆನೆಗಳು ಒಂದು ವೇಳೆ ರಿಜರ್ವಿನಲ್ಲಿ ಹೋಗಿ ಬಿದ್ದು ಸತ್ತರೆ, ರೈತರ ಮೇಲೆ ತಪ್ಪು ಹೊರಿಸಲು ಪ್ರಯತ್ನಿಸುತ್ತಾರೆ. ಇದು ನ್ಯಾಯುವೆ? ಇನ್ನಾದರೂ ಈ ವಿಷಯದಲ್ಲಿ ಅವರು ಆಲೋಚಿಸುವಂತೆ ಏರ್ಪಾಡಾಗಬೇಕು.

(೪) ಇಂಗ್ಲೀ ಇಲಾಖೆಯವರು ಈಗ ಉಪ್ಪಿನಂಗಡಿ ತಾಲೋಕಿನ ನಾಲ್ಕಾರು ಬ್ಲೊಕಿನಲ್ಲಿ 'ಕೂಪು' ಎಂಬುದಾಗಿ ಮರಗಳನ್ನು ಬೆಳೆಯಿಸುವ ಏರ್ಪಾಡಿನಲ್ಲಿದ್ದಾರೆ. ಆದರೆ ಇವರು ಈಗ ಮಾಡಿಸುವ ಕೆಲಸವು ವ್ಯರ್ಥವೆಂದು ಹೇಳಲು ಅಡ್ಡಿ ಇಲ್ಲ. ಈ ವಿಷಯಗಳನ್ನು ಸರ್ವದಾ ಈ ಪ್ರಾಂತ್ಯದಲ್ಲಿ ವಾಸಿಸುವ ಅನುಭವಜ್ಞರು ಹೇಳಿದರೆ ಸದರಿ ಡಿಪಾರ್ಟಮೆಂಟಿನ ಉದ್ಯೋಗಸ್ಥರು 'ಇದರ ವಿಷಯ ನಿಮಗೇನು ಅನುಭವವಿದೆ! ನಾವಾದರೋ 'ಡಿಗ್ರಿ'ಗಳನ್ನು ಪಡೆದು ಬಂದಿರುತ್ತೇವೆ' ಎಂಬುದಾಗಿ ತಿರಸ್ಕರಿಸಿ ಬಿಡುವರು. ಇವರಂತೆಯೇ ಮಂಗಳೂರು ಮಡಿಕೇರಿ ರಸ್ತೆಯಲ್ಲಿ ಸಂಪಾಜೆಗೆ ಸಮೀಪ 'ಚೈಲೆ' ಎನ್ನುವ ಸ್ಥಳದಲ್ಲಿ 'ಡಿಗ್ರಿ' ಹೊಂದಿದಂತಹ ಧಿಕ್ಕಾರದಿಂದ ಸಾಧಾರಣ ಮೂರು ಸಾವಿರ ರೂಪಾಯಿ ಮಣ್ಣುಪಾಲಾಯಿತು! ಇಂತಹ ಸರಕಾರದ ಉದ್ಯೋಗಸ್ಥರು ಮಾಡುವ ತಪ್ಪನ್ನು ಯಾರೂ ಕೇಳಲಿಕ್ಕಿಲ್ಲವೇ? ಆ ಸ್ಥಳದಲ್ಲಿ ಈಗ 'ಡಿಗ್ರಿ' ಪಡೆಯುವಂತಹ ಜಮೀನ್ದಾರರ ಅನುಭವಕ್ಕೆ ಸರಿಯಾಗಿ ಮಾಡಿಸಿದ ತುಸ ಖರ್ಚಿನ ರಸ್ತೆಯಲ್ಲಿ ದೊಡ್ಡ ದೊಡ್ಡ ಬಸ್ಸುಗಳು ಸಹಾ ಹೋಗಿ ಬರುತ್ತವೆ. ಇವರಂತೆಯೇ ಮೇಲಿನ ವಿಷಯಕ್ಕೂ ಹಣ ವೆಚ್ಚ ಮಾಡಿದರೆ ಬರುವ ಪ್ರಯೋಜನವು ಕಾಡುಗಳಿಂದ 'ಬೀಳು' ಕಡಿಸಬೇಕಲ್ಲದೆ ಮರಗಳ ಅಡಿಯಲ್ಲಿರುವ ಕಾಡುಗಳನ್ನು ತೆಗಿಸುವುದು ಒಳ್ಳೇಯದಲ್ಲ! ಮತ್ತು ಕಾಡಿನಲ್ಲಿ ಸಾಧಾರಣ ಹದಿನಾರು ಅಡಿಗಳ ದೂರದಲ್ಲಿ ಮೂರು ಫೀಟು ಅಗಲವಿರುವಂತಹ ತುಂಬಾ ಲೈನುಗಳನ್ನು ಕಡಿಸಲು ತೊಡಗಿದ್ದಾರೆ. ಇವರಿಂದ ಕಾಡಿನೊಳಗೆ 'ನೆಟ್ಟಗೆ' ಬೆಳೆಯುವಂತಹ 'ಕಿರಾಲ' 'ಭೋಗಿ' ಸಸಿಗಳು ಬಿಸಿಲು ಬಿದ್ದು 'ಗೇರು ಬೀಜ' ಮರದಂತೆ ಬೆಳೆಯ ತೊಡಗಿದ್ದು ಕಂದಕ್ಕದ ಹತ್ತಿರ 'ದೊಡ್ಡ ಕಾನ'ದಲ್ಲಿ ಈ ಮುಂಚೆ ತಯಾರಿಸಿದ 'ಕೂಪಿ'ನಿಂದ ತಿಳಿಯಬಂದೀತು. ಬಡ ರೈತರಿಂದ ಜಾನ್ವಾರು ಫೀಸೆಂದು ಹಣ ವಸೂಲು ಮಾಡಿ ಹೀಗೆ ವ್ಯರ್ಥ ವ್ಯಯಮಾಡುವುದರಿಂದ ಉಂಟಾಗುವ ಸುಕೃತಫಲಗಳೇನು? ಇದಕ್ಕೆ ಬದಲಾಗಿ ಜಾನ್ವಾರು ಮೇವಿಗೆ ಫರ್ಮಿಟು ರದ್ದುಮಾಡಿ ಮೇವಿಗೆ ಯೋಗ್ಯವಾದ ಸ್ಥಳಗಳನ್ನು ಬಿಟ್ಟುಕೊಟ್ಟರೆ ಆದರೆ ನಮ್ಮ ಜಿಲ್ಲೆಯಿಂದ 'ಜಗಳ' ನೆತ್ತರು ಹೀರುವಂತೆ ಪ್ರತಿವರ್ಷವೂ ಮೈಸೂರು ದೇಶಿಕರು ಜಾನ್ವಾರನ್ನು ವಿಕ್ರಯಿಸಿ ಹಣ ಲಕ್ಷಗಟ್ಟಲೆಯಲ್ಲಿ ಕೊಂಡುಹೋಗಲಾರರು. ಈ ಮೇಲೆ ಬರೆದ ವಿಷಯಗಳಲ್ಲಿ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಆಲೋಚಿಸಿ ನಮ್ಮ ಕೋರಿಕೆಯನ್ನು ಈಡೇರಿಸುವರೆಂತಲೂ, ಕೌನ್ಸಿಲ್ ಮೆಂಬರರು ಆಲೋಚಿಸದೆ ಎಂದಿಗೂ ಇರಲಾರರೆಂತಲೂ ನಮ್ಮ ನಂಬುಗೆಯು.

ವರ್ಗದಾರ.

ಮಹಾಶಯ!

ಸ್ವದೇಶಾಭಿಮಾನಿಯ (ತಾ. ೨೩-೧೦-'೨೫) ೧೪ನೇ ಸಂಚಿಕೆಯಲ್ಲಿ 'ಲೋಕಲ್ ಬೋರ್ಡುಗಳ ಮೆಂಬರರು' ಎಂಬ ಶಿರೋಲೇಖನದಿಂದ ಬರೆದಿರುವ ತಮ್ಮ ವಿಚಾರವನ್ನು ಓದಿ, ಪುನಃ ಓದಿ ಆ ಕುರಿತು ನನ್ನ ಅಭಿಪ್ರಾಯವನ್ನು ತಮ್ಮ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕುತೂಹಲಪಟ್ಟೆನು. ತಾವು ತಮ್ಮ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಬರೆದಿರುವಂತೆ, ಒಂದರ ಹಿಂದೆ ಒಂದು ಹೀಗೆ ಮೂರು ಮೀಟಿಂಗಿಗೆ ಹಾಜರು ಆಗದಿರುವ ಮೆಂಬರರನ್ನು ಲೋಕಲ್ ಬೋರ್ಡು ಕ್ರಮವಿದೆಯೆಂಬ ಕಾರಣದಿಂದ ಬೋರ್ಡು ಸಭೆಯಲ್ಲಿ ಆರಿಸಲು ಮಿಕ್ಕ ಮೆಂಬರರು ತಮ್ಮ ಅನುಕೂಲ ಮತಕೊಡುವದಾದರೂ ಬೋರ್ಡುಗಳ ಕರ್ತವ್ಯಸಾಧನಕ್ಕೆ ಗೌರವವಲ್ಲವೆಂಬುದೇನೊ ನಿಜವೇ. ಅಂಥಾ ಮೆಂಬರರು ಸಾರ್ವಜನಿಕ ಹಿತದ ಪರವಾಗಿ ಕೆಲಸ ಮಾಡಲು ನಿಜವಾಗಿಯೂ ಅಶಕ್ತರೇ. ಆದರೆ ಇದರಂತೆ ಕಳೆದ ಡಿಸ್ಟ್ರಿಕ್ಟ ಬೋರ್ಡು ಮೀಟಿಂಗಿನಲ್ಲಿ ಮೂರು ಮೀಟಿಂಗಿಗೆ ಹಾಜರು ಆಗದವರನ್ನು ಪುನಃ ಚುನಾವಣೆ ಮಾಡಿಲ್ಲವೆಂದೂ, ಕಳೆದ ಸಾರಿ ಆರಿಸಿದವರು ಒಂದೇ ಸಾರಿ ಗೈರುಹಾಜರು ಆದವರೆಂದೂ, ಲೋಕಲ್ ಬೋರ್ಡು ಕ್ರಮದಂತೆ ಮೂರು ತಿಂಗಳಲ್ಲಿ ಹಾಜರು ಆಗದವರೆಂತ ಉಲ್ಲೇಖವಿರುವುದರಿಂದ ಮಂದೇ ಸಾರಿ ಹಾಜರು ಆಗದವರು ಎರಡನೇ ಸಾರಿ ತಮ್ಮ ಹಕ್ಕನ್ನು ಕಳಮಕೊಳ್ಳುವರೆಂದೂ, ಅಂಥವರನ್ನು ಮೀಟಿಂಗಿನಲ್ಲಿಯೇ ಪುನಃ ಆರಿಸುವುದು ನ್ಯಾಯವೆಂದೂ ಎಂಥಾ ಸಾರ್ವಜನಿಕ ಕೆಲಸದಲ್ಲಿ ಪ್ರೇಮವುಳ್ಳವನಾದಾಗ್ಯೂ ಒಂದೂ ಸಾರಿ ತಪ್ಪದೆ ಇರಲು ಸಾಧ್ಯವಿಲ್ಲವೆಂದೂ, ದೇಹಾಲಸ್ಯಾದಿ ಸಂಸಾರಿಕ ತಾಪತ್ರಯಗಳು ಸರ್ವರನ್ನೂ ಬಿಟ್ಟಿಲ್ಲವೆಂದೂ ಒಂದೇ ಸಾರಿ ತಪ್ಪಿದವನನ್ನು ಹೊರತಳ್ಳುವುದು ನ್ಯಾಯವಲ್ಲವೆಂದೂ ಇದರಿಂದ ಸಾರ್ವಜನಿಕ ಹಿತವಾಗದೆ ಅಹಿತವೇ ಆಗುವದೆಂದೂ ಈ ಎಲ್ಲಾ ಕಾರಣಗಳನ್ನು ವಿಚಾರಮಾಡಿಯೇ ಕಳೆದ ಸಾರಿ ಡಿಸ್ಟ್ರಿಕ್ಟ ಬೋರ್ಡು ನ್ಯಾಯಸಮ್ಮತವಾದುದನ್ನೆ ಮಾಡಿಯದೆಂದೂ ನಾನು ಅಭಿಪ್ರಾಯಪಡುತ್ತೇನೆ.

ಸಜ್ಜನ ವಿಧೇಯ,
ಅಮಣಸೆದ್ದೆಲು ಕೃಷ್ಣರಾಯ ಕೊಡಿಗಿ.
ಡಿಸ್ಟ್ರಿಕ್ಟ ಬೋರ್ಡ ಮೆಂಬರ್.

ಡಿಸ್ಟ್ರಿಕ್ಟ ಬೋರ್ಡಿನ ಗೈರು ಹಾಜರಾದ ಮೆಂಬರರ ಪುನಃ ಚುನಾವಣೆಯು ಯೋಗ್ಯ ವಿಚಾರ ಪೂರ್ವಕ ಮಾಡಿದ್ದೆಂದು, ಡಿಸ್ಟ್ರಿಕ್ಟ ಬೋರ್ಡು ಮೆಂಬರರೇ ಪ್ರತಿಪಾದಿಸಿದ್ದನ್ನು ನೋಡಿ ನಮಗೆ ಸಂತೋಷವಾಯಿತು. ಎಲ್ಲಾ ಲೋಕಲ್ ಬೋರ್ಡುಗಳೂ, ಮ್ಯುನಿಸಿಪಾಲಿಟಿಗಳೂ, ಮುಂದೆಯೂ ಹಾಗೆಯೇ ತಮ್ಮ ಅಧಿಕಾರವನ್ನುಪಯೋಗಿಸುವರೆಂದು ಆಶಿಸುವೆವು. (ಸಂ।)

ಪುತ್ತೂರು ಬೋರ್ಡು ಹ್ಯಾಸ್ಕೂಲಿನಲ್ಲಿ ಕಲಿಯುವ ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಸ್ಥಾಪಿಸಲ್ಪಟ್ಟಿರುವ ದೀಪಾವಳಿ ಫಂಡು.

ಪುತ್ತೂರು ಬೋರ್ಡು ಹೈಸ್ಕೂಲಿನಲ್ಲಿ ಕಲಿಯುವ ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಸ್ಥಾಪಿಸಲ್ಪಟ್ಟಿರುವ ದೀಪಾವಳಿ ಫಂಡಿನ ಒಂಭತ್ತನೆಯ ವರ್ಷದ ವರದಿಯನ್ನು ಈ ಮೊದಲೇ ಪತ್ರಗಳ ಮುಖಾಂತರ ವಾಚಕ ಮಹಾಶಯರ ಮುಂದಿಟ್ಟಿರುವೆನು. ಈ ಫಂಡಿನಲ್ಲಿ [illegible] ಯಲ್ಲಿ ರೂ. ೩೦೦೦ ಮೂಲಧನವಾಗಿದೆಯೆಂದೂ, ವರದಿ ವರ್ಷದಲ್ಲಿ ರೂ. ೪೧೬-೧೧-೦ ವಿದ್ಯಾರ್ಥಿವೇತನಕ್ಕಾಗಿಯೂ, ರೂ. ೩೬-೮-೯ ಉಚಿತಾರ್ಥವಾಗಿ ಕೊಟ್ಟ ಪಠ್ಯಪುಸ್ತಕಗಳಿಗಾಗಿಯೂ ವೆಚ್ಚವಾಗಿದೆ ಯೆಂದು ಅದರಿಂದ ಕಾಣುವುದಷ್ಟೆ. ನಾಲ್ಕೈದು ವರ್ಷಗಳಿಂದ ಪುತ್ತೂರು ಪೇಟೆಯಿಂದಲೂ ನೆರೆಗ್ರಾಮಗಳಿಂದಲೂ ಮಾತ್ರ ದೀಪಾವಳಿ ಸಂದರ್ಭದಲ್ಲಿ ಧನಸಂಗ್ರಹವನ್ನು ಮಾಡುತ್ತಿದ್ದೆವು. ಈ ಸಾರಿ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಅರೇಳು ತಂಡವಾಗಿ ಉಪ್ಪಿನಂಗಡಿ ತಾಲೂಕಿನ ಅನೇಕ ಗ್ರಾಮಗಳಿಗೆ ಹೋಗಿ ಬಹಳವಾಗಿ ಶ್ರಮಪಟ್ಟಿರುವರು. ಇವರಿಂದ ಶ್ರಮದ ಫಲವಾಗಿ ಮೇಲಿನ ತಾರೀಕು ವರೆಗೆ ರೂ. ೬೧೩-೬-೧ ಜಮೆಯಾಗಿರುವುದು. ಬಡ ವಿದ್ಯಾರ್ಥಿಗಳಿಗಾಗಿ ಇವರು ಪಟ್ಟ ಶ್ರಮವು ಸ್ತುತ್ಯರ್ಹವಾದುದು. ಅಪರಿಚಿತರಾದ ಇವರಿಗೆ ದಾರಿಯಲ್ಲಿ ಅಲ್ಲಲ್ಲಿ ಊಟ ಉಪಚಾರವನ್ನು ಒದಗಿಸಿಕೊಟ್ಟು ಧನಸಂಗ್ರಹ ವಿಷಯದಲ್ಲಿ ಸಹಾಯಮಾಡಿದ ಎಲ್ಲಾ ಮಹಾಶಯರಿಗೂ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ. ಧನಸಹಾಯ ಮಾಡಿದ ಮಹಾಶಯರ ಹೆಸರನ್ನು, ಅವರು ಕೊಟ್ಟ ಐವೇಜನ್ನು ಕೆಳಗೆ ಪ್ರಕಟಿಸುವೆನು. ಸ್ಥಳಸಂಕೋಚದ ದೆಸೆಯಿಂದ ಎಲ್ಲರ ಹೆಸರನ್ನೂ ಇಲ್ಲಿ ಪ್ರಕಟಿಸಲು ಸಾಧ್ಯವಾಗದಿದ್ದುದಕ್ಕೆ ಅಂಥವರು ದಯವಿಟ್ಟು ಮನ್ನಿಸಬೇಕಾಗಿ ಅಪೇಕ್ಷೆ.

ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ರೂ. ೪೦, ಕಾಟೂರು ವಿಷ್ಣುಮಯ್ಯನವರು, ಗುಂಡಿ ನಾರಾಯಣ ಪದ್ಮನಾಭ ಪಾಡಿಲ್‌ಕಾರರು, ರೂ. ೧೨ರಂತೆ, ಕಂಜರ್ಪಣೆ ವೆಂಕಟ್ರಮಣಯ್ಯ ರೂ. ೧೦, ಎಣ್ಮೂರು ಕಟ್ಟದ ಮನೆ ಪಟೇಲ ಸಂಕಪ್ಪಗೌಡರು ರೂ. ೮, ಕಾಜೆಲ ಸುಬ್ರಾಯರು ನಾರಾಯಣ ಭಟ್ಟ ಭಿಡೇಯವರು ರೂ. ೬ ರಂತೆ, ಉಬರಡ್ಕ ತಿಮ್ಮಪ್ಪಯ್ಯ ಭಟ್ಟರು, ನಾರಣಕಜೆ ನಾರಾಯಣಯ್ಯ, ಶಿವಣ್ಣ ಕೋಳತ್ತಾಯರು, ನಲ್ಲಿಕುಂಜೆ ಕೃಷ್ಣಯ್ಯ, ಮಂಗಳಪಾದಿ ಗಣಪಯ್ಯ, ಕೆದಿಲ ನಾರಣಪ್ಪಯ್ಯ, ನೆಟ್ಟಾರು ಸುಬ್ಬಣ್ಣಯ್ಯ, ಬಿ. ವೆಂಕಟಕೃಷ್ಣರಾಯರು, ಎಮ್. ಆರ್. ಚಂದ್ರನವರು, ವಿಟ್ಲಯೂಳ ಶ್ರೀನಿವಾಸ ಪಡ್ಡಿಲ್ಲಾಯ, ಸುಬ್ರಹ್ಮಣ್ಯ ಶ್ರೀ ವಿಶ್ವಜ್ಞ ತೀರ್ಥ ಶ್ರೀಪಾದಂಗಳು, ಪುಲ್ಲಡ್ಕ ಕೆ. ಸುಬ್ರಾಯರು, ಮುಳ್ಳುಬಾಗಿಲು ವೆಂಕಟ್ರಮಣಯ್ಯ, ಪುಣ್ಚಪಾಡಿ ಗೋಪಾಲಯ್ಯ, ನಡುಮನೆ ಗೋವಿಂದಯ್ಯ, ಬಾಕಿಲಂಗಡಿ ಇಸ್ಮಾಯಿಲ್ ಬ್ಯಾರಿ; ಮೊಗರ ದೊಡ್ಡಮನೆ ನಾರಣಪ್ಪಯ್ಯ, ಗಬ್ಬಲಡ್ಕ ವಿಷ್ಣುಮಯ್ಯ, ಕರ್ವಜೆ ಮಹಾಲಿಂಗ ಜೋಯಿಸರು, ಬರ್ಮಾಯ [illegible] ವಿಶ್ವೇಶ್ವರ ಭಟ್ಟರು, ಬೆಳಗಜೆ ತಿಮ್ಮಪ್ಪಯ್ಯ, ಕೋಡಿಂಬಾಡಿ ಮಂಜಪ್ಪ ಶೆಟ್ಟರು, ಬಜಕರೆ ಸಾಲು ಕೃಷ್ಣಭಟ್ಟ ಭಿಡೆಯವರು, ಮುದಲಾಜೆ ಜನಾರ್ಧನ ಭಟ್ಟ, ಕೆ. ಎನ್. ಜೋಯಿಸಪ್ಪೆಯವರು, ಸವ್ಪೂರ ಶಿವರಾಯರು, ಎಮ್. ಶಿವರಾಯರು, ರೂಪಾಯಿ ೫ ರಂತೆ.

ರೂ. ೫ಕ್ಕಿಂತ ಕಡಿಮೆ ಕೊಟ್ಟವರ ಒಟ್ಟು ಮೊಬಲಗು ಕಡಿ ಜುಮ್ಲಾ ರೂಪಾಯಿ ೬೧೩—೬—೧.

M. RAMAN NAMBYAR,
Headmaster,
For Secretary,
Puttur Educational Society

ವಿವಿಧ ವಿಷಯಗಳು.

ಮೌಲಾನಾ ಅಜದರ ಅಭಿಪ್ರಾಯ,

ಓಲ್ ಇಂಡಿಯಾ ಯುನಿಟಿ ಕಾನ್ಫರೆನ್ಸಿನಲ್ಲಿ ಪಾಸಾದ ಠರಾವಿನಂತೆ ಮುಸಲ್ಮಾನರ ಮಸೀದಿಗಳಲ್ಲಿ ತಮ್ಮ ಪ್ರಾರ್ಥನೆ ಮಾಡುತ್ತಿರುವಾಗ್ಗೆ ಹಿಂದುಗಳು ಮಸೀದಿಯ ಹತ್ತಿರ ವಾದ್ಯಗಳನ್ನು ನುಡಿಸಿದರೆ ಅವರಿಗೆ ತೊಂದರೆಯಾಗುತ್ತದೆಯಾಗಿಯೂ ಮತ್ತು ಮುಸಲ್ಮಾನರು ದನಗಳನ್ನು ಕೊಂದರೆ ಅದು ಹಿಂದುಮತಕ್ಕೆ ವಿರೋಧವಾದುದಾಗಿ ಈ ಎರಡು ಪ್ರಶ್ನೆಗಳನ್ನು ಯುನಿಟಿ ಕೊನ್ಫರೆನ್ಸಿನಲ್ಲಿ ತಕ್ಕ ವ್ಯವಸ್ಥೆಗೆ ತರಬೇಕೆಂದು ಪಾಸಾದಂತೆ ಹಿಂದೂ ಮುಸಲ್ಮಾನರ ಮುಖಂಡರು ಯಾವ ತರದ ಪ್ರಯತ್ನಗಳನ್ನೂ ತೆಗೆದುಕೊಳ್ಳದೆ ಇದ್ದ ಕಾರಣವು ತನಗೆ ತಿಳಿಯುವುದಿಲ್ಲವಾಗಿಯೂ, [illegible] ಮತ್ತು ಪಂಡಿತ ಮೋತಿಲಾಲಜಿಯವರು ನಾಗಪೂರಿನಲ್ಲಿ ನಿರ್ಣಯಿಸಿದಂತೆ ಇತರ ಕಡೆಗಳಲ್ಲಿ ಸಹ ಏನೊಂದೂ ಪ್ರಯತ್ನಗಳು ಕಾಣುವುದಿಲ್ಲ. ಆದುದರಿಂದ ಯುನಿಟಿ ಕೊನ್ಫರೆನ್ಸಿನಲ್ಲಿ ಸೇರಿದ ಮುಖಂಡರೆಲ್ಲರೂ ಈ ಎರಡು ಪ್ರಶ್ನೆಗಳ ಕುರಿತು ತಕ್ಕ ವ್ಯವಸ್ಥೆಯನ್ನು ಕೆಲಸುತ್ತಾರೊ ಇಲ್ಲವೊ ಎಂಬ ಸಂಗತಿಯನ್ನು ತಿಳಿಸಬೇಕಾಗಿಯೂ ಮತ್ತು ಅದನ್ನು ಐಕ್ಯದಿಂದ ತಕ್ಕ ಸಾಧನೆಯನ್ನು ಮಾಡಬೇಕಾಗಿ ಮನವಿ ಮಾಡಿಕೊಂಡಿರುವರು. ಈ ವಿಷಯ ಓಲ್ ಇಂಡಿಯಾ ಕೊಂಗ್ರೆಸ್ ಪಾರ್ಟಿಯ ಪ್ರೆಸಿಡೆಂಟರಾದ ಮಹಾತ್ಮಾ ಗಾಂಧಿಯವರನ್ನು ಯುನಿಟಿ ಕಾನ್ಫರೆನ್ಸಿನಲ್ಲಿ ಪಾಸಾದ ಎರಡು ಠರಾವುಗಳನ್ನು ಯಾವ ರೀತಿಯಲ್ಲಿ ನಡವಳಿಗೆ ತರಬಹುದೆಂದು ಕೇಳಿಕೊಂಡಿರುವರು.

ಶ್ರೀ ಶ್ರೀನಿವಾಸ ಐಯ್ಯಂಗಾರರ ರಾಜಮಹೇಂದ್ರಿಯ ಭಾಷಣ.

ಸ್ವರಾಜ್ಯ ಪಾರ್ಟಿಯ ಮುಖಂಡರಾದ ಶ್ರೀಯುತ ಶ್ರೀನಿವಾಸ ಐಯ್ಯಂಗಾರರು ರಾಜಮಹೇಂದ್ರಿಗೆ ಹೋಗಿರುವರು. ಇವರಿಗೆ ಅಲ್ಲಿಯ ಸ್ವರಾಜ್ಯ ಪಾರ್ಟಿಯವರು ತಕ್ಕ ಸನ್ಮಾನವನ್ನಿತ್ತರು. ಇವರು ರಾಜಮಹೇಂದ್ರಿಯಿಂದ ಕಾಕೀರು ಎಂಬಲ್ಲಿ ಮೋಟಾರಿನಲ್ಲಿ ಹೋಗಿ ಅಲ್ಲಿ ಕೂಡಿದ [illegible] ಒಂದು ಭಾಷಣವನ್ನು ಕೊಟ್ಟರು. ಇವರು ತಮ್ಮ ಭಾಷಣದಲ್ಲಿ ಹೆಚ್ಚಾಗಿ ಸ್ವರಾಜ್ಯ ಪಾರ್ಟಿಯವರ ಕಡೆಯಿಂದ ಅಲ್ಲಿಯ ಪಂಚಾಯತರನ್ನು ಚುನಾಯಿಸಬೇಕೆಂದೂ, ಇನ್ನು ಸದ್ಯದಲ್ಲಿಯೇ ಆಗಲಿಕ್ಕಿರುವ ಪಂಚಾಯತರ ಚುನಾವಣೆಗೆ ಸ್ವರಾಜ್ಯ ಪಾರ್ಟಿಯ ಮೆಂಬರರನ್ನು ಆರಿಸಿ ಅವರಿಗೇ ವೋಟನ್ನು ಕೊಡಬೇಕಾಗಿ ಹೇಳಿರುವರು. [illegible] ಎಂಬವರು ತಮ್ಮ ಓಟುಗಳನ್ನೆಲ್ಲಾ ಸ್ವರಾಜ್ಯ ಪಾರ್ಟಿಯ ಮೆಂಬರರಿಗೆ ಕೊಡಬೇಕೆಂದೂ ಅಲ್ಲಿ ನೆರೆದ [illegible] ಹೇಳಿದರು. ಅಲ್ಲಿಂದ ಐಯ್ಯಂಗಾರರು ರಾಜಮಹೇಂದ್ರಿಗೆ ಬಂದು ಅಲ್ಲಿ ನೆರೆದಿದ್ದ ಸಭೆಗೆ [illegible] ಬಂದು ಭಾಷಣವನ್ನು ಕೊಟ್ಟರು. ಅಲ್ಲಿಯ ಸ್ವರಾಜ್ಯಪಾರ್ಟಿಯವರಿಂದ [illegible] 'ಚಿತ್ತರಂಜನ' ಎಂಬ ವಾರ ಪತ್ರಿಕೆಯ ವಿಷಯ ತಮ್ಮ [illegible] ಅಭಿಪ್ರಾಯವನ್ನು ಕೊಟ್ಟು ಆ ಪತ್ರಿಕೆಗೆ ತಕ್ಕ ಸಹಾಯವನ್ನು ಮಾಡಬೇಕೆಂದು ಸಭೆಗೆ ನೆರೆದಿದ್ದವರಿಗೆಲ್ಲಾ ಹೇಳಿದರು. ಅನಂತರ ಸ್ವರಾಜ್ಯ ಪಾರ್ಟಿಯಲ್ಲಿ ಏನೊಂದೂ ಬದಲಾವಣೆಯಾಗಲಿಲ್ಲವೆಂದೂ ಮತ್ತು [illegible] ಈಗ ಎಕ್ಸಿಕ್ಯೂಟಿವ್ ಕೌನ್ಸಿಲರ ಸಿಟ್ಟು ಮಿನಿಸ್ಟರ ಸಿಟ್ಟು [illegible] ಕೂಡ ಸ್ವರಾಜ್ಯಪಾರ್ಟಿಯವರ ಬಲ ಏನೊಂದೂ ಕಮ್ಮಿಯಾಗುವುದಿಲ್ಲವೆಂದೂ ಮಿನಿಸ್ಟರ್ ಸಿಟ್ಟುಗಳನ್ನು ಸ್ವರಾಜ್ಯ ಪಾರ್ಟಿಯವರು ಒಪ್ಪಿಕೊಳ್ಳುವುದು [illegible] ಅಂಥ ಕೃತ್ಯಗಳು ಒದಗಿದ ಪಕ್ಷಕ್ಕೆ [illegible] ಎಂದು ಹೇಳಿರುವರು.

ಸ್ಫುಟ ವಿಚಾರಗಳು.

ಮದ್ಯಪಾನ ನಿಷೇಧ.

ಕಳೆದ ತಾ. ೩ರಲ್ಲು ಮದ್ರಾಸಿನಲ್ಲಿ ಹಿಂದೂ ಮದ್ಯಪಾನ ನಿಷೇಧ ಸಭೆಯು ಕೂಡಿತ್ತು. ಮಂಜೂರಾದ ಠರಾವುಗಳಲ್ಲಿ, ಗಡಂಗುಗಳ ಸಂಖ್ಯೆಯನ್ನೂ ಸ್ಥಳವನ್ನೂ ನಿರ್ಣಯಿಸುವ ಹಕ್ಕನ್ನು ಸರಕಾರವು ಸ್ಥಳೀಕ ಸ್ವರಾಜ್ಯ ಸಂಸ್ಥೆಗಳಿಗೆನೇ ಬಿಟ್ಟುಕೊಡಬೇಕು ಎಂಬುದು ಮುಖ್ಯವಾಗಿತ್ತು.

ಗಡಂಗುಗಳ ಸ್ಥಳವನ್ನು ನಿಶ್ಚಯಿಸುವುದರ ವಿಷಯವಾಗಿ ಅನೇಕ ಕಡೆಗಳಲ್ಲಿ ವಾದ ಹುಟ್ಟಿಯದೆ. ಅಂತಹವುಗಳಲ್ಲಿ ಮಂಗಳೂರು ಮ್ಯುನಿಸಿಪಾಲಿಟಿಯೂ ಒಂದು. ಮದ್ಯಪಾನ ನಿಷೇಧಕ್ಕಾಗಿ ಜನರು ಹೂಡಿದ ಚಳವಳವನ್ನೆಲ್ಲಾ ಸರಕಾರವು ರಾಷ್ಟ್ರೀಯ ಚಳವಳಗಳಂತೆಯೇ ನೋಡಿ ನಾಶಪಡಿಸಲು ಆತುರರಾದುದು ಹಿಂದೀ ದೌರ್ಭಾಗ್ಯ. ವಿಲಾಯತಿಯ ಪ್ರಮುಖರೂ ಸ್ವಾತಂತ್ರ್ಯ ಪ್ರಿಯರೂ ಆದ ಅಮೇರಿಕೆಯರ ಕೂಡ ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧಿಸಿ ಈಗ ಅದರ ಸತ್ಪರಿಣಾಮವನ್ನು ಅನುಭವಿಸುತ್ತಾರೆ. ಆದರೆ ಇಂಗ್ಲೀಷರು, ಪ್ರಜಾ ಜನರು ಒತ್ತಾಯಮಾಡಿದರೂ ಕೂಡ ಮದ್ಯಪಾನ ನಿಷೇಧವಂತಿರಲಿ, ಅದರ ಹಾವಳಿಯನ್ನು ತಡೆಕಟ್ಟುವಲ್ಲಿ ಕೂಡ ಸಹಕಾರಿಗಳಾಗುವುದಿಲ್ಲ. ಮದ್ಯಪಾನ ಅಫೀಮು ಇತ್ಯಾದಿ ಅಮಲುಗಳಿಂದ ಸರಕಾರಕ್ಕೆ ಲಾಭವಾಗುವ ಅತಿಯಾದ ಸುಂಕವೇ ಅವರನ್ನು ಈ ರೀತಿ ಪ್ರೇರಿಸುತ್ತಿದೆ.

ಗಡುಂಗುಗಳನ್ನು ಪಟ್ಟಣದ ಮಧ್ಯದಲ್ಲಾಗಲಿ, ಹೆಚ್ಚಿನ ಜನಸಂಚಾರವಿರುವ ಸ್ಥಳಗಳಲ್ಲಾಗಲಿ ಇರಿಸುವುದರಿಂದ ಜನರಿಗೆ ಬಹಳ ಅಪಾಯವಿರುವುದು ಎಲ್ಲರಿಗೂ ಅನುಭವವಾದುದು. ಕುಡುಕತನದ ಅಭ್ಯಾಸವನ್ನು ಹೆಚ್ಚುಮಾಡಲಿಕ್ಕೂ, ಕಲಹಗಳನ್ನು ಹೆಚ್ಚಿಸಲಿಕ್ಕೂ ಈ ಗಡಂಗುಗಳು ಕಾರಣಗಳಾಗುತ್ತಿವೆ. ಈ ಹಾನಿಯನ್ನು ತಿಳಿದೂ ಸರಕಾರವು ಜನತೆಯ ಆಶಯವನ್ನು ಹಠಸಾಧನೆಯಿಂದ ನಿರೋಧಿಸುತ್ತಿದೆ. ಮಂಗಳೂರು ಮ್ಯುನಿಸಿಪಾಲಿಟಿಯ ಈ ವಿಷಯವಾದ ಎರಡು ಠರಾವುಗಳು ವ್ಯರ್ಥವಾದುವು. ಸರಕಾರವು ವಾರಿಗೆ ಕಣ್ತೆರೆಯುವುದೊ!

ಮದ್ಯಪಾನ.

ಮದ್ಯಪಾನವನ್ನು ಕೇವಲ ಶೂದ್ರಾದಿಗಳು ಮಾಡುತ್ತಿದ್ದು ಮೇಲು ಜಾತಿಯವರು ಮದ್ಯಪಾನವೆಂದರೆ ಅಸಹ್ಯಪಡುತ್ತಿದ್ದರು. ಅಲ್ಲದೆ ಜಾತಿಬಹಿಷ್ಕಾರದ ಭಯವೂ ಮದ್ಯಪಾನ ಪ್ರಸಾರ ಹೊಂದದಂತೆ ಮಾಡಿದ್ದಿತು. ಆದರೆ ಈಗಿನ ಕಾಲದಲ್ಲಿ ಬ್ರೇಂಡಿಗೆ ಗೌರವ ಉಂಟಾಗಿ, ಜಾತಿಬಹಿಷ್ಕಾರ ಇಡುವವರಿಗೆನೇ ಬೆದರಿಕೆಯಾಗುವ ಈ ಕಾಲದಲ್ಲಿ ಜನರಿಗೆ ಸ್ವೇಚ್ಛೆಯಂತೆ ನಡೆಯಲು ಸುಲಭವಾಗಿದೆ. ಅನೇಕ ಮೇಲ್ಜಾತಿಯವರು ಮದ್ಯಪಾನದಲ್ಲಿ ಲೋಲರಾಗಿರುತ್ತಾರೆ. ಮೊದಲು ಮೊದಲು ಇದು ಅಂತರಂಗದಲ್ಲಿಯೇ ನಡೆಯುತ್ತಿತ್ತಾದರೂ ಇತ್ತೀಚೆಗೆ ಬಹಿರಂಗವಾಗಿಯೇ ಈ ಮದ್ಯಪಾನವು ನಡೆಯುತ್ತಿದೆ. ಮದ್ಯಪಾನವು ಹಲವು ವರ್ಷಗಳ ಹಿಂದೆ ಇದ್ದುದಕ್ಕಿಂತಲೂ ಈಗ ಹೆಚ್ಚಾಗಿಯದೆ ಎನ್ನಬಹುದು. ಸರಕಾರದ ಹಾನಿಕರವಾದ ಧೋರಣವೇ ಇದರ ಕಾರಣವೆನ್ನಬೇಕು. "ಯಥಾ ರಾಜಾ ತಥಾ ಪ್ರಜಾ" ಎಂಬ ನಾಣ್ನುಡಿಯು ಎಂದೆಂದಿಗೂ ನಿಜವಾದುದು. ಎಸೆಂಬ್ಲಿಯಲ್ಲಿ ಮದ್ಯಪಾನಕ್ಕಾಗಿ ತಂದ ಠರಾವನ್ನೂ, ಉಪಸೂಚನೆಗಳನ್ನೂ ಸರಕಾರವು ಸಂಪೂರ್ಣವಾಗಿ ನಿಷೇಧಿಸಿಯದೆ; ಮತ್ತು ಈ ನಿರೋಧದಲ್ಲಿ ಯಾವುದರೂ ಮಂಜೂರಾಗಿ ಹೋದ ಮದ್ಯಪಾನದ ನಿಷೇಧ ಠರಾವನ್ನು ಸರಕಾರವು ಮಾನಿಸಿಲ್ಲ.

ಹಿಂದೂಮಹಾಸಭೆ.

ಪಂಡಿತ ಮದನಮೋಹನ ಮಾಲವೀಯರ ಅಧ್ಯಕ್ಷತೆಯಲ್ಲಿ ಹಿಂದೂ ಮಹಾಸಭೆಯ ಕಾರ್ಯಕಾರಿ ಮಂಡಳಿಯು ಡಿಲ್ಲಿಯಲ್ಲಿ ಕಳೆದ ತಾ. ೩ನೇ ದಿನ ಕೂಡಿತ್ತು. ಇದರ ಉದ್ದೇಶವು, ಆಗಾಗ ಹಿಂದೂ-ಮುಸಲ್ಮಾನರ ಕಲಹಗಳಿಂದ ದೇಶದಲ್ಲಿ ಉಂಟಾದ ಪರಿಸ್ಥಿತಿಯನ್ನು ವಿಚಾರಿಸುವುದಿತ್ತು. ಸಭೆಯು ಬಹಿರಂಗವಿರಲಿಲ್ಲ.

ದೇಶದಲ್ಲಿ ಮುಸಲ್ಮಾನರೆಲ್ಲರೊಳಗೆ ಒಂದು ತರದ ಮತ್ಸರಭಾವವು ಬೇರೂರಿದಂತೆ ಕಾಣುತ್ತಿದೆ. ಡಿಲ್ಲಿ ಮುಂತಾದ ಪ್ರಮುಖ ಸ್ಥಳಗಳಿಂದ ಮುಸಲ್ಮಾನ ಅರ್ಚಕರು ದೇಶದ ಇತರ ಭಾಗಗಳಿಗೆ ಹೋಗಿ ವಿಷದ ಬೀಜವನ್ನು ಬಿತ್ತುತ್ತಿರುವಂತೆ ತೋರುತ್ತಿದೆ. ಶೋಲಾಪುರದ ಘಟನೆಯು ಅಂತಹ ಪ್ರಚಾರ ಕಾರ್ಯದ ಪರಿಣಾಮವಾಗಿದ್ದಿತು. ಶೋಲಾಪುರದಲ್ಲಿ ಹಿಂದುಗಳು ಏಕಾದಶೀ ದಿವಸ ಶ್ರೀ ವಿಠ್ಠಲನೊಡನೆ ಮೆರವಣಿಗೆಯನ್ನು ತೆಗೆದುಕೊಂಡು ಹೋಗುವುದಿತ್ತು. ಮಾರ್ಗದಲ್ಲಿ ಒಂದು ಮಸೀದಿಯೂ ಇದ್ದಿತು. ವರ್ಷ ವರ್ಷವೂ ಈ ಮೆರವಣಿಗೆಯು ನಿಶ್ಶಂಕವಾಗಿ ನಡೆಯುತ್ತಿದ್ದಿತು. ಈ ವರ್ಷ ಕಾನಪುರದ ಒಬ್ಬ ಮೌಲ್ವಿಯುವರು ಮುಸಲ್ಮಾನರಲ್ಲಿ ಆವೇಶವನ್ನು ತುಂಬಿಸಿದರು. ಮೆರವಣಿಗೆಯು ಮಸೀದಿಯ ಹತ್ತಿರ ಬಂದಿತು. ಮುಸಲ್ಮಾನ ಭಾವನೆಯನ್ನು ಗೌರವಿಸಲಿಕ್ಕಾಗಿ, ಅವರ ಪ್ರಾರ್ಥನೆಯ ಕಳೆಯಲೆಂದು ೧॥ ಘಂಟೆ ಅಲ್ಲಿ ಕಾದು ನಿಂತಿತು. ಆ ಮೇಲೆ ಹೊರಟಿತು. ಆದರೆ ಈ ೧॥ ಘಂಟೆಯಲ್ಲಿ ಮುಸಲ್ಮಾನರು ಪ್ರಾರ್ಥಿಸುವ ಬದಲಿಗೆ ಮೆರವಣಿಗೆಯನ್ನು ಹ್ಯಾಗೆ ಕೆಡಿಸುವುದೆಂದು ಆಲೋಚಿಸಿದರು. ಮೆರವಣಿಗೆ ಹೊರಟ ಕೂಡಲೆ ಅದರ ಮೇಲೆ ಬಿದ್ದರು. ಜಗಳ ಕಟ್ಟಿತು. ಪೊಲೀಸರು ಗುಂಡು ಹಾರಿಸಬೇಕಾಯಿತು.

ಇದೇ ರೀತಿಯಲ್ಲಿಯೂ, ಇನ್ನು ಅನೇಕ ರೀತಿಯಲ್ಲಿಯೂ ಮುಸಲ್ಮಾನರು ಜಗಳ ಪ್ರಾರಂಭಿಸುವರಾಗಿ ತಿಳಿದು ಬರುತ್ತಿದೆ. ಹಿಂದೂಗಳ ಸೌಮ್ಯತನವು ಲೋಕವಿಶ್ರುತವಾದುದು. ಅಲ್ಲಲ್ಲಿಂದ ಬಂದ ಕಲಹಗಳ ವಾರ್ತೆಯೂ ಮುಸಲ್ಮಾನರ ಸ್ವಾವೇಶಿಕ ಕೃತ್ಯಗಳನ್ನೇ ಸೂಚಿಸುತ್ತಿದೆ. ಮಾತ್ರವಲ್ಲದೆ, ಹುಡುಗಿಯರ ಮತ್ತು ಹುಡುಗರ ಕಳವು, ಇತ್ಯಾದಿಗಳೂ ಮುಸಲ್ಮಾನರ ಕೈಯಿಂದ ನಡೆಯುತ್ತಿರುವ ವಿಷಯಗಳೂ ತಿಳಿದುಬರುತ್ತಿವೆ.

ಈ ಪರಿಸ್ಥಿತಿಯನ್ನು ವಿಚಾರಿಸಲಿಕ್ಕೆ ಕಾಂಗ್ರೆಸ್ಸು ಧೈರ್ಯಪಡುವುದಿಲ್ಲ. ಮುಸಲ್ಮಾನರಿಗೆ ಕೋಪವಾಗುವುದೆಂಬ ಹೆದರಿಕೆಯಿಂದ ಹಿಂದೂ ರಾಜಕೀಯ ಧುರೀಣರು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟಪಡಿಸುವುದಿಲ್ಲ. ಈ ಕೆಲಸಕ್ಕೆ ಹಿಂದೂ ಮಹಾಸಭೆಯೇ ಮುಂದರಿಯಬೇಕಾಗಿದೆ. ಮುಸಲ್ಮಾನ ಧುರೀಣರೂ ಖಿಲಾಫತ ಕಮಿಟಿಯೂ ಈ ಪರಿಸ್ಥಿತಿಯನ್ನು ಸುಧಾರಿಸುವುದಿಲ್ಲ. ಆದುದರಿಂದ ಹಿಂದೂ ಮಹಾ ಸಭೆಯ ಕಾರ್ಯಕಾರಿ ಮಂಡಳಿಯು ಡಿಲ್ಲಿಯಲ್ಲಿ ಕೂಡಿದ್ದು ಅತ್ಯುತ್ತಮವಾಯಿತು. ಆದರೆ ಯಾವ ತರದಲ್ಲಿ ಅದು ತನ್ನ ಕರ್ತವ್ಯವನ್ನು ಪೂರೈಸುವುದೂ ಎಂಬುದನ್ನು ನೋಡಲಿದೆ. ಸತ್ಯಾಗ್ರಹವನ್ನು ಹೂಡುವ ಸೂಚನೆಯುಂಟಾಗಿದೆ ಎಂದು ತಿಳಿಯುತ್ತೇವೆ. ಸತ್ಯಾಗ್ರಹಕ್ಕೆ ತಯಾರಿಯೂ, ಜನಸಂಖ್ಯೆಯೂ ಹೆಚ್ಚು ಬೇಕು. [illegible] ಸಾಧ್ಯವೆಂದಾದರೆ ಅದೇ ಉತ್ತಮವಾದುದು. ಆದರೆ ಮಹಾತ್ಮಾ ಗಾಂಧಿಯವರು ಹೇಳಿದಂತೆ ಸತ್ಯಾಗ್ರಹವಲ್ಲದಿದ್ದರೂ, ಇತರ ಉಪಾಯದಿಂದಾದರೂ ಹಿಂದೂಗಳು ತಮ್ಮ ಹಕ್ಕು ಸಾಧನೆಗಳನ್ನು ನಡಿಸಲೇ ಬೇಕು.

ಸ್ವರಾಜ್ಯ ಪಕ್ಷದ ಧೋರಣ, ನೆಹರುರವರ ಸ್ಪಷ್ಟೀಕರಣ

ಪಂಡಿತ ಮೋತಿಲಾಲ ನೆಹರುರವರು ಮುಂಬಾಯಿಯಲ್ಲಿ ಭಾಷಣಗಳನ್ನು ಕೊಟ್ಟು ಸ್ವರಾಜ್ಯಪಕ್ಷದ ಧೋರಣವನ್ನು ಸ್ಪಷ್ಟಪಡಿಸಿದರು. ಮಂಕಾದ ಧೋರಣವು ಅತ್ತಿತ್ತ ಅಲುಗುತ್ತಿದ್ದಾಗ, ಮನಸ್ಸಿನಲ್ಲಿಯೊಂದು, ಕಾರ್ಯದಲ್ಲಿ ಒಂದು, ರಹಸ್ಯದಲ್ಲಿ ಒಂದು, ಹೀಗೆ ವಿಶ್ವಾಸ ಕೆಡುವಂತೆ ಕೆಲವು ಘಟನೆಗಳು ನಡೆಯುತ್ತಿರುವದಾಗಿ ಅಭಯಂಕರರು ಕಳೆದ ಮಧ್ಯಪ್ರಾಂತ ಸ್ವರಾಜ್ಯಪಕ್ಷದ ಸಭೆಯಲ್ಲಿ ಹೇಳಿ, ಸ್ವರಾಜ್ಯ ಪಕ್ಷದ ಸದಸ್ಯರ ದೃಢತೆಯ ಅಭಾವವನ್ನು ತೋರಿದ್ದಾಗ ಪಂಡಿತ ನೆಹರುರವರು, ಶ್ಲೇಷವಿಲ್ಲದೆ ಸ್ಪಷ್ಟವಾಗಿ ಆ ಧೋರಣವನ್ನು ವ್ಯಕ್ತಪಡಿಸಿದುದು ಸಾಮಯಿಕವಾಯಿತು. ಸರಕಾರವು ಸ್ವರಾಜ್ಯಪಕ್ಷದ ಆಶಯಗಳನ್ನು ಮನ್ನಿಸದಿದ್ದರೆ, ಹೊಸ ಕಾರ್ಯಕ್ರಮವನ್ನು ರೂಪಿಸಿ ಸರಕಾರಕ್ಕೆ ಪಾಠವನ್ನು ಕಲಿಸುವರಾಗಿ ಒಂದು ಸೂಚನೆಯನ್ನು ಪಂಡಿತರು ಕೊಟ್ಟಿರುವರು; ಅಲ್ಲದೆ ಸವಿನಯ ಕಾನೂನು ಭಂಗದ ತಯಾರಿಯನ್ನು ಮಾಡುವ ಧೈರ್ಯವನ್ನು ಪ್ರೇರಿಸಿರುವರು.

ಸ್ವರಾಜ್ಯಪಕ್ಷದ ಈಗಿನ ಧೋರಣದಿಂದ ಅನೇಕರು ಪ್ರಯೋಜನವೇ ಇಲ್ಲವೆನ್ನುವರು. ಆದರೆ ಸರಕಾರವು ಪ್ರಜೆಗಳ ನಿರಂತರ ನಿರೋಧವನ್ನು ಸಹಿಸ ಬಲ್ಲುದೆಂಬುದನ್ನು ನಾವು ಕಲ್ಪಿಸಲಾರೆವು. ಎಷ್ಟೇ ಶಕ್ತಿಮಾನವಾದ ಸರಕಾರವಾದರೂ ಈ ನಿರಂತರ ನಿರೋಧಕ್ಕೆ ಬಗ್ಗಲೇ ಬೇಕು. ಖಂಡಿತವೇ ಬಗ್ಗುವುದು. ಮಾತ್ರ, ಪ್ರಜೆಗಳು ಖಂಡಿತ ನಿರ್ಧಾರ ಉಳ್ಳವರೂ, ಕೌನ್ಸಿಲ ಸದಸ್ಯರೂ ನಿಶ್ಚಲರು ಆಗಿರಬೇಕು,

ಒಂದು ಪಕ್ಷಕ್ಕೆ ಈ ನಿರಂತರ ನಿರೋಧದ ಧೋರಣವು ಸರಕಾರವನ್ನು ಬಗ್ಗಿಸಲು ಕಾರ್ಯಕಾರಿಯಾಗದಿದ್ದರೂ, ಜನತೆಯೊಳಗೆ ಉತ್ಸಾಹವನ್ನೂ, ಕಾದುವ ಮನಸ್ಸನ್ನೂ ಪ್ರೇರಿಸಿ ಜನತೆಯ ಲಕ್ಷ್ಯವನ್ನು ರಾಜಕೀಯ ಆಶಯದ ಕಡೆಗೆ ಕೇಂದ್ರೀಕರಿಸಬಲ್ಲುದು. ಮುಂದಿನ ರಾಜಕೀಯ ಉತ್ಕ್ರಾಂತಿಗಾಗಿ ಜನತೆಯನ್ನು ಸಿದ್ಧಪಡಿಸಿದಂತೆ ಆಗುವುದು. ಆದರೆ ರಿಸ್ಪೊನ್ಸಿವ್ ಕೊ-ಒಪರೇಶನ್ ಆಗಲಿ, ಸರಕಾರ ಸ್ವೀಕಾರದಿಂದ, ರಾಜಕೀಯ ಉತ್ಸಾಹವೇ ಮುರಿದು ಜನತೆಯೊಳಗೆ ಸ್ವರಾಜ್ಯದ ಆಶಯವೇ ಕಡಿಮೆಯಾಗುವಂತೆಯೂ ಆಗಬಹುದು.

ಅಸ್ಪೃಶ್ಯತೆ ಮತ್ತು ಸ್ವಾಮಿ ಶ್ರದ್ಧಾನಂದರು.

ಅಸ್ಪೃಶ್ಯತಾ ಸಮಸ್ಯೆಯು ದಿನಗಳೆದಷ್ಟಕ್ಕೆ ಬೆಳೆಯುತ್ತಾ ಬರುತ್ತಿದೆ; ಅಲ್ಲದೆ ಅಸ್ಪೃಶ್ಯತಾ ನಿರೋಧವೂ ಬಲಪಡುತ್ತಾ ಬರುತ್ತಿದೆ. ಅನೇಕ ಕಡೆಗಳಲ್ಲಿ ಅಸ್ಪೃಶ್ಯತೆಯ ಕಲಂಕವನ್ನು ತೆಗೆದು ಹಾಕಲು ಪ್ರಯತ್ನಗಳು ನಡೆಯುತ್ತಿವೆ. ಅಲ್ಲದೆ ಕೆಲವು ಕಡೆಗಳಲ್ಲಿ ಜಗಳಗಳುಂಟಾಗಿ, ಖೂನಿ ಕೂಡ ನಡೆದು ಸಮಸ್ಯೆಯು ಮತ್ತಷ್ಟು ಗಡುತರವಾಗಿ ಮಾಡಲ್ಪಟ್ಟಿವೆ. ಅಸ್ಪೃಶ್ಯ ಬಂಧುಗಳು ಇಡೀ ಹಿಂದೂಸ್ಥಾನದಲ್ಲಿ ೩೩ ಕೋಟಿ ಜನರೊಳಗೆ ೭॥ ಕೋಟಿ ಜನರಿರುವರು. ಅಂದರೆ ಸರಿ ಕಾಲು ಪಾಲು ಅಸ್ಪೃಶ್ಯರಿದ್ದಾರೆ. ಇವರನ್ನು ಹಿಂದೂ ಸಮಾಜವು ಕುತ್ತಿಗೆಗೆ ಕೈಹಾಕಿ ದೂಡುವುದನ್ನು ನೋಡಿದರೆ ಪಶ್ಚಾತ್ತಾಪ ಪಡಬೇಕಾಗಿದೆ. ಒಂದು ಕಡೆಯಿಂದ ಮುಸಲ್ಮಾನರು ತಾವಾಗಿ ಹಿಂದೂಗಳ ಬಲವನ್ನು ಮುರಿಯಲೆತ್ನಿಸುವಾಗ, ಇನ್ನೊಂದು ಕಡೆ ಕ್ರಿಸ್ತೀಯರು ಹಿಂದೂ ಸಂಖ್ಯೆಯನ್ನು ಅಳಿಸಿ ತಮ್ಮ ಸಂಖ್ಯೆಯನ್ನು ಬೆಳಸಲೆತ್ನಿಸುವಾಗ, ಅಂತರ್ಭಾಗದಿಂದ ಹಿಂದುಗಳು ತಾವಾಗಿ ತಮ್ಮ ಸಂಖ್ಯೆಯನ್ನು ಕಡಿಮೆಮಾಡಿಕೊಳ್ಳುವ ಆತ್ಮಘಾತುಕ ಸಾಂಪ್ರದಾಯವನ್ನು ಹಿಡಿದು ಮತಶ್ರದ್ಧೆಯನ್ನು ತೋರಿಸಿ ಅವಿವೇಕವನ್ನು ಪ್ರಕಟಿಸುವುದನ್ನು ನೋಡಿದರೆ ದುಃಖವಾಗುತ್ತದೆ.

ಸ್ವಾಮಿ ಶ್ರದ್ಧಾನಂದರು ಹಿಂದೂಗಳ ಅಗ್ರ ಧುರೀಣರು. ಹಿಂದೂ ಸಂಖ್ಯಾಬಲದ ಪ್ರಯೋಜನವನ್ನು ಅವರು ಚೆನ್ನಾಗಿ ತಿಳಿದುಕೊಂಡಿರುವರು, ಮತ್ತು ಹಿಂದೂಗಳ ಬಲವನ್ನು ಬೆಳಸಲಿಕ್ಕೆ ಅವಿಶ್ರಾಂತವಾಗಿ ಕೆಲಸಮಾಡುತ್ತಿರುವರು. ಆರ್ಯಸಮಾಜದ ದೀಕ್ಷೆಯಿಂದ ಸಮಗ್ರ ಭಾರತವನ್ನು ಸಂಚರಿಸಿ, ಸಮಸ್ತ ಹಿಂದೂಗಳಲ್ಲಿ ಚೇತನವನ್ನು ಊಸಿರುವ ಈ ಮಹಾತ್ಮರು ಅಸ್ಪೃಶ್ಯತೆಯ ಪರಿಣಾಮವನ್ನು ತಿಳಿದುಕೊಂಡು, ಅಂತಹ ದುರವಸ್ಥೆಯು ಹಿಂದೂ ಸಮಾಜಕ್ಕೆ ತಪ್ಪಿದಂತೆ, ಸಾಹಸದಿಂದ ಪ್ರಯತ್ನಿಸುವರು. ಸ್ವಾಮಿಯವರು ಕೆಲವು ದಿನಗಳ ಹಿಂದೆ ಮದ್ರಾಸಿಗೆ ಬಂದಿರುವರು. ಅಲ್ಲಿ ಅಸ್ಪೃಶ್ಯತೆಯ ವಿಷಯವಾಗಿ ಉಪನ್ಯಾಸಕೊಟ್ಟು ಅಲ್ಲಿಂದ ಪಾಲ್ಘಾಟಿಗೆ ಹೋಗುವರು. ಪಾಲ್ಘಾಟಿನಲ್ಲಿ ಅಲ್ಲಿಯ ಅಸ್ಪೃಶ್ಯರಾದ ಎಝುವಾ ಜನರಿಗೂ ಬ್ರಾಹ್ಮಣರಿಗೂ ಕಲಹವಾಗಿದೆ. ಅಲ್ಲಿ ಸಮಾಧಾನಮಾಡಲು ಹೋಗುವರು.

ಅಸ್ಪೃಶ್ಯರೂ ಕೂಡ ಜನಾಂಗದಲ್ಲಿ ಶತಮಾನಗಳಿಂದ ಬೆಳೆದು ಬಂದ ಈ ಸಾಂಪ್ರದಾಯವನ್ನು ಥಟ್ಟನೆ ಒಡೆಯಲು ಪ್ರಯತ್ನಿಸಿದರೆ ಅದರಿಂದ ಇತ್ತಂಡದವರಿಗೂ ಬಾಧಕವಿದೆ. ತಮ್ಮ ಅಸ್ಪೃಶ್ಯತೆಯನ್ನು ತೆಗೆದುಹಾಕಲಿಕ್ಕೆ ಕೆಲವು ಈಗಿನ ನಾಗರಿಕವೆನ್ನುವ ಸಾಧನಗಳನ್ನು ಉಪಯೋಗಿಸಲು ಪ್ರಯತ್ನಿಸುವುದು ವಿಷಾದಕರ. ಹೊಟೆಲಿನಲ್ಲಿ ಹೋಗುವುದು ಇತ್ಯಾದಿ ನಾಗರಿಕ ಆಚರಣೆಗಳು ಜೀವನವನ್ನು ಕಷ್ಟತರವಾಗಿ ಮಾಡುವಂತಹವುಗಳಾಗಿವೆಯೇ ಹೊರತು, ಅವುಗಳಿಂದ ಉನ್ನತಿ ಸಾಧನೆಯಿಲ್ಲ. ಅಸ್ಪೃಶ್ಯ ಜಾಗ್ರತೆಯಿಂದ ತಮ್ಮ ಸುಧಾರಣೆಯನ್ನು ಕಲ್ಪಿಸಿಕೊಳ್ಳಬೇಕು.

ಅಸ್ಪೃಶ್ಯರ ಬೆಂಬಲವಾಗುವ ಸುಧಾರಕರೂ ಜಾಗರೂಕತೆಯಿಂದ ಈ ಕೆಲಸವನ್ನು ಕೈಕೊಳ್ಳಬೇಕು. ಆದಷ್ಟು ನಿರಾತಂಕ ಉಪಾಯಗಳಿಂದ ಉದ್ದಿಷ್ಟವನ್ನು ಸಾಧಿಸಬೇಕು. ಪತಿತಸ್ಥಿತಿಯಿಂದ ಥಟ್ಟನೆ ಉನ್ನತಿಗೆ ಏರುವ ಈ ಪ್ರಯತ್ನದಲ್ಲಿ ಅಸ್ಪೃಶ್ಯರೊಳಗೆ ಪ್ರತಿ ಕ್ರಿಯಾಫಲವಾಗಿ ಅಹಂಭಾವವುಂಟಾಗದಂತೆ ನೋಡುವುದು. ಇದರ ಆದ್ಯ ಕರ್ತವ್ಯವಿದೆ.

ಸೊಳ್ಳೆಗಳನ್ನು ನಿವಾರಿಸತಕ್ಕ ಒಂದು ಜಾತಿಯ ಮೀನ.

ಸೊಳ್ಳೆಗಳನ್ನಡಗಿಸುವ ವಿಷಯದಲ್ಲಿ ಬಹು ದಿನಗಳಿಂದ ಉಪಾಯಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದ [illegible] 'ಭಾರಾಹಿಸ್ತಿಕಾ' ಎಂಬ ಒಂದು ಜಾತಿಯ [illegible] ನೀರಿನಲ್ಲಿಡುವುದರಿಂದ, ಸೊಳ್ಳೆಗಳು ಅಲ್ಲಿ ಹರಿಯುವುದೇ ಇಲ್ಲವೆಂದು ನಿರ್ಧರಿಸಿರುವನು. ಇದನ್ನು [illegible] ಮಾಡುವುದಕ್ಕಾಗಿ, ಅವನು ಬೇರೆ ಬೇರೆ ನೀರಿನಲ್ಲಿ ಬೇರೆ ಬೇರೆ [illegible] ಸೊಳ್ಳೆಗಳನ್ನೂ, [illegible] ಒಂದು ಕಡೆ ಸೇರಿಸಿ ನೋಡಿರುವನು. [illegible] ಸೊಳ್ಳೆಗಳೂ ಅಲ್ಲಿ ಮುಂದೆ ಜೀವನವನ್ನು ಹೊಂದದೆ, ಅಲ್ಲಿಂದೇ ನಶಿಸುತ್ತಿದ್ದವು. ಇದರಿಂದ ಈ [illegible], ಸೊಳ್ಳೆಯೂ ಒಂದೇ ಸ್ಥಳದಲ್ಲಿರುವುದು ಸಾಧ್ಯವೇ ಇಲ್ಲವೆಂದೂ, ಸೊಳ್ಳೆಗಳ ಹಾವಳಿಯನ್ನು ನಿರ್ಮೂಲ ಮಾಡುವುದಕ್ಕೆ ಇದಕ್ಕಿಂತಲೂ ಉತ್ತಮವಾದ ಬೇರೆ [illegible] ವಿಲ್ಲವೆಂದೂ, ಅವನು ಅನುಭವದಿಂದ ತಿಳಿದು ಬರೆದಿರುವನು.

(ಆ. ಚಂದ್ರಿಕೆ) ([illegible] ಜರ್ನಲ್.)

ಅನುಕ್ರಮಣಿಕೆ.

ಅಗ್ರಲೇಖ:—	ಪುಟಗಳು.
ಕರ್ನಾಟಕ ಏಕೀಕರಣದ ಚಳವಳ	೬
ವಿದೇಶ—ಒಳದೇಶ ವರ್ತಮಾನ	,,
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ಮಂಗಳೂರು	,,
ರಾಷ್ಟ್ರೀಯ ಶಿಕ್ಷಣ	,,
ಪತ್ರವ್ಯವಹಾರ ೧, ೨, ೩	೮
ಗೋವಧೆ	,,
ಅಧಿಕ ಸಂತೋಷದಿಂದ ಉಂಟಾಗುವ ಅನರ್ಥಗಳು	೪

ಸ್ವದೇಶಾಭಿಮಾನಿ.

ಶಕ ೧೮೪೭ ಕಾರ್ತಿಕ ಬ॥ ೧೩ಯು ಶುಕ್ರವಾರ.

ಕರ್ನಾಟಕ ಏಕೀಕರಣದ ಚಳವಳ.

ಲೇಖಾಂಕ ೧.

ಕರ್ನಾಟಕದ ಏಕೀಕರಣಕ್ಕೆ ಆಂಧ್ರದ ಆಘಾತವು ಬಿದ್ದುದನ್ನು ನೋಡಿ ಸಮಗ್ರ ಕರ್ನಾಟಕವೇ ಕೋಪಿಸಿಯದೆ. ಆಂಧ್ರದ ಈ ಸ್ವಾರ್ಥವರ್ತನವು ಆಂಧ್ರದ ಭಾಷಾ ವಾತ್ಸಲ್ಯಕ್ಕಾಗಲಿ, ಆಂಧ್ರದ ವಿಶ್ವ ವಿದ್ಯಾಲಯಕ್ಕಾಗಲಿ, ಆಂಧ್ರದ ಯಶಸ್ಸಿಗಾಗಲಿ, ಭೂಷಣವಾದುದಲ್ಲವೆಂದು ಪ್ರತ್ಯೇಕ ಉಸುರಬೇಕಾಗಿಲ್ಲ. ಯಾವ ಪ್ರಾಂತಕ್ಕೆ ಈ ವಿಶ್ವ ವಿದ್ಯಾಲಯದ ಸತ್ಪರಿಣಾಮವಾಗಲಿ, ದುಷ್ಪರಿಣಾಮವಾಗಲಿ ಉಂಟಾಗುವುದೊ, ಅದರ ಪ್ರತಿನಿಧಿಗಳ ಅಭಿಪ್ರಾಯಗಳನ್ನು ಮಾನಿಸುವ ಬದಲು ಇತರ ಪ್ರತಿನಿಧಿಗಳು ತಮ್ಮ ಸ್ವಂತದ ಅಭಿಪ್ರಾಯವನ್ನು ಆ ಪ್ರಾಂತದ ಮೇಲೆ ಹೊರಿಸಿ ಬಲಾತ್ಕಾರಪೂರ್ವಕವಾಗಿ ಅದನ್ನು ಆಂಧ್ರ ವಿಶ್ವವಿದ್ಯಾಲಯದ ಆಜ್ಞಾವರ್ತಿಯಾಗಿ ಮಾಡಿದುದನ್ನು ಯಾರೂ ನ್ಯಾಯವೆಂದು ಹೇಳಲಾರರು.

ಹತಭಾಗ್ಯ ಕರ್ನಾಟಕದ ಇತಿಹಾಸವು ದುಃಖಮಯವಾಗಿದೆ. ಒಂದು ಕಾಲದಲ್ಲಿ ಕರ್ನಾಟಕದ ಕೀರ್ತಿಯು ಸರ್ವತ್ರ ವ್ಯಾಪಿತವಾಗಿದ್ದಿತಾದರೂ, ಒಂದು ಕಾಲದಲ್ಲಿ ಅದರ ಸಾಮ್ರಾಜ್ಯವು ದಕ್ಷಿಣ ಹಿಂದೂಸ್ಥಾನವನ್ನು ಆಕ್ರಮಿಸಿದ್ದಿತಾದರೂ, ಒಂದು ಕಾಲದಲ್ಲಿ ಅದರ ಧುರೀಣರೂ ಜಗನ್ಮಾನಿತರಾಗಿದ್ದರೂ, ಈಗ ಕರ್ನಾಟಕವು ಖಂಡ ಖಂಡವಾಗಿ ವಿಭಾಗಿಸಲ್ಪಟ್ಟು, ಅನೇಕರ ಕೈಯೊಳಗೆ ಹಂಚಿಸಲ್ಪಟ್ಟಿದೆ. ಬೇರಾವ ಪ್ರಾಂತಕ್ಕೂ ಇಂತಹ ದುರ್ಗತಿಯು ಒದಗಿದೆಯೆಂದಾಗಲಿ, ಹಿಂದೆ ಒದಗಿತ್ತೆಂದಾಗಲಿ, ನಮಗೆ ತಿಳಿದು ಬಂದಿಲ್ಲ. ಮರಾಠಾ ಪ್ರಾಂತವು ಮುಂಬಾಯಿ ಮತ್ತು ಮಧ್ಯ ಪ್ರಾಂತ ಮತ್ತು ಹೈದರಾಬಾದಿನೊಳಗೆ ಹಂಚಿರುವುದಾದರೂ ಅದರ ಅಖಂಡತೆಯು ಈ ರಾಜಕೀಯ ವಿಭಜನೆಯಿಂದ ಕೆಟ್ಟು ಹೋಗಿಲ್ಲ. ಮಾತ್ರವಲ್ಲದೆ ವೀರ ಶಿವಾಜಿಯ ಅನುಯಾಯಿಗಳು ಆ ಮಹಾ ರಾಷ್ಟ್ರವೀರನ ನೆನಪಿನಲ್ಲಿ ತಮ್ಮ ಒಕಟ್ಟನ್ನು ಕಟ್ಟಿಕೊಂಡಿದ್ದಾರೆ. ಮಹಾರಾಷ್ಟ್ರದ ಸ್ವಾತಂತ್ರ್ಯದ ಗೌರವಶಾಹಿನಿಯ ಸಮಾಪ್ತಿ, ಪರಿಚ್ಛೇದವೂ, ಆಂಗ್ಲ ರಾಜ್ಯಭಾರದ ಪುನರ್ವ್ಯವಸ್ಥೆಯ ಉಪೋದ್ಘಾತವೂ ಏಕಕಾಲದಲ್ಲಿ ಉಂಟಾದುದರಿಂದ ಮಹಾ ರಾಷ್ಟ್ರದ ಪ್ರಾಂತಿಕ ಪ್ರೇಮವೂ, ಭಾಷಾ ಪ್ರೇಮವೂ ಇತಿಹಾಸ ಘಟನೆಯ ಕೈಗಳಲ್ಲಿ ಬಾಡಿ ಹೋಗಿಲ್ಲ.

ಆದರೆ ಕರ್ನಾಟಕದ ಇತಿಹಾಸವು ದುಃಖಮಯವಿದೆ. ಕರ್ನಾಟಕದ ವೀರಸಾಮ್ರಾಜ್ಯದ ಅಂತ್ಯದ ಮತ್ತು ಆಂಗ್ಲ ಪ್ರಭುತ್ವದ ವಿಚ್ಛೇದದ ಅಂತರದಲ್ಲಿ ಕರ್ನಾಟಕವು ಸಹಿಸಲಾರದ ಕಷ್ಟಗಳ ಮಧ್ಯದಲ್ಲಿದ್ದಿತು. ದಕ್ಷಿಣ ಕನ್ನಡವು ತುಂಡು ಪಾಳೆಯಗಾರರ ಖಂಡಾಟಿಕೆಯ ಮಧ್ಯದಲ್ಲಿದ್ದಿತು. ಯುದ್ಧದ ಕೋಲಾಹಲದ ಸಿಂಹಧ್ವನಿಯು ದಿನ ದಿನವೂ ಒಂದಲ್ಲ ಒಂದು ದಿಕ್ಕಿನಲ್ಲಿ ಎದ್ದು ಇನ್ನೊಂದು ದಿಕ್ಕಿನಲ್ಲಿ ಪ್ರತಿಧ್ವನಿಸುತಿದ್ದಿತು. ವಿಜಯನಗರದ ಪತನದೊಡನೆ ದೇಶದೊಳಗಿನ ಸ್ವೇಚ್ಛಾಪ್ರವರ್ತಕರಾದ ಅಧಿಕಾರಿಗಳ ದುರ್ವರ್ತನವು ದೇಶವನ್ನು ಹಿಂಡಿ ಗಿಡಿಯುತ್ತಿದ್ದಿತು. ಹೆಸರಿಗೆ ಮಾತ್ರ ಮೈಸೂರಿನಲ್ಲಿ ರಾಜನು ಸಿಂಹಾಸನದ, ಶೋಭೆಯನ್ನು ಕ್ರಿಡ್ಡೆಯಿಂದ ಕಾಯುತ್ತಿದ್ದನು.

ಹೈದರನು ಆ ಶೋಭೆಯ ಜ್ಯೋತಿಯನ್ನೂ ಆರಿಸಿಬಿಟ್ಟನು. ಇದ್ದ ರಾಜನು ಕಾರಾವಾಸದ ಅನುಭವವನ್ನು ಹೊಂದಿದನು. ದಕ್ಷಿಣವು ಮುಸಲ್ಮಾನ ಪ್ರಭುತ್ವಕ್ಕೆ ಸಲೆಯಾಯಿತು. ಹಿಂದೀ ಭಾಷೆಯು ಮುಂದಾಯಿತು. ಕರ್ನಾಟಕ ಭಾಷೆಯನ್ನು ಗಣಿಸುವವರಿಲ್ಲವಾಯಿತು. ಆ ಮೇಲಿನ ರಾಜ ರಾಜರೊಳಗಿನ ಸ್ಪರ್ಧೆಯೂ ಕರ್ನಾಟಕವನ್ನು ತುಂಡರಿಸಿ ಬಿಟ್ಟಿತು. ಮೈಯೊಳಗಿನ ವೀರದಿಂದು, ಹೃದಯದೊಳಗಿನ ಸಾಹಸ ಶೌರ್ಯ, ಭಾಷಾಪ್ರೇಮ ಇವೆಲ್ಲವೂ ಮೆಲ್ಲನೆ ನಿರ್ವಾಣವನ್ನು ಹೊಂದಿತು. ಯಾವಾಗ ಪುನಃ ಕರ್ನಾಟಕ ಜನ್ಮಾಧಿಕಾರಿಯು ಕರ್ನಾಟಕಸಿಂಹಾಸನವನ್ನು ಆಂಗ್ಲ ಸಹಾಯದಿಂದೇರಿದನೊ ಆಗ ಕರ್ನಾಟಕದ ಪರಿಸ್ಥಿತಿಯು ಕೈ ಮಿಂಚಿ ಹೋಗಿದ್ದಿತು. ಕೆಲಭಾಗ ನೈಜಾಮನಿಗೆ, ಕೆಲಭಾಗ ಆಂಧ್ರರಿಗೆ, ಕೆಲಭಾಗ ತಮಿಳರಿಗೆ, ಕೆಲಭಾಗ ಕೇರಳಕ್ಕೆ, ಕೆಲಭಾಗ ಮರಾಠಕ್ಕೆ ಹೀಗೆ ಕರ್ನಾಟಕವು ನಿಷ್ಪಕ್ಷಪಾತವಾಗಿ ಹಂಚಲ್ಪಟ್ಟಿದ್ದಿತು. ಯಾವಾಗ ಮೈಸೂರು ಪುನಃ ಸ್ವಾಧೀನವಾಯಿತೊ, ಆ ಕಾಲದಲ್ಲಿ ಮೈಸೂರಿನ ಪುನರ್ವ್ಯವಸ್ಥೆಯ ಕೆಲಸವೇ ಬಹಳವಿದ್ದು, ಭಾಷೆಗೆ ಮನಗೊಡುವವರಿಲ್ಲವಾಯಿತು.

ಹಲವು ವರ್ಷಗಳಾದವು. ಬಂಗಾಳ ವಿಭಜನೆಯಾಯಿತು. ಅದರೊಡನೆ ಬಂಗಾಳದ ಪ್ರಾಂತಿಕ ಪ್ರೇಮವು ಅವಿರೋಧವಾಗಿ ಹೊರಹರಿದು ನೆರೆಬಂದಿತು. ಅಷ್ಟರೊಳಗೆ ಬಂಕಿಮ ಮೊದಲಾದ ಅಮರ ಲೇಖಕರು ಬಂಗಾಳದಲ್ಲಿ ಉದಿಸಿ ಬಂಗಾಳವನ್ನು ಉಜ್ಜೀವಿಸಿ, ಉತ್ತೇಜಿಸಿ ಬಿಟ್ಟಿದ್ದರು. ಬಂಗಾಳವು ಎದ್ದಿತು. ಪ್ರಾಂತಿಕ ಸಮಸ್ಯೆಯನ್ನು ಅವರು ದೇಶದಲ್ಲೆಲ್ಲಾ ಹರಡಿಸಿ ಅಖಿಲ ಭಾರತದ ಸಮಸ್ಯೆಯಾಗಿ ಮಾಡಿದರು. ಪ್ರಾಂತಿಕ ಪ್ರೇಮವನ್ನು ವಿಶಾಲವಾಗಿ ಮಾಡಿ ಇಡೀ ಭಾರತವನ್ನು ಜಾಗರಿಸಿದರು. ಪ್ರಾಂತಿಕ ಪ್ರೇಮದ ಆಧಾರದಿಂದ ಅವರು ದೇಶದ ಪ್ರೇಮವನ್ನು ಕಟ್ಟಿದರು. ಅವರ ಸಾಧನೆಯಲ್ಲಿ ಕೃತಕೃತ್ಯರಾದರು.

ಬಂಗಾಳದ ಈ ಪಾಠವು ವ್ಯರ್ಥವಾಗಲಿಲ್ಲ. ಬಂಗಾಳದ ಆತ್ಮಯಜ್ಞದಲ್ಲಿ ಹೊಸ ಜ್ಯೋತಿಯು ಹುಟ್ಟಿತು. ಬಂಗಾಳದ ಮಹಾಯಜ್ಞದಲ್ಲಿ ದೇಶದ ನಿಸ್ವಾರ್ಥ ಮತ್ತು ವಿಶಾಲ ಪ್ರೇಮವು ಹುಟ್ಟಿ ಹೊರಬಂದಿತು.

ಆ ದೇಶ ಪ್ರೇಮದೊಡನೆ ಪ್ರಾಂತಿಕ ಪ್ರೇಮದ ಪ್ರೇರಣೆಯೂ ಹೊರಟಿತು. ಪ್ರತಿ ಪ್ರಾಂತವೂ ತನ್ನ ಪ್ರಾಂತವನ್ನು ಪ್ರೀತಿಸತೊಡಗಿತು. ಅದರೊಡನೆ ಭಾಷಾ ವಾತ್ಸಲ್ಯವೂ ಉಂಟಾಯಿತು. ಪ್ರತಿ ಭಾಷಾ ಪುತ್ರರೂ ಮಾತೃ ಸೇವೆಯಲ್ಲಿ ಭಕ್ತಿಯುಕ್ತರಾದರು.

ಈ ಮಹಾ ಪರಿಣಾಮವು ಕರ್ನಾಟಕದ ಮೇಲೂ ಉಂಟಾಯಿತು. ಕರ್ನಾಟಕವು ಮೆಲ್ಲನೆ ಚೇತರಿಸಿತು. ಕರ್ನಾಟಕದ ಸುಪುತ್ರರು, ಕರ್ನಾಟಕದ ವಾಙ್ಮಯ ಸೇವಕರು ಕರ್ನಾಟಕದ ಭಾಷೆಯ ಉಜ್ಜೀವನವನ್ನು ದೀಕ್ಷಾಬದ್ಧರಾಗಿ ಕೈಕೊಂಡರು. ಕರ್ನಾಟಕದ ಯುವಕರು ಕರ್ನಾಟಕದ ಮಾಧುರ್ಯವನ್ನು ಎಲ್ಲ ಕಡೆಯಲ್ಲಿಯೂ ಪ್ರಸರಿಸಲೂ ಪ್ರತಿಜ್ಞಾಬದ್ಧರಾದರು. ಸಾಹಿತ್ಯ ಪರಿಷತ್ತು, ಸಾಪ್ತಾಹಿಕ ಮಾಸಿಕ ಪತ್ರಿಕೆ ಇತ್ಯಾದಿಗಳು ಕರ್ನಾಟಕ ಸೇವೆಯ ದೀಕ್ಷೆಯ ಹೊರಗಿನ ಸೂಚನೆಗಳಾಗಿದ್ದವು.

ಹಿಂದೂ ದೇಶದ ಇತಿಹಾಸದಲ್ಲಿ ಕರ್ನಾಟಕವು ತಡವಾಗಿ ಜಾಗೃತವಾಯಿತು. ಆದರೆ ಯಾರು ಭಾಷೆಯ ಮೇಲಿನ ಅಸೀಮ ಪ್ರೇಮದಿಂದ ಮುಂದೆ ಬಂದರೂ ಅವರು ಅರ್ಧ ಮನಸ್ಸಿನವರಾಗಿರಲಿಲ್ಲ. ತಮ್ಮ ಧ್ಯೇಯಕ್ಕಾಗಿ ತಮ್ಮ ಸರ್ವವನ್ನು ಸಮರ್ಪಿಸಲು ಸಿದ್ಧರಿದ್ದವರಾಗಿದ್ದರು.

ವಿದೇಶ ವರ್ತಮಾನ.

—ಆಕಾಶದಲ್ಲಿ ಹೋಗುವ ವಿಮಾನವನ್ನು ಸೆರೆಹಿಡಿಯುವ ಉಪಾಯವೊಂದನ್ನು ಜಪಾನ್ ದೇಶೀಯರು ಕಂಡುಹಿಡಿದಿರುವರೆಂದು ತಿಳಿಯಬರುತ್ತದೆ. ಇದಲ್ಲವೇ ಅಸ್ತ್ರಕ್ಕೆ ಪ್ರತಿ ಅಸ್ತ್ರ!

—ದಮಾಸ್ಕಸ್ಸಿನಲ್ಲಿ ೧೨,೦೦೦ ಜೈದಿಗಳು ಬಾಂಬಿನಿಂದ ಕೊಲ್ಲಲ್ಪಟ್ಟರು. ಸುಮಾರು ನಾಲ್ಕುವರೆ ಕೋಟಿ ರೂಪಾಯಿಗಳು ಬಾಳುವ ಪದಾರ್ಥಗಳು ನಷ್ಟವಾದವು. ಇದಕ್ಕೆಲ್ಲಾ ಕಾರಣಭೂತನಾದ ಫ್ರೆಂಚ್ ಜನರಲ್ ಸರೇಲ್ ಎಂಬವನನ್ನು ಹಿಂದಕ್ಕೆ ಫ್ರಾನ್ಸಿನವರು ಕರೆಸಬೇಕು ಎಂಬದಾಗಿ ಅನೇಕರು ಅಭಿಪ್ರಾಯಪಡುತ್ತಲಿದ್ದಾರೆ. ಇವರ ಕೃತ್ಯದ ವಿಷಯವನ್ನು ವಿದೇಶದವರ ಗಮನಕ್ಕೆ ತರಬೇಕೆಂದು ಮತ್ತೆ ಕೆಲವರು ಪ್ರಯತ್ನಪಡುತ್ತಲಿರುವರು.

—ಅಬ್ದುಲ್ ಕರೀಮನ ಸಹೋದರನನ್ನು ಟೆನ್‍ಜಿಯರಿಗೆ ಹೋಗುವಾಗ ದಾರಿಯಲ್ಲಿ ಹಿಡಿದು ಕೊಂದುಹಾಕಿರುವರಂತೆ.

—ಡುಮಸ್ಕಸ್‍ನಲ್ಲಿ ಅಮೇರಿಕನ್ ಮಿಶನ್ ಶಾಲೆಗಳು ಮತ್ತು ದೊಡ್ಡ ದೊಡ್ಡ ಚರ್ಚುಗಳು ಸುಟ್ಟುಹೋಗಿರುತ್ತವೆ. ಪ್ರೆಂಚರು ಡುಮಸ್ಕಸ್ಸಿನ ಕ್ವಾರ್ಟರ್ ಕ್ರಿಶ್ಚನರನ್ನು ಓಡಿಸಿರುವರು. ಸುಮಾರು ೧೦,೦೦೦ ಸಾವಿರ ಅನಾಥ ಬಾಲಕಾಶ್ರಮದ ಮಕ್ಕಳು ಅಲ್ಲಿಯ ನಿಯರ್ ಈಸ್ಟ್ ರಿಲೀಫ್ ಎಸೋಸಿಯೇಶನಿನವರ ಸಹಾಯದಲ್ಲಿರುವರು.

—ಕುಷ್ಠರೋಗವನ್ನು ಅದರ ಪ್ರಥಮಾವಸ್ಥೆಯಲ್ಲಿಯೇ ಗುಣಮಾಡಬಹುದಾಗಿ ಡಾಕ್ಟರ್ [illegible] ಹೇಳಿದ ಮೇರೆಗೆ ಬ್ರಿಟಿಶ್ ಕುಷ್ಠರೋಗ ನಿವಾರಣಾ ಸಂಘದವರು ತಕ್ಕ ವ್ಯವಸ್ಥೆಯನ್ನು ಬೇಗನೆ ಮಾಡಲು [illegible] ನಿಶ್ಚಯಿಸಿರುವರು.

—ಡುಮಸ್ಕಸ್‍ನಲ್ಲಿ ಫ್ರೆಂಚರ ಕೆಪ್ಟನ್‍ನನ್ನು ಕೊಂದ ಸೇಡನ್ನು ತೀರಿಸಿಕೊಳ್ಳುವ ಬಗ್ಗೆ ಮೂರು ಜನ ಅರಬಿಯರನ್ನು ಗಲ್ಲಿಗೆ ಹಾಕಿದರು. ಸುಮಾರು ೬ ಘಂಟೆಯ ವರೆಗೆ ಹೆಣಗಳನ್ನು ತೂಗಾಡಿಸಿದ್ದರು ಮತ್ತು ಆ ಹೆಣಗಳ ಹತ್ತಿರ ದೊಡ್ಡ ಅಕ್ಷರಗಳಿಂದ ಅವರು ಮಾಡಿದ ಆರೋಪಣೆಯನ್ನು ಬರೆದು ದೊಡ್ಡ ಬೋರ್ಡನ್ನು ಸಹ ಇಟ್ಟಿದ್ದರು. ಇದನ್ನು ನೋಡಲಿಕ್ಕೆ ಜನರು ಗುಂಪುಗುಂಪಾಗಿ ಹೋಗುತ್ತಿದ್ದರಂತೆ. ಇದು ಯಾವ ಸಮೂನೆ ತಮಾಷೆ?

—ದಕ್ಷಿಣ ಆಫ್ರಿಕದ ಜನೇ ಹಿಂದೀಗಳ ಕಾನ್ಫರೆನ್ಸ್ ಇದೇ ತಿಂಗಳ ತಾ. ೧೬ಕ್ಕೆ ಸೇರಿತ್ತು. ಅದರಲ್ಲಿ ಕ್ಲಾಸ್‍ಏರಿಯಾ ಬಿಲನ್ನು ನಿಷೇಧಿಸಿರುವರು.

ಒಳದೇಶ ವರ್ತಮಾನ.

—ಕಲ್ಕತ್ತದ ಅಲಿಪೂರಿನ ಪೋಲಿಸರು ಬೊಂಬುಗಳನ್ನು ತಯಾರಿಸುತ್ತಿದ್ದ ೯ ಜನ ಬಂಗಾಳಿ ಯುವಕರನ್ನು ಅವರು ಬೊಂಬು ತಯಾರಿಸುವ ಮನೆಯಲ್ಲಿ ಸೆರೆಹಿಡಿದಿರುವರು. ಅವರ ಹತ್ತಿರ ಒಂದು ರಿವೋಲ್ವರ್ ಮತ್ತು ಒಂದು ಪಿಸ್ಟೊಲ್ ಸಹ ಸಿಕ್ಕಿರುತ್ತದೆ. ಇದರ ತನಖಿಯು ನಡೆಯುತ್ತಿದೆ. ಪೋಲೀಸರನ್ನು ಬೊಂಬುಗಳನ್ನು ತಯಾರಿಸುತ್ತಿದ್ದ ಮನೆಯ ಬಗ್ಗೆ ಕಾವಲು ಇಟ್ಟಿರುವರು.

—ಶ್ರೀಯುತ ಎಮ್. ಆರ್. ಜಯಕರ್ ಮತ್ತು ಎನ್. ಸಿ. ಕೇಳಕರರು, ಪಂಡಿತ ಮೋತಿಲಾಲಾಜಿಯವರು ನಾಗಪುರಿನಲ್ಲಿ ತಮ್ಮ ಭಾಷಣದಲ್ಲಿ ರೆಸ್ಪೋನ್ಸಿವ್ ಕೊ-ಒಪರೇಶನಿನ ಕುರಿತು ಭಾಷಣ ಮಾಡಿದ್ದರಿಂದ ಜನರಿಗೆಲ್ಲಾ ಅವರಲ್ಲಿ ತಪ್ಪುಗ್ರಹಿಕೆ ಉಂಟಾದ್ದರಿಂದ ಇದನ್ನು ನಿವಾರಿಸುವುದಕ್ಕೋಸ್ಕರ ಎಕ್ಸಿಕ್ಯೂಟಿವ್ ಸ್ವರಾಜ್ಯಪಾರ್ಟಿಗೆ ರಾಜಿನಾಮೆಯನ್ನು ಕೊಟ್ಟಿರುವರು.

—ಕಲ್ಕತ್ತದ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಬಾಟಿನ ದಾಸಿ ಎಂಬ ಹೆಂಗಸನ್ನು ಕೋಕೆನ್ ಎಂಬ ಔಷಧಿಯನ್ನು ಲೈಸನ್ಸು ಇಲ್ಲದೆ ಮಾರಿದ ಆರೋಪಣೆಯ ಮೇಲೆ ಒಂದು ವರ್ಷದ ಕಠಿಣ ಸಜೆಯನ್ನು ವಿಧಿಸಿರುವರು. ಹೆಂಗಸರು ಲೈಸನ್ಸು ಇಲ್ಲದೆ ಇಂಥಾ ಔಷಧಿಗಳನ್ನು ಮಾರಿ ಜೀವಿಸುವುದಾದರೆ ಇನ್ನೇನು ಉಳಿದಿದೆ.

—ರಂಗೂನಿನಲ್ಲಿ ಬರ್ಮಾಆಯಿಲ್ ಕಂಪೆನಿಯ ಸುಮಾರು ೫೦,೦೦೦ ಸಾವಿರ ಗೆಲನ್ ಹಿಡಿಯುವಷ್ಟು ದೊಡ್ಡ ಚಿಮಿಣಿಎಣ್ಣೆ ಟಾಂಕಿಗೆ ಆಕಸ್ಮಾತ ಬೆಂಕಿ ಹಿಡಿದು ಅದರಲ್ಲಿದ್ದ ೮೦೦೦ ಸಾವಿರ ಗೆಲನು ಚಿಮಿಣಿ ಎಣ್ಣೆಗೆ ಬೆಂಕಿ ಹಿಡಿದು ಸುಮಾರು ಒಂದು ದಿವಸದ ವರೆಗೆ ಬೆಂಕಿ ಉರಿಯುತ್ತಾ ಇತ್ತು. ಬೆಂಕಿಯು ಅದರಲ್ಲಿದ್ದ ಎಣ್ಣೆಯು ಸುಟ್ಟುಹೋದ ತರುವಾಯ ತನ್ನಷ್ಟಕ್ಕೆ ನೊಂದಿ ಆರಿಹೋಯಿತು. ಈ ಬೆಂಕಿಯ ಬಾಯಿಗೆ ಒಬ್ಬ ಕೂಲಿಯಾಳು ಮಾತ್ರ ಆಹುತಿಯಾಗಿರುವನು. ಬೆಂಕಿಯು ಯಾವ ಕಾರಣದಿಂದ ತಗಲಿದೆ ಎಂಬುದು ತಿಳಿಯುವುದಿಲ್ಲ.

—ಕಾನ್‍ಪುರದಲ್ಲಿ ನಡೆಯಲಿಕ್ಕಿರುವ ಒಲ್-ಇಂಡಿಯಾ ಕಾನ್ಫರೆನ್ಸಿಗೆ ಇಷ್ಟರ ತನಕ ೩೬,೦೦೦ ರೂಪಾಯಿ ಜಮೆಯಾಗಿರುತ್ತದೆ. ಅದರ ಪೈಕಿ ರೂಪಾಯಿ ೧೪,೧೦೦ ಕಾನ್‍ಪುರದಲ್ಲಿ ಸಂಗ್ರಹಿಸಿದ ಹಣವಾಗಿಯದೆ. ಮತ್ತು ಬನಾರಿಸ್‍ನಿಂದ ರೂಪಾಯಿ ೧೦೦. ರೂಪಾಯಿ ೫೧ ಜಾಲುನ್, ರೂಪಾಯಿ ೧೦೦೦ ಎಟ್ಟಾದಿಂದಲೂ, ಮತ್ತು ಇತರ ಎಲ್ಲಾ ಕಮಿಟಿಯವರಿಂದ ರೂಪಾಯಿ ೭೫೦ ಜಮೆಯಾಗಿರುತ್ತದೆ. ಬರಿ ಕೊಂಗ್ರೆಸ್ ಮೆಂಬರರದ್ದೆ ೯೭೦೦ ರೂಪಾಯಿ ಜಮೆಯಾಗಿರುತ್ತದೆ. ಇಷ್ಟರ ತನಕ ಸಂಗ್ರಹಿಸಿದ ಹಣದ ಪೈಕಿ ೧೫,೦೦೦ ರೂಪಾಯಿಯನ್ನು ಕೊಂಗ್ರೆಸ್ ವ್ಯವಸ್ಥೆ ಬಗ್ಗೆ ಖರ್ಚುಮಾಡಿರುವರು. ಕೊಂಗ್ರೆಸಿನ ಬಗ್ಗೆ ಹಣವನ್ನು ಸಂಗ್ರಹಿಸುವ ಕೆಲಸವು ಜೋರಾಗಿ ನಡೆಯುತ್ತಿದೆ. ಅನೇಕ ದೊಡ್ಡ ದೊಡ್ಡ ಮಹಾನುಭಾವರು ಹಣವನ್ನು ಸಂಗ್ರಹಿಸುತ್ತಾ ಇದ್ದಾರೆ. ಕಳೆದ ವರ್ಷಕ್ಕಿಂತ ಈ ವರ್ಷದ ಹಣವು ಹೆಚ್ಚು ಸಂಗ್ರಹಿಸಲಾದೀತೆಂದು ತಿಳಿದು ಬರುತ್ತದೆ.

—ಕಲ್ಕತ್ತಾ ಹ್ಯಾಕೋರ್ಟಿನ ಜಡ್ಜರಾದ ಜಸ್ಟಿಸ್‍ಪೇಗರ ಮೇಲೆ ಅವರು ಅಲ್ಲಿಯ ಮುನ್ಸಿಫಲ್ ಕೋರ್ಪೋರೇಶನಿನ ಒಬ್ಬ ಗುಮಾಸ್ತರನ್ನು ಅವಮಾನಪಡಿಸಿದ್ದುದಕ್ಕಾಗಿ ಅವರ ಮೇಲೆ ಹ್ಯಾಕೋರ್ಟಿನಲ್ಲಿ ಪಿರ್ಯಾದೆಯನ್ನು ಕೊಟ್ಟಲ್ಲಿ ಅನೇಕ ಸರ್ತಿ ಪಿರ್ಯಾದೆಯನ್ನು ತಳ್ಳಿಹಾಕಿರುವರು. ಅದರೂ ಈಗ ಹ್ಯಾಕೋರ್ಟಿನ ಚೀಫ್ ಜಸ್ಟಿಸ್ಸರವರ ಹತ್ತಿರ ಪಿರ್ಯಾದನ್ನು ದಾಖಲುಮಾಡಿಕೊಂಡಿರುವರು. ಇದರ ಸರಿಯಾದ ತನಖಿಯನ್ನು ನಡೆಸುವರೆ ಚೀಫ್ ಜಸ್ಟಿಸ್ಸರು ಹುಕುಂ ಕೊಟ್ಟಿರುವರು.

—ಬಿಹಾರ ಪ್ರಾಂತ್ಯದ ಲೆಜಿಸ್ಲೇಟಿವ್ ಕೌನ್ಸಿಲಿನ ಮಹಾ ಸಭೆಯು ಇದೇ ಬರುವ ೧೯೨೬ನೇ ಇಸವಿ ಜನವರಿ ತಿಂಗಳ ೮ನೇ ತಾರೀಕಿಗೆ ಸೇರಲಿಕ್ಕಿರುವುದು.

—ಕಳೆದ ಆದಿತ್ಯವಾರದಿಂದ ತಾ. ೧೧ರ ವರೆಗೆ ಮದುರಾದಲ್ಲಿ ಬಲವಾದ ಮಳೆಯು ಸಮ್ಮಂದ ಭಯಂಕರವಾದ ನೆರೆಯು ಬಂದಿರುವುದು. ಅನುಪ್ಪಾಂಡಿ ಚೆನಲಿನಲ್ಲಿ ನೀರು ಉಕ್ಕಿಬಂದು ಟವಣಿನ ಕೆಲವು ಭಾಗಗಳಲ್ಲಿ ನಿಂತಿರುವುದು. ಮಳೆಯು ಇನ್ನೂ ಕಡಿಮೆಯಾಗಿಲ್ಲವಾದುದರಿಂದ ನೀರಿನ ಪ್ರವಾಹ ಬಹಳ ವಿಪರೀತವಿದೆ. ಪೆರಿಯಾರ್ ಲೇಕನಿನ ಹತ್ತಿರ ಸುಮಾರು ೧೦ರಿಂದ ೧೩ ಫೀಟನ ವರೆಗೆ ನೀರು ನಿಂತಿರುವುದು. ಆದರೆ ೧೫ ಫೀಟ್‍ಗಿಂತ ನೀರು ಹೆಚ್ಚಿಗೆ ನಿಂತರೆ ಟವಣಿಗೆ ಅಪಾಯವುಂಟಾಂಗಿ ತಿಳಿದು ಬರುತ್ತದೆ. ಮಳೆಯು ಇನ್ನೂ ಶಾಂತತೆಗೆ ಬರಲಿಲ್ಲ. ಜನರೆಲ್ಲರೂ ಗಾಬರಿಯಲ್ಲಿರುವರು. ಮುನ್ಸಿಫಲ್ ಚೆಯರ್‍ಮೇನರು ಮತ್ತು ಅಲ್ಲಿಯ ಪೋಲೀಸ್ ಅಧಿಕಾರಿಗಳು ನೀರು ತುಂಬಿದ ಸ್ಥಳದ ಹತ್ತಿರ ತಕ್ಕ ಜಾಗ್ರತೆಯನ್ನು ತೆಗೆದುಕೊಳ್ಳುತ್ತಿರುವರು. ರೈಲ್ವೆ ಲೈನುಗಳಲ್ಲಿ ಅಲ್ಲಲ್ಲಿ ನೀರು ತುಂಬಿರುವುದರಿಂದ ರೈಲು ಚಾಲು ಸಹ ಬಂದಾಗಿರುತ್ತದೆ. ನದಿಯ ತೀರದಲ್ಲಿರುವ ಸ್ವಲ್ಪ ಮನೆಗಳು ಬಿದ್ದು ಹೋಗಿರುವವು. ಪ್ರಾಣಹಾನಿ ಇಷ್ಟರ ವರೆಗೆ ಆಗಲಿಲ್ಲ. ನಿನ್ನೆಯಿಂದ ಮಳೆಯು ಸ್ವಲ್ಪ ಕಡಿಮೆಯಾದುದರಿಂದ ನೀರಿನ ಪ್ರವಾಹವು ಕಡಿಮೆಯಾಗಿದೆ. ಅಲ್ಲಲ್ಲಿ ನೀರು ಇಳಿಯುತ್ತಾ ಇದೆ. ರೈಲುಚಾಲು ಇನ್ನೂ ಎರಡು ಮೂರು ದಿವಸದ ವರೆಗೆ ಸಾಧ್ಯವಿಲ್ಲವೆಂಬುದಾಗಿ ತಿಳಿದು ಬರುತ್ತದೆ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀಮಿತ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಷ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‍ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.
K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‍ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦. ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‍ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವಣಿಗೆ ಮಾತ್ರ.

Free! Free!! Free!!
ಪ್ರಸಿದ್ಧವಾದ
"ಕಾಮಶಾಸ್ತ್ರ"
ಈಗಲೆ ತಯಾರಾಗಿದೆ.
ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ತುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‍ಮೀಟ್ ಮಾರ್ಟ್.

ಮಹೋಲ್ಲಾಸ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತಶುದ್ಧಿ
ವಜ್ರಾಂಗ-ಬಿಂದು
ವೀರ್ಯವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಅಷ್ಟತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನಜನ್ಯ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಆಮೇಲೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ತಲೆ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಿಂದ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ನಿಪ್ಪಾಣೀ, (ಜಿಲ್ಹಾ ಬೆಳಗಾಂವ.)

The Canara Public Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು:
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇವರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನ್ನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್‌ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮಾದರಿಯ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
[illegible] ಬೀದಿ, ಮದ್ರಾಸ್.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2½ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಶ್ಮೆ ಮಡಿಗಳು, ಶಾಮ್ರಾಧಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಚಾಘಂಟಿ, ತಾಳ, ಪಶ್ಮೀರ್‌ದಾಣಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ, ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಬೆಂಗಾಲಾ, ಕಾಶೀ ಕ್ಷೇತ್ರ.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಠಿ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಶೇರಿಯೋ ವ ಮೂತ್ರವಿಸಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾ ಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು — ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ ಯಾ ೪ ಡಬ್ಬಿಗಳು ಜನ್ಮಾಂತ್ರದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೪ ಡಬ್ಬಿಗಳವರೆಗೆ ೦—೫—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ. | ಡಿ. ಮನ್ನಾಲಾಲ್, [illegible], ಸಾಲಂಮಿಸ್ರಿ ಮುರಬ್ಬೆ ಡಿಪೋ, ಬೆಂಗಳೂರು ಸಿಟಿ.

Edited, Printed & Published by V. S. Kamath at the M. Y. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2-0-0. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಸ್ವಸ್ಥರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತ ೧೯. ಮಂಗಳೂರು, ತಾರೀಕು ೨೦ನೇ ಶುಕ್ರವಾರ ನವಂಬರ ೧೯೨೫. ಸಂಚಿಕೆ ೪೭.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. ಹೆಡ್ ಆಫೀಸು: ಉಡುಪಿ.	Branch: COONDAPOOR. ಶಾಖೆ: ಕುಂದಾಪುರ.
ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಪಾಳಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ವಸೂಲುಕೆತ್ತ ಮೂಲಧನ	ರೂ. 1,73,185—9—11.
ಆಪದ್ಧನ ವಗೈರೆ ಎತ್ತಗಳು	ರೂ. 64,700—0—0.
ಸಾ. ಸೇ. 6ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಏವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲುಕೆತ್ತ ಮೂಲಧನ 1,73,185-9-11, ಆಪದ್ಧನ ವ ಇತರ ಎತ್ತಗಳು 64,700-0-0, ಠೇವಣಾತಿಗಳು 5,10,077-10-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4371-0-0, ಏವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 93,340-10-5, ಜುಮ್ಲಾ ರೂ. 8,45,674-14-7.

ಆಸ್ತಿ ವ ಸೊತ್ತುಗಳು.

ಹಿತ್ಲ ಅಟ್ಟೋಣ ಕಟ್ಟಿದ ಫ್ರೈಜರಿಗಳು ವಗೈರೆ 4134-4-0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496-6-2, ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತ ಪತ್ರಗಳ ಮೇಲೆ 25,800-0-0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371-0-0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡ) 41,741-14-2, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಠೇವಿದಾಗ್ಗೆ ಸಿಕ್ಕತಕ್ಕ ಶಿಲ್ಕು ನಗದು 26,131-6-3, ಜುಮ್ಲಾ ರೂಪಾಯಿ 8,45,674-14-7.

ನಿರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮೊಸುಮ್ ಠೇವಣಾತಿಗಳನ್ನು ಅಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ್ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾಹುಕಾರಿ ಹುಂಡಿಗಳನ್ನೂ, ವಜ್ಜಾಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

N. Anand Rao,
Secretary.

ಮೂರು ದಿವಸಗಳಲ್ಲಿ ಗುಣ ಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಜಿಸ್ಟರ್ ಆದದ್ದು)

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆಯಿಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧ.

1 ಸೇರು ಪಾಲ್ಪತ್ತೆಂಟು ದಿವಸಕ್ಕೆ ಸೇವಿಸಲಹುದು.

1 ಸೇರು ಡಬ್ಬಿ 1ಕ್ಕೆ 3-0-0. ½ ಸೇರು ಡಬ್ಬಿ 1ಕ್ಕೆ 1-9-0.
ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.

ವಿಳಾಸ:— ಧೇವಣ್ಣ ನಾರಾಯಣ ಸೆಟ್ಟಿ,
[illegible]
[illegible] (ದ. ಕ.)

: ಪಂಡಿತ ಬಿ. ರಾಮಕೃಷ್ಣ ಬಾಳಿಗರ :

50 ವರ್ಷ ಅನುಭವದ ಸಿದ್ಧೌಷಧಗಳು

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅಮೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಆಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಆಬಾಲವೃದ್ಧರೂ ಸೇವಿಸಬಹುದು.

48 ದಿವಸಗಳ ವರೆಗೆ ಸಾಕಾಗುವ ಲೇಹ ಸೇರು ೧ಕ್ಕೆ ರೂ. 3—0—0.

ಬ್ರಹತ್ ಶಾರಿವಾದ್ಯಾದಿ ರಸಾಯನ—ಇದು ಖಾತ್ರಿಯಿಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಖಾತ್ರಿಯಿಂದ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೇ ರೂ. 1—9—0.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

ಮಂಗಳೂರು ಏಜಂಟರು:— ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ತೇರುಬೀದಿ, ಮಂಗಳೂರು.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ, ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು. | 109 ಫ್ರೇಯರ್ ರೋಡ್, ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ರಥೋತ್ಸವ, ವಿವಾಹ ಉಪನಯನಗಳ ಸಮಯ

ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಖರೀದಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್‌ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ., ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಮಹಾರಕ್ಕೆ ಸಮೀಪವಿರುವ ಮನೆಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಚೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ನಿ, ಮಡಿಕೇರಿ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, ಶೇಲ್ಲ, ರೇಶ್ಮೆ ಸೀರೆಗಳು, ಅರಶಿನಪಟ್ಟೆ ಸೀರೆಗಳು, [illegible] ರೇಶ್ಮೆ ಸೀರೆಗಳು, [illegible] ಸೀರೆಗಳು, ರೇಶ್ಮೆ ಮಡಿಗಳು, [illegible] ಸೀರೆಗಳು [illegible] ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ [illegible], ಖದ್ದರ್ [illegible], ಖದ್ದರ್ [illegible], ಖದ್ದರ್ ಶೇಲ್ಲ, ಅಂಗವಸ್ತ್ರ, ಇತ್ಯಾದಿ—
[illegible]—
[illegible]

[illegible] 10%, [illegible] 350 [illegible] 1000ಕ್ಕೆ 12½% [illegible].

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.

ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0

ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೊಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯೂಮಿಕ್ಶ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ಚಳಿಜ್ವರಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯೂಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ದೊರೆತಿರುತ್ತದೆ. ಇದರ ಉಪಯೋಗದಿಂದ ಹೃದಯದ ಮೇಲೆ ಯಾವ ದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತ. ಡಾಕ್ಟ ಸಾಹ್ಯದಂತಿಷ್ಟು ದಾರ್ದಾರಿಗಳೂ ಕೂಡ ಅದರ ಮೇಲೆ ಹೊವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿ ಇಟ್ಟುಕೊಳ್ಳತಕ್ಕದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆಕೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ಕೃಷ್ಟವಾಗಿರುತ್ತದೆ. ಕಫವನ್ನು ಬಿಡಿಸಿ ಪಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನೂ ಉಂಟುಮಾಡುವುದು. ದರ ತೊಡಕಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಡಕ್ಕೆ:—CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಖಂ ... ... ೨-೦-೦.

೧೨ ಪ್ಯಾಕೆಟ್ ನಾಟಿ ತರಕಾರಿ ಬೀಜಗಳು ೧೨ ರಖಂ ... ... ೧-೧೨-೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಖಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಬೆಲೆಗೆ, ವಿ. ಪಿ ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರದವುಗಳು ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮ್ಯೂಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0.

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾರಿಷ್ಟವು ... ...
(6) ಷಟ್ಪಂಚಾಷಿಕ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ... ...
(10) ಕಾಲನಿರ್ಣಯಜ್ಯೋತಿಷ್ಯ ಗ್ರಂಥ ... ...
(11) ಸವ್ಯಾಖ್ಯಾನ ಕಾಲಾಮೃತ ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂದ್ರಭೀಮ ... ...
(5) ಮೈರುವರಾಮನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಲವಕುಶ ರಾಮನ ಕಥೆ ... ...
(8) ಕೃಷ್ಣದಾನಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(1[illegible]) ಜೋಕುಮಾರ ಯಕ್ಷಗಾನ ... ...

(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀನಾಕ್ಷಮೇಧ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷಾಗೃಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಜ ಕಥೆ ... ...
(26) „ ಗೋವಿನ ಚರಿತ್ರೆ ... ...
(27) „ [illegible] ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮ ... ...
(5) ಪ್ರಬಂಧ ಮುಕ್ತಾವಳಿ ... ...
(1) ಹರಿಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ಯಾಪನದ ಹಾಡು ... ...
(6) ಯಕ್ಷಗಾನ ಗೀತ ಹಾಡು ... ...
(7) ಕನಕದಾಸ ಪುರಂದರದಾಸರ ಕೀರ್ತನೆಗಳು ...
(8) ಜೋಗರ ಹಾಡು ... ...
(9) ಭಜನೆಯ ಪದಗಳು ... ...

ಪುಸ್ತಕಗಳು ದೊರೆಯುವ ಸ್ಥಳ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಶಾಲಿವಾಹನಶಕ ೧೮೫೭ನೆಯ ಕ್ರೋಧನ ಸಂ|ರದ ಮಾರ್ಗಶಿರ ಶು| ೬ ಶನಿವಾರದಿಂದ ಕ್ರೋಧನ ಸಂ|ರದ ಮಾರ್ಗಶಿರ ಶು|೧೨ ಶುಕ್ರವಾರದ ವರೆಗಿನ ಪಂಚಾಂಗ.

(೧೯೩೫ನೆಯ ವೃಶ್ಚಿಕ ಚಾರ್ದೆ.)

ತಾರೀಖು	ವಾರ	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	ತಾರೀಖು ವೃಶ್ಚಿಕ	ಸೂರ್ಯ ಉ.	ಸೂರ್ಯ ಅಸ್ತ.
21	ಶನಿ	೬	೪೯.೨೮	ಉ. ಷಾ.	೧೫.೨೮	೬	6.35	6. 0
22	ರವಿ	೭	೪೩.೪೬	ಶ್ರವಣ	೧೧.೧೬	೭	6.35	6. 0
23	ಸೋಮ	೮	೩೮.೧	ಧನಿಷ್ಠಾ	೭.೧೬	೮	6.36	6. 0
24	ಕುಜ	೯	೩೨.೫೯	ಶತಭಿಷಾ	೩.೪೬	೯	6.36	6. 0
25	ಬುಧ	೧೦	೨೮.೧೬	ಪೂ. ಭಾ.	೦.೧೬	೧೦	6.37	6. 1
26	ಗುರು	೧೧	೨೪.೩೧	ರೇವತಿ	೫೬.೧೪	೧೧	6.37	6. 1
27	ಶುಕ್ರ	೧೨	೨೧.೪೬	ಅಶ್ವಿನಿ	೫೫.೪೪	೧೨	6.38	6. 1

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
13	86—6	76—0	—	—
14	90—0	75—3	—	—
15	89—2	75—2	—	—
16	94—7	74—4	—	—
17	93—7	72—3	—	—
18	95—2	74—0	—	—
19	92—2	73—8	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ.
ಮಸ್ಕತಿ	8— 8	9— 4
ಗುಡ್ಡು ...	8— 1	8— 6
ರಾಶಿ ಸುಗ್ಗಿ ...	7— 4	8— 2
ಅನ್ವರ್ ಬೆಳ್ತಿಗೆ ...	8—12	9— 8
ಗುಡ್ಡು ಬೆಳ್ತಿಗೆ ...	8— 0	8— 4
ರಂಗೂನು ಬೆಳ್ತಿಗೆ ಗೋಣಿ ೧ ...	13— 8	14— 8
ಗೋಧಿ ಗೋಣಿ ೧ಕ್ಕೆ ...	17— 8	19— 0
ಹುರುಳಿಗೋಣಿ ೧ಕ್ಕೆ ...	9— 0	9— 8
ಕಡಲೆಗೋಣಿ ೧ಕ್ಕೆ ...	12— 8	13— 8
ತೊಗರಿಗೋಣಿ ೧ಕ್ಕೆ ...	13— 0	13— 8
ತೊಗರಿಬೇಳೆ ಗೋಣಿ ೧ಕ್ಕೆ ...	16— 0	22— 0
ಉದ್ದುಗೋಣಿ ೧ಕ್ಕೆ ...	16— 8	17— 0
ಹೆಸರುಗೋಣಿ ೧ಕ್ಕೆ ...	14— 8	15— 8
[illegible]ರು ಬೆಲ್ಲ ಖಂಡಿ ೧ಕ್ಕೆ ...	57— 8	60— 0
[illegible] ಗೋಣಿ ೧ಕ್ಕೆ ...	4— 0	4— 8
ಕೊಬ್ಬರಿ ಖಂಡಿ ೧ಕ್ಕೆ ...	120— 0	125— 0
[illegible] ಖಂಡಿ ೧ಕ್ಕೆ ...	48— 0	—
ಎಳ್ಳಿಂಡಿ ಖಂಡಿ ೧ಕ್ಕೆ. ...	43—12	—
ಕೊಬ್ಬರಿ ಎಣ್ಣೆ ಮುಡಿ ೧ಕ್ಕೆ ...	8—12	9— 8
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	11— 0
ಹರಳೆ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4— 2	4— 4
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	7— 0	—
ಸಾಸಿವೆ ಮುಡಿ ೧ಕ್ಕೆ ...	9— 0	—
ಕೊತ್ತಂಬರಿ ಮುಡಿ ೧ಕ್ಕೆ ...	3—14	4— 0
ಕಾಫಿ ಖಂಡಿ ೧ಕ್ಕೆ ...	345— 0	—
ಬೆಂಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	275— 0	290— 0
ಬೆಂಗೋಟು ಹೊಸ್ತು ...	180— 0	215— 0
ಕಾಳುಮೆಣಸು ಖಂಡಿ ೧ಕ್ಕೆ ...	260— 0	265— 0
ಯಾಲಕ್ಕಿ ಮುಡಿ ೧ಕ್ಕೆ ...	45— 0	55— 0
ಗೇರುಬೀಜ ಮುಡಿ ೧ಕ್ಕೆ ...	4—12	—
ಕಬ್ಬಿಣ ಖಂಡಿ ೧ಕ್ಕೆ ...	45— 0	65— 0
ಕಾಂಚು ತಗಡು ಮುಡಿ ೧ಕ್ಕೆ ...	16—10	16—12
ತಾಮ್ರ ಪಾತ್ರಗಳು ಮುಡಿ ೧ಕ್ಕೆ ...	21— 0	—
ಚೀನಿ ಬೆಳ್ಳಿ ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮುಡಿ ೧ಕ್ಕೆ ...	16— 8	
ಪವನು	13— 7	

ಕನ್ನಡಿಗರೇ! **ವಸಂತ.** ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . ವಸಂತ
ಸಮಾಜಸುಧಾರಕನೆಂದರೆ . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷಕ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರಾನ್ ¼ ಪುಟ ಸೈಜಿನ) ಪುಟಗಳವುಳ್ಳ ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2-8-0.
„ ಸ್ಥಳೀಕರಿಗೆ ... „ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ತ್ವರೆ ಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ
ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್, ಗಣಪತಿರಾವ್ ಐಗಳ್—ಗ್ರಂಥಕರ್ತರು. ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ಸ್ಥಳ:—

ಶಾರದಾ ಛಾಪಖಾನೆ,
ಮಂಗಳೂರು

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ಕೊಡುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡಿಪ್ರತಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳಲಿಕ್ಕೆ ಅಥವಾ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1¼ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ದ್ದರ್ ರೇಶ್ಮೆ ಪಾಡಿಗಳು, ಪಾರ್ಮಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಸಾಲಿಗ್ರಾಮ, ಶಂಖ, ಗಂಟೆ, ತಾಳ, ಪಂಚಪಾತ್ರೆ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೊ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವವು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಫ್ ಕೊಸ್ಟ್ಸ್, ಮೆಮೊರೆಂಡಮ್ ಒಫ್ ಎಪ್ಪಿಯರೆನ್ಸು, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—12—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

Advertisers Note.

A SPECIAL ISSUE OF SPECIAL IMPORTANCE.
AND
Concetrated interest with wide circulation.
This is your Opportunity.

Our fortnightly paper, THE SARASWATH will appear in the beginning of December, in a most attractive special issue printed on glaze paper, art paper bound and profusely illustrated.

ADVERTISE & REAP THE BENEFITS OF VERNACULAR ADVERTISEMENT.
RATES MODERATE.

Apply:— **Secretary,**
THE SARASWATH,
UDIPI.

NOTICE.

IN THE COURT OF THE DISTRICT MUNSIFF OF KARKAL.

O. S. No. 550/1925.

Hayath Khan Saheb & others—Plaintiff.

Mahammad Eusuff Alias Sabjan Saheb & another } Defendants.

Take notice that the above said four persons on behalf of the Mahammadan community in Karkal have filed a suit for possession of S. No. 135/3 of Karkal Kasba as the said plot was assigned to the 1st. defendant Eusuff Saheb for the keeping of the Taboot during the Moharam of every year and for the celebration of the Alabi every year. Any person objecting to the same may file his objections in the Court Specified on 30—11—1925.

16—11—1925. **K. L. Kudva,**
Pleader for Plaintiffs.

ನೋಟೀಸು.

ಕಾಸರಗೋಡು ತಾಲೂಕು ನೀಲೇಶ್ವರ ಗ್ರಾಮದ ಕೋಟಪುರದಲ್ಲಿರುವ ಯಡ್ಯಾವಿಲ್ ಬಡವ ಬ್ಯಾರಿ ಮಗ ಪಯಕ್ಕೆರೆ ಯಿಸೂಬ ಬ್ಯಾರಿಯು ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—

ಇದೇ ತಿಂಗಳ ತಾ. 16ರಲ್ಲು ನಾನು ನೀಲೇಶ್ವರ ಭಂಡಿ ಆಫೀಸಿನಿಂದ ಕಾಸರಗೋಡಿಗೆಂತ ಹೊರಟುಹೋಗುವ ಕಾಲ ವನ್ನ ಕೂಡೆ ಇರುವ ಈ ಕೆಳಗೆ ನಮೂದಿಸಿದ ದಸ್ತವೇಜುಗಳು ನನ್ನ ಕೈಯಿಂದ ಪಂಚಮೋಶದಿಂದ ಹೊರಬಿದ್ದು ಕಾಣೆಯಾಗಿ ರುತ್ತವೆ. ಅಂಥಾ ದಸ್ತವೇಜುಗಳು ಯಾರಿಗೆ ಸಿಕ್ಕಿರುತ್ತಾವೊ ಅವರು ಮೇಲ್ಕಂಡ ನನ್ನ ವಿಳಾಸಕ್ಕೆ ತಂದು ಒಪ್ಪಿಸಿಕೊಟ್ಟರೆ ಅವರಿಗೆ ನಾನು ರೂಪಾಯಿ 10-0-0 ಇನಾಮಾಗಿ ಕೊಡುವರೆ ಸಮ್ಮತಯಿದ್ದೇನೆ ಎಂಬ ಸಂಗತಿ ತಿಳಿತಿರುವುದು.

ದಸ್ತವೇಜುಗಳ ವಿವರ.

1) ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟ ಕ್ರಮ ನಂಬ್ರ ೧೬೯೯ನೇ ಡಿಕ್ರಿ ಮಂಜೂರು ನೆಳಲು ಮತ್ತು ಇದರ ಹಿಂದುಗಡೆ ಡಿಕ್ರಿ ಹಣಪಾವತಿ ಕುರಿತು ವಾದಿರಾದ ವಲಿಯ ಅಂಬು ಮತ್ತು ಚೆರಿಯ ಅಂಬು ಸಹಾ ತಾ. 14-4-1925ರಲ್ಲು ನನಗೆ ಬರಕೊಟ್ಟ ರಶೀದಿ ಸಮೇತ ಇರುವ ದಸ್ತವೇಜು 1.

2) ಮೇಲ್ಕಂಡ ಡಿಕ್ರಿ ಹಣ ಪಾವತಿ ಕುರಿತು ನನಗೆ ಸದರಿ ವಲಿಯ ಅಂಬು ಕೂಡ 2 ಜನರು ತಾ. 14-11-1925ರಲ್ಲು ಬರಕೊಟ್ಟ ಒಂದಾಣೆ ಸ್ಟಾಂಪು ಅಂಟಿಸಿದ ಅಲ್ಯಾದಾ ರಶೀದಿ 1.

3) ಮೇಲ್ಕಂಡ ತಾ. 14-11-1925ರಲ್ಲು ನನಗೆ ಸದರಿ ವಲಿಯ ಅಂಬು ಕೂಡ 2 ಜನರು ಸದರಿ ಡಿಕ್ರಿ ನಂತರದ 2 ವರುಷದ ಬಡ್ಡಿ ಭತ್ತ ಸಲಾಯಿಸಿದ ಕುರಿತು ಒಂದಾಣೆ ಸ್ಟಾಂಪು ಅಂಟಿಸಿದ ರಶೀದಿ 1.

4) ನನ್ನ ಅಳಿಯ ಪಯಕ್ಕೆರೆ ಮ್ಯೊದಿನೆಗೆ ಸದರಿ ವಲಿಯ ಅಂಬು ಮತ್ತು ಚೆರಿಯ ಅಂಬು ಸಹಾ ತಾ. 14-11-1925ರಲ್ಲು ರೂಪಾಯಿ 255ಕ್ಕೆ ವಂದಾಣೆ ಸ್ಟಾಂಪು ಅಂಟಿಸಿ ಬರಕೊಟ್ಟ ರಶೀದಿ 1 ಕೂಡ ದಸ್ತವೇಜುಗಳು 4 ಆಗಿರುತ್ತವೆ.

ಪಯಕ್ಕೆರೆ ಯಿಸುಬ ಬ್ಯಾರಿ ರುಜು.

ನೋಟೀಸು.

ಕಾಸರಗೋಡ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಪೊ. ಪಿ. ನಂಬ್ರ 167/1925.

1. ಬೇಕಲ್ ನರಸಿಂಹರಾವ್
2. ವಾಸುದೇವರಾವ್ } ಮೈನರರು
3. ಕೃಷ್ಣರಾವ್

} ಬೇಕಲ್ ನಾಗೇಶ ರಾಯನ ಮಕ್ಕಳು ಕಾಸರಗೋಡು ಕಸಬಾ } ಅರ್ಜಿದಾರರು.

ಸದರಿ ಅರ್ಜಿದಾರರ ತಂದೆ ಬೇಕಲ್ ನಾಗೇಶ ರಾಯರು ತಾರೀಖು 22—6—1925ರಲ್ಲು ಕಾಸರಗೋಡು ಕಸಬೆಯಲ್ಲಿ ಮೃತಪಟ್ಟಿರುವದರಿಂದ ಸದರಿ ಮೃತಗೆ ಬಹ ಸಾಲವನ್ನು ವಸೂಲು ಮಾಡುವರೆ ತಮಗೆ ವಾರಿಸಿ ಸರ್ಟಿಫಿಕೇಟು ಕೊಡಿಸಬೇಕೆಂತ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯು ತಾರೀಖು 1—12—1925ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನ್ನಿ ಬಗ್ಗೆ ಇಡೋಣಾಗಿರುತ್ತದೆ. ಆಕ್ಷೇಪ ಇದ್ದವರು ಆ ದಿವಸ ಕೋರ್ಟಿಗೆ ಮನವಿ ಮಾಡಿಕೊಳ್ಳಬಹುದು.

ತಾ. 9—11—'25 } **H. Srinivas Kamath,**
ಕಾಸರಗೋಡು. } *Pleader for petitioners.*

ನೋಟೀಸು.

ದಕ್ಷಿಣ ಕನ್ನಡ ಒಫಿಶಿಯಲ್ ರಿಸೀವರ ಕೋರ್ಟಿನಲ್ಲಿ
1925ನೇ ಇಸವಿಯ ದಿವಾಳಿ ಅರ್ಜಿ ನಂಬ್ರ 24.
1925ನೇ ಇಸವಿ ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್ ದಿವಾಳಿ ಅರ್ಜಿ ನಂಬ್ರ 1.

ಮುಕ್ಕುವನ್ ಕೋರನ್—ಕಲಂದ ಐತನ ಅಳಿಯ ಕಾಸರಗೋಡು ತಾಲೂಕು ಹೊಸದುರ್ಗ ಗ್ರಾಮ ಕಡಪರತ್ ಎಂಬಲ್ಲಿರುವವ. } ಅರ್ಜಿದಾರ.

ಎದ್ರಿರು

ಎಮ್. ಎ. ರಾಮಕೃಷ್ಣಯ್ಯ ಕೂಡ— ಕ್ರೆಡಿಟರರು.

1920ನೇ ಇಸವಿಯ ನಂಬ್ರ 5ನೇ ಆಕ್ಟಿನ ಸೆಕ್ಷನ್ 19(2)ನೇ ಮೇರೆಗೆ ನೋಟೀಸು. ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿಯಂತ ಸ್ಥಾಪಿಸಬೇಕಾಗಿ ಕೊಟ್ಟ ಅರ್ಜಿಯು ಇದೇ ಇಸವಿ ನವಂಬರ ತಾರೀಖು 28ಕ್ಕೆ ತನ್ನಿಗೆ ಇಟ್ಟದೆ. ಎದ್ರಾಡಲಪೇಕ್ಷಿಸುವ ಕ್ರೆಡಿಟರರು ಖುದ್ದಾಗಲಿ ಅಥವಾ ವಕೀಲ್‌ದ್ವಾರವಾಗಲೀ ಸದರಿ ತಾರೀಕಿನ ಮದ್ಯಾಹ್ನ 2 ಘಂಟೆಗೆ ಈ ಕೋರ್ಟ್ ಮುಂದೆ ಹಾಜರಾಗಿ ವ್ಯವಹರಿಸಬಹುದೆಂತ ಈ ಮೂಲಕ ಪ್ರಕಟಿಸೋಣಾಗಿಯದೆ.

ಮಂಗಳೂರು, } **John P. Siquire,**
ತಾ. 11-11-'25. } ಒಫಿಶಿಯಲ್ ರಿಸೀವರ್.

ನೋಟೀಸು.

ದಕ್ಷಿಣ ಕನ್ನಡ ಸಬೋರ್ಡಿನೇಟ್ ಕೋರ್ಟಿನಲ್ಲಿ.

ಕ್ರಮ ನಂಬ್ರ 85/25.

ಈಚ್ಲತ್ತಾಯ ನಾರಾಯಣ ತಂತ್ರಿ—ವಾದಿ.
ಮತ್ತು
ಶ್ರೀದೇವಿ ಅಂತರ್ಜನಂ ಕೂಡ—ಪ್ರತಿವಾದಿರು.

ಸದರಿ ವ್ಯಾಜದ ವಾದಿಯು ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಕಾಸರಗೋಡು ತಾಲೂಕು ಪನೆಯಾಲ ವಗೈರೆ ಗ್ರಾಮಗಳಲ್ಲಿ ಮತ್ತು ಮಂಗಳೂರು ತಾಲೂಕು ಸೋಮೇಶ್ವರ ವಗೈರೆ ಗ್ರಾಮಗಳಲ್ಲಿರುವ ವಾದಿಯ ಈಚ್ಲತ್ತಾಯಕಾರ್ವಾರಟಿಗೆ (ಇಲ್ಲಿಂಮಿಗೆ) ಸಂಬಂಧಿಸಿದ ಯಾವತ್ತು ಸ್ಥಿರಚರ ಆಸ್ತಿಗಳ ಹಕ್ಕಿನ ಕುರಿತೂ, ವಾದಿಯು ಮನೆತನದ ಬಾಬ್ತು ದೇವಸ್ಥಾನ, ದೈವಸ್ಥಾನ, ನಾಗಸ್ಥಾನ ಮತ್ತು ಭೂತಸ್ಥಾನಗಳ ಹಕ್ಕಿನ ಕುರಿತೂ, ವಾದಿ ಮನೆತನದಿಂದ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿರುವ ದೇವಸ್ಥಾನ, ದೈವಸ್ಥಾನ, ನಾಗಸ್ಥಾನ ಮತ್ತು ಭೂತಸ್ಥಾನ ವಗೈರೆಗಳಲ್ಲಿ ನಡಿಸುವ ತಾಂತ್ರಿಕದ ಹಕ್ಕಿನ ಕುರಿತೂ, ವಾದಿ ಮಾಡಿರುವ ಮೇಲಣ ವ್ಯಾಜ್ಯವು ತಾ. 15—12—25ಕ್ಕೆ ತನ್ನಿಗೆ ಇಟ್ಟಿರುತ್ತದೆ.

ತಾ. 19-11-'25. B. Srinivasa Pai,
ವಾದಿರ ಕಡೆ ವಕೀಲ್.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . . ೧೧ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಷನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಕನ್ನಡ ಸಣ್ಣ ಕಥೆಗಳ ಸ್ಪರ್ಧೆ.

KANNADA SHORT STORY COMPETITION.

ಕಳೆದ ವರ್ಷದ ವಾರ್ಷಿಕೋತ್ಸವದಲ್ಲಿ ಅಗ್ರಾಸನವನ್ನು ಅಲಂಕರಿಸಿದ್ದ ಶ್ರೀಯುತ ಬೆನಗಲ್ ರಾಮರಾವ್ ಎಂ. ಎ. ಎಲ್ ಎಲ್. ಬಿ.ಯವರು ಕೈ. ವಾ. ನಂದಳಿಕೆ ಲಕ್ಷ್ಮೀನಾರಾಯಣಪ್ಪನವರ ಜ್ಞಾಪಕಾರ್ಥವಾಗಿ ಹಾವು ಒಂದು ಸುವರ್ಣಪದಕವನ್ನು ಪ್ರತಿವರ್ಷವೂ ಕೊಡುವುದಾಗಿಯೂ, ಸಂಘವು ಪ್ರತಿವರ್ಷವೂ ಕೊಡುವುದಾಗಿಯೂ, ಸಂಘವು ಪ್ರತಿ ವರ್ಷವೂ ಸಣ್ಣ ಕಥೆಗಳ ಸ್ಪರ್ಧೆಯೊಂದನ್ನೇರ್ಪಡಿಸಿ ಅದರಲ್ಲಿ ಅತ್ಯುತ್ತಮವಾದುದನ್ನು ಬರೆದವರಿಗೆ ಸಂಘದ ವಾರ್ಷಿಕೋತ್ಸವ ಕಾಲದಲ್ಲಿ ಅದನ್ನು ಕೊಡಬಹುದೆಂದೂ ಅಪ್ಪಣೆ ಕೊಡಿಸಿದರು. ಈ ಸ್ಪರ್ಧೆಯನ್ನೇರ್ಪಡಿಸಲು ಇದೇ ಮೊದಲನೇ ವರ್ಷ. ಕರ್ಣಾಟಕದ ಎಲ್ಲ ಪ್ರಾಂತಗಳ ವಿದ್ಯಾರ್ಥಿಗಳೂ ಈ ಸ್ಪರ್ಧೆಗೆ ಸೇರುವರೆಂದು ನಿರೀಕ್ಷಿಸಲಾಗಿದೆ.

ನಿಯಮಗಳು.

೧) ಮೆಟ್ರಿಕ್, ಅಥವಾ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ವಿಶ್ವ ವಿದ್ಯಾಲಯದ ಯಾವುದಾದರೂ ಒಂದು ಪರೀಕ್ಷೆಗೆ ಓದುತ್ತಿರುವ ಕರ್ಣಾಟಕ ವಿದ್ಯಾರ್ಥಿಗಳಾರಾದರೂ ಈ ಸ್ಪರ್ಧೆಗೆ ಕಥೆಗಳನ್ನು ಕಳುಹಿಸಬಹುದು.

೨) ಈ ಸ್ಪರ್ಧೆಗೆ ಬರುವ ಕಥೆಗಳಲ್ಲಿ ಅತ್ಯುತ್ತಮವಾದುದನ್ನು ಬರೆದವರಿಗೆ "ಮದ್ದಣ ಸ್ವರ್ಣಪದಕ"ವೆಂಬ ಸುವರ್ಣಪದಕವೊಂದು ಬಹುಮಾನವಾಗಿ ಕೊಡಲ್ಪಡುವುದು.

೩) ಕಥೆಯು ಸ್ವಕಲ್ಪಿತವಾಗಿಂಬೇಕು.

೪) ಕಥೆಯನ್ನು ಕಾಗದದ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರದಲ್ಲಿ ಬರೆದಿರಬೇಕು.

೫) ಬಹುಮಾನವನ್ನು ಪಡೆದ ಕಥೆಗಳನ್ನು ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಿಸುವ ಹಕ್ಕು ಸಂಘಕ್ಕೆ ಇರುತ್ತದೆ. ಕಾಪಿರೈಟು ಹಕ್ಕು ಲೇಖಕರಿಗೇ ಇರುತ್ತದೆ.

೬) ಲೇಖಕರು ತಮ್ಮ ಹೆಸರು, ವಿಳಾಸ, ಓದುವ ಪಾಠಶಾಲೆ, ಇವುಗಳನ್ನು ಪ್ರತ್ಯೇಕ ಕಾಗದದಲ್ಲಿ ಬರೆದು ಕಳುಹಿಸಬೇಕು.

೭) ಫಲಿತಾಂಶವು ತಿಳಿದ ಮೇಲೆ ಬಹುಮಾನ ದೊರೆಯದ ಕಥೆಗಳನ್ನು ಹಿಂದಕ್ಕೆ ಕೊಡುವ ಜವಾಬ್ದಾರಿಯನ್ನು ಸಂಘವು ವಹಿಸುವುದಿಲ್ಲ.

೮) ಸ್ಪರ್ಧೆಗೆ ಸೇರುವವರು ತಮ್ಮ ಲೇಖನಗಳನ್ನು ಪ್ರವೇಶಧನವಾದ ಎಂಟು ಆಣೆಗಳೊಡನೆ ಡಿಸೆಂಬರು ೧೫ನೆಯ ತಾರೀಕಿನೊಳಗೆ ತಲುಪುವಂತೆ ರಿಜಿಸ್ಟರ್ ಪೋಸ್ಟು ಮೂಲಕ ಉಪಾಧ್ಯಕ್ಷರ ಹೆಸರಿಗೆ ಕಳುಹಿಸಬೇಕು.

೯) ಮದ್ದಣ ಸ್ವರ್ಣ ಪದಕವು ಬಾರದಿರುವ ಕಥೆಗಳಲ್ಲಿ ಶ್ರೇಷ್ಠವಾದುವೆಂದು ಪರಿಗಣಿತವಾದುವುಗಳಿಗೆ ದ್ರವ್ಯರೂಪವಾದ ಅಥವಾ ಪುಸ್ತಕರೂಪವಾದ ಬಹುಮಾನವನ್ನು ಸಂಘವು ಕೊಡಬಹುದು.

ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು,
ಬೆಂಗಳೂರು, T. S. VENKANNAIYA,
೧೩—೧೧—'೨೫. ಉಪಾಧ್ಯಕ್ಷ.

ಚಿಕ್ಕಾಡು. (Flea.)

ಲೇಖಕರು:—ಬಿ. ಜಿ. ಪ್ರಭು. Dt. Health Officer.

ಚಿಕ್ಕಾಡುಗಳಲ್ಲಿ ಕೆಲವು ಜಾತಿಗಳು ಇದ್ದಾವೆ. ಇವುಗಳಲ್ಲಿ ಕೆಲವು ನಾಯಿಗಳ ಮೇಲೂ, ಕೆಲವು ಇಲಿ ಮತ್ತು ಹೆಗ್ಗಣಗಳ ಮೈಮೇಲೂ ಕೆಲವು ಬೆಕ್ಕು ಮೊದಲಾದ ಇತರ ಪ್ರಾಣಿಗಳ ಮೇಲೂ, ಕೆಲವು ಮನುಷ್ಯರ ದೇಹದ ಮೇಲೂ ಜೀವಿಸಿಕೊಂಡು ಇದ್ದಾವೆ. ಇಂಡಿಯಾ ದೇಶದಲ್ಲಿರುವ ನಮಗೆ ಇಲಿ ಹೆಗ್ಗಣಗಳ ಮೇಲೆ ಇರುವ ಚಿಕ್ಕಾಡುಗಳೇ ಮುಖ್ಯವಾದವು, ಯಾಕಂದರೆ ಇವು ಪ್ಲೇಗ್ ರೋಗದ ಕ್ರಿಮಿಗಳನ್ನು ಒಂದು ಇಲಿಯಿಂದ ಮತ್ತೊಂದು ಇಲಿಗೂ, ಇಲಿ ಸಿಕ್ಕದಿದ್ದರೆ, ಇಲಿಯಿಂದ ಮನುಷ್ಯನಿಗೂ ಒಯ್ಯುತ್ತಾವೆ. ಮೊದಲು, ಈ ಚಿಕ್ಕಾಡುಗಳು ನೀಲನದಿಯ ಬಯಲು ಪ್ರದೇಶದಿಂದ ಬಂದಂತೆ ತಿಳಿದು ಬರುತ್ತದೆ. ಆದರೆ ಈಗ ಅವುಗಳು ಜಗತ್ತಿನ ಎಲ್ಲಾ ಪ್ರದೇಶಗಳಲ್ಲಿಯೂ ಹರಡಿಕೊಂಡು ಇದ್ದಾವೆ. ಹೆಣ್ಣು ಚಿಕ್ಕಾಡು ಪ್ರತಿ ಸಾರಿಯೂ ೧೧ರಿಂದ ೫೦ ವರೆಗೆ ಮೊಟ್ಟೆಗಳನ್ನು ಇಡುವದು, ಇವು ಮೇಣದ ಅಥವಾ ಮುತ್ತಿನ ಬಣ್ಣದವು; 1/50 ಅಂಗುಲ ಗಾತ್ರದವು. ಮೊಟ್ಟೆಗಳು ಎರಡು ದಿನದೊಳಗೆ ಒಡೆದು ಮರಿಗಳು ಹೊರಗೆ ಬರುವವು; ಇವು ಬಹಳ ಚುರುಕಾದವು. ಸೂರ್ಯನ ಕಿರಣಗಳಿಂದ ಕೂಡಲೆ ಮರೆಯಾಗಿ ಅಡಗುವವು. ನಂತರ ಒಂದು ಹಪ್ತೆಯಲ್ಲಿ ಅವುಗಳು ಆಲಸ್ಯದಿಂದ ಒಡಗೂಡಿ ಆಹಾರವನ್ನು ಬಿಟ್ಟು ಸಪೂರವಾದ ಬಿಳೀ ಪಟ್ಟೆಯ ನೂಲಿನ ಕೋಶಗಳನ್ನು ನೂಲಿಕೊಳ್ಳುವವು. ಈ ಕೋಶಗಳ ಮೇಲೆ ಕಸವು ಮುಚ್ಚುವದರಿಂದ, ಅವು ಕಣ್ಣಿಗೆ ಕಾಣುವುದಿಲ್ಲ. ನಂತರ ೭-೧೪ ದಿನಗಳಲ್ಲಿ ಕೋಶದ ಒಳಗಿನಿಂದ ಚಿಕ್ಕಾಡು ಹೊರಗೆ ಬರುವದು. ಈ ರೀತಿಯಲ್ಲಿ ಚಿಕ್ಕಾಡು ಬೆಳೆಯುವುದಕ್ಕೆ ಮೂರು ಹಪ್ತೆಗಳು ಬೇಕಾಗುತ್ತದೆ. ಚಿಕ್ಕಾಡುಗಳು ತೇವವಿದ ಸ್ಥಳಗಳಲ್ಲಿ ವರ್ಧಿಸುವದಿಲ್ಲ. ಎಳೆ ಚಿಕ್ಕಾಡಿಗೆ ರಕ್ತವೇ ಆಹಾರವು. ಒಳ್ಳೇ ಆಹಾರವನ್ನು ಕೊಡುವ ಪ್ರಾಣಿಯುವ ಸಿಕ್ಕದಿದ್ದರೆ ಚಿಕ್ಕಾಡು ಸಾಯುವದು. ಆಹಾರ ಏನೂ ಇಲ್ಲದಿದ್ದರೂ, ಒಂದೆರಡು ಹಪ್ತೆಗಳ ವರೆಗೆ ಅದು ಸಾಯದೆ ಇರುವದು! ಇಲಿಯ ಮೇಲೆ ಇರುವ ಚಿಕ್ಕಾಡೇ ಪ್ಲೇಗ್ ರೋಗವನ್ನು ಹರಡುವಂಥಾದ್ದಾಗಿದೆ.

ಮನೆಗಳಲ್ಲಿ ಚಿಕ್ಕಾಡು ಇಲ್ಲದ ಹಾಗೆ ಮಾಡಬೇಕಾದರೆ, ಅಂಥಾ ಮನೆಗಳಲ್ಲಿ ಕಸವನ್ನೂ, ಕಲ್ಮಷವನ್ನೂ, ಇಲಿಗಳನ್ನೂ ಇರಗೊಡಿಸಬಾರದು. ಅಂಥಾ ಮನೆಗಳಲ್ಲಿರುವ ಜನರಿಗೆ ಪ್ಲೇಗ್ ರೋಗದ ಹೆದರಿಕೆಯೂ ಇರುವುದಿಲ್ಲ. ಚಿಕ್ಕಾಡುಗಳು ಮನೆಯಲ್ಲಿ ಇರಬಾರದೆಂದು ಸಾಧಿಸುವದಾದರೆ ಅಂಥಾ ಮನೆಯ ಒಳಭಾಗಗಳನ್ನು ಆರು ಗಂಟೆಗಳ ವರೆಗೆ ಚೆನ್ನಾಗಿ ಸೂರ್ಯನ ಪ್ರಕಾಶದಲ್ಲಿ ಇರಗೊಳಿಸಬೇಕಾಗಿದೆ. ಹಂಚಿನ ಮಾಡುಗಳುಳ್ಳ ಮನೆಗಳ ಹಂಚನ್ನೇ ಸ್ವಲ್ಪ ಸಮಯದ ವರೆಗೆ ಎತ್ತಿಡುವದು ಒಳ್ಳೇದು. ಆದರೆ ಇದು ಹಲಗೆ ಮುಚ್ಚಿದ ಕೋಣೆಗಳ ಮಟ್ಟಿಗೆ ಸಾಧ್ಯವಿಲ್ಲವಾದ ಕಾರಣ, ಚಿಮಣಿ ಎಣ್ಣೆ ಮಿಶ್ರಿತದ ನೀರನ್ನು ಗೋಡೆಗಳ ಮೇಲೂ, ಮುಚ್ಚಿಗೆಯ ಮೇಲೂ ಚೆನ್ನಾಗಿ ಚಿಮುಕಿಸುವದು ಅವಶ್ಯವು; ಒಂದೆರಡು ದಿನಗಳ ನಂತರ ಸುಣ್ಣ ಬಳಿಸಿದರೆ ಒಳ್ಳೇದು. ಮತ್ತು ಮನೆಗಳಲ್ಲಿ ಇರುವ ಕೋಶ ಕ್ರಿಮಿಗಳನ್ನೂ ಕಸವನ್ನೆಲ್ಲಾ ಗುಡಿಸಿ ಸುಟ್ಟು ನಾಶಮಾಡಬಹುದು. ಇಲಿಗಳು ತಿರಿಗಿ ಒಳಗೆ ಬಾರದ ಹಾಗೆ ನೋಡಿದರೆ, ಪುನಃ ಈ ಚಿಕ್ಕಾಡುಗಳ ಬಾಧೆಯು ಆಗದಂತೆ ಮಾಡಬಹುದು. ಇಲಿಗಳು ಆಹಾರವನ್ನು ಹುಡುಕಿಕೊಂಡು ಒಳಗೆ ಬರುವವು. ಕಸವೂ, ಕಲ್ಮಷವೂ, ಚೆಲ್ಲಿದ ಆಹಾರ ಪದಾರ್ಥಗಳೂ ಇಲ್ಲದಿರುವಲ್ಲಿ ಇಲಿಗಳು ಸುಳಿಯುವುದಿಲ್ಲ. ಮುಚ್ಚಿಗೆಯನ್ನೂ, ಗೋಡೆಗಳ ಅಡಿಭಾಗವನ್ನೂ ಸರಿಯಾಗಿ ಸಿಮೆಂಟು ಮೂಲಕ ಜೋಡಿಸಿ ಅಥವಾ ಕಲ್ಲಿನಿಂದ ಕಟ್ಟುವ ಮೂಲಕ ಇಲಿಗಳು ಒಳಗೆ ಪ್ರವೇಶಿಸದ ಹಾಗೆ ನೋಡಿಕೊಳ್ಳಬಹುದು.

ವಿದೇಶ ವರ್ತಮಾನ.

—ಆಫ್ರಿಕಾ ದೇಶದ ಉಗಾಂಡವೇ ಮೊದಲಾದ ಪ್ರಾಂತ್ಯಗಳಲ್ಲಿ ಹತ್ತಿಬೆಳೆಯನ್ನು ಚೆನ್ನಾಗಿ ಮಾಡಬಹುದು, ಮತ್ತು ಬ್ರಿಟಿಷರು ತಮ್ಮ ವ್ಯಾಪಾರವನ್ನು ಅಲ್ಲಿ ಚೆನ್ನಾಗಿ ಪ್ರಚಾರ ಮಾಡಬಹುದು ಎಂಬದಾಗಿ ಮೇಜರ್ ಅರಮ್ಸ್ ಗೋರರವರು ಮ್ಯಾಂಚೆಸ್ಟರಿನಲ್ಲಿ ಹೇಳಿರುತ್ತಾರೆ.

—ಜಪಾನದ ರಾಜಧಾನಿಯಾದ ಟೋಕಿಯೋ ಪಟ್ಟಣದಲ್ಲಿ ೩೦ ತಾಸುಗಳ ವರೆಗೆ ಏಕಸಮನೆ ಮಳೆ ಸುರಿದು ಅನೇಕ ಮನೆಮಾರುಗಳು ಬಳದು ಹೋದವು. ಜಪಾನದ ಮೇಲೆ ಸೃಷ್ಟಿದೇವಿಯು ಬಹಳೇ ಕೋಪಗೊಂಡಿದೆ.

—ಅಮೇರಿಕಾದವರಿಗೆ ಸಲ್ಲಬೇಕಾದ ಸಾಲಗಳಲ್ಲಿ ಇಟೇಲಿಯವರಿಂದ ೧೬.೪ ಮಿಲಿಯ ಡೊಲರುಗಳಾಗಿರುವವು. ವರ್ಷಂಪ್ರತಿ ೫ ಮಿಲಿಯ ಡೊಲರುಗಳನ್ನು ಸಲಾಯಿಸಲು ಇಟೇಲಿಯವರು ಒಪ್ಪಿರುವರು.

—ಅಮೇರಿಕ ದೇಶದ ಬ್ರೆಂಟನ್ ಎಂಬ ಕಡೆಯಲ್ಲಿ ಗಂಟೆಗೆ ೫೦ ಮೈಲು ಪ್ರಕಾರ ಓಡುತ್ತಿರುವ ಒಂದು ರೈಲ್ವೆ ಭಂಡಿಯು ಮುಂದಿನಿಂದ ನಿಧಾನವಾಗಿ ಒಡುತ್ತಿರುವ ಇನ್ನೊಂದು ಭಂಡಿಗೆ ತಗಲಿ ಅನೇಕರಿಗೆ ಪ್ರಾಣಹಾನಿ ಸಂಭವಿಸಿರುವುದು.

—ಮೊರೊಕೋ ಪ್ರಾಂತದಲ್ಲಿ ಅಬ್ದುಲ್ ಕರೀಮರ ವಿರುದ್ಧ ಫ್ರಾನ್ಸ್ ಮತ್ತು ಸ್ಪೇನ್‌ನವರು ಮಾಡಿದ ಯುದ್ಧವು ಜೋರಾಗಿ ನಡಿಯುತ್ತಲಿದೆ.

—ಡಾ. ಬಿರ್ಕೆಂಹೆಡ್ಡನವರ ಹಿಂದೀ ಸ್ವರಾಜ್ಯದ ಬಿಲು ಪಾರ್ಲಿಮೆಂಟಿನ ಮುಂದ ಬೇಗನೆ ವಿಚಾರಕ್ಕೆ ಬರತಕ್ಕದಿದೆ.

—ನೆತ್ತಿಯಮೇಲೆ ಕೂದಲುಹೋಗಿದ್ದಲ್ಲಿ ಬೆಳ್ಳುಗಳನ್ನು ನೆಕ್ಕ ಹಚ್ಚಬೇಕು. ಅಂದರೆ ಕೂದಲುಗಳು ಪುನಃ ಹುಟ್ಟುತ್ತವೆ ಎಂದು ಒಬ್ಬ ಅಮೇರಿಕದ ಡಾಕ್ಟರರ ಅನುಭವ.

ಒಳದೇಶ ವರ್ತಮಾನ.

—ಗಾಂಧಿಯವರ ತತ್ವಗಳನ್ನು ಆಚರಿಸುವ ಬಗ್ಗೆ ಯುರೋಪಿನಿಂದ ಬಂದ ಮಿಸ್ ಸ್ಲೇಡ್ ಎಂಬವರು ಮೊನ್ನೆ ಅಹಮ್ಮದಾಬಾದನ್ನು ಸೇರಿರುವರು. ಇವರು ಆಶ್ರಮದಲ್ಲಿ ನೂಲುವುದನ್ನು ಕಲಿಯುತ್ತಿರುವರು. ಮುಂಜಾನೆ ೪ ಘಂಟೆಗೆ ಎದ್ದು ತನ್ನ ಕೆಲಸಗಳನ್ನು ಶ್ರದ್ಧೆಯಿಂದ ಮಾಡುತ್ತಾರೆ. ಇವರು ತನ್ನ ಈಗಿನ ಜೀವನವು ಅತಿ ಹಿತಕರವಾದದ್ದೆಂದು ತಿಳಿಸಿದ್ದಾರಂತೆ, ಇದಲ್ಲವೇ ಮಹಾತ್ಮರ ಮಹತ್ವ!

—ಬರುವ ಕೊಂಗ್ರೆಸು ಕೊನ್‌ಪುರದಲ್ಲಿ ಜರಗುವುದು ಪ್ರವೇಶ ಟಿಕೇಟುಗಳ ದರವು ರೂ. ೫೦, ೧೦೦, ೨೫೦, ೫೦೦, ೧೦೦೦ ವರೆಗೆ ಇರುವುದು ಟಿಕೇಟುಗಳು ಬೇಕಾದವರು ಕೊಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಿಗೆ ಬರಿಯಬೇಕಾಗವುದು. ಕೊಂಗ್ರೆಸ್ಸಿನ ಸಿದ್ಧತೆಗಳು ಒಳ್ಳೇದಾಗಿ ನಡಿಯುತ್ತವೆ, ಸ್ವಯಂಸೇವಕರ ಪಂಗಡವು ಬೇಗನೆ ಅಲ್ಲಿಗೆ ತೆರಳುವುದು.

—ಶ್ರೀ. ಶ್ರೀನಿವಾಸರಾವ ಕೌಜಲಗಿಯವರು ಈಗ ಗುಣಹೊಂದುತ್ತಿದ್ದಾರೆ.

—ವಿಲಾಯಿತಿಯಿಂದ ಮದ್ರಾಸಿಗೆ ಹೋಗುತ್ತಿದ್ದ ೪೨ ರಿವಾಲ್ವರು ೧೪ ಪೆಟ್ಟಿಗೆಯು ಕಲ್ಕತ್ತೆಗೆ ತಪ್ಪಿಹೋಯಿತು. ಅಲ್ಲಿ ಅವೆಲ್ಲಾ ಮಾಯವಾಗಿದೆ.

—ದೇಶಭಕ್ತ ಲಾಲಾಲಜಪತರಾಯರು ವರಿಷ್ಠ ಕಾಯಿದ ಕೌನ್ಸಿಲಿನ ಸಭಾಸದರಾಗಿ ನಿಲ್ಲುವವರಿದ್ದಾರೆ. ಅವರಿಗಾಗಿ ಜಲಂದರದ ರೈಯಾದಾ ಹಂಸರಾಜರವರು ತಮ್ಮ ಸ್ಥಳದ ರಾಜಿನಾಮೆ ಕೊಡುವವರಿದ್ದಾರೆ.

—ಮದ್ಯಪ್ರಾಂತದ ಅಂಕೋಲೆಯಲ್ಲಿ ಹಿಂದೂಗಳು ವಾದ್ಯಘೋಷದಿಂದ ಸ್ಮಶಾನಯಾತ್ರೆ ಸಾಗಿಸುತ್ತಿದ್ದಾಗ, ಮಹಮ್ಮದೀಯರು ಸಾಗಿಹೋಗಿ ದೊಂಬಿಯನ್ನೆಬ್ಬಿಸಿದರು. ದಂಗೆಯನ್ನು ಪೋಲೀಸರು ಶಾಂತಪಡಿಸಿದರು.

—ಬಳ್ಳಾರಿ ಜಿಲ್ಲೆಯ ಉತ್ತಂಗಿಯಲ್ಲಿ ವೀರಶೈವ ಸಮಾಜದ ಸಾದರ ಗುರುಗಳ ಉತ್ಸವದ ಕಾಲಕ್ಕೆ ಪಕ್ಷಭೇದಗಳ ಮೂಲಕ ಬಡದಾಟ ನಡೆಯಿತು. ಭಯಂಕರ ಬಡದಾಟ! ಪೋಲೀಸರು ಗುಂಡುಹೊಡೆದು ದೊಂಬಿಯನ್ನು ಶಾಂತಪಡಿಸಬೇಕಾಯಿತು.

—ಗೋಮಾಂತಕದ ಉಕ್ಕಳ್ಳಿ ಗ್ರಾಮದಲ್ಲಿ ಲಕ್ಷ್ಮೀಪೂಜನೋತ್ಸವದ ಸಮಯ ಧ್ವಜದ ಮೇಲೆ, "ಮಹಾತ್ಮಾ ಗಾಂಧೀಕಿ ಜೈ!" ಎಂಬ ಅಕ್ಷರ ಗಳಿದ್ದವು. ಆದ್ದರಿಂದ ಅಲ್ಲಿಯ ಪಂಚ ಕಮಿಟಿಯವರು ಮೆರವಣಿಗೆಗೆ ಪ್ರತಿಬಂಧ ಮಾಡಿದರು.

—ನಾಗಪುರದಲ್ಲಿ ೭೦೦ ಝಾಡಮಾಲಿಗಳು ಮುಷ್ಕರ ಹಾಲಿರುವರು.

—ಆಂಧ್ರ ವಿಶ್ವವಿದ್ಯಾಲಯಕ್ಕೆ ಬೆಜವಾಡವು ಕೇಂದ್ರಸ್ಥಾನವಾಗಿ ಚುನಾಯಿಸಲ್ಪಟ್ಟಿರುವುದು.

—ಈಸ್ಟ್ ಇಂಡಿಯಾ ರೈಲ್ವೆಯಲ್ಲಿ ಪ್ರಯಾಣದ ದರಗಳು ಬರುವ ಜನವರಿಯಿಂದ ಇಳಿಸಲ್ಪಡುವುದೆಂದು ನಿರ್ಣಯವಾಗಿದೆ.

—ಲೋಕಮಾನ್ಯ ಕೊನ್‌ಫರೆನ್ಸಿನ ನಿರ್ಣಯಗಳನ್ನು ಖಂಡನೆ ಮಾಡಲು, ಜರ್ಮನಿಯ ರಾಷ್ಟ್ರೀಯ ಪಕ್ಷದವರು ಮಿಟಿಂಗುಗಳನ್ನು ಮಾಡುತ್ತಲಿರುವರು.

—ಲಾಹೋರ್ ಡಿಸ್ಟ್ರಿಕ್ಟಿನ ಖುರದುಪುರವೆಂಬ ಗ್ರಾಮದಲ್ಲಿ ಇಬ್ಬರು ಗ್ರಾಮಸ್ಥರನ್ನು ಕೊಂದುಹಾಕಿ ಅನೇಕ ಹೆಂಗಸರಿಗೆ ಗಾಯವನ್ನು ಮಾಡಿದ ೩೧ ಜನ ಕೊಲೆಪಾತಕರ ಪೈಕಿ ೧೬ ಜನಗಳಿಗೆ ಸೆಷನ್ಸ್ ಜಡ್ಜಿಯವರು ಮರಣದಂಡನೆಯನ್ನು ಮಾಡಿರುವರು.

—ಮುಂಬಾಯಿಯ ಮಿಲ್ಲುಗಳಲ್ಲಿ ಮುಷ್ಕರ ಹಾಕಿರುವ ಕೆಲಸಗಾರರಿಗೆ ಸಹಾಯಮಾಡಲು ಮುಂಬಾಯಿಯಲ್ಲಿ ೧೦೯೦ ರೂಪಾಯಿಗಳು ಶೇಖರವಾಗಿವೆ. ವಿದೇಶದಿಂದ ೫೦೦ ಪವನುಗಳು ಅಂದರೆ ಸುಮಾರು ೭೦೦೦ ರೂಪಾಯಿಗಳು ಬಂದಿವೆ. ಹಿಂದಿನ ಸಿಲ್ಕು ಕೆಂಪಿ ಹಣವಿದೆ.

ದಕ್ಷಿಣ ಕನ್ನಡ.

ಕುಂದಾಪುರ:— ಪಾಲಾಡಿಯಿಂದ ಖಳ್ಳಂಜೆ, ಬಿಜ್ಜಾಡಿ, ಜೆಂಗಿವಳ್ಳಿ, ಮಚ್ಚಟ್ಟು ಗ್ರಾಮಗಳಲ್ಲಿ ಹಾದು ಅಮವಾಸೆ ಬೈಲಿಗೆ ಹೋಗುವ ದೊಂಡು ಗ್ರಾಮಸ್ಥರು ಇಷ್ಟು ಈ ರಸ್ತೆಯನ್ನು ಬೋರ್ಡಿನವರು ದುರಸ್ತು ಮಾಡಿಕೊಡಬೇಕಾಗಿ ಮೇಲಿನ ಗ್ರಾಮಸ್ಥರು ಬಹುಕಾಲದಿಂದ ಅರ್ಜಿ ಮಾಡಿಕೊಳ್ಳುತ್ತಿದ್ದರು. ೧೯೧೪ನೇ ಇಸವಿಯ ವರೆಗೆ ಈ ರಸ್ತೆಗೆ ಬೋರ್ಡಿನಿಂದ ಸಹಾಯ ದ್ರವ್ಯ ಸಹಾ ಸಿಕ್ಕುತ್ತಿತ್ತು. ೧೯೧೪ನೇ ಇಸವಿಯಲ್ಲಿ ಬೋರ್ಡಿನಿಂದ ಅಂದಾಜು ಪತ್ರಿಕೆಯನ್ನು ಸಹಾ ತಯಾರು ಮಾಡಿಸಿ ೩ ಮೈಲು ದಾರಿಯನ್ನು ಸುಮಾರು ೩೬೦ ರೂಪಾಯಿ ಖರ್ಚು ಮಾಡಿ ಬೋರ್ಡಿನವರು ಮಾಡಿಸಿದ್ದು ಅಲ್ಲಿಯೇ ಮನ್ನಮಾಡಿದರು. ಅನಂತರವೂ ಗ್ರಾಮದವರು ಬಹಳ ಅರ್ಜಿಯನ್ನು ಮಾಡಿದಾಗ್ಯೂ ಕೆಲಸ ನಡಿಸುವರೆ ಹಣವಿಲ್ಲವೆಂತ ಈ ವರೆಗೂ ಕೆಲಸ ಮಾಡದೆ ಬಾಕಿ ಇಟ್ಟಿರುತ್ತಾರೆ. ಈ ವರ್ಷ ಗ್ರಾಮಸ್ಥರು ತಮ್ಮ ಕಷ್ಟವನ್ನು ಸಹಿಸದೆ ತಿರುಗಿ ಅರ್ಜಿ ಮಾಡಿಕೊಂಡಿರುತ್ತಾರೆ.

ಈ ಮಾರ್ಗವು ಅನೇಕ ಬಡ ರೈತರಿಗೆ ತಮ್ಮ ದವಸಧಾನ್ಯವನ್ನು ಸಾಗಿಸಲು ಅತಿ ಅಗತ್ಯ ೪೦,೯೩೫೭೧ ಯೆಕ್ರೆ ವಿಸ್ತೀರ್ಣವಿದ್ದು ೧೨೪೧೧—೧೪—೦ ತೀರ್ವೆ ೧೧೬೩—೧೫—೦ ಸೇಸುಸಹಾತೆತ್ತುಬರತಕ್ಕ ಗ್ರಾಮಗಳಾಗಿರುತ್ತವೆ. ಪ್ರಕೃತ ಮೇಲೆ ಹೇಳಿದ ಐದು ಗ್ರಾಮದಲ್ಲಿ ಬೋರ್ಡು ಎಲಿಮೆಂಟರಿ ಶಾಲೆಯಿದ್ದು ಆ ಗ್ರಾಮದ ಶಾಲೆಗೆ ಹೋಗುವ ಹುಡುಗರಿಗೆ ಸಹಾ ಅತಿ ಅಗತ್ಯವಾಗಿರುತ್ತದೆ. ಬೋರ್ಡಿನವರಿಗೆ ಈ ರಸ್ತೆಯನ್ನು ಮಾಡಿಸಲು ಬೇಕಷ್ಟು ಪಟ್ಟಾಸ್ಥಳವನ್ನಾದರೂ ಗ್ರಾಮಸ್ಥರು ಧರ್ಮಾರ್ಥವಾಗಿ ಕೊಡುವರಲ್ಲದೆ ಬೇರೆ ಬೇಕಾದ ಅನುಕೂಲತೆಯನಾದರೂ ಮಾಡಿಕೊಡಲು ತಯಾರು ಇದ್ದಾರೆ. ಇನ್ನಾದರೂ ಮಾನ್ಯ ತಾಲೂಕುಬೋರ್ಡಿನವರು ಪ್ರಾಂತಿಕ ಸರಕಾರದಿಂದ ಗ್ರಾಮರಸ್ತೆಗೆ ಸಿಕ್ಕುವ ಹಣವನ್ನು ತೆಗೆದುಕೊಂಡು ಈ ರಸ್ತೆಯನ್ನು ದುರಸ್ತು ಮಾಡಿಸಿ ಅದರಿಂದ ಬಡರೈತರ ಕಷ್ಟನಿವಾರಣೆ ಮಾಡಬೇಕೆಂದು ನಮ್ರತ ಪೂರ್ವಕ ಪ್ರಾರ್ಥಿಸುವ,

ಹಳ್ಳಿಯ ಬಡ ರೈತ.

ಕುಂಬಳೆ:— ಮಲಬಾರ ಜಿಲ್ಲೆಯಲ್ಲಿ ಉಂಟಾದ ಮಳೆಗಾಳಿಯ ಹೊಡೆತಕ್ಕೆ ಸಿಕ್ಕಿ ಸಮುದ್ರದಲ್ಲಿ ತೇಲುತ್ತಿದ್ದ ೫ ಮಂದಿ ಜನರನ್ನು ಕೆಲವು ದಿನಗಳ ಹಿಂದೆಯಲ್ಲಿಯ ಮಚ್ಚಿಶಿಕಾರಿಯವರು ತಮ್ಮ ದೋಣಿಯಲ್ಲಿ ಎತ್ತಿ ಹಾಕಿ ದಡಕ್ಕೆ ಬಿಟ್ಟಿದ್ದರು. ಅವರೆಲ್ಲರೂ ಅಂದಿನ ಟ್ರೈನಿನಲ್ಲೇ ಊರಿಗೆ ಹಿಂತೆರಳಿದರು.

ಇಲ್ಲಿಗೆ ಬರೇ ೩ ಮೈಲುಗಳ ಪಾಸಿಲೆಯಲ್ಲಿದ್ದು ಯಾವ ಪಂಚ್ಯಾತ ಕೋರ್ಟಿಗೂ ಸೇರದಿರುವ ಶಿರಿಯ, ಇಚ್ಲಂಗೋಡು, ಹೇರೂರು ಮತ್ತು ಕಿದೂರು ಗ್ರಾಮಗಳನ್ನು ಕೈಪಾಡಿ ಪಂಚ್ಯಾತ ಕೋರ್ಟಿಗೆ ಒಳಪಡಿಸುವದು ಗ್ರಾಮಸ್ಥರ ಅನುಕೂಲತೆಗೋಸ್ಕರ ಅಗತ್ಯವಾಗಿರುತ್ತದೆ.

ಇಲ್ಲಿಯ ಬಾಲಿಕಾ ಬೋರ್ಡು ಪಾಠಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ತುಂಬಾ ಇರುತ್ತಿದ್ದು ಸ್ಥಳದ ಅಡಚಣೆಯಾಗಿರುವದರಿಂದ ದಯಾಳು ಬೋರ್ಡಿನವರು ಇನ್ನಾದರೂ ಈ ಶಾಲಾ ಕಟ್ಟೋಣವನ್ನು ವಿಸ್ತರಿಸುವರೆ ತ್ವರ್ಯ ವಿಲಿವಾರಿ ಮಾಡಬೇಕಾಗಿದೆ.

ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ವರ್ಷಂಪ್ರತಿ ನೆರವೇರುವ ಶ್ರೀ ಕೀರ್ತನಾಸಪ್ತಾಹವು ಇದೇ ತಾ. ೨೦ನೇ ಮಾರ್ಗಶಿರ ಶುದ್ಧ ೫ನೆಯ ದಿನ ಪ್ರಾರಂಭವಾಗಿ ತಾ. ೨೬ನೇ ದ್ವಾದಶಿಯ ದಿವಸ ಮುಕ್ತಾಯವಾಗುವುದು. ಪರವೂರುಗಳಲ್ಲಿರುವ ಸಮಸ್ತ ಭಕ್ತರೂ ಇದಕ್ಕೆ ಚಿತ್ತಯಿಸಿ ಎಂದಿಗಿಂತಲೂ ವಿಶೇಷ ರೀತಿಯಲ್ಲಿ ಈ ಪುಣ್ಯಕಾರ್ಯವನ್ನು ನೆರವೇರಿಸಿಕೊಡಬೇಕಾಗಿ ಇಲ್ಲಿಯ ಗೌಡಸಾರಸ್ವತ ವೃಂದದವರ ಸವಿನಯ ವಿನಂತಿ ಇದೆ. ಊರ ಮಹನೀಯರು ಕೂಡ ಈ ವರ್ಷ ಹೆಚ್ಚಿನ ಶ್ರದ್ಧೆಯಿಂದ ಈ ಕಾರ್ಯವನ್ನು ಚೆಲೋ ರೀತಿಯಲ್ಲಿ ಕೈಗೂಡಿಸಿ ಕೊಡುವರೆಂಬ ಭರವಸೆಯಿದೆ.

ಜಾನುವಾರುಗಳಿಗೆ ರೋಗಗಳು ಬರುವ ವಿಧಾನ, ಅವುಗಳ ಚಿಕಿತ್ಸೆ—ಬಾರದಂತೆ ಅಡಕಾಯಿಸುವ ಕ್ರಮ—ಇವುಗಳ ಕುರಿತು ಇಲ್ಲಿಯ ಬಾರ್‌ಯಸೋಸಿಯೇಶನಿನಲ್ಲಿ ನಿನ್ನೆಯ ದಿನ ಸಾಯಂಕಾಲ ೫॥ ಗಂಟೆ ಸಮಯಕ್ಕೆ ಇಲ್ಲಿಯ ವೆಟರ್ನರಿ ಸರ್ಜನರಾದ, ರಾ। ಬಿ ಸೀತಾರಾಮಯ್ಯನವರ, ರಾ। ಕೆ ಪಿ ಪದ್ಮನಾಭಯ್ಯ ಇವರ ಮತ್ತು ರಾ। ದಂಡಿಲ್ಲಾಯರವರ ಚೆಲೋ ಭಾಷಣಗಳು ಇದ್ದವು. ಈ ಭಾಷಣಗಳಿಗೆ ಹೆಚ್ಚಿನ ಮಹನೀಯರು ಹಾಜರಿದ್ದರು. ಜಾನುವಾರುಗಳಿಗೆ ರೋಗ ತಗಲದಂತೆ ಮಾಡುವ ಅನೇಕ ವಿಧಾನಗಳನ್ನು ರಾ। ಸೀತಾರಾಮಯ್ಯನವರು ವಿವರಿಸಿ ಹೇಳಿದ್ದಲ್ಲದೆ, ರೋಗವು ಒಂದು ಗ್ರಾಮದಲ್ಲಿ ತಲೆದೋರಿದಾಗ ಎಲ್ಲಾ ಜಾನುವಾರುಗಳಿಗೂ ಕಡ್ಡಾಯವಾಗಿ ದಾಕುಹಾಕಿಸಿಕೊಳ್ಳತಕ್ಕದ್ದೆಂತಲೂ ತಮ್ಮ ಭಾಷಣದಲ್ಲಿ ಒತ್ತಿ ಹೇಳಿದ್ದರು. ರಾ। ಪದ್ಮನಾಭಯ್ಯನವರು ನಮ್ಮ ಅಂದರೆ ಹಿಂದೂ ವೈದ್ಯ ಶಾಸ್ತ್ರದಲ್ಲಿ ಹೇಳಿರುವ ಚಿಕಿತ್ಸೆಗಳನ್ನೇ ಸಾಧ್ಯವಿದ್ದ ಮಟ್ಟಿಗೂ ಉಪಯೋಗಿಸತಕ್ಕದ್ದೆಂತ ಹೇಳಿದ್ದಲ್ಲದೆ ರಾ। ದಂಡಿಲ್ಲಾಯರವರು ಇವರಿಬ್ಬರೂ ಹೇಳಿದ್ದನ್ನು ಅನುಮೋದಿಸಿ ಜಾನುವಾರುಗಳ ಕುರಿತು ಹೆಚ್ಚಿನ ಜಾಗ್ರತೆ ತೆಗೆದುಕೊಳ್ಳುವವರ ಕುರಿತು ಇನ್ನೂ ಒಂದೆರಡು ಮುಖ್ಯ ಸಂಗತಿಗಳ ಕುರಿತು ವಿಸ್ತಾರವಾಗಿ ಹೇಳಿದ ನಂತರ ಸಭೆಯು ಮುಕ್ತಾಯವಾಯಿತು. ಭಾಷಣಗಳನ್ನೆಷ್ಟು ಕೇಳಿದರೇನು? ಅವುಗಳಿಗನುಸರಿಸಿ ಎಲ್ಲಾ ವಿಷಯಗಳಲ್ಲಿಯೂ ಯೋಗ್ಯವಾದ ರೀತಿಯಲ್ಲಿ ನಡೆಕೊಂಡರೆ ಮಾತ್ರ; ಭಾಷಣಗಳನ್ನು ಕೊಟ್ಟ ಸಮಯ ವ್ಯಯವಾಗಿದ ಬಗ್ಗೆ ಅಲ್ಪಸ್ವಲ್ಪ ಪ್ರಯೋಜನ ಸಿಕ್ಕಿದಂತಾಗುವುದು. ಅಲ್ಲದೆ ಭಾಷಣಗಳನ್ನು ಕೇಳಿಯೂ ಎಂದಿನಂತೆ ನಿದ್ರಾವಸ್ಥೆಯಲ್ಲಿಯೇ ಇದ್ದರೆ ಏನೂ ಪ್ರಯೋಜನವಿಲ್ಲ.

ಇಲ್ಲಿಯ ಬೆಂಚ್‌ಮ್ಯಾಜಿಸ್ಟ್ರೇಟರಲ್ಲಿ ಒಬ್ಬರಾಗಿದ್ದ ಮೃತಕಡ್ಡು ಸುಬ್ರಾಯ ಶ್ಯಾನುಭಾಗರ ಬದಲಿಗೆ ಸದರಿ ಸ್ಥಾನಕ್ಕೆ ನೇಮಕಪಟ್ಟ ರಾ. ಕಾವುಗೋಳಿ ಅರಯಂಗುರಿಕ್ಕಳವರು ಕಳೆದ ತಾ. ೮ನೇ ಆದಿತ್ಯವಾರ ದಿನ ಈ ಊರ ಎಲ್ಲಾ ಸರಕಾರಿ ನೌಕರರಿಗೂ, ವಕೀಲರಿಗೂ, ಇತರ ಮಾನ್ಯ ಗೃಹಸ್ಥರಿಗೂ ಇಲ್ಲಿಯ ಬಾರ್ ಎಸೋಸಿಯೇಶನ ಕ್ಲಬ್ಬಿನಲ್ಲಿ ಒಂದು ದೊಡ್ಡ ಟೀಪಾರ್ಟಿ ಸತ್ಕಾರವನ್ನೂ ಕೊಟ್ಟರು. ಸದರಿ ಟೀಪಾರ್ಟಿಯ ಮುಂಚೆ ಕಿವಿಗೆ ಮಧುರವಾದ ಗಾಯನಪಾರ್ಟಿಯೂ, ಇಲ್ಲಿಯ ವಕೀಲ್ ದಂಡಿಲ್ಲಾಯರವರ ಚೆಲೋ ಭಾಷಣವೂ ಇದ್ದವು. ಮಾನ್ಯ ಸರಕಾರದವರು ಸರಕಾರಿ ಕೆಲಸಗಳಲ್ಲಿಯೂ ಸರಕಾರಕ್ಕೆ ಸಮ್ಮಂಧ ಪಟ್ಟ ಇತರ ಗೌರವಾರ್ಥವಾದ ಉದ್ಯೋಗಗಳಲ್ಲಿಯೂ ಬಹಳ ವಿರಳವಾಗಿರುವ ಮತ್ತು ಹಿಂದುಳಿದವರಾದ ಬಿಲ್ಲವರ ಜಾತಿಯವರೊಬ್ಬರನ್ನು ಚುನಾಯಿಸಿರುವುದಕ್ಕೆ ತಮ್ಮ ಭಾಷಣದಲ್ಲಿ ರಾ. ದಂಡಿಲ್ಲಾಯರವರೂ ಇಲ್ಲಿಯ ಮ್ಯಾಜಿಸ್ಟ್ರೇಟರಾದ ರಾ. ಎನ್ ಸುಬ್ರಾವರವರೂ, ಎಲ್ಲಾ ಸಭಿಕರೂ ಹೆಚ್ಚು ಕೃತಜ್ಞತೆಯಿಂದ ಸರಕಾರದವರಿಗೆ ಧನ್ಯವಾದಗಳನ್ನು ಅರ್ಪಿಸಿದುದಲ್ಲದೆ ರಾ. ಕುರಿಕ್ಕಳವರು ಚಿರಾಯುವಾಗಿರಲೆಂದು ಶ್ರೀ ದೇವರೊಡನೆ ಪ್ರಾರ್ಥಿಸಿದರು. ಅಂದಿನ ಗಾಯನಸಭೆ ಸುಮಧುರ ಹಾಡುಗಳಿಂದ ಕೂಡಿ ತುಳುಕುತ್ತಿದ್ದಂತೆ ಟೀಪಾರ್ಟಿಯಾದರೋ ಖುರ್ಮಾಲಾಡುಗಳಿಂದ ಇನ್ನಷ್ಟು ಹೆಚ್ಚಾಗಿ ಕೋಭಿಸುತ್ತಿದ್ದಿತೆಂದು ಹೇಳಿದ ಮೇಲೆ ಕೇಳಬೇಕೆ? ನೆರೆದ ಮಹನೀಯರೆಲ್ಲರೂ ಇಂಪಾದ ಗಾನ, ಭಾಷಣಗಳಿಂದಲೂ, ತಂಪಾದ ಪನ್ನೀರು ವ ಟಿಫಿನ್ ನಿಂದಲೂ, ಸಂತೃಪ್ತರಾಗಿ ತಮ್ಮ ತಮ್ಮ ಮನೆಮಠಗಳನ್ನು ಸೇರುವವ ಅದರೆ ಬಾರ್ ಯೆಸೋಸಿಯೇಶನಿನ ಎಲ್ಲಾ ಮೆಂಬರರಿಗೂ ಆಮಂತ್ರಣ ವಿತ್ತಾದರೂ ಅವರ ಪೈಕಿ ಬರೇ ಮೂರೇ ಮಹನೀಯರು ಮಾತ್ರ ಹಾಜರಿದ್ದರೆಂಬದನ್ನು ತಿಳಿಸಲು ತುಂಬಾ ವಿಷಾದಪಡುತ್ತೇವೆ. ಅದೆಂತೂ ಇರಲಿ ಇಂಥಾ ಟೀಪಾರ್ಟಿಗಳು ಇನ್ನೂ ಹೆಚ್ಚಲೆಂದೂ, ರಾ. ಗುರಿಕ್ಕಳರವರಿಗೆ ದೀರ್ಘಾಯುಷ್ಯವಾಗಲೆಂದೂ ನಾವು ಕೋರುತ್ತೇವೆ.

ಈ ತಾಲೂಕಿನ ಜಮಾ ಬಂದಿಯು ಇದೇ ಬರುವ ತಾ. ೨೬ನೆಯ ಜನವರಿ ಸುಮಾರು ತಾ. ೧೫ರಿಂದ ಪ್ರಾರಂಭವಾಗಿ ಫೆಬ್ರರಿ ತಾ. ೧೩ನೇ ದಿನ ಮುಕ್ತಾಯವಾಗುತ್ತದೆಂತ ಕೇಳುತ್ತೇವೆ.

ಇದೇ ೧೧ನೆಯ ವಾರ ದಿನ ಸಾಧಾರಣ ಮಧ್ಯಾಹ್ನ ೪ ಗಂಟೆಯಿಂದ ರಾತ್ರಿ ಗಂಟೆ ೯ರ ತನಕ ಅತಿರೇಕ ಮಳೆಯು ಸುರಿದಿರುತ್ತದೆ. ಅಂದಿನ ಮಳೆಯಷ್ಟು ಮಳೆಯು ಕಠಿಣವಾದ ಮಳೆಗಾಲದಲ್ಲಿ ಕೂಡಾ ಬರಲಿಲ್ಲವಾಗಿ ಖಂಡಿತವಾಗಿಯೂ ಹೇಳಬಹುದು. ಇದೇನಾಶ್ಚರ್ಯ! ಶ್ರೀ ದೇವರ ಮಹಿಮೆಯು ಅಗಾಧವಾದದ್ದು.

ಜಿಲ್ಲಾ ಪೋಲಿಸ್ ಸ್ಪೋರ್ಟ್ಸ್ ಪಂಧ್ಯಾಟಕ್ಕೆ ಇಲ್ಲಿಂದ ಹೋದ ಹೆಚ್ಚು ಮಂದಿ ಪೊಲೀಸರಿಗೆ ಹೆಚ್ಚಿನ ಇನಾಮುಗಳು ಸಿಕ್ಕಿವೆಯಂತೆ. ಇದೊಂದು ಸಂತೋಷದ ವಾರ್ತೆಯೇ ಸರಿ.

ಇಲ್ಲಿಯ ಪೋಸ್ಟ್ ಮಾಸ್ಟರರಾಗಿದ್ದ ರಾ. ಕೆ. ಭವಾನಿ ಭಟ್ಟರವರಿಗೆ ಮಂಗಳೂರಿಗೂ, ಮಂಗಳೂರಲ್ಲಿರುವ ರಾ. ಸದಾಶಿವ ರಾವ್ ಎಂಬವರಿಗೆ ಇಲ್ಲಿಗೂ ವರ್ಗವಾಗಿಯದೆಂತ ವರ್ತಮಾನವಿರುತ್ತದೆ.

ಕ್ಲಾರಿಕ ರಾಮನನ್ನು ಕೊಂದ ಆರೋಪದ ಮೇಲೆ ೯ ವರ್ಷಗಳ ಕಠಿಣ ಸಜಾ ಹೊಂದಿದ ಕ್ಲಾರಿಕ ಬಟ್ಟನನ್ನು ಮದ್ರಾಸ್ ಹ್ಯಾಕೋರ್ಟು ಅಪೀಲಿನಲ್ಲಿ ಬಿಡುಗಡೆ ಪಡಿಸಿದ್ದಾರೆಂದು ತಿಳಿದು ಬರುತ್ತದೆ.

ಬೇಕಗ್ರಾಮದಲ್ಲಿ ಎರಡು ಶಿಶುಗಳನ್ನು ಕೊಂದ ತಪ್ಪಿಗಾಗಿ ಸೆಶನ್ಸಿಗೆ ಕಮಿಟ್ ಮಾಡಲ್ಪಟ್ಟ ಗೌರಿ ಎಂಬ ಹೆಂಗಸನ್ನು ರುಜುವಾತು ಇಲ್ಲವೆಂತ ಬಿಡುಗಡೆಪಡಿಸಿದ್ದಾರಂತೆ.

ಈ ತಾಲೂಕಿನ ಹೆಚ್ಚಿನ ಗ್ರಾಮಗಳಲ್ಲಿ ಜಾನುವಾರುಗಳಿಗೆ ಮಹಾಮಾರಿ ಮೊದಲಾದ ರೋಗಗಳು ಹೆಚ್ಚಾಗಿ ಹಬ್ಬಲಿಕ್ಕೆ ಪ್ರಾರಂಭವಾದ್ದರಿಂದ ಎಲ್ಲಾ ಜಾನುವಾರುಗಳಿಗೂ ಕಡ್ಡಾಯವಾಗಿ ವೆಟರ್ನರಿ ಸರ್ಜನರುಗಳಿಂದ ದಾಕು ಹಾಕಿಸಿಕೊಳ್ಳಬೇಕಾಗಿ ಸರಕಾರಿ ಹುಕುಂ ಬಂದಿರುತ್ತದೆಂಬ ವಾರ್ತೆ ಇದೆ.

ಇಲ್ಲಿಯ ತಾಲೂಕು ಕಚೇರಿಯಲ್ಲಿ ಅನೇಕ ಸಲ ಹೆಡ್‌ಕ್ಲಾರ್ಕರಾಗಿಯೂ ಪರೋಪಕಾರಿಗಳಾಗಿಯೂ ಎಲ್ಲರ ಹಿತಚಿಂತಕರಾಗಿಯೂ ಇದ್ದುತ್ತಿದ್ದ ರಾ. ಎಚ್. ರಾಮಭಟ್ಟರನ್ನು ಹೊಸದುರ್ಗ ಡಿಪ್ಯುಟಿ ತಹಶೀಲ್ದಾರರ ಕಚೇರಿಯ ಹೆಡ್ ಕ್ಲಾರ್ಕರಾಗಿ ವರ್ಗಾಯಿಸಿರುತ್ತಾರೆ. ರಾ. ರಾಮಭಟ್ಟರವರಿಗೆ ಇನ್ನೂ ಉನ್ನತ ಪದವಿಯು ಲಭಿಸಲೆಂದು ಕೋರುತ್ತೇವೆ.

ಇದೇ ತಾ. ೧೧ರಿಂದ ಇಲ್ಲಿಂದ ಮಂಗ್ಳೂರಿಗೆ ಮೈಲ್ ಬಂಡಿಯ ಚಾರ್ಜು ೦—೧೧—೯ಯಿಂದ ೦—೧೦—೯ ಕ್ಕೆಗೆ ತಗ್ಗಿಸಿರುತ್ತಾರೆ ವ್ಯತ್ಯಾಸ ಆಣೆ ೧ ಮಾತ್ರ.

ಬಂಟ್ವಾಳ:— ಇಲ್ಲಿಗೆ ಮಂಗಳೂರು ಡಿವಿಜನಲ್ ಆಫೀಸರರ. ಈ ತಿಂಗಳ ಮೊದಲನೇ ವಾರದಲ್ಲಿ ಸರ್ಕೀಟು ಬಂದು ಮದ್ಯಪೇಟೆಯಲ್ಲಿ ಇಕ್ಕಟ್ಟಾದ ಮಾರ್ಗವನ್ನು ಸರಕಾರದವರು ಎಕ್ವಾಯರು ಮಾಡಿದ್ದನ್ನು ಆಕ್ಷೇಪಿಸಿ ಸ್ಥಳದ ಯಜಮಾನರು ಇವರ ಹತ್ತರ ಅಪೀಲು ಮಾಡಿದನ್ನ ತನ್ನಿ ಬಗ್ಗೆ ಹೋದಲ್ಲಿ ಧೊರೆಗಳಿಗೆ ಒಂದು ಹೊಸ ಆಲೋಚನೆ ಹುಟ್ಟಿತು ಯಾವದಂದರೆ ಹೊಸ ಮಾರ್ಕೇಟಿನ ಮಾರ್ಗದಿಂದ ಸರೂತ ಪೂರ್ವಕ್ಕಾಗಿ ಹರಿಪ್ಪಗಳ ಹಿತ್ತಲಿಗಾಗಿ ಸಾವಕಾರ ಶ್ರೀನಿವಾಸ ಪ್ರಭುಗಳ ಹಿತ್ತಲಿನ ಸಮೀಪ ಬದ್ಧಕಟ್ಟೆ ಸಂಕದ ಹತ್ತರ ರಾಜಮಾರ್ಗಕ್ಕೆ ಹೋಗುವ ಒಂದು ಹೊಸ ಹೆದ್ದಾರಿ ಮಾಡಬೇಕೆಂದು ಓವರ್ಸಿಯರರು ಮತ್ತು ಮಣೆಗಾರರಿಂದ ರಫ್ ಎಸ್ಟಿಮೇಟ ಮಾಡಿಸಿ ಡಿಸ್ಟ್ರಿಕ್ಟ್ ಬೋರ್ಡಿಗೆ ಹೋಗಿರುವದು. ಇಲ್ಲಿಗೆ ಪ್ಲೇಗ್ ಬಂದಾಗ್ಗೆ ಹೊಸ ಸೆಟಲ್ ಮೆಂಟು ಮಾರ್ಗತೆರದಂತೆಯೋ ಏನೋ ನೋಡಬೇಕಾಗಿದೆ. ಆದರೆ ಧೊರೆಗಳ ಆಲೋಚನೆಯು ಮಾರ್ಗ ಮಾಡಿದರೆ ಬಂದೇ ಮಾರ್ಗದಲ್ಲಿ ಗಾಡಿಗಳೂ ಮೋಟಾರುಗಳೂ ಸೈಕಲುಗಳೂ ಜನರೂ ಆಚೆ ಈಚೆ ದಾಟುವಾಗ ಆಗುವ ಅಭ್ಯಂತರಗಳು ತಪ್ಪಿದ ಹಾಗೆ ಆಗುತ್ತಿತ್ತು.

ಇಲ್ಲಿಯ ಬೋರ್ಡು ಶಾಲೆಯ ಹಿತ್ತಲಲ್ಲಿ ಬಾವಿಗೆ ಆವರ್ಣ ಇಲ್ಲದೆ ಇರುವದರಿಂದ ಮಕ್ಕಳ ಹೆತ್ತವರಿಗೆ ಬಹಳ ಭಯವಾಗಿದೆ. ಮತ್ತು ಆಡುವ ಸ್ಥಳಗಳಲ್ಲಿ ಕಲ್ಲುಗಳೂ, ಹಂಚಿನ ಚೂರು ಮುಂತಾದವು ವಿಶಾಲವಾಗಿ ಸರಿಪಡಿಸದೆ ಇದ್ದುದರಿಂದ ಮಕ್ಕಳಿಗೆ ಬಹಳ ತೊಂದರೆ ಆಗಿದೆ. ಶಾಲೆಯ ಕಂಪೌಂಡಿಗೆ ಬೇಲಿಯಾಗಲಿ, ಗೋಡೆಯಾಗಲಿ ಅಗತ್ಯವಾಗಿದೆ. ಅಷ್ಟು ನಾಯ್ಕರ ಓಣಿಯ ಮಾರ್ಗವನ್ನು ಎತ್ತರಿಸಬೇಕೆಂದು ಇಲ್ಲಿಗೆ ಮಾನ್ಯ ಪ್ರೆಸಿಡೆಂಟರು ಬಂದಾಗ್ಗೆ ಅದು ಕಾಡೆ ದೇವಳದ ಆಡಳಿತೆದಾರರು ಪ್ರಸ್ತಾಪಿಸಿ ಸಂಕದ ವರೆಗೆ ಬೋರ್ಡಿನವರು ಏರಿಸಿ ಕೊಡುವುದಾದರೆ ಅದರ ಆಚೆಗೆ ದೇವಸ್ಥಾನದವರು ಎತ್ತರಿಸಿ ಕೊಡುತ್ತೇವೆಂತ ಸಂಭಾಷಣೆ ಆಗಿತ್ತು. ಇದರ ಫಲಿತಾಂಶ ಇನ್ನೂ ಹೊರಡಲಿಲ್ಲ. ನೋಡಲಿಕ್ಕಿದೆ.

ಬ್ರಾಂಬಿಲ:— ಇಲ್ಲಿ ಕುರಾಲರ ಯಾನೆ ಮಾಳ್ಯರ ಮಹಾಸಭೆಯು ಜರಗಿತು. ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ಸುಮಾರು ೩೦೦ ಮಂದಿ ಗೃಹಸ್ಥರು ಕೂಡಿದ್ದರು. ಇದರಲ್ಲಿ ಆ ಕುರಾಲರ ಜಾತಿ ತಪ್ಪಿನ ಒಂದು ಪುಸ್ತಕ ಅಚ್ಚು ಹಾಕಿಸಬೇಕೆಂದೂ ಜಾತಿಯ ಹೆಂಗಸರು ಬೇರೆ ಜಾತಿಯವರ ಮನೆಗಳಲ್ಲಿ ಕೆಲಸಕ್ಕೆ ಹೋಗುವದನ್ನು ಮಾನ್ಯಮಾಡಬೇಕೆಂದೂ, ಗದ್ದೆಗೆ ಹೋಗಿ ಕಳ್ಳು ಕದಿಯು ಕಾಡಿಯ ಬಾರದೆಂದೂ ಗಡಂಗುಗಳಲ್ಲಿ ಪದಾರ್ಥವನ್ನು ಮಾರಲಿಕ್ಕೆ ಕುರಾಲರ ಹೆಂಗಸರಾಗಲಿ ಗಂಡಸರಾಗಲಿ ಕೂತುಕೊಳ್ಳಬಾರದೆಂದೂ ಠರಾವುಗಳು ಪಾಸಾದವು.

ತಾಲೂಕು ಬೋರ್ಡುಗಳಲ್ಲಿಯೂ, ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿಯೂ ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲುಗಳಲ್ಲಿಯೂ ಮುನ್ಸಿಪಾಲಿಟಿಗಳಲ್ಲಿಯೂ ಕುರಾಲರ ಮೆಂಬರರನ್ನು ನೇಮಕ ಮಾಡುವಂತೆ ಸರಕಾರವನ್ನು ಕೇಳಿಕೊಳ್ಳಬೇಕೆಂದೂ ಕೆಲಕಾಲ ವಿದ್ಯಾಭ್ಯಾಸವನ್ನು ಕಾಲೇಜು ವಿದ್ಯಾಭ್ಯಾಸವನ್ನು ಧರ್ಮಾರ್ಥವಾಗಿ ಕುರಾಲರಿಗೆ ಕೊಡಬೇಕೆಂದು ಸರಕಾರವನ್ನು ಕೇಳಬೇಕೆಂದು ಠರಾವು ಪಾಸಾದವು.

ಅನುಕ್ರಮಣಿಕೆ.

ಅಗ್ರಲೇಖ:—	ಪುಟಗಳು.
ಕರ್ನಾಟಕ ಏಕೀಕರಣದ ಚಳವಳ	೬
ನಾಣ್ಯ ಚಲಾವಣೆಯ ಕಮ್ಮಿಶನ್ನು	"
ಸ್ಫುಟವಿಚಾರಗಳು	೭
ವರ್ತಮಾನಸಂಗ್ರಹಗಳು—	
ವಿದೇಶ – ಒಳದೇಶ ವರ್ತಮಾನ	"
ದಕ್ಷಿಣ ಕನ್ನಡ – ಬಂಟವಾಳ, ಬಾಂಬಿಲ, ಕುಂದಾಪುರ, ಕುಂಬಳೆ, ಪುಂಜಾಲಕಟ್ಟೆ	೫
ಮಂಗಳೂರು	"
ನೆರೆಯ ಹಾವಳಿಯಿಂದ ಬಂಟವಾಳ, ಪಾಣೆಮಂಗಳೂರನ್ನು ಉಳಿಸುವ ಉಪಾಯ	೮
ಗೀತಾಧರ್ಮ ಮಂಡಳ	"
ವಿವಿಧ ವಿಷಯ	"
ಕನ್ನಡ ಸಣ್ಣ ಕಥೆಗಳ ಸ್ಪರ್ಧೆ	೪
ಚಿಕ್ಕಾಡು	"

ಸ್ವದೇಶಾಭಿಮಾನಿ.

ಶಕ ೧೮೪೭ ಮಾರ್ಗಶಿರ ಶು॥೪ಯು ಶುಕ್ರವಾರ.

ಕರ್ಣಾಟಕ ಏಕೀಕರಣದ ಚಳವಳ.

ಲೇಖಾಂಕ ೨.

ಕರ್ನಾಟಕ ಏಕೀಕರಣದ ಆಶಯವು ನಾಗಪೂರ ಕಾಂಗ್ರೆಸ್ಸಿನಲ್ಲಿ ಕಾರ್ಯತಃ ರೂಪು ಹೊಂದಿತು. ಕಾಂಗ್ರೆಸ್ಸು ಭಾಷಾವಾರು ಪ್ರಾಂತಿಕ ವಿಭಾಗವನ್ನು ಮಾನಿಸಿತು. ಕರ್ನಾಟಕದ ವಿಶಾಲ ರಾಜ್ಯವನ್ನೂ ಮಾನಿಸಿತು. ಸಂಶಯಕರವಾದ ಗಡಿ ಪ್ರದೇಶಗಳನ್ನು ಯಾವ ಪ್ರಾಂತಕ್ಕೆ ಸೇರಿಸಬೇಕೆಂಬ ವ್ಯಾಜ್ಯವೂ ನಡೆದು, ಅನ್ಯೋನ್ಯದಿಂದ ಕಾಂಗ್ರೆಸ್ ನ್ಯಾಯಸ್ಥಾನದಲ್ಲಿ ತೀರ್ಮಾನವನ್ನು ಹೊಂದಿತು. ಕರ್ನಾಟಕದ ಎಲ್ಲೆಯು ಹಾಕಲ್ಪಟ್ಟಿತು. ಕರ್ನಾಟಕವು ಒಂದು—ಹಲವಲ್ಲ—ಎಂಬ ಭಾವನೆಯು ಸ್ಪಷ್ಟವಾಯಿತು.

ಕಾಂಗ್ರೆಸ್ಸಿನ ಉತ್ತೇಜಕ ಚಳವಳದೊಡನೆ ಕರ್ನಾಟಕದ ಸಂಘಟನೆಯು ಸ್ಥಾಪಿತವಾಯಿತು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸ್ಥಾಪನೆಯೊಡನೆ, ಕರ್ನಾಟಕದ ರಾಜಕೀಯ ಧುರೀಣರ ಸಾಹಸದೊಡನೆ, ಕರ್ನಾಟಕದ ಎಲ್ಲೆಡೆಯಲ್ಲಿಯು ಕಾಂಗ್ರೆಸ್ ಕಮಿಟಿಗಳು ನಿರ್ಣಯಿಸಲ್ಪಟ್ಟು ರಾಜಕೀಯ ಕೆಲಸವು ಬಹಳ ವೇಗವಾಗಿ ನಡೆಯ ತೊಡಗಿತು. ಈ ಚಳವಳದ ಫಲವಾಗಿಯೇ ಕರ್ನಾಟಕವು ಪ್ರಾಂತಿಕ ಪ್ರೇಮವು ಪ್ರಸಾರ ಹೊಂದಿತು. ಮತ್ತು ಕರ್ನಾಟಕ ಗೀತೆಯೊಡನೆ ಅದು ಸ್ಥಿರ ಹೊಂದಿತು.

ಕರ್ನಾಟಕದ ಅಸಹಕಾರ ಚಳವಳವು ಕರ್ನಾಟಕದ ಏಕೀಕರಣದ ಪರಿಣಾಮಕಾರಿಯಾದ ಅತೀ ಮುಖ್ಯವಾದ ದ್ವಿತೀಯಾಂಕವಾಗುವುದು. ಆ ಸಮಯದಲ್ಲಿಯೇ, ಎನ್ನಬಹುದು, ಕರ್ನಾಟಕದ ವೈಶಿಷ್ಟ್ಯವು ಪ್ರಕಟಿತವಾಗಿ, ಕರ್ನಾಟಕದ ಅಖಂಡತೆಯು ಪ್ರದರ್ಶಿಸಲ್ಪಟ್ಟಿತು.

ಈಗ ನಾವು ಕರ್ನಾಟಕ ಏಕೀಕರಣದ ಮೂರನೇ ಅಂಶವನ್ನು ಸೇರಿರುವೆವು. ಈ ಅಂಕದಲ್ಲಿ ನಮ್ಮ ಅಭಿನಯದ ಪೂರ್ಣತೆಯೇ ಶಾಶ್ವತವಾದ ಪರಿಣಾಮವನ್ನುಂಟುಮಾಡಬಲ್ಲುದು. ಕರ್ನಾಟಕದ ಪ್ರಮುಖ ಧುರೀಣರೂ, ಲೇಖಕರೂ, ಸಾಹಿತ್ಯಸೇವಕರೂ ಈ ಪ್ರಶ್ನೆಯನ್ನು ಹಿಡಿದೆತ್ತಿದ್ದು ಆಶಾಜನಕವಾಗಿದೆ.

ಆದರೆ ಆಂಧ್ರದ ವಿಶ್ವವಿದ್ಯಾಲಯದ ಸೃಷ್ಟನೆಯ ಮಧ್ಯದಲ್ಲಿ ಬಂದೊದಗಿದ ವಿಪತ್ತು ಕರ್ನಾಟಕದ ಮೇಲೆ ಯಾವ ಪರಿಣಾಮವನ್ನುಂಟು ಮಾಡಿಯದೆಂದು ಇನ್ನೂ ತಿಳಿದಿಲ್ಲ. ಏನಿಲ್ಲದಿದ್ದರೂ, ಈ ವಿಷಯವು ಕರ್ನಾಟಕ ಮುಖಂಡರ ಸಮ್ಮಿಲನದ, ಸಮಾಲೋಚನೆಯ ಮತ್ತು ಬಲವಾದ ಒಂದು ಕಾರ್ಯಕ್ರಮದ ನಿರ್ಮಾಣದ ಅವಶ್ಯಕತೆಯನ್ನು ಸೂಚಿಸುತ್ತಿದೆ. ಆ ಕಾರ್ಯಕ್ರಮವೇನು? ಎಂಬುದನ್ನು ಪ್ರತಿ ಒಬ್ಬರೂ ಅವಶ್ಯವಾಗಿ ಆಲೋಚಿಸಬೇಕು.

ಕರ್ನಾಟಕವನ್ನು ಏಕೀಕರಿಸುವುದು ಹೇಗೆ? ಬ್ರಿಟಿಷ ಆಡಳಿತೆಗೆ ಒಳಗಾದರೂ ಬೇರೆ ಬೇರೆ ಪ್ರಾಂತಕ್ಕೆ ಹಂಚಿ ಹೋದ ಕರ್ನಾಟಕವನ್ನು ಏಕೀಕರಿಸುವುದು ಹೇಗೆ? ಬ್ರಿಟಿಷ ಕರ್ನಾಟಕವನ್ನೂ ಮೈಸೂರು ಕರ್ನಾಟಕವನ್ನೂ ಏಕೀಕರಿಸುವುದು ಹೇಗೆ? ಇದರೊಡನೆ ನೈಜಾಮು ಕರ್ನಾಟಕವನ್ನು ಹೇಗೆ ಸೇರಿಸಲಿ? ಎಂಬಿತ್ಯಾದಿ ಪ್ರಶ್ನೆಗಳು ಹಲವು ಕಾಲದಿಂದ ಕರ್ನಾಟಕ ಧುರೀಣರನ್ನು ಚಿಂತೆಗೊಳಿಸಿದುವು.

ಬ್ರಿಟಿಷ ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವಾಗಿ ವಿಭಾಗಿಸಬೇಕೆಂದೂ, ಅದಕ್ಕೆ ಪ್ರತ್ಯೇಕ ಗವರ್ನರರೂ, ಪ್ರತ್ಯೇಕ ನ್ಯಾಯವಿಧಾಯಕ ಸಭೆಯು ಇರಬೇಕೆಂದೂ, ಹೀಗೆ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ಕೂಡಿದ ನ್ಯಾಯವಿಧಾಯಕ ಸಭೆಯ ಮೇಲೆ ಮೈಸೂರು ಮಹಾರಾಜರನ್ನೇ ಗವರ್ನರರಾಗಿ ಮಾಡಬೇಕೆಂದೂ, ಹೀಗೆ ಮಾಡಿದ ಆ ಮೈಸೂರು ಅರಸುತನಕ್ಕೆ ಬಾಧೆ ಬಾರದೆ ಮಹಾರಾಜರಡಿಯಲ್ಲಿ ಮೈಸೂರು ಬ್ರಿಟಿಷ ಆಡಳಿತವು ಮಹಾರಾಜರ ಅಡಿಯಲ್ಲಿಯೇ ನಡೆಯುವಂತಿದ್ದ ಬ್ರಿಟಿಷ ಕರ್ನಾಟಕ ಇವೆರಡನ್ನು ಏಕೀಕರಿಸಿದಂತಾಗುವುದು ಎಂದು ಒಂದು ಸೂಚನೆಯು ಬಂದಿದೆ.

ಆದರೆ ಇದು ಸಾಧ್ಯವೆಂತ ನಮಗೆ ಕಂಡುಬರುವುದಿಲ್ಲ. ಮಹಾರಾಜರ ಆಳುವಿಕೆಗೂ ಗವರ್ನರರ ಆಳುವಿಕೆಗೂ ತಾರತಮ್ಯ ಉಂಟು. ಮತ್ತು ಅರಸುತನದ ಪಿತ್ರಾರ್ಜಿತ ಹಕ್ಕಿನಲ್ಲಿ, ಗವರ್ನರರು ನೇಮಕವಾಗುವುದು ಉತ್ತಮ ಆಳುವಿಕೆಗೆ ಸರಿಯಾಗುವುದಲ್ಲ. ಮಹಾರಾಜರಿಗಾದರೂ ಗವರ್ನರರಂತೆ ಆಳಲಿಕ್ಕೂ ಸಾಧ್ಯವಾಗಲಿಕ್ಕಿಲ್ಲ. ಒಂದು ಕಡೆಯಲ್ಲಿ ಗವರ್ನರರಾಗಿ ಜನತೆಯ ಮನ್ನಣೆ ಖಂಡನೆಗಳಿಗೆ ಪಾತ್ರವಾಗುವುದೂ, ಇನ್ನೊಂದು ಕಡೆಯಲ್ಲಿ ರಾಜತ್ವದಿಂದ ಅಮಿತ ಅಧಿಕಾರದಿಂದಿರುವುದೂ ಒಬ್ಬರಿಗೂ ಸಾಧ್ಯವಿಲ್ಲ. ಈ ಸೂಚನೆಯನ್ನೆಬ್ಬಿಸಿದವರು ಅದನ್ನು ಬಿಟ್ಟುಬಿಡಲೇ ಬೇಕು. ಒಂದು ಪಕ್ಷಕ್ಕೆ ಬ್ರಿಟಿಷ ಕರ್ನಾಟಕವನ್ನು ಮೈಸೂರಿಗೆ ಬಿಟ್ಟುಕೊಡಬಹುದೆಂದೂ ಆಲೋಚನೆಯು ಬರಬಹುದು. ಆದರೆ ಬ್ರಿಟಿಷ ಕರ್ನಾಟಕಸ್ಥರು ಅದನ್ನು ಸಂಪೂರ್ಣ ನಿರೋಧಿಸದೆ ಇರಲಾರರು. ಕರ್ನಾಟಕದ ಏಕೀಕರಣವನ್ನು ಇತರ ಉಪಾಯಗಳ ಮೂಲಕ ಸಾಧಿಸಬೇಕು.

ನಾಣ್ಯ ಚಲಾವಣೆಯ ಕಮ್ಮಿಶನ್ನು.

The Currency Commission.

ಸರಕಾರವು ವರ್ಷ ವರ್ಷವೂ ಕೋಟಿಗಟ್ಟಲೆ ಏವೇಜಿನಷ್ಟು ರೂಪಾಯಿಯನ್ನೂ ನೋಟುಗಳನ್ನೂ ತಯಾರಿಸುತ್ತಿದೆ. ಸರಕಾರವು ತಯಾರಿಸುವ ರೂಪಾಯಿಯಲ್ಲಿ ಬರೇ ೧೦॥ ಆಣೆಯಷ್ಟು ಬೆಳ್ಳಿ ಇದ್ದು, ಬಾಕಿ ೫॥ ಆಣೆಯ ಮೌಲ್ಯವು ಸರಕಾರದ ಜವಾಬ್ದಾರಿಯಲ್ಲಿ ಸರಕಾರಕ್ಕೆ ಪ್ರಜೆಗಳಿಂದ ಸಾಲ ಸಲ್ಲುತ್ತಿದೆ; ಅಂದರೆ ಜನರೊಡನಿರುವ ಪ್ರತಿ ರೂಪಾಯಿಯಲ್ಲಿ ೫॥ ಆಣೆಯ ಮೌಲ್ಯವು ಸರಕಾರಕ್ಕೆ ಸಾಲವಾಗಿ ಸಿಕ್ಕುತ್ತದೆ. ಹಾಗೆಯೇ ನೋಟುಗಳ ಬರೇ ಕಾಗದದ ಚೂರುಗಳಾಗಿದ್ದು, ಸರಕಾರ ಜವಾಬ್ದಾರಿಯಿಂದಲೇ ಅವುಗಳಿಗೆ ಮೌಲ್ಯವು ಇದೆ. ಈ ಜವಾಬ್ದಾರಿಯು ಅನೇಕ ಕೋಟಿ ರೂಪಾಯಿಯಷ್ಟಾಗುತ್ತದೆ. ಆದುದರಿಂದ ಈ ಸರಕಾರದ ಈ ಜವಾಬ್ದಾರಿಯು ಎಷ್ಟು ಭದ್ರವಿದೆಯೊ ಅಷ್ಟು ಮೌಲ್ಯ ರೂಪಾಯಿಗೆ ಪರದೇಶದವರು ಕೊಡುತ್ತಾರೆ.

ಸಾಮಾನ್ಯವಾಗಿ ವಿಲಾಯತಿಯಲ್ಲಿ ಎಲ್ಲಾ ನಾಣ್ಯಗಳು ಭಂಗಾರದ ಮೇಲೆಯೆ ಆದರಿಸಿವೆ. ಅಂದರೆ ಅವರ ಮುಖ್ಯ ನಾಣ್ಯವು ಬಂಗಾರದ್ದಾಗಿದೆ. ಆದುದರಿಂದ ಅಂತರಾಷ್ಟ್ರೀಯ (ರಾಷ್ಟ್ರ ರಾಷ್ಟ್ರಗಳೊಳಗಿನ) ವ್ಯಾಪಾರದಲ್ಲಿ, ಜೀನಸುಗಳ ಮೌಲ್ಯವನ್ನು ಕಟ್ಟಲಿಕ್ಕೆ, ಅವರವರ ನಾಣ್ಯಗಳ ಬೆಲೆಯ ಸಂಬಂಧವು ಹೆಚ್ಚಾಗಿ ಸ್ಥಿರವಾಗಿಯೇ ಇರುತ್ತದೆ.

ಹಿಂದೂಸ್ಥಾನದ ನಾಣ್ಯವು ಬೆಳ್ಳಿಯದಾಗಿದ್ದು, ಬೆಳ್ಳಿಯ ಕ್ರಯವು ಆಗಾಗ ಹೆಚ್ಚುಕಡಿಮೆಯಾಗುವುದರಿಂದ ಫಲವಾಗಿ ರೂಪಾಯಿಯ ಬೆಲೆಯೂ ಹೆಚ್ಚುಕಡಿಮೆಯಾಗುತ್ತಿದೆ. ಮತ್ತು ರೂಪಾಯಿಯ ನಾಣ್ಯದಲ್ಲಿಯೂ ಅದರ ಬೆಲೆಯಷ್ಟು ಬೆಳ್ಳಿಯಿಲ್ಲದಿರುವುದರಿಂದ ಅದರ ಬೆಲೆಯು ಸ್ಥಿರವಾಗಿ ಇರುವುದಿಲ್ಲ.

ರೂಪಾಯಿಯ ಬೆಲೆಯು ಬೆಳ್ಳಿಯ ಬೆಲೆಯ ಏರಿಳಿತಕ್ಕೇನೆ ಬಿಟ್ಟದ್ದಾದರೆ ಚಿಂತೆಯಿರಲಿಲ್ಲ. ಆದರೆ ಸರಕಾರವು ರೂಪಾಯಿಯ ಬೆಲೆಯನ್ನು ನಿರ್ಣಯಿಸುವ ಶಕ್ತಿಯುಳ್ಳದ್ದಾದರಿಂದ ರೂಪಾಯಿಯ ಬೆಲೆಯನ್ನು ಸರಕಾರವು ಸ್ವೇಚ್ಛೆಯಂತೆ ಏರಿಸಿ ಅಥವಾ ಇಳಿಸಿ ಹಿಂದೂಸ್ಥಾನಕ್ಕೂ ಪರದೇಶಗಳಿಗೂ ಇರುವ ವ್ಯಾಪಾರಗಳೊಳಗೆ ಬಹಳ ತೊಂದರೆಗಳನ್ನು ಉಂಟುಮಾಡುತ್ತದೆ.

ಹಿಂದೂಸ್ಥಾನದ ಸರಕಾರದ ಹಣವು ಲಂಡನಿನ ಇಂಡಿಯಾ ಆಫೀಸಿನಲ್ಲಿ ಜಮೆಹೊಂದುತ್ತಿದೆ; ಅಲ್ಲದೆ ಹಿಂದೀ ಕರೆನ್ಸಿ ನೋಟುಗಳ ಭದ್ರತೆಯ ಹಣವೂ ಇಂಗ್ಲೆಂಡಿನಲ್ಲಿಯೇ ಇದೆ. ಅಲ್ಲದೆ ಆಗಾಗ ಸರಕಾರಕ್ಕೆ ಹಿಂದೀ ಸರಕಾರದ ಮಾಜಿ ನೌಕರರಿಗೆ ಹಣ ಕಳುಹಿಸುವ ಅವಶ್ಯಕತೆ ಇರುತ್ತದೆ. ಈ ಕಾರಣಗಳಿಂದ ಹಿಂದೀ ಸರಕಾರವು ಇಂಗ್ಲೀಷ ಪವನುಗಳನ್ನು ಕೊಳ್ಳುವದಂಥಾದ್ದೂ ಮಾರುವಂಥಾದ್ದೂ ಒಂದು ಸಂಸ್ಥೆಯಾಗಿದೆ. ಆದುದರಿಂದ ಸಾಮಾನ್ಯ ವ್ಯಾಪಾರದ ವಹಿವಾಟುಗಳಿಂದಲೇ ಪವನುಗಳ ರೂಪಾಯಿ ಬೆಲೆಯಾಗಲಿ, ರೂಪಾಯಿಗಳ ಪವನು ಬೆಲೆಯಾಗಲಿ ನಿರ್ಣಯವಾಗತಕ್ಕದ್ದು ಈಗ ಸರಕಾರದ ಸ್ವೇಚ್ಛೆಯಿಂದಲೇ ನಿರ್ಣಯಿಸಲ್ಪಡುತ್ತಿದೆ.

ಯುದ್ಧದ ಪೂರ್ವದಲ್ಲಿ ಪವನಿನ ಬೆಲೆಯು ಹದಿನೈದು ರೂಪಾಯಿ ಇದ್ದಿತು. ಯುದ್ಧದಲ್ಲಿ ಆಖೈರಿಯ ಸಮಯದಲ್ಲಿ ಹಿಂದೀ ಸರಕಾರಕ್ಕೆ ಪವನಿಗೆ ಹತ್ತು ರೂಪಾಯಿ ಇಡುವ ಆಲೋಚನೆಯಾಯಿತು; ಮತ್ತು ಈ ಉದ್ದೇಶದಿಂದ ರಿವರ್ಸ್ ಕೌನ್ಸಿಲ್ ಬಿಲ್ಸ ಎಂದು ಇಂಡಿಯಾ ಆಫೀಸಿನಲ್ಲಿ ಪವನಿನ ರೂಪದಲ್ಲಿ (ಪವನಿಗೆ ಹದಿನೈದು ರೂಪಾಯಿಯಂತೆ) ಇದ್ದ ತನ್ನ ಹಣವನ್ನು ಹಿಂದೂಸ್ಥಾನದಲ್ಲಿ ಮಾರಲಾರಂಭಿಸಿತು. ಪವನಿನ ಬೆಲೆಯು ಕಾರಣದಿಂದ ತಗ್ಗಿತು. ಹದಿನೈದು ರೂಪಾಯಿಯ ಪವನು ೭ರಿಂದ ೧೧ ರೂಪಾಯಿಯ ವರೆಗೆ ಸರಕಾರದಿಂದ ಮಾರಲ್ಪಟ್ಟಿತು. ಹಿಂದೂಸ್ಥಾನಕ್ಕೆ ಈ ಒಂದು ಕಾರಣದಿಂದ ೪೩ ಕೋಟಿ ರೂಪಾಯಿ ವೆಚ್ಚವಾಯಿತು.

ಆದರೆ ಪವನಿನ ಬೆಲೆಯು ೧೦ ರೂಪಾಯಿಗೆ ನಿಲ್ಲಲಿಲ್ಲ. ಸರಕಾರವು ತನ್ನ ಕೈಯನ್ನು ನಿಲ್ಲಿಸಿದ ಕೂಡಲೆ, ವ್ಯಾಪಾರದ ಕಾರಣಗಳಿಂದ ಪವನಿನ ಬೆಲೆಯು ಏರಿತು. ಮತ್ತು ೧೯೨೪ನೇ ಜನವರಿಯಲ್ಲಿ ಅದು ೧೭॥ ರೂಪಾಯಿಯಷ್ಟು ನಿಂತಿತು. ಇದರ ಮಧ್ಯದಲ್ಲಿ ಸರಕಾರವು (ಪವನಿಗೆ ೧೦ ರೂಪಾಯಿ ಬೆಲೆ ನಿಲ್ಲುವಂತೆ) ಹಿಂದೂಸ್ಥಾನದ ನಾಣ್ಯಗಳ ಪರಿಸ್ಥಿತಿಯನ್ನು ಹೇಗೆ ಸುಧಾರಿಸಬಹುದೆಂದು ಒಂದು ಕಮ್ಮಿಶನ್ನು ಮಾಡಿದರು. ಇದರೊಳಗಿನ ಎಲ್ಲಾ ವಿಲಾಯತಿ ಮೆಂಬರರು ಪವನಿಗೆ ಹತ್ತು ರೂಪಾಯಿಯಂತೆ ನಿರ್ಣಯಿಸಬೇಕಾಗಿ ಹೇಳಿದರು. ಆದರೆ ಶ್ರೀ. ದಲಾಲರೆಂಬ ಪಾರ್ಸಿ ಜಾತಿಯ, ಕಮ್ಮಿಶನ್ನಿನ ಮೆಂಬರರು, ಹೀಗೆ ಮಾಡಿದರೆ ಹಿಂದೂಸ್ಥಾನಕ್ಕೆ ಉಂಟಾಗುವ ನಷ್ಟವನ್ನು ವಿವರಿಸಿ ಪವನಿಗೆ ಹದಿನೈದೇ ರೂಪಾಯಿಯಂತೆ ನಾಣ್ಯ ಬದಲಾವಣೆಯಾಗಬೇಕೆಂದು ತಮ್ಮ ಪ್ರತ್ಯೇಕ ಮತವನ್ನು ಒಬ್ಬಂಟಿಗರಾದರೂ ಧೈರ್ಯದಿಂದ ಹೇಳಿದರು. ಸರಕಾರವು ದಲಾಲರ ಮಾತನ್ನು ಲಕ್ಷಿಸಲಿಲ್ಲ. ಅವರು ಪವನಿಗೆ ಹತ್ತೇ ರೂಪಾಯಿಯಾಗಿ ನಿಲ್ಲಿಸುವಂತೆ ಪ್ರಯತ್ನಿಸುತ್ತಿದ್ದರು.

ಈ ನಾಣ್ಯಗಳ ಸಮಸ್ಯೆಯು ಇನ್ನೂ ತೀರಿಲ್ಲ. ಸರಕಾರ ಇಚ್ಛಿಸಿದಂತೆ ಆಗುವುದಿಲ್ಲ; ಜನರಿಗೆ ಹಿತವಾಗುವಂತೆ ಮಾಡುವುದಕ್ಕೆ ಅದರ ಅಂತರ್ಯದ ಉದ್ದೇಶವು ಬಿಡುವುದಿಲ್ಲ. ಈ ಕಾರಣದಿಂದ ಅವರು ಈಗ ಹೊಸದೊಂದು ರೊಯಲ್ ಕಮ್ಮಿಶನ್ನು ಮಾಡಿದ್ದಾರೆ. ಇದರಲ್ಲಿ ಇಂಗ್ಲೀಷ ಸದಸ್ಯರು ಮತ್ತು ನಾಲ್ಕು ಹಿಂದೀ ಸದಸ್ಯರಿರುವರು. ಈ ನಾಲ್ಕು ಹಿಂದೀ ಸದಸ್ಯರೊಳಗೆ ಮೂವರು ಹೌದಪ್ಪನವರು. ಉಳಿದ ಒಬ್ಬರಿಂದ ಏನಾದೀತು? ಈ ಕಮ್ಮಿಶನ್ನಿನ ತೀರ್ಮಾನವು ಹಿಂದೂಸ್ಥಾನಕ್ಕೆ ಅಹಿತಕರದ್ದೇ ಆಗುವುದೆಂದು ಮುಂಬಯಿಯ ವರ್ತಕ ಸಂಘವೂ, ಇತರ ಪ್ರಮುಖ ವರ್ತಕ ಸಂಘಗಳೂ, ಸಾಮಾನ್ಯ ಜನರೂ ಅಭಿಪ್ರಾಯ ಪಟ್ಟಿದ್ದಾರೆ; ಮಾತ್ರವಲ್ಲದೆ ಇದನ್ನು ಬಹಿಷ್ಕರಿಸಬೇಕಾಗಿಯೂ ಚಳವಳವಿದೆ.

ಪವನಿಗೆ ಹತ್ತು ರೂಪಾಯಿ ನಿಶ್ಚಯಿಸುವುದರಿಂದ ಸರಕಾರಕ್ಕೆ ಪ್ರಯೋಜನವು ಎಂದು ತೋರಿದೆ. ಸರಕಾರದ ನೌಕರರಾಗಿ ಇಲ್ಲಿದ್ದು ಆ ಮೇಲೆ ವಿಲಾಯತಿಗೆ ಹೋದ ಪೆನ್ಶನದಾರರಿಗೆ ರೂಪಾಯಿ ಸಂಖ್ಯೆಯಲ್ಲಿ ಸರಕಾರವು ಪೆನ್ಶನ ಕೊಡುವುದು. ಇದನ್ನು ಪವನಾಗಿ ಕಳುಹಿಸುವಾಗ ಅದು ಪೆನ್ಶನದಾರರಿಗೆ ಒಂದಕ್ಕೆ ಒಂದುವರೆ ಪಾಲಿನಂತೆ ಸಿಕ್ಕುವುದು. ಇನ್ನು ಇನ್ನೊಂದೇನಂದರೆ ಪವನಿಗೆ ಬೆಲೆ ಕಡಿಮೆ ಇದ್ದುದರಿಂದ, ಪವನಿನಲ್ಲಿ ಬೆಲೆ ಕಟ್ಟಲ್ಪಡುವ, ಹಿಂದೂಸ್ಥಾನಕ್ಕೆ ಬರುವ ಇಂಗ್ಲೀಷ ಸಾಮಾನುಗಳು ಹಿಂದೂಸ್ಥಾನದಲ್ಲಿ ರೂಪಾಯಿಗೆ ೫ ಆಣೆ ೪ ಪೈಯಂತೆ ಅಗ್ಗವಾಗುವವು. ಆದುದರಿಂದ ವಿಲಾಯತಿ ವ್ಯಾಪಾರವು ಬೆಳೆಯುವುದು. ಅವರ ಸಾಮಾನು ಅಗ್ಗವಾಗಿ ತಗ್ಗಿದ ಬೆಲೆಯ ನಷ್ಟವು ಅವರಿಗೆ ಬೀಳುವುದಿಲ್ಲ. ಅದರ ನಷ್ಟವನ್ನು ಇಲ್ಲಿಂದ ಪರದೇಶಕ್ಕೆ ಕಳುಹಿಸುವ ಮ್ಯಾಲಿನ ವಿಕ್ರೇತರು ತಮ್ಮ ಕೈಯಿಂದ ಕೊಡಬೇಕು. ಏಕೆಂದರೆ ಪವನಿಗೆ ಕೊಡಬೇಕಾದ ಮ್ಯಾಲನ್ನು ಪರದೇಶಕ್ಕೆ ಅಷ್ಟೇ ಬೆಲೆಗೆ ಕೊಡಬೇಕಾಗುತ್ತದೆ. ಆದರೆ ನಮಗೆ ಹದಿನೈದು ರೂಪಾಯಿಗೆ ಸಿಕ್ಕುವ ಬದಲಿಗೆ ಬರೇ ಹತ್ತು ರೂಪಾಯಿ ಸಿಕ್ಕುತ್ತದೆ. ಐದು ರೂಪಾಯಿ ನಮಗೆ ನಷ್ಟ.

ಆದರೆ ಸರಕಾರವೇನೂ ನಿಶ್ಚಯಮಾಡಿಕೊಂಡಂತೆ ತೋರುತ್ತಿದೆ. ಪವನಿಗೆ ಹತ್ತೇ ರೂಪಾಯಿ ನಿರ್ಣಯ ಮಾಡುವಂತೆ ತೋರುತ್ತಿದೆ. ಜನರಿಗೆ ನಂಬಿಕೆಯುಳ್ಳದ ಹಿಂದೀಯರನ್ನು ಸೇರಿಸಿ, ಇಂಗ್ಲೀಷ ಹಿತವನ್ನೇ ಈ ಸುಳ್ಳು ನೆವಗಳಿಂದ ಸಾಧಿಸುವಂತೆ ತೋರುತ್ತಿದೆ. ಕಳೆದ ಸೋಮವಾರ ಮದ್ರಾಸಿನಲ್ಲಿ ನೆರೆದ ಸಭೆಯಲ್ಲಿ ಬ್ರಾಹ್ಮಣೇತರ ಧುರೀಣರಾಗಿರುವ ಶ್ರೀ. ಚಾನಿಕಾಚಲಂ ಚೆಟ್ಟಿ ಇವರು "ಸರಕಾರದ ಈ ನಾಣ್ಯ ವಿಷಯಕ ಧೋರಣದಿಂದಲೇ ಕಳೆದ ಹತ್ತು ವರ್ಷಗಳಲ್ಲಿ ಒಳ್ಳೇ ಗೌರವವಿದ್ದ ಕೆಲವು ಸಾಹುಕಾರರೂ ಬೇಂಕುಗಳು ದಿವಾಳಿ ಹೋದರು. ನಾಣ್ಯಗಳ ಬೆಲೆಯ ಏರಿಳಿತವು ಹಿಂದೀ ವ್ಯಾಪಾರಿಗಳ ಬಹಳ ಬಹಳ ಕಷ್ಟಕ್ಕೆ ಗುರಿಮಾಡಿ, ಇಂಗ್ಲೀಷರ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿಗೊಳಿಸಿತು" ಎಂದು ಹೇಳಿದರು.

ಸ್ಫುಟವಿಚಾರಗಳು.

ಶ್ರೀಯುತ ಕೇಳ್ಕರ ಮತ್ತು ಜಯಕರರ ರಾಜಿನಾಮೆ.

ಶ್ರೀಯುತ ಕೇಳ್ಕರರೂ ಜಯಕರರೂ ಮರಾಠದ ಪ್ರಮುಖ ಧುರೀಣರು. ಶ್ರೀಯುತ ಕೇಳ್ಕರರು ಲೋಕಮಾನ್ಯ ಟಿಳಕರ ಜೀವಮಾನದಲ್ಲಿ ಅವರ ಬಲಗೈಯಾಗಿಯೂ, ಅವರ ಮರಣಾನಂತರ ಅವರ ಸ್ಮಾರಕರಾಗಿಯೂ ಇರುವಂತಹರು. ಸಮಗ್ರ ಮರಾಠವನ್ನು ಹಿಡಿದೆಚ್ಚರಿಸಿ ಶಕ್ತಿವಂತರಾಗಿ ಮಾಡಿದ, ಸಮಗ್ರ ಭಾರತದಲ್ಲಿ ನವಚೇತನವನ್ನುಸುರುವುದರಲ್ಲಿ ಮುಖ್ಯ ಕಾರಣರಾದ ಆ ಲೋಕಮಾನ್ಯರ ವಿಶ್ವಾಸದ ಶಿಷ್ಯರಾದ ಶ್ರೀಯುತ ಕೇಳ್ಕರರನ್ನೂ ಮರಾಠವೂ ಶ್ರದ್ಧೆಯಿಂದ ಅನುಸರಿಸುವುದೇನೂ ಆಶ್ಚರ್ಯವಲ್ಲ.

ಅಲ್ಲದೆ ಶ್ರೀಯುತ ಕೇಳ್ಕರರೂ ಅಷ್ಟೇ ಶ್ರದ್ಧೆಯಿಂದ ಲೋಕಮಾನ್ಯರ ಕೈಯಿಂದ ಬಿದ್ದ "ರಿಸ್ಪೊನ್ಸಿವ್ ಕೊ-ಒಪರೇಶನ್" ಎಂಬ ಶಬ್ದವನ್ನೆತ್ತಿ ಹಿಡಿಯುವುದೂ ಆಶ್ಚರ್ಯವಲ್ಲ. ಗಂಗಾಪುರ ಸ್ಟೇಷನಿನಲ್ಲಿ ಲೋಕಮಾನ್ಯರು ಈ ಶಬ್ದವನ್ನು ಬರೆದು ಚಕ್ರವರ್ತಿಯವರಿಗೆ ತಂತಿ ಬಿಟ್ಟಿದ್ದೇ ಈ ಶಬ್ದಕ್ಕೆ ಪಾವಿತ್ರ್ಯವನ್ನು ತರಲು ಶ್ರೀಯುತ ಕೇಳಕರರಿಗೆ ಸಾಕಾದ ಕಾರಣವಾಯಿತು!

ಮತ್ತು ಅದೇ ರಿಸ್ಪೊನ್ಸಿವ್ ಕೊ-ಒಪರೇಶನನ್ನು ಪಂಡಿತ ಮೋತಿಲಾಲರು ಖಂಡಿಸಿದರೆಂಬ ಕಾರಣದಿಂದ, ತಮಗೆ ಪವಿತ್ರವಾದ ಅಂತಹ ಮತವನ್ನು ಖಂಡಿಸಿದುದು ನ್ಯಾಯವಲ್ಲ, ನಾಗಪೂರದಲ್ಲಿ ಸೇರಿದ ಸ್ವರಾಜ್ಯ ಪಕ್ಷದ ಕಾರ್ಯನಿರ್ವಾಹಕರ ಸಭೆಯಲ್ಲಿ ಈ ರೀತಿಯ ಉಗ್ರಖಂಡನೆಯನ್ನು ಈ ರಿಸ್ಪೊನ್ಸಿವ್ ಕೊ-ಒಪರೇಶನಿನ ವಿರೋಧವಾಗಿ ಮಾಡಬಾರದೆಂಬ ಪಂಡಿತಜಿಯವರ ಒಪ್ಪಿಗೆ ಇತ್ತು, ಈಗ ಆ ರಾಜಿಗೆ ವಿರೋಧವಾಗಿ ಖಂಡಿಸಲು ತೊಡಗಿದ್ದಾರೆ, ಪರಿಸ್ಥಿತಿಯಲ್ಲಿ ತಾವು ತಮ್ಮ ಮತವನ್ನು ಈ ಖಂಡನೆಯಿಂದ ರಕ್ಷಿಸಿ ರಿಸ್ಪೊನ್ಸಿವ್ ಕೊ-ಒಪರೇಶನಿನ ತತ್ವವನ್ನು ಜಾಹೀರು ಪಡಿಸಿ ಜನಾಂಗವನ್ನು ಒಲಿಸುವುದು ತಮ್ಮ ಕರ್ತವ್ಯವದೆ ಎಂಬಿತ್ಯಾದಿ ಕಾರಣಗಳಿಂದ ತಾವು ಕಾರ್ಯನಿರ್ವಾಹಕ ಕಮಿಟಿಯ ಸದಸ್ಯತನಕ್ಕೆ ರಾಜಿಕೊಟ್ಟದ್ದೇವೆ, ಎಂದು ಶ್ರೀಯುತ ಕೇಳ್ಕರರೂ ಜಯಕರರೂ ತಿಳಿಸಿರುವರು.

ಮರಾಠದ ಈ ಧುರೀಣರು ಸ್ವರಾಜ್ಯ ಪಕ್ಷದ ಕಾರ್ಯನಿರ್ವಾಹಕ ಸಭೆಗೆ ಮಾತ್ರ ರಾಜಿ ಕೊಟ್ಟದ್ದಾರಲ್ಲದೆ ಸ್ವರಾಜ್ಯ ಪಕ್ಷದ ಸದಸ್ಯತನಕ್ಕೆ ರಾಜಿಕೊಟ್ಟಿಲ್ಲ.

ಕೇಳ್ಕರರಿಗೂ ಸ್ವರಾಜ್ಯ ಪಕ್ಷಕ್ಕೂ ಇರುವ ಮತಭೇದ ವೇನು?

ಆದರೆ ಆಶ್ಚರ್ಯವೇನಂದರೆ, ಶ್ರೀಯುತ ಕೇಳ್ಕರರ ರಿಸ್ಪೊನ್ಸಿವ್ ಕೊ-ಒಪರೇಶನ ಎಂಬ ತತ್ವದ ವಿವರಕ್ಕೂ, ಸ್ವರಾಜ್ಯ ಪಕ್ಷದ ಈಗಿನ ಕಾರ್ಯಕ್ರಮಕ್ಕೂ ಹೆಚ್ಚಿನ ತಾರತಮ್ಯವನ್ನು ಶ್ರೀಯುತ ಕೇಳ್ಕರರು ತೋರಿಸುವುದಿಲ್ಲ; ತಾರತಮ್ಯ ಇಲ್ಲವೆಂಬುದನ್ನು ಒಪ್ಪುವರು. ರಿಸ್ಪೊನ್ಸಿವ್ ಕೊ-ಒಪರೇಶನಿನ ತತ್ವದ ಮುಖ್ಯ ಸಾರಾಂಶವೆಂದರೆ—ಸರಕಾರವು ಸಹಕಾರಕ್ಕೆ ತಯಾರಿದ್ದರೆ, ಜನರೂ ಸರಕಾರದೊಡನೆ ಸಹಕರಿಸಬೇಕು; ಸರಕಾರವು ಜನರ ಆಶಯಗಳನ್ನು ಮಾನಿಸದಿದ್ದರೆ, ಜನರೂ ಸರಕಾರಕ್ಕೆ ನಿರೋಧವನ್ನು ಕಟ್ಟಬೇಕು.

ಸ್ವರಾಜ್ಯ ಪಕ್ಷವು ನಿರಂತರ ನಿರೋಧ (obstruction) ಎಂಬ ಧ್ಯೇಯವನ್ನಿಟ್ಟರೂ, ಕಾರ್ಯತಃ ಆ ತತ್ವವನ್ನೇ ಅನುಸರಿಸಿಯದೆ, ಕೌನ್ಸಿಲ್ ಮತ್ತು ಎಸೆಂಬ್ಲಿ ಅಧ್ಯಕ್ಷ ಪದವಿಗಳನ್ನು ಸ್ವೀಕರಿಸಿಯದೆ; ಕಮಿಟಿಗೆ ನೇಮಕಗಳನ್ನು ಒಪ್ಪಿಯದೆ. ಆದರೆ ಮಂತ್ರಿಪದವಿಯನ್ನು ಸ್ವೀಕರಿಸಿಲ್ಲ. ಶ್ರೀಯುತ ಕೇಳ್ಕರರೇ ಅವರ ರಿಸ್ಪೊನ್ಸಿವ್ ಕೊ-ಒಪರೇಶನಿನ ತತ್ವದ ಮಾನದಿಂದ ಕೂಡೆ ಮಂತ್ರಿಪದವಿಯ ತತ್ಕಾಲದ ಸ್ವೀಕಾರವು ಸರಿಯಲ್ಲವೆನ್ನುವರು, ಮಂತ್ರಿಪದವಿಯಿಂದ ಯಾವ ಕೆಲಸವನ್ನೂ ಮಾಡಲಿಕ್ಕೆ ಸಾಧ್ಯವಿಲ್ಲವೆಂದು ಮಂದ ಪಕ್ಷದ ಮಾಜಿ ಮಂತ್ರಿಗಳೇ ಹೇಳುವರು. ಫಲತಃ ಮಂತ್ರಿ ಪದವಿಯ ಅಧಿಕಾರಗಳು ಇನ್ನಷ್ಟು ಬೆಳೆದರೆ ಮಾತ್ರವೇ ಅದನ್ನು ರಿಸ್ಪೊನ್ಸಿವ್ ಕೊ-ಒಪರೇಶನಿನ ಕೇಳ್ಕರರ ತತ್ವಕ್ಕನುಸಾರವಾಗಿಯಾದರೂ ಸ್ವೀಕರಿಸಬಹುದು. ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದ ದೇಶಬಂಧುಗಳ ಅಭಿಪ್ರಾಯವೂ ಅದೇ ಇದ್ದಿತು. ಸ್ವರಾಜ್ಯ ಪಕ್ಷವು ಕೂಡ ಹೆಚ್ಚು ಅಧಿಕಾರವುಳ್ಳ ಮಂತ್ರಿಪದವಿಗಳನ್ನು ನಿರಾಕರಿಸುವುದಿಲ್ಲ, ಹಾಗಾದರೆ ಕೇಳ್ಕರರಿಗೂ ಸ್ವರಾಜ್ಯ ಪಕ್ಷಕ್ಕೂ ಇರುವ ಭೇದವೆಲ್ಲಿ?

ತತ್ವತಃ ಯಾವ ಭೇದವೂ ಇಲ್ಲ. ಇರುವುದು ಒಂದೇ ಭೇದ, ಹೆಸರಲ್ಲಿ. ಒಬ್ಬರು ಸ್ವರಾಜ್ಯ ಪಕ್ಷದ ಧ್ಯೇಯದ ಅರ್ಥ "ನೀವು ನಮಗೆ ಅಧಿಕಾರಗಳನ್ನು ಕೊಡದಿದ್ದರೆ ನಾವು ನಿಮ್ಮ ಸರಕಾರಕ್ಕೆ ಅಡ್ಡಂತರ ಹಾಕುವೆವು" ಎಂದು; ಕೇಳ್ಕರರ ತತ್ವದ ಹೆಸರಿನ ಅರ್ಥ "ನೀವು ನಮಗೆ ಅಧಿಕಾರ ಕೊಟ್ಟರೆ ನಾವು ನಿಮಗೆ ಒಲಿಯುವೆವು" ಎಂದು. ಒಂದು ಅಧಿಕಾರವನ್ನು ಕೇಳುವುದು; ಇನ್ನೊಂದು ಅಧಿಕಾರವನ್ನು ಬೇಡುವುದು. ಆದರೆ ಅಧಿಕಾರ ಕೊಡದಿದ್ದರೆ ಸರಕಾರವನ್ನು ಕಠಿಣವಾಗಿ ನಿರೋಧಿಸಬೇಕೆಂಬುದರಲ್ಲಿ ಇಬ್ಬರದೂ ಒಮ್ಮತವೆ.

ಕೇಳ್ಕರರಿಗೆ ಮಜ್ಜಿಗೆಯಲ್ಲಿ ಕಲ್ಲು ಹೇಗೆ ಬಂತು?

ತತ್ವತಃ ಕೇಳ್ಕರರ ತತ್ವಕ್ಕೂ ಸ್ವರಾಜ್ಯ ಪಕ್ಷದ ತತ್ವಕ್ಕೂ ಯಾವ ಭೇದವೂ ಇಲ್ಲದಿದ್ದರೂ ಕಾರ್ಯದಲ್ಲಿ ಇದೆ. ಕೇಳ್ಕರರ ಮಾನಸಿಕತೆಯನ್ನು ಈ ತತ್ವಗಳ ಉದ್ಘಾಟನೆಯನ್ನು ನೋಡತಕ್ಕದಲ್ಲ. ಅವರ ಖಾಸಗಿ ಕಾರ್ಯಗಳಲ್ಲಿ ನೋಡತಕ್ಕದ್ದು. ಶ್ರೀಯುತ ತಾಂಬೆಯವರ ಮಧ್ಯಪ್ರಾಂತ್ಯದ ಎಕ್ಸಿಕ್ಯೂಟಿವ್ ಕೌನ್ಸಿಲ್ ಪದವಿ ಸ್ವೀಕರಿಸಿದಾಗ ಇವರು ಅಭಿನಂದನದ ತಂತಿ ಕೊಟ್ಟರೇಕೆ? ಸರಕಾರವು ರಿಸ್ಪೊನ್ಸಿವ್ ಕೊ-ಒಪರೇಶನ್ ಮಾನಿಸಿದರೆಂದೆ? ರಿಸ್ಪೊನ್ಸಿವ್ ಕೊ-ಒಪರೇಶನನ್ನು, ಹಿಂದಿನಿಂದ ಬಂದು ಒಬ್ಬ ಧುರೀಣನನ್ನು ಕಳವು ಮಾಡುವುದರಿಂದ ಸರಕಾರವು ತೋರಿಸುವುದಿಲ್ಲ. ಮುಂದಿನದ ಆ ಸರಕಾರದ ಕೈಯನ್ನು ನೀಡಬೇಕು. ಮಂತ್ರಿ ಪದವಿಯನ್ನು ಸ್ವೀಕರಿಸದೆ ಇದ್ದುದಕ್ಕಾಗಿ ಏನಾದರೂ ಸ್ವರಾಜ್ಯ ಪಕ್ಷವನ್ನು ಮಾನಿಸಿದರೆ? "ಈ ಮಂತ್ರಿಪದವಿಯ ಪ್ರಕೃತದ ಅಧಿಕಾರಗಳು ಸಾಕಿಲ್ಲವೆಂದು ನೀವು ಹೇಳುವಿರಿ; ಈಗ ಇಷ್ಟು ಹೆಚ್ಚು ಅಧಿಕಾರಗಳನ್ನು ಕೊಡುವೆವು; ಸಹಕರಿಸಿ ನೋಡುವ" ಎಂದು ಮಂತ್ರಿಪದವಿಗೆ ಅಧಿಕಾರಗಳನ್ನು ಹೆಚ್ಚು ಮಾಡಿ ಸಹಕಾರಕ್ಕೆ ಕರೆದರೇ, ಇಲ್ಲ. ಇಂತಹ ಗೌರವದ ಸಹಕಾರವನ್ನು ಸರಕಾರವು ಕೊಡಲಿಲ್ಲ. ಬರೇ ಹಿಂಬಾಗಲನ್ನು ತೆರೆದು, ತಿಂಗಳಿಗೆ ೫೦೦೦ ರೂಪಾಯಿಯ ಗಂಟನ್ನು ತೋರಿಸಿ ಮಿ। ತಾಂಬೆಯನ್ನು ಕರೆದರು. ತಾಂಬೆಯವರು ಹೋದರು. ಶ್ರೀಯುತ ಕೇಳ್ಕರರು ಅಭಿನಂದಿಸಿದರು. ನಿರಂತರ ನಿರೋಧ (obstruction)ದ ಧೋರಣಕ್ಕೆ ಅನುಸಾರವಾಗಿ ಸ್ವರಾಜ್ಯ ಪಕ್ಷಕ್ಕೆ ಕಾರ್ಯನಿರ್ವಾಹಕರಾಗಿದ್ದ ಇವರೇ ಹೀಗೆ ವರ್ತಿಸಿದರೆ, "ರಿಸ್ಪೊನ್ಸಿವ್ ಕೊ-ಒಪರೇಶನ್" ಎಂಬ ಸಹಕಾರದ ಧೋರಣದ ಅಗ್ರಧುರೀಣರಾದರೆ ಏನು ಮಾಡುತ್ತಿದ್ದರು? ಈ ಅಗ್ರಧುರೀಣರನ್ನೇ ಕರೆದು ಒಂದು ಎಕ್ಸಿಕ್ಯೂಟಿವ್ ಕೌನ್ಸಿಲರಶಿಪ್ಪನ್ನು ಇವರಿಗೆ ಸರಕಾರವು ಕೊಟ್ಟದಾದರೆ ಇವರು ಸ್ವೀಕರಿಸುತ್ತಿದ್ದರೆ? ಸ್ವೀಕರಿಸಿ ಹಿಂದೀ ರಾಜಕೀಯ ಚಳವಳದ ವಾತಾವರಣದಿಂದ ಲುಪ್ತಪ್ರಾಯರಾಗುತ್ತಿದ್ದರೆ? ಇಲ್ಲವೆ ಸ್ವೀಕರಿಸಿ ಆ ಮೂಲಕ ಸರಕಾರದ ಅನ್ಯಾಯಗಳಿಗೆ ತಡೆಗಟ್ಟುತ್ತಿದ್ದರೇ? ಒಬ್ಬ ಶಂಕರನ್ ನಾಯರರಿಂದ ಅದು ಸಾಧ್ಯವಾಗಲಿಲ್ಲ; ಅವರು ರಾಜಿನಾಮೆ ಕೊಡಬೇಕಾಯಿತು. ಹೆಚ್ಚು ಆಡಿದ್ದಕ್ಕೆ ಮಾನನಷ್ಟ ಕೊಡಬೇಕಾಯಿತು. ಪಂಜಾಬದ ಭಯಂಕರ ಅತ್ಯಾಚಾರಗಳನ್ನು ನಿಲ್ಲಿಸಲಿಕ್ಕೆ ಶಂಕರನ್ ನಾಯರರೇ, ಅಸಮರ್ಥರಿದ್ದಾಗ, ಸರಕಾರದ ಸೂಕ್ಷ್ಮ ಅನ್ಯಾಯಗಳನ್ನು ಎಕ್ಸಿಕ್ಯೂಟಿವ್ ಪದವಿಯಿಂದ ನಿಲ್ಲಿಸಲು ಶ್ರೀ. ಕೇಳ್ಕರರು ಶಕ್ತರೇ? ಶ್ರೀ. ಬಿ. ಎನ್. ಶರ್ಮರಿಂದ ಪ್ರಥಮತಃ ಆ ಅನ್ಯಾಯಗಳನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ; ರಾಜಿ ಕೊಟ್ಟರು; ಸರಕಾರವು ಅವರನ್ನು ಪುಸಲಾಯಿಸಿತು, ಆ ಮೇಲಿನ ಶರ್ಮರು ಆ ಅನ್ಯಾಯಗಳ ಅಡಿಯಲ್ಲಿಯೇ ಸೌಮ್ಯವಾಗಿ ಕೆಲಸಮಾಡಿದರು. ಈ ಎಲ್ಲಾ ಉದಾಹರಣೆಗಳಿಂದ ಸರಕಾರದ ಎಕ್ಸಿಕ್ಯೂಟಿವ್ ಸದಸ್ಯತನದಿಂದ ಏನೂ ಪ್ರಯೋಜನವಿಲ್ಲ; ಅದರಿಂದ ಹಾನಿಯೇ ಹೆಚ್ಚು; ಅದರಿಂದ ಧುರೀಣರ ಮಾನಸಿಕತೆಯು ಕೆಡುತ್ತದೆ; ಎಂಬುದನ್ನು ತಿಳಿಯಬಹುದು. ಹಾಗಾದರೆ ಶ್ರೀಯುತ ಕೇಳ್ಕರರು ಮಿ। ತಾಂಬೆಯವರಿಗೆ ಕೊಟ್ಟ ಅಭಿನಂದನವು ರಿಸ್ಪೊನ್ಸಿವ್ ಕೊ-ಒಪರೇಶನಿಗಿಂತಲೂ ಗೂಢವಿದೆಯೆಂದು ತಿಳಿಯಬೇಕಾಗುವುದು.

ರಿಸ್ಪೊನ್ಸಿವ್ ಕೊ-ಒಪರೇಶನಿಗೂ, ಸ್ವರಾಜ್ಯ ಪಕ್ಷಕ್ಕೂ ಇರುವ ಮತಭೇದಕ್ಕಿಂತಲೂ (ಮತಭೇದವೇನೂ ತೋರುವುದಿಲ್ಲ) ಶ್ರೀಯುತ ಕೇಳ್ಕರರ ಈ ಮಾನಸಿಕತೆಯೆ ಈ ವಿಚ್ಛೇದದ ಕಾರಣವೆಂದರೂ ಎನ್ನಬಹುದು. ಇಲ್ಲವೆ ಲೋಕಮಾನ್ಯ ಟಿಳಕರಂತಹ ಮಹಾತ್ಮರ ಕೈಯಿಂದ ಹರಿದ ಆ ನಾಮವೇ ಸರ್ವಶ್ರೇಷ್ಠವಾಗಬೇಕೆಂಬ ಆ ಜಾತೀಯ ಭಾವವೂ ಇದರ ಕಾರಣವಿರಬಹುದು. ಆದರೆ ಶ್ರೀಯುತ ಕೇಳ್ಕರರ ಈ ಹೊಸ ತರದ ಕಲ್ಪನಾಮಯವಾದ ಭೇದದಿಂದ ಸ್ವರಾಜ್ಯ ಪಕ್ಷವು ಸ್ವಲ್ಪ ಮಟ್ಟಿಗೆ ನಿರ್ಬಲವಾಯಿತೆನ್ನಬೇಕಾಗುತ್ತದೆ. ಈ ಸಂಧಿಗ್ಧ ಸ್ಥಿತಿಯಿಂದ ಸ್ವರಾಜ್ಯ ಪಕ್ಷವು ಹೇಗೆ ಹೊರಬರುವುದೆಂದು ನಿರೀಕ್ಷಿಸುವೆವು.

I. C. S. ಪರೀಕ್ಷೆಗೆ ಯುರೋಪಿಯ ಉಮೇದ್ವಾರರು.

ಹಿಂದೂಸ್ಥಾನಕ್ಕೆ ಸುಧಾರಣಾ ಸರಕಾರವು ಬಂದ ಕೂಡಲೆ ಇಲ್ಲಿನ ಸರಕಾರದ ಆಂಗ್ಲ ನೌಕರರು (I. C. S. ಆಗಿ ಕಲೆಕ್ಟರ ಮೊದಲಾದ ಅಧಿಕಾರದಲ್ಲಿದ್ದವರು) ಆಂಗ್ಲ ಅಧಿಕಾರವು ಕಡಿಮೆಯಾಯಿತೆಂದೂ, ಆಂಗ್ಲ ಜನರ ಜೀವನಕ್ಕೇನೇ ಅಪಾಯವಿದೆಯೆಂದೂ ಮೊದಲಾಗಿ ಅಲ್ಲದ ಸಂಕಷ್ಟಗಳನ್ನು ಸೂಚಿಸಿ, ತಾವು ಕೆಲಸಮಾಡುವುದೇ ಕಷ್ಟವೆಂದು ಬೊಬ್ಬಿಟ್ಟರು. ಕೆಲವರು ಕೆಲಸಕ್ಕೆ ರಾಜೀ ಕೊಟ್ಟು ತುಂಬಾ ಪೆನ್ಶನಿನೊಡನೆ ಊರಿಗೆ ಹಿಂತೆರಳಿ ಸುಖವಾಗಿ ನಿಂತರು. ಈ ರೀತಿಯಲ್ಲಿ ಎಬ್ಬಿಸಿದ ಚಳವಳಕ್ಕೆ ಸರಕಾರವು ಬಗ್ಗಿತು. ಇವರಲ್ಲದಿದ್ದರೆ ಆಂಗ್ಲ ಪ್ರಭುತ್ವವು ಹಿಂದೂ ದೇಶದಲ್ಲಿ ಸಾಧ್ಯವಿಲ್ಲ ಲೊಯಿಡ್ ಜೋರ್ಜರು ಇವರನ್ನೇ ಆಂಗ್ಲ ಸರಕಾರದ ಉಕ್ಕಿನ ಅಂಚು (Steal Frame) ಎಂದು ಹೇಳಿರುವರು. ಆದುದರಿಂದ ಅವರ ಸಂಬಳವು ಏರಿಸಲ್ಪಟ್ಟಿತು. ಕೆಲವು ಅಧಿಕಾರಗಳೂ ಅವರಿಗೆ ಕೊಡಲ್ಪಟ್ಟವು. ಆದರೆ ಅವರು ಈ ಮೊದಲು ಎಬ್ಬಿಸಿದ ಕಲ್ಪನೆಯ ಕಾರಣದ ಬೊಬ್ಬೆಯಿಂದ ವಿಲಾಯತಿಯಲ್ಲಿ ಉಮೇದ್ವಾರರು ಕಡಿಮೆ ಆದರು. ಆ ಮೇಲೆ "ಲೀ ಕಮಿಶನ್ನು" ಎಂಬುದು ನೇಮಕವಾಗಿ ಪುನಃ ಈ ಯುರೋಪಿಯ ನೌಕರರ ಸಂಬಳವನ್ನೇರಿಸಿದರು. ಅತ್ತ ಲೊರ್ಡ ಬರ್ಕನ್ ಹೆಡ್ಡರೂ, ಲೊರ್ಡ ಮೆಸ್ಟನರೂ ಇಂಗ್ಲೆಂಡ ಮತ್ತು ಸ್ಕೊಟ್ಲೆಂಡಿನ ವಿಶ್ವವಿದ್ಯಾಲಯಗಳನ್ನು ಸಂಚರಿಸಿ ಅಲ್ಲಿ ಭಾಷಣಗಳನ್ನು ಕೊಟ್ಟು ಅಲ್ಲಿಯ ವಿದ್ಯಾರ್ಥಿಗಳನ್ನು ಒಲಿಸಲು ಪ್ರಯತ್ನಿಸಿದರು. ಅವರ ಪ್ರಯತ್ನಗಳು ವಿಫಲವಾಗಲಿಲ್ಲ. ೧೯೨೧ರಿಂದ ೧೯೨೪ರ ವರೆಗಿನ ವರ್ಷಗಳಲ್ಲಿ ಯುರೋಪಿಯ ಉಮೇದ್ವಾರರ ಸಂಖ್ಯೆಯು ಸರಾಸರಿ ೨೧ ಇದ್ದಿತು. ಇವರೊಳಗೆ ಐವರು ಉತ್ತೀರ್ಣರಾಗುತ್ತಿದ್ದರು. ಲೊರ್ಡ ಬರ್ಕನ್ ಹೆಡ್ಡ ಮತ್ತು ಲೊರ್ಡ ಮೆಸ್ಟನರ ಸಾಹಸದಿಂದ ಈ ವರ್ಷ ಯುರೋಪಿಯ ಉಮೇದ್ವಾರರ ಸಂಖ್ಯೆಯು ೭೦ ಮತ್ತು ಅವರೊಳಗೆ ಉತ್ತೀರ್ಣರಾದವರ ಸಂಖ್ಯೆ ೨೧ ಅಂದರೆ ಕಳದ ವರ್ಷಗಳಿಗಿಂತ ಸಾಧಾರಣ ನಾಲ್ಕು ಪಾಲಷ್ಟು ಹೆಚ್ಚು. ಇದನ್ನು ನೋಡಿ ಲಂಡನ್ನಿನ "ಟೈಮ್ಸ" ಪತ್ರಿಕೆಗೆ ಸಂತೋಷವಾಯಿತು. ಅಷ್ಟು ಜನರು ಹಿಂದೂಸ್ಥಾನಕ್ಕೆ ಹೋಗುವುದೆಂದರೆ ಅವರ ಸಂಬಳದಷ್ಟು ಹಿಂದೂಸ್ಥಾನವು ಬಡವಾಗುವುದು; ಇಂಗ್ಲೆಂಡು ಸಂಪನ್ನವಾಗುವುದು. ಅಲ್ಲದೆ ಆಂಗ್ಲ ಪ್ರಭುತ್ವವೂ ಆ ಸಂಖ್ಯೆಯಷ್ಟು ಭದ್ರವಾಯಿತು. "ಟೈಮ್ಸು" ಪತ್ರಿಕೆಯು ಸಂತೋಷ ಪಡುವುದು ಸಹಜವೆ ಸರಿ.

ಕಾಂಗ್ರೆಸ್ಸಿನ ಅಧ್ಯಕ್ಷರೂ ಫ್ರೆಂಚ ಅತ್ಯಾಚಾರಗಳೂ.

ಹಕೀಮ ಅಜ್ಮಲ ಖಾನರೂ, ತುರ್ಕಿ, ಸಿರಿಯಾ ದೇಶಗಳನ್ನೂ ಸಂಚರಿಸಿ ಈಗಾಗಲೆ ಹಿಂದೆ ಬಂದಿರುವರು. ಸಿರಿಯಾ ದೇಶವು ಫ್ರೆಂಚರ ಆಶ್ರಯಕ್ಕೆ (mandate) ಲೀಗ್ ಒಫ್ ನೇಶನ್ಸಿನಿಂದ ಕೊಡಲ್ಪಟ್ಟಿದೆ. ಈ ಸಿರಿಯಾ ದೇಶದಲ್ಲಿ ಡ್ರೂಸೆ ತಂಡವು ಸ್ವಾತಂತ್ರ್ಯಕ್ಕಾಗಿ ಮೇಲೆದ್ದದೆ. ಇವರು ದಮಸ್ಕಸವನ್ನು ಸೇರುವರೆಂದೂ, ದಮಸ್ಕದಲ್ಲಿ ದಂಗೆ ಖೋರರು ಇರುವರೆಂದೂ, ಫ್ರೆಂಚರು ದಮಸ್ಕ ಪಟ್ಟಣವನ್ನು ಅಗ್ನಿಗೆ ಆಹುತಿ ಕೊಟ್ಟದನ್ನು ಈ ಪೂರ್ವದಲ್ಲಿ ನಾವು ಸೂಚಿಸಿರುವೆವು. ಸಿರಿಯಾದಿಂದ ಹಿಂದೆ ಬಂದ ಈ ಮುಸಲ್ಮಾನ ಧುರೀಣರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಮಹಾತ್ಮರಿಗೆ ಒಂದು ಪತ್ರವನ್ನು ಬರೆದಿರುವರು. ಫ್ರೆಂಚರ ಈ ಕೃತ್ಯಗಳನ್ನು ಖಂಡಿಸಿ ಲೀಗ್ ಒಫ್ ನೇಶನ್ಸಿಗೆ ತಂತಿಕೊಡಬೇಕಾಗಿ ಆ ಪತ್ರದಲ್ಲಿ ಅವರು ಕೇಳಿಕೊಂಡಿದ್ದಾರೆ, ಮಹಾತ್ಮರು, ಇಂತಹ ತಂತಿಯಿಂದ ಪ್ರಯೋಜನವೇನೂ ಇಲ್ಲವೆಂದೂ, ತಾನು ಗೂಡಿನೊಳಗಿನ ಸಿಂಹದಂತೆ ಇದ್ದೇನೆಂದೂ, ಗೂಡಿನ ಬಂಧನೆಯನ್ನು ತೀರದು ತಾನು ಸುಮ್ಮಗಿರುವೆನೆಂದೂ ಇಂತಹ ಬರ್ಬರ ಕೃತ್ಯಗಳ ಸಮ್ಮುಖದಲ್ಲಿ ನಾವು ಹಿಂದೀಯರು ಸಹಾಯ ಹೀನರೂ ಶಕ್ತಿ ಹೀನರೂ ಆಗಿರುವೆವೆಂದೂ, ಲೀಗ್ ಒಫ್ ನೇಶನ್ನು ಬರೇ ಇಂಗ್ಲೀಷ ಮತ್ತು ಫ್ರೆಂಚರ ಸಂಸ್ಥೆಯಾದುದರಿಂದ ಅದು ಫ್ರೆಂಚರ ಮೇಲೆ ನ್ಯಾಯ ತೀರ್ಮಾನಕ್ಕೆ ಕೊಡಲಿಕ್ಕಿಲ್ಲವೆಂದೂ, ಇಂತಹ ಅತ್ಯಾಚಾರಗಳ ಪ್ರತಿಯಾಗಿ ಹಿಂದೂಸ್ಥಾನವು ಸ್ವರಾಜ್ಯ ಹೊಂದುವುದೇ ಉತ್ತಮ ನಿವಾರಣೆಯೆಂದೂ, ಆದುದರಿಂದ ಹಿಂದೀಯರು ಪರಸ್ಪರ ಸಹಕಾರದಿಂದ ಸ್ವರಾಜ್ಯ ಸಂಪಾದಿಸಬೇಕೆಂದೂ ಸೂಚಿಸಿರುವರು. ಮಹಾತ್ಮರ ಪ್ರತ್ಯುತ್ತರವು ಹಕೀಮರಿಗೂ, ಅನ್ಸಾರಿಯವರಿಗೂ ಮಾನ್ಯವಾಗದಿರದು.

ಮಂಗಳೂರು.

ವರ್ಷಂಪ್ರತಿ ನಡೆಯುವ ಜೂನಿಯರ್ ಮತ್ತು ಸೀನಿಯರ್ ಸ್ಪೋರ್ಟ್ಸ್‌ನಲ್ಲಿ ಸೈಂಟ್ ಎಲ್ಲೊಸಿಯಸ್ ಕೊಲೇಜಿನವರೇ ಗೆದ್ದಿರುವರು.

ಕಳೆದ ಶನಿವಾರ ಮೈನುವೈದಾನಿನಲ್ಲಿ ಬಹಳ ಅಂಡಬರದಿಂದ ಪೋಲಿಸ್ ಸ್ಪೋರ್ಟ್ಸ್ ಜರಗಿತು. ಈ ವರ್ಷ ಬಂದಷ್ಟು ಪ್ರೇಕ್ಷಕರು ಇನ್ನಾವ ವರ್ಷವೂ ಬಂದಿಲ್ಲ. ೩॥ ಗಂಟೆಗೆ ಆಟ ಪ್ರಾರಂಭಿಸಿತು. ವೆಲ್ಲೂರಿನ ಪೋಲಿಸ್ ಬೇಂಡ್ ಮುಂತಾದುವುಗಳೇ ಪುರಜನರನ್ನು ಸಂತೋಷಪಡಿಸುವುದರಲ್ಲಿ ಆಶ್ಚರ್ಯವೆನಿಸಿದೆ. ಸಾಲದುದಕ್ಕೆ ನೂರಾರು ರೂಪಾಯಿ ವೆಚ್ಚದಿಂದ ಪ್ರದರ್ಶಿಸಿದ ಅಂದಿನ (ಪಟಾಕಿಯ ನೋಟ) ನೋಡಲಿಕ್ಕಾಗಿಯೇ ಜನರು ಹೆಚ್ಚಾಗಿ ಸೇರುತ್ತಿದ್ದರು. ಈ ರೀತಿಯಿಂದ ಈ ವರ್ಷದ ಸಮಾರಂಭವು ಕೊನೆಗೊಂಡಿತು. ಈ ಸ್ಪೋರ್ಟ್ಸಿನ ಬಗ್ಗೆ ವೆಲ್ಲೂರು ಬೇಂಡ್ ಬೇಕಿತ್ತೆ?

ಪೋಲೀಸರು ತಮ್ಮ ಶಕ್ತಿಯನ್ನು ಇಂದು ಊರಿನವರಿಗೆ ಪ್ರದರ್ಶಿಸಿ ಮಿಗಿಲಾಗಿ ಸಂತೋಷಪಡಿಸಿದರು. ನಡೆದ ಆಟಗಳಲ್ಲಿ 'ಒಬಸ್ಟೇಕಲ್ ರೇಸ್' ಎಂಬುದು ಸಾಹಸಪ್ರದರ್ಶಕವಾದ ಆಟವು. ಮಾತ್ರವಲ್ಲದೆ ಮೈಲು ರೇಸು ಮುಂತಾದ ಅನೇಕ ಆಟಗಳು ಸಹ ಇದ್ದವು. ಈ ವರ್ಷ ಊರಿನ ಅನೇಕ ಶ್ರೀಮಂತರುಗಳೂ ಬಂದಿದ್ದರು. ಬಂದವರಿಗೆ ಕೂತುಕೊಳ್ಳಲು ಪ್ರತ್ಯೇಕ ಸ್ಥಳವು ಏರ್ಪಡಿಸಿತ್ತು. ಸ್ತ್ರೀಯರಿಗಾಗಿ ಏರ್ಪಡಿಸಿದ ಸಭಾಮಂಟಪದಲ್ಲಿ ತುಂಬಾ ಸ್ತ್ರೀಯರು ನೆರೆದಿದ್ದರು. ಬಂದವರನ್ನು ಕಾಫಿ ಟೀ ಮತ್ತು ಅನೇಕ ತರದ ತಿಂಡಿಗಳಿಂದ ಸತ್ಕರಿಸಿದರು.

ಕ್ರಿಕೆಟ್ ಪಂದ್ಯಾಟದಲ್ಲಿ ಅತಿ ಗಟ್ಟಿಗರೆಂದು ಕೀರ್ತಿಪಟ್ಟ ಮತ್ತು ಅನೇಕ ಕಡೆಗಳಲ್ಲಿ ವಿಜಯಿಗಳಾದ ಒಂದು ಮದ್ರಾಸಿನ ಕ್ರಿಕೆಟ್ ಟೀಮಿನವರು ಇಲ್ಲಿಯ ನಿಪುಣರಾದ ಕ್ರಿಕೆಟ್ ಪಂದ್ಯಾಟದವರೊಡನೆ ಆಡಿದರು. ಮದ್ರಾಸಿನಿಂದ ಬಂದವರಲ್ಲಿ ಶ್ರೀಯುತ ಲೋಕನಾಥನ್ ಎಂಬವರು ಕ್ರಿಕೆಟ್‌ನಲ್ಲಿ ಬಹಳ ಚತುರರಂತೆ, ಅಪ್ಪುಚೆಟ್ಟಿ ಎಮ್. ಎಲ್. ಸಿ. ಮತ್ತು ಮುನ್ಸಿಪಲ್ ಚೇರ್‌ಮೇನರಾದ ರತ್ನವೇಲುಶೆಟ್ಟಿ ಎಂಬವರು ಸಹಾ ಆಟಕ್ಕಿದ್ದರು. ಇಂಥ ಶೂರರೊಡನೆ ನಮ್ಮೂರಿನ ಆಟಗಾರರು ಆಡಿ ಅವರನ್ನು ಅತೀ ಸುಲಭವಾಗಿ ಸೋಲಿಸಿದ್ದು ಸ್ಫೂರ್ತಿದಾಯಕವಾದ ಕೆಲಸವಾಗಿರುವುದು.

ಆರ್ಯಸಮಾಜದ ಮುಖಂಡರಾದ ಸ್ವಾಮಿ ಶ್ರದ್ಧಾನಂದರವರು ಇದೇ ಕಳೆದ ಮಂಗಳವಾರ ದಿನ ಸಾಯಂಕಾಲ ಇಲ್ಲಿಯ ಗಣಪತಿ ಹೈಸ್ಕೂಲಿನಲ್ಲಿ ಸಮಾಜಿಕವಾದೊಂದು ಭಾಷಣವನ್ನಿತ್ತರು.

ಮುನ್ಸಿಪಲ್ ಕೌನ್ಸಿಲಿನ ಮೀಟಿಂಗು ಮೊನ್ನೆ ಗುರುವಾರ ಸಾಯಂಕಾಲ ಗಂಟೆ ೫ಕ್ಕೆ ಜರಗಿತು.

ಇಲ್ಲಿ ಟೆಲಿಫೋನ್ ಪ್ರಕಾರ ಮಾತಾಡುವುದನ್ನು ಜಾರಿಗೆ ತರುವುದು ಸಾಧ್ಯವಾದೀತೊ ಎಂಬುವುದರ ಕುರಿತು ಪರ್ಯಾಲೋಚಿಸಲು ಒಂದು ಸಭೆಯು ಎ. ಸಿ. ಉಡ್‌ಹೌಸ್ ಇವರ ಅಧ್ಯಕ್ಷತೆಯಲ್ಲಿ ಬರುವ ತಾ. ೨೫ನೇ ಬುಧವಾರಗುವುದು.

ಸ್ವರ್ಗಸ್ಥರಾದ ರಾ. ಅಮ್ಮೆಂಬಳ ಸುಬ್ರಾಯ ಪೈಗಳ ಸ್ಮಾರಕಾರ್ಥ ದಿನವನ್ನು ನಿನ್ನೆ ಕೆನರಾ ಹೈಸ್ಕೂಲಿನಲ್ಲಿ ಸಾಂಗವಾಗಿ ನಡೆಸಿದರು. ಸಾಯಂಕಾಲ ಶಾಲಾ ಹುಡುಗರಿಗೆ ಮಿಠಾಯಿಯನ್ನು ಹಂಚಿದ್ದರು.

ಕೊಂಗ್ರೆಸ್ ಚಳವಳದಲ್ಲಿ ಕ್ರೈಸ್ತ ಸಮಾಜದ ಕಡೆಯಿಂದ ಸಮರ್ಥ ಕೆಲಸಗಾರರೂ, ಒಬ್ಬ ಉತ್ಸಾಹೀ ಗೃಹಸ್ಥರೂ ಆಗಿದ್ದ ಶ್ರೀಯುತ ಮಾರ್ಸೆಲ್ ಡಿ'ಸೋಜರು ಮೊನ್ನೆ ದಿನ ಮಂಗಳವಾರ ಅಕಾಲ ಮೃತ್ಯುವಿಗೆ ತುತ್ತಾದರೆಂದು ತಿಳಿಸುವುದಕ್ಕೆ ಅತ್ಯಂತ ವಿಷಾದಪಡುತ್ತೇವೆ. ಇವರು ತರುಣರಿದ್ದಾಗಲೇ ತಮ್ಮ ಸಮಾಜ ಸುಧಾರಣೆಗಾಗಿ ಬಹಳ ಶ್ರಮಪಟ್ಟಿದ್ದು, ಕದ್ರಿಯಲ್ಲಿ ಪ್ರಾಥಮಿಕ ಒಂದು ಶಾಲೆಯನ್ನು ತೆರೆದರು ಉತ್ತಮರೀತಿಯಿಂದ ಕೆಲಸಮಾಡುತ್ತಿದ್ದು ಕಾಂಗ್ರೆಸ್ ಚಳವಳವು ಆರಂಭವಾದಂದಿನಿಂದ ತಮ ಶಾಲೆಯನ್ನು ಅದಕ್ಕೊಪ್ಪಿಸಿ ತಾವೂ ಚಳವಳದಲ್ಲಿ ಸೇರಿ ಮನಮುಟ್ಟಿ ಕೆಲಸಮಾಡಿಕೊಂಡಿದ್ದರು. ಅಲ್ಲದೆ 'ಮಂಗಳೂರು ಮೈಲ್' ಎಂಬ ಇಂಗ್ಲಿಷ್ ವಾರಪತ್ರಿಕೆಯ ಸ್ಥಾಪನೆಗೆ ಮುಖ್ಯಕಾರಣರಿದ್ದರು. ಶ್ರೀಯುತ ಸೋಜರು ಎಫ್. ಎ. ಪಾಸಾಗಿದ್ದು ತಂಬೇತಾದ ಒಬ್ಬ ಮಾದರೀ ಉಪಾಧ್ಯಾಯರಾಗಿದ್ದರು. ಇವರು ಕೆಲವು ಕಾಲದ ವರೆಗೆ 'ಕರ್ನಾಟಕ ತಿಲಕ ವಿದ್ಯಾಲಯ'ದಲ್ಲಿ ಅಧ್ಯಾಪಕರಾಗಿದ್ದರು. ಇವರ ಮರಣದಿಂದ ಸಮಾಜಕ್ಕೆ ದೊಡ್ಡ ನಷ್ಟವೇ ಎಂದು ಬೇರೆ ಹೇಳಬೇಕಾಗಿಲ್ಲ. ಇವರು ಎರಡು ತಿಂಗಳುಗಳಿಂದ ಅಸ್ವಸ್ಥರಾಗಿದ್ದರೆಂದು ಈಗ ತಿಳಿದುಬಂದರೂ ಈ ವಾರ್ತೆಯು ಆಕಸ್ಮಾತ್ತಾಗಿ ಈ ವಾರ್ತೆಯು ಕೇಳಿದ ಕೂಡಲೇ ಮೃತರ ಸ್ಮರಣಾರ್ಥವಾಗಿ 'ತಿಲಕ ವಿದ್ಯಾಲಯ'ಕ್ಕೆ ಈ ದಿವಸ (ಗುರುವಾರ) ರಜೆ ಕೊಡಲಾಗಿತ್ತು. ಅಲ್ಲದೆ ನಾಳೆ ಶುಕ್ರವಾರ ಬೆಳಗ್ಗೆ ಏಳು ಗಂಟೆಗೆ ಕಾಂಗ್ರೆಸ್ ಕೆಲಸಗಾರರಲ್ಲಿ ಕೆಲವರು ಅವರ ಮನೆಗೆ ಹೋಗಿ ಅವರ ವಿಯೋಗದುಃಖದಲ್ಲಿ ಅವರ ಕುಟುಂಬದವರೊಡನೆ ತಾವು ಸಹಭಾಗಿಗಳಾಗಲು ನಿಶ್ಚಯಿಸಿರುತ್ತಾರೆ. ಉದಾರಿಗಳಾದ ಗೃಹಸ್ಥರೆಲ್ಲರೂ ಮೃತರ ಕುಟುಂಬಕ್ಕೆ ಸಹಾಯಮಾಡುವುದರ ಮೂಲಕ ಮೃತರ ಮೇಲಿರುವ ಅವರವರ ಭಕ್ತಿಯನ್ನು ಪ್ರಕಟಿಸುವರಾಗಿ ನಂಬಿಕೆ ಇದೆ. ಶ್ರೀ ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಅ. ಭೋಜರಾಯರು ತಿಳಿಸುತ್ತಾರೆ.

ನೆರೆಯ ಹಾವಳಿಯಿಂದ ಬಂಟವಾಳ, ಪಾಣೆಮಂಗಳೂರನ್ನು ಉಳಿಸುವ ಉಪಾಯ.

(ಜಿಲ್ಲಾ ಕಲೆಕ್ಟರರ ಧೊರೆಗಳವರ ಪರಾಮರಿಕೆ ಬಗ್ಗೆ)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೇತ್ರಾವತಿಯು ಅತೀ ದೊಡ್ಡದಾದ ನದಿಯಾಗಿದೆ. ಈ ನದಿಯೂ, ಇದರ ಉಪನದಿಗಳೂ ಕೂಡಿ ಉಪ್ಪಿನಂಗಡಿ ತಾಲೂಕಿನ ಪೂರ್ವದಲ್ಲಿರುವ ಪಶ್ಚಿಮ ಗಟ್ಟಗಳ ಪಶ್ಚಿಮದಲ್ಲಿ ಬೀಳುವ ಮಳೆಯ ನೀರನ್ನೆಲ್ಲಾ ಅರಬೀ ಸಮುದ್ರಕ್ಕೆ ತರುತ್ತವೆ. ಹಿರಿಮರಿ ಗುಪ್ಪೆ ಎಂಬಲ್ಲಿಂದ ನೇತ್ರಾವತಿಯು ಹುಟ್ಟಿ ಉಪ್ಪಿನಂಗಡಿಯ ವರೆಗೆ ಬರುತ್ತದೆ. ಶಿರಾಡಿ ಗಟ್ಟದಲ್ಲಿ ಹುಟ್ಟುವ ದೊಡ್ಡದಾದ ಒಂದು ನದಿಯು ಬಂದು ಕುಮಾರಧಾರಾ ನದಿಗೆ ಕೂಡುತ್ತದೆ. ಕುಮಾರ ಪರ್ವತದಿಂದ ಕುಮಾರಧಾರ ನದಿಯು ಹುಟ್ಟಿ ಬಂದು ಶಿರಾಡಿ ಹೊಳೆಯನ್ನು ಕೂಡಿಕೊಂಡು ಉಪ್ಪಿನಂಗಡಿಗೆ ಬಂದು ನೇತ್ರಾವತಿಗೆ ಕೂಡುತ್ತದೆ.

ಈ ಮೂರು ನದಿಗಳ ನೀರೂ ಮಂಗಳೂರಿನ ಹತ್ತಿರವಿರುವ ಒಂದೇ ಅಳುವೆಯಿಂದ ಸಮುದ್ರಕ್ಕೆ ಸೇರಬೇಕಾಗಿದೆ. ಮಳೆಯು ವಿಪರೀತ ಬಂದರೆ ಈ ನದಿಗಳಲ್ಲಿ ಹರಿದು ಬರುವ ನೀರು ಬಹಳ ಹೆಚ್ಚಾಗಿ ಒಂದು ಅಳುವೆಯಿಂದ ಬೇಗನೆ ಹೋಗಲಿಕ್ಕಾಗದೆ ನೇತ್ರಾವತಿ ಕುಮಾರಧಾರ ನದಿಗಳ ತೀರಗಳಲ್ಲಿರುವ ಹೊಲ ಗದ್ದೆಗಳಲ್ಲಿ ನೀರು ತುಂಬುತ್ತದೆ. ದಡಗಳಲ್ಲಿರುವ ಉಪ್ಪಿನಂಗಡಿ, ಬಂಟವಾಳ, ಪಾಣೆಮಂಗಳೂರು ನೀರಿನ ಪಾಲಾಗುತ್ತವೆ. ಮಳೆಯು ಪಶ್ಚಿಮ ಗಟ್ಟಗಳಲ್ಲಿ ಅತಿರೇಕವಾಗಿ ಸುರಿದರೆ ಮೇಲೆ ಹೇಳಿದ ಮೂರು ದೊಡ್ಡ ಊರುಗಳೂ ಇನ್ನು ಚಿಕ್ಕ ಹಳ್ಳಿಗಳೂ ನೀರಿನಲ್ಲಿ ಕೆಲವು ದಿವಸಗಳ ವರೆಗೆ ಮುಳುಗಿಕೊಂಡೆ ಇರುತ್ತವೆ. ಈ ಪಟ್ಟಣಗಳಲ್ಲಿರುವ ಅಂಗಡಿಗಳೂ, ಭಂಡಸಾಲೆಗಳೂ, ಮನೆಗಳೂ, ಅವುಗಳಲ್ಲಿರುವ ಸಾಹಿತ್ಯಗಳೂ, ಜೀನಸುಗಳೂ, ದನಕರುಗಳೂ ನಷ್ಟವಾಗಿ ಲಕ್ಷಗಟ್ಲೆಯಿಂದ ಜನರು ನಷ್ಟವನ್ನು ಅನುಭವಿಸಬೇಕಾಗುತ್ತದೆ. ಸರಕಾರಕ್ಕೂ, ಗದ್ದೆಗಳಲ್ಲಿ ಪೈರು ನಷ್ಟವಾದುದರಿಂದ ಭೂಕಂದಾಯವೂ, ಸಾಹುಕಾರರು ನಷ್ಟಪಡುವುದರಿಂದ ಇನ್‌ಕಮ್ ಟೇಕ್ಸೂ, ವೃತ್ತಿ ತೆಂಗೆಯೂ, ಲೈಸನ್ಸು ತೆಂಗೆಯೂ ಕಡಿಮೆಯಾಗುತ್ತದೆ. ಮನೆಗಳಲ್ಲಿ ನೀರು ನಿಂತುದರಿಂದ ಅವುಗಳು ವಾಸಮಾಗಿರಲಿಕ್ಕೆ ಅಯೋಗ್ಯವಾಗಿರುತ್ತವೆ. ಅಂಗಡಿ ಭಂಡಸಾಲೆಗಳ ನೆಲವು ಒದ್ದೆಯಾಗಿ ಜೀನಸುಗಳನ್ನು ತುಂಬಿಸಲಿಕ್ಕೆ ಅಯೋಗ್ಯವಾಗುತ್ತವೆ. ಆದುದರಿಂದ ಈ ಕಷ್ಟನಷ್ಟಗಳಿಂದ ಜನರನ್ನು ರಕ್ಷಿಸುವುದಕ್ಕಾಗಿ ಸರಕಾರವು ಚೆನ್ನಾಗಿ ವಿಚಾರಿಸಿ ಏನಾದರೊಂದು ಉಪಾಯ ಮಾಡುವದು ಒಳ್ಳೇದು.

೧೯೨೩ನೇ ಇಸವಿಯಲ್ಲಿ ಜುಲಾಯಿ ತಿಂಗಳಲ್ಲಿ ಬಂದ ಒಂದನೇ ನೆರೆಯಿಂದ ಉಪ್ಪಿನಂಗಡಿಯ ಅರೆವಾಶಿ ಪಾಲು, ಬಂಟವಾಳ ಕಾಲುಪಾಲು ನಾಶವಾಯಿತು. ಅದೇ ವರುಷದ ಆಗೋಸ್ತು ೭ನೇ ತಾರೀಕಿಗೆ ಬಂದ ನೆರೆಯು ಬಂಟವಾಳ ಪಾಣೆಮಂಗಳೂರು, ಉಪ್ಪಿನಂಗಡಿ, ಆರ್ಕುಳ ಊರುಗಳನ್ನು ಸಂಪೂರ್ಣ ನಾಶಪಡಿಸಿತು. ಆದರೆ ಈ ನೆರೆಗಳ ನೀರು ೨೪ ತಾಸುಗಳಲ್ಲಿ ಇಳಿದು ಹೋಗಿಯದೆ. ೧೯೨೪ನೇ ಇಸವಿಯ ಆಗೋಸ್ತು ತಿಂಗಳಲ್ಲಿ ಬಂದ ನೆರೆಯು ೧೨ ದಿವಸಗಳ ವರೆಗೆ ಬಂಟವಾಳ, ಪಾಣೆಮಂಗಳೂರುಗಳನ್ನು ಮುಳುಗಿಸಿತ್ತು. ೧೯೨೩ನೆಯ ನೆರೆಯಲ್ಲಿ ಹಾಳಾದುದಕ್ಕಿಂತ ಪೈರು ೧೯೨೪ನೇ ಇಸವಿಯಲ್ಲಿ ಹಾಳಾಯಿತು. ೧೯೨೫ನೇ ಇಸವಿಯ ಜುಲಾಯಿ ೧೦ನೇ ತಾರೀಕಿಗೆ ಬಂದ ನೆರೆಯು ಮೂರು ದಿವಸಗಳ ವರೆಗೆ ಬಂಟವಾಳ ಪೇಟೆಯಲ್ಲಿ ನಿಂತಿತ್ತು. ಹೀಗೆ ಮೂರು ವರುಷಗಳಿಂದಲೂ ಏಕರೀತಿಯಾಗಿ ಮಳೆಯು ಬಂದು ನೆರೆಯು ಬರುವುದರಿಂದ ನೆರೆಯ ಹಾವಳಿ ತಪ್ಪಿಸಲಿಕ್ಕಾಗಿ ಸರಕಾರವು ಆಲೋಚಿಸುವುದು ಅತೀ ಅಗತ್ಯವಾಗಿದೆ.

ಈ ಸರಕಾರದವರು ಬಂಟವಾಳದಲ್ಲಿರುವ ಡಿಪ್ಯುಟಿ ತಹಶೀಲದಾರರ ಕಚೇರಿಯನ್ನೂ, ಸಬ್ ರಜಿಸ್ಟ್ರಿ ಆಫೀಸನ್ನೂ, ಸಬ್ ಇನ್ಸ್‌ಪೆಕ್ಟರುಗಳ ಮನೆಗಳನ್ನೂ, ಡಿಪ್ಯುಟಿ ತಹಸೀಲದಾರರಿಗಾಗಿಯೂ, ಸಬ್ ರಜಿಸ್ಟ್ರಾರರಿಗಾಗಿಯೂ ಮನೆಗಳನ್ನು ಬಂಟವಾಳದಿಂದ ಒಂದುವರೆ ಮೈಲು ದೂರದಲ್ಲಿರುವ ಜೋಡು ಮಾರ್ಗ ಬಳಿಗೆ ಒಯ್ಯುವದೆಂತ ಆಲೋಚನೆಯಾಗಿ ಸ್ಥಳ ತನಿಖೆಗೆ ಒಂದು ಕಮಿಶನು ಬಂಟವಾಳಕ್ಕೆ ಬಂದಿತ್ತು. ಫಲಿತಾಂಶ ತಿಳಿಯಲಿಲ್ಲ. ಇದರಿಂದ ಊರಿನ ಪ್ರಜೆಗಳ ಸೌಕರ್ಯವನ್ನು ಆಲೋಚಿಸಿ ಅವರನ್ನು ಗಂಡಾಂತರದಿಂದ ತಪ್ಪಿಸುವುದರ ಬದಲಾಗಿ ಸರಕಾರವು ತನ್ನ ಸೌಕರ್ಯವನ್ನೂ ತನ್ನ ನೌಕರರ ಸೌಕರ್ಯವನ್ನೂ ನೋಡಿದಂತಾಯಿತು. ಅಲ್ಲಿಯೇ ಮನೆಗಳನ್ನು ಕಟ್ಟಿ, ಭಂಡಸಾಲೆಗಳನ್ನು ಕಟ್ಟಿ, ಅಂಗಡಿ ಕಟ್ಟಿ, ಹೊಸ ಬಂಟವಾಳ ಮಾಡುವ ಎಂದು ಸರಕಾರವು ಬಂಟವಾಳ ನಿವಾಸಿಕರನ್ನು ಕರೆಯುತ್ತದೆ. ಆದರೆ ಈಗ ಬಂಟವಾಳ ಪೇಟೆ ಇರುವ ಸ್ಥಳವು ವ್ಯಾಪಾರ ಸ್ಥಳವಾದ್ದರಿಂದ ಸಾಹುಕಾರರು ಅದನ್ನು ಬಿಟ್ಟು ಬಿಡುವ ಹಾಗಿಲ್ಲ. ಒಂದು ವೇಳೆ ಈಗ ಇರುವ ಸಾಹುಕಾರರು ಸರಕಾರವು ಹೇಳಿದಂತೆ ಜೋಡು ಮಾರ್ಗಕ್ಕೆ ಅಂಗಡಿ ಭಂಡಸಾಲೆ ಮೈದರೂ, ಧೈರ್ಯವಿರುವ ಇತರ ಸಾಹುಕಾರರು ಹಳೆ ಬಂಟವಾಳದಲ್ಲಿಯೇ ನಿಂತು ವ್ಯಾಪಾರ ನಡಿಸಿದರೆ, ಹೊಸ ಬಂಟವಾಳದಲ್ಲಿ ವಾಸವಾಗಿ ವ್ಯಾಪಾರ ಮಾಡಬಹುದಾದ ಸಾಹುಕಾರರು ದಿವಾಳಿ ತೆಗಿಯಬೇಕಾಗುವದು. ಗಿರಾಯಿಕಿಗಳು ಅಷ್ಟು ದೂರ ಹೋಗಲಿಕ್ಕಿಲ್ಲ.

ಮೇಲೆ ಹೇಳಿದ ಕಟ್ಟೋಣಗಳನ್ನು ಕಟ್ಟಿಸಲಿಕ್ಕೆ ಸರಕಾರಕ್ಕೆ ಎಷ್ಟು ಕಡಿಮೆಯಾದರೂ ಒಂದು ಲಕ್ಷ ರೂಪಾಯಿ ಬೇಕಾಗುವುದು. ಈಗಿರುವ ಕಚೇರಿಯನ್ನೂ, ರಜಿಸ್ಟ್ರಿ ಆಫೀಸನ್ನೂ, ಮಾರಿದರೂ ಏನಾದರೂ ೧೦ ಸಾವಿರ ರೂಪಾಯಿ ಸಿಕ್ಕಬಹುದು. ಆದರೆ ಕೆಳಗೆ ವಿವರಿಸಿದ ಆಲೋಚನೆಯನ್ನೂ ಸರಕಾರವು ಅವಗಾಹನೆಗೆ ತಂದರೆ ಸರಕಾರಕ್ಕೆ ನಷ್ಟವಾಗುವುದರ ಬದಲಾಗಿ ಲಾಭವಾಗುವುದು, ಪ್ರಜೆಗಳಿಗೆ ಸುಖವಾಗುವುದು, ಜಿಲ್ಲೆಯು ಉದ್ಧಾರವಾಗುವದು.

ಕುಮಾರಧಾರಾ ನದಿಯು ಶಿರಾಡಿ ನದಿಯೊಡನೆ ಹರಿದು ಉಪ್ಪಿನಂಗಡಿಗೆ ಬರುವ ಮೊದಲು ಚಿಕ್ಕ ಮುಡನೂರು ಗ್ರಾಮದ ಹತ್ತಿರದಿಂದ ಅದು ಹರಿಯುತ್ತದೆ. ಇಲ್ಲಿ ಈ ನದಿಗೆ ಸುಮಾರು ಒಂದುವರೆ ಮೈಲು ಉದ್ದವಿರುವ ಒಂದು ತೋಡು ಪಶ್ಚಿಮ ದಿಕ್ಕಿನಿಂದ ಹರಿದು ಬಂದು ಕೂಡುತ್ತದೆ. ಈ ತೋಡು ಹುಟ್ಟುವ ಸ್ಥಳದ ಎರಡು ಮೈಲು ಪಶ್ಚಿಮಕ್ಕೆ, ಒಕ್ಕೆತ್ತೂರು ಅಥವಾ ಉಪ್ಪಳ ಹೊಳೆಯು ಹುಟ್ಟುತ್ತದೆ. ಈ ಒಕ್ಕೆತ್ತೂರು ಅಥವಾ ಉಪ್ಪಳ ಹೊಳೆಗೆ ಈ ಕುಮಾರಧಾರಾ ನದಿಯನ್ನು ಕೂಡಿಸಬಹುದು. ಸುಮಾರು ಎರಡು ಮೈಲು ಉದ್ದ ಸುಮಾರು ನೂರು ಅಡಿ ಅಗಲ ಒಂದು ಕಾಲುವೆಯನ್ನು ತೋಡಿದರೆ ಕುಮಾರಧಾರಾ ನದಿಯ ನೀರಿನ ಒಂದು ಅಂಶ ನೀರು ಈ ನದಿಯ ದಾರಿಯಾಗಿ ಹರಿದು ಹೋಗಿ ಮಂಜೇಶ್ವರದ ಹತ್ತಿರ ಸಮುದ್ರವನ್ನು ದಾಟುವುದು. ಆದುದರಿಂದ ನೆರೆಯ ನೀರು ಉಪ್ಪಿನಂಗಡಿಗೆ ಬಾರದಂತೆ ಮಾಡಿದಂತಾಯಿತು. ನೇತ್ರಾವತಿಯಿಂದ ಬರುವ ನೀರು ಕಡಿಮೆ, ಕುಮಾರಧಾರ ನದಿಯಿಂದ ಬರುವ ನೀರು ಅತಿರೇಕವಾಗಿದೆ. ಆದುದರಿಂದ ಈ ಕುಮಾರಧಾರಾ ನದಿಯ ನೀರನ್ನ ತಿರುಗಿಸಿಬಿಟ್ಟರೆ ಉಪ್ಪಿನಂಗಡಿಯಿಂದ ಮಂಗಳೂರಿನ ವರೆಗೆ ನೇತ್ರಾವತಿಯ ದಡಗಳಲ್ಲಿರುವ ಊರುಗಳಿಗೂ ಹೊಲಗದ್ದೆಗಳಿಗೂ ನೆರೆಯ ಹಾವಳಿಯು ತಗಲದೆ ಸುರಕ್ಷಿತವಾಗುವವು.

ಈ ಕಾಲುವೆಯು ಪುತ್ತೂರಿಗೆ ಹತ್ತಿರವಿರುವ ಬೋಳವಾರದಿಂದ ಬರುವುದರಿಂದರಿಂದ ಬೇಸಿಗೆ ಕಾಲದಲ್ಲಿ ನೀರಿಲ್ಲದೆ ಕಷ್ಟಪಡುತ್ತಿರುವ ಪುತ್ತೂರು ಊರಿಗೆ ನೀರಿನ ಸೌಕರ್ಯವನ್ನು ಒದಗಿಸಿದಂತಾಗುವುದು. ಇಲ್ಲಿ ಇದಕ್ಕೆ ಮುಡಿಕೇರಿ, ಮಂಗಳೂರು ಮಾರ್ಗವು ಸಿಕ್ಕುವುದರಿಂದ ಒಂದು ಸೇತುವೆಯನ್ನು ಮಾತ್ರವೇ ಕಟ್ಟಬೇಕಾಗುವುದು. ಒಕ್ಕೆತ್ತೂರು ಸೇತುವೆಗಿಂತ ಸ್ವಲ್ಪ ದೊಡ್ಡದಾದರೆ ಸಾಕಾದೀತು. ಮಂಜೇಶ್ವರ ಅಳುವೆಯು, ಉಪ್ಪಳ ಹೊಳೆಯಲ್ಲಿ ಬೇಸಗೆಯಲ್ಲಿ ನೀರು ಸರಿ ಇಲ್ಲದ್ದರಿಂದ ಹೊಗೆ ಮುಚ್ಚಿಹೋಗಿ ಮಾಪಿಲ ದೋಣಿಗಳಿಗೆ ಬರಲಿಕ್ಕೆ ಸಹ ಆಗುವುದಿಲ್ಲ. ಮಳೆಗಾಲವು ಬರುತ್ತಲೆ ಹೊಳೆಯಲ್ಲಿ ನೀರು ತುಂಬಿ ಸಮುದ್ರಕ್ಕೆ ಹೋಗಲಿಕ್ಕೆ ಅಳುವೆ ಇಲ್ಲದೆ ಬಂಗ್ರಮಂಜೇಶ್ವರ, ಕೀರ್ತೇಶ್ವರ ಮೊಗೆರ ಪಟ್ಟಣ ಮುಂತಾದವುಗಳಲ್ಲಿರುವ ಮೊಗೆರ, ಪುಸಲಾರ ಮತ್ತು ಇತರ ಜಾತಿಯವರ ಮನೆಗಳು ಮುಳುಗುತ್ತವೆ. ಪ್ರತಿ ವರುಷವೂ ಈ ಬಡ ಜನರು ಒಟ್ಟುಕೂಡಿ ಅಳುವೆಯನ್ನು ಒಡಿದು ತಮ್ಮ ಮನೆಗಳನ್ನು ರಕ್ಷಿಸಿಕೊಳ್ಳಬೇಕಾಗುತ್ತದೆ. ಕುಮಾರಧಾರಾ ನದಿಯ ನೀರನ್ನು ಕಾಲುವೆಯ ದಾರಿಯಾಗಿ ಈ ನದಿಗೆ ತಿರುಗಿಸಿದರೆ ಉಪ್ಪಳ ಹೊಳೆಯಲ್ಲಿ ಬಲವಾದ ಪ್ರವಾಹವು ಉಂಟಾಗಿ ಅಳಿವೆಯು ಯಾವಾಗಲೂ ಸರಿಯಾಗಿದ್ದು ದೋಣಿಗಳ ವ್ಯಾಪಾರಕ್ಕೂ ಅನುಕೂಲವಾಗುವುದು. ಬಡವರ ಮನೆಗಳೂ ಮುಳುಗಿ ಅವರು ನೀರಿನ ತೇವದಿಂದ ಕಷ್ಟಪಟ್ಟು ಜ್ವರ, ನೆಗಡಿ, ಕೆಮ್ಮು ಮುಂತಾದ ರೋಗಗಳಿಂದ ಕಷ್ಟಪಡಲಿಕ್ಕೂ ಎಡೆಯಿರಲಾರದು.

ಸುಬ್ರಮಣ್ಯ ಶಿರಾಡಿ ಮುಂತಾದ ಮಲೆಗಳಲ್ಲಿ ಅನೇಕ ಜಾತಿಯ ಮೋಪಿಗಾಗುವ ಮರಗಳೂ, ಕಟ್ಟಿಗೆಗೆ ಆಗುವ ಮರಗಳೂ ಇರುವುದರಿಂದ ಅವುಗಳನ್ನು ತೆಪ್ಪಗಳ ಮೂಲಕವಾಗಲಿ, ದೋಣಿಗಳ ಮೂಲಕವಾಗಲಿ ಪುತ್ತೂರಿಗೂ, ಏಳ್ಳಕಕ್ಕೂ, ಬಂಗ್ರಮಂಜೇಶ್ವರಕ್ಕೂ ಸುಲಭವಾಗಿ ತರಬಹುದು. ಮಂಜೇಶ್ವರದಲ್ಲಿ ದೊಡ್ಡದಾದ ಒಂದು ಮರದ ಡಿಪೋ ಇಡಬಹುದು. ಅಲ್ಲಿಂದ ಮಂಜಿಗಳಲ್ಲಾಗಲಿ, ರೈಲು ಗಾಡಿಯಲ್ಲಾಗಲಿ ಮಂಗಳೂರಿಗೆ ಒಯ್ಯಬಹುದು. ನೀರು, ಕಟ್ಟಿಗೆಯೂ ಪ್ರಿಯವಾದ ಪುತ್ತೂರಿಗೆ ಶುದ್ಧವಾದ ಕುಮಾರಧಾರಾ ನದಿಯ ನೀರನ್ನೂ, ಸುಬ್ರಮಣ್ಯ ಶಿರಾಡಿ ಮಲೆಗಳ ಕಟ್ಟಿಗೆಯನ್ನೂ ಕಡಿಮೆ ಕ್ರಯಕ್ಕೆ ಒದಗಿಸಿದಂತಾಗುವುದು. ಬಿದಿರುಗಳನ್ನು ತೆಪ್ಪಗಳಾಗಿ ಮಾಡಿ ಮಲೆಗಳಿಂದ ತರಬಹುದು.

ಈ ಕಾಲುವೆಗೆ ಉಪಕಾಲುವೆಗಳನ್ನು ಕಡಿದರೆ ಈ ಪ್ರದೇಶದಲ್ಲಿ ಈಗ ಬಂಜರಾಗಿರುವ ಪ್ರದೇಶಗಳನ್ನು ಫಲವತ್ತಾಗಿ ಮಾಡಬಹುದು. ಜನರಿಗೆ ಕೆಲಸವೂ ಊಟಕ್ಕೆ ಧಾನ್ಯವೂ, ಸರಕಾರಕ್ಕೆ ಈಗಿನಗಿಂತ ಹೆಚ್ಚು ಕಂದಾಯವೂ ಸಿಕ್ಕಿದಂತಾಗುವುದು.

ಈ ರೀತಿ ಕಾಲುವೆಯನ್ನು ತೋಡಿಸಿ ಕುಮಾರಧಾರಾ ನದಿಯ ನೀರನ್ನು ತಿರುಗಿಸಿದರೆ ಬಂಟವಾಳಕ್ಕೂ ಪಾಣೆಮಂಗಳೂರಿಗೂ, ಉಪ್ಪಿನಂಗಡಿಗೂ ನೆರೆಯ ಹಾವಳಿಯು ತಪ್ಪಲಿಕ್ಕಿಲ್ಲ. ವ್ಯರ್ಥವಾಗಿ ಸಮುದ್ರಕ್ಕೆ ಹರಿದು ಹೋಗುವ ನೀರನ್ನು ಬೇಸಾಯಕ್ಕೂ ಜನರ ಇತರ ಸೌಕರ್ಯಕ್ಕೂ ಒದಗಿಸಿದಂತಾಗುವುದು. ಬಂಟವಾಳದಲ್ಲಿರುವ ಕಚೇರಿ ಮುಂತಾದ ಸರಕಾರ ಕಟ್ಟೋಣಗಳನ್ನು ಜೋಡುಮಾರ್ಗಕ್ಕೆ ಒಯ್ದು ಮೊದಲೇ ಹಣದ ಅಭಾವವಿರುವ ಸರಕಾರಕ್ಕೆ ವ್ಯರ್ಥವಾಗಿ ಕಷ್ಟಕೊಡುವುದರ ಬದಲಾಗಿ ಕಂದಾಯ ರೂಪದಲ್ಲಿಯೂ, ಇನ್‌ಕಮ್ ಟೇಕ್ಸಿನ ರೂಪದಲ್ಲಿಯೂ ಸರಕಾರಕ್ಕೆ ಈ ಕಾಲುವೆಯಿಂದ ಹೆಚ್ಚು ಲಾಭವಾಗುವುದರಲ್ಲಿ ಏನೂ ಸಂದೇಹ ಇಲ್ಲ. ಈ ವಿಷಯದಲ್ಲಿ ಸರಕಾರದವರು ತಕ್ಕ ವ್ಯವಸ್ಥೆಯನ್ನು ಮಾಡಿದರೆ ಬಡವರ ಗೋಳು ನಿಲ್ಲಿಸಿದಂತಾಗುವುದು.

ಗೀತಾಧರ್ಮ ಮಂಡಳಿ.

ಈ ಮಂಡಳವು ಕಳೆದ ೧೯೨೪ನೇ ಜುಲಾಯಿ ತಿಂಗಳ ತಾ. ೨೩ಕ್ಕೆ ಪೂನಾ ಪಟ್ಟಣದಲ್ಲಿ ಶ್ರೀಯುತ ಎನ್. ಸಿ. ಕೇಳ್ಕರ್ ಬಿ. ಎ. ಎಲ್. ಎಲ್. ಬಿ., ಯಮ್. ಯಲ್. ಎ. ಇವರ ಅಧ್ಯಕ್ಷತೆಯಿಂದ ಸ್ಥಾಪಿಸಲ್ಪಟ್ಟಿತು. ಇವರ ಉದ್ದೇಶಗಳಾವುವೆಂದರೆ: – (೧) ಭಗವದ್ಗೀತೆಯ ಅಧ್ಯಯನವನ್ನು ಜನರು ಹೆಚ್ಚಾಗಿ ಮಾಡುವಂತೆ ಪ್ರೇರೇಪಿಸುವದು. (೨) ಗೀತಾರಹಸ್ಯದಲ್ಲಿ ಲೋಕಮಾನ್ಯ ತಿಲಕರು ಸವಿಸ್ತಾರವಾಗಿ ಬೋಧಿಸುವಂಥಾ ಕರ್ಮಯೋಗ ತತ್ವದ ಪ್ರಚಾರವನ್ನು ಮಾಡುವದು. (೩) ಪ್ರತಿ ವರ್ಷವೂ ಗೀತಾ ಜಯಂತುತ್ಸವವನ್ನು ಆಚರಿಸುವದು. (೪) ಮಂಡಳದ ಮೇಲೆ ಹೇಳಿದ ಈ ಧ್ಯೇಯಗಳನ್ನು ನಡಿಸಲಿಕ್ಕಾಗಿ ಆಯಾಯ ಕಡೆಗಳಲ್ಲಿ ಶಾಖೆಗಳನ್ನು ತೆರೆಯುವುದು.

ಮಂಗಳೂರಲ್ಲಿ ಈ ಮಂಡಳದ ಕಡೆಯಿಂದ ಆಯುರ್ವೇದ ಭೂಷಣ ಯಮ್. ವಿ. ಶಾಸ್ತ್ರಿಯವರ ಔಷಧಾಲಯದಲ್ಲಿರುವ ಶ್ರೀಯುತ ಯಮ್. ಡಿ. ರಿಜ್ವಾಡಕರರು ಸ್ವಯಂಸೇವಕರಾಗಿದ್ದು, ಕಳೆದ ವರ್ಷ ಗೀತಾಜಯಂತಿಯು ದಶಂಬರ ತಿಂಗಳಲ್ಲಿ ಬ್ರಹ್ಮಶ್ರೀ ನಿಡ್ಲೋಡಿ ಅನಂತ ಉಪಾಧ್ಯಾಯರ ಅಧ್ಯಕ್ಷತೆಯಿಂದ, ಇಲ್ಲಿನ ನೇಶನಲ್ ಗರ್ಲ್ಸ್ ಸ್ಕೂಲಿನ ಸಭಾಸದನದಲ್ಲಿ ಆಚರಿಸಲ್ಪಟ್ಟಿತ್ತು. ಆದರೆ ಆ ಸಂದರ್ಭದಲ್ಲಿ ಸರಿಯಾಗಿ ಪ್ರಕಟಗೊಳಿಸದಿದ್ದುದರಿಂದ ಜಯಂತಿಗೆ ಹೆಚ್ಚು ಮಂದಿ ಸೇರಿ ಬಂದಿರಲಿಲ್ಲ.

ಗೀತಾ ಜಯಂತಿಯು ಪ್ರತಿವರ್ಷವೂ ಮಾರ್ಗಶಿರ ಶುದ್ಧ ಏಕಾದಶಿಯ ದಿನ ಆಚರಿಸಲ್ಪಡುವುದು. ಈ ವರ್ಷ ಆ ದಿನವು ಇದೇ ನವಂಬರ ತಾರೀಕು ೨೬ನೇ ಗುರುವಾರಕ್ಕೆ ಬೀಳುತ್ತದೆ. ಅಂದು ಅಪರಾಹ್ನ ೫ ಗಂಟೆಗೆ ಸದರಿ ಜಯಂತುತ್ಸವವನ್ನು ಇಲ್ಲಿನ ನೇಶನಲ್ ಗರ್ಲ್ಸ್‌ಸ್ಕೂಲಿನಲ್ಲಿ ಜರಗಿಸಬೇಕೆಂದು ನಿಶ್ಚೈಸಿರುವದರಿಂದ ಮಂಗಳೂರು ಹಾಗು ಇತರ ಕಡೆಯ ಹಿಂದೂ ಮಹಾ ಜನಗಳೆಲ್ಲರೂ ಚಿತ್ತೈಸಿ, ಈ ಉತ್ಸವವನ್ನು ಸಾಂಗಗೊಳಿಸಬೇಕಾಗಿಯೂ, ಇಲ್ಲಿ ಯಾವ ರೀತಿಯಲ್ಲಿ ಮೇಲಿನ ಮಂಡಳದ ಶಾಖೆಯೊಂದನ್ನು ತೆರೆಯಬರುದೆಂಬುದರ ಕುರಿತು ಬೇಕಾದ ಸೂಚನೆಗಳನ್ನು ಕೊಡಬೇಕಾಗಿಯೂ ಈ ಕೆಳಗೆ ದಸ್ಕತು ಮಾಡಿದವರ ಸವಿನಯ ವಿನಂತಿಯಿದೆ.

ನಿಡ್ಲೋಡಿ ಅನಂತ ಉಪಾಧ್ಯಾಯ.
ಯಸ್. ರಾಮಚಂದ್ರ ಅಯ್ಯರ್.
ಯಮ್. ಡಿ. ರಿಜ್ವಾಡ್‌ಕಾರ್.
ಗೀತಾಧರ್ಮ ಮಂಡಳದ ವೊಲಂಟಿಯರ್.

ವಿವಿಧ ವಿಷಯಗಳು.

೧ ರೂಪಾಯಿಗೆ ಒಂದು ಚೀಲ ಅಕ್ಕಿ.

ಒಂದು ಚಮತ್ಕಾರ! ಒಬ್ಬ ಸನ್ಯಾಸಿಯು ಕೆಲ ಮೋಟಾರು ಪ್ರಯಾಣಿಕರಿಗೆ ಒಂದು ಅಪೂರ್ವ ದೃಶ್ಯ ತೋರಿಸಿದನು. ಪ್ರಯಾಣಿಕರು ತುತ್ತುಕುಡಿಯಿಂದ ಮೋಟಾರಿನಲ್ಲಿ ಕೂತು ಕೋಟೆಗೆ ಹೋಗುತ್ತಿದ್ದರು. ಸನ್ಯಾಸಿಯು ಮಧ್ಯದಲ್ಲಿ ಭೆಟ್ಟಿಯಾದನು. ಪ್ರಯಾಣಿಕರನ್ನು ಇಳಿಸಿಕೊಂಡನು. ೩ ಗವಿಗಳನ್ನು ತೋರಿಸಿದನು. ಒಂದು ಗವಿಯಲ್ಲಿ ನೋಡಲು, ಒಬ್ಬ ಮಾನವನು ಇನ್ನೊಬ್ಬನನ್ನು ಕಿತ್ತು ತಿನ್ನುತ್ತಿದ್ದನು. ೨ನೇ ಗವಿಗೆ ಹೋಗಿ ನೋಡಲು ಒಂದು ಸೇರು ಅಕ್ಕಿ ಇತ್ತು; ಅದರೊಡನೆ ಒಂದು ರೂಪಾಯಿ ಇತ್ತು. ೩ನೇ ಗವಿಯನ್ನು ನೋಡಲು ಒಂದು ಚೀಲ ಅಕ್ಕಿ ಒಂದು ರೂಪಾಯಿ ಇತ್ತು. ಇದೆಂಥ ಚಮತ್ಕಾರ! ಇವುಗಳ ಗೂಢಾರ್ಥವೇನು? ಎಂದು ಪ್ರಯಾಣಿಕರು ಸನ್ಯಾಸಿಗೆ ಪ್ರಶ್ನಿಸಿದರು. ಅದಕ್ಕೆ ಸನ್ಯಾಸಿಯು ಉತ್ತರಿಸಿದ್ದೇನೆಂದರೆ: – ಕ್ರೋಧನ ಸಂವತ್ಸರದಲ್ಲಿ ಮನುಷ್ಯನು ಮನುಷ್ಯನನ್ನು ಕಿತ್ತು ತಿನ್ನುವನೆಂದೂ, ಅಕ್ಷಯ ಸಂವತ್ಸರದಲ್ಲಿ ರೂಪಾಯಿಗೊಂದು ಸೇರು ಅಕ್ಕಿ ಯಾಗುವದೆಂದೂ, ಪ್ರಭವ ಸಂವತ್ಸರದಲ್ಲಿ ರೂಪಾಯಿಗೆ ಒಂದು ಚೀಲ ಅಕ್ಕಿ ದೊರೆಯುವದೆಂದೂ ಸನ್ಯಾಸಿಯು ಹೇಳಿದನು. ಪ್ರಯಾಣಿಕರೊಡನೆ ಕೆಲ ಹೊತ್ತು, ತುತ್ತುಕುಡಿಯ ಬದಿಗೆ ಹೋದನು. ಸ್ವಲ್ಪ ಹಿಂದು ಮುಂದ ನೋಡುವಷ್ಟರಲ್ಲಿ ಸನ್ಯಾಸಿಯು ಮಾಯವಾದನು!

[ಕಾನಡಾವೃತ್ತ]

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ: – ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1–4–0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ: – ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3–12–0, ಅಂಚೆ ವೆಚ್ಚ ಬೇರೆ.

ಸ್ಮೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು – ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರು ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2–0–0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆಶ್ಚರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0–4–0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank Limited, Mangalore.

ಕನರಾ ಬ್ಯಾಂಕ್ ಲಿಮಿಟಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000–0–0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000–0–0
Reserve and other sinking Funds „ 259,000–0–0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000–0–0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧–೦–೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦–೧೨–೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ – ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ – ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೭ಕ್ಕೆ ೧–೪–೦, ೧೨ ಸೀಸೆಗೆ ೨–೭–೦, ೨೫ ಸೀಸೆಗೆ ೪–೧೦–೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು: –
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

Free! Free!! Free!!!
ಪ್ರಸಿದ್ಧವಾದ
"ಕಾಮಶಾಸ್ತ್ರ"
ಈಗಲೆ ತಯಾರಾಗಿದೆ.
ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಅತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ತುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿತ ಕಾಫಿ ಕ್ಲಬ್. ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | ## ವಜ್ರಾಂಗ-ಬಿಂದು | ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಶರ್ತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಉಪ್ಪುನಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ, ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬವಳ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧–೪–೦. ೩ ಬಾಟ್ಲಿಗಳಿಗೆ ರೂ. ೩–೪–೦. ೧೨ ಬಾಟ್ಲಿಗಳಿಗೆ ರೂ. ೧೦–೦–೦.

ಇದರ ಜೊತೆತು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲು ಮತ್ತು ಪ್ಯಾಕಿಂಗ ಖರ್ಚು ಬೇರೆ ಕೊಡುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ನಿಪ್ಪಾಣೀ, (ಜಿಲ್ಲಾ ಬೆಳಗಾಂವ.)

The Canara Public Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯು ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯು ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.



ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

—ಗೋಡೆಗೆ ತಗಲಿಸುವ ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಖರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವವು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜಿ. ಯು. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನೂ ದೂರ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಶೀಸೆ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಆ ಮೃ ತಾ ಶ್ರ ಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು — ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟಿನ ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ರದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦.

ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦.

ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್,
"... ಮಿಸ್ರಿ"
ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್,
ಡಿಲ್ಲಿ ನೇಟಿವ್ ಡಾಕ್ಟರ್.
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

Registered: No. M. 498.

ಚಂದಾನೀತಿಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷದ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತ ೧೯. ಮಂಗಳೂರು, ತಾರೀಕು ೨೭ನೇ ಶುಕ್ರವಾರ ನವಂಬರ ೧೯೨೫. ಸಂಚಿಕೆ ೪೮.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. ಹೆಡ್ ಆಫೀಸ: ಉಡುಪಿ.
Branch: COONDAPOOR. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ಮೌಲ್ಯಕತ್ತ ಮೂಲಧನ	ರೂ. 1,73,185—9—11.
ಆಪದ್ಧನ ವಗೈರೆ ಎತ್ತಗಳು	ರೂ. 64,700—0—0.
ಸಾ. ಸೇ. ೬ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಐವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ಮೌಲ್ಯಕತ್ತ ಮೂಲಧನ 1,73,185-9-11, ಆಪದ್ಧನ ವ ಇತರ ಎತ್ತಗಳು 64,700-0-0, ಠೇವಣಾತಿಗಳು 5,10,077-10-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4371-0-0, ಐವೇಜಿನ ಮೇಲಣ ಈ ವರಗಿನ ಬಡ್ಡಿ ಕೂಡ ಇತರ ಬಾಬುಗಳು 93,340-10-5, ಜುಮ್ಲಾ ರೂ. 8,45,674-14-7.

ಆಸ್ತಿ ವ ಸೊತ್ತುಗಳು.

ಹಿತ್ಲು ಕಟ್ಟೋಣ ಕಟ್ಟಿದವ ಟ್ರಜರಿಗಳು ವಗೈರೆ 4134-4-0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496-6-2, ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ 25,800-0-0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371-0-0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡ) 41,741-14-2, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 26,131-6-3, ಜುಮ್ಲಾ ರೂಪಾಯಿ 8,45,674-14-7.

ನಿರಖು ಠೇವಣಾತಿಗಳನ್ನು ಕಾಲಕ್ಲೃಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. ೬½ರ ದರದ ಬಡ್ಡಿ ಮೇಲೂ, ಮುಸಿನ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯದಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸರಕಾರಿ ಹುಂಡಿಗಳನ್ನೂ, ವಜ್ಞಾಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಐವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

N. Anand Rao,
Secretary.

ಪಂಡಿತ ಬಿ. ರಾಮಕೃಷ್ಣ ಬಾಳಿಗರ:

50 ವರ್ಷ ಅನುಭವದ ಸಿದ್ಧೌಷಧಗಳು

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಭಂಗಾರ, ಅಭ್ರಕಭಸ್ಮ, ಬಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅನಮೋಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ... ರೋಗಗಳನ್ನೂ ಸ್ವಪ್ನಾವಸ್ಥೆಯಲ್ಲಿ ಧಾತು ಪತನವನ್ನೂ ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಅತ್ಯಾನಂದವನ್ನು ಕೊಡುವುದಲ್ಲದೆ, ಅರ್ಶ, ಅತಿಸಾರ, ಗ್ರಹಣಿ, ಅಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಆಬಾಲವೃದ್ಧರೂ ಸೇವಿಸಬಹುದು.

43 ದಿನಗಳ ವರೆಗೆ ಸಾಕಾಗುವ ಲೇಹ ಸೇರು ೧ರ ರೂ. 3—0—0.

ಬ್ರಹತ್ ಶಾರಿವಾದ್ಯಾದಿ ರಸಾಯನ—ಇದು ಅತ್ಯುತ್ತಮವಾದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಖಾತ್ರಿಯಿಂದ ಗುಣಪಡಿಸುವುದು.

8 ಔನ್ಸ ಬಾಟ್ಲಿ ಒಂದರ ಕ್ರಯ ಬರೇ ರೂ. 1—9—0.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

ಮಂಗಳೂರು ಏಜಂಟರು:— ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ತೇರುಬೀದಿ, ಮಂಗಳೂರು.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತ್ತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮೂರ್ರು ದಿವಸಗಳಲ್ಲ, ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ] ಅಗಸ್ತ್ಯ [ನೋಡಿ ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಜಿಸ್ಟರ್ ಆದದ್ದು)

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಇಪ್ಪತ್ತೆಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3-0-0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ವಿಳಾಸ:— ದೇವಣ್ಣ ನಾರಾಯಣ ಸೇಟ್,
..., ...,
ಮಂಗಳೂರು, (ದ. ಕ.)

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಕೊಡುವುದಕ್ಕೆ ನಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು, ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡುತ್ತೇವೆ.

ಗುರ್ಪುರ್‌ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಬೇರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾಂಕ್ಕ ಸಮೀಪವಿರುವ ಮಳಿಗೆ,) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ (ಕೇಂದ್ರಸ್ಥಳಗಳಾದ—ಬನಾರಸ್, ..., ಅಹಮ್ಮದಾಬಾದ್, ಸುರತ್, ಬೆಂಗಳೂರು ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಶಾಂಭಕೋಣ, ಅರ್ನಿ, ಪಾಡಿಪೇಟೆ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಶಾಲು, ಧೋತ್ರ, ರೇಷ್ಮೆ ಸೀರೆಗಳು, ಆರಣಿಪೇಟೆ ಸೀರೆಗಳು, ... ರೇಷ್ಮೆ, ..., ಜರಿ ಅಂಚಿನ ಸೀರೆಗಳು, ರೇಷ್ಮೆ ಮುಂಡುಗಳು, ನಿತ್ಯ ಉಪಯೋಗದ ಸೀರೆಗಳು ಬನಿಯನ್, ... ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೊಪಿ, ಖದ್ದರ್ ಧೋತ್ರ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ ಸೂಟಿಗ ವಗೈರೆ—

ಎಲ್ಲ ಸಂಗ್ರಹವನ್ನೂ ನಮ್ಮ ... ಸಂಗ್ರಹಿಸಿ ತಂದಿರುತ್ತಾರೆ.

... ರೂ. 50ರಿಂದ 250ರವರೆಗೆ ... 10%, ರೂ. 250 ರಿಂದ 1000ಕ್ಕೆ 12½% ...

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 6 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0
ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬೈಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ ರೂ. 7—0—0. ಫ್ರೆಂಚ್ ಬೆಡ್ ಫೂಮೋಗಳು ಡಜನ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಕಂ ... ... ೨-೦-೦.

೧೨ ಪ್ಯಾಕೆಟ್ ನಾಟ ತರಕಾರಿ ಬೀಜಗಳು ೧೨ ರಕಂ ... ... ೧-೧೨-೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಕಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಖರ್ಚುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಗಿಗೆ, ವಿ. ಪಿ ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತಳಿಯವುಗಳು. ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0
9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಗೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸಹಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಕಾಲ್ಪಿ ನಿಂತ್ಯವೆಂತಿದ್ದ ಮಾದಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿರಿಸಿಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮಿಸಿ, ನಿದ್ರಾಭಂಗವನ್ನು ತಡೆದು ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಹೊರಗೆ ಹಾಯುವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಖಾನೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ, ಮಂಗಳೂರು.

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾಂಕ್ಯವು ... ...
(6) ಷಟ್ಪಂಚಾಶತ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ... ...
(10) ಕಾಲನಿರ್ಣಯಜ್ಯೋತಿಷ್ಯ ಗ್ರಂಥ ... ...
(11) ಸವ್ಯಾಖ್ಯಾನ ಕಾಲಾಮೃತ... ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭ್ರಮರಿ ಷಟ್ಪದ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣದಾಸಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(1[illegible]) ಜೋಷ್ಯರ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀಕ್ಷಾಮೃತೋದ ಕಥಾ ... ...
(18) ಚಂದ್ರಮಾಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷಾಗೃಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಚ ಕಥೆ ...
(26) „ ಗೋವಿನ ಚರಿತ್ರೆ ... ...
(27) „ ದುಶ್ಯಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿರಹಿಮ ... ...
(5) ಪ್ರಬಂಧ ಮುಕ್ತಾವಳಿ ... ...
(1) ಹರಿಕೀರ್ತನಾಮೃತಸಾರ
(2) ಹರಿನಾಮಾಮೃತಂ.
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ಯಾಳೀಕನ ಹಾಡು ... ...
(6) ಯಕ್ಷಗಾನ ಗೀತ ಹಾಡು ... ...
(7) ಕನಕದಾಸ ಕಬೀರದಾಸರ ಕೀರ್ತನೆಗಳು ...
(8) ಬೀಗರ ಹಾಡು ... ...
(9) ಭಜನೆಯ ಪದಗಳು ... ...

ಪುಸ್ತಕಗಳು ದೊರೆಯುವ ಸ್ಥಳ:— **ಶಾರದಾ ಛಾಪಖಾನೆ,**
ರಥಬೀದಿ, ಮಂಗಳೂರು.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ|ರದ ಮಾರ್ಗಶಿರ ಶು|೧೩ ಶನಿವಾರದಿಂದ ಕ್ರೋಧನ ಸಂ|ರದ ಮಾರ್ಗಶಿರ ಬ|೪ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ವೃಶ್ಚಿಕ ಚಾರ್ಟ.)

ತಾರೀಕು	ವಾರ	ತಿ.	ಘಳಿಗೆ.	ನಕ್ಷತ್ರ	ಘಳಿಗೆ.	ದಿನಮಾನ.	ಸೂರ್ಯ ಉ.	ಸೂರ್ಯ ಅಸ್ತ.
28	ಶನಿ	೧೩	೨೧. ೨	ಭರಣೀ	೫೩.೧೪	೧೩	6.29	6. 1
29	ರವಿ	೧೪	೨೦. ೫	ಕೃತ್ತಿಕಾ	೫೮. ೦	೧೪	6 29	6. 1
30	ಸೋಮ	○	೨೦.೩೧	ರೋಹಿಣೀ	೬೦. ೦	೧೫	6.40	6. 1
1	ಕುಜ	೧	೨೨ ೨೯	ರೋಹಿಣೀ	೧. ೦	೧೬	6.40	6. 1
2	ಬುಧ	೨	೨೫.೫೬	ಮೃಗಶಿರಾ	೫ ೧೬	೧೭	6.41	6. 2
3	ಗುರು	೩	೩೦.೧೪	ಆದ್ರಾ	೧೦.೩೨	೧೮	6.41	6. 2
4	ಶುಕ್ರ	೪	೩೫.೧೬	ಪುನರ್ವಸು	೧೬.೩೧	೧೯	6.42	6. 2

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಅಧಿಕಾಧಿಕ	Minimum ಅಲ್ಪಾತಿ	Rainfall. ಮಳೆ ಇಂದಿನ ಮಳೆ	ಜುಮಲಾ ಮಳೆ.
20	96—0	73—3	0—75	—
21	93—5	77—2	—	—
22	90—8	73—8	—	—
23	93—1	71—5	—	—
24	93—4	70—5	—	—
25	89—8	70—9	—	—
26	91—6	70—2	—	—

ಮಂಗಳೂರಿನ ಪೇಟೆ ಧಾರಣಿ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ	8— 8	9— 4
ಗುಡ್ಡು ...	8— 1	8— 6
ರಾತಿ ಸುಗ್ಗಿ ...	7— 4	8— 2
ಅವ್ವಲ್ ಬೆಳ್ತಿಗೆ ...	8—12	9— 8
ಹೊಸ ರಾತಿ ...	7— 0	7— 5
ರಂಗೂನು ಬೆಳ್ತಿಗೆ ಗೋಣಿ ೧ ...	13— 8	14 - 8
ಗೋದಿ ಗೋಣಿ ೧ಕ್ಕೆ ...	18— 0	20— 0
ಸಾಮುಳಗೋಣಿ ೧ಕ್ಕೆ ...	9— 0	9— 8
ಚಣಗೋಣಿ ೧ಕ್ಕೆ ...	13— 0	14— 0
ಕೊಗರಿಗೋಣಿ ೧ಕ್ಕೆ ...	13— 0	13— 8
ತೊಗರಿಬೇಳೆ ಗೋಣಿ ೧ಕ್ಕೆ ...	16— 0	22— 0
ಉದ್ದು ಗೋಣಿ ೧ಕ್ಕೆ ...	16— 8	17— 0
ಹೆಸರುಗೋಣಿ ೧ಕ್ಕೆ ...	14— 8	15 - 8
ಊರು ಬೆಲ್ಲ ಖಂಡಿ ೧ಕ್ಕೆ ...	57— 8	60— 0
ಉಪ್ಪು ಗೋಣಿ ೧ಕ್ಕೆ ...	4— 0	4— 8
ಕೊಬ್ಬರಿ ಖಂಡಿ ೧ಕ್ಕೆ ...	120— 0	125 — 0
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ ...	48— 0	—
ಎಳ್ಳಿಂಡಿ ಖಂಡಿ ೧ಕ್ಕೆ ...	43—12	45— 0
ಕೊಬ್ಬರಿ ಎಣ್ಣೆ ಮುಡಿ ೧ಕ್ಕೆ ...	8—12	9— 8
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	11— 0
ಹಿಪ್ಪೆ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4— 6	4— 8
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	8— 0	9— 0
ಸಾಸಿವೆ ಮುಡಿ ೧ಕ್ಕೆ ...	9— 0	—
ಕೊತ್ತಂಬರಿ ಮುಡಿ ೧ಕ್ಕೆ ...	3—14	4— 0
ಕಾಫಿ ಖಂಡಿ ೧ಕ್ಕೆ ...	345— 0	—
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹೊಳಪು ...	275— 0	290— 0
ಕಾಳುಮೆಣಸು ಖಂಡಿ ೧ಕ್ಕೆ ...	260— 0	265— 0
ಯಾಲಕ್ಕಿ ಮುಡಿ ೧ಕ್ಕೆ ...	45— 0	55— 0
ಗೇರುಬೀಜ ಮುಡಿ ೧ಕ್ಕೆ ...	4— 8	—
ಕಬ್ಬಿಣ ಖಂಡಿ ೧ಕ್ಕೆ ...	45— 0	65— 0
ಹಾಂಬು ತಗಡು ಮುಡಿ ೧ಕ್ಕೆ ...	16-10	16—12
ತಾಮ್ರ, ಪಾತ್ರೆಗಳು ಮುಡಿ ೧ಕ್ಕೆ ...	21— 0	—
ಜೀನಿ ಬೆಳ್ಳಿ ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮುಡಿ ೧ಕ್ಕೆ ...	16— 8	
ಪವನು	13— 7	

ಕನ್ನಡಿಗರೇ! **ವಸಂತ.** ಕನ್ನಡಿಗರೇ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . ವಸಂತ
ಸಮಾಜಸುಧಾರಕನೆಂದರೆ . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . ವಸಂತ
ದೇಶವಿದೇಶ ಬಂಧುವೆಂದರೆ . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರಾನ್ ¼ ಪುಟ ಸ್ಯಾಜಿನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2-8-0.
„ ಸ್ಥಳೀಕರಿಗೆ ... „ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ತ್ವರೆ ಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್ —ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಸಿ. ಎಫ್. ಎಮ್. ರಾಮರಾವ್, ಎಲ್. ಎಮ್. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ... ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಇರುವ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡಿಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಷ್ಮೆ ಮಡಿಗಳು, ಶಾಮರ್ಗಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೊ ಫ್ರೇಮುಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸು, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—12—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

Advertisers Note.

A SPECIAL ISSUE OF SPECIAL IMPORTANCE AND

Concetrated interest with wide circulation.

This is your Opportunity.

Our fortnightly paper, **THE SARASWATH** will appear in the beginning of December, in a most attractive special issue printed on glaze paper, art paper bound and profusely illustrated.

ADVERTISE & REAP THE BENEFITS OF VERNACULAR ADVERTISEMENT.

RATES MODERATE.

Apply:— **Secretary,**
THE SARASWATH,
UDIPI.

NOTICE.

IN THE COURT OF THE DISTRICT MUNSIFF OF KARKAL.

O. S. No. 550/1925.

... Saheb & others—Plaintiffs.

Hayat Mahamad Eusuff Alias Sabjan Saheb & another } Defendants.

Take notice that the above said four persons on behalf of the Mahammadan community in Karkal have filed a suit for possession of S. No. 135/3 of Karkal Kasba as the said plot was assigned to the 1st. defendant Eusuff Saheb for the keeping of the Taboot during the Moharam of every year and for the celebration of the Alabi every year. Any person objecting to the same may file his objections in the Court Specified on 30—11—1925.

K. L. Kudva,
Pleader for Plaintiffs.

16—11—1925.

ಮಾರಾಟಕ್ಕೆ ಸಿದ್ಧವಿದೆ!   ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ನೋಟೀಸು,

ದಕ್ಷಿಣ ಕನ್ನಡ ಒಫಿಶಿಯಲ್ ರಿಸೀವರ ಕೋರ್ಟಿನಲ್ಲಿ

ದಿವಾಳಿ ಅರ್ಜಿ ನಂಬ್ರ 88/1925.

ಮಾರ್ಶಿಲ್ ಸೆಬೆಸ್ತಿಯಾನ್ ವೇಗಸ್—ರುಜಾರಿಯೊ ವೇಗಸರ ಮಗ, ಮಂಗಳೂರು ತಾಲೂಕು ಪೆರಮುನ್ನೂರು ಗ್ರಾಮದಲ್ಲಿರುವವ } ಅರ್ಜಿದಾರ.

1 ಜೋನ್ ಸೋಜ, 2 ರೊಮಾಂವ್ರ ಡಿ'ಸೋಜ,
3 ಬೆಂಜಮಿನ ಡಿ'ಸೋಜ, 4 ಅಕ್ಕಾವರ ರಾಮರಾವ್,
5 ಜೋನ್ ಡಿ'ಸೋಜ, 6 ಅಲ್ಲು ಬ್ಯಾರಿ,
7 ದನುಮಂತ ನ್ಯಾಕ, 8 ಜೆ. ಎನ್. ರೆಬೆಲ್ಲೊ } ಸಾಲಿಗರು.

ಸದರಿ ಅರ್ಜಿದಾರನು ದಾಖಲುಮಾಡಿದ ಸದರಿ ದಿವಾಳಿ ಅರ್ಜಿಯು ತಾ. 28—11—1925ನೇ ದಿವಸ ಮಧ್ಯಾಹ್ನ ಘಂಟೆ 2ರ ಸಮಯ ತನ್ಕಿಗೆ ತೆಗೆಯಲ್ಪಡುವುದು. ಅದನ್ನು ಆಕ್ಷೇಪಿಸುವವರು ಆ ದಿವಸ ಜಾಹೀರುಮಾಡಿಕೊಳ್ಳತಕ್ಕದ್ದು.

ಮಂಗಳೂರು, ತಾ. 20-11-'25. } A. C. GONSALVES,
Vakil.

COCOANUT ESTATE FOR SALE.

ABOUT 154 ACRES UNDER COCOANUTS NEAR TRIKARPUR & CHARVATTUR SOUTH CANARA.

Part coming into bearing shortly, Price Rs. 75,000/-, no offers.

For particulars apply to:—

H. R. Lockie,
C/o Peirce, Leslie & Co., Ltd.,
CALICUT.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಜಡ್ಜರ ಕೋರ್ಟಿನಲ್ಲಿ,

O. P. ನಂಬ್ರ 111/'25.

ಅನಂತ ಭಟ್ಟ—ಅರ್ಜಿದಾರ.

ಮೃತಪಟ್ಟಿರುವ ಶ್ರೀನಿವಾಸ ಭಟ್ಟರ ಮ್ಯಾನರ್ ಮಗ ಕೃಷ್ಣನ ಆಸ್ತಿ ಗಾರ್ಡಿಯನಾಗಿ ತನ್ನನ್ನು ನೇಮಿಸಬೇಕಾಗಿ ವಗೈರೆ ಅರ್ಜಿದಾರನು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಅರ್ಜಿಯು ತಾ. 14—12—'25ಕ್ಕೆ ತನಕಿಗೆ ಇಟ್ಟಿರುವುದರಿಂದ ಯಾರಾದರೂ ಆಕ್ಷೇಪಿಸುವವರು ಸದರಿ ತಾರೀಕಿಗೆ ಮೇಲ್ಕಂಡ ಕೋರ್ಟಿಗೆ ಮನವಿಮಾಡಿಕೊಳ್ಳಬಹುದು.

ಮಂಗಳೂರು, ತಾ. 21-11-'25. } (sd) P. SANJIVA RAO,
Vakil for Petitioners.

The Canara Bank Ltd., Mangalore,
ದಿ. ಕೆನರಾ ಬ್ಯಾಂಕು ಲಿಮಿಟೆಡ್, ಮಂಗಳೂರು.

ನೋಟೀಸು.

ಇದೇ 1925ನೇ ಇಸವಿ ನವಂಬರ ತಾರೀಕು 6ನೇ ಸ್ವದೇಶಾಭಿಮಾನಿ ವಾರಪತ್ರಿಕೆಯಲ್ಲಿ ಪ್ರಕಟಿಸಿದ ನೋಟೀಸಿಗೆ ಅನುಸಾರವಾಗಿ ಈ ಕೆಳಗೆ ಹೆಸರುಕಾಣಿಸಿದವರ ಬಾಬ್ತು ನಗಗಳನ್ನು ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿಬಂದ ಐವೇಜಿನಲ್ಲಿ ಬ್ಯಾಂಕಿಗೆ ಬಹಾ ಅಸಲು ಬಡ್ಡಿ ವಗೈರೆ ಮೊಬಲಗು ಕಳದು ಬಾಕಿ ಇರುವ ಮೊಬಲಗನ್ನು ಸದರಿಯವರು ಪಡಕೊಂಡು ಹೋಗತಕ್ಕದೆಂತಲೂ, ಹಾಗೆ ಕೊಂಡುಹೋಗುವ ವರೆಗೆ ಸದರಿ ಐವೇಜು ಅಮಾನತು ಇಟ್ಟಿರುವದಾಗಿಯೂ ಅದಕ್ಕೆ ಬಡ್ಡಿ ಸಿಕ್ಕಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸೋಣಾಗುತ್ತದೆ.

ಷರಾ—ಐವೇಜು ಕೊಂಡುಹೋಗುವಾಗ ಈ ನೋಟೀಸಿನ ಖರ್ಚು ಕೊಡತಕ್ಕದ್ದು.

ಹೆಸರು	ಏಲಮಿನಲ್ಲಿ ಹುಟ್ಟಿ ಬಂದ ಮೊಬಲಗು.	ಬ್ಯಾಂಕಿಗೆ ಬಹಾ ಅಸ್ಲು ಬಡ್ಡಿ ವಗೈರೆ	ಬಾಕಿ ಉಳಿದ ಮೊಬಲಗು.
ಅಕ್ಕಮ್ಮಾ	ರೂ. 57-8-0	ರೂ. 53-3-8	ರೂ. 4-4-4
ಕೆ. ವರದರಾವ್	„ 66-0-0	„ 64-7-0	„ 1 9-0.
ಹಮ್ಮದಕುಟ್ಟಿ	„ 45-0-0	„ 63-8-7	„ 1-7-5.

Canara Bank, Ltd Mangalore. 25—11—1925. } K. Venkat Rao.
Secretary.

ಧರ್ಮಸ್ಥಳದ ಲಕ್ಷದೀಪದ ಸಮದಲ್ಲಿ ನಡೆದ ಕೃಷಿಪ್ರದರ್ಶನ.

[illegible]

ತಾ. ೧೯ರಿಂದ ೧೮ರ ವರೆಗೆ ಈ ಜಾತ್ರೆಗೆ ನೆರೆದ ಪರಸ್ಥಳದ ಯಾತ್ರಿಕರ ಸಂಖ್ಯೆಯು ೫೦೦೦ರಿಂದ ೭೦೦೦ದ ವರೆಗಿದ್ದಿತು. ಕೃಷಿಪ್ರದರ್ಶನಾಲಯವು ಪ್ರಾಮುಖ್ಯ ಸ್ಥಳದಲ್ಲಿ ತೆರೆಯಲ್ಪಟ್ಟಿದ್ದು ಅತ್ತ ಇತ್ತ ಹಾದು ಹೋಗುವ ಜನರನೆಲ್ಲಾ ಆಕರ್ಷಿಸುತ್ತಿತ್ತು. ಪ್ರದರ್ಶನದ ವಸ್ತುಗಳಲ್ಲಿ [illegible]

... genous and Phosphatic) ... [illegible]

ಕೆ. ಎಸ್. ರಾಮಣ್ಣ ರೈ,
ಎಗ್ರಿಕಲ್ಚರಲ್ ಡೆಮೋನ್ಸ್ಟ್ರೇಟರ್,
ಪುತ್ತೂರು.

ಅಪೂರ್ವ ಸಂದರ್ಭ.

ಉತ್ತಮ ಮ್ಯಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚುಗಳು ಆರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ ಮಾರಲ್ಪಡುವವು.

ರೂ. 15—12—0ರ ವಾಚು ರೂ. 7—8—0 ಕೊಡಲ್ಪಡುವುದು.



ಬೇಕಾದವರು ತ್ವರೆಮಾಡಿರಿ.

ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್, ಮುಂಬಯಿ.

[illegible]

ವಿದೇಶ ವರ್ತಮಾನ.

—ದಡ್ರುಸರು ಸ್ವಾತಂತ್ರ್ಯವನ್ನು ಕೇಳಿಕೊಂಡಿರುವರು ಮತ್ತು ದಮಾಸ್ಕಸಿನಲ್ಲಿ ಮಾರ್ಶಲ್ ಲೊವನ್ನು ಜಾರಿಗೆ ತಂದಿರುವರು.

—ಗ್ರೀಕ್ ನಗರದ ಎಡನ್ಸ್ ಎಂಬಲ್ಲಿ ನೆರೆಯು ಸಂಬಂಧ ಹೆಚ್ಚು ಜನರು ಸತ್ತಿರುವರೆಂದು ತಿಳಿದುಬರುತ್ತದೆ.

—ದಕ್ಷಿಣ ಅಮೇರಿಕದ ಮೆಕ್ಸಿಕೊ ರಾಜ್ಯದಲ್ಲಿ ಜಿಹುತಾನೆಜ ಎಂಬ ಸಣ್ಣ ತೀರ ಪಟ್ಟಣದ ಮೇಲೆ ೩೫ ಅಡಿ ಎತ್ತರವಿದ್ದ ಸಮುದ್ರದ ಅಲೆಯು ಉರುಳಿ ಎರಡು ಗಂಟೆಗಳ ಕಾಲ ಊರನ್ನು ಮುಳುಗಿಸಿಬಿಟ್ಟದ್ದಿತು. ಅಲ್ಲಿನ ಜನ ಸಮುದಾಯದಲ್ಲಿ ಬಹುಮಂದಿ ಹತರಾಗಿರಬೇಕೆಂದು ಊಹಿಸಲಾಗಿದೆ. ನಷ್ಟವೆಷ್ಟೆಂಬುದು ಇನ್ನೂ ಪರಿಷ್ಕಾರವಾಗಿಲ್ಲ.

—ರಷ್ಯಾರಾಜ್ಯದ ರಾಜಧಾನಿಯಾದ ಲೆನಿನ್‌ಗ್ರಾಡಿನಲ್ಲಿ ಸರಕಾರಿ ಹಣವನ್ನು ತಿಂದುಹಾಕಿದರೆಂದು ೧೨೩ ಮಂದಿ ಅಧಿಕಾರಿಗಳನ್ನು ಸರಕಾರದವರು ವಿಚಾರಣೆ ಮಾಡಿ, ಮುಖಂಡರಾದ ೧೨ ಮಂದಿಗೆ ಮರಣದಂಡನೆಯನ್ನು ವಿಧಿಸಿ; ನಿರಪರಾಧಿಗಳಾದ ೩೦ ಮಂದಿಯನ್ನು ಬಿಡುಗಡೆ ಮಾಡಿ ಉಳಿದವರಿಗೆಲ್ಲಾ ಬೇರೆ ಬೇರೆ ಅವಧಿಯ ಕಾರಾಗೃಹವಾಸವನ್ನು ವಿಧಿಸಿರುವರು.

—ಇಜಿಪ್ತದ ತುತಾಖಾನ ಎಂಬಲ್ಲಿ ಒಂದು ಹೆಣವಿದ್ದ ಪೆಟ್ಟಿಗೆಯು ಸಿಕ್ಕಿದೆ. [illegible]

ಒಳದೇಶ ವರ್ತಮಾನ.

[illegible]

ಜಾಗ್ರತೆಯನ್ನು ತೆಗೆದುಕೊಳ್ಳುತ್ತಾ ಇದ್ದಾರೆ. ಅನಶನ ವ್ರತದ ... ಈ ಮುಂಚೆ ಯಾರೊ ಆವರ ಕಾರ್ಯಗಳಲ್ಲಿ ತಪ್ಪುಮಾಡಿದ ಹಾಗೆ ಈ ಸಲವೂ ಮಾಡಿರುವುದರಿಂದ ಮಾಡಿದ್ದಾಗಿ ತಿಳಿದುಬರುತ್ತದೆ. ಮಹಾತ್ಮಾಜಿಯವರು ಅನಶನ ವ್ರತವನ್ನು ಹಿಡಿದಿರುವದರಿಂದ ಇದು ಮುಗಿಯುವ ವರೆಗೆ ಎಲ್ಲಿಯಾದರೂ ದಶಂಬರ ತಾ. ೩ರವರೆಗೆ ಪ್ರಯಾಣಕ್ಕೆ ಹೋಗುವದಿಲ್ಲ ಮತ್ತು ಗೋವಧೆಯ ವಿಷಯ ಉತ್ತೇಜಕ ಲೇಖನ ಬರೆದವನಿಗೆ ತಕ್ಕ ಉಚಿತವನ್ನು ಕೊಡುವುದು ಸಹಾ ಮುಂದರಿಸಿದೆ.

—ಬಾವಲಾ ಖಟ್ಲೆಯಲ್ಲಿ ಫಾಶೀ ಶಿಕ್ಷೆಹೊಂದಿದ ಶಾಫಿ ಅಹಮ್ಮದ ಮತ್ತು ದಿಫೆ ಅವರಿಗೆ ಫಾಶೀ ಶಿಕ್ಷೆಯು ಕಳೆದ ೧೯ಕ್ಕೆ ಕೊಡಲ್ಪಟ್ಟಿತು. ಫೋಂಡೆಯವರಿಗೆ ಹುಚ್ಚು ಬಿದ್ದದರಿಂದ ಅವರನ್ನು ಎರೋಡಾ ಜೈಲಿನಲ್ಲಿಡಲಾಗಿದೆ.

[illegible]

ದಕ್ಷಿಣ ಕನ್ನಡ.

[illegible]

ಕಾರಂಜೆ:—ಇಲ್ಲಿಯ ಒಬ್ಬ ಮ್ಯೊಲಿ ಜಾತಿಯ ಹೊಗ್ಗು ... ಕೆಲವ ಬಂಟರ ಜಾತಿಯ ಯೌವನಸ್ಥರು ಏನೋ ಕಾರಣ ... ಕೊಂದಿರುತ್ತಾರೆ.

ಬಳಂಜ:— ... ವಾರ ದಿನ ಹಗಲು ೧೨ ಘಂಟೆಗೆ ... ಯಲ್ಲಿ ವೇಣೂರು ಸೆಂಟರಿನ ಉಪಾಧ್ಯಾಯ ... ಗಿತು. ಊರಪರವೂರ ಗೃಹಸ್ಥರೂ, ಗ್ರಾಮದ ... ದ್ದರು. ಸರ್ವಸಮ್ಮತಿಯಿಂದ ನಾಲ್ಕೂರು ಫಿರ್ಕಾ ... ನಾರ್ಣಪ್ಪಯ್ಯನವರನ್ನು ಅಧ್ಯಕ್ಷರನ್ನಾಗಿ ಆರಿಸಲು ನಿಯಮದಂತೆ ... ಯವರಿಂದ, ಶಾಲಾ ವರದಿಯು ವಿವರಿಸಲ್ಪಟ್ಟಿತು. ತರುವಾಯ ಸೋದ್ದಿಯಿಂದ ಆರಿಸಲ್ಪಟ್ಟ ಶಿಲ್ಲಾಲು ಶಾಲಾ ಉಪಾಧ್ಯಾಯರಿಂದ, ೧ನೇ ದರ್ಜೆಯ ಮಕ್ಕಳಿಗೆ ... [illegible]

ಸ್ವೀಕಾರ ಮತ್ತು ವಿಮರ್ಶೆ.

[illegible]

ಅನುಕ್ರಮಣಿಕೆ.

ಅಗ್ರಲೇಖ:— ೬
ಕರ್ನಾಟಕ ಏಕೀಕರಣದ ಚಳವಳ ,,
ಸ್ಫುಟವಿಚಾರಗಳು
ಹಿಂದೂಸ್ಥಾನಕ್ಕೆ ಮೋಟಾರ ... ೫
...ರು ಬಂಟವಾಳ, ಕುಡುಪು, ಕಾರಂಜೆ, ಬಳಂಜೆ,
ವರ್ತಕ...ಹೊಸ್ರು, ಬಾಂಬಿಲ, ಮಂಜೇಶ್ವರ, ಕಾಸರಗೋಡು ,,
ಮಂಗಳೂರು ೮
ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡಬಹುದಾದ ಡಿಸ್ಟ್ರಿಕ್ಟ್ ಬೋರ್ಡ
ರೈಲುಮಾರ್ಗಗಳು, ,,
ವಿವಿಧ ವಿಷಯ ,,
ಧರ್ಮಸ್ಥಳದ ಲಕ್ಷದೀಪದ ಸಮಯದಲ್ಲಿ ನಡೆದ ಕೃಷಿ ಪ್ರದರ್ಶನ ೪

ಸ್ವದೇಶಾಭಿಮಾನಿ.

ಶಕ ೧೮೪೭ ಮಾರ್ಗಶಿರ ಶು|೧೧ಯು ಶುಕ್ರವಾರ

ಕರ್ನಾಟಕ ಏಕೀಕರಣದ ಚಳವಳ.

ಲೇಖಾಂಕ ೩.

ಬಳ್ಳಾರಿಯನ್ನು ಆಂಧ್ರ ವಿಶ್ವವಿದ್ಯಾಲಯದ ಕೈಕೆಳಗೆ ಮಾಡಿದಂದಿನಿಂದ ಕರ್ನಾಟಕ ಪತ್ರಿಕೆಗಳು ಮತ್ತಷ್ಟು ಎಚ್ಚರವಾದುವು; ಅಲ್ಲದೆ ಚೇತನಾತ್ಮಕವಾಗಿ ಕರ್ನಾಟಕದ ಅಭಿಪ್ರಾಯಗಳನ್ನು ಹೊರಚೆಲ್ಲಿದುವು. ಇದು ಅತಿ ಸಂತೋಷದ ವಿಷಯ. ಬಳ್ಳಾರಿಯು ಕರ್ನಾಟಕದ ಪರಿಸ್ಥಿತಿಯಲ್ಲ; ಅದು ಕರ್ನಾಟಕದ ಚಿಹ್ನ ಮಾತ್ರವಾಗಿರುವುದು. ಆದುದರಿಂದ ಬಳ್ಳಾರಿಯನ್ನು ಆಂಧ್ರರು ಬಲಾತ್ಕಾರ ಪೂರ್ವಕ ಸೇರಿಸಿದುದನ್ನು ನಾವು ಉಗ್ರವಾಗಿ ಖಂಡಿಸಬೇಕಾದರೂ, ಕರ್ನಾಟಕದ ಪರಿಸ್ಥಿತಿಯ ಕಡೆಗೇನೇ ಹೆಚ್ಚಿನ ಗಮನವಿಟ್ಟು ಅದರ ಕಡೆಗೆ ಕಾರ್ಯಕಾರಿಯಾದ ಕೆಲಸವನ್ನು ಗೊತ್ತುಹಚ್ಚುವುದು ಅತೀ ಅವಶ್ಯಕವೆಂದು ನಮ್ಮ ಅಭಿಪ್ರಾಯವಿದೆ.

ಕರ್ನಾಟಕ ಏಕೀಕರಣದ ಸಮಸ್ಯೆಯು ಅಷ್ಟೊಂದು ಸುಲಭವಲ್ಲವೆಂದು ಅದಕ್ಕಾಗಿ ಪ್ರಯತ್ನಿಸಿದ ಪ್ರತಿ ಒಬ್ಬರೂ ತಿಳಿಯದಿರರು. ಕರ್ನಾಟಕ ಜನತೆಯೊಳಗೆ ವಾಚನಾಭಿರುಚಿ ಇದ್ದುದಾದರೆ ಬಂದ ಪಕ್ಷಕ್ಕೆ ಈ ಏಕೀಕರಣದ ಪ್ರಯತ್ನಗಳನ್ನು ಬಹುಮಟ್ಟಿಗೆ ಸಫಲಗೊಳಿಸಬಹುದಿತ್ತು. ಆದರೆ "ಮದುವೆಯಾಗದೆ ಹುಚ್ಚು ಹೋಗದು, ಹುಚ್ಚು ಹೋಗದೆ ಮದುವೆಯಾಗದು" ಎಂಬಂತೆ, ಏಕೀಕರಣವು ಕಾರ್ಯಕಾರಿಯಾಗದೆ ಕರ್ನಾಟಕ ಜನತೆಯು ವಾಚನಾಭಿರುಚಿ ಬೆಳೆಯದು. ವಾಚನಾಭಿರುಚಿ ಬೆಳೆಯದೆ ಕರ್ನಾಟಕ ಏಕೀಕರಣವು ಕಾರ್ಯಕಾರಿಯಾಗದು ಎಂಬ ಪ್ರಕೃತ ಅವಸ್ಥೆಗೆ ನಾವು ಮುಟ್ಟಿರುವೆವು.

ಪ್ರಕೃತ ಕರ್ನಾಟಕ ಏಕೀಕರಣಕ್ಕೆ ಕರ್ನಾಟಕ ಪತ್ರಿಕೆಗಳೂ ಒಂದು ತಡೆಯಾಗಿವೆಯೆಂದು ನಾವು ಸೂಚಿಸಿದರೆ ಕರ್ನಾಟಕ ಪತ್ರಿಕೆಗಳು ಮಾನ್ಯಮಾಡುವುವೊ ಇಲ್ಲವೆಂದು ನಮಗೆ ತಿಳಿದಿಲ್ಲ. ಕರ್ನಾಟಕ ಪತ್ರಿಕೆಗಳ ಈಗಿನ ಪರಿಸ್ಥಿತಿಯೆಂದರೆ, ಪರರಿಗೆ ಶಾಸ್ತ್ರ ಹೇಳುವುದಲ್ಲದೆ, ತಾವಾಗಿ ತಮ್ಮ ಉಪದೇಶವನ್ನು ಸ್ವೀಕರಿಸುವಂತೆ ತೋರುವುದಿಲ್ಲ. ಇಲ್ಲವಾದರೆ ಕರ್ನಾಟಕ ಪತ್ರಿಕೆಗಳು ಪರಸ್ಪರ ಸಹಕಾರದಿಂದಲೂ ಮೈತ್ರಿಯಿಂದಲೂ ಕೆಲಸಮಾಡದಿರುತ್ತಿರಲಿಲ್ಲ.

ಕರ್ನಾಟಕದ ಈಗಿನ ಸಂತಾಪಕರವಾದ ಪರಿಸ್ಥಿತಿಯಲ್ಲಿ ಕರ್ನಾಟಕದ ಪತ್ರಿಕೆಗಳು ಹೆಚ್ಚು ಅನ್ಯೋನ್ಯವಾಗಿ ಇರಬೇಕಿದ್ದಿತು. ಆದರೆ ಪರಸ್ಪರ ಮೈತ್ರಿಯು ಕೇವಲ ಕೆಲವು ಪತ್ರಿಕೆಗಳೊಳಗನೇ ಸೇರಿದೆ. ಪರಸ್ಪರ ದೂಷಣೆಗಳಾಗಲಿ ಅಂತರ್ಯದೊಳಗಿನ ಕ್ಲೇಶಗಳು ಅಲ್ಲಲ್ಲಿ ಕಾಣಬರುತ್ತಿವೆ. ಇವು ಯಾವ ಕಾರಣದಿಂದ ಉಂಟಾಗುತ್ತಿವೆ ಎಂಬುದನ್ನು ನಾವು ತಿಳಿಯಲಾರದಾಗಿರುವೆವು.

ಕರ್ನಾಟಕ ಏಕೀಕರಣದ ಘಟ್ಟಿಯಾದ ತಡೆಯು ಮೈಸೂರು ಪತ್ರಿಕೆಗಳೆನ್ನಲೂ ಬಹುದು. ಮೈಸೂರು ಪತ್ರಿಕೆಗಳ ಧ್ಯೇಯವು ಬ್ರಿಟಿಷ ಕರ್ನಾಟಕ ಪತ್ರಿಕೆಗಳಷ್ಟು ಉದಾರವೂ ಕರ್ನಾಟಕ ಏಕೀಕರಣದ ಕಡೆಗೆ ಆಸಕ್ತಿಯುಳ್ಳವುಗಳೂ ಎಂದು ನಮಗೆ ತೋರಿಬಂದಿಲ್ಲ. ಈ ನಮ್ಮ ಅಭಿಪ್ರಾಯವು "ವಿಶ್ವಕರ್ನಾಟಕ"ದ ಮತ್ತು ಕೆಲವು ಮಾಸಿಕಪತ್ರಿಗಳ ಮಟ್ಟಿಗೆ ಅನ್ವಯವಾಗಲಿಕ್ಕಿಲ್ಲ. ಆದರೆ ಉಡುಪಿಯಲ್ಲಿ ಪತ್ರಿಕಾ ಪ್ರಚಾರಕರ ಸಂಘವೊಂದನ್ನು ಸ್ಥಾಪಿಸಲು ಅಭಿಪ್ರಾಯಗಳನ್ನು ಕರೆದಾಗ, ಮೈಸೂರಿನಿಂದ ಒಬ್ಬರು ಸಂಪಾದಕರು ಮಾತ್ರವೇ ಪ್ರತ್ಯುತ್ತರವಿತ್ತರೆಂದೂ, ಬಾಕಿಯವರ ಜವಾಬೇ ಇರಲಿಲ್ಲವೆಂದೂ, ಆ ಕಾಲದಲ್ಲಿ ಅವರು ಆ ಸಂಘದ ಕಡೆಗೆ ಉತ್ಸಾಹಿಸಿರಲಿಲ್ಲ ದಿದ್ದಾಗ್ಯೂ, ಈಗ ಬ್ರಿಟಿಷ ಕರ್ನಾಟಕದ ಯಾರೊಬ್ಬ ಸಂಪಾ...ಗೂ ಏನೊಂದು ಸಮಾಚಾರವಿಲ್ಲದೇನೇ ಪತ್ರಿಕಾ ಪ್ರಚಾರಕರ ಸಂಘವನ್ನೇರ್ಪಡಿಸಿದರೆಂದೂ ನಾವು ತಿಳಿಯುತ್ತೇವೆ. ಇದು ಮೈಸೂರಿನ ಮೇಲೆ ಕರ್ನಾಟಕ ಏಕೀಕರಣದ ವಿಷಯದಲ್ಲಿ ಉತ್ತಮ ಅಭಿಪ್ರಾಯವನ್ನು ಕೊಡುವುದಿಲ್ಲ.

ಇನ್ನು ಸಾಮಾನ್ಯವಾಗಿ ಮಾತನಾಡುವುದಾದರೆ, ಕರ್ನಾಟಕದೊಳಗೆ ಈ ವರೆಗೆ ಇರುವ ಪತ್ರಿಕೆಗಳ ಸಂಖ್ಯೆಯು ಅವಶ್ಯವಿದ್ದುದಕ್ಕಿಂತಲೂ, ಹೆಚ್ಚಾಯಿತು. ಇನ್ನೂ ಹೆಚ್ಚಾಗಬಹುದೆಂದೇ ತೋರುತ್ತಿದೆ. ಇದರಿಂದಲೂ ಕರ್ನಾಟಕ ಏಕೀಕರಣಕ್ಕೆ ಬಹಳ ಅಡ್ಡಿ ಬಂದಿದೆ.

ಏಕೆಂದರೆ ಪತ್ರಿಕೆಗಳ ಸಂಖ್ಯೆಯು ಬೆಳೆದುದರಿಂದ ವಾಚನಾಭಿರುಚಿಯುಳ್ಳ ಒಂದು ಪ್ರಾಂತದಲ್ಲಿ ಹೆಚ್ಚು ಪ್ರಯೋಜನವಿರಬಹುದಾದರೂ, ಕರ್ನಾಟಕಕ್ಕೆ ಹಾನಿಕರವಾಗಿಯೆ ಇದೆ. ಇದರಿಂದ ಪ್ರತ್ಯೇಕ ಪತ್ರಿಕೆಯ ಪ್ರಚಾರವು ಅಲ್ಪ ಸಂಖ್ಯಾಕವಾಗುತ್ತಿದೆ, ಅಲ್ಲದೆ ಜನತೆಯೊಳಗೆ ದಾಕ್ಷಿಣ್ಯದಿಂದಲೂ ಒತ್ತಾಯದಿಂದಲೂ ಪತ್ರಿಕಾ ಪ್ರಚಾರವಾಗಬೇಕಾಗುತ್ತದೆ. ಕರ್ನಾಟಕದಲ್ಲಿ ಯಾವುದೊಂದು ಪತ್ರಿಕೆಯ ಸಂಪಾದಕತ್ವವಾದರೂ ಅದು ಆಗಬೇಕಾದ ರೀತಿಯಲ್ಲಿ ಆಗುತ್ತದೆಂದು ತಿಳಿಯಲಾಗದು. ಉಚ್ಚವರ್ಗದ ಸಂಪಾದಕತನವು ಕರ್ನಾಟಕದಲ್ಲಿಲ್ಲ; ಮುಖ್ಯ ಕಾರಣವು ಕರ್ನಾಟಕ ಪತ್ರಿಕೆಗಳೊಳಗಿನ ಸ್ಪರ್ಧೆ. ಪತ್ರಿಕೆಗಳ ಸಂಖ್ಯೆಯ ಕಾರಣದಿಂದ ಉಂಟಾಗುವ ಈ ಸ್ಪರ್ಧೆಯಿಂದಲೂ, ಆರ್ಥಿಕ ನಷ್ಟದಿಂದಲೂ ಪತ್ರಿಕೆಗಳನ್ನು ಉತ್ತಮ ರೀತಿಯಲ್ಲಿ ಸಂಪಾದಿಸುವುದು ಪ್ರತಿ ಪತ್ರಿಕೆಗೂ ಸಂಪೂರ್ಣ ಅಸಾಧ್ಯವಿದೆ.

ಪತ್ರಿಕೆಗಳ ಬಹು ಸಂಖ್ಯೆಯಿಂದ ಪತ್ರಿಕೆಗಳ ಅಭಿವೃದ್ಧಿಯು ತಡೆಹೊಂದಿದೆಯಲ್ಲದೆ ಅವುಗಳ ಪ್ರಚಾರವು ಬೇಕಾದಷ್ಟು ಅಖಿಳ ಕರ್ನಾಟಕದಲ್ಲಿ ಇರದೆ ಅಲ್ಲಲ್ಲಿ ಮಾತ್ರವೇ ಇದ್ದು ಜನತೆಯೊಳಗೆ ಅಭಿಪ್ರಾಯವನ್ನು ಕಟ್ಟಲಿಕ್ಕೂ, ಜನತೆಯೊಳಗೆ ವಾಚನಾಭಿರುಚಿಯನ್ನು ಹುಟ್ಟಿಸಲಿಕ್ಕೂ ಕಾರ್ಯಕಾರಿಯಾಗುವುದಿಲ್ಲ; ಮಾತ್ರವಲ್ಲದೆ ಜನತೆಯ ಮೇಲೆ ತೀರಾ ವಿರೋಧವಾದ ಪರಿಣಾಮ ಉಂಟಾಗುತ್ತದೆ. ಜನತೆಯೊಳಗೆ ಕೆಲವೇ ತರದ ಅಭಿಪ್ರಾಯಗಳು ಪ್ರಚುರಹೊಂದುವ ಬದಲಿಗೆ ಸಾವಿರ ಅಭಿಪ್ರಾಯಗಳು ಪ್ರಚುರ ಹೊಂದುತ್ತಿವೆ.

ಇಷ್ಟು ವಿಶಾಲವಾದ ಕರ್ನಾಟಕದಲ್ಲಿ ಯಾವುದೊಂದು ಪತ್ರಿಕೆಗೂ ೧೦೦೦ದಿಂದ ೨೦೦೦ ವರೆಗಿನ ಪ್ರಚಾರವಲ್ಲದೆ ಹೆಚ್ಚಿರುವುದಿಲ್ಲ. ಕರ್ನಾಟಕದ ಪತ್ರಿಕೆಗಳಲ್ಲಿ ಒಂದೊಂದು ೫೦೦೦ ವಾದರೂ ಪ್ರಚಾರವಿದ್ದರೇನೇ ಕರ್ನಾಟಕದ ಏಕೀಕರಣವು ಪತ್ರಿಕೆಗಳ ಮೂಲಕ ಸುಲಭವಾಗುವುದು. ಉತ್ತರ ಕರ್ನಾಟಕದ ಪತ್ರಿಕೆಗಳು ದಕ್ಷಿಣ ಕರ್ನಾಟಕಕ್ಕೂ, ದಕ್ಷಿಣದವುಗಳು ಉತ್ತರಕ್ಕೂ, ಪೂರ್ವದವುಗಳು ಪಶ್ಚಿಮಕ್ಕೂ, ಪಶ್ಚಿಮದವುಗಳು ಪೂರ್ವಕ್ಕೂ ಹೀಗೆ ಒಂದು ಮೂಲೆಯ ಪತ್ರಿಕೆಗಳು ಇನ್ನೊಂದು ಮೂಲೆಯ ವರೆಗೆ ಪ್ರಚಾರಹೊಂದಿದರೆ ಮಾತ್ರವೇ ಕರ್ನಾಟಕ ಜನತೆಯ ಮಾನಸಿಕವು ಕರ್ನಾಟಕದ ವಿಶಾಲತೆಯಿಂದ ತುಂಬಿ, ಏಕೀಕರಣವನ್ನು ಅನುಭವ ಮಾಡುವುದು. ಈಗಿನ ಸ್ಥಿತಿಯಲ್ಲಿ ಧಾರವಾಡ ಪತ್ರಿಕೆಗಳು ಮಂಗಳೂರಿನಲ್ಲಿಲ್ಲ, ಮಂಗಳೂರು ಪತ್ರಿಕೆಗಳು ಧಾರವಾಡದಲ್ಲಿಲ್ಲ. ಮೈಸೂರು ಪತ್ರಿಕೆಗಳು ಇತರ ಭಾಗಗಳಲ್ಲಿಲ್ಲ, ಇತರ ಭಾಗದವು ಮೈಸೂರಿನಲ್ಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕ ಏಕೀಕರಣದ ಕಡೆಗೆ ಕರ್ನಾಟಕ ಮಾನಸಿಕವನ್ನು ಸಿದ್ಧಗೊಳಿಸಬಹುದಾಗಿ ನಾವು ನೆನಸುವುದಿಲ್ಲ.

ಪತ್ರಿಕೆಗಳ ಸಂಖ್ಯೆಯನ್ನು ಕಡಿಮೆಮಾಡುವ ಸಮಸ್ಯೆಯು ಕರ್ನಾಟಕ ಏಕೀಕರಣಕ್ಕಿಂತಲೂ ಕಠಿಣವಾದುದೆಂದು ನಾವು ಬಲ್ಲೆವು. ಆದರೆ ಎಂದಿನ ವರೆಗೆ ಕರ್ನಾಟಕದ ಈ ವಾಚನಾಭಿರುಚಿಯಿಲ್ಲದ ಜನತೆಯೊಳಗೆ ಇಷ್ಟು ಪತ್ರಿಕೆಗಳು ಪ್ರಚಾರವಿರುವುವೊ, ಎಂದಿನವರೆಗೆ ಕರ್ನಾಟಕದ ಒಂದು ಮೂಲೆಯ ವಾರ್ತೆಯನ್ನೂ ಅಭಿಪ್ರಾಯವನ್ನೂ ಇನ್ನೊಂದು ಮೂಲೆಯವರೆಗೆ ಹಬ್ಬಿಸಲು ಸಾಧ್ಯವಿಲ್ಲವೊ, ಆ ವರೆಗೆ ಕರ್ನಾಟಕ ಏಕೀಕರಣವು ಈ ಪ್ರತಿಬಂಧದಲ್ಲಿ ಕೆಲಸಮಾಡಬೇಕು.

ಒಂದು ಬಾರಿ ಕರ್ನಾಟಕ ಪತ್ರಿಕಾ ಸಂಪಾದಕರೆಲ್ಲರೂ ತಮ್ಮನು ತಾವೇ ಸಂಘಟಿಸಿದರೆ, ಈ ಸಮಸ್ಯೆಯನ್ನು ಚರ್ಚಿಸಬಹುದೊ ಏನೊ. ಆದರೆ ಪತ್ರಿಕೆಗಳ ಸಂಖ್ಯೆಯನ್ನು ಕಡಿಮೆ ಮಾಡಲಿಕ್ಕಾಗದಿದ್ದರೂ, ಪತ್ರಿಕೆಗಳ ಸಂಪಾದಕರ ಸಂಘವನ್ನೇರ್ಪಡಿಸಿ ನಿಜವಾದ ಉತ್ಸಾಹದಿಂದ ಕೆಲಸಮಾಡಿದರೆ, ಕರ್ನಾಟಕ ಏಕೀಕರಣವು ಸುಲಭವಾಗಬಹುದೆಂಬ ಆಸೆಯಿದೆ. ಕರ್ನಾಟಕ ಪತ್ರಿಕೆಗಳು ಕರ್ನಾಟಕ ಏಕೀಕರಣದ ವಿಷಯ ಉದ್ದ ಲೇಖನಗಳನ್ನು ಬರೆಯುವುದರಲ್ಲಿಯೇ ತೃಪ್ತರಾಗದೆ, ಈ ತರ ಕಾರ್ಯಕಾರಿಯಾದ, ತಮಗೂ ಪ್ರಯೋಜನಕರವಾದ ಸಂಘಟನೆಯಲ್ಲಿ ಕೈಯಿಕ್ಕುವರೆ?

ಸ್ಫುಟವಿಚಾರಗಳು.

ಅಲೇಕ್ಸಾಂಡ್ರಾ ರಾಣಿಯವರ ನಿಧನ.

ದಿವಂಗತ ಜೋರ್ಜ ರಾಜರ ಪತ್ನಿಯಾಗಿರುವ ಅಲೇಕ್ಸಾಂಡ್ರಾ ರಾಣಿಯವರ ನಿಧನದ ವಾರ್ತೆಯನ್ನು ಕೇಳಿ ಎಲ್ಲರೂ ಶೋಕಾಕುಲರಾಗದಿರರು. ಇವರು ನವಂಬರ ತಾ. ೨೦ರ ಮಧ್ಯಾಹ್ನದಲ್ಲಿ ಘಂಟೆ ೫-೩೦ಕ್ಕೆ ಮರಣವಾದರು. ಅಲೇಕ್ಸಾಂಡ್ರಾ ರಾಣಿಯವರು ಡೆನ್ಮಾರ್ಕ ದೇಶದ ೧೧ನೇ ಕ್ರಿಶ್ಚಿಯನ್ ದೊರೆಯ ಮಕ್ಕಳಾಗಿರುವರು. ಇವರು ೧೮೪೪ನೇ ಇಸವಿಯ ದಶಂಬರ ತಾ. ೧ಕ್ಕೆ ಜನಿಸಿ, ಏಳನೇ ಎಡ್ವರ್ಡ ಮಹಾರಾಜರನ್ನು ೧೮೬೩ನೇ ಇಸವಿ ಮಾರ್ಚ ೧೦ರಲ್ಲು ವಿವಾಹವಾದರು. ೧೯೦೧ನೇ ಇಸವಿಯಲ್ಲಿ ಅಂದರೆ ತಮ್ಮ ೫೭ನೇ ಪ್ರಾಯದಲ್ಲಿ ಇವರು ಎಡ್ವರ್ಡ ಮಹಾರಾಜರೊಡನೆ ಪಟ್ಟವೇರಿದರು.

ಮಹಾರಾಣಿಯವರು ಮಹಾದಯಾಳೂ, ಸಾರ್ವಜನಿಕ ಕೆಲಸಗಳಲ್ಲಿ ಉತ್ಸಾಹಿಗಳೂ, ಮಾನವ ಸಂಕಷ್ಟಗಳಲ್ಲಿ ಸಹಾನುಭೂತಿಯುಳ್ಳವರೂ ಆಗಿದ್ದರು. ಸಮಾಜ ಸೇವೆಗಾಗಿ ಇವರ ಹೆಸರಲ್ಲಿ ೧೯೧೯ರಲ್ಲಿ ಏರ್ಪಡಿಸಿದ ನಿಧಿಗೆ ೧ ಕೋಟಿ ರೂಪಾಯಿ ಪ್ರಜೆಗಳ ಉದಾರ ವಂತಿಗೆಯಿಂದ ಜಮೆಯಾದುದನ್ನು, ಈಗ ಅದೇ ಫಂಡು ೧॥ ಕೋಟಿ ರೂಪಾಯಿಯಷ್ಟು ಜಮೆಯಾದುದನ್ನು ನೋಡಿದರೆ ಪ್ರಜೆಗಳು ರಾಣಿಯವರನ್ನು ಎಷ್ಟು ಗೌರವಿಸುವರೆಂದು ತಿಳಿಯುವುದು.

ಹಿಂದೂಸ್ಥಾನದ ಉಚ್ಚ ಆಶಯಗಳು, ಹಿಂದೂಸ್ಥಾನದ ಅಸಂಖ್ಯ ಬಡವರ ಸುಧಾರಣೆಯು, ಹಿಂದೂಸ್ಥಾನ ಆರ್ಥಿಕ ಶೋಷಣೆಯು, ಇವೆಲ್ಲವು ಬ್ರಿಟಿಷ ಆಳುವಿಕೆಯಲ್ಲಿ ಹೆಚ್ಚಾಗುತ್ತಿವೆ. ಹಿಂದೀಯ ಸರ್ವತರದ ಚಳವಳವೂ ನೆಲಕ್ಕೆ ಬೀಳುತ್ತಿದೆ. ಆದರೆ ಹಿಂದೂಸ್ಥಾನಕ್ಕೆ ಮಹಾರಾಜರಾಗಲಿ ಮಹಾರಾಜ್ಞಿಯವರಲ್ಲಿ ಬೇಸರವಿರದು. ಏಕೆಂದರೆ ಬ್ರಿಟಿಷ ರಾಜಸಂಸ್ಥೆಯು ಆ ಔದಾರ್ಯದ ಅಧಿಕಾರವನ್ನು ಅತಿಯಾದ ಕಾರ್ಪಣ್ಯದಿಂದ ತನ್ನೊಡನೆಯೆ ಇಟ್ಟುಕೊಂಡಿದೆ. ಹಿಂದೂಸ್ಥಾನಕ್ಕೆ ಒಳ್ಳೆಯದನ್ನಾಗಲಿ ಕೆಟ್ಟದನ್ನು ರಾಜವರ್ಗವು ಮಾಡಲಾರದು. ಅತಏವ ನಾವು ಬ್ರಿಟಿಷ ರಾಜ ರಾಣಿಯರನ್ನು ಎಂದಿನಂತೆಯೇ ಪ್ರೀತಿಸುವವರೂ ಅತೀ ಶ್ರದ್ಧೆಯಿಂದ ಗೌರವಿಸುವವರೂ ಆಗಿರುವೆವು. ಮಹಾರಾಜ್ಞಿ ಅಲೇಕ್ಸಾಂಡರು ಮರಣಹೊಂದಿದುದಕ್ಕೆ ಸಮಗ್ರ ಭಾರತವೂ ಇಂಗ್ಲೆಂಡಿನೊಡನೆ ಏಕಪ್ರಕಾರವಾಗಿ ಶೋಕಿಸುವುದು.

ಕೌನ್ಸಿಲ್ ಒಫ್ ಸ್ಟೇಟಿನ ಚುನಾವಣೆ.

ಹೊಸ ಕೌನ್ಸಿಲ್ ಒಫ್ ಸ್ಟೇಟಿಗಾಗಿ ನಡೆದ ಚುನಾವಣೆಯಲ್ಲಿ, ಶ್ರೀಯುತ ಅನೆಮಲೆ ಚೆಟ್ಟಿಯಾರ, ಶ್ರೀಯುತ ಶಂಕರ ನಾಯರ, ಶ್ರೀಯುತ ರಾಮದಾಸ, ಶ್ರೀಯುತ ಡಾ| ರಾಮರಾವ್ ಇವರು ಮುಸಲ್ಮಾನೇತರರ ಪರವಾಗಿ ಚುನಾಯಿಸಲ್ಪಟ್ಟರು. ಇವರ ಚುನಾವಣೆಯಸ್ಥಾನವೂ ಮೇಲೆ ಹೆಸರು ಕೊಟ್ಟ ಕ್ರಮದಲ್ಲಿಯೇ ಇದ್ದಿತು.

ಅನೆಮಲೆ ಚೆಟ್ಟಿಯಾರರು ಆಗರ್ಭ ಶ್ರೀಮಂತರು, ದಕ್ಷಿಣ ಹಿಂದೂಸ್ಥಾನದಲ್ಲಿ ಸಂಪತ್ತಿಯಲ್ಲಿ ಹೊಂದಿದ ನಟ್ಟುಕೋಟೆ ಚೆಟ್ಟಿಯಾರರೆಂಬ ವೈಶ್ಯ ಮಂಡಳಿಯಲ್ಲಿ ಇವರು ಪ್ರಮುಖ ಶ್ರೀಮಂತರಾಗಿರುವರು. ಇವರ ವರ್ಷಾವಧಿ ಉತ್ಪನ್ನವು ಸಾಧಾರಣ ೫೦ ಲಕ್ಷವಾಗಿರಬಹುದೆಂದು ಹೇಳುತ್ತಾರೆ. ಹಿಂದೂಸ್ಥಾನಕ್ಕೆ ಖಾಸಗಿ ಉಪಯೋಗಕ್ಕಾಗಿ ಇವರು ಒಂದು ವಿಮಾನವನ್ನು ತರಿಸಿರುವರೆಂದೂ ಕೇಳುತ್ತೇವೆ.

ಶ್ರೀಯುತ ಶಂಕರನಾಯರರ ಪರಿಚಯವು ಹಿಂದೀಯರಿಗೆ ಎಲ್ಲರಿಗೂ ಇರಬೇಕು. ಪಂಜಾಬ ಅತ್ಯಾಚಾರದ ವಿಷಯದಲ್ಲಿ ಇವರು ಇಂಡಿಯಾ ಸರಕಾರದ ಎಕ್ಸಿಕ್ಯೂಟಿವ್ ಕೌನ್ಸಿಲರಾಗಿದ್ದರು. ಪಂಜಾಬ ಅತ್ಯಾಚಾರದ ಮೇಲ ನಿಷೇಧ ರೂಪವಾಗಿ ಇವರು ತಮ್ಮ ಆ ಉಚ್ಚಪದವಿಗೆ ರಾಜಿ ಕೊಟ್ಟರು. ಆ ಮೇಲೆ ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಒಂದು ಪುಸ್ತಕ ಬರೆದರು. ಅದರಲ್ಲಿ ಮಹಾತ್ಮರ ಮೇಲೆ ದೋಷಾರೋಪಣೆಗಳಿದ್ದುವು. ಹಾಗೆಯೇ ಪಂಜಾಬ ಅತ್ಯಾಚಾರ ನಡೆಸಿದ ಜನರಲ್ ಡಾಯರನ ಖಂಡನೆಯು ಇದ್ದಿತು. ಜನರಲ್ ಡಾಯರರು ಇವರ ಮೇಲೆ ಮಾನನಷ್ಟದ ಮೊಕದ್ದಮೆ ಮಾಡಿ ಗೆದ್ದರು. ಈ ವ್ಯಾಜ್ಯಕ್ಕೆ ಇತ್ತಂಡದವರಿಗೂ ಒಟ್ಟು ೨೦ ಲಕ್ಷ ಹಣವು ಖರ್ಚಾಗಿರಬಹುದು. ಇವರು ಉದಾರಮತವಾದಿಗಳು. ಪಂಜಾಬ ಅತ್ಯಾಚಾರದ ವಿಷಯದಲ್ಲಿ ಇವರು ರಾಜೀನಾಮೆ ಕೊಟ್ಟರು, ಡಾಯರರ ಮಾನನಷ್ಟದ ಮೊಕದ್ದಮೆಯಲ್ಲಿ ಇವರಿಗೆ, ಅನ್ಯಾಯವಾದರೂ, ಇವರಿಗೆ ಬ್ರಿಟಿಷ ನ್ಯಾಯಪರತೆಯಲ್ಲಿ ಇನ್ನೂ ವಿಶ್ವಾಸವಿದೆ. ಆದುದರಿಂದ ಅನೆಮಲೆ ಚೆಟ್ಟಿಯಾರರು ಶ್ರೀಮಂತರಿದ್ದುದರಿಂದಲೂ, ಶಂಕರ ನಾಯರರು ಮಂದ ಪಕ್ಷದವರಾದುದರಿಂದಲೂ ಇವರಿಬ್ಬರಿಂದ ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ದೇಶಕ್ಕೆ ಹೆಚ್ಚಿನ ಪ್ರಯೋಜನವಾಗುವುದೊ ಇಲ್ಲವೊ ಎಂಬುದು ಸಂಶಯಕರವಿದೆ. ಪಂಜಾಬ ಅತ್ಯಾಚಾರದ ಸಮಯದಲ್ಲಿ ತೋರಿಸಿದ ಮನೋಧೈರ್ಯವನ್ನು ಶಂಕರ ನಾಯರರು ಇನ್ನಾದರೂ ಆಗಾಗ ತೋರಿಸಲೆಂದು ನಮ್ಮ ಆಶಯ.

ಸ್ವರಾಜ್ಯ ಪಕ್ಷದಿಂದ ಚುನಾವಣೆ ಹೊಂದಿದವರು.

ಸ್ವರಾಜ್ಯ ಪಕ್ಷದ ಪರವಾಗಿ ಉಮೇದ್ವಾರರಾಗಿ ನಿಂತಿದ್ದ ಶ್ರೀಯುತ ರಾಮದಾಸರೂ, ಡಾ| ರಾಮರಾಯರೂ ಚುನಾವಣೆ ಹೊಂದಿದುದು ಬಹಳ ಅಭಿನಂದನೀಯ. ಮದ್ರಾಸಿನ ೨೩ ಜಿಲ್ಲೆಗಳೊಳಗಿಂದ ಬರೇ ನಾಲ್ಕು ಮಂದಿ ಆರಿಸಲ್ಪಡಲಿಕ್ಕಿದ್ದಾಗ, ಆ ಚುನಾವಣೆಯ ಗೌರವವು ಡಾ| ರಾಮರಾಯರ ಮೂಲಕ ನಮ್ಮ ಜಿಲ್ಲೆಗೂ ಸೇರಿದುದಕ್ಕೂ ನಾವು ಡಾ| ರಾಮರಾಯರನ್ನು ಅಭಿನಂದಿಸಬೇಕು. ಡಾ| ರಾಮರಾಯರು ಮದ್ರಾಸು ಕೌನ್ಸಿಲಿನಲ್ಲಿ ಮಾಡಿದ ಕೆಲಸಗಳು ಸ್ತುತ್ಯವಿವೆ. ಅವರು ಸ್ವರಾಜ್ಯ ಪಕ್ಷೀಯರಾಗಿ ಮದ್ರಾಸ ಕೌನ್ಸಿಲಿಗೆ ಆರಿಸಲ್ಪಡದಿದ್ದರೂ, ಆ ಮೇಲೆ ಸ್ವರಾಜ್ಯ ಪಕ್ಷವನ್ನು ಸೇರಿ, ಅದರ ಧ್ಯೇಯಕ್ಕನುಸಾರವಾಗಿ ನಡೆದು ಸ್ವರಾಜ್ಯ ಪಕ್ಷಕ್ಕೆ ಸಹಾಯ ಮಾಡಿದ್ದಾರೆ. ಈಗ ಅವರು ಸ್ವರಾಜ್ಯ ಪಕ್ಷೀಯರಾಗಿ ಆರಿಸಲ್ಪಟ್ಟಿದ್ದಾರೆ, ಡಾಕ್ಟರರು ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ದ್ವಿಗುಣಿತ ಉತ್ಸಾಹದಿಂದಲೂ ಸ್ವರಾಜ್ಯ ಪಕ್ಷಕ್ಕೆ ಗೌರವವಾಗಿ ಸೇವೆಮಾಡುವರೆಂದು ಆಶಿಸುವೆವು. ಸ್ವರಾಜ್ಯ ಪಕ್ಷದ ನಿರಂತರ ವಿರೋಧದ ಕಾರ್ಯಕ್ರಮಕ್ಕೆ ಇವರ ಮೂಲಕ ಬೆಂಬಲವು ಹೆಚ್ಚಲೆಂದಾಗಿ ನಾವು ಆಶಿಸುವೆವು.

ಶ್ರೀಯುತ ರಾಮದಾಸರು ನಮ್ಮ ಜಿಲ್ಲೆಗೆ ಪರಿಚಿತರಾಗಿರಲಾರರು. ಆದರೆ ಕಾರ್ಕಳದಲ್ಲಿ ನಡೆದ ಕಳೆದ ಸ್ವರಾಜ್ಯ ಪಕ್ಷದ ಅಧಿವೇಶನಕ್ಕೆ ಶ್ರೀಯುತ ರಾಮದಾಸರು ಚಿತ್ತೈಸಿ ನಮ್ಮನ್ನು ಗೌರವಿಸಿದ್ದರು. ಇವರ ಭಾಷಣಗಳು ಇವರ ಮನೋನಿರ್ಧಾರವನ್ನು ಚೆನ್ನಾಗಿ ಸೂಚಿಸಿಯವೆ. ತತ್ಪೂರ್ವದಲ್ಲಿ ಇವರು, ಶ್ರೀನಿವಾಸ ಶಾಸ್ತ್ರಿಯವರ ರಾಜೀನಾಮೆಯಿಂದ ಖಾಲಿ ಬಿದ್ದ, ಕೌನ್ಸಿಲ್ ಒಫ್ ಸ್ಟೇಟಿನ ಸ್ಥಾನಕ್ಕೆ ಉಮೇದ್ವಾರರಾಗಿ ನಿಂತು, ಚುನಾಯಿಸಲ್ಪಟ್ಟು ಕೌನ್ಸಿಲಿನಲ್ಲಿ ಒಬ್ಬರೇ ಒಬ್ಬರಾಗಿ ಹಿಂದೀಯ ಹಕ್ಕುಗಳಿಗಾಗಿ ಕಾದು ಹೆಸರುಗೊಂಡಿರುವರು. ಇವರ ಮೇಲೆಯೂ ಪ್ರಜೆಗಳು ವಿಶ್ವಾಸವಿಡಲು ಕಾರಣವಿದೆ.

ಪಂಡಿತ ಮೋತಿಲಾಲರು ಸ್ಕೀನ್ ಕಮಿಟಿಯಿಂದ ರಾಜಿ ಕೊಡುವರೊ?

ಸರಕಾರವು ಪಂಡಿತ ಮೋತಿಲಾಲನೆಹರುರನ್ನು ಸ್ಕೀನ ಕಮಿಟಿಯ ಸದಸ್ಯತನ ಸ್ವೀಕರಿಸಬೇಕಾಗಿ ಕೇಳಿಕೊಂಡಿತು. ಪಂಡಿತರು ಆ ವಿಷಯವನ್ನು ತಮ್ಮ ಪಕ್ಷದೊಡನೆ ವಿಚಾರಿಸಿದರು. ಪಕ್ಷವು ಒಪ್ಪಿಗೆ ಕೊಟ್ಟಿತು. ಹಾಗೆಯೇ ಕೆಲವು ಸಮಯದ ಮೇಲೆ ವಿ| ತಾಂಬೆಯವರು ಸರಕಾರದ ಎಕ್ಸಿಕ್ಯೂಟಿವ್ ಕೌನ್ಸಿಲರ್ ಪದವಿಯನ್ನು ಸ್ವೀಕರಿಸಿದರು. ಅದನ್ನು ಕೇಳ್ಕರರು ಅಭಿನಂದಿಸಿದರು. ಅಲ್ಲದೆ ಪಟೇಲರು ಎಸೆಂಬ್ಲಿಯ ಅಧ್ಯಕ್ಷತನವನ್ನು, ಪಂಡಿತನೆಹರುರವರು ಸ್ಕೀನ ಕಮಿಟಿಯ ಸದಸ್ಯತನವನ್ನೂ ಸ್ವೀಕರಿಸಿದುದನ್ನು ಆಧಾರವಾಗಿ ತೋರಿಸಿದರು. ಪಂಡಿತರು, ಈ ಸ್ವೀಕಾರದಿಂದ ಪಕ್ಷದ ಶಿಸ್ತು ಶಿಥಿಲವಾಯ್ತೆಂದು ನೆನಸಿ ಈಗ ಆ ಸದಸ್ಯತನವನ್ನು ಬಿಟ್ಟುಕೊಡಲು ನಿಶ್ಚಯಿಸಿರುವಂತಾಗಿ ವರ್ತಮಾನವಿದೆ. ಅದು ನಿಜವಾದರೆ ಒಳ್ಳೆಯದೇ ಎನ್ನಬಹುದು. ಸ್ಕೀನ ಕಮಿಟಿಯ ಸದಸ್ಯತನದ ಸ್ವೀಕಾರವು ದೋಷಕರವಿದ್ದಿತು. ಒಂದು ದೋಷದಿಂದ ಪಕ್ಷವು ಇನ್ನೊಂದು ಮತ್ತಷ್ಟು ದೊಡ್ಡ ದೋಷಕ್ಕೆ ಬೀಳುವುದಕ್ಕಿಂತ ಮೊದಲಿನ ದೋಷವನ್ನು ಹೋಗಲಾಡಿಸುವುದೇ ಉತ್ತಮವಿದೆ. ಕೇಳ್ಕರರು ಒಂದು ದೋಷವನ್ನು ತೋರಿಸಿ ಅದರ ಆಧಾರದಿಂದ ಇನ್ನೊಂದು ದೋಷದ ಆವಶ್ಯಕತೆಯನ್ನು ಸೂಚಿಸುತ್ತಾರೆ. ಇದು ವಿಷಾದಕರ. ಮೋತಿಲಾಲನೆಹರುರವರು ಹಾಗೆ ರಾಜಿನಾಮೆ ಕೊಟ್ಟರೆ ಪಕ್ಷದ ಭದ್ರತೆಗೆ ಉತ್ತಮವೆಂದು ನಮ್ಮದೂ ಸೂಚನೆಯಿದೆ.

ಫ್ರೆಂಚ ಸರಕಾರ.

ಫ್ರೆಂಚ ಸರಕಾರವು ಮುಗ್ಗರಿಸಲಿಕ್ಕಾರಂಭಿಸಿಯದೆ. ಮಿತ್ರ ರಾಷ್ಟ್ರಗಳ ಸಹಾಯದಿಂದಲೇ ಪ್ರಾಪ್ತವಾದ ಮಹಾಯುದ್ಧದ ವಿಜಯದಿಂದ ಉನ್ಮತ್ತವಾದ ಫ್ರೆಂಚ ಸರಕಾರವು ತನ್ನನ್ನೇ ತಾನು ಮರೆತು, ಸಾಮ್ರಾಜ್ಯ ವಿಸ್ತರಣೆಯ ಲೋಭದಿಂದ ಪರದೇಶಗಳಲ್ಲಿ ವಸಾಹತುಗಳನ್ನು ಕಟ್ಟಲಾರಂಭಿಸಿ ಸಣ್ಣ ಜನಾಂಗಗಳನ್ನು ಪೀಡಿಸತೊಡಗಿತಲ್ಲದೆ, ಜರ್ಮನಿಗೂ ಬುದ್ಧಿಗಳಿಸುವೆವೆಂದು ಜರ್ಮನಿಯ ರ್‍ಹ್ಯೂರ್ ಪ್ರದೇಶಗಳನ್ನು ಆಕ್ರಮಿಸಿಕೊಂಡಿತು. ಜರ್ಮನಿಯಿಂದ ಹೇರಳ ನಷ್ಟಪ್ರಪ್ಯವೂ ಬರುವುದೆಂದೂ ಸರಕಾರವು ಆಶಿಸಿದ್ದಿತು. ಆದರೆ ಈ ಯು... ಹೀನ ಸ್ವಾರ್ಥದ ಪರಿಣಾಮವು ಈಗಾಗಲೇ ಅನುಭವಕ್ಕೆ ಬಂದಿದೆ. ರ್‍ಹ್ಯೂರ್ ಪ್ರದೇಶಗಳ ಆಕ್ರಮಣದಿಂದ ಫ್ರೆಂಚ ಸರಕಾರಕ್ಕೆ ಲಾಭಕ್ಕಿಂತಲೂ ನಷ್ಟವೇ ಹೆಚ್ಚಾಯಿತು; ಸೀರಿಯನ್ ಮೆಂಡೇಟಿನಿಂದ ಈಗ ಅಲ್ಲಿಯ ಜನಾಂಗಗಳು ಸ್ವಾತಂತ್ರ್ಯಕ್ಕಾಗಿ ಕಾದುತ್ತಿರುವುದರಿಂದ, ಅದಕ್ಕಾಗಿಯೂ ಧನವ್ಯಯವು ಅತಿಯಾಗಿ ನಡಿಯುತ್ತಿದೆ; ಅತ್ತ ಸ್ಪೆಯಿನ್ ಮೊರೊಕ್ಕೊದೊಳಗೆ ಯುದ್ಧವಾಗುತ್ತಿದ್ದಾಗ, ತಾವೂ ತಮ್ಮ ಮೂಗನ್ನು ಅದರೊಳಗೆ ಚಾಚಿ ಮಿಲಿಯಗಟ್ಟಲೆ ಫ್ರಾಂಕುಗಳನ್ನು ಸುರಿಸಿದರು, ಫ್ರೆಂಚಿನ ಇಷ್ಟೆಲ್ಲ ವೀರ ಸಾಹಸಗಳಿಂದ ಫ್ರೆಂಚರಿಗೆ ಗೌರವಲಾಭವಾಗಲಿ, ಧನಲಾಭವಾಗುವಂತಿರಲಿ, ಅವುಗಳ ನಷ್ಟವೇ ಹೆಚ್ಚಾಗಿದೆಯೆನ್ನಬೇಕು.

ಹೀಗಾಗಿ ಫ್ರೆಂಚ ಸರಕಾರದ ಆರ್ಥಿಕ ಪರಿಸ್ಥಿತಿಯು ಈಗ ಬಹಳ ಸಂದಿಗ್ಧ ಸ್ಥಿತಿಯಲ್ಲಿದೆ. ಆರ್ಥಿಕ ಪರಿಸ್ಥಿತಿಯ ವ್ಯವಸ್ಥೆಯ ಬಗ್ಗೆ ಈಗ ಒಂದು ಬಿಲ್ಲು ಚೆಂಬರ (ಫ್ರೆಂಚ ಪಾರ್ಲಿಮೆಂಟಿನ ಹೆಸರು)ನ ಮುಂದೆ ಬಂದಿದೆ. ಅದರಲ್ಲಿನ ಕೆಲವು ನಿಯಮಗಳಿಗೆ ಚೆಂಬರಿನಲ್ಲಿ ಸರಕಾರ ವಿರೋಧವಾಗಿ ಮತಗಳು ಸಿಕ್ಕಿದುದರಿಂದ ಸರಕಾರವು ರಾಜಿಕೊಟ್ಟಿದೆ-ಅಂದರೆ ಈ ಪ್ರಧಾನ ಮಂತ್ರಿಗಳಾಗಿರುವ -ಪೈನಲೀವ್‌ರೂ ಕೆಬಿನೆಟ್ಟಿನ ಇತರ ಮಂತ್ರಿಗಳೂ ರಾಜಿನಾಮೆ ಕೊಟ್ಟಿರುವರು, ಆದರೆ ಆರ್ಥಿಕ ಪರಿಸ್ಥಿತಿಯು ಎಷ್ಟು ಕಷ್ಟತರವಾಗಿದೆಯೆಂದರೆ, ತತ್ಕಾಲಕ್ಕೆ ೧॥ ಸಾವಿರ ಮಿಲಿಯ ಫ್ರಾಂಕು ಅಂದರೆ ಸಾಧಾರಣ ೨೦ ಕೋಟಿ ರೂಪಾಯಿ ಇಲ್ಲದ ಬೇರೆ ಉಪಾಯವೆ ಇಲ್ಲವಾಗಿದೆ, ಇದನ್ನು ಬೇಂಕ ಒಫ್ ಫ್ರಾನ್ಸಿನಿಂದ ಸಾಲಕೊಳ್ಳಬೇಕಾಗಿದೆ, ಇನ್ನು ಯಾರು ಪ್ರಧಾನ ಮಂತ್ರಿಯ ಕೆಲಸವನ್ನು ವಹಿಸಿಕೊಳ್ಳುವರೊ, ನೋಡಲಿದೆ, ಎಂತೂ ಅದು ಈಗ ಸದ್ಯಕ್ಕೆ ಸ್ವೀಕಾರಾರ್ಹವಲ್ಲದ ಪದವಿಯಾಗಿದೆ,

ಐಗುಪ್ತ್ಯದ ಸ್ವಾತಂತ್ರ್ಯ!

ಬ್ರಿಟಿಷರು ಐಗುಪ್ತ್ಯಕ್ಕೆ ಒಂದು ಸ್ವಾತಂತ್ರ್ಯವನ್ನು ಕೊಟ್ಟರು! ಆದರೆ ಈ ಸ್ವಾತಂತ್ರ್ಯದ ಅಡಿಯಲ್ಲಿ ಅವರು ಹಿಂದಿನ ಪಾರತಂತ್ರ್ಯಕ್ಕಿಂತಲೂ ಕಠಿಣವಾದ ಸ್ಥಿತಿಯಲ್ಲಿದ್ದಾರೆ. ಹಿಂದುಸ್ಥಾನಕ್ಕೆ ಹೇಗೆ ಸುಧಾರಣಾ ಸರಕಾರವನ್ನು ಕೊಟ್ಟು ಮಂತ್ರಿಪದವಿಯ ಮೋಹದಿಂದ ಧುರೀಣರಿಗೂ ಜನತೆಗೂ ಕಲಹಗಳನ್ನೊಡಲು ಯತ್ನಿಸಿದರೊ, ಮತ್ತು ಅನೇಕ ಸಂದರ್ಭಗಳಲ್ಲಿ ಕೃತಕೃತ್ಯರಾದರೊ, ಹಾಗೆಯೆ ಐಗುಪ್ತ್ಯಕ್ಕೆ ಒಂದು ಸ್ವಾತಂತ್ರ್ಯವನ್ನು ಕೊಟ್ಟು, ಐಗುಪ್ತ್ಯದ ಕೆಲವು ಸ್ವಾರ್ಥ ಜನರಿಂದಲೇ ಅದನ್ನು ತಮ್ಮ ಇಚ್ಛೆಗೆ ಬೇಕಾದಂತೆ ಆಳಿಸಿಕೊಳ್ಳುತ್ತಿರುವರು. ತಮ್ಮ ಸೈನ್ಯ ಐಗುಪ್ತ್ಯದಲ್ಲಿ, ತಮ್ಮ ಅಧಿಕಾರ ಐಗುಪ್ತ್ಯದ ಮುಖ್ಯ ಪಟ್ಟಣದಲ್ಲಿ ಇರಿಸುವ ತೆರದ ಸ್ವಾತಂತ್ರ್ಯವು ಬೇರಾವ ದೇಶಕ್ಕೂ ಬೇರಾವ ಜನಾಂಗದಿಂದಲೂ ಕೊಡಲ್ಪಟ್ಟಿಯದೆಂದು ನಾವು ನೆನಸುವುದಿಲ್ಲ! ಐಗುಪ್ತ್ಯಕ್ಕೆ ಸ್ವಾತಂತ್ರ್ಯವನ್ನು ಕೊಟ್ಟರು; ಪಾರ್ಲಿಮೆಂಟ ಏರ್ಪಾಡಾಯಿತು; ಈ ಮೊದಲು ಬ್ರಿಟಿಷರು ಗಡಿಪಾರು ಮಾಡಿದ ಝಗಲುಲ್ ಪಾಶಾರವರು ಮಂತ್ರಿಯಾದರು. ಸ್ವತಂತ್ರ ವರ್ತನದ ಮಂತ್ರಿಯವರ ನೇಮಕವಾದ ಕೂಡಲೆ ಇಳಿಯಿತು ಬ್ರಿಟಿಷರ ಭಯಂಕರ ಗಧೆ. ಅೀಯವರನ್ನು ಯಾರೊ ಕೊಂದ ನೆವದಿಂದ ಐಗುಪ್ತ್ಯವು ಸಹಿಸಲಾರದ ಶರ್ತಗಳು ಹೊರಿಸಲ್ಪಟ್ಟವು. ಝಗಲೂಲನು ರಾಜೀನಾಮೆ ಕೊಡಬೇಕಾಯಿತು, ಆ ಮೇಲೆ ಪ್ರಧಾನ ಮಂತ್ರಿಯಾದವನು ಇಂಗ್ಲೀಷರ ಕೈಯಲ್ಲಿ ಸೂತ್ರದ ಗೊಂಬೆ! ಅಲ್ಲಿಯ ಪಾರ್ಲಿಮೆಂಟು ಬರ್ಖಾಸ್ತಾಗಿ, ಪುನಃ ಚುನಾವಣೆಯಾಗಿ, ಪುನಃ ಝಗಲೂಲನೇ ಅಧ್ಯಕ್ಷನಾಗಿ ಆರಿಸಲ್ಪಟ್ಟನು. ಪುನಃ ಇಂಗ್ಲೀಷರ ಪ್ರೇರಣೆಯಿಂದ ಪಾರ್ಲಿಮೆಂಟನ್ನು ಪ್ರಧಾನ ಮಂತ್ರಿಯು ಬರ್ಖಾಸ್ತುಪಡಿಸಿದನು. ಇದು ಆಗಿ ಬಹಳ ಸಮಯವಾಯಿತು.

ಈಗ ಝಗಲೂಲನ ಪಕ್ಷದವರು, ಪಾರ್ಲಿಮೆಂಟ ಬರ್ಖಾಸ್ತು ಮಾಡಿದುದು ಕಾನೂನಿಗೆ ವಿರೋಧವೆಂದು, ಪಾರ್ಲಿಮೆಂಟನ್ನು ಪ್ರತ್ಯೇಕ ಒಂದು ಸ್ಥಳದಲ್ಲಿ ಸೇರಿಸಿದರು. ಸರಕಾರವು ಅದನ್ನು ಬೇಕಾಯದೆಶೀರವಾಗಿ ಜಾಹೀರು ಮಾಡಿದರು. ಆದರೆ ಪ್ರಯೋಜನವಾಗಲಿಲ್ಲ. ಪಾರ್ಲಿಮೆಂಟು ನಿರ್ವಿಘ್ನವಾಗಿ ಕೂಡಿಕೊಂಡು, ಝಗಲೂಲನನ್ನು ಪುನಃ ಅಧ್ಯಕ್ಷನನ್ನಾಗಿ ಆರಿಸಿ, ಪುನಃ ಅಲ್ಲಿಯೇ ನಿರ್ದಿಷ್ಟ ಸಮಯದಲ್ಲಿ ಕೂಡಬೇಕಾಗಿ ನಿರ್ಣಯಿಸಿ ಬರ್ಖಾಸ್ತು ಹೊಂದಿತು,

ಐಗುಪ್ತ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಇನ್ನೊಂದು ಮುಖ್ಯ ವಿಷಯವೆಂದರೆ, ಅಲ್ಲಿಯ ಎಲ್ಲಾ ಪಕ್ಷಗಳ ಏಕೀಕರಣ, ಈ ಮೊದಲು ಝಗಲೂಲ ಪಕ್ಷದವರೂ, ಉದಾರಪಕ್ಷದವರೂ ಮಧ್ಯವರ್ತಿಗಳೂ ಎಂದು ಮೂರು ತೆರದ ರಾಷ್ಟ್ರೀಯ ಪಕ್ಷಗಳಿದ್ದುವು, ಆದರೆ ಸರಕಾರವು ದಿನ ದಿನವೂ ಹೆಚ್ಚಿಸುತ್ತಿದ್ದ ದಬ್ಬಾಳಿಕೆಗಳನ್ನು ನೋಡಿ ಜನತೆಗೆ ಬೇಸರವಾಗಿಯದ್ದುದರಿಂದ ಸರಕಾರದ ನಿರೋಧಕ್ಕಾಗಿ ಈ ಮೂರು ಪಕ್ಷ ಹೆಚ್ಚಾದಷ್ಟು ಸೇರಿವೆ, ಆದರೆ ನಮ್ಮ ದೇಶದಲ್ಲಿ ದಬ್ಬಾಳಿಕೆ ...ವಾಗಿ ಸ್ವಂತ ಪಕ್ಷ... ಬುದ್ಧಿ ಶಕ್ತಿಯು ಮತ್ತಷ್ಟು ತೀವ್ರ ... ಮಾಡುವುದರಲ್ಲಿ ಉತ್ಸಾಹಿಸುತ್ತದೆ!

ಮದ್ರಾಸು ಕೌನ್ಸಿಲಿಗೆ ಮುಂದಿನ ಉಪ... ಯಾರು?

ಡಾಕ್ಟರ ರಾಮರಾಯರು ಕೌನ್ಸಿಲ್ ಒಫ್ ಸ್ಟೇಟಿನ ಚುನಾವಣೆಗೆ ನಿಂತಂದಿನಿಂದ ಮದ್ರಾಸು ಕೌನ್ಸಿಲಿನೊಳಗಿನ ಅವರ ಸ್ಥಾನವು ಖಾಲಿ ಬಿದ್ದಿತು. ಮದ್ರಾಸ ಕೌನ್ಸಿಲಿಗೆ ಬರುವ ವರ್ಷದ ಆಖೈರಿಯೊಳಗೆ ಹೊಸ ಚುನಾವಣೆಗಳು ಆಗುವುವು. ಆದರೆ ಅದರ ಅಂತರದಲ್ಲಿರುವ ಈ ಎಂಟು ಹತ್ತು ತಿಂಗಳ ಸದಸ್ಯತನಕ್ಕೆ ಯಾರು ಯಾರಿಗೆ ಉಮೇದಾಗಿಯದೆ ಎಂದು ನೋಡಲಿದೆ. ಪ್ರಾಯಶಃ ಈ ಬಾರಿಯ ಚುನಾವಣೆಯು ನಾಡವರಿಗೆ ಹೋಗಬಹುದು. ಆದರೆ ಹಾಗೆ ಚುನಾಯಿಸಲ್ಪಟ್ಟವರು ಕೌನ್ಸಿಲಿಗೆ ಬ್ರಾಹ್ಮಣ-ಬ್ರಾಹ್ಮಣೇತರ ಭೇದವೆಂಬ ವಿಷಮಯ ಭಾವದಿಂದ ಪ್ರೇರಿತರಾಗದೆ, ದೇಶಹಿತದ ಕಡೆಗೇನೇ ಅವರ ದೃಷ್ಟಿ ಇದ್ದೀತೆಂದು ನಾವು ಆಶಿಸುತ್ತೇವೆ. ಮತದಾರರೂ ದಾಕ್ಷಿಣ್ಯದ ಕಡೆಗೆ ಲಕ್ಷ್ಯ ಕೊಡದೆ ಪ್ರತಿನಿಧಿಗಳ ಯೋಗ್ಯತೆಯ ಕಡೆಗೆ ಗಮನಿಸಬೇಕು.

ಹಿಂದೂಸ್ಥಾನಕ್ಕೆ ಮೋಟಾರಕಾರುಗಳು,

ಹಿಂದೂಸ್ಥಾನದಲ್ಲಿ ವರ್ಷಂಪ್ರತಿಯು ಮೋಟಾರಕಾರುಗಳು ಆಮದು ಹೆಚ್ಚೆಚ್ಚು ಆಗುತ್ತಾ ಬರುತ್ತಿದೆ, ಮೋಟರ ಕಾರುಗಳ ಆಮದಿನಿಂದ ಹಿಂದೂಸ್ಥಾನದಿಂದ ಬಹ ಹಣವು ಬತ್ತಿಹೋಗುತ್ತಿದೆ, ಮೋಟರುಗಳು ಮೂಲ ಮೌಲ್ಯ ಮಾತ್ರವಲ್ಲದೆ, ಅದಕ್ಕೆ ಬೇಕಾಗುವ ದುರುಸ್ತಿ ಸಾಮಾನುಗಳು, ಪೆಟ್ರೋಲಿನ ಖರ್ಚು ಟಾಯರಿನ ಖರ್ಚು ಇವನ್ನು ನೋಡಿದರೆ ಮೋಟರುಗಳ ಮೂಲಕ ಹಿಂದೂಸ್ಥಾನಕ್ಕೆ ವಿಪರೀತ ನಷ್ಟವಾಗುತ್ತಿದೆಯೆಂದು ತಿಳಿಯಬಹುದು.

ಕಳೆದ ಸಪ್ಟಂಬರಕ್ಕೆ ಅಂತ್ಯವಾಗುವ ಆರು ತಿಂಗಳೊಳಗೆನೇ ಹಿಂದೂಸ್ಥಾನಕ್ಕೆ ಒಂದು ಕೋಟಿ ರೂಪಾಯಿ ಬೆಲೆ ಬಾಳುವಷ್ಟು ೪,೭೬೩ ಕಾರುಗಳು ಬಂದವು, ಕಳೆದ ವರ್ಷ ಇದೇ ಸಮಯಕ್ಕೆ ೪,೫೭೭ ಕಾರುಗಳು ಬಂದಿದ್ದುವು, ಈ ೪,೭೬೩ ಕಾರುಗಳಲ್ಲಿ ೩,೬೨೮ ಕಾರುಗಳು ಅಮೇರಿಕದಿಂದ ಬಂದುವು, ಇಟಲಿಯಿಂದ ೩೧೧ ಮತ್ತು ಫ್ರಾನ್ಸಿನಿಂದ ೧೪೧ ಕಾರುಗಳೂ ಬಂದಿದ್ದುವು, ಬ್ರಿಟಿಷಕಾರುಗಳು ೫೫೫ರಷ್ಟು ಬಂದುವು, ಆದುದರಿಂದ ಅಮೇರಿಕದ ಮೋಟಾರ ವ್ಯಾಪಾರವೇ ಹಿಂದೂಸ್ಥಾನದಲ್ಲಿ ಬಲವಿದೆಯೆಂದು ಇದರಿಂದ ವ್ಯಕ್ತವಾಗುವುದು.

ಬ್ರಿಟಿಷ ಕಾರುಗಳು ಸರಾಸರಿ ಮೌಲ್ಯವು ೪,೧೦೦ರಿಂದ ೩,೪೦೦ಕ್ಕೆ ತಗ್ಗಿಯದೆ, ಈ ಕಾರಣದಿಂದ ಈ ಬಾರಿ ಹಿಂದಿಗಿಂತಲೂ ಹೆಚ್ಚು ಕಾರುಗಳು ಆಮದಾದುವು, ಇಟಲೀ ದೇಶದ ಕಾರುಗಳ ಸರಾಸರಿ ಮೌಲ್ಯವು ೫,೦೦೦ದಿಂದ ೩,೩೮೦ಕ್ಕೆ ತಗ್ಗಿತು, ಫ್ರೆಂಚ ಕಾರುಗಳ ಮೌಲ್ಯವು ೨,೬೦೦ರಿಂದ ೨,೮೦೦ಕ್ಕೆ ಏರಿತು, ಮತ್ತು ಅಮೇರಿಕ ಕಾರುಗಳು ಮೌಲ್ಯವು ೨,೨೫೦ರಿಂದ ೧೮೦೦ಕ್ಕೆ ತಗ್ಗಿತು,

ಮೋಟರ ಸ್ಯಾಕಲುಗಳು ೫೯೦ರಷ್ಟು ಬಂದುವು, ಇವುಗಳೊಳಗೆ ೪೮೯ ಬ್ರಿಟಿಷ ಸ್ಯಾಕಲುಗಳು,

ಬಸ್ಸುಗಳೂ ಲೋರಿಗಳೂ ೧,೫೪೫ರಷ್ಟು ಬಂದುವು, ಇವುಗಳ ಜುಮ್ಲಾ ಮೌಲ್ಯವು ೩೬ ಲಕ್ಷವಿದ್ದಿತು, ಕಳೆದ ವರ್ಷ ಇದೇ ಸಮಯಕ್ಕೆ ೮೯೩ರಷ್ಟು ಮಾತ್ರವೇ ಬಂದಿದ್ದುವು, ಇದರಿಂದ ಬಸ್ಸುಗಳು ಜನರಲ್ಲಿ ಹೆಚ್ಚು ಖಾಯಿಸಿಹೊಂದುತ್ತಿವೆ, ಬಸ್ಸುಗಳ ಪ್ರಯಾಣವು ಹೆಚ್ಚು ಪ್ರಚಾರವಾಗುತ್ತಿದೆಯೆಂದು ತಿಳಿಯುವುದು ಬಸ್ಸುಗಳ ಹೆಚ್ಚಿನ ಅಂಶವು ಅಮೇರಿಕದಿಂದ ಬರುತ್ತಿದೆ, ೧೫೪೫ ಬಸ್ಸುಗಳಲ್ಲಿ ೧೬೭೯ ಅಮೇರಿಕದಿಂದಲೂ ೧೭೦ ಇಂಗ್ಲೆಂಡಿನಿಂದಲೂ ಬಂದುವು,

ಮುಖ್ಯವಾಗಿ ಈ ಬಸ್ಸು, ಕಾರು, ಸ್ಯಾಕಲುಗಳ ಮೂಲಕ ಹಿಂದೂಸ್ಥಾನದಿಂದ ಅರ್ಧ ವರ್ಷಕ್ಕೆ ಒಂದೂವರೆ ಕೋಟಿ ರೂಪಾಯಿಯ ಹಾನಿಯಾಗುತ್ತಿದೆ, -ಇದರೊಟ್ಟಿಗೆ ಪೆಟ್ರೋಲ್ ಟಾಯರು, ದುರುಸ್ತಿ ಇವುಗಳನ್ನು ಸೇರಿಸಿದರೆ ಅರ್ಧ ವರುಷಕ್ಕೆ ಎರಡೂವರೆ ಕೋಟಿ ರೂಪಾಯಿಯಷ್ಟು ಹಿಂದೂಸ್ಥಾನಕ್ಕೆ ಖರ್ಚಾಗುತ್ತಿದೆ, ಅಂದರೆ ಪ್ರಯಾಣಗಳ ಸೌಕರ್ಯಕ್ಕೆ ಹಿಂದೂಸ್ಥಾನವು ಐದು ಕೋಟಿ ರೂಪಾಯಿಯನ್ನು ವಿಲಾಯತಿಗೆ ತುಂಬುತ್ತಿದೆ, ಅಂದ ಮೇಲೆ ವಸ್ತ್ರಕ್ಕಾಗಿ ೬೦ ಕೋಟಿಯನು ಪರದೇಶಕ್ಕೆ ಸಾಗಿಸುವುದು ಆಶ್ಚರ್ಯವಲ್ಲ,

ಮಂಗಳೂರು.

ಈ ತಿಂಗಳ ತಾರೀಖು ೨೯ನೆ ... ಘಂಟೆಗೆ ರಾವಸಾಹೇಬ ... ಬಂಗಳೂರು ಉಪಾಸನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು. ...ಜೀವನ.

ಕೌನ್ಸಿಲ್ ಓಫ್ ಸ್ಟೇಟ್ ಮೆಂಬರರಾಗಿ ಚುನಾಯಿಸಲ್ಪಟ್ಟ ಡಾಕ್ಟರ್ ಯು. ರಾಮರಾಯರ ಖಾಲಿ ಬಿದ್ದ ಮದ್ರಾಸ್ ಕೌನ್ಸಿಲ್ ಮೆಂಬರಿಕೆಯ ಸ್ಥಾನಕ್ಕೆ ಮಿ। ಕೆ. ರಾಮನಾಥ ಶೆಣೈ ಬಿ. ಎ ಯಮ್ ಎಲ್ ಎಡ್ವಕೇಟ್ ಇವರು ಉಮೇದ್ವಾರರಾಗಿ ನಿಲ್ಲಲಿರುವವರೆಂದು ತಿಳಿದು ಬರುತ್ತದೆ

ಜಿಲ್ಲಾ ಕಲೆಕ್ಟರರಾದ ಜಿ. ಡಬ್ಲ್ಯೂವೇಲ್ಸ್‌ರ ಅನುಮತಿ ಪ್ರಕಾರ ಕುಂದಾಪುರ, ಕಾರ್ಕಳ, ಕಾಸರಗೋಡು ಮತ್ತು ಉಪ್ಪಿನಂಗಡಿ ತಾಲೂಕು ಗಳ ತಹಸಿಲ್ದಾರರ ಮೂಲಕ ಕ್ವಿನಿನ್ ಮಾತ್ರೆಗಳು ಆಯಾಯ ತಾಲೂಕು ಗಳಲ್ಲಿ ಧರ್ಮಾರ್ಥವಾಗಿ ಹಂಚಲ್ಪಡುತ್ತವೆಂದು ತಿಳಿದುಬರುತ್ತದೆ.

ಮಂಜೇಶ್ವರ ಸಬ್ ರಿಜಿಸ್ಟ್ರಾರರಾದ ರಾ। ಯಮ್. ಶಾಮರಾಯರು ಮಂಗಳೂರಿನ ಹಂಗಾಮಿ ಜೊಯಿಂಟ್ ಸಬ್ ರಿಜಿಸ್ಟ್ರಾರರಾಗಿಯೂ, ಬೆಳ್ತಂಗ ಡಿಯ ಸಬ್ ರಿಜಿಸ್ಟ್ರಾರರಾದ ಮಿ। ಸಿ. ಯಮ್. ಡಿ. ಸೋಜರು ಮಂಜೇ ಶ್ವರ ಹಂಗಾಮಿ ಸಬ್ ರಿಜಿಸ್ಟ್ರಾರರಾಗಿಯೂ ನೇಮಕಹೊಂದಿರುವರಲ್ಲದೆ ಮಂಗಳೂರು ರಿಜಿಸ್ಟ್ರಾರ್ ಆಫೀಸಿನ ಕ್ಲಾರ್ಕ ಮಿ। ಯಮ್. ನಾಗಪ್ಪ ಇವರು ಬೆಳ್ತಂಗಡಿಯ ಹಂಗಾಮಿ ಸಬ್ ರಿಜಿಸ್ಟ್ರಾರರಾಗಿ ನೇಮಿಸಲ್ಪಟ್ಟಿರು ವರು.

ಕಳೆದ ಶನಿವಾರಕ್ಕೆ ಅಂತ್ಯವಾಗುವ ವಾರದಲ್ಲಿ ಇಲ್ಲಿಯ ಮುನ್ಸಿ ಪಾಲಿಟಿಯಲ್ಲಿ ಮರಣ ೨೧, ಕೋಲೇರಾದಿಂದ ಒಂದು ಮರಣ ಉಂಟಾಗಿದೆ. ಅನಾಥೆಯಾದ ೮ ವರ್ಷದ ಹುಡುಗಿಯೊಬ್ಬಳಿಗೆ ಕಂಕನಾಡಿ ರಸ್ತೆಯು ಬಲಿ ವ್ಯಾಳಿಗೆಯಾಗಿದೆ.

ಮೊದಲು ಕಲ್ಲಿಕೋಟೆಯ ನೇಟಿವ್ ಹ್ಯಾಸ್ಕೂಲಿನ ಹೆಡ್ ಮಾಸ್ತ ರರೂ ಪ್ರೊಪ್ರೈಟರರೂ ಆಗಿದ್ದ ಮಿ। ಡಿ. ಗಣಪತಿರಾಯರು ಇತ್ತಲಾಗಿ ಸನ್ಯಾಸನವನ್ನು ಸ್ವೀಕರಿಸಿ, ಸ್ವಾಮಿ ಶುವಿಚಾರಾನಂದರೆಂಬ ಹೆಸರು ಪಡೆ ದಿರುವರು. ಇವರು ಕೆನರಾ ಹ್ಯಾಸ್ಕೂಲಿನ ಸಭಾಸದನದಲ್ಲಿ 'ಹಿಂದೂ ತತ್ವಜ್ಞಾನದ' ಕುರಿತು ಇದೇ ತಿಂಗಳ ತಾ. ೨೩ನೇ ಸೋಮವಾರದಿಂದ ೨೫ನೇ ಬುಧವಾರದ ವರೆಗೆ ಸಂಜೆ ೫॥ ಘಂಟೆಯಿಂದ ಒಂದೊಂದು ಘಂಟೆ ಬೋಧಯುಕ್ತ ಉಪನ್ಯಾಸ ಮಾಡಿರುವರು.

ವಿವಿಧ ವಿಷಯಗಳು.

ಕೇಳ್ಕರರಿಗೂ ಜಯಕರರಿಗೂ ಮಹಾರಾಷ್ಟ್ರದ ಪ್ರತ್ಯುತ್ತರ.

"ನಮ್ಮ ಕಡೆಯ ಕೆಲವು ಧುರೀಣರು ಪಕ್ಷದೊಳಗೆ ಉಂಟುಮಾಡಿದ ದಂಗೆಯಿಂದ ಸ್ವರಾಜ್ಯಪಕ್ಷದ ವೀಣೆಯಲ್ಲಿ ಅಪಸ್ವರವು ಹೊರಟಿಯದೆ. ಮತ್ತು ಇತ್ತೀಚೆ ಕೆಲವು ಪ್ರಮುಖ ಸ್ವರಾಜ್ಯ ಪಕ್ಷಿಯರ ಮನೋಚಾಂಚಲ್ಯ ದಿಂದ, ಅಂತಹ ಸ್ವಾರ್ಥಸಾಧಕರನ್ನು ಸ್ವರಾಜ್ಯ ಪಕ್ಷದಿಂದ ಹೊರಹಾಕುವ ಆವಶ್ಯಕತೆಯು ತಮಗೆ ಸರಿಯಾಗಿ ವೇದ್ಯವಾಗಿಯದೆ. ಆದುದರಿಂದ ಅನುತ್ಸಾಹಕವಾಗುತ್ತಿರುವ ಈ ಸಂಸ್ಥೆಯಲ್ಲಿ ಹೊಸ ಜೀವನವನ್ನೂ ಚೇತನ ವನ್ನೂ ಉಸುರಲಿಕ್ಕೆ ತಾವು ಈ ಪ್ರಚಾರ ಕಾರ್ಯವನ್ನು ಕೈಕೊಂಡಿರುವಿರಿ. ಈ ಸಮಯದಲ್ಲಿ ನಾವು ತಮಗೆ ತಮ್ಮ ಸ್ವರಾಜ್ಯಪಕ್ಷದ ಕಡುತರದ ಧ್ಯೇಯದ ಕಡೆಗೆ ನಮ್ಮ ಅವಿಚಲ ಸಹಾಯವನ್ನೂ, ಭಕ್ತಿಯನ್ನೂ ಕೃತ ಪಡಿಸುತ್ತೇವೆ" ಈ ಮಾತುಗಳಿಂದ ಮಹಾರಾಷ್ಟ್ರ ಊರಾದ ಚಾಂದವು ಮೋತಿಲಾಲ ನೇಹರುರವರಿಗೆ ಮಾನಪತ್ರವನ್ನೀಯಿತು. ಈ ಮಾನಪತ್ರವು ಮುನ್ಸಿಪಾಲಿಟಿ ಮತ್ತು ಡಿಸ್ಟ್ರಿಕ್ಟ ಕೌನ್ಸಿಲು ಒಟ್ಟಾಗಿ ಕೊಟ್ಟುದಾಗಿರುತ್ತದೆ.

ಮಹಾರಾಷ್ಟ್ರವನ್ನು ಒಲಿಸಲು ಶ್ರೀಯುತ ಕೇಳ್ಕರರು ಹೊಸದೊಂದು ಉಪಾಯವನ್ನು ಹುಡುಕಿರುವರು. ಯಾವುದೋ ಒಂದು ಸಮಯದಲ್ಲಿ ಪಂಡಿತಜಿಯವರು ಆಡಿದ ಯಾವುದೊ ಮಾತುಗಳನ್ನೆತ್ತಿ, ಅದು ಮಹಾ ರಾಷ್ಟ್ರದ ಮೇಲಿನ ಪಂಡಿತಜಿಯವರ ಮತ್ಸರವನ್ನು ಸೂಚಿಸುತ್ತದೆಂದು ಅರ್ಥವನ್ನು ಕಟ್ಟಿ, ಪಂಡಿತಜಿಯವರಿಗೆ ಮಹಾರಾಷ್ಟ್ರದ ಮೇಲಿನ ಇರುವ ಮತ್ಸರವನ್ನು ತೋರಿಸಲು ಪ್ರಯತ್ನಿಸಿದರು. ಜವಾಬ್ದಾರಿಯುಳ್ಳ ಧುರೀಣರು ಇಂತಹ ಕ್ಷುದ್ರವೃತ್ತಿಗಳನ್ನೆತ್ತುವರಾಗಿ ಯಾರೂ ಊಹಿಸರು. ಮಹಾರಾಷ್ಟ್ರ ವನ್ನು ಶ್ರೀಯುತ ಕೇಳ್ಕರರು ಒಲಿಸಿಕೊಳ್ಳುವುದಾದರೆ ಇತರ ಉಪಾಯ ಗಳನ್ನು ನೋಡಬಹುದಿತ್ತು. ಈ ತರದಲ್ಲಿ ಪರಸ್ಪರ ದ್ವೇಷಹುಟ್ಟಿಸುವ ಸಾಧನೆಯನ್ನು ಮಹಾರಾಷ್ಟ್ರವು ಅಲ್ಲಗಳೆಯದಿರದು.

ಸರೋಜಿನಿ ದೇವಿಯವರ ಮಗನು ಮುಸಲ್ಮಾನನೊ?

ಶ್ರೀ ಸರೋಜಿನಿ ದೇವಿಯವರ ಮಗನು ಮುಸಲ್ಮಾನನಾಗಿರುವನಂತೆ. ಎರಡು ವರ್ಷಗಳ ಹಿಂದೆ ಅವನು ಶ್ರೀ ಸರೋಜಿನಿಯ ಒಪ್ಪಿಗೆಯನ್ನು ಪಡೆದೇ ಮುಸಲ್ಮಾನನಾಗಿರುವನೆಂದು "ಮುಸ್ಲಿಮ್ ಔಟಲುಕ್" ಎಂಬ ಮುಸಲ್ಮಾನ ಪತ್ರಿಕೆಯು ತಿಳಿಸಿತು. ಸ್ವಾಮಿ ಶ್ರದ್ಧಾನಂದರ "ತೇಜ" ಎಂಬ ಪತ್ರಿಕೆಯೂ ಇತರ ಹಿಂದೂ ಪತ್ರಿಕೆಗಳೂ ಇದನ್ನು ಅಲ್ಲಗಳೆದುವು. "ಮುಸ್ಲಿಮ್ ಔಟ್‌ಲುಕ್" ಪತ್ರವು ಶ್ರೀ ಸರೋಜಿನಿಯು ಲಾಹೋರಿಗೆ ಹೋದಾಗ ಅಲ್ಲಿ ಈ ಬಗ್ಗೆ ಅವರ ಭೇಟಿಯನ್ನು ಕೇಳಿತು. ಅವರು ನಿರಾಕರಿಸಿದರು. ಆದರೆ ಮುಸಲ್ಮಾನ ಪತ್ರದ ವಾರ್ತೆಯು ಸುಳ್ಳುವಾದು ದೆಂದು ಹೇಳಿದರು. ಪುನಃ ಕಲ್ಕತ್ತದಲ್ಲಿ "ಸ್ಟೇಟ್ಸ್‌ಮನ್" ಪತ್ರಿಕೆಯಲ್ಲಿ ಇದೇ ವಾರ್ತೆ ಬಂತು, ಪುನಃ "ಮುಸ್ಲಿಮ್ ಔಟ್‌ಲುಕ್" ಪತ್ರವು ಅದ ನ್ನೆತ್ತಿ. ಸರೋಜಿನಿಯವರು ತಮ್ಮ ಮಗನಿಗೆ ಧೈರ್ಯವಾಗಿ ಮುಸಲ್ಮಾನ ನಾಗಲು ಒಪ್ಪಿಗೆ ಕೊಟ್ಟುದಕ್ಕೆ ಅವರನ್ನು ಪ್ರಶಂಸಿಸಿ, ಕೊಂಗ್ರೆಸ ಅಧ್ಯಕ್ಷ ರಿಗೆ, ಹಿಂದೂ-ಮುಸಲ್ಮಾನರ ಐಕ್ಯಸಾಧಿಸುವವರಿಗೆ ಇದು ತಕ್ಕುದಾದ ವರ್ತನವೆಂದು ಹೊಗಳಿ, ಶ್ರೀ ಸರೋಜಿನಿಯರ ಉದಾಹರಣೆಯನ್ನು ಇತ ರರೂ ಕೈಕೊಳ್ಳಬೇಕಾಗಿ ಆಶಿಸಿ, "ಗಾಂಧಿಯವರು ಅನುಸರಿಸುವರೋ". ಎಂದು ಪ್ರಶ್ನಿಸಿದೆ. ಹಿಂದೂ-ಮುಸಲ್ಮಾನ ಐಕ್ಯಕ್ಕೆ ಉತ್ತಮ ಉಪಾಯ ತಂದೆಯಾಗಲಿ ತಾಯಿ ತಮ್ಮ ಮಗನನ್ನು ಮುಸಲ್ಮಾನ ಮತಕ್ಕೆ ಸೇರಿಸಿ ದರೆ "ಮುಸ್ಲಿಮ್ ಔಟಲುಕ್"ದ ಪ್ರಶಂಸೆಯೊ, ಹಿಂದೂ-ಮುಸಲ್ಮಾನರ ಐಕ್ಯವೂ ಸ್ಥಿರವಾಗುವುದು! ಏನು ಉದ್ಧಟತನ!

ಫ್ರೆಂಚ ಸಾಮ್ರಾಜ್ಯ.

ಇಂಗ್ಲೆಂಡು ಭೂಲೋಕದ ಎಲ್ಲಾ ಕಡೆಗಳಲ್ಲಿಯೂ ಹೋಗಿ ಸಾಮ್ರಾ ಜ್ಯವನ್ನು ವಿಸ್ತರಿಸುವುದನ್ನು ನೋಡಿ ಫ್ರಾನ್ಸಿಗೂ ಸಾಮ್ರಾಜ್ಯ ವಿಸ್ತರಣೆಯ ಆಶೆಯು ಎಂದಿನಿಂದಲೂ ಇದೆ. ಯುದ್ಧದ ಅಖೈರಿಯಲ್ಲಿ ಈ ವಿಸ್ತರಣೆಯ ಉತ್ತಮ ಸಂದರ್ಭವು ಒದಗಿತು. ಯುದ್ಧದ ವಿಜಯ ಲಾಭವಾಗಿ ಸಿಕ್ಕಿದ ಪ್ರಾಂತಗಳನ್ನು ಇಂಗ್ಲೆಂಡು ಸ್ವಲ್ಪವೂ, ಫ್ರಾನ್ಸು ಸ್ವಲ್ಪವೂ ಹಂಚಿಕೊಂಡಿ ಯದೆ. ಆ ಪಾಲು ನಿರ್ಣಯದ ಪ್ರಕಾರ ಫ್ರಾನ್ಸಿಗೆ ಸಿರಿಯಾ ಪ್ರದೇಶವು ಸಿಕ್ಕಿತು. ಹಾಗೆಯೇ ಮೊರೊಕ್ಕೊ ದೇಶದ ಒಂದು ಭಾಗವು ಫ್ರಾನ್ಸಿಗೆ ಮೊದಲೇ ಸಿಕ್ಕಿತ್ತು. ಬಾಯಿ ಮಾತೇನೆಂದರೆ, ತಾವು ಆಳುವ ಜನರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ ಅವರನ್ನು ತರ್ಬೇತು ಮಾಡುವೆವು ಎಂದು ಸಿರಿಯಾ ದೇಶವು ಫ್ರಾನ್ಸಿಗೆ ರಕ್ಷಣೆಗಾಗಿ ಲೀಗ್ ಓಫ್ ನೇಶನ್ಸಿನಿಂದ ಸಿಕ್ಕಿ ಯದೆ ಎಂಬ ಹಿಂದು ಕಣ್ಣುಕಟ್ಟಿನ ನೆವವೂ ಇದೆ. ಈ ವರೆಗೆ ಸ್ವಾತಂ ತ್ರ್ಯಕ್ಕೆ ಯೋಗ್ಯರಾಗಿಲ್ಲದೆ, ರಕ್ಷಣೆಗಾಗಿ ಫ್ರಾನ್ಸದೇಶದ ಅಧೀನದಲ್ಲಿ ಪಾಠ ಕಲಿಯುತ್ತಿದ್ದ ಸಿರಿಯಾ ದೇಶವು ಒಮ್ಮಿಂದೊಮ್ಮೆಯೇ ಸ್ವಾತಂತ್ರ್ಯಕ್ಕೆ ಅರ್ಹ ವಾಗಿರುವಂತೆ ತೋರುತ್ತಿದೆ. ಸಿರಿಯಾದಲ್ಲಿ ಎಲ್ಲೆಲ್ಲಿಯೂ ಜನರು ದಂಗೆ ಎದ್ದಿರುವರು. ದಮಾಸ್ಕಸ್ ಪಟ್ಟಣವನ್ನು ಫ್ರೆಂಚ ಆಡಳಿತವು ಸುಟ್ಟುಬಿಟ್ಟ ಸಮಯದಿಂದ ಡ್ರೂಸರ ಶಕ್ತಿಯು ಬೆಳೆಯುತ್ತಾ ಉಂಟು. ಫ್ರಾನ್ಸ ದೇಶವು ಸೈನ್ಯವನ್ನು ಸಿರಿಯಾದಿಂದ ಮೊರೊಕ್ಕೊಗೂ, ಮೊರೊಕ್ಕೊದಿಂದ ಸಿರಿಯಾಕ್ಕೂ ಕಳುಹಿಸುತ್ತಿದ್ದು, ಎಲ್ಲಿಯೂ ಸೈನ್ಯ ಸಾಕಾಗದೆ ಪರಾಜಯ ಹೊಂದಿದೆ. ಡ್ರೂಸರು ಬರೇ ದಂಗೆಖೋರರಾಗಲಿ ಅರಾಜಕರಲ್ಲ, ಸುಸಂ ಘಟಿತ ಸ್ವಾತಂತ್ರ್ಯ ಸಾಧಕರೆಂದು ಅವರೊಡನೆಯೂ ಆಧುನಿಕ ಉಪಕರಣ ಗಳಿವೆಯೆಂಬ ವರ್ತಮಾನದಿಂದ ತಿಳಿಯುತ್ತಿದೆ. ಅವರೊಡನೆ ವಿಮಾನಗಳೂ ಇವೆಯಂತೆ! ಆದುದರಿಂದ ಫ್ರಾನ್ಸದೇಶವು ಈಗ ಡ್ರೂಸ ಮುಖಂಡರೊಡನೆ ರಾಜಿಮಾಡುವ ಆಲೋಚನೆಯಲ್ಲಿದೆ. ರಾಜಿಗಾಗಿ ಅವರು ಮುಖಂಡರನ್ನು ಕರೆದಿರುವರು. ಡ್ರೂಸರು ಒಂದೆರಡು ತಿಂಗಳಲ್ಲಿಯೇ ಸ್ವಾತಂತ್ರ್ಯಕ್ಕೆ ಅರ್ಹರಾದರು. ಸ್ವಾತಂತ್ರ್ಯದ ಅರ್ಹತೆಯ ಮಾನವು ಇಲ್ಲಿ ಸರಿಯಾಗಿ ತೋರುವುದು. ಪಾಶ್ಚಾತ್ಯ ಬರ್ಬರತೆಯಲ್ಲಿ ಪಶುಶಕ್ತಿಯೇ ನ್ಯಾಯಾಸನ ವನ್ನು ಅಲಂಕರಿಸುವಂತಹುದುದಾಗಿದೆ. ಪಶುಶಕ್ತಿಯೇ ಅರ್ಹತೆಯನ್ನು ಸೂಚಿಸುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಬಹುದಾದ ಡಿಸ್ಟ್ರಿಕ್ಟ ಬೋರ್ಡು ರೈಲುಮಾರ್ಗಗಳು.

ಬೇರೆ ಎಲ್ಲಾ ಜಿಲ್ಲೆಗಳಲ್ಲಿಯೂ ಇರುವಂತೆ ದಕ್ಷಿಣ ಕನ್ನಡ ಜಿಲ್ಲೆಗೂ ಒಂದು ಡಿಸ್ಟ್ರಿಕ್ಟ ಬೋರ್ಡು ಇದೆ. ಜನರ ಸೌಕರ್ಯಕ್ಕಾಗಿ ಮಾರ್ಗಗಳನ್ನು ರೈಲುಮಾರ್ಗಗಳನ್ನೂ, ಸೇತುವೆಗಳನ್ನೂ ಮಾಡಿಸುವುದು ಡಿಸ್ಟ್ರಿಕ್ಟಬೋರ್ಡಿ ನವರ ಕೆಲಸಗಳಾಗಿವೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆದ್ದಾರಿಗಳು ಬೇಕಾದಷ್ಟಿವೆ. ಮುಖ್ಯಪಟ್ಟಣವಾದ ಮಂಗಳೂರಿಗೆ ಎಲ್ಲ ಗಾಡಿಮಾರ್ಗ ಗಳು ಹೆದ್ದಾರಿಗಳಿಂದ ಕೂಡಿಸಲ್ಪಟ್ಟಿವೆ. ಈ ಹೆದ್ದಾರಿಗಳಲ್ಲಿ ಸೇತುವೆಗಳೂ ಇವೆ. ಕರಾವಳಿಯ ಮಾರ್ಗಗಳಲ್ಲಿ ಉತ್ತರ ಮಾರ್ಗದಲ್ಲಿ ಪಾಂಗಾಳ ಹೊಳೆ ಒಂದಕ್ಕೆ ಮಾತ್ರವೇ ಸೇತುವೆ ಇದೆ. ಬೇರೆ ಯಾವ ಹೊಳೆಗಾದರೂ ಉತ್ತರದಲ್ಲಿಯೂ ದಕ್ಷಿಣದಲ್ಲಿಯೂ ಒಂದೇ ಒಂದು ಸೇತುವೆಯಾದರೂ ಇರುವುದಿಲ್ಲ. ಸೇತುವೆಗಳನ್ನು ಮಾಡಿಸಬೇಕೆಂದರೆ ಡಿಸ್ಟ್ರಿಕ್ಟ ಬೋರ್ಡಿನವ ರಿಗೆ ಹಣದ ಅಭಾವವಿದೆ. ಬೋರ್ಡು ಹೈಸ್ಕೂಲುಗಳಿಗೂ ಕಟ್ಟೋಣಗಳನ್ನು ಕಟ್ಟಿಸುವದೆಂದರೆ ಅವಕ್ಕೂ ಬೋರ್ಡಿನಲ್ಲಿ ಹಣವಿರುವುದಿಲ್ಲ. ಇನ್ನು ಇತರ ಯಾವ ಕೆಲಸವನ್ನು ಮಾಡಲಿಕ್ಕೂ ಬೋರ್ಡಿನಲ್ಲಿ ಹಣವಿಲ್ಲ. ಇತ್ತ ಲಾಗೆ ಮೂರು ವರುಷಗಳಿಂದ ನೆರೆಯ ಹಾವಳಿಯಿಂದ ಡಿಸ್ಟ್ರಿಕ್ಟ ಬೋರ್ಡಿಗೆ ಲಕ್ಷಾಂತರ ರೂಪಾಯಿಗಳು ನಷ್ಟವಾದವು. ಆದುದರಿಂದ ಡಿಸ್ಟ್ರಿಕ್ಟ ಬೋರ್ಡಿನವರು ಇನ್ನು ಮುಂದೆ ತಮ್ಮ ಆದಾಯವನ್ನು ಹೆಚ್ಚಿಸುವುದು ಅತೀ ಅಗತ್ಯವಾಗಿದೆ.

ಆದಾಯವನ್ನು ಹೆಚ್ಚಿಸಲಿಕ್ಕೆ ಅನೇಕ ದಾರಿಗಳಿವೆ. ಉಪ್ಪಿನಂಗಡಿ ತಾಲೂಕಿನ ಹೆಚ್ಚಿನ ಭಾಗದಲ್ಲಿ ಬೇಸಾಯಮಾಡಲಿಕ್ಕೆ ಯೋಗ್ಯವಾದ ಅನೇಕ ಗದ್ದೆಗಳು ಇದ್ದರೂ ಅವುಗಳು ಬಂಜಾರಾಗಿ ಬಿದ್ದಿವೆ ಈ ತಾಲೂಕಿನಲ್ಲಿದ್ದ ಪುರಾತನ ಕಾಲದ ಕಡಬ, ಸುಬ್ರಹ್ಮಣ್ಯ, ನರಿಮೊಗರು, ಪಂಜ, ಬೆಳ್ಳಾರೆ, ಬೈಲಂಗಡಿ ಬಂಡಿಗಾಡಿ, ಜಮಾಲಬಾದು ಮುಂತಾದ ಪಟ್ಟಣಗಳು ಸಂಪೂರ್ಣ ನಾಶವಾಗಿ ಅವುಗಳ ಕುರುಹುಗಳು ಮಾತ್ರವೇ ಇವೆ. ಈ ಒಂದೊಂದು ಪಟ್ಟಣದಲ್ಲಿ ಸಾವಿರ ಕಟ್ಟೆಯಿಂದ ಮನೆಗಳು ಇದ್ದು ಇವುಗಳಿಗೆ ಒಬ್ಬೊಬ ಪಟ್ಟಣಶೆಟ್ಟಿ ಇದ್ದರೆಂದು ಅವರ ಸಂತತಿಯವರ ಮನೆಯಿಂದ ತಿಳಿದುಬರು ತ್ತದೆ. ಆದುದರಿಂದ ಪುರಾತನ ಕಾಲದಲ್ಲಿ ಜನಭರಿತವಾಗಿಯೂ ಪಟ್ಟಣ ಗಳಿಂದ ಶೋಭಿಸುತ್ತಿದ್ದು ಅನೇಕ ಫಲವತ್ತಾದ ಹೊಲಗದ್ದೆಗಳಿದ್ದು, ಪರದೇಶ ದವರ ಬಲವಾದ ವ್ಯಾಪಾರಕ್ಕೆ ತವರುಮನೆಯಾಗಿದ್ದ ಈ ತಾಲೂಕು, ಈಗ ನಿರ್ಜನವಾಗಿಯೂ, ಪಟ್ಟಣರಹಿತವಾಗಿಯೂ, ಹೆಬ್ಬುಲಿಗಳೂ ಆನೆಗಳೂ ತಿರುಗಾಡುವ ಭಯಂಕರವಾದ ಮಲೆಗಳಿಂದ ತುಂಬಿಹೋಗಲು ಕಾರಣವು ತಿಳಿದುಬರುವುದಿಲ್ಲ. ಈ ತಾಲೂಕಿನ ಉತ್ತರದ ಮುಕ್ಕಾಲು ಭಾಗವು ಈಗಿನ ಸರಕಾರದ ಕೈಕೆಳಗೆ ೧೭೯೯ರಲ್ಲಿ ಶ್ರೀರಂಗಪಟ್ಟಣದ ಯುದ್ಧದ ಸಮಾಪ್ತಿಕಾಲದಲ್ಲಿ ಬಂದಿದೆಯಾದರೂ, ನಂತರ ಇದರ ದಕ್ಷಿಣ ಭಾಗವು ೧೮೩೪ರಲ್ಲಿ ವೀರರಾಜೇಂದ್ರ ಒಡೆಯರ ಕಾಲದ ನಂತರ ಬಂದಿದೆಯಾದರೂ ಈ ತಾಲೂಕಿನ ಅಭಿವೃದ್ಧಿಯ ಕಡೆಗೆ ಸರಕಾರವು ಇಷ್ಟರ ವರೆಗೆ ಕೈಹಚ್ಚದೆ ಇದ್ದುದನ್ನು ನೋಡಿದರೆ ವಿಷಾದಕರವಾಗಿದೆ. ನಿವಾಸಿಗಳು ಮಲೆಜ್ವರ ಪೀಡಿ ತರಾಗಿ ಮರಣಹೊಂದುತ್ತಾ ಜನರ ಸಂಖ್ಯೆಯು ದಿನೇ ದಿನೇ ಕಡಿಮೆಯಾ ಗುತ್ತಾ ಬರುತ್ತದೆ. ಈ ತಾಲೂಕಿನ ವಿಸ್ತೀರ್ಣವನ್ನು ನೋಡಿದರೆ ಈಗಿರುವ ಆಸ್ಪತ್ರೆಗಳು ಬಹಳ ಕಡಿಮೆಯೆಂದೇ ಹೇಳಬೇಕಾಗಿದೆ. ಪುತ್ತೂರಲ್ಲಿ ಒಂದು ದೊಡ್ಡ ಆಸ್ಪತ್ರೆಯಿದ್ದಮಾತ್ರಕ್ಕೆ ಬಹಳ ದೂರ ಪ್ರದೇಶದಲ್ಲಿರುವ ವರಿಗೆ ವೈದ್ಯಸಹಾಯವು ಸಿಗಲಾರದು. ಜನರ ಆರೋಗ್ಯವು ಕೆಟ್ಟುಹೋಗಿ ಹೊಲಗದ್ದೆಗಳು ಹೆಚ್ಚೆಚ್ಚಾಗಿ ಬಂಜರುಬೀಳುತ್ತಾ ಬಂದವು ಗದ್ದೆಗಳು ಬಂಜರುಬೀಳುವಂತೆಯೇ ಅವುಗಳಲ್ಲಿ ಕಾಡುಬೆಳೆಯಿತು. ಆನೆ ಹಿಂಡು ಗಳು ಪಶ್ಚಿಮಘಟ್ಟಗಳ ಬುಡದಿಂದ ಪಶ್ಚಿಮ ದಿಕ್ಕಿಗೆ ಸಂಚಾರಮಾಡಲಾರಂಭಿ ಸಿದವು ಇನ್ನು ಮುಖ್ಯ ಪಟ್ಟಣವಾದ ಪುತ್ತೂರಿನ ವರೆಗೆ ಆನೆಗಳ ಹಿಂಡುಗಳು ಬಂದಮೇಲೆ ಸರಕಾರಕ್ಕೆ ಎಚ್ಚರಿಕೆಯಾಗಿ ವಿಚಾರದೊಂದು ಉಪಾಯ ಹುಡುಕಿದ್ದಾರೋ, ಅಥವಾ ಸರಕಾರಿ ಆಫೀಸುಗಳನ್ನು ಮೊದಲು ಕಡಬ ದಿಂದ ತೆಗೆದು ಉಪ್ಪಿನಂಗಡಿಗೂ ನಂತರ ಉಪ್ಪಿನಂಗಡಿಯಿಂದ ಪುತ್ತೂರಿಗೂ ವೈದಂತೆ ಎಲ್ಲಿಯಾದರೂ ಯಾವ ರಗಳೆಯೂ ಬೇಡವೆಂದು ಪುತ್ತೂರನ್ನು ಆನೆಗಳ ಪಾಲಿಗೆ ಬಿಟ್ಟು ಸಮುದ್ರ ಕರಾವಳಿಯಲ್ಲಿರುವ ಕಾಸರಗೋಡಿಗೆ ವೈಯುವ ಆಲೋಚನೆಯು ಹುಟ್ಟುತ್ತದೋ ಏನೋ, ಆದರೆ ಹೀಗೆ ಮಾಡ ಲಾರರೆಂದು ತೋರುತ್ತದೆ. ಈ ತಾಲೂಕಿನ ಒಂದೇ ಒಂದು ಹೊಳೆಗಾದರೂ ಸೇತುವೆ ಇಲ್ಲ. ಅನೇಕ ಕಡೆಗಳಲ್ಲಿ ಮೋರಿಗಳು ಸಹ ಇಲ್ಲ. ಈ ತಾಲೂಕಿನಲ್ಲಿ ಬಲವಾದ ಜಾನುವಾರು ಸಂತೆಯು ಸುಬ್ರಹ್ಮಣ್ಯದಲ್ಲಿ ನಡಿಯು ತ್ತದೆ. ಸುಬ್ರಹ್ಮಣ್ಯ ಮತ್ತು ಧರ್ಮಸ್ಥಳ ಎಂಬ ಎರಡು ಪ್ರಸಿದ್ಧ ಪಟ್ಟಿ ಯಾತ್ರೆಗಳ ಸ್ಥಳಗಳು ಇವೆ. ಅನೇಕ ಸೀಮೆ ದೇವಸ್ಥಾನಗಳಲ್ಲಿ ದೊಡ್ಡ ಜಾತ್ರೆಗಳು ನಡಿಯುತ್ತವೆ ಇಲ್ಲಿ ಬಲವಾದ ಸಂತೆ ವ್ಯಾಪಾರವು ತಿಂಗಳುಗಟ್ಟ ನಡಿಯುತ್ತವೆ.

ಅದಲ್ಲದೆ ಈ ತಾಲೂಕಿನಲ್ಲಿ ಪಶ್ಚಿಮ ಗಟ್ಟಗಳ ಬುಡದಲ್ಲಿ ಮನುಷ್ಯ ಸಂಚಾರಕ್ಕೆ ಅಗಮ್ಯವಾದ ಅರಣ್ಯಗಳು ಇವೆ. ಈ ಕಾಡುಗಳಲ್ಲಿ ಅನೇಕ ಜಾತಿಯ ಮೋಪಿನ ಮರಗಳೂ, ಕಟ್ಟಿಗೆ ಜಾತಿಯಮರಗಳೂ, ಬಿದಿರಿನ ಹಿಂಡಿಲುಗಳೂ ಲಕ್ಷಗಟ್ಟಲೆಯಿಂದ ಇವೆ. ಇವುಗಳಲ್ಲಿ ಎಷ್ಟೋ ಮರಗಳು ಅಗ್ನಿದೇವತೆಗೆ ತುತ್ತಾಗುತ್ತಾ ಇವೆ. ಎಷ್ಟೋ ಮರಗಳು ಬಿದ್ದು ಮಣ್ಣು ಪಾಲಾಗಿ ಹೋಗುತ್ತವೆ.

ಅದೂ ಅಲ್ಲದೆ ಉಪ್ಪಿನಂಗಡಿಯ ಹತ್ತಿರ ಕಬ್ಬಿಣವೂ ಸಿಕ್ಕುತ್ತದೆಂದು ಎಷ್ಟೊ ವರ್ಷಗಳ ಹಿಂದೆ ಕಂಡುಹಿಡಿದಿರುತ್ತಾರೆ. ಅಣೆಕಟ್ಟನ್ನು ಕಟ್ಟಿ ಕಾಲುವೆಗಳನ್ನೂ ಉಪಕಾಲುವೆಗಳನ್ನೂ ತೋಡಲಿಕ್ಕೆ ಯೋಗ್ಯವಾದ ನದಿ ಗಳೂ ಇವೆ, ಕಾಗದ ಮತ್ತು ಮರದ ಕೈಗಾರಿಕೆಗಳನ್ನು ಮಾಡಲಿಕ್ಕೆ ಯೋಗ್ಯವಾದ ಬಿದಿರು ಇನ್ನು ಅನೇಕ ತರದ ಮರಗಳೂ ಹುಲ್ಲುಗಳೂ ಹೇರಳವಾಗಿದೆ.

ಇದಕ್ಕೆ ಒತ್ತಾಗಿರುವ ಕಾರ್ಕಳ ತಾಲೂಕಿನಲ್ಲಿಯೂ ಜೈನರ ಹಳೆ ರಾಜಧಾನಿಗಳೂ ಯಾತ್ರಸ್ಥಳಗಳೂ ಆಗಿರುವ ಮೂಡಬಿದರೆ, ವೇಣೂರು, ಕಾರ್ಕಳ, ಮುಂತಾದ ಊರುಗಳೂ, ನಾರಾವಿ, ನೆಲ್ಲಿಕಾರು, ವಾರಂಗ, ಮುಂತಾದ ಹಳೇ ಪಟ್ಟಣಗಳೂ ಇವೆ. ಇಲ್ಲಿಯೂ ಅನೇಕ ಕಾಡುಗಳು ಇವೆ. ಇನ್ನು ಇದರ ಉತ್ತರದಲ್ಲಿರುವ ಕುಂದಾಪುರ ತಾಲೂಕಿನಲ್ಲಿ ಬಲ ವಾದ ಕೋಟೆಯಿರುವ ಹೊಸಂಗಡಿಯೂ, ಯಾತ್ರಸ್ಥಳವಾದ ಕೊಲ್ಲೂರೂ, ಕುಟಜಾದ್ರಿಯೂ ಇವೆ. ಈ ತಾಲೂಕಿನಲ್ಲಿದ್ದಷ್ಟು ಗೊಂಡಾರಣ್ಯಗಳು ಯಾವ ತಾಲೂಕಿನಲ್ಲಿಯೂ ಇರುವುದಿಲ್ಲ.

ಒಟ್ಟಾರೆ ಹೇಳುವದಾದರೆ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ಭಾಗವು ಅಭಿವೃದ್ಧಿಗೆ ಬಂದು ಒಳಪ್ರದೇಶವು ನಿರ್ಜನಪ್ರದೇಶವಾಗಿ ಕಾಡು ಪಾಲಾಗಿದೆ ಎಂದು ಹೇಳಬಹುದು.

ಆದುದರಿಂದ ಈ ಒಳಪ್ರದೇಶವನ್ನು ಅಭಿವೃದ್ಧಿಗೆ ತಂದರೆ ಸರಕಾರಕ್ಕೆ ಭೂಕಂದಾಯವೂ, ಲಿಂಡ ಸೆಸ್ಸೂ, ವೃತ್ತಿತೆರಿಗೆಯೂ, ಆದಾಯತೆರಿಗೆಯೂ ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ.

ಈ ರೀತಿಯಲ್ಲಿ ಅಭಿವೃದ್ಧಿಯಾಗಬೇಕಾದರೆ ಜಿಲ್ಲೆಯ ಮುಖ್ಯಪಟ್ಟಣ ವಾದ ಮಂಗಳೂರಿನಿಂದ ಜಿಲ್ಲೆಯ ಒಳಪ್ರದೇಶಗಳಿಗೆ ಡಿಸ್ಟ್ರಿಕ್ಟ ಬೋರ್ಡು ರೈಲುಮಾರ್ಗಗಳನ್ನು ಹಾಕಿಸುವುದೇ ಮುಖ್ಯವಾದ ಉಪಾಯವಾಗಿದೆ. ಇದಕ್ಕಾಗಿ ಮಂಗಳೂರಿನಿಂದ ಒಂದು ರೈಲುವೆ ಮಾರ್ಗವನ್ನು ಅರ್ಕುಳ, ಬಂಟವಾಳ, ಪಾಣೆಮಂಗಳೂರು, ಪುತ್ತೂರಿಗೆ ಕೊಂಡುಹೋಗಿ ಅಲ್ಲಿಂದ ಒಂದು ಶಾಖೆಯನ್ನು ಸಂಪಾಜೆಗೆ ಕೊಂಡುಹೋಗಬಹುದು. ಇನ್ನೊಂದು ಶಾಖೆಯನ್ನು ಕಡಬ ದಾರಿಯಾಗಿ ಉಪ್ಪಿನಂಗಡಿ, ಧರ್ಮಸ್ಥಳ, ವೇಣೂರು, ಮೂಡಬಿದರೆ, ಕಾರ್ಕಳ, ವಾರಂಗ, ಅಜೆಕಾರ ದಾರಿಯಾಗಿ ಕೊಲ್ಲೂರಿನಿಂದ ಬೈಂದೂರಿಗೆ ಕೊಂಡುಹೋಗಬಹುದು. ಇನ್ನೊಂದು ಶಾಖೆಯನ್ನು ಮಂಗ ಳೂರಿನಿಂದ ಮುಲ್ಕಿ, ಪಡುಬಿದರೆ, ಕಾಪು, ಕಟ್ಟಪಾಡಿ ದಾರಿಯಾಗಿ ಮಲ್ಪೆ ಬಂದರಕ್ಕೂ ಅಲ್ಲಿಂದ ಕಲ್ಯಾಣಪುರ ಬ್ರಹ್ಮಾವರ, ದಾರಿಯಾಗಿ ಕುಂದಾಪುರ ಗಂಗೊಳ್ಳಿಯಿಂದ ಬೈಂದೂರಿಗೆ ಕೂಡಿಸಬಹುದು. ಹೀಗೆ ಡಿಸ್ಟ್ರಿಕ್ಟಬೋರ್ಡು ರೈಲುಮಾರ್ಗಗಳನ್ನು ಹಾಕಿದರೆ, ಉಪ್ಪಿನಂಗಡಿ ತಾಲೂಕಿನಲ್ಲಿ ಜನರು ಧೈರ್ಯದಿಂದ ವಾಸಮಾಡಲಾರಂಭಿಸುವರು, ಬಂಜರುಬಿದ್ದ ಹೊಲಗದ್ದೆಗಳು ಫಲಭರಿತವಾಗುವವು. ಪುತ್ತೂರು ವರೆಗೆ ಮುಂದರಿಸಿಬಂದಿರುವ ಕಾಡು ಗಳು ಕಡಿಮೆಯಾಗಿ ಫಲಭರಿತವಾದ ಹೊಲಗದ್ದೆಗಳಾಗುವವು. ಸರಕಾರಕ್ಕೆ ಸಿಕ್ಕುವ ಭೂಕಂದಾಯವು ಲಿಂಡುಸೆಸ್ಸು ಹೆಚ್ಚಾಗುವುದು. ಅಲ್ಲಲ್ಲಿ ಪಟ್ಟಣ ಗಳು ತಿರುಗಿ ಜೀವಹೊಂದಿ ವ್ಯಾಪಾರಸ್ಥಗಳಾಗುವವು. ಇದರಿಂದ ಸರ ಕಾರಕ್ಕೆ ಆದಾಯ ತೆರಿಗೆ ವೃತ್ತಿತೆರಿಗೆ ಮುಂತಾದವು ಹೆಚ್ಚಾಗಿ ಸಿಕ್ಕುವವು. ನೆರಿಯ ಶಿರಾಡಿ, ಸುಳ್ಯ ಮಲೆಗಳಲ್ಲಿ ಅಮೇರಿಕದಲ್ಲಿರುವ ನಮೂನೆ ಮರ ಸಿಗಿಯುವ ಕೈಗಾರಿಕೆ ಮಾಡಿದರೆ (Timber Industry) ಅನೇಕ ಜನರಿಗೆ ಜೀವನವು ಆಗುವುದು ರೈಲು ಮಾರ್ಗಕ್ಕೆ ಬೇಕಾದ ಮರದ ಸ್ಲೀಪರು ಗಳನ್ನು ಆ ಕಾರ್ಖಾನೆಗಳಲ್ಲಿಯೇ ತಯಾರಿಸಬಹುದು. ರೈಲುಗಾಡಿಗಳಲ್ಲಿ ಕಟ್ಟಿಗೆಯನ್ನೂ, ಬಿದಿರನ್ನೂ, ಮೋಪಿನ ಮರಗಳನ್ನೂ ಮಂಗಳೂರಿಗೆ ತರ ಬಹುದು, ಸುಬ್ರಹ್ಮಣ್ಯ, ಧರ್ಮಸ್ಥಳ ಜಾತ್ರೆ ಮತ್ತು ಜಾನುವಾರು ಸಂತೆಗಳ ಸಮಯ ಹೋಗುವ ಯಾತ್ರಿಕರ ಸಂಖ್ಯೆಯು ಈಗಿನಕ್ಕಿಂತಲೂ ಹೆಚ್ಚಾಗಿ, ರೈಲು ಕಂಪೆನಿಗೆ ಒಳ್ಳೆ ಆದಾಯವು ಸಿಕ್ಕುವುದು, ಯಾತ್ರಿಕರ ಮೇಲಿನ ತೆರಿಗೆಯೂ ಸಿಕ್ಕುವುದು. ಉಪ್ಪಿನಂಗಡಿಯಿಂದ ದಕ್ಷಿಣಕ್ಕಿರುವ ಚಿಕ್ಕ ಮೂಡ್ನೂರಿನ ಹತ್ತಿರ ಅಣೆಕಟ್ಟು ಕಟ್ಟಿ ಉಪಕಾಲುವೆಗಳನ್ನು ತೋಡಿಸದರೆ ಹೆಚ್ಚು ಬೈಲುಪ್ರದೇಶವು ಫಲವತ್ತಾಗಿ ಸರಕಾರಕ್ಕೆ ನೀರಾವರಿ ತೆರಿಗೆಯೂ ಸಿಕ್ಕುವುದು. ಇಲ್ಲಿ ನೀರಿನ ಜೋಗಿನ ಬಲದಿಂದ ಯಂತ್ರಸಾಧನೆಗಳನ್ನು ಇಟ್ಟು ಕಾಗದದ ಕಾರ್ಖಾನೆಯನ್ನೂ ಕೊಸ್ಟಿಕ್ ಸೋಡಾ ತಯಾರಿಸುವ ಕಾರ್ಖಾನೆಯನ್ನೂ, ಪಿಂಗಾಣಿಯ ಕಾರ್ಖಾನೆಯನ್ನೂ, ಹತ್ತಿರವೆ ಕಬ್ಬಿಣ ಸಿಕ್ಕುವುದರಿಂದ್ದ ಕಬ್ಬಿಣದ ಕಾರ್ಖಾನೆಯನ್ನೂ ಇಟ್ಟರೆ ಉಪ್ಪಿನಂಗಡಿಯು ಇಂಗ್ಲೆಂಡಿನಲ್ಲಿರುವ ಬರ್ಮಿಂಗಹಾಮ ಪಟ್ಟಣದಂತೆ ಶೋಭಿಸುವುದು.

ಕಾರ್ಕಳ ತಾಲೂಕಿನಲ್ಲಿಯೂ, ಕುಂದಾಪುರ ತಾಲೂಕಿನಲ್ಲಿಯೂ ಇದೇ ತರದ ಅಭಿವೃದ್ಧಿಯಾಗುವುದು. ಕೊಲ್ಲೂರು ಜಾತ್ರೆಗೆ ಹೋಗುವ ವರ ಸಂಖ್ಯೆಯು ಇನ್ನು ಕೆಲವು ಸಾವಿರ ಹೆಚ್ಚಾಗುವುದು.

ಕರಾವಳಿಯ ಮಾರ್ಗದಿಂದಲೂ ಜನರ ಪ್ರಯಾಣ ಸೌಕರ್ಯವು ಹೆಚ್ಚಾಗುವುದು, ಉಡುಪಿಗೆ ಬರುವ ಯಾತ್ರಿಕರ ಸಂಖ್ಯೆಯು ಸಾವಿರಗಟ್ಲೆ ಯಿಂದ ಹೆಚ್ಚಾಗುವುದು. ಉಡುಪಿ ಊರು ಬಹಳ ದೊಡ್ಡ ನಗರವಾಗು ವುದು. ಯಾತ್ರಿಕರ ಮೇಲೆ ಸಿಕ್ಕುವ ತೆರಿಗೆಯು ಡಿಸ್ಟ್ರಿಕ್ಟ ಬೋರ್ಡಿಗೆ ಒಳ್ಳೆ ಆದಾಯ ಕೊಡುವುದು.

ಆದುದರಿಂದ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನವರು ಮೈಸೂರಿನ ವರು ರೈಲು ಹಾಕಿದರೆ ಮೈಸೂರನ್ನು ಮಂಗಳೂರಿಗೆ ಕೂಡಿಸಬೇಕು ಇಲ್ಲ ವಾದರೆ ರೈಲು ಮಾರ್ಗವೇ ಬೇಡವೆಂದು ಕಾದುಕೂತುಕೊಳ್ಳದೆ, "ದೈತನೂ ಬಿಟ್ಟಿಭವೂ" ಎಂಬ ಕಥೆಯನ್ನು ಚೆನ್ನಾಗಿ ಮನಸ್ಸಿಗೆ ತಂದುಕೊಂಡು 'ದಕ್ಷಿಣ ಕನ್ನಡ ಜಿಲ್ಲಾ ಬೋರ್ಡನ್ನು ರೈಲುವೇ' ಎಂಬ ಸಂಸ್ಥೆಯನ್ನು ಏರ್ಪಡಿಸಿ ಮೈಸೂರಿನವ ಗೋಜಿಗೆ ಹೋಗುವ ಆಸೆಯನ್ನು ಬಿಟ್ಟುಬಿಟ್ಟು ಸೊಂಟಕಟ್ಟಿ ಕೆಲಸವನ್ನು ಶುರುಮಾಡುವುದೇ ಲೇಸು.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯು ಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನ ವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿ ಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀರಿಮಿತ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡು ವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿ ಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗ ಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭ ಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿ ಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಚಿಕಿತ್ಸೆ ಮಾಹಿತಿಗೆ "ಅರ್ಶ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿದೆ.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ, ಪೂರ್ತಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
ವಿಶೇಷ ಮಾಹಿತಿ ಬಗ್ಗೆ ಸಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವ ವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿ ದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಅಣೆ, ೭ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

Free! Free!! Free!!!
ಪ್ರಸಿದ್ಧವಾದ
"ಕಾಮಶಾಸ್ತ್ರ"
ಈಗಲೆ ತಯಾರಾಗಿದೆ.
ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟ್ ಬಾಕ್ಸ್ 1252),
ಮದ್ರಾಸ್.

ಬಂದುನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು
ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ತುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದ ವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್,

ಮಹೋಲ್ಲಾಸಿತ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. | ಅಥವಾ | 'ಸದಾನಂದ ಕಾಫಿ ಕ್ಲಬ್' ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | ವಜ್ರಾಂಗ-ಬಿಂದು | ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವವಲ್ಲದೆ, ಸ್ವಪ್ನದಸ್ಯ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕೆಯಂತಹ ಒಂದೇ ವಾರದಲ್ಲಿ ಗುಣವಾಗುವವು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಮಂಪರು ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲು ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು. ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ನಿಪ್ಪಾಣೀ, (ಜಿಲ್ಲಾ ಬೆಳಗಾಂವ,)

The Canara Public Conveyance Co. Ltd, Mangalore. (Established 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು {
ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರು
ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು — ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು — ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ತಾವರ್ಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು — ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ [illegible] ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು [illegible] ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುತ್ತವೆ. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.



ಈ ಕೈಗಡಿಯಾರವು ಭಂಗಾರಕ್ಕೆ ಸಮಸಮಾನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

—ಗೋಡೆಗೆ ತಗಲಿಸುವ ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಾಗಿದ್ದು, ಇವು ಸರಿಯಾದ ಗಂಟೆಯನ್ನು ತೋರಿಸುವವು. ಇವಕ್ಕೆ ರೀಗ ಕೊಡಬೇಕಾಗಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ಇನ್ನೊಂದು ಸ್ಪೆಶ್ಯಲ್ [illegible] ಎಂಬ ಕಾಲವನ್ನು ತೋರಿಸುವುದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿದೆ.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ, ಕಾ. ವೇ. ಸುಬ್ಬರಾವ್, ಶು. ಜಿ. ಸ. ಅವರಿಂದ ತಯಾರಿಸಲ್ಪಟ್ಟಿದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟಿದ್ದು. [illegible]

ಅಮೃತಾಶ್ರಮ,
28 [illegible], ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು — ತೆಗೆದುಕೊಳ್ಳಿರಿ. —

[illegible]

ಹೆಡ್ ಆಫೀಸು [illegible] ಡಿ. ಮನ್ನಾಲಾಲ್
ಸಾಲಾಮಿಸ್ರಿ ಮುರಬ್ಬಾ ಡಿಪೋ, ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. Sharada Press, Mangalore.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. Registered: No. M. 498. ಅಂಚೆ ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

[illegible]
ದೊರೆಯಲು ಸಮರ್ಥಗಳು ನಾ । ಗರಳ ಮಥಿಸಲು ಸುರರಿಗಿದರಿಂ । ಹರುಷವಾಯಿತೆ ಮತ್ತೆ ವಿಕ್ರಮ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೪ನೇ ಶುಕ್ರವಾರ ದಶಂಬರ ೧೯೨೫. ಸಂಚಿಕೆ ೪೮

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. Branch: COONDAPOOR.
ಹೆಡ್ ಆಫೀಸು: ಉಡುಪಿ. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ಮೌಲ್ಯತೆತ್ತ ಮೂಲಧನ	ರೂ. 1,73,185—9—11.
ಆಪದ್ಧನ ವಗೈರೆ ಎತ್ತಗಳು	ರೂ. 64,700—0—0.
ಸಾ. ಸೇ. ೬ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಏವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ಮೌಲ್ಯತೆತ್ತ ಮೂಲಧನ 1,73,185—9—11, ಆಪದ್ಧನ ವ ಇತರ ಎತ್ತಗಳು 64,700—0—0, ಠೇವಣಾತಿಗಳು 5,10,077-10-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4371—0—0, ಏವೇಜನ ಮೇಲಿನ ಈ ಪರಿಗಿನ ಬಡ್ಡಿ ಕೂಡ ಇತರ ಬಾಬುಗಳು 93,340—10—5, ಜುಮ್ಲಾ ರೂ. 8,45,674-14-7.

ಆಸ್ತಿ ವ ಸೊತ್ತುಗಳು.

ಹಿತ್ತಲ್ ಆಟ್ಟೋಣ ಕಟ್ಟಿಣದ ಟ್ರಜರಿಗಳು ವಗೈರೆ 4134—4—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496-6-2, ಸಾ. ಸೇ. ೬ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371—0—0, ಇತರ ಬಾಬುಗಳು (ಠೇವಣಿ ಬಡ್ಡಿ ವಗೈರೆ ಕೂಡಿ) 41,741—14—2, ಕೈಯಲ್ಲಿರುವ ಮತ್ತು ಬೇಂಕಿನ ಕಡೆ ಶೇರಿಲ್ಲದ ಸಿಲ್ಲಕ್ಕ ನಗದು ಹಣ 26,131—6—3, ಜುಮ್ಲಾ ರೂಪಾಯಿ 8,45,674—14—7.

ನಿರಖು ಠೇವಣಾತಿಗಳನ್ನು ಕಾಲಕ್ರಮಕ್ಕೆ ಅನುಗುಣವಾಗಿ ಸಾ. ಸೇ. ೭ರ ದರದ ಬಡ್ಡಿ ಮೇಲೂ, ಸೇವಿಂಗ್ ಠೇವಣಾತಿಗಳನ್ನು ಸಾ. ಸೇ. ೪ರ ದರದ ಬಡ್ಡಿ ಮೇಲೂ, ಚಾಲೂ ಠೇವಣಾತಿಗಳನ್ನು [illegible] ಇತರ ಬಗ್ಗೆ ಮೇಲೆ ಅಂಗೀಕರಿಸಲ್ಪಡುವುದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಮೇಲೆ ವ ಡ್ರಾಪ್ಟುಗಳನ್ನು ಸಾಟ ಹುಂಡಿಗಳನ್ನು ವಸೂಲಿ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡೆಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

N. Anand Rao,
Secretary.

ಪಂಡಿತ ಬಿ. ರಾಮಕೃಷ್ಣ ಬಾಳಿಗರ:

50 ವರ್ಷ ಅನುಭವದ ಸಿದ್ಧೌಷಧಗಳು

ಮಹಾ ಮದನಕಾಮೇಶ್ವರಿ ಲೇಹ—ಇದನ್ನು ಭಂಗಾರ, ಅಭ್ರಕಭಸ್ಮ, ರಸಸಿಂಧೂರ, ಕಸ್ತೂರಿ, ಕುಂಕುಮಕೇಸರ ವಗೈರೆ ಅವೂಲ್ಯವಾದ ರಸಾಯನ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ಎಲ್ಲಾ ತರದ ನಪುಂಸಕ ರೋಗಗಳನ್ನೂ, ಸ್ವಪ್ನಾವಸ್ಥೆಯಲ್ಲಿ ಧಾತುಪತನೆಯನ್ನೂ, ಗುಣಪಡಿಸಿ, ದೇಹಕ್ಕೆ ದಿವ್ಯಕಾಂತಿಯನ್ನೂ, ಪುಷ್ಟಿಯನ್ನೂ, ಪುರುಷತ್ವವನ್ನೂ, ವೀರ್ಯಸ್ತಂಭನವನ್ನೂ ಉಂಟುಮಾಡಿ ಆತ್ಯಾನಂದವನ್ನು ಕೊಡುವುದಲ್ಲದೆ, ಅಜೀರ್ಣ, ಅತಿಸಾರ, ಗ್ರಹಣಿ, ಅಮ್ಲ, ಪಿತ್ತ, ಉದರಶೂಲೆ, ಪ್ರಮೇಹ ವಗೈರೆ ರೋಗಗಳನ್ನು ಗುಣಪಡಿಸುವಲ್ಲಿ ಕೇವಲ ಅಮೃತಸಮಾನವಾಗಿರುವುದು. ಇದನ್ನು ಅಬಾಲವೃದ್ಧರೂ ಸೇವಿಸಬಹುದು.

48 ದಿನಗಳ ವರೆಗೆ ಸಾಕಾಗುವ ಲೇಹ ಸೇರು ೧ರ ರೂ. 3—0—0.

ಬ್ರಿಹತ್ ಶಾರಿವ್ಯಾದಿ ರಸಾಯನ—ಇದು ಶಾಸ್ತ್ರಿಯಿಂದ ರಕ್ತವನ್ನು ಶೋಧಿಸುವ ದಿವ್ಯೌಷಧವಾಗಿರುತ್ತದೆ. ಇದರ ಸೇವನೆಯಿಂದ 20 ತರದ ಪ್ರಮೇಹ ರೋಗಗಳೂ ಎಲ್ಲಾ ತರದ ಫರಂಗಿ ರೋಗಗಳೂ ಅಲ್ಪ ಸಮಯದಲ್ಲಿ ಗುಣಹೊಂದುವವು. ಅದಲ್ಲದೆ ಇದು ಎಲ್ಲಾ ತರದ ಕುಷ್ಠವ್ಯಾಧಿಗಳನ್ನೂ, ಖಜ್ಜಿ, ಕುರು ಮೊದಲಾದ ಸಕಲ ಚರ್ಮವ್ಯಾಧಿಗಳನ್ನೂ, ಪಾದರಸ ಸೇವನೆಯಿಂದ ಉಂಟಾದ ರೋಗಗಳನ್ನೂ, ಮತ್ತು ಹೆಂಗಸರ ಪ್ರದರ ರೋಗಗಳನ್ನೂ ಶಾಸ್ತ್ರಿಯಿಂದ ಗುಣಪಡಿಸುವುದು.

8 ಔನ್ಸಿನ ಬಾಟ್ಲಿ ಒಂದರ ಕ್ರಯ ಬರೇ ರೂ. 1—9—0.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.

ಮಂಗಳೂರು ಏಜಂಟರು:—— ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ತೇರುಬೀದಿ, ಮಂಗಳೂರು.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇಹದ ಯಾವ ಅಂಗದ ಯಾವ ಭಾಗದಲ್ಲಿ ನೋವಿದ್ದರೂ ಇಲ್ಲದಾಗುವುದು. ಯಾವ ತರದ ಶಿರಶೂಲೆಯನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಂಟುಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ, ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಕುವುದರೊಳಗೆ ಗಜಕರ್ಣವು ಖಂಡಿತವಾಗಿ ವಾಸಿಯಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳ ಕುಳಿಯಿಂದ ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7, ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. 109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮೂರ್ರುದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

[illegible]

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್ ಅಗಸ್ತ್ಯ [illegible]

ಮನ್ಮಥ ಚಿಂತಾಮಣಿ ಲೇಹ.

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆಯಿಲ್ಲದವರಿಗೂ, ಸ್ತ್ರೀಸೌಖ್ಯ [illegible] ಉಪಯೋಗವುಳ್ಳ, ಪರಮಾನಂದ ಔಷಧ.

1 ಸೇರು ಪಾಟ್ಲಿಯೊಳು ಇದನ್ನು ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1—9—0.

[illegible]

ವಿಳಾಸ:— ದೇವಣ್ಣ ನಾರಾಯಣ ಸೇಟ್, [illegible]

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

[illegible]

ಗುರ್ಪುರ್‌ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ನೋಡಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇವರಲ್ಲಿ ಅಜೆಬುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ [illegible]) ಮಂಗಳೂರು.

[illegible]

ಲಿವರ್ ಮೂವ್ಮೆಂಟ್ ಗೋಲ್ಡ ವಾಚ್.



15 ಮಣಿಗಳಿದ್ದು ಗಡಿಯಾರ ಕೈಗೆ ಕಟ್ಟುವಂಥಾ ದಣ್ಣಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.
ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.
"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0
ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯೂ ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಶ್ಚರ್"ನ್ನು ಸರಾಸರಿಯಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದೂ, ಎಲ್ಲಾ ತರದ ತಲೆನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿವೆ. ಇವರ ಉಪಯೋಗದಿಂದ ಹೃದಯದ ಮೇಲೆ ಯಾವ ದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದೂಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತದೆ.

ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಚಾಲ್ತಿ ಸಾಕ್ಷ್ಯದಂತೆ ಮಾರ್ವಾರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿ ಇರಿಸಿಕೊಳ್ಳತಕ್ಕದ್ದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮಿಸಿ, ನಿದ್ರಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಡಗಿ ಮಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿಖಾನೆ:-CAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.
ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತಂಕಾರಿ ಬೀಜಗಳು ೧೨ ರಖಂ ... ... ೨-೦-೦.
೧೨ ಪ್ಯಾಕೆಟ್ ನಾಟ ತರಕಾರಿ ಬೀಜಗಳು ೧೨ ರಖಂ ... ... ೧-೧೨-೦.
೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಖಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿ ಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಗಿಗೆ, ವಿ. ಪಿ. ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು. ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜಿಸ್ಟಿಕ್ ನರ್‌ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. ೫ ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8
18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0
9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.
ಚಲೋದಾದ ಲವ್ ನಕ್ಲೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾಂಕೃತ ... ...
(6) ಷಟ್ಪಂಚಾಷತ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತ ಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ... ...
(10) ಕಾಲನಿರ್ಣಯಾಭ್ಯೋಯಂ ಗ್ರಂಥ ... ...
(11) ಸವ್ಯಾಖ್ಯಾನ ಕಾಲಾಮೃತ... ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀಪಾಕ್ಷಮೋದ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷಾಗೃಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಜ ಕಥೆ ...
(26) „ ಗೋಪಿನ ಚರಿತ್ರೆ ... ...
(27) „ ದುಶ್ಯಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ನಾಶ್ಯ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಕಟ್ಟಿದ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣದಾನಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(1[illegible] [illegible] ಯಕ್ಷಗಾನ

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮೆ ... ...
(5) ಪ್ರಬಂಧ ಮುಕ್ತಾವಳಿ ... ...
(1) ಹರಿಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ಭಾಳಿಕನ ಹಾಡು ... ...
(6) ಯಕ್ಷಗಾನ ಗೀತ ಹಾಡು ... ...
(7) ಕನಕದಾಸ ಕಬೀರದಾಸರ ಕೀರ್ತನೆಗಳು ...
(8) ಬೀಗರ ಹಾಡು ... ...
(9) ಭಜನೆಯ ಪದಗಳು ... ...

ಪುಸ್ತಕಗಳು ದೊರೆಯುವ ಸ್ಥಳ:— **ಶಾರದಾ ಛಾಪಖಾನೆ,**
ರಥ ಬೀದಿ, ಮಂಗಳೂರು.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ|ರದ ಮಾರ್ಗಶಿರ ಬ|೫ ಶನಿವಾರದಿಂದ ಕ್ರೋಧನ ಸಂ|ರದ ಮಾರ್ಗಶಿರ ಬ|೧೦ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ವೃಶ್ಚಿಕ ಚಾರ್ಟ.)

ತಾರೀಕು	ವಾರ	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	ದಿನಮಾನ	ಸೂರ್ಯ ಉ.	ಸೂರ್ಯ ಅಸ್ತ.
5	ಶನಿ	೫	೪೦.೩೧	ಪುಷ್ಯಾ	೨೨.೪೪	೨೦	6.42	6. 2
6	ರವಿ	೬	೪೫.೩೨	ಅಶ್ಲೇಷಾ	೨೯.೧೪	೨೧	6.42	6. 2
7	ಸೋಮ	೭	೫೦.೧೬	ಮಘಾ	೩೫.೧೬	೨೨	6.43	6. 2
8	ಕುಜ	೮	೫೪.೧೪	ಪುಬ್ಬಾ	೪೦.೩೨	೨೩	6.43	6. 3
9	ಬುಧ	೯	೫೭.೧೬	ಉತ್ತರಾ	೪೪.೫೯	೨೪	6.44	6. 3
10	ಗುರು	೧೦	೫೮.೪೪	ಹಸ್ತಾ	೪೮.೧೪	೨೫	6.44	6. 3
11	ಶುಕ್ರ	೧೧	೫೯. ೦	ಚಿತ್ರಾ	೫೦. ೨	೨೬	6.44	6. 3

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
27	89—8	65—4	—	—
28	89—0	67—8	—	—
29	90—7	73—2	—	—
30	90—6	75—8	—	—
1	90—7	76—4	—	—
2	93—8	76—7	0—04	—
3	93—4	77—3	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ
ಮಸ್ಕತಿ	8— 8	9—14
ಗುಡ್ಡು ...	8— 1	8—12
ರಾಶಿ ಸುಗ್ಗಿ ...	7— 4	8— 6
ಅಷ್ಟಲ್ ಬೆಳ್ತಿಗೆ ...	8—12	9— 8
ಹೊಸ ರಾಶಿ ...	7— 0	7— 8
ರಂಗೂನು ಬೆಳ್ತಿಗೆ ಗೋಣಿ ೧ ...	14— 0	14— 8
ಗೋದಿ ಗೋಣಿ ೧ಕ್ಕೆ ...	18— 8	20— 8
ಹುರುಳಿಗೋಣಿ ೧ಕ್ಕೆ ...	9— 0	9— 8
ಕಡಲೆಗೋಣಿ ೧ಕ್ಕೆ ...	14— 0	15— 0
ತೊಗರಿಗೋಣಿ ೧ಕ್ಕೆ ...	14— 0	14— 8
ತೊಗರಿಬೇಳೆ ಗೋಣಿ ೧ಕ್ಕೆ ...	17— 0	22— 0
ಉದ್ದುಗೋಣಿ ೧ಕ್ಕೆ ...	17— 8	17— 8
ಹೆಸರುಗೋಣಿ ೧ಕ್ಕೆ ...	14— 0	15— 8
ಊರು ಬೆಲ್ಲ ಖಂಡಿ ೧ಕ್ಕೆ ...	57— 8	60— 0
ಉಪ್ಪು ಗೋಣಿ ೧ಕ್ಕೆ ...	4— 0	4— 8
ಕೊಬ್ರಿ ಖಂಡಿ ೧ಕ್ಕೆ ...	120— 0	125— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	48— 0	—
ಎಳ್ಳಿಂಡಿ ಖಂಡಿ ೧ಕ್ಕೆ ...	45— 0	—
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8—12	9— 8
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	11— 0
ಹಿಪ್ಪೆ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4— 6	4—10
ಊರ ಮೆಣಸಿನಕಾಯಿ ಮುಡಿ೧ಕ್ಕೆ ...	8— 0	9— 0
ಸಾಸಿವೆ ಮುಡಿ ೧ಕ್ಕೆ ...	9— 0	—
ಕೊತ್ತಂಬರಿ ಮುಡಿ ೧ಕ್ಕೆ ...	3—14	4— 0
ಕಾಫಿ ಖಂಡಿ ೧ಕ್ಕೆ ...	345— 0	—
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	275— 0	290— 0
ಕಾಳುಮೆಣಸು ಖಂಡಿ ೧ಕ್ಕೆ ...	260— 0	265— 0
ಯಾಲಕ್ಕಿ ಮುಡಿ ೧ಕ್ಕೆ ...	55— 0	58— 0
ಗೇರುಬೀಜ ಮುಡಿ ೧ಕ್ಕೆ ...	4— 8	—
ಅಕ್ಕಿಚ ಖಂಡಿ ೧ಕ್ಕೆ ...	45— 0	65— 0
ಹುಂಡ್ಸು ಹಗಡು ಮುಡಿ ೧ಕ್ಕೆ ...	16—10	16—12
ಹಾಸ್ಯ ಪಾತ್ರೆಗಳು ಮುಡಿ ೧ಕ್ಕೆ ...	21— 0	—
[illegible] ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮುಡಿ ೧ಕ್ಕೆ ...	16— 8	
ಪವನು ...	13— 6	

ವಸಂತ.

ಕನ್ನಡಿಗರೇ! ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ಣಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷಕ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರಾನ್ ⅛ ಪುಟ ಸ್ಯಾಜಿನ) ಪುಟಗಳನ್ನು ಮುಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2-8-0.
„ ಸ್ಥಳೀಕರಿಗೆ ... „ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ತ್ವರೆ ಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್ —ಗ್ರಂಥಕರ್ತರು.
ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್
ಸಿ. ಎಫ್. ಎಮ್. ರಾಮರಾವ್, ಎಲ್. ಎಮ್.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ವೈದ್ಯ, ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ರ್ ರೇಶ್ಮೆ ಮಡಿಗಳು, ಶಾಮರ್ಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Advertisers Note.

A SPECIAL ISSUE OF SPECIAL IMPORTANCE
AND
Concetrated interest with wide circulation.

This is your Opportunity.

Our fortnightly paper, THE SARASWATH will appear in the beginning of December, in a most attractive special issue printed on glaze paper, art paper bound and profusely illustrated.

ADVERTISE & REAP THE BENEFITS OF VERNACULAR ADVERTISEMENT.
RATES MODERATE.

Apply:— **Secretary,**
THE SARASWATH,
UDIPI.

ನೋಟೀಸು.

ಮಿಜಾರ ತಿಮ್ಮಪ್ಪೈ ಮಂಡಳಿಸಿದ ಅಸಾಮಿಗಳು ರಿಜಿಸ್ತ್ರಿ ... ಬ್ಯಾಗ್ಯೂ ಆಭರಣಗಳ ಈಡಿನ ಮೇಲೆ ... ಬಲಗನ್ನು ವಾಯಿದೆಗೆ ಕೊಡದೆ ಇದ್ದದರಿಂದ ಅಸಲು ಬಡ್ಡಿ ಐವೇಜು ಕೊಡಬೇಕಾಗಿ ತಿಳಿಸಿದ್ದಲ್ಲಿ ಕೂಡಾ ಆ ರೀತಿ ಅವರು ಕೊಡದೆ ಇದ್ದದ್ದರಿಂದ ಸಹಾ ಇದೇ ದಶಂಬರ ತಿಂಗಳ ತಾರೀಖು ೧೫ರ ವಳಗೆ ಮೇಲಿನ ಅಸಾಮಿಗೆ ಸಲ್ಲತಕ್ಕ ಅಸಲು ಮತ್ತು ಬಡ್ಡಿ ವ ಇತರ ಖರ್ಚು ತಂದು ಕೊಟ್ಟು ಪಟ್ಟಿಯಲ್ಲಿ ತೋರುವ ಅಡವಿಟ್ಟ ಆಭರಣಗಳು ಬಿಡಿಸದೆ ಇದ್ದರೆ ಅವುಗಳನ್ನು ಇದೇ ಬರುವ ೧೯೨೬ನೇ ಇಸವಿ ಜನವರಿ ತಾರೀಖು ೬ನೇ ಬುಧವಾರ ಮಧ್ಯಾಹ್ನ ೧೨ ಗಂಟೆಗೆ ತೇರಬೀದಿ ವಕೀಲ್ ಮಿಜಾರ ಗಣೇಶಪೈಗಳ ಆಫೀಸಿನ ಎದುರು ಬಹಿರಂಗವಾಗಿ ಏಲಂ ಮಾಡಲಾದೀತು.

ಹೆಸರು.	ಅಡವಿಟ್ಟ ತಾರೀಖು.	ಸಾಲದ ಮೊಬಲಗು.	ಏಲಮಿಗೆ ನಿಶ್ಚಯಿಸಿದ ತಾರೀಖು ವರೆಗೆ ಬಹಾ ಬಡ್ಡಿ ರೂ.
ಕಾಪ್ರೋರದಲ್ಲಿರುವ ಪಟೇಲ್ ಮೊರಣ್ಣಾಳ್ವ ಸದ್ರಿ ಅಸಾಮಿ ಬಾಬ್ತು,	೨೧ ಮೇ ೧೯೨೪ನೇ ಇಸ್ವಿ.	60—0—0	18—12—0.
	೧೪ ದಶಂಬರ ೧೯೨೪ನೇ ಇಸ್ವಿ.	15—0—0	3— 0—0.
ಗೋಳಿಕಟ್ಟೆ ಬಜಾರದಲ್ಲಿರುವ ಅಬ್ಬುಲ್ ಬ್ಯಾರಿ ಸದ್ರಿ ಅಸಾಮಿ ಬಾಬ್ತು,	೧೨ ಆಗೋಸ್ತು ೧೯೨೧ನೇ ಇಸ್ವಿ.	60—0—0	49—11—0.
	೧೨ ಆಗೋಸ್ತು ೧೯೨೧ನೇ ಇಸ್ವಿ.	30—0—0	24—13—6.
ಬೈಲ ಅಬ್ಬುಬ್ಯಾರಿ	೧೧ ಆಗೋಸ್ತು ೧೯೨೪ನೇ ಇಸ್ವಿ.	30—0—0	8— 0—0.
ಸದ್ರಿ ಅಸಾಮಿ ಬಾಬ್ತು,	೧೫ ಆಗೋಸ್ತು ೧೯೨೪ನೇ ಇಸ್ವಿ.	25—0—0	6—11—0.
ಗೋಳಿಕಟ್ಟೆ ಬಜಾರದಲ್ಲಿರುವ ಎಮ್. ಮೊಹಮ್ಮದ್ ಬ್ಯಾರಿ,	೧೮ ಆಗೋಸ್ತು ೧೯೨೩ನೇ ಇಸ್ವಿ.	150—0—0	65— 4—0.
ಗೋಳಿಕಟ್ಟೆ ಬಜಾರದಲ್ಲಿರುವ ಬೈಲ ಇದ್ದಿಬ್ಬ ಬ್ಯಾರಿ,	೧೬ ಮೇ ೧೯೨೪ನೇ ಇಸ್ವಿ.	35—0—0	11— 0—0.

ಮಿಜಾರ ತಿಮ್ಮಪ್ಪೈ ರುಜು.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—12—0,

ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ,
O. P. ನಂಬ್ರ 101/'25.
ಸರಸಮ್ಮ—ಅರ್ಜಿದಾರಳು.
ಮತ್ತು
ಶಿವಮ್ಮ ಕೂಡಾ—ರೆಸ್‌ಪೋಂಡೆಂಟರು,

ಮೇಲ್ಕಂಡ ಅರ್ಜಿಯ ವ್ಯವಹರಣೆಯಲ್ಲಿ ತನ್ನ ಮ್ಯಾನರ ಮಗಳು ಕಮಲಾವತಿಯ ವ ಅವಳ ಸ್ಥಿರಾಸ್ತಿಯ ಬಗ್ಗೆ ಕೂಡಾ ತನ್ನನ್ನು ಗಾರ್ಡಿಯಾನಳಾಗಿ ನೇಮಿಸಿ ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಅರ್ಜಿದಾರಳು ದಾಖ್ಲು ಮಾಡಿದ ಸದರಿ ಅರ್ಜಿಯು ತಾ. 14—12—'25ಕ್ಕೆ ತನ್ಖಿಗೆ ಇಟ್ಟಿರುತ್ತದೆ. ಸದರಿಅರ್ಜಿಯ ಕುರಿತು ನಿಮ್ಮಏನಾದರೂ ಆಕ್ಷೇಪಗಳು ಇದ್ದರೆ ಸದರಿ ನಿಮ್ಮ ಆಕ್ಷೇಪಗಳನ್ನು ಮೇಲ್ಕಂಡ ತನ್ಖಿ ತಾರೀಕಿಗೆ ಈ ಕೋರ್ಟಿನಲ್ಲಿ ಜಾಹೀರುಮಾಡಿಕೊಳ್ಳತಕ್ಕದ್ದು.

ಮಂಗಳೂರು, ತಾ. 1-12-'25. } G. SOMASHEKER RAO, *Vakil for Petitioners.*

COCOANUT ESTATE FOR SALE.

ABOUT 154 ACRES UNDER COCOANUTS NEAR TRIKARPUR & CHARVATTUR SOUTH CANARA.

Part coming into bearing shortly, Price Rs. 75,000/-, no offers.

For particulars apply to:—

H. R. Lockie,
C/o Peirce, Leslie & Co., LTD.,
CALICUT.

The Canara Bank Ltd., Mangalore,
ದಿ. ಕೆನರಾ ಬ್ಯಾಂಕು ಲಿಮಿಟೆಡ್, ಮಂಗಳೂರು.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರೀ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನು ವಾಯಿದೆಗೆ ಕೊಡದೆ ಇರುವದರಿಂದ ಬ್ಯಾಂಕಿಗೆ ಬಹೆ ಅಸ್ಲು ಬಡ್ಡಿ ಐವೇಜುಗಳನ್ನು ಇದೇ 12—12—'25ನೇ ಶನಿವಾರದ ಒಳಗೆ ತಂದು ಸಲ್ಲಿಸದಿದ್ದರೆ ಸದರೀ ಅಡವಿಟ್ಟ ನಗಗಳನು ಇದೇ ದಶಂಬರ ತಾ, 17ನೇ ಗುರುವಾರ ಮಧ್ಯಾಹ್ನ 12 ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡುವೆವು,

ಸಾಲಕೊಟ್ಟ ತಾರೀಖು,	ಹೆಸರು,	ಸಾಲದ ಮೊಬಲಗು,	ಏಲಂ ತಾ. ವರೆಗೆ ಆಗುವ ಬಡ್ಡಿ ವಗೈರೆ
೨೯-೯-೨೪	ತ್ಯಾಂಪಪೂಜಾರಿ	ರೂ. ೧೦೦	ರೂ. ೬-೧೪-೧೧
೨೫-೫-೨೫	ಸಯ್ಯದುಬ್ಯಾರಿ,	ರೂ. ೧೫೦,	„ ೪-೫-೩

ಮತ್ತು ಈ ನೋಟೀಸಿನ ಖರ್ಚು ಸಹಾ,

Canara Bank, Ltd. Mangalore. 25—11—1925 } **K. Venkat Rao.** *Secretary.*

ಅಪೂರ್ವ ಸಂದರ್ಭ.

ಉತ್ತಮ ವಸ್ತುಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚುಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ ಮಾರಲ್ಪಡುವವು.

ರೂ. 15—12—0ರ ವಾಚು ರೂ. 7—8—0 ಕೊಡಲ್ಪಡುವುದು.

ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳಆಕಾರವು ಮತ್ತು ಕೆಲಸಗಾರಿಕೆಯುಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ಬೇಕಾದವರು ತ್ವರೆಮಾಡಿರಿ.

ವಿಲ್ಸನ್ ವಾಚ್ ಕೊ.,
ಜಾರ್ಜ್ ಎಸ್ಟೇಟ್, ಮುಂಬಯಿ.

ವಿವಿಧ ವಿಷಯಗಳು.

ಹೃದಯದೊಳಗೆ ಶಸ್ತ್ರ ಚಿಕಿತ್ಸೆ.

ಹೃದಯದ ಒಳಗಿನಲ್ಲಿ ಶಸ್ತ್ರ ಚಿಕಿತ್ಸೆಯನ್ನು ಈವರೆಗೆ ಯಾರೂ ಮಾಡಿದ್ದಿರಲಿಲ್ಲ. ಹೃದಯವು ಮನುಷ್ಯನ ಅಂಗಗಳಲ್ಲಿ ಅತೀ ಸೂಕ್ಷ್ಮವೂ ಮುಟ್ಟಬಾರದಂತಹುದೂ ಎಂದು ಪಾಶ್ಚಾತ್ಯ ವೈದ್ಯರ ಅಭಿಪ್ರಾಯವಿದ್ದಿತು. ಆದರೆ ಕೆಲವು ಸಮಯದ ಹಿಂದೆ ಲಂಡನ್ ಆಸ್ಪತ್ರೆಯಲ್ಲಿ ಇಂತಹ ಒಂದು ಶಸ್ತ್ರಚಿಕಿತ್ಸೆಯು ನಡೆಯಿತು. ಡಾ| ಎಚ್. ಎಸ್. ಸೌಟರ C. B. S. M. Ch. F. R. C. S. ಇವರು ಈ ಚಿಕಿತ್ಸೆಯನ್ನು ನಡೆಸಿದರು. ಈ ಶಸ್ತ್ರ ಚಿಕಿತ್ಸೆಯು ಕಳೆದ ಮೇ ತಿಂಗಳ ತಾ. ೧೬ಕ್ಕೆ ನಡೆಯಿತು.

ಈ ಚಿಕಿತ್ಸೆಯು ೧೫ವರ್ಷ ಪ್ರಾಯದ ಒಂದು ಹುಡುಗಿಯ ಮೇಲೆ ನಡಿಸಲ್ಪಟ್ಟಿತು. ಇವಳು ಸಾಮಾನ್ಯವಾದ ಹೃದಯರೋಗ ಪೀಡಿತಳಾಗಿದ್ದಳು. ಹೃದಯದೊಳಗಿನ ದ್ವಾರಗಳ ಮುಚ್ಚಳ (Valves)ಗಳು ದಪ್ಪವಾಗಿದ್ದವು. ಈ ಕಾರಣದಿಂದ ಇತರ ರೋಗಗಳೂ ಅವಳಲ್ಲಿ ಉಂಟಾಗಿದ್ದವು.

ಹುಡುಗಿಗೆ ಸ್ಮೃತಿ ತಪ್ಪಿಸುವ ಔಷಧವನ್ನು ಕೊಟ್ಟ ಮೇಲೆ, ಎಡ ಭಾಗದಲ್ಲಿ, ಹೃದಯದ ಮೇಲೆ ಒಂದು ಉರುಟು ಗಾಯ ಹಾಕಿ, ಚರ್ಮವನ್ನು ಅದರೊಡನೆ ಇರುವ ಟಿಶ್ಯೂಗಳನ್ನೂ ಮಾಂಸವನ್ನೂ ಹರಿದು ಎಡಕ್ಕೆ ತಿರುಗಿಸಿ ಹಾಕಿದರು. ಸಾಧಾರಣ ೫ ಇಂಚು ಚಚ್ಚೌಕದ ಒಳಭಾಗವು ತೋರಿತು. ಆ ಮೇಲೆ ಪುನಃ ಗಾಯ ಹಾಕಿ ಎದೆ ಎಲುಬನ್ನು ಕಡಿದ ಎಡ ಬದಿಯ ಎದೆ ಅಂಶಭಾಗವನ್ನು ಅನಾವರಣ ಮಾಡಿದರು. ಆಗ ಹೃದಯವನ್ನು ಮುಚ್ಚಿದ್ದ ಚೀಲವು ಹೊರತೋರಿತು. ಈ ಸಮಯದಲ್ಲಿ ಎದೆ ಬಡಿತದ ವೇಗವು ಹೆಚ್ಚಾಯಿತು. ನಾಡಿಯು ೧೫೦ಕ್ಕೆ ಬಡಿಯಿತು. ಐದು ಮಿನಿಟುಗಳ ಮೇಲೆ ನಾಡಿಯ ಬಡಿತವು ಕಡಿಮೆಯಾಯಿತು. ಆಗ ಶಸ್ತ್ರ ಚಿಕಿತ್ಸೆಯನ್ನು ಮುಂದರಿಸಿದರು. ಹೃದಯದ ಚೀಲದ (pericardium) ಎಡಭಾಗದಲ್ಲಿ ಒಂದು ಉರುಟು ಗಾಯ ಹಾಕಿ, ಹೃದಯದ ಎಡ ಅಂಶ (left auricle)ವನ್ನು ಅನಾವರಿಸಿದರು. ಇದನ್ನು ಹೊರಗೆ ಎಳೆಯಲಿಕ್ಕಾಗುವಂತೆ ಇದರ ಮೇಲಿನ ಮತ್ತು ಕೆಳಗಿನ ಬದಿಗಳಲ್ಲಿ ದಾರದ ಹೊಲಿಗೆ ಹಾಕಿದರು. ಇಷ್ಟರೊಳಗೆ ಎದೆಬಡಿತವು ಹೆಚ್ಚಾಗಿದ್ದಿತು. ಅದು ನಿಶ್ಚಿತವಾಗುವ ವರೆಗೆ ಅಂದರೆ ಹತ್ತು ಮಿನಿಟು ಡಾಕ್ಟರರು ಸುಮ್ಮಗಿರಬೇಕಾಯಿತು. ಆ ಮೇಲೆ ಹೃದಯದ ಎಡ ಅಂಶ (left auricle)ವು ಹೊರಗೆ ಎಳೆಯಲ್ಪಟ್ಟಿತು. ರಕ್ತವು ಹೆಚ್ಚು ಬಲದಿಂದ ಬಾರದ ಹಾಗೆ ಅಡಿಯಲ್ಲಿ ಕಟ್ಟು (clamp) ಹಾಕಿದರು. ಅಗತ್ಯವಿದ್ದ ಗಾಯವನ್ನು ಹಾಕಿದರು. ಹೀಗೆ ಉಂಟಾದ ದ್ವಾರದಿಂದ ಸರ್ಜನರು ಎಡಗೈಯ ತರ್ಜನಿ ಬೆರಳನ್ನು ಹಾಕಿ, ಕಟ್ಟನ್ನು (clamp) ತೆಗೆದು, ಹೊಲಿದ ದ್ವಾರದಿಂದ ಬೆರಳಿನ ಮೇಲೆ ಅದನ್ನು ಎಳೆದರು. ಆಗ ಒಳಗಿನ ಭಾಗಗಳು ಕೈ ಬೆರಳಿಗೆ ಸ್ಪರ್ಶವಾದವು. ರಕ್ತವು ಬಲಾತ್ಕಾರದಿಂದ ಬರುತ್ತಿದ್ದಿತು. ದ್ವಾರಗಳ ಬಾಗಿಲು (valve) ಎಣಿಸಿದಷ್ಟು ದಪ್ಪವಿರಲಿಲ್ಲ. ಆದುದರಿಂದ ಮುಂದೆ ಮಾಡಬೇಕೆಂದೆಣಿಸಿದ ಅಗಾಧ ಚಿಕಿತ್ಸೆಯನ್ನು ಮಾಡದೆ ಬೆರಳಿನಿಂದಲೇ ಹೃದಯ ಕೋಶದ ಬಾಗಿಲನ್ನು (valve) ಸರಿಪಡಿಸಿ, ಹೃದಯವನ್ನು ಪೀಡಿಸುವ ರೋಗದ ನಿವಾರಣೆ ಮಾಡಿದರು. ಶಸ್ತ್ರ ಚಿಕಿತ್ಸೆಯು ಇಲ್ಲಿಗೆ ಆಖೈರಿಯಾಯಿತು. ಹೃದಯಕೋಶದೊಳಗೆ ಹಾಕಿದ ಬೆರಳನ್ನು ಹೊರ ತೆಗೆಯುವ ಸಮಯದಲ್ಲಿ, ಹೊಲಿದ ಒಂದು ದಾರವು ಫಕ್ಕನೆ ಕೈಯಿಂದ ತಪ್ಪಿ, ರಕ್ತವು ಬಲಾತ್ಕಾರದಿಂದ ಹೊರಹರಿಯಿತು. ರಕ್ತವು ಶ್ವಾಸಕೋಶಗಳಲ್ಲಿ ಹರಿಯಿತು. ಆದರೆ ಕೂಡಲೆ ಈ ಭಾಗವನ್ನು (auricle) ಹೃದಯದ ಮೇಲೆ ಒತ್ತಿ ಹಿಡಿದು, ಅದರ ಗಾಯವನ್ನು ಹೊಲಿದರು. ಆ ಮೇಲೆ ಹೃದಯದ ಹೊರ ಚೀಲ (pericardium)ವನ್ನು ಹೊಲಿದರು. ಹೊರಹರಿದ ರಕ್ತವು ಹೀರಿಸಲ್ಪಟ್ಟಿತು. ಕಡಿದ ಎಲುಬು ಅಲ್ಲಿಯೇ ಇಡಲ್ಪಟ್ಟಿತು. ಮತ್ತು ಚರ್ಮದ ಹೊದಿಯು ಹೊರತೆಗೆದ ಕ್ರಮದಲ್ಲಿಯೇ ಪುನಃ ಹೊಲಿಯಲ್ಪಟ್ಟಿತು. ಈ ಶಸ್ತ್ರ ಚಿಕಿತ್ಸೆಗೆ ಭರ್ತಿ ೬೦ ಮಿನಿಟು ಸಮಯ ಬೇಕಾಯಿತು. ಹುಡುಗಿಯು ಪೂರ್ಣ ಗುಣ ಹೊಂದಿದಳು.

ಮುಳ್ಳುಗಳಿಲ್ಲದ ಗಡಿಯಾರ.

ಇಂಗ್ಲಂಡಿನಲ್ಲಿ ಒಬ್ಬ ಮಹನೀಯರು ಒಂದು ಹೊಸ ವಿಧಾನದ ಗಡಿಯಾರವನ್ನು ಕಂಡು ಹಿಡಿದಿರುವರು. ಈ ಗಡಿಯಾರದ ಮುಖ ಬಿಲ್ಲೆಯು ಚೌಕಾಕಾರದಲ್ಲಿದೆ. ಎರಡು ಮುಳ್ಳುಗಳೂ ಇಲ್ಲ, ಪ್ರತಿ ಒಂದು ಮಿನಿಟು ಆದೊಡನೆ ಎರಡು ಅಂಕೆಗಳು ಮುಖ ಬಿಲ್ಲೆಯಲ್ಲಿ ಕಾಣಬರುವವು. ಇದರ ನಮೂನೆಯು ಮೋಟರಕಾರುಗಳಲ್ಲಿರುವ ಸ್ಪೀಡ್‌ಮೀಟರಿನಂತೆಯೇ ಇದೆ. ಈ ಗಡಿಯಾರವು ವಿದ್ಯುಚ್ಛಕ್ತಿಯ ಬಲದಿಂದ ನಡಿಯುವುದು. ಮುಳ್ಳುಗಳನ್ನು ನೋಡಿ ಗಂಟೆ ತಿಳಿದುಕೊಳ್ಳುವುದಕ್ಕಿಂತ ಅಂಕೆಗಳನ್ನು ನೋಡಿ ತಿಳಿದುಕೊಳ್ಳುವುದು ಸುಲಭವಾಗಿದೆ. ರೈಲು ಸ್ಟೇಶನುಗಳಲ್ಲಿ ಈ ಗಡಿಯಾರವು ಬಹು ಉಪಯುಕ್ತವಾದುದು. ಉದಾಹರಣೆಗಾಗಿ ಗಡಿಯಾರದಲ್ಲಿ ೧೦ ಘಂಟೆ ೧೫ ನಿಮಿಷ ಆಗುವಾಗ ಈ ಹೊಸ ಗಡಿಯಾರದಲ್ಲಿ ೧೦/೧೫ ಇಷ್ಟು ಮಾತ್ರವೇ ಕಾಣುವುದು. ಚಿಕ್ಕ ಮಕ್ಕಳಿಗೂ ಈ ಗಡಿಯಾರ ನೋಡಿ ಸಮಯ ತಿಳಿದುಕೊಳ್ಳಬಹುದು.

ವಾಯರ್‌ಲೆಸ್ ದೀಪಸ್ತಂಭ. (Light House)

ವಾಯರ್‌ಲೆಸ್ ಟೆಲಿಗ್ರಾಫಿಯನ್ನು ಕಂಡುಕೊಂಡ ಮಾರ್ಕೊನಿಯವರು ಇತ್ತಲಾಗೆ ವಾಯರ್‌ಲೆಸ್ ದೀಪಸ್ತಂಭವನ್ನು ಹುಡುಕಿರುತ್ತಾರೆ. ಇದರಿಂದ ಹಡಗಗಳಿಗೆ ಬರುವ ಅಪಾಯವು ಸರಿಯಾಗಿ ತಿಳಿಯುತ್ತದೆ, ಮಾತ್ರವಲ್ಲ ಹಡಗವು ಇರುವ ಸರಿಯಾದ ಸ್ಥಳವನ್ನು ತೋರಿಸುತ್ತದೆ.

ಶೀಳು ಹಾಕುವ ಮರಗಳು.

ಅಮೇರಿಕದ ಬಾರಬಡೋಸ್ ಎಂಬ ದ್ವೀಪದಲ್ಲಿ ಶೀಳು ಹಾಕುವ ಮರಗಳಿವೆ. ಇದಕ್ಕೆ ಒಂದು ವಿಶೇಷ ಆಕಾರದ ಎಲೆಗಳಿವೆ. ಈ ಎಲೆಯ ಒಂದು ಭಾಗವು ಸೀಳಿಹೋಗಿಯದೆ. ಇದರ ಎಡೆಯಿಂದ ಗಾಳಿಯು ಬೀಸುವಾಗ ಶೀಳುಹಾಕಿದಂತೆಯೇ ಶಬ್ದವಾಗುತ್ತದೆ. ಈ ದ್ವೀಪದಲ್ಲಿ ಈ ಮರಗಳಿಂದಲೇ ತುಂಬಿದ ಒಂದು ತಪ್ಪಲು ಇದೆ. ಈ ತಪ್ಪಲಿನಿಂದ ಗಾಳಿಯು ಬೀಸುವಾಗ ಒಂದು ಬಲವಾದ ಶೀಳು ಕೇಳುತ್ತದೆ. ಆಫ್ರಿಕಾಖಂಡದ ಸುಡಾನಿನಲ್ಲಿಯೂ ಶೀಳುಗೊಂಡೆಯ ಜಾತಿಯ ಪದಾರ್ಥದ ಒಂದು ಮರವಿದೆ. ಈ ಮರದ ಎಲೆಗಳಿಂದ ಗಾಳಿಯು ಬೀಸುವಾಗಲೂ ಇದೇ ತರದ ಶಬ್ದವಾಗುತ್ತದೆ.

ಸ್ಫುಟ ವಿಚಾರಗಳು.

ತಿದ್ದುಪಡಿ.

ಕಳೆದ ಸಂಚಿಕೆಯಲ್ಲಿ ಅಲೇಕ್ಝಾಂಡ್ರಾ ರಾಣಿಯವರ ನಿಧನದ ಪರವಾಗಿ ನಮ್ಮ ಶೋಕಸಂತಾಪವನ್ನು ವ್ಯಕ್ತಪಡಿಸುವಾಗ, ಪ್ರಥಮ ಪಾರಾದ ಆದಿಯಲ್ಲಿ "ದಿವಂಗತ ಜೋರ್ಜ ರಾಜರ ಪತ್ನಿ"ಯೆಂದು ತಪ್ಪಾಗಿ ಬಿದ್ದಿದೆ. ಪಾರಾದ ಆಖೈರಿಯಲ್ಲಿ ಸರಿಯಾಗಿ ಇರುವಂತೆ, ಅದನ್ನು "ದಿವಂಗತ ಏಳನೇ ಎಡ್ವರ್ಡ" ಎಂದು ತಿದ್ದಿಕೊಳ್ಳಬೇಕಾಗಿ ಪ್ರಾರ್ಥಿಸುತ್ತೇವೆ.

ಮತದಾರರ ಮೇಲಿನ ತಿರಸ್ಕಾರ.

ಕಳೆದ ಮದ್ರಾಸ ಮುನ್ಸಿಪಾಲಿಟಿ ಚುನಾವಣೆಯಲ್ಲಿ ರಾವ್‌ಬಹದ್ದೂರ ತಣಿಕಾಚಲಂ ಚೆಟ್ಟಿಯವರು ಒಬ್ಬರು ಉಮೇದ್ವಾರರಾಗಿದ್ದರು. ಇವರು ಆಗ ಕೊರ್ಪೊರೇಶನಿನ ಕಳೆದ ಬಾರಿಯ ಸದಸ್ಯರಾಗಿದ್ದು, ಅದರ ಅಧ್ಯಕ್ಷರಾಗಿದ್ದರು. ರಾವ್‌ಬಹದ್ದೂರರು ಬ್ರಾಹ್ಮಣೇತರ ಪಕ್ಷದ ಪ್ರಮುಖರಾದ ಮುಂದಾಳುಗಳಾಗಿರುವರು. ಇಂತಹ ಪ್ರಮುಖ ವ್ಯಕ್ತಿಯೇ ಕಳೆದ ಚುನಾವಣೆಗಳಲ್ಲಿ ಪರಾಜಯವನ್ನು ಹೊಂದಿ ಸ್ವರಾಜ್ಯ ಪಕ್ಷಕ್ಕೆ ಜಯಶ್ರೀಯನ್ನು ಒಪ್ಪಿಸಿಕೊಟ್ಟರು. ಇವರ ಪರಾಜಯವೂ ಸಾಮಾನ್ಯತರದ್ದಾಗಿರಲಿಲ್ಲ. ಪ್ರತಿಪಕ್ಷದ ಉಮೇದ್ವಾರರ ಮತಗಳ ಸಂಖ್ಯೆಗೂ ಇವರ ಮತಗಳ ಸಂಖ್ಯೆಗೂ ಅಪರಿಮಿತ ಅಂತರವಿದ್ದಿತು. ಮತದಾರರು ಇವರು ಕೊರ್ಪೊರೇಶನ್ನಿನಲ್ಲಿರುವುದು ಉಚಿತವಲ್ಲವೆಂದು ತಿಳಿದಿದ್ದರು. ಕೊರ್ಪೊರೇಶನ್ನಿನಂತಹ ಲೋಕಲ್‌ಬೋರ್ಡು ಸಂಸ್ಥೆಗಳು, ಸ್ಥಳೀಕ ಸ್ವರಾಜ್ಯ ಸಂಸ್ಥೆಗಳೆಂದೂ, ಇವುಗಳ ಮೂಲಕ ಜನರು ತಮ್ಮನ್ನು ತಾವೇ ಆಳಿಕೊಳ್ಳುವುದೆಂದೂ ತತ್ವವಿದೆ. ಆದುದರಿಂದ ಮತದಾರರ ಈ ಅಭಿಪ್ರಾಯವು ಕೊರ್ಪೊರೇಶನ್ನಿಗೆ ಸರ್ವಮಾನ್ಯವಾಗಬೇಕು; ಮತ್ತು ಜನತೆಯ ವಿಶ್ವಾಸವನ್ನು ಪಡೆಯುವ ವರೆಗೆ ರಾವ್‌ಬಹದ್ದೂರರು ಕೊರ್ಪೊರೇಶನನ್ನು ಸದಸ್ಯರಾಗಿ ಸೇರುವುದು ತತ್ವತಃ ಸಂಭವನೀಯವಲ್ಲ.

ಆದರೆ ಬ್ರಾಹ್ಮಣೇತರ ಮಂತ್ರಿವರ್ಗಕ್ಕೆ ಈ ಸಾಮಾನ್ಯ ತತ್ವವನ್ನು ಮಾನಿಸುವಷ್ಟು ಆತ್ಮಾಭಿಮಾನವಿಲ್ಲ. ಕೇವಲ ಪಕ್ಷಸ್ವಾರ್ಥದಿಂದ ಬ್ರಾಹ್ಮಣೇತರ ಮಂತ್ರಿಗಳು ರಾವ್‌ಬಹದ್ದೂರರನ್ನು ಅವರಿಗೆ ಚುನಾವಣೆಯು ಸಾಧ್ಯವಿಲ್ಲದಿದ್ದರೂ, ನೇಮಕಮಾಡಿಯೇ ಬಿಟ್ಟರು.

ಇದೇ ತರದ ನೇಮಕಗಳು ನಮ್ಮ ಜಿಲ್ಲೆಯಲ್ಲೂ ಆಗುತ್ತಿವೆ. ತಾಲೂಕುಬೋರ್ಡುಗಳಲ್ಲಿ ಚುನಾವಣೆಗೆ ನಿಂತು ಪರಾಜಯ ಹೊಂದಿ ನಿರಾಶರಾದ ತಾಲೂಕುಬೋರ್ಡು ಸದಸ್ಯತನದ ಉಮೇದ್ವಾರರು ಕೆಲವರು ಡಿಸ್ಟ್ರಿಕ್ಟಬೋರ್ಡು ಪ್ರೆಸಿಡೆಂಟರಿಂದ ಮರುದಿನವೇ ನೇಮಿಸಲ್ಪಡುವುದುಂಟು. ಇಂತಹ ಕೃತ್ಯಗಳು ಸ್ಥಳೀಕ ಸ್ವರಾಜ್ಯ ಸಂಸ್ಥೆಗಳ ಬೆಲೆಯನ್ನು ತಗ್ಗಿಸುವುವೆಂದು ನಾವು ಪ್ರತ್ಯೇಕ ಹೇಳಬೇಕಾಗಿಲ್ಲ. ನೇಮಣೂಕಿನ ಸ್ಥಾನಗಳು ಗೌರವಸ್ಥರೂ ಕಾರ್ಯದಕ್ಷರೂ ಆದ ಜನರನ್ನು ಸೇರುವ ಬದಲಿಗೆ, ಅಧಿಕಾರಾಭಿಲಾಷಿಗಳ ಸ್ವಾರ್ಥಸಾಧನೆಯ ಫಲವಾಗಿ ಅವರ ಪಾಲಿಗೆ ಸೇರಿ, ನೇಮಣೂಕಿನ ಸ್ಥಾನಗಳ ಗೌರವವೂ ಕಡಿಮೆಯಾಗುವುದು.

ತುರ್ಕಿಯೊಳಗೆ ಮುಸಲ್ಮಾನ ಮತ.

ಯಾವಾಗ ತುರ್ಕಿಯ ಯುವಕ ದಳದ ನಾಯಕನಾದ ಕೇಮಲಪಾಶನು ತುರ್ಕಿಯ ಸ್ವಾತಂತ್ರ್ಯಕ್ಕಾಗಿ ಯುದ್ಧಾಂತ್ಯದಲ್ಲಿ, ಅದನ್ನು ಮಿತ್ರರಾಷ್ಟ್ರಗಳ ಲೋಭದ ದೃಷ್ಟಿಯಿಂದ ರಕ್ಷಿಸಲು, ಯುದ್ಧಮಾಡಲು ಆರಂಭಿಸಿದನೊ, ಆಗ ಭಾರತ ಮುಸಲ್ಮಾನರು ಮತರಕ್ಷಣೆಗೆಂದು, ಖಿಲಾಫತ್‌ರಕ್ಷಣೆಗೆಂದು ಮುಂತಾಗಿ ಮತಾಭಿಮಾನದಿಂದ ಪ್ರಚಂಡ ಚಳವಳವನ್ನೆಬ್ಬಿಸಿ ಲಕ್ಷಾವಧಿ ರೂಪಾಯಿಗಳನ್ನು ಸಂಗ್ರಹಿಸಿ, ತುರ್ಕಿಗೆ ಕಳುಹಿಸಿ, ತಮ್ಮ ಸಹಾನುಭೂತಿಯನ್ನು ಪ್ರದರ್ಶಿಸಿದರು. ಕೇಮಲಪಾಶನು ತನ್ನ ದೇಶದ ಜನರ ಅಖಂಡ ದೇಶಪ್ರೇಮವನ್ನು ಒಟ್ಟುಗೂಡಿಸಿ, ಅದರ ಸಹಾಯದಿಂದ ಸೈನ್ಯವನ್ನು ರಚಿಸಿ, ಯುದ್ಧಮಾಡಿ ತುರ್ಕಿಯ ಸ್ವಾತಂತ್ರ್ಯವನ್ನು ಸ್ಥಾಪಿಸಿದನು. ಭಾರತಮುಸಲ್ಮಾನರು, ಖಿಲಾಫತ್ತಿನ ರಕ್ಷಣೆಯಾಯಿತೆಂದು ಜಯಧ್ವನಿಯನ್ನೆಬ್ಬಿಸಿದರು. ಆದರೆ ಸ್ವಲ್ಪ ಸಮಯದಲ್ಲಿಯೇ ಭಾರತಮುಸಲ್ಮಾನರು ಯಾವ ಖಿಲಾಫತ್ತಿಗಾಗಿ ಚಳವಳವನ್ನು ಹೂಡಿದ್ದರೊ—ಆ ಖಿಲಾಫತ್ತನ್ನೇ ಕೇಮಲಪಾಶನು ದೇಶದಿಂದ ಹೊರಗೆ ಕಳುಹಿಸಿದನು. ಕೇಮಲನ ಈ ಕೃತ್ಯವು ಸಾಧುವೊ ಅಸಾಧುವೊ ಎಂಬುದನ್ನು ನಾವು ಇಲ್ಲಿ ಚರ್ಚಿಸುವುದಿಲ್ಲ. ಆದರೆ ಭಾರತೀಯ ಮುಸಲ್ಮಾನರು ಅರಿಸಿದಕ್ಕೆ ತೀರಾ ವಿರೋಧವಾಯಿತೆಂಬ ಒಂದನೇ ಪಾಠ, ತುರ್ಕಿಯ ರಾಜತಂತ್ರಜ್ಞರು ದೇಶದ ಉನ್ನತಿಗಾಗಿ ಮತದ ನೆವದಿಂದ ಉಂಟಾಗುವ ತಡೆಗಳನ್ನು ಮತವೆಂಬ ಭಾವನೆಯಿಂದ ಹೆದರಿ ಅವುಗಳನ್ನು ತುಂಡರಿಸಲು ಹಿಂಜರಿಯುವುದಿಲ್ಲವೆಂಬ ಎರಡನೇ ಪಾಠ, ಇವೆರಡನ್ನು ನಾವು ಇಲ್ಲಿ ಸೂಚಿಸದಿರಲಾರೆವು.

ಕೇಮಲನು ಜನ್ಮಾರಭ್ಯ ಸುಧಾರಕನು. ಈಗಿನ ಆಳು ವಿಕೆಯಲ್ಲಿ ಅವನು ತುರ್ಕಿಯಲ್ಲಿ ಅನೇಕ ಹೊಸ ಸುಧಾರಣೆಗಳನ್ನುಂಟುಮಾಡಿರುವನು. ಮತದ ಹೆಸರಿನಲ್ಲಿ ಮುಸಲ್ಮಾನ ಚೇತನದ ಸುತ್ತಿನಲ್ಲಿ ಹೆಣ್ಣುಕಟ್ಟಿಕೊಂಡಿದ್ದ ಹಳೇ ಕಟ್ಟಳೆಗಳನ್ನು ಅವನು ಧೈರ್ಯದಿಂದ ಒಡೆಯುತ್ತಿರುವನು. ಸ್ತ್ರೀಯರ ಘರದಾ ಕ್ರಮದ ನಿವಾರಣೆ, ಇವೇ ಮೊದಲಾದ ಅನೇಕ ಸುಧಾರಣೆಗಳನ್ನು, ಅವು ಕೊರಾನಿಗೆ ವಿರೋಧವಿದ್ದರೂ ಲಕ್ಷಿಸದೆ ಸರಕಾರವು ಜ್ಯಾರಿಗೆ ತರುತ್ತಿದೆ.

ಮುಸಲ್ಮಾನ ಸಾಂಪ್ರದಾಯಿಗಳು (orthdox) ಸರಕಾರವನ್ನು ಕಾಫರ್ ಎಂದು ಅನ್ನಲಿಕ್ಕೆ ಶುರುಮಾಡಿ, ಸರಕಾರದ ವಿರೋಧವಾಗಿ ಚಳವಳವೆಬ್ಬಿಸಿರುವರು. ಈಗ ಸಣ್ಣ ಸಣ್ಣ ದಂಗೆಗಳೂ ಪ್ರಾರಂಭಿಸಿವೆ. ಸರಕಾರವು ಪ್ರಚಂಡ ದಬ್ಬಾಳಿಕೆಯಿಂದ ಸಾಂಪ್ರದಾಯವಾದಿಗಳ ಚಳವಳವನ್ನು ಅಣಗಿಸಲು ಪ್ರಯತ್ನಿಸುತ್ತಿದೆ. ನವಂಬರ ೫ನೇ ತಾರೀಕಿನೊಳಗೆ ಸರಕಾರವು ನೂರಕ್ಕಿಂತಲೂ ಹೆಚ್ಚು ಚಳವಳಗಾರರನ್ನು ಕೈದುಮಾಡಿಯದಲ್ಲದೆ, ಮೂವರನ್ನು ಫಾಶಿ ಶಿಕ್ಷೆಗೂ ಇಬ್ಬರನ್ನು ಹತ್ತು ವರ್ಷದ ಕಾರಾವಾಸಕ್ಕೂ ವಿಧಿಸಿಯದೆ. ಇದರ ಪ್ರತಿಯಾಗಿ ನಮ್ಮ ಖಿಲಾಫತ್ತ ಕಮಿಟಿಗಳು ಏನು ಮಾಡುವುವೊ ನೋಡಲಿದೆ.

ಹಿಂದೂಸ್ಥಾನದಲ್ಲಿ ಮುಸಲ್ಮಾನ ಮತ,

ಹೀಗೆ ಪರದೇಶಗಳಲ್ಲಿ ಮುಸಲ್ಮಾನ ಜನಾಂಗವೂ ತನ್ನ ತನ್ನ ದೇಶದ ರಾಜಕೀಯ- ಪರಿಸ್ಥಿತಿಯನ್ನು ಪುನರ್ಘಟಿಸುವುದರಲ್ಲಿಯೇ ಹೆಚ್ಚು ಶಕ್ತಿಯನ್ನು ವ್ಯಯಿಸುತ್ತಿದ್ದಾಗ, ಹಿಂದೂಸ್ಥಾನದಲ್ಲಿ ಮುಸಲ್ಮಾನರು ದೇಶಪ್ರೇಮವನ್ನು, ಪರದೇಶಗಳ ಸಹಾನುಭೂತಿಯಲ್ಲಿಯೇ ವ್ಯಯಿಸುತ್ತಾರೆ. ಮಾತ್ರವಲ್ಲದೆ ಕೆಲವು ಕಲಹಪ್ರಿಯರು ಹಿಂದೂ-ಮುಸಲ್ಮಾನರೊಳಗೆ ಕ್ಲೇಶದ ಬೀಜಗಳನ್ನು ಬಿತ್ತುತ್ತಿರುತ್ತಾರೆ.

ಅಂತಹ ಬೀಜಗಳಲ್ಲಿ ಒಂದು ಮೊನ್ನೆ ತಾನೆ ಮುಸ್ಲಿಮ್ ಅವ್‌ಟ್‌ಲುಕ್ (Muslim Outlook) ಎಂಬ ಪತ್ರಿಕೆಯಿಂದ ಬಿತ್ತಲ್ಪಟ್ಟಿತು. ಮೊದಲೇ ಉತ್ತರಹಿಂದೂಸ್ಥಾನದಲ್ಲಿ ಪತ್ರಿಕೆಗಳೆಂದರೆ ಹಿಂದೂ-ಮುಸಲ್ಮಾನರ ಸಬ್ಬಾಸ್ತ್ರದ ಸಮರ ಕ್ಷೇತ್ರ, ಅದರಲ್ಲಿಯೂ ಈ ಪತ್ರಿಕೆಗಳು ಸ್ವಕಪೋಲಕಲ್ಪಿತ ಕಥೆಗಳನ್ನು ಹರಡಿ ಎಷ್ಟು ಹಾನಿಮಾಡುತ್ತಾರೆಂದು, ಶ್ರೀಮತಿ ಸರೋಜಿನಿದೇವಿಯವರ ಮಗನ ವಿಷಯವಾದ, ಮೇಲಿನ ಪತ್ರಿಕೆಯ ವಾರ್ತೆಯೇ ತಿಳಿಸುವುದು.

ಇದರ ವಿವರವನ್ನು ಕಳೆದ ಸಂಚಿಕೆಯ "ವಿವಿಧ ವಿಷಯಗಳು" ಎಂಬಲ್ಲಿ ತೋರಿಸಲ್ಪಟ್ಟಿವೆ. ಈ ಮುಸ್ಲಿಮ್ ಪತ್ರಿಕೆಯು, ಸರೋಜಿನಿದೇವಿಯರ ಮಗನು ಮುಸಲ್ಮಾನನಾದನೆಂದು ಹೇಳಿತು. ಇತರ ಪತ್ರಿಕೆಗಳು ಅಲ್ಲವೆಂದುವು, ಮುಸ್ಲಿಮ್ ಪತ್ರಿಕೆಯು ಆಧಾರಗಳನ್ನು ಕೊಟ್ಟಿತು; ಮತ್ತು ಅದು ಹೌದೆನ್ನಿಸಲು ಸಾಧಿಸಿತು. ಈಗ ಶ್ರೀಮತಿ ಸರೋಜಿನಿಯವರು ಮುಸ್ಲಿಮ್ ಪತ್ರಿಕೆಯ ಆ ವಾರ್ತೆಯು ಸುಳ್ಳೆಂದು ಪ್ರಕಟಿಸಿರುವರು. ಮತ್ತು ಅದರ ಆಧಾರಗಳೂ ಸಂಪೂರ್ಣವಾಗಿ ಕಲ್ಪಿತವಾದುವುಗಳೆಂದು ಈಗ ತಾನೇ ತಿಳಿದುಬಂದಿದೆ.

ಮುಸ್ಲಿಮ್ ಪತ್ರಿಕೆಯು ಈ ವಾರ್ತೆಯನ್ನು ಸಂಪೂರ್ಣವಾಗಿ ಕಲ್ಪಿಸಿದ್ದೆನ್ನುವುದಕ್ಕೆ ಸಾಕಷ್ಟು ಕಾರಣಗಳಿವೆ. ಇದರ ಉದ್ದೇಶವೂ ಹಿಂದೂ-ಮುಸಲ್ಮಾನರೊಳಗೆ ಮತ್ತಷ್ಟು ದ್ವೇಷವನ್ನು ಬಿತ್ತುವುದಾಗಿದೆ. ಮುಖ್ಯವಾಗಿ, ಆ ಪತ್ರಿಕೆಯು, ತನ್ನ ಕಲ್ಪನೆಯ, ಶ್ರೀಮತಿ ಸರೋಜಿನಿಯವರ ಮಗನ ಮತಾಂತರಕ್ಕೂ, ಹಾಗೆಯೆ ಕಲ್ಪನೆಯ, ಸರೋಜಿನಿಯವರು ಮಗನಿಗೆ ಮತಾಂತರಕ್ಕೆ ಒಪ್ಪಿಗೆ ಕೊಟ್ಟರೆಂಬುದಕ್ಕೂ, ಅವರಿಬ್ಬರನ್ನೂ ಅಭಿನಂದಿಸಿ, ಹಿಂದೂ-ಮುಸಲ್ಮಾನ ಐಕ್ಯಕ್ಕಾಗಿ ಇತರ ಹಿಂದೂ ಧುರೀಣರನ್ನು ತಮ್ಮ ಮಕ್ಕಳನ್ನು ಸ್ವೇಚ್ಛೆಯಿಂದ ಮುಸಲ್ಮಾನ ಮತಕ್ಕೆ ಬಿಟ್ಟುಕೊಡುವ ಬಗ್ಗೆ ಕೇಳಿದುದು ಮುಖ್ಯವಾದ ವಿಷಯವಾಗಿ ವಿಷಬೀಜದ ವಿಷದ ಕೇಂದ್ರವು ಇಲ್ಲಿದೆ. ಮತಾಂತರದ ಭಾವನೆಯ ಈ ಸುಳ್ಳು ವ್ಯಾಮೋಹಕ್ಕೆ ಬಿದ್ದು, ಭಾರತೀಯ ಮುಸಲ್ಮಾನರು ಸ್ವರಾಜ್ಯವನ್ನು ದೂರಪಡಿಸುವರೇ? ಪರಸಂಕಾರದ ದಾಸ್ಯದಲ್ಲಿರುವ ಜನಾಂಗವು ಎಷ್ಟೇ ದಾನಶೂರವೂ, ಸಹಾನುಭೂತಿಯುಳ್ಳದ್ದೂ ಆದರೂ, ಇತರ ಜನಾಂಗಗಳು ಲಕ್ಷಿಸುವುದಿಲ್ಲ. ಖಿಲಾಫತ್ತಿನ ರಕ್ಷಣೆ ಆಗಬೇಕಾದರೆ, ಜಜೀರತ್‌ಉಲ್ ಅರಾಬ್ ಸುಸ್ವಸ್ಥವಾಗಬೇಕಾದರೆ, ಮೆಸ್ಸಪೊಟೇಮಿಯದ ಪಾವಿತ್ರವು ರಕ್ಷಿಸಲ್ಪಡಬೇಕಾದರೆ, ಹಿಂದೀ ಸ್ವರಾಜ್ಯವೇ ಏಕಮಾತ್ರ ಉಪಾಯಗಳೆನ್ನದೆ ಧನಸಹಾಯವನ್ನಾಗಲಿ, ಸಹಾನುಭೂತಿಯ ತಂತಿವುದು ಶಕ್ತಿಯನ್ನಾದರೂ ಮಾನಿಸುವುದಿಲ್ಲ. ಎಲ್ಲರೂ ಮಾನಿಸು ಹಿಂದೀಯರಿಗೆ ಅವಮರ್ಯಾದೆಯನ್ನು.

ಮಂಬಾಸಾ (ಪೂರ್ವ ಆಫ್ರಿಕಾ) ... ರಾಣಿ ಅಲೇಕ್ಝಾಂಡ್ರಾರ ನಿಧನದ ಶೋಕದರ್ಶನಕ್ಕಾಗಿ ... ಯಲ್ಲಿ ಅಲ್ಲಿನ ಬಿಳೇ ಜನರಿಗೂ, ಹಿಂದೀಯರಿಗೂ ಆಮಂತ್ರಣವಿತ್ತು. ಆದರೆ ದೇವಪ್ರಾರ್ಥನೆಗಾಗಿ ಕೂಡಿದ್ದ ಆ ಸಮಯದಲ್ಲಿ ಬಿಳೇ ಜನರು ಹಿಂದೀಯರನ್ನು ಇಗರ್ಜೆಯಿಂದ ಹೊರಗೆ ಹಾಕಿದರಂತೆ!

ಪರದೇಶಗಳಲ್ಲಿ ಹಿಂದೀಯರಿಗೆ ಅವಮಾನಿಸುವುದರಲ್ಲಿ ಹಿಂದೂ-ಮುಸಲ್ಮಾನ-ಕ್ರಿಸ್ತೀಯವೆಂಬ ಭೇದಗಳು ಇರುವುದಿಲ್ಲ. ಹಿಂದೂಸ್ಥಾನದಲ್ಲಿ ಯಾದರೂ, ಸರಕಾರವು ದೇಶದೊಳಗೆ ಬಣಗಳನ್ನು ಕಟ್ಟುವ ಬಗ್ಗೆ ಒಬ್ಬರಿಗೆ ಹೆಚ್ಚು ಪುರಸ್ಕಾರವನ್ನು ಇನ್ನೊಬ್ಬರಿಗೆ ಹೆಚ್ಚು ತಿರಸ್ಕಾರವನ್ನು ಕೊಡುವುದಾದರೂ, ಅಂತರ್ಯದಲ್ಲಿ ಪರಕಾರಕ್ಕೆಲ್ಲರೂ ಒಂದೇ.

ಆಫ್ರಿಕೆಯಲ್ಲಿ ದಿನನಿತ್ಯವೂ ಹಿಂದೀಯರ ಮೇಲೆ ಅವಮಾನದ ಹೊರೆಯು ಹಾಕಲ್ಪಡುತ್ತಿದೆ. ಹಿಂದೀಯರನ್ನು ಹೊಲೆಯರಿಗಿಂತ ಕಡೆಯಾಗಿ ಅಲ್ಲಿ ಕಾಣುತ್ತಾರೆ. ಹಿಂದೀಯರನ್ನು ಗಂಟುಮೂಟೆ ಕಟ್ಟಿಸಿ ಹೊರಗೆ ಓಡಿಸಲು ಪ್ರಯತ್ನಿಸುತ್ತಾರೆ. ಹತಭಾಗ್ಯರಾದ ಸಹಾಯಹೀನರಾದ ಆಫ್ರಿಕೇಯ ಹಿಂದೀಯರಿಗೆ ನಾವು ಸಹಾಯಮಾಡಲಾರೆವು; ಆ ಅವಮಾನದ ದೂಳನ್ನು ತಲೆಯಲ್ಲಿ ಧರಿಸಿ ನಾವು ಸುಮ್ಮನಿರಬೇಕು!

ಸ್ವದೇಶದಲ್ಲಿ ನಮಗೆ ಗೌರವವಿದ್ದರಲ್ಲವೇ ಅನ್ಯದೇಶದಲ್ಲಿ ಅದನ್ನು ಹೊಂದುವುದು!

ಸ್ವಾಮಿ ಶ್ರದ್ಧಾನಂದರು.

ಆರ್ಯಸಮಾಜದ ಚೇತನಾತ್ಮಕ ಧುರೀಣರಾಗಿರುವ ಸ್ವಾಮಿ ಶ್ರದ್ಧಾನಂದರು ಕೆಲವು ದಿನಗಳ ಹಿಂದೆ ಮದ್ರಾಸಿಗೆ ಬಂದು, ಅಲ್ಲಿಂದ ಕಲ್ಪಾತಿಗೂ, ಆ ಮೇಲೆ ವ್ಯಾಕೊಮ್ ಆಗಿ ಕೇರಳ ಪ್ರಾಂತ್ಯವನ್ನು ಸಂದರ್ಶಿಸಿ ಮಂಗಳೂರಿಗೂ ಬಂದಿದ್ದರು, ಇವರ ಮುಖ್ಯ ಉದ್ದೇಶವು ಕಲ್ಪಾತಿಯಲ್ಲಿ ಉಂಟಾದ ಬ್ರಾಹ್ಮಣ ಮತ್ತು ಅಸ್ಪೃಶ್ಯರೊಳಗಿನ ವಿವಾದದ ತೀರ್ಮಾನ.

ಕಲ್ಪಾತಿಯಲ್ಲಿ ಬ್ರಾಹ್ಮಣರ ಅಗ್ರಹಾರದ ಮಾರ್ಗಗಳಲ್ಲಿ ಮುಸಲ್ಮಾನರಿಗೂ ಕ್ರಿಸ್ತೀಯರಿಗೂ ಪ್ರವೇಶವಿದ್ದರೂ, ಹಿಂದೂಗಳಾದ ಅಸ್ಪೃಶ್ಯರಿಗೆ ಪ್ರವೇಶವಿಲ್ಲ. ಇದನ್ನು ನೋಡಿ ನಿರಾಶರಾದ ಅಸ್ಪೃಶ್ಯರು ಮುಸಲ್ಮಾನ ಅಥವಾ ಕ್ರಿಸ್ತೀಯ ಮತಕ್ಕೆ ಸೇರಲಿರುವುದನ್ನು ನೋಡಿ ಆರ್ಯಸಮಾಜದವರು ಅವರನ್ನು ತಮ್ಮ ಸಮಾಜಕ್ಕೆ ಸೇರಿಸಿ, ಮಾರ್ಗಗಳಲ್ಲಿ ಸಂಚರಿಸುವ ಹಕ್ಕನ್ನು ಅವರಿಗಾಗಿ ಸಾಧಿಸಿದರು.

ಈ ಕಾರಣದಿಂದ ಆರ್ಯಸಮಾಜದವರ ಮೇಲೆ ಬ್ರಾಹ್ಮಣರಿಗೆ ವೈಮನಸ್ಸುಂಟಾಗಿ, ಕೆಲವು ದಿನಗಳ ಹಿಂದೆ ಅಲ್ಲಿ ನಡೆದ ರಥೋತ್ಸವ ಸಮಯದಲ್ಲಿ, ವಿವಾದವು ಮತ್ತಷ್ಟು ಬೆಳೆಯುವಂತಿದ್ದುದರಿಂದ, ಸರಕಾರದ ಸಹಾಯದಿಂದ ಆರ್ಯಸಮಾಜದವರು ರಥೋತ್ಸವದಲ್ಲಿ ಅಲ್ಲಿ ಬರಬಾರದೆಂದು ಅಪ್ಪಣೆ ಪಡೆದರು. ಹಿಂದೂಗಳಾದ ಆರ್ಯಸಮಾಜದವರಿಗೆ ರಥೋತ್ಸವದ ಸಮಯದಲ್ಲಿ ಬರಲಿಕ್ಕಿರದಿದ್ದರೂ, ಮುಸಲ್ಮಾನರೂ, ಕ್ರಿಸ್ತೀಯರೂ ಬಂದು ತಮ್ಮ ಉಪದೇಶ ವಾಕ್ಯಗಳನ್ನು ಜನರೊಳಗೆ ಸಾರಲಿಕ್ಕೆ ಯಾವ ಆತಂಕವೂ ಇರಲಿಲ್ಲ!

ಇದೆಲ್ಲವನ್ನು ಸ್ವತಃ ನೋಡುವ ಬಗ್ಗೆಯೂ ಆರ್ಯಸಮಾಜದ ಉದಾರತತ್ವಗಳನ್ನು ಪ್ರಸರಿಸಲಿಕ್ಕೂ ಸ್ವಾಮಿಯವರು ಇತ್ತ ಬಂದಿದ್ದರು. ಅವರ ಸಂಚಾರವು ವ್ಯರ್ಥವಾಗಲಿಲ್ಲ. ರಾಜಮಹೇಂದ್ರಿ ಹತ್ತಿರದ ಕೊವ್ವೂರಿ ಎಂಬ ಹಳ್ಳಿಯಲ್ಲಿ ಇವರು ಅಸ್ಪೃಶ್ಯರಿಂದ ಮತಾಂತರ ಹೊಂದಿದ ೫೦೦ ಕ್ರಿಸ್ತೀಯರನ್ನು ಪುನಃ ಮತಾಂತರ ಪಡಿಸಿದರು. ಹಿಂದೂ ಜನಾಂಗದ ಅಸ್ತಿತ್ವಕ್ಕಾಗಿ ಸ್ವಾಮಿಜಿಯವರು ಪಡುತ್ತಿರುವ ಸಾಹಸಶ್ರಮಗಳನ್ನು ಎಲ್ಲರೂ ಪ್ರಶಂಸಿಸದಿರರು.

ಮಹಾತ್ಮರ ಉಪವಾಸ.

ಅಹಮ್ಮದಾಬಾದಿನ ಸತ್ಯಾಗ್ರಹಾಶ್ರಮದೊಳಗಿನ ಕೆಲವು ದೋಷಗಳ ಕಾರಣದಿಂದ ಮಹಾತ್ಮಾ ಗಾಂಧಿಯವರು ಏಳು ದಿನಗಳ ಉಪವಾಸವನ್ನಾರಂಭಿಸಿರುವರು, ಈ ಉಪವಾಸವು ಆಖೈರಿಯಾಗಿ, ಮಹಾತ್ಮರು ಪುನಃ ಆಹಾರವನ್ನು ಬಹು ಜಾಗ್ರತೆಯಿಂದ ತೆಗೆದುಕೊಳ್ಳುತ್ತಿರುವರು. ಸಹನೆಯ ಮಹಾಶಿಖರಗಳಾದ ಮಹಾತ್ಮಾಜಿಯವರ ಈ ಸಹನೆಯಿಂದ ದೇಶವು ಪವಿತ್ರವಾಗುವುದೆಂಬ ಭರವಸೆಯಿಂದ, ಅವರು ಪಟ್ಟಿರುವ ಅಪಾರಕಷ್ಟದ ಕಡೆಗಿನ ನಮ್ಮ ಶೋಕವನ್ನು ನಾವು ಬಚ್ಚಿಡುವೆವು.

ಅನುಕ್ರಮಣಿಕೆ

	ಪುಟ
ಅಗ್ರಲೇಖ	
ಶಬ್ದಗಳಿಂದ ಸ್ವರಾಜ್ಯ—	೬
ಸ್ಫುಟವಿಚಾರ, ಒಳದೇಶವರ್ತಮಾನ	೭
ದಕ್ಷಿಣ ಕನ್ನಡ	೭
ಮಂಗಳೂರು	೮
ಸೂರ್ಯನ ಶೆಖೆಯ ಶಕ್ತಿಯನ್ನು ಉಪಯೋಗಿಸಿ ಮಾಡಿದ ಸೂರ್ಯ ಯಂತ್ರಗಳು.	"
ಪತ್ರವ್ಯವಹಾರ ೧, ೨,	"
ವಿವಿಧವಿಷಯಗಳು	೮

ಸ್ವದೇಶಾಭಿಮಾನಿ.

ಶಕ ೧೮೪೫ ಮಾರ್ಗಶಿರ ಬ॥ ೫ಯು ಶುಕ್ರವಾರ

ಶಬ್ದಗಳಿಂದ ಸ್ವರಾಜ್ಯ.

ಹಿಂದೀಯ ರಾಜಕೀಯ ರಂಗದಲ್ಲಿ ಈಗ ಉಂಟಾಗಿರುವ ಮಹಾ ಕೋಲಾಹಲವನ್ನು ನೋಡಿದರೆ ಎದೆಯಲ್ಲಿ ನಿರಾಶೆಯುಂಟಾಗುತ್ತಿದೆ. ಜನತೆಯನ್ನು ಒಟ್ಟುಗೂಡಿಸಿ, ಐಕ್ಯವನ್ನು ಸ್ಥಾಪಿಸಿ, ಸ್ವರಾಜ್ಯದ ಧ್ಯೇಯದ ಕಡೆಗೆ ಅವರನ್ನು ಎತ್ತಬೇಕಾದ, ಆ ಧುರೀಣರೇ ಈಗ ಕಲಹಗಳನ್ನೂ, ವಾದಗಳನ್ನೂ ಬೆಳೆಸುತ್ತ, ಯಾರೊಡನೆ ತಾವು ತಮ್ಮ ಪ್ರತಿರೋಧವನ್ನು ಬಲಪಡಿಸಬೇಕೊ, ಆ ಸರಕಾರವನ್ನು ತೀರಾ ಮರೆತು ಭ್ರಾತೃ ಭ್ರಾತೃಗಳ ಸಮರದಲ್ಲಿ ಸೇರಿದುದನ್ನು ನೋಡಿದರೆ ಯಾರಿಗೂ ದುಃಖವಾಗದಿರದು. ಉದಾರ ಪಕ್ಷವು ದ್ರವ್ಯಲೋಭದಿಂದ ಸರಕಾರದ ಪದವಿಗಳನ್ನು ಇಚ್ಛಿಸಿ, ಸರಕಾರದ ಅಜ್ಞಾನವರ್ತಿಯಾಗಿ ನಡೆಯುತ್ತಿರುವಾಗ, ಇಂಡಿಪೆಂಡೆಂಟ ಪಕ್ಷವು ಧ್ಯೇಯವಿಲ್ಲದೆ, ಕಾರ್ಯಕ್ರಮವಿಲ್ಲದೆ, ಸುಮ್ಮನೆ ಆಕಾಶ ಕುಸುಮಗಳನ್ನೇ ತೋರಿಸುವಾಗ, ಮುಸಲ್ಮಾನ ಧುರೀಣರು ಪರದೇಶಗಳಲ್ಲಿ ತಮ್ಮ ಸಹಾನುಭೂತಿಯನ್ನು ತೋರಿಸುವುದರಲ್ಲಿಯೇ ಆಸಕ್ತರಿರುವಾಗ, ಉತ್ತರ ಹಿಂದೂಸ್ಥಾನದಲ್ಲಿ ಎಲ್ಲೆಲ್ಲಿಯೂ ಹಿಂದು-ಮುಸಲ್ಮಾನ ಝಟಾಪಟಿಯು ಬೆಳೆಯುತ್ತಿರುವಾಗ, ಬ್ರಿಟಿಷ ಸರಕಾರವು ಹಿಂದೀಯರನ್ನು ತೃಣಸಮಾನವಾಗಿ ತಿರಸ್ಕರಿಸಿ, ನಮ್ಮ ಆಶಯಗಳನ್ನು ದುರ್ಲಕ್ಷಿಸಿ, ನಮಗೆ ಸಹಕಾರಿಯಾಗದ ವ್ಯಾಸರಾಯಿಗಳನ್ನು ನಮ್ಮ ಮೇಲೆ ಹೊರಿಸುವಾಗ, ಪರದೇಶಗಳಲ್ಲಿ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ಅಮೇರಿಕಾ ಮುಂತಾದ ಸ್ಥಳಗಳಲ್ಲಿ ಹಿಂದೀಯ ಗೌರವವು ನಷ್ಟವಾಗುವಾಗ, ಈ ಸಂತಾಪಕರವಾದ ಪರಿಸ್ಥಿತಿಯ ಮಧ್ಯದಲ್ಲಿ, ಭಾರತೆಯ ಪರವಾಗಿ ಕ್ಷೀಣವಾದರೂ ಒಂದು ಪ್ರತಿಧ್ವನಿಯನ್ನು ಮೇಲೆತ್ತಬಹುದೆಂದು ನಾವು ಆಶಿಸಿದ ಸ್ವರಾಜ್ಯ ಪಕ್ಷದೊಳಗೆ ಧುರೀಣರೇ ಕಲಹಗಳನ್ನು ಹೂಡುವುದನ್ನು ನೋಡಿದರೆ ಯಾರ ಹೃದಯವು ವಿಚಲಿತವಾಗದು?

ಧುರೀಣರ ಶಬ್ದಯುದ್ಧವು ಬೆಳೆಯುತ್ತಾ ಬರುತ್ತಿದೆ. ಶ್ರೀಯುತ ಜಯಕರ ಕೇಳಕರರೊಡನೆ, ಅಣೆಯವರು ಸೇರಿರುವರು. ಶ್ರೀಯುತ ದೇಶಮುಖರೂ ಸ್ವರಾಜ್ಯ ಪಕ್ಷಕ್ಕೆ ರಾಜೀನಾಮೆ ಕೊಟ್ಟಿರುವರು. ಮರಾಠದ ಒಡಕು ಪೂರ್ಣವಾಯಿತು. ಕೇಳ್ಕರರು, ಜಯಕರರು, ಅಣೆಯವರು ಈ ಮೂವರು ಒಂದು ಕಡೆಗೂ, ಪಂಡಿತ ಮೋತಿಲಾಲನೇಹರುರವರು ಮತ್ತು ಜಮ್ನಾದಾಸ ಮೇಹತಾರವರು ಇನ್ನೊಂದು ಕಡೆಗೂ ಇದ್ದು ಈ ಶಬ್ದಯುದ್ಧವು ನಡೆಯುತ್ತಿದೆ. ಇಷ್ಟೆಲ್ಲಾ ಜಗಳ, ಪರಸ್ಪರ ದೂಷಣೆಗಳು ಏತಕ್ಕೆ? ಬರೇ ರಿಸ್ಪೊನ್ಸಿವ್ ಕೊ-ಒಪರೇಶನಿಗಾಗಿ. ಸರಕಾರವು ಸಹಕರಿಸಿದರೆ ತಾವೂ ಸಹಕಾರಮಾಡಬೇಕೆಂಬ ತತ್ವವನ್ನು ಸ್ಥಾಪಿಸಲಿಕ್ಕಾಗಿ.

ಸರಕಾರವು ಸಹಕಾರವನ್ನು ಕೊಟ್ಟಿದಿಲ್ಲ; ಬದಲಿಗೆ ತಿರಸ್ಕಾರವನ್ನೆ ಕೊಟ್ಟಿಯದೆ. ಈ ವರೆಗಿನ ಎಸೆಂಬ್ಲಿಯ ಇತಿಹಾಸವು ಈ ತಿರಸ್ಕಾರದ ಇತಿಹಾಸವೇ ಆಗಿರುವುದು. ಎಸೆಂಬ್ಲಿಯ ಸ್ವರಾಜ್ಯ ಪರವಾದ ಬರೇ ಸಾಮಾನ್ಯ ಠರಾವುಗಳು ನೆಲಕ್ಕೆ ಬಿದ್ದಿವೆ; ಎಸೆಂಬ್ಲಿಯ ಲೀ ಕಮಿಶನಿನ ಮೇಲಿನ ಅಭಿಪ್ರಾಯಗಳು ತಿರಸ್ಕರಿಸಲ್ಪಟ್ಟಿವೆ; ಎಸೆಂಬ್ಲಿಯ ಇನ್ನೂ ಅನೇಕ ಠರಾವುಗಳು ಅವುಗಳನ್ನು ಬರೆದ ಕಾಗದ ಚೂರಿಗಿಂತಲೂ ವ್ಯರ್ಥವೆಂದು ತಿರಸ್ಕರಿಸಲ್ಪಟ್ಟಿವೆ. ಹಾಗಾದರೆ ಈ ಸರಕಾರದ ಮಾತೆಲ್ಲಿ? ಸರಕಾರದ ಸಹಕಾರವು ತೋರಿದುದು ಒಂದು ತಾಂಬೆಯವರ ಸಂದರ್ಭದಲ್ಲಿ. ಸರಕಾರವು ತಾಂಬೆಯವರಿಗೆ ಎಕ್ಸಿಕ್ಯೂಟಿವ್ ಪದವಿ ಕೊಟ್ಟರು. ಆದರೆ ಇದು ಸಹಕಾರವೊ? ಯಾವ ಉದ್ದೇಶದಿಂದ ಸರಕಾರವು ಈ ಪದವಿಯನ್ನು ಮಿ| ತಾಂಬೆಯವರಿಗೆ ಕೊಟ್ಟರೊ, ಆ ಉದ್ದೇಶವು ಪೂರ್ಣವಾಯಿತು. ಯೋಚಿಸಿದುದಕ್ಕಿಂತಲೂ ಪೂರ್ಣವಾಯಿತು. ಸ್ವರಾಜ್ಯ ಪಕ್ಷದ ಶಿಸ್ತು ಇಷ್ಟು ಮದುವೆಂದೂ, ಸ್ವರಾಜ್ಯ ಪಕ್ಷದೊಳಗೆ ಇಷ್ಟು ಬಲವಾದ ಒಡಕು ಬರುವದೆಂದೂ ಸರಕಾರವು ಸ್ವಪ್ನದಲ್ಲಿಯಾದರೂ ಎಣಿಸಿರಲಿಲ್ಲವಾಗಿರಬೇಕು.

ಹೇಗೂ ಮರಾಠಕ್ಕೆ ಸರಕಾರವು ಕೊಟ್ಟ "ಸಹಕಾರ"ವು ವ್ಯರ್ಥವಾಗಲಿಲ್ಲ. ಒಂದು ಎಕ್ಸಿಕ್ಯೂಟಿವ ಪದವಿಯು ಮರಾಠ ಸ್ವರಾಜ್ಯ ಪಕ್ಷವನ್ನು ರಿಸ್ಪೊನ್ಸಿವ್ ಕೊ-ಒಪರೇಶನಿಗೆ ಒಲಿಸಿಕೊಟ್ಟಿತು. ತಾಜಾ ಸ್ವರಾಜ್ಯ ಪಕ್ಷೀಯರೂ ಮರಾಠದಲ್ಲಿ ಹಲವರಿರಬಹುದಾದರೂ, ಲೋಕಮಾನ್ಯ ಟಿಳಕರ ಹೆಸರಿನಿಂದ ಘಟ್ಟಿಮಾಡಲ್ಪಟ್ಟ ಈ ಸಹಕಾರ ತತ್ವಕ್ಕೆ ಮರಾಠವು ಒಕ್ಕಟ್ಟಿನಲ್ಲಿ ಬಲವೀಯಬಹುದಾಗಿ ತೋರುತ್ತಿದೆ. ನವಂಬರ ಆಖೈರಿಗೆ ಪಾಲ್ಘಾರಿನಲ್ಲಿ ಸೇರಿದ ಥಾನಾ ಜಿಲ್ಲಾ ಪರಿಷತ್ತಿನಲ್ಲಿ ಈ ರಿಸ್ಪೊನ್ಸಿವ್ ಕೊ-ಒಪರೇಶನ್ನು ಮಂಜೂರಾದುದೂ ಮರಾಠದ ಲಕ್ಷಣದ ಸೂಚನೆಯಾಗಿದೆ. ಅಲ್ಲಿಯೇ ಸೇರಿದ ಮರಾಠಾ ಪ್ರಾಂತಿಕ ಸ್ವರಾಜ್ಯ ಪಕ್ಷವು ಶ್ರೀಯುತ ಕೇಳಕರರ ಈ ಧೋರಣವನ್ನು ಮಂಜೂರು ಮಾಡಿದುದೂ ಮರಾಠವು ಎಲ್ಲಿದೆಯೆಂದು ತೋರಿಸುವುದು.

ಹಿಂದೀಯ ಉಚ್ಚ ಆಶಯಗಳನ್ನು ವ್ಯಕ್ತಪಡಿಸಬಲ್ಲ ಮತ್ತು ಹಿಂದೀಯ ಚೇತನವನ್ನು ರಕ್ಷಿಸಬಲ್ಲ, ಏಕಮಾತ್ರ ಪಕ್ಷವಾಗಿರುವ ಸ್ವರಾಜ್ಯ ಪಕ್ಷವು ಈ ವರೆಗೆ ಅಖಂಡವೂ ಪ್ರಬಲವೂ ಇದೆಯೆಂದು ಗೌರವಹೊಂದಿ ಈಗ ಒಡಕುಗಳಿಂದ ನಿರ್ಬಲವಾಯಿತು.

ಈಗಿನ ರಾಜಕೀಯ ವಾತಾವರಣದ ಅಸ್ತಿವಾರವು, ಸ್ವರಾಜ್ಯ ಪಕ್ಷದ ಸ್ಥಾಪಕರಾದ ದೇಶಬಂಧು ದಾಸರಾಗಲಿ, ಪಂಡಿತ ಮೋತಿಲಾಲನೇಹರುರವರಿಂದ ರಚಿತವಾದುದಲ್ಲವೆಂದೂ, ಅದು ಮಹಾತ್ಮಾಜಿಯವರ ನೂತನ ಉಪದೇಶದಲ್ಲಿ ಆರಂಭವಾಯಿತೆಂದೂ ನಾವು ತಿಳಿದರೆ, ಮತ್ತು ಹಿಂದಿನ ಕಾಂಗ್ರೆಸ್ ಕಾರ್ಯಕ್ರಮಕ್ಕೂ ಆ ಮೇಲಿನ ಮಹಾತ್ಮರ ಪ್ರೇರಣೆಗೂ ಇರುವ ಅಂತರವನ್ನು ನಾವು ತಿಳಿದರೆ ರಿಸ್ಪೊನ್ಸಿವ್ ಕೊ-ಒಪರೇಶನಿಗೂ ಸ್ವರಾಜ್ಯ ಪಕ್ಷದ ನಿರಂತರ ನಿರೋಧ ತತ್ವಕ್ಕೂ ಇರುವ ಅಂತರವು ತಿಳಿಯುವುದು. ಮಹಾತ್ಮರು— ಸರಕಾರದ ಕೌನ್ಸಿಲುಗಳು ವೇಶ್ಯಾಭವನದಂತೆ ಸಮ್ಮೋಹಕಾರಿಗಳಾಗಿವೆ; ಅವು ಪ್ರಜಾಪ್ರತಿನಿಧಿಗಳಲ್ಲಿ ವಿಕೃತಿಯನ್ನುಂಟುಮಾಡುತ್ತಿವೆ; ಅಲ್ಲಿ ಹೋದವರು ಹೋದ ಮಾನಸಿಕದಿಂದ ಹಿಂದೆ ಬರುವುದಿಲ್ಲ—ಎಂದು ಕೌನ್ಸಿಲ ಬಹಿಷ್ಕಾರದ ವಿಷಯದಲ್ಲಿ ಹೇಳಿದ್ದರು. ಈಗಲಾದರೂ ಅವರು ಕೌನ್ಸಿಲಿನೊಳಗೆ ಹೋಗಿ ಕೆಲಸಮಾಡುವುದು ಉಚಿತವೆನ್ನುವುದಿಲ್ಲ. ಮುಖ್ಯತಃ ಅಸಹಕಾರದ ಉದ್ದೇಶವಾದ, ಸರಕಾರ ನೇಮಕಗಳ ತಿರಸ್ಕಾರ, ಸರಕಾರ ಸಮ್ಮೋಹಗಳ ತಿರಸ್ಕಾರ ಇತ್ಯಾದಿ ಸರಕಾರ ದಾಕ್ಷಿಣ್ಯವನ್ನು ತೆಗೆದುಹಾಕುವುದೇ, ಸ್ವರಾಜ್ಯ ಪಕ್ಷವೂ ತನ್ನ ಉದ್ದೇಶವಾಗಿ ಇಟ್ಟುಕೊಂಡಿತ್ತು. ದಾಕ್ಷಿಣ್ಯದಿಂದ ವೈಯಕ್ತಿಕ ಸಂಸಾರದಲ್ಲಿಯೂ ಎಷ್ಟೊ ಅಪಾಯಕರ ಘಟನೆಗಳು ನಡೆಯುತ್ತಿವೆ. ಸರಕಾರವೂ ತನ್ನ ದಾನದೊಳಗಿರುವ ಅಧಿಕಾರದಿಂದ ರಾಜಕೀಯ ಧುರೀಣರನ್ನು ಪುರಸ್ಕರಿಸಿ ಅವರನ್ನು ದಾಕ್ಷಿಣ್ಯಕ್ಕೆ ಹಾಕಿ ಒಲಿಸಿ, ಪ್ರಜಾಪ್ರಾತಿನಿಧ್ಯದ ಭಾವನೆಯನ್ನು ಅವರ ಮನಸ್ಸಿನಿಂದ ತೆಗೆದುಹಾಕುವುದರಲ್ಲಿ ಅನೇಕ ಪ್ರಬಲ ಧುರೀಣರೊಳಗೂ ಕೃತಕೃತ್ಯವಾಗಿದೆ. ಆದುದರಿಂದ ಈ ತತ್ವದ ಆಧಾರದ ಮೇಲೆಯೇ ನಿರ್ದಾಕ್ಷಿಣ್ಯವಾದ ಸ್ವರಾಜ್ಯ ಪಕ್ಷವು ರಚಿಸಲ್ಪಟ್ಟಿದ್ದಿತು. ಸ್ವರಾಜ್ಯ ಪಕ್ಷವು ಯುಕ್ತ ಕಂಡಂತೆ ತಮ್ಮ ಧೋರಣವನ್ನು ಬದಲಿಸಿರಬಹುದು. ಆದರೆ ಈ ಅಸ್ತಿವಾರವು ಇನ್ನೂ ಕಳಚಲಿಲ್ಲ. ಪಕ್ಷವು ಇನ್ನೂ ಸರಕಾರದ ದಾಕ್ಷಿಣ್ಯಕ್ಕೆ ಬಿದ್ದಿಲ್ಲ. ಆದುದರಿಂದಲೇ ಪಕ್ಷವು ಸರ್ವಮಾನಿತವಿದೆ. ನಿರಪೇಕ್ಷ ಸಾಧಕರೆಂಬ ವಿಶ್ವಾಸವನ್ನೂ ಜನತೆಯೊಳಗೆ ಉಂಟುಮಾಡಿಕೊಂಡಿಯದೆ. ರಿಸ್ಪೊನ್ಸಿವ್ ಕೊ-ಒಪರೇಶನೆಂಬುದು ಮಹಾತ್ಮರ ಈ ತತ್ವಗಳ ಆಧಾರದಿಂದ ರಚಿತವಾದ ಅಸ್ತಿವಾರವನ್ನೇ ಕಳಚುವಂತಹುದುದಾಗಿದೆ.

ಸ್ವರಾಜ್ಯ ಪಕ್ಷದಿಂದ ಕೇಳ್ಕರರಾದಿಯವರು ಮಾಡಿದ ಅಪರೋಹಣವನ್ನು ನೋಡಿ ಮಿ| ಜಿನ್ನಾರವರೂ ಚೇತರಿಸಿರುವರು. ಮಿ| ಜಿನ್ನಾರವರು ರಾಷ್ಟ್ರೀಯಾಭಿಮಾನಿಗಳು ಅಹುದು. ಒಂದು ಬಾರಿ ಅವರು ತೀಕ್ಷ್ಣ ಪಕ್ಷದೊಳಗೆ ತೀಕ್ಷ್ಣರಾಗಿದ್ದರು. ಅಸಹಕಾರದ ಮಾತೇ ಇಲ್ಲದ ಒಂದು ಸಮಯದಲ್ಲಿ, ಲೊರ್ಡ ವಿಲ್ಲಿಂಗ್ಡನ್ನರಿಗೆ ಮುಂಬಾಯಿ ಕೊರ್ಪೊರೇಶನ್ನು ಕೊಡಬೇಕೆಂದಿದ್ದ ಮಾನಪತ್ರವನ್ನು ನಿರಾಕರಿಸುವುದರಲ್ಲಿ ಅಸೀಮ ಸಾಹಸವನ್ನು ನಡೆಸಿದವರಲ್ಲಿ ಮಿ| ಜಿನ್ನಾರವರು ಪ್ರಮುಖರು. ಆದರೆ ಅಸಹಕಾರ ಚಳವಳದ ಪ್ರಾರಂಭದೊಡನೆ ಅವರು ಕೊಂಗ್ರೆಸ್ಸಿನಿಂದ ದೂರವಾದರು. ಸರಕಾರವನ್ನು ಸ್ಪಷ್ಟೋಕ್ತಿಗಳಿಂದ ಖಂಡಿಸುವರಾದರೂ, ಅವರು ಸ್ವರಾಜ್ಯ ಪಕ್ಷದ ಧ್ಯೇಯಗಳಲ್ಲಿ ವಿಶ್ವಾಸವುಳ್ಳವರಾಗಿರಲಿಲ್ಲ, ಸ್ವತಂತ್ರರಾಗಿ ಅವರು ಎಸೆಂಬ್ಲಿಯನ್ನು ಸೇರಿರುವರು. ಈಗ ಮಿ| ಜಿನ್ನಾರವರು ಹೊಸದೊಂದು ಪಕ್ಷವನ್ನು ಉದಾರ ಮತ್ತು ಸ್ವರಾಜ್ಯ ಪಕ್ಷಗಳೊಳಗಿನ ಮಧ್ಯವರ್ತಿಯಾಗಿ ರಚಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ವಿಶೇಷವೇನೆಂದರೆ ಈ ಗದ್ದಿಲ ಪಕ್ಷಕ್ಕೆ ಸೇರಲಿಕ್ಕೆ ಯಾರೂ ತಯಾರಿಲ್ಲವೆಂದು ತೋರುತ್ತಿದೆ, ಉದಾರ ಪಕ್ಷವು ತನ್ನ ಧ್ಯೇಯಗಳನ್ನು ಮೇಲೆಬ್ಬಿಸಿ ಈ ಪಕ್ಷವನ್ನು ಸೇರಿ ತಮ್ಮ ಪಕ್ಷವನ್ನು ಆಖೈರಿ ಪಡಿಸುವ ಇಚ್ಛೆಯುಳ್ಳದಾಗಿಲ್ಲ, ಮರಾಠವು ತನ್ನನ್ನು ಜಿನ್ನರವರ ಧುರೀಣತ್ವಕ್ಕೆ ಅಧೀನವಾಗಿ ಮಾಡಿ ಪ್ರಾಂತಿಕ ಅಭಿಮಾನವನ್ನು ಕಳಕೊಳ್ಳಲು ಸಿದ್ಧವಿಲ್ಲ, ಸ್ವರಾಜ್ಯ ಪಕ್ಷವು ಈ ಸಂಶಯಕರವಾದ ಪಕ್ಷವನ್ನು ಸೇರಲಿಚ್ಛೆಯುಳ್ಳದಾಗಿಲ್ಲ, ತತ್ಕಾಲಕ್ಕೆ ಈ ಪಕ್ಷದ ಭವಿತವ್ಯವು ಇಷ್ಟೇಯಾಗಿ ಕಾಣುತ್ತಿದೆ,

ಆದರೆ ಸ್ವರಾಜ್ಯ ಪಕ್ಷಕ್ಕೆ ತೀರಾ ವಿರೋಧವಾಗಿರುವ ಈಗಿನ ವಾತಾವರಣದಿಂದ ಅದನ್ನು ರಕ್ಷಿಸಲು ಪ್ರಯತ್ನಗಳು ನಡೆಯುತ್ತಿವೆಯೆಂಬುದನ್ನು ನಾವು ಲಕ್ಷಿಸಬೇಕು, ಪಂಡಿತಜಿಯವರು, ಕೆಲವು ದಿವಸಗಳಲ್ಲಿ ಮುಂಬಾಯಿಗೆ ಬರುವಾಗ ಮರಾಠ ಧುರೀಣರೊಡನೆ ಮಾತನಾಡಲಿರುವರು, ಲಾಲಾ ಲಜಪತರಾಯರವರು ಈ ಐಕ್ಯಕ್ಕಾಗಿ ಪ್ರಯತ್ನಮಾಡಬಹುದು, ಈ ಐಕ್ಯದ ಪ್ರಯತ್ನಗಳಿಂದ ಸ್ವರಾಜ್ಯಪಕ್ಷವು ಯಾವ ಸ್ಥಿತಿಯಲ್ಲಿ ಹೊರಗೆ ಬರಬಹುದೆಂಬುದನ್ನೂ ನಾವು ನೋಡಲಿದೆ. ರಿಸ್ಪೊನ್ಸಿವ್ ಕೊಒಪರೇಶನಿನ ಮಾನಸಿಕತೆಗೂ, ಸ್ವರಾಜ್ಯ ಪಕ್ಷದ ಮೂಲ ಮಾನಸಿಕತೆಗೂ ಬಹಳ ಅಂತರವಿದೆಯೆಂದೂ, ಸ್ವರಾಜ್ಯಪಕ್ಷದ ಮಾನಸಿಕತೆಯನ್ನು ಬದಲಾಯಿಸುವಷ್ಟು ಕಾರ್ಯಕಾರಿಯಾದ ಯಾವ ರಾಜಕೀಯ ಘಟನೆಯೂ ಹಿಂದೀ ರಾಜಕೀಯ ಕ್ಷೇತ್ರದಲ್ಲಿ ನಡೆದಿಲ್ಲವೆಂದೂ ನಮಗೆಂತೂ ಅನ್ನಿಸುತ್ತಿದೆ.

ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಹಿಂದೀಯ ಧುರೀಣರು ಒಟ್ಟಾಗಿ, ಸರಕಾರವನ್ನು ಬಗ್ಗಿಸಲು ಇನ್ನಾವ ತರದಲ್ಲಿ ಕಾರ್ಯಗಳನ್ನೆಸಬಹುದೆಂದು ಚಿಂತಿಸಬೇಕಿತ್ತು. ಸರಕಾರದ ತಿರಸ್ಕಾರಗಳೊಡನೆ, ಧುರೀಣರ ಮಂದತೆಯು ರಾಜಕೀಯ ಆಶಯಗಳನ್ನು ಹೊಂದುವಂತಹುದುದಾಗಿರುವುದಿಲ್ಲ. ಅದರಿಂದ ಒಬ್ಬಿಬ್ಬರಿಗೆ ಸರಕಾರೀ ಅಧಿಕಾರಗಳು ಸಿಕ್ಕಬಹುದು. ಅಷ್ಟೆ. ಅದರಲ್ಲಿಯೂ ನಿಜವಾದ ದೇಶಪ್ರೇಮಿಗೆ, ನಿರ್ದಾಕ್ಷಿಣ್ಯನಾದ ಧುರೀಣನಿಗೆ ಈ ಅಧಿಕಾರಗಳು ಸಿಕ್ಕುವುದಿಲ್ಲ; ಸಿಕ್ಕಿದರೆ ಅವುಗಳ ಸುತ್ತು ಅನೇಕ ತಡೆಗಳಿದ್ದು, ಅವನನ್ನು ಒಲಿಸುವ ಉದ್ದೇಶದಿಂದ ಮಾತ್ರ ಕೊಡಲ್ಪಡುತ್ತಿವೆ.

ಸಂಪೂರ್ಣ ಅಸಹಕಾರವು ಪರಾಜಯಹೊಂದಿತು; ನಿರಂತರ ನಿರೋಧದ ಧೋರಣವೂ ಕಾರ್ಯಕಾರಿಯಾಗಿಲ್ಲವೆಂಬುದನ್ನು ನಾವು ಒಪ್ಪುವೆವು. ಆದರೆ ಸಹಕಾರವು ಕಾರ್ಯಕಾರಿಯಾಗಿದೆಯೋ? ರಿಸ್ಪೊನ್ಸಿವ್ ಕೊ-ಒಪರೇಶನಿಗೆ ತಕ್ಕುದಾದ ಸರಕಾರಿ ವಾತಾವರಣವಿದೆಯೆ? ಹಿಂದೀ ಆಶಯಗಳನ್ನು ಹೊಂದಬಲ್ಲ ಮತ್ತಾವ ಉಪಯುಕ್ತ ಕಾರ್ಯಕ್ರಮವಿದೆ? ಈ ಎಲ್ಲಾ ಪರಾಜಯಗಳಿಗಿಂತ ನಿರಂತನಿರೋಧದ ಪರಾಜಯವೇ ನಮಗೆ ಗೌರವಸಹಿತವಾದುದಾಗಿದೆ. ಎಂದು ನಮ್ಮ ಅಭಿಪ್ರಾಯವಿದೆ, ಮತ್ತು ಕಾಲಕ್ರಮದಲ್ಲಿ ಜನತೆಯ ಮತಗಳನ್ನು ಪುಷ್ಟೀಕರಿಸಬಲ್ಲೆವಾದರೆ ಅದು ಕಾರ್ಯಕಾರಿಯಾಗಲೂಬಹುದೆಂಬ ಭರವಸೆಯಿಂದ ನಾವು ಉದಾರಮತವನ್ನು ಪೂರ್ಣವಾಗಿ ಕಾರ್ಯಕ್ಷೇತ್ರದಲ್ಲಿ ಪರಿಶೀಲಿಸಿರುವೆವು; ಅದು ಎಂದೂ ಕಾರ್ಯಕಾರಿಯಾಗಿಲ್ಲ. ಆದರೆ ನಿರಂತರ ನಿರೋಧಕ್ಕೆ ಸಾಕಷ್ಟು ಬೆಂಬಲ ಸಿಕ್ಕಿಲ್ಲ. ಸಿಕ್ಕಿದರೆ ಕಾರ್ಯಕಾರಿಯಾಗಬಹುದು.

ಹೇಗೂ ಈಗ ಹಿಂದೀಯ ರಾಜಕೀಯ ಕ್ಷೇತ್ರದಲ್ಲಿ ನಡೆಯುವ ಈ ಶಬ್ದಗಳ ಹೋರಾಟವು ಧುರೀಣರಿಗೆ ಭೂಷಣವಾದುದಲ್ಲವೆಂದು ಎಲ್ಲರೂ ಒಪ್ಪುವರು. ಅದರಲ್ಲಿಯೂ ಹಿಂದೂಸ್ಥಾನದ ಈ ಅತೀವ ಕಷ್ಟದ ಮತ್ತು ಅವಮಾನದ ಸ್ಥಿತಿಯಲ್ಲೂ, ಅದು ಸಹನೀಯವೇ ಅಲ್ಲವೆನ್ನಬೇಕಾಗುತ್ತದೆ. ಪಂಡಿತ ಮೋತಿಲಾಲ ನೆಹರುರವರು ಈ ಯುದ್ಧವನ್ನು ಪ್ರಾರಂಭಿಸಿದರು. ಆದರೆ ಅವರದನ್ನು ಆಖೈರಿಪಡಿಸಬಲ್ಲರೊ ಎಂದೂ ನಾವು ಅತ್ಯುತ್ಸುಕರಾಗಿ ನಿರೀಕ್ಷಿಸುವೆವು. ಲಾಲಾಜಿಯವರು ಇದಕ್ಕಾಗಿ ತಮ್ಮ ಲೇಖನಿಯಿಂದ ಮಾತ್ರವಲ್ಲದೆ ದೈಹಿಕ ಪರಿಶ್ರಮದಿಂದಲೂ ಪ್ರಯತ್ನಿಸುವರಾಗಿ ಆಶಿಸುವೆವು.

ಹಿಂದೀಯ ರಾಜಕೀಯ ಧುರೀಣರಿಗೆ, ಸ್ವರಾಜ್ಯಪಕ್ಷದ ಈಗಿನ ಕಾರ್ಯಕ್ರಮ, ಇಲ್ಲವೆ ಅದರ ಧ್ಯೇಯಕ್ಕನುಗುಣವಾಗಿ ಅದರ ಧೋರಣಕ್ಕನುಗುಣವಾಗಿ, ಕಾರ್ಯಕ್ರಮದೊಳಗಿನ ಬದಲಾವಣೆ ಮತ್ತು ಉದಾರಪಕ್ಷದ ಕಾರ್ಯಕ್ರಮ ಇವೆರಡರಲ್ಲಿ ಒಂದು ಸ್ವೀಕರಿಸುವುದರ ವಿಷಯವಾಗಿ ಚಿಂತಿಸಲಿದೆಯಲ್ಲದೆ ಮೂರನೆಯ ಕಾರ್ಯಕ್ರಮವೊಂದು ಪ್ರತ್ಯೇಕವಾಗಿ ಮಾಡಬಹುದೆಂದು ನಮಗೆ ತೋರುವುದಿಲ್ಲ' ಕಲ್ಪಿತ ಭೇದಗಳಿಂದ ಅನೇಕ ಪಕ್ಷಗಳನ್ನು ಕಟ್ಟಿ ಪಕ್ಷಗಳ ಬಲವನ್ನು ತಗ್ಗಿಸುವುದಕ್ಕಿಂತ, ಇದ್ದುದನ್ನು ಒಪ್ಪಿ, ಇದ್ದ ಪಕ್ಷಗಳಲ್ಲೊಂದನ್ನು ಆರಿಸಿ ಧುರೀಣರು ಕಾರ್ಯತತ್ಪರರಾಗುವುದು, ಅವರ ವೈಯಕ್ತಿಕ ಗೌರವಕ್ಕೆ ಅನುಕೂಲವಾಗದಿದ್ದರೂ ದೇಶಕ್ಕೆ ಹಿತಾವಹವಾಗಿದೆ.

ವಿದೇಶ ವರ್ತಮಾನ.

—ಪೆರಿಸಿನಲ್ಲಿ ಅದ್ಭುತ ಸುಂಟರ ಗಾಳಿಯು ಬೆಸೆಯಿಂದ ಅನೇಕ ಮನೆಮಾರು ತೋಟಗಳು ಬಿದ್ದಿರುವವು. ಬಿರುಗಾಳಿಯ ರಭಸದಿಂದ ಆಕಾಶದಲ್ಲಿ ಹಾರುವ ಮೂರು ವಿಮಾನಗಳು ಮುಂದುಬಿದ್ದಿರುವವಂತೆ. ಇದೂ ಅಲ್ಲದೆ ಅನೇಕ ಮಂದಿ ಗಾಯಪಟ್ಟಿರುವರು ಮತ್ತು ಮೂರು ಮಂದಿ ಕೊಲ್ಲಲ್ಪಟ್ಟಿರುವರು.

—ವೆಂಬ್ಲಿಯಲ್ಲಿರುವ ವಸ್ತುಪ್ರದರ್ಶನಶಾಲೆಯನ್ನು ಬಹಿರಂಗವಾಗಿ ವಿಲಂಹಾಕುವರು.

—ಇಂಗ್ಲೆಂಡಿನ ಮುಖ್ಯ ಮಂತ್ರಿಯವರು ಕುವರಿ ಸಮೇತ ಮೋಟಾರು ಕಾರಿನಲ್ಲಿ ಲಂಡನಿಗೆ ಪಯಣಮಾಡುತ್ತಿರುವಾಗ್ಗೆ ಮೋಟಾರು ಒಂದು ಗಾಡಿಗೆ ತಗಲಿತು. ಮೋಟಾರಿನಲ್ಲಿ ಕೂತವರಿಗೆ ಅಪಾಯವೇನೂ ಸಂಭವಿಸಲಿಲ್ಲ.

—ಅಮೇರಿಕಾ ಸಂಸ್ಥಾನದ ರೈತರಲ್ಲಿ ೫,೫೦,೦೦೦ ಮಂದಿ ತಂತಿ ಇಲ್ಲದೆ ವರ್ತಮಾನಗಳನ್ನು ತರಿಸಿಕೊಳ್ಳುವ ಯಂತ್ರಗಳನ್ನುಪಯೋಗಿಸುತ್ತಿದ್ದಾರೆ.

—ಚೀನಾ ದೇಶದ ಸಿಂಗಪೂನಲ್ಲಿ ೪ ಸಾವಿರ ರಷ್ಯಾ ದೇಶೀಯರ ಕೊಲೆಯಾಯಿತೆಂದು ಸುದ್ದಿ.

ಚೀನಾ ದೇಶದಲ್ಲಿ ಸ್ವಯುದ್ಧ ಕಲಹವು ನಿಂತಿತು. ಬೋಲ್‌ಶೆವಿಕರ ವರ್ಚಸ್ಸು ವೃದ್ಧಿಹೊಂದುತ್ತಲಿದೆ.

ಒಳದೇಶ ವರ್ತಮಾನ.

—ಎಸ್. ಎಸ್. ಎಲ್. ಸಿ. ಪರೀಕ್ಷೆಯೂ, ದೇಶಭಾಷೆಗಳೂ ವಿದ್ಯಾಮಂತ್ರಿಗಳು ಮಾಡಿದ ಹೊಸ ಬದಲಾವಣೆ—ಸೆಕೆಂಡರಿ ಎಜ್ಯುಕೇಶನ್ ಬೋರ್ಡಿನವರೂ, ಎಕೆಡೆಮಿಕ್ ಕೌನ್ಸಿಲಿನವರೂ, ಎಫಿಲಿಯೇಟೆಡ್ ಕೊಲೆಜುಗಳ ಕೌನ್ಸಿಲಿನವರೂ ಕೊಟ್ಟ ಅನುಭವಕ್ಕನುಸಾರವಾಗಿ ವಿದ್ಯಾ ಇಲಾಖಾ ಮಂತ್ರಿಯವರು ಸೆಕೆಂಡರಿ ವಿದ್ಯಾಭ್ಯಾಸವನ್ನು ದೇಶಭಾಷೆಗಳಲ್ಲಿಯೇ ಕೊಡುವುದರ ವಿಷಯ ಈ ಕೆಳಗಿನ ರೀತಿಯಲ್ಲಿ ಅಪ್ಪಣೆಕೊಟ್ಟಿರುತ್ತಾರೆ. ಸೆಕೆಂಡರಿ ಶಾಲೆಗಳ ವಿದ್ಯಾಭ್ಯಾಸವನ್ನು ನಾಲ್ಕನೇ, ಐದನೇ ಮತ್ತು ಆರನೇ ಫೋರ್ಮುಗಳಲ್ಲಿ ದೇಶಭಾಷೆಗಳಲ್ಲಿಯಾಗಲೀ ಇಂಗ್ಲಿಷಿನಲ್ಲಿಯೂ ಕೊಡಬಹುದು. ಎಲ್ಲಾ ಪಾಠಗಳನ್ನು (ಇಂಗ್ಲೀಷು ಸಹ) ಕಲಿಸುವ ಪೀರಿಯಡಿನ ಅರ್ಧಭಾಗವನ್ನು ದೇಶಭಾಷೆಯಲ್ಲಿ ಕಲಿಸುವುದಕ್ಕೂ ಅರ್ಧಭಾಗವನ್ನು ಇಂಗ್ಲಿಷ ಭಾಷೆಯಲ್ಲಿ ಕಲಿಸುವುದಕ್ಕೂ ಉಪಯೋಗಿಸಬೇಕು. ಇನ್ನು ಮುಂದಿನ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಎಲ್ಲಾ ಸವಾಲುಗಳು (ಇಂಗ್ಲಿಷ್, ಲೆಟಿನ್, ಗ್ರೀಕ್, ಹಿಬ್ರೂ ಫ್ರೆಂಚ, ಜರ್ಮನ್ ಭಾಷೆಗಳ ಹೊರ್ತು ದೇಶಭಾಷೆಯಲ್ಲಿಯೂ, ಇಂಗ್ಲಿಷಿನಲ್ಲಿಯೂ ತಯಾರಿಸಲ್ಪಡುವವು. ಸಂಸ್ಕೃತ ಮತ್ತು ದೇಶಭಾಷೆಯ ಸವಾಲುಗಳನ್ನು ಇಂಗ್ಲಿಷಿನಲ್ಲಿ ತಯಾರಿಸದೆ ದೇಶಭಾಷೆಯಲ್ಲಿಯೇ ತಯಾರಿಸಲ್ಪಡುವವು. ಅರಬಿ ಮತ್ತು ಪರ್ಶಿಯನ್ ಭಾಷೆಯನ್ನು ಕಲಿಯುವರಿಗೆ ಉರ್ದು ಭಾಷೆಯಲ್ಲಿ ಸವಾಲುಪತ್ರಗಳು ತಯಾರಿಸಲ್ಪಡುವವು. ಹುಡುಗರು ತಮ್ಮ ವಿದ್ಯಾಭ್ಯಾಸವನ್ನು ದೇಶಭಾಷೆಯಲ್ಲಿ ಪಡೆದರೆ ಮಾತ್ರವೇ ಅಂಥಾ ಹುಡುಗರು ದೇಶಭಾಷೆಯಲ್ಲಿ ಉತ್ತರವನ್ನು ಬರಿಯಬಹುದು, ಇಲ್ಲವಾದರೆ ಕೂಡದು. ಅದುದರಿಂದ ಪ್ರತಿ ಒಂದು ಸೆಕೆಂಡರಿ ಶಾಲಾ ಅಧಿಕಾರಿಗಳು ಎಸ್. ಎಸ್. ಎಲ್. ಸಿ. ಪರೀಕ್ಷೆ ಬೋರ್ಡಿನವರಿಗೆ ಪ್ರತಿ ವರ್ಷದ ದಶಂಬರ ಒಂದನೇ ತಾರೀಕಿನೊಳಗೆ ತಮ್ಮ ತಮ್ಮ ಶಾಲೆಗಳಿಂದ ಎಷ್ಟೆಷ್ಟು ಹುಡುಗರು ಯಾವಯಾವ ಭಾಷೆಯಲ್ಲಿ ಬಂಲೆಕ್ಷೆಗೆ ಉತ್ತರ ಬರಿಯಲು ಕೂತಕೊಳ್ಳುವರು ಎಂದು ತಿಳಿಸಬೇಕಾಗಿದೆ. ಹೀಗೆ ಬರೆದರೆ ಸವಾಲುಪತ್ರಗಳನ್ನು ತಯಾರಿಸಲು ಸುಲಭವಾಗುವುದು.

—ಹಿಂದೂ ಮತಸಂಸ್ಥೆಗಳ ಆಕ್ಟಿನಲ್ಲಿ ತಿದ್ದುಪಡಿ—ಹೊಸತಾಗಿ ಜಾರಿಗೆ ಬಂದ ಹಿಂದೂ ಮತಸಂಸ್ಥೆಗಳ ಆಕ್ಟಿನಲ್ಲಿ ಅನೇಕ ಕುಂದುಕೊರತೆಗಳಿರುವುದರಿಂದ ಅವುಗಳನ್ನು ಸರಿಪಡಿಸಲಿಕ್ಕೆ ಸಿ. ಎನ್. ವೆಂಕಟ್ರಮಣ ಅಯ್ಯಂಗಾರರು ಈ ಸಂಸ್ಥೆಗಳ ವಿಷಯ ತಿದ್ದುಪಡಿಯ ಬಿಲನ್ನು ಬರುವ ಲೆಜಿಸ್ಲೇಟಿವ್ ಕೌನ್ಸಿಲಿನ ಮುಂದೆ ತರುವರು. (೧) ನೂರು ವರ್ಷಕ್ಕಿಂತ ಮುಂಚೆ ಸ್ಥಾಪಿಸಲ್ಪಟ್ಟ ಮಠಗಳಿಗೂ ಐವತ್ತು ವರ್ಷಗಳಿಗಿಂತ ಮೊದಲು ಸ್ಥಾಪಿಸಲ್ಪಟ್ಟ ದೇವಸ್ಥಾನಗಳಿಗೂ ಈ ಆಕ್ಟನ್ನು ಲಗಾವುಮಾಡಕೂಡದು. ಅಂಥಾ ಅಗತ್ಯವಿದ್ದಲ್ಲಿ ನ್ಯಾಯವಿಧಾಯಕ ಸಭೆಯ ಅನುಮತಿಯನ್ನು ಪಡೆದು ಆಕ್ಟನ್ನು ಲಗಾವುಮಾಡಬೇಕು. (೨) ಈ ಆಕ್ಟ ಆಗುವ ಮೊದಲು ಕೆಲವು ದೇವಸ್ಥಾನಗಳ ಆಡಳಿತೆಗಾಗಿ ಕೋರ್ಟಿನವರು ಚನ್ನಾಗಿ ಆಲೋಚಿಸಿ ಮಾಡಿದ ಸ್ಕೀಮುಗಳನ್ನು ತಿದ್ದುಪಡಿಮಾಡಲು ಎಂಡೌಮೆಂಟ ಬೋರ್ಡಿಗೆ ಅಧಿಕಾರವಿರಕೂಡದು. ಅಂಥಾ ಅಧಿಕಾರವು ಕೋರ್ಟಿನವರಿಗೆನೇ ಇರಬೇಕು.

—ಮುಂಬಯಿ ಪ್ರಾಂತದ ಹಿಂದೂ ಮಹಾಸಭೆಯು ಬರುವ ತಾ. ೫ರಿಂದ ೭ರ ವರೆಗೆ ಶ್ರೀಯುತ ಲಾಲಾಲಜಪತ್ ರೈಗಳವರ ಅಧ್ಯಕ್ಷತೆಯಲ್ಲಿ ಜರಗುವುದು.

—ಮುಂಬಯಿಯಲ್ಲಿ ಗಿರಣಿ ಕೂಲಿಕಾರರ ಮುಷ್ಕರವು ಇನ್ನೂ ನಿಂತಿಲ್ಲ. ಕೂಲಿಯವರ ಮಜೂರಿಯಲ್ಲಿ ಸೇಕಡ ೧೧॥ ರೂಪಾಯಿ ಪ್ರಕಾರ ಕಡಿಮೆಮಾಡಬೇಕೆಂದು ಗಿರಣಿಮಾಲಿಕರು ನಿರ್ಣಯಿಸಿರುವರು. ಮಜೂರಿ ಕಡಿಮೆಯಾದರೂ ಐದಾರು ಸಾವಿರ ಜನರು ಕೆಲಸಕ್ಕೆ ಸೇರಲು ತಯಾರಿರುವರು. ಮುಷ್ಕರವನ್ನು ಮುಂದರಿಸುವ ಬಗ್ಗೆ ಮುಂಬಯಿ ಕೊರ್ಪರೇಶನ್ ಮತ್ತು ಇಂಟರ್ ನೇಶನಲ್ ಟ್ರೇಡ್ ಕೊಂಗ್ರೆಸಿನವರು ಸಹಾಯ ಮಾಡಿರುವರು.

—ಸ್ವಾಮಿಶ್ರದ್ಧಾನಂದರು ಮಲಬಾರಿನ ಸಂಚಾರವನ್ನು ಮುಗಿಸಿ ಆಂಧ್ರದೇಶಕ್ಕೆ ಹೋಗಿ ಎಲ್ಲೂರಿನ ಬಳಿ ಕೊಡಾಲ ಎಂಬ ಕಮ್ಮಜಾತಿ ಜನರ ಗ್ರಾಮದಲ್ಲಿ ೫೦೦ ಜನ ಪಂಚಮ ಕ್ರೈಸ್ತರನ್ನು ಹೋಮ, ಮಂತ್ರಘೋಷ, ಗಾಯತ್ರಿ ಮೊದಲಾದ ವೈದಿಕ ಕರ್ಮಗಳಿಂದ ಶುದ್ಧೀಕರಿಸಿ ಪುನಃ ಹಿಂದೂ ಮತಕ್ಕೆ ಸೇರಿಸಿಕೊಂಡಿರುವರು.

—ಶ್ರೀಮತಿ ಸರೋಜಿನಿ ನಾಯಡುರವರ ಮಕ್ಕಳಲ್ಲಿ ಒಬ್ಬರು ತನ್ನ ಮಾತೆಯ ಅನುಮತಿ ಬೇಡಿಗೆ ಮಹಮ್ಮದೀಯ ಮತವನ್ನು ಅವಲಂಬಿಸಿದವರು ಎಂದು ಕೆಲವು ವರ್ತಮಾನಪತ್ರಿಕೆಗಳು ಪ್ರಕಟಿಸಿದ್ದವು. ಈ ವಾರ್ತೆಯು ತೀರಾ ಸುಳ್ಳೆಂದೂ ಮತ್ತು ತನ್ನ ಮಗನು ಮಹಮ್ಮದೀಯ ಗ್ರಂಥಗಳನ್ನು ಓದುತ್ತಿದ್ದರೂ ಅವನು ಎಂದೂ ಮಹಮ್ಮದೀಯ ಮತಕ್ಕೆ ಸೇರುವ ಆಲೋಚನೆಯನ್ನು ಸಹ ಮಾಡಿಲ್ಲ ಎಂದು ಶ್ರೀಮತಿ ಸರೋಜಿನಿಯವರು ಪ್ರಕಟಿಸಿದ್ದಾರೆ.

—ದಕ್ಷಿಣ ಆಫ್ರಿಕದಲ್ಲಿರುವ ಹಿಂದೀಯರ ಪರಿಸ್ಥಿತಿಯನ್ನು ತಿಳಿದು ಬರಲು ಹಿಂದುದೇಶದ ಸರಕಾರದವರು ನೇಮಿಸಿದ ಪ್ರತಿನಿಧಿಗಳು ಕಳೆದ ತಾ. ೨೫ರಲ್ಲಿ ಮುಂಬಯಿಯಿಂದ ಹೊರಟುಹೋಗಿರುವರು.

—ಬಳ್ಳಾರಿ ನಗರದಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಸಭೆಯು ಕಳೆದ ವಾರ ಜರಗಿತು. ಕರ್ನಾಟಕ ಸಂಸ್ಕೃತಿಯ, ಕರ್ನಾಟಕ ಭಾಷೆಯ ವೃದ್ಧಿ ಮತ್ತು ವೈಶಿಷ್ಟ್ಯದ ಸಂರಕ್ಷಣೆಗೆ ಮುಖ್ಯವಾಗಿ ಕರ್ನಾಟಕಕ್ಕೆ ವಿಶ್ವವಿದ್ಯಾಲಯವಾಗಬೇಕು ಎಂಬೀ ವಿಷಯಗಳನ್ನು ಲಕ್ಷ್ಯಕ್ಕೆ ತಂದು ಪುರೋಭಿವೃದ್ಧಿಮಾಡಬೇಕೆಂದು ನಿರ್ಣಯಿಸಿದ್ದು ಸ್ತೋತ್ರಾರ್ಹವಾದ ಸಂಗತಿ.

—ಕೌನ್ಸಿಲ್ ಒಫ್ ಸ್ಟೇಟ್ ಚುನಾವಣೆಯಲ್ಲಿ ಸ್ವರಾಜ್ಯಪಕ್ಷೀಯರೇ ಎಲ್ಲಾ ಕಡೆಗಳಲ್ಲಿ ವಿಜಯಿಗಳಾಗಿರುವರು.

—ಇಂಡಿಯಾ ಸರಕಾರದವರು ೨೫೦ ಲಕ್ಷ ರೂಪಾಯಿಗಳ್ನು ವಿನಿಯೋಗಿಸಿ ಖೈಬರ್ ಕಣಿವೆಯಲ್ಲಿ ೨೬ ಮೈಲುಗಳ ವರೆಗೆ ರೈಲ್ವೆಯನ್ನು ಹಾಕಿರುವರು. ಹೀಗೆ ವೆಚ್ಚಮಾಡಿದ ಹಣದಿಂದ ಸರಕಾರಕ್ಕೆ ಒಂದು ಕಾಸಾದರೂ ಉತ್ಪತ್ತಿಯಾಗುವಂತಿಲ್ಲ.

—ಮಲಯ ಪ್ರಾಂತದ ಸಿಂಗಪುರ್‌ನಲ್ಲಿ ಪ್ರಚಂಡವಾದ ನೆರೆಯ ಹಾವಳಿಯಿಂದ ಅನೇಕ ರಬ್ಬರ್ ತೋಟಗಳು ನಾಶವಾಗಿರುವುವು. ಮಾತ್ರವಲ್ಲದೆ ಅನೇಕ ತೋಟಗಳು ನೀರಡಿಯಲ್ಲಿ ಇವೆ.

—ಒರಿಸ್ಸಾ ಪ್ರಾಂತದಲ್ಲಿ ಸುಮಾರು ೫೦೦ ಚದರ ಮೈಲು ವಿಸ್ತಾರವಾದ ಪ್ರದೇಶದಲ್ಲಿರುವ ೨೦೦ ಗ್ರಾಮಗಳಲ್ಲಿ ಕ್ಷಾಮವು ಬಂದಿದ್ದರಿಂದ ಜನರು ಗಡ್ಡೆಗೆಣಸುಗಳಿಂದ ಜೀವನಮಾಡುತ್ತಾ, ಸಿಡುಬು ವಾಂತಿಭೇದಿ ಮತ್ತು ಮಲೇರಿಯಾ ರೋಗಗಳಿಗೆ ಗುರಿಯಾಗುತ್ತಿರುವರು. ಇವರಿಗೆ ಸಹಾಯ ಮಾಡಬೇಕೆಂದು ಶ್ರೀಯುತ ಲಜಪತ್ ರೈಗಳವರು ವಿಜ್ಞಾಪಿಸಿಕೊಂಡಿರುತ್ತಾರೆ.

—ರಂಗೂನಿನ ಒಂದು ಜೈಲಿನಲ್ಲಿ ಆಶ್ಚರ್ಯಕರವಾದ ಅನಾಹುತವು ಸಂಭವಿಸಿರುವುದು. ಕೈದಿಗಳನ್ನು ಸ್ನಾನಕ್ಕೆಂದು ಹೊರಕ್ಕೆ ತಂದಾಗ ಅವರು ತಮ್ಮನ್ನು ಕಾಯುವ ಸಿಪಾಯಿಗಳವರ ಆಯುಧಗಳನ್ನು ಕಸಿದು ಇಬ್ಬರನ್ನು ಕೊಂದು, ಉನ್ಮತ್ತರಾಗಿ ಜೈಲಿನೊಳಗೆ ಇರುವ ಅನೇಕ ಮಂದಿ ಸಿಪಾಯಿಗಳನ್ನು ಗಾಯಪಡಿಸಿದರು ಜೈಲಿನೊಳಗೆ ಸಂಭವಿಸಿರುವ ಅನಾಹುತವನ್ನು ಶಾಂತತೆಗೆ ತರಲು ಅಧಿಕಾರಿಗಳಿಗೆ ಸಾಕೊಸಾಕಾಯಿತು.

—ವಿಲ್ಲಫರ್ಡ ಕಿಂಗ್ ಎಂಬೊಬ್ಬ ವ್ಯಕ್ತಿಯು ಕೊಕೈನ್ ಎಂಬ ಮಾದಕ ವಸ್ತುವನ್ನು ಗುಟ್ಟಾಗಿ ಮುಂಬಯಿಯಲ್ಲಿ ಮಾರಿದನೆಂಬ ತಕ್ಷೀರಿನ ಮೇಲೆ ದಸ್ತಗಿರಿ ಮಾಡಲ್ಪಟ್ಟನು. ನವಲಕರ್ ಎಂಬೊಬ್ಬ ಅಬ್ಕಾರಿ ಇನ್ಸ್‌ಪೆಕ್ಟರನು ಸಾಧಾರಣ ವ್ಯಾಪಾರಿಯಂತೆ ನಟಿಸಿ ಈ ಕಿಂಗ್ ಎಂಬವನ ಕೂಡೆ ರೂ. ೫೮೦೦೦ ವ್ಯಾಪಾರಮಾಡಿ ಅತನನ್ನು ಕೈದು ಮಾಡಿಸುವುದರಲ್ಲಿ ಬಹಳ ಸಾಹಸಪಟ್ಟಿರವನಂತೆ. ಮುಂಬಯಿಯ ಹೈಕೋರ್ಟಿನಲ್ಲಿ ಇದರ ವಿಚಾರಣೆಯು ನಡೆದು ಅಪಾದಿನನ್ನು ೯ ತಿಂಗಳ ಸಜೆ ಮತ್ತು ೧೦೦೦ ರೂಪಾಯಿ ಜುಲುಮಾನೆಗೆ ಗುರಿಮಾಡಿರುವರು.

—ಬಿಸೆಂಟಮ್ಮನವರ ಕೋಮನ್‌ವೆಲ್ತ್ ಬಿಲು ಈಗಿನ ಪಾರ್ಲಿಮೆಂಟಿನ ಅಧಿವೇಶನದಲ್ಲಿ ಚರ್ಚಿಸಲ್ಪಡದಿದ್ದರೂ ಇನ್ನೊಂದು ಅಧಿವೇಶನದಲ್ಲಿ ತರಲ್ಪಡುವುದೆಂದು ಆನಿ ಬಿಸೆಂಟರ ಹೇಳಿಕೆ.

—ಪಂಡಿತ ಮೋತಿಲಾಲ ನೇಹರುರವರ ಪ್ರಯಾಣದ ಪ್ರೋಗ್ರಾಮನ್ನು ಸ್ವಲ್ಪ ಮಟ್ಟಿಗೆ ಬದಲಾಯಿಸಿರುವುದು. ತಾ. ೧೪ಕ್ಕೆ ಇವರು ಮುಂಬಾಯಿಗೆ ಬಂದು ಅಲ್ಲಿ ಅದೇ ದಿವಸ ಶ್ರೀ। ಕೇಳಕರರಿಗೂ ಶ್ರೀ। ಜಯಕರರಿಗೂ ಸರೋಜಿನಿ ದೇವಿಯವರಿಗೂ ಮತ್ತು ಇತರ ಮುಖಂಡರಿಗೂ ಕೂಡ ಭೇಟಿಯನ್ನು ಕೊಡುವರು. ಮಂಗಳವಾರ ರಾತ್ರೆ ಮುಂಬಾಯಿಯಿಂದ ಸಬರ್ಮತಿ ಆಶ್ರಮಕ್ಕೆ ಹೋಗಿ ಅಲ್ಲಿ ಬುಧವಾರ ಮತ್ತು ಬೃಹಸ್ಪತಿವಾರದ ವರೆಗೆ ಇದ್ದು ಮಹಾತ್ಮಾಜಿಯವರೊಡನೆ ಸ್ವರಾಜಿಸ್ಟರು ಹೇಗೆ ನಡಕೊಳ್ಳಬಹುದೆಂಬವರ ಕುರಿತು ವಿಚಾರಿಸಲಿಕ್ಕಿರುವರು. ತಾ. ೧೭ಕ್ಕೆ ಮೋತಿಲಾಲರು ಮುಂಬಾಯಿಗೆ ತಿರುಗಿ ಬಂದು ಅಲ್ಲಿ ಶ್ರೀ। ಕೇಳಕರರು, ಜಯಕರರು ಮತ್ತು ಮೂಂಜೆ ಮೊದಲಾದವರಿಂದ ಕೂಡಿದ ಕಡೆಯ ಕೊನ್ಪರೆನ್ಸಿಗೆ ಹೋಗಲಿಕ್ಕಿರುವರು ಮತ್ತು ಅಲ್ಲಿ ಅದೇ ದಿವಸ ಒಂದು ಭಾಷಣವನ್ನೂ ಕೊಡುವರು. ಪಂಡಿತಜಿಯವರು ತಾ ೫ರಿಂದ ಮಹಾರಾಷ್ಟ್ರದ ಪ್ರಾಂತ್ಯಗಳನ್ನು ಸಂದರ್ಶಿಸುವರು. ಇವರೊಡನೆ ಮದ್ರಾಸಿನ ಸತ್ಯಮೂರ್ತಿಯವರು ಸಹ ಹೋಗಲಿಕ್ಕಿರುವರು.

ಮಹಾತ್ಮಾಜಿಯವರ ಉಪವಾಸ ವ್ರತ.

ಆಶ್ರಮದಲ್ಲಿ ನಡೆದ ಯಾವದೋ ಒಂದು ಅಕೃತ್ಯಕ್ಕಾಗಿ ಗಾಂಧಿಗಳವರು ಒಂದೇ ಸವನೆ ಏಳು ದಿವಸಗಳ ಉಪವಾಸ ವ್ರತವನ್ನು ಕೈಕೊಂಡದ್ದು ಅವರಿಗೆ ನಿಯಮ ನೀತಿ ಮತ್ತು ಆಚಾರಗಳಲ್ಲಿರುವ ಶ್ರದ್ಧೆಯನ್ನು ಸೂಚಿಸುತ್ತಿವೆ. ಗಾಂಧಿಗಳ ಅನಶನ ವ್ರತವೆಂದರೆ ಘೋರವಾದದ್ದು. ಅವರು ಆ ದಿವಸಗಳಲ್ಲಿ ಬರೇ ಜಲಪಾನ ಮಾತ್ರ ಮಾಡುವರು. ಉಪವಾಸದಿಂದ ಶಕ್ತಿಯು ಕುಂದುತ್ತಿದ್ದರೂ ತನ್ನ ನಿತ್ಯದ ಕೆಲಸಗಳನ್ನು ಸಾಧ್ಯವಾದ ಮಟ್ಟಿಗೆ ತಕ್ಕ ರೀತಿಯಲ್ಲಿ ಮಾಡುವರು. ಈ ಉಪವಾಸ ವ್ರತವು ಸಣ್ಣದಾಗಿದ್ದರೂ ದಿಲ್ಲಿಯ ೨೧ ದಿವಸಗಳ ಉಪವಾಸವ್ರತವಷ್ಟೇ ಪರಿಶುದ್ಧತೆಯುಳ್ಳದೆಂದು ಮತ್ತು ಇದರಿಂದ ತನ್ನ ತ್ರಿಕರಣಗಳು ನಿರ್ಮಲವಾಗಿ ಆತ್ಮವು ಶುದ್ಧವಾಗುವುದೆಂದು ಅವರ ಹೇಳಿಕೆಯಾಗಿರುವುದು. ನವಂಬರ್ ತಾ. ೨೬ರ ವರೆಗೆ ಮಹಾತ್ಮಾಜಿಯವರ ೪ ದಿವಸದ ಉಪವಾಸವು ಅಂತ್ಯವಾಗಿರುವುದು. ಈ ಮೂರು ದಿವಸಗಳಲ್ಲಿ ಅವರು ಎಂದಿನಂತೆ ದಿನಕ್ಕೆ ಅರ್ಧ ಗಂಟೆ ನೂಲು ತೆಗೆದರು, ಪತ್ರವ್ಯವಹಾರ, ಮುಂತಾದ ಕೆಲಸಗಳನ್ನು ಸ್ವತಃ ಮಾಡಿಕೊಂಡು ಹೆಚ್ಚಿನ ಸಮಯ ಹಾಸಿಗೆಯಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದರು. ತಾ. ೨೮ಕ್ಕೆ ೫ ದಿವಸದ ಉಪವಾಸ ಕೊನೆಗಾಣಿತು. ದೇಹಬಲವು ಮಿತಿಮೀರಿ ಕಡಿಮೆಯಾಗಿ ಮಾತನಾಡಲೂ ಕೂಡ ಅಶಕ್ತರಾಗಿ ಹಾಸಿಗೆಯಲ್ಲಿಯೇ ಮಲಗಿದ್ದರು. ತಾ. ೩೦ರಲ್ಲಿ ಉಪವಾಸದ ಕಡೆಯ ದಿನವಾಗಿರುವುದು. ಈ ದಿವಸ ಅವರ ದೇಹಬಲವು ಮಿತಿಮೀರಿ ಕಡಿಮೆಯಾದರೂ, ಅಷ್ಟೊಂದು ಅಪಾಯವಿಲ್ಲದೆ ನಿಶ್ಚಿಂತರಾಗಿ ವಿಶ್ರಾಂತಿಪಡೆಯುತ್ತಿದ್ದರು. ತಾ. ೧ರಲ್ಲಿ ಬೆಳಗ್ಗೆ ೧೦ ಗಂಟೆಗೆ ದ್ರಾಕ್ಷೆರಸವನ್ನು ಪಾನಮಾಡಿ ಉಪವಾಸ ವ್ರತವನ್ನು ಅಂತ್ಯಗೊಳಿಸಿದ್ದು ಲೋಕ್ಕೆಲ್ಲಾ ಆನಂದಕರವಾದ ಸಂಗತಿಯು. ಈ ರೀತಿಯಲ್ಲಿ ಗಾಂಧಿಗಳು ಆಶ್ರಮದಲ್ಲಿ ನಡೆದ ಆ ಕಾರ್ಯಕ್ಕಾಗಿ ಮಾಡಿದ ಪರಿಹಾರ ವ್ರತವು ಇನ್ನು ಮುಂದೆ ಆಶ್ರಮದಲ್ಲಿ ದುರ್ವರ್ತನೆಗಳು ನಡೆಯದಂತೆ ಮಾಡುವುದು. ಮಹಾತ್ಮಾಜಿಯವರು ಒಳ್ಳೇ ದೇಹಸ್ಥಿತಿಯುಳ್ಳವರಲ್ಲ. ಅವರು ಉಪವಾಸ ವ್ರತ ಕೈಕೊಂಡ ಕೂಡಲೇ ದೇಶದ ಅನೇಕ ಮುಖಂಡರಿಗೆ ಉಪವಾಸ ವ್ರತದ ಪರಿಣಾಮವು ಏನಾಗುವುದೊ ಎಂದು ದಿಗಿಲುಪಟ್ಟು ಅವರನ್ನು ನೋಡಲಿಕ್ಕಾಗಿ ಗುಂಪುಗುಂಪಾಗಿ ಹೋಗುತ್ತಿದ್ದರು. ಗಾಂಧಿಜಿಗಳವರು ತನ್ನ ಉಪವಾಸ ವ್ರತದಿಂದ ಆರೋಗ್ಯ ಒಳ್ಳೇದಾಗಿರುವುದೆಂದೂ ಮತ್ತು ಕಡಿಮೆಯಾದ ದೇಹತೂಕವು ಹೆಚ್ಚಾಗುವುದೆಂದು ಪ್ರಕಟಿಸಿರುವರು.

ದಕ್ಷಿಣ ಕನ್ನಡ.

ಪುಂಜಾಲ[illegible] ... ವರುವಷವೂ ಅನೇಕ ಖೂನಿ [illegible] ... ಸುತ್ತಮುತ್ತಲೂ ಪ್ರತಿ ಒಂದು ಪೋಲಿಸ್ ಸ್ಟೇಶನ ಇರುವುದು ಅ[illegible] ... ಬೇಡ, ಪೋಲಿಸ್ ಸ್ಟೇಶನೇ ಅತೀ ಅಗತ್ಯವಾಗಿ ಇದೆ [illegible] ದ್ದರಿಂದ ಇಲ್ಲಿ [illegible]

ಬಂಟವಾಳ:—ಇಲ್ಲಿ ಮಿಷನಕೇರಿಯಲ್ಲಿ ಬದ್ಧ ಕಟ್ಟೆ [illegible] ಹತ್ತಿರ ತಾಲೂಕು ಬೋರ್ಡಿನ ಒಂದು ಬಾವಿ ಇದೆ. ಈ ಬಾವಿಯನ್ನು ತೋಡುವುದಕ್ಕಾಗಿ ಬಾವಿ ಇದ್ದ ಸ್ಥಳದ ಮಾಲಿಕರಿಗೂ ತಾಲೂಕು ಬೋರ್ಡಿಗೂ ವ್ಯಾಜ್ಯ ನಡೆದು ಎರಡೂ ಕಡೆಗೂ ಹೆಚ್ಚು ಹಣ ನಷ್ಟವಾಗಿಯದೆ. ಕಳೆದ ೧೯೨೨ನೇ ಇಸವಿಯ, ಬಂಟವಾಳ ಊರನ್ನು ನಾಶಮಾಡಿದ ನೆರೆಯು ಈ ಬಾವಿಯ ಆವರಣವನ್ನೂ ಕುಂದಗಳನ್ನೂ ಜಖಂಪಡಿಸಿಯದೆ, ಈಗ ೧೯೨೩ನೇ ಇಸವಿ ಅಂತ್ಯವಾಗುತ್ತಾ ಬಂತು. ಬಂಟವಾಳ ಊರಿನಲ್ಲಿಯೇ ಇಬ್ಬರು ತಾಲೂಕು ಬೋರ್ಡು ಮೆಂಬರರು ಇಲ್ಲಿಯೇ ಕಾಯಂ ವಾಸ್ತವ್ಯಮಾಡಿರುತ್ತಾರೆ. ಇವರಲ್ಲಿಯೂ ಒಬ್ಬರು ಬಂಟವಾಳ ಗ್ರಾಮಾಧಿಕಾರಿಗಳು ಇವರು ದಿನಾಲೂ ಎಂಬಂತೆ ಇದನ್ನು ನೋಡುತ್ತಿದ್ದಾರೆ. ಇದನ್ನು ದುರುಸ್ತಿಪಡಿಸಲಿಕ್ಕೆ ಸುಮಾರು ೨೫ ರೂ. ಬೇಕಾದೀತು. ಇವರು ಈ ಬಾವಿಯ ಸಂಗತಿಯನ್ನು ತಾಲೂಕು ಬೋರ್ಡಿನ ಮುಂದೆ ತರಬಾರದೆ? ಈ ಬಾವಿಯು ಇರುವ ಸ್ಥಳದಲ್ಲಿ ತಾಲೂಕು ಬೋರ್ಡಿನ ಗೌಡೌನವಿದೆ, ಇಲ್ಲಿ ದಿನಾಲೂ ನೂರಾರು ಗಾಡಿಗಳು ತಂಗುತ್ತವೆ. ಈ ಬಾವಿಯು ಅವರಿಗೆ ಅತೀ ಅಗತ್ಯವಾಗಿದೆ. ಆದುದರಿಂದ ಹಟಸಾಧನೆಯಿಂದ ಮಿಷನ ಮಾರ್ಕೆಟನ್ನು ಬದ್ಧ ಕಟ್ಟೆ ಸಂಕದ ಹತ್ತಿರದಿಂದ ಬಂಟವಾಳ ಮಧ್ಯಪೇಟೆಗೆ ತಂದಂತೆ, ಹಟಸಾಧನೆಮಾಡಿ ಈ ಬಾವಿಯನ್ನು ದುರುಸ್ತಿಪಡಿಸಬಾರದೆ?

ಇಲ್ಲಿಯ ಹೊಸಪೇಟೆಯ ಮಾರ್ಗದ ಎರಡು ಬದಿಗಳಲ್ಲಿ ಗಿಡಗಳು ಬೆಳೆದಿವೆ. ಇವುಗಳನ್ನು ತೆಗಿಸಲು ತಾಲೂಕು ಬೋರ್ಡಿನವರು ಸ್ವಲ್ಪ ಗಮನವನ್ನು ಕೊಡುವರೆ?

ಮಳೆಗಾಲವು ಹತ್ತಿರ ಬಂತು ಆಸ್ಪತ್ರೆಯ ಹಿತ್ತಿಲಿನಿಂದ ಬಂಗ್ಲೆಗುಡ್ಡೆಗೆ ಹೋಗಲಿಕ್ಕೆ ಸುಮಾರು ೨೦೦ ಅಡಿ ಉದ್ದ ಒಂದು ಮಾರ್ಗವನ್ನು ಮಾಡಿಸಬೇಕೆಂದು ಜಿಲ್ಲಾ ಕಲೆಕ್ಟರ ದೊರೆಗಳು ಖುದ್ದಾಗಿ ತನಿಖಿ ಮಾಡಿ ಅಗತ್ಯ ಮಾಡಿಸಬೇಕೆಂದು ಬರೆದ ಮಾರ್ಗವು ಇನ್ನೂ ಅದೆಷ್ಟು ಕಂಡುಬರುವುದಿಲ್ಲ.

ಪಳ್ಳಿಗುಡ್ಡೆಯ ಮೇಲೆ, ನೆರೆಬಂದ ಸಮಯ ಮಾಪಿಳ್ಳೆಯವರಿಗಾಗಿಯೂ ಪೊಲಿಸ್ ಶಿಬಂದಿಯ ಕುಟುಂಬದವರಿಗಾಗಿಯೂ ಉಳುಕೊಳ್ಳುವುದಕ್ಕೆ ಕಟ್ಟಿಸಿದ ಶೆಡ್ಡಿನ ಕಂಬಗಳಿಗೆ ಗೆದ್ದಲು ಹಿಡಿದು ಬೀಳಲಿಕ್ಕೆ ತಯಾರಾಗಿದೆ. ಈಗಲೇ ಅದನ್ನು ದುರುಸ್ತಿಮಾಡಿದರಾಗುತ್ತಿತ್ತಲ್ಲವೆ?

ನಾವೂರು:—ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯು ಈಗಿನ ಹೊಸ ಹೆಡ್‌ಮಾಸ್ತರರು ಬಂದಂದಿನಿಂದ ಒಳ್ಳೇ ರೀತಿಯಲ್ಲಿ ನಡಿಯುತ್ತವೆ. ಈ ಶಾಲೆಯನ್ನು ಇಲ್ಲಿ ತೆರೆಯಲೂ, ಕಟ್ಟೋಣ ಕಟ್ಟಿಸಲೂ ಸಾಹಸಪಟ್ಟ ಬಿ. ಮಂಜಪ್ಪ ಮಾಸ್ತರರಿಗೆ ಬಂಟವಾಳದಲ್ಲಿ ಹೊಸತಾಗಿ ತೆರದ ಬೋರ್ಡು ಎಲಿಮೆಂಟರಿ ಶಾಲೆಗೆ ವರ್ಗವಾದ ಮೇಲೆ ಈ ಶಾಲೆಯು ಬಿದ್ದು ಹೋಗುತ್ತದೊ ಎಂಬ ಸಂಶಯವಿತ್ತು. ಆದರೆ ಈಗಿನ ಹೆಡ್‌ಮಾಸ್ತರರು ಆಗಾಗ್ಗೆ ಮಂಗಳೂರಿಗೆ ಹೋಗಿ ಟ್ರೈನಿಂಗ್ ಶಾಲೆಯಿಂದ ಹೊಸ ಅನುಭವ ಪಡಿಯುತ್ತಾ ಶಾಲೆಯನ್ನು ಅಭಿವೃದ್ಧಿಗೆ ತರುತ್ತಿರುವುದು ತುಂಬಾ ಸಂತೋಷಕರವಾಗಿದೆ.

ಕಾರಿಂಜೆ:—ಇಲ್ಲಿಯ ಬೀದಿಯಲ್ಲಿ ರಾ| ಎಲ್ಲೂರು ಸಂಜೀವ ರಾಯರು ತಾಲೂಕು ಬೋರ್ಡು ಮೆಂಬರರಾದ ಸಮಯ ತೋಡಿಸಿದ ಒಂದು ಸರಕಾರಿ ಬಾವಿಯು ಇನ್ನೂ ಅರ್ಧದಲ್ಲಿಯೇ ಇದೆ. ಈಗಿನ ಮೆಂಬರರು ಅದರ ಕಡೆಗೆ ಸ್ವಲ್ಪ ಕಣ್ಣೆತ್ತಿ ನೋಡುವರೆ?

ಇಲ್ಲಿಯ ಪಾರ್ವತಿ ದೇವಸ್ಥಾನದ ಸುತ್ತಿನಲ್ಲಿ ಎಳಿಯುವ ರಥವನ್ನು ನಿಲ್ಲಿಸಲಿಕ್ಕೆ ಕೊಟ್ಟಿಗೆಯನ್ನು ಇಷ್ಟರ ವರೆಗೆ ಕಟ್ಟಿಸಿದ್ದಿಲ್ಲ. ಕೊಟ್ಟಿಗೆಯನ್ನು ಕಟ್ಟಿಸಲಿಕ್ಕೆ ಏನಾದರೂ ೧೦೦ ರೂಪಾಯಿ ಬೇಕಾದೀತು. ರಥವು ಮಳೆಗೆ ನೆನೆದು ಅಗ್ರಹಾರ ರಥವಂತೆಯೇ ಕುಂಬಾಗಿ ಹೋದರೆ ಇದನ್ನು ಕಟ್ಟಿಸಲಿಕ್ಕೆ ಸಾವಿರ ರೂಪಾಯಿ ಸಾಕಾಗಲಿಕ್ಕಿಲ್ಲ. ಈ ದೇವಸ್ಥಾನಕ್ಕೆ ಮುಂಚಿನ ಅರಸರು ಉಂಬಳಿ ಬಿಟ್ಟ ಭೂಮಿ ಇದೆ. ೪೮೦ ರೂ. ತಸದೀಕಿನ ರೂಪದಲ್ಲಿ ಸಿಕ್ಕುತ್ತದೆ. ಇನ್ನು ಹರಕೆ ಕಾಣಿಕೆಗಳು ಎಷ್ಟೊ ಬರುತ್ತಿವೆ. ಜಾತ್ರೆಯ ಸಮಯ ಎಷ್ಟೋ ಹಣ, ದಬ್ಬಿಗೆ ಬೀಳುತ್ತದೆ. ರಥದ ಪತಾಕೆಗಳು ಮೊಳ ಒಂದಕ್ಕೆ ಒಂದರಂತೆ ಇವೆ. ಚಂದ್ರಮಂಡಲವು ಹಾಳಾಗುತ್ತಾ ಬಂತು. ಈ ತರದ ಅವಸ್ಥೆಯು ಈ ದೇವಸ್ಥಾನಕ್ಕೆ ಬರಲು ಕಾರಣವೇನೆಂದು ತಿಳಿಯುವುದಿಲ್ಲ. ಪತಾಕೆಗಳಿಗಾಗಿ ಒಂದು ಟಾಕೆ ತೆಗೆದುಕೊಳ್ಳಲಿಕ್ಕೆ ಬಂಡಾರದಲ್ಲಿ ಹಣ ಇಲ್ಲವೆ. ಹಣವಿಲ್ಲದಿದ್ದರೆ ಭಜಕರಿಂದಲಾದರೂ ಬೇಡಿ ಬೇಕಾದಷ್ಟು ಪತಾಕೆಗಳನ್ನೂ ರಥದ ಕೊಟ್ಟಿಗೆಯನ್ನೂ ಕಟ್ಟಿಸಬಾರದೆ?

ನರಹರಿಪರ್ವತ:—ಇಲ್ಲಿಯ ನರಹರೇಶ್ವರ ದೇವಸ್ಥಾನದಲ್ಲಿ ಕಳೆದ ಅಮವಾಸೆಯ ದಿವಸ ದೀಪೋತ್ಸವವು ಬಹಳ ವಿಜೃಂಭಣೆಯಿಂದ ಜರಗಿತು. ಸುಮಾರು ಎರಡು ಸಾವಿರ ಜನರು ಈ ಉತ್ಸವಕ್ಕೆ ನೆರೆದಿದ್ದರು. ಸಭೆಯು ಅಗಲುವಾಗ ಮರುದಿನ ಒಂಭತ್ತು ಗಂಟೆಯಾಗಿದೆ.

ಬೆಳ್ತಂಗಡಿ:—ಬೆಳ್ತಂಗಡಿ ಸೆಂಟರಿನ ಉಪಾಧ್ಯಾಯರ ಸಂಘದ ವರ್ಧಂತಿ ಉತ್ಸವವು ಇದೇ ೧೯೨೩ನೇ ಇಸವಿ ದಶಂಬರ ತಾ. ೧೫ನೇ ಶನಿವಾರ ದಿನ ಬೆಳ್ತಂಗಡಿ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಈ ಕೆಳಗಿನ ಕಾರ್ಯಕ್ರಮದಂತೆ ಜರಗಿಸಲ್ಪಡುವುದು.

ಕಾರ್ಯಕ್ರಮ—ಪೂರ್ವಾಹ್ನ ೭-೩೦ರಿಂದ ೮ರ ವರೆಗೆ ಮೆರವಣಿಗೆ, ೮ರಿಂದ ೯-೧೫ರ ವರೆಗೆ ಪ್ರಾರ್ಥನೆ, ೯-೧೫ರಿಂದ ೯-೩೦ ಮಕ್ಕಳಿಗೆ ಬುದ್ಧಿವಾದ, ೯-೩೦ರಿಂದ ೧೦ರ ವರೆಗೆ ಮಕ್ಕಳಿಗೆ ತಿಂಡಿ ಹಂಚೋಣ ಅಪರಾಹ್ನ ೧೨ರಿಂದ ೧-೩೦ರ ವರೆಗೆ ಉಪಾಧ್ಯಾಯ ವರ್ಗಕ್ಕೆ ಭೋಜನ, ೩ರಿಂದ ೪-೩೦ರ ವರೆಗೆ ಪಂದ್ಯಾಟ (ಪ್ರತಿ ಶಾಲೆಯಿಂದ ಆರಿಸಿ ಕಳುಹಿಸಲ್ಪಟ್ಟ ಮಕ್ಕಳೊಳಗೆ), ೪-೩೦ರಿಂದ ೪-೪೫ ವರೆಗೆ ಸಂಘದ ವಾರ್ಷಿಕ ವರದಿ ಓದುವುದು, ೪-೪೫ರಿಂದ ೫-೧೫ರ ವರೆಗೆ ಮಕ್ಕಳಿಗೆ ಇನಾಮು ಹಂಚೋಣ, ೫-೧೫ರಿಂದ ೬ರ ವರೆಗೆ ವಿದ್ಯಾಸಂಬಂಧ ಭಾಷಣ, ೬ರಿಂದ ೬-೩೦ರ ವರೆಗೆ ಹಿಪ್ನೋಟಿಸಮ್ ವಿಷಯ ಒಂದು ಉಪನ್ಯಾಸ, ೬-೩೦ರಿಂದ ೭ರ ವರೆಗೆ ಅಧ್ಯಕ್ಷರ ಭಾಷಣ, ರಾತ್ರಿ ೭ರಿಂದ ೮ರ ವರೆಗೆ ಸಂಗೀತ, ೧೦ರಿಂದ ೩ರ ವರೆಗೆ ತಾಳಮದ್ದಳೆ (ಯಕ್ಷಗಾನ).

ಮೇಲಿನ ಕಾರ್ಯಕ್ರಮಗಳ ಖರ್ಚಿನ ಬಗ್ಗೆ ಉಪಾಧ್ಯಾಯರ ವಂತಿಗೆಯಿಂದ ಕಡಿಮೆ ಆಗಬಹುದಾದ ರೂಪಾಯಿ [illegible] ನ್ನು ಮಾ। ರಾ। ಡಿ. ಮಂಜಯ್ಯ ಹೆಗ್ಗಡೆಯವರು M. L. C. ಅವರು ಕೊಡುವುದಾಗಿ ಮಾಡಿದ ವಾಗ್ದಾನವನ್ನು ಆದರಪೂರ್ವಕವಾಗಿ ಸ್ವೀಕರಿಸಿಯದೆ.

ಮಂಗಳೂರು.

...ಪೂರ್ವವಾಗಿ ಕಳೆದ ನವಂಬರ ತಿಂಗಳಲ್ಲಿ ಕರ್ನಾಟಕ ತಿಲಕ ವಿದ್ಯಾ... ರೂ. ೪೩-೧೧-೭, ಮತ್ತು ...೦. ಅಂತೂ ಜುಮ್ಲಾ ರೂಪಾಯಿ ೬೯-೧೧-೭ ವಂತಿಗೆ... (ಸಾ. ಶ್ರೀನಿವಾಸ ರಾವ್ ಮುಖ್ಯಾಧ್ಯಾಪಕ.)

ಕಳೆದ ಸೋಮವಾರ ನಡೆದ ಮೀಟಿಂಗಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ವೈಸ್‌ಪ್ರೆಸಿಡೆಂಟರ ಚುನಾವಣೆಯು ಮುಂದರಿಸಲಾಗಿದೆ.

ಮುನ್ಸಿಪಲ್ ಆಡೀಟರ ವರದಿಯು ಪ್ರಕಟವಾಗಿದೆ. ರಾ। ರಾಮ ಕೃಷ್ಣ ಕಾರಂತರು ಮುನಿಸಿಪಾಲಿಟಿಯ ಖರ್ಚು ಹೆಚ್ಚಾಗಿರುವುದರಿಂದ, ವೆಚ್ಚವನ್ನು ಕಡಿಮೆಮಾಡಲು ಸೂಚನೆಯನ್ನೀಯುವ ಒಂದು ಕಮಿಟಿಯನ್ನು ನೇಮಿಸಬೇಕೆಂಬರ್ಥದ ಒಂದು ಠರಾವನ್ನು ತರಲಿರುವರು.

ಮಂಗಳೂರಿನಿಂದ ಹಾಸನದ ವರೆಗೆ ರೈಲ್ವೆಯನ್ನು ಹಾಕಲು ನಿಶ್ಚಯ ಮಾಡಿರುವರೆಂದು ವಾರ್ತೆ. ಈ ಬಗ್ಗೆ ಮಾರ್ಗವನ್ನು ತೆರೆಯುವುದಕ್ಕಾಗಿ ಸರ್ವೆ ಇಲಾಖೆಯೊಂದು ಬೇಗನೆ ಬರುವುದೆಂದೂ ಮತ್ತು ಈ ಇಲಾಖೆಯ ಕೇಂದ್ರಸ್ಥಾನವನ್ನು ಮಂಗಳೂರಿನಲ್ಲಿಯೆ ಮಾಡುವರೆಂದು ತಿಳಿದುಬರುತ್ತದೆ.

ಮಂಗಳೂರು ತಾಲೂಕಿನ ಜಮಾಬಂದಿಯು ಇಲ್ಲಿಯ ಡಿಸ್ಟ್ರಿಕ್ಟ ಕಲೆಕ್ಟರರಿಂದ ಈ ಕೆಳಗಿನಂತೆ ನಡಿಸಲ್ಪಡುವುದು:— ಫೆಬ್ರವರಿ ತಾ. ೨೨ ಮುಲ್ಕಿ, ತಾ. ೨೪ ಸುರತ್ಕಲ್, ತಾ. ೨೬ ಗುರುಪುರ, ಮಾರ್ಚಿ ತಾ. ೧ ಮಂಗಳೂರು, ತಾ. ೩ ಪಾಣೆಮಂಗಳೂರು ತಾ. ೫ ಬಂಟ್ವಾಳ.

ಗೀತಾಜಯಂತಿಯು ರಾ। ಉದ್ಯಾವರ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನೇಶನಲ್ ಗರ್ಲ್ಸ್‌ಸ್ಕೂಲಿನ ಸಭಾಸದನದಲ್ಲಿ ನೆರವೇರಿತು. ಈ ಸಮಯ ಸ್ವಾಮಿ ಸುಧಾರಾನಂದರು ಗೀತೆಯ ಮಹತ್ವದ ವಿಷಯ ಚಲೋ ಭಾಷಣವನ್ನಿತ್ತು ಅದನ್ನು ನಿತ್ಯವೂ ಪಠನಮಾಡಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ರಾ। ಯಮ್. ವಿ. ಶಾಸ್ತ್ರಿಗಳು ಸಹಾ ಒಳ್ಳೇದಾದ ಭಾಷಣವನ್ನಿತ್ತರು. ವಾರಕ್ಕೊಮ್ಮೆಯಾಗಲಿ, ಪಕ್ಷಕ್ಕೊಮ್ಮೆಯಾಗಲಿ, ಗೀತಾ ಕ್ಲಾಸುಗಳನ್ನು ತೆರೆಯಬೇಕೆಂದು ನಿರ್ಣಯಿಸಲಾಗಿರುವುದು.

ರಾ। ಎ. ಸಿ. ಅಮೀನರು ಕಳೆದ ತಿಂಗಳ ತಾ. ೨೮ನೇ ಶನಿವಾರ ಬೆಳಗ್ಗೆ ಜಲೋಧರ ರೋಗದಿಂದ ಮೃತರಾದರೆಂದು ತಿಳಿಸಲು ವಿಷಾದಪಡುತ್ತೇವೆ. ಇವರು ಮೊಗವೀರ ಸಮಾಜದ ಪ್ರಮುಖ ಗೃಹಸ್ಥರೂ, ಇಲ್ಲಿಯ ಮಯಂಬಾಯಿ ಸ್ಟೋರಿನ ಮ್ಯಾನೇಜರೂ ಆಗಿದ್ದರು.

ಮಂಗಳೂರು ತಾಲೂಕು ಬೋರ್ಡಿನ ಬರುವ ಸಾಮಾನ್ಯ ಸಭೆಯು ತಾಲೂಕು ಬೋರ್ಡ್ ಆಫೀಸಿನಲ್ಲಿ ದಶಂಬರ ತಾ. ೮ರಲ್ಲಿ ನಡೆಯುವುದು.

ದಕ್ಷಿಣ ಕನ್ನಡ ಜಿಲ್ಲಾ 'ಕನ್ನಡ ಮೈಲಿಯನ್ ಯುವಕ ಸಂಘ'ದ ಪ್ರಥಮ ವಾರ್ಷಿಕೋತ್ಸವವನ್ನು ಇದೇ ೧೯೨೫ನೇ ಇಸವಿ ದಶಂಬರ ತಾ. ೨೦ನೇ ಆದಿತ್ಯವಾರ ಮಧ್ಯಾಹ್ನ ಗಂಟೆ ೩ಕ್ಕೆ ಮಂಗಳೂರಿನಲ್ಲಿ ಜರಗಲಿಕ್ಕಿರುವುದರಿಂದ ಸ್ವಜಾತಿಗೆ ಒಳಪಟ್ಟ ಸರ್ವ ಗೃಹಸ್ಥರೂ ದಯಮಾಡಿಸಿ, ಸಭೆಯನ್ನು ಚಂದಗಾಣಿಸಬೇಕಾಗಿ ಕಾರ್ಯದರ್ಶಿಗಳಾದ ಕೆ. ಸೋಮಪ್ಪ ಬಂಗೇರರ ಸವಿನಯ ವಿನಂತಿಯಾಗಿರುವುದು.

ಪಬ್ಲಿಕ್ ಹೆಲ್ತ್ ಡೈರೆಕ್ಟರರು ಇದೇ ಕಳದ ಸೋಮವಾರ ಇಲ್ಲಿಗೆ ಸಾಯಂಕಾಲದ ಮೈಲಿನಲ್ಲಿ ಬಂದಿದ್ದರು, ಇವರು ಇಲ್ಲಿಯ ಡಿಸ್ಟ್ರಿಕ್ಟ್ ಸರ್ಜನರ ಅತಿಥಿಯಾಗಿದ್ದರು. ಮರುದಿವಸ ಇಲ್ಲಿಯ ಮುನ್ಸಿಪಲ್ ಹೆಲ್ತ್ ಆಫೀಸನ್ನೂ, ಡಿಸ್ಟ್ರಿಕ್ಟ ಹೆಲ್ತ ಆಫೀಸನ್ನೂ ಸಂದರ್ಶಿಸಿ, ಬುಧವಾರ ಇಲ್ಲಿಂದ ಪುತ್ತೂರು ಮತ್ತು ಬಂಟವಾಳ ಈ ಕಡೆಗೆ ಹೋಗಿ ಅದೇ ದಿವಸ ಸಾಯಂಕಾಲ ಪುನಃ ಇಲ್ಲಿಗೆ ಬಂದು ನಿನ್ನೆಯ ದಿನ ಬೆಳಗ್ಗಿನ ಮೈಲಿನಲ್ಲಿ ಹಿಂತೆರಳಿದರು.

ಸ್ವೀಕಾರಃ — ಮಂಗಳೂರು ಮುನ್ಸಿಪಾಲಿಟಿಯ ೧೯೨೪-೨೫ನೇ ಎಡ್‌ಮಿನಿಸ್ಟ್ರೇಶನ್ ರಿಪೋರ್ಟು. ಇದರ ವಿಮರ್ಶೆಯನ್ನು ಬರುವ ಸಂಚಿಕೆಯಲ್ಲಿ ಪ್ರಕಟಿಸುವೆವು.

ಸೂರ್ಯನ ಶೆಖೆಯ ಶಕ್ತಿಯನ್ನು ಉಪಯೋಗಿಸಿ ಮಾಡಿದ ಸೂರ್ಯ ಯಂತ್ರಗಳು.

ಕಲ್ಲಿದ್ದಲ್ಲು ಮತ್ತು ಚಿಮಿಣಿ ಎಣ್ಣೆ ಖರ್ಚಾಗುತ್ತಾ ಬಂತು. ನಮ್ಮ ಕಾರ್ಖಾನೆಗಳ ಯಂತ್ರಗಳನ್ನೂ, ರೈಲು ಗಾಡಿಗಳನ್ನೂ, ಮೋಟರುಗಳನ್ನೂ, ಹಡಗುಗಳನ್ನೂ, ವಿದ್ಯುಚ್ಛಕ್ತಿಯ ಯಂತ್ರಗಳನ್ನೂ ನಡಿಸಲಿಕ್ಕೆ ಬೇಕಾಗುವ ಕಲ್ಲಿದ್ದಲ್ಲು, ಚಿಮಿಣಿ ಎಣ್ಣೆ, ಪೆಟ್ರೋಲ್ ಮುಂತಾದವು ಸಿಕ್ಕುವದು ನಿಂತೊಡನೆಯೇ ಭೂಲೋಕದ ಸ್ಥಿತಿಯು ಏನಾಗುವದೆಂದು ವಿಚಾರಿಸುವುದು ಆಶ್ಚರ್ಯಕರವಾದ ಸಂಗತಿಯಲ್ಲ. ಆದರೆ ಕೂಲಿಕಾರರ ಮುಷ್ಕರ ಮುಂತಾದವು ಇಲ್ಲದಿದ್ದರೆ ಇನ್ನು ಮೂರು ವರ್ಷಗಳಿಗೆ ಬೇಕಾಗುವ ಕಲ್ಲಿದ್ದಲ್ಲೂ, ಎಣ್ಣೆಯೂ ಸಿಕ್ಕಲಿಕ್ಕೆ ಏನೊಂದೂ ತೊಂದರೆಯಾಗಲಿಕ್ಕಿಲ್ಲವೆಂದು ಊಹಿಸಬಹುದು.

ಈ ಎರಡು ವಸ್ತುಗಳು ಸಿಕ್ಕದೆ ಇದ್ದರೂ ಬೇರೆ ಸಾಧನಗಳಿಂದ ಈ ಕೆಲಸಗಳನ್ನು ನಡಿಸಬಹುದು ಎಂದು ಸ್ವೀಡನ್ ದೇಶದ ಸ್ಟೋಕ್‌ಹೋಲ್ಮ ಪಟ್ಟಣದಲ್ಲಿರುವ ಮಹಾ ಪಂಡಿತರಾದ ಪ್ರೊಫೆಸರ್ ಸವಂತೆ ಅರೆನಿಯಸ್ ಎಂಬವರು ಧೈರ್ಯದಿಂದ ಹೇಳುತ್ತಾರೆ.

ಈಗ ಕಲ್ಲಿದ್ದಲ್ಲು ಬೇಗನೆ ಖರ್ಚಾಗುವಂತೆ ಸಹಾಯ ಮಾಡುವ ಎಣ್ಣೆಯು ಕಳೆದ ಐದು ವರ್ಷಗಳಲ್ಲಿ ಖರ್ಚಾದ ರೀತಿಯಲ್ಲಿಯೇ ಖರ್ಚಾದರೆ ಇನ್ನು ಅರವತ್ತು ವರುಷಗಳಲ್ಲಿಯೇ ಎಣ್ಣೆಯು ಸಂಪೂರ್ಣವಾಗಿ ಖರ್ಚಾಗಬಹುದು.

ಇಂಗ್ಲೆಂಡಿನಲ್ಲಿರುವ ಕಲ್ಲಿದ್ದಲ್ಲು ಇನ್ನು ಹೆಚ್ಚಾದರೆ ನೂರು ವರುಷಗಳೊಳಗೆ ಸಂಪೂರ್ಣವಾಗಿ ಖರ್ಚಾಗುವದು, ಯುನೈಟೆಡ್ ಸ್ಟೇಟ್ಸಿನವರು ಅಷ್ಟೆ ಸಮಯದಲ್ಲಿ ತಮ್ಮಲ್ಲಿ ಸಿಕ್ಕುವ ಕಲ್ಲಿದ್ದಲ್ಲನ್ನು ಬೇರೆ ದೇಶದವರಿಗೆ ಕ್ರಯಕ್ಕೆ ಕೊಡಲಿಕ್ಕೆ ಒಪ್ಪಲಿಕ್ಕಿಲ್ಲ. ಹಿ. ಶ. ೨೦೦೦ದಲ್ಲಿ ಪ್ರತಿ ಒಂದು ಜನಾಂಗವು ತನ್ನಲ್ಲಿದ್ದ ವಸ್ತುಗಳನ್ನು ಬೇರೆ ಜನಾಂಗಕ್ಕೆ ಕೊಡಲಿಕ್ಕೆ ಒಪ್ಪುತ್ತಿರಲಿಲ್ಲ. ಈ ಎರಡು ವಸ್ತುಗಳ ಬದಲಾಗಿ ಯಂತ್ರಗಳನ್ನು ನಡಿಸಲಿಕ್ಕೆ ಬೇರೆ ಏನಾದರೂ ಸಾಧನವನ್ನು ಹುಡುಕಿ ತೆಗಿಯದೆ ಇದ್ದರೆ ಈಗಿನ ನಾಗರೀಕತೆಯೇ ಅಂತ್ಯವಾಗುವುದರಲ್ಲಿ ಸಂದೇಹವಿಲ್ಲ. ಈಗ ಜೀವಂತರಾಗಿರುವವರು ಇನ್ನು ನೂರು ವರುಷಗಳ ವರೆಗೆ ಬದುಕುವದು ಅಸಾಧ್ಯವಾದರೂ ಮುಂದೆ ಹುಟ್ಟುವ ಜನರು ಈ ಕಷ್ಟಗಳನ್ನು ಅನುಭವಿಸಬೇಕಾಗುವದು.

ಉಪಯೋಗಿಸಬಹುದಾದ ಹೊಸ ಶಕ್ತಿಗಳು.

ಕಲ್ಲಿದ್ದಲ್ಲು ಮತ್ತು ಎಣ್ಣೆಯ ಬದಲಾಗಿ ಇನ್ನು ಗಾಳಿಯ ಶಕ್ತಿಯನ್ನೂ, ಸೂರ್ಯನ ಶೆಖೆಯ ಶಕ್ತಿಯನ್ನೂ, ಯಂತ್ರಸಾಧನೆಗಳನ್ನು ನಡಿಸಲಿಕ್ಕೆ ಉಪಯೋಗಿಸಬಹುದು. ಕಲ್ಲಿದ್ದಲ್ಲು ಮತ್ತು ನೀರಿನ ಜೋಗುಗಳು ಲೋಕದ ಕೆಲವು ಭಾಗಗಳಲ್ಲಿ ಮಾತ್ರವೇ ಇವೆ. ಆದರೆ ಗಾಳಿ ಮತ್ತು ಸೂರ್ಯನ ಶೆಖೆಯ ಶಕ್ತಿಗಳು ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ಚದರಿಕೊಂಡಿವೆ. ಇದು ಒಂದು ಅವಗುಣದ ಸಂಗತಿಯಾಗಿದೆ. ಕಲ್ಲಿದ್ದಲ್ಲು, ಎಣ್ಣೆ, ಮತ್ತು ನೀರಿನ ಜೋಗುಗಳು ಕೆಲವು ದೇಶಗಳಲ್ಲಿ ಮಾತ್ರವೆ ಇದ್ದು ಅವುಗಳ ಸಂಪೂರ್ಣ ಶಕ್ತಿಯನ್ನು ಉಪಯೋಗಿಸಿ ಹೆಚ್ಚು ಪ್ರಯೋಜನವನ್ನು ಹೊಂದಬಹುದು.

ಆದುದರಿಂದ ಗಾಳಿಯ ಮತ್ತು ಸೂರ್ಯನ ಶೆಖೆಯ ಶಕ್ತಿಯನ್ನು ಬಹಳ ಬಲವಾಗಿ ಯಾವ ರೀತಿಯಲ್ಲಿ ಒಟ್ಟುಕೂಡಿಸಬಹುದು ಎಂಬದನ್ನು ಶಾಸ್ತ್ರಜ್ಞರು ಆಲೋಚಿಸುತ್ತಲೇ ಇದ್ದಾರೆ. ಜೋಗುಗಳಿಂದ ಸಿಕ್ಕುವ ಶಕ್ತಿಗಿಂತಲೂ ಮಳೆ ಮೋಡಗಳಲ್ಲಿರುವ ಶಕ್ತಿಯು ಹೆಚ್ಚಾಗಿದೆ. ಆದರೆ ಮೋಡಗಳಲ್ಲಿರುವ ಶಕ್ತಿಯು ಹೆಚ್ಚಾಗಿದೆ. ಆದರೆ ಮೋಡಗಳಲ್ಲಿರುವ ಶಕ್ತಿಯನ್ನು ಯಾವ ರೀತಿಯಿಂದ ಯಂತ್ರಗಳನ್ನು ನಡಿಸಲಿಕ್ಕೆ ಉಪಯೋಗಿಸಬಹುದೆಂಬದು ಆಲೋಚಿಸತಕ್ಕ ಸಂಗತಿಯಾಗಿದೆ. ಮೋಡಗಳಲ್ಲಿರುವ ನೀರನ್ನು ಬಹಳ ಎತ್ತರ ಸ್ಥಳಗಳಲ್ಲಿ ಕಟ್ಟಿದ ಕೆರೆಗಳಲ್ಲಿ ಒಟ್ಟುಕೂಡಿಸಿ ಆ ನೀರನ್ನು ಕಾರ್ಖಾನೆಗಳ ಯಂತ್ರಗಳನ್ನು ನಡಿಸಲಿಕ್ಕೆ ಉಪಯೋಗಿಸಬಹುದು, ಆದರೆ ಇದಕ್ಕಾಗುವ ಖರ್ಚು ಸಿಕ್ಕುವ ಲಾಭಕ್ಕಿಂತ ಹೆಚ್ಚಾಗುವದು. ಗಾಳಿಯ ಶಕ್ತಿಯನ್ನು ಉಪಯೋಗಿಸುವದಾದರೂ ಇದೇ ತರದ ಕಷ್ಟಗಳು ಇವೆ. ಭೂಮಿಗೆ ತಾಗಿಕೊಂಡು ನೆಟ್ಟಗೆ ಮೇಲಕ್ಕಿರುವ ಒಂದು ಚದರ ಮೈಲಿನೊಳಗಿರುವ ಗಾಳಿಯ ಶಕ್ತಿಯನ್ನು ಉಪಯೋಗಿಸಿದರೆ ಸಾವಿರಾರು ಟನ್ ಕಲ್ಲಿದ್ದಲ್ಲು ಉಪಯೋಗಿಸುವದರಿಂದ ಉಂಟಾಗುವಷ್ಟೆ ಶಕ್ತಿಯನ್ನು ಉಂಟುಮಾಡಬಹುದು. ಆದರೆ ಒಂದು ಗಾಳಿಯ ಯಂತ್ರದ ಕೈಗಳನ್ನು ಕೆಲವು ನೂರು ಚದರ ಅಡಿಗಳಿಗೆ ಮಾತ್ರವೇ ಉಪಯೋಗಿಸಬಹುದು. ಯುರೋಪ ಖಂಡದಲ್ಲಿ ಹನ್ನೊಂದನೆ ಶತಮಾನದಿಂದ ಗಾಳಿಯ ಬಲದಿಂದ ನಡಿಯುವ ಯಂತ್ರಗಳನ್ನು ಉಪಯೋಗಿಸುತ್ತಿದ್ದಾರೆ. ಆದರೂ ಈಗಿನ ಕಾಲದಲ್ಲಿ ಉಪಯೋಗಿಸುವ ಉತ್ತಮ ರೀತಿಯ ಗಾಳಿಯ ಯಂತ್ರಗಳಿಂದಲೂ ಉಂಟಾಗುವ ಶಕ್ತಿಯಿಂದ ಕಾರ್ಖಾನೆಗಳ ಯಂತ್ರಗಳನ್ನು ಸರಿಯಾಗಿ ನಡಿಸಲು ಸಾಧ್ಯವಾಗಲಿಲ್ಲ. ಯಾಕೆಂದರೆ ಇವುಗಳ ಶಕ್ತಿಯು ಕಡಿಮೆ. ಒಂದೇ ಸಮನಾಗಿ ಸಿಕ್ಕುವುದಿಲ್ಲ.

ಕಲ್ಲಿದ್ದಲ್ಲೂ, ಎಣ್ಣೆಯೂ ಪೂರ್ಣ ಖರ್ಚಾದ ಸಮಯವು ಬರುವಾಗ ಗಾಳಿಯಿಂದ ನಡಿಸುವ ಯಂತ್ರಗಳು ಎಲ್ಲಾ ಕಡೆಯಲ್ಲಿಯೂ ತಯಾರಿಸಲ್ಪಡುವವು, ಸಮುದ್ರದ ಇಳಿತ ಭರತಗಳ ಶಕ್ತಿಯನ್ನು ಉಪಯೋಗಿಸಿ ಯಂತ್ರಗಳನ್ನು ನಡಿಸಬಹುದು. ಆದರೆ ಒಂದು ಇಳಿತದಿಂದ ಒಂದು ಭರತಕ್ಕೆ ಹನ್ನೆರಡುವರೆ ತಾಸುಗಳಷ್ಟು ಸಮಯವು ಬೇಕಾಗುವುದು. ಆದುದರಿಂದ ಬೇಗಬೇಗನೆ ನಡಿಸಬೇಕಾದ ಯಂತ್ರಸಾಧನೆಗಳಿಗೆ ಇಳಿತ ಭರತಗಳ ಶಕ್ತಿಯು ಪ್ರಯೋಜನಕ್ಕೆ ಬೀಳಲಾಗದು. ಸಮುದ್ರದ ತೆರೆಗಳು ಸಹ ಒಂದೇ ರೀತಿಯಲ್ಲಿ ಬಾರದೆ ಇರುವುದರಿಂದ ಇವುಗಳ ಶಕ್ತಿಯನ್ನು ಕೈಗಾರಿಕೆಗಳಿಗೆ ಉಪಯೋಗಿಸಲು ಸಾಧ್ಯವಿಲ್ಲ. ಈ ಎರಡು ಶಕ್ತಿಗಳನ್ನು ಉಪಯೋಗಿಸಲಿಕ್ಕೆ ಸಾಧ್ಯವಿಲ್ಲದಿದ್ದರೂ ಕೈಗಾರಿಕೆಗಳಿಗೆ ಬೇಕಾಗುವ ಯಂತ್ರಸಾಧನೆಗಳು ನಿಂತುಹೋದಾವು ಎಂದು ಆಶ್ಚರ್ಯಪಡಲು ಅಗತ್ಯವಿಲ್ಲ. ಕಲ್ಲಿದ್ದಲ್ಲು ಮತ್ತು ಎಣ್ಣೆ ಖರ್ಚಾಗುವುದರೊಳಗಾಗಿ ಸೂರ್ಯ ಯಂತ್ರಗಳು ಸಿದ್ಧವಾಗುವವು. ಈ ಯಂತ್ರಗಳಿಂದ ಈಗ ಕಲ್ಲಿದ್ದಲ್ಲು ಮತ್ತು ಎಣ್ಣೆ ಮಾಡುವ ಎಲ್ಲಾ ಯಂತ್ರಸಾಧನೆಯ ಕೆಲಸಗಳು ನಡಿಸಲ್ಪಡುವವು. ಈಗ ಭೂಲೋಕದ ಎಲ್ಲಾ ಭಾಗಗಳಲ್ಲಿರುವ ಶಾಸ್ತ್ರಜ್ಞರು ಸೂರ್ಯ ಯಂತ್ರಗಳನ್ನು ಉತ್ತಮ ರೀತಿಯಿಂದ ತಯಾರಿಸಿ ಸಿದ್ಧಗೊಳಿಸಲು ಪ್ರಯತ್ನಿಸುತ್ತಿರುವರು. ಈ ಸೂರ್ಯ ಯಂತ್ರವನ್ನೂ, ಇಜಿಪ್ತದೇಶದ ಮುಖ್ಯ ಪಟ್ಟಣವಾದ ಕ್ಯಾರೋ ಪಟ್ಟಣದಲ್ಲಿರುವ ವಿದ್ಯುಚ್ಛಕ್ತಿಯ ಯಂತ್ರವನ್ನು ನಡಿಸಲಿಕ್ಕೆ ಉಪಯೋಗಿಸಿ, ಕ್ಯಾರೋ ಪಟ್ಟಣದಲ್ಲಿರುವ ಎಲ್ಲಾ ವಿದ್ಯುಚ್ಛಕ್ತಿಯ ದೀಪಗಳನ್ನು ಒಂದು ರಾತ್ರಿಯ ವರೆಗೆ ಉರಿಸಿದರು. ಇದನ್ನು ಪರೀಕ್ಷಾರ್ಥವಾಗಿ ಮಾಡಿದ್ದಾಗಿರುತ್ತದೆ. ಈ ಯಂತ್ರವನ್ನು ಆದಷ್ಟು ಕಡಿಮೆ ಖರ್ಚಿನಿಂದ ತಯಾರಿಸಲಿಕ್ಕೂ ಇದರ ಶಕ್ತಿಯನ್ನು ವೃದ್ಧಿಪಡಿಸಲಿಕ್ಕೆ ಪ್ರಯತ್ನಗಳು ನಡಿಯುತ್ತಲೇ ಇವೆ. ಇನ್ನು ಇಪ್ಪತ್ತು ವರುಷಗಳಲ್ಲಿ ಬಲವಾದ ಸೂರ್ಯ ಯಂತ್ರಗಳು ಸಂಪೂರ್ಣವಾಗುವುದರಲ್ಲಿ ಸಂದೇಹವಿಲ್ಲ. ಜೇಮ್ಸ ವೇಟನು ನಾಲ್ವತ್ತು ವರ್ಷಗಳ ಹಿಂದೆ ಸ್ಟೀಮ ಎಂಜಿನನ್ನು ಹುಡುಕಿ ತೆಗೆದಾಗ ಅದು ಯಾವ ಬಾಲ್ಯಾವಸ್ಥೆಯಲ್ಲಿತ್ತೊ ಅದೇ ರೀತಿಯಲ್ಲಿ ಸೂರ್ಯ ಯಂತ್ರವು ಈಗ ಬಾಲ್ಯಾವಸ್ಥೆಯಲ್ಲಿದೆ.

ಆದರೂ ಇದರಲ್ಲಿ ಒಂದು ಅವಗುಣವಿದೆ. ಸೂರ್ಯ ಯಂತ್ರವು ಸಂಪೂರ್ಣವಾದೊಡನೆಯೇ ನಮ್ಮ ಜೀವನ ಚರಿತ್ರೆಯಲ್ಲಿಯೂ ಹೆಚ್ಚು ಬದಲಾವಣೆಗಳು ಉಂಟಾಗುವುವು. ಈ ತರದ ಸೂರ್ಯ ಯಂತ್ರಗಳನ್ನು ಸೂರ್ಯನ ಪ್ರಕಾಶವು ಸರಿಯಾಗಿ ಇರುವ ದೇಶಗಳಲ್ಲಿ ಮಾತ್ರವೇ ಉಪಯೋಗಿಸಬಹುದು. ಯಾಕಂದರೆ ಇದನ್ನು ನಡಿಸಲಿಕ್ಕೆ ಸೂರ್ಯನ ಕಿರಣಗಳು ನೆಟ್ಟಗೆ ಆ ಯಂತ್ರದ ಮೇಲೆ ಬೀಳಬೇಕಾಗಿದೆ. ಆದುದರಿಂದ ಈ ಯಂತ್ರಗಳನ್ನು ಉಷ್ಣವಲಯದಲ್ಲಿಯೂ, ಅರ್ಧ ಉಷ್ಣವಲಯಗಳಲ್ಲಿಯೂ ಮಾತ್ರವೇ ಉಪಯೋಗಿಸಬಹುದು. ಆಫ್ರಿಕದ ಸಹಾರಾ ಮರುಭೂಮಿ, ಉತ್ತರ ಅಮೇರಿಕದ ದಕ್ಷಿಣ ಕೆಲಿಫೋರ್ನಿಯಾ, ದಕ್ಷಿಣ ಅಮೇರಿಕದ ನೈರುತ್ಯ ಭಾಗದಲ್ಲಿರುವ ಮರುಭೂಮಿ, ಮೆಕ್ಸಿಕೊ, ದಕ್ಷಿಣ ಅಮೇರಿಕದ ಕೆಲವು ಭಾಗಗಳು, ಅಸ್ಯಾ ಖಂಡದ ಮಧ್ಯ ಮತ್ತು ದಕ್ಷಿಣ ಭಾಗ ಇವುಗಳಲ್ಲಿ ಈ ಸೂರ್ಯ ಯಂತ್ರಗಳನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಬಹುದು, ಈ ದೇಶಗಳಲ್ಲಿ ದೊಡ್ಡ ದೊಡ್ಡ ಯಂತ್ರ ಸಾಧನೆಗಳನ್ನು ಕಟ್ಟುವರು. ಒಸ್ಟ್ರೇಲಿಯದವರು ತಮ್ಮ ಖಂಡಕ್ಕೆ ಬೇಕಾಗುವ ಪ್ರತ್ಯೇಕ ಸೂರ್ಯ ಯಂತ್ರಗಳನ್ನು ಕಟ್ಟುವರು. ಸಮ ಶೀತೋಷ್ಣವಲಯಗಳಲ್ಲಿಯೂ ಶೀತವಲಯಗಳಲ್ಲಿಯೂ ಈ ಸೂರ್ಯ ಯಂತ್ರಗಳನ್ನು ಕಟ್ಟಲು ಸಾಧ್ಯವಾಗಲಿಕ್ಕಿಲ್ಲ. ಆದುದರಿಂದ ಆ ವಲಯಗಳಲ್ಲಿರುವ ಎಲ್ಲಾ ಕೈಗಾರಿಕೆಗಳು, ಕಲ್ಲಿದ್ದಲ್ಲಾಗಲಿ, ಎಣ್ಣೆಯಾಗಲಿ, ಸೂರ್ಯ ಯಂತ್ರಗಳಾಗಲಿ ಇಲ್ಲದೆ ಸಂಪೂರ್ಣ ನಾಶವಾಗುವವು, ಅಥವಾ ಆ ಕೈಗಾರಿಕೆಗಳು ಉಳಿಯಬೇಕೆಂದಾದರೆ ಉಷ್ಣವಲಯದಲ್ಲಿ ಕಟ್ಟಿದ ಸೂರ್ಯ ಯಂತ್ರಗಳಿಂದ ಸಮಶೀತೋಷ್ಣವಲಯಗಳಿಗೆ ಶಕ್ತಿಯನ್ನು ಕಳುಹಿಸಬೇಕಾಗುವದು. ಈ ರೀತಿಯಲ್ಲಿ ಲೋಕದ ಸ್ಥಿತಿಯು ... ಜನನವಾದಾಯವಲ್ಲವು ಉಷ್ಣವಲಯದಲ್ಲಿಯೇ ಬಂದು ವಾಸಿಸುವರು. ಸೂರ್ಯ ಯಂತ್ರಗಳನ್ನು ಕಟ್ಟಬಹುದಾದ ದೇಶಗಳಲ್ಲಿ ಮಾತ್ರವೇ ನಾಗರೀಕತೆಯು ಉನ್ನತ ಸ್ಥಿತಿಯಲ್ಲಿ ಇರಲು ಸಾಧ್ಯವಾಗುವುದು.

ಸೂರ್ಯನ ಶೆಖೆಯನ್ನು ಒಟ್ಟುಹಾಕುವ ವಿಧಾನ.

ಲೋಕಕ್ಕೆ ಬಂದೊದಗುವ ಈ ಕಷ್ಟವನ್ನು ಪರಿಹರಿಸಲಿಕ್ಕೂ ಕಲ್ಲಿದ್ದಲ್ಲು ಮತ್ತು ಎಣ್ಣೆ ಇವುಗಳು ಇಷ್ಟರ ವರೆಗೆ ಮಾಡುತ್ತಿದ್ದ ಕೆಲಸವನ್ನು ಸೂರ್ಯನಿಂದ ಮಾಡಿಸುವದೊಂದೇ ಉಪಾಯವಾಗಿದೆ. ಈ ಸೂರ್ಯ ಯಂತ್ರವು ಬೇರೆ ಎಲ್ಲಾ ವಿಧಗಳಲ್ಲಿ ಇತರ ಯಂತ್ರಸಾಧನೆಗಳಂತೆಯೆ ಇದೆ. ಆದರೆ ಕಲ್ಲಿದ್ದಲ್ಲು ಮತ್ತು ಎಣ್ಣೆಯ ಬದಲಾಗಿ ಸೂರ್ಯನ ಶಕ್ತಿಯನ್ನು ಉಪಯೋಗಿಸಿ ಶೆಖೆಯನ್ನು ಉಂಟುಮಾಡುವರು. ಇದಕ್ಕಾಗಿ ಸೂರ್ಯನ ಕಿರಣಗಳನ್ನು ಒಟ್ಟುಗೂಡಿಸಲಿಕ್ಕೆ ಕನ್ನಡಿಗಳನ್ನು ಉಪಯೋಗಿಸುವರು. ನೀರು ತುಂಬಿಸಿದ ಬೊಯಿಲರುಗಳ ಮೇಲೆ ಸೂರ್ಯನ ಕಿರಣಗಳ ಶೆಖೆಯನ್ನು ಕನ್ನಡಿಗಳನ್ನು ಉಪಯೋಗಿಸುವುದು. ಭೂತಕನ್ನಡಿಯನ್ನು ಸೂರ್ಯನ ಬಿಸಿಲಿನಲ್ಲಿ ಹಿಡಿದು ಅದರ ಅಡಿಗೆ ಕಾಗದವನ್ನಾಗಲೀ ಹತ್ತಿಯನ್ನಾಗಲಿ ಹಿಡಿದರೆ ಅದಕ್ಕೆ ಬೆಂಕಿ ಹಿಡಿಯುತ್ತದೆಂಬದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಸೂರ್ಯ ಯಂತ್ರದಲ್ಲಿ ಉಪಯೋಗಿಸಲ್ಪಡುವ ಕನ್ನಡಿಗಳು ಇದೇ ರೀತಿಯಲ್ಲಿರುವವು. ಈ ಶಕ್ತಿಯನ್ನು ಕಾಗದ ಅಥವಾ ಹತ್ತಿಯ ಮೇಲೆ ಉಪಯೋಗಿಸುವುದರ ಬದಲಾಗಿ ಬೊಯಿಲರುಗಳ ಮೇಲೆ ಉಪಯೋಗಿಸಲ್ಪಡುವದು. ಆಕಾಶದಲ್ಲಿ ಮೋಡಗಳಿಲ್ಲದ ಸಮಯ ಸೂರ್ಯನಿಂದ ಬರುವ ಶೆಖೆಯು ನಯಾಗರಾ ಜೋಗಿನಿಂದ ಎಷ್ಟು ಬಲವಾಗಿ ನೀರು ಬೀಳುತ್ತದೋ ಅದಕ್ಕಿಂತಲೂ ಹೆಚ್ಚಾದ ಶಕ್ತಿಯಿಂದ ಸೂರ್ಯ ಕಿರಣಗಳು ಬೀಳುವವು. ಅಂದರೆ ಒಂದು ಎಕ್ರೆ ಸ್ಥಳದ ಮೇಲೆ ೫೦೦೦ ಕುದುರೆಗಳ ಶಕ್ತಿಯಷ್ಟು ಶಕ್ತಿಯು ಬೀಳುವುದು.

ಸಹರಾ ಮರುಭೂಮಿಯಲ್ಲಿ ಈ ಸೂರ್ಯ ಯಂತ್ರವನ್ನು ಸ್ಥಾಪಿಸಿ ಕಾಯರೋ ಪಟ್ಟಣದಲ್ಲಿ ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚಲಿಕ್ಕೆ ಉಪಯೋಗಿಸಿದ ಯಂತ್ರವು ಎಲ್ಲಾ ವಿಧದಲ್ಲಿಯೂ ಸಂಪೂರ್ಣತೆಯನ್ನು ಹೊಂದಿದ ಯಂತ್ರವಾಗಿದೆ. ಈ ಸೂರ್ಯ ಯಂತ್ರಕ್ಕೆ ೫ ಬೊಯಿಲರುಗಳು ಇವೆ. ಒಂದೊಂದು ಬೊಯಿಲರು ೨೦೫ ಅಡಿ ಉದ್ದವಾಗಿದೆ. ಈ ಬೊಯಿಲರುಗಳ ಮೇಲುಗಡೆಯಲ್ಲಿ ಎರಡು ಸಾಲಿನಲ್ಲಿ ಕನ್ನಡಿಗಳು ಇವೆ. ಈ ಎರಡು ಸಾಲಿನಲ್ಲಿರುವ ಕನ್ನಡಿಗಳ ಮೇಲೆ ಬೀಳುವ ಸೂರ್ಯನ ಕಿರಣಗಳ ಶೆಖೆಯು ಬೊಯಿಲರುಗಳ ಮೇಲೆ ಬೀಳುವುದು. ಸೂರ್ಯನ ಕಿರಣಗಳು ಏಕರೀತಿಯಿಂದ ಬೆಳಗ್ಗಿನಿಂದ ಸಾಯಂಕಾಲದ ವರೆಗೆ ಬೀಳುವಂತೆ ಈ ಕನ್ನಡಿಗಳನ್ನು ಸೂರ್ಯನಿಗೆ ಎದುರಾಗಿ ಬೇಕಾದ ಹಾಗೆ ತಿರುಗಿಸುವಂತೆ ಇಡಲ್ಪಟ್ಟಿವೆ. ಈ ಯಂತ್ರವನ್ನು ಇಟ್ಟಿರುವ ವಿಸ್ತೀರ್ಣವು ೧೩,೨೬೯ ಚದರ ಅಡಿಗಳು. ಇದರಿಂದ ಸಿಕ್ಕಿದ ಶಕ್ತಿಯು ಬೇರೆ ಎಲ್ಲಾ ಯಂತ್ರಗಳಿಂದ ಸಿಕ್ಕುವ ಶಕ್ತಿಗಿಂತಲೂ ಹತ್ತುಪಾಲು ಹೆಚ್ಚಾಗಿತ್ತು.

ಪತ್ರವ್ಯವಹಾರ.

ನಮ್ಮ ಸುಳ್ಯದಲ್ಲಿ ರಹಿತವರ್ಗಕ್ಕೆ ಉಪಕಾರಕ್ಕಾಗಿ ಗವರ್ನಮೆಂಟು ಸರಕಾರವು ಸುಮಾರು ೧೦ ವರುಷಗಳಲ್ಲಿ ಒಂದು ಸಲ ರಿಜಿಸ್ತ್ರಿ ಆಫೀಸು ತೆರೆದಿತ್ತು. ಅಲ್ಲಿಯ ಟಪಾಲಿನ ಸೌಕರ್ಯಕ್ಕಾಗಿ S. W. ಐತ್ತಪ್ಪ ಎಂಬವರನ್ನು ಟಪಾಲುದಾರನಾಗಿ ನೇಮಿಸಿದರೂ ಕಕ್ಷಿಗಾರರಿಗೆ ಸಮಯೋಚಿತ ಸಮಯಕ್ಕೆ ಬೇಕಾದ ಟಪಾಲುಗಳು ಸಿಕ್ಕದೆ ರೈತವರ್ಗವು ಬಹಳ ತೊಂದರೆಗೊಳಗಾಗುತ್ತಿತು. ಈ ಸಂಗತಿಯನ್ನು ಮಾನ್ಯ ಸರಕಾರಕ್ಕೆ ಹಲವು ದಫೆಗಳಿಂದ ಬಡರಹಿತವಾದಿಯ ಪದೇ ಪದೇ ತಿಳಿಸಿದ ಸಂಗತಿ ಕುರಿತು. ಇತ್ತಲಾಗೆ ಸಮ್ಮಂಧಪಟ್ಟ ಮುಖ್ಯ ಆಫೀಸರರು ಮತ್ತು ಇತರ ರಹಿತರುಗಳಿಂದಲೂ ಊರ ನಿವಾಸಿಕರಿಂದಲೂ ತಿಳಿದು ತನಿಖೆಯಿಂದ ಪೂರ್ಣ ಸಮಾಧಾನ ಹೊಂದಿ, ಬೇರೊಬ್ಬ ಟಪಾಲುದಾರರನ್ನು ನೇಮಿಸಿದ್ದರಿಂದ ಈ ಊರ ನಿವಾಸಿಕರಿಗೆ ತೊಂದರೆಗಳಿಲ್ಲದೆ ಬೇಕಾದ ಹಾಗೆ ಸರಿಯಾಗಿ ಟಪ್ಪಾಲು ವಗೈರೆ ಸಿಕ್ಕುವುದರಿಂದ ನಾವು ಬಹಳ ಸಂತೋಷಪಡುತ್ತೇವೆ.

ತಾ. ೧೧-೧೯-೨೫. ಇಂತೀ ಸುಳ್ಯ ನಿವಾಸಿಕನ ನಮಸ್ಕಾರ.

ಬಂಟವಾಳ ಡಿವಿಜನಿನಲ್ಲಿ ಕೊನಿನಂಬ್ರಗಳು.

ಬಂಟವಾಳ ಊರಿನ ಸುತ್ತುಮುತ್ತಲೂ ಇರುವ ಸುಮಾರು ೬೦ ಹಳ್ಳಿಗಳು ಬಂಟವಾಳ ಡಿಪ್ಯುಟಿ ತಹಶೀಲದಾರ ಸಬ್ ಮೆಜಿಸ್ಟ್ರೇಟರ ಕೈಕೆಳಗಿವೆ. ಬಂಟವಾಳದಲ್ಲಿ ಸುಮಾರು ೩೦ ಮಂದಿ ಪೋಲಿಸ ಸಿಬಂದಿಯರ ದೊಡ್ಡ ಪೋಲಿಸ್ಟೇಶನೂ ಇದೆ. ಬಂಟವಾಳ ಸರ್ಕಲು ಇನ್ಸ್‌ಪೆಕ್ಟರದ ಹೆಡ್‌ಕ್ವಾರ್ಟರ್ಸ ಆಗಿದೆ. ಬಂಟವಾಳ, ಮೂಡಬಿದರೆ, ಬೆಳ್ತಂಗಡಿ, ಚಾರ್ಮಾಡಿ ಪೋಲಿಸ್ ಸ್ಟೇಶನುಗಳು ಇವರ ಕೈಕೆಳಗಿವೆ. ಬಂಟವಾಳ ಆಸ್ಪತ್ರೆಯ ಬಾಗಲಲ್ಲಿ ಯಾವಾಗ ನೋಡಿದರೂ ಹೆಣವನ್ನು ಹೊತ್ತುಕೊಂಡು ಬಂದ ಹೊಲೆಯರೂ, ಇತರ ಜಾತಿಯವರೂ ಇದ್ದೇ ಇರುವರು. ಆಚೆಯಿಂದ ಹೆಣವನ್ನು ತರುವ ಗಾಡಿ, ಈಚೆಯಿಂದ ಕೊಲೆಪಾತಕ ಮಾಡಿದವನನ್ನು ಪೋಲಿಸರು ತರುವರು. ಒಬ್ಬನ ಹಣ! ಕೊಂದವ ಅಜೀವ! ಅವನಿಗೆ ಎದೆಯಲ್ಲಿ ಗಾಯ! ಮಗ್ಗುಲಲ್ಲಿ ಗಾಯ! ಕಾಲಿಗೆ ಗಾಯ! ಕೈಬೆರಳಿಲ್ಲ! ಯಾವಾಗ ನೋಡಿದರೂ ಕೊಲೆಪಾತಕಿಯನ್ನು ಆಸ್ಪತ್ರೆ ಕೋಣೆಯಲ್ಲಿ ಮಲಗಿಸಿ ಕತ್ತಿಕೋವಿಗಳಿಂದ ಪೋಲಿಸರ ಪಾರಾ! ಕಾಲು ಪಾಲು ಪೋಲಿಸ್ ಸಿಬಂದಿ ಆಸ್ಪತ್ರೆಯಲ್ಲಿರುವ ಕೊಲೆಪಾತಕಿಗಳನ್ನೂ ಸಬ್ ಜೈಲಿನಲ್ಲಿರುವ ಬಂದಿವಾನರನ್ನೂ ಕಾಯಲಿಕ್ಕಾಯಿತು.

ಅಪರಾಧಿತರನ್ನು ಹಿಡಿದು ತರುವುದೇ ಕಷ್ಟವಲ್ಲದೆ ಎರಡು ಮೂರು ತಿಂಗಳ ವರೆಗೆ ... ಎನ್‌ಕ್ವಾಯರಿ ಸರಕಾರರು... ಒಂದು ವೇಳೆ ... ಕೊಲೆಪಾತಕಗಳು ... ಅದುದರಿಂದ ಸರಕಾರದವರು ಏನಾದರೂ ಒಂದು ಉಪಾಯ ಹುಡುಕಿ ಈ ರೀತಿಯಲ್ಲಿ ಕೊಲೆಪಾತಕಗಳು ಆಗದಂತೆ ಮಾಡುವುದು ಪ್ರಜೆಗಳ ಹಿತಕ್ಕೆ ಒಳ್ಳೇದೆಂದು ಕಾಣುತ್ತದೆ.

ಓರ್ವ ಬಂಟವಾಳ ಡಿವಿಜನ್ ನಿವಾಸಿಕನ ಅರಿಕೆ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕೂಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಟಿನ್ನಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.
ಕನರಾ ಬ್ಯಾಂಕ್ ಲಿಮಿಟಡ್, ಮಂಗಳೂರು.

ESTABLISHED JULY 1906. | 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿದೆ.

Authorised and fully paid up Capital Rs. 300,000—0—0 | ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0

Reserve and other sinking Funds „ 259,000—0—0 | ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ತಗೆದುಕೊಳ್ಳಲಾಗುತ್ತವೆ.
For further particulars apply to the Secretary.
ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳತಕ್ಕದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ನೋಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೭ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

Free! Free!! Free!!

ಪ್ರಸಿದ್ಧವಾದ

"ಕಾಮಶಾಸ್ತ್ರ"

ಈಗಲೆ ತಯಾರಾಗಿದೆ.

ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೆ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ ಎಸ್. ಪಿ. ಆಚಾರ್ಯ ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಕುಂತಿಮುದಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ

ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್.

ಮಹೋಲ್ಲಾಸಿನಿ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ

ವಜ್ರಾಂಗ-ಬಿಂದು

ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಭವಳಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಅದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಚಿಕ್ಕೋಡಿ, (ಜಿಲ್ಲಾ ಬೆಳಗಾಂವ.)

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು { ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜಿ. ಯ, ಅವರ್ಗಳಿಂದ ತಯಾರಿಸಲ್ಪಟ್ಟಿದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಕೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪ್ರತಿಗಳಿಗೆ ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಟು ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

—ಗೋಡೆಗೆ ತಗಲಿಸುವ ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಖರಾರು ಘಂಟೆಯನ್ನು ತೋರಿಸುವವು. ಇವಕ್ಕೆ ದೀರ್ಘ ಕೊಡಬೇಕಾಗಿಲ್ಲ. ಇದರಲ್ಲಿ ಅಳವಡಿಸಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ಇದು ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಅಂದವಾಗಿರುವುದು.

ಕ್ರಯ 1ಕ್ಕೆ ರೂ. 3—0—0



ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು —ತೆಗೆದುಕೊಳ್ಳಿ.—

ಇದರ ಸೇವನೆಯಿಂದ ವೀರ್ಯವು ...

ಅದ್ದರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಡಿ. ಮನ್ನಾಲಾಲ್,
ಸಾಲಂಮಿಸ್ರಿ ಮುರಬ್ಬ ಡಿಪೋ,
ಚಂದೌಸಿ. U.P.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. ...

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ‖ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ‖ ೧ ‖
ದೊರೆಯಲು ಉಪಮುರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ‖
ಗರಳಕವರಂಜಿದರೆ ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೧೯. ಮಂಗಳೂರು, ತಾರೀಕು ೧೧ನೇ ಶುಕ್ರವಾರ ದಶಂಬರ ೧೯೨೫. ಸಂಚಿಕೆ ೫೦

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. Branch: COONDAPOOR.
ಹೆಡ್ ಆಫೀಸು: ಉಡುಪಿ. ಬ್ರಾಂಚ್: ಕುಂದಾಪುರ.

ನಿಯಮಿತ ಮೂಲಧನ	ರೂ. 5,50,000—0—0.
ಚಂದಾ ಹಾಕಲ್ಪಟ್ಟ ಅಧಿಕೃತ ಮತ್ತು ವಿಕ್ರಯ ಮೂಲಧನ	ರೂ. 2,25,000—0—0.
ವಸೂಲಾತ ಮೂಲಧನ	ರೂ. 1,73,185—9—11.
ಅಡ್ವಾನ್ಸ ವರ್ಗ ಎತ್ತಿಗಳು	ರೂ. 64,700—0—0.
ಸಾ. ಸೇ. ರಂ ದರದ ಬಡ್ಡಿ ...	
ಸರಕಾರಿ ಭದ್ರತೆ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ವಿದ್ಯಮಾನಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಾತ ಮೂಲಧನ 1,73,185—9—11, ಅಡ್ವಾನ್ಸ ವ ... 64,700—0—0, ... 10,077-10-3, ... 4371—0—0, ... 93,340—10—5, ಜುಮ್ಲಾ ರೂ. 8,45,674—14—7

ಆಸ್ತಿ ವ ಹೊಣ್ಣುಗಳು.

... 4134—4—0, ... 7,43,496—6—2, ... 25,800—0—0, ... 4371—0—0, ... 41,741—14—2, ... 26,131—6—3, ಜುಮ್ಲಾ ರೂಪಾಯಿ 8,45,674—14—7.

N. Anand Rao,
Secretary.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್ ಅಗಸ್ತ್ಯ [ರಿಜಿಸ್ಟರ್ಡ್]

ಮನ್ಮಥ ಚಿಂತಾಮಣಿ ಲೇಹ.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1-9-0.

ವಿಳಾಸ:— ದೇವಣ್ಣ ನಾರಾಯಣ ಸೇಟ್,

ಪಂಡಿತ ಬಿ. ರಾಮಕೃಷ್ಣ ಬಾಳಿಗರ:

50 ವರ್ಷ ಅನುಭವದ ಸಿದ್ಧೌಷಧಗಳು

ಮಹಾ ಮದನಕಾಮೇಶ್ವರಿ ಲೇಹ—...
48 ದಿವಸದ ವರೆಗೆ ಸಾಕಾಗುವ ಲೇಹ ಸೇರು ೧ರ ರೂ. 3—0—0.
ಪ್ರತಾಪ ಕಾರಿವ್ಯಾದಿ ರಸಾಯನ—...
8 ಡಿಬ್ಬಿ ಬಾಟ್ಲಿ ಒಂದರ ಕ್ರಯ ಚರೆ ರೂ. 1—9—0.

ವಿಳಾಸ:— ಪಂಡಿತ, ಬಿ. ರಾಮಕೃಷ್ಣ ಬಾಳಿಗ, ಬಂಟವಾಳ ದ. ಕ.
ಮಂಗಳೂರು ಏಜಂಟರು:— ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ತೇರುಬೀದಿ, ಮಂಗಳೂರು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಕ್ರಯ ಡಬ್ಬಿ 1ಕ್ಕೆ 10 ಆಣೆ, ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಕುವುದರೊಳಗೆ ಗಜಕರ್ಣವು ಖಂಡಿತವಾಗಿ ವಾಸಿ ಯಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—...
ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು. 109 ಫ್ರೇರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

—ರಥೋತ್ಸವ, ವಿವಾಹ ಉಪನಯನಗಳ ಸಮಯ—
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—...
ಬ್ರಾಂಚ್ ಆಫೀಸು:—ರಥಬೀದಿ—...

ಲಿವರ್ ಮೂವ್ಮೆಂಟ್ ಗೋಲ್ಡ ವಾಚ್.

15 ಮಣಿಗಳಿದ್ದ ಈ ಗಡಿಯಾರ ಕೈಗೆ ಕಟ್ಟುವಂಥಾ ದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ಕ್ಕೆ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ಕ್ಕೆ ಕ್ರಯ ರೂ. 2—4—0.

Emarald Watch Co.,
P. T. MADRAS.

ಪ್ರಸಿದ್ಧ ಪತ್ರಿಕ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಖಂ ... ... ೨-೦-೦.

೧೨ ಪ್ಯಾಕೆಟ್ ನಾಟ ತರಕಾರಿ ಬೀಜಗಳು ೧೨ ರಖಂ ... ... ೧-೧೨-೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಖಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ಸೀಸನ್‌ಗಾಗಿ ತರಿಸಿ ಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಿಗೆ, ವಿ. ಪಿ ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತಂಹವುಳ್ಳವು ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮ್ಯೂಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ಕ್ಕೆ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಸೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

ಡಾಕ್ಟರುಗಳು ಭಿನ್ನಾಭಿಪ್ರಾಯಪಡುವಾಗ್ಯೆ ತೀರ್ಮಾನಿಸುವದು ಯಾರು?

ಅಂಥಾ ಸಂದರ್ಭಗಳಲ್ಲಿ ಡೆಂಗ್ಯು ಮುಂತಾದ ಜ್ವರಗಳನ್ನು ನಿವಾರಿಸುವಂಥಾ "ಬಾಟ್ಲಿವಾಲರ ಏಗ್ಯುಮಿಕ್ಸ್ಚರ್"ನ್ನು ಸರಾಗವಾಗಿಯೂ, ಮತ್ತು ಜ್ವರಗಳನ್ನು ಖಂಡಿತವಾಗಿ ನಿಲ್ಲಿಸುವಂಥಾದ್ದೂ, ಎಲ್ಲಾ ತರದ ಚಳಿನೋವುಗಳನ್ನು ಹೋಗಲಾಡಿಸುವಂಥಾದ್ದೂ ಆದ "ಬಾಟ್ಲಿವಾಲರ ಏಗ್ಯುಪಿಲ್ಸ್" ಇದನ್ನು ಉಪಯೋಗಿಸಿರಿ.

ಐ. ಎಮ್. ಎಸ್. ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದ್ದು. ಇದರ ಉಪಯೋಗದಿಂದ ಹೃದಯದ ಮೇಲೆ ಯಾವದೊಂದೂ ಬಾಧಕವಿಲ್ಲ. ಅರ್ಧ ಶತಮಾನದಿಂದ ಹಿಂದುಸ್ಥಾನ, ಬರ್ಮಾ, ಸಿಲೋನ್, ಆಫ್ರಿಕಾ ಇವುಗಳಲ್ಲಿ ಪ್ರಖ್ಯಾತಪಟ್ಟದ್ದಾಗಿರುತ್ತವೆ. ಅನೇಕ ಹಿಂದೀ ಪ್ರದರ್ಶನಗಳಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಪಡೆದಿರುತ್ತೆ. ಬಾಲ್ಯ ನಾಮ್ಯದಂತಿದ್ದ ಮಹಾರಾಗಿ ರಿಗಳೂ ಕೂಡ ಅದರ ಮೇಲೆ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಬಡ ಮತ್ತು ಮಧ್ಯಮ ತರಗತಿಯ ಜನರಿಗೆ ವರಪ್ರದಾನವಾಗಿದ್ದು ಸಂಚಾರ, ಪ್ರಯಾಣ, ದೇಶಾಟನೆಗಳ ಸಮಯದಲ್ಲಿ ಹತ್ತಿರದಲ್ಲಿ ಇಟ್ಟುಕೊಳ್ಳದಾಗಿರುತ್ತದೆ.

ಬಾಟ್ಲಿವಾಲರ ಬಾಲಾಮೃತ ಅಥವಾ ಟೊನಿಕ್ ಸಿರಪ್.

ಕೆಮ್ಮನ್ನು ಹೋಗಲಾಡಿಸಿ, ಎದೆನೋವನ್ನು ಶಾಂತಗೊಳಿಸಿ, ಜ್ವರವನ್ನು ಉಪಶಮನಿಸಿ, ಪಿಡ್ಡಾಭಂಗವನ್ನು ಕಡಿಮೆ ಮಾಡಿ ಧಾತುವರ್ಧನವನ್ನು ಮಾಡುವದರಲ್ಲಿ ಅತ್ಯುತ್ತಮವಾಗಿರುತ್ತದೆ. ಕಫವನ್ನು ಒಣಗಿಸಿ ಸಾಯವಾಗುವಂತೆ ಮಾಡುವುದಲ್ಲದೆ ಅದೇ ಸಮಯದಲ್ಲಿ ಒಳ್ಳೇ ಜೀರ್ಣವನ್ನು ಉಂಟುಮಾಡುವುದು. ದರ ಮೊದಲಾದ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಕಾರಿನಸ್ಥ—GAWASHAPUR, BOMBAY.

Dr. H. L. Batliwala & Co., Ltd.,
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ್ಯ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾಂಶ್ರವ ... ...
(6) ಷಟ್ಪಂಚಾಶತ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ... ... ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ... ...
(10) ಶಾಲಿವಾಹನಯಾಭ್ಯೋದಯ ಗ್ರಂಥ ... ...
(11) ಸವ್ಯಾಖ್ಯಾನ ಕಾಲಾಮೃತ... ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ... ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ವೈದುನರಾಮನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುವಲಯ ರಾಮನ ಕಥೆ ... ...
(8) ಕೃಷ್ಣದಾಮಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಚರಿತೆಯು ... ...
(1[illegible]) ಜ್ಯೋತ್ಸ್ನ ಯಕ್ಷಗಾನ ...

(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀಪಾಕ್ಷಿಮೇದ ಕಥೆ ... ...
(18) ಚಂದ್ರಮಾಗಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷಾಗೃಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾದವಂಚ ಕಥೆ ...
(26) „ ಗೋವಿನ ಚರಿತ್ರೆ ... ...
(27) „ ದುಶ್ಯಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ...
(29) „ ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅದ್ವೈತ ವಿಚಾರ ... ...
(4) ಭಕ್ತಮಹಿಮೆ ... ...
(5) ಪ್ರಬಂಧ ಮುಕ್ತಾವಳಿ ... ...
(1) ಸಂಕೀರ್ತನಾಮೃತಸಾರ ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗಾರೀಹಾಡು ... ...
(5) ಉದ್ಯಾನೀಕನ ಹಾಡು ... ...
(6) ಯಕ್ಷಗಾನ ಗೀತಹಾಡು ... ...
(7) ಜನಕಭಾನ ಕುಬೇರಭಾಸರ ಕೀರ್ತನೆಗಳು ...
(8) ಶ್ರೀಗುರು ಹಾಡು ... ...
(9) ಭಜನೆಯ ಪದಗಳು ... ...

ಪುಸ್ತಕಗಳು ದೊರೆಯುವ ಸ್ಥಳ:— ಶಾರದಾ ಛಾಪಖಾನೆ,
ರಥ ಬೀದಿ, ಮಂಗಳೂರು.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಮಾರ್ಗಶಿರ ಬ। ೧೨ ಶನಿವಾರದಿಂದ ಕ್ರೋಧನ ಸಂವತ್ಸರದ ಪುಷ್ಯ ಶು। ೩ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ವೃಶ್ಚಿಕ ಜಾರ್ದೆ.)

ತಾರೀಕು	ವಾರ	ತಿ.	ಘಳಿಗೆ.	ನಕ್ಷತ್ರ	ಘಳಿಗೆ.	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
12	ಶನಿ	೧೨	೫೮. ೨	ಸ್ವಾತೀ	೫೦.೪೩	೨೭	6.45	6. 4
13	ರವಿ	೧೩	೫೬. ೧	ವಿಶಾಖಾ	೫೦.೧೬	೨೮	6.45	6. 4
14	ಸೋಮ	೧೪	೫೨.೪೬	ಅನುರಾಧಾ	೪೮.೪೪	೨೯	6.46	6. 4
15	ಕುಜ	●	೪೮.೩೨	ಜ್ಯೇಷ್ಠಾ	೪೬.೩೨	೩೦	6.46	6. 5
16	ಬುಧ	೧	೪೩.೨೮	ಮೂಲಾ	೪೩.೧೪	೧	6.47	6. 5
17	ಗುರು	೨	೩೮.೩೦	ಪೂ. ಷಾ.	೩೯.೩೨	೨	6.47	6. 6
18	ಶುಕ್ರ	೩	೩೨.೪೬	ಉ. ಷಾ.	೩೩.೪೬	೩	6.48	6. 6

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
27	89—3	65—4	—	—
28	89—0	67—8	—	—
29	90—7	73—2	—	—
30	90—6	75—8	—	—
1	90—7	76—4	—	—
2	93—8	76—7	0—04	—
3	93—4	77—3	—	—

ಮಂಗಳೂರಿನ ಪೇಟೆ ಧಾರಣಿ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಸಿ		9— 0	9—14
ಗುಡ್ಡು	...	8— 8	8—12
ರಾಶಿ ಸುಗ್ಗಿ	...	8— 0	8— 6
ಅಮ್ಮರ್ ಬೆಳ್ತಿಗೆ	...	8—12	9— 8
ಹೊಸ ರಾಶಿ	...	7— 8	8— 0
ರಂಗೂನು ಬೆಳ್ತಿಗೆ ಗೋಣಿ ೧	...	14— 0	14— 8
ಗೋದಿ ಗೋಣಿ ೧ಕ್ಕೆ	...	18— 8	20— 8
ಹುರುಳಿಗೋಣಿ ೧ಕ್ಕೆ	...	9— 4	9— 8
ಕಡಲೆಗೋಣಿ ೧ಕ್ಕೆ	...	12— 0	15— 0
ತೊಗರಿಗೋಣಿ ೧ಕ್ಕೆ	...	14— 0	14— 8
ತೊಗರಿಬೇಳೆ ಗೋಣಿ ೧ಕ್ಕೆ	...	16— 8	22— 0
ಉದ್ದುಗೋಣಿ ೧ಕ್ಕೆ	...	17— 8	17— 8
ಹೆಸರುಗೋಣಿ ೧ಕ್ಕೆ	...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ	...	51— 0	55— 0
ಉಪ್ಪು ಗೋಣಿ ೧ಕ್ಕೆ	...	4— 0	4— 8
ಕೊಬ್ರಿ ಖಂಡಿ ೧ಕ್ಕೆ	...	120— 0	125— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	49— 8	—
ಎಳ್ಳಿಂಡಿ ಖಂಡಿ ೧ಕ್ಕೆ	...	45— 0	—
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	8—12	9— 8
ಎಳ್ಳೆಣ್ಣೆ ಮುಡಿ ೧ಕ್ಕೆ	...	8— 0	11— 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	...	8-8-0	—
ದೋರಿಸ ಸಕ್ಕರೆ ಮುಡಿ ೧ಕ್ಕೆ	...	4— 8	4—10
ಊರ ಮೆಣಸಿನಕಾಯಿ ಮುಡಿ ೧ಕ್ಕೆ	...	8— 0	9— 0
ಸಾಸಿವೆ ಮುಡಿ ೧ಕ್ಕೆ	...	9— 0	—
ಕೊತ್ತಂಬರಿ ಮುಡಿ ೧ಕ್ಕೆ	...	3— 6	4— 2
ಅಡಿಕೆ ಖಂಡಿ ೧ಕ್ಕೆ	...	345— 0	—
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	275— 0	290— 0
ಕಾಳುಮೆಣಸು ಖಂಡಿ ೧ಕ್ಕೆ	...	360— 0	—
ಯಾಲಕ್ಕಿ ಮುಡಿ ೧ಕ್ಕೆ	...	45— 0	—
ಗೇರುಬೀಜ ಮುಡಿ ೧ಕ್ಕೆ	...	4— 0	—
ಕಲ್ಲಿದ ಖಂಡಿ ೧ಕ್ಕೆ	...	45— 0	55— 0
ತಾಮ್ರ ತಗಡು ಮುಡಿ ೧ಕ್ಕೆ	...	16—10	16—12
ತಾಮ್ರ ಪಾತ್ರೆಗಳು ಮುಡಿ ೧ಕ್ಕೆ	...	21— 0	—
ಚೀನಿ ಬೆಳ್ಳಿ ಸೇರು ೧ಕ್ಕೆ	...	18—10	
ಹಿತ್ತಾಳಿ ತಗಡು ಮುಡಿ ೧ಕ್ಕೆ	...	16— 8	
ಜಿನಸು		19— 6	

ಕನ್ನಡಿಗರೇ! **ವಸಂತ.** ಕನ್ನಡಿಗರೇ!

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . ವಸಂತ
ಸಮಾಜಸುಧಾರಕನೆಂದರೆ . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . ವಸಂತ
ದೇಶವಿದೇಶ ಬಂಧುವೆಂದರೆ . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ . . . . ವಸಂತ
ದೇಶಭಕ್ತನೆಂದರೆ . . . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸ್ವಾಜನ) ಪುಟಗಳನ್ನು ಒಳಕೊಂಡ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3-0-0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2-8-0.
„ ಸ್ಥಳೀಕರಿಗೆ ... „ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ತ್ವರೆ ಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಮವ್, ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮಾದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—
ಶಾರದಾ ಛಾಪಖಾನೆ,
ಮಂಗಳೂರು

... ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾ...
ಸಿ. ಎಫ್. ಎಮ್. ಯು. ಯು... ಎಸ್.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೩೩ ತಂಬುಚೆಟ್ಟಿ ಬೀದಿ, ಮದ್ರಾಸ್.

ಶುದ್ಧ ರೇಶಿಮೆಯ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಷ್ಮೆ ಮಡಿಗಳು, ಶಾಲ್ಮರ್ಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳಿಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Advertisers Note.

A SPECIAL ISSUE OF SPECIAL IMPORTANCE
AND
Concetrated interest with wide circulation.

This is your Opportunity.

Our fortnightly paper, THE SARASWATH will appear in the beginning of December, in a most attractive special issue printed on glaze paper, art paper bound and profusely illustrated.

ADVERTISE & REAP THE BENEFITS OF VERNACULAR ADVERTISEMENT.

RATES MODERATE.

Apply:— **Secretary,**
THE SARASWATH,
UDIPI.

...ಸು.

...ಮುನ್ಸಿಫ್ ಕೋರ್ಟಿನಲ್ಲಿ.

ಓ. ಪಿ. ನಂಬ್ರ 96/25.

ಮಿಜಾರ ಮಂಜುನಾಥ ಭಂಡಾರಿ—ಅರ್ಜಿದಾರ.

ಎದ್ರಿ

ಸುಂದರಿ ಯಾನೆ ಸೀತಾಬಾಯಿ—ರೆಸ್ಪೊಂಡೆಂಟ್.

ತನ್ನ ಮೃತಪಟ್ಟ ಮಗ ಮಿಜಾರು ವಾಮನ ಭಂಡಾರಿ ಹೆಸರಲ್ಲಿರುವ ನೆಶನಲ್ ಇಂಡಿಯನ್ ಲೈಫ್ ಇನ್ಸೂರೆನ್ಸ್ ಕಂಪೆನಿ ಪೋಲಿಸಿ ನಂಬ್ರ 9706 W. E. ಪ್ರಕಾರ ಬರತಕ್ಕ ರೂಪಾಯಿ 500ನ್ನು ವಸೂಲುಮಾಡುವರೆ ತನಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರನು ಮಾಡಿದ ಅರ್ಜಿಯು ತಾ. 8—1—'26ನೇ ಪೂರ್ವಾಹ್ನ ಘಂಟೆ 11ಕ್ಕೆ ತನ್ನಿಗೆ ಇಟ್ಟಿಯದೆ ಎಂತ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗಿಯದೆ.

Puttur, 8—12—'25 } H. PUNDARIK BHAT, *Vakil for Petitioner.*

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. 114/1925.

ಗಂಗಮ್ಮ— ಅರ್ಜಿದಾರಳು,

ಮತ್ತು

ರಾಮಕೃಷ್ಣ ಉಪಾಧ್ಯಾಯ— ರೆಸ್ಪೊಂಡೆಂಟ

ಸದರಿ ಮೇಲಿನ ವ್ಯವಹರಣೆಯಲ್ಲಿ ಮೈನರು ಕೃಷ್ಣ ಮತ್ತು ಸುಬ್ರಾಯ ಇವರ ದೇಹದ ಮತ್ತು ಆಸ್ತಿಯ ಗಾರ್ಡಿಯಾನಳಾಗಿ ನೇಮಿಸಬೇಕೆಂತ ಅರ್ಜಿದಾರಳು ಅರ್ಜಿಕೊಟ್ಟಿರುತ್ತಾಳೆ. ಸದರಿ ಅರ್ಜಿಯು ಈ ಕೋರ್ಟಿನಲ್ಲಿ ತಾರೀಕು 14—12—1925ಕ್ಕೆ ತನಿಕಿಗೆ ಇಟ್ಟಿರುತ್ತದೆ. ಆಕ್ಷೇಪವಿದ್ದವರು ಈ ಕೋರ್ಟಿಗೆ ಸದರಿ ತಾರೀಕಿನೊಳಗೆ ತಿಳಿಸತಕ್ಕದ್ದು.

Mangalore, 9—12—1925 } U. C. S. BHAT. *Vakil for Petitioner.*

ನೋಟೀಸು.

ಉಡುಪಿ ತಾಲೂಕು ಕಾಡೂರು ಗ್ರಾಮದ ಮುಂಡಾಡಿ ಮಹಾಬಲ ಶೆಟ್ರು, ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ:—

ನಾನು ಮತ್ತು ಹೆಬ್ಬಾಡಿ ರಾಮಣ್ಣಶೆಟ್ರು ಎಂಬವರೂ ಕೂಡ ಕಾಡೂರು ಗ್ರಾಮದಲ್ಲಿ ನಡಿಸಿಬರುವ ಕಾಡೂರು ಕಂಪೆನಿ ಭಂಡಸಾಲೆಯಲ್ಲಿ, ಇದೇ ದಶಂಬರ ತಾರೀಕು ನಾಲ್ಕರಲ್ಲಿ ಪಾಲಾಗಿ, ಸದರಿ ಕಂಪೆನಿಯ ಭಂಡಸಾಲೆಯ ಊಳಿಗದಲ್ಲಿ ನಾವಿಬ್ಬರೂ ಒಪ್ಪಿಗೆ ಕೊಟ್ಟು, ಹೆಬ್ಬೆಟ್ಟು ಮೋಹರು ನಿಶಿದಸ್ಕತು ಕೊಟ್ಟ ಪ್ರಕಾರ, ಕಂಪೆನಿಯ ಯಾವತ್ತು ಲೇಣೆದೇಣೆಗಳ ಜವಾಬ್ದಾರಿಯನ್ನು ಸದರಿ ಹೆಬ್ಬಾಡಿ ರಾಮಣ್ಣ ಶೆಟ್ರೇ ವಹಿಸಿಕೊಂಡಿರುವುದರಿಂದ, ಇನ್ನು ಮುಂದೆ, ಸದರಿ ಕಂಪೆನಿಗೆ ಸಮ್ಮಂಧಪಡುವ ಯಾವ ವಸೂಲಿಗಾಗಲೀ, ಪಾವತಿಗಾಗಲಿ ನಾನು ಬದ್ಧನಲ್ಲ. ಎಲ್ಲದಕ್ಕೂ ಹೆಬ್ಬಾಡಿ ರಾಮಣ್ಣ ಶೆಟ್ರು ಬದ್ಧರಿರುತ್ತಾರೆ. ಇನ್ನು ಯಾರೊಬ್ಬರು ನನ್ನ ಜವಾಬ್ದಾರಿಯಲ್ಲಿ ಎಂದು ಮಾಲು ಕೊಟ್ಟರೆ, ಅದರ ಐವೇಜಿನ ಪಾವತಿಗೆ ನಾನು ಹೊಣೆಯಲ್ಲ.

ಕಾಡೂರು ಗ್ರಾಮ, 8—12—1925 } ಮಹಾಬಲಸೆಟ್ಟಿ ರುಜು.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ.

O. S. No. 610/1925.

1 ಚಿಪ್ಪಣ್ಣಕಾರ ವೆಂಕಟೇಶ ಭಟ್ಟ
2 ಗೋತಿ ವೆಂಕಟೇಶ ಭಟ್ಟ } ವಾದಿರು.

ಶಿಬಾಜೆ ಗಣಪತಿ ಭಟ್ಟ— ಪ್ರತಿವಾದಿ.

ಇವರೊಳಗೆ

ಪಯ್ಯಂತೆಗೆ ಗೋವಿಂದ ಭಟ್ಟನು ರಿಜಿಸ್ತ್ರಿ ನಿಶಿ ಕಳೆದ ತಾರೀಕು 5—2—1909ರಲ್ಲು ಬರದಿಟ್ಟ ವೀಲುನಾಮೆ ಪ್ರಕಾರ ಮಾಳ ಗ್ರಾಮದ ಶ್ರೀ ಪರಶುರಾಮ ದೇವರ ಭಂಡಾರಕ್ಕೆ ಅಸಲು ರೂಪಾಯಿ 184-0-0 ವ ಬಡ್ಡಿ ವಗ್ಯೆರೆ ವಸೂಲು ಮಾಡುವ ಬಗ್ಗೆ ಸದರಿ ಭಂಡಾರದ ಕಡೆ ಮೊಕ್ತೇಸರರಾದ ವಾದಿರು ಈ ದಾವಾ ದಾಖಲು ಮಾಡಿರುವದರಿಂದ ಆ ಕುರಿತು ಯಾರಾದರೂ ಆಕ್ಷೇಪಿಸುವ ಪಕ್ಷದಲ್ಲಿ ಅಂಥಾ ಆಕ್ಷೇಪಗಳನ್ನು ಇದೇ ತಿಂಗಳ ತಾರೀಕು 22ರ ಒಳಗೆ ಮೇಲೆ ಕಾಣಿಸಿದ ಕೋರ್ಟಿನಲ್ಲಿ ಜಾಹೀರುಮಾಡಬೇಕಾಗಿ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗುತ್ತದೆ.

ತಾ. 4-12-1925. K. Santhay Kamath, *Pleader for Plaintiffs,*

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗ್ಯೆರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,

ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಆಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

"ಸಾಹಿತ್ಯ ಸರಸ್ವತಿ."

(ವಿನೋದ)

ಲೇಖಕ:— ವಿನೋದಾಭಿಲಾಷಿ.

ನಾನು ಕವಿಕುಲತಿಲಕನಲ್ಲ, ವಿದ್ಯಾಭೂಷಣನಲ್ಲ, ಕಾವ್ಯಾರ್ಜುನನಲ್ಲ, ವಾಙ್ಮಯ ಮಹೋದಧಿಯೂ ಅಲ್ಲ. ಮತ್ತಾರೆನ್ನುವಿರೊ? ಆವ ಬಿರುದನ್ನುಚ್ಚರಿಸಲು ಅಮಂದಾನಂದ ಸಂದೋಹದಿಂದ ನನ್ನ ದೇಹವು ಪುಲಕಿತವಾಗಿ ರೋಮಾಂಚಗಳುಂಟಾಗುವುವೋ ಆವ ಬಿರುದನ್ನು ಬರೆಯುತ್ತಿರಲು ಚಂದ್ರೋದಯ ಕಾಲದಲ್ಲಿ ನೀಲ ವಿಶಾಲ ಸಾಗರದ ಜಲ ರಾಶಿಯು ಉಕ್ಕೇರಿ ಬರುವಂತೆ, ನನ್ನ ಹೃದಯದಲ್ಲಿ ತರಂಗಗಳೇಳುವವೋ, ಆವ ಬಿರುದು ವೇದವಾಕ್ಯದಂತೆ ಸದಾ ಪಠನಸಾಧನವಾಗಿರುವುದೋ ಆ ಮೋಹಕವಾದ, ಆ ಮನೋಹರವಾದ, ಆ ಸರ್ವಾಂಗಸುಂದರವಾದ, ಆ ಸರ್ವ ಜನ ಮಾನ್ಯವಾದ "ಸಾಹಿತ್ಯಸರಸ್ವತಿ" ಎಂಬುದೇ ನನ್ನ ಅಭಿಮಾನಾಸ್ಪದವಾದ ಬಿರುದು. ಅನೇಕರು ಅನೇಕ ತರದ ಬಿರುದು ಮಾಲಿಕೆಗಳಿಂದ ತಂತಮ್ಮನ್ನು ಕೃತಾರ್ಥರೆಂದು ತಿಳಿದುಕೊಳ್ಳಬಹುದು. ಆದರೆ ನನ್ನ ಬಿರುದು ಇದಕ್ಕಿಂತಲೂ ಉಚ್ಚತರವಾದ ಯೋಗ್ಯತೆಯುಳ್ಳದ್ದಾಗಿರುವುದೆಂದು ನನ್ನ ಭಾವನೆ ಇರುವುದು. ಆ ನನ್ನ ಪ್ರಿಯವಾದ ಬಿರುದು ತಾನೇ ತಾನಾಗಿ ಬಂದಿರುವುದಿಲ್ಲ. ಹಾಗೆ ಬಂದಿದ್ದರೆ ಅದಕ್ಕಿಷ್ಟು ಮಹತ್ವವೂ ಬರುತ್ತಿದ್ದಿಲ್ಲ. ಆ ದಿವ್ಯ ಬಿರುದನ್ನು ಧರಿಸಿಕೊಳ್ಳಲು ಪೂರ್ವಕೃತಸುಕೃತ ರಾಶಿಗಳೇ ಸಹಾಯಕಗಳಾಗಿರಬೇಕಲ್ಲದೆ ಅನ್ಯಥಾ ಸಾಧ್ಯವಿಲ್ಲ. ಆದುದರಿಂದ, ಮಹಾಜನರೇ! ನಾನು ಮಾಡಿದ ಧನವ್ಯಯವೂ, ತಜ್ಜ್ಞರ ಅನುಭವಪರಿಷ್ಕೃತವಾದ ಸೂಚನೆಯೂ, ಹಗಲಿರುಳೆನ್ನದೆ ನಾನೆಸಗಿದ ಪರಿಶ್ರಮವೂ ಆ ಮುದ್ದು ಬಿರುದಿನ ಲಾಭಕ್ಕೆ ನಿದಾನಗಳೆಂದು ವಾದಿಸುವುದಾದರೆ ಅದು ಸಮಂಜಸವೆನಿಸಲಾರದು.

ಮನುಷ್ಯ ಜಾತಿಗೆ ನಿಸರ್ಗಸಿದ್ಧಕಾದ ಕೆಲವು ಕಾಮನೆಗಳಿರುತ್ತವೆಂದು ಹೇಳಿದರೆ ತಪ್ಪಾಗದಷ್ಟೆ. ಅಂತೆಯೇ ನನಗಾದರೂ ಕೆಲವು ಆಶೆಗಳಿದ್ದುವು. ಅವುಗಳಲ್ಲಿ ಬಿರುದುಗಳ ಆಶೆಯೂ ಒಂದಾಗಿದ್ದಿತು. ಈಗಿನ ನಾಗರಿಕ ಪಂಡಿತರು ಬಿ. ಎ., ಎಮ್, ಎ, ಇತ್ಯಾದಿ ಬಿರುದುಗಳನ್ನು ಪಡೆದು ಧನ್ಯ ಮನುಷ್ಯರಾಗುತ್ತಿರುವರು. ಲೋಕವೇ ಧನಕೆಯ ಕಡೆಗೋಡುತ್ತಿರುವಾಗ ನಾನಾದರೂ ಏತಕ್ಕೆ ಜಡನಂತೆ ಸುಮ್ಮನಿರಬೇಕು? ನನ್ನ ಕೈಲಾದ ಪ್ರಯತ್ನಗಳನ್ನು ಮಾಡಿದೆನು. ಹಲವು ಬಿರುದ ಧಾರಿಗಳ ಪ್ರಸನ್ನತೆಗೆ ಪಾತ್ರನಾದೆನು. ಅವರ ಸ್ನೇಹಬಲದಿಂದ ಭರತಖಂಡದಲ್ಲಿಯೇ "ನಿಖಿಲ ಭಾರತ ಪಂಡಿತ ಪರಿಷತ್" ಎಂಬದೊಂದು ಸಂಸ್ಥೆಯದೆಯೆಂದೂ, ಪರಮಪಂಡಿತರಿಗೆ ತಕ್ಕುದಾದ ಬಿರುದುಗಳನ್ನು ಕೊಡಲು ಸನ್ನದ್ಧವಾಗಿರುವುದೆಂದೂ ತಿಳಿಯಬಂದಿತು. ಬಡವನಿಗೆ ನಿಧಿಯು ಸಿಕ್ಕಂತೆ ನನಗೆ ಆ ಪರಮಪೂಜ್ಯ "ಪರಿಷತ್ತು" ತಾರಕವೆಂದು ತೋರಹತ್ತಿತು. ಬಳಿಕ ಕೇಳುವುದೇನು? ಪರಿಷತ್ತಿನವರಿಗೆ ನನ್ನ ಪಾತ್ರತಾವಗುಂಫಿತವಾದ ವಿಜ್ಞಾಪನಾಪತ್ರಿಕೆಯನ್ನು ಅನೇಕ ದೊಡ್ಡ ದೊಡ್ಡ ಬಿರುದಧಾರಿಗಳ ಯೋಗ್ಯತಾಪತ್ರಗಳೊಡನೆ ಕಳುಹಿಸಿದೆನು. ಆಯಾಯ ಯೋಗ್ಯತಾಪತ್ರಿಕೆಗಳನ್ನು ಸಂಪಾದಿಸಿಕೊಳ್ಳಲು ಏನಿಲ್ಲೆಂದರೂ ಒಂದು ತಿಂಗಳಿನ ನಿರಂತರ ಪರಿಶ್ರಮವಾಗಿರುವುದೆಂದು ಸ್ವಾನುಭವದ ಧೈರ್ಯದಿಂದ ಹೇಳಬಲ್ಲೆನು. ಕೈಕೆಸರಾಗದೆ ಬಾಯಿ ಮೊಸರಾಗುವುದೆ? ಮಿತ್ರರೇ! ನಿಮ್ಮೊಳಗಾರಾದರೂ ಬಿರುದುಗಳ ನ್ನಾಶಿಸುವವರಿದ್ದರೆ ಇದು ಸುಸಂದರ್ಭ!! ಮಿತ್ರನ ಮಾತನ್ನು ನಂಬಿರಿ!!!

ಆಹಹ! ಆ ಪರಿಷತ್ತಿನವರ ಕಾರ್ಯದಕ್ಷತೆಯನ್ನೇನು ಬಣ್ಣಿಸಲಿ? ಎಣಿಸಿ ಎಂಟೇ ದಿನಗಳೊಳಗೆ ಅಂಚೆಯ ಪೇದೆಯು ಪತ್ರವೊಂದನ್ನು ತಂದು ಕೊಟ್ಟನು. "ಪರಿಷತ್ತ"ನವರದೆಂದೇ ಮನಸ್ಸು ಒದನುಡಿಯುತ್ತಿತ್ತು. ಆದರೇನು? ಇಂಗ್ಲಿಷ್ ಭಾಷೆಯಲ್ಲಿ ಬರೆಯಲ್ಪಟ್ಟಿತ್ತು. ಅಮೋಘ ಬಿರುದು ಮಾಲಿಕೆಗಳ ದಾನದ ಮೂಲಕ ಗುಣಗ್ರಾಹಿಗಳಾಗಿರುವ ಆ ಪರಿಷತ್ತಿನ ಕಾರ್ಯದರ್ಶಿಯವರಿಗೆ ಇಂಗ್ಲಿಷ್ ಹೊರತು ಇತರ ದೇಶಭಾಷೆಗಳ ಜ್ಞಾನವಿದ್ದಿಲ್ಲವೆಂದು ಹೇಳುವ ಎದೆಗಾರಿಕೆಯು ಆರಲ್ಲಿರುವುದು? ಆದುದರಿಂದ ಇಂಗ್ಲಿಷಿನಲ್ಲಿ ಬರೆದುದು ರಾಜನೀತಿಯ ಉದಾತ್ತ ಭಾವನೆಯೆಂದು ಹೇಳುವುದು ಹೆಚ್ಚು ಯೋಗ್ಯವಾಗಿ ಕಾಣುವುದು. ನನಗೆ ಇಂಗ್ಲಿಷ್ ಓದಲು ಬಾರದಿದ್ದರೂ ನನ್ನ ಹಲವು ಮಿತ್ರರಿಗೆ ಬರುತ್ತಿದ್ದಿತು. ಮನಸ್ಸು ಲವಲವಿಕೆಯಿಂದ ನಲಿಯುತ್ತಿತ್ತು. ಹೃದಯವು ಬಡಬಡಿಯುತ್ತಿತ್ತು. ಮಿತ್ರನ ಬಳಿಗೆ ಒಂದೇ ಉಸುರಿನಲ್ಲಿ ಓಡಿಹೋಗಿ ಪತ್ರವನ್ನು ಓದಿ ಹೇಳಲು ಭಿನ್ನವಿಸಿದೆನು. ಮಿತ್ರನು ಓದಿ ನನಗೆ "ಸಾಹಿತ್ಯಸರಸ್ವತಿ" ಎಂಬ ಬಿರುದನ್ನು ದಯಪಾಲಿಸಿರುವರೆಂದೂ ಇಪ್ಪತ್ತೈದು ರೂಪಾಯಿಗಳಿಗೆ ಆ "ಬಿರುದ ಶಾಸನ"ವನ್ನು ಟಪ್ಪಾಲದ್ವಾರಾ ಕಳುಹಿಸಿರುವರೆಂದೂ ಹೇಳಿದನು. ಬಿರುದನ್ನು ಕೇಳಿ ಹಿಡಿಸಲಾರದಷ್ಟು ಆನಂದವಾಯಿತು. ಮುಹೂರ್ತ ಮಾತ್ರ ದೇಹದ ಭಾನವೇ ಉಳಿಯಲಿಲ್ಲ. ಮರುಕ್ಷಣದಲ್ಲಿಯೇ ಆ ಇಪ್ಪತ್ತೈದು ರೂಪಾಯಿಗಳು ಸ್ಮೃತಿಪಥವನ್ನೈದಿ ಹೃದಯಾಂತರಾಳದಲ್ಲಿ ಮರುದನಿತ್ತಿದು ಸಂತೋಷದ ಸ್ಥಳದಲ್ಲಿ ಅನಿರ್ವಚನೀಯವಾದ ಯಾತನೆಯನ್ನು ತಂದಿಕ್ಕಿದುವು. ಕಡೆಗೆ "ಕಷ್ಟಪಡದೆ ಇಷ್ಟವಿಲ್ಲ"ವೆಂಬ ನೀತಿಯ ಮಾತನ್ನು ನೆನವರಿಸಿ "ಹಣವು ನಶ್ವರವು; ಆದರೆ ಬಿರುದಿನಿಂದ ಬರುವ ವಿಶಾಲ ಕೀರ್ತಿಯು ಶಾಶ್ವತವು" ಎಂದು ಸಮಾಧಾನ ಮಾಡಿಕೊಂಡೆನು.

ಹಲವರು ಇಂತಹ ಬಿರುದುಗಳನ್ನು ತುಚ್ಛೀಕರಿಸುತ್ತಿರುವರೆಂದೂ ತಿಳಿದಿರುವೆನು. ಪರರನ್ನು ತುಚ್ಛೀಕರಿಸುವವರು ಆತ್ಮಗೌರವ ಶೂನ್ಯರೆಂದು ಬಲ್ಲವರು ಹೇಳುತ್ತಿರುವರು. ಹೀಗಿರುತ್ತಿರಲು ಅವರ ತುಚ್ಛೀಕಾರವು ಅವರ ಸೆರಗಿನೊಳಗೇ ಬೀಳುತ್ತಿರುವುದು, ಅದೂ ಅಲ್ಲದೆ ಈ ಬಿರುದನ್ನು ಅಂತಹರ ಕೃತಾರ್ಥತೆಗೋಸುಗ ನಾನು ತರಿಸಿದವನಲ್ಲ. ಆದುದರಿಂದ ತಮಗಿಲ್ಲದ ವಸ್ತುವಿನ ಮೇಲೆ ಅಸೂಯೆಪಡುವುದು ಅವರ ಮಾನಕ್ಕೆ ಹಾನಿಕರವಾಗಿರುವುದು.

ವರ್ತಮಾನ ಪತ್ರಗಳಲ್ಲಿಯೂ ನಾನೇ ಗುಪ್ತ ಹೆಸರಿನಿಂದ ನನ್ನ ಬಿರುದ ಲಾಭದ ವರ್ಣನಾತಿಶಯಗಳನ್ನು ಬರೆದು ಪ್ರಕಟಿಸುವಂತೆ ಮಾಡಿದೆನು. ಆಹಾ! ಆ ನನ್ನ ಮುದ್ದಿನ ಮುದ್ದೆಯಾದ ಬಿರುದೇ! ಅದನ್ನು ನಾನೆಷ್ಟು ಪ್ರೀತಿಸುವೆನೆಂದು ಬಲ್ಲಿರಾ? ನನ್ನ ಮನೆಯ ವರ್ಗ ಊಳಿಗ ಪುಸ್ತಕಗಳ ಅಂಚುಗಳಲ್ಲಿಯೂ ನನ್ನ ಪ್ರತಿಯೊಂದು ಪುಸ್ತಕದ ಹಾಳೆಗಳಲ್ಲಿಯೂ, ಆ ಬಿರುದನ್ನು ಕಾಣಬಹುದು. ಆದುದರಿಂದ, ಭ್ರಾತೃರೇ! ಆ ಬಿರುದಿನಿಂದುಂಟಾಗುವ ಆನಂದಾತಿಶಯಗಳನ್ನು ಅನುಭವಿಸಿಯೇ ತೀರಬೇಕಲ್ಲದೆ ಅಂತಹ ಅನುಭವವನ್ನು ಕಲ್ಪಿಸುವುದೂ ಸಾಹಸದ ಮಾತಾಗುವುದೆಂದು ಹೆದರಿಕೆಯಿಲ್ಲದೆ ಹೇಳಬಲ್ಲೆನು. ಅಂತಹ ಬಿರುದುಗಳನ್ನು ತುಚ್ಛೀಕರಿಸುವ ಜಾಣರು ಒಮ್ಮೆ ದೈವವಶಾತ್ ಹೊಂದಿ ನೋಡಲಿ! ಆಗ ತಾನೆ ಸವಿಯು ತಿಳಿಯುವುದು.

ಅಪೂರ್ವ ಸಂದರ್ಭ.

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚುಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ ಮಾರಲ್ಪಡುವವು.

ರೂ. 15—12—0ರ ವಾಚು ರೂ. 7—8—0 ಕೊಡಲ್ಪಡುವುದು.

ಈ ವಾಚುಗಳು ಬಲವಾದಕ್ಕೆ ಮತ್ತು ಹೆಸರುಪಟ್ಟ swiss made, ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

ಬೇಕಾದವರು ತ್ವರೆಮಾಡಿರಿ.

ವಿಲ್ಸನ್ ವಾಚ್ ಕೊ.,
[illegible]

ವಿದೇಶ ವರ್ತಮಾನ.

—ಪರ್ಶಿಯಾ ದೇಶವನ್ನು ಆಳುತ್ತಿದ್ದ ಖಜಾರ ವಂಶದ ಶಹಾರನ್ನು ಸಿಂಹಾಸನದಿಂದ ತಳ್ಳಿ ಅವರ ಬದಲಾಗಿ ರೆಜಾ-ಖಾನ-ಪೆಲವಿ ಎಂಬ ಬೇರೆ ಅರಸರನ್ನು ನೇಮಿಸುವ ವರೆಗೆ ಪರ್ಶಿಯಾದೇಶದ ಶಹಾರಾಗಿ ನೇಮಿಸಿರುತ್ತಾರೆ. ಇವರು ರಾಜಸಭೆಯ ಸಭಿಕರನ್ನು ಕೂಡಿಸಿ ಹೊಸ ಅರಸರನ್ನು ಚುನಾಯಿಸುವ ಅಧಿಕಾರವನ್ನು ಅವರಿಗೆ ವಹಿಸಿಕೊಟ್ಟು ರಾಜದರ್ಬಾರಿನಿಂದ ಅರಮನೆಗೆ ತೆರಳಿದರು.

—ಈಗ ಮಕ್ಕಾ ಪಟ್ಟಣವನ್ನು ಸಂದರ್ಶಿಸಲಿಕ್ಕೆ ಹೋದ ಖಿಲಾಫತ್ ಕಮಿಟಿಯ ಮೆಂಬರರಿಗೆ ಹೆಜಾಜನ ಸುಲ್ತಾನರಾದ ಇಬನ್‌ಸೌದನು ತಾನು ಮದಿನದಲ್ಲಿ ಯುದ್ಧದ ಸಮಯ ಹಾಳಾದ ಮಸೀದಿಗಳನ್ನು, ಸಮಾಧಿಗಳನ್ನೂ ದುರುಸ್ತಿಪಡಿಸುತ್ತೇನೆಂದೂ, ಅದಲ್ಲದೆ ಮದಿನಾ ಪಟ್ಟಣದ ನಿವಾಸಿಕರ ಕಷ್ಟಪರಿಹಾರಕ್ಕಾಗಿ ಹತ್ತುಸಾವಿರ ಪೌಂಡುಗಳನ್ನು ಕಳುಹಿಸುತ್ತೇನೆಂದೂ, ತಿಳಿಸಿರುವರು.

—ಸೀರಿಯದಲ್ಲಿ ಫ್ರೆಂಚರಿಗೂ ಡ್ರೂಸರಿಗೂ ಯುದ್ಧವು ಕಠಿಣತರದಲ್ಲಿ ನಡಿಯುತ್ತಿದೆ. ಅನೇಕ ಹಳ್ಳಿಗಳ ಮೇಲೆ ಬೊಂಬನ್ನು ಹಾಕಿರುವರು.

—ಹೌಸ್ ಒಫ್ ಕೋಮನ್ಸಿನಲ್ಲಿ ಬ್ರಿಟಿಷ ಸರಕಾರದ ಸಾಲದ ಕುರಿತು ಒಂದು ಪ್ರಶ್ನೆಯನ್ನು ಚರ್ಚಿಸುತ್ತಿರುವಾಗ್ಯೆ ಬ್ರಿಟಿಷರು ಅಮೇರಿಕದವರಿಗೆ ಕೊಡುವ ಸಾಲವು ಇಟೇಲಿಯವರಿಗೆ ನಿಶ್ಚಯಿಸಿದ ಸಾಲದ ಹಾಗೆ ಬ್ರಿಟಿಷ ಸರಕಾರದ ಸಾಲವನ್ನು ನಿಶ್ಚಯಿಸಿದ ಪಕ್ಷಕ್ಕೆ ಈಗ ಕೊಡಲಿಕ್ಕಿರುವ ೧೬೦ ಮಿಲಿಯ ಡೋಲರುಗಳ ಬದಲಾಗಿ ೧೯೦ ಮಿಲಿಯ ಆಗಬಹುದಾಗಿ ಹೌಸ್ ಒಫ್ ಕೋಮನ್ಸಿನಲ್ಲಿ ಹೇಳಿರುವರು.

—ಇಂಗ್ಲೆಂಡಿನಲ್ಲಿ ಬೈಚಿಲ್ಲಿ ಎಂಬ ಸ್ಥಳದಲ್ಲಿ ಎರಡು ರೈಲು ಬಂಡಿಗಳು ಒಂದಕ್ಕೊಂದು ತಾಗಿ ವಿಶೇಷವಾದ ನಷ್ಟವುಂಟಾಗಿದೆ. ಈ ಅವಘಡದಲ್ಲಿ ಆರು ಜನರು ಮರಣಹೊಂದಿರುವರು. ೮ ಜನರಿಗೆ ಬಲವಾದ ಗಾಯವಾಗಿದೆ.

ಒಳದೇಶ ವರ್ತಮಾನ.

—ನೀಲಗಿರಿಯ ಕೂನೂರಿನಲ್ಲಿ ಒಂದು ವಾರದಿಂದ ಕಠಿಣ ಮಳೆಯು ಬಂದು ಜನರ ಆರೋಗ್ಯವು ಕೆಟ್ಟುಹೋಗಿಯದೆ.

—ಮದರಾಸಿನ ರಾಯಪೇಟೆಯಲ್ಲಿರುವ ಸ್ವದೇಶ ಮಿತ್ರನ್ ಆಫೀಸಿನಲ್ಲಿ, ದೇಶಬಂಧು ದಾಸರ ಬಸ್ಟನ್ನು ಇಡುವ ಸಮಾರಂಭವು ಇದೇ ೮ನೇ ತಾರೀಕಿನ ದಿವಸ ನಡೆಯಿತು.

—ನಿಖಿಲ ಭಾರತ ಸ್ವರಾಜ್ಯ ಪಾರ್ಟಿಯ ಸಭೆಯು ಇದೇ ತಿಂಗಳ ೨೫ನೇ ತಾರೀಕಿನ ದಿವಸ ಕಾನಪೂರಿನಲ್ಲಿರುವ ತಿಲಕ ನಗರದಲ್ಲಿ ಕೂಡುವುದು.

—ಕೊಚ್ಚಿ ರಾಜ್ಯದಲ್ಲಿ ನ್ಯಾಯವಿಧಾಯಕ ಸಭಾ ಮಂದಿರವನ್ನು ಯೋಗ್ಯರೀತಿಯಲ್ಲಿ ಯೋಗ್ಯವಾದ ಸ್ಥಳದಲ್ಲಿ ಕಟ್ಟಿಸುವುದಕ್ಕೆ ಆಲೋಚನೆಯು ನಡಿಯುತ್ತದೆ.

—ಬನಾರಸಿನ ಜನರಲ್ ಪೋಸ್ಟಾಫೀಸಿನಲ್ಲಿ ಒಬ್ಬ ಪೋಸ್ಟು ಪಿಯೋನನು ಅಲ್ಲಿಯ ಅಸಿಸ್ಟಾಂಟ ಮಾಸ್ಟರರಿಗೆ ಬೈದ ಆರೋಪಣೆಯ ಮೇಲೆ ಅವನನ್ನು ಕೈದುಮಾಡಿರುವರು. ಇದಕ್ಕಾಗಿ ಅಲ್ಲಿಯ ಇತರ ಎಲ್ಲಾ ಪೋಸ್ಟು ಪಿಯೋನರು ಪೋಸ್ಟಲ್ ಇಲಾಖೆಯ ಡ್ಯಾರೆಕ್ಟರರಿಗೆ ಅವರ ಹೇಳುವಿಕೆಯನ್ನು ಸರಿಯಾಗಿ ತನಖಿ ಮಾಡದೆ ಇದ್ದ ಪಕ್ಷಕ್ಕೆ ತಮ್ಮ ಕೆಲಸಕ್ಕೆ ಮುಷ್ಕರ ಹಾಕುವೆವು ಎಂದು ತಂತಿಯ ಮೂಲಕ ತಿಳಿಸಿರುವರು.

—ಕಳೆದ ತಾ. ೪ಕ್ಕೆ ಲಾಲಾ ಲಜಪತರಾಯರು ಮುಂಬಾಯಿಗೆ ಬಂದು ತಲ್ಪಿರುವರು. ಇವರು ಮುಂಬಾಯಿಗೆ ಹೋಗದೆ ಬಹು ಕಾಲವಾದುದರಿಂದ ಅಲ್ಲಿಯ ಬಹು ಜನರು ಇವರನ್ನು ಕಾಣಲಿಕ್ಕೆ ಹೋಗಿದ್ದರು. ರೈಲಿನಿಂದ ಇಳಿದ ಕೂಡಲೆ ಇವರಿಗೆ ಹೂವಿನಲೆಯನ್ನು ಹಾಕಿ ದೊಡ್ಡ ಸಭೆಯೊಂದಿಗೆ ಕರಕೊಂಡು ಹೋಗಿರುವರು. ಅದೇ ದಿವಸ ಪಂಡಿತ ಮೋತಿಲಾಲ, ಕೇಳಕರ ಮತ್ತು ಜಯಕರ ಇವರೊಳಗೆ ನಡೆಯಲಿಕ್ಕಿರುವ ಕಾನ್ಫರೆನ್ಸಿಗೆ ಹೋಗಿ ಈ ಎರಡೂ ಪಾರ್ಟಿಯವರ ವಾದಸಂವಾದವನ್ನು ಚರ್ಚಿಸಲಿಕ್ಕಿರುವರು.

—ಡಾಕ್ಟರ ಬಿಝುಂಟಮ್ಮನವರು ಮುಂಬಾಯಿಯಲ್ಲಿ ಸೇರಲಿಕ್ಕಿರುವ ಹಿಂದೂ ಮಹಾ ಸಭೆಗೆ ಬರುವರೆಂದು ತಿಳಿಸಿರುವರು.

—ಮದ್ರಾಸಿನಲ್ಲಿ ಕಳೆದ ತಾ. ೪ಕ್ಕೆ ಮೋಟೋರುಕಾರುಗಳ ಲೈಸನ್ಸನ್ನು ರಿನಿವ್ ಮಾಡಿದೆಯೊ ಇಲ್ಲವೊ ಎಂಬುದಾಗಿ ನೋಡಲಿಕ್ಕೆ ಸಿಟಿ ಪೋಲೀಸಿನವರು ಮೋಟಾರು ಚಲಾವಣೆಯನ್ನು ನಿಲ್ಲಿಸಿದ್ದರು.

—ವಲ್ಲಭಬಾಯಿ ಪಟೇಲರು ಗುಜರಾಥಿನ ಪ್ರೊವಿನ್ಶಿಯಲ್ ಕೊಂಗ್ರೆಸ್ ಕಮಿಟಿಯ ಪ್ರೆಸಿಡೆಂಟರಾಗಿ ಪುನಃ ಚುನಾಯಿಸಲ್ಪಟ್ಟಿರುವರು. ಅಲ್ಲದೆ ಮಹಾತ್ಮಾ ಗಾಂಧಿಯವರಿಗೆ ಗುಜರಾಥಿ ಪ್ರೊವಿನ್ಶಿಯಲ್ ಕೊಂಗ್ರೆಸ್ ಕಮಿಟಿಯ ಪರವಾಗಿ ೨ ಲಕ್ಷ ರೂಪಾಯಿಯನ್ನು ಕೊಡಲು ನಿಶ್ಚಯಿಸಿರುವರು.

—ಮುಂಬಯಿ ಗಿರಣಿಯಾಳುಗಳ ಮುಷ್ಕರವು ಕೊನೆಗಾಣುತ್ತಾ ಬರುತ್ತಿದೆ. ಇತ್ತರ ತನಕ ಸುಮಾರು ೨೫,೦೦೦ ಜನರು ತಮ್ಮ ತಮ್ಮ ಕೆಲಸಕ್ಕೆ ಸೇರಿರುವರು. ಈಗ ಒಟ್ಟು ೬೩ ಗಿರಣಿಗಳಲ್ಲಿ ಕೆಲಸವು ಪ್ರಾರಂಭಿಸಿವೆ.

—ಬೆಂಗಳೂರಿನ ಗವರ್ನಮೆಂಟ್ ಆಫೀಸಿನ ಕ್ಲಾರ್ಕನೊಬ್ಬನು ಮದ್ರಾಸಿಗೆ ಸುಮಾರು ರೂ. ೪೦೦ ಕ್ರಯಬಾಳುವ ಅಫೀಮನ್ನು ಲೈಸನ್ಸು ಇಲ್ಲದೆ ಕೊಂಡುಹೋಗುವುದನ್ನು ನೋಡಿ ಮದ್ರಾಸಿನ ಸೆಂಟ್ರಲ್ ಪೋಲೀಸಿನವರು ಕೈದುಮಾಡಿರುವರು. ಸಂಬ್ರದ ತನ್ಖಿಯು ನಡೆಯಲಿಕ್ಕಿದೆ. ಇದೇನ ಸರಿಸಮಾನವಾದುದು! ಸರಕಾರಿ ನೌಕರರೇ ಲೈಸನ್ಸಿಯಿಲ್ಲದೆ ಅಫೀಮನ್ನು ಕೊಂಡೊಯ್ಯುವರೆ ಸುರುಮಾಡಿದರೆ ಇನ್ನೇನು ಉಳಿದದೆ!

—ದೊಲಕಿನಲ್ಲಿ ಮಹಾತ್ಮಾಜಿಯವರು ದೇಶಬಂಧು ದಾಸರ ಸ್ಮಾರಕ ಫಂಡಿಗೆ ರೂ. ೧೭,೦೦೦ನ್ನು ಸಂಗ್ರಹಿಸಿರುವರು. ಅನಂತರ ಇವರು ಇಲ್ಲಿಂದ ಮುಂಬಾಯಿ ಮಾರ್ಗವಾಗಿ ವಾರ್ಧಾ ಎಂಬಲ್ಲಿ ತೆರಳುವರು. ಅಲ್ಲಿ ಅವರು ಕೊಂಗ್ರೆಸ್ಸಿನ ತನಕ ವಿಶ್ರಮಿಸಿಕೊಳ್ಳುವರು.

ದಕ್ಷಿಣ ಕನ್ನಡ.

ಕಜೆಕಾರ:— ಕಾಫಿ ತೋಟದಿಂದ ತಪ್ಪಿಸಿಕೊಂಡು ಬಂದ ಒಬ್ಬ ಕೂಲಿ ಆಳನ್ನು ತಲಾಶಿ ಮಾಡುವುದಕ್ಕೆ ಆಳುಗಳ ಕಂಟ್ರಾಕ್ಟರರು ಇಬ್ಬರು ಪೋಲೀಸ್ ಕೊನ್ಸಟೇಬಲರೊಡನೆ ಇಲ್ಲಿಗೆ ಬಂದರು. ಕೂಲಿಯಾಳು ಸಿಕ್ಕಿದನು. ಅವನು ಈ ಕಂಟ್ರಾಕ್ಟುದಾರನನ್ನು ಕತ್ತಿಯಿಂದ ತಿವಿದು ಮೂಗಿನ ಹತ್ತಿರವೂ, ತುಟಿ, ಬೆನ್ನು ಈ ಸ್ಥಳಗಳಲ್ಲಿ ಕಠಿಣ ಗಾಯಗಳಾಗಿವೆ. ಪೋಲೀಸ ಕೊನ್ಸಟೇಬಲರಿಗೂ ಗಾಯಗಳಾಗಿವೆ. ಕಂಟ್ರಾಕ್ಟುದಾರನನ್ನು ಚಿಕಿತ್ಸೆ ಬಗ್ಗೆ ಬಂಟವಾಳ ಆಸ್ಪತ್ರೆಗೆ ತಂದಿರುತ್ತಾರೆ.

ಪಾಣೆಮಂಗಳೂರು:— ಪ್ರತಿ ವರ್ಷ ಚಾರ್ಮಾಡಿ ಘಾಟಿಯಿಂದಲೂ, ಶಿರಾಡಿ ಮತ್ತು ಮಡ್ಕೇರಿ ಘಾಟಿಯಿಂದಲೂ ದಶಂಬರ ತಿಂಗಳಿಂದ ಮಾರ್ಚಿ ಎಪ್ರಿಲ್ ತಿಂಗಳ ಅಂತ್ಯದ ವರೆಗೆ ಘಟ್ಟದಿಂದ ಕಾಫಿಯ ಗೋಣಿಗಳನ್ನು ಎತ್ತಿನ ಗಾಡಿಯಲ್ಲಿ ತುಂಬಿಸಿಕೊಂಡು ಅನೇಕ ವರ್ಷಗಳಿಂದ ತರುತ್ತಿದ್ದರು. ಒಂದೊಂದು ಸರ್ತಿಗೆ ಇಪ್ಪತ್ತು ಮೂವತ್ತು ಗಾಡಿಗಳಿಗಿಂತ ಕಡಿಮೆ ಇರಲಾರದು ಆದಾಗ್ಯೂ ಪ್ರತಿ ವರ್ಷ ಚಾರ್ಮಾಡಿ ಮಾರ್ಗದಲ್ಲಿ ಕಳ್ಳರ ಬಾಧೆ ತಪ್ಪುವುದೆ ಇಲ್ಲ. ಒಂದು ಗಾಡಿಯ ಸಬ್ಬಲು ತುಂಡಾಯಿತು ಎಂದೂ, ಒಂದು ಎತ್ತಿನ ಕಾಲು ನೋವು ಎಂದೂ, ಕಳ್ಳ ಹೊತ್ತಿಗೆ ಮಂಗಳೂರಿಗೆ ತಲ್ಪುವುದಕ್ಕೆ ಅಭ್ಯಂತರವಾಗುತ್ತಿತ್ತು. ಈ ಕಾಲ ಕಾಫಿ ತೋಟದ ಮಾಲಿಕರು ಪ್ರತ್ಯೇಕವಾಗಿ ಒಂದೊಂದು ಸರ್ತಿಗೆ ಸುಮಾರು ಐವತ್ತು ಅರುವತ್ತು ಗೋಣಿಗಳು ಹಿಡಿಯುವ ಧರಾವಣೆಯ ಮೋಟರ್ ಲೋರಿ ತರಿಸಿ ಇದರ ಮೇಲೆ ಮಡ್ಕೇರಿ ದಾರಿಯಿಂದ ಪಾಣೆಮಂಗಳೂರಿಗಾಗಿ ದಿನ ೧ಕ್ಕೆ ಕಾಫಿ ಗೋಣಿಗಳು ಮಾತ್ರ ತುಂಬಿಸಿ ಯುರೋಪಿಯನ ಬಿಲೀ ಅನರೇ ಡ್ರೈವ್ ಮಾಡಿಕೊಂಡು ಹೋಗುತ್ತಾರೆ. ಇದರಿಂದ ಗಟ್ಟದಿಂದ ಮಂಗಳೂರು ವರೆಗೆ ಇರುವ ಗಾಡಿ ತಂಗುವ ಸ್ಥಳಗಳ ವ್ಯಾಪಾರವು ನಿಂತುಹೋಯಿತು. ಗಾಡಿ ಸರಿಪಡಿಸುವ ಬಡಗಿಯವರಿಗೂ ಕಮ್ಮಾರರಿಗೂ ಮಳೆಗಾಲದ ಜೀವನ ಹೋಗುತ್ತಿತ್ತು, ಅದೂ ಕಡಿಮೆಯಾಯಿತು. ಅಂತು ಇಂತು ಕಳ್ಳರ ಬಾಯಿಗೆ ಮಣ್ಣು ಬಿತ್ತು. ಗೇಟಿನವರಿಗೆ ತುಂಬಾ ನಷ್ಟ.

ಬಂಟವಾಳ:— ಇಲ್ಲಿಯ ವೆಂಕಟ್ರಮಣ ದೇವಸ್ಥಾನದ ಕಡೆಯಿಂದ ಸಂಸ್ಕೃತ ಪಾಠಶಾಲೆಯನ್ನು ತೆರೆದಿರುತ್ತಾರೆ. ಇದರಲ್ಲಿ ಎಲ್ಲಾ ಜಾತಿಯ ಬ್ರಾಹ್ಮಣ ಗೃಹಸ್ಥರಿಗೂ, ವೈದಿಕರಿಗೂ ಸಂಸ್ಕೃತ ವಿದ್ಯಾಭ್ಯಾಸವು ಕೊಡಲ್ಪಡುವುದು.

ಕಂಚಿಗಾರ ಕೊಟಲಿನ ಸಂಕದ ಪೂರ್ವ ಭಾಗದಲ್ಲಿಯೂ ಉತ್ತರ ಭಾಗದಲ್ಲಿಯೂ ಕಟ್ಟಿದ ಪಿಚ್ಚಿಂಗ ಬಿದ್ದುಹೋಗಲು ತಯಾರಾಗಿದೆ. ಇದನ್ನು ಈಗಲೆ ದುರುಸ್ತಿಪಡಿಸಿದರೆ ಹೆಚ್ಚು ನಷ್ಟವಾಗಲಿಕ್ಕಿಲ್ಲ.

ಮಂಗಳೂರು.

ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ ಖಾಲಿಬೀಳುವ ಮೆಂಬರಿಕೆಗೆ ಈ ಜಿಲ್ಲೆಯಿಂದ ಸ್ವರಾಜ್ಯಪಾರ್ಟಿಯ ಪರಿಮುಖವಾಗಿ ಉಮೇದ್ವಾರರನ್ನು ನಿಲ್ಲಿಸುವುದು ಅಗತ್ಯವಾದ್ದರಿಂದ ಕ್ರಮಪ್ರಕಾರವಾಗಿ ಜಿಲ್ಲಾ ಸ್ವರಾಜ್ಯ ಪಾರ್ಟಿಯನ್ನು ಏರ್ಪಡಿಸುವರೆಯೂ ಮತ್ತು ಜಿಲ್ಲಾ ಸ್ವರಾಜ್ಯಪಾರ್ಟಿ ಕಡೆಯಿಂದ ಉಮೇದ್ವಾರರನ್ನು ಚುನಾಯಿಸುವರೆಯೂ ಈ ಜಿಲ್ಲೆಯ ಎಲ್ಲಾ ಸ್ವರಾಜ್ಯಪಾರ್ಟಿ ಮೆಂಬರರ ಮತ್ತು ಮೆಂಬರರಾಗಿ ಸೇರಲಿಚ್ಛಿಸುವವರ ಮಹಾಸಭೆಯನ್ನು ಇದೇ ತಿಂಗಳ ತಾ. ೧೭ನೇ ಸಾಯಂಕಾಲ ೫ ಘಂಟೆಗೆ ಶ್ರೀಯುತ ಕೆ. ಆರ್. ಕಾರಂತರ ಕೊಡಿಯಾಲಬೈಲು ಆಫೀಸಿನಲ್ಲಿ ಜರುಗಿಸಬೇಕಾಗಿ ನಿರ್ಣಯಿಸಲಾಯಿತು. ಸದರಿ ತಾರೀಕಿನ ಒಳಗೆ ಬರುವ ಉಪಚುನಾವಣೆಗೆ ಸ್ವರಾಜ್ಯಪಾರ್ಟಿ ಕಡೆಯಿಂದ ಉಮೇದ್ವಾರರಾಗಿ ನಿಲ್ಲುವರೇ ಅಪೇಕ್ಷಿಸುವವರು ಆ ಕುರಿತು ಶ್ರೀಯುತ ಕೆ. ಆರ್. ಕಾರಂತರಿಗೆ ಬರಹ ಮೂಲಕ ಸೂಚಿಸುವುದಲ್ಲದೆ ಮಹಾಸಭೆಯಲ್ಲಿ ಸ್ವತಹಾ ಹಾಜರಿರಬೇಕಾಗಿ ಕೂಡ ನಿರ್ಣಯಿಸಲಾಯಿತು.

ಡಿಸ್ಟ್ರಿಕ್ಟ ಹೆಲ್ತ್ ಎಂಡ್ ವೆಲ್ಫೇರ್ ಎಸೋಸಿಯೇಶನಿನವರ ಎಕ್ಸಿಕ್ಯುಟಿವ್ ಕಮಿಟಿಯ ಸಪ್ಟಂಬರ, ಒಕ್ಟೋಬರ್ ದಶಂಬರ ತಿಂಗಳುಗಳ ಕಾರ್ಯಕ್ರಮ—

(೧) ಮಿಡ್‌ವೈಫ್‌ಸರ ಸುಪರ್‌ವೈಜರರ ಜುಲಾಯಿ, ಆಗೋಸ್ತು, ಸಪ್ಟಂಬರ ಮತ್ತು ಅಕ್ಟೋಬರ ತಿಂಗಳ ಡೈರಿಯನ್ನು ಪಾಸುಮಾಡಲಾಯಿತು. (೨) ಬೇಬಿ ವೆಲ್‌ಫೇರ್ ಸೆಂಟರಿನ ಜುಲಾಯಿ ಆಗೋಸ್ತು ಸಪ್ಟಂಬರ ಮತ್ತು ಅಕ್ಟೋಬರ ತಿಂಗಳ ರಿಪೋರ್ಟು ಪಾಸುಮಾಡಲಾಯಿತು. (೩) ಮ॥ ರಾ॥ ರಾ॥ ಎ. ದೇವಪ್ಪ ಪೂಂಜರವರು ಈ ಎಸೋಸಿಯೇಶನಿಗೆ ಮತ್ತು ಡಿಸ್ಟ್ರಿಕ್ಟ ಎಡ್ವಾನ್ಸ್‌ಮೆಂಟ ಎಸೋಸಿಯೇಶನಿಗೂ ಕೂಡ ಒಂದು ಯೋಗ್ಯವಾದ ಕಟ್ಟೋಣವನ್ನು ಕಟ್ಟಿಸುವರೆ ಅವರ ಕಾಗದದಲ್ಲಿ ಸೂಚಿಸಿರುವ ೪ ಸ್ಥಳಗಳ ಪೈಕಿ ಒಂದು ಸ್ಥಳವನ್ನು ಕೊಡಬೇಕಾಗಿಯೂ ಮತ್ತು ಜಿಲ್ಲಾ ಕಲೆಕ್ಟರರಿಗೆ ಈ ವಿಷಯದಲ್ಲಿ ಹೆಚ್ಚು ಸಹಾಯವನ್ನು ಮಾಡಬೇಕಾಗಿಯೂ ಬರೆದ ಕಾಗದವು ಓದಲಾಯಿತು. (೪) ಸಂಘದಲ್ಲಿ ತಾ. ೩೧—೧೦—೨೫ರ ವರೆಗೆ ಇರುವ ಹಣ ೨೪೭೮—೧೧—೧೦. (೫) ಹೊಸದಾಗಿ ಸಿಕ್ಕಿದ ಸಹಾಯ ರೂಪಾಯಿಗೆ ೧೩—೦—೦ ಮೆಸರ್ಸ್ ರಾವ್ ಎಂಡ್ ರಾವ್ ಬೇಬಿ ವೆಲ್ಫೇರ್ ಸೆಂಟರಿಗೆ, ರೂಪಾಯಿ ೫—೦—೦ ಡಾಕ್ಟರ್ ಪಿ. ಕೆ. ನಾಯರ್‌ರವರಿಂದ.

ನಮ್ಮ ಜಿಲ್ಲೆಯ ಸೋನ್‌ಮಹಮ್ಮದರ ಪರವಾಗಿ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಡಾ॥ ಯು. ರಾಮರಾಯರ ಬದಲಿಗೆ ಉಮೇದ್ವಾರರಾಗಿ ನಿಲ್ಲುವವರ ನೋಮಿನೇಶನ್ ಪತ್ರಗಳನ್ನು ತಾ. ೧೮ರ ಒಳಗೆ ಕಳಿಸಿಕೊಡಬೇಕಾಗಿಯೂ ಮತ್ತು ಚುನಾವಣೆಯು ಬರುವ ಜನವರಿ ತಾ. ೨೫ರ ಒಳಗೆ ಆಗಬೇಕಾಗಿಯೂ ತಿಳಿಸಿರುವರು,

ಇದೇ ತಿಂಗಳ ತಾರೀಕು ೧೪ನೇ ಸೋಮವಾರ ಘಂಟೆ ೧೧ಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಕಾಸರಗೋಡು ತಾಲೂಕು ಬೋರ್ಡು ಮೆಂಬರರ ಸಭೆಯು ಕಾಸರಗೋಡು ತಾಲೂಕು ಬೋರ್ಡು ಆಫೀಸಿನಲ್ಲಿ ಕೂಡುವುದು, ಮತ್ತು ಬಾಲ್ಕಿ ವರ್ಷದ ಮತ್ತು ಬರುವ ಆಫಿಶಿಯಲ್ ವರ್ಷದ ಈ ತಾಲೂಕು ಬೋರ್ಡಿನ ಬಜೆಟ ಅಂದಾಜು ಪಟ್ಟಿಗಳು ಈ ಸಭೆಯ ಮುಂದೆ ಇಡೋಣಾಗುವುದು.

ಸ್ವೀಕಾರ:— ದಿ ಸೌತ್ ಕೆನರಾ ಸೆಂಟ್ರಲ್ ಕೋ-ಒಪರೇಟಿವ್ ಬ್ಯಾಂಕಿನ ೧೯೨೪—೨೫ನೆಯ ರಿಪೋರ್ಟು. ಇದರ ವಿಮರ್ಶೆಯನ್ನು ಸಾವಕಾಶವಾಡುವೆವು.

ಕರ್ನಾಟಕ ರಂಗಭೂಮಿ ಸಂಚಿಕೆ ೧.

— ಸಾರ್ವಜನಿಕ ನೋಟೀಸು. —

ಮದ್ರಾಸು ನ್ಯಾಯವಿಧಾಯಕ ಸಭೆಯ ದಕ್ಷಿಣ ಕನ್ನಡ ಜಿಲ್ಲಾ ಮಹಮ್ಮದೀಯರಲ್ಲದ ರೂರಲ್ ವೋಟರರ ಸಮುದಾಯದವರು ೧೯೨೬ನೇ ಇಸವಿ ಫೆಬ್ರವರಿ ೧ನೇ ತಾರೀಕಿನಲ್ಲಿ ಯಾ ಅದಕ್ಕೆ ಮುಂಚೆ ಒಂದು ಮೆಂಬರರನ್ನು ಚುನಾವಣೆಮಾಡಬೇಕಾಗಿ ಇಸ್ತಿಹಾರು ಮೂಲಕವಾಗಿ ಕೇಳಲ್ಪಟ್ಟಿರುವುದರಿಂದ ಸದರಿ ವೋಟರರ ಸಮುದಾಯದ ರಿಟರ್ನಿಂಗ್ ಆಫೀಸರರಾದ ಜಿ. ಡಬ್ಲ್ಯು. ವೆಲ್ಸ್, ಎಸ್‌ಕ್ವಾಯರ್, ಎಮ್. ಎ. ಐ. ಸಿ. ಎಸ್. ಆದ ನಾನು ಈ ಕೆಳಗಿನ ಸಾರ್ವಜನಿಕ ನೋಟೀಸನ್ನು ಈ ಮೂಲಕ ಕೊಟ್ಟಿರುತ್ತೇನೆ.

೧. ಚುನಾವಣೆಯಾಗಬೇಕಾದ ಮನುಷ್ಯರ ಸಂಖ್ಯೆಯು ಒಂದು ಆಗಿರುತ್ತದೆ.

೨. ಶಿಫಾರಸು ಪತ್ರಗಳು ಈ ಕೆಳಗೆ ದಸ್ಕತು ಮಾಡಿದವರಿಗೆ ಹಜೂರು ಆಫೀಸಿನಲ್ಲಿ ಅಥವಾ ಸದರಿಯವರು ಅನಿವಾರ್ಯವಾಗಿ ಅದನ್ನು ಪಡೆದುಕೊಳ್ಳುವರೆ ಆಗದ ಸಂಗತಿಯಲ್ಲಿ ಖಜಾನಾ ಡಿಪ್ಯುಟಿ ಕಲೆಕ್ಟರರಿಗೆ ಹಜೂರು ಆಫೀಸಿನಲ್ಲಿ ಒಪ್ಪಿಸಲ್ಪಡಬಹುದು. ಅವು ೧೯೨೫ನೇ ಇಸವಿ ದಶಂಬರ ೧೮ನೇ ತಾರೀಕಿನಲ್ಲಿ ಯಾ ಅದಕ್ಕೆ ಮುಂಚೆ ಪೂರ್ವಾಹ್ನ ೧೧ ಗಂಟೆಯಿಂದ ಅಪರಾಹ್ನ ೩ ಗಂಟೆಯೊಳಗೆ ಹಾಜರುಪಡಿಸೋಣಾಗತಕ್ಕದ್ದು.

೩. ಶಿಫಾರಸು ಪತ್ರದ ಫಾರ್ಮುಗಳನ್ನು ಮೇಲೆ ಹೇಳಲ್ಪಟ್ಟ ಆಫೀಸರವರ ಆಫೀಸುಗಳಲ್ಲಿ ೧೯೨೫ನೇ ಇಸವಿ ದಶಂಬರ ೧೧ನೇ ತಾರೀಕಿನಿಂದ ೧೯೨೫ನೇ ಇಸವಿ ೧೮ನೇ ತಾರೀಕು ವರೆಗೆ ಮಧ್ಯಾಹ್ನ ೧೨ ಗಂಟೆಯಿಂದ ಸಾಯಂಕಾಲ ೪ ಘಂಟೆಯ ವರೆಗೆ ಪಡೆಯಬಹುದು.

೪. ಶಿಫಾರಸು ಪತ್ರಗಳು ಹಜೂರು ಆಫೀಸಿನಲ್ಲಿ ೧೯೨೫ನೇ ಇಸವಿ ದಶಂಬರ ೧೯ನೇ ತಾರೀಕಿನಲ್ಲಿ ಮಧ್ಯಾಹ್ನ ೨ ಗಂಟೆಗೆ ಪರಿಶೋಧನೆಯ ಬಗ್ಗೆ ತೆಗೆದುಕೊಳ್ಳಲ್ಪಡುವವು.

೫. ಚುನಾವಣೆಯ ವಿಷಯವಾಗಿ ಮೇಲಾಟವಿರುವ ಸಂಗತಿಯಲ್ಲಿ ಪೋಲು ೧೯೨೬ನೇ ಇಸವಿ ಜನವರಿ ೨೨ನೇ ತಾರೀಕಿನಲ್ಲಿ ಬೆಳಿಗ್ಗೆ ೭ ಗಂಟೆಯಿಂದ ಸಾಯಂಕಾಲ ೬ ಗಂಟೆಯ ವರೆಗೆ, ಮಧ್ಯಾಹ್ನ ೧೨ ಗಂಟೆಯಿಂದ ೧ ಗಂಟೆಯ ವರೆಗೆ ವಿಶ್ರಾಂತಿಯ ಬಗ್ಗೆ ಸಮಯವನ್ನು ಬಿಟ್ಟು ಜರಗತಕ್ಕದ್ದು.

೬. ಯಾವ ಇಲೆಕ್ಟರನಾದರೂ ಇಲೆಕ್ಟರರ ಪಟ್ಟಿಯಲ್ಲಿ ಯಾವ ಪೋಲಿಂಗ್ ಪ್ರದೇಶದೊಳಗೆ ಅವನ ಹೆಸರು ಕಂಡುಬರುತ್ತದೆಯೋ ಅದೇ ಪ್ರದೇಶದ ಹೊರಗೆ ಮತ್ತು ಆ ಪ್ರದೇಶಕ್ಕೆ ಸಂಬಂಧಪಟ್ಟ ಪೋಲಿಂಗ್ ಸ್ಟೇಶನಿನ ಹೊರಗೆ ವೋಟು ಕೊಡಲಿಕ್ಕೆ ಬಿಡೋಣಾಗಲಿಕ್ಕಿಲ.

Sd/ ಜಿ. ಡಬ್ಲ್ಯು. ವೆಲ್ಸ್,
7—12—25. ವೋಟರರ ಸಮುದಾಯದ ರಿಟರ್ನಿಂಗ್ ಆಫೀಸರರು

ವಿವಿಧ ವಿಷಯಗಳು.

ಒಬ್ಬ ಮೋಟಾರ ಡ್ರೈವರನ ಘಾತುಕತನ

'ಹಿಂದೂ' ಪತ್ರಿಕಾಕರ್ತರು ತಮ್ಮ ನವಂಬರ ತಾ. ೨೫ನೇ ಪತ್ರಿಕೆಯಲ್ಲಿ ಹೀಗೆ ಬರೆದಿರುವರು:— ಕಳೆದ ತಿಂಗಳ ತಾ. ೧೯ನೇ ಶುಕ್ರವಾರ ಒಬ್ಬ ಶ್ರೀಮಂತ ಸ್ತ್ರೀಯು ಮದ್ರಾಸಾಧಿಪತ್ಯದ ಕಡೆಯನಲೂರು ಎಂಬ ಸ್ಥಳದಿಂದ ಶಂಕರಕೋಯಿಲ್ ಎಂಬ ಯಾತ್ರಾ ಸ್ಥಳಕ್ಕೆ ಮೋಟಾರ್ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಶಂಕರಕೋಯಿಲ್ ಸ್ಥಳಕ್ಕೆ ಇನ್ನು ೬ ಮೈಲುಗಳು ಉಳಿದಾಗ ಪ್ರಯಾಣಿಕರೆಲ್ಲರೂ ಇಳಿದುಬಿಟ್ಟರು. ಆ ಗ್ರಾಮಕ್ಕೆ ಹೋಗುವವಳು ಈಕೆಯೊಬ್ಬಳೇ ಆದಳು. ಈಕೆಯ ಮೈಮೇಲೆ ೨ಸಾವಿರ ರೂಪಾಯಿ ಬೆಲೆ ಬಾಳುವ ಆಭರಣಗಳಿದ್ದವು. ಆಕೆಯ ಹತ್ತಿರ ಸಣ್ಣದೊಂದು ಮಗುವಿದ್ದಿತು. ಡ್ರೈವರನು ಜನಗಳೆಲ್ಲಾ ಇಳಿದಮೇಲೆ ಗಾಡಿಯನ್ನು ಬಿಟ್ಟುಕೊಂಡು ಹೋಗುತ್ತಾ, ಈಕೆಯ ಮೈಮೇಲಿದ್ದ ಆಭರಣಗಳಿಗೆ ಆಶಿಸಿ, ರಸ್ತೆಯನ್ನು ತಪ್ಪಿಸಿ ಬೇರೆಕಡೆಗೆ ಹೋಗಿ ಆಕೆಯನ್ನು ಬೆದರಿಸಿ ಆಭರಣಗಳನ್ನೆಲ್ಲಾ ಕಸಿದುಕೊಂಡನು. ಆದರೆ ಈಕೆಯು ಬದುಕಿದರೆ ತನ್ನ ಕಳ್ಳತನವು ಹೊರಬೀಳುವುದೆಂದು, ಆಕೆಯನ್ನು ಕೊಲ್ಲಬೇಕೆಂದೆಣಿಸಿ ಮಗುವಿನೊಡನೆ ಎಳೆದುಕೊಂಡು ಹೋಗಿ ಒಂದು ಭಾವಿಗೆ ತಳ್ಳಿಬಿಟ್ಟು ಹೊರಟುಹೋದನು. ಅದೃಷ್ಟವಶಾತ್ ಆ ಭಾವಿಯಲ್ಲಿ ಸೊಂಟದವರೆಗೆ ಮಾತ್ರ ನೀರಿದ್ದಿತು. ಮೇಲಿನಿಂದ ದುಮುಕಿದ ಸ್ತ್ರೀಗೂ ಮಗುವಿಗೂ ಸ್ವಲ್ಪವೂ ಪೆಟ್ಟಾಗಲಿಲ್ಲ. ರಾತ್ರಿಯೆಲ್ಲವೂ ಸಹಾಯಕ್ಕೋಸ್ಕರ ಎಷ್ಟು ಕೂಗಿದರೂ ಯಾರೂ ಒದಗಲಿಲ್ಲ. ಬೆಳಗಾದಮೇಲೆ ಅದೇ ಮೋಟಾರು ಡ್ರೈವರನು ಒಬ್ಬ ಆಳನ್ನು ಜೊತೆಗೆ ಕರೆದುಕೊಂಡು ಆ ಮಾರ್ಗವಾಗಿಯೇ ಬಂದು ಆತನನ್ನು, ಮೋಟಾರನ್ನೂ ದೂರದಲ್ಲಿಯೇ ನಿಲ್ಲಿಸಿ, ಆ ಸ್ತ್ರೀಯ ಶವವು ನೀರಿನಲ್ಲಿ ತೇಲುತ್ತಿರಬಹುದೆಂದು ಇಣಿಕಿ ನೋಡಿದನು. ಆಕೆಯು ಸುರಕ್ಷಿತವಾಗಿದ್ದು ಸಹಾಯಕ್ಕೋಸ್ಕರ ಚೀರುತ್ತಿದ್ದಳು. ಈತನಿಗೆ ಅದನ್ನು ನೋಡಿ ಸಹಿಸಲಿಲ್ಲ. ಕೆಲವು ಕಲ್ಲುಗಳನ್ನೆಸೆದನು. ಆ ಕಲ್ಲುಗಳು ತಪ್ಪಿಬಿದ್ದು ಪೆಟ್ಟಾಗಲಿಲ್ಲ. ಡ್ರೈವರನಿಗೆ ಕೋಪಬಂದು ದೊಡ್ಡ ಒಂದು ಕಲ್ಲನ್ನು ಹಾಕಿ ಒಂದೇಪೆಟ್ಟಿಗೆ ಕೊಲ್ಲಬೇಕೆಂದು ಅಲ್ಲಿಗೆ ಕೈಹಾಕಿ ಸ್ವಲ್ಪ ಎತ್ತಿದನು. ಶಾಸನ ದೇವತೆಗಳು ಈ ಅನ್ಯಾಯವನ್ನು ನೋಡಿ ಸುಮ್ಮನಿರುವರೆ? ಒಂದು ಭಯಂಕರ ಸರ್ಪವು ಬಂದು ಆತನನ್ನು ಕಚ್ಚಿತು. ಆತನು ಸ್ವಲ್ಪ ದೂರ ಓಡಿಹೋಗಿ ಸತ್ತುಬಿದ್ದನು. ಮೋಟಾರಿನಲ್ಲಿದ್ದ ಆಳು ಬಹಳ ಹೊತ್ತಿನ ವರೆಗೂ ನಿರೀಕ್ಷಿಸಿ ಹುಡುಕಿಕೊಂಡು ಬಂದು ಡ್ರೈವರನ ಶವವನ್ನು ನೋಡಿ, ಆಶ್ಚರ್ಯಪಟ್ಟನು. ಭಾವಿಯೊಳಗಿನಿಂದ ಯಾರೋ ಕೂಗುವ ಶಬ್ದಗಳು ಅಲ್ಲಿಗೆ ಹೋಗಿ ನೋಡಿ, ಮೋಟಾರಿನಲ್ಲಿದ್ದ ಜನಗಳನ್ನು ಕರೆದು ಆ ಸ್ತ್ರೀಯನ್ನೂ ಮಗುವನ್ನೂ ಮೇಲಕ್ಕೆತ್ತಿಕೊಂಡನು. ಪೋಲೀಸಿಗೆ ವರದಿ ಹೋಗಿರುವುದು. ಯಥಾರ್ಥವಾಗಿ ನಡೆದ ವಿಷಯವಾದರೂ ಇದು ಕಾದಂಬರಿಯಂತಿರುವುದು. ಇದೆಲ್ಲವೇ ದೈವಘಟನೆ!

(ಮುಂದಿನ ಪುಟಕ್ಕೆ ಮುಂದುವರಿಯುವುದು)

ಅನುಕ್ರಮಣಿಕೆ.

	ಪುಟ
ಅಗ್ರಲೇಖ	
ಕರ್ನಾಟಕದ ಏಕೀಕರಣ (ಲೇಖಾಂಕ ೪)	೬
ಸ್ಫುಟವಿಚಾರಗಳು	೭
ವರ್ತಮಾನಸಂಗ್ರಹಗಳು—	
ವಿದೇಶವರ್ತಮಾನ, ಒಳದೇಶವರ್ತಮಾನ	೫
ದಕ್ಷಿಣ ಕನ್ನಡ—ಬಂಟ್ವಾಳ, ಪಾಣೆಮಂಗಳೂರು, ಕಜೆಕಾರ, ಮಂಗಳೂರು	"
ವಿವಿಧವಿಷಯಗಳು	೫-೮
ಪತ್ರವ್ಯವಹಾರ ೧,	೮
ಬುಧ ಗ್ರಹದಲ್ಲಿ ಜನರಿರುವರೆ?	"
ಮದ್ರಾಸಿನ ಗಂಧರ್ವ ಗಾಯನ ಶಾಲೆ	"
"ಸಾಹಿತ್ಯ ಸರಸ್ವತಿ"	೪

ಸ್ವದೇಶಾಭಿಮಾನಿ.

ಶಕ ೧೮೪೭ ಮಾರ್ಗಶಿರ ಬ|೧೧ಯು ಶುಕ್ರವಾರ

ಕರ್ನಾಟಕ ಏಕೀಕರಣ.

ಲೇಖಾಂಕ ೪.

ಕರ್ನಾಟಕ ದೇಶದ ರಾಜಕೀಯ ವಿಭಾಗಗಳಲ್ಲದೆ, ಕರ್ನಾಟಕದ ಈಗಿನ ಭೂಸ್ಥಿತಿಯೂ ಕೂಡ ಕರ್ನಾಟಕ ಏಕೀಕರಣಕ್ಕೆ ವಿರೋಧವಾಗಿದೆ ಎಂಬುದನ್ನು ನಾವು ಲಕ್ಷಿಸಬೇಕು. ಕರ್ನಾಟಕದ ವ್ಯಾಪಾರವನ್ನು ಒಂದೇ ಕಡೆ ಕೇಂದ್ರೀಕರಿಸಬಲ್ಲ ಒಂದು ಶಹರು, ಅಥವಾ ಕರ್ನಾಟಕವನ್ನು ಇತರ ದೇಶಗಳೊಡನೆ ಸುಗಮವಾಗಿ ವ್ಯವಹಾರವನ್ನು ಸ್ಥಾಪಿಸಬಲ್ಲ ಒಂದು ಬಂದರಿನ ಅಭಾವವೂ ಕರ್ನಾಟಕ ಏಕೀಕರಣಕ್ಕೆ ಪ್ರಬಲ ಅಭ್ಯಂತರವಾಗಿದೆಯೆಂದೂ, ಕರ್ನಾಟಕ ರಾಜಕೀಯ ಅನಾವಸ್ಥೆಯು ಕರ್ನಾಟಕದ ಭೂಸ್ಥಿತಿಯೊಡನೆ ಕೂಡಿ ಇದನ್ನು ತತ್ಕಾಲಕ್ಕೆ ಅಪರಿಹಾರ್ಯವಾಗಿ ಮಾಡಿದೆಯೆಂದೂ ನಾವು ತಿಳಕೊಳ್ಳಬೇಕು.

ಕರ್ನಾಟಕಕ್ಕೆ ಸುಂದರವಾದ ಬಂದರುಗಳಿದ್ದೂ, ಕರ್ನಾಟಕವು ಅವುಗಳ ಪ್ರಯೋಜನವನ್ನು ಹೊಂದಲು ಶಕ್ತಿಯುಳ್ಳದ್ದಾಗಿಲ್ಲ. ಮಲ್ಪೆ ಭಟ್ಕಳದಂತಹ ಸುಂದರವಾದ ಬಂದರುಗಳು ಇನ್ನೊಂದು ದೇಶದಲ್ಲಿ ಇದ್ದುದಾದರೆ ಅವು ದೇಶದ ಸಂಪತ್ತಿಗೆ ಕಾಮಧೇನುವಾಗಿ ಪರಿಣಮಿಸುತ್ತಿದ್ದುವು. ಇವು ಯೋಗ್ಯವಾದ ರೈಲು ಹಾದಿಗಳ ಸಂಬಂಧದೊಡನೆ ಸಮಗ್ರ ಕರ್ನಾಟಕದ ಆಮದು ರಫ್ತುಗಳ ಸೌಕರ್ಯವನ್ನು ಬೆಳೆಸುತ್ತಿದ್ದುವಲ್ಲದೆ, ಇಡೀ ದೇಶದ ಜನತೆಯ ಲಕ್ಷವನ್ನು ಕೇಂದ್ರೀಕರಿಸುತ್ತಿದ್ದುವು. ಕರ್ನಾಟಕಕ್ಕೆ ವ್ಯಾಪಾರದ ಸಂಪತ್ತಿಯುಳ್ಳ, ಉತ್ತಮ ಬಂದರು ಶಹರು ಇಲ್ಲದುದರಿಂದ, ಕರ್ನಾಟಕದ ವ್ಯಾಪಾರದ ವಹಿವಾಟುಗಳು ಅನ್ಯ ಪಥಗಳಲ್ಲಿ ಹೋಗಿ, ಅನ್ಯರ ಹೊಟ್ಟೆಗಳನ್ನು ತುಂಬಿಸುವಂತಹವುಗಳಾಗಿವೆ.

ಒಂದು ಬಂದರು ಶಹರಿನ ಕೆಲಸವು ದೇಶಕ್ಕೆ ಸಂಪತ್ತಿಯನ್ನು ತರುವುದು ಮಾತ್ರವಾಗಿಲ್ಲ. ಅದು ದೇಶದ ಐಕ್ಯಕ್ಕೂ ಮುಖ್ಯ ಕಾರಣವಾಗುತ್ತದೆ. ಜನತೆಯವರೆಲ್ಲರ ಲಕ್ಷ್ಯವು ಈ ಶಹರಿನ ಕಡೆಗೆ ತಿರುಗುತ್ತದೆ. ಶಹರಿನಲ್ಲಿ ವಿದ್ಯಾವಂತರು, ಅವಿದ್ಯಾವಂತರು, ಅಧಿಕಾರಿಗಳು, ಅನಧಿಕಾರಿಗಳು, ಸಾಹುಕಾರರು, ನೌಕರರು ಇತ್ಯಾದಿ ಎಲ್ಲರ ಸಮಾಗಮವಾಗುತ್ತದೆ. ಮತ್ತು ಅದರಿಂದ ದೇಶದ ವೈಶಿಷ್ಟ್ಯವು ಬೆಳೆದು ಜನತೆಯಲ್ಲಿ ದೇಶದ ಅಖಂಡತೆಯ ಅನುಭವಾಗುತ್ತಿದೆ.

ಈ ತರದ ಪರಿಣಾಮಕ್ಕೆ ಮುಂಬಾಯಿ, ಮದ್ರಾಸ, ಮತ್ತು ಕಲ್ಕತ್ತಾ ಪಟ್ಟಣಗಳೇ ನಿದರ್ಶನಗಳಾಗಿವೆ. ಮಾತ್ರವಲ್ಲದೆ, ಬಂದರುಗಳಲ್ಲದಿದ್ದರೂ, ಕೇವಲ ರಾಜಕೀಯ ಮತ್ತು ವ್ಯವಹಾರಿಕ ಪ್ರಾಮುಖ್ಯತೆಯಿಂದಲೇ ದೇಶಗಳಲ್ಲಿ ಅಖಂಡತೆಯನ್ನು ರಕ್ಷಿಸಿರುವ, ಢಿಲ್ಲಿ, ನಾಗಪುರ ಮೊದಲಾದ ಶಹರುಗಳಿವೆ. ಕರ್ನಾಟಕದಲ್ಲಿ ಬೆಂಗಳೂರು ಒಂದು ಅಂತಹ ವ್ಯವಹಾರದ ವ ಕರ್ನಾಟಕ ಕೇಂದ್ರದ ಶಹರಾಗಿದ್ದರೂ, ಭೂಸ್ಥಿತಿಯ ಕಾರಣದಿಂದ ಅದು ಸಾಕಷ್ಟು ಅಖಿಲ ಕರ್ನಾಟಕವಾಗಿಲ್ಲವೆಂಬುದೇನೊ ನಿಶ್ಚಯ. ಆದುದರಿಂದ ಅದರ ಕಡೆಗೆ ಕರ್ನಾಟಕದ ವ್ಯವಹಾರಿಕ ದೃಷ್ಟಿಯು ಎಳೆಯಲ್ಪಟ್ಟಿಲ್ಲ.

ಹಿಂದೆಯೊಂದು ಬಾರಿ ಭಟ್ಕಳ ಅಗಲಿ ಮಲ್ಪೆಯನ್ನು ಬಂದರಾಗಿ ಮಾಡಲು ಮೈಸೂರು ಸರಕಾರದ ಪ್ರಯತ್ನಗಳು ನಡೆದಿದ್ದುವು. ಮೈಸೂರು ದಿವಾನರೇ ಸ್ವತಹಾ ಬಂದು ಈ ಬಂದರುಗಳನ್ನು ಸಂದರ್ಶಿಸಿ ಹೋದರು. ಬ್ರಿಟಿಷ ಸರಕಾರದ ಮತ್ತು ಮೈಸೂರು ಸರಕಾರದ ಭಿನ್ನಾಭಿಪ್ರಾಯಗಳಿಂದ ಈ ಪ್ರಯತ್ನಗಳು ಬಿದ್ದುಹೋದುವು. ಪ್ರಯತ್ನಗಳು ಸಫಲವಾಗಿದ್ದುದಾದರೆ, ಮಂಗಳೂರು ಬಂದರಕ್ಕೆ ವಿಶೇಷ ಹಾನಿಯಾಗುತ್ತಿತ್ತು. ಆದರೆ ಅಖಿಲ ಕರ್ನಾಟಕ ಬಂದರು ಸ್ಥಾಪಿತವಾಗಬಹುದಿತ್ತು; ಮತ್ತು ಅದರ ಹತ್ತಿರವೇ ಕರ್ನಾಟಕವು ಇಚ್ಛಿಸುವ ಶಹರು ಬೆಳೆಯಬಹುದಿತ್ತು.

ಕರ್ನಾಟಕ ಏಕೀಕರಣಕ್ಕೆ ಕನ್ನಡ ಭಾಷೆಯಲ್ಲಿನ ಒಂದು ದೈನಿಕ ಪತ್ರಿಕೆಯು ಸ್ಥಾಪಿಸಲ್ಪಟ್ಟರೆ ಬಹಳ ಅನುಕೂಲವಾಗುವುದು. ಇಂತಹ ಪತ್ರಿಕೆಯು ಇಂಗ್ಲೀಷು ಪತ್ರಿಕೆಗಳಷ್ಟೇ ಉಚ್ಚವಾಗಿ ವ್ಯವಸ್ಥೆಗೊಳಿಸಲ್ಪಟ್ಟರೆ, ಜನರ ಆದರಕ್ಕೆ ಪಾತ್ರವಾಗಬಹುದು; ಕನ್ನಡ ವಿದ್ಯಾವಂತರೊಳಗಿನ ಇಂಗ್ಲೀಷ ಭಾಷೆಯ ಮೇಲಿನ ಪಕ್ಷಪಾತವನ್ನು ಕಡಿಮೆ ಮಾಡಿ, ಕನ್ನಡ ಭಾಷೆಯನ್ನು ಪ್ರಚಾರಕ್ಕೆ ತರಬಹುದಿತ್ತು; ಕನ್ನಡ ಭಾಷೆಯ ವ್ಯವಹಾರಿಕ ಗುಣಗಳನ್ನು ಹೆಚ್ಚು ಮಾಡಬಹುದಿತ್ತು; ಅಲ್ಲದೆ ದೈನಿಕ ಪತ್ರಿಕೆಗಳು ದಿನ ದಿನವೂ ಪ್ರತಿಯೊಬ್ಬರ ಕೈಸೇರುವುದರಿಂದ, ವರ್ತಮಾನಗಳನ್ನು ಓದುವ ಉತ್ಸುಕತೆಯೊಡನೆ, ಕನ್ನಡ ವಾಚನಾಭಿರುಚಿಯೂ ಬೆಳೆಯುವುದು. ಇಷ್ಟೆಲ್ಲ ಲಾಭಗಳನ್ನು ಉಂಟುಮಾಡಬಲ್ಲ ದೈನಿಕಾ ಪತ್ರಿಕೆಯನ್ನು ತತ್ಕಾಲಕ್ಕೆ ಕನ್ನಡನಾಡು ಸ್ಥಾಪಿಸಲಾರದು. ಅಂತಹ ದೈನಿಕ ಪತ್ರಿಕೆಯು ಕಾರ್ಯಕಾರಿಯಾಗಲಾರದು. ಏಕೆಂದರೆ ಕರ್ನಾಟಕಕ್ಕೆ ಒಂದು ಪ್ರಮುಖ ಶಹರಿನ ಅಭಾವ ದೈನಿಕ ಪತ್ರಿಕೆಗೆ ಬೇಕಾಗುವ ವಿಷಯಗಳನ್ನೊದಗಿಸಲಾರದು. ಅಲ್ಲದೆ, ರೈಲು ಹಾದಿಗಳು ಕನ್ನಡದಲ್ಲಿ ಬಹಳ ಕಡಿಮೆಯಾದುದರಿಂದ, ಕನ್ನಡದ ಒಂದು ಪತ್ರಿಕೆಯು ಒಂದು ಶಹರಿನಲ್ಲಿ ಪ್ರಕಟಿತವಾಗಿ, ಇನ್ನೊಂದು ಊರಿನಲ್ಲಿ ಕೈಸೇರುವ ಮೊದಲೇ ಇಂಗ್ಲೀಷು ಪತ್ರಿಕೆಯು ಮದ್ರಾಸಿನಿಂದಲೊ ಮುಂಬಾಯಿಯಿಂದ ಬಂದು ಜನರ ಕೈಸೇರುವುದು. ಮುಖ್ಯವಾಗಿ ಈ ಕಾರಣದಿಂದ ಇದರ ಮೊದಲು ಕನ್ನಡದಲ್ಲಿ ಪ್ರಕಟವಾದ ದೈನಿಕ ಪತ್ರಿಕೆಗಳು ಹೆಚ್ಚು ಪ್ರಚಾರವನ್ನು ಹೊಂದಲಿಲ್ಲ; ಹೆಚ್ಚು ಪ್ರಚಾರವನ್ನು ಹೊಂದದಿದ್ದುದರಿಂದ, ದೈನಿಕ ಪತ್ರಿಕೆಗಳನ್ನು ಇಂಗ್ಲೀಷಿನಷ್ಟೇ ಉತ್ತಮ ಸ್ಥಿತಿಗೆ ತರಲಾಗಲಿಲ್ಲ; ಇಂಗ್ಲೀಷಿನಷ್ಟು ಉತ್ತಮ ಸ್ಥಿತಿ ಇಲ್ಲದುದರಿಂದ ಅವನ್ನು ನಿಲ್ಲಿಸಬೇಕಾಯಿತು. ಹಾಗೆಯೇ ಶ್ರೀಯುತ ಮುದವೇಡಕಾರರ ದೈನಿಕ ಪತ್ರಿಕೆಯನ್ನು ಸ್ಥಾಪಿಸಲಿಕ್ಕಾಗಿ ಮಾಡಿದ ಪರಿಶ್ರಮವೂ ವ್ಯರ್ಥವಾಯಿತು. ಹಾಗೆಯೇ, ಕರ್ನಾಟಕದ ರೈಲು ವ್ಯವಹಾರಗಳು ಈ ಸ್ಥಿತಿಯಲ್ಲಿರುವವರೆಗೆ ಕನ್ನಡ ಪತ್ರಿಕೆಯ ಪರಿಚಾಲನವು ಅಸಾಧ್ಯವಿರುವುದು.

ಕರ್ನಾಟಕರ ವ್ಯಾಪಾರವು ಈಗ ಹಲವು ತರದಲ್ಲಿ ಹಲವು ಕಡೆಗಳಿಗೆ ಹರಿದುಹೋಗುತ್ತಿದೆ. ಆ ವ್ಯಾಪಾರವು ಒಂದೆ ಶಹರಿನ ಕೇಂದ್ರದಲ್ಲಿ ಬರಬಹುದಾದರೆ, ಅದರ ಪರಿಣಾಮದ ಪ್ರಯೋಜನವು ಇಡೀ ದೇಶಕ್ಕೆ ಲಭಿಸುವುದು. ಹೇಗೆ ಮುಂಬಾಯಿಯು ಸಾಧಾರಣ ಉತ್ತರ ಮತ್ತು ಪಶ್ಚಿಮ ಹಿಂದೂಸ್ಥಾನದ ವ್ಯಾಪಾರವನ್ನು ತನ್ನೊಳಗೆನೇ ಕೇಂದ್ರೀಕರಿಸಿದುದರಿಂದ ಅಷ್ಟು ಪ್ರಮುಖವಾಗಿ ಮುಂಬಾಯಿ ಪ್ರಾಂತಕ್ಕೆ ಅಷ್ಟು ಸಂಪತ್ತನ್ನೂ, ಮುಂಬಾಯಿ ಪ್ರಾಂತದೊಳಗಿನ ಪ್ರಮುಖ ಭಾಷೆಗಳಿಗೆ ಪ್ರಮುಖತೆಯನ್ನೂ ಸಂಪಾದಿಸಿತೊ, ಹಾಗೆಯೇ ಕನ್ನಡಕ್ಕಾದರೂ ಅಂತಹ ಶಹರೊಂದು ಉಂಟಾದರೆ ಅಷ್ಟೇ ಲಾಭವಾಗಬಹುದು. ಆದುದರಿಂದ ನಮಗೆ ಕನ್ನಡಕ್ಕೆ ಒಂದು ಬಂದರು ಶಹರಿನ ಅವಶ್ಯಕತೆಯು ಅಷ್ಟು ಪ್ರಮುಖವಾಗಿ ತೋರುವುದು. ಮತ್ತು ಅದರ ಮೂಲಕ ಕನ್ನಡನಾಡಿನ ಏಕೀಕರಣವನ್ನು ಮಾಡುವುದೂ ಸುಲಭವೆನ್ನಿಸುವುದು. ಅಂತಹ ಶಹರಿನ ಅಭಾವದಿಂದ ಕನ್ನಡಿಗರೊಳಗೆ ಸ್ವತಂತ್ರ ವ್ಯಾಪಾರಿಗಳಿಲ್ಲ. ಪ್ರತಿ ವ್ಯಾಪಾರಿಗಳು ತಮಗೆ ಬೇಕಾಗುವ ಸಾಮಾನಿಗಾಗಿ ಮುಂಬಾಯಿಗೆ ಆಗಲಿ ಮದ್ರಾಸಿಗೆ ಮರೆಹೋಗಬೇಕು. ಮತ್ತು ಮುಂಬಾಯಿ ಮದ್ರಾಸಿನ ಮೇಲೆಯೇ ವ್ಯಾಪಾರಕ್ಕೆ ಹೊಂದಿ ಇರುವ ಶಹರಾದರೂ ಎಷ್ಟು ಫಲಕಾರಿಯಾದೀತು?

ಮುಖ್ಯವೇನೆಂದರೆ ಕನ್ನಡನಾಡಿನೊಳಗಣ ಪ್ರಮುಖ ವ್ಯಾಪಾರಗಳು ಯಾವುವು, ನಾಡಿನ ಉತ್ಪತ್ತಿಗಳಾವುವು, ಅವುಗಳೊಳಗೆ ಯಾವುವು ಹೇಗೆ ಪರದೇಶಗಳಿಗೆ ರಫ್ತಾಗುತ್ತಿವೆ, ನಾಡಿನ ಅವಶ್ಯಕತೆಗಳಾವುವು, ಅವುಗಳಿಗಾಗಿ ಯಾವ ಸಾಮಾನುಗಳು ಎಲ್ಲಿಂದ ಆಮದಾಗುತ್ತಿವೆ ಎಂಬುದನ್ನು ಕನ್ನಡಿಗರು ಚೆನ್ನಾಗಿ ಪರಿಶೀಲಿಸಿ ತಿಳಿದು, ಅವುಗಳ ವಹಿವಾಟವು ಕನ್ನಡಿಗರ ಕೈಗಳ ಮೂಲಕವೇ ನಡಿಯುವಂತೆ ಮಾಡಿ, ಅಂತಹ ವ್ಯಾಪಾರವನ್ನು ಅಭಿವೃದ್ಧಿ ಪಡಿಸಿ, ದೇಶದೊಳಗೆ ರೈಲು ಹಾದಿಗಳು ಹೆಚ್ಚಾಗುವಂತೆ ಪ್ರಯತ್ನಿಸಿ, ಕನ್ನಡ ಬಂದರುಗಳ ಮೂಲಕವೇ ಕನ್ನಡ ವ್ಯಾಪಾರವನ್ನು ನಡಿಸುವುದು ಅವಶ್ಯವೂ ಸಾಧ್ಯ ಇದೆ. ಹಾಗೆ ಅಂತಹದೊಂದು ಬಂದರು ಸ್ಥಾಪಿತವಾಯಿತೆಂದರೆ ಕನ್ನಡಕ್ಕೆ ಹಲವು ತರದ ಲಾಭಗಳಿವೆ. ಅವುಗಳಲ್ಲಿ ಕನ್ನಡ ಏಕೀಕರಣವೂ ಮುಖ್ಯವಿದೆ.

ಸ್ಫುಟ ವಿಚಾರಗಳು.

ಸ್ವರಾಜ್ಯ ಪಕ್ಷದೊಳಗಿನ ಇಬ್ಬಣಗಳ ರಾಜಿ.

ಹಾಗೂ ಹೀಗೂ, ಅಖಿಲ ದೇಶದ ಸ್ವರಾಜ್ಯ ಪಕ್ಷದ ಮುಖಂಡರು ಸೇರಿ, ಕೇಳ್ಕರ ಮತ್ತು ಪಂಡಿತರೊಳಗೆ ಸಮಾಧಾನ ಮಾಡಿದರು. ಸಮಾಧಾನವೆಂದರೆ, ಈ ಭಿನ್ನಾಭಿಪ್ರಾಯಗಳ ತೀರ್ಮಾನವಲ್ಲ. "ನಾವು ನಮ್ಮ ಡಂಗುರು ಹೊಡಿಯುವುದಿಲ್ಲ; ನೀವು ನಿಮ್ಮಭೇರಿಯನ್ನು ಹೊಡಿಯಬೇಡಿರಿ" ಎಂಬುದೇ ತತ್ಕಾಲದ ಸಂಧಿಯ ತೀರ್ಮಾನ. ಇಬ್ಬಣಗಳೂ ಇನ್ನು ದಶಂಬರದಲ್ಲಿ ನಡೆಯುವ ಕಾಂಗ್ರೆಸ್ಸನ್ನೂ, ಆ ಮೇಲೆ ಕೂಡುವ ಸ್ವರಾಜ್ಯ ಪಕ್ಷದ ಪರಿಷತ್ತನ್ನೂ ನಿರೀಕ್ಷಿಸಿ, ಆ ವರೆಗೆ ಸುಮ್ಮಗಿರಬೇಕಾಗಿದೆ. ಸ್ವರಾಜ್ಯ ಪಕ್ಷವು ಈ ಒಡಕಿಗೆ ಒಂದು ಸಂದುಹಾಕುವುದರಲ್ಲಿ ಕೃತಾರ್ಥವಾದರೂ, ಈ ಸಂದು ಎಷ್ಟರ ತನಕ ನಿಲ್ಲುವುದೆಂಬುವುದು ಮಾತ್ರ ಸಂಶಯದ ಮಾತಾಗಿದೆ. ಹೇಗೂ ಧುರೀಣರಿಗೆ ಜನತೆಯ ಅಭಿಪ್ರಾಯವನ್ನು ಕೊಂಗ್ರೆಸ್ಸಿನ ಮೂಲಕ ತಿಳಿಯುವ ಸಂದರ್ಭವು ಬಂದಿದೆ; ಅದನ್ನವರು ಚೆನ್ನಾಗಿ ಉಪಯೋಗಿಸಿಕೊಳ್ಳುವರು. ಆದರೆ ಅಷ್ಟರೊಳಗೆ ರಾಜಕೀಯ ಕ್ಷೇತ್ರದಲ್ಲಿ ಏನೇನೆಲ್ಲ ನಡಿಯಲಿದೆಯೊ ಅದನ್ನು ಈಗ ಹೇಳಲಾಗುವುದಿಲ್ಲ. ಪರಂತು, ನಿರಂತರ ನಿರೋಧದ ಈ ತತ್ವದ ವಾತಾವರಣದಲ್ಲಿಯೇ ಸರಕಾರದ ಅಧಿಕಾರದ ಅಭಿಲಾಷೆಯು ಪ್ರತಿನಿಧಿಗಳಲ್ಲಿ ಹುಟ್ಟಿ, ಆ ಸ್ವಾರ್ಥದಿಂದ, ತಮ್ಮ ಪ್ರತಿಜ್ಞೆಯನ್ನೂ ಜನತೆಯ ಆ ದೇಹವನ್ನೂ ತುಚ್ಛೀಕರಿಸಿ ಧೈರ್ಯವಂತರೆನ್ನಿಸಿಕೊಳ್ಳುವ ಜನರಿರುವಾಗ, ಸಹಕಾರದ ತತ್ವದಲ್ಲಿ ಕೌನ್ಸಿಲು, ಎಸೆಂಬ್ಲಿ ಮೆಂಬರರುಗಳಲ್ಲಿ ಯಾವ ಪರಿಣಾಮವುಂಟಾಗಬಹುದೆಂದು ನಾವು ತಿಳಿಯಬಹುದು. ತಂದೆಯವರು ಎನ್ನೆಗಿನ್ನು ತಂದರೆ ತವರು ಮನೆಗೆ ಮೊಸರು ಕಳುಹಿಸುವಿಯಾ—ಎಂದು ಹೆಂಡತಿಯನ್ನು ಬಡಿಯಲಾರಂಭಿಸಿ, ಎಮ್ಮೆ ಬರಲಿಲ್ಲ, ಬರುವ ಸಂಭವವೂ ಇಲ್ಲವೆಂಬುದನ್ನು ಯೋಚಿಸಿರದ ಗಂಡನಂತೆ, "ಸರಕಾರವು ಸಹಕಾರವನ್ನು ನೀಡುವಾಗ ಸಹಕಾರವನ್ನು ನಿರಾಕರಿಸುವಿಯೊ" ಎಂದು ಎಂದು ಕೇಳ್ಕರರು ಸ್ವರಾಜ್ಯ ಪಕ್ಷವನ್ನು ಬಡಿಯಲಾರಂಭಿಸಿದುದು, ಹಿಂದೀ ರಾಜಕೀಯ ಕಣ ಪ್ರಗತಿಯೊಳಗಣ ಪರಿಹಾಸಾತ್ಮಕ ವಿಷಯವಿದೆ. ಈ ತಿಂಗಳ ಅಖೈರಿಗೆ ಕೂಡುವ ಕಾಂಗ್ರೆಸ್ಸು ಈ ವಿಷಯದಲ್ಲಿ ಏನು ಅಭಿಪ್ರಾಯ ಕೊಡುವುದೆಂಬುದನ್ನು ನಾವು ನಿರೀಕ್ಷಿಸುವೆವು.

ಹತ್ತಿ ಸಾಮಾನಿನ ಮೇಲಣ ತೆರಿಗೆಯ ನಿವಾರಣೆ.

ಮುಂಬಾಯಿಯ ಗಿರಣಿಗಳು ಜಪಾನ ವಸ್ತ್ರದ ಸ್ಪರ್ಧೆ (Competition)ಯ ಕಾರಣದಿಂದ ವಸ್ತ್ರಗಳನ್ನು ಯೋಗ್ಯ ಬೆಲೆಗೆ ಮಾರಲು ಶಕ್ತರಾಗದುದರಿಂದ, ಅವರು ಕೂಲಿಗಳ ಮಜೂರಿಯನ್ನು ಇಳಿಸಿದರು; ಕೂಲಿಯವರು ಅದಕ್ಕೊಪ್ಪದೆ ಮುಷ್ಕರ ಹಾಕಿದರು. ಈ ಮುಷ್ಕರ ಕಳೆದ ೨ ತಿಂಗಳಿಂದ ನಡೆಯುತ್ತಿದೆ. ಗಿರಣಿ ಮಾಲಿಕರು ಸರಕಾರಕ್ಕೆ ವಿನಂತಿ ಮಾಡಿ, ತಾವು ಕೊಡುವ ತೆರಿಗೆಯನ್ನು ತೆಗೆದು ಹಾಕಿದರೆ, ಕೂಲಿಕಾರರಿಗೆ ಸಂಬಳ ಪೂರಾ ಕೊಡಲಿಕ್ಕೆ ತಮಗೆ ಪೂರೈಸುವುದಾಗಿ ತಿಳಿಸಿದರು. ಸರಕಾರವು ಮೊದಲು ಅದು ಸಾಧ್ಯವಿಲ್ಲವೆನ್ನಿತು. ಆ ಮೇಲೆ ಎಸ್ಸೆಂಬ್ಲಿಯಲ್ಲಿ ಒಂದು ಠರಾವು ತರಲ್ಪಟ್ಟಿತು. ಆ ಠರಾವು ಮಂಜೂರಾಯಿತು. ಜವಾಬ್ದಾರಿ ಸರಕಾರವಾದರೆ, ಆ ಠರಾವಿಗೆ ಅನುಗುಣವಾಗಿ ಕೂಡಲೆ ತೆರಿಗೆಯನ್ನು ತೆಗೆದು ಹಾಕುತ್ತಿತ್ತು. ಆದರೆ ಸರಕಾರವು ಅದನ್ನು ದುರ್ಲಕ್ಷ್ಯ ಮಾಡಿತು. ಇತ್ತ ಗಿರಣಿಕಾರರಿಗೆ ವಸ್ತ್ರವನ್ನು ಅಗ್ಗ ಮಾಡದೆ ಮಾರಲಿಕ್ಕೆ ಸಾಧ್ಯವಿರಲಿಲ್ಲ. ಅಗ್ಗಮಾಡಬೇಕಾದರೆ ಕೂಲಿ ಸಂಬಳ ಕಡಿಮೆ ಆಗಬೇಕು, ಇಲ್ಲವೆ ಸರಕಾರ ತೆರಿಗೆ ತೆಗೆದುಹಾಕಬೇಕು. ಸರಕಾರವು ನಿರಾಕರಿಸಿತು.; ಆದುದರಿಂದ ಕೂಲಿಕಾರರ ಸಂಬಳವನ್ನು ಅವರು ಮುಂಚಿನ ದರಕ್ಕೇನೆ ಇಡಲೊಪ್ಪಲಿಲ್ಲ. ಕೂಲಿಗಳು ಮುಂಚಿನ ಸಂಬಳಕ್ಕಿಂತ ಕಡಿಮೆಗೆ ಬರಲೊಪ್ಪಲಿಲ್ಲ. ಹೀಗೆ ಗಿರಣಿಗಳು ಈ ವರೆಗೆ ಮುಚ್ಚಿಯೇ ಇದ್ದುವು. ಸರಕಾರಕ್ಕೆ ಇನ್ನು ಹೀಗೆಯೇ ಸುಮ್ಮನಿರುವುದು ಸಾಧ್ಯವಾಗದೆ ತೆರಿಗೆಯನ್ನು ತೆಗೆದುಹಾಕಿದರು. ಇದು ತತ್ಕಾಲದ ಮಟ್ಟಿಗೆ ಅಂದರೆ ಮಾರ್ಚಿ ತಿಂಗಳ ವರೆಗಾಗಿ ಮಾತ್ರ ನಿಲ್ಲಿಸಲ್ಪಟ್ಟಿದೆ. ಆ ಮೇಲೆ ಸರಕಾರದ ಆರ್ಥಿಕಸ್ಥಿತಿಯು ಒಳ್ಳೆದಿದ್ದರೆ ಅದನ್ನು ಲೆಜಿಸ್ಲೇಟಿವ್ ಎಸೆಂಬ್ಲಿಯ ಎಕ್ಟ ಮೂಲಕ ರದ್ದುಪಡಿಸುವರಾಗಿ ವ್ಯಾಸರಾಯರು ಹೇಳಿದ್ದಾರೆ.

ಸರಕಾರವು ಈ ತೆರಿಗೆಯನ್ನು ತೆಗೆದುಹಾಕಿದ್ದಕ್ಕೆ ನಾವು ಅವರ ಉಪಕಾರ ಸ್ಮರಣೆಮಾಡಬೇಕು. ಸರಕಾರವನ್ನು ಪ್ರತಿ ಒಂದು ಅವರ ಕಾರ್ಯದಲ್ಲಿಯೂ ತಪ್ಪು ಹುಡುಕಿ ದೂಷಿಸಬೇಕೆಂದು ನಮ್ಮ ಉದ್ದೇಶವಲ್ಲ. ಅದರ ಒಳ್ಳೆಯದನ್ನು ನಾವು ಪ್ರಶಂಸಿಸಲು ಸಿದ್ಧರಿದ್ದೇವೆ. ಹಾಗೆಯೇ ದೇಶದ ಅಭಿಪ್ರಾಯಕ್ಕೆ ಬಗ್ಗಿ ಈ ತೆರಿಗೆಯನ್ನು ನಿಲ್ಲಿಸಿದಿಟ್ಟುದಕ್ಕೆ ನಾವು ಅವರಿಗೆ ಅಭಿವಂದಿಸುವೆವು.

ಆದರೆ ಪಾಶ್ಚಾತ್ಯ ರಾಜಕಾರಣ ಕ್ರಮವು ತೋರಿಕೆಯಷ್ಟು ಸಾಮಾನ್ಯವಾಗಿಲ್ಲ. ಪ್ರತಿಯೊಂದು ಕಾರ್ಯವನ್ನೂ ಅವರು ಕೇವಲ ಪರೋಪಕಾರದ ಭಾವನೆಗಿಂತಲೂ, ಲಾಭ ನಷ್ಟದ ಲೆಕ್ಕ ಹಾಕಿ ಮಾಡುವುದು ಹೆಚ್ಚು. ಆದುದರಿಂದಲೇ ಸರಕಾರವು ಈ ತೆರಿಗೆಯನ್ನು ನಿಲ್ಲಿಸಿದುದು ಗಿರಣಿಗಳ ರಕ್ಷಣೆಯ ಮಹದುದ್ದೇಶದಿಂದಲೊ, ಇಲ್ಲವೆ ಇದರ ಒಳಗೊಳಗೆ ಬೇರೆ ಉದ್ದೇಶಗಳಿವೆಯೊ ಎಂದು ನಾವು ಸಂದೇಹಪಡಬೇಕಾಗಿದೆ.

ಅತ್ತ ಲಂಕೆಶಾಯರ, ಮೆಂಚಸ್ಟರ ಗಿರಣಿಗಳ ಕಡೆಯಿಂದ ಈ ತೆರಿಗೆ ನಿಲ್ಲಿಸಿದುದಕ್ಕೆ ನಿಷೇಧಗಳು ವ್ಯಕ್ತಪಟ್ಟಿಲ್ಲವಾದರೂ ಅದನ್ನು ನಿಲ್ಲಿಸಿದುದರಿಂದ ತಮ್ಮ ಸಾಮಾನುಗಳ ಮಾರಾಟಕ್ಕೆ ಕಷ್ಟವಿದೆಯೆಂದೂ, ತಮ್ಮ ಸಾಮಾನುಗಳ ಮೇಲಿನ ಸುಂಕವನ್ನು ತೆಗೆದುಹಾಕಬೇಕೆಂದೂ ವರ್ತಾಯವು ಮಾಡಲ್ಪಡುತ್ತಿದೆ. ಸರಕಾರವು ಹಿಂದೀ ಗಿರಣಿಗಳ ಮೇಲಿನ ತೆರಿಗೆಯನ್ನು ನಿಲ್ಲಿಸುವುದರ ಉದ್ದೇಶವೂ ಇದೇಯೊ ಎಂದು ಸಂದೇಹವಾಗುತ್ತಿದೆ. ಗಿರಣಿಗಳ ಸಾಮಾನುಗಳ ಮೇಲಿ ೩|ಯ ಸುಂಕವೂ ಹೊರಗಿನ ಸಾಮಾನುಗಳ ಮೇಲೆ ೧೧ರಷ್ಟು ಸುಂಕವೂ ಇರುವಾಗ ಸರಕಾರಕ್ಕೆ ಉದಾರಭಾವವು ಬಂದು ಎರಡನ್ನೂ ತೆಗೆದುಹಾಕಿದರೆ ಯಾರಿಗೆ ಹೆಚ್ಚು ನಷ್ಟನೆಂದು ತಿಳಿಯಬಹುದು. ಮುಖತಃ ಸರಕಾರವು ಹಿಂದೀಯ ಆವಶ್ಯಕತೆಯನ್ನು ತಿಳಿದು, ತೆರಿಗೆಯನ್ನು ಪೂರ್ಣವಾಗಿ ತೆಗೆದುಹಾಕಿ, ಹೊರಗಿನ ಸಾಮಾನುಗಳ ಮೇಲಿನ ತೆರಿಗೆಯನ್ನು ಹಾಗೆಯೇ ಇರಗೊಟ್ಟರೆ, ಸರಕಾರವು ಸದುದ್ದೇಶದಿಂದಲೇ ಈ ತೆರಿಗೆಯನ್ನು ತೆಗೆಯಿತೆನ್ನಬಹುದು. ಹಾಗೆ ಆಗಿರದೆ, ಈ ೩|ಯ ತೆರಿಗೆಯನ್ನು ಆ ೧೧ರ ತೆರಿಗೆ ತೆಗಿಯಲಿಕ್ಕಾಗಿ ಮಾತ್ರ ತೆಗೆದುದಾದರೆ, ಅದರಿಂದ ಸರಕಾರಕ್ಕೆ ಹಣದ ನಷ್ಟವೂ, ಗಿರಣಿಗಳಿಗೆ ಅನ್ಯಾಯದ ಸ್ಪರ್ಧೆಯೂ ಉಂಟಾಗಿ ನಷ್ಟವೇ ಹೆಚ್ಚಾಗಬಹುದು.

ಈ ತೆರಿಗೆಯನ್ನು ತೆಗೆದುಹಾಕಿಸುವುದರಲ್ಲಿ ಮುಖ್ಯ ಕಾರಣರಾದ ಕೂಲಿಕಾರರ ದೃಢತೆಯನ್ನು ನಾವು ಪ್ರಶಂಸಿಸಬೇಕು. ಅವರಿಗೆ ಈ ಹಕ್ಕಿನ ಸಾಧನೆಯಲ್ಲಿ ಮಜೂರಿ ಮೂಲಕ ೨ ಕೋಟಿ ರೂಪಾಯಿಯಷ್ಟು ನಷ್ಟವಾಗಿದೆಯೆಂಬುದನ್ನೂ ನಾವು ಈ ವಿಷಯದಲ್ಲಿ ನೆನಪಿಟ್ಟುಕೊಳ್ಳಬೇಕು.

ಬ್ರಿಟಿಷ ನ್ಯಾಯ!

ಕಟ್ಟಕಡೆಗೆ ಅಸ್ಸಾಮಿನ ಚಾಹೊಪ್ಪಿನ ತೋಟದ ಹತ್ಯಾಕಾಂಡದ ತೀರ್ಮಾನವಾಯಿತು! ಕೂಲಿಕಾರ ದಶರಥನು ತೋಟದಲ್ಲಿ ಕೆಲಸಮಾಡುತ್ತಿದ್ದನು. ಸಾಹೇಬರು ಬಂದರು. ದಶರಥನ ಕೈಯಲ್ಲಿರುವ ಕೊಡಲಿಯನ್ನು ತೆಗೆದು ದೂರ ಬಿಸಾಡಿದರು ಮತ್ತು ದಶರಥನಿಗೆ ತಮ್ಮ ಬೂಟ್ಸಿನಿಂದ ಏಟು ಹಾಕಿದರು. ದಶರಥನು ಮುಗ್ಗರಿಸಿ ಬಿದ್ದನು. ಸಾಹೇಬರು ಅವನಿಗೆ ಏಳಲು ಹೇಳಿದರು. ದಶರಥನಿಗೆ ಏಳಲಿಕ್ಕಾಗಲಿಲ್ಲ. ಸಾಹೇಬರು ರೇಗಿದರು. ಮತ್ತು ಪುನಃ ಬೂಟ್ಸುಗಳ ಪೆಟ್ಟುಗಳನ್ನು ಆರಂಭಿಸಿದರು. ಕಾಲು ಬಚ್ಚಿಹೋಗುವ ವರೆಗೂ ದಶರಥನಿಗೆ ಈ ಪೂಜೆ ನಡೆಯಿತು. ಮತ್ತೂ ಏಳುವುದಿಲ್ಲ! ಬೇಕಂತಲೇ ಏಳುವುದಿಲ್ಲವೆಂದು ಸಾಹೇಬರ ಭಾವನೆ. ಆಸ್ಪತ್ರೆಗೆ ಅವನನ್ನು ಹೊತ್ತುಕೊಂಡು ಹೋದರು. ಸಾಹೇಬರ ಮೇಲಿನ ದ್ವೇಷದಿಂದ ಬೇಕಂತಲೇ ಬಿದ್ದವನು ಎದ್ದು ನಿಲ್ಲದ ದಶರಥನು, ಅದೇ ಕಾರಣದಿಂದ ಇಹಲೋಕವನ್ನು ತ್ಯಜಿಸಿದನು. ಪಾಪ, ಸಾಹೇಬರು ಏನು ಮಾಡಲಿ! ನ್ಯಾಯಾಧೀಶರಿಗಾದರೂ ಸಾಹೇಬರಲ್ಲಿ ಅಷ್ಟು ವಿಶೇಷ ತಪ್ಪು ತೋರಲಿಲ್ಲ. ಜೂರಿ (Jury) (ಇವರು ಬಿಳಿ ಜನರೇ)ಯವರಲ್ಲಿ ಇದು ಹತ್ಯೆ ಹೌದೊ ಅಲ್ಲವೊ ಎಂಬುದು ಸಂಶಯವಾಯಿತು. ಮೂರು ಜನರು ಹೌದೆನ್ನುವರು; ಇಬ್ಬರು ಅಲ್ಲವೆನ್ನುವರು! ಇದಕ್ಕಾಗಿಯೇ ಬಿಳಿ ಜನರೂ ಕಪ್ಪು ಜನರು ಬಿಳಿಯವರಿಗೆ ನ್ಯಾಯ ಕೊಡಲು ಸಮರ್ಥರಲ್ಲವೆನ್ನುವುದು! ಹೇಗೂ ಜೂರಿಯವರ ಬಹುಮತದಿಂದ ತಪ್ಪು ಸಾಬೀತು ಮಾಡಲ್ಪಟ್ಟಿತು! ಸಾಹೇಬರಿಗೆ ಏನನ್ಯಾಯ! ಇನ್ನೂರು ರೂಪಾಯಿ ದಂಡ ವಿಧಿಸಲ್ಪಟ್ಟಿತು. ಸಾಹೇಬರ ಮೇಲಿನ ದ್ವೇಷದಿಂದ ಸತ್ತ ದಶರಥನಿಗಾಗಿ ಇವರಿಗೆ ಇನ್ನೂರು ರೂಪಾಯಿ ದಂಡ! ಸಾಹೇಬರಿಗೆ ಈ ದಂಡದ ಅನ್ಯಾಯ ಮನಸ್ಸಿಗೆ ಹೋಗಿ, ಇದರ ಮೇಲೆ ಅಪೀಲು ಮಾಡದಿದ್ದರೆ ಸಾಕು! ಎಂಗ್ಲೊ ಇಂಡಿಯನ್ ಎಸೋಸಿಯೇಶನಿನವರು ವ್ಹೈಸರಾಯರ ವರೆಗೆ ಉದ್ದ ಪತ್ರಗಳನ್ನು ನಿಷೇಧಗಳನ್ನೂ ಕಳುಹಿಸಿ ಆ ಇನ್ನೂರು ರೂಪಾಯಿ ಹಿಂದೆ ಕೊಡಿಸುವುದಲ್ಲದೆ, ಸಾಹೇಬರಿಗೆ ಆದ ಮಾನನಷ್ಟಕ್ಕಾಗಿ ಪರಿಹಾರದ್ರವ್ಯವನ್ನೂ ಕೊಡಿಸದಿದ್ದರೆ ಸಾಕು!

ಹಿಂದೀಯರ ಜೀವಕ್ಕೆ ಎಲ್ಲಿಹೋದರೂ ಒಂದೇ ಬೆಲೆ. ಬಿಳೀ—ಮತ್ತು ಹಿಂದೀಯರೊಳಗೆ ನ್ಯಾಯ ತೀರ್ಮಾನ ಮಾಡುವಾಗ ನ್ಯಾಯವು ಎಲ್ಲಾ ಕಡೆಗಳಲ್ಲಿಯೂ ಒಂದೇ. ದಕ್ಷಿಣ ಆಫ್ರಿಕದ ವಿರೋಧ ಪಕ್ಷ, ಆಸ್ಟ್ರೇಲಿಯ ಕೆನಡಾಗಳ ಬಹಿಷ್ಕಾರ ಪಕ್ಷ, ಇಂಗ್ಲೆಂಡಿನ ಸ್ವತಂತ್ರ ವಾತಾವರಣ, ಹಿಂದೂಸ್ಥಾನದ ಸ್ವಂತ ಮನೆ—ಎಲ್ಲಿ ಯಾದರೂ ಅದು ಒಂದೇ. ಹಿಂದೀಯನನ್ನು ಬಿಳೀಯವನು ಕೊಂದರೆ ಅದು ಹಿಂದೀಯನ ಕುಯುಕ್ತಿ—ಬಿಳೀಯವನಿಗೆ ಕೆಟ್ಟ ಹೆಸರು ತರುವ ಉದ್ದೇಶದಿಂದ ಆತನು ಸತ್ತುದು; ಬಿಳಿಯವನ ಮೇಲೆ ಹಿಂದೀಯನು ಕೈಯೆತ್ತುವುದೆಂತಿರಲಿ, ಛಾಯೆ ಮಾತ್ರ ಬಿದ್ದರೆ, ಅದು ಹಿಂದೀಯನ ಜಬರ್ದಸ್ತನ! ಹಿಂದೀಯ ಪಾರತಂತ್ರ್ಯವು ಎಂದಿನ ವರೆಗೆ ಇರುವುದೊ ಅಂದಿನ ವರೆಗೆ ಈ ಪರಿಸ್ಥಿತಿಯು ಇದ್ದೇ ಇರುವುದು.

ಮೈಸೂರು ವಿಶ್ವವಿದ್ಯಾಲಯವೂ ಕನ್ನಡವೂ.

ಮೈಸೂರು ವಿಶ್ವವಿದ್ಯಾಲಯದ ಸೆನೇಟ್ ಮೀಟಿಂಗಿನಲ್ಲಿ ಕಾಲೇಜುಗಳಲ್ಲಿ ಕನ್ನಡಕ್ಕೆ ಹೆಚ್ಚು ಪ್ರಧಾನ್ಯ ಕೊಡುವಂತೆ ಮಾಡಿದುದು ಅಭಿನಂದನೀಯವಿದೆ. ಮೈಸೂರ ವಿಶ್ವವಿದ್ಯಾಲಯದ ಈ ನಿರ್ಧಾರವು ಸ್ವಲ್ಪ ತಡವಾಗಿ ಬಂದಿತಾದರೂ, ವಿಶ್ವವಿದ್ಯಾಲಯವು ಇದನ್ನು ಕಾರ್ಯಕಾರಿಯಾಗಿ ಮಾಡಿ ಕನ್ನಡದ ವೈಶಿಷ್ಟ್ಯವನ್ನು ಬೆಳೆಸುವುದಾಗಿ ಆಶಿಸುವೆವು. ಕನ್ನಡವನ್ನು ಪ್ರತಿ ಕ್ಲಾಸುಗಳಲ್ಲಿಯೂ ಕಲಿಯುವ ವಿಷಯವಾಗಿಟ್ಟು, ಇಂಗ್ಲೀಷಿಗಿಂತಲೂ ಕಡಿಮೆ ಪ್ರಧಾನ್ಯವು ಅದರ ಮೇಲೆ ಬೀಳದಂತೆ ನೋಡಿಕೊಳ್ಳುವುದು ವಿಶ್ವವಿದ್ಯಾಲಯದ ಕರ್ತವ್ಯವಾಗಿದೆ. ಕನ್ನಡ ವಾಙ್ಮಯ ಬೆಳವಣಿಗೆಗೆ ತೊಡಕ್ಕುಂಟಾಗುವುದಕ್ಕೆ, ಅದಕ್ಕೆ ಸಿಕ್ಕಿದ ಕಡಿಮೆ ಪ್ರಧಾನ್ಯವೇ ಕಾರಣವಾಗಿದೆ. ವಿದ್ಯಾಭ್ಯಾಸ ಹೊಂದಿದ ಪ್ರತಿ ಒಬ್ಬನ ಮನಸ್ಸಿನಲ್ಲಿ ಹೊಳೆಯುವ ಪ್ರಥಮ ಭಾವನೆಗಳು ಇಂಗ್ಲೀಷ ಭಾಷೆಯಲ್ಲಾಗಿವೆ. ನಾವು ಆಲೋಚಿಸುವುದು ಇಂಗ್ಲೀಷ ಭಾಷೆಯಲ್ಲಾಗಿದೆ. ಈ ಕಾರಣದಿಂದ ನಮಗೆ ಕನ್ನಡವನ್ನು ಸುಸ್ಪಷ್ಟವಾಗಿ ಮಾತನಾಡಲಿಕ್ಕಾಗಲಿ ಬರೆಯಲಿಕ್ಕಾಗಲಿ ಆಗುವುದಿಲ್ಲ. ಈ ಕಾರಣದಿಂದಲೆ ನಮ್ಮ ಹೆಚ್ಚಿನ ಮಂದಿಗಳು ಕನ್ನಡದಲ್ಲಿ ಇಂಗ್ಲೀಷ ಶಬ್ದಗಳನ್ನು ಬೆರೆಸದೆ, ವಾಕ್ಯವನ್ನು ಆಡುವುದಿಲ್ಲ. ಆದುದರಿಂದಲೇ ಕನ್ನಡವು ಸ್ವತಂತ್ರವಾದ ಆಧುನಿಕ ವಾಙ್ಮಯವನ್ನು ಕಟ್ಟಿಕೊಳ್ಳಲಾರದಾಗಿದೆ. ಕನ್ನಡಿಗರು ಇದರ ಕಡೆಗೆ ಹೆಚ್ಚು ಲಕ್ಷ್ಯಗೊಟ್ಟು, ಕನ್ನಡದ ಬೆಳವಣಿಗೆಗಾಗಿ ಸಾಧಿಸಬೇಕು. ಮೈಸೂರು ವಿಶ್ವವಿದ್ಯಾಲಯದ ಮೂಲಕ ಈ ಸಾಧನೆಗಳು ಹೆಚ್ಚು ಕಾರ್ಯಕಾರಿಯಾಗಬಹುದು. ಮೈಸೂರಿನವರು ಮೈಸೂರು ವಿಶ್ವವಿದ್ಯಾಲಯವನ್ನು ಆಗಿಂದಾಗ ಎಚ್ಚರಿಸಿ ಕನ್ನಡವನ್ನು ವಿದ್ಯಾಲಯದ ಎಲ್ಲಾ ಪಾಠಗಳಿಗೂ ಮುಖ್ಯ ಭಾಷೆಯನ್ನು ಮಾಡಿಸುವುದು ಅಗತ್ಯವಿದೆ. ವಿಶ್ವವಿದ್ಯಾಲಯದವರು ಈ ಧ್ಯೇಯದ ಕಡೆಗೆ ಮನವಿಡಬೇಕಾಗಿ ನಮ್ಮ ಪ್ರಾರ್ಥನೆ.

ಜರ್ಮನಿಯ ಈಗಿನ ಚೇತನ.

ಜರ್ಮನಿಗೆ ಯುದ್ಧಾವಸಾನದೊಡನೆ, ವರ್ಸಲಿ ಸಂಧಿಯ ಮೂಲಕ ಬಹಳ ನಷ್ಟಗಳುಂಟಾಗಿ ಬಡತನ ಒದಗಿದರೂ, ಮಿತ್ರರಾಷ್ಟ್ರಗಳ ಅಧಿಕಾರವು ಜರ್ಮನಿಯ ಮೇಲೆ ಬಲವಾಗಿದ್ದರೂ, ದೇಶದೊಳಗಿನ ಆರ್ಥಿಕ ಪರಿಸ್ಥಿತಿಯು ಬಹಳ ಕಠಿಣವಾಗಿದ್ದರೂ, ರಾಜಕೀಯ ಪಂಗಡಗಳೊಳಗೆ ಬಡಿದಾಟವು ವಿಶೇಷವಾಗಿದ್ದರೂ, ವಿಜ್ಞಾನ ಶೋಧಗಳಲ್ಲಿಯೂ, ಔದ್ಯೋಗಿಕ ಪುನರ್ವ್ಯವಸ್ಥೆಯಲ್ಲಿಯು ಅವರು ದ್ವಿಗುಣಿತ ಚೇತನವನ್ನು ಹೊಂದಿರುವರೆಂಬುದು ಅವರ ಸಂಘಟನಾ ಶಕ್ತಿಯ ಮತ್ತು ಸ್ವಭಾವಿಕ ಚತುರತೆಯ ಉತ್ತಮ ನಿದರ್ಶನವಾಗಿದೆ. ಅವರು ಕೆಲವೇ ಸಮಯದೊಳಗೆ, ದೊಡ್ಡ ದೊಡ್ಡ ಮೆಶಿನಗನ್ನುಗಳನ್ನು ತಯಾರುಮಾಡುತ್ತಲಿದ್ದ ಕ್ರುಪ್ಪ ಕಾರಖಾನೆಯನ್ನು ಜೀವನದ ಇತರ ಆವಶ್ಯಕತೆಗಳಿಗಾಗಿ ಪರಿವರ್ತಿಸಲು ಶಕ್ತರಾದುದನ್ನು ನೋಡಿದರೆ, ದೊಡ್ಡ ವಿಮಾನುಗಳ ಕಾರಖಾನೆಗಳು ಮಿತ್ರರಾಷ್ಟ್ರಗಳ ಒತ್ತಾಯದಿಂದ ವಿಮಾನು ತಯಾರಿಯನ್ನು ನಿಲ್ಲಿಸಿ ಆ ಕೂಡಲೇ ಇತರ ಕೈಗಾರಿಕೆ ಮತ್ತು ಸಣ್ಣ ವಿಮಾನುಗಳ ತಯಾರಿಯಲ್ಲಿ ನಿಯುಕ್ತವಾದುದನ್ನು ನೋಡಿದರೆ, ಅವರ ಆಶ್ಚರ್ಯಕರ ಘಟನಾಶಕ್ತಿಯ ಪರಿಮಾಣವು ತಿಳಿದುಬರುವುದು. ಮಾತ್ರವಲ್ಲ ರ್‍ಹೂರ್ ದೇಶವನ್ನು ಫ್ರೆಂಚರು ಆಕ್ರಮಿಸಿಕೊಂಡಿದ್ದರೂ ಅವರ ಕೈಗಾರಿಕೆಗಳು ನಿರಾತಂಕವಾಗಿ ಬೆಳೆಯುತ್ತಾ ಬಂದಿವೆ. ಜರ್ಮನ್ ವ್ಯಾಪಾರವು ಇಂಗ್ಲೆಂಡು ಅಮೇರಿಕಾ, ಜಪಾನ ದೇಶಗಳೊಡನೆ ಸ್ಪರ್ಧೆಯಿಂದ ನಡೆಯುತ್ತಿದೆ. ಹಿಂದೂ ದೇಶದೊಡನೆ ಕಳೆದ ವರ್ಷದಲ್ಲಿ ನಡೆದ ಜರ್ಮನ ವ್ಯಾಪಾರದ ಪರಿಮಾಣ ನೋಡಿದರೆ ಬೇಗನೆ ಅದು ಯುದ್ಧದ ಪೂರ್ವದ ಸಮತೂಕಕ್ಕೆ ಬರುವುದೆಂದು ತೋರುತ್ತಿದೆ. ಅಲ್ಲದೆ ಇಂಗ್ಲೆಂಡಿನಲ್ಲಿ ಕೆಲಸವಿಲ್ಲ ಕೂಲಿಗಳ ಸಂಖ್ಯೆಯು ಹೆಚ್ಚಿರುವಾಗ, ಫ್ರಾನ್ಸಿನಲ್ಲಿ ಹಣದ ಅಡಚಣೆಯು ದೊಡ್ಡ ಕೋಲಾಹಲವಿರುವಾಗ, ಜರ್ಮನಿಯು ಶಾಂತವಾಗಿ ಏನೊಂದು ಗಡಿಬಿಡಿಯಿಲ್ಲದೆ ತನ್ನ ಕೈಗಾರಿಕೆಯನ್ನು ಬಲಪಡಿಸಿ ಬರುತ್ತಿದೆ. ಮಾತ್ರವಲ್ಲದೆ ಜರ್ಮನಿಯ ವೈಜ್ಞಾನಿಕರು ನವೀನ ಶೋಧಗಳನ್ನು ಮಾಡುತ್ತಲೇ ಇರುವರು. ಈ ಶೋಧಗಳ ಬಲದಿಂದಲೂ, ಕಾರ್ಯಶಕ್ತಿಯಿಂದಲೂ, ಸಂಘಟನೆಯಿಂದಲೂ ಅವರು ಯುದ್ಧದ ದುರವಸಾನದಿಂದ ಪುನಃ ಮೊದಲಿನಂತೆಯೇ ಶಕ್ತಿವಂತವಾಗಿ ಮುಂದೆ ಬರಬಹುದೆಂದು ತೋರುತ್ತಿದೆ. ಜರ್ಮನಿಯನ್ನು ಲೋಕೇತಿಹಾಸದಿಂದ ಅಂತರ್ಹಿತವಾಗಿ ಮಾಡುವ ಫ್ರಾನ್ಸಿನ ಬಲವತ್ತರವಾದ ಆಶೆಯು ಏನೂ ಫಲಕಾರಿಯಾಗಲಿಲ್ಲ. ಬದಲಿಗೆ ಫ್ರಾನ್ಸಿನ ಒಳಗಿನ ಪರಿಸ್ಥಿತಿಯು ಬಹಳ ಕಠಿಣವಾದ ಸ್ಥಿತಿಗೆ ಮುಟ್ಟಿರುವುದು.

ಲೋಕಲ್ ಬೋರ್ಡುಗಳೂ ಸ್ತ್ರೀ ವಿದ್ಯಾಭ್ಯಾಸವೂ.

ಉಡುಪಿ ತಾಲೂಕು ಬೋರ್ಡಿಗೆ ಒಂದು ಬಾಲಿಕಾ ಪಾಠಶಾಲೆ ಇದೆ. ಇದನ್ನು ಬೋರ್ಡಿನವರಿಗೆ, ಉಡುಪಿಯ ಕೊನ್ವೆಂಟ ಶಾಲೆಯವರಿಗೆ ಕೆಲವು ಶರ್ತಗಳ ಮೇಲೆ ಕೊಡುವ ಆಲೋಚನೆ ಇದೆಯೆಂದು ಕೆಲವರು ಹೇಳಿಕೊಳ್ಳುತ್ತಾರೆ. ಇದು ನಿಜವಾದರೆ ಬೋರ್ಡಿನ ಈ ಕೆಲಸವನ್ನು ಯಾರಾದರೂ ನ್ಯಾಯವೆಂದು ಹೇಳುವರೆಂದು ನಾವು ತಿಳಿಯುವುದಿಲ್ಲ. ಕೊನ್ವೆಂಟ ಎಂಬುದು ಕೇವಲ ಖಾಸಗಿ ಸಂಸ್ಥೆ; ಅಲ್ಲಿ ಒಂದೇ ಮತಕ್ಕೆ ಪ್ರಾಧಾನ್ಯವು ಹೆಚ್ಚು; ಅದು ರೋಮನ್ ಕೆಥೋಲಿಕರದು. ಆದರೆ ಬೋರ್ಡು ಶಾಲೆಯು ಎಲ್ಲರಿಗೂ ಸಂಬಂಧಪಟ್ಟುದು ಅಲ್ಲಿ ಎಲ್ಲಾ ಮತಗಳಿಗೂ ಗೌರವವಿದೆ. ಕೊನ್ವೆಂಟಿನ ಅಧಿಕಾರಿಗಳಿಗೆ ಇತರ ಮತಗಳ ಮೇಲೆ ಗೌರವವಿರುವುದಕ್ಕಿಂತ ತುಚ್ಛೀಕಾರವೇ ಹೆಚ್ಚಿದೆ ಮತ್ತು ಬೋರ್ಡು ವಿದ್ಯಾಭ್ಯಾಸ ಕ್ರಮವು ಕೊನ್ವೆಂಟ ವಿದ್ಯಾಭ್ಯಾಸ ಕ್ರಮವನ್ನು ಅನುಸರಿಸುವುದು. ಈಗ ಕೊನ್ವೆಂಟ ವಿದ್ಯಾಭ್ಯಾಸವನ್ನಿಚ್ಛೆಸುವವರು ಈ ಮೊದಲೇ ಇರುವ ಕೊನ್ವೆಂಟ ಶಾಲೆಗೆ ಹೋಗಬಹುದು. ಆದರೆ ಬೋರ್ಡು ತಾನು ಸ್ತ್ರೀ ಶಿಕ್ಷಣದ ಪರವಾಗಿ ತಾನು ಹೊರಬೇಕಾದ ಜವಾಬದಾರಿಯನ್ನು ಪರರ ಹೆಗಲ ಮೇಲಿರಿಸಲು ಯತ್ನಿಸುವುದು ಭೂಷಣವಲ್ಲ. ಹಾಗೆ ಮಾಡುವುದಾದರೆ, ಬೋರ್ಡಿನ ಇತರ ಎಷ್ಟೋ ಶಾಲೆಗಳನ್ನು ವಹಿಸಿಕೊಳ್ಳಲು ಸಿದ್ಧರಿರುವವರು ಅನೇಕರು ಇದ್ದಾರೆ. ಬೋರ್ಡು ತನ್ನ ಶಾಲೆಗಳನ್ನು ಅಂತಹರಿಗೆ ಬಿಟ್ಟುಕೊಡುವುದು ಹಿತವೆಂದು ನಮಗೆ ತೋರುವುದಿಲ್ಲ.

ತಾಲೂಕು ಮತ್ತು ಡಿಸ್ಟ್ರಿಕ್ಟ ಬೋರ್ಡುಗಳು ಸ್ತ್ರೀ ವಿದ್ಯಾಭ್ಯಾಸದ ಕಡೆಗೆ ಸರಿಯಾದ ಲಕ್ಷ್ಯವನ್ನು ಕೊಡದಿರುವುದು ಬಹಳ ದುಃಖಕರ. ಸ್ತ್ರೀ ವಿದ್ಯಾಭ್ಯಾಸದ ಸಮಸ್ಯೆಯಷ್ಟು ಕಠಿಣವಾದುದು ಬೇರೊಂದಿಲ್ಲ. ಅದನ್ನು ಚೆನ್ನಾಗಿ ಚರ್ಚಿಸಿ, ತಿಳಿದು, ಸುಧಾರಿಸಲು, ಯಾವ ಬೋರ್ಡೂ ಪ್ರಯತ್ನಿಸಿದಂತೆ ತಿಳಿಯುವುದಿಲ್ಲ. ಸ್ತ್ರೀಯರಿಗೆ ಕಸೂತಿ ಮೊದಲಾದ ಪಾಠಗಳನ್ನು ಬೋರ್ಡಿನಲ್ಲಿ ಕೊಡುತ್ತಾರೆ ನಿಜ, ಆದರೆ ಅವರ ಮಾನಸಿಕ ಬೆಳವಣಿಗೆಗೆ ಸಾಕಷ್ಟು ಗಮನವು ಇಡಲ್ಪಡುವುದಿಲ್ಲ. ಜನಾಂಗದ ಭಾವೀ ಮಾತೆಯರನ್ನು ಇಷ್ಟು ಉದಾಸೀನ ರೀತಿಯಿಂದ ಕಾಣುವುದು ಲಕ್ಷ್ಯವಾಗಿದೆ. ತಾಲೂಕು ಬೋರ್ಡುಗಳು ಸ್ತ್ರೀ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಲಕ್ಷವನ್ನು ಇನ್ನಾದರೂ ಕೊಡಬೇಕಾಗಿ ನಮ್ಮ ವಿನಂತಿ ಇದೆ.

ಇಟೇಲಿಯಲ್ಲಿನ ಸ್ವೇಚ್ಛೆಯ ಆಳಿಕೆ.

ಪಾಶ್ಚಾತ್ಯ ದೇಶಗಳಲ್ಲಿ ಪ್ರಜಾ ಸತ್ತಾತ್ಮಕ ರಾಜ್ಯಾಡಳಿತ ಕ್ರಮವು ಕಂಡುಹಿಡಿಯಲ್ಪಟ್ಟು ಈಗ ಅದೇ ಕ್ರಮವೇ ಸಾಮಾನ್ಯವಾಗಿ ಪಾಶ್ಚಾತ್ಯ ರಾಜ್ಯಗಳಲ್ಲಿ ಪ್ರಚಲಿತವಿದೆ. ಆದರೆ ಇಟೇಲಿಯ ಈಗಿನ ರಾಜ್ಯಾಡಳಿತವು ಪ್ರಜಾ ಸತ್ತಾತ್ಮಕವೆಂದು ಹೇಳಲಾಗುವುದಿಲ್ಲ. ಇಂಗ್ಲೆಂಡಿನಲ್ಲಿ ಒಂದು ಕಾಲದಲ್ಲಿ ಕ್ರೊಮವೇಲನು ಅಧಿಕಾರವನ್ನು ಅಪಹರಿಸಿಕೊಂಡಂತೆ ಇಟೇಲಿಯಲ್ಲಿ ಸಿಗ್ನರ್ ಮುಸ್ಸೊಲಿನಿ ಎಂಬಾತನು ಇಟೇಲಿ ಸರಕಾರದ ಅಧಿಕಾರಗಳನ್ನು ಸ್ವೀಕೃತ ಮಾಡಿರುವನು. ಇವನು ಇಟೇಲಿಯ ಫೆಸಿಷ್ಟ ಪಂಗಡದ ನಾಯಕನು. ಫೆಸಿಷ್ಟ ಪಂಗಡವು ಕೂಲಿಕಾರರ ಕೊಮ್ಯುನಿಷ್ಟ ಪಂಗಡಕ್ಕೆ ವಿರೋಧವಿದ್ದು, ಬಲಾತ್ಕಾರಪೂರ್ವಕ ಅದರ ಮೇಲೆ ಯುದ್ಧಮಾಡಲು ನಿರ್ಧಾರವುಳ್ಳದು. ಈ ಪಂಗಡ ಒಂದು ಇಟೇಲಿಯೊಳಗೆ ಕೆಲವು ವರ್ಷಗಳ ಹಿಂದೆ ಉಂಟಾಗಿ ಸ್ವಲ್ಪ ಸಮಯದೊಳಗೆನೇ ಸರಕಾರವನ್ನು ಬಲಾತ್ಕಾರದಿಂದ ಸ್ವಾಧೀನಮಾಡಿಕೊಂಡಿತು. ಆಗಿನ ವರೆಗೆ ಇಟೇಲಿಗೆ ರಾಜನಿದ್ದರೂ, ಇಂಗ್ಲೆಂಡಿನಂತೆಯೇ ಅದು ಪ್ರಜಾಸತ್ತಾತ್ಮಕವಾಗಿದ್ದಿತು. ಆದರೆ ಫೆಸಿಷ್ಟ ಪಂಗಡವು ಗೆದ್ದು ಸರಕಾರವನ್ನು ಅಧೀನಮಾಡಿಕೊಂಡ ಮೇಲೆ, ಈ ಸಿಗ್ನರ್ ಮುಸ್ಸೊಲೀನಿಗು ಪ್ರಧಾನ ಮಂತ್ರಿಯಾದನು. ಅಂದಿನಿಂದ ಅವನು ಬಲಾತ್ಕಾರದಿಂದ ತನ್ನ ವಿರೋಧಿಗಳ ತಲೆತಗ್ಗಿಸಿರುತ್ತಿರುವನು. ಅಲ್ಲಿನ ಪ್ರಕೃತದ ಪರಿಸ್ಥಿತಿಯ ಪ್ರಕಾರ, ಪತ್ರಿಕೆಗಳಿಗೆ ಸ್ವಾತಂತ್ರ್ಯವಿಲ್ಲ; ವ್ಯಕ್ತಿಗಳಿಗೆ ಸ್ವಾತಂತ್ರ್ಯವಿಲ್ಲ; ಮಾತ್ರವಲ್ಲ, ದೇಶವನ್ನಾಳಬೇಕಾದ ಪಾರ್ಲಿಮೆಂಟಿಗೆ ಸ್ವಾತಂತ್ರ್ಯವಿಲ್ಲ. ಮುಸ್ಸೊಲಿನಿಯು ಪಾರ್ಲಿಮೆಂಟನ್ನು ಸೂತ್ರದ ಗೊಂಬೆಯಾಗಿ ಮಾಡಿರುವನು. ತನ್ನ ಅಧಿಕಾರಗಳನ್ನು ಬಲಪಡಿಸುವ ಕಾಯಿದೆಗಳನ್ನು ತನ್ನಿಚ್ಛೆಯಂತೆ ಯಾವ ನಿರೋಧವೂ ಎದೆಕೊಡದೆ ಮಂಜೂರುಮಾಡುವನು. ಮೊನ್ನೆ, ತಾನು ಪಾರ್ಲಿಮೆಂಟಿಗೆ ಜವಾಬ್ದಾರನಲ್ಲ, ರಾಜನಿಗೆ ಜವಾಬ್ದಾರನೆಂದು ಪಾರ್ಲಿಮೆಂಟ ಎಕ್ಟ ಮಾಡಿಸಿದನು. ರಾಜನು ಶಕ್ತಿವಂತನಲ್ಲದುದರಿಂದ ಈ ಎಕ್ಟಿನಿಂದ ಮುಸ್ಸೊಲೀನಿಯೇ ಅಭಿಷಿಕ್ತರಾಜನಾದಂತಾಯಿತು. ಸ್ವಾತಂತ್ರ್ಯದ ಪಕ್ಷಪಾತಿಗಳೆಂದೆನ್ನಿಸುವ ಪಾಶ್ಚಾತ್ಯರಲ್ಲಿ ಇದು ಸಾಧ್ಯವೆಂಬುದು ಅವರ ಜಗ್ಗಳಿಕೆಗೂ, ಅವರ ಸ್ವಾತಂತ್ರ್ಯದ ಉತ್ತರವಾಗಿದೆ.

ಭೂಲೋಕದಲ್ಲಿ ಅತಿ ದೊಡ್ಡ ಗಡಿಯಾರ.

ಉತ್ತರ ಅಮೇರಿಕದ ನ್ಯೂಯಾರ್ಕ ಪಟ್ಟಣದಲ್ಲಿರುವ ಎಲ್ಲಾ ತರದ ಪರಿಮಳ ದ್ರವ್ಯಗಳನ್ನು ತಯಾರಿಸುವ ಕೊಲಗೇಟ್ ಕಂಪೆನಿಯವರು ಭೂಲೋಕದಲ್ಲಿ ಅತೀ ದೊಡ್ಡದಾಗಿರುವ ಒಂದು ಗಡಿಯಾರವನ್ನು ತಯಾರಿಸಿ ಅದನ್ನು ತಮ್ಮ ಕಂಪೆನಿಯ ಕಟ್ಟಡದ ತಲೆಯ ಮೇಲೆ ಇಟ್ಟು ಇದೇ ದಶಂಬರ ತಿಂಗಳ ೧ನೇ ತಾರೀಕಿನ ಸೋಮವಾರ ಮಧ್ಯಾಹ್ನ ೧೨ ಗಂಟೆ ಸಮಯಕ್ಕೆ ನಡಿಸಲಾರಂಭಿಸಿದರು.

ಈ ಗಡಿಯಾರದ ಮುಖಬಿಲ್ಲೆಯ ವ್ಯಾಸವು (Diameter) ೫೦ ಅಡಿ ಇದೆ. ಮಿನಿಟಿನ ಮುಳ್ಳಿನ ಉದ್ದವು ೩೭ ಅಡಿ ೩ ಇಂಚು, ಗಂಟೆ ತೋರಿಸುವ ಮುಳ್ಳು ೨೭॥ ಅಡಿ ಉದ್ದ. ಈ ಗಡಿಯಾರವು ನ್ಯೂಯೊರ್ಕ ಬಂದರದಲ್ಲಿರುವ ಎಲ್ಲಾ ಹಡಗಗಳಿಗೂ ಬಹಳ ದೂರದಿಂದ ಹೋಗುವ ಹಡಗಗಳಿಗೂ ಕಾಣುವುದು. ಇದರ ಮುಖಬಿಲ್ಲೆಯು ಅಷ್ಟಕೋನಾಕೃತಿಯಲ್ಲಿದೆ. ಇದರ ಸುತ್ತಲೂ ಇರುವ ಚೌಕವನ್ನು ಉಕ್ಕಿನಿಂದ ತಯಾರಿಸಿರುತ್ತಾರೆ. ಮುಖಬಿಲ್ಲೆಗೆ ಬಿಳಿ ಎನಮಲ್ ಬಣ್ಣಕೊಟ್ಟಿರುತ್ತಾರೆ. ಗಂಟೆಯ, ಅಂಕೆಗಳ ಮೇಲೆ ೫ ಮಿನಿಟು ತೋರಿಸುವ ಗುರ್ತವು ಬಹಳ ದೊಡ್ಡದಾಗಿದೆ. ಈ ಬಿಲ್ಲೆಯಲ್ಲಿ ಈ ಗುರ್ತಗಳು ಮಾತ್ರವೇ ಇವೆ. ರಾತ್ರಿಯಲ್ಲಿ ಈ ಗುರ್ತಗಳು ಪ್ರಕಾಶಿಸುತ್ತವೆ.

ಈ ಗಡಿಯಾರದ ಮಿನಿಟು ತೋರಿಸುವ ಕೈಯ ಭಾರವು ೨,೨೦೦ ರಾತಲು, ಗಂಟೆ ತೋರಿಸುವ ಮುಳ್ಳಿನ ಭಾರವು ೧,೭೦೫ ರಾತಲು ಒಟ್ಟಾರೆ ಗಡಿಯಾರದ ಯಂತ್ರ ಮುಳ್ಳು ಮುಂತಾದವುಗಳ ಭಾರವು ನಾಲ್ಕು ಟನ್. ಮಿನಿಟು ತೋರಿಸುವ ಮುಳ್ಳಿನ ತುದಿಯು ಗಂಟೆಗೆ ಒಂದು ಸುತ್ತು ತಿರುಗುವಾಗ ೧೫೭ ಅಡಿ ತಿರುಗುತ್ತದೆ. ಅಂದರೆ ಮುಖಬಿಲ್ಲೆಯ ಸುತ್ತಳತೆಯು ೧೫೭ ಅಡಿ ಎಂದು ಹೇಳಬಹುದು. ಈ ಮುಳ್ಳು ಒಂದು ದಿವಸದಲಿ ಮುಕ್ಕಾಲು ಮೈಲಿನಷ್ಟು ತಿರುಗುತ್ತದೆ.

∴ ∴ ∴ ∴

ಮಹಾತ್ಮಾ ಗಾಂಧಿಯವರು ಸ್ತ್ರೀಯರ ಕೂಡೆ ದೋಲಕಾ ಎಂಬಲ್ಲಿ ಮಾಡಿದ ವಿನಂತಿ.

ಮಹಾತ್ಮಾ ಗಾಂಧಿಯವರು ಶ್ರೀ। ವಲ್ಲಭಬಾಯಿ ಪಟೇಲರ ಕೂಡೆ ದೋಲಕಾ ಎಂಬಲ್ಲಿಗೆ ಇದೇ ಕಳೆದ ತಾ. ೭ಕ್ಕೆ ತೆರಳಿದ್ದರು. ಗಾಂಧಿಯವರನ್ನು ಕಾಣಲಿಕ್ಕೆ ಅಲ್ಲಿಯ ಹಳ್ಳಿಹಳ್ಳಿಗಳಿಂದ ಜನರು ಗುಂಪುಗುಂಪಾಗಿ ಬಂದು ರೈಲ್ವೆ ಸ್ಟೇಶನಿನಲ್ಲಿ ನೆರೆದಿದ್ದರು. ಮಹಾತ್ಮಾಜಿಯವರು ಅದೇ ದಿವಸ ಅಲ್ಲಿ ನೆರೆದಿದ್ದ ಸ್ತ್ರೀಯರ ಸಭೆಗೆ ಚಿತ್ತಯಿಸಿದ್ದರು. ನೆರೆದಿದ್ದ ಸ್ತ್ರೀಸಮೂಹಕ್ಕೆ, ನೀವು ಸೀತಾದೇವಿಯಂತೆ ಪರಿಶುದ್ಧತೆಯಲ್ಲಿರಬೇಕೆಂದೂ, ಚರಕದಲ್ಲಿ ನೂಲಬೇಕೆಂದೂ ಮತ್ತು ಖದ್ದರನ್ನು ಧರಿಸಬೇಕೆಂದೂ ಅನುಶಾಸನೆ ಹೇಳಿದರು. ಅನಂತರ ಮಹಾತ್ಮಾಜಿಯವರು ಅಲ್ಲಿ ನೆರೆದಿದ್ದ ಒಂದು ಮಹಾಸಭೆಗೆ ಚಿತ್ತಯಿಸಿದರು. ಈ ಸಭೆಯಲ್ಲಿ ದೊಲಕಿನ ಪರವಾಗಿ ಒಂದು ಥೈಲಿಯನ್ನು ಕೊಟ್ಟಿರುವರು. ನಂತರ ಗಾಂಧಿಯವರು ತಮ್ಮ ಸೆಕ್ರೆಟರಿಗಳಿಂದ ಅಲ್ಲಿ ನೆರೆದ ತಾಲುಕುದಾರರಿಗೆ ಪರದೇಶದ ವಸ್ತ್ರದ ಮತ್ತು ಮಿಲ್‌ಮೇಡ್ ವಸ್ತ್ರದ ಬಹಿಷ್ಕಾರದ ಕುರಿತು ಸೂಚಿಸಿ, ತಾಲುಕುದಾರರಿಗೂ ಅಲ್ಲಿಯ ಜನರಿಗೂ ಸರಿಯಾದ ಬುದ್ಧಿಮಾರ್ಗವನ್ನು ಹೇಳಿದರು. ಮಹಾತ್ಮಾಗಾಂಧಿಯವರಿಗೆ ನಡೆಯಲಿಕ್ಕೂ ಮಾತನಾಡಲಿಕ್ಕೂ ಆಗದಿದ್ದರೂ ದೊಲಕ್ ತಾಲುಕು ಜನರ ಮೇಲಿರುವ ಪ್ರೀತಿಗಾಗಿ ಬಂದಿರುವರು ಆದುದರಿಂದ ಅವರು ಹೇಳಿದ ಸೂಚನೆಗಳ ಪ್ರಕಾರ ನಡಕೊಳ್ಳಬೇಕಾಗಿ ವಲ್ಲಭಬಾಯಿ ಪಟೇಲರು ನೆರೆದಿದ್ದ ಸಭಿಕರೊಳಗೆ ಸಭೆಯು ಮುಕ್ತಾಯವಾಗುವಾಗ ಮನವಿಮಾಡಿಕೊಂಡರು.

ಬುಧಗ್ರಹದಲ್ಲಿ ಜನರಿರುವರೆ?

ಅಲ್ಲಿಯ ಅವಸ್ಥೆ ಹೇಗಿದೆ?

ಬುಧಗ್ರಹವು ನಮ್ಮ ಸೂರ್ಯ ಸಂಸ್ಥಾನದಲ್ಲಿರುವ ಗ್ರಹಗಳಲ್ಲಿ ಅತೀ ಸಣ್ಣದಾಗಿದೆ. ಮಂಗಳ ಗ್ರಹವು ೫ ವರುಷಗಳಿಗೊಮ್ಮೆ ಭೂಮಿಗೆ ಹತ್ತಿರ ಬರುತ್ತದೆ. ಆ ಸಮಯದಲ್ಲಿ ಶೋಧನೆಮಾಡಿ ಅದರಲ್ಲಿ ಜನರು ವಾಸಿಸಿಕೊಂಡಿದ್ದಾರೆಂದು ನಿಶ್ಚಯಿಸಿರುತ್ತಾರೆ. ಈಗ ಪ್ರತಿ ಗ್ರಹದಲ್ಲಿಯೂ ಜನರು ವಾಸಿಸಿಕೊಂಡಿದ್ದಾರೆಯೋ ಇಲ್ಲವೋ ಎಂದು ಶೋಧನೆಗಳು ನಡಿಯುತ್ತವೆ. "ಥೆರ್ಮ್ಯೊವನ್-ಥೆರ್ ಮೋಕಪಲ್" ಎಂಬ ಒಂದು ಸುಲಭ ಯಂತ್ರದಿಂದ ಗ್ರಹಗಳಿಂದಲೂ ನಕ್ಷತ್ರಗಳಿಂದಲೂ ಎಷ್ಟು ಸೆಕೆಯು ಹೊರಡುತ್ತದೆಂದು ಕಂಡುಹಿಡಿದ್ದಾರೆ. ಈಗ ಅದೇ ಯಂತ್ರದ ಸಹಾಯದಿಂದ ಬುಧಗ್ರಹದಿಂದಲೂ ಎಷ್ಟು ಸೆಕೆಯು ಹೊರಡುತ್ತದೆಂದು ಈಗ ಕಂಡುಹಿಡಿದಿರುತ್ತಾರೆ. ಕಳೆದ ವರುಷ, ಮಂಟ ವಿಲ್‌ಸನ್ ಒಬ್‌ಸರವೇಟರಿಯಿಂದ ಈ ಗ್ರಹವನ್ನು ಪರೀಕ್ಷಿಸಿದ್ದಲ್ಲಿ ಸೂರ್ಯನಿಗೆ ವಿಮುಖವಾದ ಆ ಗ್ರಹದ ಕಡೆಯಿಂದ ಲೆಕ್ಕಮಾಡಬಹುದಾದಷ್ಟು ಸೆಕೆಯು ಹೊರಡುತ್ತದೆ, ಎಂದು ಶೋಧನೆ ಮಾಡಿರುತ್ತಾರೆ.

ಬುಧಗ್ರಹದ ಒಂದೇ ಭಾಗವು ಸೂರ್ಯನಿಗೆ ಎದುರಾಗಿದೆ ಎಂದು ಎಷ್ಟೋ ವರ್ಷಗಳಿಂದ ಒಂದು ಭಾವನೆ ಇದೆ. ಇಟಲಿ ದೇಶದ ಪ್ರಸಿದ್ಧ ಪಟ್ಟಿ ಖಗೋಳ ಶಾಸ್ತ್ರಜ್ಞರಾದ ಶಿಯಾ ಪರೆಲಿ ಎಂಬವರು ಮಂಗಳ ಗ್ರಹದಲ್ಲಿರುವ ಕಾಲುವೆಗಳನ್ನು ಕಂಡುಹಿಡಿದಿರುತ್ತಾರೆ. ಇವರು ಸುಮಾರು ಮೂವತ್ತು ವರುಷಗಳ ಹಿಂದೆ ಬುಧಗ್ರಹದಲ್ಲಿಯೂ ಸ್ವಲ್ಪ ಸ್ವಲ್ಪ ಕುರುಹುಗಳು ಕಂಡುಬರುತ್ತವೆಂದು ಶೋಧನೆಮಾಡಿದ್ದರು. ಇವರು ಹೇಳಿದ ಸಂಗತಿಯು ನಿಜವಾದುದೆಂದು ಇಷ್ಟರ ವರೆಗೆ ಭಾವನೆ ಇದೆ. ಇವರು ಈ ಸಂಗತಿಯನ್ನು ಕಂಡುಕೊಳ್ಳುವ ಕೆಲವು ವರುಷಗಳ ಮುಂಚೆ ಶಿ ರೋ ಟ ರ್ ಎಂಬ ಒಬ್ಬ ಜರ್ಮನ್ ಖಗೋಳ ಶಾಸ್ತ್ರಜ್ಞರು ಈ ಬುಧಗ್ರಹದ ವಿಷಯ ಅನೇಕ ಶೋಧನೆಗಳನ್ನು ಮಾಡಿ, ಈ ಗ್ರಹವು ೨೪ ತಾಸು ೫ ನಿಮಿಷಗಳಲ್ಲಿ ತನ್ನ ಅಚ್ಚಿನಲ್ಲಿ ಒಂದು ಸುತ್ತು ತಿರುಗುತ್ತದೆಂದು ನಿಶ್ಚಯಿಸಿರುತ್ತಾರೆ. ಭೂಮಿಗೂ, ಮಂಗಳ ಗ್ರಹಕ್ಕೂ ತನ್ನ ಅಚ್ಚಿನಲ್ಲಿ ಒಂದು ಸುತ್ತು ತಿರುಗುವುದಕ್ಕೆ ಇಷ್ಟೇ ಸಮಯವು ಬೇಕಾಗುತ್ತದೆ. ಶಿಯಾಪರೆಲಿಯವರು ಕಂಡುಕೊಂಡ ಪ್ರಕಾರ ಬುಧಗ್ರಹದ ಒಂದೇ ಭಾಗವು ಯಾವಾಗಲೂ ಸೂರ್ಯನ ಕಡೆಗೆ ಇದ್ದರೆ ಆ ಭಾಗವು ಬೆನ್ನಾಗಿ ಬೆಂದುಹೋಗಿ ವಿಮುಖವಾಗಿರುವ ಭಾಗವು ಶೀತದಿಂದ ಗಟ್ಟಿಯಾಗಿ ಹೋಗುವದೆಂಬುದರಲ್ಲಿ ಸಂದೇಹವಿಲ್ಲ. ಅದಲ್ಲದೆ ಸೂರ್ಯನಿಗೆ ಎದುರಾಗಿರುವ ಭಾಗದಲ್ಲಿ ಸೆಕೆಯು ಅತಿರೇಕವಾಗುವುದು. ಫೆರನ್‌ಹೀಟ್ ಥರ್ಮಾಮೀಟರಿನಲ್ಲಿ ಕೆಲವು ನೂರು ಡಿಗ್ರಿ ಏರುವದು. ವಿಮುಖವಾಗಿರುವ ಭಾಗದಲ್ಲಿ ಥರ್ಮಾಮೀಟರಿನ ಜೀರೊ ಡಿಗ್ರಿಗಿಂತಲೂ ಅನೇಕ ಡಿಗ್ರಿ ಕೆಳಗಿಳಿಯುವುದು. ಬುಧಗ್ರಹದ, ಸೂರ್ಯನಿಗೆ ವಿಮುಖವಾದ ಭಾಗದಿಂದ ಸೆಕೆಯು [illegible] ಸಂಗತಿಯು ವಿಷಯ, ಪ್ರೊಫೆಸರ್ [illegible] ಎಂಬವರು ಎರಡು ತರದ ಅಭಿಪ್ರಾಯ

ಪಡುತ್ತಾರೆ. (೧) ಈ ಗ್ರಹದಲ್ಲಿ ಸೆಕೆಯು ಒಳಗಿನಿಂದಲೇ ಹುಟ್ಟಿ ಹೊರಗೆ ಬರುತ್ತದೆಂಬುದು, (೨) ಈ ಗ್ರಹವು ತನ್ನ ಅಚ್ಚಿನಲ್ಲಿ ಒಂದು ಸುತ್ತು ತಿರುಗುವಾಗ ಅದು ಹಗಲಲ್ಲಿ ಸೂರ್ಯನಿಂದ ಪಡೆದ ಸೆಕೆಯನ್ನು ರಾತ್ರಿಯ ಕಾಲದಲ್ಲಿ ಆ ಭಾಗವು ಸೂರ್ಯನಿಗೆ ವಿಮುಖವಾಗಿರುವಾಗ ಸೆಕೆಯನ್ನು ಬಿಡುತ್ತದೆಯೋ? ಈ ಸಂಗತಿಯಿಂದ ಬುಧಗ್ರಹವು ತನ್ನ ಅಚ್ಚಿನಲ್ಲಿ ೨೪ ತಾಸುಗಳಲ್ಲಿ ಒಂದು ಸುತ್ತು ತಿರುಗುತ್ತಿದೆಂದು ಹೇಳುವುದರಿಂದ ಬುಧಗ್ರಹವು ತನ್ನ ಅಚ್ಚಿನಲ್ಲಿ ತಿರುಗುತ್ತದೆಂಬ ಸೂತ್ರವನ್ನು ಒಪ್ಪಿದಂತಾಯಿತು.

ಈ ಚಿಕ್ಕ ಗ್ರಹದಲ್ಲಿ ಜನರಿರುವರೆ?

ಬುಧಗ್ರಹವು, ಭೂಮಿ ಮತ್ತು ಮಂಗಳ ಗ್ರಹಗಳ ಹಾಗೆಯೇ ತನ್ನ ಅಚ್ಚಿನ ಮೇಲೆ ತಿರುಗುವುದು ನಿಜವಾದರೆ, ಮತ್ತು ಸ್ವಲ್ಪ ಸಮಯಕ್ಕೆ ಇದು ಸೂರ್ಯನ ಸೆಕೆಯಿಂದ ತಪ್ಪಿತ್ತದಾದರೆ ಇದರಲ್ಲಿ ಜನರು ವಾಸಿಸುವ ಬಗೆ ಹೇಗೆ? ಈ ಗ್ರಹದಲ್ಲಿ ಜನರು ವಾಸಿಸಿಕೊಂಡಿರಲಿಕ್ಕೆ ಅತೀ ಅಗತ್ಯವಾದ ವಾಯು ಮತ್ತು ನೀರು ಇದರಲ್ಲಿ ಬಹಳ ಕಡಿಮೆಯಾಗಿದೆ. ಚಂದ್ರನಲ್ಲಿಯೂ ನೀರೂ, ವಾಯುವೂ ಇಲ್ಲದುದರಿಂದ ಜನರು ವಾಸಿಸಿಕೊಂಡಿರುವುದಿಲ್ಲ. ಬುಧಗ್ರಹದ ಸುತ್ತಲೂ ವಾಯು ಮಂಡಲವು ಇರುವದಾದರೆ, ಅದು ಭೂಮಿಗೂ, ಸೂರ್ಯನಿಗೂ ನೆಟ್ಟಗೆ ಮಧ್ಯಕ್ಕೆ ಬಂದಾಗ ಬುಧಗ್ರಹದ ಸುತ್ತಲೂ ಪ್ರಕಾಶದ ಒಂದು ಬಳೆಯು ಕಾಣಬರಬೇಕಿತ್ತು. ಶುಕ್ರಗ್ರಹದ ಸುತ್ತಲೂ ದಪ್ಪವಾದ ಒಂದು ವಾಯು ಮಂಡಲವು ಸುತ್ತಿಕೊಂಡಿರುವುದರಿಂದ ಅದು ಸೂರ್ಯನಿಗೂ ಭೂಮಿಗೂ ಮಧ್ಯಕ್ಕೆ ಬರುವಾಗ ಸೂರ್ಯನ ಪ್ರಕಾಶವು ಈ ದಪ್ಪವಾದ ವಾಯುಮಂಡಲದ ಮೇಲೆ ಬಿದ್ದು ಇದರ ಸುತ್ತಲೂ ಪ್ರಕಾಶದ ಒಂದು ಬಳೆಯು ಕಾಣಬರುವದು. ಕಳೆದ ವರ್ಷ ಮೇ ತಿಂಗಳ ೭ನೇ ತಾರೀಕಿನ ದಿವಸ ಈ ಬುಧಗ್ರಹವು ಭೂಮಿಗೂ ಸೂರ್ಯನಿಗೂ ನೆಟ್ಟಗೆ ಮಧ್ಯಕ್ಕೆ ಬಂದಾಗ ಇದರ ಸುತ್ತಲೂ ಪ್ರಕಾಶದ ಒಂದು ಬಳೆಯು ಕಂಡುಬಂತು. ಮತ್ತು ಈ ಗ್ರಹವು ಸೂರ್ಯ ಬಿಂಬದ ಮೇಲೆ ಒಂದು ಕಪ್ಪು ಚುಕ್ಕೆಯಂತೆ ಕಾಣಬಂತು. ಸೂರ್ಯ ಬಿಂಬದ ಕಡೆಗೆ ದೂರದರ್ಶಕ ಯಂತ್ರವನ್ನು ಇಟ್ಟು, ಸೂರ್ಯಬಿಂಬದ ೩ ಅಡಿ ವ್ಯಾಸವಿರುವ ಒಂದು ನಕ್ಷೆಯನ್ನು ಒಂದು ಬಿಳೀ ಪರದೆಯ ಮೇಲೆ ಬೀಳುವಂತೆ ಮಾಡಿದಾಗ ಈ ಬುಧಗ್ರಹದ ಕಪ್ಪು ಚುಕ್ಕೆಯ ವ್ಯಾಸವು ಒಂದು ಎಂಟನೇ ಇಂಚಿನಷ್ಟು ಮಾತ್ರವೇ ಇತ್ತು. ಈ ಗ್ರಹವು ಬಹಳ ಸಣ್ಣದಾಗಿದ್ದುದರಿಂದ ಇದು ಸೂರ್ಯನಿಗೂ ಭೂಮಿಗೂ ಮಧ್ಯಕ್ಕೆ ಬಂದಾಗ ಇದನ್ನು ಗುರುತಿಸುವದೇ ಅಸಾಧ್ಯವಾಗಿತ್ತು. ಯಾಕೆಂದರೆ ಈ ಗ್ರಹವು ಬಹಳ ಸಣ್ಣದಾಗಿದೆ. ಸೂರ್ಯ ಬಿಂಬದಲ್ಲಿ ಕಾಣುವ ಅನೇಕ ಕಪ್ಪು ಕಲೆಗಳು ಈ ಗ್ರಹಕ್ಕಿಂತಲೂ ದೊಡ್ಡದಾಗಿರುತ್ತವೆ. ಬುಧಗ್ರಹದ ಸುತ್ತಲೂ ವಾಯುಮಂಡಲವು ಇಲ್ಲವೆಂಬುದಕ್ಕೆ ಇನ್ನೊಂದು ಆಧಾರವಿದೆ, ಈ ಗ್ರಹವು ಚಂದ್ರನ ಹಾಗೆ ಬಂಜರಾಗಿದೆ. ಅಲ್ಲಲ್ಲಿ ಎತ್ತರ ತಗ್ಗುಗಳು ಮಾತ್ರವೇ ಕಂಡುಬರುತ್ತವೆ. ಈ ಬುಧಗ್ರಹಕ್ಕೆ ಪ್ರಕಾಶವನ್ನು ಹಿಂದಕ್ಕೆ ಕಳುಹಿಸುವ ಶಕ್ತಿಯೂ ಇರುವುದಿಲ್ಲ. ಬೇಸಗೆ ಕಾಲದಲ್ಲಿ ಆಕಾಶದಲ್ಲಿ ಕಾಣಬರುವ ಸಣ್ಣ ಸಣ್ಣ ಬಿಳೀ ಮೋಡಗಳಿಗೆ ಪ್ರಕಾಶವನ್ನು ಹಿಂದಕ್ಕೆ ಕಳುಹಿಸುವ ಒಳ್ಳೇ ಶಕ್ತಿಯು ಇದೆ. ಹಿಮಕಲ್ಲಿಗೂ ಇದೇ ಶಕ್ತಿ ಇದೆ. ಆದರೆ ಬಂಡೆಕಲ್ಲುಗಳಿಗೆ ಪ್ರಕಾಶವನ್ನು ಹಿಂದಕ್ಕೆ ಕಳುಹಿಸುವ ಶಕ್ತಿಯು ಇರುವುದಿಲ್ಲ. ಶುಕ್ರಗ್ರಹಕ್ಕೆ ಪ್ರಕಾಶವನ್ನು ಹಿಂದಕ್ಕೆ ಕಳುಹಿಸುವ ಶಕ್ತಿಯು ಸೇಕಡಾ ೬೫ರಂತೆ ಇದೆ. ಚಂದ್ರನಲ್ಲಿ ಬಂಡೆಕಲ್ಲುಗಳೂ ಬಂಜರುಸ್ಥಳಗಳೂ ಹೆಚ್ಚಾಗಿದ್ದರೂ ಅದಕ್ಕೆ ಶುಕ್ರನಷ್ಟೆ ಪ್ರಕಾಶವನ್ನು ಹಿಂದಕ್ಕೆ ದೂಡುವ ಶಕ್ತಿಯೂ ಇದೆ. ಆದುದರಿಂದ ಬುಧಗ್ರಹದಲ್ಲಿಯೂ ವಾಯುಮಂಡಲವು ಇಲ್ಲವೆಂಬುದಕ್ಕೆ ಒಂದು ಸೂಚನೆಯಾಗಿದೆ. ಬುಧಗ್ರಹದಲ್ಲಿ ವಾಯು ಮಂಡಲವು ಇಲ್ಲದೆ ಇರುವುದರಿಂದಲೂ, ಅದು ಸೂರ್ಯನಿಗೆ ಬಹಳ ಹತ್ತಿರವಾಗಿರುವುದರಿಂದಲೂ ಅದರ ಮೇಲೆ ಬೀಳುವ ಸೂರ್ಯನ ಪ್ರಕಾಶವೂ, ಸೆಕೆಯೂ ಬಹಳ ಹೆಚ್ಚಾಗಿರುವುದರಿಂದ ಜನರ ವಾಸಕ್ಕೆ ಅಯೋಗ್ಯವಾಗಿದೆ ಎನ್ನಬಹುದು. ಒಟ್ಟಾರೆ ಹೇಳುವದಾದರೆ ಭೂಮಿಯ ಮೇಲೆ ಬೀಳುವ ಸೆಕೆ ಮತ್ತು ಪ್ರಕಾಶದ ಏಳು ಪಾಲಷ್ಟು ಸೆಕೆಯೂ ಪ್ರಕಾಶವೂ ಬುಧಗ್ರಹದ ಮೇಲೆ ಬೀಳುತ್ತದೆಂದು ಹೇಳಬಹುದು.

ಭೂಮಿಯಲ್ಲಿರುವ ಖಗೋಳ ಶಾಸ್ತ್ರಜ್ಞರು ಸೂರ್ಯ ಗ್ರಹದ ಹತ್ತಿರಕ್ಕೆ ಹೋಗಿ ಆ ಸೂರ್ಯನಿಗೆ ಬಹಳ ಹತ್ತಿರದಲ್ಲಿರುವ ಈ ಬುಧಗ್ರಹವನ್ನು ಸೂರ್ಯನ ಸುತ್ತಲೂ ಇರುವ ಬಲವಾದ ಬೆಳಕಿನ ಬಳೆಯಿಂದ ಹೇಗೆ ವಿಂಗಡಿಸಿ ಕಂಡುಹಿಡಿಯುವರು. ಬುಧಗ್ರಹದಲ್ಲಿ ಹೋದರೆ ಹಗಲಲ್ಲಿ ನಕ್ಷತ್ರಗಳನ್ನು ನೋಡಲಿಕ್ಕೆ ಗ್ರಹಣಗಳ ಕಾಲವನ್ನು ಕಾದುಕೊಂಡಿರುವ ಅಗತ್ಯವಿಲ್ಲ. ಯಾಕೆಂದರೆ ಈ ಗ್ರಹದ ಸುತ್ತಲೂ ಪ್ರಕಾಶದ ಬಳೆಯು ಇಲ್ಲದಿರುವುದರಿಂದ ಈ ಗ್ರಹವೇ ಕಪ್ಪಾಗಿದ್ದು ನಕ್ಷತ್ರಗಳು ಹಗಲಲ್ಲಿಯೇ ಕಾಣಬರುವವು. ಚಂದ್ರಬಿಂಬದಲ್ಲಿಯೂ ಇದೇ ಅವಸ್ಥೆ ಇದೆ ಎಂದು ಮೊದಲೇ ಕಂಡುಹಿಡಿದಿದ್ದಾರೆ. ಬುಧಗ್ರಹಕ್ಕೆ ಹೋಗಿ ಸೂರ್ಯನನ್ನು ನೋಡಿದರೆ ಭೂಮಿಯಲ್ಲಿ ಸೂರ್ಯನು ಕಾಣುವುದಕ್ಕಿಂತಲೂ ಎರಡುವರೆ ಪಾಲಷ್ಟು ದೊಡ್ಡದಾಗಿ ಸೂರ್ಯಬಿಂಬವು ಕಾಣುವದು. ಅದಲ್ಲದೆ ಸೂರ್ಯನ ಸುತ್ತಲೂ ಇರುವ ಬಿಳೀ ಪ್ರಕಾಶದ ಬಳೆಯೂ ಕೆಂಪು ಜ್ವಾಲೆಗಳೂ ಭೂಮಿಗಿಂತಲೂ ಮೂರನೆ ಒಂದು ಪಾಲು ಹತ್ತಿರದಲ್ಲಿ ಕಾಣುವವು. ಈ ಪ್ರಕಾಶದ ಬಳೆಯಿಂದಲೂ, ಜ್ವಾಲೆಗಳಿಂದಲೂ ಅನೇಕ ತರದ ವಿದ್ಯುಚ್ಛಕ್ತಿಯ ಕಿಡಿಗಳು ಬುಧಗ್ರಹದ ಕಡೆಗೆ ಹಾರಿ ಬಂದು ಈ ಗ್ರಹದ ಮೇಲೆ ನಿಂತವರಿಗೆ ನಾನಾ ತರದ ಪ್ರಕಾಶಗಳೂ, ಉಲ್ಕೆಗಳೂ, ಬಿರುಗಾಳಿಗಳೂ ಕಾಣಬರುವವು. ಬುಧಗ್ರಹವು ಸೂರ್ಯನಿಗೆ ಬಹಳ ಹತ್ತಿರವಿರುವುದರಿಂದ ಅದರಿಂದ ಹಾರಿಬರುವ ವಿದ್ಯುಚ್ಛಕ್ತಿಯ ಕಿಡಿಗಳು ಸಾವಿರಗಟ್ಲೆಯಿಂದ ಇರುವವು, ಬಾಲಕೇತುಗಳು ಪ್ರತಿ ಒಂದು ಗ್ರಹದ ಹತ್ತಿರಕ್ಕೆ ಬರುವಾಗ ಅವುಗಳ ಬಾಲದಿಂದ ಹುಡಿಯು ಆಯಾ ಗ್ರಹಗಳ ಕಡೆಗೆ ಹಾರುವುದುಂಟು. ಇಂಥಾ ಬಾಲಕೇತುಗಳು ಬುಧಗ್ರಹದ ಕಡೆಗೆ ಬರುವಾಗ, ಈ ಗ್ರಹವು ಸೂರ್ಯನಿಗೆ ಬಹಳ ಹತ್ತಿರವಿರುವುದರಿಂದ, ಈ ಬಾಲಕೇತುಗಳಿಂದ ಹಾರಿಬರುವ ಹುಡಿಯು ಬಹಳ ಹೆಚ್ಚಾಗಿರಬೇಕೆಂದು ಎಣಿಸಬಹುದು. ಯಾಕೆಂದರೆ ಈ ಬುಧಗ್ರಹವು ೮೮ ದಿವಸಗಳಲ್ಲಿಯೇ ಸೂರ್ಯನ ಒಂದು ಸುತ್ತು ತಿರುಗುತ್ತದೆ. ಆದುದರಿಂದ ಇದು ತಿರುಗುವ ವೇಗವು ಬಹಳ ಹೆಚ್ಚಾಗಿದೆ. ಭೂಮಿಗೂ ನಮಗೂ ಇರುವ ಆಕರ್ಷಣ ಶಕ್ತಿಯನ್ನು ತೆಗೆದು ಬಿಟ್ಟು ನಾವು ಬುಧಗ್ರಹದ ಕಡೆಗೆ ಪ್ರಕಾಶದಷ್ಟು ವೇಗದಲ್ಲಿ ಹಾರಿಹೋಗುವಾಗ ನಮಗೆ ಬೇಕಾದ ಗಾಳಿಯನ್ನೂ, ನೀರನ್ನೂ ಕೊಂಡುಹೋದರೆ ನಮ್ಮ ಶರೀರವು ಬಹಳ ಹಗುರವಾಗಿ ಆಗುವುದು. ಯಾಕೆಂದರೆ ಈ ಬುಧಗ್ರಹದಲ್ಲಿ ಆಕರ್ಷಣ ಶಕ್ತಿಯು ಭೂಮಿಯಲ್ಲಿರುವ ಆಕರ್ಷಣ ಶಕ್ತಿಯ ಮೂರನೇ ಒಂದು ಪಾಲಷ್ಟು ಮಾತ್ರವೇ ಇದೆ.

ಪತ್ರವ್ಯವಹಾರ.

ಮಹಾ ಜನ ಸಂಸ್ಕೃತ ಕೊಲೇಜ್, ಪೆರ್ಡಾಲ, ಕಾಸರಗೋಡು, ದ. ಕನ್ನಡ.

ಇದೇ ದಶಂಬರ ತಾ. ೬ನೇ ಶುಕ್ರವಾರ ಅಪರಾಹ್ನ ೩ ಘಂಟೆಗೆ ಕೊಲೇಜ್ ದೇ ಕಮಿಟಿಯವರ ಆಮಂತ್ರಣದ ಮೇರೆಗೆ ಸದರಿ ಕೊಲೇಜಿನ ೧೯೨೪-೨೫ನೇ ವರ್ಷದ ವರ್ಧಂತಿ ಸಮಾರಂಭವು ಸಂಸ್ಕೃತ ಶಾಲೆಗಳ ಸುಪರಿಂಟೆಂಡೆಂಟರಾದ ಮ। ರಾ। ಶ್ರೀ। ಪಿ. ಪಿ. ಸುಬ್ರಹ್ಮಣ್ಯ ಶಾಸ್ತ್ರಿ ಅವರ್ಗಳ್ B. A. (oxon) M. A. (Madras) M. R. A. S. ಇವರ ಅಧ್ಯಕ್ಷತೆಯಿಂದ ಸಾಂಗವಾಗಿ ಜರಗಿತು.

ಇದಕ್ಕೆ ಈ ತಾಲೂಕಿನ ನಾರಾಯಣಮಂಗಲಂ, ಅಗಲ್ಪಾಡಿ, ಮಣಿಮುಂಡ, ವಸಿಷ್ಠಾಶ್ರಮ ಮುಂತಾದ ಸಂಸ್ಕೃತ ಎಡ್ವಾನ್ಸ್‌ಡ್ ಹಾಗೂ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರೂ, ವಿದ್ಯಾರ್ಥಿಗಳೂ, ಅಡಳ್ತೆದಾರರೂ ಬಂದಿದ್ದರಲ್ಲದೆ, ಸಮೀಪದ ಮಹನೀಯರೂ, ಕೊಲೇಜಿನ ಹಳೇ ವಿದ್ಯಾರ್ಥಿಗಳೂ ಕೂಡಿ ಸುಮಾರು ೨೦೦ಕ್ಕೆ ಮಿಕ್ಕಿ ಜನರು ನೆರೆದಿದ್ದರು.

ಪೂರ್ವ ನಿಶ್ಚಿತ ಪ್ರಕಾರ ದೇವರ ಪ್ರಾರ್ಥನೆಯಾಗಿ ಕೊಲೇಜಿನ ಪ್ರಿನ್ಸಿಪಾಲರಾದ ಬ್ರಹ್ಮ ಶ್ರೀ ಪು. ಶಂಕರ ಶಾಸ್ತ್ರಿ ಮಹೋಪಾಧ್ಯಾಯರವರು ಸ್ವಾಗತ ಭಾಷಣವನ್ನು ಮಾಡಿದ ಮೇಲೆ ಕೊಲೇಜಿನ ಸಂಸ್ಕೃತ ಭಾಷಾ ಶಾಸ್ತ್ರ ಹಾಗೂ ಕವಿಚರಿತ್ರೆಯ ಲೆಕ್ಚರರಾದ ಮ। ರಾ। ಬಿ. ನಾರಾಯಣ ಭಟ್, ಅವರ್ಗಳ್ ಬಿ. ಎ. ಯವರು ಈ ಪಾಠಶಾಲೆಯು ಕಾಸರಗೋಡು ತಾಲೂಕು ಪಂಚಾಯತ ಮತಸ್ಥಾಪನೆಗಳ ಕಮಿಟಿ ಮೆಂಬರರಾಗಿದ್ದ ದಿವಂಗತ ಬ್ರಹ್ಮ ಶ್ರೀ। ಖಂಡಿಗೆ ಶಂಭಟ್ಟರವರು ಮತ್ತು ಇವರ ಸಹೋದರ ಪ್ರಕೃತ ಶಾಲೆಯ ಅಡಳಿತೆದಾರರೂ ಕಮಿಟಿ ಮೆಂಬರರೂ ಆಗಿರುವ ಖಂಡಿಗೆ ಈಶ್ವರ ಭಟ್ಟರವರು ಇವರುಗಳ ಪ್ರೋತ್ಸಾಹದಿಂದ ಕಳೆದ ೧೯೧೧ನೇ ಇಸವಿಯಲ್ಲಿ ಪೆರ್ಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬಳಿ ಸ್ಥಾಪಿಸಲ್ಪಟ್ಟು ಇದರ ಮುಂದಿನ ಅಭಿವೃದ್ಧಿ ಬಗ್ಗೆ ಚನ್ನಕ ದ್ರಾವಿಡ 'ವಿದ್ಯಾಭಿವರ್ಧಕ ಸಂಘ'ವೆಂಬ ಸಂಸ್ಥೆಯು ರಿಜಿಸ್ಟ್ರಿಮಾಡಲ್ಪಟ್ಟು ಸುಮಾರು ೩೦೦೦ ರೂಪಾಯಿ ಮೂಲಧನವನ್ನು ಜಮೆಮಾಡಿದೆಯೆಂದೂ, ೧೯೧೨ನೇ ಇಸವಿಯಲ್ಲಿ ಸರಕಾರದವರಿಂದ ಅಂಗೀಕರಿಸಲ್ಪಟ್ಟು ೧೯೧೫ನೇ ಇಸವಿಯಲ್ಲಿ ಈಗ ಇರುವ ಕಟ್ಟೋಣಕ್ಕೆ ಬಂದು ೧೯೨೦ನೇ ಇಸವಿಯಲ್ಲಿ ಮದ್ರಾಸ್ ಯುನಿವರ್ಸಿಟಿಯವರಿಂದ ೨ನೇ ಗ್ರೇಡ್ ಸಂಸ್ಕೃತ ಕೊಲೇಜ್ ಆಗಿ ಸ್ವೀಕರಿಸಲ್ಪಟ್ಟು ವರದಿಯ ವರ್ಷದಲ್ಲಿ ರೂಪಾಯಿ ೬೫೦ ಗ್ರೇಂಟ್ ಪಡೆದಿದೆಯೆಂದೂ ಈಗ ೬೦ ವಿದ್ಯಾರ್ಥಿಗಳೂ ೮ ಜನ ಉಪಾಧ್ಯಾಯರೂ ಕೆಲಸಮಾಡುತ್ತಿರುವರೆಂದೂ ವಿದ್ಯಾರ್ಥಿಗಳು ವಿದ್ಯೋದಯ ಸಭಾ, ಸ್ಟೇಶನರೀ ಸೊಸೈಟಿ, ಮೊದಲಾದ ಪುಟ್ಟ ಸಂಸ್ಥೆಗಳನ್ನು ನಡಿಸುತ್ತಿರುವರೆಂದೂ, ಪ್ರವೇಶ ಪರೀಕ್ಷೆಗೆ ಕಳುಹಿಸಲ್ಪಟ್ಟ ೩ ಜನ ವಿದ್ಯಾರ್ಥಿಗಳಲ್ಲಿ ಇಬ್ಬರು ತೇರ್ಗಡೆಪಟ್ಟಿರುವರೆಂದೂ ಮೊದಲಾಗಿ ರಿಪೋರ್ಟನ್ನು ಓದಿದರು.

ಅನಂತರ ಅಧ್ಯಕ್ಷರು ಇಡೀ ಸಂಸ್ಥಾನದಲ್ಲಿ ಸುಮಾರು ೧೦೦ಕ್ಕೆ ಮೇಲ್ಪಟ್ಟು ಸಂಸ್ಕೃತ ಶಾಲೆಗಳೂ ಅವುಗಳಲ್ಲಿ ೨೧ ಕೊಲೇಜುಗಳೂ ಇವೆಯೆಂದೂ, ಅದರಲ್ಲಿಯೂ ೩ ಕೊಲೇಜು ಇದೇ ಜಿಲ್ಲೆಯಲ್ಲಿವೆಯೆಂದೂ ಸಂಸ್ಕೃತ ವಿದ್ಯೆಯಲ್ಲಿ ಈ ಜಿಲ್ಲೆಯು ಹೇಗೆ ಮುಂದರಿದಿದೆಯೆಂದೂ ತಿಳಿಸಿದ್ದಲ್ಲದೆ, ಇನ್ನು ಮುಂದೆ ಮದ್ರಾಸ್ ಯುನಿವರ್ಸಿಟಿಯವರು ಸಂಸ್ಕೃತ ವಿದ್ಯೆಗೆ ತುಂಬಾ ಪ್ರೋತ್ಸಾಹಕೊಡುವ ಆಲೋಚನೆಯಲ್ಲಿ ಇರುವರೆಂದೂ ಸಂಸ್ಥಾನದ ಎಲ್ಲಾ ಮಹಾ ಪಾಠಶಾಲೆಗಳಲ್ಲಿ ಇದೇ ಯುನಿವರ್ಸಿಟಿಯ ಬಿರುದುಗಳನ್ನು ಪಡೆದವರೇ ಪಂಡಿತರಾಗಿ ನೇಮಿಸಲ್ಪಡುವಂತೆ ಕಾನೂನಾಗಲಿಕ್ಕಿದೆಯೆಂದೂ, ಸಂಸ್ಕೃತದಲ್ಲಿ ವಿದ್ವಾನ್, ಶಿರೋಮಣಿ, M. O. L. ಮೊದಲಾದ ಪರೀಕ್ಷೆಗಳಲ್ಲಿ ತೇರ್ಗಡೆಪಟ್ಟವರು ಇಂಗ್ಲಿಷ್ B. A. M. A. ಮೊದಲಾದ ಬಿರುದು ಪಡೆದವರ ಗೋಷ್ಠಿಯಲ್ಲಿ ಪರಿಗಣಿಸಲ್ಪಡುವ ಯೋಗವು ಬೇಗನೆ ಬರಲಿಕ್ಕಿದೆಯೆಂದೂ, ಮದ್ರಾಸ್ ಯುನಿವರ್ಸಿಟಿಯವರು ಈ ವರೆಗೆ ಅಂಗೀಕರಿಸಲ್ಪಟ್ಟ ಸಂಸ್ಕೃತ ಕೊಲೇಜುಗಳಲ್ಲಿ ಸಂಸ್ಕೃತ ಮತ್ತು ಕರ್ನಾಟಕಗಳೆಂಬ ಉಭಯ ಭಾಷಾ ಪಾಠಶಾಲೆಯು ಇದೊಂದೇ ಆಗಿರುವುದರಿಂದ ಈ ಕೊಲೇಜು ಕನ್ನಡಿಗರೆಲ್ಲರ ಆದರಕ್ಕೆ ಪಾತ್ರವಾಗಿದೆಯೆಂದೂ, ಇದರ ಆಡಳ್ತೆದಾರರು ಮತ್ತು ಉಪಾಧ್ಯಾಯರು ಮಾಡುವ ಪ್ರಯತ್ನಕ್ಕೆ ನಾನು ತುಂಬಾ ಸಂತೋಷಪಡುವೆನಲ್ಲದೆ, ಈ ಕೊಲೇಜಿಗೆ ಪರಮಾತ್ಮನು ಉತ್ತರೋತ್ತರ ಅಭಿವೃದ್ಧಿಯನ್ನು ದಯಪಾಲಿಸಲೆಂದೂ, ಮುಂತಾಗಿ ಇಂಗ್ಲಿಷ್ ಮತ್ತು ಸಂಸ್ಕೃತಗಳಿಂದ ಭಾಷಣ ಮಾಡಿದ ಮೇಲೆ ಅಧ್ಯಕ್ಷರಿಗೂ ಸಭಿಕರಿಗೂ ಧನ್ಯವಾದಗಳು ಅರ್ಪಿಸಲ್ಪಟ್ಟು ಉಪಹಾರ ತಾಂಬೂಲಗಳೊಂದಿಗೆ ಸಾಯಂ. ೫ಗಂಟೆಗೆ ಸಭೆಯು ವಿಸರ್ಜಿಸಲ್ಪಟ್ಟಿತು.

ಅನಂತರ ಈ ಸಮಾರಂಭಕ್ಕೆ ನೆರೆದ ಅತಿಥಿಗಳೆಲ್ಲರಿಗೂ ಕಮಿಟಿಯ ಕಡೆಯಿಂದ ರಾತ್ರಿ ಭೋಜನವಾದ ಮೇಲೆ ಕೊಲೇಜಿನ ವಿದ್ಯಾರ್ಥಿಗಳು ರಾತ್ರಿ ಘಂಟೆ ೮-೩೦ರಿಂದ ೧೧-೩೦ರ ವರೆಗೆ ಮಹಾಕವಿ ಕಾಳಿದಾಸ ವಿರಚಿತ 'ಅಭಿಜ್ಞಾನ ಶಾಕುಂತಲ' ನಾಟಕದ ಮೊದಲನೇ ೩ ಅಂಕಗಳನ್ನು ರಂಗದಲ್ಲಿ ಅಭಿನಯಿಸಿದರು. ಇದಕ್ಕೆ ಸುಮಾರು ೩೦೦ ಜನರಿಗಿಂತ ಹೆಚ್ಚು ಪ್ರೇಕ್ಷಕರು ನೆರೆದಿದ್ದರು. ಮಾನ್ಯ ಶ್ರೀ ಸುಪರಿಂಟೆಂಡೆಂಟರವರೂ ಇತರ ಮಹನೀಯರೂ ನಾಟಕಾಭಿನಯನದಿಂದ ತುಂಬ ಸಂತೋಷಪಟ್ಟರು. ಈ ಶಾಲೆಗೆ ಸರ್ವಾತ್ಮನಾ ವಿಜಯವಾಗಲೆಂದು ಕೋರಿಕೆ.

"ಪ್ರೇಕ್ಷಕ"

COCOANUT ESTATE FOR SALE.

ABOUT 154 ACRES UNDER COCOANUTS NEAR TRIKARPUR & CHARVATTUR SOUTH CANARA.

Part coming into bearing shortly, Price Rs. 75,000/-, no offers.

For particulars apply to:—

H. R. Lookie,
C/o Peirce, Leslie & Co., Ltd.,
CALICUT.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀರಮಿತ್ರ!
ದಶಮೂಲ ಸುಖಪ್ರದಔಷಧ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ. ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.

ಕನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರಕೊಳ್ಳಿ.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಹತ್ತಿರ.

Free! Free!! Free!!

ಪ್ರಸಿದ್ಧವಾದ
"ಕಾಮಶಾಸ್ತ್ರ"

ಈಗಲೆ ತಯಾರಾಗಿದೆ.

ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ ಎಸ್. ಪಿ. ಆಚಾರ್ಯ ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಕುಂಡಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ಟ್ರೀಟ್ ಮಾರ್ಟ್.

ಮಹೋಲ್ಲಾಸಾ ಕಾಫಿ ಕ್ಲಬ್,
ಪೋರ್ಟ್ ರೋಡು,
ಮಂಗಳೂರು.
ಅಥವಾ
ಸದಾನಂದ ಕಾಫಿ ಕ್ಲಬ್
ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ
ವಜ್ರಾಂಗ-ಬಿಂದು
ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನಜನ್ಯ ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. [illegible] ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ [illegible] ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳ ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲು ಪ್ಯಾಕಿಂಗ್ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲು ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ್, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. [illegible], (ಜಿಲ್ಲಾ ಬೆಳಗಾಂವ.)

The Canara Public Conveyance Co., Ltd, Mangalore.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು:
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯು ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

—ಗೋಡೆಗೆ ತಗಲಿಸುವ
ಹೊಸ ನಮೂನೆಯ—



ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಖರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನ ಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವುದು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಶೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವೆವು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾ ಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ಸ್ವಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೫—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "...ಮಿಸ್ರಿ" ಬೆಂಗಳೂರು ಸಿಟಿ. | ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ಡಾಕ್ಟರ್. ಸಾಲಾಮಿಸ್ರಿ ಮುರಬ್ಬ ಡಿಪ್ಪೋ. ಬೆಂಗಳೂರು ಸಿಟಿ.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು, ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯುತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೧೮ನೇ ಶುಕ್ರವಾರ ದಶಂಬರ ೧೯೨೫. ಸಂಚಿಕೆ ೫೧

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. ಹೆಡ್ ಆಫೀಸು: ಉಡುಪಿ. | Branch: COONDAPOOR. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ವಸೂಲಿತ್ತ ಮೂಲಧನ	ರೂ. 1,73,185—9—11.
ಅವಧ್ವನ ವಗೈರೆ ಎತ್ತಗಳು	ರೂ. 64,700—0—0.
ಸಾ. ಸೇ. ೬೦ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಏವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಿತ್ತ ಮೂಲಧನ 1,73,185—9—11, ಅವಧ್ವನ ವ ಇತರ ಎತ್ತಗಳು 64,700—0—0, ಠೇವಣಾತಿಗಳು 5,10,077-10-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4371—0—0, ಏವೇಜಿನ ಮೇಲೂ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 93,340—10—5, ಜುಮ್ಲಾ ರೂ. 8,45,674—14—7.

ಆಸ್ತಿ ವ ಸೊತ್ತುಗಳು.

ಒತ್ತೆ ಕಟ್ಟೋಣ ಕಟ್ಟಿಣದ ಟ್ರೆಜರಿಗಳು ವಗೈರೆ 4134—4—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496—6—2, ಸಾ. ಸೇ. ೬ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡ) 41,741—14—2, ಕೈಯಲ್ಲಿರುವ ಮತ್ತು ಬೇಂಕರರ ಕಡೆ ಠೇವಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 26,131—6—3, ಜುಮ್ಲಾ ರೂಪಾಯಿ 8,45,674—14—7.

ಖಿರಮು ಠೇವಣಾತಿಗಳನ್ನು ಕಾಲಕ್ಲೃಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ವರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮೊಸುಮ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ್ ಠೇವಣಾತಿಗಳನ್ನೂ ಅತಿ ರಾಳಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾವುಕಾರಿ ಹುಂಡಿಗಳನ್ನೂ ವಜ್ಞಾಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏವೇಜುಗಳು ನಡೆಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

N. Anand Rao,
Secretary.

XMAS TIME

Every week brings forth new patterns of
SILKS, VOILS, SERJES, SHIRTINGS, FLANNELS, TOYS, TIME-PIECES, HATS, LAMPS, & TOILET REQUISITES.

EVERY ONE IS EXPECTED TO PAY A VISIT TO US IF HE WANTS RELIABLE GOODS AT MODERATE UP-TO-DATE PRICES.

Our earnest request to all 'Please pay a visit to us. Nevermind if you don't buy!'

BALIGA BROTHERS,
HAMPANKATTA.

'KERSO' LAMPS, CHILDREN READY-MADE DRESSES PROVISIONS CARR'S BISCUITS, STATIONERY ARE OUR FEW SPECIALITIES THIS TIME

Next week we expect a consignment of Ladies requisites from England.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ! ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕ್ಷಣದಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟಾನ್, ಮದ್ರಾಸು. | 109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆಯಿಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ, ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಸಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1—9—0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.

ವಿಳಾಸ— ದೇವಣ್ಣ ನಾರಾಯಣ ಸೇಟ್, ಸರಾಫ್, ಗೋಕರ್ಣ, ... (ಉ. ಕ.)

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಕುಶಾಲಾಗಿ ತಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತೆಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ರೀತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪೂರ್ ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಚೇರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಬೆಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಸಮೀಪದಲ್ಲಿರುವ ಮಳಿಗೆ) ಮಂಗಳೂರು.

ಈ ದೇಶದ ಸ್ವದೇಶಿ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ... ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಚೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ... ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ಮುಕ್ತಟಾ, ಜರಿಕಣ, ರೇಷ್ಮೆ, ರೇಷ್ಮೆ ಸೀರೆಗಳು, ... ಸೀರೆಗಳು, ... ರೇಷ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಷ್ಮೆ ಮುಡಿಗಳು, ... ಸೀರೆಗಳು ...

ಕೈರಾಟೆಯಲ್ಲಿ ತಯಾರಿಸಿದ ಖಾದಿಯಿಂದ ಮಾಡಿದ—

... ಶರ್ಟಿಂಗ್, ... ಕೋಟಿಂಗ್, ... —
ಮುಸಲ್ಮಾನರಿಗೆ ಬೇಕಾದ ನಮೂನೆಯ ಅಂಗಿ ... ವಗೈರೆ—

ಈ ಸಂಗ್ರಹವನ್ನು ನಮ್ಮ ... ಸಂಗ್ರಹಿಸಿ ತಂದಿರುತ್ತಾರೆ.

[illegible]

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಖಂ ... ... ೨-೦-೦.

೧೨ ಪ್ಯಾಕೆಟ್ ನಾಟಿ ತರಕಾರಿ ಬೀಜಗಳು ೧೨ ರಖಂ ... ... ೧-೧೨-೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಖಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಗಿಗೆ, ವಿ. ಪಿ. ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು. ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್‌ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.



ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0
9 „ „ „ 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car Street, MANGALORE.

ಳಳ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕಿಂಗ್ ಆಫ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಕ್ಲೋರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೀನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ್ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾರಿಷ್ಟವು ... ...
(6) ಷಟ್ಪಂಚಾಶಕ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಲಾಷ್ಟಕಗಳು ... ...
(10) ಕಾಲನಿರ್ಣಯಾಭ್ಯೋಯಂ ಗ್ರಂಥ ... ...
(11) ಸದ್ವ್ಯಾಖ್ಯಾನ ಕಾಲಾಮೃತ... ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀನಾತ್ಮತೋದ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷ್ಮಾಗ್ರಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಚ ಕಥೆ ...
(26) „ ಗೋವಿನ ಚರಿತ್ರೆ ... ...
(27) „ ದುಶ್ಯಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜಿತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣಬಾಲಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(1[illegible] ಕೋಡ್ಲೂರ ಯಕ್ಷಗಾನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮ ... ...
(5) ಪ್ರಬಂಧ ಮುಕ್ತಾವಳಿ ... ...
(1) ಹರಿಕೀರ್ತನಾಮೃತಸಾರ ...
(2) ಹರಿಪಾದಾಮೃತಂ. ... ...
(3) ರುಕ್ಮಿಣೀ ಕಲ್ಯಾಣ ... ...
(4) ಮಂಗಳ ಗೌರೀಹಾಡು ... ...
(5) ಉದ್ಯಾಪನ ಹಾಡು ... ...
(6) ಯಕ್ಷಗಾನ ಗಳೇ ಹಾಡು ... ...
(7) ಕನಕದಾಸ ಕಬೀರದಾಸರ ಕೀರ್ತನೆಗಳು ...
(8) ಬೀಗರ ಹಾಡು ... ...
(9) ಭಜನೆಯ ಪದಗಳು ... ...

ಪುಸ್ತಕಗಳು ದೊರೆಯುವ ಸ್ಥಳ:— ಶಾರದಾ ಛಾಪಖಾನೆ, ರಥ ಬೀದಿ, ಮಂಗಳೂರು.

ಆಲೆಕ್ಸ್ ಆಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತರದ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಹೇನು. (Louse)

ಲೇಖಕರು:—B. G. PRABHU L. M. & S., B. S. SC, *District Health Officer, S. K.*

ಹೇನಲ್ಲಿ ಮೂರು ಜಾತಿಗಳಿದ್ದಾವೆ. ತಲೆಕೂದಲಲ್ಲಿರುವದು ಒಂದು ಜಾತಿಯದು; ಬಟ್ಟೆಗಳಲ್ಲಿ ಇನ್ನೊಂದು ಜಾತಿಯದು ಇರುವುದು; ಇನ್ನೊಂದು ದೇಹದ ಇತರ ಕೆಳಗಿನ ಭಾಗಗಳ ರೋಮಗಳಲ್ಲಿರುವುದು ಮೊದಲನೇ ಜಾತಿಯ ಹೆಣ್ಣು ಹೇನು ಒಂದೊಂದು ಸರ್ತಿ ೫೦—೫೦ ತತ್ತಿಗಳನ್ನೂ, ಎರಡನೇ ಜಾತಿಯದು ೭೦—೮೦ ತತ್ತಿಗಳನ್ನೂ, ಮೂರನೇ ಜಾತಿಯದು ೧೦—೧೫ನ್ನೂ ಇಡುವವು. ಮೊದಲನೇ ಮತ್ತು ಮೂರನೇ ಜಾತಿಗಳ ಹೇನುಗಳು ಇಡುವ ತತ್ತಿಗಳು ಆಯಾ ಭಾಗದ ಕೂದಲುಗಳಿಗೆ ಅಂಟಿಕೊಂಡೇ ಇರುವವು. ಎರಡನೇ ಜಾತಿಯ ಹೇನಿನ ಮೊಟ್ಟೆಗಳು ಬಟ್ಟೆಗಳ ಎಳೆಗಳಿಗೆ ಅಂಟಿಕೊಳ್ಳುವವು. ರೋಮ ಮತ್ತು ಕೂದಲುಗಳಲ್ಲಿರುವ ತತ್ತಿಗಳು ೬—೭ ದಿನಗಳಲ್ಲಿ ಒಡೆದು ಮರಿಗಳು ಹೊರಡುವವು; ಬಟ್ಟೆಯೆಳೆಗಳಲ್ಲಿನ ತತ್ತಿಗಳು ೩—೪ ದಿನಗಳಲ್ಲಿ ಒಡೆದು ಮರಿಗಳು ಹೊರಡುವವು.

ಮರಿಗಳು ಯಾವನ ಕೂದಲು ಅಥವಾ ಬಟ್ಟೆಗಳಲ್ಲಿ ಇರುವವೋ ಅವನ ರಕ್ತವನ್ನು ಹೀರಿಕೊಂಡು ಬೆಳೆದು, ೨—೩ ಹಪ್ತೆಗಳೊಳಗೆ ಪ್ರಾಯಸ್ಥವಾಗಿ, ತಾವೂ ತತ್ತಿಗಳನ್ನು ಇಡಲು ತೊಡಗುವವು. ಜನರು ಗುಂಪಾಗಿ ನಿದ್ದೆಹೋಗುವಲ್ಲಿ, ಅಥವಾ ಒಂದೇ ಕಡೆ ತಂತಮ್ಮ ವಸ್ತ್ರಗಳನ್ನು ಮಡಗುವಲ್ಲಿ, ಒಬ್ಬನಿಂದ ಮತ್ತೊಬ್ಬನಿಗೂ, ಒಬ್ಬನ ವಸ್ತ್ರದಿಂದ ಮತ್ತೊಬ್ಬನ ವಸ್ತ್ರಕ್ಕೂ, ಹೇನುಗಳು ಸುಲಭವಾಗಿ ಹೋಗುತ್ತವೆಂದು ತಿಳಿದುಬಂದಿದೆ. ಈ ರೀತಿಯಾಗಿ, ಅವುಗಳು ಒಬ್ಬನಿಂದ ಮತ್ತೊಬ್ಬನಿಗೆ ರೋಗವನ್ನು ಒಯ್ಯುವವು. ಯಾಕೆಂದರೆ ಅವುಗಳು ಯಾವನ ಮೇಲಿದ್ದಾವೋ ಅವನು ಯಾವದೊಂದು ರೋಗದಿಂದ ಪೀಡಿತನಾಗಿದ್ದರೆ, ಅವನ ರಕ್ತವನ್ನು ಹೀರಿ ಬೆಳೆದ ಹೇನುಗಳು ಮತ್ತೊಬ್ಬನ ದೇಹವನ್ನು ಸೇರಿ ಅವನನ್ನು ಕಚ್ಚಲು, ಅವನಿಗೂ ಅದೇ ರೋಗವನ್ನು ತಗಲುವಂತೆ ಮಾಡುವವು.

ಹೇನಿನ ಮೂಲಕವಾಗಿ ಹೀಗೆ ಒಬ್ಬನಿಂದ ಮತ್ತೊಬ್ಬನಿಗೆ ಒಯ್ಯಲಾಗುವ ರೋಗಗಳಲ್ಲಿ ರಿಲೆಪ್ಸಿಂಗ್ ಫೀವರ್ ಅಥವಾ ಮರುಕೊಳಿಸುವ ಜ್ವರ, ಟ್ಯಾಪಸ್ ಜ್ವರ, ಕಂದಕ ಜ್ವರ (Trench fever) ಮೊದಲಾದುವು ಮುಖ್ಯವಾಗಿವೆ. ಹೇನು ಅಂಟಿರುವ ದೇಹಭಾಗವನ್ನು ಚಿಮಣಿ ಎಣ್ಣೆಯಿಂದ ಸವರಿದರೆ, ಹೇನು ಕೂಡಲೇ ಅಲ್ಲಿಂದ ತೊಲಗುವುದು ಇದರಿಂದ, ಹೇನು ಕೂಡಲೇ ಸಾಯುವುದು ಮಾತ್ರವಲ್ಲ; ಅದರ ತತ್ತಿಗಳು ಕೂದಲುಗಳಿಗೆ ಅಂಟುವಂತೆ ಮಾಡುವ ಅಂಟು ಪದಾರ್ಥವೂ ಸಡಿಲಾಗುವ ಕಾರಣ, ಬಾಚಣಿಗೆಯಿಂದ ಆ ತತ್ತಿಗಳನ್ನೆಲ್ಲ ಕೂಡಲೇ ಬಾಚಿ ತೆಗೆಯಬಹುದಾಗಿದೆ. ಬಟ್ಟೆಗಳನ್ನು ಚೆನ್ನಾಗಿ ನೀರಲ್ಲಿ ಕುದಿಸಿದರೆ, ಬಟ್ಟೆಯೊಳಗಣ ಹೇನುಗಳು ಸಾಯುವವು. ಕಂಕುಳಿನ ಅಥವಾ ಗುಪ್ತಭಾಗಗಳಲ್ಲಿನ ರೋಮಗಳಲ್ಲಿ ಸಿಕ್ಕಿಕೊಂಡಿರುವ ಹೇನನ್ನು, ಅಂಥಾ ರೋಮವನ್ನು ಕತ್ತರಿಸಿ ತೊಲಗಿಸಬಹುದು.

ತಮ್ಮ ಮಕ್ಕಳ ಶರೀರದ ಮೇಲೆ ಅಥವಾ ಬಟ್ಟೆಗಳ ಮೇಲೆ ಯಾವ ಜಾತಿಯ ಹೇನಾಗಲಿ ಇರಲಾರದಂತೆ, ಹೆತ್ತವರು ಮಕ್ಕಳನ್ನೂ ಅವರ ಬಟ್ಟೆಗಳನ್ನೂ ನಿರ್ಮಲವಾಗಿ ಇರಗೊಳಿಸುವುದು ಅವರ ಕರ್ತವ್ಯವಾಗಿದೆ.

ಉಳಾಯಿಬೆಟ್ಟು ಬೋರ್ಡು ಶಾಲೆಯಲ್ಲಿ ಡಿಲ್ಲಿ ದರ್ಬಾರ್ ಮಹೋತ್ಸವ.

ಪ್ರಿಯ ವಾಚಕರೇ ನಮ್ಮ ಉಳಾಯಿಬೆಟ್ಟು ಬೋರ್ಡು ಶಾಲೆಯಲ್ಲಿ ಇದೇ ತಿಂಗಳ ತಾ. ೧೨ನೇ ಶನಿವಾರ ಮಧ್ಯಾಹ್ನ ೧೨ ಗಂಟೆಗೆ ೨೦೦ ಮಂದಿ ಶಾಲಾ ವಿದ್ಯಾರ್ಥಿಗಳೂ, ೧೫೦ ಮಂದಿ ಗ್ರಾಮಸ್ಥರೂ ಕೂಡಿ ತಾ. ೧೧-೧೨-'೨೨ಕ್ಕೆ ದಾಕು ವಿಜಿಟಿಗೆ ಗ್ರಾಮಕ್ಕೆ ಬಂದಿದ್ದ ಮಾನ್ಯ ಹೆಲ್ತ್ ಫೀಸರವರ ಅಧ್ಯಕ್ಷತೆಯಲ್ಲಿ ಒಂದು ಸಭೆಮಾಡಿದ್ದಾಯಿತು. ಅವರು ಆ ಸಭೆಯಲ್ಲಿ ಡಿಲ್ಲಿ ದರ್ಬಾರ್ ಅಂದರೇನು? ಯಾಕೆ ಆಚರಿಸಬೇಕು? ಎಂಬಿತ್ಯಾದಿಗಳನ್ನು ವಿವರಿಸಿ ಹೇಳಿದರು. ಪರಂತು ಈ ಡಿಲ್ಲಿ ದರ್ಬಾರನ್ನು ವರ್ಷಂಪ್ರತಿಯೂ, ವಿಜೃಂಭಣೆಯಿಂದ ಜರಗಿಸುವಂತೆ ಗ್ರಾಮಸ್ಥರಿಗೂ, ಉಪಾಧ್ಯಾಯರುಗಳಿಗೂ, ತಮ್ಮ ಭಾಷಣದಿಂದ ಪ್ರೋತ್ಸಾಹಗೊಳಿಸಿದರು. ಆ ಮೇಲೆ ಮಕ್ಕಳಿಗೂ, ಕೂಡಿದ ಗೃಹಸ್ಥರಿಗೂ, ವಿಲಾಯಿ ಹಂಚೋಣ ಮಾಡಿ ತಾಂಬೂಲಾದಿ ಸತ್ಕಾರಗಳನ್ನು ನಡಿಸಿದ್ದಾಯಿತು. ಬಳಿಕ ಮಕ್ಕಳಿಂದ ನಾನಾ ನಮೂನೆಯ ರಾಜಗೀತಗಳನ್ನು ಹೇಳಿಸಿ, ಅಧ್ಯಕ್ಷರನ್ನೂ, ಸಭಿಕರನ್ನೂ ಸಂತೋಷಪಡಿಸಿದ ನಂತರ ಗ್ರಾಮಸ್ಥರೊಬ್ಬರ ಸೂಚನೆ ಮೇರೆಗೆ ಸದರಿ ಶಾಲೆಯ ಸಹಾಯಕ ಉಪಾಧ್ಯಾಯರಾದ ಪಿ. ತಿಮ್ಮಪ್ಪಯ್ಯನವರು ಈ ಶಾಲೆಯ ಪೂರ್ವ ಸ್ಥಿತಿಯನ್ನು, ಈಗಿನ ಸ್ಥಿತಿಯನ್ನೂ ವಿವರವಾಗಿ ಹೇಳಿ, ಸದರಿ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾಡಬೇಕೆಂದು ಗ್ರಾಮಸ್ಥರು ಬರಕೊಂಡ ಅರ್ಜಿಯ ಮೇಲೆ ಆದ ತಾಲೂಕು ಬೋರ್ಡಿನ ಆರ್ಡರನ್ನು ಓದಿಹೇಳಿದರು. ಈ ಶಾಲೆಯು ಅತಿ ಚಿಕ್ಕದಾಗಿರುವುದರಿಂದ ಕಟ್ಟೋಣವನ್ನು ವಿಸ್ತರಿಸುವ ವಿಷಯದಲ್ಲಿ ಮ॥ ರಾ॥ ರಾ॥ ಪ್ರೆಸಿಡೆಂಟರವರ ಆರ್ಡರ್ ಪ್ರಕಾರ ಮ॥ ರಾ॥ ತಾಲೂಕು ಬೋರ್ಡು ಮೆಂಬರ್ ಕೆ. ಮುತ್ತಯ್ಯ ಶೆಟ್ಟಿ ಅವರ್ಗಳವರು ತನಿಖೆ ನಡಿಸಿ, ಅಂದಾಜುಪಟ್ಟಿ ಕಳುಹಿಸಿರುತ್ತಾರಾಗಿಯೂ ಅವರು ವಿಜಿಟ್‌ಮಾಡಿ ಮಕ್ಕಳ ಸಂಖ್ಯೆ ವಿಪರೀತವಿದ್ದದ್ದನ್ನು ಕಂಡು ಈ ಶಾಲೆಯನ್ನು ಕೂಡಲೇ ವಿಸ್ತರಿಸಲ್ಪಡುವದೆಂದೂ, ಸದರಿ ಶಾಲೆಯನ್ನು ಮಕ್ಕಳ ಸಂಖ್ಯೆಯ ಮೇಲೂ, ಗ್ರಾಮಸ್ಥರ ಅರಿಕೆಯ ಮೇಲೂ, ಉಪಾಧ್ಯಾಯರ ಚಟುವಟಿಕೆಯ ಮೇಲೂ, ಹಾಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾಡಬಹುದೆಂಬುದಾಗಿ ಬರೆದ ರಿಮಾರ್ಕನ್ನು ಓದಿಹೇಳಿದರು. ಅನಂತರ ಶಾಲಾ ಮಕ್ಕಳ ಕೈಯಲ್ಲಿ ರಾಜರಾಣಿಯವರ ಕನ್ನಡಿಗಳನ್ನೂ, ಪತಾಕೆಗಳನ್ನೂ ಕೊಟ್ಟು, ಬೇಂಡ್ ವಾಲಗಗಳ ಮೂಲಕ ಮೆರವಣಿಗೆ ಹೊರಟು ಸುಮಾರು ೫೦೦ ಜನರು ವಾಮಂಜೂರು ಶ್ರೀ ಅಮೃತೇಶ್ವರ ದೇವಸ್ಥಾನಕ್ಕೆ ಹೋಗಿ ಅಲ್ಲಿ ಮಕ್ಕಳಿಂದ ಭಜನೆಮಾಡಿಸಿ, ಶ್ರೀಮುಡಿ ಗಂಧಪ್ರಸಾದವನ್ನು ಸ್ವೀಕರಿಸಿ, ಸ್ಥಳವಂದಿಕರ ಸತ್ಕಾರವನ್ನು ಸ್ವೀಕರಿಸಿಕೊಂಡು ಗುರುಪುರ ಸೇತುವೆಯ ಮೂಲಕ ಗುರುಪುರ ಜಂಗಮಮಠಕ್ಕೆ ಹೋಗಿ ಅಲ್ಲಿಯ ಶ್ರೀಪಾದಂಗಳವರ ದರ್ಶನ ತೆಕ್ಕೊಂಡು ಅಲ್ಲಿಯ ಮಠಕ್ಕೆ ನಮ್ಮ ಶಕ್ತ್ಯಾನುಸಾರ ಕಾಣಿಕೆ ಹಾಕಲಾಗಿ, ಸದರಿ ಮಠದ ಸನ್ಯಾಸಿಗಳು ಮಕ್ಕಳಿಗೆ ಸಕ್ಕರೆ ಹಂಚಿದರು ಗೃಹಸ್ಥರಿಗೆ ತಾಂಬೂಲಾದಿ ಯಥೋಪಚಾರ ಮಾಡಿದರು. ಅನಂತರ ಅಲ್ಲಿಂದ ಗುರುಪುರ ಪೇಟೆಯ ಮೂಲಕವಾಗಿ ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಬಂದು, ಅಲ್ಲಿ ನಮ್ಮ ಹರಿಕೆಗಳನ್ನು ಒಪ್ಪಿಸಿ, ಮಕ್ಕಳಿಂದ ಭಜನೆಯನ್ನು ಹಾಡಿಸಿ, ಶ್ರೀಮುಡಿ ಗಂಧಪ್ರಸಾದ ಸ್ವೀಕರಿಸಿ, ಅಲ್ಲಿಂದ ಪೇಟೆಯನ್ನು ಉತ್ತರಿಸಿ ಸೇತುವೆಯನ್ನು ಮುಂದರಿಸಿ, ಮಹಮ್ಮದೀಯ ಮತಸ್ಥರ ಮಸೀದಿಯ ಹತ್ತಿರ ಹೋಗಿ ಅಲ್ಲಿ ಲೋಬಾನ ಹಚ್ಚಿ, ಅಲ್ಲಿಂದ ಶ್ರೀಮಹಗಣಪತಿ ದೇವಸ್ಥಾನಕ್ಕೆ ಹೋಗಿ ಅಲ್ಲಿಯ ಹರಿಕೆ ತೀರಿಸಿ ಶ್ರೀಮುಡಿ ಗಂಧಪ್ರಸಾದವನ್ನು ಸ್ವೀಕರಿಸಿಕೊಂಡು, ಮಹಾರಾಜರನ್ನೂ, ತಾಲೂಕುಬೋರ್ಡು ಪ್ರೆಸಿಡೆಂಟರನ್ನೂ, ತಾಲೂಕು ಬೋರ್ಡು ಮೆಂಬರರನ್ನೂ, ಶಾಲಾ ಉಪಾಧ್ಯಾಯರನ್ನೂ, ಈ ಮೆರವಣಿಗೆಗೆ ಸಹಾಯಮಾಡಿ ಪ್ರೋತ್ಸಾಹ ಕೊಟ್ಟಂಥ ಮತ್ತು ಶಾಲಾ ವಿಷಯದಲ್ಲಿ ಉದ್ಯೋಗಿಗಳಾದ ಉಳಾಯಿಬೆಟ್ಟು ಗ್ರಾಮದ ಪಟೇಲರನ್ನೂ, ಹೊಗಳಿಕೊಂಡು ಜಯಕಾರ ಮಾಡುತ್ತಾ, ಸದರಿ ಶಾಲೆಯನ್ನು ಕ್ಷಿಪ್ರದಲ್ಲೇ ಹಾಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾಡುವಂತೆ ಮಾನ್ಯ ತಾಲೂಕು ಬೋರ್ಡು ಪ್ರೆಸಿಡೆಂಟರವರಿಗೆ ಉದಾರಮನಸ್ಸನ್ನು ಕೊಡುವಂತೆ ಭಗವಂತನನ್ನು ಸ್ತುತಿಸುತ್ತಾ, ಸಾಯಂಕಾಲ ೬ ಗಂಟೆಗೆ ಶಾಲೆಯ[illegible] ಸೇರಿ ಅಲ್ಲಿ ಮಂಗಳಪದವನ್ನು ಹಾಡಿಸಿ, ಮಕ್ಕಳನ್ನು ಅವರವರ ಮನೆಗಳಿಗೆ ಕಳುಹಿಸಿದ್ದಾಯಿತು, ನಮ್ಮ ಶಾಲೆಯಲ್ಲಿ ಡಿಲ್ಲಿದರ್ಬಾರೆಂಬ ರಾಜಮಹೋತ್ಸವವನ್ನು ಈ ರೀತಿಯಲ್ಲಿ ಜರಗಿಸಲ್ಪಟ್ಟಿತ್ತು. ಎಂಬುದನ್ನು ಪ್ರೇಕ್ಷಕರಾದ ವಾಚಕರಿಗೆ ಈ ಮೂಲಕ ಪ್ರಕಟಪಡಿಸುವ,

ಉಪಾಧ್ಯಾಯರಲ್ಲೊಬ್ಬರು.

ವಿವಿಧ ವಿಷಯಗಳು.

ಕರ್ನಾಟಕದ ಏಕೀಕರಣ.

ಈ ಕರ್ನಾಟಕ ದೇಶವು ೭ ವಿಭಾಗಗಳಾಗಿ ಬೇರೆಬೇರೆ ಸರಕಾರಗಳ ಕೈಕೆಳಗಿದೆ. ಇವುಗಳಲ್ಲಿ ಅತೀ ದೊಡ್ಡದಾದ ವಿಭಾಗವು ಮೈಸೂರು ಸಂಸ್ಥಾನವಾಗಿದೆ. ಒಂದು ತುಂಡು ಹೈದರಾಬಾದ ನೈಜಾಮರ ಆಳ್ವಿಕೆಗೆ ಸೇರಿಯದೆ. ಇನ್ನು ಉಳಿದ ಭಾಗಗಳು ಬಳ್ಳಾರಿ, ಅನಂತಪುರ ಜಿಲ್ಲೆಗಳ ತುಂಡುಗಳು. ಕೊಯಮುತ್ತೂರು ಜಿಲ್ಲೆಯ ತುಂಡು. ಕೊಡಗು, ಕೌಳನ ಎಂಬ ದಕ್ಷಿಣ ಕನ್ನಡ ಜಿಲ್ಲೆ, ಜೈನ, ಸುಧಾಪುರ, ಬಳಗಿ, ಮುಂತಾದವುಗಳನ್ನು ಒಳಗೊಂಡಿರುವ ಉತ್ತರಕನ್ನಡ ಜಿಲ್ಲೆ, ಧಾರವಾಡ, ಹುಬ್ಬಳ್ಳಿ ಬಿಜಾಪುರ ಜಿಲ್ಲೆಗಳು ಈ ಎಲ್ಲಾ ವಿಭಾಗಗಳನ್ನು ಒಂದು ಕಾಲದಲ್ಲಿ ಕದಂಬ ರಾಜರೂ, ಚಾಲುಕ್ಯರೂ, ರಾಷ್ಟ್ರಕೂಟರೂ, ಹೊಯಿಸಳರೂ, ಆಳಿಕೊಂಡಿದ್ದರು. ಈ ಕರ್ನಾಟಕದಲ್ಲಿರುವ ರಾಜರುಗಳ ಕುಟುಂಬಗಳೇ ಕಾಣುವುದಿಲ್ಲ. ಕೊಡಗು ವೀರರಾಜರ ಕುಟುಂಬದವರು ಕಾಶಿಯಲ್ಲಿರುತ್ತಾರಂತೆ, ಸೋದೆಯ ಅರಸರ ಕುಟುಂಬದವರು ಗೋವೆಯಲ್ಲಿರುತ್ತಾರಂತೆ. ಮೈಸೂರಿನ ಮಹಾರಾಜರವರೊಬ್ಬರೇ ಕರ್ನಾಟಕದ ರಾಜಕುಟುಂಬಗಳಲ್ಲಿ ಒಬ್ಬರಾಗಿರುತ್ತಾರೆ. ಆದುದರಿಂದ ಸಪ್ತಖಂಡಗಳಾಗಿ ವಿಭಾಗಿಸಲ್ಪಟ್ಟಿರುವ ಕರ್ನಾಟಕ ದೇಶವನ್ನು ಆ ಮಹಾರಾಜರ ಕೈಕೆಳಗೆ ಇರಿಸಿ, ಏಕ ಖಂಡವಾಗಿ, ಮೈಸೂರನ್ನೆ ಅದಕ್ಕೆ ರಾಜಧಾನಿಯಾಗಿ ಮಾಡಿ ಭಟ್ಕಳವನ್ನೂ, ಮಂಗಳೂರನ್ನೂ ಮುಖ್ಯ ಬಂದರಗಳಾಗಿ ಮಾಡಿ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಈ ಎರಡು ಬಂದರುಗಳಿಗೆ ರೈಲುಮಾರ್ಗಗಳನ್ನು ಹಾಕಿಸಿ ರಾಜಧಾನಿಗೆ ಕೂಡಿಸಬಹುದು. ಕರ್ನಾಟಕಕ್ಕೆ ಒಂದು ಹೊಸ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಅಗತ್ಯವೇ ಇರುವುದಿಲ್ಲ. ಮೈಸೂರು ವಿಶ್ವವಿದ್ಯಾಲಯವನ್ನೇ ಕರ್ನಾಟಕದ ವಿಶ್ವವಿದ್ಯಾಲಯವಾಗಿ ಮಾಡಬಹುದು. ಹೊಸ ಸರಕಾರಿ ಕಟ್ಟೋಣಗಳನ್ನೂ ಕಟ್ಟಿಸುವ ಖರ್ಚೂ ಕರ್ನಾಟಕದ ಗವರ್ನರರಿಗೂ ಅವರ ಸಿಬಂದಿಯವರಿಗೂ ಕೊಡುವ ಸಂಬಳದ ಖರ್ಚೂ ಉಳಿಯುವುದು. ಮೈಸೂರು ನ್ಯಾಯವಿಧಾಯಕ ಸಭೆಯನ್ನೇ ಕರ್ನಾಟಕದ ಪಾರ್ಲಿಮೆಂಟ ಸಭೆಯಾಗಿ ಮಾಡಬಹುದು. ಮೈಸೂರು ರೈಲ್ವೆಗಳನ್ನೇ ಕರ್ನಾಟಕದ ಸ್ಟೇಟ ರೈಲ್ವೇಗಳಾಗಿ ಮಾಡಬಹುದು. ಇದರಷ್ಟು ಸುಲಭವಾದ ಉಪಾಯವು ಕರ್ನಾಟಕದ ಏಕೀಕರಣಕ್ಕೆ ಮತ್ತೊಂದಿರುವುದಿಲ್ಲ.

ಇನ್‌ಫ್ಲು ಎನ್‌ಜಾ ಜ್ವರಕ್ಕೆ ನಾಸಿಕಚೂರ್ಣವೇ ಒಂದು ಮದ್ದು.

ಡೊಕ್ಟರ್ ಗೊರ್ಡನ್ ಎಂಬವರು ಮೈಲಿಗೆ, ಕೋರಾ, ಇನ್‌ಫ್ಲುಎನ್‌ಜಾ, ಶೀತ ಮುಂತಾದ ರೋಗಗಳಿಗೆ ಹೊಗೆಸೊಪ್ಪಿನ ನಸ್ಯವೇ ಒಳ್ಳೇ ಮದ್ದಾಗಿದೆಯೆಂದು ಅನೇಕ ತರದಲ್ಲಿ ಶೋಧನೆಮಾಡಿ ಕಂಡುಹಿಡಿದಿರುವರು. ಈ ಡಾಕ್ಟರರು ಒಂದು ಸಾರಿ ಮೊಲಕ್ಕೆ ದಾಕು ಹಾಕಿ ಅದಕ್ಕೆ ಮೈಲಿಗೆ ರೋಗವಾದೊಡನೆ ಹುಡಿಯನ್ನು ಒಂದು ನರದಲ್ಲಿಯೂ ಒಂದು ಸ್ನಾಯುವಿನಲ್ಲಿಯೂ ಇಂಜೆಕ್ಟ ಮಾಡಿದರು' ಇನ್ನೊಂದು ಸಾರಿ ಹುಡಿಯನ್ನು ಮೂಗಿನಿಂದ ಇಂಜೆಕ್ಟಮಾಡಿದರು. ಮೊಲಕ್ಕೆ ಮೈಲಿಗೆಯು ಒಳ್ಳೇ ರೀತಿಯಲ್ಲಿ ಆಯಿತು. ಎಲ್ಲಾ ರೋಗಗಳ ಬೀಜಗಳು ಮೂಗಿನ ಸೊಳ್ಳೆಗಳಲ್ಲಿರುವ ತೆಳ್ಳಗಾದ ಚರ್ಮದ ಮುಖಾಂತರವೇ ಶರೀರವನ್ನು ಪ್ರವೇಶಿಸುತ್ತವೆಂದು ಇವರು ಕಂಡುಹಿಡಿದಿರುವರು. ಆದುದರಿಂದ ಇವರ ನಾಸಿಕಚೂರ್ಣವು ತಯಾರಾದೊಡನೆ ರೋಗಗಳನ್ನು ಗುಣಮಾಡುವುದಕ್ಕೆ ಇಂಜಕ್ಷನುಗಳನ್ನು ಮಾಡುವುದರ ಬದಲಾಗಿ ಮೂಗಿನ ಮುಖಾಂತರ ಈ ಹುಡಿಯನ್ನು ಏಳವರೆ ಮೈಲಿಗೆ, ಕೋರಾ, ಗಾಣಗುಡುಗಿ, ಶೀತ, ಕೆಪ್ಪಟರಾಯ ಮುಂತಾದ ರೋಗಗಳು ಗುಣವಾಗುವವು.

ನಾಸಿಕಚೂರ್ಣವನ್ನು ಹಿಂದೂದೇಶದಲ್ಲಿ ಎಷ್ಟೋ ಸಾವಿರ ವರುಷಗಳಿಗೆ ಮೊದಲೇ ಕಂಡುಹಿಡಿಯಲಿಲ್ಲವೇ? ಹಿಂದೂದೇಶದಲ್ಲಿ ಹುಡಿ ಎಳೆಯುವುದು, ಪಾಶ್ಚಿಮಾತ್ಯ ಜನರು ಚುಟ್ಟಿ ಎಳೆಯುವಂತೆಯೇ ಬಹಳ ಪುರಾತನ ಕಾಲದಿಂದಲೂ ಇದ್ದ ಪದ್ಧತಿಯಲ್ಲವೆ, ಎಷ್ಟೋ ಸಾವಿರ ವರುಷಗಳ ಹಿಂದಿನಿಂದಲೂ ಚೀನಾದೇಶದವರು ಈ ದೇಶದ ಜನಗಾಗಿ ಹುಡಿಬುರುಡೆಗಳನ್ನು ತಯಾರಿಸಿ ತಂದು ಮಾರುತ್ತಿರಲಿಲ್ಲವೇ ನಾಸಿಕ ಚೂರ್ಣ ತಯಾರಿಸುವ ನಾನಾ ವಿಧಾನಗಳು ವೈದ್ಯಶಾಸ್ತ್ರದಲ್ಲಿ ಸಾವಿರಾರು ವರ್ಷಗಳಿಂದಲೂ ಇದ್ದಾವೆಯಲ್ಲವೆ? ಇನ್ನು ವಿಲಾಯತಿಯವರು ಗಿಲಿಟಿನ ಡಬ್ಬಿನವಲ್ಲಿ ಹಿಟ್ಟನ್ನು ಕಳುಹಿಸಿದಂತೆಯೇ ಕಳುಹಿಸುವ ಕಾಲವು ಬಂತು. ನಾನಾ ನಮೂನೆಯ ಹುಡಿಬುರುಡೆಗಳನ್ನು ತಯಾರಿಸುವ ಕೆಲಸವು ಗಾಜಿನ ಕಾರ್ಖಾನೆಯವರಿಗೆ ಸಿಕ್ಕಿದಂತಾಯಿತು. ಹುಡಿಗೂ ಮರ್ಯಾದೆಯು ಸಿಕ್ಕುವ ಕಾಲವು ಬಂತು.

ಪುತ್ತೂರು ವಿದ್ಯಾವರ್ಧಕ ಸಂಘ.

ದೀಪಾವಳಿ ಫಂಡಿಗೆ ತಾ. ೩-೧೧-೧೯೨೨ರಿಂದ ಮೇಲಿನ ತಾರೀಕು ವರೆಗೆ ಕೆಳಗೆ ಕಾಣಿಸಿದ ಮಹಶಯರು ಕೆಳಗೆ ಕಾಣಿಸಿದ ಬಾಬತನ್ನು ಕೊಟ್ಟು ಸಹಾಯಮಾಡಿರುವರು.—

[illegible]

ಅಪೂರ್ವ ಸಂದರ್ಭ.

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚುಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ ಮಾರಲ್ಪಡುವವು.

ರೂ. 15—12—0ರ ವಾಚು ರೂ. 7—8—0 ಕೊಡಲ್ಪಡುವುದು.



ಬೇಕಾದವರು ತ್ವರೆಮಾಡಿರಿ.

ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸ ವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
[illegible]

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಪುಷ್ಯ ಶು| ೪ ಶನಿವಾರದಿಂದ ಕ್ರೋಧನ ಸಂವತ್ಸರದ ಪುಷ್ಯ ಶು| ೧೦ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಧನು ಪೆಂಡರ್.)

ತಾರೀಖು	ವಾರ	ತಿ.	ಘಳಿ.	ನಕ್ಷತ್ರ	ಘಳಿ.	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
19	ಶನಿ	೪	೨೬. ೦	ಶ್ರವಣಾ	೩೧.೩೧	೪	6.48	6. 7
20	ರವಿ	೫	೨೧.೧೬	ಧನಿಷ್ಠಾ	೨೬.೨೮	೫	6.49	6. 7
21	ಸೋಮ	೬	೧೫.೨೮	ಶತಭಿಷಾ	೨೩.೪೪	೬	6.49	6. 8
22	ಕುಜ	೭	೧೦.೧೬	ಪೂ. ಭಾ.	೨೦.೩೨	೭	6.50	6. 8
23	ಬುಧ	೮	೬. ೧	ಉ. ಭಾ.	೧೭.೪೫	೮	6.50	6. 9
24	ಗುರು	೯	೧.೫೮	ರೇವತೀ	೧೬. ೨	೯	6.51	6. 9
25	ಶುಕ್ರ	೧೧	೫೮. ೦	ಅಶ್ವಿನೀ	೧೪.೫೮	೧೦	6.51	6.10

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
11	83—2	68—2	0—27	—
12	75—7	69—2	0—01	—
13	83—7	72—3	—	—
14	91—5	72—0	—	—
15	92—4	71—8	—	—
16	91—5	71—6	—	—
17	90—7	72—6	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ
ಮುಷ್ಠಿ	9— 0	9—14
ಹೊಸ ಗುಡ್ಡು ...	8— 4	8— 8
ರಾಶಿ ಸುಗ್ಗಿ ...	8— 0	0— 0
ಅವ್ವಲ್ ಬೆಳ್ತಿಗೆ ...	8—12	9— 8
ಹೊಸ ರಾಶಿ ...	7— 8	8— 0
ರಂಗೂನು ಬೆಳ್ತಿಗೆ ಗೋಣಿ ೧ ...	14— 0	14— 8
ಗೋಧಿ ಗೋಣಿ ೧ಕ್ಕೆ ...	18— 8	20— 8
ಹುರುಳಿಗೋಣಿ ೧ಕ್ಕೆ ...	9— 4	9— 8
ಕಡಲೆಗೋಣಿ ೧ಕ್ಕೆ ...	12— 0	15— 0
ತೊಗರಿಗೋಣಿ ೧ಕ್ಕೆ ...	14— 0	14— 8
ತೊಗರಿಬೇಳೆ ಗೋಣಿ ೧ಕ್ಕೆ ...	16— 8	22— 0
ಉದ್ದುಗೋಣಿ ೧ಕ್ಕೆ ...	17— 8	17— 8
ಹೆಸರುಗೋಣಿ ೧ಕ್ಕೆ ...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ ...	51— 0	55— 0
ಉಪ್ಪು ಗೋಣಿ ೧ಕ್ಕೆ ...	4— 0	4— 8
ಕೊಬ್ರಿ ಖಂಡಿ ೧ಕ್ಕೆ ...	120— 0	125— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	49— 8	—
ಎಳ್ಳಿಂಡಿ ಖಂಡಿ ೧ಕ್ಕೆ ...	45— 0	—
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8—12	9— 8
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	11— 0
ಹರಳೆಣ್ಣೆ ಬುಟ್ಟಿಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4— 0	4— 8
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	8— 0	9— 0
ಸಾಸಿವೆ ಮುಡಿ ೧ಕ್ಕೆ ...	9— 4	—
ಕೊತ್ತಂಬರಿ ಮುಡಿ ೧ಕ್ಕೆ ...	3— 8	4— 4
ಕಾಫಿ ಖಂಡಿ ೧ಕ್ಕೆ ...	345— 0	--
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	275— 0	295— 0
ಹೊಸ ಅಡಿಕೆ ಖಂಡಿ ೧ಕ್ಕೆ ...	190— 0	195— 0
ಕಾಳುಮೆಣಸು ಖಂಡಿ ೧ಕ್ಕೆ ...	360— 0	—
ಯಾಲಕ್ಕಿ ಮುಡಿ ೧ಕ್ಕೆ ...	45— 0	—
ಜೀರುಜೀಗೆ ಮುಡಿ ೧ಕ್ಕೆ ...	4— 0	—
ಕಬ್ಬಿಣ ಖಂಡಿ ೧ಕ್ಕೆ ...	45— 0	65— 0
ಜಾಂಬ್ಯ ಹೆಸರು ಮುಡಿ ೧ಕ್ಕೆ ...	16—10	16—12
[illegible] ಮುಡಿ ೧ಕ್ಕೆ ...	21— 0	—
[illegible] ಸೇರು ೧ಕ್ಕೆ ...	18—10	
[illegible] ಮುಡಿ ೧ಕ್ಕೆ ...	16— 8	
[illegible]	18— 6	

ಕನ್ನಡಿಗರೇ! **ವಸಂತ.** ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸ್ಯಾಜಿನ) ಪುಟಗಳನ್ನು ಹಿಡಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪ್ರೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ ,, 2—8—0.
,, ಸ್ಥಳೀಕರಿಗೆ ... ,, 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ತ್ವರೆ ಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್, ಗಣಪತಿರಾವ್ ಐಗಳ್ —ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೋ ಜನರು, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ಸ್ಥಳ:—

ಶಾರದಾ ಛಾಪಖಾನೆ,
ಮಂಗಳೂರು.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡಿಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ದಾರ್ ರೇಷ್ಮೆ ಮಡಿಗಳು, ಸಾರ್ಮಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಸಾಳಗ್ರಾಮ, ತಾಳ, ಸ್ಪಟಿಕದಾಕ್ಷಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೋಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಷನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Advertisers Note.

A SPECIAL ISSUE OF SPECIAL IMPORTANCE AND Concetrated interest with wide circulation.

This is your Opportunity.

Our fortnightly paper, THE SARASWATH will appear in the beginning of December, in a most attractive special issue printed on glaze paper, art paper bound and profusely illustrated.

ADVERTISE & REAP THE BENEFITS OF VERNACULAR ADVERTISEMENT.

RATES MODERATE.

Apply:— **Secretary,**
THE SARASWATH,
UDIPI.

ವಿದೇಶ ವರ್ತಮಾನ.

—ಕಳೆದ ಜುಲಾಯಿ, ಅಗೋಸ್ತು, ಸಪ್ಟಂಬರ ಈ ಮೂರು ತಿಂಗಳುಗಳಲ್ಲಿ ಲಂಡನ್ ನಗರದಲ್ಲಿ ಮೋಟಾರಿನ ಪೆಟ್ಟಿನಿಂದ ೧೯೪ ಜನ ಮಡಿದರು. ಬೇರೆ ಬೇರೆ ವಾಹನಗಳಿಂದ ೨೩,೯೨೩ ಮಂದಿ ಪೆಟ್ಟುತಿಂದರು.

—ತುರ್ಕಿ ಸರಕಾರದಲ್ಲಿ ಆಗುತ್ತಿರುವ ಅಲೌಕಿಕ ಸಾಮಾಜಿಕ ಸುಧಾರಣೆಗಳಿಗೆ ವಿರುದ್ಧವಾಗಿ ಎರ್ಜೆರೂಂ ನಗರದವರು ದಂಗೆಯೆದ್ದರು. ಸರಕಾರದವರ ದುರಾಗ್ರಹದಿಂದ ಅವರಲ್ಲಿ ೩ ಮಂದಿ ವ್ಯಾಕರಾದರು, ೧೪೪ ಮಂದಿ ಶಿಕ್ಷೆ ಪಡೆದರು.

—ಚೀನಾದೇಶದವರನ್ನು ತಮ್ಮ ದೇಶಕ್ಕೆ ಸೇರಿಸುವುದಿಲ್ಲವೆಂದು ಅಮೇರಿಕೆಯವರು ಮಾಡಿರುವ ಕಟ್ಟಾಜ್ಞೆಯನ್ನು ಸಿಲುಕ್ಕಿಸಿ ಚೀನಾದಿಂದ ಅಗ್ಗದ ಕೂಲಿಗಳನ್ನು ಪೆಟ್ಟಿಗೆಯಲ್ಲಿ ಟ್ಟು ಮೇಲೆ ಸಾಮಾನೆಂದು ಬರೆದು ಹಡಗುಗಳಲ್ಲಿ ಅವರನ್ನು ರವಾನಿಸುತ್ತಿರುವರು. ಈ ಮೋಸವು ಹೊರಬಿದ್ದಿರುತ್ತದೆ.

—ಚೀನಾ ದೇಶದಲ್ಲಿ ವಿದ್ಯಾರ್ಥಿಗಳ ಚಳವಳಿಗಳು ವಿಶೇಷ ಆಗುತ್ತಲಿವೆ. ವಿದ್ಯಾರ್ಥಿಗಳು ತಮ್ಮ ಚಳುವಳಿಯನ್ನು ವಿರೋಧಿಸುತ್ತಿದ್ದ "ಚೆನ್‌ಪಾವೊ" ಎಂಬ ವೃತ್ತಪತ್ರದ ಕಚೇರಿಗೆ ಬೆಂಕಿ ಹತ್ತಿಸಿದರು.

—ಮದೀನದಲ್ಲಿ ಸೈನಿಕರ ಹಾವಳಿಗೆ ಬಿದ್ದು ೧೫,೦೦೦ ಮಂದಿ ನರಳುತ್ತಿರುವರೆಂದೂ, ಹೆಚ್ಚಿನ ಸಹಾಯವು ಅವಶ್ಯಕವೆಂತಲೂ, ಮದೀನವು ಶೀಘ್ರದಲ್ಲಿ ಸುಲ್ತಾನ್ ಇಬನ್‌ಸಾದರ ವಶವಾಗುವುದೆಂದೂ ಮೌಲಾನಾ ಝುಬರ್ ಅಲಿಖಾನ್, ಕುರೇಶಿ ಇವರ ತಂತಿಗಳಿಂದ ತಿಳಿಯ ಬರುತ್ತದೆ.

—ಬ್ರಿಟಿಷ್ ಯುದ್ಧದ ಚಿತ್ರವೊಂದು ಐರ್ಲೆಂಡ್ ದೇಶದ ಚಲಿತ ಚಿತ್ರಮಂದಿರದಲ್ಲಿ ತೋರಿಸುತ್ತಿದ್ದಾಗ ಪ್ರೇಕ್ಷಕರಿಗೆ ಆಗ್ರಹ ಬಂದು, ಮಂದಿರವನ್ನೆಲ್ಲಾ ನೆಲಸಮ ಮಾಡಿದ್ದಾರೆ.

—ಕೊಲೋನ್ ಎಂಬಲ್ಲಿರುವ ಸೈನ್ಯವನ್ನು ಹಿಂದಕ್ಕೆ ತೆಗೆದುಕೊಂಡು ಆ ಪಟ್ಟಣವನ್ನು ಜರ್ಮನಿಗೆ ಕೊಟ್ಟು ಬಿಡಲು ನಿಶ್ಚಯವಾಗಿದೆ.

—ದಕ್ಷಿಣ ಆಫ್ರಿಕದ ಆರೇಂಜ್ ಫ್ರಿಸ್ಟೇಟಿನವರು ಬ್ರಿಟಿಷ್ ಚಕ್ರಾಧಿಪತ್ಯದಿಂದ ಪ್ರತ್ಯೇಕರಾಗಬೇಕೆಂಬುದು ಪ್ರಯತ್ನಿಸುತ್ತಿದ್ದಾರೆ.

ಒಳದೇಶ ವರ್ತಮಾನ.

—ಮದರಾಸಿನಲ್ಲಿರುವ ರಿಪನ್ ಬಿಲ್ಡಿಂಗಿನ ಹೆದ್ದಾರಿಗಳಲ್ಲಿ ಇಟ್ಟಿರುವ ಫಿರಂಗಿಯನ್ನು ತೆಗಿಯಬೇಕಾಗಿಯೂ ಇದನ್ನು ಸರಕಾರಕ್ಕೆ ಮದರಾಸು ಕೊರ್ಪೊರೇಶನಿನವರು ಹಿಂತಿರುಗಿ ಕೊಡಬೇಕಾಗಿಯೇ ಒಂದು ಠರಾವನ್ನು ಶ್ರೀಯುತ ಸಿಂಗಾರುವೇಲು ಚೆಟ್ಟಿಯವರು ಕೊರ್ಪೊರೇಶನಿನ ಮೀಟಿಂಗಿನಲ್ಲಿ ತರಲಿಕ್ಕಿರುವರು.

—ಮುಂಬಾಯಿ ಕೊರ್ಪೊರೇಶನಿನ ಬರುವ ಮೀಟಿಂಗಿನ ಸಮಯ ಮುನ್ಸಿಪಾಲ್ ಹೋಲಿನಲ್ಲಿಯಾಗಲೀ ಮುನ್ಸಿಪಾಲಿಟಿಯ ಸರಹದ್ದಿನಲ್ಲಿ ಯಾಗಲೀ ಆಗುವ ಬೆನಕ್ವೆಟ್ (ಭೋಜನ) ಕಾಲಗಳಲ್ಲಿ ಮಾದಕ ಪದಾರ್ಥಗಳಾದ ಬ್ರಾಂಡಿ, ವಿಸ್ಕಿ, ವ್ಯಾನ್, ಶರಾಬು, ಕಳ್ಳು ಮುಂತಾದವುಗಳನ್ನು ಉಪಯೋಗಿಸಬಾರದು; ಎಂಬ ಠರಾವನ್ನು ಒಬ್ಬ ಮೆಂಬರರು ಮುಂದಕ್ಕೆ ತರಲಿರುವರು.

—ಮುಂಬಾಯಿಯ ಆಸ್ಪತ್ರೆಯಲ್ಲಿ ಸದ್ಯಕ್ಕೆ ಒಳರೋಗಿಗಳಿಗಾಗಿ ೩೫೦ ಹೆಚ್ಚಿಗೆ ಮಂಚಗಳನ್ನು ತರಿಸಬೇಕೆಂದೂ, ಮುಂಬಾಯಿ ಸಂಸ್ಥಾನದ ಎಲ್ಲಾ ಭಾಗಗಳಲ್ಲಿರುವ ಆಸ್ಪತ್ರೆಗಳಲ್ಲಿಯೂ ಒಳರೋಗಿಗಳಿಗಾಗಿ ಹೆಚ್ಚಿಗೆ ಮಂಚಗಳನ್ನು ಒದಗಿಸಲಿಕ್ಕೆ ಅನುಕೂಲತೆ ಮಾಡಬೇಕೆಂದು ಮುಂಬಾಯಿ ಟೌನ್ ಹೋಲಿನಲ್ಲಿ ಗವರ್ನರ ಅಧ್ಯಕ್ಷತೆಯಲ್ಲಿ ನಡೆದ ಮೀಟಿಂಗಿನಲ್ಲಿ ನಿಶ್ಚಯಿಸಿ, ಇದಕ್ಕಾಗಿ ಇಡೀ ಸಂಸ್ಥಾನದ ಉದಾರ ಗೃಹಸ್ಥರಿಂದ ಹಣ ವಂತಿಗೆ ಮಾಡಬೇಕೆಂದು ಒಂದು ಕಮಿಟಿ ನೇಮಿಸಲಾಯಿತು.

—ರಾವಲಪಿಂಡಿಯಲ್ಲಿ ಕಳೆದವಾರ ಒಂದು ಕೈಗಾರಿಕೆಯ ಪ್ರದರ್ಶನವು ಜರಗಿತು. ರಾವಲಪಿಂಡಿ ಜಿಲ್ಲೆಯಿಂದಲೆ ೧೫೦೦ ಕೈಗಾರಿಕೆಯ ವಸ್ತುಗಳು ಪ್ರದರ್ಶನಕ್ಕೆ ಬಂದಿದ್ದವು.

—ಪಂಜಾಬಿನ ಹೊಸ ಗವರ್ನರರಾದ ಸರ್ ಜೋನ್ ಕರ್ ಇವರು ಮುಖ್ಯ ಪಟ್ಟಣವಾದ ಶಿಲ್ಲಾಂಗಿನಲ್ಲಿ ೮ನೇ ತಾರೀಕಿನ ದಿವಸ ಸರ್ ವಿಲಿಯಮ್ ರೀಡರವರಿಂದ ಚಾರ್ಜನ್ನು ವಹಿಸಿಕೊಂಡರು.

—ಕಲ್ಕತ್ತದಲ್ಲಿ ಇಲೆಕ್ಟ್ರಿಕ್ ಇಂಜಿನಿಯರರಾಗಿದ್ದ ರಮಾಪತಿ ಕೋಯಿ ಎಂಬವರು ಬೇಟೆಯಾಡುವಾಗ ಕಮಲಾ ಎಂಬ ವೇಶ್ಯಾಸ್ತ್ರೀಯನ್ನು ಬೇಕೆಂತಲೇ ಕೊಂದರೆಂಬ ತಪ್ಪಿನ ಮೇಲೆ ತನ್ನಿಯಾಗಿ ಚಿಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಇವರನ್ನು ಸೆಶ್ಯನಿಗೆ ಕಮಿಟಿಮಾಡಿರುವರು.

—ದಕ್ಷಿಣ ಆಫ್ರಿಕಕ್ಕೆ ಹೋಗುವ ಕಮಿಶನಿನ ಮೂರನೇ ಮೆಂಬರರಾದ ಸರ್ ದೇವಪ್ರಸಾದ ಸರ್ವಾಧಿಕಾರಿಯವರು ೯ನೇ ತಾರೀಕಿನ ಸಾಯಂಕಾಲ ಎಸ್. ಎಸ್. ಕರಪರಾ ಎಂಬ ಹಡಗದಲ್ಲಿ ದಕ್ಷಿಣ ಆಫ್ರಿಕಕ್ಕೆ ಹೊರಟು ಹೋದರು.

—ಹೊಟಗಿಯಿಂದ ಕೊಲಾಪುರದ ವರೆಗೆ ೯½ ಮೈಲು ಉದ್ದ ವಿರುವ ಒಂದು ಮಿಟರ್‌ಗೇಜ್ ರೈಲ್ವೇ ಲ್ಯಾನನ್ನು ತೆರಿಯುವ ಕೆಲಸವು ಸುರುವಾಗಿಯದೆ. ಇದಕ್ಕೆ ಲೆಂಡ್ ಎಕ್ವಾಯರ್ ಮಾಡಲಿಕ್ಕೆ ಮೂವತ್ತು ಸಾವಿರ ರೂಪಾಯಿಯಂತೆ. ಮಾರ್ಗಮಾಡಿಸಲಿಕ್ಕೆ ೯ ಲಕ್ಷ ರೂಪಾಯಿ ಖರ್ಚಂತೆ.

—ನೀಲಗಿರಿಯಲ್ಲಿ ಜೋರಾದ ಮಳೆಯು ಸಮ್ಮಂಧ ಅಲ್ಲಲ್ಲಿ ಮಣ್ಣು ಜರಿದುಬಿದ್ದಿರುವುದರಿಂದ ಟ್ರೈನ್ ಸರ್ವಿಸನ್ನು ತಾ. ೧೫ರ ವರೆಗೆ ನಿಲ್ಲಿಸಿದೆ.

ದಕ್ಷಿಣ ಕನ್ನಡ.

ಅರಳ:— ತಾ. ೧೧ನೇ ಶುಕ್ರವಾರ ದಿನ ವಿವಿಧ ಬಿರುದಾಂಕಿತ ಶ್ರೀಮದಭಿನವಚಾರು ಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಜಿಯವರು ತಮ್ಮ ಪರ್ಯಟಣದ ಮಧ್ಯದಲ್ಲಿ ಇಲ್ಲಿಯ ಚಂದ್ರನಾಥ ಬಸ್ತಿ ಹಾಯರ್ ಎಲಿಮೆಂಟರೀ ಶಾಲೆಯ ಧರ್ಮಶಾಲೆಗೆ ಚಿತ್ತಯಿಸಿದ್ದರು. ವಿದ್ಯುಕ್ತ ಆರಾಧನೆಗಳೂ, ಭಕ್ತಿಗಳೂ ನಡೆದವು. ಮೊದಲೇ ಸುಪರಿಚಿತರಾದ ಮ| ರಾ| ರಾ| ಶ್ರೀಯುತ ಹೆಡ್‌ಮಾಸ್ಟರ್ ಯಚ್. ಮಹಾಲಿಂಗೆ ಭಟ್ಟರೊಡನೆ ಶಾಲೆಯ ಈ ಗಣ್ಯತೆಯನ್ನು ವಿಚಾರಿಸಿ ಸಂತೋಷಪಡುವವರಾದರು. ಸ್ವಾಮಿಜಿಯವರು ಅಕ್ಷರ ಹಿಂದುಸ್ಥಾನದ ಪ್ರವಾಸದ ಫಲವಾಗಿ ಅನೇಕ ಮತಗ್ರಂಥಗಳನ್ನು ಅವಲೋಕಿಸಿದವರಲ್ಲದೆ ಪ್ರಮುಖ ಜೈನಗೃಹಸ್ಥರ ಆದರಣೆಗೂ, ಪಾತ್ರರಾಗಿರುವರು. ಸ್ವಾಮಿಜಿಯವರು ಸ್ವಭಾವಿಕವಾಗಿ ಸರಳಹೃದಯರೂ, ಜನಸ್ನೇಹಿರೂ, ನಿಸ್ಪೃಹಭಾವಿಗಳೂ, ಅಧುನಿಕ ಲೋಕಸಮುತ್ಸಾಹಿತತ್ವಗಳೂ ಆಗಿರುವರು.

ಹೊಸದುರ್ಗ:— ಕಳೆದವಾರ ರಾಗಾಯಿತು ಗಾಳಿ ಮಳೆಯ ಪ್ರಭಾವವು ಮಳೆಗಾಲದ ಯೌವನದಂತೆ ತೋರುತ್ತದೆ. ಹೊಗೆಸೊಪ್ಪು ಕೃಷಿಗಾರರಿಗೆ ಹೆಚ್ಚಿನ ಅನಾನುಕೂಲತೆ ಇರುವದಾದರೂ ಮಳೆಸಮಾಧಿ ಹೆಚ್ಚಿನ ಇತರ ಬಾಬಿನಲ್ಲಿ ಪ್ರಯೋಜನವಿದೆಯೆಂತ ಅನ್ನಬಹುದು.

ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದ ಕಳೆದ ಕಾರ್ತಿಕ ಹುಣ್ಣಿಮೆ ಮರುದಿವಸ ಆಗುವ ವಕ್ಕಳಿ ಯಾನೆ ಅಭ್ಯುದೃತ ಸ್ನಾನದ ದಿವಸ ನಡೆದ ವಿವಾದ ನಂಬ್ರವು ಪುತ್ತೂರು ಡಿವಿಜನಲ್ ಮೆಜಿಸ್ಟ್ರೇಟರು ಪುತ್ತೂರು ಮೊಕ್ಕಾಮಿನಲ್ಲಿ ತನ್ನಗೆ ಇಟ್ಟಿದ್ದಾರಾಗಿ ಕೇಳುತ್ತೇವೆ.

ಇಲ್ಲಿಯ ಕಾಂಞಂಗಾಡ ಹಿಂದೂ ಬೋರ್ಡುಶಾಲೆಯಲ್ಲಿ "ಕೊರೆನೇಶನ್‌ಡೆ" ಯಾನೆ ಡಿಲ್ಲಿದರ್ಬಾರ ದಿವಸವನ್ನು ಅತೀ ಉಲ್ಹಾಸದೊಡನೆ ಆಚರಿಸಲಾಯಿತು. ಗ್ರಾಮನಿವಾಸಿಗಳು, ಗ್ರಾಮ ಉದ್ಯೋಗಸ್ಥರು, ಶಾಲಾ ಉಪಾಧ್ಯಾಯರು ವ ವಿದ್ಯಾರ್ಥಿಗಳಿಂದ ಸಭೆಯು ಶೋಭಾಯಮಾನವಾಗುತ್ತಿತ್ತು. ಸಭೆಯನ್ನು ಪ್ರಾರಂಭಿಸುವ ಮೊದಲು ದೇವತಾ ಪ್ರಾರ್ಥನೆಯ ಶುಭಕರ ಗಾಯನವಾದ ನಂತರ ಸಭೆಗೆ ಮ| ರಾ| ರಾ| ಪಟೇಲ ಯಚ್. ಯನ್. ಕಾಮತರನ್ನು ಚೆಯರಮೇನರಾಗಿ ಆಯ್ಕೆಸಲಾಯಿತು. ಶಾಲಾ ವಿದ್ಯಾರ್ಥಿಗಳ ಪಂದ್ಯಾಟಗಳು ನಡೆದವು ಪಂದ್ಯಾಟವನ್ನು ಆಕರ್ಷಣೆ ಮಾಡುವ ಪ್ರೋತ್ಸಾಹ ಪಡುವಂತೆ ಚಾತುರ್ಯವನ್ನು ತೋರಿಸಿದ ವಿದ್ಯಾರ್ಥಿಗಳಿಗೆ ಇನಾಮು ಹಂಚಲಾಯಿತು. ನಂತರ ಸದರಿ ದಿವಸ ಕೂಡಿದ ಸಭೆಯ ಕಾರಣ ವ 'ಕೊರೆನೇಶನ್‌ಡೆ' ಎಂಬದರ ಟಿಪ್ಪಣೆಯನ್ನು ಸರಿಯಾಗಿ ಕೂಡಿದ ಜನರು ತಿಳಕೊಳ್ಳುವ ರೀತಿಯಲ್ಲಿ ಚೆಯರ್ ಮೇನರ ಭಾಷಣವಾಯಿತು. ನಂತರ ರಾಜಭಕ್ತಿಯನ್ನು ಪ್ರಕಟಪಡಿಸಿ ಮಂಗಳ ಹಾಡುಗಳಿಂದಲೂ, ವಿದ್ಯಾರ್ಥಿಗಳಿಗೆ ತಿಂಡಿ ಸಾಮಾನುಗಳಿಂದಲೂ, ಸಭೆಯವರಿಗೆ ತಾಂಬೂಲಾದಿಗಳಿಂದಲೂ ಸತ್ಕಾರ ನಡಿಸಿ ಸಭೆಯು ಮುಕ್ತಾಯಪಡಿಸೋಣವಾಯಿತು. ನೆರೆದ ಸಭೆಯಿಂದ ಶಾಲಾ ಉಪಾಧ್ಯಾಯರಿಗೂ, ನಿವಾಸಿಗಳಿಗೂ ತಮ್ಮೊಳಗೆ ಇರುವ ಪರಸ್ಪರ ಪ್ರೀತಿ ವ ಐಕ್ಯವನ್ನು ನೋಟಕರಿಗೆ ಸೂಚಿಸುತ್ತಿತ್ತು. ತಾಲೂಕು ಬೋರ್ಡಿನವರು ಈ ಶಾಲೆಯ ಕಟ್ಟಡವನ್ನು ಅಲ್ಪ ಎತ್ತರಿಸುವರೆ ಆಲೋಚಿಸಿದ್ದಾದರೆ ಉತ್ತಮವಾಗುತ್ತಿತ್ತು.

ಬಂಟ್ವಾಳ:— ಇಲ್ಲಿಯ ತಾಲೂಕು ಬೋರ್ಡಿನವರು ಅಯ್ಯನಾಯ್ಕರ ಓಣಿಯನ್ನು ಸಂಕದ ವರೆಗೆ ಸಂಕದ ಮಟ್ಟಿಗೆ ಎತ್ತರಿಸಲಿಕ್ಕೆ ಆರಂಭಿಸಿ ಸುಮಾರು ಐವತ್ತು ಜನರು ಕೆಲಸಮಾಡುತ್ತಿರುವರು. ಇನ್ನು ಅದರ ಆಚೆಗೆ ದೇವಸ್ಥಾನದ ಮೆನೇಜರವರು ಸದರಿ ಮಾರ್ಗ ಬೇಗನೇ ಎತ್ತರ ಮಾಡಿಸ್ಯಾರೆಂದು ನಂಬುತ್ತೇವೆ.

ಇಲ್ಲಿಯ ಬೋರ್ಡುಶಾಲೆಯಲ್ಲಿ ಹುಡುಗರು ಮೇಲಿನ ಕ್ಲಾಸಿನಲ್ಲಿ ಕಡಿಮೆಯಾಗುತ್ತಾ ಬಂದಿರುತ್ತಾರೆ. ಕೆಳಗಿನ ಕ್ಲಾಸಿನಲ್ಲಿ ಬೇಕಾದಷ್ಟು ಹುಡುಗರು ಇದ್ದಾರೆ. ಇನ್ನು ಸಣ್ಣ ಶಾಲೆಗೆ ಸೆಕೆಂಡರಿ ಟ್ರೈನ್ಡ್ ಹೆಡ್‌ಮಾಸ್ತರರು ಯಾಕೆ? ಮುಂದಕ್ಕೆ ಶಾಲೆ ವೃದ್ಧಿಯಾಗಿ ಮೇಲಿನ ಕ್ಲಾಸು ತೆರೆಯುವಾಗ ತಕ್ಕ ಉಪಾಧ್ಯಾಯರನ್ನು ತಂದರೆ ಸೈ. ಅವರ ಬದಲಿಗೆ ಇನ್ನು ಕ್ಲಾಸಿಗೆ ಒಬ್ಬೊಬ್ಬ ಎಲಿಮೆಂಟರಿ ಗ್ರೇಡಿನ ಇಬ್ಬರು ಮಾಸ್ತರರನ್ನು ಇಟ್ಟರೆ ಆಗುವದಿಲ್ಲವೆ?

ಫರೆಂಗಿಪೇಟೆ:— ಇಲ್ಲಿ ನೆರೆಯಿಂದ ಬಿದ್ದುಹೋದ ಮಾರ್ಗದ ರಿಪೇರಿಯನ್ನು ಇನ್ನು ಶುರುಮಾಡಿದ್ದು ಕಂಡುಬರುವುದಿಲ್ಲ. ಮಳೆಗಾಲವು ಶುರುವಾಗುವಾಗ ರಿಪೇರಿಮಾಡಲಿಕ್ಕೆ ಶುರುಮಾಡಿದರೆ ಕೆಲಸವನ್ನು ಸರಿಯಾಗಿ ಮಾಡಲಿಕ್ಕಾಗದೆ ಹಣವು ವ್ಯರ್ಥವಾಗಿ ನಷ್ಟವಾಗುತ್ತದೆ.

ಪುಂಜಾಲಕಟ್ಟೆ:— ಇಲ್ಲಿಯ ರೋಯಲ್ ಆಸ್ಪತ್ರೆಯ ವೈದ್ಯ ಉದ್ಯೋಗಸ್ಥರು ಬಂಟವಾಳ ಆಸ್ಪತ್ರೆಯ ಚಾರ್ಜು ನೋಡುತ್ತಿರುವುದರಿಂದ ಇಲ್ಲಿಯ ರೋಗಿಗಳಿಗೆ ಮದ್ದಿಗಾಗಿ ಕಷ್ಟಗಳು ಉಂಟಾಗುತ್ತವೆ.

ಪೊಳಲಿ:— ಇಲ್ಲಿಯ ರಥದ ಚಿತ್ರಗೆರುವ ಹಲಿಗೆಗಳು ಹಾಳಾಗಿವೆ. ಇವುಗಳ ಮೇಲೆ ಕಟ್ಟುವ ಚಿತ್ರಗಳು ಹಾಳಾಗಿ ಹೋಗಿ ಎಷ್ಟು ವರ್ಷಗಳಾಯಿತೊ ದೇವರೇ ಬಲ್ಲ. ಪತಾಕೆಗಳ ಸಂಗತಿ ಹೇಳತೀರದು. ಈ ದೇವಸ್ಥಾನದ ಮಹತ್ವವನ್ನೂ, ಇಲ್ಲಿಯ ರಥದ ಅವಸ್ಥೆಯನ್ನೂ ನೋಡಿದರೆ ನಾಚಿಗೆಯಾಗುತ್ತದೆ. ಬರುವ ಹರಿಕೆ ಹಣಕ್ಕೆ ಮಿತಿಯೇ ಇಲ್ಲ. ಈ ದೇವಸ್ಥಾನದ ವಿಷಯ ಬರುವ ಹೊಗಳಿಕೆಗಳಿಗೆ ಮಿತಿಯೇ ಇಲ್ಲ. ಹೊರಸುತ್ತಿನ ಸುತ್ತಲೂ ಪೂರ್ವ, ಉತ್ತರ, ದಕ್ಷಿಣ ದಿಕ್ಕಿನಲ್ಲಿ ದೊಡ್ಡ ದೊಡ್ಡ ಗುತ್ತಿನ ನಾಡದ ಬಂಟ ಮಹನೀಯರು ತಮ್ಮ ಮನೆತನಗಳ ಸ್ತ್ರೀಯರಿಗಾಗಿ ಅಲ್ಲಲ್ಲಿ ಗೊಡುಗಳ ನಮೂನೆ ಕಟ್ಟಡಗಳನ್ನು ಕಟ್ಟಿಸಿರುವರು. ಇದರ ಬದಲಾಗಿ ಎಲ್ಲರೂ ವಂತಿಗೆ ಹಾಕಿ ಕೆಳಗಡೆಯಲ್ಲಿ ನಾಲ್ಕು ಸುತ್ತುಗಳಲ್ಲಿಯೂ ಅಗಲವಾದ ಚಾವಡಿಗಳನ್ನು ಮೇಲುಗಡೆ ಉಪ್ಪರಿಗೆಗಳನ್ನು ಹಾಕಿದರೆ ಬಂಟ ಮಹನೀಯರ ಸ್ತ್ರೀಯರಿಗೂ ಕುಲೀನ ಸ್ತ್ರೀಯರಿಗೂ ಬಲಿಯನ್ನು ನೋಡಲಿಕ್ಕೂ, ರಾತ್ರಿ ಮಂಜಿನ ಬಾಧೆಯಿಂದ ತಪ್ಪಿಸಿಕೊಳ್ಳಲಿಕ್ಕೂ, ಕಳ್ಳರ ಹಾವಳಿಯಿಂದ ತಪ್ಪಿಸಿಕೊಳ್ಳಲಿಕ್ಕೂ, ಒಳ್ಳೇ ಅನುಕೂಲವಾಗುತ್ತಿತ್ತು. ದೇವರಿಗೆ ಬರುವ ಹರಿಕೆ ಕಾಣಿಕೆಗಳ ಹಣವನ್ನು ಬರೇ ಬ್ರಾಹ್ಮಣ ಸಂತರ್ಪಣೆಗಾಗಿಯೇ ಉಪಯೋಗಿಸದೆ ಎಲ್ಲಾ ಜಾತಿಯ ಭಜಕ ವೃಂದದವರ ಅನುಕೂಲತೆಗಾಗಿ ಈ ಹಣವನ್ನು ಉಪಯೋಗಿಸಿದರೆ ಒಳ್ಳೇದಿತ್ತು.

ಎಡಮಂಗ್ಲ ಗ್ರಾಮ:— ಈ ಗ್ರಾಮದ ಮರ್ದೋರು ಮೋಟಿಪ್ಪ ಗೌಡರ ಭವನದಲ್ಲಿ ದಕ್ಷಿಣ ಕನ್ನಡಾ ಗೌಡ ವಿದ್ಯಾ ಸಂಘದ ಆಡಳಿತ ಸಭೆಯು ತಾ. ೨೮—೧೧—'೨೫ನೇ ಶನಿವಾರ ಹಗಲು ಗಂಟೆ ೩ಕ್ಕೆ ಜರಗಿತು. ಆಡಳಿತ ಮೆಂಬರರು ಐದು ಮಂದಿಯೂ ಸಂಘದ ಮೆಂಬರರೂ ಹಿತಚಿಂತಕರೂ ಕೂಡ ಸುಮಾರು ೩೦ ಮಂದಿ ಮಹನೀಯರು ಸಭಾ ಹಾಜರಿದ್ದರು. ಹಾಜರಿದ್ದವರ ಪೈಕಿ ಹೊಸ ಮೆಂಬರರಾಗಿ ಸಂಘಕ್ಕೆ ಸೇರಿ ರೂಪಾಯಿ ೧೫೦ರ ವಾಗ್ದಾನ ಮನವಿ ಪತ್ರಗಳು ಬಂದಲ್ಲದೆ ರೂಪಾಯಿ ೧೨೬ ವಸೂಲು ಬಂದಿರುತ್ತದೆ. ವರುಷಾವಧಿ ಮಹಾ ಸಭೆಯನ್ನು ಇದೇ ದಶಂಬರ ತಿಂಗಳ ತಾರೀಖು ೨೮ನೇ ಸೋಮವಾರ ಹಗಲು ಗಂಟೆ ೧೨ಕ್ಕೆ ದೇವಚಳ್ಳಗ್ರಾಮದ ಮುಂಡೋಡಿ ಲಿಂಗಪ್ಪ ಗೌಡರಲ್ಲಿ ಜರಗುವುದೆಂತ ನಿರ್ಣಯಿಸಿಯದೆ. ಆದುದರಿಂದ ಸಂಘದ ಮೆಂಬರರೂ, ಹಿತಚಿಂತಕರೂ ಸರ್ವರೂ ದಯಮಾಡಿ ಬರಬೇಕಾಗಿ ಕಾರ್ಯದರ್ಶಿಯರ ವಿನಂತಿ; ಸರ್ವರಿಗೂ ಸುಸ್ವಾಗತವಿದೆ.

ಸಂಪಾಜೆ:— ಇಲ್ಲಿ ಕಲ್ಲುಗುಂಡಿ ಎಂಬಲ್ಲಿ ಸೀತಾವೆಯ ಸೈಫಿನ (ಅವರದ)ಫ ೧೯೨೫ನೆಯ ಇಸವಿಯ ತನಕ ತೆಗೆದು ಕೊಟ್ಟ ಹೋಗಿದ್ದು ವುದನ್ನು ಈ ವರೆಗೆ ಕಟ್ಟಿಸದಿರುತ್ತದರಿಂದ ಮೋಟರ್ ಬಸ್ಸ್ ವಗೈರೆ ಅವಾಂತರಕ್ಕಾಗುವಾಗ್ಗೆ ಎಷ್ಟೋ ಸಾರಿ ಜಾನುವಾರುಗಳು ಸಿಕ್ಕಿ ಫಕ್ಕನೆ ಹೊಳೆಗೆ ದುಮುಕುವ ಸಂಭವವಿದೆ. ಇತ್ತರಲ್ಲಿಯೇ ಒಂದೆರಡು ಜಾನುವಾರುಗಳು ಹೊಳೆಗೆ ಬಿದ್ದಿರುವವು. ಇಂಥಾ ಅಪಾಯಕರವಾದ ಸಂಗತಿಯಲ್ಲಿ ಮಾನ್ಯ ಬೋರ್ಡಿನವರು ನಿಗಾ ಕೊಡುವರಾಗಿ ನಂಬುತ್ತೇವೆ.

ಪಡುಬಿದರೆ:— ಇಲ್ಲಿಯ ಮಾಮೂಲು ಪ್ರಕಾರ ಆಗುವ ಶೀಮೆಯ ಕಂಬಳವು ಇದೇ ಕ್ರೋಧನ ಸಂವತ್ಸರದ ಪುಷ್ಯ ಬಹುಳ ೧ಯು ಧನುರ್ಮಾಸ ದಿನ ೧೬ ಸಲುವ ತಾ. ೩೧—೧೨—'೨೫ನೇ ಗುರುವಾರ ದಿವಸವೆಂತ ನಿಶ್ಚಯಿಸಿಯದೆ.

ತಂಜಾವೂರಿನಲ್ಲಿ ರೈಲ್ವೆಯ ಅಪಘಡ.

ಇದೇ ತಿಂಗಳ ತಾ. ೯ಕ್ಕೆ ಪ್ರಾರಂಭವಾದ ಮಳೆಯು ಜೋರಾಗಿ ಬಂದು ಪನ್ನವಾಯಲ್ ಎಂಬಲ್ಲಿ ಇರುವ ಸರೋವರದಲ್ಲಿ ನೀರು ಉಕ್ಕಿ ಬಂದು ಅದರ ದಡದಲ್ಲಿರುವ ರೈಲ್ವೆ ಲ್ಯಾನುಗಳೆಲ್ಲಾ ಕೊಚ್ಚಿ ಹೋಗಿತ್ತು. ತಾ. ೧೦ಕ್ಕೆ ಸುಮಾರು ರಾತ್ರಿ ೧ ಗಂಟೆಯ ಸಮಯದಲ್ಲಿ ಪುಟ್ಟುಕೋಟೆ ಎಂಬ ರೈಲ್ವೆ ಸ್ಟೇಶನಿನ ಹತ್ತಿರ, ರೈಲ್ವೆ ಲ್ಯಾನಿನಲ್ಲಿ ಇದ್ದ ಅಪಾಯ ತಿಳಿಯದೆ ಇದ್ದುದರಿಂದ ಒಂದು ಇಂಜನು ಮತ್ತು ಮೂರು ಪ್ರಯಾಣಿಕರ ಗಾಡಿಗಳು ಉರುಳಿ ಬಿದ್ದು ನೆಲದಲ್ಲಿ ಹೂತುಹೋಗಿವೆ. ಈ ಅಪಘಡದಲ್ಲಿ ಸತ್ತವರ ಸಂಖ್ಯೆ ಇನ್ನೂ ಚೆನ್ನಾಗಿ ತಿಳಿಯಲಿಲ್ಲ. ಆದರೆ ಸುಮಾರು ಹತ್ತು ಜನರು ಮೃತಪಟ್ಟಿರುವರೆಂದೂ ೨೦ ಜನರಿಗೆ ಬಲವಾಗಿ ಗಾಯವಾಗಿ ಆಸ್ಪತ್ರೆಯಲ್ಲಿ ಇರುವರೆಂದೂ ತಿಳಿದುಬರುತ್ತದೆ. ಈ ಅಪಘಡದ ಕಾಲದಲ್ಲಿ ಮಳೆಯು ಬಲವಾಗಿ ಬರುತ್ತಾ ಇತ್ತು. ಬಿರುಗಾಳಿಯು ರಭಸದಿಂದ ಬೀಸುತ್ತಿತ್ತು. ಎರಡು ಗಾಡಿಗಳು ಕೆಸರಲ್ಲಿ ಮಗುಚಿ ಬಿದ್ದು ಕೆಸರಲ್ಲಿ ಹೂತುಹೋಗಿವೆ. ಇದರಲ್ಲಿ ಸುಮಾರು ೨೫೦ ಜನರು ಇದ್ದರೆಂದು ತಿಳಿದುಬಂದಿದೆ. ಇವರ ಅವಸ್ಥೆ ಏನಾಗಿದೆ ಎಂದು ಇನ್ನೂ ತಿಳಿಯಲಿಲ್ಲ.

ಮಗುಚಿ ಬಿದ್ದು ಹುಗಿದು ಹೋದ ಗಾಡಿಗಳ ಎಡೆಯಿಂದ ಯಮಲೋಕ ಯಾತ್ರೆಗೆ ತೆರಳಿದ ೮ ಜನರನ್ನು ಮೇಲಕ್ಕೆ ತೆಗೆದು ಹಾಕಿದ್ದಾರೆಂದು ಅವರ ಪೈಕಿ ೬ ಜನರು ಗಂಡಸರು, ೧ ಹೆಂಗಸು ಮತ್ತು ೫ ವರ್ಷ ಪ್ರಾಯದ ಒಂದು ಮಗು ಆಗಿತ್ತು. ಸುಮಾರು ೨೧ ಜನರಿಗೆ ಬಹಳವಾದ ಗಾಯವಾಗಿ ಗಾಡಿಗಳ ಒಳಗೆ ಬಿದ್ದುಕೊಂಡಿದ್ದವರನ್ನು ಕೂಡಲೆ ಮೇಲಕ್ಕೆ ತೆಗೆದು ಹತ್ತಿರ ಇರುವ ಆಸ್ಪತ್ರೆಗೆ ಒಯ್ಯಲ್ಪಟ್ಟಿದರು. ಇವರ ಪೈಕಿ ಒಬ್ಬನು ಆಸ್ಪತ್ರೆಯಲ್ಲಿಯೇ ಸತ್ತಿರುವನು. ಬಾಕಿಯವರ ಅವಸ್ಥೆ ಏನಾಗುತ್ತದೋ ನೋಡಲಿಕ್ಕಿದೆ.

ದಕ್ಷಿಣ ದೇಶದಲ್ಲಿಯ ನೆರೆಯ ಹಾವಳಿ.

ಮಧುರಾದಲ್ಲಿ ಕಳೆದ ತಾ. ೧೦ಕ್ಕೆ ಪಾರವಾಯಿ ಎಂಬ ಸರೋವರದಲ್ಲಿ ನೀರು ಉಕ್ಕಿ ಬಂದು ಅದರ ಹತ್ತಿರವಿರುವ ಸುಮಾರು ಎರಡು ಮೈಲು ವಿಸ್ತೀರ್ಣದ ರೈಲ್ವೆ ಲ್ಯಾನನ್ನು ಕಿತ್ತು ಹಾಕಿಯದೆ. ನೆರೆಯ ಸಮ್ಮಂಧ ಕಾಮುತಕುಡಿ ಮತ್ತು ಪತ್ತಿಬಾನೂರು ಎಂಬಲ್ಲಿ ಮಾರ್ಗವು ಕುಸಿದು ಹೋಗಿದೆ. ಪುನಃ ರೈಲ್ವೆ ಸರ್ವಿಸು ಪ್ರಾರಂಭಿರುವರೆ ಸುಮಾರು ೪ ದಿವಸದ ತನಕ ಸಾಧ್ಯವಿಲ್ಲ, ಮಧುರೆಯಿಂದ ದನಸ್‌ಕೋಡಿಯ ವರೆಗೆ ಹಾದಿಯಲ್ಲಿ ಅಲ್ಲಲ್ಲಿ ರೈಲ್ವೆ ಲ್ಯಾನುಗಳು ಹಾಳಾಗಿರುವುದರಿಂದ ಆ ಕಡೆ ಚಲಾವಣೆ ಆಗುವ ಎಲ್ಲಾ ಟ್ರೈನ್ ಸರ್ವಿಸುಗಳನ್ನು ಬಂದು ಮಾಡಿತ್ತು. ಬಿರುಪಾರ್ವ ಮತ್ತು ಇತರ ಹಳ್ಳಿಗಳಲ್ಲಿ ನೆರೆಯ ಮತ್ತು ಬಿರುಗಾಳಿಯ ಸಮ್ಮಂಧ ನೂರಾರು ಮನೆಗಳು ಕುಸಿದು ಬಿದ್ದು ಅದರಲ್ಲಿರುವ ಜನರೆಲ್ಲರೂ ತಮ್ಮ ಹೆಂಗಸರು ಮಕ್ಕಳ ಸಮೇತ ಎರಡು ದಿವಸ ಮನೆಮಾರಿಲ್ಲದೆ ಆ ಚಳಿಗಾಳಿಯ ಒಡೆತಕ್ಕೆ ಬಿದ್ದು ನಿರಾಶ್ರಿತರಾಗಿಯೇ ಬಿದ್ದುಕೊಂಡಿದ್ದರು. ರಾಮನಾಡ ಮತ್ತು ಇತರ ಸ್ವಲ್ಪ ಕಡೆಗಳಲ್ಲಿ ಹಾಳಾದ ರೈಲ್ವೆ ಲ್ಯಾನುಗಳನ್ನು ಆಗಾಗಲೆ ದುರುಸ್ತಿಪಡಿಸಿದರು. ಮಧುರಾದಿಂದ ರೈಲ್ವೆ ಸರ್ವಿಸು ಸುಮಾರು ಒಂದು ವಾರದ ವರೆಗೆ ಸರಿಯಾಗಿ ಚಲಾವಣೆಯಾಗಲಿಕ್ಕಿಲ್ಲವೆಂದು ತಿಳಿದುಬಂದಿದೆ. ತಾ. ೧೨ಕ್ಕೆ ಮಳೆಯು ಮತ್ತು ಗಾಳಿಯು ಕಡಿಮೆ ಇದ್ದುದರಿಂದ ಅಲ್ಲಲ್ಲಿ ನಿಂತ ನೀರು ಇಳಿದುಹೋಗಿಯದೆ. ಆದರೆ ಪಾರವಾಯಿ ಸರೋವರದಲ್ಲಿ ಮಾತ್ರ ನೀರು ಬಹಳ ಜಾಸ್ತಿಯಾಗಿದ್ದು, ಇದರ ಹತ್ತಿರ ಕೆಡಿಮಹೋದ ರೈಲ್ವೆ ರಸ್ತೆಯು ಇನ್ನೂ ಎರಡು ಮೂರು ದಿವಸದ ವರೆಗೆ ಸರಿಮಾಡಲು ಸಾಧ್ಯವಿಲ್ಲವಂತೆ. ರೈಲ್ವೆಯವರು ಮೈಲುಗಳನ್ನು ಲೋರಿಗಳ ಮುಖಾಂತರ ಸಾಗಿಸುತ್ತಾರೆ. ಸರಿಯಾದ ರೈಲು ಚಲಾವಣೆಯು ಇನ್ನು ಕೆಲವು ದಿವಸಗಳಲ್ಲಿ ಪ್ರಾರಂಭವಾಗುವುದು. ಮಳೆ ಇಲ್ಲದೆ ಹವೆಯು ಚೆನ್ನಾಗಿದ್ದುದರಿಂದ ರೈಲ್ವೆ ರಸ್ತೆಗಳ ದುರುಸ್ತಿ ಕೆಲಸಗಳು ಜೋರಾಗಿ ನಡೆಯುತ್ತಿವೆ. ಮಧುರಾದಲ್ಲಿ ವಿಶೇಷವಾದ ಹಾನಿಯುಂಟಾಗಲಿಲ್ಲ. ಚಲಾವಣೆಯಾಗದೆ ನಿಂತಿದ್ದ ಸಿಲೋನು ಬೋಟ್ ಮೈಲ್ ಹೇಗಾದರೂ ಮಧುರಾಕ್ಕೆ ತಂದಿರುವರು. ಕುಂಭಕೋಣದಲ್ಲಿ ಜುಮಾನಾರ್ ನದಿಯಲ್ಲಿಯೂ ನೆರೆಉಂಟಾಗಿದೆ.

ಮದ್ರಾಸಿನ ಗಂಧರ್ವ ಗಾಯನಶಾಲೆ.

ಮದ್ರಾಸಿನಲ್ಲಿ ಇತ್ತೀಚೆಗೆ ಹೊಸದಾಗಿ ಎಲ್ಲಾ ಜನರಿಗೆ ಸಹಾಯಾರ್ಥವಾಗಿ ಗಾಯನವಿದ್ಯೆ ಕಲಿಸುವ ಏರ್ಪಾಡು ಮಾಡಿರುತ್ತಾರೆ. ಭರತ ಶಾಸ್ತ್ರಕ್ಕನುಸಾರವಾಗಿ ಕ್ರಮದಿಂದ ಸಣ್ಣ ಮಕ್ಕಳಿಂದ ದೊಡ್ಡವರಿಗೆ ಸಹಾ ಅಭ್ಯಾಸ ಮಾಡಬಹುದು. ಇದರಲ್ಲಿ ಎರಡು ವರ್ಷ ಕೋರ್ಸು ಉಂಟು, ನಾಲ್ಕು ವರ್ಷ ಕೋರ್ಸು ಸಹ ಉಂಟು ಈ ಶಾಲೆಯಲ್ಲಿ ಪ್ರತಿ ಒಂದು ಗಾಯನ ಸಾಹಿತ್ಯದಲ್ಲಿ ಅಂದರೆ ಫಿಡಿಲು, ವೀಣೆ, ಸತಾರ್, ಕೊಳಲು, ನಾಗಸ್ವರ ಮುಂತಾದ ಸಪ್ತಸ್ವರ ವಾದ್ಯಗಳೂ, ತಾಳ, ಮೃದಂಗ, ತಬ್ಲೆ ಮುಂತಾದನ್ನು ಬಡಿಯಲಿಕ್ಕೆ ಸಹ ಕಲಿಸುವರು. ಪ್ರತಿ ಒಂದು ದೇಶಭಾಷೆಯಲ್ಲಿ ಪ್ರತಿ ಒಂದು ಗಾಯನವಿದ್ಯೆ ಕೊಡಲ್ಪಡುವುದು. ಒಂದನೇದು— ಇಂಗ್ಲಿಷ್ ನಮುನೆಯ ಗಾಯನವಿದ್ಯೆ ಬೇಕಾದವರಿಗೆ ಅದನ್ನು ಕಲಿಸುವರು, ಎರಡನೇದು— ಹಿಂದು ಗಾಯನವಿದ್ಯೆಯಲ್ಲಿ ಗುಜರಾತಿ, ಮರಾಠಿ, ಹಿಂದುಸ್ಥಾನಿ ದಕ್ಷಿಣಾದಿ ಮುಂತಾದ ರಾಗಭೇದಗಳು ಇರುವವಷ್ಟೆ ಇದರಲ್ಲಿ ಯಾವದು ಬೇಕೊ ಅದನ್ನು ಕಲಿಸುವರು. ಅಲ್ಲದೆ ಮುಂದಾನೆ ಮತ್ತು ಸಂಜೆಗೆ ಕೊರ್ಟು ಕಚೇರಿಗೆ ಹೋಗುವ ಗುಮಾಸ್ತರಿಗೂ ವಕೀಲರಿಗೂ ಕಲಿಯುವ ಅಗತ್ಯವಿದ್ದರೆ ಅದಕ್ಕೆ ಏರ್ಪಾಡು ಮಾಡಿರುವರು. ಮತ್ತು ಇಲ್ಲಿ ಗಾಯನ ಸಮ್ಮಂಧವಾದ ಎಲ್ಲಾ ಭಾಷೆಗಳ ಪುಸ್ತಕ ಭಂಡಾರ ತೆರೆದಿರುತ್ತಾರೆ. ಹಿಂದು ಸ್ಥಾನದಲ್ಲಿರುವ ಗಾಯನ ಸಾಹಿತ್ಯ ಸಂಗ್ರಹ ಎಂಬ ಲೈಬ್ರರಿ ತೆರೆದಿರುತ್ತಾರೆ.

ಅನುಕ್ರಮಣಿಕೆ.

ಅಗ್ರಲೇಖ — ಪುಟ
ರಾಷ್ಟ್ರಸಭೆ — ೬
ಸ್ಫುಟವಿಚಾರಗಳು — ೭
ವರ್ತಮಾನಸಂಗ್ರಹಗಳು—
ವಿದೇಶವರ್ತಮಾನ, ಒಳದೇಶವರ್ತಮಾನ — ೮
ದಕ್ಷಿಣ ಕನ್ನಡ — ಅರಳ, ಹೊಸದುರ್ಗ, ಬಂಟ್ವಾಳ, ಫರಂಗಿಪೇಟೆ
ಪುಂಜಾಲಕಟ್ಟೆ, ಪೂಳಲಿ, ಎಡಮಂಗ್ಲ, ಸಂಪಾಜೆ, ಪಡುಬಿದ್ರೆ — ,,
ತಂಜಾವೂರಿನಲ್ಲಿ ರೈಲ್ವೆಯ ಅಪಘಾತ — ,,
ದಕ್ಷಿಣ ದೇಶದಲ್ಲಿಯ ನೆರೆಯ ಹಾವಳಿ — ,,
ಮಂಗಳೂರು — ೯
ಪತ್ರವ್ಯವಹಾರ ೧, — ,,
ಹೇನು (Louse) — ೧೦
ಉಳಾಯಿಬೆಟ್ಟು ಬೋರ್ಡು ಶಾಲೆಯಲ್ಲಿ ಡಿಲ್ಲಿ ದರ್ಬಾರ್ ಮಹೋತ್ಸವ
ವಿವಿಧವಿಷಯಗಳು — ,,

ಸ್ವದೇಶಾಭಿಮಾನಿ.

ಶಕ ೧೮೪೭ ಪುಷ್ಯ ಶು|| ೩ಯು ಶುಕ್ರವಾರ

ರಾಷ್ಟ್ರಸಭೆ.

ಬರುವ ವಾರಕ್ಕೆ ಕಾನಪೂರದಲ್ಲಿ ಹಿಂದೀ ರಾಷ್ಟ್ರೀಯ ಸಭೆಯು ಸೇರುವುದು. ದೇಶದ ರಾಜಕೀಯ ಮತ್ತು ಸಾಮಾಜಿಕ ಜಾಗೃತಿಗೂ ಸುಧಾರಣೆಗೂ ಮುಖ್ಯವಾದ ಕಾರಣವಾಗಿರುವ ರಾಷ್ಟ್ರೀಯ ಸಭೆಯು ದೇಶದೊಳಗಿನ ಎಲ್ಲಾ ದೇಶಸೇವಕರಲ್ಲಿ ಭಕ್ತಿಯನ್ನೂ ವಿಶ್ವಾಸವನ್ನೂ, ಆಶೆಯನ್ನೂ ಪ್ರೇರಿಸುವುದು. ರಾಷ್ಟ್ರೀಯ ಸಭೆಯು ಹಿಂದುಸ್ಥಾನದ ಮಾನಸಿಕತೆಯಲ್ಲಿ ವಿಕಾಸವನ್ನುಂಟುಮಾಡಿಯದೆಂದು ಎಲ್ಲರೂ ಒಪ್ಪಲೇ ಬೇಕು. ಮೂವತ್ತು ಕೋಟಿ ಪ್ರಜೆಗಳನ್ನು ಭಕ್ತಿಯಿಂದಲೂ, ಶ್ರದ್ಧೆಯಿಂದಲೂ ಕೇಂದ್ರೀಕರಿಸಿ, ಹಿಂದೀಯರ ನೈಸರ್ಗಿಕ ಸಾತ್ವಿಕತೆಯಿಂದ ಅವರಲ್ಲಿ ನವಜೀವನವನ್ನೂ, ನವ ಆಶಯಗಳನ್ನೂ ಪ್ರೇರಿಸಬಲ್ಲ ಮತ್ತೊಂದು ಸಂಸ್ಥೆಯು ಲೋಕದಲ್ಲಿ ಇನ್ನೆಲ್ಲಿಯೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು.

ಎಲ್ಲ ಮತಗಳ ಕ್ಷುದ್ರವಾದ ವಿಭಾಗಗಳು ಮುಚ್ಚಿಹೋಗುವುವೊ, ಎಲ್ಲಿ ಅಂತರ್ಯದ ಅಸೀಮ ದೇಶಪ್ರೇಮವು ಅವಿರೋಧವಾಗಿ ಹರಿಯಬಲ್ಲುದೊ, ಎಲ್ಲಿ ಮಾನವನ ಸೌಹಾರ್ದಭಾವವು ಸಮಾಜದ ಸಮಷ್ಟಿಯ ಹಿತದಲ್ಲಿ ವಿಲೀನವಾಗುವುದೊ, ಅದು, ಆ ಮಹಾಸಭೆಯು, ಹಿಂದೀಯರ ಮೂವತ್ತು ಕೋಟಿ ಆತ್ಮಗಳ ಸಮ್ಮಿಲನವು ಕಾನಪುರದಲ್ಲಿ ನೋಡಲು ಸಿಗುವುದು. ಇಂತಹ ಜನಾಂಗಶಕ್ತಿಯನ್ನು, ಜನಾಂಗದ ಆತ್ಮವನ್ನು ಬಲಪಡಿಸುವುದು ಪ್ರತಿಯೊಬ್ಬನ ಕರ್ತವ್ಯವಿದೆ. ಆದರೆ ಕೆಲವರು ತಾವೇ ಬುದ್ಧಿವಂತರೆನ್ನಿಸಿಕೊಂಡು ತಮ್ಮ ಅಭಿಪ್ರಾಯಗಳೇ ಮೇಲಾದವುಗಳೆಂದು ಜನಾಂಗದ ಈ ಸಂಘಶಕ್ತಿಯಲ್ಲಿ ಕೂಡಲು ಹಿಂದೆ ಸರಿಯುವುದು ದುಃಖದ ವಿಷಯ.

ದೇಶದ ಭಾವಿ ಸುಖದುಃಖಗಳಿಗೆ ಕಾರಣಭೂತವಾದ ಈ ಸಭೆಯ ಕಾರ್ಯಕಲಾಪಗಳನ್ನು ಚೆನ್ನಾಗಿ ಚಿಂತಿಸಿ ಮಾಡಬೇಕು. ೧೮೮೫ರಲ್ಲಿ ರಾಷ್ಟ್ರೀಯ ಸಭೆಯು ಸ್ಥಾಪಿತವಾದಂದಿನಿಂದ ಎಡೆಬಿಡದೆ ಅದು ರಾಷ್ಟ್ರದ ಸರಕಾರದ ಸುಧಾರಣೆಗಾಗಿ ಅದು ಪೇಚಾಡಿತು. ಪ್ರಥಮದ ಪ್ರಯತ್ನಗಳು ಬರೇ ಸಮಾಜ ಸುಧಾರಣೆಯ ಉದ್ದೇಶಕ್ಕಾಗಿಯೇ ಇದ್ದುವುಗಳಾದರೂ, ಸ್ಥಾಪಿಸಲ್ಪಟ್ಟ ಕೆಲವೇ ವರ್ಷಗಳೊಳಗೆ ಅದು ಬ್ರಿಟಿಷ್ ರಾಜತಂತ್ರದ ಸೂತ್ರಗಳನ್ನು ಬಿಚ್ಚಿ ಪರೀಕ್ಷಿಸತೊಡಗಿತು. ಆಗಿನ ಪ್ರಯತ್ನಗಳು ಸರಕಾರ ನಿವೇದನೆಗಿಂತ ಮಿಕ್ಕಿ ಹೋಗಲಿಲ್ಲ. ಆದರೆ ಬಂಗಾಳ ವಿಭಜನೆಯ ನಂತರ ಉಂಟಾದ ಚಳವಳದಿಂದ ಹೊಸ ಚೇತನವು ರಾಷ್ಟ್ರೀಯ ಸಭೆಯ ಅಂಗಾಂಗಗಳಲ್ಲಿ ಹರಿಯಿತು. ಪರಂತು ಆ ಚೇತನವು ಇನ್ನೂ ಸ್ಪಷ್ಟವಾಗಲು ಒಪ್ಪಲಿಲ್ಲ. ಯುದ್ಧಾರಂಭದೊಡನೆ ರಾಷ್ಟ್ರೀಯ ಭಾವನೆಗಳು ಸ್ವಲ್ಪ ತಡೆಹೊಂದಿ, ಮತ್ತೆ ಪುನಃ ಮಿ|| ಎನ್ನಿ ಬಿಸೆಂಟಮ್ಮನವರ ಅಪ್ರತಿಮ ಶಕ್ತಿಯೊಡನೆ ರಾಷ್ಟ್ರೀಯ ಸಭೆಯು ಪುನಃ ಚೇತನಾತ್ಮಕವಾಯಿತು.

ಮಿ|| ಎನ್ನಿಬಿಸೆಂಟಮ್ಮನವರು ಬಂಧಿಸಲ್ಪಟ್ಟು ಬಿಡಿಸಲ್ಪಟ್ಟರು. ಅಮ್ಮನವರು ಅಧ್ಯಕ್ಷರಾದರು. ಮಿ|| ಮೊಂಟೆಗ್ಯು ಸಾಹೇಬರು ಹಿಂದೂದೇಶಕ್ಕೆ ಬಂದು ರಿಫೋರ್ಮ್ಸ್ ವಿಷಯ ಒಂದು ರಚನೆಯನ್ನು ತಯಾರಿಸಿ ಹೋದರು. ಈ ವಾತಾವರಣದಲ್ಲಿ ಹಿಂದೀ ರಾಷ್ಟ್ರೀಯ ಸಭೆಯು ಬರೇ ಅನುತ್ಸಾಹಿಕವಿದ್ದಿತು. ಮತ್ತೆ ಮಿ|| ಮೊಂಟೆಗ್ಯೂರವರ ಈ ಉದಾರ ದಾನವು ಸ್ವೀಕಾರಾರ್ಹವೂ ಅಲ್ಲವೊ ಎಂಬ ತಳಮಳದಲ್ಲಿ ದೇಶದ ಶಕ್ತಿಯು ವಿನಿಮಯವಾಯಿತು. ಅಷ್ಟರಲ್ಲಿ ರೌಲೆಟ್ಟ ಆಕ್ಟು ಅದನ್ನು ವಿರೋಧಿಸಲಿಕ್ಕೆ ಸತ್ಯಾಗ್ರಹ, ಅದರ ಮೇಲೆ ಪಂಜಾಬು ಅತ್ಯಾಚಾರ ಇವುಗಳ ಪ್ರತೀಕಾರಾರ್ಥ ಕಲ್ಕತ್ತದ ರಾಷ್ಟ್ರೀಯ ಸಭೆಯ ವೈಶೇಷಿಕ ಅಧಿವೇಶನ, ಆ ಮೇಲೆ ನಾಗಪೂರದ ಅತ್ಯಂತ ಉತ್ಕ್ರಾಂತಿಕಾರಕ ರಾಷ್ಟ್ರಸಭೆಯ ಅಸಹಕಾರಪರವಾದ ಕಾರ್ಯಕ್ರಮ. ಆ ಮೇಲಿನ ಆವೇಶಪೂರ್ಣವಾದ ದಿವಸಗಳೂ, ಪ್ರಿನ್ಸ್ ಒಫ್ ವೇಲ್ಸರ ಆಗಮನದೊಡನೆ ಅವರ ಬಹಿಷ್ಕಾರ ಸವಿನಯ ಕಾಯಿದೆಭಂಗದ ತಯಾರಿ ಇವೆಲ್ಲ ಒಂದರ ಮೇಲೊಂದಾಗಿ ಬಂದು ಸರಕಾರವನ್ನು ಕಷ್ಟಕ್ಕೆ ಇಟ್ಟ ಆ ಇತಿಹಾಸವು ಇಷ್ಟರೊಳಗೆ ನಮ್ಮೆಲ್ಲರ ಸ್ಮೃತಿಪಥದಿಂದ ಅಳಿಸಿಹೋಗಲು ಕಾರಣವಿಲ್ಲ. ಆ ಮೇಲಿನ ಚೌರಿಚೌರಾದಲ್ಲಿ ಪೋಲಿಸರ ಸಮೇತ ಪೋಲಿಸ ಸ್ಟೇಶನನ್ನು ಸುಟ್ಟ ಘಟನೆಯ ಪರಿಣಾಮವಾಗಿ ಉಂಟಾದ ಪಂಡಿತ ಮಾಲವೀಯರ ಮತ್ತು ಮಹಾತ್ಮರ ಪರಸ್ಪರ ಸಂಭಾಷಣೆಯ ಮೇಲೆ ಒಮ್ಮಿಂದೊಮ್ಮೆ ಸವಿನಯ ಕಾಯಿದೆಭಂಗವು ನಿಲ್ಲಿಸಲ್ಪಟ್ಟುದೂ, ದೇಶವು ಆವೇಶಾತ್ಮಕ ಪರಿಸ್ಥಿತಿಯಿಂದ ಥಟ್ಟನೆ ನಿಶ್ಚೇತನಕ್ಕೆ ಉರುಳಿಬಿದ್ದುದೂ, ಮಹಾತ್ಮರಿಗೆ ಕಾರಾಗೃಹವು ಪ್ರಾಪ್ತಿಯಾದದ್ದೂ, ದೇಶದಲ್ಲಿ ದಬ್ಬಾಳಿಕೆಯು ಆರಂಭವಾದದ್ದೂ, ಕಾಂಗ್ರೆಸ್ಸಿನಲ್ಲಿ ಸ್ವರಾಜ್ಯ ಮತ್ತು ಬೇಡಬದಲಾವಣೆಗಳ ಪಂಗಡಗಳಾದದ್ದೂ, ಹೊಸ ಚುನಾವಣೆಗಳಲ್ಲಿ ಸ್ವರಾಜ್ಯಪಕ್ಷವು ಸಾಕಷ್ಟು ವಿಜಯವನ್ನು ಪಡೆದುದೂ, ಸ್ವರಾಜ್ಯ ಮತ್ತು ಬೇಡಬದಲಾವಣೆಗಳ ವಾಚಾಟದಲ್ಲಿ ಕಾಂಗ್ರೆಸು ತಣ್ಣಗಾಗಿ ಹೋದುದೂ, ಮಹಾತ್ಮರು ಬಿಡುಗಡೆಯಾಗಿ ಸ್ವರಾಜ್ಯಪಕ್ಷ ಮತ್ತು ಬೇಡಬದಲಾವಣೆ ಪಕ್ಷಗಳನ್ನು ಹತ್ತಿರ ತಂದುದೂ, ಇವೆಲ್ಲ ವಿಷಯಗಳು ಇತ್ತೀಚೆಯವುಗಳಾಗಿವೆ.

ಮುಂದಿನ ಕಾರ್ಯಕ್ರಮವನ್ನು ರಚಿಸಲಿಕ್ಕೆ ಇವೆಲ್ಲ ವಿಷಯಗಳನ್ನು ಪರ್ಯಾಲೋಚಿಸುವುದು ಅಗತ್ಯವಿದೆಯೆಂದು ನಾವು ಉದ್ದವಾದ ಇತಿಹಾಸಕ್ಕೆ ಕೈ ಇಕ್ಕಿದೆವು. ಏಕೆಂದರೆ ಆವೇಶಪೂರ್ಣವಾದ ಕೆಲವು ಸಮಯಗಳನ್ನು ಬಿಟ್ಟರೆ ಬಾಕಿ ಎಲ್ಲವೂ ಧುರೀಣರ ಭಿನ್ನಾಭಿಪ್ರಾಯಗಳ ಜಗಳಗಳಲ್ಲಿಯೇ ರಾಷ್ಟ್ರೀಯ ಸಭೆಯ ಜೀವನವು ವ್ಯಯಿಸಲ್ಪಟ್ಟಿದೆಯೆಂದೂ, ಈ ಜಗಳಾಟಗಳಲ್ಲಿ ಧುರೀಣರು ಪವಿತ್ರವಾದ ದೇಶಹಿತದ ಕಡೆಗೆ ಹೆಚ್ಚು ದೃಷ್ಟಿಯನ್ನಿಟ್ಟಿಲ್ಲವೆಂದೂ, ಸ್ವಂತ ಅಭಿಪ್ರಾಯಗಳ ಗೌರವ ರಕ್ಷಣೆಯಲ್ಲಿ, ದೇಶದ ವಿಪ್ಲವಗಳಿಗೆ ಸಾಕಷ್ಟು ಲಕ್ಷ್ಯವು ಹೋಗಿಲ್ಲವೆಂದೂ ನಾವು ತಿಳಿಯಬೇಕಾಗುತ್ತದೆ.

ಯಾವುದೊಂದು ದೇಶವು ತನ್ನ ಜನಾಂಗದ ವ್ಯಕ್ತಿಗಳ ಸಹಾಯದಿಂದ ಸ್ವತಂತ್ರ್ಯವನ್ನು ಹೊಂದಲು ಯತ್ನಿಸುವುದೊ ಆ ದೇಶದಲ್ಲಿ ಸ್ವಾತಂತ್ರ್ಯ ಸಾಧನೆಯ ಉಪಾಯಗಳ ಪರ್ಯಾಲೋಚನೆಯಲ್ಲಿ ಧುರೀಣರು ಬಡಿದಾಡಿಕೊಳ್ಳುವುದಕ್ಕಿಂತ, ಸಮಷ್ಟಿಯ ಮಾನಸಿಕತೆ (Mass psychology)ಯನ್ನು ಸರಿಯಾಗಿ ಕಲಿತುಕೊಳ್ಳುವುದು ಅವಶ್ಯಕ. ದೇಶದ ಉದ್ಧರಣೆಯಲ್ಲಿ ಬದ್ಧ ಕಂಕಣನಾದ ಧುರೀಣನು ಎರಡು ಪ್ರಮುಖ ಸಂಸ್ಥೆಗಳ ಮಧ್ಯದಲ್ಲಿರುವನು. ಒಂದು ತಾನು ಹತ್ತಿರ ಸೇರಿಸಿಕೊಳ್ಳಬೇಕಾಗಿರುವ ಪ್ರಜಾ ಸಮುದಾಯ ಒಂದು ಕಡೆ; ಇನ್ನೊಂದು ತಾನು ಬದಲಾಯಿಸಬೇಕಾಗಿರುವ ಸರಕಾರವು ಇನ್ನೊಂದು ಕಡೆ. ಈ ಎರಡು ಸಂಸ್ಥೆಗಳಿಗೂ ಪ್ರತ್ಯೇಕವಾದ ಮಾನಸಿಕತೆಯು ಇರುವುದು. ಇದನ್ನು ಸರಿಯಾಗಿ ಅಭ್ಯಸಿಸಿ, ಈ ಮಾನಸಿಕತೆಗೆ ಅನುಕೂಲವಾದ ಕಾರ್ಯಕ್ರಮವನ್ನು ರಚಿಸಿದರೇನೇ ದೇಶವು ಉದ್ಧಾರವನ್ನು ಹೊಂದುವುದಲ್ಲದೆ ಬರೇ ವಾಕ್ಪಟುತ್ವದಿಂದ ಕಾರ್ಯಕಾರಿಯಾದ ಕೆಲಸವನ್ನು ಮಾಡಲು ಸಾಧ್ಯವಿಲ್ಲ.

ಜನತೆಯೊಳಗೂ ಯಾವ ಅಖಂಡ ಜನಾಂಗಭಾವವೂ, ದೇಶಪ್ರೇಮವೂ ಪ್ರಾಮುಖ್ಯತೆಯನ್ನು ತಾಳಬೇಕೊ ಅದು ಇನ್ನೂ ಪ್ರಚಾರಹೊಂದಿಲ್ಲ. ಅಭಿಪ್ರಾಯಗಳೆಷ್ಟಿದ್ದರೂ ಜನನೀ ಜನ್ಮಭೂಮಿಯ ಪದತಲದಲ್ಲಿ ನಾವೆಲ್ಲರೂ ಒಂದೇ, ನಮ್ಮ ಆಶಯಗಳು ಒಂದೇ, ನಮ್ಮ ಹಿತವು ಒಂದೇ ಎಂಬ ಭಾವನೆಯು ಜನಾಂಗದ ಪ್ರತಿ ವ್ಯಕ್ತಿಯಲ್ಲಿಯೂ ಘಟ್ಟಿಯಾಗಿ ನೆಲಸಿರತಕ್ಕದು. ಸಾಧನೆಗಳಾಗಲಿ ಉಪಾಯಗಳಾಗಲಿ ತತ್ಕಾಲದ ಆವಶ್ಯಕತೆಗಳು ಮಾತ್ರವಾಗಿವೆ ಆದರೆ ಜನತೆಯ ಮಾನಸಿಕತೆಯಲ್ಲಿ ಸತ್ಪರಿಣಾಮವನ್ನುಂಟುಮಾಡಬೇಕಾಗಿರುವ ದೇಶಾಭಿಮಾನವೆಂಬುವುದು ಪ್ರತಿಹೃದಯದಲ್ಲಿಯೂ ಎಲ್ಲದಕ್ಕಿಂತಲೂ ಅಗ್ರಸ್ಥಾನವನ್ನು ಹೊಂದಬೇಕು. ದೇಶದ ಮೇಲಿನ ಪ್ರೇಮದಿಂದ ಯಾರು ತಮ್ಮ ಅಭಿಪ್ರಾಯಗಳನ್ನು ಬಲಿಯೀಯಬಲ್ಲರೊ ಅವರೇ ನಿಜವಾಗಿ ದೇಶವನ್ನು ಸೇವಿಸಬಲ್ಲರು.

ಆದುದರಿಂದ ರಾಷ್ಟ್ರಸಭೆಯ ಭಾವೀಕರ್ತವ್ಯಗಳ ವಿಷಯವಾಗಿ ನಾವು ನಿರ್ಧರಿಸುವಾಗ, ಸಮಷ್ಟಿಯ ಮಾನಸಿಕತೆ, ಧುರೀಣರ ಸಂಕಲಮರ್ಷಣ, ಜನರ ಆಳಲಂಕಿತ ದೇಶಪ್ರೇಮ ಇವನ್ನು ಸ್ಥಿರಪಡಿಸಬೇಕು. ಕಾನಪೂರದಲ್ಲಿ ದೇಶದ ಪ್ರತಿನಿಧಿಗಳು ಕೂಡುವ ಸಮಯದಲ್ಲಿ ಈ ವಿಷಯಗಳ ತೀರ್ಮಾನವು ಆಗತಕ್ಕದಿದೆ. ಏಕೆಂದರೆ ಈಗಿನ ಪರಿಸ್ಥಿತಿಯಲ್ಲಿ ಧುರೀಣರು ಧುರೀಣರೊಳಗೂ ಧುರೀಣರು ಮತ್ತು ಜನತೆಯೊಳಗೂ ಪರಸ್ಪರ ಸಂಬಂಧವು ಶಿಥಿಲವಾಗಿ ಹೋಗಿದೆ. ಕಾನಪೂರಕ್ಕೆ ಹೋಗುವ ಸಾಮಾನ್ಯ ಪ್ರತಿನಿಧಿಗಳೂ, ಧುರೀಣರ ಮೇಲಿನ ಅಂಧ ಶ್ರದ್ಧೆಯಿಂದಲೇ ಕೆಲಸಮಾಡದೆ, ತಮ್ಮ ಸ್ವಂತ ವಿಚಾರ ಶಕ್ತಿಯನ್ನು ಉಪಯೋಗಿಸುವರಾಗಿ ಆಶಿಸುವೆವು.

ಇನ್ನು ಕಾನಪೂರ ಕಾಂಗ್ರೆಸು ಮುಂದಿನ ಕಾರ್ಯಕ್ರಮದ ವಿಷಯ ಏನನೆಲ್ಲಾ ಚಿಂತಿಸಬಹುದು ಎಂಬುದಾಗಿಯೂ ನಾವು ಇಲ್ಲಿ ಸಂಕ್ಷೇಪವಾಗಿ ತರ್ಕಿಸುವೆವು.

ಬೇಡಬದಲಾವಣೆಯ ನಿವೃತ್ತಿಕರ ಕಾರ್ಯಕ್ರಮದಿಂದ ದೇಶದಲ್ಲಿ ನಿರುತ್ಸಾಹವು ಉಂಟಾಗಿ ರಾಜಕೀಯ ಕೆಲಸವು ಹಿಂದೆಬೀಳುತ್ತಿದೆ ಎಂಬುದು, ಬೇಡಬದಲಾವಣೆ ವಾದಿಗಳು ಒಪ್ಪದಿದ್ದರೂ, ನಾವದನ್ನು ಸ್ಪಷ್ಟವಾಗಿ ಕಾಣುವೆವು. ಆದುದರಿಂದ ರಾಜಕೀಯವಾದ ಕಾರ್ಯಕ್ರಮವನ್ನು ಅನುಸರಿಸುವ ಆವಶ್ಯಕತೆಯು ಸ್ಪಷ್ಟವಾಯಿತು. ಪರಿಣಾಮವಾಗಿ ಸ್ವರಾಜ್ಯ ಪಕ್ಷವನ್ನು ಕಾಂಗ್ರೆಸೇ ತನ್ನಲ್ಲಿ ಸೇರಿಸಿಕೊಳ್ಳುವ ಆವಶ್ಯಕತೆಯು ಸಂಪೂರ್ಣವಾಗಿ ವ್ಯಕ್ತವಾಗುವುದು. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ಸು, ಕೌನ್ಸಿಲಿನಲ್ಲಿ ಕೆಲಸ ನಡಿಸುವುದರ ವಿಷಯದಲ್ಲಿ ಸ್ಪಷ್ಟವಾದ ತೀರ್ಮಾನವನ್ನು ಕೊಡುವುದು ಉಚಿತವೆಂದು ನಮಗೆ ಅನ್ನಿಸುತ್ತಿದೆ. ಮತ್ತು ಈ ತೀರ್ಮಾನವು ಸರಕಾರದ ಮೇಲೆ ಪರಿಣಾಮಕಾರಿಯಾಗುವಂತೆ ಕಂಡುಹಿಡಿಯುವುದೂ ಅವಶ್ಯಕ. ಈ ತೀರ್ಮಾನವನ್ನು ರಿಸ್ಪೋನ್ಸಿವ್ ಕೊ-ಒಪರೇಶನ್ನಿನವರ ಎದುರಿನಲ್ಲಿ ನಿರ್ಧರಿಸುವುದು ಕಷ್ಟವಾಗಬಹುದಾದರೂ, ಅದನ್ನು ಸಂದೇಹಗಳಲ್ಲಿಯೇ ಬಿಡುವುದು ಯೋಗ್ಯವೆಂದು ನಾವು ನೆನಸುವುದಿಲ್ಲ. ಅಲ್ಲದೆ ಹಿಂದೂಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿಯನ್ನು ಪರೀಕ್ಷಿಸಿ, ರಾಜಕೀಯ ವಾತಾವರಣದಲ್ಲಿ ಜೀವಕಳೆಯನ್ನು ಹೇಗೆ ತುಂಬಬಹುದು ಎಂಬುದನ್ನು ಸೂಚಿಸಲು ಒಂದು ಕಮಿಶನನ್ನು ನೇಮಕಪಡಿಸುವುದೂ ಉತ್ತಮವೆಂದು ನಮ್ಮ ಅಭಿಪ್ರಾಯ.

ಇನ್ನು ಹಿಂದೂ-ಮುಸಲ್ಮಾನ ಪ್ರಶ್ನೆಯು ದಿವಸಹೋದಷ್ಟಕ್ಕೆ ತೀಕ್ಷ್ಣವಾಗುತ್ತಾ ಬರುವಂತಾದ್ದನ್ನು ಹೇಗೆ ಸುಧಾರಿಸಿಕೊಂಡುಹೋಗಬಹುದೆಂಬುದನ್ನೂ ಕಾಂಗ್ರೆಸಿನಲ್ಲಿ ನಿರ್ಣಯಿಸಬೇಕಾಗುವುದು ಪ್ರಕೃತಕ್ಕೆ ಹಿಂದೂ-ಮುಸಲ್ಮಾನ ಸಮಸ್ಯೆಯನ್ನು ತೀರ್ಮಾನಿಸುವುದು ಅಸಾಧ್ಯವಾಗಿ ಕಾಣುತ್ತಿದೆ. ನಮಗಾದರೂ ಪರಿಣಾಮಕಾರಿಯಾದ ಯಾವ ರಾಷ್ಟ್ರೀಯ ಉಪಾಯವೂ ತೋರುವುದಿಲ್ಲ. ರಾಷ್ಟ್ರೀಯ ಸಭೆಯಲ್ಲಿಯೂ ತೃಪ್ತಿಕರವಾದ ತೀರ್ಮಾನವು ಹೊಂದಲಾಗುವುದೆಂದು ಹೇಳಲಾಗಲಿಕ್ಕಿಲ್ಲ.

ಇನ್ನಿತರ ವಿಷಯಗಳು ಸಾಮಾನ್ಯವಾದುವುಗಳು ಪರದೇಶ ಪ್ರಚಾರದ ಪ್ರಶ್ನೆಯನ್ನು ಕಾಂಗ್ರೆಸ್ಸು ಕೈಕೊಳ್ಳಬಹುದು. ವಿಧಾಯಕ ಕಾರ್ಯಕ್ರಮವು ಪುನಃ ಮಂಜೂರಾಗಬಹುದು. ಆದರೆ ಸರಕಾರದೊಡನೆ ನಡೆಯುವ ವಿವಾದದ ತೀಕ್ಷ್ಣತೆಯು ಕಡಿಮೆಯಾಗಗೊಡದಂತೆ ನೋಡುವುದು ಮಾತ್ರ ಕಾಂಗ್ರೆಸ್ಸಿನ ಕರ್ತವ್ಯವಿದೆ.

ಸ್ಫುಟವಿಚಾರಗಳು.

ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ಸ್ವರಾಜ್ಯ ಪಕ್ಷ.

ನಮ್ಮ ಇಡೀ ಜಿಲ್ಲೆಗಾಗಿ ಒಂದು ಸ್ವರಾಜ್ಯ ಪಕ್ಷವು ಇಷ್ಟರ ತನಕ ಏರ್ಪಟ್ಟಿಲ್ಲ, ಅದರ ಆವಶ್ಯಕತೆಯು ಅನೇಕ ಸಮಯದ ಹಿಂದೆಯೇ ಅನುಭವವಾಗಿತ್ತೆಂದು ಕಾರ್ಕಳದಲ್ಲಿ ಶ್ರೀಯುತ ಶ್ರೀನಿವಾಸ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಕೂಡಿದ ಸ್ವರಾಜ್ಯ ಪಕ್ಷದ ಘಟನವೇ ಸೂಚಿಸುವುದು. ಈ ವರೆಗೆ ಕೌನ್ಸಿಲಿಗೆ ನಿಲ್ಲತಕ್ಕ ಉಮೇದ್ವಾರರು ಸ್ವೇಚ್ಛೆಯಂತೆ ತಮ್ಮ ಧೋರಣವನ್ನು ಜನರಿಗೆ ತಿಳಿಸುತ್ತಿದ್ದರು; ಮತ್ತು ಹೆಚ್ಚಾಗಿ ಸ್ವತಂತ್ರ ಜವಾಬ್ದಾರಿಯ ಮೇಲೆಯೇ ಅವರು ಕೌನ್ಸಿಲಿಗೆ ಉಮೇದ್ವಾರರಾಗಿ ನಿಲ್ಲುತ್ತಿದ್ದರು, ಮಧ್ಯದಲ್ಲಿ ಒಬ್ಬಿಬ್ಬರು ತಾವು ಸ್ವರಾಜ್ಯಪಕ್ಷದವರೆಂದೂ ಹೇಳಿಕೊಳ್ಳುತ್ತಿದ್ದರು. ಆದರೆ ಮುನ್ಸಿಪಲ್ ಚುನಾವಣೆಗಳ ಬಗ್ಗೆ ಮಂಗಳೂರಿನಲ್ಲಿ ಏರ್ಪಟ್ಟ ಮಂಗಳೂರು ತಾಲೂಕು ಸ್ವರಾಜ್ಯ ಪಕ್ಷವು ಈ ವರೆಗೆ ಸಾಕಷ್ಟು ಕೆಲಸ ಮಾಡಿದೆಯೆಂದೂ, ಮುನ್ಸಿಪಾಲಿಟಿಯಲ್ಲಿ ಖಾಲಿದಿದ್ದ ಜಾಗಗಾಗಿ ಅವರು ಸಾಹಸಪಟ್ಟುದ್ದು ಪ್ರಶಂಸನೀಯವೆಂದೂ ಹೇಳಬೇಕು. ಈಗ ಮಂಗಳೂರು ತಾಲೂಕು ಸ್ವರಾಜ್ಯ ಪಕ್ಷದ ಕಾರ್ಯದರ್ಶಿಯವರಾದ ಶ್ರೀ|| ರಾಮಕೃಷ್ಣ ಕಾರಂತರು ಜಿಲ್ಲಾ ಸ್ವರಾಜ್ಯ ಪಕ್ಷದ ಸಂಘಟನೆಗಾಗಿ, ಜಿಲ್ಲೆಯವರನ್ನು ಆಮಂತ್ರಿಸಿರುವರು. ಶ್ರೀಯುತ ಕಾರಂತರ ಪ್ರಯತ್ನಗಳು ಸ್ತುತ್ಯವಾಗಿವೆ, ಆದರೆ ಮಂಗಳೂರು ಸ್ವರಾಜ್ಯ ಪಕ್ಷದ ಪ್ರಕಟಣಾ ಪತ್ರಿಕೆಯಿಂದ, ಸ್ವರಾಜ್ಯ ಪಕ್ಷಕ್ಕೆ ಕೌನ್ಸಿಲಿಗೆ ಉಮೇದ್ವಾರರನ್ನು ನಿಲ್ಲಿಸುವುದಲ್ಲದೆ ಬೇರೆ ಕೆಲಸವೇ ಇಲ್ಲವೆಂದು ತಿಳಿಯಬೇಕಾಗುತ್ತದೆ, ಅದರಲ್ಲೂ ಡಾ. ರಾಮರಾಯರು ಕೌನ್ಸಿಲ್ ಒಫ್ ಸ್ಟೇಟಿಗೆ ಆರಿಸಲ್ಪಟ್ಟ ಮೇಲೆ, ಅವರ ಸ್ಥಾನಕ್ಕೆ ಉಮೇದ್ವಾರರು ಅರ್ಜಿಹಾಕಬೇಕಿದ್ದ ೧೮ನೇ ತಾರೀಕಿನ ಒಂದು ದಿನ ಮುಂಚೆ ಈ ಪಕ್ಷದ ಸಭೆಯನ್ನು ಅವಸರವಾಗಿ ಕರೆದದು ನೋಡಿದರೆ ನಿಜವಾಗಿಯೂ ಪಕ್ಷದ ಕೆಲಸವು ಬರೇ ಉಮೇದ್ವಾರರನ್ನು ನಿಲ್ಲಿಸುವುದಾಗಿದೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ.

ಈ ತಪ್ಪು ಅಭಿಪ್ರಾಯವನ್ನು ಎಲ್ಲರೂ ದೂರಮಾಡಿ ಸ್ವರಾಜ್ಯ ಪಕ್ಷವು ಒಂದು ದೃಢವಾದ ಮತ್ತು ಬಲವಾದ ಸಂಸ್ಥೆಯೆಂದು ಸ್ಥಾಪಿಸಲ್ಪಡುವುದು ಅಗತ್ಯ. ಸ್ವರಾಜ್ಯ ಪಕ್ಷದ ಕೆಲಸವು ಬೇರೆ ಉಮೇದ್ವಾರರನ್ನು ನೇಮಿಸುವುದಲ್ಲ. ಅವರು ಚುನಾಯಿಸಲ್ಪಡುವಂತೆ ಪ್ರಯತ್ನಗಳನ್ನು ಮಾಡುವಷ್ಟು ಶಕ್ತಿವಂತವಾಗಬೇಕು. ಮಾತ್ರವಲ್ಲದೆ, ಜನರಲ್ಲಿ ಪ್ರಚಾರ ಕೆಲಸವನ್ನು ಮಾಡಿ ಒಂದು ಸಚೇತನ ಸಂಸ್ಥೆಯೆಂದು ಜನರಲ್ಲಿ ಅಭಿಮಾನಹುಟ್ಟಿಸಬೇಕು. ಅಲ್ಲದೆ ತಮ್ಮ ಕಡೆಯಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಸ್ವರಾಜ್ಯಪಕ್ಷದ ಧೋರಣಕ್ಕೆ ವ್ಯತಿರಿಕ್ತವಾಗಿ ನಡೆಯದಂತೆಯೂ ನೋಡಿಕೊಳ್ಳಬೇಕು. ಜನತೆಯ ಆವಶ್ಯಕತೆಗಳನ್ನು ತಿಳಿದು ತಮ್ಮ ಪ್ರತಿನಿಧಿಗಳ ಮೂಲಕ ಅವನ್ನು ಸಾಧಿಸಬೇಕು. ಇಷ್ಟೆಲ್ಲ ಜವಾಬ್ದಾರಿಯನ್ನು ತಿಳಿದರೇನೇ ಸ್ವರಾಜ್ಯಪಕ್ಷವು ಪರಿಣಾಮಕಾರಿಯಾದ ಸಂಸ್ಥೆಯಾದೀತು, ಅಲ್ಲದೆ ಬರೇ ಉಮೇದ್ವಾರರ ಜ್ಯಾಹೀರಾತಿಗಾಗಿಯೇ ಇದು ಕೆಲಸಮಾಡುವುದಾದರೆ ಸಂಸ್ಥೆಯ ಪ್ರಯೋಜನವು ಹೆಚ್ಚಾಗಲಿಕ್ಕಿಲ್ಲ, ಇವೆಲ್ಲ ವಿಷಯಗಳನ್ನು ಲಕ್ಷಿಸಿ, ನಿಜವಾಗಿ ಜನರೊಳಗೆ ಕೆಲಸಮಾಡಲು ಶಕ್ತಿಯುಳ್ಳ ಜನರನ್ನು ಕೂಡಿಸಿ ಈ ಜಿಲ್ಲಾ ಸಂಸ್ಥೆಯನ್ನು ಏರ್ಪಡಿಸುವರಾಗಿ ನಾವು ಆಶಿಸುತ್ತೇವೆ.

ಹತ್ತಿಮೇಲಿನ ಸುಂಕವನ್ನು ಸರಕಾರವು ಏಕೆ ತೆಗೆದುಹಾಕಿತು?

ಸರಕಾರವು ಹಿಂದೂಸ್ಥಾನದ ಗಿರಣಿಗಳ ಮೇಲಿನ ಕರವನ್ನು ತೆಗೆದು ಹಾಕಿದುದು ಏಕೆ ಎಂದು ಬಿ. ಎಫ್. ಭರುಚಾರವರು ಹೀಗೆ ಚರ್ಚಿಸುತ್ತಿರುವರು:—

(೧) ಸರಕಾರವು ಕರವನ್ನು ತೆಗೆದು ಹಾಕಿದುದು ಗಿರಣಿ ಮ್ಯಾಲೀಕರ ನಿರ್ಧಾರದ ಪರಿಣಾಮವಾಗಿಯೊ? ಅಲ್ಲ.

(೨) ಬಡ ಕೂಲಿಗಾರರ ಮುಷ್ಕರದಿಂದ ಅವರಿಗೆ ಉಂಟಾದ ಕಷ್ಟಗಳ ಮೇಲಿನ ಕನಿಕರದಿಂದಲೊ? ಅಲ್ಲ.

(೩) ಎಸಂಬ್ಲಿಯ ಠರಾವಿಗೆ ಅನುಗುಣವಾಗಿಯೊ? ಅಲ್ಲ.

(೪) ಗಿರಣಿ ಮ್ಯಾಲಿಕರ ಡೆಪ್ಯುಟೇಶನುಗಳ ಮತ್ತು ಹಿಂದೀ ಸಾಹುಕಾರರ ಸಂಘದ ವಶ್ಲಾಯಕ್ಕಾಗಿಯೊ? ಅಲ್ಲ.

(೫) ಮುಂಬಾಯಿ ಗವರ್ನರರು ವ್ಯಾಪಾರಿಯರೊಡನೆ ವಶ್ಲಾಯಪಡುದುದರಿಂದಲೊ? ಅಲ್ಲ.

ಶ್ರೀಯುತ ಭರೂಚಾರವರು ಕರವನ್ನು ಏಕೆ ತೆಗೆದು ಹಾಕಿದುದೆಂಬುದರ ವಿಷಯ ಹೀಗೆ ತರ್ಕಿಸಿ, ನಿಜವಾದ ಕಾರಣಗಳನ್ನು ಕೆಳಗಿನಂತೆ ಕಂಡು ಹಿಡಿದಿದ್ದಾರೆ:—

(೧) ಎಕ್ಸೈಜ್ ರೆವನ್ಯೂ ಎಂದರೆ ಸುಂಕಗಳ ಏವೇಜು ಕಡಿಮೆ ಬಿದ್ದಿತು.

(೨) ಕಲ್ಲಿದ್ದಲ್ಲು, ಹತ್ತಿ, ನೂಲು, ವಸ್ತ್ರ ಇವುಗಳ ತಿರುಗಾಟವು ನಿಂತುದರಿಂದ ರೈಲ್ವೆ ಹುಟ್ಟುವಳಿ ಕಡಿಮೆಯಾಯಿತು.

(೩) ಗಿರಣಿಗಳಿಗೆ ಆಗಾಗ ಬೇಕಾಗುವ ಮ್ಯಾಲುಗಳ ಆಮದು ನಿಂತುಹೋಗಿ ಅದರಿಂದ ಸುಂಕವು ಸಿಕ್ಕದೆ ಸರಕಾರೀ ಆದಾಯವು ಕಡಿಮೆಯಾಯಿತು.

(೪) ಗಿರಣಿ ಮ್ಯಾಲೀಕರು, ಏಜಂಟರು, ಹತ್ತಿ ಮತ್ತು ವಸ್ತ್ರದ ಸಾಹುಕಾರರು, ಮೆಶಿನ್ ವ್ಯಾಪಾರಸ್ಥರು ಇವರೆಲ್ಲರ ಆದಾಯ ಕಡಿಮೆ ಆಗಿ ಇನ್ಕಮ್ ಟೆಕ್ಸ ಕೊಡಲೊಪ್ಪಲಿಲ್ಲ.

(೫) ಬೆಂಕ ಮತ್ತು ಇತರ ಏಲಾಯತಿ ಜನರು ತಮ್ಮ ವಹಿವಾಟುಗಳು ಮಂದಿಯಾದುವೆಂದು ಬೊಬ್ಬಿಟ್ಟರು.

(೬) ಮುಂಬಾಯಿಯ ವ್ಯಾಪಾರವು ಕಡಿಮೆ ಬಿದ್ದುಹೋದುದರಿಂದ ಬ್ರಿಟಿಷ ವ್ಯಾಪಾರಸ್ಥರು ಬೊಬ್ಬಿಟ್ಟರು.

ವಾಚಕರು ಸರಕಾರದ ಔದಾರ್ಯವನ್ನು ಈ ಮೂಲಕ ತಿಳಿದುಕೊಳ್ಳಬಹುದು!

ಮೆಡಿನಾ ಪಟ್ಟಣವು ಇಬ್ನಸೌದನ ವಶವಾಯಿತು.

ಹಲವು ತಿಂಗಳುಗಳ ನಂತರ ಕಟ್ಟ ಕಡೆಗೆ ಮೆಡಿನಾ ಪಟ್ಟಣವು ಇಬ್ನಸೌದನಿಗೆ ಶರಣಾಗತವಾಯಿತು. ಮೆಡಿನಾ ಪಟ್ಟಣವು ಮುಸಲ್ಮಾನರಿಗೆ ಅತೀ ಪವಿತ್ರವಾದ ಪಟ್ಟಣವಾಗಿದೆ. ಇದರಲ್ಲಿ ಅತ್ಯಾಚಾರಗಳು ನಡೆದುವೆಂದರೆ ಇಡೀ ಮುಸಲ್ಮಾನ ಪ್ರಪಂಚವು ತಮ್ಮ ಮತಕ್ಕೆ ಹಾನಿ ಬಂತೆಂದು ತಿಳಿಯುವುದು. ಆದುದರಿಂದ ಇಬ್ನಸೌದನು ಪಟ್ಟಣಕ್ಕೆ ಏನೊಂದೂ ಬಾಧಕ ಬಾರದಂತೆ ನೋಡಿ ಅದನ್ನು ಕೈವಶಮಾಡಿಕೊಳ್ಳಲಿಕ್ಕಿತ್ತು. ಗುಂಡುಗಳನ್ನು ಹಾರಿಸುವುದು ಈ ಕಾರಣದಿಂದ ಅಸಾಧ್ಯವಾಗಿತ್ತು. ಆದುದರಿಂದ ಇಬ್ನಸೌದನು ಶಾಂತವಾಗಿ ಅದನ್ನು ಮುತ್ತಿ ಕುಳಿತುಬಿಟ್ಟನು. ಹಿಂದೂಸ್ಥಾನದಲ್ಲಿ ಅವನ ವಿರೋಧವಾಗಿ ಅವನು ಮೆಡಿನಾಕ್ಕೆ ಗುಂಡು ಹಾರಿಸಿ ಕೆಲವು ಘೋರಿಗಳನ್ನು ಕೆಡವಿದನೆಂದು ಸುಳ್ಳು ವರ್ತಮಾನಗಳು ಹಬ್ಬಿದುವು. ಖಿಲಾಫತ ಕಮಿಟಿಯು ಇಬ್ನಸೌದನ ಮೇಲೆ ಸಹಾನುಭೂತಿಯುಳ್ಳದಾಗಿತ್ತು. ಇತರ ಹಿಂದೀ ಮುಸಲ್ಮಾನರು ಅವನ ವಿರೋಧವಿದ್ದರು. ಹೀಗಾಗಿ ಮುಸಲ್ಮಾನರೊಳಗೇನೇ ಈ ವಿಷಯದಲ್ಲಿ ವಿವಾದ ಬಿದ್ದಿತು. ಆದರೆ ಇಬ್ನಸೌದನು ಖಿಲಾಫತ್ ಕಮಿಟಿಯ ಆಶಯಗಳನ್ನು ರಕ್ಷಿಸಿದನು ಮತ್ತು ಮೆಡೀನ ಪಟ್ಟಣಕ್ಕೆ ಯಾವದೊಂದು ಹಾನಿತಟ್ಟದಂತೆ ನೋಡಿ ಅದನ್ನು ಕೈವಶಮಾಡಿಕೊಂಡನು. ಇಬ್ನಸೌದನು ಅತೀ ಉದಾರ ಮನಸ್ಸಿನವನೆಂದು ವರ್ತಮಾನವಿದೆ, ಅವನು ಮುಸಲ್ಮಾನರ ಆಶಯಗಳನ್ನು ಇನ್ನು ಮುಂದೆಯೂ ಮಾನಿಸುವನೆಂದು ನಾವು ಅಪೇಕ್ಷಿಸುವೆವು.

ಪರ್ಶಿಯಾ ದೇಶದಲ್ಲಿ ಹೊಸ ರಾಜಮನೆತನ.

ಪರ್ಶಿಯಾವನ್ನು "ಶಾ" ಎಂಬ ಹೆಸರಿನಿಂದ ರಾಜಮನೆತನದವರು ಆಳುತ್ತಿದ್ದರು. ಪೂರ್ವಕಾಲದಲ್ಲಿನ ಇವರ ಕ್ರೂರತನವು ಹೆಸರು ಹೋಗಿಯದೆ. ತಮ್ಮ ಅಧಿಕಾರವನ್ನು ಬಲಪಡಿಸಲಿಕ್ಕೆ ಈ ವಂಶದವರು ಪೂರ್ವದಲ್ಲಿ ಸಾವಿರಾರು ಜನರಿಗೆ ಅನ್ಯಾಯವಾದ ಪೀಡೆಗಳನ್ನು ಕೊಟ್ಟಿದ್ದರು. ಕಣ್ಣು ಕುಕ್ಕಿಸುವುದು, ಕೈ ಕತ್ತರಿಸುವುದು, ಜೈಲಿನಲ್ಲಿ ಹಾಕಿ ಆಹಾರ ಕೊಡದೆ ಉಪವಾಸವಿಟ್ಟು ಕೊಲ್ಲುವುದು ಇವೇ ಮೊದಲಾದ ಅನಾಚಾರಗಳಲ್ಲಿ ಈ ವಂಶದವರು ತಮ್ಮ ಅಧಿಕಾರಗಳನ್ನು ಸ್ಥಾಪಿಸಿದರು. ಕಳೆದ "ಶಾ"ನು ಗತಿಸಿದಾಗ ಅವನ ಮಗನು ಬರೇ ಚಿಕ್ಕ ಪ್ರಾಯದವನಾಗಿದ್ದನು. ಈ ಮಗನನ್ನು ತಾಯಿಯು ಬಹಳ ಪ್ರೀತಿಯಿಂದ ಬೆಳೆಸಿದ್ದಳು. ಮಗನು ಮೈಯಲ್ಲಿ ಅಗಲವಾಗಿಯೂ, ಗಿಡ್ಡನೂ ಆಗಿ ಭೋಗಾಭಿಲಾಷಿಯಾಗಿದ್ದನು. ಪ್ರಾಯ ಸಮರ್ಥನಾಗುವ ಸಮಯದಲ್ಲಿ ಇವನು ಯುರೋಪಿನ ಸಂಚಾರಕ್ಕೆ ಹೋದನು. ಇವನು ಕುದುರೆ ಜೂಜಿನಲ್ಲಿಯೂ, ವ್ಯಭಿಚಾರದಲ್ಲಿಯೂ, ದುಸ್ಸಂಗಗಳಲ್ಲಿ ಆಸಕ್ತನಾದನು. ಪರ್ಶಿಯದ ಪಾರ್ಲಿಮೆಂಟು ಅವನನ್ನು ದೇಶವನ್ನಾಳಲು ಕರೆಕಳುಹಿಸಿತು. ಪ್ಯಾರಿಸಿನ ಭೋಗಮಂದಿರಗಳನ್ನು ತ್ಯಜಿಸಲು ಅವನು ಒಪ್ಪಲಿಲ್ಲ. ಬದಲಿಗೆ ಅವನು ಖರ್ಚಿಗೆ ಹೆಚ್ಚು ಹಣ ಕೇಳಿಕಳುಹಿಸಲು ಹೇಳಿ ಕಳುಹಿಸಿದನು, ಈ ಸಮಯದಲ್ಲಿ ಸರ್ ರೇಜಾಖಾನ್ ಪಹಲೇವಿ ಎಂಬವನು ಪ್ರಾಮುಖ್ಯತೆಗೆ ಬಂದಿದ್ದನು. ಇವನ ಮುಖಂಡತನದಲ್ಲಿ ಪರ್ಶಿಯಾದ ಪಾರ್ಲಿಮೆಂಟು ಶಾನ ಈ ವರ್ತನದಿಂದ ಬೇಸತ್ತು, ಅವನನ್ನು ಸಿಂಹಾಸನದಿಂದ ತಳ್ಳಿಹಾಕಿತ್ತು. ಇತ್ತೀಚೆಗೆ ಸರ್ ರೇಜಾಖಾನ್ ಪೆಹ್ಲವಿ ಎಂಬವನೇ ರಾಜನಾಗಿ ಅಭಿಷಿಕ್ತನಾಗಿರುವನು. ಮತ್ತು ರಾಜತ್ವವು ಅವನ ನಂತರ ಅವನ ಮಕ್ಕಳಿಗೆ ಹೋಗುವುದು. ಪರ್ಶಿಯಾ ದೇಶವು ಇನ್ನೊಬ್ಬ ರಾಜನನ್ನು ಮಾಡಿದುದಾಗಲಿ, ಮಾಡಿದ ಮೇಲೆ ಅದರ ಹಕ್ಕನ್ನು ಕುಟುಂಬ ಪಾರಂಪರ್ಯಕ್ಕೆ ಕೊಟ್ಟುದುದಾಗಲಿ ಎರಡೂ ತಪ್ಪಾಗಿದೆ. ಪಾಶ್ಚಾತ್ಯ ರಾಜಕ್ರಮದಂತೆ ಅಧ್ಯಕ್ಷನನ್ನಾರಿಸಿ, ಪ್ರಜಾಸತ್ತಾತ್ಮಕ ರಾಜ್ಯಾಡಳಿತೆಯಾಗಿ ಮಾಡಿದ್ದರೆ ಒಳ್ಳೆದಿತ್ತು.

ದಕ್ಷಿಣ ಆಫ್ರಿಕದಲ್ಲಿ ಹಿಂದೀಯರ ಪರಿಸ್ಥಿತಿ.

ದಕ್ಷಿಣ ಆಫ್ರಿಕದ ಬಿಳಿಯವರ ಸರಕಾರವು ಎಂದಿನಂತೆಯೇ ನಿರಾತಂಕವಾಗಿ ತನ್ನ ಹಿಂದೀಯ ವಿರುದ್ಧವಾದ ಧೋರಣವನ್ನು ಮುಂದರಿಸುತ್ತಿದೆ. ಹಿಂದೀಯರ ಕಷ್ಟಗಳೂ, ಅವಮಾನಗಳೂ ದಿನೇ ದಿನೇ ಬೆಳೆಯುತ್ತ ಬರುತ್ತಿವೆ. ಈ ಪ್ರಭೇದವನ್ನು ಎಷ್ಟು ಬೆಳೆಸಿ ಹಿಂದೀಯರು ಎಷ್ಟು ಹೀನಿಸಲ್ಪಡುವರೋ, ಬಿಳಿಯವರು ಅಷ್ಟು ತಮ್ಮ ದಾನವ ತೃಪ್ತಿಯನ್ನು ತೋರಿಸುತ್ತಿರುವರು. ಇಂಗ್ಲೆಂಡಿನಲ್ಲಿ ಮಜೂರಿ ಪಕ್ಷವಾಗಲಿ, ಉದಾರಪಕ್ಷವಾಗಲಿ, ಕನ್ಸರ್ವೇಟಿವ್ ಪಕ್ಷವಾಗಲಿ ಎಲ್ಲವೂ ಸಾಮ್ರಾಜ್ಯ ವಿಸ್ತಾರವೆಂಬ ದೊಡ್ಡ ಸ್ವಾರ್ಥಪರ ಅನುಭೂತಿಯಿಂದ ಇದೆಲ್ಲವನ್ನು ನೋಡುತ್ತ, ಕಣ್ಣುಮುಚ್ಚಾಟವನ್ನು ಆರಂಭಿಸಿಯದೆ. ಹಿಂದೂಸ್ಥಾನದ ಸರಕಾರದಲ್ಲಿಯೂ ಈ ಸಮಸ್ಯೆಯನ್ನು ಪರಿಶೋಧಿಸಲು ಬೇಕಾದ ಶಕ್ತಿಯು ಖಂಡಿತ ಇದೆಯಾದರೂ, ಅಂತರ್ಯದಲ್ಲಿ ಹಿಂದೀಯರ ಯಜಮಾನ ಸಹಾನುಭೂತಿಯು ಬಿಳಿಯವರೊಡನಿದ್ದು ಹಿಂದೀಯರ ಮೇಲಿನ ಅನ್ಯಾಯವು ಅವಿರೋಧವಾಗಿ ನಡೆಯುತ್ತಿದೆ, ಹಿಂದೀ ಸರಕಾರವು ದಕ್ಷಿಣ ಆಫ್ರಿಕದ ಸರಕಾರದೊಡನೆ ಕೇಳಿಕೊಂಡ ರಾಜಿಪಂಚಾಯಿತಿಕೆಗೆ ಕೂಡ ದಕ್ಷಿಣ ಆಫ್ರಿಕದ ಸರಕಾರಕ್ಕೆ ಒಪ್ಪಿಗೆ ಇಲ್ಲ. ಇಷ್ಟು ನಿರ್ದಾಕ್ಷಿಣ್ಯವಾಗಿ ಆಫ್ರಿಕದ ಸರಕಾರವು ವರ್ತಿಸಿದರೂ, ಹಿಂದೀ ಸರಕಾರವು ಈ ಸಮಸ್ಯೆಯ ತೀರ್ಮಾನಕ್ಕಾಗಿ ಬರೇ ಒಂದು ಶಕ್ತಿಹೀನವಾದ ಡೆಪ್ಯುಟೇಶನನ್ನು ಕಳುಹಿಸುವುದನ್ನು ನೋಡಿದರೆ, ಈ ಡೆಪ್ಯುಟೇಶನ್ನಿನ ಉದ್ದೇಶವು ಜನರ ಕಣ್ಣಿನಲ್ಲಿ ಮಣ್ಣು ಹಾಕುವ ಉಪಾಯವಾಗಿದೆ ಎಂದು ತಿಳಿದುಕೊಳ್ಳದೇ ಕಾಗುತದೆ.

ಹಿಂದೂಸ್ಥಾನಕ್ಕೆ ಬಂಗಾರದ ನಾಣ್ಯದ ಆವಶ್ಯಕತೆ.

ಹಿಂದೂಸ್ಥಾನಕ್ಕೆ ಬಂಗಾರದ ನಾಣ್ಯದ ಚಲಾವಣೆಯು ಅಗತ್ಯವೆಂದು ಯುದ್ಧವು ಆರೈರಿಯಾದಂದಿನಿಂದ ವ್ಯಾಪಾರದ ಸಂಘಗಳು ವಶ್ಲಾಯಪಡಿಸುತ್ತಾ ಇವೆ. ಬಂಗಾರದ ನಾಣ್ಯವು ಏಕೆ ಅವಶ್ಯ, ಅದರಿಂದ ಹೇಗೆ ಹಿಂದೀಯರ, ಇತರ ಜನಾಂಗದೊಡನಿರುವ ವಹಿವಾಟುಗಳಿಗೆ ಪ್ರಯೋಜನವಾಗುತ್ತಿದೆ ಎಂಬಿವುಗಳ ವಿಷಯ ಈ ಮೊದಲಿನ ಒಂದು ಲೇಖದಲ್ಲಿ ನಾವು ಸೂಚಿಸಿರುವೆವು. ಕೆಲವು ವರ್ಷಗಳ ಹಿಂದೆ ನೇಮಕವಾಗಿದ್ದು ವರದಿಯನ್ನಿತ್ತ ಕರೆನ್ಸಿ ಕಮಿಶನ್ನಿನಲ್ಲಿ ಒಬ್ಬನೇ ಒಬ್ಬ ಹಿಂದೀ ಮೆಂಬರನಾಗಿದ್ದ ಮಿ|| ದಲಾಲರು ಇದರ ಪ್ರಯೋಜನಗಳನ್ನು ಸ್ಪಷ್ಟೀಕರಿಸಿದ್ದರು. ಆದರೆ ಆ ವರದಿಯನ್ನು ಸರಕಾರವು ಮಾನಿಸಲಿಲ್ಲ. ಮುಂಬಾಯಿಯ ಹಿಂದೀ ವರ್ತಕ ಸಂಘವು ಕಳೆದ ತಾ. ೧೧ರಲ್ಲು ಈ ಪ್ರಕಾರವೇ ಸರಕಾರಕ್ಕೆ ಮನವಿ ಮಾಡಿಕೊಂಡದೆ, ಅಲ್ಲದೆ ಎಕ್ಸ್‌ಚೇಂಜ್ ಅಂದರೆ ಅಂತರಾಷ್ಟ್ರೀಯ ನಾಣ್ಯಗಳೊಳಗಿನ ಬೆಲೆಯ ನಿರ್ಮಾಣದಲ್ಲಿ ಸರಕಾರವು ಕೈಹಾಕಬಾರದಾಗಿಯೂ ಅವರ ವಶ್ಲಾಯವಿದೆ. ಮುಖ್ಯ ಅಭಿಪ್ರಾಯವೇನೆಂದರೆ, ಸರಕಾರವು ತನ್ನಿಚ್ಛೆಯಂತೆ ಪವನು ಮತ್ತು ರೂಪಾಯಿಯೊಳಗಿನ ಬೆಲೆಯ ಸಂಬಂಧವನ್ನು ಹೆಚ್ಚು ಕಡಿಮೆ ಪಡಿಸಿ ದೇಶದೊಳಗಿನ ವ್ಯಾಪಾರಕ್ಕೂ, ಹಿಂದೂಸ್ಥಾನ ಮತ್ತು ಇತರ ದೇಶಗಳೊಳಗಿನ ವಹಿವಾಟಗಳಿಗೂ ಬಹಳ ತೊಂದರೆಕೊಡುತ್ತಿದೆ. ಇಂತಹುದು ನಡಿಯಬಾರದಾಗಿ ಹಿಂದೀ ವರ್ತಕರೆಲ್ಲರ ಆಗ್ರಹವಿದೆ. ಹಿಂದೀ ಸರಕಾರವು ಇದನ್ನು ಬೇಗನೇ ಮಾನಿಸಬೇಕು. ಅದು ಏನು ಮಾಡುವುದೊ ಎಂದು ನಾವು ನಿರೀಕ್ಷಿಸುತ್ತೇವೆ. ಕಮಿಶನ್ನಿನ ವರದಿಯು ಬೇಗ ಬರಬಹುದಾಗಿ ಹಾರೈಸುತ್ತೇವೆ.

ಬ್ರಿಟಿಷ ಹಡಗಗಳೂ ಹಿಂದೀ ಕೈಗಾರಿಕೆಗಳೂ.

ಪಿ. ಎಂಡ್ ಒ. ಕಂಪೆನಿಯೆಂದರೆ ಬ್ರಿಟಿಷರ ಸ್ಟೀಮರು ಕಂಪೆನಿ. ಇದರ ಹಡಗಗಳು ಇಡೀ ಭೂಲೋಕವನ್ನು ಸುತ್ತುತ್ತಿವೆ. ಈ ಹಡಗುಕಂಪೆನಿಯ ಮೀಟಿಂಗು ಲಂಡನಿನಲ್ಲಿ ಕಳೆದ ತಾ. ೯ರಲ್ಲಿ ಲೋರ್ಡ ಇಂಚಕೇಪರ ಅಧ್ಯಕ್ಷತೆಯಲ್ಲಿ ಜರಗಿತು. ಆ ಸಮಯದಲ್ಲಿನ ಲೋರ್ಡ ಇಂಚಕೇಪರ ಭಾಷಣವು ವಿಷಯಗರ್ಭಿತವಾಗಿದ್ದಿತು. ಅವರು ಹಿಂದುಸ್ಥಾನದ ವಿಷಯವಾಗಿ ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

"ಕೃಷಿ ವ್ಯವಸಾಯದ ದೇಶವಾದ ಹಿಂದೂಸ್ಥಾನವು ನಮ್ಮ ಕಾರಖಾನೆ ಸಾಮಾನುಗಳ ಮೇಲೆ ಸುಂಕವನ್ನು ಹೊರಿಸಿ ಒಳಗೆ ಬಾರದಂತೆ ಮಾಡಲು ಪ್ರಯತ್ನಿಸುತ್ತಿದೆ. ಅವರು ಬ್ರಿಟಿಷ ಕಲ್ಲಿದ್ದಲ್ಲಿನ ಮೇಲೆ ಸುಂಕಹೊರಿಸುವ ಯೋಚನೆಯಲ್ಲಿದ್ದಾರೆ. ಹಿಂದೂಸ್ಥಾನವೂ ಡೊಮಿನಿಯನ್ನುಗಳೂ ತಮಗೆ ಬೇಕಾದ ಎಲ್ಲಾ ಸಾಮಾನುಗಳನ್ನೂ ತಾವೇ ತಯಾರಿಸಿ ಹೊರಗಿನ ಸಾಮಾನುಗಳನ್ನು ಮುಚ್ಚಿಲಿಡುವಂತೆ ತೋರುತ್ತಿದೆ".

ಇದರಿಂದ ಹಿಂದೀ ಕೈಗಾರಿಕೆಗಳು ಪರದೇಶಗಳ ಸ್ಪರ್ಧೆಯಿಂದ ರಕ್ಷಿಸುವುದರಿಂದ ಬ್ರಿಟಿಷರಿಗೆ ಉಂಟಾಗುವ ಹಾನಿಯು ವ್ಯಕ್ತವಾಗುತ್ತಿದೆ. ಅದರಿಂದ ಬ್ರಿಟಿಷ ಕೈಗಾರಿಕೆಗಳಿಗೆ ಬಾಯಿಸು ಕಡಿಮೆಯಾಗುತ್ತದೆ ಮಾತ್ರವಲ್ಲದೆ ಬ್ರಿಟಿಷ ಹಡಗು ಪಡೆಗಳು ಕೆಲಸವಿಲ್ಲದೆ ಉಪವಾಸವಿರಬೇಕಾಗುತ್ತದೆ. ಇದರಿಂದ ಸರಕಾರವು ಹಿಂದೀ ಕೈಗಾರಿಕೆಗಳನ್ನು ಬೆಳೆಸುವದಕ್ಕೆ ಏಕೆ ಹೆದರುವುದೆಂಬುದು ಸ್ಪಷ್ಟವಾಗಿ ತಿಳಿಯುವುದು.

ಬಂಗಾಳದ ಕೈದಿಗಳು.

ಬಂಗಾಳ ಕೈದಿಗಳು ಬಂಗಾಳ ಸರಕಾರದ ಮೇಲಿನ ಅಳಿಸಲಾಗ ಕಲಂಕವಾಗಿ ನಿಂತಿದೆ. ಏನೊಂದು ವಿಚಾರಣೆಯಿಲ್ಲದೆ, ಸ್ವಾರ್ಥವಿದ್ದ ಪೋಲೀಸರ ಗುಟ್ಟಿನ ವಾರ್ತೆಯ ಮೇಲೆ ಅಪರಾಧಿಗಳೊ ನಿರಪರಾಧಿಗಳೊ ಎಲ್ಲರನ್ನೂ ಜೈಲಿನಲ್ಲಿ ದುಬ್ಬುವುದು ಯಾವ ಸುಧಾರಿತ ದೇಶದಲ್ಲಿಯೂ ಆಚರಿಸಲ್ಪಡುವುದೆಂದು ಹೇಳಲಾಗುವುದಿಲ್ಲ. ಪೋಲೀಸರು ತಮ್ಮ ಸಂಬಳಕ್ಕೆ ತಕ್ಕ ಕೆಲಸವನ್ನು ತೋರಿಸಲೇಬೇಕಾಗುತ್ತದೆ. ಅದಕ್ಕಾಗಿ, ತಮ್ಮ ಮೇಲ್ವಿಚಾರಕರ ಸದಭಿಪ್ರಾಯಕ್ಕೆ ಪಾತ್ರರಾಗುವ ಬಗ್ಗೆ ಈ ಪೋಲೀಸರು ಸ್ವೇಚ್ಛೆಯಂತೆ ಕಲ್ಪನೆಯ ಸಂಚುಗಳನ್ನು ರಚಿಸುವುದು ಯಾರಿಗೂ ತಿಳಿಯದಿರುವ ವಿಷಯವಲ್ಲ. ಅದರಲ್ಲೂ ಒಂದು ಪ್ರತ್ಯೇಕ ನಮೂನೆಯ ಕೈದಿಗಳನ್ನು ಹುಡುಕುವ ಬಗ್ಗೆ ನೇಮಿಸಲ್ಪಡುವ ಗುಪ್ತ ಪೋಲೀಸರಿಗೆ ನಿಜವಾದ ಕೈದಿಯು ಸಿಕ್ಕದಿದ್ದರೆ, ಮೇಲಾಫೀಸರರ ಹೆದರಿಕೆಗೆ ಕಲ್ಪನೆಯ ಕೈದಿಯನ್ನು ತಯಾರಿಸುವುದು ಅವಶ್ಯವೇ ಆಗುತ್ತಿದೆ. ನಿಷ್ಪಕ್ಷಪಾತಿಗಳಾದ ನ್ಯಾಯಾಧೀಶರೇ ಇದರ ಗುಟ್ಟನ್ನು ಹೊರತಳ್ಳಬೇಕಾಗುತ್ತದೆ. ಅಲ್ಲದೆ ಈ ಸರಕಾರ ವರ್ತನವನ್ನು ಯಾರೂ ಸಾಧುವೆಂದು ಹೇಳಲಾರರು.

ಮಂಗಳೂರು.

ರೆವಿನ್ಯೂ ಡಿವಿಜನಲ್ ಆಫೀಸಿನ ಎರಡನೇ ಕ್ಲಾರ್ಕರಾದ ರಾ। ಯಂ. ಸುಬ್ರಾಯ ಕಾಮತರು ಆಕ್ಟಿಂಗ್ ಹೆಡ್ ಕ್ಲಾರ್ಕರಾಗಿಯೂ, ರೆವಿನ್ಯೂ ಇನ್ಸ್‌ಪೆಕ್ಟರ್ ರಾ। ಯಂ. ಭವಾನಿ ಶಂಕರರಾಯರು ಎರಡನೇ ಕ್ಲಾರ್ಕರಾಗಿಯೂ ನೇಮಕಹೊಂದಿರುವರು.

ಇಲ್ಲಿಯ ಪೋಲೀಸು ಸಬ್ ಇನ್ಸ್‌ಪೆಕ್ಟರರಾಗಿದ್ದು, ಮೇಲಾಧಿಕಾರಿಗಳ ಕಡೆಗಿನ ಅವಿಧೇಯತನದ ತಪ್ಪಿಗಾಗಿ ಕೆಲಸದಿಂದ ಸಸ್ಪೆಂಡ್ ಮಾಡಲ್ಪಟ್ಟಿದ್ದ ಶ್ರೀ ಕೆ. ಲಕ್ಷ್ಮೀನಾರಾಯಣ ರಾಯರನ್ನು, ಜಿಲ್ಲಾ ಸುಪರಿಂಟೆಂಡೆಂಟರು ಅವರ ಗ್ರೇಡ್ ಕಡಿಮೆಮಾಡಿ ಕಾಸರಗೋಡಿನಲ್ಲಿ ಪುನಃ ಕೆಲಸಕ್ಕೆ ನೇಮಿಸಿರುವರೆಂದು ತಿಳಿದುಬರುತ್ತದೆ.

ಕಳೆದ ಸಪ್ಟಂಬರ ತಿಂಗಳಲ್ಲಿ ಮಿಸೆಸ್ ಶ್ರೇಷ್ಠರ ಮೋಟಿರ್ ಡ್ರ್ಯಾವರನೊಬ್ಬನು, ಅವರ ೩೦೦ ರೂಪಾಯಿಗಳನ್ನು ವಂಚಿಸಿ ಎಲ್ಲಿಗೆ ಓಡಿ ಹೋಗಿದ್ದನೆಂದು ಕೆಲ ಸಮಯದ ವರೆಗೆ ತಿಳಿಯದಾಗಿತ್ತು. ಸ್ಪೆಶಲ್ ಡ್ಯೂಟಿಯ ಮೇಲಿದ್ದ ಇಲ್ಲಿಯ ಪೋಲೀಸ್ ಕನ್ಸ್ಟೇಬಲರಾದ ಕೃಷ್ಣಪ್ಪ ಎಂಬವರು ಈ ತಕ್ಸೀರುಗಾರನನ್ನು ಮುಂಬಾಯಿಯಲ್ಲಿ ಹಿಡಿದು ಕೈದುಮಾಡಿ ತಂದಿರುವರು. ಇವನು ಮುಂಬಾಯಿಯ ಒಂದು ಕನ್ವೆಂಟಿನಲ್ಲಿ ಅಕ್ಕೇಸಿಯಸ್ ಅಂಬ್ರೋಸ್ ಎಂಬ ಸುಳ್ಳು ಹೆಸರನ್ನು ತಾಳಿ ಮೋಟಿರ್ ಡ್ರ್ಯಾವರನಾಗಿದ್ದನೆಂದು ತಿಳಿದುಬರುತ್ತದೆ.

ಉಡುಪಿ ತಾಲೂಕು ಬೋರ್ಡಿನ ಅಧ್ಯಕ್ಷತನದ ಕುರಿತು ಉಂಟಾಗಿದ್ದ ವ್ಯವಹರಣೆಯು ಶ್ರೀ ಯಮ್. ವಿಠಲ ಕಾಮತರಿಗೆ ಗುಣವಾಗಿದೆ ಎಂದು ತಿಳಿದು ಬರುತ್ತದೆ.

ಇದೇ ತಿಂಗಳ ತಾ. ೨೭ಕ್ಕೆ ಕೆನರಾ ಹ್ಯಾಸ್ಕೂಲಿನ ವಾರ್ಷಿಕ ವರ್ಧಂತಿಯು ನಡೆಯಲಿದೆ. ಈ ದಿವಸ ಹಳೇ ವಿದ್ಯಾರ್ಥಿಗಳ ಸಭೆಯೂ, ನಾಟಕವೂ ಇದೆ. ಇನಾಮು ಹಂಚುವುದೇ ಮೊದಲಾದ ಸಮಾರಂಭಗಳು ಬರುವ ತಿಂಗಳ ತಾ. ೯ಕ್ಕೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ನಡೆಯಲಿರುವದು.

ಪತ್ರವ್ಯವಹಾರ.

"ಮಳೆ ಬಂದ ಕಡೆ ಕೊಡೆ ಹಿಡಿ' ಎಂಬ ನಾಣ್ಣುಡಿಯು ಕುಂದಾಪುರ ಹ್ಯಾಸ್ಕೂಲು ಮಾಜಿ ಹೆಡ್‌ಮಾಸ್ತರರೂ, ಜ್ಞಾನವೃದ್ಧರಾಗಿ ವಶಿಷ್ಠ ಸಮಾನರೆಂದು ಬಿರುದಾಂಕಿತರೂ, ಪ್ರಕೃತ ಆರ್ಯ ಸಮಾಜದ ಅಧ್ಯಕ್ಷರೂ ಆಗಿದ್ದು ಇಹಲೋಕದ ತಮ್ಮ ಯಾತ್ರೆಯನ್ನು ಮುಗಿಸಿ ವಾನಪ್ರಸ್ಥಾಶ್ರಮಿಗಳಾದ ಶ್ರೀಯುತ ಬಂಟ್ವಾಳ ರಘುನಾಥ ರಾಯರ ಈಗಿನ ವರ್ತನದಲ್ಲಿ ವ್ಯಕ್ತವಾಯಿತು. ಸದರಿಯವರು ಹೆಡ್‌ಮಾಸ್ತರರಾಗಿದ್ದಾಗ ತಮ್ಮ ಅದ್ಭುತ ವಾಕ್ಚಾತುರ್ಯವೇ ಮೊದಲಾದ ಶಕ್ತಿಸಹಾಸಗಳಿಂದ ತಮ್ಮ ದರ್ಪವನ್ನು ತೋರಿ ನಿರಂಕುಶ ಪ್ರಭುತ್ವದಿಂದ ಡಿ। ಬೋರ್ಡು ಪ್ರೆಸಿಡೆಂಟ್ ಮಹಾಶಯರ ಅಸಾಧಾರಣವಾದ ಪ್ರೇಮವನ್ನು ಸಂಪಾದಿಸಿ ತಮ್ಮ ಕಾರ್ಯಕ್ಷೇತ್ರದಲ್ಲಿ ಆಯುಷ್ಯ ತೀರಿದರೂ ಮತ್ತೆ ನಾಲ್ಕು ವರ್ಷ ಹೆಚ್ಚಿಗೆ ಆಯುಷ್ಯವನ್ನು ಡಿ। ಬೋರ್ಡು ಪ್ರೆಸಿಡೆಂಟರಿಂದ ಪಡೆದು ಕೊನೆಗೆ ನಿರ್ವಾಹವಿಲ್ಲದೆ ಕಾರ್ಯದಿಂದ ಮುಕ್ತರಾದರು. ಆಗ ಮಾತ್ರ ಅವರಿಗೆ ಶಕ್ತಿ, ಸಹನ, ದರ್ಪಗಳು ಪ್ರಯೋಜನವಲ್ಲದ ವಸ್ತುಗಳೆಂದೂ, ಪ್ರೇಮವೇ ಸಮಾಜ ಪ್ರೀತಿಯ ಸೋಪಾನವೆಂದೂ ತಿಳಿಯಿತು. ಅವರು ಅದರಂತೆ ಕುಂದಾಪುರದಲ್ಲಿ ಸ್ಥಾಪಿತವಾದ ಆರ್ಯ ಸಮಾಜದ ಅಧ್ಯಕ್ಷರಾಗಿ ನಿಂತು ಪಂಚಮೋದ್ಧಾರ ವಿಧವಾ ದುಃಖನಿವಾರಣ ಮೊದಲಾದ ಸಮಾಜ ಸೇವಾಕಾರ್ಯದಲ್ಲಿ ನಿರತರಾದದ್ದನ್ನು ನೋಡಿ ಭೀಷ್ಮಪರ್ವರೇ ಮುಂದಾಗುವುದು ಎಂದು ಜನರೆಲ್ಲಾ ಉತ್ಸಾಹದಿಂದ ಕಾಯುತ್ತಿದ್ದರು. ಮೊನ್ನೆ ಆರ್ಯ ಸಮಾಜದಲ್ಲಿ "ಬೋರ್ಡು ಮತ್ತು ಸರಕಾರಿಯಿಂದ ಗ್ರೇಂಟು ಪಡೆದು ರಿಕಗ್ನೈಜಾದ ಎಲ್ಲಾ ಶಾಲೆಗಳಲ್ಲಿಯೂ ಪಂಚಮರನ್ನು ಸೇರಿಸಬೇಕೆಂಬ ನಿರ್ಣಯವು ಸರ್ವಸಮ್ಮತಿಯಿಂದ ಪಾಸಾಯಿತು. ಅಧ್ಯಕ್ಷ ಮಹಾಶಯರೇ ಈ ನಿರ್ಣಯದ ವಿಷಯ ಮುಂದಾಳಾಗಿದ್ದರು. ಅದರಂತೆ ಇಬ್ಬರು ಪಂಚಮರನ್ನು ಕುಂದಾಪುರ ಹಿಂದೂ ಶಾಲೆಗೆ ಸೇರಿಸಬೇಕೆಂದು ಕೊಂಡುಹೋದಾಗ ಅದರ ಆಡಳ್ತೆದಾರರೂ, ಮತ್ತು ವ್ಯವಸ್ಥಾಪಕರೂ ಆದ ಮೇಲಿನ ಆರ್ಯಸಮಾಜದ ಅಧ್ಯಕ್ಷ, ಆ ನಮ್ಮ ಹಣ್ಣುಗಡ್ಡದ ಭೀಷ್ಮಾಚಾರ್ಯರು ಶಾಲೆಯನ್ನು ಮುಚ್ಚಿ, ಸಾಮಾನುಗಳನ್ನು ಏಲಂಮಾಡಿ ಕೊನೆಗೆ ತಮ್ಮ ಆರ್ಯಸಮಾಜದ ಅಧ್ಯಕ್ಷತನಕ್ಕೆ ರಾಜಿನಾಮೆ ಹಾಕಿ ಮುಂದಿನ ಶಾಲಾ ಕಟ್ಟೋಣದಲ್ಲಿ ಸಂಸಾರ ನಡಿಸಲು ಪ್ರಾರಂಭಿಸಿದ್ದಾರೆ. ಇನ್ನು ಬೇಕಾದದ್ದಂದರೆ ಭೀಷ್ಮಂಗೆ ಒಪ್ಪುವ ಅಂಬೆ. ಆ ದ್ವಾಪರದಲ್ಲೇ ಅಂಬೆಯು ಸಿಕ್ಕಿರುವಾಗ ಈ ಕಲಿಯುಗದಲ್ಲಿ ಅಂಬಾಮಯವಾಗಲಿಕ್ಕೇನೂ ಅಡ್ಡಿ ಇಲ್ಲ. ಅಂತು ನಮ್ಮ ಭೀಷ್ಮರು ಶಾಲೆ ಮುಚ್ಚಿದರೂ ಚಿಂತೆ ಇಲ್ಲ. ಆರ್ಯಸಮಾಜದ ಅಧ್ಯಕ್ಷಸ್ಥಾನಕ್ಕೆ ರಾಜಿನಾಮೆಕೊಟ್ಟರೂ ಪರ್ವಾಯ ಇಲ್ಲ. ಹೇಗಾದರೂ ಮುಂದಿನ ಕೆಲಸಕ್ಕೆ ಸಾಕಷ್ಟು ಉಪಭೀಷ್ಮರನ್ನು ಪಡೆಯಲೆಂದು ಶ್ರೀ ಭಂಗವಂತನನ್ನು ಪ್ರಾರ್ಥಿಸಿ ಇಂಥಾ ಸಮಾಜ ಸುಧಾರಕರನ್ನು ಮೃಗವೆಂದು ಕರೆಯಲೋ? ಯಾ ಮನುಷ್ಯರೆಂದು ಕರೆಯಲೋ ಎಂಬ ವಿಚಾರದಲ್ಲಿ ವಾಚಕವೃಂದವು ತಮ್ಮ ಅಭಿಪ್ರಾಯವನ್ನು ಕೊಡಲೆಂದು ಪ್ರಾರ್ಥಿಸುವ,

"ಸಮಾಜಸೇವಕ."

ಮಹಾರಾಜೇಶ್ರೀ,

ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟ ಮತ್ತು ಮೆಂಬರುಗಳ ಸನ್ನಿಧಾನಕ್ಕೆ.

ಈ ಕೆಳಗೆ ದಸ್ಕತು ಮಾಡಿರುವ ಅಮ್ಮಾರು, ಬೋಳಂತೂರು, ಮಂಚಿ ಮತ್ತು ಗೋಳ್ತಮಜ್ಲು ಗ್ರಾಮಸ್ತರು ಜಾಹೀರು ಮಾಡಿಕೊಳ್ಳುವುದೇನೆಂದರೆ:

(೧) ನಾವು ಪಾಣೆಮಂಗ್ಳೂರಿಂದ ೦-೮ ಮೈಲು ದೂರದ ವರೇಗೆ ವಾಸಿಸುವವರಾಗಿದ್ದು ನಮ್ಮ ಗ್ರಾಮಗಳಲ್ಲಿ ಪೈದಾಸ್ತು ಆಗುವ ಅಕ್ಕಿ, ಅಡ್ಕೆ, ಗೇರು ಬೀಜ, ತೆಂಗಿನಕಾಯಿ ಮತ್ತು ಕಟ್ಟಿಗೆಯ ರಫ್ತಿಗೂ, ನಮ್ಮ ಮನೆ ಖರ್ಚಿಗೆ ಬೇಕಾದ ಸಾಮಾನುಗಳ ಆಮದಿಗೂ, ಪಾಣೆಮಂಗಳೂರು, ಪುತ್ತೂರು ರಸ್ತೆಯ ೧೮। ಮೈಲು ಕಲ್ಲಿನ ಸಮೀಪದಿಂದ ಶಾಖೆಯಾಗಿ ಹೋಗುವ ಒಂದು ಮಾರ್ಗವಿದೆ. ಮಳೆಗಾಲದಲ್ಲಿ ಸುಮಾರು ೪ ತಿಂಗಳ ವರೆಗೆ ಬೇರೆ ಎಲ್ಲಾ ಹಾದಿಗಳು ನೀರಿನಿಂದ ತುಂಬಿಹೋಗುವದರಿಂದ ಈ ಗ್ರಾಮಸ್ಥರಿಗೆ, ಪಾಣೆಮಂಗಳೂರಿಗೂ ಇತರ ಕಡೆಗೂ ಹೋಗಬೇಕಾದರೆ ಈ ಮಾರ್ಗವೇ ಉಪಯೋಗಕರವಾಗಿರುತ್ತದೆ.

(೨) ಮಡಿಕೇರಿಯಿಂದ ಕಾಫಿ, ಏಲಕ್ಕಿ, ತರುವ ಕೆಲವು ಗಾಡಿಯವರು ಅವರ ಗಾಡಿಗಳ ಸಮೇತ ಸದರಿ ಗ್ರಾಮಗಳಲ್ಲಿ ವಾಸಿಸುವವರಾಗಿದ್ದು ಅವರಿಗೆ ಈ ಶಾಖೆ ಮಾರ್ಗ ಅತೀ ಅಗತ್ಯ.

(೩) ಪಾಣೆಮಂಗಳೂರಲ್ಲಿಯೂ, ಮೇಲ್ಕಾಣಿಸಿದ ಗ್ರಾಮಗಳಲ್ಲಿಯೂ ಇರುವ ಕ್ರೈಸ್ತ ಮತಸ್ಥರಿಗೆ ಕರಿಂಗಾಣದಲ್ಲಿರುವ ಒಂದೇ ಇಗರ್ಜಿಯಾಗಿದ್ದು ಅವರುಗಳಿಗೆ ಹೋಗಿಬರುವರೆ ಈ ಮಾರ್ಗವೇ ಹೆಚ್ಚಿನ ಉಪಯೋಗದ್ದಾಗಿರುತ್ತದೆ.

(೪) ಬೋರ್ಡು ಶಾಲೆಗಳಿಗೂ ಇತರ ಶಾಲೆಗಳಿಗೂ ಹೋಗುವ ಹಳ್ಳಿಗರ ಮಕ್ಕಳಿಗೆ ಈ ಮಾರ್ಗದ ಮೂಲಕವೇ ಹೋಗಿಬರುವದ್ದಾಗಿರುತ್ತದೆ. ಹೀಗಿರುತ್ತಾ ಬೋರ್ಡಿನವರು ಕಳೆದ ೩ ವರ್ಷಗಳಿಂದ ಆ ಮಾರ್ಗದ ಏನೊಂದೂ ದುರುಸ್ತಿ ನಡೆಸದೆ ಇರುವದರಿಂದ ಎಲ್ಲರಿಗೂ ಹೆಚ್ಚಿನ ಅನಾನುಕೂಲತೆಯಾಗಿರುತ್ತದೆ. ಆದ್ದರಿಂದ ಇನ್ನಾದರೂ ಹೆಚ್ಚಿನ ಸಮಯ ತೆಗೆಯದೆ ಸದರಿ ಮಾರ್ಗವನ್ನು ಜನಜಾನುವಾರುಗಳ ಆಮದುರಫ್ತಿಗೆ ಯೋಗ್ಯವಾಗುವಂತೆ ಇರಿಸಬೇಕಾಗಿ ನಮ್ಮೆಲ್ಲರ ಅಪೇಕ್ಷೆ.

ಈ ಅರ್ಜಿಗೆ ಸುಮಾರು ೫೦ ಜನರು ದಸ್ಕತು ಮಾಡಿರುತ್ತಾರೆ.

'ಸದರಿ ಗ್ರಾಮಸ್ತರಲ್ಲೊಬ್ಬ.'

ಮಂಗಳೂರು ಹಾಸನ ರೈಲುವೆ ಪುತ್ತೂರಿನಿಂದ ಹಾದುಹೋಗಬೇಕಾಗಿದೆ.

ನಾವು ಇದೇ ತಿಂಗಳ ತಾ. ೪ನೇ ಸ್ವದೇಶಾಭಿಮಾನಿಯಲ್ಲಿ ಮಂಗಳೂರು ಹಾಸನ ರೈಲುವೆಯ ಮಾರ್ಗ ಬೇಗನೆ ಸರ್ವೆ ಮಾಡಲಿಕ್ಕಿದ್ದಾರೆ ಎಂತ ವಾರ್ತೆ ಓದಿ ಹರ್ಷಿತರಾದೆವು. ನಾವು ಮಾತ್ರವಲ್ಲ, ಈ ಜಿಲ್ಲೆಯಲ್ಲಿ ರೈಲುವೆ ಇಲ್ಲದ ಪ್ರದೇಶದ ಜನರ ಹೃದಯದಲ್ಲಿ ಸಂತೋಷವು ತುಂಬಿ ತುಳುಕುತ್ತಿದೆ. ಈ ಆಲೋಚನೆಯು ಸುಮಾರು ಮೂವತ್ತು ವರ್ಷದಿಂದ ಚರ್ಚೆಯಲ್ಲಿದ್ದು ಒಂದೆರಡು ಸಾರಿ ಸರ್ವೆ ಆಗಿ ಮೂಲೆಗೆ ಬಿದ್ದದ್ದು, ತಿರಿಗಿ ಅಂಕುರಿಸಿದ್ದು ನೋಡುವಾಗ ನಮ್ಮ ಭಾಗ್ಯವೆನ್ನಬೇಕು. ಆ ರೈಲು ಮಾರ್ಗವು ಮಲೆನಾಡಿನ ಕರಾವಳಿಯಲ್ಲಿರುವ ಪುತ್ತೂರಿಗೆ ಜಂಕ್ಷನ್ ಮಾಡಿ ಅಲ್ಲಿಂದ ಹಾಸನಕ್ಕೆ ಹೋಗುವ ಮಾರ್ಗವನ್ನು ಮುಂದರಿಸಿದರೆ ನೇತ್ರಾವತಿ ಕರಾವಳಿಯ ನೆರೆಯ ಬಾದೆ ತಪ್ಪಿದ ಹಾಗಾಯಿತು. ಪುತ್ತೂರಿನಿಂದ ಮಡ್ಯೇರಿಗೂ ಹೋಗಬಹುದು, ಉಪ್ಪಿನಂಗಡಿ ದಾರಿಯಾಗಿ ಶಿರಾಡಿಗೂ ಹೋಗಬಹುದು. ಇದು ತಾಲೋಕು ಡಿವಿಜನ್ ಹೆಡ್ ಕ್ವಾರ್ಟರ ಆಗಿರುವದರಿಂದ ಜನರ ಪ್ರಯಾಣಕ್ಕೂ ವ್ಯಾಪಾರಕ್ಕೂ ತುಂಬಾ ಅನುಕೂಲವಾಗಿದೆ. ಮಂಗಳೂರಿಂದ ಸುಮಾರು ಮೂವತ್ತು ಮೈಲು ದೂರವಷ್ಟೆ. ಇದರ ಮಧ್ಯದಲ್ಲಿ ಬಹಳ ದೊಡ್ಡ ಗುಡ್ಡಗಳೂ ಇರುವದಿಲ್ಲ, ಪುತ್ತೂರಿಗಾಗಿ ಬರುವದಾದರೆ ಪಾಣೆಮಂಗಳೂರು, ಮಾಣಿ ಈ ಎರಡು ಸ್ಟೇಶನುಗಳು ಹೆಚ್ಚಿಗೆ ಸಿಕ್ಕುವವು. ನೇತ್ರಾವತಿಗೆ ಬೇರೆ ಸಂಕವು ಬೇಡ, ಇದರ ಮೇಲೆ ಬ್ರೊಡ್‌ಗೇಜ ರೈಲುವೆ ಸಹ ಹಾಕಬಹುದೆಂದು ತೋರುತ್ತದೆ.

"ಒಬ್ಬ ಗ್ರಾಮಸ್ತ."

ಬಂಟವಾಳ ಗುರುಪುರ ರಸ್ತೆ.

ಈ ರಸ್ತೆಯ ಕಾಮಗಾರಿಯ ಆರಂಭವು ಯಾವ ಮುಹೂರ್ತದಲ್ಲಿ ನಡದಿದೆಯೋ ದೇವರೆ ಬಲ್ಲ. ಈ ರಸ್ತೆ ಆರಂಭಿಸಿದ ಮೇಲೆ ಎಷ್ಟು ಮಂದಿ ಇಂಜಿನಿಯರುಗಳು ಬಂದು ಹೋದರು? ಎಷ್ಟು ಮಂದಿ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರುಗಳಾದರು? ಇದರ ಉದ್ದಿಷ್ಯಕ್ಕಾಗಿ ಎಷ್ಟು ಸರ್ತಿ ಮೀಟಿಂಗುಗಳಾದವು? ಎಷ್ಟು ಸರ್ತಿ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿತು? ಈ ಮಾರ್ಗ ಅನಾವಶ್ಯಕ ಎಂತ ಕಂಡುಬಂದಿದ್ದರೆ ವರ್ಷಕ್ಕೆ ಸ್ವಲ್ಪ ಸ್ವಲ್ಪ ಹಣ ವೆಚ್ಚ ಮಾಡುವದು ಯಾತಕ್ಕೆ? ಅದರ ಪ್ರಸ್ತಾಪವೇ ಬಿಟ್ಟು ಬಿಟ್ಟರೆ ಜನರ ಆಶೆಯು ತೀರಿತಲ್ಲವೇ? ಈ ಮಾರ್ಗ ಪ್ರಾರಂಭ ಮಾಡಿದ ಮೇಲೆ ಬಡಗರದಿಂದ ರೈಲುಮಾರ್ಗ ಮಂಗಳೂರಿಗೆ ಬಂತು. ಒಮ್ಮೆ ಸರ್ವೆ ಆದ ಅರಸಿಕೆರೆ ಮಂಗಳೂರು ರೈಲುವೆಯ ಆಲೋಚನೆಯು ಪೂರಾ ಮೂಲೆಗೆ ಬಿದ್ದದು ತಿರಿಗಿ ಆಗುವ ಸಂಭವ ಬಂದರೂ ಗುರುಪುರ, ಬಂಟ್ವಾಳ ಮಾರ್ಗ ಸರ್ವೆ ಆಗಿ ಮುಕ್ಕಾಲು ಮೂರು ಪಾಲು ಕೆಲಸವಾಗಿ, ಸಾವಿರಾರು ರೂಪಾಯಿ ಬೋರ್ಡಿನವರು ಖರ್ಚುಮಾಡಿ, ಅದರ ಪ್ರತಿಫಲವು ತಿಲಾಂಶವೂ ಇಷ್ಟರ ತನಕ ಜನರಿಗೆ ಸಿಕ್ಕದಿದ್ದರೆ ಇದು ನಾಚಿಕೆಕರವಲ್ಲವೇ? ಒಂದು ವೇಳೆ ದಿವಂಗತ ಪ್ರೆಸಿಡೆಂಟರವರು ವಯೋವೃದ್ಧರಾಗಿದ್ದು ಕಣ್ಣಾರೆ ಕಾಣಲಿಕ್ಕೆ ಅನಾನುಕೂಲವಾಗಿದ್ದದರಿಂದಲೋ ಏನೋ ವಿಳಂಬವಾಯಿತು. ಇನ್ನಾದರೂ ಹೊಸ ಮಾನ್ಯ ಪ್ರೆಸಿಡೆಂಟರು ಬಂಟವಾಳದಿಂದ ಕಳ್ಳಿಗೆ ಮಾರ್ಗವಾಗಿ ಗುರುಪುರ ವರೆಗೆ ಹೋದರೆ ಆದೀತು. ಇಲ್ಲವೆ ಗುರುಪುರದಿಂದ ಬಂಟವಾಳ ಕಳ್ಳಿಗೆ ಮಾರ್ಗವಾಗಿ ಬಂದರೂ ಆದೀತು, ಒಬ್ಬಾರೆ ಈ ಮಾರ್ಗದ ತೊಡಕು ಯಾವದೆಂದು ಕಣ್ಣಾರೆ ಕಂಡು ಸರಿಯಾದ ಹೆದ್ದಾರಿ ಮಾಡಿಸಿ ಕೊಟ್ಟರೆ ಜನರಿಗೆ ಬಹಳ ಉಪಕಾರವಾಗುತ್ತಿತ್ತು. ಈ ಮಾರ್ಗವನ್ನು ಕೂಡಿಸಿದರೆ ಮಳಲಿ, ಪೊಳಲು, ಅಮುಂಜೆ ಈ ಸ್ಥಳಗಳಿಂದ ಅಕ್ಕಿ, ಬೈಹುಲ್ಲು, ಮುಂತಾದ್ದು ಯಥೇಷ್ಟವಾಗಿ ಪುಲಾನಿ ಹೊಳೆಯಲ್ಲಿ ನೀರು ಬತ್ತಿದಾಗ ನೇತ್ರಾವತಿ ಹೊಳೆಯಿಂದ ಮಂಗಳೂರಿಗೆ ಹೋಗಬಹುದು. ಗುರುಪುರದವರಿಗೆ ಬಂಡಿಯಲ್ಲಾಗಲಿ ಮೋಟಾರಿನಲ್ಲಾಗಲಿ ಬಂಟವಾಳ ಅತ್ತ ಕಡೆ ಬರುವವರಿಗೆ ಈಗ ಮೂಡಬಿದ್ರೆಗಾಗಿ ಇಲ್ಲವೆ ಮಂಗಳೂರಿಗಾಗಿ ಬರಬೇಕಾಗುವುದು. ಈ ಮಾರ್ಗವಾದರೆ ೧೦ ಮೈಲುಗಳೊಳಗೆ ಬರಬಹುದು. ಮತ್ತು ಪೊಳಲಿ ರಾಜರಾಜೇಶ್ವರಿ ದುರ್ಗಾಪರಮೇಶ್ವರಿ ಅಮ್ಮನವರ ಅನಾದಿಯ ಒಂದು ದೇವಸ್ಥಾನವು ಇದೆ. ಇಲ್ಲಿ ಕಾಲಂಪ್ರತಿ ಒಂದು ತಿಂಗಳ ಜಾತ್ರೆ ನಡದು ಅಕ್ಕೆರಿಗೆ ಮೂರು ದಿನದ ಚೆಂಡಿನ ಉತ್ಸವಕ್ಕೆ ಕನ್ನಡ ಜಿಲ್ಲೆಯ ಹಲವು ಭಾಗಗಳಿಂದ ನೋಟಕರು ಬರುತ್ತಿದ್ದಾರೆ; ಈಗ ಈ ನೋಟಕ್ಕೆ ಬರುವವರು ತಕ್ಕ ಮಾರ್ಗ ಇಲ್ಲದೆ ಗಂಡಸರು ಮಾತ್ರ ಬರುತ್ತಾರೆ. ಹೆಂಗಸರಿಗೂ ಮಕ್ಕಳಿಗೂ ಇಲ್ಲಿಗೆ ಬರುವರೆ ಉಪಾಯವೇ ಇಲ್ಲ. ಜಾತ್ರೆ ಕಾಲಗಳಲ್ಲಿ ಒಮ್ಮೊಮ್ಮೆ ಜಿಲ್ಲಾ ಕಲೆಕ್ಟರು ದೊರೆಗಳೂ, ಜಡ್ಜ ದೊರೆಗಳೂ, ಮತ್ತು ಇತರ ಆಫೀಸರೂ ಗುರುಪುರದಿಂದ ಕಾಲು ನಡೆಯಾಗಿಯೇ ಬರಬೇಕಾಗಿದೆ. ಇನ್ನು ಇಲ್ಲಿಗೆ ಬರುವ ಸಂತೆಗಳನ್ನು ಈಗ ಹೊತ್ತುಕೊಂಡು ಬರಬೇಕಾಗಿದೆ. ಈ ಗುರುಪುರ ರಸ್ತೆಯು ಪೂರೈಸಿದರೆ ಬೆಳ್ವಾರು ಅಮ್ಮಾಡಿ, ಕುರಿಯಾಳ, ಕಳ್ಳಿಗೆ ಮುಂತಾದ ಗ್ರಾಮದ ಜನರು ಹಳ್ಳಿಯಲ್ಲಿ ಬೆಳಸುವ ಧಾನ್ಯ ಕಾಯಿಪಲ್ಯ ಅಕ್ಕಿ ಬೈಹುಲ್ಲು ತಾಳೆಬೆಲ್ಲ ಇತ್ಯಾದಿ ವ್ಯಾಪಾರವು ಪಟ್ಣಕ್ಕೆ ಸೇರುವದು.

ಆದದರಿಂದ ಗುರುಪುರ ಕಳ್ಳಿಗೆ ರಸ್ತೆ ಮಾಡಿಸಿ, ಇದಕ್ಕೆ ಒಂದ್ ಟೋಲ್‌ಗೇಟನ್ನು ಇಟ್ಟರೆ ಬೋರ್ಡಿನವರಿಗೆ ಖರ್ಚಾದ ಹಣವು ಬೇಗನೆ ಭರ್ತಿಯಾಗುವದು.

"ಪ್ರಯಾಣಸ್ಥ."

ದಕ್ಷಿಣ ಕನ್ನಡ ಜಿಲ್ಲೆಯ ತಲೆಹೊರೆ ಕಟ್ಟಿಗೆಯ ಸುಂಕ.

ಹಳ್ಳಿ ನಾಡಿನ ಅನೇಕ ಬಡಬಗ್ಗರ ಕುಟುಂಬದ ಜೀವನವು ಹಳ್ಳಿಗಳಿಂದ ಪೇಟೆ ಪಟ್ಟಣಕ್ಕೆ ಸೌದೆ ಹೊರೆಯನ್ನು ಮಾರಿ ಬಂದ ದುಡ್ಡಿನಿಂದ ಅಕ್ಕಿ, ಉಪ್ಪು, ಮೆಣಸು ಕೊಂಡುಹೋಗಿ ಕಾಲಹಲಣ ಮಾಡುವ ಕುಟುಂಬವು ಸಾವಿರಕ್ಕೆ ಮಿಕ್ಕಿ ಇವೆ. ಒಂದು ಹೊರೆ ಸೌದೆಯನ್ನು ಪೇಟೆಗೆ ಮಾರಲಿಕ್ಕೆ ತರಬೇಕಾದರೆ ಬೆಳಿಗ್ಗೆ ಎದ್ದು ಗುಡ್ಡೆಯ ಧನಿಗಳ ಹತ್ತರ ದಮ್ಮಯ್ಯ ಹಾಕಿ ಒಂದು ಹೊರೆ ಕಟ್ಟಿ ಅರೇಳು ಮೈಲು ಹೊತ್ತುಕೊಂಡು ಬಂದು ಪೇಟೆ ಎಲ್ಲಾ ಸುತ್ತಾಡಿ ಕಡೆಗೆ ಏಳು ದುಡ್ಡು ಎಂಟು ದುಡ್ಡು ಬೆಲೆಗೆ ಮಾರಿದರೆ ಅದರಿಂದ ಆರು ಪೈ ಸುಂಕ ಠಾಣೆದಾರರಿಗೆ ಕೊಟ್ಟು ಹೋಗಬೇಕು. ಉಳಿದ ಎರಡಾಣೆಯಿಂದ ಅಕ್ಕಿ, ಉಪ್ಪು, ಮೆಣಸು, ಎಷ್ಟು ಸಿಕ್ಕುವದು? ಅಯ್ಯೋ ದೇವರೇ, ಎಂಟು ದುಡ್ಡಿಗೆ ಒಂದುವರೆ ದುಡ್ಡು ವೃತ್ತಿತೆರಿಗೆಯೇ ಆಹಾ! ಈ ಪಾಪ ಬಡಪಾಯಿಗಳಿಗೆ ಬಿದ್ದಿರುವ ಸುಂಕವೇ. ಮೊದಲೇ ಅಕ್ಕಿ ಮತ್ತು ಇತರ ಜೀನಸುಗಳ ಕ್ರಯವು ದಿನ ದಿನ ಹೆಚ್ಚಾಗುತ್ತಾ ಬರುವಾಗ ಇಂಥ ಬಡವರ ಗೋಳನ್ನು ತಡಮರಿಸುವವರು ಯಾರು? ನಮ್ಮ ಜಿಲ್ಲೆಯ ಕಡೆಯಿಂದ ನ್ಯಾಯವಿಧಾಯಕ ಸಭೆಯ ಮೆಂಬರರಾಗಿರುವ ಮಾನ್ಯ ಸಾಲ್ಡಾಂಘಾರವರು ಬರುವ ನ್ಯಾಯವಿಧಾಯಕ ಸಭೆಯಲ್ಲಿ ಮುಂದೆ ತರುವರಾಗಿ ನಂಬುತ್ತೇವೆ. ವೃತ್ತಿತೆರಿಗೆ, ಇನ್ಕಮಟೇಕ್ಸ್, ಸುಪರ್ ಇನ್ಕಮ್‌ಟೇಕ್ಸ್, ವಿದ್ಯಾ ತೆರಿಗೆ, ಸೇಂದಿ ತೆರಿಗೆ ಮುಂತಾದ ಎಲ್ಲಾ ತೆರಿಗೆಯ ದಾಮಾಶಾಯಿಗಿಂತಲೂ ಈ ಕಟ್ಟಿಗೆ ಹೊರೆಯ ಸುಂಕವು ಎಷ್ಟೋ ಪಾಲು ಹೆಚ್ಚಾಗಿದೆ. ಆದುದರಿಂದ ತಲೆಗೆ ಹೊರೆಗೆ ಈಗ ಇರುವ ಆರುಪೈ ಸುಂಕವನ್ನು ತೆಗೆದು ಮೂರು ಪೈಗೆ ಇಳಿಸಬೇಕಾಗಿದೆ. ಈ ಸಂಗತಿಯನ್ನು ಕಣ್ಣಾರೆ ಕಾಣುವ ಇನ್ನಿಬ್ಬರು ಮಾನ್ಯ ನ್ಯಾಯವಿಧಾಯಕ ಸಭೆಯ ಮೆಂಬರ ಸಹಾನುಭೂತಿಯು ಇದ್ದೀತೆಂದು ನಂಬುತ್ತೇನೆ.

"ಒಬ್ಬ ನಾಡಿಗ."

-: ಶ್ರೀಮದ್ಭಗವದ್ಗೀತಾ. :-

ಹಿಂದೂಗಳ ಧರ್ಮಗ್ರಂಥಗಳಾದ ವೇದಗಳೂ, ಅವುಗಳಿಂದ ಹುಟ್ಟಿರುವ ಉಪನಿಷತ್ತುಗಳೇ ಮೊದಲಾದವುಗಳೂ, ಆತ್ಮಜ್ಞಾನವನ್ನು ಪಡೆದ ಪುರಾತನ ಋಷಿಗಳಿಂದ ಬರೆಯಲ್ಪಟ್ಟು ಅತಿ ಮಹತ್ವದ ತತ್ವಗಳನ್ನೊಳಗೊಂಡಿರುವವುಗಳೂ, ಆಧ್ಯಾತ್ಮಿಕ ಜ್ಞಾನವನ್ನು ಹುಟ್ಟಿಸುವವು ಬಹಳೇ ಪವಿತ್ರವಾದವುಗಳೂ ಆಗಿದ್ದರೂ, ಆ ಗ್ರಂಥಗಳು ಕಠಿಣ ಸಂಸ್ಕೃತ ಭಾಷೆಯಲ್ಲಿದ್ದು, ಆ ಭಾಷೆಯಲ್ಲಿ ಹೆಚ್ಚಿನ ಪಾಂಡಿತ್ಯವಿದ್ದ ಹೊರತು ಓದಿ ತಿಳಕೊಳ್ಳಲು ಅಸಾಧ್ಯಗಳಾದುದರಿಂದಲೂ, ಬ್ರಾಹ್ಮಣರು ತಮ್ಮ ಹೊರತು ಇತರರ್‍ಯಾರೂ ಅವುಗಳನ್ನೋದಲು ಯಾ ಕೇಳಲು ಕೂಡ ಪಾಪವೆಂದು ಬಹಿಷ್ಕಾರವಿರಿಸಿದುದರಿಂದಲೂ, ಅಧಿಕಾಂಶ ಹಿಂದೂಗಳಿಗೆ ಆ ಧರ್ಮಗ್ರಂಥಗಳೆಂದರೆ ಕನಸಿನ ಲೋಕವೇ ಸರಿ. ಪರಕೀಯರ್‍ಯಾರಾದರೂ ಅವುಗಳನ್ನು ಓದಿ, ಅತಿ ಗಹನವಾದ ತತ್ವಗಳು ಅವುಗಳಲ್ಲಿ ಅಡಕವಾಗಿವೆಯೆಂದು ಬರೆದರೆ ನಾವು "ಇರಬಹುದು" ಎಂದು ತಲೆಯಾಡಿಸುತ್ತೇವಲ್ಲದೆ ಅದಕ್ಕಿಂತ ಹೆಚ್ಚಿಗೇನೂ ನಮಗೆ ಗೊತ್ತಿಲ್ಲ. ವೇದಗಳು ಘೋಷಿಸುವ "ಏಕಮೇವಾ ದ್ವಿತೀಯಂ" ಎಂಬ ಮುಖ್ಯ ತತ್ವವು ಹಿಂದೂಗಳಿಗೆ ಬೋಧಿಸಲ್ಪಡದಿದ್ದು, ಹೆಚ್ಚಾಗಿ ಹಿಂದೂ ಮತದ್ವೇಷಿಗಳಿಂದ ರೂಪಾಂತರಗೊಳಿಸಲ್ಪಟ್ಟ ಪುರಾಣಗಳೇ ಅವರಿಗೆ ಓದ ಸಿಕ್ಕಿದ ಗ್ರಂಥಗಳಾದುದರಿಂದ ಅವುಗಳಲ್ಲಿ ಹೇಳಿದುದೇ ಸತ್ಯವೆಂದೂ, ಅವುಗಳಲ್ಲಿನ ಕಥಾನಾಯಕರುಗಳೇ ದೇವರುಗಳೆಂತಲೂ ಅವರಿಗೆ ಅನಿಸಿತು. ಹೀಗಾಗಿ ಸ್ವಾಮಿ ಶ್ರದ್ಧಾನಂದಜೀಯವರು ಅನ್ನುವಂತೆ ೩೩ಕೋಟಿ ಹಿಂದೂಗಳಿಗೆ ೩೩ಕೋಟಿ ದೇವತೆಗಳ ಆರಾಧನೆ ಪ್ರಾರಂಭಿಸಿತು, ಅಷ್ಟು ಮಾತ್ರವಲ್ಲ, ತನ್ನ ದೇವರು ಸತ್ಯ, ತನ್ನ ದೇವರು ಸತ್ಯ, ಎಂದು ಪಾಳಯದೊಳಗೇ ಕಚ್ಚಾಟವಾಗಿ, ಐಕ್ಯವು ತಪ್ಪಿ ಪರಕೀಯ ಮತಸ್ಥರಿಗೆ ನಮ್ಮ ಮತವನ್ನು ಛಿನ್ನಾಭಿನ್ನವಾಗಿ ಮಾಡಲು ಎಡೆದೊರೆಯಿತು. ಅವರಾದರೊ, ನಿಜವಾದ ಹಿಂದೂ ತತ್ವಗಳನ್ನರಿಯದ ಅಶಿಕ್ಷಿತ ಹಿಂದೂ ವರ್ಗದವರಿಗೆ ಹಿಂದೂ ಪುರಾಣಗಳ ಸುಳ್ಳು ಭಾಗಗಳನ್ನು ಮಾತ್ರ ತೋರಿಸಿ, ಅವರ ಧರ್ಮವು ಅಸತ್ಯವೆಂದೂ, ತಮ್ಮ ಧರ್ಮವು ಪವಿತ್ರವಾದುದೆಂದೂ, ಅದರಲ್ಲಿ ಸರ್ವಸ್ವಾತಂತ್ರವಿದೆಯೆಂದೂ ಮೊದಲಾಗಿ ಸಾರಲಾರಂಭಿಸಲು, ಮತ ಶ್ರದ್ಧೆಯಲ್ಲಿ ಚಂಚಲರಾಗಿದ್ದ ಹಿಂದೂಗಳು ಆ ಮತಗಳಲ್ಲಿ ಮೋಹಗೊಂಡು, ಇತರ ಅನೇಕ ಕಾರಣಗಳಿಂದಲೂ ಒಂದೇ ಸಮನೆ ಮತಾಂತರವಾಗಲಾರಂಭಿಸಿದರು. ಆದರೆ ಹಿಂದೂ ಮತದಲ್ಲಿ ಆಯಾ ಕಾಲಕ್ಕೆ ಒಬ್ಬೊಬ್ಬ ವಿಭೂತಿಯು ಮುಂದೆ ಬಂದು ಆ ಮತದ ವಿನಾಶವನ್ನು ತಡೆಗಟ್ಟಿದರು. ಹೀಗೆ ಅನೇಕ ಶತಮಾನಗಳಿಂದಲೂ ಹಿಂದೂ ಮತವು ಪರಕೀಯ ಪಂಥಗಳ ಪೆಟ್ಟು ತಿನ್ನುತ್ತಿದ್ದರೂ ಈಗಲೂ ಉಳಿದುಕೊಂಡಿದೆ. ಇನ್ನೂ ಅದು ಉಳಿದೇ ತೀರುವುದು. ಅದಂತಿರಲಿ.

ಈಗ ಹಿಂದೂ ಮತದ ಆ ಮಹತ್ವದ ತತ್ವಗಳನ್ನು ವೇದ ಉಪನಿಷತ್ತುಗಳಿಂದ ಸರ್ವಸಾಮಾನ್ಯರಿಗೆ ತಿಳುಕೊಳ್ಳಲು ಸಾಧ್ಯವಾಗಿರುವಾಗ ನಮಗೆ ಇನ್ನಾವದರಿಂದ ಅವುಗಳನ್ನು ತಿಳುಕೊಳ್ಳಬಹುದೆಂಬ ಪ್ರಶ್ನೆ ಏಳುತ್ತದೆ. ಶ್ರೀಮದ್ಭಗವದ್ಗೀತೆಯು ಈ ಗ್ರಂಥಗಳಲ್ಲಿ ಸವಿಸ್ತಾರವಾಗಿ ಹೇಳಿರುವ ಮಹತ್ವದ ತತ್ವಗಳನ್ನು ಸ್ಪಷ್ಟವಾಗಿಯೂ, ಸುಲಭವಾಗಿಯೂ, ತಿಳಿಯಪಡಿಸುತ್ತದೆ. ಗೀತೆಯೆಂಬುದು ಹಿಂದೂಮತದ ಮಾತ್ರವಲ್ಲ, ಇಡೀ ಪ್ರಪಂಚದ ಮತಗಳ ತತ್ವಗಳನ್ನೇ ಒಳಗೊಂಡಿರುವ ಭಾಂಡಾಗಾರ. ಈ ಚಿಕ್ಕ ಗ್ರಂಥವು ಸರ್ವ ಭಾಷೆಗಳಲ್ಲಿಯೂ ಭಾಷಾಂತರಿಸಲ್ಪಟ್ಟಿರುವುದರಿಂದ ಅದನ್ನು ಎಲ್ಲರಿಗೂ ಓದಿಕೊಳ್ಳಲು ಅನುಕೂಲವಿದೆ. ಹಿಂದೂಗಳಿಗೆ ತಮ್ಮ ಧರ್ಮವು ತಿಳಿದು ಅವರು ಕರ್ತವ್ಯಬಾಹಿರರಾಗದಿರಬೇಕಾದರೆ ಅಗತ್ಯವಾಗಿ ಗೀತೆಯನ್ನು ಓದಲೇ ಬೇಕು.

ಇನ್ನು ಗೀತೆಯೆಂದರೇನು? ಅದು ಯಾರಿಂದ ಯಾರಿಗೆ ಯಾವ ಸಂದರ್ಭದಲ್ಲಿ ಹೇಳಲ್ಪಟ್ಟಿತು? ಎಂಬೀ ವಿಚಾರವಾಗಿ ಬರುವ ಸಂಚಿಕೆಯಲ್ಲಿ ಕೊಡಲಾಗುವದು.

ಇತಿ;

ಗೀತೆಯ ವಾಚಕರಲ್ಲೊಬ್ಬ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀಮಿತ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ನೋಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಪ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೩೬ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

Free! Free!! Free!!

ಪ್ರಸಿದ್ಧವಾದ "ಕಾಮಶಾಸ್ತ್ರ"

ಈಗಲೆ ತಯಾರಾಗಿದೆ.

ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ ಎಸ್. ಪಿ. ಆಚಾರ್ಯ ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ತುಂಡಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ

ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮಹೋದ್ಯಾನಿ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | **ವಜ್ರಾಂಗ-ಬಿಂದು** | ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ಪನ್ನೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉತ್ತಮತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವವಲ್ಲದೆ, ಸ್ವಪ್ನಜನ್ಯ ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸಂಯೋಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬಿದ್ದು ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಯು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆನ್ನುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಚಿಕ್ಕೋಡಿ, (ಜಿಲ್ಹಾ ಬೆಳಗಾಂವ)

The Canara Public Conveyance Co., Ltd, Mangalore.
(ESTABLISHED 1914.)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು {
ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು
ಕೊಳ್ಳುವವರಿಗೆ
ಮೋಡರ್ನ್ ರೆಗ್ಯುಲೇಟರ್
ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.



ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್‌ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

—ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಖರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಅಕ್ಷಣವಾಗಿರುವ...



ಕ್ರಯ 1ಕ್ಕೆ ರೂ. 3—0—0
ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜಿ. ಯು. ಅವರ್ಗಳಿಂದ
ಪ್ರಯೋಗಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲೀಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾ ಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ
450 ಪುಟಗಳು ಕ್ರಯ ರೂ. 2—4—0
ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ
ಬಹುಮಾನ.
ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟ ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ," ಬೆಂಗಳೂರು ಸಿಟಿ. } ಡಾ॥ ಮನ್ನಾಲಾಲ್, ಡಿಲ್ಲಿ ನೇಟಿವ್ ಡಾಕ್ಟರ್. ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Registered: No. M. 498.
ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಷವ ಸೂಸುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯. ಮಂಗಳೂರು, ತಾರೀಕು ೨೫ನೇ ಶುಕ್ರವಾರ ದಶಂಬರ ೧೯೨೫. ಸಂಚಿಕೆ ೫೨

Th Canara Banking Corporation,
UDIPI, Ltd.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್,
ಉಡುಪಿ, ಲಿಮಿಟೆಡ್.

Head office: UDIPI. Branch: COONDAPOOR.
ಹೆಡ್ ಆಫೀಸು: ಉಡುಪಿ. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ವಸೂಲಾದ ಮೂಲಧನ	ರೂ. 1,73,185—9—11.
ಆಪದ್ಧನ ವಗೈರೆ ಎತ್ತಗಳು	ರೂ. 64,700—0—0
ಸಾ. ಸೇ. 6ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	ರೂ. 25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಏವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಾದ ಮೂಲಧನ 1,73,185—9—11, ಆಪದ್ಧನ ವ ಇತರ ಎತ್ತಗಳು 64,700—0—0, ಠೇವಣಾತಿಗಳು 5,10,077-10-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4371—0—0, ಏವೇಜಿನ ಮೇಲಿನ ಈ ವರೆಗಿನ ಬಡ್ಡಿ ಕೂಡಿ ಇತರ ಬಾಬುಗಳು 93,340—10—5, ಜುಮ್ಲಾ ರೂ. 8,45,674—14—7.

ಆಸ್ತಿ ವ ಸೊತ್ತುಗಳು.

ಹಿತ್ಲು ಆಟ್ಟೋಣ ಕಟ್ಟಡದ ಪ್ರೊಜಗಳು ವಗೈರೆ 4134—4—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496—6—2, ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ) 41,741—14—2, ಕೈಯಲ್ಲಿರುವ ಮತ್ತು ಬ್ಯಾಂಕರರ ಕೂಡೆ ಠೇವಣಾಗ್ಗೆ ಸಿಕ್ಕತಕ್ಕ ಶಿಲ್ಕು ಹಣ 26,131—6—3, ಜುಮ್ಲಾ ರೂಪಾಯಿ 8,45,674—14—7.

ನಿರಖು ಠೇವಣಾತಿಗಳನ್ನು ಕಾಲಕ್ಲೃಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸಿಮ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ್ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಷರ್ತುಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾಹುಕಾರಿ ಹುಂಡಿಗಳನ್ನೂ, ವಜ್ಞಾಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

N. Anand Rao,
Secretary.

ಮೂರ್ರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ
ಔಷಧಿಯ ಕ್ರಯ ವಾಪಾಸು.
ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.
ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!
ಟ್ರೇಡ್ ಮಾರ್ಕ] ಅಗಸ್ತ್ಯ [ಹೊಸ ಲೇಹ್ಯಗಳು
ಮನ್ಮಥ ಚಿಂತಾಮಣಿ ಲೇಹ.
(ರಿಜಿಸ್ಟರ್ ಆದದ್ದು)
ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.
ಮೇಹವಿಕಾರವಿದ್ದವರಿಗೂ, ನಿದ್ರೆಯಿಲ್ಲದವರಿಗೂ, ಶಿಥಿಲೇಂದ್ರಿಯವಾಗುವ ಯುವಕರಿಗೂ ಅಜ್ಞ ನವಯೌವನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧ.
1 ಸೇರು ಹಾಳ್ವತ್ತೆಂಟು ದಿವಸಕ್ಕೆ ಸೇವಿಸಬಹುದು.
1 ಸೇರು ಡಬ್ಬಿ 1ಕ್ಕೆ 3-0-0. ½ ಸೇರು ಡಬ್ಬಿ 1ಕ್ಕೆ 1-9-0.
ವಿಶೇಷ ಮಾಹಿತಿಗೆ ಬರೆಯಿರಿ.
ದೇವಣ್ಣ ನಾರಾಯಣ ಸೇಟ್,
ಸರಾಫ್, ಗೋಕರ್ಣ,
(ಉ. ಕ.)

XMAS TIME
Every week brings forth new patterns of
SILKS, VOILS, SERJES, SHIRTINGS, FLANNELS, TOYS, TIME-PIECES, HATS, LAMPS, & TOILET REQUISITES.
EVERY ONE IS EXPECTED TO PAY A VISIT TO US IF HE WANTS RELIABLE GOODS AT MODERATE UP-TO-DATE PRICES
Our earnest request to all 'Please pay a visit to us. Nevermind if you don't buy!'
BALIGA BROTHERS,
HAMPANKATTA.
'KERSO' LAMPS, CHILDREN READY-MADE DRESSES PROVISIONS CARR'S BISCUITS, STATIONERY ARE OUR FEW SPECIALITIES THIS TIME
Next week we expect a consignment of Ladies requisites from England.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. — 109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಕೊಡುವುದಕ್ಕೆ ನಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ., ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ... ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮತ್ತೂರು, ಮಧುರೆ, ತಂಜಾವೂರು, ... ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯಾರಾದ

[illegible]

ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

[illegible]

[illegible]

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ್ ಜರ್ಮನ್ ಟೈಮ್‌ಪೀಸ್ ಕ್ರಯ ರೂ. 5-0-0

ಡಬ್ಬಲ್ ಎ. „ „ „ 6-0-0.

"ಬಿ" ಟೈಮ್‌ಪೀಸ್ ಕ್ರಯ ರೂ. 2—4—0

ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಡಕ್ಟರ್ಡ್ ಪೇಪರ್ ಕ್ಲಿಪ್ ಟೈಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಖಂ ... ... ೨-೦-೦.

೧೨ ಪ್ಯಾಕೆಟ್ ನಾಟ ತರಕಾರಿ ಬೀಜಗಳು ೧೨ ರಖಂ ... ... ೧-೧೨-೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಖಂಗಳ ಬೀಜಗಳು ... ... ೨-೮-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಗಿಗೆ, ವಿ. ಪಿ. ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು. ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್‌ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮ್ಯೂಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಕಿ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟೈಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.

14 „ „ „ 26—0—0.

14 „ 15 ಮಣಿ „ 36—0—0.

9 „ „ „. 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
184 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ. ಬಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಎಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕೊರ್ ಆಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಡೈರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೀನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. (No. 14.)

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಜ್ಯೋತಿಷ್ಯ ಸಂಗ್ರಹ.

(1) ಬೃಹಜ್ಜಾತಕ ... ...
(2) ಉಮಾಮಹೇಶ್ವರ ಸಂವಾದ ಎಂಬ ಜ್ಯೋತಿಷ ಕಾಲಚಕ್ರ
(3) ಕೇರಳ ಪ್ರಶ್ನೆ ... ...
(4) ಪ್ರಶ್ನೋತ್ತರ ರತ್ನಮಾಲಿಕಾ ... ...
(5) ನವನೀತಾರಿಷ್ಟವು ... ...
(6) ಷಟ್ಪಂಚಾಶತ್ ಗ್ರಂಥ ... ...
(7) ನಕ್ಷತ್ರ ಚೂಡಾಮಣಿ ಗ್ರಂಥ ... ...
(8) ಮುಹೂರ್ತಪದವೀಗ್ರಂಥ ... ...
(9) ಅಷ್ಟದಿಕ್ಪಾಲಕ ಮಂಗಳಾಷ್ಟಕಗಳು ... ...
(10) ಕಾಲನಿರ್ಣಯಸಭ್ಯೋಯಂ ಗ್ರಂಥ ... ...
(11) ಸವ್ಯಾಖ್ಯಾನ ಕಾರಾಮೃತ... ...

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ಮಹಿಷ್ಯ ಪುರಾಣ ... ...
(3) ಇಂದ್ರಜೀತು ಕಾಳಗ
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಕಟ್ಟಿದ ಚೋರ ಕಥೆ ... ...
(7) ಕುವರಾರ ರಾಮನ ಕಥೆ ... ...
(8) ಕೃಷ್ಣದಾನಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ...
(10) ಚಿತ್ರಸೇನ ರಾಜನ ಕಥೆ ...
(11) ಬಕಾಸುರ ವಧೆ ...
(12) ಬಾಣಾಸುರನ ಕಥೆ ...
(13) ರಂಭಾಶುಕ ಸಂವಾದ ...
(14) ರುಕ್ಮಿಣೀ ಪರಿಣಯ ...
(15) ... ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣ ದೀನಾಶ್ವಮೇಧ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷಾಗ್ರಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಚ ಕಥೆ ...
(26) „ ಗೋವಿನ ಚರಿತ್ರೆ ... ...
(27) „ ಧುಕ್ಕಾಸಪ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

— ಭಜನೆಯ ಪುಸ್ತಕಗಳು. —

(1) ಉಡುಪಿಕ್ಷೇತ್ರ ಮಹಾತ್ಮೆ ... ...
(2) ಹನುಮದ್ರಾಮಾಯಣ ... ...
(3) ಅಧ್ಯಾತ್ಮ ವಿಚಾರ ... ...
(4) ಭಕ್ತಿಮಹಿಮೆ ... ...
(5) ಪ್ರಬೋಧ ಮುಕ್ತಾವಳಿ ...
(1) ಹರಿಕೀರ್ತನಾಮೃತಸಾರ ... ...
(2) ಹರಿನಾಮಾಮೃತಂ. ... ...
(3) ರುಕ್ಮಿಣೀ ಆಖ್ಯಾನ ... ...
(4) ಮಂಗಳ ಗೌರೀಹಾಡು ... ...
(5) ಉದ್ಯಾಪೀಠನ ಹಾಡು ... ...
(6) ಯಕ್ಷಗಾನ ಗೀತ ಹಾಡು ...
(7) ಅನೇಕಭಾಷ ಕವೀಶ್ವರದಾಸರ ಕೀರ್ತನೆಗಳು ...
(8) ಕೀರ್ತನ ಹಾಡು ... ...
(9) ಭಜನೆಯ ಪದಗಳು ... ...

ಪುಸ್ತಕಗಳು ದೊರೆಯುವ ಸ್ಥಳ:— ಶಾರದಾ ಛಾಪಖಾನೆ, ರಥ ಬೀದಿ, ಮಂಗಳೂರು.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ|ರದ ಪುಷ್ಯ ಶು| ೧೦ ಶನಿವಾರದಿಂದ ಕ್ರೋಧನ ಸಂ|ರದ ಪುಷ್ಯ ಶು| ೬ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೫ನೆಯ ಧನು ಪೆರಾರ್ದ.)

ತಾರೀಕು	ವಾರ	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರಮಾನ.	ಸೂರ್ಯ ಉ.	ಸೂರ್ಯ ಅಸ್ತ.
26	ಶನಿ	೧೨	೫೭.೪೬	ಭರಣೀ	೧೫.೨	೧೨	6.52	6.10
27	ರವಿ	೧೩	೫೮.೪೦	ಕೃತ್ತಿಕಾ	೧೫.೪೮	೧೩	6.52	6.11
28	ಸೋಮ	೧೪	೬೦. ೦	ರೋಹಿಣೀ	೧೬.೪೬	೧೪	6.53	6.12
29	ಕುಜ	೧೪	೧. ೨	ಮೃಗಶಿರಾ	೧೯.೩೨	೧೫	6.53	6.13
30	ಬುಧ	○	೪.೩೧	ಆರ್ದ್ರಾ	೨೩.೩೧	೧೬	6.54	6.13
31	ಗುರು	೧	೮.೫೯	ಪುನರ್ವಸು	೨೮.೩೨	೧೭	6.54	6.14
1	ಶುಕ್ರ	೨	೫೮. ೦	ಪುಷ್ಯಾ	೧೪.೫೮	೧೮	6 55	6.14

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
18	90—2	72—7	—	—
19	90—7	72—7	—	—
20	90—7	71—9	—	—
21	90—4	71—9	—	—
22	90—8	72—4	—	—
23	90—2	71—7	—	—
24	92—2	70—3	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ
ಮಸ್ಸಿತಿ	9— 0	9—14
ಹೊಸ ಗುಡ್ಡು ...	8— 4	8—14
ಸುಗ್ಗಿ ...	8— 0	9— 0
ಅನ್ವರ್ ಬೆಳ್ತಿಗೆ ...	8—12	10— 0
ಹೊಸ ರಾಶಿ ...	7—14	8— 6
ರಂಗೂನು ಬೆಳ್ತಿಗೆ ಗೋಣಿ ೧ ...	14— 0	14— 8
ಗೋಧಿ ಗೋಣಿ ೧ಕ್ಕೆ ...	18— 8	20— 8
ಹುರುಳಿಗೋಣಿ ೧ಕ್ಕೆ ...	9— 4	9— 8
ಕಡಲೆಗೋಣಿ ೧ಕ್ಕೆ ...	14— 8	15— 0
ತೊಗರಿಗೋಣಿ ೧ಕ್ಕೆ ...	14— 8	15— 0
ತೊಗರಿಬೇಳೆ ಗೋಣಿ ೧ಕ್ಕೆ ...	16— 8	22— 0
ಉದ್ದುಗೋಣಿ ೧ಕ್ಕೆ ...	17— 0	17— 8
ಹೆಸರುಗೋಣಿ ೧ಕ್ಕೆ ...	15— 4	15— 8
ಊರು ಬೆಲ್ಲಖಂಡಿ ೧ಕ್ಕೆ ...	60— 0	62— 8
ಉಪ್ಪು ಗೋಣಿ ೧ಕ್ಕೆ ...	4— 0	4— 4
ಕೊಬ್ರಿ ಖಂಡಿ ೧ಕ್ಕೆ ...	120— 0	125— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	50— 8	—
ಎಳ್ಳಿಂಡಿ ಖಂಡಿ ೧ಕ್ಕೆ ...	40— 0	47— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	9— 0	9— 8
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	11— 0
ಚಿಮಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4— 6	4— 8
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	8— 0	9— 0
ಸಾಸಿವೆ ಮುಡಿ ೧ಕ್ಕೆ ...	9— 8	10— 0
ಕೊತ್ತಂಬರಿ ಮುಡಿ ೧ಕ್ಕೆ ...	3— 8	4— 4
ಕಾಫಿ ಖಂಡಿ ೧ಕ್ಕೆ ...	345— 0	—
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	275— 0	295— 0
ಹೊಸ ಅಡಿಕೆ ಖಂಡಿ ೧ಕ್ಕೆ ...	200— 0	210— 0
ಕಾಳುಮೆಣಸು ಖಂಡಿ ೧ಕ್ಕೆ ...	360— 0	—
ಮೆಣಸು ಮುಡಿ ೧ಕ್ಕೆ ...	45— 0	—
ಗೇರುಬೀಜ ಮುಡಿ ೧ಕ್ಕೆ ...	3—14	—
ಚಕ್ಕೆ ಖಂಡಿ ೧ಕ್ಕೆ ...	45— 0	65— 0
ತಾಂಬ್ರ ತಗಡು ಮುಣ ೧ಕ್ಕೆ ...	16—10	16—12
ತಾಮ್ರ ಪಾತ್ರೆಗಳು ಮುಣ ೧ಕ್ಕೆ ...	21— 0	—
ಜೇನು ಮೇಣ ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮುಣ ೧ಕ್ಕೆ ...	16— 8	
ಪಾವನು	18— 0	

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸ್ಯಾಜಿನ) ಪುಟಗಳನ್ನು ಮುಕ್ತಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2—8—0.
„ ಸ್ಥಳೀಕರಿಗೆ ... „ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪ್ರತಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಂಗಾರ್,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ತ್ವರೆ ಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಮಿ॥ ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಪಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳದಿದ್ದಲ್ಲಿ ಹಣವನ್ನು ಮುಂಗಡವಾಗಿ ಕಳುಹಿಸುವುದು ಬಾಧಕವಿಲ್ಲ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೩೩ ತಂಬುಚೆಟ್ಟಿ ಬೀದಿ, ಮದ್ರಾಸ್.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1¼ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಬರ್ ರೇಶ್ಮೆ ಮಡಿಗಳು, ಪಾಮರಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಷನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Advertisers Note.

A SPECIAL ISSUE OF SPECIAL IMPORTANCE AND Concetrated interest with wide circulation.

This is your Opportunity.

Our fortnightly paper, THE SARASWATH will appear in the beginning of December, in a most attractive special issue printed on glaze paper, art paper bound and profusely illustrated.

ADVERTISE & REAP THE BENEFITS OF VERNACULAR ADVERTISEMENT.

RATES MODERATE.

Apply:— **Secretary,**
THE SARASWATH,
UDIPI.

ಆಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಮಾರಾಟಕ್ಕೆ ಸಿದ್ಧವಿದೆ.

ಅವಾಲ್ಜಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜವೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಫ್ ಕೊಸ್ಟ್ಸ್, ಮೆಮೊರಂಡಮ್ ಒಫ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ

100 ಫೋರ್ಮುಗಳ ಕ್ರಯ 0—10—0,

ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು

೧೦ ಕ್ರಯ 0—2—0.

ಶಾರದಾ ಛಾಪಖಾನೆ,

ತೇರು ಬೀದಿ, ಮಂಗಳೂರು.

ನೋಟೀಸು.

The Canara Bank Ltd., Mangalore.
ದಿ. ಕೆನರಾ ಬ್ಯಾಂಕು ಲಿಮಿಟೆಡ್., ಮಂಗಳೂರು.

ಇದೇ 1925ನೇ ಇಸವಿ ದಶಂಬರ ತಾರೀಕು 4ನೇ ಸ್ವದೇಶಾಭಿಮಾನಿ ಪತ್ರಿಕೆಯ ಸಂಚಿಕೆಯಲ್ಲಿ ಪ್ರಕಟಿಸಿದ ನೋಟೀಸಿಗೆ ಅನುಸಾರವಾಗಿ ಈ ಕೆಳಗೆ ಹೆಸರು ಕಾಣಿಸಿದವರ ಬಾಬ್ತು ನಗಗಳನ್ನು ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿಬಂದ ಐವೇಜಿನಲ್ಲಿ ಬ್ಯಾಂಕಿಗೆ ಬಹಾ ಅಸ್ಸಲು ಬಡ್ಡಿ ವಗೈರೆ ಮೊಬಲಗು ಕಳೆದು ಬಾಕಿ ಇರುವ ಐವೇಜನ್ನು ಸದರೀಯವರಾಗಲಿ ಅವರ ವಾರಿಸ್ದಾರರಾಗಲಿ ಅವರ ಹಕ್ಕಿನ ಸಂಗತಿ ಬ್ಯಾಂಕಿಗೆ ಸಮಾಧಾನ ಪಡಿಸಿ ಪಡಕೊಂಡು ಹೋಗತಕ್ಕದ್ದೆಂತಲೂ ಹಾಗೆ ಕೊಂಡು ಹೋಗುವ ವರೇಗೆ ಸದರಿ ಐವೇಜು ಅಮಾನತ್ತು ಇಟ್ಟಿರುವದಾಗಿಯೂ ಅದಕ್ಕೆ ಬಡ್ಡಿ ಕೊಡಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸೋಣಾಗುತ್ತದೆ.

ಷರಾ:— ಐವೇಜು ಕೊಂಡುಹೋಗುವಾಗ ಈ ನೋಟೀಸಿನ ಖರ್ಚು ಕೊಡತಕ್ಕದ್ದು.

ಹೆಸರು.	ಏಲಮಿನಲ್ಲಿ ಹು. ಬ. ಮೊ.	ಬ್ಯಾಂಕಿಗೆ, ಬಹಾ ಬಡ್ಡಿ ವಗೈರೆ.	ಬಾಕಿಉಳಿದ ಮೊಬಲಗು.
ಸ್ಯಾಂಕ ಫುಟಾರಿ	123—0—0,	108- 1-11,	14-14-1.
ಸಯ್ಯೋದು ಬ್ಯಾರಿ	178—0—0,	155-10- 3,	22- 5-9.

ಕೆನರಾ ಬ್ಯಾಂಕು, ಲಿಮಿಟೆಡ್., ಮಂಗಳೂರು 17-12-'25 } K. Venkat Rao, ಸೆಕ್ರೆಟರಿ.

ನೋಟೀಸು.

ಮಿಜಾರ ತಿಮ್ಮಪ್ಪ ಪೈ ಮಂಗಳೂರು ಶಹರ ಈ ಕೆಳಗೆ ಹೆಸರು ಕಾಣಿಸಿದ ಅಸಾಮಿಗಳು ರಿಜಿಸ್ತ್ರಿ ನೋಟೀಸು ಕೊಟ್ಟಾಗ್ಯೂ, ಅಸಲು ಬಡ್ಡಿ ವಸೂಲು ಕೊಡದೆ ಇರುವ ಕಾರಣ ಸದರಿ ಅಸಾಮಿಯವರು ಬರಕೊಟ್ಟ ಪಟ್ಟಿಯಲ್ಲಿ ತೋರುವ ನಗಗಳು ಇದೇ ೧೯೨೬ನೇ ಇಸ್ವಿ ಜನವರಿ ತಾರೀಕು ೫ರ ವಳಗೆ ಈಡಿಟ್ಟ ಅಸಾಮಿಗೆ ತಂದುಕೊಟ್ಟು ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದರೆ ಈ ಕೆಳಗೆ ಕಾಣಿಸಿದ ಆಯಾಯ ಅಸಾಮಿಯವರ ಬಾಬ್ತು ಪಟ್ಟಿಯಲ್ಲಿ ತೋರುವ ಎಲ್ಲಾ ಆಭರಣಗಳು ಇದೇ ಬರುವ ೧೯೨೬ನೇ ಇಸ್ವಿ ಜನವರಿ ತಾರೀಕು ೧೨ನೇ ದಿವಸ ೧೨ ಘಂಟೆ ಸಮಯಕ್ಕೆ ತೇರುಬೀದಿಯಲ್ಲಿ ವಕೀಲ್ ಮಿಜಾರ ಗಣೇಶ ಪೈಗಳ ಆಫೀಸಿನ ಎದುರು ಬಹಿರಂಗವಾಗಿ ಏಲಂ ಮಾಡಿ ಅಸಲು ಬಡ್ಡಿ ಐವೇಜಿಗೆ ಹುಟ್ಟಿಬಂದ ಮೊಬಲಗು ರೂಪಾಯಿ ವಜಾ ಕಳೆದು ಕಡಿಮೆ ಬೀಳಬಹುದಾದ ಐವೇಜಿಗೆ ಮಾಡುವ ಸಕಲ ದಾವೆಯು ಖರ್ಚಿಗೆ ಈ ಕೆಳಗಿನ ಅಸಾಮಿಯವರು ಖರ್ಚು ಸಮೇತ ಕೂಡಿಸಿ ಕೊಡಬೇಕಾದೀತು.

ಹೆಸರು.	ಅಡವಿಟ್ಟ ತಾರೀಕು.	ಸಾಲದ ಮೊಬಲಗು	ಏಲಂ ತಾರೀಕ್ಕು ವರೆಗೆ ಬಡ್ಡಿ.
ಪಡವಿನಲ್ಲಿರುವ ಅಳ್ಕೆ ಸುಬ್ರಾಯ ಕಿಣಿ	5-12-'23,	70-0-0,	19-0-0.
ಬೊಂಡತಿಲ ಫಿರ್ಕೆ ಶ್ಯಾನು ಭಾಗ ಕೆ. ಸುಬ್ರಾಯ	17- 6-'24,	8-0-0,	2-6-0.
ಸದರಿ ಅಸಾಮಿ ಬಾಬ್ತು	18- 8-'24,	51-0-0,	14-0-0
ಸದರಿ ಅಸಾಮಿ ಬಾಬ್ತು	21- 2-'25,	120-0-0,	20-8-0.
ಜೈಲು ಬಳಿಯಲ್ಲಿರುವ, ಸೊನ್ನಾರ ಬಾಬಿಶೆಟ್ಟಿ	31- 1-'25,	115-0-0,	21-0-0.
ಸದರಿ ಅಸಾಮಿ ಬಾಬ್ತು	31- 1-'25,	24-0-0,	4-2-0.
ಅಮ್ಮೆಂಬಳ ಮೊಮ್ಮ ಬ್ಯಾರಿ.	31- 8-'21,	30-0-0,	25-0-0.
ಗೋಳಿಕಟ್ಟೆ ಬಜಾರ ದಿವಿಡ ಲಾಲ್ ಮೊಹಮ್ಮದ್ ಯಾನೆ ಬಾವ ಬ್ಯಾರಿ	22- 1-'25,	40-0-0,	7-8-0.
ಗೋಳಿಕಟ್ಟೆ, ಬಜಾರ ಮಹಮ್ಮದ್ ಅಬ್ದುಲ್ ಖಾದರ್ ಸಾಬ	25- 8-'24,	100-0-0,	25-0-0.
ಸದರಿ ಅಸಾಮಿ ಬಾಬ್ತು	11-11-'24,	25-0-0,	5-8-0.

ಮಿಜಾರ ತಿಮ್ಮಪ್ಪ ಪೈ ರುಜು.

ಉಡ್ಪಿ ತಾಲೂಕು ನೋನ್‌ಮಿಶನ್ ಯೈಡೆಡ್

—: ಶಾಲೆಗಳ ಸಂಘ :—

ಪ್ರಿಯರೇ, ಈ ಸಂಘದ ವಾರ್ಷಿಕ ಮಹಾ ಸಭೆಯು ಇದೇ ಬರುವ ತಾರೀಕು ೨೬—೧೨—'೨೫ನೇ ಶನಿವಾರ ಅಪರಾಹ್ನ ಘಂಟೆ ೨ಕ್ಕೆ ಉಡ್ಪಿ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಮ॥ ರಾ॥ ರಾ॥ ಉಡ್ಪಿ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ ಜರಗಬೇಕಾಗಿ ನಿಶ್ಚಯಿಸೋಣಾಗಿಯದೆ. ಸದರಿ ಸಭೆಗೆ ಉಡ್ಪಿ ತಾಲೂಕು ನೋನ್‌ಮಿಶನ್ ಯೈಡೆಡ್ ಶಾಲೆಗಳ ಮ್ಯಾನೇಜರರೂ, ಉಪಾಧ್ಯಾಯರೂ, ದಯಮಾಡಿ ತಪ್ಪದೆ ಬರಬೇಕಾಗಿ ಅಪೇಕ್ಷಿಸೋಣಾಗುತ್ತದೆ

ವಿಷಯಗಳು:—(೧) ಜಿಲ್ಲಾ ಪರಿಷದಕ್ಕೆ ಪ್ರತಿನಿಧಿಗಳನ್ನು ಆರಿಸುವುದು. (೨) ಜಿಲ್ಲಾ ಪರಿಷದದಲ್ಲಿ ಇಡತಕ್ಕ ವಿಷಯಗಳು. (೩) ವಾರ್ಷಿಕ ವಂತಿಗೆಯ ವಸೂಲಿ. (೪) ಇತರ ವಿಷಯಗಳು.

ಶ್ರೀ ಗಣಪತಿ ಹಾಯರ್ ಎಲಿಮೆಂಟರಿ ಶಾಲೆ, ಕುರುಕಾಲು, ತಾ. 14—12—1925. } ಕೆ. ಗಣಪಯ್ಯ ಶೆಟ್ಟಿ, ಸೆಕ್ರೆಟರಿ. ನೋನ್‌ಮಿಶನ್ ಯೈಡೆಡ್ ಶಾಲೆಗಳ ಸಂಘ ಉಡುಪಿ.

ಅಪೂರ್ವ ಸಂದರ್ಭ.

ಉತ್ತಮ ಮಾಲು! ಫ್ಯಾಶನ್ ಮಾಡಲ್!! ದರ ಸುಲಭ!!!

ಭಂಗಾರದ್ದ್‌ರಿಸ್ಟ್ ವಾಚುಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ ಮಾರಲ್ಪಡುವವು.

ರೂ. 15—12—0ರ ವಾಚು ರೂ. 7—8—0 ಕೊಡಲ್ಪಡುವುದು.

ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸ ಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

ವಿಲ್ಸನ್ ವಾಚ್ ಕೊ.,

ಬೆಲಾರ್ ಎಸ್ಟೇಟ್, ಮುಂಬಯಿ.

ಮಹಾಜನ ಸಂಸ್ಕೃತ ಕೋಲೇಜಿನ ವರ್ಧಂತ್ಯುತ್ಸವ ಮತ್ತು ಇನಾಮು ಹಂಚೋಣದ ಬಗ್ಗೆ ದ್ರವ್ಯಸಹಾಯ ಮಾಡಿದ ಮಹನೀಯರವರು.—

ಧಾರ್ಮಿಕಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ರೂ. ೩೨ ಮಹಾರಾಜೇಶ್ರಿ ಉಳಿಯದ ಕುಂಞಿರಾಮ ಅಸ್ರರವರು ರೂ. ೨೩-೬-೦.

ಮಹಾರಾಜೇಶ್ರಿಗಳಾದ ಖಂಡಿಗೆ ಈಶ್ವರ ಭಟ್ಟರವರ ಮಗ ಕೃಷ್ಣ ಭಟ್ಟರವರು, ಖಂಡಿಗೆ ಕೃಷ್ಣಭಟ್ಟರವರ ಮಗ ಕೃಷ್ಣಭಟ್ಟರವರು, ಖಂಡಿಗೆ ಗಣಪತಿ ಭಟ್ಟರವರು, ಖಂಡಿಗೆ ನಾರಾಯಣ ಭಟ್ಟರವರು, ಖಂಡಿಗೆ ವೆಂಕಪ್ಪ ಭಟ್ಟರವರು, ಖಂಡಿಗೆ ಶಂಭು ಭಟ್ಟರವರು — ರೂ. ೫—೦—೦ರ ಪ್ರಕಾರ.

ಮಹಾರಾಜೇಶ್ರಿಗಳಾದ ಬಿ. ವಾಸುದೇವ ಭಟ್ಟರವರು, ಚಂಬ್ರಿಕ್ರಿ ಮಾರು ಶಂಕರನಾರಾಯಣ ಭಟ್ಟರವರು, ಪಾಂಡೇಲು ಕೆ. ಎಸ್. ಮಹಾಲಿಂಗ ಭಟ್ಟರವರು, ಕೊಮ್ಮುಂಜೆ ಸುಬ್ರಾಯ ಭಟ್ಟರವರು, ಬದಿಯಡ್ಕ ಉಪೇಂದ್ರ ಶ್ಯಾನುಭೋಗರವರು, ಕಾವುಗೋಳಿ ಶಿವರಾಮ ಭಟ್ಟರವರು, ರೂ. ೨—೦—೦ ಪ್ರಕಾರ.

ಮಹಾರಾಜೇಶ್ರಿಗಳಾದ ನಾಡ ಎಸ್. ವಿಷ್ಣುಶರ್ಮರವರು, ಡಿ. ಸುಬ್ರಾಯ ತಂತ್ರಿಗಳವರು, ಕೊಲ್ಲಂಬಾರೆ ನಾರಾಯಣ ಭಟ್ಟರವರು, ಕೆ. ಚಿಕ್ಕಪ್ಪ ಅಳ್ವರವರು, ಕನಿಯಾಲ ಕೆ. ರಾಮಭಟ್ಟರವರು, ಕೆ. ನಾರಾಯಣ ಭಟ್ಟರವರು, ಪಿಕ್ಕ ಕೃಷ್ಣಭಟ್ಟರವರು, ಕಟ್ಟದ ಕೋರಿಕ್ಕಾರು ವೆಂಕಟರಮಣ ಭಟ್ಟರವರು, ಕೋಳಾರಿ ವಿಷ್ಣುಶರ್ಮರವರು, ಕೊಳ್ಳಿಲ ಕೃಷ್ಣಭಟ್ಟರವರು, ಕೆ. ಮಹಾಲಿಂಗ ಭಟ್ಟರು, ಪಿಳ್ಳಾನ ಮಹಾಲಿಂಗ ಭಟ್ಟರವರು ರೂ. ೧—೦—೦ ಪ್ರಕಾರ,

ಮಹಾರಾಜೇಶ್ರಿಗಳಾದ ಕೇಂತಾರು ನರಸಿಂಹ ಭಟ್ಟರವರು, ಕನ್ನೆಪಾಡಿ ವೆಂಕಟರಮಣ ಭಟ್ಟರವರು, ಎ. ರಾಮಯ್ಯ ಭಟ್ಟರವರು, ರೂ. ೦—೧೨—೦ ಪ್ರಕಾರ. ಮಹಾರಾಜೇಶ್ರಿಗಳಾದ ಖಂಡಿಗೆ ಶಂಭುಭಟ್ಟರವರು, ಬೊಳಂಬು ಮಹಾಲಿಂಗ ಭಟ್ಟರವರು, ಕುಂಜಾರು ಈಶ್ವರ ಮಧ್ಯಸ್ಥರವರು, ಕೋಡುಮ್ಮಾಡು ದಿವಾಕರ ಭಟ್ಟರವರು, ಬೊಳಂಬು ಸುಬ್ರಾಯಭಟ್ಟರ ಮಗ ಮಹಾಲಿಂಗ ಭಟ್ಟರವರು, ಕೋರಿಕ್ಕಾರು ವಿಷ್ಣು ಭಟ್ಟರವರು, ಕೆ. ಶಂಕರನಾರಾಯಣ ಭಟ್ಟರವರು, ಎಸ್. ಈಶ್ವರ ಭಟ್ಟರವರು, ಕುಳಮರ್ವ ಮಹಾಲಿಂಗ ಭಟ್ಟರವರು, ಮಿಂಚಿನಡ್ಕ ವೆಂಕಪ್ಪ ಭಟ್ಟರವರು, ಮೂಲಡ್ಕ ವೆಂಕಪ್ಪ ಭಟ್ಟರವರು, ಸುಳ್ಯೋಡು ವೆಂಕಪ್ಪ ಭಟ್ಟರವರು ಅಳಕ್ಕೆ ಗೋಪಾಲಕೃಷ್ಣ ಭಟ್ಟ, ಕಾನತ್ತಿಲ ಶಂಭು ಭಟ್ಟರವರು, ಮೂಲಡ್ಕ ಮಹಾಲಿಂಗ ಭಟ್ಟರವರು, ಸೇಡಿಗುಮ್ಮೆ ಶಂಕರನಾರಾಯಣ ಭಟ್ಟರವರು, ಪುದುಕ್ಕೋಳಿ ಶಂಕರ ಭಟ್ಟರವರು, ಕುಂಬಳೆ ಪಾಠಾಳಿ ವೆಂಕಪ್ಪಯ್ಯನವರು, ಅಂಬಟೆಗಯ ಗೋವಿಂದ ಭಟ್ಟರವರು, ಪಾಂಡೇಲು ವೆಂಕಪ್ಪ ಭಟ್ಟರವರು, ಶಿಮುಲಡ್ಕ ಶಂಭುಭಟ್ಟರವರು, ಉಂಡೆಮನೆ ವಿಷ್ಣು ಭಟ್ಟರವರು ೦—೮—೦ ಪ್ರಕಾರ. ಮಹಾರಾಜೇಶ್ರಿಗಳಾದ ಪಡಿಯಡ್ಪು ಪುರುಷೋತ್ತಮ ಭಟ್ಟರವರು, ಪಂಜತ್ತಡ್ಕ ಪರಮೇಶ್ವರ ಭಟ್ಟರವರು ೦—೬—೦ ಪ್ರಕಾರ. ಮಹಾರಾಜೇಶ್ರಿಗಳಾದ ಅಳಕ್ಕೆ ವೆಂಕಪ್ಪ ಭಟ್ಟರವರು, ಅಂಬಟೆಗಯ ವೆಂಕಪ್ಪ ಭಟ್ಟರವರು ಪುದುಕ್ಕೋಳಿ ಗೋವಿಂದ ಭಟ್ಟರವರು, ಬಾಯಿಕ್ಕಾರೆ ವೆಂಕಟರಮಣ ಭಟ್ಟ, ಖಂಡಿಗೆ ಶಂಭು ಭಟ್ಟರವರು ೦—೪—೦ ಪ್ರಕಾರ ಜುಮ್ಲಾ ರೂಪಾಯಿ ೧೨೭—೦—೦.

ಎಸ್. ವೆಂಕಪ್ಪ ಶರ್ಮಾ.
ಶಾಲಾ ವರ್ಧಂತ್ಯುತ್ಸವದ ಕಾರ್ಯದರ್ಶಿ.

ವಿವಿಧ ವಿಷಯಗಳು.

ಪಂಜಾಬ ಜೈಲುಗಳಲ್ಲಿ ಬದಲಾವಣೆ.

ಪಂಜಾಬ ದೇಶದ ಜೈಲುಗಳ ಅಭಿವೃದ್ಧಿಯ ಕಮಿಟಿಯ ಮುಂದೆ ಪಂಜಾಬ ಕೊಂಗ್ರೆಸ ಕಮಿಟಿಯ ಜನರಲ್ ಸೆಕ್ರೆಟರಿಯವರಾದ ಡೋಕ್ಟರ್ ಸತ್ಯಪಾಲರವರು ಈ ಕೆಳಗಿನ ರೀತಿಯಲ್ಲಿ ತನ್ನ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ನಾನು, ಮಾರ್ಶಲ್ ಲಾ ಪ್ರಕಾರ ಸೆರೆಯಲ್ಲಿದ್ದೆನು. ಆಗ ಜೈಲುಗಳ ಒಳಗಡೆ ನಡೆಯುವ ಅನರ್ಥಗಳನ್ನು ನಾನು ನೋಡಿರುತ್ತೇನೆ. ಜೈಲಿನೊಳಗೆ ಜೈಲು ಕಾನೂನಿಗೆ ವಿರೋಧವಾಗಿ ಅನೇಕ ತರದ ಅನುಕೂಲತೆಗಳು ಬಂದಿವಾನರಿಗೆ ಒದಗಿಸಿ ಕೊಡಲ್ಪಡುತ್ತವೆ. ಜೈಲು ಉದ್ಯೋಗಸ್ಥರಿಗೆ ಲಂಚ ಕೊಟ್ಟರೆ ಬಂದಿವಾನರಿಗೆ ಬಂಗಿ, ಅಫೀಮು, ಮೊದಲಾದ ಮಾದಕ ಪದಾರ್ಥಗಳನ್ನೂ, ಅಮಲುಕರವಾದ ಮದ್ಯವನ್ನೂ, ಒದಗಿಸಿಕೊಡುತ್ತಾರೆ. ಲಂಚಕೊಡುವ ಬಂದಿವಾನರನ್ನು ಜೈಲ ಅಧಿಕಾರಿಗಳು ಪ್ರೀತಿಯಿಂದ ನಡಿಸುತ್ತಾರೆ. ಇತರ ಬಂದಿವಾನರನ್ನು ಕ್ರೂರತನದಿಂದ ನಡಿಸುತ್ತಾರೆ. ಆದುದರಿಂದ ಜೈಲುಗಳ ಕ್ರಮಗಳನ್ನು ತಿದ್ದುಪಡಿಮಾಡುವಾಗ ಮೇಲಿನ ಸಂಗತಿಗಳನ್ನು ಲಕ್ಷ್ಯದಲ್ಲಿ ಇಟ್ಟುಕೊಳ್ಳಬೇಕಾಗಿದೆ. ಆಫೀಸರರಲ್ಲದ ಇತರ ಮಹನೀಯರು ಜೈಲುಗಳನ್ನು ಸಂದರ್ಶಿಸಿ ಬರೆದ ಸೂಚನೆಗಳಿಂದ ಏನೊಂದೂ ಪ್ರಯೋಜನವಾಗಲಿಲ್ಲ. ಆದುದರಿಂದ ಇನ್ನು ಮುಂದೆ ದೇಶಭಕ್ತರಾದ ಜನರನ್ನು ಜೈಲುಗಳಲ್ಲಿ ಸಂದರ್ಶಿಸುವಂತೆ ಕಾನೂನನ್ನು ಏರ್ಪಡಿಸುವದು ಒಳ್ಳೇದು. ಜೈಲುಗಳು ಬಂದಿವಾನರನ್ನು ತಿದ್ದಿ ಅವರು ಮುಂದಕ್ಕೆ ಒಳ್ಳೇ ನಡತೆಯವರಾಗುವಂತೆ ಮಾಡುವ ಸ್ಥಳವಾಗಿರಬೇಕಲ್ಲದೆ, ತಪ್ಪು ಮಾಡಿದವರನ್ನು ಕಾಯಿಸುವ ಕೊಠಡಿಗಳಾಗಿರಬಾರದು. ಕೆಟ್ಟ ದುರಾಚಾರಗಳಿಗೆ ಎಡೆಕೊಡುವ ಜೈಲ ಉದ್ಯೋಗಸ್ಥರನ್ನು ತೆಗೆದು ಹಾಕಿ ಯೋಗ್ಯರಾದವರನ್ನು ಜೈಲು ಉದ್ಯೋಗಸ್ಥರಾಗಿ ನೇಮಿಸಬೇಕು. ಸೆಂಟ್ರಲ್ ಜೈಲುಗಳನ್ನು ತೆಗೆದು ಹಾಕಿ, ಜಿಲ್ಲೆಗೊಂದು ಡಿಸ್ಟ್ರಿಕ್ಟ ಜೈಲುಗಳನ್ನು ಮಾಡುವದೇ ಉತ್ತಮ.

ಒಂದು ಬ್ರಿಟಿಷ್ ಹಡಗದಲ್ಲಿ ಒಬ್ಬ ಹಿಂದೂ ಸ್ತ್ರೀಗೆ ಬಿಳಿಜಾತಿಯ ಸ್ತ್ರೀಯು ಮಾಡಿದ ಅವಮಾನ.

ಒಬ್ಬ ಹಿಂದೂ ಸ್ತ್ರೀಯು ಮಾರ್ಸೆಲ್ಸಿಸ್‌ನಿಂದ ಮುಂಬಯಿಗೆ ಬರುವರೆ ಕೆಬಿನ್ ಟಿಕೇಟನ್ನು ಪಡಕೊಂಡು ಪ್ರಯಾಣಮಾಡುತ್ತಿದ್ದಳು. ಆ ಹಿಂದೂ ಸ್ತ್ರೀಯು ಪ್ರವೇಶಿಸಿದ ಕೆಬಿನಿನಲ್ಲಿ ಒಂದು ಯುರೋಪಿಯನ್ ಸ್ತ್ರೀಯು ಕೂಡ ಪ್ರಯಾಣಮಾಡುತ್ತಿದ್ದಳು. ಹಿಂದಿ ಸ್ತ್ರೀಯು ಕೆಬಿನಿನ ಒಳಗೆ ಇದ್ದದನ್ನು ನೋಡಿ ತಾನು ಆ ಕೆಬಿನಿನ ಒಳಗೆ ಹೋಗಲಿಕ್ಕಿಲ್ಲವಾಗಿಯೂ ಮತ್ತು ಹಿಂದೂ ಸ್ತ್ರೀಯರ ಜೊತೆ ಪ್ರಯಾಣಮಾಡುವುದರ ಬದಲಿಗೆ ಸ್ಟೀಮರಿನ ಹೊರಭಾಗದಲ್ಲಿಯಾದರು ಮಲಗಿಕೊಳ್ಳುವೆನೆಂದು ಸ್ಟೀಮರ್ ಅಧಿಕಾರಿಗಳಿಗೆ ಗದರಿಸಿದಳು. ಹಿಂದೀ ಸ್ತ್ರೀಯು ಈ ಮಾತುಗಳನ್ನು ಕೇಳಿ ಬೇಜಾರಪಟ್ಟು ಸ್ಟೀಮರಿನ ಅಧಿಕಾರಿ ಹತ್ತಿರ ಕೇಳಿಕೊಂಡು ಇನ್ನೊಂದು ಕೆಬಿನಿಗೆ ಹೋದಳು. ಮತ್ತು ಸ್ಟೀಮರಿನ ಅಧಿಕಾರಿಗಳು ಕೂಡ ಇವಳನ್ನು ಹಾಗೆ ಮಾಡಲು ವರ್ತಿಸಿದರು. ಬಿಳಿ ಜನರು ಹಿಂದೂಗಳೊಡನೆ ಪ್ರಯಾಣಮಾಡುವುದು ಅವಮಾನಕರವಾದದ್ದು ಎಂದು ಆ ಯುರೋಪಿಯನ್ ಸ್ತ್ರೀಯು ಅವಳ ಅಭಿಪ್ರಾಯ ಕೊಟ್ಟಿರುವಳಂತೆ. ಈಗಿನ ಕಾಲದ ಮಹಿಮೆ! ಎಲ್ಲಿ ಹೋದರೂ ಹಿಂದೂಗಳು ಕರಿಯರೆಂದು ಬೇಕಾಗುತ್ತದಲ್ಲ. ಇನ್ನು ಮುಂದಕ್ಕೆ ಬಿಳಿ ಜನರು ನಡೆಯುವ ರಾಜರಸ್ತೆಯಲ್ಲಿ ಹಿಂದೂಗಳು ನಡೆಯಬಾರದಾಗಿ ಬಿಳಿ ಜನರು ಹೇಳಿ ಕಾನೂನು ಮಾಡುವರೋ ನೋಡಬೇಕಿದೆ.

ವಿದೇಶ ವರ್ತಮಾನ.

— ಜಿನೇವಾದಲ್ಲಿ ನಡೆದ ಲೀಗ್ ಒಫ್ ನೇಶನ್ಸಿನ ಸಭೆಯಲ್ಲಿ ಮೋಸಲ ಪ್ರಾಂತವನ್ನು ಇರಾಕಿಗೆ ಬಿಟ್ಟುಕೊಡಬೇಕೆಂದು ನಿಶ್ಚಯಿಸಲಾಯಿತು. ಆದರೆ ಈ ಸಭೆಗೆ ತುರ್ಕಿ ದೇಶದ ಕಡೆಯಿಂದ ಪ್ರತಿನಿಧಿಗಳು ಬರಲಿಲ್ಲ. ತುರ್ಕಿಯವರು ಇದಕ್ಕೆ ಒಪ್ಪುವದಿಲ್ಲ.

— ಇಂಡಿಯಕ್ಕೆ ಬರುವ ಹೊಸ ವ್ಯಾಸರಾಯರಾದ ರ್ಯಾಟ್ ಒನರೇಬಲ್ ಎಡ್ವರ್ಡ ವುಡ್ ಸಾಹೇಬರವರು, ಮೇಜೊರ್ ಸಿ. ಒ. ಹಾರ್ವಿಯವರನ್ನು ಖಾಸಗಿ ಸೆಕ್ರೆಟರಿಯವರಾಗಿ ನೇಮಿಸಿರುತ್ತಾರೆ.

— ಫ್ರಾನ್ಸ ದೇಶದಲ್ಲಿ ಹೊಸ ಹೊಸ ನಮೂನೆಯ ತೆರಿಗೆಗಳನ್ನು ವಿಧಿಸಿದ್ದರಿಂದ ಗಲಾಟೆಗಳುಂಟಾಗಿ ಮಂತ್ರಿ ಸಭೆಯವರು ತಿರಿಗಿ ರಾಜಿನಾಮೆಯನ್ನು ಕೊಟ್ಟಿರುತ್ತಾರೆ.

— ಒಸ್ಟ್ರೇಲಿಯಾ ಖಂಡದಲ್ಲಿ ಕಳೆದ ವಾರ ಸುಮಾರು ೩೦ ಮಿನಿಟುಗಳ ವರೆಗೆ ಭೂಮಿಯು ಕಂಪಿಸಿತು. ಯಾವ ಯಾವ ಭಾಗಗಳಲ್ಲಿ ಹಾನಿಯುಂಟಾಗಿದೆ ಎಂದು ತಿಳಿಯಲಿಲ್ಲವಂತೆ.

— ಇಂಗ್ಲೆಂಡಿನಲ್ಲಿ ಕೆಲಸವಿಲ್ಲದೆ ಅಲೆಯುತ್ತಿದ್ದವರ ಸಂಖ್ಯೆಯು ಕಳೆದವಾರ ೧೧೬೧,೦೦೦ ಇದ್ದಿತು. ಹಿಂದಿನ ವಾರಕ್ಕಿಂತ ಇವರು ೪೨೭೫ ಕಡಿಮೆಯಾಗಿದ್ದಾರೆ.

— ಜರ್ಮನಿಯವರು ಯುದ್ಧಕ್ಕೆ ಮುಂಚೆ ಇದ್ದ ತಮ್ಮ ವ್ಯಾಪಾರದ ಮಹತ್ವವನ್ನು ಪುನಃ ಉಂಟುಮಾಡಿಕೊಳ್ಳುವರು. ಪದಾರ್ಥಗಳ ತಯಾರಿಯಲ್ಲಿಯೂ, ಕಡಿಮೆ ಬೆಲೆಯಲ್ಲಿಯೂ ಇತರ ದೇಶದ ಕೈಗಾರಿಕೆಗಳನ್ನು ಮೀರಿಸುತ್ತಿರುವುದರಿಂದ ಕಳೆದುಹೋಗಿದ್ದ ಇವರ ವ್ಯಾಪಾರವು ಮತ್ತೆ ಈಗ ಅವರ ಕೈವಶವಾಗುತ್ತಿರುವುದು. ಆಸ್ಟ್ರೇಲಿಯಾ ದೇಶದವರು ಕಳೆದ ವರ್ಷ ಪರದೇಶಗಳಿಂದ ತರಿಸಿದ ೩೧೮ ಸಾವಿರ ಪವರನ್‌ಗಳ ಆಟದ ಸಾಮಾನು ಪೈಕಿ ಜರ್ಮನಿ ರಾಜ್ಯವೊಂದೇ ೧೩೪ ಸಾವಿರ ಪವರನ್‌ಗಳ ಸಾಮಾನುಗಳನ್ನು ಒದಗಿಸಿರುತ್ತದೆ.

ಒಳದೇಶ ವರ್ತಮಾನ.

— ಆಗ್ರಾ ಮತ್ತು ಅಯೋಧ್ಯಾ ಸಂಯುಕ್ತ ಸಂಸ್ಥಾನದಲ್ಲಿ ಪ್ರಾಥಮಿಕ ವಿದ್ಯೆಯನ್ನು ಕಡ್ಡಾಯವಾಗಿಯೂ ಧರ್ಮಾರ್ಥವಾಗಿಯೂ ಕೊಡಬೇಕೆಂಬದರ ವಿಷಯ ಒಂದು ಬಿಲ್ಲು ಇದೇ ತಿಂಗಳ ೧೬ನೇ ತಾರೀಕಿಗೆ ನ್ಯಾಯವಿಧಾಯಕ ಸಭೆಯ ಮುಂದೆ ಬಂದು ಅದರ ವಿಷಯ ಆಲೋಚಿಸುವುದಕ್ಕಾಗಿ ಒಂದು ಕಮಿಟಿಯನ್ನು ನೇಮಿಸಿರುತ್ತಾರೆ. ಈ ಕಮಿಟಿಯವರು ೧೯೨೬ನೇ ಇಸವಿ ಫೆಬ್ರುವರಿ ತಿಂಗಳ ೨೫ನೇ ತಾರೀಕಿನೊಳಗೆ ತಮ್ಮ ರಿಪೋರ್ಟನ್ನು ಕಳುಹಿಸಬೇಕಾಗಿದೆ.

— ಪುದುಕೋಟೆ ಸಂಸ್ಥಾನದಲ್ಲಿ ಪ್ರಾಥಮಿಕ ವಿದ್ಯೆಯನ್ನು ಧರ್ಮಾರ್ಥವಾಗಿಯೂ ಕಡ್ಡಾಯವಾಗಿಯೂ ಕೊಡಬೇಕೆಂಬ ಕಾನೂನು ಜಾರಿಗೆ ಬಂತು.

— ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಮತ್ತು ಅಂಧ್ರಾ ವೆಲ್ಲಿ-ಪವರ್-ಸಪ್ಲೈ ಕಂಪೆನಿಯವರ ವರುಷಾವಧಿ ಮೀಟಿಂಗು ನಡೆದು ಪಾಲುಗಾರರಿಗೆ ಮೊದಲನೇ ಕಂಪೆನಿಯಲ್ಲಿ ಶೇಕಡಾ ೫ರ ಪ್ರಕಾರವೂ ಎರಡನೆ ಕಂಪೆನಿಯಲ್ಲಿ ಶೇಕಡಾ ೭ರ ಪ್ರಕಾರವೂ ಮುನಾಫೆಯೂ ಹಂಚಬೇಕೆಂದು ಕಳೆದ ೧೬ನೇ ತಾರೀಕಿನಲ್ಲಿ ನಡೆದ ಈ ಕಂಪೆನಿಗಳ ಮೀಟಿಂಗಿನಲ್ಲಿ ನಿಶ್ಚಯಿಸಲಾಯಿತು.

— ಈ ವರ್ಷ ಕಾನಪುರದಲ್ಲಿ ಕೂಡುವ ಕೊಂಗ್ರೆಸ್ ಸಭೆಗೆ ೪೦೦೦ ಪ್ರತಿನಿಧಿಗಳು ಬರುವರು. ಅಂಧ್ರ ದೇಶದಿಂದ ೧೫೫; ಬಿಹಾರ ೫೮೮; ಡಿಲ್ಲಿ ೫೫; ಬರ್ಮಾ ೪೫; ಮುಂಬಾಯಿ ೨೨; ಸಿಂಧುದೇಶ ೪೪; ಗುಜರಾತ ೯೬; ಪಂಜಾಬ ೧೫೨; ಮಹಾರಾಷ್ಟ್ರ ೨೧೬; ಕರ್ನಾಟಕ ೧೩೬; ಬಿರಾರ್ ೬೧; ಬಂಗಾಳ ಮತ್ತು ಸುರ್ಮಾವೆಲ್ಲಿ ೯೭೮; ಮಧ್ಯಪ್ರಾಂತ್ಯ ಹಿಂದುಸ್ಥಾನಿ ೧೭೮; ಸಂಯುಕ್ತ ಸಂಸ್ಥಾನ ಮತ್ತು ಉಳಿದ ಉರಿಯಾ, ತಮಿಳು, ಮಲೆಯಾಳ ಮತ್ತು ಇನ್ನು ಉಳಿದ ಪ್ರಾಂತ್ಯಗಳಿಂದ ಸುಮಾರು ಒಂದು ಸಾವಿರ ಪ್ರತಿನಿಧಿಗಳು.

— ಕೊಂಗ್ರೆಸಿನ ವಾರದಲ್ಲಿ ಕಾನಪುರದಲ್ಲಿ ಸ್ವದೇಶಿ ವಸ್ತುಪ್ರದರ್ಶನವು ಜರಗುವುದು. ಇದೇ ಸಮಯ ಹಿಂದು ದೇಶದ ಪುರಾತನ ಕಾಲದ ಚಿತ್ರಕಲೆಯ ಒಂದು ಪ್ರತ್ಯೇಕ ಕೊಠಡಿಯನ್ನು ತಯಾರಿಸಿರುತ್ತಾರೆ.

— ಕಾನ್‌ಪುರ್ ಕೊಂಗ್ರೆಸ್ಸಿನ ಪ್ರೆಸಿಡೆಂಟರಾದ ಸರೋಜಿನಿ ದೇವಿಯವರು ತಾ. ೨೨ಕ್ಕೆ ಮುಂಬಾಯಿಯಿಂದ ತೆರಳುವರು. ಮಹಾತ್ಮಾ ಗಾಂಧಿಯವರು ಬಸ್‌ವಾಲ್ ಎಂಬಲ್ಲಿಂದ ಸರೋಜಿನಿಯವರೊಡನೆ ಸೇರಿ ಇಬ್ಬರೂ ತಾ. ೨೩ನೇ ಬುಧವಾರ ಸಾಯಂಕಾಲ ಕಾನ್‌ಪುರಿಗೆ ಸೇರುವರು.

— ಮುಂಬಾಯಿಯಿಂದ ಕೊಂಗ್ರೆಸಿನವರಿಗಾಗಿ ಸ್ಪೆಶಲ್ ಟ್ರೈನುಗಳು ಬಿಡಲಾಗುವುದಿಲ್ಲ.

— ಕಾನ್‌ಪುರ್ ಕೊಂಗ್ರೆಸಿನ ಸ್ವಾಗತ ಕಮಿಟಿಯವರು ಮಾಡಿರುವ ಕಾರ್ಯಕ್ರಮ:— ಪಂಡಿತ ಮೋತಿಲಾಲ ನೇಹರುರವರು ಮತ್ತು ಜವಾಹಿರ್ ಲಾಲ ನೇಹರುರವರು ತಾ. ೧೭ಕ್ಕೆ ಮುಟ್ಟುವರು. ಇತರ ಎಲ್ಲಾ ಕಡೆಗಳಿಂದ ವೊಲಂಟಿಯರರು ಬಂದು ಸೇರುತ್ತಿರುವರು. ತಾ. ೧೮ಕ್ಕೆ ಆಗ್ರಾದಿಂದ ಠಾಕೂರ ಚಿದಾರಸಿಂಗರು ೫೫ ವೊಲಂಟಿಯರೊಡನೆ ಬಂದಿರುವರು. ತಾ. ೨೧, ೨೬ ಮತ್ತು ೩೧ಕ್ಕೆ ಮಲ್ಲಯುದ್ಧ ಇತ್ಯಾದಿ ಪಂದ್ಯಾಟಗಳು ಕೊಂಗ್ರೆಸಿಗೆ ಬಂದವರ ಮನಸ್ಸನ್ನು ವಿನೋದಗೊಳಿಸುವುದಕ್ಕಾಗಿ ನಡೆಯಲಿಕ್ಕಿರುವುವು. ಸುಮಾರು ೩೦ ಕಾಸ್ಪರನ್ನುಗಳು ತಿಲಕನಗರದಲ್ಲಿ ಸೇರಲಿಕ್ಕಿರುವವು. ಕಾನ್‌ಪುರಿನವರು ತಮ್ಮ ಮುತ್ಸಾದ ಚಟುವಟಿಕೆಗಳಿಂದ ಆರಿಸಲ್ಪಟ್ಟ ಅಧ್ಯಕ್ಷರಿಗೆ ತಕ್ಕ ಸ್ವಾಗತಾಭಿವಾದನವನ್ನು ಕೊಡಲಿರುವರು.

— ತಾ. ೨೧ಕ್ಕೆ ಮದರಾಸಿನಿಂದ ಸ್ವರಾಜ್ಯಪಾರ್ಟಿಯ ಪ್ರೆಸಿಡೆಂಟರಾದ ಶ್ರೀನಿವಾಸ ಐಯ್ಯಂಗಾರರು ಮತ್ತು ಇತರ ವೊಲಂಟಿಯರರು ಕೂಡ ಕಾನ್‌ಪುರಿಗೆ ತೆರಳಿರುವರು.

— ಕುಡಿಕತನವನ್ನು ಯಾವ ವಿಧದಿಂದಲಾದರೂ ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಎಲ್ಲಾ ನೆಕಸಂಕಲ್ಪರೂ ಸಾಧಿಸಬೇಕೆಂದು ಶ್ರೀ ರಾಜಗೋಪಾಲಾಚಾರ್ಯರು ಒಂದು ಮನವಿಯನ್ನು ಕಳುಹಿಸಿರುತ್ತಾರೆ.

— ಮುಂಬಯಿಯಲ್ಲಿ ಹಾಲ್ಲು ಅದೆಯ ವಾರವೆಗಳನ್ನು ಮಾಡುವ ... ಪೋಲೀಸಿನವರು ... ಹುವರು.

— ವ್ಯಾಸರಾಯರ ಕಡೆ ದಕ್ಷಿಣ ಅಫ್ರಿಕದಲ್ಲಿ ಹಿಂದಿಯರ ಬಗ್ಗೆ ಏರ್ಪಡಿಸಲ್ಪಟ್ಟ ಕ್ಲಾಸ್ ಏರಿಯಾ ಬಿಲ್ಲಿನ ಕುರಿತು ಮನವಿಮಾಡಿದಲ್ಲಿ ತಾನು ಆದಷ್ಟು ತ್ವರೆಯಲ್ಲಿಯೇ ತಕ್ಕ ವ್ಯವಸ್ಥೆಯನ್ನು ಮಾಡುವುದರ ಗೋಸ್ಕರ ಅಲ್ಲಿಯ ಯೂನಿಯನ್ ಸರಕಾರದವರೊಡನೆ ಮನವಿಮಾಡಿಕೊಳ್ಳುವೆನೆಂದು ತಿಳಿಸಿರುವರು.

— ಲಾಹೋರಿನಲ್ಲಿರುವ ವಿಧವಾ ವಿವಾಹ ಸಹಾಯಕ ಸಭೆಯವರು ತಮ್ಮ ಆಶ್ರಯದಲ್ಲಿ ಈ ವರ್ಷದ ಜನವರಿ ಪ್ರಾರಂಭದಿಂದ ನವಂಬರು ಅಖೈರು ವರೆಗೆ ಇಂಡಿಯಾ ದೇಶದಲ್ಲೆಲ್ಲಾ ಒಟ್ಟು ೨೩೬೭ ವಿಧವಾ ವಿವಾಹಗಳನ್ನು ಮಾಡಿಸಿರುವರು. ಇವುಗಳನ್ನು ಜಾತಿಗಳ ಮೇಲೆ ವಿಂಗಡಿಸಿದರೆ, ಬ್ರಾಹ್ಮಣರಲ್ಲಿ ೪೦೧, ಕ್ಷತ್ರಿಯರಲ್ಲಿ ೪೭೫, ಅರೋರ ಜನರಲ್ಲಿ ೫೧೬, ಅಗ್ಗರವಾಲರಲ್ಲಿ ೧೫೬, ಕಾಯಸ್ಥರಲ್ಲಿ ೬೮, ರಜಪೂತರಲ್ಲಿ ೧೬೪, ಸಿಕ್ಕರಲ್ಲಿ ೨೧೨, ಇತರ ಜಾತಿಯವರಲ್ಲಿ ೩೭೫. ಅಧಿಕಶ್ಯಗಳ ಮೇಲೆ ಹಂಚಿದರೆ, ಪಂಜಾಬ್ ವಾಯುವ್ಯ ಪ್ರಾಂತಗಳಲ್ಲಿ ೧೮೧೫, ಸಿಂಧೂದೇಶದಲ್ಲಿ ೩೭, ದೆಹಲಿಯಲ್ಲಿ ೩೯, ಸಂಯುಕ್ತ ಅಧಿಕಶ್ಯಗಳಲ್ಲಿ ೩೨೨, ಬಂಗಾಳದಲ್ಲಿ ೬೪, ಮದ್ರಾಸಿನಲ್ಲಿ ೨೩, ಬೊಂಬಾಯಿಯಲ್ಲಿ ೧೧, ಮಧ್ಯಪ್ರಾಂತಗಳಲ್ಲಿ ೭, ರಾಜಪುತ್ರಸ್ಥಾನದಲ್ಲಿ ೧೪, ಹೈದರಾಬಾದ್ ಸಂಸ್ಥಾನ ೫, ಅಸ್ಸಾಂ ೩೦. ಈ ರೀತಿ ವಿಧವಾ ವಿವಾಹಗಳಾಗಿರುತ್ತವೆ ಅಂದರೆ ಉತ್ತರದೇಶದಲ್ಲಿ ವಿಧವಾ ವಿವಾಹವು ಹರಡುತ್ತಿರುವ ಹಾಗೆ ದಕ್ಷಿಣ ಇಂಡಿಯಾದಲ್ಲಿ ಹರಡುತ್ತ ಇಲ್ಲ.

— ಅಸಾಧ್ಯವಾದ ಮಳೆಯಿಂದ ಮದ್ರಾಸ್ ಪಟ್ಟಣದಲ್ಲಿ ಬಹಳ ಮನೆಗಳು ಉರುಳಿ ಅನೇಕರು ಮೃತಪಟ್ಟರು.

— ಪಂಜಾಬ್ ನ್ಯಾಯವಿಧಾಯಕ ಸಭೆಯಲ್ಲಿ ಸರದಾರ್ ಜೋಧ್ ಸಿಂಗ್ ಎಂಬವರು ಆ ಪ್ರಾಂತ್ಯದ ಬಂದಿಖಾನೆಗಳಲ್ಲಿರುವ ಶಿಕ್ಷೆಯನ್ನು ಹೊಂದಿರುವ ಅಥವಾ ಇನ್ನೂ ವಿಚಾರಣೆಯಾಗದೇ ಇರುವ ಸಿಕ್ ಖೈದಿಗಳ ನ್ನೆಲ್ಲಾ ಬಿಡುಗಡೆ ಮಾಡಬೇಕೆಂಬದಾಗಿ ಒಂದು ಠರಾವನ್ನು ತಂದಿರುವರು.

— ಪಾಟಿಯಾಲಾ ಮಹಾರಾಜರು ಮುಂಬಾಯಿಯಿಂದ ಪಾಟಿಯಾಲಾಕ್ಕೆ ರೈಲಿನಲ್ಲಿ ಒಕ್ಟೋಬರ ತಿಂಗಳಲ್ಲಿ ಪ್ರಯಾಣಮಾಡುತ್ತಿರುವಾಗ ಮಹಾರಾಜರ ಚಿನ್ನ, ಬೆಳ್ಳಿಸಾಮಾನುಗಳು, ನಗಗಳು ಇವುಗಳನ್ನಿಟ್ಟಿದ್ದ ಒಂದು ಪೆಟ್ಟಿಗೆಯು ಕಳವಾಗಿರುವುದು. ಈಗ ಮುಂಬಾಯಿ ಪೋಲೀಸಿನವರು ಅದರ ಪತ್ತೆಹಚ್ಚುತ್ತಲಿದ್ದಾರೆ

ದಕ್ಷಿಣ ಕನ್ನಡ.

ಕಾಸರಗೋಡು:— ಕಳೆದ ವಾರದಲ್ಲಿ ಮಾನ್ಯ ಡಿಸ್ಟ್ರಿಕ್ಟ ಜಡ್ಜರ ಸವಾರಿಯು ಇಲ್ಲಿಯ ಮುನ್ಸೀಫ್ ಕೋರ್ಟು ಇನ್‌ಸ್ಪೆಕ್ಷನ್ ಬಗ್ಗೆ ಚಿತ್ತಯಿಸೋಣಾಗಿತ್ತು. ಇನ್‌ಸ್ಪೆಕ್ಷನ್ ಕಳೆದ ನಂತರ ಕಳೆದ ಆದಿತ್ಯವಾರ ದಿನ ೪ ಘಂಟೆಗೆ ಸದರಿಯವರಿಗೆ ವ, ಮುನ್ಸೀಫ್ ಕೋರ್ಟು ವ ಇತರ ಕಚೇರಿಗಳಿಗೆ ಸಂಬಂಧಪಟ್ಟ ಆಫೀಸರರಿಗೂ ಬಾರ್ ಎಸೋಸಿಯೇಶನ್ನಿನ ಎಲ್ಲಾ ಮೆಂಬರರಿಗೂ, ಒಂದು ದೊಡ್ಡ ಟೀಪಾರ್ಟಿ ಸತ್ಕಾರವು ಮುನ್ಸೀಫ್ ಕೋರ್ಟು ಹಿಂಬದಿ ಇರುವ ಟೆನ್ನಿಸ್ ಕೋರ್ಟಿನಲ್ಲಿ ನಡೆಯಿತು. ಟೀಪಾರ್ಟಿಯಾದೊಡನೆ, ಮಾನ್ಯ ಜಡ್ಜರವರು ಅದೇ ದಿನ ಮೈಲ್ ಬಂಡಿಗೆ ಮಂಗಳೂರಿಗೆ ಹೋದರು.

ತಾ. ೯, ೧೦ ವ ೧೧ನೇ ದಿನ ಹೆಚ್ಚಿನ ಗಾಳಿ ವ ಸ್ವಲ್ಪ ಮಳೆಯು ಕೂಡ ಬಿಡದೆ ಬಂದಿರುತ್ತದೆ. ಗಾಳಿಯು ತಕ್ಕ ಮಟ್ಟಿಗೆ ಜೋರಾಗಿದ್ದರೂ ಹೆಚ್ಚಿನ ಹಾವಳಿಯುಂಟಾಗಲಿಲ್ಲ. ಆದರೆ ಈ ಗಾಳಿಯಿಂದಲೂ ತಪ್ಪದೆ ಮೆಲ್ಲನೆ ಸುರಿಯುತ್ತಿರುವ ಮಳೆಯಿಂದಲೂ ಉಂಟಾದ ಚಳಿಯು ಈಚೆಗೆ ಯಾರೂ ಅನುಭವಿಸಲಾರದಷ್ಟಾಗಿತ್ತು. ಈ ಎರಡು ದಿನ ಮಳೆಯಿಂದ ಇಳಿದು ಹೊರಗೆ ಹೋಗುವದೂ ಕೂಡ ಒಂದು ನಮೂನೆಯ ಶಿಕ್ಷೆಯಂತೆಯೇ ಪರಿಣಮಿಸಿತು. ಈಗ ಪುನಃ ಎಂದಿನಂತೆ ಮಳೆಗಾಳಿಗಳು ಶಾಂತವಾಗಿ ಬಿಸಿಲು ಕಾಯುತ್ತಿದೆ.

ಇಲ್ಲಿಯ ನುಳ್ಳಿಪ್ಪಾಡಿ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ವರ್ಷ ವರ್ಷ ನೆರವೇರುವ ಸ್ಕೂಲ್ ಡೇಯು ಇದೇ ತಾ. ೧೭ನೆಯ ಶನಿವಾರ ಸದರಿ ಶಾಲೆಯಲ್ಲಿ ನಡೆಯಲಿಕ್ಕಿದೆ. ಈ ದಿನದ ಕಾರ್ಯಗಳೆಲ್ಲಾ ಇಲ್ಲಿಯ ಮಾನ್ಯ ಮೆಜಿಸ್ಟ್ರೇಟರಾದ ಮ॥ ರಾ॥ ಎನ್. ಸುಬ್ರಾಯರವರ ಅಧ್ಯಕ್ಷತೆಯಲ್ಲಿ ನಡೆಯುವವು. ಸ್ಪೋರ್ಟ್ಸ್ ವಗೈರೆ ಪಂದ್ಯಾಟಗಳಿಗೆ ಇಲ್ಲಿಯ ಮಾನ್ಯ ಡಾಕ್ಟರರಾದ ಕೆ. ಪಿ. ರಾಘವೇಂದ್ರ ರಾವ್, L. M. & S. ಇವರು ಸುಪರಿಂಟೆಂಡೆಂಟರಾಗಿ ಆರಿಸಲ್ಪಟ್ಟಿರುವರು.

ದವಸ ಧಾನ್ಯಗಳಿಗೆ ವಿಪರೀತ ಬೆಲೆಯು ಈಗಲೇ ಏರಿರುತ್ತದೆ. ಅಕ್ಕಿಗಂತೂ ಈಗಲೇ ರೂ. ೯-೦-೦ ೯-೮-೦ ಹೇಳುತ್ತಾರೆ. ಬಡಜನರು ಬದುಕುವದು ತೀರಾ ಕಷ್ಟವಾಗಿರುತ್ತದೆ. ಎಲ್ಲಿ ನೋಡಿದರೂ ಬಿಕ್ಷುಕರ ತಂಡಗಳು ದಿನೇ ದಿನೇ ವೃದ್ಧಿಯಾಗುತ್ತಾ ಹೋಗಿವೆ. ಶ್ರೀ ಭಗವಂತನೇ ಈ ಕಷ್ಟವನ್ನು ದೂರಮಾಡಬೇಕಲ್ಲದೆ ಮನುಷ್ಯರಿಂದ ಆಗುವ ಸಂಭವ ತೋರುವದಿಲ್ಲ.

ಪಾಣೆಮಂಗಳೂರು:— ಇದು ಒಂದು ದೊಡ್ಡ ವ್ಯಾಪಾರ ಸ್ಥಳವಾಗಿ ಅನೇಕ ಮನೆಗಳುಳ್ಳ ಸಣ್ಣ ಪಟ್ಟಣವಾಗಿದೆ. ಇದರ ಸುತ್ತಲು ಅನೇಕ ಗ್ರಾಮಗಳಿವೆ. ಇಲ್ಲಿ ಒಂದು ಬ್ರೆಂಚ್ ಪೋಸ್ಟು ಆಫೀಸು ಇದ್ದು ಅದಕ್ಕೆ ಒಬ್ಬ ಬಟ್ವಾಡೆ ಪೇದೆ ಇಲ್ಲದೆ ಜನರೇ ಆಫೀಸಿಗೆ ಹೋಗಬೇಕಾಗಿದೆ. ಇಲ್ಲದಿದ್ದರೆ ಪೋಸ್ಟು ಮಾಸ್ತರರೇ ಅವರ ಸಮಯ ಆದಾಗ ಕಾಗದ ಬಟ್ವಾಡೆ ಮಾಡುವರು. ಇದರಿಂದ ವ್ಯಾಪಾರಸ್ಥರಿಗೆ ಬಹಳ ತೊಂದರೆ ಆಗಿದೆ. ಆದುದರಿಂದ ಈ ತರದ ತೊಂದರೆ ಆಗದಂತೆ ಒಬ್ಬ ಬಟ್ವಾಡೆ ಪೇದೆಯನ್ನು ಇಲಾಖೆಯವರು ನೇಮಿಸಿದರೆ ಉತ್ತಮವಿತ್ತು.

ಇಲ್ಲಿಂದ ಆನೆಕಲ್ಲು ಮಾರ್ಗವಾಗಿ ಸುಮಾರು ಮೂವತ್ತು ವರ್ಷವಾಯಿತು. ಆದರೂ ನಂದಾವರ ಕೋಡಿಗೆ ಒಂದು ಸಂಕವಾಗದೆ ಇದ್ದದರಿಂದ ಮಳೆಗಾಲದಲ್ಲಿ ಹೋಗಿ ಬರುವ ಗಾಡಿಗಳಿಗೂ ಜನರಿಗೂ ಸಮಯ ನಷ್ಟ, ಹಣ ನಷ್ಟ ಮುಂತಾದ ತೊಂದರೆಗಳಾಗುತ್ತವೆ. ಇದೇ ಮಾರ್ಗ ಸೀದಾ ಮಂಜೇಶ್ವರಕ್ಕೆ ಹಾದುಹೋಗುವದರಿಂದ ಅನೇಕ ಮಂದಿ ಪ್ರಯಾಣಿಕರು ಈ ದಾರಿಯಾಗಿಯೇ ಹೋಗುವರು. ನಂದಾವರ ಕೋಡಿಗೆ ಸಂಕವು ಅತೀ ಅಗತ್ಯವಾಗಿದೆ. ಈ ವಿಷಯ ಮಾನ್ಯ ಬೋರ್ಡಿನವರು ಗಮನ ಕೊಡುವರೇ? ... ಇಲ್ಲಿ ಅಲ್ಲದೆ ಬಂಟ್ವಾಳ ಪಾಣೆಮಂಗಳೂರು ಪರಂಗಿಪೇಟೆಯು ... ಇರುವ ಸ್ಥಳಗಳಲ್ಲಿರುವ ಮುಖ್ಯ ಕಾಮಗಾರಿಯ ಉಸ್ತುವಾರಿ ಆಗಾಗ್ಗೆ ನೋಡಿಕೊಳ್ಳುವರೆ ಅನುಕೂಲವಾಗಿ ಬೋರ್ಡಿನವರ ಹಣ ವ್ಯರ್ಥವಾಗದಂತೆಯೂ ಕೆಲಸ ಉತ್ತಮ ರೀತಿಯಲ್ಲಿ ಆಗುವಂತೆಯೂ ಅನ್ನದವಾಯಿತು.

ವಿಟ್ಲ:— ಮಂಗಳೂರು ಹಾಸನ್ ರೈಲುವೆಯ ಎಲ್ಲಾ ಕಾರ್ಯಗಳಿಗಾಗಿ ಒಬ್ಬ ಐ. ಸಿ. ಎಸ್. ಆಫೀಸರರನ್ನು ನೇಮಿಸಿರುತ್ತಾರಂತೆ. ಈ ರೈಲುಮಾರ್ಗವನ್ನು ಪುತ್ತೂರಿಗೆ ಕೊಂಡುಹೋಗುವಾಗ ವಿಟ್ಲದ ದಾರಿಯಾಗಿ ತೆಗೆದುಕೊಂಡು ಬಂದರೆ ಒಳ್ಳೇದಿತ್ತು. ವಿಟ್ಲವು ಟೀಪೂ ಸುಲ್ತಾನನ ಸಂಗಡ ಯುದ್ಧಕಾಲದಲ್ಲಿ ಇಂಗ್ಲಿಷರಿಗೆ ಒಳ್ಳೇ ಸಹಾಯಮಾಡಿದ ವಿಟ್ಲ ಅರಸರ ರಾಜಧಾನಿಯಾಗಿದ್ದು, ಅಡಿಕೆ ವ್ಯಾಪಾರದ ಮಧ್ಯಸ್ಥಳವಾಗಿದೆ. ಇದರ ಸುತ್ತುಮುತ್ತಲೂ ಇರುವ ಪ್ರದೇಶವು ಒಳ್ಳೇ ಫಲಭರಿತವಾದ ಸೀಮೆಯಾಗಿದೆ. ಈಗ ಈ ಅಡಿಕೆ ವ್ಯಾಪಾರವು ಮಂಜೇಶ್ವರ ದಾರಿಯಾಗಿ ನಡಿಯುತ್ತದೆ. ಅನೇಕ ತರದ ಕಷ್ಟಗಳು ದಾರಿಯಲ್ಲಿ ಈ ವ್ಯಾಪಾರಿಗಳಿಗೆ ಉಂಟಾಗುತ್ತಿವೆ. ಆದುದರಿಂದ ರೈಲುವೇ ಲ್ಯಾನನ್ನು ಬಂಟವಾಳ ಜೋಡುಮಾರ್ಗದಿಂದ ಪಾಣೆಮಂಗಳೂರು ವಿಟ್ಲ ದಾರಿಯಾಗಿ ಪುತ್ತೂರಿಗೆ ತಂದು ಉಪ್ಪಿನಂಗಡಿ ದಾರಿಯಿಂದ ಶಿರಾಡಿ ಘಟ್ಟದ ಮಾರ್ಗವಾಗಿ ಹಾಸನಕ್ಕೆ ಕೊಂಡುಹೋದರೆ ವಿಟ್ಲವನ್ನು ಕರಾವಳಿಗೆ ಕೂಡಿಸಿದಂತಾಗುವದು.

ಬಂಟವಾಳ:— ಮಂಚಿಗ್ರಾಮದ ಕರ್ನಾಟಕ ಬ್ರಾಹ್ಮಣ ನರಸಿಂಗ ರಾಯರ ಕೊಲೆಪಾತಕದ ಸಂಬಂಧ ತನಿಖೆಯು ಇಲ್ಲಿಯ ಸಬ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆದು ಕೈದುಮಾಡಲ್ಪಟ್ಟ ವಿಠಪ್ಪನಾಯ್ಕನ ಮೇಲೆ ಏನೂ ರುಜುವಾತಿಲ್ಲವೆಂದು ಆತನನ್ನು ಬಿಡುಗಡೆ ಮಾಡಿರುತ್ತಾರೆ. ಆದರೆ ಮೃತನ ವಿಧವೆಯಾದ ಮಹಾಲಕ್ಷ್ಮಿಯನ್ನು ಅವಳ ವಾಗ್ಮೂಲದ ಗುಮಾನಿಯ ಮೇಲೆ ಚಾರ್ಜು ಮಾಡಿರುತ್ತಾರೆ.

ಗುರುವಾಯನಕೆರೆ:— ಅಲ್ಲಿಯ ಜಮೀನುದಾರರೂ, ಆಢ್ಯ ಮನುಷ್ಯರೂ ಆದ ಎರ್ಡೂರು ಸರ್ವೋತ್ತಮರಾಯರು ಹಳ್ಳಿ ಸಂಚಾರಕ್ಕೆ ಹೋಗಿ ಹಿಂತಿರುಗಿ ಮನೆಗೆ ಬರುವಾಗ ಯಾರೋ ದುಷ್ಟರು ದಾರಿಯಲ್ಲಿ ಅಡಗಿಕೊಂಡಿದ್ದು ಅವರನ್ನು ಕೊಲ್ಲಬೇಕೆಂದು ಹೊಡೆದ ಗುಂಡು ದೈವವಶಾತ್ ಮೊಣಕೈಗೆ ತಾಗಿತು. ಅದೇ ದಾರಿಯಾಗಿ ಬರುತ್ತಿದ್ದ ಒಂದು ಮೋಟರ್ ಕಾರು ಅವರನ್ನು ಕೂಡಲೆ ಆ ಸ್ಥಳದಿಂದ ಸುಮಾರು ರಾತ್ರೆ ೧೦ ಘಂಟೆಗೆ ಬಂಟವಾಳ ಆಸ್ಪತ್ರೆಗೆ ಚಿಕಿತ್ಸೆ ಬಗ್ಗೆ ತಂದಿತು. ಡಾಕ್ಟರ ಶಿಲಪಾಡಿಕಾರರು ಯೋಗ್ಯ ಚಿಕಿತ್ಸೆಯನ್ನು ಕೂಡಲೇ ನಡಿಸಿದ್ದರಿಂದ ರಾ॥ ಸರ್ವೋತ್ತಮರಾಯರು ಗುಣಹೊಂದುತ್ತಾ ಬರುತ್ತಾರೆ.

ಮಂಗಳೂರು.

ಮಂಗಳೂರು ಕೊ-ಒಪರೇಟಿವ್ ಟೌನ್ ಬೇಂಕಿನ ವರ್ಷಾವಧಿ ವರದಿ ಮಹಾಸಭೆಯು ಇದೇ ಬರುವ ಜನವರಿ ತಾ. ೩ನೇ ಆದಿತ್ಯವಾರ ಮಧ್ಯಾಹ್ನ ೩ ಗಂಟೆಗೆ ತೇರುಬೀದಿಯಲ್ಲಿ ಹೊಸತಾಗಿ ಕಟ್ಟಿಸಿದ ಬೇಂಕಿನ ಆಫೀಸಿನಲ್ಲಿ ಜರಗುವುದು.

ಕೃಷಿ ಇಲಾಖೆಯ ಅಸಿಸ್ಟಾಂಟ್ ಡೈರೆಕ್ಟರರಾ ಶ್ರೀ॥ ಕೆ. ಟಿ. ಅಳ್ವರು ಮದ್ರಾಸಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಕರ್ನಾಟಕ ತಿಲಕ ವಿದ್ಯಾಲಯದ ಸಹಾಯಾರ್ಥವಾಗಿ ಕಳೆದ ವಾರ ಮುಷ್ಟಿಫಂಡಿನಿಂದ ರೂ. ೭-೮-೪ ಮತ್ತು ೧೧। ಸೇರು ಅಕ್ಕಿ ಜಮಾ ಬಂದಿರುತ್ತದೆ. ಸು. ಶ್ರೀನಿವಾಸರಾವ್ (ಮುಖ್ಯಾಧ್ಯಾಪಕ)

ನ್ಯಾಯವಿಧಾಯಕ ಸಭೆಗೆ ದಕ್ಷಿಣ ಕನ್ನಡ ಜಿಲ್ಲೆಯ ಮಹಮ್ಮದೀಯರಲ್ಲದ ರೂರಲ್ ವೋಟರರ ಸಮುದಾಯದ ಚುನಾವಣೆಯ ಉಮೇದ್ವಾರರ ಅಖೈರು ಪಟ್ಟಿಯಲ್ಲಿ, ನಾಗಪ್ಪ ಹೆಗ್ಡೆ, ಚಾರ್ಕಳ್, ಬೈಲೂರು ಪೋಸ್ಟು, ದಕ್ಷಿಣ ಕನ್ನಡಾ ಮತ್ತು ರಾಮನಾಥ ಶೆಣೈ 2/16 ಪೆರಿಯಪಳ್ಳಿ ರಸ್ತೆ, ಮ್ಯಾಲಾಪೂರ, ಮದ್ರಾಸು, ಇವರು ಉಮೇದ್ವಾರರಾಗಿ ಚುನಾಯಿಸಲ್ಪಟ್ಟಿರುವರು. ೧೯೨೬ನೇ ಇಸವಿ ಜನವರಿ ತಾರೀಕು ೨೭ರಲ್ಲು ಬೆಳಗ್ಗೆ ೭ ಘಂಟೆಯಿಂದ ಸಾಯಂಕಾಲ ೬ ಘಂಟೆಯ ವರೆಗೆ ವೋಟು ಜರಗತಕ್ಕದ್ದು.

ಇದೇ ತಿಂಗಳ ತಾ. ೨೨ನೇ ಸೋಮವಾರ ಸಂಜೆ ಇಂಪೀರಿಯಲ್ ಬೇಂಕಿನ ಏಜಂಟರಾದ ಶ್ರೀ॥ ಯು. ಆನಂದ ರಾಯರ ದಿವಂಗತ ಪತ್ನಿ ಸರಸ್ವತೀ ಬಾಯಿಯವರ ಸ್ಮಾರಕಾರ್ಥವಾಗಿ ಒಂದು ದೀಪಸ್ತಂಭ ಸ್ಥಾಪನಾಕಾರ್ಯವು ಇಲ್ಲಿಯ ಮುನ್ಸಿಪಲ್ ಚೆಯರ್‌ಮೇನರ ಪತ್ನಿಯವರಿಂದ ಸಂಭ್ರಮದಿಂದ ನಡೆಯಿತು.

ಬೆಳ್ತಂಗಡಿಯ ಅಕ್ಟಿಂಗ್ ಡಿ. ತಹಸಿಲ್‌ದಾರರಾಗಿರುವ ಶ್ರೀ॥ ಬಿ. ಕೆ. ಕುಂಜಿಕೃಷ್ಣ ಶಾಸ್ತ್ರಿಯವರು ಮಂಗಳೂರಿನ ತಾಲೂಕು ಹೆಡ್ ಎಕೌಂಟಂಟರಾಗಿ ನೇಮಕಹೊಂದಿರುವರು.

ಶರಾಬು, ಗಾಂಜಾ, ಅಫೀಮು ಗುತ್ತಿಗೆಗಳ ಏಲಂ, ಕಾಸರಗೋಡಿನಲ್ಲಿ ಬರುವ ಫೆಬ್ರುವರಿ ತಾ. ೧ಕ್ಕೂ, ಮಂಗಳೂರಲ್ಲಿ ತಾ. ೩ಕ್ಕೂ, ಕುಂದಾಪುರದಲ್ಲಿ ತಾ. ೬ಕ್ಕೂ, ಪುತ್ತೂರಲ್ಲಿ ತಾ. ೮ಕ್ಕೂ, ಬೆಳ್ತಂಗಡಿಯಲ್ಲಿ ತಾ. ೧೦ಕ್ಕೂ, ಉಡುಪಿಯಲ್ಲಿ ತಾ. ೧೬ಕ್ಕೂ, ಕಾರ್ಕಳದಲ್ಲಿ ತಾ. ೧೮ಕ್ಕೂ ಆಯಾಯ ತಾಲೂಕುಗಳ ಡಿಪ್ಯುಟಿ ಕಲೆಕ್ಟರುಗಳಿಂದ ನಡಿಸಲ್ಪಡುವುದು.

ತಾ. ೧೯—೧೨—'೨೫ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೨೦ ಮರಣಗಳಾಗಿವೆ. ಅಸ್ಪತ್ರೆಯಲ್ಲಿ ಒಬ್ಬನಿಗೆ ಪ್ಲೇಗು ತಗಲಿರುತ್ತದೆ. ಪ್ಲೇಗಿನಿಂದ ಒಂದು ಮರಣವುಂಟಾಗಿದೆ.

ಕಳೆದ ವಾರ ಇಲ್ಲಿಯ ಮುನ್ಸಿಪಾಲಿಟಿಯಲ್ಲಿ ಸುಲ್ತಾನ ಬತ್ತೇರಿ ಮಾರ್ಗದಲ್ಲಿ ಎರಡು ಜನರಿಗೆ ಪ್ಲೇಗು ತಗಲಿರುತ್ತದೆ ಒಂದು ಮರಣವುಂಟಾಗಿರುತ್ತದೆ.

ಮಂಗಳೂರಲ್ಲಿ ಬರುವ ಫೆಬ್ರುವರಿ ಮೊದಲನೆಯ ವಾರದಲ್ಲಿ ಶಿಶುಪ್ರದರ್ಶನವು ನಡೆಯಲಿರುವುದೆಂದೂ, ಇದರಲ್ಲಿ ಒಂದು ವರ್ಷದೊಳಗಿನ ಮತ್ತು ಒಂದರಿಂದ ಎರಡು ವರ್ಷದೊಳಗಿನ ಅತಿ ಆರೋಗ್ಯಕರವಾದ ಶಿಶುಗಳಿಗೆ ಇನಾಮು ಕೊಡಲಿರುವುದೆಂದೂ, ಆದುದರಿಂದ ಶಿಶುಪ್ರದರ್ಶನಕ್ಕೆ ಶಿಶುಗಳನ್ನು ತರಲಿರುವ ತಾಯಂದಿರೆಲ್ಲರೂ ತಮ್ಮ ಶಿಶುಗಳಿಗೆ ತಮ್ಮ ಮೊಲೆಹಾಲನ್ನೇ ಕೊಟ್ಟು, ಉಗುರುಬೆಚ್ಚಿ ನೀರಿನಲ್ಲಿ ಸ್ನಾನಮಾಡಿಸಿ, ಶುದ್ಧ ಉಡುಗೆಯನ್ನುಡಿಸಿ, ಸಾಕಷ್ಟು ಬೆಳಕು ಮತ್ತು ಗಾಳಿಯು ದೊರೆಯುವಂತೆ ಮಾಡಿ, ಹಲ್ಲು ಬಂದ ಕೂಡಲೆ ರಾಗಿ ಅಥವಾ ಗೋಧಿಯ ಗಂಜಿಯನ್ನಿತ್ತು, ಚೆನ್ನಾಗಿ ಆರೈಕೆಮಾಡಲು ಈಗಲೇ ಆರಂಭಿಸಬೇಕೆಂದೂ ದಕ್ಷಿಣ ಕನ್ನಡ ಆರೋಗ್ಯಾಧಿಕಾರಿ ... ಪ್ರಕಟಿಸಿರುತ್ತಾರೆ.

ಅನುಕ್ರಮಣಿಕೆ.

ಅಗ್ರಲೇಖ ಪುಟ
ಹಿಂದೂ ಸಂಘಟನ ಮತ್ತು ರಾಷ್ಟ್ರೀಯತೆ ೬
ಸ್ಫುಟವಿಚಾರಗಳು ೬-೮
ವರ್ತಮಾನಸಂಗ್ರಹಗಳು—
ವಿದೇಶವರ್ತಮಾನ, ಒಳದೇಶವರ್ತಮಾನ ೫
ದಕ್ಷಿಣ ಕನ್ನಡ - ಕಾಸರಗೋಡು, ಪಾಣೆಮಂಗಳೂರು, ವಿಟ್ಲ, ಬಂಟವಾಳ, ಗುರುವಾಯನಕೆರೆ „
ಮಂಗಳೂರು „
ಪತ್ರವ್ಯವಹಾರ ೧, ೨, ೮
ವಿವಿಧವಿಷಯಗಳು ೪

ಸ್ವದೇಶಾಭಿಮಾನಿ.

ಶಕ ೧೮೪೭ ಪುಷ್ಯ ಶು ೧೦ಯು ಶುಕ್ರವಾರ

ಹಿಂದೂ ಸಂಘಟನ ಮತ್ತು ರಾಷ್ಟ್ರೀಯತೆ.

ಉತ್ತರ ಹಿಂದೂಸ್ಥಾನದಲ್ಲಿ ಹಿಂದು ಮುಸಲ್ಮಾನ ಕಲಹಗಳು ದಿನಗಳೆದಷ್ಟಕ್ಕೆ ವೃದ್ಧಿಹೊಂದುತ್ತಾ ಬಂದುದರಿಂದ ಹಿಂದುಗಳ ಆತ್ಮರಕ್ಷಣೆಗಾಗಿಯೂ, ಮುಸಲ್ಮಾನರ ಮೇಲಿನ ಪ್ರತಿಬಂಧಕಕ್ಕಾಗಿಯೂ ಹಿಂದುಗಳು ಸಂಘಟಿಸಲ್ಪಡುವುದು ಆವಶ್ಯಕವಾಯಿತು. ವಿಶಾಲ ಮತವಾದಿಗಳಾದ ಸ್ವಾಮಿ ದಯಾನಂದ ಸರಸ್ವತಿಯವರು ಯಾವಾಗ ಹಿಂದೂ ಧರ್ಮದ ಕ್ಷುದ್ರತೆಯನ್ನು ತೊಳೆದು ಹಾಕಿ, ಅದನ್ನು ವಿಶಾಲವಾಗಿ ಮಾಡಿದರೋ ಆಗ ಈ ಹಿಂದೂ ಸಂಘಟನಾಕಾರ್ಯವು ಸಾಧ್ಯವಾಯಿತು.

ಮುಸಲ್ಮಾನ ಮತದ ವೈಶಿಷ್ಟ್ಯವೇ ಪರರ ಮತದ ಮೇಲಿನ ತಿರಸ್ಕಾರ. ಮುಸಲ್ಮಾನರ ಪ್ರತಿ ಮಗುವಿಗೂ ಈ ತಿರಸ್ಕಾರವು ಸಣ್ಣಂದಿನಿಂದ ಪಾಠವಾಗುತ್ತಿದೆ. ಅಷ್ಟು ತಿರಸ್ಕಾರಯುಕ್ತ ಮತವು ಬೇರೆ ಇದ್ದೀತೆಂದು ಹೇಳಲಾಗುವುದಿಲ್ಲ. ಆದರೆ ಕ್ರಿಸ್ತೀ ಮತಕ್ಕೂ ಮುಸಲ್ಮಾನ ಮತಕ್ಕೂ ಸ್ವಲ್ಪ ಸಂಬಂಧವಿದ್ದುದರಿಂದ, ಮುಸಲ್ಮಾನರ ಪರಮತದ ಮೇಲಿನ ತಿರಸ್ಕಾರಕ್ಕೆ ಹಿಂದೂಗಳೊಬ್ಬರೇ ಭಾಗಿಗಳಾಗುತ್ತಾರೆ.

ಮಾತ್ರವಲ್ಲ, ಹಿಂದೂಗಳ ಸಂಖ್ಯೆಯಾದರೂ ದಿನೇ ದಿನೇ ಬಡವಾಗುತ್ತಾ ಬರುತ್ತಿದೆ. ವ್ಯಕ್ತಿಗಳ ಶಕ್ತಿಹೀನತೆಯಿಂದಲೂ ಪರಮತದ ಆಘಾತಗಳಿಂದಲೂ, ಮತಾಂತರಗಳಿಂದಲೂ ಹಿಂದುಗಳು ಕೃಷರಾಗುತ್ತಾರೆ. ಫಲತಃ ಈ ವಿನಾಶಕ ಕ್ರಿಯೆಯ ಪ್ರತಿಕ್ರಿಯೆಯಾಗಿ ಹಿಂದೂ ಸಂಘಟನ ಚಳವಳವು ಏರ್ಪಟ್ಟದು ಕೇವಲ ನಿಸರ್ಗಸಿದ್ಧವಾಗಿದೆ.

ಆದರೆ ಯಾವಾಗ ಮುಸಲ್ಮಾನರು ತಮ್ಮ ಮತಕ್ಕೆ ಪ್ರಾಶಸ್ತ್ಯವನ್ನೂ ಹಿಂದುಗಳು ತಮ್ಮ ಮತಕ್ಕೆ ಪ್ರಾಶಸ್ತ್ಯವನ್ನು ಕೋರುವರೊ, ಯಾವಾಗ ಮುಸಲ್ಮಾನರೊಳಗೆ ಮತಾಂತರ ಕ್ರಮವೂ ಹಿಂದೂಗಳೊಳಗೆ ಶುದ್ಧಿಯೂ ಇರುವುದೋ ಆಗ ಹಿಂದೂ ಮುಸಲ್ಮಾನರೊಳಗೆ ಒಂದು ತರದ ಕ್ಲೇಶದ ಭಾವನೆಯು ಇದ್ದೇ ಇರುವುದು. ಮತ್ತು ಆಗಾಗ ಕಲಹಗಳೂ ಆಗುವುದು ಸ್ವಾಭಾವಿಕವೆ.

ಹಿಂದೂಗಳ ಮತವು ಸಾತ್ವಿಕವು. ಬೌದ್ಧ ಧರ್ಮದ ಪ್ರಚಾರದ ಮೇಲೆ ಹಿಂದೂ ಜನಾಂಗವು ಪತಿತವಾದುದು ಮತ್ತೆ ಪುನಃ ಉದ್ಧರಿಸಲ್ಪಟ್ಟಿಲ್ಲ. ಬೌದ್ಧ ಧರ್ಮದ ಅಹಿಂಸಾ ಪರಮೋ ಧರ್ಮ ಎಂಬ ತತ್ವದೊಡನೆ ಹಿಂದೂಗಳು ಹೊಸ ಜೀವನವನ್ನು ಸೇರಿದರು. "ನಿರ್ವಾಣ" ಹೊಂದಲಿಕ್ಕೆ ಇದಕ್ಕಿಂತ ಉತ್ತಮವಾದ ಬೇರೆ ತತ್ವವಿಲ್ಲ. ಈ ತತ್ವದಿಂದ ಪರಲೋಕದ ಸುಖವುಂಟೊ ಇಲ್ಲವೊ, ಇದರಿಂದ ಸ್ವರ್ಗಲಾಭವಿದೆಯೊ ಇಲ್ಲವೊ, ಅಂತು ಬೌದ್ಧರ "ನಿರ್ವಾಣ" (ಅಂತರ್ಹಿತತೆ)ವನ್ನು ಹಿಂದೂ ಜನಾಂಗವು ಈ ಲೋಕದಲ್ಲಿಯೇ ಪಡೆಯಿತು. ಬೌದ್ಧ ಧರ್ಮ ಪ್ರಚಾರದಿಂದ ಉಳಿಯಲಿಕ್ಕಾಗಿ ಹಿಂದೂ ಧರ್ಮವು ಬೌದ್ಧರಿಂದ ಅನೇಕ ತತ್ವಗಳನ್ನೂ ಸಾಂಪ್ರದಾಯಗಳನ್ನೂ ಹೀರಿಕೊಂಡಿತು, ಅವುಗಳಲ್ಲಿ ಅಹಿಂಸಾ ಪರಮೋಧರ್ಮ. ಇದಕ್ಕೆ ಸರಿಯಾಗಿ ಭಕ್ತಿ ಪ್ರಚಾರಕ್ಕೆ ಕಥೆಗಳು, ಇತಿಹಾಸಗಳು ಪ್ರಚಾರವಾದುವು. ಪರಿಣಾಮವಾಗಿ, ಪೂರ್ವ ವೀರ ಆರ್ಯವಂಶದೊಳಗೊಂದು, ಆತ್ಮರಕ್ಷಣಾ ಶಕ್ತಿಹೀನವಾದ, ಬರೇ ಸ್ವಪ್ನಪ್ರಾಯ ತತ್ವಾಧಾಮಿನಿಯಾದ, "ಅಹಿಂಸಾ ಪರಮೋಧರ್ಮ" ವನ್ನೆ ಜಪಿಸುತ್ತ ನಿಷ್ಕರ್ಮಿಯಾದ ನಿರ್ವೀರ್ಯ ಹಿಂದೂ ಜನಾಂಗವು ಜನಿಸಿತು. ಕಾಲನ ಆಘಾತಕ್ಕೆ ಅತ್ಯ ವಿಚಾರದ ಚಿಂತನೆಯಲ್ಲಿ ದೇಹಪಿಂಡ್ಯವಿದ್ದುಕೊಂಡು, ಹತಪ್ರಾಣವಾಗಿ ಹಿಂದೂ ಜನಾಂಗವು ಬಿದ್ದಿತು. ನಮ್ಮ ಸಮ್ಮುಖದಲ್ಲಿ ಇದೇ ಹಿಂದೂ ಜನಾಂಗದ ಅವಶಿಷ್ಟವು ಇದೆ.

ಹಿಂದೂ ಜನಾಂಗವು ದೇಶನಷ್ಟದಿಂದಲೂ, ಜನನಷ್ಟದಿಂದಲೂ, ಧರ್ಮನಷ್ಟದಿಂದಲೂ, ಪಡೆದಿರುವ ಈ ಸಾತ್ವಿಕತೆಯು ಹಿಂದೂಗಳಿಗೆ ಅಮೂಲ್ಯವಾಗಿರುವಾಗ, ಇತರರು ಅದರ ಪ್ರಯೋಜನವನ್ನು ಮಾಡಿಕೊಳ್ಳುವುದೇನೂ ಆಶ್ಚರ್ಯವಲ್ಲ. ಉತ್ತರ ಹಿಂದೂಸ್ಥಾನದ ಮುಸಲ್ಮಾನರಾದರೂ ಈ ಸಾತ್ವಿಕತೆಯ ಲಾಭವನ್ನು ಪಡೆದಿರುವರು. ಅಲ್ಲಿನ ಹಿಂದೂ ಮುಸಲ್ಮಾನ ಕಲಹಗಳ ಮತ್ತವುಗಳ ಪರಿಣಾಮದ ಇತಿಹಾಸವೇ ಇದನ್ನು ಸೂಚಿಸುವುದು.

ಈ ಗಭೀರವಾದ ಪತನವನ್ನು ನೋಡಿಯೇ ಪಂಡಿತ ಮಾಲವೀಯರೂ, ಲಾಲಾ ಲಜಪತರಾಯರೂ ರಾಜಕೀಯ ಧುರೀಣರಾದರೂ ಜಾತೀಯ ಚಳವಳದ ಧುರೀಣತ್ವವನ್ನು ವಹಿಸಿಕೊಂಡರು. ಹಿಂದೂಗಳ ನಿರ್ವೀರ್ಯತೆಯೊಡನೆ ಭಾರತ ರಾಷ್ಟ್ರೀಯತೆಯು ಮುಗ್ಗರಿಸುತ್ತಾ ಇದೆ ಎಂಬು ಅವರು ಕಂಡುಕೊಂಡರು. ಹಿಂದುಗಳ ದೈಹಿಕ ಶಕ್ತಿಹೀನತೆಯೊಡನೆ ಹಿಂದೀ ರಾಷ್ಟ್ರೀಯತೆಯು ಬೆಳೆಯಲಾರದೆಂದು ಅವರು ತಿಳಿದರು. ಆದುದರಿಂದಲೇ ಈ ದಿನ ಅವರು ಹಿಂದೂಗಳ ಉದ್ಧರಣೆಯ ಸೂತ್ರಗಳನ್ನು ಕೈಯಲ್ಲಿ ಹಿಡಿದು ಪೇಚಾಡುತ್ತಿರುವರು. ಸ್ವಾಮಿ ಶ್ರದ್ಧಾನಂದರ ಅವಿಶ್ರಾಂತ ಸಹಾಯದಿಂದಲೂ, ಹಿಂದೂ ಮಹಾಸಭೆಯ ಸುಸಂಘಟನೆಯಿಂದಲೂ, ಈ ಭಾರತ ಧುರೀಣರು ಹಿಂದೂಗಳನ್ನೆಬ್ಬಿಸುವುದರಲ್ಲಿ ನಿರತರಾಗಿರುವರು.

ಆದರೆ ಇತರ ರಾಷ್ಟ್ರೀಯ ಕೆಲಸಗಾರರು ಹಿಂದೂ ಮಹಾ ಸಭೆಯ ಚಳವಳವನ್ನಾಗಲಿ, ಶುದ್ಧಿ ಚಳವಳವನ್ನು ಹಿತದ ದೃಷ್ಟಿಯಿಂದ ನೋಡುವುದಿಲ್ಲ. ರಾಷ್ಟ್ರೀಯ ಕೆಲಸಗಾರರು ಒಂದು ಪಕ್ಷಕ್ಕೆ ಮುಸಲ್ಮಾನರ ಕಡೆಯಿಂದಲೂ ತಾಂಜೀಮ್ ಮತ್ತು ಮತಾಂತರ ಚಳವಳಗಳನ್ನು ನಿಲ್ಲಿಸುವ ಯತ್ನ ಮಾಡಿದ್ದರೆ ಚಿಂತೆ ಇರುತ್ತಿರಲಿಲ್ಲ. ಆದರೆ ರಾಷ್ಟ್ರೀಯತೆಯೆಂದು ಮುಸಲ್ಮಾನ ಚಳವಳಗಳು ಒಳಗಿನಿಂದಲೇ ಹಿಂದೂ ಜನಾಂಗವನ್ನು ಕೊರೆಯುತ್ತಿದ್ದಾಗ, ಹಿಂದೂ ಮುಸಲ್ಮಾನ ಐಕ್ಯಕ್ಕಾಗಿ ಹಿಂದುಗಳು ಮುಸಲ್ಮಾನ ಚಳವಳಕ್ಕೆ ಪ್ರತಿಬಂಧಕವಿಲ್ಲದೆ ತಲೆಯೊಡ್ಡಬೇಕೆಂದು ಹೇಳುವುದು ನ್ಯಾಯವೆಂದು ಯಾರೂ ಹೇಳಲಾರರು. ಇದರಿಂದ ಹಿಂದೂ ಮುಸಲ್ಮಾನ ಐಕ್ಯವು ಸಾಧ್ಯವಾಗುವುದೆಂದೂ ಹೇಳಲಾಗುವುದಿಲ್ಲ. ಇದು ಸಾಧ್ಯವೂ ಅಲ್ಲ. ಆದರೂ ರಾಷ್ಟ್ರೀಯ ಕೆಲಸಗಾರರು, ಸ್ವಾಮಿ ಶ್ರದ್ಧಾನಂದರು ಒಂದು ಕಾಲದಲ್ಲಿ ವತ್ತಾಯದಿಂದ ಮತಾಂತರವಾದ ಹಿಂದೂಗಳು ಸ್ವೇಚ್ಛೆಯಿಂದ ಪುನರ್ಮತಾಂತರ ಹೊಂದಲು ಇಚ್ಛಿಸಿದಾಗ ಅವರನ್ನು ಶುದ್ಧೀಕರಿಸಿದುದಕ್ಕೆ ಖಂಡಿಸುವರು! ಇದು ರಾಷ್ಟ್ರೀಯತೆಯೆಂಬು ನಾವು ಕರೆಯಲಾರೆವು. ಐಕ್ಯವನ್ನು ಯಾವ ಉಪಾಯದಿಂದಲೂ ಸಾಧಿಸಿದರೆ ಪ್ರಯೋಜನವಿಲ್ಲ. ಚಿರಸ್ಥಾಯಿಯಾದ ಐಕ್ಯವೇ ಪ್ರಯೋಜನ. ಐಕ್ಯದಿಂದ ರಾಷ್ಟ್ರೀಯತೆಗೆ ಮಾತ್ರವಲ್ಲ; ಹಿಂದೂ ಮತಕ್ಕೂ ಮುಸಲ್ಮಾನ ಮತಕ್ಕೂ ಪ್ರತ್ಯೇಕ ಪ್ರಯೋಜನವಿದೆ. ಅಂತಹ ಪರಸ್ಪರ ಪ್ರಯೋಜನಕಾರಿಯಾದ ಐಕ್ಯವನ್ನು ಹೊಂದಿದರೇನೇ ರಾಷ್ಟ್ರೀಯತೆಗೆ ಉಪಕಾರವಾಗುವುದು. ಅಲ್ಲದೆ ಕಣ್ಣುಕಟ್ಟಿನ ಐಕ್ಯದಿಂದ ರಾಷ್ಟ್ರಲಾಭದ ಬದಲಿಗೆ ರಾಷ್ಟ್ರಹಾನಿಯೇ ಅಧಿಕವಾಗುವುದು.

ಆದರೆ ಹಿಂದುಗಳ ಈ ಹೊಸ ಚಳವಳದಿಂದ ಹಿಂದೂಗಳಿಗೆ ಮುಸಲ್ಮಾನ ಧುರೀಣರ ಮೇಲೂ, ಮುಸಲ್ಮಾನರಿಗೆ ಹಿಂದೂ ಧುರೀಣರ ಮೇಲೂ ಅವಿಶ್ವಾಸವು ಜನಿಸಿಯದೆ. ಪ್ರತಿಯೊಬ್ಬನೂ ಪ್ರತಿ ಮತದ ಧುರೀಣನ ಮೇಲೆ ಸಂಶಯದ ದೃಷ್ಟಿಯಿಂದ ನೋಡುವನು. ಇದು ಮಾತ್ರ ರಾಷ್ಟ್ರೀಯತೆಗೆ ಹಾನಿಕರವಾಗಿದೆ. ಒಂದು ಮತಸ್ಥರು ತಮ್ಮ ಊರ್ಜಿತಾವಸ್ಥೆಯನ್ನು ಸಾಧಿಸಿಕೊಂಡರೆ, ಇನ್ನೊಂದು ಮತದವರು ಅವರನ್ನು ಸಂಶಯದ ಮತ್ತು ಮತ್ಸರದ ದೃಷ್ಟಿಯಿಂದ ನೋಡುವುದು ಅವರ ಶಕ್ತಿಹೀನತೆಯನ್ನು ತೋರಿಸುತ್ತದೆನ್ನಬೇಕು. ಮತಸ್ಥರು ತಮ್ಮನ್ನು ತಾವು ಬಲಪಡಿಸಿಕೊಳ್ಳುವುದರಲ್ಲಿಯೇ ನಿರತರಾದರೆ ಇತರರ ಕಡೆಗೆ ನೋಡಬೇಕಾದ ಆವಶ್ಯಕತೆಯಿಲ್ಲ. ಆದುದರಿಂದ ಹಿಂದೂಗಳಾಗಲಿ ಮುಸಲ್ಮಾನರಾಗಲಿ ತಮ್ಮನ್ನು ತಾವು ಬಲಪಡಿಸುವುದರಲ್ಲಿ, ತಮ್ಮ ಸಮಾಜವನ್ನು ಕೇಂದ್ರೀಕರಿಸುವುದರಲ್ಲಿರಬೇಕಲ್ಲದೆ, ಪರಮತಸ್ಥರ ಕಡೆಗೆ ಮತ್ಸರದ ದೃಷ್ಟಿ ಹಾಕುವುದು ರಾಷ್ಟ್ರೀಯತೆಯ ದೃಷ್ಟಿಯಿಂದ ಹಾನಿಕರವಾಗಿದೆಯಲ್ಲ, ಆ ಮತಸ್ಥರ ಹಿತದ ದೃಷ್ಟಿಯಿಂದಲೂ ಹಾನಿಕರವಾಗಿರುವುದು. ಪ್ರತಿ ಮತಸ್ಥರ ಚಿಂತೆಯು ತಮ್ಮೊಳಗಣ ದೋಷಗಳ್ನ್ಯೂನತೆ, ಧರ್ಮ ಬುದ್ಧೀಪನ ಮತ್ತು ಸಮಷ್ಟಿ ಹಿತಸಾಧನ. ಆದುದರಿಂದ ಹಿಂದೂ ಮಹಾ ಸಭೆಯಾಗಲೀ, ಮುಸ್ಲಿಮ್ ಲೀಗು ಮತ್ಸರದ ದೃಷ್ಟಿಯನ್ನು ಕಳೆದು ತಮ್ಮೊಳಗಿನ ಸುಧಾರಣೆಗಳನ್ನು ಮಾಡಿ, ಪರಸ್ಪರ ಸ್ನೇಹಕರವಾದ ವ್ಯವಹಾರವನ್ನು ನಡೆಸಿ ರಾಷ್ಟ್ರೀಯತೆಯ [illegible]

ಈ ಎರಡು ಸಂಸ್ಥೆಗಳು ಕಾಂಗ್ರೆಸ್ಸಿಗಿಂತಲೂ ಹೆಚ್ಚು ಪ್ರಾಮುಖ್ಯತೆಯನ್ನು ತಾಳಬಹುದು.

ಆದರೆ ರಾಷ್ಟ್ರೀಯತೆಯ ಉತ್ಸಾಹದಿಂದ ರಾಷ್ಟ್ರೀಯ ಕೆಲಸಗಾರರು ಮುಸಲ್ಮಾನ ಚಳವನ್ನು ಖಂಡಿಸಲು ಧೈರ್ಯಪಡುವುದಿಲ್ಲವಾದರೂ, ಹಿಂದೂ ಚಳವಳವನ್ನು ಖಂಡಿಸಲು ಹಿಂಜರಿಯುವುದಿಲ್ಲ. ಈ ವರುಷದ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿರುವ ಶ್ರೀಮತಿ ಸರೋಜಿನಿ ದೇವಿಯವರ ಮೊನ್ನೆಯ ಸಣ್ಣ ಘಟನೆಯೂ ಈ ಕ್ಷುದ್ರ ದೃಷ್ಟಿಯ ಒಂದು ಉದಾಹರಣೆಯಾಗಿದೆ. ಶ್ರೀಮತಿ ಸರೋಜಿನಿಯವರು ಲಾಲಾಜಿಯವರ ಜಾತೀಯ ಕಾರ್ಯಗಳನ್ನು ಖಂಡಿಸಿದರು. ಲಾಲಾಜಿಯವರು ಹಿಂದೂ ಮಹಾ ಸಭೆಯಲ್ಲಿ ತೆಗೆದುಕೊಳ್ಳುವ ಭಾಗವು ಶ್ರೀಮತಿಯವರಿಗೆ ಸರಿಬೀಳಲಿಲ್ಲ. ಲಾಲಾಜಿಯವರು ಎಷ್ಟು ಅಖಂಡ ರಾಷ್ಟ್ರೀಯತೆಯುಳ್ಳವರೆಂದು ಯಾರೊಬ್ಬರೂ ಅವರಿಗೆ ಶಿಫಾರಸು ಕೊಡಬೇಕಾಗಿಲ್ಲ. ಅವರ ಹಿಂದಿನ ಜೀವನ ಚರಿತ್ರವೇ ತೋರಿಸುವುದು. ಅಲ್ಲದೆ ಮದ್ರಾಸ ಸ್ವರಾಜ್ಯ ಪತ್ರಿಕೆಯಲ್ಲಿ ಅವರು ಕೆಲವು ಸಮಯದ ಹಿಂದೆ ಬರೆದ ಲೇಖಗಳ ಮೂಲಕ ಅವರ ಮನೋಭಾವನೆಗಳೂ ವ್ಯಕ್ತವಾಗುವುವು. "ಪ್ರಥಮತಃ ಹಿಂದೀಯನಾಗು; ಆ ಮೇಲೆ ಹಿಂದೂ ಆಗಲಿ ಮುಸಲ್ಮಾನನೆನ್ನು" ಎಂಬುದೇ ಅವರ ತತ್ವ. ಹಿಂದೂ ಮುಸಲ್ಮಾನ ಐಕ್ಯಕ್ಕೆ ಆ ತತ್ವವೇ ಆಧಾರವಾಗಿರಬೇಕು. ಆದರೆ ಈ ತತ್ವವನ್ನು ಒಂದೇ ವಿಭಾಗವು ಆಚರಿಸಿದರೆ ಪ್ರಯೋಜನವಿಲ್ಲ. ಎರಡೂ ವಿಭಾಗವು ಆಚರಿಸಬೇಕು. ಆದರೆ ತನ್ಮಧ್ಯದಲ್ಲಿ ಸ್ವಜಾತೀಯ ಜನರ ಸಂಘಟನೆಗಾಗಿ ಪ್ರಯತ್ನಿಸಿದರೆ ಅದು ಅಪರಾಧವಾಗುವುದೆಂದು ನಾವು ನೆನಸುವುದಿಲ್ಲ. ಈ ವಿಷಯದಲ್ಲಿ ನಾವು ಶ್ರೀಮತಿಯವರನ್ನು ಖಂಡಿಸ ಬೇಕಾಗುತ್ತದೆ.

ಶ್ರೀಮತಿ ಸರೋಜಿನಿಯವರು ಲಾಲಾಜಿಯವರ ವಿಷಯವಾಗಿ ಹೇಳಿದುದು ನ್ಯಾಯವಲ್ಲವಾದರೂ, ಕಾನಪೂರಿನ ಹಿಂದೂ ಮಹಾಸಭೆಯ ಕೆಲವು ಧುರೀಣರು ಎಬ್ಬಿಸಿದ ಚಳವಳವನ್ನು ಮಾತ್ರ ನಾವು ಮಾನ್ಯಮಾಡಲಾರೆವು. ಲಾಲಾಜಿಯವರನ್ನು ಖಂಡಿಸಿದುದಕ್ಕಾಗಿ ಕಾನಪೂರ ಸ್ವಾಗತ ಸಮಾರಂಭದಲ್ಲಿ ಶ್ರೀಮತಿಯವರಿಗೆ ಬಹಿಷ್ಕಾರ ಹಾಕಬೇಕೆಂಬುದೇ ಅವರ ದುಸ್ಸಾಧನೆ. ಇಂತಹ ವರ್ತನದಿಂದ ಹಿಂದೂ ಮಹಾ ಸಭೆಗೆ ಅಪಕೀರ್ತಿ ಮಾತ್ರವಲ್ಲದೆ, ಹಾನಿಯೂ ಉಂಟಾಗುವುದು. ಪಂಡಿತ ಮಾಲವೀಯರೂ, ಲಾಲಾಜಿಯವರೂ, ಸ್ವಾಮಿ ಶ್ರದ್ಧಾನಂದಜೀಯವರೂ, ಈ ದುಸ್ಸಾಧನೆಯನ್ನು ಖಂಡಿಸಿದ್ದಾರೆ. ಕಾನಪೂರಿನ ಹಿಂದೂಗಳೂ ಇದರ ಪಾಠವನ್ನು ಮನಸ್ಸಿಗೆ ಕೊಂಡುಹೋಗುವರಾಗಿ ಆಶೆಯಿದೆ.

ರಾಷ್ಟ್ರೀಯ ಕೆಲಸಗಾರರಿಂದ ಯಾವ ಉಪಾಯದಿಂದಲೂ ಹಿಂದೂ ಮುಸಲ್ಮಾನ ಐಕ್ಯ ತರಲಿಕ್ಕಾಗಲಿಲ್ಲ. ಎಂದಿನ ವರೆಗೆ ಅನ್ಯ ಸರಕಾರವೊಂದು ಹಿಂದೂಸ್ಥಾನದ ಮೇಲೆ ಅಧಿಕರಿಸುವುದೊ, ಅಂದಿನ ವರೆಗೆ ಈ ಐಕ್ಯವು ಸಾಧ್ಯವೆಂದು ನಮಗೆ ವಿಶ್ವಾಸವಿಲ್ಲ. ಆದರೆ ಆ ಐಕ್ಯವು ಸ್ಥಾಪನೆಯಾಗುವ ವರೆಗೆ ಹಿಂದೂಗಳು ಮುಸಲ್ಮಾನರು ಪ್ರತ್ಯೇಕ ಸಮಾಜ ಸಂಘಟನೆಯ ಕಾರ್ಯವನ್ನು ಕೈಕೊಳ್ಳಬೇಕು. ಇದಕ್ಕೆ ರಾಷ್ಟ್ರೀಯ ಕೆಲಸಗಾರರು ಅಡ್ಡಿ ಹೇಳಿ ಪ್ರಯೋಜನವಿಲ್ಲ.

ಸ್ಫುಟವಿಚಾರಗಳು.

ಬೊಸ್ಟಾರ್ಲ್ ಶಾಲೆಗಳು.

ಮದ್ರಾಸ ಕೌನ್ಸಿಲಿನಲ್ಲಿ ಬೊಸ್ಟಾರ್ಲ್ ಶಾಲೆಯ ಮಸೂದೆಯು ಮಂಜೂರಾಯಿತೆಂದು ತಿಳಿಯಲು ನಮಗೆ ಸಂತೋಷವಾಗುತ್ತಿದೆ. ಸಣ್ಣ ಪ್ರಾಯದ ಅಪರಾಧಿಗಳನ್ನು ಶಿಕ್ಷಿಸುವ ಬದಲು ಅವರ ನಡತೆಯನ್ನು ತಿದ್ದಲು ಪ್ರಯತ್ನಿಸಿದರೆ, ಅವರ ಸ್ವಭಾವವು ಬದಲಾಗುವುದು; ಹಾಗೆ ಮಾಡದೆ ಅಪರಾಧಿಗಳೆಂದು ಶಿಕ್ಷಿಸಿದರೆ, ಅವರ ಸ್ವಭಾವವು ಮತ್ತಷ್ಟು ಕೆಟ್ಟು ಕಟ್ಟಾ ದುರ್ವ್ಯಸನಗಳಿಗೆ ಸೇರುವರು ಎಂಬ ವಿಷಯವು ಸರ್ವಸಾಮಾನ್ಯವಾಗಿ ಎಲ್ಲರಿಗೂ ಅನುಭವದ ವಿಷಯವೇ ಆಗಿದೆ. ಈ ಬೊಸ್ಟಾರ್ಲ್ ಶಾಲೆಗಳ ಉದ್ದೇಶವು ಸಣ್ಣ ಪ್ರಾಯದ ಅಪರಾಧಿಗಳನ್ನು ತಿದ್ದುವುದಾಗಿದೆ. ೨೧ ವರ್ಷ ಪ್ರಾಯದೊಳಗಿನ ಯಾರೊಬ್ಬ ಹುಡುಗನು ಯಾವುದೊಂದು ತಕ್ಸೀರು ನಡಿಸಿದರೆ, ಈ ಮಸೂದೆಯ ಮೇಲಿನಿಂದ ಮೆಜಿಸ್ಟ್ರೇಟನು ಅವನನ್ನು ಈ ಶಾಲೆಗೆ ಕಳುಹಿಸಬಹುದು. ಅಲ್ಲಿ ಅವನು ಕೆಲವು ಕಾಲ ಇರುವನು. ಅಲ್ಲಿ ಅವನಿಗೆ ಅವನ ವರ್ತನವನ್ನು ತಿದ್ದುವ ಬಗ್ಗೆ ಅಭ್ಯಾಸವು ನಡಿಯುವುದು. ಇಂತಹ ರೀತಿಯಿಂದ ನಮ್ಮ ದೇಶದ ಅನೇಕ ಬಾಲಕರನ್ನು ದುರ್ವರ್ತನದ ಮಾರ್ಗದಿಂದ ರಕ್ಷಿಸಿದಂತಾಗುತ್ತದೆ. ನಾಗರಿಕವಾದ ಪ್ರತಿ ದೇಶದಲ್ಲಿಯೂ ಈ ಕ್ರಮ ಇದ್ದೇ ಇದೆ. ಮದ್ರಾಸ ಪ್ರಾಂತ [illegible]

ಆಯಿತು. ಇದರ ಜ್ಯಾರಿಯಿಂದ ನಮ್ಮ ಪ್ರಾಂತವು ಬಹಳ ಪ್ರಯೋಜನವನ್ನು ಹೊಂದುವುದೆಂಬುವುದರಲ್ಲಿ ಸಂದೇಹವಿಲ್ಲ.

ಪಂಜಾಬ ಜೈಲಿನ ಕಮಿಟಿ.

ಪಂಜಾಬಿನ 'ವಂದೇ ಮಾತರಮ್' ಎಂಬ ಪತ್ರಿಕೆಯಲ್ಲಿ ಪಂಜಾಬ ಜೈಲುಗಳಲ್ಲಿ ನಡೆಯುತ್ತಿರುವ ಅತಿಶಯವಾದ ದುರ್ವ್ಯವಹಾರಗಳ ವಿಷಯ ಒಂದು ಲೇಖವು ಬಂದಿತ್ತು. ಜೈಲ್ ಸುಪರಿಡೆಂಟರು ಇದರಿಂದ ತನಗೆ ಮಾನನಷ್ಟವಾಯಿತೆಂದು ಪತ್ರಿಕೆಯ ಮೇಲೆ ನಷ್ಟದ್ರವ್ಯಕ್ಕೆ ಸರಕಾರದ ಒಪ್ಪಿಗೆಯಿಂದ ವ್ಯಾಜ್ಯ ತಂದರು. ಅದು ಅವರ ಪಕ್ಷಕ್ಕೆ ಗುಣವಾಯಿತು. ಆದರೆ ತನಖಿ ಸಮಯದಲ್ಲಿ ಇನ್ನೂ ಅನೇಕ ದೋಷಗಳು ಹೊರಬಿದ್ದುವು. ಈ ವಿಷಯವಾಗಿ ಇಂಗ್ಲೆಂಡಿನಲ್ಲಿ ಹೌಸ್ ಒಫ್ ಕೊಮನ್ಸನಲ್ಲಿ ಕೂಡ ಪ್ರಶ್ನೆಯು ಬಂದಿತು. ಪಂಜಾಬದೊಳಗಿನ ಚಳವಳದಿಂದಲೂ, ಇಂಗ್ಲೆಂಡಿನ ಮಜೂರಿ ಪಕ್ಷದ ಒತ್ತಾಯದಿಂದಲೂ, ವಂದೇ ಮಾತರಮ್ ಪತ್ರಿಕೆಯ ಆರೋಪಗಳ ಭೀಕರತೆಯಿಂದಲೂ ಸರಕಾರವು ಇದನ್ನು ಶೋಧಿಸುವ ಬಗ್ಗೆ ಒಂದು ಕಮಿಟಿಯನ್ನು ನೇಮಕಮಾಡಲೇ ಬೇಕಾಯಿತು. ಅದರಂತೆ ಆ ಕಮಿಟಿಯು ಈಗ ಅಧಿಕಾರಿಗಳಿಂದ, ಮುಖ ಕೈದಿಗಳಿಂದ, ಪ್ರಮುಖ ಜನರಿಂದ ಈ ವಿಷಯ ಅಭಿಪ್ರಾಯಗಳನ್ನು ಕೇಳುತ್ತಿದೆ.

ಜೈಲು ನಿಯಮಗಳು ಅನಾವಶ್ಯಕವಾಗಿ ಬಹಳ ಕಠಿಣವಾಗಿವೆಯೆಂದೂ, ಕಾರಣವಾಗಿ ದುಡ್ಡಿನ ಲಂಚಿನಿಂದ ವಾರ್ಡರ (warder)ರ ಮೂಲಕ ಬೇಕಾದುದನ್ನು ಪಡೆಯಬೇಕಾಗುತ್ತದೆಂದೂ, ಈ ಲಂಚಿನ ವ್ಯವಹಾರವಲ್ಲದೆ, ಕೈದಿಗಳೊಳಗೆ ವಾರ್ಡರರ ಸಹಾಯದಿಂದಲೇ ಅನೇಕ ಹೇಯವಾದ ಕೃತ್ಯಗಳು ನಡೆಯುತ್ತಿವೆಯೆಂದೂ ಇತ್ಯಾದಿ ವಿಷಯಗಳು ಬಯಲಿಗೆ ಬಂದಿವೆ.

ಜೈಲುಗಳು ಈಗಣ ನಾಗರಿಕ ಅಭಿಪ್ರಾಯಗಳಿಗೆ ಸರಿಯಿರದೆ, ಬರೇ ಶಿಕ್ಷಾಸ್ಥಾನಗಳು ಮಾತ್ರವಾಗಿವೆ. ಸರಕಾರವು ಈ ತಪ್ಪು ಅಭಿಪ್ರಾಯವನ್ನು ದೂರಪಡಿಸಿ ಇವನ್ನು ರಕ್ಷಣೆಯ ಸ್ಥಾನಗಳಾಗಿ ಮಾರ್ಪಡಿಸಬೇಕು. ಮನುಷ್ಯನು ತಿದ್ದಲ್ಪಡಲಾಗದವನಾಗಿಲ್ಲ. ಆ ದುರ್ಮಾರ್ಗಕ್ಕೆ ಬೀಳುವ ಜನರೊಳಗೆ ಕೆಲವರನ್ನು ತಿದ್ದುವುದು ಅಸಾಧ್ಯವೆನಬಹುದಾದರೂ, ಹೆಚ್ಚಿನವರನ್ನು ಅದರಿಂದ ಮೇಲೆತ್ತಬಹುದಾಗುತ್ತದೆ. ಈಗಿನ ಕ್ರಮದಿಂದ ಶಿಕ್ಷಿತ ಮನುಷ್ಯನಿಗೆ ಮತ್ತೆ ಸಮಾಜದಲ್ಲಿ ಸ್ಥಾನವಿಲ್ಲ. ಪರಿಣಾಮವಾಗಿ ಅವನು ಬಹಿಷ್ಕೃತನಾಗಿ ತನ್ನ ದುರ್ವೃತ್ತಿಯಲ್ಲಿಯೇ ಇರಬೇಕಾಗುತ್ತದೆ. ಜೈಲುಗಳ ಉದ್ದೇಶವು ಕೆಟ್ಟವನನ್ನು ಹೊಸಬನನ್ನಾಗಿ ಹೊರ ಕಳುಹಿಸುವುದಾಗಬೇಕು.

ಹಿಂದೂಸ್ಥಾನವೂ ಎಂಗ್ಲೊ ಇಂಡಿಯಾನರೂ.

ಎಂಗ್ಲೊ ಇಂಡಿಯಾನರೆಂದರೆ, ಯುರೋಪಿಯ ತಾಯಿತಂದೆಗಳಿಗಾಗಲಿ, ಯುರೋಪಿಯ ಮತ್ತು ಹಿಂದೀಯ ಮಿಶ್ರಣದಿಂದಾಗಲಿ, ಹಿಂದೂಸ್ಥಾನದಲ್ಲೆ ಜನಿಸಿದ, ಇಲ್ಲವೇ ಹಿಂದೂಸ್ಥಾನದಲ್ಲೇ ಮನೆಮಾಡಿಕೊಂಡ ಯುರೋಪಿಯ ಜನರು. ಇವರಿಗೆ ಹಿಂದೀ ಸರಕಾರದಲ್ಲಿ ಅನೇಕ ರಿಯಾಯತಿಗಳಿವೆ. ಇವರ ಸಹಾನುಭೂತಿಯು ಯುರೋಪಿಯ ಜನರ ಕಡೆ; ಮತ್ತು ಇವರಿಗೆ ಹಿಂದೀಯರ ಕಡೆಗೆ ತುಚ್ಛೀಕಾರವು ಬಹಳ. ಆದರೆ ಯಾವಾಗ ಹಿಂದೂಸ್ಥಾನದಲ್ಲಿ ಮನೆಮಾಡಿದರೊ ಆಗ ಅವರು ಹಿಂದೀಯರಾದರು; ಅವರನ್ನು ಯುರೋಪಿಯ ಯಾವ ದೇಶದವರೂ ತಮ್ಮವರೆಂದು ಹೇಳಿಕೊಳ್ಳುವುದಿಲ್ಲ. ಆದರೆ ಇವರು ಯುರೋಪಿಯ ಲಾಭಕ್ಕೆ ಸಹಕಾರಿಗಳಾಗುವರೆಂದು ಹಿಂದೀ ಸರಕಾರವು ಇವರಿಗೆ ಹೆಚ್ಚು ರಿಯಾಯತಿ ತೋರಿಸುತ್ತಿದೆ. ಪರಂತು ಹಿಂದೂಸ್ಥಾನದಲ್ಲಿ ಇವರು ಬರೇ ಅಲ್ಪಸಂಖ್ಯಾಕರಿದ್ದುದರಿಂದ, ಇವರು ಅಧಿಕಾರಿಗಳ ಸಹಾಯದಿಂದ ಎಷ್ಟೋ ಪ್ರಯೋಜನವನ್ನು ಹೊಂದಬಹುದಾದರೂ, ಜನತೆಯ ಬಲವನ್ನು ಹೊಂದಲಾರರು. ಇದರಿಂದ ಅವರು ಹಿಂದೀಯರೊಡನೆ ಕಲೆಯದಿದ್ದರೆ, ಹಿಂದೀ ರಾಜಕಾರಣದಲ್ಲಿ ಹಿಂದೆ ಬೀಳುವ ಸಂಭವವಿದೆ.

ಈ ವಿಷಯವನ್ನು ಇತ್ತಲಾಗೆ ಇವರು ಅರಿತುಕೊಂಡಂತೆ ತೋರುತ್ತಿದೆ. ಇವರ ಒಂದು ಸಂಘವು ಲಂಡನ್ನಿನಲ್ಲಿ ಇದೆ. ಕರ್ನಲ್ ಗಿಡ್ನಿ ಎಂಬ ಎಂಗ್ಲೊ ಇಂಡಿಯಾನರು ಲಂಡನ್ನಿನಿಂದ ಹಿಂದೂಸ್ಥಾನಕ್ಕೆ ಹೊರಟು ಬರುವಾಗ ಈ ಸಂಘದವರು ಅವರಿಗೆ ವಿದಾಯವನ್ನಿತ್ತರು. ಈ ಸಮಯದಲ್ಲಿ ಕರ್ನಲ್ ಗಿಡ್ನಿಯವರು ಹೀಗೆ ಹೇಳಿದರು:—

> ಎಂಗ್ಲೊ ಇಂಡಿಯಾನರು ಹಿಂದೀ ಆಶಯಗಳನ್ನು ತಿಳಿಯಲು ಕಲಿಯಬೇಕು, ಮತ್ತು ಹಿಂದೀಯರೊಡನೆ ಕಲೆತು ಅವರ ಆಶಯಗಳೊಡನೆ ಸಹಕರಿಸಿ, ಸಾಮ್ರಾಜ್ಯದೊಳಗಿನ ಡೊಮಿನಿಯನ್ ಸ್ಟೆಟಸ್ ಹೊಂದುವುದರಲ್ಲಿ ಸೇರಬೇಕು. ಎಂಗ್ಲೊ ಇಂಡಿಯಾನರು ಹಿಂದೂಸ್ಥಾನದ ಜನತೆಯೊಳಗಿನ ಒಂದಂಶವಾಗಿದ್ದು, ಒಂದು ಕಪ್ಪು ಜನಾಂಗದ ಹಳ್ಳ ಸ್ಥಾಪಿಸುವಂತೆ ಇರಲು ತಯಾರಿರಬೇಕು. ಅವರು ಯುರೋಪಿಯನರ ಹಿಂಬಾಲವಾಗಿರಬಾರದು.

ಎಂಗ್ಲೊ ಇಂಡಿಯಾನರು ಈ ಪಾಠವನ್ನು ಸರಿಯಾಗಿ ಮನಸ್ಸಿಗೆ ಕೊಂಡುಹೋಗದಿದ್ದ, ಹಿಂದೂಸ್ಥಾನದ ರಾಜಕೀಯ ವಿಕಾಸದಲ್ಲಿ ಹಿಂದೆ ಬೀಳಬೇಕಾದಿತೆಂಬುದು ಕೇವಲ ಸ್ಪಷ್ಟವಿದೆ.

ಸ್ಕೀನ ಕಮಿಟಿಯ ಶೋಧಗಳು.

ಹಿಂದೀಯರಿಗೆ ಸೈನ್ಯದಲ್ಲಿ ಹೆಚ್ಚು ಅಧಿಕಾರ ಕೊಡುವ ಬಗ್ಗೂ, ಹಿಂದೂಸ್ಥಾನದೊಳಗೆನೇ ಸೈನ್ಯದ ತರಬೇತಿ ಶಾಲೆಗಳನ್ನು ಸ್ಥಾಪಿಸುವ ಬಗ್ಗೂ ಈ ಕಮಿಟಿಯು ನೇಮಕವಾಯಿತು. ಇದರಲ್ಲಿ ಪಂಡಿತ ಮೋತಿಲಾಲನೆಹರುರವರೂ ಒಬ್ಬರು ಸದಸ್ಯರಾಗಿರುವರು. ಈ ವರೆಗೆ ಹಿಂದೀಯರಲ್ಲಿ ಯುದ್ಧದ ಸ್ವಭಾವವೇ ಇಲ್ಲವೆಂದೂ, ಅವರು ಸೈನ್ಯಾಧಿಕಾರಕ್ಕೆ ಯೋಗ್ಯರಲ್ಲವೆಂದೂ ಅಭಿಪ್ರಾಯವು ಹುಟ್ಟಿಸಲ್ಪಟ್ಟಿದ್ದಿತು. ಆದರೆ ಕಳೆದ ಮಹಾಯುದ್ಧದ ಸಮಯದಲ್ಲಿ ಇದರ ಅಸಾಧುತ್ವವು ಹೊರಗೆಡಹಲ್ಪಟ್ಟಿತು.

ಆದರೂ ಯುರೋಪಿಯ ಅಧಿಕಾರಿಗಳಿಗೆ ಹಿಂದೀಯರಿಗೆ ಅಧಿಕಾರಗಳನ್ನು ಥಕ್ಕನೆ ಬಿಟ್ಟುಕೊಡಲು ಮನಸ್ಸಾಗುವುದಿಲ್ಲವೆಂಬಂತೆ ತೋರುತ್ತಿದೆ. ಸ್ಕೀನ ಕಮಿಟಿಯ ಮುಂದೆ ಯುರೋಪಿಯ ಅಧಿಕಾರಗಳು ಕೊಟ್ಟ ಸಾಕ್ಷಿಗಳು ವಿಮರ್ಶಿಸಿದರೆ ಇದು ತಿಳಿಯುವುದು. ಕೆಲವರು ಹಿಂದೀಯರಿಗೆ ಆ ಅಧಿಕಾರಗಳಿಗೆ ಬೇಕಾದ ಶಕ್ತಿ ಇದೆಯೆಂದು ಒಪ್ಪುವರಾದರೂ, ಅವರ ಕೈಕೆಳಗೆ ಯುರೋಪಿಯನರು ಕೆಲಸಮಾಡಲಿಕ್ಕಿಲ್ಲವೆಂದು ಹೇಳುವರು. ಆದರೆ ಹಿಂದಿ ಸಾಕ್ಷಿಗಳು ಹಿಂದೀಯರ ಯೋಗ್ಯತೆಯ ವಿಷಯ ಸಾಕಷ್ಟು ರುಜುವಾತನ್ನು ಕೊಟ್ಟಿರುವರು.

ಒಂದು ದೇಶದ ಸ್ವಾತಂತ್ರ್ಯವು ಬಲವಾಗಬೇಕಾದರೆ, ಅದರ ಸೈನ್ಯವೂ ಬಲವಾಗಿರಬೇಕು; ಅದಕ್ಕಾಗಿ ದೇಶವು ಇತರ ಜನಾಂಗಗಳ ಮೇಲೆ ಹೊಂದಿರಬಾರದು; ಸೈನ್ಯಾಧಿಕಾರಿಗಳನ್ನು ಆ ಜನಾಂಗವು ತನ್ನೊಳಗಿನಿಂದಲೇ ಪಡೆಯಬೇಕು. ಆಗ ಮಾತ್ರವೇ ಆ ಸ್ವಾತಂತ್ರ್ಯವು ಫಲಕಾರಿಯಾಗುವುದು. ಹಾಗೆಯೇ ಹಿಂದೀ ಸೈನ್ಯಗಳು ಹಿಂದೀ ಸೈನ್ಯಾಧಿಕಾರಿಗಳಿಂದ ಸಂಚಾಲಿತವಾದರೆ ಮಾತ್ರವೆ ಹಿಂದೀ ಸ್ವಾತಂತ್ರ್ಯವು ಸಾಧ್ಯವಾಗುವುದು. ಆದರೆ ಆ ಕಾರಣದಿಂದಲೇ ಇಂಗ್ಲೀಷರು ಹಿಂದೀಯರನ್ನು ಆ ಅಧಿಕಾರಿಗಳಿಗೆ ನೇಮಿಸಲು ಹಿಂಜರಿಯುವರು. ಪಂಡಿತ ಮೋತಿಲಾಲನೆಹರುರವರಿದ್ದ ಈ ಕಮಿಟಿಯು ಯಾವ ವರದಿಯನ್ನು ಕೊಡುವುದೆಂದೂ, ಕೊಟ್ಟ ಮೇಲೆ ಸರಕಾರವು ಆ ವರದಿಗೆ ಯಾವ ತರದ ಸ್ವಾಗತವನ್ನು ಕೊಡುವುದೆಂದು ನಾವು ನಿರೀಕ್ಷಿಸುವೆವು. ಹಿಂದೀಯರನ್ನು ಇಂಗ್ಲೆಂಡಿಗೆ ಕಳುಹಿಸಿ ಅಲ್ಲಿ ತರ್ಬೇತು ಮಾಡುವುದಕ್ಕಿಂತ ಇಲ್ಲಿಯೆ ಶಾಲೆಯನ್ನು ಸ್ಥಾಪಿಸುವುದು ಅಗತ್ಯ. ಆ ಶಾಲೆಯೊಂದು ತೆರೆದರೆ ಸೈನ್ಯಾಧಿಕಾರವನ್ನು ಹಿಂದೀಯರಿಗೆ ಕೊಡುವ ಮಾರ್ಗದಲ್ಲಿ ಸರಕಾರವು ಇಳಿದದೆ ಎಂದು ತಿಳಿಯಬಹುದಾಗುತ್ತದೆ.

ಮೊಸುಲ್ ಪ್ರಾಂತ್ಯ ಮತ್ತು ಲೀಗ್ ಒಫ್ ನೇಶನ್ಸಿನ ತೀರ್ಮಾನ.

ಎಲ್ಲರೂ ಎಣಿಸಿದಂತೆಯೇ ಲೀಗ್ ಒಫ್ ನೇಶನ್ಸಿನ ತೀರ್ಮಾನವು ಹೊಂದಿದ್ದಿತು. ಮೊಸುಲ್ ಪ್ರಾಂತವನ್ನು ಬ್ರಿಟಿಷರಿಗೆ ಕೊಡಲಿಲ್ಲ—ಅದು ಇರಾಕಿಗೆ ಸೇರಿದುದೆಂದು ತೀರ್ಮಾನ—ಇರಕಿನ ಮೇಲ್ವಿಚಾರಣೆಯ ಜವಾಬ್ದಾರಿಯ ಆ ದೊಡ್ಡ ಭಾರ, ಪಾಪ, ಬ್ರಿಟಿಷರ ಮೇಲೆ—ಇನ್ನೂ ೨೫ ವರ್ಷ ಹೊರಬೇಕಂತೆ!—ಅಂತೂ ಮೊಸುಲ್ ಇರಾಕಿಗೆ, ಇರಾಕು ಬ್ರಿಟಿಷರಿಗೆ. ಈ ನಿಷ್ಪಕ್ಷಪಾತತೆಯನ್ನು ಬ್ರಿಟಿಷ ಪ್ರತಿನಿಧಿಗಳಾದ ಕರ್ನಲ್ ಎಮರಿಯವರು ಹೊಗಳುವುದೇನೂ ಆಶ್ಚರ್ಯವಲ್ಲ.

ಆದರೆ ಮೊಸುಲ್ ಪ್ರಶ್ನೆಯು ಇಲ್ಲಿಗೆ ತೀರ್ಮಾನ ಹೊಂದಿತೊ? ತುರ್ಕಿಯವರು ತಮ್ಮ ಹಕ್ಕಿನ ಕಡೆಗೆ ಲೀಗ್ ಒಫ್ ನೇಶನ್ಸ ತೋರಿಸಿದ ತಿರಸ್ಕಾರವನ್ನು ಪ್ರತಿ ಮಾತಿಲ್ಲದೆ ಅನುಭವಿಸಿ ಕೂತುಕೊಳ್ಳುವುದೊ? ಇಂಗ್ಲೆಂಡಿನಲ್ಲಿ ಚೆಂಬರಲೇನರೂ ಕರ್ನಲ್ ಎಮರಿಯವರೂ ತಮ್ಮ ವಿಜಯದ ವಿವರವನ್ನು ಕೊಡುತ್ತಿರುವರು. ಇಂಗ್ಲಿಷ್ ಮತ್ತು ಫ್ರಾನ್ಸಿನ [illegible]ಯಲ್ಲಿ ಆಟದ ಗೊಂಬೆಯಂತಿರುವ ಲೀಗ್ ಒಫ್ ನೇಶನ್ಸಿನಿಂದ [illegible]ನ್ನು ಯಾವ ಯಾವ ನ್ಯಾಯತೀರ್ಮಾನವಾಗಲಿದೆಯೊ. ಫ್ರಾನ್ಸ ದೇಶವು ಕಳೆದ ವರ್ಷ ತುರ್ಕಿಯ ಕಡೆಗೆ ಹೆಚ್ಚು ಮೈತ್ರಿಯುಳ್ಳದುದಾಗಿತ್ತು. ಈಗ ಇಂಗ್ಲಿಷ ರಾಜತಂತ್ರದಿಂದಲೂ ಸಿರಿಯಾದಲ್ಲಿ ಫ್ರಾನ್ಸಿಗೆ ಉಂಟಾದ ಪರಾಜಯದಿಂದಲೂ ಫ್ರಾನ್ಸಿಗೆ ತುರ್ಕಿಯ ಮೇಲೆ ಆಗ ಮೈತ್ರಿಯಿಲ್ಲ. ಆದರೆ ಬ್ರಿಟಿಷರಿಗೆ ಮೊಸುಲ್ ಪ್ರಾಂತ ಲಾಭವಾದ್ದರಿಂದ ಫ್ರಾನ್ಸಿನ ಶಕ್ತಿಯು ತುರ್ಕಿಯಲ್ಲಿ ಕಡಿಮೆಯಾಗಿ ಫ್ರಾನ್ಸಿಗೆ ನಷ್ಟ ಉಂಟಾಗುವುದೆಂಬುದನ್ನು ಫ್ರಾನ್ಸು ಅರಿತಂತೆ ನಮಗೆ ತಿಳಿಯುವುದಿಲ್ಲ. ಅಂತ ರಾಷ್ಟ್ರೀಯ ರಾಜತಂತ್ರದಲ್ಲಿ ಫ್ರಾನ್ಸು ಹೆಚ್ಚು ವಿಚಕ್ಷಣತೆಯನ್ನು ಈ ವರೆಗೂ ತೋರಿಸಿಲ್ಲ. ಈಗಲಾದರೂ ಬ್ರಿಟಿಷ ಹಾಡಿಗೆ ಫ್ರಾನ್ಸು ಪಲ್ಲವಿಯನ್ನು ಹೇಳುವುದು ಆಶ್ಚರ್ಯವಲ್ಲ.

ಆದರೆ ಪ್ರಕೃತದ ಪರಿಸ್ಥಿತಿಯು ಯಾವ ಪರಿಣಾಮವನ್ನು ಹೊಂದುವುದೆಂಬುದನ್ನು ಯೋಚಿಸಲಿದೆ. ತುರ್ಕಿಯು ಯುದ್ಧಕ್ಕೆ ಸನ್ನಾಹವನ್ನು ಕಟ್ಟಿಕೊಳ್ಳುವ ಚಿಹ್ನೆಗಳನ್ನು ತೋರಿಸಿದ್ದರೂ, ಈಗಾಗಲೇ ಯುದ್ಧಗಳಿಂದ ಹೊರ ಬಂದ ತುರ್ಕಿಯು ಪುನಃ ಇಂಗ್ಲೀಷರ ವಿಶಾಲ ಸೈನ್ಯಗಳ ಪ್ರತಿಯಾಗಿ ಹೋರಾಡಬಹುದೊ ಎಂಬುದು ಸಂದೇಹಕರವಾಗಿದೆ.

ಬ್ರಾಹ್ಮಣೇತರ ಪರಿಷತ್ತು.

ದಶಂಬರ ತಾ. ೧೯ಕ್ಕೆ ಮದ್ರಾಸಿನಲ್ಲಿ ಬ್ರಾಹ್ಮಣೇತರರ ಪರಿಷತ್ತು ನೆರೆಯಿತು. ಮುಂಬಾಯಿ ಸರಕಾರದ ವಿದ್ಯಾ ಇಲಾಖಾ ಮಂತ್ರಿಗಳಾದ ಮಿ| ಬಿ. ವಿ. ಜಾಧವ ಎಮ್. ಎ. ಎಲ್. ಎಲ್. ಬಿ. ಇವರು ಅಧ್ಯಕ್ಷರಾಗಿದ್ದರು. ಸ್ವಾಗತಾಧ್ಯಕ್ಷರಾಗಿದ್ದ ಮಿ| ಪಿ. ರಮಾನಾಥನರ ಭಾಷಣದಲ್ಲಿ ವಿಶೇಷವೇನೂ ಇರಲಿಲ್ಲ. ಮೃತ ಧುರೀಣರಿಗಾಗಿ ದುಃಖ ಪ್ರದರ್ಶನ, ಜಾತೀಯ ಚಳವಳದ ಆವಶ್ಯಕತೆ, ಮದ್ರಾಸ ಮಂತ್ರಿ ಪಕ್ಷದ ಪ್ರಶಂಸೆ, ದಕ್ಷಿಣ ಅಫ್ರಿಕದ ಹಿಂದೀಯರ ಕಡೆಗೆ ಸಹಾನುಭೂತಿ, ದ್ವಿದಳ ರಾಜ್ಯಪದ್ಧತಿಯ ಖಂಡನ, ಸ್ವರಾಜ್ಯ ಪಕ್ಷೀಯರಿಗೆ ತಾಡನ, ಬ್ರಾಹ್ಮಣೇತರರ ಐಕ್ಯದ ಆವಶ್ಯಕತೆ, ಮುಂದಿನ ಚುನಾವಣೆಯ ತಯಾರಿ ಇವೇ ವಿಷಯಗಳು ಸ್ವಾಗತ ಭಾಷಣದಲ್ಲಿದ್ದುವು.

ಆದರೆ ಮಿ| ಜಾಧವರ ಭಾಷಣವು ಬರೇ ಬ್ರಾಹ್ಮಣ ದ್ವೇಷವನ್ನು ವ್ಯಕ್ತಪಡಿಸುವುದರಲ್ಲಿಯೇ ಪೂರ್ಣವಾಗಿತ್ತು. ಜವಾಬ್ದಾರಿ ಸ್ಥಾನದಲ್ಲಿರುವ ಮುಂಬಾಯಿ ಸರಕಾರದ ಮಂತ್ರಿಗಳ ಬಾಯಿಯಿಂದ ಇಂತಹ ಹೀನ, ಮನಸ್ಸಿನ ಕ್ಷುದ್ರತೆಯನ್ನು ತೋರಿಸುವ ಮಾತುಗಳು ಬರುವುವೆಂದು ಯಾರೂ ಎಣಿಸಲಿಕ್ಕಿಲ್ಲ. ಬ್ರಾಹ್ಮಣರ ಮೇಲಿನ ಬೈಗಳೇ ಆ ಭಾಷಣದ ವೈಶಿಷ್ಟ್ಯ. ಬ್ರಾಹ್ಮಣ-ಬ್ರಾಹ್ಮಣೇತರರೊಳಗಿನ ಭೇದಗಳಿಷ್ಟಿದ್ದರೂ ಅವನ್ನು ಹಿತಚಿಂತಕನೊಬ್ಬನು ಕಡಿಮೆ ಮಾಡಲು ಉಪಾಯಗಳನ್ನು ಹುಡುಕುವನೇ ವಿನಹ, ಈ ತರದಲ್ಲಿ ಅವರೊಳಗಿನ ವಿಚ್ಛೇದವನ್ನು ಘಟ್ಟಿಮಾಡಲಿಕ್ಕಿಲ್ಲ. ಪರಂತು ಮಿ| ಜಾಧವರಿಗೆ ಬ್ರಾಹ್ಮಣರ ಮೇಲೆ ದ್ವೇಷ ಎಷ್ಟು ಹೆಚ್ಚೊ ಬ್ರಾಹ್ಮಣೇತರರ ಹಿತಸಾಧನೆಯು ಅಷ್ಟೇ ಕಡಿಮೆ ಎಂದು ಹೇಳಬೇಕಾಗಿದೆ.

ಹಿಂದೂಗಳನ್ನು ಒಂದಾಗಿ ಮಾಡಲು ಪ್ರಯತ್ನಿಸುವ ಆ ಹಿಂದೂ ಮಹಾಸಭೆಯಾದರೂ ಮಿ| ಜಾದವರ ತಾಡನದಿಂದ ಹೊರಗಿರಲಿಲ್ಲ. ಮುಖ್ಯತಃ ಬ್ರಾಹ್ಮಣ-ಬ್ರಾಹ್ಮಣೇತರರೊಳಗಿನ ಯಾವ ತರದ ಐಕ್ಯಕ್ಕೂ ಮಿ| ಜಾದವರು ತಯಾರಿಲ್ಲವೆಂದು ಇದರಿಂದ ತಿಳಿಯುವುದು. ಬ್ರಾಹ್ಮಣೇತರರಿಗೆ ಲಾಭವಾಗಲಿ ಆಗದಿರಲಿ, ಬ್ರಾಹ್ಮಣರು ದೂಳಿ ಪಾಲಾದರೆ ಸರಿ. ಮಿ| ಜಾದವರ ಈ ಧ್ವಂಸಕಾರಿ ತತ್ವವು ಬ್ರಾಹ್ಮಣೇತರರಿಗೆ ರುಚಿಸುವುದೆಂದು ನಾವು ನೆನಸಲಿಕ್ಕಿಲ್ಲ. ಇಂತಹ ಕಾರ್ಯಕ್ರಮವಿಲ್ಲದ ಬರೇ ದ್ವೇಷಮತ್ಸರಗಳ ಭಾಂಡಾಗಾರಗಳಿಂದ ಬ್ರಾಹ್ಮಣೇತರರಿಗೆ ಯಾವ ಲಾಭವಾದೀತೊ ನೋಡಲಿದೆ. ಮಿ| ಜಾದವರಿಗೆ ಬ್ರಾಹ್ಮಣರನ್ನು ದೂಷಿಸಿ ಮಾತ್ರವೇ ತೃಪ್ತಿಯಾಗಲಿಲ್ಲ. ಬ್ರಾಹ್ಮಣ ಮತ್ತು ಇತರ ಮತಸ್ಥರೊಳಗೆ ಭೇದವನ್ನು ಹುಟ್ಟಿಸುವುದೂ ಮಿ| ಜಾದವರ ಉದ್ದೇಶಗಳಲ್ಲೊಂದಾಗಿ ತೋರುತ್ತಿದೆ. ಬ್ರಾಹ್ಮಣೇತರರು ಈ ಭಾಷಣದ ಹಿಂದಿನ ಭಾವನೆಗಳನ್ನು ಚೆನ್ನಾಗಿ ಅಳೆದು ಅದಕ್ಕೆ ಯೋಗ್ಯ ಬೆಲೆ ಕಟ್ಟುವರಾಗಿ ನಾವು ಆಶಿಸುತ್ತೇವೆ.

ನಮ್ಮ ಜಿಲ್ಲೆಯ ಹತ್ತಿಯ ಬೆಳೆ ಮತ್ತು ನೂಲುವ ಸಂಘ.

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ಸ್ವರಾಜ್ಯ ಪಕ್ಷಕ್ಕೆ ಆಡಳಿತವನ್ನು ಕೊಟ್ಟು, ನೂಲುವ ಪ್ರಚಾರಕ್ಕೆ ಮಹಾತ್ಮಾ ಗಾಂಧಿಯವರು ಪ್ರತ್ಯೇಕ, ರಾಜಕೀಯವಲ್ಲದ ಸಂಘವನ್ನು ಏರ್ಪಡಿಸಿದ ಮೇಲೆ, ನೂಲುವ ಪ್ರಚಾರವು ದೇಶದಲ್ಲಿ ಹೆಚ್ಚಾಗಲು ಕಾರಣವಿದೆ. ಕರ್ನಾಟಕ ಪ್ರಾಂತದ ಚರಕ ಪ್ರಚಾರದ ಮತ್ತು ಖಾದಿ ವಹಿವಾಟಿನ ಇಲಾಖೆಯು ಶ್ರೀಯುತ ಗಂಗಾಧರ ರಾವ್ ದೇಶಪಾಂಡೆಯವರ ಕೈಯಲ್ಲಿ ಕೊಡಲ್ಪಟ್ಟಿದೆ. ಅವರಿಂದ ಕಳುಹಿಸಲ್ಪಟ್ಟ ಮಿ| [illegible] ಮೊನ್ನೆ ನಮ್ಮ ಜಿಲ್ಲೆಗೆ ಬಂದು ಖಾದಿ ಕೇಂದ್ರಗಳನ್ನು ನೋಡಿ [illegible]

ನಮ್ಮ ಜಿಲ್ಲೆಯ ದಕ್ಷಿಣ ಭಾಗದಲ್ಲಿ, ನಿಲೇಶ್ವರ ಪ್ರಾಂತದಲ್ಲಿ ಹತ್ತಿಯ ಬೆಳೆಯು ಚೆನ್ನಾಗಿ ಸಾಗುತ್ತಿದೆ. ಇಲ್ಲಿಂದ ಹತ್ತಿ ಪರಬಂದರುಗಳಿಗೆ ಕೂಡಾ ಹೋಗುತ್ತಿದೆ ಎಂದು ನಾವು ಕೇಳುತ್ತೇವೆ. ನಿಲೇಶ್ವರದಲ್ಲಿ ೫೦೦ಕ್ಕೆ ಮಿಕ್ಕಿದ ಕುಟುಂಬಗಳು ಅರ್ಧ ಉಪವಾಸದಲ್ಲಿ ದಾರಿದ್ರ್ಯವನ್ನು ಕಳೆಯುತ್ತಿವೆಯೆಂದೂ ನಾವು ತಿಳಿಯುತ್ತೇವೆ. ಇಂತಹ ಪರಿಸ್ಥಿತಿಯಲ್ಲಿ ನಿಲೇಶ್ವರದಲ್ಲಿ ನೂಲುವ ಪ್ರಚಾರವು ಸುಲಭವಾಗಬೇಕು. ಒಂದೆರಡು ವರ್ಷಗಳ ಹಿಂದೆ ನಿಲೇಶ್ವರದಲ್ಲಿ ತಿಂಗಳಿಗೆ ೭೫೦ ರಾತ್ತು ನೂಲು ತಯಾರಾಗುತ್ತಿದೆ ಎಂದು ಶ್ರೀಯುತ ಕಾರ್ನಾಡು ಸದಾಶಿವ ರಾಯರು ಮಹಾತ್ಮರಿಗೆ ಬರೆದದ್ದು ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆದರೆ ಈಗ ಅಷ್ಟು ನೂಲು ಅಲ್ಲಿ ಆಗುವುದಿಲ್ಲ. ಆಗದಿರುವುದಕ್ಕೆ ಕಾರಣವೇನು? ನೂಲುವ ಸಂಘದವರು ಈ ವಿಚಾರವಾಗಿ ಪರಾಮರ್ಶಿಸಿರುವರೊ? ಇಷ್ಟು ಫಲಪ್ರದವಾದ ಪ್ರಾಂತವನ್ನು ಜವಾಬ್ದಾರಿಯುಳ್ಳ ಶ್ರೀಯುತ ದೇಶಪಾಂಡೆಯವರು ಏಕೆ ಒಂದು ಬಾರಿ ಸಂದರ್ಶಿಸಬಾರದು? ಅಲ್ಲಿಯ ಹತ್ತಿಯ ಬೆಳೆಗೆ ಯಾವ ಉತ್ತೇಜನ ಸಿಕ್ಕಿಯದೆ? ಅದನ್ನು ಜಿಲ್ಲೆಯ ಇತರ ಭಾಗಗಳಿಗೆ ಹಂಚಿ ಹತ್ತಿ ಸರಿಯಾಗಿ ಎಲ್ಲರಿಗೂ ಸಿಕ್ಕುವ ಹಾಗೆ ಮಾಡಲಾದೀತೋ? ಎಂಬ ಪ್ರಶ್ನೆಗಳಿವೆ. ಅಲ್ಲದೆ ನಿಲೇಶ್ವರದಲ್ಲಿ ವಸ್ತ್ರ ತಯಾರಿಸಿದರೆ ತಿರಪೂರ ಖದ್ದರಿಗಿಂತ ಕಡಿಮೆ ದರದಲ್ಲಿ ಕೊಡಲು ಸಾಧ್ಯವಾಗುವುದೆಂದೂ ನಾವು ತಿಳಿಯುತ್ತೇವೆ. ಹಾಗಾದರೆ ನೂಲುವ ಸಂಘವು ಇದರ ಬಗ್ಗೆ ಯಾವ ಕೆಲಸವನ್ನು ಮಾಡಬಲ್ಲುದೆಂದು ತಿಳಿಯಲು ನಾವು ಉತ್ಸುಕರಾಗಿರುವೆವು. ನೂಲುವ ಸಂಘಕ್ಕೆ ನೂಲುವ ಕಾರ್ಯಕ್ರಮವು ಕೇವಲ ಒಂದು ಸುಂದರ ಅನುಭೂತಿಯಾಗಿರದೆ ಜೀವಂತ ಕಾರ್ಯಕಾರಿ ಕಾರ್ಯಕ್ರಮವಾಗಿರಬೇಕು.

ಪತ್ರವ್ಯವಹಾರ.

— ಅಬ್ಕಾರಿ ಇಲಾಖೆ. —

ಈ ನಂಬ್ರವನ್ನು ಅಬ್ಕಾರಿ ಪೋಲೀಸಿನವರು ಹಿಡಿದು ತಂದರೆ ನೂರಕ್ಕೆ ಇಪ್ಪತ್ತೈದು ನಂಬ್ರಗಳಾದರೂ ಬಿಟ್ಟು ಹೋಗುವಂತಿಲ್ಲ. ಕೊಲೆಪಾತಕಗಳ ನಂಬ್ರವಾದರೂ ರುಜುವಾತನ್ನು ಅನುಸರಿಸಿ ಬಿಟ್ಟು ಹೋಗುತ್ತಿದೆ. ಈ ಸಂಗತಿ ಜನರಿಗೆ ಚೆನ್ನಾಗಿ ಮಂದಟ್ಟಾಗಿದೆ. ಒಂದು ಊರಲ್ಲಿ ಇಬ್ಬರೊಳಗೆ ದ್ವೇಷ ಇದ್ದರೆ ದ್ವೇಷವನ್ನು ದುರಾಲೋಚನೆಯಿಂದ ಸಾಧಿಸಬೇಕೆಂಬ ಇರಾದೆ ಇದ್ದರೆ ಒಂದು ಉಪಾಯ ಮಾಡುವರು. ಮೊದಲಾಗಿ ಸ್ವಲ್ಪ ಮಡಿಕೆ ಕೆಲವು ಅಡಿ ತೂತಿನ ಮಡಿಕೆಗಳೂ, ಕಳ್ಳು ವಾಸನೆ ಬರುವ ಒಂದು ದೊಡ್ಡ ಪಾತ್ರೆ, ಒಂದು ಬಾಟ್ಲಿಯಲ್ಲಿ ಊರ ಶರಾಬು ಇವುಗಳನ್ನು ತಯಾರಿ ಮಾಡಿ ಇಟ್ಟುಕೊಂಡು ಒಂದು ಕಳ್ಳಕಾಗದವನ್ನು ಬರೆದು ಆ ಊರಿನ ಅಬ್ಕಾರಿ ಇಲಾಖೆಯ ಆಫೀಸರರಿಗಾಗಲಿ, ಅಬ್ಕಾರಿ ಪೋಲೀಸಿನವರಿಗಾಗಲಿ ಕಳುಹಿಸುವರು. ಅವರು ಕೂಡಲೆ ತಮ್ಮ ಹತ್ಯಾರುಗಳನ್ನೆಲ್ಲಾ ತೆಕ್ಕೊಂಡು ರಾತ್ರಿಯೇ ಹೋಗುವರು. ಇವರು ಹೋಗುವಷ್ಟರಲ್ಲಿ ಹಗೆಗಾರನು ದ್ವೇಷಿಯ ಬಚ್ಚಲುಕೊಟ್ಟಿಗೆಯೊಳಗಾಗಲಿ, ಹಟ್ಟಿಯೊಳಗಾಗಲಿ ಬಚ್ಚಿಡುವನು. ಸರಾಯಿ ಬಾಟ್ಲಿಯನ್ನು ಬೈಹುಲ್ಲಿನ ಮೂಟೆಯಲ್ಲಾಗಲಿ ಮನೆಹತ್ತರದಲ್ಲಿರುವ ಕಸಗುಪ್ಪೆಗಳಲ್ಲಾಗಲಿ ಬಚ್ಚಿಟ್ಟು ಹೋಗುವನು. ಪೋಲೀಸಿನವರು ಬೆಳಗಿನ ಜಾವದೊಳಗೆ ಮನೆಯನ್ನು ಮುತ್ತಿಗೆ ಹಾಕಿ ಬಿಡುವರು, ಸುತ್ತಲು ಹುಡುಕುವರು. ಪಾತ್ರೆಯೂ ಒಂದೊಂದು ಸ್ಥಳದಲ್ಲಿ ಒಂದೊಂದು ಸಿಕ್ಕುವದು. ಚಾರ್ಜಮಾಡಿ ಮೇಲು ಆಫೀಸರಿಗೆ ಕಳುಹಿಸುವರು. ಇದರಲ್ಲಿ ಚಾರ್ಜ ಮಾಡಿದ ನಂಬ್ರವನ್ನು ಇಲಾಖೆ ಮೇಲು ಆಫೀಸರರೇ ಕೌಂಪೌಂಡು ಮಾಡುವದಕ್ಕೆ ತಕ್ಸೀರುಗಾರನು ಒಪ್ಪಿದರೆ ಕಂಪೌಂಡ ಆಗುವದು. ಇಲ್ಲದಿದ್ದರೆ ಸಜಾವಾಗುವದು. ಅಬ್ಕಾರಿ ನಂಬ್ರಗಳಲ್ಲಿ ಹೆಚ್ಚಾಗಿ ನಂಬ್ರ ಹಿಡಿಯುವವರೂ ಸಾಕ್ಷಿಗಾರರೂ ವಕೀಲರೂ ಕಂಪೌಂಡು ಮಾಡುವವರೂ ಇಲಾಖೆ ಉದ್ಯೋಗಸ್ಥರೆ ಆಗಿರುತ್ತಾರೆ. ಅದರಿಂದ ಅಬ್ಕಾರಿ ಪೋಲೀಸಿನವರು ನಂಬ್ರ ಹಿಡಿಯಲಿಕ್ಕೆ ಹೋಗುವಾಗ ಗ್ರಾಮದ ಪಟೇಲ ಅಥವಾ ಶ್ಯಾನುಭಾಗರ ಹಾಜರಿಯಲ್ಲಾಗಲಿ ಇವರ ಅವಾಕ್ಯಾಲಕ ಅದ್ದರೆ ಜವಾನ ...

"ಬಡ ಮುತ್ತೇದಾರ."

॥ ಓಂ ॥

॥ ಶ್ರೀ ಸುಬ್ರಹ್ಮಣ್ಯಾಯ ನಮಃ ॥

ಸ್ವಜಾತಿ ಸುಬ್ರಹ್ಮಣ್ಯ ಬ್ರಾಹ್ಮಣ ಮಹಾಜನರಲ್ಲಿ ನನ್ನದೊಂದು ಸವಿನಂತಿ.

ಪ್ರಿಯ ಸ್ವಜನರೇ,

[illegible]

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಸ್ಮೂರಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಷಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಪ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Ma[ngalore]

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳ[ೂರು]

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds „ 259,000—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸ[ಲ್ಪಟ್ಟಿತು] ಅಧಿಕಾರಗೊಳಿಸಲ್ಪಟ್ಟ, ಪೂರ್ಣ[ವಾಗಿ] ಕೊಟ್ಟ ಮೂಲಧನವು ರೂ. 3[00,000] ಕ್ಷೇಮನಿಧಿ ಮತ್ತು ಇತರ ಫಂಡುಗಳ[ು] 259,000

THE BANK RECEIVES FIXED, CURRENT ACCOUNT, & SAVINGS BANK DEPOS[ITS]
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಬೋಧಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಬೋಧಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಸಾಳ್ವದ ವೆಂಕಟಾಚಲ ಪಂಡಿತರು,
ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

Free! Free!! Free!!

ಪ್ರಸಿದ್ಧವಾದ

"ಕಾಮಶಾಸ್ತ್ರ"

ಈಗಲೆ ತಯಾರಾಗಿದೆ.

ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.

ಅತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ ಎಸ್. ಪಿ. ಆಚಾರ್ಯ ಇವರಿಂದ ತಯಾರಿಸಲ್ಪಟ್ಟ

ಉಪ್ಪಿನ ಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಶುಂಠಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ...

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತಶುದ್ಧಿ — ## ವಜ್ರಾಂಗ-ಬಿಂದು — ವೀರ್ಯವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಅನೇಕ ತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

[illegible]

Public Conveyance Co., Ltd, Mangalore.

(Established 1914.)

ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು

ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.

ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.

ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.

ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮುಹಿರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

ನಮ್ಮ ಜಿಲ್ಲೆಯ ದಕ್ಷಿಣ ಭಾ... ದಲ್ಲಿ ಹತ್ತಿಯ ಬೆಳೆಯು ಚೆನ್ನಾ... ಹತ್ತಿ ವರಬಂದರುಗಳಿಗೆ ಕೂಡಾ ಕೇಳುತ್ತೇವೆ. ನೀಲೇಶ್ವರದಲ್ಲಿ ... ಗಳು ಅರ್ಧ ಉಪವಾಸದಲ್ಲಿ ಯೆಂದೂ ನಾವು ತಿಳಿಯು... ನೀಲೇಶ್ವರದಲ್ಲಿ ನೂಲು ಒಂದೆರಡು ವರ್ಷ ರಾತ್ರು ...ಗಳೂರು ಕಾವಾ...

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

—ಗೋಡೆಗೆ ತಗಲಿಸುವ

ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಸಿದ್ದು. ಇವು ಕಂಠಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನ ಸ್ವಶಕ್ತಿ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುತ್ತದೆ.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ

ಪೋಸ್ಟ್ ಬಾಕ್ಸ್, ನಂ. 27, ಮದ್ರಾಸ್

ಆಯುರ್ವೇದ ಶಾಸ್ತ್ರಿ ...ವಧಾನಿ,
ರಾ. ವೇ. ಸುಬ್ಬರಾವ್, ಯ... ಅವರಿಂದ ತಯಾರಿಸಲ್ಪಟ್ಟ...

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದೀಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೇ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ ೨ ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. ೩—0—0. ಪತ್ರವ್ಯವಹಾರವು ಇಂಗ್ಲೀಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು

— ತೆಗೆದುಕೊಳ್ಳಿರಿ: —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯ ವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ಉತ್ತಮ ಔಷಧವು. ಈ ಸಾಲಾಮಿಸ್ರಿ ಎಂಬುವುದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ಸಿದ್ಧಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ ಯಾ ೪ ಡಬ್ಬಿಗಳು ಮುಗಿಯುವವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೪ ಡಬ್ಬಿಗಳವರೆಗೆ ೦—೬—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.	ಡಿ. ಮುನ್ನಾಲಾಲ್, ಢಿಲ್ಲಿ ಸೇಟಿಡ್ ಡಾಕ್ಟರ್. ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗವರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೧ನೇ ಶುಕ್ರವಾರ ಜನವರಿ ೧೯೨೬. ಸಂಚಿಕೆ ೧.

Th Canara Banking Corporation,
UDIPI, Ltd.
ದಿ ಕೆನರಾ ಬ್ಯಾಂಕಿಂಗ್ ಕೂರ್ಪೊರೇಶನ್,
ಉಡುಪಿ, ಲಿಮಿಟೆಡ್.

Head office: UDIPI. Branch: COONDAPOOR.
ಹೆಡ್ ಆಫೀಸು: ಉಡುಪಿ. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ಮೌಲ್ಯಕತ್ತ ಮೂಲಧನ	ರೂ. 1,73,185—9-11.
ಆಪದ್ಧನ ವಗೈರೆ ಎತ್ತಗಳು	ರೂ. 64,700—0—0.
ಸಾ. ಸೇ. ೬ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	ರೂ. 25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಐವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ಮೌಲ್ಯಕತ್ತ ಮೂಲಧನ 1,73,185-9-11, ಆಪದ್ಧನ ವ ಇತರ ಎತ್ತಗಳು 64,700-0-0, ಠೇವಣಾತಿಗಳು 5,10,077-10-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4371-0-0, ಐವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 93,340-10-5, ಜುಮ್ಲಾ ರೂ. 8,45,674-14-7.

ಆಸ್ತಿ ವ ಸೊತ್ತುಗಳು.

ಹಿತ್ಲು ಕಟ್ಟೋಣ ಕಬ್ಬಿಣದ ಟ್ರಿಜರಿಗಳು ವಗೈರೆ 4134-4-0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496-6-2, ಸಾ. ಸೇ. ೬ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ 25,800-0-0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371-0-0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ) 41,741-14-2, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 26,131-6-3, ಜುಮ್ಲಾ ರೂಪಾಯಿ 8,45,674-14-7.

ನಿರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮೊಸುಮ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನು ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಪ್ಟುಗಳನ್ನು ಸಾವುಕಾರಿ ಹುಂಡಿಗಳನ್ನೂ, ವಟ್ಟಾಯಿಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಐವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

N. Anand Rao,
Secretary.

ಮೂರು ದಿವಸಗಳಲಿ ಗುಣಸಿಕ್ಕದಿದ್ದರೆ
ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತಿಳ್ಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ, ಪರಮಾನಂದ ಔಷಧಿ.

1 ಸೇರು ನಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3-0-0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ವಿಳಾಸ:— ದೇವಣ್ಣ ನಾರಾಯಣ ಶೇಟ್,
ಸರಾಫ, ಗ್ರೋಳಿಕಟ್ಟಾ,
ಮಂಗಳೂರು, (ದ. ಕ.)

XMAS TIME

Every week brings forth new patterns of
SILKS, VOILS, SERJES, SHIRTINGS, FLANNELS, TOYS, TIME-PIECES, HATS, LAMPS, & TOILET REQUISITES.

EVERY ONE IS EXPECTED TO PAY A VISIT TO US IF HE WANTS RELIABLE GOODS AT MODERATE UP-TO-DATE PRICES

Our earnest request to all 'Please pay a visit to us. Nevermind if you don't buy'

BALIGA BROTHERS,
HAMPANKATTA.

'KERSO' LAMPS, CHILDREN READY-MADE DRESSES PROVISIONS CARR'S BISCUITS, STATIONERY ARE OUR FEW SPECIALITIES THIS TIME

Next week we expect a consignment of Ladies requisites from England.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವದೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕ್ಷಣ [illegible] ಇಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು [illegible] ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ [illegible] ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—8—0

ದಂತಮಂಜನ:— [illegible] ದಂತಮಂಜನವನ್ನು ಉಪಯೋಗಿಸುವುದರಿಂದ [illegible] ಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯು [illegible] ಉಪಯುಕ್ತವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್‌ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ,) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಅರ್ನಿ, ಪಾಡಿಚೇರಿ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಕಣ, ವೇಸ್ಟಿ, ರೇಶ್ಮೆ ಸೀರೆಗಳು, ಆರಣಿಪೇಟೆ ಸೀರೆಗಳು, ಕೊರ್ನಾಡ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮುಂಡಗಳು, ನಿತ್ಯ ಉಪಯೋಗದ ಸೀರೆಗಳು ಬನಿಯನ್, ಕರ್ನಾಟಕ ಮಿಲ್ಲುಗಳ ವ ಇತರ ಮಿಲ್ಲುಗಳ ಕೋಟಿಂಗ್ ಶರ್ಟಿಂಗ್. ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ವೇಸ್ಟಿ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ ಸೂಕಿಗಳು ವಗೈರೆ—
ಎಲ್ಲ ಸಂಗ್ರಹವನ್ನೂ, ನಮ್ಮ ಪ್ರೊಪ್ರೈಟರರಾದ ರಾ। ನಾರಾಯಣ ಪ್ರಭುಗಳು ಖಾವಃ ಸ್ವತಃ ಆಯಾ ಊರುಗಳಿಗೆ ಹೋಗಿ ಸಂಗ್ರಹಿಸಿ ತಂದಿರುತ್ತಾರೆ.

ಶರ್ತ:—ನಗದಿ ರೂಪಾಯಿ 50ಕ್ಕೆ ಮಿಗದ ಖರೀದಿಯನ್ನು ಪಡೆಯುವವರಿಗೆ ಸೇಕಡಾ 6¼ರ, ರೂ. 50ರಿಂದ 250ರವರೆಗೆ ಸೇಕಡಾ 10%, ರೂ. 250 ರಿಂದ 1000ಕ್ಕೆ 12½% ಈ ರೀತಿ ಡಿಸ್ಕೌಂಟು ಕೊಡಲಾಗುವುದು.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. ,, ,, ,, 6-0-0.

"ದಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ ,, 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫ್ಲೊಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಖಂ ... ... ೨-೦-೦.

೧೨ ಪ್ಯಾಕೆಟ್ ನಾಟ ತರಕಾರಿ ಬೀಜಗಳು ೧೨ ರಖಂ ... ... ೧-೧೨-೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಖಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಗಿಗೆ, ವಿ. ಪಿ. ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು. ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್‌ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮ್ಹೂಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ದಿ" ಟ್ಯಾಮ್‌ಪೀಸ ರೂ. 2-4-0
9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪
ಬಾಟ್ಲಿವಾಲರ ಕೂರ್ ಆಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಕ್ಲೊರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ಕಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ ,, 2—8—0.
,, ಸ್ಥಳೀಕರಿಗೆ ... ,, 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಡಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2½ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಮನ್ ರೇಶ್ಮೆ ಮಡಿಗಳು, ಸಾಮ್ರಾಣಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ, ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ।ರದ ಪುಷ್ಯ ಬ। ೩ ಶನಿವಾರದಿಂದ ಕ್ರೋಧನ ಸಂ।ರದ ಪುಷ್ಯ ಬ। ೯ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಧನು ಪೆಂಡರ್.)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
2	ಶನಿ	೩	೧೯.೨೮	ಆಶ್ಲೇಷಾ	೪೬.೧೪	೧೮	6 54	6 14
3	ರವಿ	೪	೨೪.೨೮	ಮಘಾ	೫೩.೧೬	೧೯	6 55	6 15
4	ಸೋಮ	೫	೨೯.೧೪	ಪುಬ್ಬಾ	೫೮.೪೨	೨೦	6.55	6 15
5	ಕುಜ	೬	೩೩. ೧	ಉತ್ತರಾ	೬೦. ೦	೨೧	6.56	6.16
6	ಬುಧ	೭	೩೫.೪೬	ಉತ್ತರಾ	೩.೩೨	೨೨	6 56	6.16
7	ಗುರು	೮	೩೬.೧೪	ಹಸ್ತಾ	೬ ೪೪	೨೩	6.56	6.17
8	ಶುಕ್ರ	೯	೩೬.೩೨	ಚಿತ್ತಾ	೯. ೨	೨೪	6 57	6 17

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
25	92—4	69—5	—	—
26	92—8	68—8	—	—
27	89—0	70—2	—	—
28	88—5	74—4	—	—
29	93—6	74—6	—	—
30	91—5	74—0	—	—
31	92—8	74—0	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ	8—12	9—0
ಹೊಸ ಗುಡ್ಡು ...	8—4	8—8
ಸುಗ್ಗಿ ...	8—0	9—0
ಅವ್ವಲ್ ಬೆಳ್ತಿಗೆ ...	8—12	10—0
ಹೊಸ ರಾಶಿ ...	7—10	8—6
ರಂಗೂನು ಬೆಳ್ತಿಗೆ ಗೋಣಿ ೧ ...	14—0	14—8
ಗೋದಿ ಗೋಣಿ ೧ಕ್ಕೆ ...	18—8	20—8
ಹುರುಳಿಗೋಣಿ ೧ಕ್ಕೆ ...	9—4	9—8
ಕಡಲೆಗೋಣಿ ೧ಕ್ಕೆ ...	14—8	15—0
ತೊಗರಿಗೋಣಿ ೧ಕ್ಕೆ ...	14—8	15—0
ತೊಗರಿಬೇಳೆ ಗೋಣಿ ೧ಕ್ಕೆ ...	16—8	22—0
ಉದ್ದುಗೋಣಿ ೧ಕ್ಕೆ ...	17—0	17—8
ಹೆಸರುಗೋಣಿ ೧ಕ್ಕೆ ...	15—4	15—8
ಊರು ಬೆಲ್ಲ ಖಂಡಿ ೧ಕ್ಕೆ ...	60—0	62—8
ಉಪ್ಪು ಗೋಣಿ ೧ಕ್ಕೆ ...	4—0	4—4
ಕೊಬ್ರಿ ಖಂಡಿ ೧ಕ್ಕೆ ...	120—0	125—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	50—0	—
ಎಳ್ಳಿಂಡಿ ಖಂಡಿ ೧ಕ್ಕೆ ...	40—0	47—8
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8—14	9—8
ಎಳ್ಳೆಣ್ಣೆ ಮಣ ೧ಕ್ಕೆ ...	8—0	11—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮಣ ೧ಕ್ಕೆ ...	4—6	—
ಊರ ಮೆಣಸಿನಕಾಯಿ ಮಣ ೧ಕ್ಕೆ ...	8—0	9—0
ಹಾಸಿವೆ ಮುಡಿ ೧ಕ್ಕೆ ...	9—8	10—0
ಕೊತ್ತುಂಬರಿ ಮುಡಿ ೧ಕ್ಕೆ ...	3—8	4—4
ಕಾಫಿ ಖಂಡಿ ೧ಕ್ಕೆ ...	345—0	—
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	275—0	295—0
ಹೊಸ ಅಡಿಕೆ ಖಂಡಿ ೧ಕ್ಕೆ ...	200—0	210—0
ಕಾಳುಮೆಣಸು ಖಂಡಿ ೧ಕ್ಕೆ ...	440—0	—
ಅರಶಿನ ಮಣ ೧ಕ್ಕೆ ...	45—0	—
ಗೇರುಬೀಜ ಮುಡಿ ೧ಕ್ಕೆ ...	3—14	—
ಕಚ್ಚೆಣ ಖಂಡಿ ೧ಕ್ಕೆ ...	45—0	65—0
ತಾಂಬ್ರ ತಗಡು ಮಣ ೧ಕ್ಕೆ ...	16-10	16—12
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	21—0	—
ಚೀನಿ ಬೆಳ್ಳಿ ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮಣ ೧ಕ್ಕೆ ...	16—8	
ಪವನು	13—6	

ಕನ್ನಡಿಗರೇ! **ವಸಂತ.** ಕಸ್ತೂರಿಯಂ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . . ವಸಂತ
ಸಮಾಜಸುಧಾರಕನೆಂದರೆ . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . ವಸಂತ
ಕರ್ಣಾಟಕ ಭಾಷಾಸೇವಕನೆಂದರೆ . . . . ವಸಂತ
ದೇಶವಿದೇಶ ಬಂಧುವೆಂದರೆ . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . ವಸಂತ
ದೇಶಭಕ್ತನೆಂದರೆ . . . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರಾನ್ ¼ ಫುಟ ಸ್ಯಾಜಿನ) ಪುಟಗಳನ್ನು ಮಿಶ್ರಿತ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ಡಿಡ್ಡ ಸೈಜಿನ ಸಾದಾ ಡೈರಿ . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ತ್ವರೆ ಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈಮನರಾಮನ ಚರಿತ್ರೆ ... ...
(6) ಛಾಮಿನಿ ಕಟ್ಟಿದ ಚೋರ ಕಥೆ ... ...
(7) ಕುವರಾರ ರಾಮನ ಕಥೆ ... ...
(8) ಕೃಷ್ಣದಾನಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪಂಚಾಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀಕ್ಷಾಕ್ಷಮೇದ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) ,, ಶನಿದೇವರ ಮಹಾತ್ಮೆ ... ...
(22) ,, ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷಾಗೃಹ ಕಥೆ ... ...
(24) ,, ಚೋರ ಕಥೆ ... ...
(25) ,, ಪಾರ್ವತಿ ಕಾರವಂಚ ಕಥೆ ... ...
(26) ,, ಗೋವಿನ ಚರಿತ್ರೆ ... ...
(27) ,, ದುಶ್ಶಾಸನ ಕಥೆ ... ...
(28) ,, ಸಾನಂದ ಗಣೇಶ್ವರ ಕಥೆ ... ...
(29) ,, ಅಂಗದ ಸಾಧನ ... ...

ಶಾರದಾ ಛಾಪಖಾನೆ, ಮಂಗಳೂರು.

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚುಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ ಮಾರಲ್ಪಡುವವು.

ರೂ. 15—12—0ರ ವಾಚು ರೂ. 7—8—0 ಕೊಡಲ್ಪಡುವುದು.



ಬೇಕಾದವರು ತ್ವರೆಮಾಡಿರಿ.

ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

ವಿಲ್ಸನ್ ವಾಚ್ ಕೊ.,
ಬಜಾರ್ ಎಸ್ಟೇಟ್, ಮುಂಬಯಿ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೋಸ್ಟ್ಸ, ಮೆಮೊರಂಡಮ್ ಒಪ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡಾ ಪ್ರೊಫೀಶಿಯಲ್ ರಿಸೀವರರವರ
—: ಕೋರ್ಟನಲ್ಲಿ :—

ದಿವಾಳಿ ಅರ್ಜಿ ನಂಬ್ರ 99/1925.

ಎ. ಬಿರ್ಮಣ್ಣ ಬೆಳಚಾಡ ಕುಂಞ ಬೆಳಚಾಡನ ಮಗ ಮಂಗಳೂರು ತಾಲೂಕು ಅಳಪೆಗ್ರಾಮದಲ್ಲಿರುವವ; } ಅರ್ಜಿದಾರ.

ಮತ್ತು

ಜೆ. ಎ. ಅಲ್ವರೀಸ್ ಕೂಡಾ — ಲೇಣೆದಾರರು.

ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪನೆ ಮಾಡಬೇಕಾಗಿ ಮೇಲ್ಕಂಡ ಅರ್ಜಿದಾರರು ಮೇಲ್ಕಂಡ ಕೋರ್ಟನಲ್ಲಿ ಅರ್ಜಿ ಕೊಟ್ಟಿರುವುದರಿಂದ ಮತ್ತು ಸದರಿ ಅರ್ಜಿಯು ಇದೇ ಬರುವ ತಾರೀಕು 9—1—1926ಕ್ಕೆ ಸದರಿ ಮೇಲ್ಕಂಡ ಕೋರ್ಟನಲ್ಲಿ ತನ್ಖಿಗೆ ಇಟ್ಟಿರುತ್ತದೆ. ಅದ್ದರಿಂದ ಆಕ್ಷೇಪ ಹೇಳುವವರು ಸದರಿ ಅರ್ಜಿ ಇಟ್ಟ ತಾರೀಕು 9—1—'26ನೇ ಮಧ್ಯಾಹ್ನ ಗಂಟೆ 12ರ ವಳಗೆ ಸದರಿ ಮೇಲ್ಕಂಡ ಕೋರ್ಟನಲ್ಲಿ ಜ್ಯಾಹೀರು ಮಾಡತಕ್ಕದ್ದು ಇದಕ್ಕೆ ತಪ್ಪಿದರೆ ಕೋರ್ಟನವರಿಗೆ ಯುಕ್ತ ತೋರುವಂತೆ ತೀರ್ಮಾನಿಸಲಾದೀತೆಂತ ಈ ಮೂಲಕ ಪ್ರಕಟಿಸೋಣಾಗಿಯದೆ.

ಮಂಗಳೂರು, ತಾ. 24—12—'25. } Bola Nagesh Row, *Vakil for petitioner.*

ನೋಟೀಸು.

ದಕ್ಷಿಣ ಕನ್ನಡಾ ಪ್ರೊಫೀಶಿಯಲ್ ರಿಸೀವರರವರ
—: ಕೋರ್ಟನಲ್ಲಿ :—

ದಿವಾಳಿ ಅರ್ಜಿ ನಂಬ್ರ 101/1925.

ಅಬ್ಬುಲ್ ಬ್ಯಾರಿ ಹಮ್ಮಬ್ಬಮುಕ್ರಿ ಬ್ಯಾರಿಗಳ ಮಗ ಮಂಗಳೂರು ಕೋಟೆಗ್ರಾಮದ ಬೋಳಾರದಲ್ಲಿರುವವ } ಅರ್ಜಿದಾರ.

ಮತ್ತು

(1) ಬಾಬು ಮರಕಾಲ, (2) ಅಮ್ಮು ಮರಕಾಲ, (3) ಡಿ. ಲಕ್ಷ್ಮಣ, (4) ಕೆ. ಅಬ್ದುಲ್ಲ ಇದಿನಬ್ಬ, (5) ಯಂ. ಯಂ. ಅಮದ್‍ಪಕ್ಕಿ ಎಂಡ್‍-ಕೋ, (6) ಬಜಲ ಬಾವು ಬ್ಯಾರಿ, (7) ಬಿ. ಯಂ. ಡಿ. ಸೋಜ, (8) ಬಡಿಲ ಸಂಕು ನಾಯ್ಕ, (9) ತುಕ್ಕಪ್ಪ, (10) ಬಿ. ಮಹಾಬಲ ರೈ, (11) ಬಿ. ತಿಮ್ಮಪ್ಪ ಸೆಟ್ಟಿ, (12) ಬಿ. ಸಂಕು ರೈ, (13) ಕೊರಗ ಮರಕಾಲ, (14) ಮುತ್ತಪ್ಪ ಮರಕಾಲ, (15) ಐತಪ್ಪ ಮರಕಾಲ, (15) ಪಂಜಪ್ಪ ಮರಕಾಲ,

ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪನೆ ಮಾಡಬೇಕಾಗಿ ಮೇಲ್ಕಂಡ ಅರ್ಜಿದಾರರು ಮೇಲ್ಕಂಡ ಕೋರ್ಟನಲ್ಲಿ ಅರ್ಜಿ ಕೊಟ್ಟಿರುವುದರಿಂದ ಮತ್ತು ಸದರಿ ಅರ್ಜಿಯು ಇದೇ ಬರುವ ತಾ. 9—1—'26ಕ್ಕೆ ಸದರಿ ಮೇಲ್ಕಂಡ ಕೋರ್ಟನಲ್ಲಿ ತನ್ಖಿಗೆ ಇಟ್ಟಿರುತ್ತದೆ. ಅದ್ದರಿಂದ ಸದರಿ ಅರ್ಜಿಗೆ ಆಕ್ಷೇಪ ಹೇಳುವವರು ಸದರಿ ಅರ್ಜಿಯು ತಾ. 9—1—'26ನೇ ಮಧ್ಯಾಹ್ನ ಗಂಟೆ 12ರ ವಳಗೆ ಸದರಿ ಮೇಲ್ಕಂಡ ಕೋರ್ಟನಲ್ಲಿ ಜ್ಯಾಹೀರು ಮಾಡತಕ್ಕದ್ದು. ಇದಕ್ಕೆ ತಪ್ಪಿದರೆ ಕೋರ್ಟನವರಿಗೆ ಯುಕ್ತ ತೋರುವಂತೆ ತೀರ್ಮಾನಿಸಲಾದೀತೆಂಬ ಸಂಗತಿ ಈ ಮೂಲಕ ಪ್ರಕಟಿಸೋಣಾಗಿಯದೆ.

ಮಂಗಳೂರು, ತಾ. 24—12—'25. } Bola Nagesh Row, *Vakil for petitioner.*

ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ವ್ಹೊಲಿಯರ್ ಯುವಕ ಸಂಘ, ಮಂಗಳೂರು.

ಕಳೆದ ದಶಂಬರ ತಾ. ೮ನೇ ಸ್ವದೇಶಾಭಿಮಾನಿಯಲ್ಲಿ ಸೂಚಿಸಿದ ಪ್ರಕಾರ ಈ ಸಂಘದ ಪ್ರಥಮ ವಾರ್ಷಿಕೋತ್ಸವವು ಸದರಿ ತಿಂಗಳ ತಾ. ೨೦ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಮಂಗಳೂರ ಮಾರ್ಕೆಟ್ ವಾರ್ಡ್ ಮುನ್ಸಿಫಲ್ ಶಾಲಾ ಕಟ್ಟೋಣದಲ್ಲಿ ಸುಮಾರು ೨೫೦ಕ್ಕೆ ಕಡಿಮೆಯಾಗದಷ್ಟು ಸ್ತ್ರೀಪುರುಷರಿಂದಲೂ, ಬಾಲಕ ಬಾಲಕಿಯರಿಂದಲೂ ಅತೀ ಸಂಭ್ರಮದಿಂದ ಮ. ರಾ. ರಾ. ಪಿ. ಆರ್. ಶ್ರೀಯಾನರವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಥಮತಾ ದೇವರ ಪ್ರಾರ್ಥನೆಯಾದ ತರುವಾಯ ಸಂಘದ ಕಾರ್ಯದರ್ಶಿಯವರು ವರುಷಾವಧಿ ರಿಪೋರ್ಟನ್ನು ಓದಿ ತಿಳಿಸಿದ ನಂತರ ಮ॥ ರಾ॥ ರಾ॥ ಯಂ. ಕೃಷ್ಣ ಇವರು ಸಂಘ ಸ್ಥಾಪನೆಯಾದುವರ, ಉದ್ದಿಷ್ಟ ಮೊದಲಾದುದರ ಕುರಿತು ಒಂದು ಚಲೋ ಭಾಷಣವನ್ನೂ, ಶ್ರೀಮತಿ ನಾಗಮ್ಮನವರು ಸ್ತ್ರೀ ವರ್ಗಕ್ಕೆ ಯೋಗ್ಯವಾದ ಒಂದು ಭಾಷಣವನ್ನೂ ಕೊಟ್ಟದ್ದಲ್ಲದೆ ಸದರಿ ಸಂಘದ ಅಧ್ಯಕ್ಷರಾದ ರಾ. ಬಾಬು ಮಾಸ್ತರರವರು ಸ್ತ್ರೀ ಪುರುಷರ ವ, ಮಕ್ಕಳ ಜ್ಞಾನಾಭಿವೃದ್ಧಿಯ ಕುರಿತು ಅರ್ಥಗರ್ಭಿತವಾದ ಭಾಷಣವನ್ನೂ ಕೊಟ್ಟರು. ಭಾಷಣವು ಮುಗಿದೊಡನೆ ಸುಮಾರು ೩೫ ಮಂದಿ ಸ್ವಜಾತಿ ಶಾಲಾ ಮಕ್ಕಳಿಗೆ ವಿದ್ಯೆಯಲ್ಲಿ ಅಭಿರುಚಿ ಹುಟ್ಟಿಸುವ ಬಗ್ಗೆ ಇನಾಮು ಹಂಚಲ್ಪಟ್ಟ ನಂತರ ಆ ದಿನ ಅಧ್ಯಕ್ಷಸ್ಥಾನವನ್ನು ವಹಿಸಿದ ಪಿ. ಆರ್. ಶ್ರೀಯಾನರು ಸ್ವಜಾತಿಯ ಮತ್ತು ಸಂಘದ ಅಭಿವೃದ್ಧಿಯ ಕುರಿತು ಭಾಷಣವನ್ನಿತ್ತದ್ದಲ್ಲದೆ ರೂಪಾಯಿ ೫ನ್ನೂ ಸದರಿ ಸಂಘಕ್ಕೆ ಕೊಡುವೆನಾಗಿ ವಾಗ್ದಾನ ಮಾಡಿರುವರು. ಇದೇ ರೀತಿ ಕೊಡಿಯಾಲ್‍ಬೈಲ್ ಐತಣ್ಣನವರೂ ರೂಪಾಯಿ ೫ನ್ನು ಕೊಡುತ್ತೇನೆಂದು ವಚನವಿತ್ತಿರುವರು. ತದನಂತರ ಬಾಳೆಹಣ್ಣು, ಕಾಫಿ, ತಾಂಬೂಲಾದಿ ಸತ್ಕಾರಗಳಿಂದ ಸಭಿಕರನ್ನು ಸತ್ಕರಿಸಿದ್ದಲ್ಲದೆ, ಸಂಘದ ಮೆಂಬರರಾದ ಮ॥ ರಾ॥ ಮಂಜುನಾಥನವರಿಂದ ರಚಿಸಲ್ಪಟ್ಟ ಮನುಷ್ಯನ ಮೂರು ತರದ ಕೆಟ್ಟ ನಡತೆಯಿಂದ ಉಂಟಾಗುವ ದುಷ್ಪರಿಣಾಮದ ಕುರಿತಾದ 'ಚಂಡಧೂರ್ತ'ವೆಂಬ ಒಂದು ಚಲೋ ನಾಟಕವನ್ನು ಆಡಿ ಸಭಿಕರನ್ನು ಆನಂದಗೊಳಿಸಿದರು. ಅನಂತರ ಸಭೆಯು ಮುಕ್ತಾಯವಾಯಿತು.

ಸಂಘಕ್ಕೆ ಸಹಾಯ ಧನವನ್ನಿತ್ತ ಮಹನೀಯರು:— ಮ॥ ರಾ॥ಗಳಾದ ಯಂ. ಪರಮೇಶ್ವರನವರು, ಎಚ್. ಶ್ಯಾಂಪಣ್ಣನವರು, ಪಿ. ಆರ್ ಶ್ರೀಯಾನರು, ಕೆ. ಬಸಪ್ಪನವರು, ಉರುವ ಪೈಂಟರ್ ಮುಂಡಪ್ಪನವರು, ರೂ. ೨ರಂತೆಯೂ, ಮ॥ ರಾ॥ಗಳಾದ ಎಚ್. ವೆಂಕಪ್ಪನವರು, ಕೆ. ಶ್ಯಾಂಪಣ್ಣನವರು, ಕೆ. ತಿಮ್ಮಣ್ಣನವರು, ಕೆ. ನಾರ್ಣಪಣ್ಣನವರು, ಯಂ. ಕೊಗ್ಗನವರು ರೂ. ೧ರಂತೆಯೂ ಕೊಟ್ಟಿರುವರು. ರಾ॥ಗಳಾದ ಜಪ್ಪು ಕೊರಗಣ್ಣನವರು ರೂ ೧ ವಾಗ್ದಾನ ಮಾಡಿರುವರು. ಉದ್ಯಾವರ ಪಂಡಿತ್ ಅಪ್ಪಯ್ಯನವರು, ಬ್ರಹ್ಮಾವರ ಐತಪ್ಪನವರು ರೂ. ೨ರಂತೆ ವಾಗ್ದಾನವಿತ್ತದ್ದಲ್ಲದೆ ಅನೇಕ ಸ್ವಜಾತಿ ಗೃಹಸ್ಥರು ಈ ದಿನವೇ ಮೆಂಬರರಾಗಿಯೂ ದಾಖಲಾದರು. ಈ ದಿನ ಮುಂಬಾಯಿಯ ಹಲವು ಸ್ವಜಾತಿ ಗೃಹಸ್ಥರು ಕೂಡಾ ಈ ಸಂಘಕ್ಕೆ ಹೊಸ ಮೆಂಬರರಾಗಿಯೂ ಸೇರಿದ್ದಲ್ಲದೆ ಪತ್ರಮುಖೇನ ತಮ್ಮ ವಾಗ್ದಾನಗಳನ್ನೂ, ಸಂತೋಷವನ್ನೂ ತಿಳಿಯಪಡಿಸಿರುವರು. ಅಲ್ಲದೆ ಅನ್ಯಗೃಹಸ್ಥರಲ್ಲೊಬ್ಬರಾದ ಮ. ರಾ. ರಾ. ದೂಮಣ್ಣನವರು ಸಹಾಯ ಮಾಡಿದ ರೂ. ೨ನ್ನು ಅತ್ಯಾದರದಿಂದ ಸ್ವೀಕರಿಸಿರುವೆವು. ಇದು ಆದರ್ಶನೀಯವಾಗಿರುವುದು.

ಮುಂಬಾಯಿಯಲ್ಲಿರುವ ಗೃಹಸ್ಥರು ಬಹಳ ದೂರದಲ್ಲಿದ್ದರೂ ಸಂಘದ ಮೇಲೆ ಪ್ರೀತಿಪಟ್ಟು ಮೆಂಬರರಾಗಿ ಸೇರಿದಕ್ಕಾಗಿಯೂ, ಅಲ್ಲದೆ ಇನ್ನು ಹೆಚ್ಚಿನ ಸಹಾಯವನ್ನು ಮಾಡುತ್ತೇವೆಂಬುದಾಗಿ ವಾಗ್ದಾನ ಮಾಡಿದಕ್ಕಾ, ಸದಂ ದಿವಸ ಖರ್ಚಾದ ಹಣವನ್ನು ಮೆಂಬರರು ತಾವಾಗಿ ಒಪ್ಪಿಕೊಂಡು ಸಾಹಸದಿಂದ ಕಾರ್ಯ ನಡಿಸಿದಕ್ಕಾ, ಸಂಘದ ಖಜಾನಜಿ ಕಂಟ್ರಾಕ್ಟರ್ ಸೋಮಪ್ಪನವರು ಹಣದಿಂದಲೂ, ಮೋಹನಪ್ಪನಿಂದಲೂ ಹೆಚ್ಚಾದ ಸಾಹಸ ಪಟ್ಟದ್ದಕ್ಕಾ, ಮಾ॥ ರಾ॥ಗಳಾದ ಕೆ. ಗೋಪಾಳ, ಯಂ. ಗುರುವಪ್ಪ ಇವರು ಕಾರ್ಡ, ನೋಟೀಸನ್ನೂ, ರಾ॥ಗಳಾದ ಕೆ. ಕೊರಗಪ್ಪ, ರಾ॥ ಕೆ. ಬಾಬು ಇವರು ರಿಬ್ಬನ್ (ಮಾರ್ಕ್ಸ)ನ್ನು ಸಂಘಕ್ಕೆ ಬೇಕಾದಷ್ಟು ಒದಗಿಸಿಕೊಟ್ಟದ್ದಕ್ಕಾ, ಸದರಿ ಸಂಘದ ಅಧ್ಯಕ್ಷರಾದ ರಾ॥ ಎಚ್. ಬಾಬುನವರು ಹೃತ್ಪೂರ್ವಕ ವಂದನೆಯನ್ನು ಅರ್ಪಿಸಿರುತ್ತಾರೆ.

ಮಂಗಳೂರು, ತಾ. 21—12—'25 } ಮಾಸ್ತರ್ ಕೆ. ಸೋಮಪ್ಪ, ಜಪ್ಪು ಲಕ್ಷ್ಮಣ, (ಜತೆ ಕಾರ್ಯದರ್ಶಿಗಳು.)

ಉಡುಪಿ ತಾಲೂಕು ನೊನ್‍ಮಿಶ್ಯನ್ ಎೈಡೆಡ್ ಶಾಲೆಗಳ ಸಂಘದ ವಾರ್ಷಿಕ ಮಹಾಸಭೆಯ ಪ್ರೊಸಿಡಿಂಗ್ಸ್.

ತಾ. ೨೬—೧೨—೧೯೨೫ರಲ್ಲು ಈ ಸಭೆಯು ಮ॥ ರಾ॥ ಉಡುಪಿ ರೇಂಜ್ ಶಾಲೆಗಳ ಡಿಪ್ಟಿ ಇನ್ಸ್‍ಪೆಕ್ಟರವರ ಅಧ್ಯಕ್ಷತೆಯಲ್ಲಿ ಜರಗಿತು. ಇಂದಿನ ಸಭೆಗೆ ಏೈಡೆಡ್ ಶಾಲೆಗಳ ಮೆನೇಜರರೂ, ಉಪಾಧ್ಯಾಯರೂ ಕೂಡ ೪೯ ಮಂದಿ ಹಾಜರಿದ್ದರು.

ಪ್ರಥಮತಃ ಸಂಘದ ಕಾರ್ಯದರ್ಶಿಯವರಾದ ರಾ॥ ಕೆ. ಗಣಪಯ್ಯ ಸೆಟ್ರು ಕಳೆದ ತಾ. ೭—೧೧—೨೫ರಲ್ಲು ಜರಗಿದ ಮೀಟಿಂಗಿನ ಪ್ರೊಸಿಡಿಂಗ್ಸನ್ನೂ, ಜಿಲ್ಲಾ ಪರಿಷದ ಜರಗಿಸುವ ಕುರಿತು ಮಂಗಳೂರು ತಾಲೂಕು ನೋನ್‍ಮಿಶ್ಯನ್ ಏೈಡೆಡ್ ಶಾಲೆಗಳ ಸಂಘದ ಸೆಕ್ರಿಟರಿಯರಾದ ರಾ॥ ಕೆ. ಸುಬ್ರಹ್ಮಣ್ಯನವರಿಂದ ತನಗೆ ಬಂದಿರುವ ಪತ್ರವನ್ನೂ ಓದಿಹೇಳಿದ ಬಳಿಕ ಈ ಕೆಳಗಿನ ನಿರ್ಣಯಗಳು ಮಂಜೂರಾದವು.

೧) ಏೈಡೆಡ್ ಶಾಲೆಗಳಿಗೆ ವರುಷಾವಧಿ ಕೊಡತಕ್ಕ ಟೀಚಿಂಗ್ ಗ್ರಾಂಟನ್ನು ಬರುವ ವರುಷದಿಂದ, ವರುಷದಲ್ಲಿ ಕನಿಷ್ಠಪಕ್ಷಕ್ಕೆ ೩ ಕಂತುಗಳನ್ನಾದರೂ ಮಾಡಿ ಕೊಡಿಸುವಂತೆ ಬರಕೊಳ್ಳುವುದು. ೨) ದಕ್ಷಿಣ ಕನ್ನಡ ಜಿಲ್ಲೆಯ ನೋನ್‍ಮಿಶ್ಯನ್ ಏೈಡೆಡ್ ಶಾಲೆಗಳ ಟೀಚರ್ ಮೆನೇಜರರ ಪರವಾಗಿ ಒಬ್ಬರನ್ನೂ, ಉಪಾಧ್ಯಾಯರ ಪರವಾಗಿ ಒಬ್ಬರನ್ನೂ, ಹೀಗೆ ಇಬ್ಬರು ಪ್ರತಿನಿಧಿಗಳನ್ನು ಜಿಲ್ಲಾ ಪರಿಷದದಲ್ಲಿ ಚುನಾಯಿಸಿ, ಡಿಸ್ಟ್ರಿಕ್ಟು ಎಜ್ಯುಕೇಶನಲ್ ಕೌನ್ಸಿಲಿಗೆ ಮೆಂಬರರಾಗಿ ಕಳುಹಿಸಬೇಕಾಗಿ ನಿರ್ಣಯಿಸಲಾಯಿತು. ೩) ಜಿಲ್ಲಾ ಪರಿಷದಕ್ಕೆ ಈ ಸಂಘದ ಪರವಾಗಿ, ಕಾರ್ಯದರ್ಶಿಯರಾದ ರಾ॥ ಕೆ. ಗಣಪಯ್ಯ ಸೆಟ್ರನ್ನೂ, ಜತೆಕಾರ್ಯದರ್ಶಿಯರಾದ ರಾ॥ ಎಸ್. ನರಸಿಂಗರಾಯರನ್ನೂ ಡೆಲಿಗೇಟರಾಗಿ ಸರ್ವಸಮ್ಮತದಿಂದ ಆರಿಸಲಾಯಿತು. ೪) ಕಳೆದ ತಾ. ೨೮—೧೦—೨೫ರಲ್ಲು ಜರಗಿದ ಸಭೆಯಲ್ಲಿ ಪಾಸಾದ ೧ರಿಂದ ೭ರ ವರೆಗಿನ ಠರಾವುಗಳನ್ನೂ, ಇನ್ನಿತರ ವಿಷಯಗಳನ್ನೂ ಜಿಲ್ಲಾ ಪರಿಷದದಲ್ಲಿ ಇಡುವಂತೆ, ಈ ಪ್ರತಿನಿಧಿಗಳಿಗೆ ಸಭೆಯವರಿಂದ ಅಧಿಕಾರ ಕೊಡೋಣಾಯಿತು.

ತರುವಾಯ ವಾರ್ಷಿಕ ವಂತಿಗೆಯ ವಿಚಾರ ನಡೆದು ಈ ವರೆಗೆ ವಸೂಲು ಕೊಡದ ಶಾಲೆಯವರು ಮುಂದಿನ ಮೀಟಿಂಗಿನ ದಿವಸವಾದರೂ ವಸೂಲಿ ಕೊಡಬೇಕೆಂಬದಾಗಿ ನಿರ್ಣಯಿಸಲ್ಪಟ್ಟು, ಅಧ್ಯಕ್ಷ ಮಹಾಶಯರಿಗೂ ಶ್ರೀಯುತ ದಾನಿಜನ್ನರಿಗೂ ಧನ್ಯವಾದಗಳನ್ನು ಸಮರ್ಪಿಸಿ, ಸಭೆಯು ಕೊನೆಗೊಂಡಿತು.

ಶ್ರೀ ಗಣಪತಿ ಜೂನಿಯರ್ ಎಲಿಮೆಂಟರಿ ಶಾಲೆ, ಕುರುಕಾಲು, ತಾ. 14—12—1926. } ಕೆ. ಗಣಪಯ್ಯ ಶೆಟ್ಟಿ, ಸೆಕ್ರೆಟರಿ. ನೋನ್‍ಮಿಶನ್ ಏೈಡೆಡ್ ಶಾಲೆಗಳ ಸಂಘ ಉಡುಪಿ.

ಶ್ರೀ ಕಾಸರಗೋಡು ತಾಲೂಕು ಎಣ್ಮಕಜೆ ಗ್ರಾಮದ ವಸಿಷ್ಠಾಶ್ರಮ ಉಕ್ಕಿನಡ್ಕ.

ಹೊಸ ನಿಯಮಗಳು.

(೧) ಈ ಆಶ್ರಮವನ್ನು ಸಂಘವಾಗಿ ರಿಜಿಸ್ಟ್ರಿಮಾಡುವುದೆಂದು ನಿಶ್ಚಯಿಸಿದೆ. (೨) ರೂಪಾಯಿ ೧ರ ಕೆಳಗೆ ವಂತಿಗೆ ಕೊಟ್ಟವರು ಸಹಾಯಕರಾಗಿಯೂ ೧೦೦ರಿಂದ ಮೇಲೆ ೫೦೦ ರೂಪಾಯಿಗಳ ವರೆಗೆ ಕೊಡುವವರು ಮೆಂಬರರಾಗಿಯೂ ೫೦೦ರ ಮೇಲೆ ಕೊಡುವವರು ಸ್ಥಾಪಕರಾಗಿಯೂ ನಿಯಮಿಸಲ್ಪಡುವರು. (೩) ಈ ಆಶ್ರಮಕ್ಕೆ ವಂತಿಗೆ ಕೊಡುವವರಿಗೆ ರಶೀದಿ ಕೊಡುವರೆ ಪುಸ್ತಕ ಅಚ್ಚೆಡಿ ಮಾಡಿದೆ ಇನ್ನು ಮೇಲೆ ವಂತಿಗೆ ಕೊಡುವವರು ಪ್ರಿಂಟಾದ ರಶೀದಿ ಸಿಕ್ಕದೆ ಯಾರೂ ಕೊಡಕೂಡದೆಂದು ಮೆನೇಜರರ ವಿನಂತಿಯಿದೆ. (೪) ಯಾವಾದರೂ ಮಹಾತ್ಮರು ಹಣಕೊಟ್ಟು ಈ ಮೇಲಿನ ಸ್ಥಾನಗಳಲ್ಲಿ ಸೇರಲು ಪತ್ರವ್ಯವಹಾರ ಮಾಡಬೇಕೆಂದು ಅಪೇಕ್ಷೆಯುಳ್ಳವರು ಪಂಡಿತ ಶಂಕರನಾರಾಯಣ ಭಟ್ಟ, ಮೆನೇಜರ್, ವಸಿಷ್ಠಾಶ್ರಮ ಕಾಸರಗೋಡು, ದ. ಕ. ಈ ವಿಳಾಸದಲ್ಲಿ ಕೇಳಿಕೊಳ್ಳಬಹುದು. (೫) ಸ್ಥಾಪಕರೂ, ಮೆಂಬರರೂ, ಸಹಾಯಕರೂ ಆಗಿ ಈಗ ಸುಮಾರು ೧೦೦೦ ಮಂದಿಗೂ ವಿಕ್ಕಿರುವರು. (೬) ಈಗ ೩೪ ಮಂದಿ ವಿದ್ಯಾರ್ಥಿಗಳೂ ೪ ಉಪಾಧ್ಯಾಯರೂ ಇರುವರು ಮತ್ತು ಹುಡುಗರಿಗೆ ಸಂಸ್ಕೃತ ಭಾಷಾ ಉತ್ಕೃಷ್ಟಿಗೋಸ್ಕರ 'ಶ್ರೀ ಶಾರದಾ' ಎಂಬ ಗೀರ್ವಾಣ ಭಾಷಾ ಪಾಕ್ಷಿಕ ಪತ್ರಿಕೆಯನ್ನು ತರಿಸುತ್ತಿರುವರು. (ಸದ್ಯಕ್ಕೆ ಸರಕಾರದವರು ಎಲಿಮೆಂಟರಿ ಸ್ಕೂಲಾಗಿ ಸ್ವೀಕರಿಸಿರುವರು). (೭) ಈ ಆಶ್ರಮಕ್ಕೆ ಧನಸಹಾಯ ಸಿಕ್ಕಿದ ಹಾಗೆಯೇ ಒಂದೊಂದೇ ವಿದ್ಯೆಗಳನ್ನು ಇಟ್ಟು ಕ್ರಮೇಣ ಎಲ್ಲಾ ವಿದ್ಯೆಗಳನ್ನೂ ಆಶ್ರಮದಿಂದಲೇ ಪಡೆಯುವಂತೆ ಮಾಡುವ ಏರ್ಪಾಡಿನಲ್ಲಿರುವರು. (೮) ಮುಂಚಿನವರು ಹೊರತು ಈಗ ಹೊಸತಾಗಿ ಸೇರಿರುವ ಮೆಂಬರರ ಹೆಸರು— ರಾ॥ಗಳಾದ ಬಡೆಕ್ಕಿಲ ದೋಸೆಮನೆ ರಾಮಚಂದ್ರ ಭಟ್ಟ, ಸರ್ಪಂಗಳ ಈಶ್ವರ ಭಟ್ಟ, ನಗ್ರಿ ನಾರಾಯಣಾಚಾರ್ಯ, ಮುಳಿಯಾಲ ಕೃಷ್ಣ ಭಟ್ಟ, ಗುಣಾಜೆ ರಾಮ ಭಟ್ಟ, ಮಡೆಯಾಲ ಶಂಭಟ್ಟ ಇವರುಗಳು ರೂಪಾಯಿ ೧೦ರಂತೆ ಧನಸಹಾಯವನ್ನಿತ್ತಿರುವರು. ಇತಿ,

ಎಸ್. ಈಶ್ವರ ಭಟ್ಟ, ಕಾರ್ಯದರ್ಶಿ.

ದ್ವಿತೀಯ ಕರ್ಣಾಟಕ ಆಯುರ್ವೇದ ಸಮ್ಮೇಳನ

— ಬೆಂಗಳೂರು. —

(ಪ್ರಸಿದ್ಧ ಪತ್ರಿಕಾ)

ವಿಶೇಷ ಸೂಚನೆ:— ಬೆಳಗಾಮಿನ ಕರ್ಣಾಟಕ ಆಯುರ್ವೇದ ಸಮ್ಮೇಳನ ಸಭೆಯ ಸ್ಥಾಯಿಕಮಿಟಿಯವರ ಅಭಿಪ್ರಾಯವನ್ನು ಅನುಸರಿಸಿ, ಉಡುಪಿಯಲ್ಲಿ ೧೯೨೬ನೆಯ ಜನವರಿ ೧೮ರಿಂದ ೨೫ರ ವರೆಗೆ ನಡೆಯುವ ಪರ್ಯಾಯ ಮಹೋತ್ಸವಕ್ಕೆ ಜನಗಳು ಹೋಗಬೇಕಾಗಿರುವುದರಿಂದ ಜನವರಿಯಲ್ಲಿ ಬೆಂಗಳೂರಲ್ಲಿ ಆಯುರ್ವೇದ ಸಮ್ಮೇಳನವೂ ನಡದರೆ ಬರತಕ್ಕವರಿಗೆಲ್ಲಾ ಅನುಕೂಲವಿಲ್ಲವೆಂಬ ತಿಳಿಯಬರುವ ಅಂಶವನ್ನು ಸೂಕ್ತವೆಂದು ಭಾವಿಸಿ ಸ್ವಾಗತ ಸಭೆಯವರು ಸಮ್ಮೇಳನವು ಜನವರಿ ೧೬ನೆಯ ತಾರೀಕಿನಿಂದ ನಡೆಯಬೇಕೆಂಬ ತೀರ್ಮಾನವನ್ನು ಬದಲಾಯಿಸಿ ೧೯೨೬ನೆ ಫೆಬ್ರವರಿ ೧೪ರಿಂದ ನಡೆಯುವಂತೆ ಈಗ ತೀರ್ಮಾನಿಸಿ ಹಿಂದೆ ಪ್ರಕಟಿಸಿರುವ ಪ್ರಸಿದ್ಧ ಪತ್ರಿಕೆ ನಿಯಮಾವಳಿ ವಗೈರೆಗಳ ಮೂಲಕ ತಿಳಿಸಿರುವ ತಾರೀಖುಗಳನ್ನು ಯಥಾಯೋಗ್ಯವಾಗಿ ಸಂಪಡಿಸಿ ಸಮ್ಮೇಳನಕ್ಕೆ ಬರತಕ್ಕವರಿಗೆಲ್ಲಾ ಅನ್ಕೂಲಿಸುವಂತೆ ಕೆಳಗೆ ಕಂಡ ರೀತಿಯಲ್ಲಿ ತಾರೀಖುಗಳನ್ನು ನಿಶ್ಚಯಿಸಿರುತ್ತಾರೆ. ದೇಶಬಾಂಧವರಾದ ಮತ್ತು ಆಯುರ್ವೇದಾಭಿಮಾನಿಗಳಾದ ಸರ್ವರೂ ಈ ತಾರೀಖುಗಳನ್ನು ಅನುಸರಿಸಿ ಕಾರ್ಯಗಳನ್ನು ನಡಸಿ ಸಮ್ಮೇಳನವನ್ನು ಸಾಂಗಗೊಳಿಸಿ ಕೀರ್ತಿಯನ್ನು ಪಡೆಯಬೇಕಾಗಿ ಪ್ರಾರ್ಥಿಸಿದೆ.

ಸಮ್ಮೇಳನ ಜರಗುವುದು ೧೯೨೬ನೆ ಫೆಬ್ರವರಿ ೧೪, ೧೫, ೧೬.

ತಾ. ೧೦—೨—೧೯೨೬ಕ್ಕೆ ಆಯುರ್ವೇದ ವೈದ್ಯ ವಸ್ತುಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸುವುದು. ತಾ. ೨೦—೧—೧೯೨೬ಕ್ಕೆ ಸಮ್ಮೇಳನದ ಕಾಲದಲ್ಲಿ ಕೊಡುವ ಉಪನ್ಯಾಸಗಳ ಪ್ರತಿಗಳನ್ನೂ, ಓದುವ ಲೇಖನ ಪ್ರತಿಗಳನ್ನೂ, ಚರ್ಚಿಸಬೇಕಾದ ವಿಷಯಗಳ ಪಟ್ಟಿಯನ್ನೂ ಕಳುಹಿಸುವುದು ತಾ. ೮—೨—೧೯೨೬ಕ್ಕೆ ತಾಲೂಕು ಮತ್ತು ಡಿಸ್ಟ್ರಿಕ್ಟು ಬೋರ್ಡುಗಳ ಮೂಲಕವೂ ಡಿಸ್ಟ್ರಿಕ್ಟುಗಳಲ್ಲಿ ನಿಯಮಿತರಾದ ಸೆಕ್ರಿಟರಿಗಳಿಂದ ವಸೂಲಾದ ಹಣವನ್ನು ಸಮ್ಮೇಳನದ ಆಯವ್ಯಯ ಸಮಿತಿಗೆ ಅಧ್ಯಕ್ಷರಾಗಿ ಕಳುಹಿಸತಕ್ಕದ್ದು. ತಾ. ೫—೨—೧೯೨೬ಕ್ಕೆ ಸಮ್ಮೇಳನಕ್ಕೆ ಬರುವವರಾದಿಸತಕ್ಕ ಡೆಲಿಗೇಟ್ಸ್ ಯಾನೆ ಪ್ರತಿನಿಧಿ ಮುಂತಾದವರು, ತಾವು ಬರುವ ತಾರೀಖುಗಳನ್ನು ಮತ್ತು ತಮಗೆ ಕಲ್ಪಿಸಬೇಕಾದ ಅನುಕೂಲಗಳನ್ನು ತಿಳಿಸತಕ್ಕದ್ದು.

174, ಸುಲ್ತಾನ್‍ಪೇಟೆ, ಬೆಂಗಳೂರು ಸಿಟಿ, ತಾ. 31—12—1925. } ಕರ್ಪೂರ ಶ್ರೀನಿವಾಸರಾವ್, ಸ್ವಾಗತ ಸಮಿತಿಯ ಅಧ್ಯಕ್ಷರು.

ಅನುಕ್ರಮಣಿಕೆ.

ಅಗ್ರಲೇಖ	ಪುಟ
ಚೇತರಿಸಿರಿ	೫
ನಾಲ್ವತ್ತನೇ ರಾಷ್ಟ್ರೀಯ ಅಧಿವೇಶನ	೬, ೭, ೮, ೯
ವರ್ತಮಾನಸಂಗ್ರಹಗಳು—	
ವಿದೇಶವರ್ತಮಾನ, ಒಳದೇಶವರ್ತಮಾನ	೯
ದಕ್ಷಿಣ ಕನ್ನಡ ‑ ಬರಿಮಾರ, ಉಕ್ಕಿನಡ್ಕ, ಬೆಡ್ರಾಲ, ಎಣ್ಮಕಜೆ, ಬಂಟವಾಳ	"
ಮಂಗಳೂರು	೧೦
ಪತ್ರವ್ಯವಹಾರ ೧, ೨, ೩, ೪,	"

ಸ್ವದೇಶಾಭಿಮಾನಿ.

ಶಕ ೧೮೪೭ ಪುಷ್ಯ ಬ॥ ೩ಯು ಶುಕ್ರವಾರ

ಚೇತರಿಸಿರಿ.

ತನ್ನ ಬೆಳೆಗಳ ಮಧ್ಯದಲ್ಲಿ ಉಪವಾಸಿಯೂ, ತನ್ನ ಮನೆಯೊಳಗೆ ದಾಸಿಯೂ, ತನ್ನ ಎಲ್ಲೆಯೊಳಗೆ ಭಿಕ್ಷುಕಳೂ ಆಗಿ, ತನ್ನ ವೃದ್ಧಾಪ್ಯದ ಈ ಸಮಯದಲ್ಲಿ, ತನ್ನನ್ನು ಬಂಧನೆಯ ಅವಮಾನದಿಂದಲೂ ದುಃಖದಿಂದಲೂ ರಕ್ಷಿಸಿ. ಮೃತ್ಯುವನ್ನು ತರುತ್ತಿರುವ ತುಮುಲಗಳಿಂದ ದಣಿದ ಈ ಭೂಲೋಕದಲ್ಲಿ ಜೀವನದಾತೆಯೆಂಬ ತನ್ನ ಹಿಂದಿನ ಆ ಗೌರವವನ್ನು ಮತ್ತು ಪದವಿಯನ್ನು ಪುನಃ ಪ್ರಾಪ್ತಿಸಬೇಕಾಗಿ ಮಾತೆಯು ತನ್ನ ಮಕ್ಕಳೊಡನೆ ಬೇಡಿಕೊಳ್ಳುತ್ತಿರುವಳು.

೨೦ನೇ ದಶಂಬರ ೧೯೨೫. ಸರೋಜಿನಿ ನಾಯುಡು.

ಮದ್ರಾಸಿನ ಪತ್ರಿಕೆ ಸಂದೇಶ.

• • • •

ತಾ. ೨೬ನೇ ದಶಂಬರದಲ್ಲಿ ಕಾನಪೂರದಲ್ಲಿ ಕೂಡಿದ ಆ ಉತ್ತೇಜಿತ ರಾಷ್ಟ್ರ ಸಮೂಹದ ಸಮ್ಮುಖದಲ್ಲಿ, ಹಿಂದೂಸ್ಥಾನದ ಮಹಾ ಕವಯಿತ್ರಿಯಾದ ಶ್ರೀಮತಿ ಸರೋಜಿನಿಯವರು, ತನ್ನ ಕಾವ್ಯಮಯವಾದ, ಭಾವಮಯವಾದ ಸುಜ್ಞವಾದ ಭಾಷಣವನ್ನು ಕೊಟ್ಟರು. ಭಾಷಣವು ಒಂದು ವಾಙ್ಮಯ ಉಪನ್ಯಾಸದಂತೆ ಇದೆ ಎಂಬುದನ್ನು ಎಲ್ಲರೂ ಪ್ರಶಂಸಿರುವರು. ಕೆಲವು ಭಾಗಗಳನ್ನು ಓದುವಾಗ ಮಿಲ್ಟನ್ ಕವಿಯ ಪೆರಡ್ಯಾಸ ಲೊಸ್ಟ ಎಂಬ ಮಹಾ ಕಾವ್ಯದ ನೆನಪೇ ಆಗುತ್ತಿದೆ. ಅದು ಉತ್ತೇಜಕವಾಗಿತ್ತು, ಆವೇಶಪೂರ್ಣವಾಗಿತ್ತು, ದೇಶದ ಮೇಲಿನ ಅಸೀಮ ಪ್ರೇಮವನ್ನು ವ್ಯಕ್ತಗೊಳಿಸುವಂತಹುದುದಾಗಿತ್ತು, ಎಂಬುದರಲ್ಲಿ ಎಲ್ಲರೂ ಒಪ್ಪುವರು.

ಶ್ರೀಮತಿಯವರು ಗ್ರಾಮಸಂಘಟನೆಯ ಅವಶ್ಯಕತೆಯನ್ನು ಸೂಚಿಸಿದರು. ಈ ವಿಷಯದಲ್ಲಿ ಅವರ ಹೊಸ ಸೂಚನೆಗಳನ್ನಾಗಲಿ ಕಾರ್ಯಕಾರಿಯಾದ ವಿಷಯಗಳನ್ನಾಗಲಿ ಅವರು ಕೊಟ್ಟಿಲ್ಲ. ಆದರೆ ಸ್ವಯಂಸೇವಕ ದಳಕ್ಕೆ ಸೈನ್ಯ ಶಿಕ್ಷಣ ಕೊಡುವ ಅವಶ್ಯಕತೆಯನ್ನು ಅವರು ಚೆನ್ನಾಗಿಯೇ ಅಂಕಿಸಿದರು. ಅಲ್ಲದೆ ಪರದೇಶವಾಸಿಗಳಾದ ಹಿಂದೀಯರ ಕಷ್ಟ ಪರಿಹಾರದ ಬಗ್ಗೆ ಪ್ರತ್ಯೇಕ ಕಾಂಗ್ರೆಸು ಇಲಾಖೆಯನ್ನು ಏರ್ಪಡಿಸಬೇಕೆಂಬ ಅವರ ಸೂಚನೆಯಾದರೂ ಉತ್ತಮವಾಗಿಯೇ ಇತ್ತು. ಹಿಂದೂ ಮುಸಲ್ಮಾನ ಸಂಬಂಧದ ಕಠಿಣ ಸಮಸ್ಯೆಗೆ ಸರೋಜಿನಿಯವರ ಸಂತಾಪಮಯ ಭಾಷಣವಿದ್ದಿತಾದರೂ, ಕಾರ್ಯಕಾರಿ ಸೂಚನೆಗಳಿರಲಿಲ್ಲ. ಮತ್ತು ಸ್ವರಾಜ್ಯ ಪಕ್ಷದ ಭಾವಿ ಕಾರ್ಯಕ್ರಮದ ಸೂಚನೆಯು ಈ ಮೊದಲು ಮೋತಿಲಾಲನೆಹರುರವರು ಮನಸ್ಸಿನಲ್ಲಿ ಕಲ್ಪಿಸಿದುದನ್ನು ಶ್ರೀಮತಿಯವರ ಮೂಲಕ ಹೇಳಿಸಿದ್ದಿರಬಹುದಾಗಿರಬೇಕು.

ಅಂತೂ ದೇಶದ ಎಲ್ಲಾ ಪತ್ರಿಕೆಗಳೂ ಹೇಳುವಂತೆ ಅಧ್ಯಕ್ಷ ಭಾಷಣದಲ್ಲಿ ವಿಷಯತ್ವದ ವಿಷಯವಾವುದೂ ಇರಲಿಲ್ಲವೆಂದು ನಾವು ಒಪ್ಪಬೇಕಾಗಿದೆ. ಹಲವು ಸಮಯದಿಂದ ದೇಶದೊಳಗೆ ಚರ್ಚಿಸಲ್ಪಡುತ್ತಿದ್ದ ವಿಷಯಗಳನ್ನೇ ಪ್ರತ್ಯೇಕ ತೀರ್ಮಾನವಾವುದನ್ನೂ ಕೊಡದೆ ಶ್ರೀಮತಿಯವರು ನಿವೇದಿಸಿರುವರು. ಈ ಭಾಷಣದಲ್ಲಿ ವಿಶೇಷವೇನೂ ಇಲ್ಲವೆಂದು ಭಾಷಣವು ಗೌರವಾರ್ಹವಲ್ಲವೆನ್ನುವುದನ್ನು ಮಾತ್ರ ನಾವು ಒಪ್ಪಲಾರೆವು. ಭಾಷಣದಲ್ಲಿ ಹೊಸ ವಿಷಯಗಳಾಗಲಿ ಹೊಸ ಸೂಚನೆಗಳಿದ್ದಿಲ್ಲ ನಿಜ. ಆದರೆ ಎಷ್ಟೊ ವಿಚಕ್ಷಣರಾಗಿರುವ ರಾಜನೀತಿಜ್ಞರು ತರ್ಕಿಸಿ, ಜಗಳಗಟ್ಟಿ, ಇನ್ನೂ ಆಖೈರಿಯನ್ನು ಕಾಣದ ಹಿಂದೀಯ ಸಮಸ್ಯೆಯನ್ನು ಶ್ರೀಮತಿಯವರು ಬಿಡಿಸಿಕೊಳ್ಳುವರು ಎಂಬುದನ್ನು ನಿರೀಕ್ಷಿಸಿ ಆ ಮೇಲೆ ಬಿಡಿಸದೆ ಇದ್ದುದಕ್ಕೆ ಅವರನ್ನು ಖಂಡಿಸುವುದು ನ್ಯಾಯದ ಮಾತಲ್ಲ. ಹಿಂದೀಯ ಸಮಸ್ಯೆ ಗೂಢವಾಗಿದೆ; ಅದು ಅಗಾಧವಾಗಿದೆ. ಅದರ ಸಮ್ಮುಖದಲ್ಲಿ ಮಹಾತ್ಮರು ತಮ್ಮ ಶಸ್ತ್ರಗಳನ್ನು ಕೆಳಗಿಳಿಸಿದರು; ಅದರ ಕೋಲಾಹಲದಲ್ಲಿ ದೇಶಬಂಧುಗಳು ನಿಂಾತರಾದರು; ಅದರ ಸಂಕೀರ್ಣತೆಯಲ್ಲಿ ಪಂಡಿತಜೀಯವರು ಕಂಗೆಟ್ಟರು. ಮತ್ತು ಯಾವ ನ್ಯಾಯದಿಂದ ನಾವು ಶ್ರೀಮತಿಯವರಲ್ಲಿ ಹೊಸ ಧುರೀಣತ್ವವನ್ನು ಹುಡುಕಬಹುದು? ಹೊಸ ಉಪಾಯಗಳನ್ನು ನಿರೀಕ್ಷಿಸಬಹುದು?

ಈಗಿನ ಪರಿಸ್ಥಿತಿಯೆಂದರೆ ಒಂದು ಗಭೀರ ಸಮಸ್ಯೆ. ಅದನ್ನು ಆ ಧುರೀಣರು ಬಿಡಿಸಲಿಲ್ಲ, ಈ ಅಧ್ಯಕ್ಷರು ಹೇಳಲಿಲ್ಲ ಎಂದು ದೂರುವುದರಿಂದ ಪ್ರಯೋಜನವಿಲ್ಲ. ಯಾರಿಂದಲೂ ಅದು ಸಾಧ್ಯವಾಗಿಲ್ಲ. ಒಂದು ಉಪಾಯ ಹುಡುಕಿದರೆ ಅದಕ್ಕೆ ಪ್ರತಿಯಾದ ಅಭ್ಯಂತರಗಳು ಕಠಿಣವೂ ತೀಕ್ಷ್ಣವೂ ಆಗಿ ಪ್ರತ್ಯೇಕವಿವೆ. ಇದರಿಂದ ಸರಕಾರದ ವಿಜ್ಞತೆಯನ್ನು, ರಾಜತಂತ್ರವನ್ನೂ, ನಮ್ಮ ನೈಸರ್ಗಿಕ ದೌರ್ಬಲ್ಯವನ್ನೂ ತಿಳಿಯುತ್ತೇವೆ. ಮಾತ್ರವಲ್ಲದೆ, ಧುರೀಣರ ಅಜ್ಞತೆಯು ಇದಕ್ಕೆ ಕಾರಣವಾಗಿಲ್ಲ. ತೇಜಸ್ವಿಯೂ ಪ್ರತಿಭಾಪನ್ನನೂ ಆದ ಇನ್ನೊಬ್ಬ ಮಹಾತ್ಮನಾದರೂ ಬಂದು ಜನತೆಯ ಮೇಲೆ ಪ್ರಚಂಡ ಶಕ್ತಿಯಿಂದ ಅಧಿಕರಿಸಬಲ್ಲನಾದರೆ ಮಾತ್ರವೇ ನಮ್ಮ ಈ ಪರಿಸ್ಥಿತಿಯು ಸುಧಾರಿತವಾಗಬಹುದು.

ಶ್ರೀಮತಿಯವರ ಭಾಷಣದ ಒಂದು ಮುಖ್ಯ ಗುಣವು ಕಠಿಣ ಸಮಸ್ಯೆಗಳ ಮೇಲೆ ತೀರ್ಮಾನವನ್ನು ಕಟ್ಟದೆ ಇದ್ದುದು. ಇದನ್ನು ಕೆಲವರು ಅವಗುಣವೆನ್ನಬಹುದು. ಆದರೆ ದೇಶದೊಳಗೆ ದೇಶಕ್ಕಿಂತಲೂ ಸ್ವಾಭಿಪ್ರಾಯಗಳನ್ನೆ ಮಾನಿಸುವ ಪಕ್ಷಗಳಿರುವ ಈ ಸಮಯದಲ್ಲಿ ತೀರ್ಮಾನಗಳನ್ನು ವಿಶರಿಸಿ ಪಕ್ಷಪಾತಿ ಎಂದೆನ್ನಿಸಿ ದೇಶದಲ್ಲಿ ಭೇದಗಳನ್ನೂ, ಕ್ರೋಧೆಯನ್ನೂ ಹೆಚ್ಚಿಸುವುದಕ್ಕಿಂತ ತೀರ್ಮಾನಗಳನ್ನು ಕೊಡದೆ ಪರಿಸ್ಥಿತಿಯನ್ನು ಇದಕ್ಕಿದ್ದಂತೆ ಹೇಳಿ ಜನರ ಮನಸ್ಸಿನಲ್ಲಿ ನಾಟಿಸಿದುದು ಯುಕ್ತವಾಯಿತೆಂದು ನಮ್ಮ ಅಭಿಪ್ರಾಯವಿದೆ.

ಪ್ರಕೃತದ ಕಠಿಣವಾದ ಸ್ಥಿತಿಯಲ್ಲಿ ಶ್ರೀಮತಿಯವರ ಭಾಷಣವು ಚೆನ್ನಾಗಿಯೇ ಇದ್ದಿತೆಂಬುದನ್ನು ಎಲ್ಲರೂ ಒಪ್ಪಬೇಕಾಗಿದೆ.

• • • •

ಕಾಂಗ್ರೆಸ್ಸಿನಲ್ಲಿ ಮಂಜೂರಾದ ಠರಾವುಗಳಲ್ಲಿ ಮೋತಿಲಾಲಜೆಯವರ ಸ್ವರಾಜ್ಯ ಪಕ್ಷದ ಠರಾವೇ ಮುಖ್ಯವಾಗಿತ್ತು. ಮಹಾತ್ಮಾಜೀಯವರು ತಂದ ದಕ್ಷಿಣ ಆಫ್ರಿಕದ ಹಿಂದೀಯರ ಪರವಾದ ಠರಾವಿನಿಂದ ಲಾಭವಿದೆಯೆಂದು ನಮಗೆ ವಿಶ್ವಾಸವಿಲ್ಲ. ಬಿಳೀ ಸಾಮ್ರಾಜ್ಯವು ನಿರಂಕುಶವಾಗಿಯೂ, ಹೃದಯಹೀನರಂತೆಯೂ, ತಮ್ಮ ಸಾಂಘಿಕ ಸ್ವಾರ್ಥವನ್ನು ಕಟ್ಟಿಕೊಳ್ಳುತ್ತಿದ್ದಾರೆ. ಅಧಿಕಾರವು ಅವರದು; ಶಕ್ತಿಯು ಅವರದು. ಯೋಗ್ಯರೇ ಬಾಳುವರೆಂಬ ಡಾರ್ವಿನಿನ ತತ್ವದಂತೆ, ಹಿಂದೀಯರಿಗಾಗುವ ಅವಮಾನದ ರಾಶಿಯನ್ನು ಹಿಂದೀಯರು ಒಪ್ಪಿ ಸಹಿಸಲೇಬೇಕು. ಕೇಳುವವರಾರು? ಠರಾವಿನಿಂದ, ಪರದೇಶದೊಳಗಿನ ಹಿಂದೀಯರ ಕಡೆಗಿನ ನಮ್ಮ ಕರ್ತವ್ಯವನ್ನು ಪೂರೈಸಿದಂತಾಯಿತು. ಮಾತ್ರವಲ್ಲದೆ ಬೇರೆ ಪ್ರಯೋಜನದ ಯಾವ ಫಲವೂ ಇರಲಿಕ್ಕಿಲ್ಲ, ಈ ವಿಷಯದಲ್ಲಿ ನೈರೋಬಿ (ದಕ್ಷಿಣ ಆಫ್ರಿಕದ ಒಂದು ಪಟ್ಟಣ)ಯ ಹಿಂದೀಯ ಕಾಂಗ್ರೆಸ ಕಮಿಟಿಯು ಕಾಂಗ್ರೆಸಿಗೆ ತಂತಿ ಮೂಲಕ ಕಳುಹಿಸಿದ ಸಂದೇಶವು ಚೆನ್ನಾಗಿದೆ. ಅದು ಅನ್ನುತ್ತಿದೆ:—

> ಇಡೀ ಹಿಂದೂಸ್ಥಾನವು ಐಕ್ಯವಾಗಿ ಸ್ವರಾಜ್ಯವನ್ನು ಹೊಂದದಿದ್ದರೆ, ಬ್ರಿಟಿಷ ವಸಾಹತಗಳಲ್ಲಿಯೂ ಪರದೇಶಗಳಲ್ಲಿಯೂ, ಹಿಂದೀಯರಿಗೆ ಸವಾನವರ್ತನೆಯನ್ನು ಪಡೆಯುವ ಪ್ರಯತ್ನಗಳು ನಿಷ್ಫಲವಾಗುವುವು.

ಪರದೇಶವಾಸಿ ಹಿಂದೀಗಳ ಅಭಿಪ್ರಾಯವೇ, ಅನುಭವವೇ ಹೀಗಿದೆ. ಅಂದ ಮೇಲೆ ನಮ್ಮ ಕರ್ತವ್ಯವು ಸ್ಪಷ್ಟವಾಗುತ್ತಿದೆ.

ಇನ್ನೂ ಕೌನ್ಸಿಲು ಪರವಾದ ಠರಾವಿನ ವಿಷಯ ಸ್ವಲ್ಪವಾಗಿ ಆಲೋಚಿಸಲಿದೆ. ಮುಖ್ಯವಾಗಿ ಮರಾಠದ ಅವಿಧೇಯತೆಯಿಂದ ಸ್ವರಾಜ್ಯ ಪಕ್ಷವು ನಿರ್ಬಲವಾಗುತ್ತಿದೆಯೆಂಬುದನ್ನು ನಾವು ಒಪ್ಪಿಕೊಳ್ಳಬೇಕು. ಪರಾಜಯಗಳಿಂದ ಜಯಕರ ಕೇಳ್ಕರರಿಗೆ ಸ್ವಂತ ಅಭಿಪ್ರಾಯಗಳ ಮೇಲೆ ವಿಶ್ವಾಸವು ಹೆಚ್ಚುತ್ತಾ ಬರುತ್ತಿದೆ. ಜಯಕರ-ಕೇಳ್ಕರರು ಕೌನ್ಸಿಲಿನೊಳಗಣ ತಮ್ಮ ಸ್ಥಾನಕ್ಕೆ ರಾಜಿಕೊಟ್ಟು ದೇಶದೊಳಗೆ ಪ್ರಚಾರಕ್ಕೆ ಹೊರಡುವರಾಗಿ ಸೊಂಟ ಕಟ್ಟಿರುವರು. ಇದು ಹೊಸ ಚುನಾವಣೆಗೆ ಪೂರ್ವತಯಾರಿಯೆಂಬುದು ಕೇವಲ ಸ್ಪಷ್ಟವಿದೆ. ಹೀಗೆ ಅನೈಕ್ಯದಿಂದ ದೇಶವೆಲ್ಲಾ ಕ್ಷತವಿಕ್ಷತವಾಗಿ ಹೋಗಿರುವ ಸಮಯದಲ್ಲಿ ಸ್ವರಾಜ್ಯ ಪಕ್ಷೀಯರ ಸಾಹಸವಾದರೂ ದೂಳಿಸಾಲಾಗುವುದಾದರೆ ಅದರಲ್ಲಿ ಆಶ್ಚರ್ಯವಿರದು.

ಸ್ವರಾಜ್ಯ ಪಕ್ಷೀಯರು ತಮ್ಮ ಈ ಹೊಸ ಠರಾವಿನ ಮೂಲಕ ತಮ್ಮ ಕಾರ್ಯಕ್ರಮವನ್ನು ಘಟ್ಟಿ ಮಾಡಿದರು ನಿಜ, ಆದರೆ ಸರಕಾರದ ಮೇಲೆ ಇದರ ಪರಿಣಾಮವೇನಾದೀತು. ಸರಕಾರವು ಈ ಠರಾವಿಗೆ ಉತ್ತರ ಕೊಟ್ಟೀತೆಂದು ಹೇಳಬರುವುದಿಲ್ಲ. ಮರಾಠದ ಹೊಸ ಚಳವಳ—ಅದರೊಂದಿಗೆ ಸುಹೃದರ್ಶಿತಾಂಬೆಯವರ ಪ್ರಚಂಡ ಮೋಸ ಉದಾರ ಪಕ್ಷದ ಸಂಪೂರ್ಣ ಸಹಾಯ—ಇವುಗಳ ಬೆಂಬಲವಿರುವಾಗ ಸರಕಾರಕ್ಕೆ ತಗ್ಗಿ ಬಗ್ಗುವ ಯಾವ ಆವಶ್ಯಕತೆಯೂ ಇರದು. ಆದರೂ ದೇಶವನ್ನು ಎಚ್ಚರಿಸಿ, ಚೇತರಿಸಿ, ವಿಶ್ವಾಸವನ್ನು ಹುಟ್ಟಿಸುವುದು ಸ್ವರಾಜ್ಯ ಪಕ್ಷೀಯರ ಕರ್ತವ್ಯವಿದೆ. ಹುದ್ದೆಗಳಿಂದಾಗಲಿ ಅಧಿಕಾರದಿಂದಾಗಲಿ ಏನು ಲಾಭವೂ ದೇಶಕ್ಕಾಗುವುದಿಲ್ಲ ಸರಕಾರವು ಅಧಿಕಾರಗಳನ್ನು ಅಷ್ಟು ಔದಾರ್ಯದಿಂದ ಧರ್ಮ ಮಾಡುವುದಿಲ್ಲ. ತಾವು ಅಧಿಕಾರಾಭಿಲಾಷಿಗಳಲ್ಲ, ದೇಶದ ಬಂಧನವಿಚ್ಛೇದಕರೆಂದು ತೋರಿಸಿ ಜನತೆಯನ್ನು ಒಲಿಸಿಕೊಳ್ಳುವುದೇ ಸ್ವರಾಜ್ಯ ಪಕ್ಷೀಯರ ಕರ್ತವ್ಯವಿದೆ. ಈ ದೃಷ್ಟಿಯಲ್ಲಿ ನೋಡಿದರೆ ಸ್ವರಾಜ್ಯ ಪಕ್ಷೀಯರ ಠರಾವು ಚೆನ್ನಾಗಿದೆಯೆಂದು ಹೇಳಬೇಕು. ಕೌನ್ಸಿಲು ಮಂದಿರಗಳು ಬರೇ ಕೋಳಿಜೂಜಿನ ಸ್ಥಳಗಳಾಗದೆ ದೇಶದ ಹಿತ ಸಾಧನೆಯ ಸ್ಥಾನಗಳಾಗಬೇಕು. ಈಗಿನ ಸ್ಥಿತಿಯಲ್ಲಿ ಅವು ಪರಸ್ಪರ ಕಲಹಗಳ ಕಾರಣವಾಗಿವೆಯಲ್ಲದೆ ಬೇರೆ ಪ್ರಯೋಜನವನ್ನು ಮಾಡುವುದಿಲ್ಲ—ಮಾಡುವ ಶಕ್ತಿಯೂ ಅಧಿಕಾರವೂ ಅವಕ್ಕಿಲ್ಲ. ಅಂತೆ ಅವುಗಳಿಂದ ಹೊರಗೆ ಬಂದು ಕೌನ್ಸಿಲು ಮಂದಿರಗಳನ್ನು ಖಾಲಿ ಹಾಕುವ ಪ್ರಯತ್ನಗಳು ಸ್ತುತ್ಯವಾಗಿವೆಯಲ್ಲದೆ ನಿಜವಾದ ಕೌನ್ಸಿಲು ಬಹಿಷ್ಕಾರವಾಗಿದೆ. ಸ್ವರಾಜ್ಯ ಪಕ್ಷದೊಳಗಿನ ಶಿಸ್ತು ಈ ಸಮಯದಲ್ಲಿ ಅದನ್ನು ರಕ್ಷಿಸುವುದು ಅವಶ್ಯಕ.

ಐಕ್ಯದ ವಿಷಯದಲ್ಲಿ ಕೆಲವು ಧುರೀಣರು ಮಾಡುವ ಪ್ರಯತ್ನಗಳು ಬರೇ ಹಾಸ್ಯಾಸ್ಪದವಿವೆ. ಐಕ್ಯಕ್ಕಾಗಿ ಕಾರ್ಯಕ್ರಮ ಬಿಡಿರಿ; ಐಕ್ಯಕ್ಕಾಗಿ ಧೋರಣವನ್ನು ಬಿಟ್ಟುಕೊಡಿರಿ; ಐಕ್ಯಕ್ಕಾಗಿ ಆದರ್ಶಗಳನ್ನು ಮೂಲೆಗೊತ್ತಿ ಎಂದು ಹೇಳುವರು. ಇನ್ನೂ ಕೆಲವರು ಹಿಂದೂ ಮುಸಲ್ಮಾನರ ಐಕ್ಯ ವಿಷಯದಲ್ಲಿ, ಮುಸಲ್ಮಾನರು ಏನೇ ಮಾಡಲಿ, ಹಿಂದುಗಳಿಗೆ ಐಕ್ಯಕ್ಕಾಗಿ ಶುದ್ಧಿ ನಿಲ್ಲಿಸಿ ಐಕ್ಯಕ್ಕಾಗಿ ಸಂಘಟನ ಚಳವಳ ನಿಲ್ಲಿಸಿ, ಎಂದು ಆತ್ಮರಕ್ಷಣೆಯ ಸಾಧನೆಗಳನ್ನು ತೆಗೆದು ಹಾಕಲು ಯತ್ನಿಸಿರುವರು. ಧ್ಯೇಯವನ್ನೂ ಆದರ್ಶವನ್ನೂ ಕಳೆದುಕೊಂಡು ಐಕ್ಯದಿಂದ ಏನು ಮಾಡಲಿ? ಯಾವ ಧ್ಯೇಯಕ್ಕಾಗಿ ನಾವು ಐಕ್ಯವನ್ನು ಕೋರುತ್ತೇವೊ, ಆ ಧ್ಯೇಯವನ್ನು ಕ್ರಯಕೊಟ್ಟು ಐಕ್ಯಪಡೆದು ನಾವು ಯಾವ ಪ್ರಯೋಜನವನ್ನು ಹೊಂದಲಿ? ಧುರೀಣರು ತಮ್ಮ ಈ ಹುಚ್ಚಾಟವನ್ನು ಬಿಟ್ಟು ಪರಸ್ಪರ ಧ್ಯೇಯಗಳನ್ನು ತಿಳಿದುಕೊಂಡು, ಭೇದಗಳನ್ನು ಮಾನಿಸಿ, ಐಕ್ಯವನ್ನು ಸಂಪಾದಿಸಲು ಪ್ರಯತ್ನಿಸಬೇಕು.

ಕಾಂಗ್ರೆಸು ಮುಗಿದು ಹೋಯಿತು, ರಾಷ್ಟ್ರಪ್ರವಾಹವು ಹರಿದು ಹೋಯಿತು. ಇನ್ನು ದೇಶದ ರಾಜಕೀಯ ಪರಿವರ್ತನೆಗಳು ಹೇಗೆ ನಡೆಯುವವು ಎಂಬುದನ್ನೇ ನಾವು ಲಕ್ಷಿಸುವೆವು.

ಮಾಜಿ ಯುದ್ಧ ಮಂತ್ರಿಗಳಾದ ಲೋರ್ಡ ಕಿಚನ್‍ರವರ ಮರಣದ ಗುಟ್ಟು.

ಯುದ್ಧಮಂತ್ರಿಗಳಾದ ಲೋರ್ಡ ಕಿಚ್ನರ್‍ರವರು ರಷ್ಯಾದೇಶದ ರಾಜಧಾನಿಯಾದ ಪಿಟ್ರೊಗ್ರೆಡಿಗೆ ಹೋಗಲಿಕ್ಕೆ ಹೊರಟ್ಟಿದ್ದರು. ಆದರೆ ನೊರ್ತ ಸೀಯ ದಾರಿಯಾಗಿ ಹೋದರೆ ಜರ್ಮನಿಯವರಿಗೆ ತಿಳಿಯುವದೆಂದು ಅವರು ಲಂಡನಪಟ್ಟಣದಿಂದ ರೈಲುದಾರಿಯಾಗಿ ಸ್ಕೋಟ್ಲಂಡಿಗೆ ಹೋದರು. ಆ ದೇಶದ ಉತ್ತರ ಭಾಗದಿಂದ ಹಡಗದಲ್ಲಿ ಕೂತು ಒರಳೆನಿ ದ್ವೀಪಗಳಿಗೆ ಹೋಗಿ ಹಡಗ ಹತ್ತಿದರು. ಇವರು ಹಡಗದಲ್ಲಿ ಕೂತು ಒಂದು ಗಂಟೆಯೊಳಗೆ ಬಿರುಗಾಳಿಯು ಬಂದು ಹಡಗವು ಮುಳುಗಿ ಹೋಯಿತು. ಈ ಹಡಗದಲ್ಲಿ ಲೋರ್ಡ ಕಿಚನ್‍ರವರೂ ಇನ್ನು ೧೨ ಜನರು ಮಾತ್ರವೇ ಉಳಿದರು.

ಈ ಯುದ್ಧ ಮಂತ್ರಿಗಳ ಯುದ್ಧ ಆಫೀಸಿನಲ್ಲಿ ಅನೇಕ ಮಂದಿ ಜರ್ಮನ ಗೂಢಚಾರರು ಬೇರೆ ಬೇರೆ ನೌಕರಿ ಕೆಲಸದಲ್ಲಿದ್ದರು. ಇವರು ರಷ್ಯಕ್ಕೆ ಹೊರಡುವಾಗ ಗೂಢಚಾರರು ಇವರೊಡನೆ ನೌಕರರಾಗಿ ಹೋಗಿದ್ದರು. ಹಡಗವು ಮುಳುಗಿದಾಗ ೧೩ ಮಂದಿ ಉಳಿದರು. ಇವರಲ್ಲಿ ಲೋರ್ಡ ಕಿಚನರರೂ ಒಬ್ಬ ಜರ್ಮನ ಗೂಢಚಾರನೂ, ಮಂತ್ರಿಗಳ ಒಬ್ಬ ನಂಬಿಗಸ್ಥ ಉದ್ಯೋಗಸ್ಥನೂ ಒಂದು ಬಂಡೆಕಲ್ಲನ್ನು ಸೇರಿದರು. ಉದ್ಯೋಗಸ್ಥನಿಗೆ ಇನ್ನೊಬ್ಬನ ವಿಷಯ ಸಂಶಯವೇ ಇತ್ತು. ಅಷ್ಟರಲ್ಲಿ ಈ ಗೂಢಚಾರನು ಇನ್ನೊಂದು ಬಂಡೆಯ ಹತ್ತಿರ ಮಂತ್ರಿಗಳ ಪಲಿಯ ಕವಚವೂ ಖಡ್ಗವೂ ಕೇಲಿಕೊಂಡಿವೆಯೆಂದು ಹೇಳಿದನು. ಸೇವಕನು ಅವುಗಳನ್ನು ತರಲಿಕ್ಕೆ ಈಜಾಡಿಕೊಂಡು ಹೋದನು. ಅಷ್ಟರಲ್ಲಿ ಈ ಗೂಢಚಾರನು ಯುದ್ಧಮಂತ್ರಿಯವರೊಡನೆ ಉರುಡಾಡಲಾರಂಭಿಸಿದನು. ಇಬ್ಬರೂ ನೀರಿನಲ್ಲಿ ಮುಳುಗಿ ಪ್ರಾಣಬಿಟ್ಟರು. ಈ ಸಂಗತಿಯು ಕತ್ತಿಯನ್ನು ತರಲಿಕ್ಕೆ ಹೋದವನು ತಿಳಿಸಿದ್ದನ್ನು ಇಂಗ್ಲಿಷ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಈ ವಾರ್ತೆಯು ಹಿಂದೊ ಪತ್ರಿಕೆಯಲ್ಲಿಯೂ ಪ್ರಕಟವಾಗಿತ್ತು.

ನಾಲ್ವತ್ತನೇ ರಾಷ್ಟ್ರೀಯ ಅಧಿವೇಶನ.

ಶ್ರೀಮತಿ ಸರೋಜಿನಿ ದೇವಿಯವರ ಆವೇಶಯುಕ್ತ ಭಾಷಣ.

ಸ್ವರಾಜ್ಯ ಪಕ್ಷೀಯರ ಕಾರ್ಯಕಾರಿ ಕಾರ್ಯಕ್ರಮ.

ಜನಾಂಗದ ನಿರ್ಣಯಗಳು.

ಪೂರ್ವ ತಯಾರಿ.

ಕಾಂಗ್ರೆಸ್ಸು ಅಧಿವೇಶನವನ್ನು ಕೂಡಿಸಲಿಕ್ಕೂ, ಕಾಂಗ್ರೆಸನ್ನು ನೋಡಲು ಬರುವ ಅಸಂಖ್ಯ ಜನ ಮಂಡಳಿಗೂ, ಜನತೆಯ ಪ್ರತಿನಿಧಿಗಳಿಗೂ ಅಶ್ರಯ ಗೃಹಗಳನ್ನು ಕಲ್ಪಿಸಲಿಕ್ಕೂ ಕಾನಪೂರದಲ್ಲಿ ರೈಲ್ವೆ ಸ್ಟೇಶನಿನ ಹತ್ತಿರವೇ ಪ್ರತ್ಯೇಕ ಪಟ್ಟಣವೇ ರಚಿಸಲ್ಪಟ್ಟಿದ್ದಿತು. ಇದರ ಹೆಸರು ಟಿಳಕ ನಗರ ಎಂದು ಇಡಲ್ಪಟ್ಟಿದೆ. ವಿಶಾಲವಾಗಿದ್ದು, ತ್ರಿಕೋಣಾಕಾರದ ರೂಪದಲ್ಲಿದ್ದ ಈ ಸ್ಥಳದಲ್ಲಿ ಮುಖಂಡರ ಹೆಸರಿನ ಮಾರ್ಗಗಳು ರಚಿಸಲ್ಪಟ್ಟು, ಪಟ್ಟಣವು ಬಹಳ ಆಕರ್ಷಕ ರೀತಿಯಲ್ಲಿ ತಯಾರಿಸಲ್ಪಟ್ಟಿದ್ದಿತು.

ಅಧಿವೇಶನವು ಕೂಡುವ ಚಪ್ಪರವು ದಪ್ಪವಾದ ಕೆನ್ವಾಸ (canvas) ವಸ್ತ್ರದಿಂದ ತಯಾರಿಸಲ್ಪಟ್ಟಿದ್ದಿತು. ೫೦೦ ಧನ ಸಹಾಯಕರಿಗೂ (Donors), ಸ್ವಾಗತ ಕಮಿಟಿಯ ಸದಸ್ಯರಿಗೂ ೪೦೦೦ ಪ್ರತಿನಿಧಿಗಳಿಗೂ, ಸಾಧಾರಣ ೪೦೦೦ ಪ್ರೇಕ್ಷಕರಿಗೂ ಬೇಕಾದಷ್ಟು ಕೂತುಕೊಳ್ಳಲು ಸ್ಥಳವಿರುವಂತೆ ಚಪ್ಪರವು ವಿಶಾಲವಾಗಿತ್ತು. ತಮಿಳು, ತೆಲುಗು, ಕೇರಳ, ಕರ್ನಾಟಕ ಈ ಪ್ರಾಂತದ ಪ್ರತಿನಿಧಿಗಳಿಗೆ ಹೆಚ್ಚು ಛಳಿ ಅನುಭವಿಸುವ ಶಕ್ತಿ ಇಲ್ಲದರಿಂದ ಅವರಿಗೆ ಉತ್ತಮ ವ್ಯವಸ್ಥೆಯಿದ್ದ ಪ್ರತ್ಯೇಕ ಬಿಡಾರಗಳನ್ನು ಕಲ್ಪಿಸಿದ್ದರು.

ಸ್ವಯಂಸೇವಕರು ಪ್ರತಿನಿಧಿಗಳಿಗೆ ಸಾಕಷ್ಟು ಸೌಕರ್ಯಗಳನ್ನು ಒದಗಿಸುತ್ತಿದ್ದರು.

ತಾ. ೨೩ ಮತ್ತು ೨೪ರ ವಳಗೆ ನಾಲ್ವತ್ತು ಸಮ್ಮೇಲನಗಳು ಕೂಡಿದ್ದವು. ಖಿಲಾಫತು, ಸ್ವರಾಜ್ಯ ಪಕ್ಷ, ಹಿಂದೂ ಮಹಾಸಭೆ, ಕೊಮ್ಯುನಿಸ್ಟ ಇವುಗಳು ಪ್ರಮುಖವಾದವುಗಳು.

ಶ್ರೀಮತಿ ಸರೋಜಿನಿದೇವಿ (ಅಧ್ಯಕ್ಷರು) ತಾ. ೨೩ನೇ ಸಂಜೆಗೆ ಕಾನಪೂರಕ್ಕೆ ತಲಪಿದರು. ಮಹಾತ್ಮಾ ಗಾಂಧಿಯವರೂ ಅವರೊಟ್ಟಿಗೆ ಇದ್ದರು. ಶ್ರೀಮತಿಯವರ ಸ್ವಾಗತಕ್ಕೆ ಬಹಿಷ್ಕಾರವನ್ನು ಹಾಕಬೇಕೆಂದವರ ಪ್ರಯತ್ನಗಳು ವಿಫಲವಾದಂತೆ ತೋರುತ್ತಿದೆ. ಶ್ರೀಮತಿಯವರು ಅತಿ ವಿಜೃಂಭಣೆಯಿಂದ ಅಧ್ಯಕ್ಷರ ಬಿಡಾರಕ್ಕೆ ಮೆರವಣಿಗೆಯೊಡನೆ ಒಯ್ಯಲ್ಪಟ್ಟರು.

ಪಂಡಿತ ಮೋತಿಲಾಲ ನೆಹರುರವರ ಬಿಡಾರದಲ್ಲಿ ಧುರೀಣರು ಕೂಡಿ ರಾಜಕೀಯ ಧೋರಣದ ವಿಷಯದ ವಿವಾದದ ವಿಷಯದಲ್ಲಿ ತರ್ಕಿಸಿದರು.

ಖಾದಿ ಪ್ರದರ್ಶನ.

ತಾ. ೨೪ನೇ ಬೆಳಿಗ್ಗೆ ಘಂಟೆ ೯ಕ್ಕೆ ಮಹಾತ್ಮಾಜೀಯವರು ಖಾದೀ ಪ್ರದರ್ಶನವನ್ನು ತೆರೆದರು. ಶ್ರೀಮತಿ ಸರೋಜಿನಿ, ಪಂಡಿತ ಮೋತಿಲಾಲ, ಸೇನಗುಪ್ತ, ಲಾಲಾಜಿ, ಶ್ರೀನಿವಾಸ ಐಯ್ಯಂಗಾರ, ರಾಮದಾಸ, ರಂಗಸ್ವಾಮಿ ಐಯ್ಯಂಗಾರ, ಪ್ರಭೃತಿ ಧುರೀಣರೆಲ್ಲರೂ ಹಾಜರಿದ್ದರು. ಸಾವಿರಾರು ಇತರ ಜನರೂ ಅಲ್ಲಿ ನೆರೆದಿದ್ದರು. ತೆರೆಯುವ ಸಮಯದಲ್ಲಿ ಮಹಾತ್ಮರು ಈ ರೀತಿ ಭಾಷಣಕೊಟ್ಟರು:—

ನಾನು ಖದ್ದರಿನ ಮೇಲೆ ಹುಚ್ಚನಾಗಿ ಹೋಗಿದ್ದೇನೆ. ನನಗೆ ಬೇರಾವುದರಲ್ಲಿಯೂ ರುಚಿಯಿಲ್ಲ. ಜನರು ಗಿರಣಿ ವಸ್ತ್ರವನ್ನು ಬಿಟ್ಟು ಖಾದಿಯನ್ನು ಉಪಯೋಗಿಸಲು ಆರಂಭಿಸಿದರೆ, ಹಿಂದೂ ಮುಸಲ್ಮಾನ ಐಕ್ಯವಿಲ್ಲದಿದ್ದರೂ, ಅವರಿಗೆ ಸ್ವರಾಜ್ಯವು ಒಂದು ವರುಷದೊಳಗೆ ಸಿಕ್ಕಬಲ್ಲುದೆಂದು ನಾನು ಪುನಃ ಹೇಳುವೆನು. ಈ ಪ್ರದರ್ಶನದಲ್ಲಿ ಗಿರಣಿ ವಸ್ತ್ರವಿಲ್ಲವೆಂದು ಮೊದಲು ಸಂಶಯ ನಿವಾರಿಸಿಯೇ ನಾನು ಇದನ್ನು ತೆರೆಯಲು ಸಮ್ಮತಿಸಿದೆನು. ಐದು ವರ್ಷಗಳ ಅನುಭವದಿಂದ ನಾನು ಖಾದಿ ಕೆಲಸವು ವೃದ್ಧಿಯಾಗಿದೆ ಎಂದು ಹೇಳಬಲ್ಲೆನು. ೧೯೨೦ರಲ್ಲಿ ನಾನೇ ಖಾದಿಯನ್ನು ವಾರಿಗೆ ೧೬ ಆಣೆಯಂತೆ ಮಾರಿದ್ದೇನೆ. ಈಗ ೯ ಆಣೆಗೆ ಉತ್ತಮ ಖಾದಿಯು ಸಿಕ್ಕುತ್ತದೆ. ಪೂರ್ವದಲ್ಲಿ ಖಾದಿ ಟೊಪ್ಪಿ ಇಟ್ಟವರೆಲ್ಲ ಖಾದಿ ಧರಿಸುವರೆಂದು ಹೇಳಲ್ಪಡುತ್ತಿದ್ದರು. ಈಗ ಪೂರಾ ಖಾದಿ ಧರಿಸುವವರ ಸಂಖ್ಯೆ ಬಹಳ ಹೆಚ್ಚಾಗಿದೆ.

ಪ್ರಥಮದಲ್ಲಿ ನಾನು ಹೇಳಿದ್ದನ್ನೆಲ್ಲಾ ಮಾಡುವರಾಗಿ ಜನರು ಹೇಳಿದರು. ಅವರ ಮೇಲೆ ನಾನು ಅವಿಶ್ವಾಸಪಡಲು ಕಾರಣವಿರಲಿಲ್ಲ. ಅವರ ಪ್ರತಿಜ್ಞೆಯನ್ನು ಅವರು ಪೂರೈಸದೆ ನಾವು ನಿಶ್ಚಿತ ಸಮಯದಲ್ಲಿ ಸ್ವರಾಜ್ಯವನ್ನು ಹೊಂದಲಾಗಲಿಲ್ಲ.

ಈ ದಿನವಾದರೂ ನಾನು ನಿಮಗೆ ಹೇಳುವುದೇನಂದರೆ, ನೀವು ಪರದೇಶಿ ಮತ್ತು ಗಿರಣಿ ವಸ್ತ್ರಕ್ಕೆ ಸಂಪೂರ್ಣ ಬಹಿಷ್ಕಾರ ಹಾಕಿದರೆ ನಿಮಗೆ ಸ್ವರಾಜ್ಯವು ಒಂದು ವರ್ಷಕ್ಕಿಂತಲೂ ಕಡಿಮೆ ಸಮಯದಲ್ಲಿಯೇ ಸಿಕ್ಕುವುದು. ಮಾತ್ರ ನಾನು ಹೇಗೆ ಹೇಳುತ್ತೇನೋ ಹಾಗೆ ನಡೆದುಕೊಳ್ಳಬೇಕು.

ಅಖಿಲ ಭಾರತ ಕಾಂಗ್ರೆಸ್ಸು ಮೀಟಿಂಗು.

ಘಂಟೆ ೧೨ಗೆ ಅಖಿಲ ಭಾರತ ಕಾಂಗ್ರೆಸ್ಸ ಕಮಿಟಿ ಮೀಟಿಂಗು ಕೂಡಿತು. ಸಾಧಾರಣ ೨೦೦ ಸದಸ್ಯರು ಹಾಜರಿದ್ದರು.

ಕಳೆದ ವರ್ಷದ ವರದಿಯನ್ನು ಜವಾಹಿರಲಾಲರು ಓದಿದರು. ಕಾಂಗ್ರೆಸ್ ಸದಸ್ಯರ ಸಂಖ್ಯೆ ಕಳೆದ ವರ್ಷದಲ್ಲಿ ಅಂಧ್ರ ೨,೬೬೮, ಬಂಗಾಳ ೩,೧೬೯, ತಮಿಳು ೨,೨೫೦, ಗುಜರಾತ ೧,೮೪೩, ಕರ್ನಾಟಕ ೧,೧೨೯, ಸಂಯುಕ್ತ ಪ್ರಾಂತ ೧,೪೪೩, ಈ ರೀತಿಯಲ್ಲಿ ಇದ್ದಿತು. ಹಿಂದೂ ಮುಸಲ್ಮಾನ ಸಂಬಂಧವು ಚೆನ್ನಾಗಿರಲಿಲ್ಲ. ಇಲ್ಲಿ

ಐಕ್ಯ ಪರಿಷತ್ತಿನ ಠರಾವುಗಳು ಮಾನಿಸಲ್ಪಟ್ಟಿಲ್ಲ. ಹೊಸದಾಗಿ ಸ್ಥಾಪಿಸಲ್ಪಟ್ಟಿಲ್ಲ. ಹೊಸದಾಗಿ ಸ್ಥಾಪಿಸಲ್ಪಟ್ಟ ನೂಲುವ ಸಂಘವು ಬಂಗಾಳ ಮತ್ತು ತಮಿಳು ನಾಡಿನಲ್ಲಿಯು ಉತ್ತಮವಾಗಿ ಕೆಲಸ ಮಾಡಿದೆ. ಖಾದಿ ಕೆಲಸವು ಅಂಧ್ರದಲ್ಲಿ ಚೆನ್ನಾಗಿ ಸಾಗಿತ್ತು. ಇವೇ ಮುಂತಾದ ವಿಷಯಗಳು ವರದಿಯಲ್ಲಿ ನಿವೇದಿಸಲ್ಪಟ್ಟದ್ದುವು.

ಅಜಮೀರ ಮೇವಾರದಿಂದ ಕಾಂಗ್ರೆಸ್ಸಿಗೆ ಬಂದ ಪ್ರತಿನಿಧಿಗಳ ಚುನಾವಣೆಯಲ್ಲಿ ದೋಷವಿದ್ದುದರಿಂದ ಅವರ ಪ್ರಾತಿನಿಧ್ಯವು ರದ್ದು ಮಾಡಲ್ಪಟ್ಟಿತು.

ವಿಷಯ ನಿಯಾಮಕ ಕಮಿಟಿ.

ಆ ಮೇಲೆ ಅಖಿಲ ಭಾರತ ಕೊಂಗ್ರೆಸ್ಸ ಕಮಿಟಿಯು ವಿಷಯ ನಿಯಾಮಕ ಕಮಿಟಿಯಾಗಿ ಪರಿವರ್ತಿಸಲ್ಪಟ್ಟಿತು.

ವಿಷಯಗಳನ್ನು ಚರ್ಚಿಸುವ ಮೊದಲು ಕಾಂಗ್ರೆಸು ಅಧ್ಯಕ್ಷಸ್ಥಾನವನ್ನು ಶ್ರೀಮತಿ ಸರೋಜಿನಿಯವರಿಗೆ ಬಿಟ್ಟುಕೊಡುವಾಗ ಮಹಾತ್ಮಾ ಗಾಂಧಿಯವರು ಭಾಷಣಕೊಟ್ಟರು.

ಮಹಾತ್ಮರ ಭಾಷಣ:— ತನಗೆ ಈ ವರೆಗೆ ಎಲ್ಲಾ ರೀತಿಯಲ್ಲಿಯೂ ಸಹಾಯಮಾಡಿ, ತನ್ನ ಪ್ರತಿ ಮಾತನ್ನು ತತ್ಕ್ಷಣವೇ ಮಾನಿಸಿದ ಕಮಿಟಿಯ ಸದಸ್ಯರಿಗೆ ವಂದನೆಯನ್ನಿತ್ತರು. ಈಗ ಶ್ರೀಮತಿ ಸರೋಜಿನಿಯವರಿಗೆ ಅಧ್ಯಕ್ಷತನದ ಜವಾಬ್ದಾರಿ ಹೋಗುವುದರಿಂದ, ಅವಳಿಗೆ ವಿಜಯವನ್ನು ಇಚ್ಛಿಸಿ, ಅವಳ ಆಡಳಿತದಲ್ಲಿ ಪರಿಸ್ಥಿತಿಯು ಉತ್ತಮವಾಗುವುದಾಗಿ ಹಾರೈಸಿದರು. ಅವಳು ದಕ್ಷಿಣ ಅಫ್ರಿಕದಲ್ಲಿ ಹಿಂದೀಯರ ಬಗ್ಗೆ ಮಾಡಿದ ಫಲಪೂರ್ಣವಾದ ಕಾರ್ಯಗಳನ್ನು ಪ್ರಶಂಸಿಸಿದರು.

ಶ್ರೀಮತಿ ಸರೋಜಿನಿಯವರು ಯುಕ್ತವಾಗಿ ಪ್ರತ್ಯುತ್ತರವನ್ನಿತ್ತರು.

ಮಹಾತ್ಮರು ಪಾಟ್ನಾದಲ್ಲಿ ಮಾಡಿದ ಬದಲಾವಣೆಗಳನ್ನು ಸೂಚಿಸಿದರು.

ಶ್ರೀಯುತ ಕೇಳಕರರು ಎರಡು ಉಪಸೂಚನೆಗಳನ್ನು ತಂದರು—
(೧) ನಾಲ್ಕಾಣೆ ಚಂದಾಹಣದ ಸದಸ್ಯತನವನ್ನು ಇಟ್ಟು, ಅದರ ಬದಲಿಗೆ ಕೈ ನೂಲು ಕೊಡಬಹುದೆನ್ನುವುದನ್ನು ತೆಗೆದು ಹಾಕುವುದು.
(೨) ಖಾದಿಯನ್ನು ಕಾಂಗ್ರೆಸ್ ಸಭೆಗಳಲ್ಲಿ ಹಾಜರಾಗುವಾಗ ಧರಿಸಬೇಕೆನ್ನುವ ಕ್ರಮವನ್ನು ತೆಗೆದುಹಾಕುವುದು. ಇದಲ್ಲದೆ ಇನ್ನೂ ಕೆಲವು ಉಪಸೂಚನೆಗಳಿದ್ದವು. ಆದರೆ ಮಹಾತ್ಮರ ಮೂಲ ಸೂಚನೆಯ ಬಹುಮತದಿಂದ ಮಂಜೂರು ಹೊಂದಿತು. ಇಲ್ಲಿಗೆ ಕಮಿಟಿಯು ಕೆಲಸವನ್ನು ಮುಂದಿನ ದಿನಕ್ಕೆ ಮುಂದರಿಸಿತು.

ಸ್ವರಾಜ್ಯ ಪಕ್ಷದ ಜನರಲ್ ಕೌನ್ಸಿಲಿನ ಮೀಟಿಂಗು.

ಸ್ವರಾಜ್ಯಪಕ್ಷದ ಮುಂದಿನ ಕಾರ್ಯಕ್ರಮವು ಈ ಕೌನ್ಸಿಲು ಚರ್ಚಿಸಿತು. ತಾ. ೨೫ರ ಬೆಳಿಗ್ಗೆ ಕೌನ್ಸಿಲು ಕೂಡಿತು. ಪಂಡಿತ ಮೋತಿಲಾಲ ನೆಹರುರವರು ಈ ಠರಾವನ್ನು ಮುಂದೆ ತಂದರು.

I. ಪಾಟ್ನಾ ಮೀಟಿಂಗಿನಲ್ಲಿ ಮಂಜೂರಾದ ಠರಾವಿನ ೭ನೇ ಭಾಗವನ್ನು ಈ ಕಾಂಗ್ರೆಸ್ಸು ಮಂಜೂರುಮಾಡುತ್ತಿದೆ. ಮತ್ತು ಕಾಂಗ್ರೆಸ್ಸಿನ ಶಕ್ತಿಯನ್ನೂ, ಧನವನ್ನೂ, ದೇಶಕ್ಕೆ ಹಿತಕರವಾದ ರಾಜಕೀಯ ಕೆಲಸಕ್ಕಾಗಿ ಉಪಯೋಗಿಸಿ ಅಂತಹ ಕೆಲಸಗಳನ್ನು ಕೈಕೊಳ್ಳಬೇಕಾಗಿ ಈ ಕಾಂಗ್ರೆಸ್ಸು ನಿರ್ಣಯಿಸುತ್ತಿದೆ.

II. ಈ ಕಾಂಗ್ರೆಸ್ಸು, ಸವಿನಯ ಕಾಯಿದೆಭಂಗದ ಮೇಲೆ ತನಗಿರುವ ವಿಶ್ವಾಸವನ್ನು ಪುನಃ ಸ್ಪಷ್ಟೀಕರಿಸುತ್ತಿದೆ; ಮತ್ತು ಅದು ಈಗ ಸದ್ಯಕ್ಕೆ ಸಾಧ್ಯವಲ್ಲವಾದುದರಿಂದ ಈ ಕಾಂಗ್ರೆಸು ಕೆಳಗಿನಂತೆ ನಿರ್ಣಯಿಸುತ್ತದೆ:—

(೧) ಸವಿನಯ ಕಾಯಿದೆ ಭಂಗಕ್ಕೆ ಅನುಕೂಲವಾದ ರಾಜಕೀಯ ಕೆಲಸವನ್ನು ಕೈಕೊಂಡು, ವಿರೋಧವಾದ ಕೆಲಸಗಳಿಂದ ದೂರ ಹೋಗುತ್ತದೆ.

(೨) ಆ ಆತ್ಮ ವಿಶ್ವಾಸ ಮತ್ತು ಸರಕಾರವಾಗಲಿ ಇತರ ಯಾವುದೇ ತರದ ಪ್ರತಿಬಂಧಕ ಶಕ್ತಿಯ ನಿರೋಧ, ಇವೆರಡು ರಾಜಕೀಯ ಕೆಲಸಗಳ ಸೂತ್ರವಾಗಿವೆ. ಅದಕ್ಕಾಗಿ ಕಾಂಗ್ರೆಸು ಈ ಕೆಳಗಿನ ಕಾರ್ಯಕ್ರಮವನ್ನು ಅನುಕರಿಸುತ್ತದೆ.

ವಿಧಾಯಕ ಕಾರ್ಯಕ್ರಮ:—(ಅ) ನೂಲುವ ರಾಟೆ ಮತ್ತು ಖದ್ದರ ಪ್ರಚಾರದೊಡನೆ ಜನತೆಯೊಳಗೆ ರಾಷ್ಟ್ರೀಯತೆಯ ಪ್ರಚಾರ; ಅಂತರ್ಜಾತಿಗಳ ಐಕ್ಯ; ಅಸ್ಪೃಶ್ಯತಾ ನಿವಾರಣೆ; ದೀನ ಜನರ ಸುಧಾರಣೆ; ಮದ್ಯಪಾನ ನಿಷೇಧ

(ಆ) ಸ್ಥಳೀಕ ಬೋರ್ಡುಗಳ ಪ್ರವೇಶ; ಗ್ರಾಮ ಸಂಘಟನೆ; ಔದ್ಯೋಗಿಕ ಮತ್ತು ಕೃಷಿಕ ಕೂಲಿಗಳ ಸಂಘಟನೆ; ಆರ್ಥಿಕ ವ್ಯಾವಹಾರಿಕ ಉನ್ನತಿ.

ಕೌನ್ಸಿಲು ಕಾರ್ಯಕ್ರಮ:—(ಅ) ೧೯೨೪ನೇ ಫೆಬ್ರುವರಿ ೧೮ ಮತ್ತು ೧೯೨೫ನೇ ಸಪ್ಟಂಬರ ಎರಡೂ ಎಸೆಂಬ್ಲಿಯಲ್ಲಿ ಮಂಜೂರಾದ ಠರಾವಿನ ಮೇಲೆ ಕೌನ್ಸಿಲುಗಳೊಳಗಣ ಕೆಲಸವು ಕೇಂದ್ರೀಕರಿಸಲ್ಪಡಬೇಕು.

(೧) ಎಸೆಂಬ್ಲಿಯೊಳಗಣ ಸ್ವರಾಜ್ಯಪಕ್ಷವು ಸರಕಾರದ ತೀರ್ಮಾನವನ್ನು ಕೇಳಿ, ಫೆಬ್ರುವರಿ ಅಖೈರಿಯೊಳಗೆ ತೀರ್ಮಾನ ಸಿಕ್ಕದಿದ್ದರೆ, ಇಲ್ಲವೆ ತೀರ್ಮಾನವು ತೃಪ್ತಿಕರವಲ್ಲದಿದ್ದರೆ ಎಸೆಂಬ್ಲಿಯಲ್ಲಿಯೇ ಸ್ವರಾಜ್ಯಪಕ್ಷವು ತಾವಿನ್ನು ಎಸೆಂಬ್ಲಿಯಲ್ಲಿ ನಿಲ್ಲುವುದಿಲ್ಲ, ಜನತೆಯೊಳಗೆ ಕೆಲಸಮಾಡಲು ಹೋಗುತ್ತೇವೆ ಎಂದು ಸರಕಾರಕ್ಕೆ ತಿಳಿಸಿ, ಎಸೆಂಬ್ಲಿ ಮತ್ತು ಪ್ರಾಂತಿಕ ಕೌನ್ಸಿಲುಗಳಲ್ಲಿದ್ದ ಸ್ವರಾಜ್ಯ ಪಕ್ಷೀಯ ಪ್ರತಿನಿಧಿಗಳು ಹೊರಬಂದು ವರ್ಕಿಂಗ ಕಮಿಟಿಗೆ ತಿಳಿಸಬೇಕು.

(೨) ಆ ಮೇಲೆ ತಮ್ಮ ಸ್ಥಾನವು ಖಾಲಿ ಎಂದು ಸರಕಾರವು ಮಾಡದಂತೆ ನೋಡಲಿಕ್ಕೆ ಜನರ ಮೇಲೆ ಹೆಚ್ಚು ಕರವನ್ನು ಹೊರಿಸುವ ಠರಾವು ಬಂದಾಗ ಸರಕಾರವು ಅಂದಾಜುಪಟ್ಟಿ (ಬಜೆಟು) ಇಟ್ಟು ಅದನ್ನು ನಿರಾಕರಿಸುವ ಸಮಯದಲ್ಲಿ ಈ ಸಂದರ್ಭಗಳಲ್ಲಲ್ಲದೆ ಇನ್ನಾವ ಸಮಯದಲ್ಲೂ ಪ್ರತಿನಿಧಿಗಳು ಕೌನ್ಸಿನಲ್ಲಿ ಹಾಜರಾಗಬಾರದು.

(೩) ೧ನೇ ಉಪನಿಬಂಧನೆಯ ಪ್ರಕಾರ ವರದಿಗಳು ಬಂದಕೂಡಲೆ, ಮುಂದಿನ ಕಾರ್ಯಕ್ರಮವನ್ನು ನಿರ್ಣಯಿಸಲಿಕ್ಕೆ ವರ್ಕಿಂಗ್ ಕಮಿಟಿಯು ಸಭೆಕೂಡಬೇಕು.

(೪) ಅಂತಹ ಕಾರ್ಯಕ್ರಮವು I ಮತ್ತು IIನೇ ನಿಬಂಧನೆಗಳಲ್ಲಿನ ಅಗತ್ಯವಾದ ವಿಷಯಗಳಿಗಾಗಿಯೂ, ಮತದಾರರೊಳಗಿನ ಪ್ರಚಾರಕ್ಕಾಗಿಯೂ ಉಪಯೋಗಕರವಾಗಬೇಕು.

(೫) ಸರಕಾರದ ತೀರ್ಮಾನವು ವರ್ಕಿಂಗ ಕಮಿಟಿಗೆ ತೃಪ್ತಿಕರವಿದ್ದರೆ, ಮುಂದಿನ ಕೆಲಸವನ್ನು ನಿರ್ಧರಿಸುವ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ಸ ಕಮಿಟಿಯು ಸಭೆಸೇರಬೇಕು.

(೬) ಸ್ವರಾಜ್ಯ ಪಕ್ಷೀಯರು ಕೌನ್ಸಿಲುಗಳನ್ನು ಬಿಡುವ ವರೆಗೆ, ಇನ್ನು ಮುಂದೆ ಕಾಂಗ್ರೆಸ್ಸು ಮಾಡಬಹುದಾದ ಬದಲಾವಣೆಯೊಡನೆ ಸ್ವರಾಜ್ಯಪಕ್ಷದ ಈ ಮೊದಲಿನ ಸಂಘಟನೆಯನ್ನೇ ಅವರು ಅನುಸರಿಸಬೇಕು.

(೭) ೩ನೇ ಮತ್ತು ೪ನೇ ಉಪನಿಬಂಧನೆಗಳಂತೆ ಕೆಲಸಮಾಡುವ ಬಗ್ಗೆ ಪ್ರಚಾರಕಾರ್ಯದ ಪ್ರಾಥಮಿಕ ಖರ್ಚನ್ನು ಕಾಂಗ್ರೆಸು ವಹಿಸತಕ್ಕದ್ದು. ಅದಕ್ಕಿಂತ ಮಿಕ್ಕಿದ ಖರ್ಚನ್ನು ವರ್ಕಿಂಗ ಕಮಿಟಿಯೇ ಜನರಿಂದ ಕೂಡಿಸಿಕೊಡಬೇಕು.

ಪಂಡಿತಜಿಯವರು ಈ ದೀರ್ಘ ನಿರ್ಣಯದ ಪರವಾಗಿ ಯುಕ್ತಿಯುಕ್ತವಾಗಿ ಚರ್ಚಿಸಿದರು.

ಮಿ। ಜಯಕರರು ಸರಕಾರೀ ಹುದ್ದೆಗಳನ್ನು ಸ್ವೀಕರಿಸಬಹುದೆಂಬ ಉಪಸೂಚನೆಯನ್ನು ತಂದರು. ಅಭ್ಯಂಕರರು ಅದನ್ನು ನಿರೋಧಿಸಿದರು. ಡಾ। ಮುಂಜೆಯವರು ಅದನ್ನು ಪುಷ್ಟೀಕರಿಸಿದರು. ಜಯಕರರ ಉಪಸೂಚನೆಗೆ ೨೮ ಮತಗಳೂ ವಿರುದ್ಧವಾಗಿ ೬೯ ಮತಗಳೂ ಸಿಕ್ಕಿದುದರಿಂದ ಉಪಸೂಚನೆಯು ಬಿದ್ದು ಹೋಗಿ ಮೂಲ ಸೂಚನೆಯು ಮಂಜೂರು ಹೊಂದಿತು.

ಈ ಸೂಚನೆಯು ಮುಂದೆ ಕೊಂಗ್ರೆಸ್ಸಿನ ವಿಷಯ ನಿರ್ಮಾಣಕ ಸಭೆಯಲ್ಲಿ ಇಡಲ್ಪಟ್ಟಿತು.

ವಿಷಯನಿಯಾಮಕ ಕಮಿಟಿ

ಅದೇ ದಿವ ಮಧ್ಯಾಹ್ನ ಘಂಟೆ ೪ಕ್ಕೆ ವಿಷಯ ನಿಯಾಮಕ ಕಮಿಟಿಯು ಸೇರಿತು. ಈ ಸಮಯದಲ್ಲಿ ಕೆಲವು ಯುರೋಪಿಯನರೂ ಹಾಜರಿದ್ದರು. ಅಫ್ರಿಕದ ಹಿಂದೀಯರ ದುಃಖಕರವಾದ ಸ್ಥಿತಿಯನ್ನು ನಿವೇದಿಸುವ ಬಗ್ಗೆ ಡಾ। ಅಬ್ದುರ್‌ರಹಿಮಾನರ ಧುರೀಣತ್ವದಲ್ಲಿ ಹಿಂದೂಸ್ಥಾನಕ್ಕೆ ಬಂದ ದಕ್ಷಿಣ ಅಫ್ರಿಕ ಹಿಂದೀಯರ ಪ್ರಾತಿನಿಧ್ಯ ಮಂಡಳಕ್ಕೆ ಶ್ರೀ। ಸರೋಜಿನಿಯವರು ಸ್ವಾಗತವನ್ನಿತ್ತರು.

ಮಹಾತ್ಮಾ ಗಾಂಧಿಯವರು ಕೆಳಗಿನ ನಿರ್ಣಯವನ್ನು ಮುಂದೆ ತಂದರು.

ಈ ಕಾಂಗ್ರೆಸ್ಸು ದಕ್ಷಿಣ ಅಫ್ರಿಕದ ಪ್ರಾತಿನಿಧ್ಯ ಮಂಡಳಕ್ಕೆ ಸುಸ್ವಾಗತವಿತ್ತು, ಅವರ ಅಸ್ತಿತ್ವಕ್ಕೆನೇ ಬಾಧಕ ತರುವ ಅಲ್ಲಿಯ ಘಟನೆಗಳ ವಿರೋಧವಾಗಿ ಅಲ್ಲಿನ ಹಿಂದೀಯರು ಮಾಡುವ ಪ್ರಯತ್ನಗಳಲ್ಲಿ ಪೂರ್ಣ ಪುಷ್ಟೀಕರಣ ಕೊಡುತ್ತಿದೆ.

ದಕ್ಷಿಣ ಅಫ್ರಿಕ ಸರಕಾರದ ಈಗಿನ ಕ್ಲಾಸ ಏರಿಯಾ ಮಸೂದೆಯು, ೧೯೧೪ನೇ ಇಸವಿಯ ಸ್ಮಟ್ಸ - ಗಾಂಧಿ ಒಪ್ಪಂದಕ್ಕೆ ವಿರೋಧವಿದೆ ಎಂದು ಸ್ಪಷ್ಟವಾಗಿ ಅಭಿಪ್ರಾಯಪಡುತ್ತಿದೆ.

ಆ ಒಪ್ಪಂದಕ್ಕೆ ಹಿಂದೀಯರ ಪರವಾಗಿ ಮಾಡುವ ಅರ್ಥವನ್ನು ಯೂನಿಯನ್ ಸರಕಾರವು ಸಮ್ಮತಿಸದಿದ್ದರೆ ೧೯೦೭ರ ೩ನೇ ಕಾನೂನಿಗಾಗ ೧೯೦೮ರಲ್ಲಿ ಮಾಡಿದಂತೆ ಈವಾಗಲೂ ಅದನ್ನು ಪಂಚಾಯತಿಕೆ ಮೂಲಕ ತೀರ್ಮಾನಿಸಬೇಕು.

ಎಲ್ಲಾ ಪಕ್ಷೀಯ ಧುರೀಣರ ಪರಿಷತ್ತನ್ನು, ಹಿಂದೀ ಪ್ರತಿನಿಧಿಗಳ ಕೂಡ, ಕೂಡಿಸಿ ಈ ಪ್ರಶ್ನೆಯ ಇತ್ಯರ್ಥವನ್ನು ಮಾಡಬೇಕೆಂಬ ಸೂಚನೆಯನ್ನು ಈ ಕಾಂಗ್ರೆಸ್ಸು ಪುಷ್ಟೀಕರಿಸಿ, ಯೂನಿಯನ್ ಸರಕಾರವು ಇದನ್ನು ಮಾನಿಸುವುದಾಗಿ ಆಶಿಸುತ್ತದೆ. ಯಾವುದೊಂದು ರಾಜಿಯ ನಿರ್ಣಯವಾಗದಿದ್ದರೆ, ಯೂನಿಯನ್ ಸರಕಾರದ ಮಸೂದೆಗೆ ಚಕ್ರವರ್ತಿಗಳು ಸಹಿಹಾಕಬಾರದಾಗಿ ಈ ಕಾಂಗ್ರೆಸ್ಸು ಕೇಳಿಕೊಳ್ಳುತ್ತಿದೆ.

ಈ ಮೇಲಿನ ಠರಾವು ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟಿತು.

ಆ ಮೇಲೆ ಸ್ವರಾಜಿಸ್ಟ ಕೌನ್ಸಿಲಿನಲ್ಲಿ ಮಂಜೂರಾದ, ಸ್ವರಾಜ್ಯ ಪಕ್ಷದ ಕ್ರಮ ಮತ್ತು ಧೋರಣದ ವಿಷಯಕವಾದ ಠರಾವನ್ನು ಪಂಡಿತ ಮೋತಿಲಾಲರು ಸೂಚಿಸಿ ಶ್ರೀಯುತ ಶ್ರೀನಿವಾಸ ಐಯ್ಯಂಗಾರರು ಪುಷ್ಟೀಕರಿಸಿದರು. ಲಾಲಾಜಿಯವರು ಕೆಲವು ಸದರಿ ಠರಾವಿಗೆ ಅನುಕೂಲವಾಗುವ ಕೆಲವು ಉಪಸೂಚನೆಗಳನ್ನು ತಂದರು. ಜಯಕರರು ಮಂತ್ರಿಪದವಿ ಮೊದಲಾದ ಹುದ್ದೆಗಳನ್ನು ಸ್ವೀಕರಿಸಬಹುದೆಂಬ ಉಪಸೂಚನೆ ತಂದರು. ಸೇನಗುಪ್ತರು ಮೂಲಠರಾವನ್ನು ಪುಷ್ಟೀಕರಿಸಿದರು. ಡಾ। ಮುಂಜೆಯವರು ಜಯಕರರನ್ನು ಸಮರ್ಥಿಸಿದರು. ಜಯಕರರ ಉಪಸೂಚನೆಗೆ ೨೧ ಮತಗಳೂ ವಿರೋಧವಾಗಿ ೧೩೫ ಮತಗಳೂ ಸಿಕ್ಕಿದುದರಿಂದ ಸೂಚನೆಯು ಬಿದ್ದುಹೋಯಿತು. ಪಂಡಿತರೂ ಲಾಲಾಜಿಯವರೂ ಒಟ್ಟಿಗೆ ಪುನಃ ಮೂಲಠರಾವನ್ನು ರೂಪಿಸುವರಾದುದರಿಂದ, ಲಾಲಾಜಿಯವರ ಉಪಸೂಚನೆಗಳು ಬಾಕಿ ಇಡಲ್ಪಟ್ಟು ಠರಾವಿನ ಮೂಲ ಮುಂದಿನ ಬದಲಾವಣೆಗೆ ಅನುಕೂಲವಾಗಿ ಮಂಜೂರುಮಾಡಲ್ಪಟ್ಟಿತು.

ಕಾಂಗ್ರೆಸ್ಸು ಅಧಿವೇಶನ.

ದಶಂಬರ ತಾ. ೨೬ಕ್ಕೆ ಘಂಟೆ ೧೨ಕ್ಕೇನೇ ಚಪ್ಪರವು ತುಂಬಲಾಯಿತು. ೧॥ ಘಂಟೆಗೆ ಅಜಮೀರ ಮೇವಾರದ ಪ್ರಾತಿನಿಧ್ಯ ರದ್ದಾದವರು ಚಪ್ಪರವನ್ನು ಒಳಕ್ಕೆ ಬಲಾತ್ಕಾರದಿಂದ ಪ್ರವೇಶಿಸಲು ಪ್ರಯತ್ನಿಸಿ ಸಣ್ಣ ಕೋಲಾಹಲವಾಯಿತು. ಸ್ವಯಂಸೇವಕ ಯುಕ್ತಿಯಿಂದ ಅದನ್ನು ನಿವಾರಿಸಿದರು. ಧುರೀಣರು ಮೆರವಣಿಗೆಯಾಗಿ ಚಪ್ಪರವನ್ನು ಸೇರಿದರು. ಚಪ್ಪರು ಜನರಿಂದ ತುಂಬಿಹೋಗಿತ್ತು.

ಡಾ। ಮುರಾರಿಲಾಲರು ತಮ್ಮ ಸ್ವಾಗತ ಭಾಷಣವನ್ನು ಕೊಟ್ಟರು ಇದಕ್ಕೆ ೧೫ ಮಿನಿಟುಗಳು ತಗಲಿತು.

ಸ್ವಾಗತ ಭಾಷಣ.

ಕಳೆದ ವರ್ಷ ಕಾಂಗ್ರೆಸ್ಸನ್ನು ಕಾನಪೂರಕ್ಕೆ ಕರೆಯುವಾಗ ವಿಶೇಷ ಸಂಭ್ರಮದ ಸ್ವಾಗತವನ್ನು ಕೊಡುವ ಭರವಸೆಯು ತಮಗಿದ್ದಿತಾದರೂ ಅನೇಕ ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ. ರಾಷ್ಟ್ರೀಯತೆಯ ವಿರೋಧಿಗಳು ನಮ್ಮ ತತ್ಕಾಲದ ನಿರ್ಬಲತೆ ನೋಡಿ ನಮ್ಮ ಕಾರ್ಯಕ್ರಮದ ಮೇಲೆ ತಿರಸ್ಕಾರವನ್ನು ಹಾಕುತ್ತಿರುವರು. ಅಂತಃಕ್ಲೇಶ ಮತ್ತು ಭೇದಗಳಿಂದ ಅನೇಕ ದೇಶಸೇವಕರು ನಿರುತ್ಸಾಹಿಯಾದರು. ವ್ಯಾಪಾರದ ಮಂದಿಯಿಂದ ಹಣದ ಅಭಾವವಾಗಿ ಕೆಲಸಗಾರರಿಗೆ ಕರ್ತವ್ಯಪಾಲನೆಯು ಕಷ್ಟವಾಯಿತು. ಸರಕಾರದ ಆರ್ಥಿಕ ಧೋರಣವು ಹೃದಯಹೀನವಾದ ದ್ರವ್ಯಶೋಷಣೆಯಲ್ಲಿ ಆಸಕ್ತವಿದ್ದಿತು. ಕಕೋರಿಯ ರೈಲು ಡಕಾಯತಿ ಸಂಬ್ರದ ನೆವದಿಂದ ಅನೇಕ ಕೆಲಸಗಾರರನ್ನು ಸರಕಾರವು ಅಪಹರಿಸಿತ್ತು. ಇದರಿಂದ ನೌಕರಶಾಹಿಯು ಪ್ರಜಾಸ್ವಾತಂತ್ರ್ಯವನ್ನು ಎಷ್ಟು ತಿರಸ್ಕಾರದಿಂದ ನೋಡುತ್ತಿದೆಯೆಂದು ತಿಳಿಯುವುದು. ಆದರೆ ನಮಗೆ ವಿಜಯವಿದೆಯೆಂದು ವಿಶ್ವಾಸವಿದೆ. ಅಸಹಕಾರ ತತ್ವವು ನಮ್ಮ ಭಯವನ್ನು ತೆಗೆದಿದೆ. ತತ್ಕಾಲಕ್ಕೆ ನಮಗೆ ಅನೇಕ ಕಷ್ಟಗಳನ್ನು ಒದಗಿದರೂ, ಬೇಗನೇ ನಮ್ಮ ಚಳವಳವು ಫಲಪ್ರದವಾಗುವುದು.

ಗೈರುಹಾಜರು ಧುರೀಣರ ಸಂದೇಶ.

ಕಾರ್ಯದರ್ಶಿಯರಾದ ಗಿರಿಧರಲಾಲರು ಶ್ರೀಮತಿ ವಸಂತಿ ದೇವಿ, ಡಾ। ರವೀಂದ್ರನಾಥ ಠಾಕೂರು, ಬಿ. ಚಕ್ರವರ್ತಿ, ಸಿ. ವಿಜಯ ರಾಘವಾಚಾರಿ, ಮಿ। ಎನ್ನಿಬಿಸೆಂಟೆ, ಜೆ. ಎಸ್ ಖರ್ಜಿ, ಲೊರ್ಡ ಸಿಂಹ, ಮಿ। ಜಿನ್ನಾ ಇವರ ತಂತಿಗಳನ್ನು ಓದಿದರು. ಇದರ ಮೊದಲು ದಕ್ಷಿಣ ಅಫ್ರಿಕದಿಂದ ಬಂದ ಡಾ। ಅಬ್ದುಲ್ ರಹಿಮಾನರು ಶ್ರೀಮತಿ ಸರೋಜಿನಿ ದೇವಿಯವರಿಗೆ, ಸರೋಜಿನಿ ದೇವಿಯರ ಭಾವಚಿತ್ರವನ್ನು ಸಮರ್ಪಿಸಿದರು.

ಶ್ರೀಮತಿ ಸರೋಜಿನಿಯವರು ಆ ಮೇಲೆ ರೊಸ್ಟ್ರಮ್ (Rostrum)ಗೆ ಹೋಗಿ ತಮ್ಮ ಭಾಷಣವನ್ನು ಕೊಟ್ಟರು.

ಅಧ್ಯಕ್ಷ ಭಾಷಣ,

ಶ್ರೀಮತಿ ಸರೋಜಿನಿ ದೇವಿಯವರು, ಕೆಳಗಿನ ಪ್ರಕಾರ ಭಾಷಣವನ್ನು ಕೊಟ್ಟರು:—

ತಾವು ನನಗೆ ಕೊಟ್ಟಿರುವ ಈ ಮಹಾ ಗೌರವವನ್ನು ಸ್ವೀಕರಿಸುವಾಗ ನನ್ನ ಮನಸ್ಸಿನಲ್ಲುಂಟಾಗುವ ಪ್ರಚಂಡ ಭಾವನೆಗಳನ್ನು ತಮಗೆ ವ್ಯಕ್ತಪಡಿಸಲು ನನಗೆ ಶಬ್ದಗಳೇ ಸಿಕ್ಕುವುದಿಲ್ಲ. ನಾನು ಇಲ್ಲಿಯಾಗಲಿ, ಪರದೇಶದಲ್ಲಿ ಮಾಡಿದ ಸ್ವದೇಶಸೇವೆಗಾಗಿ ಮಾತ್ರವಲ್ಲದೆ ಹಿಂದೀ ನಾರೀತ್ವದ ಮೇಲಿನ ಅತಿಶಯವಾದ ಅಭಿಮಾನದಿಂದ ತಾವು ಈ ಗೌರವವನ್ನು ಕೊಟ್ಟಿದ್ದೀರಿ ಎಂಬುದನ್ನು ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ.

ಸ್ಮಾರಕ.

ಇತರ ಯಾವ ವಿಷಯವನ್ನೆತ್ತುವ ಮೊದಲು,— ಅರ್ಧ ಶತಮಾನದಿಂದ ತನ್ನ ಗಂಭೀರವಾದ ವಕ್ತೃತೆಯಿಂದ ರಾಜಕೀಯ ಪ್ರಪಂಚದಲ್ಲಿ ಗುಡುಗಿಸಿದ ಸರ್ ಸುರೇಂದ್ರನಾಥ ಬೆನರ್ಜಿಯವರ; ಸಂಸ್ಕೃತ ನಾಗರಿಕತೆಯನ್ನು ರಾಜಕೀಯ ತುಮುಲಗಳಿಂದ ಮೇಲೆತ್ತಿದ ಮಹಾಜ್ಞಾನಿ ಸರ್ ರಾಮಕೃಷ್ಣ ಭಂಡಾರಕರರ; ವೈಷ್ಣವ ಅನುಭೂತಿಯಿಂದ, ಶಕ್ತಿಮಾನವಾದ ಪ್ರತಿರೋಧಿಯೊಡನೆ ನಿರ್ಭೀತಿಯಿಂದ ಕಾದಿದ್ದರೂ ಸೌಹಾರ್ದದ ಕರಗಳನ್ನು ಮುಂದೆ ಚಾಚಿದ ದೇಶಬಂಧು ಚಿತ್ತರಂಜನನ; ಇವರೆಲ್ಲರ ನೆನಪಿಗಾಗಿ ನಮ್ಮ ಪೂಜನೆಯನ್ನು ಅರ್ಪಿಸುವ.

ಆ ಮಹಾನ್ ದೇಶಬಂಧುವು ಈ ದಿನ ನಮ್ಮ ಮಧ್ಯದಲ್ಲಿದ್ದುದಾದರೆ ಒಳ್ಳೆಯದಾಗಿತ್ತು. ನಮ್ಮ ಈಗಿನ ಕರ್ತವ್ಯವು ನಮ್ಮ ಪ್ರಕೃತ ಅನೈಕ್ಯದಿಂದ ಸಂಜನಿತ ನಮ್ಮ ನಿಸ್ಸಹಾಯಕತ್ವದ ಪರಿಸ್ಥಿತಿಯನ್ನು ಅವಲೋಕಿಸುವುದಾಗಿದೆ. ನಮ್ಮನ್ನು ಸುತ್ತಿರುವ ಅಪಾಯಗಳಿಂದ ಬಿಡುಗಡೆಹೊಂದಲು ನಾವು ಯಾವ ಉಪಾಯವನ್ನು ರಚಿಸಬಹುದು? ನಮ್ಮಲ್ಲಿ ನಷ್ಟವಾಗಿ ಉಳಿದಿದ್ದ ಅಲ್ಪಸ್ವಲ್ಪ ಮಾನಸಿಕ ಮತ್ತು ಆರ್ಥಿಕ ಅರ್ಜಿತವು ಸಾಮ್ರಾಜ್ಯವಾದದ ಪಿಪಾಸೆಗೆ ಬಲಿಕೊಡುವ, ನಮ್ಮ ಸ್ವಾತಂತ್ರ್ಯವನ್ನು ನಿರಂಕುಶ ಪ್ರಭುತ್ವದ ಮೂಲಕ ಅಪಹರಿಸುವ, ದಾನವ ಶಕ್ತಿಗಳನ್ನು ಹೇಗೆ ನಿರೋಧಿಸಬಹುದು? ಬ್ರಿಟಿಷ ವಸಾಹತಿಗಳಲ್ಲಿ ನಮ್ಮ ಬಂಧುಗಳಿಗೆ ಒದಗಿದ ವಿನಾಶಕಾರಕ ಪರಿಸ್ಥಿತಿಯಿಂದ ಅವರನ್ನು ಹೇಗೆ ಉದ್ಧರಿಸಬಹುದು? ಅಂತಃಕಲಹಗಳನ್ನು ಹೇಗೆ ನಿವಾರಿಸಬಹುದು?

ಆತ್ಮಯಜ್ಞದ ಉಪದೇಶ

ಈ ಪ್ರಶ್ನೆಗಳಿಗೆಲ್ಲಾ ಉತ್ತರವು ಒಂದೇ — ಆತ್ಮಯಜ್ಞ, ಮಹಾತ್ಮರು ಇದಕ್ಕಾಗಿ ಬಹಳ ಪ್ರಯತ್ನಪಟ್ಟರು. ಆದರೆ ಆತ್ಮಯಜ್ಞದ ಸ್ವಭಾವವನ್ನು ಕಳಕೊಂಡು ಬಹಳ ಸಮಯವಾಯಿತು. ಆದುದರಿಂದ ಹೆಚ್ಚು ಸಮಯದ ವರೆಗೆ ಆತ್ಮಯಜ್ಞ ಮಾಡಲು ನಮಗೆ ಸಾಧ್ಯವಾಗಲಿಲ್ಲ. ಇತಿಹಾಸವು ಏನೇ ಹೇಳಿದರೂ, ಅಹಿಂಸಾತ್ಮಕ ಅಸಹಕಾರದಿಂದ ನಮ್ಮ ಮಾನಸಿಕ ಭಾವನೆಗಳು ಸಂಪೂರ್ಣವಾಗಿ ಬದಲಾಗಿವೆಯೆಂದೂ, ಅದು ರಾಷ್ಟ್ರೀಯತೆಯ ಅಡಿಗಟ್ಟನ್ನೆ ಕಂಪಿಸಿಯದೆಂದೂ ಇತಿಹಾಸವು ಹೇಳದಿರದು. ನಮ್ಮ ಮುಂದಿನ ಕಾರ್ಯಕ್ರಮಗಳು ಎಷ್ಟೇ ಭಿನ್ನವಾಗಿದ್ದರೂ ಅವುಗಳ ಮೇಲೆ ಮಹಾತ್ಮರ ಅಹಿಂಸಾತ್ಮಕ ಅಸಹಕಾರದ ಪರಿಣಾಮವು ಇದ್ದೇ ಇರುವುದು. ನಮ್ಮನ್ನು ಈ ರಾಜಕೀಯ ಪರಾಧೀನತೆಯ ಕಟ್ಟುಗಳಿಂದ ಬಿಡಿಸಲು ನಮ್ಮ ಶಕ್ತಿಯನ್ನು ಏಕೀಕರಿಸಿ ಸುಸಂಘಟಿಸಬಲ್ಲ, ಹಿಂದೂಸ್ಥಾನದ ಸಾಮಾಜಿಕ, ಆರ್ಥಿಕ, ಔದ್ಯೋಗಿಕ ಮತ್ತು ವೈಜ್ಞಾನಿಕ ಅಭಿವೃದ್ಧಿಯ ಬಗ್ಗೆ ಉಪಾಯಗಳನ್ನು ನಿರ್ಮಿಸಬಲ್ಲ ಒಬ್ಬ ರಾಜನೀತಿಜ್ಞನು ನಮಗೆ ಈಗ ಅಗತ್ಯವಾಗಿರುವನು

ಗ್ರಾಮ ಸಂಘಟನ

ಕಾಂಗ್ರೆಸ್ಸು ಪ್ರತ್ಯೇಕ ಇಲಾಖೆಯ ಮೂಲಕ, ಕೆಲಸಕ್ಕೆ ತಕ್ಕುದಾದ ಸ್ತ್ರೀಪುರುಷರನ್ನು ಈ ಇಲಾಖೆಯಲ್ಲಿ ಸೇರಿಸಿ, ದೇಶಬಂಧುಗಳು ಕಲ್ಪನೆಯ ಗ್ರಾಮಸಂಘಟನೆಯನ್ನು ಕೈಕೊಳ್ಳಬೇಕು. ಇದಕ್ಕಾಗಿ ಚರಕ ಮತ್ತು ನೇಗಿಲಿಗಿನ ಚಿಹ್ನೆಯಿಂದ ಜನತೆಯೊಳಗಿನ ಬಡತನವನ್ನೂ ಸಂಕಷ್ಟವನ್ನೂ ನಿವಾರಿಸಿ ಆತ್ಮಸಹಾಯ ಮತ್ತು ಆತ್ಮಾಭಿಮಾನವನ್ನು ದೇಶದ ಉದ್ದಗಲಕ್ಕೆ ಪ್ರೇರಿಸಬಲ್ಲ, ಮತ್ತು ಪೂರ್ವಕಾಲದಂತೆ ಗೃಹಸ್ಥನ ದಾನದ ಮೂಲಕ ಜೀವನಮಾಡಬಲ್ಲ ಉತ್ಸಾಹಕ ದೇಶಸೇವಕರು ಬೇಕು. ಹಾಗೆಯೇ ಶಹರಿನಲ್ಲಿ ಪಶುಪ್ರಾಯ ಪರಿಸ್ಥಿತಿಯಲ್ಲಿ ಜೀವಿಸುತ್ತಿರುವ ಕೂಲಿಗಳನ್ನೂ ಸುಸಂಘಟಿಸಿ, ಅವರಿಗೆ ಉತ್ತಮ ಕೂಲಿಯೂ, ನಿಲ್ಲಲಿಕ್ಕೆ ಉತ್ತಮ ಗೃಹಗಳೂ, ಸುಖವಾದ ವಾತಾವರಣವೂ ಸಿಕ್ಕುವಂತೆ ಮಾಡಿ, ಕೂಲಿಗೂ ಯಜಮಾನ್ಯಕ್ಕೂ ಅನ್ಯೋನ್ಯ ಸಂಬಂಧವನ್ನು ಕಲ್ಪಿಸಬೇಕು.

ವಿದ್ಯಾಭ್ಯಾಸ ಮತ್ತು ಸೈನ್ಯದ ತರಬೇತು.

ನಮ್ಮ ಗೌರವ ಕಾಪಿಸಿಗಳಿಂದಲೂ. ನಮ್ಮ ರಾಷ್ಟ್ರೀಯ ವಿಜ್ಞಾನದಿಂದಲೂ ನಾವು ವಂಚಿಸಲ್ಪಡುವುದೇ ಪರಾಧೀನತೆಯ ಒಂದು ಅಸೀಮ ದುಷ್ಪರಿಣಾಮ. ನಾವು ಈಗಿನ ವಿದ್ಯೆಗೆ ಸೂತ್ರದ ಗೊಂಬೆಗಳಂತಿದ್ದೇವೆ. ಪೌರ್ವಾತ್ಯ ನಾಗರಿಕತೆಯನ್ನು, ಪಾಶ್ಚಾತ್ಯಕಲಾ, ವಿಜ್ಞಾನ, ತತ್ವ, ಸಂಘಟನೆ ಇತ್ಯಾದಿಗಳೊಡನೆ ಸೇರಿಸಿ ನಮ್ಮ ಭಾವೀ ಜನಾಂಗದ ವಿದ್ಯಾಭ್ಯಾಸವನ್ನು ರಚಿಸುವುದು ನಮ್ಮ ಕರ್ತವ್ಯವಾಗಿದೆ.

ಅಲ್ಲದೆ ನಮ್ಮ ರಾಷ್ಟ್ರೀಯ ವಿದ್ಯಾಭ್ಯಾಸದೊಡನೆ ಸೈನಿಕ ತರಬೇತು ಕೂಡಿರಬೇಕಾಗಿ ನಾನು ಪತ್ಯಾಯಪೂರ್ವಕ ಹೇಳುವೆನು. ಅತ್ಯಂತ ಬರ್ಬರದಿಂದ ಅತೀ ನಾಗರೀಕ ಜನಾಂಗಗಳೂ ತಮ್ಮ ರಾಷ್ಟ್ರೀಯ ಶಸ್ತ್ರಗಳನ್ನು ಹಿಡಿದು ರಾಷ್ಟ್ರೀಯ ಗೌರವವನ್ನು ರಕ್ಷಿಸುವಾಗ ನಾವು ನಮ್ಮ ಮನೆಗಳ ಪಾವಿತ್ರ್ಯವನ್ನೂ ರಕ್ಷಿಸಲಾರೆವೆಂಬುದು ನಮ್ಮ ಪೌರುಷಕ್ಕೆ ಅತೀ ಗೃಣೀತ ಕಲಂಕವಾಗಿದೆ. ಈಗ ಕೆಲಸ ಮಾಡುತ್ತಿರುವ ಕಮ್ಮಿಶನ್ನು ಏನೇ ನಿರ್ಣಯಿಸಲಿ. ಪರಂತು ಸ್ವೇಚ್ಛೆಯಿಂದ ಕೂಡಿದ ರಾಷ್ಟ್ರೀಯದಳವೊಂದನ್ನು ಏರ್ಪಡಿಸುವುದು ಅತ್ಯಗತ್ಯ. ಈಗಿನ ಸ್ವಯಂಸೇವಕ ದಳದಿಂದಲೇ ಇದನ್ನು ರಚಿಸಬಹುದು. ಹಾಗೆಯೇ ನೌಕಾಪಡೆಯನ್ನೂ, ವಿಮಾನಪಡೆಯನ್ನೂ ಏರ್ಪಡಿಸುವ ವಿಚಾರವನ್ನು ನಾವು ಮಾಡಬಹುದು.

ಕಾಂಗ್ರೆಸ್ಸಿನೊಳಗೆ ವಿದೇಶಿ ಇಲಾಖೆ.

ಹಿಂದೂಗಳನ್ನು ಹೊರಗೆ ಹಾಕಲಿಕ್ಕೆ ಮಾಡಿರುವ, ದಕ್ಷಿಣ ಅಫ್ರಿಕದ ಮಸೂದೆಯಷ್ಟು ಮಾನವ ಜಾತಿಯ ಮೇಲಿನ ಅತ್ಯಾಚಾರವು ಇನ್ನೊಂದಿಲ್ಲ. ಈಗ ನಮ್ಮಲ್ಲಿಗೆ ಬಂದಿರುವ ಅವರ ಪ್ರತಿನಿಧಿಗಳ ಮೂಲಕ ಅವರ ಪ್ರಚಂಡ ಪ್ರಯತ್ನಗಳಿಗೆ ನಮ್ಮ ಸಹಾಯವನ್ನೂ, ಕಳುಹಿಸಬೇಡವೆ? ವಿದೇಶದಲ್ಲಿರುವ ಹಿಂದೀಯ ಕಡೆಗಿನ ಕರ್ತವ್ಯವು ಈ ದಕ್ಷಿಣ ಅಫ್ರಿಕದ ಪಾಠದಿಂದ ನಮ್ಮ ಮನಸ್ಸಿಗೆ ಚೆನ್ನಾಗಿ ಹೋಗಿಯದೆ. ಇನ್ನು ಇದಕ್ಕಾಗಿ ಪ್ರತ್ಯೇಕ ಇಲಾಖೆಯನ್ನು ಏರ್ಪಡಿಸುವುದರಲ್ಲಿ ಕಾಂಗ್ರೆಸ್ ಒಂದು ನಿಮಿಷವನ್ನಾದರೂ ಹಾಳುಮಾಡಕೊಡದು.

ದೇಶವನ್ನು ಸರಕಾರಕ್ಕೆ ಮಾನ್ಯವಾಗದ ಉಪಾಯಗಳ ಮೂಲಕ ಪರದಾಸ್ಯದಿಂದ ರಕ್ಷಿಸಲು ಯತ್ನಿಸಿ, ಸರಕಾರದ ಬಹಿಷ್ಕಾರದಿಂದ ಲೋಕದ ದೂರದ ಸಂದುಮೂಲೆಗಳಲ್ಲಿ ನರಳುವ ಜನತೆಯನ್ನೂ ನನ್ನ ಎದೆಯು ನನ್ನ ಸ್ಮೃತಿಗೆ ತರುತ್ತಿದೆ. ಈಗವರು ಸಹನೆಯಿಂದ ಪವಿತ್ರರಾಗಿರುವರು.

ಪ್ರಕಟಣಾ ಇಲಾಖೆ.

ಉತ್ತಮವಾಗಿ ಪರಿಣಾಮಕಾರಿಯಾದ ಪ್ರಕಟಣಾ ಕಾರ್ಯವನ್ನೂ ನಾವು ವಹಿಸಿಕೊಳ್ಳಬೇಕು. ಇದರಿಂದ ನಾವು ಜನತೆಯೊಳಗೆ ರಾಜಕೀಯ ಪ್ರಚಾರ ಕಾರ್ಯವನ್ನು ಮಾಡಬಹುದಾಗುತ್ತದೆ. ಅಂಗ್ಲ ಮತ್ತು ದೇಶಭಾಷೆಯ ರಾಷ್ಟ್ರೀಯ ಪತ್ರಗಳ ಮೂಲಕವೂ ನಾವು ಪ್ರಚಾರಕಾರ್ಯವನ್ನು ಕೈಕೊಳ್ಳಬಹುದು. ಪರದೇಶಗಳಿಗೆ ಹಿಂದೂಸ್ಥಾನ ಸತ್ಯವಾದ ಸ್ಥಿತಿಯ ವರ್ತಮಾನವು ಮುಟ್ಟುವಂತೆ ವಾರ್ತಾ ಇಲಾಖೆಯನ್ನೂ ಏರ್ಪಡಿಸಬೇಕಲ್ಲದೆ, ಪರದೇಶಗಳಲ್ಲಿ ಪ್ರತಿನಿಧಿಗಳನ್ನು ನೇಮಿಸಿ ಬೇರೆ ಬೇರೆ ಜನಾಂಗಗಳೊಡನೆ ಸೌಹಾರ್ದವನ್ನು ಸ್ಥಾಪಿಸಬೇಕು.

ಹಿಂದೂ-ಮುಸಲ್ಮಾನ ಸಮಸ್ಯೆ.

ಹಿಂದೂ-ಮುಸಲ್ಮಾನರೊಳಗಿರುವ ಭೇದ ಮತ್ತು ಕಲಹಗಳನ್ನು ನೋಡುವಾಗ ನನಗೆ ಕಣ್ಣೀರು ಬರುತ್ತದೆ. ಈ ಎರಡು ಮತಸ್ಥರೊಳಗೆ ಭೇದ ಉಂಟಾಗಲು ಕಾರಣವಿದ್ದ ಸಂಗತಿಗಳನ್ನು ತಿಳಿಯಲು ನಾನು ಚೆನ್ನಾಗಿ ಪ್ರಯತ್ನಿಸಿದ್ದೇನೆ. ಜಾತೀಯ ಪ್ರಾತಿನಿಧ್ಯದಿಂದ ಜನಾಂಗದ ಅಖಂಡತೆಯು ಕುಸಿಯುವುದೆಂದು ನನಗೆ ತಿಳಿದಿದ್ದರೂ, ಜನತೆಯೊಳಗಿನ ಜಾತೀಯ ಮಾತ್ಸರ್ಯ ಸಂಶಯ, ಭಯ, ಅವಿಶ್ವಾಸ ಮತ್ತು ದ್ವೇಷಗಳ ಕಾರಣದಿಂದ, ನಿಸ್ಸಂದೇಹವಾಗಿಯೂ, ದೇಶಪ್ರೇಮಿಗಳಾದ ಎರಡೂ ಜಾತಿಯ ರಾಜನೀತಿಜ್ಞರ ಮೂಲಕ ತೃಪ್ತಿಕರವಾದ ತೀರ್ಮಾನವನ್ನು ಹೊಂದುವುದು ಅಗತ್ಯವೆಂದು ನಾನು ಅಭಿಪ್ರಾಯಪಡುತ್ತೇನೆ.

ಮುಸಲ್ಮಾನರೂ ತಮ್ಮ ಭಾವನೆಗಳನ್ನು ಸಿರಿಯಾ, ಐಗುಪ್ತ, ಇರಾಕ್, ಅರೇಬಿಯಾದ ದುಃಖಗಳಲ್ಲಿ ಆಸಕ್ತವಾಗಿರದೆ, ಮಾತೃಭೂಮಿಯಾದ ಹಿಂದೂಸ್ಥಾನದ ಕಡೆಗಿನ ಕರ್ತವ್ಯದ ಜಾಗೃತಿಯಲ್ಲಿಡಬೇಕಾಗಿ ನಾನು ನನ್ನ ಮುಸಲ್ಮಾನ ಬಂಧುಗಳನ್ನು ಕೇಳುವೆನು.

ಹಿಂದೂಗಳೂ ಮುಸಲ್ಮಾನರೂ ಪರಸ್ಪರವಾಗಿ ದೇವಪೂಜೆಯ ಸ್ವಾತಂತ್ರ್ಯವನ್ನು ಮಾನಿಸಿದರೆ, ಪರಸ್ಪರ ನಾಗರಿಕತೆಗಳ ದೈವೀಕತೆಯನ್ನು ತಿಳಿಯಲು ಅಭ್ಯಸಿಸಿದರೆ, ಸೌಹಾರ್ದದ ಮತ್ತು ಶಾಂತಿಯ ವಾತಾವರಣದಲ್ಲಿ ಮಕ್ಕಳನ್ನು ಬೆಳೆಸಿದರೆ ನಮ್ಮ ಹೃದಯದ ಆಕಾಂಕ್ಷೆಯು ಎಷ್ಟು ಬೇಗನೆ ಪೂರ್ತಿಯಾಗಬಹುದು!

ದೇಶಿ ಸಂಸ್ಥಾನಗಳು.

ದೇಶಿ ಸಂಸ್ಥಾನಗಳ ಅಂತರ್ಯದ ವಿಷಯಗಳಲ್ಲಿ ಕೈ ಹಾಕದೆ ಅವರ ವಿಶಾಲವಾದ ಹಿತಗಳಲ್ಲಿ ನಾವು ಉತ್ಸುಕರಾಗುವುದೂ ನಮ ಕರ್ತವ್ಯವಿದೆ. ಯಾವಾಗಲೂ ದಂಡು ಕಾನೂನಿನಲ್ಲಿರುವ ವಾಯುವ್ಯ ಸರಹದ್ದಿನ ಜನರಿಗೆ ಸಾಮಾನ್ಯ ಸ್ವಾತಂತ್ರ್ಯವು ಲಾಭವಾಗುವಂತೆಯೂ ನಾವು ಸಹಾಯವನ್ನು ಮಾಡಬೇಕು.

ಸ್ವರಾಜ್ಯ ಪಕ್ಷ.

ಕಾಂಗ್ರೆಸ್ಸಿನ ಪ್ರಮುಖೋದ್ದೇಶವು ಸ್ವರಾಜ್ಯಸಾಧನೆಯಾಗಿದೆ. ರಾಜಕೀಯ ಸಂಸ್ಥೆಗಳನ್ನು ಲಕ್ಷಿಸದೆ, ಮಹಾತ್ಮರ ಚರಕತತ್ವದಲ್ಲಿ ವಿಶ್ವಾಸವುಳ್ಳವರಾಗಿ ಬಡವರನ್ನು ಮತ್ತು ಬಹಿಷ್ಕೃತರನ್ನು ಉದ್ಧರಿಸುವುದರಲ್ಲಿ ಬದ್ಧ ಕಂಕಣರಾದ ಕಾಂಗ್ರೆಸ್ ಜನರು ಅನೇಕರಿರುವರು. ಪ್ರಚಂಡ ಶಿಸ್ತಿನಿಂದ ಇರುವ ಸ್ವರಾಜ್ಯ ಪಕ್ಷವೇ ಈಗ ಕಾಂಗ್ರೆಸ್ಸಿನ ಏಕಮಾತ್ರ ರಾಜಕೀಯ ಪಕ್ಷವಾಗಿದೆ. ಇತರ ರಾಜಕೀಯ ಪಕ್ಷಗಳೂ ಈ ಪಕ್ಷವನ್ನು ಸೇರುವುದು ಅವರ ಕರ್ತವ್ಯವಲ್ಲವೇ?

ಎಸೆಂಬ್ಲಿಯಲ್ಲಿ ಎಲ್ಲಾ ಪಕ್ಷಗಳೂ ಒಟ್ಟಾಗಿ ಸರಕಾರದೊಡನೆ ಎಷ್ಟು ಕಡಿಮೆ ಕೇಳಬಹುದೊ ಅಷ್ಟು ಕಡಿಮೆ ಕೇಳಿದ್ದಾರೆ. ಇನ್ನು ಈ ವಿಷಯವನ್ನು ಮಾಡಬೇಕೆಂತ ನಿರ್ಧರಿಸುವುದು ಸರಕಾರದ ಕೆಲಸವಿದೆ. ಸರಕಾರವು ತಕ್ಕ ಜವಾಬನ್ನು ಕೊಡದಿದ್ದರೆ, ಕಾಂಗ್ರೆಸ್ಸು ಕೌನ್ಸಿಲಿನೊಳಗಣ ತನ್ನ ಜನರನ್ನು ಹಿಂದೆ ಕರೆದು ಪುನಃ ಶಕ್ತಿಮಂತವಾದ ಕಾರ್ಯಕ್ರಮವನ್ನು ಕೈಲಾಸದಿಂದ ಕನ್ಯಾಕುಮಾರಿ ವರೆಗೂ, ಇಂದಸ್‌ನಿಂದ ಬ್ರಹ್ಮಪುತ್ರ ವರೆಗೂ ಪ್ರಸರಿಸಬೇಕು. ಮಾತೆಯನ್ನು ಈಗಿನ ಅತೀವ ಅವಮಾನದಿಂದಲೂ, ಬಂಧನದಿಂದಲೂ ಉದ್ಧರಿಸಲಿಕ್ಕೆ ಯಾವ ಕಷ್ಟಗಳೂ, ಯಾವ ಸಹನೆಯೂ ಚಿಕ್ಕದಾಗಿಯೇ ಇದೆ.

ಸ್ವಾತಂತ್ರ್ಯದ ಯುದ್ಧದಲ್ಲಿ ಭಯ ವ ಅಕ್ಷಮ್ಯವಾದ ದೋಷ ಮತ್ತು ನಿರಾಶೆಯು ಅಕ್ಷಮ್ಯವಾದ ಪಾಪ.

ಈ ನಮ್ಮ ಸಂಕಷ್ಟದ ಸಮಯದಲ್ಲಿ ಈಶ್ವರನು ನಮಗೆ ಅಪ್ರತಿಹತ ವಿಶ್ವಾಸವನ್ನೂ, ಧೈರ್ಯವನ್ನೂ ದಯಪಾಲಿಸಲೆಂದು ಕೈ ಜೋಡಿಸಿ ಬೇಡಿಕೊಳ್ಳುತ್ತೇನೆ ಮತ್ತು ನಮ್ಮ ಪೂರ್ವಜರ ಮಾತಿನಲ್ಲಿ—

ಅಸತೋ ಮಾಂಸದ್ಗಮಯ
ತಮಸೊ ಮಾಂಜ್ಯೋತಿರ್ಗಮಯ
ಮೃತ್ಯೋರ್ಮಾಮೃತಂ ಗಮಯ

ಠರಾವುಗಳು.

ಅಧ್ಯಕ್ಷಸ್ಥಾನದಿಂದ ದಿವಂಗತ ಧುರೀಣರ ಮೃತ್ಯುವಿಗಾಗಿ ಸಂತಾಪ ಸೂಚಕ ಠರಾವು ಸೂಚಿಸಲ್ಪಟ್ಟು, ಎಲ್ಲರೂ ನಿಂತು ಮಂಜೂರು ಹೊಂದಿತು.

ವಿಷಯ ನಿಯಾಮಕ ಕಮಿಟಿಯಲ್ಲಿ ಮಂಜೂರಾದಂತೆ ದಕ್ಷಿಣ ಅಫ್ರಿಕದ ಪರವಾದ ಠರಾವನ್ನು ಮಹಾತ್ಮಾ ಗಾಂಧಿಯವರು ಸೂಚಿಸಿ ಭಾಷಣ ಕೊಟ್ಟರು. ದಕ್ಷಿಣ ಅಫ್ರಿಕದಲ್ಲಿ ಸತ್ಯಾಗ್ರಹವನ್ನಾಚರಿಸಬಹುದೆಂದೂ ಅಗ ಹಿಂದೂಸ್ಥಾನದಿಂದ ಧನಸಹಾಯವು ಬೇಕಾದಿತೆಂದೂ ಲೋರ್ಡ ರೀಡಿಂಗರು ವ್ಯಾಸರಾಯಸ್ಥಾನದಿಂದ ಕೊಟ್ಟ ಉತ್ತರವು ಸಮಾಧಾನಕರವಲ್ಲವೆಂದೂ, ಜನರಲ್ ಸ್ಮಟ್ಸರು ಈಗಿನ ವರ್ತನದಿಂದ ತಮ್ಮ ಪ್ರತಿಜ್ಞಾ ಬದ್ಧ ಮಾತನ್ನು ಮುರಿಯುವರೆಂದೂ ಇತ್ಯಾದಿಯಾಗಿ ಮಹಾತ್ಮರು ಹೇಳಿದರು. ಮೌಲಾನಾ ಮಹಮ್ಮದಾಲಿಯವರೂ ಮಿ। ಕರಂದಿಕರರೂ ಠರಾವನ್ನು ಅನುಮೋದಿಸಿದರು ಠರಾವು ಮಂಜೂರಾಯಿತು. ದಕ್ಷಿಣ ಅಫ್ರಿಕದ ಪ್ರತಿನಿಧಿ ಮಂಡಳದ ಮುಂದಾಳುತನದಲ್ಲಿ ಬಂದ ಡಾ। ಅಬ್ದುಲ್ ರಹಿಮಾನರು ಈ ಠರಾವಿಗಾಗಿ ಉಪಕಾರವನ್ನು ಹೇಳುವುದಕ್ಕೆ ಭಾಷಣಕೊಟ್ಟರು. ಕಾಂಗ್ರೆಸ್ಸು ಮರುದಿನ ಮಧ್ಯಾಹ್ನಕ್ಕೆ ಮುಂದರಿಸಲ್ಪಟ್ಟಿತು.

ವಿಷಯ ನಿಯಾಮಕ ಕಮಿಟಿ.

ತಾ. ೨೬ರಲ್ಲು ಕಾಂಗ್ರೆಸು ಅಧಿವೇಶನದ ಪ್ರಥಮ ದಿನದ ಮಿಲನವು ಮುಗಿದ ನಂತರ ವಿಷಯನಿಯಾಮಕ ಕಮಿಟಿಯು ೬-೩೦ಕ್ಕೆ ಕೂಡಿತು. ಮಹಾತ್ಮಾ ಗಾಂಧಿಯವರೂ ಹಾಜರಿದ್ದರು. ಹಿಂದಿನ ದಿನ ಚರ್ಚಿಸಿ ಪಂಡಿತ ನೆಹರು ಮತ್ತು ಲಾಲಾಜಿಯವರ ಚರ್ಚೆಗೆ ಬಾಕಿ ಇಟ್ಟ ಸ್ವರಾಜ್ಯ ಪಕ್ಷೀಯರ ಠರಾವು ಲಾಲಾಜಿಯವರ ಸೂಚನೆಯಂತೆ ಕೆಲವು ಬದಲಾವಣೆಗಳೊಡನೆ ಮುಂದೆ ತರಲ್ಪಟ್ಟಿತು. ಪರದೇಶ ಪ್ರಚಾರವು ಆ ಠರಾವಿನಲ್ಲಿ ಕೂಡಿಸಲ್ಪಟ್ಟಿದ್ದಿತು. ಸ್ವರಾಜ್ಯ ಪಕ್ಷವು ಸರಕಾರದ ಉತ್ತರವನ್ನು ಹೊಂದದಿದ್ದರೆ ಕೌನ್ಸಿಲುಗಳಿಂದ ಫೆಬ್ರುವರಿ ಆಖೈರಿಗೆ ಬರಬೇಕೆಂದಿದ್ದುದು, ಬಜೆಟು ಕೆಲಸದ ವರೆಗೆ ಕೌನ್ಸಿಲುಗಳಲ್ಲಿದ್ದು, ಅದನ್ನು ನಿರಾಕರಿಸಿ ಹೊರಗೆ ಬರಬೇಕೆಂದು ಬದಲಾವಣೆ ಮಾಡಲ್ಪಟ್ಟಿತು. ಡಾ| ಪಟ್ಟಾಭಿ ಸೀತಾರಾಮಯ್ಯನವರು ಇಡೀ ಠರಾವನ್ನು ನಿರೋಧಿಸಿದರು. ಕೆಲವರು ಸ್ವರಾಜ್ಯ ಪಕ್ಷದ ಅಸ್ತಿತ್ವವನ್ನು ಒಪ್ಪಿಕೊಳ್ಳಬಾರದಾಗಿ ಸೂಚಿಸಿದರು. ಅದಕ್ಕೆ ತಾನು ಬಗ್ಗುವುದಿಲ್ಲ, ಸ್ವರಾಜ್ಯ ಪಕ್ಷದ ಧ್ವಜವು ಆ ಪಕ್ಷದಲ್ಲಿ ಪ್ರತ್ಯೇಕವಾಗಿ ಹಾರುವುದೆಂದ ಪಂಡಿತಜಿಯವರು ಮರುತ್ತರವನ್ನಿತ್ತರು. ಇಂತಹ ಹಲವು ಉಪಸೂಚನೆಗಳ ನಂತರ ಮೂಲ ಸೂಚನೆಯು ಎರಡು ಸಾಮಾನ್ಯ ಉಪಸೂಚನೆಗಳೊಡನೆ ಮಂಜೂರಾತಿಯನ್ನು ಹೊಂದಿತು. ಅಪರಿವರ್ತನವಾದಿಗಳು ಮತಕೊಡಲಿಲ್ಲ.

ಮಿ| ಶ್ರೀಹರಿಯವರು ಸ್ವರಾಜ್ಯ ಪಕ್ಷೀಯರು ಹುದ್ದೆಗಳನ್ನು ಸ್ವೀಕರಿಸಬಾರದಾಗಿ ಠರಾವನ್ನು ತಂದರು. ಪಂಡಿತಜಿಯವರು ತಾವು ಸ್ಕೀನ ಕಮಿಟಿಯ ಸದಸ್ಯತನವನ್ನೂ, ಪಟೇಲರು ಅಧ್ಯಕ್ಷತನವನ್ನೂ ಸ್ವೀಕರಿಸಿದುದನ್ನು ಸಮರ್ಥಿಸಿದರು. ಪಂಡಿತಜೀಯವರಿಗೆ ಕೆಲವರೂ, ಡಾ| ಮುಂಜೆಯವರೂ ಕಠಿಣವಾದ ಅಡ್ಡ ಸವಾಲು ಹಾಕಿದರು. ಜಯಕರರು ಪಂಡಿತಜಿಯವರು ಒಂದೇಮಾತಿನಲ್ಲಿ ಪ್ರಕಟಪಡಿಸಿದ ವಿರೋಧ ಭಾವಗಳನ್ನು ತೋರಿಸಿದರು. ಶ್ರೀಹರಿಯವರ ಠರಾವು ಬಹುಮತವಿಲ್ಲದೆ ಬಿದ್ದುಹೋಯಿತು.

ಶ್ರೀಯುತ ಬಿ. ಸಾಂಬಮೂರ್ತಿಯವರು, ಸ್ವರಾಜ್ಯ ಪಕ್ಷೀಯರ ಠರಾವಿನಲ್ಲಿ ದೇಶವು ಈಗ ಸವಿನಯ ಕಾಯಿದೆ ಭಂಗಕ್ಕೆ ತಯಾರಿಲ್ಲವೆಂದು ಇರುವುದನ್ನು ತೆಗೆದುಹಾಕಬೇಕಾಗಿ ಠರಾವು ತಂದಿದ್ದರು. ಘಂಟೆ ರಾತ್ರಿ ೧೧ ಆಗಿ ಹೋಗಿತ್ತು. ಅನೇಕರು ಬಿಟ್ಟುಹೋಗಿದ್ದರು. ಉಳಿದವರಿಗೆ ಠರಾವಿನ ವಿರೋಧವಿದ್ದವರ ಕೈಯೆತ್ತಲು ಅಧ್ಯಕ್ಷರು ಹೇಳಿದರು. ಮಹಾತ್ಮಾಜಿಯವರು ಮೊದಲಾಗಿ ಕೈಯೆತ್ತಿದರು. ಅದನ್ನು ನೋಡಿ ಎಲ್ಲರೂ ನಕ್ಕರು. ಅವರೊಡನೆ ಮಹಾತ್ಮಾಜೀಯವರು ನಕ್ಕರು, ಸೂಚನೆಯು ಬಿದ್ದುಹೋಯಿತು.

ವಿಷಯ ನಿಯಾಮಕ ಕಮಿಟಿಯು ಮರುದಿನಕ್ಕೆ ಮುಂದರಿಸಲ್ಪಟ್ಟಿತು.

ಕಾಂಗ್ರೆಸ್ಸು ಅಧಿವೇಶನ.

ದ್ವಿತೀಯ ದಿನದ ಮಿಲನ.

ದಶಂಬರ ತಾ. ೨೭ಕ್ಕೆ ಮಧ್ಯಾಹ್ನ ಘಂಟೆ ೧-೩೦ಕ್ಕೆ ಕಾಂಗ್ರೆಸು ಪುನಃ ಕೂಡಿತು. ಈ ದಿನ ಪಂಡಿತ ಮಾಲವೀಯರು ಹಾಜರಿದ್ದರು.

ಬಂಗಾಳದ ಅನೇಕ ದೇಶಸೇವಕರನ್ನು ವಿಚಾರಣೆಯಿಲ್ಲದೆ ಜೈಲಿಗೆ ಒಯ್ದು ಸರಕಾರವು ೧೮೧೮ರ ರೆಗ್ಯುಲೇಶನ IIIರ ಬಂಗಾಳ ಒರ್ಡಿನೆನ್ಸ್ ಎಕ್ಟಿನ ದುರುಪಯೋಗ ಮಾಡುವುದನ್ನೂ, ಜೈಲಿನಲ್ಲಿ ಇವರಿಗೆ ಕಠಿಣವಾಗಿ ಪೀಡಿಸುವುದನ್ನೂ ಈ ಕಾಂಗ್ರೆಸು ಖಂಡಿಸುತ್ತದೆ.

ಈ ಅರ್ಥದ ಠರಾವನ್ನು ಬಂಗಾಳ ಪ್ರಾಂತಿಕ ಸ್ವರಾಜ್ಯ ಪಕ್ಷದ ಅಧ್ಯಕ್ಷರಾಗಿರುವ ಸೇನಗುಪ್ತರು ಸೂಚಿಸಿ ಭಾಷಣ ಮಾಡಿದರು. ಜಯಕರರು, ಶ್ಯಾಮಸುಂದರ ಚಕ್ರವರ್ತಿಯವರು, ಡಾ| ಸತ್ಯಪಾಲರು ಮತ್ತು ಪುರುಷೋತ್ತಮರೇಯವರು ಅನುಮೋದಿಸಿದರು.

ಠರಾವು ಸರ್ವಾನುಮತದಿಂದ ಮಂಜೂರಾಯಿತು. ಗುರುದ್ವಾರ ಕೈದಿಗಳನ್ನು ಬಿಡುಗಡೆ ಮಾಡದುದಕ್ಕೆ ಈ ಕಾಂಗ್ರೆಸು ವಿಷಾದಿಸುವುದಲ್ಲದೆ, ಅವರ ಬಿಡುಗಡೆಯಾಗದೆ ಸರಿಯಾದ ಗುರುದ್ವಾರದ ತೀರ್ಮಾನವಾಗದೆಂದು ಅಭಿಪ್ರಾಯ ಪಡುತ್ತಿದೆ.

ಲಾಲಾಜಿಯವರು ಚಿಕ್ಕ ಭಾಷಣದಿಂದ ಈ ಠರಾವನ್ನು ಮುಂದೆ ತಂದರು, ಶ್ರೀನಿವಾಸ ಅಯ್ಯಂಗಾರರು ಸರಕಾರದ ಹೇಯ ವರ್ತನವನ್ನು ಖಂಡಿಸಿದರು. ಮೌಲಾನಾ ಕೌಕತಲ್ಲಿ, ಪಂಡಿತನೇಕಿ ರಾಮ್, ಗಾಜಿ ಅಬ್ದುರ್ ರಹಿಮಾನ ಮತ್ತು ಚರೂ ಚರೂ ಅನುಮೋದಿಸಿದರು. ಸರ್ದಾರ ಮಂಗಲಸಿಂಗರು ಅಕಾಲಿಗಳ ಪರವಾಗಿ ಕಾಂಗ್ರೆಸಿಗೆ ವಂದನೆಗಳನ್ನರ್ಪಿಸಿ ಸಿಖ್ಖರು ಇದಕ್ಕಿಂತಲೂ ಮಿಕ್ಕಿದ ಕಷ್ಟಗಳನ್ನು ಆತ್ಮಾಭಿಮಾನಕ್ಕಾಗಿ ಸಹಿಸಲು ಸಿದ್ಧರಿರುವರೆಂದು ಹೇಳಿದರು.

ಠರಾವು ಮಂಜೂರಾಯಿತು.

ಬರ್ಮಾದಲ್ಲಿ ಒಂದು ಹೊಸ ಮಸೂದೆಯು ತರಲ್ಪಟ್ಟಿದೆ. ಅದರ ಪ್ರಕಾರ ಬರ್ಮಿಯರಲ್ಲದೆ ಸರಕಾರದ ಮೇಲೆ ಅಪರಾಧ ಮಾಡಿದವರನ್ನು ಬರ್ಮಾ ದೇಶದಿಂದ ಹೊರತಳ್ಳುವರು. ಬರ್ಮಾದೇಶದಲ್ಲಿ ಹಿಂದೀಯರು ಅನೇಕರ ವ್ಯಾಪಾರ ವಹಿವಾಟಗಳಲ್ಲಿ ನೆಲಸಿರುವರು. ಈ ಮಸೂದೆಯಿಂದ ಹಿಂದೀಯರಿಗೆ ಬಹಳ ಅಪಾಯವಾಗಿ, ಹಿಂದೀಯರಿಗೆ ಯಾವ ಸ್ವಾತಂತ್ರ್ಯವೂ ಇರದಂತಾಗುತ್ತದೆ. ಈ ಮಸೂದೆಯನ್ನು ಖಂಡಿಸಿ, ಇದಕ್ಕೆ ವ್ಯಾಸರಾಯರವರು ಒಪ್ಪಿಗೆ ಕೊಡಕೂಡದಾಗಿ ಟಿ. ಪ್ರಕಾಶಯವರು ಒಂದು ಠರಾವನ್ನು ತಂದರು. ಈ ಮಸೂದೆಯು ಮಂಜೂರಾದರೆ ಹಿಂದೂಸ್ಥಾನದಲ್ಲಿಯೇ ಇನ್ನೊಂದು ಕೀನ್ಯಾವಸಾಹತವನ್ನು ಕಟ್ಟಿದಂತಾಗುವುದೆಂದು ಹೇಳಿದರು. ಹಿಂದೀಯನೊಬ್ಬನು ಊರಿನಿಂದ ಪುನಃ ಬರ್ಮಾ ದೇಶಕ್ಕೆ ಹೋದಾಗ ಪ್ರತಿ ಸರ್ತಿಯೂ ತಲೆಗೆ ೫ ರೂಪಾಯಿಯಂತೆ ಕರಕೊಡಬೇಕೆಂಬ ಇನ್ನೊಂದು ಮಸೂದೆಯಿದೆ. ಇದನ್ನು ಮೇಲಿನ ಠರಾವಿನಲ್ಲಿ ಖಂಡಿಸಿತ್ತು. ಮಿ| ಹಲ್ದಾರರೂ, ಮಿ| ಬೆನರ್ಜಿಯವರೂ ಅನುಮೋದಿಸಿದರು. ಬರ್ಮಾ ಮತ್ತು ಹಿಂದೀಯರೊಳಗೆ ಭೇದವನ್ನು ಕಲ್ಪಿಸಿ ಹೇಗೆ ಇಂಗ್ಲೀಷರು ಲಾಭಮಾಡಿಕೊಳ್ಳುತ್ತಾರೆಂಬುದನ್ನು ಸ್ಪಷ್ಟವಾಗಿ ತೋರಿಸಿದರು. ಬರ್ಮಾ ದೇಶದ ಪ್ರತಿನಿಧಿಗಳಾದ ಅಬ್ದುಲ್ ಸತ್ತರ್‌ವಾಲಿ ಮಿ. ಮಂದಂಜೆಶ್‌ರೂ ಅನುಮೋದಿಸಿದರು.

ಪಾಟ್ನಾದಲ್ಲಿ ಬದಲುಮಾಡಲ್ಪಟ್ಟ ಕಾಂಗ್ರೆಸು ಸದಸ್ಯತನದ ಚಂದಾ. (ವರ್ಷಕ್ಕೆ ನಾಲ್ಕಾಣೆಯಾಗಲಿ ೨೦೦೦ ವಾರು ನೂಲು) ಮತ್ತು ನೂಲುವ ಸಂಘದ ವಿಷಯವಾಗಿ ಡಾ| ಸತ್ಯಪಾಲರು ಮಹಾತ್ಮಾಜಿಯವರ ಬದಲಿಗೆ ಸೂಚಿಸಿದರು. ಸಿ ವಿ. ವೆಂಕಟ್ರಮಣಯ್ಯಂಗಾರರು ಗಿರಣಿ ವ್ಯಾಲಿಕರಾದರೂ ಠರಾವನ್ನು ಅನುಮೋದಿಸಿದರು. ಹಜ್ರತ್ ಮೋಹಾನಿಯವರು ನಿರೋಧಿಸಿದರು. ಹಮೀದ ಅಲಿಯವರು ಠರಾವು ಬರೇ ಪಾಸರ್ಾಗಿದೆ ಎಂದರು. ಮೌಲಾನಾ ಮಹಮ್ಮದಲ್ಲಿಯವರು ಮೂಲ ಠರಾವನ್ನು ಪುಷ್ಟೀಕರಿಸಿದರು. ಠರಾವು ಮಂಜೂರಾಯಿತು.

ಅಮೇರಿಕನ್‌ರೊಬ್ಬರ ಭಾಷಣ.

ಶ್ರೀಮತಿ ಸರೋಜಿನಿ ದೇವಿಯವರು ಅಮೇರಿಕದ ಪ್ರೋ. ಹೋಲ್ಮ್ಸ್ ಎಂಬವರ ಗುರುತು ಮಾಡಿದರು. ಹೋಲ್ಮ್ಸರು ಸಣ್ಣ ಭಾಷಣ ಕೊಟ್ಟರು. ಅದರ ಸಾರಾಂಶ

ನಾನು ಕಾನೂನು ಪ್ರಕಾರ ಅಮೇರಿಕದ ಪ್ರತಿನಿಧಿಯಾಗಿಲ್ಲವಾದರೂ, ಕ್ವೇಕರ್ (Quaker) ಸಂಘದ ಸದಸ್ಯನೂ, ಕೂಲಿ ಸಂಘಕ್ಕೆ ಸೇರಿದವನೂ ಆಗಿರುವೆನು. ಆ ಸದಸ್ಯತನಗಳ ಹೆಸರಲ್ಲಿ ನಾನು ತಮ್ಮ ಸ್ವಾತಂತ್ರ್ಯದ ಚಳವಳದಲ್ಲಿ ಸಹಾನುಭೂತಿಯನ್ನೂ, ತಮ್ಮ ಮಹಾ ಧುರೀಣನಲ್ಲಿ ಪ್ರೇಮ ಮತ್ತು ಭಕ್ತಿಯನ್ನೂ ಕೊಡುವೆನು. ನಾನು ಗಾಂಧಿಯನ್ನು ಇಡೀ ಭೂಲೋಕದವನಾಗಿ ಹೇಳಿಕೊಳ್ಳುವೆನು. ನಾವು ಪಾಶ್ಚಾತ್ಯ ನಾಗರಿಕತೆಯಲ್ಲಿ ತಪ್ಪಿ ಬಿದ್ದಿರುವೆವು. ಧನದಭಿಲಾಷೆಯು ಧನಸಂಗ್ರಹವನ್ನೂ ಮಜೂರಿಕಾರರ ತೊಂದರೆಗಳನ್ನೂ ಉಂಟುಮಾಡಿದೆ. ಅಧಿಕಾರಾಭಿಲಾಷೆಯು ಯುದ್ಧಗಳ ಮೇಲೆ ಯುದ್ಧಗಳನ್ನು ತಂದಿದೆ. ನಾವು ಈಗ ಸಂತೋಷದಿಂದ ನಿಮ್ಮ ಕಡೆಗೆ ನೋಡುವೆವು, ನಾವು ನಮ್ಮ ವೈಜ್ಞಾನಿಕ ಪ್ರಯೋಜನಗಳನ್ನು ಇಟ್ಟುಕೊಂಡು ತಮ್ಮ ಮಹಾತ್ಮನಿಂದ ವ್ಯಕ್ತವಾಗುವ ಸೌಹಾರ್ದಭಾವವನ್ನು ಅನುಸರಿಸಲು ಆಶಿಸುತ್ತೇವೆ. ತಮ್ಮ ಸಮಸ್ಯೆಗಳ ನಾನು ಏನನ್ನೂ ಹೇಳಲಾರೆನು. ಆದರೆ ಲೋಕದ ಎಲ್ಲಾ ಜನಾಂಗಗಳ ಸ್ವಾತಂತ್ರ್ಯದ ಚಳವಳವನ್ನೇ ಸಂಯುಕ್ತ ಅಮೇರಿಕವು ಲಕ್ಷಿಕ್ಷಿಸುವುದೆಂದು ನಾನು ನಿಮಗೆ ಹೇಳುವೆನು.

ಡಾ| ಸತ್ಯಪಾಲರು ಭಾಷಣವನ್ನು ಉರ್ದು ಭಾಷೆಯಲ್ಲಿ ಪರಿವರ್ತಿಸಿ ಹೇಳಿದರು. ಪ್ರೊ. ಹೋಲ್ಮ್ಸರು ಇಂಗ್ಲಿಷ್ ವಸ್ತ್ರಗಳನ್ನು ಧರಿಸಿ ಗಾಂಧಿ ಟೊಪ್ಪಿಯನ್ನಿಟ್ಟುಕೊಂಡಿದ್ದರು.

ಘಂಟೆ 6-45ಕ್ಕೆ ಪಂಡಿತ ನೆಹರುರವರು ಸ್ವರಾಜ್ಯಪಕ್ಷದ ವಿಷಯನಿಯಾಮಕ ಕಮಿಟಿಯಲ್ಲಿ ಈ ಮೊದಲು ಮಂಜೂರಾದ ನಿರ್ಣಯವನ್ನು ಮುಂದೆ ತಂದರು.

ಪಂಡಿತ ಮಾಲವೀಯರು ಇಡೀ ಮೂಲ ಠರಾವನ್ನು ಸಂಪೂರ್ಣವಾಗಿ ಬದಲಾಯಿಸುವ ಉಪಸೂಚನೆಯನ್ನು ತಂದರು.

ಸಮಯ ಬಹಳವಾದುದರಿಂದ ಕಾಂಗ್ರೆಸು ಮರುದಿನಕ್ಕೆ ಮುಂದರಿಸಲ್ಪಟ್ಟಿತು. ಈ ಠರಾವಿನ ಭಾಷಣಗಳು ಮರುದಿನ ನಡೆದುವು.

ವಿಷಯನಿಯಾಮಕ ಕಮಿಟಿ.

ಕಾಂಗ್ರೆಸು ಮಿಲನವು ಆಖೈರಿಯಾದ ಅರ್ಧ ಘಂಟೆಯ ನಂತರ ವಿಷಯನಿಯಾಮಕ ಕಮಿಟಿಯು ಕೂಡಿತು.

ಬಾಬು ಪುರುಷೋತ್ತಮದಾಸ ಟಾಂಡನರು ಕೆಳಗಿನ ಠರಾವನ್ನು ತಂದರು.

ಮುಂದಿನ ಎಲ್ಲಾ ಸಭೆಗಳಲ್ಲಿಯೂ ಕಾಂಗ್ರೆಸ್ಸೂ, ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯೂ, ವರ್ಕಿಂಗ್ ಕಮಿಟಿಯೂ ಹಿಂದುಸ್ಥಾನಿ ಅಂದರೆ ಹಿಂದಿ ಅಥವಾ ಉರ್ದು ಭಾಷೆಯನ್ನೇ ಉಪಯೋಗಿಸಬೇಕು.

ಮದ್ರಾಸ, ಬಂಗಾಳ, ಆಂಧ್ರ ಮತ್ತು ಕೇರಳದ ಪ್ರತಿನಿಧಿಗಳು ಇದನ್ನು ಕಠಿಣವಾಗಿ ನಿರೋಧಿಸಿದರು. ಹಿಂದುಸ್ಥಾನಿಯನ್ನು ಸಾಧ್ಯವಿದ್ದಷ್ಟು ಉಪಯೋಗಿಸಿ, ಬಾಕಿಯವರು ಅದನ್ನು ಕಲಿತು ಇಂಗ್ಲಿಷನ್ನು ಅನಾವಶ್ಯಕವಾಗಿ ಮಾಡಬೇಕೆಂಬ ಉಪಸೂಚನೆಯನ್ನು ಲಾಲಾಜಿಯವರು ತಂದರು. ಇದು ಬಿದ್ದುಹೋಯಿತು. ಹಿಂದುಸ್ಥಾನಿಯನ್ನು ತಿಳಿಯದವರು ತಮ್ಮ ಪ್ರಾಂತಿಕ ಭಾಷೆಯನ್ನಾಗಲಿ ಇಂಗ್ಲೀಷ ಭಾಷೆಯನ್ನು ಆಡಬಹುದೆಂಬ ಸೇನಗುಪ್ತರ ಉಪಸೂಚನೆಯು ಮಂಜೂರಾತಿಯನ್ನು ಹೊಂದಿತು.

ಪರದೇಶ ಖಾತೆಯನ್ನು ಏರ್ಪಡಿಸುವ ಠರಾವನ್ನು ಮರುದಿನ ಅಧಿವೇಶನದಲ್ಲಿ ಅಧ್ಯಕ್ಷರು ಸೂಚಿಸುವಂತಾಗಿ ತಿಳಿಸಲಾಯಿತು.

ಮುಂದಿನ ವರ್ಷದ ಅಧಿವೇಶನಕ್ಕೆ ಅಸ್ಸಾಮಿನ ಆಮಂತ್ರಣವನ್ನು ಸ್ವೀಕರಿಸುವುದಾಗಿ ನಿರ್ಣಯಿಸಲಾಯಿತು.

ಕಾಂಗ್ರೆಸ್ಸು ಅಧಿವೇಶನ.

ಮೂರನೇ ದಿನದ ಮಿಲನ.

ಕಾಂಗ್ರೆಸು ಅಧಿವೇಶನದ ಕಡೆಯ ಸಮ್ಮಿಲನವು ದಶಂಬರ ತಾ. ೨೮ಕ್ಕೆ ಘಂಟೆ ೧೨-೩೦ಕ್ಕೆ ಕೂಡಿತು. ಪಂಡಿತ ಮೋತಿಲಾಲರು ಕಳೆದ ದಿನ ಮುಂದೆ ತಂದ ಠರಾವಿನ ಚರ್ಚೆಯಿಂದ ಆರಂಭವಾಯಿತು. ಜನರು ಚಪ್ಪರದಲ್ಲಿ ತುಂಬಿ ಹೋಗಿದ್ದರು.

ಮಿ| ಸಯ್ಯದ್ ಬಕ್ಷ ಎಂಬವರು, ದೇಶವು ಸವಿನಯ ಕಾಯಿದೆ ಭಂಗಕ್ಕೆ ತಯಾರಿದೆ ಎಂದು ಉಪಸೂಚನೆ ತಂದು ಧುರೀಣರೇ ತಯಾರಿಲ್ಲವೆಂದು ದೂರಿದರು. ಮಿ| ಸಾಂಬಮೂರ್ತಿಯವರು ಅದೇ ತರದ ಇನ್ನೊಂದು ಉಪಸೂಚನೆ ತಂದರು. ಶ್ರೀ ಕೃಷ್ಣದಾಸಲಾಲರು, ಕೌನ್ಸಿಲಿನಿಂದ ಸ್ವರಾಜ್ಯ ಪಕ್ಷೀಯರು ಹೊರಗೆ ಬರುವಾಗ, ಎಸೆಂಬ್ಲಿ ಅಧ್ಯಕ್ಷರೂ, ಪಂಡಿತ ನೆಹರರಂತಹ ಕಮಿಟಿ ಮೆಂಬರರೂ ರಾಜಿ ಕೊಡಬೇಕಾಗಿ ಉಪಸೂಚನೆ ಪಡೆದರು. ಮಾಲವೀಯರು ಇಡೀ ಠರಾವನ್ನು ನಿರೋಧಿಸಿ ಸಹಕಾರಿತೆಯ ನಮೂನೆಯ ಸೂಚನೆಯನ್ನು ಕೊಟ್ಟರು. ಜಯಕರರು ಪಂಡಿತ ಮಾಲವೀಯರ ಉಪಸೂಚನೆಯನ್ನು ಅನುಮೋದಿಸಿ, ತಾನು ಕೇಳ್ಕರರೂ ಕೌನ್ಸಿಲ್ ಸದಸ್ಯತನಕ್ಕೆ ರಾಜಿ ಕೊಟ್ಟು ದೇಶದಲ್ಲಿ ಪ್ರಚಾರ ಕೆಲಸ ಮಾಡುವರಾಗಿ ತಿಳಿಸಿದರು. ಮಿ| ಸೇನಗುಪ್ತರು ಮೂಲ ಠರಾವು ಅಂದರೆ ಮೋತಿಲಾಲರನ್ನು ಅನುಮೋದಿಸಿದರು. ಅಭ್ಯಂಕರರು, ಜಯಕರರ ಮತ್ತು ಪಂಡಿತ ಮಾಲವೀಯರು ಟಿಳಕರ ಹತ್ತಿರವಿಲ್ಲದಿದ್ದರೂ ಅವರ ಹೆಸರಲ್ಲಿ ಕತ್ತಪ್ರಸಾರ ಮಾಡುವುದನ್ನು ಖಂಡಿಸಿದರು. ರಿಸ್ಪೊನ್ಸಿವ್ ಕೊ-ಒಪರೇಶನ್ ತತ್ವದ ವಿಷಯ ತನ್ನ ಮಾನ್ಯತೆಯಿದೆ, ಆದರೆ ಅದರ ಮೂಲಕ ಮಂತ್ರಿ ಪದವಿ ಸ್ವೀಕಾರದ ಸಮರ್ಥನೆಯು ಅದಕ್ಕೆ ಅವಮಾನ ಮಾಡುತ್ತಿದೆ ಎಂದರು. ಮಿ| ಪಲ್ಲಿವಾಲರು ಪಂಡಿತ ಮಾಲವೀಯರ ಉಪಸೂಚನೆಯನ್ನು ಅನುಮೋದಿಸಿದರು. ಮಿ| ಶ್ಯಾಮಸುಂದರ ಚಕ್ರವರ್ತಿಯವರು ಈ ಠರಾವಿನಿಂದ ಅಭಿವೃದ್ಧಿಯ ರಥವು ಹಿಂದಕ್ಕೆಳೆಯಲ್ಪಡುವುದೆಂದೂ ಅಸಹಕಾರ ಮಂತ್ರ ಒಂದರಿಂದ ಮಾತ್ರವೇ ಸ್ವರಾಜ್ಯ ಬರುವುದೆಂದೂ ಹೇಳಿ ಮೂಲ ಠರಾವನ್ನು ನಿರೋಧಿಸಿದರು. ಮಿ| ಚಮನಲಾಲರು ರಿಸ್ಪೊನ್ಸಿವ್ ಕೊ-ಒಪರೇಶನೆಂದರೆ ನೌಕರಶಾಹಿಯು ಒದೆಗಳನ್ನು ಸಹಾಸುವುದೆಂದರ್ಥವಾಗುತ್ತದೆಂದು ಮೂಲ ಠರಾವನ್ನು ಪುಷ್ಟೀಕರಿಸಿದರು. ಡೋಕ್ಟರ್ ಮುಂಜೆಯವರು ರಿಸ್ಪೊನ್ಸಿವ್ ಕೊ-ಒಪರೇಶನನ್ನು ಸಮರ್ಥಿಸಿದರು.

೭ ಘಂಟೆಗೆ ಮೋತಿಲಾಲರ ಪ್ರತ್ಯುತ್ತರವಾಗಿ ಓಟು ತೆಗೆಯಲ್ಪಟ್ಟು ಪಂಡಿತ ನೆಹರುರವರ ಮೂಲ ಠರಾವು ಮಂಜೂರಾಯಿತು.

ಆ ಮೇಲೆ ಭಾಷೆಯ ವಿಷಯಕವಾದ ಠರಾವು ವಿಷಯ ನಿಯಾಮಕ ಕಮಿಟಿಯಲ್ಲಿ ನಿರ್ಣಯಿಸಲ್ಪಟ್ಟಂತೆ ಮಂಜೂರಾಯಿತು. ಪರದೇಶ ಇಲಾಖೆಯೊಂದನ್ನು ತೆರೆಯುವ ಠರಾವೂ ಮಂಜೂರಾಯಿತು.

ಕಳೆದ ವರ್ಷ ಕಾರ್ಯದರ್ಶಿಗಳಾಗಿದ್ದ ಜವಾಹರಲಾಲ ನೆಹರು, ಭರೂಚಾ ಮತ್ತು ಶುಯಬ್ ಖುರೇಶಿಯವರ ಉಪಕಾರ ಸ್ಮರಣೆ ಮಾಡಿ ಅವರ ಸ್ಥಾನದಲ್ಲೂ, ಅನ್ಸಾರಿ, ರಂಗಸ್ವಾಮಿ ಐಯ್ಯಂಗಾರ, ಪಂಡಿತ ಶಾಂತನಮ್ ಇವರು ನೇಮಕವಾದರು. ಹಳೇ ಖಜಾನ್ಜಿಯವರೂ ಲೆಖ್ಖ ಪರಿಶೋಧಕರೂ ಪುನಃ ನೇಮಿಸಲ್ಪಟ್ಟರು.

ಡೋಕ್ಟರ್ ಮೊರಾರಿಲಾಲರು ಪ್ರತಿನಿಧಿಗಳಿಗೂ ಇತರರಿಗೂ ವಂದನೆಗಳನ್ನರ್ಪಿಸಿದರು. ಮಿ| ಗಣೇಶ ಶಂಕರ ವಿದ್ಯಾರ್ಥಿಯವರು ಅನುಮೋದಿಸಿದರು. ಎಸ್. ಶ್ರೀನಿವಾಸ ಐಯಂಗಾರರ ಕಾನಪೂರ ನಿವಾಸಿಗಳಿಗೆ ವಂದನೆಯನ್ನರ್ಪಿಸಿದರು.

ಅಧ್ಯಕ್ಷರ ಆಖೈರಿ ಭಾಷಣ.

ಆಖೈರಿ ಭಾಷಣದಲ್ಲಿ ಶ್ರೀಮತಿ ಸರೋಜಿನಿಯವರು ಹೀಗೆ ಹೇಳಿದರು:—

ಈ ಮೂರು ದಿನಗಳಲ್ಲಿ ನೀವು ಸ್ವಾತಂತ್ರ್ಯ ಮತ್ತು ಮೃತ್ಯುಗಳಲ್ಲೊಂದನ್ನು ಮಾತ್ರ ಚುನಾಯಿಸುವರಾಗಿ ಪ್ರತಿಜ್ಞೆಯನ್ನು ಕೈಕೊಂಡಿರುವಿರಿ ನೀವು ಪ್ರತಿಜ್ಞೆಯನ್ನು ಮುರಿದರೆ ಪಾಪವನ್ನು ಸಂಗ್ರಹಿಸಿರುವಿರಿ. ನಾನು ಧ್ವಜವಾಹಿ ಮಾತ್ರ ತಾವು ಹೆಂಗಸಿನ ಕೈಯಲ್ಲಿ ಕೊಟ್ಟ ಈ ಸ್ವಾತಂತ್ರ್ಯದ ಧ್ವಜವನ್ನು ನಾನು ನನ್ನ ಎಲ್ಲಾ ಬಲದಿಂದ ಇಟ್ಟುಕೊಳ್ಳುತ್ತೇನೆ. ಮತ್ತು ಬೀಳಗೊಡುವುದಿಲ್ಲ ತಮಗೆ ಖಂಡಿತವಾಗಿ ಹೇಳುತ್ತೇನೆ.

ಇಲ್ಲಿಗೆ ನಾಲ್ವತ್ತನೆ ಕಾಂಗ್ರೆಸ್ ಅಧಿವೇಶನವು ಮುಕ್ತಾಯವನ್ನು ಹೊಂದಿತು.

ವಿದೇಶ ವರ್ತಮಾನ.

—ಆಫ್ರಿಕೆಯೊಳಗಿನ ರೆಂಡ ಎಂಬಲ್ಲಿ ಚಿನ್ನದ ಗಣಿಗಳಿವೆ. ಅಲ್ಲಿ ಭಯಂಕರ ಅವಘಾತ ಒದಗಿ ೧೦ ಗಣಿಗಳಲ್ಲಿ ಕೆಲಸ ನಿಂತುಹೋಗಿದೆ.

—ಹೆಜ್ಜಾಸ್ ಪ್ರಾಂತ್ಯವೆಲ್ಲಾ ಐಬನ್ ಸೌದ್ ಸುಲ್ತಾನನಿಗೆ ವಶವಾಯಿತು. ಆ ಸೀಮೆಯಲ್ಲಿ ಎಲ್ಲಾ ನೆಮ್ಮದಿಯಾಗಿದೆ. ಜೆಡ್ಡಾ ನಗರವು ವ್ಯಾಪಾರಕ್ಕೂ ಸಂಚಾರಕ್ಕೂ ಅನುಕೂಲವಾಡಲ್ಪಟ್ಟಿದೆ ಎಂದು ಜೆಡ್ಡಾದಿಂದ ಮುಂಬಾಯಿಗೆ ಒಂದು ತಂತೀವರ್ತಮಾನ ಬಂದಿದೆ.

—ಮಿಸೆಸ್ ಬೆಸಾಂಟರವರು ಹಿಂದುಸ್ಥಾನದ ಆಳ್ವಿಕೆಗೆ ಕೆಲವು ಬದಲಾವಣೆಗಳನ್ನು ಕಾಣಿಸಿ ಒಂದು ಮಸೂದೆ ಬಿಲ್ ತಯಾರುಮಾಡಿ ಹಿಂದುಸ್ಥಾನದಲ್ಲೂ ಇಂಗ್ಲಾಂಡಿನಲ್ಲೂ ಅದರ ಲಕ್ಷಣಗಳನ್ನು ಕುರಿತು ಉಪನ್ಯಾಸಗಳನ್ನು ಮಾಡಿ, ಇಂಗ್ಲಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಚರ್ಚೆಗೆ ಇಡಿಸಿರುತ್ತಾರೆ.

—ಚೀನಾ ರಾಜ್ಯದಲ್ಲಿ ಫೆಂಗ್ ಯೂಸಿಯಾಂಗ್ ಎಂಬ ಮುಖಂಡನ ಸೈನಿಕರಿಗೂ ಲಿಚಿಂಗ್‌ಲಿನ್ ಎಂಬ ಮುಖಂಡನ ಸೈನ್ಯಗಳಿಗೂ ಕಠಿಣವಾದ ಯುದ್ಧಗಳು ನಡೆಯುತ್ತಿವೆ. ಕಳೆದ ಭಾನುವಾರ ಹಗಲೆಲ್ಲಾ ಯುದ್ಧವಾಯಿತೆಂದೂ, ಅನೇಕರು ಕೊಲೆಯಾಗಿ ಹಲವರು ಗಾಯಪಟ್ಟರೆಂದೂ, ಯಾವ ಪಕ್ಷದವರಿಗೂ ಜಯಪ್ರದವಾಗಲಿಲ್ಲವೆಂದೂ, ತಿಳಿದುಬಂದಿದೆ.

—ಇಂಗ್ಲಾಂಡಿನ ಬರ್ಕನ್‌ಹೆಡ್ ಎಂಬ ತೀರಪಟ್ಟಣದ ಕಾರ್ಖಾನೆಯಲ್ಲಿ ಒಂದು ಭಾರೀ ಯುದ್ಧದ ಹಡಗನ್ನು ಕಟ್ಟಿ ಸಿದ್ಧಮಾಡಿದರು. ಇದಕ್ಕೆ ಪ್ರಿನ್‌ಸೆಸ್ ಮೇರಿಯವರು ದಯಮಾಡಿ "ರೊಡ್ನೆ" ಎಂಬ ಹೆಸರನ್ನಿಟ್ಟರು. ಈ ಯುದ್ಧದ ಜಹಜಿನೊಳಗೆ ೧೬ ಅಂಗುಲವುಳ್ಳ ಒಂಭತ್ತು ಫಿರಂಗಿಗಳನ್ನು ಜೋಡಿಸಿರುವರು. ಈ ಹಡಗಿಗೆ ಒಟ್ಟು ಹತ್ತುಮರೆ ಕೋಟಿ ರೂಪಾಯಿ ಖರ್ಚಾಗಿರುವುದೆಂದೂ, ಇದು ಅತ್ಯಂತ ಭಾರಿಯಾದ ಜಹಜೆಂದೂ ತಿಳಿಸಲ್ಪಟ್ಟಿದೆ.

ಒಳದೇಶ ವರ್ತಮಾನ.

—ರಂಗೂನಿನ ೫ ಮೈಲು ದೂರದಲ್ಲಿರುವ ಒಂದು ಹಗ್ಗದ ಕಾರಖಾನೆಗೆ ಫಕ್ಕನೆ ಬೆಂಕಿ ಹಿಡಿದು ೨ ಲಕ್ಷ ರೂಪಾಯಿಗಳ ನಷ್ಟ!

—'ವಿಶ್ವಕರ್ನಾಟಕ' ಪತ್ರಿಕೆಯ ಸಂಪಾದಕರಾದ ಶ್ರೀ ಶರ್ಮರವರು ಮೈಸೂರ ವಿಶ್ವವಿದ್ಯಾಲಯ ಸಭೆಯ ಸದಸ್ಯರು. ಶ್ರೀಯುತರು ಬರೇ ಖಾದಿಯ ವೈರಣ್ಣು ಧರಿಸಿ ಸಭಾಸ್ಥಾನಕ್ಕೆ ಹೋಗುತ್ತಿರಲು ರಿಜಿಸ್ಟ್ರಾರವರು ಅವರಿಗೆ ಒಳಸೇರಲು ಬಿಡಲಿಲ್ಲ; ಶ್ರೀ ಶರ್ಮರು ಬರಕೊಂಡರು. ಆಗ ರಿಜಿಸ್ಟ್ರಾರರು ಸುಮ್ಮಗೆ ಅವರನ್ನು ಒಳಸೇರಗೊಟ್ಟರು.

—ಮದರಾಸ್ ಪಟ್ಟಣದಲ್ಲಿ ಮಹಮ್ಮದೀ ಮತದ ತಾಯಿ ಮಗಳೀರ್ವರನ್ನು ಪೋಲೀಸಿನವರು ಅಳೆದ ವಾರ ದಸ್ತಗಿರಿ ಮಾಡಿದ್ದಾರೆ. ಮೈಸೂರಿನವರಿಂದ ಅಬ್ದುಲ್ ಕರೀಂ ಎಂಬೊಬ್ಬನು ಒಂದು ಪಾರ್ಸೆಲನ್ನು ಮದರಾಸಿಗೆ ಮೇಲ್ಕಂಡ ಮಗಳ ವಿಳಾಸಕ್ಕೆ ಅಂಚೆಯ ಮೇಲೆ ಕಳುಹಿಸಿದನು. ಆ ಮಗಳು ತನ್ನ ತಾಯಿಯ ಕೂಡ ಪೋಸ್ಟು ಆಫೀಸಿಗೆ ಹೋಗಿ ಭಾಂಗಿಯನ್ನು ತೆಗೆದುಕೊಂಡಳು. ಪೋಲೀಸಿನವರು ಗುಮಾನಿಯ ಮೇಲೆ ಆ ಭಾಂಗಿಯನ್ನು ತೆಗೆದು ಒಡೆದು ನೋಡಿದಾಗ ಒಳಗೆ ಲೈಸೆನ್ಸ್ ಇಲ್ಲದ ಸುಮಾರು ೩೦೦ ರೂಪಾಯಿನ ಅಫೀಮು ಸಿಕ್ಕಿತು. ಕೂಡಲೇ ಅವರಿಬ್ಬರನ್ನು ದಸ್ತಗಿರಿ ಮಾಡಿರುತ್ತಾರೆ.

—ತಿರುವಾಂಕೂರು ಸಂಸ್ಥಾನಕ್ಕೆ ಸೇರಿದ ಕೊಟ್ಟಾಯಂ ಎಂಬ ಸ್ಥಳದಲ್ಲಿ ಪಾಪಿತರ ಒಂದು ಸಂಸ್ಥಾನದಲ್ಲಿ ತಂದೆಯಾದವನು ಒಂದು ಬಂದೂಕವನ್ನು ಇಟ್ಟುಕೊಂಡು ಪದೇ ಪದೇ ಹೊರಗೆ ಹೋಗಿ ಹಕ್ಕಿಪಕ್ಷಿ ಮೊಲಗಳೇ ಮೊದಲಾದವನ್ನು ಹೊಡೆದು ಕೊಲ್ಲುತ್ತಿದ್ದನು. ಅವನ ಮಗನು ತಂದೆಯನ್ನು ಕುರಿತು ಮೂಗಪ್ರಾಣಿಗಳನ್ನು ಕೊಲ್ಲಬಾರದೆಂದು ಅನೇಕಾವರ್ತಿ ಹೇಳಿದರೂ ತಂದೆಯು ಕೇಳದೆ ಹೋದನು. ಆ ಮಗನು ತಂದೆಯ ಬಳಿ ಇದ್ದ ಬಂದೂಕನ್ನು ತೆಗೆದು ಆತ್ಮಹತ್ಯಮಾಡಿಕೊಂಡನು. ಅವನ ಜೇಬಿನಲ್ಲಿ ಒಂದು ಕಾಗದ ಬರೆದಿಟ್ಟುಕೊಂಡಿದ್ದದ್ದು ಸಿಕ್ಕಿತು. ಅದರಲ್ಲಿ ಅವನು ತನ್ನ ತಂದೆಗೆ—ನೀನು ಈಗ ಪುತ್ರಶೋಕ ಹೇಗೆ ಅನುಭವಿಸುತ್ತೀಯೊ ನೀನು ಕೊಲ್ಲುವ ಮೂಗು ಪ್ರಾಣಿಗಳ ಮಾತಾಪಿತೃಗಳೂ ಹಾಗೇ ದುಃಖಪಡುತ್ತವೆ ಎಂಬುವುದು ನಿನ್ನ ಮನಸ್ಸಿಗೆ ಗೊತ್ತಾಗಲೆಂದು ನಾನು ಆತ್ಮಹತ್ಯ ಮಾಡಿಕೊಂಡಿರುತ್ತೇನೆ ಎಂದು ಬರೆದಿಟ್ಟಿದ್ದನು!

—ದಶಂಬರ ತಾ. ೨೮ರಲ್ಲಿ ಖಿಲಾಫತ್ ಪರಿಷತ್ತು ನಡೆಯಿತು. ಹೆಜ್ಜಾಜ್ ಪ್ರಶ್ನೆಯ ಕುರಿತು ಸ್ವಾಗತ ಕಮಿಟಿಯ ಅಧ್ಯಕ್ಷರಾದ ಹಜ್ರತ್ ಮೋಹಾನಿಯವರಿಗೂ ಅಧ್ಯಕ್ಷರಾದ ಮೌಲಾನಾ ಅಬ್ದುಲ್ ಕಲಮ್ ಆಜಾದರಿಗೂ ತೀವ್ರ ಭಿನ್ನಾಭಿಪ್ರಾಯ ಹುಟ್ಟಿ ಕೊನೆಗೆ ಮೋಹಾನಿಯವರ ಸ್ವಾಗತ ಭಾಷಣವನ್ನು ರದ್ದುಪಡಿಸಲಾಯಿತು.

ದಕ್ಷಿಣ ಕನ್ನಡ.

ಬರಿಮಾರು:—ಬಾಳ್ತಿಲ, ಶಂಬೂರು ಈ ಗ್ರಾಮಗಳ ಪ್ರಜೆಯ ಉಪಯೋಗಾರ್ಥದ ಬಗ್ಗೆ ಒಂದು ಬ್ರಾಂಚು ಪೋಸ್ಟು ಆಫೀಸನ್ನು ಬರಿಮಾರ ಇಗರ್ಜಿ ಬಳಿ ಬರುವ ತಾ. ೧-೧-'೨೬ಕ್ಕೆ ತೆರೆಯುವಂತೆ ಸೆಂಕ್ಷನ್ ಆದ ವಿಷಯ ಪ್ರಜಾವರ್ಗದವರಾದ ನಾವು ಈಗದಪತ್ರಾದಿಗಳ ಕುರಿತು ಈ ಮೊದಲು ಆಗಾಗ್ಗೆ ಪಡುತ್ತಿದ್ದ ಅನೇಕ ಕಷ್ಟನಷ್ಟವನ್ನು ನಿವಾರಿಸಿದ ಮಾನ್ಯ ಅಧಿಕಾರಿಗಳಿಗೆ ವಂದನಾಪೂರ್ವಕ ಉಪಕಾರ ಸ್ಮರಿಸುತ್ತಾ ಇರುವೆವು.

ಉಕ್ಕಿನಡ್ಕ:—ಇಲ್ಲಿ ವಹಿಷ್ಠಾಶ್ರಮ, ಧನ್ವಂತರೀ ವೈದ್ಯಶಾಲಾ ಈ ವಿಷಯವಾಗಿ ಪತ್ರವ್ಯವಹಾರದ ಬಗ್ಗೆ, ಬೇರೆ ಊರಿನವರಿಗೆ ಪತ್ರವ್ಯವಹಾರದ ಬಗ್ಗೆ ಪೋಸ್ಟು ಆಫೀಸು ಕಾಸರಗೋಡಿನಲ್ಲಿ ಆಗಿದ್ದು ದೊಡ್ಡ ಕಷ್ಟವಾಗಿದೆ. ಆದಕಾರಣ ಇಲ್ಲಿ ಒಂದು ಟಪ್ಪಾಲು ಪೆಟ್ಟಿಗೆಯನ್ನಾದರೂ ಇಡಿಸುತ್ತಿದ್ದರೆ ಬಹಳ ಉಪಕಾರವಾಗುತ್ತಿತ್ತು.

ಇಲ್ಲಿ ಅನೇಕ ಗಾಡಿಗಳು ಬಂದು ತಂಗುತ್ತವೆ. ಅಲ್ಲದೆ ಬೇರೆ ಬೇರೆ ಜಾತಿಯ ಮನೆಗಳಿರುವುವು. ಆದಕಾರಣ ಸರಕಾರದ ಕಡೆಯಿಂದ ಲೋಕಲ್‌ಫಂಡಿನವರು ಒಂದು ಬಾವಿ ಅಗಿಸುತ್ತಿದ್ದರೆ ಪರೋಪಕಾರಮಾಡಿದಂತಾಗುತ್ತಿತ್ತು.

ಪೆರ್ಡಾಲು:—ಇಲ್ಲಿ ಕೋರಿಕ್ಕಾರು ಎಂಬಲ್ಲಿ ಸುಬ್ರಾಯ ಜ್ಯೋಸರ ತೋಟದಿಂದ ಸುಮಾರು ೩೦೦೦ದಷ್ಟು ಅಡಿಕೆ ಮೊನ್ನೆ ತಾ. ೨೦ನೇ ರವಿವಾರ ರಾತ್ರಿ ಯಾರೋ ಪುಂಡರು ಕಳವುಮಾಡಿರುವರು.

ಎಣ್ಮಕಜೆ:—ಇಲ್ಲಿ ಸರ್ಪಂಗಳ ಕೇಶವ ಭಟ್ಟರ ತೋಟದಿಂದ ಸುಮಾರು ೬೦೦ ಅಡಿಕೆ ಕಳವಾಗಿರುವುದು. ಮತ್ತು ಪೆರ್ಡಾಲ್ ಕೊಮ್ಮಟೆ ಎಂಬಲ್ಲಿಂದ ಅಂಗಳದಲ್ಲಿ ಕೊಯಿಸಿ ಹಾಕಿದ ಅಡಿಕೆ ಸುಮಾರು ೪ ಖಂಡಿ ಹೋಗಿದೆ. ಕಾಲದ ಮಹಿಮೆ!

ಬಂಟವಾಳ:—ಒಂದೆರಡು ತಿಂಗಳ ಹಿಂದೆ ಅನಂತಯ್ಯ ಚಾಟರ ಕೈ ಕಾಲು ಕಡಿದು ಬಂಟ್ವಾಳ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವರಷ್ಟೆ ಇವರ ನಂಬ್ರವನ್ನು ಮಂಗಳೂರು ಡಿಪ್ಯುಟಿ ಕಲೆಕ್ಟರವರು ತಳ್ಳಿಹಾಕಿರುವರು. ಸ್ವೈ, ಹಾಗಾದರೆ ಇವರ ಕಾಲು ಮುರಿದವರು ಯಾರು? ತಾನೇ ಕಡಕೊಂಡರೇ, ಪಾಪ! ತನ್ನ ಒಂದು ಕಾಲು ಕಳಕೊಂಡದ್ದಲ್ಲದ ಸುಮಾರು ನೂರುಗಟ್ಟೆಯಲ್ಲಿ ಹಣಖರ್ಚುಮಾಡಿದ್ದೇ ಬಂತು.

ಬಂಟ್ವಾಳ ಸಮಗಾರ ಕೇರಿಯ ಸಂಕದ ಮಧ್ಯದ ಕಮಾನಿನ ಕೆಳಗಿನ ಅಡಿಸ್ಥಳದ ಕಲ್ಲು ಜಾರಿ ಬಿಟ್ಟಿರುತ್ತದೆ. ಇದನ್ನು ಬೇಗನೆ ಸರಿಪಡಿಸದಿದ್ದರೆ ಈ ವರ್ಷದ ಮಳೆಗಾಲದ ನೆರೆಯಲ್ಲಿ ಉಳಿಯುವುದು ಕಷ್ಟವಾಗಿದೆ. ಇಂಜಿನಿಯರ ಇಲಾಖೆಯವರಿಗೆ ಮೇಧ್ಯವಿಂಳಿ.

ಇಲ್ಲಿಗೆ ಇಷ್ಟುಕಾಲ ಗಟ್ಟದ ಕೆಳಗೂ ಬಂಗಾಡಿ ಚಾರ್ಮಾಡಿ ಗಟ್ಟದ ಭತ್ತವು ಕೆಳಗಿಳಿದು ಇಲ್ಲಿಯ ಭಂಡಸಾಲೆ ಸಾವುಕಾರರು ಅದನ್ನು ಇತರ ಕೂಲಿಯವರಿಂದ ಅಕ್ಕಿಮಾಡಿಸಿ ಮಾರುತ್ತಿದ್ದರು ಈ ಕಾಲದಲ್ಲಿ ಏನೆಲು ಬೆಳೆ ಅನೇಕ ಕಡೆಗಳಲ್ಲಿ ನಷ್ಟವಾದ್ದರಿಂದ ಭತ್ತವು ಇಳಿಯುವದೇ ಇಲ್ಲ. ಆದರೆ ಇಲ್ಲಿಯ ಮಹಾನುಭಾವರಾದ ಕಂಪೆನಿ ಭಂಡಸಾಲೆ ಸಾವುಕಾರ ಸುಬ್ರಾಯ ಬಾಳಿಗರು ಮತ್ತು ಕಂಪೆನಿಯವರೂ, ಡಾ| ಸಾವುಕಾರ ಹರಿಪೈ ಮತ್ತು ಕಂಪೆನಿಯವರೂ ಕರಾಚಿ ಅತ್ತಕಡೆಯಿಂದ ಸಾವಿರಗಟ್ಟೆಯಲ್ಲಿ ಭತ್ತದ ಗೋಣಿ ತರಿಸಿ ಅಕ್ಕಿ ಮಾಡಿಸುವದರಿಂದ ಬಡಬಗ್ಗರ ದಿನಹರಣೆ ಹೋಗುವದಾಂ ಹುಡುಕಿದಂತಾಯಿತು. ಅಕ್ಕಿ ಪ್ರಿಯದಿಂದ ಬಳಲುವ ಬಡ ಕೂಲಿಯವರ ಪುಣ್ಯವು ಇವರೆಲ್ಲರಿಗೆ ಸಿಕ್ಕಲಿ.

ಮಂಗಳೂರು.

ಸೂಚನೆ—೧೯೨೬ನೇ-ಇಸವಿಯ ಸ್ವದೇಶಾಭಿಮಾನಿಯ ಕೆಲಂಡರನ್ನು ಈ ಸಂಚಿಕೆಯ ಪುರವಣಿಯಾಗಿ ಇಟ್ಟಿದೆ.

ಮಂಗಳೂರಿನ ವೈ. ಎಮ್. ಸಿ. ಎ.ಯ ಪ್ರೆಸಿಡೆಂಟರು ಬರೆಯುವುದೇನೆಂದರೆ:—ಸೆಕ್ರಿಟರಿಯವರಾದ ಮಿ| ಇ ಪ್ರಸಾದರು ದಶಂಬರ ೩೧ನೇ ತಾರೀಕಿನಿಂದ ೧೦ ದಿನಗಳ ರಜೆ ಪಡಕೊಂಡು ಮೈಸೂರಿಗೆ ಹೋಗಿರುವರು. ಅವರ ಬದಲಿಗೆ ಮೆಸ್ಸರ್ ಚಾರ್ಲ್ಸ್ ಬರನ್ ಮತ್ತು ಜೆ ಆಮೋದ ಇವರೀರ್ವರು ಚಾರ್ಜು ವಹಿಸಿ ಕೆಲಸ ನಡಿಸುವರು. ವೈ. ಎಮ್. ಸಿ. ಎ.ಯ ಪರವಾಗಿ ಹಣದಾನ ಮಾಡುತ್ತೇನೆಂದು ಮಾತುಕೊಟ್ಟ ಮಹನೀಯರೆಲ್ಲರೂ ಆ ದಾನಗಳನ್ನು ಖಜಾನ್ಜಿಯರಾದ ಮಿ| ಅಬ್ನೆರ್ ಸೋನ್ಸರಿಗೆ ಯಾ ಬದಲಿ ಕೆಲಸ ನೋಡುವ ಸೆಕ್ರಿಟರಿಗಳಲ್ಲಿ ಯಾರೊಬ್ಬರಿಗಾದರೂ ದಯಮಾಡಿ ಕಳುಹಿಸಿಕೊಡಬಹುದು. ಹಾಗೆ ಕೊಟ್ಟ ಹಣಗಳೆಲ್ಲಾ ರಶೀದಿ ಕೇಳಬೇಕಾಗಿ ವಿನಂತಿ ಇದೆ.

ಇಲ್ಲಿಯ ಸಾಹುಕಾರರಲ್ಲಿ, ಉದಾರರೂ ಸಾತ್ವಿಕರ ಆದ ಶ್ರೀಯುತ ಅತ್ತಾವರ ಸೋಮಪ್ಪನವರು ತಾ. ೩೦ರಲ್ಲಿ ದೈವಾಧೀನರಾದರು. ಇವರು ಜಾತಿಯಲ್ಲಿ ಗಾಣಿಗರಾಗಿದ್ದು ತನ್ನ ಜಾತಿಯ ಬಡಬಗ್ಗರ ಅಭಿವೃದ್ಧಿಗಾಗಿ ಶ್ರಮಪಟ್ಟು ಕೆಲಸಮಾಡಿದ್ದರು. ಇವರಿಗೆ ಪುತ್ರಸಂತತಿಯು ಇಲ್ಲದಿದ್ದುದರಿಂದ ಇವರು ತನ್ನ ಅಣ್ಣನ ಪುತ್ರನನ್ನು ದತ್ತಕ್ಕೆ ತಕ್ಕೊಂಡು, ತನ್ನ ವ್ಯಾಪಾರದಲ್ಲಿ ಅಭಿವೃದ್ಧಿಹೊಂದಿ, ಅನೇಕ ಶುಭಕಾರ್ಯಗಳಿಗೆ ಸಹಾಯ ಮಾಡುತ್ತಾ ಮೊನ್ನೆಯವರೆಗೆ ಇದ್ದುಕೊಂಡು ಈಗ ಗತಿಸಿಹೋದದ್ದು ಇವರ ಜಾತಿಗೆ ಒಂದು ವಿಶೇಷತರದ ನಷ್ಟವೆಂದೇ ಹೇಳಬೇಕು. ಶ್ರೀ ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಕಳೆದ ತಾ. ೨೭ಕ್ಕೆ ಕೆನರಾ ಹೈಸ್ಕೂಲಿನ ವರ್ಧಂತ್ಯುತ್ಸವವು ಬಹಳ ವಿಜೃಂಭಣೆಯಿಂದ ಜರಗಿತು. ಬೆಳಿಗ್ಗೆ ಶಾಲಾ ಹಳೇ ಹುಡುಗರೂ ಶಾಲಾ ಈಗಿನ ಹುಡುಗರೂ ಮತ್ತು ಇತರ ಅನೇಕ ಪಟ್ಟಣಿಗರೂ ಬಂದು ಶಾಲೆಯ ಆಟಸ್ಥಳಗಳಲ್ಲಿ ಬೆಡ್‌ಮಿಂಟನ್, ಟೆನ್ನಿಸ್ ಮುಂತಾದ ಆಟಗಳನ್ನು ಉಲ್ಲಾಸದಿಂದ ಆಡುತ್ತಿದ್ದರು. ನಂತರ ಎಂಟುಗಂಟೆಗೆ ನೆರೆದಿದ್ದ ಜನರನ್ನು ಫಲಹಾರ ಮುಂತಾದವುಗಳಿಂದ ಸತ್ಕರಿಸಿದರು.

ಇದಾದ ಮೇಲೆ ಶಾಲಾ ಹಳೇ ಹುಡುಗರ ಒಂದು ಮೀಟಿಂಗು ಶಾಲೆಯ ಹೆಡ್ಮಾಸ್ತರರ ಅಧ್ಯಕ್ಷತೆಯಲ್ಲಿ ಭುವನೇಂದ್ರ ಸಭಾಸದನದಲ್ಲಿ ನೆರವೇರಿತು. ಮೀಟಿಂಗಿನಲ್ಲಿ ಶಾಲಾ ಹುಡುಗರ ಒಂದು ಸಂಘವನ್ನು ಸ್ಥಾಪಿಸುವದೆ ನಿಶ್ಚಯಮಾಡಲಾಯಿತು. ಮಧ್ಯಾಹ್ನ ೩॥ ಗಂಟೆಗೆ ಪುನಃ ಶಾಲಾ ಹುಡುಗರು ಬಂದಿದ್ದರು. ಬೊಲ್ ಥ್ರೋಯಿಂಗ್ ಸ್ಲೋ ಸ್ಯಾಕಲ್ ರೇಸ್ ಮುಂತಾದ ಅನೇಕ ಆಟಗಳು ಹುಡುಗರಿಂದ ಪ್ರದರ್ಶಿಸಲ್ಪಟ್ಟವು. ಇಷ್ಟೆಲ್ಲಾ ಆಗುವಾಗ್ಗೆ ೫॥ ಗಂಟೆ ಆಯಿತು. ನೆರೆದ ಜನರೆಲ್ಲರೂ ಭುವನೇಂದ್ರ ಸಭಾಸದನಲ್ಲಿ ಕೂಡಿದರು. ನಂತರ ಕಾಪು ರಾಮನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ಶಾಲಾ ಸ್ಪೋರ್ಟ್ಸುಗಳಲ್ಲಿ ಗೆದ್ದವರಿಗೆ ಇನಾಮುಗಳು ಹಂಚಲ್ಪಟ್ಟು, ಗತಿಸಿಹೋದ ಹಳೇ ಹುಡುಗರಲ್ಲೊಬ್ಬರಾದ ಕೀರ್ತಿಶೇಷ ಹನುಮಂತ ಪೈಗಳವರ ಭಾವಚಿತ್ರವನ್ನು ಭುವನೇಂದ್ರ ಸಭಾಸದನದಲ್ಲಿ ಸ್ಥಾಪಿಸಲ್ಪಟ್ಟಿತು.

ಕೊನೆಗೆ ವಿದ್ಯಾರ್ಥಿಗಳು ಚಂದ್ರರಾವ್ ಮೋರೆ ಎಂಬ ಮರಾಟರಾಜನ ಚರಿತ್ರೆಯನ್ನು ನಾಟಕ ರೂಪದಲ್ಲಿ ಮನೋಹರವಾಗಿ ಅಭಿನಯಿಸಿ ಸಭೆಯು ರಾತ್ರೆ ೯ ಗಂಟೆಗೆ ಮುಕ್ತಾಯವಾಯಿತು.

ತಾ. ೨೫ರಲ್ಲಿ ಕೆನರಾ ಗರ್ಲ್ಸ್‌ಸ್ಕೂಲಿನ ವರ್ಧಂತ್ಯುತ್ಸವವು ಮಾಜಿ ಡಿಪ್ಯುಟಿ ಕಲೆಕ್ಟರಾಗಿದ್ದ ಎಚ್. ಸುಬ್ಬರಾವ್‌ರವರ ಪತ್ನಿಯವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರವೇರಿತು. ಈ ಶಾಲೆಯ ಶಾಲಾ ಹುಡುಗಿಯರು ಇಂಪಾದ ಗಾನಗಳಿಂದ ಸಭಿಕರನ್ನು ಆನಂದಗೊಳಿಸಿದರು. ಅಧ್ಯಕ್ಷರು ಶಾಲೆಯ ಅಧಿಕಾರಿಗಳ ಉತ್ಸಾಹಕರವಾದ ಕೆಲಸವನ್ನು ಶ್ಲಾಘಿಸಿ, ಶಾಲಾ ಹುಡುಗಿಯರಿಗೆ ಇನಾಮುಗಳನ್ನು ಹಂಚಿದರು.

ಈ ಶಾಲೆಯು ಅಮ್ಮೆಂಬಳ ಸುಬ್ರಾಯಪೈಗಳವರಿಂದ ಸ್ಥಾಪಿಸಲ್ಪಟ್ಟು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಾ, ಇಂದು ಈ ಶಾಲೆಯಲ್ಲಿ ಉಚ್ಚವಾದ ಶಿಕ್ಷಣವು ಕೊಡಲಾಗುವುದು. ಈಗಲಾದರೂ ಶಾಲೆಯಲ್ಲಿ ಸ್ಥಳಸಂಕೋಚಿತವಾದುದರಿಂದ ಶಾಲೆಗೋಸ್ಕರ ಹೊಸತಾಗಿ ಎರಡು ಕಟ್ಟೋಣಗಳು ಕಟ್ಟಲಾಗುತ್ತವೆ. ಶಾಲೆಗೆ ಅತ್ಯಲ್ಪವಾದ ಗ್ರೇಟು ಸಿಕ್ಕುವುದು. ಮೂಲಧನದ ಬಡ್ಡಿಯು ಶಾಲೆಯ ಖರ್ಚಿಗೆ ಸಾಲದಾಗುತ್ತದೆ. ಆದ ಪ್ರಯುಕ್ತ ಮಹಾಜನರು ಸಮಾಜದ ಉನ್ನತಿಯ ಮುಖ್ಯ ಸಲಹೆಯಾದ ಈ ಶಾಲೆಯ ಅಭಿವೃದ್ಧಿಗೆ ಉದಾರ ಮನಸ್ಸಿನಿಂದ ಸಹಾಯಮಾಡಬೇಕಾಗಿ ವಿಜ್ಞಾಪಿಸಿಕೊಂಡಿರುವರು

ತಿರುಚಿನಾಪಳ್ಳಿಯ ಉದಾರರೂ, ದಾನಪರರೂ ಆದ ಶ್ರೀಯುತ ಆರ್ ಕೆ. ಪ್ರಸನ್ನ ವೆಂಕಟೇಶರಾವ್ ಎಂಬವರು ಮಂಗಳೂರಿನಲ್ಲಿ ಶ್ರೀ ಬಾಲಕೃಷ್ಣ ಛತ್ರಮ್ ಎಂಬದೊಂದು ಛತ್ರವನ್ನು ಸ್ಥಾಪಿಸುವ ಬಗ್ಗೆ ರೂ. ೬೦೦೦ವನ್ನು ದಾನಕೊಟ್ಟಿರುವರು. ಈ ಧರ್ಮಶಾಲೆಯು ಉಡುಪಿಗೆ ಯಾತ್ರೆ ಮಾಡುವ ಮಧ್ವರಿಗೆ ಅಥವಾ ಬ್ರಾಹ್ಮಣರಿಗಾಗಿಯೇ ಮಂಗಳೂರಿನ ರೈಲ್ವೆ ಸ್ಟೇಷನ ಬಳಿ ಸ್ಥಾಪಿಸಲ್ಪಟ್ಟಿರುವರು.

ಕಳೆದ ವಾರದಲ್ಲಿ ತಿಲಕ ವಿದ್ಯಾಲಯದ ಸಹಾಯಾರ್ಥವಾಗಿ ಮುಷ್ಟಿಫಂಡಿನಿಂದ ವಸೂಲಾದ ರೂ. ೬-೧೦-೭ ಮತ್ತು ಅಕ್ಕಿ ಸೇರು ೫ ಪಾವು ॥ ಮಾತ್ರ.

ವಿವಿಧ ವಿಷಯಗಳು.

ಇಜಿಪ್ಟ ದೇಶದ ಪುರಾತನ ಕಾಲದ ಸ್ಥಿತಿ.

ಇಜಿಪ್ಟ ದೇಶದ ಈಗಿನ ದಕ್ಷಿಣ ಗಡಿಯು ನ್ಯಾಲ ನದಿಯ ಒಂದನೇ ಜೋಗಾದ, ಎಸ್ವಾನಿನ ಹತ್ತರವಿದೆ. ಇದರ ದಕ್ಷಿಣದಲ್ಲಿ ನೂಬಿಯಾ ದೇಶವಿದೆ. ಇನ್ನು ಆರು ಜೋಗುಗಳನ್ನು ದಾಟಿ ಸೋಡಾನ್ ದೇಶವಿದೆ. ಪುರಾತನ ಕಾಲದ ಇಜಿಪ್ಟ ದೇಶವನ್ನು ಆ ಕಾಲದ ನಿವಾಸಿಗಳು ನೂಬಿಯಾ ದೇಶದ ದಕ್ಷಿಣ ಭಾಗವನ್ನು "ತಾಪೆಡ್ತು" ಎಂದು ಕರೆಯುತ್ತಿದ್ದರು. ಈ ಶಬ್ದದ ಅರ್ಥವು ಬಿಲ್ಲುಗಾರರ ದೇಶವೆಂದಾಗುತ್ತದೆ. ಎರಡನೆ ಜೋಗಿನ ಕೆಳಗೆ ಕುಶ್‌ದೇಶವಿದೆ. ನೂಬಿಯದ ಜನರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿದ್ದರು. ಇವರಲ್ಲಿ ಮುಖ್ಯವಾದ ಜನರ ಹೆಸರು "ಮೆಜೋಯ" ಈ ಮೆಜೋಯ ಜನರು ಇಜಿಪ್ಟದೇಶದ ಸೈನ್ಯದಲ್ಲಿ ಸಂಬಳಕ್ಕಾಗಿ ಕೆಲಸ ಮಾಡುತ್ತಿದ್ದರು. ಈ ಜನರು ಹೆಚ್ಚಿಚ್ಚಾಗುತ್ತಾ ಸೇರಿದುದರಿಂದ ಮೆಜೋಯ ಎಂಬ ಶಬ್ದಕ್ಕೆ ವೀರನು ಎಂಬ ಅರ್ಥವು ಉಂಟಾಯಿತು. ಬಹಳ ಪುರಾತನ ಕಾಲದಲ್ಲಿ ನೂಬಿಯದ ಜನರಿಗೆ "ನಿಹೊಸಿ" ಎಂದು ಹೆಸರು ಇತ್ತು. ಕಡೆಗೆ ಈ ಶಬ್ದವೇ ನಿಗ್ರೊ ಎಂದಾಯಿತು. ಆದರೆ ಪುರಾತನ ಕಾಲದಲ್ಲಿ ಇಜಿಪ್ಟದೇಶದ ಜನರಿಗೂ ನಿಗ್ರೊ ಜನರಿಗೂ ವಿಶೇಷ ಸಂಪರ್ಕವಿರಲಿಲ್ಲ. ಈ ನಿಗ್ರೋ ಜನರು ಇಜಿಪ್ಟದೇಶದ ಜನರಿಗಿಂತ ಕಪ್ಪಾಗಿದ್ದರು.

ಪುರಾತನ ಕಾಲದಲ್ಲಿ ಆಳಿದ ೬ನೇ ಮತ್ತು ೧೨ನೇ ರಾಜವಂಶಗಳ ಸಮಾಧಿಗಳಲ್ಲಿರುವ ಚಿತ್ರಕಲೆಗಳಿಂದಲೂ ಮರದ ಆಕೃತಿಗಳಿಂದಲೂ ಜನರಿಗೆ ನಿಯೋಶಿಗಳೆಂದು ಹೆಸರಿದ್ದರೂ ಅವರ ಎಲುಬುಗಳ ಲಕ್ಷಣಗಳಿಂದಲೂ ಅವರು ಯಾವ ತರದಲ್ಲಿಯೂ ನಿಗ್ರೊ ಜನರನ್ನು ಹೋಲುವುದಿಲ್ಲ. ಈ ಜನರು ಆಫ್ರಿಕಾ ಖಂಡದ ಈಶಾನ್ಯದಿಕ್ಕಿನಲ್ಲಿರುವ ಜನರಂತೆಯೇ ಇವರು ಹೆಮ್ಯಾಟ್‌ವಂಶಕ್ಕೆ ಸೇರಿದವರಾಗಿದ್ದರು. ಸಾಧಾರಣ ಕ್ರಿಸ್ತ ಪೂರ್ವ

೧೦೦ರಲ್ಲಿ ಆಳಿದ ೧೮ನೇ ರಾಜವಂಶದ ಸಮಾಧಿಗಳಲ್ಲಿ ನಿಗ್ರೊ ಜನರ ವಿಷಯ ಸ್ವಲ್ಪ ಸ್ವಲ್ಪ ಸಂಗತಿಗಳು ತಿಳಿದುಬರುತ್ತವೆ. ಒಂದು ಕಾಲದಲ್ಲಿ ಇಜಿಪ್ಟದೇಶದ ಚಿತ್ರಿಕರು ನೂಬಿಯದ ಜನರೊಡನೆ ಸ್ನೇಹಭಾವದಿಂದಿರುವಾಗ ನಿಗ್ರೊ ಜನರ ವಿಷಯ ವಿಶೇಷವಾಗಿ ಚಿತ್ರಗಳನ್ನು ಬರೆದಿರುತ್ತಾರೆ. ನೂಬಿಯದೇಶವು ಬಂಜರು ಪ್ರದೇಶವಾಗಿತ್ತು. ಆದುದರಿಂದ ಇಜಿಪ್ಟ ದೇಶದ ಜನರು ಈ ದೇಶವನ್ನು "ದುರ್ಭಿಕ್ಷ ಕೂಶ್" ಎಂದು ಕರೆಯುತ್ತಿದ್ದರು. ಸೊಡಾನ್ ದೇಶದ ಅನೇಕ ತರದ ಆಹಾರ ಜೀನಸುಗಳನ್ನು ತರುವುದಕ್ಕಾಗಿ ಮಾತ್ರವೇ ಅವರು ನೂಬಿಯದ ದಾರಿಯಾಗಿ ಬರುತ್ತಿದ್ದರು. ಆದರೂ ಇತ್ತಲಾಗೆ ಅಗೆದು ತೆಗೆದ ಸಮಾಧಿಗಳಿಂದ ಚರಿತ್ರೆಯ ಕಾಲಕ್ಕಿಂತಲೂ ಪುರಾತನ ಕಾಲದಲ್ಲಿ ನೂಬಿಯದಲ್ಲಿಯೂ, ಇಜಿಪ್ಟದೇಶದಲ್ಲಿಯೂ ಒಂದೇ ರೀತಿಯ ನಾಗರೀಕತೆಯು ಇತ್ತು. ಚರಿತ್ರೆಯ ಕಾಲದಲ್ಲಿ ನೂಬಿಯವು ನಾಗರೀಕತೆಯಲ್ಲಿ ಹಿಂದುಳಿಯಿತು. ಪಂಟದೇಶದ ಜನರನ್ನು ಇಜಿಪ್ಟದೇಶದವರು ತಮ್ಮಂತೆಯೇ ಇದ್ದುದರಿಂದ ಅವರು ತಮ್ಮವರೆಂಬ ಭಾವನೆಯಿಂದಲೇ ನಡಿಸುತ್ತಿದ್ದರು.

∴ ∴ ∴ ∴

ನೂಬಿಯದ ಐಶ್ವರ್ಯ.

ನೂಬಿಯಾ ದೇಶದಲ್ಲಿ ಮುಖ್ಯವಾಗಿ ಭಂಗಾರ ಚರ್ಮಗಳು, ಬೀಟಿ, ಸುಗಂಧ ದ್ರವ್ಯಗಳು, ಗೊಂದು, ಮತ್ತು ಉಷ್ಟ್ರಪಕ್ಷಿಯ ಗರಿಗಳು ಸಿಕ್ಕುತ್ತಿದ್ದವು. ಆದರೆ ಈ ವಸ್ತುಗಳು ನಿಜವಾಗಿ ನೂಬಿಯಾ ದೇಶದವುಗಳಲ್ಲ. ನೂಬಿಯದ ಜನರು ಇವುಗಳನ್ನು ಬೇರೆ ದೇಶಗಳಿಂದ ತಂದು ಈಜಿಪ್ಟ ದೇಶದ ಜನರಿಗೆ ಕೊಡುತ್ತಿದ್ದರು. ಆದುದರಿಂದ ಈಜಿಪ್ಟ ದೇಶದ ಅರಸರು ನೂಬಿಯವನ್ನು ತಮ್ಮ ಆಡಳಿತೆಯಲ್ಲಿಯೇ ಕ್ರಿಸ್ತಪೂರ್ವ ೨೫೦೦ರಲ್ಲಿ ಆಳಿದ ೬ನೇ ವಂಶದ ಅರಸರ ಚರಿತ್ರೆಯಿಂದ ತಿಳಿಯುತ್ತದೆ. ಈ ಅರಸರು ನ್ಯಾಲ ನದಿಯ ಮೂರನೇ ಜೋಗಿನ ಹತ್ತಿರ ಒಂದು ಬಲವಾದ ಕೋಟೆಯನ್ನು ಕಟ್ಟಿ ಅದರಲ್ಲಿ ಸೈನ್ಯವನ್ನಿಟ್ಟಿದ್ದರು. ಈಜಿಪ್ಟ ದೇಶದ ಒಬ್ಬ ಗೃಹಸ್ಥನು ತನ್ನ ಸಮಾಧಿಯ ಕಲ್ಲಿನ ಮೇಲೆ ತಾನೊಬ್ಬನೇ ನೂಬಿಯ ದೇಶವನ್ನು ಜಯಿಸಿದೆನೆಂದು ಬರೆಸಿರುತ್ತಾನೆ. ಕ್ರಿಸ್ತಪೂರ್ವ ೨೦೦೦ದಲ್ಲಿ ಆಳಿದ ೧೨ನೇ ರಾಜವಂಶದವರು ಕಟ್ಟಿಸಿದ ಸೆಮುನಕ್ ಕೋಟೆಯ ಮೇಲೆ ಬರೆದಿರುವ ಶಾಸನದಿಂದ ನುಬೋನಿ ಗಾಟಿಯನ್ನು ವ್ಯಾಪಾರದ ದಾರಿಯಾಗಿ ಉಪಯೋಗಿಸುತ್ತಿದ್ದರೆಂದು ಬರೆದಿರುತ್ತದೆ. ೧೮ನೇ ರಾಜನ ವಂಶದವರು ಆಳುವಾಗ ನಿಗ್ರೊ ಜನರು ಇಜಿಪ್ಟ ಜನರ ಸಂಪರ್ಕಕ್ಕೆ ಬಂದಿರುತ್ತಾರೆಂದು ತಿಳಿದುಬರುತ್ತದೆ.

ಡಿಯರ್, ಎಲ್ ಬಿಹಾರಿ ದೇವಸ್ಥಾನದಲ್ಲಿರುವ ಚಿತ್ರಗಳಲ್ಲಿ ಪಂಟುಗಳ, ನಿಗ್ರೊ ಜನರ, ಮಂಗಗಳ, ಬೇಟೆಯ ನಾಯಿಗಳ, ಮರಗಿಡಗಳ ನಕ್ಷೆಗಳು ಇವೆ. ಇನ್ನೊಂದು ಚಿತ್ರದಲ್ಲಿ ವ್ಯಾಪಾರಸ್ಥರ ಒಂದು ಸಾಲನ್ನು ತೋರಿಸಿಯದೆ. ಈ ದೇವಸ್ಥಾನದ ಬಾಗಲಲ್ಲಿ ಪರಿಮಳದ ಗಿಡಗಳನ್ನು ಕಟ್ಟೆಗಳಲ್ಲಿ ನೆಡುತ್ತಿದ್ದರೆಂದು ಕಾಣುತ್ತದೆ. ಈಗ ಅಗೆದು ತೆಗೆದ ಈ ಕಟ್ಟೆಗಳಲ್ಲಿ ಅವುಗಳ ಬೇರುಗಳು ಸಿಕ್ಕಿಯವೆ. ಪರಿಮಳವು ಇನ್ನೂ ಮಣ್ಣಿಗೆ ಇದೆ. ಈ ಕಟ್ಟೆಯಲ್ಲಿರುವ ಮಣ್ಣಿಗೂ ಸುತ್ತುಮುತ್ತಲೂ ಇರುವ ಮಣ್ಣಿಗೂ ವ್ಯತ್ಯಾಸವಿದೆ.

ಹತ್ತೊಂಬತ್ತನೇ ರಾಜವಂಶವು ಆಳುವ ಕಾಲದಲ್ಲಿ ಇಜಿಪ್ಟ ದೇಶದಲ್ಲಿ ಎಲ್ಲಾ ವಿಧದ ಜನರಿದ್ದರೆಂದು ತಿಳಿದುಬರುತ್ತದೆ. ನಂತರ ಈಜಿಪ್ಟ ದೇಶವು ಹೀನ ಸ್ಥಿತಿಗೆ ಬಂದಾಗ ನೂಬಿಯಾದೇಶದವರು ಈಜಿಪ್ಟ ದೇಶವನ್ನು ಒಳನುಗ್ಗಿ ಆಗಾಗ್ಗೆ ಸುಲಿಗೆಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಇವರು ಈಜಿಪ್ಟಿನಲ್ಲಿ ೧೨ನೇ ರಾಜನ ವಂಶವನ್ನು ಸ್ಥಾಪಿಸಿದರು. ಈ ಅರಸರಲ್ಲಿ ಒಬ್ಬನು ರೊಹೊಬಾಮನ ಸಂಗಡ ಯುದ್ಧಕ್ಕೆ ಬಂದಿದ್ದನೆಂದು ಬ್ಯಾಬಲಿನಿಂದ ತಿಳಿಯುತ್ತದೆ. ಈ ಸಮಯದಲ್ಲಿ ನೂಬಿಯಾ ದೇಶವು ಅತೀ ಉನ್ನತ ಸ್ಥಿತಿಯಲ್ಲಿತ್ತು. ನಂತರ ನೂಬಿಯಾ ರಾಜ್ಯವು ಇದ್ದರೂ ಈಜಿಪ್ಟ ದೇಶದ ಮೇಲೆ ಇವರ ಅಧಿಕಾರವಿರಲಿಲ್ಲ.

ಪತ್ರವ್ಯವಹಾರ.

(ಬಾತ್ಮಿದಾರರು ಕೊಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ ಸಂ. ಸ್ವ.)

'ಸಮಾಜಸೇವಕ'ರಿಗೊಂದು ಉತ್ತರ.

"ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ । ನ ಬ್ರೂಯಾತ್ ಸತ್ಯಮ ಪ್ರಿಯಮ್ ॥ ಪ್ರಿಯಂ ಚನಾನೃತಂ ಬ್ರೂಯಾತ್ ಏಷಧರ್ಮಃ ಸನಾತನಃ ॥" ಇದರ ತಾತ್ಪರ್ಯವೇನೆಂದರೆ, ಸತ್ಯವನ್ನೂ, ಪ್ರಿಯವಾದುದನ್ನೂ ನುಡಿಯಬೇಕು. ಅಪ್ರಿಯವಾದುದು ಸತ್ಯವಾದರೂ ಅದನ್ನು ಹೇಳಬಾರದು. ಪ್ರಿಯವಾದದ್ದು (ಅಂದರೆ ಅಹಿಂಸಾಮಯವಾದದ್ದು) ಅಸತ್ಯವಾದರೂ ಹೇಳಬಾರದು. ಇದೇ ನಿಜವಾದ ಸನಾತನ ಧರ್ಮಾಭಿಮಾನಿಯ ಧರ್ಮವಿರುತ್ತದೆ. 'ಸಮಾಜಸೇವಕ'ರೆಂತ ಬಿರುದಾಂತು ಕಳೆದ ತಾ. ೧೮ ನೇ ಸ್ವದೇಶಾಭಿಮಾನಿಯಲ್ಲಿ, ಸತ್ಯವಾದರೂ ಅಪ್ರಿಯವಾದುದನ್ನು ಪ್ರಕಟಿಸಿರುವರಷ್ಟೆ? ಅವರು ಆವ ಸಮಾಜದವರು? ಸನಾತನ ಧರ್ಮಾನುಯಾಯಿಗಳೇ? ಇತರರೇ?

ಭೀಷ್ಮರಿಗೆ ಒಬ್ಬನ ಅಂಬೆ. ಕಲಿಗಾಲದಲ್ಲಿ ಅಂಬೆ ಸಿಗಲಿಕ್ಕೇನೂ ಅಡ್ಡಿ ಇಲ್ಲವೆಂಬ ತಾತ್ಪರ್ಯವನ್ನು ಬರೆದಿರುವ ಲೇಖಕರು ಖಂಡಿತವಾಗಿಯೂ ಸಭ್ಯತೆಯ ಎಲ್ಲೆಯನ್ನು ಮೀರಿರುವರೆನ್ನಬೇಕಾಗುವುದು. ಇಂಥಾ ಪರನಿಂದಾಪೂರಿತವಾದ ಲೇಖನಗಳನ್ನು ಪ್ರಕಟಿಸುವುದು ನಿಜವಾದ ಸಮಾಜಹಿತೈಷಿಗಳಿಗೆ ತಕ್ಕುದಲ್ಲವು. ಇತಿ,

"ಓರ್ವ ನಿಷ್ಪಕ್ಷಪಾತಿ"

ದಕ್ಷಿಣ ಕನ್ನಡ ಜಿಲ್ಲೆಯ ಸ್ವರಾಜ್ಯಪಕ್ಷ.

ನಮ್ಮ ಜಿಲ್ಲೆಗೊಂದು ಸ್ವರಾಜ್ಯಪಕ್ಷವನ್ನು ಏರ್ಪಡಿಸುವುದಕ್ಕೆ ಶ್ರೀಯುತ ಕಾರಂತರು ಅತೀ ಉತ್ಸುಕರಾಗಿರುವುದು ಅಭಿನಂದನೀಯ. ಆದರೆ ಮೊನ್ನೆ ಮದ್ರಾಸ ಕೌನ್ಸಿಲಿನ ಚುನಾವಣೆಗೆ ಉಮೇದ್ವಾರಿಕೆ ಪತ್ರಿಕೆಯನ್ನು ಹಾಕುವ ಒಂದು ದಿನ ಪೂರ್ವದಲ್ಲಿ ಅವರು ಅವಸರದಿಂದ ಕರೆದ ಸ್ವರಾಜ್ಯಪಕ್ಷವು ತನ್ನ ಕಾರ್ಯಸಿದ್ಧಿಯನ್ನು ಮಾಡಿಕೊಂಡೀತೆಂದು ಹೇಳಲಾಗುವುದಿಲ್ಲ.

ಜಿಲ್ಲೆಗೆ ಸ್ವರಾಜ್ಯಪಕ್ಷವೆಂದರೆ ಮಂಗಳೂರಿನ ಕೆಲವರು ಕೂಡಿ ಪಕ್ಷವನ್ನು ಕಟ್ಟಿಕೊಳ್ಳುವುದೆಂದಲ್ಲ. ಹಾಗಾಗಲಿಕ್ಕೆ ಜಿಲ್ಲೆಯ ಇತರ ಭಾಗದವರಿಗೆ ಸಾಧ್ಯವಾಗದಿದ್ದರೂ ಅವರ ಸಹಾನುಭೂತಿಯನ್ನಾದರೂ ಕಟ್ಟಿಕೊಳ್ಳುವುದು ಅವಶ್ಯಕ. ಶ್ರೀಯುತ ಕಾರಂತರಿಗೆ ಸ್ವರಾಜ್ಯಪಕ್ಷವನ್ನು ಸ್ಥಾಪಿಸುವ ಉತ್ಸಾಹ ಎದ್ದುದಾದರೆ ಅವರು ತತ್ಪೂರ್ವದಲ್ಲಿ ಜಿಲ್ಲೆಯ ಪ್ರಮುಖ ಕೆಲಸಗಾರರಾಗಲಿ, ಚುನಾವಣೆಯ ಸಮಯದಲ್ಲಿ ಕೆಲಸಮಾಡಲು ಶಕ್ತಿಯುಳ್ಳವರೊಡನೆ ಪತ್ರವ್ಯವಹಾರ ನಡೆಸುವುದು ಉತ್ತಮವಿತ್ತು. ಇಂತಹುದೇನೂ ಶ್ರೀಯುತ ಕಾರಂತರು ಮಾಡಿದಂತೆ ತೋರುವುದಿಲ್ಲ.

ಕಾರ್ಕಳದಲ್ಲಿ ಜರುಗಿದ ಪರಿಷತ್ತಿನಲ್ಲಿ ಒಂದು ಸಂಘಟನೆಯು ತಯಾರಾಗಿತ್ತು. ಅದಕ್ಕೆ ಅನುಸಾರವಾಗಿ ಉಡುಪಿಯಲ್ಲಿಯೂ, ಕಾರ್ಕಳದಲ್ಲಿಯೂ ತಾಲೂಕು ಕಮಿಟಿಗಳು ಏರ್ಪಟ್ಟಿದ್ದುವು. ಮಂಗಳೂರಿನಲ್ಲಿಯೂ ತಾಲೂಕು ಕಮಿಟಿಯು ಏರ್ಪಟ್ಟಿದೆ. ಇವುಗಳಿಂದ ಜಿಲ್ಲಾ ಕಮಿಟಿಗೆ ಪ್ರತಿನಿಧಿಗಳು ಆರಿಸಲ್ಪಟ್ಟಿದ್ದಾರೆ. ಅವಸರವಾಗಿ ಪಕ್ಷವನ್ನು ಕಟ್ಟುವ ಬದಲಿಗೆ ಶ್ರೀಯುತ ಕಾರಂತರು ಈ ಪ್ರತಿನಿಧಿಗಳನ್ನು ಕರೆಸಿಕೊಳ್ಳಬಹುದಿತ್ತು. ಇವರು ಪರಿಷತ್ತಿನ ಸಂಘಟನೆಗೆಳಿಗೆ ಅನುಸಾರವಾಗಿ ಆರಿಸಲ್ಪಟ್ಟಿರುವುದರಿಂದ ಇವರ ನಿರ್ಧಾರಕ್ಕೆ ಸ್ವಲ್ಪ ಬೆಲೆಯಾದರೂ ಇರುತ್ತಿತ್ತು. ಈ ತಾಲೂಕು ಕಮಿಟಿಗಳು ಯಾವ ಕೆಲಸವನ್ನೂ ಮಾಡಿಲ್ಲವೆಂಬುದೇನೊ ನಿಜ; ಆದರೆ ಶ್ರೀಯುತ ಕಾರಂತರು ಇವುಗಳನ್ನೆ ಉಜ್ಜೀವಿಸಿ ಪಕ್ಷವನ್ನು ರಚಿಸಿದರೆ ಸರಿಯಾಗುತ್ತಿತ್ತು.

ಶ್ರೀಯುತ ನಾಗಪ್ಪ ಹೆಗ್ಡೆಯವ ಮೂಲಕ ಸ್ವರಾಜ್ಯಪಕ್ಷ ಉಮೇದ್ವಾರರನ್ನು ಮುಂದೆ ಹಾಕುವ ಉದ್ದೇಶದಿಂದ ಇಷ್ಟುವಸರ ಮಾಡಿದ್ದಾದರೆ, ಆಗಲಾದರೂ ಇದು ಉತ್ತಮವಾಗಿಲ್ಲ. ಅಷ್ಟಾದರೆ ಮದ್ರಾಸ ಪ್ರಾಂತಿಕ ವತಿಯಿಂದ ಶ್ರೀಯುತರು ನಿಲ್ಲಬಹುದಿತ್ತು, ಮತ್ತು ಸ್ವರಾಜ್ಯಪಕ್ಷವನ್ನು ಪುರಸತ್ತಿನಲ್ಲಿ ಮಾಡುವುದು ಉತ್ತಮವಿತ್ತು.

ಶ್ರೀಯುತ ಕಾರಂತರು ಇನ್ನಾದರೂ ತಮ್ಮ ಸ್ವರಾಜ್ಯಪಕ್ಷವನ್ನು ಪುನಃ ಸಂಘಟಿಸುವುದು ಒಳ್ಳೇಯದು. ಸ್ವರಾಜ್ಯಪಕ್ಷಕ್ಕೆ ವಿಶಾಲ ಸಹಾನುಭೂತಿಯಿದ್ದರೇನೇ ಅದು ಕೆಲಸಮಾಡಬಲ್ಲುದು. ಬರೇ ಅವಸರ ಕಾರ್ಯಗಳಿಂದ ಕೆಲಸಗಳು ಕೆಡುವುವಲ್ಲದೆ ಬೇರೆ ಪ್ರಯೋಜನವಾಗಲಾರದು. ತಾಲೂಕುಗಳ ಪ್ರಾತಿನಿಧ್ಯವಾಗಲಿ ಸಹಾನುಭೂತಿ ಇಲ್ಲದೆ ಜಿಲ್ಲಾ ಸ್ವರಾಜ್ಯ ಪಕ್ಷವು ಕೆಲಸ ಮಾಡಲಾರದು. ಆದುದರಿಂದ ತಾಲೂಕುಗಳಲ್ಲಿ ಸ್ವರಾಜ್ಯ ಪಕ್ಷದ ಏರ್ಪಾಡುಗಳನ್ನು ಮಾಡಿಸುವುದು ಉತ್ತಮ.

ಮೂಲ್ಕಿ ವಾಮನ ಕುಡುವ.

ಬಂಟವಾಳದಲ್ಲಿರುವ ಧರ್ಮಸ್ಥಳದ ಬೀಡು.

ಇಲ್ಲಿ ಅನೇಕ ವರ್ಷಗಳಿಂದ ಇದ್ದ ಧರ್ಮಸ್ಥಳದ ಬೀಡನ್ನು ಹಿಂದಿನ ಗತ ಮಂಜಯ್ಯ ಹೆಗ್ಗಡೆಯವರು ದುರುಸ್ತಿ ಪಡಿಸಿ ಸ್ಥಳದ ಕೀರ್ತಿಗೆ ಯೋಗ್ಯವಾದ ದೊಡ್ಡ ಕಟ್ಟೋಣವು ಸುತ್ತಲೂ ಕೋಟೆಯಂತಿರುವ ಆವರ್ಣಗಳಿಂದ ಶೋಭಿಸುತ್ತಿತ್ತು. ಅದರ ಒಳಗೆ ಸಾವಿರಾರು ಅಕ್ಕಿಮುಡಿ ಹಿಡಿಯುವ ಕೋಣೆಗಳೂ, ಸುತ್ತಲೂ ಅರಮನೆಯೋಪಾದಿ ಇದ್ದ ನಾಲ್ಕು ಸುತ್ತಿನ ಚಾವಡಿಯೂ, ಮುಂದುಗಡೆ ಮುಖಮಂಟಪವೂ, ಅದರ ಮೇಲ್ಗಡೆ ಕನ್ನಡಿ ಬಾಗಲಿನ ಉಪ್ಪರಿಗೆಯೂ ಶೋಭಿಸುತ್ತಿತ್ತು. ಇನ್ನು ಅದರ ಒಳಗೆ ಒಂದು ಸಣ್ಣ ಬಸ್ತಿಯೂ, ಅದರ ಮುಂದುಗಡೆ ಉದ್ಯಾನವೂ, ಪ್ರಯಾಣಸ್ಥರಿಗೆ ಛತ್ರದ ಓಪಾದಿ ಬೇರೆ ಬೇರೆ ಕೋಣೆಗಳೂ, ಮಾರ್ಗದಿಂದ ಒಳಗೆ ಹೊಕ್ಕುವಾಗ ಬಲಗಡೆಯಲ್ಲಿ ಎಲ್ಲರಿಗೂ ಭೇಟಿ ಸಿಕ್ಕಲಿಕ್ಕೆ ಅನ್ನೂಕೂಲವಾದ ಒಡ್ಡೋಲದ ಚಾವಡಿಯೂ ಸಾಧಾರಣ ಅರಮನೆಯಂತೆ ಕಂಗೊಳಿಸುತ್ತಿತ್ತು. ಇದರ ಚೌಕ ಮನೆಯಲ್ಲಿ ೧೮೦೨ನೇ ಇಸವಿಯಲ್ಲಿ ಸರ್ವೆ ಸೆಟ್ಲಿಮೆಂಟ್ ಸುಮಾರು ೩೦೦ ಸಿಬಂದಿ ಇದ್ದ ಆಫೀಸು ಇತ್ತು. ಅದಲ್ಲದೆ ಅದು ಬಿದ್ದು ಹೋಗುವ ವರೆಗೆ ಬಂಟ್ವಾಳಕ್ಕೆ ಬರುತ್ತಿದ್ದ ಸರ್ಕಾರಿ ನೌಕರಿ ಹಿಂದು ಆಫೀಸರರು ಅದರಲ್ಲಿ ತಂಗುತ್ತಿದ್ದರು. ಇಷ್ಟು ಶೋಭಾಯಮಾನವಾಗಿಯೂ, ಎಲ್ಲರಿಗೂ ಪರೋಪಕಾರಕ್ಕಾಗುತ್ತಿದ್ದ ಕಟ್ಟೋಣವು ೧೯೨೩ನೇ ಇಸವಿ ಆಗೋಸ್ತು ೭ನೇ ತಾರೀಕಿಗೆ ಬಂಟವಾಳಕ್ಕೆ ಬಂದಿದ್ದ ಘೋರ ನೆರೆಯಿಂದ ನೆಲಸಮವಾದದ್ದು ಇನ್ನೂ ತಿರುಗಿ ಯಥಾಸ್ಥಿತಿಗೆ ಬರಲಿಲ್ಲ. ಈ ಕಟ್ಟೋಣವನ್ನು ತಿರುಗಿ ಕಟ್ಟಿಸದಿದ್ದರೆ ಮುಂಚಿನ ಹೆಗ್ಗಡೆಯವರ ಕೀರ್ತಿಗೆ ಅಪಕೀರ್ತಿ ಬಂದಂತೆ ಆಗುವದು. ಬಂಟವಾಳದ ಬೀಡಿನ ನಾಮ ನಾಶವಾಗದಂತೆಯೂ ಈಗೀಗ ಧರ್ಮಸ್ಥಳದ ಹೆಗ್ಗಡೆಯವರು ಮುಂಚಿಗಿಂತಲೂ ಉತ್ತಮ ರೀತಿಯಲ್ಲಿ ಕಟ್ಟಿಸಿ ಕೀರ್ತಿ ಪಡಕೊಂಡಾರೆಂತ ನಂಬುತ್ತೇನೆ. ಧರ್ಮಸ್ಥಳ ಶ್ರೀಯುತ ಮಾನ್ಯ ಈಗಿನ ಹೆಗ್ಗಡೆಯವರು ಇದೇ ಬೀಡನ್ನೂ ಬೇಗನೆ ಕಟ್ಟಿಸಿ ಮಂಜೈ ಹೆಗ್ಗಡೆಯಂಬ ನಾಮಧೇಯ ಶಾಶ್ವತಗೊಳಿಸ್ಯಾರೆಂತ ಹಾರೈಸುತ್ತೇನೆ.

"ಓರ್ವ ಹಿತಚಿಂತಕ."

ಯಕ್ಷಗಾನವು ನಮ್ಮ ಕರ್ನಾಟಕ ವಾಙ್ಮಯದಲ್ಲಿ ಒಂದು ಅಂಗವಾಗಿದ್ದು ಅದರಲ್ಲೂ ನಮ್ಮ ಪೂರ್ವ ಸಂಸ್ಕೃತಿಯ ವಿದ್ಯಾಭ್ಯಾಸಕ್ಕೆ ಆಧಾರವಾದ ಸಾಧನವಾಗಿದ್ದರೂ ಪ್ರಕೃತ ಆ ಕಲೆಯು ಕೇವಲ ಹೀನಾವಸ್ಥೆಗೆ ಬಿದ್ದು ಬಯಲಾಟವೆಂದ ಕೂಡಲೆ ಅನಾಗರೀಕರ ಕೂಟವೆಂದು ಭಾಸವಾಗುವಷ್ಟು ಶೋಚನೀಯಾವಸ್ಥೆಗೆ ಬಂದಿದೆ. ಅದನ್ನು ಊರ್ಜಿತಾವಸ್ಥೆಗೆ ತರಲು ಇತ್ತೀಚೆಗೆ ನಡಿಯುತ್ತಿರುವ ಪ್ರಯತ್ನಗಳು ಅಷ್ಟಿಷ್ಟೆಂದು ಹೇಳಲಾಗದು. ಆದರೆ ಪ್ರತಿಯೊಂದು ವಿಷಯದಲ್ಲೂ ಕರ್ನಾಟಕದಲ್ಲಿ ಮತಭೇದವಿರುವಂತೆ ಈ ವಿಷಯದಲ್ಲೂ ದಕ್ಷಿಣ ಭಾಗದ ಮಂಗಳೂರು, ಕಾಸರಗೋಡು, ಕೊಡಗು ಕಾರ್ಕಳ ಪ್ರಾಂತ್ಯದವರು ತಮ್ಮ ಸಂಪ್ರದಾಯವೇ ಸರ್ವೋತ್ಕೃಷ್ಟವೆಂದೂ, ಕುಂದಾಪುರ ತಾಲೂಕಿನವರು ತಮ್ಮ ಕ್ರಮವೇ ಆದರ್ಶನೀಯವಾದದ್ದೆಂತಲೂ, ಧಾರವಾಡ, ಉತ್ತರ ಕನ್ನಡ, ಬಾಗಲಕೋಟೆ, ಬಿಜಾಪುರದವರು ತಮ್ಮದು ಶಾಸ್ತ್ರೀಯವಾದದ್ದೆಂತಲೂ, ಇನ್ನು ಮೈಸೂರವರು ಕರ್ನಾಟಕ ಭಾಷಾಸಂಬಂಧ ಪ್ರತಿ ಕಲೆಗೂ ತಮ್ಮದೇ ತವರು ಮನೆ ಎಂದೂ ಪರಸ್ಪರ ಬಡಿದಾಡುತ್ತಿರುವುದನ್ನು ನೋಡಿ ಇವರ ವಿದ್ಯೆಗಳನ್ನೆಲ್ಲಾ ಪ್ರದರ್ಶನಕ್ಕೆ ತಂದು ಅದರಲ್ಲಿ ಅತ್ಯುತ್ತಮವೆಂದು ತೋರುವುದನ್ನು ಇಡೀ ಕರ್ನಾಟಕಕ್ಕೆ ಮಾದರಿಯಾಗಿಟ್ಟುಕೊಳ್ಳಲು ಅನುಕೂಲವಾಗುವಂತೆ ಕುಂದಾಪುರ ತಾಲೂಕಿನವರು ಈ ಯಕ್ಷಗಾನ ಕಲೆಯ ವಿಷಯ ಇಡೀ ಕರ್ನಾಟಕಕ್ಕೆ ಸ್ಪರ್ಧೆಗೆ ಕರೆದಿರುತ್ತಾರೆ. ಬರುವ ೧೯೨೬ನೇ ಇಸವಿ ಜನವರಿ ತಾ. ೯ನೇ ಶನಿವಾರದಿಂದ ಯಕ್ಷಗಾನೋಜ್ಜೀವನ ಪರಿಷತ್ತು ಪ್ರಾರಂಭವಾಗುವುದು. ಅದಕ್ಕೆ ಇಡೀ ಕರ್ನಾಟಕದವರು ಮುಂದಾಗಿ ಬಂದು ತಮ್ಮ ಯೋಗ್ಯತೆಯನ್ನು ಪ್ರದರ್ಶಿಸಿ ಇನ್ನು ಮುಂದೆ ತಾವು ಮೇಲೆ, ತಾವು ಮೇಲೆ ಎಂಬ ಬಡಿದಾಟವನ್ನು ನಿಲ್ಲಿಸಿ ಯಕ್ಷಗಾನೋಜ್ಜೀವನ ಪರಿಷತ್ತನ್ನು ಮಂಗಲಗೊಳಿಸಬೇಕಾಗಿ ಪ್ರಾರ್ಥಿಸುತ್ತೇವೆ. ಈ ಪರಿಷತ್ತಿನ ನಿರ್ಣಯದ ನಕಲನ್ನು ಇದರ ಅಗ್ರ ಇಟ್ಟಿದೆ.

ಮೇಲಿನ ಪರಿಷತ್ತಿನ ಆತಿಥ್ಯೋಪಚಾರವನ್ನು ಶ್ರೀಯುತ ಕೃಷ್ಣರಾಯ ಕೊಡ್ಗಿಯರೂ ಫಲಹಾರೋಪಚಾರವನ್ನು ಶ್ರೀಯುತ ಶಂಕರನಾರಾಯಣ ತಿವರಾಮ ಉಡುಪರೂ, ಬಂಗಾರದ ಪದಕಗಳನ್ನು ಶ್ರೀಯುತ ಪಡೇರ ಹೋಬಳಿ ನರಸಿಂಹ ಕಾರಂತರೂ, ಮಾನಂಜೆ ಶೇಷಗಿರಿರಾಯರೂ, ಅಮ್ಮಾಸೆಬೈಲು ಸರ್ವೋತ್ತಮ ಕೊಡ್ಗಿಯರೂ, ವೀಳ್ಯ ಮತ್ತು ಗ್ಯಾಸ್‌ಲೈಟುಗಳ ಖರ್ಚನ್ನು ಶ್ರೀಯುತ ವಕೀಲ ಅನಂತ ಪದ್ಮನಾಭ ಉಡುಪರೂ, ವಹಿಸುವುದಾಗಿ ದಾಗ್ದಾನಮಾಡಿರುತ್ತಾರೆ ಎಂತ ತಿಳಿಸಲು ತುಂಬಾ ಸಂತೋಷಪಡುತ್ತೇವೆ. ಕರ್ನಾಟಕ ವಾಙ್ಮಯೋದ್ಧಾರ ಕೆಲಸದಲ್ಲಿ ಮೇಲಿನ ಸದ್ಗೃಹಸ್ಥರು ಮುಂದಾಳಾಗಿ ಪ್ರೋತ್ಸಾಹಿಸಿದ್ದು ಅಭಿನಂದನೀಯವಾದದ್ದೆ. ವಾಙ್ಮಯೋದ್ಧಾರ ಕೆಲಸಕ್ಕಾಗಿ ಜನ್ಮವೆತ್ತಿದ ತಾವೂ ಕೂಡ ಈ ನಮ್ಮ ವಿಜ್ಞಾಪನೆ ಮತ್ತು ನಿಯಮಗಳನ್ನು ತಮ್ಮ ಪತ್ರಿಕೆಯಲ್ಲಿ ಕೂಡಲೇ ಪ್ರಕಟಿಸಿ ಇಡೀ ಕರ್ನಾಟಕವು ಸ್ಪರ್ಧೆಗೆ ನಿಲ್ಲಲು ಅನುಕೂಲವಾಗುವಂತೆ ಪ್ರೋತ್ಸಾಹಿಸಬೇಕಾಗಿ ಸವಿನಯದಿಂದ ಪ್ರಾರ್ಥಿಸುವ,

ಕೆ. ಎ. ಕಾರಂತ,
ಕುಂದಾಪುರ ಯಕ್ಷಗಾನೋಜ್ಜೀವನೀ ಸಭೆಯ ಕಾರ್ಯದರ್ಶಿ.
ಮತ್ತು ಪರಿಷತ್ತು ಸ್ವಾಗತ ಕಮಿಟಿಯ ಕಾರ್ಯದರ್ಶಿ.

ದಕ್ಷಿಣ ಕನ್ನಡ ಯಕ್ಷಗಾನೋಜ್ಜೀವನೀ ಪ್ರಥಮ ಪರಿಷತ್ತು ಕುಂದಾಪುರ.

೧ ದಕ್ಷಿಣ ಕನ್ನಡ ಯಕ್ಷಗಾನೋಜ್ಜೀವನೀ ಪರಿಷತ್ತು ಕುಂದಾಪುರ ತಾಲೂಕು ಶಂಕರನಾರಾಯಣ ಮಹಾಕ್ಷೇತ್ರದಲ್ಲಿ ತಾ. ೯-೧-'೨೬ನೇ ಶನಿವಾರ ಸಾಯಂಕಾಲ ಜರಗುವುದು.

೨ ಶ್ರೀಯುತ ಕೃಷ್ಣರಾಯ ಕೊಡ್ಗಿ ಜಮೀನ್ದಾರ ಅಮ್ಮಾಸೆಬೈಲು ಇವರು ಸ್ವಾಗತ ಕಮಿಟಿಯ ಅಧ್ಯಕ್ಷರಾಗಿರುವರು.

೩ ಕನ್ನಡ ನಾಡಿನ ಮಾತೃಭಾಷೆಯ ವಾಕ್‌ಚಾತುರ್ಯವು ಪ್ರದರ್ಶನವಾಗುವುದು.

೪ ಅರ್ಥಗಾರರಲ್ಲಿ ಪ್ರಥಮ ನಿಂತವರಿಗೆ ಒಂದು ಸುವರ್ಣಪದಕ, ದ್ವಿತಿಯಸ್ಥಾನದವರಿಗೆ ಒಂದು ಬೆಳ್ಳಿಯ ಪದಕ, ತೃತೀಯ ಸ್ಥಾನವನ್ನು ಹೊಂದಿದವರಿಗೆ ಒಂದು ಯೋಗ್ಯತಾ ಪತ್ರವು ಕೊಡಲಾಗುವುದು.

೫ ಭಾಗವತರು ಮತ್ತು ಮೃದಂಗ ಬಾರಿಸುವವರಿಗೂ ಮೇಲಿನಂತೆ ಒಂದೊಂದು ಸುವರ್ಣ ಪದಕ, ಒಂದೊಂದು ಬೆಳ್ಳಿಯ ಪದಕ, ಒಂದೊಂದ್ ಮಾನ್ಯ ಪತ್ರಗಳು ಕೊಡಲಾಗುವುದು.

೬ "ಯಕ್ಷಗಾನವು ನಮ್ಮ ಪ್ರಾಚೀನ ಕಲೆಗಳಲ್ಲಿ ಒಂದು ಸರ್ವಶ್ರೇಷ್ಠವಾದ ಕಲೆ" ಎಂದು ೮ ಅರ್ಧ ಕಾಪಿನ ಒಂದು ಬದಿಯ ಪುಟಗಳಲ್ಲಿ ಉತ್ತಮ ರೀತಿ ಪ್ರಬಂಧ ಬರೆದವರಿಗೆ ಒಂದು ಸುವರ್ಣಪದಕವು ಕೊಡಲಾಗುವುದು. ಆದರೆ ಈ ಪ್ರಬಂಧಗಳು ಜನವರಿ ತಾರೀಕು ೫ರ ವಳಗೆ ಸ್ವಾಗತ ಕಮಿಟಿಯ ಅಧ್ಯಕ್ಷರ ಕೈಸೇರತಕ್ಕದ್ದು.

೭ ಮೇಲಿನ ಪಂಥಕ್ಕೆ ನಿಲ್ಲುವವರು ರೂ. ೩-೦-೦ ಪ್ರವೇಶ ಹಾಸಲು ನಿಶ್ಚಿ ಬರುವ ಜನವರಿ ೫ನೇ ತಾರೀಕಿನ ಒಳಗೆ ತಮ್ಮ ಪೂರ್ಣ ಹೆಸರು ವಿಳಾಸ ಕಾಣಿಸಿ ಸ್ವಾಗತ ಕಮಿಟಿಯ ತಮ್ಮ ಅರ್ಜಿಯನ್ನು ಕಳುಹಿಸತಕ್ಕದ್ದು.

೮ ಮೇಲಿನ ಸೂತ್ರದಂತೆ ರೂ. ೩-೦-೦ ಕಳುಹಿಸಲು ಸಾಧ್ಯವಿಲ್ಲದವರು ತಮ್ಮ ತಾಲೂಕು ಕಮಿಟಿಯವರಿಂದ ಯೋಗ್ಯತಾ ಪತ್ರ ಕಳುಹಿಸಿದ್ದಲ್ಲಿ ಧರ್ಮಾರ್ಥವಾಗಿ ಟಿಕೇಟು ಕೊಡಲಾಗುವುದು.

೯ ಪರಿಷತ್ತಿನ ಅಧ್ಯಕ್ಷರ ಅಪ್ಪಣೆಯರಿತೆ ಸರ್ವರೂ ಸಭೆಯಲ್ಲಿ ವರ್ತಿಸತಕ್ಕದ್ದು. ವಿಚಾರಿಕ ಕಮಿಟಿಯವರು ಕೊಟ್ಟ ಅರ್ಥವನ್ನು ಪಾತ್ರಗಳು ಅನ್ವಯಿಸತಕ್ಕದ್ದು.

೧೦ ಪಾತ್ರಗಳ ಯೋಗ್ಯತಾ ಪರೀಕ್ಷೆಯು ವಿಚಾರಿಕ ಮಂಡಳಿಯಿಂದ ನಡಿಸಲ್ಪಡುವುದು.

೧೧ ಸ್ಪರ್ಧೆಗೆ ನಿಲ್ಲಲು ಇಡೀ ಕರ್ನಾಟಕ ಪ್ರಾಂತ್ಯದವರಿಗೆ ಎಡೆ ಇರುವುದು.

೧೨ ವಿಚಾರಿಕ ಕಮಿಟಿಯ ತೀರ್ಮಾನವೇ ಯೋಗ್ಯತಾ ನಿರ್ಣಯದಲ್ಲಿ ಕೊನೆಯ ತೀರ್ಮಾನ.

೧೩ ಪರಿಷತ್ತಿನ ಸದಸ್ಯರ ಮತ್ತು ಸ್ಪರ್ಧೆಗೆ ನಿಲ್ಲುವ ಪಾತ್ರಗಳ ಊಟೋಪಚಾರಗಳನ್ನೆಲ್ಲಾ ಸ್ವಾಗತ ಕಮಿಟಿ ಕಡೆಯಿಂದ ನಡಿಸಲ್ಪಡುವುದು.

೧೪ ಪರಿಷತ್ತಿನಲ್ಲಿ ಅಧ್ಯಕ್ಷರನ್ನು ಆರಿಸಲ್ಪಡುವುದು. ನಂತರ ವಿಚಾರಿಕ ಕಮಿಟಿಯ ನಿರ್ಮಾಣವು ರಚಿಸಲ್ಪಡುವುದು.

೧೫ ವಿಚಾರಿಕ ಕಮಿಟಿಗೆ ಸ್ವಾಗತ ಕಮಿಟಿಯ ಅಧ್ಯಕ್ಷರೂ, ಪರಿಷತ್ತಿನ ಅಧ್ಯಕ್ಷರೂ, ಸ್ವಾಗತ ಕಮಿಟಿಯ ಕಾರ್ಯದರ್ಶಿಯರೂ, ಕೋಶಾಧ್ಯಕರೂ, ಪ್ರತಿ ತಾಲೂಕು ಕಮಿಟಿಯ ಅಧ್ಯಕ್ಷರೂ ಮತ್ತು ಕಾರ್ಯದರ್ಶಿಯರೂ, ಜಿಲ್ಲಾ ಕಮಿಟಿಯ ಅಧ್ಯಕ್ಷರೂ, ಕಾರ್ಯದರ್ಶಿಯರೂ, ಮೆಂಬರರಾಗಿರುವದಲ್ಲದೆ ಸ್ಥಳಿಕ ಮಂಡಳಿಯಿಂದ ೪ ಜನ ಮೆಂಬರರನ್ನೂ ಇತರ ಪ್ರತಿ ತಾಲೂಕಿಗೆ ೨ ಪ್ರತಿನಿಧಿಯರಂತೆಯೂ ಆರಿಸತಕ್ಕದ್ದು.

೧೬ ಶ್ರೀಯುತ ಹೊಸಕೊಪ್ಪ ಕೃಷ್ಣರಾಯರನ್ನು ಪರಿಷತ್ತಿನ ಅಧ್ಯಕ್ಷರನ್ನಾಗಿ ಸ್ಥಳೀಕ ಮಂಡಳಿಯು ಸೂಚಿಸುತ್ತದೆ.

೧೭ ಬೇರೆ ತಾಲೂಕು ಕಮಿಟಿಯವರು ಮತ್ತು ಜಿಲ್ಲಾ ಕಮಿಟಿಯೂ ಪರಿಷತ್ತಿನ ಅಧ್ಯಕ್ಷರ ಸೂಚನೆಯನ್ನು ಬರುವ ಜನವರಿ ೫ನೇ ತಾರೀಕಿನ ಒಳಗೆ ಸ್ವಾಗತ ಕಮಿಟಿಯ ಅಧ್ಯಕ್ಷರಿಗೆ ತಿಳಿಸತಕ್ಕದ್ದು.

೧೮ ಆಯಾಯ ತಾಲೂಕಿನ ಯಕ್ಷಗಾನೋಜ್ಜೀವನೀ ಸಭೆಯ ಪ್ರತಿನಿಧಿಗಳೂ ಸ್ವಾಗತ ಕಮಿಟಿಯ ಮೆಂಬರರೂ ಈ ಸಭೆಯ ಸದಸ್ಯರಾಗಿರುತ್ತಾರೆ.

೧೯ ಸ್ವಾಗತ ಕಮಿಟಿಯ ಮೆಂಬರರಾಗತಕ್ಕವರು ರೂ. ೩-೦-೦ಕ್ಕೆ ಕಡಿಮೆಯಾಗದ ಟಿಕೇಟು ಪಡಿಯತಕ್ಕದ್ದು.

೨೦ ಸ್ಪರ್ಧೆಗೆ ನಿಂತು ಅದರಲ್ಲಿ ಗೆಲ್ಲುವ ಸ್ತ್ರೀ ಪ್ರತಿನಿಧಿಯರಿಗೆ ಅವರ ಪ್ರಯಾಣ ಖರ್ಚನ್ನು ಸ್ವಾಗತ ಕಮಿಟಿಯು ಕೊಡುವುದು.

೨೧ ಈ ಸಂಬಂಧ ಪತ್ರವ್ಯವಹಾರಗಳನ್ನು ಸ್ವಾಗತ ಕಮಿಟಿಯ ಅಧ್ಯಕ್ಷರಿಗೆ ನಡಿಸತಕ್ಕದ್ದು.

೨೨ ವಿಶೇಷ ಪ್ರಸಂಗದಲ್ಲಿ ಮೇಲಿನ ನಿರ್ಣಯಗಳನ್ನು ಬದಲಾಯಿಸಲು ಸ್ವಾಗತ ಕಮಿಟಿಯವರಿಗೆ ಅಧಿಕಾರವಿರುವುದು

K. A. KARANTH,
ಕಾರ್ಯದರ್ಶಿ.
ಯಕ್ಷಗಾನೋಜ್ಜೀವನೀ ಸಭೆ, ಕುಂದಾಪುರ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ್ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀರಮಿತ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. | 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0
Reserve and other sinking Funds „ 259,000—0—0

ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೫ ಸೀಸೆಗೆ ೪—೧೦—೦. ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,
ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟಿವಣಿಗೆ ಮಾತ್ರ.

Free! Free!! Free!!
ಪ್ರಸಿದ್ಧವಾದ
"ಕಾಮಶಾಸ್ತ್ರ"
ಈಗಲೆ ತಯಾರಾಗಿದೆ.
ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ ಎಸ್. ಪಿ. ಆಚಾರ್ಯ ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ತುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್.

ಮನೋಹರ ಸಿಹಿ ಕಾಫಿ ಕ್ಲಬ್. ಮಾರ್ಕೆಟು ರೋಡು, ಮಂಗಳೂರು. | ಅಥವಾ | "ಸದಾನಂದ ಕಾಫಿ ಕ್ಲಬ್" ರಥಬೀದಿ, ಮಂಗಳೂರು

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | ## ವಜ್ರಾಂಗ-ಬಿಂದು | ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚ ತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುಶಂಕೆಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬಿದ್ದು ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲು ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಸ್ಥಾವಣೆ, (ಜಿಲ್ಲಾ ಬೆಳಗಾಂವ).

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

=ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಖರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಕೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು, ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವ್ರು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಕೀರಿಯೋ ವ ಮೂತ್ರ ಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ ೩ ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನು ದೂರ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅ ಮೃ ತಾ ಶ್ರ ಮ,
28 ಏಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ, ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ರದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ಡಾಕ್ಟರ್. ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Edited, Printed & Published by V. S. Kamath at the M. S. A. SHARADA PRESS, MANGALORE.

Registered: No. M. 498.
ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ಧೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೧ನೇ ಶುಕ್ರವಾರ ಜನವರಿ ೧೯೨೬. ಸಂಚಿಕೆ ೨.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. ಹೆಡ್ ಆಫೀಸು: ಉಡುಪಿ. Branch: COONDAPOOR. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ಮೌಲ್ಯಕೆತ್ತ ಮೂಲಧನ	ರೂ. 1,73,185—9—11.
ಅಪದ್ಧನ ವಗೈರೆ ಎತ್ತಗಳು	ರೂ. 64,700—0—0.
ಸಾ. ಸೇ. 6ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ವಿವೇಚುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ಮೌಲ್ಯಕೆತ್ತ ಮೂಲಧನ 1,73,185—9—11, ಅಪದ್ಧನ ವ ಇತರ ಎತ್ತಗಳು 64,700—0—0, ಠೇವಣಾತಿಗಳು 5,10,077-10-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳುವಾರಿಗಳಿಗೆ 4371—0—0, ವಿವೇಚನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 93,340—10—5, ಜುಮ್ಲಾ ರೂ. 8,45,674—14—7.

ಆಸ್ತಿ ವ ಸೊತ್ತುಗಳು.

ಹಿಸ್ಸೆ ಕಟ್ಟೋಣ ಕಟ್ಟಿದ ಪೈಜರಿಗಳು ವಗೈರೆ 4134—4—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496—6—2, ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡ) 41,741—14—2, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಠೇವಿದಾಗ್ಗೆ ಸಿಕ್ಕತಕ್ಕ ಶಿಲ್ಕು ನಗದು 26,131—6—3, ಜುಮ್ಲಾ ರೂಪಾಯಿ 8,45,674—14—7.

ನಿರಖು ಠೇವಣಾತಿಗಳನ್ನು ಕಾಲಕ್ಕನುಸರಿಸಿ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಖ್ಯವಾದ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಸಹ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾವುಕಾರಿ ಹುಂಡಿಗಳನ್ನೂ ವಟ್ಟಾಯಿಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಿವೇಚುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

N. Anand Rao,
Secretary.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ತೇಜಸ್ಸು, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!
[ಟ್ರೇಡ್ ಮಾರ್ಕ್] ಅಗಸ್ತ್ಯ [ರಿಜಿಸ್ಟರ್ ಮಾಡಲ್ಪಟ್ಟಿದೆ]

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೋಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಪಾಲ್ಕಿಗೆಂತು ಖಿಮಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1—9—0.
ವಿ. ಪಿ. ಖರ್ಚು ಪ್ರತ್ಯೇಕ, ವಿಶೇಷ ಮಾಹಿತಿಗೆ ಬರೆಯಿರಿ.

ವಿಳಾಸ— ದೇವಣ್ಣ ನಾರಾಯಣ ಸೇಟ್, ಸರಾಫ, ಗೋಕರ್ಣ, ಮಂಗಳೂರು, (ಎ. ಕೆ.)

ಅಪೂರ್ವ ಸಂದರ್ಭ.

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8

ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬಿಲಾರ್ಡ್ ಎಸ್ಟೇಟ್, ಮುಂಬಯಿ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕ್ಷಣದಲ್ಲಿ ಶಮನವಾಗುವುದು. ಇದು ಯಾವ ತರದ ಶೀತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಕುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.
109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

=ಗೋಡೆಗೆ ತಗಲಿಸುವ
ಹೊಸ ನಮೂನೆಯ—
ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಖರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಕೀಗ ಕೊಡಬೇಕಾದಿಲ್ಲ. ಇದರಲ್ಲಿ ಕಾಣುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು, ತನ್ನಷ್ಟಕ್ಕೆ ತಾನೇ ಟಿಕ್—ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುವ್ರು.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟೈಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.

"ಬಿ" ಟೈಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬೈಂಡ್ ಪೆಪರ್ ಕ್ಲಿಪ್ ಟೈಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಖಂ ... ... ೨-೦-೦.
೧೨ ಪ್ಯಾಕೆಟ್ ನಾಟಿ ತರಕಾರಿ ಬೀಜಗಳು ೧೨ ರಖಂ ... ... ೧-೧೨-೦.
೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಖಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಗಿಗೆ, ವಿ. ಪಿ. ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು. ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್‌ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮೂವ್‌ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8
18 ಕೆರೆಟು ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟೈಮ್‌ಪೀಸ ರೂ. 2-4-0
9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.
ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
184 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ ಬಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಎಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕೊರ್ ಆರ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಟೈಂಯಿನ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಶಕ್ತಿ ಔಷಧ. ರೂ. ೦—೬—೦ "AGENTS WANTED"
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦ LIBERAL DISCOUNT TO TRADE

ಕಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ವಾಂಸರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	„ 2—8—0.
„ ಸ್ಥಳೀಕರಿಗೆ ...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1¼ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಮ್ಮರ್ ರೇಶ್ಮೆ ಮಡಿಗಳು, ಜಮಖಾನೆಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಸಾಲಿಗ್ರಾಮ, ಜಾಘಂಟೆ, ಶಾಳ್, ಪೆಟ್ಟೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಪೋಟೋ ಉಂಗುರಗಳು ಮುತ್ತು, ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮುಖಾಂತರ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಮುಖ ನಾರಾಯಣಾಚಾರ್ಯ
ಮುದ್ದು ಕರುಣೆ, ಬಾಗಿಲಂಗಡಿ, ಕಾಶೀ ಕ್ಷೇತ್ರ.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಪುಷ್ಯ ಬ| ೧೦ ಶನಿವಾರದಿಂದ ಕ್ರೋಧನ ಸಂವತ್ಸರದ ಮಾಘ ಶು| ೧ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಧನು. ಪೆರಾರ್ದೆ.)

ತಾರೀಖು	ವಾರ	ತಿ.	ಘಳಿಗೆ.	ನಕ್ಷತ್ರ	ಘಳಿಗೆ.	ಯೋಗ	ಸೂರ್ಯ ಉ.	ಸೂರ್ಯ ಅಸ್ತ.
9	ಶನಿ	೧೦	೩೬.೨೮	ಸ್ವಾತಿ	೧೦.೫	೨೫	6.57	6.18
10	ರವಿ	೧೧	೩೪.೧೬	ವಿಶಾಖಾ	೯.೪೬	೨೬	6.57	6.18
11	ಸೋಮ	೧೨	೩೧.೨	ಅನುರಾಧಾ	೮.೩೨	೨೭	6.58	6.19
12	ಮಂಗಳ	೧೩	೨೬.೪೪	ಜ್ಯೇಷ್ಠಾ	೬.೧೪	೨೮	6.58	6.20
13	ಬುಧ	೧೪	೨೨.೧	ಮೂಲಾ	೩.೨೮	೨೯	6.58	6.20
14	ಗುರು	●	೧೬.೪೪	ಉ. ಷಾ.	[illegible]	೧	6.59	6.21
15	ಶುಕ್ರ	೧	೧೧.೨	ಶ್ರವಣಾ	೫೧.೪೪	೨	6.59	6.21

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿವಸ ಮಳೆ	ಒಟ್ಟು ಮಳೆ.
1	94—8	78—8	—	—
2	91—6	72—9	1—06	—
3	87—8	73—3	—	—
4	90—2	73—5	—	—
5	89—3	73—2	—	—
6	87—1	72—2	—	—
7	88—6	70—6	—	—

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಅ.	ವರೆಗೆ ರೂ. ಅ
ಮಸ್ಕತಿ	8— 4	9— 0
ಹೊಸ ಗುಡ್ಡು ...	8— 0	8— 8
ಸುಗ್ಗಿ ...	8— 0	9— 0
ಅಸ್ನಲ್ ಬೆಳ್ತಿಗೆ ...	8—12	10— 0
ಹೊಸ ರಾಶಿ ...	7— 0	7—14
ರಂಗೂನು ಬೆಳ್ತಿಗೆ ಗೋಣಿ ೧ ...	13— 0	14— 0
ಗೋದಿ ಗೋಣಿ ೧ಕ್ಕೆ ...	18— 8	20— 8
ಹುರುಳಿಗೋಣಿ ೧ಕ್ಕೆ ...	9— 0	9— 8
ಉದ್ದಿನಗೋಣಿ ೧ಕ್ಕೆ ...	14— 8	15— 0
ತೊಗರಿಗೋಣಿ ೧ಕ್ಕೆ ...	14— 8	15— 0
ತೊಗರಿಬೇಳೆ ಗೋಣಿ ೧ಕ್ಕೆ ...	16— 8	22— 0
ಉದ್ದುಗೋಣಿ ೧ಕ್ಕೆ ...	17— 0	17— 8
ಹೆಸರುಗೋಣಿ ೧ಕ್ಕೆ ...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ ...	60— 0	62— 8
ಉಪ್ಪು ಗೋಣಿ ೧ಕ್ಕೆ ...	4— 0	4— 4
ಕೊಬ್ರಿ ಖಂಡಿ ೧ಕ್ಕೆ ...	110— 0	125— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	42— 0	—
ಎಳ್ಳಿಂಡಿ ಖಂಡಿ ೧ಕ್ಕೆ ...	40— 0	45— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8—10	—
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	11— 0
ಹರಳೆಣ್ಣೆ ಬೆಣ್ಣೆಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4— 6	—
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	9— 0	—
ಸಾಸಿವೆ ಮುಡಿ ೧ಕ್ಕೆ ...	9— 8	10— 0
ಕೊತ್ತಂಬರಿ ಮುಡಿ ೧ಕ್ಕೆ ...	3— 8	4— 4
ಕಾಫಿ ಖಂಡಿ ೧ಕ್ಕೆ ...	345— 0	—
ಚಿಕಣೆ ಅಡಿಕೆ ಖಂಡಿ ೧ಕ್ಕೆ ...	275— 0	295— 0
ಹೊಸ ಅಡಿಕೆ ಖಂಡಿ ೧ಕ್ಕೆ ...	160— 0	210— 0
ಕಾಳುಮೆಣಸು ಖಂಡಿ ೧ಕ್ಕೆ ...	400— 0	—
ಅರಶಿನ ಮುಡಿ ೧ಕ್ಕೆ ...	45— 0	—
ಗೇರುಬೀಜ ಮುಡಿ ೧ಕ್ಕೆ ...	3—14	—
ಹುಣಸೆ ಖಂಡಿ ೧ಕ್ಕೆ ...	45— 0	65— 0
ತಾಂಬ್ರ ತಗಡು ಮಣ ೧ಕ್ಕೆ ...	16— 4	16—12
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	21— 0	—
ಚೀನಿ ಬೆಳ್ಳಿ ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮಣ ೧ಕ್ಕೆ ...	16— 8	
ತಗಡು	13— 6	

ಕನ್ನಡಿಗರೇ! **ವಸಂತ.** ಓದಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ⅛ ಘಟ ಸಹ್ಯಜನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮುಖಾಂತರವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಫ್ ಕೊಸ್ಟ್ಸ್, ಮೆಮೊರಂಡಮ್ ಒಫ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ತ್ವರೆ ಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್, ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—
ಶಾರದಾ ಛಾಪಖಾನೆ,
ಮಂಗಳೂರು.

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಣಿಕ್ಕ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಕಟ್ಟಿದ ಚೋರ ಕಥೆ ... ...
(7) ಕುವರಾರ ರಾಮನ ಕಥೆ ... ...
(8) ಕೃಷ್ಣದಾನಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣ ದೀಪಾಕ್ಷಮೋದ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷಾಗೃಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಚ ಕಥೆ ...
(26) „ ಗೋವಿನ ಚರಿತ್ರೆ ... ...
(27) „ ದುಶ್ಯಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

ಶಾರದಾ ಛಾಪಖಾನೆ, ಮಂಗಳೂರು.

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
O. P. No. 98/1925.

ಸಂಜಾಥ ವೈಕುಂಠ ನಾಯ್ಕ — ಅರ್ಜಿದಾರ.
ಎದ್ರಿ
ನೇತ್ರಾವತಿ ಯಾನೆ ಸರಸ್ವತಿ ಕೂಡಾ—ರೆಸ್ಪೊಂಡೆಂಟರು.

ಅರ್ಜಿದಾರನು ತನ್ನ ಮೃತ ಪಟ್ಟ ತಂದೆ ಸಂಜಾಥ ನರಸಿಂಗ ನಾಯ್ಕರ ಹೆಸರಲ್ಲಿರುವ "Toronto Manufacturer's Life Iusurance Co," ಪೋಲಿಸಿ ನಂಬ್ರ 160.614ರ ಪ್ರಕಾರ ಬರತಕ್ಕ ರೂಪಾಯಿ 2000ವನ್ನು ವಸೂಲ್ ಮಾಡುವ ಬಗ್ಗೆ ತನಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಮಾಡಿದ ಅರ್ಜಿಯು ಈ ಕೋರ್ಟಿನಲ್ಲಿ ತಾರೀಕು 15—1—1926ರಲ್ಲು ಪೂರ್ವಾಹ್ನ ಘಂಟೆ 11ಕ್ಕೆ ತನಿಖೆ ಇಟ್ಟಿರುತ್ತದೆ. ಆಕ್ಷೇಪವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಜ್ಯಾಹೀರು ಮಾಡಿಕೊಳ್ಳಬಹುದು.

ಪುತ್ತೂರು,
ತಾ. 2—1—1926. } H PUNDARIK BHAT,
Pleader for Petitioner.

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 99/25.

ಸರಾಫ ವೈಕುಂಠ ನ್ಯಾಕ — ಅರ್ಜಿದಾರ.

ಎದ್ರಿ

ಪದ್ಮಾವತಿ ಯಾನೆ ಗೌರಿ ಕೂಡ—ರೆಸ್ಪೊಂಡೆಂಟರು.

ಅರ್ಜಿದಾರನು ತನ್ನ ಮೃತಪಟ್ಟ ತಂದೆ ಸರಾಫ ನರಸಿಂಗ ನಾಯ್ಕರ ಹೆಸರಲ್ಲಿರುವ "Toronto Manufacturer's Life Insurance Co." ಪೊಲಿಸಿ ನಂಬ್ರ 110.614ರ ಪ್ರಕಾರ ಬರತಕ್ಕ ರೂಪಾಯಿ 2000ವನ್ನು ಸದರಿ ಕಂಪೆನಿಯಿಂದ ವಸೂಲು ಮಾಡುವರೆ ತನಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಈ ಕೋರ್ಟಿಗೆ ಮಾಡಿದ ಅರ್ಜಿಯು ತಾ. 15-1-'26ನೇ ಪೂರ್ವಾಹ್ನ ಘಂಟೆ 11ಕ್ಕೆ ತನ್ಕಿಗೆ ಇಟ್ಟಿಯದೆ. ಆಕ್ಷೇಪ ಉಳ್ಳವರು ತಮ್ಮ ಆಕ್ಷೇಪಣೆಗಳನ್ನು ಜ್ಯಾಹೀರು ಮಾಡಿಕೊಳ್ಳಬಹುದು.

ಪುತ್ತೂರು, ತಾ. 2—1—1926. } H PUNDARIK BHAT, *Vakil for Petitioner.*

ನೋಟೀಸು.

೧೯೨೫ನೇ ಇಸ್ವಿ ದಶಂಬರ ತಾರೀಕು 4ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆ ಮಾಡಿದ ಪ್ರಕಾರ ಈ ಕೆಳಗೆ ಕಾಣಿಸಿದ ಅಸಾಮಿಯುವರ ಬಾಬ್ತು ನಗಗಳು ಮಿಜಾರ ಗಣೇಶ ಪೈಗಳ ಆಫೀಸಿನ ಎದುರುಗಡೆಯಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿಬಂದ ಐವೇಜಿನಲ್ಲಿ ಈ ಕೆಳಗೆ ಕಾಣಿಸಿದ ಪ್ರಕಾರ ಅಸ್ಲು ಬಡ್ಡಿ ಮತ್ತು ಇತರ ಖರ್ಚು ಸಹಾ ಕಳದು ಕಮ್ಮಿ ಬಿದ್ದ ಐವೇಜಿನ ವಿವರವು ಈ ಕೆಳಗೆ ಕಾಣಿಸಿದ ಪ್ರಕಾರ ಆಯಾಯ ಅಸಾಮಿಯುವರು ಕಮ್ಮಿ ಬಿದ್ದ ಐವೇಜು ಈ ವಿಷಯದಲ್ಲಿ ಬಿಟ್ಟ ನೋಟೀಸಿನಲ್ಲಿ ಕಾಣಿಸಿದ ಪ್ರಕಾರ ನೋಟೀಸು ತಲ್ಪಿದ ಒಂದು ವಾರದೊಳಗೆ ಯಾವ ವಿಧದಿಂದಲೂ ಹಣ ಪಾವತಿ ಮಾಡುವರೆ ತಪ್ಪಿದರೆ ಆ ವಿಷಯದಲ್ಲಿ ನಾನು ಮಾಡುವ ಸಕಲ ದಾವೆಯ ಖರ್ಚಿಗೆ ಆಯಾಯ ಅಸಾಮಿಯುವರು ಜವಾಬ್ದಾರರಾಗಿರುತ್ತಾರೆ.

ಹೆಸರು.	ಅಸ್ಲು ಬಡ್ಡಿ ಇತರ ಖರ್ಚು.	ಏಲಮಿನಲ್ಲಿ ಹು.ಬ.ಮೊ.	ಬಾಕಿಬರತಕ್ಕ ಮೊಬಲಗು.
ಕಾವೂರಲ್ಲಿರುವ ಪಟೇಲ್ ಮಾರಣ್ಣಾಳ್ವ ಆಳ್ವ ಬರ್ದ ಬಾಬ್ತು ಬರತಕ್ಕ ಅಸ್ಲು ಬಡ್ಡಿ ಮತ್ತು ಇತರ ಖರ್ಚು ಸಹಾ ಕೂಡ ರೂಪಾಯಿ	[illegible]	[illegible]	[illegible]
ಗೋಳಿಕಟ್ಟೆ ಬಜಾರ ವಲ್ಲಿ [illegible] ಬರತಕ್ಕ ಅಸ್ಲು ಬಡ್ಡಿ ಇತರ ಖರ್ಚು ಕೂಡ ರೂಪಾಯಿ	[illegible]	[illegible]	[illegible]
[illegible] ಬರತಕ್ಕ ಅಸ್ಲು ಬಡ್ಡಿ ಇತರ ಖರ್ಚು ಕೂಡ ರೂಪಾಯಿ	[illegible]	[illegible]	[illegible]
ಗೋಳಿಕಟ್ಟೆ ಬಜಾರದಲ್ಲಿ ಇದ್ದಿಷ್ಟ ಬ್ಯಾರಿ, ಬರತಕ್ಕ ಅಸ್ಲು ಬಡ್ಡಿ ಇತರ ಖರ್ಚು ಕೂಡ ರೂಪಾಯಿ	೪೯-೦-೦,	೬೪-೦-೦,	೧೫೬-೦-೦.

ಮಿಜಾರ ತಿಮ್ಮಪ್ಪ ಪೈ ರುಜು.

ನೋಟೀಸು.

ಪುತ್ತೂರು ಡಿವಿಜನಲ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 101/1925.

ಮುಡಂಕಿಲ ಯಾನೆ ಬಿರ್ಮಣ ಪೂಜಾರಿ ಸಹಾ—ಅರ್ಜಿದಾರರು

ಕೊರಗ ಪೂಜಾರಿ — ಎದ್ರಿ.

ಕರಾಯ ಗ್ರಾಮದ ಮುಗ್ಗ ಎಂಬಲ್ಲಿದ್ದ ಹಾಲಿ ಮೃತಪಟ್ಟಿರುವ ಬೊಳ್ಳ ಪೂಜಾರಿಗೆ ಬಾರ್ಯ ಗ್ರಾಮದ ಅಲದ್ಕ ಎಂಬಲ್ಲಿರುವ ಲಿಂಗಪ್ಪ ಗೌಡ, ಸುಬ್ಬಯ್ಯ ಗೌಡ ಕೂಡ 2 ಜನರು ತಾ. 22—5—'22ರಲ್ಲು ಬರಕೊಟ್ಟ ರಿಜಿಸ್ಟ್ರಿ ಜಾನುವಾರು ಅಡವು ದಸ್ತಾವೇಜು ಪ್ರಕಾರ ಬಹಾ ಅಸ್ಲು ರೂಪಾಯಿ 100 ವ ಬಡ್ಡಿ ರೂ. 60—12—0ನ್ನು ವಸೂಲು ಪಡಿಯುವರೆ ಅರ್ಜಿದಾರರಿಗೆ ವಾರೀಸು ಸರ್ಟಿಫಿಕೇಟು ಕೊಡಬೇಕೆಂದು ಮೇಲಿನ ಅರ್ಜಿಯನ್ನು ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ ದಾಖಲು ಮಾಡಿಯದೆ. ಸದರಿ ಅರ್ಜಿ ತಾ. 25—1—'26ಕ್ಕೆ ಇಟ್ಟಿರುತ್ತದೆ. ಆ ಕುರಿತು ಯಾರಿಗಾದರೂ ಆಕ್ಷೇಪವಿರುವದಾದರೆ ಸದರಿ ಕೋರ್ಟಿಗೆ ಮೇಲಿನ ತಾರೀಕಿಗೆ ಮನವಿಮಾಡಬೇಕಾಗಿ ಈ ಮೂಲಕ ತಿಳಿಸಿಯದೆ.

K. KRISHNARAYA SHENAI

Pleader for Petitioners.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ

O. P. No. 126/1925.

ವೆಂಕಟಸುಬ್ಬಾಚಾರ—ಅರ್ಜಿದಾರ,

ಮತ್ತು

ಶೇಷಕನಂತ — ರೆಸ್ಪೊಂಡೆಂಟರ.

ಮೃತಪಟ್ಟಿರುವ ವೆಂಕಟ್ರಮಣ ಕನಂತರ ಮ್ಯಾನರ್ ಮಕ್ಕಳು, ಸುಬ್ರಾಯ ವ ಶೇಷಮ್ಮ, ಇವರ ದೇಹದ ವ ಆಸ್ತಿ ಗಾರ್ಡಿಯನಾಗಿ ತನ್ನನ್ನು ನೇಮಿಸಬೇಕಾಗಿ ವಗೈರೆ ವೆಂಕಟಸುಬ್ಬಚಾತರನು ಕೊಟ್ಟ ಮೇಲ್ಕಂಡ ಅರ್ಜಿಯು ಇದೇ ತಾ. 15—1—1926ಕ್ಕೆ ತನ್ಕಿಗೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುತ್ತದೆ. ಆಕ್ಷೇಪವುಳ್ಳವರು ಸದರಿ ತಾರೀಕಿಗೆ ಜ್ಯಾಹೀರು ಮಾಡಿಕೊಳ್ಳಬಹುದು.

ಮಂಗಳೂರು, ತಾ. 5—1—1926. } P. Sanjiva Rao, *Vakil for Petitioner.*

ನೋಟೀಸು.

ದಕ್ಷಿಣ ಕನ್ನಡಾ ವೊಫೀಶಿಯಲ್ ರಿಸೀವರರ

—: ಕೋರ್ಟಿನಲ್ಲಿ :—

ಐ. ಪಿ. ನಂಬ್ರ 110/1925.

ಅಂಬು ಪೂದುವಾಳ ಮದಕ್ಕದ ಕೊವ್ವ ಪೂದುವಾಳನ ಅಳಿಯ ವ ಚಿರಿಅಮ್ಮನ ಮಗ ಅಸಕ ಗೋಡು ತಾಲೂಕು ತಂಕತ್ರಿಕರಪುರು ಗ್ರಾಮ, | ಅರ್ಜಿದಾರ.

ಮತ್ತು

ತೈಯ್ಯು ಅವ್ವಾಕ ಕೂಡ 2 ಜನರು—ಕ್ರೆಡಿಟರ್ಸ್.

ಸದರಿ ಅರ್ಜಿದಾರನು ತನ್ನನ್ನು ಇನ್ಸೊಲ್ವೆಂಟ ಎಂತ ಎಡ್ಜಜ್ಯ ಮಾಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ಸದರಿ ದಿವಾಳಿ ಅರ್ಜಿ ದಾಖಲು ಮಾಡಿರುತ್ತಾನೆ. ಆ ಅರ್ಜಿಯು 1926ನೇ ಇಸ್ವಿ ಜನವರಿ ತಾ. 16ನೇ ಶನಿವಾರ ಪೂರ್ವಾಹ್ನ ಘಂಟೆ 11ಕ್ಕೆ ತನ್ಕಿಗೆ ಇಟ್ಟದೆ. ಯಾರಾದರೂ ಆಕ್ಷೇಪವುಳ್ಳವರು ಮೇಲ್ಕಂಡ ತಾರೀಕಿಗೆ ತಮ್ಮ ಆಕ್ಷೇಪಣೆಗಳನ್ನು ದಾಖಲ್ಮಾಡತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಸೋಣಾಗಿರುತ್ತದೆ.

ಮಂಗಳೂರು, ತಾ. 2—1—1926. } K. P. Gopalkrishna Rao, *Vakil for Petitioner.*

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,

ಮಂಗಳೂರು.

ವಿವಿಧ ವಿಷಯಗಳು.

ಮಂಗಳೂರು ಪಟ್ಟಣದ ಅಭಿವೃದ್ಧಿ.

ಇದೇ ಪಟ್ಟಣದ ಮಾದರಿಯಲ್ಲಿ ಬೆಂಗಳೂರು, ಮಧುರೆ ಇತ್ಯಾದಿ ಪಟ್ಟಣಗಳಲ್ಲಿ ಮುನ್ಸಿಪಾಲಿಟಿ ಇರುವದು. ಇದ್ದಾಗ್ಯೂ ಕೆಲವು ಸಂಗತಿಗಳಲ್ಲಿ ಮಂಗಳೂರು ಮುನ್ಸಿಪಾಲಿಟಿಯ ಏರ್ಪಾಡು ಅತೀ ಉತ್ತಮವಾಗಿ ಕಾಣುವುದು. ದೀಪದ ಏರ್ಪಾಡು, ಮಾರ್ಕೆಟಿನ ಶುಚಿತ್ವ, ಮಾರ್ಗದ ದುರುಸ್ತಿ ಇತ್ಯಾದಿ ಉತ್ತಮವಿದ್ದರೂ, ಕಾಫಿ ಮತ್ತು ಊಟದ ಹೊಟೇಲು [illegible]

ಒಂದು ಅಸ್ಪತ್ರೆಯನ್ನು ಇಟ್ಟು ಅವರ ಚಿಕಿತ್ಸೆ ಹೊಂದಿಸಿ ಆರೈಕೆಯೂ ಜೀವನ ಪೋಷಿಸುತ್ತಾರಂತೆ. [illegible]

ಹಿಂದೂಸ್ಥಾನದಲ್ಲಿ, ಹೆಂಗಸರಿಗಿಂತಲೂ ಗಂಡಸರ ಸಂಖ್ಯೆಯೇ ಹೆಚ್ಚು, ಅಂದರೆ ೧ ಸಾವಿರ ಗಂಡಸರಿದ್ದರೆ ೯೪೫ ಹೆಂಗಸರಿರುತ್ತಾರೆ. ಯುರೋಪಿನಲ್ಲಿ ಸಮವಾಗಿರುತ್ತಾರೆ. ಇಂಗ್ಲೆಂಡದಲ್ಲಿ ಗಂಡಸರು ೧೦೦೦ ಇದ್ದರೆ ಹೆಂಗಸರು ೧೦೬೮. ಫ್ರಾನ್ಸ್, ಇಟಲಿ, ಆಸ್ಟ್ರಿಯಾಗಳಲ್ಲಿ ೧೦೩೬. ಹಿಂದೂಸ್ಥಾನದಲ್ಲಿ ಹೆಂಗಸರ ಸಂಖ್ಯೆಯು ವರ್ಷೇ ವರ್ಷೇ ಕಡಿಮೆಯಾಗುತ್ತಾ ಹೋಗಿದೆ. ೧೯೦೧ರಲ್ಲಿ ೯೬೩ ಹೆಂಗಸರಿದ್ದರೆ ೧೯೧೧ರಲ್ಲಿ ೯೫೪ಕ್ಕೂ ೧೯೨೧ರಲ್ಲಿ ೯೪೫ಕ್ಕೂ ಇಳಿದಿದೆ. ಇದು ಶೋಚನೀಯವು. (ಸಾಕ್ಷಿ)

ಮುಂಬಾಯಿ:—ಕಳೆದ ದಶಂಬರ ತಿಂಗಳ ತಾ. ೩ನೇ ಗುರುವಾರ ಸಾಯಂಕಾಲ ೫ ಗಂಟೆಗೆ ಆರ್ಯ ಸಮಾಜದ ಮಂದಿರದಲ್ಲಿ ಮಂಗಳೂರಲ್ಲಿ ಶಾಲಾ ಉಪಾಧ್ಯಾಯರಾಗಿದ್ದ ಮಂಜುನಾಥ ರಾಯರ ಪುತ್ರ ಶ್ರೀಮಾನ್ ಗೋಪಾಲ ಕೃಷ್ಣರಾಯರಿಗೂ ಕಟಂಗಳಪಾಡಿ ರಾಘವಾಚಾರ್ಯರ ಪುತ್ರಿ ಶ್ರೀಮತಿ ಸುಲೋಚನದೇವಿಗೂ ವಿವಾಹ ಸಂಸ್ಕಾರವಾಯಿತು. ವಧುವರರು ಶುದ್ಧ ಖದ್ದರ್ ಉಡುಪನ್ನು ಧರಿಸಿದ್ದರು. ಗುರುಕುಲದ ಪಂಡಿತ ದ್ವಿಜೇಂದ್ರನಾಥ್ ಶರ್ಮ ಸಿದ್ಧಾಂತ ಶಿರೋಮಣಿಯವರು ವಧುವಿನ ಪರವಾಗಿಯೂ, ಪಂಡಿತ ಹರಿಶ್ಚಂದ್ರಜಿಯವರು ವರನ ಪರವಾಗಿಯೂ ಪೌರೋಹಿತ್ಯವನ್ನು ನಡಿಸಿದರು. ವಿವಾಹ ಸಂಸ್ಕಾರವು ಮುಗಿದ ಮೇಲೆ ಮೈಸೂರಿನ ಆರ್ಯ ಮೂರ್ತಿಯವರೂ, ಸ್ವಾಮಿ ಸಚ್ಚಿದಾನಂದಜಿ ಓಂಕಾರ, ಸ್ವಾಮಿ ಲಕ್ಷ್ಮಣಾನಂದಜಿ ಮತ್ತು ಸ್ವಾಮಿ ಪರಮಾನಂದಜಿಯವರು ಕೂಡ ಕಾಲೋಚಿತ ಭಾಷಣವನ್ನು ಮಾಡಿ ವಧುವರರನ್ನು ಆಶೀರ್ವಚನಗಳಿಂದ ಹರಸಿದ ನಂತರ ಅಥಿತಿಗಳನ್ನು ಪುಷ್ಪ, ಫಲಾಹಾರಗಳಿಂದ ಸತ್ಕರಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯವರ ಪೈಕಿ ಮುಂಬಾಯಿಯಲ್ಲಿ ಜರಗಿದ ಆರ್ಯ ಸಮಾಜಕ ವಿವಾಹವು ಇದೇ ಪ್ರಥಮದಾಗಿರುತ್ತದೆ.

ಕುರುಕಾಲು 'ಶ್ರೀಗಣಪತಿ' ಹಾಯರ್ ಎಲಿಮೆಂಟರಿ ಶಾಲೆಯ ೮ನೇ ವರುಷಾವಧಿ ಪರೀಕ್ಷೆಯ ರಿಮಾರ್ಕು.

[illegible]

Kurkal, 21-12-'25. } (Sd) B. Venkatraya Malya, Deputy Inspector of Schools, Udipi Range.

(True copy—K. G. Shetty)

ಸ್ವಂತ ವಿಚಾರಗಳು.

ಲಿಬರಲ್ ಪರಿಷತ್ತು

ಕಾಂಗ್ರೆಸು ಬರೇ ಠರಾವಿನ ಮೂಲಕದ ಕಾರ್ಯಕ್ರಮವನ್ನು ಬಿಟ್ಟು ಸರಕಾರದ ಹತ್ತಿರ ಯಾಚಿಸುವುದನ್ನು ನಿಲ್ಲಿಸಿದಂದಿನಿಂದ ಲಿಬರಲ್ ಧುರೀಣರು ತಮ್ಮ ಅಸ್ತಿತ್ವದ ರಕ್ಷಣೆಗಾಗಿ ಪ್ರತ್ಯೇಕ ಪಕ್ಷವನ್ನು ಕಟ್ಟಿಕೊಂಡರು. ಈ ಪಕ್ಷದಲ್ಲಿ ಸರಕಾರೀ ಪದವಿಗಳನ್ನಲಂಕರಿಸುವ ಕೆಲವರಲ್ಲದೆ ಇತರರೂ ಉತ್ಸುಕರಾಗಿರುವದು ತೋರಬರುವುದಿಲ್ಲ. ಕಳೆದ ದಶಂಬರ ತಾ. ೨೮ಕ್ಕೆ ಕಲ್ಕತ್ತಾದ ಟೌನ್‌ಹೋಲಿನಲ್ಲಿ ಈ ಪರಿಷತ್ತು ಕೂಡಿತು. ಬಂಗಾಲ ಪ್ರಾಂತ್ಯ ಬಿಟ್ಟು ಮಿಕ್ಕ ಎಲ್ಲಾ ಪ್ರಾಂತ್ಯಗಳಿಂದ ಒಟ್ಟು ಬರೇ ೮೦ ಪ್ರತಿನಿಧಿಗಳು ಹಾಜರಿದ್ದರೆನ್ನುವಾಗ ಈ ಪರಿಷತ್ತು ಜನತೆಗಿಂತಲೂ ಧುರೀಣರಿಗಾಗಿ ಮಾತ್ರವೇ ಕೂಡಿಸಲ್ಪಡುತ್ತಿದೆಯೆಂಬುದು ಸ್ಪಷ್ಟವಾಗುವುದು.

ಲಿಬರಲ್ ಪಕ್ಷವು ದೇಶಕ್ಕಾಗಿ ಏನು ಮಾಡಿತು? ಪಾಪ ಸ್ವಾಗತಾಧ್ಯಕ್ಷರು, ಸ್ವರಾಜ್ಯಪಕ್ಷದವರು ಅವರ ಮೇಲೆ ಅನ್ಯಾಯದ ದೂರುಗಳನ್ನು ಹೊರಿಸಿ ಹೆಸರನ್ನು ಕೆಡಿಸಿದರು, ಇಲ್ಲವಾದರೆ ಕೆಲಸವು ಮತ್ತೂ ಹೆಚ್ಚಾಗಿ ಮಾಡಬಹುದಿತ್ತು, ಎನ್ನುವರು, ಲಿಬರಲ್ ಪಕ್ಷವು ದೇಶಕ್ಕೆ ಲಾಭ ಮಾಡಿದ ವಿಷಯಗಳನ್ನೂ, ಸ್ವಾಗತಾಧ್ಯಕ್ಷರಾಗಿರುವ, ಶ್ರೀ ಕೃಷ್ಣಕುಮಾರ ಮಿತ್ರರ ಮಾತಿನಲ್ಲಿಯೇ ಇಲ್ಲಿ ಹೇಳುವೆವು:—

ಕೌನ್ಸಿಲುಗಳನ್ನು ದೊಡ್ಡದಾಗಿ ಮಾಡಿದೆವು; ನೌಕರಿ [illegible]

ಜೋಶಿಯವರು ತಮ್ಮ ಅಧ್ಯಕ್ಷಸ್ಥಾನದಿಂದ ಹಿಂದೂಸ್ಥಾನವು ಸ್ವರಾಜ್ಯಕ್ಕೆ ಸಿದ್ಧವಿದೆಯೆಂದೂ, ಮುಡ್ಡಿಮಾನ ಕಮಿಟಿಯ ಅಲ್ಪಮತದ ವರದಿಯನ್ನು ತಾವು ಸ್ವೀಕರಿಸುವನೆಂದೂ, ಹಿಂದೂಸ್ಥಾನಕ್ಕೆ ರಾಷ್ಟ್ರೀಯ ಸೈನ್ಯ ಇಲ್ಲವೆಂಬುದಕ್ಕೆ ಬ್ರಿಟಿಷ್ ರಾಜಭಾರ ಕ್ರಮವೇ ಜವಾಬ್ದಾರವೆಂದೂ, ಜಾತೀಯ ವಿಭಾಗಗಳು ಎಂದಿನಿಂದಲೂ ಇರುವೆಯಾದುದರಿಂದ ರಾಷ್ಟ್ರೀಯ ಸರಕಾರವು ಬಂದ ಮೇಲೆ ಹಿಂದೀ ಸಂಸ್ಥಾನಗಳಂತೆ ಜಾತೀಯ ಕಲಹಗಳನ್ನು ಸಂಯಮಿಸುವಷ್ಟು ಅದು ಶಕ್ತವಿರುವದೆಂದೂ ಹೇಳಿ ಹಿಂದೀಯ ಯೋಗ್ಯತೆಯನ್ನು ಸಾರಿದರು. ದ್ವಿದಳ ರಾಜಪದ್ಧತಿಯನ್ನು ಖಂಡಿಸಿ, ಮುಡ್ಡಿಮಾನ ಕಮಿಟಿಯ ಅಲ್ಪಮತದ ವರದಿಯ ಅಭಿಪ್ರಾಯಗಳೊಡನೆ ಅಧ್ಯಕ್ಷರೂ ಒಪ್ಪಿದರು. ಈ ಅಭಿಪ್ರಾಯಗಳು—

(೧) ಮಂತ್ರಿಗಳಿಗೆ ನಿಜವಾದ ಜವಾಬ್ದಾರಿಯಿಲ್ಲ.

(೨) ಸರಕಾರದ ಎರಡು ಭಾಗ (ಮಂತ್ರಿ ಮತ್ತು ಎಕ್ಸಿಕ್ಯೂಟಿವ್)ಗಳೊಳಗೆ ಸರಿಯಾದ ಸಹಕಾರವಿರಲಿಲ್ಲ.

(೩) ರಿಜರ್ವಡ್ ಮತ್ತು ಟ್ರಾನ್ಸ್‌ಫರ್ಡ್ ಖಾತೆಗಳೊಳಗೆ ಹೆಚ್ಚಿನ ಭೇದ ಕಾಣದುದರಿಂದ ಲೆಜಿಸ್ಲೇಟಿವ್ ಕೌನ್ಸಿಲುಗಳಿಗೆ ಸರಕಾರದ ಮೇಲೆ ಇದ್ದಷ್ಟೆ ಮಂತ್ರಿಗಳ ಮೇಲೆಯೂ ಬೇಸರವಿದೆ.

ಮುಂದೆ ಸರ್. ಜೋಶಿಯವರು ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಎಲ್ಲಾ ಧುರೀಣರ ಪರಿಷತ್ತು ಕರೆದು ಹಿಂದೂಸ್ಥಾನದ ಸಂಘಟನೆಯನ್ನು ತಯಾರಿಸಬೇಕಾಗಿ ಸರಕಾರವನ್ನು ಕೇಳಿಕೊಂಡ ಠರಾವನ್ನು ಸಮರ್ಥಿಸಿ ಅದರ ಪರವಾಗಿ ವಾದಿಸಿದರು. ಲಿಬರಲ್ ಪಕ್ಷದ ಕಾರ್ಯಕ್ರಮವನ್ನು ಸರ್. ಜೋಶಿಯವರು ಸ್ವರಾಜ್ಯಪಕ್ಷದ ಖಂಡನೆಯ ಮೂಲಕ ಸಮರ್ಥಿಸುವುದು ಮಾತ್ರ ಕಾಣುತ್ತಿದೆಯಲ್ಲದೆ, ಸ್ಪಷ್ಟವಾದ ಕಾರ್ಯಕ್ರಮವನ್ನು ಅವರು ನಿರೂಪಿಸಿದಂತೆ ಕಾಣುವುದಿಲ್ಲ. ಆ ಮೇಲೆ ಸರ್. ಜೋಶಿಯವರು ಐಕ್ಯ ಬೇಕೆಂದು ಸಾರಿದರು.

ಇದರಿಂದ ರಾಷ್ಟ್ರೀಯ ಪಕ್ಷದ ಸೂತ್ರಗಳ ವಿರೋಧವಾಗಿ ಲಿಬರಲ್ ಪಕ್ಷದವರಿಗೆ ಏನೊಂದೂ ಹೇಳಲಿರುವುದಿಲ್ಲವೆಂದು ಸ್ಪಷ್ಟವಾಗುತ್ತಿದೆ. ಬರೇ ಸಾಧನೆಗಳಿಗಾಗಿ ಈ ಬಡಿದಾಟವಲ್ಲದೆ ಮತ್ತೇನಲ್ಲವೆಂದು ಇದರಿಂದ ತಿಳಿಯುವುದು. ಸಿಕ್ಕಿದ್ದನ್ನು ಮುಕ್ಕಿ ಮತ್ತೆ ಕೇಳುವುದೆಂಬುದೆ, ಸರ್. ಜೋಶಿಯವರ ಮಾತಿನಲ್ಲಿ, ಲಿಬರಲ್ ಪಕ್ಷದ ಕಾರ್ಯಕ್ರಮವಿದೆ. ರಾಜಕೀಯ ರಂಗದಲ್ಲಿ ರಾಜತಂತ್ರಜ್ಞರ ಮಧ್ಯದಲ್ಲಿ ಇದು ಎಷ್ಟು ಉಪಕಾರಿಯಾದೀತೆಂದು ಜನತೆಯೇ ಯೋಚಿಸಬಹುದು.

ಹಿಂದೂ ಮುಸಲ್ಮಾನ ಸಮಸ್ಯೆ

ಈ ವರ್ಷದ ರಾಷ್ಟ್ರೀಯ ವಾರದ ನಾಲ್ಕೈದು ಪರಿಷತ್ತುಗಳು ನಡೆದು ಹೋದುವು. ಅವುಗಳಲ್ಲಿ ಕಾಂಗ್ರೆಸು, ಖಿಲಾಫತ್ ಕಮಿಟಿ ಮತ್ತು ಅಲೀಗರದಲ್ಲಿ ಕೂಡಿದ ಮುಸ್ಲಿಮ್ ಲೀಗು ಹಿಂದು-ಮುಸಲ್ಮಾನ ಸಮಸ್ಯೆಯನ್ನು ಚರ್ಚಿಸಬಹುದಿತ್ತು. ಆದರೆ ಇವುಗಳಲ್ಲೊಂದೂ ಈ ಪ್ರಶ್ನೆಯನ್ನು ಎತ್ತಿಕೊಳ್ಳಲಿಲ್ಲ. ಕಾಂಗ್ರೆಸು, ಈ ಸಮಸ್ಯೆಯನ್ನು ತಾನು [illegible]

ಗಳಿಗೂ, ಸ್ಪೈಯಿನ್ ಸೈನ್ಯಗಳಿಗೂ ಯುದ್ಧವಿಲ್ಲದೆನೇ ಪರಾಜಯಗಳನ್ನು ಹೊಂದುವ ಸ್ಥಿತಿಯುಂಟಾಗಿದೆ. ಈಗ ಆರಿಮಳೆಗಾಲವಾದುದರಿಂದ, ಫ್ರಾನ್ಸ್ ಮತ್ತು ಸ್ಪೈಯಿನ್ ಸೈನ್ಯಗಳು ತಮ್ಮ ಒಂದೊಂದೇ ಸ್ಥಾನವನ್ನು ಬಿಟ್ಟು ಹಿಂದೆ ಬರುತ್ತಿರುವುವು. ಪುನಃ ಆ ಮೂಲಸ್ಥಾನಗಳನ್ನು ಆಕ್ರಮಿಸಬೇಕಾದ ಇನ್ನು ಎಷ್ಟೊ ಧನ ನಷ್ಟವೂ, ಪ್ರಾಣ ನಷ್ಟವೂ ಆಗಲಿದೆ. ಇತರ ಫ್ರೆಂಚ ಸರಕಾರವು ಬಹಳ ಕಷ್ಟದಿಂದ ತನ್ನ ಖಜಾನೆಯನ್ನು ತಾತ್ಕಾಲಿಕವಾಗಿ ಸರಿಮಾಡಿಕೊಂಡಿದೆ. ಒಂದೆರಡು ತಿಂಗಳ ಆಲೋಚನೆ, ಸರಕಾರ ಸೃಜನೆ ಮತ್ತು ವಿಸರ್ಜನೆ, ವಾದ ವಿವಾದಗಳ ನಂತರ ಹೇಗೂ ಒಂದು ವ್ಯವಸ್ಥೆ ಮಾಡಿ, ಜನರ ಮೇಲೆ ತೆರಿಗೆ ಹೊರಿಸಿ ನಷ್ಟವಿರುವ ಖಜಾನೆಯನ್ನು ಹೇಗೂ ಸುಧಾರಿಸಿರುವರು. ಇದು ಬರೇ ತಾತ್ಕಾಲಿಕ ಉಪಾಯ. ಮೊರೊಕ್ಕೊ ದೇಶದಂತಹ ಯುದ್ಧಗಳು ಹೆಚ್ಚಾದರೆ ಫ್ರಾನ್ಸಿನ ಭವಿಷತ್ತು ಏನಾಗುವುದೊ ನೋಡಲಿದೆ. ಅತ್ತ ಸಿರಿಯಾ ದೇಶದಲ್ಲಿಯೂ ಫ್ರಾನ್ಸು ಪರಸ್ಪರ ಸೌಹಾರ್ದದಿಂದ ಡ್ರುಸ ಜನರನ್ನು ಅವರಷ್ಟಕ್ಕೆ ಬಿಡಲು ಒಪ್ಪುವುದಿಲ್ಲ. ಇಂತಹ ಘಟನೆಗಳು, ಮದವೇಂದ್ರ ಸಾಮ್ರಾಜ್ಯವಾದಿಗಳ ಕೈಯಿಂದ ನಡೆಯುತ್ತಿರುವಾಗ ಫ್ರಾನ್ಸಿನ ಭವಿಷ್ಯ ಸುಖಮಯವಾಗಿ ಕಾಣುವುದಿಲ್ಲ. ಫ್ರಾನ್ಸು ಈ ಘಟನೆಗಳಿಂದ ಬೇಗನೆ ಪಾಠ ಕಲಿತರೆ ಉತ್ತಮವಿತ್ತು. ಆದರೆ ಫ್ರಾನ್ಸಿಗೆ ಬ್ರಿಟಿಷರ ಗೌರವ ಸ್ಥಿತಿಯನ್ನು ಹೊಂದುವ ಅಭಿಲಾಷೆ ಇದ್ದಾಗ ಅದೆಲ್ಲಿ ಸಾಧ್ಯ?

ಮುಸಲ್ಮಾನರೊಳಗಿನ ಭೇದ.

ಮುಸಲ್ಮಾನರೊಳಗೆ ಪರಿಹಾಸಾತ್ಮಕ ಭೇದ ಉಂಟಾಗಿದೆ. ಕಾರಣವು ಅಂಜಿಡ್ಡಾ ಮುಂತಾದ ಪವಿತ್ರ ಪಟ್ಟಣಗಳಿಗೆ [illegible]

ಅನುಕ್ರಮಣಿಕೆ.

ಅಗ್ರಲೇಖ — ಪುಟ
ಜಾತೀಯ ಹಿತ ೬
ಸ್ಫುಟವಿಚಾರಗಳು ೭
ವರ್ತಮಾನಸಂಗ್ರಹಗಳು—
ವಿದೇಶ, ಒಳದೇಶ ೫
ದಕ್ಷಿಣ ಕನ್ನಡ— ಕುಂಬಳೆ, ಜೋಯಿಕಟ್ಟೆ, ಸುಬ್ರಹ್ಮಣ್ಯ, ಮಂಜೇಶ್ವರ, ಮಂಗಳೂರು ೮
ಪತ್ರವ್ಯವಹಾರ ೧, ೨, ೩, ೪, ... „
ವಿವಿಧ ವಿಷಯಗಳು ೪
ಕುರುಕಾಲು ಶ್ರೀ ಗಣಪತಿ ಹಾಯರ್ ಎಲಿಮೆಂಟರಿ ಶಾಲೆಯ ೮ನೇ ವರುಷಾವಧಿ ಪರೀಕ್ಷೆಯ ರಿಮಾರ್ಕು . . . . . „

ಸ್ವದೇಶಾಭಿಮಾನಿ.

ಶಕ ೧೮೪೭ ಪುಷ್ಯ ಬ॥ ೯ಯು ಶುಕ್ರವಾರ

ಜಾತೀಯ ಹಿತ.

(Communal Interests.)

ಮಿ॥ ಜಾದವರಂತಹರು ಬ್ರಾಹ್ಮಣೇತರ ಪರಿಷತ್ತಿನ ಅಧ್ಯಕ್ಷರಾಗಿಯೂ, ಸರ್ ಅಬ್ದುರ್ ರಹೀಮರಂತಹರು ಮುಸ್ಲಿಮ್ ಲೀಗಿನ ಅಧ್ಯಕ್ಷರಾಗಿರುವ ವರೆಗೂ, ದೇಶದ ಕ್ಷೋಭೆಯೂ, ಅಂತಃಕಲಹಗಳೂ, ಇಂತಹರ ಕೃಪೆಯಿಂದ ಕಡಿಮೆಯಾಗಬೇಕೆಂತಿಲ್ಲ. ಉನ್ನತವಾದ ಸಭಾಸ್ಥಾನದಲ್ಲಿ ನಿಂತು, ತನ್ನ ನಿರಂಕುಶ ವಾಕ್ಝರಿಯನ್ನು ಕಟ್ಟೊಡೆದು ನೆರೆ ಬರಲು ಬಿಟ್ಟು, ದೇಶಬಂಧುತ್ವದ ಸಾಮಾನ್ಯ ಔದಾರ್ಯವನ್ನು ಕೂಡ ಕೊಚ್ಚಿಕೊಂಡು ಹೋಗಿ, ಆತ್ಮನಾಶದ ಪಥವನ್ನೆ ಏಕದೃಷ್ಟಿಯಿಂದ ನೋಡುತ್ತಿದ್ದ ಶ್ರಾವಕ ವರ್ಗದ ಕೈಚಪ್ಪಾಳೆಯ ಪ್ರಶಂಸೆಗೆ ಪಾತ್ರರಾದ ಮಿ॥ ಯಾದವರು, ಬ್ರಾಹ್ಮಣರನ್ನು ಸಮೂಲವಾಗಿ ಕಿತ್ತೊಗೆಯಲು ತನ್ನ ವಕ್ತೃತೆಯನ್ನುಪಯೋಗಿಸಿದುದು ದೇಶಹಿತದ ದೃಷ್ಟಿಯಲ್ಲಾಗಲಿ, ಜಾತಿಹಿತದ ದೃಷ್ಟಿಯಲ್ಲಿ ಒಳ್ಳೆದಾಯಿತೆಂದು ವಿಚಾರವಂತರಾರೂ ಹೇಳಲಿಕ್ಕಿಲ್ಲ.

ಆದರೆ ಈ ಜಾತಿಯ ಕಾರ್ಯಕ್ಷೇತ್ರದಲ್ಲಿ ಮಿ॥ ಯಾದವರೊಬ್ಬರೇ ವಿಚಕ್ಷಣರೆಂಬ ಆ ಅಪೂರ್ವ ಬಿರುದನ್ನು ಸರ್ ಅಬ್ದುರ್ ರಹಿಮರು ಉಳಿಯಲು ಬಿಡಲಿಲ್ಲ. ಮಿ॥ ಯಾದವರಿಗಿಂತಲೂ ಶ್ರೇಷ್ಠರಲ್ಲದಿದ್ದರೂ, ಅಷ್ಟೆ ವಿಚಕ್ಷಣರು ಇನ್ನೊಬ್ಬರಿರುವರು ಎಂದು ಜಾತೀಯಾಭಿಮಾನಿ ಸರ್ ಅಬ್ದುರ್ ರಹಿಮರು ತೋರಿಸಿದರು. ಯಾವ ಸ್ಥಾನವು ಈ ವರೆಗೆ ಜಾತೀಯ ಹಿತವನ್ನು ಕಟ್ಟಕೊಳ್ಳುವುದರಲ್ಲಿ ಆಸಕ್ತವಾಗಿದ್ದು, ಆ ಹಿತದಲ್ಲಿ ಹಿಂದೂ ಮುಸಲ್ಮಾನ ಐಕ್ಯವೂ ಒಂದೆಂದು ಪರಿಗಣಿಸಲ್ಪಟ್ಟಿದ್ದಿತೊ, ಆ ಸ್ಥಾನವು ಈ ಬಾರಿ ಜಾತೀಯ ಹೆಗ್ಗಳಿಕೆಯ ನೆವದಿಂದ ಹಿಂದೂ ಮುಸಲ್ಮಾನ ದೂಷಣೆಗೆ ಉಪಯೋಗಿಸಲ್ಪಟ್ಟು ಅಪವಿತ್ರವಾಗಿ ಮಾಡಲ್ಪಟ್ಟಿತು. ಮುಸಲ್ಮಾನರು ಯಾವ ತರದಲ್ಲಿ ಈ ಭಾಷಣಕ್ಕೆ ಸ್ವೀಕಾರ ಕೊಡುವರೊ ಅದು ವಿಶೇಷ ಆಲೋಚಿಸಬೇಕಿಲ್ಲ. ಸಾಮಾನ್ಯರು ದೂರದರ್ಶಿಗಳಲ್ಲದುದರಿಂದ ಜಾತೀಯಾಭಿಮಾನಕ್ಕೆ ನೋಸಪಟ್ಟು, ವಿವಾತ್ತ ಈ ಭಾಷಣವನ್ನು ಆನಂದದಿಂದ ಪರಿಪಠಿಸಬಹುದು. ಆದರೆ ವಿಚಾರವಂತ ಮುಸಲ್ಮಾನರಾರೂ ಈ ಭಾಷಣವನ್ನು ಗೌರವಿಸುವರಾಗಿ ನಾವು ನೆನಸುವುದಿಲ್ಲ. ಹಾಗೆ ಗೌರವಿಸುವರಾದರೆ ಮುಸಲ್ಮಾನರ ಬಂಧು ಪ್ರೇಮವೂ, ದೂರದರ್ಶಿತ್ವವೂ, ಜಾತೀಯ ಹಿತಸಾಧನೆಯ ಆಶಯವೂ ನಷ್ಟವಾಗಿ ಕೇವಲ ವ್ಯಕ್ತಿ ಸ್ವಾರ್ಥವೇ ಮುಂದೊತ್ತುತ್ತಿದೆ ಎಂದು ನೆನಸಬೇಕಾಗಿದೆ.

ಪ್ರತಿಯೊಂದು ಜಾತಿಯು ತನ್ನನ್ನು ತಾನು ಸಂಘಟಿಸಿಕೊಳ್ಳಬೇಕು. ಪ್ರತಿಯೊಂದು ಜಾತಿಯು ತನ್ನ ಆರ್ಥಿಕ, ಸಾಮಾಜಿಕ, ನೈತಿಕ ಜೀವನವನ್ನು ಸುವ್ಯವಸ್ಥೆಗೊಳಿಸಬೇಕು. ಇದರಲ್ಲಿ ಯಾರಬ್ಬರು ವಿರೋಧ ಕಟ್ಟುವವರು ಇರುವರೆಂದು ನಾವು ನೆನಸುವುದಿಲ್ಲ. ಆದರೆ ಅಬ್ದುರ್ ರಹಿಮರು ಮುಸಲ್ಮಾನರು ಸಂಘಟಿಸುವುದು ಅವಶ್ಯಕವೆಂದು ಹೇಳುತ್ತಿರುವರಾದರೂ, ಹಿಂದುಗಳ ಮಟ್ಟಿಗೆ ಅವರು ವಿರೋಧವನ್ನು ತೋರುವರು. ಶುದ್ಧಿ, ಸಂಗಟನ, ಹಿಂದೂ ಮಹಾಸಭೆ ಮೊದಲಾದ ಹಿಂದೂ ಚಳವಳಗಳು ಮುಸಲ್ಮಾನರ ವಿರೋಧವಾಗಿ ಮಾಡಲ್ಪಟ್ಟವೆಯೆಂದು ಸರ್ ಅಬ್ದುರ್ ರಹಿಮರ ಅಭಿಪ್ರಾಯ!

"ಸ್ಪೆಯಿನ್ ದೇಶದವರು ಸ್ಪೆಯಿನ್ ದೇಶದಿಂದ ಮೂರ್ ಜನರನ್ನು ಹೊರತಳ್ಳಿದಂತೆ, ಹಿಂದೂಸ್ಥಾನದಿಂದ ಮುಸಲ್ಮಾನರನ್ನು ಹೊರತಳ್ಳಬೇಕಾಗಿ ಕೆಲವು ಹಿಂದೂ ಧುರೀಣರು ಬಹಿರಂಗವಾಗಿ ಹೇಳಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಹಿಂದೂಗಳು ಬಹಳ ಅನುಕೂಲ ಸ್ಥಿತಿಯಲ್ಲಿರುವರಾಗಿ ನಾವು ಒಪ್ಪಿಕೊಳ್ಳಬೇಕು. ಇಂಗ್ಲೀಷರು ಕೂಡ ಅವರ ವಿಷಭರಿತ ಪ್ರಚಾರ ಕಾರ್ಯಕ್ಕೆ ಹೆದರುತ್ತಾರೆ. ಹಿಂದೂಗಳ ರಾಜಕೀಯ ಸೂತ್ರಗಳಿಗೆ ಒಪ್ಪಿದವರನ್ನು ಬಿಟ್ಟು ಇತರ ಮುಸಲ್ಮಾನ ಪ್ರಮುಖರನ್ನು ಜನತೆಯ ದೃಷ್ಟಿಯಲ್ಲಿ ಹೀನಿಸಲು ಹಿಂದೂಗಳು ಪ್ರವೀಣರು. ಮುಸಲ್ಮಾನರು ಆತ್ಮರಕ್ಷಣೆಗಾಗಿ ಎಲ್ಲಾ ಉಪಾಯಗಳನ್ನೂ ಅನುಸರಿಸಬೇಕೆಂದೂ, ಮುಸಲ್ಮಾನರು ಹಿಂದೂಗಳ ಕೈಯಲ್ಲಿ ತಮ್ಮ ವಿಧಿಯನ್ನು ಇಡಬಾರದೆಂದೂ ಹಿಂದೂಗಳು ತಮ್ಮ ವರ್ತನೆಯಿಂದ ತೋರಿಸಿರುವರು. ಹಿಂದೂಸ್ಥಾನವು ಹಿಂದೂಗಳದ್ದು ಮಾತ್ರನೇ ಆಗಿದೆ ಎಂಬುದು ನೀಚ ಭಾವನೆಯೆಂದೂ, ಅದರಿಂದ ಹಿಂದೂಸ್ಥಾನಕ್ಕೇನೇ ಅನ್ಯಾಯವಾಗುವುದೆಂದೂ ಮುಸಲ್ಮಾನರು ಸ್ಪಷ್ಟವಾಗಿ ತೋರಿಸಬೇಕು".

ಸರ್ ಅಬ್ದುರ್ ರಹಿಮರು ಹಿಂದೂಗಳ ಮೇಲೆ ಈ ರೀತಿಯಲ್ಲಿ ವಾಕ್ಪ್ರಹಾರಗಳನ್ನು ಸುರಿದರು. ಹಿಂದೂ ಮುಸಲ್ಮಾನ ಐಕ್ಯವು ಅತ್ಯಂತ ಅವಶ್ಯವಾಗಿರುವ ಈ ಸಮಯದಲ್ಲಿ ನೊಂದ ಘಾಯದಲ್ಲಿ ಸುಣ್ಣವನ್ನು ಹಚ್ಚುವ ಈ ಜಾತೀಯ ರಾಜತಂತ್ರಜ್ಞರ ವಿಷಯ ನಮಗೆ ಹೆಚ್ಚು ಹೇಳಬರುವುದಿಲ್ಲ. ಅನುಭವಿಕರೂ ನಾಗರಿಕರೂ ಆಗಿರುವ ಈ ಮಹನೀಯರೇ ಈ ರೀತಿಯಲ್ಲಿ ಆಡತೊಡಗಿದರೆ ಮುಂದೆ ರಾಷ್ಟ್ರೀಯತೆಯ ಭವಿತವ್ಯತೆಯೇನೆಂದು ನಾವು ಕಲ್ಪಿಸಲಾರೆವು. ಕಲ್ಪಿಸಲು ನಮಗೆ ಧೈರ್ಯವಾಗುವುದಿಲ್ಲ.

ಮುಸಲ್ಮಾನರು ಹಿಂದೂಗಳ ಪ್ರತಿಯಾಗಿಯೂ, ಬ್ರಾಹ್ಮಣೇತರು ಬ್ರಾಹ್ಮಣರ ಪ್ರತಿಯಾಗಿಯೂ, ಈ ರೀತಿಯಲ್ಲಿ ಜಗಳಗಂಟುತನವನ್ನು ಬೆಳೆಸಿ ಜಾತಿ ಉದ್ಧಾರದ ಕೆಲಸದಲ್ಲಿ ಬದ್ಧಕಂಕಣರಾಗಿ ನಿಸ್ವಾರ್ಥತೆಯ ಮಾದರಿಯನ್ನು ಜಗಳಕ್ಕೆಲ್ಲಾ ತೋರಿಸಿ ಜನ ಜನಾಂಗಗಳ ಪರಿಹಾಸಕ್ಕೆ ಗುರಿಯಾಗುತ್ತಿರುವರು.

ಚೀನಾದೊಳಗಿನ ಅಂತಃಕಲಹಗಳೊಡನೆಯೂ, ಇತರ ಪೌರ್ವಾತ್ಯ ಜನಾಂಗಗಳೊಳಗಿನ ಜಡತೆಯಿಂದಲೂ, ಹಿಂದೀ ದೇಶೀಯ ರಾಜರುಗಳ ಭೋಗಾಸಕ್ತತೆಯಿಂದಲೂ, ಹಿಂದೂಸ್ಥಾನದೊಳಗಿನ ಅನೈಕ್ಯದಿಂದಲೂ, ಮುಸಲ್ಮಾನ ರಾಷ್ಟ್ರಗಳೊಳಗಿನ ಅಲ್ಪಾಭಿಲಾಷೆಯಿಂದಲೂ ಪೌರ್ವಾತ್ಯ ನಾಗರಿಕತೆಯು ದೂಳಿಪಾಲಾಗುತ್ತಿದೆ; ಪೌರ್ವಾತ್ಯ ಗೌರವವು ವಿನಾಶವಾಗಿದೆ. ವಿಜಯದ ಝೇಂಕಾರದಿಂದ, ಅಧಿಕಾರದ ದರ್ಪದಿಂದ, ವಿಜ್ಞಾನದ ಅಜೇಯತ್ವದಿಂದ ಪಾಶ್ಚಾತ್ಯರು ತಮ್ಮನ್ನು ತಾವೇ ಸಂಘಟಿಸಿಕೊಂಡು, ತಮ್ಮ ಭೇದಗಳನ್ನು ಪಾಶ್ಚಾತ್ಯ ಸಮಷ್ಟಿಯ ಹಿತದಲ್ಲಿ ಅಡಗಿಸಿಕೊಂಡು ಪೌರ್ವಾತ್ಯದ ಮೇಲೆ ಮುಹೂರ್ತ ಮುಹೂರ್ತವು ದಂಡೆತ್ತಿ ಪರಾಜಯದ ಅವಮಾನದ ರಾಶಿಯನ್ನು ಹೊರಿಸುತ್ತಿದೆ. ನಾವು ಅವರ ಸಮ್ಮುಖದಲ್ಲಿ ಜೂಜಿನ ಕೋಳಿಗಳಂತೆ ಜಗಳಾಡುತ್ತೇವೆ. ಇದರ ಲಾಭ ಯಾರಿಗೆ?

ಕಾನಪೂರ ಕಾಂಗ್ರೆಸ್ಸಿನ ಅನಂತರ

ಕಾನಪೂರ ಕಾಂಗ್ರೆಸ್ಸು ಮುಗಿಯಿತು. ಮೋತಿಲಾಲ ನೆಹರುರವರು ವಿಜಯದ ಧ್ವಜವನ್ನೆತ್ತಿ ಹೊರಗೆ ಬಂದರು. ಮುಂದೇನು? ಎಂಬ ಪ್ರಶ್ನೆಯು ಪ್ರತಿಯೊಬ್ಬನಲ್ಲಿಯೂ ತೋರಿಬರಬೇಕು. ಸ್ವತಂತ್ರ ಧುರೀಣರೂ, ಸ್ವಾಭಿಪ್ರಾಯಗಳಿದ್ದ ಪತ್ರಿಕೆಗಳೂ ಕಾಂಗ್ರೆಸ್ಸಿನ ಅಧಿವೇಶನಗಳ ಹತ್ತಿರ ಹೋಗಿಲ್ಲವಾದರೂ ಉದ್ಬುದ್ಧ ಟೀಕೆಗಳಿಂದ ತಮ್ಮ ವಿಚಾರ ಶಕ್ತಿಯ ಪ್ರಶಂಸೆಯನ್ನು ಹೊರಗೆಡಹುತ್ತಿರುವರು. ಟಿ. ವಿ. ಶೇಷಗಿರಿ ಅಯ್ಯರರು ಹೇಳುತ್ತಿರುವರು:—

"ಯಾವ ಕಾರ್ಯಕಾರಿ ಕಾರ್ಯಕ್ರಮವು ನಮಗಿದೆ? ಶಬ್ದಗಳು, ಬರೇ ಶಬ್ದಗಳು. ಹಿಂದೂ ಮುಸಲ್ಮಾನ ವಿರೋಧಗಳಿಗಾಗಿ ಏನು ನಿರ್ಣಯಿಸಲ್ಪಟ್ಟಿತು? ಕಾಂಗ್ರೆಸ್ಸು ಕೆಲಸ ಮಾಡುವುದನ್ನು ನಿಲ್ಲಿಸಿದೆ. ಅದು ತನ್ನ ಅಧಿಕಾರವನ್ನು ಬಿಟ್ಟುಕೊಟ್ಟು ಸ್ವರಾಜ್ಯ ಪಕ್ಷದ ಅಡಿಯಾಳಾಗಿದೆ. ಇನ್ನು ನಾಲ್ಕು ವರ್ಷಗಳಿಗೆ ಪಕ್ಷವು ಮೊದಲು, ದೇಶವು ಎಲ್ಲಿಯೂ ಇಲ್ಲ, ಅಂತಾಗುವುದು".

ಮತ್ತೆ ಈ ಅಭಿಪ್ರಾಯಗಳನ್ನು ಸಮರ್ಥಿಸಲು ಪತ್ರಿಕೆಗಳೆಷ್ಟೊ ಇವೆ. ಮದ್ರಾಸಿನ ಡೈಲಿ ಎಕ್ಸ್‌ಪ್ರೆಸ್ ಪತ್ರಿಕೆಯು—

"ತಮ್ಮ ನಿಷ್ಪಕ್ಷಪಾತವಾದ ಮತ್ತು ಏನೂ ಮುಚ್ಚುಮರೆಯಿಲ್ಲದ ಪತ್ರದಲ್ಲಿ ಟಿ. ವಿ. ಶೇಷಗಿರಿ ಅಯ್ಯರರು ಕಾಂಗ್ರೆಸ್ಸಿನ ಕೆಲಸಗಳ ಸರಿಯಾದ ಪರಿಮಾಣವನ್ನು ಕಟ್ಟಿರುವರು" ಎಂದು ಹೇಳುತ್ತಿದೆ.

ಕಾಂಗ್ರೆಸ್ಸು ಮಾತುಗಳಿಂದಲ್ಲದೆ ಕಾರ್ಯದಿಂದ ಯಾವ ಕೆಲಸವನ್ನು ಮಾಡಿಲ್ಲವೆಂದು ಟೀಕಿಸುವುದೇನೊ ಸುಲಭ. ಆದರೆ ಯೋಗ್ಯವಾದ ಕಾರ್ಯಗಳನ್ನು ಈ ವರೆಗೆ ಯಾವ ಟೀಕಾಕಾರರು ನಿರೂಪಿಸಿದಂತೆ ತೋರುವುದಿಲ್ಲ. ಲಿಬರಲ್ ಪಕ್ಷವಾಗಲಿ, ಇನ್ನಿತರ ಯಾವುದೇ ಪಕ್ಷವಾದರೂ ತನ್ನ ಕಾರ್ಯಕ್ರಮವನ್ನು ಸರಿಯಾಗಿ ಅನುಸರಿಸಿದರೂ ದೇಶಕ್ಕೆ ಸ್ವರಾಜ್ಯ ಸಿಕ್ಕೀತೆಂದು ಭರವಸೆ ಕೊಡುವುದಿಲ್ಲ. ಅಲ್ಲದೆ ಸ್ವರಾಜ್ಯ ಸಿಕ್ಕದಿರುವ ವರೆಗೆ ದೇಶದಲ್ಲಿ ಎಷ್ಟೇ ಸುಧಾರಣೆಗಳು ಬ್ರಿಟಿಷ ಔದಾರ್ಯವು ಗಂಟು ಬಿಚ್ಚಿ ಹೊರಗೆ ಬಂದರೂ, ಅವುಗಳಿಂದ ದೇಶದ ಆರ್ಥಿಕ ಶೋಷಣೆಯು ನಿಲ್ಲುವುದಾಗಲಿ, ಸಾಂಪತ್ತಿಕ ಅಭಿವೃದ್ಧಿಯು ಸಾಧ್ಯವಾಗುವುದಾಗಲಿ ಇಲ್ಲವೆಂದು ಲಿಬರಲ್ ಬ್ರಾಹ್ಮಣೇತರವಾಗಲಿ, ರಿಸ್ಪೋನ್ಸಿವ್ ಕೊಒಪರೇಶನ್ನಿನ ಪ್ರತಿ ಧುರೀಣನ ಮನಸ್ಸಿನ ಅಂತರ್ಯದಲ್ಲಿಯೂ ತಿಳಿದೇ ಇದೆ. ಹಾಗಾದರೆ ಸರ್ವಸಮ್ಮತವಾದ ಉಪಾಯವು ಯಾವುದು?

ಈಗಿನ ರಾಜಕೀಯ ಲಕ್ಷಣವನ್ನು ನೋಡಿದರೆ ಇದು ಸೂತ್ರಗಳ ಜಗಳವಲ್ಲ, ಇದು ಧುರೀಣತ್ವದ ಜಗಳವೆಂದು ಸ್ಪಷ್ಟವಾಗುತ್ತಿದೆ. ದೇಶದಲ್ಲಿ ಧುರೀಣರೆನ್ನಿಸಿಕೊಳ್ಳಲಿರುವವರೇ ಹೆಚ್ಚಿರುವರು. ಏಕೆಂದರೆ ಸೂತ್ರಗಳ ಮಟ್ಟಿಗೆ ಯಾರಲ್ಲಿಯೂ ಯಾವ ಭೇದವೂ ಕಾಣುವುದಿಲ್ಲ. ಎಂದಿನ ವರೆಗೆ ಜನಾಂಗವೇ ಎಚ್ಚತ್ತು, ಒಬ್ಬನೇ ಧುರೀಣನನ್ನು ಕಂಡುಹಿಡಿಯುವುದಿಲ್ಲವೊ, ಆ ವರೆಗೆ ಈ ಧುರೀಣತ್ವದ ಜಗಳವು ಮುಂದೆ ನಡಿಯಲೇಬೇಕು.

ಈಗಿನ ರಾಜಕೀಯ ವಾತಾವರಣಕ್ಕೂ, ಪೂರ್ವದ ಹಿಂದೂಸ್ಥಾನದ ಇತಿಹಾಸಕ್ಕೂ ವಿಶೇಷ ತಾರತಮ್ಯವು ಕಾಣುವುದಿಲ್ಲ. ನವನಾಗರಿಕತೆಯೊಡನೆ, ಹೊಸ ವಿದ್ಯಾಭ್ಯಾಸದೊಡನೆ ಹಿಂದೀ ಮಾನಸಿಕತೆಯು ಬದಲಾಯಿಸಬಹುದೆಂಬ ಆಶೆಯಿದ್ದರೂ, ಈಗ ಅದು ಸಾಧ್ಯವಾಗಿಲ್ಲ.

ಧುರೀಣತೆಯೊಳಗಿನ ಕಚ್ಚಾಟವು ವಿಶೇಷವಾಗಿರುವುದೇನೊ ಆಶ್ಚರ್ಯವೆನ್ನಲಾಗುವುದಿಲ್ಲ. ೩೦೦ ಮಿಲಿಯ ಜನತೆಗೆ ಅಲ್ಪಸಂಖ್ಯಾಕ ಧುರೀಣರಿರುವುದು ಸಾಧ್ಯವಿಲ್ಲ. ಯುರೋಪಿಯ ಜನಾಂಗಗಳು ಅನೇಕವಾಗಿದ್ದುದರಿಂದ, ಸ್ವತಂತ್ರ ರಾಷ್ಟ್ರಗಳಿಗೆ ಸ್ವತಂತ್ರ ಧುರೀಣರಿದ್ದು, ಕಚ್ಚಾಟ ನಡೆದು ನಡೆದು, ಹೇಗೂ ಒಂದು ಐಕ್ಯಕ್ಕೆ ಬಂದಿರುವರು. ಹಾಗೆಯೇ ಹಿಂದೂಸ್ಥಾನದಲ್ಲಿ ಕಚ್ಚಾಟ ನಡಿಯುವುದೇನೊ ಸಹಜವೆ. ಆದರೆ ದೇಶದ ಈಗಿನ ಸ್ಥಿತಿಯಲ್ಲಿ ಇದರಿಂದ ದೇಶವು ಪತಿತವಾಗುತ್ತಿದೆ ಎಂಬುದನ್ನು ಪ್ರತಿಯೊಬ್ಬರು ಚೆನ್ನಾಗಿ ತಿಳಿದುಕೊಳ್ಳಬೇಕು.

"ಪಕ್ಷವು ಮೊದಲು, ದೇಶವು ಎಲ್ಲಿಯೂ ಇಲ್ಲ" ಎಂಬ ಶ್ರೀ. ಟಿ. ವಿ. ಶೇಷಗಿರಿ ಅಯ್ಯರರವರ ಮಾತು ಸ್ವರಾಜ್ಯ ಪಕ್ಷಕ್ಕೆ ಮಾತ್ರವಲ್ಲ ಎಲ್ಲಾ ಪಕ್ಷಗಳಿಗೂ ಅನ್ವಯಿಸುತ್ತಿದೆ ಎಂಬುದನ್ನು ಪ್ರತಿ ಒಬ್ಬರು ತಿಳಿಯಬಹುದು. "ದೇಶವು ಮೊದಲು" ಎಂಬುದನ್ನು ಪ್ರತಿ ಒಬ್ಬರು ತಿಳಿದುಕೊಂಡದ್ದಾದರೆ ರಾಜಕೀಯ ಕ್ಷೇತ್ರವು ಈಗ ಬಂಧು ಬಂಧುಗಳೊಳಗಿನ ರಣರಂಗವಾಗಿ ಪರಿಣಮಿಸುತ್ತಿರಲಿಲ್ಲ. ಪಕ್ಷಗಳು ಮೊದಲಲ್ಲ, ದೇಶವು ಮೊದಲು ಎಂಬುದನ್ನು ತೋರಿಸುವ ಸಾಧ್ಯತೆಯು ಜನಸಾಮಾನ್ಯರಲ್ಲಿ ಇದೆ. ಆದರೆ ಅವರಿಗೆ ಆಶಕ್ತಿ ಮಾತ್ರ ಇಲ್ಲ.

ಕಾಂಗ್ರೆಸ್ಸಿನಲ್ಲಿ ಹಿಂದೀಯರೆಲ್ಲರೂ ಮತ್ತಷ್ಟು ಶಕ್ತಿಯನ್ನು ಕೇಂದ್ರೀಕರಿಸಿ ಅದನ್ನು ಪುಷ್ಟೀಕರಿಸುವ ಆವಶ್ಯಕತೆಯು ಇನ್ನಾದರೂ ಎಲ್ಲರಿಗೂ ವಿದಿತವಾಗದಿರದು. ಗ್ರಾಮ ಸಂಸ್ಥೆಗಳನ್ನು ಬಲಪಡಿಸಿ ಜನರು ಅದರ ಮೂಲಕ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟೀಕರಿಸುವುದು ಅಗತ್ಯ.

ಪಾಶ್ಚಾತ್ಯರು ಹೆದರುವುದಾದರೆ, ಅದು ಸಂಘಟನೆಗೆ. ಎಲ್ಲಿ ಸಂಪೂರ್ಣ ಸುವ್ಯವಸ್ಥೆಯೂ ಸುಸಂಘಟನೆಯೂ ಇದೆಯೊ ಅಲ್ಲಿ ಪಾಶ್ಚಾತ್ಯರು ಪರಾಜಯವನ್ನು ಹೊಂದುವರು. ಆದುದರಿಂದ ಹಿಂದೀಯರು ತಮ್ಮ ಅರ್ಹತೆಯನ್ನು ಈ ಮೂಲಕ ತೋರಿಸಬೇಕಲ್ಲದೆ, ಈ ಮೂಲಕವೇ ತಮ್ಮ ಬಲವನ್ನು ಪ್ರಕಾಶಗೊಳಿಸಬೇಕು.

ಕಾಂಗ್ರೆಸ್ಸಿನಲ್ಲಿ ಹಾಜರಿದ್ದ ಅಮೇರಿಕನರೂ ಇಂಗ್ಲೀಷರೂ ಹಿಂದೀಯ ಸಂಘಟನಾ ಶಕ್ತಿಯನ್ನು ಒಪ್ಪಿರುವರು. ಕಾಂಗ್ರೆಸ್ಸಿನ ಕಾರ್ಯಕಾರಿತೆಯನ್ನು ತಿಳಿದಿರುವರು. ಇನ್ನು ನಮ್ಮ ಕೆಲಸವು ಅದನ್ನು ಭಕ್ತಿಮಾಡುವುದಾಗಿದೆ. ಇದೊಂದರಿಂದ ನಾವು ಹಿಂದೆ ಬೀಳದಿರುವ.

ವಿದೇಶ ವರ್ತಮಾನ.

—ಯುರೋಪಿನಲ್ಲಿ ಕಳೆದ ತಾ. ೨೪ಕ್ಕೆ ಭಯಂಕರವಾದ ನೆರೆಯು ಬಂದು ಅಲ್ಲಿಯ ಅನೇಕ ನದಿಗಳಲ್ಲಿ ನೀರು ಉಕ್ಕಿಬಂದು ಅನೇಕ ತರದ ನಷ್ಟ ಸಂಭವಿಸಿಯದೆ. ದಕ್ಷಿಣ ಇಂಗ್ಲೆಂಡ ಮತ್ತು ವೇಲ್ಸಿನಲ್ಲಿ ಸಹ ನದಿಗಳಲ್ಲಿ ನೀರು ಉಕ್ಕಿಬಂದು ಅಲ್ಲಿಯ ಒಂದು ಇಲೆಕ್ಟ್ರಿಕ್ ಪವರ್ ಸ್ಟೇಶನಿಗೆ ಬಹಳ ನಷ್ಟವುಂಟಾಗಿದೆ ಮತ್ತು ಇಡೀ ಊರಲ್ಲಿಯೇ ಇಲೆಕ್ಟ್ರಿಕ್ ದೀಪಗಳು ಹಾಳಾಗಿದ್ದುವು. ಟ್ರೇಮುಗಳ ಚಲಾವಣೆಯು ನಿಲ್ಲಿಸಿದೆ. ಅನೇಕ ವ್ಯಾಪಾರದ ಅಂಗಡಿಗಳು ಮುಚ್ಚಲ್ಪಟ್ಟಿವೆ.

—ತೇಮ್ಸ್ ನದಿಯಲ್ಲಿಯೂ ಕೂಡ ನೀರು ನೆರೆಯ ಸಮ್ಬಂಧ ಉಕ್ಕಿಬಂದು ತೇಮ್ಸಿನಲ್ಲಿ ನಡಿಯಲಿಕ್ಕಿರುವ ಫುಟ್‌ಬಾಲ್ ಮ್ಯಾಚುಗಳನ್ನು ಹೊಕ್ಕಿ ಮ್ಯಾಚುಗಳನ್ನು ನಿಲ್ಲಿಸಲ್ಪಟ್ಟಿವೆ. ನೀರಿನ ಪ್ರವಾಹವು ಜೋರಾಗಿದ್ದರಿಂದ ಅದರ ಸುತ್ತುಮುತ್ತಲಿರುವ ಅನೇಕ ಮನೆಗಳು ಬಿದ್ದುಹೋಗಿಯವೆ. ಮನೆಗಳ ಒಳಗೆ ಇರುವ ಜನರ ರಕ್ಷಣೆಗಾಗಿ ಮತ್ತು ಅವರ ಸಾಮಾನುಗಳನ್ನು ಒದಗಿಸಿಕೊಡುವ ಬಗ್ಗೆ ಬೋಟುಗಳನ್ನು ಒದಗಿಸಿರುವರು.

—ಜರ್ಮನಿಯಲ್ಲಿ ಕಳೆದ ತಾ. ೩೧ರಲ್ಲಿ ರ್‍ಹೈನ್ ಎಂಬ ನದಿಯಲ್ಲಿ ನೀರು ಉಕ್ಕಿಬಂದು ಪಟ್ಟಣದಲ್ಲಿ ವಿಶೇಷವಾದ ನೀರು ನಿಂತಿದೆ. ಕೆಲವು ಕಡೆಗಳಲ್ಲಿ ನದಿಯ ತೀರದಲ್ಲಿರುವ ಮನೆಗಳ ಮೂರನೆ ಉಪ್ಪರಿಗೆಯ ತನಕ ನೀರು ಏರಿಕೊಂಡಿತ್ತು. ಸುಮಾರು ೩೩॥ ಫೂಟು ಎತ್ತರದ ವರೇಗೆ ನೀರು ಉಕ್ಕಿ ಬಂದಿತ್ತು. ಅನೇಕ ಕಾರಖಾನೆಗಳು ಬಂದು ಮಾಡಿದ್ದರಿಂದ ಸಾವಿರಾರು ಜನರು ಕೆಲಸವಿಲ್ಲದೆ ಗೋಳಾಡುತ್ತಿರುವರು.

—ತಾ. ೩ಕ್ಕೆ ಬೆಲ್ಜಿಯಮ್‌ದಲ್ಲಿ ಸುಮಾರು ೮೦೦೦ ಮನೆಗಳು ನೀರಿನಲ್ಲಿ ಮುಳುಗಿಕೊಂಡು ಇದ್ದವು. ಅಲ್ಲಿಯ ಸರಕಾರದವರು ಅನೇಕ ಸಾವಿರ ನೀರು ತೆಗೆಯುವ ಯಂತ್ರಗಳ ಮುಖಾಂತರ ನೀರನ್ನು ಕಡಿಮೆ ಮಾಡುವ ಪ್ರಯತ್ನ ಮಾಡುತ್ತಿದೆ. ಅಲ್ಲಿಯ ರೆಡ್‌ಕ್ರಾಸ್ ಸೊಸೈಟಿಯವರು ನೆರೆಯಿಂದ ನಷ್ಟಹೊಂದಿದವರ ಬಗ್ಗೆ ಒಂದು ಫಂಡನ್ನು ಏರ್ಪಡಿಸಿದ್ದಾರೆ.

—ಬೆಲ್ಜಿಯಮ್ ಮಹಾರಾಜರು ಅಲ್ಲಿಯ ನೇಶನಲ್ ಫಂಡಿನವರಿಗೆ ನೆರೆಯ ಹಾವಳಿಯಲ್ಲಿ ನಷ್ಟಹೊಂದಿದವರಿಗೆ ತಕ್ಕ ಸಹಾಯಮಾಡುವವರೆ ಎರಡು ಮಿಲಿಯ ಫ್ರಾಂಕ್ಸನ್ನು ದಾನವಾಗಿ ಕೊಟ್ಟಿರುವರು.

—ಹೋಲೆಂಡಿನ ಅನೇಕ ಹಳ್ಳಿಗಳು ನೆರೆಯ ಸಮ್ಬಂಧ ನೀರಿನಲ್ಲಿ ಮುಳುಗಿರುವವು. ಅಲ್ಲಿಯ ಸ್ಟೀಮರುಗಳು ಡಾಯಕ್ ಮತ್ತು ಆರ್ನ್‌ಹೇಮ್ಸ್‌ನಲ್ಲಿರುವ ಅನೇಕ ಜನರ ಪ್ರಾಣವನ್ನು ಉಳಿಸಿದವು. ಅಲ್ಲಿಯ ನದಿಗಳಲ್ಲಿ ನೀರು ಹೆಚ್ಚಾಗಿ ಉಕ್ಕಿ ಬಂದುದರಿಂದ ಇನ್ನೂ ಅನೇಕ ಹಳ್ಳಿಗಳಲ್ಲಿ ಅನೇಕ ಮನೆಗಳು ಬಿದ್ದುಹೋಗಿರುವವು, ಅವುಗಳಲ್ಲಿರುವ ಜನರು ಬಹಳ ಕಷ್ಟಪಡುತ್ತಿದ್ದಾರೆ. ನೀರು ಏರಿದ ಸ್ಥಳದಿಂದ ಜನರನ್ನು ಕೊಂಡೊಯ್ಯುವರೆ ನೇವಿಯ ಮಂತ್ರಿಗಳು ಮೋಟಾರು ಬೋಟುಗಳನ್ನು ನೇವಿಯ ಜನರಿಗೆ ಸಹಾಯಕ್ಕಾಗಿ ಕಳಿಸಿರುವರು.

—ಇಂಗ್ಲೆಂಡಿನಿಂದ ಮುಂಬಾಯಿಗೆ ಬರುವ ವಿಲಾಯತಿ ಸ್ಟೀಮರುಗಳ ವಾಯರ್‌ಲೆಸ್ ಓಪ್‌ರೇಟ್ಸರು ಇಂಗ್ಲೆಂಡಿನಲ್ಲಿ ತಮ್ಮ ಕೆಲಸಕ್ಕೆ ಮುಷ್ಕರ ಹಾಕಿದ್ದಾರೆ. ತಮ್ಮ ತಿಂಗಳುಗಟ್ಲೆ ಪಗಾರವನ್ನು ಕಮ್ಮಿ ಮಾಡಿದ್ದರಿಂದ ಅವರು ತಮ್ಮ ಕೆಲಸಕ್ಕೆ ಮುಷ್ಕರ ಹಾಕಿರುವರು. ಈ ವಾಯರ್‌ಲೆಸ್ ಓಪರೇಟ್ಸ್‌ನ ಕೆಲಸವನ್ನು ತ್ವರೆಯದಲ್ಲಿ ಬೇರೆಯವರಿಗೆ ಕಲಿಸುವುದು ಕಷ್ಟವಾದ್ದರಿಂದ ಮುಷ್ಕರವು ಬೇಗನೆ ಮುಗಿಯದಿದ್ದರೆ ಸ್ಟೀಮರ್ ಚಲಾವಣೆಗೆ ಕಷ್ಟವಾದೀತೆಂದು ತಿಳಿದು ಬರುತ್ತದೆ.

—ಅಬ್ದುಲ್ ಕರೀಮ್‌ರವರು ಫ್ರೆಂಚರೊಡನೆ ಸಮಾಧಾನವನ್ನು ಮಾಡಿಕೊಳ್ಳಬೇಕೆಂಬದಾಗಿ, ತನ್ನ ಷರತ್ತುಗಳನ್ನು ಸೂಚಿಸಿ, ಮಿ॥ ಕ್ಯಾನಿಂಗ್ ರವರನ್ನು ಫ್ರಾನ್ಸಿಗೆ ಕಳುಹಿಸಿದ್ದರು. ಆದರೆ ಫ್ರೆಂಚರು ಇದಕ್ಕೆ ತಕ್ಕ ಗಮನವನ್ನು ಕೊಟ್ಟಿರುವುದಿಲ್ಲ.

—ಇಂಡಿಯಾ ದೇಶದಲ್ಲಿ ಫ್ರೆಂಚರಿಗೆ ಸೇರಿರುವ ಪ್ರದೇಶವು ಬಹಳ ಅಲ್ಪವಾದುದೆಂದೂ, ಇದಕ್ಕಾಗಿ ಒಂದು ಸೈನ್ಯವನ್ನು ಇಡುವದು ಲಾಭಕರವಲ್ಲವೆಂದೂ ಯೋಚಿಸಿ, ಸದರಿ ಸೈನ್ಯವನ್ನು ತೆಗೆದುಹಾಕಬೇಕೆಂದು ಇಂಡಿಯಾ ದೇಶದ ಫ್ರೆಂಚ್ ನ್ಯಾಯವಿಧಾಯಕ ಸಭೆಯವರು ಸಲಹೆಯನ್ನು ಮಾಡಿರುತ್ತಾರೆ. ಇದೂ ಅಲ್ಲದೆ ಇನ್ನೂ ಅನೇಕ ದೊಡ್ಡ ಆಫೀಸರುಗಳ ಹುದ್ದೆಯು ತೆಗೆದುಹಾಕಲ್ಪಟ್ಟಿದೆ.

—ರೊಮೇನಿಯದ ಯುವರಾಜನು ತನಗೆ ಇನ್ನು ಮುಂದೆ ರಾಜ್ಯಭಾರವು ಬೇಡವೆಂದು ಸಾಧಾರಣ ಮನುಷ್ಯರ ಹೆಸರಿಟ್ಟುಕೊಂಡು ರಾಜ್ಯದಿಂದ ಹೊರಟುಹೋಗಿರುವನು. ತಂದೆಗೂ ಮಗನಿಗೂ ಹೆಚ್ಚು ವರುಷಗಳಿಂದ ಕಠಿಣ ದ್ವೇಷವಿದ್ದುದೇ ಇದಕ್ಕೆ ಕಾರಣವೆಂದು ಹೇಳುತ್ತಾರೆ.

—ಗ್ರೀಸ್ ದೇಶದಲ್ಲಿ ರಿಪಬ್ಲಿಕನ್ ಸೈನ್ಯವು ಹೆಚ್ಚುತ್ತಲಿದೆ. ಜನರಲ್ ಪೆಂಗೆಲೋಸನು ಇದರ ನಾಯಕನಾಗಿರುವನು.

—ಲಂಡನಿನಿಂದ ಪೆರಿಸ್ ವರೆಗೆ ಸಂಚರಿಸುವ ವಾಯುವಿಮಾನವು ಮನುಷ್ಯನ ಸಹಾಯವಿಲ್ಲದೆ ತನ್ನಷ್ಟಕ್ಕೆ ನಡಿಯುವುದಂತೆ.

—ಇಟಲಿಯ ಆರಸರ ಮಾತೆಯವರು ಕಾಲವಾದರು.

ಒಳದೇಶ ವರ್ತಮಾನ.

—ಕಳೆದ ಡಿಶಂಬರ ತಾ. ೧೯ಕ್ಕೆ ಕಾನ್‌ಪೂರಿನಲ್ಲಿ ಸಮಾಯವಧಿ ಎಂಬ ಪತ್ರಿಕೆಯ ಎಡಿಟರರ ಆಫೀಸನ್ನೂ, ಮನೆಯನ್ನೂ ಕೆಲವು ಸಿ. ಆಯ್. ಡಿ. ಪೋಲೀಸರು ಏನೋ ಆರೋಪಣೆಯ ಮೇಲೆ ಜಪ್ತಿಮಾಡಿ ಅವರಲ್ಲಿರುವ ಕೆಲವು ಪುಸ್ತಕಗಳನ್ನೂ, ಬ್ರಿಟಿಷ್ ಟ್ರೇಡ್ ಯೂನಿಯನ್ ಕೊಂಗ್ರೆಸ್ಸಿನ ಸೋವಿಯಟ್ ಮತ್ತು ರುಸ್ಸದ ರಿಪೋರ್ಟನ್ನು ಸಹ ತೆಗೆದುಕೊಂಡು ಹೋಗಿರುವರು.

—ಮಲಬಾರಿನ ಪಕ್ಕಲುಗಳ ಮಹಾಸಭೆಯು ಪಟ್ಟಾಂಬಿ ರೈಲುವೆ ಸ್ಟೇಶನಿನ ಮುಂಭಾಗದ ಹಾಕಿರುವ ಸಭಾಮಂದಿರದಲ್ಲಿ ರಾವ್‌ಸಾಹೇಬ್ ಪಿ. ವಿ. ಕೇಶವ ಮೆನೋನರ ಅಧ್ಯಕ್ಷತೆಯಲ್ಲಿ ಇದೇ ತಿಂಗಳ ೨೩ನೇ ತಾರೀಕಿಗೆ ಜರಗುವುದು.

—ಕೊಯಮುತ್ತೂರು ಜಿಲ್ಲೆಯಲ್ಲಿ ಕೊಲೆಪಾತಕಗಳ ಸಂಖ್ಯೆಯು ಹೆಚ್ಚುಹೆಚ್ಚಾಗುತ್ತಾ ಬರುವದರಿಂದ ಮದರಾಸು ಸರಕಾರದವರು ಹಂಗಾಮಿಯಾಗಿ ಜನವರಿ ೮ನೇ ತಾರೀಕಿನಿಂದ ಒಂದು ಅಸಿಸ್ಟಾಂಟ್ ಸೆಶ್ಶನ್ ಕೋರ್ಟನ್ನು ಕೊಯಮುತ್ತೂರಿನಲ್ಲಿ ತೆರೆದಿರುವರು.

—ಕಳೆದ ತಾ. ೨೬ ದಿವಸ ಪಾಟಿಯಾಲದ ಮಹಾರಾಜರ ಅರಮನೆಗೆ ಮಹಾರಾಣಿಯವರ ಅಂಗಸೇವಕರನ್ನು ಕೊಂಡುಹೋಗುತ್ತಿದ್ದ ಒಂದು ಮೋಟಾರಕಾರು ಟ್ಲೌಳೆ ಎಂಬಲ್ಲಿ ಒಂದು ರೈಲ್ವೆ ಕ್ರೋಸಿಂಗ್ ಗೇಟಿನ ಹತ್ತಿರ ಹೋಗುತ್ತಿರುವಾಗ್ಯೆ ರೈಲ್ವೆ ಗೇಟು ಫಕ್ಕನೆ ಬಂದುಮಾಡಲ್ಪಟ್ಟದ್ದರಿಂದ ಈ ಮೋಟಾರುಕಾರು ಟ್ರೈನಿನ ಕೆಳಗೆ ಬಿದ್ದು ಬಹಳ ವಿಶೇಷತರದ ಪೆಟ್ಟಾಗಿ ಇಡಿ ಮೋಟಾರುಕಾರು ಚಿಂತಿಪೆಟ್ಟಿಗೆಯನ್ನು ತುಳಿದರೆ ಹ್ಯಾಗೆ ನುಚ್ಚಾಗುತ್ತದೊ ಹಾಗೆಯೇ ನುಚ್ಚುನುಚ್ಚಾಗಿ ಹೋಗಿದೆ. ಮೋಟಾರಿನಲ್ಲಿದ್ದ ೯ ಜನ ಹೆಂಗಸರಲ್ಲಿ ೬ ಜನರು ಕೂಡಲೆ ಮಡಿದಿರುವರು. ಒಬ್ಬಳು ಆಸ್ಪತ್ರೆಯಲ್ಲಿ ಮಡಿದಿರುವಳು. ಬಾಕಿಯವರಿಗೆ ಕಠಿಣ ಗಾಯವಾಗಿದೆ. ಮೋಟಾರಿನ ಡ್ರ್ಯಾವರನಿಗೂ ಕೂಡ ಒಳ್ಳೇ ಪೆಟ್ಟಾಗಿದೆ.

—ರಾಕೀಲ್‌ಪುರಕ್ಕೆ ಪ್ರಯಾಣಕ್ಕೆ ಹೊರಟಿದ್ದ ೫ ಮಿಲಿಟರಿ ವಾಯು ವಿಮಾನಗಳು ಕಳೆದ ತಾ. ೩ರಲ್ಲಿ ಅಲಹಾಬಾದಿನಿಂದ ಹಾದುಹೋದವು.

—ಮಹಾತ್ಮಾ ಗಾಂಧಿಯವರು ಕಾನ್‌ಪುರದ ಕಾಂಗ್ರೆಸ್ ಮುಗಿದ ನಂತರ ಮರಾಠಾ ಪ್ರದೇಶವನ್ನು ಪ್ರಯಾಣ ಮಾಡಬೇಕೆಂದು ನಿಶ್ಚಯಿಸಿದ್ದರು. ಆದರೆ ಅವರು ದೇಹದಲ್ಲಿ ಬಹಳವಾಗಿ ಕ್ಷೀಣವಾಗಿದ್ದರಿಂದಲೂ ಕಳೆದ ತಿಂಗಳಲ್ಲಿ ನಡೆಸಿದ ೭ ದಿವಸದ ಉಪವಾಸ ವ್ರತದಿಂದ ಸುಮಾರು ೨೦ ಪೌಂಡು ತೂಕದಲ್ಲಿ ಕಡಿಮೆಯಾಗಿದ್ದರಿಂದಲೂ, ಡಾಕ್ಟರುಗಳ ಅಭಿಪ್ರಾಯದ ಮೇರೆಗೆ ತಾನು ಇನ್ನು ಒಂದು ವರ್ಷದ ವರೇಗೆ ಸಬರಮತಿ ಆಶ್ರಮದಲ್ಲಿಯೇ ಉಳಕೊಳ್ಳುವೆನೆಂದೂ, ಇತರ ಕಡೆ ಎಲ್ಲಿಯಾದರೂ ಹೋಗುವುದಿಲ್ಲವಾಗಿ ತಮ್ಮ ನವಜೀವನ ಪತ್ರಿಕೆಯಲ್ಲಿ ಬರೆದಿರುವರು.

—ಮಹಾತ್ಮಾ ಗಾಂಧಿಯವರ ಫ್ರಾನ್ಸದೇಶದ ಹೊಸ ಶಿಷ್ಯಳಾದ ಕುಮಾರಿ ಸ್ಲೆಡಳು ಶುದ್ಧವಾಗಿಯೂ ಖಾದಿಯ ಝುಗೆಯನ್ನು ಧರಿಸಿದ್ದಳು.

—ಅಮೇರಿಕೆಯಿಂದ ಬಂದ ಹೋಮ್ಸರವರು ವೃತ್ತ ಪತ್ರಿಕಾ ವ್ಯವಸಾಯದವರು. ಇವರು ಇಲ್ಲಿಯ ಸಂಗತಿಗಳನ್ನೆಲ್ಲಾ ಅಭ್ಯಾಸಿಸಲು ಬಂದಿದ್ದಾರೆ.

—ರಂಗೂನಿನಲ್ಲಿ ಕಳೆದ ಮೇ ತಿಂಗಳಲ್ಲಿ ಒಂದು ವೇಶ್ಯಾಸ್ತ್ರೀಯ ಮನೆಗೆ ೯ ಜನ ಪೋಲೀಸ ಇಲಾಖೆಯವರು ಹೋಗಿ ಅಲ್ಲಿ ನಡೆಸಿದ ಅಪಕೃತಗಳ ಆರೋಪಣೆಗಳ ಮೇಲೆ ಆ ೯ ಜನರನ್ನೂ ಕೈದುಮಾಡಲ್ಪಟ್ಟಿದ್ದರು. ಇವರ ಸಂಬ್ರದ ತನ್ನಿಯು ಮುಗಿದು ಕಳೆದ ತಾ. ೪ಕ್ಕೆ ೩ ಜನ ಪೋಲಿಸ್ ಆಫೀಸರರಿಗೆ ೯ ತಿಂಗಳ ಕಠಿಣ ಸಜೆಯನ್ನೂ, ಮತ್ತು ಎರಡು ಜನ ವಾರ್ಡ್‌ಹೆಡ್ಡ್ ಮೇನರಿಗೆ ೨ ತಿಂಗಳ ಕಠಿಣ ಸಜೆಯನ್ನೂ ವಿಧಿಸಲಾಯಿತು.

—ವ್ಯಾಸರಾಯರು ಈಗ ಅಸ್ಸಾಮಿನಲ್ಲಿ ಸಂಚರಿಸುತ್ತಿರುವರು. ನಾಲ್ಕನೆ ತಾರೀಕಿಗೆ ಮುಖ್ಯಪಟ್ಟಣವಾದ ಶಿಲ್ಲೊಂಗಿನಲ್ಲಿದ್ದರು.

—ಕರೆನ್ಸಿ ಕಮಿಶನ್‌ನವರ ಮುಂದೆ ಬಂಗಾಳ ಚೆಂಬರ್ ಒಫ್ ಕಮರ್ಸ ಎಂಬ ವರ್ತಕ ಸಂಘದವರು. ಹಿಂದೂದೇಶಕ್ಕೆ ಮೊಹರು ಎಂಬ ಭಂಗಾರದ ನಾಣ್ಯವನ್ನು ಕೊಡಿಸಬೇಕೆಂದೂ, ಬೆಳ್ಳಿಯ ನಾಣ್ಯ ಮಾಡುವುದನ್ನು ಕಡಿಮೆಮಾಡಬೇಕೆಂದೂ, ನೋಟುಗಳನ್ನು ಇಂಡಿಯದಲ್ಲಿಯೇ ಛಾಪಿಸಬೇಕೆಂದೂ, ಇಂಪೀರಿಯಲ್ ಬ್ಯಾಂಕಿನ ಡ್ಯಾರೆಕ್ಟರರಲ್ಲಿ ಹಿಂದಿಯರ ಸಂಖ್ಯೆಯನ್ನು ಏರಿಸಬೇಕೆಂದೂ, ೫ ರೂಪಾಯಿಗಿಂತ ಕಡಿಮೆ ಬೆಲೆಯ ನೋಟುಗಳನ್ನು ಛಾಪಿಸಬಾರದೆಂದೂ ತಿಳಿಸಿದ್ದರು.

—ಪಂಡಿತ ಮೋತಿಲಾಲ ನೆಹರುರವರು ಕಾನಪುರದಿಂದ ಬಂದಂದಿನಿಂದ ಜ್ವರದಿಂದ ಪೀಡಿತರಾಗಿರುವರು.

ದಕ್ಷಿಣ ಕನ್ನಡ.

ಕುಂಬಳೆ:— ಇಲ್ಲಿಯ ಹಾಯ್ಯರ್ ಎಲಿಮೆಂಟರಿ ವ ಲವರ್ ಎಲಿಮೆಂಟರಿ ಶಾಲೆಯ ಬಗ್ಗೆ ಒಂದು ನೂತನ ಕಟ್ಟೋಣವನ್ನು ಬೋರ್ಡಿನವರು ಮಾಡಿಸುವಲ್ಲಿ ಬೋರ್ಡು ಮೆಂಬರುಗಳೂ ಜಮೀನುದಾರರೂ ಆಗಿರುವ ಇಲ್ಲಿಯ ಮ॥ ರಾ॥ ಬಿ. ಚಿಕ್ಕಪ್ಪ ಭಂಡಾರಿಗಳೂ ಮ॥ ರಾ॥ ಕೆ. ವೆಂಕಪ್ಪ ಪೂಂಜರವರೂ ತಲಾ ರೂ. ೫೦೦ರಂತೆ ೧೦೦೦ ರೂಪಾಯಿಗಳನ್ನು ಕೊಡುವದಾಗಿ ವಾಗ್ದಾನ ಮಾಡಿರುವರೆಂತಲೂ ಮಾಸ್ಕ ಬೋರ್ಡಿನವರು ಈ ಕಟ್ಟೋಣದ ವಿಲವಾರಿ ಕಾರ್ಯ ಮಾಡಿಸುವರಾಗಿಯೂ ವದಂತಿ ಇದೆ.

ಬೋರ್ಡಿನವರು ಈಚೆಗೆ ಗ್ರಾಮಗಳ ತೋಡುಗಳಿಗೆ ಕಾಲು ಸಂಕಗಳನ್ನು (Foot bridges) ಮಾಡಿಸುವದು ಸ್ತುತ್ಯವಾಗಿದ್ದು ಆರಿಕಾಡಿ ಗ್ರಾಮದ ಕಂಚಿಕಟ್ಟೆ ಮತ್ತು ಕೈಯಾಡಿ ಗ್ರಾಮದ ಕೋಟೆಕಾರು ಎಂಬಲ್ಲಿ ೨ ಸಂಕಗಳನ್ನು ಮಾಡಿಸಿದ್ದಲ್ಲಿ ದಿನಂಪ್ರತಿ ಆಮುದರವಿತ್ತಾಗುವ ನೂರಾರು ಹಳ್ಳಿ ನಿವಾಸಿಕರಿಗೆ ವ ಶಾಲಾ ಬಾಲಕರಿಗೆ ಇರುತ್ತಿದ್ದ ಕಷ್ಟಗಳು ಪರಿಹಾರವಾಗುವದರಿಂದ ಇದಕ್ಕೆ ನಿಗಾಕೊಡಬೇಕಾಗಿದೆ.

ಇಲ್ಲಿಯ ಪಟ್ಟಣದ ಮಧ್ಯದಲ್ಲಿರುತ್ತಿದ್ದ ಲೋಕಲ್ ಫಂಡ್ ಬಾವಿಯನ್ನು ಮೆ॥ ಇನಾಸ್ ಡಿ'ಸೋಜರಿಗೆ ಕೊಟ್ಟಿರುವದರಿಂದ ಮಾರ್ಕೆಟ ಬಳಿ ಒಂದು ನೂತನ ಬಾವಿಯನ್ನು ಬೋರ್ಡಿನವರು ಮಾಡಿಸುವುದು ಅಗತ್ಯವಾಗಿದೆ.

ಇದೇ ತಾ. ೧ರ ಲಾಗಾಯಿತು 'ಕೆ. ಎ. ಮೋಟರ್ ಸರ್ವಿಸ್' ಎಂಬ ಕಂಪೆನಿ ಬಸ್ಸು ಇಲ್ಲಿಂದ ಪುತ್ತೂರಿಗೆ ಚಲಾವಣೆಗೆ ಪ್ರಾರಂಭವಾಗಿದೆ. ಇನ್ನೊಂದು ಕಂಪೆನಿಯವರು ಸದ್ಯದಲ್ಲೇ ಇಡುವರಂತೆ! ಪ್ರಯಾಣಿಕರಿಗೆ ತುಂಬಾ ಸೌಕರ್ಯ!!

ಇದೇ ತಾ. ೧೩ರಿಂದ ಇಲ್ಲಿಯ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಜಾತ್ರೆಯು ಪ್ರಾರಂಭಿಸುವದರಿಂದ ಗುಂಡುಕಪಲೆ ವ ಇತರ ಸುಲಿಗೆಯಾಟಗಳು ಇಡದಂತೆ ಪೋಲೀಸಿನವರು ತಕ್ಕ ನಿಗಾ ಇಡುವರಾಗಿ ನಂಬುತ್ತೇವೆ.

ಜೋಯಿಕಟ್ಟೆ:— ಇಲ್ಲಿ ಮಾಪಿಳಾ ಜಾತಿಯವರ ಮನೆಗಳು ಸುಮಾರು ೧೦೦ರ ವರೇಗೆ ಇವೆ. ಮಾಪಿಳಾ ಜಾತಿಯ ಜನರ ಸಂಖ್ಯೆ ಜಾಸ್ತಿ ಇರುವಲ್ಲಿ ಮಾಪಿಳಾ ಬೋರ್ಡು ಶಾಲೆಯನ್ನು ತಾಲೂಕು ಬೋರ್ಡಿನವರು ಸ್ಥಾಪನೆ ಮಾಡುತ್ತಾರೆಂಬ ವದಂತಿಯೂ ಇದೆ. ಆದುದರಿಂದ ಮಂಗಳೂರು ತಾಲೂಕು ಬೋರ್ಡಿಗೆ ಒಳಪಟ್ಟ ಈ ಜೋಯಿಕಟ್ಟೆ ಎಂಬ ಸ್ಥಳದಲ್ಲಿ ಒಂದು ಮಾಪಿಳಾ ಬೋರ್ಡುಶಾಲೆಯನ್ನು ಸ್ಥಾಪನೆ ಮಾಡಿದರೆ ವಿದ್ಯೆಯಲ್ಲಿ ಹಿಂದುಳಿದ ಮಾಪಿಳಾ ಜಾತಿಯ ಮಕ್ಕಳು ವಿದ್ಯಾವಂತರಾಗುತ್ತಿದ್ದರು.

ಸುಬ್ರಹ್ಮಣ್ಯ:— ಇಲ್ಲಿ ಇದೇ ಕಳೆದ ವಾರದಲ್ಲಿ ದ್ರಾವಿಡ ಬ್ರಾಹ್ಮಣರ ಆರನೇ ಪರಿಷದವು ಜರಗಿತು. ಶ್ರೀ ಸಿ. ಎಸ್. ಸುಬ್ಬರಾವ್, ಶ್ರೀಪತಿರಾವ್ ಮೊದಲಾದವರು ಕೊಡಗು ಪ್ರಾಂತ್ಯದಿಂದಲೂ, ಬಿ. ಸೀತಾರಾಮರಾಯರು ಮುದರಾಸಿನಿಂದಲೂ, ಕಲ್ಮಾಡಿ ಲಕ್ಷ್ಮೀನಾರಾಯಣರಾವ್, ಪಾಂಗಾಳ ಸುಬ್ಬರಾವ್, ಎಂ. ಅನಂತ ಶಾಸ್ತ್ರಿ, ಕೆ. ಆರ್. ಆಚಾರ್, ಎಸ್. ಭಿಡೆ, ಕೆ. ಆರ್. ಕಾರಂತ, ನರಿಕೊಂಬುರಾವ್, ಪಂಡಿತ ಸೀತಾರಾಮಾಚಾರ್, ಬಿ. ಆರ್. ಆಚಾರ್ ಮೊದಲಾದವರು ಮಂಗಳೂರಿಂದಲೂ, ಲಕ್ಷ್ಮೀನಾರಾಯಣ ಪುಣಿಂಚತ್ತಾಯ, ವೈದ್ಯ ಶಂಕರ ನಾರಾಯಣ ಭಟ್ಟರು ಕಾಸರಗೋಡಿನಿಂದಲೂ, ಇಡ್ಯ ಕೃಷ್ಣಯ್ಯ, ಇಡ್ಯ ವಾಸುದೇವಯ್ಯನವರು ಕಾರ್ಕಳದಿಂದಲೂ, ಯು. ವೆಂಕಟರಾವ್, ಸುಬ್ಬಣ್ಣಯ್ಯ ಮೊದಲಾದವರು ಉಡುಪಿಯಿಂದಲೂ, ಸುಬ್ರಾಯ ಕೋಳ್ಪಾಡಿತ್ತಾಯ, ನಾರಾಯಣಾಚಾರ್, ಶ್ರೀನಿವಾಸ ಶಾಸ್ತ್ರಿ, ಮೊದಲಾದವರು ಪುತ್ತೂರಿಂದಲೂ ಬಂದಿದ್ದರು. ಬಿ. ಅನಂತರಾಮಶರ್ಮರು ಸ್ವಾಗತ ಮಂಡಳದ ಅಧ್ಯಕ್ಷರಾಗಿ ಸಭಿಕರನ್ನು ಸತ್ಕರಿಸಿದರು. ಸುಬ್ರಹ್ಮಣ್ಯ ವಿಶ್ವಜ್ಞತೀರ್ಥಶ್ರೀಪಾದಂಗಳವರೂ ಯಥೋಚಿತವಾಗಿ ಸನ್ಮಾನಿಸಿದರು. ಹ್ಯಾ ಕೋರ್ಟು ವಕೀಲ್ ಮ॥ ರಾ॥ ಯು. ಸಿ. ಕೃಷ್ಣ ಭಟ್ಟರು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಅಧ್ಯಕ್ಷರ ಭಾಷಣವು ಸ್ಫೂರ್ತಿದಾಯಕವಾಗಿತ್ತು. ಸಭಾಲಂಕೃತರಾದ ಅನೇಕ ವಕೀಲ ಮಹಾಶಯರ ಮತ್ತು ಪಂಡಿತೋತ್ತಮರ ಮನೋಹರವಾದ ವ್ಯಾಖ್ಯಾನಗಳಾದವು. 'ಕರ್ನಾಟಕ ಬೇಂಕ್' ಮತ್ತು 'ಬಡ ವಿದ್ಯಾರ್ಥಿ ನಿಧಿ'ಗಳಿಗೆ ಉತ್ಸಾಹದಿಂದ ಧನಸಂಗ್ರಹವಾಯಿತು. ಸ್ವಜಾತಿಯ ಏಳಿಗೆಯ ಕೆಲವು ಠರಾವುಗಳು ಮಂಜೂರಾದವು. ಶ್ರೀಯುತ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ಮತ್ತು ವೈದ್ಯ ಶಂಕರನಾರಾಯಣ ಭಟ್ಟರ ಆಮಂತ್ರಣದಂತೆ ೭ನೇ ಪರಿಷದವನ್ನು ಕಾಸರಗೋಡಿನಲ್ಲಿ ಜರಗಿಸಬೇಕೆಂದು ನಿರ್ಧಾರವಾಯಿತು. ಅನಂತರ ಅಧ್ಯಕ್ಷರ ಕೊನೆಯ ಭಾಷಣವಾಗಿ ಸಭೆಯು ಕೊನೆಗೊಂಡಿತು.

ಮಂಜೇಶ್ವರ:— ಇಲ್ಲಿ ಕುಂಕದಕಟ್ಟೆಯಲ್ಲಿ ಒಂದು ಬ್ರೆಂಚ್ ಪೋಸ್ಟ ಆಫೀಸನ್ನು ತೆರೆದಿರುತ್ತಾರೆ.

ಇಲ್ಲಿಯ ಹೊಳೆಗೆ ಒಂದು ಸೇತುವೆಯು ಅತೀ ಅಗತ್ಯವಾಗಿದ್ದರೂ ಡಿಸ್ಟ್ರಿಕ್ಟ ಬೋರ್ಡಿನವರು ಇದನ್ನು ಮಾಡಿಸದೆ ಇದ್ದ ಕಾರಣವು ತಿಳಿದುಬರುವುದಿಲ್ಲ. ರಾ॥ ನಾರ್ಣಪ್ಪ ಸುವರ್ಣನವರು ಡಿಸ್ಟ್ರಿಕ್ಟಬೋರ್ಡ ವಿಸಿಟಿಂಗಿನ ಸಮಯ ಇದರ ವಿಷಯ ಒಂದು ಸವಾಲನ್ನಾದರೂ ಕೇಳಿ ಸಂಕ ಮಾಡಿಸದೆ ಇರುವುದರ ಗುಟ್ಟು ತಿಳಿದುಕೊಳ್ಳಬಾರದೆ? ಈ ಸೇತುವೆಗೆ ಬೇಕಾದ ನಮೂನೆಯ ಕಬ್ಬಿಣದ ಅಡ್ಡಗಳು ಪಾಣೆಮಂಗಳೂರು ಸೇತುವೆಯ ಹತ್ತಿರ ನೂರಾರು ಇವೆಯಲ್ಲವೆ!

ಮಂಗಳೂರು.

ಸ್ಥಳೀಕ ವೈ. ಯಂ. ಸಿ. ಎಗೆ ಹಣ ಸಹಾಯ್ಯ ಮಾಡುವರೆ ವಾಗ್ದಾನ ಮಾಡಿದ ಮಹನೀಯರನ್ನು ಪ್ರೆಸಿಡೆಂಟರು ಬೇಡಿಕೊಳ್ಳುವುದೇನೆಂದರೆ:— ಅಂತಹ ವಾಗ್ದಾನಗಳನ್ನು ಅದಕ್ಕಾಗಿಯೇ ತೆರೆದಿರುವ ಭಾಷಾ ಪುಸ್ತಕದಲ್ಲಿಯೇ ಬರಿಯಬೇಕಾಗಿಯೂ, ಹಣವನ್ನು ಕೊಡುವಾಗ ಆ ಪುಸ್ತಕವನ್ನು ತರಿಸಿ, 'ಹಣವನ್ನು ಕೊಟ್ಟದೆ' ಎಂಬದಾಗಿ ಬರಿಯಬೇಕಾಗಿಯೂ, ತರುವಾಯ ಛಾಪೆ ಮಾಡಿದ ರಶೀದಿಯೊಂದನ್ನು ಕೇಳಬೇಕಾಗಿಯೂ, ಸಾಧ್ಯವಿದ್ದಷ್ಟು ಮಟ್ಟಿಗೆ ಹಣವನ್ನು ವೈ. ಯಂ. ಸಿ. ಎಯ ಗೌರವಾರ್ಥ ಖಜಾಂಚಿಯವರಾದ ಮೆ॥ ಆಲ್ಬೆರ್ ಸೋನ್ಸರಿಗೆನೇ ಪಾವತಿ ಮಾಡಬೇಕಾಗಿಯೂ ವಿನಂತಿ.

ಮಂಗಳೂರು ಗಣಪತಿ ಹ್ಯಾಸ್ಕೂಲಿನ ಫಂಡಿನ ಸಹಾಯಾರ್ಥವಾಗಿ ಅದೇ ಸಾಲೆಯಲ್ಲಿ ಕಲಿತು ಹೋದ ವಿದ್ಯಾರ್ಥಿಗಳು "ಏಕಚ್ ಪ್ಯಾಲಾ" ಎಂಬ ಕನ್ನಡ ಸಂಗೀತ ನಾಟಕವನ್ನು ಅದೇ ಶಾಲೆಯಲ್ಲಿ ಬರುವ ಬುಧವಾರ (ತಾ. ೧೩—೧—'೨೬)ದಿನ ರಾತ್ರಿ ೯-೩೦ಕ್ಕೆ ಆಡಿ ತೋರಿಸುವರು. ಎಲ್ಲರೂ ಪ್ರೋತ್ಸಾಹಿಸುವರಾಗಿ ಸೆಕ್ರೆಟರಿಯವರು ನಂಬುತ್ತಾರೆ.

ಕರ್ನಾಟಕ ತಿಲಕ ವಿದ್ಯಾಲಯ ಸಹಾಯಾರ್ಥವಾಗಿ ಕಳೆದ ವಾರ ಮುಷ್ಟಿ ಫಂಡಿನಿಂದ ರೂ. ೭-೨-೩ ಮತ್ತು ೭॥ ಸೇರು ಅಕ್ಕಿ ಜಮಾ ಬಂದಿರುತ್ತದೆ. ಕಳೆದ ದಶಂಬರ ಇಡೀ ತಿಂಗಳಲ್ಲಿ ಮುಷ್ಟಿಫಂಡಿನಿಂದ ರೂ. ೩೬—೧—೨ ಮತ್ತು ವಂತಿಗೆಯಾದ ರೂ. ೨೪—೮—೦, ಹೀಗೆ ಜುಮ್ಲಾ ರೂಪಾಯಿ ೬೦—೯—೨ ಜಮಾ ಬಂದಿರುತ್ತದೆ. (ಮುಖ್ಯಾಧ್ಯಾಪಕ.)

ಇಂಪೀರಿಯಲ್ ಬೇಂಕಿನ ಏಜೆಂಟರರಾದ ಯು. ಅನಂದರಾಯರಿಗೆ ಹೊಸ ವರ್ಷದ ಬಹುಮಾನವನ್ನು ಕೊಡುವಾಗ ರಾವ್ ಬಹದೂರ್ ಎಂಬ ಬಿರುದನ್ನು ಸರಕಾರವು ಕೊಟ್ಟಿರುತ್ತದೆ. ಈ ಮಹನೀಯರು ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಗೆ ಧನ ಸಹಾಯವನ್ನು ಮಾಡುವಾಗ ವಿಶೇಷ ಪ್ರಸಕ್ತಿಯನ್ನು ತೋರಿಸಿರುವರು.

ಕಳೆದ ವಾರದಲ್ಲಿ ಜಸ್ಟಿಸ್ ಎಸ್. ಡಿ. ದೇವದಾಸ ಬಾರ್, ಎಟ್. ಲಾ. ಇವರು ಮಂಗಳೂರನ್ನು ಸಂದರ್ಶಿಸಿದರು.

ಶ್ರೀಯುತ ಪುರುಷೋತ್ತಮ ನಾಂಬಿ ಶೇಟರವರು ಶ್ರೀಯುತ ಉಳ್ಳಾಲ ನಾರಾಯಣ ಕಿಣಿಯರ ಸ್ಥಾನದಲ್ಲಿ ಬೆಂಚಿ ಮೆಜಿಸ್ಟ್ರೇಟರಾಗಿ ನೇಮಕ ಹೊಂದಿರುವರು.

ಶ್ರೀಯುತ ಅಮ್ಮೆಂಬಳ ರಾಮರಾಯರಿಗೆ ಅವಮರ್ಯಾದೆ ಮಾಡಿದ ತಪ್ಪಿಗಾಗಿ ಬೋಳಾರ ವೈಸನಪ್ಪ ಬೆಳ್ಚಡನಿಗೆ ೧॥ ವರ್ಷ ಕಠಿಣ ಸಜೆಯೂ, ನಂತರ ಒಂದು ವರ್ಷದ ಮಟ್ಟಿಗೆ ರೂ. ೧೦೦ರ ಜಾಮೀನು ಪಿಕುವೆಯೂ ವಿಧಿಸಲ್ಪಟ್ಟಿರುತ್ತದೆ.

ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ಕ್ಲಬ್ಬಿನ ಎರಡನೆಯ ವಾರ್ಷಿಕೋತ್ಸವವು ದಶಂಬರ ತಾ. ೩೧ರಲ್ಲಿ ಸಂಭ್ರಮದಿಂದ ನಡೆಯಿತು.

ತಾ. ೨—೧—'೨೬ಕ್ಕೆ ಅಂತ್ಯವಾಗುವ ವಾರದಲ್ಲಿ ಇಲ್ಲಿಯ ಮುನ್ಸಿಪಾಲಿಟಿಯಲ್ಲುಂಟಾದ ೨೦ ಮರಣಗಳಲ್ಲಿ ೪ ವಿಷಮ ಜ್ವರದ ಮತ್ತು ೧ ಪ್ಲೇಗಿನ ಮರಣಗಳಾಗಿವೆ. ಪ್ಲೇಗಿನ ಮರಣವು ಪಳ್ನೀರಿನಲ್ಲಿ ಉಂಟಾದುದಾಗಿದೆ.

ಮದ್ರಾಸ್ ಹಾರ್ಬರ್ ವರ್ಕ್ಸಿನ ಮುಖ್ಯ ಇಂಜಿನೀಯರಾದ ನಮ್ಮ ಜಿಲ್ಲೆಯವರಾದ ರಾವ್ ಸಾಹೇಬ್ ಕೆ. ಗಣಪತಿ ರಾಯರಿಗೆ ರಾವ್ ಬಹದೂರ್ ಎಂಬ ಬಿರುದು ದೊರೆಯುತ್ತಿರುತ್ತದೆ. ಮುಂಬಾಯಿಯಲ್ಲಿರುವ ರಾವ್ ಬಹದೂರ್ ಅಮ್ಮೆಂಬಳ ಅನಂತಕೃಷ್ಣ ಶೈಣಯವರಿಗೆ ಎರಡನೆಯ ಕರ್ಗತ್ತಿಯ ಕೈಸರ್ ಹಿ-ಇಂಡ್ ಪದಕವು ದೊರೆತಿರುತ್ತದೆ.

ಪತ್ರವ್ಯವಹಾರ.

(ವಾಕ್ಯೀದಾರರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ. ಸಂಪಾದಕ ಸ್ವದೇ.)

ಸಹೋದರರೇ ಎಚ್ಚರಿಕೆ!

ಸುಖಜೀವನದ ಹಾದಿಯಾದ ಖಾದಿಯು ಎಂದು ಜನ್ಮವೆತ್ತಿ ಹೊಳೆಯ ತೊಡಗಿತೋ ಅಂದಿನಿಂದ ಕ್ರಮೇಣವಾಗಿ ವಿದೇಶಿ ಬಟ್ಟೆಯ ಕ್ರಯವು ಇಳಿಯ ತೊಡಗಿ ೧೭೦೩ನೇ ನಂಬರದ ಮಲ್ಲಿನ ವಸ್ತ್ರದ ವಾರಿಗೆ ರೂಪಾಯಿ ೧–೬–೦ ಇದ್ದದು ಬರೇ ರೂ. ೦–೧೩–೦ಗೆ ಬಂದಿಳಿಯಿತು. ಖಾದಿಯು ತನ್ನ ಅಂಬೇಗಾಲಿನಿಂದ ಮುಮ್ಮುಂದಾದ ಹೆಜ್ಜೆಯನ್ನು ಇಡಲಾರಂಭಿಸು ತ್ತಲೇ ಪರದೇಶಿ ಅರಿವೆಯು ಮನೆ ಬಾಗಿಲಿಗೆ ಬಂದು ಬೀಳಲಾರಂಭಿಸಿತು. ಆಗ ಖಾದಿ ಬಟ್ಟೆಯನ್ನುಟ್ಟ ಹಲವು ಮಹನೀಯರೇ ಅದರ ಆಳುಗಳಾಗಿ ಮಾರ್ಪಟ್ಟರು. ಈ ಮಾತಂತಿರಲಿ. ಸುದರ್ಶನ ಚಕ್ರದಂತ್ಯಾ ಚರಕದ ಪೆಟ್ಟು ೬,೦೦೦ ಮೈಲುಗಳ ದೂರದಲ್ಲಿರುವ ಇಂಗ್ಲೆಂಡಿಗೆ ತಾಗಿತು. ಅನೇಕ ಮಿಲ್ಲುಗಳು ಕೆಲವು ಕಾಲ ಹಟಕ್ಕವನ್ನೈದಿದವು. ಅನೇಕರಿಗೆ ಹೊಟ್ಟೆಗೆ ಹಿಟ್ಟು ಸಹಾ ಸಿಕ್ಕುವುದು ಬಲು ಕಷ್ಟದಾಯಕವಾಯಿತು. ಆಗ ಎಲ್ಲೆಲ್ಲೂ ವಸ್ತ್ರದ ಹರಾಜುಗಳಿಗೆ ಪ್ರಾರಂಭವಾಯಿತು. ಪೇಟೆಪಟ್ಟಣಗಳಲ್ಲೆಂದಲ್ಲ ನಾಲ್ಕು ಜನರ ನೆರವಿಯು ನೆರದಿರುವಲ್ಲಿ ಸಹಾ ವಸ್ತ್ರ ಏಲಂ! ಅವಿಚಾರಿಗಳನೇಕರು ಬಲಿಬೀಳತೊಡಗಿದರು. ಎಂಥಾ ಅರಿವೆಗಳನ್ನು ಏಲಂ ಮಾಡುತ್ತಿರುವರೆಂಬುದನ್ನು ವಿಚಾರಿಸುವ ವಿಚಾರಿಗಳು ಯಾರೂ ಇಲ್ಲ. ಮಿರುಮಿರುಗುವ ತಾಲುಗಳೆಂದು ತೆಗೆದುಕೊಂಡು ಒಂದೆರಡಾವರ್ತಿ ಉಪಯೋಗಿಸುವ ಮೊದಲೇ ಅವು ಸಾಲಿಗರ ಭೈರಾಸಿನಂತೆ ಮಾರ್ಪಡುತ್ತವೆ. ಪಟ್ಟೆಯ ಬಟ್ಟೆಯೆಂದು ತೆಗೆದುಕೊಂಡದ್ದು ಅತ್ಯಲ್ಪ ಸಮಯದಲ್ಲಿ ಲೊಟ್ಟೆಯ (ಠಕಾರಿಯ) ಬಟ್ಟೆ ಎಂಬ ಅರಿಯು ಬರುತ್ತದೆ. ಹೊಳೆಯುವಂತೆ ತಯಾರಿಸಿಟ್ಟ ಧೋತಿಗಳನ್ನು ಆರಿಸಿಕೊಂಡು ಹೋಗಿ ಒಂದೆರಡಾವರ್ತಿ ಮೈಗೆ ಸುತ್ತಿಕೊಂಡೊಡನೆಯೇ ಅವು ತಮ್ಮ ಪರಮಾವಧಿಯನ್ನೈದುವವು. ಜನರೇ! ಇಂಥಾ 'ಘಟೋತ್ಕಚ' ಮಾಯಾಜಾಲಕ್ಕೆ ಬಲಿಬೀಳುವಿರೇಕೆ? ಕಡಿಮೆ ಕ್ರಯವೆಂದು ನಿಮ್ಮ ಸ್ವದೇಶದ ಬಟ್ಟೆಯನ್ನು ಬಿಟ್ಟು ಇವಕ್ಕೊಲಿಯುವಿರೇಕೆ? ಕ್ರಯ ಕಡಿಮೆಯಾದರೇನಾಯಿತು? ಅಂದು ಘಟೋತ್ಕಚನು ಕೌರವಾದಿಗಳಿಗೆ ಧರ್ಮಾರ್ಥವಾಗಿಯೇ ಕಂಡೊಡನೇ ಮರುಳುಗೊಳಿಸುವಂಥಾ ಉಡಿಗೆಗಳನ್ನು ಕೊಡಲಿಲ್ಲವೇ? ಕಡೆಗೆ ಅದರ ಪರಿಣಾಮವೇನಾಯಿತೆಂಬದನ್ನು ವಾಚಕರಲ್ಲಿ ಪ್ರತಿಯೊಬ್ಬರೂ ಬಲ್ಲರು. ಆದ್ದರಿಂದ ಸಹೋದರರೇ! ಇಂಥಾ ಏಲಂಗಳಿಗೆ ಮರುಳಾಗಬೇಡಿರಿ! ಸ್ವದೇಶಿ ಬಟ್ಟೆಯನ್ನು ಬಟ್ಟರೆ ನೀವು ಭಾರತ ಮಾತೆಯ ಪುತ್ರರೆಂಬ ಬಿರುದನ್ನು ಕಟ್ಟಿಕೊಳ್ಳಲಾರಿರಿ! ಆದ್ದರಿಂದ ಈಗ ತಾನೆ ಮುಗಿಯುತ್ತಿರುವ ಕಾನ್‌ಪುರದ ಕಾಂಗ್ರೆಸಿನಲ್ಲಿ ಹಲವು ಪ್ರಮುಖರಾದ ಮುಖಂಡರು ಕೊಂಗ್ರೆಸ್ ಮೆಂಬರರಾಗತಕ್ಕವರು ಧರಿಸಲೇಬೇಕೆಂದು ಚರ್ಚಿಸುತ್ತಿರುವ ಆ ದಿವ್ಯ ಖಾದಿಯನ್ನು ಉಪಯೋಗಿಸಲು ಇನ್ನಾದರೂ ದೃಢಪ್ರತಿಜ್ಞೆಯನ್ನು ಗೈಯಿರಿ. ವೀರ ಭಾರತೀಯರೇ! ನಿಮ್ಮ ಅಂತಃರಂಗದಲ್ಲಿ [illegible] ಕೊಂಡರೆ ಇಹಲೋಕದಲ್ಲಿ ಸ್ಥಿರವಾದ ಕೀರ್ತಿಯನ್ನು ಪಡೆಯುವುದಲ್ಲದೆ ಸ್ವರ್ಗದ ಮಾರ್ಗದಲ್ಲಿ ನಿಮ್ಮ ಕೀರ್ತಿಜ್ಯೋತಿಯನ್ನು ಹಿಡಿದು ನಿಂತುಕೊಂಡು ಮಾರ್ಗದರ್ಶಕರಾಗ್ಲುಬಹುದು. ಇದೇ ನನ್ನ ಎಚ್ಚರಿಕೆ!!

ಇತಿ, ತಮ್ಮ ಹಿತಾಭಿಲಾಷಿಯಾದ
'ಒಬ್ಬ ಸಹೋದರ'

ಉಡುಪಿ ಪರ್ಯಾಯವೂ ಮಠಾಧಿಪತಿಗಳೂ,

ಉಡುಪಿ ಪರ್ಯಾಯವೆಂದರೆ ಇಡೀ ಕರ್ನಾಟಕದಲ್ಲಿ ಹೆಸರುಹೋದುದು. ಇಡೀ ಕರ್ನಾಟಕದ ಸಂದುಗೊಂದಿನಿಂದ ಸಾವಿರಾರು ಜನರು ನೆರೆಯುವರು. ಆರೇಳು ದಿನ ಇರುವರು. ಉತ್ಸವಗಳ ಸಮಯದಲ್ಲಿ ರಾತ್ರಿಯಲ್ಲಿ ಹಳ್ಳಿ ಹಳ್ಳಿಗಳಿಂದಲೂ ಜನರು ಸೇರಿ ಜನಸಮುದಾಯವು ಬಹಳ ದೊಡ್ಡದಾಗುವುದು. ಈ ಸಮಯದಲ್ಲಿ ಪೋಕ್ರಿಗಳ ತಂಟೆಗಳೂ, ಅವಘಡಗಳೂ, ನೂಗ್ಗಾಟವೂ ಉಂಟಾಗುವುದು. ದೇವಸ್ಥಾನವನ್ನು ನೋಡಲಿಕ್ಕೆ ಬಂದ ಈ ಭಕ್ತಿವಂತ ಮಂಡಲಿಯಲ್ಲಿ ಈ ಅವಘಡಗಳಾಗಲಿ ಅತ್ಯಾಚಾರಗಳಾಗಲಿ ನಡೆಯದಂತೆ ನೋಡುವುದು ಆವಶ್ಯಕ. ಮಠಾಧೀಶರು ಈ ವಿಷಯದಲ್ಲಿ ಹೆಚ್ಚು ಪ್ರಯತ್ನ ತೆಗೆದುಕೊಳ್ಳಬೇಕು. ಅದರಲ್ಲಿಯೂ ಮಠಾಧೀಶರಿಗೆ ದುಡ್ಡಿನ ಲಾಭವೂ ಇದ್ದುದರಿಂದ, ಜನಹಿತಕ್ಕಾಗಿಯಲ್ಲವಾದರೂ ತಮ್ಮ ಒಳ್ಳೇ ಹೆಸರಿಗಾಗಿಯಾದರೂ ಈ ಸಮುದಾಯಸೇವೆಗೆ ಯೋಗ್ಯವಾದ ಉಪಾಯಗಳನ್ನು ಮಾಡುವುದು ಅಗತ್ಯವಿತ್ತು.

ಆದರೆ ಸ್ವಾಮಿಗಳು ನಿಸ್ಸಂಗರಾಗಿರಬೇಕೆಂದು ತಕ್ಕವಿದ್ದರೂ, ಈ ಸಣ್ಣ ವಿಷಯದಲ್ಲಿ ಕೂಡ ತಮ್ಮ ಮನಸ್ಸನ್ನು ಉದಾರವಾಗಿಡಲಾರರೆಂಬುದು ವಿಷಾಧಕರ. ಸ್ವೇಚ್ಛೆಯಿಂದ ಒಟ್ಟುಕೂಡಿ ಉಡುಪಿಯ ಕೆಲವು ತರುಣರು ಒಂದು ಸ್ವಯಂಸೇವಕ ದಳವನ್ನು ಕಟ್ಟಿವರು. ಇವರಿಗೆ ನಿಲ್ಲಲಿಕ್ಕೆ ಒಂದು ಠಾಣ್ಯಗಾಗಿ ಜಾಗನ್ನು ಕೇಳಿದರೆ ಸಿಕ್ಕುವುದು ದುರ್ಲಭವಾಗುತ್ತದೆ. ಎಲ್ಲಾ ಸ್ಥಳಗಳೂ ಬಾಡಿಗೆಗೆ ಕೊಡಲ್ಪಡುತ್ತಿವೆ. ಬಾಡಿಗೆಗಾದರೂ ಮಳೆಬಿದುರಿವ ಚಪ್ಪರವೂ ಸಿಕ್ಕುವುದು. ಸ್ವಯಂಸೇವಕ ದಳದಂತಹ ಜನಸೇವಕ ಮಂಡಳಿಗೆ ಒಂದು ಸಣ್ಣ ಸ್ಥಳಕೂಡ ಈ ಬಾಡಿಗೆಯ ದುಡ್ಡಿನ ಅಭಿಲಾಷೆಯಲ್ಲಿ ಸಿಕ್ಕುವುದಿಲ್ಲ. ಮಠಗಳ ಈ ಧನಾಭಿಲಾಷೆಯ ಸ್ವಾರ್ಥವು ಎಲ್ಲಿಯ ವರೆಗೆ ಹೋಗುವುದೋ, ಆದರೂ ಸ್ವಾರ್ಥದ ಮೂರ್ತಿಮಂತ ಚಿತ್ರಗಳಾಗಿ ಪರಿಣಾಮ ಹೊಂದಿರುವ ಈ ಮಠಗಳಲ್ಲಿ ದುಡ್ಡನ್ನು ಸುರಿಸಿ ಪುಣ್ಯವನ್ನು ಕೊಟ್ಟು ಕೊಂಡು ಹೋಗುವ ಮಹಾನುಭಾವರು ಎಷ್ಟೊ ಇರುವರು!

ಉಡುಪಿ,
4–1–'26. } ಉಡುಪಿ ನಿವಾಸಿ.

—: ಗೀತಾಧರ್ಮಮಂಡಲ, ಮಂಗಳೂರು. :—

ಸೂರ್ಯನ ಉದಯಾಸ್ತಮಾನಗಳು ಇರುವಲ್ಲಿಯ ವರೆಗಿನ ರಾಜ್ಯಗಳಲ್ಲಿರುವ ಪ್ರತಿಯೊಂದು ನಾಗರಿಕ ಜನಾಂಗದವರು ತಮ್ಮ ತಮ್ಮ ಭಾಷೆಗಳಲ್ಲಿ ಪರಿವರ್ತನೆಯನ್ನು ಮಾಡಿದ್ದ, ದ್ವೈತ, ಅದ್ವೈತ, ವಿಶಿಷ್ಟಾದ್ವೈತಗ [illegible]

[illegible] ಗೀತಾಧರ್ಮಮಂಡಲದ ಕಮಿಟಿಯವರು.

ಸೂರ್ಯಗ್ರಹಣವೂ, ನಮ್ಮಲ್ಲಿಯ ಪಂಚಾಂಗಗಳೂ.

ಧರ್ಮಾಭಿಮಾನಿಗಳಾದ ವಾಚಕಮಹಾಶಯರೇ!

[illegible]

[illegible]	[illegible]	[illegible]	[illegible]	[illegible]	[illegible]

ಕನ್ನಡ ಜ್ಯೋತಿಷ್ಯಶಾಸ್ತ್ರೀ ಪಂಚಾಂಗ ಸಂಪಾದಕರು. [illegible]

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ್ಯಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸೂತಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಕೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2–0–0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರೆಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಪ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೭ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೩೬ ಸೀಸೆಗೆ ೬—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವರಿಗೆ ಹತ್ತ.

Free! Free!! Free!!

ಪ್ರಸಿದ್ಧವಾದ
"ಕಾಮಶಾಸ್ತ್ರ"

ಈಗಲೆ ತಯಾರಾಗಿದೆ.
ಬರೂರಾಗಿ ಬರೆಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಹುಂಡಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ದೇಶಾದ ಉಪಕರಣಗಳನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮಹೋಲ್ಲಾಸಿನಿ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | **ವಜ್ರಾಂಗ-ಬಿಂದು** | ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡತಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಅಳುವಿನಿಂತ ಮೊದಲು ಅಥವಾ ಕಡೆಗೆ ಸ್ವಾಭಾವಿಕವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮೈಯು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಅಷ್ಟಕ್ಕೆ ಶಕ್ತಿ ಬಂದಂತಾಗಿ ಬರುವದು, ಕೈಕಾಲುಗಳ ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲು ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ವಿಜಂಟರಾಗಬೇಕೆನ್ನುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲು ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. [illegible], (ಜಿಲ್ಲಾ ಬೆಳಗಾಂವ.)

The Canara Public Conveyance Co., Ltd, Mangalore.

(Established 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು:
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

---

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

— ರಥೋತ್ಸವ, ವಿವಾಹ ಉಪನಯನಗಳ ಸಮಯ — ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು, ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಕಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ತಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತೈವತ್ತು ವರುಷಗಳಿಂದ ಪಡೆದ ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಬದಲಿ ಸಂಗ್ರಹವನ್ನು ಮಾಡಿದ್ದೇವೆ.

ಗುರ್ಪುರ್‌ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಬೇರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ: ಅಜೆಬುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಶ್ಚಿಮಕ್ಕೆ ಸಮೀಪವಿರುವ ಮಳಿಗೆ,) ಮಂಗಳೂರು.

ಈ ದೇಶದ ಪ್ರಖ್ಯಾತವಸ್ತ್ರ ನೇಯುಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಾಂಜೀವರಮ್, [illegible], ಮಧುರೆ, ತಂಜಾವೂರು, ಕುಂಭಕೋಣ, ಆರ್ನಿ, [illegible], ಹುಬ್ಬಳ್ಳಿ, [illegible], ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಶಾಲು, ಪೇಟಾ, ರೇಶ್ಮೆ ಸೀರೆಗಳು, ಅರಳಿಪೇಟೆ ಸೀರೆಗಳು, [illegible] ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮುಂಡುಗಳು, ನಿತ್ಯ ಉಪಯೋಗದ ಸೀರೆಗಳು [illegible], [illegible] ಇತರ [illegible] ಕೋಟಿಂಗ್ ಶರ್ಟಿಂಗ್. ಕೈಮಗ್ಗದಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟಾ, ಅಂಗವಸ್ತ್ರ, ಇತ್ಯಾದಿ—

ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ [illegible]—

ಎಲ್ಲಾ ಸಂಗ್ರಹವನ್ನು ನಮ್ಮ [illegible] [illegible] ಸಂಗ್ರಹಿಸಿ ಇಟ್ಟಿರುತ್ತೇವೆ.

ಶರತ್ತು:—ನಗದಿ ರೂಪಾಯಿ 5)ಕ್ಕೆ [illegible] 6[illegible], ರೂ. 50ರಿಂದ 250ರವರೆಗೆ ಸೇಕಡಾ 10%, ರೂ. 250 ರಿಂದ 1000ಕ್ಕೆ 12½% ಈ ರೀತಿ ಡಿಸ್ಕೌಂಟು ಕೊಡಲ್ಪಡುವುದು.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಎಂ. ಜೆ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಶ್ರೀ ಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಕೀರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ನಡಸತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು   ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಸುಖವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡನೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.   ಡಿ. ಮನ್ನಾಲಾಲ್, ಡೆಲ್ಲಿ ನೇಟಿವ್ ಡಾಕ್ಟರ್. ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. Sharada Press, Mangalore.

Registered: No. M. 498.

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2—0—0.   ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಪಡೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦.   ಮಂಗಳೂರು, ತಾರೀಕು ೧೫ನೇ ಶುಕ್ರವಾರ ಜನವರಿ ೧೯೨೬.   ಸಂಚಿಕೆ ೩.

Th Canara Banking Corporation, Udipi, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. ಹೆಡ್ ಆಫೀಸು: ಉಡುಪಿ.   Branch: COONDAPOOR. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ವಸೂಲಿಕೆತ್ತ ಮೂಲಧನ	ರೂ. 1,73,185—9—11.
ಅಪದ್ಧನ ವಗೈರೆ ಎತ್ತಗಳು	ರೂ. 64,700—0—0.
ಸಾ. ಸೇ. 6ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಏವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಿಕೆತ್ತ ಮೂಲಧನ 1,73,185-9-11, ಅಪದ್ಧನ ವ ಇತರ ಎತ್ತಗಳು 64,700-0-0, ಠೇವಣಾತಿಗಳು 5,10,077-10-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಶೇರುದಾರಿಗಳಿಗೆ 4371-0-0, ಏವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 93,340-10-5, ಜುಮ್ಲಾ ರೂ. 8,45,674-14-7.

ಆಸ್ತಿ ವ ಸೊತ್ತುಗಳು.

ಹಿತ್ಲ ಆಟ್ಮೋಟ ಕಟ್ಟಿದ ಫ್ರೆಂಚರಿಗಳು ವಗೈರೆ 4134-4-0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496-6-2, ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ 25,800-0-0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371-0-0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡ) 41,741-14-2, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 26,131-6-3, ಜುಮ್ಲಾ ರೂಪಾಯಿ 8,45,674-14-7.

ನಿರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುದ್ದತ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನು ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತುಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾವುಕಾರಿ ಹುಂಡಿಗಳನ್ನೂ, ವಸ್ಸಾಲು ಮಾಡುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

N. Anand Rao,
Secretary.

ಮೂರು ದಿವಸಗಳಲಿ, ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು!   ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್]   ಅಗಸ್ತ್ಯ   [ನೋಡಿ ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆಯಿಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ, ಪರಮಾನಂದ ಔಷಧಿ.

1 ಸೇರು ಹಾಳ್ವತ್ತೆಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0.   ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಯಿರಿ.

ವಿಳಾಸ:— [illegible],
[illegible], [illegible],
ಮಂಗಳೂರು, (ದ. ಕ.)

ಅಪೂರ್ವ ಸಂದರ್ಭ.

ಉತ್ತಮ ಮಾಲು!   ತ್ವರೆ ಮಾಡಿರಿ!!   ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುಧಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

ವಿಲ್ಸನ್ ವಾಚ್ ಕೊ.,
ಬಿರಾರ್ ಎಸ್ಟೇಟ್, ಮುಂಬಯಿ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿಲವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ, ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.   109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

—ಗೋಡೆಗೆ ತಗಲಿಸುವ
ಹೊಸ ನಮೂನೆಯ—

ಟಿಕ್—ಟಾಕ್

ಎಂಬ ಈ ಗಡಿಯಾರಗಳು ಜರ್ಮನೀ ದೇಶದಲ್ಲಿ ತಯಾರಿಸಿದ್ದು. ಇವು ಖರಾರು ಘಂಟೆಯನ್ನು ತೋರಿಸುವವು. ಇವಕ್ಕೆ ಬೀಗ ಕೊಡಬೇಕಾದಿಲ್ಲ. ಇದರಲ್ಲಿ ತೂಗುತ್ತಿರುವ ಗುಂಡನ್ನು ಮೇಲಕ್ಕೆ ಎಳೆದರೆ ಸಾಕು. ತನ್ನಷ್ಟಕ್ಕೆ ತಾನೇ ಟಿಕ್‌ಟಾಕ್ ಎಂಬ ಶಬ್ದವನ್ನು ಮಾಡುತ್ತಾ ಸರಿಯಾದ ಕಾಲವನ್ನು ತೋರಿಸುವದು. ಇದು ನೋಡುವುದಕ್ಕೆ ಬಹು ಲಕ್ಷಣವಾಗಿರುತ್ತದೆ.

ಕ್ರಯ 1ಕ್ಕೆ ರೂ. 3—0—0

ಪೀಟರ್ ವಾಚ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 27, ಮದ್ರಾಸ್.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ್ ಜರ್ಮನ್ ಟೈಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.

"ಬಿ" ಟೈಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬರ್‌ಲ್ಯಾಂಡ್ ಪೇಪರ್ ಕ್ಲಿಪ್ ಟೈಮ್‌ಪೀಸ ಹಿತ್ತಾಳೆ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಲೋಕಪ್ರಸಿದ್ಧ ಔಷಧಗಳು.

ಳಳ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.
ಬಾಟ್ಲಿವಾಲರ ಕೂರ್ ಆಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಡೈರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
ಬಾಟ್ಲಿವಾಲರ ಕ್ವಿನೀನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ಕಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ ೧ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಕಂ ... ... ೨-೦-೦.

೧೨ ಪ್ಯಾಕೆಟ್ ನಾಟಿ ತರಕಾರಿ ಬೀಜಗಳು ೧೨ ರಕಂ ... ... ೧-೧೨-೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಕಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಗಿಗೆ, ವಿ. ಪಿ. ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು. ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್‌ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮೂವ್‌ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
184 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3—0—0
ಇತರರಿಗೆ, ವರ್ಷಕ್ಕೆ, ಪೋಸ್ಟೇಜು ಸೇರಿ	„ 2—8—0.
„ ಸ್ಕೂಲಿನವರಿಗೆ ...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತರದ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 1[illegible] ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. [illegible]ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಬ್ ರೇಷ್ಮೆ ಮಡಿಗಳು, ಶಾಮರ್ಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಸಾಳಗ್ರಾಮ, ಪತ್ತಿ, ಪಂಚಪಾತ್ರೆ, ಕನ್ನಡಿ, ತಾಳ, ಪಚ್ಚೆಕಲ್ಲು, ಪ್ರಸಾದಕ್ಕೆ ಬೇಕಾಗುವ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಖಂಬಾ, ಕಾಶೀ ಕ್ಷೇತ್ರ.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಪೌಷ ಶು|| ೨ ಶನಿವಾರದಿಂದ ಕ್ರೋಧನ ಸಂವತ್ಸರದ ಪೌಷ ಶು|| ೯ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮಕರ ಪುಷ್ಯಂತಿಲ್.)

ತಾ.	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಅಸ್ತ.
16	ಶನಿ	೨	೪.೫೯	ಧನಿಷ್ಠಾ	೪೬.೪೨	೩	6.59	6.22
17	ರವಿ	೪	೫೩.೪೬	ಶತಭಿಷಾ	೪೪.೩೨	೪	6.59	6.22
18	ಸೋಮ	೫	೪೮.೪೪	ಪೂ. ಭಾ.	೪೦.೨೮	೫	7. 0	6.23
19	ಕುಜ	೬	೪೪.೩೨	ಉ. ಭಾ	೩೬. ೫	೬	7. 0	6.23
20	ಬುಧ	೭	೪೧. ೧	ರೇವತಿ	೩೫.೩೨	೭	7. 0	6.24
21	ಗುರು	೮	೩೮.೧೩	ಅಶ್ವಿನಿ	೩೪.೨೮	೮	7. 0	6.24
22	ಶುಕ್ರ	೯	೩೭. ೫	ಭರಣಿ	೩೪.೪೬	೯	7. 0	6 25

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
1	94—3	78—3	—	—
2	91—6	72—9	1—06	—
3	87—8	78—3	—	—
4	90—2	73—5	—	—
5	89—3	73—2	—	—
6	87—1	72—2	—	—
7	88—6	70—6	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಸೂರಿ	8— 2	8— 8
ಹೊಸ ಗುಡ್ಡು ...	8— 0	8— 8
ಸುಗ್ಗಿ ...	7—14	8— 0
ಅವ್ವಲ್ ಬೆಳ್ತಿಗೆ ...	8—12	10— 0
ಹೊಸ ರಾಶಿ ...	7— 0	7—14
ರಂಗೂನು ಬೆಳ್ತಿಗೆ ಗೋಣಿ ೧ ...	13— 0	14— 0
ಗೋಧಿ ಗೋಣಿ ೧ಕ್ಕೆ ...	18— 8	20— 8
ಹುರುಳಿಗೋಣಿ ೧ಕ್ಕೆ ...	9— 0	9— 8
ಕಡಲೆಗೋಣಿ ೧ಕ್ಕೆ ...	14— 8	15— 0
ತೊಗರಿಗೋಣಿ ೧ಕ್ಕೆ ...	14— 8	15— 0
ತೊಗರಿಬೇಳೆ ಗೋಣಿ ೧ಕ್ಕೆ ...	16— 8	22— 0
ಉದ್ದುಗೋಣಿ ೧ಕ್ಕೆ ...	17— 0	17— 8
ಹೆಸರುಗೋಣಿ ೧ಕ್ಕೆ ...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ ...	60— 0	62— 8
ಉಪ್ಪು ಗೋಣಿ ೧ಕ್ಕೆ ...	4— 0	4— 4
ಕೊಬ್ರಿ ಖಂಡಿ ೧ಕ್ಕೆ ...	110— 0	125— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	42— 0	—
ಎಳ್ಳಿಂಡಿ ಖಂಡಿ ೧ಕ್ಕೆ ...	40— 0	45— 8
ಕೊಬ್ರಿ ಎಣ್ಣೆ ಮಣ ೧ಕ್ಕೆ ...	8—10	—
ಎಳ್ಳೆಣ್ಣೆ ಮಣ ೧ಕ್ಕೆ ...	8— 0	11— 0
ಚಿಮಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮಣ ೧ಕ್ಕೆ ...	4— 6	—
ಊರ ಮೆಣಸಿನಕಾಯಿ ಮಣ ೧ಕ್ಕೆ ...	9— 4	—
ಸಾಸಿವೆ ಮುಡಿ ೧ಕ್ಕೆ ...	9— 8	10— 0
ಕೊತ್ತಂಬರಿ ಮುಡಿ ೧ಕ್ಕೆ ...	3— 8	4— 4
ಕಾಫಿ ಖಂಡಿ ೧ಕ್ಕೆ ...	345— 0	--
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	275— 0	295— 0
ಹೊಸ ಅಡಿಕೆ ಖಂಡಿ ೧ಕ್ಕೆ ...	160— 0	210— 0
ಕಾಳುಮೆಣಸು ಖಂಡಿ ೧ಕ್ಕೆ ...	400— 0	--
ಯಾಲಕ್ಕಿ ಮಣ ೧ಕ್ಕೆ ...	45— 0	—
ಗೇರುಬೀಜ ಮುಡಿ ೧ಕ್ಕೆ ...	3—14	—
ಶುಂಠಿ ಖಂಡಿ ೧ಕ್ಕೆ ...	45— 0	65— 0
ತಾಮ್ರ ತಗಡು ಮಣ ೧ಕ್ಕೆ ...	16— 4	16—12
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	21— 0	—
ಚೀನಿ ಬೆಳ್ಳಿ ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮಣ ೧ಕ್ಕೆ ...	16— 8	
ತವರು	13— 6	

ಕನ್ನಡಿಗರೇ! **ವಸಂತ.** ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . . ವಸಂತ
ನವಜೀವನಸುಧಾರಕನೆಂದರೆ . . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . . ವಸಂತ
ಚಿತ್ತಾಕರ್ಷಕ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ¼ ಪುಟ ಸ್ಯಾಜಿನ) ಪುಟಗಳನ್ನು ಮಿಶ್ರಿತ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—1—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'.
೩೩೩ ತಂಬುಚೆಟ್ಟಿ ಬೀದಿ, ಮದ್ರಾಸ್.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ನಾಮೆ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಆಫ್ ಕೊಸ್ಟ್ಸ, ಮೆಮೊರಂಡಮ್ ಆಫ್ ಎಪ್ಪಿಯರೆನ್ಸು, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0,

ಶಾರದಾ ಛಾಪಖಾನೆ,
ತೇರುಬೀದಿ, ಮಂಗಳೂರು.

ತ್ವರೆ ಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್, ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಛಾಮಿನಿ ಪಟ್ಟದ ಚೋರ ಕಥೆ ... ...
(7) ಕುವರಾರ ರಾಮನ ಕಥೆ ... ...
(8) ಕೃಷ್ಣದಾಸಾಮೃತ ... ...
(9) ಶ್ರೀ ಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀಪಾಶ್ವಮೇಧ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷಾಗೃಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಜ ಕಥೆ ...
(26) „ ಗೋವಿನ ಚರಿತ್ರೆ ... ...
(27) „ ದುಶ್ಶಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

ಶಾರದಾ ಛಾಪಖಾನೆ, ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡಾ ಒಫಿಶಿಯಲ್ ರಿಸಿವರರ ಮುಂದೆ
ಐ. ಪಿ. ನಂಬ್ರ 111/1925.

ಎಚ್. ವೀರಪ್ಪ, ಬಸಪ್ಪ ಪೂಜಾರಿ ಮಗ ಮಂಗಳೂರು ಶಹಾರ ಹಂಪನಕಟ್ಟೆಯಲ್ಲಿರುವವ. } ಅರ್ಜಿದಾರ.

ಎದ್ರಿರು

ಎಚ್. ಲಕ್ಷ್ಮಮಣ ಕೂಡಾ 6 ಜನರು— ಕ್ರೆಡಿಟರ್ಸರು.

ಸದರಿ ಅರ್ಜಿದಾರನು ತನ್ನನ್ನು ಇನ್ಸೋಲ್ವೆಂಟ ಎಂತ ಎಡ್ಜಜ್ಜ ಮಾಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ಸದರಿ ದಿವಾಳಿ ಅರ್ಜಿ ದಾಖಲುಮಾಡಿರುತ್ತಾರೆ, ಆ ಅರ್ಜಿಯು 1926ನೇ ಇಸವಿ ಜನವರಿ ತಾರೀಕು 30ನೇ ಶನಿವಾರ ದಿವಸ ಮಧ್ಯಾಹ್ನ ಘಂಟೆ 2ಕ್ಕೆ ಒಫಿಶಿಯಲ್ ರಿಸೀವರರ ಮುಂದೆ ತನಿಖೆಗೆ ಇಟ್ಟಿರುತ್ತದೆ. ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಮೇಲ್ಕಂಡ ತಾರೀಕಿಗೆ ದಾಖಲುಮಾಡತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಸೋಣಾಗಿರುತ್ತದೆ.

ಮಂಗಳೂರು, ತಾ. 8-1-1926 } K. P. Gopalkrishna Rao, *Vakil for Petitioner.*

ನೋಟೀಸು.

THE
Canara Bank Ltd., Mangalore.
ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು.

Notice is hereby given that under Section 37 of the Indian Companies Act No. VII of 1913 the Directors have resolved that the Register of Members be closed from Saturday 16th January 1926 to Sunday 14th February 1926 (both days inclusive).

1913ನೇ ಇಸವಿಯ ನಂಬ್ರ VIIನೇ ಇಂಡಿಯನ್ ಕಂಪೆನಿಯ ಅಕ್ಟಿನ 37ನೇ ಸೆಕ್ಷನಿಗೆ ಅನುಗುಣವಾಗಿ ಬ್ಯಾಂಕಿನ ಪಾಲುಮಾಲಿಕರ ರಿಜಿಸ್ಟ್ರಿಯು (Register of Members) ಇದೇ ಜನವರಿ ತಾರೀಕು 16ನೇ ಶನಿವಾರ ಲಾಗಾಯ್ತು ಬರುವ ಫೆಬ್ರವರಿ ತಾರೀಕು 14ನೇ ಆದಿತ್ಯವಾರದ ವರೆಗೆ ಶೇರುಗಳ ವಹಿವಾಟು ನಡಿಸದಂತೆ ಮುಚ್ಚಲ್ಪಡಬೇಕಾಗಿ (closed) ಡೈರೆಕ್ಟರರು ನಿರ್ಣಯಿಸಿದ್ದಾರೆ ಎಂಬದಾಗಿ ಈ ಮೂಲಕ ತಿಳಿಸೋಣಾಗುತ್ತದೆ.

(*By Order*)

The Canara Bank Ltd., *MANGALORE.* *11th January 1926.* } K. Venkat Rao, *Secretary.*

NOTICE.

In the Court of the District Judge of South Kanara.

O. P. No. 1 of 26.

In the Matter of the debts of M. N. Nivas *alias* M. Narasinga Nivas deceased.

Between

Nagamma— Petitioner

AND

Choodappa & others—Respts.

Notice is hereby given that an application has been made to the above-named Court by the Petitioner for grant of a succession certificate to collect the debts of the deceased M. N. Nivas who died on 23-6-1925 at Mangalore and the said application is posted to 22nd Jan. 1926 for final disposal.

Mangalore, 11-1-1926. } P. D'SUZA B. A., B. L. & L. C. PAIS B. A., B. L., *Vakil for Petitioner.*

ನೋಟೀಸು.

ಸರ್ವರಿಗೂ ಈ ಮೂಲಕ ತಿಳಿಸುವದೇನಂದರೆ:—

ಇಲಿ ಹಿಡಿಯುವ ಗೂಡುಗಳು ಮಂಗಳೂರು ಹಂಪನಕಟ್ಟೆಯಲ್ಲಿರುವ ಹೆಲ್ತ್ ಆಫೀಸಿನಲ್ಲಿ ದೊರೆಯುತ್ತವೆ. ಅಗತ್ಯವಿದ್ದವರು ಅಲ್ಲಿಂದ ಈ ಗೂಡುಗಳನ್ನು ತಕೊಂಡು ಮರುದಿನ ಗೂಡನ್ನೂ ಇಲಿಯನ್ನೂ ಆ ಬಗ್ಗೆ ಅವರ ಮನೆಗೆ ಬರುವ ಮುನ್ಸಿಪಲ್ ಕೂಲಿಯ ಸ್ವಾಧೀನ ಕೊಡತಕ್ಕದ್ದು.

ಗೂಡುಗಳನ್ನು ಹೊರಗೆ ಕೊಡುವ ಮೊದಲು ಕೆಳಗೆ ದಸ್ಕತು ಹಾಕಿದವರ ಸಮಕ್ಷಮದಲ್ಲಿ ಕ್ರಿಮಿನಾಶಕ ದ್ರಾವಕಗಳಿಂದ ಶುದ್ಧೀಕರಿಸುವುದು. ಆದ್ದರಿಂದ ಯಾರೂ ಯಾವ ತರದ ಸಂಶಯ ವ ಸಂದೇಹಪಡುವ ಅಗತ್ಯ ಇರದು.

ದೇಹದೊಳಗೆ ಪ್ಲೇಗಿನ ಕ್ರಿಮಿಗಳು ಸೇರುವುದರಿಂದ ಪ್ಲೇಗು ರೋಗವು ತಗಲುವುದು. ಈ ಕ್ರಿಮಿಗಳು ಇಲಿಯಿಂದ ಇಲಿಗೆ ತಗಲಿ ನಂತರ ಇಲಿಯಿಂದ ಮನುಷ್ಯನಿಗೆ ತಗಲುತ್ತದಾದ್ದರಿಂದ ಇಲಿಗಳು ಸಂಪೂರ್ಣ ನಿರ್ಮೂಲವಾಗಿ ಅವುಗಳ ಸಂತಾನವೇ ಅಳಿದುಹೋದರೆ ನಮ್ಮ ಊರಿನಲ್ಲಿ ಪ್ಲೇಗು ರೋಗವೇ ಇಲ್ಲದೆಹೋಗುವುದು. ಆದುದರಿಂದ ಸರ್ವರು ತಮ್ಮ ಆಜುಬಾಜುಗಳಲ್ಲಿ ಇಲಿಗಳನ್ನು ಆದಷ್ಟು ನಿರ್ಮೂಲ ಮಾಡುವರೆ ಪ್ರಯತ್ನಪಡುವುದು ಅಗತ್ಯ.

ಮನೆಗಳಲ್ಲೇ ಕೊಳ್ಳುವ ವ ಪ್ಲೇಗಿನ ವಿಷಯ ಆಲೋಚಿಸತಕ್ಕ ಯಾವದೊಂದು ವಿಷಯವಿದ್ದಲ್ಲಿ ಅಂಥವರು ಇದರ ಕೆಳಗೆ ದಸ್ಕತುಮಾಡಿದವರಿಗೆ ಬರಕೊಳ್ಳಬಹುದು.

ಮು. ಹೆ. ಆಫೀಸು, ಮಂಗಳೂರು, 8—1—1962. } ಡಾಕ್ಟರ್ ಪಿ. ಗೋಪಾಲನ್ ನಾಯರ್, ಮುನ್ಸಿಪಲ್ ಹೆಲ್ತ್ ಆಫೀಸರ್.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ.

O. P. No. 122/1925.

1 ಬಾಬು ರಾವ್
2 ಕಮಲಮ್ಮ } ಅರ್ಜಿದಾರರು.

ಮೃತಪಟ್ಟ ನರಸಿಂಗ ರಾಯರ ಮ್ಯಾನೇಜ್ ಮಗ ಗೋಪಾಲಕೃಷ್ಣನ ಹಕ್ಕಿನ ಆಸ್ತಿಯ ವ ದೇಹದ ಗಾರ್ಡಿಯನ್ನರಾಗಿ ತಮ್ಮನ್ನು ನೇಮಿಸಬೇಕೆಂತ ವಗೈರೆ ಅರ್ಜಿದಾರರು ಮಾಡಿರುವ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 29-1-1926ಕ್ಕೆ ತನ್ಕಿಗೆ ಇಟ್ಟಿರುತ್ತದೆ. ಎಂತ ಈ ಮೂಲಕ ಸರ್ವರಿಗೂ ತಿಳಿಸೋಣಾಗಿಯದೆ.

ಮಂಗಳೂರು, ತಾ. 7—1—1926. } **P. Sanjiva Rao,** *Vakil for Petitioner.*

ನೋಟೀಸು.

೧೯೨೫ನೇ ಇಸವಿ ದಶಂಬರ ತಾರೀಕು ೨೫ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆ ಮಾಡಿದ ಪ್ರಕಾರ ಈ ಕೆಳಗೆ ಕಾಣಿಸಿದ ಅಸಾಮಿಯವರ ಬಾಬ್ತು ನಗಗಳು ಮಿಜಾರ ಗಣೇಶ ಪೈಗಳ ಆಫೀಸಿನ ಎದುರುಗಡೆಯಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಐವೇಜಿನಲ್ಲಿ ಈ ಕೆಳಗೆ ಕಾಣಿಸಿದ ಪ್ರಕಾರ ಅಸ್ಲು ಬಡ್ಡಿ ಮತ್ತು ಇತರ ಖರ್ಚು ಸಹಾ ಕಳೆದು ಕಮ್ಮಿ ಬಿದ್ದ ಐವೇಜಿನ ವಿವರವು ಈ ಕೆಳಗೆ ಕಾಣಿಸಿದ ಪ್ರಕಾರ ಆಯಾಯ ಅಸಾಮಿಯವರು ಕಮ್ಮಿ ಬಿದ್ದ ಐವೇಜು ಈ ವಿಷಯದಲ್ಲಿ ಬಿಟ್ಟ ನೋಟೀಸಿನಲ್ಲಿ ಕಾಣಿಸಿದ ಪ್ರಕಾರ ನೋಟೀಸು ತಲಪಿದ ಒಂದು ವಾರದೊಳಗೆ ಯಾವ ವಿಧದಿಂದಲೂ ಹಣ ಪಾವತಿ ಮಾಡುವರೆ ತಪ್ಪಿದರೆ ಆ ವಿಷಯದಲ್ಲಿ ನಾನು ಮಾಡುವ ಸಕಲ ದಾವೆಯ ಖರ್ಚಿಗೆ ಆಯಾಯ ಅಸಾಮಿಯವರು ಜವಾಬ್ದಾರರಾಗಿರುತ್ತಾರೆ.

ಹೆಸರು.	ಅಸ್ಲು ಬಡ್ಡಿ ಇತರ ಖರ್ಚು.	ಏಲಮಿನಲ್ಲಿ ಹು.ಬ.ಮೊ.	ಬಾಕಿಬರತಕ್ಕ ಮೊಬಲಗು.
ಪಡವಿನಲ್ಲಿರುವ ಅಳ್ಕೆ ಸುಬ್ರಾಯ ಕಮ್ತಿ ಲೈಟರ್ ೧೮ ಬಾಬ್ತು ಬರತಕ್ಕ ಅಸ್ಲು ಬಡ್ಡಿ ಇತರ ಖರ್ಚು ಕೂಡಾ ರೂಪಾಯಿ	೯೧-೪-೦,	೭೩-೮-೦,	೧೭-೧೨-೦
ಜೈಲ ಬಳಿ ಇರುವ ಸೊನ್ನಾರ ಬಾಬ ಶೆಟ್ಟಿ ಲೈಟರ್ ೨೮ ಬಾಬ್ತು ಬರತಕ್ಕ ಅಸ್ಲು ಬಡ್ಡಿ ಇತರ ಖರ್ಚು ಕೂಡಾ ರೂಪಾಯಿ	೧೬೭-೨-೦,	೧೬೪-೧೧-೦,	೨-೭-೦
ಅಳ್ಕೆಂಬಳ ಮಾಮ್ತು ಬ್ಯಾರಿ ಲೈಟರ್ ೧೮ ಬಾಬ್ತು ಬರತಕ್ಕ ಅಸ್ಲು ಬಡ್ಡಿ ಇತರ ಖರ್ಚು ಕೂಡಾ ರೂಪಾಯಿ	೫೮-೮-೦,	೪೯-೮-೦,	೯-೦-೦
ಗೋಳಿಕಟ್ಟೆ ಬಜಾರ ಬೀವಿ ದಲಾಲ್ ಮೊಹಮ್ಮದ ಯಾನೆ ಬಾವಬ್ಯಾರಿ ಲೈಟರ್ ೧೮ ಬಾಬ್ತು ಬರತಕ್ಕ ಅಸ್ಲು ಬಡ್ಡಿ ಇತರ ಖರ್ಚು ಕೂಡಾ ರೂಪಾಯಿ	೪೯-೮-೦,	೪೧-೦-೦,	೮-೮-೦
ಗೋಳಿಕಟ್ಟೆ ಬಜಾರ ಮಹಮ್ಮದ ಅಬ್ದುಲ್ ಕರೀಮ್ ಸ್ಯಾಬ ಲೈಟರ್ ೨೮ ಬಾಬ್ತು ಬರತಕ್ಕ ಅಸ್ಲು ಬಡ್ಡಿ ಇತರ ಖರ್ಚು ಕೂಡಾ ರೂಪಾಯಿ	೧೫೮-೦-೦,	೧೨೬-೮-೦,	೩೧-೮-೦

ಮಂಗಳೂರು, ತಾ. 15-1-'26. } ಮಿಜಾರ ತಿಮ್ಮ ಪೈ ರುಜು.

ದಕ್ಷಿಣಕನ್ನಡ ಜಿಲ್ಲಾ ನೋನ್‌ಮಿಶ್ಯನ್ ಯೈಡೆಡ್
—: ಶಾಲೆಗಳ ಸಂಘ :—

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ, ತಾಲೂಕು ಸಂಘಗಳನ್ನು ಸ್ಥಾಪಿಸಿ, ಒಂದು ಜಿಲ್ಲಾ ಸಂಘವನ್ನು ಸ್ಥಾಪಿಸಬೇಕಾಗಿ ಈ ಮೊದಲು ನಿರ್ಣಯಿಸಿ ಪತ್ರಿಕೆಗಳಲ್ಲಿ ಪ್ರಕಟಿಸಿದಂತೆ, ಮಂಗಳೂರು ಮತ್ತು ಉಡ್ಪಿ ಈ ೨ ತಾಲೂಕುಗಳಲ್ಲಿ ಮಾತ್ರ ನೋನ್‌ಮಿಶ್ಯನ್ ಯೈಡೆಡ್ ಶಾಲೆಗಳ ಸಂಘಗಳು ಸ್ಥಾಪನೆಯಾಗಿ ಉಳಿದ ತಾಲೂಕುಗಳಲ್ಲಿ ಸದರಿ ಸಂಘಗಳು ಈ ವರೇಗೆ ಸ್ಥಾಪಿಸಲ್ಪಡದಿರುವುದರಿಂದ, ಈ ೨ ಸಂಘಗಳು ಒಟ್ಟಿಗೆ ಸೇರಿ ತಾ. ೧೦—೧—೧೯೨೬ರಲ್ಲು, ಉಡ್ಪಿ ತಾಲೂಕು ಬ್ರಹ್ಮಾವರ ಕೊಸ್ಮೊ ಪೊಲಿಟನ್ ಹಾಯರ್ ಎಲಿಮೆಂಟರಿ ಶಾಲೆಯ ಹೆಡ್ ಮಾಸ್ತರ್ ಮ. ರಾ. ರಾ. ಯನ್. ನರಸಿಂಗರಾಯರ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಂಘವನ್ನು ಸ್ಥಾಪಿಸಲ್ಪಟ್ಟು ಮಂಗಳೂರು ಗವರ್ನಮೆಂಟು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಕಟ್ಟೋಣದಲ್ಲಿ ಸಭೆಯನ್ನು ಜರಗಿಸಲಾಯಿತು. ಜಿಲ್ಲಾ ಸಂಘದ ಕಾರ್ಯನಿರ್ವಾಹಕ ಮೆಂಬರರಾಗಿ ಮಂಗಳೂರು ತಾಲೂಕು ಸಂಘದ ಕಡೆಯಿಂದ ೫ ಮಂದಿಯನ್ನು ಆರಿಸಲ್ಪಟ್ಟ ಮೇರೆಗೆ ಇಂದಿನ ಸಭೆಗೆ ಕಾರ್ಯನಿರ್ವಾಹಕ ಮೆಂಬರರ ಪೈಕಿ ೬ ಮಂದಿಯೂ ಬೇರೆ ಬೇರೆ ತಾಲೂಕುಗಳ ಅನೇಕ ಮಂದಿ ಉಪಾಧ್ಯಾಯರೂ ಹಾಜರಿದ್ದು ಈ ಕೆಳಗಿನ ಠರಾವುಗಳು ಮಂಜೂರಾದವು.

೧. ಮ. ರಾ. ರಾ. ಎ. ರಾಮಚಂದ್ರ ಹೆಗ್ಗಡೆಯವರನ್ನು ಜಿಲ್ಲಾ ಸಂಘದ ಖಾಯಂ ಪ್ರೆಸಿಡೆಂಟರಾಗಿ, ರಾ. ಕುರುಕಾಲು ಗಣಪ್ಪಯ್ಯ ಸೆಟ್ಟಿ ಸೂಚಿಸಿ ರಾ. ಕೋಟೆಕಾರ್ ಸುಬ್ಬಣ್ಣಯ್ಯನವರಿಂದ ಅನುಮೋದಿಸಲ್ಪಟ್ಟ ಮೇರೆಗೂ, ರಾ. ಕೆ. ಪಿ. ಕಾಮತ್ ಮತ್ತು ರಾ. ಕುರುಕಾಲು ಗಣಪ್ಪಯ್ಯ ಸೆಟ್ಟಿ, ಇವರಿಬ್ಬರನ್ನು ಜತೆಕಾರ್ಯದರ್ಶಿಗಳಾಗಿ, ರಾ. ಯಸ್. ನರಸಿಂಗ ರಾಯರು ಸೂಚಿಸಿ ರಾ. ಯು. ಬಸಪ್ಪನವರಿಂದ ಅನುಮೋದಿಸಲ್ಪಟ್ಟ ಮೇರೆಗೂ ಸರ್ವಸಮ್ಮತದಿಂದ ಮಂಜೂರಾಯಿತು.

೨. ಪ್ರತಿ ಯೈಡೆಡ್ ಶಾಲೆಯಲ್ಲಿ ಯೋಗ್ಯ ಉಪಾಧ್ಯಾಯರನ್ನು ನೇಮಿಸಿ, ವಿದ್ಯೆಯನ್ನು ಅಭಿವೃದ್ಧಿಪಡಿಸುವಂತೆ ಈ ಕೆಳಗಿನ ದರದಲ್ಲಿ ಗ್ರಾಂಟಿನ ಸ್ಕೇಲನ್ನು ಏರಿಸಿ, ಮೆನೇಜರುಗಳಿಗೆ ಸಹಾಯ ಮಾಡುವಂತೆ ಬರಕೊಳ್ಳುವುದು.

	ಅನ್‌ಟ್ರೈನ್ಡ್.	ಟ್ರೈನ್ಡ್.
ಲೋವರ್ ಎಲಿಮೆಂಟ್ರಿಗ್ರೇಡು ತಿಂಗಳು ೧ಕ್ಕೆ	೮—೦—೦,	೧೨-೦-೦,
ಹಾಯರ್ „ „	೧೦—೦—೦,	೧೫-೦-೦.
ಸೆಕೆಂಡ್ರಿಗ್ರೇಡು „ „	೧೫—೦—೦,	೨೦-೦-೦.

೩. ಉತ್ತಮತರದ ಶಿಕ್ಷಣವನ್ನು ಕೊಡುವ ಯೈಡೆಡ್ ಶಾಲೆಗಳಿಗೆ ನೇಕಡಾ ೧೦ರಂತೆ ಅಭಿವೃದ್ಧಿ ಗ್ರಾಂಟನ್ನು ಕೊಡಬಹುದಾಗಿ ಗ್ರಾಂಟು ಇನ್‌ಯೈಡ್ ಕೋರ್ಡಿನಲ್ಲಿ ರೂಲು ಇದ್ದರೂ ಈ ವರೇಗೆ ಜಾರಿಗೆ ತಾರದ್ದರಿಂದ ಸದರಿ ರೂಲನ್ನು ಮುಂದಕ್ಕೆ ಜಾರಿಗೆ ತರುವಂತೆ ಬರಕೊಳ್ಳುವುದು.

೪. ಟ್ರೈನ್ಡ್ ಶಾಲೆಗಳಿಗೆ ವರುಷಾವಧಿ ಕೊಡತಕ್ಕ ಟೀಚಿಂಗ್ ಗ್ರಾಂಟನ್ನು ವರುಷದಲ್ಲಿ ಕನಿಷ್ಠ ಪಕ್ಷಕ್ಕೆ ೪ ಕಂತುಗಳನ್ನಾದರೂ ಮಾಡಿ ಕೊಡಿಸುವಂತೆ ಬರಕೊಳ್ಳುವುದು.

೫. ವಿದ್ಯಾಇಲಾಖೆಯವರಿಂದ ವಿನಾಯತಿ ಸರ್ಟಿಫಿಕೇಟು ಹೊಂದಿದವರಿಗೂ, ೧೯೨೫ನೇ ಇಸವಿಯ ಮೊದಲು ಟ್ರೈನಿಂಗ್ ಪರೀಕ್ಷೆಯಲ್ಲಿ ಫೈಲಾದವರಿಗೂ ಟ್ರೈನ್ಡ್ ಆದವರ ದರದಲ್ಲಿಯೇ ಗ್ರಾಂಟನ್ನು ಕೊಡಿಸಬೇಕಾಗಿ ಬರಕೊಳ್ಳುವುದು.

೬. ಉಪಾಧ್ಯಾಯ ವೃತ್ತಿಯಲ್ಲಿ ಕನಿಷ್ಠ ಪಕ್ಷಕ್ಕೆ ೩ ವರ್ಷ ಸರ್ವೀಸು ಮಾಡಿದ ಟ್ರೈನ್ಡ್ ಉಪಾಧ್ಯಾಯರು ಖಾಸಾಗಿಯಿಂದ ಕಲಿತು ಮೇಲ್ತರಗತಿಯ ಪರೀಕ್ಷೆಗೆ ನಿಲ್ಲುವಂತೆ ವಿನಾಯತಿ ಕೊಡಿಸಬೇಕಾಗಿ ಬರಕೊಳ್ಳುವುದು.

೭. ಶಾಲಾ ಕಟ್ಟೋಣದ ನಕ್ಷೆ ವ ಎಸ್ಟಿಮೇಟುಗಳನ್ನು ಡಿಪಾರ್ಟ್‌ಮೆಂಟಿನಿಂದಲೇ ಧರ್ಮಾರ್ಥವಾಗಿ ಒದಗಿಸಿಕೊಡಬೇಕಾಗಿಯೂ, ಕಟ್ಟೋಣಕ್ಕೆ ⅔ ಗ್ರಾಂಟು ಕೊಡಿಸಬೇಕಾಗಿಯೂ, ಗ್ರಾಂಟು ಪಡದ ಕಟ್ಟೋಣದ ಬೋಂಡು ೨೦ ವರುಷಕ್ಕೆ ತಗ್ಗಿಸಬೇಕಾಗಿಯೂ ಬರಕೊಳ್ಳುವುದು.

೮. ಫರ್ನಿಚರ್ ಗ್ರಾಂಟು ⅔ಕ್ಕೆ ಏರಿಸಬೇಕಾಗಿಯೂ ಮತ್ತು ಲೋವರ್ ಎಲಿಮೆಂಟರಿ ಶಾಲೆಗೆ ೫೦ರೂಪಾಯಿಗಳ ವರೆಗೂ ಹಾಯರ್ ಎಲಿಮೆಂಟರಿ ಶಾಲೆಗೆ ೧೦೦ರೂಪಾಯಿಗಳ ವರೆಗೂ ಫರ್ನಿಚರ್ ಗ್ರಾಂಟು ಕೊಡಿಸುವಂತೆಯೂ ಬರಕೊಳ್ಳುವುದು.

೯. ೧೯೨೫ನೇ ಇಸವಿಯಲ್ಲಿ ಹೊಸತಾಗಿ ತೆರೆದ ಶಾಲೆಗಳ ಪೈಕಿ ಕೆಲವಕ್ಕೆ ಮಾತ್ರ ರೂಪಾಯಿ ೧೫೦ರ ಸ್ಪೆಶ್ಯಲ್ ಫರ್ನಿಚರ್ ಗ್ರಾಂಟು ಸೆಂಕ್ಷನ್ ಆದಂತೆ ಸದರಿ ಇಸವಿಯಲ್ಲಿ ತೆರೆದಿರುವ ಇತರ ಶಾಲೆಗಳಿಗೂ ೧೯೨೬ನೇ ಇಸವಿಯಲ್ಲಿ ತೆರೆಯಲಿಕ್ಕಿರುವ ಶಾಲೆಗಳಿಗೂ ಅದೇ ರೀತಿಯಾಗಿ ರೂ. ೫೦ರ ಸ್ಪೆಶ್ಯಲ್ ಫರ್ನಿಚರ್ ಗ್ರಾಂಟು ಕೊಡಿಸಬೇಕಾಗಿ ಬರಕೊಳ್ಳುವುದು.

೧೦. ಯೈಡೆಡ್ ಶಾಲೆಯಿರುವ ಪ್ರತಿಯೊಂದು ಗ್ರಾಮದ ಒಳಗೆ ೫೦೦ ಜನಸಂಖ್ಯೆಗೆ ಮಿಕ್ಕಿರುವ ಸೆಂಟರುಗಳಲ್ಲಿ ಇನ್ನು ಮುಂದಕ್ಕೆ ಹೊಸ ಶಾಲೆಗಳನ್ನು ತೆರೆಯುವ ಅಗತ್ಯವು ಡಿಪಾರ್ಟ್‌ಮೆಂಟಿನವರಿಗೆ ಕಂಡುಬಂದರೆ ಅಂಥಾ ಸೆಂಟರುಗಳಲ್ಲಿ ಹೊಸ ಶಾಲೆಗಳನ್ನು ತೆರೆಯುವಂತೆ ಆ ಶಾಲಾ ಮೆನೇಜರರಿಗೇನೇ ಇಲಾಖೆಯವರು ಬರಹಮೂಲಕ ತಿಳಿಸಬೇಕೆಂತಲೂ ಅವಕ್ಕೆ ಆ ಮೆನೇಜರರು ಕಬೂಲಿ ಮಾಡದಿದ್ದರೆ ಮಾತ್ರ ಬೇರೆಯವರಿಂದ ಶಾಲೆಗಳನ್ನು ಇಡಿಸಬಹುದೆಂತಲೂ ಬರಕೊಳ್ಳುವುದು.

೧೧. ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿಗೆ ಈ ಜಿಲ್ಲೆಯ ನೋನ್‌ಮಿಶ್ಯನ್ ಯೈಡೆಡ್ ಶಾಲೆಗಳ ಟೀಚರ್ ಮೆನೇಜರರ ಪ್ರತಿನಿಧಿ ಮೆಂಬರರಾಗಿ ಉಡ್ಪಿ ತಾಲೂಕು ಕುರುಕಾಲು 'ಶ್ರೀಗಣಪತಿ' ಹಾಯರ್ ಎಲಿಮೆಂಟರಿ ಶಾಲೆಯ ಟೀಚರ್ ಮೆನೇಜರ್ ಮಾ. ರಾ. ರಾ. ಕೆ. ಗಣಪ್ಪಯ್ಯ ಸೆಟ್ರನ್ನು ರಾ. ಕೆ. ಸುಬ್ರಹ್ಮಣ್ಯನವರು ಸೂಚಿಸಿ, ರಾ| ಯು. ಬಸಪ್ಪನವರಿಂದ ಅನುಮೋದಿಸಲ್ಪಟ್ಟ ಮೇರೆಗೂ, ಉಪಾಧ್ಯಾಯರ ಪ್ರತಿನಿಧಿ ಮೆಂಬರರಾಗಿ ಮಂಗಳೂರು ತಾಲೂಕು ಫರಂಗಿ ಪೇಟೆ 'ಶ್ರೀರಾಮ' ಹಾಯರ್ ಎಲಿಮೆಂಟರಿ ಶಾಲೆಯ ಹೆಡ್‌ಮಾಸ್ತರ್ ಮಾ. ರಾ. ರಾ. ಎ. ರಾಮಚಂದ್ರ ಹೆಗ್ಗಡೆಯರನ್ನು ರಾ. ಎಸ್. ನರಸಿಂಗರಾಯರು ಸೂಚಿಸಿ, ರಾ. ಎಸ್. ಲಕ್ಷ್ಮೀನಾರ್ಣಪ್ಪಯ್ಯನವರಿಂದ ಅನುಮೋದಿಸಲ್ಪಟ್ಟ ಮೇರೆಗೂ, ಸದರಿ ಇಬ್ಬರನ್ನು ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲು ಮೆಂಬರರಾಗಿ ನೇಮಿಸುವಂತೆ ಬರಕೊಳ್ಳಬೇಕಾಗಿ ಸರ್ವಸಮ್ಮತದಿಂದ ನಿರ್ಣಯಿಸಲಾಯಿತು.

೧೨. ಜಿಲ್ಲಾ ಸಂಘದ ಜತೆಕಾರ್ಯದರ್ಶಿಗಳು, ಸಂಘಗಳು ಸ್ಥಾಪನೆಯಾಗದ ತಾಲೂಕುಗಳ ಟೀಚರ್ ಮೆನೇಜರರುಗಳಿಗೆ ಸಂಘ ಸ್ಥಾಪನೆಯ ಕುರಿತು ಪತ್ರವ್ಯವಹಾರಗಳನ್ನು ನಡಿಸಬೇಕಾಗಿಯೂ, ಹಾಗೆ ಸಂಘಗಳನ್ನು ಸ್ಥಾಪಿಸುವರೇ ಆಯಾ ತಾಲೂಕುಗಳ ಡಿಪ್ಯುಟಿ ಇನ್ಸ್‌ಪೆಕ್ಟರುಗಳ ಸಹಾಯವನ್ನು ಕೇಳಕೊಳ್ಳಬೇಕಾಗಿಯೂ ನಿರ್ಣಯಿಸಲಾಯಿತು.

೧೩. ಜಿಲ್ಲಾ ಸಂಘದ ಕಾರ್ಯಕಲಾಪಗಳ ಎಲ್ಲಾ ಖರ್ಚುಗಳನ್ನು ಮಂಗಳೂರು, ಉಡ್ಪಿ, ಈ ಎರಡು ತಾಲೂಕು ಸಂಘಗಳು ಸಮ ಧರಿಸಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು.

೧೪. ೨ರಿಂದ ೧೧ರ ವರೆಗಿನ ನಿರ್ಣಯಗಳನ್ನು ಮಾ. ಡಿರೆಕ್ಟರವರಿಗೂ ವಿದ್ಯಾಇಲಾಖೆ ಮಂತ್ರಿಯವರಿಗೂ ಈ ಜಿಲ್ಲೆಯ ಎಮ್. ಎಲ್. ಸಿ. ಗಳಿಗೂ ಮತ್ತು ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲು ಪ್ರೆಸಿಡೆಂಟರಿಗೂ, ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರಿಗೂ ಕಳುಹಿಸುವಂತೆಯೂ ಎಲ್ಲಾ ಪ್ರೊಸಿಡಿಂಗ್ಸನ್ನು ಪ್ರಕಟಿಸುವವರೇ ಪತ್ರಿಕೆಗಳಿಗೆ ಕಳುಹಿಸುವಂತೆಯೂ ಜಿಲ್ಲಾ ಸಂಘದ ಜತೆಕಾರ್ಯದರ್ಶಿಗಳಿಗೆ ಅಧಿಕಾರವನ್ನು ಕೊಡೋಣಾಗಿ ಸಭೆಯು ಮುಕ್ತಾಯವಾಯಿತು.

ಮಂಗಳೂರು, ತಾ. ೧೧-೧೦-'೨೬. } ಮ| ರಾ| ರಾ| ಕೆ. ಪಿ. ಕಾಮತ್, „ ಕೆ. ಗಣಪ್ಪಯ್ಯ ಸೆಟ್ಟಿ, ಜತೆಕಾರ್ಯದರ್ಶಿಗಳು, ದಕ್ಷಿಣಕನ್ನಡ ಜಿಲ್ಲಾ ನೋನ್‌ಮಿಶ್ಯನ್ ಯೈಡೆಡ್ ಶಾಲೆಗಳ ಸಂಘ.

ಸ್ಫುಟವಿಚಾರಗಳು.

ನಾಗರಿಕರ ಬರ್ಬರತೆ.

ಒಂದು ಎಣ್ಣೆಯ ಗಣಿಗಾಗಿ ಪಾಶ್ಚಾತ್ಯರು ಪ್ರತಿ ದಿನವೂ ಎಂಬಂತೆ ರಾಜಕೀಯ ಅತ್ಯಾಚಾರಗಳನ್ನು ನಡಿಸುತ್ತಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಇಂಗ್ಲೀಷರು ಮೆಸೊಪೊಟೇಮಿಯದ ಸ್ವಾತಂತ್ರ್ಯವನ್ನು ಅಪಹರಿಸಿದುದೂ, ಮೊಸುಲ್ ಪ್ರಾಂತವನ್ನು ತುರ್ಕಿಯಿಂದ ಕಸಕೊಂಡುದುದೂ, ಫ್ರಾನ್ಸ ದೇಶವು ಸಿರಿಯಾ ದೇಶವನ್ನು ಸ್ವಾಧೀನಪಡಿಸಿಕೊಂಡಿದುದೂ ಈ ಎಣ್ಣೆಯ ಅಭಿಲಾಷೆಯಿಂದಲೇ ಆಗಿದೆ. ಅಂತ ರಾಷ್ಟ್ರೀಯ ರಾಜತಂತ್ರಗಳಲ್ಲಿ ಎಣ್ಣೆಯು ಬಹಳ ಮುಖ್ಯವಾದ ಕೆಲಸವನ್ನು ಮಾಡುತ್ತಿದೆ. ಪರ್ಸಿಯಾ ದೇಶದೊಳಗಿನ ಪರರಾಜ್ಯಗಳ ಕುತಂತ್ರಗಳೂ ಈ ಕಾರಣದಿಂದಲೇ ಆಗಿವೆ. ಏಕೆಂದರೆ ಎಣ್ಣೆಯು ಸ್ವಾಧೀನದಲ್ಲಿದ್ದರೆ, ಈಗಿನ ಎಲ್ಲಾ ಯಂತ್ರ ಸಾಮಾಗ್ರಿಗಳನ್ನು ನಡಿಸಬಹುದು. ಯುದ್ಧದ ಹಡಗುಪಡೆ, ವಾಯು ನೌಕೆ ಮೋಟರ, ಮೆಶೀನ್‌ಗನ್ನು, ಮುಂತಾದ ಎಲ್ಲಾ ಯುದ್ಧದ ಉಪಕರಣಗಳಿಗೆ ಎಣ್ಣೆಯ ಸಹಾಯವು ಅಗತ್ಯವಿದೆ. ಶಾಂತಿ ಸಮಯದಲ್ಲಿ ದೇಶದ ಸಾಂಪತ್ತಿಕ ಅಭಿವೃದ್ಧಿಗೂ ಎಣ್ಣೆಯು ಬೇಕೇ ಬೇಕು. ಇತ್ತೀಚೆಗೆ ದೇಶದ ಸಂಪದಭಿವೃದ್ಧಿಗೆ ಕಾರಣಗಳಾದ ಕೈಗಾರಿಕೆಯ ಕಾರಖಾನೆಗಳಲ್ಲಿ ಎಣ್ಣೆಯ ಉಪಯೋಗವು ಹೆಚ್ಚುತ್ತಿದೆ. ಅಲ್ಲದೆ ಎಣ್ಣೆಯ ಕಂಪೆನಿಗಳು ಮತ್ತೆ ಯಾವ ಕಂಪೆನಿಗಳಿಗೂ ಸಿಕ್ಕದ ಲಾಭವನ್ನು ಪಡೆಯುತ್ತಿವೆ. ಹೀಗಾಗಿ ರಾಜಕೀಯ ತಂತ್ರಗಳಲ್ಲಿ ಎಣ್ಣೆಗೆ ದಿನದಿನವೂ ಹೆಚ್ಚು ಪ್ರಾಮುಖ್ಯತೆಯು ಲಾಭವಾಗುತ್ತಿದೆ. ಈ ವರೆಗೆ ಸಂಕರಾಂಗಳೇ ಈ ಲಾಭದ ದುರಾಶೆಯಿಂದ ಎಷ್ಟೋ ಜನಾಂಗಗಳನ್ನು ಪೀಡಿಸಿ, ಅಧೀನವಾಗಿ ಮಾಡಿ ಕಷ್ಟಗಳಿಗೆ ಈಡುಮಾಡಿ ಅವರ ಆರ್ಥಿಕ ಸುವ್ಯವಸ್ಥೆಯನ್ನು ಕೆಡಿಸುತ್ತಿದ್ದರು. ಆದರೆ ಇತ್ತೀಚೆಗೆ ಕೆಲವು ಬಿಳಿ ಪಂಗಡಗಳು ಅತೀ ಹೇಯವಾದ ಅತ್ಯಾಚಾರಗಳನ್ನು ಈ ಎಣ್ಣೆಯ ಲಾಭಕ್ಕಾಗಿ ಮಾಡಿರುವರಾಗಿ ತಿಳಿದು ಬರುತ್ತಿದೆ.

ಅಮೇರಿಕದ ಮೂಲ ನಿವಾಸಿಗಳಾದ ಕಪ್ಪು ಜನರನ್ನು ಯುರೋಪಿನ ಬಿಳೇಯವರು ಅಲ್ಲಿ ಹೋಗಿ ಬೇಟೆಯಾಡಿ ಕೊಂದು, ಅಮೇರಿಕವನ್ನು ಸ್ವಾಧೀನಪಡಿಸಿ ನೆಲಸಿದರು. ಉಳಿದ ಮೂಲ ನಿವಾಸಿಗಳು ತಮ್ಮ ಹಕ್ಕಿಗಾಗಿ ಕಾದಾಡಿ ಕಡೆಗೆ ಅವರ ಹಕ್ಕನ್ನು ಬಿಳೇಯವರು ಮಾನಿಸಿದರು. ಅದರಂತೆ ಈ ಕಪ್ಪು ಜನರಿಗಾಗಿ ಅವರು ಸುಖವಾಗಿ ನೆಲಸುವಂತೆ ಪ್ರತ್ಯೇಕ ಸ್ಥಳವು ಕೊಡಲ್ಪಟ್ಟಿತ್ತು. ಈ ಸ್ಥಳದಲ್ಲಿ ಎಣ್ಣೆ ಇದೆಯಾಗಿ ತಿಳಿದು ಬಂದು, ಇದರ ಕ್ರಯವು ಸಾಧಾರಣ ೬ ಮಿಲಿಯ ರೂಪಾಯಿಯಷ್ಟು ಆಗುವುದರಿಂದ, ಅದನ್ನು ಅವರ ಕೈಯಿಂದ ವಶಪಡಿಸಿಕೊಳ್ಳುವ ಬಗ್ಗೆ ಕೆಲವರು ಮೂರು ವರ್ಷಗಳಿಂದ ಒಳಸಂಚು ನಡೆಸಿ ಸಾಧಾರಣ ೨೦ ಜನರನ್ನು ಕೊಂದುಹಾಕಿರುವರು. ಈ ಪ್ರಚಂಡ ಹತ್ಯಾಕಾಂಡವನ್ನು ನೋಡಿದರೆ ಯಾರಿಗೂ ಅಸಹ್ಯವಾಗದಿರದು. ಇದ ಈಗಿನ ಪಾಶ್ಚಾತ್ಯ ಮಾನಸಿಕತೆಯ ಪರಮಾವಧಿ ಪರಿಣಾಮವಲ್ಲದೆ, ಇದರಲ್ಲಿ ಮತ್ತೇನೂ ನೂತನ ವಿಲ್ಲವೆಂದು ತಿಳಿಯಬಹುದು.

ಶ್ರೀಯುತ ಕೇಳ್ಕರರ ಕೌತುಕ!

ಪಕ್ಷಪಾತಿ ಪಕ್ಷಗಳೊಳಗೆ ವಿವಾದಗಳೆದ್ದಾಗ, ಪ್ರತಿರೋಧಿಗಳು ಬುದ್ಧಿ ಹೀನರೆಂದಾಗಲಿ, ಹುಚ್ಚರೆಂದಾಗಲಿ, ಇಲ್ಲವೆ ಗೊತ್ತಿಲ್ಲದವರೆಂದಾಗಲಿ ತೋರಿಸುವುದು ಸಾಧಾರಣ ಪ್ರತಿ ಒಬ್ಬರಿಗೂ ಅಭ್ಯಾಸವಿದೆ. ಅಂತೆಯೇ ಲಿಬರಲ್ಲಿನ ಒಬ್ಬೊಬ್ಬರೇ ಧುರೀಣರು ಕಾಂಗ್ರೆಸ್ಸಿನ ಅಭಿಪ್ರಾಯಗಳಿಂದ ದೂರವಾಗಲೆತ್ನಿಸಿದಾಗ ಕಾಂಗ್ರೆಸ್ಸಿನ ಬಲವು ಮುರಿಯಿತು, ಅದರ ಉಪಯುಕ್ತತೆಯು ಕಡಿಮೆಯಾಯಿತು, ಅದರ ಪ್ರಾತಿನಿಧ್ಯವು ಹೋಯಿತು ಎಂಬಿತ್ಯಾದಿಯಾಗಿ ಹೇಳಲಾರಂಭಿಸಿದರು. ಡಾ| ಎನ್ನಿ ಬಿಸೆಂಟಮ್ಮನವರು ಆಗ ಕಾಂಗ್ರೆಸ್ಸಿನ ಸೂತ್ರಧಾರಿಯಾಗಿದ್ದರು. ಕಾಂಗ್ರೆಸ್ಸಿನ ಗೌರವದ ಬೆಳವಣಿಗೆಯನ್ನು ತೋರಿಸುವ ಭಾರವು ಆಗ ಅವರದಾಯಿತು. ಆ ಮೇಲೆ ಡಾ| ಬಿಸೆಂಟಮ್ಮನವರೂ ದೇಶದಲ್ಲಿ ಪ್ರಬಲವಾಗಿ ವಿಕಾಸ ಹೊಂದುತ್ತಿದ್ದ ರಾಜಕೀಯ ವಿಚಾರಗಳಿಂದ ಹಿಂದೆಗೆದರು. ಆಗ ಡಾ| ಬಿಸೆಂಟಮ್ಮನವರೇ ಕಾಂಗ್ರೆಸ್ಸಿನ ಗೌರವ ನಷ್ಟದ ವಿಷಯ ಡಂಗುರ ಹೊಡೆಯಲಾರಂಭಿಸಿದರು. ಆಗ ಅವರು ಮಾತಿನ ವ್ಯರ್ಥತೆಯನ್ನು ತೋರಿಸುವ ಭಾರವು ಶ್ರೀಯುತ ಕೇಳ್ಕರರಂತಹರ ಮೇಲೆ ಬಿದ್ದಿತು. "ಮರಾಠ"ದ ಪ್ರಚಂಡ ವಾಕ್ಪ್ರಹಾರಗಳು ನಿದಾಕ್ಷಿಣ್ಯವಾಗಿ "ನ್ಯೂ ಇಂಡಿಯಾ"ದ ಮೇಲೆ ಸುರಿಯಲಾರಂಭಿಸಿದುವು. ಅಡಗಿದ ಅರ್ಥಗಳಿಂದ, ಸತರ್ಕವಾದಗಳಿಂದ, ಕಠಿಣ ಮಾತುಗಳಿಂದ ಶ್ರೀಯುತ ಕೇಳ್ಕರರು ಡಾ| ಬಿಸೆಂಟಮ್ಮನವರ ಮೇಲೆ ತಿರಸ್ಕಾರದ ಜಡಿಮಳೆಯನ್ನು ಸುರಿಸಿದರು. ಕಾಂಗ್ರೆಸ್ಸಿನ ಚಿರಸ್ಥಾಯಿಯಾದ ಗೌರವವನ್ನು ತೃಪ್ತಪಡಿಸಿದರು. ಆದರೆ ಈಗ?

"ಕಾಂಗ್ರೆಸ್ಸಿನ ಆತ್ಮ ಗೌರವವು ಈ ಕ್ಷಣದಲ್ಲಿ ಹಿಂದೆಂದಿಗಿಂತಲೂ ಇದ್ದುದಕ್ಕಿಂತ ಕಡಿಮೆಯಾಗಿದೆ ಎಂದು ನಾನು ಹೇಳಬಲ್ಲೆನು."

ಅದೇ ಕೇಳ್ಕರರಿಂದ, ಇದೇ ಮಾತಿಗಾಗಿ ಡಾ| ಎನ್ನಿ ಬಿಸೆಂಟಮ್ಮನವರು ನಿರ್ದಾಕ್ಷಿಣ್ಯವಾಗಿ ಖಂಡಿಸಿದ ಶ್ರೀಯುತ ಕೇಳ್ಕರರು ಬಹಳ ಆತ್ಮ ತೃಪ್ತಿಯಿಂದ ಇದೇ ಮಾತನ್ನು, ಆತ್ಮ ಪ್ರಾವಿಣ್ಯದ ಸಂಪೂರ್ಣ ಸ್ವಾನುಭಾವದೊಡನೆ ಹೇಳುವರು! ಇದೆಲ್ಲಾ ಏತಕ್ಕೆ? ರಿಸ್ಪೊನ್ಸಿವ್ ಕೊ-ಒಪರೇಶನನ್ನು ಒಪ್ಪದಿದ್ದುದಕ್ಕೆ ರಿಸ್ಪೊನ್ಸಿವ್ ಕೊ-ಒಪರೇಶನಿನ ಮಾತನ್ನು ದೇಶದ ಮುಂದೆ ಇಡುವ ಸಮಯದಲ್ಲಿ ಶ್ರೀಯುತ ಕೇಳ್ಕರರ ಅಭಿಪ್ರಾಯವೇ ಬೇರೆ ಇತ್ತು. ಆ ಶಬ್ದದ ಅರ್ಥವು ಕೂಡ ಕೇಳ್ಕರರ ಈಗಿನ ಅಭಿಪ್ರಾಯದಂತೆ ಆಗಿಲ್ಲ. ಸರಕಾರವು ಸಹಕರಿಸಿದರೆ ನಾವೂ ಸಹಕರಿಸುವುದೆಂತ ಆ ಶಬ್ದದ ಅರ್ಥ. ಆ ಅರ್ಥದಲ್ಲಿಯೇ ಶ್ರೀಯುತ ಕೇಳ್ಕರರು ಆ ಧೋರಣವನ್ನು ಮೊದಲು ಮೊದಲು ಜನತೆಯ ಮುಂದೆ ಹಾಕಿದರು. ಅವರು ಈಗ ಅನ್ನುವುದೇನು.

"ಸರಕಾರಿ ಹುದ್ದೆಗಳನ್ನು ಸ್ವೀಕರಿಸಿ, ರಿಫೋರ್ಮ್ಸ್ ಸರಕಾರವನ್ನು ಇದ್ದಕ್ಕಿದ್ದಂತೆ ನಡೆಸಿ, ಸ್ವರಾಜ್ಯವನ್ನು ಹತ್ತಿರ ತರುವುದು ನನ್ನ ಧೋರಣವಾಗಿದೆ."

ಈ ಧೋರಣಕ್ಕೆ "ರಿಸ್ಪೊನ್ಸಿವ್ ಕೊ-ಒಪರೇಶನ್" ಅಂತ ಏಕೆ ಹೆಸರು ಹಾಕಬೇಕೆಂದು ನಮಗೆ ತಿಳಿಯುವುದಿಲ್ಲ. ಲಿಬರಲ್ ಪಕ್ಷದವರು ಈ ಧೋರಣಕ್ಕೆ ಏನೊಂದೂ ಕಡಿಮೆ ಮಾಡಿರುವರೆಂದೂ ನಮಗೆ ತೋರುವುದಿಲ್ಲ. ಮತ್ತೇಕೆ ಈ ಹೊಸ ಹೆಸರು, ಮತ್ತೇಕೆ ಈ ಒಣ ಹರಟೆ? ಲಿಬರಲ್ ಪಕ್ಷವು ಹೇಗೂ ಇದ್ದೇ ಇದೆ.

"ಕಾನಪೂರ ಕಾಂಗ್ರೆಸ್ಸಿನ ವಿಷಯ ಹೇಳುವುದಾದರೆ, ಸ್ವರಾಜ್ಯ ಪಕ್ಷದ ಕೌನ್ಸಿಲಿನ ಸಭೆಯ ನಂತರ ನಾನು ಕಾಂಗ್ರೆಸ್ಸನ್ನು ಬರೇ ಕೌತುಕದಿಂದ ನೋಡುತ್ತ ಇದ್ದೆನು."

ಅಷ್ಟೇ ಕೌತುಕವು ಕಾಂಗ್ರೆಸ್ಸಿಗೂ ಶ್ರೀಯುತ ಕೇಳ್ಕರರ ವಿಚಿತ್ರ ಧುರೀಣತ್ವವನ್ನು ನೋಡಿ ಉಂಟಾಗಿದ್ದಿರಬಹುದು.

ಆಧುನಿಕ ರಾಜತಂತ್ರದ ವೈಶಿಷ್ಟ್ಯ!

ಆ ಕಾಲವಲ್ಲಿ ರಾಜ್ಯಗಳು ಅಷ್ಟು ನಾಗರಿಕವಾಗಿರಲಿಲ್ಲ! ಒಬ್ಬನೇ ಒಬ್ಬನು ನಿರಂಕುಶ ಪ್ರಭುತ್ವದಿಂದ ರಾಜನೆಂಬ ಮದದಿಂದ ಆಳುತ್ತಿದ್ದನು. ಅದರಲ್ಲಿ ಪ್ರಜೆಗಳ ಹಿತವು ಸರಿಯಾಗಿ ಸಾಧಿಸಲ್ಪಡುತ್ತಿರಲಿಲ್ಲ. ಅದು ಪೂರ್ವ ಕಾಲದ ಕ್ರಮ. ರಾಜನ ರಾಜ್ಯಾಡಳಿತವನ್ನು ಈಗಿನ ರಾಜತಂತ್ರ ಪಟುಗಳು ಮಾನಿಸುವುದಿಲ್ಲ. ಈಗಿನ ನಾಗರಿಕ ಮಾನಸಿಕತೆಗೆ ಆ ಕ್ರಮವು ಅಮಾನ್ಯವಾಗಿದೆ. ಈಗಿಂದೀಚೆಗೆ ಜರ್ಮನ ಕೈಸರನು ಹೋದನು; ಆಷ್ಟ್ರಿಯದ ಚಕ್ರವರ್ತಿಯು ಅಳಿದನು; ರಶ್ಯದ ಝಾರನು ನಾಶಿಸಲ್ಪಟ್ಟನು. ನಾಗರಿಕತೆಯು ರಾಜ್ಯಾಡಳಿತವನ್ನು ರಾಜನ ಕೈಯಲ್ಲಿ ಕೊಡಲೊಪ್ಪುವುದಿಲ್ಲ. ಆದರೆ ಇಂಗ್ಲೆಂಡಿನ ಹಿಂದಿನ ಕ್ರಾಮ್ವೆಲನ ವಿಷಯವಾಗಿ ಅದು ಏನು ಹೇಳುವುದು? ಈಗಿನ ಸಮಯದಲ್ಲಿಯೇ, ಸ್ಪೈಯಿನ್ ದೇಶದಲ್ಲಿ ಡಿ| ರಿವೇರನೂ, ಇಟಲಿಯಲ್ಲಿ ಸಿಗ್ನರ್ ಮುಸ್ಸೋಲಿನಿಯೂ, ಈಗ ಹೊಸದಾಗಿ ಗ್ರೀಸ್ ದೇಶದಲ್ಲಿ ಪಾಂಗಲಸನೂ ತಮ್ಮ ನಿರಂಕುಶ ಪ್ರಭುತ್ವವನ್ನು ಆರಂಭ ಮಾಡಿರುವರು. ನಾಗರಿಕತೆಯು ಇದನ್ನು ಮೆಚ್ಚುವುದೇ? ಜನತೆಯು ಎಷ್ಟೇ ನಾಗರಿಕವೆಂದುಕೊಂಡರೂ, ತಮ್ಮನ್ನು ತಾವೇ ಆಳಿಕೊಳ್ಳುವುದು ಸುಲಭದ ಕೆಲಸವಲ್ಲವೆಂದು ಹೇಳಿಕೊಳ್ಳಲಿಕ್ಕೆ ಬಂತೆ?

ಹೆಸರಿನಲ್ಲಿ ಸಭ್ಯತೆಯ ಪ್ರತ್ಯಯ

ಸಭ್ಯತೆಯ ಸೂಚನೆಯಾಗಿ ಪ್ರತಿ ದೇಶದಲ್ಲಿಯೂ ಸಭ್ಯ ಗೃಹಸ್ಥರ ಹೆಸರಿಗೆ ಒಂದು ಪ್ರತ್ಯಯವನ್ನು ಕೂಡಿಸುತ್ತಾರೆ. ಇಂಗ್ಲೀಷಿನಲ್ಲಿ ಮಿಸ್ಟರ್ ಎಂದು ಪುರುಷರಿಗೂ, ಮಿಸ್ ಎಂದು ಅವಿವಾಹಿತ ಸ್ತ್ರೀಗೂ, ಮಿಸಿಸ್ ಎಂದು ವಿವಾಹಿತ ಸ್ತ್ರೀಗೂ ಸಂಬೋಧಿಸುತ್ತಾರೆ. ಈ ಶಬ್ದಗಳು ನಮ್ಮಲ್ಲಿಯೂ ವಾಡಿಕೆಯಲ್ಲಿವೆ. ನಮ್ಮ ಭಾಷೆಯಲ್ಲಿಯೂ, ನಮ್ಮ ನಾಗರಿಕತೆಯಲ್ಲಿಯೂ ಈ ಉದ್ದೇಶದ ಶಬ್ದಗಳು ಇವೆಯಾದರೂ, ನಾವು ಇಂಗ್ಲೀಷ ಶಬ್ದಗಳನ್ನೇ ಉಪಯೋಗಿಸುತ್ತಿರುವೆವು. ಮಹಾತ್ಮಾ ಗಾಂಧಿಯವರ ಚಳವಳಿದ ನಂತರ ಶ್ರೀಯುತ ಮತ್ತು ಶ್ರೀಮತಿ ಶಬ್ದಗಳು ಉಪಯೋಗಕ್ಕೆ ಬಂದಿರುವುವಾದರೂ, ಪರದೇಶದ ಆ ಶಬ್ದಗಳನ್ನುಪಯೋಗಿಸುವ ಅಭ್ಯಾಸವು ನಮ್ಮಿಂದ ಇನ್ನೂ ಹೋಗಿಲ್ಲ. ಶ್ರೀಯುತ, ಮ| ರಾ| ರಾ|, ಅವರ್ಗಳ್ ಮುಂತಾದ ಉತ್ತಮ ಶಬ್ದಗಳು ನಮ್ಮಲ್ಲಿದ್ದರೂ ನಾವು ಪರಭಾಷೆಯಿಂದ ಇವುಗಳನ್ನು ಎರವಲು ತರುವುದು ಅಗೌರವವಾಗಿದೆ. ಪಾಶ್ಚಾತ್ಯದ ಪ್ರತಿ ದೇಶದವರೂ ತಮ್ಮತಮ್ಮ ಈ ವೈಶಿಷ್ಟ್ಯವನ್ನು ಚೆನ್ನಾಗಿ ಕಾಪಾಡಿಕೊಂಡಿರುವರು. ಯಾವ ಭಾಷೆಯಲ್ಲಿಯೇ ಹೆಸರು ಬರಲಿ, ಅದು ಜರ್ಮನ್ ಹೆಸರಾದರೆ ಹೆರ್ ಎಂದೂ, ಫ್ರೆಂಚ್ ಹೆಸರಾದರೆ ಮೊನ್ಸಿರ್ ಎಂದೂ, ಇಟಲಿ ದೇಶದವರ ಹೆಸರಾದರೆ ಸಿಗ್ನರ್ ಎಂದೂ ಮುಂತಾಗಿ ಬರೆಯುತ್ತಾರೆ. ನಾವಾದರೂ ನಮ್ಮ ಈ ವೈಶಿಷ್ಟ್ಯವನ್ನು ಪ್ರಚಾರಕ್ಕೆ ತಂದು ನಮ್ಮ ಭಾಷೆಯ ಸಭ್ಯತೆಯನ್ನು ಪ್ರಕಾಶಪಡಿಸುವುದು ಅವಶ್ಯಕ. ಪರದೇಶದ ವಾರ್ತೆಗಳು ಹಿಂದೂಸ್ಥಾನಕ್ಕೆ ಬರುವಾಗ ಆಯಾ ದೇಶಗಳ ರೀತಿಯಂತೆಯೇ ಈ ಪ್ರತ್ಯಯಗಳು ಬರುವುವು. ಆದರೆ ಹಿಂದುಸ್ಥಾನದಿಂದ ಹೊರಗೆ ವರ್ತಮಾನಗಳಾಗಲಿ, ಇತರ ರೂಪದಿಂದ ಹಿಂದೀ ಹೆಸರುಗಳು ಹೋಗುವಾಗ ಮಿಸ್ಟರ್ ಎಂಬ ಸಂಬೋಧನೆಯಿಂದಲೇ ಹೋಗುತ್ತಿವೆ. ಈ ಕ್ರಮವನ್ನು ನಿಲ್ಲಿಸಿ ಹಿಂದೀ ಕ್ರಮವನ್ನೇ ಸಾಧ್ಯವಿದ್ದಷ್ಟು ಪ್ರಚಾರಕ್ಕೆ ತರುವುದು ಆವಶ್ಯಕ.

ಮಿ| ಹೊರ್ನಿಮಾನರ ಆಗಮನ

ಮುಂಬಯಿಯ "ದಿ ಬೊಂಬೆ ಕ್ರಾನಿಕಲ್" ಪತ್ರಿಕೆಯ ಸಂಪಾದಕರಾಗಿದ್ದು ಹಿಂದೀ ರಾಜಕೀಯ ರಂಗದಲ್ಲಿಯೂ ಹಿಂದೀ ಪತ್ರಿಕೆಯ ಇತಿಹಾಸದಲ್ಲಿಯೂ ಉತ್ಕ್ರಾಂತಿಕರಾಗಿದ್ದು ಆ ಕಾರಣದಿಂದಲೇ ಸರಕಾರದಿಂದ ಹಿಂದುಸ್ಥಾನದಿಂದ ಹೊರತಳ್ಳಲ್ಪಟ್ಟ ಮಿ| ಹೊರ್ನಿಮಾನರು ಪುನಃ ಹಿಂದುಸ್ಥಾನವನ್ನು ಸೇರಿದರು. ಮಿ| ಹೊರ್ನಿಮಾನರ ಮೇಲೆ ಮಾಡಿದ ಸರಕಾರದ ಈ ಅಪರಾಧವು ಅಕ್ಷಮ್ಯವಾಗಿದೆ, ಮುಂಬಯಿ ಲೆಜಿಸ್ಲೇಟಿವ್ ಕೌನ್ಸಿಲೂ, ಹಿಂದೀಯ ಲೆಜಿಸ್ಲೇಟಿವ್ ಎಸೆಂಬ್ಲಿಯೂ ಅವರನ್ನು ಪುನಃ ಹಿಂದುಸ್ಥಾನಕ್ಕೆ ಬರಲು ಬಿಡಬೇಕಾಗಿ ಒತ್ತಾಯಪಡಿಸಿತ್ತು. ಬ್ರಿಟಿಷ ಸರಕಾರವು ಅದರ ನೈಸರ್ಗದಂತೆ, ಹಿಂದೀಯರ ಆಶಯವನ್ನು ತಿರಸ್ಕರಿಸಿ ನಿರ್ಲಕ್ಷ್ಯವಾಗಿಯೇ ಇದ್ದಿತ್ತು. ಮೊನ್ನೆ ಮಿ| ಹೊರ್ನಿಮಾನರು ಕೊಲೊಂಬೊಗೆ ಬಂದರು. ಸರಕಾರದ ಆಕ್ಷೇಪವಿಲ್ಲದಿದ್ದರೆ ತಾನು ಹಿಂದೂಸ್ಥಾನಕ್ಕೆ ಬರುವೆನಾಗಿ ತಂತಿ ಕೊಟ್ಟರು. ಮತ್ತು ಕೊಲೊಂಬೊದಿಂದ ಧನುಷ್ಕೋಡಿಗೆ ಬಂದರು. ಅಲ್ಲಿ ಅವರನ್ನು ಕೆಲ ಕಾಲ ತಡೆಮಾಡಿದರೂ ಕಡೆಗೆ ಹಿಂದುಸ್ಥಾನಕ್ಕೆ ಬರಲು ಬಿಟ್ಟರು. ಕಳೆದ ಶನಿವಾರ ದಿವಸ ಮಿ| ಹೊರ್ನಿಮಾನರು ಮದ್ರಾಸಿಗೆ ತಲ್ಪಿದರು. ಹಿಂದುಸ್ಥಾನದಲ್ಲಿ ಬಂದ ಮೇಲೆ ಅವರ ಮೊದಲಿನ ಪ್ರತಿಜ್ಞೆಯು ಹೀಗಿದ್ದಿತು:—

"ಹಿಂದುಸ್ಥಾನದ ನೆಲದ ಮೇಲೆ ಕಾಲಿಟ್ಟೆನೆಂದೂ, ಹಿಂದೀ ಸ್ವಾತಂತ್ರ್ಯದ ಕಾರಣದಲ್ಲಿ ಮನದಣಿಯೆ ಕೆಲಸ ಮಾಡಲು ಸಂದರ್ಭ ದೊರಕಿತೆಂದೂ ನನಗೆ ಅತ್ಯಂತ ಆನಂದವಾಗುತ್ತಿದೆ."

ಇದರಿಂದ ಅವರು ಹಿಂದೂದೇಶಕ್ಕೆ ಎಷ್ಟು ಪ್ರೀತಿಯಿಂದ ಪುನಃ ಬಂದಿರುವರೆಂದೂ ತಿಳಿಯುವುದು. ಮದ್ರಾಸಿನಲ್ಲಿ ಅವರಿಗೆ ಸ್ವಾಗತವೀಯುವುದಕ್ಕಾಗಿ ಕೂಡಿದ ಸಭೆಯಲ್ಲಿ ಅವರು ತಮ್ಮ ಮನೋನಿರ್ಧಾರಿಂದ ವಿಷಯದಲ್ಲಿ ಹೀಗೆ ಹೇಳಿದರು:—

"ಕಳೆದ ಏಳು ವರ್ಷಗಳಲ್ಲಿ ಸರಕಾರವು ನನಗೆ ಮಾಡಿದ ಅವಮಾನವಾಗಲಿ, ನನಗೆ ಕೊಟ್ಟ ಪೀಡೆಯಾಗಲಿ, ಸರಕಾರವು ನನ್ನ ಮೇಲೆ ಹೊರಿಸಿದ ಎಷ್ಟೊ ಇತರ ಕಷ್ಟಗಳಾಗಲಿ, ನನಗೆ ಹಿಂದುಸ್ಥಾನದ ಆಶಯಗಳ ಮೇಲಿದ್ದ ಭಕ್ತಿಯನ್ನು ಕಡಿಮೆ ಮಾಡಿಲ್ಲವೆಂದು ಮೊದಲು ಹೇಳುವೆನು. ಸರಕಾರದ ಅನ್ಯಾಯಗಳನ್ನು ಪ್ರತಿ ಸಂದರ್ಭದಲ್ಲಿಯೂ ಖಂಡಿಸಲು ನಾನು ಸಿದ್ಧನಿದ್ದೇನೆ. • • • • ನಾನು ನನ್ನ ಸ್ವಂತ ಸಾಧನೆಯಿಂದ ಬಂದಿದ್ದೇನೆ. ನಾನು ಯಾವ ಸರಕಾರದ ಒಪ್ಪಿಗೆಯಿಂದಲೂ ಬಂದಿಲ್ಲ. ನಾನು ಬ್ರಿಟಿಷ್ ಪ್ರಜೆಯ ಅಧಿಕಾರದ ಬಲದಿಂದ ಮಾನವನ ಹಕ್ಕಿನಿಂದ ಬಂದಿದ್ದೇನೆ."

ಮಿ| ಹೊರ್ನಿಮಾನರಿಗೆ ಹಿಂದೂದೇಶದ ಮೇಲಿರುವ ಅಸೀಮ ಪ್ರೇಮ ಇದರಿಂದ ವ್ಯಕ್ತವಾಗುವುದು. ಇವರ ಸಹಾಯದಿಂದ ಹಿಂದೀ ಸ್ವರಾಜ್ಯವು ಹತ್ತಿರವಾಗಲೆಂದು ನಾವು ಪ್ರಾರ್ಥಿಸುವ.

ಕೇಳಿರಿ! ಬರೆಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ— ದಿ. ಊಲನ್ ಮಾರ್ಟ್, ಮಂಗಳೂರು.

ಅನುಕ್ರಮಣಿಕೆ.

	ಪುಟ
ಅಗ್ರಲೇಖ	
ಸನ್ಯಾಸದ ದುರುಪಯೋಗ	೬
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೭
ದಕ್ಷಿಣ ಕನ್ನಡ— ಪಿಲಿಕೋಡು, ಬಂಟ್ವಾಳ, ಕುಂಬಳೆ, ಕಾಸರಗೋಡು, ಮೂಲ್ಕಿ ರಾಮಕುಂಜ	„
ಮಂಗಳೂರು	೮
ಪತ್ರವ್ಯವಹಾರ ೧, ೨, ...	„
ವಿವಿಧ ವಿಷಯಗಳು	„
ದಕ್ಷಿಣಕನ್ನಡಜಿಲ್ಲಾ ನೋನ್-ಮಿಶನ್ ಏಯಿಡೆಡ್ ಶಾಲೆಗಳ ಸಂಘ	೪

ಸ್ವದೇಶಾಭಿಮಾನಿ.

ಶಕ ೧೮೫೭ ಮಾಘ ಶು| ೧೫ ಶುಕ್ರವಾರ

ಸನ್ಯಾಸದ ದುರುಪಯೋಗ.

ಸಮಗ್ರ ಭಾರತ ಭೂಮಿಯನ್ನು ಸಂಚರಿಸಿ ದ್ವೈತ ಮತವನ್ನು ತಮ್ಮ ಅಗಾಧವಾದ ಪ್ರತಿಭೆಯಿಂದ ಸ್ಥಾಪಿಸಿದ ಶ್ರೀಮನ್ಮಧ್ವಾಚಾರ್ಯರ, ಅಖಿಲ ಕರ್ನಾಟಕದ ಪೂಜೆಗೆ ಪಾತ್ರವಾಗಿರುವ ಉಡುಪಿಯ ಪವಿತ್ರ ಯಾತ್ರೆಯ ಕ್ಷೇತ್ರದಲ್ಲಿಯೇ ಆ ಮಹಾಮಹಿಮರ ಗೌರವವು ಅವರ ಅನುಯಾಯಿಗಳಿಂದಲೇ ಇಂದಿನ ಗತಿಗೆ ವಯ್ಯಲ್ಪಡುಲ್ಪಡುವುದೆಂದು ಶ್ರೀಮನ್ಮಧ್ವಾಚಾರ್ಯರು ಕಲ್ಪಿಸಿ ಕೂಡ ಇರಲಿಕ್ಕಿಲ್ಲ. ಆದರೂ ಈ ದಿನ ಅಂತಹ ಘಟನೆಯು ಸಂಭವಿಸಿತು; ಪವಿತ್ರ ಕ್ಷೇತ್ರದ ಪಾವಿತ್ರ್ಯದ ಇಂದಿನ ಪರಿಸ್ಥಿತಿಯೇನು? ಅಖಿಲ ಕರ್ನಾಟಕದಲ್ಲಿ ಅಖಿಲ ಕರ್ನಾಟಕದ ಏಕ ಮಾತ್ರ ಪವಿತ್ರಸ್ಥಾನದ ನಿಜಸ್ಥಿತಿಯು ಸಂಪೂರ್ಣವಾದ ನಗ್ನಾವಸ್ಥೆಯಲ್ಲಿ ಈದಿನ ಚಿತ್ರಿತವಾಯಿತು. ಇದರಿಂದ ಯಾರಿಗೆ ದುಃಖವಾಗದು?

ಸನ್ಯಾಸದೊಡನೆ ಲೌಕಿಕರ ತಾಪತ್ರಯಗಳು ದೂರವಾದುವು ಎಂದು ನಾವು ತಿಳಿದಿದ್ದೆವು. ಸರ್ವಸಂಗ ಪರಿತ್ಯಾಗದೊಡನೆ ಸನ್ಯಾಸವು ವಿಭೂಷಿತವಾಯಿತೆಂದೂ, ಸನ್ಯಾಸದೊಡನೆ ಸಮಾಜ ಧುರೀಣತೆಯು ವಿಭೂಷಿತವಾಯಿತೆಂದೂ, ಇಂತಹ ಸಮಾಜ ಧುರೀಣತ್ವದ ಅಡಿಯಲ್ಲಿ ಪರಮಾರ್ಥವು ಶಾಶ್ವತವಾಯಿತೆಂದೂ ನಮ್ಮ ಭಾವನೆಯಿದ್ದಿತು. ಶ್ರೀಮನ್ಮಧ್ವಾಚಾರ್ಯರ ಉದ್ದೇಶವಾದರೂ ಹಾಗಿದ್ದಿರಬಹುದು, ಎಂದು ನಮ್ಮ ನಂಬುಗೆ ಇದ್ದಿತು. ಶ್ರೀ ಶಂಕರಾಚಾರ್ಯರ ಸನ್ಯಾಸದ ಹೊಗಳಿಕೆಯೂ ಈ ತೆರನಾಗಿದ್ದಿರಬಹುದು. ಆದರೆ ಸನ್ಯಾಸಿಗಳಿಗೂ ಲೌಕಿಕರ ಸ್ಥಿತಿಯು ಪ್ರಾಪ್ತವಾದ ಮೇಲೆ ಈ ಆಶಯಗಳು ಪೂರ್ಣಹೊಂದುವ ಬಗೆ ಹೇಗೆ?

ಯಾವಾಗ ಸನ್ಯಾಸವು ಉದ್ದಿಷ್ಟ ಧ್ಯೇಯವನ್ನು ಬಿಟ್ಟು ಹಣ ಡಂಭದಲ್ಲಿ ಸೇರಿತೊ, ಆಗಲೇ ಮಠಾಧಿಪತ್ಯದ ಮಠಾಧಿಪತ್ಯವು ಶಿಥಿಲವಾಯಿತು. ಯಾವಾಗ ನಿಜಸಾಧನೆಗಳಿಗಿಂತಲೂ ಸೇವಕರ ಸಂಖ್ಯೆಯ ಮೇಲೂ, ಸಿಕ್ಕಬೇಕಾದ ಸನ್ಮಾನಗಳ ಮೇಲೂ, ದೀವಟಿಗೆಯ ಮೇಲೂ, ಪಲ್ಲಕಿಗಳ ಮೇಲೂ, ಸಿಪಾಯಿಯವರ ಸಂಖ್ಯೆಯ ಮೇಲೂ ಸನ್ಯಾಸಿಗಳ ಮನಸ್ಸು ಹೋಯಿತೊ, ಯಾವಾಗ ಸೌಹಾರ್ದಕ್ಕಿಂತಲೂ ನಮಸ್ಕಾರಗಳ ಪ್ರದರ್ಶನವೇ ಸನ್ಯಾಸದ ಗೌರವದ ಗುರುತಾಯಿತೊ, ಆಗಲೇ ಸನ್ಯಾಸದ ದುರುಪಯೋಗವು ಆರಂಭವಾಯಿತು. ಸನ್ಯಾಸಿಗಳ ಉದಾರ ಕಾರ್ಯಗಳಿಗಾಗಿ ಸಮಾಜದೊಳಗಿನ ಭಕ್ತಿವಂತರು ಧನವನ್ನರ್ಪಿಸುವ ಬದಲು ಸನ್ಯಾಸಿಗಳು ತಮ್ಮ ಕೌಶಲ್ಯದಿಂದ ಆರ್ಜನೆಗೆ ಹೊರಡಬೇಕಾಯಿತು. ಶಿಷ್ಯವೃಂದದ ಭಕ್ತಿಯನ್ನು ಉನ್ನತಿಗೆ ತರುವ ಬದಲು, ಅವರಲ್ಲಿ ಮೌಢ್ಯವನ್ನು ಹೆಚ್ಚಿಸಿ ದುಡ್ಡುಗಳಿಸಬೇಕಾಯಿತು. ಮಠಗಳು ಹಿತೋಪದೇಶಗಳನ್ನು ಮತೋಪದೇಶಗಳನ್ನು ಪ್ರಸರಿಸುವ ಸಂಸ್ಥೆಗಳಾಗುವ ಬದಲಿಗೆ, ರೂಪಾಯಿಗಳ ಗಂಟಿನಿಂದ ಬೆಲೆಕಟ್ಟಲ್ಪಡುವ ಪಾಪಪುಣ್ಯಗಳ ವಹಿವಾಟುಗಳ ಸ್ಥಾನವಾಗಿ ಪರಿಣಮಿಸಿದುವು. ಮೂಲ ಸ್ಥಾಪಕರಿಗೆ ಏನನ್ಯಾಯ!

ಸನ್ಯಾಸಿಗಳು ವಿಯೋಗಿಗಳಾಗಿ ಸುಖಿಗಳಾಗಿರುವರೆಂಬ ತಪ್ಪುಗ್ರಹಿಕೆಯನ್ನು ನಾವು ದೂರಮಾಡಿಕೊಳ್ಳುವ. ಪಾಪ! ಲೌಕಿಕ ಗೃಹಸ್ಥನಂತೆ ಅವರಿಗೆ ಯಾವ ಉಪಾಯದಿಂದಲಾದರೂ ದುಡ್ಡುಗಳಿಸಲಿದೆ. ಮನೆಯೊಳಗಿನ ವಾದಿನಿಯರಂತೆ ಪರಸ್ಪರ ಜಗಳಾಡಲಿದೆ; ಕೋರ್ಟಿನಲ್ಲಿ ನಿತ್ಯ ವ್ಯವಹಾರ ನಡಿಸುವವನಂತೆ ಕೋರ್ಟಿನ ನ್ಯಾಯಸ್ಥಾನದಿಂದ ವಾಕ್ಪ್ರಹರಗಳನ್ನು ತಿನ್ನಲಿದೆ, ಮಾತು ಮಾತಿಗೆ ವಕೀಲರ ಆಶ್ರಯವನ್ನು ಹೊಂದಲಿದೆ. ಈ ಪರಿಸ್ಥಿತಿಯಲ್ಲಿ ಅವರನ್ನು ಸುಖಿಯೆನ್ನುವವರಾರು?

ದೇಶದೊಳಗಿನ ಎಲ್ಲಾ ಸನ್ಯಾಸದ ಪರಿಸ್ಥಿತಿಯು ಹೀಗಿದೆ. ಈ ಲೌಕಿಕ ಸುಖ ಕಷ್ಟಗಳ ಮಧ್ಯದಲ್ಲಿ, ಮತವನ್ನು ಉಜ್ಜೀವಿಸುವುದಾದರೂ ಹೇಗೆ? ಜನತೆಯ ಸಂಕಷ್ಟಗಳನ್ನು ಪರಿಹರಿಸುವುದಕ್ಕೆ ಸಮಯವೆಲ್ಲಿ?

ಮಠದೊಳಗಿನ ಧನಸಂಗ್ರಹದ ಈ ಸ್ಪರ್ಧೆಯಲ್ಲಿ, ಹಣ ಡಂಭ ಸಾಧನೆಯ ಈ ಮೇಲಾಟದಲ್ಲಿ ಯಾವುದಾದರೂ ಎರಡು ಮಠಗಳ ಸೌಹಾರ್ದದಿಂದಿರುವುದೆಂದು ತೋರುವುದಿಲ್ಲ. ಬೇಲಿಯೇ ಹುಲ್ಲನ್ನು ಮೇಯಲಿಕ್ಕೆ ಆರಂಭಿಸಿಯದೆ. ಮತ್ತೆ ಹೇಳಲಿರುವುದೇನು?

ದೇಶದ ಈ ಸಾಂಕ್ರಾಮಿಕ ರೋಗದ ಸೋಂಕು ಉಡುಪಿಯ ಮಠಗಳ ಪ್ರಕೃತದ ಸ್ಥಿತಿಯನ್ನು ಬಿಟ್ಟಿಲ್ಲ. ಸ್ವಾಮಿಯವರೊಳಗೆ ಜಗಳವಾಯಿತೆಂಬುದನ್ನೇ ನಾವು ನಮಗೆ ಅವಮಾನಕರವೆಂದು ಪರಿಗಣಿಸುವೆವು. ಅದರಲ್ಲಿಯೂ ಯಾವ ರಾಜಿಯೂ ಸಾಧ್ಯವಾಗಲಿಲ್ಲವೆಂಬುದು ಮತ್ತಷ್ಟು ದುಃಖಕರವು. ಮತ್ತೂ ಸರಕಾರಿ ಅಧಿಕಾರಿಗಳೇ ಬಂದು ತಮ್ಮ ಅಧಿಕಾರದ ದರ್ಪದಿಂದ, ಎಂಟು ಮಠಗಳ ಸನ್ಯಾಸಿಗಳ ಸಮ್ಮುಖದಲ್ಲಿ ಏನೊಂದು ಸನ್ಮಾನತೆಯ ಸೂಚನೆಯಿಲ್ಲದೆ ಮಂಡಿಸಿ, ಸನ್ಯಾಸದೊಳಗಿನ ಅಶಾಂತತೆಯನ್ನು ತಡೆಯಲಿಕ್ಕಾಗಿ ನಿರ್ದಾಕ್ಷಿಣ್ಯ ತೀರ್ಮಾನವನ್ನು ಕೊಟ್ಟುದೂ, ಶಿಷ್ಯವೃಂದಕ್ಕೂ, ಮತಾಭಿಮಾನಿಗಳಿಗೂ, ಒಂದು ಪ್ರಚಂಡ ಎಚ್ಚರಿಕೆಯಾಗಿರಬೇಕು.

ನಾವು ಎಲ್ಲಿಯೋ ಒಂದು ಕಡೆಯಲ್ಲಿ ಒಂದು ಕಥೆಯನ್ನು ಓದಿದ್ದೆವು. ಈಗದರ ನೆನಪು ನಮಗಾಗುತ್ತಿದೆ. ಅದರ ಸಾರಾಂಶ ಹೀಗಿದೆ:—

ಮಹಾ ವೈಭವಶಾಲಿಯಾದ ರಾಜನ ಶಹರಿನಲ್ಲಿ ಒಂದು ದೊಡ್ಡ ದೇವಾಲಯವಿದ್ದಿತು. ರಾಜನ ಪೂರ್ವಜರು ಅದನ್ನು ಕಟ್ಟಿಸಿದ್ದರು. ಸರ್ವಸಂಗ ಪರಿತ್ಯಾಗಿಯಾಗಿರುವ ಸನ್ಯಾಸಿಯೊಬ್ಬನು ಅಲ್ಲಿ ಪೂಜೆಮಾಡುತ್ತಿದ್ದನು. ರಾಜನು ದೇವಸ್ಥಾನಕ್ಕೆ ಹೋಗಿ ಆ ಸನ್ಯಾಸಿಗೂ, ದೇವರಿಗೂ ನಮಸ್ಕರಿಸಿ ಬರುತ್ತಿದ್ದನು.

ಒಂದು ದಿನ ರಾಜನಿಗೆ ಸನ್ಯಾಸಿಯನ್ನು ಮನೆಗೆ ಕರೆಸುವ ಇಚ್ಛೆಯಾಯಿತು. ರಾಜನು ಅವನನ್ನು ಕರೆಕಳುಹಿಸಿದನು. ಅವನು ಹೇಳಿದನು,

"ಬೇಕಾದರೆ ರಾಜನೇ ಇತ್ತ ಬರಲಿ"

ರಾಜನಿಗೆ ಸೇವಕರು ಬಂದು ಹೇಳಿದರು.

ರಾಜನಿಗೆ ಕೋಪವಾಯಿತು.

ಆದರೆ ಮಾಡುವುದೇನು? ಸನ್ಯಾಸಿಯು ಈಗಲೇ ರಾಜ್ಯ ಬಿಟ್ಟು ಹೋಗಲು ಸಿದ್ಧನಿದ್ದನು. ಅವನಿಗೆ ಏನೂ ಬೇಕಾಗಿರಲಿಲ್ಲ.

ರಾಜನು ಮಂತ್ರಿಯೊಡನೆ ಕೇಳಿದನು.

ಮಂತ್ರಿಯು ರಾಜನಿಗೆ ಹೇಳಿದನು:—

"ಪ್ರಭೂ ಕೆಲಕಾಲ ಸುಮ್ಮನಿರಿ. ಮತ್ತೆ ತಾನಾಗಿ ತಮ್ಮ ಪಾದದಡಿಯಲ್ಲಿ ಬರುವನು."

ರಾಜನು ಒಪ್ಪಿದನು.

ಮಂತ್ರಿಯು ಸನ್ಯಾಸಿಯ ಪರಿಚಾರಕ್ಕೆ ಒಬ್ಬ ಸುಂದರ ಹುಡುಗಿಯನ್ನು ನೇಮಿಸಿದನು. ಸನ್ಯಾಸಿಯು ಕೇವಳ ಮೋಹ ಜಾಲಕ್ಕೆ ಸಿಲುಕಿದನು. ಮಂತ್ರಿಯು ವಹ್ತಾಯ ಮಾಡಿದನು. ರಾಜನು ಒಪ್ಪಿದನು. ಉಳಿದುದೇನು. ಸನ್ಯಾಸಿಯು ಮದುವೆ ಮಾಡಿಕೊಂಡನು.

ಮುಂದೆ ಸನ್ಯಾಸಿಗೆ ಸಂಸಾರದ ತಾಪತ್ರಯಗಳು ಬೆಳೆದುವು. ಒಂದು ದಿನ ರಾಜನ ಆಸ್ಥಾನಕ್ಕೆ ಬಂದನು. ಹೇಳಿದನು:—

"ರಾಜನ್! ಪೂಜೆಗೆ ಖರ್ಚು ಸಾಲದು. ತಮ್ಮ ಕಾಣಿಕೆಯು ಹೆಚ್ಚಬೇಕು."

ರಾಜನು ಮಂತ್ರಿಯ ಮುಖ ನೋಡಿದನು.

ಇಬ್ಬರೂ ಮುಗುಳುನಗೆ ನಕ್ಕರು.

ಆಗಿನಿಂದ ವಿವಾಹಿತ ಪೂಜಾರಿಯು ದಿನನಿತ್ಯವು ರಾಜನ ಅರಮನೆಗೆ ಬಂದು ಹೋಗುತ್ತಿದ್ದನು. ಅವನಲ್ಲಿ ರಾಜನಿಗೆ ಅನುಕೂಲವಾದ ದಾಸನೊಬ್ಬನು ಸಿಕ್ಕಿದನು. (ಅಪೂರ್ಣ)

ಇದರಿಂದ ಮೂಲತತ್ವವೂ ಅದರ ಶಿಥಿಲತೆಯಿಂದುಂಟಾಗುವ ಪರಿಣಾಮವೂ ಸರಿಯಾಗಿ ವಿದಿತವಾಗುವುದು. ಸನ್ಯಾಸವೆಂದರೆ ಅತೀ ಉಚ್ಚವಾದ ಪದವಿಯಾಗಿದೆ. ಆದರಿಂದ ಯಾವಾಗ ಸನ್ಯಾಸವು ಸಂಸಾರಕ್ಕೆ ಅವರೋಹಿಸುವುದೊ, ಆಗ ಅದು ಅವಮಾನ ದೂಳಿನಿಂದ ಮುಚ್ಚಿಹೋಗುವುದು.

ಇಂತಹ ಪರಿಸ್ಥಿತಿಯಲ್ಲಿ ಎಂಡೋಮೆಂಟ್ ಎಕ್ಟಿಗೆ ಎಷ್ಟೇ ವಿರೋಧವಿದ್ದರೂ ಅಂತಹ ಎಕ್ಟಿನ ಅಥವಾ ವ್ಯವಸ್ಥೆಯ ಅವಶ್ಯಕತೆ ತೋರದಿರದು. ಮಠಗಳ ಈ ಅನಾವಸ್ಥೆಯಲ್ಲಿ ಮಠಗಳು ಸ್ವಾಮಿಯವರ ಖಾಸಗಿ ಸಂಸ್ಥೆಗಳು ಎಂದು ಸಾಧಿಸುವುದರಲ್ಲಿ ಶಿಷ್ಯವೃಂದದವರು ಎಷ್ಟು ಹಾನಿಯನ್ನು ಮಾಡುವರಾಗಿ ತಿಳಿಯುವುದು. ಕೇವಲ ಪಾರಮಾರ್ಥಿಕ ವಾತಾವರಣದಿಂದ ಪ್ರತಿ ಕಡೆಯ ಪ್ರತಿ ಮಠಗಳೂ ಸ್ವಾರ್ಥಕ್ಕೆ ಇಳಿದು ಅತ್ಯಂತ ದೋಷಕರ ಕಾರ್ಯಗಳನ್ನು ಮಾಡುವರು, ಕ್ರಿಮಿನಲ್ ಫಿರ್ಯಾದಿಗಳೂ, ಶ್ರೀಯವರ ಮೇಲೆ ಒಂದೊಂದು ಬಾರಿ ಬರುವ ಸಂಭವಗಳಿವೆಯೆನ್ನುವಾಗ ಹಿಂದೂ ಮತಸಂಸ್ಥೆಗಳು ಎಷ್ಟೆಷ್ಟು ಲಜ್ಜಾಸ್ಪದ ಸ್ಥಿತಿಗೆ ಅವತರಿಸುತ್ತಿವೆ ಎಂದು ತಿಳಿಯಬಹುದು.

ಹಿಂದುಗಳೇ! ಇನ್ನಾದರೂ ಎಚ್ಚತ್ತು ಈ ಮಠಗಳ ಪುನರ್ವ್ಯವಸ್ಥೆಯನ್ನು ಕೈಕೊಂಡು ಮಠಗಳ ಮೂಲಕ ಹಿಂದೂ ಮತ, ಹಿಂದೂ ಜನಾಂಗ ಮತ್ತು ಹಿಂದೂ ನಾಗರಿಕತೆಗಳೊಳಗಿನ ಜಡತೆಯನ್ನೂ, ಮೌಢ್ಯವನ್ನೂ ಕಳೆದು, ಆರ್ಯಕಾಲದ ಉಜ್ವಲತೆಯನ್ನು ಪುನಃ ಉಜ್ಜೀವಿಸುವಿರಾ! ದೋಷಗಳನ್ನು ಶೋಧಿಸುವೆವೆಂದು ಕೋಪಿಸಬೇಡಿರಿ, ಬೆಂಕಿಯನ್ನು ಉದಿಯಲ್ಲಿ ಅಡಗಿಸಿಡಲು ಪ್ರಯತ್ನಿಸಬೇಡಿರಿ. ನಮ್ಮ ಉಜ್ಜೀವನವು ದೋಷಗಳನ್ನು ಅಡಗಿಸುವುದರಲ್ಲಿಲ್ಲ. ನಮ್ಮ ಗೌರವವು ನಮ್ಮ ದೋಷಗಳನ್ನು ಮುಚ್ಚುವುದರಲ್ಲಿಲ್ಲ. ನಮ್ಮ ಹೃದಯವನ್ನು ಪರೀಕ್ಷಿಸಿ, ನಮ್ಮ ಜನತೆಯ ಮೇಲೆ ಅಭಿಮಾನಪಟ್ಟು ನಮ ಸಂಸ್ಥೆಗಳನ್ನು ಮೃತ್ಯುವಿನ ಕರಾಳ ಗ್ರಾಸದಿಂದ ತಪ್ಪಿಸಿ ಅಮೃತ ವರ್ಷಣದಿಂದ ಚಿರಜೀವಿಯಾಗಿ ಮಾಡುವ!

ಓಂ ತತ್ ಸತ್.

ವಿದೇಶ ವರ್ತಮಾನ.

— ಇಟಲಿ ದೇಶದಲ್ಲಿರುವ ವೆಸುವಿಯಸ್ ಎಂಬ ಜ್ವಾಲಾಮುಖಿಯಿಂದ ಸುಮಾರು ೩೦೦ ಮೀಟರ್ ಎತ್ತರವೂ ೫ರಿಂದ ೧೫ ಮೀಟರ ಅಗಲವೂ ಆದ ಲಾವಾ ಪ್ರವಾಹವು ಮೇಲಕ್ಕೆ ಬರಲು ಪ್ರಾರಂಭವಾಗಿಯದೆ.

— ಫ್ರಾನ್ಸ್ ದೇಶದ ರಾಜಧಾನಿಯಾದ ಪೆರಿಸ್ ಪಟ್ಟಣದ ಹತ್ತಿರದಿಂದ ಹರಿಯುವ ಸೀನ್ ನದಿಯ ನೆರೆಯು ಇನ್ನು ಇಳಿಯಲಿಲ್ಲ. ನೆರೆಯ ನೀರು ಪೆರಿಸ್ ಪಟ್ಟಣದ ಬೇರೆ ಬೇರೆ ಮಾರ್ಗಗಳಲ್ಲಿರುವದರಿಂದ ರೈಲು ಗಾಡಿಗಳ ಸಂಚಾರಕ್ಕೆ ಅಡಚಣೆಯಾಗಿದೆ.

— ಮೊದಲು ಮದರಾಸು ಸರಕಾರದ ಸರ್ಜನ್ ಜನರಲ್‌ರಾಗಿದ್ದ ಸರ್ ಗಿರಾಲ್ಡ್ ಗಿಫರ್ಡರು ಲಂಡನಿನಲ್ಲಿ ಕಾಲವಾದರು!

— ಆಯರ್ಲೆಂಡಿನ ಭಾಗವಾದ ಅಲ್ಸ್ಟರಿನ ವಿದ್ಯಾಮಂತ್ರಿಯವರಾದ ಲೋರ್ಡ ಲಂಡನ್‌ಡರಿಯವರು ತನ್ನ ಕೆಲಸಕ್ಕೆ ರಾಜಿನಾಮೆ ಕೊಟ್ಟಿರುವರು. ವ್ಯಾಕೌಂಟ್ ಚಾರ್ಲ ಮೊಂಟರು ಅವರ ಬದಲಾಗಿ ನೇಮಿಸಲ್ಪಟ್ಟಿರುವರು.

— ಎಡ್ವರ್ಡ್ ಮೂಸಿಯವರನ್ನು ಹಿಂದೂ ದೇಶದ ಅಪೋಸ್ತಲಿಕ್ ಡೆಲಿಗೇಟರಾಗಿ ಪೋಪ್ ಸಾಹೇಬರು ನೇಮಿಸಿರುವರು. ಈ ಡೆಲಿಗೇಟರು ಇಂಡಿಯಕ್ಕೆ ಎಪ್ರಿಲ್ ತಿಂಗಳಲ್ಲಿ ಬಂದು ತಲುಪುವರು.

— ಹೊಲೆಂಡಿನಲ್ಲಿ ನೆರೆಯು ಇಳಿಯುತ್ತಾ ಬರುತ್ತಿದೆ. ಜನರ ಸೊತ್ತುಗಳು ಕಳವಾಗದಂತೆ ಪೋಲೀಸಿನವರು ಆಯುಧಪಾಣಿಗಳಾಗಿ ಕಾಯುತ್ತಿರುವರು. ರಾತ್ರೆಯಲ್ಲಿ ಲೈಸನ್ಸ್ ಪಡೆಯದವರು ದೆಪ್ಪಗಳಲ್ಲಿ ಸಾಮಾನುಗಳನ್ನು ವೈಯಲು ಬಿಡುವುದಿಲ್ಲ. ಪೋಪ ಸಾಹೇಬರು ನೆರೆಯಿಂದ ನಿರಾಶ್ರಿತರಾದ ಈ ದೇಶದ ಜನರ ಸಹಾಯಾರ್ಥವಾಗಿ ಇಪ್ಪತ್ತು ಸಾವಿರ ಫ್ಲೋರಿನುಗಳನ್ನು ಕಳುಹಿಸಿರುವರು.

— ರಷ್ಯಾ ದೇಶದ ಅರಸರಾದ ಜಾರರ ಮತ್ತು ರಷ್ಯಾ ದೇಶದ ಇತರ ಶ್ರೀಮಂತರ ನವರತ್ನಗಳು ಈಗಿನ ಸೋವಿಯಟ್ ಸರಕಾರದ ಸ್ವಾಧೀನದಲ್ಲಿದ್ದವು. ಅವುಗಳನ್ನು ಈಗ ಮಾರುವರು. ಹೊಲೆಂಡಿನ ಒಂದು ಕಂಪೆನಿಯವರು ಇವುಗಳಿಗೆ ಬೆಲೆಕಟ್ಟುವುದಕ್ಕಾಗಿ ರಾಜಧಾನಿಯಾದ ಮೊಸ್ಕೊ ಪಟ್ಟಣಕ್ಕೆ ಬಂದಿರುವರು. ಸೋವಿಯಟ್ ಸರಕಾರದ ಭಂಡಾರದಲ್ಲಿ ಹಣವಿಲ್ಲದುದೇ ಇದಕ್ಕೆ ಕಾರಣವಂತೆ!

— ಫಿಜಿ ದ್ವೀಪಗಳಲ್ಲಿ ಕೆಲವು ವರುಷಗಳ ಹಿಂದೆ ಕಬ್ಬಿನ ಬೆಳೆಯನ್ನು ಇಲಿಗಳು ಹಾಳುಮಾಡುತ್ತಿದ್ದವಂತೆ. ಅವುಗಳನ್ನು ನಾಶಮಾಡುವುದಕ್ಕಾಗಿ ಇಂಡಿಯದಿಂದ ಮುಂಗುಸಿಯನ್ನು ಕೊಂಡುಹೋದರಂತೆ. ಈ ಪ್ರಾಣಿಗಳು ಇಲಿಗಳ ಸಂತತಿಯನ್ನು ನಾಶಮಾಡಿ ಕಡೆಗೆ ಆ ದ್ವೀಪದ ಎಲ್ಲಾ ಪಕ್ಷಿಗಳನ್ನು ನಾಶಮಾಡಿದವಂತೆ. ಪಕ್ಷಿಗಳು ನಾಶವಾದ್ದರಿಂದ ಪತಂಗ ಮತ್ತು ಇತರ ಹುಳುಗಳ ಬಾಧೆಯು ಹೆಚ್ಚಾಗಿ ಅವುಗಳು ತೆಂಗಿನ ಮರಗಳನ್ನು ನಾಶಮಾಡಲಾರಂಭಿಸಿದವಂತೆ. ಅದಕ್ಕಾಗಿ ಹುಳುಗಳನ್ನು ಹಿಡಿದು ತಿನ್ನುವ ಪಕ್ಷಿಗಳನ್ನು ಒಸ್ಟ್ರೇಲಿಯಾ ಖಂಡದಿಂದ ತರಿಸಬೇಕೆಂದು ಅಲ್ಲಿಯ ಸರಕಾರಕ್ಕೆ ಬರೆದರಂತೆ. ಆದರೆ ಆ ಖಂಡದಲ್ಲಿ ಹುಳುತಿನ್ನುವ ಪಕ್ಷಿಗಳೇ ಇಲ್ಲವಂತೆ! ಆದುದರಿಂದ ಈ ಇಂಡಿಯದಿಂದ ಹುಳ ತಿನ್ನುವ ಪಕ್ಷಿಗಳನ್ನು ಫಿಜಿದ್ವೀಪಗಳಿಗೆ ಕೊಂಡ್ಯೊಯ್ಯೊಗುವುದಕ್ಕೆ ಮಿ| ವಾರ್ಡ್ ಎಂಬವರು ಇಲ್ಲಿಕ್ಕೆ ಬಂದು ಕೆಲವು ಜಾತಿಯ ಪಕ್ಷಿಗಳನ್ನು ಕಳುಹಿಸಿದರಂತೆ. ಈಗ ಮದರಾಸಿಗೆ ಬಂದಿರುವರಂತೆ!

— ಕಳೆದವಾರದಲ್ಲಿ ಹೊಲೆಂಡಿನಲ್ಲಿ ಬಂದ ನೆರೆಯು ಕಳೆದ ತಾ. ೧೧ಕ್ಕೆ ಇಳಿಯಿತು. ನೀರು ನಿಂತಿರುವ ಎಲ್ಲಾ ಸ್ಥಳಗಳಲ್ಲಿ ನೀರು ಸಂಪೂರ್ಣವಾಗಿ ಇಳಿದು ಹೋಗಿಯದೆ. ಅಲ್ಲಿಯ ಎಲ್ಲಾ ನದಿಗಳಲ್ಲಿ ನೀರು ಸಮಾಧಾನ ಸ್ಥಿತಿಯಲ್ಲಿದೆ. ಅನೇಕ ಮನೆಗಳು ಸಂಪೂರ್ಣವಾಗಿ ನಾಶ ಹೊಂದಿವೆ. ಅಲ್ಲಿ ಕೂಲಿಯೋರಗಳು ನೆರೆಯ ಸಂಬಂಧ ಕೆಲಸ ಇಲ್ಲದೆ ಇದ್ದರೂ ಕೂಡ ಅವರ ಕೂಲಿಯನ್ನು ಕೊಟ್ಟಿರುವರು. ನೆರೆಯಲ್ಲಿ ನಷ್ಟ ಹೊಂದಿದವರಿಗೆ ತಕ್ಕ ಸಹಾಯವನ್ನು ಮಾಡುವಂತೆ ಅಲ್ಲಿಯ ರಾಣಿಯವರು ಅಧಿಕ ಪ್ರಯತ್ನಪಡುತ್ತಿದ್ದಾರೆ.

— ಲಂಡನಿನಲ್ಲಿ ಆಸ್ಪತ್ರೆಗಳಿಗೆ ವಾಯರ್‌ಲೆಸ್ ಟೆಲಿಫೋನುಗಳನ್ನು ಇಡುವರೆ ನಿಶ್ಚಯಿಸಿರುವರು.

— ಲಂಡನಿನಲ್ಲಿ ತೆಮ್ಸ್ ನದಿಯಲ್ಲಿ ಮಳೆಯ ಸಂಬಂಧ ಬಂದ ನೆರೆಯು ಕಳೆದ ತಾ. ೧೧ಕ್ಕೆ ಸಂಪೂರ್ಣವಾಗಿ ಇಳಿದಿದೆ.

— ಮೆಕ್ಸಿಕೊ ಪಟ್ಟಣದ ಮತ್ತು ಗೌಡಲ್‌ಜರಾ ಈ ರೈಲ್ವೆ ಸ್ಟೇಶನುಗಳ ನಡುವೆ ೨೦ ಮಂದಿ ದರೋಡೆಕಾರರು ಒಂದು ಟ್ರೈನಿನೊಳಗೆ ಹೊಕ್ಕಿ ಅದರಲ್ಲಿರುವ ಜನರಿಗೆಲ್ಲಾ ಪಿಸ್ತೂಲಿನಿಂದಲೂ ಚೂರಿಯಿಂದಲೂ ಜಖಂಪಡಿಸಿ ಕೊಂದುಹಾಕಿರುವರು. ಜನರ ಪೈಕಿ ೭ ಜನರು ಮಾತ್ರ ಬದುಕಿರುವರು. ಬದುಕಿದವರಿಗೆ ಚೂರಿಯ ಬಲವಾದ ಗಾಯಗಳಾಗಿವೆ. ಈ ಎಲ್ಲಾ ಅಪಕೃತ್ಯಗಳು ನಿರವೇರಿದ ತರುವಾಯ ಈ ದರೋಡೆಕಾರರು ಎಲ್ಲಾ ಟ್ರೈನ್ ಗಾಡಿಗೆ ಗುಂಡು ಹೊಡೆದು ಗಾಡಿಗಳಿಗೆ ಬೆಂಕಿ ತಗಲಿಸಿ ತಂತಿಕರಿಗೆಗಳನ್ನು ಕಡಿದು ಹಾಕಿ ಅದೇ ಟ್ರೈನಿಗಿರುವ ಇಂಜನಿನಲ್ಲಿ ಓಡಿಹೋಗಿರುವರು. ಇದರ ಕಾರಣವೇನೆಂದು ಇನ್ನೂ ತಿಳಿದುಬರಲಿಲ್ಲ. ಇವರನ್ನು ಹಿಂಬಾಲಿಸಿ ಸೈನ್ಯವನ್ನು ಕಳಿಸಿರುವರು.

ಒಳದೇಶ ವರ್ತಮಾನ.

— ಇಂಡಿಯಾ ಗವರ್ನಮೆಂಟಿನವರಿಂದ ಇಂಡಿಯಾದಿಂದ ಗಡಿಪಾರು ಮಾಡಲ್ಪಟ್ಟ, 'ಬೊಂಬೆ ಕ್ರೋನಿಕಲ್' ಪತ್ರಿಕೆಯ ಎಡಿಟರರಾದ ಮಿ| ಬಿ. ಜಿ. ಹೊರ್ನಿ ಮೇನರವರು ಇದೇ ತಿಂಗಳ ತಾರೀಖು ೧೧ನೇ ಆದಿತ್ಯವಾರ ಬೆಳಗ್ಗೆ ಗಂಟೆ ೬-೩೦ಕ್ಕೆ ಮದರಾಸು ಎಗ್‌ಮೋರ ಸ್ಟೇಶನಿನಲ್ಲಿ ಬಂದು ಇಳಿದರು.

— ಎಸ್. ಆರ್. ಜಯಕರರು ಮುಂಬಾಯಿ ನ್ಯಾಯವಿಧಾಯಕ ಸಭೆಯ ಮೆಂಬರಿಕೆಗೆ ರಾಜಿನಾಮೆ ಕೊಟ್ಟಿರುವುದರಿಂದ ಅವರ ಬದಲಾಗಿ ಸ್ವರಾಜ್ಯಪಾರ್ಟಿ ಕಡೆಯಿಂದ ಡೊಕ್ಟರ್ ಜಿ. ವಿ. ಮುಖರು ಉಮೇದುವಾರರಾಗಿ ನಿಂತಿರುವರು.

— ಇಂಡಿಯಾ ರೆಡಿಯೊ ಟೆಲಿಗ್ರಾಫ್ ಕಂಪೆನಿಯವರು ಹಿಂದೂ ದೇಶದ ಎಲ್ಲಾ ಭಾಗಗಳಲ್ಲಿಯೂ ರೆಡಿಯೊ ಟೆಲಿಗ್ರಾಫ್ ಸ್ಟೇಶನುಗಳನ್ನು ಕಟ್ಟುವುದಕ್ಕಾಗಿ ಇಂಡಿಯಾ ಸರಕಾರದ ಅಪ್ಪಣೆಯನ್ನು ಪಡೆದಿರುವರು. ಅದಕ್ಕೆ ೧೫ ಲಕ್ಷ ರೂಪಾಯಿ ಖರ್ಚಾಗುವುದು. ಒಂದು ಸ್ಟೇಶನನ್ನು ಮುಂಬಾಯಿಯಲ್ಲಿಯೂ, ಇನ್ನೊಂದನ್ನು ಕಲ್ಕತ್ತದಲ್ಲಿಯೂ ಕಟ್ಟುವರು.

— ರಾವ್ ಬಹದೂರ ಎಲ್. ಬಿ. ಲಾತೆಯವರನ್ನು ಕೊಲ್ಹಾಪುರ ರಾಜ್ಯದ ದಿವಾನರಾಗಿ ನೇಮಿಸಿರುವರು.

— ಮದ್ರಾಸು ಡಿಸ್ಟ್ರಿಕ್ಟಿನ ಸೈನ್ಯದ ಹೆಡ್ ಕ್ವಾರ್ಟರನ್ನು ಬೆಂಗಳೂರಿಗೆ ವೈಯಬೇಕೆಂಬ ಆಲೋಚನೆಯನ್ನು ಸದ್ಯಕ್ಕೆ ನಿಲ್ಲಿಸಿರುವರು. ವೈಯುವ ಖರ್ಚು ಹೆಚ್ಚಾಗುತ್ತದಂತೆ.

— ಇದೇ ತಿಂಗಳ ೨೦ನೇ ತಾರೀಕಿಗೆ ಆರಂಭವಾಗುವ ಬಿಹಾರ ನ್ಯಾಯವಿಧಾಯಕ ಸಭೆಯ ಮುಂದೆ, ಫಿಲಿಫ್‌ಡಫ್ ಕಮಿಶನಿನವರ ಶಿಫಾರಸು ಪ್ರಕಾರ ಉರಿಯಾ ಭಾಷೆಯನಾಡುವ ಎಲ್ಲಾ ಪ್ರದೇಶಗಳನ್ನು ಒಟ್ಟು ಕೂಡಿಸುವಂತೆ ಇಂಡಿಯಾ ಗವರ್ನಮೆಂಟಿಗೆ ಶಿಫಾರಸು ಮಾಡಬೇಕೆಂದೂ, ಪಾಟ್ನಾದಲ್ಲಿ ಆಯುರ್ವೇದಿಕ್ ಮತ್ತು ತಿಬ್ಬಿ ಕೋಲೇಜುಗಳನ್ನು ತೆರೆಯಬೇಕೆಂದೂ, ಉರಿಯಾ ದೇಶದಲ್ಲಿ ನೆರೆಯಿಂದ ಕಷ್ಟಪಟ್ಟ ರೈತರಿಗೂ ವರ್ತಕರಿಗೂ ಸಹಾಯಮಾಡುವುದಕ್ಕಾಗಿ ಸರಕಾರವು ೨ ಲಕ್ಷ ರೂಪಾಯಿಗಳನ್ನು ಒದಗಿಸಿಕೊಡಬೇಕೆಂದೂ ಠರಾವುಗಳು ಬರುವವು.

— ಇಂಡಿಯಾದಲ್ಲಿ ಮಿಲಿಟರಿ ಕೋಲೇಜುಗಳನ್ನು ಇಡಬೇಕೋ ಎಂಬುದರ ವಿಷಯ ತನ್ನಿಗೆ ಬಂದಿರುವ ಸ್ಕೀನ ಕಮಿಟಿಯವರ ಮುಂದೆ ಮಿ| ಸಿ. ವಿ. ಎಸ್. ನರಸಿಂಹರಾಜು ಎಮ್. ಎಲ್. ಸಿ. ಯವರು ಹಿಂದೂ ದೇಶದ ಪ್ರತಿ ಒಂದು ಸಂಸ್ಥಾನದಲ್ಲಿಯೂ ಡೆರಾಡೂನ್ ಕೋಲೇಜಿನ ನಮೂನೆಯ ಮಿಲಿಟರಿಕೋಲೇಜುಗಳನ್ನು ಇಡಬೇಕೆಂದೂ, ಸೈನ್ಯಕ್ಕೆ ಯೋಗ್ಯರಲ್ಲವೆಂದು ಕಂಡುಬಂದವರನ್ನು ಪೋಲೀಸ್ ಫೋರ್ಸ್ ಅಥವಾ ಅರಣ್ಯಗಳಿಗೆ ನೇಮಿಸಬೇಕೆಂದೂ, ಇಂಗ್ಲಂಡಿನಲ್ಲಿರುವ ಸೆಂಡ ಹರ್ಸ್ಟ ಕೋಲೆಜಿಗೆ ಯೋಗ್ಯರಾದವರನ್ನು ಕಳುಹಿಸಬೇಕೆಂದೂ, ಈ ಕೋಲೇಜುಗಳನ್ನು ಇಡುವ ಖರ್ಚಿಗೆ ಸ್ವರಾಜ್ಯ ಪಾರ್ಟಿಯವರು ವಿರೋಧಿಸಲಿಕ್ಕಿಲ್ಲವೆಂದೂ, ವಾದಿಸಿದರು. ಕೆಪ್ಟನ್ ರಾಜಾ ಹೊಡ್ ಜಂಗರು ಒಂದೊಂದು ಜಾತಿಯ ಸೈನ್ಯವನ್ನು ಪ್ರತ್ಯೇಕ ಮಾಡಬೇಕೆಂದೂ ಆಯಾ ಜಾತಿಯ ಸೈನ್ಯಕ್ಕೆ ಆಯಾ ಜಾತಿಯ ಸೇನಾಧಿಪತಿಯನ್ನೇ ನೇಮಿಸಬೇಕೆಂದೂ, ಈ ರೀತಿ ಮಾಡಿದರೆ ಸೈನ್ಯವು ಉನ್ನತ ಸ್ಥಿತಿಗೆ ಬರುವದೆಂದೂ ವಿವರಿಸಿ ಹೇಳಿದರು.

— ಇಂಡಿಯದ ಎಲ್ಲಾ ಸಂಸ್ಥಾನಗಳ ನ್ಯಾಯವಿಧಾಯಕ-ಸಭೆಯ ಅಧ್ಯಕ್ಷರ ಮತ್ತು ಎಸೆಂಬ್ಲಿಯ ಅಧ್ಯಕ್ಷರ ಸಭೆಯ ಕೆಲಸವು ಮುಗಿದು ಅವರವರ ಸಂಸ್ಥಾನಕ್ಕೆ ತೆರಳಿದರು.

— ಮಧುರೆಯ ಮೀನಾಕ್ಷಿದೇವಸ್ಥಾನದ ಒಂದು ಕಂಬದಲ್ಲಿ ಕೆತ್ತಿ ಬಿಡಿಸಿದ ಅಗ್ನಿ ವೀರಭದ್ರನ ಪ್ರತಿಮೆಯ ಎರಡೂ ಕೈಗಳನ್ನು ತುಂಡುಮಾಡಿ ಬಿಸಾಡಿರುವರು. ಘಾತಕಿಗಳು ಯಾರೆಂದು ಪೋಲಿಸಿನವರು ತನಿಖೆ ನಡಿಸುತ್ತಿರುವರು.

— ಮಿ| ಎಮ್. ಪಿ. ನಾರಾಯಣ ಮೆನೋನರನ್ನು ಕಳೆದ ಮಾಪಿಳ್ಳೆಯರ ದಂಗೆಯ ಸಮಯ ಸೆರೆಯಲ್ಲಿಟ್ಟಿದ್ದರು. ಇವರನ್ನು ಸೆರೆಯಿಂದ ಬಿಟ್ಟುಬಿಡಬೇಕೆಂದು ಮಲಬಾರಿನ ವಲವನಾಡು ತಾಲೂಕುಬೋರ್ಡ ಪ್ರೆಸಿಡೆಂಟರಾದ ರಾವ್‌ಬಹದೂರ ನಾರಾಯಣ ನಂಬೂದಿರಿಪಾದರವರೂ ಇನ್ನು ತಾಲೂಕುಬೋರ್ಡಿನ ೧೫ ಮಂದಿ ಮೆಂಬರರೂ ಮದರಾಸು ಸರಕಾರಕ್ಕೆ ಮನವಿಮಾಡಿರುವರು.

— ರಾಮೇಶ್ವರದಿಂದ ತಿರುಪತಿಗೂ, ತಿರುಪತಿಯಿಂದ ರಾಮೇಶ್ವರಕ್ಕೂ ಪೆಟ್ಟಿಗೆ ಪ್ರಯಾಣಕ್ಕಾಗಿ ಒಂದು ರೈಲು ಟ್ರೈನನ್ನು ಬಿಡಬೇಕೆಂದು ಸೌತ ಇಂಡಿಯನ್ ರೈಲ್ವೆ ಕಂಪೆನಿಯ ಎಡವಿಸರಿ ಕಮಿಟಿಮೆಂಬರರಾದ ಟಿ. ಎಸ್. ಕಾಳಿದಾಸರು ಕಂಪೆನಿಗೆ ತಿಳಿಸಿರುವರು.

— ಪಂಜಾಬಿನಿಂದ ರೈಲುಗಾಡಿಯು ಕಲ್ಕತ್ತಕ್ಕೆ ಬರುವಾಗ ದಾರಿಯಲ್ಲಿ ಯಾರೊ ಹಿಂದು ಹಂಡ್ರೆಡ್‌ವೇಟ ಭಾರವಿರುವ ಬಂಡೆಕಲ್ಲನ್ನು ಇಟ್ಟಿದ್ದರಂತೆ. ರಾತ್ರೆ ಕತ್ತಲೆಯಲ್ಲಿ ಗಾಡಿಯು ಬರುವಾಗ ಎಂಜಿನಿನ ಕೌಕೆಚರಿಗೆ ಕಲ್ಲು ತಾಗಿತು. ಆದರೆ ಗಾಡಿಗೆ ಅಪಾಯವಾಗಲಿಲ್ಲ. ಇಲ್ಲಿ ರೈಲುಮಾರ್ಗವು ೪೦ ಅಡಿ ಎತ್ತರವಾಗಿತ್ತು. ಗಾಡಿಯು ಹಳ್ಳಿಯಿಂದ ತಪ್ಪಿದ್ದರೆ ಅನಾಹುತವಾಗುತ್ತಿತ್ತು.

— ಜಿ. ಐ. ಪಿ. ರೈಲುವೆ ಕಂಪೆನಿಯವರು ಮೂರನೆ ಕ್ಲಾಸಿನ ಪ್ರಯಾಣಿಕರ ದರವನ್ನು ಬರುವ ಎಪ್ರಿಲ್ ತಿಂಗಳಿನಿಂದ ತಗ್ಗಿಸುವರು. ಮುಂಬಾಯಿಯಿಂದ ಅಲಹಾಬಾದಿಗೆ ಈಗ ರೂ. ೧೯-೬-೬ ಇರುವುದು. ಇನ್ನು ಮುಂದೆ ರೂ. ೧೪-೬ ಆಗುವುದು. ಈ ಲೆಕ್ಕದಲ್ಲಿ ಕಂಪೆನಿಯವರಿಗೆ ವರ್ಷಕ್ಕೆ ೨೧ ಲಕ್ಷ ರೂಪಾಯಿ ನಷ್ಟವಾಗುವುದು. ಆದರೆ ದರವು ಕಡಿಮೆಯಾದ್ದರಿಂದ ಪ್ರಯಾಣಿಕರ ಸಂಖ್ಯೆಯು ಹೆಚ್ಚುವುದರಿಂದನಷ್ಟವು ಭರ್ತಿಯಾಗಬಹುದಂತೆ.

— ಹತ್ತಿಯ ವ್ಯಾಪಾರವೂ ವಸ್ತ್ರದ ವ್ಯಾಪಾರವೂ ಬಿದ್ದುಹೋದ್ದರಿಂದ ಮುಂಬಾಯಿಯ ಕೆಲವು ಗಿರಣಿಗಳನ್ನು ಮುಚ್ಚಿರುವರು. ಎಲ್ಲಾ ಗಿರಣಿಗಳನ್ನು ಮುಚ್ಚುವುದರಲ್ಲಿದ್ದಾರಂತೆ.

— ತಾತಾ ಕಂಪೆನಿಯವರು ತಮ್ಮ ಕಂಪೆನಿಯವರು ಕೆಲಸಕ್ಕಾಗಿ ೨ ಕೋಟಿ ರೂಪಾಯಿ ಸಾಲತೆಗೆದುಕೊಂಡಿರುವರು. ಮಿ| ಪಿ. ಬಿ. ದಿನ್‌ಶೊ ಮತ್ತು ಟಿಲ್‌ದಿನ್ ಸ್ಮಿತ್ ಕಂಪೆನಿಯವರು ಈ ಸಾಲವನ್ನು ಕೊಟ್ಟಿರುವರು.

— ಬಿಹಾರ ಸಂಸ್ಥಾನದ ಪಾಟ್ನಾದಲ್ಲಿ ಒಂದು ವೆಟರಿನೆರಿಕೊಲೇಜನ್ನೂ, ಮ್ಯೂಜಿಯಮನ್ನೂ ತೆರೆಯುವರಂತೆ.

— ಹೆಜಾಜಿಗೆ ಹೋಗಲು ಟರ್ಕಿಸ್ಥಾನದಿಂದ ಅನೇಕ ಮಂದಿ ಮುಸಲ್ಮಾನ ಯಾತ್ರಿಕರು ಮುಂಬಾಯಿಗೆ ಬಂದು ತಲುಪಿರುವರು.

— ಅಸ್ಸಾಮು ಸಂಸ್ಥಾನದ ಸ್ಯಾಲೆಟ್ ಜಿಲ್ಲೆಯನ್ನು ಬಂಗಾಳಕ್ಕೆ ಬಿಟ್ಟುಕೊಟ್ಟರು.

— ಗ್ವಾಲಿಯರ ಮಹಾರಾಣಿಯವರು ಸ್ವರ್ಗಸ್ಥರಾದ ತನ್ನ ಗಂಡನಿಗೆ ಫ್ರೆಂಚರು ಮರಣಕಾಲದಲ್ಲಿ ಮಾಡಿದ ಉಪಕಾರಕ್ಕಾಗಿ ಒಂದು ಲಕ್ಷ ಫ್ರೆಂಕನ್ನು ಫ್ರೆಂಚ್ ಸರಕಾರಕ್ಕೆ ಧರ್ಮಫಂಡಿಗಾಗಿ ದಾನಮಾಡಿರುವರು.

— ಮಚಲೀ ಪಟ್ಟಣದಲ್ಲಿ ಸಮಗ್ರ ಹಿಂದೂದೇಶದ ಖಾದಿ ಬೋರ್ಡಿನವರು ನಡಿಸುವ ವಸ್ತ್ರಕ್ಕೆ ಬಣ್ಣಕೊಟ್ಟು ನಕ್ಷೆಬಿಡಿಸುವ ವಿದ್ಯೆಯನ್ನು ಕಲಿಸುವ ಕಲಾಶಾಲೆಯು ಜನವರಿ ೧ನೇ ತಾರೀಕಿನಿಂದ ಕೆಲಸವನ್ನು ಆರಂಭಿಸಿಯದೆ. ಕಳೆದ ಮೂರು ವರುಷಗಳಲ್ಲಿ ಈ ಶಾಲೆಯ ಉತ್ಕಳ, ಕೇರಳ, ಬಂಗಾಳ, ಬಿಹಾರ, ತಮಿಳುನಾಡು, ಕರ್ನಾಟಕ, ಮುಂಬಾಯಿ, ಮಹಾರಾಷ್ಟ್ರ ಮತ್ತು ಸಿಲೋನಿನಿಂದ ೨೫ ಮಂದಿ ವಿದ್ಯಾರ್ಥಿಗಳು ಕಲಿತು ಹೋಗಿರುವರು. ಅಂಥಾ ಹುಡುಗರು ಕಲಿತುಹೋಗಿ ಇತರ ಕಡೆಗಳಲ್ಲಿ ಈ ಕೆಲಸವನ್ನು ಇತರರಿಗೆ ಕಲಿಸುತ್ತಿರುವರು. ಇಲ್ಲಿ ಆರು ತಿಂಗಳ ವರೆಗೆ ಕಲಿಯಬೇಕಾಗುವುದು ಊಟದ ಖರ್ಚಿಗೆ ತಿಂಗಳಿಗೆ ೧೫ ರೂಪಾಯಿ ಬೇಕಾಗುವುದು. ಇತರ ಖರ್ಚಿಗೆ ಸ್ವಲ್ಪ ಹಣ ಬೇಕಾಗುವುದು. ಕಲಿತು ಹೋಗುವಾಗ ನಕ್ಷೆಯ ಅಚ್ಚುಗಳು ಕೊಡಲ್ಪಡುವವು.

— ಕೊಚ್ಚಿಯ ನಂಬೂದಿರಿ ಯುವಜನ ಸಂಘದವರು ಜನವರಿ ೧ನೇ ತಾರೀಕಿಗೆ ಚೇವಾರದ ಭಗವತಿ ದೇವಸ್ಥಾನದ ಮುಂದುಗಡೆ ಹಾಕಿದ ಸಭಾ ಮಂಟಪದಲ್ಲಿ ಸಭೆ ಸೇರಿದರು. ಕೊಡನಾಥ ನಾರಾಯಣ ನಂಬೂದಿರಿಪಾದರು ಅಧ್ಯಕ್ಷರಾಗಿದ್ದರು. ಕೊಚ್ಚಿ ಸರಕಾರದವರು ನಂಬೂದಿರಿ ಮತ ಸಮ್ಮಂಧವಾದ ಮಸವಿದಾ ಆಕ್ಟನ್ನು ಬೇಗನೇ ಜಾರಿಗೆ ತರಬೇಕೆಂದೂ, ನಂಬೂದಿರಿ ಹಿರೆ ಮೆಂಬರರು ಆಸ್ತಿಯ ಹಣವನ್ನು ತಮ್ಮ ಖುಶಿಬಂದಂತೆ ಖರ್ಚುಮಾಡಬಿಡಕೂಡದೆಂದೂ, ಇನ್ನು ಮುಂದೆ ನಂಬೂದಿರಿ ಕಿರೀ ಮೆಂಬರರು ಇತರ ಜಾತಿಯ ಹೆಂಗಸರನ್ನು ಮದುವೆಮಾಡಿಕೊಳ್ಳಕೂಡದೆಂದೂ, ಒಬ್ಬ ನಂಬೂದಿರಿಯು ಒಂದು ಹೆಂಡತಿ ಜೀವದಿಂದ ಮನೆಯಲ್ಲಿ ಇರುವಾಗಲೇ ಇನ್ನೊಂದು ಮದುವೆಯಾಗಕೂಡದೆಂದೂ, ವೇದಶಾಸ್ತ್ರಗಳನ್ನು ಹೊಸ ರೀತಿಯಲ್ಲಿ ಕಲಿಸುವ ಏರ್ಪಾಡು ಮಾಡಬೇಕೆಂದೂ ನಂಬೂದಿರಿ ಹುಡುಗಿಯರಿಗೆ ಈಗಿನ ನಮೂನೆಯ ವಿದ್ಯಾಭ್ಯಾಸವನ್ನು ಕೊಡಬೇಕೆಂದೂ ಠರಾವುಗಳು ಪಾಸಾದವು.

ದಕ್ಷಿಣ ಕನ್ನಡ.

ಪಿಲಿಕೋಡು:— ಈ ಗ್ರಾಮದಲ್ಲಿರುವ ಪಂಚಮ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ಕಳೆದ ದಿಸಂಬರ ತಿಂಗಳ ೩೦ನೇ ತಾರೀಕಿಗೆ ಮಿ| ಕೆ. ಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಡಿಸ್ಟ್ರಿಕ್ಟ ಲೇಬರ ಆಫೀಸರರಾದ ಎ. ತಿಮ್ಮಪ್ಪ ಪೂಂಜರವರು ಹಾಜರಿದ್ದರು. ಅದೇ ಸಮಯ ಪಿಲಿಕೋಡು, ಮಣಿಯಾಟ್, ಉದಿನೂರು, ಪದ್ನಾ ಮತ್ತು ಚೆರ್ವತ್ತೂರು ಈ ನಾಲ್ಕು ಗ್ರಾಮಗಳ ಆದಿದ್ರಾವಿಡರ ಸಭೆಯು ಜರಗಿ ಈ ಕೆಳಗಿನ ಠರಾವುಗಳು ಪಾಸಾದವು:— ೧. ಆದಿದ್ರಾವಿಡರ ಶುಭಾಶುಭ ಕಾರ್ಯಗಳ ಸಮಯ ಅನಾವಶ್ಯಕವಾಗಿ ಹೆಚ್ಚು ಹಣ ಖರ್ಚು ಮಾಡಬಾರದಾಗಿಯೂ, ವರದಕ್ಷಿಣೆಯು ೨೫ ಸೇರು ಭತ್ತಕ್ಕಿಂತಲೂ ಹೆಚ್ಚಿಗಿರಕೂಡದೆಂದೂ, ಮದುವೆಯ ಸಮಯದಲ್ಲಿಯಾಗಲೀ ಇತರ ಯಾವುದೊಂದು ಶುಭಾಶುಭ ಕಾರ್ಯಗಳ ಸಮಯದಲ್ಲಿಯೂ ಸುರಾಪಾನವನ್ನು ಮಾಡಬಾರದಾಗಿಯೂ, 'ಕಾಯಮ್' ಎಂಬ ಪೂಜೆಯನ್ನು ಮನೆಮನೆಯಲ್ಲಿ ಮಾಡುವುದನ್ನು ನಿಲ್ಲಿಸಿ ಗ್ರಾಮದವರೆಲ್ಲರೂ ಸೇರಿ ಗ್ರಾಮಕ್ಕೊಂದು 'ಕಾಯಂ' ಪೂಜೆ ಮಾಡಿದರೆ ಸಾಕೆಂದೂ, ಮೇಲಿನ ಗ್ರಾಮಗಳಲ್ಲಿ ಪ್ರತಿ ಒಂದರಲ್ಲಿ ಕಾಯಮ್‌ನ ಒಂದೊಂದು ದೇವಸ್ಥಾನ ಕಟ್ಟಿಸಲಿಕ್ಕೆ ಒಂದೊಂದು ಸ್ಥಳವನ್ನು ಕೊಡುವುದಕ್ಕೆ ಜಿಲ್ಲಾ ಕಲೆಕ್ಟರರನ್ನು ಕೇಳಿಕೊಳ್ಳಬೇಕೆಂದೂ, ಒಂದೊಂದು ಗ್ರಾಮದಲ್ಲಿ ಒಂದೊಂದು ಸ್ಮಶಾನ ಸ್ಥಳವನ್ನು ಕೊಡಬೇಕೆಂದೂ ನಾಡಕಾವು ಮತ್ತು ದಕ್ಷಿಣ ತ್ರಿಕರಪುರ ಸಂತೆಗಳಲ್ಲಿ ಹೋಗಿ ವ್ಯಾಪಾರವನ್ನು ಸ್ವತಃ ಕೊಳ್ಳಲಿಕ್ಕೆ ಬಿಡುವಂತೆ ಕಾಸರಗೋಡು ತಾಲೂಕು ಬೋರ್ಡ ಪ್ರೆಸಿಡೆಂಟರನ್ನು ಕೇಳಿಕೊಳ್ಳಬೇಕೆಂದೂ, ಎಲ್ಲಾ ಸರಕಾರಿ ಮಾರ್ಗಗಳಲ್ಲಿ ಆದಿದ್ರಾವಿಡರಿಗೆ ತಿರುಗಾಡಲಿಕ್ಕೆ ಬಿಡಬೇಕೆಂದೂ, ಠರಾವುಗಳು ಪಾಸಾದವು.

ಬಂಟವಾಳ:— ಇಲ್ಲಿಯ ಆಸ್ಪತ್ರೆಯ ಹಿತ್ತಲಿನಿಂದ ಬಂಗ್ಲೆಗುಡ್ಡೆಗೆ ಹೋಗಲಿಕ್ಕೆ ಮಾರ್ಗವು ಇನ್ನೂ ಮಾಡಿಸಿದ್ದು ಕಂಡುಬರುವುದಿಲ್ಲ. ಮಳೆಗಾಲವು ಹತ್ತಿರ ಬಂತು.

ಇಲ್ಲಿಯ ಕಂಪೌಂಡರಿಗೆ ಮನೆ ಇಲ್ಲದೆ ಬಹಳ ಕಷ್ಟಪಡುತ್ತಿರುವರು. ತಾಲೂಕು ಬೋರ್ಡಿನವರು ಆಸ್ಪತ್ರೆಯ ಹತ್ತಿರವೇ ಒಂದು ಮನೆಯನ್ನು ಕಟ್ಟಿಸಿಕೊಡುವುದು ಅತಿ ಅಗತ್ಯ.

ತಾಲೂಕು ಬೋರ್ಡಿನವರು ಅಯ್ಯನಾಯ್ಕರ ಓಣಿಯನ್ನು ಮುಚ್ಚುವಂತೆ ಸಂಕಕ್ಕೆ ಸಮೀಪದ ದೇವಸ್ಥಾನದ ಆಡಳಿತದಾರರು ಸಂಕದ ಆಚೆಯಿಂದ ಮಾರ್ಗ ಏರಿಸಿ ದೈವದ ಪಾದೆಗೆ ಮಾರ್ಗ ಕೂಡಿಸುತ್ತೇವೆಂದು ಕೊಟ್ಟ ಮಾತನ್ನು ಉರ್ಜಿತ ಪಡಿಸಿದ್ದು ಕಂಡುಬರುವುದಿಲ್ಲ.

ಇಲ್ಲಿಯ ಎಸ್. ವಿ. ಎಸ್. ಟೆಂಪಲ್ ಸೆಕೆಂಡರಿ ಶಾಲೆಯನ್ನು ಕೆನರಾ ಹ್ಯಾಸ್ಕೂಲಿಗೆ ಎಫಿಲಿಯೇಟೆಡ್ ಮಾಡಿ ಅಲ್ಲಿಂದ ಒಬ್ಬ ಸುಪರ್‌ವ್ಯಾಜಿಂಗ್ ಹೆಡ್‌ಮಾಸ್ತರರನ್ನು ತಿಂಗಳಿಗೊಮ್ಮೆ ಬರುವಂತೆ ಮಾಡಿ ಅನಾವಶ್ಯಕ ೧೦-೧೫ ರೂಪಾಯಿ ಖರ್ಚುಮಾಡುವುದರ ಬದಲಿಗೆ ಶಾಲೆಗೆ ಒಬ್ಬ ಬಿ. ಎ. ಎಲ್. ಟಿ. ಹೆಡ್‌ಮಾಸ್ತರರನ್ನು ಇಟ್ಟರೆ ಎಷ್ಟೋ ಒಳ್ಳೇದಾಗುತ್ತಿತ್ತಲ್ಲವೇ. ಸುಪರ್‌ವ್ಯಾಜಿಂಗ್ ಹೆಡ್‌ಮಾಸ್ತರರನ್ನು ನೇಮಿಸುವ ಕ್ರಮ ಈ ಜಿಲ್ಲೆಯ ಯಾವ ಶಾಲೆಯಲ್ಲಿಯೂ ಇರುವುದಿಲ್ಲ. ಬಿ. ಎ. ಎಲ್. ಟಿ. ಯವರನ್ನೂ, ಒಬ್ಬ ಬಿ. ಎ. ಪಾಸಾದವರನ್ನೂ ಇಟ್ಟರೆ ಈ ಶಾಲೆಯಲ್ಲಿ ಫೋರ್ತ ಫೋರ್ಮ ತೆರೆಯಬಹುದು. ದೇವಸ್ಥಾನದ ಹಣವು ಇತರ ಎಲ್ಲಾ ಕ್ಲಾಸುಗಳಿಗೆ ಎಷ್ಟೋ ವ್ಯಯವಾಗುತ್ತದೆ. ಇದಕ್ಕೆ ಖರ್ಚುಮಾಡಿದರೆ ಒಳ್ಳೇದಲ್ಲವೆ.

ಇಲ್ಲಿಯ ಎರಡೂ ಪರಸ್ಪರ ಸಂಘಗಳ ರಾಟಾಣುಗಳನ್ನು ಇನ್ನೂ ದುರುಸ್ತಿಪಡಿಸಿ ಉರಿಸಲಾರಂಭಿಸಿದ್ದು ಕಂಡುಬರುವುದಿಲ್ಲ. ಪೇಟೆಗೆ ೬ ರೂಪಾಯಿ ಸಂಬಳವಂತೆ, ತೋಟಿಗೆ ಸಹ ೧೦ ರೂ. ಸಂಬಳವಿದೆಯಂತೆ ಮಣ್ಣು ಹೊರುವವರಿಗೆ ತಿಂಗಳಿಗೆ ೧೫ ರೂ. ಸಂಪಾದನೆ ಇದೆ ಗುಮಾಸ್ತರಿಗೆ ೧೦ ರೂಪಾಯಿ ಸಂಬಳವಂತೆ. ಮುನಾಫೆ ಈಗ ಉಳಿಯುವುದಿಲ್ಲವೇ. ಸಂಘದ ಇಬ್ಬರು ಪಂಚಾಯಿತ ಮೆಂಬರರು ಹಣಕಟ್ಟದೆ ಇದ್ದುದಕ್ಕಾಗಿ ಅವರ ಪಂಚಾಯಿತ ಮೆಂಬರಿಗೆ ರದ್ದಾಗಿ ಎಷ್ಟೋ ಸಮಯವಾಯಿತು. ಮೀಟಿಂಗು ಮಾಡಿ ಇಬ್ಬರು ಪಂಚಾಯಿತ ಮೆಂಬರರನ್ನು ಇನ್ನಾದರೂ ಚುನಾಯಿಸುವದು ನ್ಯಾಯಸಮ್ಮತವಾದುದಲ್ಲವೇ.

ಇಲ್ಲಿಯೂ ಆರೋಗ್ಯ ವಾರ (ಹೆಲ್ತ್‌ವೀಕ್)ವನ್ನು ಬರುವ ಫೆಬ್ರವರಿ ತಿಂಗಳ ಮೊದಲನೇ ವಾರದಲ್ಲಿ ಜರಗಿಸುವದೆಂದು ಸಭೆಸೇರಿ ನಿಶ್ಚಯಿಸಿದರು. ಇಲ್ಲಿಯ ಡಿ. ತಹಶೀಲದಾರರು ಸಭೆಯ ಅಧ್ಯಕ್ಷರಾಗಿದ್ದರು. ಹೆಲ್ತ ಇನ್ಸಪೆಕ್ಟರರು ಆರೋಗ್ಯ ವಾರದ ವಿಷಯ ಇಂಗ್ಲಿಷಿನಲ್ಲಿ ವಿವರಿಸಿ ಹೇಳಿದರು. ಒಂದು ಕಮಿಟಿಯನ್ನು ನೇಮಿಸಿದರು. ಬಂಟವಾಳ ಇಗರ್ಜಿಯ ವಿಕಾರ ಒಫ್ ಓರಾರವರನ್ನು ಅಧ್ಯಕ್ಷರಾಗಿ ಆರಿಸಿರುವರು. ಇಲ್ಲಿಯ ಜಮೀನುದಾರರೂ, ಗ್ರಾಮ ಪಂಚಾಯಿತು ಕೋರ್ಟಿನ ಅಧ್ಯಕ್ಷರೂ, ಪರಸ್ಪರ ಸಹಾಯಕ ಸಂಘದ ಪಂಚಾಯಿತದಾರರೂ ಆದ ಎಸ್. ಗಣಪತಿರಾಯರನ್ನು ಖಜಾನಜಿಯವರಾಗಿಯೂ ಚುನಾಯಿಸಿರುವರು. ತಾಲೂಕು ಬೋರ್ಡ ಮೆಂಬರರಾದ ಬಿ. ಎಲ್. ಅಮದ ಸಾಹೇಬರು ಸೆಕ್ರಿಟರಿಯವರಾಗಿರುವರು. ಕೊಡಿಯಾಲ ಅನಂತರಾಯರೂ ಕಮಿಟಿ ಮೆಂಬರರಾಗಿರುವರು. ಇವರು ಸಬ್ ಕಮಿಟಿಯನ್ನು ನೇಮಿಸಿ ಕಾರ್ಯಕ್ರಮವನ್ನು ಬೇಗನೆ ಕೈಕೊಳ್ಳುವರು.

ಈ ಊರಿನಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಕಳವುಗಳು ಆಗುವುದರಿಂದ ಪೋಲಿಸಿನವರು ಇದರ ವಿಷಯ ನಿಗಾಕೊಡುವದು ಅಗತ್ಯ.

ಕುಂಬಳೆ:— ಇಲ್ಲಿಯ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ವರ್ಷಾವಧಿ ಜಾತ್ರೆಯು ಇದೇ ತಿಂಗಳ ಮಕರ ಸಂಕ್ರಮಣದ ದಿವಸ ಧ್ವಜಾರೋಹಣವಾಗಿ ಪ್ರಾರಂಭವಾಗುವದು.

ಈ ಮೊದಲು ಕಾಸರಗೋಡು ತಾಲೂಕು ಬೋರ್ಡ ಮೆಂಬರರಾದ ರಾ| ಭವಾನಿ ಶಂಕರರಾವ ಇವರು ತಮ್ಮ ಮೆಂಬರಿಕೆ ಸ್ಥಾನಕ್ಕೆ ರಾಜಿ ಕೊಟ್ಟಿರುವುದರಿಂದ ಸದರಿ ಮೆಂಬರಿಕೆ ಸ್ಥಾನಕ್ಕೆ ಕುಂಬಳೆ ಪಂಚಾಯಿತ್ ಕೋರ್ಟ ಮೆಂಬರರಾದ ರಾ| ಎಂ. ಎ. ಇದ್ದಿನ್ ಕುಂಞಯವರು ಉಮೇದ್ವಾರರಾಗಿ ನಿಲ್ಲುತ್ತಾರೆ ಎಂದು ತಿಳಿದುಬರುತ್ತದೆ.

ಕಾಸರಗೋಡು:— ಇಲ್ಲಿ ನುಳ್ಳಿಪಾಡಿ ಶಾಲೆಯಲ್ಲಿ ಕಾಸರಗೋಡು ತಾಲೂಕು ಬೋರ್ಡ ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ಕ್ರಿಸ್ತಮಸ್ ಲೆಕ್ಚರುಗಳು ಕಾಸರಗೋಡು ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗೆ, ರಾ| ಉಕ್ಕಾಲ ಮಂಗೇಶರಾಯರು, ರಾ| ರಾಮಚಂದ್ರ ಪೈಗಳವರು, ರಾ| ಯಂ. ಬಾಬುರವರಿಂದ ಕೊಡಲ್ಪಟ್ಟವು. ಈ ಮೂವರಿಗೆ ತಾಲೂಕು ಬೋರ್ಡಿನವರ ಲೆಕ್ಕಕ್ಕೆ ಖರ್ಚು ಕೊಡಲ್ಪಟ್ಟಿತಂತೆ. ಬಡ ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗೆ ಅವರವರ ಸ್ವಂತ ಜೇಬಿನಿಂದ ೪-೫ ರೂಪಾಯಿ ಖರ್ಚಂತೆ. ಟ್ರೈನಿಂಗ್ ಶಾಲಾ ಉಪಾಧ್ಯಾಯರಿಗೆ ಹೆಚ್ಚು ಸಂಬಳವಿದ್ದರೂ ಅವರಿಗೆ ಭತ್ತೆ ಅಗತ್ಯವಿದೆಯಂತೆ. ೧೫ ರೂಪಾಯಿ ಸಂಬಳದ ಉಪಾಧ್ಯಾಯರಿಗೆ ಭತ್ತೆ ಕೊಡಲಿಕ್ಕೆ ತಾಲೂಕು ಬೋರ್ಡಿನಲ್ಲಿ ಹಣವಿಲ್ಲವಂತೆ. ನುಳ್ಳಿಪಾಡಿ ಶಾಲೆಯಲ್ಲಿ ಕಾಫಿ ಹೊಟೇಲು ತೆರದ ಬೋರ್ಡ ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗೆ, ಮೀಟಿಂಗಿಗೆ ಬಂದಿದ್ದ ಸುಮಾರು ೩೦೦ ಮಂದಿ ಉಪಾಧ್ಯಾಯರಿಂದ ಸುಮಾರು ಹಣ ಮುನಾಫೆಯಂತೆ.

ಮುಗ್ಗಿಕೋಪ್ಪಕ ಇನ್ನು ಮುಂದೆ ಉಪಾಧ್ಯಾಯರು ಉಪಯೋಗಿಸುವದು ಬೇಡವಂತೆ. ಸಹಕಾರಿಯನ್ನು ಎಲ್ಲಾ ಉಪಾಧ್ಯಾಯರು ತೆಗೆದುಕೊಳ್ಳಬೇಕಂತೆ. ಒಬ್ಬಾರೆ ಟ್ರೈನಿಂಗ್ ಶಾಲೆಯ ಉಪಾಧ್ಯಾಯರು ಮಾಡಿದ ಪ್ರತಿ ಒಂದು ಪುಸ್ತಕ, ಪ್ರತಿ ಒಬ್ಬ ಉಪಾಧ್ಯಾಯರು ತೆಗೆದುಕೊಳ್ಳಬೇಕಂತೆ. ಇತರರು ಮಾಡಿದ ಪುಸ್ತಕ ನೆರೆಯ ಪಾಲಿಗೆ ಬಿಡಬೇಕಂತೆ! ಇದು ಯಾವ ನ್ಯಾಯ?

ಮೂಲ್ಕಿ:— ಮಾಮೂಲು ಮೇರೆಗೆ ನಡೆಯುತಕ್ಕ ಇಲ್ಲಿಯ ಐಕಳಭಾವದ ಕಂಬಳವು ಈ ವರ್ಷ ಇದೇ ಬರುವ ತಾ. ೨೨ನೇ ಬುಧವಾರ ನಡೆಯಲಿಕ್ಕಿರುವುದು.

ರಾಮಕುಂಜ:— ಇಲ್ಲಿಯ ಸಂಸ್ಕೃತ ವಿದ್ಯಾಲಯದ ವಾರ್ಷಿಕ ಮಹಾಸಭೆಯು ಮ| ರಾ| ಇಡ್ಯ ವಾಸುದೇವಯ್ಯ, ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರ ಭಾಷಣವು ಅತಿ ಮನೋಹರವಾಗಿತ್ತು. ಮ| ರಾ|ಗಳಾದ ವಕೀಲ್ ಯು. ಪಿ. ಕೃಷ್ಣಭಟ್, ರಾಮಚಂದ್ರಾಚಾರ್ಯ, ಲಕ್ಷ್ಮೀನಾರಾಯಣ ಪುಣಿಂಚಿತ್ತಾಯ, ನಾರಾಯಣಾಚಾರ್ಯ ಮೊದಲಾದವರೂ ಸಮಯೋಚಿತವಾಗಿ ಭಾಷಣಗಳನ್ನು ಮಾಡಿದರು. ಸಂಸ್ಥೆಯ ಏಳಿಗೆಯ ಕೆಲವು ನಿಯಮಗಳನ್ನು ಮಂಜೂರು ಮಾಡಿದರು. ಸಭೆಯ ಅಧ್ಯಕ್ಷ ಶ್ರೀಶ ವಾಸುದೇವಯ್ಯನವರೂ, ಶ್ರೀಶ ಪುಣಿಂಚಿತ್ತಾಯರೂ ಸಂಸ್ಥೆಕ್ಕೆ ೧೦೦ ರೂಪಾಯಿಗಳಂತೆ ಸಹಾಯ ಮಾಡಿದರು. ಈಗಿನ ಹೆಡ್ಮಾಸ್ತರ ಮತ್ತು ಸ್ಥಳೀಕ ಮಹಾಶಯರ ಸಹಾಯದಿಂದ ವಾರ್ಷಿಕ ಮಹಾಸಭೆಯು ಸಾಂಗವಾಗಿ ನೆರವೇರಿತು.

ಮಂಗಳೂರು.

ಸ್ಥಾನಿಕ ಪ್ರಜ್ಞಾನ ಪಾರಿತೋಷಕ.

ಇದಕ್ಕೆ ಸಂಬಂಧಪಟ್ಟ ಪ್ರಕಟಣೆಯ ೭ ಮತ್ತು ೮ನೇ ನಿಬಂಧನೆಯ ಮೇರೆಗೆ ೧ ಪದಕವು ಮ॥ ರಾ॥ ಪಟ್ಟೋಜಿ ಶ್ಯಾರಾಶಿವರಾಯರಿಗೆ ಕೊಡಲ್ಪಟ್ಟಿತು. ಇದರ ವಿವರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

'ಕರ್ಣಾಟಕ ಶಿಲ್ಪ ವಿದ್ಯಾಲಯದ ಸಹಾಯಾರ್ಥವಾಗಿ ಕಳೆದ ವಾರ ಮುಷ್ಟಿಫಂಡಿನಿಂದ ರೂ. ೫-೧೪-೫ ಮತ್ತು ೭॥ ಸೇರು ಅಕ್ಕಿ ಜಮಾ ಬಂದಿರುತ್ತದೆ. (ಮುಖ್ಯಾಧ್ಯಾಪಕ.)

ದಕ್ಷಿಣ ಕನ್ನಡ ಜಿಲ್ಲಾ ಇನ್‌ಕಮ್‌ಟೇಕ್ಸ್ ಅಧೀಸರರ ೧೯೨೬ನೇ ಇಸವಿ ಜನವರಿ ತಿಂಗಳ ಸರ್ಕೀಟಿನ ವಿವರ:— ತಾ. ೨೫ ಮಂಗಳೂರಿಂದ ಉಡ್ಪಿಗೆ, ಉಡ್ಪಿಯಲ್ಲಿ ೨೫, ೨೬ ಮತ್ತು ೨೭. ತಾ. ೨೮ ಉಡ್ಪಿಯಿಂದ ಪಡುಬಿದ್ರೆಗೆ, ಪಡುಬಿದ್ರೆಯಲ್ಲಿ ೨೮ ಮತ್ತು ೨೯. ತಾ. ೩೦ ಪಡುಬಿದ್ರೆಯಿಂದ ಮಂಗಳೂರಿಗೆ.

ಬಾರಕೂರಿನ ಪೋಸ್ಟುಮಾಸ್ತರರಾದ ವಿಟ್ಠಲಭಟ್ಟರೆಂಬವರನ್ನು ಫೋರ್ಜರಿಯನ್ನೂ, ಮನಿಓರ್ಡರ್ ಹಣದ ದುರುಪಯೋಗವನ್ನೂ ಮಾಡಿದರೆಂಬ ಆರೋಪದ ಮೇಲೆ ಡಿಸ್ಟ್ರಿಕ್ಟ್ ಸೆಕ್ಷನ್ಸ್ ಜಡ್ಜರಾದ ಕೆ. ಯಸ್. ಮೇನನರು ಕೆಲಸದಿಂದ ತೆಗೆದು ಹಾಕಿರುವರು.

ಪುತ್ತೂರಿನ ಮುನ್ಸೀಫರಾದ ಕೆ. ರಾಮಚಂದ್ರ, ಬಿ. ಎ. ಬಿ. ಎಲ್. ಇವರ ಜನಕರಾದ ಕೆ. ಧರ್ಮಣ್ಣ ಎಂಬವರು ಕಾಲವಶರಾದರು.

ಮಂಗಳೂರು ತಾಲೂಕಿನಲ್ಲಿ ಕರಾಟು ಮತ್ತು ಅಫೀಮಿನ ಅಂಗಡಿಗಳನ್ನು ಇಡಬಾರದೆಂದು ತಾಲೂಕು ಬೋರ್ಡಿನ ಠರಾವು ಪಾಸುಮಾಡಿದರೂ ಕಳೆದ ಎರಡು ವರ್ಷಗಳಲ್ಲಿಯೂ, ಕಲೆಕ್ಟರರೂ, ಸರಕಾರವೂ ಅದನ್ನು ಗಮನಕ್ಕೆ ತರಲಿಲ್ಲ. ಈ ವರ್ಷ ಕಲೆಕ್ಟರರು ಅಂಥ ಅಂಗಡಿಗಳನ್ನಿಂಸುವದಕ್ಕೆ ಅಭಿಪ್ರಾಯ ಕೇಳಿದಾಗ ಬೋರ್ಡಿನವರು ಹಿಂದಿನಂತೆಯೆ ಅಸಮ್ಮತಿಯನ್ನು ಸೂಚಿಸಿ ಠರಾವನ್ನು ಪಾಸುಮಾಡಿದರು.

ಇದೇ ತಿಂಗಳ ತಾ. ೧೮ಕ್ಕೆ ಇಟ್ಟಿದ್ದ ಡಿಸ್ಟ್ರಿಕ್ಟ್ ಬೋರ್ಡಿನ ಮಹಾಸಭೆಯು ಉಡುಪಿ ಪರ್ಯಾಯೋತ್ಸವದ ಕಾರಣದಿಂದ ಇದೇ ತಿಂಗಳ ತಾ. ೨೫ಕ್ಕೆ ಮುಂದಂಸಲ್ಪಟ್ಟಿತು.

South Kanara District Sports Advance Notice.

Uunder the auspices of the Mangalore Y. M. C. A., an open Sports Meet will be held on Saturday the 30th inst. at 2-30 P. M. There will be separate items for Seniors and Juniors as under:—

SENIORS:

1. 100 Yard Race
2. 220 Yard Race
3. Quarter Mile Race
4. Half Mile Run
5. One Mile Run
6. One Mile Relay
7. 120 Yards High Hurdles
8. Sack Race
9. Running High Jump
10. Running Long Jump
11. Throwing the Cricket Ball
12. Putting the 16 lb. Shot

JUNIORS:

1. 50 Yard Race
2. 100 Yard Race
3. Mathematical Race
4. Egg and Spoon Race
5. Half Mile Relay
6. Running High Jump
7. Running Long Jump
8. Hop Step and Jump
9. Throwing the Cricket Ball

All entries must be submitted not later than 6 p. m. on the 27th inst., to the Secretary Y. M. C. A., Mangalore. No entry which is not accompanied with the entrance fee will be accepted.

ಪತ್ರವ್ಯವಹಾರ.

(ಬಾಹ್ಯರಾದ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವದೇ.)

ದ್ರಾವಿಡ ಬ್ರಾಹ್ಮಣರ ಅರನೇ ಪರಿಷತ್ತಿನ ವಿಚಾರ.

[illegible]

ಪರಿಷತ್ತಿನಲ್ಲಿ ಹಾಜರಿದ್ದ ಒಬ್ಬ ದ್ರಾವಿಡ ಬ್ರಾಹ್ಮಣ.

—: ಎಲ್ಲರಲ್ಲಿಯೂ ವಿನಂತಿ. :—

[illegible]

'ಹವ್ಯಕ ಬ್ರಾಹ್ಮಣ.'

ವಿವಿಧ ವಿಷಯಗಳು.

[illegible]

ತಂಜಾವೂರು ಜಿಲ್ಲೆಯ ನಾಗಪಟ್ಟಣದಲ್ಲಿ ಸಿಕ್ಕಿದ ೩೦೦ ಬೌದ್ಧ ವಿಗ್ರಹಗಳು.

[illegible]

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ಫೂರ್ತಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 259,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ವರ್ತಮಾನದ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗರ್ಭಿಣಿಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೭ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

Free! Free!! Free!!

ಪ್ರಸಿದ್ಧವಾದ "ಕಾಮಶಾಸ್ತ್ರ"

ಈಗಲೆ ತಯಾರಾಗಿದೆ.

ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ

ಎಸ್. ಪಿ. ಆಚಾರ್ಯ

ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

[illegible]

ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ಪಿರಿಟ್ ಮಾರ್ಟ್,

[illegible]

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | ## ವಜ್ರಾಂಗ-ಬಿಂದು | ವೀರ್ಯ ವೃದ್ಧಿಕಾರಕ

[illegible]

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೦—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

[illegible]

ಪತ್ರ ಮ್ಯಾನೇಜರ, ಕೆ. ಎಸ್. ಹನುಮಂತ ಪ್ರಸಾದಿಲ ಕಂಪೆನಿ,

The Canara Public Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು:
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K

---

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯೆನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265. ಮದ್ರಾಸು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತೈವತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪೂರ್‌ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ತಿಂಡ್ ಕೊ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತವಾದ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, [illegible], ಅಹಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕಲ್ಲಿಕೋಟೆ, ಅರ್ಣಿ, ವಾಡಿಪೇಟೆ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ಮುಸ್ಸಿನ ಜರಿಶಾಲು, ಪೇಟ, ರೇಶ್ಮೆ ಸೀರೆಗಳು, ಅರಸಿನಕೆಂಪು ಸೀರೆಗಳು, ಕೊರ್ನಾಡ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮುಂಡುಗಳು, ನಿತ್ಯ ಉಪಯೋಗದ ಸೀರೆಗಳು [illegible]
ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

[illegible]

[illegible] ಸಂಗ್ರಹಿಸಿ ತಂದಿರುತ್ತಾರೆ.

[illegible] 10%, ರೂ. 250 ರಿಂದ 1000ಕ್ಕೆ 12½% ಈ ದರ [illegible]

Edited, Printed & Published by V. S. Kamath at the M. T. A. Sharada Press, Mangalore.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ
ತಯಾರಿಸಲ್ಪಟ್ಟಿದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದ್ದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯ ಪಾವರಣ, ಸ್ತ್ರೀ ಸಂಭೋಗ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ, ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದ್ದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. [illegible] ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ ಯಾ ೪ ಡಬ್ಬಿಗಳು ಅನ್ಯಾಂತ್ರವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪಾಲು ಖರ್ಚು ೧ರಿಂದ ೪ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.

ಡಿ. ಮುನ್ನಾಲಾಲ್,
ಡಿಲ್ಲಿ ನೇಟಿವ್ ಡಾಕ್ಟರ್.
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ‖ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ‖ ೧ ‖
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ‖
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೨೦. ಮಂಗಳೂರು, ತಾರೀಕು ೨೨ನೇ ಶುಕ್ರವಾರ ಜನವರಿ ೧೯೨೬. ಸಂಚಿಕೆ ೪.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. ಹೆಡ್ ಆಫೀಸು: ಉಡುಪಿ. Branch: COONDAPOOR. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ಮೌಲ್ಯಕೆತ್ತ ಮೂಲಧನ	ರೂ. 1,73,185—9—11.
ಅಪದ್ಧನ ವಗೈರೆ ಎತ್ತಗಳು	ರೂ. 64,700—0—0.
ಸಾ. ಸೇ. 6ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಏವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ಮೌಲ್ಯಕೆತ್ತ ಮೂಲಧನ 1,73,185—9—11, ಅಪದ್ಧನ ವ ಇತರ ಎತ್ತಗಳು 64,700—0—0, ಠೇವಣಾತಿಗಳು 5,10,077-10-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4371—0—0, ಐವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 93,340—10—5, ಜುಮ್ಲಾ ರೂ. 8,45,674—14—7.

ಆಸ್ತಿ ವ ಸೊತ್ತುಗಳು.

ಹಿತ್ಲು ಕಟ್ಟೋಣ ಕಟ್ಟಿದ ಟ್ರೆಜರಿಗಳು ವಗೈರೆ 4134—4—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496—6—2, ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ) 41,741—14—2, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 26,131—6—3, ಜುಮ್ಲಾ ರೂಪಾಯಿ 8,45,674—14—7.

ನಿರಖು ಠೇವಣಾತಿಗಳನ್ನು ಕಾಲಕ್ಲೃಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸ್ಸುಮ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಪ್ಟುಗಳನ್ನು ಸಾವುಕಾರಿ ಹುಂಡಿಗಳನ್ನೂ, ವಜ್ಜಾಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

N. Anand Rao,
Secretary.

ಮೂರು ದಿವಸಗಳಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ] ಅಗಸ್ತ್ಯ [ನೋಡಿ ಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೋಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಹಾಲ್ಕತ್ತೆಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1—9—0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿ.

ವಿಳಾಸ:— ದೇವಣ್ಣ ನಾರಾಯಣ ಸೇಟ್,
ಸರಾಫ, ಗೋಲಿಬಜಾರ,
ಮಂಗಳೂರು, (ದ.

ಅಪೂರ್ವ ಸಂದರ್ಭ.

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುಧಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೀರ್ಸ್ ಎಸ್ಟೇಟ್. ಮುಂಬಯಿ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ಶತತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ್ ಜರ್ಮನ್ ಟೈಮ್‌ಪೀಸ್ ಕ್ರಯ ರೂ. 5-0-0
ಡಬ್ಬಲ್ ಎ. „ „ „ 6-0-0.

"ಬಿ" ಟೈಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬರ್‍ಲೆಂಡ್ ಪೆಪರ್ ಕ್ಲಿಪ್ ಟೈಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಖಂ ... ... ೨-೦-೦.

೧೨ ಪ್ಯಾಕೆಟ್ ನಾಟಿ ತರಕಾರಿ ಬೀಜಗಳು ೧೨ ರಖಂ ... ... ೧-೧೨-೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಖಂಗಳ ಬೀಜಗಳು ... ... ೨-೦-೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಬೆಲೆಗೆ, ವಿ. ಪಿ ಯಿಂದ ಕಳುಹಿಸುತ್ತೇವೆ. ಅಲ್ಲದೆ ಇವರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮೂವ್‌ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಲೆಸ್‌ಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಬಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕೊರ್ ಆರ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಡೈರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೈನ ಚೀಟುಗಳು—ಒಂದು ಗ್ರೈನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ಕಾರಿನಪತ್ರ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay, No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ಕಾವ್ಯ ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	„ 2—8—0.
„ ಸ್ಥಳೀಕರಿಗೆ ...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು. ಎಡಿಟರ್,

ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2½ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2½ ಮಳ ಅಗಲ ರೂ. 9ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಮನ್ ರೇಶ್ಮೆ ಮಡಿಗಳು, ಸಾವರ್ಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಸಾಲಿಗ್ರಾಮ, ಬಾಣಲಿಂಗ, ಜಾಘಂಟೆ, ಶಾಳ, ಕಸ್ತೂರಿ ವಗೈರೆ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂರದ ಪೂಷ ಶು ೧೦ ಶನಿವಾರದಿಂದ ಕ್ರೋಧನ ಸಂರದ ಮಾಘ ಬ ೧ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮಕರ ಪ್ರಯುಂತಿಲ್.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಮಕರಮಾಸ	ಸೂರ್ಯ ಉ.	ಸೂರ್ಯ ಅಸ್ತ.
23	ಶನಿ	೧೦	೩೬.೪೬	ಕೃತ್ತಿಕಾ	[illegible]	೧೦	7. 0	6.25
24	ರವಿ	೧೧	೩೬.೪೪	ರೋಹಿಣೀ	[illegible]	೧೧	7. 0	6.26
25	ಸೋಮ	೧೨	೪೦. ೧	ಮೃಗಶಿರಾ	೪೨. ೦	೧೨	7. 0	6.26
26	ಕುಜ	೧೩	೪೩ ೩೨	ಆರ್ದ್ರಾ	[illegible]	೧೩	7. 0	6.27
27	ಬುಧ	೧೪	[illegible]	ಪುನರ್ವಸು	[illegible]	೧೪	7. 0	6.27
28	ಗುರು	○	[illegible]	ಪುಷ್ಯ	[illegible]	೧೫	6 59	6.28
29	ಶುಕ್ರ	೧	[illegible]	ಆಶ್ಲೇಷಾ	೬೦. ೦	೧೬	6 59	6.28

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿವಸದ ಮಳೆ	ಜುಮಲಾ ಮಳೆ.
15	95—0	72—2	—	—
16	96—5	70—8	—	—
17	93—6	68—3	—	—
18	91—8	69—2	—	—
19	90—8	67—9	—	—
20	89—4	69—0	—	—
21	90—3	68—6	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ
ಮಸ್ಕತಿ	8— 2	8—10
ಹೊಸ ಗುಚ್ಚ ...	8— 0	8— 8
ಅಮ್ಮಲ್ ಬೆಳ್ತಿಗೆ ...	8— 0	9— 0
ಹೊಸ ರಾಶಿ ...	7— 0	7—14
ರಂಗೂನು ಬೆಳ್ತಿಗೆ ಗೋಣಿ ೧ ...	13— 0	14— 0
ಗೋಧಿ ಗೋಣಿ ೧ಕ್ಕೆ ...	18— 8	20— 8
ಹುರುಳಿಗೋಣಿ ೧ಕ್ಕೆ ...	8—12	10— 0
ಕಡಲೆಗೋಣಿ ೧ಕ್ಕೆ ...	14— 8	15— 0
ತೊಗರಿಗೋಣಿ ೧ಕ್ಕೆ ...	14— 8	15— 0
ತೊಗರಿಬೇಳೆ ಗೋಣಿ ೧ಕ್ಕೆ ...	16— 8	22— 0
ಉದ್ದುಗೋಣಿ ೧ಕ್ಕೆ ...	17— 0	—
ಹೆಸರುಗೋಣಿ ೧ಕ್ಕೆ ...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ ...	60— 0	62— 8
ಉಪ್ಪು ಗೋಣಿ ೧ಕ್ಕೆ ...	4— 0	4— 4
ಕೊಬ್ರಿ ಖಂಡಿ ೧ಕ್ಕೆ ...	110— 0	120— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	37— 0	38—
ಎಳ್ಳಿಂಡಿ ಖಂಡಿ ೧ಕ್ಕೆ ...	40— 0	45— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8— 4	—
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	11— 0
ಹಿಪ್ಪೆ ಎಣ್ಣೆ ಹೆಪ್ಪಿಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4—10	—
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	9— 4	—
ಸಾಸಿವೆ ಮುಡಿ ೧ಕ್ಕೆ ...	9— 8	—
ಕೊತ್ತಂಬರಿ ಮುಡಿ ೧ಕ್ಕೆ ...	3— 8	4— 4
ಕಾಫಿ ಖಂಡಿ ೧ಕ್ಕೆ ...	345— 0	--
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	275— 0	295— 0
ಹೊಸ ಅಡಿಕೆ ಖಂಡಿ ೧ಕ್ಕೆ ...	160— 0	210— 0
ಕಾಳುಮೆಣಸು ಖಂಡಿ ೧ಕ್ಕೆ ...	400— 0	--
ಯಾಲಕ್ಕಿ ಮುಡಿ ೧ಕ್ಕೆ ...	45— 0	—
ಗೇರುಬೀಜ ಮುಡಿ ೧ಕ್ಕೆ ...	3—14	—
ಕಲ್ಲಿಜ ಖಂಡಿ ೧ಕ್ಕೆ ...	45— 0	65— 0
ಹುಂಡ್ಯ ಹಗಡು ಮುಡಿ ೧ಕ್ಕೆ ...	16— 4	16—12
ಹಾಮ್ರ ಪಾತ್ರಗಳ ಮುಡಿ ೧ಕ್ಕೆ ...	21— 0	—
ಚೀನಿ ಬೆಲ್ಲ ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮುಡಿ ೧ಕ್ಕೆ ...	16— 8	
ಪವನು	13— 6	

ಕನ್ನಡಿಗರೇ! **ವಸಂತ.** ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . . ವಸಂತ
ಸಮಾಜಸುಧಾರಕನೆಂದರೆ . . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . . ವಸಂತ
ಚಿತ್ರಕರ್ಮ ಚಿತ್ರಶಾಲೆಯೆಂದರೆ . . . . . . ವಸಂತ
ದೇಶಭಕ್ತನೆಂದರೆ . . . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಫುಟ ಸ್ಯಾಜಿನ) ಫುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂಬಾಪುರ, ದಕ್ಷಿಣ ಕನ್ನಡ

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಕುಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಬೆಲೆಯು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೨—೦. ಹಿಂದಿನ ಸಂಚಿಕೆಗಳು ಕೂಡ ದೊರಿಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಆಫ್ ಕೋಸ್ಟ್ಸ್, ಮೆಮೊರಂಡಮ್ ಆಫ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರಮ್‌ಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರಮ್‌ಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0,

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ತ್ವರೆ ಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್, ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುವರಾರ ರಾಮನ ಕಥೆ ... ...
(8) ಕೃಷ್ಣದಾಸಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀಪಾತ್ಮಮೋದ ಕಥಾ ... ...
(18) ಚಂದ್ರವಾಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷಾಗೃಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಜ ಕಥೆ ... ...
(26) „ ಗೋವಿನ ಚರಿತ್ರ ... ...
(27) „ ದುಶ್ಯಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

ಶಾರದಾ ಛಾಪಖಾನೆ, ಮಂಗಳೂರು.

ಜ್ಯಾಹೀರಾತು.

ಕಾರ್ಕಳ ಕಸಬೆಯಲ್ಲಿರುವ ಚೆಡ್ಯ ಯಾನೆ ವೆಂಕಟೇಶ ಶ್ಯಾನುಭಾಗರ ಪತ್ನಿ ಚಂದ್ರಬಾಗಮ್ಮ 1 ನಲ್ಲೂರು ಗ್ರಾಮದಲ್ಲಿರುವ ರಂಜಾಳ ಶೇಷಗಿರಿ ನಾಯ್ಕರ ಮಗ ನರಸಿಂಹ ನಾಯ್ಕ ಕೂಡ 2 ಜನರು ಸರ್ವಜನರಿಗೂ ತಿಳಿಯಪಡಿಸುವುದೇನಂದರೆ:-

ನಮ್ಮ ಪೈಕಿ 1ನೇಯವಳಿಗೆ 2ನೇಯವನು ತಾರೀಕು 13—11—1924ರಲ್ಲು ರೂಪಾಯಿ 800ಕ್ಕೆ ಬರಕೊಟ್ಟ ಡಿಮಾಂಡ್ ನೋಟನ್ನು 1ನೇಯವಳು ಯಾರಿಗೂ ಟ್ರಾನ್ಸ್‌ಫರ್ ಮಾಡಿ ಕೊಟ್ಟದ್ದಿಲ್ಲ. 1ನೇಯವಳ ಮಗ ವಿಠ್ಠಲ ಶ್ಯಾನುಭಾಗನು ಇತ್ತಲಾಗೆ ಅದನ್ನು ಅಪಹರಿಸಿ ಸುಳ್ಳು ಟ್ರಾನ್ಸ್‌ಫರ್ ಮಾಡಿದ್ದಾನೆಂತ ನಾವು ತಿಳಿಯುತ್ತೇವೆ. ಸದರಿ ನೋಟಿನ ಮೇರೆಗೆ ಐವೇಜು ವಸೂಲು ಮಾಡುವರೆಯಾಗಲಿ ಯಾರಿಗೂ ಟ್ರಾನ್ಸ್‌ಫರ್ ಮಾಡುವರೆಯಾಗಲಿ ಸದರಿಯವನಿಗೆ ಹಕ್ಕಿಲ್ಲ. 2ನೇಯವನಿಂದ 1ನೇಯವಳಿಗೆ ಸದರಿ ಡಿಮಾಂಡ್ ನೋಟಿನ ಮೇರೆಗೆ ಬಹಾ ಐವೇಜು ಝಾಡೆಯಾಗಿ ವಸೂಲಾಗಿಯದೆ.

ತಾ. 14-1-'26, } ಚಂದ್ರಬಾಗಿ ರುಜು.
ಕಾರ್ಕಳ. } ನರಸಿಂಹ ನಾಯ್ಕನ ರುಜು.

ಭೂಮಿಯ ವಿರಳ ಛಾಯೆಯಲ್ಲಿ ಚಂದ್ರಬಿಂಬದ ಪ್ರವೇಶ.

ಪ್ರಿಯ ಕನ್ನಡಿಗರೆ!

ನಮ್ಮ ಭೂಮಿಗೆ ಪ್ರಕಾಶವನ್ನುಂಟುಮಾಡುವ ಸೂರ್ಯಗೋಲವು ಬಹು ದೊಡ್ಡದಿರುವುದರಿಂದ ಶಂಕ್ವಾಕಾರದ ಭೂಮಿಯ ನೆರಳು ವಿರಳ ಛಾಯೆಯಿಂದ ಸುತ್ತಲ್ಪಟ್ಟದ್ದಾಗಿ ಸೂರ್ಯನಿಂದ ೧೮೦ ಭಾಗೆ ದೂರದಲ್ಲಿ ಭೂಮಿಯೊಡನೆ ಯಾವಾಗಲೂ ತಿರುಗುತ್ತಿರುವುದು. ಪರಂತು ಆಕಾಶದಲ್ಲಿ ವಿತಾನ (ಮೇಲ್ಕಾಪು)ದಂತಹ ಪದಾರ್ಥವಿಲ್ಲದಿರುವದರಿಂದ ಭೂಮಿಯ ಛಾಯೆ ಮತ್ತು ವಿರಳಛಾಯೆ ಇವೆರಡನ್ನು ಸಂಪೂರ್ಣವಾಗಿ ನೋಡಲಿಕ್ಕಾಗುವುದಿಲ್ಲ. ಹೀಗಿದ್ದರೂ ಚಂದ್ರಗ್ರಹಣ ಕಾಲದಲ್ಲಿ ಚಂದ್ರಬಿಂಬವು ಸ್ವಲ್ಪ ಮಟ್ಟಿಗೆ ವಿತಾನದಂತಾಗುವುದರಿಂದ ಆ ಕಾಲದಲ್ಲಿ ಭೂಮಿಯ ವಿರಳ ಛಾಯೆಯ ದರ್ಶನವು ಸ್ವಲ್ಪಮಟ್ಟಿಗಾಗುವುದು. ಚಂದ್ರಗ್ರಹಣ ಕಾಲದಲ್ಲಿ ಚಂದ್ರಬಿಂಬದ ಮೇಲೆ ಬೀಳುವ ಭೂಛಾಯೆಯ ಬದಿಯಿಂದ ಹತ್ತು ಕಲೆಯ ಅಂತರದೊಳಗೆ ಚಂದ್ರಬಿಂಬದಲ್ಲಿ ಹೊಗೆ ಹಾಗಿದಂತೆ ಕಾಣುವುದೆ ಭೂಮಿಯ ವಿರಳ ಛಾಯೆಯು. ಚಂದ್ರಗ್ರಹಣಾರಂಭಕ್ಕೆ ಸುಮಾರು ಒಂದು ಘಂಟೆಯ ಮೊದಲು ಸ್ಪರ್ಶವಾಗುವ ಭಾಗದಲ್ಲಿ ಚಂದ್ರಬಿಂಬವು ಮಲಿನವಾಗಲಿಕ್ಕೆ ಶುರುವಾಗುತ್ತದೆಂಬುದು ಮಕ್ಕಳಿಗಾದರೂ ಗೊತ್ತಿರುವುದು. ಆದುಕಾರಣ ಭೂಛಾಯೆಯಂತೆ ಅದರ ವಿರಳಛಾಯೆಯೂದರೂ ಇರುತ್ತದೆಂಬುದರಲ್ಲಿ ಸಂದೇಹವಿಲ್ಲ. ಒಂದು ದೀಪದ ಸುತ್ತಲೂ ಏಳು ಬತ್ತಿಗಳನ್ನು ಹೊತ್ತಿಸಿ ಒಂದರಲ್ಲಿ ಸೂರ್ಯನಂತೆಯೇ ಜೋಮಯವಾದ ವಲಯವನ್ನುಂಟುಮಾಡಿ ಅದರ ಮೇಲೆ ಸ್ವಲ್ಪ ಅಂತರದಲ್ಲಿ ಚೆಂಡನ್ನಾಗಲಿ, ಇತರ ಗೋಲ ಪದಾರ್ಥಗಳನ್ನಾಗಲಿ ಹಿಡಿದರೆ ಮೇಲಿರುವ ವಿತಾನದಲ್ಲಿ ಆ ಗೋಲದ ಘನಛಾಯೆ (Umbra)ಯನ್ನೂ, ವಿರಳಛಾಯೆ (panambra)ಯನ್ನೂ, ನೋಡಬಹುದು. ಭೂಮಿಯ ವಿರಳ ಛಾಯೆಯ ಹೊರಭಾಗವು ಅತ್ಯಂತ ವಿರಳವಾಗಿರುವದರಿಂದ ಅದರ ಪ್ರವೇಶ ನಿರ್ಗಮ ಕಾಲಗಳು ಕಣ್ಣಿಗೆ ಗೋಚರಿಸುವುದಿಲ್ಲ. ದುರ್ಬಿನಿಯಿಂದ ಸಾಮಾನ್ಯ ಸೂಕ್ಷ್ಮವಾಗಿ ತಿಳಿಯಬಹುದು. ಪ್ರಾಚೀನ ಗಣಿತ ಗ್ರಂಥಗಳಲ್ಲಿ ಇದರ ಹೆಸರೆ ಇಲ್ಲದಿರುವದರಿಂದ ಸಾಮಾನ್ಯ ಜನರು ಇದನ್ನು ನಂಬಲಾರರು. ಆದರೂ ಯುಕ್ತಿ ಸಿದ್ಧವಾದ ಹಾಗು ಸ್ವಲ್ಪ ಪ್ರತೀತಿಯುಳ್ಳ ಇದರ ಗಣಿತವನ್ನು ಉತ್ತಮ ವಿದ್ವಾಂಸರ ರಂಜನಾರ್ಥವಾಗಿ ಶ್ರೀಯುತ, ವೆಂಕಟೇಶ ಕೇತಕರರೆಂಬ ಸುಪ್ರಸಿದ್ಧ ಜ್ಯೋತಿಷಿಗಳು ತಮ್ಮ "ಜ್ಯೋತಿರ್ಗಣಿತ" ಗ್ರಂಥದಲ್ಲಿ ಕೊಟ್ಟಿರುವರು. ಈ ಗ್ರಂಥರೀತ್ಯಾ ಇದೇ ಕ್ರೋಧನ ಸಂವತ್ಸರದ ಮಾಘ ಪೌರ್ಣಮಿ ಗುರುವಾರ ಜನವರಿ ತಾ. ೨೮ನೇ ರಾತ್ರಿ ಸ್ಟೇಂಡಾರ್ಡ್ ಘಂಟೆ ೧-೨ಕ್ಕೆ ಚಂದ್ರಬಿಂಬದ ಆಗ್ನೇಯ ಭಾಗದಲ್ಲಿ ಭೂಮಿಯ ವಿರಳ ಛಾಯೆಯು ಪ್ರವೇಶವಾಗಿ ಘಂಟೆ ೨-೫೧ರ ಸುಮಾರಿಗೆ ಚಂದ್ರಬಿಂಬದ ದಕ್ಷಿಣ ಭಾಗವು ಹೊಗೆ ಹಿಡಿದಂತೆ ಕಾಣುವುದು. ನಂತರ ಘಂಟೆ ೪-೪೦ಕ್ಕೆ ನೈರುತ್ಯ ಭಾಗದಲ್ಲಿ ಚಂದ್ರಬಿಂಬದ ಮಾಲಿನ್ಯವು ನಿವೃತ್ತಿಯಾಗುವುದು. ಇದು ಚಂದ್ರಗ್ರಹಣವೆಂದು ಮಾತ್ರ ವಾಚಕರು ಗ್ರಹಿಸಬಾರದು. ಶ್ರೀಯುತ ಕೇತಕರರ "ಜ್ಯೋತಿರ್ಗಣಿತ"ದ ಪರೀಕ್ಷೆಯನ್ನು ಮೊನ್ನೆಯ ಸೂರ್ಯಗ್ರಹಣದಂತೆ ಮತ್ತೊಮ್ಮೆ ಮಾಡಬೇಕೆಂದೆ ನಾವೀಗಣಿತವನ್ನು ಮಾಡಿ ನಿಮ್ಮ ಮುಂದೆ ಇರಿಸಿದ್ದಾಗಿದೆ.

ಮಾಘ ಶು. ೬ ಕುಜವಾರ ಶಕ ೧೮೪೭ ಕ್ರೋಧನ. } ಇಂತಿ, ಕನ್ನಡ ವೈಜಯಂತೀ ಪಂಚಾಂಗ ಸಂಪಾದಕರು,
ಪೊ ಪುತ್ತೂರು ಜಿ. ದಕ್ಷಿಣ ಕನ್ನಡ.

ಬಾಲಕರಿಗೆ ಅಂಗಸಾಧನೆಯ ಅವಶ್ಯಕತೆ.

ಈ ನಮ್ಮ ದೇಶವು ಸಮಸ್ತ ಸ್ವಾತಂತ್ರ್ಯವನ್ನು ಕಳೆದುಕೊಂಡ ಹಲವು ಕಾರಣಗಳಲ್ಲಿ ಅಂಗಸಾಧನೆಯ ಕೊರತೆಯೇ ಮುಖ್ಯವಾದುದೆಂದು ಆರೋಗ್ಯ ಚಂದ್ರಿಕೆಯೇ ಮುಂತಾದ ವೃತ್ತಪತ್ರಿಕೆಗಳು ಆಗಾಗ್ಗೆ ಉದ್ಘೋಷಿಸುತ್ತಿರುವುದಾದರೂ, ಅದನ್ನು ಮುಖ್ಯವಾಗಿ ಎಲಿಮೆಂಟರಿ ಶಾಲೆಗಳಲ್ಲಿ ಪ್ರತಿ ದಿನವೂ ಪಾಠದ ಒಂದು ಅಂಗವಾಗಿಟ್ಟುಕೊಂಡು ಆಚರಿಸುವುದಕ್ಕೂ, ಹುಡುಗರು ತಮ್ಮ ಮನೆಯಲ್ಲಿ ಪ್ರಾತಃ ಸಂಧ್ಯಾಕಾಲಗಳಲ್ಲಿ ಅರೆಘಳಿಗೆಯ ಸಮಯವಾದರೂ ಶಕ್ತಿಗನುಕೂಲವಾದ ಸಾಧನೆಗಳನ್ನು ಕಡ್ಡಾಯದಿಂದ ಮಾಡುತ್ತಾ ದೇಹಬಲವನ್ನೂ ಆರೋಗ್ಯಬಲವನ್ನೂ ಅಭಿವೃದ್ಧಿಗೊಳಿಸುವುದಕ್ಕೂ ಅನುಕೂಲವಾಗುವಂತೆ ಬಾಲಕರ ಬಾಯಿಯಲ್ಲಿ ಬಾಯಿಪಾಠವಿರುವಗೋಸ್ಕರ ನಾನು ಕುಂದಪಟ್ಟು ಶಾಲೆಯಲ್ಲಿ ಜರಗಿದ ಶಾಲಾ ಉಪಾಧ್ಯಾಯರ ಸಭೆಗೆ ಬರೆದುಕಳುಹಿಸಿದ ಈ ಕೆಳಗಿನ ಪದ್ಯವನ್ನು ಪ್ರಚಾರಕ್ಕಾಗಿ ಪ್ರಕಟಗೊಳಿಸಲು ಆತುರಪಟ್ಟೆನು. ಇದನ್ನು ಸರ್ವರೂ ಅನುಸರಿಸಿದರೆ ಕೃತಕೃತ್ಯನಾಗುವೆನು.

ರಾಗ: ಕಾಂಬೋಧಿ ಝಂಪೆ (ದಾಟಿ—ನಂಬಿದಿರು ಈ ದೇಹ ನಿತ್ಯವಲ್ಲ)

ಅಂಗಸಾಧನೆ ಬಾಲರಿಂಗವಶ್ಯಂ ‖ ಅಂಗಸುಖವಿರೆ ಜನರವಂಗೆ ವಶ್ಯಂ ‖ ಅಂಗಸಾಧನೆ ಬಾಲರಿಂಗವಶ್ಯಂ ‖ ಪಲ್ಲ ‖ ಅಂಗದೊಳು ಶ್ರೇಷ್ಠಾಂಗದಲ್ಲಿದೆ ಶಿರೋಮಿದುಳು । ಮುಂಗಡೆಯೊಳುದರದೊಳಗಿಹುದು ಕರುಳೂ ‖ ಹಿಂಗಡೆಯ ಪೃಷ್ಠಾಸ್ಥಿ ಕೊರಳು ಕೈಕಾಲುಗಳು । ಅಂಗಳಿಗೆ ಸೊಗಸಾಗಿ ಕಾಯರಂಜಿಸಲೂ ‖ ಅಂಗಸಾಧನೆ ‖ ೧ ‖ ಶ್ವಾಸಕೋಶದಿ ಶುದ್ಧವಾಯು ಸೇರಿಯಶುದ್ಧ । ದೋಷಕರಮಲಸ್ವೇದಜಲ ದೂಡಲೂ ‖ ಅಶುದ್ಧರಕ್ತನಾಳಗಳು ಹೃತ್ಕಮಲದೊಳು । ಬೇಸರಿಸದಲೆ ಚರಿಸಿ ವಪುವ ಪೋಷಿಸಲೂ ‖ ೨ ‖ ಮಿದುಳಧಿಕವಾಗಿ ಮನಕೊದಗುವುದು ಸುಜ್ಞಾನ । ಸದರದಿಂ ಸ್ನಾಯು ಬಲವೃದ್ಧಿಸುವದೂ ‖ ಪದುಳದಿಂ ಪಚನಶಕ್ತಿಯು ಪೆರ್ಚಿ ಸರ್ವಾಂಗ । ಮುದಗೊಂಡು ಸುಖದಿಂದ ಬಹುಕಾಲ ಬಾಳ್ವುದಕೆ ‖ ೩ ‖ ಆಟಕೋಲಾಟ ಹುಲಿಯಾಟ ಓಡಾಟ । ಮೇಲಾಟ ಚೆಂಡಾಟ ಈಜಾಟಂಗಳೂ ‖ ಕೂಟಕೂಡುತ ನಡೆವ ಕೋಟಿಗಿಡಗಳ ನೆಡುವ । ನೋಟಕಕುಶಲಗಿನಾಟಗಳ ವ್ಯಾಯಾಮಗಳ ‖ ೪ ‖ ಕಟ್ಟಿರ್ದ ಅರದ ಸರಪಣಿಯ ಮುರಿಯಲಿಕಹುದು । ಮೆಟ್ಟಿರ್ದ ಗಜವನಿದೆಯಲಿ ನಿಲಿಸಲಹುದೂ ‖ ಘಟ್ಟಿಕಲೆ ಬೆನ್ನಮೇಲಿಟ್ಟು ತುಂಡಿಸಬಹುದು । ಮುಷ್ಟಿರಂ ಕಷ್ಟದಿ ಕಟ್ಟಿಹಿಂದಟ್ಟುವರೆ ‖ ೫ ‖ ಆರೋಗ್ಯ ಸೌಭಾಗ್ಯ ಶಾರೀರ ಬಲಯೋಗ್ಯ । ಧೀರತನ ಸುಜ್ಞಾನಕ್ಕೆ ನಿತ್ಯ ಸಾಮ್ಯ ‖ ಭೂರಿಬಲಪರರಿಸ್ವಪಕಾರ ಸ್ವಜನೋದ್ಧಾರ । ಸಾರವಿಪರಸುಕೃತ ಸೇರಿ ಸುಖಪಡೆಯುವರೆ ‖ ಅಂಗಸಾಧನೆ ಬಾಲರಿಂಗವಶ್ಯಂ ‖ ೬ ‖

ಬಳಂಜ, ತಾ. 19-1-'26. } ಎ. ನಾರ್ಣಪ್ಪಯ್ಯ. [illegible]

ಹುಚ್ಚು ಜನ್ಮ ಸಂಬಂಧವಾಗಿ ಅನುಸರಿಸಿ ಬರುವ ವ್ಯಾಧಿಯೇ?

ಹುಚ್ಚು ಬುದ್ಧಿಮಾಂದ್ಯ ಮುಂತಾದ ಮನೋವೈಕಲ್ಯಗಳು ಮನುಷ್ಯನಿಗೆ ಹುಟ್ಟಿದ ಮೇಲೆ ನಡುವೆ ಆಗಂತುಕವಾಗಿ ಬರುವ ವ್ಯಾಧಿಗಳೆ ಅಥವಾ ಜನ್ಮಸಂಬಂಧವಾಗಿ ಅನುಸರಿಸಿ ಬರುವ ಬೇರೆ ಕೆಲವು ವ್ಯಾಧಿಗಳಂತೆ ತಂದೆ ತಾಯಿಗಳಲ್ಲಿ ಆ ತರದ ದೋಷದಿಂದ ಅನುಸರಿಸಿ ಬರುವುದೆ? ಎಂಬ ವಿಚಾರವಾಗಿ ಫ್ರೆಡರಿಕ್ ಮಾರ್ಟ್ ಎಂಬ ಶಾಸ್ತ್ರಜ್ಞರೊಬ್ಬರು ಬಹಳ ದೂರ ಪರಿಶೋಧನೆಗಳನ್ನು ಮಾಡಿ, ಕೊನೆಗೆ 'ತಂದೆಯಂತೆ ಮಗ ನೂಲಿನಂತೆ ಶಾಲೆ' ಎಂಬ ಲೋಕೋಕ್ತಿಯು ಈ ಭಾಗದಲ್ಲಿಯೂ ನಿಜವೆಂದೇ ನಿರ್ಣಯಿಸಿರುವರು ಇದಕ್ಕಾಗಿ ಅವರು ತಮ್ಮ ಕೈಕೆಳಗೆ ಉದ್ಯೋಗದಲ್ಲಿದ್ದ ಮಿಸ್. ಆಗ್ನಿಸ್‌ಕೆಲ್ಲಿ ಎಂಬಾಕೆಯ ಮೂಲಕ, ಹುಚ್ಚರು ಮಂದಬುದ್ಧಿಗಳು, ಮತ್ತು ಸಾಧಾರಣ ಜನರೆಂಬ ಮೂರು ವರ್ಗಗಳಲ್ಲಿ ಕೆಲವರನ್ನು ಆರಿಸಿ, ಅವರ ಸ್ಥಿತಿಗತಿಗಳು ಚರಿತ್ರೆ ಮುಂತಾದುವನ್ನೆಲ್ಲಾ, ಅವರ ವಂಶಾನುಕ್ರಮವಾಗಿ ಬಂದ ಜನರ ಪೂರ್ವೋತ್ತರಗಳೊಡನೆ ಕೂಲಂಕಷವಾಗಿ ಪರಿಶೋಧಿಸಿ ನೋಡಿದರು. ಮೇಲ್ಕಂಡ ಪ್ರತಿ ವರ್ಗದಲ್ಲಿಯೂ ೬೦ ಜನರಂತೆ ಆರಿಸಿ ಪರೀಕ್ಷಿಸಿದರು. ಅದರಲ್ಲಿ ಲಂಡನ್ ಕೌಂಟಿಯ ಹುಚ್ಚಾಸ್ಪತ್ರೆಯಲ್ಲಿದ್ದವರು ಮೊದಲನೆಯ ವರ್ಗದವರು. ಎರಡನೆಯ ವರ್ಗದವರು ವಿಶೇಷ ಮಂದ ಬುದ್ಧಿಯುಳ್ಳವರು. ಮೂರನೆಯ ವರ್ಗದವರು ಪ್ರಾಥಮಿಕ ಪಾಠಶಾಲೆಗಳಲ್ಲಿ ವ್ಯಾಸಂಗಮಾಡುತ್ತಿದ್ದ ಸಾಮಾನ್ಯಬಾಲಕರು; ಇವರನ್ನೆಲ್ಲಾ ಬೇರೆ ಬೇರೆಯಾಗಿ ಪರೀಕ್ಷಿಸಿ ನೋಡಿದ್ದಲ್ಲಿ, ಯಾವ ಕುಟುಂಬದಲ್ಲಿ ಹಿಂದಿನವರಿಗೆ ಹುಚ್ಚು ಹಿಡಿದಿದ್ದಿತೊ, ಅಂತವರ ವಂಶದಲ್ಲಿ ಹುಟ್ಟಿದವರೇ ಹೆಚ್ಚಾಗಿ ಬುದ್ಧಿಭ್ರಮವುಳ್ಳವರಾಗಿದ್ದರೆಂದೂ, ಆ ಬುದ್ಧಿಭ್ರಮವು ಅಥವಾ ಹುಚ್ಚು ಅವರಿಗೆ ಆ ಜನ್ಮವಾಗಿಯೇ ಇತ್ತೆಂತಲೂ ತಿಳಿದುಬಂದಿತು.

ಬುದ್ಧಿಮಾಂದ್ಯವುಳ್ಳವರ ಗರ್ವದಲ್ಲಿ ನೂರಕ್ಕೆ ೭೫ ಮಂದಿಗೆ ಅವರ ತಂದೆಗಳು ಅಷ್ಟಾಗಿ ಕಾರ್ಯಚತುರರಾಗಿರಲಿಲ್ಲವೆಂದೂ, ಅವರ ಜೀವನಸ್ಥಿತಿಯು ಬಹಳ ಬಡತನದ್ದಾಗಿತ್ತೆಂತಲೂ ತಿಳಿದುಬಂದಿತು.

ಸಾಧಾರಣಜನರ ವರ್ಗದಲ್ಲಿ ಅವರ ಹಿಂದಿನ ಕಾಲದಿಂದಲೂ ಮೇಲೆ ಕಾರ್ಯ ಚಾತುರ್ಯವೂ, ಕುಟುಂಬಭರಣಕ್ರಮವೂ ಅವರಲ್ಲಿ ಬಹಳ ತೃಪ್ತಿಕರವಾಗಿ ಕಂಡುಬಂದು, ಮೇಲೆ ಮೇಲೆ ಅವರಲ್ಲಿ ಅಭಿವೃದ್ಧಿಸ್ಥಿತಿಯೂ ತೋರಿಬಂದಿತ್ತು.

ಜನ್ಮಸಿದ್ಧವಾಗಿ ಬರತಕ್ಕ ಮೇಲ್ಕಂಡ ಲೋಪವನ್ನು ನೀಗಿಸುವ ಮಾರ್ಗವೇನಾದರೂ ಉಂಟೆ? ಎಂಬ ವಿಚಾರದಲ್ಲಿಯೂ ಅವರು ಪರಿಶೋಧಿಸಿ ಹೇಳಿದುದೇನಂದರೆ, ಮನುಷ್ಯನ ಶೀಲಸ್ವಭಾವಾದಿಗಳಿಗೆ ಜನ್ಮಸಂಬಂಧದಿಂದಲೇ ಅಸ್ತಿಭಾರವು ದೈವಕಲ್ಪಿತವಾಗಿದ್ದರೂ, ವಿದ್ಯಾಭ್ಯಾಸ, ಲೌಕಿಕ ನಿದರ್ಶನಗಳು ಅವನ ಸುತ್ತುಮುತ್ತಲಿನ ಪರಿಸ್ಥಿತಿಗಳು, ಇವೆಲ್ಲಾ ಅಂತವನ ಉನ್ನತಿ ಅಥವಾ ಅವನತಿಯ ವಿಷಯದಲ್ಲಿ ಅವನ ಸಹಜ ಸ್ವಭಾವವನ್ನು ಕುಂದಿಸಿ ತಮ್ಮ ಶಕ್ತಿಯನ್ನು ತೋರಿಸಬಲ್ಲುವೆಂದು ಹೇಳಬಹುದು.

ಈ ಮೇಲ್ಕಂಡ ಸಾಮಾನ್ಯ ಶೋಧನೆಗಳ ಆಧಾರದ ಮೇಲೆ, ಅವರು ಮನುಷ್ಯರಲ್ಲಿ ಬುದ್ಧಿವೈಕಲ್ಯಕ್ಕೂ, ಮನೋರೋಗಕ್ಕೂ ಇರುವ ಅನ್ಯೋನ್ಯ ಸಂಬಂಧವನ್ನು ಕುರಿತು ಅದಕ್ಕಾಗಿ ತಾವು ಲಂಡನಿನಲ್ಲಿ ಬೇರೆ ಬೇರೆ ಕಡೆಗಳಲ್ಲಿರುವ ೧೦ ಹುಚ್ಚಾಸ್ಪತ್ರೆಗಳಲ್ಲಿದ್ದ ರೋಗಿಗಳನ್ನಾರಿಸಿ, ಅವರ ಹಿಂದಿನ ೫-೬ ತಲೆಮಾರಿಗಳಿಂದ ಅವರವರ ಪೂರ್ವಿಕರ ಸ್ಥಿತಿಗತಿಗಳನ್ನೆಲ್ಲಾ ಸಂಗ್ರಹಿಸಿ, ಸುಮಾರು ೪೦೦೦ ಚೀಟಿಗಳ ಸಹಾಯದಿಂದ ಲೆಕ್ಕಹಾಕಿ ನೋಡಿದರಲ್ಲಿ, ಆಸ್ಪತ್ರೆಯ ರೋಗಿಗಳಲ್ಲಿ ಕಂಡುಬಂದ ನಾನಾ ಬಗೆಯ ಬುದ್ಧಿವಿಕಾರಗಳಿಗೆಲ್ಲಾ ಪ್ರಾಯಶಃವಾಗಿ ಅವರ ಪೂರ್ವಿಕರಲ್ಲಿದ್ದ ಆ ದೋಷಸಂಬಂಧವೇ ಕಾರಣವೆಂದು ನಿರ್ಣಯಿಸಿರುವರು

[ಆ. ಚ.]

ಅರ್ಕುಳ ಶ್ರೀ ವರದೇಶ್ವರ ದೇವರ ಸಂಘದ ಆಡಳ್ತೆ ಸಭೆಯ ನಿರ್ಣಯಗಳು.

ಇದೇ ಜನವರಿ ತಾ. 17ನೇ ಆದಿತ್ಯವಾರ ೪ ಗಂಟೆಗೆ ಶ್ರೀ ವರದೇಶ್ವರ ದೇವಸ್ಥಾನದಲ್ಲಿ ಶ್ರೀಯುತ ಸಿ. ವಿ. ನಾಯ್ಕರ ಅಧ್ಯಕ್ಷತೆಯಿಂದ ಸಭೆಯು ಸೇರಿತು. ಅನೇಕ ಚರ್ಚೆಗಳು ನಡೆದು ಕಡೆಗೆ ಶ್ರೀ ದೇವಸ್ಥಾನದ ಮುಂದಿನ ಅಭಿವೃದ್ಧಿ ಕುರಿತು ಈ ಕೆಳಗಿನ ಠರಾವುಗಳು ಸರ್ವಸಮ್ಮತದಿಂದ ಮಂಜೂರು ಮಾಡಲಾಯಿತು.

ಶ್ರೀ ದೇವಸ್ಥಾನಕ್ಕೆ ಬ್ರಹ್ಮಕಲಶ ಅಷ್ಟಗಂಧವೂ ವಿಷ್ಣು, ಗಣಪತಿ, ವಗೈರೆ ದೇವರುಗಳ ಬಿಂಬಪ್ರತಿಷ್ಠೆ ಬ್ರಹ್ಮಕಲಶವನ್ನು ರಾಜೇಶ್ರೀ ಅರ್ಕುಳ ಗೋವಿಂದ ಶ್ಯಾನಭಾಗರು ತಾನು ಮಾಡಿಸುತ್ತೇನಾಗಿ ವಾಗ್ದಾನ ಮಾಡಿದ ಪ್ರಕಾರ ಸದರಿ ಬ್ರಹ್ಮಕಲಶವನ್ನು ಏಪ್ರಿಲು ವ, ಮೇ ತಿಂಗಳಲ್ಲಿ ಶುಭದಿವಸ ನೋಡಿ ಮಾಡಿಸಬಹುದಾಗಿ ನಿರ್ಣಯಿಸಲಾಯಿತು:—

ಕಳೆದ ನೆರೆ ಹಾವಳಿಯಿಂದ ದೇವಸ್ಥಾನದ ಬಡಗು ಬಿಕ್ಕಿನ ಪೌಳಿಯು ಸ್ವಲ್ಪ ನಾದುರಸ್ತಿಯಾದ್ದನ್ನು ದುರಸ್ತಿ ಮಾಡಿಸುವ ಖರ್ಚು ತಾನು ಕೊಡುತ್ತೇನಾಗಿ ಶ್ರೀಯುತ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರು ಈ ಮೊದಲು ವಾಗ್ದಾನ ಮಾಡಿದ್ದನ್ನೂ ಸದರಿ ಕೆಲಸ ಮಾಡಿಸದೆ ಇರುವುದರಿಂದ ಮುಂದಿನ ದುರಸ್ತಿಯನ್ನು ರಾಜೇಶ್ರಿ ಕೆ. ಕಾಂತಪ್ಪ ಶೆಟ್ಟಿ ಮಾಡಿಸಿ ಅದರ ನ್ಯಾಯವಾದ ಖರ್ಚಿನ ಪಟ್ಟಿಯನ್ನು ಶ್ರೀಯುತ ಧರ್ಮಸ್ಥಳ ಮಂಜಯ್ಯ ಹೆಗ್ಡೆಯರಿಗೆ ಕೊಟ್ಟು ಅವರಿಂದ ಹಣ ಪಡಕೊಳ್ಳಬೇಕಾಗಿ ನಿರ್ಣಯಿಸಲಾಯಿತು.

ಮುಂದೆ ಅಷ್ಟಗಂಧ ಬ್ರಹ್ಮಕಲಶ ವರೆಗೆ ದೇವಸ್ಥಾನದ ನಿತ್ಯ ಪೂಜಾದಿ ವಿನಿಯೋಗಗಳನ್ನು ರಾಜೇಶ್ರಿ ಸುಜೀರ ಗುತ್ತು ಐತಪ್ಪಾಳ್ವರು ತಾನು ಮಾಡಿಸುತ್ತೇನಾಗಿ ವಾಗ್ದಾನ ಮಾಡಿದ ಪ್ರಕಾರ ನಿರ್ಣಯಮಾಡಲಾಯಿತು.

ಈ ವರೆಗೆ [illegible] ತಾ. [illegible] ಕೂಡುವ ಸಭೆಯ ಮುಂದೆ [illegible] ನಿರ್ಣಯಿಸಲಾಯಿತು:—

ಶ್ರೀ ದೇವಸ್ಥಾನದ ಭಂಡಾರಕ್ಕೆ ಹಣ ಕೊಡುತ್ತೇವಾಗಿ ವಾಗ್ದಾನ ಮಾಡಿದ ಮೆಂಬರರಿಂದ ಬಾಕಿ ಇರುವ ಐವೇಜು ವಸೂಲು ಮಾಡುವರೇ ನೇಮಕ ಪಟ್ಟ ದೇವಸ್ಥಾನದ ಮೆಂಬರರು ವಸೂಲು ಮಾಡದೆ ಬಾಕಿ ಇಟ್ಟದ್ದರಿಂದ ಕೆಲವು ಹೊರಗೆ ಸಲುವ ಐವೇಜಿನ ವಹ್ಯಾಯವಾದ್ದರಿಂದ ಸದರಿ ಮೆಂಬರರ ವಾಗ್ದಾನ ಹಣಗಳನ್ನು ವಸೂಲು ಮಾಡುವ ಅಧಿಕಾರವೂ ಇನ್ನು ಹೊಸ ಮೆಂಬರರನ್ನು ಸೇರಿಸುವದಕ್ಕೂ ಇತರ ವಿಧಾನಗಳಿಂದ ಹಣ ಸಂಗ್ರಹಿಸಿ ಹೊರಗೆ ಸಲುವ ಐವೇಜುಗಳನ್ನು ಜಾಮೂತ್ಯಾ ಮೇರೆಗೆ ಸಲ್ಲಿಸಿ ಪಾವತಿ ರಶೀದಿ ಸಮೇತ ಮುಂದೆ ಬರುವ ಬ್ರಹ್ಮಕಲಶ ಮಹಾಸಭೆಗೆ ರಾಜೇಶ್ರಿ ಎನ್. ಎ. ಶೀನಪ್ಪ ಹೆಗ್ಗಡೆಯವರು ಸಭೆ ಮುಂದಿಡಬೇಕಾಗಿ ನಿರ್ಣಯಿಸಿ ವಸೂಲಿ ಮಾಡುವ ಅಧಿಕಾರವನ್ನು ಸರ್ವ ಸಮ್ಮತದಿಂದ ಅವರಿಗೆ ಕೊಡೋಣಾಯಿತು.

ಆದುದರಿಂದ ಬಾಕಿ ಇರುವ ಎಲ್ಲಾ ಮೆಂಬರರು ದಯವಿಟ್ಟು ಬಾಕಿ ಐವೇಜುಗಳನ್ನು ಕಾರ್ಯದರ್ಶಿಯರಾದ ಶ್ರೀಯುತ ಎನ್. ಎ. ಶೀನಪ್ಪ ಹೆಗ್ಗಡೆಯರ ವಶ ವಸೂಲು ಕೊಡಬೇಕಾಗಿ ಈ ಮೂಲಕ ಸಂಘದವರಾದ ನಾವು ವಿಜ್ಞಾಪಿಸಿಕೊಳ್ಳುತ್ತೇವೆ.

ಸಿ. ವಿ. ನಾಯ್ಕ, ಅಧ್ಯಕ್ಷ. | ಎ. ಗೋವಿಂದ ರಾವ್, ಎನ್. ಎ. ಶೀನಪ್ಪ ಹೆಗ್ಗಡೆ, ಜತೆಕಾರ್ಯದರ್ಶಿಯರು.

ಪ್ರಕಟಣೆ.

ಮಂಗಳೂರು ತಾಲೂಕು ಕಾಂಗ್ರೆಸು ಕಮಿಟಿಯ ೧೯೨೬ನೆ ಇಸವಿ ಬಗ್ಗೆ ಪ್ರಥಮ ಸಾಧಾರಣ ಮಹಾ ಸಭೆಯು ತಾ. ೧೪—೨—'೨೬ನೆ ಆದಿತ್ಯವಾರ ಅಪರಾಹ್ನ ಗಂಟೆ ೩ಕ್ಕೆ ಮಂಗಳೂರಲ್ಲಿ ಕರ್ನಾಟಕ ತಿಲಕ ವಿದ್ಯಾಲಯದಲ್ಲಿ ಜರಗುವುದು.

೧೯೨೬ನೆ ಇಸವಿ ಬಗ್ಗೆ ವರ್ಗಣಿ ಕೊಟ್ಟವರು ಆ ಬಗ್ಗೆ ರಶೀದಿ ಸಮೇತ ಹಾಗೆ ವರ್ಗಣಿ ಕೊಡದಿದ್ದವರು ಸದರಿ ವರ್ಗಣಿ ಸಮೇತ ಕೈ ನೂಲಿನಿಂದ ಹಾಗೂ ಕೈಮಗ್ಗದಿಂದ ಮಾಡಿದ ಖಾದಿಯನ್ನು ಧರಿಸಿಕೊಂಡು ಬರಬೇಕಾಗಿ ಸವಿನಯ ವಿನಂತಿ ಸದರಿ ರಶೀದಿ ಇಲ್ಲದೆ ಯಾ ೧೯೨೬ನೆ ಇಸವಿಯ ಸದಸ್ಯರ ಪಟ್ಟಿಯಲ್ಲಿ ಹೆಸರು ಕಾಣದೆ ಇಲ್ಲದವರನ್ನು ಸದಸ್ಯರಾಗಿ ಅಂಗೀಕರಿಸೋಣಾಗಲಾರದು. ಅಂತಹ ಖಾದಿಯನ್ನು ಧರಿಸಿಕೊಂಡು ಬಾರದವರಿಗೆ ಸಭೆಯಲ್ಲಿ ಭಾಗಿಯಾಗಲಿಕ್ಕೆ ಅಧಿಕಾರವಿಲ್ಲ.

ಕಾರ್ಯಕ್ರಮ.

೧. ಕಳೆದ ವರುಷದ ಲೆಕ್ಕ ಮತ್ತು ಕೆಲಸದ ವರದಿ. ೨. ಸದಸ್ಯರಿಂದ ಸಕಾಲದಲ್ಲಿ ಬಂದ ಪ್ರಶ್ನೆಗಳಿಗೆ ಉತ್ತರ. ೩. ನಿಯಮಗಳ ಬದಲಾವಣೆ. ೪. ಸದಸ್ಯರಿಂದ ಸಕಾಲದಲ್ಲಿ ಬಂದ ಸೂಚನೆಗಳು. ೫. ವಾರ್ಷಿಕ ಚುನಾವಣೆ ವ ಖಾಲಿ ಇರಬಹುದಾದ ಸ್ಥಳಗಳ ಚುನಾವಣೆ. ೬. ಬಾಕಿ ವರುಷದ ಪರಿಶೋಧಕರ ಚುನಾವಣೆ. ೭. ಈ ವರುಷದ ಜಿಲ್ಲಾ ಪರಿಷತ್ತು ಮಂಗಳೂರು ತಾಲೂಕಿನಲ್ಲಿ ಆಗಬೇಕಾಗಿ ನಿಶ್ಚಯಿಸಿರುವುದರಿಂದ ಪರಿಷತ್ತಿನ ಸ್ಥಳವನ್ನು ನಿಶ್ಚಯಿಸುವುದು ವ ಆ ಮೊದಲು ಆಗದೆ ಇದ್ದರೆ ಸ್ವಾಗತಮಂಡಳಿಯನ್ನು ಸ್ಥಾಪಿಸುವುದು. ೮. ತಾಲೂಕು ಪರಿಷತ್ತನ್ನು ಮಾಡುವ ವಿಷಯ. ೯. ಅಧ್ಯಕ್ಷರ ಅನುಮತಿಯಿಂದ ಸಭೆಯ ಮುಂದೆ ಬರಬಹುದಾದ ಇತರ ಜರೂರು ವಿಷಯಗಳು.

ವಿ. ಸೂ.—೧. ಪ್ರಶ್ನೆಗಳನ್ನು ಕೇಳಲಿಕ್ಕೆ ಇಚ್ಛೆ ಇದ್ದವರು ಅವುಗಳ ಯಥಾ ನಕಲುಗಳನ್ನು ತಾ. ೩೧—೧—೧೯೨೬ರ ವಳಗೆ ಈ ಕಚೇರಿಗೆ ತಲ್ಪುವ ಹಾಗೆ ಕಳುಹಿಸಬೇಕಾಗಿ ವಿನಂತಿ. ೨. ನಮ್ಮ ತಾಲೂಕಿನಲ್ಲಿ ಮಂಗಳೂರು ಪಟ್ಟಣ ಬಿಟ್ಟು ಇತರ ಸ್ಥಳಗಳಲ್ಲಿ ಪರಿಷತ್ತನ್ನು ಕರೆಯಲಿಕ್ಕೆ ಇಚ್ಛಿಸುವವರು ಅಲ್ಲಿಯ ಸ್ಥಳೀಕರ ಅನುಭವ ಪಡಕೊಂಡು ಈ ಕಚೇರಿಗೆ ತಾ. ೭—೨—೧೯೨೬ರ ವಳಗೆ ಇಲ್ಲಿಗೆ ತಲ್ಪುವ ಹಾಗೆ ಬರಿಯಬೇಕಾಗಿ ವಿನಂತಿ. ೩. ನಮ್ಮ ಕರ್ನಾಟಕ ತಿಲಕ ವಿದ್ಯಾಲಯವನ್ನು ಮುಂದರಿಸಲೇಬೇಕೆಂದು ಕಳೆದ ಮಹಾಸಭೆಯಲ್ಲಿ ನಿಶ್ಚಯಿಸಿರುವದರಿಂದ ಮಹಾಜನರೆಲ್ಲರೂ ಮೊದಲಿನಂತೆಯೇ ಪ್ರೋತ್ಸಾಹಿಸಬೇಕಾಗಿ ಸವಿನಯ ವಿನಂತಿ. ೪. ಕಾರ್ಯಕ್ರಮದಲ್ಲಿ ೨ರಲ್ಲಿ ಕಾಣುವ ಪ್ರಶ್ನೆಗಳ ವ ೩ ಮತ್ತು ೪ರಲ್ಲಿ ಕಾಣಿಸಿದವುಗಳ ನಕಲುಗಳು ತಾ. ೭—೨—೧೯೨೬ರ ಮೇಲೆ ಕಚೇರಿಯ ಪ್ರಕಟಣೆಯ ಹಲಗೆಯ ಮೇಲೆ ಇರುವವು.

ಮು. ತಾ. ಕಾ. ಕಚೇರಿ, ಮಂಗಳೂರು, ೧೯—೧—'೨೬ } ಕಾರ್ಯದರ್ಶಿ.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು!

ವಿಳಾಸ:— ಡಿ. ಲ್ಯೂಲಸ್ ಮಾರ್ಟ್, ಮಂಗಳೂರು.

ಸ್ಫುಟ ವಿಚಾರಗಳು.

ಲಾರ್ಡ ಕಾರ್ಮಿಕಯೇಲರ ನಿಧನ.

ಕಳೆದ ತಾ. ೧೬ರಲ್ಲು ಲೊರ್ಡ ಕಾರ್ಮಿಕಯೇಲರವರು ಲಂಡನಿನಲ್ಲಿ ಪರಂಧಾಮವನ್ನೈದಿದರೆಂದು ತಿಳಿಯಲು ನಾವು ತುಂಬಾ ವಿಷಾದಪಡುತ್ತೇವೆ. ೧೯೧೧ರಲ್ಲಿ ಮದ್ರಾಸಿನ ಗವರ್ನರರಾಗಿ ಇವರು ನಮ್ಮನಾಳಿರುವರು. ಆ ಮೇಲೆ ಬಂಗಾಳದ ಗವರ್ನರರಾಗಿ ಇವರು ನೇಮಕಹೊಂದಿರುವರು. ಇವರ ಆಡಳಿತದ ವಿಷಯದಲ್ಲಿ ನಮಗೆ ವಿಶೇಷವೇನೂ ಹೇಳಲಿರುವುದಿಲ್ಲ. ಅಂತೂ ಹಿಂದೂಸ್ಥಾನದೊಡನೆ ಒಂದು ಬಾರಿ ನಿಕಟ ಸಂಬಂಧವಿದ್ದ ಈ ಪುರುಷರ ನಿಧನಕ್ಕೆ ನಾವು ನಮ್ಮ ವಿಷಾದವನ್ನು ಪ್ರಕಟಿಸಿದಿರಲಾರೆವು.

ಹಿಂದೂ-ಮುಸಲ್ಮಾನರ ಐಕ್ಯವೂ ಮೌಲನ ಶೌಕತ್ ಅಲ್ಲಿಯವರೂ—

ಹಿಂದೂ-ಮುಸಲ್ಮಾನ ಸಮಸ್ಯೆಯು ಗಡುತರವಾಗಿ ಬೆಳೆದಷ್ಟಕ್ಕೆ ಆ ಸಮಸ್ಯೆಯನ್ನು ಮುಂದೆ ತಾರದೆ ಮರೆತುಬಿಡಲು ಹಲವು ಧುರೀಣರು ಪ್ರಯತ್ನಿಸುತ್ತಾರೆ. ಮತ್ತೆ ಕೆಲವರು, ಇದರ ಮೂಲಕ ಪರರ ಮೇಲಿನ ಸಂಶಯ ಮತ್ತು ತಿರಸ್ಕಾರವನ್ನು ತೋರಿಸಿ ಇದನ್ನು ಮತ್ತಷ್ಟು ಜ್ವಲಿಸಿಬಿಡುವರು. ಆದರೆ ಮೌ॥ ಶೌಕತ್ ಅಲ್ಲಿಯವರು ಈ ವಿಷಯದಲ್ಲಿ ಚಿಂತಿತರಿದ್ದುದು ಅಭಿನಂದನೀಯವಾಗಿದೆ.

"ಸ್ವಂತಕ್ಕಾಗಿ, ಅಧಿಕಾರಕ್ಕಾಗಿ ಹೆಣಗಾಡುತ್ತಿರುವ ಸ್ವಾರ್ಥಿ ಮುಂದಾಳುಗಳೇ ತಮ್ಮ ಖಾಸಗಿ ಪ್ರಯೋಜನಕ್ಕಾಗಿ ಜನತೆಯನ್ನು ಕಲಹಕ್ಕೆಬ್ಬಿಸುತ್ತಿರುವರು.

ಎಲ್ಲಾ ತರದ ಜಾತೀಯ ಮತ್ಸರಸಾಧನೆಗಳಲ್ಲಿ ಇದೇ ಪ್ರಮುಖವಾದ ಕಾರಣವಾಗಿರುತ್ತದೆ ಎಂಬುದನ್ನು ನಾವು ಸೂಕ್ಷ್ಮವಾಗಿ ವಿಚಾರಿಸಿದರೆ ತಿಳಿಯುವುದು. ಜಾತೀಯ ಹಿತವೆಂದು ಬೊಬ್ಬಿಟ್ಟು ಮುಂದೆಬರುವ ಹಲವು ಧುರೀಣರೆನ್ನಿಸಿಕೊಳ್ಳುವವರನ್ನು ಚೆನ್ನಾಗಿ ಪರಿಶೀಲಿಸಿದರೆ, ಈ ಜಾತೀಯ ವ್ಯಾಮೋಹದ ಮಾಯೆಯನ್ನು ಕಳಚಿದರೆ, ಅವರಲ್ಲಿ ಪ್ರಶಂಸನೀಯವಾದುದೇನೂ ಇಲ್ಲವೆಂದೂ, ಇವರು ಜಾತಿಗಾಗಿ ಯಾವದೊಂದು ತ್ಯಾಗವನ್ನೂ ಮಾಡಿಲ್ಲವೆಂದೂ, ಇನ್ನೂ ಮಾಡುವವರಲ್ಲವೆಂದೂ ತಿಳಿಯಬಹುದು. ಜಾತೀಯತೆಯಲ್ಲದಿದ್ದರೆ ಹಲವು ಜಾತೀಯ ಮುಂದಾಳುಗಳೆನ್ನಿಸಿಕೊಳ್ಳುವವರು ಅಧಿಕಾರದಿಂದ ಕೆಳಗಿಳಿಯಬೇಕಾಗುವುದು.

ಮೌಲಾನಾ ಶೌಕತ್ ಅಲ್ಲಿಯವರ ಮುಂಬಾಯಿ ಕ್ರೊನಿಕಲ್ಲಿಗೆ ಈ ರೀತಿಯಲ್ಲಿ ಕೊಟ್ಟ ಅಭಿಪ್ರಾಯಗಳು ಅತೀ ಉತ್ತಮವಿವೆ.

ಗೈಕವಾಡರವರ ಜ್ಯುಬಿಲಿ ಮಹೋತ್ಸವ

ಬರೋಡಾ ಮಹಾರಾಜರಾದ ಗೈಕವಾಡರವರ ಆಳುವಿಕೆಯ ಐವತ್ತನೆಯ ವರ್ಧಂತಿಯು ಅತೀ ವಿಜೃಂಭಣೆಯಿಂದ ನಡೆಯಿತು. ಮಹಾರಾಜರವರು ತೀಕ್ಷ್ಣ ರಾಜತಂತ್ರಜ್ಞರೆಂದೂ, ಪ್ರಜಾವತ್ಸಲರೆಂದೂ ಹೆಸರು ಹೊಂದಿರುವರು. ಅವರು ತಮ್ಮ ಆಳುವಿಕೆಯಲ್ಲಿ ಜನರ ವಿದ್ಯಾಭ್ಯಾಸ ಮತ್ತು ಆರ್ಥಿಕ ಉನ್ನತಿಯ ಬಗ್ಗೆ ಅನೇಕ ಸುಧಾರಣೆಗಳನ್ನು ನಡೆಸಿರುವರಾಗಿ ನಾವು ತಿಳಿಯುತ್ತೇವೆ. ಆದರೆ ಇತ್ತೀಚೆಗೆ ಅವರ ಪೂರ್ವದ ಉತ್ಸಾಹವು ಕಡಿಮೆಯಾದಂತೆ ಕೆಲವು ಸೂಚನೆಗಳು ತಲೆದೋರಿವೆ. ರಾಜವಂಶಗಳ ಈಗಿನ ಫ್ಯಾಶನುಗಳಂತೆ ಬರೋಡಾ ಮಹಾರಾಜರೂ ಇಂಗ್ಲೆಂಡಿಗೆ ಹೋಗಿ ಮನೆ ಕಟ್ಟಿ ವರ್ಷಗಟ್ಟಲೆಯಲ್ಲಿ ನಿಂತು ಪ್ರಜೆಗಳನ್ನು ಪೋಸ್ಟು ಮೂಲಕ ಆಳುವ ಅಭ್ಯಾಸವು ಮಹಾರಾಜರಲ್ಲಿಯೂ ಉಂಟಾದಂತೆಯೂ, ಪ್ರಜೆಗಳ ಹಿತಸಾಧನೆಯು ಸ್ವಲ್ಪಮಟ್ಟಿಗೆ ಹಿಂದೆ ಬಿದ್ದಂತೆಯೂ ತೋರಬಂದಿದೆ. ಆದರೆ ಈಗಿನ ಈ ವಿಜೃಂಭಣೆಯ ಮಹೋತ್ಸವವು ಅವರಲ್ಲಿ ಕರ್ತವ್ಯಪಾಲನೆಯ ದೀಕ್ಷೆಯನ್ನು ಪ್ರೇರಿಸುವುದೆಂದು ನಾವು ಆಶಿಸುವೆವು.

ಈ ಸಮಾರಂಭದ ಸಮಯದಲ್ಲಿ ಕೀರ್ತಿಮಂದಿರವೆಂಬ ಕಟ್ಟೋಣಕ್ಕೆ ಅಡಿಗಲ್ಲನ್ನು ಹಾಕಿದುದೂ ಒಂದು ವಿಶೇಷದ ವಿಷಯ. ಕೀರ್ತಿಮಂದಿರವು, ಬರೋಡದೊಡನೆ ಸಂಬಂಧವಿದ್ದ ಮಹಾಪುರುಷರ ಭಾವಚಿತ್ರಗಳನ್ನೂ, ಪಾಷಾಣ ಪ್ರತಿಮೆಗಳನ್ನೂ ಇಡುವ ಉದ್ದೇಶದಿಂದ ಕಟ್ಟಲ್ಪಡುವುದು. ಈ ಸಮಯದಲ್ಲಿ ಮಹಾರಾಜರು ಮಾಡಿದ ಭಾಷಣವೂ ಭಾವಗರ್ಭಿತವಿದ್ದಿತು.

"ಮಹಾಪುರುಷರ [illegible] ಮೇಲೆ [illegible] ಇಲ್ಲ. ಅವರ ಹೆಸರುಗಳು ಮರೆತು ಹೋದರೂ ಅವರ ನಡತೆಯ ಪರಿಣಾಮವು ಮನಸ್ಸಿನಿಂದ ಮನಸ್ಸಿಗೆ ಹರಿಯುತ್ತದೆ. • • • • ಈ ಕೀರ್ತಿಮಂದಿರ ಅರ್ಥಾತ್ ಈ ಸ್ಮಾರಕ ಮಂದಿರವನ್ನು ಸ್ಥಾಪಿಸುವುದರಿಂದ ನಾವು ಲೋಕದ ಮಹಾಪುರುಷರ ಉತ್ತಮ ಅನುಭೂತಿಯನ್ನು ಕಡುವೆವು". ಎಂದು ಭಾಷಣವನ್ನು ಆರಂಭಿಸಿ, ತನ್ನ ಪೂರ್ವಜರ ಮೇಲಿನ ಪೂಜ್ಯಬುದ್ಧಿಯನ್ನು ಪ್ರಕಟಿಸಿ, ಮಹಾಪುರುಷರನ್ನು ಗೌರವಿಸುವುದನ್ನು ವಿಸ್ತರಿಸಿ—"ನಾವು ಕರ್ತವ್ಯಕರ್ಮಗಳ ಮತ್ತು ವೈಯಕ್ತಿಕ ಸುಗುಣಗಳ ಪರಮಾರ್ಥವನ್ನು ಗೌರವಿಸುವ ಇದರಲ್ಲಿ ಸಮಾಜಭೇದಗಳಾಗಲಿ, ಸಾಂಸಾರಿಕ ಘಟನೆಗಳಾಗಲಿ ಅಭ್ಯಂತರವನ್ನೊಡ್ಡದಿರಲಿ" ಎಂದು ಹೇಳಿ ಗಾಯತ್ರಿ ಮಂತ್ರದ ಪುನರುಚ್ಚರಣೆಯಿಂದ ತಮ್ಮ ಭಾಷಣವನ್ನು ಅಷ್ಟೈರುಪಡಿಸಿ ಮಹಾರಾಜರು ಕೀರ್ತಿಮಂದಿರಕ್ಕೆ ಅಡಿಗಲ್ಲನ್ನು ಹಾಕಿದರು.

ವಿಲಾಯತಿ ಜನರ ಕ್ರಮ

ವಿಲಾಯತಿ ಸಾಮಾನುಗಳು ಎಷ್ಟೇ ಪ್ರಿಯವಾದರೂ ನಮ್ಮ ಜನರಿಗೆ ಅವುಗಳ ಮೇಲೆಯೇ ಶ್ರದ್ಧೆ ಹೆಚ್ಚು. ಯುದ್ಧದ ಸಮಯದಲ್ಲಿ ಪ್ರತಿ ವಿಲಾಯತಿ ಸಾಮಾನಿಗೆ ಕ್ರಯ ಒಂದಕ್ಕೆ ನಾಲ್ಕಾರು ಪಾಲಷ್ಟು ಹೆಚ್ಚಾಯಿತು. ಆದರೆ ನಾವು ಬಹಳ ಶ್ರದ್ಧೆಯಿಂದ ಅವರ ಸಾಮಾನುಗಳನ್ನೆ ಕ್ರಯಕ್ಕೆ ಪಡಕೊಂಡೆವಲ್ಲದೆ ಇಲ್ಲಿ ಅವುಗಳನ್ನು ತಯಾರಿಸಲು ಬೇರೆ ಪ್ರಯತ್ನಿಸಲಿಲ್ಲ. ಸಕ್ಕರೆಗೆ ಯುದ್ಧದ ಪೂರ್ವದಲ್ಲಿ ಸೇರಿಗೆ ಒಂದಾಣೆ ಇದ್ದದ್ದು ಯುದ್ಧದ ಸಮಯದಲ್ಲಿ ನಾಲ್ಕಾಣೆ ವರೆಗೆ ಆದರೂ ನಮ್ಮ ಜನರಿಗೆ ಅದನ್ನು ಇಲ್ಲಿ ತಯಾರಿಸುವ ಆಲೋಚನೆಯಾಗಲಿಲ್ಲ. ನಮ್ಮ ದೇಶವು ಕೃಷಿದೇಶವೆಂದು ಹೆಸರು ಹೋಗಿಯದೆ. ನಮ್ಮಲ್ಲಿ ಕಬ್ಬು ಸಾಧಾರಣವಾಗಿ ಬೇಕಷ್ಟು ಬೆಳೆಯುತ್ತಿದೆ. ಕಬ್ಬಿನ ವ್ಯವಸಾಯವನ್ನು ಹೆಚ್ಚಿಸಿದರೆ ಪರದೇಶದಿಂದ ಬರುವ ಸಕ್ಕರೆಯನ್ನು ಪೂರ್ಣವಾಗಿ ನಿಲ್ಲಿಸುವಷ್ಟು ಕೂಡ ಮಾಡಬಹುದಿತ್ತು. ಆದರೆ ಆ ಉತ್ತಮ ಸಂದರ್ಭವನ್ನು ನಮ್ಮ ದೇಶವು ಕಳಕೊಂಡು, ಈಗ ಪರದೇಶದ ಅಡಿಯಲ್ಲಿಯೇ ಸಕ್ಕರೆಗಾಗಿ ಬಿದ್ದಿರಬೇಕು. ನಮ್ಮ ಕ್ರಮ ಹೀಗೆ.

ವಿಲಾಯತಿ ಕ್ರಮವು ಹೀಗಲ್ಲವೆಂದು ಈಗಿನ ರಬ್ಬರ ವ್ಯಾಪಾರವನ್ನು ನೋಡಿದರೆ ತಿಳಿಯುವುದು. ರಬ್ಬರ ವ್ಯವಸಾಯವು ಬ್ರಿಟಿಷರ ಕೈಯಲ್ಲಿದೆ. ಈಗ ರಬ್ಬರಿನ ಬೆಲೆ ಸ್ವಲ್ಪ ಸಮಯದಲ್ಲಿ ಬಹಳವಾಗಿ ಏರಿಹೋಗಿಯದೆ. ಅಮೇರಿಕದಲ್ಲಿ ಮೋಟರಕಾರುಗಳ ಖರ್ಚು ಮಿಲಿಯಗಟ್ಟಲೆಯನ್ನು ಮೀರಿವೆ. ಅವುಗಳ ಟಾಯರುಗಳಿಗಾಗಿ ಅವರಿಗೆ ರಬ್ಬರು ಬೇಕು. ಈಗ ರಬ್ಬರಿಗೆ ಬೆಲೆ ಏರಿದುದರಿಂದಲೂ, ಬ್ರಿಟಿಷರೇ ಅದರ ಮಾಲೀಕರಾದುದರಿಂದಲೂ, ಅಮೇರಿಕದ ಮೋಟರ ವ್ಯಾಪಾರಸ್ಥರು ರಬ್ಬರನ್ನು ತಾವೇ ಬೆಳಿಸುವ ಹಾಗೆ ನಿರ್ಣಯಿಸಿದ್ದಾರೆ. ಇದಕ್ಕಾಗಿ ಮಿಲಿಯಗಟ್ಲೆ ಡೊಲರನ್ನು ತೆಗೆದಿಟ್ಟು 1930ನೇ ಇಸವಿಯೊಳಗೆ ಅಮೇರಿಕಕ್ಕೆ ಬೇಕಷ್ಟು ರಬ್ಬರನ್ನು ಬೆಳಿಸುವಂತೆ ಅವರು ಒಂದು ತಿಂಗಳೊಳಗೆ ನಿರ್ಣಯಿಸಿ ಬಿಟ್ಟರು. ಇಂತಹ ಕಾರ್ಯದಕ್ಷತೆ ಇದ್ದುದರಿಂದಲೇ ಅಮೇರಿಕವು ಲೋಕದಲ್ಲೆಲ್ಲಾ ಶ್ರೀಮಂತವಾಯಿತು. ಇದು ಇಲ್ಲದುದರಿಂದಲೇ ಹಿಂದುಸ್ಥಾನಕ್ಕೆ ನೈಸರ್ಗಿಕ ಬಲವಿದ್ದರೂ ಬಡವಾಗುತ್ತ ಬಂದಿತು.

ಸ್ವರಾಜ್ಯಪಕ್ಷದ ಅಧ್ಯಕ್ಷರು ಏನು ಮಾಡಬಹುದು?

ಶ್ರೀಯುತ ವಿ. ಜೆ. ಪಟೇಲರೆಂದರೆ ಎಲ್ಲರಿಗೂ ತಿಳಿದವರೇ ಇರುವರು. ಇವರು ಉತ್ತಮ ಭಾವನೆಯ ಸ್ವರಾಜ್ಯಪಕ್ಷೀಯರೂ, ಅನುಪಮ ದೇಶಭಕ್ತರೂ ಆಗಿರುವರೆಂಬುದು ನಿಸ್ಸಂದೇಹವಿದೆ. ಇವರು ಲೆಜಿಸ್ಲೇಟಿವ್ ಎಸೆಂಬ್ಲಿಗೆ ಆರಿಸಲ್ಪಟ್ಟ ದಿನದಿಂದ ಸರಕಾರಕ್ಕೆ ಪ್ರಶ್ನೆಗಳ ಮೂಲಕವೂ, ಪ್ರತ್ಯುತ್ತರಗಳ ಮೂಲಕವೂ, ತರ್ಕಗಳ ಮೂಲಕವೂ ಹಿಂದೀ ರಾಷ್ಟ್ರೀಯತೆಯನ್ನು ಸಾಧಿಸಿ ತೊಂದರೆ ಕೊಡುತ್ತಿದ್ದರೆಂಬುದು ಎಸೆಂಬ್ಲಿಯ ಇತಿಹಾಸವನ್ನು ಬಲ್ಲವರು ತಿಳಿದಿರುವರು. ಬಂಗಾಳದ ಶ್ರೀ ಸುಹ್ರವರ್ದಿಯರಂತಾಗಲಿ, ಮಧ್ಯಪ್ರಾಂತದ ತಾಂಬೆಯವರಂತಾಗಲಿ ಅಧಿಕಾರ ಪದವಿಗಳ ಅಭಿಲಾಷೆಯಿಂದಿರದೆ, ಇವರು ನಿಜವಾದ ರಾಷ್ಟ್ರೀಯ ಭಾವನೆಯಿಂದ ಎಸೆಂಬ್ಲಿಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಶ್ರೀಯುತ ಕೇಳ್ಕರರಂತಹರಿಗೆ ಕಲ್ಲೂ ರತ್ನವೂ ಒಂದಾಗಿಯೇ ತೋರಿದರೂ, ತಾಂಬೆಯವರು ಶ್ರೀಯುತ ಪಟೇಲರ ಹಿಂದೆ ಬರುವಷ್ಟು ಕೂಡ ಯೋಗ್ಯರಲ್ಲವೆಂದು ಇಷ್ಟರವರೆಗೆ ನಡೆದ ವಿದ್ಯಮಾನಗಳಿಂದ ತಿಳಿಯಬಹುದು. ಎಸೆಂಬ್ಲಿ ಅಧ್ಯಕ್ಷನಿಗೆ, ಸರಕಾರಕ್ಕೆ ಮೆಂಬರರು ಹಾಕುವ ಪ್ರಶ್ನೆಗಳನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ಸಂಪೂರ್ಣ ಅಧಿಕಾರವಿದೆ. [illegible] ಸರಕಾರಕ್ಕೆ [illegible] ಕಾರಕ್ಕೆ ಪಟೇಲರ ಮೇಲೆ ಏನೊಂದು ಸಿಟ್ಟುವವಿಲ್ಲ. ಆದರೆ ಈ ಬಾರಿ ನಡೆದ ಒಂದು ಘಟನೆಯು ಪಟೇಲರಿಗೂ ಸ್ವರಾಜ್ಯ ಪಕ್ಷಕ್ಕೂ ಯಶಸ್ಸನ್ನು ತರುವ ವಿಷಯವಾಗಿದೆ. ಲಿಬರಲ ಪಕ್ಷದಲ್ಲಿಯೂ, ಲಿಬರಲ್ ಆಗಿರುವ ಸರ್. ಶಿವಸ್ವಾಮಿ ಐಯ್ಯರರು ಹಿಂದುಸ್ಥಾನಕ್ಕೆ ಲೊಕಾರ್ನೊ ಕಾನ್ಫರೆನ್ಸಿನಿಂದ ಉಂಟಾಗುವ ಖರ್ಚಿಗೆ ಬಾಧ್ಯತೆಯಿರಬಾರದಾಗಿ ತಂದ ಸಾಮಾನ್ಯ ಠರಾವನ್ನು ಕೂಡ ಸರಕಾರವು ಸ್ವೀಕರಿಸಲೊಪ್ಪಲಿಲ್ಲ. ಬ್ರಿಟಿಷ ಸಮ್ರಾಟನಿಗೂ, ಪರದೇಶದ ಸರಕಾರಗಳಿಗೂ ಇರುವ ಸಂಬಂಧಕ್ಕೆ ತೊಂದರೆಯಾಗುತ್ತದೆಂದು ವ್ಯಾಸರಾಯರು ಸದ್ರಿ ಠರಾವನ್ನು ಮುಂದೆ ತರಲೊಪ್ಪಲಿಲ್ಲ. ಈಗ ಅದೇ ವಿಷಯದಲ್ಲಿನ ಪ್ರಶ್ನೆಯನ್ನು ಶ್ರೀ ರಾಮಚಂದ್ರರಾಯರು ತರುವವರಿದ್ದಾರೆ. ಪ್ರಶ್ನೆಯನ್ನು ತರುವುದಕ್ಕೆ ಒಪ್ಪಿಗೆ ಕೊಡುವ ಅಧಿಕಾರವು ಎಸೆಂಬ್ಲಿ ಅಧ್ಯಕ್ಷರದಾಗಿದೆ. ಶ್ರೀಯುತ ಪಟೇಲರು ತಮ್ಮ ಈ ಅಧಿಕಾರವನ್ನು ಧೈರ್ಯದಿಂದ ಉಪಯೋಗಿಸಿ, ಆ ಪ್ರಶ್ನೆಗೆ ಸರಕಾರವು ಉತ್ತರ ಕೊಡುವಂತೆ ಮಾಡಿರುವರು.

ಅಲ್ಲದೆ ಕೆಲವು ಸಮಯದ ಹಿಂದೆ ನಡೆದ ಚುನಾಯಿಸಲ್ಪಟ್ಟ ಲೆಜಿಸ್ಲೇಟಿವ್ ಅಧ್ಯಕ್ಷರ ಪರಿಷತ್ತಿನಲ್ಲಿಯೂ ಇವರು ಅಧ್ಯಕ್ಷತನದ ಸ್ವಾತಂತ್ರ್ಯದ ವಿಷಯ ಬಹಳ ಪರಿಶ್ರಮಪಟ್ಟಿರುವರಾಗಿಯೂ ತಿಳಿಯುತ್ತೇವೆ.

ಮುಂಬಾಯಿ ಸ್ವರಾಜ್ಯಪಕ್ಷ.

ಶ್ರೀಯುತ ಕೇಳ್ಕರರ ಮತ್ತಿತರ ಮುಖಂಡ ವೀರತೆಯ ಪ್ರದರ್ಶನದಲ್ಲಿ ಸ್ವರಾಜ್ಯ ಪಕ್ಷವೂ, ರಿಸ್ಪೊನ್ಸಿವ್ ಕೊ-ಒಪರೇಶನ್ ವಾದಿಗಳ ಪಕ್ಷವೂ ಜನತೆಯ ಸಮ್ಮುಖದಿಂದ ಅಳಿದು ಹೋಗುತ್ತಿದೆಯೆಂಬುದನ್ನು ಯಾರೂ ಲಕ್ಷಿಸುವಂತೆ ಕಾಣುವುದಿಲ್ಲ. ಈ ವರೆಗೆ ಚುನಾವಣೆ ಸಮಯದಲ್ಲಿ ಜನರಿಗೆ ಉತ್ಸಾಹವಿತ್ತು; ಸ್ವರಾಜ್ಯಪಕ್ಷವೆಂಬ ಅಭಿಮಾನವಿತ್ತು; ಸರಕಾರವನ್ನು ಪ್ರತಿರೋಧಿಸಬೇಕೆಂಬ ಇಚ್ಛೆಯೂ ಇತ್ತು. ಧುರೀಣರ ಅಧಿಕಾರದ ಸ್ವಾರ್ಥದಿಂದ ಎಲ್ಲರಿಗೂ ಧುರೀಣರ ಮೇಲಿನ ವಿಶ್ವಾಸವೇ ಆರಿ ಹೋಗಿಯದೆ. ಇಂದು ಸ್ವರಾಜ್ಯಪಕ್ಷೀಯನಾದರೆ ನಾಳೆ ರಿಸ್ಪೊನ್ಸಿವ್ ಕೊ-ಒಪರೇಶನ್ ಪಕ್ಷ, ನಾಳದು ಮಂತ್ರಿ; ಆ ಮೇಲೆ ಎಕ್ಸಿಕ್ಯೂಟಿವ್ ಕೌನ್ಸಿಲರ. ಹೀಗೆ ಮುಂದಾಳುಗಳು ಜನತೆಯ ದೇಶಪ್ರೇಮದ ಪ್ರಥಮ ಮೆಟ್ಲನ್ನು ತುಳಿದು, ಸರಕಾರ ಅಧಿಕಾರದ ಕಡೆಯ ಮೆಟ್ಲನ್ನು ಏರುವುದನ್ನು ನೋಡಿ ಜನರಿಗಾದರೂ ಬೇಸರವಾಗದೆ ಇರುವುದಿಲ್ಲ. ಅಂತಃ-ಕಲಹಗಳ ಈ ತೆರದ ಪರಿಣಾಮವನ್ನು ಯಾರೂ ಲಕ್ಷಿಸುವಂತೆ ಕಾಣುವುದಿಲ್ಲ. ಮುಂಬಾಯಿ ಸ್ವರಾಜ್ಯಪಕ್ಷದವರು ತಾವು ಅಲ್ಪಸಂಖ್ಯಾಕರಿದ್ದು ಎಷ್ಟು ಕಷ್ಟಪಡುತ್ತಿರುವೆವೆಂಬುದನ್ನು ತಿಳಕೊಂಡಂತೆ ತೋರುವುದಿಲ್ಲ. ಅಲ್ಪಸಂಖ್ಯಾಕರಿಗೆ ಸರಕಾರವು ಕರೆಯುವುದಾದರೂ ಏಕೆ? ಇಂತಹ ಪರಿಹಾಸಾತ್ಮಕ ಸ್ಥಿತಿಯಲ್ಲಿಯೇ ಮುಂಬಾಯಿ ಸ್ವರಾಜ್ಯ ಪಕ್ಷೀಯರೂ ರಿಸ್ಪೊನ್ಸಿವ್ ಕೊ-ಒಪರೇಶನಿನ ಪಲ್ಲವಿಯನ್ನೆತ್ತಿದುದು ವಿಷಾದಕರ. ಮುಂದಿನ ಚುನಾವಣೆಯು ಪಕ್ಷೀಯ ಹೋರಾಟದಲ್ಲಿ ನಡೆಯುವುದಕ್ಕಿಂತಲೂ ವೈಯಕ್ತಿಕ ಸಾಧನೆಗಳಲ್ಲಿಯೇ ನಡೆದು ಹಾನಿಕರವಾಗಿ ಪರಿಣಮಿಸುವುದಾಗಿ ತೋರುತ್ತಿದೆ.

ಯಕ್ಷಗಾನೋಜ್ಜೀವಿನೀ ಪರಿಷತ್ತು.

ನಮ್ಮ ಜಿಲ್ಲೆಯ ಹಲವು ಪ್ರಮುಖ ವಾಙ್ಮಯ ಸೇವಕರು ಪೂರ್ವದ ಕಾಲಕ್ಷೇಪ ಕ್ರಮವನ್ನು ಪುನರುಜ್ಜೀವಿಸಲು ನಿರತರಾದುದು ಸಂತೋಷಕರವಾಗಿದೆ. ಯಕ್ಷಗಾನವು ಹಿಂದಿನ ಜನತೆಯೊಳಗೆ ಪುರಾಣ ಮತಗಳನ್ನು ಪ್ರಸರಿಸುವ ಉತ್ತಮವಾದ ವಿಧಾನ. ಇದರಿಂದ ಜನ ಸಾಮಾನ್ಯತೆಯೊಳಗೆ ಉತ್ತಮವಾದ ವಿದ್ಯಾಪ್ರಸಾರವು ನಡೆಯುತ್ತಿದೆ. ಈಗಿನ ನಾಗರಿಕತೆಯ ನವರುಚಿಗಳು ಜನತೆಯೊಳಗೆ ಹೆಚ್ಚೆಚ್ಚಾಗಿ ನೆಲಸಲಾರಂಭವಾದಂದಿನಿಂದ, ಈ ಯಕ್ಷಗಾನವು ಹಿಂದೆ ಸರಿಯಲಾರಂಭಿಸಿತು. ಯಕ್ಷಗಾನಕ್ಕೆ ಪ್ರಾಪ್ತವಾಗುತ್ತಿದ್ದ ಈ ದುರ್ದಶೆಯನ್ನು ಕಂಡು ಮಂಗಳೂರಿನ ಪ್ರಮುಖ ವಾಙ್ಮಯ ಸೇವಕರೇ ಕೈಕೊಟ್ಟುದು ಅವರ ದೂರದರ್ಶಿತೆಯ ಶುಭಚಿಹ್ನವಾಗಿದೆ. ಅಷ್ಟರಲ್ಲಿಯೇ ಕುಂದಾಪುರದ ನಮ್ಮ ಭ್ರಾತೃಗಳು ಈ ಪರಿಷತ್ತನ್ನು ಶ್ರೀ. ಹೊಸಕೊಪ್ಪ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಕೂಡಿಸಿ ಯಶಸ್ವಿಯಾಗಿ ಮಾಡಿದುದೂ ಅಭಿನಂದನೀಯ, ಬಹುಮಾನಗಳ ವಿತರಣೆಯಿಂದ ಯಕ್ಷಗಾನದ ಕಲೆಗೆ ಹೊಸ ಹುರುಪು ಉಂಟುಮಾಡಿದುದಕ್ಕೆ ಕುಂದಾಪುರವನ್ನು ಧನ್ಯವೆನ್ನಬೇಕು. ಯಕ್ಷಗಾನವು ಚಿರಕಾಲ ಬಾಳಲಿ.

ಅನುಕ್ರಮಣಿಕೆ.

ಅಗ್ರಲೇಖ — ಪುಟ
ಹಿಂದುಸ್ಥಾನದಲ್ಲಿ ಸಹಕಾರ ೬
ವರ್ಣ ಭೇದ . . . . . ,,
ಸ್ಫುಟವಿಚಾರಗಳು ೫
ವರ್ತಮಾನಸಂಗ್ರಹಗಳು—
ವಿದೇಶ, ಒಳದೇಶ ೭
ದಕ್ಷಿಣ ಕನ್ನಡ— ಉಡುಪಿ, ಆರಳ ಕಾಡಬೆಟ್ಟು, ಮಂಜೇಶ್ವರ, ಕುಂಬಳೆ ,,
ಮಂಗಳೂರು . . . . . ,,
ವಿವಿಧ ವಿಷಯಗಳು ೮
ಪತ್ರವ್ಯವಹಾರ ೧, ೨ . . . . . ,,
ಉಡುಪಿ ಪರ್ಯಾಯ ಮಹೋತ್ಸವ . . . . . ,,
ಹುಟ್ಟು ಜನ್ಮಸಂಬಂಧವಾಗಿ ಅನುಸರಿಸಿ ಬರುವ ವ್ಯಾಧಿಯೇ ೪

ಸ್ವದೇಶಾಭಿಮಾನಿ.

ಶಕ ೧೮೪೭ ಮಾಘ ಶು। ೯ಯು ಶುಕ್ರವಾರ

ಹಿಂದೂಸ್ಥಾನದಲ್ಲಿ ಸಹಕಾರ.

ವಿಲಾಯತಿಯಲ್ಲಿ ಬೆಳೆದು ಬಳಿದ ಸಹಕಾರ ಚಳವಳವು ಹಿಂದೂಸ್ಥಾನದಲ್ಲಿಯೂ ಸಾಕಷ್ಟು ಪ್ರಚಾರ ಹೊಂದಿರುವುದಾದರೂ, ಅದರ ಪ್ರಯೋಜನವು ಹಿಂದೂಸ್ಥಾನದಲ್ಲಿ ಸರಿಯಾಗಿ ಉಂಟಾದಂತೆ ಕಾಣುವುದಿಲ್ಲ. ಸಹಕಾರ ಸಂಘಗಳ ಸಂಖ್ಯೆಯು ಬೆಳೆದಿದೆ. ವರ್ಷ ವರ್ಷವೂ ಪ್ರತಿ ಹಳ್ಳಿಯಲ್ಲಿಯೂ ಸಹಕಾರ ಸಂಘಗಳು ಸ್ಥಾಪಿಸಲ್ಪಟ್ಟು ನಡಿಸುತ್ತಿವೆ. ಇಷ್ಟರಲ್ಲಿ ಸಹಕಾರ ಸಂಘಗಳಿಂದ ದೇಶಕ್ಕೆ ಹಿತವಾಗಿದೆಯೊ ಅಹಿತವಾಗಿದೆಯೊ ಎಂಬ ವಿಷಯದಲ್ಲಿಯೇ ಸಹಕಾರ ಸಾಧಕರೊಳಗೆ ಸಂಶಯ ಉಂಟಾದಂತೆಯೂ ತೋರುತ್ತಿದೆ. ರೈತರನ್ನೂ ಬಡವರನ್ನೂ ಹಿಂದಿನ ಕೃಪಣ, ನಿರ್ದಯರಾದ ಸಾಲಗಾರರಿಂದ ಈ ಸಂಘಗಳು ರಕ್ಷಿಸಿವೆಯೆಂಬುದು ನಿಶ್ಚಯವಾಗಿದ್ದರೂ, ಸಾಲದ ಈ ಸೌಲಭ್ಯದಿಂದ ಸಾಲವನ್ನು ಹೆಚ್ಚು ಮಾಡಿ ಹಿಂದಿನ ಸಾಲಗಾರರಿಗೆ ಕೊಡುತ್ತಿದ್ದ ಅನ್ಯಾಯದ ಬಡ್ಡಿಗಿಂತಲೂ ಈಗಿನ ಸುಲಭ ಸಾಲದ ವಿವೇಚನೆ ದುರ್ವ್ಯಯವು ಹೆಚ್ಚಾಗಿದೆ ಎಂದು ಹಲವರು ಆಕ್ಷೇಪಿಸುವರು. ಇದು ಎಷ್ಟರ ಮಟ್ಟಿಗೆ ನಿಜವೆಂಬುದನ್ನು ನಾವು ಇಲ್ಲಿ ಚರ್ಚಿಸಲು ಎಳಸುವುದಿಲ್ಲ. ಆದರೆ ಪರದೇಶಗಳಲ್ಲಿ, ಮುಖ್ಯತಃ ಜರ್ಮನಿ, ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ ಸಹಕಾರವು ನಡೆಸಿದ ಕೆಲಸವನ್ನು ಹಿಂದೂದೇಶದಲ್ಲಿ ಸಹಕಾರವು ನಡೆಸಲಾರದೆ ಹೋಯಿತು ಎಂಬುದನ್ನು ಪ್ರತಿ ಸಹಕಾರಿ ಧುರೀಣನೂ ಒಪ್ಪುತ್ತಿರುವನು. ಈಗಿನ ಸಹಕಾರ ಸಂಘಗಳ ವಹಿವಾಟಗಳು ಬರೇ ಸಾಲ ಕೊಟ್ಟು ಬಡ್ಡಿ ಕೂಡಿಸುವ ಬೇಂಕು ವಹಿವಾಟುಗಳಲ್ಲಿ ಮಾತ್ರವೇ ಪರ್ಯವಸಾನವನ್ನು ಹೊಂದಿದೆಯಲ್ಲದೆ, ನಿಜವಾಗಿ ತನ್ನ ಸದಸ್ಯರ ಆರ್ಥಿಕ ಉನ್ನತಿಯ ಸಾಧನೆಯಲ್ಲಿ ಆಸಕ್ತಿವಾಗಿಲ್ಲವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳದಿರಲಾರರು. ಒಬ್ಬರಿಗೆ ಇಬ್ಬರು ಜಾಮೀನಾಗುವ ಸದಸ್ಯ ಸರಪಣಿಯು, ಕೂಡ ಸದಸ್ಯರಲ್ಲಿ ಅನೇಕರ ಸರ್ವ ನಾಶಕ್ಕೆ ಕಾರಣವಾಗಿದೆಯೆಂಬುದನ್ನೂ ಸಹಕಾರಿ ಸೂತ್ರಧಾರಿಗಳು ಬಲ್ಲರು. ತಾತ್ಕಾಲಿಕ ಸಾಲದ ಸುಖಕ್ಕಾಗಿ ಸಿಕ್ಕವರಿಗೆ ಜಾಮೀನು ನಿಂತು, ಅವರ ಸಾಲವನ್ನು ತಾವೇ ತೆತ್ತು ಬಹಳ ಸಂಕಷ್ಟಪಡುವ ಬಡವರ ಕೆಲವರ ಗೋಳಾಟವನ್ನು ಕಂಡರೆ, "ಸಹಕಾರಿ"ಯು ಆಗಾಗ ನೂತನ ಕವಿತೆಯ ಮೂಲಕ ಪ್ರಸರಿಸುತ್ತಿರುವ ಸಹಕಾರ ಸುಖವು ಆ ಕವಿತೆಯಂತೆಯೇ ಕಲ್ಪನಾ ಸಾಮ್ರಾಜ್ಯವೆಂದೇ ನೆನಸದೇಕಾಗುತ್ತದೊ ಏನೊ ಎಂದು ನಮಗೆ ಸಂದೇಹವಾಗುತ್ತಿದೆ.

ನಮ್ಮ ಜಿಲ್ಲೆಯಲ್ಲಿ ಆಗಾಗ ಕೊಡುತ್ತಿರುವ ಕೊ-ಒಪರೇಟಿವ್ ಸಂಘಗಳಲ್ಲಿ, ಇತ್ತೀಚೆಗೆ ಸಹಕಾರದ ಲಾಭಗಳ ವಿಷಯ ಸಂದೇಹಗಳು ಪ್ರಕಟಿಸಲ್ಪಡಲು ಆರಂಭವಾಗಿದೆಯಾದರೂ, ಹೆಚ್ಚಿನ ಮಟ್ಟಿಗೆ ಸಹಕಾರದ ಸ್ತುತಿಯಲ್ಲಿಯೂ, ಬಿಸಿನೆಸ್ಸಿನ ತರ್ಕದಲ್ಲಿಯೂ ಹೆಚ್ಚಾಗಿ ಕಳೆಯುತ್ತಿರುವಂತೆ ತೋರುತ್ತಿದೆ. ಮೊನ್ನೆ ಮುಂಬಾಯಿಯಲ್ಲಿ ನಡೆದ ಸಹಕಾರಿ ರಿಜಿಸ್ಟ್ರಾರರ ಪಂಕ್ತಿನಲ್ಲಿಯೂ ಸಹಕಾರಿ ಸಂಘಗಳ ಈ ತರದ ಕಾರ್ಯಕಾರಿತೆಯ ಕಡೆಯ ವಿಶೇಷ ಗಮನವಿಡಲ್ಪಟ್ಟಂತೆ ತೋರುವುದಿಲ್ಲ. ಸಾಮಾನ್ಯ ವಿಷಯಗಳನ್ನ ಚರ್ಚಿಸಿ ಅಷ್ಟರಿಂದಲೇ ಈ ಸಹಕಾರಿ ನಗರ [illegible]

ಸಹಕಾರಿ ಸಂಘಗಳ ಆಡಳಿತದಲ್ಲಿಯೂ ಆಗಾಗ ಕುಂದು ಕೊರತೆಗಳು ಬರುತ್ತಿವೆಯಲ್ಲದೆ, ವರ್ಷಾವಧಿಯ ಜನರಲ್ ಮೀಟಿಂಗು ಸದಸ್ಯರೊಳಗಿನ ಸಹಕಾರ ಭಾವನೆಯನ್ನು ವ್ಯಕ್ತಪಡಿಸುವ ಬದಲಿಗೆ ಪರಸ್ಪರ ಸ್ಪರ್ಧೆಯನ್ನೂ ದ್ವೇಷವನ್ನೂ ಸಾಧಿಸುವ ಸಮರಭೂಮಿಯಾಗಿ ಹಲವು ಸಾರಿ ಪರಿಣಾಮ ಹೊಂದುತ್ತಿದೆ. ಇದಕ್ಕೆ ಸಹಕಾರದ ನಿಜವಾದ ಪ್ರಯೋಜನವನ್ನು ಜನರು ಹೊಂದದಿರುವುದೇ ಕಾರಣವಾಗಿದೆಯೆಂದು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು.

ಸಹಕಾರಿ ಸಂಘಗಳ ಮೂಲಕ ಜನರಿಗೆ ಹೆಚ್ಚು ಪ್ರಯೋಜನ ಮಾಡಲು ಸಾಧ್ಯವಿದೆ ಎಂಬುದೇನೊ ನಿರ್ವಿವಾದ. ಆದರೆ ನಮ್ಮ ದೇಶದ ಪರಿಸ್ಥಿತಿಗನುಸಾರವಾಗಿ, ನಮ್ಮ ಜನರ ಮಾನಸಿಕತೆಗೆ ಸರಿಯಾಗಿ ಈ ಸಹಕಾರಿ ಸಂಘಗಳನ್ನು ಹೇಗೆ ಉಪಯೋಗಿಸಿಕೊಳ್ಳಬಹುದು ಎಂಬುದನ್ನು ಯಾರೊಬ್ಬರೂ ತಿಳಿದುಕೊಳ್ಳಲು ಪ್ರಯತ್ನಿಸಿರುವರೊ ಎಂಬುದು ಸಂದೇಹವಿದೆ. ಹಾಗೆ ತಿಳಿದುಕೊಳ್ಳಲು ಪ್ರಯತ್ನಿಸಿದ್ದರೂ, ಈ ಸಮಸ್ಯೆಯನ್ನು ಬಿಡಿಸುವಷ್ಟು ಶಕ್ತಿವಂತರಾರೂ ಈ ವರೆಗೆ ಸಹಕಾರ ವಾತಾವರಣದಲ್ಲಿ ಬಂದಂತೆ ತೋರುವುದಿಲ್ಲ.

ಹಿಂದೂಸ್ಥಾನವು ಮುಂದಾಗಿ ವ್ಯವಸಾಯ ಭೂಮಿ ಎಂದು ಎಲ್ಲರೂ ಹೇಳುವರು. ಭೂದೇವಿಯು ತನ್ನ ಫಲವತ್ತಾದ ಗರ್ಭದಿಂದ ಹಿಂದೂಸ್ಥಾನದ ಬಡವರಿಗೆ ಸಂಪತ್ತನ್ನು ಹಂಚುತ್ತಿರುವಳು ಆ ಸಂಪತ್ತಿನ ಸಂಪೂರ್ಣಾನುಭವವು ಕೂಡ ನಮ್ಮ ಈ ಹಣೆಯಲ್ಲಿ ಬಂದಿಲ್ಲವೆಂಬುದು ವಿಷಾದಕರ. ಈ ಕೃಷಿ ಸಂಪತ್ತನ್ನು ಹೊಸ ಉಪಾಯಗಳಿಂದಲೂ, ಸಹಾಯದಿಂದಲೂ ಹೆಚ್ಚಿಸುವುದು ಈ ಸಹಕಾರಿ ಸಂಘಗಳಿಗೆ ಸುಲಭವಾಗಿದೆ. ಈ ಕೆಲಸವನ್ನು ತಿಳಿದವರು ಇದಕ್ಕೆ ಕೈ ಹಾಕಿದರೆ ಕಾರ್ಯಕಾರಿಯಾಗಿ ಮಾಡಬಹುದು. ಆದರೆ ಇಂತಹ ಪ್ರಯತ್ನಗಳೇನೂ ಯಾವ ರೀತಿಯಲ್ಲಿಯೂ ನಡೆದಿಲ್ಲ.

ಸರಕಾರದ ಕೃಷಿ ಇಲಾಖೆಯ ಸಹಕಾರದೊಡನೆ ಹಳ್ಳಿಗಳ ಸಹಕಾರ ಸಂಘಗಳು ತಮ್ಮ ರೈತರ ಬೆಳೆಗಳ ಸಮೃದ್ಧಿಯನ್ನು ಬೆಳಸಬಹುದು. ವಿದೇಶಗಳಲ್ಲಿ, ಒಂದು ಜಮೀನಿನಲ್ಲಿ ಹಿಂದೂಸ್ಥಾನದಲ್ಲಿ ಅಷ್ಟೇ ದೊಡ್ಡ ಜಮೀನಿನಲ್ಲಿ ಆಗುವ ಬೆಳೆಗಿಂತಲೂ ಎಷ್ಟೊ ಪಾಲು ಹೆಚ್ಚು ಬೆಳೆಯು ಸಿಕ್ಕುತ್ತದೆ. ಅಲ್ಲಿ ನೆಲವನ್ನು ಹೊಸ ಕ್ರಮಗಳಿಂದ ಹೂಡುವರು, ಗೊಬ್ಬರವನ್ನು ಹೊಸ ರೂಪದಿಂದ ಹೊಂದುವರು, ಬೀಜವನ್ನು ಉತ್ತಮ ಕ್ರಮದಿಂದ ಆರಿಸುವರು. ಅವರ ಈ ಎಲ್ಲಾ ಕ್ರಮಗಳನ್ನು ನಮ್ಮ ದೇಶದ ಜನರೂ ಕಲಿತರೆ ಅವರಂತೆಯೇ ನಮ್ಮ ರೈತರೂ ಸಾಕಷ್ಟು ಸಮೃದ್ಧಿಯನ್ನು ಹೊಂದಬಹುದು.

ಸಹಕಾರ ಸಂಘಗಳು ಬರೇ ಸಾಲಕೊಡುವುದರಲ್ಲಿಯೇ ತೃಪ್ತವಾಗದೆ, ಸಾಲದಿಂದ ಜನತೆಯ ಮೂಲವು ಹೆಚ್ಚುವಂತೆ ನೋಡುವುದು ಸಹಕಾರ ಮೂಲ ಕರ್ತವ್ಯವಾಗಿದೆ. ಆಗ ಮಾತ್ರವೇ ಸಹಕಾರದ ಸಾರ್ಥಕ್ಯವು ಸ್ಪಷ್ಟವಾಗುವುದು. ಇಲ್ಲವಾದರೆ ರೈತರು ಒಬ್ಬರ ಸಾಲವನ್ನು ಇನ್ನೊಬ್ಬರು ಹೊತ್ತುಕೊಳ್ಳುತ್ತಾ, ಪೂರ್ವದ ೧,೮೦೦ರ ಸಲೆ ಬಡ್ಡಿಯ ಸಾಲಗಾರರ ಕೈಗಿಂತಲೂ ಹೆಚ್ಚಿನ ಸಂಕಷ್ಟಗಳನ್ನು ಸಹಕಾರ ಸಂಘಗಳ ಕೈಗಳಿಂದ ಅನುಭವಿಸಬೇಕಾಗುವುದು.

ವರ್ಣ ಭೇದ.

ಬರೇ ನಮ್ರತೆಯಿಂದ ಕಪ್ಪು ಜನರನ್ನು ಬಿಳೀ ಜನರ ತಿರಸ್ಕಾರದಿಂದ ಉದ್ಧರಿಸುವುದು ಸಂಪೂರ್ಣವಾಗಿ ಅಸಾಧ್ಯವಾಗುತ್ತ ಬರುತ್ತಿದೆ ಎಂಬುದು ದಿನಗಳೆದಷ್ಟಕ್ಕೆ ನಿಜವಾಗುತ್ತಾ ಬರುತ್ತಿದೆ. ಹಿಂದೀಯರಾಗಲಿ, ಚೀನೀಯರಾಗಲಿ, ಜಪಾನಿನವರಾಗಲಿ, ಎಲ್ಲರೂ ಬಿಳೀಯವರ ವಸತಿ ಸ್ಥಾನಗಳಿಂದ ಮೆಲ್ಲನೆ ಹೊರದೂಡಲ್ಪಡುತ್ತಿರುವರು. ಕಪ್ಪು ಜನರಿಗೆ ಈ ಭೂಲೋಕದಲ್ಲಿ ಅಸ್ತಿತ್ವವಿರಲು ಕಾರಣವೇ ಇಲ್ಲವೆಂದು ಈ ಬಿಳೀ ಜನರು ಭಾವಿಸುತ್ತಿರುವಂತೆ ಕಾಣುತ್ತಿದೆ. ಕಪ್ಪು ಜನರ ನಾಮನಾಶಕ್ಕಾಗಿ ಬಿಳಿಯವರು ತಮ್ಮೊಳಗಿನ ಎಲ್ಲಾ ಭೇದಗಳನ್ನು ಮರೆತು ಐಕ್ಯವನ್ನು ಹೊಂದುವರು.

ಕಪ್ಪು ಜನರ ದೇಶದೊಳಗೆ ನುಗ್ಗಿ, ಅವರು ಬೇಡವೆಂದರೂ ಅವರ ಹಿತವನ್ನು ಸಾಧಿಸುವರೆಂದು ವಸ್ತ್ರಾಯ ಪೂರ್ವಕ ನೆಲಸಿ, ಅವರ ಸ್ವಂತ ಮನೆಯೊಳಗಿನ ಅಧಿಕಾರಗಳನ್ನು ಅಪಹರಿಸಿ ಚಿರದಾಸ್ಯತ್ವದಲ್ಲಿ ಅವರನ್ನು ನರಳಿಸಿ ಆ ಮೇಲೆ ತಾವು ಲೋಕ ಕಲ್ಯಾಣಕಾರರು, ತಾವು ಶಾಂತಿ ಸ್ಥಾಪಕರು ಎಂದು ಈ ಬಿಳೀ ಜನಾಂಗದವರ ಸ್ಥಾಪಿಸಲು ನೋಡುವಾಗ, ಬಿಳೀಯವರ ದಾಕ್ಷಿಣ್ಯತೆಯು ತೋರಿದರೂ, ಅವರ ಈ ಕೃತ್ಯದ ದಾನವೀ ರಹಸ್ಯವು ಸ್ಪಷ್ಟವಾಗುವುದು. ಕಪ್ಪು ಜನರೊಳಗೆ [illegible]

ಹೆಚ್ಚು ಅಧಿಕಾರ ಮತ್ತು ಹೆಚ್ಚು ಮಾನವನ್ನು ಸಾಧಿಸುವರು. ತಮ್ಮ ಮನೆಯೊಳಗೆನೇ ಕಪ್ಪು ಜನರು ಅವಮಾನಿಸಲ್ಪಡುವರು. ಇದೀಗ ಈಗಿನ ಬಿಳೀ-ಮತ್ತು ಕಪ್ಪು ಜನತೆಯ ಸಂಬಂಧದೊಳಗಿನ ವೈಶಿಷ್ಟ್ಯವಿದೆ.

ಕಪ್ಪು ಜನರ ದೇಶಗಳಾದ ಇಜಿಪ್ಟ, ತುರ್ಕಿ, ಚೀನಾ, ಹಿಂದೂಸ್ಥಾನ ಈ ದೇಶದೊಳಗೆ ಬಿಳೀಯವರು ಹೋದರು; ನೆಲಸಿದರು; ಆ ಮೇಲೆ ಅವರಿಗೆ ಪ್ರತ್ಯೇಕ ಪ್ರಾತಿನಿಧ್ಯದ ಅಧಿಕಾರ; ಅವರಿಗೆ ಪ್ರತ್ಯೇಕ ರಕ್ಷಣೆಯ ಉಪಾಯ; ಅವರ ರಕ್ಷಣೆಗಾಗಿ ಅವರ ಸೈನ್ಯಕ್ಕೆ ಒಂದು ಬಿಡಾರ! ಹೀಗೆ ಒಂದರ ಹಿಂದೆ ಒಂದು ಅಧಿಕಾರವನ್ನು ಸಾಧಿಸುತ್ತ ದೇಶವನ್ನು ನುಗ್ಗಿದರು. ನ್ಯಾಯ ವಿತರಣೆಯಲ್ಲಿ ಕೂಡ, ಹಿಂದಿನ ಹಿಂದೂ ಧರ್ಮ ಶಾಸ್ತ್ರಗಳಲ್ಲಿ ಬ್ರಾಹ್ಮಣರಿಗೆ ಒಂದು ರೀತಿಯಲ್ಲಿ, ಕ್ಷತ್ರಿಯರಿಗೆ ಇನ್ನೊಂದು ರೀತಿಯಲ್ಲಿ, ವೈಶ್ಯರಿಗೆ ಮತ್ತೊಂದು ರೀತಿಯಲ್ಲಿ, ಶೂದ್ರರಿಗೆ ಮಗದೊಂದು ರೀತಿಯಲ್ಲಿ, ಹೀಗೆ ನಾಲ್ಕು ವರ್ಣಗಳಿಗೆ ನಾಲ್ಕು ರೀತಿಗಳಲ್ಲಿ ಒಂದೇ ಅಪರಾಧಕ್ಕೆ ಶಿಕ್ಷೆ ಇರುವುದನ್ನು ಈ ಬಿಳೀ ಜನರ ನ್ಯಾಯ ವಿಧಾಯಕರು ಖಂಡಿಸುವುದಾದರೂ, ಬಿಳೀ ಮತ್ತು ಕಪ್ಪು ಜನರ ಮಧ್ಯದಲ್ಲಿ ನ್ಯಾಯ ತೀರ್ಮಾನ ಮಾಡುವಾಗ ಬಿಳೀಯವರ ಹತ್ತಿರದಲ್ಲಿ ನ್ಯಾಯವು ಒಂದು ರೀತಿಯಲ್ಲಿಯೂ, ಕಪ್ಪು ಜನರ ಹತ್ತಿರದಲ್ಲಿ ನ್ಯಾಯವು ಇನ್ನೊಂದು ರೀತಿಯಲ್ಲಿಯೂ ಆಗುವುದು. ಹಿಂದೂಸ್ಥಾನದ ಅಸ್ಸಾಮ ಚಾ ತೋಟಗಳಲ್ಲಿಯೂ ಇತರ ಖಾಸಗಿ ಬಂಗಲೆಗಳಲ್ಲಿಯೂ ಆಗಾಗ ನಡೆಯುವ ಪ್ರಚಂಡ ಹತ್ಯಾಕಾಂಡಗಳ ವಿಚಾರಣೆ ಮತ್ತು ತೀರ್ಮಾನವೇ ಇದಕ್ಕೆ ತಕ್ಕ ನಿದರ್ಶನಗಳಾಗಿವೆ. ಇದೇ ಕ್ರಮವು ದಕ್ಷಿಣ ಆಫ್ರಿಕದಲ್ಲಿಯೂ ಮತ್ತಷ್ಟು ಗಡುಸಾಗಿ ತೋರಿಸಲ್ಪಡುವುದು. ಆದರೆ ನಮ್ಮ ದೇಶದಲ್ಲಿ ನಮ್ಮ ಮೇಲ ಅತ್ಯಾಚಾರ ನಡೆಸುವವರಿಗೆ ಕಡಿಮೆ ಶಿಕ್ಷೆಯೂ, ನಾವು ಅವರ ಮೇಲೆ ಅತ್ಯಾಚಾರ ನಡಿಸಿದರೆ, ಏಕೆ? ಸಾಮಾನ್ಯ ಒಂದು ಸಣ್ಣ ಅಪರಾಧ ಮಾಡಿದರೂ, ನಮಗೆ ಕಠಿಣ ಶಿಕ್ಷೆಯೂ ಆಗುವ ಈ ನ್ಯಾಯ ತೀರ್ಮಾನಕ್ರಮವು ಬ್ರಿಟಿಷ ನ್ಯಾಯ ವಿತರಣೆಗೆ ಅಳಿಸಲಾಗದ ಕಲಂಕವಾಗಿ ನಿಂತಿರುವುದು.

ಸ್ವತಂತ್ರ ರಾಷ್ಟ್ರವೂ, ಸ್ವಾತಂತ್ರ್ಯ ದೇವಿಯ ಶ್ರದ್ಧಾವಂತ ಉಪಾಸಕರೂ ಎಂದು ಹೇಳಿಸಿಕೊಳ್ಳುವ ಯುನೈಟೆಡ್ ಸ್ಟೇಟ್ಸ್ ಒಫ್ ಅಮೇರಿಕವು ಕೂಡ ಬಿಳೀ ಮತ್ತು ಕಪ್ಪು ಎಂಬ ಭೇದವನ್ನು ತೋರಿಸಿಯದೆ. ಅಲ್ಲಿ ಹಲವು ವರ್ಷಗಳಿಂದ ನೆಲಸಿರುವ ಹಿಂದೀಯರು ಒಂದು ಬಾರಿ ಅಮೇರಿಕದ ನಾಗರಿಕರು (citizen) ಎಂದೂ, ಅಮೇರಿಕೆಯ ನಾಗರಿಕರ ಎಲ್ಲಾ ಹಕ್ಕುಗಳಿದ್ದವರು ಎಂದೂ ಪ್ರಥಮತಃ ಅಮೇರಿಕವು ಒಪ್ಪಿದ್ದರೂ, ಆ ಮೇಲೆ ಈಗ ಕೆಲವು ವರ್ಷಗಳ ಹಿಂದೆ ಯಾವ ಕಪ್ಪು ಜನರೂ ಅಮೇರಿಕದ ನಾಗರಿಕರಾಗುವುದಿಲ್ಲವೆಂದು, ಆ ಅಮೇರಿಕ ನಾಗರಿಕರ ಹಕ್ಕುಗಳನ್ನು ಕಳೆದುಕೊಂಡಿದ್ದಾರೆ. ಹೀಗಾಗಿ ಹಿಂದೀಯತ್ವವನ್ನು ಕಳೆದು ಅಮೇರಿಕದಲ್ಲಿ ನೆಲಸಿದ್ದ ಹಿಂದೀಯರು ಈಗ ದೇಶಹೀನರಾಗಿರುವ ವಿಚಿತ್ರ ಪರಿಸ್ಥಿತಿಯಲ್ಲಿ ಇರುವರು. The Stateless Indians of America. ಅಂದರೆ ಅಮೇರಿಕದ ದೇಶವಿಲ್ಲದ ಹಿಂದೀಯರೆಂದು ಈಗ ಅವರನ್ನು ಕರೆಯುತ್ತಿರುವರು. ಈಗಿನ ನಾಗರಿಕತೆಯಲ್ಲಿ ಕೂಡ, ವೈಯಕ್ತಿಕ ಪ್ರತಿಭೆಗಿಂತಲೂ ಜನ್ಮ ಕಾರಣಕ್ಕೇನೇ ಹೆಚ್ಚು ಮರ್ಯಾದೆಯು ಕೊಡಲ್ಪಡುತ್ತಿದೆಯೆಂದು ಇದರಿಂದ ತಿಳಿಯುವುದು.

ದಕ್ಷಿಣ ಆಫ್ರಿಕದ ಮಾತು ಹಾಗಿರಲಿ. ಯಾರ ಮಾತನ್ನೂ ಕೇಳಲೊಲ್ಲದ ಇಂಗ್ಲೆಂಡಿನ ಈ ತುಂಟ ಮಗನ ವಿಚಾರವು ಪ್ರತ್ಯೇಕವೇ ಸರಿ. ಆದರೆ ಇಂಗ್ಲೆಂಡೇ ಈ ವಿಷಯದಲ್ಲಿ ನಿರ್ದೋಷವಾಗಿದೆಯೇ? ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಕೂಡ ಹಿಂದೀ ಸದಸ್ಯರಿರುವದು ನಿಜ. ಇಂಗ್ಲೆಂಡಿನಲ್ಲಿ ಅನೇಕ ಹಿಂದೀಯರು, ಮುಖ್ಯವಾಗಿ ದಾಕ್ತಾರರು ಮತ್ತು ಇಂಜಿನಿಯರರು ನೆಲಸಿರುವರು ಮತ್ತು ಜನತೆಯ ಆದರಕ್ಕೆ ಪಾತ್ರರಾಗಿರುವರು ನಿಜ. ಆದರೆ ಮೆಲ್ಲನೆ ಈ ವರ್ಣ ವಿದ್ವೇಷದ ವಿಷಾಕ್ತ ಬೀಜವು ಅಲ್ಲಿಯೂ ನೆಡಲ್ಪಡುತ್ತಿದೆ. ಅಲ್ಲಿಯೂ ಬಿಳೀ ಮತ್ತು ಕಪ್ಪಿನ ಬಣ್ಣ ಭೇದವು ತೋರಿಸಲ್ಪಡಲು ಆರಂಭವಾಗಿಯದೆ.

ಲೋಕಾರ್ನೊ ಸಂಧಿಯಾದರೂ ಯುರೋಪಿನ ಬಿಳೀ ಜನರೊಳಗಿನ ಸೌಹಾರ್ದತೆಯನ್ನು ಬೆಳಸುವ ಉದ್ದೇಶದಿಂದ ರಚಿತವಾಗಿದೆಯೆನ್ನುವಾಗ, ಅದು ಕಪ್ಪು ಜನರ ಪ್ರತಿಯಾಗಿ ರಚಿಸಲ್ಪಟ್ಟಿದೆಯೋ ಏನೊ ಎಂದು ಸಂದೇಹವಿಡಲು ಕಾರಣವಿದೆ. ಅಂತೂ ಕಪ್ಪು ಜನರು ಎಚ್ಚರವಾಗುವ ಆವಶ್ಯಕತೆಯಿದೆ. ಆದರೆ ಎಂತಹ ಹೀನ ಸ್ಥಿತಿಗೆ ಇಳಿದರೂ ಕಪ್ಪು ಜನರು ಒಂದಾಗದಿರುವುದೂ, ತಮ್ಮನ್ನು ತಾವೇ ಸಂಘಟಿಸಿಕೊಳ್ಳದಿರುವುದೂ ವಿಷಾದಕರವಿದೆ. ಜಗತ್ತಿನ ಪಾಪವು ಕಪ್ಪು ಜನರಲ್ಲಿ ಅಂಕಿತವಾಗುವುದೇ ಇಲ್ಲ!

ವಿದೇಶ ವರ್ತಮಾನ.

[illegible]

ಒಳದೇಶ ವರ್ತಮಾನ.

[illegible]

ದಕ್ಷಿಣ ಕನ್ನಡ.

[illegible]

ಮಂಗಳೂರು.

[illegible]

NOTICE

The National Health and Baby week Celebration will be opened by Mrs. Kirkwood on Tuesday 1st February 1926 at 4 P. M. Models and Postors of various description have been collected and these will be exhibited in the Ladies Club Hall. A particular feature of the week is Health Drams and milk cattle show. A visit during the week will be entertaining and useful. A short programme is added below for the information of the public. Admission free:

1—2—1926 at 4-30 to 7 p. m.	Ladies Club, Light House Hill	Baby show below one year. Health Drama in English.
2—2—1926 at 4-30 to 7 p. m.	Do.	Baby show between 1 and 2 years. Milk cattle show and Health Drama in Konkani.
3—2—1926 at 5 to 7 p. m.	Do.	Exhibition, Lantern Lectures, Physical Drill and Prize Essays Reading. Chairman, Rao Sahib N. Subba Rao.
4—2—1926 at 5 to 7 p. m.	Manual Boys School Fort;	Health Drama in Kanarese and Lantern Lecture. Chairman, Nellikai Venkat Rao.
5—2—1926 at 5 to 7-30 p. m.	Ganapathi High School	Health Drama in English Lantern Lecture and Prize Distribution. Chairman, Mr. A. B. SHETTY

ವಿವಿಧ ವಿಷಯಗಳು.

ಕುಡಿಕತನವನ್ನು ನಿಲ್ಲಿಸುವುದಕ್ಕೆ ಭೂಲೋಕದ ಬೇರೆ ಬೇರೆ ದೇಶಗಳಲ್ಲಿ ನಡೆದ ಸಾಧನೆಗಳು.

[illegible]

ಇದರ ವಾಯು ಗುಣವು ಒಣನಮೂನೆಯದಾಗಿದೆ. ಅದುದರಿಂದ ಜನರ ಬಾಯಾರಿಕೆಯನ್ನು ಕಡಿಮೆ ಮಾಡಲಿಕ್ಕೆ ಯಾವದೊಂದು ಉಪಾಯವಿರಲಿಲ್ಲ. ಈ ದೇಶದಲ್ಲಿ ದ್ರಾಕ್ಷೆಯು ಬಹಳ ಹೆಚ್ಚಾಗಿ ಬೆಳೆಯುತ್ತದೆ. ಇದರಿಂದ ದ್ರಾಕ್ಷಾರಸವನ್ನು ತಯಾರಿಸುತ್ತಾರೆ. ಇದರ ಬೆಲೆಯೂ ಕಡಿಮೆ. ಅದುದರಿಂದ ಕುಡಿಕತನವು ಹೆಚ್ಚಾಯಿತು. ಆದರೆ ಹೆಂಗಸರಿಗೆ ಕುಡಿಯುವ ಅಭ್ಯಾಸವು ಇಲ್ಲದ್ದರಿಂದ ಕುಡಿಕತನವು ಕಡಿಮೆಯಾಯಿತು. ಹಿಂದೂದೇಶದ ಹೆಂಗಸರೂ ಕುಡಿಕತನದ ವಿಷಯ ಜಾಗ್ರತೆ ತೆಗೆದುಕೊಂಡರೆ ಕುಡಿಕತನವನ್ನು ಬೇಗನೆ ನಿಲ್ಲಿಸಬಹುದು' ಎಂದು ಹೇಳಿದರು.

ದಕ್ಷಿಣ ಅಫ್ರಿಕಾ.

ದಕ್ಷಿಣ ಅಫ್ರಿಕದಿಂದ ಬಂದ ಶ್ರೀಮತಿ ಈ. ಎ. ಬೆನ್‌ಸನ್ ಅಮ್ಮನವರು "ನಮ್ಮ ದೇಶವು ಕುಡಿಕತನವನ್ನು ನಿಲ್ಲಿಸುವುದಕ್ಕೆ ಸಾಧಿಸುವಷ್ಟು ಉನ್ನತ ಸ್ಥಿತಿಗೆ ಬರಲಿಲ್ಲವೆಂದೂ ಕುಡಿಕತನವು ಇಲ್ಲಿ ಹದ ತಪ್ಪಿ ಹೋಗಲಿಲ್ಲವೆಂದೂ ಕುಡಿಕತನವನ್ನು ನಿಲ್ಲಿಸುವುದಕ್ಕೆ ಅನೇಕ ಮಂದಿ ಅಡ್ಡ ಬರುತ್ತಾರೆಂದೂ, ಹಿಂದೂದೇಶದಲ್ಲಿ ಕುಡಿಕತನವನ್ನು ಸಂಪೂರ್ಣವಾಗಿ ನಿಲ್ಲಿಸಿದರೆ ದೇವರ ರಾಜ್ಯವನ್ನು ಸ್ಥಾಪಿಸಿದಂತೆ ಆಗುವುದೆಂದೂ ಹೇಳಿದರು."

ಅಮೇರಿಕಾ.

ಯುನ್ಯಾಟಿಡ್ ಸ್ಟೇಟ್ಸಿನ ಶ್ರೀಯುತ ಮೆಕ್ಕ ವಾರ್ಡೆಲರರು ಈ ರೀತಿ ಹೇಳಿದರು. ...

ಜಪಾನಿನ ಸ್ಥಿತಿ.

ನೋರ್ವೇದೇಶದಲ್ಲಿ.

ಸ್ವೀಡನ್.

ಜಾವಾದ್ವೀಪ.

ಪೋಲೆಂಡ.

ಇಲ್ಲಿಯೂ ಕುಡಿಕತನವನ್ನು ನಿಲ್ಲಿಸುವುದಕ್ಕೆ ಸಾಧನೆ ನಡಿಯುತ್ತದೆ.

ಯುಗೋಸ್ಲಾವಿಯ.

ಇಲ್ಲಿಯೂ ಮುಖ್ಯ ಪ್ರಧಾನಿಯು ಇದೇ ಸಾಧನೆಯಲ್ಲಿರುವರು.

ವೇಲ್ಸ.

ಇಲ್ಲಿ ಕೆಲಸಗಾರರಿಗೆ ಒಂದು ಅಮಲು ಪದಾರ್ಥವಿದೆ. ಅದರ ಇದರ ಬದಲಾಗಿ ಟೀ ಕುಡಿಸಲಿಕ್ಕೆ ಸಾಧಿಸುತ್ತಾರೆ.

ಇಂಡಿಯಾ.

ಇಂಡಿಯದಲ್ಲಿ ಇನ್ನೂ ಕುಡಿಕತನವು ಅಭಿವೃದ್ಧಿಗೆ ಬರಲಿಲ್ಲ. ಅದುದರಿಂದ ಅದನ್ನು ನಿಲ್ಲಿಸುವುದು ಸುಲಭ.

ಪತ್ರವ್ಯವಹಾರ.

(ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವದೇ.)

ಅಯ್ಯಾ, ಮಂಗಳೂರು ತಾ. ೧೪-೧-'೨೬.

ಶ್ರೀಯುತ ವಾಮನ ಕುಡುವರು ತಮ್ಮ ಪತ್ರಿಕೆಯಲ್ಲಿ ಜಿಲ್ಲಾ ಸ್ವರಾಜ್ಯ ಪಾರ್ಟಿ ಕುರಿತು ಬರೆದ ಲೇಖನಕ್ಕೆ ಇದು ಉತ್ತರವಾಗಿರುತ್ತದೆ.

...

ಅಧಿಕಾರದ ದೌರ್ಜನ್ಯ.

ಉಡುಪಿ ಪರ್ಯಾಯ ಮಹೋತ್ಸವ.

(ನಮ್ಮ ಸ್ವಂತ ಬಾತ್ಮಿಗಾರರಿಂದ)

ಶ್ರೀ ಕೃಷ್ಣನ ಕೃಪೆಗಿಂತಲೂ ಡಿವಿಜನಲ್ ಆಫೀಸರರ ಕೃಪೆಯಿಂದ ಈ ವರ್ಷದ ಸಂಕ್ರಾಂತ ಮಹೋತ್ಸವವು ನಿರ್ವಿಘ್ನವಾಗಿ ನಡೆದುಹೋಯಿತು. ತಾಲೂಕು ಬೋರ್ಡುಗಳ ಎಲಿಮೆಂಟರಿ ಶಾಲೆಗಳ ಕೆಲವು ಉಪಾಧ್ಯಾಯರಿಂದ ಕೂಡಿದ ಫಸ್ಟ್ ಎಡ ಸ್ವಯಂಸೇವಕ ದಳ ಮತ್ತು ಬೋರ್ಡು ಹ್ಯಾಸ್ಕೂಲಿನ ಉತ್ಸಾಹೀ ಉಪಾಧ್ಯಾಯರಾಗಿರುವ ಶ್ರೀಯುತ ಕೋಟಿ ವಾಸುದೇವ ಕಾರಂತರ ಪರಿಶ್ರಮದಿಂದಲೂ ಊರಿನ ಕೆಲವು ತರುಣರ ಸಹಕಾರದಿಂದಲೂ ರಚಿತವಾದ ಸುವ್ಯವಸ್ಥೆಗಾಗಿ ಬೇಕಾದುವ ಸ್ವಯಂ ಸೇವಕ ದಳದಿಂದಲೂ ಜನಸಂದಣಿಯ ಬಗ್ಗೆ ಉತ್ತಮವಾದ ಸೌಕರ್ಯಗಳು ಯೋಜಿಸಲ್ಪಟ್ಟಿದ್ದವು. ಇಂತಹ ಸ್ವಯಂಸೇವಕ ದಳಗಳಿಗೆ ಮಠಗಳಿಂದ ಸಾಕಷ್ಟು ಉತ್ತೇಜನವು ದೊರಕದಿರುವುದೇ ವಿಷಾದಕರವಾದ ವಿಷಯವು.

ಈ ಬಾರಿ ಶ್ರೀ ರಾಘವೇಂದ್ರ ಮಠದ ಸ್ವಾಮಿಗಳವರ ಆಗಮನವೇ ಒಂದು ವಿಶೇಷವಾದ ವಿಷಯ. ಶ್ರೀ ಸ್ವಾಮಿಯವರ ಬಿರುದಾವಳಿಗಳ ಪ್ರದರ್ಶನವೂ, ದೊಡ್ಡಸ್ತಿಕೆಯ ನಿವೇದನವೂ ಸಾಕಷ್ಟು ಚೆನ್ನಾಗಿಯೇ ನಡೆದವು. ...

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ಫೂರ್ತಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,

ಆಯುರ್ವೇದ ಭೂಷಣ,

ಮಂಗಳೂರು ದ. ಕನ್ನಡ.

The Canara Bank Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. | 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0 | ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0

Reserve and other sinking Funds „ 259,000—0—0 | ರಿಸರ್ವು ನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT

ಕಾಯಂ ಮತ್ತು ಚಾಲ್ತಿ ಠೇವಣಾತಿಗಳನ್ನು, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳನ್ನು ಪಡಕೊಳ್ಳಲಾಗುತ್ತದೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರೆಕೊಳ್ಳುವದು.

Canara Bank Ltd.,
Mangalore, 9th Feb. 1925.

K. Venkat Rao,
Secretary.

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಪ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೪ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯೆಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

Free! Free!! Free!!

ಪ್ರಸಿದ್ಧವಾದ

"ಕಾಮಶಾಸ್ತ್ರ"

ಈಗಲೆ ತಯಾರಾಗಿದೆ.

ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟ್ ಬಾಕ್ಸ್ 1252),
ಮದ್ರಾಸ್.

ಬಂದುನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ

ಪದಕವನ್ನು

ಬಹುಮಾನವಾಗಿ ಪಡೆದಿರುವ

ಎಸ್. ಪಿ. ಆಚಾರ್ಯ

ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ತುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ

ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್.

ಮನೋರಮಾ ಟೀ ಕ್ಲಬ್, ಮಾರ್ಕೆಟ್ಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | **ವಜ್ರಾಂಗ-ಬಿಂದು** | ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕೆಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸಂಗ್ರಹ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ತಿವಳಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೮—೦. ೩ ಬಾಟ್ಲಿಗಳಿಗೆ ರೂ. ೩—೮—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆನ್ನುವವರು ಪತ್ರವ್ಯವಹಾರ ಮಾಡಿ, ಶರತ್ತು ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,

ಮು. ಪೋ. ಹಿಪ್ಪರಗಿ, (ಜಿಲ್ಲಾ ಬೆಳಗಾಂವ.)

The Canara Public Conveyance Co., Ltd, Mangalore.

(Established 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು {
ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದಕ್ಕೆ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಸರಿಯಾದ ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇದಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು, ಕಳೆದ ಹತ್ತುಹನ್ನೆರಡು ವರುಷಗಳಿಂದ ಸತತ ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಮಹಾರಕ್ಕೆ ಸಮೀಪವಿರುವ ಮಳಿಗೆ,) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಿಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, ಪಾಡಿಪೇಟೆ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಶಾಲ, ಪೇಟ್ಯ, ರೇಶ್ಮೆ ಸೀರೆಗಳು, ಅರಳಿಪೇಟೆ ಸೀರೆಗಳು, ಕೊಳ್ಳಾರ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮಡಿಗಳು, [illegible] ಸೀರೆಗಳು [illegible], ಕರ್ನಾಟಕ [illegible] ಶರ್ಟಿಂಗ್ [illegible] ಕೈಮಗ್ಗದಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೋಪಿ, ಖದ್ದರ್ ಪೇಟ್ಯ, [illegible]—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ [illegible] ವಗ್ಯೆರೆ—
[illegible] ಸಂಗ್ರಹವನ್ನು ನಮ್ಮ [illegible] ಊರುಗಳಿಗೆ ಹೋಗಿ [illegible]

[illegible]—[illegible] 250 [illegible] 250ರವರೆಗೆ [illegible]
ಕಮಿಶನ್ 10%. ರೂ. 250 ರಿಂದ 1000ಕ್ಕೆ 12½% [illegible]

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕೆ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಕೇರಿಯೋ ವ ಮೂತ್ರಬಲಸೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನೂ ಪರಿಹರಿಸುವುದು. ಶಕ್ತಿಯುಳ್ಳವರು ಈ ಮದ್ದನ್ನು 2 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡೆಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್, ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. [illegible] ಡಬ್ಬಿಗಳು ಅನ್ಯಾಂತ್ಯದವರಿಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೪ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ. | ಡಿ. ಮನ್ನಾಲಾಲ್, [illegible] ಡಾಕ್ಟರ್. ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ತಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೨೨ನೇ ಶುಕ್ರವಾರ ಜನವರಿ ೧೯೨೬. ಸಂಚಿಕೆ ೫.

Th Canara Banking Corporation, Udipi, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. Branch: COONDAPOOR.
ಹೆಡ್ ಆಫೀಸು: ಉಡುಪಿ. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ದಾಖಲಿಸ್ಸ ಅಂಗೀಕರಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ಮೌಲ್ಯತೆತ್ತ ಮೂಲಧನ	ರೂ. 1,73,185—9—11.
ಅಪದ್ಧನ ವಗ್ಯೆರೆ ಎತ್ತಗಳು	ರೂ. 64,700—0—0.
ಸಾ. ಸೇ. 6ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಬಿವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ಮೌಲ್ಯತೆತ್ತ ಮೂಲಧನ 1,73,185—9—11, ಅಪದ್ಧನ ವ ಇತರ ಎತ್ತಗಳು 64,700—0—0, ಠೇವಣಾತಿಗಳು 5,10,077-10-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4371—0—0, ವಿವೇಚನ ಮೇಲಾ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 93,340—10—5, ಜುಮ್ಲಾ ರೂ. 8,45,674—14—7.

ಆಸ್ತಿ ವ ಸೊತ್ತುಗಳು.

ಹಿತ್ತು ಕಟ್ಟೋಣ ಕಟ್ಟಿಇದ ಕ್ರಿಜರಿಗಳು ವಗ್ಯೆರೆ 4134—4—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496—6—2, ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗ್ಯೆರೆ ಕೂಡ) 41,741—14—2, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಠೇವಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 26,131—6—3, ಜುಮ್ಲಾ ರೂಪಾಯಿ 8,45,674—14—7.

ನಿರಖು ಠೇವಣಾತಿಗಳನ್ನು ಕಾಲಕ್ಕೆ ಪ್ರತಿಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸಿಮ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾವುಕಾರಿ ಹುಂಡಿಗಳನ್ನೂ, ವಜ್ಯಾಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಬಿವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

N. Anand Rao,
Secretary.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!
ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತಕ್ಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೋಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ, [illegible] ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಹಾಲಿನೊಂದಿಗೆ [illegible] ಸೇವಿಸಬಹುದು.
1 ತೊಲೆ ಡಬ್ಬಿ ಒಂದಕ್ಕೆ 0—0—0. ½ ಸೇರು ಡಬ್ಬಿ 1ಕ್ಕೆ 1—9—0.
ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಯಿರಿ.

ವಿಳಾಸ:— ದೇವಣ್ಣ ನಾರಾಯಣ ಶೇಟ್ಸ್, [illegible], [illegible], (ದ. ಕ.)

ಅಪೂರ್ವ ಸಂದರ್ಭ.

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುಧಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರ್ಯಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್, ಮುಂಬಯಿ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

❀ ಅಮೃತಾಂಜನ ❀

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು. — 109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —
ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರ್ಯಾಪುಗಳು ಉಚಿತ ಕೊಡುವೆವು.

Write to:— SWAN HOUSE.
P. B. 508, P. T. Madras.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡ ಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು. 10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ ೧ಕ್ಕೆ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೊಟೋಗಳು ಡಜನ್ ೧ಕ್ಕೆ ಕ್ರಯ ರೂ. 2—4—0.

Emarald Watch Co.,
P. T. MADRAS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕಿಓರ್ ಅಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಡೈರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೩—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦ "AGENTS WANTED"
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ಕಾರಿನಪತ್ತೆ:—CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿಗೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಪ್ರಸಿದ್ಧ ಪತ್ರಿಕೆ.

ಹೊಸ ಬೀಜಗಳು! ಖಾತರಿಯಾದವು!!

೧೨ ಪ್ಯಾಕೆಟ್ ಉತ್ತಮ ಜಾತಿಯ ವಿದೇಶಿ ತರಕಾರಿ ಬೀಜಗಳು ೧೨ ರಕಮ್ ... ... ೨—೦—೦.

೧೨ ಪ್ಯಾಕೆಟ್ ನಾಟ ತರಕಾರಿ ಬೀಜಗಳು ೧೨ ರಕಮ್ ... ... ೧—೧೨—೦.

೧೨ ಪ್ಯಾಕೆಟ್ ದೇವರ ಪೂಜೆಗೂ ಮತ್ತು ಅಲಂಕಾರಕ್ಕೆ ಯೋಗ್ಯವಾದ ಹೂ ಬಿಡತಕ್ಕ ಉತ್ತಮವಾದ ೧೨ ರಕಮಿಗಳ ಬೀಜಗಳು ... ... ೨—೦—೦.

ಈ ಮೇಲ್ಕಂಡ ಬೀಜಗಳನ್ನು ಈ ತಿಂಗಳೊಳಗಾಗಿ ತರಿಸಿಕೊಂಡರೆ, ಪೋಸ್ಟೇಜು ಮತ್ತು ಇತರ ಎಲ್ಲಾ ಚಾರ್ಜುಗಳು ಸೇರಿ, ಮೇಲೆ ನಮೂದಿಸಿರುವ ಮೊಬಲಗಿಗೆ, ವಿ. ಪಿ. ಯಿಂದ ಕಳುಹಿಸುತ್ತೇವೆ. ಅಲ್ಲದೆ ಇದರ ಸಂಗಡ ಚಿತ್ರಗಳಿಂದ ಕೂಡಿರುವ ನಮ್ಮ ದೊಡ್ಡ ಕ್ಯಾಟಲಾಗನ್ನು ಕಳುಹಿಸಿ ಕೊಡುತ್ತೇವೆ. ನಮ್ಮಲ್ಲಿ ದೊರಕುವ ಬೀಜಗಳು, ಉತ್ತಮ ತರಹವುಳ್ಳವು. ಮತ್ತು ಖಾತರಿಯಾದವು, ಹುಟ್ಟದೆ ಹೋದರೆ, ಬೇರೆ ಬೀಜಗಳನ್ನು ಬದಲಾಯಿಸಿ ಕೊಡುತ್ತೇವೆ.

ದಿ. ಮೆಜೆಸ್ಟಿಕ್ ನರ್‌ಸರಿ (ತೋಟ)
ಲಾಲ್‌ಬಾಗ್ (ಕೋಟೆ) ರೋಡ್,
ಬೆಂಗಳೂರು ಸಿಟಿ.

11 ಮಣಿಗಳಿದ್ದು ಬ್ರಿಜ್ ಮ್ಯೂಮೆಂಟ್.

22 ಕೆರೆಟ್ ರೋಲ್ಡ ಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ ೧ಕ್ಕೆ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಲೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
184 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ವಾಂಸರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೇಖನಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2—8—0.
„ ಸ್ಥಳೀಕರಿಗೆ ... „ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ರಿಂದ 5 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಮನ್ ರೇಷ್ಮೆ ಮುಡಿಗಳು, ಹಾರ್ಮೋನಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಜಿಲಿಂಗ, ಅಫೀಂಟ, ಶಾಲು, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಟಾ, ಕಾಶೀ ಕ್ಷೇತ್ರ.

ಶಾಲಿವಾಹನಶಕೆ ೧೮೪೭ನೆಯ ಕ್ರೋಧನ ಸಂ||ರದ ಮಾಘ ಬ. ೨. ಶನಿವಾರದಿಂದ, ಕ್ರೋಧನ ಸಂ||ರದ ಮಾಘ ಬ. ೭. ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮಕರ ವುಯಿಂಕಿಲ್.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರದಿನ	ಸೂರ್ಯ ಉ.	ಸೂರ್ಯ ಅಸ್ತ
30	ಶನಿ	೩	೬೦. ೦	ಆಶ್ಲೇಷಾ	೫. ೩	೧೬	6.59	6.29
31	ರವಿ	೩	೩. ೫	ಮಘಾ	೧೧.೧೪	೧೮	6.59	6.29
1	ಸೋಮ	೪	೮.೧೪	ಪುಬ್ಬಾ	೧೬. ೧	೧೯	6.59	6.30
2	ಕುಜ	೪	೧೨. ೩	ಉತ್ತರಾ	೨೧.೪೪	೨೦	6.59	6.30
3	ಬುಧ	೫	೧೪.೩೦	ಹಸ್ತಾ	೨೫.೩೦	೨೧	6.59	6.31
4	ಗುರು	೬	೧೫.೪೪	ಚಿತ್ರಾ	೨೮. ೩	೨೨	6.59	6.31
5	ಶುಕ್ರ	೭	೧೬. ೧	ಸ್ವಾತಿ	೨೯.೩೦	೨೩	6.58	6.31

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚು ಕಾವು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ
22	91—3	69—3	—	—
23	93—3	69—4	—	—
24	92—3	69—7	—	—
25	93—7	70—2	—	—
26	95—3	76—3	—	—
27	95—2	77—2	—	—
28	96—7	77—1	—	—

ಮಂಗಳೂರಿನ ಪೇಟೆ ಧಾರಣೆ.

ಜೀವಸು	ಇಂದ ರೂ. ಆ.	ವರೆಗೆ ರೂ. ಆ
ಮಸ್ಸಿತಿ	8— 2	8—10
ಹೊಸ ಗುಡ್ಡು ...	7—10	8— 4
ಹೊಸ ರಾಶಿ ...	7— 0	7—12
ಆವ್ವಲ್ ಬೆಳ್ತಿಗೆ ...	8— 0	9— 0
ರಂಗೂನು ಬೆಳ್ತಿಗೆ ಗೋಣಿ ೧ ...	13— 0	14— 0
ಗೋಧಿ ಗೋಣಿ ೧ಕ್ಕೆ ...	18— 0	19— 8
ಹುರುಳಿಗೋಣಿ ೧ಕ್ಕೆ ...	8—12	10— 0
ಅಲಸಂಡೆಗೋಣಿ ೧ಕ್ಕೆ ...	14— 8	15— 0
ತೊಗರಿಗೋಣಿ ೧ಕ್ಕೆ ...	14— 8	15— 0
ತೊಗರಿಬೇಳೆ ಗೋಣಿ ೧ಕ್ಕೆ ...	16— 8	22— 0
ಉದ್ದುಗೋಣಿ ೧ಕ್ಕೆ ...	17— 0	—
ಹೆಸರುಗೋಣಿ ೧ಕ್ಕೆ ...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ ...	60— 0	62— 8
ಉಪ್ಪು ಗೋಣಿ ೧ಕ್ಕೆ ...	4— 0	4— 4
ಕೊಬ್ರಿ ಖಂಡಿ ೧ಕ್ಕೆ ...	110— 0	120— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	36— 0	—
ಎಳ್ಳಿಂಡಿ ಖಂಡಿ ೧ಕ್ಕೆ ...	40— 0	45— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8—	—
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	11— 0
ಹರಳೆ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4—12	—
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	9— 4	—
ಸಾಸಿವೆ ಮುಡಿ ೧ಕ್ಕೆ ...	9— 8	—
ಕೊತ್ತಂಬರಿ ಮುಡಿ ೧ಕ್ಕೆ ...	3— 8	4— 4
ಕಾಫಿ ಖಂಡಿ ೧ಕ್ಕೆ ...	345— 0	--
ಹಳೆಗೋಟು ಅಡಿಕೆ ಖಂಡಿ ೧ಕ್ಕೆ ಹಳಕು ...	275— 0	300— 0
ಹೊಸ ಅಡಿಕೆ ಖಂಡಿ ೧ಕ್ಕೆ ...	170— 0	215— 0
ಕಾಳುಮೆಣಸು ಖಂಡಿ ೧ಕ್ಕೆ ...	300— 0	400—
ಯಾಲಕ್ಕಿ ಮುಡಿ ೧ಕ್ಕೆ ...	45— 0	—
ಗೇರುಬೀಜ ಮುಡಿ ೧ಕ್ಕೆ ...	4— 0	—
ಶೆಕ್ಕೆಯ ಖಂಡಿ ೧ಕ್ಕೆ ...	45— 0	65— 0
ಹಾಂಡ್ರು ಹಗಣು ಮುಡಿ ೧ಕ್ಕೆ ...	16— 4	16—12
ಹಾವ್ರು ಪಾತ್ರಗಳು ಮುಡಿ ೧ಕ್ಕೆ ...	21— 0	—
ಚೀನಿ ಬೆಲ್ಲ ಸೇರು ೧ಕ್ಕೆ ...	18—10	
ಹಿತ್ತಾಳ ತಗಡು ಮುಡಿ ೧ಕ್ಕೆ ...	16— 8	
ಜವಸು	13— 6	

ವಸಂತ.

ಕನ್ನಡಿಗರೇ! ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . ವಸಂತ
ಕರ್ಣಾಟಕ ಭಾಷಾಸೇವಕನೆಂದರೆ . . . . ವಸಂತ
ದೇಶವಿದೇಶ ಬಂಧುವೆಂದರೆ . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು, ಯಾರಿಗೆ ಬೇಡ?

48 (ಕ್ರೌನ್ ¼ ಘಟಿ ಸೈಜಿನ) ಪುಟಗಳನ್ನು ಮಿಶ್ರಿತ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಆರೋಗ್ಯ ಚಂದ್ರಿಕೆ.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಎಲ್. ಎಮ್. ಸಿ. ಎಫ್. ಎಮ್. ಯು. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂ. ೧—೮—೦; ಬಿಡುಪತ್ರಿಕೆ ಒಂದಕ್ಕೆ ರೂ. ೦—೩—೦. ಹಿಂದಿನ ಸಂಚಿಕೆಗಳು ಕೂಡ ದೊರೆಯುವವು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ. ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ'
೩೨೩ ತಂಬುಚೆಟ್ಟಿ ಬೀದಿ, ಮದ್ರಾಸ್.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಿಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ; ಬತ್ತಾ ನೋಟು, ಮೆಮೊ ಆಫ್ ಕೊಸ್ಟ್ಸ, ಮೆಮೊರಂಡಮ್ ಆಫ್ ಎಪ್ಪಿಯರೆನ್ಸ, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ!

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
೧ಕ್ಕೆ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ತ್ವರೆ ಮಾಡಿರಿ! ತಯಾರಾಗಿದೆ!

ನಾಲ್ಕನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ-ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಪ್ರಸಂಗದ ಪುಸ್ತಕಗಳು.

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ವೈದುನರಾಮನ ಚರಿತ್ರೆ ... ...
(6) ಭಾಮಿನಿ ಕಟ್ಟದ ಚೋರ ಕಥೆ ... ...
(7) ಕುವರಾರ ರಾಮನ ಕಥೆ ... ...
(8) ಕೃಷ್ಣದಾಸಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೀನಾತ್ಮಮೋದ ಕಥಾ ... ...
(18) ಚಂದ್ರವಾಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗದರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷ್ಮಾಗ್ರಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಜ ಕಥೆ ...
(26) „ ಗೋವಿನ ಚರಿತ್ರೆ ... ...
(27) „ ದುಶ್ಯಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

ಶಾರದಾ ಛಾಪಖಾನೆ, ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡ ಒಫಿಶಿಯಲ್ ರಿಸೀವರ ಕೋರ್ಟಿನಲ್ಲಿ.

I. P. 3/26.

ಅಬ್ದುಲ್ ಕಾದ್ರಿ ಬ್ಯಾರಿ-ಹಸನ್ನ ಬ್ಯಾರಿ ಮಗ, ಹರೇಕಳ ಕಸಬಾ— ದಿವಾಳಿ ಅರ್ಜಿದಾರ

ಮತ್ತು

1 ಬಿರಿಯ ಯಾನೆ ಕುಂಞಾಮು 2 ಕೊರಪಳು ಶೆಟ್ಟಿ
3 ಎ. ಜೆ. ಮಥಾಯಸ್ 4 ದ್ಯಾಕ ಹೆಂಗಸು
5 ಕೊಮನ್‌ವೆಲ್ತ ಹಂಚುಕಾರ್ಖಾನೆಯ ಮೆನೇಜರ್
6 ಕೊರಗಪ್ಪ ಮತ್ತು ಕಂಪೆನಿ 7 ಕೃಷ್ಣಪ್ಪ ಶೆಟ್ಟಿ
8 ಉಂಞ ಬ್ಯಾರಿ } ಕ್ರೆಡಿಟರ್ಸ್

ಮೇಲ್ಕಂಡ ಕೋರ್ಟಿನಲ್ಲಿ ಸದರಿ ಅರ್ಜಿದಾರನು ದಿವಾಳಿ ಅರ್ಜಿ ದಾಖಲು ಮಾಡಿರುತ್ತಾನೆ. ಸದರಿ ದಿವಾಳಿ ಅರ್ಜಿಯು ತಾ. 5—3—'26ಕ್ಕೆ ತನ್ಖಿಗೆ ಇಟ್ಟಿದೆ. ಸದರಿ ತಾರೀಕಿನ ಒಳಗೆ ಸದರಿ ದಿವಾಳಿ ಅರ್ಜಿ ವಿಷಯ ಆಕ್ಷೇಪಿಸುವವರು ಮೇಲ್ಕಂಡ ಕೋರ್ಟಿಗೆ ಮನವಿಮಾಡಿಕೊಳ್ಳತಕ್ಕದ್ದು.

ಮಂಗಳೂರು,
ತಾ. 25—1—'26. } J. H. A. Mascarenhas.
B. A. L. L. B.
Vakil for Petitioner.

ಕೇಳಿರಿ! ಬರಿ ಬರಿ !!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ
ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲ 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

ಜ್ಯಾಹೀರಾತು.

ಪುತ್ತೂರಲ್ಲಿ ವ್ಯಾಪಾರಮಾಡುವ ಬೆಳ್ಳಾರೆ ನರಸಿಂಹ ಮಲ್ಯನು ಈ ಮೂಲಕ ಸರ್ವಜನರಿಗೆ ತಿಳಿಸುವುದೇನೆಂದರೆ:—

ನನ್ನ ಅಳಿಯ ಎಲ್ಲೂರು ರಾಮಕೃಷ್ಣ ಕಿಣಿಯು ನನ್ನ ಅಂಗಡಿಯಲ್ಲಿ ತನ್ನ ಚಿಕ್ಕಂದಿನಿಂದ ಇದ್ದು ಕಳೆದ ತಾರೀಕು 28—10—25ರಲ್ಲಿ ನಮ್ಮೊಳಗೆ ರಿಜಿಸ್ಟ್ರಿ ನಿಶಿ ರಶೀದಿಯಾಗಿ ಈಗ ಆತನು ಪ್ರತ್ಯೇಕ ಅಂಗಡಿಯನ್ನು ಮಾಡಿ ವ್ಯಾಪಾರ ನಡಿಸುತ್ತಿದ್ದಾನೆ. ಸದರಿ ಅಂಗಡಿಯಲ್ಲಿ ನನಗೇನು ಹಕ್ಕು ಸ್ವತಂತ್ರ ಇಲ್ಲವೆಂಬುದನ್ನು ಈ ಮೂಲಕ ತಿಳಿಸೋಣಾಗುತ್ತದೆ.

ಬಿ. ನರಸಿಂಹ ಮಲ್ಯ,
ಪುತ್ತೂರು.

ನೋಟೀಸು.

ದಕ್ಷಿಣಕನ್ನಡಾ ಒಫಿಶಿಯಲ್ ರಿಸೀವರ ಕೋರ್ಟಿನಲ್ಲಿ

I. P. 1/1926.

ಯು. ಕೃಷ್ಣ ಯಾನೆ ವಿಠ್ಠಳ ನಾಯ್ಕ—ಅರ್ಜಿದಾರ ಡೆಟ್ಟರ್.

ಮತ್ತು

1 ತ್ರೇಡರ್ಸ ಕೊ-ಒಪರೇಟಿವ್ ಸೊಸೈಟಿ ಬಂಟ್ವಾಳ
2 ರಾಯಿ ದಾಮೋದರ ಬಾಳಿಗಾ
3 ಚಕ್ರಬೆಟ್ಟು ಕೃಷ್ಣರಾಯ ಶ್ಯಾನಭಾಗ
4 ಬಂಟ್ವಾಳ ರಾಮದಾಸ ಪೈ
5 ಭಾಮಿ ರಾಮಯ್ಯ ಶ್ಯಾನಭಾಗ
6 ಭಾಮಿ ದಾಸಯ ಶ್ಯಾನಭಾಗ
7 ಗುರುಪುರಕಾರ ಬ್ರದರ್ಸ್
8 ರಾಮಚಂದ್ರ ಸ್ಟೋರ ಬಾಳಿಗಾ
9 ಲಕ್ಷ್ಮಣ ಬಾಳಿಗಾ
10 ಪಾಂಡುರಂಗ ಸುಬ್ರಾಯ ಬಾಳಿಗ
11 ಸಾವಕಾರ ಬಾಬು ಕಮ್ತಿ
12 ಮಂಗಳಪಾಡಿ ಕೇಶವ ಶ್ಯಾನಭಾಗ
13 ನರಸಿಂಗರಾವ್
14 ಮೈಂದಾಲ ಇಸ್ಸು ಬ್ಯಾರಿ
15 ಅಡ್ಯಾರ ಅಮ್ಮದ ಬ್ಯಾರಿ
16 ಪದವು ಅನಂತ ಶ್ಯಾನಭಾಗ
17 ಪದವು ಶಾದಿ ಸಿಲ್ವ
18 ಎಮ್. ಎಸ್. ಪೈ

} ಕ್ರೆಡಿಟರ್ಸ್, ರೆಸ್ಪೊಂಡೆಂಟರು.

ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿ ಎಂತ ಸ್ಥಾಪಿಸಬೇಕೆಂತ ವಗ್ಯೆರೆ ಕಾಣಿಸಿ ಮೇಲ್ಕಂಡ ಕೋರ್ಟಿನಲ್ಲಿ ಕೊಟ್ಟ ಅರ್ಜಿಯನ್ನು ತನಿಖೆ ಬಗ್ಗೆ ತಾ. 30—1—'26ಕ್ಕೆ ಪೂರ್ವಾಹ್ನ 11 ಗಂಟೆಗೆ ತನಿಖೆಗೆ ಇಟ್ಟಿದೆ. ಆಕ್ಷೇಪ ಇದ್ದವರು ಅವರವರ ಆಕ್ಷೇಪಗಳನ್ನು ಸದರಿ ತಾರೀಕಿಗೆ ಸದರಿ ಕೋರ್ಟಿನಲ್ಲಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

MANGALORE 27—1—1926. } M. Ramakrishnachar, *Vakil for petitioner.*

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. No. 14/1926.

1 ರುಕ್ಮಿಣಿ ಯಾನೆ ವಿಮಲಾ ಬಾಯಿ
2 ರಮಾಬಾಯಿ-ಮ್ಯಾನರ ಇವಳ ರಕ್ಷಕ ವಿಠಲ ಪ್ರಭು
3 ಬಾಬುರಾವ್ ಪ್ರಭು
4 ರತ್ನಾ ಬಾಯಿ
5 ಕೃಷ್ಣಾ ಬಾಯಿ
6 ಲೀಲಾವತಿ
7 ಜಯಾ ಬಾಯಿ
8 ಗೋವಿಂದ
9 ನಾರಾಯಣಿ

(3–9) } ಮ್ಯಾನರರು, ಗಾರ್ಡಿಯನ್ ತಾಯಿ 1ನೇ ಅರ್ಜಿದಾರಳು ರುಕ್ಮಿಣಿ ಯಾನೆ ವಿಮಲಾ ಬಾಯಿ

} ಅರ್ಜಿದಾರರು.

ತಾ. 6—11—1925ರಲ್ಲು ಮಂಗಳೂರು ಶಹಾರಿನಲ್ಲಿ ಮೃತಪಟ್ಟ ಪಸಾರಿ ವಿಟ್ಟಪ್ಪ ಪ್ರಭು ಇವರ ಸಾಲಗಳನ್ನು ವಸೂಲುಮಾಡುವರೆ ಮೇಲ್ಕಂಡ ಅರ್ಜಿದಾರರು 1ನೇಯವಳ ಹೆಸರಲ್ಲಿ ಸರ್ಟಿಫಿಕೇಟು ಕೊಡಬೇಕೆಂತ ವಗ್ಯೆರೆ ಕಾಣಿಸಿ ಮೇಲ್ಕಂಡ ಕೋರ್ಟಿನಲ್ಲಿ ಕೊಟ್ಟ ಅರ್ಜಿಯನ್ನು ತಾರೀಕು 10—2—26ಕ್ಕೆ ಪೂರ್ವಾಹ್ನ 11 ಗಂಟೆಗೆ ತನ್ನಿಗೆ ಇಟ್ಟಿದೆ. ಆಕ್ಷೇಪ ಇದ್ದವರು ಅವರವರ ಆಕ್ಷೇಪಣೆಗಳನ್ನು ಸದರಿ ತಾರೀಕಿಗೆ ಸದರಿ ಕೋರ್ಟಿನಲ್ಲಿ ಜಾಹೀರುಮಾಡಿಕೊಳ್ಳತಕ್ಕದ್ದು.

Mangalore, 26-1-1926. } K. Sadashiva Rao, *Counsel for Petitioner.*

ಸ್ಥಿರಾಸ್ತಿ ಏಲಂ ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ.

ಕ್ರಮ ನಂಬ್ರ 92/1924.
ಕ್ರಮ ಅಮಲ್ಜಾರಿ ನಂಬ್ರ 152/1925.

ಮಿಜಾರ ಅಣ್ಣಪ್ಪ ಅನಂತ ಪೈ— ವಾದಿ—ಅರ್ಜಿದಾರ.

1 ಬಿ. ಶ್ರೀನಿವಾಸ ನಾಯಕ
2 ಮಹಾಲಿಂಗ ಭಟ್ಟ
3 ಬಿ. ಉಪೇಂದ್ರ ಶ್ಯಾನುಭಾಗ

} ಪ್ರತಿವಾದಿರು. ರೆಸ್ಪೊಂಡೆಂಟರು.

ಈ ಮೇಲಿನ ಡಿಕ್ರಿ ಅಮಲ್ಜಾರಿಯಲ್ಲಿ 1ನೇ ಪ್ರತಿವಾದಿಯ ಬಾಬ್ತು ಸ್ಥಿರಾಸ್ತಿಗಳನ್ನು ತಾರೀಕು 22—2—1926ರಲ್ಲು ಹಗಲು ಘಂಟೆ 12ಕ್ಕೆ ಮಂಗಳೂರಲ್ಲಿರುವ ಡಿಸ್ಟ್ರಿಕ್ಟ್ ಕೋರ್ಟ ಸೆಂಟ್ರಲ್ ನಾಜರರ ಆಫೀಸಿನಲ್ಲಿ ಬಹಿರಂಗವಾದ ಏಲಂ ಮೂಲಕ ಡಿಕ್ರಿ ಹಣ ಸಮಾಧಾನವಾಗುವ ಮಟ್ಟಿಗೆ ವಿಕ್ರಯ ಮಾಡೋಣಾಗುವುದು. ಸದರಿ ಮಾರಾಟದ ಶರ್ತಗಳು ವಗೈರೆ ಕೋರ್ಟು ಇಸ್ತಿಹಾರಿನಲ್ಲಿ ಸಂಪೂರ್ಣವಾಗಿ ಕಾಣಿಸಿರುತ್ತವೆ. ಹೆಚ್ಚಿನ ಮಾಹಿತಿ ಬೇಕಾದವರು ವಾದಿಯ ವಕೀಲ್ ಎಮ್. ಕೇಶವ ಪೈ ಅಥವಾ 1 ಮತ್ತು 3ನೇ ರೆಸ್ಪೊಂಡೆಂಟರ ಕಡೆ ವಕೀಲ ಪುತ್ತೂರು ಸಂಜೀವ ಇವರ ಮಂಗಳೂರಲ್ಲಿರುವ ಆಫೀಸುಗಳಲ್ಲಿ ಪಡಿಯಬಹುದು.

ಮಂಗಳೂರು, ತಾ. 25-1-'26. } M. Keshava Pai, B. A. B. L. High-court Vakil. Puttur Sanjiva, M. A. B. L. Vakil.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. 17/1926.

ವೆಂಕಟ್ರಮಣ ಭಟ್ಟ— ಅರ್ಜಿದಾರ.

ಮತ್ತು

ಶಂಕರನಾರಾಯಣ ಭಟ್ಟ ಕೂಡಾ— ರೆಸ್ಪೊಂಡೆಂಟರು.

ಸದರಿ ಮೇಲಿನ ಅರ್ಜಿಯಲ್ಲಿ ಅರ್ಜಿದಾರ ಮುಳಿಯ ಶಂಭಟ್ರ ಮಗ ವೆಂಕಟ್ರಮಣ ಭಟ್ಟನು, ಉಪ್ಪಿನಂಗಡಿ ತಾಲೂಕು ಪಥೂರು ಗ್ರಾಮದ ತುಕ್ಕಿಲ ತಿಮ್ಮಣ್ಣ ಭಟ್ರ ಮಗ ಶಂಕರ ನಾರಾಯಣ ಭಟ್ಟ ಹುಟ್ಟುಹುಚ್ಚನೆಂದು ತೀರ್ಮಾನಿಸುವ ಬಗ್ಗೆ, ಸದರಿ ಯವನ ಮತ್ತು ಆತನ ಮ್ಯಾನರ ಮಗಳು ಸಂಕಮ್ಮನ ದೇಹದ ಗಾರ್ಡಿಯಾನನಾಗಿ ನೇಮಿಸುವ ಬಗ್ಗೆ, ಮತ್ತು ಸದರಿಯವರ ಕುಟುಂಬ ಆಸ್ತಿಯ ಮೆನೇಜರನಾಗಿ ನೇಮಿಸಬೇಕೆಂತ ವಗ್ಯೆರೆ ಮನವಿಮಾಡಿರುತ್ತಾನೆ. ಸದರಿ ಅರ್ಜಿಯು ಈ ಕೋರ್ಟಿನಲ್ಲಿ ತಾ. 16—2—1926ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆಕ್ಷೇಪವಿದ್ದವರು ಈ ಕೋರ್ಟಿಗೆ ಸದರಿ ತಾರೀಕಿನೊಳಗೆ ತಿಳಿಸತಕ್ಕದ್ದು.

MANGALORE 23—1—1926. } N. Krishna Bhat, *Vakil for Petitioner.*

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. 16/1926.

ಸರಸ್ವತಿ ಅಮ್ಮ— ಅರ್ಜಿದಾರಳು.

ಮತ್ತು

ಸರಸ್ವತಿ ಕೂಡಾ— ರೆಸ್ಪೊಂಡೆಂಟರು.

ಸದರಿ ಮೇಲಿನ ಅರ್ಜಿಯಲ್ಲಿ ಅರ್ಜಿದಾರಳಾದ ನೂಜಿಬೈಲು ವೆಂಕಟ್ರಮಣ ಭಟ್ರ ಪತ್ನಿ, ಸರಸ್ವತಿ ಅಮ್ಮನು ಉಪ್ಪಿನಂಗಡಿ ತಾಲೂಕು ಕಬಕ ಗ್ರಾಮದ ಮಹಾಲಿಂಗ ಭಟ್ಟನ ಮಗ ಮ್ಯಾನರ ಭೀಮನ ದೇಹದ ಮತ್ತು ಆಸ್ತಿಯ ಗಾರ್ಡಿಯಾನಳಾಗಿ ತನ್ನನ್ನು ನೇಮಿಸಬೇಕೆಂತ ವಗ್ಯೆರೆ ಮನವಿಮಾಡಿರುತ್ತಾಳೆ. ಸದರಿ ಅರ್ಜಿಯು ಈ ಕೋರ್ಟಿನಲ್ಲಿ ತಾರೀಕು 12—2—1926ಕ್ಕೆ ತನ್ನಿಗೆಯಿಟ್ಟಿರುತ್ತದೆ. ಆಕ್ಷೇಪವಿದ್ದವರು ಈ ಕೋರ್ಟಿಗೆ ಸದರಿ ತಾರೀಕಿನೊಳಗೆ ತಿಳಿಸತಕ್ಕದ್ದು.

MANGALORE 23—1—1926. } N. Krishna Bhat, *Vakil for Petitioner.*

ಪ್ರಕಟಣೆ.

ಈ ಕಚೇರಿಯಿಂದ ತಾ. ೧೪—೧—'೨೬ಕ್ಕೆ ಹೊರಡಿಸಿದ್ದರೂ ಕಾರಣಾಂತರದಿಂದ ತಾ. ೧೯—೧—'೨೬ಕ್ಕೆ ಹೊರಡಿಸಿದ ಹಾಗೆ ಸ್ವದೇಶಾಭಿಮಾನಿ ಪತ್ರಿಕೆಯ ತಾ. ೨೨—೧—'೨೬ನೆಯ ಸಂಚಿಕೆಯಲ್ಲಿ ಪ್ರಕಟಿಸಿರುವ ಪ್ರಕಟನೆಯಲ್ಲಿ ಈ ಕೆಳಗಿನ ಸಂಗತಿಯನ್ನು ಕಾರ್ಯಕ್ರಮ ವಗೈರೆಯಲ್ಲಿ ಕೂಡಿಸಿಕೊಳ್ಳಬೇಕಾಗಿ ವಿನಂತಿ.

ಕಾರ್ಯಕ್ರಮ ೪. ಅ. ಕರ್ನಾಟಕ ವಿಶ್ವವಿದ್ಯಾಲಯದ ಮುಂದಿನ ಸ್ಥಿತಿಯ ವಿಷಯ ಕಳೆದ ಮಹಾ ಸಭೆಯಲ್ಲಿ ಮಾಡಿದ ನಿರ್ಣಯವನ್ನು ಸ್ಥಿರಗೊಳಿಸುವುದು ಯಾ ಅಗತ್ಯ ಇದ್ದರೆ ಪುನರಾಲೋಚಿಸುವುದು. ಮುಂದಿನ ಆಡಳಿತ ಸಭೆ ಶಿಕ್ಷಣ ಕ್ರಮದ ವಗೈರೆ ಯಾವತ್ತು ಅವಶ್ಯ ಇದ್ದ ವಿಷಯ ನಮ್ಮ ತಾಲೂಕು ಕಾಂಗ್ರೆಸು ಕಮಿಟಿಯ ಮಟ್ಟಿಗೆ ಕೊನೆಯ ನಿರ್ಣಯ.

ವಿಶೇಷ ಸೂಚನೆ:—ಕಳೆದ ಮಹಾ ಸಭೆಯ ಸದರಿ ನಿರ್ಣಯದ ನಕಲನ್ನು ಇದರೊಂದಿಗೆ ಪ್ರಕಟನೆಗೆ ಕಳುಹಿಸಿರುತ್ತದೆ. ಒಂದು ವೇಳೆ ಅದು ಸಕಲರಲ್ಲಿ ಪ್ರಕಟನೆಯಾಗದಿದ್ದರೂ ನಮ್ಮ ಕಚೇರಿಯಲ್ಲಿರುವ ಮೂಲ ನಕಲಿನಿಂದ ಅನುಭವ ಮಾಡಿಕೊಂಡು ಸಂಬಂಧ ಪಟ್ಟವರೆಲ್ಲರೂ ಸರಿಯಾಗಿ ಪರಿಯಾಲೋಚಿಸಿ ಸಭೆಯಲ್ಲಿ ಭಾಗಿಗಳಾಗ ಬೇಕಾಗಿ ಸವಿನಯ ವಿನಂತಿಯಿದೆ.

ಕಾರ್ಯಕ್ರಮ:— ೪. ಆ: ಚಾಲ್ತಿವರ್ಷದ ಕೆಲಸದ ಕ್ರಮ ಮತ್ತು ಅಂದಾಜು ಜಮಾ ಖರ್ಚಿನ ಪಟ್ಟಿ

ಮಂಗಳೂರು ತಾಲೂಕು ಕಾಂಗ್ರೆಸು ಕಮಿಟಿ ಕಚೇರಿ, ತಾ. ೨೯—೧—೧೯೨೬. | ಅ. ಭೋಜರಾಯ, ಕಾರ್ಯದರ್ಶಿ.

ಬಾಗಾಯಿತು ಕೃಷಿಕರ ಪರಾಂಬರಿಕೆಗೆ.

ನಮ್ಮ ಉಪ್ಪಿನಂಗಡಿ ತಾಲೂಕಿನ ಅಮರ, ಸುಳ್ಯ, ಪಂಜ, ಬೆಳ್ಳಾರೆ ಮತ್ತು ಸುಬ್ರಮಣ್ಯ ಈ ಐದು ಮಾಗಣೆಯ ಜನರ ಉಪಯೋಗಕ್ಕಾಗಿ ದಕ್ಷಿಣ ಕನ್ನಡಾ ಜಿಲ್ಲೆಯ ಬಾಗಾಯಿತು ಕೃಷಿಕರ ಸಂಘದ ಒಂದು ಉಪಶಾಖೆಯನ್ನು ಪ್ರಕೃತದ ಕೆಲಸಕ್ಕೆ ಕೈಗೊಂಡವರು ಗುತ್ತಿಗಾರು ಗ್ರಾಮದಲ್ಲಿರುವುದರಿಂದ, 'ಗುತ್ತಿಗಾರು ಬ್ರಾಂಚ್' ಎನ್ನುವ ಅಂಕಿತ ನಾಮದಿಂದ ಇದನ್ನು ಕರೆಯುವ ಮೇಲೆ ತೋರುವ ಐದು ಮಾಗಣೆಯ ಕೃಷಿಕರು ಇನ್ನು ಮೇಲೆ ಎಲ್ಲಾ ವಹಿವಾಟುಗಳನ್ನು ಈ ಶಾಖೆಯ ಮುಖಾಂತರ ಮಾಡುವ ಈ ಬ್ರಾಂಚಿನ ಹೆಡ್ಆಫೀಸು ವಿಟ್ಲದಲ್ಲಿರುತ್ತದೆ. ಇನ್ನೊಂದುಬ್ರಾಂಚ್ ಮಂಗಳೂರಿನಲ್ಲಿರುವುದು. ಜನಜನಿತ ಇದಕ್ಕೆ ಮುಂಚೆಯೇ ತಿಳಿದಿರುತ್ತದೆ. ಪ್ರಕೃತ ನಮಗೆ "ಸಂಘವು ಭಂಗವೆಂದು" ಕಾಣಬಹುದು ಆದರೆ ಪ್ರತಿ ಒಂದು ಕೆಲಸವನ್ನು ಮಾಡಬೇಕಾದರೂ ನಮಗೆ ಬೇರೆಯವರ ಸಹಾಯ ಬೇಕಲ್ಲವೆ? ಒಂದು ಹಿಡಿ ಅನ್ನವನ್ನು ಬಾಯಿಗೆ ಹಾಕಬೇಕಾದರೆ ಐದು ಬೆರಳುಗಳ ಸಹಾಯ ಬೇಕು; ಇದಕ್ಕೆ 'ಸಹಕಾ'ವೆಂದು ನಾವು ಆಗಾಗ ಹೇಳುವುದು. ಆದುದರಿಂದ ಇನ್ನು ಮೇಲೆ ನಾವೆಲ್ಲವರೂ ಐಕಮತ್ಯದಿಂದ ನಮ್ಮ ಎಲ್ಲಾ ವಹಿವಾಟುಗಳನ್ನು ಈ ಕೃಷಿಕರ ಸಹಕಾರಿ ಸಂಘದ ಬ್ರಾಂಚಿನ ಮುಖಾಂತರವೇ ನೆರವೇರಿಸುವ; ಇದರಿಂದ ನಮಗೆಂದಿಗೂ ನಷ್ಟ ಬರಲಾರದು. ಲಾಭ ಹೆಚ್ಚು ಸಿಕ್ಕದಿರಲೂ ಸಾಕು.

ಲಾಲಿಸಿರಿ! ನಾವು ಇಡೀ ವರ್ಷ ಕಷ್ಟಪಟ್ಟು ಕೆಲಸ ಮಾಡಿ ಕೊನೆಗೆ ನಮ್ಮ ಮಹಲನ್ನು ವಿಕ್ರಯಿಸಲು ಪರಾಶ್ರಮವನ್ನು ಬಯಸುವುದೇ ಹೇಸಿಕೆಯೂ, ನಾಚಿಕೆಯೂ ಅಲ್ಲವೆ? ನಮ್ಮ ಮಹಲನ್ನು ನಾವು ವಿಕ್ರಯಿಸಲು ನಮಗೆ ಸ್ವತಂತ್ರವಿಲ್ಲ. ಮಂಗಳೂರಿನ ಬಂದರಕ್ಕೆ ಹ್ಯಾಗೂ ನಮ್ಮ ಸ್ವತಂತ್ರತೆಯಿಂದ ಬರುತ್ತದೆ. ಆ ಮೇಲೆ ಯಾರಾದರೂ ಒಬ್ಬ ಸಾಹುಕಾರನ ಭಂಡಸಾಲೆಗೆ ಹಾಕಬೇಕು. ಮತ್ತೆ ಕೆಳಗೆ ಮೇಲೆ ನೋಡಬೇಕು. ಅವರ ಸಮಯ ಕಾಯಬೇಕು; ಬೀದಿ ದೂಳು ತಿನ್ನಬೇಕು. ಹೋಟೇಲಿಗೆ ದುಡ್ಡು ಹಾಕಬೇಕು. ಅಚ್ಚು ಕುಟಿ ಸುತ್ತಬೇಕು; ಈ ಕಷ್ಟ ಯಾರಿಗೆ ಬೇಕು! ದಲಾಲಿ ಚಾರ್ಜು ಬರಾಬರಿ ೬ ರೂಪಾಯಿ ಕೊಡಬೇಕು. ಇದು ಪ್ರತಿ ವರ್ಷವೂ ಹೆಚ್ಚುತ್ತಾ ಬರುತ್ತದೆ. ಆದುದರಿಂದ ಇನ್ನು ಮೇಲೆ ನಾವು ನಮ್ಮ ತಿಳಿಗೇಡಿತನವನ್ನು ಬಿಟ್ಟು ಇಡೀ ಜಿಲ್ಲೆಯ ಬಾಗಾಯಿತು ಕೃಷಿಕರು ಈ ಸಂಘದ ಕಡೆಗೆ ತಮ್ಮ ದೃಷ್ಟಿಯನ್ನಿಟ್ಟು ಮಹಲನ್ನೆಲ್ಲಾ ಉತ್ತಮ ರೀತಿಯಿಂದ ತಯಾರಿಸಿ ಅಲ್ಲಲ್ಲಿಯ ಬ್ರಾಂಚಿನ ಮೂಲಕ ವಿಕ್ರಯಿಸಲು ಪ್ರಯತ್ನಿಸುವ ಮೇಲಿನ ಐದು ಶಾಲೋತಿನವರು ಎಲ್ಲಾ ವಿವರಕ್ಕೆ ಕೆಳಗಿನವರಿಗೆ ಬರೆಯಿರಿ ಸಹಕಾರವೇ ಸರ್ವಕಾರ್ಯಗಳಿಗೂ ತಾಯಿಬೇರು.

ಗುತ್ತಿಗಾರು ಬ್ರಾಂಚ್ ತಾ. ೨೪—೧'—೨೬. } ಕೆ. ಯಸ್. ನಾರಾಯಣ ರಾವ್ ಮತ್ತು ಕೆ. ಸುಬ್ಬರಾಯ.

ಸ್ಫುಟವಿಚಾರಗಳು.

ದ್ವಿಜೇಂದ್ರನಾಥ ಠಾಕೂರರ ನಿಧನ.

ಶ್ರೀ ರವೀಂದ್ರನಾಥರ ಅಗ್ರಜರಾಗಿರುವ ಶ್ರೀ ದ್ವಿಜೇಂದ್ರನಾಥ ಠಾಕೂರರು ಈ ತಿಂಗಳ ತಾ. ೧೯ಕ್ಕೆ ದೈವಾಧೀನರಾಗಿ ಭಾರತೆಯು ತನ್ನ ಅತ್ಯುಜ್ವಲ ಪುತ್ರರತ್ನವನ್ನು ಕಳೆದುಕೊಂಡಳು. ಶ್ರೀ ರವೀಂದ್ರನಾಥರ ಶಾಂತಿನಿಕೇತನದ ಮಗ್ಗುಲಲ್ಲಿ ಒಂದು ಸಣ್ಣ ಕುಟೀರದಲ್ಲಿ ಶ್ರೀ ದ್ವಿಜೇಂದ್ರನಾಥರು ಸನ್ಯಾಸದಿಂದ ಸರ್ವಸಂಗ ಪರಿತ್ಯಕ್ತರಾಗಿ, ತನ್ನ ೮೬ ವರ್ಷದ ವಯಸ್ಸಿನವರೆಗೆ ಲೋಕ ಹಿತಚಿಂತನೆಯಲ್ಲಿಯೇ ಲೀನರಾಗಿ ತಮ್ಮ ಜೀವನದ ಸಾರ್ಥಕ್ಯವನ್ನು ಪ್ರಕಟಿಸಿದರು. ಅಗಾಧ ತತ್ವವೇತ್ತರಾದ ಶ್ರೀ ದ್ವಿಜೇಂದ್ರನಾಥರನ್ನು ಶಾಂತಿನಿಕೇತನವಾಸಿಗಳೂ, ಇತರರೂ ಬಹು ನಮ್ರತೆಯಿಂದ ಗೌರವಿಸುತ್ತಿದ್ದರು. ಹೆಚ್ಚಾಗಿ ಇವರನ್ನು ಎಲ್ಲರೂ "ಬಡಾ ದಾದಾ" ದೊಡ್ಡಣ್ಣನೆಂದು ಕರೆಯುತ್ತಿದ್ದರು. ಇವರು ಬಂಗಾಳಿ ಭಾಷೆಯ ಪ್ರತಿಭಾಪನ್ನ ಕವಿಗಳೂ ಆಗಿದ್ದುದರಿಂದ ಬಂಗಾಳದ ವಾಙ್ಮಯದಲ್ಲಿ ಹೆಚ್ಚು ಸನ್ಮಾನವನ್ನು ಹೊಂದಿರುವರು. ಮಹಾತ್ಮಾ ಗಾಂಧಿಯವರಿಗೂ ಇವರ ಮೇಲೆ ಅತಿಶಯವಾದ ಭಕ್ತಿಯಿದ್ದು ಅವರು ಕೂಡ ದ್ವಿಜೇಂದ್ರನಾಥರನ್ನು "ಬಡಾ ದಾದಾ" ಎಂದು ಪ್ರೇಮಪೂರ್ವಕವಾಗಿ ಕರೆಯುತ್ತಿದ್ದರು. ತಮ್ಮನಾದ ಶ್ರೀ ರವೀಂದ್ರನಾಥ ಠಾಕೂರರ ಅಭಿಪ್ರಾಯಗಳೇನಿದ್ದರೂ, ದ್ವಿಜೇಂದ್ರನಾಥರು ಮಹಾತ್ಮರ ಕಾರ್ಯಗಳಲ್ಲಿ ತಮ್ಮ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸಿ, ಮಹಾತ್ಮರನ್ನು ಅವರ ಕಾರ್ಯದಲ್ಲಿ ಹರಸುತ್ತಿದ್ದರು. ಠಾಕೂರರ ಇಡೀ ಕುಟುಂಬವೇ ಬಂಗಾಳದಲ್ಲೆಲ್ಲಾ ಪ್ರಸಿದ್ಧವಾದುದಾಗಿದೆ, ಠಾಕೂರ ವಂಶಜರು ಬಂಗಾಳದ ಭಾವನೆಗಳಲ್ಲಿಯೂ, ಬಂಗಾಳದ ವಾಙ್ಮಯದಲ್ಲಿಯೂ ಉತ್ತಮ ಪರಿಣಾಮಗಳನ್ನುಂಟುಮಾಡಿದ್ದಾರೆ. ಹಾಗೆಯೇ ಇವರ ತಂದೆಯವರು ದೇವೇಂದ್ರನಾಥ ಠಾಕೂರರು ಪ್ರಮುಖ ತತ್ವವೇತ್ತರೂ, ತ್ಯಾಗಿಗಳೂ ಆಗಿದ್ದು ಮಹರ್ಷಿಯೆಂದು ಪರಿಗಣಿಸಲ್ಪಟ್ಟಿದ್ದಾರೆ. ಬಂಗಾಳದ ಅತ್ಯಂತ ಶ್ರೀಮಂತವಾದ ಕುಟುಂಬದಲ್ಲಿ ಇಂತಹ ನಿಸ್ವಾರ್ಥಿಗಳೂ, ತ್ಯಾಗಿಗಳೂ ಜನನಕ್ಕೆ ಬರುವುದು ವಿರಳ. ಅದರಲ್ಲಿಯೂ ಕುಟುಂಬದೊಳಗಿನ ಪ್ರಮುಖರೇ ತ್ಯಾಗಿಗಳಾಗುವರೆಂದರೆ, ಅವರ ಮನಸ್ಸು ಎಷ್ಟು ಉಚ್ಚವಿರುವುದೆಂದು ಅಭಿಪ್ರಾಯವಾಗುವುದು. ದ್ವಿಜೇಂದ್ರನಾಥರ ನಿಧನದ ವಿಷಯವಾಗಿ ಮಹಾತ್ಮರು ಹೀಗೆ ಬರೆಯುತ್ತಿದ್ದಾರೆ:—

"ಬಡಾ ದಾದರ ಮರಣವೆಂದರೆ ನಮ್ಮೊಳಗಿನಿಂದ ಒಬ್ಬ ದೊಡ್ಡ ಋಷಿಯೂ, ತತ್ವವೇತ್ತನೂ, ದೇಶಪ್ರೇಮಿಯೂ ಹೋದಂತಾಯಿತು."

ಜಾತೀಯ ಭಾವನೆ (Communal Feeling)

ನಮ್ಮ ಜಿಲ್ಲೆಯ ಜನರೊಳಗೆ ಈ ಜಾತೀಯ ಭಾವನೆಯ ವಿಷವು ದಿನಗಳೆದಷ್ಟಕ್ಕೆ ಹೆಚ್ಚು ಹೆಚ್ಚಾಗಿ ನೆಲಸಿ ಬರುತ್ತಿದೆ ಎಂಬುದನ್ನು ನಾವು ಬಹಳ ವಿಷಾದದಿಂದ ಕಂಡುಕೊಳ್ಳುತ್ತೇವೆ. ಸಾರ್ವಜನಿಕ ಕೆಲಸಗಳಲ್ಲಿ ಈ ಜಾತೀಯ ಭಾವನೆಗಳನ್ನು ಕಂಡುಕೊಂಡುದರಿಂದ, ಜಾತಿ ಜಾತಿಗಳೊಳಗೆ ಅನ್ಯಾಯವಾಗಿ ಸ್ಪರ್ಧೆಯೂ, ದ್ವೇಷವೂ, ಮತ್ಸರ್ಯವೂ ಬೆಳೆಸಲ್ಪಟ್ಟು, ಹಿಂದೂ ಅಖಂಡತೆಯು ಕೆಡಿಸಲ್ಪಡುತ್ತಿದೆ. ಚುನಾವಣೆಗಳಲ್ಲಿ ಕೌನ್ಸಿಲ್ ಮಂದಿರಗಳ ಖುರ್ಚಿಗಳನ್ನು ಅಪಹರಿಸುವ ಅವಸರದಲ್ಲಿ, ಉಮೇದ್ವಾರರೂ ಅವರ ಬಗ್ಗೆ ಕೆಲಸ ಮಾಡುವವರೂ ಜಾತೀಯ ಭಾವನೆಗಳನ್ನು ಮುಂದೊತ್ತಿ ಸ್ವಾರ್ಥವನ್ನು ಸಾಧಿಸುವರು. ಮೆಲ್ಲನೆ ಬ್ರಾಹ್ಮಣ ಮತ್ತು ಬ್ರಾಹ್ಮಣೇತರವೆಂಬ ಭೇದವು ನಮ್ಮ ಜಿಲ್ಲೆಯವರೊಳಗೂ ತಲೆದೋರಲಾರಂಭಿಸಿಯದೆ. ಬ್ರಾಹ್ಮಣೇತರ ಅಖಂಡತೆ ಕೂಡ ಈ ಕೌನ್ಸಿಲ್ ಸದಸ್ಯತನದ ಆಶಾ ಪಿಶಾಚದ ಸಮ್ಮುಖದಲ್ಲಿ ಕುಸಿದು ಹೋಗುತ್ತಿದೆಯೆನ್ನುವಾಗ, ಈ ಜಾತೀಯ ತತ್ವಗಳ ನಿಜಸ್ವರೂಪವು ಸ್ಪಷ್ಟವಾಗುವುದು. ಈ ಮೊದಲು ಬ್ರಾಹ್ಮಣೇತರ ಸ್ಥಾನಕ್ಕೆ ಶ್ರೀಯುತ ಮಂಜಯ್ಯ ಹೆಗ್ಡೆ ಇತ್ಯಾದಿಯವರು ಉಮೇದ್ವಾರರಿದ್ದಾಗ, ಕೂಡಲೇ ಬಂಟರೂ ಜೈನರೂ ಎಂಬ ಭೇದವು ಮುಂದೆ ಬಂದಿತ್ತು. ಇದರಿಂದಲೇ ಬ್ರಾಹ್ಮಣೇತರರೆನಿಸಿಕೊಳ್ಳುವ ಬ್ರಾಹ್ಮಣ ವಿದ್ವೇಷಿಗಳ ಅಂತರ್ಯ ಶೋಧನೆಯಾಗುವುದು. ಇಂತಹವರಿಗೆ ಬ್ರಾಹ್ಮಣೇತರ ಜಾತಿಯವರ ಪ್ರೇಮ ಕೂಡ ಇರುವುದಿಲ್ಲ. ಇವರ ಪ್ರೇಮವು ಬ್ರಾಹ್ಮಣೇತರರೆಂದು ಸಂಕುಚಿತವಾಗಿ, ಪುನಃ ಸ್ವಕುಟುಂಬಕ್ಕೆ ಸಂಕುಚಿತವಾಗಿ, ಆಬಳಿಕ ತಮ್ಮ ಸ್ವಾರ್ಥದಲ್ಲಿಯೇ ಸಂಕುಚಿತವಾಗುತ್ತದೆ. ಮುಖ್ಯತಃ ಸಾರ್ವಜನಿಕ ಕೆಲಸಗಳಲ್ಲಿ ದುಃಖದ ತೋರಲ್ಪಡುವ ಈ ಜಾತೀಯ ಭಾವನೆಯು ಬರೇ ಈ ಸಂಕುಚಿತ ಸ್ವಾತ್ಮಪ್ರೇಮದ ಫಲವಾಗಿದೆಯಲ್ಲದೆ, ಇದರಲ್ಲಿ ಮಹತ್ವದ ವಿಚಾರವೂ ಇರುವುದಿಲ್ಲ. ಪುನಃ ಮೊನ್ನೆ ತಾ. ೨೨ರಲ್ಲು ನಡೆದ ಚುನಾವಣೆಗಳಲ್ಲಿ ಕೂಡ, ಒಂದು ಪಕ್ಷವು ಒಂದು ಜಾತಿಯೆಂದೂ, ಇನ್ನೊಂದು ಪಕ್ಷವು ಇನ್ನೊಂದು ಜಾತಿಯೆಂದೂ ತೋರಿಸಿಕೊಂಡು ಕೆಲಸಮಾಡಿಯದೆ. ಈ ತರದ ಚುನಾವಣೆಯ ರೀತಿಗಳು ಜಿಲ್ಲೆಯ ಸಾಮಾಜಿಕ ಜೀವನವನ್ನು ಅಸಹನೀಯವಾಗಿ ಮಾಡುತ್ತಿವೆ. ಕ್ಷಣಿಕ ವಿಜಯದ ಸಾಧನೆಗಾಗಿ, ಯಾರಾದರೂ ವ್ಯಕ್ತಿಯು ಸ್ವಾರ್ಥಕ್ಕಾಗಿ ಸಮಷ್ಟಿಯ ಸುಖವನ್ನು ಬಲಿಯೀಯುವುದು ಅತ್ಯಂತ ಖೇದಜನಕವಾದ ವಿಷಯವು.

ಕೆಲವರು ತಮ್ಮ ಜಾತೀಯ ಪ್ರೇಮವನ್ನು ವ್ಯಕ್ತಪಡಿಸುವ ಭರದಲ್ಲಿ ಸತ್ಯತೆಗೆ ಕೂಡ ಮಾನ್ಯತೆಯನ್ನು ಕೊಡಲು ಒಪ್ಪುವುದಿಲ್ಲ. ಒಬ್ಬರು ಬಂಟರು ಮದ್ರಾಸ್ ಮೈಲು ಪತ್ರಿಕೆಯಲ್ಲಿ, ಶ್ರೀಯುತ ನಾಗಣ್ಣ ಹೆಗ್ಡೆಯವರು ಸ್ವರಾಜ್ಯಪಕ್ಷದ ಪರವಾಗಿ ಉಮೇದ್ವಾರರಾಗಿ ನಿಂತುದನ್ನು ಖಂಡಿಸಿ, ಕೌನ್ಸಿಲಿಗೆ ಬಂಟರ ಓಟುಗಳು ಹೆಚ್ಚಿರುವಾಗ್ಗೆ, ನಾಗಣ್ಣ ಹೆಗ್ಡೆಯರು ಸ್ವರಾಜ್ಯಪಕ್ಷೀಯರಾಗಿ ನಿಲ್ಲುವ ಆವಶ್ಯಕತೆಯಿರಲಿಲ್ಲ, ನಾಡವರಾಗಿಯೇ ನಿಲ್ಲಬಹುದಿತ್ತು ಎಂದು ಸೂಚಿಸಿ, ನಾಗಣ್ಣ ಹೆಗ್ಡೆಯವರು ಸ್ವರಾಜ್ಯಪಕ್ಷವೆಂದ ಬ್ರಾಹ್ಮಣರ ಮೋಸಕ್ಕೆ ಬಲಿಬಿದ್ದುದಕ್ಕಾಗಿ ದುಃಖಿಸುವರು. ಬ್ರಾಹ್ಮಣರ ಮೋಸವೆಂದರೇನೆಂದು ಅವರು ಸ್ಪಷ್ಟಪಡಿಸಿಲ್ಲ. ಸ್ವರಾಜ್ಯಪಕ್ಷದ ಸಂಘಟನಾಕರ್ತರೆಲ್ಲರೂ ಮನಃ ಪೂರ್ವಕವಾಗಿ ಶ್ರೀಯುತ ನಾಗಣ್ಣ ಹೆಗ್ಡೆಯವರಿಗೆ ಸಾಧ್ಯವಿದ್ದಷ್ಟು ಸಹಾಯವನ್ನೆತ್ತಿರುವರು. ಸ್ವರಾಜ್ಯಪಕ್ಷದ ಸಂಘಟನಾ ಕರ್ತರಲ್ಲದರವಾಗಿ, ಇತರ ಉಮೇದ್ವಾರರಿಗೆ ಸಹಾಯರಾದುದಾದರೆ, ಅವರು ಬ್ರಾಹ್ಮಣ ಜಾತಿಯವರೆಂದು "ನೀನಲ್ಲದಿದ್ದರೆ ನಿನ್ನಪ್ಪ" ಎಂಬ ತೋಳನ ಮತ್ತು ಕುರಿ ಮರಿಯ ನ್ಯಾಯ ತೀರ್ಮಾನದಂತೆ, ಸ್ವರಾಜ್ಯಪಕ್ಷದ ಬ್ರಾಹ್ಮಣರನ್ನು ಬೈಯುವುದು ಈ ಜಾತೀಯ ಭಾವನೆಯ ವೈಚಿತ್ರ್ಯ ವೈಶಿಷ್ಟ್ಯವಾಗಿದೆ. ಅಲ್ಲದೆ ಶ್ರೀಯುತ ನಾಗಣ್ಣ ಹೆಗ್ಡೆಯವರು ತಾವಾಗಿ ಮೊದಲು ಸ್ವರಾಜ್ಯಪಕ್ಷೀಯರೆಂದು ಕೊಂಡು ಯಾರ ಅಪ್ಪಣೆಯನ್ನೂ ಪಡೆದುಕೊಳ್ಳದೆ, ಹಾಕಿಕೊಂಡು ಆ ಮೇಲೆ ಸ್ವರಾಜ್ಯಪಕ್ಷವು ಬ್ರಾಹ್ಮಣೇತರರಾದ ಇವರಿಗಾಗಿಯೇ ಅವಸರದಿಂದ ಕರೆಯಲ್ಪಟ್ಟು, ಇವರು ಉಮೇದ್ವಾರರಾಗಿ ನೇಮಕ ಹೊಂದಿದ್ದರಲ್ಲದೆ, ಬ್ರಾಹ್ಮಣರಾರೂ ನಾಗಣ್ಣ ಹೆಗ್ಡೆಯವರ ಹತ್ತಿರ ಹೋಗಿ ಅವರನ್ನು ಮೋಸದಲ್ಲಿ ಸಿಲುಕಿಸಲಿಲ್ಲ.

ನಮ್ಮ ಜಿಲ್ಲೆಯ ಸ್ವರಾಜ್ಯ ಪಕ್ಷದ ಸಂಕಷ್ಟಗಳು.

ಉಮೇದ್ವಾರರು ಕೆಲವರು ತಮ್ಮಷ್ಟಕ್ಕೆ ತಾವು "ಸ್ವರಾಜ್ಯಿಸ್ಟರು"ರೆಂದು ಹಾಕಿಕೊಂಡ ಮಾತ್ರಕ್ಕೆ ಬಿಳೀ ಟೊಪ್ಪಿಯವರೆಲ್ಲರೂ ತಮಗಾಗಿ ಬಂದು ಕೆಲಸಮಾಡಬೇಕಲ್ಲದೆ ಸ್ವಂತ ಚೀಲದಿಂದಲೂ ಖರ್ಚಿಮಾಡಬೇಕೆಂಬ ಊಹೆಯು ಕೆಲವರಲ್ಲಿದೆ. ಹಿಂದಿನ ಚುನಾವಣೆಯಲ್ಲಿ ಸ್ವರಾಜ್ಯಪಕ್ಷದವರಲ್ಲವಾಗಿದ್ದರೂ, ಸ್ವರಾಜ್ಯಪಕ್ಷೀಯರ ಸಂಸರ್ಗಮಾಡಿದ ಆ ಮಹತ್ ಔದಾರ್ಯಕ್ಕಾಗಿ ಸ್ವರಾಜ್ಯಪಕ್ಷೀಯರು ತಮ್ಮ ಚುನಾವಣೆಗೆ ಸಹಾಯಕ್ಕಾಗಿ ಬರಬೇಕೆಂದು ಇಚ್ಛಿಸಿ, ಹಾಗೆ ಬಾರದಿದ್ದುದಕ್ಕಾಗಿ ಸ್ವರಾಜ್ಯದ ಮೇಲೆ ಅಪವಾದ ಹೊರಿಸಿದವರೂ ಇದ್ದಾರೆ. ಆ ಸಮಯದಲ್ಲಿ, (೧) ಸ್ವರಾಜ್ಯಪಕ್ಷೀಯರ ಉಮೇದ್ವಾರರಾರೂ ಇರಲಿಲ್ಲ, (೨) ಸ್ವರಾಜ್ಯಪಕ್ಷವೇ ಇರಲಿಲ್ಲ. ಆದರೂ ಸ್ವರಾಜ್ಯಪಕ್ಷಕ್ಕೆ ಅಪವಾದವು ತಪ್ಪಲಿಲ್ಲ.

ಈ ಬಾರಿ ಸ್ವರಾಜ್ಯಪಕ್ಷವು ಉಂಟಾಯಿತು; ಸ್ವರಾಜ್ಯಪಕ್ಷದ ಉಮೇದ್ವಾರರೂ ನೇಮಕವಾದರು. ಮುಂದೆ? ಪಕ್ಷದವರ ಕೈಯಲ್ಲಿ ಖರ್ಚಿಗೆ ಕಾಸಿಲ್ಲ. ಉಮೇದ್ವಾರರು ಗಂಟು ಬಿಚ್ಚುವುದಿಲ್ಲ. ಸ್ವರಾಜ್ಯಪಕ್ಷದ ಗೌರವ ಉಳಿಯಬೇಕಾದರೆ, ಬಿಳಿ ಟೊಪ್ಪಿಯವರು ಬಂದು ಕೆಲಸಮಾಡಬೇಕು. ಕೆಲಸವೇನೊ ಮಾಡಬಹುದು. ಆದರೆ ಚುನಾವಣೆ ಗದ್ದಲದ ಖರ್ಚಿನ ಗತಿಯೇನು? ಅದನ್ನೂ ಪಕ್ಷವನ್ನು ಸಂಘಟಿಸಿದ ತಪ್ಪಿಗಾಗಿ, ಉಮೇದ್ವಾರರನ್ನು ಸ್ವೀಕರಿಸಿದ ತಪ್ಪಿಗಾಗಿ ಅವರೆ ವಹಿಸಿಕೊಳ್ಳಬೇಕೆ? ಪಕ್ಷದೊಡನೆ ಚುನಾವಣೆ ಬಗ್ಗೆ ನಿಧಿ ಇದ್ದುದಾದರೆ ಚಿಂತೆ ಇರುತ್ತಿರಲಿಲ್ಲ. ಇಲ್ಲವೆ ಸ್ವರಾಜ್ಯಪಕ್ಷದ ಸಂಘಟನಾಕರ್ತರು ಶ್ರೀಮಂತರಿದ್ದುದಾದರೂ ಚಿಂತೆ ಇರಲಿಲ್ಲ. ಕಾಂಗ್ರೆಸ್ ಕಾರ್ಯರಂಗದಲ್ಲಿ ಲಕ್ಷ್ಮೀ ಬಲವು ಕಡಿಮೆ. ಹಾಗಿರುವಾಗ ಚುನಾವಣೆ ಬಗ್ಗೆ ಖರ್ಚುಮಾಡುವವರು ಯಾರು? ಹೊತ್ತನಿದ್ದರೆ ಸತ್ತ ಹಾಗೆ ದಿದ್ದೆಂದು [illegible] ಓಡಿಸುವುದೂ [illegible]

ಮಹಾತ್ಮಾಜೀಯವರಿಗೆ ಆಮಂತ್ರಣ.

ಮಹಾತ್ಮಾಜೀಯವರು ಅಮೇರಿಕಕ್ಕೆ ಬಂದು ಅಲ್ಲಿ ತಮ್ಮ ಸಂದೇಶವನ್ನು ಕೊಡಬೇಕಾಗಿಯೂ, ಮಹಾತ್ಮರ ಪ್ರಯಾಣ ಖರ್ಚನ್ನು ಅವರೇ ವಹಿಸಿಕೊಳ್ಳುವರಲ್ಲದೆ, ಅವರ ಸಂಸ್ಥೆಗಳಿಗೆ ಯೋಗ್ಯವಾದ ಧನಸಹಾಯವನ್ನು ಸಿಕ್ಕುವಂತೆ ಮಾಡಬಹುದಾಗಿಯೂ, ಅಮೇರಿಕ ಜನರ ಆಗ್ರಹವಿದೆ. ಅಮೇರಿಕದ "ಫೆಲ್ಲೊಶಿಪ್ ಒಫ್ ಫೈತ್ಸ" "ಲೀಗ್ ಒಫ್ ನೇಬರ್ಸ್" "ಯುನಿಯನ್ ಒಫ್ ಈಸ್ಟ್ ಎಂಡ್ ವೆಸ್ಟ್" ಇವುಗಳ ಕಡೆಯಿಂದ ಮಿಸೆಸ್ ಲಾಂಗ್‌ಲೊತ್ ಮತ್ತು ಮಿಸೆಸ್ ಕೆಲ್ಲಿ ಎಂಬ ಇಬ್ಬರು ಅಮೇರಿಕದ ಸ್ತ್ರೀಯರು ಮಹಾತ್ಮರನ್ನು ಆಮಂತ್ರಿಸಲು ಸ್ವತಃ ಬಂದಿದ್ದರು. ಆದರೆ ಇಲ್ಲಿ ತನ್ನ ಕೆಲಸವಾಗದೆ ತಾನು ಇತರ ದೇಶಕ್ಕೆ ಬರಲಾರೆನೆಂದೂ, ತನ್ನ ದೇಶದಲ್ಲಿ ತನ್ನ ಸಂದೇಶವು ಪ್ರಸಾರವಾಗದೆ, ಇತರ ದೇಶಕ್ಕೆ ಹೋಗಿ ಪ್ರಸಾರಮಾಡಲಾರೆನೆಂದೂ ಹೇಳಿ ಮಹಾತ್ಮರು ನಿರಾಕರಿಸಿದರು. ಇದರಿಂದ ಮಹಾತ್ಮರ ನಿಷ್ಕಾಮ ಭಾವನೆಯು ಸುವ್ಯಕ್ತವಾಗುವುದು. ಮಹಾತ್ಮರಿಗೆ ಅಮೇರಿಕಕ್ಕೆ ಹೋದರೆ ಬೇಕಷ್ಟು ಸಂಪತ್ತು ಲಾಭವಾಗುತ್ತದೆ. ಅಮೇರಿಕವು ಲೋಕದೊಳಗೆ ಶ್ರೀಮಂತವಾದ ದೇಶವಿದೆ. ಅಲ್ಲಿ ಮಹಾತ್ಮರಂತಹ ಲೋಕಕಲ್ಯಾಣಕಾರಕರು ಹೋದರು. ಅಲ್ಲಿಯವರ ಸಂಪತ್ತು ಅನರ್ಗಳವಾಗಿ ಹೊರ ಹರಿಯುವುದು. ಶ್ರೀ ರವೀಂದ್ರನಾಥ ಠಾಕೂರರೂ ಅಲ್ಲಿಗೆ ಹೋಗಿ ಶಾಂತಿನಿಕೇತನಕ್ಕೆ ಸಾಕಷ್ಟು ಸಹಾಯವನ್ನು ಕೊಡಿಸಿ ಬಂದಿದ್ದರು. ಮಹಾತ್ಮರಿಗಾದರೂ ತಮ್ಮ ಆಶ್ರಮಕ್ಕಾಗಲಿ ಇತರ ಉಚ್ಚ ಉದ್ದೇಶಗಳಿಗೆ, ತಾವಾಗಿ ಕೇಳದೆ ಧನವನ್ನೂ ಅಲ್ಲಿ ಸಂಗ್ರಹಿಸಬಹುದು. ಅಲ್ಲದೆ ಲೋಕಗೌರವವೂ ಅವರಿಗೆ ಲಭಿಸುವುದು. ಆದರೆ ಮಹಾತ್ಮರಿಗೆ ಧನವೂ ಗೌರವವೂ ಲಕ್ಷ್ಯವಿದ್ದಲ್ಲ; ಕೆಲಸವೇ ಮುಖ್ಯ. ತಾನು ಇತರ ಕಡೆಗೆ ಹೋಗಬೇಕಾದರೆ ತನ್ನ ಇಲ್ಲಿಯ ಕೆಲಸ ನೆರವೇರಬೇಕೆಂಬುದೇ ಅವರ ಧ್ಯೇಯ. ಅವರ ಈ ಧ್ಯೇಯಕ್ಕೂ ಶ್ರೀ ರವೀಂದ್ರನಾಥ ಠಾಕೂರರ ಲೋಕಪರಿಭ್ರಮಣದ ಮಾನಸಿಕತೆಗೂ ತಾರತಮ್ಯವನ್ನು ನೋಡಬಹುದು. ಶ್ರೀ. ರವೀಂದ್ರರಿಗೆ ಹಿಂದೂಸ್ಥಾನದಲ್ಲಿ ಕೆಲಹೊತ್ತು ನಿಲ್ಲಲಿಕ್ಕೇನೇ ಮನಸ್ಸು ಬರುವುದಿಲ್ಲ. ಅಸಹಕಾರದ ಪ್ರಚಂಡ ಸಮಯದಲ್ಲಿ, ಇಡೀ ಭರತವರ್ಷವೇ ತಳಮಳಿಸುತ್ತಿದ್ದಾಗ, ಶ್ರೀ. ರವೀಂದ್ರರು ತಮ್ಮ ಲೋಕಸಂಚಾರವನ್ನು ನೆರವೇರಿಸುವುದರಲ್ಲಿದ್ದರು. ಎಷ್ಟು ಬಾರಿ ಸಂಚರಿಸಿದರೂ ಅವರಿಗೆ ತೃಪ್ತಿ ಇರುವುದಿಲ್ಲ. ಬರೇ ಡಂಬಾಚಾರದ ಆಗತ ಸ್ವಾಗತದಲ್ಲಿಯೂ, ಉದ್ಬುದ್ಧ ಭಾಷಣಗಳಲ್ಲಿ ಮಹಾತ್ಮರಿಗೆ ವಿಶ್ವಾಸವಿಲ್ಲ. "ನಾನು ನನ್ನ ಜನರನ್ನು ನನ್ನ ಸಂದೇಶಕ್ಕೆ ಸರಿಯಾಗಿ ವರ್ತಿಸುವಂತೆ ಮಾಡದೆ, ನಿಮ್ಮ ಜನರು ನನ್ನ ಸಂದೇಶಕ್ಕೆ ಸರಿಯಾಗಿ ನಡೆಯುವಂತೆ ಮಾಡಲಾರೆ" ಎಂದು ಮಹಾತ್ಮರು ಹೇಳುತ್ತಾರೆ.

ಹುಡುಗಿಯರನ್ನು ಕಳುವುದು.

ಬಂಗಾಳದಲ್ಲಿ ಹಿಂದೂ ಹುಡುಗಿಯರನ್ನು ಮುಸಲ್ಮಾನರು ಕದ್ದುಕೊಂಡು ಹೋಗಿ ಮದುವೆಮಾಡಿಕೊಳ್ಳುವ ಕ್ರಮವು ಹೆಚ್ಚಾಗುತ್ತಾ ಬರುತ್ತಿದೆ. ಆಗಾಗ ಈ ಕಳವುಗಳು ನ್ಯಾಯಸ್ಥಾನಗಳಲ್ಲಿ ತರಲ್ಪಡುವುವಾದರೂ, ಇಂತಹ ಸಮಯದಲ್ಲಿ, ಹಿಂದೂಗಳೂ, ಮುಸಲ್ಮಾನರೂ ಈ ಕಾರ್ಯದ ನ್ಯಾಯಗಳನ್ನು ಲಕ್ಷಿಸುವುದಕ್ಕಿಂತಲೂ, ಜಾತಿಯನ್ನು ಲಕ್ಷಿಸಿ ಪ್ರತ್ಯೇಕ ತಂಡಗಳಾಗಿ ಹಠಸಾಧನೆಮಾಡುವುದನ್ನು ನೋಡಿದರೆ, ಇವು ಸಾಮಾನ್ಯವಾಗಿಲ್ಲವೆಂದೂ, ನ್ಯಾಯಸ್ಥಾನದಲ್ಲಿ ಬಾರದ ಇಂತಹ ಕಳವುಗಳು ಅನೇಕವಿರಬಹುದೆಂದೂ ಸಂದೇಹಿಸಬೇಕಾಗುತ್ತದೆ. ಇನ್ನೊಂದು ದುಃಖಜನಕ ವಿಷಯವೆಂದರೆ ಹಾಗೆ ಕಳವುಮಾಡಲ್ಪಟ್ಟ ಹುಡುಗಿಯ ಭಾವೀ ಜೀವನ. ಹಿಂದೂಗಳು ಅವಳಿಗೆ ಜಾತಿ ತೆಗೆದುಬಿಡುವರೊ ಇಲ್ಲವೇ ಪುನಃ ಸಮಾಜದಲ್ಲಿ ತೆಗೆದುಕೊಳ್ಳುವರೊ ಎಂಬುದು ನಮಗೆ ತಿಳಿದಿಲ್ಲ. ಹಾಗೆ ಪುನಃ ಸ್ವೀಕರಿಸದಿದ್ದರೆ ಹುಡುಗಿಗೆ ಅನ್ಯಾಯವೂ ಸಮಾಜಕ್ಕೆ ನಷ್ಟವೂ ಉಂಟಾಗುವುದು. ಇನ್ನು ಈ ಕಳವುಗಳು ನ್ಯಾಯಸ್ಥಾನಕ್ಕೆ ಬಂದಾಗ ಹಿಂದೂ ಮುಸಲ್ಮಾನರು ಪ್ರತ್ಯೇಕ ತಂಡಕಟ್ಟುವುದನ್ನು ನೋಡಿದರೆ, ಇದರ ಹಾನಿಯು ಸಾಮಾನ್ಯವಾಗಿಲ್ಲವೆಂದೂ ತಿಳಿಯಬೇಕಾಗುತ್ತದೆ. ಅಲ್ಲದೆ ಬಂಗಾಳದ ಹಿಂದೂಗಳ ನಿರ್ವೀರ್ಯತನವೂ ಅಸಹಾಯತ್ವವೂ ಸ್ಪಷ್ಟವಾಗುತ್ತಿದೆ. ಹಿಂದೂ ಸಮಾಜದೊಳಗಿನ ಕೆಲವು ಕಲಂಕಮಯ ಕ್ರಮಗಳೂ ಮುಸಲ್ಮಾನರಿಗೆ ಧೈರ್ಯಕೊಡುತಿವೆಯೊ ಎಂಬುದೂ ಅನುಮಾನಾಸ್ಪದ. ಎಂತೂ ಬಂಗಾಳಿ ಹಿಂದೂಗಳು ಈ ವಿಷಯ ಎಚ್ಚರ ತೆಗೆದುಕೊಳ್ಳದಿದ್ದರೆ ಹಿಂದೂ ವರ್ಗಕ್ಕೆ ನಷ್ಟ ಉಂಟು.

ಅನುಕ್ರಮಣಿಕೆ.

ಅಗ್ರಲೇಖ — ಪುಟ
ವೈಸರಾಯಿಯವರ ಭಾಷಣ . . . ೬
ಕನ್ನಡ ಪ್ರಾಂತರಚನೆ . . . ,,
ಸ್ಫುಟವಿಚಾರಗಳು . . . ೫
ವರ್ತಮಾನಸಂಗ್ರಹಗಳು—
ವಿದೇಶ, ಒಳದೇಶ . . . ೭
ದಕ್ಷಿಣ ಕನ್ನಡ—ಮಂಜೇಶ್ವರ, . . . ,,
ಮಂಗಳೂರು . . . ,,
೧೯೨೬ನೇ ವರುಷದ ಮದ್ರಾಸು ನ್ಯಾಯವಿಧಾಯಕ ಸಭೆಯ ಮುಂದಣ ಚುನಾವಣೆ . . . ,,
ಉಪ್ಪಿನಂಗಡಿ ತಾಲೂಕಿನ ವರ್ಗದಾರರು ಸುಳ್ಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಮಾಡಿದ ಸಭೆಯ ಪ್ರೊಸೀಡಿಂಗ್ಸು ,,
ಶ್ರೀಮತಿ ಸರೋಜಿನಿಯವರು . . . ೮
ಆರೋಗ್ಯ ಮತ್ತು ಶಿಶುರಕ್ಷಣೆಯ ಸಪ್ತಾಹ . . . ,,
ಬಾಗ್ಯಾತು ಕೃಷಿಕರ ಪರಾಂಬರಿಕೆಗೆ . . . ೯

ಸ್ವದೇಶಾಭಿಮಾನಿ.

ಶಕ ೧೮೪೭ ಮಾಘ ಬ| ೧ಯು ಶುಕ್ರವಾರ

ವೈಸರಾಯಿಯವರ ಭಾಷಣ.

ಅಸೆಂಬ್ಲಿಯ ಅಧಿವೇಶನವು ಪುನಃ ತೆರೆಯಲ್ಪಟ್ಟಿತು. ಬೇಗನೆ ಅಧಿಕಾರ ಪದವಿಯಿಂದ ನಿವೃತ್ತರಾಗುವ ಭಾರತ ಭಾಗ್ಯವಿಧಾತರಾದ ವೈಸರಾಯ ಪ್ರಭುಗಳು ಈ ಅಧಿವೇಶನದಲ್ಲಿ ತಮ್ಮ ಔದಾರ್ಯಕ್ಕೆ ಸರಿಬೀಳುವ ಕಡೆಯ ಮಾತುಗಳನ್ನು ಕೊಟ್ಟರು. ಹಿಂದೀಯ ರಾಜಕೀಯ ಬದಲಾವಣೆಗಳ ಸೂತ್ರಧಾರಿಗಳಾದ ಹಿಂದೀ ಧುರೀಣರ ಮಾನಸಿಕತೆಗೆ ಚೆನ್ನಾಗಿ ಒಪ್ಪುವ ಆಶಾಮಯವೂ, ಮಾಯಾಮಯವೂ, ಭೇದಜನಕವೂ ಆದ ಭಾಷಣದಿಂದ ವೈಸರಾಯಿಗಳವರು ಹಿಂದೀಯ ಹಸಿವು ನೀರಡಿಕೆಗಳನ್ನು ಅಡಗಿಸಲು ಪ್ರಯತ್ನಿಸಿದರು. ಬಂಗಾಳದ ಲಿಬರಲ್ ಪಕ್ಷದ ದೈನಿಕ ಪತ್ರವಾದ "ಬಂಗಾಳೀ"ಯಂತಹ ಪತ್ರಿಕೆಗಳಿಗೆ ಅದರಲ್ಲಿ ಹೊಸ ಹುರುಪು ಕಾಣಬರಬಹುದಾದರೂ ಬ್ರಿಟಿಷ್ ರಾಜತಂತ್ರಗಳನ್ನು ಸರಿಯಾಗಿ ಅಭ್ಯಸಿಸಿರುವ ಹಿಂದೀ ರಾಜನೀತಿಜ್ಞನೊಬ್ಬನಾದರೂ ಈ ಭಾಷಣದಲ್ಲಿ ಆಶಾಜನಕವಾವುದನ್ನೂ ಕಂಡುಕೊಳ್ಳಲಾರನು. ರಾಜಕೀಯ ಪಂಗಡಗಳೊಳಗಿನ ಭೇದಗಳನ್ನು ಅಭಿವರ್ಧಿಸಿ, ರಾಜಕೀಯ ಮತ್ಸರಗಳಿಗೆ ಸಾಕಷ್ಟು ಎಡೆಯಿಟ್ಟು, ಆಶಾವಾದಿಗಳಿಗೆ ಬೇಕಷ್ಟು ಆಶೆಗಳನ್ನು ತೋರಿಸಿ, ಜನತೆಗೆ ಕಲ್ಪನಾ ಪ್ರಯೋಜನಗಳನ್ನು ಪ್ರದರ್ಶಿಸಿ, ಸರ್ವ ರೀತಿಯಲ್ಲಿಯೂ ಅನುಕೂಲವಾದ ವಾತಾವರಣವನ್ನು ಕಟ್ಟಿಕೊಳ್ಳುವುದರಲ್ಲಿ ಲೋಕತಂತ್ರಜ್ಞನಾದ ಇಂಗ್ಲೀಷನಿದಿರಿನಲ್ಲಿ ಪಾಶ್ಚಾತ್ಯರೇ ಜಯಶ್ರೀಯನ್ನು ಒಪ್ಪಿಸುವಾಗ, ರಾಜನೀತಿಯ ಪ್ರಥಮ ಸೋಪಾನಗಳನ್ನೂ ಏರಲಾರದ ಹಿಂದೀಯರ ಅಸಮರ್ಥತೆಯೂ ಹೆಚ್ಚು ಆಶ್ಚರ್ಯಜನಕವಲ್ಲ. ನಮ್ಮ ಅಸಮರ್ಥತೆಯೂ, ನಮ್ಮ ಭೇದಗಳ ಸಾಧನೆಯೂ, ಆಶ್ಚರ್ಯಜನಕವಾಗಿರುವುದಕ್ಕಿಂತಲೂ, ಹೆಚ್ಚಾಗಿ ಕನಿಕರವನ್ನುಂಟುಮಾಡುವ ವಿಷಯವಾಗಿದೆ!

ದೇಶದ ಭೂವ್ಯವಸಾಯದ ಬಗ್ಗೆ ಒಂದು ರೊಯಲ್ ಕಮಿಶನಿನ ಏರ್ಪಾಡೂ ಸರಕಾರದ ಔದಾರ್ಯದ ಪರಮಾವಧಿಯನ್ನು ಸೂಚಿಸುತ್ತಿದೆ, ಎಸೆಂಬ್ಲಿಯು ಕೇಳಿಕೊಂಡ ಕಾಂಗ್ರೆಸು ವಕ್ತಾಯಪಡಿಸಿದ, ಸಮಸ್ತ ಪಕ್ಷಗಳ ಪರಿಷತ್ತನ್ನು ಕೂಡಿಸುವುದರ ವಿಷಯದಲ್ಲಿ ವೈಸರಾಯರಿಗೆ ಏನೂ ಹೇಳಲಿರುವುದಿಲ್ಲ. ಕೃಷಿವ್ಯವಸಾಯದ ಕಮಿಶನಾದರೆ ಹಿಂದೀಯರ ಬೇಡುವಿಕೆಯಿಲ್ಲದೆನೇ ಸರಕಾರವು ಕೊಟ್ಟುಬಿಟ್ಟಿತು. ಸರಕಾರದ ಈ ಮಹಾ ಉದಾರ ಕೃತ್ಯಕ್ಕಾಗಿ ನಾವು ಬೇಕಾದರೆ ಅವರನ್ನು ಅಭಿನಂದಿಸೋಣ. ಆದರೆ ಈ ಔದಾರ್ಯದಿಂದ ದೇಶಕ್ಕೆ ಯಾವ ಹಿತಸಾಧನೆಯಾದೀತು? ಅದರಿಂದ ಯಾವ ಲಾಭವಾದೀತು? ಯಾರು ಈ ಕಮಿಶನಿನ ಪರಿಶ್ರಮದ ಫಲವನ್ನನುಭೋಗಿಸಬಲ್ಲರು? ಸಮಸ್ತ ಭಾರತದ ಸಮಸ್ತ ಪರಿಸ್ಥಿತಿಯನ್ನು ವಿಚಾರಿಸಿ ಯುಕ್ತವಾದ ಸೂಚನೆಗಳನ್ನು ಕೊಟ್ಟು, ದೇಶದ ಸಾವಿರಾರು ರೂಪಾಯಿಗಳನ್ನು ಸ್ವಂತ ಖರ್ಚಿಗಾಗಿ ವ್ಯಯಿಸಿದ ಇಂಡಸ್ಟ್ರಿಯಲ್ ಕಮಿಶನ್ ಆಗಿ ಹೋಗಿ ಎಷ್ಟೋ ವರ್ಷಗಳಾದುವು. ಬಹುಮತದ್ದು ಒಂದು, ಪಂಡಿತ ಮದನಮೋಹನ ಮಾಲವೀಯರದು ಇನ್ನೊಂದು, ಹೀಗೆ ವರದಿ ಉಪವರದಿಗಳು ಹೊರಬಂದು, ಅವಲೋಕಿಸಲ್ಪಟ್ಟು ಹಾಗೆಯೇ ಬಿದ್ದುಕೊಂಡಿವೆ. ಅದರ ಕಡೆಗೆ ಸರಕಾರದ ಲಕ್ಷ್ಯ ಹೋಗಿಲ್ಲ. ಹೀಗೆಯೇ ದೇಶದ ಲಕ್ಷಾವಧಿ ರೂಪಾಯಿಗಳನ್ನು ವ್ಯಯಿಸಿ ಆಗಿಹೋದ ಎಷ್ಟೋ ಕಮಿಶನುಗಳ ವರದಿಗಳಿವೆ. ಅವುಗಳ ಸೂಚನೆಗಳಿಗೆ ಸರಕಾರವು, ಆ ಸೂಚನೆಗಳು ಹಿಂದೀಯ ಜನರಿಗೆ ಪ್ರಯೋಜನಕಾರಿಗಳಾಗುವುದಾದರೆ, ಮಾನಿಸುವುದೇ ಇಲ್ಲ. ಹಾಗಾದರೆ ಈ ಕಮಿಶನುಗಳನ್ನು ನೇಮಿಸುವ ಉದ್ದೇಶವಾದರೂ ಏನು?

ಕೆಲವು ವಿಲಾಯತಿ ಪ್ರಮುಖರಿಗೆ ಲಾಭ ಮಾಡುವುದೂ ಹಿಂದೀ ರಾಜಕೀಯ ರಣಾಂಗಣದಲ್ಲಿ ಮುಂದರಿಸಲೆತ್ನಿಸುವ ಧುರೀಣರನ್ನು ದಾಕ್ಷಿಣ್ಯಕ್ಕೆ ಹಾಕುವುದು ಈ ಕಮಿಷನುಗಳ ಏರ್ಪಾಡಿನ ಮೂಲ ಉದ್ದೇಶವಾಗುತ್ತದೆಂದು ಹಿಂದೀಯರು ಈ ಸ್ಥಿತಿಯಲ್ಲಿ ಏಕೆ ಹೇಳಬಾರದು. ಹೇಗೆ ತಿಂಗಳಿಗೆ ಸಾವಿರಗಟ್ಟಲೆ ಸಂಬಳದ ಮಂತ್ರಿಪದವಿಗಳ ಏರ್ಪಾಡಿನಿಂದ, ರಾಜಕೀಯ ಧುರೀಣರ ಬಲವು ಉಂಟಾಗಿ, ಆ ಮೂಲಕ ಸರಕಾರವು ಸಿವಿಲ್ ಸರ್ವಿಸಿನ ಸಂಬಳವನ್ನು ಧೈರ್ಯದಿಂದ ಏರಿಸಿ ಇಂಗ್ಲೆಂಡಿಗೆ ಹಿಂದೀಯ ಒಪ್ಪಿಗೆಯಿಂದಲೇ ಲಾಭ ಮಾಡಿಕೊಳ್ಳಲು ಶಕ್ಯವಾಯಿತೊ, ಹಾಗೆಯೇ ಈ ಕಮಿಷನುಗಳ ಮೆಂಬರಿಕೆಯ ಮೂಲಕ ಹಿಂದೀ ಒಪ್ಪಿಗೆಯಿಂದ ಸರಕಾರವು ಹಿಂದೀ ಹಣವನ್ನು ಉತ್ತಮ ಉಪಾಯದಿಂದ ಇಂಗ್ಲೆಂಡಿಗೆ ಸಾಗಿಸಲು ಶಕ್ತವಾಗುತ್ತಿದೆ.

ಈ ವಿಷಯ ಹಾಗಿರಲಿ. ಈ ಭೂವ್ಯವಸಾಯ ಕಮಿಶನಿನ ವರದಿಯಿಂದ ಹಿಂದುಸ್ಥಾನಕ್ಕೆ ಲಾಭವಾದರೂ ಎಷ್ಟಾದೀತೆಂಬುದನ್ನು ಚಿಂತಿಸುವ. ನಿಜವಾಗಿ ಏನೊಂದು ಲಾಭವಿದ್ದರೆ ಅದರ ಖರ್ಚಿನ ನಷ್ಟವು ಹಿಂದೂಸ್ಥಾನಕ್ಕೆ ಬಾಧಕವಾಗುತ್ತಿದ್ದಿಲ್ಲ. ಪರಂತು ಈ ಕಮಿಶನಿನಿಂದ ಹಿಂದೂಸ್ಥಾನದ ಉತ್ಪತ್ತಿಯ ಕೂಲಂಕಷ ವಿಚಾರವನ್ನು ತಿಳಿದು, ಇಂಗ್ಲೆಂಡಿನ ಕೈಗಾರಿಕೆಗಳಿಗೆ ಹೊಸ ಅಭಿಪ್ರಾಯಗಳನ್ನು ಉಂಟುಮಾಡಿ ಇಂಗ್ಲೆಂಡಿಗೆ ಹಿಂದುಸ್ಥಾನದ ಉತ್ಪತ್ತಿಯಿಂದ ಆಗಬಹುದಾದ ಲಾಭದ ಸೂಚನೆಗಳು ಸಂಗ್ರಹಿಸುವುದೂ ಒಂದು ಉದ್ದೇಶವಾಗಿರಬಾರದೆಂದು ಹೇಳಬರುವಂತಿಲ್ಲ. ದೇಶದ ಕೃಷಿಯ ಪರಿಸ್ಥಿತಿಯನ್ನು ಸುಧಾರಿಸಲು ಕಮ್ಮಿಶನಿಗಿಂತಲೂ ಉತ್ತಮ ಉಪಾಯಗಳಿವೆಯೆಂದು ನಮಗೆ ಕಂಡುಬರುತ್ತದೆ. ಸರಕಾರದ ಕೃಷಿ ಇಲಾಖೆಯು ಇದೆ. ಇದು ಸರಿಯಾಗಿ ಕೆಲಸ ಮಾಡಿದರೆ ಹೆಚ್ಚು ಪ್ರಯೋಜನವಾಗುವುದು. ಸ್ಥಳೀಕ ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೋಧಿಸಿ, ಅದಕ್ಕೆ ತಕ್ಕ ಉಪಾಯಗಳನ್ನೂ, ಸುಧಾರಣೆಗಳನ್ನೂ ನಿರ್ಧರಿಸುವುದು ಕೃಷಿ ಇಲಾಖೆಗೆ ಸುಲಭಸಾಧ್ಯವಾಗಿದೆ. ಆದರೆ ಕೃಷಿ ಇಲಾಖೆಯ ಕಾರ್ಯಗಳೇ ಅಷ್ಟೊಂದು ತೃಪ್ತಿಕರವಾಗಿಲ್ಲ. ಅಂದ ಮೇಲೆ ರೊಯಲ್ ಕಮ್ಮಿಶನ್ನಿನಿಂದ ದೇಶಕ್ಕೆ ಹೆಚ್ಚಿನ ಪ್ರಯೋಜನವಾಗಬಹುದೆಂದು ಹೇಳಬರುವುದಿಲ್ಲ.

ಇನ್ನು ವೈಸರಾಯಿಯವರು ಯಾವ ಆಧಾರಭೂತವಾದ ವಿಷಯಗಳನ್ನೂ ಪ್ರಕಟಿಸಿಲ್ಲ. ದಕ್ಷಿಣ ಅಫ್ರಿಕದ ವಿಷಯದಲ್ಲಿ ಹೇಳಿದ ಮಾತುಗಳು ವೈಸರಾಯಿಯವರ ಆ ಉಚ್ಚ ಅಧಿಕಾರದ ಪದವಿಗೆ ಗೌರವವನ್ನುಂಟು ಮಾಡುವಂತಹುದಾಗಲಿ, ಆತ್ಮಾಭಿಮಾನವುಳ್ಳದಾಗಲಿ ಆದ ಮಾತುಗಳಾಗಿಲ್ಲ.

> "ನಮ್ಮ ಅಭಿಪ್ರಾಯಗಳನ್ನು ದಕ್ಷಿಣ ಅಫ್ರಿಕದ ಮೇಲೆ ಅಂಕಿಸುವುದರಲ್ಲಿ ನಾವು ಕೃತಕೃತ್ಯರಾಗುವೆವೊ ಇಲ್ಲವೊ ಎಂದು ನಾವು ಹೇಳಲಾರೆವು. ಆದರೆ ಸಕಾರಣವಾದ ಸಾಧನೆಯು ಕಟ್ಟಕಡೆಗೆ ವಿಜಯಿಯಾಗುವುದೆಂದೇ ನಾನು ಆಶಿಸುತ್ತೇನೆ".

ಈ ಅಭಿಪ್ರಾಯಗಳನ್ನು ವೈಸರಾಯಿಗಳವರು ಕೊಡಬೇಕಾದ ಯಾವ ಆವಶ್ಯಕತೆಯೂ ಇರಲಿಲ್ಲ. ಯಾವನೊಬ್ಬನೂ ಇದನ್ನು ಹೇಳಬಲ್ಲನು. ಆದರೆ ಅಧಿಕಾರ ಸಹಿತವಾದ ಯಾವ ಮಾತುಗಳನ್ನೂ ವೈಸರಾಯಿಯವರು ಹೇಳಲಾರದೆ ಹೋದರಾದರೆ ಅದರ ಅಗೌರವವೂ ಅವರಿಗನೇ ಸಲ್ಲತಕ್ಕದ್ದು.

ದೇಶದ ರಾಜಕೀಯ ಆಶಯಗಳ ವಿಷಯ ಸಮಾಧಾನ ಕೊಡುವುದಕ್ಕಿಂತಲೂ ವೈಸರಾಯಿಯವರು ತಿರಸ್ಕಾರ ದರ್ಶನದಿಂದಲೇ ತೃಪ್ತರಾದರು.

> ರಾಜಕೀಯ ಧುರೀಣರ ಮಾತುಗಳಲ್ಲಿಯೂ, ಭಾವನೆಯಲ್ಲಿಯೂ, ಸರಕಾರದ ಕಡೆಗಾಗಿ ಬದಲಾವಣೆಗಳುಂಟಾಗಿರುವುದಾದರೂ, ಅದು ಸಂಪೂರ್ಣವಾಗಿ ಸ್ಪಷ್ಟವಾಗಿದ್ದರೆ ಒಳ್ಳೆಯದಿತ್ತು".

ವ್ಯಾಸರಾಯಿಯವರ ಈ ಮಾತುಗಳನ್ನು ಪ್ರತಿ ಒಬ್ಬ ರಾಜಕೀಯ ಧುರೀಣನು ಅವಮಾನಕರವೆಂದು ತಿಳಿಯತಕ್ಕದ್ದು. ವ್ಯಾಸರಾಯಿಯವರು, ಧುರೀಣರ ಮಾತುಗಳಲ್ಲಿಯೂ, ಭಾವನೆಯಲ್ಲಿಯೂ ಬದಲಾವಣೆಯುಂಟಾಗಿದೆಯೆಂದು ಒಪ್ಪುವರು. ಆದರೂ ಜನತೆಯ ಬಗ್ಗೆ ಸರಕಾರವನ್ನು ಸುಧಾರಿಸಲು ಅವರು ತಯಾರಿಲ್ಲ. "ಅದು ಸಂಪೂರ್ಣವಾಗಿ ಸ್ಪಷ್ಟವಾಗಿದ್ದರೆ—" ಎಂದು ವ್ಯಾಸರಾಯರು ಹೇಳುವಾಗ, ಸ್ಪಷ್ಟವಾಗಿದ್ದರೆ ಮುಂದೇನು? ಧುರೀಣರ ಮಾತನ್ನು ಮನ್ನಿಸುವರೊ? ಲಿಬರಲ್, ಇಂಡಿಪೆಂಡೆಂಟ್, ಸ್ವರಾಜ್ಯಪಕ್ಷ, ಹೀಗೆ ಎಲ್ಲಾ ಪಕ್ಷದವರೂ ಕೇಳಿಕೊಳ್ಳುವಂತೆ ಸರಕಾರದಲ್ಲಿ ಸುಧಾರಣೆಯನ್ನುಂಟುಮಾಡುವರೊ? "ಸ್ಪಷ್ಟವಾಗಿದ್ದರೆ ಒಳ್ಳೆಯದಿತ್ತು. ಬರೇ ಒಳ್ಳೇದಿತ್ತು. ಮುಖ್ಯ ತಾತ್ಪರ್ಯವೇನೆಂದರೆ ಧುರೀಣರು ಸರಕಾರದ ವಿರುದ್ಧವಾಗಿ ಏನನ್ನೂ ಮಾಡಬಾರದು, ಹೇಳಿದಂತೆ ಕೇಳಬೇಕು. ಹೀಗೆ ಸರಕಾರಕ್ಕೆ ಸರಿ ವಿಧೇಯವಾಗಿ ಹಿಂದೀ ಜನತೆಯ ಸರ್ವ ಹಿತಾಹಿತಗಳನ್ನು ವ್ಯಾಸರಾಯಿ ಪ್ರಭುಗಳ ಕೈಯಲ್ಲಿ ವಹಿಸಿಕೊಟ್ಟರೆ, ಆಗಲಾದರೆ ವ್ಯಾಸರಾಯಿಯವರಿಗೆ ಸಂಪೂರ್ಣ ತೃಪ್ತಿಯಿದ್ದಿತು.

ಆಶ್ಚರ್ಯವೇನೆಂದರೆ, ಇಂತಹ ಭಾಷಣಗಳನ್ನೂ ಪ್ರಶಂಸಿಸುವ ಹಿಂದೀಯ ಪತ್ರಿಕೆಗಳಿದ್ದುದು! ಅಂತೂ ಸರ್. ಅಲೆಕ್ಝಾಂಡರ್ ಮಡ್ಡಿಮಾನರು "ಕಡೆಯ ಮಾತು ಎಂದೂ ಹೇಳಲ್ಪಡುವುದಿಲ್ಲ" ಎಂದು ಹೇಳಿದರೂ, ವ್ಯಾಸರಾಯಿಯವರು ಸರಕಾರದ ಕಡೆಯ ಮಾತನ್ನೇ ಹೇಳಿರುವರಾಗಿ ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅದುದರಿಂದ ಸ್ವರಾಜ್ಯಪಕ್ಷದ ಕರ್ತವ್ಯವೂ ಕಾನಪೂರ ಠರಾವಿನಿಂದ ಸ್ಪಷ್ಟವಾಗಿದೆ.

ಕನ್ನಡ ಪ್ರಾಂತರಚನೆ.

ಕನ್ನಡ ಏಕೀಕರಣದ ಸಲುವಾಗಿ ಹಲವು ವಿಷಯಗಳ ದೃಷ್ಟ್ಯಾ ಹಲವು ಲೇಖಗಳನ್ನು ನಾವು ಈ ಮೊದಲೇ ಪ್ರಕಟಿಸಿದ್ದೇವೆ. ಕರ್ನಾಟಕ ಏಕೀಕರಣದ ಸಮಸ್ಯೆಯು ಅಷ್ಟೊಂದು ಸುಲಭವಲ್ಲವೆಂದೂ ಅವುಗಳಿಂದ ತಿಳಿಯಬಹುದು, ಅಲ್ಲದೆ ಕರ್ನಾಟಕೀಯರು ಈ ವಿಷಯದಲ್ಲಿ ಪಡುವ ಪರಿಶ್ರಮವನ್ನು ನೋಡಿದರೂ ತಿಳಿಯುವುದು. ಡಾ| ಯು. ರಾಮರಾಯರು ಕೌನ್ಸಿಲ್ ಒಫ್ ಸ್ಟೇಟ್ಸಿನಲ್ಲಿ ಈ ಪ್ರಶ್ನೆಯನ್ನು ಚರ್ಚಿಸುವುದಕ್ಕೆ ಮುಂದೆ ತೆಗೆದುಕೊಂಡು ಹೋಗುವುದರಲ್ಲಿ ಉದ್ಯುಕ್ತರಾದುದು ಕರ್ನಾಟಕದ ಸೌಭಾಗ್ಯವೆನ್ನಬಹುದು, ಮಾತ್ರವಲ್ಲದೆ ಈ ಏಕೀಕರಣದ ಸಮಸ್ಯೆಯ ಒಂದು ಸುಲಭ ಉಪಾಯದ ಕಡೆಗೆ ಕೈಯಿಕ್ಕಿದಂತಾಯಿತೆಂದೂ ನಾವು ಹೇಳಬಹುದು. ಕೌನ್ಸಿಲ್ ಒಫ್ ಸ್ಟೇಟ್ ಎಂಬುದು ಅಖಿಲ ಭಾರತದ ವಿಧಾಯಕ ಸಂಸ್ಥೆಯಾದುದರಿಂದಲೂ, ಕರ್ನಾಟವು ಹಲವು ಪ್ರಾಂತಗಳಲ್ಲಿ ಹಂಚಲ್ಪಟ್ಟದ್ದರಿಂದಲೂ, ಕರ್ನಾಟಕರ ಪ್ರಾಂತರಚನೆಗೆ ಏನೊಂದು ಸಹಾಯವಾಗಬೇಕಾದರೆ ಅದು ಇದರ ಮೂಲಕವೂ ಎಸೆಂಬ್ಲಿ ಮೂಲಕವೂ ಆಗ ಬೇಕಾಗಿವೆ.

ಡಾ| ರಾಮರಾಯರ ಈ ಪ್ರಯತ್ನಗಳಿಗೆ ಸ್ವರಾಜ್ಯ ಪಕ್ಷೀಯರಾಗಿ ರಾಮರಾಯರ ಜತೆ ಸದಸ್ಯರಾಗಿರುವ ಆಂಧ್ರದ ಶ್ರೀಯುತ ವಿ. ರಾಮದಾಸರು ಪ್ರತಿಕೂಲವಾಗಿರುವ ವಿಷಯವು ಕರ್ನಾಟಕ ಪತ್ರಿಕೆಗಳಲ್ಲಿ ಅತ್ಯಂತ ವಿರೋಧವನ್ನುಂಟುಮಾಡಿಯದೆ. ಶ್ರೀಯುತ ವಿ. ರಾಮದಾಸರ ಪ್ರತಿಕೂಲ ಸಾಧನೆಗಳನ್ನು ಸಾಮಾಯಿಕವಾಗಿ ಕರ್ನಾಟಕ ಪತ್ರಿಕೆಗಳು ನಿರೋಧಿಸಲು ತೊಡಗಿದುದೂ, ಕರ್ನಾಟಕದಲ್ಲಿ ಬೆಳೆಯುತ್ತಿರುವ ಅಂತರ್ಯದ ಅಖಂಡತೆಯ ಚಿಹ್ನೆಯಾಗಿದೆ. ಇದು ಶ್ರೀಯುತ ವಿ. ರಾಮದಾಸರ ಅವಗಾಹನೆಗೆ ಬಂದಿದ್ದರೆ ಉತ್ತಮವಿತ್ತು.

ಕರ್ನಾಟಕಕ್ಕೆ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಬಗ್ಗೆ ಕರ್ನಾಟಕ ಪತ್ರಿಕೆಗಳು ಬಹಳ ವಿಚಾರಮಾಡಿರುವುವು. ಅನೇಕ ಪ್ರಸಿದ್ಧ ಕರ್ನಾಟಕೀಯರು ಇದಕ್ಕಾಗಿ ತುಂಬಾ ಆಸಕ್ತರಾಗಿದ್ದಾರೆ. ಆಂಧ್ರವು ಕೂಡ ಒಂದು ವಿಶ್ವವಿದ್ಯಾಲಯವನ್ನು ಹೊಂದಿತು. ಅತ್ತ ಮದ್ರಾಸ ವಿಶ್ವವಿದ್ಯಾಲಯದಲ್ಲಿ ತಮಿಳು ಪ್ರಾಧಾನ್ಯವೇ ಹೆಚ್ಚಿದ್ದರೂ ತಮಿಳು ನಾಡಿಗೆ ಆ ವಿಶ್ವವಿದ್ಯಾಲಯದಲ್ಲಿ ತೃಪ್ತಿಯಿರುವುದಿಲ್ಲ. ಇತ್ತ ಕೇರಳದಲ್ಲಿ ವಿಶ್ವವಿದ್ಯಾಲಯಕ್ಕಾಗಿ ಮೆಲ್ಲಗೆ ಚಳವಳವು ಮೇಲೇಳಲಾರಂಭಿಸಿಯದೆ. ಅನ್ನುವಾಗ ಕನ್ನಡಕ್ಕೂ ವಿಶ್ವವಿದ್ಯಾಲಯದ ಸ್ಥಾಪನೆಯಾಗದಿದ್ದರೆ ಕರ್ನಾಟಕೀ ಹಿತವು ಮೂಲೆ ಸೇರಾಗುವುದು ನಿಶ್ಚಯ.

ಕರ್ನಾಟಕಕ್ಕೆ ವಿಶ್ವವಿದ್ಯಾಲಯವು ಈಗಿನ ಪರಿಸ್ಥಿತಿಯಲ್ಲಿ ಸಂಪೂರ್ಣವಾಗಿ ಅಸಾಧ್ಯವಾಗಿದೆ. ಕರ್ನಾಟಕ ದೇಶದ ಪ್ರತ್ಯೇಕ ಭಾಗಗಳು ಒಂದಾಗದೆ ಕನ್ನಡದ ಅಖಂಡವಾದ ಪ್ರಾಂತದ ರಚನೆಯಾಗದೆ ಕರ್ನಾಟಕ ವಿಶ್ವವಿದ್ಯಾಲಯವು ಎಂದಿಗೂ ಸಾಧ್ಯವಿಲ್ಲ. ಒಂದು ಪಕ್ಷಕ್ಕೆ ಅದು ಸಾಧ್ಯವಾದರೂ ಅದರ ಪ್ರಯೋಜನವು ಜನರಿಗೆ ಸಿಕ್ಕಲಿಕ್ಕಿಲ್ಲ ಅಲ್ಲದೆ ಕರ್ನಾಟಕಕ್ಕೆ ಅದರ ಖರ್ಚು ವಹಿಸಲಿಕ್ಕೂ ಕಷ್ಟವಾಗುವುದು. ಆದುದರಿಂದ ಕರ್ನಾಟಕದ ಎಲ್ಲಾ ಪರಿಸ್ಥಿತಿಯನ್ನು ಲಕ್ಷಿಸಿದಲ್ಲಿ, ಹಿಂದೂದೇಶದ ಯಾವ ಭಾಗಕ್ಕಿಂತಲೂ ಕರ್ನಾಟಕಕ್ಕೆ ಪ್ರಾಂತರಚನೆಯು ಅತ್ಯಾವಶ್ಯಕವಾಗಿದೆ. ಇದಕ್ಕೆ ಪ್ರತಿಕೂಲವಾಗಿ ಯಾರು ಯಾವ ಅಭಿಪ್ರಾಯವನ್ನು ಕರ್ನಾಟಕವು ಮಾನಿಸಲಾರದಲ್ಲದೆ, ಅದನ್ನು ಸ್ವಪ್ರೇರಣೆಯಿಂದ ಖಂಡಿಸಿಬಿಡುವುದು. ಸ್ವರಾಜ್ಯಪಕ್ಷೀಯರಾದ ರಾಮದಾಸ ಪ್ರತಿಕೂಲ ಅಭಿಪ್ರಾಯವೂ ಕಾಂಗ್ರೆಸ್ಸಿನ ತತ್ವಕ್ಕೇ ವಿರೋಧವಾಗಿರುವುದರಿಂದ, ಆ ಅಭಿಪ್ರಾಯವನ್ನು ಯಾವ ಕಾಂಗ್ರೆಸ್ಸಿಗನನೂ ಮಾನಿಸಲಾರನು.

ಡಾ| ರಾಮರಾಯರೂ ತಮ್ಮ ಠರಾವನ್ನು ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ಚರ್ಚಿಸುವ ಮೊದಲು ಸಮಗ್ರ ಕರ್ನಾಟಕದ ಅಭಿಪ್ರಾಯಗಳನ್ನು ಸಂಘಟಿಸಿ ವ್ಯಕ್ತಪಡಿಸಿ, ಯೋಗ್ಯವಾದ ಸೂಚನೆಗಳನ್ನು ತಯಾರಿಸಿ, ನಿರೋಧಾಭಿಪ್ರಾಯಗಳಿಗೆ ಸಮರ್ಪಕ ಪ್ರತಿ ಸೂಚನೆಗಳನ್ನು ತಯಾರಿಸಿ, ಆ ಮೇಲೆ ಕೌನ್ಸಿಲ್ ಒಫ್ ಸ್ಟೇಟ್ಸಿನಲ್ಲಿ ಆಧಾರಭೂತವಾದ ಅಭಿಪ್ರಾಯಗಳನ್ನು ಅವರು ಕೊಡುವುದು ಉತ್ತಮವಾಗಿದೆ. ನೈಜಾಮ್ ರಾಜ್ಯ, ಮುಂಬಾಯಿ ಪ್ರಾಂತ, ಮದ್ರಾಸ ಪ್ರಾಂತ, ಮೈಸೂರು ಇವುಗಳ ಕರ್ನಾಟಕಗಳನ್ನು ಹೇಗೆ ಸಮ್ಮಿಳಿಸಬಹುದೆಂಬುದರ ವಿಷಯದಲ್ಲಿ ಯಾರೂ ಯಾವ ಯೋಗ್ಯವಾದ ಸೂಚನೆಯನ್ನೂ ಕೊಟ್ಟಿಲ್ಲ. ಬರೇ ಪ್ರಾಂತರಚನೆಯೆಂದು ಅಸ್ಪಷ್ಟವಾದ ಅವ್ಯಕ್ತಭಾವನೆಗಳಿಂದ ಸಾಧಿಸಿದರೆ ಯಾವ ಪ್ರಯೋಜನವೂ ಲಭಿಸಲಾರದು. ಆದುದರಿಂದ ಇದಕ್ಕಾಗಿ ಕರ್ನಾಟಕದ ಎಲ್ಲಾ ಭಾಗಗಳನ್ನು ಒಂದು ಮಂಡಳಿಯು ಸಂಚರಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಿ ಕಾರ್ಯಕಾರಿಯಾದ ಪ್ರಾಂತರಚನಾಕ್ರಮವನ್ನು ನಿರ್ಣಯಿಸುವುದು ಅಗತ್ಯವಿದೆ. ಇತ್ತ ಕಡೆಗೆ ಕರ್ನಾಟಕೀಯರೂ, ಡಾ| ರಾಮರಾಯರೂ ಗಮನವಿಡುವರೇ?

ವಿದೇಶ ವರ್ತಮಾನ.

—ಲೋರ್ಡ್ ವಿಲಿಂಗ್‌ಡನ್ನರು ಕೆನಾಡಿನ ಗವರ್ನರ್ ಜನರಲ್‌ರಾಗುವರೆಂದು ವದಂತಿ ಇದೆ.

—ಬರುವ ತಿಂಗಳ ತಾ. ೧೫ಕ್ಕೆ ಲಂಡನಿನಲ್ಲಿ ರೈಲ್ವೆ ಕೆಲಸದವರು ತಮ್ಮ ಶರ್ತಗಳಿಗೆ ಕಂಪೆನಿಯವರು ಒಪ್ಪದಿದ್ದರೆ ತಮ್ಮ ಕೆಲಸಕ್ಕೆ ಮುಷ್ಕರ ಹಾಕುವುದಾಗಿ ನಿಶ್ಚಯಿಸಿದ್ದರು. ಕಳೆದ ತಾ. ೨೬ಕ್ಕೆ ನಡೆದ ರೈಲ್ವೆ ಬೋರ್ಡಿನ ಮೀಟಿಂಗಿನಲ್ಲಿ ಮುಷ್ಕರಹಾಕಬಾರದಾಗಿಯೂ ಮತ್ತು ಸಂಬಳ ನಿರ್ಣಯಮಾಡುವ ಬೋರ್ಡಿನವರ ಶರ್ತವನ್ನು ಒಪ್ಪಬೇಕಾಗಿಯೂ ಠರಾವನ್ನು ಮಾಡಿರುವರು.

—ಲೀಗ್ ಒಫ್ ನೇಷನ್ಸಿನ ೬ನೇ ವಾರ್ಷಿಕೋತ್ಸವವು ನಡೆಯಿತು.

—ಮೊರಾಕೋದಲ್ಲಿ ಯುದ್ಧದ ಸಮಾಪ್ತಿಯ ಸೂಚನೆಗಳು ಕಾಣುತ್ತಿರುವುವು.

—೧೯೨೧-೨೨ರಲ್ಲಿ ೩೫ಲಕ್ಷ ರೂಪಾಯಿ ಬೆಲೆಬಾಳುವ ಮಕ್ಕಳ ಆಟದ ಸಾಮಾನುಗಳು ಇಂಡಿಯಾದೇಶಕ್ಕೆ ಆಮದುಮಾಡಲ್ಪಟ್ಟಿತು.

—ವಿಲಾಯತಿಯಲ್ಲಿ ಹೊಸದಾಗಿ ಏರ್ಪಡಿಸಿರುವ ನ್ಯಾಶನಲ್ ಅಲೆಕ್ಸಾಂಡ್ರಾರವರ ಮೆಮೋರಿಯಲ್ ಫಂಡಿಗೆ ನಮ್ಮ ಚಕ್ರವರ್ತಿಗಳು ೨೦೦೦ ಪೌನುಗಳನ್ನೂ ಚಕ್ರವರ್ತಿನಿಯವರು ೫೦೦ ಪೌನುಗಳನ್ನೂ ಕೊಟ್ಟಿರುವರು.

—ವಿದ್ಯುಚ್ಛಕ್ತಿಯ ಹೊಡೆತದಿಂದ ಮೃತರಾದವರನ್ನು ತಲೆಯ ಕಡೆ ಎತ್ತರವಾಗಿರುವಂತೆ ಮಲಗಿಸಿ, ಕ್ರಮವನ್ನನುಸರಿಸಿ, ಅವರ ತೋಳುಗಳನ್ನು ತಿರುಗಿಸಿದರೆ ಕೆಲವು ಘಂಟೆಗಳಲ್ಲೇ ಅವರಿಗೆ ಪ್ರಾಣವು ಬರುವುದೆಂದು ಒಬ್ಬ ಅಸ್ಟ್ರೇಲಿಯಾದ ಡಾಕ್ಟರರು ಹೇಳುತ್ತಾರೆ.

—ಒಂದೇ ಬಣ್ಣದ ಹೊಗೆಯ ಸೊಪ್ಪಾದರೂ, ಅದರಲ್ಲಿ ಅಲ್ಪಸ್ವಲ್ಪ ವರ್ಣಭೇದವನ್ನು ಕಂಡುಹಿಡಿದು, ಅದಕ್ಕನುಸಾರವಾಗಿ ಗುಣಭೇದವಿರುವಂತೆ ತೋರಿಸಬಲ್ಲ ಒಂದು ಸೂಕ್ಷ್ಮ ಯಂತ್ರವನ್ನು ಭಾರಿ ಹೊಗೆಸೊಪ್ಪಿನ ಕಾರ್ಖಾನೆಗಳಲ್ಲಿಟ್ಟಿರುವರು. ಇದು ಹೊಗೆಸೊಪ್ಪಿನ ಬಣ್ಣದಲ್ಲಿ ೩೦ ಭೇದಗಳನ್ನು ಕಂಡುಹಿಡಿಯುವುದಂತೆ!

ಒಳದೇಶ ವರ್ತಮಾನ.

—ಕಲ್ಕತ್ತಾದ ಹ್ಯಾಕೋರ್ಟಿನಲ್ಲಿ ಇಂಪೀರಿಯಲ್ ಟಬೆಕೊ ಕಂಪೆನಿಯವರ ಮೇಲೆ ನಡೆದ ದಾವೆಯಲ್ಲಿ ವಾದಿಯವರಿಗೆ ಆದ ನಷ್ಟವನ್ನು ಕೊಡಬೇಕಾಗಿ ಜಡ್ಜರು ತೀರ್ಪುಕೊಟ್ಟಿರುವರು. ದಾವೆಯು ಸುಮಾರು ೬|| ಲಕ್ಷ ರೂಪಾಯಿಗೆ ತರಲ್ಪಟ್ಟಿತು.

—ಇಂಡಿಯಾ ಸರಕಾರದವರು ಲೋಕಲ್ ಗವರ್ನಮೆಂಟಿನವರಿಗೆ ಐ. ಯಮ್. ಎಸ್. ಪದವಿಯ ಡಾಕ್ಟರಗಳು ಬೇಕಾದ ಸ್ಥಳಗಳಲ್ಲಿ, ಯೂರೋಪಿಯನ್ ಐ. ಯಮ್. ಎಸ್ ಡಾಕ್ಟರರನ್ನು ಹಿಂದಿಗಳ ಬದಲಿಗೆ ಇಡಬೇಕಾಗಿ ತಿಳಿಸಿರುವರು. ಹಿಂದಿಯ ಐ. ಯಮ್. ಎಸ್. ಡಾಕ್ಟರರು ಬಹುಶಃ ಇನ್ನೂ ತಮ್ಮ ತಮ್ಮ ತವರು ಮನೆಗೆ ಹೋಗಬೇಕಾಗುತ್ತದೋ ಏನೋ!

—ಮಹಾತ್ಮಾ ಗಾಂಧಿಯವರಿಗೆ ಕಾನ್‌ಪುರ ಕೊಂಗ್ರೆಸ್ಸಿಗೆ ಹೋಗಿ ಬಂದಂದಿನಿಂದ ಮಲೇರಿಯಾ ಜ್ವರ ಬರುತ್ತಿರುವುದು.

—ಸೊಲ್ಲಾಪುರದಲ್ಲಿ ಮೊನ್ನೆ ಆದ ದಂಗೆಯ ಸಂಬಂಧವಾಗಿ ಮಿ| ಬಸಲಿಂಗಪ್ಪ ಶೇಟ್ ಇವರು ಫಿರ್ಯಾದ ಮಾಡಿದ್ದರು. ಅದರ ತೀರ್ಮಾನವು ತಾ. ೯ರಲ್ಲಿ ಆಯಿತು. ಮ್ಯಾಜಿಸ್ಟ್ರೇಟರು ಅಬದುಲ ಪೀರಸಾಹೇಬ ಇವನನ್ನು ಸಂಶಯದ ಮೇಲೆ ದೋಷಮುಕ್ತರನ್ನಾಗಿ ಮಾಡಿದರು. ಉಳಿದ ೯ ಜನ ಮುಸಲ್ಮಾನ ಆರೋಪಿಗಳಿಗೆ ೧ ವರ್ಷ ಕಠಿಣ ಶಿಕ್ಷೆ. ೫೦೦ ರೂ. ದಂಡ, ದಂಡವನ್ನು ಕೊಡದೆ ಇದ್ದರೆ ೬ ತಿಂಗಳುಗಳ ವರೆಗೆ ಕಠಿಣ ಶಿಕ್ಷೆಯನ್ನು ವಿಧಿಸಿದರು.

—ಮಹಾತ್ಮಾ ಗಾಂಧಿಯವರು ಈಗ ಜನರಿಗೆ ತಮ್ಮ ಆಶ್ರಮದಲ್ಲಿ ದರ್ಶನ ಮಾತ್ರ ಕೊಡುತ್ತಾರೆ. ಯಾರ ಸಂಗಡಲೂ ವಿಶೇಷ ಮಾತಾಡುವದಿಲ್ಲ. ವೃತ್ತಪತ್ರಿಕೆಗಳ ಪ್ರತಿನಿಧಿಗಳಿಗಂತೂ ಏನೊಂದೂ ಹೇಳುವದಿಲ್ಲ. ಆಶ್ರಮ ಬಿಟ್ಟು ಅಹಮ್ಮದಾಬಾದಿಗೂ ಕೂಡ ಹೋಗಲು ಇಷ್ಟವಿಲ್ಲ. ಒಂದು ವರುಷದ ವರೆಗೆ ಎಲ್ಲಿಯೂ ಹೋಗದೆ ವಿಶ್ರಾಂತಿಯನ್ನು ಹೊಂದಬೇಕೆಂಬ ಭಾವನೆಯು ದಿನದಿನಕ್ಕೆ ಅವರಲ್ಲಿ ದೃಢವಾಗುತ್ತಲಿದೆ. ಈಗ ಅವರು ದಿನಾಲು ಬೆಳಗಿನಿಂದ ಮಧ್ಯಾಹ್ನ ೧೨ ಗಂಟೆಯ ವರೆಗೆ ಮೌನವ್ರತವನ್ನು ಧರಿಸುತ್ತಾರೆ. ಆ ಮೇಲೆ ಆಶ್ರಮದಲ್ಲಿ ಪ್ರಾರ್ಥನೆಗಾಗಿ ಹೋಗುತ್ತಾರೆ. ಪ್ರತಿ ಸೋಮವಾರದಂತೂ ಇಡೀ ದಿವಸ ಮೌನವ್ರತವನ್ನು ಧರಿಸುತ್ತಾರೆ.

—ಸ್ವರಾಜ್ಯಪಕ್ಷಕ್ಕೆ ರಾಜಿನಾಮೆ ಕೊಟ್ಟ ಮಿ| ಕೇಳ್ಕರ್ ಮೊದಲಾದವರು, ಮಿ| ಜಿನ್ನಾ ಮೊದಲಾದವರ ಸಂಗಡ ಸೇರಿಕೊಂಡು ಒಂದು ಹೊಸ ರಾಜಕೀಯ ಪಕ್ಷವನ್ನು ಸ್ಥಾಪಿಸುವರಾಗಿ ತಿಳಿದುಬರುತ್ತದೆ.

ದಕ್ಷಿಣ ಕನ್ನಡ.

ಮಂಜೇಶ್ವರ:—ಜಿಲ್ಲಾ ಎಂಡ್ ಬೇಬಿವೀಕನ್ನು ಬಹಳ ವಿಜೃಂಭಣೆಯಿಂದ ನೆರವೇರಿಸಬೇಕಾಗಿ ಇಲ್ಲಿಯ ಡಾಕ್ಟರರಾದ ರಾ| ಬಿ. ಸುಂದರರಾಯರು ಪ್ರಯತ್ನಿಸುತ್ತಲಿರುವದು ತುಂಬಾ ಸಂತೋಷಕರವೇ ಸರಿ.

ಕಾಸರಗೋಡ ತಾಲೂಕು ಬೋರ್ಡಿನ ಮೀಟಿಂಗು ಇದೇ ಬರುವ ಫೆಬ್ರವರಿ ತಾ. ೧೪ನ್ನು ಮಧ್ಯಾಹ್ನ ಘಂಟೆ ೧-೩೦ಕ್ಕೆ ಕಾಸರಗೋಡಿನಲ್ಲಿ ಜರಗುವದಾಗಿ ಕೇಳುತ್ತೇವೆ.

ಜಿಲ್ಲೆಯ ಎಜ್ಯುಕೇಶನಲ್ ಅಫೀಸರರಾದ ರಾ| ಶಂಕರ ಮೇನೊನ್ ಬಿ. ಎ. ಯವರು ಇಲ್ಲಿಗೆ ಬಿಜ್ಜೈಸಿ ಕೆಲವು ಶಾಲೆಗಳನ್ನು ಸಂದರ್ಶಿಸುತ್ತಲಿದ್ದಾರೆ.

ಶ್ರೀ ಮದನಂತೇಶ್ವರ ದೇವಸ್ಥಾನದ ಆಕ್ಟಿಂಗ್ ಮೆನೇಜಿಂಗ್ ಟ್ರಸ್ಟಿಯವರಾಗಿದ್ದ ಮೃತ ರಾಮನಾಯ್ಕರ ಸ್ಥಾನಕ್ಕೆ ರಾ|ಗಳಾದ ಮಂಜುನಾಥ ರಾಮಕಮ್ಮಿರೂ, ಮಠರ್ಕಮ್ಮಿರೂ, ಮತ್ತು ಸರ್ವೋತ್ತಮಕಮ್ಮಿರೂ ಉಮೇದ್ವಾರರಾಗಿ ನಿಂತಿರುವರು.

ಸದರಿ ದೇವಸ್ಥಾನದ ಹಾಯರ್ ಎಲಿಮೆಂಟರಿ ಶಾಲೆಯ ನೂತನ ಕಟ್ಟೋಣದ ಕೆಲಸವು ಪ್ರಾರಂಭವಾಗಿದೆ. ಶಿವೆಶಾಲದ ರಜೆ ಮುಗಿಯುವುದರೊಳಗಾಗಿ ಕೆಲಸವು ಮುಗಿಯುವುದಾಗಿಯೂ, ಶಾಲೆಯು ಪುನಹಾ ತೆರೆಯಲ್ಪಡುವ ದಿನ 'ಶಿವಾಜಿ ಮಹಾರಾಜ್' ಎಂಬ ನಾಟಕವು ವಿದ್ಯಾರ್ಥಿಗಳಿಂದ ಅಭಿನಯಿಸಲ್ಪಡುವದಾಗಿಯೂ ಕೇಳಬರುತ್ತದೆ.

ಮಂಗಳೂರು.

ಈಚೆಗೆ ಇಲ್ಲಿಗೆ ಬಂದಿರುವ ಶ್ರೀ| ರಾಘವೇಂದ್ರ ಮಠದ ಶ್ರೀಪಾದಂಗಳವರು ಮೊನ್ನೆ ಸೋಮವಾರ ರಾತ್ರಿ ಮೈಸೂರು ಅರಮನೆಯ ಪ್ರಮುಖ ಸಂಗೀತ ವಿದ್ವಾಂಸರಾದ ಶ್ರೀ ಗಾನವಿಶಾರದ ಬಿ. ಕೃಷ್ಣಪ್ಪನವರ ಶಿಷ್ಯಂದಿರ ಕೊಳಲು ಪಿಟೀಲಿನ ಸೇವೆಯನ್ನು ಶ್ರೀ| ನೆಲ್ಲಿಕ್ಕಾ ವೆಂಕಟ್ರಾಯರ ಮನೆಯಲ್ಲಿ ಸ್ವೀಕರಿಸಿ ಸಂತೋಷಪಟ್ಟು ರಾ| ಬಿ ಕೃಷ್ಣಪ್ಪನವರಿಗೆ ಅಖಂಡ ಜಿನ್ನದ ಕೈಬಳೆಯನ್ನೂ ಅವರ ಶಿಷ್ಯಂದಿರಿಗೆ ಜರತಾರಿ ರೇಶ್ಮೆ ಶಾಲುಗಳನ್ನೂ ದಯಪಾಲಿಸಿ ಸನ್ಮಾನಿಸಿರುತ್ತಾರೆ.

ಕರ್ನಾಟಕ ಏಕೀಕರಣ ಕಾರ್ಯದ ಸಮ್ಮಂಧವಾಗಿ ಬೆಂಗಳೂರಿನ ಡಾಕ್ಟರ್ ಸಿ. ಬಿ. ರಾಮರಾವ್, ಯಮ್ ಡಿ. ಇವರು ಫೆಬ್ರವರಿ ತಾರೀಕು ೨ ಅಥವಾ ೩ರಲ್ಲಿ ಮಂಗಳೂರಿಗೆ ಬರಲಿರುವರು. ಅವರು ಇಲ್ಲಿ ಬಂದಾಗ ಸಾರ್ವಜನಿಕ ಸಭೆಯೊಂದು ಸೇರಿಸಲಾಗುವುದು. ಈ ಸಭೆ ಸೇರುವ ಸರಿಯಾದ ದಿವಸವು ಅವರು ಇಲ್ಲಿಗೆ ಬಂದ ಮೇಲೆ ಪ್ರಕಟಿಸಲಾಗುವುದು.

'ಕರ್ನಾಟಕ ತಿಲಕ ವಿದ್ಯಾಲಯದ ಸಹಾಯಾರ್ಥವಾಗಿ ಮುಷ್ಟಿ ಫಂಡಿನಿಂದ ಕಳೆದ ತಾ. ೧೭-೧-'೨೬ನೇ ವಾರದಲ್ಲಿ ರೂ. ೬-೪-೬ ಮತ್ತು ೬|ಸೇರು ಅಕ್ಕಿ, ಮತ್ತು ತಾ. ೨೪-೧-'೨೬ನೇ ವಾರದಲ್ಲಿ ರೂಪಾಯಿ ೫-೧೧-೩ ಮತ್ತು ೭ಸೇರು ಅಕ್ಕಿ ಜಮಾ ಬಂದಿರುತ್ತದೆ.

ಇದೇ ತಿಂಗಳ ತಾ. ೩೦ನೇ ಶನಿವಾರ ಘಂಟೆ ೫ಕ್ಕೆ ಮಂಗಳೂರು ಮುನಿಸಿಪಾಲಿಟಿ ಸಭೆಯು ನಡೆಯಲಿರುವುದು.

ಕೆನರಾ ಹ್ಯಾಸ್ಕೂಲಿನ ಹಳೇ ವಿದ್ಯಾರ್ಥಿಗಳು 'ಚಂದ್ರರಾವ್ ಮೋಹರೆ' ಎಂಬ ನಾಟಕವನ್ನು ಕಳೆದ ಶನಿವಾರ ರಾತ್ರಿಯೂ ಆದಿತ್ಯವಾರ ಹಗಲೂ ಆಡಿ ತೋರಿಸಿದರು. ಆದಿತ್ಯವಾರದ ನಾಟಕವು ಈ ಕಾರ್ಯಕ್ಕಾಗಿ ಶ್ರಮಪಟ್ಟ ಸ್ವಯಂಸೇವಕರಿಗಾಗಿದ್ದಿತು. ಈ ನಾಟಕಕ್ಕೆ ಮಂಗಳೂರಿಗೆ ಬಂದಿರುವ ಶ್ರೀ| ಗಾನವಿಶಾರದ ಬಿಡಾರದ ಕೃಷ್ಣಪ್ಪನವರು ಬಂದಿದ್ದರು. ಇವರು ಅಭಿನಯಕಾರರನ್ನು ಪ್ರೋತ್ಸಾಹಿಸಿ ನಾಟಕವನ್ನು ಪ್ರಶಂಸಿಸಿ ಸದರಿ ನಾಟಕ ಸಂಘದ ಯಶಸ್ಸನ್ನು ಹಾರೈಸಿ ಮಾತಾಡಿದರು. ಶ್ರೀ| ಯಮ್. ಎನ್. ಕಾಮತರು ಕೃಷ್ಣಪ್ಪನವರನ್ನು ಅಭಿನಂದಿಸಿ ಪುಷ್ಪಮಾಲೆ ಹಾಕಿದರು. ಗಾನವಿಶಾರದರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

೧೯೨೬ನೇ ವರುಷದ ಮದ್ರಾಸು ನ್ಯಾಯವಿಧಾಯಕ ಸಭೆಯ ಮುಂದಣ ಚುನಾವಣೆ.

ದಕ್ಷಿಣಕನ್ನಡ ಜಿಲ್ಲೆಯ ಮಾನ್ಯ ಮುಸ್ಲಿಮ್ ಸಹೋದರರಿಗೆ

—: ವಿನಂತಿ :—

ಪ್ರಿಯರೇ ದಕ್ಷಿಣಕನ್ನಡ, ಮಲಬಾರು ಮತ್ತು ನೀಲಗಿರಿ ಜಿಲ್ಲೆಗಳ ಮಹಮ್ಮದೀಯರ ಪ್ರತಿನಿಧಿಯಾಗಿ ಕಳೆದ ೫ ವರ್ಷಗಳಿಂದ ವೈಸರಾಯರ ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಹಲವು ತರದ ಸ್ವದೇಶ ಸೇವೆಯನ್ನು ನಿಸ್ವಾರ್ಥತೆಯಿಂದ ಮಾಡುತ್ತಿರುವ ಜನಾಬ ಮಹಮ್ಮದ್ ಶಮ್ನಾಡರು, ದೇಶಭಕ್ತರಾದ ಮಹಮ್ಮದಲಿ, ಶಾಕತಲಿ ಸಹರು ಮೊದಲಾದವರ ಬಿಡುಗಡೆಯ ಕುರಿತು ಎಸೆಂಬ್ಲಿಯಲ್ಲಿ ಧೈರ್ಯದಿಂದ ಸರಕಾರದ ಮತ್ತು ಅವರ ಪಕ್ಷದವರ ವೈಮನಸ್ಸನ್ನು ಸಹಾಗಬ್ಬ ಮಾಡದೆ ಎದುರಾಡಿದ್ದಲ್ಲದೆ, ಮಲಬಾರು ದಂಗೆಯ ಸಮಯ ಅಲ್ಲಿಯ ಜನರಿಗಿರುತ್ತಿದ್ದ ಭಯಂಕರವಾದ ಸಂಕಷ್ಟಗಳನ್ನು ಅಲ್ಲಿಗೆ ಹೋಗಿ ನೋಡಿ ತಿಳಿದುಕೊಳ್ಳಲಿಕ್ಕೆ ಅಂಜುತ್ತಿದ್ದ ಅಘೋರವಾದ "ಮಾರ್ಶ್ಯಲ್ ಲೋ" ಕಾಲದಲ್ಲಿ ಅಲ್ಲಿಗೆ ಸ್ವತಹ ಹೋಗಿ ಜನರ ಸುಖದುಃಖಗಳನ್ನು ತಿಳಿದು ಸರಕಾರಿ ಉದ್ಯೋಗಸ್ಥರು ವ ಇತರರು ಮಾಡುತ್ತಿದ್ದ ಅನ್ಯಾಯಗಳನ್ನು ನಿರ್ಭೀತಿಯಿಂದ ತಾನೇ ವೈಸರಾಯರ ವರಗಮನಕ್ಕೆ ತಂದದ್ದಲ್ಲದೆ ಎಸೆಂಬ್ಲಿಯಲ್ಲಿ ವಿವರವಾಗಿ ತಿಳಿಸಿ ಮಲಬಾರಿನವರ ಸಂಕಷ್ಟ ನಿವೃತ್ತಿಗಾಗಿ ಪ್ರಯತ್ನಿಸಿದ ಸಂಗತಿಯು ಎಲ್ಲರಿಗೂ ವಿದಿತವಿರುವದು.

ಮಲಬಾರಿನಿಂದ ದಂಗೆಯ ಹೇತುವಿನಿಂದ ಶಿಕ್ಷಿಸಲ್ಪಟ್ಟ ಮಾಪಿಳ್ಳಾ ಕೈದಿಗಳ ನಿರಪರಾಧಿಗಳಾದ ಹೆಂಡರು ಮಕ್ಕಳು ಮತ್ತು ಕುಟುಂಬವನ್ನೇ ಅಂಡಮಾನಿಗೆ ಕೊಂಡು ಹೋಗುವ ಕುರಿತು ಆಕ್ಷೇಪಿಸಿ ಸರಕಾರದೊಡನೆ ಅವರ ಸುಖಕ್ಕಾಗಿ ಹೋರಾಡಿ ದುಃಖದಲ್ಲಿ ಭಾಗಿಯಾಗಿ ಅವರ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲಿಕ್ಕೆ ಅಂಡಮಾನಿಗೆ ಹೋಗಿ ಈಗ ತಾನೇ ಅಲ್ಲಿಂದ ಹಿಂತಿರುಗಿ ಬಂದು ನಮ್ಮ ಮುಸ್ಲಿಮ್ ಸಹೋದರರ ಅಭ್ಯುದಯಕ್ಕಾಗಿ ತುಂಬಾ ಪರಿಶ್ರಮ ಪಡುತ್ತಿರುವರು. ಮಿ. ಶಮ್ನಾಡರು ಎಸೆಂಬ್ಲಿ ಮೆಂಬರರಾಗಿ ಮಾಡುತ್ತಿರುವ ಸೇವೆಗಿಂತಲೂ ಮದ್ರಾಸು ಕೌನ್ಸಿಲು ಮೆಂಬರರಾದರೆ ಅದರಿಂದ ನಮಗೆ ಹೆಚ್ಚಿನ ಪ್ರಯೋಜನವು ದೊರಕೀತಾದ್ದರಿಂದ ಅವರು ಬರುವ ಕೌನ್ಸಿಲು ಚುನಾವಣೆಗೆ ನಮ್ಮ ಜಿಲ್ಲೆಯ ಮಹಮ್ಮದೀಯರ ಪರವಾಗಿ ಉಮೇದ್ವಾರನಾಗಿ ನಿಲ್ಲಬೇಕೆಂದು ನಾವು ಅವರನ್ನು ವಿಜ್ಞಾಪಿಸಿದಕ್ಕೆ ಅವರು ಸಮ್ಮತಿಸಿರುವದರಿಂದ ದಕ್ಷಿಣಕನ್ನಡ ಜಿಲ್ಲೆಯ ಎಲ್ಲಾ ಮುಸ್ಲಿಮ್ ಸಹೋದರರು ಪ್ರೋತ್ಸಾಹಿಸಬೇಕೆಂದು ನಾವು ವಿನಃ ಪೂರ್ವಕ ಅಪೇಕ್ಷಿಸುತ್ತೇವೆ.

೧. (ಸಹಿ.) ಸಿ. ಮಹಮೂದೆ ಸಾಹುಕಾರ್ ಮತ್ತು ಜಮೀನುದಾರ ಮಂಗಳೂರು. ೨. ದೊಡ್ಡಮನೆ ಇಬ್ರಿನ ಬ್ಯಾರಿ ರುಜು ಸಾಹುಕಾರ ಜಮೀನುದಾರ ಮಂಗಳೂರು. ೩. ವಲಿ ಹುಸೈನಬ್ಬ ಜಮೀನುದಾರ ಮತ್ತು ಕಮಿಟಿಮೆಂಬರ ಮಂಗಳೂರು. ೪. ಶೀದಿ ಬ್ಯಾರಿ ಜಮೀನುದಾರ ಮತ್ತು ಕಮಿಟಿ ಮೆಂಬರ ಉಳ್ಳಾಲ. ೫. ಜಿ. ಸ. ಕುಂಞ'ಮ್ಮಾಕುಟ್ಟಿ ಜಮೀನುದಾರ ಮತ್ತು ಮಾಜಿ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರು ಕಳನಾಡು. ೬. ಎಂ. ಕೆ. ಮಹಮ್ಮದ್ ಮಾಜಿ ಪಟೇಲ ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರರು ಜಮೀನುದಾರರು ಮೊಗ್ರಾಲ್. ೭. ಮಹಮ್ಮದ್ ಶಿರೂರ್ ಜಮೀನುದಾರರು ಕಮಿಟಿ ಮೆಂಬರರು, ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರರು ಬಾಡೂರು ಕುಂಬಳೆ. ೮. ಪಿ. ಟಿ. ಬೆನದ್ದಿನ್ ಜಮೀನುದಾರ ಮತ್ತು ಮಾಜಿ ತಾಲೂಕು ಬೋರ್ಡು ಮೆಂಬರರು ಪಳ್ಳಿಕೆರೆ. ೯. ಕುಂಞ ಕಲಂದರ್ ಜಮೀನುದಾರ ಪಂಚಾಯತ ಕೋರ್ಟು ಪ್ರಸಿಡೆಂಟು ಮತ್ತು ತಾಲೂಕು ಬೋರ್ಡು ಮೆಂಬರ ಕಳನಾಡು. ೧೦. ಕುಂಞ'ಮ್ಮಾ ಕುಟ್ಟಿ ಜಮೀನುದಾರ ಮೊಗ್ರಾಲ್. ೧೧. ಪಿ. ಕೆ. ಸಿ. ಮಹಮ್ಮದ ಕುಂಞ ಜಮೀನುದಾರ ಮತ್ತು ಪಂಚಾಯತ ಕೋರ್ಟು ಪ್ರಸಿಡೆಂಟು ಪಡ್ನೆ. ೧೨. ಪಿ. ಬಿ. ಕೆ. ಕುಂಞ'ಮ್ಮೊದಿನ್ ಕುಟ್ಟಿ ಜಮೀನುದಾರ ಪಡ್ನೆ. ೧೩. ಯು. ಎನ್. ಮಹಮ್ಮದ ಕುಂಞ ಜಮೀನುದಾರ ಉದ್ಯಂತಲೆನಾಲ್ ಪುರವಾಡ ತ್ರಿಕರಪುರ. ೧೪. ಕೆ. ಮಮ್ಮುಂಞ ಬಿ. ಎ. ಜಮೀನುದಾರ ಪಳ್ಳಿಕೆರೆ ೧೫. ಇಸ್ಮಾಯಿಲ್ ಹಕೀಮ್ ಮತ್ತು ಜಮೀನುದಾರ ಉಳ್ಳಾಲ. ೧೬. ಮಂಜಲ ಹಮ್ಮಬ್ಬ ಬ್ಯಾರಿ ಜಮೀನುದಾರ ಪರಮನ್ನೂರು ಮಂಗಳೂರು. ೧೭. ವಲಿ ಅಬ್ದುಲ್ಲ ಕಿಡಾವು ಜಮೀನುದಾರ ಮತ್ತು ಸಾಹುಕಾರ ಮಂಗಳೂರು. ೧೮. ಹಾಜಿ ಮೊಯಿದಿನಬ್ಬ ಸಾಹುಕಾರ ಮತ್ತು ಜಮೀನುದಾರ ಮಂಗಳೂರು. ೧೯. ಕಾದ್ರಿ ಹಾಜಬ್ಯಾರಿ ರುಜು, ಸಾಹುಕಾರ ಸಜೀಪ ಮಂಗಳೂರು. ೨೦. ಕುಂಞಮು ಹಾ ಮೊಗ್ರಾಲ್ ಜಮೀನುದಾರ ಮತ್ತು ಮಾಜಿ ಡಿಸ್ಟ್ರಿಕ್ಟ್ ಬೋರ್ಡು ಮೆಂಬರ ಕುಂಬಳೆ. ೨೧. ಕೇಕಬ್ಬ ಬ್ಯಾರಿ ಜಮೀನುದಾರ ಬಿವತ್ತಕೊಳು ಗ್ರಾಮ ಉಪ್ಪಿನಂಗಡಿ. ೨೨. ಕೆ. ಎಮ್. ಮಮ್ಮುಂಞ ರುಜು ಹೊನರರಿ ಬೆಂಚು ಮೆಜಿಸ್ಟ್ರೇಟ್ ಮತ್ತು ಉಜ್ಮೆನುಲ್ ಇಸ್ಲಾಮ್ ಸಭಾ ಅಧ್ಯಕ್ಷ ಕಾಸರಗೋಡು. ೨೩. ಮಮ್ಮುಂಞ ಯಾನೆ ಮಹಮ್ಮದ ಬ್ಯಾರಿ ರುಜು, ಜಮೀನುದಾರ ಸಾಹುಕಾರ ಮತ್ತು ಮುಯಿಜುಲ್ ಇಸ್ಲಾಮ್ ಸಭೆಯ ಅಧ್ಯಕ್ಷ ತಳಂಗ್ರೆ ಕಾಸರಗೋಡು. ೨೪. ಕಂಪಡಿ ಮಮ್ಮುಂಞ ರುಜು, ಸಾಹುಕಾರ ಮತ್ತು ತನ್ವೀರು ಇಸ್ಲಾಂ ಸಭೆಯ ಪ್ರಸಿಡೆಂಟ್ ಪಳ್ಳ ಕಾಸರಗೋಡು. ೨೫. ಟಿ. ಸೇಕಾಲಿ, ಜಮೀನುದಾರ ಮತ್ತು ಸೆಕ್ರೆಟರಿ ಮುಯಿಸ್ಸುಲ್ ಇಸ್ಲಾಂ ಸಭೆ ತಳಂಗರೆ.

ತಾ. ೨೫-೧೦-೨೫ರಲ್ಲು ಮ| ರಾ| ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರರಾದ ಸಾಲ್ಯಾಂಜಾರವರ ಅಧ್ಯಕ್ಷತೆಯಲ್ಲಿ ಉಪ್ಪಿನಂಗಡಿ ತಾಲೂಕಿನ ಈ ಕೆಳಗೆ ದಸ್ಕತು ಹಾಕಿದ ವರ್ಗದಾರರು ಸುಳ್ಯದ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸಭೆಮಾಡಿ, ಮಾಡಿದ ಪ್ರೊಸಿಡಿಂಗ್ಸು:—

೧) ವ್ಯವಸಾಯಕ್ಕೆ ಯೋಗ್ಯವಾದ ಸ್ಥಳಗಳು ರಿಜರ್ವ ಕಾಡಿನಲ್ಲಿ ಸೇರಿರುವುದರಿಂದ ಅಂಥಾ ಸ್ಥಳಗಳನ್ನು ದರಖಾಸ್ತಿಗೆ ಕೊಡಬೇಕಾಗಿ ವರ್ಗದಾರರು ಕೇಳಿದಲ್ಲಿ, ಅವರಿಗೆ ಆ ರೀತಿ ದರಖಾಸ್ತಿ ಕೊಡಬೇಕಾಗಿ ಮ| ರಾ| ಕಿಲಾರು ರಾಮಚಂದ್ರಯ್ಯನವರು ಕಂಡ ಸೂಚನೆಯನ್ನು ಮ| ರಾ| ಪುಲ್ಲದ್ಯ ಸುಬ್ಬಾಯರು ಅನುಮೋದಿಸಿದ್ದಲ್ಲಿ ಆ ರೀತಿ ಮಾಡಬೇಕಾಗಿ ಸರ್ವಸಮ್ಮತದಿಂದ ನಿರ್ಣಯಿಸಲಾಯಿತು.

೨) ಫೋರೆಸ್ಟ್ ಬೌಂಡರಿ ಲ್ಯಾನುಗಳು ವರ್ಗದ ಸಮೀಪ ಬಂದದ್ದರಿಂದಲೂ, ರಿಜರ್ವ ಕಾಡು ಸಾಗುವಳಿ ಸ್ಥಳಕ್ಕೆ ಸಮೀಪ ಇದ್ದಲ್ಲಿ ವರ್ಗದಾರರಿಗೆ ಕಾಡುಮೃಗಗಳ ದೆಸೆಯಿಂದ ಅವರ ಬೆಳೆಯು ಹಾಳಾಗುವುದಲ್ಲದೆ, ಅಂತಹ ಸ್ಥಳಗಳಲ್ಲಿ ಸಾಗುವಳಿಗೆ ಕೂಡ ಬಹಳ ಕಷ್ಟವಾಗುವುದರಿಂದ ರಿಜರ್ವ ಕಾಡುಗಳನ್ನು ಸಾಗುವಳಿ ಸ್ಥಳದಿಂದ ಒಂದು ಮೈಲು ದೂರಕ್ಕೆ ಸರಿಗೊಡಿಸಬೇಕಾಗಿ ಮ| ರಾ| ಮಡ್ತಿಲ ರಾಮಣ್ಣಗೌಡರು ಕಂಡ ಸೂಚನೆಯನ್ನು ಮ| ರಾ| ಕಳ್ಳಕಾರು ಗ್ರಾಮದಲ್ಲಿರುವ ಕಟ್ಟದ ಸದಾಶಿವಯ್ಯನವರು ಅನುಮೋದಿಸಿದ ಪ್ರಕಾರ ಸರ್ವಾನುಮತದಿಂದ ಮಂಜೂರುಮಾಡಲಾಯಿತು.

೩) ರಿಜರ್ವ ಕಾಡಿನಲ್ಲಿ ಆಕಸ್ಮಿಕವಾಗಿ ಬೆಂಕಿಬಿದ್ದಲ್ಲಿ ವರ್ಗದಾರರ ಕುಮಕಿ, ಕಾನ, ವ ಖಾಸಗಿ ಸುರಕ್ಷಿತಪಡಿಸಿದ ಕಾಡುಗಳಿಗೆ ಸಹ ಬೆಂಕಿ ವ್ಯಾಪಿಸಿ ವರ್ಗದಾರರಿಗೆ ಹೆಚ್ಚಿನ ನಷ್ಟಕ್ಕೆ ಕಾರಣವಾಗುವುದರಿಂದ ಅಂತಹ ಬೆಂಕಿಯು ಆಗಲೀ, ಇತರ ಕಾಡು ಮೃಗಗಳಿಂದಾಗಲೀ ರಿಜರ್ವ ಕಾಡಿನಿಂದ ಹೊರಗೆ ಬಾರದಂತೆ ಅತೀ ಭದ್ರವಾದ ಧರೆ ವಲಿಗಳು, ಸುರಕ್ಷಿತ ಕಾಡುಗಳ ಸುತ್ತಲೂ ಮಾಡಿಸುವಂತೆ ಸಮ್ಮಂಧ ಪಟ್ಟ ಸರಕಾರಿ ಇಲಾಖೆಯನ್ನು ಕೇಳಿಕೊಳ್ಳಬೇಕಾಗಿ ಮ| ರಾ| ಕಲ್ಲೆ ಪೂವಣಿ ಹೆಗ್ಗಡೆಯವರು ಕಂಡ ಸೂಚನೆಯನ್ನು ಮ| ರಾ| ಅಜ್ಜನಗದ್ದೆ ಗೋಪಾಲ ಕೃಷ್ಣಯ್ಯನವರು ಅನುಮೋದಿಸಿದ್ದಲ್ಲಿ ಸರ್ವ ಸಮ್ಮತದಿಂದ ಮಂಜೂರು ಮಾಡಲಾಯಿತು.

೪) ರಿಜರ್ವಕಾಡಿಗೆ ಹೋಗುವ ಜಾನುವಾರು ಫೀಸು ವರುಷದಿಂದ ವರುಷಕ್ಕೆ ಹೆಚ್ಚುತ್ತಾ ಬರುವುದರಿಂದ ಜಾನುವಾರು ಇಲ್ಲದೆ ಕಷ್ಟಪಡುವ ಈ ತಾಲೂಕಿನ ರೈತರಿಗೆ ಸಾಗುವಳಿಗೆ ಬೇಕಾಗುವಷ್ಟು ಕೂಡ ಜಾನುವಾರುಗಳು ಸಾಕಲಿಕ್ಕೆ ಕಷ್ಟವಾಗುವುದರಿಂದ ಅಂತಹ ಫೀಸು ಪೂರ್ಣ ಮಾಫಿಯಾಗಬೇಕಾಗಿ ಮ| ರಾ| ಕಿಲಾರು ರಾಮಚಂದಯ್ಯನವರು ಕಂಡ ಸೂಚನೆಯನ್ನು ಮ| ರಾ| ಶ್ಯಾನುಭಾಗ, ಯಮ್. ಬಶಪ್ಪ ರೈಗಳು ಅನುಮೋದಿಸಿದಂತೆ ಸರ್ವ ಸಮ್ಮತದಿಂದ ಮಂಜೂರು ಮಾಡಲಾಯಿತು.

೫) ರಿಜರ್ವ ಕಾಡುಗಳಲ್ಲಿ ತನ್ನಷ್ಟಕ್ಕೆ ಬಿದ್ದು ಸತ್ತು ಸೌದೆಗೆ ಯೋಗ್ಯವಾದ ಒಣಮರಗಳನ್ನು ಏಲಂ ಹಾಕಿ ವರ್ಗದಾರರಿಗೆ ಕೊಡಕೊಡದೆ ಬಾಕಿ ಹುಳುಮು ಉಂಟೆಂತ ಕಂಡುಬರುವುದರಿಂದ ಅಂತಹ ಹುಳುಮನ್ನು ರದ್ದುಪಡಿಸಿ, ಅಲ್ಪ ಕ್ರಯಕ್ಕಾದರೂ ಅಪೇಕ್ಷೆ ಪಡುವ ವರ್ಗದಾರರಿಗಾದರೂ ಕೊಡಬೇಕಾಗಿ ಮ| ರಾ| ಉಬರಡ್ಕ ವೆಂಕಟ್ರಮಣಯ್ಯನವರು ಕಂಡ ಸೂಚನೆಯನ್ನು ಮ| ರಾ| ಅರಿಮಜಲ್ಕ ಸುಬ್ಬಯ್ಯ ರೈಗಳು ಅನುಮೋದಿಸಿರುವಂತೆ ಸರ್ವಸಮ್ಮತದಿಂದ ಮಂಜೂರು ಮಾಡಲ್ಪಟ್ಟಿತು.

ಮುಂದುವರಿಯುವುದು.

—: ಶ್ರೀಮತಿ ಸರೋಜಿನಿ ದೇವಿಯವರು. :—

(ಲೇಖಕ:—ಕ. ಹೊನ್ನಯ ಶೆಟ್ಟಿ.)

ಭಾರತ ಮಾತೆಯು ಒಂದು ಕಾಲದಲ್ಲಿ ಉನ್ನತಿಯ ಶಿಖರವನ್ನೇರಿ ಸಮಸ್ತ ಭೂಲೋಕದ ಮಾತೆಯಾಗಿತ್ತು. ಸರ್ವ ವಿಧದ ಸಂಪತ್ಸಮೃದ್ಧಿಯುಳ್ಳ ದೇಶವಾಗಿತ್ತು. ಜ್ಞಾನಕ್ಕೂ ಶಾಸ್ತ್ರಕ್ಕೂ ತವರೂರಾಗಿತ್ತು. ಅನೇಕ ಋಷಿಪುಂಗವರು ಇಲ್ಲಿಯೇ ಜನ್ಮವೆತ್ತಿದರು. ರಾಮ, ಬಲಿ, ಧರ್ಮರಾಯ, ಹರಿಶ್ಚಂದ್ರ, ಪ್ರಹಲ್ಲಾದ, ಅರ್ಜುನ ಮೊದಲಾದಂಥವರ ಪಿತೃವಾಕ್ಯ ಪರಿಪಾಲನಾಧುರೀಣರೂ ದಾನಶೂರರೂ, ಸತ್ಯಸಂಧರೂ, ಭಕ್ತಶಿಖಾಮಣಿಗಳೂ, ವೀರಾಗ್ರಣಿಗಳೂ ಆದ ಪುತ್ರರತ್ನರು ಈ ಭಾರತಿಯುದರದಲ್ಲಿ ಜನ್ಮತಾಳಿದರು. ಸೀತೆ, ದ್ರೌಪದಿ ಮೊದಲಾದ ಪತಿವ್ರತಾ ನಾರಿಯರಂಥಾ ತರುಣಿಯರೂ ಇಲ್ಲೇ ಜನ್ಮವೆತ್ತಿದರು. ಅನೇಕ ಮುತ್ಸದ್ದಿಗಳೂ ಸಾಹಿತ್ಯ ಶಿರೋಮಣಿಗಳೂ ಮತಸ್ಥಾಪಕರೂ, ಕವಿವರ್ಯರೂ, ರಾಜನೀತಿಕುಶಲರೂ, ಈ ಆರ್ಯಮಾತೆಯ ನಿಜಪುತ್ರರೆನಿಸಿಕೊಂಡರು. ದುಷ್ಟರನ್ನು ದಮನಿಸಲಿಕ್ಕೂ, ಶಿಷ್ಟರನ್ನು ಪಾಲಿಸಲಿಕ್ಕೂ ಶ್ರೀಮನ್ನಾರಾಯಣನು ಇಲ್ಲಿಯೇ ತನ್ನ ಅವತಾರಗಳನ್ನೆತ್ತಿದನು. ದಾಧಾಬಾಯಿ ನವರೋಜಿ, ಲೋಕಮಾನ್ಯ ತಿಲಕ, ಗೋಪಾಲಕೃಷ್ಣ ಗೋಖಲೆ, ದೇಶಬಂಧು ಚಿತ್ತರಂಜನ ದಾಸ ಮೊದಲಾದ ನಿಷ್ಕಾಮಕರ್ಮಿಗಳು ಮೊನ್ನೆ ಮೊನ್ನೆ ಭಾರತ ಮಾತೆಯ ಪುತ್ರವರ್ಯರೆನಿಸಿಕೊಂಡರು. ಹಿಂದಿನ ಕಾಲದಲ್ಲಿ ಇಂಥಾ ಅಸಾಮಾನ್ಯ ಪ್ರತಾಪಶಾಲಿಗಳ ತವರುಮನೆಯಾದ ಹಿಂದೂಮಾತೆಯು ಇಂದಾದರೂ ಅಂದಿನಂತೆಯೇ ಕರ್ಮಯೋಗಿಗಳೂ, ಜಗದ್ವಂದ್ಯರೂ ಸರ್ವಗುಣಸಂಪನ್ನರೂ ಆದ ಮಹಾತ್ಮಾ ಮೋಹನದಾಸ ಕರಮಚಂದ ಗಾಂಧಿಯವರಿಗೂ, ಕವಿತಿಲಕರಾದ ರವೀಂದ್ರನಾಥ ಠಾಗೂರರವರಿಗೂ ಲೋಕಪ್ರಸಿದ್ಧ ರಸಾಯನ ಶಾಸ್ತ್ರಜ್ಞರಾದ ಜಗದೀಶ ಚಂದ್ರಬೋಸರವರಿಗೂ ಮಹಮ್ಮದೀ ವೀರಬಂಧುಗಳಾದ ಶೌಕತ್ಆಲಿ-ಮಹಮ್ಮದಾಲಿಗಳಿಗೂ ಮಾತೃಭೂಮಿಯಾಗಿರುವಳು. ಭಾರತಿಯು ಆಧುನಿಕ ಕಾಲದಲ್ಲಿ ತನ್ನುದರದಿಂದ ಹೊರಚೆಲ್ಲಿದ ಉಜ್ವಲವಾದ ಸ್ತ್ರೀರತ್ನವಾದರೂ ಕವಿಯತ್ರಿಯಾದ ಶ್ರೀಮತಿ ಸರೋಜಿನೀ ದೇವಿಯವರು.

ಶ್ರೀಮತಿ ಸರೋಜಿನಿ ದೇವಿಯು ೧೮೭೯ನೇ ಇಸವಿಯ ಫೆಬ್ರವರಿ ತಿಂಗಳ ೧೩ನೇ ತಾರೀಕಿನ ದಿನ ಜನ್ಮಕ್ಕೆ ಬಂದಳು. ಈಕೆಯು ಬ್ರಾಹ್ಮಣ ಮನೆತನದ ಸತ್ಕುಲ ಪ್ರಸೂತಳು, ಶ್ರೀ। ಅಘೋರನಾಥ ಚಟ್ಟೋಪಾಧ್ಯಾಯನು ಇವಳ ತಂದೆಯು. ಈತನು ಸಕಲಗುಣವಿಶಾರದನು, ಸುಹೃದ್ವರ್ಗಕ್ಕೆ ಸೇರಿಸಲಿಕ್ಕೆ ಯೋಗ್ಯನು. ಬಹು ಶ್ರೀಮಂತನು, ವಿದ್ವತ್ಪ್ರಭುವು. ಹೈದರಾಬಾದಿನ ನಿಜಾಮ್ ಕಾಲೇಜನ್ನು ಈತನೇ ಸ್ಥಾಪಿಸಿದನು. ಇದರಿಂದ ಆತನಿಗೆ ವಿದ್ಯೆಯಮೇಲಿದ್ದ ಪ್ರೇಮರಸವು ಒಡಮೂಡುತ್ತದೆ. ವಿಚಕ್ಷಣೆಯೂ ಆಗಿದ್ದನು. ದಯಾಳುವು. ಒಟ್ಟಾರೆ ಸಕಲ ವಿಷಯಗಳಲ್ಲಿಯೂ ಶ್ಲಾಘಾರ್ಹನು.

ವರದಾಸುಂದರ ದೇವಿ ಎಂಬಾಕೆಯೇ ಸರೋಜಿನೀದೇವಿಯನ್ನು ಹೊತ್ತುಹೆತ್ತಮಾತೆಯು. ಒಬ್ಬ ತಾಯಿಯಲ್ಲಿರತಕ್ಕ ಸಕಲ ಸಲ್ಲಲಿತ ಲಕ್ಷಣಗಳು ವರದಾಸುಂದರದೇವಿಯಲ್ಲಿ ಮೂರ್ತಿಮಂತವಾಗಿದ್ದವು. ಸರೋಜಿನೀ ದೇವಿಯು ತನ್ನ ಬಾಲ್ಯದಲ್ಲಿ ತನ್ನ ತಾತನ ಕೈಯಿಂದಲೇ ಉಚಿತವಾದ ಶಿಕ್ಷಣವನ್ನು ಪಡೆದಳು. ಆಕೆಯ ತಂದೆಯು ಆಕೆಯ ಹೃದಯ ಪಂಜರದಲ್ಲಿ ಸೆರೆಯಾಗಿದ್ದ ನೈಸರ್ಗಿಕ ಗುಣಗಳೆಂಬ ಪಕ್ಷಿಯನ್ನು ಹೊರಕ್ಕೆಳೆದು ಅದು ತನ್ನ ಪಕ್ಕಗಳನ್ನು ಒಡೆದು ಹಾರಿಹೋಗುವಂತೆ ಮಾಡಿದನು. ತಂದೆಯಿಂದ ಯೋಗ್ಯ ಶಿಕ್ಷಣವನ್ನು ಪಡೆದ ಬಳಿಕ ಸರೋಜಿನಿಯು ಮೊದಲು ಮದ್ರಾಸು ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ಕೊಟ್ಟು ಅದರಲ್ಲಿ ತೇರ್ಗಡೆ ಹೊಂದಿದಳು. ಒಳ್ಳೇ ಪ್ರಶಸ್ತಿ ಪತ್ರಿಕೆಯನ್ನು (Certificate) ಪಡೆದದ್ದರಿಂದ ವಿದ್ಯಾರ್ಥಿವೇತನವನ್ನು ಹೊಂದಲನುಕೂಲವಾಗಿ ಪ್ರೌಢ ವಿದ್ಯಾಭ್ಯಾಸದ ನಿಮಿತ್ತವಾಗಿ ವಿಲಾಯತಿಗೆ ಪ್ರಯಾಣ ಮಾಡಿದಳು. ಅಲ್ಲಿ ಲಂಡನಿನ ಕಿಂಗ್ಸ್ ಕಾಲೇಜಿನಲ್ಲಿ ಅಧ್ಯಯನಕ್ಕಾರಂಭಿಸಿದಳು. ಕಟ್ಟಕಡೆಗೆ ಈಕೆಯು ಗಿರ್ಟನ್ (Girton) ಎಂಬಲ್ಲಿ ವಿದ್ಯಾಭ್ಯಾಸ ಮಾಡತೊಡಗಿದಳು. ಅಲ್ಲಿ ಶಿಕ್ಷಣವನ್ನು ಮುಗಿಸಿ ಇಟಲಿದೇಶಕ್ಕೆ ಬಂದಳು. ಅಲ್ಲಿಯ ಸೃಷ್ಟಿವೈಚಿತ್ರ್ಯಗಳನ್ನೆಲ್ಲಾ ನೋಡುತ್ತ ತಿರುಗಾಡಿದಳು. ಈಕೆಯು ದೊಡ್ಡ ಮನೆತನದ ಬ್ರಾಹ್ಮಣಕುಲಕದಲ್ಲಿ ಉದಯಕ್ಕೆ ಬಂದ ಕೆಂದು ಹಿಂದೆಯೇ ಅಂದಿರುವೆವು. ಅದರೂ ಇವಳು ಜಾತಿಯ ಕಡೆಗೆ ಲಕ್ಷ್ಯವಿಡದೆ "ಧೈರ್ಯಂ ಸರ್ವತ್ರ ಸಾಧನಂ" ಎಂಬಂತೆ ಸರ್ವಕ್ಕೂ ಪ್ರಾಧಾನ್ಯವಾದ ಧೈರ್ಯವನ್ನು ತಾಳಿ 'ಡಾಕ್ಟರ್ ಗೋವಿಂದರಾಜಲು ನಾಯುಡು ಎಂಬವರನ್ನು ಲಗ್ನವಾದಳು. ಬ್ರಾಹ್ಮಣ ಯುವತಿಯರಲ್ಲಿ ಅಬ್ರಾಹ್ಮಣ ಯುವಕನನ್ನು ಮದುವೆಯಾದ ಪ್ರಥಮಳನ್ನೆ ಎಂದರೆ ಇವಳೇ.

ಅಘೋರನಾಥ ಚಟ್ಟೋಪಾಧ್ಯಾಯನು ತನ್ನ ಮಗಳನ್ನು ಗಣಿತಶಾಸ್ತ್ರದಲ್ಲಿ ಅವಳಿಗೆ ಯಾರೂ ಎಣೆ ಇಲ್ಲದವಳಂತೆ ಮಾಡಬೇಕೆಂದು ಹವಣಿಸಿದ್ದನು. ಆದರೇನುಮಾಡಲಿ! "ತಾನೊಂದು ನೆನೆದರೆ ದೈವವು ಬೇರೊಂದು ಬಯಸಿತು" ಎಂಬಂತೆ ಆತನ ಮನದಿಚ್ಛೆಯೊಂದಾದರೆ ಸರೋಜಿನಿಯಾದುದು ಬೇರೊಂದಾಯಿತು.

ಸರೋಜಿನಿಗೆ ಬಾಲ್ಯದಿಂದಲೂ ಕವಿತೆಯಲ್ಲಿ ಬಲು ಪ್ರೀತಿ. ತನ್ನ ೧೨ನೇ ವಯಸ್ಸಿನಲ್ಲಿಯೇ ಈಕೆಯು ತನ್ನ ಕವಿತಾಶಕ್ತಿಯನ್ನು ಜಗಕ್ಕೆಲ್ಲ ತೋರತೊಡಗಿದಳು. ರಸಿಕಳಾಗಿದ್ದುದರಿಂದ ರಸಪ್ರಧಾನವಾದ ಕಾದಂಬರಿಗಳನ್ನೋದಿ ಮುಗಿಸಿದಳು. ಅನೇಕ ಗ್ರಂಥಗಳನ್ನು ಮಗಚಿದಳು. ತನ ೧೩ನೇ ವಯಸ್ಸಿನಲ್ಲಿ ಆಂಗ್ಲೇಯ ಭಾಷೆಯಲ್ಲಿ ಚೊಕ್ಕವಾದ ಒಂದು ಚಿಕ್ಕ ನಾಟಕವನ್ನು ಬರೆದಳು. ಮುದ್ದುಮುದ್ದಾದ ಕಾದಂಬರಿ (Novel) ಯೊಂದನ್ನು ರಚಿಸಿದಳು. ಅನೇಕ ಪತ್ರಿಕೆಗಳಿಗೆ ಲೇಖನಗಳನ್ನು (Article) ಬರೆಯಲಾರಂಭಿಸಿದಳು. ೧೬ನೇ ವಯಸ್ಸಿನೊಳಗೆ ಲೆಕ್ಕವಿಲ್ಲದಷ್ಟು ಗ್ರಂಥಪಠನ ಮಾಡಿದಳು.

ಡಾ। ಸರ್. ಎಡ್‌ಮಂಡ್‌ಗಾಸ್ (Dr. Sir Admond Gas) ಎಂಬಾತನು ಆಂಗ್ಲೇಯ ಸಾಹಿತ್ಯಗಳಲ್ಲಿ ಹೆಸರುವಾಸಿಯಾಗಿದ್ದನು. ದೈವಸಂಘಟನೆಯಿಂದ ಈತನ ಪರಿಚಯವು ಸರೋಜಿನಿಗೆ ಲಭಿಸಿತು. ಈತನು ಇವಳ ವಿಚಕ್ಷಣಯುಕ್ತವಾದ ಕವಿತೆಗಳನ್ನೋದಿ ಬಹುಕಳವಾಗಿ ಶ್ಲಾಘಿಸಿದನು. ಆಕೆಯ ಕವಿತೆಗಳಾದರೂ ಓದಿದವರನ್ನು ಮುಗ್ಧರನ್ನಾಗಿ ಮಾಡುತ್ತಿದ್ದವು. ದೇವಿಯಲ್ಲಿ ಅಪ್ರತಿಮ ಕಲ್ಪನಾಶಕ್ತಿ ಇದ್ದರೂ ಅದು ತೀರಾ ವಿದೇಶೀಯತರದ್ದಾಗಿತು. ಸ್ವದೇಶ ಕಡೆಗೆ ಅವಳ ಲಕ್ಷ್ಯವು ಎಳ್ಳಷ್ಟೂ ಇದ್ದಿಲ್ಲ. ಡಾ। ಗಾಸರ್ ಆಕೆಯ ಮನಸ್ಸನ್ನು ಆಕೆಯ ದೇಶದ ಕಡೆಗೆ ತಿರುಗಿಸಿದನು. ಆಗ ಆಕೆಯ ಲೇಖನಿಯು ಸ್ವದೇಶದ ಕಡೆಗೆ ಸರಿಯಿತು. ಅಂದಿನಿಂದ ದೇವಿಗೊಂದು ನವನವೀನವಾದ ಶಕ್ತಿ ಬಂತು. ರಾಷ್ಟ್ರಪ್ರೇಮವು ಆಕೆಯ ಹೃದಯದಲ್ಲಿ ಪುಂಖಾನುಪುಂಖವಾಗಿ ಉದ್ಭವಿಸತೊಡಗಿತು.

ಉತ್ಕೃಷ್ಟವಾದ ಸ್ವದೇಶಾಭಿಮಾನವು ಅವಳನ್ನು ಬಂಧಿಸಿಯೇ ಬಿಟ್ಟಿತು. ಅಂದಿನಿಂದವಳು ವಿದೇಶಿಕವಿತೆಗೆ ತಿಲಾಂಜಲಿಯನ್ನಿತ್ತು ರಾಷ್ಟ್ರಕವಿಯತ್ರಿಯಾಗಿ ಭಾರತಿಯ ಬಾಳೆ ಎನಿಸಿಕೊಂಡಳು. ಈಗಿನ ನವನಾಗರಿಕತೆಯ ನಮೂನೆಯಾಕಾರದ ಜುಟ್ಟಿನಕಟ್ಟು; ಅದರೊಟ್ಟಿಗೆ ಭವನ ಮುಖರಿ ಭಾಗವಾದ ಬಾಗಿಲ ಸೂತ್ರಪಟ್ಟಿಗೆಗೆ ಹೊಡೆಯು ತರದ ಆಣಿಯೊಂದು; ಅದರ ಸಂಗಡ ಬಂಗಾರದ ಗುಲಾಬಿಯ ಹೂ; ಇಲ್ಲವಿದ್ದರೆ ಬಣ್ಣ ಬಣ್ಣದ ಕಾಗದದಿಂದ ವಿರಚಿತವಾದ ಮಲ್ಲಿಗೆಯ ಮಾಲೆ; ಜುಟ್ಟನ್ನು ಕಟ್ಟದಿದ್ದ ಜಡೆ ಹೆಣೆದರೆ ಜೋತಾಡುವ ಆ ಜಡೆಯ ತುದಿಗೆ ಅಚ್ಚ ಗುಲಾಬಿ ವರ್ಣದ ಚೌರಿಯೊಂದು; ನಾಸಿಕಕ್ಕೆ ಬೊಟ್ಟು; ಕಿವಿಗೆ ಮಧ್ಯಖಚಿತವಾದ ಬೆಂಡೋಲೆ; ಮೈಗೆ ಬಿಳಿಯ ಬಣ್ಣದ ಹೊಳೆಯುವಂಥಾ ರವಕೆ; ಇಲ್ಲವೆ ಜಕೇಟು; ಜಕ್ಕೇಟಿನ ಪಕ್ಕಗಳಲ್ಲಿ ಚಿಕ್ಕ ಕಿಸೆಗಳು; ಅವುಗಳಲ್ಲಿ ಒಂದರಲ್ಲಿ ಸುಗಂಧ ಸಹಿತ ಬುರುಡೆ ಮತ್ತು ಕರವಸ್ತ್ರ; (Hand-kerchief) ಇನ್ನೊಂದರಲ್ಲಿ ಸೆಂಟಿನ ಸಣ್ಣದೊಂದು ಬಾಟ್ಲಿ ಯಾ ಸೆಂಟಿನ ಕಾರ್ಡು; ಮೈಗೆ ಮೊಣಕಾಲು ವರೆಗೆ ಮಾತ್ರ ಬಗೆ ಬಗೆಯ ತರದ ಗವಾನು; ಇಲ್ಲವೆ ಉಡಲಿಕ್ಕೆ ಶಿಲ್ಕಿನ ಬಣ್ಣಬಣ್ಣದ ವಸ್ತ್ರಗಳು; ಕೈಗೆ ಶಿಲ್ಕಿನ ಬಳೆಗಳು; ಸೀರೆಯುಟ್ಟರೆ ಸೊಂಟಕ್ಕೆ ಗೆಜ್ಜೆಸಹಿತವಾದ ಬಂಗಾರದ ಯಾ ಗಿಲ್ಟಿನಪಟ್ಟಿ; ಗವಾನಾದರೆ ವಸ್ತ್ರದ ಪಟ್ಟಿ; (Belt) ಕಣ್ಣಿಗೆ ಕನ್ನಡಕ; ಕಾಲಿಗೆ ಕಾಲುಚೀಲಗಳು ಮತ್ತು ಬೂಟ್ಸು; ಇವೇ ಮೊದಲಾದ ವೇಶಭೂಷಗಳಿಗೆ ಈಕೆಯು ತರ್ಪಣವಿತ್ತು ಶುದ್ಧವಾದ ಖಾದಿಯನ್ನೇ ಉಪಯೋಗಿಸಿ ಭಾರತಿಯ ನಿಜಪುತ್ರಿ ಎನಿಸಿಕೊಂಡಳು. ನಾರಿಯರೇ ನೀವಾದರೂ ಅವಳಂತೆ ದೇಶಪ್ರೇಮಕ್ಕೆ ಮನವನ್ನಿರಿಸಲು ಏಕಾಗದು?

ಮಧುರ ಮಧುಭರಿತವಾದ ಕಮಲದ ರಸಾಸ್ವಾದನದ ಸವಿಯು ಮಧುಪಗಳಿಗೆ ಹೊರತು ಭೇಕಗಳಿಗೆ ಹೇಗೆ ತಿಳಿಯಲಾರದೊ ಹಾಗೆಯೇ ಈಕೆಯ ಸ್ವಾತಂತ್ರ್ಯಗಾನದ ಸವಿಯು ನಿಜವಾದ ದೇಶಪ್ರೇಮಿಗಳಿಗೆ ಮಾತ್ರ ತಿಳಿಯುವುದಲ್ಲದೆ ನಮ್ಮಂಥಾ ದುರಭಿಮಾನಿಗಳಿಗೆ ಸರ್ವಥಾ ತಿಳಿಯಲಾರದೆಂದೇ ಹೇಳಬಹುದು. ಆಕೆಯ ಕವಿತಾ ಜ್ಞಾನವು ಇಡೀ ಜಗತ್ತನ್ನೇ ಬೆರಗುಗೊಳಿಸಿರುವುದು. ಜನಾಂಗವೇ ಅವಳ ಇಹಜನ್ಮ ಧಾರಣೆಯು ಸಾಫಲ್ಯವಾಯಿತೆಂದು ಪಾಕರಿಕವಾಗಿ ಸಾರುತ್ತಿರುವುದು. ಈಕೆಯಂತೆಯೇ ಸುಂದರವಾದ ಇವಳ ಕವಿಯು ಜನರ ಮನಸ್ಸನ್ನು ತನ್ನ ಕಡೆಗೆ ಆಕರ್ಷಣೆ ಮಾಡುತ್ತಿರುವುದು. ಇವಳ ವೈಭವಕನ್ನುಗುಣವಾದ ಆ ಆಕರ್ಷಣ ಶಕ್ತಿಯೊಂದು ಇವಳಲ್ಲಿ ನೆಲೆಗೊಂಡಿರುವುದರಿಂದ ಇವಳನ್ನು ಬಹುಜನ ಪರಿವೇಷ್ಟಿತರನ್ನಾಗಿ ಮಾಡುತ್ತಿರುವುದು.

ದೇವಿಯು ಹಿಂದೆ ರಸಾಯನುಭವದಲ್ಲಿ ಪರಮಾವಧಿಯನ್ನು ಕಂಡಿದ್ದಳು. ಅಂದಚಂದವಾದ ವಸ್ತುಜಾಲದಲ್ಲಿ ಈಕೆಯ ನೇತ್ರಗಳು ಮಿಂದು ಆನಂದಿಸಿ ಮೈಮರೆತಾಗ ಕನಸ್ಸಿನಲ್ಲಿ ಕವಿತೆ ಕಟ್ಟುವಳು. ಎಂಥಾ ಅಪ್ರತಿಮ ಕವಿಯತ್ರಿಯು!

ದೇವಿಯು ಭಾಷಣಕೊಡುವುದೆಂದರೆ ಜನರು ಸಂತೋಷಗೊಳ್ಳುವರು. ಅಬಲಾಸ್ವಭಾವವಾದ ಮಂಜುಳಸ್ವರದಿಂದ ಇವಳು ತನ್ನ ವಾಕ್‌ಪ್ರವಾಹವನ್ನು ಪ್ರವಹಿಸತೊಡಗಿದರೆ ಸಭಿಕವೃಂದವು ತಮ್ಮೊಳಗಿನ ಕ್ಲೇಶಪಾಶಗಳನ್ನು ಹರಿದೊಗೆದು ಭಾಷಣವನ್ನು ಕೇಳುವುದರಲ್ಲೇ ತಲ್ಲೀನವಾಗಿ ಹೋಗುವುದು.

ಇವಳಲ್ಲಿರುವ ಗುಣಗಳಿಷ್ಟೇ ಅಲ್ಲ. ನಿಸರ್ಗ ಸುಂದರಿ, ಅಪ್ರತಿಮ ಕವಿಯತ್ರಿ; ಅಸಹನೀಯ ಭಾಷಣಕರ್ತೆ ಎಂಬೀ ವಿಷಯಗಳು ಸರ್ವಸಮ್ಮತವಾದವು. ಇವಳಲ್ಲಿರುವ ವಿಶಿಷ್ಟಗುಣ ಯಾವುದೆಂದರೆ ತನ್ನ ಸ್ವಾತಂತ್ರ್ಯವೆಲ್ಲವನ್ನೂ ಕಳೆದುಕೊಂಡು ಅನ್ಯರ ಪಾದತಳದಲ್ಲಿ ಬಿದ್ದು ಮರುಗಿ, ಸೊರಗಿ ಕರಗಿ ಕೊರಗುತ್ತಿರುವ ತನ್ನ ಮಾತೆಯ ಬಂಧವಿಮುಕ್ತನಾ ಕಾರ್ಯದಲ್ಲಿ ತೊಡಗಿ ದೇಶಸೇವೆಯೇ ಈಶಸೇವೆಯೆಂದು ಭಾವಿಸಿ ಹೋರಾಡುತ್ತಿರುವುದೇ. ಇಂಥಾ ಭಾರತೀಯ ಪ್ರಮದೆಯು ಇಂದಿಗೆ ಇವಳೇ ಆಗಿರುವಳು.

ಎಂಥಾ ಅದ್ಭುತ ಮಾರ್ಪಾಟು! ಹಿಂದಿನ ಇವಳ ಚರಿತ್ರೆ ಏನು! ಇಂದು ಇವಳು ಕೈಕೊಂಡಿರುವ ಕಾರ್ಯವೇನು! ಭಲೇ! ಸರೋಜಿನೀ ದೇವಿ! ಸರ್ವವನ್ನೂ ಮರೆತು ದೇಶಾಭಿಮಾನಕ್ಕೆ ಮನವನ್ನು ಸೂರೆ ಬಿಟ್ಟ ನೀನೇ ಧನ್ಯೆಯು! ಮಾನ್ಯೆಯು ನಾರಿಯರ ಮಾರ್ಗದರ್ಶಕಿಯು! ಯಾರಾದರೊಬ್ಬನ ತಾಯಿಯು ಪರಕೀಯರ ಹಸ್ತಗತವಾಗಿ ಘೋಳಿಡುವುದನ್ನು ಕೇಳಿದರೆ ಅವನು ಸುಮ್ಮನಿರಲಾಪನೇ? ಇಲ್ಲ, ಇಲ್ಲ. ಅವನು ಅವಳನ್ನು ಬಿಡಿಸುವ ಕಾರ್ಯದಲ್ಲಿ ಎರವಾಗಿ ತನ್ನ ಪ್ರಾಣವನ್ನಾದರೂ ಅರ್ಪಿಸಲು ಸಿದ್ಧನಾಗುವನಲ್ಲವೆ? ಹಾಗೆಯೇ ಹಿಂದೂ ಜನಾಂಗದ ಮಾತೆಯಾದ ಭಾರತಿಯು ಅನ್ಯರ ವಶಳಾಗಿ ಅನುನಿತ್ಯವೂ ಅನನ್ಯ ಭ್ಯಾವದಿಂದ ಗೋಳಿಡುತ್ತ ನರಳುತ್ತಿರುವುದನ್ನು ಸರಳಹೃದಯೆಯಾದ ಈ ತರಳಾಮಣಿಯು ನೋಡಿ ಹೇಗೆ ಸುಮ್ಮನಿರಲಾದೀತು? ಸ್ವಾರ್ಥವನ್ನು ಬಿಟ್ಟಳು, ತನ್ನ ಮೋಹಾಬಲವೆಲ್ಲವನ್ನೂ ಕಟ್ಟಿದಳು, ಶಕ್ತಿಯೆಲ್ಲವನ್ನೂ ಒಟ್ಟಿದಳು, ಸ್ವಾತಂತ್ರ್ಯಸಂಗ್ರಾಮರಂಗವನ್ನು ಮುಟ್ಟಿದಳು. ಶಾಂತ ಸೈನಿಕರ ನಾಯಕಿ ಪಟ್ಟವನ್ನು ಕಟ್ಟಿಬಿಟ್ಟಳು. ಸೇನಾನಾಯಕನಾಗಲಿ ನಾಯಕಿಯಾಗಲಿ ಕೇಡುಗಳಿಗೆ ಈಡಾಗದಿರುವುದುಂಟೇ? ಅಂತೆಯೇ ಸೇನಾನಾಯಕತ್ವವನ್ನು ವಹಿಸಿದ ಈಕೆಯು ಘಡಲಾರದ ಕಷ್ಟನಷ್ಟವನ್ನು ಪಟ್ಟಳು. ಅಪರ ಮಾನವಿಜನ್ಮಧಾರಿಗಳಿಗೆ ಧಾರಾಳವಾಗಿರಬೇಕಾದ ಆ ಸಹನಾ ಶಕ್ತಿಯು ಅವಳಲ್ಲಿ ಅತಿಯಾಗಿದ್ದುದರಿಂದ ಅವೆಲ್ಲವನ್ನೂ ಸಹಿಸಿಕೊಂಡಳು. ಸ್ವರಾಜ್ಯಸ್ಥಾಪನೆಗಾಗಿ ಕಷ್ಟನಿಷ್ಟುರಗಳಿಗಾದರೂ ತಲೆಯೊಡ್ಡಿ, ಆತ್ಮಬಲಿಯನ್ನಾದರೂ ಅರ್ಪಿಸಲು ಸಿದ್ಧರಾಗುವಂತೆ ಜನರುಗಳಲ್ಲಿ ನವೀನೋದ್ಯಮದ ಧೋರಣೆಗಳನ್ನು ಕಲ್ಪಿಸಿಕೊಟ್ಟಳು. ಇಂದಾದರೂ ಅವಳು ಕಾನ್‌ಪುರದ ಅಖಿಲಭಾರತೀಯ ರಾಷ್ಟ್ರಸಭೆಯ ಅಧ್ಯಕ್ಷಳು. ಹಿಂದೂದೇಶದ ಜನರು ಪಡೆಯತಕ್ಕ ಅತ್ಯುಚ್ಚ ಸ್ಥಾನವೆಂದರೆ ಇದೇ. ಈ ಪದವಿಯನ್ನು ಪಡೆಯಲು ಜನಸಾಮಾನ್ಯರಿಗೆ ಸಾಧ್ಯವಿಲ್ಲ. ಅಧ್ಯಕ್ಷಾಸನವನ್ನಲಂಕರಿಸಿದ ಡಾ। ಅನ್ನಿ ಬಿಸೆಂಟಮ್ಮನನ್ನು ಬಿಟ್ಟರೆ ಈಕೆಯೇ ಅದನ್ನು ಅಲಂಕರಿಸಿದ ಘನ್ನ ಗೌರವವುಳ್ಳ ಪ್ರಥಮ ಮಹಿಳೆಯು. ಮಹೋನ್ನತವಾದ ಈ ಸಭಾಧ್ಯಕ್ಷತೆಯನ್ನು ಈಕೆಯು ವಹಿಸಿದ್ದರಿಂದ ಸಮಸ್ತ ಭಾರತ ಮಹಿಳಾವೃಂದವು ಸನ್ಮಾನಪಡೆದಂತಾಯಿಯಿತು. ಮೂವತ್ತ ಮೂರು ಕೋಟಿ ಪ್ರಜೆಗಳು ಒಮ್ಮನಸ್ಸಿನಿಂದ ಮನಃಪೂರ್ವಕವಾಗಿ ಆಕೆಯನ್ನು ರಾಷ್ಟ್ರಸಿಂಹಾಸನದ ಮೇಲೆ ಕುಳ್ಳಿರಿಸಿ ಭಕ್ತಿಜಲದಿಂದ ಅಭಿಷೇಕಿಸಿದ್ದರಿಂದಲೇ ಅವಳಲ್ಲಿ ಎಷ್ಟೊಂದು ಮಹತ್ವವಿದೆ ಎಂದು ಗೊತ್ತಾಗುವದು. ಅವಳಲ್ಲಿ ಸಂಘಟನಾಶಕ್ತಿ ಇದೆ. ಜನತೆಯಲ್ಲಿ ಪ್ರೇರಣಾಶಕ್ತಿಯನ್ನೂ ಉತ್ಸಾಹವನ್ನೂ ಉಂಟುಮಾಡುವ ಶಕ್ತಿ ಇದೆ. ಸುದಿನದಲ್ಲಿ ಆಲೋಚಿಸುವ ಬುದ್ಧಿ ಇದೆ. ಅಹಾ! ಭಾರತಮಾತೆಯ ಸತ್ಪುತ್ರ ನಾರಿಯರಿಗೆ ಮಾರ್ಗದರ್ಶಕಳಾದ ಇಂಥಾ ಪುತ್ರಿರತ್ನವನ್ನು ಪಡೆದ ನೀನಾದರೂ ಧನ್ಯೆಯೇ ಸರಿ. ನಿನ್ನ ಜಗದ್ವಂದ್ಯವಾದ ಕೀರ್ತಿಜ್ಯೋತಿಗೆ ಕಳಂಕವನ್ನು ತರುವ ನಮ್ಮಂಥಾ ಪಾಮರ ಪುತ್ರಪುತ್ರಿಯರನ್ನು ಹೆತ್ತು ಫಲವೇನು? ಮಾತೆಯೇ! ನೀನು ಪಾರಿಗಣಕ್ಕೆ ಮೇಲುಪಂಕ್ತಿಯಾದ ಸರೋಜಿನಿ ದೇವಿಯಂಥಾ ಉಜ್ವಲ ಪ್ರತಿಭಾಶಾಲಿನಿಯರನ್ನೂ, ಇಡೀ ಜಗತ್ತಿಗೆ ಆದರ್ಶಪುರುಷರಾಗಿರುವ ಮೋಹನದಾಸ ಕರಮಚಂದ ಗಾಂಧಿಯವರಂಥಾ ಸಾಹಸಿ, ಪ್ರತಿಭಾ ಸಂಪನ್ನರನ್ನೂ ಪ್ರಸವಿಸುತ್ತಿದ್ದರೆ ನೀನೆಂದೋ ಸ್ವಾತಂತ್ರ್ಯವನ್ನು ಹೊಂದಿ ತಲೆಎತ್ತಿ ಲೋಕದಲ್ಲೆಲ್ಲ ನಿನ್ನ ಉಜ್ವಲ ಪ್ರಭೆಯನ್ನು ಪ್ರಸರಿಸುತ್ತಿದ್ದೆ. ಅಥವಾ ಗತಿಸಿಹೋದ ಆ ರಾಮ, ಭೀಮ, ಅರ್ಜುನ, ಮೊದಲಾದವರಂಥ ವೀರಾಗ್ರಣಿಗಳನ್ನು ಪಡೆದಿದ್ದರೆ ಇಷ್ಟರ ಒಳಗೇನೇ ಜಯದುಂದುಭಿಯಿಂದ ಸರ್ವ ದಿಗಂತಗಳನ್ನೂ ನಡುಗಿಸಿ ನಿನ್ನ ಕೀರ್ತಿಪ್ರಭೆಯನ್ನು ಸರ್ವಲೋಕಗಳಿಗೂ ಬೀರಿ ನಿತ್ಯಕಲ್ಯಾಣಿಯೆನಿಸುತ್ತಿದೆ.

ಸಿಂಹದ ಹೊಟ್ಟೆಯಲ್ಲಿ ಕುರಿಮರಿಯು ಹುಟ್ಟಿದಂತೆ ನಿನ್ನುದರದಲ್ಲಿ ನಾವು ಜನಿಸಿದೆವೆಂದು ಹಟಸ್ಥರಾಗಿರುವ ನಿನ್ನ ಮೂವತ್ತ ಮೂರು ಕೋಟಿ ಪುತ್ರರು ಇಂದಾದರೂ ಕಣ್ತೆರೆದು ತಾವು ಪ್ರತಾಪಸಿಂಹ, ಸಂಗ್ರಾಮಸಿಂಹ, ಅಕ್ಬರ ಮೊದಲಾದ ವೀರಸಿಂಹಗಳುದರದಲ್ಲಿ ಉದಯಿಸಿದ ಕಿಶೋರಕೇಸರಿಗಳೇ ಎಂಬುದನ್ನು ಮನಗಂಡು, "ಯದ್ಯದ್ವಿಭೂತಿಮತ್ಸತ್ವಂ ಶ್ರೀಮದೂರ್ಜಿತ ಮೇವಾ। ತತ್ತದೇವಾವಗಚ್ಛತ್ವಮ್ ಮಮ ತೇಜೋಂಶ ಸಂಭವಮ್" ॥ ಎಂದು ಭಗವದ್ಗೀತೆಯ ೧೦ನೇ ಅಧ್ಯಾಯದ ೪೧ನೇ ಶ್ಲೋಕದಲ್ಲಿ ಹೇಳಿದಂತೆ ತಮ್ಮ ಮತವು ಯಾವುದೇ ಇರಲಿ, ತಮ್ಮ ಉದ್ಯೋಗವು ಏನು ಬೇಕಾದರೂ ಆಗಲಿ, ತಮ್ಮ ಸ್ಥಳವು ಯಾವುದೇ ಬೇಕಾದರೂ ಆಗಲಿ ತಾವೆಲ್ಲರೂ ಜಗತ್ಕರ್ತನ ಮಕ್ಕಳೆಂದು ದೃಢವಾಗಿ ನಂಬಿ ದುರಭಿಮಾನ ಸೂಯೆಗಳಿಗೆ ಸೂಜಿಮೊನೆಯಷ್ಟಾದರೂ ತಮ್ಮ ಅಂತಃಕರಣದಲ್ಲಿ ಸ್ಥಳಕೊಡದೆ ಉಚ್ಚ, ನೀಚ ಭಾವನೆಗಳಿಂದ ಕಲಂಕಿತವಾದ ತಮ್ಮ ಹೃದಯ ಕುಸುಮವನ್ನು ಪಶ್ಚಾತ್ತಾಪಕಂಬನಿಯಿಂದ ತೊಳೆದುಕೊಂಡು ಶುದ್ಧಾಂತಃಕರಣದಿಂದ ಒಬ್ಬರನ್ನೊಬ್ಬರು ಪ್ರೀತಿಸಿದರೆ ಮತ್ತು ಸ್ವದೇಶಿ ವಸ್ತುಗಳನ್ನು ಸಂಗ್ರಹಿಸಿದರೆ ತಮ್ಮ ನರನಾಡಿಗಳಲ್ಲಿ ವೀರರಸವನ್ನು ತುಂಗೊಳಿಸಿ ಸರ್ವರೂ ಅಹಿಂಸಾಸಮರಕ್ಕೆ ಬದ್ಧಕಂಕಣರಾದರೆ ನೀನು ಮ್ಲೇಂಛರ ಪಾಶದಿಂದ ಪಾರಾಗಿ ಆ ಸೇತು ಹಿಮಾಚಲವಾಗಿ ರಾರಾಜಿಸುವ ರಾಷ್ಟ್ರಧ್ವಜವನ್ನೇರಿ ನಿನ್ನ ವೈಭವ ಜ್ಯೋತಿಯನ್ನು ಜಗತ್ತಿಗೆಲ್ಲಾ ಬೀರತೊಡಗುವೆಯೆಂಬುದರಲ್ಲಿ ಸಂದೇಹವಿದೆಯೆಂದು ಹೇಳಲಸಾಧ್ಯವು.

ಆದುದರಿಂದ ಎಲೆ! ಭಾರತ ಬಂಧುಭಗಿನಿಯರೇ! ಇನ್ನಾದರೂ ನೀವು ಎಚ್ಚೆತ್ತು ಕಣ್ತೆರೆದು ಕಾರ್ಯತತ್ಪರರಾಗಿ ಸಿಂಹನಾದವನ್ನು ಮಾಡಿದರೆ ಭಾರತವೇ ಯಾಕೆ! ಜಗತ್ತೇ ನಿಮ್ಮ ಪಾದಾಕ್ರಾಂತವಾಗುವುದು! ವಶವಾಗುವುದು! ನಿಮಗೆ ಸುಖವಾಗುವುದು! ಮಂಗಲವಾಗುವುದು! ನಿತ್ಯಕಲ್ಯಾಣವಾಗುವುದು!

ಭಾರತಮಾತಾಕೀ ಜೈ!

ತಥಾಸ್ತು.

ಓಂ ಶಾಂತಿ ಶಾಂತಿ ಶಾಂತಿಃ

(ಇತರ ಪತ್ರಿಕೆಗಳ ಆಧಾರದಿಂದ ಬರೆದದ್ದು.)

ಆರೋಗ್ಯ ಮತ್ತು ಶಿಶುರಕ್ಷಣೆಯ ಸಪ್ತಾಹ,

— ಬೆಳ್ತಂಗಡಿ, ದ. ಕ. —

President of the Committee: Doctor M. Shesha Bhat, L. M. P.

ಸೋಮವಾರ ೧—೨—೨೬: ಮನೆ ಶುಚಿಮಾಡೋಣ. ಬೆಳಗ್ಗೆ ೮ ಗಂಟೆಗೆ ಭಜನೆಸಹಿತ ಮೆರವಣಿಗೆ. ಸಾಯಂಕಾಲ ೫ ಘಂಟೆಗೆ ಬೆಳ್ತಂಗಡಿ ಶಾಲೆಯಲ್ಲಿ "ಆರೋಗ್ಯವಾಗಿರಬೇಕಾದರೆ ಮನೆಗಳನ್ನು ಹೇಗೆ ಕಟ್ಟಿಸಬೇಕು" ಎಂಬದರ ಕುರಿತು ಡಾಕ್ಟರ್ ಶೇಷಭಟ್ಟರವರ ಉಪನ್ಯಾಸ.

ಮಂಗಳವಾರ ೨—೨—೨೬: ಊರೆಲ್ಲ ಶುಚಿಯಾಗಿರಿಸೋಣ. ಸಾಯಂಕಾಲ ೫ ಗಂಟೆಗೆ ಶ್ರೀಯುತ ಬಿ ಮಂಗೇಶರಾಯರ ಉಪನ್ಯಾಸ.

ಬುಧವಾರ ೩—೨—೨೬: ಶಿಶುಗಳ ಸ್ನಾನ. ಈ ದಿನ ಪ್ರತಿಯೊಂದೂ ಮನೆಯಲ್ಲಿಯೂ ಮಕ್ಕಳಿಗೆಲ್ಲಾ ಸ್ನಾನಮಾಡಿಸಿ, ಶುಚಿಯಾದ ಬಟ್ಟೆಗಳನ್ನು ತೊಡಿಸಬೇಕು. ಮನೆಯಲ್ಲಿ ಸ್ನಾನಕ್ಕೆ ಅನುಕೂಲತೆಗಳು ಇಲ್ಲದ ಬಡಬಗ್ಗರಿಗೋಸ್ಕರ ಬೆಳ್ತಂಗಡಿ ಹೊಳೆ ಬದಿಯಲ್ಲಿ ಬಿಸಿನೀರು, ಎಣ್ಣೆ, ಮೈ ಮತ್ತು ಬಟ್ಟೆ ತೊಳೆಯಲಿಕ್ಕೆ ಸಾಬೂನು, ಮೈಯುಜ್ಜಿಕೊಳ್ಳಲಿಕ್ಕೆ ಮಡಿವಸ್ತ್ರಗಳು ಕೂಡ ಒದಗಿಸಲ್ಪಡುವುದು. ಈ ದಿನ ಸ್ನಾನಮಾಡದೆ ಒಂದೇ ಒಂದು ಮಗುವಾದರೂ ಬಾಕಿಯಾಗಕೂಡದಂತೆ ಎಲ್ಲರೂ ಪ್ರಯತ್ನಿಸಬೇಕಾಗಿದೆ. ಸಾಯಂಕಾಲ ೫ ಗಂಟೆಗೆ ಸರ್ವ ಜಾತಿಯ ಎರಡು ವರುಷದ ಮತ್ತು ಅದಕ್ಕಿಂತ ಚಿಕ್ಕಪ್ರಾಯದ ಮಕ್ಕಳನ್ನೆಲ್ಲಾ ಪ್ರದರ್ಶನಕ್ಕೆ ತರಬೇಕು. ನಿರ್ಮಲವಾಗಿಯೂ, ಪುಷ್ಟಿಯಾಗಿಯೂ, ಆರೋಗ್ಯದಿಂದಲೂ ಇರುವ ಶಿಶುಗಳಲ್ಲಿ ಅತಿ ಉತ್ತಮವಾಗಿ ಕಂಡ ಮಕ್ಕಳಿಗೆ ಯೋಗ್ಯ ಬಹುಮಾನಗಳು ಹಂಚಲಾಗುವವು.

ಶಿಶುಪಾಲನೆಯ ಕುರಿತಾಗಿ ಉಪನ್ಯಾಸವೂ—"Malana"ದ ಕುರಿತು ಮಾಯಾಲಾಂದರ ಪ್ರದರ್ಶನವೂ ಇರುವವು.

ಗುರುವಾರ ೪—೨—೨೬: ಸರ್ವರಿಗೂ ಸ್ನಾನದ ದಿನ. ಸಾಯಂಕಾಲ ೫ ಗಂಟೆಗೆ ಶ್ರೀಯುತ K. S. ಪಕ್ಕಳರವರ, ಉಪನ್ಯಾಸ.

ಶುಕ್ರವಾರ ೫—೨—೨೬: ಪ್ರಾರ್ಥನೆಯ ದಿನ. ಈ ದಿನ ಬೆಳಗ್ಗೆ ೭ ಗಂಟೆಗೆ ಬೆಳ್ತಂಗಡಿ (ಉಪ್ಪಾರ) ದೇವಸ್ಥಾನದಲ್ಲಿ ಮತ್ತು ಇಗರ್ಜಿಯಲ್ಲಿ ಆರಾಧನೆ ಇರುವುದು. ಸಾಯಂಕಾಲ ೫ ಗಂಟೆಗೆ Messers ಜೇಮ್ಸ್ ಅಂಡ್ರ್ಯೂಸ್, ವೆಂಕಟ್ರಾಯ ಭಟ್, ಸಾಂತಪ್ಪ ಶೆಟ್ಟರು, ಮತ್ತು Rev. Father ಫೆರ್ನಾಂಡೀಸ್ ಇವರುಗಳಿಂದ ಉಪನ್ಯಾಸಗಳು ಕೊಡಲಾಗುವವು.

ಶನಿವಾರ ಬೆಳಗ್ಗೆ ೮ ಗಂಟೆಗೆ Badminton ಆಟ, ಸಾಯಂಕಾಲ ೫ ಗಂಟೆಗೆ ಶಾಲಾ ಮಕ್ಕಳ ನಾಟಕ.

ಆದಿತ್ಯವಾರ ಮುಕ್ತಾಯ ದಿನ. ೨ರಿಂದ ೫ ಗಂಟೆಯ ವರೆಗೆ ಶಾಲಾ ಮಕ್ಕಳ ಆಟ. ಗೆದ್ದವರಿಗೆ ಮಾ। ರಾ। C. S. ಗಣಪತಿಯವರು ಇನಾಮುಗಳನ್ನು ಹಂಚುವರು. ೭ ಗಂಟೆಗೆ ಭಜನೆಸಹಿತ ಮೆರವಣಿಗೆ.

Beltangady, 25—1—1926.

H. NARAYANA,
Secretary,
Health & Baby week Committee.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅನ್ಮೃತಾಕುಂಕುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀ(?) ಮಿತ್ರಣಾ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್ಫ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. Authorised and fully paid up Capital Rs. 300,000—0—0 Reserve and other sinking Funds „ 259,000—0—0	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು. ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0 ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd., Mangalore, 9th Feb. 1925.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

Free! Free!! Free!!
ಪ್ರಸಿದ್ಧವಾದ
"ಕಾಮಶಾಸ್ತ್ರ"
ಈಗಲೆ ತಯಾರಾಗಿದೆ.
ಜರೂರಾಗಿ ಬರಿಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದುನೋಡಿರಿ! ತಿಂದುನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ತುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ಟೀಟ್‌ವಿಟ್ ಮಾರ್ಟ್.

ಮಣೋಲ್ಮಾ ಸಿ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | ### ವಜ್ರಾಂಗ-ಬಿಂದು | ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನಜನ್ಯ ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುಶಂಕೆಗಿಂತ ಮೊದಲು ಅಥವಾ ಕಡೆಗೆ ಸ್ವಾಭಾವಿಕವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ತಿರುಗು ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇವರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು. ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. [illegible] (ಜಿಲ್ಲಾ [illegible])

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು:
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರುಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

—ರಥೋತ್ಸವ, ವಿವಾಹ ಉಪನಯನಗಳ ಸಮಯ—
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಚೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ವಠಾರಕ್ಕೆ ಸಮೀಪವಿರುವ ಮಳಿಗೆ,) ಮಂಗಳೂರು.

ಈ ದೇಶದ ಪ್ರಖ್ಯಾತವಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ಕಂಬಾಪೂರು, ಕುಂಭಕೋಣ, ಆರ್ನಿ, ಪಾಡಿಚೇರಿ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ಮುಸ್ಸಟಾ, ಜರಿಕಾ, ವೇಷ್ಟಿ, ರೇಶ್ಮೆ ಸೀರೆಗಳು, ಅರಳಪೇಟೆ ಸೀರೆಗಳು, ಜೋರ್ಜೆಟ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮುಂಡಗಳು, ನಿತ್ಯ ಉಪಯೋಗದ ಸೀರೆಗಳು ಬನಿಯನ್, ಕರ್ನಾಟಕ [illegible] ಇತರ [illegible] ಕೋಟಿಂಗ್ ಶರ್ಟಿಂಗ್.

ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

[illegible]

ಎಲ್ಲಾ ಸಂಗ್ರಹವನ್ನು, ನಮ್ಮ [illegible] ಸಂಗ್ರಹಿಸಿ ಇಡಲಾಗಿದೆ.

[illegible] ರೂ. 50ರಿಂದ 250ರವರೆಗೆ [illegible] 10%, ರೂ. 250 ರಿಂದ 1000ಕ್ಕೆ 12½% ಈ ರೀತಿ ಡಿಸ್ಕೌಂಟು ಕೊಡಲಾಗುವುದು.

ಆಯುರ್ವೇದದ ಶಾಸ್ತ್ರಿ ಅಪ್ಪಾವಧಾನಿ,

ರಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನರಾದವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಬಿಡುವ ಹಿಂದೋ ಮುಂದೋ ಹೊರಬೀಳುವ ಧಾತುಪತನವಾದ್ದಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನೂ ದೂರ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು —ತೆಗೆದುಕೊಳ್ಳಿರಿ.—

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನು ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಅವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಅವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.	ಡಿ. ಮುನ್ನಾಲಾಲ್, ರಿಜ್ಜ. ನೇಟಿವ್ ಡಾಕ್ಟರ್. ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೫ನೇ ಶುಕ್ರವಾರ ಫೆಬ್ರುವರಿ ೧೯೨೬. ಸಂಚಿಕೆ ೬.

The Canara Banking Corporation,
UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. Branch: COONDAPOOR.
ಹೆಡ್ ಆಫೀಸು: ಉಡುಪಿ. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ವಸೂಲಾಗಿದ್ದ ಮೂಲಧನ	ರೂ. 1,73,185—9—11.
ಅಪದ್ಧನ ವಗೈರೆ ಎತ್ತಗಳು	ರೂ. 64,700—0—0.
ಸಾ. ಸೇ. 6ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	ರೂ. 25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಏವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಾಗಿದ್ದ ಮೂಲಧನ 1,73,185—9—11, ಅಪದ್ಧನ ವ ಇತರ ಎತ್ತಗಳು 64,700—0—0, ಠೇವಣಾತಿಗಳು 5,10,077-10-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4371—0—0, ಏವೇಜಿನ ಮೇಲಣ (ಈ ವರೆಗಿನ ಬಡ್ಡಿ ಕೂಡ) ಇತರ ಬಾಬುಗಳು 93,340—10—5, ಜುಮ್ಲಾ ರೂ. 8,45,674—14—7

ಆಸ್ತಿ ವ ಸೊತ್ತುಗಳು.

ಹಿತ್ತಿಲು ಕಟ್ಟೋಣ ಕಬ್ಬಿಣದ ಟ್ರಂಕುಗಳು ವಗೈರೆ 4134—4—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496—6—2, ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡ) 41,741—14—2, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ನಗದು 26,131—6—3, ಜುಮ್ಲಾ ರೂಪಾಯಿ 8,45,674—14—7.

ನಿರಖು ಠೇವಣಾತಿಗಳನ್ನು ಕಾಲಕ್ರಮತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮೊಸಮ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತುಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾವುಕಾರಿ ಹುಂಡಿಗಳನ್ನೂ ವಜ್ಜಾಯಿಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

N. Anand Rao,
Secretary.

ಮೂರು ದಿವಸಗಳಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತಕ್ಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೋಹವಿಕಾರವಿದ್ದವರಿಗೂ, ನಿದ್ರೆಯಿಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧ.

1 ಸೇರು ಪಾಕ್ಕೆಟ್ಟಿಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1-9-0.
ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ವಿಳಾಸ:— ದೇವಣ್ಣ ನಾರಾಯಣ ಶೇಟ್, [illegible], [illegible], (ದ. ಕ.)

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುವಾಸಿ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುಧಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್. ಮುಂಬಯಿ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು. | 109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುವಾಸಿ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— **SWAN HOUSE,**
P. B. 508, P. T. MADRAS.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾ ದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಕನ್ನಡಿಗರೇ! **ವಸಂತ.** ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . . ವಸಂತ
ಸಮಾಜಸುಧಾರಕನೆಂದರೆ . . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ಣಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಫುಟ ಸ್ಕಾಜಿನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

11 ಮಣಿಗಳಿದ್ದು ಬ್ರಿಜ್ ಮ್ಯೂವ್‌ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ಸಕ್ಕೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
184 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕೂರ್ ಆಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೩.
ಬಾಟ್ಲಿವಾಲರ ಡೈರಿಯಾ ಮಿಕ್ಸ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ್ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ಕಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರ ವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಘೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2—8—0.
„ ಸ್ಥಳೀಯರಿಗೆ ... „ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪ್ರತಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1¼ ಮಳ ಅಗಲ ರೂ. 1¼ ರಿಂದ 5 ವರೆಗೆ, 6 ಮಳ ಉದ್ದ 1¼ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3¼ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಸಿರ್ ರೇಷ್ಮೆ ಮಡಿಗಳು ಶಾರ್ಮಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ ಬಾಣಲಿಂಗ, ಘಾಂಟೆ, ತಾಳ, ಪಶ್ಮೀರ್ ದಾಸಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಕಾಂಗುರಗಳು, ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಶಾಲಿವಾಹನಶಕೆ ೧೮೪೭ನೆಯ ಕ್ರೋಧನ ಸಂವತ್ಸರದ ಮಾಘ ಬ ೮ ಶನಿವಾರದಿಂದ ಕ್ರೋಧನ ಸಂವತ್ಸರದ ಮಾಘ ಬ ೧೫ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮಕರ ಪುಯಿಂಕೆಲ್.)

ತಾರೀಕು	ವಾರ	ತಿ.	ಘಳಿಗೆ.	ನಕ್ಷತ್ರ	ಘಳಿಗೆ.	ಯೋಗ	ಸೂರ್ಯ ಉ.	ಸೂರ್ಯ ಅಸ್ತ.
6	ಶನಿ	೮	೧೪.೪೮	ವಿಶಾಖಾ	೫೯.೫೯	೨೪	6.58	6.32
7	ರವಿ	೯	೧೨.೩೨	ಅನುರಾಧಾ	೨೮.೩೨	೨೫	6 58	6.32
8	ಸೋಮ	೧೦	೯. ೨	ಜ್ಯೇಷ್ಠಾ	೨೬.೫೯	೨೬	6.58	6.32
9	ಕುಜ	೧೧	೫. ೧	ಮೂಲಾ	೨೩.೪೬	೨೭	6.57	6.33
10	ಬುಧ	೧೨	೫೪.೩೨	ಪೂ. ಷಾ.	೨೦.೧೬	೨೮	6 57	6.33
11	ಗುರು	೧೪	೪೮.೪೬	ಉ. ಷಾ.	೧೬.೩೨	೨೯	6 57	6.33
12	ಶುಕ್ರ	●	೪೨.೫೯	ಸ್ವಾತಿ	೧೨.೩೧	೩೦	6 56	6.34

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚು ಕಾವು	Minimum ಅಲ್ಪಕಾವು	Rainfall. ಮಳೆ ಇಂದಿನ ಮಳೆ	ಜುಮಲಾ ಮಳೆ.
29	96—2	77—8	—	—
30	93—5	76—3	0—01	—
31	91—7	76—2	—	—
1	92—0	78—6	—	—
2	90—2	73—6	—	—
3	90—7	73—3	—	—
4	88—8	73—3	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ	8— 2	8—10
ಹೊಸ ಗುಡ್ಡು ...	7—10	8— 4
ಹೊಸ ರಾಶಿ ...	7— 0	7—12
ಅವ್ವಲ್ ಬೆಳ್ತಿಗೆ ...	8— 0	9— 0
ರಂಗೂನು ಬೆಳ್ತಿಗೆ ಗೋಣಿ ೧ ...	13— 0	14— 0
ಗೋಧಿ ಗೋಣಿ ೧ಕ್ಕೆ ...	18— 0	19— 8
ಹುರುಳಿಗೋಣಿ ೧ಕ್ಕೆ ...	8—12	9— 8
ಉದ್ದಿನಗೋಣಿ ೧ಕ್ಕೆ ...	14— 8	15— 0
ಕಡಲೆಗೋಣಿ ೧ಕ್ಕೆ ...	14— 8	15— 0
ಕೊಡಂಬೇಳೆ ಗೋಣಿ ೧ಕ್ಕೆ ...	16— 8	22— 0
ಉದ್ದು ಗೋಣಿ ೧ಕ್ಕೆ ...	16— 0	—
ಹೆಸರುಗೋಣಿ ೧ಕ್ಕೆ ...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ ...	60— 0	62— 8
ಉಪ್ಪು ಗೋಣಿ ೧ಕ್ಕೆ ...	4— 2	4— 8
ಕೊಬ್ರಿ ಖಂಡಿ ೧ಕ್ಕೆ ...	110— 0	120— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	35— 0	36— 0
ಎಳ್ಳಿಂಡಿ ಖಂಡಿ ೧ಕ್ಕೆ ...	40— 0	47— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	8—	—
ಎಳ್ಳೆಣ್ಣೆ ಮುಡಿ ೧ಕ್ಕೆ ...	8— 0	11— 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-8-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4—12	—
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	9— 4	—
ಸಾಸಿವೆ ಮುಡಿ ೧ಕ್ಕೆ ...	9— 8	—
ಕೊತ್ತಂಬರಿ ಮುಡಿ ೧ಕ್ಕೆ ...	3— 8	4— 4
ಕಾಫಿ ಖಂಡಿ ೧ಕ್ಕೆ ...	375— 0	383— 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	275— 0	300— 0
ಹೊಸ ಅಡಿಕೆ ಖಂಡಿ ೧ಕ್ಕೆ ...	180— 0	225— 0
ಕಾಳುಮೆಣಸು ಖಂಡಿ ೧ಕ್ಕೆ ...	300— 0	400—
ಮೂಲಕ್ಕೆ ಮುಡಿ ೧ಕ್ಕೆ ...	45— 0	—
ಗೇರುಬೀಜ ಮುಡಿ ೧ಕ್ಕೆ ...	4— 0	—
ಅಕ್ಕಿಹಿಟ್ಟು ಖಂಡಿ ೧ಕ್ಕೆ ...	45— 0	65— 0
ತಾಂಬ್ರ ತಗಡು ಮುಡಿ ೧ಕ್ಕೆ ...	16— 4	16—12
ತಾಮ್ರ ಪಾತ್ರೆಗಳು ಮುಡಿ ೧ಕ್ಕೆ ...	21— 0	—
ಚೀನಿ ಬೆಲ್ಲ ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮುಡಿ ೧ಕ್ಕೆ ...	16— 8	
ಹವನು	13— 6	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

PROPRIETOR RAJVAIDYA ... NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರಿವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲ 1ಕ್ಕೆ ರೂ. 3—2—0.
„ 2. „ „ ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೆಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸು, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ತ್ವರೆಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ
ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ
ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.
ಎಮ್, ಗಣಪತಿರಾವ್ ಐಗಳ್—ಗ್ರಂಥಕರ್ತರು.
ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—
ಶಾರದಾ ಛಾಪಖಾನೆ,
ಮಂಗಳೂರು.

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ಮತ್ಸ್ಯ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈರಾವಣನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುವರಾ ರಾಮನ ಕಥೆ ... ...
(8) ಕೃಷ್ಣಬಾಲಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣ ... ...
(17) ಶ್ರೀ ಕೃಷ್ಣರಿಂದಾಶ್ವಮೇಧ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶಾದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷ್ಮೀಗೃಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಜ ಕಥೆ ... ...
(26) „ ಗೋವಿನ ಚರಿತ್ರೆ ... ...
(27) „ ಮುಕ್ಕಾಸುರ ಕಥೆ ... ...
(28) „ ಸುವಂಶ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

ಶಾರದಾ ಛಾಪಖಾನೆ, ಮಂಗಳೂರು.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,
ಮಂಗಳೂರು.

ಜ್ಯಾಹೀರಾತು.

ಪುತ್ತೂರಲ್ಲಿ ವ್ಯಾಪಾರಮಾಡುವ ಬೆಳ್ಯಾರೆ ನರಸಿಂಹ ಮಲ್ಯನು ಈ ಮೂಲಕ ಸರ್ವಜನರಿಗೆ ತಿಳಿಸುವುದೇನೆಂದರೆ:—

ನನ್ನ ಅಳಿಯ ಎಲ್ಲೂರು ರಾಮಕೃಷ್ಣ ಕಿಣಿಯು ನನ್ನ ಅಂಗಡಿಯಲ್ಲಿ ತನ್ನ ಚಿಕ್ಕಂದಿನಿಂದ ಇದ್ದು ಕಳೆದ ತಾರೀಕು 28—10—25ರಲ್ಲಿ ನಮ್ಮೊಳಗೆ ರಿಜಿಸ್ತ್ರಿ ನಿಶಿ ರಶೀದಿಯಾಗಿ ಈಗ ಆತನು ಪ್ರತ್ಯೇಕ ಅಂಗಡಿಯನ್ನು ಮಾಡಿ ವ್ಯಾಪಾರ ನಡಿಸುತ್ತಿದ್ದಾನೆ. ಸದರಿ ಅಂಗಡಿಯಲ್ಲಿ ನನಗೇನು ಹಕ್ಕು ಸ್ವತಂತ್ರ ಇಲ್ಲವೆಂಬುದನ್ನು ಈ ಮೂಲಕ ತಿಳಿಸೋಣಾಗುತ್ತದೆ.

ಬಿ. ನರಸಿಂಹ ಮಲ್ಯ,
ಪುತ್ತೂರು.

ನೋಟೀಸು.

ದಕ್ಷಿಣಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ

O P. 5/1926.

ನರಸಿಂಹ ಭಟ್ಟ . . . ಅರ್ಜಿದಾರ.

ಮತ್ತು

1. ನಾಗಮ್ಮ
2. ಕೃಷ್ಣ ಭಟ್ಟ
3. ಶಂಕರನಾರ್‍ಯಾಣ ಭಟ್ಟ
4. ರಾಮಣ್ಣ ಭಟ್ಟ
5. ವಿಶ್ವನಾಥ ಭಟ್ಟ
6. ಕೃಷ್ಣವೇಣಿ
7. ರಾಮಣ್ಣ ತಿಬ್ರುರಾಯ

} ರಿಸ್ಪೊಂಡೆಂಟರು.

ಸದರಿ ಮೇಲಿನ ಅರ್ಜಿಯಲ್ಲಿ ಅರ್ಜಿದಾರನು, 1ನೇ ರಿಸ್ಪೊಂಡೆಂಟಳನ್ನು ಹುಚ್ಚಳನ್ನಾಗಿ ಮಾಡಿ ಅವಳ ದೇಹದ ಮತ್ತು ಆಸ್ತಿಯ ಗಾರ್ಡಿಯಾನನಾಗಿ ನೇಮಕವಾಡಬೇಕೆಂತ ವಗೈರೆ ಕಾಣಿಸಿ ಅರ್ಜಿಕೊಟ್ಟಿರುತ್ತಾನೆ. ಸದರಿ ಅರ್ಜಿಗೆ ಆಕ್ಷೇಪವಿದ್ದವರು ಈ ಕೋರ್ಟಿಗೆ ತಾ. 13—2—1926ರ ಒಳಗೆ ತಿಳಿಸತಕ್ಕದ್ದು.

Mangalore, 25—1—1926. U. C. S. BHATT, *Vakil for Petitioner.*

The Canara Bank Ltd., Mangalore.

ದಿ ಕೆನರಾ ಬ್ಯಾಂಕು, ಲಿಮಿಟೆಡ್, ಮಂಗಳೂರು.

NOTICE.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲೀ ಬಡ್ಡಿಯನ್ನಾಗಲೀ ಅವರಿಗೆ ರಿಜಿಸ್ತ್ರಿ ನೋಟೀಸು ಮೂಲಕ ತಿಳಿಸಿದಾಗ್ಯೂ ಕೊಡದೆ ಇರುವದರಿಂದ ಇನ್ನಾದರೂ ಸದರಿಯವರು ಅವರಿಂದ ಬಹಾ ಅಸಲುಬಡ್ಡಿ ಮೊಬಲಗುಗಳನ್ನು ಇದೇ ೧೯೨೬ನೇ ಇಸವಿ ಫೆಬ್ರುವರಿ ತಾ. ೧೮ರ ಒಳಗೆ ತಂದು ಕೊಡುವರೆ ತಪ್ಪಿದ್ದಲ್ಲಿ ಅವರ ಬಾಬತು ಅಡವಿಟ್ಟ ಆಭರಣಗಳನ್ನು ತಾ. ೨೫—೨—೧೯೨೬ನೇ ಗುರುವಾರ ಮಧ್ಯಾಹ್ನ ೧೨ ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

ಹೆಸರು.	ಅಡವಿಟ್ಟ ತಾರೀಕು.	ಅಸಲು ಐವೇಜು ಬಾಕಿ.	ವ್ಯಾಜೆ ವರೇಗಿನ ಬಡ್ಡಿ, ಖರ್ಚು ಕೂಡಾ.
ಮಂಜಣ್ಣ ಭಂಡಾರಿ	೨೭-೨-'೨೨	೩.೫೪	೧೩- ೧- ೬
ಮಮ್ಮದೆ ಬ್ಯಾರಿ	೧೩-೬-'೨೪	೩.೫೦	೨೨- ೩- ೮
ಬಿ. ಮೋನಪ್ಪ ಶೆಟ್ಟಿ	೧೨-೧೨-'೨೩	೪೫೦	೪೧-೧೪-೧೦
ಡಿ.	೨೦- ೮-'೨೩	೪೨೪	೧೦- ೮- ೭

ಮತ್ತು ಈ ನೋಟೀಸು ಖರ್ಚು ಸಹಾ.

Canara Bank, Ltd., Mangalore, 4th Feb 1926. K. Venkat Rau, *Secretary.*

ವಿವಿಧ ವಿಷಯಗಳು.

ಹತ್ತಿಯ ಕೈಗಾರಿಕೆಯೂ, ಭೂಲೋಕದ ಅವಸ್ಥೆಯೂ.

ಮನುಷ್ಯನ ಉಡಿಗೆತೊಡಿಗೆಗಳಿಗೆ ಉಪಯೋಗವಾಗುವ ವಸ್ತ್ರಗಳಲ್ಲಿ [illegible] ದಲ್ಲಿಯೇ ಕಂಡುಹಿಡಿದಿರುವರು. ಆದುದರಿಂದ ಹತ್ತಿಗಾಗಿ ಅನೇಕ ದೇಶಗಳು ಒಂದರಮೇಲೊಂದು ಆಧರಿಸಿಕೊಂಡಿದ್ದವು. ಇಂಗ್ಲಂಡ ದೇಶದಲ್ಲಿ ವಸ್ತ್ರ ತಯಾರಿಸುವ ಅನೇಕ ತರದ ಯಂತ್ರಸಾಧನೆಗಳನ್ನು ಕಂಡುಹಿಡಿದ ಮೇಲೆ ಹತ್ತಿಯ ಕೈಗಾರಿಕೆಯಲ್ಲಿ ಮಾತ್ರವಲ್ಲ, ಎಲ್ಲಾ ತರದ ಉಡಿಗೆತೊಡಿಗೆಗೆ ಬೇಕಾದ ವಸ್ತ್ರಗಳ ಕೈಗಾರಿಕೆಯಲ್ಲಿಯೂ ವಿಶೇಷ ತರದ ಹೊಸ ಬದಲಾವಣೆಗಳು ಉಂಟಾದವು. ೧೭೮೮ರಲ್ಲಿ ಈಸ್ಟ ಇಂಡಿಯಾ ಕಂಪೆನಿಯವರು ಇಂಡಿಯದಲ್ಲಿ ಒಳ್ಳೆ ಜಾತಿಯ ಹತ್ತಿಯನ್ನು ಹೆಚ್ಚೆಚ್ಚಾಗಿ ಬೆಳಸಲು ಸಾಧನೆಮಾಡತೊಡಗಿದರು. ಅಷ್ಟರ ವರೆಗೆ ಈ ಕಂಪೆನಿಯವರು ಹಿಂದುಸ್ಥಾನದ ವಸ್ತ್ರವನ್ನೇ ಹೆಚ್ಚಾಗಿ ಇಂಗ್ಲಂಡಿಗೆ ಕಳುಹಿಸುತ್ತಿದ್ದರು. ಆ ವರುಷದ ನಂತರ ಲಂಡನಲ್ಲಿರುವ ಈ ಕಂಪೆನಿಯ ಡ್ಯಾರೆಕ್ಟರರ ಅಪ್ಪಣೆ ಪ್ರಕಾರ ಇಂಡಿಯದಿಂದ ಹತ್ತಿಯನ್ನು ಇಂಗ್ಲಂಡಿಗೆ ಕಳುಹಿಸಲಾರಂಭಿಸಿದರು. ೧೮೧೮ರಲ್ಲಿ ೬ ಮಿಲಿಯರಾತಲು ಹತ್ತಿಯನ್ನು ಇಂಡಿಯದಿಂದ ಇಂಗ್ಲಂಡಿಗೆ ಕಳುಹಿಸಿದರು. ೧೮೬೧ರಲ್ಲಿ ೩೬೯ ಮಿಲಿಯ ರಾತಲು ಹತ್ತಿಯನ್ನು ಕಳುಹಿಸಿದರು. ಈ ಹತ್ತಿಯು ಬಹಳ ಉತ್ತಮ ತರದ ಹತ್ತಿಯಾಗಿತ್ತು. ಈಗ ಈ ತರದ ಹತ್ತಿಯು ಇಂಡಿಯದಲ್ಲಿ ಬೆಳಸುವುದನ್ನು ಕಡಿಮೆಮಾಡಿರುತ್ತಾರೆ. ಪುನಹ ಅದೇ ತರದ ಹತ್ತಿಯನ್ನು ಬೆಳಸಬೇಕೆಂದು ಸಾಧನೆಯು ನಡಿಯುತ್ತದೆ. ೧೮೬೧ ಅಮೇರಿಕದಲ್ಲಿ ಹತ್ತಿಯು ಅಷ್ಟು ಹೆಚ್ಚಾಗಿ ಬೆಳೆಯುತ್ತಿರಲಿಲ್ಲ. ಹದ್ಗೊಂಬತ್ತನೇ ಶತಮಾನದ ಆದಿಯಲ್ಲಿ ಅಮೇರಿಕದಿಂದ ವರುಷಕ್ಕೆ ೩ ಸಾವಿರ ಬೇಲುಗಳನ್ನು ಮಾತ್ರವೇ ಇಂಗ್ಲಡಿಗೆ ಕಳುಹಿಸುತ್ತಿದ್ದರು. ಆದರೆ ಹತ್ತಿಯನ್ನು ಶುದ್ಧಮಾಡುವ ಯಂತ್ರವನ್ನು ಎಲ್. ವಿಟನಿ ಎಂಬವರು ಕಂಡುಕೊಂಡ ಮೇಲೂ ಇತರರು ನೂಲು ಮಾಡುವ ಮತ್ತು ವಸ್ತ್ರಮಾಡುವ ಯಂತ್ರಗಳನ್ನು ಹುಡುಕಿ ತೆಗೆದ ಮೇಲೆ ಹತ್ತಿಯ ಕೈಗಾರಿಕೆಯು ಭೂಲೋಕದಲ್ಲಿ ಅತೀ ಉನ್ನತ ಸ್ಥಿತಿಯನ್ನು ಹೊಂದಿತು.

ಹತ್ತಿ ಕೈಗಾರಿಕೆಯ ಮೂಲಸ್ಥಾನ ಇಂಡಿಯಾದೇಶ.

ಹೇಳಲಿಕ್ಕೆ ಸಾಧ್ಯವಿಲ್ಲದಷ್ಟು ಪುರಾತನ ಕಾಲದಿಂದ ಹತ್ತಿಯ ಕೈಗಾರಿಕೆಯು ಉನ್ನತ ಸ್ಥಿತಿಯಲ್ಲಿತ್ತು. ಆ ಸಮಯದಲ್ಲಿ ಹತ್ತಿಯಿಂದ ಯಾವ ರೀತಿಯಲ್ಲಿ ಸಪೂರವಾದ ನೂಲನ್ನು ತಯಾರಿಸಿ ವಸ್ತ್ರಮಾಡುತ್ತಾರೆಂಬ ಸಂಗತಿಯು ಭೂಲೋಕದ ಯಾವ ಜನಾಂಗಕ್ಕೂ ತಿಳಿದಿರಲಿಲ್ಲ. ಆದರೆ ಇಂಗ್ಲಂಡ ದೇಶದವರು ನೂಲುಮಾಡುವ ಯಂತ್ರಸಾಧನೆಗಳನ್ನು ಕಂಡುಕೊಂಡಮೇಲೆ ಇಂಡಿಯದಲ್ಲಿ ಕೈರಾಟೆಯಿಂದ ನೂಲುಮಾಡುವುದು ಕಡಿಮೆಯಾಯಿತು. ಆದುದರಿಂದ ಹತ್ತಿಯಿಂದ ನೂಲು ತಯಾರಿಸಿ ಮಗ್ಗದಲ್ಲಿ ವಸ್ತ್ರಮಾಡಿದ ಎರಡನೇ ದೇಶವು ಇಂಗ್ಲೆಂಡ ಎಂದೇ ಹೇಳಬಹುದು. ಮೊದಲು ಮೊದಲು ಹತ್ತಿಯ ಕೈಗಾರಿಕೆಯು ಇಂಗ್ಲೆಂಡಿನಲ್ಲಿ ಅಷ್ಟೊಂದು ಅಭಿವೃದ್ಧಿಯನ್ನು ಪಡಿಯಲಿಲ್ಲ. ಆ ಸಮಯದಲ್ಲಿ ನೂಲುಮಾಡಿ ವಸ್ತ್ರ ತಯಾರಿಸುವ ಈಗಿನ ನಮೂನೆಯ ದೊಡ್ಡ ದೊಡ್ಡ ಗಿರಿಣಿಗಳು ಇರಲಿಲ್ಲ. ಆಗ ಇದು ಮನೆಯ ಕೈಗಾರಿಕೆಯಾಗಿತ್ತು. ೧೭೬೦ರ ವರೆಗೆ ಇಂಡಿಯದಲ್ಲಿರುವ ನಮೂನೆಯ ಕೈರಾಟೆಗಳನ್ನೂ, ಮಗ್ಗಗಳನ್ನೂ ಉಪಯೋಗಿಸುತ್ತಿದ್ದರು. ೧೭೩೩ರಲ್ಲಿ ಜೊನ್ ಕೆ. ಎಂಬವರು ಕೈಯಿಂದ ನೂಲಿನ ದೋಣಿಯನ್ನು ಓಡಿಸುವುದರ ಬದಲಾಗಿ ತನ್ನಷ್ಟಕ್ಕೆ ದೋಣಿಯು ಓಡುವ ರೀತಿಯನ್ನು ಕಂಡುಕೊಂಡಮೇಲೆ ಒಬ್ಬನು ಒಂದು ದಿವಸದಲ್ಲಿ ಕೈಯಿಂದ ಓಡಿಸಿ ಮಾಡುವ ವಸ್ತ್ರದ ಎರಡುಪಾಲಷ್ಟು ವಸ್ತ್ರವು ಮಾಡಲು ಸಾಧ್ಯವಾಯಿತು. ಅನಂತರ ಜೇಮ್ಸ ಹರಗ್ರೀವ್ ಎಂಬವರು ನೂಲು ಮಾಡುವ ಯಂತ್ರವನ್ನು ತಯಾರಿಸಿದರು. ಅನಂತರ ಸ್ಪರ್ಧೆಯಿಂದ ಲಂಕಶೇಯರಿನಲ್ಲಿ ಆರ್ಕರ್‍ರ್ಯಟ್ ಮೊದಲಾದವರು ಹೊಸ ಹೊಸ ಯಂತ್ರಗಳನ್ನು ತಯಾರಿಸಿದರು. ಸಾಮುವೇಲ್ ಕ್ರೋಮ್‌ಟನ್ ಎಂಬವರು ನೂತನವಾದ ಮ್ಯೂಲ್ ಎಂಬ ಯಂತ್ರವನ್ನು ಹುಡುಕಿತೆಗೆದರು.

ಈ ಸಮಯದಲ್ಲಿ ಹತ್ತಿಯ ಕಾರ್ಖಾನೆಗಳು ಉಂಟಾದವು. ಈ ಯಂತ್ರಸಾಧನೆಗಳನ್ನು ನಡಿಸಲಿಕ್ಕೆ ನೀರನ್ನು ಉಪಯೋಗಿಸದೆ ಇದ್ದರೆ ಈ ಕೈಗಾರಿಕೆಯು ಬಹಳ ಹಿಂದೆ ಬೀಳುತ್ತಿತ್ತು. ೧೭೮೫ರಲ್ಲಿ ಜೇಮ್ಸ ವೆಟನು ಉಗಿ ಯಂತ್ರವನ್ನು ಹುಡುಕಿ ತೆಗೆದ ಮೇಲೆ ಈ ಕೈಗಾರಿಕೆಯು ಬಹಳ ಉನ್ನತಿಯನ್ನು ಹೊಂದಿತು. ಇಂಗ್ಲೆಂಡಿನಲ್ಲಿ ಕಬ್ಬಿಣದ ಮತ್ತು ಕಲ್ಲಿದ್ದಲು ಹೆಚ್ಚಾಗಿ ಸಿಕ್ಕುತ್ತಿದ್ದುದರಿಂದ ಹೊಸ ರೀತಿಯ ಯಂತ್ರಗಳನ್ನು ತಯಾರಿಸಲು ಸಾಧ್ಯವಾಯಿತು. ಈ ಸಮಯದಲ್ಲಿ ಇಂಗ್ಲಡಿನ ರಾಜ್ಯಭಾರದಲ್ಲಿಯೂ ವಿಶೇಷ ತರದ ಚಳವಳಗಳು ಇಲ್ಲದೆ ಇದ್ದುದರಿಂದ ಈ ಕೈಗಾರಿಕೆಗೆ ತೊಡಕುಗಳುಂಟಾಗಲಿಲ್ಲ. ಯುರೋಪ ಖಂಡದಲ್ಲಿ ಶುರುವಾದ ಯುದ್ಧಗಳು ೧೮೧೫ರ ವರೆಗೆ ಮುಂದರಿಯುತ್ತಲೇ ಇದ್ದುದರಿಂದ ಅಲ್ಲಿಯ ಕೈಗಾರಿಕೆಗಳು ಬಿದ್ದುಹೋದವು. ಇಂಗ್ಲಂಡ ದೇಶವು ಉನ್ನತಿಯನ್ನು ಹೊಂದಿತು. ೧೭೭೦ರಿಂದ ೧೮೦೦ರ ವರೆಗೆ ಈ ಕೈಗಾರಿಕೆಯಲ್ಲಿ ವಿಶೇಷ ತರ ಬದಲಾವಣೆಗಳು ಉಂಟಾದವು. ಯಂತ್ರಸಾಧನೆಗಳು ಹೆಚ್ಚಾಗುತ್ತಾ ಬಂದು ಕಾರ್ಖಾನೆಗಳ ಸಂಖ್ಯೆಯು ಹೆಚ್ಚುತ್ತಾ ಬಂತು. ಆಗ ಕೂಲಿಯಾಳುಗಳ ಸಂಖ್ಯೆಯು ಹೆಚ್ಚಾಗುತ್ತಾ ಬಂತು. ಲೀವರ್‌ಪೂಲ್ ಮತ್ತು ಮಂಚೆಸ್ಟರ ಇವೆರಡು ಹತ್ತಿಕೈಗಾರಿಕೆಯ ಮಧ್ಯಸ್ಥಳಗಳಾದವು. ಎಮ್. ಟೊಲೊಕಿ ಎಂಬವರು (Principles of political Economy) ಎಂಬ ಪುಸ್ತಕದಲ್ಲಿ ಹೀಗೆ ಬರೆದಿರುತ್ತಾರೆ. "ಫ್ರಾನ್ಸ ದೇಶದಲ್ಲಿ ಅನೇಕ ತರದ ಉತ್ಪಾತಗಳು ಉಂಟಾಗಿ ಇಡಿ ಯುರೋಪ ಖಂಡಕ್ಕೂ ನೆಪೋಲಿಯನ್ ಬೊನೆಪಾರ್ಟನೆಂಬವನಿಂದ ಕಷ್ಟಗಳು ಬಂದೊದಗಿದಾಗ್ಯೂ, ಹತ್ತಿಯ ಕೈಗಾರಿಕೆಯೊಂದು ಇಂಗ್ಲಂಡಿನಲ್ಲಿ ಬಲಹೊಂದಿದರಿಂದ ಇಂಗ್ಲಂಡಿಗೆ ಯಾವತರದ ಕಷ್ಟಗಳೂ ಬಂದೊದಗಲಿಲ್ಲ! ಆದರೆ ಹರಗ್ರೇವ್, ಆರ್ಕರ್‍ರ್ಯಾಟ್, ಕ್ರೊಮಟನ್, ಕಾರ್ಟರ್‍ರ್ಯಾಟ್, ವೆಟ್ ಮುಂತಾದವರು ಹೊಸ ಹೊಸ ಯಂತ್ರಸಾಧನೆಗಳನ್ನು ಮಾಡಿದ್ದರಿಂದ ವಸ್ತ್ರದ ಕ್ರಯವು ಕಡಿಮೆಯಾಗಿ ವ್ಯಾಪಾರವು ಹೆಚ್ಚಾಗಿ ಇಂಗ್ಲಂಡಿಗೆ ಸಿಕ್ಕುವ ಹಣವು ಹೆಚ್ಚಾಯಿತು.

ಯುನೈಟೆಡ್ ಸ್ಟೇಟ್ಸ್ ಮುಂದಕ್ಕೆ ಬಂತು.

೧೮೦೦ಕ್ಕಿಂತ ಮೊದಲು ಇಂಗ್ಲಂಡಿಗೆ ಹತ್ತಿಯು ಎಲ್ಲಿಂದ ಸಿಕ್ಕಿತು ಎಂಬುದನ್ನು ಓದುಗರು ವಿಚಾರಿಸಬಹುದು. ಅಷ್ಟರವರೆಗೆ ಯುನೈಟೆಡ್ ಸ್ಟೇಟ್ಸಿನಿಂದ ಸ್ವಲ್ಪ ಹತ್ತಿಯು ಮಾತ್ರವೇ ಇಂಗ್ಲಂಡಿಗೆ ಬರುತ್ತಿತ್ತು. ಈ ಸಮಯದಲ್ಲಿ ಇಂಗ್ಲೆಂಡಿನಲ್ಲಿ ೫೦ ಸಾವಿರ ನೂಲಿನ ಕಾರ್ಖಾನೆಗಳು ಇದ್ದವು. ಇವುಗಳಲ್ಲಿ ೩೫ ಮಿಲಿಯ ನೂಲಿನ ರಾಟೆಗಳು ಇದ್ದವು. ೩ ಲಕ್ಷ ಯಂತ್ರದಿಂದ ನಡೆಯುವ ಮಗ್ಗಗಳು ಇದ್ದವು. ಆಗ ಇಂಡಿಯದಲ್ಲಿ ಅಮೇರಿಕದಲ್ಲಿ ಹತ್ತಿಬೆಳೆಯುವುದಕ್ಕಿಂತಲೂ ೩ ಪಾಲಷ್ಟು ಹೆಚ್ಚು ಹತ್ತಿಯು ಬೆಳೆಯುತ್ತಿತ್ತು. ಗೋದಾವರಿ ನದಿಯ ತೀರ ಬಂದರಲ್ಲಿಯೇ ಅಮೇರಿಕಾ ಖಂಡದಲ್ಲಿ ಬೆಳೆಯುವಷ್ಟೆ ಹತ್ತಿಯು ಬೆಳೆಯುತ್ತಿತ್ತು. ಅಮೇರಿಕದಲ್ಲಿ ಬೆಳೆಯುವ ಹತ್ತಿಗಿಂತಲೂ ಹೆಚ್ಚು ಹತ್ತಿಯು ಇಂಡಿಯದಲ್ಲಿ ಹಾಳಾಗಿಹೋಗುತ್ತಿತ್ತು.

ಇಂಡಿಯದಿಂದ ಇಂಗ್ಲಂಡಿಗೆ ಹತ್ತಿಯು ಹೋಗಲು ತೊಡಕುಗಳು ಇದ್ದವು. ಈ ಹತ್ತಿಯನ್ನು ಬೆಳೆಯುವ ಸ್ಥಳಗಳಿಂದ ಬಂದರಗಳಿಗೆ ಒಯ್ಯಲು ಸರಿಯಾದ ಗಾಡಿ ಚಲಾವಣೆಯು ಇಲ್ಲದೆ, ಹತ್ತಿಯು ಬೆಳೆದ ಸ್ಥಳದಲ್ಲಿ ಹೆಚ್ಚು ಸಮಯದ ವರೆಗೆ ಜಮೆಯಾಗಿ ಉಳಿಯುತ್ತಿತ್ತು. ೧೮೪೫ರಲ್ಲಿ ಅಮೇರಿಕದಿಂದ ಲಿವರ್‌ಪೂಲಿಗೆ ಒಳ್ಳೇ ರೀತಿಯ ಹೆಚ್ಚು ಹತ್ತಿಯು ಬಂದು ಇಂಡಿಯದ ಹತ್ತಿಯ ವ್ಯಾಪಾರವು ಬಿದ್ದುಹೋಗಿ ಇಂಡಿಯದ ಹತ್ತಿಯನ್ನು ರಾತಲಿಗೆ ೩ ಪೆನ್ನ ಪ್ರಕಾರ ಮಾರಬೇಕಾಯಿತು. ಲಿವರ್‌ಪೂಲಿನಲ್ಲಿ ಹತ್ತಿಯ ವ್ಯಾಪಾರಮಾಡುತ್ತಿದ್ದ ಸಾಹುಕಾರರು ಬಹಳ ಹಣದ ಅಡಚಣೆಯಲ್ಲಿ ಬಿದ್ದುಬಿಟ್ಟರು. ಇಂಡಿಯದಲ್ಲಿದ್ದ ಅವರ ಹತ್ತಿಯ ದಲಾಲಿಗಳು ಹಿಂದಕ್ಕೆ ಕರೆಸಿದರು. ಅಂದಿನಿಂದ ಇಂಡಿಯದಿಂದ ಯುರೋಪಿಗೆ ಹೋಗುವ ಹತ್ತಿಯು ಕಡಿಮೆ ಕಡಿಮೆಯಾಗುತ್ತಾ ಬಂದು ಅಮೇರಿಕದಿಂದ ಬರುವ ಹತ್ತಿಯೇ ಹೆಚ್ಚೆಚ್ಚಾಯಿತು. ಅದರ ಮೊದಲು ಇಂಗ್ಲಂಡಿಗೆ ಇಂಡಿಯಾ ಇಜಿಪ್ಟ ಮತ್ತು ಬ್ರೆಜಿಲ್ ದೇಶಗಳಿಂದ ಹತ್ತಿಯು ಬರುತ್ತಿತ್ತು. ಆದರೆ ಈಗ ಭೂಲೋಕಕ್ಕೆ ಹತ್ತಿಯನ್ನು ಒದಗಿಸುವ ದೇಶಗಳಲ್ಲಿ ಯುನೈಟೆಡ್ ಸ್ಟೇಟ್ಸ್ ಒಂದನೇ ಸ್ಥಾನವನ್ನು ಪಡೆದಿದೆ. ಆದರೆ ಒಂದು ಶತಮಾನಕ್ಕೆ ಹಿಂದೆ ಯುನೈಟೆಡ್ ಸ್ಟೇಟ್ಸಿನಿಂದ ಬರುವ ಹತ್ತಿಯು ೮ ಬೇಲುಗಳು ಮಾತ್ರವೇ ಇದ್ದವು. ಅವುಗಳನ್ನು ಸಹ ಇಂಗ್ಲಂಡಿಗೆ ತಂದರೆ ಅದು ಅಮೇರಿಕದ ಹತ್ತಿಯಲ್ಲವೆಂದೂ, ಅಷ್ಟು ಹತ್ತಿಯು ಅಮೇರಿಕದಲ್ಲಿ ಬೆಳಸಲಿಕ್ಕೆ ಸಾಧ್ಯವೇ ಇಲ್ಲವೆಂದೂ, ಅದು ವೆಸ್ಟ ಇಂಡಿಯದಲ್ಲಿ ಬೆಳೆದ ಹತ್ತಿಯಾಗಿರಬೇಕೆಂದೂ ಬಂದರದ ಅಧಿಕಾರಿಗಳು ಅದರ ಮೇಲೆ ಹೆಚ್ಚು ಸುಂಕ ವಿಧಿಸುತ್ತಿದ್ದರು. ಆದರೆ ಈಗಿನ ಅವಸ್ಥೆಯು ಹೇಗಿದೆ? ಈಗ ಅಮೇರಿಕದಿಂದ ಭೂಲೋಕದ ಎಲ್ಲಾ ಭಾಗಗಳಿಗೂ ಒಂದು ವರುಷಕ್ಕೆ ೧೧೦ ಮಿಲಿಯ ಬೇಲುಗಳು ಕಳುಹಿಸಲ್ಪಡುತ್ತವೆ. ಲೀವರ್‌ಪೂಲ್ ಒಂದೇ ಬಂದರಕ್ಕೆ ೪೫ ಮಿಲಿಯ ಬೇಲುಗಳು ಬರುತ್ತವೆ. ಬೇರೆ ಎಲ್ಲಾ ದೇಶಗಳಿಂದ ೧ ಲಕ್ಷ ಬೇಲುಗಳು ಮಾತ್ರವೇ ಬರುತ್ತವೆ.

ಲೋಕಲ್ ಸೆಲ್ಫ ಗವರ್ನಮೆಂಟಿನ ವಿಷಯ ಹೊಸ ಬದಲಾವಣೆಯ ಬಿಲ್ಲು.

ಈಗಿರುವ ತಾಲೂಕು ಬೋರ್ಡು, ಡಿಸ್ಟ್ರಿಕ್ಟ ಬೋರ್ಡು ಮತ್ತು ಮುನಿಸಿಪಾಲಿಟಿ ಎಂಬ ಲೋಕಲ್ ಸೆಲ್ಫ ಗವರ್ನಮೆಂಟ ಕ್ರಮವನ್ನು ಲೋರ್ಡ ರಿಪನರು ವೈಸರಾಯರಾಗಿರುವಾಗ ಶುರುಮಾಡಿದರು. ಅವರು ಗ್ರಾಮಪಂಚಾಯತುಗಳನ್ನು ಸ್ಥಾಪಿಸಿ ಗ್ರಾಮಗಳನ್ನು ಅಭಿವೃದ್ಧಿಮಾಡುವುದರ ಬದಲಾಗಿ ತಾಲೂಕು ಬೋರ್ಡು, ಡಿಸ್ಟ್ರಿಕ್ಟ ಬೋರ್ಡುಗಳನ್ನು ಉಂಟುಮಾಡಿದ್ದು ತಪ್ಪಾಗಿರುತ್ತದೆ. ಈ ರೀತಿ ಮಾಡಿದ್ದರಿಂದ ಈಗಿರುವ ಅನರ್ಥಗಳು ಉಂಟಾಗಲು ಕಾರಣವಾಯಿತು. ಆದುದರಿಂದ ಈಗಿನ ಲೋಕಲ್ ಸೆಲ್ಫ ಗವರ್ನಮೆಂಟಿನ ಮಂತ್ರಿಗಳು ಒಂದು ಹೊಸ ಬದಲಾವಣೆಯನ್ನು ಮಾಡಲು ಯೋಚಿಸಿದರು. ಒಂದು ಸಾವಿರ ಜನಸಂಖ್ಯೆ ಇರುವ ಪ್ರತಿ ಒಂದು ಗ್ರಾಮಕ್ಕೂ ಒಂದು ಗ್ರಾಮಪಂಚಾಯತನ್ನು ಮಾಡಲು ಯೋಚಿಸಿರುವರು.

ಈಗ ಮಾಡುವ ಹೊಸ ಆಕ್ಟಿನಲ್ಲಿ ಪಂಚಾಯತಿಯ ಹೊಸ ಕ್ರಮಗಳನ್ನು ತಯಾರಿಸಬೇಕೆಂದಿರುವರು. ಈ ಪಂಚಾಯತಿಗೆ ಗ್ರಾಮದ ಎಲ್ಲಾ ತರದ ಆರ್ಥಿಕ ಅಭಿವೃದ್ಧಿಯನ್ನು ಮಾಡುವ ಅಧಿಕಾರವು ಕೊಡಲ್ಪಡುವುದು. ಕೆಲವು ಗ್ರಾಮಗಳನ್ನು ಒಟ್ಟುಕೂಡಿಸಿ ಮಾಗಣೆ ಪಂಚಾಯತು ಮಾಡುವರು. ಮಾಗಣೆ ಪಂಚಾಯತು ಕೂಡಿಸಿ ಜಿಲ್ಲಾ ಪಂಚಾಯತು ಮಾಡುವರು. ಈ ಜಿಲ್ಲಾ ಪಂಚಾಯತಿನವರು ಗ್ರಾಮಪಂಚಾಯತಿನವರು ಮಾಡಿದ ಅನ್ಯಾಯಗಳ ವಿಷಯ ತನಿಖೆಮಾಡುವರು. ಈ ಗ್ರಾಮಪಂಚಾಯತುಗಳ ಮೆಂಬರುಗಳನ್ನು ಚುನಾಯಿಸುವರು. ನೊಮಿನೇಶನುಗಳು ಇಲ್ಲ. ಜಾತಿಗನುಸಾರವಾಗಿ ಮೆಂಬರುಗಳನ್ನು ಚುನಾಯಿಸುವ ವಿಲೆವಾರಿ ಮಾಡಲ್ಪಡುವುದು. ಜಿಲ್ಲಾ ಪಂಚಾಯತಿನ ಮೆಂಬರರನ್ನು, ಗ್ರಾಮಪಂಚಾಯತುಗಳ ಮೆಂಬರರೊಳಗಿನಿಂದಲೂ ಇತರರಿಂದಲೂ ಚುನಾಯಿಸುವರು.

ಈ ಬಿಲ್ಲನ್ನು ತಯಾರಿಸುವುದಕ್ಕೆ ಒಂದು ಕಮಿಟಿಯನ್ನು ನೇಮಿಸಿರುವರು. ಮುನ್ಸಿಪಾಲಿಟಿಗಳು ಈಗಿರುವ ರೀತಿಯಲ್ಲಿಯೇ ಇರುವವು. ಮುನಿಸಿಪಾಲಿಟಿಗಳಿಗಾಗಿ ಪ್ರತ್ಯೇಕ ಅಧ್ಯಾಯಗಳು ಬರೆಯಲ್ಪಡುವವು.

ಶಾಲೆಗಳ ಮೆಡಿಕಲ್ ಇನ್ಸ್‌ಪೆಕ್ಷನ್.

ಶಾಲೆಗಳ ಹುಡುಗರನ್ನು ಡಾಕ್ಟರರು ಪರೀಕ್ಷಿಸುವ ವಿಷಯದಲ್ಲಿ ಜನವರಿ ೯ನೇ ತಾರೀಕಿನಲ್ಲಿ ಒಂದು ಹುಕುಮನ್ನು ಕೊಟ್ಟಿರುವರು. ಸರಕಾರಿ ವೈದ್ಯಉದ್ಯೋಗಸ್ಥರ ಶಾಲೆಗಳನ್ನೆ ಸಂದರ್ಶಿಸಲಿಕ್ಕೆ ನೇಮಿಸಬೇಕೆಂದು ೧೯೨೫ನೆ ಇಸವಿ ಎಪ್ರಿಲ್ ೩ನೇ ತಾರೀಕಿನಲ್ಲಿ ಕೊಟ್ಟ ಜಿ. ಓ. ನಂಬ್ರ ೬೪೧೧ ೧ (೩)ನೇ ಪಾರದಲ್ಲಿ ಕಾಣಿಸಿತ್ತು. ಈಗ ಈ ಹುಕುಮನ್ನು ರದ್ದುಮಾಡಿ ಪಾಸಾದ ಯಾವ ಡಾಕ್ಟರರೂ ಈ ಪರೀಕ್ಷೆಯನ್ನು ಮಾಡಬಹುದೆಂದು ಹುಕುಂ ಕೊಟ್ಟಿರುವರು.

ಕ್ವೈಲನ್ ಎರಣಾಕೊಲಂ ರೈಲ್ವೇ.

ಕ್ವೈಲನ್‌ನಿಂದ ಎರಣಾಕೊಳದ ವರೆಗೆ ರೈಲುಹಾಕುವುದಕ್ಕಾಗಿ ಸರ್ವೆ ಕೆಲಸವು ಮುಗಿಯಿತು. ಈ ವರುಷ ಈ ರೈಲುವೆಗಾಗಿ ೨,೪೦,೦೦೦ ರೂಪಾಯಿಗಳನ್ನು ತಿರುವಾಂಕೂರು ಸರಕಾರದವರು ಸಂಕ್ಷನ್‌ಮಾಡಿರುವರು. ಕ್ವೈಲನ್‌ನಿಂದ ಎರಣಾಕೊಳದ ವರೆಗೆ ಶಸ್ತಂಕೊಟಾ, ಕಯಾಂಕುಳಂ, ಮಾವಿಲಿಕರ, ಚಂಗನೂರು, ತಿರುವಲ್ಲಿ, ಚಂಗನಶೇರಿ, ಪಳ್ಳಂ, ಕೊಟಿಯಂ, ಎಟ್ಟುಮಾನುರು, ಪಿರಾವುನ್, ತ್ರಿಪೋಣಿತುರ ಎಂಬ ಸ್ಟೇಶನುಗಳು ಇರುವವು. ಪಳ್ಳಂನಿಂದ ಒಂದು ಮೋಟರಬೋಟ್ ಆಲ್ಲಪ್ಪಿಗೆ ಹೋಗುವುದು. ಈ ರೈಲುಮಾರ್ಗವನ್ನು ಮಾಡುವಾಗ ದೊಡ್ಡ ದೊಡ್ಡ ನದಿಗಳಿಗೆ ಸೇತುವೆಯನ್ನು ಕಟ್ಟಿಸಲಿಕ್ಕಿರುವುದರಿಂದ ಮೈಲಿಗೆ ೨ ಲಕ್ಷ ರೂಪಾಯಿಯಂತೆ ಬೇಕಾಗುವುದು. ಹೀಗೆ ಲೆಕ್ಕ ಹಿಡಿದರೆ ಈ ಲ್ಯಾನಿಗೆ ೨ ಕೋಟಿ ೫೦ ಲಕ್ಷ ರೂಪಾಯಿ ಬೇಕಾಗುವುದು. ಇದಾದ ಕೂಡಲೇ ಇನ್ನು ಎರಡು ಲ್ಯಾನುಗಳನ್ನು ತೆರೆದು ಗುಡ್ಡಪ್ರದೇಶಗಳಲ್ಲಿರುವ ತೋಟಗಳಿಗೆ ಕೊಂಡುಹೋಗುವರು. ಒಟ್ಟಿನಲ್ಲಿ ಈಗಿನ ಮಹಾರಾಣಿಯವರು ತಮ್ಮ ೧೫-೨೦ ವರುಷಗಳ ಆಳ್ವಿಕೆಯಲ್ಲಿಯೇ ತಿರುವಾಂಕೂರು ರಾಜ್ಯವನ್ನು ರೈಲುಮಾರ್ಗಗಳಿಂದ ತುಂಬಿಸಬೇಕೆಂದು ಆಲೋಚಿಸುತ್ತಿರುವರು.

ಸ್ಫುಟ ವಿಚಾರಗಳು.

ಗಾಳಿಯಿಂದ ಹಸಿವು ತಣಿಸುವುದು!

ದಕ್ಷಿಣ ಆಫ್ರಿಕದಲ್ಲಿ ಹಿಂದೀಯರ ಹಕ್ಕುಗಳನ್ನು ಸಾಧಿಸುವುದಕ್ಕೆಂದು ಮಿ| ಸಿ. ಎಫ್. ಎಂಡ್ರೂಸರು ಹೋಗಿ, ದಕ್ಷಿಣ ಆಫ್ರಿಕದಲ್ಲಿ ಸಂಚರಿಸುತ್ತಿರುವರು. ಪರದೇಶಗಳಲ್ಲಿ ಕೂಲಿ ಕೆಲಸಕ್ಕೆ ಹೋಗಿ ಕಷ್ಟಗಳನ್ನನುಭವಿಸುತ್ತಿದ್ದ ಹಿಂದೀಯರಿಗಾಗಿ ಮಿ| ಎಂಡ್ರೂಸರು ಬಹಳ ಪರಿಶ್ರಮಪಟ್ಟಿರುವರು. ವಿದೇಶಿಯರಾದರೂ ಹಿಂದೀ ಬಡವರ ಮೇಲೆ ಇಷ್ಟು ಪ್ರೇಮವನ್ನು ತೋರಿಸುತ್ತಿದ್ದುದಕ್ಕೆ ಹಿಂದೀಯರು ಅವರಿಗೆ ಚಿರಕೃತಜ್ಞರಿರಬೇಕು. ಈ ಬಾರಿ ದಕ್ಷಿಣ ಆಫ್ರಿಕದಲ್ಲಿ ಕ್ಲಾಸ್ ವಿರಿಯಾಸ್ ಬಿಲ್ಲು ಬಂದು ಹಿಂದೀಯರನ್ನು ಹೊರದೂಡುವ ಹಂಚಿಕೆ ತಯಾರಾಗುವುದನ್ನು ಕಂಡು ಮಿ| ಎಂಡ್ರೂಸರು ಹಿಂದೂಸ್ಥಾನದಲ್ಲಿ ಚಳವಳವನ್ನೆಬ್ಬಿಸಿದರಲ್ಲದೆ, ಅವರು ಸ್ವತಹಾ ದಕ್ಷಿಣ ಆಫ್ರಿಕಕ್ಕೆ ಹೋಗಿ ಅದನ್ನು ವಿರೋಧಿಸುವ ಪ್ರಯತ್ನದಲ್ಲಿ ನಿರತರಿದ್ದಾರೆ.

ಇಂತಹ ಸಮಯದಲ್ಲಿ ಮಿ| ಎಂಡ್ರೂಸರು ಹಿಂದೀ ಮಹಾನ್‌ಪುರುಷರ ಚರಿತ್ರಚಿತ್ರವನ್ನು ದಕ್ಷಿಣ ಆಫ್ರಿಕದ ಬಿಳೇಜನರಲ್ಲಿ ಚಿತ್ರಿಸುವುದು ಲಾಭಕರವಾಗಿದೆ ನಿಜ. ಅದರಿಂದ ಅವರಲ್ಲಿ ಹಿಂದೀಯ ಯೋಗ್ಯತೆಯ ನಿಜವಾದ ಅನುಭವವನ್ನು ಉಂಟುಮಾಡಿಕೊಟ್ಟಂತಾಗುವುದು, ಅಂತೆ ಮಿ| ಎಂಡ್ರೂಸ ಶ್ರೀ ರವೀಂದ್ರನಾಥ ಠಾಕುರರ ತತ್ವಗಳನ್ನು ಪಸರಿಸುವುದರಲ್ಲಿ ನಿರತರಾದುದು ಉತ್ತಮವೇ ಆಯಿತು. ಶ್ರೀ ರವೀಂದ್ರನಾಥರ ಸಂದೇಶವನ್ನು ಕೇಳಲಿಕ್ಕೆ ಹಲವು ಜನರು ಬಂದು ಮಂತ್ರಮುಗ್ಧವತ್ ಕೇಳಿ ಅದನ್ನು ಪ್ರಶಂಸಿಸುತ್ತಿರುವರೆಂಬುದು ನಮಗೆ ಅಭಿನಂದನೀಯವಾದರೂ, ಅದರಿಂದ ಹಿಂದೂಸ್ಥಾನಕ್ಕೆ ಸ್ವಲ್ಪವಾದರೂ ಪ್ರಯೋಜನವಾಗುವುದಿಲ್ಲ. "ಶ್ರೋತೃವರ್ಗವು ಲಕ್ಷ್ಯವಿಟ್ಟು ಸಿ. ಎಫ್. ಎಂಡ್ರೂಸರ ಭಾಷಣವನ್ನು ಕೇಳಿ, ದಕ್ಷಿಣ ಆಫ್ರಿಕಕ್ಕೆ ಹಿಂದೂಸ್ಥಾನದ ವಿರೋಧವಾಗಿ ಯಾವ ಸಹಜವಾದ ದುರ್ಭಾವವೂ ಇಲ್ಲವೆಂದೂ, ಈ ಯುದ್ಧವು, ಈ ಎರಡು ಪಕ್ಷಗಳ ಆರ್ಥಿಕ ಸ್ವಾರ್ಥದೊಳಗಿನ ಅನೈಸರ್ಗಿಕ ಜಗಳ ಮಾತ್ರವೆಂದೂ ತೋರಿಸಿದರು" ಎಂದು "ದಿ ಕೇಪ್ ಅರ್ಗಸ್" ಎಂಬ ದಕ್ಷಿಣ ಆಫ್ರಿಕದ ಪತ್ರಿಕೆಯು ಆಶಾಜನಕವಾದ ಅಭಿಪ್ರಾಯವನ್ನು ಕೊಟ್ಟಿರುವುದಾದರೂ, ಇದರಲ್ಲಿ ಪ್ರಯೋಜನಕರವಾದುದೇನೂ ಇಲ್ಲವೆಂದೂ, ಇಂತಹ ಪ್ರಶಂಸೆಯೂ, ಹಿಂದೂಸ್ಥಾನದ ನಾಗರಿಕತೆಯ ಮೇಲಿನ ಬಹಿಃಪ್ರದರ್ಶಿತ ಶ್ರದ್ಧೆಯೂ ಹಿಂದೀಯರ ಪರಿಸ್ಥಿತಿಯನ್ನು ಎಳ್ಳಷ್ಟಾದರೂ ಸುಧಾರಿಸುವಂತಿಲ್ಲವೆಂಬುದನ್ನೂ ನಾವಿಲ್ಲಿ ಸೂಚಿಸಿ ಹಿಂದೀಯರನ್ನು ಎಚ್ಚರಿಸದಿರಲಾರೆವು. ಪಾಶ್ಚಾತ್ಯ ರಾಜಕೀಯ ರಂಗದಲ್ಲಿ ಅನುಭೂತಿಗೆ ಸ್ಥಾನವಿಲ್ಲ.

ಪಾಶ್ಚಾತ್ಯ ವೈದ್ಯಕೀಯ ಸಂಸ್ಥೆ—

ಎಲ್ಲಾ ವೃತ್ತಿ ಪರಸಂಸ್ಥೆಗಳಲ್ಲಿ ವೈದ್ಯಕೀಯ ಸಂಸ್ಥೆಯಷ್ಟು ಬಲವಾಗಿ ಸಂಘಟಿಸಲ್ಪಟ್ಟ ಸಂಸ್ಥೆಯು ಬೇರಿಲ್ಲ. ಈ ಪಾಶ್ಚಾತ್ಯ ವೈದ್ಯಸಂಸ್ಥೆಗಳಿಂದ ವೈದ್ಯವರ್ಗವು ತುಂಬಾ ಪ್ರಯೋಜನವನ್ನು ಹೊಂದಿದೆ. ವೈದ್ಯರ ಹಕ್ಕುಗಳನ್ನೂ, ಅಧಿಕಾರಗಳನ್ನೂ ಈ ಸಂಸ್ಥೆಗಳು ಬಹಳ ಜಾಗರೂಕತೆಯಿಂದ ರಕ್ಷಿಸುತ್ತಿವೆಯಲ್ಲ, ವೈದ್ಯರೊಳಗಿನ ಅನೇಕ ಅಭಾವಗಳನ್ನು ನಿರಾತಂಕವಾಗಿ ಸುಧಾರಿಸುತ್ತಿವೆ. ಪಾಶ್ಚಾತ್ಯ ವೈದ್ಯಕೀಯ ಕ್ರಮವು ಸ್ವಭಾವತಃ ಬಹಳ ಪ್ರಿಯವಿದ್ದು ಬಡವರಿಗೆ ಎಟಕದಂತಿದೆ. ಈ ವೈದ್ಯಸಂಸ್ಥೆಗಳು ಈ ಪರಿಸ್ಥಿತಿಯನ್ನು ಮತ್ತಷ್ಟು ಘಟ್ಟಿಮಾಡಿ, ಜನತೆಯ ಹಿತಕ್ಕಿಂತಲೂ ವೈದ್ಯರ ರಕ್ಷಣೆಯಲ್ಲಿ ಹೆಚ್ಚು ಚಿಂತಿತವಾಗಿವೆ. ವೈದ್ಯರ ಆರ್ಥಿಕ ಅಭಿವೃದ್ಧಿಯಲ್ಲಿಯೂ, ಗೌರವ ಸಾಧನೆಯಲ್ಲಿಯೂ, ಈ ಸಂಸ್ಥೆಗಳು ಜನತೆಯ ಪೀಡೆಯಿಂದಾದರೂ, ಹೆಚ್ಚು ಆಶಕ್ತವಾಗಿರುತ್ತವೆ. ಈ ಸಂಸ್ಥೆಗಳು ಜನತೆಯ ಪೀಡೆಯ ನಿವಾರಣೆಗಿಂತಲೂ ಸ್ವಾರ್ಥಸಾಧನೆಗಳಿಗೆ ಹೆಚ್ಚು ಲಕ್ಷ್ಯಕೊಡುವುದು ವಿಷಾದಕರ. ಇಂಗ್ಲೆಂಡಿನಲ್ಲಿ ಒಬ್ಬರು ಅತೀ ಪ್ರಸಿದ್ಧವಾದ ಎಲುಬಿನ ರೋಗಗಳನ್ನು ಗುಣಮಾಡುವವರಿರುವರು. ಇವರಿಗೆ ತಕ್ಕುದಾದ ವಿಶ್ವವಿದ್ಯಾಲಯದ ಪದವಿ ಇಲ್ಲದುದರಿಂದ, ಈ ಸಂಸ್ಥೆಗಳು ಇವರನ್ನು ತಮ್ಮಲ್ಲಿ ಸೇರಿಸಿಕೊಳ್ಳಲಿಲ್ಲ. ಸಂಸ್ಥೆಯ ಮೆಂಬರರೊಬ್ಬರು ಇವರು ಚಿಕಿತ್ಸೆ ನಡಿಸುವಾಗ, ರೋಗಿಗೆ ಸ್ಮೃತಿಹಾರಕ ದ್ರವವನ್ನು ಪಯೋಗಿಸಿ ಸಹಾಯಕರಾಗಿ ನಿಂತುದಕ್ಕೆ, ಈ ಸಂಸ್ಥೆಯು ಇವರನ್ನು ಬಹಿಷ್ಕರಿಸಿಯದೆ. ಸರಕಾರದ ನೌಕರರ ಮೇಲಿನ ಅಧಿಕಾರವು ಕೂಡ ಈ ಸಂಸ್ಥೆಯ ಸಮ್ಮತಿಗೆ ಆಧೀನವಾಗಿದೆ. ಈ ತರದ ಸೌಕರ್ಯವು ಇತರ ಯಾವ ವೃತ್ತಿಗಳಿಗೆ ಸಿಕ್ಕುವುದಿಲ್ಲ. ಆದರೂ ಈ ಸಂಸ್ಥೆಯವರು ಜನತೆಯ ಸಹನೆಯ ಕಡೆಗೆ ಲಕ್ಷ್ಯಕೊಡದಿರುವುದನ್ನು ನೋಡಿದರೆ ಇವರ ಹೃದಯಹೀನತೆಯು ವ್ಯಕ್ತವಾಗುವುದು.

ಕೃತ್ರಿಮ ನಾರಿನ ಕೈಗಾರಿಕೆ.

ಹಿಂದೂಸ್ಥಾನದ ಪ್ರಮುಖ ಕೈಗಾರಿಕೆಗಳೆಂದರೆ ವಸ್ತ್ರದ ಗಿರಣಿಗಳು ಮತ್ತು ನಾರಿನ ಗಿರಣಿಗಳು. ವಸ್ತ್ರದ ಗಿರಣಿಗಳು ಸರ್ವಸಾಮಾನ್ಯವಾಗಿ ಹಿಂದೀಯರ ಕೈಯೊಳಗೆನೇ ಇವೆ. ಆದರೆ ನಾರಿನ ಗಿರಣಿಗಳು, ಇದರ ಸರಿವಿರೋಧವಾಗಿ, ಇಂಗ್ಲೀಷರ ಕೈಯೊಳಗಿವೆ. ನಾರಿನ ಗಿರಣಿಗಳಿಗೆ ಯಾವಾಗಲೂ ಲಾಭವು ಹೆಚ್ಚು. ಇತ್ತೀಚೆಗೆ ಸರ್ವತರದ ವ್ಯಾಪಾರ ವಹಿವಾಟುಗಳಲ್ಲಿಯೂ, ಕೈಗಾರಿಕೆಗಳಲ್ಲೂ ಅತ್ಯಂತ ಧಾರುಣವಾದ ಮಂದಿಯು ಇದ್ದರೂ, ಹಿಂದು ಸಮಯದಲ್ಲಿ ಶೇಕಡಾ ೧೦೦-೨೦೦ರಂತೆ ಲಾಭವನ್ನು ಹಂಚುತ್ತಿದ್ದ ಮುಂಬ್ಯಾಯ ವಸ್ತ್ರದ ಗಿರಣಿಗಳು ಇತ್ತೀಚೆಗೆ ಮುಚ್ಚಲ್ಪಡುವ ಪ್ರಸಂಗವು ಕೂಡ ಬಂದಿದ್ದರೂ, ನಾರಿನ ಗಿರಣಿಗಳು ಯಥಾಕ್ರಮದಂತೆ ಉತ್ತಮ ಲಾಭವನ್ನು ಪಡಕೊಳ್ಳುತ್ತಿವೆ. ಈ ಲಾಭದಿಂದ ಹಿಂದೂಸ್ಥಾನಕ್ಕೆ ಪ್ರಯೋಜನವು ಹೆಚ್ಚಿಲ್ಲವೆಂಬುದೇ ಇದರೊಳಗಿನ ವಿಷಾದಕರವಾದ ವಿಷಯ. ಗಿರಣಿಗಳಿಗೆ ಕಳೆದ ೧೯೨೪ಕ್ಕೆ ಅಂತ್ಯವಾಗುವ ೧೦ ವರ್ಷಗಳ ಒಟ್ಟು ಉತ್ಪನ್ನವು ೩೦೦ ಮಿಲಿಯ ಪವನು, ಅಂದರೆ, ೪೫೦ ಕೋಟ ರೂಪಾಯಿ. ಗಿರಣಿ ಮ್ಯಾಲಿಕರು ಈ ಹತ್ತು ವರುಷಗಳ ಸರಾಸರಿ ವರುಷಾವಧಿ ಉತ್ಪನ್ನವು ಮೂಲಧನದ ಶೇಕಡಾ ೯೦ರಷ್ಟು ಇದೆ. ಅಂದರೆ ಈ ಹತ್ತು ವರುಷಗಳಲ್ಲಿ ಪಾಲುದಾರರು ತಮ್ಮ ಪೂರ್ಣ ಮೊಬಲಗನ್ನು ಪಡೆದು, ಅದರ ಮೇಲೆ ಎಂಟು ಪಾಲು ಮೂಲಧನವನ್ನು ಪುನಹ ಪಡೆದಿರುವರು." ಈ ರೀತಿಯಲ್ಲಿ ಲಾಭ ಮಾಡಿಕೊಳ್ಳುವಾಗ, ಕಂಪೆನಿಗಳು ತಮ್ಮ ಕೂಲಿಕಾರರಿಗಾಗಿ ಯಾವ ತರದ ಅಭಿವೃದ್ಧಿಯ ಉಪಾಯಗಳನ್ನೂ ಕಲ್ಪಿಸಿಲ್ಲ. ಈ ಕಾರ್ಖಾನೆಗಳಲ್ಲಿ ೩ ಲಕ್ಷ ಜನರು ಕೆಲಸಮಾಡುವರು. ಇವರಿಗೆ ಸರಾಸರಿ ವರುಷಾವಧಿ ಕೂಲಿಯು ರೂ. ೧೮೦, ಅಂದರೆ ತಿಂಗಳ ತಲಬು ರೂಪಾಯಿ ಹದಿನೈದು ಸಿಕ್ಕುತ್ತದೆ. ಕೂಲಿಗಳಿಗೆ ಆರೋಗ್ಯಕರವಾದ ವಸತಿ ಸ್ಥಾನಗಳಿಲ್ಲ. ಕೂಲಿಗಳ ಮಕ್ಕಳಲ್ಲಿ ನೂರು ಮಕ್ಕಳು ಹುಟ್ಟಿದರೆ ೫೦ ಮಕ್ಕಳು ಸಾಯುತ್ತಾರೆ ಎನ್ನುವಾಗ ಕೂಲಿಗಳು ಎಷ್ಟು ಹೃದಯದ್ರಾವಕವಾದ ಕನಿಷ್ಟಸ್ಥಿತಿಯಲ್ಲಿರುವರೆಂದು ವ್ಯಕ್ತವಾಗುವುದು. ಮಕ್ಕಳಿಗೆ ವಿದ್ಯಾಭ್ಯಾಸ ಕೂಡ ಸಿಕ್ಕುವುದಿಲ್ಲವೆಂದು ಮಿ| ಜೊನ್ಸ್ಟನ್ ಮತ್ತು ಸ್ಯಾಮ್‌ರವರ ವರದಿಯು ತೋರುತ್ತಿದೆ. ಹಿಂದೀ ಬೆವರಿನಿಂದುಂಟಾದ ಸಂಪತ್ತು ಹೇಗೆ ವಿಲಾಯತಿಗೆ ಸೂರೆ ಹೋಗುತ್ತದೆಂದು ಇದರಿಂದ ತಿಳಿಯಬಹುದು.

ಹೊಸ ಕ್ರೈಸ್ತ!

ಮೂಢಭಾವನೆಗಳಿಂದ ತುಂಬಿ ತುಳುಕಾಡುವ ಮತತತ್ವಗಳ ಸಾಂಪ್ರದಾಯಿಗಳಿಂದ ಕೂಡಿರುವ ಈ ಆರ್ಯಭೂಮಿಯು ಡಾ| ಅನ್ನಿಬಿಸೆಂಟಮ್ಮನವರ ವಿಚಿತ್ರವಾದ ಕಲ್ಪನೆಗೆ ಫಲಪ್ರದವಾದ ಭೂಮಿಯಾಗಿ ಪರಿಣತವಾದುದೇನು ಆಶ್ಚರ್ಯವಲ್ಲ. ಅಡ್ಯಾರದ ಆ ಸಣ್ಣ ಕ್ಷೇತ್ರದ ಕಲ್ಪನಾಮಯವಾದ ನಿಸರ್ಗರಾಜ್ಯದಲ್ಲಿ ಥಿಯೊಸೊಫಿಕಲ್ ಸಮಾಜದ ಅಧಿಷ್ಠಾತ್ರೀ ದೇವಿಯು ಉಪವಿಷ್ಟಳಾಗಿ ತನ್ನ ಅನಿರ್ಬಂಧಿತಕಲ್ಪನಾತುರಂಗವನ್ನು ವಿಹರಿಸಲು ಬಿಡುವ ಆ ಕಥೆಯನ್ನು ನೋಡಿದರೆ ಯಾರಿಗೂ ಕೌತುಕವಾಗದಿರದು. ಡಾ| ಅನ್ನಿಬಿಸೆಂಟಮ್ಮನವರು ಬಹುಕಾಲ ಪೂರ್ವದಿಂದಲೇ ತನಗೆ ಇರುವ ವಿಶಿಷ್ಟ ಅನೈಸರ್ಗಿಕ ಶಕ್ತಿಗಳ ಕ್ಯಾಟಲಾಗವನ್ನು ಶ್ರದ್ಧಾಮಯವಾದ ಹಿಂದೂ ಸದಸ್ಯರ ಮಧ್ಯದಲ್ಲಿ ಹಂಚಿಡುತ್ತಿದ್ದಳು. ಅಲ್ಲದೆ ಲೋಕದ ಎಲ್ಲೆಡೆಗೂ ವಿಸ್ತರಿಸಿರುವ ತನ್ನ ಥಿಯೊಸೊಫಿ ಸಮಾಜದ ಪಾಶ್ಚಾತ್ಯ ಪೌರ್ವಾತ್ಯ ಸದಸ್ಯರೊಳಗೂ ತನ್ನ ರಹಸ್ಯಮಯ ಶಕ್ತಿಯ ರಹಸ್ಯದ ಅಸ್ತಿತ್ವವನ್ನು ಬಯಲಿಗೆ ತರಲು ಹಿಂಜರಿಯುತ್ತಿರಲಿಲ್ಲ. ಥಿಯಾಸಾಫಿ ಸಮಾಜದವರು ಈ ಆತ್ಮಮುಗ್ಧತೆಯಲ್ಲಿ ಎಷ್ಟು ತಲ್ಲೀನರಿರುವರೆಂದು ನಾವು ಅರಿಯುವೆವು ಆದರೆ ಹೊಸ ಕ್ರೈಸ್ತನ ಆಗಮನದ ಪ್ರಕಟನೆಯ ಹಂಚಿಕೆಯು ಈ ಥಿಯಾಸಾಫಿ ಮಾತೇಕಕಾರಕರ ಬಹಳ ಜಾಗರೂಕತೆಯಿಂದಲೂ ಬುದ್ಧಿವಂತಿಕೆಯಿಂದಲೂ ಸಾಗುತ್ತಿದೆ. ಯಾರೋ ಒಬ್ಬರು ತನ್ನಿಬ್ಬರು ಮಕ್ಕಳನ್ನು ಡಾ| ಅನ್ನಿ ಬಿಸೆಂಟಮ್ಮನವರ ಕೈಯಲ್ಲಿ ವಿದ್ಯಾಭ್ಯಾಸಕ್ಕಾಗಿ ಕೊಟ್ಟು ಮರಣವಾದರು. ಆ ಮಕ್ಕಳನ್ನು ತೆಗೆದುಕೊಂಡು, ಆಗಿನಿಂದ ಡಾ| ಅನ್ನಿಬಿಸೆಂಟಮ್ಮನವರು ಅವರಲ್ಲೊಬ್ಬನಲ್ಲಿ ಹೊಸ ಕ್ರೈಸ್ತನನ್ನು ಆವಾಹಿಸುವುದರಲ್ಲಿ ನಿರತರಾಗಿರುವರು. ಇಬ್ಬರೊಳಗೆ ಸಣ್ಣವನು ಫ್ರಾನ್ಸಿನಲ್ಲಿ ಕ್ಷಯರೋಗದಿಂದ ಮೃತನಾದನು. ದೊಡ್ಡವನಾದ ಕೃಷ್ಣಮೂರ್ತಿಯಲ್ಲಿ ಡಾ| ಅನ್ನಿಬಿಸೆಂಟಮ್ಮನವರು ಕ್ರೈಸ್ತನಿಗೆ ಯೋಗ್ಯವಾದ ಪಾತ್ರವನ್ನು ಸಿದ್ಧಪಡಿಸುತ್ತಿರುವರು. ಡಾ| ಅನ್ನಿಬಿಸೆಂಟಮ್ಮನವರಿಂದ ಅಭಿನೀತವಾಗುತ್ತಿರುವ ಈ ಮಹಾ ನಾಟಕದಲ್ಲಿ ಅವರು ಸ್ವತಹಾ ಜೊನ್ ದಿ ಬೆಪ್ಟಿಸ್ಟ (John the Baptist)ನ ಪಾತ್ರವನ್ನು ವಹಿಸಿದುದು ಅಭಿನಂದನೀಯ. ಹದಿನೆರಡು ಶಿಷ್ಯರಲ್ಲಿ ಕೆಲವರು ಈಗಲೇ ತಯಾರಿಸಲ್ಪಟ್ಟಿರುವರೆಂದೂ ನಾವು ತಿಳಿಯುತ್ತೇವೆ. ಆದರೆ ವಿಶ್ವಾಸಘಾತಕ ಯೂದನನ್ನೂ, ಗಲ್ಲಿನ ಕಂಭವು ಇನ್ನೂ ತಯಾರಿಸಲ್ಪಟ್ಟಂತೆ ತೋರುವುದಿಲ್ಲ. ಡಾ| ಅನ್ನಿ ಬಿಸೆಂಟಮ್ಮನವರ ಮಹಾತ್ಮಗಳೊಡನೆ ನಡೆಯುವ ವ್ಯವಹಾರದಲ್ಲಿ ಅವರು ಅದನ್ನೂ ಕಂಡು ಹಿಡಿದು ಪ್ರಕಟಿಸಿದ್ದುದಾದರೆ ಉತ್ತಮವಿತ್ತು. ಪ್ರಾಯಶಃ ಅಮ್ಮನವರು, ತಮ್ಮ ಈ ಹೊಸ ಕ್ರೈಸ್ತ ತತ್ವಕ್ಕೆ ಒಪ್ಪದಿರುವ ಪ್ರತಿ ಥಿಯೊಸೊಫಿಸ್ಟನಲ್ಲಿಯೂ, ಒಬ್ಬೊಬ್ಬ ಇಸ್ಕಾರಯೊಟ್ ಯೂದನನ್ನು ಕಾಣುವರೆಂದು ತೋರುತ್ತಿದೆ. ಅಂತೂ ಪಾಶ್ಚಾತ್ಯ ಥಿಯೊಸೊಫಿಸ್ಟರು ಅನೇಕರು ಈ ಮಂತ್ರ ಜಾಲವನ್ನು ಹರಿಯಲಾರಂಭಿಸಿರುವರು. ಹಿಂದೀ ಥಿಯೊಸೊಫಿಸ್ಟರಿಗೆ ಅದೇ ಧೈರ್ಯವು ಬೇಗನೆ ಬರಲೆಂದು ನಮ್ಮ ಆಶಯ.

ಮನೆಯೆಲ್ಲಾ ನಿಮ್ಮದೇ ಬಟ್ಟಲು ತಂಬಿಗೆಗೆ ಮುಟ್ಟಬೇಡಿ.

ಹಿಂದೂ ದೇಶವನ್ನು ಹಿಂದೂ ದೇಶದ ಒಳ್ಳಿತಕ್ಕಾಗಿ ಆಳುವ ನಮ್ಮ ಅರಸರ ಪರೋಪಕಾರ ಭಾವನೆಯನ್ನು ಎಷ್ಟು ಹೊಗಳಿದರೂ ಸಾಲದು. ನಮ್ಮ ದೇಶವನ್ನು ನಮಗಾಗಿ ಆಳುವ ಆಳರಸರ ಅಸಂಖ್ಯಾ ಒಳಸಂಚುಗಳಲ್ಲಿ ಇನ್ನೊಂದು ಈಗಾಗಲೇ ಹೊರ ಬಿದ್ದದೆ. ಸಿವಿಲ್ ಸರ್ವಿಸ್, ಮೆಡಿಕಲ್ ಸರ್ವಿಸ್, ಎಡ್ಯುಕೇಶನಲ್ ಸರ್ವಿಸ್ ಇತ್ಯಾದಿ ಪಬ್ಲಿಕ್ ಸರ್ವಿಸುಗಳಲ್ಲಿ ಹಿಂದೀಯರ ಸಂಖ್ಯೆ ಹೇಗೆ ಹೆಚ್ಚಿಸಬಹುದೆಂದು ನಿರ್ಣಯಿಸಲು ಲಕ್ಷಾವಧಿ ರೂಪಾಯಿ ವೆಚ್ಚದಿಂದ ಏರ್ಪಟ್ಟ ಲೀ ಕಮಿಶನ್ನು, ಹಿಂದೀ ಸಂಖ್ಯೆಯನ್ನು ಹೆಚ್ಚಿಸುವ ರೂಪವನ್ನು ತೋರಿಸಿ, ಇಂಗ್ಲೀಷ ನೌಕರರ ಸಂಬಳದ ಏರ್ಪಾಡನ್ನು ಮಾಡಿ ೧॥ ಕೋಟಿ ರೂಪಾಯಿಗೆ ಇಂಡಿಯಕ್ಕೆ ಟಕ್ಕರು ಹಾಕಿದರೂ, ಹಿಂದೀ ಸಂಖ್ಯೆಯನ್ನು ಹೆಚ್ಚಿಸುವ ಆಶೆಯಿಂದ ಹಿಂದೀಯರ ಒಪ್ಪಿತವನ್ನು ಒಲಿಸಲು ಪ್ರಯತ್ನಿಸಿತು. ಆ ಆಶೆ ಕೂಡ ಕ್ಷಣ ಮಾತ್ರಕ್ಕಾಗಿ ಕೊಡಲ್ಪಟ್ಟದೆಂದು, ಸರಕಾರದ ಈಗಿನ ಒಳಸಂಚಿನ ಕಾರ್ಯದಿಂದ ತೋರುತ್ತಿದೆ. ಈ ಒಳಸಂಚಿನ ಫಲವಾಗಿ ೨೦೦ಕ್ಕೆ ಮಿಕ್ಕಿದ ಐ. ಎಮ್. ಎಸ್. ಇಂಗ್ಲೀಷ ಆಫೀಸರರು (ವೈದ್ಯ ಶಾಖೆಯ ನೌಕರರು) ಮಿಲಿಟರಿಯ ಉಪಯೋಗಕ್ಕಾಗಿ ಯಾವಾಗಲೂ ಸಿವಿಲ್ ಸರ್ವೀಸಿನಲ್ಲಿರಬೇಕು. ಇದಕ್ಕೆ ನೆವವೇನೆಂದರೆ—ಯುದ್ಧವಾಗುವ ಸಂದರ್ಭದಿಂದ ಸೈನ್ಯವನ್ನು ಕೂಡಲೇ ಸೇರಬಲ್ಲ ಆಫೀಸರರನ್ನು ಸದಾಕಾಲವೂ ಸಿದ್ಧವಾಗಿಡುವುದು. ಈ ಹಿಂದು ಕೃತ್ರಿಮದಿಂದ ಹಿಂದೀಯರು ಸಿವಿಲ್ ನೌಕರಿಯ ಆಶೆಯನ್ನೇ ತೊರೆಯಬೇಕಾಗುವುದು. ಈ ತರದ ವರ್ಣ ಭೇದವನ್ನು ಖಂಡಿಸಿ, ಮಿಲಿಟರಿಗಾಗಿ ಸಿವಿಲ್ ನೌಕರಿಯಲ್ಲಿ ಹಿಂದೀಯರಿಗೂ ಸ್ಥಾನ ಕೊಡಬೇಕಾಗಿ ಕೇಳಿಕೊಳ್ಳುವ ಠರಾವನ್ನು ಸರ್ ಶಿವಸ್ವಾಮಿ ಐಯರ್, ಡಾ| ಲೊಹೊಖಾರಿ, ಮತ್ತಿತರ ಹತ್ತು ಜನರು ಕೂಡಿ ಎಸೆಂಬ್ಲಿಯಲ್ಲಿ ತರುವರು. ಬಟ್ಟಲು ತಂಬಿಗೆಗೆ ಮುಟ್ಟಲು ಬಿಡದಿರುವ ಈ ಧೋರಣವನ್ನು ಬದಲಾಯಿಸಿ ನಮ್ಮ ಮನೆಯಲ್ಲಿ ನಮ್ಮ ಹಕ್ಕಿನ ಅಧಿಕಾರಗಳನ್ನು ಕೊಡುವುದು ಸರಕಾರದ ಕೆಲಸವಾಗಿದೆ.

ಮಹಾರಾಜರಿಗೂ ವಿಚಾರಣೆಯಿದೆ.

ಮುಂಬಾಯಿಯ ಬಾವ್ಲಾನನ್ನು, ಅವನ ಆಶ್ರಯವನ್ನು ಸೇರಿದ್ದ ಮುಮತಾಜಳ ಅಪಹರಣಕ್ಕಾಗಿ ಕೊಂದ ಅತ್ಯಾಚಾರದ ಘಟನೆಯು ಎಲ್ಲರ ಸ್ಮೃತಿಯಲ್ಲಿ ಇರಬಹುದು. ಈ ಕ್ರೂರ ಕೃತ್ಯದ ಹಿಂದೆ ಇಂದೋರಿನ ಹೋಳ್ಕರ ಮಹಾರಾಜರು ಸೂತ್ರಧಾರರಾಗಿದ್ದರೆಂಬ ಆರೋಪವು ಆ ಕಾಲದಲ್ಲಿಯೇ ಪತ್ರಿಕೆಗಳಲ್ಲಿ ಅನುಮಾನಿತವಾಗಿದ್ದಿತು. ಹಿಂದೀ ರಾಜರು ಮಹಾ ರಾಜರುಗಳು ಭೋಗವಿಲಾಸೋನ್ಮತ್ತರಾಗಿ ಪ್ರಜಾಹಿತಸಾಧನೆಗಿಂತಲೂ ಪ್ರಜಾ ಪೀಡೆಯಲ್ಲಿಯೇ ನಿರತರಾಗಿ, ತಮ್ಮ ಪಾಶವಿಕ ಭೋಗ ತೃಪ್ತಿಗಾಗಿ ಕಾಲವನ್ನು ದುರ್ವ್ಯಯಮಾಡಿ, ಪ್ರಜಾ ಜನರ ಹಿತವನ್ನು ದೂಳಿಗೆಳೆಯುವುದರ ದುಃಖ ಜನಕ ಕಥೆಗಳೆಷ್ಟೊ ನಮ್ಮ ಮುಂದೆ ಬಂದಿವೆ, ಒಬ್ಬ ರಾಜನು ಇಂಗ್ಲೆಂಡಿನಲ್ಲಿಯೇ ಮನೆಮಾಡಿಕೊಂಡಿರುವನು; ಇನ್ನೊಬ್ಬನು ನಾಯಿಗಳಿಗಾಗಿ ತನ್ನ ಪ್ರಜೆಗಳ ವಿದ್ಯಾಭ್ಯಾಸಕ್ಕಿಂತಲೂ ಹೆಚ್ಚು ಖರ್ಚುಮಾಡುವನು; ಮತ್ತೊಬ್ಬನು ಲಕ್ಷಾವಧಿ ರೂಪಾಯಿಗಳನ್ನು ರೊಲ್ಸ ರೊಯ್ಸ ಅಂತಹ ಮೋಟರ ಗಾಡಿಗಳಿಗಾಗಿ ವ್ಯಯಿಸಿ (ರೊಲ್ಸ ರೊಯ್ಸ ಗಾಡಿಗೆ ಒಂದಕ್ಕೆ ೪೦-೪೫ ಸಾವಿರ ರೂಪಾಯಿ ಬೆಲೆ ಇದೆ) ಮೆರೆಯುವನು; ಇನ್ನೊಬ್ಬನು ಲಂಡನ್, ಪ್ಯಾರಿಸ್ ಮುಂತಾದ ಯುರೋಪಿಯ ಶಹರುಗಳ ಉನ್ಮತ್ತ ಕ್ಲಬ್ಬಗಳ ವಿಹಾರ ಸುಖದಲ್ಲಿ ತಲ್ಲೀನನಾಗುವನು; ಮಗದೊಬ್ಬನು ತನ್ನ ಎಲ್ಲೆಯೊಳಗಿನ ಗೃಹಮಂದಿರಗಳಲ್ಲೆಲ್ಲಾ ಪ್ರಣಯಾಭಿಸಾರವನ್ನು ಬೆಳಸಿ ಅಸಂಖ್ಯ ಯುವತಿಗಳ ಜೀವನವನ್ನು ವ್ಯರ್ಥಪಡಿಸುವನು! ಇಂತಹ ಪತನೋನ್ಮುಖ ರಾಜ ವರ್ಗವು ಒಂದಲ್ಲ ಒಂದು ದಿವ ಅವಮಾನಿತವಾಗುವುದೇನೊ ಆಶ್ಚರ್ಯವಲ್ಲ. ಇಂದೋರಿನ ಮಹಾರಾಜರು ತಮ್ಮ ನಿರ್ದೋಷಿತ್ವವನ್ನು ಈ ಬಾರಿ ಸ್ಥಾಪಿಸುವ ಸಂದರ್ಭವು ಒದಗಿದೆ. ಅವರ ವಿಚಾರಣೆಗಾಗಿ ಒಂದು ಕಮಿಷನು ನೇಮಕವಾಗುವುದಿದೆ. ಮಹಾರಾಜರು ಈ ಕಮಿಷನಿನ ಮುಂದೆ ತಮ್ಮ ನಿರಪರಾಧಿತ್ವವನ್ನು ಸ್ಥಾಪಿಸಲಾರದಾದರೆ, ಆದರ ದೋಷವನ್ನು ಮತ್ತಾರೂ ಹೊರಲಾರರು. ಹಿಂದೀಯ ರಾಜಪುತ್ರರು ತಮ್ಮ ವಿಲಾಸ ತೃಷಿತ ನಯನಗಳನ್ನು ಇನ್ನಾದರೂ ತೆರೆಯಲಿ.

ಅನುಕ್ರಮಣಿಕೆ.

ಅಗ್ರಲೇಖ — ಪುಟ

ಸ್ಥಳೀಕ ಸಂಸ್ಥೆಗಳ ಆಡಳಿತದೊಳಗಿನ ನ್ಯೂನತೆಗಳ ಕಾರಣ ೫

ಸ್ಫುಟವಿಚಾರಗಳು ೫

ವರ್ತಮಾನಸಂಗ್ರಹಗಳು—

ವಿದೇಶ, ಒಳದೇಶ ೫

ದಕ್ಷಿಣ ಕನ್ನಡ— ಕಾಸರಗೋಡು, ಬಂಟ್ವಾಳ, ಕಾರಿಂಜೆ, ಪಾಣೆ ಮಂಗಳೂರು, ಪುತ್ತೂರು, ಸುಳ್ಯ, ಮೂಲ್ಕಿ ಮಂಜೇಶ್ವರ ೬

ಮಂಗಳೂರು . . . . . ,,

ಪತ್ರವ್ಯವಹಾರ ೧, ೨, ೮

ಉಪ್ಪಿನಂಗಡಿ ತಾಲೂಕಿನ ವರ್ಗದಾರರು ಸುಳ್ಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಮಾಡಿದ ಸಭೆಯ ಪ್ರೊಸೀಡಿಂಗ್ಸು ,,

ವಿವಿಧ ವಿಷಯಗಳು ೪

ಸ್ವದೇಶಾಭಿಮಾನಿ.

ಶಕ ೧೮೪೭ ಮಾಘ ಬ ೭ಯು ಶುಕ್ರವಾರ

ಸ್ಥಳೀಕ ಸಂಸ್ಥೆಗಳ ಆಡಳಿತದೊಳಗಿನ ನ್ಯೂನತೆಗಳ ಕಾರಣ.

ಪಂಜಾಬ ಪ್ರಾಂತದೊಳಗಿನ ಮ್ಯುನಿಸಿಪಾಲಿಟಿಗಳ ಆಡಳಿತದ ವಿಷಯ ತನ್ನ ಅಭಿಪ್ರಾಯಗಳನ್ನು ಪ್ರಕಟಿಸುವ ಸಮಯದಲ್ಲಿ ಪಂಜಾಬ ಸರಕಾರವು ಈ ರೀತಿಯಲ್ಲಿ ಹೇಳುತ್ತಿದೆ.

"ಮೆಂಬರರ ಜವಾಬ್ದಾರಿಯ ಕಡೆಗಿನ ಅವರ ಲಕ್ಷ್ಯದ ವಿಷಯದಲ್ಲಿ ಬದಲಾವಣೆಗಳಾವುವೂ ತೋರಿ ಬಂದಿಲ್ಲ. ಕೆಲವು ಕಮಿಟಿಗಳು ಚೆನ್ನಾಗಿ ಕೆಲಸ ಮಾಡಿವೆ; ಇನ್ನು ಕೆಲವು ತಮಗೆ ತೋರಿದ ರೀತಿಯಲ್ಲಿ ಚೆನ್ನಾಗಿ ಕೆಲಸಮಾಡಿವೆ, ಆದರೆ ಕಾರ್ಯಜ್ಞಾನದ ಅಭಾವದಿಂದಲೂ, ಅನನುಭವದಿಂದಲೂ ತೊಂದರೆಗೆ ಈಡಾಗಿವೆ. ಕೆಲವು ಕಮಿಟಿಗಳಲ್ಲಿ ಜಾತೀಯ ಭಾವನೆಗಳು ತಲೆದೋರಿ, ಸದಸ್ಯರ ದೃಷ್ಟಿಯಲ್ಲಿ ಮಾಲಿನ್ಯ ಉಂಟಾಗಿ, ಆ ಕಾರಣದಿಂದ ಆಡಳಿತದಲ್ಲಿ ನ್ಯೂನತೆಗಳುಂಟಾಗುತ್ತಿವೆ. ಇನ್ನು ಕೆಲವು ಕಮಿಟಿಗಳಲ್ಲಿ ಜಾತೀಯ ಭಾವನೆಯು ಅದೃಷ್ಟವಶಾತ್ ಇಲ್ಲದಿದ್ದರೂ ವೈಯಕ್ತಿಕ ದ್ವೇಷಗಳು ಮುಂದೆ ಬಂದು ಅದೇ ನ್ಯೂನತೆಯನ್ನುಂಟುಮಾಡುತ್ತಿವೆ. ಕೆಲವು ಕಡೆಗಳಲ್ಲಿ ಸರಕಾರೀ ಅಧಿಕಾರವು ತೆಗೆಯಲ್ಪಟ್ಟಲ್ಲಿ, ಬೇ ಸರಕಾರೀ ಸದಸ್ಯರು ಹೆಚ್ಚಿನ ಉತ್ಸಾಹದಿಂದ ಕೆಲಸಮಾಡಿರುವರು; ಮತ್ತು ಆಡಳಿತದಲ್ಲಿ ಅಭಿವೃದ್ಧಿಯು ತೋರಿ ಬಂದಿದೆ. ಇನ್ನು ಕೆಲವು ಕಡೆಗಳಲ್ಲಿ ಸರಕಾರೀ ಅಧ್ಯಕ್ಷರನ್ನು ತೆಗೆದು ಹಾಕಿದುದರಿಂದ, ಜಾತೀಯ ಮತ್ತು ವೈಯಕ್ತಿಕ ಸಾಧನೆಗಳ ಮೇಲಿನ ನಿರ್ಬಂಧವು ಕಳೆದಂತಾಗಿ ಆಡಳಿತವು ಕಳೆಗುಂದಿದೆ. ಎಲ್ಲಿ ಸರಿಯಾದ ಸದಸ್ಯರು ಸಿಕ್ಕಿ, ಸಮಯವನ್ನೂ ಶಕ್ತಿಯನ್ನೂ ಈ ಸ್ಥಳೀಕ ಸಂಸ್ಥೆಗಳು ಸಾಮಾನ್ಯವಾಗಿ ಚೆನ್ನಾಗಿ ನಡೆದಿವೆ. ಎಲ್ಲಿ ಅಂತಹ ಜನರು ಇಲ್ಲವೊ, ಇಲ್ಲವೆ, ಇದ್ದರೂ ಕೆಲಸಮಾಡಲು ಒಪ್ಪುವುದಿಲ್ಲವೊ, ಅಲ್ಲಿಯ ಆಡಳಿತವು ನಿಷ್ಫಲವಾಗಿದೆ.

ಈ ಅಭಿಪ್ರಾಯಗಳು ಬರೇ ಪಂಜಾಬ ಪ್ರಾಂತಕ್ಕೆ ಮಾತ್ರ ಅನ್ವಯಿಸುವುಗಳಲ್ಲವೆಂಬುದನ್ನು ನಮ್ಮ ಸ್ಥಳೀಕ ಸ್ವರಾಜ್ಯ ಸಂಸ್ಥೆಗಳ ಅಂತರ್ಯಗಳನ್ನು ತಿಳಿದವರು ಬಲ್ಲರು. ಈ ಅಭಿಪ್ರಾಯಗಳಲ್ಲಿ ಎಷ್ಟು ವಿಧದ ಉತ್ತಮ ಮತ್ತು ಕನಿಷ್ಠ ಆಡಳಿತೆಯ ಲಕ್ಷಣಗಳು ವಿವರಿಸಲ್ಪಟ್ಟಿವೆಯೊ, ಅವೆಲ್ಲವೂ ಒಂದೊಂದಾಗಿ, ಒಂದೊಂದು ಕಡೆಯಲ್ಲಿ ಆಗಾಗ ತೋರಿ ಬರುತ್ತಿವೆ ಎಂಬ ವಿಷಯವನ್ನು ನಾವು ಪ್ರತ್ಯೇಕವಾಗಿ ಸ್ಪಷ್ಟಪಡಿಸಬೇಕಿಲ್ಲ.

ಸ್ವರಾಜ್ಯ ಸಂಸ್ಥೆಗಳಲ್ಲಿ ತೊಂದರೆಯನ್ನೀಕ್ಕುವ ಮುಖ್ಯ ವಿಷಯಗಳನ್ನು ಈ ರೀತಿಯಾಗಿ ವಿಭಾಗಿಸಬಹುದು.

(೧) ಜಾತೀಯ ಕಲಹಗಳು.
(೨) ವೈಯಕ್ತಿಕ ಕಲಹಗಳು.
(೩) ಅನನುಭವ.
(೪) ಜವಾಬ್ದಾರಿಯ ದುರ್ಲಕ್ಷ್ಯ.

ಜಾತೀಯ ಕಲಹದ ವಿಷಯವನ್ನು ನಾವು ಉದ್ದೇಶಪೂರ್ವಕವಾಗಿಯೇ ಮುಂದಾಗಿ ಹಾಕಿರುವೆವು. ಏಕೆಂದರೆ ಜಾತೀಯ ಭೇದಗಳು ಸಾರ್ವಜನಿಕ ಮತ್ತು ಸಾಮಾಜಿಕ ಜೀವನಗಳಲ್ಲಿ, ನಮ್ಮ ಜಿಲ್ಲೆಯಲ್ಲಿಯೂ ಇತರ ಎಲ್ಲಾ ಕಡೆಗಳಲ್ಲಿ ದಿನಗಳೆದಷ್ಟಕ್ಕೆ ಹೆಚ್ಚು ಹೆಚ್ಚಾಗಿ ಸುಸ್ಪಷ್ಟವಾಗಿ ಹತ್ತಿವೆ. ಉಳಿದ ಮೂರು ಕಾರಣಗಳಿಗಿಂತಲೂ ಪ್ರಥಮದ ಕಾರಣವೇ ನಮ್ಮ ಜಿಲ್ಲೆಯ ಸ್ಥಳೀಕ ಸಂಸ್ಥೆಗಳ ಭಾವೀ ಜೀವನದ ಕಂಟಕವಾಗಿ ಸ್ಥಿರಗೊಳ್ಳುವುದಾಗಿ ಅನ್ನಿಸುತ್ತಿದೆ. ಇತರರು ನಮ್ಮೆಲ್ಲ ಜಾತಿಗಳನ್ನು ಒಂದಾಗಿ ಪರಿಗಣಿಸಿ ನಮ್ಮನ್ನು ಸರ್ವ ತರದ ನಷ್ಟ ಕಷ್ಟಗಳಿಗೆ ಗುರಿಮಾಡುತ್ತಿರುವಾಗ, ನಾವು ಈ ಅಲ್ಪಾಭಿಲಾಷೆಗಳಿಂದ ಜಾತೀಯ ಮುಸುಕುಗಳನ್ನು ತೊಟ್ಟು, ತೊಟ್ಟಿಸಿ ನಮ್ಮ ಸರ್ವ ನಾಶಕ್ಕೆ ಇಳಿದುದು ಖೇದಕರ. ಇಂತಹ ಜಾತೀಯ ಕಲಹಗಳು ಮ್ಯುನಿಸಿಪಾಲಿಟಿ, ತಾಲೂಕು ಬೋರ್ಡು ಡಿಸ್ಟ್ರಿಕ್ಟ ಬೋರ್ಡುಗಳಲ್ಲಿ ಬೇಕಷ್ಟು ನೋಡಸಿಗುತ್ತವೆ.

ಇನ್ನು ವೈಯಕ್ತಿಕ ಕಲಹಗಳಾದರೂ ಈ ಸಂಸ್ಥೆಗಳಲ್ಲಿ ಕಡಿಮೆಯಾಗಿಲ್ಲ. ಸಂಸ್ಥೆಯ ಸಮಷ್ಟಿ ಪರವಾದ ಹಿತದ ಯಾವ ಚಿಂತನೆಯೂ ಇಲ್ಲದೆ ಈ ವ್ಯಕ್ತಿಗಳು ತಮ್ಮ ಮನೆಯ ಜಗಳಗಳನ್ನು ನಿರ್ಲಜ್ಜೆಯಾಗಿ ಈ ಹತ್ತು ಸಮಸ್ತರ ಮಂದಿರದಲ್ಲಿ ತಂದು ಅದನ್ನು ಕಲುಷಿತವಾಗಿ ಮಾಡುವುದನ್ನು ನೋಡಿ ಜನತೆಯೇ ಅಸಹ್ಯಪಟ್ಟಿದೆ. ಅಂತೆಯೇ ಜವಾಬ್ದಾರಿಯ ದುರ್ಲಕ್ಷ್ಯವೂ ಈ ಸಂಸ್ಥೆಗಳ ನಿಜವಾದ ಪ್ರಯೋಜನವನ್ನು ಜನತೆಗೆ ಸಿಕ್ಕದ ಹಾಗೆ ಮಾಡುತ್ತಿದೆ. ಸದಸ್ಯರು ಅತ್ಯಂತ ವಿನೀತರಾಗಿ, ಮನೆ ಮನೆ ಅಲೆದು ಓಟುಗಳನ್ನು ಸಂಪಾದಿಸುವರಾದರೂ, ಆ ಮೇಲಿನ ತಮ್ಮ ಕರ್ತವ್ಯಗಳೇನೆಂಬುದನ್ನು ವಿಚಾರಿಸದೆ, ತಮಗೆ ಸಿಕ್ಕಿದ ಗೌರವದ ಅನುಭವದಲ್ಲಿಯೇ ದಿನಗಳೆದು, ತಮ್ಮನ್ನು ಆರಿಸಿದ ಜನತೆಯ ಹಿತಚಿಂತನೆಯನ್ನು ಮರೆಯುವರು.

ಪಂಜಾಬ ಸರಕಾರವು ತೋರಿಸಿಕೊಡುವಂತೆ, ಇದರ ನಿವಾರಣೋಪಾಯವೂ ಜನತೆಯ ಕೈಯೊಳಗೆನೇ ಇದೆ:—

"ಇದರ ನಿವಾರಣೋಪಾಯವು ಮತದಾರರ ಕೈಯೊಳಗೆನೇ ಇದೆ. ಮತ್ತು ವಿದ್ಯಾಭ್ಯಾಸವು ಅಭಿವೃದ್ಧಿಯನ್ನು ಹೊಂದಿ, ಸ್ಥಳೀಕ ಸಂಸ್ಥೆಗಳ ಆಡಳಿತದೊಳಗೆ ಯೋಗ್ಯವಾದ ಸುಧಾರಣೆಯನ್ನು ಕೇಳಿಕೊಳ್ಳ ಬಲ್ಲ ಮತದಾರ ವರ್ಗವು ಏರ್ಪಡುವುದೊ, ಆಗ ಮತ್ತಷ್ಟು ಅಭಿವೃದ್ಧಿಯನ್ನು ಈ ಸಂಸ್ಥೆಗಳೊಳಗೆ ನಿರೀಕ್ಷಿಸ ಬಹುದು."

ಈ ರೀತಿಯಾಗಿ ಸರಕಾರವು ಸೂಚಿಸುತ್ತಿದೆ. ನಮ್ಮ ಜಿಲ್ಲೆಯೊಳಗೂ ವಿದ್ಯಾಭ್ಯಾಸದ ಪ್ರಚಾರದೊಡನೆ ಉತ್ತಮ ಮತದಾರ ವರ್ಗವು ಉಂಟಾಗಬಹುದೆಂದು ಆಶಿಸಬಹುದಾದರೂ, ಈಗಿನ ಜಾತೀಯ ಭಾವನೆಗಳ ವಿಷಾಕ್ತ ವಾತಾವರಣದಲ್ಲಿ ಯಾವ ತರದ ವಿದ್ಯಾಭ್ಯಾಸವಾದರೂ ಕಾರ್ಯಕಾರಿಯಾದೀತೊ ಎಂಬುದು ವಿಷಯ ಸಂದೇಹಪಡಬೇಕಾಗಿದೆ.

ಎಲ್ಲ ಪ್ರಮುಖರನ್ನು ಏಕೀಕರಿಸೋಣವೆಂದರೆ, ಈ ಜಾತೀಯ ಭಾವನೆಯಿಂದಲೂ, ಅದರ ಫಲವಾಗಿ ವ್ಯಕ್ತಿಗಳು ಮಾಡಿದ ಕೆಲಸಗಳಿಂದಲೂ, ಪ್ರಮುಖರೊಳಗೂ, ಜನತೆಯೊಳಗೂ. ಪರಸ್ಪರ ಸಂಶಯ ಭಾವವು ಉಂಟಾಗಿದೆ. ಇದು ಇರುವ ತನಕ ಮತದಾರರ ಸರಿಯಾದ ದೃಷ್ಟಿ ನಿಕ್ಷೇಪವು ಸಾಧ್ಯವಾಗದು. ಅತ ಏವ, ಈ ಚುನಾವಣೆಯ ಕ್ರಮವೂ ಫಲವಾಗಿ ನ್ಯೂನ್ಯತಾಪೂರ್ಣವಾದ ಆಡಳಿತವೂ ಎಂದಿನಂತೆಯೇ ಮುಂದೂ ಸಾಗುವುದು.

ವಿದೇಶ ವರ್ತಮಾನ.

— ಅಟ್ಲಾಂಟಿಕ್ ಸಾಗರದಲ್ಲಿ ಎದ್ದ ಬಿರುಗಾಳಿಯ ಬೀಸಿಯಿಂದ ಬ್ರಿಟಿಷರ ಲಾರಿಸ್ಟನ್ ಎಂಬ ಹಡಗವೂ, ಎಂಟಿನೊ ಎಂಬ ಇನ್ನೊಂದು ಹಡಗವೂ ಒಡೆದು ಹೋದುವು. ಇವುಗಳ ಖಲಾಸಿಗಳನ್ನೂ, ಕ್ಯಪ್ಟನರನ್ನೂ ಜರ್ಮನರ ಬ್ರಿಮೆನ್ ಎಂಬ ಹಡಗವೂ, ಮತ್ತು ಅಮೇರಿಕದವರ ಪ್ರೆಸಿಡೆಂಟ ಸುವೆಲ್ಲಿ ಎಂಬ ಹಡಗವೂ ರಕ್ಷಿಸಿದವು. ಮತ್ತು ಬ್ರಿಟಿಷರ ಲಾರಿಸ್ಟನ್ ಹಡಗದಲ್ಲಿದ್ದ ಸುಮಾರು ೨೫ ಮಂದಿ ಜನರು ಮುಳುಗಿ ಹೋಗಿರುವರು.

— ಜಪಾನ ದೇಶದ ಮುಖ್ಯ ಮಂತ್ರಿಗಳಾದ ಬೆರನ್ ಕಟೋರವರು ನ್ಯುಮೋನಿ ಜ್ವರದಿಂದ ಕಾಲವಾದರು.

— ನಮ್ಮ ಯುವರಾಜರು ಬೇಟೆಯಾಡುತ್ತಿದ್ದಾಗ ಒಂದು ಆನೆಯಿಂದ ಕುದುರೆಯು ಹಾರಿದಾಗ ಬಿದ್ದು ಉತ್ತಿಗೆಯ ಕೋಲರ ಎಲುಬು ಮುರಿದು ಹೋಗಿರುವುದು ಈಗ ಗುಣಾಂಶ ಹೊಂದುತ್ತಿದ್ದಾರೆ.

— ಸಿನೇಮಾ ಎಂಬ ಚಲನಚಿತ್ರಗಳನ್ನು ತಯಾರಿಸಲು ತಸ್ವೀರು ತೆಗೆಯುವವರಲ್ಲಿ ಪ್ರಸಿದ್ಧನಾದ ಪಿಟ್ಟಿಪ್ರಾಂಕ್ಲಿನ್ ಎಂಬವನು ಕಳೆದ ೧೦ ವರ್ಷಗಳಿಂದಲೂ ಈ ಕೆಲಸವನ್ನು ಮಾಡುತ್ತಾ, ಈಗ ವಾರ ಒಂದಕ್ಕೆ ೫೦೦ ಸವರಿನ್‌ಗಳ ವರೆಗೆ ಪ್ರತಿಫಲವನ್ನು ಪಡೆಯುತ್ತಿರುವನು.

— ಇಂಗ್ಲೆಂಡಿನ ಗ್ರೇಟ್ ವೆಸ್ಟರನ್ ರೈಲ್ವೆಯಲ್ಲಿ ವಾಯರ್‌ಲೆಸ್ ಎಂಬ ತಂತಿಯಿಲ್ಲದೆ ವರ್ತಮಾನವನ್ನು ಕಳುಹಿಸಲೂ ತರಿಸಲೂ ಬಲ್ಲ ಯಂತ್ರಸಾಧನಗಳನ್ನು ಇಟ್ಟಿರುವುದರಿಂದ ಪ್ರಯಾಣಿಕರು ರೈಲ್ವೆಟ್ರೈನಿನಲ್ಲಿ ಹೋಗುತ್ತಿದ್ದಾಗಲೂ ಪರದೇಶಗಳಲ್ಲಿ ಆಗುವ ಸಂಗೀತ ಮುಂತಾದ ವಾದ್ಯ ವಿಶೇಷಗಳನ್ನು ಕೇಳುವ ಸೌಕರ್ಯ ಉಂಟಾಗಿರುವುದು.

— ಒಬ್ಬಾನೊಬ್ಬ ಕೋಟ್ಯಾಧೀಶ್ವರನ ಅಸ್ತಿಯಲ್ಲಿ ಬಂಧುವರ್ಗದವರಿಗೆ ಬಿಡಿಯಲ್ಪಟ್ಟ ನಂತರ ಉಳಿದ ಸುಮಾರು ೭೦ ಲಕ್ಷ ಸವರಿನ್‌ಗಳ ಮೊಬಲಗು [illegible] ಅಮೇರಿಕದ [illegible] ಯೂನಿವರ್ಸಿಟಿಗೆ ಸಿಕ್ಕುವುದು. ಇದರಿಂದ ಆ ಅಮೇರಿಕದವರು ಪ್ರಪಂಚದಲ್ಲಿ ಅತ್ಯಂತ ಹೆಚ್ಚಿನ ಅಸ್ತಿಯುಳ್ಳ ಸಂಸ್ಥೆಗಳಲ್ಲಿ ಒಂದಾಗುವುದು. ಆ ದೇಶದಲ್ಲಿ ಧನಿಕರು ತಮ್ಮ ಐಶ್ವರ್ಯವನ್ನು ಹೇಗೆ ಸದ್ವಿನಿಯೋಗ ಪಡಿಸುವರೆಂದು ಇದರಿಂದ ತಿಳಿಯ ಬಹುದು.

— ಪ್ಯಾರಿಸ್ ನಗರದಲ್ಲಿ ಹಚ್ಚು ಪ್ರಾಣಿಗಳ ಕಡೆಗೆ ಚಿಕಿತ್ಸೆ ಮಾಡುವ ಆಸ್ಪತ್ರೆಯ ಮುಖ್ಯಾಧಿಕಾರಿಯಾದ ಪ್ರೊಫೆಸರ್ ಕಾಲ್ಮೆಟ ಎಂಬವರು ಕ್ಷಯರೋಗಕ್ಕೆ ಖಂಡಿತವಾದ ಚಿಕಿತ್ಸೆಯನ್ನು ಕಂಡುಹಿಡಿದಿರುವುದಾಗಿ ಪ್ರಕಟವಾಗಿದೆ. ಕ್ಷಯರೋಗದ ಕ್ರಿಮಿಗಳಿಂದ ಒಂದು ರಸವಿಶೇಷವನ್ನು ಕ್ಷಯರೋಗ ಪೀಡಿತರಾದ ತಂದೆತಾಯಿಗಳು ಮಕ್ಕಳಿಗೆ ಹುಟ್ಟಿದ ೧೦ ದಿನಗಳೊಳಗಾಗಿ ಸೂಜಿಯ ಮೂಲಕ ರಕ್ತಕ್ಕೆ ಸೇರಿಸಿದರೆ, ಆ ಮಕ್ಕಳು ವಂಶಪಾರಂಪರ್ಯವಾಗಿ ಕ್ಷಯರೋಗದ ಸೋಂಕನ್ನು ಕಳೆದುಕೊಂಡು ಆರೋಗ್ಯ ದೃಢಕಾಯವುಳ್ಳವರಾಗಿ ಬೆಳೆಯುವರೆಂದು ಗೊತ್ತಾಗುತ್ತದೆ. 'ಬಿ. ಸಿ. ಜಿ.' ಎಂಬ ಈ ಚಿಕಿತ್ಸೆಯಿಂದ ರೋಗಪೀಡಿತರು ಗುಣಪಡದಿದ್ದಾಗ್ಯೂ, ಮುಂದಿನ ಜನಾಂಗದವರು ಈ ಚಿಕಿತ್ಸೆಯ ದೆಸೆಯಿಂದ ಈ ರೋಗದ ಹಾವಳಿಯನ್ನು ಹೋಗಲಾಡಿಸಬಹುದೆಂದು ತಿಳಿಯಬರುತ್ತದೆ.

ಒಳದೇಶ ವರ್ತಮಾನ.

— ಕಡಲೂರಿನಲ್ಲಿ, ಗಡಿಲಮ ನದಿಯಲ್ಲಿ ಕಠಿಣ ಮಳೆಯ ದೆಸೆಯಿಂದ ನೆರೆಬಂದು ದಡದ ಮೇಲೆ ೧೨ ಅಡಿ ನೀರು ಇದೆ. ಹೊಸ ಕಡಲೂರಿನಿಂದ ಹಳೆ ಕಡಲೂರಿಗೆ ಹೋಗಲು ಸಾಧ್ಯವಿಲ್ಲ. ಮೈದಾನು ನೀರಿನಿಂದ ತುಂಬಿಯದೆ. ಪುದುಪಾಳಯದ ಹೆಚ್ಚಿನ ಭಾಗವು ನೀರಿನಲ್ಲಿ ಮುಳುಗಿ, ಅನೇಕ ಗುಡಿಸಲುಗಳು ಬಿದ್ದುಹೋಗಿವೆ. ಪ್ರಾಣಹಾನಿಯಾಗಲಿಲ್ಲ. ಆಸ್ಪತ್ರೆ ಮುನ್ಸಿಪಾಲ ಹ್ಯಾಸ್ಕೂಲ್ ಮತ್ತು ಕೆಲವು ಬಂಗ್ಲೆಗಳ ಸುತ್ತಲೂ ನೀರು ಇತ್ತು! ಪೆನ್ನಾರ ನದಿಯಲ್ಲಿಯೂ ನೆರೆಬಂದಿದೆ.

— ಡಿಲ್ಲಿಯಲ್ಲಿ ೨೯ನೇ ತಾರೀಕಿನ ದಿನ ಜರಗಿದ ರಾಜಕುಮಾರರ ದರ್ಬಾರು ನಡಿಯಿತು. ವೈಸರಾಯರು ಅನೇಕ ಮಂದಿ ರಾಜಕುಮಾರರಿಗೆ ಬಿರುದುಗಳನ್ನು ಕೊಟ್ಟರು.

— ನೀಲಗಿರಿ ರೈಲುವೆಯ ಒಂದು ಕಡೆಯಲ್ಲಿ ಗುಡ್ಡೆ ಜರಿದು ಬಿದ್ದುದರಿಂದ ಹತ್ತು ದಿವಸಗಳ ವರೆಗೆ ರೈಲು ನಡಿಯಲು ಸಾಧ್ಯವಿಲ್ಲ.

— ಮದರಾಸು ಗವರ್ನರರವರು ಪರ್ಲಾಕಿಮಿಡಿಗೆ ಹೋಗಿರುವರು.

— ೧೯ನೇ ಇಸವಿಯಲ್ಲಿ ಇಂಡಿಯದ ರಾಜ್ಯಭಾರದಲ್ಲಿ ಬದಲಾವಣೆಯಾಗುವಾಗ ಆಶ್ರಿತ ರಾಜರ ವಿಷಯ ಆಗುವ ಬದಲಾವಣೆಗಳ ವಿಷಯ ಆಲೋಚಿಸುವುದಕ್ಕೆ ಬಿಕಾನೀರ್, ಪಟಿಯಾಲ, ಜಾಮನಗರ ಮತ್ತು ಅಲವರ್ ಮಹಾರಾಜರನ್ನು ಕಮಿಟಿಯ ಮೆಂಬರರಾಗಿ ಚುನಾಯಿಸಿರುವರು.

— ಮೈಸೂರು ಸಂಸ್ಥಾನದ ತುಮಕೂರು ಜಿಲ್ಲೆಯ ೭೨ ಖಾಸಗಿ ಶಾಲೆಗಳನ್ನು ಫೆಬ್ರುವರಿ ೧ನೇ ತಾರೀಕಿನಿಂದ ಸರಕಾರಿ ಶಾಲೆಗಳಾಗಿ ಮಾಡಿರುವರು. ಸಾಹಿತ್ಯಸಾಮಗ್ರಿ ಒದಗಿಸುವ ಖರ್ಚು ರೂ. ೭೫೦೦ ವರುಷಾವಧಿ ಖರ್ಚು ರೂ. ೭೫೦೦.

— ಮೌಲಾನಾ ಸೌಕತ್‌ಆಲಿ ಮತ್ತು ಅಬ್ದುಲ್ ಕಮಲನ್ ಅಜಾದರವರು ರಂಗೂನಿಗೆ ಹೋಗಿರುವರು.

— ಬೊಂಬಾಯಿ ನಗರದ ವಿಲ್ಸನ್ ಕಾಲೇಜಿನಲ್ಲಿರುವ ಪ್ರೊಫೆಸರ್ ಮೀನುದ್ದೀನ್ ಅಹಮ್ಮದ್ ಎಂಬವರು ತಮ್ಮ ಆದಾಯದಲ್ಲಿ ಖರ್ಚು ಕಳೆದುಳಿದ್ದ ೩೪,೦೦೦ ರೂಪಾಯಿಗಳನ್ನು ಅಲಿಘರದ ಮುಸ್ಲಿಂ ಯೂನಿವರ್ಸಿಟಿಯಲ್ಲಿ ಚಿತ್ರವಸ್ತು ಸಂಗ್ರಹ ಶಾಲೆಯನ್ನೇರ್ಪಡಿಸಲು ಧರ್ಮ ಮಾಡಿರುವರು.

— ತಿರುವಾಂಕೂರು ಸಂಸ್ಥಾನದಲ್ಲಿ ಪಿಪಾ ಪದಾರ್ಥಗಳ ಬಳಕೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಸರಕಾರದವರು ಮುಂದೆ ಹೇಳುವಂತೆ ಅಪ್ಪಣೆ ಮಾಡಿರುವರು. ೧೮ ವರ್ಷ ವಯಸ್ಸಿನೊಳಗಿರುವ ಯಾರಿಗೂ ಶರಾಬ್ ಮತ್ತು ಶೇಂದಿಯನ್ನು ಮಾರಕೂಡದೆಂದೂ, ಲೈಸನ್ಸಿಲ್ಲದೆ ಯಾವ ಮನುಷ್ಯನೂ ಆರು ಡ್ರಾಂಗಳಿಗಿಂತ ಹೆಚ್ಚಾಗಿ ಶರಾಬನ್ನು ಇಟ್ಟಿರಕೂಡದೆಂದೂ, ಅಲ್ಲಿನ ಸರ್ಕಾರದ ಅಪ್ಪಣೆಯಾಗಿರುವುದು.

— ಪ್ರಪಂಚದಲ್ಲೆಲ್ಲಾ ಅತ್ಯಂತ ಎತ್ತರವಾದ ಗೌರೀಶಂಕರ ಎಂಬ ಪರ್ವತ ಶಿಖರವು ಹಿಮಾಲಯ ಪರ್ವತಗಳಲ್ಲಿದೆ. ಇದರ ಎತ್ತರ ೨೯೦೦೨ ಅಡಿ. ಇದನ್ನು ಹತ್ತಿ ಇದರ ತುದಿಯನ್ನು ನೋಡಿದವರು ಯಾರೂ ಇಲ್ಲ. ೨೦,೦೦೦ ಅಡಿ ಎತ್ತರಕ್ಕೆ ಹೋಗುವುದರೊಳಗಾಗಿ ಶೈತವು ಸಹಿಸಲಾಗದೆಯೂ, ಶ್ವಾಸವಾಡುವುದು ಅಸಾಧ್ಯವಾಗಿಯೂ ಕಂಡು ಬಂದು ವಾಪಸು ಬರಬೇಕಾಗುವುದು. ಈ ಪ್ರಯತ್ನದಲ್ಲಿ ಅನೇಕರು ಅಕಾಲಮೃತ್ಯುವನ್ನು ಪಡೆದಿರುತ್ತಾರೆ. ಕೆಲಿಜೋ ಎಂಬ ಫ್ರೆಂಚ್ ವೈಮಾನಿಕನು ಬರುವ ಮಾರ್ಚಿ ತಿಂಗಳಲ್ಲಿ ಇಂಡಿಯಕ್ಕೆ ಬಂದು ತನ್ನ ವಿಮಾನದಲ್ಲಿ ಮತ್ತಿಬ್ಬರು ಸ್ನೇಹಿತರನ್ನು ಕೂಡಿಸಿಕೊಂಡು, ಅವನ್ನಜನಕವರಟ ಆನಿಲದ ಸಹಾಯದಿಂದ ಕ್ಷೇಮವಾಗಿ ಗೌರೀಶಂಕರದ ಮೇಲೆ ಹಾರಿ, ಅಲ್ಲಿ ತಸ್ವೀರುಗಳನ್ನು ತೆಗೆದುಕೊಂಡು ಫ್ರೆಂಚ್ ಬಾವುಟವನ್ನು ಅಲ್ಲಿಟ್ಟು ಬರುವುದಾಗಿ ಪ್ರಯತ್ನಪಡುತ್ತಿರುವನು.

— ಕೊಯಮುತ್ತೂರಿನಲ್ಲಿ ಅರಲೆ ವ್ಯಾಪಾರಿಗಳಾದ ಮೆಸ್ಸರ್ಸ್ ಪಿ. ಎಸ್. ಜಿ. ಅಂಡ್ ಸನ್ಸರವರು ಪೀಲಮೇಡು ಎಂಬಲ್ಲಿ ಒಂದು ಕೈಗಾರಿಕಾ ಪಾಠಶಾಲೆಯನ್ನು ಸ್ಥಾಪಿಸಲು ಅಲ್ಲಿನ ಪ್ಯಾಕ್ಟರಿ ಎದುರಾಗಿರುವ ೧೯,೦೦೦ ರೂ. ನ ನಿವೇಶನವನ್ನೂ, ಕಾರ್ಖಾನೆಗೆ ಅಗತ್ಯವಾದ ೪೫ ಸಾವಿರ ರೂಪಾಯಿ ಕ್ರಯ ಬಾಳುವ ಎಂಜಿನ್ ಮುಂತಾದ ಸಲಕರಣೆಗಳನ್ನೂ, ಉಪಾಧ್ಯಾಯರ ವಾಸಕ್ಕೆ ೧೦ಸಾವಿರ ರೂಪಾಯಿ ಕ್ರಯ ಬಾಳುವ ಕಟ್ಟಡವನ್ನೂ, ಮೂಲಧನಕ್ಕೆ ರಂಗವಿಲಾಸ ಕಾರ್ಖಾನೆಯ ೧ ಲಕ್ಷ ರೂಪಾಯಿ ಶೇರುಗಳನ್ನೂ ಕೊಯಮುತ್ತೂರು ಬ್ಯಾಂಕಿನ ೫೦ಸಾವಿರ ರೂಪಾಯಿ ಶೇರುಗಳನ್ನೂ, ಒಟ್ಟು [illegible] ಲಕ್ಷ ರೂಪಾಯಿಗಳ ಆಸ್ತಿಯನ್ನು ಧರ್ಮಾರ್ಥವಾಗಿ ಬಿಟ್ಟುಕೊಟ್ಟಿರುವರು. ಮತ್ತು ಈ ಕೈಗಾರಿಕಾ ಪಾಠಶಾಲೆಯ ವರ್ಷಂಪ್ರತಿ ಖರ್ಚಿಗೆ ತಮ್ಮ ಆದಾಯದ ಐವತ್ತರ ಒಂದು ಭಾಗವನ್ನು ಅಂದರೆ ಸಾಲಿಯಾನ ೫೦ಸಾವಿರ ರೂಪಾಯಿಗಳನ್ನು ಕೊಡುವುದಾಗಿ ವಾಗ್ದಾನ ಮಾಡಿರುವರು. ಜಾತಿಮತಭೇದಗಳನ್ನು ನೋಡದೆ ಅನಾಥರಾದ ಮಕ್ಕಳನ್ನು ಸೇರಿಸಲು ಏರ್ಪಾಡು ಮಾಡಿದೆ. ಈ ಸ್ಕೂಲಿನಲ್ಲಿ ವೈಶ್ಯರು [illegible]

ದಕ್ಷಿಣ ಕನ್ನಡ.

ಕಾಸರಗೋಡು:— ಇಲ್ಲಿಯ ಸಾರಸ್ವತರು ಸೇರಿ ಕೂಡಿ ಶ್ರೀ ಪಾಂಡುರಂಗ ಬೇಂಕಿಂಗ್ ಕೊರ್ಪೊರೇಶನ್ ಎಂಬ ಹೆಸರಿನ ಒಂದು ಬೇಂಕನ್ನು ಸ್ಥಾಪಿಸಲು ಠರಾವು ಮಾಡಿರುವರು. ರಿಟಾಯರ್ಡ ಅಸ್ಸಿಸ್ಟಂಟ್ ಇನ್ಸಪೆಕ್ಟರರಾದ ರಾವ್ ಸಾಹೇಬ್ ಬಿ. ಸುಬ್ಬರಾವ್, ಬಿ. ಎ. ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಇಲ್ಲಿಯ 'ನೆಶನಲ್ ಹೆಲ್ತ ಮತ್ತು ಬೇಬಿ' ವಾರವು ಇದೇ ತಿಂಗಳ ತಾ. ೨ನೆಯ ಮಂಗಳವಾರ ದಿನ ಪ್ರಾರಂಭವಾಗಿ ತಾ. ೭ನೇ ಆದಿತ್ಯವಾರ ದಿನ ಮುಕ್ತಾಯವಾಗುವದು. ಈ ಸಮಾರಂಭಕ್ಕೆ ಇಲ್ಲಿಯ ಮೊನ್ನ ಅಸಿಸ್ಟಾಂಟ್ ಸರ್ಜನರಾದ ರಾ। ಕೆ. ವಿ. ವಾಸ್‌ಕುಟ್ಟಿನ್ನಾಯರವರು ಸೆಕ್ರೆಟರಿಗಳಾಗಿಯೂ, ಇಲ್ಲಿಯ ಹೆಲ್ತ ಇನ್ಸ್‌ಪೆಕ್ಟರರು ಅಸಿಸ್ಟಾಂಟ ಸೆಕ್ರೆಟರಿಗಳವರಾಗಿಯೂ ಇರುತ್ತಾರೆ. ಇದಕ್ಕೆ ಸಂಬಂಧಪಟ್ಟ ಎಲ್ಲಾ ಭಾಷಣಗಳೂ ಶಿಶುಪ್ರದರ್ಶನವೂ ಇಲ್ಲಿಯ ಕೆ. ಇ. ಬಿ. ಎಮ್. ಸೆಕೆಂಡರಿ ಶಾಲೆಯಲ್ಲಿ ಜರಗುವವು. ಶಿಶು ಪ್ರದರ್ಶನವು ತಾ. ೪ನೇ ಗುರುವಾರ ದಿನ ಬೆಳಿಗ್ಗೆ ೮ ಘಂಟೆಗೂ ಮಿಕ್ಕ ಎಲ್ಲಾ ಭಾಷಣ ವಗೈರೆ ಕಾರ್ಯಗಳು ತಾ. ೨, ೩, ೫, ೬ ಮತ್ತು ೭ನೇ ತಾರೀಕುಗಳಲ್ಲಿ ಸಾಯಂಕಾಲ ೫-೩೦ಕ್ಕೆ ಪ್ರಾರಂಭಿಸಲ್ಪಡುವವು. ಊರಿನ ಎಲ್ಲಾ ಮಹಾಶಯರಿಗೂ ಸುಸ್ವಾಗತವಿರುತ್ತದೆ. ಶಿಶು ಪ್ರದರ್ಶನದಲ್ಲಿ ಒಳ್ಳೇ ಆರೋಗ್ಯವಂತವಾದ ೪ ಶಿಶುಗಳಿಗೆ ಇನಾಮ್ ದೊರೆಯುವದು.

ಇಲ್ಲಿಯೇ ಸಮೀಪದ ಹಳ್ಳಿಯಾದ ಪೆರ್ಡಾಲ ಗ್ರಾಮದಲ್ಲಿರುವ ಜಿ. ಕೃಷ್ಣನ ಕಂಭಟ್ಟರೆಂಬವರ ಕೂಡೆ ೧೦೦ ರೂಪಾಯಿಯ ಹಲವು ಠಕಾರಿ ನೋಟುಗಳು ಸಿಕ್ಕಿದ ಪ್ರಯುಕ್ತ ಅವರನ್ನೂ ಇನ್ನೊಬ್ಬ ಅಚ್ಯುತ ಭಟ್ಟರೆಂಬವರನ್ನೂ ಕೈದುಮಾಡಿ ಇಲ್ಲಿಯ ರಿಮಾಂಡಿನಲ್ಲಿ ಇಟ್ಟಿರುವದಲ್ಲದೆ, ಸದರಿಯವರೊಡನೆ ಜಿಡ್ಡಿಯಲ್ಲಿ ಸಿಕ್ಕಿದ ಎಲ್ಲಾ ೧೦೦ ರೂಪಾಯಿ ನೋಟುಗಳನ್ನು ಇಲ್ಲಿಯ ಸ್ಟೇಶನ್‌ನಲ್ಲಿ ಅಮಾನತು ಮಾಡಿಟ್ಟಿರುತ್ತಾರೆ. ಈ ಠಕಾರಿ ನೋಟುಗಳು ಇನ್ನಾರ್ಯಾರಿಗೆ ಸಿಕ್ಕಿ ಮೋಸವಾಗಿಯದೊ ತಿಳಿಯದು!

ಸ್ಪೆಶ್ಯಲ್ ಸೆಟ್ಲಮೆಂಟ ಅಫೀಸರರಾದ ಮಿ। ಪ್ರೆಸ್ಲಿ ದೊರೆಗಳವರು ೩, ೪ ದಿವಸಗಳ ಹಿಂದೆ ಇಲ್ಲಿಯ ಬ್ರೆಂಚ್ ಸೆಟ್ಲಮೆಂಟ ಆಫೀಸ್ ಇನ್ಸ್‌ಪೆಕ್ಷನ್ ಬಗ್ಗೆ ಚಿತ್ತಯಿಸಿದ್ದರು. ಇನ್ಸ್‌ಪೆಕ್ಷನ್ ಮುಗಿಸಿ ಇಲ್ಲಿಂದ ತಾ. ೧೪ಕ್ಕೆ ಹೊಸದುರ್ಗ ಅತ್ತಕಡೆ ಚಿತ್ತಯಿಸಿರುತ್ತಾರಂತೆ.

ಈ ತಾಲೂಕಿನ ಶರಾಬು, ಅಫೀಮು ಮತ್ತು ಗಾಂಜಾ ಗುತ್ತೆವಾರುಗಳು ಇದೇ ತಾ. ೧ನೇಗೆ ಪುತ್ತೂರು ಡಿವಿಜನಲ್ ಆಫೀಸರರವರಿಂದ ನಡಿಸಲ್ಪಟ್ಟಿವೆ.

ತಾ. ೨ನೆಯ ದಿನ ಸಾಯಂಕಾಲ ಘಂಟೆ ೬ಕ್ಕೆ, ಇಲ್ಲಿಯ ಸರ್ವೆ ಅಸಿಸ್ಟಾಂಟ್ ಡೈರೆಕ್ಟರರಾದ ರಾ। ರಾಮಸ್ವಾಮಿ ಅಯ್ಯರವರು, ಮದ್ರಾಸ್ ಅಡ್ಯಾರ್, ಥಿಯೋಸೊಫಿಕಲ್, ಕನ್‌ವೆನ್‌ಶನ್ (Madras Adyar Theosophical convention) ಎಂಬುದರ ಕುರಿತು ಒಂದು ಚೆಲೋ ಭಾಷಣವನ್ನಿತ್ತರು. ಈ ಭಾಷಣಕ್ಕೆ ಹೆಚ್ಚಿನ ಮಹನೀಯರು ಹಾಜರಿದ್ದರು.

ಈ ತಾಲೂಕಿನ ಜಮಾಬಂದಿಯು ಇದೇ ತಿಂಗಳ ತಾ. ೧೩ಕ್ಕೆ ಮುಕ್ತಾಯವಾಗುತ್ತದೆ.

ಬಂಟ್ವಾಳ:— ಇಲ್ಲಿಯ ಡಿವಿಜನಿಗೆ ಸೇರಿದ ಪಂಜಿಕಲ್ಲು ಗ್ರಾಮದಲ್ಲಿ ಒಂದು ಕೆಥೋಲಿಕರ ಮನೆಯಲ್ಲಿ ಒಂದು ವಿಶೇಷ ಕೃತ್ಯ ನಡಿಯಿತು. ಕೆಥೋಲಿಕ ಹೆಂಗಸು ಒಂದುವರೆ ತಿಂಗಳಿನ ಬಾಣಂತಿ. ಮಗುವಿಗೆ ಒಂದುವರೆ ತಿಂಗಳು ಪ್ರಾಯ. ಈ ಹೆಂಗಸಿನ ಗಂಡನಿಗೂ ಇವಳಿಗೂ ಆದ ಜಗಳದಲ್ಲಿ ಮಗುವಿನ ಪ್ರಾಣ ಹೋಯಿತು. ಹೆಂಡತಿಗೆ ಹುಚ್ಚು ಹಿಡಿದು ಅವಳು ಮಗುವನ್ನು ಕೆಳಗೆ ಬಿಸಾಡಿದ್ದರಿಂದ ಮಗುವಿನ ಜೀವ ಹೋಯಿತೆಂದು ಗಂಡನ ಹೇಳಿಕೆಯಂತೆ. ಒಟ್ಟಾರೆ ಪೋಲಿಸಿನವರು ಗಂಡಹೆಂಡರಿಬ್ಬರನ್ನು ಕೈದುಮಾಡಿ ತಂದಿರುವರು. ತಾಯಿಯು ಮಗುವಿನ ಹೆಣವನ್ನು ಹಿಡಕೊಂಡು ಸ್ಟೇಶನಿಗೆ ಬಂದಳು. ಡಾಕ್ಟರರು ಮಗುವಿನ ಪೋಸ್ಟಮಾರ್ಟೆಮ್ ಮಾಡಿದರು.

ಇಲ್ಲಿ ಆರೋಗ್ಯವಾರವನ್ನು ವಿಜೃಂಭಣೆಯಿಂದ ಜರಗಿಸಲಿಕ್ಕೆ ಪ್ರೋಗ್ರೇಮುಗಳು ತಯಾರಾಗಿ ಊರಿನಲ್ಲೆಲ್ಲಾ ಗೋಡೆಗಳಿಗೆ ಹಚ್ಚಲ್ಪಟ್ಟಿವೆ. ಗುರುವಾರ ಬಾಲಬಾಲಕಿಯರ ಮೆರವಣಿಗೆ, ಶುಕ್ರವಾರ ಶನಿವಾರ ಆರೋಗ್ಯ ಭಾಷಣ ಮತ್ತು ಶಿಶು ಪ್ರದರ್ಶನ, ಆದಿತ್ಯವಾರ ಮಕ್ಕಳ ಆಟಗಳು ಅನಂತರ ತಿಂಡಿಗಳು ಇನಾಮುಗಳು ಹಂಚಲ್ಪಡುವವು. ಇಲ್ಲಿಯ ವೃದ್ಧ ಉದ್ಯೋಗಸ್ಥರಾದ ಕಿಲ್ಪಾಡೀರಾರು ಬಹಳ ಸಾಹಸಪಡುತ್ತಿರುವರು.

ಇಲ್ಲಿಯ ಶ್ರೀ ತಿರುಮಲ ದೇವಸ್ಥಾನದ ಧ್ವಜಾರೋಹಣವು ಇದೇ ತಿಂಗಳ ೧೫ನೇ ತಾರೀಕು ಸೋಮವಾರವಾಗಿ ಗುರುವಾರ ಮೃಗಬೇಟೆ ಶುಕ್ರವಾರ ರಥೋತ್ಸವ.

ಮಂಚಿ ಗ್ರಾಮದ ಕರ್ನಾಟಕ ಬ್ರಾಹ್ಮಣ ನರಸಿಂಗರಾಯರನ್ನು ಕೊಂದ ನಂಬ್ರವು ಪುನಹಾ ರಿಟ್ರಾಯಲ್ ಆಗಬೇಕೆಂತ ಮೇಲಾಫೀಸರರ ಹುಕುಮು ಆಗಿದೆಯಂತೆ.

ಇಲ್ಲಿ ಒಂದು ಅಬ್ಕಾರಿ ನಂಬ್ರವು ಬಂಟ್ವಾಳ ಡಿಪುಟಿ ತಹಸೀಲ್ದಾರರಲ್ಲಿ ತನಿಖೆ ಆಗುತ್ತಾ ಉಂಟು. ವಕೀಲರ ವಿಚಾರಣೆಯಲ್ಲಿ ಇಲಾಖೆಯ ಪಕ್ಷದ ಸಾಕ್ಷಿಗಾರನ ವಾಗ್ಮೂಲವು ಕನಡಿನಲ್ಲಿ ಮಾತಾಡಿದಂತೆ ಆಗಿದೆ. ತೀರ್ಪಿನ ಫಲಿತಾಂಶ ನೋಡಬೇಕಿದೆ.

ಇಲ್ಲಿಯ ಆಸ್ಪತ್ರೆಯಲ್ಲಿ ಹಿಂದಿನ ಸ್ಟೋರಿನಲ್ಲಿದ್ದ ಮದ್ದೆಲ್ಲಾ ಕರ್ಬಾರ್ಗದಿಂದ ಜನರಿಗೆ ಬೇಕಾದ ತೊಂದರೆ ಆಗಿದೆ. 'ರಾಗಬರುವಾಗ ತಂತಿ ಕಡಿಯಿತು' ಎಂಬಂತೆ ಒಳ್ಳೇ ಡಾಕ್ಟರರು ಹುರುವಾಗ ಇಲ್ಲಿ ಮದ್ದಿಲ್ಲ!

ಹೈದರಾಬಾದಿನಿಂದ ಉಡುಪಿ, ಧರ್ಮಸ್ಥಳ ಮುಂತಾದ ಯಾತ್ರಾಸ್ಥಳಗಳಿಗೆ ಯಾತ್ರಿಕರಾಗಿ ಬಂದಿದ್ದ ಏಳೆಂಟುಮಂದಿ ವೈಷ್ಣವ ಬ್ರಾಹ್ಮಣ ಕುಟುಂಬದವರ ಸೊತ್ತು ಹಣ ವಗೈರೆ ಕಳ್ಳರ ಪಾಲಾಗಿ ನಿರ್ಗತಿಕರಾಗಿ ಬಂಟ್ವಾಳಕ್ಕೆ ಬಂದವರನ್ನು ಇಲ್ಲಿಯ ಮಹಾನುಭಾವರು ಧನಸಹಾಯ ಮಾಡಿ ಮಂಗಳೂರಿಗೆ ಕಳುಹಿಸಿಕೊಟ್ಟಿರುತ್ತಾರೆ.

ಕಾರಿಂಜೆ:— ಇಲ್ಲಿ ಪ್ರತಿ ಶಿವರಾತ್ರಿಗೆ ಜಾತ್ರೆಯಾಗುವದು. ಈ ವರ್ಷದ ಜಾತ್ರೆಯು ಇದೇ ಬರುವ ಫೆಬ್ರುವರಿ ೧೧ನೇ ತಾರೀಕಿಗೆ ಆರಂಭವಾಗುವುದು. ಇದು ಮಂಗಳೂರು ತಾಲೂಕಿನಲ್ಲಿದ್ದು ಬಂಟ್ವಾಳದಿಂದ ಸುಮಾರು ೭ ಮೈಲು ದೂರದಲ್ಲಿ ಸುಮಾರು ೭೦೦ ಅಡಿ ಎತ್ತರವುಳ್ಳ ಶಿಲಾಮಯವಾದ ಪರ್ವತದ ಶಿಖರದ ಅರ್ಧಭಾಗದಲ್ಲಿ ಪಾರ್ವತಿ ದೇವಸ್ಥಾನವೂ ಶಿಖರದ ತುದಿಯಲ್ಲಿ ಈಶ್ವರ ದೇವಾಲಯವೂ ಇದೆ. ಇಲ್ಲಿಗೆ ಸಾವಿರಗಟ್ಟಲೆಯಲ್ಲಿ ಭಕ್ತಾದಿಗಳು ಪ್ರತಿ ವರ್ಷ ಜಾತ್ರೆಗೆ ಬಂದು ಸೇರುವರು. ಆದುದರಿಂದ ಈ ಕಾಲದಲ್ಲಿ ಸಹ ಭಕ್ತಾದಿಗಳು ಬಂದು ಶ್ರೀಮುಡಿ ಗಂಧಪ್ರಸಾದ ಪಡದು ದೇವರ ದರ್ಶನಮಾಡಿ ಹೋಗಬೇಕಾಗಿ ಕ್ಷೇತ್ರವಾಸಿ ಪ್ರಾರ್ಥನೆಯಾಗಿದೆ.

ಪಾಣೆಮಂಗಳೂರು:— ಇಲ್ಲಿ ಹತ್ತಿಪ್ಪತ್ತು ವರ್ಷಕ್ಕೆ ಮೊದಲು ಹೊಳೆಕಿನಾರೆಯಲ್ಲಿ ಅಂಗಡಿಗಳ ಸಾಲು ಇರುವದರಿಂದ ಪ್ರಯಾಣಸ್ಥರಿಗಾಗಲಿ, ವ್ಯಾಪಾರಸ್ಥರಿಗಾಗಲಿ ಕಳ್ಳಾಟಕೆಗೆ ಆಸ್ಪದವಾಗುತ್ತದೆಂದು ಸರ್ಕಾರದವರು ತಿಳಿದು ಪಾಣೆಮಂಗಳೂರು ಬಂಟ್ವಾಳ ಹೊಳೆಕಿನಾರೆಗಳಲ್ಲಿ ಸಣ್ಣ ಸಣ್ಣ ಸಂತೆ ಅಂಗಡಿಗಳು ಇಪ್ಪಬಾರದಾಗಿ ಹುಕುಮು ಕೊಟ್ಟು ಅಂಗಡಿ ಇಟ್ಟವರನ್ನು ತೆಗಿಸುತ್ತಿದ್ದರು. ಈ ವರ್ಷ ಈಗ ಅಂಥಾ ಅಂಗಡಿಗಳು ಅಲ್ಲಲ್ಲಿ ಕಂಡುಬರುತ್ತಿದೆ. ಸರ್ಕಾರದವರ ನಿಗಾ ಇರಲಿ.

ಈ ಊರು ಬಂಟವಾಳ ಊರಿನಷ್ಟೆ ದೊಡ್ಡದಾಗಿದ್ದರೂ ಇಲ್ಲಿ ಒಂದು ಸಬ್ ಪೋಸ್ಟು ಆಫೀಸು ಇಲ್ಲದೆ ಬಹಳ ಕಷ್ಟವಾಗಿದೆ. ಈ ಊರಿನ ಸುತ್ತಲೂ ದೊಡ್ಡ ದೊಡ್ಡ ಜಮೀನುದಾರರು ವಾಸವಾಗಿರುವರು. ಫಲಭರಿತವಾಗಿಯೂ, ಜನಭರಿತವಾಗಿಯೂ ಇರುವ ಹಳ್ಳಿಗಳು ಸುತ್ತಲೂ ಇವೆ. ಇಲ್ಲಿ ವ್ಯಾಪಾರವೂ ವಿಶೇಷವಾಗಿದೆ. ಇಲ್ಲಿ ಒಂದು ಕಂಬೈಂಡ್ ಸಬ್ ಪೋಸ್ಟ್ ಆಫೀಸು ಇಡಬೇಕಾಗಿ ಊರಿನಿಂದ ಪೋಸ್ಟುಮಾಸ್ಟರ್ ಜನರಲರಿಗೆ ಒಂದು ಮನವಿ ತಯಾರಾಗಿ ಹೋಗಿಯದೆ.

ಕಾರ್ಕಳ:— ಈ ತಾಲೂಕು ಬೋರ್ಡು ಮೆಂಬರರ ಸಭೆಯು ಇದೇ ಫೆಬ್ರುವರಿ ತಿಂಗಳ ತಾರೀಕು ೭ನೇ ಆದಿತ್ಯವಾರ ಇಲ್ಲಿ ಅನಂತಶಯನ ದೇವಸ್ಥಾನದ ಬಳಿ ಇರುವ ಕ್ಲಬ್ ಕಟ್ಟಡದಲ್ಲಿ ಅಪರಾಹ್ನ ಗಂಟೆ ೨ಕ್ಕೆ ಸರಿಯಾಗಿ ಜರಗುವುದು.

ಕಾರ್ಕಳ ಸೆಂಟರ್ ಪ್ರಾಥಮಿಕ ಶಾಲಾ ಉಪಾಧ್ಯಾಯರ ೫ನೇ ಸಭೆಯು ಇದೇ ಕಳೆದ ಜನವರಿ ತಾ. ೩೦ನೇ ಶನಿವಾರ ಮಧ್ಯಾಹ್ನ ಘಂಟೆ ೨ಕ್ಕೆ ಹಜ್ರತ್ ಅಬ್ದುಲ್ ಖಾದರ್ ಅರಬ್ಬಿ ಇವರ ಅಧ್ಯಕ್ಷತೆಯಲ್ಲಿ ಕಾಬೆಟ್ಟು ಬೋರ್ಡು ಎಲಿಮೆಂಟರಿ ಶಾಲಾ ಕಟ್ಟೋಣದಲ್ಲಿ ಜರಗಿತು. ಸಭೆಯಲ್ಲಿ ದೇವರ ಪ್ರಾರ್ಥನೆ, ಕಾರ್ಯದರ್ಶಿಯವರ ರಿಪೋರ್ಟು, ಮುಖ್ಯ ಉಪಾಧ್ಯಾಯರ ಶಾಲಾವರದಿ, ಶ್ರೀಯುತ ಕೆ. ಎಸ್. ಬಾಬು ಎಂಬವರ ಸಾಮಾನ್ಯ ತಿಳುವಳಿಕೆಯ ಪಾಠ (೩ನೇ ವರ್ಗಕ್ಕೆ) ಅಧ್ಯಕ್ಷರ ಭಾಷಣ, ಮೊದಲಾದ ಅನೇಕ ಸಂಗತಿಗಳು ನಡೆದವು. ಆ ಬಳಿಕ ಕಾರ್ಯದರ್ಶಿಯವರು ಸಂಘದ ಪರವಾಗಿ ಅಧ್ಯಕ್ಷರಿಗೂ ಶಾಲಾ ಮುಖ್ಯ ಉಪಾಧ್ಯಾಯರಿಗೂ ವಂದನೆಗಳನ್ನು ಅರ್ಪಿಸಿ ತಾಂಬೂಲಾದಿಗಳನ್ನು ಸ್ವೀಕರಿಸಿ ಸಭೆಯು ಮುಕ್ತಾಯವಾಯಿತು.

ಇದೇ ಫೆಬ್ರುವರಿ ತಿಂಗಳ ತಾ. ೬ನೇ ಶನಿವಾರ ಎಲ್ಲಾ ಶಾಲಾ ಮಕ್ಕಳನ್ನು ಒಟ್ಟುಗೂಡಿಸಿ ಹೆಲ್ತ್‌ವೀಕಿನ ಸಮ್ಮಂಧ ಒಂದು ಮೆರವಣಿಗೆಯು ಇರುವುದು. ಅವಲ್ಲದೆ ಸ್ಯಾಕಲ್ ರೇಸ್, ಸೆಕ್‌ರೇಸ್, ಲೋಂಗ್ ಜಂಪ್, ಹ್ಯಾಜಂಪ್ ಮೊದಲಾದ ಅನೇಕ ಪಂದ್ಯಾಟಗಳು ಇರುವುವು. ಇವುಗಳಲ್ಲಿ ಗೆದ್ದು ೧ನೇ ಯಾ ೨ನೇ ಬಂದವರಿಗೆ ಇನಾಮುಗಳು ಹಂಚೋಣಾಗುವುವು.

ಗಾಯನದಲ್ಲಿ ಲೋಕಪ್ರಸಿದ್ಧರಾದ ಶ್ರೀಯುತ ಬಿಡಾರ ಕೃಷ್ಣಪ್ಪ ಎಂಬವರು ಕಳೆದ ಮಂಗಳವಾರ ಸಾಯಂಕಾಲ ಮಂಗಳೂರಿನಿಂದ ಇಲ್ಲಿಗೆ ಬಂದು ಬುಧವಾರ ದಿನ ರಾತ್ರೆ ತನ್ನ ಸುರಸವಾದ ಗಾಯನದಿಂದ ಎಲ್ಲಾ ಸಭಿಕರ ಮನಸ್ಸನ್ನು ಆನಂದಗೊಳಿಸಿದರು.

ಪುತ್ತೂರು:— ಉಪ್ಪಿನಂಗಡಿ ತಾಲೂಕು ಬೋರ್ಡಿನವರು, ಅವರ ಚೆಕ್‌ಬಂದಿ ಒಳಗೆ ಪ್ರೆಸಿಡೆಂಟರ ಲೈಸನ್ಸ್ ಪಡಕೊಂಡ ವಿನಹಾ ಯಾವನೊಬ್ಬ ಮನುಷ್ಯನಾದರೂ ಜಾನುವಾರು, ಕುರಿ, ಆಡು ಯಾ ಹಂದಿಯನ್ನು ಕೊಲ್ಲಲಿಕ್ಕೆ ಯಾ ಕೊಲ್ಲಿಸಲಿಕ್ಕೆ ಕೂಡದೆಂತಲೂ ಹಾಗೆ ಕೊಲ್ಲುವ ಪ್ರತಿ ಸಂಗತಿಯಲ್ಲಿ ವರುಷ ಒಂದರ ರೂಪಾಯಿ ೫ರಂತೆ ಫೀಸು ಹೊಂಸೋಣಾಗುತ್ತದೆಂತಲೂ ೧೯೨೦ನೇ ಇಸವಿ ಮದ್ರಾಸ್ ಲೋಕಲ್ ಬೋರ್ಡು ಆಕ್ಟಿನ ೧೯೦ (b) ಕಲಂ ಮೇರೆಗೆ ಒಂದು ಪ್ರಕಟಣೆಯನ್ನು ಇದೇ ಇಸವಿ ಜನವರಿ ತಿಂಗಳ ೨೫ನೇ ತಾರೀಕಿನ ಡಿಸ್ಟ್ರಿಕ್ಟ ಗಜೇಟಿನಲ್ಲಿ ಪ್ರಕಟಿಸಿರುವರು.

ಇಲ್ಲಿ ಇದೇ ಕಳದ ಜನವರಿ ತಾ. ೩೦, ೩೧ರಲ್ಲು ರಾತ್ರಿ ವ ಹಗಲು ಅಗಾಧ ಮಳೆ ಸುರಿಯಿತು.

ಇಲ್ಲಿ ಇದೇ ಫೆಬ್ರುವರಿ ತಾ. ೧ರಿಂದ ಆರೋಗ್ಯ ಮತ್ತು ಶಿಶು ರಕ್ಷಣೆಯ ಸಪ್ತಾಹದ ಆರಂಭವಾಗಿಯದೆ. ತಾ. ೭ರ ವರೇಗೆ ಇರುವದು. ಈ ದಿನ ಸಾಯಂಕಾಲ ಡಿವಿಜನ ಆಫೀಸಿನ ಬಳಿ ಮೈದಾನಿನಲ್ಲಿ ಇದಕ್ಕಾಗಿ ಹಾಕಿದ ಚಪ್ಪರದಿಂದ ಬಾಯಸ್ಕ್ಯಾಟಿನವರು ತಮ್ಮ ಕೈಯಲ್ಲಿ ಲಟ್ಟಿಗಳನ್ನು ಧರಿಸಿ ಪೇಟೆ ಮೆರವಣಿಗೆ ಮಾಡಿ ಚಪ್ಪರವನ್ನು ಸೇರಿದರು. ಅನಂತರ ಉಪನ್ಯಾಸಗಳು, ಮಾಯಾಲಾಂದ್ರದ ದೇಖಾವೆಗಳು ತೋರಿಸೋಣಾದವು.

ಸುಳ್ಯ:— ನಮ್ಮ ಸುಳ್ಯದಲ್ಲಿ ಈಗ ಭಯಂಕರವಾದ ಒಂದು ಆಕಸ್ಮಾತ್ತಾದ ಬೆಂಕಿಯು ಉಂಟಾಗಿ ೩-೪ ಕಟ್ಟೋಣವು ನಾಶವಾಗಿ ಸುಮಾರು ೨೦೦೦ ರೂಪಾಯಿಯಷ್ಟು ನಷ್ಟ ಉಂಟಾಗಬಹುದು. ಹೀಗೆ ಇನ್ನು ಸಹ ಬೆಂಕಿಯು ಉಂಟಾದರೆ ಸುಳ್ಯ ಪೇಟೆಯು ಹೆಚ್ಚು ದಿವಸಕ್ಕಿಲ್ಲ! ೨ ದಿವಸಕ್ಕೆ ಭಸ್ಮೀಭೂತವಾಗುವದು. ಮನುಷ್ಯರಿಂದಲೇ ಈ ಅನರ್ಥವು ಉಂಟಾದ್ದೆಂದು ಕೆಲವರು ಹೇಳುವುದನ್ನು ನಾವು ಕೇಳಿರುತ್ತೇವೆ. ಹಾಗಿದ್ದರೆ ಅಧಿಕಾರವುಳ್ಳ ಸರಕಾರಿಯು ತಕ್ಕ ತನಿಖೆಯನ್ನು ಮಾಡುವುದು ಅತ್ಯಗತ್ಯ. ಬೆಂಕಿ ಹಾಕಿ ಹೋಗುವುದನ್ನು ಸಹ ಪೂರದಲ್ಲಿ ಕಂಡವರಿದ್ದಾರೆಂತೆ. ಹೀಗಿದ್ದಲ್ಲಿ ಸಮ್ಮಂಧಪಟ್ಟವರು ಯಾಕೆ ತನಿಖೆ ನಡಿಸಲಿಲ್ಲವೊ! ಅಂತು ನಮ್ಮ ಸುಳ್ಯಕ್ಕೆ ಒಂದು ಪೋಲೀಸು ಸ್ಟೇಶನು ಇಲ್ಲದ್ದು ಒಂದು ದೊಡ್ಡ ಕೊರತೆಯೆಂತ ಇದರಿಂದ ಗೊತ್ತಾಗುವದು. ಆದ್ದರಿಂದ ಸರಕಾರವು ಇದರ ತಕ್ಕ ತನಿಖೆಯನ್ನು ಮಾಡುವುದು ಅತೀ ಅಗತ್ಯ. ಬಟ್ಟರೆ ಇನ್ನು ಕೆಲವು ದಿವಸಕ್ಕೆ ಸುಳ್ಯ ಲೈನು ಬೂದಿಯಾಗುವಲ್ಲಿ ಸಂಶಯ ಸಹ ಇರಲಾರದು. ಎಂದೊಂದು ಭಾಷ್ಯ.

ಮೂಲ್ಕಿ:— ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಹೆಲ್ತ ವೀಕ ಉತ್ಸವ ಬಹಳ ವಿಜೃಂಭಣೆಯಿಂದ ನಡೆಯಿತು. ತಾ. ೧ರಲ್ಲು ಇಲ್ಲಿಯ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳು ಪೇಟೆಯ ಎಲ್ಲಾ ಬೀದಿಗಳಲ್ಲಿ ಮೆರವಣಿಗೆಗಳನ್ನು ಮಾಡಿ ತಿರುಗಾಡಿದರು. ೩ನೆ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳೂ ಉಪಾಧ್ಯಾಯರೂ, ಸರ್ಕಾರಿ ಆಫೀಸರರೂ ಊರಿನ ಕೆಲವು ಗೃಹಸ್ಥರೂ ಸೇರಿ ಕೂಡಿ ಲೇಬರ್ ಇನ್ಸ್‌ಪೆಕ್ಟರ ಪರಮೇಶ್ವರರನ್ನು ಸಭಾಧ್ಯಕ್ಷರಾಗಿ ಆರಿಸಿ ಪ್ರಾಜ್ಞ ಭಾಸ್ಕರ ರಾಯರು ಶಂಭುರವರು ಆರೋಗ್ಯರಕ್ಷಣೆ, ಹಿರುಡಿಳಿ, ಅಂಟುರೋಗಗಳ ವಿಷಯ ಸ್ವಾರಸ್ಯವಾದ ಉಪನ್ಯಾಸ ಮಾಡಿದ ನಂತರ ಪಟೇಲ ಮುಕುಂದ ಕಮ್ತಿಯರು ಅದನ್ನು ಅದರಿಸಿ ಉದಾಹರಣೆಗಳನ್ನು ಹೇಳಿ ಮಾತಾಡಿದರು. ನಂತರ ಒಂದು ಸಬ್ ಕಮಿಟಿ ಕೂಡಿ ಮಕ್ಕಳನ್ನು ಆರಿಸಿ ಅಂಗಿಗಳನ್ನೂ, ಸ್ಲೇಟುಗಳನ್ನೂ, ಟಂಬ್ಲರುಗಳನ್ನೂ ವಗೈರೆ ಹಂಚಿ, ಕೂಡಿದ ಗೃಹಸ್ಥರಿಗೆ ಪಾನ್‌ಸುಪಾರಿ ಕೊಟ್ಟು ನೆಶನಲ್ ಎಂಥೆಮ್ನು ಹಾಡಿ ಸಭಾಧ್ಯಕ್ಷರಿಗೆ ಹೂಮಾಲೆ ಹಾಕಿ ಸಭೆ ಕೈದುಮಾಡೋಣಾಯಿತು. ಹಂಚಲಿಕ್ಕೆ ವಸ್ತ್ರವನ್ನು ತಯಾರಿಸಿ ಕೊಟ್ಟ ಫಾದರ್ ಕುವೆಲಿಂಗೂ, ಹೆಚ್ಚಿಗೆ ವಂತಿಗೆ ಕೊಟ್ಟ ಪಟೇಲ ದೇವಪ್ಪ ಶೆಟ್ರಿಗೂ ಶ್ಲಾಘಿಸೋಣಾಯಿತು. ಈ ಉತ್ಸವ ನೆರವೇರಿಸಲಿಕ್ಕೆ ಪ್ರಯತ್ನಪಟ್ಟ ಹೆಲ್ತ ಇನ್ಸಪೆಕ್ಟರರೂ, ಪಟೇಲ ಮುಕುಂದ ಕಮ್ತಿಯರೂ ಶ್ಲಾಘನೆಗೆ ಪಾತ್ರರು.

ಮಂಜೇಶ್ವರ:— ಇದು ವರೆಗೆ ಟೌನಿನ ಮಧ್ಯದಲ್ಲೂ ಮಾರ್ಗದ ಕಿನಾರೆಯಲ್ಲೂ ಇರುತ್ತಿದ್ದ ಟಪ್ಪಾಲ ಆಫೀಸನ್ನು ಇದೇ ತಿಂಗಳ ತಾ. ೧ರಿಂದ ಸ್ಥಳಸಂಕೋಚವಾದ ಒಂದು ಹೊಸ ಕಟ್ಟೋಣಕ್ಕೆ ರಾ। ರಾಮನ್ನಾಕರವರ ಅಂಗಡಿಯ ಎದುರಿಗೆ ಒಯ್ದಿರುತ್ತಾರೆ. ಮೊದಲಿನ ಕಟ್ಟೋಣವೇ ಆಗಬಹುದಿತ್ತೆಂಬ ಈಗ ಎಲ್ಲವರ ಬಾಯಿಯಿಂದಲೂ ಕೇಳಬರುತ್ತದೆ. ಅದೇ ದಿನ ಕುಂಜತ್ತೂರಿನಲ್ಲಿ ಸಹಾ ಒಂದು ಬ್ರಾಂಚು ಪೋಸ್ಟಾಫೀಸು ತೆರೆಯಲ್ಪಟ್ಟಿದೆ.

ತಲಪಾಡಿ ಗ್ರಾಮಕ್ಕೆ ಬಂದ ಬಟ್ವಾಡೆಯು ಕೆಲವು ಮನಿಆರ್ಡರುಗಳ ಹಣವನ್ನು ಅಕ್ಕಿಂಗ ಪೇದೆಯಾಗಿದ್ದ ಮುಂಡಪ್ಪ ಎಂಬವನು ದುರ್ವಿನಿಯೋಗ ಪಡಿಸಿದುದಾಗಿ ಕೊಟ್ಟ ಅರ್ಜಿಗಳ ತನಿಖೆ ಬಗ್ಗೆ ಟಪ್ಪಾಲು ಇನ್ಸಪೆಕ್ಟರರವರು ಬಂದು ತನಿಖೆ ನಡಿಸುತ್ತಲಿದ್ದಾರೆ. ತನಿಖೆ ಸಮಯ ಆತಗೆ ಇತರ ಪೇದೆಗಳು ಸಹಾನುಭೂತಿ ಕೊಟ್ಟ ಸಂಗತಿ ಬಯಲಿಗೆ ಬಂದಿರುತ್ತದಾಗಿ ಕೇಳುತ್ತೇವೆ. ತನ್ನದ್ದೆ ಇನ್ನೊಬ್ಬನ ಮೇಲೆ ಒಂದು ಇದೇ ತರದ ಮೊಕದ್ದಮೆಯು ಪ್ರಾರಂಭವಾಗಿದೆಯಂತೆ.

ಇಲ್ಲಿಯ ಸಕಲ ಜನಪ್ರೀತರಾದ ಈಗಿನ ಪೋಸ್ಟಮಾಸ್ಟರ್ ರಾ। ಗೋಪಾಲಕೃಷ್ಣಯ್ಯನವರಿಗೆ ಹೊಸದುರ್ಗಕ್ಕೆ ವರ್ಗವಾಗಿ ಅವರ ಬದಲಿಗೆ ಅಲ್ಲಿಯ ಪೋಸ್ಟುಮಾಸ್ಟರರವರು ಬರಲಿಕ್ಕಿರುವರಾಗಿ ಕೇಳುತ್ತೇವೆ.

ತಿದ್ದುಪಡಿ:— ಕಳೆದ ಸಂಚಿಕೆಯ ಮಂಜೇಶ್ವರ ಬಾತ್ಮಿಯಲ್ಲಿ "ಮಂಜುನಾಥ ರಾವು ಕಮ್ತಿ ಎಂಬುದರ ಬದಲಿಗೆ "ಮಂಜುನಾಥ ರಾಯ ಕಮ್ತಿ" ಎಂತ ಓದಬೇಕಾಗಿದೆ.

ಬಂಟ್ವಾಳ ಸೆಂಟರಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ —: ಸಂಘದ ಸಭೆಯ ಪ್ರೊಸಿಡಿಂಗ್ಸು :—

ಈ ಸಂಘದ ಉಪಾಧ್ಯಾಯರ ಸಭೆಯು ಜನವರಿ ತಿಂಗಳ ತಾರೀಕು ೩೦ನೇ ಶನಿವಾರ ಶ್ರೀ ವೆಂಕಟ್ರಮಣ ಟೆಂಪಲ್ ಫ್ರೀ ಎಲಿಮೆಂಟರಿ ಶಾಲೆಯಲ್ಲಿ ಜರಗಿತು. ಸುತ್ತುಮುತ್ತಲಿನ ಎೈಡೆಡ್ ಮತ್ತು ಬೋರ್ಡು ಶಾಲೆಗಳ ಅನೇಕ ಮಂದಿ ಉಪಾಧ್ಯಾಯರು ಹಾಜರಿದ್ದರು.

ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಹೆಡ್ ಮಾಸ್ತರರಾದ ರಾ। ಬಿ. ಕೃಷ್ಣಪೈಗಳವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಟೆಂಪಲ್ ಎಲಿಮೆಂಟರಿ ಶಾಲೆಯ ಸಹಾಯಕ ಉಪಾಧ್ಯಾಯರಾದ ರಾ. ಮಾಧವ ಕಮ್ತಿಯವರು ದೇವತಾ ಪ್ರಾರ್ಥನೆಯನ್ನು ನಡಿಸಿದರು. ನಂತರ ಕಾರ್ಕಳದಲ್ಲಿರುವ ಎಲಿಮೆಂಟರಿ ಶಾಲೆಯ ಉಪಾಧ್ಯಾಯರಾದ ರಾ. ಬಿ. ಶ್ರೀನಿವಾಸ ಪೈಗಳವರು ಉಪಾಧ್ಯಾಯರ ಸಂಘಗಳಿಂದ ಉಂಟಾಗುವ ಪ್ರಯೋಜನಗಳನ್ನು ವಿವರಿಸಿ ಹೇಳಿದ ನಂತರ ಒಂದನೇ ದರ್ಜೆಯ ಮಕ್ಕಳಿಗೆ ಒಂದು ಭಾಷಾ ಪಾಠವನ್ನು ಕೊಟ್ಟರು.

ಅನಂತರ ಈ ಕೆಳಗಿನ ಠರಾವುಗಳು ಪಾಸಾದವು. ಈ ಸೆಂಟರಿನ ಉಪಾಧ್ಯಾಯರ ಸಂಘದ ಸಭೆಗಳನ್ನು ವರ್ಷಕ್ಕೆ ಮೂರಾವರ್ತಿ ಕಾರ್ತಿಕ ಫಾಲ್ಗುಣ ಮತ್ತು ಜ್ಯೇಷ್ಠಮಾಸಗಳಲ್ಲಿ ಜರಗಿಸುವದೆಂದು ನಿರ್ಣಯಿಸಲಾಯಿತು. (೨) ಉಪಾಧ್ಯಾಯರಿಗೆ ರೂಪಾಯಿ ೨೦ಕ್ಕಿಂತ ಕಡಿಮೆ ಸಂಬಳ ಇಡದಂತೆ ತಮ್ಮ ತಮ್ಮ ಶಾಲಾ ಮೇಲಾಧಿಕಾರಿಗಳಿಗೆ ಬರಕೊಳ್ಳಬೇಕು. (೩) ಗ್ರಾಮಕ್ಕೊಂದು ಶಾಲೆಯನ್ನು ಇಟ್ಟು ಪ್ರಾಥಮಿಕ ವಿದ್ಯಾಭ್ಯಾಸವನ್ನು ಧರ್ಮಾರ್ಥವಾಗಿಯೂ, ಕಡ್ಡಾಯವಾಗಿಯೂ ಕೊಡಿಸುವಂತೆ ಮಾಡಿಸಬೇಕು. (೪) ಕ್ಲಾಸಿಗೆ ಒಬ್ಬ ಉಪಾಧ್ಯಾಯನಿಲ್ಲದೆ ಎಲ್ಲಾ ಶಾಲೆಗಳಲ್ಲಿಯೂ ಶಿಕ್ಷಣವು ಸರಿಯಾಗಿ ನಡಿಸಲಿಕ್ಕೆ ತೊಡಕು ಉಂಟಾಗುವುದರಿಂದ ಕ್ಲಾಸಿಗೆ ಒಬ್ಬ ಉಪಾಧ್ಯಾಯನನ್ನು ನೇಮಿಸುವಂತೆ ಮೇಲಾಧಿಕಾರಿಗಳನ್ನು ಕೇಳಿಕೊಳ್ಳುವದು. (೫) ಹೊಸ ಸಿಲೆಬಸನ್ನು ತಯಾರಿಸಿದರೂ ಉಪಾಧ್ಯಾಯರು ಇದರ ಪ್ರಕಾರ ಪಾಠಗಳನ್ನು ಮಾಡುತ್ತಿಲ್ಲವಾದ್ದರಿಂದ ಇನ್ನು ಮುಂದಾದರೂ ಸರಿಯಾಗಿ ಪಾಠ ಮಾಡಿ ಪ್ರಾಥಮಿಕ ವಿದ್ಯೆಯನ್ನು ಅಭಿವೃದ್ಧಿ ಮಾಡುವುದು. (೬) ಸಿಲೆಬಸ್ ಪ್ರಕಾರ ಕಲಿಸಲಿಕ್ಕೆ ಅನುಕೂಲವಾಗುವಂತೆಯೂ ಉಪಾಧ್ಯಾಯರ ಜ್ಞಾನವು ಅಭಿವೃದ್ಧಿಯಾಗುವಂತೆಯೂ ಹೊಸ ಹೊಸದಾದ ರೆಫರೆನ್ಸ ಪುಸ್ತಕಗಳ ಪ್ರತಿಯೊಂದನ್ನು ಪ್ರತಿ ಶಾಲೆಗೆ ಒದಗಿಸಿ ಕೊಡುವಂತೆಯೂ ಜಿಲ್ಲೆಯಲ್ಲಿ ಪ್ರಕಟವಾಗುವ ಒಂದು ವಾರ ಪತ್ರಿಕೆಯನ್ನು ಪ್ರತಿಶಾಲೆಗೂ ಒದಗಿಸಿಕೊಡುವಂತೆ ಎೈಡೆಡ್ ಶಾಲೆಯ ಮನೇಜರರಿಗೂ ಬೋರ್ಡು ಶಾಲೆಯ ಪ್ರೆಸಿಡೆಂಟರಿಗೂ ಬರಕೊಳ್ಳುವುದು. (೭) ಎಂ. ಜಿ. ಬಗಲ್ ಇವರಿಂದ ಹೊಸ ಸಿಲೆಬಸಿಗೆ ಅನುಸಾರವಾಗಿ ಕ್ರಮವಾಗಿ ಬರೆಯಲ್ಪಟ್ಟ ಎರಡನೇ ದರ್ಜೆಯ ಕಥೆಗಳು, ಮೂರನೇ ಮತ್ತು ನಾಲ್ಕನೆ ದರ್ಜೆಯ ಚರಿತ್ರೆ ಮತ್ತು ಕಥೆಗಳು; ಇವುಗಳು ಎಲ್ಲಾ ಶಾಲೆಗಳಲ್ಲಿಯೂ ಉಪಯೋಗಿಸ ಬಹುದಾಗಿ ಸಹ ಠರಾವು ಪಾಸಾಯಿತು.

ಅನಂತರ ಅಧ್ಯಕ್ಷರು ಪ್ರೋತ್ಸಾಹಕ ಭಾಷಣವನ್ನು ಮಾಡಿ ಸಭೆಯನ್ನು ಮುಕ್ತಾಯ ಪಡಿಸಿದರು. ನಂತರ ನೆರೆದ ಸಭಿಕರಿಗೆ ತಾಂಬೂಲ ಪಾನಕಾದಿಗಳನ್ನು ಹಂಚಿದ ಬಳಿಕ ದೊಡ್ಡ ಹರ್ಷದಿಂದ ಬಂದ ಉಪಾಧ್ಯಾಯರಿಗೆ ಅಭಿನಂದನೆಗಳನ್ನು ಅರ್ಪಿಸಿ ಸಭೆಯು ಮುಗಿಯಿತು.

ಸೆಕ್ರೆಟರಿ,
ಉಪಾಧ್ಯಾಯರ ಸಂಘ ಬಂಟ್ವಾಳ.

ಮಂಗಳೂರು.

ಮಂಗಳೂರು ಗೀತಾಧರ್ಮ ಮಂಡಳದ ಆಶ್ರಯದೊಳಗೆ ನೇತನಲ್ ಗರ್ಲ್ಸ್ ಸ್ಕೂಲ್ ಸಭಾಸದನದಲ್ಲಿ ತಾ. ೮-೨-'೨೬ನೇ ಸೋಮವಾರ ೫॥ ಗಂಟೆಗೆ ಬ್ರಹ್ಮಶ್ರೀ ತ್ರಿವೇದಿ ಅನಂತ ಉಪಾಧ್ಯಾಯ ಇವರು "ಭಗವದ್ಗೀತೆಯು ಉದ್ದೇಶ ನಿಷ್ಕಾಮ ಕರ್ಮೋಪದೇಶ" ಈ ಕುರಿತು ಉಪನ್ಯಾಸ ಕೊಡುತ್ತಾರೆ. ಮ॥ ರಾ॥ ಎ. ಶ್ರೀನಿವಾಸ ಪೈ, ಹ್ಯಾಕೋರ್ಟು ವಕೀಲ್ ಇವರು ಅಧ್ಯಕ್ಷರಾಗಲಿಕ್ಕೆ ದಯವಿಟ್ಟು ಅನುಮತಿ ಕೊಟ್ಟಿರುವರು. ಸರ್ವರಿಗೂ ಸ್ವಾಗತವಿದೆ.

ಗವರ್ನಮೆಂಟ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತಿಯನ್ನು ಇದೇ ಕ್ರಿಸ್ತನ ಸಂವತ್ಸರದ ಮಾಘ ಬ॥ ೯ಯು ಶನಿವಾರ (೬-೨-'೨೬) ಸಾಯಂಕಾಲ ೫॥ ಘಂಟೆಗೆ (ಸ್ಟೆಂಡಾರ್ಡ ಟೈಮ್) ಸರಿಯಾಗಿ ಸದರಿ ಶಾಲೆಯಲ್ಲಿ ಜರಗಿಸಬೇಕಾಗಿ ನಿಶ್ಚಯಿಸಿಯದೆ. ಸುಸ್ವಾಗತ.

ಬರುವ ಗುರುವಾರ ಶಿವರಾತ್ರಿ ದಿವಸ ಮಂಗಳೂರು ಆರ್ಯ ಸಮಾಜ ಮಂದಿರದಲ್ಲಿ ಋಷಿ ಬೋಧೋತ್ಸವವು ಜರಗಿಸಲ್ಪಡುವುದು. ಅಂದು ಸಾಯಂಕಾಲ ೫ನು ಘಂಟೆಗೆ ಶ್ರೀಯುತರುಗಳಾದ ಯಂ. ಮಾಧವ ರಾವ್ ಅವರ್ಗಳ್ ಬಿ. ಎ. ಬಿ. ಯಲ್. ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿಯವರು ಮತ್ತು ಮೋಹನಪ್ಪ ತಿಂಗಳಾಯರ ಭಾಷಣಗಳಾಗುವವು. ಸರ್ವರಿಗೂ ಸುಸ್ವಾಗತವಿದೆ.

ಕರ್ನಾಟಕ ತಿಲಕ ವಿದ್ಯಾಲಯದ ಸಹಾಯಾರ್ಥವಾಗಿ ಕಳೆದ ವಾರ ಮುಷ್ಟಿಫಂಡಿನಿಂದ ರೂ. ೬ ಮತ್ತು ೮॥ ಸೇರು ಅಕ್ಕಿ ಜನಾ ಬಂದಿರುತ್ತದೆ. [illegible]

– ಖಾದಿಯಲ್ಲಿ ಅಭಿಮಾನ. –

[illegible]

ಕರ್ನಾಟಕ ತಿಲಕವಿದ್ಯಾಲಯದ ಮುಂದಿನ ಸ್ಥಿತಿ

[illegible]

ರಿಂದ ಬೇರೆ ಬೇರೆ ಶಾಲೆಗಳಿಗೆ ಹೋಗುವ ಹಾಗೂ ಪಾಠಕ್ರಮವನ್ನು ಅದಷ್ಟು ಮಟ್ಟಿಗೆ ಆ ವಿದ್ಯಾಲಯಗಳಿಗೆ ಸರಿಯಾಗಿ ಇಡತಕ್ಕದ್ದು.

ವಿದ್ಯಾಲಯದ ಬದಿಯಲ್ಲಿಯೇ ಉಳಕೆಯಿಂದ ವಿದ್ಯಾವೃದ್ಧಿ ಮಾಡುವ ಹಾಗೆ ಜಾತಿಗಳ ನಿಯಮಗಳಿಗೆ ವಿರುದ್ಧವಾಗದಂತೆ ಊಟೋಪಚಾರಕ್ಕೆ ಏರ್ಪಾಡು ಇರತಕ್ಕದ್ದು. ಈ ಮೇಲಿನ ತತ್ವಗಳನ್ನಿಟ್ಟು ಅಗತ್ಯ ಇದ್ದರೆ ಕಾರ್ಯದರ್ಶಿಯರನ್ನು ಬರಲು ಮಾಡಿ ಕೆಲಸವನ್ನು ಕಾರ್ಯಕಾರಿ ಮಂಡಳಿಯವರು ಮಾಡಿ ಬರುವ ಸಭೆಯ ಮುಂದೆ ವರದಿ ಇಡತಕ್ಕದ್ದು.

ಸರ್ವಸಮ್ಮತದಿಂದ ಮಂಜೂರಾಯಿತು.

(ಸಹಿ) M. Madhava Rao,
President,
6–12–1925

(ಯಥಾನಕಲು)

ಮಂಗಳೂರು ತಾಲೂಕು ಕಾಂಗ್ರೆಸ್ಸು ಕಮಿಟಿ ಕಚೇರಿ, ೨೯-೧-'೨೬. — ಅ. ಭೋಜರಾಯ, ಕಾರ್ಯದರ್ಶಿ.

NOTICE

The public are hereby informed that there is recrudescence of small-pox in the Market Ward. As a preventive measure they are advised to have all unprotected children immediately vacinated and adults re-vacinated. Every fascility for this purpose will be afforded by the undersigned.

Office of the Municipal Health Officer, Mangalore, 4–2–1926. — T. Gopalan Nair, *Munl. Health Officer.*

ಪತ್ರವ್ಯವಹಾರ.

(ಪತ್ರಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವದೇ.)

ಕಾಸರಗೋಡು ತಾಲೂಕಿಗೆ ಸೇರಿದ ಹೊಸಬೆಟ್ಟು ಪಂಚಾಯತ ಕೋರ್ಟಿಗೆ ಸೇರಿದ ೬ ಗ್ರಾಮಗಳ ಪೈಕಿ ಪಾವೂರು ಗ್ರಾಮವು ಒಂದಾಗಿದೆ. ಬಾಕಿ ೫ ಗ್ರಾಮಗಳು ಕಾಸರಗೋಡ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿಗೆ ಸೇರಿದಾಗ್ಯೂ ಈ ಗ್ರಾಮವು ಮಾತ್ರ ಮಂಗಳೂರು ಮುನ್ಸಿಫ ಕೋರ್ಟಿಗೆ ಸೇರಿಯದೆ. ಪಾವೂರು ಗ್ರಾಮಕ್ಕೆ ಸೇರಿದ ಪ್ರತಿವಾದಿರ ಮೇಲೆ ವಾರಂಟು ತೆಗಿಸುವ ಬಗ್ಗೆ ಡಿಕ್ರಿಯನ್ನು ಸರ್ಟಿಫೈ ಮಾಡಿಸಿ ನೇರಾಗಿ [illegible]

"ನಿಷ್ಪಕ್ಷಪಾತಿ."

ಮದ್ರಾಸು ಕೌನ್ಸಿಲ್ ಮೆಂಬರರ ಕೂಡೆ ನನ್ನದೊಂದು ವಿಜ್ಞಾಪನೆ.

ಅಯ್ಯಾ,

[illegible]

ಈಗ ಲೇಬರ್ ಡಿಪಾರ್ಟಮೆಂಟಿನವರಿಂದ ರೈತರಿಗೆ ಒದಗುವ ಕಷ್ಟಗಳನ್ನು ಕೇಳುವವರ್‍ಯಾರಿದ್ದಾರೆ. ಅಯ್ಯಾ! ಮೆಂಬರರುಗಳಿರಾ ಲೇಬರ್ ಡಿಪಾರ್ಟಮೆಂಟಿನವರಿಂದ ರೈತರಿಗೆ ಒದಗಿದ ಕಷ್ಟನಷ್ಟಗಳಿದ್ದ ರೈತರನ್ನು ಕಾಪಾಡಿ ಆ ಡಿಪಾರ್ಟಮೆಂಟಿನ ಧನುರ್ಭಾಗಗಳನ್ನು ಕಡಿಸ ಬಲ್ಲಿರಾ ಎಂಬದೊಂದು ನಿಮ್ಮೆಲ್ಲರ ಕೂಡೆ ನನ್ನದೊಂದು ವಿನಯದ ವಿಜ್ಞಾಪನೆ,

(ನಾನೊಬ್ಬ ರೈತ.)

ತಾರೀಕು ೨೯—೧೦—೨೫ರಲ್ಲು ಮ. ರಾ. ರಾ. ಮದರಾಸು ನ್ಯಾಯವಿಧಾಯಕ ಸಭೆಯ ಮೆಂಬರರಾದ ಸಾಲ್ದಾಂಞಾರವರ ಅಧ್ಯಕ್ಷತೆಯಲ್ಲಿ ಉಪ್ಪಿನಂಗಡಿ ತಾಲೂಕಿನ ಈ ಕೆಳಗೆ ದಸ್ಕತು ಹಾಕಿದ ವರ್ಗದಾರರು ಸುಳ್ಯದ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸಭೆಮಾಡಿ, ಮಾಡಿದ ಪ್ರೊಸಿಡಿಂಗ್ಸ್:—

(ಕಳೆದ ಸಂಚಿಕೆಯಿಂದ ಮುಂದುವರಿದುದು)

೬) ರಿಜರ್ವ, ಯಾ, ರೆವಿನ್ಯುಕಾಡುಗಳಲ್ಲಿ ಇರುತ್ತಿದ್ದ ಹಾಲುಬೆತ್ತ ಮತ್ತು ದೊಡ್ಡ ಬೆತ್ತಗಳನ್ನು ಏಲಂ ಹಾಕುತ್ತಾ ಬಂದುದರಿಂದ ಕಂಟ್ರಾಕ್ಟುದಾರರು ಅಂತಹ ಬೆತ್ತಗಳನ್ನು ಗಡ್ಡೆ ಸಮೇತ ಪೂರ್ತಿ ಕಿತ್ತುತೆಗೆದು, ಬೆತ್ತವು ಬಹಳ ಕಮ್ಮಿಯಾದುದರಿಂದ ಅವುಗಳು ಪುನಹ ಸಾಕಷ್ಟು ಬೆಳೆಯುವ ವರೆಗೆ ಏಲಂಮನ್ನು ಮನ್ನಮಾಡಬೇಕಾಗಿಯೂ, ಏಲಂ ಮಾಡುವ [illegible]

[illegible]

[ವರ್ಗದಾರ.]

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ್ಯ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನೆಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗ್ಯೆರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯೆಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ — **ವಜ್ರಾಂಗ-ಬಿಂದು** — ವೀರ್ಯ ವೃದ್ಧಿ ಕಾರಕ

[illegible]

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

[illegible]

ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
[illegible]

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000–0–0	ಅಧಿಕಾರಿಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds ,, 259,000–0–0	ಕ್ಷೇಮನಿಧಿ ಮತ್ತು ಇತರ ಫಂಡುಗಳು 259,000—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
ವಿಶೇಷ ಮಾಹಿತಿ ಬಗ್ಗೆ ಸೆಕ್ರಿಟರಿಗಳಿಗೆ ಬರಕೊಳ್ಳುವದು.

Canara Bank Ltd., *Mangalore, 9th Feb. 1925.* — ***K. Venkat Rao,*** *Secretary.*

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾಂರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೫೦ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ. ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:— ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ, ಮಂಗಳೂರು ಟೌನಿಗೆ ಮಾತ್ರ.

Free! Free!! Free!!
ಪ್ರಸಿದ್ಧವಾದ
"ಕಾಮಶಾಸ್ತ್ರ"
ಈಗಲೆ ತಯಾರಾಗಿದೆ.
ಜರೂರಾಗಿ ಬರೆಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252), ಮದ್ರಾಸ್.

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಹುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ಪಿರಿಟ್ ಮಾರ್ಟ್.

ಮಹೋರ್ಕ್ಯಾಸಿ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. — ಅಥವಾ — [illegible] ಕಾಫಿ ಕ್ಲಬ್, ರಥಬೀದಿ, ಮಂಗಳೂರು.

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲ ವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತುಹತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಕುಬೇರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಲಿಬುದ್ದಿನ್‌ರ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಿಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, ಪಾಡಿಸೇರಿ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಶಾಲು, ವೇಷ್ಟಿ, ರೇಶ್ಮೆ ಸೀರೆಗಳು, ಅರಳಪೇಟೆ ಸೀರೆಗಳು, [illegible] ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮುಂಡುಗಳು, [illegible] ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

[illegible] ಅಂಗವಸ್ತ್ರ, ಇತ್ಯಾದಿ—ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ [illegible] ವಗೈರೆ—

ಎಲ್ಲಾ ಸಂಗ್ರಹವನ್ನೂ ನಮ್ಮ [illegible] ಸಂಗ್ರಹಿಸಿ ಇಟ್ಟಿರುತ್ತೇವೆ.

ಶರತ್ತು:—ನಗದು ರೂಪಾಯಿ 5)ಕ್ಕೆ ಮೀರಿದ [illegible] ಸೇಕಡಾ 6¼ರ, ರೂ. 50ರಿಂದ 250ರವರೆಗೆ ಸೇಕಡಾ10%, ರೂ. 250 ರಿಂದ 1000ಕ್ಕೆ 12½% ಈ ದರ [illegible] ಕೊಡಲಾಗುವುದು.

ಆಯುರ್ವೇದಾಚಾರ್ಯ ಶಾಸ್ತ್ರಿ ಅಪ್ಪಾವಧಾನಿ,
ಶಾ. ವೇ. ಸುಬ್ಬರಾವ್, ಯಂ. ಜಿ. ಯು. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಕೀವಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುತ್ತದೆ. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ, ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦.
ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೯—೦.
ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ. | ಡಿ. ಮುನ್ನಾಲಾಲ್, ಡಿಲ್ಲಿ ನೇಟಿವ್ ಡಾಕ್ಟರ್. ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. SHARADA PRESS, MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. Registered: No. M. 498. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಕುಲಸುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ತೆರುಪವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಳವರಂಜಿಪರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೧೨ನೇ ಶುಕ್ರವಾರ ಫೆಬ್ರುವರಿ ೧೯೨೬. ಸಂಚಿಕೆ ೭.

The Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. ಹೆಡ್ ಆಫೀಸು: ಉಡುಪಿ. — Branch: COONDAPOOR. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ವಸೂಲಾದ ಮೂಲಧನ	ರೂ. 1,73,185—9—11.
ಆಪದ್ಧನ ವಗೈರೆ ಎತ್ತಗಳು	ರೂ. 64,700—0—0.
ಸಾ. ಸೇ. 6ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಏವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಾದ ಮೂಲಧನ 1,73,185—9—11, ಆಪದ್ಧನ ವ ಇತರ ಎತ್ತಗಳು 64,700—0—0, ಠೇವಣಾತಿಗಳು 5,10,077—10—3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳುವಾರಿಗಳಿಗೆ 4371—0—0, ಏವೇಜಿನ ಮೇಲಣ [illegible] ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 93,340—10—5, ಜುಮ್ಲಾ ರೂ. 8,45,674—14—7.

ಆಸ್ತಿ ವ ಸೊತ್ತುಗಳು.

ಹಿತ್ತಲು ಕಟ್ಟೋಣ ಕಟ್ಟಿಣದ ಟ್ರೆಜರಿಗಳು ವಗೈರೆ 4134—4—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496—6—2, ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ) 41,741—14—2, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 26,131—6—3, ಜುಮ್ಲಾ ರೂಪಾಯಿ 8,45,674—14—7.

ನಿರಖು ಠೇವಣಾತಿಗಳನ್ನು ಕಾಲಪ್ರಸ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಪ್ರೊವಿಡೆಂಟ್ ಠೇವಣಾತಿಗಳನ್ನು ಕೆಂತು ಠೇವಣಾತಿಗಳನ್ನು, ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾವ್ಕಾರಿ ಹುಂಡಿಗಳನ್ನೂ, ವಜ್ಜಾಕುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

N. Anand Rao,
Secretary.

ಮೂರು ದಿವಸಗಳಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತಕ್ಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆಯಿಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಹಾಕ್ಕತ್ತೆಂಟು ದಿವಸಕ್ಕೆ ಸೇವಿಸಬಹುದು.
1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1—9—0.
ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಯಿರಿ.

ವಿಳಾಸ:— ದೇವಣ್ಣ ನಾರಾಯಣ ಸೇಟ್, [illegible] ಮಂಗಳೂರು, (ದ. ಕ.)

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುಧಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟೆಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬಲಾರ್ಡ್ ಎಸ್ಟೇಟ್, ಮುಂಬಯಿ

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಅಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಅಣೆ.

ಅಮೃತಾಂಜನ ಡಿಪೊ,
6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು. — 109 ಫ್ರೇಯರ್ ರೋಡ್ ಮುಂಬಯಿ.
ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟೆಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬಯ್ಯಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . . ವಸಂತ
ಸಮಾಜಸುಧಾರಕನೆಂದರೆ . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . ವಸಂತ
ಕರ್ಣಾಟಕ ಭಾಷಾಸೇವಕನೆಂದರೆ . . . . ವಸಂತ
ದೇಶವಿದೇಶ ಬಂಧುವೆಂದರೆ . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರಾನ್ ¼ ಪುಟ ಸ್ಯಾಜಿನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

11 ಮಣಿಗಳಿದ್ದು ಬ್ರಿಜ್ ಮೂವ್ಹಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟವಾಚ್.



ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Shetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಐಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.
ಬಾಟ್ಲಿವಾಲರ ಕಿಒರ್ ಆಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಟೈಫಾಯಿಡ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦ "AGENTS WANTED"
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ತಾರಿನಪತ್ರ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಚಿ. ಬಾ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2—8—0.
„ ಸ್ಥಳೀಕರಿಗೆ ... „ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು. ಎಡಿಟರ್,

ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮೊಳ ಉದ್ದ 1¼ ಮೊಳ ಅಗಲ ರೂ. 1½ರಿಂದ 2 ವರೆಗೆ, 5 ಮೊಳ ಉದ್ದ 1½ ಮೊಳ ಅಗಲ ರೂ. 1½ ರಿಂದ 5 ವರೆಗೆ, 6 ಮೊಳ ಉದ್ದ 1½ ಮೊಳ ಅಗಲ ರೂ. 2½ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಷ್ಮೆ ಮಡಿಗಳು, ಜಾರ್ಮ್ಸಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಚಾಪಿಂಗ್, ಜಾಘಂಟೆ, ಶಾಳ, ಪಶ್ಮೀರ್ ದಾಸಿ, ಹಿತ್ತಾಳೆಯ ಅಟೆದ ಸಾಮಾನುಗಳು, ಪೋಟೋ ಅಂಗುರಗಳು ಮತ್ತು ಇನ್ನು ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಲ್ಯಾಟೆಲಾಗ್ ಇನಾಂ.

ವಿಳಾಸ:—
ತ್ರಿಲೋಕಮಣಿ ಯೂ ನಾರಾಯಣಾಚಾರ್ಯ
ಮತ್ತು ಕಂಪೆನಿ, ಜೋಲಂಜಾ, ಕಾಶೀ ಕ್ಷೇತ್ರ.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಪಾಲ್ಗುನ ಶು॥ ೧ ಶನಿವಾರದಿಂದ ಕ್ರೋಧನ ಸಂವತ್ಸರದ ಪಾಲ್ಗುನ ಶು॥ ೭ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಕುಂಭ ಮಾಸ.)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರದಿನ	ಸೂರ್ಯ ಉ.	ಸೂರ್ಯ ಅಸ್ತ.
13	ಶನಿ	೧	೩೬.೧	ಧನಿಷ್ಠಾ	೮.೨೦	೧	6 55	6.34
14	ರವಿ	೨	೩೧.೪೬	ಶತಭಿಷಾ	೪.೩೨	೨	6 56	6.34
15	ಸೋಮ	೩	೨೬.೩೧	ಪೂ. ಭಾ.	೦.೪೮	೩	6.55	6.35
16	ಕುಜ	೪	೨೨ ೧೪	ರೇವತೀ	೫೫.೩೨	೪	6.55	6.35
17	ಬುಧ	೫	೧೮.೩೦	ಅಶ್ವಿನೀ	೫೪ ೩೨	೫	6.55	6.35
18	ಗುರು	೬	೧೫.೫೮	ಭರಣೀ	೫೪. ೫	೬	6 54	6.36
19	ಶುಕ್ರ	೭	೧೪.೩೨	ಕೃತ್ತಿಕಾ	೫೪.೫೮	೭	6 54	6.36

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚು ಪಕ್ಷ	Minimum ಕಡಿಮೆ	Rainfall. ಮಳೆ ದಿವಸದ ಮಳೆ	ಜುಮಲಾ ಮಳೆ.
5	91—8	71—9	—	—
6	90—8	72—8	—	—
7	91—0	72—8	—	—
8	90—1	73—1	—	—
9	91—5	72—8	—	—
01	90—8	73—2	—	—
11	88—6	73—6	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಅ.	ವರೆಗೆ ರೂ. ಅ.
ಮಸ್ಕತಿ		8— 4	9— 0
ಹೊಸ ಗುಡ್ಡು	...	7— 10	8— 4
ಹೊಸ ರಾಶಿ	...	7— 0	7—12
ಅವ್ವಲ್ ಬೆಳ್ತಿಗೆ	...	8— 0	9— 0
ರಂಗೂನು ಬೆಳ್ತಿಗೆ ಗೋಣಿ ೧	...	13— 0	14 — 0
ಗೋಧಿ ಗೋಣಿ ೧ಕ್ಕೆ	...	18— 8	19 — 8
ಹುರುಳಿಗೋಣಿ ೧ಕ್ಕೆ	...	8 — 12	9 — 8
ಕಡಲೆಗೋಣಿ ೧ಕ್ಕೆ	...	14— 8	15— 0
ತೊಗರಿಗೋಣಿ ೧ಕ್ಕೆ	...	14— 8	15— 0
ತೊಗರಿಬೇಳೆ ಗೋಣಿ ೧ಕ್ಕೆ	...	16— 8	22— 0
ಉದ್ದುಗೋಣಿ ೧ಕ್ಕೆ	...	16— 0	—
ಹೆಸರುಗೋಣಿ ೧ಕ್ಕೆ	...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ	...	60— 0	62— 8
ಉಪ್ಪು ಗೋಣಿ ೧ಕ್ಕೆ	...	4— 4	4— 8
ಕೊಬ್ರಿ ಖಂಡಿ ೧ಕ್ಕೆ	...	110— 0	120 — 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	35— 0	36— 0
ಎಳ್ಳಿಂಡಿ ಖಂಡಿ ೧ಕ್ಕೆ	...	42— 8	47— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	7—14	—
ಎಳ್ಳೆಣ್ಣೆ ಮುಡಿ ೧ಕ್ಕೆ	...	7— 4	11— 0
ಹರಳ ಎಣ್ಣೆ ಪೆಟ್ಟಿಗೆ ೧ಕ್ಕೆ	...	8-8-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	5— 0	5 — 2
ಊರ ಮೆಣಸಿನಕಾಯಿ ಮುಡಿ ೧ಕ್ಕೆ	...	9— 4	—
ಸಾಸಿವೆ ಮುಡಿ ೧ಕ್ಕೆ	...	9— 8	—
ಕೊತ್ತಂಬರಿ ಮುಡಿ ೧ಕ್ಕೆ	...	3— 8	4— 4
ಕಾಫಿ ಖಂಡಿ ೧ಕ್ಕೆ	...	380— 0	390— 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳಹು	...	275— 0	300— 0
ಹೊಸ ಅಡಿಕೆ ಖಂಡಿ ೧ಕ್ಕೆ	...	180— 0	225 — 0
ಕಾಳುಮೆಣಸು ಖಂಡಿ ೧ಕ್ಕೆ	...	300— 0	400—
ಯಾಲಕ್ಕಿ ಮುಡಿ ೧ಕ್ಕೆ	...	45— 0	—
ಗೇರುಬೀಜ ಮುಡಿ ೧ಕ್ಕೆ	...	4— 0	—
ಕಬ್ಬಿಣ ಖಂಡಿ ೧ಕ್ಕೆ	...	45— 0	65— 0
ತಾಂಬ್ರ ತಗಡು ಮುಡಿ ೧ಕ್ಕೆ	...	16— 4	16—12
ತಾಮ್ರ ಪಾತ್ರೆಗಳು ಮುಡಿ ೧ಕ್ಕೆ	...	21— 0	—
ಚೀನಿ ಬೆಳ್ಳಿ ಸೇರು ೧ಕ್ಕೆ	...	18—10	
ಹಿತ್ತಾಳೆ ತಗಡು ಮುಡಿ ೧ಕ್ಕೆ	...	16— 8	
ಪವನು		13— 6	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

PROPRIETOR RAJVAIDYA NARAYANJI KESHAVJI
NO PRICE NO POSTAGE

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದಿ, ಅಂಚೆ ಕಾಸಿಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಚೈನಾ ಬಜಾರ್, ರೋಡ್, ಮದ್ರಾಸು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲು 1ಕ್ಕೆ ರೂ. 3—2—0.
„ 2. „ „ ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೋಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಷನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಖತ್ತಾ ನೋಟು, ಮೆಮೊ ಒಫ್ ಕೊಸ್ಟ್ಸ್, ಮೆಮೊರಂಡಮ್ ಒಫ್ ಎಪ್ಪಿಯರೆನ್ಸು, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—3—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ತ್ವರೆಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ

ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್, ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮಾದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಾಲಿ ಪುರಾಣ ... ...
(3) ಇಂದ್ರಜಿತು ಕಾಳಗ ... ...
(4) ಚಂದ್ರಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಕಟ್ಟಿದ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣದಾಸಾಮೃತ ... ...
(9) ಶ್ರೀ ಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣ ದೀಪಾಕ್ಷಮೋದ ಕಥಾ ... ...
(18) ಚಂದ್ರಮಾಳ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಮಹಾದೇವರ ಮಹಾತ್ಮ್ಯ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷ್ಮಾಗ್ರಹ ಕಥೆ ... ...
(24) „ ಚೋರ ಕಥೆ ... ...
(25) „ ಭಾರ್ಗವ ಶಾರದೆಂಬ ಕಥೆ ... ...
(26) „ ಗೋವಿಂದ ಚರಿತ್ರೆ ... ...
(27) „ ಮುಕ್ತಾಂಗನ ಕಥೆ ... ...
(28) „ ಸಾಮಂತ ಗಣೇಶ್ವರ ಕಥೆ ... ...
(29) „ ಅಂಗದ ಸಂಧಾನ ... ...

ಶಾರದಾ ಛಾಪಖಾನೆ, ಮಂಗಳೂರು.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ಡಿ. ಊಲನ್ ಮಾರ್ಟ್ಸ್,
ಮಂಗಳೂರು.

ಜ್ಯಾಹೀರಾತು.

ಪುತ್ತೂರಲ್ಲಿ ವ್ಯಾಪಾರಮಾಡುವ ಬೆಳ್ಯಾರೆ ನರಸಿಂಹ ಮಲ್ಯನು ಈ ಮೂಲಕ ಸರ್ವಜನರಿಗೆ ತಿಳಿಸುವುದೇನೆಂದರೆ:—

ನನ್ನ ಅಳಿಯ ಎಲ್ಲೂರು ರಾಮಕೃಷ್ಣ ಕಿಣಿಯು ನನ್ನ ಅಂಗಡಿಯಲ್ಲಿ ತನ್ನ ಚಿಕ್ಕಂದಿನಿಂದ ಇದ್ದು ಕಳೆದ ತಾರೀಕು 28—10—25ರಲ್ಲಿ ನನ್ನೊಳಗೆ ರಿಜಿಸ್ಟ್ರಿ ನಿಶಿ ರಶೀದಿಯಾಗಿ ಈಗ ಆತನು ಪ್ರತ್ಯೇಕ ಅಂಗಡಿಯನ್ನು ಮಾಡಿ ವ್ಯಾಪಾರ ನಡಿಸುತ್ತಿದ್ದಾನೆ. ಸದರಿ ಅಂಗಡಿಯಲ್ಲಿ ನನಗೇನು ಹಕ್ಕು ಸ್ವತಂತ್ರ ಇಲ್ಲವೆಂಬುದನ್ನು ಈ ಮೂಲಕ ತಿಳಿಸೋಣಾಗುತ್ತದೆ.

ಬಿ. ನರಸಿಂಹ ಮಲ್ಯ,
ಪುತ್ತೂರು.

NOTICE.

ದಕ್ಷಿಣ ಕನ್ನಡಾ ಒಫಿಶಿಯಲ್ ರಿಸೀವರ ಕೋರ್ಟಿನಲ್ಲಿ
ದಿವಾಳಿ ಅರ್ಜಿ ನಂ. 8/26.

ಲಕ್ಷ್ಮಣ ಮರಕಾಲ, ಗುರುವ ಮರಕಾಲನ ಮಗ, ಮಂಗಳೂರು ಶಹಾರು ಕುದ್ರೋಳಿ } ದಿವಾಳಿ ಅರ್ಜಿದಾರ.

ಮತ್ತು

ಬೈಕಂಪಾಡಿ ಪೂವಪ್ಪ ಮರಕಾಲ ಕೂಡ— ಕ್ರೆಡಿಟರರು.

ಸದರಿ ಅರ್ಜಿದಾರನು ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಿದ ಸದರಿ ಅರ್ಜಿಯು ತಾರೀಕು 5-3-1926ಕ್ಕೆ ಸದರಿ ಕೋರ್ಟಿನಲ್ಲಿ ತನಿಕೆ ಬಗ್ಗೆ ಇಟ್ಟಿರುತ್ತದೆ. ಆಕ್ಷೇಪವುಳ್ಳವರು ಸದರಿ ತಾರೀಕಿನ ಒಳಗೆ ತಮ್ಮ ಆಕ್ಷೇಪಗಳನ್ನು ಜಾಹೀರುಮಾಡತಕ್ಕದ್ದು.

Mangalore, 9—2—1926. } M. Shankaranarayana Rao,
Vakil for Petitioner.

ನೋಟೀಸು.

ಮಂಗಳೂರು ಶಹಾರ ಮಿಜಾರ ತಿಮ್ಮ ಪೈ, ಇವರು ತಿಳಿಯಪಡಿಸುವುದೇನೆಂದರೆ:— ಈ ಕೆಳಗೆ ಹೆಸರು ಕಾಣಿಸಿದ ಅಸಾಮಿಯವರು ಚಿನ್ನಾಭರಣ ಮತ್ತು ಬೆಳ್ಳಿ ಆಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲೀ ಬಡ್ಡಿಯನ್ನಾಗಲೀ ಅವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ತಿಳಿಸಿದ್ದಾಗ್ಯೂ ಕೊಡದೆ ಇರುವದರಿಂದ ಇನ್ನಾದರೂ ಸದರಿಯವರು ಅವರಿಂದ ಬಹಾ ಅಸಲು ಬಡ್ಡಿ ಮೊಬಲಗುಗಳನ್ನು ಇದೇ ೧೯೨೬ನೇ ಇಸವಿ ಫೆಬ್ರವರಿ ತಾರೀಕು ೧೮ರ ಒಳಗೆ ತಂದುಕೊಡುವರೆ ತಪ್ಪಿದಲ್ಲಿ ಅವರ ಬಾಬ್ತು ಅಡವಿಟ್ಟ ಆಭರಣಗಳನ್ನು ತಾ. ೨೫-೨-೧೯೨೬ನೇ ಇಸವಿ ಗುರುವಾರ ಮಧ್ಯಾಹ್ನ ಗಂಟೆ ೧೨ಕ್ಕೆ ತೇರುಬೀದಿ ವಕೀಲ ಮಿಜಾರ ಗಣೇಶಪೈಗಳ ಆಫೀಸಿನ ಎದುರು ಬಹಿರಂಗವಾಗಿ ಏಲಂಮಾಡಲಾಗುವುದು.

ಹೆಸರು	ಅಡವಿಟ್ಟ ತಾರೀಖು.	ಅಸಲುಬಾಕಿ.	ಏಲಂ ತಾರೀಕು ವರೆಗೆ ಬಡ್ಡಿ.
ಗೋಳಿಕಟ್ಟೆ ಬಜಾರ ಅಮ್ಮೆಂಬಳ ಸ್ವಾರಿ ಬ್ಯಾರಿ	೮-೪-೧೯೨೩	೧೬-೦-೦	೮-೧೨-೦
ಡಿ	೨೬-೪-೧೯೨೪	೬೦-೦-೦	೧೩-೧೨-೦
ಬೈದ್ಯಾವ ಡಯ್ಯಬ ಬ್ಯಾರಿ	೬-೧-೧೯೨೪	೪೫-೦-೦	೧೨- ೯-೦
ಗೋಳಿಕಟ್ಟೆ ಬಜಾರ ಕಾಟು ಬ್ಯಾರಿ ಮಗ ಅಮದ ಬ್ಯಾರಿ	೨೩-೬-೧೯೨೪	೫೫-೦-೦	೧೧- ೮-೦
ಕೆಲವು ತಿಂಗಳ ಮುಂಚೆ ಮೃತಪಟ್ಟ ಗೋಳಿಕಟ್ಟೆ ಬಜಾರ ಉಳ್ಳಾಲ ಬಡ್ಡ ಬ್ಯಾರಿ ಮಗ ಅಮದಬ್ಯಾರಿ	೨೩-೧೦-೨೨ ಚಿನ್ನದ ಕುಡ್ಕ ಜೋಡು ೧	೮-೦-೦	೫- ೦-೦
ಡಿ	೯-೮-೧೯೨೩ ಬೆಳ್ಳಿಯ ಕುಡ್ಕ ಜೋಡು ೧ ಸೊಂಟದ ಸರಪಳಿ ೨	೨೫-೦-೦	೧೩- ೦-೦
ಡಿ	೨೮-೮-೧೯೨೩ ಬೆಳ್ಳಿಯ ಕಾಲು ಸರಪಳಿ ಜೋ. ೧	೧೬-೦-೦	೬- ೮-೦

ಮಿಜಾರ ತಿಮ್ಮಪ್ಪ ಪೈ.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.
O. P. No. 12 of 1926.

ಅಂತೋನಿ ಜೋನ ಮಥಾಯಸ್ ಸಾಲ್ದೊದರ ಮಥಾಯಸ್ ಯಾನೆ ನೋತಿ ಪ್ರಭುಗಳ ಮಗ, ಮಂಗಳೂರು ಶಹಾರು ಬೋಳಾರದಲ್ಲಿರುವಂಥವ— } ಅರ್ಜಿದಾರ.

ಮತ್ತು

ಲೂವಿಸ ಫೆರ್ನಾಂಡಿಸ್ ಬ್ಯಾ ಕೂಡ— ರೆಸ್ಪೊಂಡೆಂಟರು.

ಮೇಲ್ಕಂಡ ಅರ್ಜಿದಾರನ ತಂದೆ ಮೃತಪಟ್ಟ ಸಾಲ್ದೊದರ ಮಥಾಯಸ್ ಯಾನೆ ನೋತಿ ಪ್ರಭುಗಳು ತಾ 1-9-1916ರಲ್ಲಿ ರಿಜಿಸ್ಟ್ರಿ ನಿಶಿ ಅರ್ಜಿದಾರನ ಹೆಸರಿಗೆ ಬರದಿಟ್ಟ ವೀಲು ಮೇರೆಗೆ ತನಗೆ ಪ್ರೊಬೇಟ್ ಕೊಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ಸದರಿ ಅರ್ಜಿದಾರನು ಅರ್ಜಿ ಕೊಟ್ಟಿರುತ್ತಾನೆ. ಸದರಿ ಅರ್ಜಿಯು ತಾ. 17—2—1926ಕ್ಕೆ ತನಿಕಿಗೆ ಇಟ್ಟಿರುತ್ತದೆ. ಆದ್ದರಿಂದ ಸದರಿ ಅರ್ಜಿಗೆ ಆಕ್ಷೇಪಹೇಳುವವರು ಸದರಿ ತಾರೀಕಿಗೆ ಮಧ್ಯಾಹ್ನ 11 ಗಂಟೆ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ಜಾಹೀರು ಮಾಡತಕ್ಕದೆಂತ ಈ ಮೂಲಕ ಪ್ರಕಟಿಸೋಣಾಗಿಯದೆ.

ಮಂಗಳೂರು, ತಾ. 8-2-1926 } B. Nagesha Rao.
Vakil for Petitioner.

ಮ| ರಾ| ರಾ| ಎಮ್. ಆರ್. ಪೂಂಜಾ ಅವರ್ಗಳ್,
ಪ್ರೆಸಿಡೆಂಟ್, ತಾಲೂಕು ಬೋರ್ಡು, ಮಂಗಳೂರು.

ಪ್ರಕಟಣೆ.

ಮಂಗಳೂರಿನಿಂದ ಬಜ್ಪೆಗಾಗಿ ಕಿನ್ನಿಗೋಳಿಗೆ ಹೋಗುವ ರಸ್ತೆಯ 13ನೇ ಮೈಲು 7ನೇ ಫರ್ಲೊಂಗಿನಿಂದ 15ನೇ ಮೈಲು 3ನೇ ಫರ್ಲಂಗ್ ವರೆಗೆ ರಸ್ತೆಯ ಮಧ್ಯದಿಂದ 22 ಗಜದ ರೋಡು ಪೊರಂಬೋಕು ಅದರ ಒಳಗಿರುವ ಮರಗಳಲ್ಲಿ ಮಾವಿನ ಮತ್ತು ಮನ್ನಜಾತಿಯ ಮರಗಳ ವಿನಹಾ ಇತರ ಎಲ್ಲಾ ಮರಗಿಡ ವಗೈರೆಗಳು 1926ನೇ ಇಸವಿ ಮಾರ್ಚಿ ತಾರೀಕು 8ನೇ ಸೋಮವಾರ ಸಂತೆ ವಾರಿನ ಸಮಯದಲ್ಲಿ ಅಪರಾಹ್ನ 2 ಗಂಟೆಗೆ ಬಜ್ಪೆಯಲ್ಲಿ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರವರಿಂದ ಏಲಂಮಾಡಲಾದಾವು. ಈ ಸಮಯದಲ್ಲಿ ಬಜ್ಪೆಯ ಛತ್ರದ ಹಿತ್ತಲ್ಲಲ್ಲಿರುವ ಮಾವು ಹಲಸು ವಗೈರೆ ಮರ ಶಿವಾಯಿ ಬಾಕಿ ಜಾತಿಯ ಮರಗಳನ್ನು ಸಹಾ ಏಲಂಮಾಡಲಾದಾವು. ಏಲಮಿಗೆ ಅಪೇಕ್ಷೆಯುಳ್ಳವರು ಎಲ್ಲರೂ ಆ ದಿನ ತಕ್ಕ ಸಮಯದಲ್ಲಿ ಹಾಜರಿರುವುದು. ಏಲಮಿನಲ್ಲಿ ಮೂರು ವಾರು ಕಾಯಂ ಮಾಡಿದ ಮೊಬಲಗನ್ನು ಕೂಡಲೆ ಪಾವತಿಮಾಡಬೇಕಾಗುವುದು.

29-1-1926 M. R. Punja.
ಪ್ರೆಸಿಡೆಂಟ್, ಮಂ. ತಾ. ಬೋ.

The Canara Banking Corpcration Udipi Limited, Udipi.

NOTICE.

Is hereby given to the shareholders of the Canara Banking Corporation Udipi Ltd. that Mr. U. Venkata Rao one of the shareholders of the Corporation has given notice of his intention to propose at the next Ordinary general meeting of the Corporation, the nomination of Messrs Kalmadi & Ekambaram as the auditors of the Corporation for the current year.

N. Ananda Rao,
Secretary.

ನೋಟೀಸು.

ಉಪ್ಪಿನಂಗಡಿ ತಾಲ್ಲೂಕು ನಂಬ್ರ 166ನೇ ಕರೋಪಾಡಿ ಗ್ರಾಮದ ಮುಗುಳಿ ಶಂಕರ ಭಟ್ಟರ ಮಗ ರಾಮಕೃಷ್ಣ ಭಟ್ಟನು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ:— ನನ್ನ ವಿಭಕ್ತ ಕುಟುಂಬದವರಾದ ಕರೋಪಾಡಿ ಗ್ರಾಮದ ಮುಗುಳಿ ಮ್ಹಾಲಿಂಗ ಭಟ್ಟರ ಮಗ ಕೃಷ್ಣಭಟ್ಟರು ಕಳೆದ ತಾ. 7—1—1926ರಲ್ಲು ಮೃತಪಟ್ಟಿರುತ್ತಾರೆ ಅವರಿಗೆ ಗಂಡು ವ ಹೆಣ್ಣು ಮಕ್ಕಳು ಸಹಾ ಇಲ್ಲದೆ ಎರಡು ಜನ ಹೆಂಡತಿಯರು ಮಾತ್ರ ಇರುತ್ತಾರೆ. ಅವರ ಏಶಿಷ್ಟ ಸ್ಥಿರ ಚರ ಸೊತ್ತುಗಳಿಗೆ ನಾನು ಪೂರ್ಣ ಹಕ್ಕುದಾರನಾಗಿರುತ್ತೇನೆ. ಸದರಿ ಹೆಂಡತಿಯರು ಅವರ ಸಮ್ಮಂದಿಕರ ಮತ್ತು ನನ್ನ ದ್ವೇಶಿಕರ ದುರುಬೋಧನೆಗೆ ಒಳಪಟ್ಟು ಕೆಲವು ಸ್ವಸ್ವಹುಬ್ಬಸಾಲುಗಳನ್ನು ಕಲ್ಪಿಸಿ ಮೃತರ ಬಾಬ್ತು ಆಸ್ತಿಗಳನ್ನು ಅಡವು ಅರುವಾರು ಇತ್ಯಾದಿ ಪರಾಧಿನಗಳು ಮಾಡುವ ಇರಾದೆಯಲ್ಲಿರುತ್ತಾರೆ. ಆ ರೀತಿ ಅವರು ಸಾಲ ಕಲ್ಪಿಸಿ ಮಾಡುವ ಯಾವದೊಂದು ಪರಾಧಿನಗಳೂ ನನಗೆ ಯಾ ಸದರಿ ಆಸ್ತಿಗಳಿಗೆ ಬದ್ಧಪಡುವಂತಾದ್ದಲ್ಲ. ಮತ್ತು ಅಂಥಾ ಪರಾಧಿನಗಳು ಅಸಿಂಧುವಾಗಿ ರದ್ದಾಗಿರುತ್ತವೆಂತ ಈ ಮೂಲಕ ತಿಳಿಸಿರುತ್ತೇನೆ.

ಕರೋಪಾಡಿ ತಾ. 8—2—1926 } ಮುಗುಳಿ ರಾಮಕೃಷ್ಣ ಭಟ್ಟ.

ಮಿತಸಂತತಿ.

ಮಿತಸಂತತಿಯ ಸಮಸ್ಯೆಯು ಈಗಿನ ದಿವಸಗಳಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತ ಬಂದಿದೆ. ಜನಸಂಖ್ಯೆಯು ಲೋಕದಲ್ಲಿ ಹೆಚ್ಚಾಗುತ್ತಾ ಬಂದ ಹಾಗೆ, ಜನಜೀವನವು ಹೆಚ್ಚೆಚ್ಚು ಸ್ಪರ್ಧಾಮಯವಾಗಿ ಬಂದ ಹಾಗೆ, ಆಧುನಿಕ ಜೀವನಕ್ರಮಗಳ ಫಲವಾಗಿ, ಸಂಪತ್ತು ಶ್ರೀಮಂತರಲ್ಲಿ ಹೆಚ್ಚಿ ಹೋಗಿ, ದಾರಿದ್ರ್ಯವು ಬಡವರ ಮನೆಗಳನ್ನು ಹೊಕ್ಕು, ಬಡತನವು ಹೆಚ್ಚೆಚ್ಚು ವಿಸ್ತಾರವಾಗಿ ಬಂದ ಹಾಗೆ, ಮಿತಸಂತತಿಯ ಸಮಸ್ಯೆಯು ವಿಚಾರಿ ಜನರೊಳಗೆ ಹೆಚ್ಚು ಪ್ರಬಲತೆಯನ್ನು ಹೊಂದಿದೆ.

ಮಿತಸಂತತಿಯ ತತ್ವದ ಪ್ರಚಾರದ ಬಗ್ಗೆ ಇಂಗ್ಲೆಂಡ್ ಅಮೇರಿಕಾ ಮೊದಲಾದ ವಿಲಾಯತಿ ದೇಶಗಳಲ್ಲಿ ಪ್ರತ್ಯೇಕ ಪ್ರಚಾರಕ ಸಂಸ್ಥೆಗಳೇ ಇವೆ; ಈ ವಿಷಯವಾಗಿ ಆಗಾಗ ಹೊಸಹೊಸ ವಿಚಾರಗಳನ್ನೊಳಗೊಂಡ ಪುಸ್ತಕಗಳು ಪ್ರಕಟವಾಗುತ್ತವೆ; ಅಲ್ಲದೆ ಈ ವಿಷಯವನ್ನು ಚೆನ್ನಾಗಿ ಚರ್ಚಿಸುವುದಕ್ಕೆ ಮಾಸಿಕ, ಸಾಪ್ತಾಹಿಕ ಪತ್ರಿಕೆಗಳೂ ಪ್ರಕಟಿತೆಯನ್ನು ಹೊಂದುತ್ತಿವೆ. ವಿಲಾಯತಿಯ ಅನೇಕ ಪ್ರಮುಖ ಲೇಖಕರೂ, ರಾಜಕೀಯ ಧುರೀಣರೂ ಮಿತಸಂತತಿಯ ಸಮಸ್ಯೆಯನ್ನು ತಿರಸ್ಕರಿಸದೆ, ಅವರಿಗೆ ಕಂಡ ರೀತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ.

ಹಿಂದೂದೇಶದಲ್ಲಿ ಕೂಡ ಈ ಸಮಸ್ಯೆಯು ದೇಶದ ಪ್ರಮುಖರ ಲಕ್ಷ್ಯಕ್ಕೆ ಬಾರದೆ ಇರುವುದಿಲ್ಲ. ಮಹಾತ್ಮಾ ಗಾಂಧಿಯವರು ತಮ್ಮ ಯಂಗ್ ಇಂಡಿಯಾ ಪತ್ರದಲ್ಲಿ ಈ ಸಮಸ್ಯೆಯ ವಿಷಯಕ್ಕೆ ಸಾಕಷ್ಟು ಸ್ಥಳವನ್ನು ಕೊಟ್ಟಿರುವುದೂ, ಸಮಸ್ಯೆಯು ತಿರಸ್ಕಾರಾರ್ಹವಾದ ವಿಷಯವಲ್ಲವೆಂದೂ, ಅದು ವಿಚಾರಣೀಯವಿದೆಯೆಂದೂ ತೋರಿಸುವುದು. ಅಲ್ಲದೆ ಲೋಕವಿಖ್ಯಾತ ಕವಿಶ್ರೇಷ್ಠರಾಗಿರುವ ಶ್ರೀ ರವೀಂದ್ರನಾಥ ಠಾಕೂರರು ಕೂಡ ಈ ಸಮಸ್ಯೆಯನ್ನು ಎತ್ತಿ ಹಿಡಿದುದೂ ಇದರ ಪ್ರಾಮುಖ್ಯತೆಯನ್ನು ಸೂಚಿಸುವ ಲಕ್ಷಣವಾಗಿದೆ.

ಹಿಂದುಸ್ಥಾನದ ಅನೇಕ ಬಡವರ ಕುಟುಂಬಗಳನ್ನು ಲಕ್ಷಿಸಿದರೂ, ಈ ಸಮಸ್ಯೆಯ ಸರಿಯಾದ ತೀರ್ಮಾನದ ಆವಶ್ಯಕತೆಯು ಅನುಭವವಾಗುವುದು. ಮಾತ್ರವಲ್ಲ, ಶ್ರೀಮಂತರ ಕುಟುಂಬಗಳಲ್ಲಿ ಕೂಡ, ಅತಿ ಸಂತತಿಯಿಂದ, ಎಲ್ಲಾ ಮಕ್ಕಳು ಕೊರಗಿ, ದೇಹಸೌಖ್ಯವನ್ನೂ ಮನೋಸೌಖ್ಯವನ್ನೂ ಕಳಕೆತಿಳ್ಳವುದನ್ನು ನೋಡಿದರೂ ಮಿತಸಂತತಿ ಸಾಧನೆಯು ಎಷ್ಟು ಅವಶ್ಯವಾದುದೆಂದು ತಿಳಿಯಬಹುದು.

ಫಲತಃ, ಒಂದು ಕುಟುಂಬದಲ್ಲಿ, ಆ ಕುಟುಂಬವು ಅರೈಕೆ ನೋಡಿಕೊಳ್ಳಬಹುದಾದಷ್ಟೇ ಮಕ್ಕಳು ಇರಬೇಕೆಂಬ ವಿಷಯದಲ್ಲಿ ಅಭಿಪ್ರಾಯಭೇದವು ಇದ್ದೀತೆಂದು ನಾವು ನೆನಸುವುದಿಲ್ಲ. ಮಕ್ಕಳನ್ನು ದೇವರು ಕೊಡುವರು, ನಾವು ಪ್ರತಿಯಾಗಿ ಅದನ್ನು ತಡೆಯಲು ಪ್ರಯತ್ನಿಸುವುದು ಕೇವಲ ಪಾಪಕೃತ್ಯವೆನ್ನುವ ಮಾತುಗಳ ಪ್ರತಿಯಾಗಿ ನಮಗೆ ಹೇಳಲೇನೂ ಇರುವುದಿಲ್ಲ. ಈ ಮಾತು ಕೇವಲ ಮೂಢ ಭಾವನೆಯು, ಕರ್ಮಾಕರ್ಮ ಜ್ಞಾನವಿಲ್ಲದೆ ಹೇಳುವಂತಾದ್ದು ಎಂದು ವಿಚಾರಿಗಳು ತಿಳಿಯದೆ ಇರರು. ತಾವು ಪೋಷಿಸಲಾಗದಷ್ಟು, ತಾವು ಅರೈಕೆ ನೋಡಿಕೊಳ್ಳಲಾರದಷ್ಟು ಮಕ್ಕಳನ್ನು ಪಡೆಯುವುದು ಪಾಪಕರವೆಂದೇ ನಮ್ಮ ಭಾವನೆ.

ಒಂದು ಪಕ್ಷಕ್ಕೆ, ಪೂರ್ವಕಾಲದಲ್ಲಿ ಜರ್ಮನಿಯಲ್ಲಿದ್ದಂತೆ, ಮಕ್ಕಳ ಅರೈಕೆ ಬಗ್ಗೆ, ದೇಶದ ಸರಕಾರವು ಜವಾಬ್ದಾರವಿದ್ದುದಾದರೆ ಅತಿಸಂತತಿಯಿಂದ ಬಾಧಕವಿರುತ್ತಿದ್ದಿಲ್ಲ. ಸರಕಾರವು ಇಂತಹ ಒಂದು ತರದ ಸಹಾಯವನ್ನು ಭಾವೀಜನಾಂಗದ ಮೊಳಕೆಯಾಗಿರುವ ಈ ಶಿಶುವರ್ಗಕ್ಕೆ ನೀಡುವುದಾದರೆ ದೇಶವನ್ನೂ, ವೈಯಕ್ತಿಕ ಕುಟುಂಬಗಳನ್ನೂ ಉದ್ಧರಿಸಿದಂತಾಗುವುದು. ಆದರೆ ಅಷ್ಟು ದೊಡ್ಡ ಜವಾಬ್ದಾರಿಯನ್ನು ಯಾವ ಸರಕಾರವೂ ಹೊರಲಾರದು.

ಅತಿಸಂತತಿಯಿಂದ ಉಂಟಾಗುವ ಹಾನಿಯನ್ನು ನಾವು ಸಾಧಾರಣ ಪ್ರತಿ ಮನೆಯಲ್ಲಿಯೂ ಪ್ರತ್ಯಕ್ಷ ನೋಡಬಹುದು ಮಕ್ಕಳಿಗೆ ಬೇಕಾದ ಆಹಾರಗಳನ್ನೂ, ಉಡಿಗೆಗಳನ್ನೂ, ಒದಗಿಸುವ ಕಷ್ಟಗಳ ಮಧ್ಯದಲ್ಲಿ, ಅವುಗಳ ಸೌಖ್ಯರಕ್ಷಣೆಯು ಸಾಧ್ಯವಾಗದೆ, ಅವುಗಳಲ್ಲಿ ಅಸ್ವಸ್ಥವಾಗಿ, ಅವುಗಳ ಚಿಕಿತ್ಸೆಯಲ್ಲಿ ತಾಯಿ ತಂದೆಗಳು ಪುನಃ ವ್ಯಥಿತರಾಗುವ ಆ ಸರ್ವಸಾಮಾನ್ಯವಾದ ಸಂಸಾರ ಚಿತ್ರವನ್ನು ನೋಡಿದರೆ ಯಾರಿಗೂ ದುಃಖವು ಉಂಟಾಗದಿರದು.

ಮಿತಸಂತತಿಯು ಅವಶ್ಯವೆನ್ನುವುದರಲ್ಲಿ ಮಹಾತ್ಮಾ ಗಾಂಧಿಯವರು ಕೂಡ ತಮ್ಮ ಸಮ್ಮತಿಯನ್ನು ಕೊಟ್ಟಿರುವರು. ಆದರೆ ಈಗ ಈ ವಿಷಯದಲ್ಲಿ ಇರುವ ಭೇದವೆಂದರೆ ಅದರ ಸಾಧನೋಪಾಯದಲ್ಲಿ. ಮಿತಸಂತತಿಯನ್ನು ಹೇಗೆ ಸಾಧಿಸಬೇಕೆಂಬುದೇ ಈಗ ಹಲವರೊಳಗೆ ವಾದಕ್ಕೆಡೆ. ಈ ವಿಷಯವಾಗಿ ನಾವೂ ನಮ್ಮ ಒಂದೆರಡು ಮಾತುಗಳನ್ನು ಹೇಳಿ ವಾಚಕರ ನಿರ್ಧಾರಕ್ಕೆ ಈ ವಿಷಯವನ್ನು ಬಿಡುವೆವು.

ಮಹಾತ್ಮಾ ಗಾಂಧಿಯವರು, ನಿಜ ಬ್ರಹ್ಮಚರ್ಯದಿಂದಲೇ ಮಿತಸಂತತಿಯನ್ನು ಸಾಧಿಸಬೇಕೆಂದೂ, ಇತರ ಉಪಾಯಗಳು ಪಾಪಕರವೆಂದೂ ಹೇಳುವರು. ಆದರೆ ಮನುಷ್ಯನ ಮತ್ತು ಸ್ತ್ರೀಯ ಸಂಭೋಗಾಭಿಲಾಷೆಯ ಮಾನಸಿಕತೆಯನ್ನು ಲಕ್ಷಿಸಿದರೆ ಇದು ಸಂಪೂರ್ಣವಾಗಿ ಅಸಾಧ್ಯವೆಂದು ತಿಳಿಯದಿರದು. ಮಹಾತ್ಮರು ಈಗ ಪ್ರಕಟಿಸುತ್ತಿರುವ ಅವರ ಜೀವನ ಚರಿತ್ರೆಯೇ ಇದಕ್ಕೆ ಸಾಕಷ್ಟು ಉದಾಹರಣೆಯಾಗಿದೆ. ಎಲ್ಲರೂ ಮಹಾತ್ಮರಾಗಲಾರರು. ಸಂಯಮವು ಎಲ್ಲರಿಗೂ ಸಾಧ್ಯವಿದ್ದುದಾದರೆ ಮನುಷ್ಯನು ಇಷ್ಟು ಪತಿತಾವಸ್ಥೆಯಲ್ಲಿರುತ್ತಿರಲಿಲ್ಲ. ಸಂಭೋಗದ ಮಟ್ಟಿಗಂತೂ, ಸರ್ವಸಾಮಾನ್ಯವಾಗಿ ಮನುಷ್ಯನು ಇತರ ಪ್ರಾಣಿಗಳಿಗಿಂತಲೂ ಕೆಳತರಗತಿಯವನಿರುವನು. ಆದುದರಿಂದ ಬ್ರಹ್ಮಚರ್ಯ ಸಾಧನೆಯು ಯಾವ ಸಾಂಸಾರಿಗೂ ಸಾಧ್ಯವಿರದು. ಸಾಧ್ಯವಿದ್ದುದಾದರೆ, ಯಾರೊಬ್ಬನೂ ಸಂಸಾರದ ಗಭೀರಕೂಪದಲ್ಲಿ ಬಿದ್ದು ದುಃಖಿಸುವುದ ಮಾಡುತ್ತಿರಲಿಲ್ಲ. ಆದುದರಿಂದ ಮಹಾತ್ಮರ ಉಪಾಯವು ಕೇವಲ ಶಾಸ್ತ್ರೀಯವಲ್ಲದೆ, ಅನುಕರಣೀಯವಾದ ಸಾಧನೆಯೆಂದು ನಾವು ನೆನಸುವುದಿಲ್ಲ.

ಇಂತಹ ಜನಸಾಮಾನ್ಯರ ಪ್ರಶ್ನೆಗಳನ್ನು ತರ್ಕಿಸುವುದಕ್ಕೆ ಬರೇ ಆದರ್ಶದ ಉತ್ತರಗಳನ್ನಿತ್ತರೆ, ಅವು ಎಂದಿಗೂ ಕಾರ್ಯಕಾರಿಯಾಗುವುದಿಲ್ಲ. ಎಲ್ಲರಿಗೂ ಪ್ರಯೋಜನಕ್ಕೆ ಬೀಳಬಹುದಾದ, ಎಲ್ಲರೂ ಅನುಕರಿಸಬಹುದಾದ ಸೂಚನೆಯನ್ನು ಕೊಟ್ಟರೇನೇ ಅದರಿಂದ ಪ್ರಯೋಜನವಾಗಬಹುದು. ಬ್ರಹ್ಮಚರ್ಯವು ಆದರ್ಶಕರವಾದ ಉಪಾಯವೆಂಬುದು ಸಹಜ. ಆದರೆ ಇಂತಹ ವಿಷಯಗಳಲ್ಲಿ ಆದರ್ಶವು ಪ್ರಯೋಜನವಿಲ್ಲ. ಜನತೆಯ ಮಾನಸಿಕತೆಯೇ ಮುಖ್ಯವಾದುದು.

(ಅಪೂರ್ಣ)

ಸ್ಫುಟವಿಚಾರಗಳು.

ಬಿಡಾರ ಕೃಷ್ಣಪ್ಪನವರ ಗಾಯನ.

ನಮ್ಮ ಜಿಲ್ಲೆಯಿಂದ ಮೈಸೂರಿಗೆ ಹೋಗಿ ಅಲ್ಲಿ ಗಾಯನದಲ್ಲಿ ಅದ್ವಿತೀಯ ಕೀರ್ತಿಯನ್ನು ಸಂಪಾದಿಸಿದ ಬಿಡಾರ ಕೃಷ್ಣಪ್ಪನವರು ಪುನಃ ನಮ್ಮ ಜಿಲ್ಲೆಗೆ ಬಂದು ತಮ್ಮ ಮನೋಮುಗ್ಧಕರ ಗಾಯನದಿಂದ ನಮ್ಮ ಜಿಲ್ಲೆಯನ್ನು ಮೋಹಗೊಳಿಸುವುದು ಸ್ತುತ್ಯವಾಗಿದೆ. ಬಿಡಾರ ಕೃಷ್ಣಪ್ಪನವರು ನಮ್ಮ ಜಿಲ್ಲೆಗೆ ಕೀರ್ತಿಯನ್ನು ಈ ಮೂಲಕ ತಂದಿರುವರು. ಆದರೆ ಬಿಡಾರ ಕೃಷ್ಣಪ್ಪನವರಿಗೆ ನಮ್ಮ ಜಿಲ್ಲೆಯ ಮೇಲೆ ಎಷ್ಟು ಅಭಿಮಾನವಿರುವುದೊ ಎಂಬ ವಿಷಯವು ಯಾವ ರೀತಿಯಲ್ಲಿ ನಮ್ಮ ಜಿಲ್ಲೆಗೆ ತಿಳಿದು ಬಂದಿಲ್ಲ. ಊರಿನ ಅನೇಕ ಸಂಸ್ಥೆಗಳು ಧನಾಭಾವದಿಂದ ಕೊರಗುತ್ತಿರುವ ಸಮಯದಲ್ಲಿ, ಜಿಲ್ಲೆಗೆ ಅತೀ ಉಪಯೋಗಕರವಾದ ವಿಷಯಗಳಿಗೆ ದುಡ್ಡು ಹೊರಬಾರದಿದ್ದುವ ಸಮಯದಲ್ಲಿ, ಹೊರಗಿನ ಉದ್ದೇಶಕ್ಕಾಗಿ, ಹೊರಗಿನವರಾಗಿಯೇ ಇರಲು ಇಚ್ಛಿಸುವಂತವರು ಬಂದ ಕೂಡಲೆ, ಅವರಿಗಾಗಿ ಪೇಟಾಡಿ ಹಣ ತುಂಬಿಸಿ ಕೊಡುವ ಕ್ರಮವು ಕೇವಲ ನಮ್ಮ ಸಾಂಪ್ರದಾಯವಾಗಿದೆ. ಅಂತೆಯೇ ಬಿಡಾರ ಕೃಷ್ಣಪ್ಪನವರ ಆಗಮನದೊಡನೆ ಅನೇಕ ಉತ್ಸಾಹಿಗಳು ಮುಂದೆ ಬಂದು ವಶಾತ್ತಾಯದ ಟಿಕೇಟಿನ ಮಾರಾಟದಿಂದ ರಾಮ ಮಂದಿರ ರಚನೆಯ ಪುಣ್ಯದ ವಿತರಣೆಯನ್ನು ಮಾಡುವುದು ನಮ್ಮ ಅತಿಥಿ ಸತ್ಕಾರಕ್ಕೆ ಶ್ಲಾಘ್ಯನೀಯವಾದರೂ, ನಮ್ಮ ಸ್ವಂತ ಜನರ ಉದ್ಧರಣೆಯ ವಿಷಯದಲ್ಲಿ ಉತ್ತಮ ಅಭಿಪ್ರಾಯವನ್ನುಂಟುಮಾಡುವುದಿಲ್ಲ. ರಾಮ ಮಂದಿರದ ಉದ್ದೇಶಗಳಾಗಿ, ಉಪಯೋಗವಾಗಲಿ ಯಾರಿಗೂ ತಿಳಿದು ಇರುವಂತೆ ತೋರುವುದಿಲ್ಲ. ರಾಮ ಮಂದಿರದ ಭವಿತವ್ಯವಾದರೂ ಏನೆಂದೂ ತಿಳಿದಿಲ್ಲ. ಶ್ರೀ ಬಿಡಾರ ಕೃಷ್ಣಪ್ಪನವರು ತಮ್ಮ ಗಾಯನದ ಪ್ರತಿಭೆಯಿಂದಲೇ ಸಾಕಷ್ಟು ಪುರಸ್ಕಾರವನ್ನು ಹೊಂದಲು ಯೋಗ್ಯರಿರುವರು. ಅನ್ನುವಾಗ ದಕ್ಷಿಣಕನ್ನಡ ಜಿಲ್ಲೆಗೆ ಯಾವ ವಿಶೇಷ ಉಪಯೋಗವಾದರೂ ಇಲ್ಲದ ಈ ರಾಮ ಮಂದಿರದ ಹೆಸರೂ, ಟಿಕೇಟು ಮಾರಾಟದ ವಶಾತ್ತಾಯವೂ ಅಗತ್ಯವಿದ್ದಿತೆಂದು ನಾವು ನೆನಸುವುದಿಲ್ಲ. ಶ್ರೀ ರವೀಂದ್ರನಾಥರ ಶಾಂತಿನಿಕೇತನ, ಮಹಾತ್ಮಾಜೀಯವರ ಸತ್ಯಾಗ್ರಹಾಶ್ರಮದಂತೆ, ಇತರರಿಗೂ ತಮಗೆ ಕೀರ್ತಿದಾಯಕವಾಗುವ ಖಾಸಗಿ ಸಂಸ್ಥೆಗಳನ್ನು ಜನತೆಯ ಹಣದಿಂದ, ಕಟ್ಟುವ ಆಲೋಚನೆಯು ತೋರಬಹುದು. ಆದರೆ ಅಂತಹ ಸಂಸ್ಥೆಗಳನ್ನು ಏರ್ಪಡಿಸುವಾಗ, ಅವುಗಳ ಉದ್ದೇಶ, ಪ್ರಯೋಜನ, ಮುಂದಿನ ಆಡಳಿತೆ ಇತ್ಯಾದಿಯನ್ನು ಮೊದಲೇ ಸ್ಥಿರೀಕರಿಸುವುದು ಆವಶ್ಯಕ. ಟಿಕೇಟು ಪ್ರಚಾರದೊಡನೆ, ರಾಮ ಮಂದಿರದ ಈ ವಿವರದ ಪ್ರಚಾರದ ಕಡೆಗೂ, ಶ್ರೀ ಬಿಡಾರ ಕೃಷ್ಣಪ್ಪನವರು ಲಕ್ಷ್ಯ ಕೊಟ್ಟಿರುವರೇ?

ಕೊಂಚಾಡಿಗೂ ಒಂದು ಸುಂಕದ ಗೇಟು!

ಕಳೆದ ಜನವರಿ ಮೀಟಿಂಗಿನಲ್ಲಿ ಡಿಸ್ಟ್ರಿಕ್ಟ ಬೋರ್ಡಿನವರು ಕೊಂಚಾಡಿಗೆ ಒಂದು ಗೇಟು ಹಾಕಿಸುವರೆ ನಿರ್ಣಯಿಸಿರುವರು. ಮಂಗಳೂರಿನ ಕಟ್ಟೋಣಗಳಿಗೆ ಈ ಮಾರ್ಗವಾಗಿಯೇ ಕಲ್ಲುಗಳು ಸಾಗಿಸಲ್ಪಡುತ್ತಿದ್ದಾವೆ. ಪ್ರಾಯಶಃ ಗುರುಪುರ ಮಾರ್ಗದಿಂದ ಬರುವ ಗಾಡಿಗಳು ಕೊಂಚಾಡಿಯಿಂದ ಬಂದು ಡಿಸ್ಟ್ರಿಕ್ಟ ಬೋರ್ಡಿಗೆ ನಷ್ಟವಾಗ ಬಹುದೆಂದು ಇದನ್ನು ತೆರದಿರಬಹುದು. ಹಾಗೆ ಬೋರ್ಡಿಗೆ ನಷ್ಟಮಾಡಿ ಬರತಕ್ಕ ಗಾಡಿಗಳಿಗೆ ಸುಂಕ ಲಾಭಮಾಡಿಕೊಂಡದ್ದಕ್ಕಿಂತಲೂ ಆ ಸುತ್ತು ತೆಗೆದು ಒಳ ಮಾರ್ಗದ ಕಷ್ಟಗಳನ್ನು ಅನುಭವಿಸಿ ನಷ್ಟಮಾಡಿಕೊಂಡದ್ದೇ ಹೆಚ್ಚಾಗುವುದರಿಂದ ಸಾಮಾನ್ಯವಾಗಿ ಬಹಳೇ ಸ್ವಲ್ಪ ಗಾಡಿಗಳು ಕೊಂಚಾಡಿಯ ಮಾರ್ಗದಿಂದ ಬರಬಹುದು. ಈ ಅಲ್ಪ ನಷ್ಟವನ್ನು ಭರ್ತಿಮಾಡಲಿಕ್ಕೆಂದು ಕಲ್ಲಿನ ಗಾಡಿ ಮೊದಲಾಗಿ ಅನಾಯಾಸವಾಗಿ ಬರಬೇಕಾದ ಗಾಡಿಗಳಿಗೆ ತೊಂದರೆ ಕೊಡತಕ್ಕ ಈ ಗೇಟು ಏರ್ಪಡಿಸಿದುದು ಮಂಗಳೂರಿಗೆನೆ ನಷ್ಟಕರವೆಂದು ಯಾರೂ ತಿಳಿಯದಿರಲಾರರು. ಮಂಗಳೂರು ನಿವಾಸಿಗಳು ಈ ವಿಷಯ ಗೇಟು ಆಗದಂತೆ ನೋಡಿಕೊಳ್ಳಲು ಪ್ರಯತ್ನಿಸುವುದು ಅಗತ್ಯವಿದೆ.

ಬೋರ್ಡು ಶಾಲೆಗಳು ಮತ್ತು ನೂಲುವುದು

ಶ್ರೀ ಬಿ. ಸೂರಪ್ಪ ಹೆಬ್ಬಾರರು ತಂದ ಬೋರ್ಡು ಶಾಲೆಗಳಲ್ಲಿ ನೂಲುವುದನ್ನು ಮತ್ತು ನೇಯುವುದನ್ನು ಕಡ್ಡಾಯವಾಗಿ ಕಲಿಸಬೇಕೆಂಬ ಠರಾವು ಸರ್ವಾನುಮತದಿಂದ ಮಂಜೂರಾದುದು ಅಭಿನಂದನೀಯ. ಡಿಸ್ಟ್ರಿಕ್ಟ್ ಬೋರ್ಡು ಸದಸ್ಯರೊಳಗೆ ರಾಷ್ಟ್ರೀಯ ಜಾಗರಣೆ ಇದೆ ಎಂದು ಸೂಚಿತವಾಯಿತು. ಇಂತಹ ಠರಾವು ಒಂದು ಉಡುಪಿ ತಾಲೂಕು ಬೋರ್ಡಿನಲ್ಲಿಯೂ ಬಂದಿತ್ತು. ಆದರೆ ಈ ಠರಾವು ಬರೇ ರಾಷ್ಟ್ರೀಯತೆಯ ಪ್ರದರ್ಶನಕ್ಕಾಗಿ ಮಂಜೂರು ಮಾಡುವುದೊ, ಇಲ್ಲವೆ ಇದರಿಂದ ಬೇರೇನಾದರೂ ಪ್ರಯೋಜನವಿದೆಯೊ ಎಂಬುದನ್ನು ಯಾರೂ ಚಿಂತಿಸುವಂತೆ ತೋರುವುದಿಲ್ಲ. ರಾಷ್ಟ್ರೀಯ ಶಾಲೆಗಳಲ್ಲಿ ಇದರ ಪ್ರಚಾರದಿಂದ ಯಾವ ಪ್ರಯೋಜನ ಅಥವಾ ನಿಷ್ಪ್ರಯೋಜನವಾಗಿದೆ ಎಂಬುದನ್ನು ಪರೀಕ್ಷಿಸಲು, ರಾಷ್ಟ್ರೀಯ ಪಕ್ಷದವರಾರೂ ಧೈರ್ಯಪಟ್ಟಿಲ್ಲ. ನೂಲುವುದು ಮತ್ತು ನೇಯುವುದು ಶಾಲೆಗಳಲ್ಲಿ ಪ್ರಚಾರ ಮಾಡಿದ ಮಾತ್ರದಿಂದ ಅದು ಪ್ರಚಾರ ಹೊಂದುವುದೊ, ಅದಕ್ಕಾಗಿ ಹತ್ತಿಯ ವ್ಯವಸ್ಥೆ ಏನು? ಹುಡುಗರಿಗೆ ಅದರ ಮೇಲೆ ಯಾವ ಅಭಿಮಾನವಿರುವುದು, ಇತ್ಯಾದಿ ಪ್ರಶ್ನೆಗಳನ್ನೂ ಆದರ್ಶದ ಮುಗ್ಧತೆಯನ್ನೂ ಬಿಟ್ಟು ವಿಚಾರಿಸುವುದು ಅವಶ್ಯ. ಈ ವಿಚಾರಗಳಿಂದ ನಾವು ನೂಲುವುದರ ವಿರೋಧವಿರುವರೆಂಬ ತಪ್ಪು ಅಭಿಪ್ರಾಯ ಮಾಡಿಕೊಳ್ಳಬಾರದು. ರಾಷ್ಟ್ರೀಯ ಶಾಲೆಗಳ ಹಿಂದಿನ ಅನುಭವದಿಂದ ನಮಗೆ, ನೂಲುವುದರ ಕ್ಷೇತ್ರವು ಶಾಲೆಗಳಲ್ಲ, ಆ ಕ್ಷೇತ್ರವು ಪ್ರತ್ಯೇಕವಿದೆ ಎಂದು ಅನ್ನಿಸುತ್ತಿದೆ.

ಬೋರ್ಡುಗಳಲ್ಲಿ ದೇಶಭಾಷೆ

ಶ್ರೀ ಸೂರಪ್ಪ ಹೆಬ್ಬಾರರು ತಂದ ದೇಶಭಾಷೆಯ ಪರವಾದ ಠರಾವು ಉತ್ತಮವಿತ್ತು. ಶ್ರೀ ಕೆ. ಸದಾಶಿವ ಭಟ್ಟರು ಮಂಜೂರು ಮಾಡಿಸಿದ ಉಪಸೂಚನೆಯು, ಮೂಲ ಸೂಚನೆಯಷ್ಟು ಪೂರ್ಣವಾಗಿಲ್ಲ. ಬೋರ್ಡು ಮೀಟಿಂಗಿನಲ್ಲಿ ಕನ್ನಡದಲ್ಲಿಯೇ ಎಲ್ಲರೂ ಮಾತನಾಡಬೇಕಾಗಿ ಮೂಲದಲ್ಲಿದ್ದುದನ್ನು ಉಪಸೂಚನೆಯಲ್ಲಿ ತೆಗೆದುಹಾಕಿದುದರ ಕಾರಣವು ನಮಗೆ ತಿಳಿದಿಲ್ಲ. ಎಲ್ಲದಕ್ಕಿಂತಲೂ ಇದು ಮುಖ್ಯವಿದ್ದಿತೆಂದು ನಮ್ಮ ಅಭಿಪ್ರಾಯವಿದ್ದಿತು. ಶ್ರೀ| ಕೆ. ಎಸ್. ಭಟ್ಟರು ಬಾಯಿ ಮಾತಿನಿಂದ, ಹಾಗೆಯೇ ಮುಂದೆ ನಡಿಸಬಹುದಾಗಿ ಮೂಲ ಸೂಚಕರಿಗೆ ಭರವಸೆ ಕೊಟ್ಟುದಾದರೆ, ಚಿಂತೆಯಿಲ್ಲ. ಮೀಟಿಂಗಿನಲ್ಲಿ ಇಂಗ್ಲಿಷ್ ಭಾಷೆ ತಿಳಿಯದೆ, ಇಂಗ್ಲೀಷ ಮಾತನಾಡುವವರ ಭಾಷಣದ ಅರ್ಥವಾಗದೆ, ಆಕಳಿಕೆ ತೆಗೆದು ತೂಕಡಿಸುವವರು ಹಲವರಿರಲು ಸಾಧ್ಯ ಉಂಟು. ಈ ಬಗ್ಗೆ ಎಲ್ಲಾ ಸದಸ್ಯರೂ ಯೋಗ್ಯ ರೀತಿಯಲ್ಲಿ ವರ್ತಿಸುವರಾಗಿ ಆಶಿಸುತ್ತೇವೆ.

ಶ್ರೀ. ಕೇಳ್ಕರರ ಮಾನಸಿಕತೆ.

ಶ್ರೀ. ಕೇಳ್ಕರರ ಮಾನಸಿಕತೆಯು ವಿಚಿತ್ರವಾದ ಪರಿಣಾಮವನ್ನು ಹೊಂದುತ್ತಿದೆ. ಕೇಳ್ಕರ ಎಂಡ್ ಕೊ.ರವರಿಗೆ ತನಗಿಂತ ಬುದ್ಧಿವಂತರಾಗಲಿ, ತಮಗಿಂತ ಪವಿತ್ರರಾಗಲಿ, ಲೊ| ಟಿಳಕರಿಗಿಂತ ಮಹತ್ವವುಳ್ಳವರಾಗಲಿ, ಯಾರೂ ತೋರಬರುವುದಿಲ್ಲ. ಮರಾಠರಲ್ಲೂ, ಬಂಗಾಳದಂತೆ, ಯುಕ್ತಾಯುಕ್ತ ಜ್ಞಾನಕ್ಕಿಂತಲೂ ಪ್ರಾಂತಿಕ ಭಾವನೆಯೇ ಮಿಗಿಲಾಗಿದೆ. ಕೇಳ್ಕರರ ಈಗಿನ ಅಭಿಪ್ರಾಯ ಭಿನ್ನತೆಯು ಕಡೆಗಿನ ಮರಾಠಾ ಒಪ್ಪಿಗೆಯೇ ಈ ತರದ ಪ್ರಾಂತಿಕ ಭಾವನೆಯನ್ನು ಸೂಚಿಸುತ್ತಿದೆ. ಈ ಮರಾಠಾ ಕಂಪೆನಿಯು ಗಾಂಧಿಯವರನ್ನು ಮಹಾತ್ಮರೆಂದ ಕೂಡಲೇ ಉರಿದೇಳುವರು. ಮಹತ್ತರದ ಮಾತ್ಸರ್ಯವು ತಲೆದೋರುವುದು. ಹೀನಿಸುವರು, ತಿರಸ್ಕರಿಸುವರು. ಶ್ರೀ. ಕೇಳ್ಕರರ ಪತ್ರಿಕೆಯು ಇಂತಹ ಉದ್ದೇಶಹೀನವಾದ ಕುತ್ಸಿತ ಮಾತುಗಳಿಂದಲೇ ತುಂಬಿಹೋಗಿಯದೆ. ಸ್ವರಾಜ್ಯಪಕ್ಷದ ಕಡೆಗೂ ಅವರ ವಿಚಿತ್ರ ಅಭಿಪ್ರಾಯವಿದೆ. ಸ್ವರಾಜ್ಯಪಕ್ಷದ ಧೋರಣವು ತಮ್ಮ ಧೋರಣದಂತೆಯೇ ಇದೆ ಎನ್ನುವರು. ಆದರೆ ಹೆಸರು ರಿಸ್ಪೊನ್ಸಿವ್ ಕೊ-ಒಪರೇಶನ್ ಎಂದು ಇಲ್ಲದಿದ್ದುದೇ ಮರಾಠರಿಗೆ ಕೋಪಕ್ಕಿಟ್ಟದೆ! ಪರಂತು, ಕೇಳ್ಕರರು ಉದಹರಿಸಿದ ಮರಾಠಾ ಧೋರಣವು ಸ್ವರಾಜ್ಯಪಕ್ಷೀಯರ ಒಬ್ಸಟ್ರಕ್ಷನ್ (obstruction) ಧೋರಣಕ್ಕಿಂತ ಎಷ್ಟು ದೂರವಿದೆಯೊ, ರಿಸ್ಪೊನ್ಸಿವ್ ಕೊ-ಒಪರೇಶನಿನಿಂದಲೂ ಇದು ಅಷ್ಟೇ ದೂರವಿದೆ. ಅನ್ನುವಾಗ ಧೋರಣದ ಹೆಸರಿಗಾಗಿ ಶ್ರೀ. ಕೇಳ್ಕರರು ಪ್ರತಿಪಕ್ಷವನ್ನು ದೂಷಿಸಿ, ನಿಂದಿಸಿ, ತಮ್ಮ ವೈಯಕ್ತಿಕ ಶ್ರೇಷ್ಠತೆಯನ್ನು ಸ್ಥಾಪಿಸಲು ನೋಡುವುದನ್ನು ಯಾರೂ ಕ್ಷಮಿಸಲಾರರು.

"ಕ್ಲಾಸ್ ಏರಿಯಾಸ್ ಬಿಲ್ಲ"

ಹಿಂದೀಯರನ್ನು ಹೊರತಳ್ಳಲಿಕ್ಕೆಂದು ದಕ್ಷಿಣ ಆಫ್ರಿಕದ ಸರಕಾರವು ಮುಂದೆ ತಂದಿರುವ ಈ ಮಸೂದೆಯ ಪ್ರಥಮ ಪಠನವು ಮಂಜೂರಾಯಿತು. ಮಿ. ಸಿ. ಎಫ್. ಎಂಡ್ರೂಸರು, ಹಿಂದೀಯರ ಪರವಾಗಿ ಎಷ್ಟೊ ಉತ್ತಮತರದ ಆಶೆಗಳನ್ನು ಸೂಚಿಸಿದರು. ಒಂದುಬಾರಿ ಈ ಮಸೂದೆಯ ಆಲೋಚನೆಯನ್ನು ಈ ಬಾರಿ ಮಾಡದ ಮುಂದೆ ಹಾಕಿರುವರಾಗಿಯೂ, ನಮ್ಮ ಚಳವಳದ ಮೂಲಕ ಅಷ್ಟರೊಳಗೆ ದಕ್ಷಿಣ ಆಫ್ರಿಕ ಸರಕಾರವನ್ನು ಸಮಾಧಾನಪಡಿಸಿ, ಆ ಮಸೂದೆಯು ಎದುರಿಗೆ ಬಾರದಂತೆಯೇ ಮಾಡಬಹುದೆಂದೂ ಸೂಚಿಸಿದರು. ಇನ್ನೊಂದು ಬಾರಿ, ಶ್ರೀ. ರವೀಂದ್ರನಾಥರ ಹೊಗಳುವಿಕೆಯಿಂದ ದಕ್ಷಿಣ ಆಫ್ರಿಕದ ಬಿಳಿಯವರನ್ನು ಒಲಿಸಿಕೊಂಡವೆಂದು ತಿಳಿಸಿದರು. ಮಿ. ಸಿ. ಎಫ್. ಎಂಡ್ರೂಸರು ದಕ್ಷಿಣ ಆಫ್ರಿಕದಲ್ಲಿಯೇ ಇದ್ದು, ಎಲ್ಲಾ ಪರಿಸ್ಥಿತಿಗಳನ್ನು ಬಲ್ಲವರಾಗಿದ್ದು, ಹೀಗೆ ಆಶಾದಾಯಕವಾದ—ಫಲತಃ ನಮ್ಮ ಇಲ್ಲಿಯ ಚಳವಳವನ್ನು ತಗ್ಗಿಸಬಹುದಾದ—ವಾರ್ತೆಗಳನ್ನು ಏಕೆ ಹರಡಿಸಿದರೆಂದು ತಿಳಿಯದು. ಒಂದೆರಡು ವರ್ಷಗಳ ಹಿಂದೆ, ಅಲ್ಲಿಯ ಕೆಲವು ಹಿಂದೀಯರು, ಮಿ| ಎಂಡ್ರೂಸರ ಸತ್ಯತೆಯ ವಿಷಯ ಸಂಶಯವನ್ನು ಪ್ರಕಟಿಸಿದ್ದರು. ಮಿ| ಎಂಡ್ರೂಸರು ಅಂತಹ ಅನುಮಾನದ ಕಾರ್ಯಗಳನ್ನು ಮಾಡಲಿಕ್ಕಿಲ್ಲವೆಂದು ನೆನಸಿ ನಾವು ಸುಮ್ಮಗಾಗುವೆವು. ಆದರೆ ಮಿ| ಎಂಡ್ರೂಸರ ಪಯಣದಿಂದ ಹಿಂದೂಸ್ಥಾನಕ್ಕೆ ಲಾಭವೆಷ್ಟಾಯಿತೆಂದು ಲೆಖ್ಖಹಾಕುವುದು, ಅವರು ಹಿಂದೂಸ್ಥಾನಕ್ಕೆ ಪುನಃ ಬಂದ ಮೇಲೆ ಅಗತ್ಯವಾಗಿ ತೋರಬಹುದು.

ಡಿಸ್ಟ್ರಿಕ್ಟಬೋರ್ಡು ಪ್ರೆಸಿಡೆಂಟರೂ ಇಂಜಿನಿಯರರೂ.

ಪ್ರೆಸಿಡೆಂಟರಿಗೂ ಇಂಜಿನಿಯರರಿಗೂ ಹಲವು ಸಮಯದಿಂದೀಚೆಗೆ ಮನೋಕ್ಲೇಶವು ಬೆಳೆಯುತ್ತಾ ಬರುತ್ತಿದೆಂದು ನಾವು ತಿಳಿಯುತ್ತೇವೆ. ಈ ಅಂತಃ ಕ್ಲೇಶಗಳ ಮಧ್ಯದಲ್ಲಿ, ಜಿಲ್ಲೆಗೆ ಸರಕಾರದಿಂದ ಮಾರ್ಗಗಳ ಕೆಲಸದ ಬಗ್ಗೆ ಸಿಕ್ಕಿದ (ಅಂದಾಜು) ಒಂದುವರೆ ಲಕ್ಷ ರೂಪಾಯಿಯಲ್ಲಿ, ಕೆಲಸ ಸಾಗದೆ, ಸಾಧಾರಣ (ಅಂದಾಜು) ಅರ್ಧ ಲಕ್ಷದಷ್ಟು ಕೆಲಸವಾಗಿ, ಒಂದು ಲಕ್ಷ ರೂಪಾಯಿಯು ಸರಕಾರಕ್ಕೆ ಪುನಃ ಸೇರಿ, ನಮ್ಮ ಜಿಲ್ಲೆಗೆ ಇಷ್ಟು ದೊಡ್ಡ ಐವೇಜು ನಷ್ಟವಾಯಿತೆಂದೂ ತಿಳಿಯುತ್ತೇವೆ. ಕಳೆದ ಜನವರಿಯಲ್ಲಿ ಸೇರಿದ ಡಿಸ್ಟ್ರಿಕ್ಟ ಬೋರ್ಡು ಮೀಟಿಂಗಿನಲ್ಲಿ, ಸದರಿ ಇಂಜಿನಿಯರರನ್ನು ಬೇರೆ ಕಡೆಗೆ ವರ್ಗಾಯಿಸಬೇಕಾಗಿ ಸರಕಾರವನ್ನು ಕೇಳಿಕೊಳ್ಳೋಣಾಗಿಯದೆ. ಜನತೆಗೆ ಇದರ ಪೂರ್ಣವಿವರ ತಿಳಿಯುವುದು ಅವಶ್ಯವಿದೆ. ಒಂದು ಲಕ್ಷ ರೂಪಾಯಿಯೆಂದರೆ ಸಾಮಾನ್ಯವಾದ ಐವೇಜಲ್ಲ. ಯೋಗ್ಯವಾದ ಉದಾಹರಣೆಯನ್ನು ಡಿಸ್ಟ್ರಿಕ್ಟಬೋರ್ಡಿನವರು ಬಹಿರಂಗವಾಗಿ ಪ್ರಕಟಿಸುವುದು ಅಗತ್ಯವಿದೆ. ಮನಃಕ್ಲೇಶಗಳು ಏನೆ ಇದ್ದರೂ ಪ್ರಜಾಜನರ ಹಣವು ಅನ್ಯಾಯವಾಗಿ ನಷ್ಟವಾಗಬಾರದೆಂಬುದೆ ಜನರ ಕೇಳುವಿಕೆ. ಪ್ರೆಸಿಡೆಂಟರು ಈ ವಿಷಯವಾಗಿ ಬೇಗನೆ ಒಂದು ಪ್ರಕಟಣೆಯನ್ನು ಹೊರಡಿಸುವುದು ಅವರ ಕರ್ತವ್ಯವಿದೆ.

ಸ್ವರಾಜ್ಯಪಕ್ಷೀಯರು

ಕಳೆದ ಎರಡು ಚುನಾವಣೆಗಳಿಂದ ಸ್ವರಾಜ್ಯ ಪಕ್ಷವು ಬಹಳವಾಗಿ ವಿಶ್ವಾಸವನ್ನು ಕಳೆದುಕೊಂಡಿದೆಂಬುದೇನೊ ನಿಜ. ಸ್ವರಾಜ್ಯಪಕ್ಷದ ವಿರೋಧವಿದ್ದವರೆಂತೂ, ಪಕ್ಷವನ್ನೂ, ಪಕ್ಷೀಯರನ್ನೂ, ಖದ್ದರ್ ವಸ್ತ್ರಧಾರಿಗಳನ್ನೂ ಚೆನ್ನಾಗಿ ಬೈಯುತ್ತಿರುವರು. ಆದರೆ ಸ್ವರಾಜ್ಯಪಕ್ಷದ ಹಿತಚಿಂತನೆಯಲ್ಲಿದ್ದವರು, ಸ್ವರಾಜ್ಯಪಕ್ಷದ ನಿರ್ಬಲತೆಯ ಕಾರಣವನ್ನು ಹುಡುಕುವ ಬದಲಿಗೆ, ಪಕ್ಷವನ್ನೂ, ಪಕ್ಷೀಯರನ್ನೂ ಬೈಯುವುದನ್ನು ನೋಡಿದರೆ ಮನಸ್ಸಿಗೆ ಖೇದವಾಗುತ್ತದೆ. ಮುಖ್ಯ ವಿಷಯವೇನಂದರೆ ಕಳೆದ ಚುನಾವಣೆಯಲ್ಲಿ ಎರಡೂ ಪಕ್ಷಗಳೂ ಸ್ವರಾಜ್ಯ ಪಕ್ಷವನ್ನಾಗಲಿ, ಪಕ್ಷೀಯರನ್ನು ನಿಂದಿಸಿರುವರು. ಇದರಿಂದಲೇ ನಿಜವಾದ ಸ್ವರಾಜ್ಯ ಪಕ್ಷೀಯರು, ಪಕ್ಷದ ವ್ಯವಸ್ಥೆಯಲ್ಲಿಯೇ ಏನೊ ದೋಷವಿದೆ; ಅದನ್ನು ಸರಿಪಡಿಸಲಿದೆ ಎಂದು ತಿಳಿಯುತ್ತಿದ್ದರು. ಅಂತಹರಾರೂ ಈಗ ಕಾಣುವುದಿಲ್ಲ. ಮುಖ್ಯತಃ ನಮ್ಮ ಒಂದು ಪತ್ರವ್ಯವಹಾರದಲ್ಲಿ ಬರೆದಂತೆ ಸ್ವರಾಜ್ಯಪಕ್ಷದ ಅವ್ಯವಸ್ಥೆಯೂ, ಅವಸರವೂ ಇದಕ್ಕೆ ಕಾರಣವಾಗಿದೆಯೆಂದೇ ತಿಳಿಯಬೇಕು. ಯಾವಾಗ ವೈಯಕ್ತಿಕ ಶಕ್ತಿಯನ್ನು ಸಂಯಮಿಸಬಲ್ಲ ಮಿಗಿಲಾದ ಶಕ್ತಿಯುಲ್ಲವೊ, ಆಗ ವ್ಯಕ್ತಿಯು ತನ್ನ ಇಷ್ಟ ಬಂದಂತೆ ನಡೆಯುವುದು ಸಹಜ. ಸಂಯಮದ ಶಕ್ತಿಯನ್ನು (controlling power) ಸ್ವರಾಜ್ಯ ಪಕ್ಷದಲ್ಲಿ ಹೇಗೆ ಕಟ್ಟಿಕೊಂಡಿರುವರೆಂಬುದನ್ನು ವಿಚಾರಿಸದೆ, ಪಕ್ಷವನ್ನೂ, ಪಕ್ಷೀಯರನ್ನೂ ದೂರುವುದು ಚೆನ್ನಾಗಿರಲಿಲ್ಲ. ಚುನಾವಣೆಯ ದಿನದಲ್ಲಿ, ಪಕ್ಷಸ್ಥಾಪಕರು ಸುಮ್ಮನಾದುದೇಕೆ? ಅವರು ಇತರ ಸ್ಥಳಗಳಿಗೆ ಮತ್ತು ತಾಲೂಕು ಪಟ್ಟಣಗಳಿಗೆ ಹೋಗಿ ಏಕೆ ಕೆಲಸ ಮಾಡಲಿಲ್ಲ? ಅಲ್ಲಲ್ಲಿದ್ದ ಸ್ವರಾಜ್ಯಪಕ್ಷೀಯರೆನ್ನಿಸಿಕೊಳ್ಳುವವರೊಡನೆ ಸ್ವರಾಜ್ಯ ಪಕ್ಷ ಸ್ಥಾಪಕರಾಗಲಿ, ಉಮೇದ್ವಾರರಾಗಲಿ ಮಾತನಾಡಿರುವರೊ? ಎಂಬಿತ್ಯಾದಿ ವಿಷಯಗಳನ್ನೂ, ಶ್ರೀ ನಾಗಣ್ಣ ಹೆಗ್ಗಡೆಯರನ್ನು ಸ್ವರಾಜ್ಯ ಪಕ್ಷದ ಪತಿಯಿಂದ ನಿಲ್ಲಿಸಿದ ಸ್ವರಾಜ್ಯ ಪಕ್ಷವು ತಮ್ಮ ಈ ಚುನಾವಣೆಯ ಅನುಭವವನ್ನು ಕೊಟ್ಟರೆ ಒಳಿತಾಗುತ್ತಿದ್ದಿತು. ಸ್ವರಾಜ್ಯ ಪಕ್ಷವು ನಿಜವಾಗಿ ನಮ್ಮ ಜಿಲ್ಲೆಗೆ ಅವಶ್ಯವೆಂದು ಪಕ್ಷದ ವ್ಯವಸ್ಥಾಪಕರು ತಿಳಿಯುವರಾದರೆ, ಅವರು ತಮ್ಮ ಅನುಭವಗಳನ್ನೂ, ಅವುಗಳಿಂದ ಕಲಿತ ಪಾಠಗಳನ್ನೂ, ಮುಂದಿನ ಕಾರ್ಯಕ್ಕಾಗಿ ಜನತೆಯು ಹೇಗೆ ವರ್ತಿಸಬಹುದೆಂಬುದನ್ನೂ ಚರ್ಚಿಸುವುದು ಅವಶ್ಯ. ಬರೇ ಪರಸ್ಪರ ದೂಷಣೆಯಿಂದಲೂ ಅವಿಶ್ವಾಸದಿಂದಲೂ ಯಾವ ಕಾರ್ಯವೂ ಸಾಗುವಂತಿಲ್ಲ.

ಅನುಕ್ರಮಣಿಕೆ.

ಅಗ್ರಲೇಖ — ಪುಟ
ಹಿಂದೂ ಮತಸಂಸ್ಥೆಗಳು ... ೬
ಸ್ಫುಟವಿಚಾರಗಳು ... ೬
ವರ್ತಮಾನಸಂಗ್ರಹಗಳು—
ವಿದೇಶ, ಒಳದೇಶ ... ೭
ದಕ್ಷಿಣ ಕನ್ನಡ—ಕುಂಬಳೆ, ಕಾಸರಗೋಡು, ಕಾರ್ಕಳ, ಬಂಟ್ವಾಳ, ೭
ಪಾಣೆಮಂಗಳೂರು ... „
ಮಂಗಳೂರು ... „
ಪತ್ರವ್ಯವಹಾರ ೧, ... ೮

ಸ್ವದೇಶಾಭಿಮಾನಿ.

ಶಕ ೧೮೪೭ ಮಾಘ ಬ| ೧೫ಯು ಶುಕ್ರವಾರ

ಹಿಂದೂ ಮತಸಂಸ್ಥೆಗಳು.

ಹಿಂದೂ ಮತದ ಒಂದು ವೈಶಿಷ್ಟ್ಯವೆಂದರೆ ಅದರ ದೊಡ್ಡ ದೊಡ್ಡ ಮತಸಂಸ್ಥೆಗಳು. ಸಾಮಾನ್ಯತಃ ಹಿಂದೂ ಮತವು ತನ್ನ ಅಸ್ತಿತ್ವಕ್ಕಾಗಿಯೂ, ತನ್ನ ಆದರ್ಶ ರಕ್ಷಣೆಗಾಗಿಯೂ ವ್ಯವಸ್ಥಿತವಾದಷ್ಟು ಬೇರಾವ ಮತವೂ ಇರುವುದಿಲ್ಲ. ಹಿಂದೂ ಸಂಸ್ಥೆಗಳ ಹಿಂದಿನ ಇತಿಹಾಸವನ್ನೂ, ಅವುಗಳು ಗೈಯುತ್ತಲಿದ್ದ ಕೆಲಸವನ್ನೂ ನೋಡಿದರೆ, ಹಿಂದೂ ಮತಸಂಸ್ಥೆಗಳು ಉದಾರ ಭಾವನೆಯಿಂದಲೂ, ವಿಶಾಲ ಜ್ಞಾನದಿಂದಲೂ ರಚಿತವಾದುವು ವೆಂದು ಧಾರಾಳವಾಗಿ ಹೇಳಬಹುದು.

ಆದರೆ ದುಃಖದ ವಿಷಯವೆಂದರೆ ಈಗ ಅವೆಲ್ಲವೂ ಜಡ ರೂಪವನ್ನು ತಾಳಿಕೊಂಡಿವೆ. ಅವುಗಳ ಮೂಲೋದ್ದೇಶವು ವಿಸ್ಮೃತಿಯ ಪಾಲಾಗಿವೆ. ಅವುಗಳ ನಿಜವಾದ ಕಾರ್ಯಕಾರಿತೆಯು ಇಲ್ಲದೆ ಹೋಗಿಯದೆ. ಅಂತಾಗಿ ಈ ಸಂಸ್ಥೆಗಳು ತಮಗೆ ಹಿಂದಿದ್ದ ಗೌರವವನ್ನು ಕಳಕೊಂಡು, ಒಂದು ಬಾರಿ ಜನತೆಯ ವಿಶ್ವಾಸದ ಕೇಂದ್ರವೆಂದಿದ್ದುವು. ಈಗ ಜನತೆಯನ್ನು ಹತ್ತಿರ ಬರಗೊಡದ ಜಡವಸ್ತುಗಳಾಗಿ ಪರಿಣಮಿಸಿವೆ. ಇರಲಿ ಈ ಸಂಸ್ಥೆಗಳಲ್ಲಿ ಧನವಿದೆ; ಅಲ್ಲಿ ಡಂಭವೂ ಇದೆ. ಆದರೆ ಅಲ್ಲಿ ವಿಶ್ವಾಸಕ್ಕೆ ಪಾತ್ರವಾಗುವಂತಹ ವಿಷಯವೇನೂ ಇಲ್ಲ. ಜನತೆಯನ್ನು ಜ್ಞಾನದ ಕಡೆಗೆ ಒಯ್ಯುವ ಬದಲಿಗೆ ಮೂಢತೆಯ ಕಡೆಗೂ ಮಿಥ್ಯಾಚಾರದ ಕಡೆಗೂ ಒಯ್ಯುವಂತಹ ವಿಷಯಗಳೇ ಈ ಸಂಸ್ಥೆಯಲ್ಲಿ ಹೆಚ್ಚಿನದಾಗಿವೆ.

ನಮ್ಮ ಜಿಲ್ಲೆಯಲ್ಲಿಯೂ ಅಂತಹ ಸಂಸ್ಥೆಗಳು ಹಲವಿದೆ. ದೇವಸ್ಥಾನಗಳೆಂದೂ, ಮಠಗಳೆಂದೂ, ಈ ಸಂಸ್ಥೆಗಳು ಜನತೆಯ ಮಧ್ಯದಲ್ಲಿದ್ದು, ಬಹಳ ಹಣವನ್ನು ಹೀರಿಕೊಳ್ಳುತ್ತಿವೆ. ಆದರೆ ಹಣ ಹೀರಿಕೊಳ್ಳುವುದರಲ್ಲಿಯೇ ಇವುಗಳ ತೃಪ್ತಿಯಿಲ್ಲ, ಆ ಹಣದ ಸುವಿನಿಯೋಗದಲ್ಲಿಯಾಗಲಿ, ತಾವು ಅಧಿಕರಿಸಿ ಧನವನ್ನು ಕೂಡಿಸುತ್ತಿರುವ ಆ ಸಮಾಜದ ಉಜ್ಜೀವನದಲ್ಲಿಯಾಗಲಿ, ಈ ಸಂಸ್ಥೆಗಳು ಚಿಂತಿತವಾಗಿಲ್ಲ.

ಈ ಎಲ್ಲಾ ಸಂಸ್ಥೆಗಳ ತಮ್ಮ ಶ್ರೀಮಂತಿಕೆಯನ್ನು ಬೆಳೆಸಲು ಯಾವ ತರದ ಸಾಧನೆಗಳನ್ನು ನಡೆಸಲಿಕ್ಕೂ ಹಿಂಜರಿಯುವುದಿಲ್ಲ. ಈ ಕಾರಣದಿಂದಲೇ ಇವುಗಳು ಸಮಾಜದ ಕಡೆಗೆ ನಡೆಸಬೇಕಾದ ಕಾರ್ಯಕ್ರಮಗಳನ್ನು ಇವು ನಡೆಸದೆ ಬರೇ ದುಡ್ಡಿನ ಜಮೆಯ ಪ್ರಯತ್ನಗಳಲ್ಲಿಯೇ ಸತತವೂ ನಿರತವಾಗಿವೆ.

ನಮ್ಮ ಜಿಲ್ಲೆಯ ಹಿಂದೂ ಸಂಸ್ಥೆಗಳು ಸಾಮಾನ್ಯವಾಗಿ ಹವೀಕ ಮತ್ತು ಗೌಡಸಾರಸ್ವತ ಬ್ರಾಹ್ಮಣರದವುಗಳಾಗಿವೆ. ಗೋವೆಯಂತಹ ದೂರದೇಶದಿಂದ ಇಲ್ಲಿಗೆ ಬಂದು ವಸತಿಗಳನ್ನು ಕಟ್ಟಿಕೊಂಡ ಸಾರಸ್ವತ, ಗೌಡಸಾರಸ್ವತ ಸಮಾಜಗಳು, ತಮ್ಮ ಸಮಾಜದ ಸುವ್ಯವಸ್ಥೆಗಾಗಿಯೇ ಈ ದೇವಸ್ಥಾನಗಳನ್ನು ರಚಿಸಿದರು. ಅಲ್ಲದೆ, ಶ್ರೀಮನ್ಮಧ್ವಾಚಾರ್ಯರು, ತಮ್ಮ ಅದ್ವಿತೀಯ ಪ್ರತಿಭೆಯಿಂದಲೂ ಸಾಮರ್ಥ್ಯದಿಂದಲೂ ದ್ವೈತ ತತ್ವವನ್ನು ಸ್ಥಾಪಿಸಿ, ಅದರ ಚಿರ ಅಸ್ತಿತ್ವಕ್ಕಾಗಿ ಹವೀಕರ ಮಠಗಳನ್ನೂ ದೇವಾಲಯಗಳನ್ನೂ ಸ್ಥಾಪಿಸಿದರು. ಈ ಸಂಸ್ಥೆಗಳಲ್ಲೆಲ್ಲಾ ಸಾಕಷ್ಟು ಹಣವಿದೆ. ಆದರೆ ಪರಿಚಾಲಕರಿಗೆನೇ ಇವುಗಳ ಮೇಲೆ ಶ್ರದ್ಧೆಯೂ ವಿಶ್ವಾಸವೂ ಇಲ್ಲದ ಮೇಲೆ ಇವುಗಳಿಂದ ಸಮಾಜಕ್ಕೆ ಎಷ್ಟು ಲಾಭವಾದೀತು?

ನಮ್ಮ ಜಿಲ್ಲೆಯಲ್ಲಿ ಮಾತ್ರವಲ್ಲ—ಇಡೀ ಹಿಂದೂಸ್ಥಾನದ ಸಂಸ್ಥೆಗಳ ಪರಿಸ್ಥಿತಿಯೇ ಹೀಗಾಗಿದೆ. ಹಲವು ಇಂತಹ ಸಾರ್ವಜನಿಕ ಸಂಸ್ಥೆಗಳು ವಂಶಪಾರಂಪರ್ಯವಾಗಿ ಒಂದೇ ಕುಟುಂಬದ ಆಡಳಿತೆಯಿಂದ ನಡೆದು ಬಂದಿವೆ. ಅದೊಂದು ಕಾರಣದಿಂದ ಆ ಕುಟುಂಬದವರು, ತಮ್ಮ ಆಡಳಿತದ ಇಡೀ ಸಂಸ್ಥೆಯೇ ತಮ್ಮದೆಂದು ಸಾಧಿಸುವುದುಂಟು. ತಾರಕೇಶ್ವರದ ದೇವಸ್ಥಾನದ ಕಥೆಯೂ ಹೀಗಿದ್ದಿತು. ತಿರುಪತಿ, ತಾರಕೇಶ್ವರ, ಗಯಾ ಮೊದಲಾದ ಪ್ರಸಿದ್ಧ ಸ್ಥಳಗಳ ಪ್ರಸಿದ್ಧ ದೇವಸ್ಥಾನಗಳು ಮಹಂತನೆಂಬ ಹೆಸರಿನಿಂದ ಒಂದೇ ಕುಟುಂಬದ ಯಜಮಾನನಿಂದ ವಂಶಪಾರಂಪರ್ಯದ ಕ್ರಮದಿಂದ ಆಡಳಿತೆಯಲ್ಲಿವೆ. ಈ ಮಹಂತರಲ್ಲಿ ಹಲವರು ದುರ್ವ್ಯಸನವುಳ್ಳವರೂ, ದುರಾಚಾರಿಗಳೂ, ಸ್ವಾರ್ಥಿಗಳೂ ಆಗಿರುತ್ತಾರೆ; ಮತ್ತು ದೇವಸ್ಥಾನವನ್ನು ಕೇವಲ ದುಡ್ಡು ಜಮೆಮಾಡುವ ಅಂಗಡಿಯಂತೆ ಮಾಡಿ ಆ ಹಣವನ್ನು ತಮ್ಮ ಉಪಯೋಗಕ್ಕೆ ತೆಗೆಯುವರು. ಬರುವ ಜನರಿಗೆ ಸೌಕರ್ಯವನ್ನಾಗಲಿ, ಅವರು ಕೊಡುವ ದ್ರವ್ಯದ ಸದ್ವಿನಿಯೋಗವನ್ನಾಗಲಿ ಈ ಮಹಂತರು ಮಾಡುವುದಿಲ್ಲ. ಇದರಿಂದ ಜನರಿಗೆ ಮಹಂತರುಗಳ ಮೇಲೆ ತಾತ್ಸಾರ ಹುಟ್ಟುವುದುಂಟು. ಈ ಕಾರಣದಿಂದಲೇ ಕಳೆದ ವರ್ಷ ಮಹಂತರನ್ನು ತೆಗೆದು ಹಾಕಲಿಕ್ಕೆಂದು ಸತ್ಯಾಗ್ರಹ ಚಳವಳವು ತಾರಕೇಶ್ವರದಲ್ಲಿ ನಡೆದಿತ್ತು.

ಅಲ್ಲದೆ ನಾವು ಪುಣ್ಯವನ್ನು ಸಂಪಾದಿಸಿಕೊಳ್ಳುವೆವೆಂದು ಆಶೆಯಿಂದ ಯಾವ ಯಾವ ಮಹಾ ಯಾತ್ರೆಯ ಕ್ಷೇತ್ರಗಳಿಗೆ ಹೋಗುವೆವೊ, ಆ ಕ್ಷೇತ್ರಗಳಲ್ಲಿಯ ಉಪಾಸಕರ ಪರಿಸ್ಥಿತಿಯನ್ನು ನೋಡಿದರೆ, ಅಲ್ಲಿ ಈಶ್ವರನು ಪಲಾಯಿತನಾಗಿರುವನೆಂದೇ ಒಂದೊಂದು ಬಾರಿ ಅನ್ನಿಸುತ್ತಿದೆ. ಅಲ್ಲಿಯ ಎಲ್ಲಾ ಉಪಾಸಕರೂ, ಪುರೋಹಿತರೂ ದ್ರವ್ಯಲೋಭದಿಂದ ಬಂದ ಯಾತ್ರಿಕರನ್ನು ವಂಚಿಸುವುದರಲ್ಲಿ ಚಿಂತಿತರಾಗಿರುವರಲ್ಲದೆ, ಅವರಿಗೆ ಈಶ್ವರನ ನಿಜವಾದ ಜ್ಞಾನವನ್ನು ಕಲ್ಪಿಸಿಕೊಡುವುದಿಲ್ಲ. ನಾಲ್ಕಾಣೆಯ ಸ್ನಾನ, ರೂಪಾಯಿ ತರ್ಪಣ ಎಂಟಾಣೆಯ ನೈವೇದ್ಯ, ಸಾವಿರ ರೂಪಾಯಿಗಳ ಮಹಾ ಪೂಜೆ (ದುಯಂ); ಎರಡು ಸಾವಿರ ರೂಪಾಯಿಗಳ ಮಹಾ ಪೂಜೆ (ಅವ್ವಲ್) ಇತ್ಯಾದಿ ದೇವಪೂಜೆಗಳಿಗೆ ಬೆಲೆಕಟ್ಟಿ ಅವ್ವಲ್ ಮತ್ತು ದುಯಂ ಎಂದು ವಿಂಗಡಿಸುವುದನ್ನು ನೋಡಿದರೆ ಒಂದು ಕಡೆಗೆ ಹಾಸ್ಯವೂ, ಇನ್ನೊಂದು ಕಡೆಗೆ ದುಃಖವೂ ಉಂಟಾಗುತ್ತಿದೆ. ಜನತೆಯಾದರೂ ಇಂತಹ ಮೂಢ ಔಪಚಾರಿಕ ಪೂಜೆಗಳಲ್ಲಿಯೂ ಸುಲಭವಾಗಿ ಸಿಕ್ಕುವ ಪುಣ್ಯರಾಶಿಗೂ ಮರುಳಾಗಿ ಈ ಯಾತ್ರಾಸ್ಥಳಗಳ ಮತಕಟುಕರ ಕತ್ತಿಗೆ ಬಲಿಯಾಗುವರು. ಅಂತೂ ಹಿಂದೂ ಮತದ ಉಚ್ಚತತ್ವಗಳು ಗೆದ್ದಲಿಗೆ ಆಹಾರವಾಗಿ, ಉಳಿದ ಈ ಸ್ವಾತ್ಮಮಾಯೆಯೇ ಮತವಾಗಿ ಪರಿಣಮಿಸಿಯದೆ!

ಸಿಖ್ಖರೆಂದರೆ, ಹಿಂದೂ ಮತ್ತು ಮುಸಲ್ಮಾನರೊಳಗೆ ಐಕ್ಯವನ್ನು ತರಲಿಕ್ಕಾಗಿ ಒಂದು ಮತವನ್ನು ಸಾರಿದ ಗುರು ನಾನಕನ ಪಂಥದವರು. ಇವರು ಪಂಜಾಬದಲ್ಲಿರುವರು. ಇವರಿಗೂ ದೊಡ್ಡದೊಡ್ಡ ದೇವಸ್ಥಾನಗಳಿವೆ. ಇವುಗಳ ಹೆಸರು ಗುರುದ್ವಾರವೆಂದು. ಈ ದೇವಾಲಯಗಳು ಕೂಡ, ನಾವು ಈ ಮೊದಲು ವಿವರಿಸಿದ ಹಿಂದೂಮತ ಸಂಸ್ಥೆಗಳ ಪರಿಸ್ಥಿತಿಗೆ ಬಂದಿದ್ದುವು. ಆದರೆ ಸಿಖ್ಖ ಜನರು ಬೇಗನೆ ಎಚ್ಚರಿದ್ದು, ಇನ್ನು ತಾವು ನಿದ್ರೆಗೈದರೆ ತಮ್ಮ ಸಂಸ್ಥೆಗಳು ಹಾಳುಬೀಳುವುವೆಂದು ತಮ್ಮನ್ನು ತಾವೇ ಸಂಘಟಿಸಿಕೊಳ್ಳಲಾರಂಭಿಸಿದರು. ಅವರು ಸಿಖ್ಖ ಗುರುದ್ವಾರ ಪ್ರಬಂಧಕ ಕಮಿಟಿ ಎಂದು ಒಂದು ಕಮಿಟಿಯನ್ನೇರ್ಪಡಿಸಿ, ಅದರ ಮೂಲಕ ತಮ್ಮ ಒಂದೊಂದೇ ಗುರುದ್ವಾರ (ದೇವಸ್ಥಾನ)ವನ್ನು ಕೈವಶಪಡಿಸಿಕೊಳ್ಳಲಾರಂಭಿಸಿದರು. ಈ ಗುರುದ್ವಾರಗಳೂ, ತಿರುಪತಿ, ತಾರಕೇಶ್ವರ ದೇವಾಲಯಗಳಂತೆಯೇ ಒಬ್ಬೊಬ್ಬ ಮಹಂತನ ಆಡಳಿತೆಯಲ್ಲಿದ್ದುವು. ತಮ್ಮ ದೃಢ ನಿರ್ಧಾರದಿಂದ, ಸರಕಾರವು ತಮಗೆ ಪ್ರತಿಕೂಲವಿದ್ದರೂ ಲಕ್ಷಿಸದೆ, ಈ ಕಮಿಟಿಯ ಧೈರ್ಯದಿಂದ ಪ್ರತಿ ಗುರುದ್ವಾರವನ್ನೂ ತಮ್ಮ ಆಡಳಿತೆಗೆ ತಂದಿತು. ಇದಕ್ಕಾಗಿ ಕಮಿಟಿಯು ಅನೇಕ ಸಾಹಸ ಕೃತ್ಯಗಳನ್ನು ಮಾಡಬೇಕಾಯಿತು. ಒಂದು ಗುರುದ್ವಾರವು ಇವರಿಗೆ ಸುಲಭದಲ್ಲಿ ಕೈಗೆ ಸಿಕ್ಕದೆ, ಕಡೆಗೆ ಸತ್ಯಾಗ್ರಹವನ್ನಾಚರಿಸಬೇಕಾಗಿ ಬಂದು ಕಮಿಟಿಯ ಸ್ವಯಂ ಸೇವಕರು ಅನೇಕ ಪೀಡೆಗಳನ್ನು ಅನುಭವಿಸಬೇಕಾಯಿತು. ಆದರೂ ಚಿಕ್ಕಪಡೆ ಅವರು ಕಡೆಯ ತನಕ ಯತ್ನಿಸಿ ಆ ಗುರುದ್ವಾರವನ್ನೂ ತಮ್ಮ ಕೈಕೆಳಗೆ ತಂದರು. ಆ ಮೇಲೆ ಸರಕಾರವು ಸಿಖ್ಖ ನಿರ್ಧಾರವನ್ನು ನೋಡಿ, ಇನ್ನು ತಾವು ಸುಮ್ಮನಿರುವುದು ನ್ಯಾಯವಲ್ಲವೆಂದು, ಅವರಿಗೆ ಬೇಕಾದ ತರದ ಒಂದು ಮಸೂದೆಯನ್ನು ತಯಾರಿಸಿ, ಅವರ ದೇವಸ್ಥಾನಗಳ ಅನಿರ್ಬಂಧಿತ ಆಡಳಿತೆಗೆ ಸಹಾಯಕವಾಯಿತು.

ತಿರುಪತಿ ದೇವಸ್ಥಾನವು ಕೂಡ ಸರಕಾರದ ಮೇಲ್ವಿಚಾರದಲ್ಲಿದೆ. ಅಲ್ಲಿ ಸರಕಾರದ ರಿಸೀವರನೊಬ್ಬನಿದ್ದು ಆದರ ಎಲ್ಲಾ ಜಮಾಖರ್ಚುಗಳ ತಪಸೀಲು ಸರಿಯಾಗಿ ತಯಾರಿಸಲ್ಪಡುತ್ತಿದೆ. ಆದರೆ ಅಲ್ಲಿಯಾದರೂ ದೇವಸ್ಥಾನವು ಸಮಾಜ ಹಿತಕ್ಕಾಗಿ, ಮುಖ್ಯವಾಗಿ ಹಿಂದೂಮತದ ಪ್ರಸಾರಕ್ಕಾಗಿ ಹೆಚ್ಚು ಪರಿಶ್ರಮಪಡುತ್ತಿರುವಂತೆ ತೋರುವುದಿಲ್ಲ.

ಪ್ರಕೃತ ಲೇಖದಲ್ಲಿ ಇತರ ದೇವಸ್ಥಾನಗಳ ವರ್ತಮಾನ ಇತಿಹಾಸವನ್ನು ವಿವರಿಸುವುದು ನಮ್ಮ ಉದ್ದೇಶವಲ್ಲ. ಆದರೆ ಅವುಗಳ ವರ್ತಮಾನ ಇತಿಹಾಸದಿಂದ ನಮ್ಮ ದೇವಸ್ಥಾನಗಳಿಗೆ ಯಾವ ಪಾಠವು ಸಿಕ್ಕುವುದು ಎಂಬುದನ್ನು ಕಲಿಯಲೆಂದೇ ಮೇಲಿನ ವಿವರಗಳನ್ನು ನಾವು ಸಂಕ್ಷೇಪವಾಗಿ ಕೊಟ್ಟಿರುವೆವು. ನಮ್ಮ ದೇವಸ್ಥಾನಗಳು ದಿನದಿನವೂ ಸಮಾಜದಿಂದ ದೂರವಾಗುತ್ತಿರುವುದನ್ನು ನೋಡಿಯೇ ನಾವು ಇಷ್ಟೆಲ್ಲವನ್ನು ಚರ್ಚಿಸಲೆಳಸಿದೆವು.

ನಮ್ಮ ದೇವಸ್ಥಾನಗಳ ಆಡಳಿತದಲ್ಲಿ ಉದಾರಭಾವನೆಯೂ, ಸಮಾಜಸೇವೆಯ ಚಿರಚಿಂತನವೂ, ಮತಪ್ರಸಾರದ ಆಕಾಂಕ್ಷೆಯೂ ಸ್ಥಿರವಾಗಿ ಕೂಡಿಕೊಂಡರೇನೇ ದೇವಸ್ಥಾನ ಉದ್ದೇಶದ ಕಿಂಚಿದಂಶವಾದರೂ ಸಾರ್ಥಕವಾಗುವುದು. ದೇವರಿಗೆ ಸಮಾಜದ ಮೇಲೆ ಪ್ರೀತಿ ಉಂಟು. ಹತ್ತು ಜನರಿದ್ದಲ್ಲಿ ತಾನೂ ಇದ್ದೇನೆಂದು ಅವನ ಅಂಬೋಣವಿದೆ. ಮೂರ್ತಿ ಸೇವೆಯು ಬರೇ ಚಿಹ್ನೆಯು ಸ್ವರೂಪ ಮಾತ್ರವಾಗಿದೆ. ನಿಜವಾದ ದೇವಸೇವೆಯು ಸಮಾಜ ಮೂಲಕವಾಗತಕ್ಕುದಿದೆ. ಆದುದರಿಂದ ವ್ಯಕ್ತಿಯು ತನ್ನ ಸೇವೆಯನ್ನು ದೇವಸ್ಥಾನದಲ್ಲಿ ಮೂರ್ತಿ ಸ್ವರೂಪನಾದ ಈಶ್ವರನಿಗೆ ಸಮರ್ಪಿಸುವಾಗ, ಅದನ್ನು ಸಮಾಜದ ಕಡೆಗೆ ಮಾಡಿ, ಆ ಉಪಾಸನೆಯನ್ನು ಪೂರ್ಣಗೊಳಿಸುವುದು ದೇವಸ್ಥಾನಗಳ ಕರ್ತವ್ಯವಿದೆ.

ಮುಖ್ಯತಃ ಪ್ರತಿ ಜಾತಿಯವರೂ ತಮ್ಮ ತಮ್ಮ ಸುವ್ಯವಸ್ಥೆಗೊಳಿಸುವುದು ಅವಶ್ಯಕ. ಎಂಡೋಮೆಂಟ್ ಬಿಲ್ಲು ತಯಾರಾದಂದಿನಿಂದ ಕೆಲವರು ಜನತೆಯೊಳಗೆ ದಿಗಿಲು ಹಚ್ಚಿಸಲು ಪ್ರಯತ್ನಿಸಿದರು. ನಾವು ನಮ್ಮಲ್ಲಿಯೇ ಉತ್ತಮವಾದ ವ್ಯವಸ್ಥೆಯನ್ನು ಕೈಗೊಂಡರೆ, ಈ ಎಂಡೋಮೆಂಟ್ ಆಕ್ಟಿನಿಂದ ನಮ್ಮ ದೇವಸ್ಥಾನಗಳಿಗೆ ಹೆಚ್ಚು ತೊಂದರೆ ಬರುವ ಕಾರಣವಿಲ್ಲ. ಪ್ರತಿ ಜಾತಿಯವರೂ ತಮ್ಮ ಜಾತಿಯ ಎಲ್ಲಾ ದೇವಸ್ಥಾನಗಳನ್ನು ಒಂದೇ ಕೂಟವಾಗಿ ಮಾಡಿ, ಎಲ್ಲಾ ದೇವಸ್ಥಾನಗಳ ಮೇಲ, ಎಲ್ಲರೂ ಸಹಕರಿಸಬಲ್ಲ ದೊಡ್ಡ ಆಡಳಿತೆಯ ಬೋರ್ಡನ್ನು ಮಾಡಿದರೆ, ದೇವಸ್ಥಾನ ದೇವಸ್ಥಾನಗಳೊಳಗೆ ಸಹಕಾರವೂ, ಜಾತೀಯ ಕೆಲಸಗಳ ಸುಲಭಸಾಧನೆಯೂ, ಮತ ಪ್ರಸಾರದ ಕೆಲಸವೂ ಚೆನ್ನಾಗಿ ನಡೆಯಲು ಉತ್ತಮ ಉಪಾಯವಾಗುವುದೆಂದು ನಮಗೆ ಅನ್ನಿಸುತ್ತಿದೆ.

ಸಮಾಜದೊಳಗೆ ಮತಪ್ರಸಾರ ಮಾಡಲಿಕ್ಕೆಂದಿರುವ ಮಠಗಳು, ನಿಸ್ಸಂಗತ್ವದ ಆದರ್ಶಭೂಮಿಯಾಗಿರುವುದರ ಬದಲಿಗೆ ಸ್ವಾರ್ಥದ ತವರುಮನೆಯಾಗಿ ಪರಿಣಮಿಸಿಯವೆ. ಅಲ್ಲದ ಎಂಡೋಮೆಂಟ್ ಬಿಲ್ಲು ಬಂದಂದಿನಿಂದ, ಎಂಡೋಮೆಂಟ್ ಬಿಲ್ಲಿನಿಂದ ಈ ಮಠಗಳನ್ನು ತಪ್ಪಿಸಲಿಕ್ಕಾಗಿ ಅವು ಖಾಸಗಿ ಸಂಸ್ಥೆಗಳೆಂದೆನ್ನಿಸಲು ಪ್ರಯತ್ನಗಳು ನಡೆಯುತ್ತಿವೆ. ಸಮಾಜದ ಕೆಲವು ಧುರೀಣರೇ ಸಂಸ್ಥೆಗಳನ್ನು ಖಾಸಗಿ ಸಂಸ್ಥೆಗಳೆಂದೆನ್ನಿಸಲು ಪ್ರಯತ್ನಿಸುವುದು ಶೋಚನೀಯ. ಒಂದು ಬಾರಿ ಈ ಸಂಸ್ಥೆಗಳು ಖಾಸಗಿ ಸಂಸ್ಥೆಗಳೆಂದಾದರೆ, ಮುಂದೆ ಅವುಗಳು ಸಮಾಜದ ಮಟ್ಟಿಗೆ ಉಪಯುಕ್ತವಾಗುವುದರಲ್ಲಿ ಅನುಮಾನವೇ ಇಲ್ಲ. ಎಂಡೋಮೆಂಟ್ ಆಕ್ಟಿನ ಶೋಧವನ್ನು ಹೆದರಿ ಮಠಾಧಿಕಾರಿಗಳ ಸ್ವಾರ್ಥದ ಬಾವಿಗೆ ಬೀಳುವುದು, ವಿಚಾರದ ಕಾರ್ಯವಲ್ಲ; ಸಮಾಜಕ್ಕೆ ಹಿತಕರವಾದುದೂ ಅಲ್ಲ.

ಹಿಂದೂ ಧುರೀಣರು ಈ ಸಂಸ್ಥೆಗಳ ಸುಧಾರಣೆಗಾಗಿ ಬೇಗನೆ ಮುಂದೆ ಬರುವ ಆವಶ್ಯಕತೆಯು ತುಂಬಾ ಇದೆ.

ವಿದೇಶ ವರ್ತಮಾನ.

—ಇಂಗ್ಲೆಂಡಿನಿಂದ ಇಂಟರ್‌ನೇಶನಲ್ ಫೆಡರೇಶನ್ ಮಾಸ್ಟರ್ ಕಾಟನ್ ಸ್ಪಿನ್ನರ್ಸ್ ಎಂಡ್ ಮೆನುಫೆಕ್ಚರರ್ಸ್ ಎಸೋಸಿಯೇಶನ್‌ನವರು ಅಮೇರಿಕೆಯಲ್ಲಿಯ ಕೊಲುಂಬಿಯಾ ಎಂಬಲ್ಲಿ ಅಲ್ಲಿಯವರು ಬೆಳಸುವ ಹತ್ತಿಯ ಬೆಳೆಯ ವಿಷಯ ಮಾಹಿತಿ ತೆಗೆದುಕೊಳ್ಳಲಿಕ್ಕಾಗಿ ಮೇಲಿನ ಸಂಘದ ಕಾರ್ಯದರ್ಶಿಯವರು ಮತ್ತು ನೂಲುವ ಸಂಘದವರ ಪೈಕಿ ಪ್ರಮುಖ ವ್ಯಾಪಾರಿಗಳಾದ ಆರ್ಥರ್ ಫೋಸ್ಟರ್ ಎಂಬವರು ತಾ. ೩ಕ್ಕೆ ಇಂಗ್ಲೆಂಡಿನಿಂದ ಕೊಲುಂಬಿಯಾಕ್ಕೆ ಹೋಗಿರುವರು.

—ಕುದುರೆಯ ಮೇಲಿಂದ ಬಿದ್ದ ನಮ್ಮ ಯುವರಾಜರು ಈಗ ಸ್ವಲ್ಪ ಗುಣಹೊಂದಿ ಕಳೆದ ತಾ. ೮ಕ್ಕೆ ಇವರು ಅಲ್ಲಿಯ ಒಂದು ಬಾಯಿಸ್ಕೋಪ್ ಆಟಕ್ಕೆ ಏನೊಂದೂ ಕಷ್ಟವಿಲ್ಲದೆ ಹೋಗಿರುವರು.

—ಪೋರ್ಚುಗಲ್ಲಿನಲ್ಲಿ ದಂಗೆಗೆ ಎಬ್ಬಿಸಿದವರನ್ನು ಪೋರ್ಚುಗೀಸ ಸರಕಾರದವರು ಎಜೋರ್ಸ್ ದ್ವೀಪಕ್ಕೆ ಗಡಿಪಾರು ಮಾಡಿರುವರು.

—ಫ್ರಾನ್ಸದೇಶದಲ್ಲಿ ಒಂದು ರೈಲು ಇನ್ನೊಂದು ರೈಲಿಗೆ ಬಡಿದು ಒಬ್ಬನು ಮರಣಹೊಂದಿರುವನು. ಮೂವತ್ತೆರಡು ಮಂದಿಗೆ ಗಾಯವಾಗಿದೆ.

ಒಳದೇಶ ವರ್ತಮಾನ.

—ಕಲಕತ್ತಾದಿಂದ ನ್ಯೂಯಾರ್ಕಿಗೆ ಹೋಗುವ ಎಸ್. ಎಸ್. ಸಿಟಿ ಒಫ್ ಆಗ್ರಾ ಎಂಬ ಹಡಗವು ಕೊಚ್ಚಿಯ ಹತ್ತಿರ ಹೊಗೆಯಲ್ಲಿ ಉರಿದುಹೋಗಿಯದೆ. ಇದರಲ್ಲಿ ಮದರಾಸ್, ಅಲ್ಲೆಪ್ಪಿ, ಕಲಕತ್ತಾದಿಂದ ತುಂಬಿಸಿದ ಒಳ್ಳೆಮೆಣಸು, ಹುರಿಹಗ್ಗ, ನೂಲು, ನಿಂಬೆಹಣ್ಣು, ಹರಳು ಬೀಜ ಮುಂತಾದವುಗಳು ತುಂಬಾ ಇವೆ. ಈಗ ಅದು ೮ ಅಡಿ ನೀರಿನಲ್ಲಿದೆ.

—ಪಾಲಂಕೋಟೆಯಲ್ಲಿ ಒಂದು ಬೆಂಕಿಪೆಟ್ಟಿಗೆಯ ಕಾರ್ಖಾನೆಯನ್ನು ಇಟ್ಟಿರುತ್ತಾರೆ. ಇದರ ಮಾಲಿಕರು ಪಾದಿಯನ್ನು ತಯಾರಿಸುತ್ತಾರೆ.

—ಮಹಾತ್ಮಾ ಗಾಂಧಿಯವರು ಸಬರಮತಿ ಆಶ್ರಮದಲ್ಲಿಯೇ ಇರುವುದರಿಂದ ಅಲ್ಲಿ ಚರ್ಕದಲ್ಲಿ ನೂಲು ತಯಾರಿಸುವುದು ಹೆಚ್ಚಿಗಾಗುತ್ತಾ ಬರುತ್ತದೆ.

—ಬೊಂಬಾಯಿ ಕೋರ್ಟಿನಲ್ಲಿ ಇಂದೋರ ಮಹಾರಾಜರು ತಮ್ಮ ಸ್ವಂತ ಹಣವನ್ನಾಗಲೀ, ಭಂಡಾರದ ಹಣವನ್ನಾಗಲಿ ಕೇಸಿನ ಹಾಗೆ ಖರ್ಚು ಮಾಡಿದ್ದಾರೆಂದು ಟೈಮ್ಸ್ ಒಫ್ ಇಂಡಿಯಾದಲ್ಲಿ ಬರೆದ ವಾರ್ತೆಯು ನಿಜವಲ್ಲವೆಂದು ಇಂದೋರ ಮಹಾರಾಜರ ಮುಖ್ಯ ಪ್ರಧಾನಿಗಳು ತಿಳಿಸುತ್ತಾರೆ.

—ಪಂಜಾಬ ಸಂಸ್ಥಾನದಲ್ಲಿ ಪಟ್ಟಣಗಳಲ್ಲಿ ಶ್ವಾಸಕೋಶದ ಬೇರೆ ಬೇರೆ ರೋಗಗಳಿಂದಲೂ, ಆಹಾರ ಜೀರ್ಣಾದಿಗಳ ರೋಗಗಳಿಂದಲೂ ಹೆಚ್ಚು ಜನರು ಮರಣಪಡುತ್ತಾರೆಂದೂ ಆದುದರಿಂದ ಪಟ್ಟಣಗಳಲ್ಲಿ ಮನೆಗಳನ್ನು ಕಟ್ಟುವದರಲ್ಲಿಯೂ ಶುದ್ಧವಾದ ನೀರನ್ನು ಒದಗಿಸುವುದರಲ್ಲಿಯೂ, ಕೊಳಚು ನೀರು ಸರಿಯಾಗಿ ಹೊರಗೆ ಹೋಗುವಂತೆ ಮಾಡಬೇಕೆಂದೂ, ಮಲಮೂತ್ರಗಳನ್ನು ವೈಯುವುದರಲ್ಲಿ ಹೆಚ್ಚು ಜಾಗ್ರತೆಯನ್ನು ತೆಗೆದುಕೊಳ್ಳಬೇಕೆಂದೂ ಹಳ್ಳಿಗಳಲ್ಲಿ ಜನರು ಹೆಚ್ಚಾಗಿ ಮಲೇರಿಯಾ, ಪ್ಲೇಗ, ಮೈಲಿಗಜ್ಜಿ, ಬಿಟ್ಟು ಬಿಟ್ಟು ಬರುವ ಜ್ವರ ಇವುಗಳಿಂದ ಹೆಚ್ಚು ಜನರು ಸಾಯುತ್ತಿರುವುದರಿಂದ ಅವರಿಗೆ ಬೇಕಾದ ಶುದ್ಧವಾದ ನೀರನ್ನು ಒದಗಿಸಿಕೊಡುವುದಕ್ಕೆ ಸಾಧಿಸಬೇಕೆಂದೂ ಅಲ್ಲಿಯ ಡೈರೆಕ್ಟರ್ ಒಫ್ ಪಬ್ಲಿಕ್ ಹೆಲ್ತ ಇವರು ವರ್ಷಾವಧಿ ರಿಪೋರ್ಟಿನಲ್ಲಿ ಬರೆದಿರುತ್ತಾರೆ.

—ಮುಂಬಾಯಿಯ ಯುನಿವರ್ಸಿಟಿಗೆ ಇರುವ ವ್ಹಾಯಿಸ ಚೆನ್ಸಲರರಿಗೆ ಸಂಬಳ ನಿರ್ಣಯಿಸಬೇಕೆಂದು ತಂದ ಠರಾವು ಬಿದ್ದುಹೋಯಿತು.

—ಡಿಲ್ಲಿಯಲ್ಲಿ ಯಾರೋ ಮತ ಭ್ರಾಂತಿಯಿಂದ ಪೋಲಿಸ ಅಸಿಸ್ಟಾಂಟ ಸುಪರಿಂಟೆಂಡೆಂಟರನ್ನು ಗುಂಡುಹಾಕಿ ಕೊಂದಿರುವರು. ತನಖಿಯು ನಡಿಯುತ್ತಿದೆ.

—ಇಂಡಿಯಾ ಗವರ್ನಮೆಂಟಿನ ಸ್ಟೇಟ ರೈಲುವೆಯಿಂದ ಜನವರಿಗೆ ಅಂತ್ಯವಾಗುವ ವರ್ಷದಲ್ಲಿ ೭೩.೭೨ ಕೋಟಿ ರೂಪಾಯಿ ಮುನಾಫೆ ಸಿಕ್ಕಿಯದೆಂತೆ.

—ಕುಡಿಕತನವನ್ನು ಸಂಪೂರ್ಣವಾಗಿ ನಿಲ್ಲಿಸಿ ಬಿಡಬೇಕೆಂದು ಸ್ಟೇಟ ಕೌನ್ಸಿಲಿಗೆ ಬಂದ ಠರಾವಿಗೆ, ಇನ್ನು ೨೦ ವರ್ಷಗಳಲ್ಲಿ ಅದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡುತ್ತೇವೆಂದು ನಿರ್ಣಯವಾಯಿತು.

—ಬರ್ಮಾ ದೇಶದ ಪ್ರೋಮ ಜಿಲ್ಲೆಯಲ್ಲಿರುವ ೧೧೦ ಕುಟುಂಬಗಳಿರುವ ಒಂದು ಚಕ್ರರವಾಡಿ ಜಾತಿಯನ್ನು ಒಂದು ಹಳ್ಳಿಯಲ್ಲಿ ನಿಲ್ಲುವಂತೆ ಸರಕಾರವು ಕಾನೂನು ಮಾಡಿಯದೆ. ಈ ಜನರನ್ನು ಒಂದು ಹಳ್ಳಿಯಲ್ಲಿ ಒಂದು ಕುಟುಂಬ ಪೋಷಣೆಗೆ ಯೋಗ್ಯವಾದಷ್ಟು ಭೂಮಿಯನ್ನು ಸಾಗುವಳಿಗೆ ಕೊಟ್ಟು ಬೇಸಾಯಕ್ಕೆ ಬೇಕಾದ ದನಕರುಗಳನ್ನೂ, ನೇಗಿಲು ಮುಂತಾದ ಬೇಸಾಯದ ಸಾಹಿತ್ಯವನ್ನೂ, ಬೀಜವನ್ನೂ ಕೊಟ್ಟು, ಉಳ್ಳುಕೊಳ್ಳುವುದಕ್ಕೆ ಮನೆಗಳನ್ನು ಕಟ್ಟಿಕೊಡುವುದೆಂತಲೂ ನಿಶ್ಚಯಿಸಿಯದೆ.

—ಇಂದೋರಿನ ಮಹಾರಾಜರು ತನಗೆ ಬಾವಲಾ ಕೊಲೆಯ ವಿಷಯ ಕಮಿಷನ್ ಮೂಲಕ ವಿಚಾರಣೆ ಮಾಡಲಿಕ್ಕೆ ಒಪ್ಪಿರುವರು.

—ಕೊಯಮುತ್ತೂರು ಜಿಲ್ಲಾ ಕಲೆಕ್ಟರರ ಆಫೀಸಿನಿಂದ ಕೆಲವು ರಿಕಾರ್ಡುಗಳನ್ನು ಮತ್ತು ಸ್ವಲ್ಪ ಹಣವಿರುವ ಒಂದು ಪೆಟ್ಟಿಗೆಯನ್ನು ಯಾರೋ ಕಳವು ಮಾಡಿರುವರು. ಪೋಲೀಸರು ತಕ್ಕ ತನ್ನಿಯನ್ನು ನಡಿಸುತ್ತಿರುವರು.

—ಪೂನಾದಲ್ಲಿ ಡಾ| ಬೆಸೆಂಟಮ್ಮನವರು ಕಳೆದ ತಾ. ೬ಕ್ಕೆ ಅಲ್ಲಿಯ ಸರ್ವೆಂಟ್ಸ್ ಒಫ್ ಇಂಡಿಯಾ ಸೊಸೈಟಿಯ ಆಫೀಸುಗಳ ಹತ್ತಿರ ಥಿಯೋಸೋಫಿಕಲ್ ಸೊಸೈಟಿಯ ಹೊಸ ಆಫೀಸಿನ ಬಗ್ಗೆ ಶಂಕುಸ್ಥಾಪನೆ ಮಾಡಿ (Coming Teacher) ಎಂಬವರ ಕುರಿತು ಒಂದು ಭಾಷಣವನ್ನು ಕೊಟ್ಟರು.

—ಹೈದರಾಬಾದಿನ ರಾಜಾ ಆಸ್ಥಾನದಿಂದ ಕದ್ದುಹೋದ ಹೆಚ್ಚು ಬೆಲೆಯುಳ್ಳ ಚಿನ್ನಾಭರಣಗಳು ಈಗ ಅಲ್ಲಿಯ ಮುಸಿ ಎಂಬ ಸರೋವರದಲ್ಲಿ ಕಳ್ಳರು ಬಿಸಾಡಿರುವರೆಂದು ಅಲ್ಲಿಯ ಸರ[illegible]ರಿಗೆ ವರ್ತಮಾನ ಸಿಕ್ಕಿ ಈ ಸರೋವರದಲ್ಲಿ ಈಗ ಪೋಲೀಸರು ಹಾರುವನ್ನು ಹಾಕಿರುವರು.

—ಡಾ| ಬೆಸೆಂಟಮ್ಮನವರು ಬರುವ ವಾರದಲ್ಲಿ ಇಂಗ್ಲೆಂಡಿಗೆ ಹೋಗಲಿಕ್ಕಿರುವರು. ಈಗ ಅಲ್ಲಿಯ ಮುನ್ಸಿಪಾಲಿಟಿಯವರು ಅವರಿಗೊಂದು ಸ್ವಾಗತಾಭಿಮಾನ ಭಾಷಣವನ್ನು ಒಪ್ಪಿಸಬೇಕೆಂದು [illegible]

ದಕ್ಷಿಣ ಕನ್ನಡ.

ಕುಂಬಳೆ:— ಇಲ್ಲಿ, ಇದೆ ತಾ. ೧೧ರಿಂದ ಆರೋಗ್ಯ ಮತ್ತು ಶಿಶು ರಕ್ಷಣಾ ಸಪ್ತಾಹವು ಬಹು ಸಂಭ್ರಮದಿಂದ ಆಚರಿಸಲ್ಪಟ್ಟಿತು. ಮದ್ರಾಸ್ ಹೆಲ್ತ್ ಕೌನ್ಸಿಲಿನಿಂದ ಪ್ರಕಟಿಸಲ್ಪಟ್ಟ ಅಂಟು ಜಾಡ್ಯಗಳೂ ಅದರ ನಿವಾರಣೋಪಾಯವೂ ಇರುವ ಸಚಿತ್ರ ಪಟಗಳನ್ನು ಇಲ್ಲಿಯ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳಿಗೂ ಸಭೆಯವರಿಗೂ ಪ್ರದರ್ಶಿಸಲ್ಪಟ್ಟು ಈ ಕುರಿತು ಡಾಕ್ಟರ್ ಎಮ್. ಎಲ್. ಫೆರ್ನಾಂಡಿಸ್, ಡಾಕ್ಟರ್ ಎನ್. ಗಣೇಶಪ್ಪ, ಹಾಯರ್ ಎ. ಶಾಲಾ ಮುಖ್ಯೋಪಾಧ್ಯಾಯ ರಾ| ಎಮ್. ರಾಮಕೃಷ್ಣರಾವ್, ಎ. ಶಾ. ಉಪಾಧ್ಯಾಯ ರಾ| ಕೆ. ಮಾಧವನಾಯರ್ ರವರು ಸಹ ಸರಸವಾದ ಉಪನ್ಯಾಸಗಳನ್ನಿತ್ತರು. ಇಲ್ಲಿಯ ರೆವಿನ್ಯೂ ವ ಸಿವಿಲ್ ಪಂಚಾಯತುಗಳ ಪ್ರೆಸಿಡೆಂಟರಾದ ರಾ| ನರಸಿಂಗ ರಾಮಚಂದ್ರ ನಾಯಕ್ ರವರು ಈ ಆರೋಗ್ಯವಾರವನ್ನು ನಡಿಸುವರೆ ಉತ್ತೇಜನ ಕೊಟ್ಟದ್ದು ಶ್ಲಾಘನೀಯವಾಗಿದೆ.

ಈ ಮೊದಲು ಪ್ರಕಟಿಸಿದಂತೆ ಇಲ್ಲಿಯ ಮಾರ್ಕೆಟ ಬಳಿ ಹೊಸ ಬಾವಿಯ ಬಗ್ಗೆ ರೂ. ೨೦೦ ಸೆಂಕ್ಷನ್ ಆಗಿರುವದಲ್ಲದೆ ಬೋರ್ಡು ಮೆಂಬರುಗಳೂ ಉದಾರ ಗೃಹಸ್ತರಾದ ಇಲ್ಲಿಯ ಮ| ರಾ| ಬಿ. ವೆಂಕಪ್ಪ ಪುಂಜರು ವ ಮ| ರಾ| ಬಿ. ಚಿಕ್ಕಪ್ಪ ಭಂಡಾರಿಗಳು ರೂ. ೧೦೦೦ ದಾನ ಮಾಡಿದರಿಂದ ಮಾನ್ಯ ಬೋರ್ಡಿನವರು ಇಲ್ಲಿ ಹಾಯರ್ ಎಲಿಮೆಂಟರಿ ವ ಲವರ್ ಎಲಿಮೆಂಟರಿ ಶಾಲಾ ಕಟ್ಟೋಣದ ಬಗ್ಗೆ ರೂ. ೩೦೦೦ ಸೆಂಕ್ಷನ್ ಮಾಡಿರುವರು.

ಬಡತನ ವ ರೋಗದ ಸಂಕಷ್ಟ ತಾಳಲಾರದ ಇಲ್ಲಿಯ ಪೂಲ್ತ ಜಾತಿಯವನೊಬ್ಬನು ಕೆಲವು ದಿನಗಳ ಹಿಂದೆ ಇಲ್ಲಿಯ ರಸ್ತೆ ಕಿನಾರೆಯ ಮರಕ್ಕೆ ನೇಣು ಹಾಕಿ ಪ್ರಾಣಕಳಕೊಂಡನು.

ಬಂಟವಾಳ:— ಇಲ್ಲಿ ನೆಶನಲ್ ಹೆಲ್ತ ಎಂಡ್ ಬೇಬಿ ವೀಕ್ ಬಹು ವಿಜೃಂಭಣೆಯಿಂದ ಜರಗಿತು.

ಇಲ್ಲಿ ಜಾತ್ರೆಯ ಕಾಲಗಳಲ್ಲಿ ಕೆಲವು ವರ್ಷಗಳ ಮೊದಲು ಅನೇಕ ಊರುಗಳಿಂದ ಸಂತೆಗಳು ಬರುತ್ತಿತ್ತು. ಆ ಸಂತೆಗಳಿಗೆ ದೇವಸ್ಥಾನದ ಕಡೆಯಿಂದ ತೆತ್ತುವ ಬಾಡಿಗೆಯು ವಿಪರೀತವಾದುದರಿಂದ ಈಗೀಗ ಸಂತೆಗಳೇ ಕಡಿಮೆಯಾಗುತ್ತಾ ಬಂದವು. ಆದುದರಿಂದ ಈಗಿನ ದಯಾಳು ದೇವಳದ ಮೆನೇಜರವರು ಬಾಡಿಗೆಯ ಆಶೆ ಮಾಡದೆ ಜಾತ್ರೆಯು ಸಾಂಗವಾಗಿ ನಡಿಯುವಂತೆ ಮಾಡ್ಯಾರು ಎಂದು ನಂಬುತ್ತೇವೆ.

ಇಲ್ಲಿ ಇನ್ನು ಮುಂದೆ ಟಪ್ಪಾಲ ಬಟ್ವಾಡೆ ಮಂಜುನಾಥ ಮೋಟರ ಸರ್ವಿಸಿಗಂತೆ. ಇವರಿಗೆ ಮಂಗಳೂರು ವರೆಗೆ ಪ್ರಯಾಣಿಕರನ್ನು ವೈಯುವುದಕ್ಕೆ ಲೈಸನ್ಸ ಸಿಕ್ಕದೆ ಇದ್ದುದಕ್ಕೆ ಟಪ್ಪಾಲು ವೈಯುವ ನೆವನದಿಂದ ಲೈಸನ್ಸು ಪಡಿಯುವ ವಿಲೆವಾರಿ ಎಂದು ಕಾಣುತ್ತದೆ. ಒಟ್ಟಾರೆ ಇಲ್ಲಿ ಇಷ್ಟರ ವರೇಗೆ ಬೆಳಗ್ಗೆ ಎಂಟು ಗಂಟೆಗೆ ಸಿಕ್ಕುತ್ತಿದ್ದ ಟಪ್ಪಾಲು ಇನ್ನು ಮುಂದೆ ಮಧ್ಯಾನಕ್ಕೊ, ಸಾಯಂಕಾಲಕ್ಕೊ ಸಿಕ್ಕುವ ಸಂಭವವು ಕಾಣುತ್ತದೆ. ಜನರ ದುರಾದೃಷ್ಟಕ್ಕೆ ಏನೆಂದು ಹೇಳಲಿ.

ಇಲ್ಲಿಯ ನಿವಾಸಿಕರಲ್ಲಿ ಕೆಲವರು ವಂತಿಗೆಯಿಂದ ಒಂದು ದೀಪಸ್ಥಂಬವನ್ನು ಮಾಡಿಸಿ ಅದನ್ನು ಇಲ್ಲಿಯ ಮಧ್ಯಸ್ಥಳವಾದ ಡಿಪ್ಯುಟಿ ತಹಶೀಲದಾರರ ಆಫೀಸಿನ ಬಳಿ ರಾಷ್ಟ್ರೀಯ ಶಿಶು ಸಪ್ತಾಹದ ಸ್ಮಾರಕಕ್ಕಾಗಿ ೭ನೇ ತಾರೀಕಿನ ರಾತ್ರೆಯಿಂದ ಹಚ್ಚಲಾರಂಭಿಸಿ ತಾಲೂಕು ಬೋರ್ಡಿಗೆ ಬಿಟ್ಟುಕೊಟ್ಟಿರುತ್ತಾರೆ.

ಪಾಣೆಮಂಗಳೂರು:— ಬಂಟವಾಳದಷ್ಟೆ ದೊಡ್ಡದಾದ ಮತ್ತು ವ್ಯಾಪಾರದಲ್ಲಿಯೂ ಐಶ್ವರ್ಯದಲ್ಲಿಯೂ ಮಿಕ್ಕಿರುವ ಈ ಊರಿನಲ್ಲಿಯೂ ೮ ಲಾಟೀನುಕಂಭಗಳನ್ನು ಇಡುವುದಕ್ಕೆ ಮಂಗಳೂರು ತಾಲೂಕು ಬೋರ್ಡಿನವರು ಸೆಂಕ್ಷನ್ ಮಾಡಿರುತ್ತಾರಂತೆ. ಇಷ್ಟರ ವರೇಗೆ ಕಂಭಗಳನ್ನು ಸ್ಥಾಪಿಸಿದ್ದು ಕಂಡುಬರುವುದಿಲ್ಲ.

ಇಲ್ಲಿ ಇನ್ನು ಮುಂದೆ ಟಪ್ಪಾಲು ಹೋಟಲಿನಲ್ಲಿ ಬಟವಾಡೆ ಎಂದು ವರ್ತಮಾನ. ಇಲ್ಲಿ ಮೊದಲೆ ಬ್ರೆಂಚ ಪೋಸ್ಟ ಆಫೀಸಿಲ್ಲ. ತಂತೀ ಆಫೀಸಿಲ್ಲದ ನಿವಾಸಿಕರು ಕಷ್ಟಪಡುತ್ತಾರೆ. ಇನ್ನು ಹೋಟಲಿನಲ್ಲಿ ಟಪ್ಪಾಲು ಬಟ್ವಾಡೆ ಆದರೆ ಹೇಳಲಿಕ್ಕೇನಿದೆ.

ಕಾಸರಗೋಡು:— ಇಲ್ಲಿಯ ನೆಶನಲ್ 'ಹೆಲ್ತ ಮತ್ತು ಬೇಬಿ' ವಾರವು, ಇದೇ ತಾ. ೭ನೇ ಆದಿತ್ಯವಾರ ದಿನ ಮುಕ್ತಾಯವಾಯಿತು. ಕಳೆದ ವರ್ಷಕ್ಕಿಂತ ಈ ವರ್ಷ ಈ ವಾರವು ಹೆಚ್ಚು ವಿಜೃಂಭಣೆಯಿಂದಲೂ, ಈ ಊರಿನ ಮೂವರು ಮಾನ್ಯ ಡಾಕ್ಟರರ ವ ಹೆಲ್ತ ಇನ್ಸ್‌ಪೆಕ್ಟರರ ಮತ್ತು ಮಾನ್ಯ ರಾ| ಕೆ. ಪಿ. ಪದ್ಮನಾಭಯ್ಯನವರ ಚಲೋ ಭಾಷಣಗಳಿಂದಲೂ ನೆರವೇರಿತು. ಒಂದನೇ ದಿನ ಹೆಲ್ತ ಇನ್ಸ್‌ಪೆಕ್ಟರರಾದ ರಾ| ಕೇಶವ ಮನೋಹರವರ ಭಾಷಣ, ೨ನೇ ದಿನ ಇಲ್ಲಿಯ ಮಾನ್ಯ ಅಸಿಸ್ಟಾಂಟ ಸರ್ಜನ್ ಮಿ| ನಾಗಕಟ್ಟೆ ಶಾಯರರವರ ಭಾಷಣ ೩ನೇ ದಿನ ಪ್ರಾತಃಕಾಲ ಶಿಶುಪ್ರದರ್ಶನ, ೪ನೇ ದಿನ ಕೆ. ಪಿ. ರಾಘವೇಂದ್ರರಾಯರ ಭಾಷಣ, ೫ನೇ ದಿನ ಡಾಕ್ಟರ್ ವಿಟ್ಠಲ್ ಭಂಡಾರಿಗಳವರ ಭಾಷಣ, ಮತ್ತು ಕೊನೆಯ ದಿನವಾದ ೭ನೇ ದಿನ ರಾ| ಕೆ. ಪಿ. ಪದ್ಮನಾಭಯ್ಯನವರ ಮುಕ್ತಾಯದ ಭಾಷಣಗಳಿಂದ ಸರ್ವಜನರು ಸಂತೋಷಪಟ್ಟರು. ಮೇಲಿನ ೫ ದಿವಸಗಳ ಭಾಷಣಗಳು ಕೇವಲ ಪಾಶ್ಚಾತ್ಯರ ಆರೋಗ್ಯ ಕ್ರಮಕ್ಕನುಸರಿಸಿದವುಗಳಾಗಿಯೂ, ೭ನೇ ಮತ್ತು ಕೊನೆಯ ಭಾಷಣವು ಮಾತ್ರ ಹಿಂದೂ ಶಾಸ್ತ್ರದಲ್ಲಿ ಉಕ್ತವಾದ ಆರೋಗ್ಯ ಕ್ರಮಗಳಿಗನುಸರಿಸಿಯೂ ಇದ್ದವು. ಮಾನ್ಯ ಪದ್ಮನಾಭಯ್ಯನವರು ಪಾಶ್ಚಾತ್ಯ ಮತ್ತು ಹಿಂದೂ ಆರೋಗ್ಯಕ್ರಮಗಳಿರುವ ಅಂತರವನ್ನು ಚೆನ್ನಾಗಿ ಬೋಧಿಸಿದ್ದಲ್ಲದೆ, ಇವೆರಡರಿಂದಲೂ ನಮಗೆ ಹಿತವಾಗಿಯೂ ಅವಶ್ಯವಾಗಿಯೂ ಇರುವ ಕ್ರಮಗಳನ್ನೇ ಆರಿಸಿ ತೆಗೆದು, ಆ ಪ್ರಕಾರ ಎಲ್ಲರೂ ಕೈಲಾದಮಟ್ಟಿಗೆ ನಡಕೊಂಡು ತಮ್ಮ ತಮ್ಮ ಆರೋಗ್ಯವನ್ನೂ ಕಾಪಾಡಿಕೊಂಡಿರಬೇಕಾಗಿಯೂ ಒತ್ತಿ ಹೇಳಿ ಶ್ರೀ ಪುರಂದರದಾಸರ ಕೀರ್ತನೆಗಳನ್ನೂ ಕೂಡ ಹಾಡಿತೋರಿಸಿ ಈ ವಾರವನ್ನು ಮುಕ್ತಾಯಪಡಿಸಿದರು. ಶಿಶುಪ್ರದರ್ಶನದ ದಿವಸ ಒಂದು ವರ್ಷದ ಕೆಳಗಿನ ೬ ಜನ ಮಕ್ಕಳಿಗೂ, ಒಂದು ವರ್ಷಕ್ಕೆ ಮೇಲಿನ ಮತ್ತು ೨ ವರ್ಷಕ್ಕೆ ಕೆಳಗಿನ ಇಬ್ಬರು ಮಕ್ಕಳಿಗೂ ಹೆಚ್ಚಿನ ಇನಾಮುಗಳನ್ನೂ ಕೊಟ್ಟದ್ದಲ್ಲದೆ ಆ ದಿನ ಬಂದ ಇತರ ಎಲ್ಲಾ ಚಿಕ್ಕ ಮಕ್ಕಳಿಗೂ ಪೆಪ್ಪರ್‌ಮಿಂಟ್ ಮಿಠಾಯಿ ಮತ್ತು ಆಡುವ ಗೊಂಬೆಗಳನ್ನೂ ಕೂಡ ಹಂಚಿದರು. ಈ ವಾರದಲ್ಲಿ ಹೆಚ್ಚಿನ ಪರಿಶ್ರಮ ಪಟ್ಟ ಹೆಲ್ತ ಇನ್ಸ್‌ಪೆಕ್ಟರರಿಗೂ, ಅಸಿಸ್ಟಾಂಟ ಸರ್ಜನರಾದ ಮಿ| ನಾಗಕಟ್ಟೆ ಶಾಯರರವರಿಗೂ [illegible]

ಕಾರ್ಕಳ:— [This section continues in the next column.]

ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾಶಾಖೆಯ ಅಧಿಕಾರಿಗಳು ಕೋಟೆಯವರು ಯಾನೆ ರಾಮಕ್ಷತ್ರಿಯವರ ಜಾತಿಯವರಾದ, ವಿದ್ಯಾರ್ಥಿಗಳಿಗೆ ಅರ್ಧ ಶಾಲಾ ಫೀಸು ಮಾಫಿಮಾಡುವರೆ ಸಾಧ್ಯವಿಲ್ಲವಾಗಿಯೂ ಸದರಿ ವಿದ್ಯಾರ್ಥಿಗಳಿಂದ ಕಳೆದ ಜೂನು ತಿಂಗಳ ಲಾಗಾಯ್ತು ಇಡೀ ಸಂಬಳ ವಸೂಲುಮಾಡಬೇಕಾಗಿಯೂ, ಎಲ್ಲಾ ಮೇಲಧಿಕಾರಿಗಳಿಗೆ ತಾ. ೨೩-೧-೨೬ ನೇಗೆ ಕೊಟ್ಟ Dis. ಕ್ಲಿಕಿನೇ ಹುಕುಮಿಗೆ ಅನುಸರಿಸಿ ಇಲ್ಲಿಯ ಬಿ. ವೆಂಕಟ್ರಮಣಯ್ಯನವರು ಆ ಪಬ್ಲಿಕ್ ಇನ್‌ಸ್ಟ್ರಕ್ಷನ್ ಡೈರೆಕ್ಟರವರಿಗೆ, ಇದು ಸರಿಯಲ್ಲವಾಗಿಯೂ, ಮೇಲಿನ ಜಾತಿಯವರನ್ನು ಸರಕಾರದವರು ಮುಂಚೆಯೇ ಬೇಕ್‌ವರ್ಡ ಕ್ಲಾಸಿಗೆ ಸೇರಿಸಿ ಅರ್ಧ ಸಂಬಳ ಮಾಫಿಮಾಡಿರುತ್ತಾರಾಗಿಯೂ ಅದನ್ನೂ ರುಜುಪಡಿಸುವರೆ ತಕ್ಕ ಸರಕಾರ ಹುಕುಂಗಳ ನಮೂದಿನಿಂದ, ತಾ. ೩-೨-'೨೬ಕ್ಕೆ ಒಂದು ಟೆಲಿಗ್ರಾಮ್ ಕೊಟ್ಟಿದ್ದಾರಲ್ಲದೆ, ಸದರಿ ಟೆಲಿಗ್ರಾಮಿನ ನಕಲುಗಳನ್ನೂ ಜಿಲ್ಲಾ ಎಜ್ಯುಕೇಶನಲ್ ಆಫೀಸರರಿಗೂ ಎಲ್ಲಾ ಶಾಲೆಗಳ ಮೇಲಧಿಕಾರಿಗಳೂ ಕಳುಹಿಸಿರುತ್ತಾರೆ. ಇದರ ತೀರ್ಮಾನವು ಇನ್ನೂ ತಿಳಿಯಲಿಲ್ಲ. ಇದಲ್ಲವೇ ಜಾತಿವಾತ್ಸಲ್ಯ?

ಕಾರ್ಕಳ:— ಕಾರ್ಕಳ ಸೆಂಟರ್ ಪ್ರಾಥಮಿಕ ಶಾಲಾ ಉಪಾಧ್ಯಾಯರ ೭ನೇ ಸಭೆಯು ಇದೇ ಫೆಬ್ರವರಿ ತಾರೀಕು ೨೦ನೇ ಶನಿವಾರ ಅಪರಾಹ್ನ ೧ ಗಂಟೆ ೨ಕ್ಕೆ ಸರಿಯಾಗಿ ಇಲ್ಲಿಂದ ೪ ಮೈಲು ದೂರವಿರುವ ಅತ್ತೂರು ಕಲಂಬಾಡಿ ಶಾಲೆಯಲ್ಲಿ ಜರಗಲಿಕ್ಕಿರುವುದು.

ಈ ತಾಲೂಕು ಬೋರ್ಡಿನಲ್ಲಿ ಕೆಲಸಮಾಡುತ್ತಿರುವ ಹಾಯರ್ ಗ್ರೇಡ್ ಉಪಾಧ್ಯಾಯರು ಒಟ್ಟು ಕೂಡಿ, ತಮಗೆ ಈಗ ಸಿಕ್ಕುವ ೧೨+೪ ರೂಪಾಯಿ ಸಂಬಳವು ಸಾಲದೆಂದು ಇತರ ಬೋರ್ಡಿನಲ್ಲಿ ಕೊಡುವ ಹಾಗೆ ಸ್ಕೇಲು ತರದ ಸಂಬಳವನ್ನು (೧೮—೧—೩೦) ಕೊಡಬೇಕೆಂದೂ ಒಂದು ಅರ್ಜಿಯನ್ನು ಠರಾವುಮಾಡಿ ಇದೇ ಕಳೆದ ೧೯೨೫ನೇ ಇಸವಿ ಆಗೋಸ್ತು ತಿಂಗಳಲ್ಲಿ ಮಹಾರಾಜೇಶ್ರಿ ಕಾರ್ಕಳ ತಾಲೂಕು ಬೋರ್ಡು ಪ್ರೆಸಿಡೆಂಟರವರ ಬಳಿಗೆ ಕಳುಹಿಸಿದ್ದರು. ಅನಂತರ ಕಳೆದ ನವಂಬರ ತಿಂಗಳಲ್ಲಿ ಈ ವಿಷಯವನ್ನು ಸಬ್ ಕಮಿಟಿಯವರು ಚೆನ್ನಾಗಿ ಆಲೋಚಿಸಿ ತಂಬೇತಿ ಹೊಂದಿದ ಹಾಯರ್ ಗ್ರೇಡ್ ಉಪಾಧ್ಯಾಯರಿಗೆ ೧೬—೧—೩೦ ಲೋವರ್ ಗ್ರೇಡ್ ಉಪಾಧ್ಯಾಯರಿಗೆ ೧೬—½—೨೫ ತರಬೇತಿಹೊಂದದೇ ಇದ್ದವರಿಗೆ ೧೪ ರೂಪಾಯಿ ಮಾತ್ರ ಈ ರೀತಿಯಲ್ಲಿ ಕೊಡಬಹುದೆಂದೂ ಇದನ್ನು ಜಾರಿಗೆ ತರಬೇಕಾದರೆ ಕೆಲವು ಉಪಾಧ್ಯಾಯರ ಇಸಮುಗಳನ್ನು ಕಮ್ಮಿಮಾಡಿ ಈ ಸಂಬಳವನ್ನು ನವಂಬರ ತಿಂಗಳ ೧ನೇ ತಾರೀಕಿನಿಂದಲೇ ಕೊಡಬೇಕೆಂದೂ ಗತಸರ್ವಿಸಿಗೆ ವರ್ಷ ೧ಕ್ಕೆ ೪ ಆಣೆಯಂತೆ ಕೊಡಬೇಕಾಗಿಯೂ ನಿರ್ಣಯಮಾಡಿದರು. ಉಪಾಧ್ಯಾಯರಿಗೆಲ್ಲಾ ಸಂತೋಷವಾಯಿತು. ಆದರೆ ಈ ಸಂಗತಿಯು ಮುಂದರಿಯುತ್ತಾ ಬಂದು ಇದೇ ತಿಂಗಳ ೭ನೇ ಆದಿತ್ಯವಾರ ನಡದ ಸಭೆಯಲ್ಲಿ ತಾಲೂಕು ಬೋರ್ಡಿನವರ ಮಂಜೂರಾತಿಯು ಬಗ್ಗೆ ಇಡಲ್ಪಟ್ಟಿತು. ತಾಲೂಕು ಬೋರ್ಡಿನವರು, ಈ ತರದ ಸ್ಕೇಲನ್ನು ಕೊಡಲಿಕ್ಕೆ ಸಾಧ್ಯವಿಲ್ಲವೆಂದೂ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯು ಏರಿಯುವುದರಿಂದ ೨೪ ಹೊಸ ಇಸಮುಗಳನ್ನು ಸೆಂಕ್ಷನ್‌ಮಾಡಬಹುದಾಗಿಯೂ ಸ್ಕೇಲಿನ ಕುರಿತು ಸಬ್ ಕಮಿಟಿಯವರು ತಿರಿಗಿ ಆಲೋಚಿಸಿ ಹೊಸರೀತಿಯ ಸ್ಕೇಲನ್ನು ಮಾಡಬೇಕೆಂದೂ ನಿರ್ಣಯಮಾಡಿದರು. ಉಪಾಧ್ಯಾಯರೆಲ್ಲಾ ಸಭೆ ನಡೆಯುವ ಕಟ್ಟಡದ ಹೊರಗೆ ತಮ್ಮ ಬಾಯಿಯಲ್ಲಿ ಸಕ್ಕರೆಯು ಬೀಳುವುದೆಂದು ತುಂಬಾ ಆಶೆಯಿಂದ ಕಾದು ನಿಂತಿದ್ದರು. ಆದರೆ ಬಾಯಿಗೆ ಸಕ್ಕರೆ ಬದಲಿಗೆ ಮಣ್ಣು ಬಿತ್ತು. ಈ ಸುಯೋಗವು ಮುಂದಿರುವುದರಿಂದ ಈಗ ತತ್ಕಾಲಕ್ಕೆ ಸಕ್ಕರೆಯು ಬಾಯಿಯಲ್ಲಿ ಬೀಳಲಿಲ್ಲ. ಮುಂದಕ್ಕೆ ಬೀಳುತ್ತದೋ ನೋಡೋಣ.

ಮಂಗಳೂರು.

ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವಾರ್ಷಿಕೋತ್ಸವವು ತಾ. ೬-೨-'೨೬ರಲ್ಲಿ ಆಚರಿಸಲ್ಪಟ್ಟಿತು. ಬೆಳಗ್ಗೆ ಫಲಹಾರಾದಿಗಳು ತೀರಿದ ನಂತರ ಮೊದಲ್ ಶಾಲೆಯ ಮಕ್ಕಳಿಗೆ 'ಇನಾಮುಗಳನ್ನು' ಹಂಚಲಾಯಿತು. ಶಾಲೆಯು ವಠಾರವು ತಳಿರುತೋರಣಗಳಿಂದ ಶೃಂಗರಿಸಲ್ಪಟ್ಟು ಕಂಗೊಳಿಸುತಿತ್ತು. ಸಾ| ಗಂಟೆ ೫-೩೦ಕ್ಕೆ ನಿಶ್ಚಯದಂತೆ ಸಭೆ ಕೂಡಿತು. ಮಹಾರಾಜೇಶ್ರೀ ಮ. ತಾ. ಬೋ. ಪ್ರೆಸಿಡೆಂಟರಾದ ಮೂಲ್ಕಿ ರಾಮಕೃಷ್ಣ ಪೂಂಜರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮುಖ್ಯ ಉಪಾಧ್ಯಾಯರು ಶಾಲಾವರದಿ ಹೇಳಿದ ಮೇಲೆ ಕಳದ ಶಿಕ್ಷಣ ವಸ್ತುಪ್ರದರ್ಶನದಲ್ಲಿ ಕೊಡಬೇಕಾಗಿದ್ದ ಬೆಳ್ಳಿಯ ಪದಕಗಳನ್ನು ಯೋಗ್ಯತಾಪತ್ರಗಳೊಂದಿಗೆ ಅವರವರಿಗೆ ಕೊಡಿಸಿದರು. ಆ ಮೇಲೆ ಉಮೇದ್ವಾರ ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಹಂಚಲಾಯಿತು. ಕೊನೆಗೆ ಅಧ್ಯಕ್ಷರು ಹಳ್ಳಿಯ ಏಳಿಗೆಯು ಹಳ್ಳಿ ಉಪಾಧ್ಯಾಯರಿಂದಲೇ ಆಗಬೇಕಾಗಿದೆ; ಅಂಥಾ ಉಪಾಧ್ಯಾಯರ ಮಾತೃಸ್ಥಾನವೇ ಈ ಶಾಲೆಯು. ಆದ್ದರಿಂದ ಇದರ ಅಭಿವೃದ್ಧಿಯನ್ನು ಎಲ್ಲರೂ ಕೋರಬೇಕಾಗಿದೆ. ಎಂಬಿತ್ಯಾದಿ ಕಾಲೋಚಿತವಾದ, ಅರ್ಥಗರ್ಭಿತವಾದ ಸುರಸವಾದ ಭಾಷಣವನ್ನು ಮಾಡಿದರು.

ನಂತರ ಯಕ್ಷಗಾನವನ್ನು ನೂತನ ರೀತಿಯಲ್ಲಿ ನಟನೆ ಮೂಲಕ ಕೃಷ್ಣಸಂಧಾನ 'ಕೌರವ ಸಭೆ'ಯನ್ನು ಪ್ರದರ್ಶಿಸಲಾಯಿತು. ತದನಂತರ 'ಗೋರಕನಾಥನ ಗುರುಭಕ್ತಿ' ಎಂಬ ನಾಟಕವನ್ನು ಚಿಕ್ಕಮಕ್ಕಳು ಚಲೋ ರೀತಿಯಿಂದ ಆಡಿತೋರಿಸಿ ಸಭಿಕವೃಂದವನ್ನು ಆನಂದಸಾಗರದಲ್ಲಿ ಓಲಾಡಿಸಿದರು. ರಾತ್ರಿ ಘಂಟೆ ೧೦ಕ್ಕೆ "ಕರ್ಮಫಲವೆಂಬ ನೂತನ ನಾಟಕವು ಶಾಲಾ ಉಮೇದ್ವಾರರಿಂದ ಅಭಿನಯಿಸಲ್ಪಟ್ಟಿತು. ನಾಟಕದಲ್ಲಿ ಗಾಯನವೂ ಒಂದೆರಡು ಹೆಚ್ಚಿನ ಸೀನರಿಗಳೂ ಇದ್ದಿದ್ದರೆ ಹೆಸರುಗೊಂಡಿರುವ ನಾಟಕ ಕಂಪೆನಿಗಳ ನಾಟಕಕ್ಕೆ ಸರ್ವ ವಿಧದಲ್ಲಿಯೂ ಸಮನಾಗಿಯೇ ಇತ್ತೆನ್ನಲು ಯಾವ ಆತಂಕವೂ ಬರಲಾರದು. ನಾಟಕದ ನಾಯಕನಾದ ಶಂಕರ್ ಜಂಗ್‌ಬಹದ್ದೂರನ ಮತ್ತು ನಾಯಕಿಯಾದ ಸುಲೋಚನೆಯ ಪಾತ್ರಗಳನ್ನು ಕಂಡಷ್ಟು ಸಾಲದಿತ್ತು. ತಮಾಷೆಗಾರನಾದ ಗಂಗಾರಾಮನ ಪಾತ್ರವು ಇನ್ನೊಮ್ಮೆ ರಂಗಭೂಮಿಗೆ ಬಂದರೆ ಒಳಿತೆಂದು ಎಲ್ಲರೂ ಹಾರೈಸುತ್ತಲೇ ಇದ್ದರು. ಅಲ್ಲಲ್ಲಿ ಚಿಕ್ಕಮಕ್ಕಳ ನರ್ತನವು ಪ್ರೇಕ್ಷಕರನ್ನು ತೋಷಗೊಳಿಸುತ್ತಿತ್ತು. ನಾಟಕಕ್ಕೆ ಸ್ಟೇಜನ್ನು ಹೊರಗೆನೇ ತಯಾರಿಸಿದ್ದರೂ, ಜನರು ಎರಡು ಸಾವಿರಕ್ಕೆ ಮಿಕ್ಕಿ ಬಂದುದರಿಂದ ಹಲವರು ನಿರಾಶರಾಗಿ ಹಿಂತಿರುಗಿ ಹೋದರು. ಹೀಗೆ ಹಳ್ಳಿಯ ಉಮೇದ್ವಾರರಿಂದ ಇಂಥಾ ಚಲೋ ನಾಟಕವು ಅಭಿನಯಿಸಲ್ಪಡುವುದೆಂದರೆ ಶ್ಲಾಘನೀಯವಾದುದು.

ಈಗಿನ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ರಾವ್ ಬಹದ್ದೂರ್ ಯುಸ್. ಸುಬ್ಬರಾಯರ ಅಧಿಕಾರಾವಧಿ ಮುಗಿದ ನಂತರ [illegible] ಪ್ರೆಸಿಡೆಂಟರ ಸ್ಥಾನಕ್ಕೆ ಶ್ರೀ. ಕಾರ್ಕಳ ಸದಾಶಿವ ರಾವ್, ಬಿ. ಎ., ಬಿ. ಎಲ್., ಇವರು ಉಮೇದುವಾರರಾಗಿರುವರೆಂದು ತಿಳಿಯುತ್ತದೆ.

ನಮ್ಮ ಜಿಲ್ಲಾ ಕಲೆಕ್ಟರರಾದ ಮಿ. ಜ. ಮ್ಯಾಕ್ಮೈಕಲ್ ವಿ. ಎ. ಯುಸ್. ಇವರು ಇದೇ ಮಾರ್ಚ ತಾ. ೧೮ರಿಂದ ಫಸ್ಟ ಗ್ರೇಡ್ ಕಮಿಷನರ್ [illegible]

ಪತ್ರವ್ಯವಹಾರ.

(ವಾತ್ರಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ, ಸ್ವದೇ.)

ಜನವರಿ ತಾ. ೨೯ನೇ ಶುಕ್ರವಾರದ ಸ್ವದೇಶಾಭಿಮಾನಿಯ ಸ್ಫುಟ ವಿಚಾರಗಳಲ್ಲಿ 'ಜಾತೀಯ ಭಾವನೆ' ಮತ್ತು ನಮ್ಮ ಜಿಲ್ಲೆಯ ಸ್ವರಾಜ್ಯ ಪಕ್ಷದ ಸಂಕಷ್ಟಗಳು' ಎಂಬೀ ಶಿರೋನಾಮಗಳ ಸಂಪಾದಕೀಯ ವಿಚಾರದಲ್ಲಿ ವಿಚಾರಾರ್ಹ ಸಂಗತಿಗಳು ಪ್ರಕಟವಾಗಿದ್ದರೂ ಅವುಗಳು ಕೆಲವೆಡೆಗಳಲ್ಲಿ ತೀರಾ ಏಕಮುಖಿ (One-sided) ಯೂಗಿದ್ದು ಅಸಂಗತವಾಗಿದೆ. ಈ ಕುರಿತು ಕೆಲವು ಮಾತುಗಳು ಅಗತ್ಯವಾಗಿವೆ. ನಮ್ಮ ಜಿಲ್ಲೆಯಲ್ಲಿ ಜಾತೀಯ ಭಾವನೆಯ ಜಾಗ್ರತಿಗೂ ಸ್ವರಾಜ್ಯಪಕ್ಷದ ಸಂಕಷ್ಟಗಳಿಗೂ ಸ್ವರಾಜ್ಯ ಭಾವನೆಯನ್ನು ಮುಂದೊತ್ತಿ, ಸಮಯ ಬಂದಾಗ ಸ್ವಾರ್ಥ ಸಾಧನೆಯಲ್ಲಿ ಮಗ್ನರಾಗಿರುವ ಅದೊಂದು ವಿಧದ ಸ್ವರಾಜಿಸ್ಟರೇ ಹೆಚ್ಚಿನ ಮಟ್ಟಿಗೆ ಜವಾಬ್ದಾರರೆನ್ನಬಹುದು. ವ್ಯಕ್ತಿಸ್ವಾರ್ಥ, ಜಾತಿ ಸ್ವಾರ್ಥವೇನೂ ಇಲ್ಲದೆ ಸಾರ್ವಜನಿಕ ಹಿತಕ್ಕಾಗಿ ರಾಷ್ಟ್ರೀಯ ಭಾವನೆಯಿಂದ ಕೆಲಸ ಮಾಡುವವರೆನ್ನಿಸಿಕೊಂಡು ಪತ್ರಿಕೆಗಳಲ್ಲೆಲ್ಲಾ ಉದ್ದುದ್ದ ಲೇಖ ಬರೆದು ಸಾರಿ ಹೋರುವಂಥಹ ಕೆಲವರ ರಾಷ್ಟ್ರಾಭಿಮಾನವು ಎಷ್ಟೊಂದು ಆಳವಾಗಿರುತ್ತದೆಂದು ಇತ್ತೀಚೆಗೆ ಒರೆಗೆ ಹಚ್ಚಿ ನೋಡಲಾಗಿದೆ.

ಈಗ ತಾನೆ ಕಳೆದು ಹೋದ ಚುನಾವಣೆಗಿಂತ ಮೊದಲಿನ ಚುನಾವಣೆಯಲ್ಲಿ ಈ ರಾಷ್ಟ್ರಾಭಿಮಾನಿಗಳು ತಟಸ್ಥರಾಗಿಯಾದರೂ ಇರಬಹುದಿತ್ತು. ಹಾಗೆ ಮಾಡದೆ-ಹೇಗೂ ಇರಲಿ-ಶ್ರೀಯುತ ಮಂಜಯ ಹೆಗ್ಡೆಯವರು ಉಮೇದ್ವಾರರಾಗಿ ನಿಂತರೆಂದ ಕೂಡಲೆ ಇತ್ಯವಾತನ್ನೂ, ಉಚ್ಚ ತತ್ವವನ್ನೂ ಬಿಟ್ಟು ಸಂದಿಗ್ಧ ಸಮಯದಲ್ಲಿ ಒಳಗೊಳಗೆ ನೇಗಿಲಿನ ಮಾರ್ಗ ತಿರುಗಿಸಿ ಬಿಟ್ಟರು. ಈ ಉಜ್ವಲ ರಾಷ್ಟ್ರಾಭಿಮಾನಿಗಳೆನ್ನಿಸುವವರು ಹೀಗೆ ಮಾಡಿದುದು ಯಾವ ತತ್ವವನ್ನನುಸರಿಸಿಯೋ? ಯಾವ ಧ್ಯೇಯದಿಂದಲೋ? ಪರಸ್ಪರ ಸಹೋದರ ಭಾವದಿಂದಲೆ ಇರುತ್ತಿದ್ದ ಜೈನ ಬಂಟರೊಳಗೆ ಕ್ಷಣಿಕವಾಗಿಯಾದರೂ ಭೇದದ ಬೀಜವನ್ನು ಬಿತ್ತಿದವರಾದರೂ ಯಾರು? ಈ ಸಂದರ್ಭದಲ್ಲಿ ಮಿಗಿಲಿಲ್ಲದ ರಾಷ್ಟ್ರಾಭಿಮಾನಿಗಳೆಂದು 'ಜೈ ಜೈ' ಎಂದು ವಿಜಯನಾದ ಮಾಡುವವರ ಅಂತರ್ಯ ಶೋಧನೆ ಮಾಡುವಂತಾಯಿತು. ಈ ಅಂತರ್ಯಕ್ಕೂ, ಇನ್ನೇನಕ್ಕೋ ನಿಕಟ ಸಂಬಂಧವಲ್ಲದೆ ರಾಷ್ಟ್ರಕ್ಕಲ್ಲವೆಂಬುದು ಸರ್ವವಿದಿತವಾಯಿತು. ಇದಲ್ಲದೆ ಒಂದೇ ಬಾಣದಿಂದ ಎರಡು ಹಕ್ಕಿಗಳನ್ನು ಕೊಲ್ಲುವ ಷಡ್ಯಂತ್ರವೂ ವಂಚನೆಯೂ (Double-game) ಈಗ ಸ್ವರಾಜಿಸ್ಟ್ ಪ್ರಮುಖರೆನ್ನಿಸಿಕೊಳ್ಳುವವರಿಂದಲೆ ಹೇಗೆ ನಡಿಸಲ್ಪಟ್ಟಿತೆಂದು ಮೊದಲಿನ ಚುನಾವಣೆಯ ನಂತರ ನಡೆದ ಪತ್ರವ್ಯವಹಾರದಿಂದ ವಿಶದವಾಗುತ್ತದೆ.

ಕಳೆದ ಚುನಾವಣೆಯ ಮಾತಂತಿರಲಿ. ಈಗ ತಾನೆ ನಡೆದ ಚುನಾವಣೆಯು ಈ ಸ್ವರಾಜಿಸ್ಟರಲ್ಲಿ ಕೆಲವರ ನಿಜಸ್ವರೂಪ ಪ್ರದರ್ಶನವನ್ನು ಮಾಡಿರುತ್ತದೆ. ಶ್ರೀ ನಾಗಣ್ಣ ಹೆಗ್ಡೆಯರು ಗಂಟು ಬಿಚ್ಚುವರಲ್ಲವೆಂಬ ಅಪವಾದದಲ್ಲಿ ಅರ್ಥವಿಲ್ಲ. ಇದು ಕೋರಿಕೆಯ ಒಂದು ನೆವನವೆಂದೇ ಹೇಳಬೇಕಾಗಿದೆ. ಅದಂತಿರಲಿ ಶ್ರೀ ಹೆಗ್ಗಡೆಯರು ಹಿಂದುಮುಂದು ನೋಡದೆ ದುಡ್ಡಿನ ಚೆಲ್ಲಾಟ ಮಾಡುವವರೇ ಆಗಿದ್ದರೆ ಅವರು ಸ್ವರಾಜಿಸ್ಟರೂ ಆಗುವುದು ಬೇಡ. ಅವರು ಯಾರಾದರೇನು? ಈಗ ಶ್ರೀ ಮಂಜಯ್ಯ ಹೆಗ್ಡೆಯರು ಯಾವ ಪಕ್ಷಕ್ಕೆ ಸೇರಿರುವರೆಂಬುದು ಸರ್ವವಿದಿತವಷ್ಟೆ. ಮೊದಲಾಗಿ ಹೆಗ್ಗಡೆಯರು ಗಂಟು ಬಿಚ್ಚುವವರಲ್ಲ. ಮತ್ತೇನು? ಅವರು ಬಂಟ ಸ್ವರಾಜಿಸ್ಟರು, ಇದೀಗ ಪ್ರಾಮುಖ್ಯ ಸಂಗತಿ. ಆದರೆ ಶೆಣೈಯವರು ಯಾವ ಸ್ವರಾಜಿಸ್ಟರೋ?

ಚುನಾವಣೆಯ ವಿದ್ಯಮಾನಗಳನ್ನು ಕಂಡರೆ ಶ್ರೀ ನಾಗಣ್ಣ ಹೆಗ್ಗಡೆಯವರಿಗೆ ಸ್ವರಾಜ್ಯಪಕ್ಷದ ಉಮೇದ್ವಾರರಾಗಿ ನಿಲ್ಲುವ ಯಾವ ಅವಶ್ಯಕತೆಯೂ ಇದ್ದಿಲ್ಲವೆಂಬುದು ನಿಶ್ಚಯವೇ ಸರಿ. ಇವರಿಗೆ ಸ್ವರಾಜ್ಯಪಕ್ಷದಿಂದ ಯಾವ ಸಹಾಯವು ದೊರೆತಿದೆ? ಯಾಕೆಂದರೆ ಇವರು ಹೆಗ್ಡೆ ಸ್ವರಾಜಿಸ್ಟರು. ಶ್ರೀ ಹೆಗ್ಡೆಯರು ಮೋಸ ಹೋದರೂ ಇಲ್ಲವೋ ಎಂಬುದನ್ನು ಅವರು ಇಷ್ಟರ ತನಕವೇ ಮನಗಾಣಿರಬಹುದು ಕಾಲವೇ ಇವನ್ನು ಚೆನ್ನಾಗಿ ವಿಶದಗೊಳಿಸದಿರದು.

ಹೆಗ್ಗಡೆಯರು ಸ್ವರಾಜಿಸ್ಟರಾದರೂ ಜಾತೀಯ ಭಾವನೆಯುಳ್ಳ ಅವರ ಜಾತಿಗೃಹಸ್ಥರು ಈ ಸಾರಿಯೂ ಮೈಮರೆತು ಸುಳಿಯಲ್ಲಿ ಬೀಳಲು ಈ ಮೊದಲಿನ ಚುನಾವಣೆಯು ಅವರಲ್ಲಿ ಸಾಕಷ್ಟು ಜಾಗ್ರತಿಯನ್ನುಂಟುಮಾಡಿರುವುದು. ಖದ್ದರ್‌ವಾಲರೇ ಅವರ ಗುರುಗಳಾಗಿ ಪಾಠಕಲಿಸಿದ್ದರು. ಈ ಸಾರಿ ಆ ಪಾಠದ ಪುನರಾವರ್ತನೆಯಾಯಿತು. ಹೆಗ್ಗಡೆಯರು ಸ್ವತಂತ್ರರಾಗಿ ಚುನಾವಣೆಗೆ ನಿಂತು ಚುನಾವಣೆಯ ನಂತರ ತನಗೆ ಇಷ್ಟಬಂದ ಪಕ್ಷಕ್ಕೆ ಸೇರುವುದು ಉತ್ತಮವಾಗಿದ್ದಿತು.

ಇನ್ನು ಹಿಂದಿನ ಚುನಾವಣೆಯಲ್ಲಿ ಸ್ವರಾಜ್ಯಪಕ್ಷದವರಲ್ಲವಾಗಿದ್ದರೂ ಸ್ವರಾಜ್ಯಪಕ್ಷೀಯರ ಸಂಸರ್ಗ ಮಾಡಿದ ಆ ಮಹತ್ ಔದಾರ್ಯಕ್ಕಾಗಿ ಸ್ವರಾಜ್ಯಪಕ್ಷೀಯರು ತಮ್ಮ ಚುನಾವಣೆಗೆ ಸಹಾಯಕ್ಕಾಗಿ ಬರಬೇಕೆಂದು ಇಚ್ಛಿಸಿ ಹಾಗೆ ಬಾರದಿದ್ದುದಕ್ಕಾಗಿ ಸ್ವರಾಜ್ಯದ ಮೇಲೆ ಅಪವಾದ ಹೊರಿಸಿದವರೂ ಇದ್ದಾರೆ. ಆ ಸಮಯದಲ್ಲಿ ಸ್ವರಾಜ್ಯಪಕ್ಷೀಯರ ಉಮೇದ್ವಾರರಾರೂ ಇರಲಿಲ್ಲ. 'ಸ್ವರಾಜ್ಯಪಕ್ಷವೇ ಇರಲಿಲ್ಲ' ಈ ವಾಕ್ಯವು ಎಷ್ಟು ಯುಕ್ತಿಯುಕ್ತವಾದುದೆಂದು ವಾಚಕರು ಸ್ವಲ್ಪ ವಿಚಾರಿಸಿದರೆ ತಿಳಿಯದಿರದು. ಸ್ವರಾಜ್ಯ ಪಕ್ಷವೇ ಇಲ್ಲದೆ, ಸ್ವರಾಜ್ಯಪಕ್ಷೀಯರ ಸಂಸರ್ಗವೆಂದರೆ ಹೇಗೆ? ಸಹಾಯ ಇಚ್ಛಿಸುವುದಾದರೂ ಎಂತು? ಅಪವಾದ ಹೊರಿಸುವುದೆಂದರೆ ಯಾರ ಮೇಲೆ, ಮತ್ತು ಯಾರು? ಇವೆಲ್ಲಾ ಹುರುಳಿಲ್ಲದ ಗತ ಪಂಚಾಂಗವೇ ಹೊರತು ಬೇರೆಯಲ್ಲ. ದಕ್ಷಿಣ ಕನ್ನಡದಲ್ಲಿ ಸ್ವರಾಜ್ಯಪಕ್ಷವೆಂದರೇನೆಂದೂ, ಅದು ಏತಕ್ಕಾಗಿ ಮೊದಲು ಅಷ್ಟೊಂದು ಅವಸರದಲ್ಲಿ ಸ್ಥಾಪಿತವಾಯಿತೆಂದೂ, ಅದರ ಕಾರ್ಯಕಲಾಪಗಳೇನೆಂದೂ, ವಾಚಕರಲ್ಲಿ ಕೆಲವರಿಗಾದರೂ ತಿಳಿಯದಿಲ್ಲ. ಮೊದಲು ಸ್ವರಾಜ್ಯಪಕ್ಷದ ಉಮೇದ್ವಾರರೇ ಇಲ್ಲದೆ ಜಸ್ಟಿಸ್ ಪಕ್ಷೀಯರಿಗೆ ಸಹಾಯವಿತ್ತುದಾಯಿತು. ಈಗ ಸ್ವರಾಜಿಸ್ಟರು ಹೆಗ್ಗಡೆಯರೆಂದು ಸುಮ್ಮನಿದ್ದುದೋ ಶೆಣೈಯವರಿಗೆ ಸಹಾಯವಿತ್ತುದೋ ಆಯಿತು. ಇನ್ನು ಬರುವ ಚುನಾವಣೆಯಲ್ಲಿ ಏನಾಗಲಿದೆಯೋ ನೋಡಲಿದೆ.

ಕಾಂಗ್ರೆಸ್ ಮೆಂಬರರಲ್ಲೊಬ್ಬ.

ನಮ್ಮ ಜಿಲ್ಲೆಯೊಳಗೆ ಜನತೆಯ ದಿನಕ್ಕಿಂತ ದಿನ ಹೆಚ್ಚಾಗಿ ಬೆಳೆಯುತ್ತಿರುವ ಮಾನಸಿಕತೆಯ ಚಿತ್ರವನ್ನು ಸೂಚಿಸುವುದೆಂದು ಈ ಪತ್ರವನ್ನು ಪ್ರಕಟಿಸಿದ್ದೇವೆ. ಲೇಖಕರು, ನಮ್ಮ ವಿಚಾರಗಳನ್ನು "ಹುರುಳಿಲ್ಲದ ಗತಪಂಚಾಂಗ" (ಗತಪಂಚಾಂಗವಾದ ಮೇಲೆ, ಪಂಚಾಂಗವು ಅಸ್ತಿತ್ವವಿದ್ದಿರದೇಕೆ) ಎಂದು, "ಕಲ್ಪನೆ"ಯೆಂದು, "ಅರ್ಥವಿಲ್ಲ"ವೆಂದು ಟೀಕಿಸಿ, ಅವುಗಳು ಕೆಲವೆಡೆಗಳಲ್ಲಿ ತೀರಾ ಏಕಮುಖಿಯಾಗಿವೆ ಎಂದು ಅನ್ನುವುದನ್ನು ನೋಡಿದರೆ, ಅಲ್ಲದೆ ತಮ್ಮ ಹೆಸರನ್ನು ಕಾಂಗ್ರೆಸ್ ಮೆಂಬರರ ಪೋಷಾಕಿನಲ್ಲಿ ಅಡಗಿಸಿಟ್ಟುದನ್ನು ನೋಡಿದರೆ, ಈ ಕಾಂಗ್ರೆಸ್ ಮೆಂಬರರು ನಮ್ಮ ಟೀಕೆಯ ಅರ್ಥಮಾಡಿಕೊಳ್ಳಲಿಕ್ಕೂ, ಕಾಂಗ್ರೆಸ್ ಮೆಂಬರತನದ ವೈಶಿಷ್ಟ್ಯವನ್ನು ತಿಳಿದುಕೊಳ್ಳಲಿಕ್ಕೂ, ಪ್ರಯತ್ನಿಸಿದಂತೆ ತೋರುವುದಿಲ್ಲ. ಹೇಗೂ ಕಾಂಗ್ರೆಸ್ ಸದಸ್ಯರಾಗಿ, ಸ್ವರಾಜ್ಯಪಕ್ಷೀಯರೊಳಗಿನ ವಿಶ್ವಾಸಘಾತುಕರಿಗಿಂತಲೂ, ಸ್ವರಾಜ್ಯಪಕ್ಷದ ಧ್ಯೇಯ ಮತ್ತು ಆಶಯಗಳಿಗೆ ಕಾಂಗ್ರೆಸ್ ಮೆಂಬರರಾಗಲಿ, ಕೌನ್ಸಿಲ್ ಉಮೇದ್ವಾರರಾಗಲಿ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುವರಾದರೆ ಈ ಕಾಂಗ್ರೆಸ್ ಮೆಂಬರರೂ ಆ ಕೌನ್ಸಿಲ್ ಉಮೇದ್ವಾರರೂ ಪರರ ಖಂಡನೆಗೆ ಸಾಕಷ್ಟು ಆಧಾರವನ್ನಾದರೂ ಹೊಂದುತ್ತಿದ್ದರು. ಪತ್ರವ್ಯವಹಾರಗಳಲ್ಲಿ ತೋರಿದ ನ್ಯೂನತೆಗಳೇ ಈ ದಿನ ಸ್ವರಾಜ್ಯಪಕ್ಷವು ಇತ್ತಂಡದವರ ಅವಹೇಳನವನ್ನು ಹೊಂದಲು ಕಾರಣವಾದುವಲ್ಲದೆ, ಸ್ವರಾಜ್ಯಪಕ್ಷದ ಪ್ರತಿಯಾಗಿ ಆಗಲಿ, ಯಾರೊಬ್ಬರ ಉಮೇದ್ವಾರರ ಪರವಾಗಿಯಾಗಲಿ, ಅವು ಬರೆಯಲ್ಪಟ್ಟುವಲ್ಲವೆಂದು ಸರಿಯಾಗಿ ಓದಿ, ಅವುಗಳ ಅರ್ಥವನ್ನು ಮಾಡಿಕೊಳ್ಳಬಲ್ಲವರು ತಿಳಿಯಬಹುದು. ಎಂತೂ ಈ ಎರಡು ಚುನಾವಣೆಗಳೊಳಗೇನೇ ನಮ್ಮ ಜಿಲ್ಲೆಯ ಅವಸ್ಥೆಯು ಹೀಗಾಯಿತು. ರಾಷ್ಟ್ರೀಯತ್ವವು ಅಡಗಿತು. ಇನ್ನು ಅವಿಶ್ವಾಸದ ಉತ್ಕೃಷ್ಟ ಮರುಭೂಮಿಯಲ್ಲಿ ಮುಂದಿನ ಚುನಾವಣೆಗಳು ನಡೆಯುವವು. ಒಂದೊಂದು ಬಾರಿ ಅಖಂಡ, ಅಸಹಕಾರಿಗಳೂ, ರಾಷ್ಟ್ರೀಯಭಾವನೆಯುಳ್ಳವರೂ, ಆಗಿರುವವರೇ ಮೆಲ್ಲನೆ ಕೊಡಲಿಗೆ ಕಾವನ್ನು ಹಾಕಿರುವರು. ನಾವು ಏಕಪಕ್ಷೀಯರಾಗಿ ಬರೆದುದೊ, ನಿಷ್ಪಕ್ಷಪಾತವಾಗಿ ಬರೆದುದೊ ಎಂದು ಇಲ್ಲಿ ಚರ್ಚಿಸಲಿಳಿಸುವುದಿಲ್ಲ. ವಿಷಯವು ಉದ್ದವಿದೆ. ಅವಿಶ್ವಾಸವು ಎಲ್ಲೆಡೆಗಳಲ್ಲಿಯೂ ತುಂಬಿದೆ, ಈ ಜಿಲ್ಲೆಯ ದುಃಖಮಯಪರಿಸ್ಥಿತಿಯ ಬಗ್ಗೆ ಮಾತ್ರ ನಮ್ಮ ವಿಷಾದವನ್ನು ಪ್ರಕಟಿಸದಿರಲಾರೆವು.

(ಸಂಪಾದಕರು)

ಬಂಟವಾಳದಲ್ಲಿ ಜರಗಿದ ಶಿಶು ಸಪ್ತಾಹ.

ಇಲ್ಲಿ ರಾಷ್ಟ್ರೀಯ ಶಿಶು ಸಪ್ತಾಹವು ಈ ತಿಂಗಳ ೮ನೇ ತಾರೀಕಿನಿಂದ ೭ನೇ ತಾರೀಕು ವರೇಗೆ ಬಹಳ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಮೊದಲನೇ ದಿನ ಇಲ್ಲಿಯ ಟೆಂಪಲ್ ಸೆಕೆಂಡರಿ ಶಾಲೆ, ಫ್ರೀ ಎಲಿಮೆಂಟರಿ ಶಾಲೆ, ಬೋರ್ಡು ಹಾಯರ್ ಎಲಿಮೆಂಟರಿ ಶಾಲೆ, ಬಂಟವಾಳ ಬೋರ್ಡು ಹುಡುಗಿಯರ ಶಾಲೆ, ಪಾಣೆಮಂಗಳೂರು ಹುಡುಗಿಯರ ಶಾಲಾ ಮಕ್ಕಳ ಬೀದಿ ಮೆರವಣಿಗೆಯು ಹಿಂದೂ ವಾದ್ಯಘೋಷದೊಡನೆ ಧ್ವಜಪತಾಕೆಗಳನ್ನೂ, ಆರೋಗ್ಯಸೂತ್ರಗಳನ್ನು ತೋರಿಸುವ ಸಚಿತ್ರ ಪಠಗಳನ್ನೂ ಹಿಡಿದು ಮೆರವಣಿಗೆಯು ಇಲ್ಲಿಯ ಲೋಕಲ್ ಫಂಡ್ ಆಸ್ಪತ್ರೆಯ ಕಂಪೌಂಡಿನಿಂದ ಹೊರಟು ಎಲ್ಲಾ ಬೀದಿಗಳಲ್ಲಿಯೂ ನಡೆಯಿತು. ಮೆರವಣಿಗೆಯ ನಂತರ ಇಲ್ಲಿಯ ಬೋರ್ಡು ಬಾಲಿಕಾ ಪಾಠಶಾಲೆಯ ಕಂಪೌಂಡಿನಲ್ಲಿ ಮಕ್ಕಳನ್ನೆಲ್ಲಾ ಸಾಲಿನಲ್ಲಿ ಕುಳ್ಳಿರಿಸಿ ಬಾಳೆ ಹಣ್ಣುಗಳು ಹಂಚಲ್ಪಟ್ಟವು.

ಅನಂತರ ಬಾಲಿಕಾ ಪಾಠ ಶಾಲೆಯ ಒಳಗಡೆಯಲ್ಲಿ ಆಯುರ್ವೇದ ಸಮ್ಮಂಧ ಭಾಷಣವು ಕಮಿಟಿ ಮೆಂಬರರಾದ ರಾ। ಕೊಡಿಯಾಳ ಅನಂತರಾಯರಿಂದ ಕೊಡಲ್ಪಟ್ಟಿತು. ಆ ಮೇಲೆ ಹೆಲ್ತ ಇನ್ಸಪೆಕ್ಟರವರು ಮಲೇರಿಯಾ ಜ್ವರ ಮತ್ತು ಮೈಲಿಗಜ್ಜಿಯ ವಿಷಯ ಮಾಯಾಲಾಂದ್ರದ ಚಿತ್ರಗಳನ್ನು ತೋರಿಸಿ ಬಹಳ ಒಳ್ಳೇ ರೀತಿಯಲ್ಲಿ ವಿವರಿಸಿ ಹೇಳಿದರು. ಅಂದಿನ ಸಭೆಯು ಆಗಲುವಾಗ ರಾತ್ರೆ ೮ ಗಂಟೆಯಾಯಿತು. ಎಲ್ಲರೂ ಸಂತೋಷದಿಂದ ಮನೆಗೆ ತೆರಳಿದರು.

ಮೂರು ದಿನ ಶಿಶು ಪ್ರದರ್ಶನವು ಅದೇ ಬಾಲಿಕಾ ಪಾಠಶಾಲೆಯಲ್ಲಿ ನಡೆಯಿತು. ಊರಿನ ಎಲ್ಲಾ ಜಾತಿಯ ಸ್ತ್ರೀಯರು ಶಿಶುಗಳನ್ನು ಕರತಂದಿದ್ದರು. ಕಮಿಟಿ ಮೆಂಬರರು ಉತ್ತಮ ರೀತಿಯಲ್ಲಿ ಬೆಳಸಿದ ಎಲ್ಲಾ ಜಾತಿಯ ಮಕ್ಕಳಿಗೂ ಇನಾಮುಗಳನ್ನು ಹಂಚಿದರು. ಅನಂತರ ಇಲ್ಲಿಯ ಆಯುರ್ವೇದಿಕ್ ವೈದ್ಯರೂ, ಜವಿನುದಾರರೂ ಆದ ರಾ। ಸರ್ವೋತ್ತಮ ಬಾಳಿಗರು ಮಕ್ಕಳನ್ನು ಒಳ್ಳೇ ರೀತಿಯಲ್ಲಿ ಸಂರಕ್ಷಿಸುವದರ ಕುರಿತು ಅರ್ಥಗರ್ಭಿತವಾದ ಭಾಷಣವನ್ನು ಎಲ್ಲರಿಗೂ ಮಂದಟ್ಟಾಗುವಂತೆ ಸುಲಭ ಭಾಷೆಯಿಂದ ವಿವರಿಸಿ ಹೇಳಿದರು.

ಬಂದ ಮಹಿಳೆಯರನ್ನೂ, ಮಹನೀಯರನ್ನೂ ಸಂತೋಷಗೊಳಿಸುವುದಕ್ಕಾಗಿ ಬಾಲಿಕಾ ಪಾಠಶಾಲೆಯ ಹುಡುಗಿಯರು, ದೇವರ ಪ್ರಾರ್ಥನೆ ಕೋಲಾಟ, ಸಣ್ಣದೊಂದು ನಾಟಕ ಮುಂತಾದ ಅಭಿನವ ಗೀತಗಳನ್ನು ಹಾಡಿದರು. ರಾಜಗೀತವನ್ನು ಹಾಡಿ ಆದ ನಂತರ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಮೂರನೆ ದಿನ ಆರೋಗ್ಯದ ವಿಷಯ ಚಲೋದಾದ ಭಾಷಣಗಳು ಮಹನೀಯರುಗಳಿಂದ ಕೊಡಲ್ಪಟ್ಟವು.

ಆದಿತ್ಯವಾರ ಶಿಶು ಸಪ್ತಾಹದ ಕಡೆಯ ದಿನವಾಗಿತ್ತು. ಈ ದಿವಸ ಎರಡು ಗಂಟೆಗೆ ಎಂಬಂತೆ ಜನರೆಲ್ಲರೂ ಲೋಕಲ್ ಫಂಡ್ ಆಸ್ಪತ್ರೆಯ ಕಂಪೌಂಡಿನಲ್ಲಿ ಕೂಡಿ ಬಂದರು. ಒಂದೊಂದೇ ಶಾಲೆಯ ಮಕ್ಕಳು ಒಳ್ಳೇ ತರದ ಪೋಷಾಕುಗಳನ್ನು ಧರಿಸಿಕೊಂಡು ಸಾಲಿನಿಂದ ಬಂದು ನೇಮಿಸಿದ ಸ್ಥಳಗಳಲ್ಲಿ ಕ್ರಮದಿಂದ ಸದ್ದಿಲ್ಲದೆ ಕುಳಿತುಕೊಂಡರು. ಸುಮಾರು ನಾಲ್ಕು ಗಂಟೆಗೆ ಪಂದ್ಯಾಟಗಳು ನಡೆಯಲಾರಂಭಿಸಿದವು. ಈ ಸಮಯ ಸುಮಾರು ೫೦೦ ಜನರು ಹಾಜರಿದ್ದರು. ಮೊದಲು ಹುಡುಗಿಯರ ಪಂದ್ಯಾಟಗಳು ನಡೆದವು. ಅನಂತರ ಎಲಿಮೆಂಟರಿ ಶಾಲೆಗಳ ಪಂದ್ಯಾಟಗಳೂ, ನಂತರ ಸೆಕೆಂಡರಿ ಶಾಲೆಯ ಪಂದ್ಯಾಟಗಳೂ ನಡೆದವು. ... ಶಾಲೆಯ ಗುತ್ತ ವೇಷಗಳು ಸಭಿಕರನ್ನು ಆನಂದಗೊಳಿಸಿದವು. ಅಷ್ಟರಲ್ಲಿ ಟೆಂಪಲ್ ಸೆಕೆಂಡರಿ ಶಾಲಾ ಮೇಲಿನ ದರ್ಜೆಯ ಮಕ್ಕಳು ಹೀರಿನಲ್ಲಿ ಬಿದ್ದ, ತಲೆ ಒಡೆದು ಹೋದ ಮತ್ತು ಕಾಲು ಮುರಿದವರಿಗೆ ಪ್ರಥಮ ಚಿಕಿತ್ಸೆಯನ್ನೂ ಅದೇ ಹುಡುಗರಲ್ಲಿ ಮೂವರು ಡಾಕ್ಟರ, ಕಂಪೌಂಡರ, ವಾರ್ಡುಕಾಲಿ ಮುಂತಾದ ವೇಷವನ್ನು ಹಾಕಿ ದ್ವಿತೀಯ ಚಿಕಿತ್ಸೆಯನ್ನು ಮಾಡಿ ತೋರಿಸಿದರು.

ಇದಾದ ಮೇಲೆ ಟೆಂಪಲ್ ಸೆಕೆಂಡರಿ ಶಾಲೆಯ ಮೇಲಿನ ದರ್ಜೆಯ ಮಕ್ಕಳು ಆರೋಗ್ಯದ ವಿಷಯ ಭಾಷಣಗಳನ್ನು ಕೊಟ್ಟರು.

ಅನಂತರ ಪಂದ್ಯಾಟಗಳಲ್ಲಿಯೂ, ವೇಷಧಾರಿಗಳಲ್ಲಿಯೂ ಪ್ರಥಮ ದ್ವಿತೀಯ ಚಿಕಿತ್ಸೆಯಲ್ಲಿಯೂ ಪ್ರವೀಣರಾದವರಿಗೆ ಇನಾಮುಗಳು ಹಂಚಲ್ಪಟ್ಟವು. ನಂತರ ನೆರೆದವರೆಲ್ಲರಿಗೆ ತಿಂಡಿ ಪದಾರ್ಥಗಳು ಹಂಚಲ್ಪಟ್ಟವು. ಇದರ ನಂತರ ನೆರೆದು ಬಂದ ಮಹನೀಯರೆಲ್ಲರಿಗೂ ಧನ್ಯವಾದಗಳು ಕೊಡಲಾದವು. ಎಲ್ಲರೂ ಅಗಲಿದರು. ಇಷ್ಟಾಗುವಾಗ ರಾತ್ರೆ ಎಂಟು ಗಂಟೆಯಾಯಿತು. ಅನಂತರ ಎಲ್ಲಾ ಶಾಲೆಗಳ ಉಪಾಧ್ಯಾಯ ಉಪಾಧ್ಯಾಯಿನಿಯವರಿಗೂ ಕಮಿಟಿ ಮೆಂಬರರಿಗೂ ಉಪಾಹಾರವು ಕಮಿಟಿ ಮೆಂಬರರ ಖಾಸಗಿ ಖರ್ಚಿನಿಂದ ನಡಿಸಲ್ಪಟ್ಟಿತು.

ಈ ರಾಷ್ಟ್ರೀಯ ಶಿಶು ಸಪ್ತಾಹದಲ್ಲಿ ಬಹಳ ಪರಿಶ್ರಮಪಟ್ಟ ಇಲ್ಲಿಯ ಡಾಕ್ಟರ ಕಿಲ್ಲಾಡಿಕಾರರ ಮತ್ತು ರಾ। ಬಿ. ಎಲ್. ಹಾಮದ ...ಹೇಬರ ಕೆಲಸಗಳು ಸ್ತುತ್ಯವಾದವುಗಳೆಂದೇ ಹೇಳಬೇಕಾಗಿದೆ.

ಶಿಶು ಸಪ್ತಾಹ.

ಈ ವರ್ಷದ ಶಿಶುಸಪ್ತಾಹವು ಉಡುಪಿ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರರ ಪರಿಶ್ರಮದಿಂದಲೂ, ಇತರ ಅನೇಕ ಸದ್ಗೃಹಸ್ಥರ ಸಹಕಾರದಿಂದಲೂ ನಮ್ಮ ಜಿಲ್ಲೆಯಲ್ಲಿನ ಹೆಲ್ತ್ ವೀಕ್ ಅಥವಾ ಬೇಬಿ ವೀಕಿನ ಆಚರಣೆಯು ಚೆನ್ನಾಗಿ ಪ್ರಚಾರವನ್ನು ಹೊಂದಿತು. ಜಿಲ್ಲೆಯ ಮುಖ್ಯ ಊರುಗಳಲ್ಲಿಯೂ, ಹಳ್ಳಿಗಳಲ್ಲಿಯೂ ಈ ಶಿಶುಸಪ್ತಾಹವು ತೋರಣಾದಿ ಅಲಂಕಾರಗಳಿಂದಲೂ, ಬಹಿರಂಗದ ಪ್ರಕಟಣೆಗಳಿಂದಲೂ, ಮೆರವಣಿಗೆಗಳಿಂದಲೂ, ಭಾಷಣಗಳಿಂದಲೂ ನಡೆಯಿತು. ಸರಕಾರೀ ಪ್ರೇರಣೆಯಿಂದ, ಮದ್ರಾಸಿನ ಅಧಿಕಾರಿಗಳ ಆಜ್ಞಾಧೀನವಾಗಿ ನಡೆಯಬೇಕಾದುದರಿಂದ, ಶಿಶುಸಪ್ತಾಹಕ್ಕೆ ಪರಿಚಾಲಕರು ಬೇಕಷ್ಟು ಸಿಕ್ಕಿದರು. ಅಲ್ಲದೆ, ಇದರ ವಿಷಯವಾಗಿ ಸರಕಾರದ ಪ್ರತ್ಯೇಕ ರಿಪೋರ್ಟು ಇರುವುದರಿಂದ ಮತ್ತು ಚೆನ್ನಾಗಿ ಕೆಲಸ ಮಾಡಿದವರಿಗೆ ಸರಕಾರದ ಅಮೂಲ್ಯವಾದ ಶಿಫಾರಸು ಪತ್ರಗಳು ಲಭಿಸುವುದರಿಂದ, ಅನೇಕರು ಈ ವಾರದಲ್ಲಿ ಬಹಿಃಪ್ರಕಟನೆಯನ್ನು ಹೊಂದಲು ಪ್ರಯತ್ನಿಸುವರು.

ಎಂತೂ, ಶಿಶುಸಪ್ತಾಹವು ನಡೆಯಿತು. ಈ ಶಿಶುಸಪ್ತಾಹದ ಉದ್ದೇಶವು, ಅದರ ಹೆಸರಿನಂತೆ, ಶಿಶುಗಳ ಪೋಷಣೆ ಮತ್ತು ಜನಸಾಮಾನ್ಯತೆಯ ಆರೋಗ್ಯದ ದೃಢೀಕರಣ. ಈ ಉಚ್ಚ ಉದ್ದೇಶಗಳುಳ್ಳ ಶಿಶುಸಪ್ತಾಹವು, ತನ್ನ ಕಾರ್ಯರಂಗದಲ್ಲಿ ಸಾಫಲ್ಯವನ್ನು ಹೊಂದುವುದು ದೇಶದ ಹಿತಕ್ಕೆ ಅತೀ ಅಗತ್ಯವು. ಹಿಂದೂದೇಶದಲ್ಲಿ ಶಿಶುಗಳ ಮರಣ ಸಂಖ್ಯೆಯು ಬಹಳ ಹೆಚ್ಚು. ಮಾತ್ರವಲ್ಲದೆ, ಆರೋಗ್ಯ ಕೂಡ ಬಹಳ ಹೀನಸ್ಥಿತಿಯಲ್ಲಿದೆ. ಶಿಶುಗಳ ಆರೈಕೆಯು ಹಿಂದೂದೇಶದ ಹೆಂಗಸರಿಗೆ ಸರಿಯಾಗಿ ತಿಳಿಯುವುದಿಲ್ಲ. ಆದುದರಿಂದ ನಮ್ಮ ದೇಶದ ಜನರಿಗೆ ಶಿಶುಗಳ ಸಂರಕ್ಷಣೆಯ ಸಂಯಾದ ಕ್ರಮವನ್ನು ನಿವೇದಿಸಿ, ಅವರಿಂದ ಮಕ್ಕಳ ಪಾಲನೆಯು ಉತ್ತಮ ರೀತಿಯಲ್ಲಿ ನಡೆಯುವಂತೆ ಮಾಡುವುದು ಈ ಶಿಶುಸಪ್ತಾಹದ ಉದ್ದೇಶವಾಗಿರಬೇಕು.

ಆದರೆ, ಈ ಸಪ್ತಾಹದ ಆಚರಣೆಯ ಅಲ್ಲಲ್ಲಿನ ವ್ಯವಸ್ಥಾಪಕರು ಶಿಶುಸಪ್ತಾಹದ ಮೂಲ ಉದ್ದೇಶಕ್ಕಿಂತಲೂ ಅದರ ಬಹಿರಾಡಂಬರಕ್ಕೇನೆ ಹೆಚ್ಚು ಗಮನವಿಡುತ್ತಿರುವರು. ಜನತೆಯ ಲಕ್ಷ್ಯವನ್ನು ವಿಷಯದ ಕಡೆಗೆ ಸರಿಯಾಗಿ ಎಳೆಯಲಿಕ್ಕೆ ಬಹಿರಾಡಂಬರವು ಅತೀ ಅಗತ್ಯವಿದೆಯಾದರೂ, ಈ ಬಹಿಃಪ್ರದರ್ಶನದ ಕೋಲಾಹಲದಲ್ಲಿ ಅಂತರ್ಯದ ಉದ್ದೇಶವು ಮರೆಯಲ್ಪಡಬಾರದು. ಜನತೆಯೊಳಗೆ ಹೇಗೆ ಕೆಲಸಮಾಡಬೇಕೆಂಬ ಅನುಭವವಿಲ್ಲದೆ, ಬರೇ ವಿಜ್ರಂಬಣೆಯ ಗಲಭೆಯಿಂದ ಕೆಲವರು ಈ ಶಿಶುಸಪ್ತಾಹದ ಅತ್ಯಂತ ಪ್ರಯೋಜನೀಯ ವಿಷಯಗಳನ್ನು ಹಿಂದೆ ಹಾಕುವರು.

ಹಳ್ಳಿಹಳ್ಳಿಗಳಲ್ಲಿ ಹೋಗಿ ಗೋಡೆಗೆ ಅಂಟಿಸುವ ಪ್ರಕಟನಾಪತ್ರಗಳು ಹೆಚ್ಚಾಗಿ ಇಂಗ್ಲೀಷಿನಲ್ಲಿವೆ. ಪ್ರಥಮತಃ ಅಂತಹ ಪತ್ರಗಳೇ ಸಾಕಷ್ಟು ಸಾಕಷ್ಟು ರೀತಿಯವುಗಳು, ವಿಷಯವನ್ನು ಸರಿಯಾಗಿ ಅಂಕಿಸುವಂತಹವುಗಳು, ಇರುವುದಿಲ್ಲ. ಎರಡನೆಯದಾಗಿ ಅವುಗಳ ಭಾಷೆಯು ಜನಸಾಮಾನ್ಯರಿಗೆ ತಿಳಿಯುವುದಿಲ್ಲ. ನಮ್ಮ ಇಡೀ ಜಿಲ್ಲೆಗೆ ಯೋಗ್ಯವಾದ ಕಾಯಂ ಒಂದು ಸಂಘವನ್ನೇರ್ಪಡಿಸಿ ಆ ಮೂಲಕ ಶಿಶುಗಳ ಆರೋಗ್ಯ ರಕ್ಷಣೆಯ ಕೆಲಸಗಳನ್ನು ನಡಿಸಬಹುದು.

ಈಗಿನ ಶಿಶುಸಪ್ತಾಹ ಕ್ರಮವು ಮೆಲ್ಲನೆ ಹಿಂದುಗಳ ಗೋಪಾಷ್ಟಮಿಯಂತೆಯೇ, ಉದ್ದೇಶ ಗೋವುಗಳ ಪೂಜೆಯಾದರೂ, ಗೋವುಗಳ ನೆನಪೇ ಮರೆತು, ಗೋವುಗಳ ಹೆಸರಿನಲ್ಲಿ ಮನೆಮಕ್ಕಳಿಗೆ ತಿಂಡಿ ಒದಗಿಸುವ ರೂಪಕ್ಕೆ ಪರಿಣಾಮ ಹೊಂದುತ್ತಿದೆ. ಶಿಶುಗಳ ಹೆಸರಿನಲ್ಲಿ ವಿಜ್ರಂಭಣೆಯ ಸಪ್ತಾಹಾಚರಣೆಯಿಂದ ಸರಕಾರೀ ಭೋಜನದ ನಿರೀಕ್ಷಣೆಯಲ್ಲಿ ಶಿಶುಗಳೇ ಮರೆತು ಹೋಗುವಂತೆ ತೋರುತ್ತಿದೆ. ಈ ರೀತಿಯಲ್ಲಿ ಆಗದಂತೆ ನೋಡಿಕೊಳ್ಳುವುದು ವ್ಯವಸ್ಥಾಪಕರ ಕರ್ತವ್ಯ. ಸರಕಾರೀ ಶಿಫಾರಸ್ಸಿಗಿಂತಲೂ ಜನತೆಯ ಹಿತಸಾಧನೆಯೇ ಮುಖ್ಯವಾದುದು.

ಮುಖ್ಯವಾಗಿ ಈ ವಾರದಲ್ಲಿ ಮನೆಮನೆಗೆ ಪ್ರಚಾರಕಾರ್ಯವನ್ನು ಕೈಕೊಳ್ಳಬೇಕು, [illegible] ದಾರದಲ್ಲಿ, ಡಾಕ್ಟರರ ಸಹಾಯವನ್ನು ಪಡೆದು, ಅದರೊಡನೆ ಪ್ರತಿ ಬಡವರ ದೊಡ್ಡವರ ಮನೆಗೆ ಹೋಗಿ ಮಕ್ಕಳ ಆರೋಗ್ಯವನ್ನು ಪರೀಕ್ಷಿಸಿ ಹೆತ್ತವರಿಗೆ ಯೋಗ್ಯವಾದ ಬುದ್ಧಿವಾದವನ್ನು ಕೊಡಬೇಕು. ಇಂತಹ ಕಾರ್ಯಕಾರಿಯಾದ ಕೆಲಸಗಳನ್ನು ಮಾಡಿದರೇನೆ ಈ ಬೇಬಿ ವೀಕಿನ ನಿಜವಾದ ಪ್ರಯೋಜನವು ಜನರಿಗೆ ಲಭಿಸುವುದು. ಮುಂದಿನ ವರ್ಷವಾದರೂ ಇಂತ ಸುಧಾರಣೆಗಳು ಬಾಲಿಂದು ನಾವು ನಿರೀಕ್ಷಿಸುವೆವು.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಶಾಕುಂತಲ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀಮಿತ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಧರ್ಗಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಷ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೭ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,
ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

Free! Free!! Free!!
ಪ್ರಸಿದ್ಧವಾದ "ಕಾಮಶಾಸ್ತ್ರ"
ಈಗಲೆ ತಯಾರಾಗಿದೆ.
ಜರೂರಾಗಿ ಬರೆಯುವಲ್ಲಿ ಅಂಚೆಯ ಹಾಸಲು ಸಹ ಇಲ್ಲದೆ ಕಳುಹಿಸುವೆವು.
ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, (ಪೋಸ್ಟು ಬಾಕ್ಸ್ 1252),
ಮದ್ರಾಸ್.

ಬಂದು ನೋಡಿರಿ! ತಿಂದು ನೋಡಿರಿ!
ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,
ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಕುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.
ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!
ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.
ಮಹೋಲ್ಸಾಸಿ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. | ಅಥವಾ | ಗಣೇಶ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"
ರಕ್ತ ಶುದ್ಧಿ | ## ವಜ್ರಾಂಗ-ಬಿಂದು | ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉತ್ಕೃಷ್ಟತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವವಲ್ಲದೆ, ಸ್ವಪ್ನಜನ್ಯ ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕೆಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬಿಳಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.
ಇದರ ಜೊತೆ ಒಂದು ಬಾಟ್ಲಿಯು ಉಚಿತ. ಟಪ್ಪಾಲು ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆಂದಿರುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.
ಟಪ್ಪಾಲು ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.
ಪತ್ರ: ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಚಿಕ್ಕೋಡಿ, (ಜಿಲ್ಲಾ ಬೆಳಗಾಂವ)

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲ ವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ —ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು
ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್.

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜೆಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಮಠಾರಕ್ತ ಸಮೀಪವಿರುವ ಮಳಿಗೆ,) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, ಪಾಡಿಕೇರಿ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, ಪೇಟ್ಯ, ರೇಶ್ಮೆ ಸೀರೆಗಳು, ಅರಳಪೇಟೆ ಸೀರೆಗಳು, ಕೊಜಾರ್ಜ್ ರೇಶ್ಮೆ ಸೀರೆಗಳು, ಆಬ ಅಂಚಿನ ಸೀರೆಗಳು, ರೇಶ್ಮೆ ಮುಂಡಾಸುಗಳು, ಹತ್ತಿ ಕಾರುಕೋಣಗಳ ಸೀರೆಗಳು ಬನಿಯನ್, ಕರ್ನಾಟಕ ಮಿಲ್ಲುಗಳ ವ ಇತರ ಮಿಲ್ಲುಗಳ ಶರ್ಟಿಂಗ್ ಕೋಟಿಂಗ್. ಕೈರಾಟೆಯಲ್ಲಿ ತಯಾರಿಸಿದ ಖಾದಿಯಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಶಾಲು, ಖದ್ದರ್ ಪೇಟ್ಯ, ಅಂಗವಸ್ತ್ರ, ಜಮಖಾನೆ—
ಮುಸಲ್ಮಾನರಿಗೆ [illegible] ಇತ್ಯಾದಿ—

ಎಲ್ಲಾ ಸಂಗ್ರಹವನ್ನು ನಮ್ಮ [illegible] ಗಿರಾಕಿಗಳು [illegible] ತೃಪ್ತಿ ಹೊಂದಿರುತ್ತಾರೆ.

ಶೇಕಡಾ—[illegible] 5 [illegible] 6 [illegible] ರೂ. 50ರಿಂದ 250ವರೆಗೆ ಸೇಕಡಾ10%, ರೂ. 250 ರಿಂದ 1000ಕ್ಕೆ 12½% [illegible]

Edited, Printed & Published by V. S. Kamath at the M. T. A. Sharada Press, Mangalore.

ಆಯುರ್ವೇದದ ಶಾಸ್ತ್ರಿ, ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಯಂ. ಜೆ. ಯ, ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುವೃದ್ಧಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನರಾದವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಕೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವಾದ್ಯಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನು ಸಂತತಿ ಲಾಭವನ್ನು ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲೀಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ ಯಾ ೪ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ತಿಯಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦.

ಟಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೬—೦.
ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

[illegible] ಬ್ರದರ್ಸ್,
"ಮಿಸ್ರಿ"
ಬೆಂಗಳೂರು ಸಿಟಿ.

ಡಿ. [illegible],
[illegible] ಬಜಾರ್,
ಸಾಲಾಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೧೯ನೇ ಶುಕ್ರವಾರ ಫೆಬ್ರುವರಿ ೧೯೨೬. ಸಂಚಿಕೆ ೮.

The Canara Banking Corporation,
UDIPI, Ltd.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್,
ಉಡುಪಿ, ಲಿಮಿಟೆಡ್.

Head office: UDIPI. Branch: COONDAPOOR.
ಹೆಡ್ ಆಫೀಸು: ಉಡುಪಿ. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲಿಕ್ಕೆ ಆರಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ವಸೂಲಿಕೆತ್ತ ಮೂಲಧನ	ರೂ. 1,73,185—9—11.
ಆಪದ್ಧನ ವಗೈರೆ ಎತ್ತಗಳು	ರೂ. 64,700—0—0.
ಸಾ. ಸೇ. 6ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	ರೂ. 25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಐವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಿಕೆತ್ತ ಮೂಲಧನ 1,73,185—9—11, ಆಪದ್ಧನ ವ ಇತರ ಎತ್ತಗಳು 64,700—0—0, ಠೇವಣಾತಿಗಳು 5,10,077-10-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳುವಾರಿಗಳಿಗೆ 4371—0—0, ಐವೇಜಿನ ಮೇಲಣ (ಈ ವರೆಗಿನ ಬಡ್ಡಿ ಕೂಡ) ಇತರ ಬಾಬುಗಳು 93,340—10—5, ಜುಮ್ಲಾ ರೂ. 8,45,674—14—7.

ಆಸ್ತಿ ವ ಹೊತ್ತುಗಳು.

[illegible] ಹತ್ತು, ಅಕ್ಟೋಬರು ಕಳೆದಿದದ ಟ್ರೆಜರಿಗಳು ವಗೈರೆ 4134—4—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496—6—2, ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡ) 41,741—14—2, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 26,131—6—3, ಜುಮ್ಲಾ ರೂಪಾಯಿ 8,45,674—14—7.

ಸರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮೊಸುಮ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು, ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾವಕಾರಿ ಹುಂಡಿಗಳನ್ನೂ ವಜ್ಯಾಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಐವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

N. Anand Rao,
Secretary.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ
ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೋಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಚ್ಯಾವಿಸುಚ್ಯಾವಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು [illegible] ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1-9-0.
ವಿ. ಪಿ. ಖರ್ಚ ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಯಿರಿ.

ವಿಳಾಸ:— ಬೇವಿನ್ಲಿ ನಾರಾಯಣ ಶೇಟ್,
[illegible],
ಮಂಗಳೂರು, (ದ. ಕ.)

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್‌ಸನ್ ವಾಚ್ ಕೊ.,
ಬಿಲಾರ್ಡ್ ಎಸ್ಟೇಟ್, ಮುಂಬಯಿ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ, ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 500, P. T. MADRAS.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟಿವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.

ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0

ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೊಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಕನ್ನಡಿಗರೆ! **ವಸಂತ.** ಕಚ್ಚೆರಿಯಿಂ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . . ವಸಂತ
ಸಮಾಜಸುಧಾರಕನೆಂದರೆ . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . ವಸಂತ
ಕರ್ಣಾಟಕ ಭಾಷಾಸೇವಕನೆಂದರೆ . . . ವಸಂತ
ದೇಶವಿದೇಶ ಬಂಧುವೆಂದರೆ . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರಾನ್ ¼ ಪುಟ ಸೈಜಿನ) ಪುಟಗಳನ್ನು ಒಳಕೊಂಡ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

11 ಮಣಿಗಳಿದ್ದ ಬ್ರಿಜ್ ಮೂವ್‌ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8
18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0
9 „ „ „ 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಎಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಟೂತ್ ಅಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಕ್ಲೋರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಬಿ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ವಾರ್ಟಿ, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಫೋಷಕರಿಗೆ	... ...	ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ		„ 2-8-0.
„ ಸ್ಥಳೀಕರಿಗೆ	...	„ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಆಲೆಕ್ಸ್ ಆಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜಪ್ಪರ್ ರೇಷ್ಮೆ ಮುಡಿಗಳು, ಶಾಮ್ಲಾಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಸಾಳಿಗ್ರಾಮ, ಗಂಧ, ಪನ್ನೀರ್‌ಬಾಸಿ, ಹಿತ್ತಾಳಿಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನು ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುತ್ತವೆ. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಫಾಲ್ಗುಣ ಶು| ೮ ಶನಿವಾರದಿಂದ ಕ್ರೋಧನ ಸಂವತ್ಸರದ ಫಾಲ್ಗುಣ ಶು| ೧೪ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಕುಂಭ ಮಾಸ.)

ತಾರೀಖು	ವಾರ	ತಿ.	ಘಳಿಗೆ.	ನಕ್ಷತ್ರ	ಘಳಿಗೆ.	ನಿತ್ಯಯೋಗ	ಸೂರ್ಯ ಉ.	ಸೂರ್ಯ ಅಸ್ತ.
20	ಶನಿ	೮	೧೯.೨೮	ರೋಹಿಣಿ	[illegible]	೮	6.54	6.36
21	ರವಿ	೯	೧೫.೨೯	ಮೃಗಶಿರಾ	೬೦.೦	೯	6.53	6.37
22	ಸೋಮ	೧೦	೧೬.೫೮	ಮೃಗಶಿರಾ	೦.೪೬	೧೦	6.53	6.37
23	ಕುಜ	೧೧	೨೧.೩೨	ಆದ್ರ್ರಾ	೫.೧೬	೧೧	6.52	6.37
24	ಬುಧ	೧೨	೬. ೦	ಪುನರ್ವಸು	೧೦.೪೪	೧೨	6.52	6.38
25	ಗುರು	೧೩	೩೦.೫೯	ಪುಷ್ಯಾ	೧೬. ೩	೧೩	6.51	6.38
26	ಶುಕ್ರ	೧೪	೩೬.೧೪	ಆಶ್ಲೇಷಾ	೨೩.೧೪	೧೪	6.51	6.38

ಮಂಗಳೂರಿನ ವಾಯುಸ್ಥಿತಿ.

Date ತಾರೀಖು.	Temperature. ಉಷ್ಣ (ಕಾವು) Maximum ಅತಿ ಹೆಚ್ಚು	Minimum ಅತಿ ಕಡಿಮೆ	Rainfall ಮಳೆ ದಿನದ ಮಳೆ	ಜನವರಿ ಮಳೆ.
12	92—7	71—2	—	—
13	93—0	68—5	—	—
14	91—3	69—5	—	—
15	90—6	72—7	—	—
16	89—6	73—5	—	—
17	90—0	73—0	—	—
18	89—8	72—5	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಅ.	ವರೆಗೆ ರೂ. ಅ
ಮಸ್ಕತಿ		8— 4	9— 0
ಹೊಸ ಗುಡ್ಡು	...	7— 14	8— 4
ಹೊಸ ರಾಶಿ	...	7— 0	7—12
ಅವ್ವಲ್ ಬೆಳ್ತಿಗೆ	...	8— 0	9— 0
ರಂಗೂನು ಬೆಳ್ತಿಗೆ ಗೋಣಿ ೧	...	13— 0	14— 0
ಗೋಧಿ ಗೋಣಿ ೧ಕ್ಕೆ	...	19— 0	20— 0
ತುರುಳ್ಗೋಣಿ ೧ಕ್ಕೆ	...	8—12	9— 4
ಅವಲಕ್ಕಿಗೋಣಿ ೧ಕ್ಕೆ	...	14— 0	14— 8
ಕಡಲೆಗೋಣಿ ೧ಕ್ಕೆ	...	14— 8	15— 0
ಕಡಲೆಬೇಳೆ ಗೋಣಿ ೧ಕ್ಕೆ	...	16— 8	22— 0
ಉದ್ದು ಗೋಣಿ ೧ಕ್ಕೆ	...	16— 0	—
ಹೆಸರುಗೋಣಿ ೧ಕ್ಕೆ	...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ	...	60— 0	62— 8
ಉಪ್ಪು ಗೋಣಿ ೧ಕ್ಕೆ	...	4— 6	4—10
ಕೊಬ್ರಿ ಖಂಡಿ ೧ಕ್ಕೆ	...	110— 0	120— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	35— 0	35— 8
ಎಳ್ಳಿಂಡಿ ಖಂಡಿ ೧ಕ್ಕೆ	...	42— 8	47— 8
ಕೊಬ್ಬರಿ ಎಣ್ಣೆ ಮುಡಿ ೧ಕ್ಕೆ	...	7—12	7—13
ಎಳ್ಳೆಣ್ಣೆ ಮುಡಿ ೧ಕ್ಕೆ	...	7— 8	11— 0
ಹರಳ ಎಣ್ಣೆ ಬುಟ್ಟಿಗೆ ೧ಕ್ಕೆ	...	8-12-0	—
ತೋರಿನ ಸಕ್ಕರೆ ಮುಡಿ ೧ಕ್ಕೆ	...	5— 0	5 — 2
ಊರ ಮೆಣಸಿನಕಾಯಿ ಮುಡಿ ೧ಕ್ಕೆ	...	9— 4	—
ಸಾಸಿವೆ ಮುಡಿ ೧ಕ್ಕೆ	...	9— 8	—
ಕೊತ್ತಂಬರಿ ಮುಡಿ ೧ಕ್ಕೆ	...	3— 8	4— 4
ಶುಂಠಿ ಖಂಡಿ ೧ಕ್ಕೆ	...	380— 0	390— 0
[illegible] ಖಂಡಿ ೧ಕ್ಕೆ [illegible]	...	275— 0	300— 0
ಹೊಸ [illegible] ಖಂಡಿ ೧ಕ್ಕೆ	...	180— 0	225— 0
[illegible] ಖಂಡಿ ೧ಕ್ಕೆ	...	300— 0	400—
[illegible] ಮುಡಿ ೧ಕ್ಕೆ	...	45— 0	—
[illegible] ಮುಡಿ ೧ಕ್ಕೆ	...	4— 0	—
[illegible] ಖಂಡಿ ೧ಕ್ಕೆ	...	45— 0	65— 0
[illegible] ಮುಡಿ ೧ಕ್ಕೆ	...	16— 4	16—12
[illegible] ಮುಡಿ ೧ಕ್ಕೆ	...	21— 0	—
[illegible] ೧ಕ್ಕೆ	...	18—10	
[illegible] ಮುಡಿ ೧ಕ್ಕೆ	...	16— 8	
[illegible]		18—12	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

NO PRICE NO POSTAGE

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರಿವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲ 1ಕ್ಕೆ ರೂ. 3—2—0.
„ 2. „ „ ರೂ. 1—8—0.

— ವ್ಯಾಪಾರಸ್ಥರಿಗೆ ನೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆಯಲಿಕ್ಕೆ ಒಂದು ದೇಹದ ಮರ್ಮಶಾಸ್ತ್ರವು ಇರುವುದು. ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಜಾರ್ಜ್‌ಟೌನ್, ಮದ್ರಾಸ್.

ತ್ವರೆಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ

ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್, ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಾಲಿ ವಧಾ ... ...
(3) ಇಂದ್ರಜಿತು ಕಾಳಗ ... ...
(4) ಚಂದ್ರಾವಳಿ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣಬಾಲಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣ ದೀಪಾಶ್ವಮೇಧ ಕಥಾ ... ...
(18) ಚಂದ್ರಮಾಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ [illegible] ... ...
(22) „ [illegible] ಕಥೆ ... ...
(23) ಯಕ್ಷಗಾನ [illegible] ಕಥೆ ... ...
(24) „ ಚೋರ ಕಥೆ ... ...
(25) „ [illegible] ಕಥೆ ... ...
(26) „ ಗೋವಿನ ಚರಿತ್ರೆ ... ...
(27) „ [illegible] ಕಥೆ ... ...
(28) „ [illegible] ಕಥೆ ... ...
(29) „ [illegible] ... ...

ಶಾರದಾ ಛಾಪಖಾನೆ, ಮಂಗಳೂರು.

ನೋಟೀಸು.

ಉಪ್ಪಿನಂಗಡಿ ತಾಲೂಕು ನಂಬ್ರ 166ನೇ ಕರೋಪಾಡಿ ಗ್ರಾಮದ ಮುಗುಳಿ ಶಂಕರ ಭಟ್ಟರ ಮಗ ರಾಮಕೃಷ್ಣ ಭಟ್ಟನು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ:—ನನ್ನ ವಿಭಕ್ತ ಕುಟುಂಬದವರಾದ ಕರೋಪಾಡಿ ಗ್ರಾಮದ ಮುಗುಳಿ ಮಹಾಲಿಂಗ ಭಟ್ಟರ ಮಗ ಕೃಷ್ಣಭಟ್ಟರು ಕಳೆದ ತಾ. 7—1—1926ರಲ್ಲು ಮೃತಪಟ್ಟಿರುತ್ತಾರೆ. ಅವರಿಗೆ ಗಂಡು ವ ಹೆಣ್ಣು ಮಕ್ಕಳು ಸಹಾ ಇಲ್ಲದೆ ಎರಡು ಜನ ಹೆಂಡತಿಯರು ಮಾತ್ರ ಇರುತ್ತಾರೆ. ಅವರ ವಿಶಿಷ್ಟ ಸ್ಥಿರಚರ ಸೊತ್ತುಗಳಿಗೆ ನಾನು ಪೂರ್ಣ ಹಕ್ಕುದಾರನಾಗಿರುತ್ತೇನೆ. ಸದರಿ ಹೆಂಡತಿಯರು ಅವರ ಸಮ್ಮಂಧಿಕರ ಮತ್ತು ನನ್ನ ದ್ವೇಷಿಕರ ದುರುಬೋಧನೆಗೆ ಒಳಪಟ್ಟು ಕೆಲವು ಸೃಷ್ಟಿತ ವ್ಯಸಾಲಗಳನ್ನು ಕಲ್ಪಿಸಿ ಮೃತರ ಬಾಬ್ತು ಆಸ್ತಿಗಳನ್ನು ಅಡವು ಆರುವಾರು ಇತ್ಯಾದಿ ಪರಾಧೀನಗಳು ಮಾಡುವ ಇರಾದೆಯಲ್ಲಿರುತ್ತಾರೆ. ಆ ರೀತಿ ಅವರು ಸಾಲ ಕಲ್ಪಿಸಿ ಮಾಡುವ ಯಾವದೊಂದು ಪರಾಧೀನಗಳೂ ನನಗೆ ಯಾ ಸದರಿ ಆಸ್ತಿಗಳಿಗೆ ಬದ್ಧಪಡುವಂತಾದಲ್ಲ. ಮತ್ತು ಅಂಥಾ ಪರಾಧೀನಗಳು ಅಸಿಂಧು ಆಗಿ ರದ್ದಾಗಿರತಕ್ಕದ್ದೆಂತ ಈ ಮೂಲಕ ತಿಳಿಸಿರುತ್ತೇನೆ.

ಕರೋಪಾಡಿ
ತಾ. 8-2-1926. } ಮುಗುಳಿ ರಾಮಕೃಷ್ಣ ಭಟ್ಟ.

ನೋಟೀಸು.

ದಕ್ಷಿಣ ಕನ್ನಡ ಒಫಿಶಿಯಲ್ ರಿಸೀವರ ಕೋರ್ಟಿನಲ್ಲಿ.

ದಿವಾಳಿ ಅರ್ಜಿ ನಂಬ್ರ 10/1926.

(ಮಂಗಳೂರು ಡಿ. ಮು. ಕೋರ್ಟು ದಿವಾಳಿ ಅರ್ಜಿ ನಂಬ್ರ 4/26.)

ಪಿ. ಚೆರ್ದಪ್ಪ ಯಾನೆ ಗೋಪಾಲಕೃಷ್ಣ ಶ್ಯಾನುಭಾಗ } ದಿವಾಳಿ ಅರ್ಜಿದಾರ.

ಮತು.

1. ಕೆ. ಅನಂತನಾರಾಯಣ ಪ್ರಭು
2. ಮುಲ್ಕಿ ವೆಂಕಟ್ರಾಯ ಶ್ರೀನಿವಾಸ ಪ್ರಭು ಮತ್ತು ಕಂಪೆನಿ
3. ಪಕೀರ ಯಾನೆ ರಾಮಚಂದ್ರ ಬಾಳಿಗಾ ಮತ್ತು ಸನ್ಸ
4. ಸುಜೀರ ವಾಸುದೇವ ನಾಯ್ಕ ಮತ್ತು ಬ್ರದರ್ಸ
5. ಶ್ರೀ ವೆಂಕಟ್ರಮಣ ದೇವಸ್ಥಾನ ಬಂಟ್ವಾಳ
6. ದಾಮೋದರ ವೆಂಕಟೇಶ ಬಾಳಿಗ
7. ದಿ ಬಂಟ್ವಾಳ ಟ್ರೇಡರ್ಸ್ ಕೋಅಪರೇಟಿವ್ ಸೊಸ್ಸಾಟಿ
8. ಬಿ. ಎಚ್. ಸರ್ವೋತ್ತಮ್ ಪೈ.

} ಸಾಲದಾರರು.

ಮೇಲ್ಕಂಡ ದಿವಾಳಿ ಅರ್ಜಿದಾರ ಪಿ. ಚೆರ್ದಪ್ಪ ಯಾನೆ ಗೋಪಾಲಕೃಷ್ಣ ಶ್ಯಾನುಭಾಗನು ನಿರಾಧಾರಿಯೆಂತಲೂ ತನ್ನನ್ನು ದಿವಾಳಿಯಾಗಿ ಸ್ಥಾಪಿಸಬೇಕಾಗಿ ವಗೈರೆ ಕಾಣಿಸಿ ಮೇಲ್ಕಂಡ ದಿವಾಳಿ ಅರ್ಜಿಯನ್ನು ದಾಖಲುಮಾಡಿರುತ್ತಾನೆ. ಸದರಿ ಅರ್ಜಿಯು ತಾ. 13—3—1926ನೇ ದಿವಸ ಅಪರಾಹ್ನ ಗಂಟೆ 2ಕ್ಕೆ (2 p. m.) ತನ್ಖಿಗೆ ಇಟ್ಟಿದೆ. ಇದಕ್ಕೆ ಆಕ್ಷೇಪಿಸುವವರು ಸದರಿ ದಿವಸ ಬಂದು ಮೇಲ್ಕಂಡ ಕೋರ್ಟಿಗೆ ಅವರ ಆಕ್ಷೇಪಗಳನ್ನು ಜಾಹೀರುಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ಪ್ರಕಟಿಸೋಣಾಗಿಯದೆ.

ಮಂಗಳೂರು,
ತಾ. 17—2—'26. } G. Upendra Prabhu, ಅರ್ಜಿದಾರನ ಕಡೆ ವಕೀಲ್.

ಪ್ರಕಟಣೆ.

ತಾ. ೨೧—೨—೨೬ನೇ ಅಪರಾಹ್ನ ಘಂಟೆ ೩ಕ್ಕೆ ಮಂಗಳೂರಲ್ಲಿ ಕರ್ನಾಟಕ ತಿಲಕ ವಿದ್ಯಾಲಯದಲ್ಲಿ ಜರಗಲಿಕ್ಕಿದ್ದ ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿಯ ಮಹಾಸಭೆಯು ಕನಿಷ್ಟ ಹಾಜರಿಲ್ಲವಾದ್ದರಿಂದ ನಿಯಮ ೧೮ರ ಪ್ರಕಾರ ಇದೇ ತಿಂಗಳ ತಾ. ೨೫ನೇ ಅಪರಾಹ್ನ ಘಂಟೆ ೩ಕ್ಕೆ ಕರ್ನಾಟಕ ತಿಲಕ ವಿದ್ಯಾಲಯದಲ್ಲಿ ಜರಗುವುದು. ನಿಯಮಿತ ಸಮಯದ ಅರ್ಧತಾಸಿನೊಳಗೆ ಕನಿಷ್ಟಹಾಜರಿ ಇಲ್ಲವಾದರೆ ಸದರಿ ಅರ್ಧತಾಸಿನ ನಂತರ ಹಾಜರಿದ್ದ ಸದಸ್ಯರು ಮಾಡಿದ ನಿರ್ಣಯಗಳು ಮಂಜೂರಾಗತಕ್ಕದ್ದು.

ಮಂಗಳೂರು ತಾಲೂಕು ಕಾಂಗ್ರೆಸ್ಸು ಕಮಿಟಿ ಕಚೇರಿ, ೧೭-೨-'೨೬. } ಎ. ಭೋಜರಾಯ, ಕಾರ್ಯದರ್ಶಿ, ಮಂಗಳೂರು ತಾಲೂಕು ಕಾಂಗ್ರೆಸು ಕಮಿಟಿ.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ಡಿ. ಊಲನ್ ಮಾರ್ಟ್, ಮಂಗಳೂರು.

ವಿವಿಧ ವಿಷಯಗಳು.

ಎಲ್ಲಾ ತಾಲೂಕು ಬೋರ್ಡಿನವರಿಗೆ ವಿನಂತಿ.

ನಮ್ಮ ಜಿಲ್ಲೆಯ ರಾಜಮಾರ್ಗಗಳ ಇಕ್ಕೆಡೆಗಳಲ್ಲಿ ಸರಕಾರದವರು ಬಹಳ ಹಣ ಖರ್ಚು ಮಾಡಿ ಇಡಿಸಿರುವ ಸಾಲುಮರಗಳಲ್ಲಿ ಅನೇಕ ಮರಗಳಿಗೆ ಬದನಿಕೆ ಹಿಡಿದು ಮರಗಳೇ ನಾಶವಾಗುತ್ತಾ ಬರುತ್ತವೆ. ಇಂಥಾ ಸಂಗತಿಗಳಲ್ಲಿ ಆಯಾ ಸರಹದ್ದಿಗೆ ಸೇರಿದ ಬೋರ್ಡಿನವರು ಅವುಗಳನ್ನು ಅಂದರೆ ಬದನಿಕೆ ಹಿಡಿದ ಮರದ ಗೆಲ್ಲುಗಳನ್ನು ಕಡಿದು ಏಲಂ ಮಾಡಿದರೆ ಯಾವ ತರದ ನಷ್ಟವಾಗಲಿಕ್ಕಿಲ್ಲ. ಕೆಲವು ಮಾರ್ಗಗಳಲ್ಲಿ ಈಚೀಚೆಗೆ ಅಂಥಾ ಸಾಲುಮರಗಳನ್ನು ಇಡದೆ ಇರುವುದರಿಂದ ಪ್ರಯಾಣಿಕರಿಗೆ ತುಂಬಾ ಬಿಸಿಲಿನ ತಾಪವಾಗಿದೆ.

೧೯೨೬ನೇ ಇಸವಿಯಲ್ಲಿ ಭೂಲೋಕದ ಭವಿಷ್ಯ.

ಕಾರ್ಲರಾಜ, ಪ್ರೆಸಿಡೆಂಟ ವಿಲಸನ್‌ರ ಮರಣದ ಕಾಲವನ್ನೂ, ಹಿರಿಯುಟನು ಪ್ರಬಲಕ್ಕೆ ಬರುವ ವಿಷಯವನ್ನೂ, ಲಾರ್ಕಾನೊ ಕೊನ್ಫರೆನ್ಸಿನ ವಿಷಯದ ವಿಷಯವೂ ಭವಿಷ್ಯ ಹೇಳಿದ ರೊಸ್‌ಬೆನ್ಲಿಯವರು ಈ ವರುಷದ ಭವಿಷ್ಯದ ವಿಷಯ ಹೀಗೆ ಬರೆದಿರುತ್ತಾರೆ.

ಯುರೋಪ ಖಂಡದಲ್ಲಿ ರಾಜತಂತ್ರಗಳಲ್ಲಿ ಯಾವ ತರದ ಗಲಾಟೆಗಳು ಇದ್ದರೂ ಯುರೋಪ ಖಂಡದಲ್ಲಿ ಯುದ್ಧವಾಗಲಿಕ್ಕಿಲ್ಲ. ಆದರೆ ಜಪಾನಿಗೂ ಚೈನಕ್ಕೂ ಯುದ್ಧವಾಗಿ ರಕ್ತಪ್ರವಾಹವಾಗುವದು. ಸ್ವಿಜರ್‌ಲೆಂಡಿನಲ್ಲಿಯೂ, ಎಮ್ಸ್ಟರ್‌ಡಮ್‌ನಲ್ಲಿಯೂ ಮಹಾಸಭೆಗಳಾಗುವವು. ಅಮೇರಿಕದಲ್ಲಿ ಭೂಲೋಕದ ಎಲ್ಲಾ ರಾಜ್ಯಗಳ ಸಭೆಯು ಆಗುವದು. ಬಾಲ್ಕನ್ ರಾಜ್ಯಗಳಲ್ಲಿ ವಿಶೇಷ ತರದ ಸಂಘಟನೆಗಳು ಆಗುವವು.

ಯುರೋಪ ಖಂಡದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಬಹಳ ಶೀತಗಾಳಿಗಳು ಬೀಸುವವು. ಎಪ್ರಿಲ್ ತಿಂಗಳಲ್ಲಿ ಬಿರುಗಾಳಿಗಳು ಬೀಸಲಾರಂಭಿಸುವವು. ಆಕಾಶ ಮಂಡಲದಲ್ಲಿ ವಿಶೇಷ ಬದಲಾವಣೆಗಳು ಉಂಟಾಗುವವು. ಖಗೋಳ ಶಾಸ್ತ್ರಜ್ಞರು ವಿಶೇಷ ಸಂಗತಿಗಳನ್ನು ಕಂಡುಹಿಡಿಯುವರು. ಯುರೋಪ ಖಂಡದಲ್ಲಿ ೧೯೨೬ನೇ ಇಸವಿಯಲ್ಲಿ ಬಾಲಕೇತು ಕಂಡುಬಂದರೆ ಇನ್ನು ಎರಡೇ ವರ್ಷಗಳಲ್ಲಿ ಇನ್ನೊಂದು ಭೂಲೋಕದ ಯುದ್ಧವು ಸುರುವಾಗುವದು.

ಇಂಗ್ಲೆಂಡಿನವರು ಕೊಲೊನಿಗಳ ವಿಷಯ ಹೆಚ್ಚು ಮುಂಜಾಗ್ರತೆ ತೆಗೆದುಕೊಳ್ಳಬೇಕಾಗಿದೆ. ಆಶ್ಯಾ ಖಂಡದಲ್ಲಿ ಉಂಟಾಗುವ ರಾಜ್ಯಭಾರದ ಬದಲಾವಣೆಗಳೇ ಇದಕ್ಕೆ ಕಾರಣಗಳಾಗುವವು. ಜರ್ಮನಿಯೂ ಇಂಗ್ಲೆಂಡೂ ಬಹಳ ಪ್ರೀತಿಯಿಂದ ಇರುವುದು. ಫ್ರಾನ್ಸದೇಶದಲ್ಲಿ ಇನ್ನೂ ರಾಜ್ಯಭಾರದಲ್ಲಿ ಗಲಾಟೆಗಳಾಗುವವು. ಇಟಲಿ ದೇಶದಲ್ಲಿ ಫೆಸಿಜಮ್ ಹೆಚ್ಚಾಗಿ ಅಲ್ಲಿ ಸುಖ ಉಂಟಾಗುವದು.

ಹಿಂದೂಸ್ಥಾನಕ್ಕೊಂದು ನೌಕಾಸೈನ್ಯ.

ಹಿಂದೂದೇಶವನ್ನು ಎಷ್ಟೋ ಹಿಂದಿನ ಕಾಲದಿಂದ ಆಳಿದ ಅರಸರ ಕಾಲದಲ್ಲಿಯೂ ಈ ದೇಶಕ್ಕೊಂದು ನೌಕಾ ಸೈನ್ಯವಿತ್ತು. ಮೊಗಲಾಯ ಚಕ್ರವರ್ತಿಗಳ ಕಾಲದಲ್ಲಿಯೂ ಹಿಂದೂದೇಶದ ಕರಾವಳಿಯನ್ನು ಕಾಯಲಿಕ್ಕೆ ನೌಕಾ ಸೈನ್ಯವಿತ್ತು. ಕರಾವಳಿಯ ಪ್ರದೇಶದ ರಾಜ್ಯಗಳನ್ನು ಆಳುತ್ತಿದ್ದ ಸಣ್ಣ ಸಣ್ಣ ಅರಸರ ಹತ್ತರವೂ ನೌಕಾ ಸೈನ್ಯಗಳಿದ್ದವು. ಟೀಪು ಸುಲ್ತಾನನ ಕಾಲದಲ್ಲಿಯೂ, ಹೊನ್ನಾವರ, ಭಟಕಲ, ಗಂಗೋಳಿ, ದರಿಯಾ ಬಾದಿರಗಡ (ಮಲಪೆ) ಮಂಗಳೂರು ಮುಂತಾದ ಬಂದರುಗಳು ನೌಕಾ ಸೈನ್ಯಗಳು ನಿಲ್ಲುವ ಬಂದರುಗಳಾಗಿದ್ದವು. ಪೋರ್ತುಗೀಸರು ಇಂಡಿಯಕ್ಕೆ ಬಂದು ಕರಾವಳಿಯ ಅರಸರ ನೌಕಾ ಸೈನ್ಯಗಳನ್ನು ಸುಟ್ಟು ನಾಶಮಾಡಿದರು.

ಅನಂತರ ಇಂಗ್ಲಿಷರು ಈ ಹಿಂದೂದೇಶವನ್ನು ಆಳಲಿಕ್ಕೆ ತೊಡಗಿದ ಮೇಲೆ ಅವರು ತಮ್ಮ ಹತ್ತರವಿದ್ದ ಇಂಗ್ಲೀಷ ನೌಕಾಸೈನ್ಯವನ್ನೇ ತಂದು ಹಿಂದೂದೇಶದ ಕರಾವಳಿಯನ್ನು ಕಾಯಲು ಆರಂಭಿಸಿದರೂ ಇಂಡಿಯಾ ಸರಕಾರಕ್ಕೆ ಪ್ರತ್ಯೇಕ ನೌಕಾ ಸೈನ್ಯವು ಇಷ್ಟರ ವರೆಗೆ ಇರಲಿಲ್ಲ.

ಕಳೆದ ಯುದ್ಧದ ಸಮಯ ಹಿಂದೂದೇಶಕ್ಕೆ ಪ್ರತ್ಯೇಕ ನೌಕಾ ಸೈನ್ಯವು ಇಲ್ಲದೆ ಕರಾವಳಿಯನ್ನು ಕಾಯಲಿಕ್ಕೆ ಬಹಳ ಕಷ್ಟವಾಯಿತು. ಎಮ್ಡನ್ ಎಂಬ ಒಂದು ಜರ್ಮನ ಯುದ್ಧನಾವೆಯು ಬಂದು ಮದರಾಸು ಕರಾವಳಿಯನ್ನು ಹಾಳುಮಾಡುವಾಗ ಸಂಭವಿಸಿದ ಕಷ್ಟಗಳು ಎಲ್ಲರಿಗೂ ತಿಳಿದೇ ಇದೆ. ಈಗ ಹಿಂದೂದೇಶಕ್ಕೆ ಒಂದು ನೌಕಾ ಸೈನ್ಯವನ್ನು ಇಡಬೇಕೆಂದು ನಿಶ್ಚಯವಾಗಿ ಸ್ಟೇಟ ಸೆಕ್ರೆಟರಿಯವರ ಹುಕುಂ ಬಂದದೆಂದು ವ್ಯಾಸರಾಯರು ಮೊನ್ನೆಯ ಸ್ಟೇಟ ಕೌನ್ಸಿಲಿನ ಅಧಿವೇಶನದಲ್ಲಿ ತಿಳಿಯಪಡಿಸಿದರು.

ಈಗ ಇರುವ ರೋಯಲ್ ಇಂಡಿಯನ್ ಮರೈನ ಎಂಬ ಯುದ್ಧದ ನಾವೆಗಳನ್ನೇ ರೋಯಲ್ ಇಂಡಿಯನ್ ನೌಕಾ ಸೈನ್ಯವೆಂದು ಹೆಸರನ್ನು ಬದಲಾಯಿಸಿರುವರು. ಇದಕ್ಕೆ ಈಗ ೧೦ ಯುದ್ಧದ ಹಡಗಗಳು ಒದಗಿಸಲ್ಪಡುವವು. ಇದರ ಶಿಕ್ಷಣೆಯು ಬೇರೆ ಹಾವಳಿಯಾಗಿರುವದು. ಇಂಡಿಯಾ ನಿವಾಸಿಗಳು ಇದರಲ್ಲಿ ನೌಕಾ ವಿದ್ಯೆಯನ್ನು ಕಲಿತು ಉದ್ಯೋಗಸ್ಥರಾಗಬಹುದು. ಈ ನೌಕಾ ಸೈನ್ಯವು ಹಿಂದೂಸ್ಥಾನದ ಬಂದರಗಳನ್ನೂ ಕರಾವಳಿಯನ್ನೂ ಕಾಯುವುದು. ವರ್ಷಕ್ಕೊಮ್ಮೆ ... ಇಂಗ್ಲೆಂಡಿನಲ್ಲಿ ದೇಶಿಯರಿಗೆ ಶಿಕ್ಷಣ ಕೊಡುವರು. ಆದರೆ ಇಷ್ಟರ ವರೇಗೆ ಪೂರ್ವ ದೀರ್ಘ ಸಮುದಾಯದ ನೌಕಾ ಶಾಖೆಗೆ ನಾವು ವರ್ಷವರ್ಷವೂ ತೆರುತ್ತಿರುವ ೧೫ ಲಕ್ಷ ರೂಪಾಯಿಯನ್ನು ಇನ್ನು ಮುಂದೆಯೂ ಕೊಡಬೇಕಾಗುವದೋ ಇಲ್ಲವೋ ಎಂಬುದು ಈ ಭಾಷಣದಲ್ಲಿ ತಿಳಿಯುವುದಿಲ್ಲ.

ಜರ್ಮನಿಯಲ್ಲಿರುವ ಬೇಸಾಯದ ಸಹಕಾರ ಸಂಘಗಳು.

ಬೇಸಾಯವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಜರ್ಮನ ದೇಶದಲ್ಲಿರುವ ಬೇಸಾಯ ಸಹಕಾರ ಸಂಘಗಳ ರೀತಿಯ ಸಂಘಗಳು ಭೂಲೋಕದ ಬೇರೆ ಯಾವ ದೇಶಗಳಲ್ಲಿಯೂ ಇರುವುದಿಲ್ಲ. ಇದೇ ಮಾದರಿಯನ್ನು ಅನುಸರಿಸಿದರೆ ನಮ್ಮ ಸಂಸ್ಥಾನವು ಸಹ ಬೇಸಾಯದಲ್ಲಿ ಬಹಳ ಅಭಿವೃದ್ಧಿಯನ್ನು ಹೊಂದುವುದರಲ್ಲಿ ಸಂದೇಹವಿರಲಿಕ್ಕಿಲ್ಲ. ೧೯ನೇ ಶತಮಾನದ ಆದಿಭಾಗದ ವರೆಗೆ ಜರ್ಮನ ದೇಶದ ಹಳ್ಳಿಗಳ ಅವಸ್ಥೆಯು ಬಹಳ ದೀನಾವಸ್ಥೆಯಲ್ಲಿತ್ತು. ಬಡತನ, ರೋಗ, ಕೊಳೆ ಮನೆಗಳು, ಹೆಚ್ಚು ಬಡ್ಡಿಗೆ ಹಣ ಸಾಲಕೊಟ್ಟು ಬೇಸಾಯಗಾರರನ್ನು ಪೀಡಿಸುವುದು, ಜಗಳಗಳು, ಕುಡಿಕತನ, ವಿದ್ಯಾಹೀನತೆ ಇವೇ ಜರ್ಮನ ಹಳ್ಳಿಗಳ ಸಾಮಾನ್ಯ ಲಕ್ಷಣಗಳಾಗಿದ್ದವು. ಬೇಸಾಯದ ಸಾಮಗ್ರಿಗಳು ಬಹಳ ಹಳೆಯ ನಮೂನೆಯವುಗಳಾಗಿದ್ದವು. ಬೇಸಾಯಕ್ಕೆ ಬೇಕಾದಷ್ಟು ದನಕರುಗಳು ಇರಲಿಲ್ಲ.

ಬೇಸಾಯಗಾರರಿಗೆ ಎಹೂದ್ಯರು ಹಣವನ್ನು ಹೆಚ್ಚು ಬಡ್ಡಿಕೊಟ್ಟು ಅವರನ್ನು ಬಹಳವಾಗಿ ಪೀಡಿಸುತ್ತಿದ್ದರು. ಹಣವನ್ನು ಸಾಲಕೊಟ್ಟ ಒಡನೆಯೇ ಅದರ ಬಡ್ಡಿಯನ್ನು ಮೊದಲೇ ಕಳದುಕೊಳ್ಳುತ್ತಿದರು. ಬೆಳೆದ ಪೈರನ್ನು ಈ ಎಹೂದ್ಯ ಸಾಹುಕಾರರಿಗೇನೇ ಮಾರಿ ಅವರ ಮುಖಾಂತರವೇ ಬೇಸಾಯದ ಸಾಮಗ್ರಿಗಳನ್ನೂ ದನಕರುಗಳನ್ನೂ ಕ್ರಯಕ್ಕೆ ಪಡಕೊಳ್ಳಬೇಕಿತ್ತು. ಬೆಳೆಗೆ ಪೇಟೆಯ ಧಾರಣೆಗಿಂತ ಕ್ರಯವು ಕಡಿಮೆ ಸಿಗುತ್ತಿತ್ತು. ಬೇಸಾಯದ ಸಾಹಿತ್ಯಗಳಿಗೆ ಹೆಚ್ಚು ಕ್ರಯ ಕೊಡಬೇಕಿತ್ತು.

ಈಗಿನ ಜರ್ಮನ ಹಳ್ಳಿಗಳು ಮೊದಲಿದ್ದ ಅವಸ್ಥೆಯಿಂದ ಸಂಪೂರ್ಣ ಮೇಲಕ್ಕೆ ಬಂದು ಭೂಲೋಕದಲ್ಲಿ ಮೊದಲನೇ ಸ್ಥಾನವನ್ನು ಪಡೆದಿವೆ. ಶಾಸ್ತ್ರರೀತಿಯಲ್ಲಿ ಬೇಸಾಯವನ್ನು ಮಾಡಿದ್ದರಿಂದ ಬೆಳೆಯುವ ಬೆಳೆಯು ನಾಲ್ಕೈದುಪಾಲು ಹೆಚ್ಚಾಗಿಯದೆ. ಬೇಸಾಯ ಸಮ್ಮಂಧವಾದ ಕೈಗಾರಿಕೆಗಳೂ ಹೆಚ್ಚಾಗಿವೆ. ಹಳ್ಳಿಯ ಜನರ ಸಮಾನ ಪರಿಸ್ಥಿತಿಯು ಉನ್ನತಿಯನ್ನು ಹೊಂದಿಯದೆ. ಹಳ್ಳಿಯ ಜನರಲ್ಲಿ ಸಮಾಧಾನವೂ ಪರಸ್ಪರ ಪ್ರೀತಿಯೂ ಹೆಚ್ಚಾಗುತ್ತಾ ಬಂದದೆ. ನಿದ್ರಾವಸ್ಥೆಯಲ್ಲಿದ್ದ ಹಳ್ಳಿಯವರು ಈಗ ತಮ್ಮ ಕಾಯಶಕ್ತಿಯನ್ನೂ ಬುದ್ಧಿಶಕ್ತಿಯನ್ನು ಉಪಯೋಗಿಸಲಾರಂಭಿಸಿದ್ದಾರೆ.

ಈ ರೀತಿಯಲ್ಲಿ ಅಭಿವೃದ್ಧಿಯಾಗಲು ಕಾರಣಗಳು ಯಾವವೆಂದರೆ (೧) ಜಮೀನುದಾರರನ್ನು ತೆಗೆದುಹಾಕಿರುತ್ತಾರೆ. ಬೇಸಾಯದ ಮೇಲಿರುವ ಸುಂಕವನ್ನು ತೆಗದುಹಾಕಿರುತ್ತಾರೆ. (೨) ಹೆಚ್ಚು ವಾಯಿದೆಗೆ ಕಡಿಮೆ ಬಡ್ಡಿಗೆ ಹಣವನ್ನು ಒದಗಿಸಿಕೊಡುವುದು. ಹಳ್ಳಿಯ ಪರಸ್ಪರ ಸಂಘಗಳನ್ನು ಸ್ಥಾಪಿಸಿದ್ದು.

ಜಮೀನುದಾರಿ ಕ್ರಮ: ಇಷ್ಟರ ವರೆಗೆ ಜರ್ಮನ ರೈತರು ಧಣಿಗಳಿಂದ ಗದ್ದೆಗಳನ್ನು ಬೇಸಾಯಕ್ಕೆ ಪಡೆಯುತ್ತಿದ್ದರು. ರೆಂಟ ಚಾರ್ಜ ಬೇಂಕ್ (ಗೇಣಿ ಸಲಾಯಿಸುವ ಬೇಂಕು) ಎಂಬ ಹೆಸರಿನ ಬೇಂಕುಗಳನ್ನು ಸ್ಥಾಪಿಸಿ ೬೦ ವರುಷಗಳ ವಾಯಿದೆಗೆ ಕಡಿಮೆ ದರದ ಬಡ್ಡಿಯಲ್ಲಿ ಹಣವನ್ನು ವಕ್ಕಲುಗಳಿಗೆ ಕೊಟ್ಟು ವಕ್ಕಲುಗಳನ್ನು ಧಣಿಗಳ ಬಾಯಿಂದ ತಪ್ಪಿಸಿ ಅವರು ಸ್ವಂತ ಸಾಗುವಳಿ ಮಾಡುವಂತೆ ಮಾಡಿದರು. ಖರ್ಚಿಗೆ ಬೇಕಾಗುವಷ್ಟೆ ಉತ್ಪತ್ತಿ ಸಿಕ್ಕುವ ವಕ್ಕಲುಗಳಿಗೆ ಇತರ ಟೆಕ್ಸುಗಳನ್ನು ವಿಧಿಸಲಿಲ್ಲ. ಭೂಮಿ ಇಲ್ಲದವರು ಇನ್ಕಮ್ ಟೆಕ್ಸ್ ಮಾತ್ರವೇ ಕೊಡಬೇಕಾಗಿದೆ. ಇದರಿಂದ ಹೊಲಗಳಲ್ಲಿ ಬೆಳೆಯುವ ಬೆಳೆಯು ಅಭಿವೃದ್ಧಿಯಾಯಿತು. ವಕ್ಕಲುಗಳು ಉನ್ನತಸ್ಥಿತಿಗೆ ಬಂದರು.

ಈ ದೇಶದಲ್ಲಿ ಬೇಸಾಯಮಾಡುವವರಿಗೆ ಸಹಾಯಮಾಡುವ, ಹಾಲು ಬೆಣ್ಣೆ ಮಾಡುವವರಿಗೆ ಸಹಾಯಮಾಡುವ, ಹಣ್ಣುಹಂಪಲು ಬೆಳಸುವವರಿಗೆ ಸಹಾಯಮಾಡುವ, ಇನ್ನು ಎಲ್ಲಾ ವಿಧದ ಸಂಘಗಳೂ ಇವೆ. ಇವುಗಳು ಸರಿಯಾಗಿ ಹಣವನ್ನು ವಕ್ಕಲುಗಳಿಗೆ ಒದಗಿಸಿಕೊಟ್ಟು ಕಡಿಮೆ ಬಡ್ಡಿಗೆ ಕೊಡುತ್ತಾರೆ. ಆದುದರಿಂದ ಜರ್ಮನಿಯ ಬೇಸಾಯದಲ್ಲಿ ಅಭಿವೃದ್ಧಿ ಹೊಂದಿ ಜರ್ಮನಿಯ ಹಳೆ ಹಳ್ಳಿಗಳು ಸಂಪೂರ್ಣ ಹೊಸ ಹಳ್ಳಿಗಳಾಗಿ ಬಹಳ ಉನ್ನತಿಯನ್ನು ಹೊಂದಿವೆ.

ಮದರಾಸು ಸಂಸ್ಥಾನದಲ್ಲಿಯೂ ಇದೇ ರೀತಿಯ ಸಂಘಗಳನ್ನು ಏರ್ಪಡಿಸಿ ಮನಃಪೂರ್ವಕವಾಗಿ ಬೇಸಾಯಗಾರರಿಗೆ ಸಹಾಯಮಾಡಿದರೆ ಬೇಸಾಯಗಾರರ ಬಡತನವು ಹೋಗುವುದು.

ಪತ್ರವ್ಯವಹಾರ.

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವದೇ.]

ಪಂಚಾಯತ ಕೋರ್ಟು ವ ಗ್ರಾಮ ಮುನ್ಸಿಫ ಕೋರ್ಟುಗಳಿಂದ ಕೊಡೋಣಾದ ಡಿಕ್ರಿಗಳ ಮಂಜೂರ ನಕಲನ್ನು ಛಾಪಿ ಕಾಗದದ ಮೇಲೆ ಪಕ್ಷಿಗಾರರಿಗೆ ಕೊಡಬೇಕಾಗಿಯೂ ಅಂಥಾ ನಕಲುಗಳಿಗೆ ಛಾಪಿ ಕಾಗದಗಳನ್ನು ಪಕ್ಷಿಗಾರರಿಂದ ಪಡೆಯಬಾರದಾಗಿಯೂ ... ಪಡೆಯುವದಾದರೆ ಮಾತ್ರ ಛಾಪಿ ಕಾಗದಗಳ ಮೇಲೆ ಕೊಡಬೇಕಾಗಿ ವಗೈರೆ ಮದ್ರಾಸು ಗವರ್ನಮೆಂಟಿನವರು (ಲಾ ಜನರಲ್ ಡಿಪಾರ್ಟಮೆಂಟ್ ಮೆಮೋರಿಂಡಮ್ ನಂಬ್ರ ೧೬೪೦ ಬಿ ೩ (ತಾರೀಖು ೧೩-೬-೧೯೨೫) ಹುಕುಂ ಪ್ರಕಾರ ಪಾಸ್ ಮಾಡಿದ ಹುಕುಮನ್ನು ಮಾನ್ಯ ಕಲೆಕ್ಟರ್ ದೊರೆಗಳವರು ಪಿ.ಡ್. ಸಿ. ... ನೇ ತಾ. ೧೯-೬-೧೯೨೫ನೇ ಹುಕುಂ ಪ್ರಕಾರ ಸಮ್ಮಂಧಪಟ್ಟ ಅಧಿಕಾರಿಗಳಿಂದ ಎಲ್ಲಾ ಅಧಿಕಾರಿಗಳಿಗೂ ತಿಳಿಸಿರುತ್ತಾರಷ್ಟೆ. ಆದರೆ ಈ ಹುಕುಂ ಈ ವರೆಗೆ ಅನೇಕ ಕೋರ್ಟುಗಳಲ್ಲಿ ಜಾರಿಗೆ ತರದೆ ಇನ್ನೂ ಛಾಪಿಕಾಗದಗಳ ಮೇಲೆಯೇ ಮುನ್ಸಿಫ ಕೋರ್ಟು ಮುಖಾಂತರ ನಕಲಾಗಿ ಕೊಡುವುದು ತುಂಬಾ ವ್ಯಸನಕರವಾಗಿದೆ. ಇದು ಪಕ್ಷಿಗಾರರಿಗೆ ನಷ್ಟಕ್ಕೆ ... ಕಾರಣವಲ್ಲದೆ ಕೋರ್ಟಿನವರಿಗೆ ಏನೂ ಬಾಧಕವಿಲ್ಲ. ಆದುದರಿಂದ ಮಾನ್ಯ ಕಲೆಕ್ಟರ್ ದೊರೆಗಳವರು ಈ ಹುಕುಮನ್ನು ಕೂಡಲೇ ಜಾರಿಗೆ ತರುವಂತೆ ಎಲ್ಲಾ ಪಂಚಾಯತ ಗ್ರಾಮ ಮುನ್ಸಿಫ ಮತ್ತು ಸಮ್ಮಂಧಪಟ್ಟ ಮುನ್ಸಿಫ ಕೋರ್ಟುಗಳಿಗೂ ಒಂದು ಸರ್ಕ್ಯೂಲರನ್ನು ದಯಪಾಲಿಸುವವರಾಗಿ ಕೋರುವ,

ಓರ್ವ ದಾರಿಗ.

ಸ್ಪುಟವಿಚಾರಗಳು.

ಜಯಕರ್ನಾಟಕವೂ ಕರ್ನಾಟಕದ ಉದ್ಧಾರವೂ.

ಕರ್ನಾಟಕದ ಏಕೀಕರಣಕ್ಕಾಗಿ ಸೊಂಟಕಟ್ಟಿ ತನ್ನ ನಿಸ್ವಾರ್ಥತೆಯನ್ನು ಪ್ರಕಟಿಸಿ ಜನತೆಯ ಸಹಾನುಭೂತಿ ಮತ್ತು ಸಹಕಾರವನ್ನು ಕೋರುತ್ತಿರುವ ಜಯಕರ್ನಾಟಕವು ತನ್ನ ಮನಸ್ಸನ್ನು ಹೆಚ್ಚು ಉದಾರವಾಗಿ ಮಾಡುವುದು ಅವಶ್ಯವಿದೆ. ಕರ್ನಾಟಕ ಏಕೀಕರಣದ ಆ ಒಂದೇ ಉತ್ಸಾಹದಲ್ಲಿ ಜಯಕರ್ನಾಟಕವು ಒಂದೊಂದು ಬಾರಿ ಬರೇ ಕ್ಷುದ್ರ ತರದ ನಟನೆಯನ್ನು ತೋರುತ್ತಿದೆ—ಇದು ಬಹಳ ವಿಷಾದಕರವು. ಇತರ ಪ್ರಾಂತಗಳಲ್ಲಿ ಉತ್ತಮವಾದ ಮಾಸಿಕಗಳು ಬೆಳೆದು ಹೊಳೆಯುತ್ತಿರುವಾಗ, ನಮ್ಮ ಪ್ರಾಂತದಲ್ಲಿ ಒಂದಾದರೂ ಆ ತರದ ಪತ್ರಿಕೆಗಳಲ್ಲವಲ್ಲ! ಇದ್ದ ಪತ್ರಿಕೆಯಾದರೂ ಕರ್ನಾಟಕವನ್ನು ಹರಸಿ ಬಾಳಲಿ ಎಂದು ನಮ್ಮ ಅಂತಃಕರಣಪೂರ್ವಕವಾದ ಬಯಕೆಯಿದೆ, ಪರಂತು ಜಯಕರ್ನಾಟಕವು ಮಾತ್ರ ತನ್ನ ಭಾವನೆಯನ್ನಾಗಲಿ, ತನ್ನ ದೃಷ್ಟಿ ನಿಕ್ಷೇಪವನ್ನಾಗಲಿ, ವಿಶಾಲಮಾಡಿದಂತೆ ತೋರುವುದಿಲ್ಲ.

ಆದರೆ ಕರ್ನಾಟಕ ಏಕೀಕರಣದ ಕಡೆಗಿನ ಹೊಸ ಚಳವಳದಲ್ಲಿ ಕೊಡಗು, ತುಳು, ಕೊಂಕಣಿ, ಭಾಷೆಯ ಜನಗಳನ್ನು ಕನ್ನಡ ಕಡೆಗೆ ವಲ್ಲಿಸುವುದಾಗಿದೆ, "ಮಾತೃ ಭಾಷೆಯನ್ನು ಒಮ್ಮೆಲೆ ಮರಿಯುವುದು ಸಾಧ್ಯವಾಗದು" ಎಂದು ಜಯಕರ್ನಾಟಕದ ಸಂಪಾದಕರು ತಮ್ಮ ಬಿಡಿನುಡಿಗಳೊಳಗಿನ ಒಳನುಡಿಗಳಲ್ಲಿ ಅನ್ನುವುದರಲ್ಲಿ ಹೆಚ್ಚಿನ ಅರ್ಥವಿದೆ. ಕನ್ನಡ, ಕನ್ನಡ, ಕನ್ನಡವೆಂಬ ಜಯಕರ್ನಾಟಕದವರ ಈ ಮಾತುಗಳು ಕನ್ನಡ ಪ್ರಾಂತದೊಳಗಿನ ಕೆಲವು ಜನತೆಯ ಮೇಲೆ ಮಂಕುಬೂದಿಯನ್ನು ತಳೆಯಲಿಕ್ಕೆ ಉಪಯೋಗಿಸುವ ಮಾತೇ? ಇಲ್ಲವೆ ಇದ್ದ ಭೇದಗಳನ್ನು ಇರಿಸಿ, ಅವುಗಳೊಳಗೆ ಐಕ್ಯವನ್ನೂ ಏಕತ್ವವನ್ನೂ ಸ್ಥಾಪಿಸಲಿಕ್ಕಾಗಿ ಹೇಳುವ ಮಾತೇ? ಜಯಕರ್ನಾಟಕವು ಕೊಡಗು, ತುಳು, ಕೊಂಕಣಿ ಎಂಬ ಮೂರು ಹೆಸರುಗಳನ್ನು ಕೊಟ್ಟು ಏನೊ ಸಂಶಯಮಯವಾಗಿ, ಅಸ್ಪಷ್ಟವಾಗಿ ಟೀಕಿಸುವುದೇಕೆ?

ಈ ಒಳನುಡಿಗಳ "ಕಾರಣವನ್ನು ನಾವಾದರೂ ಸ್ಪಷ್ಟಪಡಿಸಬೇಕಾಯಿತು. ಕಳೆದ ದಶಂಬರದ ಆವೃತಿಯಲ್ಲಿ ಕೊಂಕಣಿ ಭಾಷೆಯ "ಸಾರಸ್ವತ"ವು "ಹೇಮಂತ ಸಂಚಿಕೆ" ಎಂಬ ಒಂದು ವಿಶೇಷ ಸಂಚಿಕೆಯನ್ನು ತೆಗೆಯಿತು. "ಸಾರಸ್ವತವು" ಕನ್ನಡ ಪತ್ರಿಕೆಗಳ ವಿನಿಮಯವನ್ನಿಚ್ಛಿಸುವಷ್ಟು ಉತ್ಸುಕವಾಗಿಲ್ಲ. ಆದರೆ ಈ ಹೇಮಂತ ಸಂಚಿಕೆಯನ್ನು ಜಯಕರ್ನಾಟಕ"ಕ್ಕೆ ಆ ಪತ್ರಿಕೆಯು ಇದನ್ನು ಹೇಗೆ ಲಕ್ಷಿಸಬಹುದೆಂದು ನೋಡಲಿಕ್ಕೆಂದು "ಸಾರಸ್ವತ"ವು ಕಳುಹಿಸಿತು. ಕನ್ನಡದ ಉದ್ಧರಣೆಯಲ್ಲಿಯೇ ಚಿರಚಿಂತಿತನಿರುವ ಅನೇಕ ಕಷ್ಟನಷ್ಟಗಳಿಂದ ಹೊರ ಹೊರಡುವ "ಕನ್ನಡಿಗ"ನು ಈ ಪೂರ್ವದಿಂದಲೂ "ಸಾರಸ್ವತ"ದ ಸ್ನೇಹಿತನಿರುವನು. ಕನ್ನಡ ಏಕೀಕರಣವು ಅಂತರ್ಯದ ಕ್ಷುದ್ರತೆಯಿಂದಾಗಲಾರದು ಎಂದು "ಕನ್ನಡಿಗ"ನು ಅರಿತಿರುವನು. ಆದರೆ "ಜಯಕರ್ನಾಟಕ"ವು ತನ್ನ ಸ್ವೀಕಾರದಲ್ಲಿ ಒಂದು ಸಭ್ಯತನದ ಒಪ್ಪಿಗೆಯನ್ನಾದರೂ ಹಾಕಲಾರದೆ ಹೋಯಿತು. ಆದರೆ ತನ್ನ ಮನೋಭಾವಗಳನ್ನು ಬಚ್ಚಿಡಲೂ ಸಾಧ್ಯವಾಗಲಿಲ್ಲ. ಫಲವಾಗಿ ಈ "ಒಳನುಡಿಗಳೇ" ಒಡೆದು ಹೊರಬಂದುವು.

ಜಯಕರ್ನಾಟಕವು "ಬಾಂಧವರ ವಿಚಾರಗಳನ್ನು ತಿಳಿದುಕೊಳ್ಳಲಿಚ್ಛಿಸುವುದು." ಜಯಕರ್ನಾಟಕದ ದೈನ್ಯತೆಯೂ ಮನನೀಯವಿದೆ. ಆದರೆ ದೈನ್ಯತೆಯು ಸೌಹಾರ್ದವನ್ನು ಸೂಚಿಸುವುದಿಲ್ಲ. ಜಯಕರ್ನಾಟಕವು ಒಳನುಡಿಗಳ ಬಿಡಿನುಡಿಗಳಲ್ಲಿ, ಇಂತಹ ಸಮಸ್ಯೆಗಳ ತರ್ಕದ ಸಮಯದಲ್ಲಿ ಇರಬೇಕಾದ ಸೌಹಾರ್ದವನ್ನು ವ್ಯಕ್ತಪಡಿಸುವುದಿಲ್ಲ. ಮತ್ತು ಕರ್ನಾಟಕದ ಏಕೀಕರಣವೆಂದರೆ ಇತರ ನುಡಿಗಳ "ಒಮ್ಮೆಲೆ" ಅಲ್ಲದಿದ್ದರೂ ಕಾಲಾಂತರದಲ್ಲಾದರೂ ಸಾಧ್ಯವಾಗಬೇಕಾದ ಮರವೆ (ಮರೆಯುವಿಕೆ) ಎಂದು ಜಯಕರ್ನಾಟಕವು ಅನ್ನುವಂತೆ ತೋರುತ್ತಿದೆ.

ಈ ತರದ ಧೋರಣವು ಸಾಧ್ಯವೂ ಅಲ್ಲ; ಉಪಕಾರಿಯೂ ಅಲ್ಲ. ಪರರ ಭಾಷಾನಾಶ, ಸಮಾಜ ಜೀವನನಾಶ ಇಂತಹವುಗಳ ಮೇಲೆ ಕರ್ನಾಟಕ ಏಕೀಕರಣದ ತಳಹದಿಯನ್ನು ಕಟ್ಟುವುದಾದರೆ ಅದೆಂದಿಗೂ ಸಾಧ್ಯವಾಗುವ ಮಾತಲ್ಲ. ಕರ್ನಾಟಕ ಭಾಷೆಯ ಪ್ರೇಮ, ಕರ್ನಾಟಕವು ಒಂದಾಗಬೇಕೆಂಬ ಅತುಚ್ಛ ಆಕಾಂಕ್ಷೆ, ಭೇದಗಳ ಸಹಾನುಭೂತಿಪರವಾದ ಸಂಕಲನ, ಸೌಹಾರ್ದ, ಇವುಗಳ ಮೇಲೆ ಕರ್ನಾಟಕವನ್ನು ಏಕೀಕರಿಸಬೇಕು.

ಕೊಡಗು, ತುಳು, ಕೊಂಕಣಿ

ಕರ್ನಾಟಕೀಯರು ತುಚ್ಛವಾಗಿ ಬಗೆಸಿ ತಿರಸ್ಕರಿಸುವ ಈ ಮೂರು ಭಾಷೆಗಳು ಸರಿಯಾಗಿ ವಿಚಾರಿಸಿದರೆ ಅಷ್ಟು ತಿರಸ್ಕಾರಾರ್ಹವಲ್ಲವೆಂದು ತಿಳಿಯಬಹುದು. ಕೊಡಗು ದೇಶವು ಇದ್ದೇ ಇದೆ—ಕರ್ನಾಟಕದಂತೆ ಅದನ್ನು ಪುನರ್ಗ್ರಂಥಿಸಬೇಕಿಲ್ಲ. ತುಳುನಾಡು ಇತಿಹಾಸ ಪ್ರಸಿದ್ಧವಾದುದು. ಅದಕ್ಕೆ ಪ್ರತ್ಯೇಕ ಲಿಪಿಯಿದೆ. ಕೊಂಕಣಿಯೆಂದರೆ ಅನೇಕ ವಿಲಿಯ ಜನತೆಯು, ವಿದ್ಯೆ, ಬುದ್ಧಿ, ಕಲಾ, ಕೌಶಲ ಇತ್ಯಾದಿ ಎಲ್ಲಾ ರೀತಿಯಲ್ಲಿ ಪ್ರಸಿದ್ಧವಾದ ಜನತೆಯು ಆಡುವಂತಹುದು. ರತ್ನಗಿರಿಯಿಂದ ಕೊಚ್ಚಿ ವರೆಗೆ ಕೊಂಕಣಿಯು ಚಿರವ್ಯಾಪ್ತವಿದೆ. ದಕ್ಷಿಣದಲ್ಲಿ ಮಲೆಯಾಳಿಯು ಅದನ್ನು ಕೊಲ್ಲಲಿಲ್ಲ; ಮಧ್ಯದಲ್ಲಿ ತುಳುವೂ, ಕನ್ನಡವೂ ಅದನ್ನೇನೂ ಮಾಡಲಾರದೆ ಹೋಯಿತು; ಉತ್ತರದಲ್ಲಿ ಕನ್ನಡಕ್ಕೆ ಕೂಡ ಮರಾಠಿ ಪ್ರಬಲವಾದ ಆಘಾತಗಳನ್ನು ಕೊಡುತ್ತಿರುವಾಗ ಕೊಂಕಣಿಯು ಶತಮಾನಗಳಿಂದ ಇರುತ್ತಾ ಇದೆ. ಈ ದಿನ ಕೊಡಗರು, ತುಳು ಜನರು, ಕೊಂಕಣಿ ಆಡುವವರು ಕನ್ನಡಕ್ಕೆ ಪ್ರಾಧಾನ್ಯ ಕೊಟ್ಟಿರುವಂತಾದರೆ, ಅದು ತಮ್ಮ ಭಾಷೆಗೆ ತಿಲಾಂಜಲಿಯನ್ನೀಯಲಿಕ್ಕೆಂದು ಕರ್ನಾಟಕವು ತಿಳಿಯಬಾರದು. ಹೇಗೆ, ಜಯಕರ್ನಾಟಕವು ಅನ್ನುವಂತೆ, ರಾಷ್ಟ್ರೀಯ ಭಾಷೆಯಾಗಿ ಕರ್ನಾಟಕವು ಹಿಂದಿಯನ್ನು ಸ್ವೀಕರಿಸುವುದೊ, ಹಾಗೆಯೇ, ಕರ್ನಾಟಕ ಪ್ರಾಂತರಚನೆಗಾಗಿ, ಬೆಳೆದು ಬರುತ್ತಿರುವ ಕರ್ನಾಟಕದ ಸುಖದೇಳ್ಗೆಗಾಗಿ, ಸಮಷ್ಟಿಯ ಸಮರಚನೆಗಾಗಿ, ಕೊಡಗರು, ತೌಳವರು ಮತ್ತು ಕೊಂಕಣಿ ಆಡುವವರು ಕರ್ನಾಟಕವನ್ನೊಪ್ಪಿ, ಅದಕ್ಕಾಗಿ ಮೈ ಸವೆದು ಕೆಲಸಮಾಡಲು ಸಿದ್ಧರಿರುವರು. ಆದರೆ ಆ ಕಾರಣದಿಂದ ಅವರು ತಮ್ಮ ವೈಯಕ್ತಿತ್ವವನ್ನು ಕರ್ನಾಟಕ ದೇವಿಗೆ ಬಲಿಯೀಯಲು ಮಾತ್ರ ಸಿದ್ಧರಿರರು.

ಕೊಂಕಣಿಯ ಪ್ರತ್ಯೇಕತ್ವದ ಅವಶ್ಯಕತೆ

ಕರ್ನಾಟಕವು ಯಾವುದೊಂದು ಜನತೆಗೆ ಅನ್ಯಾಯ ಮಾಡಿರುವುದಾದರೆ ಅದು ಕೊಂಕಣಿ ಭಾಷೆಗೆ ಮತ್ತು ಆ ಭಾಷಾಪುತ್ರರಿಗೆ. ಕರ್ನಾಟಕವು ಈ ಭಾಷೆಯನ್ನು ಮತ್ತು ಈ ಜನತೆಯನ್ನು ತನ್ನ ಆಶ್ರಯದ ನೆರಳಲ್ಲಿರಿಸಲು ಎಂದೂ ಒಪ್ಪಿಲ್ಲ. ಕೊಂಕಣಿ ಭಾಷೆಯು ಮತ್ತು ಅದನ್ನಾಡುವ ಜನ ಕರ್ನಾಟಕೀಯರಿಂದ ಪ್ರತ್ಯೇಕಿಸಲ್ಪಟ್ಟಿದೆ. ಫಲತಃ ಈ ಭಾಷೆಯೂ, ಈ ಜನತೆಯೂ ಕರ್ನಾಟಕ ವಾತಾವರಣದಲ್ಲಿ ಸ್ವಂತ ಶಕ್ತಿಯಿಂದಲೇ ಬೆಳೆಯಬೇಕಾಯಿತು. ಅದು ತನ್ನ ಅಸ್ತಿತ್ವವನ್ನು ಕಟ್ಟಿಕೊಳ್ಳುವುದು ಸಂದರ್ಭದ ಅವಶ್ಯಕತೆಯಾಯಿತು. ಫಲತಃ ಈ ದಿನ ಈ ಜನತೆಯು ತಮ್ಮನ್ನು ತಾವೇ ವ್ಯವಸ್ಥೆಗೊಳಿಸಿ, ಕರ್ನಾಟಕದ ಸಮಷ್ಟಿಯಲ್ಲಿ ಉತ್ಸಾಹಿತವಾಗಿರುವ ಸಮಯದಲ್ಲಿ ಸ್ವಂತ ಸಮಾಜವನ್ನೂ ಸುಸಂಘಟಿಸಿ, ಸ್ವಂತ ಭಾಷೆಯನ್ನೂ ಸುಲಭ ಪ್ರಚಾರಕ್ಕೆ ತರುವುದು ಆ ಸಮಾಜದ ಹಿತದೃಷ್ಟಿಯಲ್ಲಿ ಅತೀ ಅವಶ್ಯವಿದೆ.

ಕರ್ನಾಟಕ ಪ್ರಾಂತರಚನೆ.

ನಾವು ಈ ಮೊದಲು ಕೊಟ್ಟ ಅಭಿಪ್ರಾಯಗಳಿಂದ ಕರ್ನಾಟಕ ಪ್ರಾಂತರಚನೆಯಲ್ಲಿ ಸ್ವದೇಶಾಭಿಮಾನಿಯು ಎರಡಭಿಪ್ರಾಯಗಳುಳ್ಳದೆಂದು ಯಾರೂ ತಪ್ಪು ಅಭಿಪ್ರಾಯವನ್ನು ಮಾಡಿಕೊಳ್ಳಕೂಡದು. ಕರ್ನಾಟಕವು ಸುವ್ಯಸ್ಥಿತವಾಗಬೇಕೆಂದೂ, ಕರ್ನಾಟಕ ಏಕೀಕರಣವು ತೀವ್ರ ಸಾಧ್ಯವಾಗಬೇಕೆಂದೂ ಸ್ವದೇಶಾಭಿಮಾನಿಯು ಚಿಂತಿತವಾಗಿಯೇ ಇದೆ. ಪರಂತು ಕರ್ನಾಟಕದ ಅಂತಃಕರಣದ ಆಶೆಯಂತೆ ಮರೆಯಲ್ಪಡಬೇಕೆಂಬುದನ್ನು ಮಾತ್ರ ನಾವು ಒಪ್ಪಲಾರೆವು. ಏಕೆಂದರೆ ಅವು ಅಳಿಸಲ್ಪಡಲು ಸಾಧ್ಯವಿಲ್ಲ. ಮತ್ತು ಅವುಗಳನ್ನು ಅಳಿಸುವ ಪ್ರಯತ್ನಗಳು ನಡೆದರೆ ಸಂಬಂಧಪಟ್ಟ ಸಮಾಜಕ್ಕೆ ಹಾನಿಯಿದೆ. ಕಾರ್ಕಳ ಜಿಲ್ಲಾ ಪರಿಷತ್ತಿಗೆ ಅಧ್ಯಕ್ಷರಾಗಿ ಬಂದ ಕಾಕಾ ಕಲೇಲ್ಕಾರರು ಕೂಡ ಈ ಒಳನುಡಿಗಳ ವಿಷಯ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದರು. ಮತ್ತು ಅವು ಸಾಯತಕ್ಕವುಗಳಲ್ಲವೆಂದು ಅವರು ಹೇಳುತ್ತಿದ್ದರು. ಒಂದು ಪ್ರಾಂತದಲ್ಲಿ ಭಾಷಾಭೇದಗಳಿದ್ದುದರಿಂದ ಆ ಪ್ರಾಂತಕ್ಕೆ ಬಾಧಕವಿದೆ, ಅದರ ಏಳ್ಗೆಗೆ ತಡೆಯಿದೆಯೆಂದು ಭಾವಿಸುವುದು ತಪ್ಪು. ಬೇಕಾದುದು ಜನತೆಯ ಪ್ರೇಮ. ಕರ್ನಾಟಕದ ಕಡೆಗೆ ಈ ಎಲ್ಲಾ ಭಾಷಾಪುತ್ರರಿಗೆ ಪ್ರೇಮವಿದ್ದೇ ಇದೆ. ಅನ್ನುವಾಗ ಈ ಭಾಷೆಗಿಂತಲೂ ಕರ್ನಾಟಕದವರ ಅಂತರ್ಭೇದಗಳೇ ಕರ್ನಾಟಕದ ಐಕ್ಯಕ್ಕೆ ಮುಖ್ಯ ತಡೆಯೆನ್ನಬೇಕು. ದಕ್ಷಿಣಕನ್ನಡವು ವಿದ್ಯೆಯಲ್ಲಿಯೂ, ಭಾವನೆಯಲ್ಲಿಯೂ, ಚತುರತೆಯಲ್ಲಿಯೂ ಮಿಕ್ಕ ಕರ್ನಾಟಕದ ಭಾಗಗಳಿಂದ ಎಷ್ಟೇ ಶ್ರೇಷ್ಠವಿದ್ದರೂ, ಕರ್ನಾಟಕದೊಳಗೆಲ್ಲಾ ದಕ್ಷಿಣಕನ್ನಡ ಜಿಲ್ಲೆಯೇ ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯಗಳಲ್ಲಿ ಬಹಳ ಮುಂದಾಗಿದ್ದರೂ, ಕರ್ನಾಟಕದಲ್ಲಿ ಅದಕ್ಕೆ ತಕ್ಕುದಾದ ಸ್ಥಳವನ್ನು ಕೊಡಲು ಇತರ ಕರ್ನಾಟಕೀಯರು ಬಹಳ ಹಿಂದಾಗಿರುವರು. ಈ ರೀತಿಯ ವರ್ತನೆಯೇ ಕರ್ನಾಟಕ ಏಕೀಕರಣಕ್ಕೆ ಹೆಚ್ಚು ತಡೆಗೊಡುತ್ತಿವೆಯಲ್ಲದೆ ಈ ಒಳನುಡಿಗಳಲ್ಲ. ಕರ್ನಾಟಕ ಪ್ರಾಂತರಚನೆಯನ್ನು ಅತ್ಯುದಾರ ಭಾವನೆಯಿಂದ ಮುಂದೆ ಸಾಗಿಸಬೇಕೆಂಬುದೇ ನಮ್ಮ ಆಶಯ. ಈ ವಿಷಯದಲ್ಲಿ "ಕನ್ನಡಿಗ"ನ ಸಾಧನವು ನಮಗೆ ಅನ್ಯಾಯವೆಂದು ಅನ್ನಿಸಿತು. ಕರ್ನಾಟಕ ಪ್ರಾಂತರಚನೆಯು ಸ್ವಾರ್ಥದಿಂದ ಆಗತಕ್ಕದ್ದಲ್ಲ; ಸೌಹಾರ್ದದಿಂದ ಬೆಳೆಯ ತಕ್ಕದ್ದು.

ಲೀಗ್ ಒಫ್ ನೇಶನ್ಸ ಪರಿಹಾಸ!

ಈ ಲೀಗ್ ಒಫ್ ನೇಶನ್ಸಿನ ಪರಿಹಾಸವು ಎಂದಿನಂತೆಯೇ ಚೆನ್ನಾಗಿ ನಡೆಯುತ್ತಿದೆ. ಲೋಕದ ವಿಚಾರಿಗಳ ಮುಂದೆ ಇದು ಬಹಳ ಹಾಸ್ಯಾತ್ಮಕವಾದ ವಿಷಯವಾಗಿ ಪರಿಣಮಿಸಿಯದೆ. ಲೀಗ್ ಒಫ್ ನೇಶನ್ಸಿನಂಥ ಜಗಚ್ಛಾಂತಿ ಸಂಸ್ಥಾಪಕ ಸಂಸ್ಥೆಯು ಬರೇ ಆಡಂಬರದ ಹೆಸರಿನಲ್ಲಿಯೇ ತೃಪ್ತವಿರಬೇಕಲ್ಲದೆ, ಮತ್ತೆ ಯಾವ ಜನಾಂಗಗಳೂ ಅದರಡಿಯಲ್ಲಿ ಸರಿಯಾಗಿ ವಿಧೇಯತೆಯನ್ನೊಪ್ಪಿಕೊಳ್ಳುವಂತೆ ತೋರುವುದಿಲ್ಲ. ಅದರ ಕಲ್ಪನಾಕರ್ತರಾದ ವಿಲ್ಸನರು ಅದನ್ನು ಸ್ಥಾಪಿಸಲಾರದೆ ಅದರ ಉಚ್ಚ ಭಾವನೆಗಳನ್ನು ಕೊಂಡಾಡಿ ಹಿಗ್ಗಿದ ಅಮೇರಿಕವು ಅದನ್ನು ಸೇರಲಾರದಾಯಿತು. ಅದನ್ನು ಸ್ಥಾಪಿಸಿದ ಇಂಗ್ಲೆಂಡ್ ಮತ್ತು ಫ್ರಾನ್ಸು ಇದರ ತತ್ವಗಳನ್ನೊಪ್ಪಲಾರದಾದರು. ಅದನ್ನು ಸೇರಿದ ಹಿರಿ ಜನಾಂಗಗಳು ಅದನ್ನು ಮೂಲೆಗೊತ್ತುವುದರಲ್ಲಿಯೇ ತಮ್ಮ ಗೌರವವನ್ನು ಕಾಣುವರು. ಪಾಪ! ಕಿರಿಕಿರಿ ಜನಾಂಗಳು ಈ ಹಿರಿ ಜನಾಂಗಗಳ ಬರ್ಬರ ವರ್ತನದಲ್ಲಿ ಮಾತ್ರ ಅವರ ಹೇಳಿಕೆಗೆ ಕೈಗುಟ್ಟುತ ಕುಳ್ಳಿರಬೇಕಾಗಿದೆ.

ರಕ್ಷಣೆಗಾಗಿ ಲೀಗ್ ಒಫ್ ನೇಶನ್ಸ್ ಸಭೆಯು ಫ್ರಾನ್ಸಿಗೆ ಕೊಟ್ಟ ಸಿರಿಯಾವನ್ನು ದಂಡು ಕಾನೂನುಗಳಿಂದ ಫ್ರಾನ್ಸು ಭಕ್ಷಿಸುತ್ತಿದೆ. ಅಲ್ಲಿ ಇನ್ನೂ ಶಾಂತಿಯು ಸ್ಥಾಪಿಸಲ್ಪಟ್ಟಿಲ್ಲ. ದಮಸ್ಕಸ್ ಪಟ್ಟಣದಲ್ಲಿ ದಂಡುಕಾನೂನಿನ ಗವರ್ನರನು ನೇಮಿಸಲ್ಪಟ್ಟಿರುವನು. ಇತ್ತ ಇಂಗ್ಲೀಷರಿಗಂತೂ ಲೀಗಿನ ಲಕ್ಷ್ಯವೇ ಇಲ್ಲ. ಐಗುಪ್ತ್ಯ ಮುಂತಾದ ದೇಶಗಳಲ್ಲಿ ಅದರ ಸ್ವೇಚ್ಛೆಯಂತೆ ವಿಷಯಗಳು ನಡೆಯುತ್ತಿವೆ. ನ್ಯಾಯಾನ್ಯಾಯವನ್ನು ಪರಿಶೀಲಿಸುವವರೇ ಇಲ್ಲ.

ಇಟಲಿಯಂತೂ, ಸಿಗ್ನರ್ ಮುಸ್ಸೊಲಿನಿಯ ನಿರಂಕುಶ ಪ್ರಭುತ್ವದಲ್ಲಿ ಲೀಗ್ ಒಫ್ ನೇಶನ್ಸನ್ನು ಲಕ್ಷ್ಯಕ್ಕೆ ತರುವುದೇ ಇಲ್ಲ. ಸಿಗ್ನರ್ ಮುಸ್ಸೊಲೀನಿಯು ತನ್ನ ಸ್ವೇಚ್ಛಾಧಿಕಾರದಿಂದ ಇಡೀ ಇಟಲಿಯಲ್ಲಿ ರಾಜ್ಯಭಾರವನ್ನು ಮಾಡುವನು. ಇಟಲಿಯ ಈ ನಿರಂಕುಶ ಪ್ರಭುತ್ವವನ್ನು ಬೆದರಿಕೆ ತೋರಿಸುವುದೇ ಅವನ ಇತಿ ಕರ್ತವ್ಯವಾಗಿ ಪರಿಣಮಿಸಿಯದೆ. ಅಲ್ಲದೆ ಯುದ್ಧದಿಂದ ಸಿಕ್ಕಿದ ಕೆಲವು ಅಸ್ಟ್ರಿಯನ್ ಪ್ರದೇಶಗಳನ್ನು ಇನ್ನೂ ವಿಸ್ತರಿಸುವುದರಲ್ಲಿ ಸಿಗ್ನರ್ ಮುಸ್ಸೊಲೀನಿಯು ಉತ್ಸಾಹಿತನಿರುವನು. ಈ ಉದ್ದೇಶದಿಂದ ಅವನು ಜರ್ಮನಿಯ ಮೇಲೆ ಕ್ಷುದ್ರ ಕಾರಣಗಳನ್ನು ಹುಡುಕಿ ರೇಗಿದಿದ್ದಿರುವನು. ಜರ್ಮನಿಗೂ ಇಟಲಿಗೂ ಯಾವುದೊಂದು ಭೇದವು ತಲೆದೋರಿದರೆ, ಸರಿಮಾಡುವ ಕರ್ತವ್ಯವು ಲೀಗ್ ಒಫ್ ನೇಶನ್ಸಿನವರದಾಗಿ, ಈ ಎರಡು ಜನಾಂಗಗಳು ತಮ್ಮ ಭೇದವನ್ನು ಈ ಲೀಗ್ ಒಫ್ ನೇಶನ್ನಿಗೆ ಹೇಳಬೇಕು. ಹಾಗೆ ಸಿಗ್ನರ್ ಮುಸ್ಸೊಲಿನಿಯ ನ್ಯಾಯವಾದ ಕರ್ತವ್ಯ — ತನಗೂ ಜರ್ಮನಿಗೂ ಭೇದವಿದ್ದರೆ—ಆ ಭೇದವನ್ನು ಲೀಗ್ ಒಫ್ ನೇಶನ್ಸನೊಡನೆ ನಿವೇದಿಸುವುದು. ಆದರೆ ಅಂತಹುದಾವುದನ್ನು ಮಾಡಲು ಮುಸ್ಸೊಲೀನಿಯು ಬಯ್ಸುವುದಿಲ್ಲ — ಈ ವಿಷಯದಲ್ಲಿ ತಾನೇ ತೀರ್ಮಾನಕರ್ತನೆಂದು ಅವನು ಹೇಳುವನು. ವಿಲಾಯತಿ ರಾಜ್ಯಗಳ ಈ ಧೋರಣದಿಂದ ಯುರೋಪ ಖಂಡವು ಎಲ್ಲಿ ಸಾಗುವುದೋ!

ಡಿಸ್ಟ್ರಿಕ್ಟ ಬೋರ್ಡಿನ ಅಧ್ಯಕ್ಷರ ಚುನಾವಣೆ.

ಈ ವರೆಗೆ ಡಿಸ್ಟ್ರಿಕ್ಟ ಬೋರ್ಡಿನ ಅಧ್ಯಕ್ಷರಿರುವ ಶ್ರೀಯುತ ರಾವ್, ಎನ್. ಸುಬ್ಬರಾಯರು ಸದ್ಯದಲ್ಲಿಯೇ ತಮ್ಮ ಅಧ್ಯಕ್ಷ ಪದವಿಯಿಂದ ನಿವೃತ್ತರಾಗಲಿರುವರು. ಪುನಃ ಇವರು ಚುನಾವಣೆಗೆ ನಿಲ್ಲುವ ಸಂಭವವೂ ಇಲ್ಲವೆಂದು ನಾವು ಕೇಳುತ್ತೇವೆ. ಇಷ್ಟು ವರ್ಷಗಳ ತನಕ ಡಿಸ್ಟ್ರಿಕ್ಟ ಬೋರ್ಡಿನ ಅಧ್ಯಕ್ಷರಾಗಿದ್ದು ಅವಿಶ್ರಾಂತವಾಗಿ ಕೆಲಸ ನಡಿಸಿದ ಶ್ರೀ. ಎನ್. ಸುಬ್ಬರಾಯರು ಈಗ ವಿಶ್ರಾಂತಿಗಾಗಿ ಈ ಪದವಿಯಿಂದ ನಿವೃತ್ತಿಯನ್ನು ಹೊಂದಲು ಇಚ್ಛಿಸುವುದು ಸಹಜವೇ. ಆದರೆ ಇನ್ನು ಮುಂದಿನ ಚುನಾವಣೆಯಲ್ಲಿ ಸ್ಪರ್ಧೆಯು ಬಹಳವಿದೆ. ಈಗ ನಮ್ಮ ಲಕ್ಷ್ಯಕ್ಕಿದ್ದವರ ಪೈಕಿ ಶ್ರೀಯುತ ಕಾರ್ಕಳ ಸದಾಶಿವ ಭಟ್ಟರು, ಶ್ರೀಯುತ ಮಹಾಬಲ ಹೆಗ್ಡೆಯವರು, ಶ್ರೀಯುತ ಎಮ್. ರಾಮಕೃಷ್ಣ ಪೂಂಜರ ಹೆಸರುಗಳು ಮುಂದೆ ಬಂದಿವೆ. ಶ್ರೀಯುತ ಎಮ್. ವಿಠ್ಠಲ ಕಾಮತರ ಹೆಸರೂ ಅಲ್ಲಲ್ಲಿ ಕೇಳಿ ಬರುತ್ತಲಿದೆ. ಶ್ರೀಯುತ ಸದಾಶಿವ ಭಟ್ಟರು, ಕಾರ್ಕಳ ತಾಲೂಕು ಬೋರ್ಡಿನ ಅಧ್ಯಕ್ಷರು; ಪೂಂಜರು ಮಂಗಳೂರು ತಾಲೂಕು ಬೋರ್ಡಿನ ಅಧ್ಯಕ್ಷರು; ಶ್ರೀ. ವಿಠ್ಠಲ ಕಾಮತರು ಉಡುಪಿ ತಾಲೂಕು ಬೋರ್ಡಿನ ಅಧ್ಯಕ್ಷರು; ಶ್ರೀ. ಮಹಾಬಲ ಹೆಗ್ಡೆಯವರು ಪಬ್ಲಿಕ್ ಪ್ರೊಸಿಕ್ಯೂಟರರು. ಹೀಗಿರುವಾಗ ಇವರ ಪರಿಚಯ ಬೇರೆ ನಮ್ಮ ಜಿಲ್ಲೆಯವರಿಗೆ ಪ್ರತ್ಯೇಕವಾಗಿ ಮಾಡಿಕೊಡಬೇಕಾಗಿಲ್ಲ. ನಮಗಿಂತಲೂ ವಾಚಕ ಮಹಾಶಯರಿಗೇನೇ ಇವರ ವಿಷಯ ಹೆಚ್ಚು ತಿಳಿದಿರಲು ಕಾರಣ ಉಂಟು. ಯೋಗ್ಯಾಯೋಗ್ಯತೆಗಳನ್ನಾಗಲಿ, ವಿಶೇಷ ವಿಚಾರಗಳನ್ನಾಗಲಿ ಚರ್ಚಿಸಿ ಯಾವ ಫಲವೂ ಇಲ್ಲ. ಇಂತಹ ವಿಷಯಗಳಲ್ಲಿ, ನಮ್ಮ ಜಿಲ್ಲೆಯ ಮಟ್ಟಿಗೆ ಜಾತೀಯ ಭಾವನೆಯೇ ಮುಖ್ಯವಾದುದಾಗಿರುವಾಗ ಈ ವಿಚಾರಗಳೆಲ್ಲ ವ್ಯರ್ಥವೇ

ಅನುಕ್ರಮಣಿಕೆ.

	ಪುಟ
ಅಗ್ರಲೇಖ	
ನಮ್ಮ ದೇಶದ ಆರ್ಥಿಕ ಜೀವನ	೩
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೭
ದಕ್ಷಿಣ ಕನ್ನಡ— ಮಂಜೇಶ್ವರ, ಪುತ್ತೂರು, ಸುಳ್ಯ, ಬಂಟ್ವಾಳ, ಬೆಳ್ತಂಗಡಿ ಸುಳ್ಕೇರಿ, ಪಾಣೆಮಂಗಳೂರು, ಕಾರಿಂಜೆ, ಕಾಸರ, ಗೋಳ್ತು, ಬೆಳ್ಳಿ, ಕುಂದಾಪುರ, ಎಳ್ಳಾಡು . . .	೭-೮
ಮಂಗಳೂರು	೮
"ನಾನು ಮುನ್ಸಿಪಲ್ ಸದಸ್ಯನಾಗಿದ್ದರೆ" — . . .	"
ಪತ್ರವ್ಯವಹಾರ ೧, ...	೯
ವಿವಿಧ ವಿಷಯಗಳು	"

ಸ್ವದೇಶಾಭಿಮಾನಿ.

ಶಕ ೧೮೪೨ ಫಾಲ್ಗುಣ ಶು| ೭ಯು ಶುಕ್ರವಾರ

ನಮ್ಮ ದೇಶದ ಆರ್ಥಿಕ ಜೀವನ.

ಹಿಂದೂಸ್ಥಾನದಲ್ಲಿ ಕೈಗಾರಿಕೆಯೂ ವ್ಯಾಪಾರವೂ ಇನ್ನೂ ಅಭಿವೃದ್ಧಿ ಸ್ಥಿತಿಗೆ ತರಬೇಕೆಂದು ಹೇಳುವಾಗ ಹಿಂದೂಸ್ಥಾನದ ನಿಜವಾದ ಆರ್ಥಿಕ ಮತ್ತು ನೈಸರ್ಗಿಕ ಪರಿಸ್ಥಿತಿ ಹೇಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ದೇಶದಲ್ಲಿ ವ್ಯಾಪಾರವು ಹೆಚ್ಚಬೇಕು; ವ್ಯಾಪಾರದ ಬಗ್ಗೆ ಸೌಕರ್ಯಗಳು ಹೆಚ್ಚಬೇಕು, ವ್ಯಾಪಾರದಲ್ಲಿ ಹೆಚ್ಚು ಜನರು ಆಸಕ್ತರಿರಬೇಕು; ಎಂಬಿತ್ಯಾದಿಯಾಗಿ ಹಲವರು ಹೇಳುವಾಗ ಹಿಂದೂಸ್ಥಾನದ ಪ್ರಕೃತ ಪರಿಸ್ಥಿತಿಯು ಏನೆಂದು ಯಾರೂ ಯೋಚಿಸುವುದಿಲ್ಲ.

ಹಿಂದೂಸ್ಥಾನದಲ್ಲಿ ಕೈಗಾರಿಕೆಗಳಾಗಿಯಾಗಲಿ, ವ್ಯಾಪಾರಕ್ಕಾಗಲಿ, ಬೇಕಷ್ಟು ನೈಸರ್ಗಿಕ ಅನುಕೂಲ್ಯಗಳಿವೆ. ಆದರೆ ಹಿಂದೂಸ್ಥಾನದ ಪ್ರಕೃತದ ಸ್ಥಿತಿಯನ್ನು ರಾಷ್ಟ್ರೀಯ ಅರ್ಥಶಾಸ್ತ್ರದ ದೃಷ್ಟ್ಯಾ ನೋಡಿದರೆ ಕೈಗಾರಿಕೆಗಾಗಿಯಾಗಲಿ, ವ್ಯಾಪಾರಕ್ಕಾಗಲಿ ಹಿಂದೂಸ್ಥಾನದ ಈಗಿನ ಅವಸ್ಥೆಯು ಬಹಳ ಸಂಕುಚಿತವಿದೆಯೆಂದು ತೋರದಿರದು.

ವಾಣಿಜ್ಯವೆಂದರೇನು? ವಾಣಿಜ್ಯಕ್ಕೆ ಪೂರ್ವ ಹಿಂದೂಸ್ಥಾನದಲ್ಲಿ ಸನಾತನ ಆರ್ಯ ರಾಜ್ಯದಲ್ಲಿ ಕೂಡ ಅಷ್ಟು ಗೌರವವೂ ಪ್ರಾಮುಖ್ಯತೆಯೂ ಏಕಿದ್ದಿತು? ವಾಣಿಜ್ಯದ ಉದ್ದೇಶವೇನು? ಎಂಬೀ ವಿಷಯಗಳನ್ನು ಆಲೋಚಿಸಿದರೆ ಹಿಂದೂಸ್ಥಾನದ ವಾಣಿಜ್ಯದ ದುಃಸ್ಥಿತಿಯು ಸುವ್ಯಕ್ತವಾಗುವುದು.

ಸಾಮಾನ್ಯತಃ ಹಿಂದೂಸ್ಥಾನದ ವಾಣಿಜ್ಯವನ್ನು ಎರಡು ತೆರನಾಗಿ ವಿಭಾಗಿಸಬಹುದು. ಒಂದು ಭೂಮ್ಯುತ್ಪತ್ತಿಗಳ ವ್ಯಾಪಾರ. ಇನ್ನೊಂದು ಉಳಿದ ವಿಷಯಗಳ ವ್ಯಾಪಾರ. ಭೂಮ್ಯುತ್ಪತ್ತಿಗಳ ವ್ಯಾಪಾರದಲ್ಲಿ ಬಹ್ವಂಶವು ದೇಶದೊಳಗಿನದೇ ವ್ಯಾಪಾರವಾಗಿದ್ದು, ರಾಷ್ಟ್ರೀಯ ದೃಷ್ಟ್ಯಾ ಬರೇ ಸ್ವಲ್ಪವೇ ಸಂಪತ್ತನ್ನು ದೇಶಕ್ಕೆ ತಕ್ಕುದಾಗಿದೆ.

ಆದರೆ ಇತರ ತರದ ವಾಣಿಜ್ಯವು ದೇಶಕ್ಕೆ ಯಾವ ತರದ ಸಾಂಪತ್ತಿಕ ಉಪಕಾರವನ್ನೂ ಮಾಡುವಂತಹುದುದಾಗಿಲ್ಲ. ನಮ್ಮ ವ್ಯಾಪಾರಿಗಳೆಂದರೆ ಪರದೇಶದ ಸಾಮಾನುಗಳಿಗೆ ಗಿರಾಕಿಗಳನ್ನು ತಯಾರಿಸಿಕೊಡುವ ಪರದೇಶೀಯರ ಕಮಿಶನ್ನು ಏಜಂಟರು ಮಾತ್ರ. ಪ್ರತಿ ಒಂದು ದಿನ ನಿತ್ಯದ ವಹಿವಾಟಿನ, ದಿನ ನಿತ್ಯದ ಉಪಯೋಗದ ಸಾಮಾನೂ ನಮಗೆ ಪರದೇಶದಿಂದ ಬರಬೇಕು. ಅದನ್ನು ಸರಿಯಾಗಿ ತರಿಸಿ, ಲಾಭಕರವಾಗಿ ವಿಕ್ರಯಿಸುವುದೇ ನಮ್ಮ ವಣಿಕರ ವ್ಯಾಪಾರವಾಗಿದೆ. ಫಲತಃ ಈ ವ್ಯಾಪಾರದಿಂದ ದೇಶದ ಹಣವು ಸುಲಿಗೆಹೋಗಿ ದಿನ ದಿನವೂ ದೇಶವು ಬಡವಾಗುತ್ತಿದೆಯಲ್ಲದೆ ಬೇರಾವ ಲಾಭವೂ ದೇಶಕ್ಕೆ ಉಂಟುಮಾಡಿಕೊಡುವುದಿಲ್ಲ. ಅರ್ಥ ಶಾಸ್ತ್ರದ ದೃಷ್ಟಿಯಲ್ಲಿ ಈ ವ್ಯಾಪಾರವು ದೇಶಕ್ಕೆ ಕ್ಷೋಭೆಯನ್ನೂ ಬಡತನವನ್ನೂ ಉಂಟುಮಾಡುವುದಾಗಿದೆ.

ಪಾಶ್ಚಾತ್ಯರ ಕ್ರಮಗಳನ್ನನುಸರಿಸಿ ನಾವು ವ್ಯಾಪಾರ ವ್ಯಾಪಾರವೆಂದು ಬೊಬ್ಬಿಡುತ್ತ ಹಣದ ಚಲಾವಣೆ ಬಗ್ಗೆ ಬೇಂಕು ಇತ್ಯಾದಿಗಳನ್ನು ಇಚ್ಛಿಸಿ ಅವುಗಳ ಸ್ಥಾಪನೆಯ ಬಗ್ಗೆ ಬಹಳವಾಗಿ ಯತ್ನಿಸುವೆವಾದರೂ, ಕಾರ್ಯತಃ ಈ ಬೇಂಕುಗಳಿಂದ ಸ್ವದೇಶೀಯರ ಆರ್ಥಿಕ ಸುಧಾರಣೆಯು ಆಗುವುದಿಲ್ಲ. ಮತ್ತು ಆಗಲಾರದೆಂಬ ಸಂಗತಿಯನ್ನು ತಿಳಿದವರು ಹೇಳುವರು. ನಮ್ಮ ಜಿಲ್ಲೆಯಲ್ಲಿ ಈಗ ಕೆಲವು ವರ್ಷಗಳೊಳಗೆ ಅನೇಕ ಬೇಂಕುಗಳು ಸ್ಥಾಪಿಸಲ್ಪಟ್ಟಿರುವುವಾದರೂ, ಅವುಗಳ ಸಹಾಯದಿಂದ ಜಿಲ್ಲೆಯ ಆರ್ಥಿಕ ಉನ್ನತಿಯು ಸಾಧಿಸಲ್ಪಟ್ಟ ಯಾವ ಚಿಹ್ನೆಯೂ ತೋರುವುದಿಲ್ಲ. ಬದಲಿಗೆ ದುಡ್ಡಿನ ತಗಾದೆಯೂ, ಜನರೊಳಗಿನ ಆರ್ಥಿಕ ಕ್ಷಯವೂ ವೃದ್ಧಿಯಾದಂತೆ ಬೇಕಷ್ಟು ಸೂಚನೆಗಳು ದೊರೆಯುತ್ತಿವೆ.

ಕೈಗಾರಿಕೆಯ ಪರಿಸ್ಥಿತಿಯಾದರೂ ನಮ್ಮ ದೇಶದಲ್ಲಿ ಇತರ ದೇಶಗಳ ಪರಿಸ್ಥಿತಿಯಂತೆ ಇರುವುದಿಲ್ಲ. ಕೈಗಾರಿಕೆಗಳು ಸಾಮಾನ್ಯವಾಗಿ ನಮ್ಮ ದೇಶದ ಅನುಕೂಲ್ಯಗಳನ್ನು ಕಲ್ಪಿಸುತ್ತಿವೆ ನಿಜ. ಇವುಗಳಿಂದ ಸಾಮಾನ್ಯವಾಗಿ ಪರದೇಶಗಳಿಂದ ಬರುವ ಸಾಮಾನುಗಳನ್ನು ಸ್ವಲ್ಪ ಮಟ್ಟಿಗೆ ತಡೆದಂತಾಗಿ ದೇಶದ ಆರ್ಥಿಕ ಜೀವನವು ಸುಧಾರಿಸುವುದು, ಸಾವಿರಾರು ಬಡವರಿಗೆ ಜೀವನವು ಕಲ್ಪಿಸಿಕೊಟ್ಟಂತಾಗಿ ಬಡತನವು ಕಡೆಗಾಣುವುದು. ಒಂದು ಪ್ರಕಾರ ಇದರಿಂದ ಪರದೇಶಕ್ಕೆ ಹರಿದು ಹೋಗುವ ಧನವಾಹಿನಿಯನ್ನು ತಡೆಕಟ್ಟಿದಂತಾಗುವುದು. ಆದರೆ ಇಲ್ಲಿ ಕೂಡ ನಮ್ಮ ದೇಶವು ಈ ಕೈಗಾರಿಕೆಗಳ ಪೂರ್ಣ ಪ್ರಯೋಜನವನ್ನು ಹೊಂದಿ ಸೌಭಾಗ್ಯ ಉಳ್ಳುದಾಗಿಲ್ಲ. ಏಕೆಂದರೆ ವಸ್ತ್ರದ ಗಿರಣಿಗಳಲ್ಲಿ ಹೆಚ್ಚಿನವುಗಳು ದೇಶೀಯರ ಕೈಯಲ್ಲಿರುವುದಾದರೂ, ಅನೇಕ ಗಿರಣಿಗಳು ಪರದೇಶೀಯರ ಆಡಳಿತದಲ್ಲಿರುವುವು. ಅಲ್ಲದೆ ನಾರಿನ ಗಿರಣಿಗಳೂ, ಇತರ ಅನೇಕ ಮುಖ್ಯವಾದ ಕೈಗಾರಿಕೆ ಸಂಸ್ಥೆಗಳೂ ಪರದೇಶೀಯರ ಕೈಯಲ್ಲಯೇ ಇದ್ದು ಪರದೇಶದ ಮೂಲ ಧನದಿಂದಲೂ ಪರದೇಶದ ಆಡಳಿತದಿಂದಲೂ ನಡೆಯುತ್ತಿವೆ.

ಇಂತಹ ಪರದೇಶ ಕೈಗಾರಿಕೆ ಸಂಸ್ಥೆಗಳಿಂದ ನಮಗೆ ಎರಡು ತರದ ಬಾಧಕವಿರುತ್ತದೆ. ಪ್ರಥಮತಃ ಆರ್ಥಿಕ ನಷ್ಟವು ಕೇವಲ ಸ್ಪಷ್ಟವಿದೆ. ನಮ್ಮ ದೇಶಕ್ಕೆ ಸಿಕ್ಕುವುದೆಂದರೆ ಬರೇ ಒಂದಿಷ್ಟು ಕೂಲಿ ಮಜೂರಿ. ಬಾಕಿ ಲಾಭವೂ, ಆಡಳಿತದ ಹೆಚ್ಚಿನ ಖರ್ಚೂ ಪರದೇಶಕ್ಕೆ ಹೋಗುವುದು. ಎರಡನೆಯದಾಗಿ ರಾಜಕೀಯ ಬಾಧಕವಿದೆ. ಇಂತಹ ಪರದೇಶೀಯರ ಸಂಸ್ಥೆಗಳ ರಚನೆಯಿಂದ ಪರದೇಶೀಯರ ಅಧಿಕಾರವು ನಮ್ಮ ದೇಶದಲ್ಲಿ ಶಾಶ್ವತವಾಗುತ್ತಿದೆ. ತಮ್ಮ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಸಂರಕ್ಷಣೆಗೆಂದು ದೇಶವನ್ನು ಅಧಿಕರಿಸುವ ಕ್ರಮವು ಇಂಗ್ಲೀಷರಿಗೆ ನಿಸರ್ಗಸಿದ್ಧವಾಗಿ ಪರಿಣಮಿಸಿಯದೆ. ಹೇಗೆ ನಮ್ಮ ದೇಶದಲ್ಲಿ ಪರಕೀಯ ಕಾರ್ಖಾನೆಗಳೂ, ಸಂಸ್ಥೆಗಳೂ ಬೆಳೆಯುವವೂ ಹಾಗೆ ನಮ್ಮ ದೇಶದ ಪರಾಧೀನತೆಯು ಸ್ಥಿರೀಕರಿಸಲ್ಪಡುತ್ತಿದೆಯೆಂದು ನಾವು ತಿಳಿಯಬಹುದು.

ಈ ಕೈಗಾರಿಕೆ ಸಂಸ್ಥೆಗಳ ವಿಷಯವಾಗಿ ಆಲೋಚಿಸುವಾಗ ನಾವು ಇನ್ನೊಂದು ವಿಷಯವನ್ನು ನೆನಸಬೇಕು. ವಿಲಾಯತಿ ದೇಶಗಳಲ್ಲಿ ಕೈಗಾರಿಕೆಗಳು ಬೆಳೆದಷ್ಟಕ್ಕೆ ಅವುಗಳಿಗೆ ಲಾಭವಾಗುವಷ್ಟು ನಮ್ಮ ದೇಶದಲ್ಲಿ ನಮ್ಮ ಕೈಗಾರಿಕೆಗಳು ಬೆಳೆದಷ್ಟಕ್ಕೆ ನಮಗೆ ಲಾಭವಾಗಲಾರದು. ಏಕೆಂದರೆ ವಿಲಾಯತಿಯಲ್ಲಿ ಔದ್ಯೋಗಿಕ ಸಂಸ್ಥೆಗಳು ಶತಮಾನಗಳಿಂದ ಕ್ರಮಪ್ರಕಾರವಾಗಿ ಬೆಳೆದುಬಂದವುಗಳಾಗಿ, ಹೊಸ ಕೈಗಾರಿಕೆಗಳಿಗೆ ಬೇಕಾದ ಉಪಕರಣಗಳನ್ನು ಸಿದ್ಧಪಡಿಸಲಿಕ್ಕೆ ಹೊರದೇಶಗಳಿಗೆ ಹೋಗುವುದಿಲ್ಲ. ತಮ್ಮ ದೇಶದಲ್ಲಿಯೇ ಸಿದ್ಧಪಡಿಸಿದ ಯಂತ್ರ ಸಾಮಗ್ರಿಗಳಿಂದ ತಮ್ಮ ಕೈಗಾರಿಕೆಯನ್ನು ವಿಲಾಯತಿಯ ಪ್ರತಿ ದೇಶದವರೂ ತಯಾರಿಸಿಕೊಳ್ಳುತ್ತಾರೆ. ಒಂದು ಸ್ಪಷ್ಟವಾದ ನಿದರ್ಶನವಾಗಿ ನಾವು ಅಮೇರಿಕೆಯ ಮೋಟರಕಾರು ಉಪಯೋಗವನ್ನು ವಿವೇಚಿಸುವ. ಅಮೇರಿಕೆಯಲ್ಲಿ ಸಾಧಾರಣ ಪ್ರತಿ ಏಳು ಜನರಲ್ಲಿ ಒಬ್ಬನಿಗೆ ಒಂದು ಮೋಟರಗಾಡಿ ಇದೆಯಂತೆ. ಅದರಿಂದ ಅಮೇರಿಕಕ್ಕೆ ಯಾವ ನಷ್ಟವೂ ಇಲ್ಲ.

ಏಕೆಂದರೆ ಅಮೇರಿಕದಲ್ಲಿ ಉಪಯೋಗಿಸುವ ಗಾಡಿಗಳು ಅಮೇರಿಕದಲ್ಲಿಯೇ ತಯಾರಾಗುವುವು; ಅವುಗಳ ಸಾಮಾನುಗಳೂ ಅಲ್ಲಿಯೇ ತಯಾರಾಗುವುವು; ಅವುಗಳ ಪೆಟ್ರೋಲೂ ಅಲ್ಲಿಯೇ ಸಿಕ್ಕುವುದು; ಅವುಗಳಿಗೆ ಬೇಕಾದ ಯಾವತ್ತು ಸಾಮಾನುಗಳೂ ಅಲ್ಲಿಯೇ ತಯಾರಾಗುವುವು. ನಮ್ಮ ದೇಶದಲ್ಲಿ ಹಾಗಿರುವುದಿಲ್ಲ. ನಮ್ಮ ದೇಶದಲ್ಲಿ ಗಾಡಿಗಳು ತರಿಸುವುದಾದರೆ, ಗಾಡಿಗಳ ಖರ್ಚು ಮಾತ್ರವಲ್ಲದೆ, ಇತರ ಎಲ್ಲಾ ಖರ್ಚು ಪರದೇಶಕ್ಕೇನೇ ಸಲ್ಲತಕ್ಕದ್ದು.

ಹಾಗೆಯೇ ಕೈಗಾರಿಕೆಗಳ ಪರಿಸ್ಥಿತಿ. ಮೂಲಧನವೆಲ್ಲ ಹಿಂದುಸ್ಥಾನದಿಂದ ಪರದೇಶಗಳಿಗೆ ಹೋಗಿಯೇ ಹಿಂದೂದೇಶದಲ್ಲಿ ಒಂದು ಕೈಗಾರಿಕೆ ಸಂಸ್ಥೆಯಾಗಬೇಕಾಗಿದೆ ಮತ್ತು ಆ ಕೈಗಾರಿಕೆ ಸಂಸ್ಥೆಯ ದಿನನಿತ್ಯದ ಪಾಲನೆಯೂ ಪರದೇಶಗಳ ಮೂಲಕವೇ ನಡೆಯತಕ್ಕದ್ದಿದೆ. ಫಲತಃ ಈ ಕೈಗಾರಿಕೆ ಸಂಸ್ಥೆಗಳು ಪರದೇಶಕ್ಕೆ ಹೋಗುವ ನಮ್ಮ ಹಣವನ್ನು ಸಂಪೂರ್ಣವಾಗಿ ತಡೆಗಟ್ಟಲಾರವು.

ಇನ್ನು ಪರದೇಶೀಯರ ಮೂಲಧನವೂ ಈ ದೇಶದಲ್ಲಿ ಬರೇ ಕೈಗಾರಿಕೆಗಳಲ್ಲಿ ಮಾತ್ರ ತೊಡಗುತ್ತಿಲ್ಲ. ಅನೇಕ ಇತರ ವಿಧಗಳಲ್ಲಿಯೂ ಪರದೇಶೀಯ ಮೂಲಧನವು ನಮ್ಮ ದೇಶದಲ್ಲಿ ಚರಿಸಿ ನಮ್ಮಿಂದ ಧನಾಪಹಾರ ಮಾಡುತ್ತಿದೆ. ಮದ್ರಾಸ, ಮುಂಬೈ, ಕಲಕತ್ತಾ ಮುಂತಾದ ಮುಖ್ಯ ಪಟ್ಟಣಗಳಲ್ಲೆಲ್ಲಾ ಅನೇಕ ಪರದೇಶೀಯ ವ್ಯಾಪಾರೀ ಸಂಸ್ಥೆಗಳಿವೆ. ಇವು ಪರದೇಶದ ಸಾಮಾನುಗಳನ್ನು ಈ ದೇಶದ ಮೇಲೆ ಹೊರಿಸುತ್ತಿವೆ. ಮಾತ್ರವಲ್ಲದೆ, ಆ ಸಮಯದಲ್ಲಿ ಸ್ವಭಾವತಃ ನಮ್ಮ ವ್ಯಾಪಾರಿಗಳಿಗೆ ಸಿಕ್ಕಬೇಕಾದ ಮಧ್ಯವರ್ತಿ ಲಾಭವನ್ನೂ ತಾವು ಪಡೆಯುತ್ತಿವೆ. ಈ ರೀತಿಯಲ್ಲಿ ಮುಂದಾಗಿ ಪ್ರಚಾರಕ್ಕೆ ಬಂದಿರುವ ಈ ಸಂಸ್ಥೆಗಳು ಹೆಚ್ಚು ಗೌರವಕ್ಕೂ ಪಾತ್ರವಾಗಿ, ದೇಶೀಯ ಶ್ರೀಮಂತರಿಗೆ ಸಾಮಾನುಗಳನ್ನು ಒದಗಿಸಿಕೊಡುವುದರಲ್ಲಿ ಹೆಚ್ಚು ಆದರಕ್ಕೆ ಪಾತ್ರವಾಗುತ್ತಿವೆ.

ಇಂತಹ ದೇಶದೊಳಗಿನ ಆರ್ಥಿಕ ಪರಿಸ್ಥಿತಿಯು ಹಿಂದೂದೇಶಕ್ಕೆ ಹಿತಕರವಾಗಿಲ್ಲ. ಹಿಂದೀ ಸರಕಾರವು ಆಗಿಂದಾಗ್ಗೆ ಪ್ರಕಟಿಸುತ್ತಿರುವ ವ್ಯಾಪಾರ ಸಂಖ್ಯೆಗಳು ತೋರಿಸುವಷ್ಟು ಸುಸ್ಥಿತಿಯು ಹಿಂದೀ ವ್ಯಾಪಾರದಲ್ಲಿಲ್ಲ. ದೇಶದೊಳಗೆ ಬಂದ ಮತ್ತು ದೇಶದಿಂದ ಹೊರಗೆ ಹೋದ ಸಾಮಾನುಗಳ ಬೆಲೆಯ ಸಂಖ್ಯೆಯನ್ನು ಕೊಟ್ಟು, ದೇಶದಿಂದ ಹೊರಗೆ ಹೋದ ಸಾಮಾನಿನ ಬೆಲೆಯೇ ಹೆಚ್ಚೆಂದು ತೋರಿಸಿ, ಹಿಂದುಸ್ಥಾನವು ಶ್ರೀಮಂತವಾಗುತ್ತಾ ಬರುತ್ತದೆಂದು ತೋರಿಸುವುದು ಸುಲಭ. ಆದರೆ ಒಳಗಿನ ದ್ರವ್ಯಶೋಷಣೆಯನ್ನು ಲೆಕ್ಕಿಸಿದರೆ ನಿಜವಾದ ಆರ್ಥಿಕ ನಷ್ಟವು ಆಗ ತಿಳಿದುಬರುವುದು.

ಅಂತೆ ಹಿಂದೀ ಆರ್ಥಿಕ ಶೋಷಣವು ಎಲ್ಲಾ ರೀತಿಯಿಂದಲೂ ಅವಿರೋಧವಾಗಿ ಯಾವಾಗಲೂ ನಡೆಯುತ್ತಾ ಉಂಟೇ ಉಂಟು. ಇನ್ನು ಸರಕಾರಿ ನೌಕರಿಯು ಕೂಡ ಈ ದ್ರವ್ಯ ಶೋಷಣ ಧೋರಣದ ಒಂದು ಅಂಗಮಾತ್ರವಾಗಿದೆ. ವಿಚಾರಪೂರ್ವಕವಾಗಿಯೇ ಈ ಧೋರಣವು ಸ್ವೀಕರಿಸಲ್ಪಟ್ಟಿದೆ. ಸಿವಿಲ್ ಸರ್ವೆಂಟುಗಳಲ್ಲಿ ಆಂಗ್ಲ ನೌಕರರ ಸಂಖ್ಯೆಯನ್ನೇ ಹೆಚ್ಚು ಮಾಡುವುದರಲ್ಲಿ ಸರಕಾರವು ಬಹಳವಾಗಿ ಪ್ರಯತ್ನಿಸುತ್ತಿದೆ. ಮಾತ್ರವಲ್ಲದೆ, ಇಂಗ್ಲೀಷ ಹುಡುಗರು ಯಾವ ಕಾರಣದಿಂದಾದರೂ ಹೆದರಿ ಸೇರದಿದ್ದ ಹಾಗೆ ಸೆಕ್ರೆಟರಿ ಒಫ್ ಸ್ಟೇಟರಾಗಿರುವ ಲೋರ್ಡ ಬರ್ಕನ್‌ಹೆಡ್ಡರು ಸ್ವತಹಾ ಆಯಾ ವಿಶ್ವವಿದ್ಯಾಲಯಗಳಿಗೆ ಹೋಗಿ ಹಿಂದೂಸ್ಥಾನವು ಸಾರವತ್ತಾದ ದೇಶವೆಂದೂ, ಅಲ್ಲಿ ಅಧಿಕರಿಸುವುದೆಂದರೆ ಅತೀ ಪ್ರಯೋಜನಕರವಾದ ವಿಷಯವೆಂದೂ ಬೋಧಿಸಹತ್ತಿದ್ದಾರೆ.

ಮುಖ್ಯತಃ ನಮ್ಮ ದೇಶದ ಆರ್ಥಿಕ ಪ್ರಗತಿಯು ಸುಧಾರಿಸಬೇಕಾದರೆ ನಮ್ಮ ದೇಶದ ಜನರು ಬೇಸಾಯದ ಕಡೆಗೆ ಹೆಚ್ಚು ಲಕ್ಷ್ಯ ಕೊಡತಕ್ಕದ್ದು. ಯಾವ ಉದ್ಯಮವಾಗಲಿ ದೇಶಕ್ಕೆ ಸಂಪತ್ತನ್ನು ತರುವುದರಲ್ಲಿ—ಬದಲಿಗೆ ಬಡತನವನ್ನೇ ಹೆಚ್ಚಿಸುತ್ತಿದೆ. ಕೃಷಿಯ ಮಟ್ಟಿಗೆ ಪರದೇಶದ ಯಾವ ಸಾಮಾನೂ ಸಾಮಾನ್ಯವಾಗಿ ಬೇಕಾಗಿರುವುದಿಲ್ಲ. ಇತ್ತೀಚೆಗೆ ಚಿಲಿಯನ್ ನೈಟ್ರೇಟ್ ಕಂಪೆನಿಯಂತಹ ಪರದೇಶೀಯ ಗೊಬ್ಬರದ ಸಂಸ್ಥೆಗಳು ಪರದೇಶದ ಗೊಬ್ಬರವನ್ನು ನಮ್ಮ ಭೂಮಿಗಳಲ್ಲಿ ಪ್ರಚಾರಕ್ಕೆ ತರುವವರಾದರೂ, ಅಂತಹವುಗಳ ಸಹಾಯವಿಲ್ಲದೇನೆ ನಾವು ದೇಶದ ಬೇಸಾಯವನ್ನು ವೃದ್ಧಿಗೊಳಿಸಬಹುದು. ಸಹಾಯ ಬೇಕಿದ್ದರೂ ಅದರಿಂದ ನಮ್ಮ ದೇಶಕ್ಕೆ ಹೆಚ್ಚಿನ ನಷ್ಟವಾಗಲಾರದು. ಕೃಷಿಯು ದೇಶದಲ್ಲಿ ಪ್ರಚಾರವಾಗಬೇಕಾದ ವಿಷಯವಾಗಿದೆ. ನಮ್ಮ ದೇಶದ ವಿದ್ಯಾವಂತ ಮಂಡಳಿಯು ಕೃಷಿಯ ಕಡೆಗೆ ಹೆಚ್ಚು ಲಕ್ಷ್ಯ ಕೊಟ್ಟರೇನೆ ದೇಶದ ಸಾಂಪತ್ತಿಕ ಸ್ಥಿತಿಯು ಸುಧಾರಿಸಬಹುದು.

ನಮ್ಮ ದೇಶದಲ್ಲಿ ಭೂಮಿಯುಳ್ಳ ಶ್ರೀಮಂತರು ಹೆಚ್ಚಾಗಿ ತಮ್ಮ ಎಲ್ಲಾ ಜಮೀನನ್ನೂ ಇತರರಿಗೆ ಗೇಣಿಗೆ ಕೊಟ್ಟು ಸಾಗುವಳಿಮಾಡಿಸಿ, ಜಮೀನಿನ ಸುಧಾರಣೆಗಾಗಿ ಯಾವ ಕಷ್ಟವನ್ನೂ ತೆಗೆದುಕೊಳ್ಳುವುದಿಲ್ಲ. ಇತ್ತೀಚೆ, ಇಂತಹ ಜಮೀನುದಾರರ ಮಕ್ಕಳು ವಿಶ್ವವಿದ್ಯಾಲಯ ಅಭ್ಯಾಸವನ್ನು ಹೊಂದಿ ಕೆಲಸವಿಲ್ಲದೆ ಮನೆಯಲ್ಲಿರುತ್ತಾರೆ, ಇಲ್ಲವೆ ನೌಕರಿಗೆ ಹೋಗುತ್ತಾರೆ, ಇಲ್ಲವೆ ವ್ಯಾಪಾರದ ಉತ್ಸಾಹದಿಂದ ವ್ಯಾಪಾರವನ್ನು ಆರಂಭಿಸಿ, ಇಲ್ಲದ ನಷ್ಟಗಳನ್ನು ಹೊಂದಿ ಜಮೀನನ್ನು ಕಳಕೊಳ್ಳುತ್ತಾರೆ. ಇದು ಶೋಚನೀಯವಾದ ಪರಿಸ್ಥಿತಿ. ಜಮೀನುದಾರರ ಮಕ್ಕಳು ಜಮೀನಿನಲ್ಲಿ ಹೆಚ್ಚು ಜೀತಿಸುವುದೇ ಅವರಿಗೆ ಗೌರವಕರವೂ ಲಾಭಕರವೂ ಆದ ಕರ್ತವ್ಯವಾಗಿದೆ. ಜಮೀನುದಾರರು ಎಂದೂ ನೌಕರಿಯಾಗಲಿ ವ್ಯಾಪಾರಕ್ಕಾಗಲಿ ಹೋಗಬಾರದು. ಕೃಷಿಶಾಸ್ತ್ರವನ್ನು ಕಲಿತು ಅದರ ಮೂಲಕ ಜಮೀನನ್ನು ಹೆಚ್ಚು ಉತ್ಪತ್ತಿ ಕೊಡುವಂತೆ ಅವರು ಮಾಡುವುದು ಅವಶ್ಯ.

ಈ ಕೃಷಿ ವಿಭಾಗದಲ್ಲಿ ಕೂಡ ಪರದೇಶದ ಮೂಲಧನವು ಇದೆ. ಅಸ್ಸಾಮಿನ ಚಾ ತೋಟಗಳೂ, ನೀಲಗಿರಿಯ ಕಾಫಿ—ಚಾ ತೋಟಗಳೂ ಬೇಹಾ ಜಿಲ್ಲೆಯ ನೀಲಿಯ ತೋಟಗಳೂ ಇಂಗ್ಲೀಷರ ಕೈಯಲ್ಲಿವೆ. ಪಾಶ್ಚಾತ್ಯ ಅರ್ಥ ನೀತಿಯು ಹಿಂದೂಸ್ಥಾನದಲ್ಲಿ ಎಲ್ಲಿ ವರೆಗೆ ಹೋಗಿದೆ ಎಂದು ಈ ಮೂಲಕ ತಿಳಿಯುವುದು.

ವಿದೇಶ ವರ್ತಮಾನ.

—ಆಸ್ಟ್ರೇಲಿಯಾದಿಂದ ೩೧ ಸಾವಿರ ಟನ್ ಗೋಧಿಯು ಜಪಾನ್ ದೇಶಕ್ಕೆ ಹೋಗಿರುವುದು. ಬರುವ ಎಪ್ರಿಲ್ ತಿಂಗಳೊಳಗೆ ೪೦ ಸಾವಿರ ಟನ್ ಗೋಧಿಯು ಜಪಾನಿಗೆ ಹೋಗಲಿಕ್ಕಿರುವುದು. ಗೋಧಿಯ ಮೇಲೆ ತೆರಿಗೆಯನ್ನು ಜಪಾನ ಗವರ್ನಮೆಂಟಿನವರು ಹೊರಿಸ್ಯಾರೆಂದು ತಿಳಿದು ಬರುತ್ತದೆ.

—ಇಂಗ್ಲೆಂಡಿನಲ್ಲಿ ಬಿರುಗಾಳಿ ಮತ್ತು ಅತಿರೇಕ ಮಳೆಯ ದೆಸೆಯಿಂದ ಹೆಚ್ಚು ಹಾವಳಿಯುಂಟಾಗಿದೆ. ಕೆಲವು ಕಡೆಗಳಲ್ಲಿ ಮಾರ್ಗಗಳು ಮುಳುಗಿಯವೆ. ಆದರೆ ಪ್ರಾಣಾಪಾಯವಾಗಲಿಲ್ಲ.

—ಆಫ್ರಿಕದ ಎಸೆಂಬ್ಲಿಯಲ್ಲಿ ಎಕ್ಸಾಟಿಕ್ ಬಿಲ್ ಮೊದಲನೇ ಸಾರಿ ಓದಿ ಬಹುಮತದಿಂದ ಮಂಜೂರಾಯಿತು.

—ಇಂಗ್ಲೀಷ ಯುವರಾಜರಾದ ಪ್ರಿನ್ಸ್ ಒಫ್ ವೇಲ್ಸ್‌ರವರು ಇನ್ನು ಮುಂದೆ ರಾಜಕಾರ್ಯಗಳಲ್ಲಿ ಪ್ರವೇಶಿಸುವರೆಂದು ತಿಳಿಯುತ್ತದೆ.

—ಉತ್ತರ ಅಮೇರಿಕದ ಮೆಕ್ಸಿಕೊ ಎಂಬ ರಿಪಬ್ಲಿಕಿನಲ್ಲಿ ಪಾದ್ರಿಗಳು ಮದುವೆಯಾಗ ಬಹುದೆಂಬ ಕಾನೂನನ್ನು ಮಾಡಿರುತ್ತಾರೆ. ಕೆಥೋಲಿಕ್ ಪಾದ್ರಿಗಳು ಇದು ತಮ್ಮ ಧರ್ಮಕ್ಕೆ ವಿರೋಧವೆಂದು ಮದುವೆಯಾಗಲು ಒಪ್ಪದೆ ಇದ್ದುದರಿಂದ ಕೈದುಮಾಡಲ್ಪಟ್ಟಿರುವರಂತೆ.

—ಮಿ. ಹಾರ್ನಿಮನ್ ಇವರ ಮಾತೋಶ್ರೀಗಳು ವಿಲಾಯತಿಯಲ್ಲಿ ಮರಣಹೊಂದಿರುವರು.

—ಕಳೆದ ಜರ್ಮನ್ ಯುದ್ಧದಲ್ಲಿ ಜರ್ಮನರ ಟಾರ್ಪೆಡೋ ಎಂಬ ಸಿಡಿಮದ್ದಿನ ಪೆಟ್ಟಿಗೆ ಸಿಕ್ಕಿ ಮುಳುಗಿಹೋದ ಲಾರೆನ್‌ಟಿಕ್ ಎಂಬ ಹಡಗಿನಲ್ಲಿ ಸುಮಾರು ೫೦ ಲಕ್ಷ ಸವರಿನ್‌ಗಳ ಭಂಗಾರವಿದ್ದಿತು. ಬ್ರಿಟಿಷ್ ನಾವಿಕ ಕಡೆಯವರು ಸುಮಾರು ೧೪ ಸಾವಿರ ಸವರಿನ್‌ಗಳ ವೆಚ್ಚದಿಂದ ಯಾವ ಅಪಾಯವೂ ಇಲ್ಲದೆ ಆ ಚಿನ್ನವನ್ನೆಲ್ಲಾ ಮುಳುಗಿಹೋಗಿದ್ದ ಹಡಗಿನಿಂದ ತೆಗೆದಿರುತ್ತಾರೆ.

—ದೊಡ್ಡ ವರನುಗ್ರಹವನ್ನು ಸಂಪಾದಿಸಿಕೊಳ್ಳಲಿಕ್ಕೆ ಜನರು ಏನು ಬೇಕಾದರೂ ಮಾಡುವರು. ಪ್ರಿನ್ಸ್ ಕ್ಯಾರೊಲ್ ಎಂಬ ರೊಮೇನಿಯ ರಾಜಪುತ್ರನ ವಿಶ್ವಾಸವನ್ನು ಪಡೆಯಬೇಕೆಂದು ಯತ್ನಿಸುತ್ತಿದ್ದ ನೂರಾರು ಮಂದಿ ಸ್ತ್ರೀಯರನ್ನು ನೋಡಿ ರಾಜಪುತ್ರನು—ಯಾರು ಒಂದು ಸೊಡವನ್ನು ತಿನ್ನುವರೋ ಅಂಥವರಿಗೆ ತನ್ನ ಅನುಗ್ರಹದ ಜತೆಗೆ ೩೦ ಫ್ರಾಂಕ್‌ಗಳನ್ನು ಇನಾಮು ಕೊಡುವುದಾಗಿ ತಿಳಿಸಿದನು. ಅಲ್ಲಿ ನೆರೆದಿದ್ದ ಸ್ತ್ರೀಯರಲ್ಲಿ ಪ್ರತಿಯೊಬ್ಬರೂ ಅದರಂತೆ ನಡೆದುಕೊಂಡರಂತೆ! ಇದೀಗ ತಮಾಶೆ!

—ಶೀಷೆಗಳು, ಜಾಡಿಗಳು ಇವುಗಳಿಗೆ ಪದಾರ್ಥಗಳನ್ನು ಸ್ವತಃ ತುಂಬಿ ಮುಚ್ಚಿ ಅವಶ್ಯವಾದ ಮೊಹರು ವಗೈರೆ ಮಾಡಿ, ಮೇಲೆ ಕಾಗದದ ಚೀಟುಗಳನ್ನು ಅಂಟಿಸತಕ್ಕ ಯಂತ್ರವು ಅಮೇರಿಕದಲ್ಲಿ ಕಂಡುಹಿಡಿಯಲ್ಪಟ್ಟಿದೆ. ಇಷ್ಟೇ ಅಲ್ಲದೆ ಶೀಷೆ ಒಡೆದಿದ್ದರೆ ಅಥವಾ ಅನ್ಯಾವ ರೀತಿಯಲ್ಲಾದರೂ ಅನುಪಯೋಗವಾಗಿದ್ದರೆ, ಅದಕ್ಕೆ ಪದಾರ್ಥವನ್ನು ತುಂಬುವುದೇ ಇಲ್ಲ. ಈ ರೀತಿ ಯಂತ್ರದಿಂದ ನಿಮಿಷ ೧ಕ್ಕೆ ೧೦೦ ಶೀಷೆಗಳನ್ನು ಭರ್ತಿಮಾಡಬಹುದು. ಇದರ ಕೆಲಸದಲ್ಲಿ ಮನುಷ್ಯನ ಸಹಾಯವೇ ಇಲ್ಲದಿರುವುದರಿಂದ ಇದು ಆಶ್ಚರ್ಯವನ್ನುಂಟುಮಾಡುತ್ತದೆ!

—ನಿರುದ್ಯೋಗಿಗಳಾಗಿ ಕಾಲಕಳೆಯುತ್ತಿರುವವರ ಸಂಖ್ಯೆಯು ಇಂಗ್ಲಾಂಡಿನಲ್ಲಿ ದಿನೇ ದಿನೇ ಕಡಿಮೆಯಾಗುತ್ತದೆ. ಕಳೆದ ನಾಲ್ಕು ವಾರಗಳಲ್ಲಿ ೭೦,೦೦೦ ಜನರು ಕೆಲಸಗಳ ಮೇಲೆ ಹೋಗಿರುತ್ತಾರೆ. ಈಗ ಕೆಲಸವಿಲ್ಲದೆ ಇರುವವರ ಸಂಖ್ಯೆ ೧೧,೭೫,೦೦೦ ಅಂದರೆ ಹಿಂದಿನ ಸಂವತ್ಸರಕ್ಕಿಂತ ೭೩,೦೦೦ ಜನರು ಕಡಿಮೆಯಾಗಿರುತ್ತಾರೆ.

ಒಳದೇಶ ವರ್ತಮಾನ.

—ಬಿ. ಎನ್. ಆರ್. ರೈಲ್ವೆ ಕಂಪೆನಿಯ ಒಂದು ಟ್ರೈನು ಸಾಹಬದ್ನೀನುದ ಎಂಬ ಸ್ಟೇಶನಿನಿಂದ ಹೊರಡುವಾಗ ಕೆಲವು ದಕ್ವಾಯಿತರು ರೈಲು ಚಾಲಿನಲ್ಲೇ ಇರುವಾಗ ಹತ್ತಿ ಅದರಲ್ಲಿರುವ ಗಾರ್ಡನನ್ನು ಚೂರಿಯಿಂದ ತಿವಿದು ಕೊಂದು ಲಗ್ಗೇಜ್‌ವಾನಿನಲ್ಲಿರುವ ಹಣದ ಪೆಟ್ಟಿಗೆಯನ್ನು ಕೆಳಕ್ಕೆ ಬಿಸಾಡಿ ಪರಾರಿಯಾಗಿರುವರು. ಪೆಟ್ಟಿಗೆಯಲ್ಲಿರುವ ಹಣವನ್ನು ತೆಗೆಯಲು ಅನೇಕ ಪ್ರಯತ್ನಗಳನ್ನು ನಡಿಸಿದ್ದರು. ಆದರೆ ಅವು ಸಾಧ್ಯವಾಗಲಿಲ್ಲ. ಇಷ್ಟರ ಒಳಗೆ ಈ ಸಮಾಚಾರವು ರೈಲ್ವೆ ನಡಿಸುತ್ತಿರುವ ಡ್ರೈವರನಿಗೆ ತಿಳಿದು ಬಂದುದರಿಂದ ಅವನು ಟ್ರೈನು ನಿಲ್ಲಿಸಿ ಹಿಂದುಗಡೆ ಬಂದು ಸತ್ತುಬಿದ್ದಿರುವ ಗಾರ್ಡನನ್ನು ಕಂಡನು. ಕೊಲೆಮಾಡಿದ ದಕ್ವಾಯತರನ್ನು ಹುಡುಕುತ್ತಿರುವಾಗ್ಗೆ ಬಿಸಾಡಿದ ಹಣದ ಪೆಟ್ಟಿಗೆಯು ಆತನಿಗೆ ಸಿಕ್ಕಿರುವುದು. ಈ ವಿಷಯ ರೈಲ್ವೆ ಪೋಲೀಸ ಅಧಿಕಾರಿಗಳು ತಕ್ಕ ತನಿಖೆಯನ್ನು ನಡಿಸುತ್ತಿರುವರು.

—ಕಳೆದ ಮೊಹರಮ್ ಸಮಯದಲ್ಲಿ ಪಾಣಿಪತದಲ್ಲಿ ನಡೆದ ಘಲಾಟೆಯಲ್ಲಿ ಕೈದುಮಾಡಲ್ಪಟ್ಟವರ ಮೊಕದ್ದಮೆಯ ತನಿಖೆಯು ಅನೇಕ ತಿಂಗಳಿಂದ ನಡೆಯುತ್ತಾ ಇದ್ದು, ಕಳೆದ ತಾ. ೧೨ಕ್ಕೆ ಅಂತ್ಯವಾಗಿ ಪಾಣಿಪತದ ೪ ಜನ ಬಾಸಿಯಾಸ್‌ರನ್ನು ೬ ತಿಂಗಳ ಕಠಿಣ ಸಜೆಗೂ, ಮತ್ತು ಪೋಲೀಸರ ಮೇಲೆ ಬಿದ್ದು ಜಖಂ ಪಡಿಸಿದ ಇಬ್ಬರನ್ನು ಮೂರು ತಿಂಗಳ ಕಠಿಣ ಸಜೆಗೂ ೬ ಜನ ಜನರನ್ನು ಒಂದು ತಿಂಗಳ ಕಠಿಣ ಸಜೆಗೂ ಮತ್ತು ಪ್ರತಿಯೊಬ್ಬನಿಗೆ ರೂಪಾಯಿ ೫೦ನ್ನು ಜುರುಮಾನೆಯಾಗಿಯೂ, ಅದಕ್ಕೆ ತಪ್ಪಿದರೆ ಇನ್ನೊಂದು ತಿಂಗಳ ಕಠಿಣ ಸಜೆಯನ್ನು ಪಾಣಿಪತದ ಸ್ಪೆಶ್ಯಲ್ ಮ್ಯಾಜಿಸ್ಟ್ರೇಟರು ವಿಧಿಸಿರುವರು.

—ಅನೇಕ ಸಮಯದಿಂದ ಲಾಹೋರಿನಲ್ಲಿ ಕೊಲೆಪಾತಕಗಳನ್ನು ನಡಿಸುತ್ತಿದ್ದ ದರೋಡೆಕರ ಎರಡು ಪಂಗಡವನ್ನು ಲಾಹೋರಿನ ಪೋಲೀಸಿನವರು ಬಹು ಪರಿಶ್ರಮದಿಂದ ಹಿಡಿದಿರುವರು.

—ಇಂದೋರಿನ ಮಹಾರಾಜಂಗೆ ಸರಕಾರದವರಿಂದ ತನಿಖೆ ನಡಿಸಿರುವ ಸಂಗತಿಯ ವಿಷಯ ಇನ್ನೂ ಸರಿಯಾದ ಉತ್ತರವನ್ನು ಕೊಡಲಿಲ್ಲ. ಆದರೆ ಇಂದೋರಿನ ಮಹಾರಾಜರು ತನ್ನ ರಾಜಸ್ಥಾನದಲ್ಲಿ ಗಲಾಟೆಯಾಗುವ ಸಂಭವವು ಬಂದೀತೆಂದು ರಾಜಸ್ಥಾನದಲ್ಲಿರುವ ಎಲ್ಲಾ ಸಿಪಾಯಿಗಳ ಬಂದೂಕು ವಗೈರೆ ಸಾಮಾನುಗಳನ್ನು ಭದ್ರತೆಯ ಕೋಣೆಯೊಳಗೆ ಹಾಕಿರುವರೆಂದು ತಿಳಿದುಬರುತ್ತದೆ.

—ರಂಗೂನಿನ ಅಕ್ಕಿಯ ಕಾರ್ಖಾನೆಗಳಲ್ಲಿ ಕೂಲಿಗಾರರಿಗೆ ದಿನಂಪ್ರತಿ ಕೊಡುತ್ತಿರುವ ಪಗಾರವನ್ನು ಬದಲಾಯಿಸಿರುವುದರಿಂದ ೫೦೦೦ ಕೂಲಿಗಾರರು ಮುಷ್ಕರ ಹಿಡಿದಿರುವರು.

—ಮದ್ಯಪಾನ ಮಾಡುವುದನ್ನು ಮದರಾಸು ಸಂಸ್ಥಾನದಲ್ಲಿ ಇನ್ನು ೩೦ ವರುಷಗಳಲ್ಲಿ ಸಂಪೂರ್ಣವಾಗಿ ನಿಲ್ಲಿಸಿ ಬಿಡಬೇಕೆಂಬ ಠರಾವು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಮಂಜೂರಾಯಿತು.

—ಟ್ರಾವಂಕೂರು ರಾಜ್ಯದಲ್ಲಿ ಇನ್ನು ಮುಂದೆ ಯುರೋಪಿಯನ್ ಜಡ್ಜರನ್ನು ನೇಮಿಸುವರಂತೆ.

—ಕುಂಭಕೋಣದಲ್ಲಿ ಒಬ್ಬಳು ಪ್ರಸೂತಳಾಗಿ ವಿಲಕ್ಷಣವಾದ ಶಿಶುವನ್ನು ಹಡೆದಳು. ಶಿಶುವಿಗೆ ತಲೆಯಿಲ್ಲ. ಒಂದು ಮಾಂಸದ ಉಂಡೆ ಅದರಲ್ಲಿ ಎರಡು ಕಣ್ಣು!

—ದುಡ್ಡಿನ ಆಶೆ ನೋಡಿ ಹೈದರಾಬಾದದಲ್ಲಿ ಒಬ್ಬ ಟಪ್ಪಾಲ ಖಾತೆಯ ಅಧಿಕಾರಿಯು ತನ್ನ ಪತ್ನಿಯನ್ನು ೧೨೦೦ ರೂಪಾಯಿಗಳಿಗೆ ಮಾರಿದನು. ಈ ಕುರಿತು ಲೇಖಿ ಕರಾರುನಾಮೆಯು ಕೂಡ ಆಯಿತು. ಆದರೆ, ಕರಾರಿನಂತೆ ಹೆಂಡತಿಯನ್ನು ಕ್ರಯಕ್ಕೆ ಕೊಂಡವನು ಹಣವನ್ನು ಕೊಡಲಿಲ್ಲ. ದುಡ್ಡಿನ ಆಶೆಯಿಂದ ಹೆಂಡತಿಯನ್ನು ಮಾರಿದನರಾಧಮನು ಮಜಿಸ್ಟ್ರೇಟರಲ್ಲಿ ಫಿರ್ಯಾದು ಮಾಡಲು, ಮೆಜಿಸ್ಟ್ರೇಟರು, ಇದು ದಿವಾಣಿ ಬಾಬೆಂದು ಆತನನ್ನು ತಳ್ಳಿಬಿಟ್ಟರು. ಹೆಂಡತಿ ಮಾರಿದ ಬಗ್ಗೆ ಯೋಗ್ಯ ಶಿಕ್ಷೆಯಾಯಿತು!

—ಮದರಾಸ್ ಪಟ್ಟಣದಲ್ಲಿರುವ ನೇಷನಲ್ ಬ್ಯಾಂಕಿಗೆ ಒಬ್ಬನು ಕೆಲವು ದಿನಗಳ ಹಿಂದೆ ಒಂದು ತಂತೀವರ್ತಮಾನವನ್ನು ತೋರಿಸಿ ಬ್ಯಾಂಕಿನ ಕ್ಯಾಷಿಯರಾದ ಮಿ. ಪಿ. ಕುಪ್ಪಸಾಮಿಚೆಟ್ಟಿ ಎಂಬಾತನಿಂದ ೩೦,೦೦೦ ರೂಪಾಯಿ ಪಡೆದು ಎಲ್ಲಿಯೋ ಪರಾರಿ ಆದನು. ಈಗ ಆ ಕ್ಯಾಷಿಯರನ್ನು ಬ್ಯಾಂಕಿನವರು ಕೆಲಸದಿಂದ ವಜಾ ಮಾಡಿ, ಆತನ ಮೇಲೆ ಆ ಮೊಬಲಗಿಗೆ ದಾವಾ ತಂದಿದ್ದಾರೆ. ಆ ಮೋಸಗಾರನು ಇದುವರೆಗೂ ಸಿಕ್ಕಲಿಲ್ಲ.

—ಮದರಾಸ್ ಅಧಿಪತ್ಯಕ್ಕೆ ಸೇರಿದ ಚಿತ್ರಪುರದ ತಾಲೂಕು ಬೋರ್ಡು ಪ್ರೆಸಿಡೆಂಟರಾಗಿದ್ದ ವಿಶ್ವನಾಥ ದಾಸರವರು ಖದ್ದರ್ ಬಟ್ಟೆಗಳನ್ನು ಪ್ರಚಾರಕ್ಕೆ ತರಬೇಕೆಂದು ತಾಲೂಕು ಬೋರ್ಡಿನ ಹಣದಲ್ಲಿ ೨೧೧೦ ರೂಪಾಯಿಯನ್ನು ಆ ಕೆಲಸಕ್ಕೆ ವಿನಿಯೋಗಿಸಿದರೆಂದು ಕ್ರಿಮಿನಲ್ ಮೊಕದ್ದಮೆ ಆಗಿ ಬರ್ಹಾಂಪುರದ ಸೆಷನ್ಸ್ ಜಡ್ಜ ಮಿ. ನ್ಯಾಪೆಂರವರು ಅಪರಾಧಿಗೆ ಕಳೆದ ಗುರುವಾರ ಆರು ತಿಂಗಳ ಕಠಿಣ ಸಜೆಯನ್ನೂ, ೫೦೦೦ ರೂಪಾಯಿ ಜುಲುಮಾನೆಯನ್ನೂ ವಿಧಿಸಿದರು. ಅಪರಾಧಿಯು ಆ ಅಧಿಪತ್ಯದ ನ್ಯಾಯವಿಧಾಯಕ ಸಭಾ ಮೆಂಬರರಾಗಿರುವರು. ಅವರು ಈಚೆಗೆ ಮದರಾಸ್ ಹೈಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಾಗ ಜಡ್ಜಿಗಳು ಅವರನ್ನು ಜಾಮೀನ ಮೇಲೆ ಖುಲಾಸ್ ಮಾಡಿರುತ್ತಾರೆ.

—ಶ್ರೀಯುತ ಸಯಾಜಿರಾವ ಗಾಯಕವಾಡ ಮಹಾರಾಜರವರು ಎಪ್ರಿಲ್ ತಿಂಗಳಲ್ಲಿ ಪುನಃ ಯುರೋಪಕ್ಕೆ ಹೊರಡುವರೆಂದು ತಿಳಿಯುತ್ತದೆ.

—ಕಾಶ್ಮೀರದ ಮಹಾರಾಜರಾದ ಸರ್ ಹರಿಸಿಂಗ ಇವರು ಅಧಿಕಾರ ಸೂತ್ರಗಳನ್ನು ವಹಿಸುವ ಸಮಾರಂಭವು ನಡೆಯುವದಿದೆ. ಆಗ ಅವರು ಯಾವ ಸುಧಾರಣೆಯನ್ನು ಸಂಸ್ಥಾನದಲ್ಲಿ ಮಾಡುವರೆಂದು ಜನರು ನಿರೀಕ್ಷಿಸುತ್ತಿರುವರು.

—ಶ್ರೀಮತಿ ಸರೋಜಿನಿ ನ್ಯಾಡೂರವರು ಈಗ ಡಿಲ್ಲಿಯಲ್ಲಿ ಸ್ವರಾಜ್ಯವಾದಿಗಳ ಕೂಡ ಸಲಹೆಗಳನ್ನು ನಡೆಸುತ್ತಿರುವರು.

—ಬೊಂಬಾಯಿಯ ಮುನ್ಸಿಫಲ್ ಚುನಾವಣೆಯಲ್ಲಿ ಮಿ. ಬಿ. ಜಿ. ಹಾರ್ನಿಮನ್ನರೂ, ಮಿ. ಪಿ. ಜೋಸೆಫ್‌ರವರೂ, ಮಿಸೆಸ್ ಸರೋಜಿನಿ ನ್ಯಾಡೂರವರೂ ವಿಜಯವನ್ನು ಹೊಂದಿರುತ್ತಾರೆ.

—ಡಾ. ರವೀಂದ್ರನಾಥ ಟಾಗೋರ್‌ವರು ಪಂಜಾಬಿನಲ್ಲಿ ನಡೆದ ಅತ್ಯಾಚಾರಗಳಿಗೋಸ್ಕರ ತಮ್ಮ ಸರ್ ಎಂಬ ಬಿರುದನ್ನು ಸರಕಾರಕ್ಕೆ ವಾಪಸು ಕೊಟ್ಟುಬಿಟ್ಟರು. ಈಗ ಇಂತಹ ಬಿರುದುಗಳಿಗೆ ನಿಜವಾದ ಮರ್ಯಾದೆಯಿಲ್ಲವೆಂದು ಇವರು ಪಶ್ಚಾತ್ತಾಪ ಪಟ್ಟು ಒಂದು ಲೇಖನವನ್ನು ಬರೆದಿರುವರು.

—ಇಂಡಿಯಾ ದೇಶದ ಅತ್ಯಂತ ಪಶ್ಚಿಮದಲ್ಲಿರುವ ಕರಾಚಿ ರೇವು ಪಟ್ಟಣದಿಂದ ಲಂಡನ್ ನಗರಕ್ಕೆ ಐದು ದಿವಸಗಳಲ್ಲಿ ವಿಮಾನದಲ್ಲಿ ಹಾರಿ ಹೋಗಲು ಫ್ಲೈಟ್ ಲೆಫ್ಟಿನೆಂಟ್ ಅಲಿವರ್ ಎಂಬವರು ತನ್ನ ಏರೋಪ್ಲೇನನ್ನು ಕರಾಚಿಯಲ್ಲಿ ಸಿದ್ಧಪಡಿಸುತ್ತಿರುವರು. ಈಗ ಕರಾಚಿಯಿಂದ ಲಂಡನಿಗೆ ಜಹಜಿನಲ್ಲಿ ಹೋಗಲು ೧೫ ದಿನಗಳು ಹಿಡಿಯುವುದು.

—ಮಹಾತ್ಮ ಗಾಂಧಿಯವರು ಜನಾಂಗದ ಏಳಿಗೆಗೆ ಮಾಡುತ್ತಿರುವ ಮಹದುಪಕಾರಕ್ಕಾಗಿ ಅವರಿಗೆ ಮದ್ರಾಸ್ ಯೂನಿವರ್ಸಿಟಿಯ ಎಲ್‌ಲ್. ಡಿ. (ಡಾಕ್ಟರ್ ಆಫ್ ಲಿಟರೇಚರ್) ಎಂಬ ಗೌರವ ಪ್ರಾಶಸ್ತ್ಯವನ್ನು ಕೊಡಬೇಕೆಂದು ಸೇಲಂನ ಮಿ| ಕೆ. ವಿ. ಸುಬ್ಬರಾವ್ ಬಿ. ಎ. ಬಿ. ಎಲ್. ಎಂಬವರು ಮುಂದಿನ ಯೂನಿವರ್ಸಿಟಿ ಸೆನೆಟ್ ಮೀಟಿಂಗಿನಲ್ಲಿ ಚರ್ಚೆಗೆ ತರುವವರಾಗಿದ್ದಾರೆ.

—ತಂಜಾವೂರು ಮುನ್ಸಿಪಲ್ ಹೋಲಿನಲ್ಲಿ ಮಹಾತ್ಮಾಜಿಯವರ ಭಾವಚಿತ್ರವನ್ನು ಇಡಬೇಕೆಂಬ ಠರಾವು ಮುನ್ಸಿಫಲ್ ಕೌನ್ಸಿಲಿನಲ್ಲಿ ಬಿದ್ದುಹೋಯಿತು.

—ಪರಸ್ಪರ ಸಹಾಯಕ ಸಂಘಗಳ ಮೆಂಬರರಾದ ಮೇಲೆ ಅವರು ಸೊಸ್ಯಾಟಿಯನ್ನು ಬಿಟ್ಟುಬಿಟ್ಟರೂ ಅವರಿಂದ ಸೊಸ್ಯಾಟಿಗೆ ಏನೂ ಸಲ್ಲುವದು ಇಲ್ಲದೆ ಇದ್ದರೂ ಸೊಸ್ಯಾಟಿಯು ದಿವಾಳಿ ತೆಗೆದರೆ ಆ ಸೊಸ್ಯಾಟಿಯ ಮೆಂಬರರಲ್ಲಿ ಪ್ರತಿಯೊಬ್ಬರೂ ಅದರ ಸಾಲಸಂದಾಯಕ್ಕೆ ಬಾಧ್ಯರೆಂದು ಮದರಾಸು ಹೈಕೋರ್ಟು ಜಡ್ಜರಾದ ಜಸ್ಟಿಸ್ ವಿ. ವಿ. ಶ್ರೀನಿವಾಸ ಅಯ್ಯಂಗಾರರು ನಂಬ್ರ ೧೬೬೭ನೇ ರೋಯಪೇಟೆಯ ಸೊಸ್ಯಾಟಿಯ ದಿವಾಳಿ ನಂಬ್ರದಲ್ಲಿ ತೀರ್ಮಾನಿಸಿರುವರು.

—ತಿರುವಾಂಕೂರು ಈಗಿನ ಮಹಾರಾಜರು ಬಾಲ್ಯಾವಸ್ಥೆಯಲ್ಲಿರುವದರಿಂದ ಈ ರಾಜ್ಯಕ್ಕೆ ಒಂದು ಕೌನ್ಸಿಲ್-ಒಫ್ ರಿಜನ್ಸಿ ಎಂಬ ಸಭೆಯು ನೇಮಿಸಲ್ಪಡುವುದು. ಇದಕ್ಕೆ ಈಗಿನ ಮಹಾರಾಣಿ ರಿಜಂಟರೂ, ಚಿಕ್ಕ ರಾಣಿಯವರೂ, ಸರ್ ಪಿ. ರಾಜಗೋಪಾಲಾಚಾರ್ಯರೂ, ಕೌನ್ಸಿಲಿಗೆ ಮೆಂಬರರಾಗುವರೆಂಬ ವದಂತಿಯಿದೆ.

—ಮುಂಬಾಯಿಯ ಮುನ್ಸಿಪಾಲಿಟಿಯವರು ೪೫,೦೦೦ ರೂಪಾಯಿಯನ್ನು ಮುಂಬಾಯಿಯ ಪಟ್ಟಣದ ಮಲೇರಿಯಾ ಜ್ವರ ನಿವಾರಣೆಗಾಗಿ ಉಪಯೋಗಿಸಿರುವರು.

—ಓಲ್ ಇಂಡಿಯಾ ಸ್ವರಾಜ್ಯ ಪಾರ್ಟಿಯ ಸಭೆಯು ಮಾರ್ಚಿ ತಿಂಗಳ ತಾ. ೭ರಲ್ಲಿ ಸೇರಲಿಕ್ಕಿರುವದು.

—ಮಿಡ್‌ವೈಫ್ ಮತ್ತು ನರ್ಸುಗಳ ರಿಜಸ್ಟ್ರೇಷನ್ ಬಿಲ್ಲು ಸಿಲೆಕ್ಟ್ ಕಮಿಟಿಯವರ ಸಭೆಯ ಮುಂದೆ ಚರ್ಚೆಗೆ ಬರುವದು.

—೧೯೨೮ನೇ ಇಸವಿ ಜನವರಿ ೧ನೇ ತಾರೀಕಿನಿಂದ ಪ್ಲೀಡರಶಿಪ್ ಪರೀಕ್ಷೆಯು ತೆಗೆದು ಹಾಕಲ್ಪಡುವುದೆಂದು ಮದರಾಸು ಹೈಕೋರ್ಟು ಹುಕುಂ ಆಗಿಯದೆ.

—ಇಂಗ್ಲೆಂಡಿನಲ್ಲಿರುವ ಸೆಂಡಹರಸ್ಟ ರೋಯಲ್ ಮಿಲಿಟರಿ ಕಾಲೇಜಿಗೆ ಇಂಡಿಯದ ಯುವಕರನ್ನು ಚುನಾಯಿಸುವುದಕ್ಕಾಗಿ ೧೯೨೬ನೇ ಇಸ್ವಿ ಮೇ ತಿಂಗಳ ಕಡೆಯ ಭಾಗದಲ್ಲಿ ಸಿಮ್ಲದಲ್ಲಿ ಒಂದು ಪ್ರವೇಶ ಪರೀಕ್ಷೆಯು ಆಗುವುದು. ಕ್ಲಾಸುಗಳು ಸಪ್ಟಂಬರ ತಿಂಗಳಲ್ಲಿ ಶುರುವಾಗುವವು. ಕ್ರಿಪ್‌ಗಳು ಇದೇ ತಿಂಗಳ ೨೩ನೇ, ಮಾರ್ಚಿ ತಿಂಗಳ ೨ನೇ, ೯ನೇ, ಮತ್ತು ೧೬ನೇ ತಾರೀಕುಗಳಲ್ಲಿ ಫೋರ್ಟುಸ್ಟೆಂಟು ಜೋರ್ಜಗಜೆಟಿನಲ್ಲಿ ಛಾಯಸ್ ಆಗುವವು.

—ತಿರುವಾಂಕೂರಿನ ಜನ್ಮಭೂಮಿ ಎಂಬ ಪತ್ರಿಕೆಯ ಸಂಪಾದಕರಿಗೆ ೧೨ ತಿಂಗಳ ಕಠಿಣ ಸಜೆಯೂ, ೨೫೦ ರೂಪಾಯಿ ಜುರುಮಾನೆಯೂ ವಿಧಿಸಲಾಯಿತು. ಕ್ರೈಸ್ತರಿಗೆ ವಿರೋಧವಾದ ಲೇಖನಗಳನ್ನು ಬರೆದದ್ದೆ ಕಾರಣವಂತೆ.

—ಇಂದೋರು ಮಹಾರಾಜರ ತನಿಖೆಯಾಗುವ ಕಮಿಶನಿನಲ್ಲಿ ಲೋರ್ಡ ಸಿಂಹರವರು ಮಹಾ ರಾಜರ ಕಡೆಯ ಮೆಂಬರರಾಗುವರಂತೆ.

—ಬರೋಡಾ ಸೈನ್ಯದ ಸೇನಾಧಿಪತಿಯ ಹೆಣವು ರೇಸ್ ಕೋರ್ಸಿನ ಹತ್ತಿರವಿರುವ ಸುಮಾರು ೨೫ ಫೀಟ್ ಆಳವಿರುವ ಬಾವಿಯಲ್ಲಿ ಸಿಕ್ಕಿತಂತೆ! ಯಾರೊ ಕೊಂದುಹಾಕಿರುವರೆಂಬ ಗುಮಾನಿಯಿದೆಯಂತೆ!

ಪುರಾತನ ಕಾಲದಲ್ಲಿ ಇಂಡಿಯದಲ್ಲಿದ್ದ ಅಸ್ಪತ್ರೆಗಳು.

ಡೊಕ್ಟರ ಲಕ್ಷ್ಮಿಪತಿಯವರು ಬೆಂಗಳೂರಲ್ಲಿ ಜರಗಿದ ಆಯುರ್ವೇದಿಕ್ ಸಮ್ಮೇಳನದಲ್ಲಿ ಅರ್ಥಗರ್ಭಿತವಾದ, ಆಯುರ್ವೇದದ ವಿಷಯ ಭಾಷಣಗಳನ್ನು ಕೊಟ್ಟರು. ಅದರಲ್ಲಿ ಕ್ರಿಸ್ತಪೂರ್ವದಲ್ಲಿ ಆಳಿದ ಅಶೋಕ ಮಹಾರಾಯನ ಕಾಲದಲ್ಲಿ ಇಂಡಿಯದ ಎಲ್ಲಾ ಭಾಗಗಳಲ್ಲಿ ಅನೇಕ ಅಸ್ಪತ್ರೆಗಳೂ ಇದ್ದವೆಂದೂ ಆರೋಗ್ಯ ಸೂತ್ರಗಳನ್ನು ತಿಳಿಸುವ ಅನೇಕ ಶಿಲಾಶಾಸನಗಳನ್ನು ಬರೆಸಿ ರಾಜವೈದ್ಯನಾದ ನಾಗಾರ್ಜುನನು ಬರೆಸಿ ಅಲ್ಲಲ್ಲಿ ಸ್ಥಾಪಿಸಿದ್ದನೆಂದೂ ಅದರಲ್ಲಿ ನೇತ್ರರೋಗಗಳ ವಿಷಯ ಅನೇಕ ಸೂತ್ರಗಳು ಇದ್ದವೆಂದೂ ಪಾಟಲಿಪುತ್ರದಲ್ಲಿರುವ ಶಾಸನದಿಂದ ತಿಳಿದು ಬರುತ್ತದೆ. ಅದಲ್ಲದೆ ದೇಶಕ್ಕೆ ಬೇಕಾದ ಮದ್ದುಗಳನ್ನು ತಯಾರಿಸುವ ಕಾರ್ಖಾನೆಯು ರಾಜಧಾನಿಯಾದ ಪಾಟಲೀಪುತ್ರದಲ್ಲಿಯೇ ಇತ್ತೆಂದೂ ಮದ್ದಿನ ಗಿಡಗಳನ್ನು ಬೆಳೆಯ ಮಧ್ಯದಲ್ಲಿ ಒಂದೊಂದು ಸಾಲು ನಡಿಸುತ್ತಿದ್ದರೆಂದೂ ಹೊಟ್ಟೆಯ ಒಪರೇಶನುಗಳನ್ನು ಆ ಕಾಲದಲ್ಲಿ ಮಾಡಿದ್ದರೆಂದು ಶುಶ್ರುತ ಎಂಬ ಗ್ರಂಥದಲ್ಲಿ ಇದೆಯೆಂದೂ ತಿಳಿಸಿರುವರು.

ಕಡೆಗೆ ರಾಜಾಶ್ರಯವು ತಪ್ಪಿ ಗಾಯನದ ವಿದ್ಯೆಯೂ ಚಿತ್ರಕಲೆಯ ವಿದ್ಯೆಯೂ ಶಿಲ್ಪಶಾಸ್ತ್ರವೂ ಅದರೊಡನೆ ವೈದ್ಯಶಾಸ್ತ್ರವೂ ಮೂಲೆಗೆ ಒತ್ತಲ್ಪಟ್ಟಿತೆಂದೂ ಹೇಳಿದರು. ಮೈಸೂರು ಸರಕಾರದವರು ಅನೇಕ ಅಡೆತಟ್ಟುಗಳನ್ನು ಕಟ್ಟಿ ವಿದ್ಯಾಶಕ್ತಿಯನ್ನು ಉಂಟುಮಾಡಿದಂತೆ ಈ ವಿದ್ಯೆಗಳನ್ನು ಮುಂದಕ್ಕೆ ತರಲಿಕ್ಕೆ ಸಾಧ್ಯವೆಂದು ಹೇಳಿದರು.

ದಕ್ಷಿಣ ಕನ್ನಡ.

ಮಂಜೇಶ್ವರ:— ಇದೇ ತಿಂಗಳ ತಾ. ೧೦ನೇ ಬುಧವಾರ ದಿನ ನಡೆಯಲಿಕ್ಕಿದ್ದ ಶ್ರೀಮದನಂತೇಶ್ವರ ದೇವಸ್ಥಾನದ ಟ್ರಸ್ಟಿ ಮೆಂಬರಿಕೆಯ ಚುನಾವಣೆಯಲ್ಲಿ ಉಮೇದ್ವಾರರಾಗಿದ್ದ ರಾ|| ಗಳಾದ ಸರ್ವೋತ್ತಮ ಕಮ್ತಿಯೂ, ಇವರ ಸಹೋದರ ರಾ| ವಾಸುದೇವ ಕಮ್ತಿಯೂ ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದುದರಿಂದ ರಾ| ಮಂಜುನಾಥ ರಾಯಕಮ್ತಿರು ಚುನಾಯಿಸಲ್ಪಟ್ಟರು. ಫಲಿತಾಂಶವನ್ನು ೩ ಗಂಟೆ ಸಮಯ ಓದಿ ಹೇಳುವಾಗ ಈ ಕುರಿತು ಆಕ್ಷೇಪ ಇದ್ದರೆ ತಾ. ೨೫ರೊಳಗೆ ಬರಕೊಳ್ಳಬೇಕಾಗಿಯೂ, ಇವರನ್ನು ಚುನಾಯಿಸಲ್ಪಟ್ಟಿರುವುದಾಗಿಯೂ ಓದಿ ಹೇಳಿದುದರಿಂದ ಅತೀ ಆಶ್ಚರ್ಯಕ್ಕೆ ಕಾರಣವಾಗಿದೆ. ಎಮರಾಯಿಸಲ್ಪಡದೆ ಚುನಾವಣೆ ಹೊಂದಿದ ಈ ಉಮೇದ್ವಾರಿಕೆಗೆ ಯಾವ ತರದ ಆಕ್ಷೇಪಗಳನ್ನು ತರಬಹುದೋ ದೇವರೇ ಬಲ್ಲ!

ಶಿಶುರಕ್ಷಣಾ ಸಪ್ತಾಹವು ತಾ. ೬ ಮತ್ತು ೭ರಲ್ಲು ಬಹು ಸಂಭ್ರಮದಿಂದ ಆಚರಿಸಲ್ಪಟ್ಟಿತು.

ಇಲ್ಲಿಯ ಕಾಯಂ ಪೋಸ್ಟ ಮಾಸ್ತರ ರಾ| ವಿಟ್ಲ ಶೆಣ್ಯಯವರು ಚಾರ್ಜು ವಹಿಸಿಕೊಂಡಿರುವರು.

ಬಂಗ್ರಮಂಜೇಶ್ವರ, ಹೊಸಬೆಟ್ಟು ಮತ್ತು ಉದ್ಯಾವರ ಗ್ರಾಮವನ್ನು ಸೇರಿಸಿ ಒಂದು ಪಂಚಾಯತವನ್ನು ಸ್ಥಾಪಿಸುವರೆ ಪಂಚಾಯತ ರಿಜಿಸ್ಟ್ರಾರ ಜನರಲವರಿಗೆ ಮನವಿಮಾಡುತ್ತಾರಾಗಿ ವಾರ್ತೆ ಇದೆ.

ಪೋಲೀಸ್ ಸಬ್ ಇನ್ಸ್‌ಪೆಕ್ಟರವರ ಬಗ್ಗೆ ಕ್ವಾರ್ಟರ್ಸನ್ನು ಪೋಲಿಸ್ ಲೈನಿನ ಸಮೀಪವೇ ಕಟ್ಟಿಸುವರೆ ಯೋಗ್ಯವಾದ ಸ್ಥಳವನ್ನು ಆರಿಸುತ್ತಾರೆ. ಪೋಲಿಸ್ ಸ್ಟೇಶನನ್ನು ಸಹಾ ಅದರ ಸಮೀಪವೇ ಕಟ್ಟಿಸುವರಾಗಿ ಸಹಾ ವಾರ್ತೆ ಇದೆ.

ಟೌನಿನಲ್ಲಿದ್ದ ಕೆಲವು ಲಾಟೀನು ಕಂಭಗಳನ್ನು ಕಿತ್ತುಕೊಂಡು ಹೋಗಿ ಅನೇಕ ತಿಂಗಳಾದರೂ ಈ ವರೆಗೆ ಹೊಸ ಕಂಭಗಳು ಬಂದಿಲ್ಲ. ಮಿಕ್ಕುಳಿದ ಕೆಲವು ಲಾಟೀನುಗಳು ನಿದ್ರೆ ತೂಗುತ್ತಲಿವೆ. ಈ ವರೆಗೆ ಯಾವ ದುರುಸ್ತಿಯೂ ಕಂಡುಬರುವುದಿಲ್ಲ. ಈ ಫಿರ್ಕಗೆ ಇಬ್ಬರ ತಾಲೂಕು ಬೋರ್ಡು ಮೆಂಬರರಿದ್ದರೂ ಈ ಕೊರತೆಯನ್ನು ಹೋಗಲಾಡಿಸಲಾರರೇ?

ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಲಿರುವ ನಾಟಕದ ಕುರಿತು ಬರೆದ ವಾರ್ತೆಯನ್ನು ಎಮರಾಯಿಸಿ "ಕಂಠೀರವ"ದಲ್ಲಿ ಒಂದು ವಾರ್ತೆಯು ಬಂದಿರುತ್ತದೆ. ಕಂಠೀರವದಲ್ಲಿ ಕೇಳಬರುವ ನಾಟಕವಲ್ಲದೆ ಸದರಿ ನಾಟಕವು ನಡೆಯಲಿಕ್ಕಿರುತ್ತದೆ. ಶಾಲಾ ಉಪಾಧ್ಯಾಯರು ಬಾಲಕರಿಗೆ ಅಭಿನಯಗಳನ್ನು ಕಲಿಸುವದನ್ನು ಕಣ್ಣಾರೆ ನೋಡಿ ಬರೆದ ವಾರ್ತೆಗೆ ಅಲ್ಲದಸಲ್ಲದ ಶಬ್ದಗಳನ್ನು ಹಾಕಿ ಸದರಿ ವಾರ್ತೆಯನ್ನು ಬರೆದುದರಿಂದ ಯಾವ ಲಾಭವೂ ಕಂಠೀರವದ ವಾರ್ತಾದಾರನಿಗೆ ಸಿಕ್ಕಲಾರದು. ವಾರ್ತಾದಾರನು ಶಾಲೆ ಬಳಿಗೆ ಹೋಗಿ ಉಪಾಧ್ಯಾಯರಿಂದ ತಿಳಕೊಳ್ಳುವುದು ಲೇಸು.

ಪುತ್ತೂರು: — ನಂಬ್ರ ೩೯೦ನೇ ಪುತ್ತೂರು ಕೃಷಿಕರ ಭೂಮಿ ಸಾಲೆಯ ಸಹಕಾರಿ ಸಂಘ, ಲಿಮಿಟೆಡ್ ಈ ಸಂಘದ ಮಹಾಸಭೆಯನ್ನು ಮುಂದರಿಸಿದ್ದು ಪುನಹಾ ಇದೇ ಬರುವ ಮಾರ್ಚಿ ತಾ. ೭ನೇ ಆದಿತ್ಯವಾರ ಅಪರಾಹ್ನ ಘಂಟೆ ೪ಕ್ಕೆ ಪುತ್ತೂರು ಸಹಕಾರ ಸಂಘಗಳ ಮಂದಿರ (Puttur Co-operative Buildings)ದಲ್ಲಿ ಸೇರುವುದು.

ಎಂದಿನಂತೆ ಇಲ್ಲಿ ಈ ವರ್ಷವೂ ಆರೋಗ್ಯ ಮತ್ತು ಶಿಶು ಸಪ್ತಾಹವು ಇದೇ ತಿಂಗಳ ತಾ. ೧೧ರಿಂದ ತಾ. ೭೮ ತನಕ ಬಹಳ ವಿಜೃಂಭಣೆಯಿಂದ ಜರಗಿತು. ಭಜನೆ ಮಾಡುತ್ತಾ ನಗರ ಪರಿಭ್ರಮಣ ಮಾಡುತ್ತಲಿದ್ದ ತರುಣರ ಕೂಟವು ನೋಟಕ್ಕೆ ಆಂದವಾಗಿತ್ತು. ಏಳು ದಿನಗಳ ಪರ್ಯಂತರವೂ ಕೋರ್ಟು ಮೈದಾನಿನಲ್ಲಿ ಆರೋಗ್ಯ ವಿಷಯಕ ಭಾಷಣಗಳ ಸುರಿಮಳೆಯು ಭೋರ್ಗರೆಯಿತು. ವಿದ್ಯಾರ್ಥಿಗಳ ವಿಧವಿಧದ ವಿನೋದಕರ ಸ್ಪರ್ಧೆಗಳು, ಸ್ಕಾಕಲ್ ಪಂದ್ಯಾಟಗಳು, ನಾಲ್ಕೈದು ಪಂಗಡಗಳ (teams) ಬೆಡ್ಮಿಂಟನ್ ಪಂದ್ಯಾಟಗಳು ಜರಗಿಸಲ್ಪಟ್ಟಿದ್ದವು. ಕೊನೆಯ ದಿನ ಪಂದ್ಯಾಟಗಳಲ್ಲಿ ಜಯವಂತರಾದವರಿಗೆ ಇನಾಮುಗಳು ಹಂಚಲ್ಪಟ್ಟವು. 'ಬೆಡಮಿಂಟನ್' ಸ್ಪರ್ಧೆಯಲ್ಲಿ ವಿಜಯಹೊಂದಿದ ಶ್ರೀ ಶಾರದಾ ವಾಚಕ ಮಂದಿರದ ಟೀಮಿಗೆ ಬೆಳ್ಳಿಯ ಪದಕ್ಕ (Silver shield)ವು ವಿಜೃಂಭಣೆಯಿಂದ ಕೊಡಲ್ಪಟ್ಟಿತು.

ಸುಳ್ಯ: — ಇಲ್ಲಿಯ ಆರೋಗ್ಯ ಸಪ್ತಾಹವು ಇತರ ಕಡೆಗಳಂತೆ ಇಲ್ಲಿಯೂ ತಾ. ೧—೨—'೨೬ರಿಂದ ೭—೨—'೨೬ರ ವರೇಗೆ ಬಹು ವಿಜೃಂಭಣೆಯಿಂದ ಜರಗಿತು.

ಬಂಟವಾಳ: — ಇಲ್ಲಿಯ ಸಬ್ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ತನಿಖೆಯಾಗುತ್ತಿದ್ದ ಕಾರಂಜೆ ಕೊಲೆಪಾತಕದ ನಂಬ್ರವನ್ನೂ, ಮಗುವನ್ನು ಕೆಳಗೆ ಹಾಕಿ ಕೊಂದಳೆಂಬ ಆಪಾದನೆ ಪಟ್ಟ ಕೆಥೋಲಿಕ ಹೆಂಗಸಿನ ನಂಬ್ರವನ್ನು ಸೆಶ್ಶನ್ಸಿಗೆ ಕಮಿಟು ಮಾಡಿರುವರು. ಇದನ್ನು ಕಮಿಟು ಮಾಡಿದ ಕೂಡಲೆ ಸುಳ್ಯೇರಿ ಕೊಲೆಪಾತಕದ ನಂಬ್ರವು ಬಂತೇ ಬಂತು.

ಇಲ್ಲಿಯ ನೆರೆಗ್ರಾಮಗಳಾದ ಅಮಟಾಡಿ, ಮೂಡ, ಕಳ್ಳಿಗೆ ಈ ಮೂರು ಗ್ರಾಮಗಳಿಗೆ ಮೊಡಂಕಾಪಿನಲ್ಲಿ ಒಂದು ಬ್ರೇಂಚ್ ಪೋಸ್ಟ್ ಆಫೀಸನ್ನು ತೆರೆಯಬೇಕೆಂದು ಬಂಟ್ವಾಳ ಇಗರ್ಜಿಯ ವಿಕಾರ ಒಫ್ ಫೊರಾರವರು ಪೋಸ್ಟು ಮಾಸ್ಟರ ಜನರಲ್‌ರವರಿಗೆ ಮನವಿಮಾಡಿಕೊಂಡಿರುವರು.

ಇಲ್ಲಿಯ ಶ್ರೀ ತಿರುಮಲ ದೇವಸ್ಥಾನವನ್ನು ಸಂದರ್ಶಿಸುವ ರಿಲಿಜಸ್ ಎಂಡೌಮೆಂಟ ಬೋರ್ಡಿನ ಮಲಬಾರು ಮತ್ತು ದಕ್ಷಿಣಕನ್ನಡ ಜಿಲ್ಲೆಗಳ ಇನ್ಸ್‌ಪೆಕ್ಟರರವರು ಸಂದರ್ಶಿಸಿ ದೇವಸ್ಥಾನದ ಕಟ್ಟೋಣಗಳೂ, ಉಪಕರಣಗಳೂ ಬಹಳ ಉತ್ತಮ ರೀತಿಯಲ್ಲಿವೆ ಎಂದೂ ಈ ದೇವಸ್ಥಾನದ ಆಡಳಿತೆ ನಮೂನೆಯ ಆಡಳಿತೆಯು ಬೇರೆ ಯಾವ ದೇವಸ್ಥಾನದಲ್ಲಿಯೂ ಇಲ್ಲವೆಂದು ಸಂತೋಷಪಟ್ಟರು. ಇವರು ಎರಡು ದಿವಸಗಳ ವರೆಗೆ ಇಲ್ಲಿಯ ಟೆಂಪಲ್ ಫ್ರೀ ಎಲಿಮೆಂಟರಿ ಶಾಲೆಯಲ್ಲಿ ಉಳಕೊಂಡಿದ್ದರು.

ಇಲ್ಲಿಯ ರಥೋತ್ಸವವು ಬಹಳ ಒಳ್ಳೇ ರೀತಿಯಿಂದ ನಡಿಯಿತು. ಊರುಪರವೂರು ಗೃಹಸ್ಥರೂ, ಮಹಿಳೆಯರೂ, ಎಲ್ಲಾ ಜಾತಿಯವರೂ ಕೂಡಿ ಸುಮಾರು ನಾಲ್ಕು ಸಾವಿರ ಜನರು ನೆರೆದಿದ್ದರು.

ಈ ವರ್ಷ ಅನೇಕ ಕಟ್ಲೇರಿ ಸಂತೆಗಳೂ, ಮಿಠಾಯಿ ಸಂತೆಗಳೂ, ಹಿತ್ತಾಳೆ ಕಂಚಿನ ಪಾತ್ರದ ಸಂತೆಗಳೂ ಬಂದಿವೆ. ಅದಲ್ಲದೆ ಅಮೇರಿಕದ ಯಕ್ಷಿಣಿ ವಿದ್ಯೆಯನ್ನು ತೋರಿಸುವ ಒಂದು ನಾಟಕವೂ ಬಂದಿತ್ತು. ಇದು ಬಹಳ ವಿಚಿತ್ರವಾಗಿದೆ.

ಮಂಗಳೂರಿನಿಂದ ಬಂಟವಾಳದ ೧೨ನೇ ಮೈಲುಕಲ್ಲಿನ ಹತ್ತಿರ ವಳವೂರು ಎಂಬಲ್ಲಿಗೆ ಸರಕಾರಿ ಮಾರ್ಗದಿಂದ ಜೋರಿನಿಂದ ಬರುತ್ತಿದ್ದ ಒಂದು ಮೋಟಾರಿನಲ್ಲಿ ಬಟ್ಕಳದ ಒಬ್ಬ ಐಶ್ವರ್ಯವಂತ ನವಾಯತರು ಮಡಿಕೇರಿಗೆ ಹೋಗುತ್ತಿದ್ದರು. ಇವರಿಗೆ ೧೨ ಗಂಟೆಗೆ ಮಡಿಕೇರಿಗೆ ಮುಟ್ಟಬೇಕಂತೆ. ಅದೇ ದಾರಿಯಾಗಿ ಮಂಗಳೂರಿಗೆ ಮದುವೆಗೆ ಹೋಗಿ ಹಿಂತಿರುಗಿ ಬರುತ್ತಿದ್ದ ಕೊಟ್ಯಾರಿ ಜಾತಿಯ ಒಬ್ಬ ಗಂಡಸೂ ಇಬ್ಬರು ಹೆಂಗುಸರೂ ಬರುತ್ತಿದ್ದರು. ಮೋಟಾರಿನ ರಭಸಕ್ಕೆ ಆ ಗಂಡಸು ಮೋಟಾರಿನ ಅಡಿಗೆ ಬಿದ್ದು ಆ ಬಂಡಿಯು ಆತನ ತೊಡೆಗಳ ಮೇಲಿನಿಂದ ಹೋಯಿತು. ಆಗ ಬಲ ಕಾಲಿನ ಹಿಮ್ಮಡಿಗೂ, ಗಂಟಿಗೂ ಕಠಿಣ ಪೆಟ್ಟಾಗಿಯದೆ. ಆವಾಗ ವಳವೂರಿನ ಇಬ್ಬರು ಮಾಪಿಳ್ಳೆಯರು ಇದನ್ನು ನೋಡಿ ಮೋಟಾರನ್ನು ನಿಲ್ಲಿಸಿ ಆ ಗಂಡಸನ್ನೂ, ಹೆಂಗಸರನ್ನೂ ಅದರಲ್ಲಿ ಕುಳ್ಳಿರಿಸಿ, ಇಬ್ಬರು ಮಾಪಿಳ್ಳೆಯರೂ ಅದರಲ್ಲಿ ಕುಳಿತು ಬಂಟವಾಳ ಆಸ್ಪತ್ರೆಗೆ ತಂದರು. ದಾಕ್ತರರು ಆ ಗಂಡಸಿಗೆ ಕ್ಲೋರೋ ಫೋರ್ಮ್ ಕೊಟ್ಟು ಗಾಯಗಳನ್ನು ಬೆಂಡೇಜು ಮಾಡಿದರು. ಹೆಂಗಸರಿಬ್ಬರು ಅಳುತ್ತಾ ಆಸ್ಪತ್ರೆಯ ಬೆಂಚಿನ ಮೇಲೆ ಕುಳಿತಿದ್ದರು. ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದ ಕೆಲವು ಬಂಟಮಹಾನಿಯರು ಕೂಡಲೆ ಕಲ್ಲಡ್ಕದಲ್ಲಿರುವ ಅವರ ಮನೆಗೆ ಜನ ಕಳುಹಿಸಿದರು. ಆತನಿಗೆ ಬೋಧ ಬರುವ ವರೆಗೆ ಆ ಇಬ್ಬರು ಹೆಂಗಸರೂ ಒಪರೇಶನ್ ಟೇಬಲಿನ ಆಚೆ ಈಚೆ ನಿಂತಿದ್ದರು. ಮೋಟಾರಿನಲ್ಲಿ ಕೂತ ನವಾಯತ ಮಹನೀಯರು ಆಚೆ ಈಚೆ ತಿರುಗಾಡುತ್ತಾ ಇದ್ದು, ಥಕ್ಕನೆ ಮೋಟಾರು ಬಿಟ್ಟು ಪೆಟ್ಟು ತಾಗಿದ ಆ ಬಡವನಿಗೆ ಒಂದೇ ಒಂದು ಪೈ ಪರಿಹಾರದ ದ್ರವ್ಯವನ್ನಾದರೂ ಕೊಡದೆ ಮೋಟಾರು ಬಿಟ್ಟು ಮಡಿಕೇರಿಗೆ ನಡದೇ ಬಿಟ್ಟರು. ಈ ನವಾಯತ ಮಹನೀಯರು ಇನ್ನಾದರೂ ಮಡಿಕೇರಿಯಿಂದಾಗಲೀ ಅಥವಾ ಊರಿಗೆ ಮುಟ್ಟಿದ ಮೇಲಾಗಲೀ ಮನಿಯಾರ್ಡರ ಮೂಲಕವಾದರೂ ಏನಾದರೂ ಪರಿಹಾರ ದ್ರವ್ಯ ಕಳುಹಿಸಿದರೆ ಒಳ್ಳೇದಿತ್ತು. ಬಡವರ ಜೀವಕ್ಕೆ ಬೆಲೆಯಿಲ್ಲವೆ?

ಅಳದಂಗಡಿ ಸುಳ್ಕೇರಿ: — ಇಲ್ಲಿಯ ಒಬ್ಬ ಮಹನ್ನ ಹೆಂಡತಿಯು ದುರ್ವಾಸನ ಯುಳ್ಳಳೆಂದು ಅವಳನ್ನು ಚೂರಿಯಿಂದ ತಿವಿದು ಕೊಂದನಂತೆ ಅಲ್ಲದೆ ತನ್ನನ್ನೂ ಚೂರಿಯಿಂದ ತಿವಿದುಕೊಂಡನಂತೆ ಹೆಂಡತಿಯ ಶವವನ್ನು ಪೋಸ್ಟ ಮೋರ್ಟಮಿಗೆ ಕಾರ್ಕಳ ಆಸ್ಪತ್ರೆಗೆ ಒಯ್ದರು. ಗಂಡನನ್ನು ಕೈದು ಮಾಡಿ ಬಂಟವಾಳ ಸ್ಟೇಶನಿಗೆ ತೆಗೆದುಕೊಂಡು ಹೋಗಿರುವರು. ಹೆಂಡರು ವ್ಯಭಿಚಾರಿಣಿಗಳಾದರೆ ಅವರನ್ನು ಅವರ ತಾಯಿ ಮನೆಗೆ ಕೊಂಡುಹೋಗಿ ಬಿಟ್ಟು ತಾನು ಎರಡನೇ ಮದುವೆಯಾಗುವುದು ಎಷ್ಟೋ ಒಳ್ಳೇಯದು. ಸ್ತ್ರೀಹತ್ಯ, ಆತ್ಮಹತ್ಯ ದೋಷವನ್ನು ಹೊತ್ತುಕೊಳ್ಳುವದಕ್ಕಿಂತ ಇದು ಎಷ್ಟೋ ಮೇಲು. ಪಾಶ್ಚಿಮಾತ್ಯ ನಾಗರೀಕತೆಯೊಡನೆ ಪತಿವ್ರತಾ ಧರ್ಮವು ಕೆಟ್ಟುಹೋಯಿತು. ವ್ಯಭಿಚಾರಿಣಿಯಾದ ಹೆಂಡತಿಯನ್ನು ತವರುಮನೆಗೆ ತೆಗೆದುಕೊಂಡು ಹೋಗಬಿಟ್ಟರೆ, [illegible] ಕಡಿಮೆಯಾಗಿ ಪೋಲಿಸ ಇಲಾಖೆಗೂ, [illegible] ಇಲಾಖೆಗೂ, [illegible] ಕೆಲಸವು ಬಹಳ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ.

ಪಾಣೆಮಂಗಳೂರು: — ಇಲ್ಲಿಗೆ ಬರುವ ವಿ. ಪಿ. ಇನ್ಸೂರ ಮಣಿಯಾರ್ಡರ, ಟೆಲಿಗ್ರಾಮುಗಳನ್ನು ಬಂಟವಾಳ ಸಬ್ ಪೋಸ್ಟ ಆಫೀಸಿನಿಂದ ಇಲ್ಲಿಗೆ ತರಬೇಕಾಗುತ್ತದೆ. ಮೇಲಿನ ಇನಮುಗಳು ಬಂಟವಾಳ ಆಫೀಸಿಗೆ ಬರತಕ್ಕವುಗಳು ಹೆಚ್ಚಿನವು ಈ ಊರಿನವುಗಳು. ಆದುದರಿಂದ ಇಲ್ಲಿಯೇ ಒಂದು ಕಂಬ್ಯಾಂಡ್ ಸಬ್ ಪೋಸ್ಟ ಆಫೀಸನ್ನು ಸರಕಾರದವರು ಇಟ್ಟರೆ ಎಷ್ಟೋ ಒಳ್ಳೇದಿತ್ತು. ಟೆಲಿಗ್ರಾಫ್ ಕಂಬಗಳನ್ನು ಹೊಸತಾಗಿ ನಡುವ ಅಗತ್ಯವೇ ಇಲ್ಲ. ಪುತ್ತೂರಿಗೆ ಹೋಗುವ ಲ್ಯಾನು ಈ ಊರಿನ ಮಧ್ಯದಿಂದಲೇ ದಾಟಿಹೋಗುತ್ತದೆ.

ಇಲ್ಲಿಯ ಸಂಕದ ಎರಡೂ ಕಡೆಗಳಲ್ಲಿ ಸಾಧಾರಣ ತರದ ಸಣ್ಣ ಸಣ್ಣ ಸಂಕಗಳಿಗೆ ಬೇಕಾಗುವ ನೂರಾರು ಗರ್ಡರುಗಳು ಮಣ್ಣಿನಲ್ಲಿ ಬಿದ್ದುಕೊಂಡಿವೆ. ಇತರ ಸಂಕಗಳನ್ನು ಕಟ್ಟಿಸಲಿಕ್ಕೆ ಡಿಸ್ಟ್ರಿಕ್ಟಬೋರ್ಡಿನಲ್ಲಿ ಹಣವಿಲ್ಲದಿದ್ದರೆ ಅವುಗಳನ್ನು ಡಿಸ್ಟ್ರಿಕ್ಟ ಬೋರ್ಡು ಇಂಜಿನಿಯರರ ಆಫೀಸಿಗಾದರೂ ಕೊಂಡುಹೋಗಿ ಇಟ್ಟರೆ ಮಣ್ಣುಪಾಲಾಗಿ ಹೋಗುವುದಾದರೂ ತಪ್ಪೀತಲ್ಲವೇ! ಕ್ರಯಕೊಟ್ಟು ತೆಗೆದುಕೊಂಡ ಗರ್ಡರುಗಳಲ್ಲವೆ? ಒಬ್ಬರೇ ಒಬ್ಬ ಡಿಸ್ಟ್ರಿಕ್ಟ ಬೋರ್ಡು ಮೆಂಬರರಾದರೂ ಇದರ ವಿಷಯ ಗಮನಕೊಡದೆ ಇದ್ದದ್ದು ಪರಮಾಶ್ಚರ್ಯವಾಗಿದೆ.

ಕಾರಿಂಜೆ: — ಇಲ್ಲಿಯ ಕಾರಿಂಜೇಶ್ವರ ದೇವಸ್ಥಾನದ ಜಾತ್ರೆಯು ಮುಗಿಯಿತು. ಹ್ಯಾಗೂ ರಥಕ್ಕೆ ತುಂಬಾ ಪತಾಕೆಗಳನ್ನು ಮಾಡಿಸಿದ್ದಾರೆ. ಆದರೆ ಪಾರ್ವತಿ ದೇವಸ್ಥಾನದ ರಥಕ್ಕೆ ಕೊಟ್ಟಿಗೆಯನ್ನು ಕಟ್ಟಿಸಿದ್ದು ಕಂಡುಬರುವುದಿಲ್ಲ. ಪಾರ್ವತಿ ದೇವಸ್ಥಾನದಿಂದ ಈಶ್ವರ ದೇವಸ್ಥಾನಕ್ಕೆ ಹೋಗುವ ಹಾಳಾದ ಮೆಟ್ಟಿಲುಗಳನ್ನು ಸರಿಪಡಿಸಲಿಲ್ಲ.

ಈ ವರ್ಷ ಸರಕಾರದ ಕಡೆಯಿಂದ ೩೦ ರೂಪಾಯಿ ಖರ್ಚುಮಾಡಿ ಉರಿಸುತ್ತಿದ್ದ ದೀಪಗಳು ಇಲ್ಲದೆ ಹಾದಿಯನ್ನು ಹತ್ತಿ ಪಾರ್ವತಿ ದೇವಸ್ಥಾನಕ್ಕೆ ಹೋಗುವುದು ಬಹಳ ಕಷ್ಟವಾಯಿತು. ಸಾಧಾರಣ ಉತ್ಸವ ಮುಗಿಯುವ ಸಮಯಕ್ಕೆ ಮೂರು ಗೇಸ್‌ಲ್ಯಾಟುಗಳು ಬಂದವು ಹೋದವು.

ಗದಾ ತೀರ್ಥದಲ್ಲಿ ಯಾರಾದರೂ ಕಾಲು ತೊಳೆಯದ ಹಾಗೂ ಮಲಮೂತ್ರ ವಿಸರ್ಜನೆಮಾಡಿ ತಿಳಿ ತೊಳೆಯದಂತೆಯೂ ಜಾಗ್ರತೆಮಾಡಿದ್ದರು. ಕಟಾರಗಳಲ್ಲಿ ನೀರು ತುಂಬಿಸಿಟ್ಟು ಕೈಕಾಲು ತೊಳೆಯಲಿಕ್ಕೆ ಮಣ್ಣಿನ ಕುಜಲಿಗಳನ್ನು ಬೇಕಾದಷ್ಟು ಒದಗಿಸಿದ್ದಾರೆ. ಗದಾ ತೀರ್ಥದ ಬದಿಗಳನ್ನೂ ಅದರ ಮಧ್ಯದಲ್ಲಿರುವ ಮಂಟಪವನ್ನೂ ದುರುಸ್ತಿಪಡಿಸುವ ಕಾಲವು ಯಾವಾಗ ಬರುತ್ತದೋ ನೋಡಲಿಕ್ಕಿದೆ. ಉಡುಪಿ ಕೃಷ್ಣಾಪುರ ಮಠದ ಶ್ರೀಪಾದಂಗಳವರು ಕಾರಿಂಜೆ ದೇವಸ್ಥಾನ, ಮೆಟ್ಟಿಲುಗಳು, ಗದಾತೀರ್ಥ ಮುಂತಾದವುಗಳನ್ನು ದುರುಸ್ತಿಪಡಿಸುವ ಆಲೋಚನೆಯಲ್ಲಿದ್ದಾರೆಂದು ಬಹಳ ಪುಕಾರೆಯಿತ್ತು. ಆದರೆ ಕೆಲಸವೇನೂ ಕಂಡುಬರುವುದಿಲ್ಲ.

ಕಾಸರಗೋಡು: — ಇಲ್ಲಿ ಶ್ರೀ ದತ್ತಾತ್ರೇಯ ಮೋಟರ್ ಸರ್ವಿಸ್ ಎಂಬ ಹೆಸರಿನ ಮೋಟರ್ ಸರ್ವಿಸ್ ಇಲ್ಲಿಂದ ಸುಳ್ಯದ ವರೇಗೆ ಚಲಾವಣೆಯಾಗಲು ಶುರುವಾಗಿಯದೆ. ಜಾಲ್ಸೂರು ದಾರಿಯಾಗಿ ಸುಬ್ರಮ್ಹಣ್ಯದ ವರೇಗೆ ಇಟ್ಟರೆ ಒಂದೇ ವರ್ಷದಲ್ಲಿ ಇವರಿಗೆ ಮೋಟರಿನ ಕ್ರಯದ ಹಣವು ಭರ್ತಿಯಾಗುವುದರಲ್ಲಿ ಸಂದೇಹವಿಲ್ಲ.

ಬೆಳ್ಳೆ: — ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ಬಹಳ ವಿಜೃಂಭಣೆಯಿಂದ ಜರಗಿತು

ಕುಂದಾಪುರ: — ಯಕ್ಷಗಾನ ಪುನರುಜ್ಜೀವಿನಿ ಪ್ರಾಂತಿಕ ಪರಿಷತ್ತು ಬರುವ ಮೇ ತಿಂಗಳಲ್ಲಿ ಬಳ್ಕೂರಿಯಲ್ಲಿ ಕೂಡುವದಂತೆ.

ಬಳ್ಕಾಡು: — ಈ ಗ್ರಾಮದಲ್ಲಿ ಚಪ್ಪರಿಕಾರ ಜಾತಿಯ ಅಣ್ಣ ತಮ್ಮಂದಿಯರಿಬ್ಬರಾದ ಐತ ಮತ್ತು ಅಪ್ಪು ಎಂಬವರು ಜಗಳವಾಡಿಕೊಂಡಿರುವಾಗ ಬಿಡಿಸಲಿಕ್ಕೆ ಹೋದ ಮುತ್ತಪ್ಪ ಬಂಟನಿಗೆ ಪೆಟ್ಟುತಾಗಿ ಗಾಯವಾಗಿ ಪುತ್ತೂರು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಯ್ಯಲ್ಪಟ್ಟವನು ಮೃತಪಟ್ಟನು. ಇಬ್ಬರ ಜ್ಯಾಯ, ಮೂರನೆಯವನ ಪ್ರಾಣನಷ್ಟ!

ಮಂಗಳೂರು.

ಇದೇ ಫೆಬ್ರವರಿ ೨೧ನೇ ತಾರೀಕ್ಕಿನಿಂದ ಕೊ-ಒಪರೇಟಿವ್ ಬಿಲ್ಡಿಂಗ್ಸ್ ಕೊಡಿಯಾಲಬೈಲ್ ಈ ಕಟ್ಟೋಣದಲ್ಲಿ "ಸಹಕಾರ ಪ್ರಚಾರ" ಎಂಬದರ ವಿಷಯದಲ್ಲಿ ಭಾಷಣಗಳಾಗುವವು. ಪ್ರಥಮ ಭಾಷಣವು 'ಸಹಕಾರ ದೇವಾಲಯ' (ಕನ್ನಡದಲ್ಲಿ) ಮ। ರಾ। ಉಳ್ಳಾಲ ಮಂಗೇಶರಾಯರಿಂದ ಸದರಿ ದಿವಸ ಸಾಯಂಕಾಲ ೫ ಗಂಟೆಗೆ ಕೊಡಲ್ಪಡುವುದು. ಸರ್ವರಿಗೂ ಸುಸ್ವಾಗತವಿದೆ.

ಇದೇ ಬರುವ ಮಾರ್ಚಿ ತಿಂಗಳ ತಾ. ೩ಕ್ಕೆ ಮಂಗಳೂರು ರೆವಿನ್ಯೂ ಡಿವಿಜನಲ್ ಆಫೀಸಿನಲ್ಲಿ ಶ್ಯಾಮ ಗಂಟೆ ೫ಕ್ಕೆ ತಾಲೂಕು ಸೋಲ್ಜರ್ ಕಮಿಟಿಯವರ ಸಭೆಯು ಸೇರುವದು. ಸೇನಾಸೇವೆಯಿಂದ ನಿವೃತ್ತಪಟ್ಟವರಲ್ಲಿ ಯಾರಿಗಾದರೂ ಈ ಸಭೆಯಲ್ಲಿ ವಿಜ್ಞಾಪಿಸಿಕೊಳ್ಳುವದಿದ್ದರೆ ಅಂಥವರು ಈ ಸಭೆ ಕೂಡುವ ಸಂದರ್ಭದಲ್ಲಿ ಹಾಜರಾಗಬಹುದು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನ ಅಧಿವೇಶನವು ಇದೇ ತಿಂಗಳ ತಾ. ೨೭ನೇ ಶನಿವಾರ ಮಧ್ಯಾಹ್ನ ೩ ಗಂಟೆಗೆ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜರಗುವದು.

ಇಲ್ಲಿಯ ಗೋಕರ್ಣಮಠ ಎಲಿಮೆಂಟರಿ ಶಾಲೆಯನ್ನು ಶ್ರೀ, ವೆಂಕಟರಮಣ ದೇವಸ್ಥಾನದ ಆಡಳಿತ ಕಮಿಟಿಯವರು ವಹಿಸಿಕೊಂಡು ದೇವಸ್ಥಾನದ ಕಡೆಯಿಂದಲೇ ನಡಿಸುವ ಆಲೋಚನೆಯು ನಡಿಯುತ್ತದೆಂದು ತಿಳಿದುಬರುತ್ತದೆ.

ಮಡಿಕೇರಿ ಗುಡ್ಡೆಯ ಬಳಿ ಒಂದು ಮಾರ್ಕೇಟನ್ನು ತೆರೆಯಬೇಕೆಂದು ಮುನ್ಸಿಫಲ್ ಕೌನ್ಸಿಲಿನಲ್ಲಿ ನಿರ್ಣಯವಾಗಿದೆ.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಮೆಡಿಕಲ್ ಆಫೀಸರರಾದ ಕರ್ನಲ್ ಜೆ. ಕರ್ಕಪ್ಯಾಟ್ರಿಕರವರಿಗೆ ಉಟಕಮಂಡಿಗೆ ವರ್ಗವಾಗಿ ಅವರ ಬದಲಿಗೆ ಮೆಜರ್ ಬರಡ್ ಐ. ಎಮ್. ಎಸ್‌ರವರು ಜಿಲ್ಲಾ ಮೆಡಿಕಲ್ ಆಫೀಸರರಾಗಿ ನೇಮಕಗೊಂಡಿರುವರು.

ಗವರ್ನಮೆಂಟ ಕೊಲೇಜಿನ ಮುಂದುಗಡೆ ಕಟ್ಟೋಣದಲ್ಲಿ ಇಷ್ಟರವರೆಗೆ ಇದ್ದ [illegible] ಆಫೀಸನ್ನು [illegible].

ಮದರಾಸು ನ್ಯಾಯವಿಧಾಯಕ ಸಭೆಯ ಮೆಂಬರರಾದ ಶ್ರೀಯುತ ಎಸ್. ಸತ್ಯಮೂರ್ತಿಯವರು ಇದೇ ತಿಂಗಳ ತಾ. ೨೨ನೇ ಸೋಮವಾರ ಬೆಳಿಗ್ಗಿನ ರೈಲುಗಾಡಿಯಲ್ಲಿ ಬಂದು ಇಲ್ಲಿ ತಲುಪುವರು. ಅದೇ ದಿನ ಸಂಜೆಗೆ ೪॥ ಗಂಟೆಗೆ ಕೊಡಿಯಾಲಬೈಲಲ್ಲಿರುವ ಶ್ರೀಯುತ ವಕೀಲ ರಾಮಕೃಷ್ಣ ಕಾರಂತರ ಮನೆಯಲ್ಲಿ ಕೊಂಗ್ರೆಸ್ ಮತ್ತು ಸ್ವರಾಜ್ಯಪಾರ್ಟಿಯ ಸಭೆಯು ಸೇರುವುದು. ಆಗ ಇವರ ಭಾಷಣವು ಇರುವದು. ಅದೇ ಸಾಯಂಕಾಲ ೬ ಗಂಟೆಗೆ ಮೈನುಮೈದಾನಿನಲ್ಲಿ ಕೊಂಗ್ರೆಸ್ ಮತ್ತು ಬರುವ ಚುನಾವಣೆಯ ವಿಷಯ ಭಾಷಣಮಾಡುವರು.

ಮದರಾಸಿನ ಹಿಂದೂ ಮಹಿಳಾ ಸಭೆಯ ಕಾರ್ಯದರ್ಶಿಯವರಾದ ಮಿಸೆಸ್ ಕಜನ್ಸರವರು ಇಲ್ಲಿಗೆ ಬಂದು ಥಿಯೋಸೊಫಿಕಲ್ ಲೋಜಿನಲ್ಲಿಯೂ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿಯೂ "ಹಿಂದೂ ಸ್ತ್ರೀಯ ಭವಿಷ್ಯ" ಎಂಬುದರ ವಿಷಯ ಭಾಷಣವಿತ್ತರು.

ಈ ತಿಂಗಳ ೧೩ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನ್ಸಿಪಾಲಿಟಿಯಲ್ಲಿ ಉಂಟಾದ ಮರಣ ೨೬, ಇದರಲ್ಲಿ ೭ವರ್ಷದ ಮಗು ಒಂದು ಸಿಡುಬಿನಿಂದ ಮಾರ್ಕೆಟ್ ವಾರ್ಡಿನಲ್ಲಿ ವೆಂಕಟ್ರಮಣ ದೇವಸ್ಥಾನದ ವಠಾರದಲ್ಲಿ ಮೃತವಾದುದಾಗಿದೆ.

ಕಳೆದ ವಾರ ಇಲ್ಲಿಯ ಎಲೋಸಿಯುಸ್ ಕೊಲೇಜ್ ಮತ್ತು ಗವರ್ನಮೆಂಟ್ ಕೊಲೇಜುಗಳೊಳಗೆ ನಡೆದ ಟೆನ್ನಿಸ್ ಪಂದ್ಯಾಟದಲ್ಲಿ ಎಲೋಸಿಯುಸ್ ಕೊಲೇಜಿನವರು ಗೆದ್ದಿರುವರು. ಎಲೋಸಿಯುಸ್ ಕೊಲೇಜಿನ ಪರವಾಗಿ ಸ್ಪರ್ಧೆಗೆ ನಿಂತವರಲ್ಲಿ ರಾಮಕೃಷ್ಣ ವಿದ್ಯಾರ್ಥಿ ಭವನದ ರಾಜೀವಸೆಟ್ಟಿ ಒಬ್ಬರಾಗಿರುವರು.

"ನಾನು ಮುನಿಸಿಪಲ್ ಸದಸ್ಯನಾಗಿದ್ದರೆ—"

ಶ್ರೀ। ಧರ್ಮಪಾಲ ಅಷ್ಟೆ ಎಂಬವರು ತಾನು ಮ್ಯುನಿಸಿಪಲ್ ಸದಸ್ಯನಾಗಿದ್ದರೆ ಏನು ಮಾಡುತ್ತಿದ್ದೆನೆಂದು ಹೀಗೆ ಬರೆಯುತ್ತಾರೆ.

ತಾನು ಯಾವ ವಾರ್ಡಿನ ಪರವಾಗಿ ಸದಸ್ಯನಾಗಿದ್ದೇನೋ ಆ ವಾರ್ಡಿನ ನಕ್ಷೆಯನ್ನು ಪ್ರಥಮತಃ ದೊರಕಿಸಿಕೊಂಡು ಅದರ ಪ್ರತಿಯೊಂದು ಬೀದಿಕೇರಿಗಳ ಗೊತ್ತನ್ನು ಚೆನ್ನಾಗಿ ಮಾಡಿಕೊಳ್ಳುತ್ತಿದ್ದೆನು.

ಜನರ ಸುಖಜೀವನಕ್ಕಿರುವ ಎಲ್ಲಾ ಪ್ರತಿಬಂಧಗಳ ಮತ್ತು ಕುಂದುಕೊರತೆಗಳ ಪಟ್ಟಿಯೊಂದನ್ನು ಮಾಡುತ್ತಿದ್ದೆನು.

ನನ್ನ ಪೇಟರು ದೀಪದ ವ್ಯವಸ್ಥೆಯ, ಕೊಳೆನೀರಿನ ಚರಂಡಿಗಳ, ಶುದ್ಧನೀರಿನ ವಿಷಯದಲ್ಲಿ ತೊಂದರೆಗೊಳ್ಳದಂತೆ ನೋಡುತ್ತಿದ್ದೆನು.

ಯಾವುದಕ್ಕೂ ಮುಂಚಿತವಾಗಿ ನನ್ನ ವಾರ್ಡಿನ ಬೀದಿಗಳೂ ಮನೆಗಳೂ ಚೆನ್ನಾಗಿ ಬೆಳಕನ್ನು ಹೊಂದುವಂತೆಯೂ, ಸ್ವಚ್ಛವಾಗಿರುವಂತೆಯೂ, ಒಳ್ಳೆ ಹವೆಯಿಂದ ಕೂಡಿರುವಂತೆಯೂ, ನೋಡಲಿಕ್ಕೆ ಆರೋಗ್ಯಕರವಾಗಿ ಮತ್ತು ಅಂದವಾಗಿರುವಂತೆಯೂ ಏರ್ಪಾಡುಮಾಡುತ್ತಿದ್ದೆನು. ಹೊಸದಾಗಿ ಮನೆಕಟ್ಟಿಸತಕ್ಕವರು ತಮ್ಮ ಮನೆಯ ಸುತ್ತಲೂ ವಿಶಾಲವಾದ ಬರಿದಾದ ಜಾಗಗಳನ್ನಿಡುವಂತೆಯೂ, ಯಾವುದಾದರೂ ಚೊಕ್ಕಟವಾದ ಶಿಲ್ಪಕ್ರಮವನ್ನು ಅನುಸರಿಸುವಂತೆಯೂ, ವಿಶಾಲವಾದ ಮತ್ತು ನೆಟ್ಟಗಾದ ಬೀದಿಗಳನ್ನು ಮಾಡಲಾಗುವಂತೆಯೂ, ಹೆಂಗಸರು ಮಕ್ಕಳು ಆಲೆದಾಡಿ ಆರೋಗ್ಯವಂತರಾಗುವ ಹಾಗೆ ನನ್ನ ವಾರ್ಡಿನ ಪ್ರತಿಯೊಂದು ಭಾಗದಲ್ಲಿಯೂ ಒಂದೊಂದು ವಿಹಾರದ ಉದ್ಯಾನವನ್ನು ಮಾಡುವಂತೆಯೂ ಪ್ರಯತ್ನಿಸುತ್ತಿದ್ದೆನು. ಇದರಿಂದ ಅರ್ಧಕರ್ಧ ವೈದ್ಯರು ಮತ್ತು ವೈದ್ಯ ಇಲಾಖೆಯವರನ್ನು ಕಡಿಮೆ ಮಾಡಿದಂತಾಗುವುದಲ್ಲದೆ ಎಲ್ಲೆಲ್ಲೂ ಆರೋಗ್ಯವುಳ್ಳ ಭಾಗ್ಯವಂತರಾದ ಮತ್ತು ಸುಖಕಾಲಕ್ಷೇಪವುಳ್ಳವರ ಸಂತೋಷವು ಅಭಿವೃದ್ಧಿಯಾಗುತ್ತಿರುವುದು.

ನನ್ನ ವಾರ್ಡಿನ ಪ್ರತಿಯೊಂದು ಭಾಗದಲ್ಲಿ ಒಂದೊಂದು ಸಂಘವನ್ನು ಏರ್ಪಡಿಸಿ ಅದರ ಪ್ರತಿನಿಧಿಗಳು ತಂತಮ್ಮ ಕುಂದುಕೊರತೆಗಳನ್ನು ನನಗೆ ನಿವೇದಿಸುವಂತೆ ಮಾಡಿ ಅವುಗಳನ್ನು ನಿವಾರಿಸುವುದಕ್ಕೆ ನಾನು ಪ್ರಯತ್ನಿಸುವೆನು.

ವಾರದಲ್ಲಿ ಒಂದು ದಿನವನ್ನು ನಿಶ್ಚಯಮಾಡಿ ಆ ದಿನವನ್ನೆಲ್ಲಾ ನನ್ನ ವಾರ್ಡಿನ ಕೆಲವು ಬೀದಿಗಳನ್ನು ಸಂದರ್ಶಿಸುವುದರಲ್ಲಿ ಕಳೆಯುತ್ತಾ ಜನರು ನಾನು ತಮ್ಮವನೆಂದೇ ಭಾವಿಸುವಂತೆ ಮಾಡುವೆನು.

ಬಡವರು ಮತ್ತು ಅಸಹಾಯರು ನನ್ನನ್ನು ಕಂಡು ತಮ್ಮ ಅಹವಾಲೆಗಳನ್ನು ನನ್ನಲ್ಲಿ ಹೇಳುವಂತೆ ಮಾಡುವೆನು.

ತಮ್ಮ ಹತಭಾಗ್ಯರಾದ ಬಂಧುಗಳನ್ನು ಸಹಾಯಮಾಡುವಂತೆ ಶ್ರೀಮಂತರನ್ನು ಪ್ರೋತ್ಸಾಹಪಡಿಸುವೆನು. ಇದಕ್ಕಾಗಿ ನನ್ನ ಎಲ್ಲಾ ಸಾಹಸ ಶಕ್ತಿಗಳನ್ನುಪಯೋಗಿಸಿ ಬಡವರ ಮತ್ತು ಹಿಂದುಳಿದವರ ಉದ್ಧಾರಣೆಗಾಗಿ ಯೋಗ್ಯವಾದ ಸಾಧನಗಳನ್ನು ಕ್ರಮಪಡಿಸುವೆನು. ಉದಾಹರಣೆಗಾಗಿ ಒಬ್ಬನು ತನಗೆ ಕುಡಿಯಲಿಕ್ಕೆ ಶುದ್ಧ ನೀರನ್ನು ಒದಗಿಸಿಕೊಳ್ಳಲಾರನಾದರೆ, ತನ್ನ ಮಕ್ಕಳನ್ನು ಶಾಲೆಗೆ ಕಳುಹಿಸಲಾರನಾದರೆ, ತನಗಾಗಲಿ ತನ್ನ ಮಕ್ಕಳಿಗಾಗಲಿ ವೈದ್ಯಕೀಯ ಸಹಾಯವನ್ನು ದೊರಕಿಸಿಕೊಳ್ಳಲಾರನಾದರೆ, [illegible] ಮಾನಸಿಕ ಸಂತುಷ್ಟಿಗಾಗಿ ಪುಸ್ತಕಗಳನ್ನು ದೊರಕಿಸಿಕೊಳ್ಳನಾದರೆ, ಅಥವಾ ತಾನು ತನ್ನ ಮನೆತನಕ್ಕೆ ಅಗತ್ಯವಾದ ಪ್ರಾಥಮಿಕ ಅನುಕೂಲತೆಗಳನ್ನು ಒದಗಿಸಲಾರನಾದರೆ, ಪ್ರತ್ಯೇಕ ವ್ಯಕ್ತಿಯಿಂದಾಗಲಿ ಸಂಘಗಳ ಮೂಲಕವಾಗಲಿ ಅವನಿಗೆ ತಕ್ಕ ಸಹಾಯವು ದೊರೆಯುವಂತೆ ವಿಶ್ವಪ್ರಯತ್ನ ಮಾಡುವೆನು. ಮ್ಯುನಿಸಿಪಾಲಿಟಿಯು ಮುಂದೆ ಬಂದು ನನ್ನೀ ಕಾರ್ಯಗಳಲ್ಲಿ ಸಹಾಯಮಾಡುವಂತೆ ಎಲ್ಲಾ ವಿಧಗಳಿಂದಲೂ ಪ್ರಯತ್ನಿಸುವೆನು.

ಈ ರೀತಿಯಲ್ಲಿ ನನ್ನ ವಾರ್ಡಿನವರಿಗೆ ಆಹಾರ ಮತ್ತು ನಿವಾಸಗಳ ಕುರಿತು ವ್ಯವಸ್ಥೆಯನ್ನು ಮಾಡಿ ಜಯಶೀಲನಾದೊಡನೆ, ಸಾರ್ವಜನಿಕ ಪುಸ್ತಕ ಭಂಡಾರ ಮತ್ತು ವಾಚನಾಲಯಗಳನ್ನೂ, ಸಾರ್ವಜನಿಕ ಮತ್ತು ಧರ್ಮಾರ್ಥ ಆಸ್ಪತ್ರೆಯನ್ನೂ, ಸಾರ್ವಜನಿಕ ಮತ್ತು ಧರ್ಮಾರ್ಥ ಶಾಲೆಯನ್ನೂ, ಸಾರ್ವಜನಿಕ ಪ್ರದರ್ಶನ ಶಾಲೆಯನ್ನೂ, ಸಾರ್ವಜನಿಕ ವಿಹಾರ ತೋಟವನ್ನೂ, ಮತ್ತೆಲ್ಲದಕ್ಕೂ ಸಾರ್ವಜನಿಕ ಪರಸ್ಪರ ಸಹಾಯಕ ಸಂಘವನ್ನೂ ಸ್ಥಾಪಿಸುವುದಕ್ಕೆ ತೊಡಗುವೆನು.

ನಮ್ಮಲ್ಲಿನ ಮ್ಯುನಿಸಿಪಾಲಿಟಿಯ ಸದಸ್ಯರಾಗಲಿಚ್ಛಿಸುವವರೆಷ್ಟು ಮಂದಿ ಮತ್ತು ಸದ್ಯಕ್ಕೆ ಸದಸ್ಯರಾಗಿರುವವರೆಷ್ಟು ಮಂದಿ ಮೇಲಿನ ಧ್ಯೇಯಗಳುಳ್ಳವರಾಗಿರುವರು. ಮತ್ತು ಎಷ್ಟರ ಮಟ್ಟಿಗೆ ಜಯಶೀಲರಾಗಿರುವರೆಂದು ವಿಮರ್ಶಿಸುವುದು ಉಚಿತವಲ್ಲವೇ?

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ಮೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. Authorised and fully paid up Capital Rs. 300,000—0—0 Reserve and other sinking Funds „ 288,500—0—0	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿದೆ. ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0 ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಲಮಿತಿ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೭ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ. ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.	ವಿಜಂಟರು:— ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ, ಮಂಗಳೂರು ಟವನಿಗೆ ಮಾತ್ರ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಶೈಡ್ಯೂಲ, ಪೇಮೆಂಟ್ ಶೈಡ್ಯೂಲ, ಬತ್ತಾ ನೋಟು, ಮೆಮೊ ಒಫ್ ಕೊಸ್ಟ್ಸ್, ಮೆಮೊರಂಡಮ್ ಒಫ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನ ಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಹುಂಡಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

[illegible]

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | ವಜ್ರಾಂಗ-ಬಿಂದು | ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂಥ ವನಸ್ಪತಿಗಳ [illegible] ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವನ್ನು [illegible] ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯು [illegible] ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, [illegible] ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ [illegible]

[illegible]

[illegible]

ಮೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. [illegible]

The Canara Public Conveyance Co., Ltd, Mangalore.
(Established 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು {
ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು.
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತುವತ್ತು ವರುಷಗಳಿಂದ ಸತತ ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕಾರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಬೆಋದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಶ್ಚಾರಕ್ಕ ಸಮೀಪವಿರುವ ಮನೆಗೆ,) ಮಂಗಳೂರು.

ಈ ದೇಶದ ಪ್ರಖ್ಯಾತವಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಶೆಂಗೋಟೆ, ಆರ್ನಿ, ಪಾಡಿಶೇಟಿ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, ಪೇಟ್ಸ್, ರೇಶ್ಮೆ ಸೀರೆಗಳು, ಜರತಾರಿ ಸೀರೆಗಳು, ಕೊಚ್ಚರ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮಡಿಗಳು, [illegible]
ಬೆಂಗಳೂರಿನಲ್ಲಿ ತಯಾರಿಸಿದ ಷೂಲಿನಿಂದ ಮಾಡಿದ—

[illegible]

ಎಲ್ಲಾ ಸಂಗ್ರಹವನ್ನು ನಮ್ಮ [illegible]

ಷರತ್ತು—[illegible] ಶೇಕಡಾ 6¼ , ರೂ. 50ರಿಂದ 250ರವರೆಗೆ ಸೇಕಡಾ10%, ರೂ. 250 ರಿಂದ 1000ಕ್ಕೆ 12½% ಈ ರೀತಿ ಕಮಿಶನ್ ಕೊಡಲಾಗುವುದು.

Edited, Printed & Published by V. S. Kamath at the M. T. A. Sharada Press, Mangalore.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜಿ. ಯ, ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಬಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವಿದ್ದಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ, ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಡಬ್ಬಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾ ಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್,
"ಮಿಸ್ರಿ"
ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್,
ಡಿಲ್ಲಿ ನೇಟಿವ್ ಡಾಕ್ಟರ್.
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೧೯ನೇ ಶುಕ್ರವಾರ ಫೆಬ್ರವರಿ ೧೯೨೬. ಸಂಚಿಕೆ ೯.

Th Canara Banking Corporation, Udipi, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. ಹೆಡ್ ಆಫೀಸು: ಉಡುಪಿ. Branch: COONDAPOOR. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಪಾಲಕರಿಗೆ ಅರ್ಪಿಸಿದ ಮತ್ತು ವಿಕ್ರಿದ ಮೂಲಧನ	ರೂ. 2,25,000—0—0.
ವಸೂಲಾದ ಮೂಲಧನ	ರೂ. 1,73,185—9—11.
ಅಪದ್ಧನ ವಗ್ಯೆರೆ ಎತ್ತಗಳು	ರೂ. 64,700—0—0.
ಸಾ. ಸೇ. ೬ರ ಧರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಐವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಾದ ಮೂಲಧನ 1,73,185—9—11, ಅಪದ್ಧನ ವ ಇತರ ಎತ್ತಗಳು 64,700—0—0, ಠೇವಣಾತಿಗಳು 5,10,077-10-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4371—0—0, ಐವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 93,340—10—5, ಜುಮ್ಲಾ ರೂ. 8,45,674—14—7.

ಆಸ್ತಿ ವ ಸೊತ್ತುಗಳು.

ಹಿಕ್ಕ ಅಟ್ಟೋಬ ಕಟ್ಟಡದ ಬ್ರಿಜಂಗಳು ವಗ್ಯೆರೆ 4134—4—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496—6—2, ಸಾ. ಸೇ. ೬ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗ್ಯೆರೆ ಕೂಡ) 41,741—14—2, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 26,131—6—3, ಜುಮ್ಲಾ ರೂಪಾಯಿ 8,45,674—14—7.

ನಿರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. ೬½ರ ದರದ ಬಡ್ಡಿ ಮೇಲೂ, ಪಮುಸುಮ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾಹುಕಾರಿ ಹುಂಡಿಗಳನ್ನೂ, ವಟ್ಟಾಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಐವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

N. Anand Rao,
Secretary.

ಮೂರು ದಿವಸಗಳಲಿ, ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ] ಅಗಸ್ತ್ಯ [ನೋಡಿ ತಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ.

(ರಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೋಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಹಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. ಖರ್ಚು ಪ್ರತ್ಯೇಕ, ಭಿಕ್ಷೆ ಮಾಹಿತಿಗೆ ಬರೆಕೊಳ್ಳಿರಿ.

ವಿಳಾಸ:— ದೇವಣ್ಣ ನಾರಾಯಣ ಶೇಟ್,
ಸರಾಫ, [illegible],
[illegible], (ದ. ಕ.)

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ ಎಸ್ಟೇಟ್, ಮುಂಬಯಿ

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತವೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.

ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡ್‌ಗೋಲ್ಡ್ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು. 10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡ ಗೋಲ್ಡ್ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ್ ಗೋಲ್ಡ್ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ್ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.
"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1೦ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳೆ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1೦ ಕ್ರಯ ರೂ. 2—4—0.

Emarald Watch Co.,
P. T. MADRAS.

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . ವಸಂತ
ಕರ್ಣಾಟಕ ಭಾಷಾಸೇವಕನೆಂದರೆ . . . . ವಸಂತ
ದೇಶವಿದೇಶ ಬಂಧುವೆಂದರೆ . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರ್ಯಾನ್ ½ ಪುಟ ಸ್ಯಾಜಿನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

11 ಮಣಿಗಳಿದ್ದು ಬ್ರಿಜ್ ಮೂವ್‌ಮೆಂಟ್.

22 ಕೆರೆಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡ್‌ಗೋಲ್ಡ್ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1೦ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
184 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕಿಊರ್ ಆಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಡೈರಿಯಾ ಮಿಕ್ಸ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೀನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ, ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦ "AGENTS WANTED"
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ಕಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay, No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2—8—0.
„ ಸ್ಥಳೀಕರಿಗೆ ... „ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಡಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜುಬ್ಬರ್ ರೇಷ್ಮೆ ಮಡಿಗಳು, ಪಾರ್ಮಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಗೋಲಂಬಾ, ಕಾಶೀ ಕ್ಷೇತ್ರ.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಫಾಲ್ಗುನ ಶು| ೧೫ ಶನಿವಾರದಿಂದ ಕ್ರೋಧನ ಸಂವತ್ಸರದ ಫಾಲ್ಗುನ ಬ| ೬ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಕುಂಭ ಮಾಯಿ.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
27	ಶನಿ	○	೪೧.೧೬	ಮಘಾ	೨೯.೨೮	೧೫	6.50	6.38
28	ರವಿ	೧	೪೫.೪೪	ಹುಬ್ಬಾ	೩೫.೩೦	೧೬	6 50	6.38
1	ಸೋಮ	೨	೪೯.೧೬	ಉತ್ತರಾ	೪೩.೨೮	೧೭	6.49	6.38
2	ಕುಜ	೩	೫೨. ೨	ಹಸ್ತಾ	೪೪.೩೧	೧೮	6.48	6.39
3	ಬುಧ	೪	೫೩.೧೪	ಚಿತ್ರಾ	೪೬.೩೦	೧೯	6 48	6.39
4	ಗುರು	೫	೫೩. ೨	ಸ್ವಾತೀ	೪೯. ೧	೨೦	6.47	6.39
5	ಶುಕ್ರ	೬	೫೧.೪೬	ವಿಶಾಖಾ	೪೯.೧೪	೨೧	6 46	6.39

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಅತ್ಯಧಿಕ	Minimum ಅತ್ಯಲ್ಪ	Rainfall. ಮಳೆ ದಿವಸದ ಮಳೆ	ಜುಮಲಾ ಮಳೆ.
19	90—0	73—0	—	—
20	90—8	74—0	—	—
21	89—8	73—0	—	—
22	89—2	71—7	—	—
23	89—7	72—7	—	—
24	89—6	76—7	—	—
25	90—8	75—0	—	137-75

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ತಿ	8— 4	9— 0
ಹೊಸ ಗುಡ್ಡು ...	7— 14	8— 4
ಹೊಸ ರಾಶಿ ...	7— 0	7—12
ಅವ್ವಲ್ ಬೆಳ್ತಿಗೆ ...	8— 0	9— 0
ರಂಗೂನು ಬೆಳ್ತಿಗೆ ಗೋಣಿ ೧ ...	13— 0	14— 0
ಗೋದಿ ಗೋಣಿ ೧ಕ್ಕೆ ...	19— 0	20— 0
ಹುರುಳಿಗೋಣಿ ೧ಕ್ಕೆ ...	8—12	9— 4
ಕಡಲೆಗೋಣಿ ೧ಕ್ಕೆ ...	14— 0	14— 8
ತೊಗರಿಗೋಣಿ ೧ಕ್ಕೆ ...	14— 8	15— 0
ತೊಗರಿಬೇಳೆ ಗೋಣಿ ೧ಕ್ಕೆ ...	16— 8	22— 0
ಉದ್ದುಗೋಣಿ ೧ಕ್ಕೆ ...	16— 0	—
ಹೆಸರುಗೋಣಿ ೧ಕ್ಕೆ ...	15— 4	15— 8
ಊರು ಬೆಲ್ಲ ಕಂಡಿ ೧ಕ್ಕೆ ...	60— 0	62— 8
ಉಪ್ಪು ಗೋಣಿ ೧ಕ್ಕೆ ...	4— 6	4—10
ಕೊಬ್ರಿ ಕಂಡಿ ೧ಕ್ಕೆ ...	105— 0	110— 0
ಕೊಬ್ರಿ ಹಿಂಡಿ ಕಂಡಿ ೧ಕ್ಕೆ ...	35— 0	35— 8
ಎಳ್ಳಿಂಡಿ ಕಂಡಿ ೧ಕ್ಕೆ ...	45— 0	52— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	7—10	7—12
ಎಳ್ಳೆಣ್ಣೆ ಮುಡಿ ೧ಕ್ಕೆ ...	7— 8	11— 0
ಹಿಪ್ಪೆ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-12-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	5— 0	5— 2
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	9— 4	—
ಸಾಸಿವೆ ಮುಡಿ ೧ಕ್ಕೆ ...	9— 8	—
ಕೊತ್ತಂಬರಿ ಮುಡಿ ೧ಕ್ಕೆ ...	3— 8	4— 4
ಕಾಫಿ ಕಂಡಿ ೧ಕ್ಕೆ ...	75— 0	80— 0
ಚಾಲಿಗೋಟು ಅಡಿಕೆ ಕಂಡಿ ೧ಕ್ಕೆ ಹಳತು ...	275— 0	300— 0
ಹೊಸ ಅಡಿಕೆ ಕಂಡಿ ೧ಕ್ಕೆ ...	200— 0	235— 0
ಕಾಳುಮೆಣಸು ಕಂಡಿ ೧ಕ್ಕೆ ...	300— 0	340—
ಯಾಲಕ್ಕಿ ಮುಡಿ ೧ಕ್ಕೆ ...	45— 0	—
ಗೇರುಬೀಜ ಮುಡಿ ೧ಕ್ಕೆ ...	4— 0	—
ಚಕ್ಕೆಗಳ ಕಂಡಿ ೧ಕ್ಕೆ ...	45— 0	65— 0
ಕಾಂಡ್ಲ ಹಸುಡ ಮುಡಿ ೧ಕ್ಕೆ ...	16— 4	16—12
ಕಾಪ್ತ ವಾಸ್ತ್ರಗಳು ಮುಡಿ ೧ಕ್ಕೆ ...	21— 0	—
ಭೋಜ ಬೆಳ್ಳಿ ಸೇರು ೧ಕ್ಕೆ ...	18—10	
ಹಿಪ್ಪಳ ಹಸುಡ ಮುಡಿ ೧ಕ್ಕೆ ...	16— 8	
ಪವನು	18—10	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

PROPRIETOR RAJVAIDYA NARAYANJI KESHAVJI
NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರಿವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ
ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲ 1ಕ್ಕೆ ರೂ. 3—2—0.
„ 2. „ „ ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ
ದೊಡ್ಡ ಸೈಜಿನ ಸಾದಾ ಡೈರಿ . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆಸುಕೊಳ್ಳುವದಕ್ಕೆ ಒಂದು ದೇಹದ ಮರ್ಮಶಾಸ್ತ್ರವು ಇರುವುದು. ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—
"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.
ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಛತ್ರಿಸ್ಟ್ರೀ, ಮದ್ರಾಸ್.

ತ್ವರೆಮಾಡಿರಿ! ತಯಾರಾಗಿದೆ.

ನಾಲ್ಕನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ನಾಲ್ಕನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್, ಗಣಪತಿರಾವ್ ಐಗಳ್—ಗ್ರಂಥಕರ್ತರು.

ಮನೋರಂಜಕ ಚಿತ್ರಗಳೂ ಇವೆ.

ಇದರಲ್ಲಿ ಬಾರಕೂರು, ಮಂಗಳೂರು, ಮೂಲಿಕೆ ಕಾರ್ಕಳ, ಮೂಡಬಿದರೆ, ಸುಬ್ರಮಣ್ಯ, ಉಡುಪಿ, ಬಸರೂರು, ವೇಣೂರು, ಬೈಲಂಗಡಿ, ಧರ್ಮಸ್ಥಳ, ಕೊಲ್ಲೂರು, ಕುಂಬಳೆ, ಜಪಾನ ದೇಶದ ಜನರು, ಚೀನಾದೇಶದ ಜನರು, ಬರ್ಮದೇಶದ ಜನರು, ಯುರೋಪ ಖಂಡದ ಜನರು, ಎಸ್ಕಿಮೊ ಜನರು, ನಿಗ್ರೊ ಜನರು. ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ನಾಲ್ಕನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 8 ಆಣೆ.

ಪುಸ್ತಕ ದೊರಕುವ ವಿಳಾಸ:—
ಶಾರದಾ ಛಾಪಖಾನೆ,
ಮಂಗಳೂರು.

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ಮತ್ಸ್ಯ ಪುರಾಣ ... ...
(3) ಇಂದ್ರಜಿತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಕಟ್ಟಿದ ಚೋರ ಕಥೆ ... ...
(7) ಕುವರಾರ ರಾಮನ ಕಥೆ ... ...
(8) ಕೃಷ್ಣಬಾಲಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣದೇವಾತ್ಮಬೋಧ ಕಥಾ ... ...
(18) ಚಂದ್ರವಾಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷಾಗೃಹ ಕಥೆ ... ...
(24) „ ಚೋರ ಕಥೆ ... ...
(25) „ ಧಾರ್ಮಿಕ ಕಾರವಂಚ ಕಥೆ ... ...
(26) „ ಗೋವಿನ ಚರಿತ್ರೆ ... ...
(27) „ ದುಶ್ಯಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

ಶಾರದಾ ಛಾಪಖಾನೆ ಮಂಗಳೂರು.

Sale of Laccadivi Coir.

Notice is hereby given that the undermentioned quantities of coir yarn, the produce of the Laccadivi Islands attached to the districts of South Kanara and Malabar, will be sold by public auction by the Port Officer, Mangalore, at his office, in convenient lots, on Thursday, the 11th March 1926 at 11 A. M., subject to the confirmation of the sale by the Collector of South Kanara—

Amini Divi (560 lb. per candy), 100 candies—The produce of Amini, Kiltan, Chetlat and Kadmath islands.

1. Malabar (560 lb. per candy), 100 candies. The produce of Androth, Kalpeny Kaverti and Agathi islands.

2. The Port Officer does not bind himself to accept the highest bid and will exercise the option of accepting any offer in whole or in part.

3. A sum equal to 10 per cent. of the purchase money is to be deposited by the purchaser immediately after the sale.

4. The purchaser must take delivery of coir within ten days after the offer has been accepted, paying balance value of the coir. If the coir is not taken delivery within the time allowed, godown rent will be collected and the coir resold at the risk of the purchaser.

5. Coolie charges for weighing and removing coir from the godowns should be borne by the purchaser.

6. The coir can be inspected in the godown at Mangalore on application to the Port Officer.

7. Samples can be taken free.

8. Any further information can be obtained from the Port Officer, Mangalore.

S. Kanara Collector's Office, Camp Karkal, 24th Feb. '26. } A. C. Woodhouse, *For Collector.*

ನೋಟೀಸು.

೧೯೨೬ನೇ ಇಸ್ವಿ ಫೆಬ್ರುವರಿ ತಾರೀಕು ೧೨ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆ ಮಾಡಿದ ಪ್ರಕಾರ ಈ ಕೆಳಗೆ ಕಾಣಿಸಿದ ಅಸಾಮಿಯವರ ಬಾಬ್ತು ನಗಗಳು ಮಿಜಾರ ಗಣೇಶ ಪೈಗಳ ಆಫೀಸಿನ ಎದುರುಗಡೆಯಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿಬಂದ ಐವೇಜಿನಲ್ಲಿ ಈ ಕೆಳಗೆ ಕಾಣಿಸಿದ ಪ್ರಕಾರ ಅಸ್ಲು ಬಡ್ಡಿ ಮತ್ತು ಇತರ ಖರ್ಚು ಸಹಾ ಕಳೆದು ಕಮ್ಮಿ ಬಿದ್ದ ಐವೇಜಿನ ವಿವರವು ಈ ಕೆಳಗೆ ಕಾಣಿಸಿದ ಪ್ರಕಾರ ಆಯಾಯ ಅಸಾಮಿಯವರು ಕಮ್ಮಿ ಬಿದ್ದ ಐವೇಜಿನ ವಿಷಯದಲ್ಲಿ ಬಿಟ್ಟ ನೋಟೀಸಿನಲ್ಲಿ ಕಾಣಿಸಿದ ಪ್ರಕಾರ ನೋಟೀಸು ತಲ್ಪಿದ ಒಂದು ವಾರದೊಳಗೆ ಯಾವ ವಿಧದಿಂದಲೂ ಬಾಕಿಬರತಕ್ಕ ರೂಪಾಯಿಗಳು ವಸೂಲು ಕೊಟ್ಟು ರಶೀದಿ ಪಡೆಕೊಳ್ಳತಕ್ಕದ್ದು ಇದಕ್ಕೆ ತಪ್ಪಿದರೆ ಆ ವಿಷಯದಲ್ಲಿ ನಾನು ಮಾಡುವ ದಾವೆಯ ಸಕಲ ಕರ್ಜಿಗೆ ಆಯಾಯ ಅಸಾಮಿಯವರು ಜವಾಬ್ದಾರರಾಗಿರುತ್ತಾರೆ.

ಗೋಳಿಕಟ್ಟೆ ಬಜಾರದಲ್ಲಿರುವ ಅಮ್ಮೆಂಬಳ ಸ್ಯಾಂಬ್ಯಾರಿ ಆ್ಯಟಿನ್ ೨ ರಾ। ಬಾಬ್ತು ಬರತಕ್ಕ ಅಸಲು ಬಡ್ಡಿ ಇತರ ಖರ್ಚು ಕೂಡ ರೂಪಾಯಿ ೧೦೧—೦—೦, ಏಲಮಿನಲ್ಲಿ ಹುಟ್ಟಿಬಂದ ಮೊಬಲಗು ೮೩—೮—೦, ಬಾಕಿ ಬರತಕ್ಕ ಮೊಬಲಗು ೧೭—೮—೦.

ಬೈದ್ಯಾವ ಜೆಯ್ನಬ ಬ್ಯಾರಿಯಿಂದ ಅಸಲು ಬಡ್ಡಿ ಇತರ ಖರ್ಚು ರೂ. ೫೯—೯—೦, ಏಲಮಿನಲ್ಲಿ ಹುಟ್ಟಿಬಂದ ಮೊಬಲಗು ೫೧—೦—೦, ಬಾಕಿ ಬರತಕ್ಕ ಮೊಬಲಗು ೮—೯—೦.

ಗೋಳಿಕಟ್ಟೆ ಬಜಾರ ಕಾಟುಬ್ಯಾರಿ ಮಗ ಅಮದ ಬ್ಯಾರಿಯಿಂದ ಅಸಲುಬಡ್ಡಿ ಇತರ ಖರ್ಚು ರೂ. ೬೮—೮—೦, ಏಲಮಿನಲ್ಲಿ ಹುಟ್ಟಿಬಂದ ಮೊಬಲಗು ೬೦—೦—೦, ಬಾಕಿ ಬರತಕ್ಕ ಮೊಬಲಗು ೮—೮—೦.

ಕೆಲವು ತಿಂಗಳ ಮುಂಚೆ ಮೃತಪಟ್ಟ ಗೋಳಿಕಟ್ಟೆ ಬಜಾರ ಉಚ್ಚಾಲ ಬಚ್ಚಬ್ಯಾರಿ ಮಗ ಅಮದ ಬ್ಯಾರಿಯು ಆ್ಯಟಿನ್ ೩ ರಾ। ಬಾಬ್ತು ಬರತಕ್ಕ ಅಸಲು ಬಡ್ಡಿ ಇತರ ಖರ್ಚು ಸಹಾ ಕೂಡ ರೂಪಾಯಿ ೭೬—೬—೦, ಏಲಮಿನಲ್ಲಿ ಹುಟ್ಟಿಬಂದ ಮೊಬಲಗು ೫೮—೦—೦, ಬಾಕಿ ಬರತಕ್ಕ ಮೊಬಲಗು ೮—೬—೦, ಈ ಮೊದಲು ನಗದಿಯಿಂದ ಬಂದ ರೂಪಾಯಿ ೧೦—೦—೦.

ಮಿಜಾರ ತಿಮ್ಮಪ್ಪ ಪೈ.

—: ತೆಂಗಿನಕಾಯಿಯ ಮಹಾತ್ಮೆ. :—

ಮೋದನಪುರವೆಂಬ ಒಂದು ಪಟ್ಟಣದಲ್ಲಿ ಅಖಿಳೈಶ್ವರ್ಯಸಂಪನ್ನನಾದ ಒಬ್ಬ ಜಮೀನುದಾರನಿದ್ದನು, ಇವನಿಗೆ ರಾಮರಾಯ ಮತ್ತು ಸುಬ್ಬರಾಯರೆಂಬ ಇಬ್ಬರು ಗಂಡುಮಕ್ಕಳು. ಮಕ್ಕಳೆಂದರೆ ಇವರೇ ಸರಿ. ಬಹು ತುಂಟರು. ಇವರಲ್ಲಿ ಕಲಹ ದೇವತೆಯು ಸದಾ ಕಾಲವೂ ಪ್ರಸನ್ನಳಾಗಿದ್ದಳು. ಎಲ್ಲಾ ಬಲ್ಲವನ್ನು ಮಸಿನುಂಗಿತು ಎಂಬಂತೆ ಆ ವೃದ್ಧ ಜಮೀನುದಾರನಿಗೆ ಬಿಡಿದ್ದರೇನು! ಮಕ್ಕಳಲ್ಲಿರುವ ಅವಿವೇಕವು ಇವನನ್ನು ಅಧಿಕವಾಗಿ ಬಾಧಿಸುತ್ತಿದ್ದಿತು. ತಂದೆಗೆ ಅವಸಾನಕಾಲವು ಸಮೀಪಿಸಿರುವುದನ್ನು ಕಂಡು, ಅವರಿಗೆ ಆಸ್ತಿಯ ಚಿಂತೆ ಹಿಡಿಯಿತು. ಅವರು ತಂದೆಯೊಡನೆ "ಆಸ್ತಿಯನ್ನು ಸಮಪಾಲುಮಾಡಿಕೊಡೆಂದ"ರು. ಅವನು ಬೇರೆ ಯಾವ ಉಪಾಯವನ್ನು ಕಾಣದೆಯೂ, ಅಣ್ಣತಮ್ಮಂದಿರ ಅನುರಾಗವು ಹುಲ್ಲು ಬೆಂಕಿಗಳಂತೆ ಇರುವದನ್ನು ಕಂಡೂ, 'ದೈವಸಂಕಲ್ಪದಂತಾಗಲಿ' ಎಂದು ನೆನಸಿ ಆಸ್ತಿಯನ್ನು ಸಮ ಎರಡು ಪಾಲುಮಾಡಿ ಒಂದೊಂದನ್ನು ಒಬ್ಬೊಬ್ಬನಿಗೆ ಕೊಟ್ಟನು. ಈಗ ಅವರ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ಸ್ವಲ್ಪ ಸಮಯದಲ್ಲಿಯೇ ಆ ಜಮೀನುದಾರನು ಈ ಸಂಸಾರದಿಂದ ಮುಕ್ತನಾದನು. ತಂದೆಯು ಜೀವಂತನಾಗಿರುವಾಗಲೇ ಅವರ ಹೃದಯವನ್ನು ತನ್ನ ಮಾಯಾಜಾಲಗಳಿಂದ ಆಕ್ರಮಿಸಿದ್ದ ಕಲಿಪುರುಷನು ಈಗ ತನ್ನ ಲೀಲೆಯನ್ನು ಧಾರಾಳವಾಗಿ ತೋರಿಸತೊಡಗಿದನು.

ಈ ಅಣ್ಣ-ತಮ್ಮಂದಿರ ಹಿತ್ತಲುಗಳು ಬಹು ಸಮೀಪದಲ್ಲಿದ್ದವು. ಒಂದು ದಿವಸ ಅಣ್ಣನ ತೆಂಗಿನ ಮರದಿಂದ ಒಂದು ತೆಂಗಿನ ಕಾಯಿಯು ತಮ್ಮನ ಹಿತ್ತಲಿಗೆ ಬಿತ್ತು. ಬಿದ್ದೊಡನೆಯೇ ಜಗಳ. ಅಣ್ಣನಾದ ರಾಮರಾಯನು ತೆಂಗಿನಕಾಯಿಯು ತನ್ನದೆಂದೂ, ತಮ್ಮನಾದ ಸುಬ್ರಾಯನು ಅದು ತನ್ನ ಹಿತ್ತಲಿಗೆ ಬಿದ್ದುದರಿಂದ ತನಗೆ ಸೇರಬೇಕೆಂದೂ ಜಗಳಮಾಡಿಕೊಂಡರು. ಜಗಳದ ಫಲಿತಾಂಶವೇನಂದರೆ ಮಾರಣೆ ದಿನ ಅಣ್ಣನು ಒಬ್ಬ ವಕೀಲರನ್ನು ಗೊತ್ತುಮಾಡಿಕೊಂಡು ಮೆಜಿಸ್ಟ್ರೇಟರ ಕೋರ್ಟಿನಲ್ಲಿ ತಮ್ಮನ ಮೇಲೆ ಫಿರ್ಯಾದು ದಾಖಲುಮಾಡಿದನು. ತಮ್ಮನಿಗೆ ನೋಟೀಸು ಬಂದಾಗ ಅವನೂ ಬುದ್ಧಿವಂತನಾದ ಒಬ್ಬ ಲಾಯರನ್ನು ಗೊತ್ತುಮಾಡಿಕೊಂಡು ಹೋದನು. ಅಲ್ಲಿ ಮೆಜಿಸ್ಟ್ರೇಟರು ತೆಂಗಿನ ಕಾಯಿ ರಾಮನಿಗೆ ಸಲ್ಲಬೇಕೆಂದು ತೀರ್ಮಾನಿಸಿದರು. ಇಷ್ಟರಲ್ಲಿ ಇಬ್ಬರಿಗೂ ೫೦-೫೦ ರೂಪಾಯಿಗಳು ಖರ್ಚಾದವು. ಈ ತೀರ್ಮಾನವನ್ನು ಕೇಳಿ ಸುಬ್ಬರಾಯನು ವಕೀಲರ ಮಾಯಾಜಾಲಕ್ಕೆ ಮರುಳಾಗಿಯೂ, ಅಣ್ಣನ ಮೇಲೆ ಸೇಡು ತೀರಿಸಿಕೊಳ್ಳುವ ಸಲುವಾಗಿಯೂ ಮುನಸೀಫರ ಕೋರ್ಟಿನಲ್ಲಿ ಫಿರ್ಯಾದು ಮಾಡಿದನು. ಅಲ್ಲಿ ಕಾಂಚನದ ಮಹತ್ವದಿಂದ ತಮ್ಮನು ಜಯಶೀಲನಾದನು. ಅಣ್ಣನು ಕೂಡಲೇ ನ್ಯಾಯವು ಅನ್ಯಾಯವಾಗಿ ಹೇಗೆ ಪರಿಣಮಿಸುತ್ತದೆ ಎಂದು ಜಡ್ಜರ ಕೋರ್ಟಿನಲ್ಲಿ ದೂರು ಕೊಂಡುಹೋದನು. ಇಲ್ಲಿ ಅಣ್ಣನು ಜಯವನ್ನು ಪಡೆದನು. ತಮ್ಮನು ಒಂದು ತೆಂಗಿನ ಕಾಯಿಗಾಗಿ ಎಷ್ಟು ಖರ್ಚುಮಾಡುವದೆಂದು ಸುಮ್ಮನಾದನು. ಅಣ್ಣನು 'ತೆಂಗಿನಕಾಯಿ ನಿನಗೆ ಸಿಕ್ಕಿತೆ?' ಎಂದು ಕೇಳಿ ಹಾಕಿ ನಕ್ಕನು.

ಇಂದು ಕೋರ್ಟಿನಲ್ಲಿ ಅಣ್ಣನಿಂದ ತಿರಸ್ಕೃತನಾದ ಸುಬ್ಬರಾಯನು ಕೈಯಲ್ಲಿ ಕಾಸೊಂದೂ ಇಲ್ಲದೆ ನಿರ್ಭಾಗ್ಯನಾಗಿ, ಹೊರಜಗುಲಿಯ ಮೇಲೆ ವೀಳ್ಯದೆಲೆಯನ್ನು ಜಗ್ಗುತ್ತಾ, ಅಣ್ಣನ ಮೇಲೆ ಹೇಗೆ ಸೇಡನ್ನು ತೀರಿಸಿಕೊಳ್ಳಲೆಂದು ಚಿಂತಿಸುತ್ತಿದ್ದನು. ಅಷ್ಟರಲ್ಲಿ ಅವನ ಕಡೆಯ ವಕೀಲರಾದ ಶ್ರೀಧರರಾಯರು ಬಂದು ಬಿಟ್ಟರು. ಸುಬ್ಬರಾಯನು ಎ.ಲ್. ಎಲ್. ಬಿ. ಪಾಸಾದ ವಕೀಲರು ತನ್ನ ನಿವಾಸಕ್ಕೆ ಬರಬೇಕಾದರೆ ತಾನು ಸುಕೃತಶಾಲಿಯೆಂದೇ ನೆನಸಿ, ಒಡನೆ ಎದ್ದು ಊಟಉಪಚಾರಗಳನ್ನೆಲ್ಲ ಮಾಡಿ ಮಾತುಕಥೆಗಳಾದ ಬಳಿಕ 'ವಕೀಲರೆ! ನನ್ನ ಅವಸ್ಥೆಯನ್ನು ಏನೆಂದು ಹೇಳುವದು! ಹಿಂದಣದನ್ನೆಲ್ಲ ನೆನಸಿದರೆ ಕೀರಿನಲ್ಲಿ ಕಣ್ಣುತೆರೆದಂತಾಗುವದು. ಕೈಯಲ್ಲಿ ಕಾಸಿಲ್ಲ. ದೇಶಭ್ರಷ್ಟನಾಗಲು ತಯಾರಾಗಿದ್ದೇನೆ! ಎಂದು ದುಃಖಿಸಿದನು. ವಕೀಲರು ತಮ್ಮ ಕಿಸೆ ತುಂಬಿಸಲಿಕ್ಕೆ ಇದೇ ಸಮಯವೆಂದು ತನ್ನ ರಮಣೀಯ ವಾಕ್ಯಜಾಲಗಳಿಂದ ಇಂತೆಂದರು "ಸುಬ್ಬರಾಯರೇ, ಸಮಸ್ತವನ್ನು ತಿಳಿದ ತಮ್ಮೆದುರಿನಲ್ಲಿ ಮಾತನಾಡಲು ನಾನು ಶಕ್ತನಲ್ಲ. ತಾವು ಉತ್ತಮ ಕುಲದಲ್ಲಿ ಹುಟ್ಟಿದವರಾಗಿ ಅವಮರ್ಯಾದೆಯಿಂದ ಇರುವದು ಶ್ರೇಯಸ್ಕರವೆನಿಸದು. ನಾವು ಯಾವ ಕಷ್ಟವನ್ನಾದರೂ ಸಹಿಸಬಹುದು. ಆದರೆ ನಮ್ಮ ಬಂಧುಗಳು ನಮ್ಮನ್ನು ತಿರಸ್ಕರಿಸುವುದನ್ನು ಮಾತ್ರ ಸಹಿಸಲಾರದು. ಹೇಗಾದರೂ ಖರ್ಚಾದುದು ಆಯಿತು. ಉಂಡಮೇಲೆ ಜಾತಿ ಕೇಳುವುದೇಕೆ? ಅದುದರಿಂದ ನೀವು ಆಸ್ತಿಯನ್ನು ಅಡವಿಟ್ಟು ಸಾಲತೆಗೆದು, ನಿಮ್ಮ ಮೇಲೆ ಬಂದ ಕಳಂಕವನ್ನು ನಿವಾರಿಸಬೇಕು. ತಡಮಾಡಬೇಡಿ, ಮದ್ರಾಸು ಬೋರ್ಡಿನಲ್ಲಿ ಅಪೀಲು ಮಾಡಿರಿ. ಖಂಡಿತವಾಗಿಯೂ ತಮಗೆ ಜಯವಾಗುವುದು." ಅವನು ವಕೀಲರ ಮಾತು ನಿಜವೆಂದು ನಂಬಿ ಅಣ್ಣನ ಮೇಲೆ ಸೇಡನ್ನು ತೀರಿಸಿಕೊಳ್ಳಲು ಟೊಂಕಕಟ್ಟಿಕೊಂಡನು. ಸಾಲ ತೆಗೆದುದೂ ಆಯಿತು. ಅಪೀಲು ಮಾಡಿದುದೂ ಆಯಿತು. ಅಹಾ! ತುಂಟರ ಸ್ವಭಾವವೆ? ತಂದೆಯು ಕಷ್ಟಪಟ್ಟು ಮಾಡಿದ ಆಸ್ತಿಯ ವಿಷಯ ಇವನಿಗೆ ಏನು ಗೊತ್ತು?

ಇತ್ತ, ಅಣ್ಣನು ಬಿಡುತ್ತಾನೋ, ಅವನೂ ಚಿಲ್ಲರೆಯವನಲ್ಲ. ಇಷ್ಟರಲ್ಲಿ ವಕೀಲರ ಕಿಸೆ ತುಂಬ ಹಣ. ವ್ಯಾಜ್ಯ ಸುರುಆಗಿ ಮೂರು ತಿಂಗಳುಗಳು ಸಂದು ಹೋದವು. ಇಂದು ಬೋರ್ಡಿನಲ್ಲಿ ಕಡೆಯ ತೀರ್ಮಾನ. ಗೋಪಾಲರಿಂದ ಭೋಪಾಲ ವರೆಗಿರುವ ಸಮಸ್ತ ಜನರೂ ತೆಂಗಿನ ಕಾಯಿಯ ವ್ಯಾಜ್ಯವನ್ನು ನೋಡಬೇಕೆಂಬ ಲವಲವಿಕೆಯಿಂದ ಮದ್ರಾಸು ನ್ಯಾಯಸ್ಥಾನದಲ್ಲಿ ನೆರೆದಿದ್ದರು. ಉಭಯ ಕಡೆಯ ವಕೀಲರುಗಳು ಹಸನ್ಮುಖರಾಗಿ ತಮ್ಮ ಆಸನಗಳಲ್ಲಿ ಕುಳಿತಿದ್ದರು. ನ್ಯಾಯಾಧಿಪತಿಯು ರಿಪೋರ್ಟನ್ನು ಓದಿ ವಾದಿಯನ್ನು ಕುರಿತು, ರಾಮರಾಯರೆ! ಇದು ನ್ಯಾಯಸ್ಥಾನವು, ಸುಳ್ಳನ್ನಾಡಬೇಡಿ. ನಿಜವಾಗಿಯೂ ಆ ತೆಂಗಿನ ಮರ ಯಾರದು?

ವಾದಿ—ಸ್ವಾಮಿ! ನಮ್ಮ ಅಪ್ಪನು ಸಾಯುವಾಗ ಮಾಡಿದ ಪಾಲುಪಟ್ಟಿಗೆ ಅನುಸಾರವಾಗಿ ಅದರ ಪಟ್ಟೆಯು ನನ್ನ ಹೆಸರಿನಲ್ಲಿದೆ. ಬೇಕಾದರೆ ವಕೀಲರು ರಿಕಾರ್ಡನ್ನು ತೋರಿಸುವರು.

ನ್ಯಾಯಾಧೀಶನು ರಿಕಾರ್ಡನ್ನು ನೋಡಿ, ಸುಬ್ಬರಾಯರೇ! ನಿಮ್ಮ ಅಗ್ರಜನ ಹೆಸರಿನಲ್ಲಿ ಪಟ್ಟೆ ಇರುವಾಗ ನೀವು ಹೇಗೆ ಆ ತೆಂಗಿನಕಾಯಿಯನ್ನು ಸೆಳೆದುಕೊಂಡಿರಿ. ಅದಪ್ರಯುಕ್ತ ನೀವು ಅಪರಾಧಿಯಲ್ಲವೋ?

ಪ್ರತಿವಾದಿ—ಸ್ವಾಮಿ! ಅಪ್ಪನು ಸಾಯುವಾಗ ಪರಲೋಕದಿಂದ ಅದ ಕೆಲಸವಿದು, ನಿಜವಾಗಿಯೂ ಮರವು ನನ್ನದು. ಅದಲ್ಲದೆ ಅದು ಅಂಗುಳದ ಮಧ್ಯದಲ್ಲಿದೆ. ಆ ಅಂಗುಳ ನನ್ನ ಹೆಸರಿನಲ್ಲಿರುವುದರಿಂದ ಅದು ನನ್ನದಾಗಿದೆ.

ಅನಂತರ ಪ್ರತಿವಾದಿ ಕಡೆ ೯ ಜನ ಸಾಕ್ಷಿಗಳಲ್ಲಿ ೫ ಜನ ಗೈರುಹಾಜರಾಗಿದ್ದರು. ಉಳಿದವರನ್ನು ವಿಚಾರಿಸಿ ಆಯಿತು. ಪ್ರತಿವಾದಿಯ ವಕೀಲರು ೧೮೭೪ರ ಆಕ್ಟಿನ ಎರಡನೆಯ ಪ್ರಬಂಧದ, ಮೂರನೆಯ ಸಂಚಿಕೆಗೆ ಅನುಸಾರವಾಗಿ ತೆಂಗಿನ ಮರವು ತಮ್ಮನಿಗೆ ಸೇರುವದೆಂದು ಹೇಳಿಕೆಗೆ ಮಾಡಿದರು. ಈಗ ನ್ಯಾಯಾಧಿಪತಿಯು ತನ್ನ ಬುದ್ಧಿಯನ್ನು ಉಪಯೋಗಿಸತಕ್ಕ ಸಮಯ ಒದಗಿತು. ಎಲ್ಲರೂ ಜಜ್ಜ್‌ಮೆಂಟನ್ನು ಕೇಳಲು ಬಹು ಕುತೂಹಲದಿಂದಿದ್ದರು. ನ್ಯಾಯಾಧೀಶರು ಬಹು ಹೊತ್ತು ಆಲೋಚಿಸಿ ಕಟ್ಟಕಡೆಗೆ ಈ ರೀತಿಯಾಗಿ ತೀರ್ಮಾನವನ್ನು ಕೊಟ್ಟರು:—

ಪರ್ಯಾಲೋಚಿಸಿ ನೋಡಿದರೆ ನೀವಿಬ್ಬರೂ ಒಂದೇ ಮನೆಯಲ್ಲಿ ಹುಟ್ಟಿಬೆಳೆದ ಅಣ್ಣತಮ್ಮಂದಿರು. ಒಂದು ತೆಂಗಿನ ಕಾಯಿಗಾಗಿ ಒಬ್ಬೊಬ್ಬರು ಐದೈದು ಸಾವಿರ ರೂಪಾಯಿಗಳನ್ನು ನೀರಿನಲ್ಲಿ ಹೋಮ ಮಾಡಿದಂತೆ ವ್ಯಯಮಾಡಿದಿರಿ. ನೀವು ಇಷ್ಟು ಖರ್ಚುಮಾಡಿದುದರ ಉದ್ದೇಶವನ್ನು ಶಿವನೇ ಬಲ್ಲ. ತೆಂಗಿನ ಕಾಯಿಯ ಮರವು ರಾಮರಾಯರ ಹೆಸರಿನಲ್ಲಿರುವುದರಿಂದಲೂ, ಅಂಗುಳಿಯು ಸುಬ್ಬರಾಯರ ಹೆಸರಿನಲ್ಲಿರುವುದರಿಂದಲೂ ನೀವಿಬ್ಬರೂ ಆ ತೆಂಗಿನ ಕಾಯಿಗೆ ಹಕ್ಕುದಾರರು. ಇಬ್ಬರೂ ಅದನ್ನು ಸಮಪಾಲು ಮಾಡಿಕೊಳ್ಳಿ ಎಂದು ಹೇಳಿ 'ಯಾರೂ ಹೊರಗೆ ಎಂದು ಹೇಳಿ ಪಿಯೋನನ್ನು ಕರೆದು, 'ಈ ತೆಂಗಿನ ಕಾಯಿಯನ್ನು ತುಂಡುಮಾಡಿ ಅವರಿಗೆ ಕೊಡು' ಎಂದರು. ಇಷ್ಟು ಹೇಳಿದುದೇ ತಡ, ಒಬ್ಬ ಸೇವಕನು ಬಂದು ತೆಂಗಿನ ಕಾಯಿಯನ್ನು ಭಾಗಮಾಡಿದನು. ಒಳಗೆ ಕಾಣುವುದೇನು? ಕೊಳೆತುಹೋದ ತಿರುಳು ಮಾತ್ರ! ಎಲ್ಲರೂ ಇದನ್ನು ಕಂಡು ಗೊಳ್ಳನೆ ನೆಗಾಡಿದರು. ಅಣ್ಣತಮ್ಮಂದಿರಿಬ್ಬರು 'ಕೆಟ್ಟ ಮೇಲೆ ಬುದ್ಧಿ'ಯೆಂಬಂತೆ ತಮ್ಮ ತಪ್ಪನ್ನು ತಿಳಿದು ಕೊಂಡು 'ನಮಗೆ ಈ ಕೋರ್ಟಿನ ನ್ಯಾಯವೂ ಸಾಕು ವಕೀಲರ ಫೀ ಕೇಳುವ ಕಾಲವೂ ಸಾಕಾಯಿತು. ಕೈಯಲ್ಲಿ ಒಂದು ಚಿಕ್ಕಾಸೂ ಇಲ್ಲ. ತಂದೆ ಗಳಿಸಿಟ್ಟ ದ್ರವ್ಯವನ್ನು ಈ ತೆಂಗಿನ ಕಾಯಿಗೆ ಪೂಜೆಮಾಡಿ ತೆಗೆದೆವು' ಎಂದು ಹೇಳುತ್ತ ತಮ್ಮ ಮುಂದಿನ ಜೀವನೋಪಾಯಕ್ಕೆ ಅನುಕೂಲವಾದ ಭಿಕ್ಷಾಟನೆಯನ್ನು ಕೈಕೊಂಡರು.

ಅಹ! ತೆಂಗಿನಕಾಯಿಯ ಮಹಿಮೆಯೆ!!

ತಾ. ೨೧—೨—೧೯೨೬ನೇ ಅಪರಾಹ್ನ ಘಂಟೆ ೩॥ಗೆ ನಿಯಮ ೧೮ರ ಪ್ರಕಾರ ಮುಂದುವರಿಸಿಟ್ಟ ಮಂಗಳೂರು ತಾ. ಕಾ. ಕಮಿಟಿಯ ಮಹಾ ಸಭೆಯ ವರದಿ.

೧. ಗ್ರಾಮ ಕಮಿಟಿಗಳಲ್ಲಿ ಈ ಹೊತ್ತಿನ ವರೆಗಿರುವ ಯಾವತ್ತು ಹಣ ವ ಇತರ ಸೊತ್ತನ್ನು ತಾಲೂಕು ಕಮಿಟಿಗೆ ಒಪ್ಪಿ ಪ್ರಕೃತ ತಾಲೂಕು ಕಮಿಟಿಗೆ ಅಗತ್ಯವಿರುವ ಖರ್ಚಿಗೆ ಉಪಯೋಗಿಸತಕ್ಕದ್ದು. ಮತ್ತು ಇನ್ನು ಮುಂದಕ್ಕೆ ಗ್ರಾಮ ಕಮಿಟಿಗಳಲ್ಲಿ ಎಷ್ಟು ಹಣ ಇರತಕ್ಕದ್ದು ಮತ್ತು ಎಲ್ಲಿ ಇರತಕ್ಕದ್ದು ವ ಹೇಗೆ ಉಪಯೋಗಿಸತಕ್ಕದ್ದು ಎಂಬುದು ಕಾರ್ಯಕಾರಿ ಮಂಡಲದವರು ನಿರ್ಣಯಿಸತಕ್ಕದ್ದು.

೨. ಕಾರ್ಯದರ್ಶಿಯವರು ತಾ. ೩೧—೧—'೨೬ಕ್ಕೆ ಈ ಕಮಿಟಿಯ ಕೈಕೆಳಗಿರುವ ಕೆಲಸಗಾರರ ಕೆಲಸವು ಬರುವ ಮಾರ್ಚಿ ಅಖೈರಿಯ ಮೇಲೆ ಅಗತ್ಯವಿಲ್ಲ ಎಂತ ಕೊಟ್ಟ ನೋಟೀಸು ಮಂಜೂರು ಮಾಡಲಾಯಿತು.

೩. ಈ ಕೆಳಗೆ ಹೆಸರು ತೋರುವ ಮಹಾಶಯರು ಈ ವರ್ಷದ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿರತಕ್ಕದ್ದು.

ಶ್ರೀಯುತರುಗಳಾದ ಕಾರ್ನಾಡ ಸದಾಶಿವರಾಯರು, ಅ. ಭೋಜರಾಯರು, ಯು. ಸಿ. ಕೃಷ್ಣಭಟ್ಟರು, ಎಮ್. ಮಾಧವರಾಯರು, ಕೆ. ಎಮ್. ದಾಸಪ್ರಭುಗಳು, ಕೆ. ಆರ್. ಕಾರಂತರು, ಎ. ಬಿ. ಶೆಟ್ಟಿ, ಗಂಗೊಳ್ಳಿ ಕೃಷ್ಣರಾಯರು, ಕೆ. ಆರ್. ಆಚಾರ್ಯ, ಅಬ್ದುಲ್ ಖಾದರ್ ಅಸಾದಿ ಯಾನೆ ಬಾದಶಯ ಸಾಹೇಬರು.

ಈ ಪೈಕಿ ಶ್ರೀ। ಮಾಧವರಾಯರು ಅಧ್ಯಕ್ಷರಾಗಿರತಕ್ಕದ್ದು. ಕಾರ್ಯದರ್ಶಿ ಮತ್ತು ಖಜಾಂಚಿ ಇವರನ್ನು ಕಾರ್ಯಕಾರಿ ಮಂಡಲಿಯವರೇ ಚುನಾಯಿಸತಕ್ಕದ್ದು. ಆ ವರೇಗೆ ಶ್ರೀ। ಅ. ಭೋಜರಾಯರೇ ಕಾರ್ಯದರ್ಶಿಯಾಗಿರತಕ್ಕದ್ದು.

೪. ಬರುವ ಮಾರ್ಚಿ ಅಖೈರಿಯಿಂದ ಕರ್ನಾಟಕ ಶಿಲ್ಪ ವಿದ್ಯಾಲಯವನ್ನು ನಡಿಸಿ ಬರುವದು ತಾಲೂಕು ಕಾಂಗ್ರೆಸು ಕಮಿಟಿಗೆ ಸಾಧ್ಯವಿಲ್ಲವಾಗಿ ಕಂಡುಬರುತ್ತ ಆ ಸಂದರ್ಭದಲ್ಲಿ ಶ್ರೀ। ಅ. ಭೋಜರಾಯರು ಅದನ್ನು ನಡಿಸುವುದಾಗಿ ಒಪ್ಪಿಕೊಂಡುದುದರಿಂದ ಅಗತ್ಯವಿರುವ ಶರ್ತಗಳ ಮೇಲೆ ಕಾರ್ಯಕಾರಿ ಮಂಡಳಿಯವರು ಇವರಿಗೆ ಶಾಲಾ ಸಾಮಗ್ರಿಗಳನ್ನು ಮತ್ತು ಉಪಕರಣಗಳನ್ನು ಕೊಡತಕ್ಕದ್ದು. ಸಾಧ್ಯವಿದ್ದ ಧನಸಹಾಯವನ್ನು ಕೂಡಾ ಮಾಡತಕ್ಕದ್ದು. ಎಂತೂ ಮಾರ್ಚಿ ಅಖೈರ ಮೇಲೆ ವಿದ್ಯಾಲಯವನ್ನು ತಾಲೂಕು ಕಾಂಗ್ರೆಸ್ ಕಮಿಟಿಯವರು ನಡಿಸಿ ಬರುವ ಭಾರವನ್ನು ಬಿಟ್ಟುಕೊಟ್ಟಿರುವರು.

೫. ಕಾರ್ಯಕ್ರಮದಲ್ಲಿ ಕಾಣುವ ಇತರ ವಿಷಯಗಳನ್ನು ಕಾರ್ಯಕಾರಿ ಮಂಡಲದವರು ಇತ್ಯರ್ಥಿಸತಕ್ಕದ್ದು.

ಮ. ತಾ. ಕಾ. ಕಮಿಟಿ, ೨೪—೨—'೨೬. } (ಸಹಿ) ಎನ್. ಶಾಮಭಟ್ಟ, ಅಧ್ಯಕ್ಷ.

ಅ. ಭೋಜರಾಯ, ಕಾರ್ಯದರ್ಶಿ.

ವಿ. ಸೂ. ನಿರ್ಣಯ ೪ಕ್ಕೆ ಒಳಪಟ್ಟ ಕರ್ನಾಟಕ ಶಿಲ್ಪ ವಿದ್ಯಾಲಯದ ಮುಂದಿನ ಸ್ಥಿತಿಯನ್ನು ಹಿಂದಿನಿಂದ ಪ್ರಕಟಿಸಲಾದೀತು. ಸದ್ಯಕ್ಕೆ ಸದರಿ ವಿದ್ಯಾಲಯದ ಬಗ್ಗೆ ಯಾವತ್ತು ವಂತಿಗೆಯನ್ನು ಮಾರ್ಚಿ ಅಖೈರ ವರೇಗೆ ತಾ. ಕಾ. ಕಮಿಟಿಗೆ ಎಂದಿನಂತೆ ಕೊಡಬೇಕಾಗಿಯೂ, ಮಾರ್ಚಿ ಅಖೈರಿಗೆ ಕೆಲಸದಿಂದ ನಿವೃತ್ತರಾಗುವ ಕೆಲಸಗಾರರಿಗೆ ಸಹಾಯಿಸುವದರ ಯಾವತ್ತು ಬಾಕಿಯನ್ನು ದಯಮಾಡಿ ಕೂಡಲೆ ಕೊಟ್ಟು ಈ ಕಮಿಟಿಯು ಕೃತಜ್ಞತಾಪೂರ್ವಕ ಉಪಕಾರ ಸ್ಮರಣೆಗೆ ಪಾತ್ರರಾಗಬೇಕಾಗಿ ವಿನಂತಿ. ಮಾರ್ಚಿ ಅಖೈರು ಮೇಲೆ ಹೊಸ ವಂತಿಗೆ ಪಟ್ಟಿಯನ್ನು ತೆರೆದು ತಮ್ಮ ಒಬ್ಬಿಗೆ ದಸ್ಕತನ್ನು ಸಂಬಂಧಪಟ್ಟವರು ಹಾಕಿಸಿಕೊಂಡಾರು.

ಅ. ಭೋಜರಾಯ, ಕಾರ್ಯದರ್ಶಿ.

ವಿದೇಶ ವರ್ತಮಾನ.

—ಅಮೇರಿಕದಲ್ಲಿ ವಿಲಿಂಗ್‌ಡನ್ ಎಂಬಾತನು ೧೯೧೭ನೆಯ ಇಸವಿಯಲ್ಲಿ ಒಂದು ಜೂಜಿನ ಕುದುರೆಯನ್ನು ತೆಗೆದುಕೊಂಡಿದ್ದನು. ಅದು ಈಗ ೬॥। ಲಕ್ಷ ರೂಪಾಯಿಗೆ ವಿಕ್ರಯಿಸಲ್ಪಟ್ಟಿದೆ.

—ಉತ್ತರ ಅಮೇರಿಕಕ್ಕೆ ಸೇರಿದ ಮೆಕ್ಸಿಕೋ ರಾಜ್ಯದಲ್ಲಿ ರೋಮನ್ ಕೆಥೋಲಿಕ್ ಪಾದ್ರಿಗಳು ಬ್ರಹ್ಮಚಾರಿಗಳಾಗಿರದೆ ವಿವಾಹವನ್ನು ಮಾಡಿಕೊಂಡೇ ತೀರಬೇಕೆಂದು ಶಾಸನವು ಮಾಡಲ್ಪಟ್ಟಿರುವುದರಿಂದ, ಆ ಪಾದ್ರಿಗಳು ಅದಕ್ಕೊಪ್ಪದೆ ಆಂದೋಳನ ಮಾಡಿದುದರ ಮೇಲೆ ಅನೇಕರು ಸೆರೆಯಲ್ಲಿಡಲ್ಪಟ್ಟಿರುವರು.

—ಬೆಲ್ಜಿಯಮ್ಮಿನ ಮಂತ್ರಿಮಂಡಲದಲ್ಲಿ ದಂಡು ಕಡಿಮೆಮಾಡುವಂತೆ ಠರಾವು ಪಾಸಾಯಿತು. ಇದರಿಂದ ೫೦ ಸಾವಿರ ಮಂದಿ ನಿರುದ್ಯೋಗಿಗಳಾಗುವರು. ಇದರಿಂದ ಪ್ರಜೆಗಳೆಲ್ಲಾ ಕೋಲಾಹಲವೆದ್ದು ಸಭೆನಡೆಸಿ ಇದನ್ನು ಖಂಡಿಸಿದರು. ಮತ್ತು ರಸ್ತೆಯಲ್ಲಿ ಬರುತ್ತಿದ್ದ ಮಂತ್ರಿಯವರನ್ನು ಸ್ವಲ್ಪ ತೊಂದರೆಗೆ ಗುರಿಮಾಡಬೇಕೆಂದು ಹಿಂಬಾಲಿಸಿದರು. ಮಂತ್ರಿಯವರು ಹತ್ತಿರವಿದ್ದ ಚಿತ್ರಶಾಲೆಯನ್ನು ಸೇರಿ ಹಿಂದಿನ ಬಾಗಿಲಿನಿಂದ ಪರಾರಿಯಾಗಿರುವರಂತೆ!

—ಫ್ರಾನ್ಸಿನ ಲಾವಲ್‌ನಲ್ಲಿ ನಡಿಯುವ ಒಂದು ಪ್ರದರ್ಶನಕ್ಕೆ ಲಂಡನ್ ನಗರದ ಮಿ। ದೆಹರ್ ಎಂಬವರು ಒಂದು ರತ್ನಗಂಬಳಿಯನ್ನು ಕಳುಹಿಸಿರುವರು. ಇದು ಪೂರ್ವದಲ್ಲಿ ಪರ್ಷಿಯಾದ ಷಹ ದೊರೆಗಳಿಗೆ ಸೇರಿದ್ದುದು. ಇದರಲ್ಲಿ ನಾನಾ ಜಾತಿಯ ಕಾಡುಮೃಗಗಳು ಚಿತ್ರಿತವಾಗಿವೆ. ಇದರ ಬೆಲೆ ೧೨೦ ಸಾವಿರ ಸವರಿನ್‌ಗಳೆಂದು ಅಂದಾಜಾಗಿರುವುದು. ಇದು ಫ್ರಾನ್ಸಿನಲ್ಲಿಯೇ ಇರುವ ಪಕ್ಷಕ್ಕೆ ಅದರ ಯಜಮಾನನು ಸರಕಾರಕ್ಕೆ ೨೦ ಸಾವಿರ ಸವರಿನ್‌ಗಳ ತೆರಿಗೆಯನ್ನು ಕೊಡಬೇಕಾಗುವುದು.

—ಜಪಾನ್ ದೇಶದ ಬಟ್ಟೆಗಳು ಇಂಡಿಯಾ ದೇಶದಲ್ಲಿ ಅಗ್ಗವಾಗಿ ಮಾರಲ್ಪಡುತ್ತಿರುವುದಕ್ಕೆ ಕೆಲವು ಕಾರಣಗಳು ಸೂಚಿತವಾಗಿವೆ. ದೊಡ್ಡದಾದ ೧೪ ಜಪಾನೀಯ ಕಾರ್ಖಾನೆಗಳು ದಿನವಹಿ ೨೨ ಗಂಟೆಗಳ ಕಾಲ ಕೆಲಸ ಮಾಡುತ್ತಿರುವವು. ವಾಷಿಂಗ್‌ಟನ್ ಒಪ್ಪಿಗೆಗೆ ವಿರುದ್ಧವಾಗಿ ಜಪಾನಿನಲ್ಲಿ ಸ್ತ್ರೀಯರೂ ರಾತ್ರಿವೇಳೆ ಕಾರ್ಖಾನೆಗಳಲ್ಲಿ ಕೆಲಸಕ್ಕೆ ಹೋಗುವರು. ಜಪಾನಿನಲ್ಲಿ ಕೂಲಿ ದರಗಳು ಬೊಂಬಾಯಿಯ ದರಗಳಿಗಿಂತ ಕಡಿಮೆಯಾಗಿವೆ.

—ಯುರೋಪಿನ ಪಶ್ಚಿಮ ರಾಜ್ಯಗಳಲ್ಲಿ ಅಪರಾಧಿಗಳು ಶಿಕ್ಷೆಯನ್ನು ತಪ್ಪಿಸಿಕೊಳ್ಳುವುದಕ್ಕೆ ತಮ್ಮ ಸ್ವರೂಪವನ್ನೇ ಬದಲಾಯಿಸಿಕೊಳ್ಳುವಷ್ಟು ಚತುರರಾಗಿರುವರು. ಮುಖಭಾವವನ್ನೂ ಅಂಗದ ಯಾವ ವಿಶೇಷ ಗುರುತನ್ನೂ ಸಂಪೂರ್ಣವಾಗಿ ಬದಲಾಯಿಸಬಲ್ಲ ಶಸ್ತ್ರರಾದ ವೈದ್ಯರು ಆ ದೇಶಗಳಲ್ಲಿರುವುದರಿಂದ, ದೊಡ್ಡ ದೊಡ್ಡ ಅಪರಾಧಗಳನ್ನು ಮಾಡಿದವರು ಈ ವೈದ್ಯರ ಸಹಾಯದಿಂದ, ತಮ್ಮ ಸ್ವರೂಪವನ್ನು ಬದಲಾಯಿಸಿಕೊಂಡು, ಎಷ್ಟೇ ಶಕ್ತರಾದ ಪೋಲೀಸಿನವರಿಂದಲೂ ಗುರ್ತಿಸಲ್ಪಡುತ್ತಿಲ್ಲ. ಇಂಗ್ಲೆಂಡಿನಲ್ಲಿ ಸೆರೆಹಿಡಿಯಲ್ಪಟ್ಟ ಒಬ್ಬ ಕಳ್ಳನ ಜೇಬಿನಲ್ಲಿ ಆತನ ಅಂಗಚಹರೆಯನ್ನು ಬದಲಾಯಿಸಿದ್ದ ವೈದ್ಯನ ೯೦ ಸವರಿನ್‌ಗಳ ಬಿಲ್ ಸಿಕ್ಕಿತಂತೆ. ಈ ಅಪರಾಧಿಯು ಹಿಂದೆ ಎಷ್ಟೋ ವೇಳೆ ಶಿಕ್ಷೆ ಹೊಂದಿದ್ದರೂ ಪೋಲೀಸಿನವರು ಅವನನ್ನು ಗುರ್ತಿಸಲಿಲ್ಲ.

—ಕಳೆದ ತಾ. ೨೩ರಲ್ಲಿ ಎಡನ್‌ನಿಂದ ವಿಲಾಯತಿಗೆ ಹೋಗುತ್ತಿದ್ದ ಮಲ್ವಾ ಎಂಬ ವಿಲಾಯತಿ ಸ್ಟೀಮರಿನಲ್ಲಿ ಅಕಸ್ಮಾತ್ತಾಗಿ ಒಂದು ಬಗೆಯ ಹೊಗೆಯ ಸಮ್ಮಂಧ ಎರಡು ಜನರು ಮಡಿದಿರುವರು. ಇದು ಯಾವ ಬಗೆಯ ವಿಷಕರವಾದ ಹೊಗೆ ತಿಳಿದು ಬರಲಿಲ್ಲ.

ಒಳದೇಶ ವರ್ತಮಾನ.

—ಮುಂಬಯಿ ನಗರದಲ್ಲಿ ಕಲ್ಲಿದ್ದಲ್ಲು ಭರ್ತಿಯಾಗಿದ್ದ ಒಂದು ಗಂಡಿಗಿಗೆ ೧೪ನೇ ತಾರೀಖಿನಲ್ಲಿ ಬೆಂಕಿ ಬಿದ್ದುದರಿಂದ ಸುಮಾರು ನಾಲ್ಕೂವರೆ ಲಕ್ಷ ರೂಪಾಯಿಗಳ ವರೆಗೆ ನಷ್ಟವಾಗಿದೆ.

—ಕೃತಕ ರೇಷ್ಮೆಯನ್ನು ತಯಾರಿಸುವಾಗ ನಿಷ್ಪ್ರಯೋಜನವೆಂದು ಎಸೆಯಲ್ಪಡುತ್ತಿದ್ದ ಪದಾರ್ಥಗಳಿಂದ, ಈಗ ಕೃತಕ ಉಣ್ಣೆಯು ತಯಾರಾಗುತ್ತಿದೆ. ಇದಕ್ಕೆ ಯಾವ ಬಣ್ಣವನ್ನು ಬೇಕಾದರೂ ಕೊಡಬಹುದಂತೆ. ಇದನ್ನು ನಿಜವಾದ ಉಣ್ಣೆಯ ಜತೆಯಲ್ಲಿ ಬೆರಸಿದರೆ ನೋಡುವುದಕ್ಕೆ ಅಂದವಾಗಿಯೂ ಹೊಳಪಾಗಿಯೂ ಕಾಣಬರುವುದಂತೆ!

—ಮಹಾತ್ಮಾ ಗಾಂಧಿಯವರು ಸತ್ಯಾಗ್ರಹಾಶ್ರಮದಲ್ಲಿರಲು ಪ್ರಾರಂಭಿಸಿದಂದಿನಿಂದ ನೂಲುವ ಕೆಲಸವು ಬಹಳ ಉತ್ಸಾಹದಿಂದ ನಡೆಯುತ್ತಿದೆ.

—ಮದ್ರಾಸ್ ಮುನ್ಸಿಪಾಲಿಟಿಯಲ್ಲಿ ಕೆಲಸಗಾರರಿಗೆ ಖಾದಿಯ ... ಮಾದರಿಯ ಬಟ್ಟೆ ಕೊಡಬೇಕೆಂದೂ ಪ್ರಾಥಮಿಕ ಶಾಲೆಗಳಲ್ಲಿ ನೂಲುವುದನ್ನೂ ಒತ್ತಾಯ ಶಿಕ್ಷಣ ಮಾಡಬೇಕೆಂದೂ ಠರಾವು ಪಾಸಾಯಿತು. ಇದನ್ನು ನಮ್ಮ ಮಾದರೀ ಮುನ್ಸಿಪಾಲಿಟಿಯವರೂ ಅನುಸರಿಸುವರೋ?

—ಕಾಶ್ಮೀರಸಂಸ್ಥಾನದಲ್ಲಿ ಹೊಸದಾಗಿ ರಾಜ್ಯಪ್ಪಾಭಿಷಿಕ್ತರಾದ ರಾಜಾಹರಿಸಿಂಗರವರು ರಾಜ್ಯಸಿಂಹಾಸನಾರೂಢರಾದ ಕಾಲದಲ್ಲಿ ವೇಶ್ಯಾನರ್ತನಕ್ಕಾಗಿ ಒಂದುಲಕ್ಷ ರೂಪಾಯಿ ಖರ್ಚುಮಾಡಿದರಂತೆ! ಇದೀಗ ಕಾಲದ ಮಹಿಮೆ!

—ಮುಂಬಾಯಿಯಲ್ಲಿ ೫೦ ಸಾವಿರ ವೇಶ್ಯೆಯರೂ ಅವರ ೯೦೦ ಮನೆಗಳೂ ಇರುವುದಾಗಿ ತಿಳಿದುಬಂದಿದೆ. ಈ ಮನೆಗಳನ್ನು ಟೌನಿನಿಂದ ತೆಗೆದು ಬೇರೆಕಡೆಗೆ ಹಾಕಬೇಕು ಅಥವಾ ಪ್ರತ್ಯೇಕವಾದ ಸ್ಥಳದಲ್ಲಿ ಏರ್ಪಡಿಸಬೇಕು ಎಂದು ಅಲ್ಲಿನ ಸ್ತ್ರೀಸಮಾಜದವರಲ್ಲ ದೊಡ್ಡ ಸಭೆ ಸೇರಿ ನಿಶ್ಚಯಿಸಿ ಈ ಪ್ರಸ್ತಾಪವನ್ನು ಸರಕಾರಕ್ಕೂ ಮುನ್ಸಿಪಾಲಿಟಿಗೂ ವಿಜ್ಞಾಪಿಸಿಕೊಳ್ಳಬೇಕಾಗಿ ಗೊತ್ತುಮಾಡಿದರು.

—ಬಂಗಾಲದ ಗವರ್ನರ್ ಜನರಲ್‌ರಾದ ಲೋರ್ಡ್ ಲಿಟನ್ನರು ಬರುವ ಜೂನ್ ತಿಂಗಳ ತಾ. ೧೦ರಿಂದ ನಾಲ್ಕು ತಿಂಗಳ ರಜೆಯ ಮೇಲೆ ಹೋಗುವರು. ಇವರ ಬದಲಿಗೆ ಹೊನರೇಬಲ್ ಸರ್ ಸ್ಟೀವನ್‌ಸನ್ ಎಂಬವರಿಗೆ ನೇಮಕ ಮಾಡಿರುವರು.

—ಇಂದೋರಿನ ಮಹಾ ರಾಜರು ತನ್ನ ವಿಚಾರಣೆಯ ಕುರಿತು ವೈಸರಾಯಿ ಜನರಲ್‌ರವರು ತಮ್ಮ ಉತ್ತರವನ್ನು ಕಳುಹಿಸಿ ಕೊಟ್ಟಿರುವರು. ತಮ್ಮ ರಾಜಸ್ಥಾನದಲ್ಲಿ ಎರಡು ವಾರದ ವರೆಗೆ ಯಾರಾದರೂ ಯಾವ ಸಮೂಹವು ಮೃಗಗಳನ್ನಾಗಲಿ, ಪಕ್ಷಿಗಳನ್ನಾಗಲಿ ಪ್ರಾಣಹಾನಿಮಾಡಬಾರದಾಗಿ ತಿಳಿಸಿರುವರು.

—ಕಲ್ಕತ್ತಾದಲ್ಲಿ ಕೆಲವು ದಿವಸಗಳ ಹಿಂದೆ ಒಂದು ಹೆಂಗಸನ್ನು ಗುಂಡುಹಾಕಿ ಕೊಂದು ಮತ್ತು ತನ್ನ ಜೀವವನ್ನು ಸಹ ಕಳಕೊಳ್ಳುವ ಪ್ರಯತ್ನರುವ ಒಬ್ಬ ಇಲೆಕ್ಟ್ರಿಕ್ ಇಂಜಿನಿಯರನ್ನು ಕೈದುಮಾಡಲ್ಪಟ್ಟಿದ್ದರು. ತದನಂತರ ಇವನ ಸಂಬಂಧ ವಿಚಾರಣೆಯು ಕಳೆದ ತಾ. ೨೩ಕ್ಕೆ ಮುಗಿದು ೫ ವರ್ಷದ ಕಠಿಣ ಸಜೆಗೆ ಕಲ್ಕತ್ತೆಯ ಸೇಶನ್ ಕೋರ್ಟಿನ ಜಡ್ಜರವರು ವಿಧಿಸಿರುವರು.

—ವಿಲ್ಲಿಪುತ್ತೂರು ಎಂಬ ಸ್ಥಳದಲ್ಲಿ ಒಬ್ಬ ಯೋಗಿಯು ಸ್ವಇಚ್ಛೆಯಿಂದ ಭೂಮಿಯಲ್ಲಿ ಸಜೀವವಾಗಿ ಹೂಳಲ್ಪಟ್ಟು ಮಣ್ಣಿನಿಂದ ಮುಚ್ಚಲ್ಪಟ್ಟಿದ್ದನು. ೪ ದಿನಗಳ ಮೇಲೆ ಪೋಲೀಸರು ಈ ಸಂಗತಿಯನ್ನು ತಿಳಿದು ಸಮಾಧಿಯನ್ನು ತೆಗೆದು ನೋಡುವಲ್ಲಿ ಯೋಗಿಯು ಪ್ರಾಣದಿಂದಿದ್ದು ಮೇಲಕ್ಕೆದ್ದುಬಂದನು. ಇದರಿಂದ ಸಮಸ್ತರಿಗೂ ಪರಮಾಶ್ಚರ್ಯವಾಯಿತು. ಪೋಲೀಸಿನವರು ನಡೆದ ಸಂಗತಿಯನ್ನು ವಿಚಾರಿಸಿಕೊಂಡು ಇನ್ನು ಮುಂದೆ ಈ ರೀತಿ ಮಾಡುವುದಿಲ್ಲವೆಂದು ಯೋಗಿಯಿಂದ ಬರೆಯಿಸಿಕೊಂಡು ಅವನನ್ನು ಬಿಟ್ಟುಬಿಟ್ಟರು.

—ಪ್ರತಿವರ್ಷವೂ ಹಿಂದುಸ್ಥಾನದಿಂದ ಪರದೇಶಕ್ಕೆ ವ್ಯಾಪಾರ ನಿಮಿತ್ತವಾಗಿ ೪ ಲಕ್ಷ ದನಗಳು ಸಾಗಿಹೋಗುತ್ತಿರುವವು. ಮಾಂಸ ನಿಮಿತ್ತವಾಗಿ ೩೦ ಲಕ್ಷ ದನಗಳು ಹತವಾಗುತ್ತಿರವವು. ಒಟ್ಟು ೩೪ ಲಕ್ಷ ದನಗಳು ಪ್ರತಿವರ್ಷವೂ ಹಿಂದೂಸ್ಥಾನದ ಕೈ ಬಿಟ್ಟುಹೋಗುತ್ತವೆಂದು ಹೇಳಿದಂತಾಯಿತು. ಹೀಗಾದುದರಿಂದಲ್ಲವೆ ಒಂದಕ್ಕೆ ನಾಲ್ಕರಷ್ಟು ಬೆಲೆಯನ್ನು ಕೊಟ್ಟರೂ ಅಪ್ಪಟಾ ಹಾಲು ತುಪ್ಪವು ಸಿಕ್ಕದಿರುವುದು. ಮತ್ತು ಹಿಂದೂಸ್ಥಾನದ ಕೃಷಿಜೀವನವು ದಿನೇ ದಿನೇ ಶೋಚನೀಯಾವಸ್ಥೆಯನ್ನು ಹೊಂದುತ್ತಿರುವುದು?

ದಕ್ಷಿಣ ಕನ್ನಡ.

ಕಾರ್ಕಳ:—ಇಲ್ಲಿಯ ಸೆಂಟರ್ ಪ್ರಾಥಮಿಕ ಶಾಲಾ ಉಪಾಧ್ಯಾಯರ ೬ನೇ ಸಭೆಯು ಇದೇ ಕಳೆದ ಶನಿವಾರ ತಾ. ೨೦—೨—೧೯೨೬ನೇ ಅಪರಾಹ್ನ ಗಂಟೆ ೨ಕ್ಕೆ ಸರಿಯಾಗಿ ಅತ್ತೂರು ಕಲಂಬಾಡಿ ಶಾಲೆಯಲ್ಲಿ ಮಹಾರಾಜಶ್ರೀ ಸಾಂತಿರಾಜ ಅತಿಕಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಮೊದಲು ಮಕ್ಕಳು ಶ್ರೀ ದೇವರನ್ನು ಸ್ತುತಿಸಿದರು. ಕಾರ್ಯದರ್ಶಿಯವರು ಕಳೆದ ಸಭೆಯ ಠರಾವುಗಳನ್ನು ಓದಿ ಹೇಳಿದರು. ಶಾಲಾ ಉಪಾಧ್ಯಾಯರು ಶಾಲೆಯ ಪೂರ್ವಸ್ಥಿತಿಯನ್ನು ಸ್ವಲ್ಪ ಮಟ್ಟಿಗೆ ವಿವರಿಸಿದರು. ಸೊಸೈಟಿಯ ಮೂಲಕ ನಿಶ್ಚಯಿಸೋಣಾದ ಪ್ರಕಾರ ಶ್ರೀಯುತ ಕೆ. ಸದಾಶಿವರಾಯರು ೩ನೇ ದರ್ಜೆಗೆ ಒಂದು ಕನ್ನಡ ಭಾಷಾ ಪಾಠವನ್ನು ಕೊಟ್ಟರು. ಆ ಮೇಲೆ ಕಾರ್ಯದರ್ಶಿಯವರು ಶಾಲಾ ಕಟ್ಟೋಣವು ಬಹಳ ಜೀರ್ಣವಾಗಿದೆ ಎಂದೂ ಅದನ್ನು ಜೀರ್ಣೋದ್ಧಾರ ಮಾಡುವರೆ ಕೆಲವು ಗ್ರಾಮದ ಸದ್‌ಗ್ರಹಸ್ಥರು ಟೊಂಕ ಕಟ್ಟಬೇಕೆಂದೂ ಒಂದು ಸುರಸವಾದ ಭಾಷಣವನ್ನು ಕೊಟ್ಟರು. ಈ ಭಾಷಣವನ್ನು ಕೇಳಿದೊಡನೆ ಅಧ್ಯಕ್ಷರು ಈ ಶಾಲೆಯನ್ನು ತಿರಿಗಿ ಕಟ್ಟಲಿಕ್ಕೆ ಬೇಕಾಗುವ ಮರಮಟ್ಟು ತಾನು ಧರ್ಮಾರ್ಥವಾಗಿ ಕೊಡುತ್ತೇನೆಂದು ಒಪ್ಪಿದರು. ಅನಂತರ ಕಾರ್ಯದರ್ಶಿಯವರು ಅಧ್ಯಕ್ಷರಿಗೂ ಶಾಲಾ ಮುಖ್ಯ ಉಪಾಧ್ಯಾಯರಿಗೂ ತನ್ನ ಧನ್ಯವಾದಗಳನ್ನು ಅರ್ಪಿಸಿದ ಮೇಲೆ ಪಾನಕ, ತಾಂಬೂಲಾದಿಗಳನ್ನು ಸ್ವೀಕರಿಸಿ ಸಭೆಯು ಕೊನೆಗಾಣಿತು.

ಬಂಟ್ವಾಳ:—ಉಪ್ಪಿನಂಗಡಿಯ ಹತ್ತಿರ ಬಂದಾರು ಎಂಬ ಗ್ರಾಮದಲ್ಲಿ ಒಂದು ಗೌಡರ ಕುಟುಂಬದೊಳಗೆ ಕೊಳಕೆ ನೀರಿಗಾಗಿ ಜಗಳವಾಯಿತಂತೆ ಇವರಲ್ಲಿ ಕಠಿಣ ತರದ ಕತ್ತಿಯ ಮತ್ತು ಕೊಡಲಿಗಳ ಪೆಟ್ಟಾಗಿ ಜಖಂ ಆದವರನ್ನು ಬಂಟವಾಳ ಆಸ್ಪತ್ರೆಗೆ ತಂದಿರುತ್ತಾರೆ. ಗಾಯಗಳು ಶರೀರದ ಎಲ್ಲಾ ಭಾಗಗಳಲ್ಲಿಯೂ ಇವೆ. ಇವರಲ್ಲಿ ಒಬ್ಬ ಹೊಲೆಯನಿಗೆ ತಲೆಯ ಮೇಲೆ ಕೊಡಲಿಯ ಪೆಟ್ಟುಗಳು ಇವೆ. ಇವನು ಆಸ್ಪತ್ರೆಗೆ ಬಂದೊಡನೆಯೇ ಸಾಯುವನೆಂದು ಇಲ್ಲಿಯ ಸಬ್ ಮ್ಯಾಜಿಸ್ಟ್ರೇಟರು ಮರಣ ವಾಗ್ಮೂಲವನ್ನು ತಗೆದುಕೊಂಡರು. ಅವನು ಇಷ್ಟರ ವರೆಗೆ ಸಾಯಲಿಲ್ಲ. ಈ ಹೊಲೆಯನು ಒಳ್ಳೇ ವೀರಪುರುಷನಂತೆ ಕಾಣುತ್ತಾನೆ. ಇವನು ಯುರೋಪ ಖಂಡದಲ್ಲಿ ಹುಟ್ಟಿದ್ದರೆ ದೊಡ್ಡ ಸೇನಾಧಿಪತಿಯಾಗಿ ಅನೇಕ ಬಿರುದುಗಳನ್ನು ಪಡೆಯುತ್ತಿದ್ದನು. ಇವನ ತಲೆಗೆ ಕೊಡಲಿಯ ಪೆಟ್ಟು ಬಿದ್ದೊಡನೆಯೇ ರಕ್ತವು ಸುರಿದು ನೆಲಕ್ಕೆ ಬಿದ್ದುಬಿಟ್ಟನಂತೆ! ಅವರೆ ಕೂಡಲೇ ಎದ್ದು ತನ್ನನ್ನು ಹೊಡೆದವನ ಕೈಯಿಂದ ಕೊಡಲಿಯನ್ನೂ ಮತ್ತು ಇತರರ ಕೈಗಳಿಂದ ದೊಣ್ಣೆಗಳನ್ನೂ ಸೆಳಕೊಂಡನಂತೆ! ಹೊಡಿಯಲಿಕ್ಕೆ ಬಂದವರೆಲ್ಲಾ ಒಬ್ಬನೇ ಓಡಿಸಿಬಿಟ್ಟನಂತೆ! ಆದ್ದರಿಂದ ಈತನು ಮಹಾ ವೀರನೇ ಸೈ.

ಇಲ್ಲಿಯ ನೆರೆಕರೆಯ ಮನೆಗಳಲ್ಲಿಯೂ, ಕಾಡುಗುಡ್ಡೆಗಳಲ್ಲಿಯೂ ಜುಗಾರಾಟದ ಗಡಿಬಿಡಿಯು ಅಧಿಕವಾಗುತ್ತಾ ಬರುತ್ತದೆ. ಈ ದುರ್ವ್ಯಸನದಿಂದ ಕೈಯಲ್ಲಿ ಕಾಸು ಇಲ್ಲದಿದ್ದರೆ ಮೆಲ್ಲನೆ ಕದಿಯುವ ದಾರಿ ಹುಡುಕಬೇಕಾಗುತ್ತದೆ. ಬಂಟವಾಳ ಪೋಲೀಸ ಅಧಿಕಾರಿಗಳು ನಿದ್ರಾವಸ್ಥೆಯಲ್ಲಿದ್ದ ಹಾಗೆ ಕಾಣುತ್ತದೆ. ಮುಂಚಿನ ಪೋಲೀಸ ಇನ್ಸ್‌ಪೆಕ್ಟರ ರಾ। ಶಾಂತಾರಾಮರಾಯರು ಇರುವಾಗ್ಯೆ ಈ ಸಂಗ್ತಿಗಳೆಲ್ಲಾ ಆಗುವುದೇ ಕಡಿಮೆಯೇ ಇತ್ತು. ಆದ್ದರಿಂದ ಇಂಥಾ ಜುಗಾರಾಟಗಳನ್ನು ನಿರ್ಮೂಲಮಾಡದಿದ್ದರೆ ಜನರು ದುರ್ಮಾರ್ಗಿಗಳಾಗಿ ಹೋಗುವರು.

ಸಂಪಾಜೆ:—ಇಲ್ಲಿಗೆ ಸಮೀಪ ಕೊಡಗು ಪ್ರಾಂತ್ಯದ ಚೆಂಬು ಎಂಬಲ್ಲಿ ಗೌಡಜಾತಿಯ ಎರಡು ಮೂರು ಕುಟುಂಬಗಳು ಕೆಲವು ಸಮಯದ ಮೊದಲು ಪ್ರೊಟೆಸ್ಟಾಂಟ ಕ್ರೈಸ್ತ ಮತವನ್ನವಲಂಬಿಸಿದ್ದರು. ಈಗ ಇನ್ನೂ ಅನೇಕ ಕುಟುಂಬಗಳು ಕ್ರೈಸ್ತರಾಗುವುದಕ್ಕೆ ಸಿದ್ಧರಾಗುತ್ತಿರುತ್ತಾರೆ. ಈ ಬಗ್ಗೆ ಒಬ್ಬ ಕ್ರೈಸ್ತ ಉಪದೇಶಿಯು ಮಡಿಕೇರಿಯಿಂದ ಇಲ್ಲಿಗೆ ಆಗ್ಯಾಗ್ಗೆ ಬರುತ್ತಾರೆ. ಧರ್ಮತತ್ವ ಏನೆಂತ ತಿಳಿಯದ ಅಜ್ಞಗೌಡರು ಸುಲಭವಾಗಿ ಇವರ ಬಲೆಗೆ ಬೀಳುತ್ತಾರೆ. ಇಂತಹ ಶೋಚನೀಯ ಅವಸ್ಥೆಯನ್ನು ಕಂಡು ಇಲ್ಲಿಯ ಶ್ರೀಮಂತರೂ ಜನೋಪಕಾರಿಗಳೂ ಆದ ಮ। ರಾ। ರಾ। ಕಿಲಾರ ರಾಮಚಂದ್ರಯ್ಯನವರು ಆರ್ಯಧರ್ಮ ಪ್ರಚಾರಕರಾದ ಶ್ರೀಯುತ ಮೋಹನಪ್ಪ ತಿಂಗಳಾಯರನ್ನು ಇಲ್ಲಿಗೆ ಆಮಂತ್ರಿಸಿದ್ದರು. ಇದೇ ಫೆಬ್ರವರಿ ತಿಂಗಳ ತಾ. ೩ರಲ್ಲಿ ಕ್ರೈಸ್ತ ಸರಕಾಯ ಎಂಬವರ ಮನೆಯಲ್ಲಿ ಆಸುಪಾಸಿನ ಅನೇಕ ಗೌಡಜನರ ಸಮಕ್ಷಮ ಕ್ರೈಸ್ತ ಉಪದೇಶಿಯವರಿಗೂ ಶ್ರೀಯುತ ತಿಂಗಳಾಯರಿಗೂ ಧರ್ಮಸಂಬಂಧವಾಗಿ ವಾದಪ್ರತಿವಾದಗಳು ಆಗಿ ಬೆಳಗ್ಗೆ ೧೦ ಗಂಟೆಯಿಂದ ಸಾಯಂಕಾಲ ಮೂರು ಘಂಟೆ ವರೆಗೆ ನಡೆಯಿತು.

ಶ್ರೀಯುತ ತಿಂಗಳಾಯರು ಕ್ರೈಸ್ತ ಬೈಬಲಿನ ಬೋಧನೆ ಮತ್ತು ಆದರ್ಶಗಳಲ್ಲಿ ಹಿಂದೂ ಪೌರಾಣಿಕ ಸಂಪ್ರದಾಯದ ಆದರ್ಶ ಮತ್ತು ಬೋಧನೆಗಳಿಗಿಂತ ವಿಶೇಷವಾದದ್ದು ಏನೂ ಇಲ್ಲವೆಂತ ಬೈಬಲಿನಲ್ಲಿ ಹೇಳಿರುವ ಅನೇಕ ಉದಾಹರಣೆಗಳಿಂದಲೇ ರುಜುಪಡಿಸಿ ಮನುಷ್ಯನು ತನ್ನ ಜನ್ಮಸಾಫಲ್ಯಗೊಳಿಸಿ ಮುಕ್ತನಾಗಲಿಕ್ಕೆ ಅಗತ್ಯವುಳ್ಳ ಸರ್ವಮತ ಮಾನ್ಯವಾದ ಮತ್ತು ವೈದಿಕವಾದ ಯಮನಿಯಮಗಳ ವ್ಯಾಖ್ಯಾನ ಮಾಡಿದರು. ಅಂತ್ಯದಲ್ಲಿ ಕ್ರೈಸ್ತ ಧರ್ಮೋಪದೇಶಿಗಳು ನಿರುತ್ತರರಾಗಿ ಹೋದರು. ಇದರಿಂದ ಕ್ರೈಸ್ತ ಮತಾಂತರವಾಗಲಿಕ್ಕಿದ್ದ ಗೌಡಜನರೊಳಗೆ ಶುಭಪರಿಣಾಮವಾಗಿ ಅವರ ಮತಾಂತರಕ್ಕೆ ತುಂಬಾ ತಡೆಯಾಯಿತು.

ಮಂಗಳೂರು.

ನಿನ್ನೆ ತಾ. ೨೫ನೆಯ ಗುರುವಾರ ಸಾಯಂಕಾಲ ಗಣಪತಿ ಹೈಸ್ಕೂಲಿನಲ್ಲಿ ಗವರ್ನಮೆಂಟ್ ಕೊಲೇಜು ಮತ್ತು ಗಣಪತಿ ಹೈಸ್ಕೂಲ್ ವಿದ್ಯಾರ್ಥಿಗಳೊಳಗೆ ನಡೆದ "ವಾಲಿಬೋಲ್" ಪಂದ್ಯಾಟದಲ್ಲಿ ಗಣಪತಿ ಹೈಸ್ಕೂಲಿನ ವಿದ್ಯಾರ್ಥಿಗಳು ಜಯಶೀಲರಾದುದರಿಂದ ಈ ಬಗ್ಗೆ ನವೀನವಾಗಿ ಸಿದ್ಧಗೊಳಿಸಿದ "ಶ್ರೀ ಸರಸ್ವತೀ ವಾಲಿಬೋಲ್ ಟೂರ್ನಮೆಂಟ" ಎಂಬ ಹೆಸರಿನ ಬೆಳ್ಳಿಯ ಕಪ್ ಅವರಿಗೆ ಕೊಡೋಣಾಯಿತು.

ಪುತ್ತೂರು ಡಿವಿಜನಿನ ಡಿಪ್ಯುಟಿ ಕಲೆಕ್ಟರರಾಗಿರುವ ಮ। ರಾ। ರಾ। ಕೆ. ಎನ್. ಚೋಯಿಕುಟ್ಟಿಯವರನ್ನು ಚೆಂಗಲ್ಪಟ್ಟಿಗೆ ವರ್ಗಾಯಿಸಿರುತ್ತಾರೆ. ಪುತ್ತೂರು ಡಿವಿಜನಿನ ಡಿಪ್ಯುಟಿ ಕಲೆಕ್ಟರರಾಗಿ ಮ। ರಾ। ಎಮ್. ವ್ಯಾಸರವರು ಚಾರ್ಜು ವಹಿಸಿಕೊಂಡಿರುವರು.

ಕೃಷಿ ಇಲಾಖೆಯ ಡಿಪ್ಯುಟಿ ಡಿರೆಕ್ಟರವರು ಈ ಜಿಲ್ಲೆಗೆ ಬಂದು ತಾ. ೧೪-೧೫ರಲ್ಲಿ ಇಲ್ಲ ಇದ್ದು ಕಾಸರಗೋಡು, ಪುತ್ತೂರು, ಬಾಮಾರ್ಡಿ, ಈ ಪ್ರಾಂತಗಳನ್ನು ಸಂದರ್ಶಿಸಿ, ತಾ. ೨೩-೨೪ಕ್ಕೆ ಮಂಗಳೂರಿನಿಂದ ಶಿರ್ವಕ್ಕೆ ಹೋಗಿ, ತಾ. ೨೬-೨೮ರಲ್ಲಿ ಶಿರ್ವ ಪ್ರಾಂತ್ಯವನ್ನು ಸಂದರ್ಶಿಸುವರು. ಈ ಸಂದರ್ಶನಕಾಲದಲ್ಲಿ ಬಾಮಾರ್ಡಿ ಪ್ರಾಂತಗಳಲ್ಲಿ ಕೃಷಿಭೂಮಿಗಳ ತನಖಿಯನ್ನೂ ಮತ್ತು ಇತರ ಕಡೆಗಳಲ್ಲಿರುವ ತೆಂಗಿನ ಮರಗಳ ಫಾರ್ಮುಗಳನ್ನೂ ಮತ್ತು ಇಂಥ ಡಿಮನ್‌ಸ್ಟ್ರೇಟಿವ್ ಫಾರ್ಮುಗಳನ್ನು ಎಲ್ಲೆಲ್ಲಿ ಸ್ಥಾಪಿಸಬಹುದೆಂಬುದನ್ನೂ ತನಖಿಮಾಡುವರು.

ಲಕ್ಷ್ಮಣ ಸೆಟ್ಟಿ ಎಂಬವನನ್ನು ಕೈದುಮಾಡಿ ಬಂಟವಾಳದಲ್ಲಿ ರಿಮಾಂಡಿನಲ್ಲಿಟ್ಟಿರುತ್ತಾರೆ. ಈತನ ಮೇಲಣ ತಪ್ಪಿನ ಆರೋಪಣೆಯು ಈ ರೀತಿ ಇರುವುದು. ಇದೇ ತಿಂಗಳ ತಾ. ೧೧ರಲ್ಲಿ ಈತನು ಒಂದು ಕತ್ತಿಯಿಂದ ತನ್ನ ಹೆಂಡತಿಯ ಕುತ್ತಿಗೆಯನ್ನು ಕಡಿದಾಕ್ಷಣ ಆಕೆಯು ಮೃತಪಟ್ಟಳು. ಮುದ್ದೆಯಾಲಿಯು ತನ್ನ ತಪ್ಪನ್ನು ಒಪ್ಪಿರುವನೆಂದೂ ಮತ್ತು ಮೃತಪಟ್ಟ ತನ್ನ ಹೆಂಡತಿಯು ದುರ್ನಡತೆಯವಳಾಗಿದ್ದು ತನ್ನಕೂಡೆ ಇರಲು ನಿರಾಕರಿಸಿದ್ದರಿಂದಲೂ ತಾನು ಈ ರೀತಿ ಖೂನಿಮಾಡಲು ಕಾರಣವಾಯಿತೆಂದು ಹೇಳಿರುವನಾಗಿ ತಿಳಿದುಬರುತ್ತದೆ. ಮತ್ತು ಈ ಮುದ್ದೆಯಾಲಿಯು ಈ ಖೂನಿ ನಂತರ ಪ್ರಾಣಹತ್ಯವನ್ನು ಮಾಡಿಕೊಳ್ಳಲು ಪ್ರಯತ್ನಿಸಿದನೆಂತ ಸಹ ಕೇಳುತ್ತೇವೆ.

ಬೈಕಂಪಾಡಿ ಮಂಜಯ್ಯಾಚಾರಿ ಮಗ ಸುಬ್ರಾಯಾಚಾರಿ ಎಂಬವನನ್ನು ಬೆಳ್ತಂಗಡಿ ಪೋಲೀಸಿನವರು ಕೈದುಮಾಡಿ ಬಂಟವಾಳ ಸಬ್ ಮೇಜಿಸ್ಟ್ರೇಟರ ಮುಂದೆ ಹಾಜರುಪಡಿಸಿರುತ್ತಾರೆ. ತಾ. ೧೫—೨—'೨೬ರಲ್ಲು ಈ ಮುದ್ದೆಯಾಲಿಯು ಕಾರಿಂಜೆಯಲ್ಲಿ ಸಂತೆಯಲ್ಲಿ ಮಲಗಿಕೊಂಡಿರುವ ಒಬ್ಬ ಹುಡುಗಿಯ ಕೊರಳಲ್ಲಿರುವ ಚಿನ್ನದ ಸರಪಣಿಯನ್ನು ಕದ್ದುಕೊಂಡು ಹೋಗುತ್ತಿದ್ದಾಗ ಸರಪಣಿಯೊಂದಿಗೆ ಮುದ್ದೆಯಾಲಿಯನ್ನು ಪೋಲೀಸಿನವರು ಹಿಡಿದರೆಂತಲೂ ಪೋಲೀಸು ತನಖಿಯು ಪೂರ್ಣವಾಗುವ ವರೇಗೆ ಮುದ್ದೆಯಾಲಿಯನ್ನು ಬಂಟವಾಳದಲ್ಲಿ ರಿಮಾಂಡಿನಲ್ಲಿಟ್ಟಿರುವರಾಗಿಯೂ ತಿಳಿದುಬರುತ್ತದೆ.

ಇಲ್ಲಿಯ ವೆನ್‌ಲೋಕ್ ಆಸ್ಪತ್ರೆಯಲ್ಲಿ ಸಬ್ ಅಸಿಸ್ಟಾಂಟ್ ಸರ್ಜನರಾಗಿದ್ದ ರಾ। ಎಸ್. ಶಂಕರರಾಯರು ಇದೇ ಬರುವ ಮಾರ್ಚಿ ೧ನೇ ತಾರೀಕಿನಿಂದ ಆರು ಹಪ್ತೆಗಳ ರಜೆಯನ್ನು ಪಡೆದಿರುವರು.

ಇವತ್ತು ಎಡ್ಯುಕೇಶನಲ್ ಕೌನ್ಸಿಲಿನ ಗ್ರೆಂಟ್ ಸಬ್ ಕಮ್ಮಿಟಿಯ ಸಭೆಯು ಕೂಡಿತ್ತು, ನಾಳೆಯೂ ಎಡ್ಯುಕೇಶನಲ್ ಕೌನ್ಸಿಲಿನ ಸಭೆಯು ಇರುವುದು.

ನಾಳೆ ಶನಿವಾರ ಬೆಳಗ್ಗೆ ಗಂಟೆ ೮ಕ್ಕೆ ಬಲ್ಮಠದ ವೈ. ಎಮ್. ಸಿ. ಎ. ಕಟ್ಟಡದ ಎಮುರಿನಲ್ಲಿ ಬೆಡ್‌ಮಿಂಟನ್ ಪಂದ್ಯಾಟದಲ್ಲಿ ಗೆದ್ದವರಿಗೆ ಬೆಳ್ಳಿಯ ಪದಕಗಳು ಕಪ್ಪು ಇತ್ಯಾದಿಗಳ ಬಹುಮಾನಗಳು ಮ। ರಾ। ನೆಲ್ಲಿಕಾಯಿ ವೆಂಕಟರಾವ್‌ರವರ ಪತ್ನಿಯವರಿಂದ ಹಂಚೋಣಾಗುವವು.

ನಮ್ಮ ಜಿಲ್ಲೆಯ ಯಾವತ್ತು ಮತದಾರರಿಗೆ ಈ ಮೂಲಕ ಜಾಹೀರು ಮಾಡಿಕೊಳ್ಳುವುದೇನಂದರೆ:—ನ್ಯಾಯವಿಧಾಯಕ ಸಭೆಗಳಿಗೆ ಈ ವರುಷ ಚುನಾವಣೆ ಆಗಲಿಕ್ಕೆ ಇದೆ. ಕಳೆದ ಕಾನ್ಪುರ ಕಾಂಗ್ರೆಸ್ಸಿನಲ್ಲಿ ಕಾಂಗ್ರೆಸು ಪ್ರತಿನಿಧಿಗಳು ಸದ್ರಿ ಸಭೆಗಳನ್ನು ಪ್ರವೇಶಮಾಡಬೇಕೆಂದು ನಿಶ್ಚಯಿಸಿರುವರು. ಆದ್ದರಿಂದ ತಮ್ಮ ಮತಗಳನ್ನು (ಯಾ ವೋಟುಗಳನ್ನು) ಕಾಂಗ್ರೆಸು ಪ್ರತಿನಿಧಿಗಳಿಗೋಸ್ಕರ ಪ್ರತ್ಯೇಕಿಸಿ ಇಡಬೇಕಾಗಿಯೂ ಇತರರಿಗೆ ಯಾರಿಗೂ ಮಾತು ಕೊಡಬಾರದಾಗಿಯೂ ವಿನಂತಿ. ಕಾಂಗ್ರೆಸ್ಸಿನ ಪರವಾಗಿ ಆರಿಸಲ್ಪಟ್ಟ ಉಮೇದ್ವಾರರ ಹೆಸರುಗಳು ಆಯಾಯ ಕಾಲದಲ್ಲಿ ಪತ್ರಗಳಲ್ಲಿ ಪ್ರಕಟಿಸಲ್ಪಡುವವು ಎಂದು ಅ. ಭೋಜರಾಯರು ತಿಳಿಸುತ್ತಾರೆ.

ಕೇಳಿರಿ! ಬರೆಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ— ಡಿ. ಕ್ಲಾಲಸ್ ಮಾರ್ಟಿಸ್, ಮಂಗಳೂರು.

ವಿವಿಧ ವಿಷಯಗಳು.

ಮಂಗಳೂರು ಮುನಿಸಿಪಾಲಿಟಿಯಿಂದ ವೇಶ್ಯಾಸ್ತ್ರೀಯರ ಉಚ್ಚಾಟನೆ.

ಪುರಾತನ ಕಾಲದಲ್ಲಿ ಆಳಿದ ಹಿಂದೂ ಅರಸರೂ ಜೈನಬೌದ್ಧ ಅರಸರೂ ಮುಸಲ್ಮಾನ ಅರಸರೂ ತಮ್ಮ ರಾಜಧಾನಿಗಳಲ್ಲಿಯೂ ದೊಡ್ಡದೊಡ್ಡ ಪಟ್ಟಣಗಳಲ್ಲಿಯೂ ವೇಶ್ಯಾ ಸ್ತ್ರೀಯರಿಗಾಗಿಯೂ, ತುಂಡುಸೂಳೆಯವರಿಗಾಗಿಯೂ ಅವರ ವಾಸಸ್ಥಾನದ ಬಗ್ಗೆ ಪ್ರತ್ಯೇಕ ಕೇರಿಗಳನ್ನು ಮಾಡಿಸುತ್ತಿದ್ದರು. ಅದರಲ್ಲಿ ವ್ಯಭಿಚಾರಮಾಡುವ ಈ ಸ್ತ್ರೀಯರ ಮಾತ್ರವೇ ವಾಸಮಾಡಬೇಕಿತ್ತು. ಅವರು ಪಟ್ಟಣದ ಇತರ ಕೇರಿಗಳಲ್ಲಿ ವಾಸಮಾಡಕೂಡದಿತ್ತು. ಇಂಥಾ ಕೇರಿಗೆ ಸೂಳೆಕೇರಿ ಎಂದು ಹೆಸರಿತ್ತು. ಮಂಗಳೂರು, ಬಾರಕೂರು, ವಿಟ್ಲ, ಕುಂಬಳೆ, ಬಸರೂರು ಮುಂತಾದ ಊರುಗಳಲ್ಲಿ ಪ್ರತ್ಯೇಕ ಸೂಳೆ ಕೇರಿಗಳು ಇದ್ದವು.

ಮಂಗಳೂರಲ್ಲಿ ಪ್ಲೇಗು ಬರುವ ಮುಂಚೆ ವೇಶ್ಯಾಸ್ತ್ರೀಯರೆಲ್ಲರೂ ಚಡ್ಡೆಗಲ್ಲಿಯಲ್ಲಿಯೇ ವಾಸಮಾಡಿಕೊಂಡಿದ್ದರು. ನಂತರ ಇವರು ಸಿಕ್ಕಿದ ಸ್ಥಳದಲ್ಲಿ ಹೋಗಿ ಉಳುಕೊಳ್ಳಲಾರಂಭಿಸಿದರು. ಈಗ ಮಂಗಳೂರಿನ ಯಾವ ಕೇರಿಯಲ್ಲಿ ನೋಡಿದರೂ ಒಂದೆರಡು ವೇಶ್ಯಾಸ್ತ್ರೀಯರ ಮನೆಗಳು ಇದ್ದೇ ಇವೆ. ಮಾರ್ಕೆಟು ಮಾರ್ಗದ ಎಲ್ಲಾ ಓಣಿಗಳಲ್ಲಿಯೂ ಇವರ ಮನೆಗಳು ತುಂಬಿಹೋಗಿಯವೆ.

ವೇಶ್ಯಾಸ್ತ್ರೀಯರ ಮನೆಗಳು ಇತರ ಗರತಿಯರ ಮನೆಗೆ ಹತ್ತಿರವಿದ್ದರೆ ಗಂಡಯುಳ್ಳ ಗರತಿಯರೂ ಇವರ ಸಂಪರ್ಕದಿಂದ ವೇಶ್ಯಾಸ್ತ್ರೀಯರ ಗುಣಗಳೇ ಇವರಲ್ಲಿ ಬೇರೂರಿ ಕ್ರಮೇಣ ಇವರನ್ನು ಹಾಳುಮಾಡುತ್ತಿವೆ. ಇನ್ನು ಮುಂದೆಯೂ ಈ ವೇಶ್ಯಾಸ್ತ್ರೀಯರ ಮನೆಗಳೂ ಇತರ ಗರತಿಯರ ಮನೆಗಳ ಹತ್ತಿರವಿದ್ದ ಪಾಶ್ಚಿಮಾತ್ಯ ನಾಗರೀಕತೆಯಿಂದ ಅರೆವಾಸಿ ಹಾಳಾದ ಪತಿವ್ರತಾಧರ್ಮವು ಸಂಪೂರ್ಣವಾಗಿ ನಾಶಹೊಂದುವುದರಲ್ಲಿ ಸಂದೇಹವಿಲ್ಲ.

ಆದುದರಿಂದ ಮಂಗಳೂರು ಮುನಿಸಿಪಾಲಿಟಿಯವರು ವೇಶ್ಯಾಸ್ತ್ರೀಯರಿಗಾಗಿ ಒಂದು ಪ್ರತ್ಯೇಕ ಗಲ್ಲಿಯನ್ನು ನಿರ್ಮಿಸಿ ಅವರೆಲ್ಲರನ್ನೂ ಅಲ್ಲಿ ವಾಸವಾಗಿರುವಂತೆ ಮಾಡಬೇಕು. ಅದಲ್ಲದೆ ವೇಶ್ಯಾಸ್ತ್ರೀಯರ ಮನೆಗಳಿಗೂ ತುಂಡುಸೂಳೆಯವರ ಮನೆಗಳಿಗೂ ಪ್ರತ್ಯಪ್ರತ್ಯೇಕ ನಂಬ್ರಗಳನ್ನು ಹಾಕಬೇಕು. ಈ ರೀತಿಯಲ್ಲಿ ವರ್ತಿಸಿದರೆ ಗಂಡಯುಳ್ಳ ಹೆಂಗಸರು ಇವರ ಚಾಳಿಯನ್ನು ಕಲಿತು ಹಾಳಾಗದಂತೆ ಜಾಗ್ರತೆಯನ್ನು ಮಾಡಿದಂತಾಗುವುದು. ಮುನ್ಸಿಪಲ್ ಕೌನ್ಸಿಲ ಮೆಂಬರರಿಗೊಂದು ವಿನಯಪೂರ್ವಕ ಸೂಚನೆ. ಈ ವಿಷಯ ಮುಂಬಾಯಿಯಲ್ಲಿ ಅನೇಕ ಗೃಹಸ್ಥರು ಮತ್ತು ಸ್ತ್ರೀಯರು ಕೂಡ ಕೂಡಿ ವೇಶ್ಯಾಸ್ತ್ರೀಯರ ಮನೆಗಳನ್ನು ವಿಂಗಡಿಸಬೇಕಾಗಿ ಸರಕಾರದವರಿಗೆ ಮನವಿಮಾಡಿಕೊಂಡಿರುವರು.

.·. .·. .·. .·.

ರಾಜಪುತಾನದಲ್ಲಿರುವ ಉದಯಪುರ.

ಹಿಂದೂ ದೇಶದ ಯಾವ ಭಾಗದಲ್ಲಿ ನೋಡಿದರೂ ಮಹತ್ತಾದ ಅರಮನೆಗಳೂ, ಸಭಾಮಂದಿರಗಳೂ, ಮಸೀದಿಗಳೂ, ದೇವಸ್ಥಾನಗಳೂ, ಬಸದಿಗಳೂ, ಗುಡ್ಡಗಳ ಮೇಲೂ ಪರ್ವತಗಳ ಮೇಲೂ ಇರುವ ಕೋಟೆಗಳೂ ಕಂಡುಬರುತ್ತವೆ.

ರಜಪುತಾನದಲ್ಲಿರುವ ಉದಯಪುರವು ಎಲ್ಲಾ ವಿಧದ ಅಂದಚಂದಗಳಿಂದಲೂ ಕೂಡಿದ ಒಂದು ರಾಜಧಾನಿಯಾಗಿದೆ. ಈ ಪಟ್ಟಣದಲ್ಲಿರುವ ಅನೇಕ ಕಟ್ಟಡಗಳನ್ನು ಚಂದ್ರಕಾಂತ ಶಿಲೆಯಿಂದಲೇ ಮೊದಲಾರಭ್ಯ ಆಳಿದ ಅರಸರು ಕಟ್ಟಿಸಿರುತ್ತಾರೆ. ನಂತರ ಬಂದವರು ಈ ಪಟ್ಟಣವನ್ನು ಹೊಸ ರೀತಿಯಲ್ಲಿ ಕಟ್ಟಿಸಬೇಕೆಂದು ಎಷ್ಟು ಆಲೋಚಿಸಿದರೂ ಅದರಲ್ಲಿರುವ ಕಟ್ಟೋಣಗಳನ್ನೂ ಕೋಟೆಯನ್ನೂ ಕಟ್ಟಿದ ರೀತಿಯನ್ನು ಆಲೋಚಿಸುವಾಗ ಮೊದಲಿದ್ದ ಸ್ಥಿತಿಯಲ್ಲಿಯೇ ಇರಗೊಡಿಸುವುದು ಉತ್ತಮವೆಂದು ತಿಳಿದು ತಮ್ಮ ಹೊಸ ಆಲೋಚನೆಗಳನ್ನು ಬೇಡವೆಂದು ಬಿಟ್ಟುಬಿಡುತ್ತಾರೆ ಉದಯಪುರಕ್ಕೆ ಹೋಗಲು ಒಂದು ಕಾಲುದಾರಿ ಮಾತ್ರವೇ ಇತ್ತು. ಆದುದರಿಂದ ಪ್ರಯಾಣಿಕರು ಈ ಪಟ್ಟಣವನ್ನು ನೋಡಲು ಹೋಗುವುದೇ ಕಡಿಮೆ. ಆದರೆ ಇತ್ತಲಾಗಿ ಚಿತ್ತೂರಿನಿಂದ ಈ ಪಟ್ಟಣಕ್ಕೆ ಒಂದು ರೈಲು ಮಾರ್ಗವನ್ನುಮಾಡಿಸಿರುತ್ತಾರೆ. ಆದುದರಿಂದ ಇಲ್ಲಿಗೆ ಹೋಗುವುದು ಈಗ ಸುಲಭಸಾಧ್ಯವಾಗಿದೆ.

ಈ ಪಟ್ಟಣವನ್ನು ಆಳುವ ಮಹಾರಾಣನು ಈ ರಾಜ್ಯವನ್ನು ಆಳುವುದು ಮಾತ್ರವಲ್ಲ, ವಿವಾರ ರಾಜ್ಯದ ಅಧಿಕಾರಿಯೂ ಆಗಿರುವನು. ಈಗ ಆಳುವ ಉದಯಪುರದ ಮಹಾರಾಣನು ಈ ವಂಶದ ಆದಿಪುರುಷನಿಂದ ನೂರಹದಿನೈದನೇಯವನಾಗಿರುವರು.

ಈ ಪಟ್ಟಣಕ್ಕೆ ಹೋಗುವ ರೈಲುಮಾರ್ಗ ಮೈದಾನಾಗಿಯೂ, ಮರುಭೂಮಿಯಿಂದ ಕೂಡಿರುವುದಾಗಿಯೂ ಇರುವ ಪ್ರದೇಶದಿಂದ ದಾಟಿಹೋಗಿಯದೆ. ಮಾರ್ಗದ ಎರಡೂ ಕಡೆಗಳಲ್ಲಿ ಹೈಗೆಯ ಮೇಲೆ ಕಳ್ಳಿಯ ಗಿಡಗಳು ಮಾತ್ರವೇ ಬೆಳೆದುದನ್ನು ನೋಡಬಹುದು. ಈ ಪಟ್ಟಕ್ಕೆ ಹತ್ತಿರ ಬರುವಾಗ ಬಹಳ ವಿಶಾಲವಾದ ಒಂದು ಸರೋವರವು ಕಂಡುಬರುತ್ತದೆ. ಇದರಲ್ಲಿ ಸಣ್ಣ ಸಣ್ಣ ದ್ವೀಪಗಳು ಇವೆ. ಈ ದ್ವೀಪಗಳಲ್ಲಿ ಚಂದ್ರಕಾಂತ ಶಿಲೆಯಿಂದಲೆ ಕಟ್ಟಿದ ಸಣ್ಣ ಸಣ್ಣ ಅರಮನೆಗಳು ಕಾಣುತ್ತಿವೆ. ಈ ಸರೋವರದ ದಡದಲ್ಲಿ ಬಿಳೀ ಶಿಲೆಯಿಂದಲೇ ಕಟ್ಟಿದ ದೊಡ್ಡ ಅರಮನೆಗಳೂ ಇತರ ಕಟ್ಟಡಗಳೂ ಕಂಡುಬರುತ್ತಿವೆ. ಈ ಸರೋವರವನ್ನು ಪೀಲಾ ಸರೋವರವೆಂದು ಕರೆಯುವರು. ಸರೋವರದಲ್ಲಿರುವ ಒಂದು ದ್ವೀಪವನ್ನು ಜಗಮಂದಿರವೆಂತಲೂ, ಇನ್ನೊಂದನ್ನು ಜಗನಿವಾಸವೆಂತಲೂ ಕರೆಯುವರು. ಅರಮನೆಯ ಸುತ್ತಲೂ ಬಾಳೆಯ ಗಿಡದ ತೋಟಗಳೂ ತಾಳೆ ಮರಗಳ ತೋಪುಗಳೂ ಇವೆ. ಈ ದ್ವೀಪಗಳಲ್ಲಿರುವ ಅರಮನೆಗಳನ್ನು ನೋಡಬೇಕಾದರೆ ಮಹಾರಾಣನ ಅಪ್ಪಣೆಯನ್ನು ಪಡೆದು ದೋಣಿಗಳ ಮೇಲೆ ಕುಳಿತು ಹೋಗಬೇಕಾಗಿದೆ. ಈ ಅರಮನೆಗಳಲ್ಲಿ ಒಂದರಲ್ಲಿ ಜಹಾಂಗೀರನ ಮಗನಾದ ಶಹಜಹಾನನು ತನ್ನ ಶತ್ರುವಾದ ಒಬ್ಬ ರಾಜಕುಮಾರನಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಅಡಗಿಕೊಂಡಿದ್ದನಂತೆ. ಗದರಿನ ಸಮಯ ಅನೇಕ ಮಂದಿ ಯುರೋಪಿಯನರು ಇನ್ನೊಂದು ಅರಮನೆಯಲ್ಲಿ ಅಡಗಿಕೊಂಡಿದ್ದರಂತೆ ಮಹಾರಾಣನು ಇವರನ್ನು ಗದರಿನಾಗ ಮೆಹೊರ ಅವುಟರಾಮುಸಿಂಬ ಸೇನಾಧಿಪತಿಯು ಅರಮನೆಯಿಂದ ಈ ಕಡೆಗೆ ಹಾರಿ ಈಜಾಡಿ ದಡವನ್ನು ಸೇರಿದನಂತೆ. ಈ ಸರೋವರದಲ್ಲಿ ಬೇಸಿಗೆ ಕಾಲದಲ್ಲಿ ದೋಣಿಯಲ್ಲಿ ಹೋಗುವವರಿಗೆ ಪ್ರಾಣಾಪಾಯಗಳು ಆಗುತ್ತಲೇ ಇವೆ. ಅರಮನೆಯ ಒಳಗಡೆಯಲ್ಲಿ ಬಹಳ ವಿಚಿತ್ರ ತರದ ಶೃಂಗಾರವನಗಳು ಇವೆ.

ಪತಿತರಿಂದ ಪತಿತಳು.

ಆ ಹದಿನೆರಡು ವರ್ಷ ವಯಸ್ಸಿನ ಬಾಲೆಯು, ಮಂಚದ ಮೇಲೆ ಉದ್ದಕ್ಕೆ ಬಿದ್ದಿದ್ದ, ತನ್ನ ಪತಿಯ ಮೃತದೇಹದ ಕಾಲಡಿಯಲ್ಲಿ ಕುಳಿತಿದ್ದಾಗ, ಆ ಹತಭಾಗಿನಿಗೆ ವೈಧವ್ಯದ ತೀಕ್ಷ್ಣತೆಯು ತಿಳಿದಿರಲಿಲ್ಲ. ಮೃತಪತಿಯು ಅವಳಿಗೆ ಇನ್ನೂ ಅಪರಿಚಿತನಾಗಿಯೇ ಇದ್ದನು. ಅವನೊಡನೆ ಅವಳು ಒಂದು ಭಾರಿಯಾದರೂ ಸಲ್ಲಾಪವನ್ನು ನಡಿಸಿಲ್ಲ. ನಡಿಸುವ ಸಂದರ್ಭವೂ, ಧೈರ್ಯವೂ, ಇಚ್ಛೆಯೂ, ಇವು ಮೂರೂ ಅವಳಿಗಿರಲಿಲ್ಲ. ಅನೇಕ ಮೈಲಿ ದೂರದಲ್ಲಿದ್ದ ಒಂದು ಅನ್ಯಾನ್ಯ ಕುಟುಂಬದ ತರುಣ ಯುವಕನನ್ನು ಒಂದು ದಿನ ಮೆರವಣಿಗೆಯಿಂದ ಅವಳ — ಅವಳ ತಂದೆಯ — ಮನೆ ವರೆಗೆ ತಂದು, ಅವಳನ್ನು ಧಾರೆಯೆರೆದು ಕೊಟ್ಟಿದ್ದರು. ಆ ವಾದ್ಯಘೋಷದ, ತನ್ನ ಸ್ನೇಹಿತರ ಪಿಕಲಾಟದ, ವಿವಾಹ ಮಂಟಪದ ಕೋಲಾಹಲದ, ಮತ್ತೂ ಎಲ್ಲದಕ್ಕಿಂತಲೂ ಮೇಲಾದ ರುಚಿಕರವಾದ ಭಕ್ಷ್ಯಭೋಜನಗಳ ಆನಂದವೇ ಅವಳಿಗೆ ವಿವಾಹದ ಮಹತ್ವವೆಂದು ತಿಳಿದಿದ್ದಿತೇ ವಿನಹಾ, ಗಂಡನೆಂದೂ, ಗಂಡನೊಡನೆ ಸಂಸಾರಮಾಡುವುದೆಂದೂ, ಇವಾವ ವಿಷಯಗಳೂ ಅವಳಿಗೆ ತಿಳಿದಿರಲಿಲ್ಲ.

ವಿವಾಹದ ತುಮುಲ ಧ್ವನಿಯೂ, ಅಡಿಗೆಯವನ ವಿಲಕ್ಷಣ ಭೋಜ್ಯಗಳೂ ಅವಳಿಗೆ ವಿವಾಹದ ಛಾಯೆಯಾಗಿ ಅವಳಲ್ಲಿ ಉಳಿದಿದ್ದುವು. ಅಪರಿಚಿತನೊಬ್ಬನು ಯಾಕೆ ತನ್ನ ಕೈಯನ್ನು ಹಿಡಿದನು, ಸಖಿಯರು ಯಾಕೆ ತನ್ನ ಮೈಯನ್ನು ಚುಚ್ಚಿ ನೋಯಿಸಿದರು, ತಾನು ಮತ್ತು ತನ್ನ ಪತಿಯು ಲಗ್ನ ಮಂಟಪದಲ್ಲಿ ಇಬ್ಬರಿಗೆ ಮಾತ್ರ ಬೇಕಾದಷ್ಟು ಉದ್ದವಿದ್ದ ಲಗ್ನಾಸನದಲ್ಲಿ ಕುಳಿತಿದ್ದಾಗ ತನ್ನ ಅತ್ತಿಗೆಯು ಏಕೆ ತನ್ನ ಸಣ್ಣ ರೋದನಭೂಷಣ ತಮ್ಮನನ್ನು ತಂದು ತನ್ನ ಎಡಪಾರ್ಶ್ವದಲ್ಲಿ ವತ್ತಾಯದಿಂದ ಕೂಡಿಸಿದಳು, ಇತ್ಯಾದಿ ವಿವಾಹದ ಆ ಪ್ರಮುಖ ಘಟನೆಗಳ ಆ ಅರ್ಥವೇ ಅವಳಿಗೆ ಆಗುತ್ತಿರಲಿಲ್ಲ.

ಆ ದಿನ ಅವಳಿಗೆ ಅವಳ ಅಜ್ಜನು ಬೇಕಾಗುವಷ್ಟು ಹೂವನ್ನು ಮುಡಿಸಿ ತಲೆಯನ್ನು ಜಗ್ಗಿಸಿದ್ದರು. ಅಂದಿನ ಆ ಪುಷ್ಪರಾಶಿಯೇ ಇನ್ನೆಂದೆಂದಿಗೂ ಸಾಕಾಗಬೇಕೆಂದೂ ಅವಳಾಗಲೀ, ಅವಳ ಪ್ರಣಯಮಯಿಯರಾದ ಸಖಿಗಳಾಗಲಿ, ಅವಳ ಪ್ರೇಮಮಯಿ ಮಾತೆಯಾಗಲಿ, ಯಾರೂ ಕಲ್ಪಿಸಿದ್ದಿಲ್ಲ. ಅವಳ ಮುಂದಿನ ಸುಖಮಯ ಜೀವನ ಗ್ರಂಥದ ಉಪೋದ್ಘಾತವೆಂದೇ ತಾಯಿಯು ಅಷ್ಟು ಹೂವನ್ನು ಅವಳಿಗೆ ಮುಡಿಸಿದ್ದಳು. ಆದರೆ ಗ್ರಂಥಕರ್ತನ ದೌರ್ಭಾಗ್ಯ! ಎಷ್ಟೋ ಗ್ರಂಥಗಳು ಉಪೋದ್ಘಾತದಲ್ಲಿಯೇ ಪರಿಸಮಾಪ್ತಿಯನ್ನು ಹೊಂದಿವೆ!

ವಿವಾಹವಾಗಿ ಎರಡು ವರ್ಷಗಳಾದುವು. ಈ ಎರಡು ವರ್ಷಗಳೂ ಬಾಲೆಯು ತಾಯಿಯ ಪಕ್ಕದಲ್ಲಿಯೇ ಇದ್ದು ಸಂಸಾರದ ಪಾಠಗಳ ಅಕ್ಷರಾಭ್ಯಾಸವನ್ನು ಮಾಡುತ್ತಿದ್ದಳು. ಬೆಳಗ್ಗಿನಿಂದ ಸಂಜೆಯ ತನಕ ಅವಿಶ್ರಾಂತವಾಗಿ ಗೃಹಕಾರ್ಯದಲ್ಲಿ ನಿರತವಾಗುವ ಸಂಸಾರ ಪಾಠದ ಪ್ರಥಮಾಕ್ಷರವನ್ನೇ ಅವಳು ಈ ವರೆಗೆ ಅಭ್ಯಸಿಸಿದ್ದಳು.

ತನ್ನ ತಾಯಿಯ ಕಿರಿಮಕ್ಕಳ ಆರೈಕೆ, ತನ್ನ ಹಿರಿ ಸಹೋದರರ ಆಜ್ಞಾಪಾಲನೆ, ತನ್ನ ವೃದ್ಧ ಪಿತನ ಸೌಕರ್ಯ ಸಾಧನೆ, ಇತ್ಯಾದಿ ಸೇವಾಪರವಾದ ಸಂಸಾರ ಪಾಠವನ್ನು ಅವಳು ಚೆನ್ನಾಗಿಯೇ ಅಭ್ಯಸಿಸುತ್ತಿದ್ದಳು.

ಬಾಲೆಯು ವೃಥಶರೀರಿಯು; ಕಾಂತಿಯುಕ್ತಮೊಗವಿದ್ದವಳು; ಆನಂದಮಯಿ; ಸಂಸಾರ ಜ್ಞಾನವಿಲ್ಲದವಳು.

ಒಂದು ದಿನ ಒಂದು ಗಾಡಿಯು ಮನೆಯ ಮುಂದೆ ನಿಂತಿತು. ಯುವಕನೊಬ್ಬನು ಒಳಗೆ ಬಂದನು, ಬಾಲೆಯ ತಾಯಿಯನ್ನು ಕಂಡನು— ಬಾಲೆಯ ಪತಿಯು ಅಂತಿಮಾವಸ್ಥೆಯಲ್ಲಿರುವನೆಂದೂ, ಹುಡುಗಿಯನ್ನು ನೋಡಬೇಕೆಂದು ಅವನ ಕಡೆಯ ಇಚ್ಛೆಯಿದೆಯೆಂದೂ, ಸಮಯ ಕಳೆಯಲಿಕ್ಕೆ ಸಾಧ್ಯವಿಲ್ಲವೆಂದೂ ಹೇಳಿದನು. ತಾಯಿಯು ಕಣ್ಣೀರು ಸುರಿಸಿ ಮಗಳನ್ನು ಕೂಡಲೇ ಕಳುಹಿಸಿದಳು.

ಅನೇಕ ವರ್ಷಗಳಿಂದ ಮನೆಯಲ್ಲಿಯೇ ಮುಚ್ಚಿಡಲ್ಪಟ್ಟ ಬಾಲೆಗೆ ಈ ಪ್ರಯಾಣವು ಆನಂದವನ್ನು ಕೊಟ್ಟಿತು. ಗಭೀರವಾದ ದುಃಖಜೀವನವು ತನ್ನ ಸಮ್ಮುಖೀನವಾದುದು ಅವಳಿಗೆ ತಿಳಿಯಲಿಲ್ಲ; ಅವಳ ಆ ಶೈಶವ ಹೃದಯವು ಇನ್ನೂ ಪ್ರಸ್ಫುಟಿತವಾಗಿರಲಿಲ್ಲ. ಗಾಡಿಯ ಪಯಣ, ನವ ಪವನ, ನವೀನ ಪ್ರಕೃತಿ, ಸುತ್ತಲಿನ ಸುಂದರವಾದ ಶೋಭೆ ಇವೆಲ್ಲವನ್ನು ನೋಡಿ ಅವಳ ಮನಸ್ಸು ಉಲ್ಲಸಿತವಾಯಿತೇ ಹೊರತು, ಅವಳಿಗಾಗಿ ಕಾದಿದ್ದ ದೌರ್ಭಾಗ್ಯದ ಚಿಂತನೆಗೆ ಅವಳ ಆ ಚಿಕ್ಕ ಹೃದಯದಲ್ಲಿ ಎಡೆಯೇ ಇರಲಿಲ್ಲ.

ಬಂದವಳು ಶ್ವಶುರಗೃಹವನ್ನು ಪ್ರವೇಶಿಸಿದಳು. ಯಾರೂ ಅವಳಿಗೆ ಸ್ವಾಗತವನ್ನೀಯಲಿಲ್ಲ. ಯಾರೋ ಬಂದು ಅವಳ ಕೈಯನ್ನು ಹಿಡಿದು ಅವಳ ಕುಂಕುಮಾಧಿಕಾರಿಯ ಶಯ್ಯಾತಲದಲ್ಲಿ ಕೂಡಿಸಿದರು. ಆದರೆ ಆಗ ಆ ದೇಹದಿಂದ ಜ್ಯೋತಿಯು ಆರಿಹೋಗಿದ್ದಿತು. ಆ ಎದೆಯಿಂದ ಎಣ್ಣೆಯು ಉರಿದುಹೋಗಿದ್ದಿತು. ಸುತ್ತಲೂ ಬಂಧುಗಳು ಕುಳಿತು ರೋಧಿಸುತ್ತಿದ್ದರು.

ಬಾಲೆಯು, ಕಮಲೆಯು, ತನ್ನ ಪತಿಯ ಮೃತ ದೇಹವನ್ನು ನೋಡಿದಳು. ಅವಳಿಗೆ ಅದರ ಅಭಿಪ್ರಾಯವಾಗಲಿಲ್ಲ. ಅವಳು ಸುತ್ತಲೂ ನೋಡಿದಳು. ಎಲ್ಲರೂ ಅಳುತ್ತಿದ್ದರು. ತನ್ನವರಾರೂ ಹತ್ತಿರವಿರಲಿಲ್ಲ. ವಾತಾವರಣವು ದುಸ್ಸಹವಾಗಿ ಅವಳಿಗೆ ಬೋಧೆಯಾಯಿತು.

ಹೊರಗೆ, ಇಷ್ಟು ಮೈಲುಗಳ ಉದ್ದಕ್ಕೆ ಇಷ್ಟು ಉಜ್ವಲವಾಗಿದ್ದ, ಸುಂದರವಾಗಿದ್ದ, ಸುಖಮಯವಾಗಿದ್ದ, ಪ್ರಕೃತಿಯು ಏಕೆ ಇಷ್ಟು ಬೇಗನೆ, ಇಷ್ಟು ಒಮ್ಮಿಂದೊಂಮ್ಮೆ ಈ ದುಃಖದ ಮುಸುಕನ್ನು ತೊಟ್ಟುಕೊಂಡಳು ಎಂಬುದು ಅವಳಿಗೆ ತಿಳಿಯದಾಯಿತು. ಬರುವಾಗ ದೂರದ ಒಂದು ಮಾವಿನ ಮರದ ಮೇಲೆ ಒಂದು ಕೋಗಿಲೆಯು ಕುಳಿತು "ಕುಹೂ" ಎಂದಿತು, ಆಗ ಅವಳ ತುಟಿಯಲ್ಲಿ ಒಂದು ಮಧುರವಾದ ರಾಗವು ಕಂಪಿಸಿ ಅವಳ ಎದೆಯಲ್ಲಿ ಒಂದು ಗಾನದ ಪ್ರಬಲೇಚ್ಛೆಯು ಹುಟ್ಟಿದ್ದಿತು. ಹಾದಿಯ ಪಾರ್ಶ್ವದ ಗಿಡಗಳಲ್ಲಿ ಹೂವು ಅರಳಿದುದನ್ನು ನೋಡಿ, ಕೆಲವನ್ನು ಆರಿಸಿ ಮಾಲೆಮಾಡಿ ಮುಡಿಯಬೇಕೆಂದು ಅವಳಿಗೆ ಅನ್ನಿಸಿದ್ದಿತು. ಊರಿನ ಮಾರ್ಗಗಳಲ್ಲಿ ಸಣ್ಣ ಹುಡುಗರು ಜಗಳವಾಡುವುದನ್ನು ನೋಡಿ ಅವರ ಮಧ್ಯದಲ್ಲಿ ಹೋಗಿ ನಿಂತು ಶಾಂತಮಾಡಬೇಕೆಂದು ಅವಳಿಗೆ ಮನಸ್ಸಿನಲ್ಲಿ ಆಗುತ್ತಿದ್ದಿತು. ತನ್ನ ಪತಿಯ ಭವನವನ್ನು ಪ್ರವೇಶಿಸುವ ಸಮಯದಲ್ಲಿ ಹೊರಗಿನ ಜಗಲಿಯ ಮೇಲಿನ ಅಂಗಳದ ಮೇಲೆ ಎರಡು ಗುಬ್ಬಿಗಳು ಕೂಡಿ ಆಡುತ್ತಿದ್ದುವು. ಅವುಗಳ ಜೊತೆಯಲ್ಲಿ ತಾನೂ ವಿನೋದವಾಡಬೇಕೆಂದು ಅವಳ ಬಾಲ್ಯ ಚಪಲತೆಯು ಪ್ರೇರಿಸಿದ್ದಿತು. ಮತ್ತು ಮಾವನ ಮನೆಯಲ್ಲಿ ಹೊಡಕೊಂಡಲೇ, ಬಾವಿನೀರು ಸೇದಬೇಕೆಂದೂ, ಅಡಿಗೆ ಮನೆಯಲ್ಲಿ ರುಚಿಯಾದ ಪದಾರ್ಥವನ್ನು ಮಾಡಿ ನಾದಿನಿಯರಿಗೆ ಆಶ್ಚರ್ಯಪಡಿಸಬೇಕೆಂದೂ, ಸಂಜೆಯ ಸಮಯದಲ್ಲಿ, ನಾದಿನಿಯರು ತನಗೆ ದೀಪಹಚ್ಚಲು ಹೇಳಿದಾಗ, ತಾನು ದೀಪ ಹಚ್ಚಿ, ಅವರ ಹಣೆಯನ್ನೆಲ್ಲಾ ಕುಂಕುಮಮಾಡಿಬಿಡಬೇಕೆಂದೂ ಅವಳು ನಿರ್ಧರಿಸಿದ್ದಳು.

ಒಮ್ಮಿಂದೊಮ್ಮೆ ಹೊರಗಿನ ಆ ಪ್ರಕೃತಿಯು ಸ್ವಪ್ನಪ್ರಾಯವಾಗಿ ಅಳಿದುಹೋಯಿತು. ಸಮ್ಮುಖದಲ್ಲಿ ಒಂದು ಕಲ್ಲಾಗಿದ ದೇಹ, ಸುತ್ತಲೂ ಅತ್ತು ಎದೆಬಡಕೊಳ್ಳುತ್ತಿದ್ದ ಸಮಗ್ರ ಸಂಸಾರ!

ಆಗ ಅವಳಿಗೆ ತನ್ನ ತಾಯಿಯು ಹತ್ತಿರವಿದ್ದುದಾದರೆ ಒಳ್ಳೆದಿತ್ತೆಂದು ಭಾಸವಾಯಿತು; ಆಗ ತಾನೇಕೆ ತನ್ನ ಚಿಕ್ಕ ತಂಗಿಯನ್ನು ಕರೆತರಲಿಲ್ಲವೆಂದು ಪಶ್ಚಾತ್ತಾಪವಾಯಿತು; ಆಗ, ತನ್ನ ಬಹಳ ಹಠಿಯಾಗಿದ್ದ ಒಂದೇ ವರ್ಷದ ತಮ್ಮನನ್ನು ಕಂಕುಳಲ್ಲಿ ಹಿಡಿದು ತಂದಿದ್ದರೆ ಏನೂ ತೊಂದರೆಯೂ ಗುತ್ತಿರಲಿಲ್ಲವೆಂದು ಅವಳಿಗೆ ಅನ್ನಿಸಿತು, ತನ್ನ ತಂದೆಯ ಮನೆ, ತನ್ನ ತಾಯಿಯ, ತನ್ನ ಅಣ್ಣತಮ್ಮಂದಿರು, ತನ್ನ ಅಕ್ಕತಂಗಿಯರು, ಇವರೆಲ್ಲರ ಚಿತ್ರವು ಅವಳ ಕಣ್ಣೆದುರಿನಲ್ಲಿ ಮೂರ್ತಿಮತ್ತಂತವಾಗಿ ನಿಂತಿತು. ಮತ್ತು ಒಮ್ಮಿದೊಂಮ್ಮೆ ಅವಳ ಎದೆಯೊಡೆದಂತಾಗಿ ಅಳುವು ಉಕ್ಕಿ ಏರಿ ಬಂದಿತು. ಎಲ್ಲರೂ ನೆನಸಿದರು— "ಪಾಪ, ಹುಡುಗಿ ಗಂಡನಿಗಾಗಿ ಅಳುತ್ತಿರುವಳು" ಎಂದು. ಅದರೆ, ಪಾಪ, ಬಾಲೆಗೆ ಗಂಡನೆಂದರೆ ಗೊತ್ತಿದ್ದರಲ್ಲವೇ.

[ಅಪೂರ್ಣ]

—: ವಿಮರ್ಶೆ :—

ಎರಡನೆ ದರ್ಜೆಯ ಚರಿತ್ರೆ ಮತ್ತು ಕಥೆಗಳು.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಹೊಸ ಎಲಿಮೆಂಟರಿ ಶಾಲಾ ಪಾಠದ ಪಟ್ಟಿಗನುಸಾರವಾಗಿ ರಾ॥ ಎಂ. ಗಣಪತಿರಾವ್ ಐಗಳ್ ಇವರು ತಯಾರಿಸಿದ ಎರಡನೇ ದರ್ಜೆಯ ಚರಿತ್ರೆ ಮತ್ತು ಕಥೆಗಳು ಎಂಬ ಪುಸ್ತಕವು ನಮ್ಮ ಹಸ್ತಗತವಾಗಿದೆ. ಈ ಪುಸ್ತಕದಲ್ಲಿ ೧. ಸಿಂಡಿರೆಲ್ಲ ಕುಂಟುಕಣ್ಣಿಕಲ್ಲಮ್ಮ, ೨. ಅರಬಿಯವನೂ ಅವನ ಕುದುರೆಯೂ, ೩. ಹಳ್ಳಿಯನ್ನು ಕಾಪಾಡಿದ ಹುಡುಗನು, ೪. ರಾಮ ಮತ್ತು ಸೀತೆ, ೫. ಆಂಡ್ರೊಕ್ಲೆ ಮತ್ತು ಸಿಂಹ, ೬. ಎಲ್ಲರನ್ನು ಮೆಚ್ಚಿಸುವದು ಮೂಢತನ, ೭. ಕಾಗೆ ಮತ್ತು ಗುಬ್ಬಚ್ಚಿ, ೮. ಬಾವುರುಲೆ ಬ್ಯಾ, ೯. ಬೆಲ್ಲದ ಬೈಲು ಬೆರ್ಚಪ್ಪ, ೧೦. ಬ್ರಾಹ್ಮಣ ಬೈರಾಗಿ, ೧೧. ದಮಯಂತಿಯ ಕಥೆ ೧೨. ಪರಶುರಾಮನ ಕಥೆ, ೧೩. ಚೇಳಾರುಗುತ್ತಿನ ಮಂಜಣ್ಣನ ಕಥೆ, ೧೪. ಯೋಸೇಫನ ಕಥೆ, ೧೫ ಮೋಸೆಯ ಕಥೆ, ೧೬. ಹಸನಹುಸ್ಸೇನರ ಕಥೆ, ೧೭. ಗೋವಿನ ಕಥೆ, ೧೮. ಆನೆಯ ಸೊಂಡಿಲು ಹೇಗೆ ಉದ್ದವಾಯಿತು?, ೧೯. ಒಂಟೆಯ ಬೆನ್ನಿನ ಮೇಲೆ ದುಬ್ಬವು ಹೇಗೆ ಬಂತು?, ೨೦. ಕೊ-ಕೊ ಕೋಳಿ, ೨೧. ಜೋಡು ನಕ್ಷತ್ರ, ೨೨. ಚಟಪಟ ಹನಿಯಪ್ಪ, ೨೩. ವಾಯಿಯೂ, ಬೆಕ್ಕು, ೨೪. ಹಸುವೂ ಕತ್ತೆಯೂ, ೨೫. ಜೇಡರ ಹುಳವೂ, ನೊಣವೂ, ೨೬. ಬಣ್ಣಗಳು, ೨೭. ಜಾಕಯ್ಯನೂ ಅವರೇ ಬಳ್ಳಿಯೇ ಎಂಬ ೨೭ ಕಥೆಗಳು ಇವೆ. ಇವುಗಳೆಲ್ಲವೂ ಪಾಠ ಪಟ್ಟಿಗೆ ಅನುಸಾರವಾಗಿ ಎರಡನೇ ದರ್ಜೆಯ ಮಕ್ಕಳಿಗೆ ಸುಲಭವಾಗುವಂತೆ ಸುಲಭ ಶೈಲಿಯಲ್ಲಿ ಬಹಳ ಸಣ್ಣ ಸಣ್ಣ ಶಬ್ದಗಳನ್ನು ಉಪಯೋಗಿಸಿ ಬರೆಯಲ್ಪಟ್ಟಿವೆ.

ಈ ಒಂದು ಪುಸ್ತಕವನ್ನು ತೆಗೆದುಕೊಂಡರೆ ಉಪಾಧ್ಯಾಯರೂ ಹುಡುಗರೂ ಇತ್ತರ ವರೆಗೆ ಉಪಯೋಗಿಸುತ್ತಿದ್ದ ೧. ಎರಡನೆ ದರ್ಜೆಯ ಕಥೆಗಳು ೨. ಬಾಲಕಥಾವಳಿ, ೩. ಚೇಳಾರುಗುತ್ತಿನ ಮಂಜಣ್ಣ, ೪. ಕೊ-ಕೊ ಕೋಳಿ, ೫. ಜೋಡು ನಕ್ಷತ್ರ, ೬. ಚಟಪಟ ಹನಿಯಪ್ಪ, ೭. ಕಿಂಡರ ಗಾರ್ಡನ ಕೈಪಿಡಿ, ೮. ಜಾಕಯ್ಯನೂ ಅವರೇ ಬಳ್ಳಿಯೂ ಎಂಬ ೮ ಬೇರೆ ಬೇರೆ ಪುಸ್ತಕಗಳನ್ನು ಹೆಚ್ಚು ಹಣ ಖರ್ಚು ಮಾಡಿ ತೆಗೆದುಕೊಳ್ಳುವ ಅಗತ್ಯವಿಲ್ಲ. ಇದರ ಕ್ರಯವು ಬರೆ ನಾಲ್ಕಾಣೆ ಮಾತ್ರ. ಈ ಪುಸ್ತಕವು ಶಾರದಾ ಛಾಪಖಾನೆಯಲ್ಲಿ ದೊರಕುವುದು. ಉಪಾಧ್ಯಾಯರುಗಳೂ ಮಹನೀಯರುಗಳೂ ಈ ಪುಸ್ತಕ ಕೊಂಡುಕೊಂಡು ಪ್ರೋತ್ಸಾಹಿಸಬೇಕಾಗಿ ನಾವು ಅಪೇಕ್ಷಿಸುತ್ತೇವೆ.

ಪತ್ರವ್ಯವಹಾರ.

ಸೂಚನೆ:—ತಾ. ೨೩ರ "ಕಂಠೀರವ" ಪತ್ರಿಕೆಯಲ್ಲಿ ಪ್ರಕಟವಾದ "ಜಗಳಗಂಟಿ"ನ "ಸ್ಫುಟವಿಚಾರದ ಪುಟವಿಚಾರ"ದ ಪ್ರತಿಯಾಗಿ "ಇನ್ನೊಬ್ಬ ಜಗಳುಗಂಟಿ"ನು ನಮಗೊಂದು ಲೇಖವನ್ನು ಕಳುಹಿಸಿರುವನು. ಸ್ವದೇಶಾಭಿಮಾನಿಯ ಅಭಿಪ್ರಾಯಗಳ ಪರವಾದರೂ, ಪ್ರತಿಯಾದರೂ, ಜಗಳಗಂಟರಿಗೆ ಸ್ವದೇಶಾಭಿಮಾನಿಯಲ್ಲಿ ಸ್ಥಳದೊರಕಲಿಕ್ಕಿಲ್ಲ.—ಸಂಪಾದಕ.

ಬಂಟವಾಳ ಗುರ್ಪುರ ಮಾರ್ಗ.

ಪೊಳಲಿ ಜಾತ್ರೆಯು ಹತ್ತಿರ ಬಂತು. ಬಂಟವಾಳದಿಂದ ಪೊಳಲಿ ಜಾತ್ರೆಗೆ ಗಾಡಿ ಅಥವಾ ಮೋಟರುಗಳಲ್ಲಿಯೂ ಸ್ಕಾಕಲು ಕಲಿತ ಹುಡುಗರು ಸ್ಕಾಕಲಿನಲ್ಲಿಯೂ ಕೂತುಕೊಂಡು ಆ ಉತ್ಸವಕ್ಕೆ ಹೋಗಿ ಸಂತೋಷಪಡಬೇಕೆಂಬ ಭಾವನೆಯಿಂದ ಎಷ್ಟೋ ಮಂದಿ ಜನರು ಆಶಿಸುತ್ತಾ ಇರುವರು. ಈ ವರುಷ ಸರಕಾರದವರು ಮಂಗಳೂರು ತಾಲೂಕು ಬೋರ್ಡಿಗೆ ರೂ. ೫೦೦೦ವನ್ನು ಹಳ್ಳಿ ಮಾರ್ಗಗಳನ್ನು ಮಾಡಿಸಲಿಕ್ಕೆ ಕೊಟ್ಟಿರುತ್ತಾರೆ. ಇದರಲ್ಲಿ ಸ್ವಲ್ಪ ಹಣ ಖರ್ಚುಮಾಡಿ ಕಲ್ಲಡ್ಕದಿಂದ ಕರಿಂಗಾಣ ಇಗರ್ಜಿಗೆ ಹೋಗಲಿಕ್ಕೆ ಎರಡು ಮೈಲು ಉದ್ದವಾದ ಒಂದು ಮಾರ್ಗವನ್ನು ಮಾಡಿಸುವ ಆಲೋಚನೆಯಿದೆಯಂತೆ! ಇದನ್ನು ಮಾಡಿಸದೆ ಇದ್ದರೆ ಮಾಸ್ಕ ಪಾದರಿ ಸಾಹೇಬರ ಮನಸ್ಸನ್ನು ನೋಯಿಸಿದಂತಾಗುತ್ತದೆಂದು ಕಾಣುತ್ತದೆ. ಪಾದರಿ ಸಾಹೇಬರ ಮನಸ್ಸು ನೋಯದಂತೆ ಮಾರ್ಗ ಮಾಡಿಸುವ ಸೂತ್ರವಿದ್ದರೆ ಬಂಟ್ವಾಳ, ಗುರ್ಪುರ ಮಾರ್ಗದಲ್ಲಿ ಮೊಡಂಕಾಪು ಇಗರ್ಜಿಯೂ ಹೊಸತಾಗಿ ಕಟ್ಟುವ ದಾಸುಇಗರ್ಜಿಯೂ ಇವೆ. ಆದುದರಿಂದ ಈ ಮಾರ್ಗವನ್ನು ಮಾಡಿಸಿದರೆ ಇಬ್ಬರು ಪಾದರಿಸಾಹೇಬರ ಮನಸ್ಸನ್ನು ಸಂತೋಷಪಡಿಸಿದಂತಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಕ್ರಯ ಸಂವತ್ಸರದ ಅಂತ್ಯದಲ್ಲಿಯಾದರೂ ಈ ಮಾರ್ಗ ಮುಗಿದೀತೆಂದು ಕಾಣುತ್ತದೆ. ತಾಲೂಕು ಬೋರ್ಡು ಮೆಂಬರುಗಳೇ ಪೋಟಿನ ಸಮಯ ಪೋಟರ್‌ರಿಗೆ ಕೊಟ್ಟ ಭಾಷೆಯ ನೆನಪು ಮಾಡಿರಿ!

ಪ್ರಯಾಣಸ್ಥ.

ಸ್ಫುಟವಿಚಾರಗಳು.

ನಮ್ಮ ಜಿಲ್ಲೆಯ ರಾಜಮಾರ್ಗಗಳು.

ನಮ್ಮ ಜಿಲ್ಲೆಯ ಮೋಟರ ಪ್ರಯಾಣವು ಬೆಳೆಯುತ್ತಾ ಬರುತ್ತಿದೆ. ಇಂತಹ ಸಮಯಗಳಲ್ಲಿ ನಮ್ಮ ಡಿಸ್ಟ್ರಿಕ್ಟ ಬೋರ್ಡು ಮೋಟರ ಕಂಪೆನಿಗಳ ಮೇಲೆ ಕರ ಹೊರಿಸುವುದರಲ್ಲಿಯೇ ಚಿಂತಿತನಾಗಿದೆಯಲ್ಲದೆ, ಈಗಿನ ಈ ಪರಿಸ್ಥಿತಿಗೆ ಅನುಕೂಲವಾದ ರೀತಿಯಲ್ಲಿ ಮಾರ್ಗಗಳ ದುರುಸ್ತಿಗೆ ಅಷ್ಟೇ ಯೋಚನೆಯನ್ನು ಕೊಡುವಂತೆ ತೋರುವುದಿಲ್ಲ. ಇತ್ತೀಚೆಗೆ ಮಾರ್ಗಕ್ಕೆ ಕಡಿಮೆ ಮೆಟಲು ಹಾಕಿ ತನ್ಮೂಲಕ ದುರುಸ್ತಿ ಖರ್ಚನ್ನು ಕಡಿಮೆ ಮಾಡಲು ಪ್ರಯತ್ನಗಳು ನಡಿಯುವಂತೆಯೂ ತೋರುತ್ತಿದೆ. ಜಿಲ್ಲೆಯಲ್ಲಿ ವ್ಯಾಪಾರವು ವ್ಯವಹಾರವು ಹೆಚ್ಚಾಗಿ ನಡೆಯುತ್ತಿರುವಾಗ, ಹೊಸ ಸೌಕರ್ಯಗಳೊಡನೆ ಇವು ಇನ್ನೂ ಅಭಿವೃದ್ಧಿಗೆ ಬರತಕ್ಕವುಗಳಾಗಿವೆ. ನಮ್ಮ ಜಿಲ್ಲೆಯ ಈಗಿನ ವ್ಯವಹಾರಗಳ ರೀತಿಯನ್ನೂ ಮುಂದೆ ಅಭಿವೃದ್ಧಿಗೆ ಬರಬಹುದಾದ ವ್ಯವಹಾರಗಳ ಪರಿಮಾಣವನ್ನೂ ನೋಡಿದರೆ ನಮ್ಮ ಜಿಲ್ಲೆಯ ಮಾರ್ಗಗಳು ೫ ಟನ್‌ನಂತಹ ಲೊರಿಗಳನ್ನು ನಡೆಸುವಷ್ಟು ಉತ್ತಮವಿರಬೇಕಿತ್ತು. ಆದರೆ ಈಗಿನ ಮಾರ್ಗಗಳ ಪರಿಸ್ಥಿತಿಯಲ್ಲಿ ೧½ ಟನ್ನುಗಳನ್ನು ಕೂಡ ಒಯ್ಯುವುದು ಕಷ್ಟವಾಗಿ ಪರಿಣಮಿಸಿಯದೆ. ಡಿಸ್ಟ್ರಿಕ್ಟ ಬೋರ್ಡು ಬಸ್ಸು ಕಂಪೆನಿಗಳ ಮೇಲೆ ನಿರ್ಬಂಧಗಳನ್ನಿಡುವುದರಲ್ಲಿ ಹೆಚ್ಚು ಉತ್ಸುಕವಾಗಿರುವುದಲ್ಲದೆ, ಈಗಿನ ದಿನಂಪ್ರತಿ ಬೆಳೆಯುತ್ತಿರುವ ವ್ಯವಹಾರಕ್ಕೆ ಯೋಗ್ಯವಾದ ಮಾರ್ಗಗಳನ್ನು ರಚಿಸುವುದಿಲ್ಲ.

ಮಾರ್ಗದುರುಸ್ತಿಯ ಸರಿಯಾದ ಶಾಸ್ತ್ರೀಯ ವಿಚಾರಗಳ ಕಡೆ ಇಂಜೆನಿಯರಿಂಗ್ ಆಫೀಸು ಹೆಚ್ಚು ಗಮನವಿಟ್ಟಿಲ್ಲ. ದುರುಸ್ತಿ ಖರ್ಚು ಕಡಿಮೆಮಾಡಲಿಕ್ಕೆಂದು ಮಧ್ಯಮ ತರದ ಮಾರ್ಗ ದುರುಸ್ತಿಮಾಡುವುದರಿಂದ ಡಿಸ್ಟ್ರಿಕ್ಟ ಬೋರ್ಡಿಗೆ ತಾತ್ಕಾಲಿಕ ಖರ್ಚು ಕಡಿಮೆಯಾದರೂ, ಪರಿಣಾಮದಲ್ಲಿ ಖರ್ಚು ಹೆಚ್ಚು ಮಾಡುವುದು. ಮುಖ್ಯವಾಗಿ ಈಗಿನ ವ್ಯವಹಾರಗಳು ವೃದ್ಧಿಯಾಗುವ ಈಗಿನ ದಿನಗಳಲ್ಲಿ ಸಾಮಾನ್ಯ ದುರುಸ್ತಿಯು ಯಾವ ಪ್ರಯೋಜನಕ್ಕೂ ಬೀಳುವುದಿಲ್ಲ.

ವಿಲಾಯತಿಯಲ್ಲಿ ಮಾರ್ಗ ದುರಸ್ತಿಯನ್ನೇ ಇತ್ತೀಚೆಗೆ ಪ್ರತ್ಯೇಕವಾದ ಒಂದು ವಿಜ್ಞಾನವಾಗಿ ಪರಿಗಣಿಸಿ ಅದಕ್ಕೆ ವಿಶೇಷ ಲಕ್ಷ್ಯಕೊಟ್ಟು ಮಾರ್ಗಗಳನ್ನು ಈಗಿನ ವ್ಯವಹಾರಗಳಿಗೆ ತಕ್ಕುದಾದ ರೀತಿಯಲ್ಲಿ ರಚಿಸುತ್ತಿರುವರು. ಮಾರ್ಗಗಳ ರಚನೆಗಾಗಿಯೇ ಪ್ರತ್ಯೇಕ ಸಾಪ್ತಾಹಿಕ ಮತ್ತು ಮಾಸಿಕ ಪತ್ರಿಕೆಗಳಿವೆ. ವಿಲಾಯತಿಯ ಸಂಪನ್ನತೆಯು ನಮ್ಮ ದೇಶದಲ್ಲಿಲ್ಲವಾದರೂ, ಬೋರ್ಡಿಗೆ ಪರಿಣಾಮದಲ್ಲಿ ಖರ್ಚನ್ನು ಕಡಿಮೆಮಾಡಿ, ಬೇಗನೆ ಹಾಳಾಗದ ರೀತಿಯ ಮಾರ್ಗಗಳನ್ನು ಮಾಡುವ ಬಗ್ಗೆ, ಮಾರ್ಗಗಳ ಈಗಿನ ಪರಿಸ್ಥಿತಿಯನ್ನೂ, ಮಾರ್ಗ ದುರುಸ್ತಿಗೆ ಅಲ್ಲಲ್ಲಿ ಸಿಕ್ಕುವ ಮಣ್ಣುಕಲ್ಲುಗಳ ಪರೀಕ್ಷೆಯನ್ನೂ, ದುರುಸ್ತಿಕ್ರಮವನ್ನೂ ಪರಿಶೀಲಿಸುವ ಬಗ್ಗೆ, ಸರಿಯಾಗಿ ತಿಳಿದವರನ್ನು ನೇಮಿಸಿ ಮಾರ್ಗದುರುಸ್ತಿ ಕ್ರಮದಲ್ಲಿ ಸುಧಾರಣೆಯನ್ನು ತರುವುದು ಡಿಸ್ಟ್ರಿಕ್ಟ ಬೋರ್ಡಿನ [illegible]ಶವಾಗಿದೆ. ಈ ಪ್ರಶ್ನೆಯು ಬಸ್ಸು ಕಂಪೆನಿಗಳಿಗೆ ಮಾತ್ರವಲ್ಲದೆ ಜನಸಾಮಾನ್ಯಕ್ಕೂ ಅತೀ ನಿಕಟವಾದ ಸಂಬಂಧ ಉಳ್ಳದ್ದಾಗಿದೆ. ಬೋರ್ಡಿನವರು ಈ ಕಡೆಗೆ ಲಕ್ಷ್ಯಕೊಡುವರೆಂದು ಆಶಿಸುವೆವು.

ಔದ್ಯೋಗಿಕ ಕಾಂಗ್ರೆಸ್ಸು.

ಇದೇ ತಿಂಗಳ ತಾ. ೧೯ಕ್ಕೆ ಡಿಲ್ಲಿಯಲ್ಲಿ ಔದ್ಯೋಗಿಕ ಕಾಂಗ್ರೆಸ್ಸು ಕೂಡಿತ್ತು. ಪಂಜಾಬದ ಮಂತ್ರಿಯರಾಗಿದ್ದ ಲಾಲಾ ಹರಿಕಿಶನ್‌ಲಾಲರು ಅಧ್ಯಕ್ಷರಾಗಿದ್ದರು. ಅಧ್ಯಕ್ಷ ಭಾಷಣವು ಹಿಂದೀ ಆರ್ಥಿಕ ಸಮಸ್ಯೆಯ ಅನೇಕ ಸುವಿಚಾರಗಳನ್ನೊಳಗೊಂಡಿತು. ಶ್ರೀಯುತ ಹರಿಕಿಶನಲಾಲರು ಆರ್ಥಿಕ ಶಾಸ್ತ್ರದಲ್ಲಿ ವಿಜ್ಞರೆಂದು ಪ್ರಸಿದ್ಧರಾಗಿರುವರು. ಆದುದರಿಂದ ಅವರ ಭಾಷಣವಾದರೂ ಚಿಂತನೀಯವೇ ಇರತಕ್ಕದ್ದು.

ದೇಶದ ಆರ್ಥಿಕ ಉಜ್ಜೀವನದ ಪರವಾಗಿ ದೇಶದ ಮುಂದಾಳುಗಳು ಮುಂದೊತ್ತಿದ ನಾಲ್ಕು ಸಾಧನೆಗಳನ್ನು ಹರಿಕಿಶನ್‌ಲಾಲರು ಸಮಾಲೋಚಿಸಿದರು. ಈ ನಾಲ್ಕು ಸಾಧನೆಗಳು—(೧) ಸ್ವದೇಶಿ ಪ್ರಚಾರ. (೨) ಚರಕ ಪ್ರಚಾರ. (೩) ಖದ್ದರ ಪ್ರಚಾರ. (೪) ವ್ಯವಸಾಯಿಕ ರೊಯಲ್ ಕಮಿಶನ್ನು.

ಸ್ವದೇಶಿ ಚಳವಳದ ಪರಿಣಾಮ.

ಆದರೆ ಸ್ವದೇಶಿ ಚಳವಳದ ವಿಷಯವಾಗಿ ಅವರು ಹೇಳಿದ ವಿಚಾರಗಳನ್ನು ಯಾರೂ ಮಾನಿಸುವರೆಂದು ನಾವು ಭಾವಿಸುವುದಿಲ್ಲ.

"ಸ್ವಂತ ಅಭಿರುಚಿಯನ್ನು ಬಿಟ್ಟುಕೊಟ್ಟು, ಸಾಮಾನುಗಳು ದುರ್ಲಭ್ಯವಿರುವ ಸಂಗತಿಯನ್ನೂ ಲಕ್ಷಿಸದೆ, ಸಾಮಾನಿನ ಬಾಳುವಿಕೆಯನ್ನೂ ಪರಿಗಣಿಸದೆ, ಮೌಲ್ಯವನ್ನೂ ನೋಡಿಕೊಳ್ಳದೆ ಹಿಂದೀ ಸಾಮಾನನ್ನೆ ಪಡೆಕೊಳ್ಳುವುದೇ ಸ್ವದೇಶಿಯ ಆರ್ಥಿಕ ಅರ್ಥವಾಗಿದೆ. ಇದು ದೊಡ್ಡ ತ್ಯಾಗ ಮತ್ತು ಈ ತ್ಯಾಗವು ಕೊಳ್ಳುವವನ ಮೇಲೆಯೇ ಬೀಳುತ್ತಿದೆ. ರಾಜಕೀಯ ಚಳವಳಗಳ ಭರದಲ್ಲಿ ಇದು ಎರಡು ಬಾರಿ ಸಾಧಿಸಲ್ಪಟ್ಟಿದೆ. ಇದರಿಂದ ಕಳೆದು ಹೋದ ಸಂಪತ್ತಿಯು ಬಹುಬಹುಹೆಂದು ಪ್ರಥಮ ದೃಷ್ಟಿಗೆ ತೋರಿಬಂದಿತು. ಆದರೆ ರಾಜಕೀಯ ಚಳವಳದ ಪ್ರಥಮೋತ್ಸಾಹದ ನಿರ್ವಾಣದೊಡನೆ ಈ ಚಳವಳವೂ ಕಂದಿ ಹೋಯಿತು, ಮತ್ತು ತಯಾರಿದ್ದ, ಹೆಚ್ಚು ಉಪಯೋಗಕರವೂ, ಉತ್ತಮ ದೇಶೀಯೂ, ಇದ್ದು ಅಗ್ಗವೂ ಆಗಿದ್ದ ಪರದೇಶಿಯ ಮುಂದೆ ದೇಶಿ ಸಾಮಾನುಗಳು ನಿಲ್ಲಲಾರವಾದವು."

ಎಂದು ಶ್ರೀ. ಹರಿಕಿಶನ್‌ಲಾಲರು ಅನ್ನುವರು. ಆದರೆ ದೇಶದೊಳಗಿನ ಪರಿಸ್ಥಿತಿಯನ್ನು ಹೆಚ್ಚು ಸೂಕ್ಷ್ಮವಾಗಿ ಪರಿಶೀಲಿಸಿದರೆ ಹರಿಕಿಶನ್‌ಲಾಲರು ಹೇಳುವುದು ಪೂರ್ಣವಾಗಿ ಸರಿಯಿದೆಯನ್ನಲಾಗುವುದಿಲ್ಲ. ಪ್ರಥಮೋತ್ಸಾಹದ ರಭಸವು ಅಂತರ್ಹಿತವಾಗುವಾಗ ತೋರಿಕೆಗೆ ಅದರ ಸಂಬಂಧವಾದ ಎಲ್ಲವೂ ಹೋಯಿತೆಂದು ಕಾಣುವುದು ಸಹಜ. ಆದರೆ ಹಿಂದೀಯ ರಾಜಕೀಯ ರಂಗದಲ್ಲಿದ್ದ ಚಳವಳಗಳಲ್ಲಿ ಯಾವುದೂ ಪರಿಣಾಮವಿಲ್ಲದೆ ಹೋಗಿಲ್ಲವೆಂಬುದನ್ನು ಯಾರೂ ತಿಳಿಯಬಹುದು. ಬಂಗಾಳ ವಿಭಜನೆಯ ಚಳವಳಿಯ ಸ್ವದೇಶಿಯೇ ಈ ದಿನ ಹಿಂದೂಸ್ಥಾನದಲ್ಲಿ ಇಷ್ಟು ಗಿರಣಿಗಳಿಗೆ ಪ್ರೇರಕವಾಯಿತೆಂಬುದನ್ನು ಮರೆಯಬಾರದು. ಆ ಚಳವಳಿಯು ಪ್ರಥಮತಃ ಕೊಳ್ಳುವವರಿಂದ ತ್ಯಾಗವಮಾಡಿಸಿ ಮತ್ತೆ ತಯಾರಿಸುವವರಲ್ಲಿ ಧೈರ್ಯವನ್ನು ಪ್ರೇರಿಸಿ, ಈಗ ಹಿಂದೀಯ ಪ್ರಾಮುಖ್ಯ ಕೈಗಾರಿಕೆಯಾದ ಹಿಂದೀ ಗಿರಣಿಗಳಿಗೆ ಪರದೇಶಗಳೊಡನೆ ಪ್ರತಿಸ್ಪರ್ಧಿಸ್ಸು ಶಕ್ತಿಯನ್ನು ಉಂಟುಮಾಡಿಕೊಟ್ಟಿತು. ಆರ್ಥಿಕ ಶಾಸ್ತ್ರಜ್ಞನು ಈ ಸೂಕ್ಷ್ಮ ವಿಷಯಗಳನ್ನು ಮರೆಯಲೊಲ್ಲನು. ಈ ಬಾರಿ ಹರಿಕಿಶನ್‌ಲಾಲರು ಸ್ವದೇಶಿಗೆ ಇಷ್ಟು ಅಲ್ಪ ಬೆಲೆ ಕಟ್ಟುವರಾದರೆ ಅದರ ಕಾರಣವು ಅವರ ಅಜ್ಞಾನ ಸರಕಾರದೊಡನೆ ಅವರಿಗೆ ಈಗಿರುವ ಸಂಬಂಧವೇ ಈ ತರದ ಅವರ ವಿಮರ್ಶೆಗೆ ಕಾರಣವಾಗಿದ್ದಿರಬಹುದು.

ಅಕೋಲಾ ಪರಿಷತ್ತು,

ಕೆಲವು ದಿನಗಳ ಹಿಂದೆ ಅಕೋಲಾದಲ್ಲಿ ರಿಸ್ಪೊನ್ಸಿವ್ ಕೊ-ಒಪರೇಶನ್‌ವಾಲರ ಪರಿಷತ್ತು ಸೇರಿತು. ರಿಸ್ಪೊನ್ಸಿವ್ ಕೊ-ಒಪರೇಶನಿನವರಿಗೆ ಮಾತ್ರವೇ ಈ ಪರಿಷತ್ತಿಗೆ ಪ್ರವೇಶವಿತ್ತು. ಬೆರಿಸ್ಟರ್ ಜಯಕರರೇ ಅಧ್ಯಕ್ಷರು. ಅವರು ತಮ್ಮ ಘಂಟೆಯ ಸ್ವರವನ್ನು ಒಂದೇ ರೀತಿಯಾಗಿಯೇ ಬಾರಿಸಿದರು. ಈ ಪರಿಷತ್ತಿನ ಠರಾವುಗಳಾಗಲೀ ಈ ಪ್ರತ್ಯೇಕ ಪಕ್ಷದ ಅವಶ್ಯಕತೆಯನ್ನೂ ಕಿಂಚಿತ್ತಾದರೂ ಸೂಚಿಸುವುದಿಲ್ಲ. ಅಧಿಕಾರ ಪದವಿಗಳನ್ನು ಹಿಡಿದುಕೊಳ್ಳಬೇಕೆಂಬುದೇ ಇವರ ಧ್ಯೇಯವಿದೆಯೆಂದು ಮಾತ್ರ ಸ್ಪಷ್ಟಮಾಡಿರುವರು. ಲಿಬರಲ್‌ನವರ ಧ್ಯೇಯವಾದರೂ ಇದೇ ಇದ್ದು, ಅದನ್ನು ಸೇರಿಯಾದರೂ ಅವರು ತಮ್ಮ ಧ್ಯೇಯವನ್ನು ಸಾಧಿಸಿಕೊಳ್ಳಬಹುದಿತ್ತು. ಸ್ವಾಯತ್ತ ಅಧಿಕಾರ ಪದವಿಗಳು ಬಂದಾಗ ಹಂಚಿಕೊಳ್ಳಲಿಕ್ಕೆ ಜನರು ಹೆಚ್ಚಾಗಿ ತೊಂದರೆ ಬಂದೀತೆಂಬ ಭಾವನೆಯಿಂದ ಅವರಿಗೆ ಈ ಪ್ರತ್ಯೇಕ ಪಕ್ಷಕ್ಕೆ ಪಟ್ಟಕಟ್ಟುವ ಆವಶ್ಯಕತೆ ಬಿದ್ದಿರಬಹುದು.

ಆದರೆ ಈ ತರದಲ್ಲಿ ಸಣ್ಣ ಸಣ್ಣ ಪಕ್ಷಗಳನ್ನು ಕಟ್ಟಿ ಇವರು ಎಲ್ಲಾ ಪಕ್ಷಗಳ ಬಲವನ್ನು ಕಡಿಮೆಮಾಡುವುದನ್ನು ಮನಸ್ಸಿಗೆ ತಂದುಕೊಳ್ಳುವುದಿಲ್ಲ. ಸ್ವರಾಜ್ಯಪಕ್ಷದಲ್ಲಿದ್ದರೆ ಸ್ವರಾಜ್ಯಪಕ್ಷ ಗಟ್ಟಿಯಾಗುತ್ತಿತ್ತು. ಅದು ಸೇರದಿದ್ದರೆ ಲಿಬರಲ್ ಪಕ್ಷವನ್ನಾದರೂ ಸೇರಬಹುದಿತ್ತು. ಅದಾದರೂ ಗಟ್ಟಿಯಾಗುತ್ತಿತ್ತು. ಈ ಹೊಸ ಪಕ್ಷದಲ್ಲಿ ಲಿಬರಲ್ ಜನರಂತೂ ಸೇರುವುದಿಲ್ಲ. ಇಂಡಿಪೆಂಡೆಂಟ್ ಪಕ್ಷದವರು ಸೇರುವುದು ದುರ್ಲಭ. ಸ್ವರಾಜ್ಯಪಕ್ಷದೊಳಗಿಂದ ಕೆಲವರು ಸೇರಬಹುದು. ಇವರು ಕಾಂಗ್ರೆಸು ಮೆಂಬರುತನದ ಆವಶ್ಯಕತೆಯನ್ನೂ ತೆಗೆದುಹಾಕಿದುದು ಇನ್ನೊಂದು ಮುಖ್ಯವಾದ ವಿಷಯ. ಅನಿರ್ಬಂಧವಾಗಿ ಸ್ವೇಚ್ಛೆಯಂತೆ ನಡಕೊಂಡು ಸಿಕ್ಕಿದ ಪದವಿಗಳನ್ನು ಬದಲಿಗೆ ಹಾಕಿಕೊಂಡು ದೇಶದ ಒಳ್ಳಿತನ್ನು ಇವರು ಬಲಿಯೀಯದಿದ್ದರೆ ದೇಶಕ್ಕೆ ದೊಡ್ಡ ಸೇವೆಯಾಗುವುದು, ಮುಖ್ಯತಃ ಸರಕಾರವು ಈ ಪಕ್ಷಕ್ಕೆ ಯಾವ ಬೆಲೆ ಕಟ್ಟುವುದೆಂದು ನೋಡಲಿದೆ.

ಜಪಾನ್ ವಸ್ತ್ರವೂ ಹಿಂದೀ ಗಿರಣಿಗಳೂ.

ಜಪಾನ್ ದೇಶಕ್ಕೆ ಹಿಂದೀ ಹತ್ತಿಯು ಹೋಗಿ ಅಲ್ಲಿ ವಸ್ತ್ರವನ್ನು ನೇಯ್ದು, ಇಲ್ಲಿ ಆ ದೇಶದವರು ಮಾರುತ್ತಿರುವರು. ಜಪಾನ್ ದೇಶದಲ್ಲಿ ಮಜೂರಿಯವರಿಗೆ ಕಡಿಮೆ ಸಂಬಳವೂ ಹೆಚ್ಚು ಹೊತ್ತು ಕೆಲಸವೂ ಇದೆ. ಅಲ್ಲದೆ ಕಡಿಮೆ ಸಂಬಳದ ಹೆಂಗಸರನ್ನು ಗಿರಣಿಗಳಲ್ಲಿ ರಾತ್ರಿಯಲ್ಲಿ ನಡಿಸಲಿಕ್ಕೆ ಕೂಡ ಕೂಲಿಗೆ ಹಿಡಿಯುತ್ತಾರೆ. ಹಿಂದೂಸ್ಥಾನದ ಗಿರಣಿ ಕೂಲಿಗಳಿಗೆ ಈ ತರದ ಪರಿಶ್ರಮವನ್ನು ಮಾಡಗೊಡುವುದಿಲ್ಲ. ಸರಕಾರವು ಕೂಲಿಗಳ ಪರವಾಗಿ ಅಗತ್ಯವಾದ ಕಾನೂನನ್ನು ಮಾಡಿಯದೆ. ಹೀಗಾಗಿ ಜಪಾನ್ ವಸ್ತ್ರವು ಕಡಿಮೆ ಖರ್ಚಿನಿಂದ ತಯಾರಿಸಲ್ಪಟ್ಟು ನಮ್ಮ ದೇಶದಲ್ಲಿ ಕಡಿಮೆ ಬೆಲೆಗೆ ಮಾರಾಟವಾಗುತ್ತದೆ. ಜಪಾನ್ ವಸ್ತ್ರದ ಮುಂದೆ ಹಿಂದೀ ವಸ್ತ್ರವು ಹಿಂದೆ ಬೀಳುತ್ತಿದೆ. ಈ ಕಾರಣದಿಂದ ಜಪಾನ್ ವಸ್ತ್ರಗಳ ಮೇಲೆ ಕರವನ್ನು ಹೆಚ್ಚುಮಾಡಬೇಕಾಗಿ ಹಿಂದೀ ಗಿರಣಿಗಳ ಮಾಲೀಕರ ವತ್ತಾಯವಿದೆ. ಆದರೆ ಕರ ಹೆಚ್ಚಬಾರದಾಗಿ ಜಪಾನ್ ಗಿರಣಿ ಮಾಲಿಕರ ಶತಪ್ರಯತ್ನಗಳು ನಡೆಯುತ್ತಿವೆ. ಜಪಾನ್ ವಸ್ತ್ರ ಮತ್ತು ನೂಲಿನ ಕಲ್ಕತ್ತದ ವ್ಯಾಪಾರಿಗಳು ತಮಗೆ ಸಿಕ್ಕುವ ಅಲ್ಪ ಲಾಭಕ್ಕಾಗಿ, ಜಪಾನ ದೇಶಕ್ಕೆ ಹೆಚ್ಚು ಲಾಭಮಾಡಿಕೊಳ್ಳುವುದರಲ್ಲಿ ಆಸಕ್ತವಾದುದು ದುಃಖಕರ. ಈ ವ್ಯಾಪಾರಿಗಳು, ಕರ ಹೆಚ್ಚಿಸಬಾರದೆಂದೂ, ಹೆಚ್ಚಿಸಿದರೆ ಹಿಂದೀ ಬಡ ರೈತರಿಗೆ ವಸ್ತ್ರದ ಕ್ರಯವೇರಿ ಕಷ್ಟವಾಗುವುದೆಂದೂ, ಇದರಿಂದ ಮುಂಬಾಯಿ ಮತ್ತು ಮೆಂಚಸ್ಟರ ಗಿರಣಿಗಳಿಗೆ ಮಾತ್ರವೇ ಲಾಭವೆಂದು ಸೂಚಿಸುವರು. ಬಡ ರೈತರ ಮೇಲಿನ ವ್ಯಾಪಾರಿಗಳ ಕನಿಕರವು ಇಂತಹ ಸಮಯದಲ್ಲಿ ಮಾತ್ರವೇ ತೋರಿಬರುವುದು.

ಜಪಾನ ದೇಶದಲ್ಲಿ ಈ ತರದ ಬಡವರ ಮೇಲಿನ ಪ್ರೇಮದ ಸೂಚನೆಯಿಲ್ಲ. ಕೂಲಿಗಳಿಂದ ಹೆಚ್ಚು ಕೆಲಸಮಾಡಿಸುತ್ತಾರೆ; ಬಡವರಿಂದಲೂ ವಟ್ಟಾದ ಸರಕಾರೀ ಹಣವನ್ನು ಹತ್ತಿ ಒಯ್ಯುವ ಹಡಗಗಳು ಹತ್ತಿಯನ್ನು ಕಡಿಮೆ ಖರ್ಚಿನಲ್ಲಿ ಒಯ್ಯುವಂತೆ ಸಹಾಯ ದ್ರವ್ಯವಾಗಿ ಹಡಗು ಕಂಪೆನಿಗಳಿಗೆ ಕೊಡುತ್ತಾರೆ. ನಮ್ಮ ಕೂಲಿಗಳು ಉಪವಾಸ ಬೀಳುವ ಸಂದರ್ಭದಲ್ಲಿ ಇಂತಹ ಕ್ಷುದ್ರ ಕಾರಣಗಳನ್ನು ಮುಂದೆ ತಂದು ಜಪಾನಿಗೆ ಸಹಾಯ ಮಾಡುವುದು ವ್ಯಾಪಾರೀ ಮಾನಸಿಕತೆಯ ಪರಮಾವಧಿಯೇ ಸರಿ!

ಇಂಗ್ಲೆಂಡಿನಲ್ಲಿ ಸ್ವದೇಶಿ.

ಸ್ವದೇಶಿಗೆ ನಮ್ಮ ಸರಕಾರವು ಕೊಡುತ್ತಿದ್ದ ನಮೂನೆಯ ಪ್ರೋತ್ಸಾಹವು ಎಲ್ಲರಿಗೂ ತಿಳಿದೇ ಇದೆ. ಇಂಗ್ಲೆಂಡಿನಲ್ಲಿ ನಡೆದ ಈ ಘಟನೆಯು ಹಿಂದೀಯರಿಗೆ ಎಚ್ಚರ ಕೊಡುವಂತಹದುದಾಗಿದೆ:—

ಇಂಗ್ಲೆಂಡಿನಲ್ಲಿ ನಡೆದ ಔದ್ಯೋಗಿಕ ಸಂತೆಗೆ ರಾಜರು ದಯಮಾಡಿಸಿದ್ದರು. ಅಲ್ಲಿ ಇಂಗ್ಲಿಷ ಸರಕಾರವು ಪರದೇಶಿ ಟ್ಯಾಪರ್‍ರೈಟರುಗಳನ್ನು ಉಪಯೋಗಿಸುತ್ತಿರುವರಾಗಿ ಯಾರೋ ಹೇಳಿದರು. "ಬೇರೆ ಸರಕಾರಗಳು ಬ್ರಿಟಿಷ ಟ್ಯಾಪರ್‍ರೈಟರುಗಳನ್ನು ಉಪಯೋಗಿಸುತ್ತಿರುವರೇ?" ಎಂದು ರಾಜರು ಕೇಳಿದರು. ಅಹುದೆಂದು ಉತ್ತರ ದೊರಕಿತು. "ಬೇರೆ ಸರಕಾರಗಳು ಅವುಗಳನ್ನುಪಯೋಗಿಸುವರಾದರೆ ನಮ್ಮ ಸರಕಾರವು ಏಕೆ ಉಪಯೋಗಿಸುವುದಿಲ್ಲ." ಎಂದು ಹೇಳಿ ತಾವು ಸ್ವತಹಾ ಇದನ್ನು ವಿಚಾರಿಸುವರಾಗಿ ಹೇಳಿದರು. ಇದರ ಫಲವಾಗಿ ಪಾರ್ಲಿಮೆಂಟಿನಲ್ಲಿ ಸರಕಾರಕ್ಕೆ ಪ್ರಶ್ನೆಗಳನ್ನು ಹಾಕಿ, ಇನ್ನು ಮುಂದೆ ಸರಕಾರವು ಬ್ರಿಟಿಷ್ ಟ್ಯಾಪರೈಟರುಗಳನ್ನೇ ಉಪಯೋಗಿಸುವುದಾಗಿ ಉತ್ತರವನ್ನು ಪಡೆದರು. ಅಲ್ಲದೆ ಈ ಮಹಾರಾಜರ ಈ ಪ್ರೋತ್ಸಾಹದಿಂದ ಬ್ರಿಟಿಷ ಕಂಪೆನಿಗಳಿಗೆ ತುಂಬಾ ಆರ್ಡರುಗಳು ಬಂದಿವೆಯಂತೆ.

ನಮ್ಮ ದೇಶದ ಸರಕಾರವು ಇಂಗ್ಲೀಷ ಸರಕಾರಕ್ಕಿಂತಲೂ ಇಂಗ್ಲೀಷರ ಮೇಲೆ ಹೆಚ್ಚು ಪ್ರೀತಿಯುಳ್ಳದು. ನಮ್ಮ ದೇಶದಲ್ಲಿಯೇ ಸಾಮಾನುಗಳು ತಯಾರಾದರೂ, ನಮ್ಮ ದೇಶದವುಗಳಿಗೆ ಕ್ರಯ ಕಡಿಮೆಯಾದರೂ, ನಮ್ಮ ಸರಕಾರವು ಕೊಳ್ಳುವುದು ಇಂಗ್ಲೆಂಡಿನಲ್ಲಿ!

ತುರ್ಕಿಯು ನಾಗರಿಕವಾಗುವುದು!

ತುರ್ಕಿಯು ಪಾಶ್ಚಾತ್ಯ ಪದ್ಧತಿಗಳಲ್ಲಿ ಅನುರಕ್ತವಾಗಿ ಹೇಗೆ ಬೇಗ ಬೇಗನೆ ಪಾಶ್ಚಾತ್ಯರ ಸರಿದೂಗುವುದರಲ್ಲಿ ಉತ್ಸುಕರಿದ್ದಾರೆಂಬುದನ್ನು ಈ ಮೊದಲು ನಾವು ಒಂದೆರಡು ಬಾರಿ ಸೂಚಿಸಿರುವೆವು. ಸ್ತ್ರೀ ಸ್ವಾತಂತ್ರ್ಯ ಸ್ತ್ರೀ ವಿದ್ಯಾಭ್ಯಾಸ, ಸ್ತ್ರೀಯರ ಘರದಾ ಕ್ರಮ ತೆಗೆದುಹಾಕುವುದು, ಪಾಶ್ಚಾತ್ಯ ಪೋಷಾಕಿನ ಅನುಕರಣ ಇವೆಲ್ಲವೂ ತುರ್ಕಿಯಲ್ಲಿ ಬೇಗ ಬೇಗನೆ ಸಾಗಿಹೋದವು. ಈಗ, ಜನರ ನಿತ್ಯಜೀವನಕ್ಕೆ ಸಂಬಂಧವಾದ ಪೆನಲ್‌ಕೋಡನ್ನು ಪಾಶ್ಚಾತ್ಯ ಕ್ರಮಗಳಿಗೆ ಆದರ್ಶದಿಂದ ತುರ್ಕಿ ನೇಷನಲ್ ಎಸೆಂಬ್ಲಿಯು ಪರಿವರ್ತಿಸಿಯದೆ.

ಅನುಕ್ರಮಣಿಕೆ.

ಅಗ್ರಲೇಖ	ಪುಟ
ಆಯುರ್ವೇದ	೬
ಹಿಂದೂಸ್ಥಾನವು ಸುಜ್ಞತೆಗೆ ಬರುವುದು	,,
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೭
ದಕ್ಷಿಣ ಕನ್ನಡ— ಕಾರ್ಕಳ, ಬಂಟ್ವಾಳ, ಸಂಪಾಜೆ	,,
ಮಂಗಳೂರು	೮
ವಿವಿಧ ವಿಷಯಗಳು	,,
ಪತಿತರಿಂದ ಪತಿತಳು	,,
ವಿಮರ್ಶೆ	,,
ಪತ್ರವ್ಯವಹಾರ ೧, ೨	,,
ತೆಂಗಿನಕಾಯಿಯ ಮಹಾತ್ಮೆ	೪

ಸ್ವದೇಶಾಭಿಮಾನಿ.

ಶಕ ೧೮೪೭ ಫಾಲ್ಗುಣ ಶು|೧೪ಯು ಶುಕ್ರವಾರ

ಆಯುರ್ವೇದ.

ಈಗಿನ ಪಾಶ್ಚಾತ್ಯ ಔಷದ ಕ್ರಮಗಳು ಇತ್ತೀಚೆಯವುಗಳಾಗಿವೆ. ಹೆಚ್ಚು ಪರಿಣಾಮಕಾರಿಯಾದ ಕೆಲವು ಔಷಧ ಕ್ರಮಗಳು ಬರೇ ೫೦-೬೦ ವರ್ಷಗಳ ಇತ್ತೀಚೆಗೆನೇ ಪಾಶ್ಚಾತ್ಯರಿಂದ ಕಂಡು ಹಿಡಿಯಲ್ಪಟ್ಟವುಗಳಾಗಿವೆ. ಪಾಶ್ಚಾತ್ಯ ಔಷಧ ಕ್ರಮವು ಸೂತ್ರಬದ್ಧವಾದ ತರ್ಕ ಮೀಮಾಂಸೆಗಳಿಂದ ವಿಕಾಸ ಹೊಂದಿದುದಾಗಿ ಸ್ವಭಾವತಃ ಹೆಚ್ಚು ಜನರ ವಿಶ್ವಾಸಕ್ಕೆ ಪಾತ್ರವಾಯಿತು.

ಆಯುರ್ವೇದವು ಆರ್ಯ ಮಹರ್ಷಿಗಳಿಂದ ಕಂಡು ಹಿಡಿಯಲ್ಪಟ್ಟದು. ಸಾವಿರಾರು ವರ್ಷಗಳ ಪೂರ್ವದಲ್ಲಿಯೇ ಆಯುರ್ವೇದ ವಿಜ್ಞಾನವು ನಿರೂಪಿಸಲ್ಪಟ್ಟು ರೂಪಿಸಲ್ಪಟ್ಟದ್ದಿತು. ಆಯುರ್ವೇದದ ವಿಕಾಸದ ಕ್ರಮವು ಯಾರಿಗೂ ಗೊತ್ತಿಲ್ಲ. ಪುರಾಣ ಕ್ರಮದಂತೆ ಇಡೀ ವಿಜ್ಞಾನವು ಅಕಸ್ಮಾತ್ತಾಗಿ ದೈವ ದತ್ತವಾಗಿ ಬಂದಿತೆಂದು ಕೆಲವರು ಹೇಳುವರು. ಮತ್ತು ಹೆಚ್ಚು ಪರಿಶೀಲನೆಯಿಂದ ಆಯುರ್ವೇದವನ್ನು ವಿಶಾಲವಾಗಿಯೂ, ಪರಿಣಾಮಕಾರಿಯಾಗಿಯೂ ಮಾಡಲು ಯತ್ನಿಸಿದ ಚಾರಕ ಪ್ರಭೃತಿಗಳನ್ನು ಹಿಂದೂ ಜನಾಂಗವು ನಾಸ್ತಿಕ್ಯದ ಅಪವಾದದಿಂದ ಮುಚ್ಚಿಡಲು ಯತ್ನಿಸಿತು.

ನಮ್ಮ ಪರಿಶೀಲನಾ ಮತ್ತು ತಾರ್ಕಿಕ ಮಾನಸಿಕತೆಗೆ ಪಾಶ್ಚಾತ್ಯ ಕ್ರಮದಲ್ಲಿ ತುಂಬಾ ಆಶ್ರಯ ದೊರಕುವುದಾದರೂ, ಹಿಂದೂಸ್ಥಾನದಲ್ಲಿ ಪಾಶ್ಚಾತ್ಯ ಕ್ರಮವು ಪ್ರಚಾರದಲ್ಲಿಲ್ಲದಿದ್ದಾಗ, ಸಾಮಾನ್ಯ ಗೃಹ ಚಿಕಿತ್ಸೆಗಳು ಹೆಂಗಸರಿಂದಲೇ ಮಾಡಲ್ಪಟ್ಟು ವಿಶೇಷ ಪರಿಣಾಮಕಾರಿಯಾದ ಉಪಶಮನವು ದೊರಕುತ್ತಿದ್ದಿತೆಂಬುದನ್ನೂ, ಆಗಿನ ಸಾಮಾನ್ಯತಃ ವ್ಯಕ್ತಿಯ ದೇಹ ಸೌಖ್ಯವು ಈಗಿನ ಕಾಲು ಪಾವು ಅನ್ನದ ಸೂಕ್ಷ್ಮತೆಯಲ್ಲಿ ಬೆಳೆದು, ಈಗಿನ ಪ್ರೋಟೀಡ್ಸ ಪ್ರೊಟೀನ್ಸ ತತ್ವದಲ್ಲಿ ಬೆಳೆಯುವ ಮಕ್ಕಳಿಗಿಂತಲೂ ಎಷ್ಟೋ ದೃಢವಿದ್ದಿತೆಂಬುದನ್ನೂ ನಾವು ಲಕ್ಷಿಸಿದರೆ ಸಾಮಾನ್ಯ ಚಿಕಿತ್ಸೆಗೆ ಆಯುರ್ವೇದವು ಎಂದೂ ಹಿಂದೆ ಬೀಳಲಿಕ್ಕೆ ಕಾರಣವಿಲ್ಲವೆಂದು ತಿಳಿಯ ಬಹುದು.

ಹಳ್ಳಿಯಲ್ಲಿ, ಆಧುನಿಕ ವಿಶ್ವಾಸಕ ಚಿಕಿತ್ಸಾಕ್ರಮಗಳು ಅಡಿಯಿಡದ ಈ ನಮ್ಮ ಅನಾಗರಿಕ ಪ್ರದೇಶಗಳಲ್ಲಿ ಆಯುರ್ವೇದವೇ ಜನತೆಯ ಸೌಖ್ಯವನ್ನು ಕಾಪಾಡುತ್ತಿದೆ. ಈ ಹಳ್ಳಿಗಳಲ್ಲಿ ಮರಣ ಸಂಖ್ಯೆಯು ಆಧುನಿಕ ಕ್ರಮಗಳಿದ್ದ ಸ್ಥಳಗಳಿಗಿಂತ ಹೆಚ್ಚೆಂದು ಹೇಳಬರುವುದಿಲ್ಲ. ಮಾತ್ರವಲ್ಲ ಸಾಮಾನ್ಯ ಸೌಖ್ಯವು ಎಷ್ಟೋ ಉತ್ತಮವಾಗಿಯೇ ಇದೆ.

ಇನ್ನು ಸರಕಾರದ ಧರ್ಮಾಸ್ಪತ್ರೆಗಳ ವಿಷಯವನ್ನು ನೋಡಿದರೆ, ಆ ಮೂಲಕ ಜನರಿಗೆ ಹೆಚ್ಚು ಲಾಭವಾದಂತೆಯೂ ತೋರುವುದಿಲ್ಲ. ದಿನಕ್ಕೆ ೫೦೦-೬೦೦ ಜನರಿಗೆ ಒಬ್ಬ ದಾಕ್ತಾರರು ಮದ್ದು ಕೊಡಬೇಕಾದ ಈ ಸಂಸ್ಥೆಗಳಲ್ಲಿ ದಾಕ್ತಾರರು ಒಬ್ಬರನ್ನು ಎಷ್ಟು ಸಮಯ ಪರೀಕ್ಷಿಸಬಹುದೆಂದು ತಿಳಿಯಬಹುದು. ಕಾರ್ಯತಃ ರೋಗಿಗಳ ಸಾಮಾನ್ಯ ರೋಗಗಳು ಗುಣಪಡುವುದಾದರೂ, ಹೆಚ್ಚಾಗಿ ರೋಗಿಗಳು ಸಾಕಷ್ಟು ಪ್ರಯೋಜನವನ್ನು ಹೊಂದದೆ ಕಡೆಗೆ ಆಯುರ್ವೇದವನ್ನು, ಹಳ್ಳಿ ಔಷಧಗಳನ್ನು ಪಡೆಯುವರು.

ಮುಖ್ಯವಾಗಿ ಆಯುರ್ವೇದ ಕ್ರಮಕ್ಕೆ ಒಂದು ತೊಡಕೆಂದರೆ ಅದರಲ್ಲಿ ಯಾವ ಕ್ರಮವಾಗಲಿ, ಯಾವ ತರದ ಸತರ್ಕ ವಿಷಯಗಳಾಗಲಿ ಔಷಧ ನಿರ್ಣಯಕ್ಕೆ ಸಿಕ್ಕುವುದಿಲ್ಲ. ಅಲ್ಲದೆ ರೋಗಗಳ ಪರಿಶೀಲನಾ ಕ್ರಮವು ಕೇವಲ ಅಂದಾಜಿನದಾಗಿದ್ದು, ಜನತೆಯ ವಿಶ್ವಾಸವನ್ನು ಕಟ್ಟಿಕೊಳ್ಳುವಂತಹುದಾಗಿಲ್ಲ.

ಆಯುರ್ವೇದದ ಔಷಧಗಳನ್ನು ಸೇವಿಸುವುದರಲ್ಲಿ ವಿಶ್ವಾಸವಿಲ್ಲದವರೆಲ್ಲರಿಗೂ ಆಯುರ್ವೇದ ಔಷಧಗಳ ಗುಣಗಳು ಪಾಶ್ಚಾತ್ಯ ಔಷಧಗಳಿಗಿಂತ ಉತ್ತಮವೆಂದು ತಿಳಿದೇ ಇದೆ. ಮುಖ್ಯತಃ ಆಯುರ್ವೇದದ ಒಂದು ಶಾಸ್ತ್ರೀಯ ವಿಜ್ಞಾನವಿಲ್ಲ. ಮಹರ್ಷಿಗಳು ಬರೆದಿಟ್ಟದನ್ನು ಪಾಠಮಾಡಿ ಅಕ್ಷರಶಃ ನಡಿಯಲು ಯತ್ನಿಸುವುದೇ ನಮ್ಮ ಪಂಡಿತಾಗ್ರೇಸರರಲ್ಲಿ ಕೂಡ ಅಭ್ಯಾಸವಿದೆಯಲ್ಲದೆ ಅದಕ್ಕಿಂತ ಮೀರಿ ಆಲೋಚನೆ ಮಾಡಲೊಪ್ಪುವುದಿಲ್ಲ. ಇದ್ದುದೇ ಪೂರ್ಣವೆಂದು, ಇನ್ನು ಅದಕ್ಕೆ ಕೂಡಿಸುವಂತಹುದೇನೂ ಇಲ್ಲವೆಂದು ಭಕ್ತಿಯಿಂದ ಪ್ರಾಚೀನ ಆರ್ಯ ವಿಜ್ಞಾನವನ್ನೂ ಲಕ್ಷಿಸುವ ಅಭ್ಯಾಸದಿಂದ ನಮ್ಮ ಜನರಿಗೆ ಈ ರೀತಿಯ ಗತಿಯಾಗಿದೆ. ಇಂತಹ ವಿಜ್ಞಾನಗಳ ವಿಷಯದಲ್ಲಿ ವಿಜ್ಞರಿಗೆ ಭಕ್ತಿಯಿಂದ ಯಾವ ಪ್ರಯೋಜನವೂ ಲಾಭವಾಗದು. ಬೇಕಾದುದು ವಿಚಾರ ಮತ್ತು ಪರಿಶೀಲನಾಶಕ್ತಿ. ಪ್ರತಿಭಾಪನ್ನ ಪೂರ್ವಜರಾದರೂ, ಅವರು ಕೊಟ್ಟಿರುವ ವಿಜ್ಞಾನಗಳು ಪೂರ್ಣವಾಗಬೇಕೆಂತಿಲ್ಲ. ಯಾವ ವಿಜ್ಞಾನವೂ ಪೂರ್ಣವಿರುವುದಿಲ್ಲ. ಹೆಚ್ಚು ಅನುಭವದೊಡನೆ, ಹೊಸ ವಿಷಯಗಳ ಜ್ಞಾನವಾಗಿ, ಹೊಸ ತತ್ವಗಳ ಆಧಾರವಾಗುವುದು.

ಆಯುರ್ವೇದ ಔಷಧಗಳು ಹೆಚ್ಚು ಪರಿಣಾಮಕಾರಿಯಾಗಲಿಕ್ಕೆ ಕಾರಣವುಂಟು. ಆಯುರ್ವೇದ ಔಷಧಗಳು ವನಸ್ಪತಿಯಿಂದಲೇ ತಯಾರಿಸಲ್ಪಟ್ಟು ತತ್ಕಾಲವೇ ಔಷಧಗಳಾಗಿ ಉಪಯೋಗಿಸಲ್ಪಡುವಂತಹುಗಳಾಗಿವೆ. ಎಷ್ಟೋ ಕಠಿಣ ರೋಗವಾದರೂ, ವನಸ್ಪತಿಗಳ ತತ್ಕಾಲ ಸಂಗ್ರಹದಿಂದ ಔಷಧಿಯು ತಯಾರಿಸಲ್ಪಟ್ಟು ಆ ರೋಗಕ್ಕೆ ಕೊಡಲ್ಪಡುತ್ತಿದ್ದಿತು. ಇಂತಹ ಔಷಧಿಗಳಲ್ಲಿ ರಾಸಾಯನಿಕ ಕಾರಖಾನೆಗಳಲ್ಲಿ ತಯಾರಿಸಲ್ಪಟ್ಟ ಔಷಧಿಗಳಿಗಿಂತ ಹೆಚ್ಚು ಶಕ್ತಿಯಿದ್ದೆ ಆಧುನಿಕ ರಸಾಯನ ಶಾಸ್ತ್ರದಲ್ಲಿ ಕೂಡ ರಾಸಾಯನ ಪದಾರ್ಥಗಳ ತಯಾರಿಯ ಮುಹೂರ್ತದ ಶಕ್ತಿಯು ತಯಾರಿಸಿಡಲ್ಪಟ್ಟ ಅಂತಹವುಗಳಿಗಿಂತಲೂ ಪ್ರಚಂಡವಿದೆಯೆಂದು ತಿಳಿಯಲ್ಪಟ್ಟಿರುವುದು. ಈ ಪರಿಸ್ಥಿತಿಗೆ ನೇಸೆಂಟ್ (nascent) ಪರಿಸ್ಥಿತಿಯೆನ್ನುವರು. ಔಷಧಿಗಳ ತಯಾರಿಯಲ್ಲಿ ಕೂಡ ಈ ನೇಸೆಂಟ ಶಕ್ತಿಯ ಬೆಲೆಯು ಅತ್ಯಧಿಕವಿರತಕ್ಕುದಾಗಿದೆ. ಸರಿಯಾದ ಔಷಧಿಯ ರೀತಿ ಗೊತ್ತಿದ್ದು ಔಷಧಿಯು ಮಾಡಲ್ಪಟ್ಟು ರೋಗಕ್ಕೆ ತಕ್ಕ ಔಷಧಿಯು ಕೊಡಲ್ಪಟ್ಟರೆ, ಆಯುರ್ವೇದವು ಪಾಶ್ಚಾತ್ಯ ಔಷಧಿಗಿಂತ ಹೆಚ್ಚು ತತ್ಪರಿಣಾಮಕಾರಿಯಾಗಲು ಕಾರಣವಿದೆ. ಈ ತರದ (nascent) ಶಕ್ತಿಯು ಪಾಶ್ಚಾತ್ಯ ಕ್ರಮಗಳಲ್ಲಿಲ್ಲದುದರಿಂದಲೇ ಪಾಶ್ಚಾತ್ಯ ಔಷಧಗಳು ಅನೇಕ ರೋಗಗಳನು ಶಾಂತಿ ಮಾಡಲಾರವು.

ವೈದ್ಯ ವಿಜ್ಞಾನದ ಹೆಸರಲ್ಲಿಯಾದರೂ ಆಯುರ್ವೇದವನ್ನು ನೂತನ ದೃಷ್ಟಿಯಿಂದ ಪರಿಶೀಲಿಸುವುದು ಅಗತ್ಯವಿದೆ. ಇತ್ತಲಾಗೆ ಆಯುರ್ವೇದ ಪರಿಷತ್ತುಗಳು ಅನೇಕವಾಗಿ ವ್ಯವಸ್ಥೆಗೊಳಿಸಲ್ಪಟ್ಟು, ಪಂಡಿತರು, ಶಾಸ್ತ್ರಿಗಳು ಇತ್ಯಾದಿಯವರ ಸಂಸ್ಕೃತ ಪಾಂಡಿತ್ಯದ ಭಾಷಣಗಳು ನಡೆದು, ಪ್ರಾಚೀನ ಆಯುರ್ವೇದದ ಕೀರ್ತಿಯು ಹೊಗಳಲ್ಪಟ್ಟು ಅಂತಹ ಪರಿಷತ್ತುಗಳು ಮುಕ್ತಾಯ ಹೊಂದುವುವು. ಹಿಂದೀಯರ ಸಾಮಾನ್ಯ ಸ್ವಾಭಿಮಾನವೆಂದರೆ ತಮ್ಮ ಪೂರ್ವಜರ ಗೌರವ ಪ್ರತಿಭೆಗಳ ಪ್ರಶಂಸೆ ಮಾತ್ರವೇ ಆಗಿದೆ. ಇಂತಹ ಪೂರ್ವ ಗೌರವಗಳ ಪಠನದಿಂದ ಯಾವ ಲಾಭವೂ ಆಯುರ್ವೇದಕ್ಕಾಗಲಿ ಜನತೆಗೆ ಲಭಿಸುವಂತಿಲ್ಲ. ವೈದ್ಯ ವಿಜ್ಞಾನದ ಆಧುನಿಕ ಕ್ರಮಗಳನ್ನು ಲಕ್ಷಿಸಿ ಅವುಗಳಿಗೆ ಸರಿಯಾಗುವಂತೆ ಹೇಗೆ ಆಯುರ್ವೇದವನ್ನು ಪೂರ್ತಿಗೊಳಿಸಬಹುದೆಂಬುದನ್ನೂ ಆಧುನಿಕ ದೃಷ್ಟ್ಯಾ ಆಯುರ್ವೇದದಲ್ಲಿ ಬಿಡಬೇಕಾದುದಾಗಲ್ಲಿ ಅದರಿಂದ ಸ್ವೀಕರಿಸಬೇಕಾದುದೇನೆಂಬುದನ್ನೂ ತರ್ಕಿಸಿ ತಿಳಕೊಳ್ಳಲೆತ್ನಿಸುವುದು ಉತ್ತಮ.

ವಿಜ್ಞಾನ ವಿಷಯಗಳನ್ನು ಆಲೋಚಿಸುವಾಗ ನಮ್ಮ ಭಕ್ತಿಯಾಗಲಿ, ವಿಶ್ವಾಸವಾಗಲಿ ಸರಿಯಾದ ಪರಿಶೀಲನೆಗೆ ಅಡ್ಡಗಟ್ಟಬಾರದು. ನಮ್ಮ ಮನಸ್ಸಿಗೆ ಆಯುರ್ವೇದ ಪುನರಾವಲೋಕನವಾಗುವುದು ಅವಶ್ಯವಿದೆಯೆಂದು ತೋರುವುದು. ಈ ವಿಚಾರವಾಗಿ ಮುಂದಿನ ಒಂದು ಲೇಖದಲ್ಲಿ ನಮ್ಮ ಅಭಿಪ್ರಾಯಗಳನ್ನು ಕೊಡುವೆವು.

ಹಿಂದೂದೇಶವು ಸುಜ್ಞತೆಗೆ ಬರುವುದು.

Returning to Sanity.

ಹಿಂದೂದೇಶವು ಬುದ್ಧಿಯಿಲ್ಲದ ಕೆಲಸಮಾಡುತ್ತಿದೆ. ಸುಧಾರಣೆಯ ಸರಕಾರವನ್ನು ಸರಿನಡಿಸದೆ ಕೆಟ್ಟುಹೋಗುತ್ತಿದೆ ಎಂದು ಇಂಗ್ಲಿಷ ಸರಕಾರದ ಮತ್ತು ಆಂಗ್ಲೇಯ ಪತ್ರಿಕೆಗಳ ಪ್ರತ್ಯಹದ ಬುದ್ಧಿ ಮಾತಾಗಿದೆ. ಇಂಗ್ಲೀಷರು ಯಾವ ತರದ ಬುದ್ಧಿವಂತಿಕೆಯನ್ನು ಹಿಂದೂದೇಶದೊಳಗಿರುವಂತೆ ಇಚ್ಛಿಸುತ್ತಾರೆ ಎಂಬುದನ್ನು ಇಂಗ್ಲೀಷ ಪತ್ರಿಕೆಗಳೊಳಗೆ ಆಗಾಗ ಬರುತ್ತಿರುವ ಲೇಖಗಳನ್ನೂ, ಅವರಿಗೆ ಮನಸೊಪ್ಪುವ ಹಿಂದೀಯ ರಾಜಕೀಯ ಪರಿಸ್ಥಿತಿಗಳನ್ನೂ ಸರಿಹೋಲಿಸಿದರೆ ತಿಳಿಯುವುದು.

ಅಸಹಕಾರದ ಸಮಯದಲ್ಲಿ, ಎಲ್ಲಾ ರಾಜಕೀಯ ಧುರೀಣರು ಒಂದಾಗಿ ಒಂದೇ ರಥದಿಂದಿದ್ದು ಸರಕಾರಕ್ಕೆ ಬಹಳ ಕಂಪನೆಯನ್ನುಂಟುಮಾಡಿದ. ಆ ಸಮಯದಲ್ಲಿ ಧುರೀಣರು ಹುಚ್ಚಾಟವನ್ನು ಮಾಡುತ್ತಿರುವರೆಂದು ಈ ಪತ್ರಿಕೆಗಳ ಮತ್ತು ಸರಕಾರದ ಅಂಬೋಣವಿದ್ದಿತು. ಈಗ ಹಿಂದೂಸ್ಥಾನದಲ್ಲಿ ಬುದ್ಧಿವಂತಿಕೆಯ ಬರುವಿಕೆಯ ಲಕ್ಷಣಗಳನ್ನು ಇವರು ಕಂಡುಕೊಳ್ಳುತ್ತಿರುವರು. ಈ ಬುದ್ಧಿವಂತಿಕೆಯ ಲಕ್ಷಣಗಳಾವುವು?

ಯಾವಾಗ ದೇಶಬಂಧು ದಾಸರು ಅಸಹಕಾರ ಆಕ್ಸೈರಿಯಲ್ಲಿ ದೇಶದ ಉತ್ಸಾಹವು ಶಕ್ತಿಯೂ ಕಳೆಗುಂದುವುದನ್ನು ಕಂಡು, ಹೊಸ ಚಳವಳವನ್ನು ಮುಂದೊತ್ತಲಿಕ್ಕೆ ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದರೂ, ಆಗ ಕಾಂಗ್ರೆಸ್ ಪಂಥದಲ್ಲಿ ಬರೇ ಎರಡು ಬಾಣಗಳಾಗಿ ಸ್ವರಾಜ್ಯಪಕ್ಷವು ತಕ್ಕಷ್ಟು ಶಕ್ತಿಯುಕ್ತವಾಗಿ ಎಸೆಂಬ್ಲಿಯನ್ನು ಸೇರಿತು. ದೇಶದಲ್ಲಿ ಆಗ ಅಸಹಕಾರದ ಜಾಗೃತಿಯು ನವಚೇತನವು ಇನ್ನೂ ಕುಂದಿರಲಿಲ್ಲ. ಆದುದರಿಂದ ಇಂಡಿಪೆಂಡೆಂಟ್ ಪಕ್ಷವೂ ಸ್ವರಾಜ್ಯಪಕ್ಷೀಯರೊಡನೆ ಸಹಕರಿಸುವುದಕ್ಕೆ ಹಿಂದೆಗೆಯಲಿಲ್ಲ. ಆದಾಗಿ ಸರಕಾರದ ಆಯವ್ಯಯದ ಅಂದಾಜು ಪತ್ರಿಕೆಗಳು ಬಿದ್ದು ಹೋದುವು, ಸರಕಾರವು ಅನೇಕ ಮಸೂದೆಗಳಲ್ಲಿ ಪರಾಜಯವನ್ನು ಹೊಂದಿತು. ಆಗ ಸರಕಾರವು ರಿಫೋರ್ಮ್ಸ ಕಮಿಟಿಯನ್ನು ನೇಮಿಸುವ ಆವಶ್ಯಕತೆಯನ್ನು ಕಂಡಿತು. ಅಂತಹ ಐಕ್ಯದ ಮಾನಸಿಕ ಪರಿಣಾಮದಿಂದಲೇ ಈ ಕಮಿಟಿಯ ಮುಂದೆ ಲಿಬರಲ್ ಪಕ್ಷದವರು ಕೂಡ ಸುಧಾರಣಾ ಸರಕಾರದ ಎಲ್ಲಾ ಊನತೆಗಳನ್ನೂ ಹೊರಗೆಡವಿದರು. ಅಂತಹ ಪರಿಣಾಮಕಾರಿಯಾದ ಸಮಯದಲ್ಲಿಯಾದರೆ ಹಿಂದೀ ಧುರೀಣರ ಸೆನಿಟಿ (Sanity)ಯು ತಪ್ಪಿ ಹೋಗಿತ್ತು—ಬುದ್ಧಿ ಭ್ರಂಶವಾಗಿತ್ತು. ಯಾವ ಕಾಲದಲ್ಲಿ ಹಿಂದೀ ಧುರೀಣರ ಕೆಲಸಗಳು ಇಂತಹ ಪ್ರಬಲ ಸರಕಾರವನ್ನು ಕೂಡ ಬಗ್ಗುವಂತೆ ಮಾಡುವಷ್ಟಾಗುವುವೊ ಆಗ ಅವರ ಕೆಲಸಗಳು ಬುದ್ಧಿ ಭ್ರಂಶತೆಯನ್ನು ಇಂಗ್ಲೀಷರ ಮಟ್ಟಿಗೆ ಮತ್ತು ಉದಾರ ಹಿಂದೀಯರ ಮಟ್ಟಿಗೆ ಸೂಚಿಸುತ್ತಿದ್ದುವು. ಸತ್ಯಾಗ್ರಹವು ಬುದ್ಧಿ ಭ್ರಂಶತೆ, ಅಸಹಕಾರವು ಬುದ್ಧಿ ಭ್ರಂಶತೆ, ನಿರಂತರ ನಿರೋಧವು ಬುದ್ಧಿ ಭ್ರಂಶತೆ! ನಿಜವಾದ ಬುದ್ಧಿವಂತಿಕೆಯ ಲಕ್ಷಣವೇನು?

ಈ ಬಾರಿ ಎಸೆಂಬ್ಲಿಯ ಅಧಿವೇಶನವನ್ನು ಪ್ರಾರಂಭಿಸುವ ಸಮಯದಲ್ಲಿ ವ್ಯಾಸರಾಯಿಯವರು ಬುದ್ಧಿವಂತಿಕೆಯ ಲಕ್ಷಣವನ್ನು ಹೇಳಿರುವರು. ಏನೆಂದರೆ ಈಗ ತಾನೇ ಕೆಲವರಲ್ಲಿ (ಪ್ರಾಯಶಃ ರಿಸ್ಪೊನ್ಸಿವ್ ಕೊ-ಒಪರೇಶನ್‌ವಾಲರಲ್ಲಿ) ಬುದ್ಧಿವಂತಿಕೆಯ ಪುನರಾಗಮನವು ತೋರುತ್ತಿದೆ. ಆದರೆ ಅಷ್ಟು ಸಾಲದು. ಇನ್ನೂ ಸಹಕಾರವು ಬೇಕು. ಅಂದರೆ ಹೇಳಿದಂತೆ ಕೇಳಬೇಕು. ಮುಖ್ಯತಃ ಸರಕಾರದೊಡನೆ ಅದು ಹೇಳಿದಂತೆ ಯಾರು ವರ್ತಿಸುವರೊ ಅವರಲ್ಲಿ ಬುದ್ಧಿವಂತಿಕೆಯ ಉತ್ತಮ ಲಕ್ಷಣಗಳನ್ನು ಸರಕಾರವು ಕಾಣುವುದು.

ಇನ್ನು ಲೊರ್ಡ ಮೆಸ್ಟನರೆಂದರೆ ಅರಿಯದವರು ಇರಲಿಕ್ಕಿಲ್ಲ. ಇವರು ಹಿಂದೂಸ್ಥಾದದ ಮಾಜಿ ಪ್ರಾಂತಾಧಿಪರು. ಈಗ ಹಿಂದಿಯ ಸಮಸ್ಯೆಗಳ ಮೇಲಿನ ವಿಚಾರಗಳನ್ನು ಬರೆದು ಈವರು ಆಗಾಗ ಆಂಗ್ಲೇಯ ಪತ್ರಿಕೆಗಳಿಗೆ ಬರೆಯುತ್ತಿರುವರು. ಒಡ್ವಾಯರರ ನಂತರ ಇವರಿಗಿಂತ ಉತ್ತಮ ಬ್ಯುರೊಕ್ರೆಟ ಮಾನಸಿಕತೆಯವರು ಇನ್ನೊಬ್ಬರು ಸಿಕ್ಕುವುದು ವಿರಳ. ಇವರು ಲಂಡನ್ ಟೈಮ್ಸ ಪತ್ರಿಕೆಯಲ್ಲಿ ಹಿಂದೀಯರ ಬುದ್ಧಿಯ ಪುನರಾಗಮನ ವಿಚಾರಗಳನ್ನು ಕೆಲವನ್ನು ಬರೆದಿರುವರು.

ಲೊರ್ಡ ಮೆಸ್ಟನರು ತಮ್ಮ ಲೇಖದಲ್ಲಿ ಹೇಗೆ ಧುರೀಣರೊಳಗಿನ ಮಾತ್ಸರ್ಯವು ಲಿಬರಲ್ ಇಂಡಿಪೆಂಡೆಂಟರೊಳಗಿನ ಐಕ್ಯಕ್ಕೆ ಪ್ರತಿಬಂಧವನ್ನು, ಶಕ್ತಿಮಾನ್ ಧುರೀಣನಾಗಿದ್ದ ಚಿತ್ತರಂಜನ ದಾಸನ ಮರಣದಿಂದ ಸ್ವರಾಜ್ಯಪಕ್ಷೀಯರ ಅಂತರ್ಭೇದಗಳನ್ನು, ಹಿಂದೂ ಮುಸಲ್ಮಾನ ಕ್ಲೇಶಗಳನ್ನೂ ವಿವರಿಸಿಯೂ ಲೊರ್ಡ ಮೆಸ್ಟನರು ಹಿಂದೂಸ್ಥಾನದ ಬುದ್ಧಿವಂತಿಕೆಯ ಪುನರಾಗಮನದ ಚಿಹ್ನೆಗಳನ್ನು ನೋಡುತ್ತಿರುವರು! ಇಂಗ್ಲೀಷರ ಹಿತದಲ್ಲಿ ಇದೇ ಬುದ್ಧಿವಂತಿಕೆಯಾಗಿರ ಬಹುದು!

ಆದರೆ ಈಗಿನ ಪರಿಸ್ಥಿತಿಯನ್ನು ಲಕ್ಷಿಸಿದರೆ, ಹಿಂದುಸ್ಥಾನದ ಧುರೀಣರಲ್ಲಿ ಈ ದಿನ ತೋರುವ ಸ್ವಾರ್ಥದ, ಅವಿವೇಕದ ಮತ್ತು ಆತ್ಮ ಘಾತುಕತೆಯ ಲಕ್ಷಣಗಳು ಇನ್ನೊಂದೂ ತೋರಿ ಬಂದಿಲ್ಲ. ಹಿಂದಿನ ಐಕ್ಯದ ಮತ್ತು ಉತ್ಸಾಹದ ಪ್ರತಿಕ್ರಿಯೆಯಾಗಿ (reaction) ಈ ದಿನ ಅನೈಕ್ಯ ಮತ್ತು ಸ್ವಾರ್ಥದ ಬಿರುಗಾಳಿಯು ಬೀಸಿ ಹಾವಳಿಯನ್ನುಂಟುಮಾಡಿಯದೆ. ತಾಂಬೆಯವರ ವಿಶ್ವಾಸ ಘಾತುಕತೆಯೊಡನೆ, ಸ್ವರಾಜ್ಯ ಪಕ್ಷದ ಪತನವಾರಂಭಿಸಿತು. ಇತ್ತೀಚೆ ಸ್ವರಾಜ್ಯಪಕ್ಷದ ಪತನವಾರಂಭಿಸಿತು. ಇತ್ತೀಚೆ ಸ್ವರಾಜ್ಯಪಕ್ಷವು ಸ್ವಾರ್ಥ ಸಾಧಕರ ಉಪಾಯದ ಯಂತ್ರ ಮಾತ್ರವಾಗಿ ಪರಿಣಮಿಸಿತು. ಇನ್ನು ಮರಾಠಾಪಕ್ಷದ ಪ್ರತ್ಯೇಕತೆಯು ಅಕೋಲಾ ಪರಿಷತ್ತಿನಿಂದ ಸ್ಪಷ್ಟವಾಯಿತು.

ಇನ್ನು ಎಸೆಂಬ್ಲಿಯ ಪರಿಸ್ಥಿತಿಯು ಹೇಳಲಾಗದು. ಪ್ರಥಮತಃ ಲಿಬರಲ್, ಇಂಡಿಪೆಂಡೆಂಟ್ ಮತ್ತು ಸ್ವರಾಜ್ಯಪಕ್ಷವೆಂಬ ಭೇದಮಾತ್ರಗಳಿದ್ದುವು. ಆದರೆ ಪಂಡಿತ ಮ್ಯಾಲವೀಯರಿಗೆ ಇವು ಸಾಲದಾಗಿ ದೇಶೋದ್ಧಾರದ ದೊಡ್ಡ ನಿಸ್ವಾರ್ಥತೆಯಿಂದ ಹೊಸ ಪಕ್ಷ ಸ್ಥಾಪನೆಯಲ್ಲಿ ಅವರು ಚಿಂತಿತರಾಗಿದ್ದಾರೆ. ಇತ್ತ ಜಿನ್ನರವರು ಹಿಂದೆ ಬೀಳುವವರಲ್ಲವಾಗಿ ಮುಸಲ್ಮಾನರನ್ನು ಒಟ್ಟುಗೂಡಿಸುವವರಾಗಿದ್ದಾರೆ. ಎಸೆಂಬ್ಲಿ ಮೆಂಬರರಲ್ಲಿ ಪ್ರತಿ ಒಬ್ಬರನ್ನು ಒಂದೊಂದು ಪಕ್ಷ ಕಟ್ಟಿದರೆ ಮತ್ತೆ ಹೇಳಬೇಕೆಂತಿಲ್ಲ. ಎಲ್ಲರೂ ದೇಶದ ಹೆಸರನ್ನೆ ಕೂಗುವರು.

ಇವುಗಳೀಗ ಬುದ್ಧಿವಂತಿಕೆಯ ಲಕ್ಷಣಗಳು. ಇವುಗಳನ್ನು ಸರಕಾರವು ಪ್ರೋತ್ಸಾಹಿಸದಿದ್ದರೆ ಅದು ಮತ್ತು ಹೇಗೆ ನ್ಯಾಯಯುತವಾದೀತು.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರತಿಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ಫೂರ್ತಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.

ಕನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦. ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವನಿಗೆ ಹತ್ತಿರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಫ್ ಕೊಸ್ಟ್ಸ, ಮೆಮೊರಂಡಮ್ ಒಫ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ

ಎಸ್. ಪಿ. ಆಚಾರ್ಯ

ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಕುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ

ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮುಸೋಲ್ಮಾನಿ ಕಾಫಿ ಕ್ಲಬ್. ಮಾರ್ಕೆಟು ರೋಡು, ಮಂಗಳೂರು.	ಅಥವಾ	ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ

ವಜ್ರಾಂಗ-ಬಿಂದು

ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕೆಯಿಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ತಿರುಗಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆನ್ನಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ: ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಶಿಪ್ಪಾಣೆ, (ಜಿಲ್ಲಾ ಬೆಳಗಾಂವ.)

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು {
ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯು ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯು ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಇವಳ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೇರ ನಾಗಪ್ಪನಾಯಕ್, ಎಚ್. ಕೊ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಶ್ಚಿಮಕ್ಕೆ ಸಮೀಪವಿರುವ ಮನೆಗೆ) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ಣಿ, ಪಾಡಿಪೇಟೆ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟ್ಟಾ, ಜರಿಕಣ, ಪೇಟ್ಟಾ, ರೇಶ್ಮೆ ಸೀರೆಗಳು, ಅರಪಟ್ಟೆ ಸೀರೆಗಳು, ಜಾರ್ಜೆಟ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಬನಿಯನ್, ಕರ್ನಾಟಕ ಮಿಲ್ಲುಗಳ ಮತ್ತು ಇತರ ಮಿಲ್ಲುಗಳ ಶರ್ಟಿಂಗ್ ಕೋಟಿಂಗ್. ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಟೊಪ್ಪಿ, ಖದ್ದರ್ ಪೇಟ್ಟ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಉಂಗಿ ಇವುಗಳ ಕೈರ—

ಇದು ಸಂಗ್ರಹವನ್ನು ನಮ್ಮ ಪ್ರೊಪ್ರೈಟರರಾದ ರಾ। ನಾರಾಯಣ। ಪ್ರಭುಗಳು ಖಾಸ ಸ್ವತಃ ಆಯಾ ಊರುಗಳಿಗೆ ಹೋಗಿ ಸಂಗ್ರಹಿಸಿ ತಂದಿರುತ್ತಾರೆ.

ಶರತ್ತು:—ನಗದಿ ರೂಪಾಯಿ 5ಕ್ಕೆ ಮೀರಿದ ಖರೀದಿಯನ್ನು ಮಾಡುವವರಿಗೆ ಸೇಕಡಾ 6¼ರ, ರೂ. 50ರಿಂದ 250ವರೆಗೆ ಸೇಕಡಾ 10%, ರೂ. 251 ರಿಂದ 1000ಕ್ಕೆ 12½% ಈ ರೀತಿ ಡಿಸ್ಕೌಂಟು ಕೊಡಲಾಗುವುದು.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಎಂ. ಜೆ. ಎ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ, ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲೀಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ಕಾಣಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦.
ಟಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦.
ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ. | ಡಿ. ಮುನ್ನಾಲಾಲ್, ಡಿಲ್ಲಿ ಸೇಟ್ಸ್ ಬಾಜಾರ್, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೫ನೇ ಶುಕ್ರವಾರ ಮಾರ್ಚಿ ೧೯೨೬. ಸಂಚಿಕೆ ೧೦.

Th Canara Banking Corporation, UDIPI, Ltd.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI, ಹೆಡ್ ಆಫೀಸು: ಉಡುಪಿ.	Branch: COONDAPOOR. ಶಾಖೆ: ಕುಂದಾಪುರ.
ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ವಸೂಲಾದ ಮೂಲಧನ	ರೂ. 1,73,185—9—11.
ಅಪದ್ಧನ ವಗೈರೆ ಎತ್ತಗಳು	ರೂ. 64,700—0—0.
ಸಾ. ಸೇ. ೬ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತಾ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಐವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಾದ ಮೂಲಧನ 1,73,185—9—11, ಆಪದ್ಧನ ವ ಇತರ ಎತ್ತಗಳು 64,700—0—0, ಠೇವಣಾತಿಗಳು 5,10,077-10-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4371—0—0, ಐವೇಜಿನ ಮೇಲಣ [illegible] ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 93,340—10—5, ಜುಮ್ಲಾ ರೂ. 8,45,874—14—7.

ಆಸ್ತಿ ವ ಸೊತ್ತುಗಳು.

ಬಿಲ್ಡಿಂಗ್, ಫರ್ನಿಚರ್ ಕಟ್ಟಡದ ಟ್ರೆಜರಿಗಳು ವಗೈರೆ 4134—4—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,496—6—2, ಸಾ. ಸೇ. ೬ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತಾ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ) 41,741—14—2, ಕೈಯಲ್ಲಿರುವ ಮತ್ತು ಬೇಂಕರರ ಕೂಡ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 26,131—6—3, ಜುಮ್ಲಾ ರೂಪಾಯಿ 8,45,874—14—7.

ನಿರಖು ಠೇವಣಾತಿಗಳನ್ನು ಕಾಲಪ್ರಸ್ತುತಿಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. ೬½ರ ದರದ ಬಡ್ಡಿ ಮೇಲೂ, ಮುದ್ದತ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾವುಕಾರಿ ಹುಂಡಿಗಳನ್ನೂ, ವಸೂಲು ಮಾಡುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಐವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

N. Anand Rao,
Secretary.

ಮೂರು ದಿವಸಗಳಲಿ, ಗುಣಸಿಕ್ಕದಿದ್ದರೆ
ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ] ಅಗಸ್ತ್ಯ [ನೋಡಿ ತಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಪಾತ್ರೆಪ್ಪತ್ತು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ವಿಳಾಸ— ಸೇವಣ್ಣ, [illegible]
[illegible]

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುಧಾರಿಕ ಕ್ರಮದಲ್ಲಿ ಮಾಡಲ್ಪಟ್ಟವೆ, ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್, ಮುಂಬಯಿ.

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ದೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಕುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. | 109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡ ಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾ ದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.
ಅಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೇಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಕನ್ನಡಿಗರೇ! **ವಸಂತ.** ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . ವಸಂತ
ಸಮಾಜಸುಧಾರಕನೆಂದರೆ . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರಾನ್ ¼ ಪುಟ ಸ್ಯಾಜಿನ) ಪುಟಗಳನ್ನು ಮುಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂಬಾಪುರ, ದಕ್ಷಿಣ ಕನ್ನಡ

11 ಮಣಿಗಳಿದ್ದು ಬ್ರಿಜ್ ಮೂವ್‌ಮೆಂಟ್.

22 ಕೆರೆಟ್ ರೋಲ್ಡ ಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8
18 ಕೆರೆಟು ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0
9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.
ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
184 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

ಳಳ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಪಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕೂರ್ ಆಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಜ್ವರಿಯೂ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	„ 2—8—0.
„ ಸ್ಥಳೀಕರಿಗೆ ...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪ್ರತಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ದಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಷ್ಮೆ ಮಡಿಗಳು, ಶಾರ್ಮಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪಶ್ಮೀರ್‌ಬಾಗಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಕಾಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂ॥ರದ ಫಾಲ್ಗುನ ಬ ೭ ಶನಿವಾರದಿಂದ ಕ್ರೋಧನ ಸಂ॥ರದ ಫಾಲ್ಗುನ ಬ ೧೩ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಕುಂಭ ಮಾಸ.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರದಿನ	ಸೂರ್ಯ ಉ.	ಸೂರ್ಯ ಅಸ್ತ.
6	ಶನಿ	೭	೪೯.೧೪	ಅನುರಾಧಾ	೪೮.೫೦	೨೨	6.46	6.39
7	ರವಿ	೮	೪೫.೪೬	ಜ್ಯೇಷ್ಠಾ	೪೬.೪೬	೨೩	6.45	6.39
8	ಸೋಮ	೯	೪೧.೨೮	ಮೂಲಾ	೪೪. ೧	೨೪	6.44	6.39
9	ಕುಜ	೧೦	೩೬.೩೦	ಪೂ. ಷಾ.	೪೦.೪೬	೨೫	6.44	6.39
10	ಬುಧ	೧೧	೩೧. ೨	ಉ. ಷಾ.	೩೭. ೨	೨೬	6.43	6.39
11	ಗುರು	೧೨	೨೫.೧೬	ಶ್ರವಣಾ	೩೩. ೧	೨೭	6.42	6.39
12	ಶುಕ್ರ	೧೩	೧೯.೪೪	ಧನಿಷ್ಠಾ	೨೯. ೨	೨೮	6.42	6.39

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಅಧಿಕದಲ್ಲಿ	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
26	91—2	75—7	—	—
27	90—5	74—7	—	—
28	91—0	73—3	—	—
1	91—2	76—5	—	—
2	92—4	77—0	—	—
3	93—5	76—3	—	—
4	91—2	75—7	—	137-75

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಸಿತಿ		8— 4	9— 4
ಹೊಸ ಗುಡ್ಡು	...	7— 14	8— 6
ಹೊಸ ರಾಶಿ	...	7— 0	7—12
ಅವ್ವಲ್ ಬೆಳ್ತಿಗೆ	...	8— 0	9— 0
ರಂಗೂನು ಬೆಳ್ತಿಗೆ ಗೋಣಿ ೧	...	13— 0	14— 0
ಗೋಧಿ ಗೋಣಿ ೧ಕ್ಕೆ	...	19— 0	20— 0
ಹುರುಳಿಗೋಣಿ ೧ಕ್ಕೆ	...	8— 8	9— 2
ಕಡಲೆಗೋಣಿ ೧ಕ್ಕೆ	...	14— 0	14— 8
ತೊಗರಿಗೋಣಿ ೧ಕ್ಕೆ	...	14— 8	15— 0
ತೊಗರಿಬೇಳೆ ಗೋಣಿ ೧ಕ್ಕೆ	...	16— 8	23— 0
ಉದ್ದುಗೋಣಿ ೧ಕ್ಕೆ	...	16— 8	—
ಹೆಸರುಗೋಣಿ ೧ಕ್ಕೆ	...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ	...	60— 0	65— 0
ಉಪ್ಪು ಗೋಣಿ ೧ಕ್ಕೆ	...	4— 6	4—10
ಕೊಬ್ರಿ ಖಂಡಿ ೧ಕ್ಕೆ	...	105— 0	110— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	33— 0	33— 8
ಎಳ್ಳಿಂಡಿ ಖಂಡಿ ೧ಕ್ಕೆ	...	47— 8	55— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	7—11	7—12
ಎಳ್ಳೆಣ್ಣೆ ಮುಡಿ ೧ಕ್ಕೆ	...	7— 8	9— 0
ಜಿಡ್ಡಿನ ಎಣ್ಣೆ ಪೆಟ್ಟಿಗೆ ೧ಕ್ಕೆ	...	8-12-0	—
ಬೋರಿನ ಸಕ್ಕರೆ ಮುಡಿ ೧ಕ್ಕೆ	...	4—15	5 — 0
ಊರ ಮೆಣಸಿನಕಾಯಿ ಮುಡಿ ೧ಕ್ಕೆ	...	9— 4	—
ಸಾಸಿವೆ ಮುಡಿ ೧ಕ್ಕೆ	...	9— 8	—
ಕೊತ್ತಂಬರಿ ಮುಡಿ ೧ಕ್ಕೆ	...	3— 8	4— 6
ಕಾಫಿ ಖಂಡಿ ೧ಕ್ಕೆ	...	360— 0	385— 0
ಬೆಳೆಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	275— 0	300— 0
ಹೊಸ ಅಡಿಕೆ ಖಂಡಿ ೧ಕ್ಕೆ	...	200— 0	235— 0
ಕಾಳುಮೆಣಸು ಖಂಡಿ ೧ಕ್ಕೆ	...	320— 0	340—
ಯಾಲಕ್ಕಿ ಮುಡಿ ೧ಕ್ಕೆ	...	45— 0	50— 0
ಗೇರುಬೀಜ ಮುಡಿ ೧ಕ್ಕೆ	...	3— 8	—
ಕಬ್ಬಿಣ ಖಂಡಿ ೧ಕ್ಕೆ	...	45— 0	65— 0
ಸುಂಟು ತಗಡು ಮುಡಿ ೧ಕ್ಕೆ	...	16— 4	16—12
ತಾಮ್ರ ಪಾತ್ರಗಳು ಮುಡಿ ೧ಕ್ಕೆ	...	21— 0	—
ಚೀನಿ ಬೆಲ್ಲ ಸೇರು ೧ಕ್ಕೆ	...	18—10	
ಹಿತ್ತಾಳಿ ತಗಡು ಮುಡಿ ೧ಕ್ಕೆ	...	16— 8	
ಜಿನಸು		13—10	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್, ಗಣಪತಿರಾವ್ ಐಗಳ್—ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂಡ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಡತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುಲೆ ಬಾ, ಬೆಲ್ಲದ ಬೈಲು ಬೆರ್ಚಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ತಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—
ಶಾರದಾ ಛಾಪಖಾನೆ,
ಮಂಗಳೂರು.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆಸಿಕೊಳ್ಳುವುದಕ್ಕೂ, ಒಂದು ದೇಶದ ಮರ್ಮಶಾಸ್ತ್ರವು ಇರುವುದು. ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—
"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.
ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೆ, ಮದ್ರಾಸ್.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲು 1ಕ್ಕೆ ರೂ. 3—2—0.
„ 2. „ „ ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡೆ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈದುನರಾಮನ ಚರಿತ್ರೆ ... ...
(6) ಭಾಮಿನಿ ಷಟ್ಪದಿ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣದಾಸಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋತ್ಸವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣ ದೀಪಾವ್ಯರೋದ ಕಥಾ ... ...
(18) ಚಂದ್ರಮಾಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗದರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷ್ಮಾಗ್ರಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಪಾರಮಂಚ ಕಥೆ ...
(26) „ ಗೋವಿನ ಚರಿತ್ರೆ ... ...
(27) „ ದುಶ್ಯಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಂಧಾನ ... ...

ಶಾರದಾ ಛಾಪಖಾನೆ, ಮಂಗಳೂರು.

ನೋಟೀಸು.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ,
O. P. No. 13/1926.

1. ಕೊರಪಳು ಯಾನೆ ಮುತ್ತಕ್ಕ ಶೆಡ್ತಿ, ಯಚ್ಚಣ್ಣ ಶೆಟ್ಟಿಯ ವಿಧವೆ.
2. ಲಕ್ಷ್ಮಿ ಶೆಡ್ತಿ,
3. ಶೇಷಪ್ಪ ಶೆಟ್ಟಿ } ಯಚ್ಚಣ್ಣ ಶೆಟ್ಟಿಯ ಮಕ್ಕಳು.

1. 2ನೇಯವರು ಉಡ್ಪಿತಾಲೂಕು ಉಳಿಯಾರು ಗೋಳಿ ಗ್ರಾಮದಲ್ಲಿಯೂ, 3ನೇಯವನು ಉಡ್ಪಿ ಕಸಬೆಯಲ್ಲಿಯೂ ಇರುವವರು. } ಅರ್ಜಿದಾರರು.

ಮತ್ತು

1. ಅಂತಮ್ಮ ಶೆಡ್ತಿ
2. ವೆಂಕ ಶೆಟ್ಟಿ
3. ಕೇಚಮ್ಮ ಶೆಡ್ತಿ
4. ಅಕ್ಕಮ್ಮ ಶೆಡ್ತಿ
5. ದೇಜಪ್ಪ ಶೆಟ್ಟಿ
6. ಬಿದ್ದು ಶೆಡ್ತಿ

} ಪುಟ್ಟಮ ಶೆಡ್ತಿಯ ಮಕ್ಕಳು. 1ನೇಯವನು ಉಡ್ಪಿ ಕಸಬೆಯಲ್ಲಿಯೂ 2, 4, 5ನೇಯವರು ಪುಳಿಯಾರ್ ಗೋಳಿ ಗ್ರಾಮದಲ್ಲಿಯೂ 3ನೇಯವಳು ಕೊರಂಗ್ರಪಾಡಿ ಗ್ರಾಮದಲ್ಲಿಯೂ, 6ನೇಯವಳು ಬೆಳಪು ಗ್ರಾಮದಲ್ಲಿಯೂ ಇರುವವರು. } ಎದುರು.

ಮೃತಪಟ್ಟ ಯಚ್ಚಣ್ಣ ಶೆಟ್ಟಿಯು ಬರದಿಟ್ಟ ತಾರೀಕು ೩—೧೨—'೨೫ನೇ ವಿಲುಪ್ರಕಾರ ತಾವು ಆತನ ವಾರಿಸ್ದಾರರು ಎಂದು ಹೇಳಿ ಸದರಿ ಯಚ್ಚಣ್ಣ ಶೆಟ್ಟಿಗೆ ಹೊರಗಿನಿಂದ ಬರತಕ್ಕ ಕೆಳಗೆ ವಿವರಿಸಿದ ಸಾಲಗಳನ್ನು ವಸೂಲು ಮಾಡಲಿಕ್ಕೆ ತಮಗೆ ಸಕ್ಸೆಶ್ಶನ್ ಸರ್ಟಿಫಿಕೇಟು ಕೋರ್ಟಿನವರು ಕೊಡಬೇಕಾಗಿ, ಅರ್ಜಿದಾರರು ಈ ಕೋರ್ಟಿಗೆ ಅರ್ಜಿ ಕೊಟ್ಟಿರುತ್ತಾರೆ. ಅರ್ಜಿಯ ತನಿಖೆಯು ಇದೇ ಬರುವ ಮಾರ್ಚಿ ತಿಂಗಳ ೩೦ನೇ ತಾರೀಕಿಗೆ ಇಟ್ಟಿರುತ್ತದೆ. ಈ ಅರ್ಜಿಬಾಬಿನಲ್ಲಿ ಯಾರಾದರೂ ಆಕ್ಷೇಪ ಹೇಳುವಂಥಾದ್ದು ಇದ್ದರೆ ಸದರಿ ಕೋರ್ಟಿನಲ್ಲಿ (೩೦—೩—೧೯೨೬)ನೇ ದಿವಸ ಹಗಲು ೧೧ ಗಂಟೆಯ ಒಳಗಾಗಿ ಈ ಕೋರ್ಟಿನಲ್ಲಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಸಾಲಗಳ ವಿವರ.

NAME.	
1. The Empire of India Life Assurance Co. Ltd., Bombay,	Rs. 1125—0—0 under Policy No. 4041 issued on 2—12—1902.
2. Annayyachary—	Rs. 70—13—2 S. C. S. No. 512/17 (S. E. P. No. 410/24 of this Court.)
3. Anthayya *alias* Yoseph	Rs. 65—8—9 S. C. S. No.143/16 S. E. P. No. 609/24 of this Court.
4. Yelimmma Shattati—	Rs. 18—8—6 O. S. No. 28/17 of Padu village Court S. E. P. No. 642/24 of this Court.
5. Menku Hengasu—	Rs. 85—4—10 S. C. S. No. 799/18 S. E. P. 989/24 of this Court.
6. Benjamin Maben—	Rs. 51—12—1 S. C. S. N. 289/21 S. E. P. No. 1020/24.
7. Sowbhadre *alias*, Laxmiamma	Rs. 201—12—1 S. C. S. No. 442 of 1925 of this Court.
8. Alangar Venkappa Hegde.	Rs. 315—0—2 O. S. No. 801 of 1925 of this Court.
9. Laxminarayana Naika	Rs. 32—4—10 Demand Pronote dated 3—10—'23

(By order)

District Munsif's Court, Udipi, 22—2—1926. } HEAD CLERK.

ನೋಟೀಸು.

ದಕ್ಷಿಣ ಕ. ಒಫೀಸಿಯಲ್ ರಿಸೀವರರ ಕೋರ್ಟಿನಲ್ಲಿ,
ದಿವಾಳಿ ಅರ್ಜಿ ನಂಬ್ರ 9/1926.

ದೇವರಾಜ ಶೆಟ್ಟಿ—ಚಂದಯ್ಯ ಶೆಟ್ಟಿ ಅಳಿಯ— ಕಾರ್ಕಳ ತಾಲ್ಲೂಕು ವೇಣೂರು ಗ್ರಾಮದಲ್ಲಿರುವ } ದಿವಾಳಿ ಅರ್ಜಿದಾರ

ಮತ್ತು

ಕಾಗಲ್ ವಾಮನ್ ವೆಂಕಟೇಶಪೈ ಎಂಡ್ ಕೊ.—ಕ್ರೆಡಿಟರರು.

ಸದರಿ ದಿವಾಳಿ ಅರ್ಜಿದಾರನು ತನ್ನನ್ನು ದಿವಾಳಿಯಾಗಿ ಡಿಕ್ಲೇರ್ ಮಾಡಬೇಕಾಗಿ ದಾಖಲ್ಲು ಮಾಡಿದ ಮೇಲಿನ ದಿವಾಳಿ ಅರ್ಜಿಯು ಸದರಿ ಒಫಿಸಿಯಲ್ ರಿಸೀವರರ ಕೋರ್ಟಿನಲ್ಲಿ ತಾ. 13—3—'26ರಲ್ಲು 11 ಘಂಟೆಗೆ ತನ್ಖಿಗೆ ಇಟ್ಟಿರುತ್ತದೆ. ಆದುದರಿಂದ ಈ ಕುರಿತು ಆಕ್ಷೇಪವುಳ್ಳ ಆತನ ಕ್ರೆಡಿಟರರು ಅವರ ಜೇಳಿಕೆಗಳನ್ನು ಮೇಲಿನ ಕೋರ್ಟಿನಲ್ಲಿ ಸದರಿ ತಾರೀಕು 13—3—'26ನೇ ದಿವಸ 11 ಘಂಟೆ ಒಳಗೆ ಜಾಹೀರು ಮಾಡಿಕೊಳ್ಳಬಹುದು.

ಮಂಗಳೂರು, ತಾ. 24-2-'26. } B. VAIKUNTA BALIGA, ಅರ್ಜಿದಾರನ ಲಾ ವಕೀಲು.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ,
O. P. No. 34/1926.

ಶಿಬಾಡ ಶಾಂತಬಾಯಿ — ಅರ್ಜಿದಾರಳು.

ಮೇಲ್ಕಂಡ ಅರ್ಜಿದಾರಳು ತನ್ನ ಗಂಡ ಮೃತಪಟ್ಟ ಶಿಬಾಡ ರಾಮರಾಯರ ಬಾಬ್ತು ಹೊರಗಿನಿಂದ ಬರತಕ್ಕ ಸಾಲವನ್ನು ವಸೂಲು ಮಾಡುವ ಬಗ್ಗೆ ತನಗೆ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿ ಮಾಡಿರುತ್ತಾಳೆ. ಸದರಿ ಅರ್ಜಿಯು ತಾರೀಕು ೧೦—೩—೧೯೨೬ಕ್ಕೆ ತನ್ಖಿಗೆ ಇಟ್ಟಿರುತ್ತದೆ. ಯಾರಾದರೂ ಆಕ್ಷೇಪಿಸುವವರು ಇದ್ದರೆ ಸದರಿ ಆಕ್ಷೇಪಣೆಗಳನ್ನು ವ್ಯಾದೆಗೆ ಕೋರ್ಟಿನಲ್ಲಿ ದಾಖಲ್ಲು ಮಾಡತಕ್ಕದ್ದು ಎಂತ ಈ ಮೂಲಕ ಸರ್ವರಿಗೂ ತಿಳಿಸಿರುತ್ತದೆ.

ಮಂಗಳೂರು, ತಾ. ೨೬—೨—'೨೬. } K. Rammohan Rao, *Vakil for petitioner.*

The Canara Bank Ltd., Mangalore.

ದಿ ಕೆನರಾ ಬ್ಯಾಂಕು ಲಿಮಿಟೆಡ್, ಮಂಗಳೂರು.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರೀ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲೀ ಅವುಗಳ ಬಡ್ಡಿಯನ್ನಾಗಲೀ ಕ್ಲಪ್ತ ವ್ಯಾದೆಗೆ ಕೊಡದಿರುವುದರಿಂದ ಅವರಿಗೆ ಬಿಟ್ಟ ರಿಜಿಸ್ತ್ರ ನೋಟೀಸುಗಳು ಅವರು ಕಾಣಸಿಕ್ಕಲಿಲ್ಲವಾಗಿ ವಾಪಾಸು ಬಂದಿರುವುದರಿಂದ ಕೂಡ ಈ ಮೂಲಕ ಅವರಿಗೆ ತಿಳಿಯಪಡಿಸುವುದೇನಂದರೆ ಸದರಿಯವರು ಅವರಿಂದ ಬೇಂಕಿಗೆ ಸಲ್ಲತಕ್ಕ ಅಸಲು ಬಡ್ಡಿ ಐವೇಜುಗಳನ್ನು ಇದೇ ೧೯೨೬ನೇ ಇಸವಿ ಮಾರ್ಚಿ ತಾರೀಕು ೧೮ನೇ ಗುರುವಾರದ ಒಳಗೆ ಬೇಂಕಿಗೆ ತಂದುಕೊಟ್ಟು ಅವರ ಆಭರಣಗಳನ್ನು ಪಡಕೊಂಡು ಹೋಗದಿದ್ದರೆ ಸದರಿ ಅಡವಿಟ್ಟ ಆಭರಣಗಳನ್ನು ತಾ. ೨೫—೩—೧೯೨೬ನೇ ಗುರುವಾರ ಮಧ್ಯಾಹ್ನ ೧೨ ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಸಾಲ ಪಡಕೊಂಡ ತಾರೀಕು.	ಹೆಸರು.	ಸಾಲದ ಮೊಬಲಗು.	ಏಲಂ ತಾರೀಕಿನ ವರೆಗೆ ಬಡ್ಡಿ ಖರ್ಚು ಕೂಡ ಜಿ.
೨೧—೧೨—'೨೩	ಬಿ. ರಾಮುಬ್ಯಾರಿ	175-0-0,	7—12—9.
೨೩— ೫—'೨೪	ಮುಂಡಪೂಜಾರಿ	50-0-0,	3—14—11.
೨೮— ೫—'೨೪	ಜೆಯಬ್ಬ ಬ್ಯಾರಿ	15-0-0,	1—14—9.
೨೨— ೩—'೨೪	ಇಮಾಮಖಾನ	1000-0-0,	25—8—4.

ಮತ್ತು ಈ ನೋಟೀಸಿನ ಖರ್ಚು ಕೂಡ.

Canara Bank Ltd., Mangalore, 2-3-'26. } K. Venkat Rao, *Secretary.*

NOTICE.

ದಕ್ಷಿಣಕನ್ನಡ ಒಫಿಶಿಯಲ್ ರಿಸೀವರರ ಕೋರ್ಟಿನಲ್ಲಿ
ದಿವಾಳಿ ಅರ್ಜಿ ನಂಬ್ರ 11/1926.

ಎಮ್. ಪುಟ್ಟಣ್ಣ ಭಟ್ಟ-ಕೃಷ್ಣ ಭಟ್ರ ಮಗ, ಮಂಗಳೂರು ಶಹರಿನಲ್ಲಿರುವವ } ಅರ್ಜಿದಾರ.

ಎದ್ರು

ರಾಮಮೈಲಿ ಕೂಡಾ ಕ್ರೆಡಿಟರರು.

ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ದಾಖಲುಮಾಡಿದ ಮೇಲಿನ ಅರ್ಜಿಯು ದಕ್ಷಿಣ ಕನ್ನಡಾ ಒಫಿಶಿಯಲ್ ರಿಸೀವರರ ಮುಂದೆ ತಾ. 13-3-'26ನೇ ಪೂರ್ವಾಹ್ನ ಗಂಟೆ 11ಕ್ಕೆ ತನಖಿ ಬಗ್ಗೆ ಇಟ್ಟಿರುವದರಿಂದ ಆ ಬಗ್ಗೆ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಸದರಿ ಕೋರ್ಟಿಗೆ ಜ್ಯಾಹೀರುಮಾಡಿಕೊಳ್ಳತಕ್ಕದೆಂದು ಇದರಿಂದ ತಿಳಿಸೋಣಾಗಿಯದೆ.

ಮಂಗಳೂರು, ತಾ. 3ನೇ ಮಾರ್ಚಿ 1926. } B. Vyasarayachar, *Vakil for petitioner.*

ಪ್ರಕಟಣೆ.

ಉಡುಪಿ ತಾಲೂಕಿನ ಎಲ್ಲಾ ಕಾಂಗ್ರೆಸ್ ಸದಸ್ಯರಿಗೂ, ಮಹಾಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅಸಹಕಾರ ಚಳವಳದ ಭರದಲ್ಲಿ ನಮ್ಮ ತಾಲೂಕಿನ ಅನೇಕ ಭಾಗಗಳಲ್ಲಿ ಸುಮಾರು ೩೦ ಗ್ರಾಮ ಕಾಂಗ್ರೆಸ್ ಕಮಿಟಿಗಳು ಸ್ಥಾಪಿಸಲ್ಪಟ್ಟವು. ಕಾಲಕ್ರಮೇಣ ಅವುಗಳಲ್ಲಿ ಕೆಲವು ಶಿಥಿಲವಾಗುತ್ತಾ ಬಂದು ಇತ್ತೀಚೆಗೆ ಹೆಚ್ಚು ಕಡಿಮೆ ಎಲ್ಲವೂ ತಮ್ಮ ತಮ್ಮ ಕೆಲಸವನ್ನು ಯೋಗ್ಯ ಬವಾಬ್ದಾರಿ ರೀತಿಯಿಂದ ಮಾಡಿಕೊಂಡು ಬರುವದಿಲ್ಲ. ಉತ್ಸಾಹೀ ಕೆಲಸಗಾರರೂ ಕಮ್ಮಿಯಾಗುತ್ತಾ ಬಂದು ಬಹಳ ಕಮ್ಮಿ ಸಂಖ್ಯೆಯಲ್ಲಿಯೇ ಇದ್ದಾರೆ. ಆದುದರಿಂದ ತಾಲೂಕಿನಲ್ಲಿ ಅನೇಕ ಚಿಕ್ಕ ಪುಟ್ಟ ಕಾಂಗ್ರೆಸ್ ಸಂಸ್ಥೆಗಳನ್ನು ಇಟ್ಟುಕೊಂಡು ಕೆಲಸ ಮಾಡುವದರ ಬದಲು ಮಧ್ಯವರ್ತಿಯಾದ ಒಂದೇ ಕಾಂಗ್ರೆಸ್ ಸಂಸ್ಥೆಯನ್ನು (ಅಂದರೆ, ತಾಲೂಕು ಕಾಂಗ್ರೆಸ್ ಕಮಿಟಿ) ಬಲಪಡಿಸಿ ಅದರ ಮೂಲಕವೇ ಜನರಲ್ಲಿ ಕಾಂಗ್ರೆಸ್ ಧ್ಯೇಯವನ್ನು ಪ್ರಚಾರಪಡಿಸಿ, ದೇಶಸೇವೆಯನ್ನು ಮಾಡುವದು ಉತ್ತಮವೆಂದು ಭಾವಿಸಿ, ತಾ. ೨೧—೨—೧೯೨೬ರಲ್ಲಿ ಸೇರಿದ ತಾಲೂಕು ಕಾಂಗ್ರೆಸ್ ಕಮಿಟಿಯು ಮೆಜಾರಿಟಿಯುತರ ಕೆಳಗೆ ಕಾಣುವ ನಿರ್ಣಯವನ್ನು ಮಾಡಿದ್ದಾರೆ. ಅದನ್ನು ತಮ್ಮ ಎಲ್ಲರ ಅವಗಾಹನೆಯ ಬಗ್ಗೆ ಛಾಪಿಸಿ ಪ್ರಕಟಿಸಿದ್ದೇನೆ. ಈ ನಿರ್ಣಯದಂತೆ ಇನ್ನು ಮುಂದಕ್ಕೆ ನಮ್ಮ ತಾಲೂಕಿನಲ್ಲಿ ಯಾವ ಕಾಂಗ್ರೆಸ್ ಸಂಸ್ಥೆಯೂ ಅಸ್ತಿತ್ವದಲ್ಲಿ ಇಲ್ಲವೆಂದು ತಿಳಿಯಬೇಕು. ತಾಲೂಕು ಕಾಂಗ್ರೆಸ್ ಕಮಿಟಿಯು ಮಾತ್ರ ಇರುವದು. ಕಾಂಗ್ರೆಸ್ ಸದಸ್ಯರಾಗಲು ಅಪೇಕ್ಷಿಸುವವರು ವರ್ಗಣೆಯನ್ನು ಸೀದಾ ತಾಲೂಕು ಕಾಂಗ್ರೆಸ್ ಕಮಿಟಿಗೆ ಕೊಟ್ಟು ಪಾವತಿಯನ್ನು ಪಡಿಯಬೇಕು. ಕಾರ್ಯದರ್ಶಿಯವರಿಂದಾಗಲಿ, ಅಧ್ಯಕ್ಷರಿಂದಾಗಲಿ ಅಧಿಕಾರ ಪತ್ರವನ್ನು ತೋರಿಸದೆ ಯಾರ ಕೈಯಲ್ಲಿಯಾಗಲಿ ಕಾಂಗ್ರೆಸ್ಸಿನ ಬಾಬತು ಸದಸ್ಯರ ವರ್ಗಣೆಯನ್ನಾಗಲಿ, ಇತರ ಸಹಾಯವನ್ನಾಗಲಿ ಕೊಟ್ಟಲ್ಲಿ ಕಾಂಗ್ರೆಸ್ ಕಮಿಟಿಯು ಜವಾಬ್ದಾರಿಯಾಗಲಿಕ್ಕಿಲ್ಲ. ಯಾವತ್ತು ವರ್ಗಣೆಯೂ, ಸಹಾಯಧನವೂ ಸೀದಾ 'ತಾಲೂಕು ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ, ಉಡುಪಿ' ಇವರಿಗೇನೆ ಕಳುಹಿಸಲ್ಪಡಬೇಕು. ಅವರಿಂದಲೆ ಪಾವತಿಯನ್ನು ಪಡೆಯಬೇಕು. ಹಳೇ ಸದಸ್ಯರೆಲ್ಲರೂ ತಮ್ಮ ವರ್ಗಣೆಯನ್ನು ಸೀದಾ ತಾಲೂಕು ಕಾಂಗ್ರೆಸ್ ಕಮಿಟಿಗೆ ಕಳುಹಿಸಿ ಚಾಲ್ತಿ ವರ್ಷಕ್ಕೆ ಸದಸ್ಯರಾಗಬೇಕೆಂದೂ, ಹೊಸಬರೂ ಸದಸ್ಯರಾಗಿ ಸೇರಬೇಕೆಂದೂ ವಿಜ್ಞಾಪನೆ.

೧೯೨೬ನೇ ನಿರ್ಣಯ.

೧. 'ಹಳ್ಳಿಗಳಲ್ಲಿ ಕಾಂಗ್ರೆಸ್ ಪ್ರಚಾರವನ್ನು ಮಾಡುವರೆ ತರಬೇತಾದ ಸ್ವಯಂಸೇವಕರು ಸದ್ಯಕ್ಕೆ ಸಿಗದೆ ಇರುವದರಿಂದಲೂ ಅಲ್ಲಲ್ಲಿ ಕಾಂಗ್ರೆಸ್ ಕೆಲಸವನ್ನು ಮಾಡುವರೆ ಜವಾಬ್ದಾರಿ ಮನುಷ್ಯರ ಯೋಗ್ಯ ಸಹಾಯ ದೊರೆಯದೆ ಇರುವದರಿಂದಲೂ, ಸದ್ಯಕ್ಕೆ ಜೀರ್ಣಾವಸ್ಥೆಯಲ್ಲಿರುವ ಈ ತಾಲೂಕಿನ ಎಲ್ಲಾ ಗ್ರಾಮ ಕಾಂಗ್ರೆಸ್ ಕಮಿಟಿಗಳನ್ನು ಬಂದು ಮಾಡಬೇಕೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.'

೨. 'ಇಷ್ಟರ ವರೆಗೆ ಗ್ರಾಮ ಕಾಂಗ್ರೆಸ್ ಕಮಿಟಿಗಳಲ್ಲಿ ಕೆಲಸವನ್ನು ಮಾಡಿದ ಎಲ್ಲಾ ಸದ್ಗೃಹಸ್ಥರೂ ತನ್ನ ಧನ್ಯವಾದಗಳನ್ನು ಸಮರ್ಪಿಸುವದಲ್ಲದೆ, ಕಾಂಗ್ರೆಸ್ ಕಮಿಟಿಗಳ ಸಂಬಂಧ ಇರುವ ಯಾವತ್ತು ರಿಕಾರ್ಡುಗಳನ್ನೂ ಸೊತ್ತನ್ನೂ ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರ ವಶ ಕೊಟ್ಟು ರಶೀದಿಯನ್ನು ಪಡಕೊಳ್ಳಬೇಕೆಂದು ಆಯಾಯ ಗ್ರಾಮ ಕಾಂಗ್ರೆಸ್ ಕಮಿಟಿಗಳ ಅಧಿಕಾರಿಗಳಿಗೆ ವಿನಂತಿಯನ್ನು ಮಾಡುತ್ತದೆ.'

೩. ಮತ್ತು 'ಈ ತಾಲೂಕಿನಲ್ಲಿ ಕಾಂಗ್ರೆಸ್ ಸದಸ್ಯರಾಗಲಿಚ್ಚಿಸುವವರು ಇನ್ನು ಮುಂದೆ ತಾಲೂಕು ಕಮಿಟಿಗೆ ಸೀದಾ ಸದಸ್ಯರಾಗಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.'

ತಾ. ೨೪—೨—'೨೬, ತಾ. ಕಾ. ಕಚೇರಿ, ಉಡುಪಿ. } (Sd) ಫಣಿಯಾಡಿ ಶ್ರೀನಿವಾಸ ಉಪಾಧ್ಯಾಯ, ಕಾರ್ಯದರ್ಶಿ.

ವಿವಿಧ ವಿಷಯಗಳು.

ಮದ್ರಾಸು ಸಂಸ್ಥಾನದಲ್ಲಿ ಫೆಬ್ರವರಿ ತಿಂಗಳ ಮರಣ ಲೆಕ್ಕ.

ಕೊಲೆರಾ—೧೩ ಜಿಲ್ಲೆಗಳಲ್ಲಿ ಈ ರೋಗದಿಂದ ೬೮೯ ಮಂದಿ ಸತ್ತಿರುವರು. ದಕ್ಷಿಣ ಆರ್ಕಾಡು ೧೯೩, ತಿನ್ನವಲ್ಲಿ ೧೯೩; ತಂಜಾವೂರು ೧೨೬; ತಿರುಚಿನಾಪಳ್ಳಿ ೯೧; ಕೊಯಮುತ್ತೂರು ೬೭; ಸೇಲಂ ೩೨; ಮದುರೆ ೨೩; ರಾಮನಾಡು ೨೧; ಇತರ ಜಿಲ್ಲೆಗಳಲ್ಲಿ ೧೩೦.

ಮೈಲಿಗೆ ರೋಗ—೧೫ ಜಿಲ್ಲೆಗಳಲ್ಲಿ ೮೧ ಮಂದಿ ಮರಣಪಟ್ಟಿರುವರು. ದಕ್ಷಿಣ ಆರ್ಕಾಡು ೨೧; ತಂಜಾವೂರು ೧೨; ಗುಂಟೂರು ೧೧; ಇತರ ಜಿಲ್ಲೆಗಳಿಂದ ೬.

ಪ್ಲೇಗು ರೋಗ—೭ ಜಿಲ್ಲೆಗಳಲ್ಲಿ ೮೮ ಮಂದಿ ಮಡಿದರು. ಕೊಯಮುತ್ತೂರು ೨೯; ಬಳ್ಳಾರಿ ೨೧; ಮದುರಾ ೧೬; ರಾಮನಾಡು ೧೩; ಇತರ ಜಿಲ್ಲೆಗಳು ೯.

ಸರ್ಜರಿಯ ವಿಚಿತ್ರ ಕೆಲಸಗಳು.

ಕಳೆದ ವರುಷ ವಿಲಾಯತಿಯ ದಾಕ್ತಾರುಗಳು ಇಷ್ಟರ ವರೆಗೆ ಯಾರೂ ಮಾಡದಿರುವ ಕೆಲವು ಒಪರೇಶನುಗಳನ್ನು ಮಾಡಿರುವರು.

ಐದು ವರುಷದ ಒಬ್ಬ ಹುಡುಗನಿಗೆ ಕಣ್ಣುಗಳು ಕಾಣಿಸುತ್ತಿರಲಿಲ್ಲ. ಸರ್ಜನರು ಧೈರ್ಯ ಹೇಳಿದರು. ಆದರೆ ಹುಡುಗನ ತಾಯಿಗೆ ಹೆದರಿಕೆಯುಂಟಾಯಿತು. ದಾಕ್ತಾರರು ಧೈರ್ಯದಿಂದ ಒಪರೇಶನು ಮಾಡಿದರು. ಮದ್ದು ಹಾಕಿ ಗುಣವಾಗಿ ಪಟ್ಟಿಪರದೆಯನ್ನು ತೆಗೆದೊಡನೆ ಹುಡುಗನು "ಅಮ್ಮಾ ನನ್ನ ಕಣ್ಣುಗಳನ್ನು ಕಾಣುವ ಹಾಗೆ ಮಾಡಿದವರು ಎಲ್ಲಿದ್ದಾರೆಂದು ಕೇಳಿದನಂತೆ.

ಕಳೆದ ಅಕ್ಟೋಬರ ತಿಂಗಳಲ್ಲಿ ರೋಚೆಸ್ಟರ್ ಸೈಂಟ್ ಮೇರಿ ಆಸ್ಪತ್ರೆಯ ಡೊಕ್ಟರ ರೊಬರ್ಟ್ಸ್ ಎಂಬವರು ಎದೆಯನ್ನು ಸಿಗಿದು ೧೦ ವರ್ಷಗಳಿಂದ ಎಡ ಶ್ವಾಸಕೋಶದಲ್ಲಿದ್ದ ಒಂದು ಕುರ್ಚಿ ಗುಂಡನ್ನು ತೆಗೆದರು. ಇದನ್ನು ತೆಗೆಯಬೇಕಾದರೆ ಪಕ್ಕೆಲುಬುಗಳನ್ನು ತೆಗೆದು ಶ್ವಾಸಕೋಶವನ್ನು ಕಡಿದು ಗುಂಡು ತೆಗೆಯಬೇಕಾಯಿತು.

ಅರುವತ್ತಮೂರು ವರುಷದ ಒಬ್ಬ ಮುದುಕನು ಮೋಟರಕಾರಿನ ಅಡಿಯಲ್ಲಿ ಬಿದ್ದು ಎರಡು ಕಿವಿಯು ಹರಿದು ಹೋಯಿತು. ಇವನನ್ನು ಪಶ್ಚಿಮ ಲಂಡನದ ಆಸ್ಪತ್ರೆಗೆ ಒಯ್ದರು. ಅಲ್ಲಿ ದಾಕ್ತಾರರು ಕಿವಿಯನ್ನು ಹೊಲಿದು ಮುಂಚಿನಂತೆಯೇ ಮಾಡಿದರು.

ಹದಿಮೂರು ವರುಷ ಪ್ರಾಯದ ಒಬ್ಬ ಹುಡುಗನ ನಾಲ್ಕು ರಾತಲು ಭಾರವಾದ ಒಂದು ಬರ್ಚಿಯ ತಲೆಯು ಹೃದಯಕ್ಕೂ ಶ್ವಾಸಕೋಶಕ್ಕೂ ಮಧ್ಯದಲ್ಲಿತ್ತು. ಈ ಬರ್ಚಿ ತಲೆಯು ೯॥ ಇಂಚು ಉದ್ದವೂ ೨॥ ಇಂಚು ಅಗಲವೂ ಆಗಿತ್ತು. ಇದು ಪ್ರಿನ್ಸ ಒಫ್ ವೇಲ್ಸರ ತಲೆಯ ಮೊಹರಿನ ಗುರಿಯ ಹಾಗಿತ್ತು. ಈ ಗಾಯದಲ್ಲಿ ಹುಡುಗನ ಶರ್ಟಿನ ವಸ್ತ್ರದ ಒಂದು ತುಂಡೂ ಇತ್ತು. ಆದರೆ ಇದು ಹೃದಯಕ್ಕೂ ಶ್ವಾಸಕೋಶಕ್ಕೂ ತಾಗಿಕೊಂಡಿರದೆ ಹೃದಯದ ಕವಾಟವನ್ನು ಸ್ವಲ್ಪ ದೂರಕ್ಕೆ ದೂಡಿತ್ತು. ಸರ್ಜನರು ಈ ಬರ್ಚಿಯ ತಲೆಯನ್ನು ತೆಗೆದು ಶ್ವಾಸಕೋಶದಲ್ಲಿದ್ದ ವಸ್ತ್ರದ ತುಂಡನ್ನೂ ತೆಗೆದರು. ಇದನ್ನು ತೆಗೆದೊಡನೆ ಹೃದಯಕವಾಟವು ಮೊದಲಿನ ಸ್ಥಳದಲ್ಲಿಯೇ ಹೋಗಿ ನಿಂತಿತು.

[illegible]

ಸ್ಫುಟವಿಚಾರಗಳು.

ಮಂಗಳೂರಿನ ಆರ್ಥಿಕ ಸಂದಿಗ್ಧ ಸ್ಥಿತಿ.

ಕೆಲವು ವರ್ಷಗಳಿಂದ, ಮಹಾಯುದ್ಧದ ಸ್ಥಿತಿಯ ಪ್ರತಿಕ್ರಿಯೆ (reaction)ಯ ಸ್ವರೂಪದಂತೆ ದೇಶದ ವಾಣಿಜ್ಯವೂ ಉದ್ಯೋಗವೂ ಕ್ಷೀಣವಾದ ವಿಷಯವನ್ನು ಪ್ರತಿ ಒಬ್ಬರೂ ಅನುಭವಿಸುತ್ತಲೇ ಇರುವರು. ನಮ್ಮ ಜಿಲ್ಲೆಯ ಪ್ರಮುಖ ವ್ಯಾಪಾರಿಗಳಾಗಿದ್ದು ನಮ್ಮ ಜಿಲ್ಲೆಗೆ ಸಂಪತ್ತನ್ನು ತರುತ್ತಿದ್ದ ಹಂಚಿನ ಮತ್ತು ಮೊಸಿನ ಕಾರಖಾನೆಗಳು ಬಹಳ ಮಂದಿಯ ಸ್ಥಿತಿಯಲ್ಲಿದ್ದು, ಸ್ವಭಾವತಃ ಜಿಲ್ಲೆಗೆ ಬಹಳ ನಷ್ಟವಾಗಿರುವುದು. ಜಿಲ್ಲೆಯ ವ್ಯಯವಿಭಾಗವೂ ದಿನೇ ದಿನೇ ಬೆಳೆಯುತ್ತಿದೆಯಲ್ಲದೆ ಕಡಿಮೆಯಾಗಿ ಬರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅನೇಕರು ಅತ್ಯಂತ ಸಂದಿಗ್ಧ ಸ್ಥಿತಿಯಲ್ಲಿದ್ದು ವಹಿವಾಟುಗಳ ಲಾಭ ನಷ್ಟಗಳ ಲೆಕ್ಕಕಿಂತಲೂ ಹಣದ ಸಂಚಾಲನೆಯಲ್ಲಿಯೇ ಚಿಂತಿತರಾಗಿದ್ದು ಕ್ಷಯಿಸುತ್ತಿರುವರು. ಈ ತರದ ಸ್ಥಿತಿಯಲ್ಲಿ ಮಂಗಳೂರಿನಲ್ಲಿಯೂ ಈ ವ್ಯಾಪಾರದ ಕಷ್ಟ ಸ್ಥಿತಿಯು ಸ್ಪಷ್ಟವಾಗಲಾರಂಭಿಸಿದ್ದುದನ್ನು ನೋಡಿ ದುಃಖಿಸಬೇಕಾಗಿದೆ. ವ್ಯಾಪಾರಿಗಳ ವ ಶ್ರೀಮಂತರ ಬಡತನದೊಡನೆ ಜಿಲ್ಲೆಯ ಉದ್ಯೋಗವೂ ಜನಸಾಮಾನ್ಯತೆಯ ಜೀವನವೂ ಅತ್ಯಂತ ಕಷ್ಟ ಸ್ಥಿತಿಗೆ ಬರುವುದು. ಆದುದರಿಂದ ಇಂತಹ ಕಷ್ಟ ಸ್ಥಿತಿಗಳು ತೋರಿಕೆಗೆ ಬರೇ ವ್ಯಕ್ತಿಯ ಸಂಬಂಧದವುಗಳಾಗಿದ್ದರೂ, ಸೂಕ್ಷ್ಮವಾಗಿ ಆಲೋಚಿಸಿದ ಸಮಷ್ಟಿಯ ಹಿತದ ಸಂಬಂಧದವುಗಳಾಗಿವೆ. ಆದುದರಿಂದ ನಮ್ಮ ಜಿಲ್ಲೆಯವರು ಈ ಸ್ಥಿತಿಯನ್ನು ತಡೆಯಲಿಕ್ಕೆ ಯಾವ ಉಪಾಯವನ್ನು ಮಾಡಬಹುದೆಂದು ಯೋಜಿಸುವುದು ಅಗತ್ಯವಿದೆ. ವ್ಯಾಪಾರದ ಮತ್ತು ಉದ್ಯೋಗದ ಉಜ್ಜೀವನವು ಅತೀ ಮುಖ್ಯವಾದ ವಿಷಯವಾಗಿದ್ದು, ಇಂತಹ ಸಮಯದಲ್ಲಿ ಅವು ಸಾಯಗೊಡದಂತೆ ನೋಡುವುದು ಪ್ರತಿ ವ್ಯಾಪಾರಿಯ ಮತ್ತು ಔದ್ಯೋಗಿಕನ ಕರ್ತವ್ಯವಿದೆ.

ಇಂಡೋರ ಮಹಾರಾಜರ ಸಿಂಹಾಸನತ್ಯಾಗ.

ಇಂಡೋರ ಮಹಾರಾಜರು ಇಟ್ಟುಕೊಂಡಿದ್ದ ಮುಮ್ತಾಜ್‍ಳೆಂಬ ವೇಶ್ಯೆಯು ಅವರಲ್ಲಿಂದ ತಪ್ಪಿಸಿ ಮುಂಬಯಿಯ ಬಾವ್ಲಾನೆಂಬವನೊಡನೆ ಇದ್ದ ಸಮಯದಲ್ಲಿ ಅವಳ ಪುನರ್ಹರಣಕ್ಕಾಗಿ ಕೆಲವರು ಬಂದು ಬಾವ್ಲಾನನ್ನು ಖೂನಿಮಾಡಿದುದೂ, ಅವರ ವಿಚಾರಣೆಯಾಗಿ ತಪ್ಪಿತಸ್ಥರಿಗೆ ಫಾಶೀ ಶಿಕ್ಷೆ ಆದುದೂ, ಆ ಸಂಬಂಧದಲ್ಲಿ ಇಂಡೋರು ಮಹಾರಾಜರ ಪ್ರೇರಣೆ ಇದ್ದಿರಬಹುದೆಂದು ಅನುಮಾನವು ವ್ಯಕ್ತಪಟ್ಟುದೂ ಎಲ್ಲರಿಗೂ ತಿಳಿದ ವಿಷಯ.

ಇಂತಹ ದೊಡ್ಡ ಮನುಷ್ಯರು ಇಂತಹ ಅತ್ಯಾಚಾರಗಳಿಗೆ ಕೈಹಾಕಿದುದು ನಿಜವೆಂದಾದರೆ, ಮುಂದೆ ಕಷ್ಟವಾದೀತೆಂದೂ ಪ್ರಜೆಗಳೂ, ಪತ್ರಿಕೆಗಳೂ ಒತ್ತಾಯಮಾಡಿದುದರಿಂದ, ಸರಕಾರವು ಇದರ ಅಂತರ್ಯವನ್ನು ಶೋಧಿಸಿ ಮಹಾರಾಜರು ವಿಚಾರಣೆಗೆ ಗುರಿಯಾಗಬೇಕೆಂದೂ, ವಿಚಾರಣೆಗೆ ಗುರಿಯಾಗುವ ಇಚ್ಛೆಯಿಲ್ಲದಿದ್ದರೆ ಸಿಂಹಾಸನವನ್ನು ಬಿಟ್ಟು ನಿವೃತ್ತರಾಬೇಕೆಂದೂ ಮಹಾರಾಜರನ್ನು ಕೇಳಿಕೊಂಡಿತು. ದೀರ್ಘ ಆಲೋಚನೆಯ ಮೇಲೆ ಮಹಾರಾಜರು ವಿಚಾರಣೆಗಿಂತಲೂ ಸಿಂಹಾಸನ ತ್ಯಾಗವೇ ಸುಖವೆಂದು ತಿಳಿದು, ಈಗ ಸಿಂಹಾಸನವನ್ನು ತನ್ನ ಪಟ್ಟದ ಮಗನಿಗೆ ಬಿಟ್ಟು ಸಿಂಹಾಸನ ತ್ಯಾಗಮಾಡುವೆನೆಂದು ತಿಳಿಸಿರುವರು.

ಇದರಿಂದ ಮಹಾರಾಜರು ತಮ್ಮ ಮೇಲೆ ಬಂದಿರುವ ಕಲಂಕವನ್ನು ತೊಳೆಯಲಿಕ್ಕೆ ಸಿದ್ಧರಿಲ್ಲವೆಂದೂ, ಜನರು ಮಾಡಿದ ಅನುಮಾನವು ನಿಜವೆನಲಿಕ್ಕೆ ಸಾಧ್ಯವಿದೆಯೆಂದೂ ತಿಳಿಯಬಹುದಾಗುತ್ತದೆ. ಹಿಂದೀಯ ರಾಜರುಗಳ ವರ್ತನದ ವಿಷಯವಾಗಿ ಇದೇ ನಮೂನೆಯ ಅನುಮಾನವು ಜನಜನಿತವಿದೆ. ಸ್ವೇಚ್ಛಾವರ್ತನೆ, ವ್ಯಭಿಚಾರ, ಸ್ವಾರ್ಥಸಾಧನೆ ಇತ್ಯಾದಿಗಳ ಪ್ರಚಂಡ ಇತಿಹಾಸವು ಪ್ರತಿ ರಾಜಸ್ಥಾನದ ಇತಿಹಾಸದಲ್ಲಿ ಒಡೆದು ಕಾಣುತ್ತಿದೆ. ಈಗಿನ ಕಾಲದ ವಿಶಾಲ ಅಭಿಪ್ರಾಯಗಳು, ಉದಾರಭಾವನೆಗಳು, ಸಮಷ್ಟಿಯ ಅಧಿಕಾರಗಳು, ಇತ್ಯಾದಿ ರಾಜನೀತಿಯ ಆಧುನಿಕ ಮೂಲ ಸೂತ್ರಗಳಿಗೆ ಇನ್ನೂ ಹಿಂದೀ ರಾಜರ ಆಸ್ಥಾನದೊಳಗೆ ಪ್ರವೇಶವಿಲ್ಲದೆ, ಪ್ರಜೆಗಳ ಗೋಳಾಟವು ಕೇಳಬರುತ್ತಿದೆ. ವಸೂಲಿಯಾದ ಕಂದಾಯ ಹಣವು ಸ್ವಸ್ವತ್ತಿಯ ಗೇಣಿಯಂತೆ ಜಮೆಮಾಡಿ ತನ್ನ ಭೋಗವಿಲಾಸಗಳಿಗೆ ವ್ಯರ್ಥಗೈಯುವ ಹಿಂದೀ ರಾಜರು ಮನೆತನಗಳನ್ನು ನೋಡಿದರೆ, ಹಿಂದೀ ರಾಜಸ್ಥಾನಗಳನ್ನು ಅಳಿಸಿ ಬ್ರಿಟಿಷ ಸಂಸ್ಥಾನವಾಗಿ ಮಾಡುವುದೇ ಒಳ್ಳೇಯದೊ ಎಂದು ಒಂದೊಂದು ಬಾರಿ ಕಾಣುತ್ತಿದೆ.

ಹಿಂದೀ ರಾಜರ ಈ ತರದ ನಿರಂಕುಶ ಪ್ರಭುತ್ವವನ್ನು ಎಲ್ಲರೂ ತಿಳಿದೇ ಇರುವರು. ಆದರೂ ಮದ್ರಾಸ, ಮುಂಬಯಿ, ನಾಗಪುರ ಇತ್ಯಾದಿ ಕಡೆಗಳಲ್ಲಿ ಇಂಡೋರ ಮಹಾರಾಜರಿಗೆ ವಿಚಾರಣೆಮಾಡುವ ವಿಷಯದಲ್ಲಿ ನಿಷೇಧವನ್ನು ತೋರಿಸುವ ಸಭೆಗಳಾದುದು ಆಶ್ಚರ್ಯಕರ. ಬ್ರಿಟಿಷರ ಸರಕಾರದ ಈ ಹೊಸ ಪಕ್ಷಪಾತದಿಂದ ಯಾವ ತರದ ಇತರ ಕೇಡುಂಟಾದರೂ, ರಾಜರು ಮಹಾರಾಜರುಗಳಿಗೆ ಅತ್ಯಾಚಾರದ ಪ್ರತಿಶೋಧದ ಅನುಭವವನ್ನು ಕೊಡುವುದು ಆ ಕೇಡುಗಳಿಗಿಂತ ಹೆಚ್ಚಿನ ಮುಖ್ಯತೆಯ ವಿಷಯವಾಗಿದೆ. ಇಂಡೋರ ಮಹಾರಾಜರಿಂದ ತಿಳಿಯಬಹುದಾದ ಪಾಠವನ್ನು ಇತರ ಮಹಾರಾಜರೂ ಮರೆಯದೆ, ಭೋಗಲೋಲುಪ್ತತೆಯ ಪತಿತ ಸ್ವಭಾವದಿಂದ ಮೇಲೇಳಲು ಯತ್ನಿಸುವರಾಗಿ ಬಯಸುವೆವು.

ಮಿಸ್ತರ್ ಎ. ರವರ ಸಿಂಹಾಸನಾರೋಹಣ.

ಇಬ್ಬ ಮಹಾರಾಜರು ಸಿಂಹಾಸನತ್ಯಾಗಮಾಡುವ ಸಮಯದಲ್ಲಿಯೇ ಇನ್ನೊಬ್ಬ ಮಹಾರಾಜರು ಇನ್ನೊಂದು ಕಡೆಯಲ್ಲಿ ಸಿಂಹಾಸನವನ್ನಾರೋಹಿಸಿದರು. ಕಾಶ್ಮೀರ ಮಹಾರಾಜರು ಗತರಾಗಿ ಕೆಲವು ತಿಂಗಳುಗಳಾದುವು ಮಾತ್ರ. ಸರ್ ಹರಿಸಿಂಗರವರು ಅವರ ಉತ್ತರಾಧಿಕಾರಿಯಾಗಿ ಕಳೆದ ತಿಂಗಳ ಫೆಬ್ರವರಿ ೨೬ಕ್ಕೆ ಪಟ್ಟವೇರಿದರು. ಸರ್ ಹರಿಸಿಂಗರ ಪೂರ್ವೇತಿಹಾಸದಲ್ಲಿ ಒಂದು ವಿಶೇಷ ತರದ ಘಟನೆಯು ನಡೆದು ಹೋಯಿತು. ಆದರಿಂದ ಸರ್ ಹರಿಸಿಂಗರ ವಿಶೃಂಕಲ ಭೋಗಾಸಕ್ತ ಪೂರ್ವ ಜೀವನವು ಚಿತ್ರಿತವಾಗಿದೆ. ನಡೆದು ಹೋದುದನ್ನು ಅನುಭವಕ್ಕೆಂದು ಮರೆತು ಇನ್ನಾದರೂ ಪ್ರಜಾಪಾಲನೆಯಲ್ಲಿಯೂ, ಪ್ರಜಾ ಕಲ್ಯಾಣ ಸಾಧನೆಯಲ್ಲಿಯೂ ನಿರತರಾಗುವರೊ ಇಲ್ಲವೆ ಹುಟ್ಟುಗುಣವೆಂಬಂತೆ ತೋರಿಸಿ ಸುಂದರವಾದ ಕಾಶ್ಮೀರ ದೇಶವನ್ನು ಪಾಶ್ಚಾತ್ಯರ ಲಾಭದೃಷ್ಟಿಗೆ ಬಲಿಕೊಡುವರೊ ಎಂದು ನೋಡಲಿದೆ.

ನಮ್ಮ ಜಿಲ್ಲೆಯ ಸ್ವರಾಜ್ಯಪಕ್ಷ.

ಸ್ವರಾಜ್ಯಪಕ್ಷದ ದೋಷಗಳನ್ನು ತೋರಿಸಿ ಉಪಯುಕ್ತ ಸೂಚನೆಯನ್ನು ಕೊಟ್ಟ ಕೂಡಲೇ, ನಾವು ಸ್ವರಾಜ್ಯಪಕ್ಷದ ಪ್ರತಿಯಾಗಿ ಬರೆದು ಅದರ ಕೆಲಸಕ್ಕೆ ತೊಡಕುಂಟುಮಾಡಲು ಪ್ರಯತ್ನಿಸುವರಾಗಿ ಸ್ವರಾಜ್ಯಪಕ್ಷದೊಳಗಿನ ಕೆಲವರು ಮತ್ತು ಸ್ವರಾಜ್ಯಪಕ್ಷದ ಸಹಾಯವನ್ನು ತತ್ಕಾಲದ ಮಟ್ಟಿಗೆ ಪಡೆಯುವವರು ನೆನಸುತ್ತಾರೆಯೇ ವಿನಹ ಆ ದೋಷಗಳು ಸರಿಯೊ ಮತ್ತು ಆ ಸೂಚನೆಗಳು ಸಾಧ್ಯವೊ ಎಂದು ಯಾರೂ ತರ್ಕಿಸುವುದಿಲ್ಲ. ಶ್ರೀಯುತ ನಾಗಣ್ಣ ಹೆಗ್ಡೆಯವರನ್ನು ಉಮೇದುವಾರರಾಗಿ ಮಾಡಿದ ಸಮಯದ ಸ್ವರಾಜ್ಯಪಕ್ಷದ ತಪ್ಪು ಹೆಜ್ಜೆಯನ್ನು ನಾವು ಆಗಲೇ ಸೂಚಿಸಿದ್ದೆವು. ಶ್ರೀ ನಾಗಣ್ಣ ಹೆಗ್ಡೆಯವರ ಚುನಾವಣೆಯ ಒಳಗೊಳಗಿನ ಪಾಠವತದರೂ ನಮಗೆ ತಕ್ಕಷ್ಟು ಎಚ್ಚರಿಕೆ ಕೊಡುವಂತಹುದಾಗಿದೆ. ಅನ್ನುವಾಗ ಸ್ವರಾಜ್ಯಪಕ್ಷವು ಈಗ ಸುಮ್ಮನೆ ಕಾಲಹರಣ ಮಾಡಿ ಕಾಲಾವಧಿಯಲ್ಲಿ ಎಚ್ಚತ್ತು ಅವಸರಮಾಡಿ ತನ್ನ ಕಾರ್ಯದೊಳಗೆ ವಿಘ್ನವನ್ನುಂಟುಮಾಡಿಕೊಳ್ಳುವುದು ಸಹನೀಯವಲ್ಲ. ಸ್ವರಾಜ್ಯವು ಈಗಲೆ ಎಚ್ಚತ್ತು ಪ್ರಚಾರಕೆಲಸವನ್ನು ವಹಿಸಿ, ಉಮೇದುವಾರರು ಯಾರ್ಯಾರೆಂದು ತಿಳಿದುಕೊಂಡು ಮೊದಲೆ ಸಿದ್ಧವಾಗದಿದ್ದರೆ ನಮ್ಮ ಜಿಲ್ಲೆಯಲ್ಲಿ ಈ ಚುನಾವಣೆಯೊಂದಿಗನೇ ಸ್ವರಾಜ್ಯಪಕ್ಷವು ಅಪಯಶಸ್ಸನ್ನು ಹೊಂದುವುದರಲ್ಲಿ ಅನುಮಾನವಿಲ್ಲ.

ಕರ್ನಾಟಕ ಪ್ರಾಂತರಚನೆ

ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ಸರ್ ಶಂಕರನ್ ನಾಯರರು ತಮಿಳು ಜಿಲ್ಲೆಗಳನ್ನು ಪ್ರತ್ಯೇಕಮಾಡಿ, ತಮಿಳು ಪ್ರಾಂತವೆಂದು ಸ್ವಾತಂತ್ರ್ಯ ಪ್ರಾಂತಿಕ ಆಡಳಿತದ ಕೆಳಗೆ ಇಡಬೇಕೆಂದು ಠರಾವನ್ನು ತರುವರು. ಹಿಂದೂಸ್ಥಾನದ ಭಾಷಾವಾರು ಪ್ರಾಂತರಚನೆಗೆ ಇದು ಪೂರ್ವಪೀಠಿಕೆಯಾಗಿದೆಯೆಂದು ನಾವು ತಿಳಿದುಕೊಳ್ಳಬೇಕು. ಡಾ॥ ರಾಮರಾಯರೂ ಕರ್ನಾಟಕ ಪ್ರಾಂತರಚನೆಗಾಗಿ ಪ್ರಯತ್ನಿಸುವ ಸಮಯದಲ್ಲಿ ಸರ್ ಶಂಕರನ್ ನಾಯರರ ಠರಾವು ಸಾಮಯಿಕವಾಯಿತೆನ್ನಬಹುದು. ಸರ್ ಶಂಕರನ್ ನಾಯರರ ಠರಾವಿನ ಇನ್ನೊಂದು ವೈಶಿಷ್ಟ್ಯವೆಂದರೆ ಪ್ರಾಂತಿಕ ಸ್ವಾತಂತ್ರ್ಯ. ಈ ಠರಾವು ಮಂಜೂರಾದರೆ ಕರ್ನಾಟಕಕ್ಕೂ ಸಹಾಯವೇ ಇದೆ. ಕರ್ನಾಟಕವಾದರೂ ಪ್ರಾಂತರಚನೆಗಾಗಿ ತನ್ನ ಇಚ್ಛೆಯನ್ನು ತೋರಿಸುತ್ತಿದೆಯಲ್ಲದೆ ಕಾರ್ಯಕಾರಿಯಾದ ವಿಚಾರವೊಂದನ್ನೂ ಸೂಚಿಸಿದಂತೆ ತೋರುವುದಿಲ್ಲ. ಕರ್ನಾಟಕ ಪ್ರಾಂತರಚನೆಯ ಸಮಸ್ಯೆಯು ಸಾಮಾನ್ಯವಲ್ಲ. ಕರ್ನಾಟಕವು ಹಿಂದಿ ರಾಜರುಗಳಲ್ಲಿ ಹಂಚಿದೆಯಲ್ಲದೆ ಬ್ರಿಟಿಷ್ ಇತರ ಪ್ರಾಂತಗಳಲ್ಲಿಯೂ ಹಂಚಲ್ಪಟ್ಟಿದೆ. ಒಂದು ವೇಳೆ ಬ್ರಿಟಿಷ್ ಕರ್ನಾಟಕವನ್ನು ಒಂದಾಗಿ ಮಾಡಬಹುದು, ಆದರೆ ಇತರ ರಾಜರುಗಳ ಕರ್ನಾಟಕವನ್ನು ಸೇರಿಸಿಕೊಳ್ಳಲು ಸಾಧ್ಯವಾಗದು. ಇತರ ರಾಜರುಗಳ ಕರ್ನಾಟಕವು ಸೇರದಿದ್ದರೆ ಅನ್ಯೋನ್ಯ ಜಿಲ್ಲೆಗಳ ಒಂದುಗೂಡುವಿಕೆಯೂ ಸರಿಯಾಗದು. ಆದುದರಿಂದ ಇವೆಲ್ಲ ಪ್ರಶ್ನೆಗಳನ್ನು ಚಿಂತಿಸುವುದು ಅವಶ್ಯ. ವಿಶ್ವವಿದ್ಯಾಲಯದ ಪ್ರಶ್ನೆಯು ಕಡೆಗಾಣಬೇಕಾದರೂ ಪ್ರಾಂತಿಕ ರಚನೆಯ ಪ್ರಶ್ನೆಯು ಪ್ರಥಮತಃ ನಿರ್ಣಯಿಸಲ್ಪಡುವುದು ಅಗತ್ಯ. ಈ ಎಲ್ಲಾ ಪ್ರಶ್ನೆಗಳನ್ನು ಚೆನ್ನಾಗಿ ಆಲೋಚಿಸುವುದು ಕರ್ನಾಟಕೀಯರ ಕರ್ತವ್ಯವಿದೆ.

ಸ್ವರಾಜ್ಯಪಕ್ಷದ ಕರ್ತವ್ಯ.

ಮಂಗಳೂರು ಸ್ವರಾಜ್ಯಪಕ್ಷವು ಮುಂದಿನ ಚುನಾವಣೆಯ ವ್ಯವಸ್ಥೆಯ ಬಗ್ಗೆ ಒಂದು ಸಭೆಯನ್ನು ಕರೆದದೆ. ಮಂಗಳೂರಿನ ಸ್ವರಾಜ್ಯಪಕ್ಷದಲ್ಲಿ ನಾವು ಈ ಮೊದಲಿಂದಲೂ ಹೇಳುವುದು— ಅದು ಚುನಾವಣೆಗೆ ಉಮೇದ್ವಾರರನ್ನು ನಿಲ್ಲಿಸುವುದರಲ್ಲಿ ಚಿಂತಿತವಾಗಿದೆಯೆ ವಿನಹ, ಸ್ವರಾಜ್ಯಪಕ್ಷವು ಕಾರ್ಯಕಾರಿಯಾಗಿ ಪ್ರಜಾಜನರೊಂದಿ ಸಮಾಜದ ಎಲ್ಲಾ ಭಾಗದಲ್ಲಿ ಪ್ರಯೋಜನಕಾರಿಯಾಗಿಯೂ ಪ್ರಮುಖವೂ ಆಗುವಂತೆ ಮಾಡಿಲ್ಲ. ಆದುದರಿಂದ ಸ್ವಭಾವತಃ ಸ್ವರಾಜ್ಯಪಕ್ಷವು ಇತರ ವ್ಯಕ್ತಿಗಳಂತೆ ಚುನಾವಣೆ ಹೊಂದಲಿಕ್ಕೆ ಮಾತ್ರ ಪ್ರಯತ್ನಿಸುತ್ತಿದೆಯಲ್ಲದೆ ಬೇರೆ ಯಾವ ಕೆಲಸವೂ ಅದರಿಂದ ಆಗುವುದಿಲ್ಲವೆಂಬ ಭಾವನೆಯೂ ಜನರೊಳಗೆ ಸೇರುತ್ತಿದೆ. ಅದರಲ್ಲೂ ಇತ್ತೀಚೆಗೆ ಸ್ವರಾಜ್ಯಪಕ್ಷದ ತತ್ವಗಳು ಅಸ್ಪಷ್ಟವಾಗಿ ವರ್ತನವು ವಿಶೃಂಖಲಿತವಾಗಿಯಾಗಿದೆ. ಇಂತಹ ಸಂದರ್ಭದಲ್ಲಿ ಚುನಾಯಿಸುವವರು ಸ್ವರಾಜ್ಯಪಕ್ಷದಲ್ಲಿ ಹೆಚ್ಚಿನದೇನೂ ಕಾಣಲಿಕ್ಕಿಲ್ಲ. ಹೀಗೆ ಸ್ವರಾಜ್ಯಪಕ್ಷದ ವಿಷಯದಲ್ಲಿ ಜನರ ಅಭಿಪ್ರಾಯವು ಕೆಡುತ್ತಾ ಬರುವುದನ್ನು ತಡಮಾಡುವುದಾದರೂ ಮಂಗಳೂರು ಸ್ವರಾಜ್ಯಪಕ್ಷದ ಕೆಲಸವಾಗಿಯದೆ. ಸ್ವರಾಜ್ಯಪಕ್ಷಕ್ಕೆ ಧನದ ಬಲವಿಲ್ಲದೆ ಬಹಳ ಇಕ್ಕಟ್ಟಿನಲ್ಲಿ ಕೆಲಸಮಾಡಬೇಕಾಗಿದೆಯೆಂಬುದೇನೂ ನಿಜ. ಇದರಿಂದ ವ್ಯವಸ್ಥಾಪಕರ ಕಷ್ಟಗಳು ಬಹಳವಾಗಿವೆ ಎಂಬುದೂ ನಿಜ. ಆದರೆ ಈ ಕಷ್ಟಗಳೂ ಈಗಿನ ರೀತಿಯಲ್ಲಿ ನೀರು ಹೋಮವಾಗಿ ಪರಿಣಮಿಸುತ್ತಿವೆಯೆಂಬುದೇ ನಮಗೆ ದುಃಖವನ್ನೀಯುವ ವಿಷಯವಾಗಿದೆ.

ಜರ್ಮನಿಯಲ್ಲಿ ಹಿಂದೀ ವಿದ್ಯಾರ್ಥಿಗಳು.

ಹಿಂದೂಸ್ಥಾನದಿಂದ ಪರದೇಶಗಳಿಗೆ ಹೋಗಿ ಅಲ್ಲಿ ವ್ಯಾಸಂಗ ಮಾಡುತ್ತಿರುವ ನಮ್ಮ ತರುಣ ವಿದ್ಯಾರ್ಥಿಗಳ ವಿಷಯ ತಿಳಿದುಕೊಳ್ಳಲು ನಮಗೆ ಯಾವಾಗಲೂ ಅತಿಶಯವಾದ ಕುತೂಹಲವಿರಬೇಕು. ಏಕೆಂದರೆ ಆ ಮೂಲಕ ನಮ್ಮ ದೇಶದ ನವ ತಾರುಣ್ಯವೂ, ನವ ಚೇತನವೂ, ನವ ಕಲ್ಪನೆಯೂ ಪರದೇಶಿಯರಲ್ಲಿ ಅಂಕಿತವಾಗಿ ಅವರಿಗೆ ನಮ್ಮ ದೇಶದ ನಿಜವಾದ ನಾಗರಿಕತೆಯು ತಿಳಿದು ಬರುವುದು. ವಿದ್ಯಾರ್ಥಿ ವರ್ಗವೆಂದರೆ ಸ್ವಭಾವತಃ ಸೌಹಾರ್ದಮಯವಾದುದು; ಸಹಾನುಭೂತಿಯನ್ನು ಹುಟ್ಟಿಸುವಂತಹುದು. ಫಲತಃ ನಮ್ಮ ಹಿಂದೀ ವಿದ್ಯಾರ್ಥಿಗಳಾದರೂ ಪರದೇಶದಲ್ಲಿ ತಮ್ಮ ನಡೆನುಡಿಗಳಿಂದಲೂ ಅಸೀಮ ದೇಶ ಪ್ರೇಮದಿಂದಲೂ ನಮ್ಮ ಜನಾಂಗದ ಕಡೆಗೆ ಸೌಹಾರ್ದವನ್ನೂ ಸಹಾನುಭೂತಿಯನ್ನೂ ಉಂಟುಮಾಡಬಲ್ಲುದು.

ಇಂತಹ ಸೌಹಾರ್ದವನ್ನೂ ಸಹಾನುಭೂತಿಯನ್ನೂ ಜರ್ಮನಿಯಲ್ಲಿರುವ ಹಿಂದೀ ವಿದ್ಯಾರ್ಥಿಗಳು ಜರ್ಮನಿಯ ಜನರೊಳಗೆ ಉಂಟುಮಾಡಲು ಯತ್ನಿಸುವರೆಂದು ತಿಳಿದುಕೊಳ್ಳಲು ನಮಗೆ ಸಂತೋಷವಾಗುತ್ತಿದೆ. ಆರಂಭದಿಂದಲೂ ಜರ್ಮನರಿಗೆ ಹಿಂದೂಸ್ಥಾನದ ನಾಗರಿಕತೆಯ ಮೇಲೆ ಹೆಚ್ಚು ಆಕರ್ಷಣೆಯಿದೆ. ಮೆಕ್ಸ ಮುಲ್ಲರ್, ಕ್ಯಾಂಟೊ, ಪ್ರಭೃತಿ ದೊಡ್ಡ ಜರ್ಮನ್ ವಿದ್ವಾಂಸರು ಬಹು ಪೂರ್ವದಲ್ಲಿಯೇ ಹಿಂದೀ ತತ್ವಗಳಲ್ಲಿಯೂ ವೇದಾದಿ ಪವಿತ್ರ ಜ್ಞಾನ ಭಾಂಡಾಗಾರದಲ್ಲಿಯೂ ತನ್ಮಯರಾಗಿ ಪಂಡಿತರಾಗಿ ಹೋದರು. ಹಿಂದೀಯರೊಳಗೂ ಜರ್ಮನರೊಳಗೂ ಒಂದು ನೈಸರ್ಗಿಕ ಆಕರ್ಷಣವಿದೆಯೆಂದರೂ ಹೇಳಬಹುದು. ಜರ್ಮನಿಯು ಕೂಡ ಹಿಂದೀ ವಿದ್ಯಾರ್ಥಿಗಳನ್ನು ಆದರದಿಂದ ಬರಮಾಡಿಕೊಳ್ಳುತ್ತಿದೆಯೆಂದೂ ನಾವು ತಿಳಿಯುತ್ತೇವೆ.

ಜರ್ಮನ ಜನರೊಳಗಿನ ಈ ಸೌಹಾರ್ದವನ್ನು ಮತ್ತಷ್ಟು ಭದ್ರಪಡಿಸಲಿಕ್ಕೆಂದು ಹಿಂದೀ ವಿದ್ಯಾರ್ಥಿಗಳು ಜರ್ಮನಿಯ ಮುಖ್ಯಮುಖ್ಯ ಪ್ರೊಫೆಸರುಗಳಿಗೆ ಆಮಂತ್ರಣವನ್ನಿತ್ತು ಒಂದು ಔತಣವನ್ನು ಕೊಟ್ಟರು. ಐವತ್ತು ಹಿಂದೀ ವಿದ್ಯಾರ್ಥಿಗಳು ಕೂಡಿ ಸಾಧಾರಣ ೧೦೦ ಪ್ರೊಫೆಸರರಿಗೂ ಅವರ ಪತ್ನಿಯರಿಗೂ ಆಹ್ವಾನವನ್ನಿತ್ತು ಔತಣಮಾಡಿಸಿ ಮಿತ್ರಕೂಟ ಕೂಡಿಸಿದರು. ಜರ್ಮನ್ ಪ್ರೊಫೆಸರರೂ ಹಿಂದುಸ್ಥಾನವನ್ನು ಪ್ರಶಂಸಿಸಿ ಮಾತನಾಡಿದರು.

ಜರ್ಮನಿಯಿಂದ ಕಲಿಯಲಿರುವ ಪಾಠ

ಜರ್ಮನಿಯು ಅಪ್ರತಿಮ ತತ್ವವೇತ್ತರನ್ನು ಜನ್ಮಕೊಟ್ಟಿದೆ; ಅದು ಅಗಾಧ ವಿಜ್ಞಾನಶೋಧಕರನ್ನು ಜನ್ಮಕೊಟ್ಟಿದೆ. ಜರ್ಮನಿಯ ಕಾರ್ಯನಿಪುಣತೆಯು ಮತ್ತು ಸಂಘಟನೆಯ ಚತುರತೆಯು ಎಲ್ಲರಿಗೂ ತಿಳಿದೇ ಇದೆ. ಪ್ರಲಯಕಾರಿಯಾದ ಮಹಾಯುದ್ಧದ ಪರಿಣಾಮವನ್ನಾದರೂ ಜರ್ಮನಿಯು ಧೈರ್ಯದಿಂದಲೂ, ಸಚೇತನವಾಗಿಯೂ ವಹಿಸಿ ಬಾಳಿತು. ಆದುದರಿಂದ ಜರ್ಮನಿಯಿಂದ ಹಿಂದೀಯರು ಕಲಿಯಬೇಕಾದ ವಿಷಯಗಳು ಬಹಳವಿವೆ.

ಮತ್ತು ಹಿಂದೀ ವಿದ್ಯಾರ್ಥಿಗಳಿಗೂ ಜರ್ಮನಿಯಲ್ಲಿ ಸಿಕ್ಕುವ ಸ್ವಾಗತವು ಇನ್ನೆಲ್ಲಿಯೂ ಸಿಕ್ಕುವುದಿಲ್ಲ. ಕಲಿಯುವಿಕೆಯ ವಾತಾವರಣವು ಸ್ವಚ್ಛವಾಗಿಯೂ ನಿಷ್ಕಾಮವಾಗಿಯೂ ಇದೆ. ಇಂಗ್ಲೆಂಡಿನಲ್ಲಿ ಹಿಂದೀಯರು ಒಂದು ತರದ ದಾಸ್ಯಭಾವದಿಂದಿರಬೇಕು; ಆಳರಸರ ನೌಕರಿಯ ಅಭಿಲಾಷೆಯಲ್ಲಿಯೇ ಇರಬೇಕು. ಸ್ವಭಾವತಃ ಹಿಂದೀಯ ವಿದ್ಯಾರ್ಥಿ ಹಿಂದಿರುಗುವಾಗ ದೇಶದ ಹಿತ್ತಲನ್ನು ಮರೆತು ನೌಕರಶಾಹಿಯ ಒಂದಂಗವಾಗುವನು.

ಜರ್ಮನಿಯಲ್ಲಿ ಈ ತರದ ಭಾವಕ್ಕೆ ಎಡೆಯಿಲ್ಲ. ಸಮಾನತೆಯುಂಡಿದ್ದು, ಸೌಹಾರ್ದದಿಂದ ಸ್ವತಂತ್ರ ಉದ್ಯೋಗಗಳಲ್ಲಿ ಹಿಂದೀಯ ವಿದ್ಯಾರ್ಥಿಯು ಅಭ್ಯಾಸಿಸಿ ದೇಶಪ್ರೇಮದ ಭಾವನೆಯೊಂದಿಗೆ ಹಿಂದಿರುಗಬಹುದು.

ಅನುಕ್ರಮಣಿಕೆ.

ಅಗ್ರಲೇಖ	ಪುಟ
ಹಿಂದೀ ಸರಕಾರದ ಆಯವ್ಯಯ	೬
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೭
ದಕ್ಷಿಣ ಕನ್ನಡ—ಬೆಳ್ಳಾರೆ, ಬೆಳ್ತಂಗಡಿ, ಉಡುಪಿ, ಬಂಟ್ವಾಳ, ಬೈಂದೂರು,	,,
ಮಂಗಳೂರು	೮
ಪತ್ರಿಕೆಯಿಂದ ಪತ್ರಿಕೆಗಳು	,,
ನಿಜವಾದ ಸಾಧು ಯಾರು?	,,

ಸ್ವದೇಶಾಭಿಮಾನಿ.

ಶಕ ೧೮೪೭ ಫಾಲ್ಗುಣ ಬ॥೬ಯು ಶುಕ್ರವಾರ.

ಹಿಂದೀ ಸರಕಾರದ ಆಯವ್ಯಯ.

ಸರ್ ಬೇಸಿಲ್ ಬ್ಲೆಕೆಟ್ಟರು ಇಂಪೀರಿಯಲ್ ಸರಕಾರದ ಆಯವ್ಯಯದ ಪಟ್ಟಿಯನ್ನು ಎಸೆಂಬ್ಲಿ ಮುಂದೆ ಇಟ್ಟಿರುವರು. ಅದರ ಸಾರಾಂಶ:—

ಕೋಟಿ ಗಟ್ಟಲೆ.

	ನಿಶ್ಚಿತ. ೧೯೨೪-'೨೫	ಅಂದಾಜು. ೧೯೨೫-'೨೬	ಅಂದಾಜು. ೧೯೨೬-'೨೭
ಆಯ.	೧೩೮·೦೪	೧೩೧·೩೫	೧೩೩·೪೩
ವ್ಯಯ.	೧೩೨·೬೬	೧೩೦·೦೫	೧೩೦·೩೮
ಉಳಿತಾಯ.	೫·೭೮	೧·೩೦	೩·೦೫

ಉಳಿತಾಯದ ವಿನಿಯೋಗದಲ್ಲಿ ಈ ಕೆಳಗಿನಂತೆ ಖರ್ಚು ಮಾಡುವುದಾಗಿ ನಿಶ್ಚಯಿಸಿಯದೆ.

ಹತ್ತಿಯ ಕಂದಾಯ ತೆಗೆದು ಹಾಕಿದ್ದು. ೧·೭೫.

ಪ್ರಾಂತಗಳು ಕೊಡಬೇಕಾದ ವಂತಿಗೆಯಿಂದ ಮಾಫಿ ಮಾಡಿದ್ದು:—

ಮದ್ರಾಸು	೫೭ ಲಕ್ಷ.
ಸಂಯುಕ್ತ	೩೩ ,,
ಪಂಜಾಬ	೨೮ ,,
ಬರ್ಮಾ	೭ ,,
ಪ್ರಾಕ್ತನ ಶೋಧಗಳಿಗೆ	೫೦ ,,

ಸರ್ ಬೆಸಿಲ್ ಬ್ಲೆಕೆಟ್ಟರು ಹಿಂದೀ ಆರ್ಥಿಕ ಸುಧಾರಣೆಗಳಲ್ಲಿ ಒಳ್ಳೆ ಹೆಸರು ಮಾಡಿರುವರು. ನಾಲ್ಕು ವರ್ಷಗಳಿಂದ ಅವರು ಹಿಂದೀ ಆಯವ್ಯಯದ ಪಟ್ಟಿಯನ್ನು ತೋರಿಕೆಯ ಮಟ್ಟಿಗೆ ಸಮಾಧಾನಕರವಾಗಿಯೇ ತಯಾರಿಸಿರುವರು. ನಾಲ್ಕು ವರ್ಷಗಳಿಂದ ಹಿಂದೀ ಆಯವ್ಯಯದಲ್ಲಿ ಏನ್ ಲಾಭವು ಹೆಚ್ಚು ತೋರುತ್ತಿದೆ. ಆದರೆ ಇದು ಎಂತಹ ಲಾಭ? ವೆಂಬುದನ್ನು ಮಾತ್ರ ಥಕ್ಕನೆ ಹೇಳಬರುವಂತಿಲ್ಲ. ಅಂದಾಜು ಪಟ್ಟಿಯೇನೊ ಸಮಾಧಾನಕರವೆಂದು ಒಪ್ಪಬೇಕಾಗುತ್ತಿದೆ.

ಬಜೆಟಿನ ಮುಖ್ಯ ವೈಶಿಷ್ಟ್ಯವೆಂದರೆ ಹತ್ತಿಯ ಮೇಲಿನ ಕರವನ್ನು ತೆಗೆದುದು ಹಾಕಿದುದು. ಹಿಂದೂಸ್ಥಾನದೊಳಗಿನ ಹತ್ತಿ ಕೈಗಾರಿಕೆಗೆ ಬಹಳ ಪ್ರತಿಬಂಧಕವನ್ನೀಯುತ್ತಿದ್ದ ಈ ಕರವು ಹಿಂದೀಯರ ಅನೇಕ ವರ್ಷಗಳ ಚಳವಳದ ನಂತರ ಹೇಗೂ ಬಿದ್ದುಹೋಯಿತು. ಈ ಕರವನ್ನು ತೆಗೆದು ಹಾಕಿದುದರ ಕಥೆಯನ್ನು ನಾವು ಈ ಮೊದಲೇ ಸ್ವದೇಶಾಭಿಮಾನಿಯ ಸ್ಫುಟವಿಚಾರಗಳಲ್ಲಿ ಚರ್ಚಿಸಿದ್ದೇವೆ. ಈ ಬಾರಿಯ ಬಜೆಟು ಭಾಷಣದೊಳಗಿನ ಸರ್ ಬೆಸಿಲ್ ಬ್ಲೆಕೆಟ್ಟರ ವಕ್ರೋಕ್ತಿಗಳು ಕೂಡ ತೆಗೆದು ಹಾಕಿದುದರ ಅಂತರ್ಯವನ್ನು ಹೊರಗೆಡಹುತ್ತಿದೆ.

"ಹತ್ತಿಯ ಕರದ ರೋಗಿಯು ಸತ್ತು ಹೋದನು; ಅದರ ಪ್ರೇತದ ಬಾಧಕ ಕೂಡ ನಮಗೆ ತಟ್ಟಲಿಕ್ಕಿಲ್ಲ. ಫ್ರ್ಯಾನೆನ್ನ ಬಿಲ್ಲಿನ ಮಂಜೂರಾತಿಯ ಸಮಯದಲ್ಲಿಯ ಅಕಲ್ಪಿತ ಅಪಘಾತವಲ್ಲದೆ ಇನ್ನಾವುದೂ ಅದನ್ನು ಪುನರ್ಜೀವಿಸಲಾರದು." ಅಂದರೆ ಪ್ರಾಯಶಃ ಇದೊಂದು ಸ್ವರಾಜ್ಯಪಕ್ಷೀಯರಿಗೆ ಬೆದರಿಕೆ ತಟ್ಟಿಸುವುದಾಗಿರಬೇಕು. ಇದನ್ನು ಬರೇ ದೇಶದ ಆರ್ಥಿಕ ಪರಿಸ್ಥಿತಿಯ ಅನಿಕರದಿಂದ ತೆಗೆದುದಲ್ಲ; ಇದರ ಉದ್ದೇಶವು ಗೂಢವಿದೆ; ಇದರಿಂದ ರಾಜಕೀಯ ಲಾಭಮಾಡಿಕೊಳ್ಳುವುದೇ ಸರಕಾರದ ಮುಖ್ಯೋದ್ದೇಶವಿದೆ ಎಂದು ಸ್ವದೇಶಾಭಿಮಾನಿಯು ಈ ಮೊದಲು ಸೂಚಿಸಿದ್ದು ಈಗಲಾದರೂ ಹೌದೆನ್ನಬೇಕಾಗಿದೆ.

೧೯೨೪-೨೫ರ ಲಾಭದ ಪರಿಶೀಲನ ಮಾಡುವುದೂ ಅಗತ್ಯವಿದೆ. ೧೯೨೪-೨೫ರಲ್ಲಿ ೪ ಕೋಟಿ ರೂಪಾಯಿ ಉಳಿತಾಯವಿರಬಹುದೆಂದು ಪುನಃ ಲೆಖ್ಖಮಾಡಿ ಕಳೆದ ವರ್ಷ ಸೂಚಿಸೋಣಾಗಿತ್ತು. ಕಳೆದ ವರ್ಷದ ಪೂರಾ ಲೆಖ್ಖ ಪರಿಶೋಧನೆಮಾಡಿ ನೋಡಿದ್ದಲ್ಲಿ ಸರಕಾರಕ್ಕೆ ಎಣಿಸಿದಕ್ಕಿಂತ ಹೆಚ್ಚೇ ಉಳಿತಾಯವಾಯಿತು. ಅಂದರೆ ೫೭೮ ಲಕ್ಷ ರೂಪಾಯಿ ಉಳಿಯಿತು. ಅಂದರೆ ೧೭೮ ಲಕ್ಷ ಹೆಚ್ಚು ಉಳಿಯಿತು. ಸೈನ್ಯದ ಖರ್ಚಿನಲ್ಲಿ ೭೦ ಲಕ್ಷವು ರೈಲ್ವೆ ಲಾಭದಲ್ಲಿ ೧೧೪ ಲಕ್ಷವು ಹೆಚ್ಚು ಉಳಿದು ಈ ಜಾಸ್ತಿ ಉಳಿತಾಯವು ಉಂಟಾಯಿತೆಂದು ಸರ್ ಬ್ಲೆಕೆಟ್ಟರು ಸೂಚಿಸುವರು. ಈ ಲಾಭದಲ್ಲಿ ಹಿಂದೀ ಸರಕಾರಕ್ಕೆ ಗೌರವಕರವಾದುದೇನೂ ಕಾಣುವುದಿಲ್ಲ. ಹಿಂದೀ ಸರಕಾರದ ಸೈನ್ಯದ ಖರ್ಚಿನ ಅನ್ಯಾಯವು ಸರ್ವಪ್ರಸಿದ್ಧವಾದುದು. ಆ ಒಂದು ಅನ್ಯಾಯದಿಂದ ರಾಷ್ಟ್ರದ ಸರ್ವ ಕರದ ಏಳಿಗೆಯೂ ತಡೆಗಟ್ಟಿದೆ. ಆ ಖರ್ಚನ್ನು ಇಳಿತಕ್ಕೆ ತರಬೇಕೆಂದು ಎಷ್ಟು ಪತ್ರಾಯ ಮಾಡಿದರೂ ಸರಕಾರವು ಕೇಳುವುದಿಲ್ಲ. ಅಲ್ಲದೆ ಕಳೆದ ವರ್ಷದ ಉಳಿತಾಯವು ಸೈನ್ಯದ ಖರ್ಚು ಕಡಿಮೆಯಾಗಿದೆಯೆಂದಲ್ಲ. ಏಕೆಂದರೆ ೫೫ ಕೋಟಿ ಖರ್ಚಿನಲ್ಲಿ, ಈಗ ಸಾಮಾನಿಗೆ ದರ ತಗ್ಗಿದ ಸಮಯದಲ್ಲಿ ಬರೇ ೭೦ ಲಕ್ಷ ಉಳಿದದ್ದರಲ್ಲಿ, ಅಂದಾಜಿಗಿಂತ ಸೈನ್ಯವು ಹೆಚ್ಚು ಖರ್ಚುಮಾಡಿಯದೆಂದು ತೋರಿಸುತ್ತಿದೆಯಲ್ಲದೆ, ನಿಜವಾಗಿ ಖರ್ಚು ಕಡಿಮೆ ಮಾಡಿಯದೆಂದು ತೋರಿಸುವುದಿಲ್ಲ. ಇನ್ನು ರೈಲ ಲಾಭವೂ ಅಷ್ಟು ಗೌರವದ್ದಲ್ಲವೇಕೆಂದರೆ, ಈ ಲಾಭವು ಬಡ ೩ನೇ ಕ್ಲಾಸು ಪೆಸೆಂಜರರಿಂದ ಬರತಕ್ಕದ್ದಿದೆ. ಮೂರನೇ ಕ್ಲಾಸು ದರಗಳನ್ನೇರಿಸಿ ಹಲವು ಸಮಯವಾಯಿತು. ಪ್ರಯಾಣವು ಈಗ ಬಹಳ ಪ್ರಿಯವಾಗಿದೆ. ಸೌಕರ್ಯಗಳು ಏನೂ ಸಿಕ್ಕುವುದಿಲ್ಲ. ಈ ಪರಿಸ್ಥಿತಿಯಲ್ಲಿ ಈ ೧೧೪ ಲಕ್ಷಗಳ ಉಳಿತಾಯವು ಜನರಿಗೆ ನಿಜವಾದ ಲಾಭವಲ್ಲವೆಂದೂ ಸೂಚಿಸಬೇಕಾಗುತ್ತದೆ.

ವ್ಯಾಪಾರದ ಸಾಮಾನ್ಯ ಪರಿಸ್ಥಿತಿಯ ಚಿತ್ರವನ್ನೂ ನಾವು ಪರಿಶೀಲಿಸಲಿದೆ. ೧೯೨೫-೨೬ರಲ್ಲಿ ವ್ಯಾಪಾರದ ಸ್ಥಿತಿಯು ಚೆನ್ನಾಗಿತ್ತೆಂದು ಫ್ಯಾನೆನ್ಸ ಮೆಂಬರರ ಸೂಚನೆ. ಅವರು ಹೇಳಿದ ಸಂಗತಿಗಳನ್ನೆತ್ತಿಯೇ ನೋಡಿದರೆ ಇದು ನಿಜವಲ್ಲವೆಂದು ತಿಳಿಯಬಹುದು. ಸರ್ ಬ್ಲೆಕೆಟ್ಟರು, ಹತ್ತಿಯ ವ್ಯಾಪಾರವೂ ಜವಳಿ ವ್ಯಾಪಾರವೂ ಬಹಳ ಕಷ್ಟಸ್ಥಿತಿಯಲ್ಲಿತ್ತೆಂದೂ, ರಫ್ತಾದ ಗೋದಿಯ ಬೆಲೆಯೂ, ಗೋದಿಯೂ ಕಡಿಮೆಯಿತ್ತೆಂದೂ ಸೂಚಿಸಿ, ಆದರೆ ಇತರ ವ್ಯಾಪಾರಗಳು ಉತ್ತಮವಿದ್ದವೆಂದು ಸೂಚಿಸುವರು. ಹತ್ತಿಗೆ ಕ್ರಯ ಕಡಿಮೆಯಾದುದರಿಂದ ನಮ್ಮ ರೈತರ ಅರ್ಜನೆಯು ಕಡಿಮೆಯಾಯಿತು ಮಾತ್ರವಲ್ಲದೆ ನಮ್ಮ ಗಿರಣಿಗಳಿಗೆ ನಷ್ಟವನ್ನು ತಂದುವು. ಗೋದಿಯ ಬೆಲೆ ಕಡಿಮೆಯಾದುದನ್ನು ನೋಡಿದರೆ, ಮತ್ತು ಪರದೇಶಕ್ಕೆ ಕಡಿಮೆ ಸಾಗಿದುದನ್ನೂ ನೋಡಿದರೆ, ಗೋದಿ ಬೆಳೆಗೆ ಬಾಧಕವಿರಲಿಲ್ಲವೆಂದು ತಿಳಿಯುವುದಲ್ಲದೆ, ರೈತರಿಗೆ ನಷ್ಟವಾಯಿತೆಂದು ತಿಳಿಯಬೇಕಾಗುತ್ತದೆ. ಹೀಗೆ ರೈತರಿಗೆ ಸಂಬಂಧಪಟ್ಟ ಈ ವಿಷಯಗಳು ಹೀಗಿದ್ದಮೇಲೆ ಉತ್ತಮವಿದ್ದ ವಿಷಯಗಳ ಪರಿಣಾಮವೇನು? ಚಾ ಉದ್ಯೋಗವೂ ನಾರಿನ ಕೈಗಾರಿಕೆಗಳೂ ಉತ್ತಮವಿದ್ದುವು. (ನಾರಿನ ಕೈಗಾರಿಕೆಯ ಲಾಭಗಳ ವಿಷಯ ಸ್ವದೇಶಾಭಿಮಾನಿಯಲ್ಲಿ ಈ ಮೊದಲೇ ನಾವು ಆಲೋಚಿಸಿದ್ದೇವೆ.) ಈ ಎರಡೂ ಕೈಗಾರಿಕೆಗಳ ಅಧಿಕ ಸಂಪತ್ತು ಪರದೇಶೀಯರ ಪಾಲಾಗಿದೆ. ಅಂತೂ ಸರಕಾರದ ಆಯವ್ಯಯ ಪಟ್ಟಿಗೆ ಇದರಿಂದ ಪ್ರಯೋಜನವಿರಬಹುದಾದರೂ, ಈ ಉದ್ಯೋಗಗಳ ಸುಧಾರಣೆಯಿಂದ ನಮ್ಮ ದೇಶದ ಆರ್ಥಿಕ ಜೀವನವು ಸುಧಾರಿಸುವುದಿಲ್ಲ. ಮೋಟರ ಗಾಡಿಗಳ ಆಮದು ಹೆಚ್ಚಿದುದೂ ದೇಶದ ಆರ್ಥಿಕ ಸ್ಥಿತಿಗೆ ಒಳ್ಳೆಯದಲ್ಲ. ಪೆಟ್ರೋಲ್ ಕರವನ್ನು ತಗ್ಗಿಸಿದುದೂ ದೇಶಕ್ಕೆ ಹೆಚ್ಚು ಲಾಭಮಾಡತಕ್ಕ ವಿಷಯವಲ್ಲ. ಇವುಗಳಿಂದಲೂ ಪರದೇಶೀಯರಿಗೆ ಲಾಭವಾಯಿತು; ಹಿಂದೀಯ ದ್ರವ್ಯಶೋಷಣವು ಸುಲಭವಾಯಿತು. ಅಷ್ಟೆ. ಆದುದರಿಂದ ಹಿಂದೀ ವ್ಯಾಪಾರವು ಉತ್ತಮಸ್ಥಿತಿಗೆ ಬಂದದೆ ಎಂದು ತೋರಿಸಲು ಸರ್ ಬ್ಲೆಕಟರು ಮಾಡಿದ ಪ್ರಯತ್ನಗಳು ಫಲಿತವಾಗಿಲ್ಲ. ಅವು, ಅದರ ಬದಲಿಗೆ ದೇಶದ ಆರ್ಥಿಕ ಸ್ಥಿತಿಯ ಕಠಿಣತೆಯನ್ನೇ ತೋರಿಸುತ್ತಿವೆ.

ಸರಕಾರವು ತನ್ನ ಆದಾಯದ ವಿಷಯಗಳನ್ನು ಚರ್ಚಿಸುವಾಗ, ಉಪ್ಪಿನ ಕರದಲ್ಲಿ ತನ್ನ ಅಂದಾಜು ಆಯವು ಕಡಿಮೆಯಾದುದನ್ನು ಮಾತ್ರವೇ ಸೂಚಿಸುತ್ತಿದೆಯಲ್ಲದೆ, ಜನರ ಮೇಲೆ ಅನ್ಯಾಯವಾಗಿ ಹೊರಿಸಲ್ಪಟ್ಟಿರುವ ಈ ತೆರಿಗೆಯನ್ನು ತೆಗೆದು ಹಾಕುವ ಆಲೋಚನೆಮಾಡುವುದಿಲ್ಲ. ಶ್ರೀಮಂತರಿಗೆ ವಿಶೇಷವಾಗಿರದೆ, ಬಡವರಿಗೆ ಮಾತ್ರ ಕಷ್ಟಕೊಡುತ್ತಿರುವ ಈ ತೆರಿಗೆಯನ್ನು ತೆಗೆದುಹಾಕುವ ಅವಶ್ಯಕತೆಯನ್ನು ಸರಕಾರವು ಇನ್ನೂ ಕಾಣದಿರುವುದನ್ನು ನೋಡಿದರೆ, ಕರಗಳನ್ನೆತ್ತುವುದರಲ್ಲಿಯೂ ಮಾಫಿ ಬಿಡುವುದರಲ್ಲಿಯೂ ಸರಕಾರದ ರಾಜಕಾರಣವು ಅತ್ಯಂತ ಗೂಢವಾಗಿ ಕೆಲಸಮಾಡುತ್ತಿದೆಯೆಂದು ತಿಳಿಯಬೇಕು.

ಟಪ್ಪಾಲು ಕಾರ್ಡುಕವರುಗಳ ಬೆಲೆ ತಗ್ಗಿಸುವುದರಲ್ಲಿಯೂ ಸರಕಾರವು ಯೋಚನೆಪಟ್ಟಿಲ್ಲ. ತಂತಿ ಟಪ್ಪಾಲು ಖಾತೆಯಲ್ಲಿ ಲಾಭ ಉಳಿದರೂ, ಆ ಲಾಭವು ತಾತ್ಕಾಲಿಕವೆಂದು ತೋರಿಸುವುದರಲ್ಲಿಯೇ ಸರ್ ಬ್ಲೆಕಟರು ಪ್ರಯತ್ನಿಸಿದರಲ್ಲದೆ, ಅತ್ಯಂತ ಬಡವರ ವರೆಗೆ ಉಪಯೋಗಿಸಬೇಕಾದ ಕಾರ್ಡುಕವರುಗಳ ಬೆಲೆಯನ್ನು ತಗ್ಗಿಸುವ ವಿಷಯವನ್ನು ಸರ್ ಬ್ಲೆಕೆಟ್ಟರು ಸ್ಪರ್ಶಕೂಡ ಮಾಡಿಲ್ಲ. ಹಿಂದೂಸ್ಥಾನದ ವ್ಯಕ್ತಿಯ ಸರಾಸರಿ ಆದಾಯವು ರೂ. ೨, ಇಂಗ್ಲೆಂಡಿನಲ್ಲಿ ಅದು ೨೪, ಅಮೇರಿಕದಲ್ಲಿ ಅದು ೩೬, ಅಂದರೆ ಇಂಗ್ಲೆಂಡಿನ ವ್ಯಕ್ತಿಯು ಹಿಂದೂಸ್ಥಾನದ ಪ್ರತಿ ವ್ಯಕ್ತಿಗಿಂತ ೧೨ಪಾಲಷ್ಟು ಆಯವಿದ್ದವನು; ಅಮೇರಿಕದ ವ್ಯಕ್ತಿಯು ೧೮ಪಾಲಷ್ಟು ಆದಾಯವಿದ್ದವನು ಆದರೂ ಹಿಂದೂ ದೇಶದ ಟಪ್ಪಾಲು ಖರ್ಚು ಆ ಶ್ರೀಮಂತ ದೇಶಗಳಷ್ಟೆ ಇದೆ. ಆಧುನಿಕ ಜೀವನದಲ್ಲಿ ಒಂದಂಗವಾಗಿ ಪರಿಣಮಿಸಿರುವ ಈ ಟಪ್ಪಾಲು ಸೌಕರ್ಯವನ್ನು ದೇವರ ಗಾಳಿಯಂತೆ ಅವಶ್ಯವಾಗಿ ಬಂದಿರುವಾಗ, ಅದರಂತೆ ಸುಲಭ ಮಾಡಿಡುವುದೂ ನಿಸರ್ಗತಃ ಅಗತ್ಯವಿದ್ದಿತು. ಸರಕಾರದ ಧೋರಣವು ಈ ವಿಷಯಗಳಲ್ಲಿ ಪೂರ್ಣ ಮಾರ್ಪಾಡಾಗುವುದು ಅಗತ್ಯವಿದೆ.

ಆರ್ಕಿಯೊಲೊಜಿಕಲ್ ಫಂಡ್ ಎಂದು ಐತಿಹಾಸಿಕ ಶೇಷ ಶೋಧನೆಗಳಿಗಾಗಿ ಸರಕಾರವು ೫೦ ಲಕ್ಷ ರೂಪಾಯಿಯನ್ನು ಒಂದು ನಿಧಿಯನ್ನು ಕಲ್ಪಿಸುವರೆ ವಂತಿಗೆಯಾಗಿ ಬಜೆಟಿನ ಉಳಿತಾಯದಿಂದ ಪ್ರತ್ಯೇಕಿಸಿದ್ದು ತತ್ವತಃ ಉತ್ತಮವೇ ಆಯಿತು. ಹಿಂದೀಯ ಅತೀತಕಾಲದಿಗಳ ಅನುಭವವನ್ನು ಪಡೆಯಲು ಪ್ರತಿ ಹಿಂದೀಯನೂ ಉತ್ಸುಕನಿರುವನು. ಆದಕ್ಕಾಗಿ ಸರ್ ಬ್ಲೆಕೆಟ್ಟರ ಆವೇಶದಾಯಕ ಭಾಷಣದ ಅವಶ್ಯಕತೆಯಿರಲಿಲ್ಲ. ಆದರೆ ಈ ನಿಧಿಯು ರಾಜರು ಮಹಾರಾಜರುಗಳಿಂದ ಹಣ ಕೂಡಿಸಿ ದೊಡ್ಡದಾಗಿ ಮಾಡಿ ಹೇಗೆ ವಿನಿಯೋಗಿಸುವರೆಂಬುದರಲ್ಲಿ ಮಾತ್ರ ನಮಗೆ ವಿಶ್ವಾಸವು ಕಾಣುವುದಿಲ್ಲ. ಬೆಂಗಳೂರಿನ ಟಾಟಾ ಇನ್ಸ್ಟಿಟ್ಯೂಟಿನಂತೆ ಕೆಲವು ಇಂಗ್ಲೀಷ ಪ್ರೊಫೆಸರರಿಗೆ ಕೆಲಸ ಕೊಡಲಿಕ್ಕೆ ಮಾತ್ರ ಇದು ಏರ್ಪಾಡಾಗುವುದೋ? ಇಲ್ಲವೆ ಇದರಲ್ಲಿ ಅಭಿರುಚಿ ಇದ್ದ ವಿಚಕ್ಷಣ ವಿಜ್ಞಾನವಾದಿಗಳಿಗೆ ಪ್ರವೇಶವಿದ್ದಿತೊ ಎಂದು ನೋಡಲಿದೆ. ಎರಡನೆಯದಾಗಿ ಇದರ ಉದ್ದೇಶವು ಹಿಂದೀ ವಿದ್ಯಾರ್ಥಿಗಳಿಗೂ ಅಭ್ಯಾಸಕೊಡಲಿಕ್ಕೆಂದು ಇದ್ದರೂ, ಕಾರ್ಯತಃ ಹಿಂದೀ ವಿದ್ಯಾರ್ಥಿಗಳಿಗೆ ಯಾವ ತರದ ಅಭ್ಯಾಸವಾದೀತೆಂಬುದನ್ನೂ ನೋಡಲಿದೆ. ಮೂರನೆಯದಾಗಿ ಇಲ್ಲಿಯ ಶೋಧಗಳನ್ನು ಲಂಡನ್ ಮ್ಯೂಸಿಯಮುಗಳಿಗೆ ಕಳುಹಿಸುವರೊ ಇಲ್ಲವೆ ಇಲ್ಲಿಯೇ ತಕ್ಕುದಾದ ಏರ್ಪಾಡಾದೀತೊ ಎಂಬುದನ್ನೂ ನಾವು ನೋಡಬೇಕಾಗಿದೆ. ಹೊರಗಿನ ಉದ್ದೇಶವೇನೊ ಸರಿಯಿದೆ. ಅನುಮಾನದಿಂದಲೇ ದೂರುವುದು ಯುಕ್ತವಲ್ಲವಾದುದರಿಂದ ಆ ನಿಧಿಯು ಏರ್ಪಾಡಾಗುವ ಬಗ್ಗೆ ನಮ್ಮ ಪುಷ್ಟೀಕರಣವನ್ನೂ ಕೊಡುವೆವು.

ಸರಕಾರ ಸಾಲಗಳನ್ನು ಕಡಿಮೆಮಾಡುತ್ತಾ ಬರುವದು ಉತ್ತಮವಾಗಿದೆ. ಹೀಗೆ ಕಡಿಮೆ ಮಾಡಿದುದನ್ನು ಮುಂದೆ ಹೆಚ್ಚು ಮಾಡಲಿಕ್ಕಾಗಿ ಉಪಯೋಗಿಸದೆ ಸಾಲವು ಮುಂದೆ ಇಲ್ಲದಂತೆ ಮಾಡುವುದು ಅವಶ್ಯವಿದೆ. ಹಿಂದೂಸ್ಥಾನವು ಸಾಲವನ್ನು ಸಹಿಸಿಕೊಳ್ಳುವಷ್ಟು ಸಂಪತ್ತುಳ್ಳ ದೇಶವಲ್ಲ.

೧೯೨೬-೨೭ನೇ ಆಯವ್ಯಯದ ಅಂದಾಜಿನ ಭಾಷಣದಲ್ಲಿ ಸರ್ ಬ್ಲೆಕೆಟ್ಟರು ಅತ್ಯಂತ ಸುಂದರವಾದ ಚಿತ್ರವನ್ನು ಕೊಡಲು ಪ್ರಯತ್ನಿಸಿರುವರು. ನಾವು ಈ ಮೊದಲು ಹೇಳಿದಂತೆ ಸರ್ ಬ್ಲೆಕೆಟ್ಟರ ಅಂದಾಜು ಪಟ್ಟಿಯೂ, ಅವರ ಭಾಷಣವು ಯುಕ್ತಿಯುಕ್ತವಾಗಿದ್ದಿತು. ಹಿಂದಿನ ವರ್ಷಗಳ ಆಯವ್ಯಯವನ್ನೂ ಈಗಿನ ಆಯವ್ಯಯವನ್ನೂ, ಮುಂದಿನ ಆಯವ್ಯಯವನ್ನೂ ಸರಿಹೋಲಿಸಿ ಸರ್ ಬ್ಲೆಕೆಟ್ಟರು ಹಿಂದೂಸ್ಥಾನವು ಹೇಗೆ ಲಾಭ ಹೊಂದುತ್ತಿದೆಯೆಂದು ತೋರಿಸಿ, ಸುಧಾರಣಾ ಸರಕಾರದ ಉಪಕಾರಗಳನ್ನು ವರ್ಣಿಸಿದರು. ಕಳೆದ ವರ್ಷಗಳ ಮಿಲಿಟರಿ ಖರ್ಚುಗಳ ತಾರತಮ್ಯವು ಹೀಗಿದ್ದಿತು:—

(ಕೋಟಿ ರೂಪಾಯಿಗಳು)

	೧೯೨೧-೨೨	೨೨-೨೩	೨೩-೨೪	೨೪-೨೫	೨೫-೨೬
ಪ್ರಥಮದ ಅಂದಾಜು	೬೬·೮೨	೬೭·೭೫	೬೨·೦೦	೬೦·೨೫	೫೬·೨೫
ಎರಡನೇ ಅಂದಾಜು	೬೯·೩೫	೬೭·೦೯	೫೯·೭೪	೫೬·೩೩	೫೬·೨೮
ನಿಶ್ಚಿತ	೬೯·೮೧	೬೫·೨೭	೫೬·೨೩	೫೫·೫೬	

೧೯೨೬-೨೭ಕ್ಕೆ ಅಂದಾಜು ಖರ್ಚು ೫೪·೮೮.

ಈ ಖರ್ಚಿನ ತಪಶೀಲಿನಂತೆ ಮಿಲಿಟರಿ ಖರ್ಚು ಮೆಲ್ಲನೆ ಕಡಿಮೆ ಆಗಿ ಬರುತ್ತಿರುವುದು ಅಭಿನಂದನೀಯವಾಗಿದೆ. ಸರಕಾರವಾದರೂ ಇದನ್ನು ಕಡಿಮೆಮಾಡುವ ಅವಶ್ಯಕತೆಯನ್ನು ಬಹಳ ಚಳವಳದ ನಂತರವಾದರೂ ಕಂಡುಕೊಂಡುದು ಅಭಿನಂದನೀಯ. ಆದರೆ ನಾವು ಇದರಲ್ಲಿ ಸರಕಾರದ ಮೇಲೆ ತುಂಬಾ ಆಧಾರವನ್ನೆಣಿಸುವ ವಿಷಯವು ಹೆಚ್ಚು ಪರಿಶೀಲಿಸಿದರೆ ಕಂಡು ಬರುವುದಿಲ್ಲ. ಈ ಮಿಲಿಟರಿ ಖರ್ಚು ಹೇಗೆ ಹೆಚ್ಚಾಯಿತು, ಎಂಬುದನ್ನು ಯೋಚಿಸಿದರೆ ಕಡಿಮೆ ಮಾಡಿದುದು ಸಾಕಷ್ಟಾಗಲಿಲ್ಲವೆಂದೂ ತಿಳಿಯ ಬರುವುದು. ಯುದ್ಧದ ಸಮಯದಿಂದ ಏರಿ ಬಂದ ಖರ್ಚು, ಆ ಮೇಲೆ ಅಫಘಾನಿಸ್ಥಾನದೊಡನೆ ನಡೆದು ಬಂದ ಯುದ್ಧದ ಕಾರಣವಾಗಿ ಏರಿದ ಖರ್ಚು ಈ ಪ್ರಶಾಂತ ವಿಶ್ರಾಂತಿ ಸಮಯದಲ್ಲಿಯೂ ಇರತಕ್ಕದ್ದೆಂದರೆ ಯಾರೂ ಒಪ್ಪತಕ್ಕ ಮಾತಲ್ಲ. ಮತ್ತು ಆ ಸಮಯದ ಖರ್ಚಿಗೂ ಈಗಿನ ಖರ್ಚಿಗೂ ಬರೇ ಶೇಕಡಾ ೧೫ರಷ್ಟು ಮಾತ್ರ ತಾರತಮ್ಯವಿರುವುದೂ ಖರ್ಚು ಕಡಿಮೆಯಾದುದನ್ನು ತೋರಿಸುವುದಿಲ್ಲ. ಏಕೆಂದರೆ ಈ ಐದು ವರ್ಷಗಳಲ್ಲಿ ಸಾಮಾನಿನ ಬೆಲೆಯು ತಗ್ಗಿದುದೊಂದು; ಸೈನ್ಯದ ವಿಶೇಷ ಕಾರ್ಯಗಳನ್ನು ಅಪ್ರೈರಿಪಡಿಸಿದುದಿನ್ನೊಂದು; ಸೈನ್ಯ ಸಂಖ್ಯೆಯನ್ನು ಕಡಿಮೆ ಮಾಡಿದುದು ಮತ್ತೊಂದು. ಇವೆಲ್ಲವುಗಳನ್ನು ನೋಡಿದರೆ ಸೈನ್ಯ ಖಾತೆಯ ಖರ್ಚು 1/3ನೇ ಪಾಲಷ್ಟಾದರೂ ಕಡಿಮೆಯಾಗುವುದು ಅವಶ್ಯಕವಿದ್ದಿತು. ಆದರೆ ಅಂತಹ ಶುಭ ಸೂಚನೆಯು ಈ ಬಜೆಟಿನಲ್ಲಿ ಕಾಣ ಬರುವುದಿಲ್ಲ.

ಅಫೀಮು ಬೆಳೆಯು ಕಡಿಮೆ ಮಾಡಲ್ಪಟ್ಟಿದೆಯೆಂದು ಸೂಚಿಸೋಣಾಗಿರುವುದಾದರೂ, ಬೆಳೆಯನ್ನು ಕಾಲಾನುಕ್ರಮದಲ್ಲಿ ಪೂರ್ಣವಾಗಿ ಕಡಿಮೆಮಾಡುವ ಧೋರಣಕ್ಕನುಸಾರವಾಗಿ ಮಾಡಿಲ್ಲ. ಮಾಡಬಹುದೆಂಬ ಆಶೆಯೊಂದು ಮಾತ್ರ ತೋರಿಸಿಯದೆಯಲ್ಲದೆ, ಆ ಧೋರಣವು ಕೈಕೊಳ್ಳಲ್ಪಡುವುದಾಗಿ ಮಾತು ಕೊಟ್ಟಿಲ್ಲ. ಹಿಂದೀ ಅಫೀಮಿನಿಂದ ಚೈನಾದ ಸರ್ವನಾಶವಾದ ಕಥೆ ಇತಿಹಾಸಪ್ರಸಿದ್ಧವಾಗಿದೆ. ಹಿಂದೀ ಸರಕಾರವು ಇದರ ಬೆಳೆಯಿಂದಾಗುವ ೨ ಕೋಟಿಯ ಲಾಭದ ಆಶೆಯಿಂದ ಈ ಅತ್ಯಾಚಾರವನ್ನು ಇನ್ನೂ ನಡಿಸುವುದು ಅನ್ಯಾಯವಿದೆ. ಲೋಕ ದೃಷ್ಟಿಯಲ್ಲಿ ಕೂಡ ಇದು ಬಹಳ ಅವಮಾನಕರವಾಗಿ ಪರಿಣಮಿಸಿಯದೆ.

ಬಜೆಟಿನ ಪೆಟ್ಟಿನ ವಿಷಯಗಳನ್ನು ನಾವು ತತ್ಕಾಲಕ್ಕೆ ಚರ್ಚಿಸುವುದಿಲ್ಲ. ಆದರೆ ಸರ್ ಬ್ಲೆಕೆಟ್ಟರು ಈ ಸುಧಾರಣಾ ಸರಕಾರವನ್ನು ತಮ್ಮ ಬಜೆಟು ಮೂಲಕ ಆಕಾಶಕ್ಕೇರಿಸುವುದನ್ನು ಮಾತ್ರ ನಾವು ಒಪ್ಪಲಾರೆವು. ಬಜೆಟಿನೊಳಗಿನ ಲಾಭವು ಹೇಗೆ ಉಳಿಯಿತು, ಆದಾಯ ಯಾವ ರೀತಿಯಿಂದಾಗುತ್ತದೆ, ವ್ಯಯ ಯಾವುದಕ್ಕಾಗಿ ಆಗುತ್ತದೆ ಎಂಬುದನ್ನು ಪೂರ್ಣ ನೋಡಿದರೆ ಸುಧಾರಣಾ ಸರಕಾರದಿಂದ ಹಿಂದೂಸ್ಥಾನಕ್ಕೆ ಅದ ದೊಡ್ಡ ಲಾಭವು ತೋರಿ ಬರುವಂತಿಲ್ಲ.

ವಿದೇಶ ವರ್ತಮಾನ.

—ದಕ್ಷಿಣ ಆಫ್ರಿಕದ ಸೆನೆಟರ್ ಬೇಂಕನ್ನೂ, ಡಾರ್ಬನ್ ಬೇಂಕನ್ನೂ ಒಟ್ಟುಕೂಡಿಸಿ ಒಂದೇ ಬೇಂಕಾಗಿ ಮಾಡಿರುವರು. ಒಟ್ಟು ಬಂಡವಾಳ ೧೦ ಮಿಲಿಯ ಪೌಂಡು!

—ಜಿನೋವಾದಲ್ಲಿ ನಡಿಯುವ ಲೀಗ್ ಒಫ್ ನೇಶನುಗಳ ಸಭೆಯಲ್ಲಿ ಸರಿಯಾಗಿ ಕೈಹಾಕಲು ಜಿದವಿದ್ದರೆ ಇಂಗ್ಲೆಂಡಿನ ಮಂತ್ರಿಗಳಾದ ಸರ್. ಎ. ಚೆಂಬರಲೇನರು ರಾಜಿನಾಮೆ ಕೊಡುವುದರಲ್ಲಿದ್ದಾರಂತೆ!

—ಈ ವರ್ಷ ಬ್ರಿಟಿಷ್ ನೌಕಾ ಸೈನ್ಯಕ್ಕಾಗಿ ೫೮ ಮಿಲಿಯ ಪೌಂಡುಗಳನ್ನು ಖರ್ಚುಮಾಡುವುದಂತೆ. ಈ ಹಣದಿಂದ ಸಿಂಗಾಪುರದಲ್ಲಿ ಒಂದು ಡೋಕನ್ನು ಕಟ್ಟಿಸುವರು.

—ಉತ್ತರ ಧ್ರುವಸಾಗರಕ್ಕೆ ಹೋಗಿ ಉತ್ತರ ಧ್ರುವವನ್ನು ಕಂಡುಕೊಳ್ಳುವುದಕ್ಕೆ ಕೆಪ್ಟನ್ ಅಮುಂಡಸೇನರ ವಿಮಾನವು ತಯಾರಾಗುತ್ತದೆ. ಇದರಲ್ಲಿ ೩೦ ಜನರು ಕೂತುಕೊಳ್ಳಬಹುದು.

—ಸೀರಿಯದಲ್ಲಿ ದಂಗೆ ಎಬ್ಬಿಸದ ಹಾಗೆ ಫ್ರೆಂಚರು ಬಹಳ ಜಾಗರೂಕತೆಯಿಂದ ಗಡಿಯನ್ನು ಕಾಯುತ್ತಿರುವರು.

—ಪಾರ್ಲಿಮೆಂಟ ಎಸೋಶಿಯೇಶನಿನಲ್ಲಿ ಇಂಡಿಯದಿಂದಲೂ ಮೆಂಬರರನ್ನು ಚುನಾಯಿಸುವರಂತೆ.

—ರ್ಹೈನ ನದಿಯಲ್ಲಿ ನಿಂತು ಜರ್ಮನಿಯನ್ನು ಕಾಯುತ್ತಿದ್ದ ಇಂಗ್ಲಿಷ ನೌಕಾ ಹಡಗಗಳು ಲಂಡನಿಗೆ ಬರುವಾಗ ದಾರಿಯಲ್ಲಿ ತುಫಾನಿನಿಂದ ಒಂದು ಹಡಗವು ಮುಳುಗಿ ಹೋಯಿತು.

—ಚೈನದಲ್ಲಿ ಕ್ರೈಸ್ತರಿಗೆ ವಿರೋಧವಾಗಿ ನಡಿಯುತ್ತಿದ್ದ ಚಳವಳವನ್ನು ನಿಲ್ಲಿಸುವಂತೆ ಅಲ್ಲಿಯ ಸರಕಾರದವರು ಸಿವಿಲ್ ಮತ್ತು ಮಿಲಿಟರಿ ಗವರ್ನರರಿಗೆ ಅಪ್ಪಣೆಕೊಟ್ಟಿರುವರು.

—ರಶ್ಯಾದೇಶದಲ್ಲಿ ಮೊಸ್ಕೊ ಪಟ್ಟಣದಲ್ಲಿ ಕೊಮ್ಯುನಿಸ್ಟರ ಕೊಂಗ್ರೆಸು ಸೇರಿ ಬೇರೆ ಬೇರೆ ದೇಶಗಳಲ್ಲಿ ಬೊಲ್ಶೆವಿಜಮ್ ಎಷ್ಟು ಅಭಿವೃದ್ಧಿ ಹೊಂದಿಯದೆಂದು ಚರ್ಚಿಸುವರು.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಇಲೆಕ್ಟ್ರಿಸಿಟಿ ಬಿಲ್ಲನ್ನು ತರಲಿಕ್ಕಿರುವರು ಇದರ ಪ್ರಕಾರ ಒಬ್ಬ ಚೆಯರ್‌ಮೇನರು ಮತ್ತು ೭ ಮಂದಿ ಮೆಂಬರರು ಇರುವರು.

—ಇಂಗ್ಲಂಡಿನ ಬ್ರ್ಯಾಟನ್ನಿನಲ್ಲಿ ಬಾಯಸ್ಕೋಪಿನ ಫಿಲ್ಮುಗಳನ್ನು ತಯಾರಿಸುವ ಒಂದು ಕಂಪೆನಿಯನ್ನು ಇಡುತ್ತಾರೆ.

—ಗ್ರೀಸ್ ದೇಶದ ಯುದ್ಧವಿಮಾನಗಳಲ್ಲಿ ೪೫೦ ಕುದುರೆ ಶಕ್ತಿ ಇರುವ ಬ್ರಿಟಿಷ ವಿಮಾನಗಳನ್ನು ಉಪಯೋಗಿಸುವರೆಂದು ನಿಶ್ಚಯಿಸಿರುತ್ತಾರೆ.

—ಚೀನಾದಲ್ಲಿ ಸಾಂಗಾಯಿ ಎಂಬ ಒಂದು ಜಪಾನಿಸ್ ವಸ್ತ್ರದ ಗಿರಣಿಯಲ್ಲಿ ಸುಮಾರು ೩೯೦೦ ಕೂಲಿಕಾರರು ತಮ್ಮ ಕೆಲಸಕ್ಕೆ ಮುಷ್ಕರ ಹಾಕಿ ಆ ಗಿರಣಿಯ ಫೋರ್‌ಮೇನರನ್ನು ಕೊಂದು ಅನೇಕ ಯಂತ್ರಸಾಮಗ್ರಿಗಳನ್ನು ಹಾಳುಮಾಡಿ ಹಾಕಿರುವರು.

—ಇಡೀ ಭೂಲೋಕದಲ್ಲಿರುವ ಮೋಟಾರುಕಾರುಗಳ ಪೈಕಿ ಅತಿ ವೇಗವಾಗಿ ಓಡುವ ಮೋಟಾರುಕಾರು ಇಂಗ್ಲೆಂಡಿನಲ್ಲಿ ಸನ್‌ಬೀಮ್ ಮೋಟಾರಕಾರ್ ಕಂಪೆನಿಯವರು ತಯಾರಿಸಿರುವರು. ಇದು ಒಂದು ಘಂಟೆಗೆ ೧೭೦ ಮೈಲು ಓಡುವುದಂತೆ! ಈ ಮೋಟಾರುಕಾರಿಗೆ ಸುಮಾರು ೩೦೦ ಕುದುರೆಗಳ ತ್ರಾಣವಿದೆಯಂತೆ.

—ಲಂಡನಿನಲ್ಲಿ ಹಾಸ್ ಒಫ್ ಕೋಮನ್ಸಿನಲ್ಲಿ ಬ್ರ್ಯಾವ್‌ಲಿ ಎಂಬವರು ಸಿಲೋನಿನಲ್ಲಿ ಕೃಷ್ಣನ್ ಎಂಬ ಒಬ್ಬ ಚಾ ತೋಟದ ಕೂಲಿಯನ್ನು ಕೊಂದುಹಾಕಿದ ವಿಷಯವನ್ನು ಸಿಲೋನ್ ಗವರ್ನರಿಗೆ ಬರೆದು, ಒಂದು ರಿಪೋರ್ಟನ್ನು ತರಿಸಬೇಕಾಗಿ ಕೇಳಿಕೊಂಡಿರುವನು.

—ಮಂಡಾಲಿ ಜೈಲಿನಲ್ಲಿದ್ದ ಬಂಗಾಲ ಓರ್ಡಿನೆನ್ಸಿನ ಮೇರೆಗೆ ಕೈದುಮಾಡಲ್ಪಟ್ಟ ರಾಜಕೈದಿಗಳಿಗೆ ತಮಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುವುದಿಲ್ಲವಾದ್ದರಿಂದ ಎಲ್ಲರೂ ಅನಶನವ್ರತವನ್ನು ಹಿಡಿದಿರುವರು. ಇವರನ್ನು ಕೂಡಲೆ ಬಿಡುಗಡೆಮಾಡಬೇಕಾಗಿ ಲಂಡನಿನಲ್ಲಿ ಇಂಡಿಪೆಂಡೆಂಟ್ ಲೇಬರ್ ಪಾರ್ಟಿಯವರು ಲೋರ್ಡ ಬರ್ಕನ್‌ಹೆಡ್ಡರಿಗೆ ಒಂದು ಮನವಿ ಮಾಡಿಕೊಂಡಿರುವರು.

ಒಳದೇಶ ವರ್ತಮಾನ.

—ಇನ್ನು ಮುಂದೆ ಇಂಡಿಯದಲ್ಲಿರುವ ಪೋರ್ತುಗೀಸ ವಸಾಹತುಗಳಿಗೆ ಪೂರ್ಣ ಸ್ವತಂತ್ರವನ್ನು ಕೊಡುವರಂತೆ!

—ಒನರೇಬಲ್ ಮಾಧವನ್ ನಾಯರರನ್ನೂ, ವಿ. ವಿ. ಶ್ರೀನಿವಾಸ ಅಯ್ಯಂಗಾರರನ್ನೂ ಮದರಾಸು ಹ್ಯಾಕೋರ್ಟಿನ ಟೆಂಪರರಿ ಜಡ್ಜರಾಗಿ ನೇಮಿಸಿರುತ್ತಾರೆ.

—ಬೇಸಾಯದ ವಿಷಯ ತನ್ನಿ ನಡಿಸಲಿಕ್ಕೆ ಇಂಗ್ಲೆಂಡಿನಿಂದ ಒಂದು ರೋಯಲ್ ಕಮಿಷನ್ ಬರುವಾಗ ಮದರಾಸು ಸಂಸ್ಥಾನದಿಂದ ಬೇಸಾಯಗಾರರನ್ನೂ, ಮತ್ತು ಭೂಮಾಲಿಕರನ್ನೂ ಸಾಕ್ಷಿಕೊಡಲಿಕ್ಕೆ ಮೆಂಬರರಾಗಿ ಚುನಾಯಿಸುವರಂತೆ!

—ಇಂದೋರಿನ ಮಹಾರಾಜಾ ಹೋಳ್ಕರರು ತನ್ನ ಸಿಂಹಾಸನವನ್ನು ಮಗನಿಗೆ ಬಿಟ್ಟುಕೊಟ್ಟರು. ಇಂಡಿಯಾ ಸರಕಾರವು ಇದಕ್ಕೆ ಒಪ್ಪಿಗೆ ಕೊಟ್ಟಿರುವದು. ಆದುದರಿಂದ ಇನ್ನು ಬಾವ್ಲಾ ಕೊಲೆಯ ತನಿಖೆಯು ಇಷ್ಟರಲ್ಲಿ ಮುಗಿಯಿತಂತೆ! ಮಹಾರಾಜರು ಬಚಾವು ಆದರು!

—ಅಹಮದಾಬಾದಿನಲ್ಲಿ ಹಿಂದೂಮುಸಲ್ಮಾನರಿಗಾದ ಜಗಳವು ರಾಜಿಯಿಂದ ತೀರ್ಮಾನವಾಯಿತು.

—ಮಂಡಲೆಯ ಜೈಲಿನಲ್ಲಿರುವ ಕೊಂಗ್ರೆಸ್ ಪಂಗಡದವರು ಆ ದಿವಸಗಳ ಉಪವಾಸ ವ್ರತವನ್ನು ಆಚರಿಸುವರು.

—ರಂಗೂನಿನ ಬರ್ಮಾ ಗವರ್ನರರಾದ ಸರ್ ಹೆರ್‌ಕೋರ್ಟ ಬಟ್ಲರರವರು ಬರ್ಮಾದೇಶದ ರಾಜ್ಯಭಾರ ಕ್ರಮದ ವಿಷಯ ಒಂದು ಭಾಷಣದಲ್ಲಿ ಇಂಡಿಪೆಂಡೆಂಟ ಪಾರ್ಟಿಯವರಿಗೆ ಕಳೆದ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳು ಸಿಕ್ಕಿದೆಯೆಂದೂ, ಇಂಡಿಯಾದೇಶದ ಎಲ್ಲಾ ಪ್ರದೇಶಗಳಲ್ಲಿಯೂ ಕೊಡಲ್ಪಟ್ಟಿದ್ದ [illegible] ಅನೇಕ ತರದ ಅನ್ಯಾಯಗಳು ನಡಿಯುತ್ತವೆಂದೂ ಆದರೂ ಬರ್ಮಾ ದೇಶದವರು, ಸರಕಾರವು ತೆಗೆದುಕೊಳ್ಳುವ ಮುಂಜಾಗ್ರತೆಯಿಂದ ಕಡಿಮೆಯಾಗಿದೆಯೆಂದೂ, ಬರ್ಮಾ ದೇಶಕ್ಕೆ ಇದು ಗಳು ಹೆಚ್ಚಾಗಿರುವುದರಿಂದ ಈ ಕಳವು ಕೊಲೆಗಳಿಗೆ ಕಾರಣವೆಂದೂ, ಈ ವರುಷ ನಡೆದ ೩೭೭ ಕೊಲೆಪಾತಕಗಳಲ್ಲಿ ೬೬ ಮಂದಿಗೆ ಮಾತ್ರವೇ ಶಿಕ್ಷೆಯಾಗಿದೆಯೆಂದೂ ಪೋಲೀಸ ಅಧಿಕಾರಿಗಳು ಒಳ್ಳೇ ಶ್ರದ್ಧೆಯಿಂದ ಕೆಲಸ ಮಾಡುತ್ತಾರೆಂದೂ ಅವರಿಗೆ ಊರವರು ಕೊಲೆಪಾತಕರನ್ನು ಹುಡುಕಿಕೊಡುವುದರಲ್ಲಿ ಸಹಾಯಕರಾಗಬೇಕೆಂದೂ, ಅವಕ್ಕೆ ಬಿಸ್ತರೆ ಕಾನೂನನ್ನು ತಿದ್ದುಪಡಿಮಾಡಬೇಕೆಂದೂ, ಬರ್ಮಾ ದೇಶವು ಇಂಡಿಯದ ಮೇಲೆ ಅವಲಂಬಿಸಿಕೊಂಡಿದೆಯೆಂದೂ ಬರ್ಮಾ ಹ್ಯಾಕೋರ್ಟಿಗೆ ಇಬ್ಬರು ಇಂಡಿಯನ್ ಜಡ್ಜರನ್ನು ನೇಮಿಸಿಯದೆಂದೂ, ಪ್ರಜೆಗಳೂ ಸರಕಾರವೂ ಪ್ರೀತಿಯಿಂದ ಇದ್ದಾರೆಂದೂ ಪಾರ್ಲಿಮೆಂಟಿನವರು ಇಂಡಿಯಾ ಸರಕಾರದ ಹೊಸ ಬದಲಾವಣೆಗಳನ್ನು ಮಾಡುವಾಗ ಬರ್ಮಾ ದೇಶಕ್ಕೆ ಈಗಿರುವದಕ್ಕಿಂತಲೂ ಹೆಚ್ಚು ಹಕ್ಕು ಸ್ವಾತಂತ್ರಗಳು ಸಿಕ್ಕುವಂತೆ ತಾನು ಪ್ರಯತ್ನಿಸುವೆನೆಂದೂ ಹೇಳಿದರು.

—ಪಂಡಿತ ಮೋತಿಲಾಲ ನೆಹರುರವರು ಅಹಮದಾಬಾದಿಗೆ ಬಂದು ಮಹಾತ್ಮಾಜಿಯವರೊಡನೆ ಬರುವ ಓಲ್ ಇಂಡಿಯಾ ಕೊಂಗ್ರೆಸ ಕಮಿಟಿಯ ಮಿಟಿಂಗಿನ ವಿಷಯ ಮಾತನಾಡಿದರು. ಮಹಾತ್ಮಾಜಿಯವರು ಈ ಮಿಟಿಂಗಿಗೆ ಬರುವುದಿಲ್ಲವಂತೆ!

—ಸ್ಕೀನ ಕಮಿಟಿಯವರು ಡಿಲ್ಲಿಯಲ್ಲಿ ಜನರಿಂದ ಅನುಭವವನ್ನು ಪಡೆದು ಅಲಿಗಾರಕ್ಕೆ ಹೋಗಿ ಅಲ್ಲಿಯ ಜನರ ಅನುಭವವನ್ನು ಪಡಕೊಂಡು ಅಲಿಗಾರಾ ಯುನಿವರ್ಸಿಟಿಯನ್ನು ಸಂದರ್ಶಿಸುವರು. ಇವರ ಸಬ್ ಕಮಿಟಿ ಮೆಂಬರರಾದ ಪಂಡಿತ ಮೋತಿಲಾಲ ನೆಹರು, ಮಿ॥ ಜಿನ್ನಾ, ಸರ್ ಅಬ್ದುಲ್ ಕರಿಮ್ ಮತ್ತು ಮೆಜೊರ್‌ಜೊರಾವರಸಿಂಗ ಇವರು ಎಪ್ರಿಲ್ ೧೦ನೇ ತಾರೀಕಿಗೆ ಇಂಗ್ಲೆಂಡಿಗೂ ಅಲ್ಲಿಂದ ಕೆನಡಕ್ಕೂ ಹೋಗಿ ಆಗೋಸ್ತು ತಿಂಗಳಲ್ಲಿ ಹಿಂತಿರುಗಿ ಇಂಡಿಯಕ್ಕೆ ಬರುವರು.

—ರಂಗೂನ್ ಪೋಸ್ಟಾಫೀಸಿನ ಒಬ್ಬ ಕ್ಲಾರ್ಕರು ರೂ. ೧೫೮೪೫ನ್ನು ಟಪ್ಪಾಲು ಆಫೀಸಿನಿಂದ ಕಳವುಮಾಡಿದ್ದಕ್ಕಾಗಿ ೩॥ ವರುಷಗಳ ಕಠಿಣ ಸಜೆಯನ್ನು ವಿಧಿಸಿದರು. ಫೊಸೊ ಎಂಬ ಈ ಗುಮಾಸ್ತರು ಈ ಹಣವನ್ನೆಲ್ಲ ಕುದುರೆ ಜೂಜಿನಲ್ಲಿ ಖರ್ಚುಮಾಡಿದ್ದೇನೆಂದು ಮೆಜಿಸ್ಟ್ರೇಟರ ಮುಂದೆ ಒಪ್ಪಿದರು!

—ಕಾಶ್ಮೀರ್ ಮಹಾರಾಜರ ಪಟ್ಟಾಭಿಶೇಕ ಮಹೋತ್ಸವವು ಹಿಂದೂ ಶಾಸ್ತ್ರ ರೀತಿಯಲ್ಲಿ ಜರಗಿ ಮುಗಿಯಿತು. ಪಟ್ಟಾಭಿಷೇಕಕ್ಕೆ, ಪತಿಯಾ, ಆಲವಾರ್, ಕಪುರತಾಲಾ ಮಹರಾಜರೂ, ಪಲಂಪೂರಿನ ನವಾಬರೂ ಬಂದಿದ್ದರು. ಬರುವ ವಾರ ಯುರೋಪಿಯನ್‌ರಿಗೆ ಸಮ್ಮಾನಗಳು ನಡಿಯುವವು. ಇದಕ್ಕೆ ಪಂಜಾಬ ಗವರ್ನರರೂ, ಸರ್ವ ಸೇನಾಧಿಪತಿಗಳೂ ಬರುವರು.

—ಬಂಗಾಳ ಕೊಲ್ಲಿಯಲ್ಲಿ ಒಂದು ಸ್ಟೀಮ್‌ಲೊಂಚ್ ಮುಳುಗಿ ೪೩ ಪ್ರಯಾಣಿಕರು ಮುಳುಗಿ ಸತ್ತರು!

—ಎಸ್ಸಾಮು ಕೌನ್ಸಿಲಿನವರು ಪ್ರಾಮರಿ ವಿದ್ಯಾಭ್ಯಾಸಕ್ಕೆ ೫ ಲಕ್ಷ ರೂಪಾಯಿಯನ್ನು ಹೆಚ್ಚಿಗೆ ಸೆಂಕ್ಷನ್ ಮಾಡಿರುವರು.

—ಮದರಾಸಿನ ೪೨ನೆ ಫ್ಯಾನ್ ಆರ್ಟ ಎಗ್ಜಿಬಿಶನನ್ನು ಮದರಾಸು ಗವರ್ನರರು ತೆರೆದರು. ಇದರಲ್ಲಿ ಸುಮಾರು ೫೦೦ ಚಿತ್ರಗಳು ಬಂದಿದ್ದವು.

—ಮೈಸೂರಿನ ದಿವಾನರಾಗಿದ್ದ ಸರ್ ಆಲ್ಬಿಯನ್ ರಾಜಕುಮಾರ ಬೆನರ್ಜಿಯವರು ತಮ್ಮ ಹುದ್ದೆಯನ್ನು ಬಿಟ್ಟು ಮೇ ತಿಂಗಳಲ್ಲಿ ಇಂಗ್ಲೆಂಡಿಗೆ ಹೋಗಿ ಅಲ್ಲಿ ಲಿಬರಲ್ ಪಕ್ಷದವರ ಕಡೆಯಿಂದ ಪಾರ್ಲಿಮೆಂಟ ಮೆಂಬರರಾಗುವರಂತೆ. ಇವರ ಬದಲಾಗಿ ಅಮಿನ್ ಉಲ್ ಮುಲ್ಕ ಮಿರಜಾ ಮಹಮದ್ ಇಸ್ಮಯೇಲ್ ಸಿ. ಐ. ಇ. ಯವರು ದಿವಾನರಾಗುವರು. ಇವರು ಈಗ ಮಹಾರಾಜರವರ ಪ್ರ್ಯಾವೇಟ ಸೆಕ್ರಿಟರಿಯಾಗಿರುವರು.

—ಮುಂಬಾಯಿಯಲ್ಲಿ ಪ್ರಕಟವಾಗುತ್ತಿರುವ ದಿ ಬೊಂಬೇ ಕ್ರೋನಿಕಲ್ ಪತ್ರಿಕೆಯ ಸಂಪಾದಕತ್ವದ ಕೆಲಸಕ್ಕೆ ಮಿ॥ ಬಿ. ಜಿ. ಹೊರ್ನಿಮನರು ರಾಜಿನೆಕೊಟ್ಟಿರುವರೆಂದು ತಿಳಿದುಬರುತ್ತದೆ.

—ಸಿಮ್ಲಾದಲ್ಲಿ ಒಬ್ಬ ಕೂಲಿಯನ್ನು ಕೊಂದ ಮೇನಸಲ್ ಕ್ಷಿಯೂಡಲ್ ಎಂಬ ಯುರೋಪಿಯನರ ಮೇಲೆ ನಡಿಯುತ್ತಿರುವ ಕ್ರಿಮಿನಲ್ ಸಂಬಂಧದ ವಿಚಾರಣೆಯು ಕಳೆದ ತಾ. ೧೯ಕ್ಕೆ ಮುಗಿದು ಅಪರಾಧಿಗೆ ೧॥ ವರ್ಷದ ಕಠಿಣ ಸಜೆಯನ್ನೂ ಮತ್ತು ೪,೦೦೦ ರೂಪಾಯಿಯ ಜುರುಮಾನೆಯನ್ನೂ ವಿಧಿಸಿರುವರು. ಆ ತಕ್ಕ ಜುರುಮಾನೆಯನ್ನು ಕೊಡಲಿಕ್ಕೆ ತಪ್ಪಿದ್ದಲ್ಲಿ ಇನ್ನೊಂದು ವರ್ಷದ ಕಠಿಣ ಸಜೆಯನ್ನು ವಿಧಿಸಿರುವರು. ಇನ್ನು ಮುಂದಕ್ಕೆ ಅಫೀಲ್ ಉಂಟಂತೆ!

—ದಕ್ಷಿಣ ಆಫ್ರಿಕದಲ್ಲಿ ಭಾರತೀಯರಿಗೆ ವಿರೋಧವಾಗಿ ಮಾಡಲ್ಪಟ್ಟಿರುವ ಕಾನೂನು ಸಿಲೆಕ್ಟ ಕಮಿಟಿಗೆ ಅಂಕಿತಮಾಡಲ್ಪಟ್ಟಿರುತ್ತದೆ.

—ಮದರಾಸಿನ ಹೈಕೋರ್ಟು ಜಡ್ಜರಾಗಿದ್ದ ಮಿ॥ ಟಿ. ವಿ. ಶೇಷಗಿರಿಯ್ಯರ್‌ರವರು ಕೆಲವು ದಿವಸಗಳಿಂದಲೂ ಬಹಳ ಕಾಯಿಲೆಯಲ್ಲಿರುವರೆಂದು ತಿಳಿಯಬರುತ್ತದೆ.

—ಹತ್ತಿ ಕೈಗಾರಿಕೆಯ ಸುಂಕವನ್ನು ವಜಾ ಮಾಡುವ ಉದ್ದಿಶ್ಯ ವಿನಾ ಮತ್ಯಾವ ವಿಧವಾದ ರಕ್ಷಣೆಯನ್ನೂ ಬೊಂಬಾಯಿಯ ಮಿಲ್ ಮ್ಹಾಲಿಕರು ಕೇಳಿರುವುದಿಲ್ಲವೆಂದು ಇಂಡಿಯದ ನ್ಯಾಯವಿಧಾಯಕ ಸಭೆಯಲ್ಲಿ ತಿಳಿಸಲ್ಪಟ್ಟಿದೆ.

—ಬರೋಡಾ ಸಂಸ್ಥಾನದಲ್ಲಿ ಬರೋಡಾ ಸೈನ್ಯಾಧಿಪಗಳಾದ ಮಿಸೆಸ್ ಹಾರ್ಕಿಶ್ ದೊರೆಸಾನಿಯವರ ಶವವು ಒಂದು ಬಾವಿಯಲ್ಲಿ ಸಿಕ್ಕಿತ್ತು. ಅವರ ಮೈಮೇಲಿದ್ದ ಆಭರಣಗಳು ಅಪಹರಿಸಲ್ಪಟ್ಟಿದ್ದವು. ಇದರ ತನಿಖೆಯು ನಡಿಯುತ್ತಿದೆ.

—ಮದರಾಸ್ ದಿನಚರೀ ಹಿಂದೂ ಪತ್ರಿಕೆಯು ದಿನ ಒಂದಕ್ಕೆ ೧೯,೦೦೦ರಂತೆ ಪ್ರಚಾರವಿದೆ. ಮದರಾಸ್ ಮೈಲ್ ಪತ್ರಿಕೆಯು ೭,೦೦೦ ನ್ಯೂ ಇಂಡಿಯಾ ೨,೦೦೦, ಡೈಲೀ ಪೋಸ್ಟ್ ೬೫೦, ಆಂಧ್ರ ಪತ್ರಿಕೆಯು ೭,೦೦೦, ಆನಂದ ಬೋಧಿನಿ ೨೦,೦೦೦ ಸ್ವದೇಶಮಿತ್ರನ್ ೬,೦೦೦.

—ಬಂಗಾಳದ ನ್ಯಾಯವಿಧಾಯಕ ಸಭೆಯಲ್ಲಿ ಅಧ್ಯಕ್ಷರಿಗೂ ಅನೇಕ ರಾಷ್ಟ್ರೀಯ ಸದಸ್ಯರಿಗೂ ಪರಸ್ಪರ ವಾಗ್ವಾದಗಳು ನಡೆದು, ಬಹಳ ಜನ ಸದಸ್ಯರು ಸಭೆಯನ್ನು ಬಿಟ್ಟು ಹೊರಗೆ ಬಂದರು. ಈ ವಿಷಯವಾಗಿ ಬಂಗಾಳದಲ್ಲಿ ಬಹಳ ಅಲ್ಲೋಲಕಲ್ಲೋಲವಾಗಿರುವದು.

—ಅನೇಕ ವಿಧವಾದ ಕೈಗಾರಿಕೆಗಳನ್ನು ಈಗ, ವಿದ್ಯುಚ್ಛಕ್ತಿಯ ಸಹಾಯದಿಂದ ನಡೆಸುತ್ತಲಿರುವರು. ಅಲ್ಲದ್ದೆ ದೊಡ್ಡ [illegible] ಕಡಿಮೆ ಯಾಗುತ್ತಿರುವುದು. ವಿಲಾಯತಿಯು ಹತ್ತಿ ಕಾರ್ಖಾನೆಗಳಲ್ಲಿ ಇದನ್ನೇ ಇದನ್ನು ಬಹಳವಾಗಿ ಉಪಯೋಗಿಸುತ್ತಿರುವರು.

—ಕಲ್ಕತ್ತೆಯಲ್ಲಿ ಒಬ್ಬ ವಕೀಲನನ್ನು ಅವನ ಮೇಲೆ ಆಗಿದ್ದ ಸಿವಿಲ್ ಡಿಕ್ರಿಗಾಗಿ ಅಮೀನನು ಕೋರ್ಟಿನಲ್ಲಿ ವಾರಂಟು ತೋರಿಸಿ, ದಸ್ತಗಿರಿ ಮಾಡಿದನು. ಹೈಕೋರ್ಟ ಜಡ್ಜಿಯವರಲ್ಲಿ ಹೇಳಿಕೊಂಡಾಗ, ಅದು ನ್ಯಾಯವಲ್ಲವೆಂದು ಹೇಳಿ ಆ ವಕೀಲನನ್ನು ಅಮೀನಿನ ವಶದಿಂದ ಬಿಡಿಸಿಬಿಟ್ಟರಂತೆ!

—ಲಾಲಾಹರಿಕಿಶನ್‌ಲಾಲ್ ಎಂಬವರು ಪಂಜಾಬ್ ಸರ್ಕಾರದ ಮಾಜೀ ಮಂತ್ರಿಗಳು. ಇವರು ಈ ತಿಂಗಳ ತಾ. ೧೯ನೇ ಡಿಲ್ಲಿಯಲ್ಲಿ ನಡೆದ ಅಖಿಲ ಭಾರತ ಕೈಗಾರಿಕೆಯ ಮಹಾಸಭೆಗೆ ಅಧ್ಯಕ್ಷರಾಗಿದ್ದರು. ಆ ಸಭೆಯಲ್ಲಿ ಅಧ್ಯಕ್ಷರು ಕೈರಾಟೆಯ ಪ್ರಚಾರವನ್ನು ಕುರಿತು ಬಹಳವಾಗಿ ಪ್ರಶಂಸಿದರು.

—ದಕ್ಷಿಣ ಆಫ್ರಿಕದಲ್ಲಿ ನಮ್ಮ ಭಾರತೀಯರಿಗೆ ವಿರೋಧವಾಗಿ ಮಾಡಬೇಕೆಂದಿರುವ ಕಾನೂನಿನ ವಿಷಯದಲ್ಲಿ ಅತೃಪ್ತಿಯನ್ನು ತೋರಿಸುವುದಕ್ಕೋಸ್ಕರ ನಮ್ಮ ಇಂಡಿಯಾದೇಶದ ವ್ಯಾಸರಾಯರವರು ರಾಜೀನಾಮೆಯನ್ನು ಕೊಡಬೇಕೆಂಬ ಅಭಿಪ್ರಾಯದ ಒಂದು ಠರಾವು ಕರಾಚಿಯ ಮ್ಯುನ್ಸಿಪಾಲಿಟಿಯಲ್ಲಿ ತರಲ್ಪಡುವುದು.

—ಜಪಾನಿನಿಂದ ಬರುವ ಹತ್ತಿನೂಲು ಮತ್ತು ಬಟ್ಟೆಗಳ ಮೇಲೆ ಸುಂಕವನ್ನು ಹಾಕಬೇಕೆಂಬ ಪ್ರಯತ್ನವನ್ನು ಕಲ್ಕತ್ತೆಯ ಅನೇಕ ವರ್ತಕರು ವಿರೋಧಿಸುವರು. ಇದರಿಂದ ಬ್ರಿಟಿಷ್ ಬಟ್ಟೆಯ ವ್ಯಾಪಾರಿಗಳಿಗೂ ಮುಂಬಯಿಯ ಗಿರಣಿಯ ಮ್ಹಾಲಿಕರಿಗೂ ಫಾಯಿದೆಯಾಗುವುದೇ ವಿನಹಾ ದೇಶಕ್ಕೆ ಯಾವ ವಿಧವಾದ ಲಾಭವೂ ಇಲ್ಲವೆಂಬುದು ಇವರ ಅಭಿಪ್ರಾಯ.

—ಕಳೆದ ತಾ. ೧೯ಕ್ಕೆ ಹೈದರಾಬಾದಿನ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಒಂದು ಮಹಮ್ಮದಿಯ ಹೆಂಗಸಿನ ಮದುವೆಯ ವಿಷಯದ ಸಂಬಂಧ ತನ್ನಿಯು ನಡಿಯುತ್ತಿರುವಾಗ್ಗೆ ಕೆಲವು ಮಹಮ್ಮದಿಯರು ಕೋರ್ಟಿನ ಒಳಗೆ ಬಲತ್ಕಾರದಿಂದ ನುಗ್ಗಿ, ವಾದಿಯರ ಕಡೆಯಿಂದ ಆ ಹೆಂಗಸನ್ನು ರಿಮಾಂಡಿನಲ್ಲಿಟ್ಟಿದ್ದ ಸ್ಥಳದಿಂದ ತೆಗೆದುಕೊಂಡು ಹೋಗುವರೇ ಪ್ರಯತ್ನಗಳನ್ನು ನಡಿಸುತ್ತಿರುವಾಗ್ಗೆ ಎರಡು ಪಕ್ಷದವರೊಳಗೆ ಬಲವಾದ ಜಗಳವಾಗಿ ಎರಡು ಪಕ್ಷದವರಲ್ಲಿಯೂ ಸುಮಾರು ಎಳೆಂಟು ಜನರಿಗೆ ವಿಶೇಷ ಗಾಯವಾಗಿದೆ. ಜಗಳ ಮಾಡಿದ ಎರಡು ಪಕ್ಷದವರನ್ನೂ ಪೋಲೀಸರು ಕೈದು ಮಾಡಿರುವರು. ಇವರ ತನ್ನಿಯು ನಡಿಯುತ್ತಿದೆ.

—ಮದ್ರಾಸಿನ ಚೂಲೆ ಎಂಬಲ್ಲಿಯ ಒಂದು ಮಾರ್ಗದ ಬದಿಯಲ್ಲಿ ಒಬ್ಬ ಹುಡುಗನಿಗೂ ಮತ್ತೊಬ್ಬ ಸಾಧಾರಣ ೩೦ ವರ್ಷದ ಯೌವನಸ್ಥನಿಗೂ ಇಬ್ಬರೊಳಗೆ ಜಗಳ ನಡೆದು ಹುಡುಗನಿಗೆ ಬಲವಾದ ಪೆಟ್ಟಾಯಿತು. ಈ ವಿಚಾರವನ್ನು ತಿಳಕೊಳ್ಳಲಿಕ್ಕೆ ಬಂದ ಆ ಹುಡುಗನ ೫೫ ವರ್ಷ ಪ್ರಾಯದ ಮುದುಕಿಗೂ ಹುಡುಗನಿಗೆ ಹೊಡೆದ ಸದರಿ ಮನುಷ್ಯನು ಆಕೆಯ ತಲೆಯ ಜುಟ್ಟಿಗೆ ಹಿಡಿದು ನೆಲಕ್ಕೆ ಅಪ್ಪಳಿಸಿದನು. ಕೂಡಲೇ ಆ ಮುದುಕಿಯು ಪ್ರಾಣ ಬಿಟ್ಟಳು; ಅಪರಾಧಿಯು ಪರಾರಿಯಾಗಿರುತ್ತಾನೆ. ಅಲ್ಲಿಯ ಪೋಲೀಸಿನವರು ತಕ್ಕ ತನ್ನಿಯನ್ನು ನಡಿಸುತ್ತಿರುವರು.

—ಇಂಡಿಯದ ಈ ವರುಷದ ಬಜೆಟಿನಲ್ಲಿ ಖರ್ಚು ಕಳೆದು ೩೦೫ ಲಕ್ಷ ರೂಪಾಯಿ ಉಳಿಯುವದಂತೆ ಹೊಸ ತೆರಿಗೆಗಳನ್ನು ಈ ವರುಷ ವಿಧಿಸುವುದಿಲ್ಲವಂತೆ! ಮದ್ರಾಸು ಸಂಸ್ಥಾನಕ್ಕೆ ಉಳಿಯುವ ಈ ಹಣದಿಂದ ೫೭ ಲಕ್ಷ ರೂಪಾಯಿಯೂ, ಆಗ್ರಾ ಅಯೋಧ್ಯಾಸಂಯುಕ್ತ ಸಂಸ್ಥಾನಕ್ಕೆ ೩೩ ಲಕ್ಷವೂ, ಪಂಜಾಬಿಗೆ ೨೮ ಲಕ್ಷವೂ, ಬರ್ಮಕ್ಕೆ ೭ ಲಕ್ಷವೂ ಸಿಕ್ಕುವದು. ಹತ್ತಿಯ ಮೇಲಿರುವ ಸುಂಕವನ್ನು ತೆಗದು ಹಾಕಿ ೧೭೫ ಲಕ್ಷ ರೂಪಾಯಿ ನಷ್ಟವಾಗಿರುವುದು.

ದಕ್ಷಿಣ ಕನ್ನಡ.

ಬೆಳ್ಳಾರೆ:—ಸಹೃದಯ ಮಹಾಶಯರಲ್ಲಿ ವಿಜ್ಞಾಪನೆ—ನಮ್ಮ ಬೆಳ್ಳಾರೆಯಲ್ಲಿ ಪೂರ್ವದಲಾಗ್ಯಾತು ಇರುತ್ತಿದ್ದ ಶ್ರೀ ಲಕ್ಷ್ಮೀವೆಂಕಟರಮಣ ದೇವಸ್ಥಾನದ ಕಟ್ಟೋಣಗಳು ಜೀರ್ಣವಾಗಿರುತ್ತವೆ. ಅವನ್ನು ನವೀನವಾಗಿ ದುರುಸ್ತಿಪಡಿಸುವರ ಪ್ರಕೃತ ದೇವರ ಭಂಡಾರದಲ್ಲಿ ಹಣವಿಲ್ಲದಿರುವುದರಿಂದಲೂ ಈ ಜೀರ್ಣೋದ್ಧಾರ ಮಾಡುವ ಕೆಲಸ ಪ್ರಾರಂಭಿಸಿರುವುದರಿಂದ ಆ ಕುರಿತು ಉದಾರಹೃದಯರಾದ ತಾವೆಲ್ಲರೂ ಶಕ್ತ್ಯಾನುಸಾರ ದ್ರವ್ಯಸಹಾಯಮಾಡಿ ಸದರಿ ದೇವಸ್ಥಾನವನ್ನು ಉದ್ಧಾರಪಡಿಸಿದ ಪುಣ್ಯಕೆ ಭಾಗಿಗಳಾಗಬೇಕಾಗಿ ಅದಲ್ಲೆ ಮೊಕ್ತೇಸರರ ಸವಿನಯ ಕೋರಿಕೆಗಳು.

ಬೆಳ್ತಂಗಡಿ:—ತಾ. ೨೧—೨—೧೯೨೬ನೇ ಆದಿತ್ಯವಾರ ಶ್ರೀಯುತ ಕವಿಭೂಷಣ ಕೆ. ಪಿ. ವಿ. ಶೆಟ್ಟಿಯವರ ಶ್ರೀಸಿದ್ಧಾರೂಢ ಆಯುರ್ವೇದ ಔಷಧಾಲಯ ಮಂಗಳೂರು, ಇದರ ಶಾಖೆಯೊಂದನ್ನು ಬೆಳ್ತಂಗಡಿಯಲ್ಲಿ ಮ॥ ರಾ॥ ರಾ॥ ಉಪ್ಪಿನಂಗಡಿ ತಾಲೂಕುಬೋರ್ಡು ಪ್ರೆಸಿಡೆಂಟ ವಕೀಲ್ ಮೊಳಹಳ್ಳಿ ಶಿವರಾಯರ ಅಧ್ಯಕ್ಷತೆಯಿಂದ ಸಭೆ ಸೇರಿ ಬಹುಮಾನಪಟ್ಟ ಕಾರ್ಕಳ ಸದಾಶಿವ ಭಟ್ಟ ಬಿ. ಎ. ಬಿ. ಎಲ್. ಎಮ್. ಎಲ್. ಎ. ಇವರಿಂದ ತೆರೆಯಲಾಯಿತು.

ಉಡುಪಿ:—ಬರುವ ಮದರಾಸು ನ್ಯಾಯವಿಧಾಯಕ ಚುನಾವಣೆಗೂ, ಎಸೆಂಬ್ಲಿ ಚುನಾವಣೆಗೂ ಸ್ವರಾಜ್ಯಪಾರ್ಟಿ ಕಡೆಯಿಂದ ಹ್ಯಾಕೋರ್ಟು ವಕೀಲರಾದ ಆರೂರು ಲಕ್ಷ್ಮೀನಾರಾಯಣರಾಯರೂ, ಡಾಕ್ಟರ್ ಯು. ರಾಮಚಂದ್ರರಾಯರೂ ದಕ್ಷಿಣ ಕನ್ನಡ ಜಿಲ್ಲೆಯ ಪರವಾಗಿ ಉಮೇದ್ವಾರರಾಗಿ ನಿಲ್ಲುವರೆಂದು ತಿಳಿದುಬರುತ್ತದೆ.

ಬಂಟವಾಳ:—ಇಲ್ಲಿಯ ಸ್ಟೇಶನ್ ಹೌಸ್ ಆಫೀಸರರೂ ಸಬ್ ಇನ್ಸ್‌ಪೆಕ್ಟರರೂ ಆದ ಪೇಜಾವರ ರಾಮಕೃಷ್ಣರಾಯರಿಗೆ ಮಂಗಳೂರು ಟೌನ್ ಸ್ಟೇಶನಿಗೆ ವರ್ಗವಾಗಿದೆ. ಅವರ ಬದಲಾಗಿ ಇಲ್ಲಿ ಲಕ್ಷ್ಮೀನಾರಾಯಣಯ್ಯನವರು ವರ್ಗವಾಗಿ ಬರುವರು.

ಇಲ್ಲಿ ಬದ್ಧ ಕಟ್ಟೆಯಲ್ಲಿ ಗಾಡಿಟೋಕದಲ್ಲಿ ಗಾಡಿಬಿಟ್ಟು, ಗಾಡಿಯವರು ಊಟಕ್ಕೆ ಕೂತ ಸಮಯ, ಒಬ್ಬನು ಮಂಗಳವಾಡಿಯವನಂತೆ ಬಂದು, ಗಾಡಿಯ ರಾಟಾನು ಸೊಂದಿಸಿ ಗಾಡಿಯಲ್ಲಿದ್ದ ಕಾಫಿ ಗೋಣಿ ತೆಗೆಯುವಷ್ಟರಲ್ಲಿ ಗಾಡಿಯವರಿಗೆ ಅವನ ನೆರಳು ಕಂಡು ಅವನನ್ನು ಹಿಡಿದರು.

ಬೈಂದೂರು:—ಹೊಸ ಮೆಂಡ್ಸೆ ಶೆಟ್ಟಿ ಎಂಬವರು ಬಳ್ಳಲ್ಲಿ ಬಾಯಿಯಿದಾಗ ಮೂವರು ಮುಸ್ಸಾಕರು ಅವರಿಗೆ ಗುಂಡುಹೊಡೆದು ಕೊಂದು ಹಾಕಿದರು. ಅಪರಾಧಕರನ್ನು ಹುಡುಕುತ್ತಲಿದ್ದಾರೆ.

ಮಂಗಳೂರು.

ಸಹಕಾರ ಪ್ರಚಾರದ ಭಾಷಣಗಳು, ಇದೇ ತಿಂಗಳ ತಾ. ೩ನೇ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ಕ್ರೆಡಿಟ್ 'ಸಹಕಾರಿ ಮತ್ತು ಇತರ ಬೇಂಕುಗಳ ಪ್ರಭೇದ' ಎಂಬುದರ ಕುರಿತು ಮ|| ರಾ|| ಉಳ್ಳಾಲ ಮಂಗೇಶ ರಾವ್, ಬಿ. ಎ., ಎಲ್. ಟಿ., ಇವರಿಂದಲೂ, ತಾ. ೧೪ನೇ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ಛನೇ 'ಸಹಕಾರಿ ವಿಧಾನದಲ್ಲಿ ವ್ಯವಸಾಯ ಮತ್ತು ಕ್ರಯ ವಿಕ್ರಯ' ಮ|| ರಾ|| ಪಿ. ಭದ್ರಯ್ಯ, ಎಮ್. ಎ., ಎಲ್. ಟಿ. ಇವರಿಂದಲೂ, ತಾ. ೨೧ನೇ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ೫ನೇ 'ಬಿನಪತ್ತಿನ ಸಹಕಾರ' ಈ ವಿಷಯವಾಗಿ ಮ|| ರಾ|| ಪಿ. ರಮಾನಂದ, ಎಮ್. ಎ., ಎಲ್. ಟಿ. ಇವರಿಂದಲೂ ಕೋ-ಒಪರೇಟಿವ್ ಬಿಲ್ಡಿಂಗ್, ಕೊಡಿಯಾಲಬೈಲ್, ಮಂಗಳೂರು ಈ ಕಟ್ಟಡದಲ್ಲಿ ಜರಗುವುವು.

ವಿ. ಸೂ:—ಮುಂದಿನ ಭಾಷಣಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುವುದು. ೩ನೇ ಭಾಷಣವು ಕನ್ನಡದಲ್ಲಿಯೂ, ಇತರ ಭಾಷಣಗಳು ಇಂಗ್ಲಿಷ ಭಾಷೆಯಲ್ಲಿಯೂ ಜರಗುವವು; ಆದರೆ ಇಂಗ್ಲಿಷ ಭಾಷಣದ ಸಾರಾಂಶವನ್ನು ಕನ್ನಡದಲ್ಲಿ ಹೇಳಲು ಏರ್ಪಾಡು ಇದೆ.

ಕುಂದಾಪುರ ಸಬ್ ಕಲೆಕ್ಟರವರಿಗೆ ಇದೇ ಬರುವ ತಾ. ೧೯ರಿಂದ ೨೮ರವರೆಗೆ ರಜೆಕೊಟ್ಟಿರುವುದರಿಂದ ಇವರ ಬದಲಿಗೆ ಇಲ್ಲಿಯ ಡಿಪ್ಯುಟಿ ಕಲೆಕ್ಟರರಾಗಿದ್ದ ಎ. ಸಿ. ವುಡ್‌ಹೌಸರು ಇವರ ಚಾರ್ಜನ್ನು ನೋಡಿಕೊಳ್ಳುವರು.

ಕಾರಿಂಜೆಯ ಜಾತ್ರೆಯ ಸಮಯದಲ್ಲಿ ಒಂದು ಹುಡುಗಿಯು ನಿದ್ರೆಯಲ್ಲಿರುವಾಗ್ಗೆ ಅವಳ ಕುತ್ತಿಗೆಯಲ್ಲಿದ್ದ ಭಂಗಾರದ ಸರವನ್ನು ಕದ್ದ ಬೈಕಂಪಾಡಿ ಸುಬ್ಬಯ್ಯ ಆಚಾರಿಯ ವಿಚಾರಣೆಯು ಬಂಟ್ವಾಳ ಸಬ್ ಮೆಜಿಸ್ಟ್ರೇಟರ ಮುಂದೆ ನಡೆದು, ೩ ತಿಂಗಳ ಕಠಿಣ ಸಜೆಯನ್ನು ವಿಧಿಸಲಾಯಿತು.

ಇಲ್ಲಿಯ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಕ್ಲಾರ್ಕರಾಗಿದ್ದ ಎಲ್. ಸುಬ್ಬರಾಯರು ಸುಮಾರು ೮೫ ರೂಪಾಯಿ ಕಸೆಯ ಕಾಗದದ ಮೌಲ್ಯವು ತನಗೆ ಸಿಕ್ಕಬೇಕಾಗಿಯೂ ಮಾಡಿದ ಅರ್ಜಿಯಲ್ಲಿ ಫೋರ್ಜರಿ ಮತ್ತು ಸುಳ್ಳು ತಾರೀಖು ಹಾಕಿದ ಅಪರಾಧದ ಮೇಲೆ ಇಲ್ಲಿಯ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು ಆರು ತಿಂಗಳ ಕಠಿಣ ಸಜೆ ಮತ್ತು ೫೦ ರೂಪಾಯಿ ಜುರುಮಾನೆ, ಜುರುಮಾನೆ ಕೊಡಲಿಕ್ಕೆ ತಪ್ಪಿದಲ್ಲಿ ಇನ್ನೊಂದು ತಿಂಗಳ ಸಜೆಯನ್ನು ವಿಧಿಸಿರುವರು. ಇವರು ಪುನಃ ಇಲ್ಲಿಯ ಸೆಶನ್ ಜಡ್ಜರಲ್ಲಿ ಅಪೀಲು ದಾಖಲು ಮಾಡಿದ್ದರಿಂದ ಸದರಿಯವರನ್ನು ಜಾಮೀನುಮೇಲೆ ಬಿಡಲಾಗಿದೆ.

ಕಳೆದ ವಾರದಲ್ಲಿ ಇಲ್ಲಿಯ ಮುನ್ಸಿಪಾಲಿಟಿಯೊಳಗೆ ೨೯ ಮರಣಗಳು, ೩೮ ಜನನಗಳು ಆಗಿದ್ದವು. ಮರಣಗಳ ಪೈಕಿ ಎರಡು ಪ್ಲೇಗು ಮತ್ತು ೧ ಮೈಲಿಗೆಜ್ವರದ್ದಾಗಿತ್ತು.

ಪತಿತರಿಂದ ಪತಿತಳು.

(ಕಳೆದ ಸಂಚಿಕೆಯಿಂದ ಮುಂದುವರಿದುದು.)

೩

ಮೂರು ವರ್ಷಗಳು ಕಳೆದುವು. ಈ ಮೂರು ವರ್ಷಗಳಲ್ಲಿ, ಕಮಲೆಯ ಮೇಲೆ ಪರಿಣಾಮಕಾರಿಯಾದ ಅಸಂಖ್ಯ ಘಟನೆಗಳು ನಡೆದು, ಅವಳಿಗೆ ಆಗ ವಿಧವೆಯ ಜೀವನವೆಂದರೇನೆಂದು ತಿಳಿಯಿತು. ಅವಳ ಬಾಲ್ಯದ, ಇನ್ನೂ ಅರಳಿರದ ಎದೆಯ ಮೊಗ್ಗೆಯು, ಚೂರಾಗಿ ಮಾಡಲ್ಪಟ್ಟಿತ್ತು; ಅರಳುವ ಮೊದಲೆ ಅದನ್ನು ಬಂಧಿಯಾಗಿ ಮಾಡಿದರು. ಈ ಮೂರು ವರ್ಷದೊಳಗೆ ಆ ಹೃದಯವು ಸಂತಪ್ತವಾಗಿ ಮೆಲುವುದಾರಾ ಪೂರಕವಾಗಿ ಅದರಿಂದ ಹೊರಗೆ ಹರಿಯುತ್ತಿದ್ದಿತು.

ಈ ಮೂರು ವರ್ಷಗಳೊಳಗೆ, ಬರೇ ಬಾಲ್ಯದ ಈ ಮೂರು ವರ್ಷಗಳೊಳಗೆ ಸಾಮಾನ್ಯರ ೬೦ ವರ್ಷದ ಪ್ರಪಂಚಾನುಭವವನ್ನು ಅವಳು ಮಾಡಿದಳು. ಆಗವಳಿಗೆ ತಿಳಿಯಿತು—ತಾನಾರಿಗೂ ಬೇಕಾಗಿಲ್ಲವೆಂದು. ಆಗವಳಿಗೆ ತಿಳಿಯಿತು—ತಾನು ಸಮಾಜದಿಂದ ಬಹಿಷ್ಕರಿಸಲ್ಪಟ್ಟಿರುವೆನೆಂದು. ತಾನು ಹೊರವತ್ತಾಯದ ಮೇಲೆ ಸನ್ಯಾಸಿನಿಯಾಗಿರಬೇಕೆಂದೂ, ಯಾವುದೊಂದು ದೋಷವು ತನ್ನಿಂದ ಆಕಸ್ಮಿಕವಾಗಿ ಆದರೂ ಅದನ್ನು ಯಾರೂ ಕ್ಷಮಿಸುವುದಿಲ್ಲವೆಂದೂ ಅವಳಿಗೆ ಅನುಭವವಾಯಿತು.

ಶುಭ ಕೆಲಸಗಳಲ್ಲಿ ಅವಳಿಗೆ ಪ್ರವೇಶವಿಲ್ಲ; ಉತ್ಸವಗಳಲ್ಲಿ ಅವಳಿಗೆ ಭಾಗವಿಲ್ಲ; ಅವಳು ಮುಟ್ಟಿದ ನೀರನ್ನು ಕುಡಿಯುವವರಿಲ್ಲ; ಅವಳ ನೈವೇದ್ಯವನ್ನು ಸ್ವೀಕರಿಸುವ ದೇವರಿಲ್ಲ; ಹತ್ತು ಜನರ ಮಧ್ಯದಲ್ಲಿ ಹೋಗಿ ಕೂಡಲು ಅವಳಿಗೆ ಸ್ಥಳವೀಯುವವರಿಲ್ಲ. ಬಂಧುಗಳು, ಸಮಾಜವು, ಏಕೆ, ದೇವರು ಕೂಡ ಅವಳ ಉತ್ಸರ್ಗವನ್ನು ಸ್ವೀಕರಿಸುವುದಿಲ್ಲ. ಕೇವಲ ತನ್ನಂತೆಯೇ ವಿಧವೆಯಾಗಿ ಒಳಗೆ ಕುಳಿತಿದ್ದ ತನ್ನ ಅಮ್ಮನ ಪಕ್ಕದಲ್ಲಿ ಮಗಳು ಕುಳಿತು, ಇಬ್ಬರೂ ಒಟ್ಟಿಗೆ ಅಳುವರು! ಈ ಕಣ್ಣೀರ ನೆರೆಯು ಬತ್ತಿದ ಮೇಲೆ ಸ್ವಲ್ಪ ಶಾಂತಿಯು ಸಿಕ್ಕುವುದು. ಪುನಃ ಹತಭಾಗಿನಿಯು ಹೊರ ಪ್ರಪಂಚಕ್ಕೆ ಮರುಳಾಗಿ ಹೊರಬರುವಳು. ಪುನಃ ಆ ಬಹಿಷ್ಕಾರದ ಉಗ್ರ ಆಜ್ಞೆಯು ಅವಳನ್ನು ತಡೆಯುವುದು. ಪುನಃ ಆ ಬಾಲೆಯು ತನ್ನ ತಾಯಿಯ ಪಕ್ಕದಲ್ಲಿ ಹೋಗಿ ಅವಳ ಉಡಿಯಲ್ಲಿ ತಲೆಯನ್ನಿಟ್ಟು ಅಳುವಳು. ಪುನಃ ತಾಯಿಯೂ ಅಳುವಳು. ಅಳುವಿನಲ್ಲಿಯೂ ಸುಖವಿದೆಯೆಂದು ಆಗ ಕಮಲೆಗೆ ಭಾಸವಾಯಿತು.

ಯಾವಾಗ ನಿಜದೇವರೂ ಪ್ರೇಮರಹಿತರೂ, ನಿಜಬಂಧುಗಳು ತಿರಸ್ಕಾರಪೂರ್ಣರೂ, ನಿಜಸಮಾಜವೂ ನಿಂದಾದೃಷ್ಟಿ ಸಮೇತವೂ ಇರುವುವೋ ಆಗ ಅಳುವೇ ಶಾಂತಿದಾಯಿಯಾದ ಸಹಕಾರಿಯಾಗುವುದು.

೪

ಇನ್ನೆರಡು ವರ್ಷಗಳು ದಾಟಿದುವು. ಕಮಲೆಯ ವೈಯಿಂದ ಕೃಶವಪು ಇಳಿದು ಹೋಯಿತು; ಅದರ ಬದಲಿಗೆ ಮೆಲ್ಲನೆ ನವತಾರುಣ್ಯವು ತನ್ನ ಪೂರ್ಣ ಪ್ರಾಬಲ್ಯದಿಂದ ಕಮಲೆಯನ್ನು ಆವರಿಸುತ್ತಿದ್ದಿತು. ಕಮಲೆಯ ಅಂತರ್ಯವು ವೈಧವ್ಯದ ಚಿರಯಾತನೆಯ ಕೇಂದ್ರವಾಗಿದ್ದಿತು. ಸಹಜವಾಗಿ ಆ ಯಾತನಾ ಭಾವನೆಯು ಅವಳ ಮುಖಮಂಡಲದಲ್ಲಿ ವ್ಯಕ್ತವಾಗಬೇಕಿದ್ದಿತು. ಆದರೆ ದಿನದಿನವೂ ವೃದ್ಧಿಯಾಗುತ್ತಿದ್ದ ಆ ತಾರುಣ್ಯವು ಅವಳ ನಿಜಮುಖವನ್ನು ಮರೆಸಿ ಇಡುತ್ತಿದ್ದಿತು. ಫಲವಾಗಿ ಆ ಮುಖವು ತಾರುಣ್ಯದ ಸ್ವಾಭಾವಿಕ ಸೌಂದರ್ಯವನ್ನು ಪ್ರತಿಭಾಸಿಸುತ್ತಿದ್ದಿತು.

ಆ ತಾರುಣ್ಯದಬಹಿಃಶ್ರೀಯೊಡನೆ ಅವಳ ಅಂತರ್ಭಾವನೆಗಳಾದರೂ ಆ ಮುಖದ ಆವೇಗದ ಸಾಕ್ಷ್ಯದಲ್ಲಿಯೇ ಪಕ್ವವಾಗುತ್ತಿದ್ದುವು.

ವರ್ಷಕ್ಕೆ ವಸಂತವು ಹೇಗೋ, ಮಾನವ ಜೀವನದಲ್ಲಿ ತಾರುಣ್ಯವು ಹಾಗೆಯೇ. ಅದರ ರಭಸವನ್ನು, ಅದರ ಮಾಧುರ್ಯವನ್ನು, ಅದರ ಭಾವ ಪ್ರವಾಹವನ್ನು ಕಟ್ಟಿಡಲು ಯಾರಿಗೂ ಸಾಧ್ಯವಿಲ್ಲ. ಈ ದಿನ ಪುಷ್ಪಗಳನ್ನು ಕಿತ್ತರೆ ಹೊಸ ಪುಷ್ಪವು ಬಂದು ಹೊಸ ಸೌರಭವನ್ನು ಪ್ರಸರಿಸುವುದು; ಅದರ ಗಂಧವಾಹಕನನ್ನು ಬಚ್ಚಿಡಲು ಆರಿಗೂ ಸಾಧ್ಯವಿಲ್ಲ; ಅದರ ಶ್ಯಾಮಲ ವರ್ಣದ ಪಲ್ಲವರಾಜಿಯನ್ನು ಒಣಗಿಸಲಾರಿಂದಲೂ ಸಾಧ್ಯವಿಲ್ಲ. ವಸಂತವನ್ನು ಮುಟುಗಿಯ ವರ್ಷಾಗಮದಿಂದಾಗಲಿ, ಛಾಯಾಹೀನ ಗ್ರೀಷ್ಮಯುಗದಿಂದಾಗಲಿ, ಕಠೋರತ್ವದಯುಕ್ತ ಶರತ್ತಿನಿಂದಾಗಲಿ ಪರಿವರ್ತಿಸಲು ಸಾಧ್ಯವಿಲ್ಲ. ವಸಂತನು ವಸಂತನೇ—ಅವನು ಭಾವಮಯನು, ಮಧುರನು, ಸುಖಾಭಿಲಾಷಿಯು, ಸುಖಪ್ರಸಾರಕನು, ಪ್ರಣಯಿಯು, ಪ್ರಣಯಾಧಿಕಾರಿಯು.

ವಸಂತನ ಈ ಸ್ವಭಾವವನ್ನು ಪರಿವರ್ತಿಸಲು ಪ್ರಪಂಚಕ್ಕೆ ಹೇಗೆ ಅಸಾಧ್ಯವೋ, ಮಾನವ ಜೀವನದ ತಾರುಣ್ಯದ ಕೋಮಲತೆಯನ್ನು, ತಾರುಣ್ಯದ ಮಾರ್ದವವನ್ನು, ತಾರುಣ್ಯದ ಹೃದಯಾಭಿಲಾಷೆಯನ್ನು, ತಾರುಣ್ಯದ ಪ್ರಣಯವನ್ನು ಅಡ್ಡಗಟ್ಟುವುದೂ ಅಸಾಧ್ಯವಿದೆ. ಜನಾಂಗಗಳು ಮಡಿಯುತ್ತವೆ. ಪ್ರಪಂಚವು ಯುದ್ಧದ ಪ್ರಲಯರೂಪದಿಂದ ಕಂಪಿಸುತ್ತದೆ; ಗೃಹತಾರಕೆಗಳು ಬಿದ್ದು ವಿನಾಶವಾಗುತ್ತಿವೆ; ವಿಶ್ವವು ಉತ್ಕ್ರಾಂತಿಯನ್ನೈದುತ್ತಿದೆ; ಆದರೆ ಈ ಜಗತ್ತಿನಿಂದ ವಸಂತವನ್ನು ಅಪಹರಿಸುವವರಾರು? ಪ್ರೇಮಮಯ, ಪ್ರಣಯೇಚ್ಛು, ಸುಂದರ ಕಲ್ಪನಾಮಯವಾದ ಈ ತಾರುಣ್ಯವನ್ನು ಜೀವನದಿಂದ ಅಪಹರಿಸಲು ಶಕ್ತಿಯುಳ್ಳವರಾರು?

ಕಮಲೆಯ ಅಂಗಾಂಗಗಳಲ್ಲಿ, ಕಮಲೆಯ ಕಲ್ಪನೆಯ ಸಂದುಮೂಲೆಗಳಲ್ಲಿ, ಕಮಲೆಯ ಭಾವನೆಯ ಪ್ರತಿಕುಹರದಲ್ಲಿ ತಾರುಣ್ಯವು ಸೇರಿಯಿರುತ್ತಿದ್ದಿತು. ಅವಳ ಹೃದಯವು ದಿನದಿನವೂ ಆಶೆ ಮತ್ತು ತ್ಯಾಗದ ಪ್ರಚಂಡ ಯುದ್ಧದ ರಂಗಭೂಮಿಯಾಗಿ ಪರಿಣಮಿಸಿದ್ದಿತು. ವಿಶಾಲ ಸಮಾಜದ ಲೀಲಾವಿನೋದಗಳು, ಪ್ರಕೃತಿಯ ಉದಾರ ಭಾವನೆಗಳು ತನಗೆ ಆಹ್ವಾನವನ್ನೀಯುತ್ತಿರುವಂತೆ ಭಾಸಿಸುತ್ತಿದ್ದಳು. ಪ್ರತಿಯಾಗಿ ತಾನು ಪತಿವಿರಹಿತೆ, ತಾನು ಅನಧಿಕಾರಿಣಿ, ಎಂಬ ಭಾವವು ಅವಳನ್ನು ಹಿಂದಕ್ಕೆಳೆಯುತ್ತಿದ್ದಿತು. ಹೃದಯದ ಈ ಮಹಾ ಕೋಲಾಹಲದಲ್ಲಿ, ದೇವಪೂಜೆ, ಪುರಾಣಶ್ರವಣ ಇತ್ಯಾದಿಗಳು ಸ್ವಲ್ಪ ಮಟ್ಟಿಗೆ ಶಾಂತಿಯನ್ನೀಯುತ್ತಿದ್ದುವು.

ಪುರಾಣದಲ್ಲಿ ಪಾತಿವ್ರತ್ಯದ ಮಹಿಮೆಯು ಹೊಗಳಲ್ಪಟ್ಟದ್ದು ಅವಳು ಕೇಳಿದ್ದಳು. ಒಬ್ಬಳು ತನ್ನ ಪತಿಯ ನಂಜಿನ ಕೈಬೆರಳುಗಳು ತುಂಡಾಗಿ ಬಿದ್ದಿದ್ದ ಆಹಾರವನ್ನು ಉಂಡಿದ್ದಳು; ಒಬ್ಬಳು ಸೂರ್ಯಗಮನವನ್ನೇ ತಡೆದಿದ್ದಳು; ಒಬ್ಬಳು ಬೆಂಕಿಯನ್ನು ತಣ್ಣಗೆ ಮಾಡಿದ್ದಳು. ಇತ್ಯಾದಿ ಪಾತಿವ್ರತ್ಯದ ಮಹಾ ಪ್ರಕಾಶವು ಅವಳಿಗೆ ಒದಲ್ಪಡುತ್ತಿದ್ದಿತು.

ತನಗೂ ಒಬ್ಬ ಪತಿಯಿದ್ದರೆ ಅವರಂತೆಯೆ ತಾನೂ ಪತಿಯನ್ನು ಸೇವಿಸುತ್ತಿದ್ದೆನೆಂದೂ, ಹಾಗೆಯೇ ತನ್ನ ಪತಿಗಾಗಿ ಜೀವನವನ್ನು ಸಮರ್ಪಿಸುತ್ತಿದ್ದೆನೆಂದೂ ಅವಳಿಗೆ ಅನೇಕಬಾರಿ ಅನ್ನಿಸುತ್ತಿದ್ದಿತು. ಆದರೆ ಈ ಭಾವನೆಯು ಅವಳಲ್ಲಿ ಉಂಟಾದಾಗ, ಸಹಿಸಲಾಗದ ವೇದನೆಯೊಂದು ಅವಳ ಎದೆಯಿಂದ ಏಳುತ್ತಿದ್ದಿತು.

ದೇವಪೂಜೆಯೂ ಪುರಾಣಶ್ರವಣವೂ, ವತ್ಸಾಯದ ಸನ್ಯಾಸದ ತಾರುಣ್ಯಕ್ಕೆ ಬಂಧಿಸಲು ಬರೇ ಕೃತ್ರಿಮ ರೂಪದ ಉಪಾಯವಾಗಿದೆ. ಬೆಂಕಿಯನ್ನು ಭಸ್ಮದ ಹೊಕ್ಕಳಿನ ರಾಶಿಯಿಂದ ಆರಿಸಬಹುದಾದರೆ, ತಾರುಣ್ಯದ ಪ್ರಬಲವಾದ ಹೃದಯದ ಅಗ್ನಿಯನ್ನು ಪುರಾಣ ಕಥೆಗಳಿಂದ ಮುಚ್ಚಬಹುದು.

ತಾರುಣ್ಯಕ್ಕೆ ಒಂದು ನಿಸರ್ಗವಿದೆ, ಆ ನಿಸರ್ಗವನ್ನು ಮುಚ್ಚುವುದು ಅಸಾಧ್ಯ. ಒಂದು ಪಕ್ಷಕ್ಕೆ ಮುಚ್ಚಿದರೆ ಆ ನಿಸರ್ಗವು ವಿಕೃತರೂಪವನ್ನು ಹೊಂದಿ ಅತಿಯಾದ ದುಷ್ಪರಿಣಾಮವನ್ನು ಕೊಡುವುದೇ ಹೊರತು ಬೇರೆ ಇಲ್ಲ.

ಕಮಲೆಯ ಈ ತಾರುಣ್ಯವನ್ನು ಮುಚ್ಚಿಡಲು ಪುರಾಣಗಳಿಗಾಗಲಿ, ಭಕ್ತಿಬೋಧೆಗಾಗಲಿ ಕಡಿಮೆ ಇರಲಿಲ್ಲ. ಆದರೆ ಭಕ್ತಿಬೋಧೆಗಳಿಂದ ಎಷ್ಟು ತರುಣರು ರಕ್ಷಿಸಲ್ಪಟ್ಟಿದ್ದಾರೆ? ವಾಚಕರು ತರುಣರಾಗಿಯಾಗಲಿ, ಹಿಂದೊಂದು ಸಮಯದಲ್ಲಿಯಾದರೂ ತರುಣರಾಗಿ ಇದ್ದಿರಬೇಕು; ಅವರು ಆ ತಾರುಣ್ಯವನ್ನು ನೆನಪಿಗೆ ತರಲಿ; ಅದರಲ್ಲಿ ವಿಶೃಂಖಲ ವೃತ್ತಿಗಳು ಹೇಗೆ ನಡೆದಿವೆ, ಬೋಧನೆಯು ಯಾವ ಪರಿಣಾಮವನ್ನು ಹೊಂದಿದೆ ಎಂಬಿತ್ಯಾದಿ ವಿಷಯಗಳನ್ನು ನೆನಪಿಗೆ ತಂದುಕೊಂಡರೆ ಮಾನವ ನಡತೆಯ ಮೇಲೆ ತಾರುಣ್ಯದ ಪರಿಣಾಮವು ತಿಳಿಯುವುದು.

ನಿಜವಾದ ಸಾಧು ಯಾರು?

ದೇವರ್ಷಿಯಾದ ನಾರದರಿಗೆ ಅನೇಕರು ಜಗಳಗಂಟನೆನ್ನುವರು. ಅಕ್ಕಸಾಲಿಗನು ಬಂಗಾರವನ್ನು ಓರೆಗಲ್ಲಿನ ಮೇಲೆ ತಿಕ್ಕಿ ಪರೀಕ್ಷಿಸುವಂತೆ ಅವರು ಮನುಷ್ಯರನ್ನು ನಾನಾ ಬಗೆಯ ಸಂಕಟಗಳಲ್ಲಿ ಕೆಡವಿ ಅವರ ಯೋಗ್ಯತೆಯನ್ನು ಪರೀಕ್ಷಿಸುತ್ತಿದ್ದರು. ಅವರು ಸಾಮಾನ್ಯವಾಗಿ ಜಗಳಗಂಟರಾಗಿ ತೋರಿದರೂ ಪರೋಕ್ಷರೀಯಿಂದ ಜಗತ್ತಿನ ಕಲ್ಯಾಣಕರ್ತರಾಗಿ ಶೋಭಿಸುವರು.

ಭಕ್ತವತ್ಸಲನಾದ ಶ್ರೀಮನ್ನಾರಾಯಣನು ಎಂದಿನಂತೆ, ಒಂದು ದಿನ ವೈಕುಂಠದಲ್ಲಿ ಶೇಷಶಾಯಿಯಾಗಿ, ಶಂಖ ಚಕ್ರ ಗದಾ ಪದ್ಮಧಾರಿಯಾಗಿ, ಕೇಯೂರಕುಂಡಲಾದಿಗಳಿಂದಲಂಕೃತನಾಗಿ ವೇದಗಾನವನ್ನು ಕೇಳುತ್ತ ಆನಂದದಿಂದ ಲಕ್ಷ್ಮೀದೇವಿಯೊಡನಿದ್ದನು. ಗಂಧರ್ವರೂ, ಕಿನ್ನರರೂ, ಅಪ್ಸರೆಯರೂ ಅವನನ್ನು ಸುತ್ತುವರಿದು ಕುಳಿತಿದ್ದರು. ಕೆಲವರು ತಂಬೂರಿಗಳನ್ನೂ, ಕೆಲವರು ವೀಣೆಗಳನ್ನೂ, ನಾನಾ ವಿಧವಾದ ಮೃದಂಗಾದಿಗಳನ್ನೂ ಬಾರಿಸುತ್ತಿದ್ದರು. ಈ ಸಮಯದಲ್ಲಿ ಕಲಹಪ್ರಿಯರಾದ ನಾರದರು ವೀಣೆಯನ್ನು ಬಾರಿಸುತ್ತ, ಹರಿನಾಮಸ್ಮರಣೆಯನ್ನು ಮಾಡುತ್ತ ಅಲ್ಲಿಗೆ ಬರಲು, ಪರಮಾತ್ಮನು ಅವರನ್ನು ಕಂಡು ಹಸ್ತಲಾಘವವನ್ನು ಕೊಟ್ಟು, ಅರ್ಘ್ಯ ಪಾದ್ಯಾದಿಗಳಿಂದ ಸತ್ಕರಿಸಿ ಉಚಿತಾಸನದಲ್ಲಿ ಕುಳ್ಳಿರಿಸಿದನು.

ಮಾತುಕತೆಗಳಾದ ಬಳಿಕ ನಾರಾಯಣನು ಆ ಋಷಿಯು ಅಲ್ಲಿಗೆ ಬಂದ ಕಾರಣವನ್ನು ಕೇಳಲು, ನಾರದನು 'ಎಲೆ ದೇವನೇ! ನಾನೀಗ ಇಲ್ಲಿಗೆ ಒಂದು ಮಹತ್ವದ ಕಾರ್ಯಕ್ಕಾಗಿ ಬಂದಿದ್ದೇನೆ. ಈರೇಳು ಲೋಕಗಳಲ್ಲಿಯೂ ಮಹಾಸಾಧು ಯಾರು? ಆ ಸಾಧುವಿನ ದರ್ಶನದಿಂದ ಉಂಟಾಗುವ ಫಲಗಳಾವುವು? ಇವುಗಳನ್ನು ನನಗೆ ಪ್ರೀತಿಯಿಂದ ವಿವರಿಸಬೇಕು' ಎಂದನು. ಬಹು ದೈನ್ಯದಿಂದ ಬೇಡಿಕೊಳ್ಳುವ ನಾರದಮಹರ್ಷಿಯ ಮಾತುಗಳನ್ನು ವಿಷ್ಣುವು ಕೇಳಿ "ಎಲೌ ಋಷಿಯೇ! ಚಂದ್ರನಗರದಲ್ಲಿ ರಾಮಸೆಟ್ಟಿಯೆಂಬ ವ್ಯಾಪಾರಿ ಇರುವನು. ಅವನ ಮಗಳಾದ ಸುಲೋಚನೆಯ ಬಳಿಯಲ್ಲಿ ಒಂದು ರಾಜಗಿಳಿಯಿದೆ. ಅದರೊಡನೆ ಕೇಳಿದರೆ ನಿನಗೆ ತಕ್ಕುದಾದ ಉತ್ತರವನ್ನು ಕೊಡುವುದು" ಎಂದು ಹೇಳಿ ಮುನಿಯನ್ನು ಕಳುಹಿಸಿಕೊಟ್ಟನು.

ಚಂದ್ರನಗರವನ್ನು ಸೇರಬೇಕಾದರೆ ಒಂದು ಉನ್ನತವಾದ ಪರ್ವತಾವಳಿಯನ್ನು ದಾಟಬೇಕು. ನಾರದರು ಆ ಮಾರ್ಗವಾಗಿ ಹೋಗುತ್ತಿರುವಾಗ, ಒಂದೆಡೆಯಲ್ಲಿ ಪಕ್ಷಿಗಳು ಆನಂದದಿಂದ ಹಾಡುತ್ತಿದ್ದುವು. ಇನ್ನೊಂದೆಡೆಯಲ್ಲಿ ಭರದಿಂದ ಹರಿಯುವ ಗಂಗೆಯು 'ಬುಳ್ ಬುಳ್' ಎಂದು ಶಬ್ದ ಮಾಡುತ್ತ ಓಡುತ್ತಿತ್ತು. ಮತ್ತೊಂದೆಡೆಯಲ್ಲಿ ಚಿಗುರಿದ ಮರಗಳು ಮನೋಹರವಾಗಿ ಕಂಗೊಳಿಸುತ್ತಿದ್ದುವು. ನೆರೆಯಲ್ಲಿಯೇ ಗಿಡದ ಕೆಳಗೆ ಗೋವುಗಳು ಮೆಲುಕಾಡಿಸುತ್ತ ಅಂಬೇ ಎಂದು ಕೂಗುತ್ತಿದ್ದುವು. ವನಸೌಂದರ್ಯವನ್ನು ನೋಡುತ್ತ, ಹರಿನಾಮ ಸ್ಮರಣೆಯನ್ನು ಮಾಡುತ್ತ ಹೋಗುತ್ತಿದ್ದ ನಾರದನಿಗೆ ಮಾರ್ಗಾಯಾಸವು ಸ್ವಲ್ಪವಾದರೂ ತಿಳಿಯಲಿಲ್ಲ.

ನಾರದರು ರಾಮಸೆಟ್ಟಿಯ ಗಿಳಿಯ ಬಳಿಗೆ ಹೋಗಿ, ಅದರೊಡನೆ ನಿಜವಾದ ಸಾಧು ಯಾರೆಂದು ಪ್ರಶ್ನಿಸಲು, ಅದು ಅವರಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡುವಂತೆ ತನ್ನ ಕೊಕ್ಕನ್ನು ನೆಲಕ್ಕೆ ಮುಟ್ಟಿಸುವಂತೆ ಬಗ್ಗಿಸಿ ಮುಕ್ತಿಯನ್ನು ಹೊಂದಿತು. ಮುನಿಯು ಅದರ ಅರ್ಥವನ್ನು ತಿಳಿಯದೆ ಅದರ ಸಾವಿಗೆ ತಾನು ಕಾರಣಭೂತನೆಂದು ಬಹಳವಾಗಿ ಚಿಂತಿಸಿ, ವಿಷ್ಣುವಿನ ಬಳಿಗೆ ಎಲ್ಲವನ್ನೂ ವಿಚಾರಿಸುವೆನೆಂದು ನಿಶ್ಚಯಿಸಿಕೊಂಡು ಸ್ವರ್ಗದಲ್ಲಿ ವೈಕುಂಠವನ್ನು ಸೇರಿದರು. ವಿಷ್ಣುವು ನಾರದನನ್ನು ಕುರಿತು "ಎಲೆ ನಾರದನೇ! ನೀವೇಕೆ ಚಿಂತಿಸುವುದು? ಯಾವನು ಯಾವ ಪ್ರಕಾರದ ಕರ್ಮಗಳನ್ನು ಮಾಡುವನೋ ಅವನಿಗೆ ಅಂತಹ ಫಲವು ದೊರೆಯುವುದು. ಅದರ ಹಿಂದಿನ ಕರ್ಮಕ್ಕನುಸಾರವಾಗಿ ಅದು ಮಡಿಯಿತು. ಅದರ ಸಾವಿಗೆ ನೀವು ಚಿಂತಿಸುವುದೇಕೆ? ಕಾಂಚೀಪುರದಲ್ಲಿ ಒಂದು ದೊಡ್ಡ ಸರೋವರವಿರುವುದು. ಆ ಸರೋವರದ ಮಧ್ಯದಲ್ಲಿ ಒಬ್ಬ ಹಂಸರಾಜನಿರುವನು. ಅವನು ನಿಮಗೆ ಸಾಧು ಯಾರೆಂದು ತಿಳಿಸುವನು." ಎಂದು ಋಷಿಯನ್ನು ಸಂತೈಸಿ ಕಳುಹಿಸಿದನು.

ನಾರದನು 'ಅವನೂ ನನ್ನ ದುರ್ದೆಶೆಯಿಂದ ಮರಣಪಟ್ಟರೆ ಏನು ಮಾಡುವುದು' ಎಂದು ಚಿಂತಿಸಿ ಹೊರಟುಹೋದನು. ದಾರಿಯಲ್ಲಿ ಹೋಗುತ್ತಿರುವಾಗ ಪಕ್ಕದಲ್ಲಿದ್ದ ಮರದ ಪೊಟರೆಯಲ್ಲಿ ಕುಳಿತಿದ್ದ ಗೂಗೆಯೊಂದು 'ಗುಟುಂ' ಎಂದು ಒದರುತ್ತಿತ್ತು. ಋಷಿಯು ತನಗೆ ಅಪಶಕುನವಾಯಿತೆಂದು ಚಿಂತಿಸಿ ಅದರ ಗೋಣಲನ್ನು ಗಣನೆಗೆ ತಾರದ ಹಂಸದ ಬಳಿಗೆ ಹೋಗಿ ಅದರೊಡನೆ ತನ್ನ ಮನೋಭಿಪ್ರಾಯವನ್ನು ತಿಳಿಸಲು ಅದೂ ಋಷಿಯನ್ನು ವಂದಿಸಿ, ಪರಲೋಕಯಾತ್ರೆಯನ್ನು ಮಾಡಿತು. ನಾರದನು ಎರಡು ಜೀವರಾಶಿಗಳ ಮರಣಕ್ಕೆ ತಾನು ಕಾರಣಭೂತನಾದೆನೆಂದೂ, ವಿಷ್ಣುವು ಮೋಸವನ್ನು ಮಾಡಿದನೆಂದೂ ಮನಸ್ಸಿನಲ್ಲಿಯೇ ಕೊರಗುತ್ತ, ತಿರುಗಿ ಅವನ ಬಳಿಗೆ ಹೋಗಿ ಉಕ್ಕುತ್ತಿರುವ ದುಃಖವನ್ನು ಸಹಿಸಲಾರದೆ, ಹಾಗಾಗಲು ಕಾರಣವೇನೆಂದು ಬೆಸಗೊಳ್ಳಲು ವಿಷ್ಣುವು ಅವನನ್ನು ನೋಡಿ 'ಋಷಿಯೇ! ನಿನಗೀಗ ನಾನು ಯಾವುದನ್ನೂ ವಿವರಿಸಲಾರೆ. ಕಾಶೀ ದೇಶವನ್ನು ಬಲಬುದ್ಧಿಯೆಂಬ ದೊರೆಯು ಸಕಲೈಶ್ವರ್ಯದಿಂದ ಪರಿಪಾಲಿಸುತ್ತಿರುವನು. ಆದರೆ ಅವನಿಗೆ ಪುತ್ರ ಸಂತತಿಯಿಲ್ಲದುದರಿಂದ ಅವನು ದಿನೇ ದಿನೇ ಕೊರಗುತ್ತ ಕೃಶವಾಗುತಿದ್ದನು. ಇತ್ತಲಾಗಿ ಒಬ್ಬ ಋಷಿಯ ವರಪ್ರಸಾದದಿಂದ ಅವನ ಪತ್ನಿಯು ನವಮಾಸಧರಿತಳಾಗಿರುಳು. ನಾಡದು ಅವಳು ಒಂದು ಪುತ್ರರತ್ನವನ್ನು ಪ್ರಸವಿಸುವಳು. ಅದು ನಿನಗೆಲ್ಲವನ್ನೂ ತಿಳಿಸುವುದು. ಇದು ಖಚಿತವು". ಋಷಿಯು ವಾಯುವೇಗದಿಂದ ಕಾಶಿ ನಗರಿಯನ್ನು ಸೇರಿದನು.

ಕಾಶಿ ರಾಯನಿಗೆ ಅವನ ಪತ್ನಿಯು ಋಷಿಯ ವರಪ್ರಸಾದದಿಂದ ಗರ್ಭಿಣಿಯಾದಳೆಂಬ ವರ್ತಮಾನವು ಬರಲು, ಅವನಿಗೆ ಉಂಟಾದ ಸಂತೋಷವು ಅಷ್ಟಿಷ್ಟಲ್ಲ. ಪತ್ನಿಗೆ ಬೇಕಾದ ಊಟಉಪಚಾರಗಳನ್ನು ಮಾಡಿ ಆಕೆಯ ಬಯಕೆಗಳನ್ನೆಲ್ಲಾ ಪೂರ್ತಿಗೊಳಿಸಿದನು. ಹೀಗೆ ನವಮಾಸಗಳು ತುಂಬಿದವು. ಒಂದಾನೊಂದು ಶುಭದಿನದ ಶುಭಲಗ್ನದಲ್ಲಿ ಮಹಾರಾಣಿಯು ಒಂದು ಪುತ್ರರತ್ನವನ್ನು ಪ್ರಸವಿಸಿದಳು. ಈ ಸಂಗತಿಯು ರಾಜನಿಗೆ ತಿಳಿಯಲು, ಅವನು ರಾಜ್ಯದಲ್ಲೆಲ್ಲಾ ಸಕ್ಕರೆಯನ್ನು ಹಂಚಿದನು. ದೇವಸ್ಥಾನಗಳಲ್ಲಿ ಅನೇಕ ಉತ್ಸವಾದಿಗಳನ್ನು ನಡೆಯಿಸಿ ಬ್ರಾಹ್ಮಣರಿಗೆ ಅನೇಕ ದಾನಗಳನ್ನು ಕೊಟ್ಟನು. ಬಡಬಗ್ಗರಿಗೂ ಅಂಗಹೀನರಿಗೂ ಅನ್ನ ವಸ್ತ್ರಗಳನ್ನು ಕೊಡಿಸಿ ತನ್ನ ಔದಾರ್ಯವನ್ನು ಪ್ರಕಟಿಸಿದನು. ಗುಡಿಗುಟಾರಗಳಲ್ಲಿ ತೋರಣಗಳಿಂದ ಅಲಂಕರಿಸಲ್ಪಟ್ಟವು. ಆ ದಿನ ಭಿಕ್ಷುಕರ ಆನಂದಕ್ಕೆ ಮಿತಿಯೇ ಇಲ್ಲ. ಕಾಶಿ ರಾಯನಿಗೆ ಮಗನು ಹುಟ್ಟಿರುವನೆಂಬುದನ್ನು ಕೇಳಿ, ರಾಜಕುಮಾರನನ್ನು ನೋಡುವುದಕ್ಕಾಗಿ ನಾಲ್ಕು ಕಡೆಗಳಿಂದಲೂ ಜನರು ಗುಂಪುಕೂಡಿ ಬರತೊಡಗಿದರು. ನಾರದನು ಆ ಪಟ್ಟಣದ ಸೌಂದರ್ಯವನ್ನು ನೋಡುತ್ತ ಹೋಗುತ್ತಿದ್ದನು. ಶೀತಲವಾದ ಮಂದಮಾರುತವು ಮಾಲತೀಮಲ್ಲಿಕಾದಿಗಳ ಪರಿಮಳವನ್ನು ಸಂಗ್ರಹಿಸಿ ಬಹು ಗಾಂಭೀರ್ಯದಿಂದ ಅಲ್ಲಲ್ಲಿ ಸುಳಿಯುತ್ತಿದ್ದಿತು. ಕ್ರಮವಾಗಿ ಸಾಯಂಕಾಲವಾಗುತ್ತ ಬಂದಿತ್ತು. ಆಕಾಶವು ಬರಿದಾದುದನ್ನು ಕಂಡು ಕೆಲವು ನಕ್ಷತ್ರಗಳು ತಮ್ಮ ಅಲ್ಪ ತೇಜಸ್ಸಿನೊಡನೆ ಅಲ್ಲಲ್ಲಿ ಮಿನುಗುತ್ತಿದ್ದವು. ಕುಮುದಬಾಂಧವನಾದ ಚಂದ್ರನೂ ಚಂದ್ರಮಂಡಲವನ್ನಡರಿದನು. ಈ ಸಮಯದಲ್ಲಿ ನಾರದನು ಅರಮನೆಯನ್ನು ಸೇರಲು, ರಾಜನು ಮಹರ್ಷಿಗಳ ಪಾದಾರವಿಂದಗಳಿಗೆ ಶಿರಸಾವಂದಿಸಿ, ಅವರಿಂದ ಆಶೀರ್ವಾದವನ್ನು ಪಡೆದನು.

ಋಷಿಯು ತನ್ನ ಮನೋಗತವನ್ನು ಅರಸನಿಗೆ ತಿಳಿಸಲು, ಅವನು ನಾರದನನ್ನು ಮಗುವಿನ ಬಳಿಗೆ ಕರಕೊಂಡುಹೋದನು. ಮುನಿಯು ಮಗುವನ್ನು ಕುರಿತು "ಎಲೆ ಪುತ್ರರತ್ನವೇ! ಈರೇಳು ಲೋಕದಲ್ಲಿಯೂ ನಿಜವಾದ ಸಾಧು ಯಾರು? ಮತ್ತು ಅತನ ದರ್ಶನದಿಂದ ಉಂಟಾಗುವ ಫಲಗಳಾವುವು?" ಎಂದು ಕೇಳಲು ಆ ಮಗುವು ಮೆಲ್ಲನೆ ಕುಳಿತುಕೊಂಡು, ತ್ರಿಕರಣಗಳಿಂದಲೂ ಮುನಿಯನ್ನು ವಂದಿಸಿ ಆದರಪೂರ್ವಕವಾದ ಮಾತುಗಳಿಂದ ಹೇಳತೊಡಗಿತು. ಮಗುವಿನ ಭಾಷಣೆಯನ್ನು ಕೇಳಲು ನಾಲ್ಕು ಕಡೆಗಳಿಂದಲೂ ಜನರು ಬಂದು ತುಂಬಿದರು.

"ಎಲೆ ಋಷಿಶ್ರೇಷ್ಠನೇ! ಸಾವಧಾನವಾಗಿ ಲಾಲಿಸು. ಹಿಂದೆ ನಾನು ರಾಮಯ ಸೆಟ್ಟಿಯ ಬಳಿಯಲ್ಲಿ ಒಂದು ಗಿಳಿಯಾಗಿದ್ದೆನು. ಅಲ್ಲಿಗೆ ನೀವು ಶ್ರೀ ವಿಷ್ಣುವಿನ ಮಾತಿನಂತೆ ಬರಲಿಲ್ಲವೇ! ತಮ್ಮ ದರ್ಶನಮಾತ್ರದಿಂದಲೇ ಪಕ್ಷಿಜನ್ಮದಲ್ಲಿದ್ದ ನಾನು ಉತ್ತಮತರಗತಿಯಲ್ಲಿ ಸೇರಿದ ರಾಜಹಂಸನಾಗಿ ಹುಟ್ಟಿದೆನು. ಅಷ್ಟರಲ್ಲಿ ತಿರುಗಿ ಸಾಧುವಾದ ತಮ್ಮ ದರ್ಶನವು ಸಿಕ್ಕಿತು. ನಾನು ತಮ್ಮ ದರ್ಶನಮಹಿಮೆಯಿಂದ ರಾಜಾಧಿರಾಜನಾದ ಈ ಕಾಶಿರಾಯನ ಹೊಟ್ಟೆಯಲ್ಲಿ ಅಗಭ್ರಶ್ರೀಮಂತನಾಗಿ ಜನ್ಮಿಸಿದೆನು. ಒಂದು ಬಡ ಪಕ್ಷಿಯೆಲ್ಲಿ? ಈ ಅರಸುಪದವಿಯೆಲ್ಲಿ? ಆದಪ್ರಯುಕ್ತ ತಾವೇ ನಿಜವಾದ ಸಾಧು. ತಮ್ಮ ದರ್ಶನದಿಂದ ನಾನು ಈ ಜನ್ಮಗಳನ್ನು ಹೊಂದಿದೆನು. ಈಗ ಇನ್ನೊಂದು ಮಹತ್ವದ ಸಂಗತಿಯಿರುವುದು. ಇರದು ನೀವು ಪುನಃ ನನಗೆ ದರ್ಶನವನ್ನು ಕೊಟ್ಟದ್ದರಿಂದ ಎಳೆತನದ ನನಗೆ ಮಾತನಾಡುವ ಶಕ್ತಿ ಬಂತು. ತಮ್ಮ ಉಪಕಾರವನ್ನು ನಾನು ಎಂದೆಂದಿಗೂ ಮರೆಯಲಾರೆನು" ಎಂದು ಹೇಳಿ ಮುನಿಯನ್ನು ವಂದಿಸಿ, ತಿರುಗಿ ಸಾಧಾರಣ ಮಗುವಿನಂತೆಯೇ ದಕ್ಷಣಾಚಿತವಾದ ತೊಟ್ಟಿಲಲ್ಲಿ ಮಲಗಿತು.

ಮಗುವಿನ ಈ ವಿಚಾರವನ್ನು ಕೇಳಿ ರಾಜನು ಆನಂದದಿಂದ ಉನ್ಮತ್ತನಾಗಿಬಿಟ್ಟನು. ಅವನು ತನ್ನ ಪತ್ನಿಯೊಡಗೂಡಿ, ಮುನಿಗೆ ಭಕ್ತಿಯಿಂದ ನಮಸ್ಕಾರವನ್ನು ಮಾಡಿ ಆ ಮಗುವಿನ ಅಭ್ಯುದಯಕ್ಕೆ ಮುನಿಯೇ ಮೂಲಕಾರಣನೆಂದು ಹೇಳಿ ಧನ್ಯನಾದನು. ಆ ಬಳಿಕ ನಾರದರು ಎದ್ದು ನಿಂತು, ಮಗುವಿಗೆ ಅಂತಃಕರಣಪೂರ್ವಕವಾಗಿ ಆಶೀರ್ವದಿಸಿ, ತಮ್ಮ ವೀಣೆಯನ್ನು ಬಾರಿಸುತ್ತ, ಹರಿನಾಮಸ್ಮರಣೆಯನ್ನು ಮಾಡುತ್ತ ವೈಕುಂಠದ ಹಾದಿಯನ್ನು ಹಿಡಿದು ಹೊರಟರು.

ಶ್ರೀ ರ. ಸ್ವ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಂಕುಶಮು ತೈಲಃ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶಃ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ಫೂರ್ತಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಪ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸ ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಪ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೧ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೪ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟಿವಣಿಗೆ ಮಾತ್ರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಫ್ ಕೋಸ್ಟ್ಸ, ಮೆಮೋರಂಡಮ್ ಒಫ್ ಎಪ್ಪಿಯರೆನ್ಸ, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದುನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ತುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ಪಿರಿಟ್ ಎಂಪೋರಿಯ ಮಾರ್ಟ್.

ಮಹೋಲ್ಲಾಸ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು.	ಅಥವಾ	'ಸದಾನಂದ ಕಾಫಿ ಕ್ಲಬ್' ರಥಬೀದಿ, ಮಂಗಳೂರು

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ — ## ವಜ್ರಾಂಗ-ಬಿಂದು — ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚ ತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿನಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ವಾಭಾವಿಕವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸಂಯೊಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ತಿರುಗಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆನ್ನುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.
ಟಪ್ಪಾಲು ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ: ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೊ. [illegible], (ಜಿಲ್ಲಾ ಬೆಳಗಾಂವ.)

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು {
ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —
ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು ಕಳೆದ ಹತ್ತಿಪ್ಪತ್ತು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ದೃಷ್ಟಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್‌ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ. ಇದ್ದಲ್ಲಿ; ಅಜೀಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೆಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮಳಿಗೆ) ಮಂಗಳೂರು.

ಈ ದೇಶದ ಪ್ರಖ್ಯಾತವಷ್ಟೆ ನೇಯುಗೆಯ ಕೇಂದ್ರಸ್ಥಳಗಳಾದ—ಬನಾರಿಸ್, ಪೂನಾ, ಅಹಮ್ಮದಾಬಾದ್, ಸೂರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಆರ್ನಿ, ಪಾಡಿಪೇಟೆ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ಮುಸ್ಸಟಾ, ಜರಿಕಣ, ಪೇಟ್ಟಿ, ರೇಶ್ಮೆ ಸೀರೆಗಳು, ಅರಬೆಸೇಟೆ ಸೀರೆಗಳು, ಕೊಹಿನೂರ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಛಾಯಿಟ್, ಕರ್ನಾಟಕ ಮಿಲ್ಸ್‌ಗಳ ವ ಇತರ ಮಿಲ್ಸ್‌ಗಳ ಶೂಟಿಂಗ್ ಶರ್ಟಿಂಗ್. ಕೈರಾಟೆಯಲ್ಲಿ ತಯಾರಿಸಿದ ನೂಲಿನಿಂದ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಧೋತಿ, ಖದ್ದರ್ ಪೇಟ್ಟಿ, ಅಂಗವಸ್ತ್ರ, ಇತ್ಯಾದಿ—
ಮುಸಲ್ಮಾನರಿಗೆ ಬೇಕಾದ ನಮೂನೆಯ ಲುಂಗಿ ಶೋಭಿಗಳು ವಗೈರೆ—
ಈ ಸಂಗ್ರಹವನ್ನು ನಮ್ಮ [illegible] ಸ್ವತಃ ಆಯಾ ಊರುಗಳಿಗೆ ಹೋಗಿ ಸಂಗ್ರಹಿಸಿ ತಂದಿರುತ್ತಾರೆ.

ಸೆಕೆ—ಹಗದಿ ರೂಪಾಯಿ 50ಕ್ಕೆ [illegible] ನೆಕಡಾ 6¼, ರೂ. 50ರಿಂದ 250ರವರೆಗೆ ನೆಕಡಾ 10½, ರೂ. 250 ರಿಂದ 1000ಕ್ಕೆ 12½, [illegible]

ಆಯುರ್ವೇದ ಶಾಸ್ತ್ರಿ ಅಪ್ಪಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಶೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಅಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾ ಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಸೆಂಟ್ರಲ್ ಅಫೀಸ್, "ಮಿಸ್ತ್ರಿ" ಬೆಂಗಳೂರು ಸಿಟಿ. | ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ಡಾಕ್ಟರ್, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಖಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. — ಮಂಗಳೂರು, ತಾರೀಕು ೧೨ನೇ ಶುಕ್ರವಾರ ಮಾರ್ಚಿ ೧೯೩೬. ಸಂಚಿಕೆ ೧೧.

The Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೂರ್ಪೂರೇಶನ್, ಉಡುಪಿ, ಲಿಮಿಟಡ್.

Head office: UDIPI. ಹೆಡ್ ಆಫೀಸು: ಉಡುಪಿ.	Branch: COONDAPOOR. ಶಾಖೆ: ಕುಂದಾಪುರ.
ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ದಾಖಲಿಕ್ಕೆ ಅರ್ಪಿಸಿದ ಮತ್ತು ವಿಕ್ರಯ ಮೂಲಧನ	ರೂ. 2,25,000—0—0.
ವಸೂಲಾತ ಮೂಲಧನ	ರೂ. 1,73,185—9—11.
ಆಪದ್ಧನ ವಗೈರೆ ಎತ್ತಗಳು	ರೂ. 64,700—0—0.
ಸಾ. ಸೇ. ೬೦ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತಾ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'35 ಕ್ಕೆ ತೋರುವ ಸದರ್ ಬ್ಯಾಂಕಿನ ವಿವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಾತ ಮೂಲಧನ 1,73,185—9—11, ಆಪದ್ಧನ ವ ಇತರ ಎತ್ತಗಳು 64,700—0—0, ಠೇವಣಾತಿಗಳು 5,10,077—10—3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4371—0—0, ವಿವೇಜಿನ ಮೇಲ್ಬಾಗದ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 93,340—10—5, ಜುಮ್ಲಾ ರೂ. 8,46,674—14—7.

ಆಸ್ತಿ ವ ಸೊತ್ತುಗಳು.

ಹಿತ್ತಲು ಕಟ್ಟೋಣ ಕಟ್ಟಿಣದ ಫ್ರೆಂಚುಗಳು ವಗೈರೆ 4134—4—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,43,498—6—2, ಸಾ. ಸೇ. ೬ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತಾ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4371—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡ) 41,741—14—2, ಕೈಯಲ್ಲಿರುವ ಮತ್ತು ಬೇಂಕರರ ಕೂಡ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 26,131—6—3, ಜುಮ್ಲಾ ರೂಪಾಯಿ 8,46,674—14—7.

ನಿರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ವರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. ೬½ರ ವರದ ಬಡ್ಡಿ ಮೇಲೂ, ಮುದ್ದತ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯದಿಂದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾವುಕಾರಿ ಹುಂಡಿಗಳನ್ನೂ, ವಟ್ಟಾಯಿಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಿವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿಂ.

N. Anand Rao,
Secretary.

ಮೂರು ದಿವಸಗಳಲ್ಲಿ, ಗುಣಸಿಕ್ಕದಿದ್ದರೆ
ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತಕೊಳ್ಳಿರಿ.

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ, ಪರಮಾನಂದ ಔಷಧಿ.

1 ಸೇರು ಹಾಳ್ವತ್ತೆಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1—9—0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.

ವಿಳಾಸ:— ದೇವಣ್ಣ ನಾರಾಯಣ ಸೇಟ್,
ನರಹಳ್ಳಿ, ಗೋಕರ್ಣ,
[illegible] (ಉ. ಕ.)

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳಆಕಾರವು ಮತ್ತು ಕೆಲಸಗಾರಿಕೆಯು ಬಹು ಹೊಸ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್, ಮುಂಬಯಿ



ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. | 109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

Edited, Printed & Published by V. S. Kamath at the M. T. A. Sharada Press, Mangalore.

ಲಿವರ್ ಮೂವ್‌ಮೆಂಟ್ ವಾಚ್.
15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಇಷ್ಟೇ ಈ ಗಡಿಯಾರ ಕೈಗೆ ಕಟ್ಟುವಂಥಾ ದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. ,, ,, ,, 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ ,, 2—12—0

ಕಂಬೈಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . ವಸಂತ
ಸಮಾಜಸುಧಾರಕನೆಂದರೆ . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ. . . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರ್ಯಾನ್ ¼ ಪುಟ ಸ್ಯಾಜಿನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

11 ಮಣಿಗಳಿದ್ದು ಬ್ರಿಜ್ ಮ್ಯೂಮೆಂಟ್.
22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ನಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0
9 ಕ್ಯಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.
ಬಾಟ್ಲಿವಾಲರ ಕೊರ್ ಅಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಡೈರಿಯಾ ಮಿಕ್ಸ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ಕಾರಿನಪತ್ರ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಥಾನುವಾರವೂ ಪ್ರಕಟವಾಗುವ ಉತ್ತಮತರದ

ವಾರ ಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಫೋಷಕರಿಗೆ	ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	,, 2—8—0.
,, ಸ್ಕೂಲರಿಗೆ ...	,, 1—8—0.

ಸರಕಾರದವರಲ್ಲಿಯೂ ಪ್ರಜೆಗಳಲ್ಲಿಯೂ ಈ ಪ್ರತಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮೊಳ ಉದ್ದ 1¼ ಮೊಳ ಅಗಲ ರೂ. 1½ರಿಂದ 2 ವರೆಗೆ, 6 ಮೊಳ ಉದ್ದ 1½ ಮೊಳ ಅಗಲ ರೂ. 1½ ರಿಂದ 5 ವರೆಗೆ, 6 ಮೊಳ ಉದ್ದ 1½ ಮೊಳ ಅಗಲ ರೂ. 2½ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಶ್ಮೆ ಮುಡಿಗಳು, ಪಾಮೂರ್ತಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಸಾಳಿಗ್ರಾಮ, ಶಾಳ, ಪಶ್ಮೀರ್ ಮಾಲ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನು ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಔಲಂಡಾ, ಕಾಶೀ ಕ್ಷೇತ್ರ.

ಶಾಲಿವಾಹನಶಕ ೧೮೪೭ನೆಯ ಕ್ರೋಧನ ಸಂವತ್ಸರದ ಫಾಲ್ಗುನ ಬ॥೧೪ ಶನಿವಾರದಿಂದ ಕ್ಷಯ ಸಂವತ್ಸರದ ಅಧಿಕ ಚೈತ್ರ ಶು॥೬ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ವಿಜ್ಞಾನ ಪುಸ್ತಿ.)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಗೌರನಾಡಿ	ಸೂರ್ಯ ಉ.	ಸೂರ್ಯ ಅಸ್ತ.
13	ಶನಿ	೧೪	೧೩.೪೪	ಶತಭಿಷಾ	೨೫.೩೧	೨೯	6.41	6.39
14	ರವಿ	●	೮.೧೬	ಪೂ. ಭಾ.	೨೧.೨೮	೧	6.40	6.40
15	ಸೋಮ	೧	೩.೧೪	ಉ. ಭಾ.	೧೮.೧೪	೨	6.40	6.40
16	ಕುಜ	೩	೫೫. ೨	ರೇವತೀ	೧೫.೪೨	೩	6.39	6.40
17	ಬುಧ	೪	೫೭.೩೨	ಅಶ್ವಿನೀ	೧೪.೧೬	೪	6.39	6.40
18	ಗುರು	೫	೫೧.೧೪	ಭರಣೀ	೧೩.೪೬	೫	6.38	6.40
19	ಶುಕ್ರ	೬	೫೧. ೨	ಕೃತ್ತಿಕಾ	೧೪.೨೮	೬	6.38	6.40

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮ್ಮೆದ್ದು	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
5	91—3	76—3	—	—
6	91—6	76—2	—	—
7	91—3	76—2	—	—
8	92—4	75—9	—	—
9	91—6	76—3	—	—
10	89—9	72—1	—	—
11	90—2	72—0	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಸಿತಿ		8— 4	9— 0
ಹೊಸ ಗುಡ್ಡು	...	7— 14	8— 6
ಹೊಸ ರಾಶಿ	...	7— 0	7—12
ಅವ್ವಲ್ ಬೆಳ್ತಿಗೆ	...	8— 0	9— 0
ರಂಗೂನು ಬೆಳ್ತಿಗೆ ಗೋಣಿ ೧	...	13— 0	14— 0
ಗೋಧಿ ಗೋಣಿ ೧ಕ್ಕೆ	...	18— 0	19— 8
ಹುರುಳಿಗೋಣಿ ೧ಕ್ಕೆ	...	8— 8	9— 2
ಕಡಲೆಗೋಣಿ ೧ಕ್ಕೆ	...	13— 0	13— 8
ತೊಗರಿಗೋಣಿ ೧ಕ್ಕೆ	...	15— 4	15— 8
ತೊಗರಿಬೇಳೆ ಗೋಣಿ ೧ಕ್ಕೆ	...	16— 8	23— 0
ಉದ್ದುಗೋಣಿ ೧ಕ್ಕೆ	...	16— 8	• —
ಹೆಸರುಗೋಣಿ ೧ಕ್ಕೆ	...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ	...	60— 0	65— 0
ಉಪ್ಪು ಗೋಣಿ ೧ಕ್ಕೆ	...	4—10	4—12
ಕೊಬ್ರಿ ಖಂಡಿ ೧ಕ್ಕೆ	...	105— 0	110— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	32— 0	—
ಎಳ್ಳಿಂಡಿ ಖಂಡಿ ೧ಕ್ಕೆ	...	47— 8	53—12
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	7—11	7—12
ಎಳ್ಳೆಣ್ಣೆ ಮುಡಿ ೧ಕ್ಕೆ	...	7— 8	9— 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	...	8-12-0	—
ಜೋರಿಸ ಸಕ್ಕರೆ ಮುಡಿ ೧ಕ್ಕೆ	...	4—12	4—13
ಊರ ಮೆಣಸಿನಕಾಯಿ ಮುಡಿ ೧ಕ್ಕೆ	...	9— 4	—
ಸಾಸಿವೆ ಮುಡಿ ೧ಕ್ಕೆ	...	9— 8	—
ಕೊತ್ತಂಬರಿ ಮುಡಿ ೧ಕ್ಕೆ	...	3— 8	4— 6
ಕಾಫಿ ಖಂಡಿ ೧ಕ್ಕೆ	...	380— 0	385— 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	275— 0	300— 0
ಹೊಸ ಅಡಿಕೆ ಖಂಡಿ ೧ಕ್ಕೆ	...	200— 0	235— 0
ಕಾಳುಮೆಣಸು ಖಂಡಿ ೧ಕ್ಕೆ	...	320— 0	340—
ಯಾಲಕ್ಕಿ ಮುಡಿ ೧ಕ್ಕೆ	...	45— 0	50— 0
ಗೇರುಬೀಜ ಮುಡಿ ೧ಕ್ಕೆ	...	2—14	3— 0
ಕಚ್ಚಿಜ ಖಂಡಿ ೧ಕ್ಕೆ	...	45— 0	65— 0
ಅಂದ್ರು ಹಗಲು ಮುಡಿ ೧ಕ್ಕೆ	...	16— 4	16—12
ನಾಮ್ರು ಬಾಕ್ರುಗಳು ಮುಡಿ ೧ಕ್ಕೆ	...	21— 0	—
ಚೀನಿ ಬೆಲ್ಲ ಸೇರು ೧ಕ್ಕೆ	...	18—10	
ಹಿತ್ಲಾಳಿ ಹಗಲು ಮುಡಿ ೧ಕ್ಕೆ	...	16— 8	
ಜವಜು		13—10	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯಾ

NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರಿವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮುಂಬಾಯಿ.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂಡ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುಂಲೆ ಬಾ, ಬೆಲ್ಲದ ಬೈಲು ಬೆರ್ಚಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ತಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೀಡರ ಹುಳವೂ ನೊಣವೂ, ಬಣ್ಣಗಳು, ಜಾಕ ಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—
ಶಾರದಾ ಛಾಪಖಾನೆ,
ಮಂಗಳೂರು.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆಮಕೊಳ್ಳುವದಕ್ಕೆ ಒಂದು ದೇಹದ ಮರ್ಮಶಾಸ್ತ್ರವು ಇರುವುದು. ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—
"ಕಾಮಶಾಸ್ತ್ರವೆಂಬುವುದು"
ಈಗಲೆ ತಯಾರಾಗಿದೆ.
ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, ಮದ್ರಾಸ್.

ಕೇಳಿರಿ! ಖರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ಡಿ. ಊಲನ್ ಮಾರ್ಟ,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲ 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ದಕ್ಷ ಧ್ವರಾ... ... ...
(3) ಇಂದ್ರಜಿತು ಕಾಳಗ ... ...
(4) ಚಂಡಭೀಮ ... ...
(5) ಮೃದುನರಾಮನ ಚರಿತ್ರೆ ... ...
(6) ಭಾಮಿನಿ ಕನ್ಯೆಯ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣಬಾಲಾಮೃತ ... ...
(9) ಶ್ರೀ ಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಸಂಚಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣ ದೀಪಾತ್ಮಮೋದ ಕಥಾ ... ...
(18) ಚಂದ್ರಮಾ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) ,, ಶಾದೇವರ ಮಹಾತ್ಮೆ ... ...
(22) ,, ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷ್ಯಗ್ರಹ ಕಥೆ ... ...
(24) ,, ಚೋರ ಕಥೆ ... ...
(25) ,, ಶಾರ್ವರಿ ಕಾರವಂಚ ಕಥೆ ... ...
(26) ,, ಗೋವಿನ ಚರಿತ್ರೆ ... ...
(27) ,, ದುಷ್ಯಂತನ ಕಥೆ ... ...
(28) ,, ಸಾವಂತ ಗಣೇಶನ ಕಥೆ ... ...
(29) ,, ಅಂಗದ ಸಾಧನ ... ...

ಶಾರದಾ ಛಾಪಖಾನೆ, ಮಂಗಳೂರು

ರೋಲ್ಡ್‌ಗೋಲ್ಡ್ ಎಂಟು ಮೂಲೆ ಕೈಗಡಿಯಾರ.

ಈ ಕೈಗಡಿಯಾರವು ಬಂಗಾರಕ್ಕೆ ಸರಿಸಮಾನವಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ಕೃಷ್ಟವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು.

ಕ್ರಯ ಗಳ್ಕೆ ರೂ. 7–2–0.

— ಕಾಸಿನ ಸರ (ಮಾಲೆ). —

ಇದನ್ನು ಪ್ರತಿಯೊಬ್ಬರಿಗೂ ಅನುಕೂಲವಾಗಿರುವ ಹಾಗೆ 60 ಕಾಸುಗಳು ಇಟ್ಟು ತಯಾರಿಸಿದೆ. ಕುತ್ತಿಗೆಗೆ ಹಾಕಲು ತೆಗೆಯಲು ಮಧ್ಯದಲ್ಲಿ ಕೀಲು ಇಟ್ಟಿರುವುದು. ನೋಡಲು ಬಹು ಅಲಂಕಾರವಾಗಿದೆ. ಯಾವಾಗಲೂ ಬಣ್ಣವು ಕೆಡದಂತೆ ಎಲಕ್ಟ್ರೋ ಭಂಗಾರದ ಗಿಲೀಟು ಮಾಡಿರುವುದು.

ಕ್ರಯ ಮಾಲೆ ಸರ 1ಕ್ಕೆ ರೂ. 8–0–0.

ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ೧೨ ರೋಸ್ ಸೆಂಟ್ ಬಾಟ್ಲಿಗಳು ಇನಾಂ ಕೊಡುವೆವು.

ಪೌಂನ್‌ಟೆನ್‌ಪೇನಾ.

Fountain Pen.

ಈ ನಕ್ಷೆಯಲ್ಲಿ ಕಾಣಿಸಿರುವ ಪೇನಾಗಳು ವಿಲಾಯತಿಯಲ್ಲಿ ತಯಾರಿಸಲ್ಪಟ್ಟವು. ಇವಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಬರೆಯುವದು. ಈ ಪೇನಾವನ್ನು ಮೇಲಾದ ವಾಲ್ಕನೈಟ್‌ನಿಂದ ತಯಾರಿಸಲ್ಪಟ್ಟಿದ್ದು. ಇದಕ್ಕೆ 14 ಕ್ಯಾರೆಟ್ ಭಂಗಾರದ ಮುಳ್ಳು ಇರುವದು. ಇದರಲ್ಲಿ ಬರೆದ ಅಕ್ಷರಗಳು ಸ್ವಲ್ಪವೂ ವ್ಯತ್ಯಾಸವಿಲ್ಲದೆ ಒಂದೇ ಸಮನಾಗಿರುವವು. ಇದರ ಜೊತೆಯಲ್ಲಿ ಇಂಕಿಯನ್ನು ತುಂಬುವ ಗಾಜಿನ ಕೊಳವೆಯನ್ನು ಮುಫತ್ತಾಗಿ ಕೊಡುವೆವು. ಕ್ರಯ 1ಕ್ಕೆ 2–0–0.

ವಿಳಾಸ: – ಎಸ್. ಆರ್. ಕೃಷ್ಣ ಅಂಡ್ ಕೊ.
ನಂ॥ ೧ ತಂಬುನಾಯಕನ ಬೀದಿ, ಮದರಾಸು.

॥ ಶ್ರೀ ಶಂಕರನಾರಾಯಣ ಪ್ರಸನ್ನಃ ॥

ವಸಿಷ್ಠಾಶ್ರಮದಲ್ಲಿ ಪಾಲ್ಗುಣ ಬಹುಳ ಬಿದಿಗೆ ಸೋಮವಾರ ೨ ಘಂಟೆಗೆ ಭರಣ್ಯ ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಈ ಶಾಲೆಯಲ್ಲಿ ನಡೆಯಿತು.

ಕಾರ್ಯಕ್ರಮವು ನಿಯಮವಾಗಿದ್ದಂತೆ ಸಂಘದ ನಿಬಂಧನೆಗಳು ಬಹುಮಂದಿ ಸಮ್ಮತದಿಂದ ಪಾಸುಮಾಡಲಾಗಿರುತ್ತೆ.

ಸಂಘವನ್ನು ರಿಜಿಸ್ಟ್ರಿಮಾಡುವರೆ ಈ ಕೆಳಗೆ ನಮೂದಿಸಿರುವ ಮೆಂಬರುಗಳನ್ನು ಚುನಾಯಿಸಿರುತ್ತೆ.

ಮ॥ ರಾ॥ಗಳಾದ ಪಂಡಿತ ಶಂಕರನಾರಾಯಣ ಭಟ್ಟರು, ಗುರುವಾರೆ ರಾಮಯ್ಯ ಭಟ್ಟರು, ಭರಣ್ಯ ರಾಮಯ್ಯ ಭಟ್ಟರು, ಕೋಕಳ ಶಂಕರ ಭಟ್ಟರು, ಕೈರಂಗಳ ಪಟ್ಲ ಶಂಕರ ಭಟ್ಟರು, ಕಾಶಿಮಠ ಗಣಪಯ್ಯನವರು, ಗುಡ್ಡೆಹಿತ್ತಲು ಡಿ. ಸುಬ್ರಾಯಭಟ್ಟರು, ಕಣಿಯಾರು ಮೇಗಿನಮನೆ ನಾರಾಯಣ ಭಟ್ಟರು, ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು, ಕೇದಕೆ ನಾರಾಯಣಾಚಾರ್ಯರು, ಕರಿಂಬಿತ್ತಲು ಸುಬ್ರಾಯ ಭಟ್ಟರು, ವಾಲ್ತಜೆ ಹೃಷೀಕೇಶವ ಭಟ್ಟರು, ಪಳ್ಳತ್ತಮೂಲೆ ಅನಂತಭಟ್ಟರು, ಮೊಳಕಾಲು ವೆಂಕಟೇಶ ಭಟ್ಟರು, ಬೆಲ್ಲ ವಿಷ್ಣುಭಟ್ಟರು, ಸರ್ವಂಗಳ ಈಶ್ವರ ಭಟ್ಟರು, ಪರ್ತಜೆ ವೆಂಕಟರಮಣ ಭಟ್ಟರು.

ಧನಪಾಟಿಗಳಿಗೆ ವೇತನವು ಹೆಚ್ಚಿಸಿದ್ದಲ್ಲದೆ ಹೆಚ್ಚು ಸಮಯ ಬೋಧಿಸಬೇಕೆಂದೂ ನಿಯಮಮಾಡಿರುತ್ತೆ. ಇಂಗ್ಲಿಷ್ ಉಪಾಧ್ಯಾಯರನ್ನು ಪಂಡಿತರು ನಿಯಮಿಸಿದ್ದರು. ಅವರನ್ನೇ ಮಹಾಜನರು ಅನುಮೋದಿಸಿ ಸ್ಥಾಪಿಸಿದರು. ಅದ್ದರಿಂದ ಇತಃಪರ ಸಂಸ್ಕೃತ ವೇದಪಾಠಗಳಂತೆಯೇ ಪಾಠವು ನಡೆಯುತ್ತದೆ.

ಕಾಸರಗೋಡು ತಾಲೂಕಿನವರು ೧೯೨೬ನೇ ಇಸವಿಯಲ್ಲಿ ನಡೆಯಬೇಕಾದ ದ್ರಾವಿಡಬ್ರಾಹ್ಮಣರ ಸಭೆಯನ್ನು ಕರೆದಿರುತ್ತಾರೆ. ಈ ಸಭೆಯನ್ನು ಜರಗಿಸುವುದಕ್ಕಾಗಿ ಕಾರ್ಯನಿರ್ವಾಹಕ ಸಭೆಯನ್ನು ಮೇ ತಾರೀಖು ೧೬ರಲ್ಲಿ ಏರ್ಪಡಿಸಬೇಕೆಂದು ಕಾಸರಗೋಡು ತಾಲೂಕು ದ್ರಾವಿಡ ಬ್ರಾಹ್ಮಣರಲ್ಲಿ ವಿನಂತಿ. ಅದ್ದರಿಂದ ಸರ್ವರೂ ಆ ಸಭೆಯನ್ನು ಅಂದಗೊಳಿಸಬೇಕಾಗಿಯೂ ವಿನಂತಿ.

ವಸಿಷ್ಠಾಶ್ರಮ
5–3–1926.

ಸರ್ವಂಗಳ ಈಶ್ವರಭಟ್ಟ,
ಕಾರ್ಯದರ್ಶಿ.

ಅಹಲ್ಯಾಬಾಯಿ ಹೋಳ್‌ಕರ್,

(ಲೇಖಕ ಕೆ. ಎಸ್. ಎನ್. ರಾವ್.)

ಈ ಸಾಧ್ವೀಮಣಿಯ ಚರಿತ್ರೆಯನ್ನು ಮೂರು ಭಾಗವಾಗಿ ವಿಭಾಗಿಸಬಹುದು, ಹ್ಯಾಗಂದರೆ (೧) ಜನ್ಮ ಮತ್ತು ಬಾಲ್ಯ, (೨) ಸಂಸಾರಸುಖ, (೩) ವೈಧವ್ಯ ಮತ್ತು ರಾಜ್ಯಪಾಲನೆ.

೧. ಅಹಮ್ಮದ್ ನಗರ ತಾಲೂಕಿಗೆ ಸೇರಿದ ಪಾಥರಡಿ ಎಂಬ ಗ್ರಾಮನಿವಾಸಿಯಾದ ಅನಂದಸಿಂಧೇ ಎಂಬೊಬ್ಬ ಮರಾಟ ಗ್ರಹಸ್ಥನಿಗೆ ೧೭೩೫ನೇ ಇಸವಿಯಲ್ಲಿ ಒಂದು ಕನ್ಯಾರತ್ನವು ಜನಿಸಿತು. ಆ ಮಗುವನ್ನು 'ಅಹಲ್ಯೆ' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಈಕೆಯಲ್ಲಿ ನೆಲೆಯಾಗಿದ್ದ ಗುಣವಿಶೇಷಗಳನ್ನು ನೋಡಿ ಈಕೆಯು ದೇವಾಂಶಸಂಭೂತೆಯೆಂದು ಭಾವಿಸಿ ಗ್ರಂಥಕರ್ತರೆಲ್ಲ...ಈಕೆಯನ್ನು ತಮ್ಮ ಗ್ರಂಥಗಳಲ್ಲಿ ದೇವೀ ಅಹಲ್ಯಾಬಾಯಿ ಎಂದು ಸಂಬೋಧಿಸುವರು. ಈಕೆಯು ದೇವಾಂಶದಿಂದ ಜನ್ಮವೆತ್ತಿರುವಳೆಂಬುದನ್ನು ದೃಢಪಡಿಸುವುದಕ್ಕೆ ಅನೇಕ ಕಥೆಗಳಿವೆ. ಚಿಕ್ಕವಳಾದ ಅಹಲ್ಯೆಯು ಬಂಧುಬಾಂಧವರನ್ನು ಬಹಳ ಪ್ರೀತಿಭಾವದಿಂದ ಕಾಣುತ್ತಿದ್ದಳು. ಈಕೆಯು ಎಂದೆಂದಿಗೂ ಅಸತ್ಯವನ್ನಾಡುತ್ತಿದ್ದಿಲ್ಲ. ಈಕೆಯು ಆ ಗ್ರಾಮದಲ್ಲಿದ್ದ ಪಾಠಶಾಲೆಯೊಂದರಲ್ಲಿ ವಿದ್ಯಾಭ್ಯಾಸ ಮಾಡಿದಳು. ಈಕೆಯ ಗುರುವಿಗೆ ಮಕ್ಕಳಿರಲಿಲ್ಲವಾದಕಾರಣ ಆತನು ತನ್ನ ಮಿತ್ರನ ಮಗಳಾದ ಅಹಲ್ಯೆಯನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಈಕೆಯು ಸೀತೆ, ದ್ರೌಪದಿ, ದಮಯಂತಿ, ಸಾವಿತ್ರಿಯೇ ಮೊದಲಾದ ಮಹಿಳೆಯರ ಕಥೆಗಳನ್ನು ಪ್ರೇಮದಿಂದ ಕೇಳುತ್ತಿದ್ದಳು. ಅಹಲ್ಯೆಗೆ ಪ್ರಾಯ ತುಂಬಲು ಬಡವನಾದ ಅನಂದರಾಯನು ವರವನ್ನು ಹುಡುಕುವುದಕ್ಕೆ ಯತ್ನಿಸಲಾರಂಭಿಸಿದನು. ಒಂದು ದಿನ ಅಹಲ್ಯೆಯು ತನ್ನ ಗುರುವಿನೊಡನೆ ಹನುಮಂತ ದೇವಾಲಯಕ್ಕೆ ಹೋಗಿದ್ದಳು. ಅಲ್ಲಿ ಬಂದು ಇಳಿದಿದ್ದ ರಘುನಾಥರಾಯನೂ, ಮಲ್ಹಾರಿರಾವ್ ಹೋಳ್ಕರನೂ ಆಕೆಯ ಸೌಂದರ್ಯಾತಿಶಯವನ್ನು ಕಂಡು ಆಕೆಯನ್ನು ಖಂಡೆರಾಯನಿಗೆ ಯೋಗ್ಯಳಾದವಳೆಂದು ಎಣಿಸಿ, ಅನಂದರಾಯನಿಗೆ ಇದನ್ನು ಹೇಳಲು ಅವನು ಹಾಗೆಯೇ ಮಾಡಿದನು. ಪೂನಾಪಟ್ಟಣದ ಸಮೀಪದಲ್ಲಿದ್ದ ಹೋಳ್ ಎಂಬ ಹಳ್ಳಿಯಲ್ಲಿ ಖಂಡೋಜಿ ಎಂಬೊಬ್ಬ ಕುರುಬನು ವಾಸವಾಗಿದ್ದನು, ಮಲ್ಹಾರಿರಾಯನು ಅವನ ಕುಮಾರನು. ಖಂಡೋಜಿಯ ಮರಣಾನಂತರ ಮಲ್ಹಾರಿಯು ತನ್ನ ಸೋದರಮಾವನ ಮನೆಯಲ್ಲಿ ದನ ಕಾಯುತ್ತಿದ್ದನು. ಆತನು ಇವನ ಶೌರ್ಯಧೈರ್ಯಾದಿಗಳನ್ನು ಕಂಡು ಅವನಿಗೆ ಸೇನಾಧಿಪನಾದ ದಾಭಾಡೆಯ ಬಳಿ ಸೈನಿಕ ಕೆಲಸವನ್ನು ಕೊಡಿಸಿದನು. ಮಲ್ಹಾರಿಯು ಬಾದಶಹನಿಗೂ ಪೇಶ್ವೆಗೂ ನಡೆದ ಕದನದಲ್ಲಿ ತೋರಿದ ಶೌರ್ಯದ ದೆಸೆಯಿಂದ ಶಿಲೆದಾರ್ ಪದವಿಯು ಲಭಿಸಿತು. ಪರಿತರುವಾಯ ಈತನು ಡಿಲ್ಲಿಯ ಸೇನಾಧಿಪತಿಯನ್ನು ಗೆದ್ದ ಕಾರಣ ಮಾಳವ ಪ್ರಾಂತ್ಯದ ಸುಭೇಧಾರಿಯೂ, ಮಲ್ಹಾರಿರಾವ್ ಹೋಳ್‌ಕರ್ ಎಂಬ ಬಿರುದೂ ಲಭಿಸಿತು. ಈತನಿಗೆ ಗೌತಮಾಬಾಯಿ ಎಂಬ ಪತ್ನಿ ಇದ್ದಳು. ಇ ದಂಪತಿಗಳ ಉದರದಲ್ಲಿ ಖಂಡೇರಾಯನು ಜನ್ಮಿಸಿದನು. ಈತನೇ ಅಹಲ್ಯಾಬಾಯಿಯ ಪತಿಯು.

೨. ಮಲ್ಹಾರಿರಾಯನು ಸೊಸೆಯಾದ ಅಹಲ್ಯೆಯನ್ನು ಬಹಳ ಪ್ರೀತಿಭಾವದಿಂದ ಕಾಣುತ್ತಿದ್ದನು. ಅಹಲ್ಯೆಯು ಅತ್ತೆಮಾವಂದಿಯರ ಹೇಳಿಕೆಯಂತೆ ನಡೆಯುತ್ತಿದ್ದಳು. ಇವಳು ಮನೆಯನ್ನು ಪ್ರವೇಶಿಸಿದಂದಿನಿಂದ ಮಲ್ಹಾರಿಯು ಅನೇಕ ಯುದ್ಧಗಳಲ್ಲಿ ಜಯವನ್ನು ಪಡೆದನಾದ ಕಾರಣ ತನ್ನ ಸೊಸೆಯಾದ ಅಹಲ್ಯೆಯು ಜಯಲಕ್ಷ್ಮಿಯ ಅವತಾರವೆಂದೆಣಿಸಿ ಅಂದಿನಿಂದ ಯುದ್ಧಕ್ಕೆ ಹೊರಡುವ ಮೊದಲು ಅಹಲ್ಯಾಬಾಯಿಯ ಸಮ್ಮತಿಯನ್ನು ಪಡೆದು ಹೊರಡುತ್ತಿದ್ದನು. ಈಕೆಯ ಅತ್ತೆಯು ಸ್ವಲ್ಪ ಕೋಪಿಷ್ಠಳು; ಅಹಲ್ಯೆಯು ಗೌತಮಾಬಾಯಿಯ ಗುಣವನ್ನು ಮೊದಲೆ ತಿಳಿದಿದ್ದಳಾದ ಕಾರಣ ಆಕೆಗೆ ಸಿಟ್ಟುಬಾರದಂತೆ ನಡೆದುಕೊಂಡು ಆಕೆಯಿಂದ ಆಶೀರ್ವಾದಗಳನ್ನು ಪಡೆಯುತ್ತಿದ್ದಳು. ಹರಕುಬಾಯಿ, ಉದಾಬಾಯಿಯರೆಂಬವರು ಖಂಡೇರಾಯನ ಜೇಷ್ಠಸೋದರಿಯರು. ಅವರು ಮೊದಲೆ ವಿವಾಹಿತೆಯರಾಗಿ ಅತ್ತೆಯ ಮನೆಯಲ್ಲಿರುತ್ತಿದ್ದರು. ಅಹಲ್ಯೆಯು ಅವರನ್ನು ಆಗಾಗ ಕರೆಸಿಕೊಂಡು ತನಗೆ ತಿಳಿದಿರುವುದನ್ನು ಅವರಿಗೂ ಕಲಿಸುತ್ತಿದ್ದಳು. ಅಹಲ್ಯೆಯು ತಾನು ಗುರುಮಠದಲ್ಲಿ ಓದಿ ಕಲಿತ ಸಾಧ್ವಿಮಣಿಯರಂತೆ ಪಾತಿವೃತ್ಯವನ್ನು ಪರಿಪಾಲಿಸುತ್ತಿದ್ದಳು. ಖಂಡೇರಾಯನು ತನ್ನ ಭಾರ್ಯೆಯನ್ನು ಅತ್ಯಂತ ಪ್ರೇಮದಿಂದ ಆದರಿಸುತ್ತಿದ್ದನು. ಈ ದಂಪತಿಗಳಿಗೆ ಮಲೆರಾವ್ ನೆಂಬ ಪುತ್ರನೂ, ಮಂಚಾಬಾಯಿ ಎಂಬ ಪುತ್ರಿಯೂ ಜನಿಸಿದರು. ಹೀಗೆ ಅಹಲ್ಯಾಬಾಯಿಯು ತನ್ನ ಗುಣ, ರೂಪಗಳಿಂದ ಅನುದಿನವೂ ಸೌಖ್ಯವಾಗಿದ್ದಳು.

೩. ಮಲ್ಹಾರಿರಾಯನಿಗೂ ಯವನರಿಗೂ ನಡೆದ ಸಂಗ್ರಾಮದಲ್ಲಿ ಶತ್ರುಸೈನ್ಯದಿಂದ ಹಾರಿಸಿದ ಅಗ್ನಿಗೋಳವೊಂದು ಖಂಡೇರಾಯನ ಮೇಲೆ ಬಿದ್ದು ಆತನು ಪರಲೋಕಯಾತ್ರೆ ಮಾಡಿದನು. ಇದನ್ನರಿತು ಅಹಲ್ಯಾಬಾಯಿಯು ಸಹಗಮನಕ್ಕೆ ಸಿದ್ಧಳಾದಳು. ತನ್ನ ಮಾವನಾದ ಮಲ್ಹಾರಿಯು ಬಹಳವಾಗಿ ಪ್ರಾರ್ಥಿಸಿಕೊಂಡ ಕಾರಣ ವೈಧವ್ಯ ದುಃಖವನ್ನು ಸಹಿಸಿಕೊಂಡು ಈ ಲೋಕದಲ್ಲೇ ಉಳಿದಳು. ಪತಿಯು ಕಾಲವಾದ ಸ್ವಲ್ಪಕಾಲದಲ್ಲೆ ಮಾವನಾದ ಮಲ್ಹಾರಿಯು ಗತಿಸಿದನು; ಇದಾದ ಆರು ತಿಂಗಳೊಳಗೆ ಮಗನಾದ ಮಲೆರಾಯನು ಕಾಲನರಮನೆಯನ್ನು ಸೇರಿದನು. ಮಲೆರಾಯನ ಮರಣಾನಂತರ "ರಾಜ್ಯಪಾಲನೆಯು ಯಾರ ಹೆಸರಲ್ಲಿ ನಡೆಯಬೇಕು!" ಎಂದು ವಿವಾದವು ಪ್ರಾರಂಭವಾಯಿತು. ಇದನ್ನರಿತು ಪೂನಾಪೇಶ್ವೆಯ ಮಂತ್ರಿಯಾದ ಗಂಗಾಧರಯಶವಂತನು, ಯಾರನ್ನಾದರೂ ದತ್ತು ತೆಗೆದುಕೊಳ್ಳಬೇಕೆಂದೂ, ಹುಡುಗನು ಪ್ರಾಪ್ತವಯಸ್ಕನಾಗುವ ತನಕ ತಾನು ರಾಜ್ಯವನ್ನಾಳುವೆನೆಂದೂ ಅಹಲ್ಯಾಬಾಯಿಗೆ ತಿಳುಹಿದನು. ಈ ಮಾತಿಗೆ ಅಹಲ್ಯಾಬಾಯಿಯು ಒಪ್ಪದಿರಲು ಮತ್ಸರದಿಂದ ರಘುನಾಥರಾಯನು ಮಾಳವ ದೇಶದ ಮೇಲೆ ದಂಡೆತ್ತಿಬರುವುದಾಗಿ ಹೇಳಿದನು. ಈ ವರ್ತಮಾನವನ್ನು ಅಹಲ್ಯಾಬಾಯಿಯು ತಿಳಿದು ದೊಡ್ಡ ದೊಡ್ಡ ಮರಾಟಿ ಸರದಾರರ ಸಹಾಯವನ್ನು ಬೇಡಿದಳು; ಅದಕ್ಕೆ ಅವರೆಲ್ಲರೂ ಸಮ್ಮತಿಸಿ ಸೈನ್ಯವನ್ನು ಕಳುಹಿದರು. ಅಹಲ್ಯಾಬಾಯಿಯು ದೊಡ್ಡದೊಂದು ಸಭೆಯನ್ನು ಮಾಡಿ ಆ ಸಭೆಯಲ್ಲಿ "ಅಬಲೆಯಾದ ನಾನು ಬಿದಿರು ಓಟೆಯೊಂದನ್ನು ಧರಿಸಿ ಹೊರಟರೂ ಶ್ರೀಮಂತರ ರಾಜ್ಯಕ್ಕೆ ಹಾನಿಯುಂಟಾಗದಿರದು, ಕಷ್ಟದಿಂದ ಸಂಪಾದಿಸಿದ ಈ ರಾಜ್ಯವನ್ನು ಪಡೆಯಬೇಕೆಂದು ಯತ್ನಿಸಿದರೆ ಅದು ಅಸಾಧ್ಯವೇ ಸರಿ; ಹೆಂಗಸಿನೊಡನೆ ಹೆಣಗಾಡಿ ಸೋತುಹೋದಲ್ಲಿ ನಿಮಗೆ ಅವಮಾನ, ನಾನು ಸೋತರೆ ಅಬಲೆಯೊಡನೆ ಹೋರಾಡಿ ಸೋಲಿಸಿದನೆಂಬ ಅವಮಾನ; ಹ್ಯಾಗೆ ವಿಚಾರಿಸಿದರೂ ನಿಮಗೆ ಅವಮಾನ ಪ್ರಾಪ್ತಿಯಾಗುವುದು" ಎಂದಳು. ಪೇಶ್ವೆಯು ಇದನ್ನು ಕೇಳಿ ಸೈನಿಕರನ್ನು ಹಿಂದೆಯೇ ಬಿಟ್ಟು ತಾನು ಇಂದೋರನ್ನು ಪ್ರವೇಶಿಸಿ, ಅಹಲ್ಯಾಬಾಯಿಯನ್ನು ಆದರಿಸಿ ಪುನಃ ಹೊರಟುಹೋದನು. ಆಹಾ! ಸ್ತ್ರೀಯಾದರೂ ಏನು ಧೈರ್ಯವು! ಇಂಥಾ ಕಪಟದಿಂದ ರಾಘೋಬನಂತಹ ವೀರನನ್ನು ಹಿಂದೋಡಿಸಿದ ಅಹಲ್ಯಾಬಾಯಿಯು ನಿಜವಾಗಿಯೂ ಧನ್ಯಳು! ಇಂತು ೧೭೬೬ರಲ್ಲಿ ರಾಜಪಟ್ಟವನ್ನು ಅಹಲ್ಯೆಯು ಪಡೆದಳು. ತುಕೋಜಿಯು ಆಕೆಯ ಮಂತ್ರಿಯಾಗಿದ್ದನು. (ಸಶೇಷ)

ವಿವಿಧ ವಿಷಯಗಳು.

ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಹೊಸ ಬದಲಾವಣೆಗಳು.

ಸೆಕೆಂಡರಿ ವಿದ್ಯಾಭ್ಯಾಸದ ಸಂಬಂಧವಾದ ಸಭೆಯು ಇದೇ ತಿಂಗಳ ೨, ೩, ೪ ಮತ್ತು ೫ನೇ ತಾರೀಖುಗಳಲ್ಲಿ ಡೈರೆಕ್ಟರ ಒಫ್ ಪಬ್ಲಿಕ್ ಇನ್‌ಸ್ಟ್ರಕ್ಷನರವರ ಆಫೀಸಾದ ನಂಗಂಬಾಕಂನಲ್ಲಿರುವ ಹಳೆ ಕೊಲೇಜಿನಲ್ಲಿ ಜರಗಿತು. ಮಿ॥ ಆರ್. ಲಿಟ್ಲ ಹೇಲ್ಸರುವರು ಅಧ್ಯಕ್ಷರಾಗಿದ್ದರು. ಎಲಿಮೆಂಟರಿ ವಿದ್ಯಾಭ್ಯಾಸದಲ್ಲಿ ಹೊಸ ಬದಲಾವಣೆಯ ವಿಷಯ ಮೊದಲೇ ಚರ್ಚಿಸಿ ತೀರ್ಮಾನಿಸಿದ್ದರಿಂದ ಈ ಸರ್ತಿ ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಮಾಡಬೇಕಾದ ಹೊಸ ಬದಲಾವಣೆಗಳ ವಿಷಯ ಆಲೋಚಿಸಲಾಯಿತು. ಇಷ್ಟರವರೆಗೆ ಮಿಡ್ಲ ಸ್ಕೂಲುಗಳಲ್ಲಿ I, II, III ಫೋರ್ಮು ಮಾತ್ರವೇ ಇತ್ತು. ಇನ್ನು ಮುಂದೆ IV ಫೋರ್ಮನ್ನು ಮಿಡ್ಲ ಸ್ಕೂಲುಗಳಿಗೆ ಕೂಡಿಸಿ ಮಿಡ್ಲ ಸ್ಕೂಲ ವಿದ್ಯಾಭ್ಯಾಸವನ್ನು ೪ ವರುಷ ಮಾಡಬೇಕೆಂದು ನಿಶ್ಚಯಿಸಲಾಯಿತು. ಹ್ಯಾಸ್ಕೂಲುಗಳ V ಮತ್ತು VI ಫೋರ್ಮುಗಳನ್ನು ಮಾತ್ರವೇ ಇಟ್ಟು ಎರಡೇ ವರುಷಗಳಲ್ಲಿ ಹ್ಯಾಸ್ಕೂಲ ವಿದ್ಯಾಭ್ಯಾಸವನ್ನು ಕೊಡಬೇಕೆಂದು ನಿರ್ಣಯಿಸಲಾಯಿತು. ಮಿಡ್ಲ ಸ್ಕೂಲುಗಳಲ್ಲಿ ಯಾವದಾದರೂ ಒಂದು ಕೈಗಾರಿಕೆಯನ್ನು ಕಡ್ಡಾಯವಾಗಿ ಕಲಿಸಬೇಕೆಂದಾಯಿತು. ಮಿಡ್ಲ ಸ್ಕೂಲ ಕಲಿತು ಹ್ಯಾಸ್ಕೂಲ ವಿದ್ಯಾಭ್ಯಾಸ ಕಲಿಯುವ ಹುಡುಗನು ಇಷ್ಟವಿದ್ದಲ್ಲಿ ಮುಂದರಿಸುವದಾದರೆ ಮುಂದರಿಸಬಹುದು ಇಲ್ಲವೆ ಯಾವದಾದರೂ ಒಂದು ಕೈಗಾರಿಕೆ ವಿದ್ಯೆಯನ್ನು ಕಲಿಯಬಹುದು. ಯೋಗ್ಯವಾದ ಮಧ್ಯಸ್ಥಳಗಳಲ್ಲಿ ಬೇಸಾಯದ ಇಲಾಖೆ ಮತ್ತು ಕೈಗಾರಿಕೆ ಇಲಾಖೆಗಳ ಕೈ ಕೆಳಗೆ ಕೈಗಾರಿಕೆ ಶಾಲೆಗಳನ್ನು ಇಡಬೇಕೆಂದು ನಿರ್ಣಯಿಸಲಾಯಿತು.

ಹ್ಯಾಸ್ಕೂಲುಗಳಲ್ಲಿ ಯಾವದಾದರೂ ಒಂದು ತರದ ಕೈಗಾರಿಕೆಯನ್ನು ಕಡ್ಡಾಯವಾಗಿ ಕಲಿಸಲೇಬೇಕು. ಮಿಡ್ಲ ಸ್ಕೂಲುಗಳಲ್ಲಿ ಕೈಗಾರಿಕೆಯನ್ನು ಕಲಿಸುವಾಗ ತೋಟದ ಕೆಲಸವನ್ನು ಕಲಿಸಲೇಬೇಕು. ಮೊದಲು ನೇಚರ್ ಸ್ಟಡಿಯನ್ನು ಕಲಿಸಿ ನಂತರ ಇದನ್ನೇ ಎಲಿಮೆಂಟರಿ ಸ್ಸಾಯನ್ಸಾಗಿ ಕಲಿಸಿ ಅದನ್ನು ಕಡ್ಡಾಯವಾಗಿ ಕಲಿಸಬೇಕು. ಡಾಕ್ಟರರು ಅಯೋಗ್ಯನೆಂದು ಹೇಳಿದ ವಿನಹಾ, ಪ್ರತಿ ಒಬ್ಬ ಹುಡುಗನು ಅಂಗಸಾಧನೆಯನ್ನು ಕಲಿಯಲೇಬೇಕು.

ಮಿಡ್ಲ ಸ್ಕೂಲುಗಳಲ್ಲಿ ದೇಶಭಾಷೆಯಲ್ಲಿಯೇ ವಿದ್ಯಾಭ್ಯಾಸವನ್ನು ಕಲಿಸಬೇಕು. ಇಂಗ್ಲಿಷ್, ಎಲಿಮೆಂಟರಿ ಮೆತಮೆಟಿಕ್ಸ, ಭೂಗೋಳ, ಇಂಡಿಯದ ಭೂಗೋಳ ಮುಖ್ಯವಾಗಿ, ಇಂಡಿಯ ಮತ್ತು ಇಂಗ್ಲೆಂಡಿನ ಚರಿತ್ರೆ ಸಿವಿಕ್ಸ, ನೇಚರ್‌ಸ್ಟಡಿ, ಡ್ರೊಯಿಂಗ್, ಅಂಗಸಾಧನೆ, ಹ್ಯಾಜಿನ್, ಮರದ ಕೆಲಸ, ಲೋಹದ ಕೆಲಸ, ಬೆತ್ತದ ಕೆಲಸ, ತೋಟಗಾರಿಕೆ, ಬುಕ್ ಬ್ಯಾಂಡಿಂಗ್. ನೇಯಿಗೆ ಇವುಗಳನ್ನು ಕಡ್ಡಾಯವಾಗಿ ಕಲಿಸಲೇಬೇಕು. ಒಂದು ಕ್ಲೆಸಿಕಲ್ ಭಾಷೆಯನ್ನೂ ಒಂದು ದೇಶಭಾಷೆಯನ್ನೂ ಕಲಿಸಬಹುದು. ಹ್ಯಾಸ್ಕೂಲುಗಳಲ್ಲಿ ವೊಕೆಶನಲ್ ಟ್ರೈನಿಂಗ ಕೊಡಬಹುದು.

ಹ್ಯಾಸ್ಕೂಲುಗಳಲ್ಲಿ ಇಂಗ್ಲಿಷ, ದೇಶಭಾಷೆ, ಒಂದು ಕ್ಲೆಸಿಕಲ್ಭಾಷೆ, ಮೆತಮೆಟಿಕ್ಸ, ಭೂಗೋಳ, ಇಂಡಿಯಾ ಮತ್ತು ಇಂಗ್ಲೆಂಡ ಚರಿತ್ರೆ, ಎಲಿಮೆಂಟರಿ ಸಾಯನ್ಸ, ಫಿಜಿಕಲ್ ಟ್ರೈನಿಂಗ್, ಹ್ಯಾಜಿನ್, ಮರದ ಕೆಲಸ, ಮೆಕೆನಿಕಲ್ ಡ್ರೊಯಿಂಗ್, ಲೋಹದ ಕೆಲಸ, ನೇಯಿಗೆ, ಬುಕ್‌ಬ್ಯಾಂಡಿಂಗ್ ಬೆತ್ತದ ಕೆಲಸ, ತೋಟಗಾರಿಕೆ ಇವುಗಳನ್ನು ಕಡ್ಡಾಯವಾಗಿ ಕಲಿಸಬೇಕು, ಅದಕ್ಕೆಲ್ಲ ಇನ್ನು ಈ ಕೆಳಗಿನವುಗಳಲ್ಲಿ ಯಾವದಾದರೂ ಎರಡು; ದೇಶಭಾಷೆ, ಕ್ಲೆಸಿಕಲ್ ಅಥವಾ ಅನ್ಯದೇಶದ ಭಾಷೆಗಳಲ್ಲಿ ಒಂದು ಭಾಷೆ, ಅಲ್ಜಿಬ್ರಾ, ಜೊಮಿಟ್ರಿ, ಪ್ರೆಕ್ಟಿಕಲ್ ಮೆತಮೆಟಿಕ್ಸ, ಟ್ರಿಗ್ನೊಮೆಟ್ರಿ, ಫಿಜಿಕ್ಸ, ಕೆಮಿಸ್ಟ್ರಿ, ಬೊಟೆನಿ, ಫಿಜಿಯೋಲಜಿ ಮತ್ತು ಹಾಜಿನ್, ಗಾಯನ, ಶೋರ್ಟಹೆಂಡ ಮತ್ತು ಟ್ಯಾಪ್‌ರ್‍ಯಾಟಿಂಗ್, ಬುಕ್ ಕೀಪಿಂಗ್, ಕಮರ್ಶಿಯಲ್ ಎರಿತ್‌ಮೆಟಿಕ್, ಕಮರ್ಶಿಯಲ್ ಪ್ರೆಕ್ಟಿಸ್, ಭೂಗೋಳ ಪ್ರಿಸಿಸ್ ರ್‍ಯಾಟಿಂಗ್ ಬಿಸಿನೆಸ್ ಕರಸ್‌ಪೊಂಡೆನ್ಸ, ಬಡಿಗೆ ಕೆಲಸ, ಕೆಬಿನೆಟ್ ಮಾಡುವುದು, ಕಟ್ಟಣದ ಕೆಲಸ, ಫಿಟರನ ಕೆಲಸ, ಎರಕದ ಕೆಲಸ, ಛಾಪಿಸುವ ಕೆಲಸ, ಬುಕ್‌ಬ್ಯಾಂಡಿಂಗ್, ನೇಯಿಗೆ, ಬೇಸಾಯ, ಇಂಗ್ಲೆಂಡ ಮತ್ತು ಇಂಡಿಯದ ಭೂಗೋಳ, ಇಕನೊಮಿಕ್ಸ, ಬ್ರಿಟಿಶ್ ಎಂಪಾಯರಿನ ಚರಿತ್ರೆ.

ರಿಕೊಗ್ನಿಶನಿನ ಶರ್ತಗಳು ಗವರ್ನಮೆಂಟ ಶಾಲೆಗಳಿಗೂ ಖಾಸಗಿ ಶಾಲೆಗಳಿಗೂ ಒಂದೇಯಾಗಿರುವುದು.

ಇದಾದ ಮೇಲೆ ಬರುವ ಜುಲ್ಯ ತಿಂಗಳಲ್ಲಿ ಸಭೆಸೇರಿ ಗ್ರೆಂಟ ಇನ್ ಎಯಿಡ ಕೋಡನ್ನು ತಿದ್ದುಪಡಿಮಾಡುವ ವಿಷಯ ಆಲೋಚಿಸಲಾಗುವದೆಂದು ನಿಶ್ಚಯಿಸಿ ಸಭೆಯು ಮುಕ್ತಾಯವಾಯಿತು.

ಇಂಡಿಯಾ ಸರಕಾರಕ್ಕಿರುವ ಸಾಲದ ಕಥೆ.

ಮಿ॥ ಸಿ. ರಾಜಗೋಪಾಲಾಚಾರ್ಯರು ಈ ಸಾಲದ ವಿಷಯ ಹೀಗೆ ಬರಿಯುತ್ತಾರೆ. –

ಇಂಡಿಯವನ್ನು ಈಸ್ಟ ಇಂಡಿಯಾ ಕಂಪೆನಿಯವರಿಂದ ಬ್ರಿಟಿಷ ಸರಕಾರದವರು ತೆಗೆದುಕೊಳ್ಳುವಾಗ ಅವರು ಇಂಡಿಯದಲ್ಲಿ ಖರ್ಚುಮಾಡಿದ ೬ ಮಿಲಿಯ ಪೌಂಡ್‌ಗಳನ್ನು ಆ ಕಂಪೆನಿಯವರಿಗೆ ಕೊಡಬೇಕಾಯಿತು. ಈ ೬ ಮಿಲಿಯ ಪೌಂಡುಗಳನ್ನು ಇಂಡಿಯದ ಕಂದಾಯದಿಂದಲೇ ಕೊಟ್ಟಿರುತ್ತಾರೆ. ೧೮೭೪ರಲ್ಲಿ ಈ ಸಾಲವನ್ನು ೧೦೦ಕ್ಕೆ ೨೦೦ ಪೌಂಡ್ ಪ್ರಕಾರ ಕೊಟ್ಟುತೀರಿಸಿದರು.

ಇಸ್ಟ ಇಂಡಿಯಾ ಕಂಪೆನಿಯವರು ಫ್ರೆಂಚರೊಡನೆಯೂ, ಕರ್ನಾಟಕ ನವಾಬರೊಡನೆಯೂ ಯುದ್ಧವನ್ನು ಮಾಡುತ್ತಿದ್ದಾಗ ಖರ್ಚಿಗಾಗಿ ಹಣವನ್ನು ಸಾಲತೆಗೆದುಕೊಂಡಿದ್ದರು. ಕಡೆಗೆ ಬಂಗಾಳವನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಂಡ ಮೇಲೆ ಆ ಸಾಲವನ್ನು ಬಂಗಾಳದ ಸರಕಾರದ ಮೇಲೆ ಹೊರಿಸಿದರು. ಕಂಪೆನಿಯವರಿಗೆ ಬೇರೆ ಬೇರೆ ವಿಧದಲ್ಲಿ ಸಿಕ್ಕಿದ ಹಣವೂ ಬಂಗಾಳದ ಕಂದಾಯದ ಹಣವೂ ಸಾಕಾಗದೆ ಬಂಗಾಳ ಸರಕಾರವು ಇನ್ನೂ ಸಾಲತೆಗೆಯಬೇಕಾಯಿತು. ಈ ರೀತಿ ಸಾಲತೆಗೆದು ಟೀಪುಸುಲ್ತಾನನ ಸಂಗಡ ಯುದ್ಧ ಮಾಡಿ ಮೈಸೂರು ಸಂಸ್ಥಾನವನ್ನು ಸ್ವಾಧೀನಪಡಿಸಿಕೊಂಡರು.

ಮೈಸೂರು ಸರಕಾರದಿಂದ ಸಿಕ್ಕಿದ ಕಂದಾಯದ ಹಣದಿಂದ ಮರಾಟಿಯವರ ಸಂಗಡ ಯುದ್ಧವನ್ನು ನಡಿಸಿದರು.

ಈ ರೀತಿಯಲ್ಲಿ ಇಂಡಿಯವನ್ನು ಜಯಿಸಿದರು ಹೀಗೆ ಜಯಿಸುವಾಗ ಉಂಟಾದ ಖರ್ಚನ್ನೆಲ್ಲಾ ಇಂಡಿಯದ ಸಾಲವೆಂದು ಕರೆದರು.

ಇದಲ್ಲದೆ ಅಸ್ಯಾಖಂಡದಲ್ಲಿ ನಡೆದ, ಚೈನಾ, ಅಫಘಾನಿಸ್ಥಾನ, ಬರ್ಮಾ, ಪರ್ಶಿಯಾ ಮುಂತಾದ ದೇಶಗಳ ಸಂಗಡ ನಡಿಸಿದ ಯುದ್ಧಗಳ ಖರ್ಚು ಇಂಡಿಯದ ಕಂದಾಯದ ಹಣದಿಂದಲೇ ನಡಿಸಿದ್ದಾಗಿರುತ್ತದೆ, ಯುದ್ಧಮಾಡಿದ ಸೈನಿಕರೂ ಇಂಡಿಯದವರೇ ಆಗಿರುತ್ತಾರೆ.

೧೮೫೪ರಲ್ಲಿ ಇಂಡಿಯಾ ಸರಕಾರದ ಸಾಲವು ೬೦ ಕೋಟಿ ರೂಪಾಯಿ ಆಗಿತ್ತು. ೧೮೫೭ರ ವರೆಗೆ ನಡೆದ ಇತರ ಯುದ್ಧಗಳಿಂದ ಈ ಸಾಲವು ೭೫ ಕೋಟಿ ರೂಪಾಯಿ ಆಯಿತು. ಇದಲ್ಲದೆ ಹೋಮು ಚಾರ್ಜಸ್ ಎಂಬ ಖರ್ಚೂ ಕೂಡಿ ೨೩ ವರುಷಗಳಲ್ಲಿ ಅಂದರೆ ೧೮೫೭ರಲ್ಲಿ ೧೦೦ ಕೋಟಿ ರೂಪಾಯಿ ಆಯಿತು.

ಅನಂತರ ಸಿಪಾಯಿಗಳ ದಂಗೆಯಾಯಿತು. ಈ ದಂಗೆಯನ್ನು ಅಡಗಿಸುವುದಕ್ಕೆ ೬೫ ಕೋಟಿ ರೂಪಾಯಿ ಬೇಕಾಯಿತು. ಇದನ್ನು ಇಂಡಿಯದ ಸಾಲಕ್ಕೆ ಕೂಡಿಸಲಾಯಿತು. ಹೀಗೆ ೧೮೬೦ರಲ್ಲಿ ಈ ಸಾಲವು ೧೬೫ ಕೋಟಿ ರೂಪಾಯಿ ಆಯಿತು.

ಈ ರೀತಿಯಲ್ಲಿ ಇಂಡಿಯಾ, ಬರ್ಮಾ, ಸಿಲೋನ್ ಸ್ಟ್ರೈಟ್ಸ್, ಹೊಂಕೊಂಗ್, ಏಡನ್ ಮುಂತಾದವುಗಳನ್ನು ಇಂಡಿಯದ ಖರ್ಚಿನಿಂದಲೇ ಸಂಪಾದಿಸಿದಂತಾಯಿತು.

ಯುರೋಪದ ಮಹಾಯುದ್ಧವು ಶುರು ಆಗುವಾಗ ಈ ಸಾಲವನ್ನು ತೀರಿಸಿ ಸ್ವಲ್ಪ ಆಗಿತ್ತಷ್ಟೇ. ಯುದ್ಧದ ಸಮಯ ಇಂಡಿಯಾ ಸರಕಾರವು ೧೫೦ ಕೋಟಿ ರೂಪಾಯಿ ಸಾಲತೆಗೆದು ಬ್ರಿಟನಿಗೆ ಯುದ್ಧದ ಖರ್ಚಿಗಾಗಿ ಕೊಟ್ಟಿತು. ತರುವಾಯ ಇಪ್ಪತ್ತು ಕೋಟಿ ರೂಪಾಯಿ ಕಂದಾಯದಿಂದ ಕೊಟ್ಟಿತು. ಯುದ್ಧದ ನಂತರ ೫ ವರುಷಗಳ ವರೆಗೆ ಇಂಡಿಯ ಸರಕಾರವು ಖರ್ಚಿಗೆ ಬೇಕಾದಷ್ಟು ಹಣವಿಲ್ಲದೆ ಬಹಳ ಕಷ್ಟದಿಂದ ರಾಜ್ಯಭಾರ ನಡಿಸಿತು, ಇದರಿಂದ ೩೦೦ ೧೦೦ ಕೋಟಿ ರೂಪಾಯಿ ಸಾಲವಾಯಿತು.

ಈಗ ಈ ಸಾಲವು ಒಟ್ಟು ೨೨೫ ಕೋಟಿ ರೂಪಾಯಿ ಆಗಿದೆ.

ಸ್ಫುಟ ವಿಚಾರಗಳು.

ಮೆರವಣಿಗೆ ಮಾಡಿರಿ!

ರೆ॥ ಎಂಡ್ರ್ಯೂಸರ ಹೊಸ ಸೂಚನೆ, ಹೊಸ ಉಪಾಯ! ದಕ್ಷಿಣ ಆಫ್ರಿಕಕ್ಕೆ ಹೋಗಿ ರೆ॥ ಎಂಡ್ರ್ಯೂಸರು ಮಾಡಿದ ಎಲ್ಲ ಯತ್ನಗಳೂ ವ್ಯರ್ಥವಾದುವು. ಅದರೂ ವ್ಯರ್ಥವೆನ್ನಲಿಕ್ಕೆ ಅವರಿಗೆ ಮನಸ್ಸಿಲ್ಲ. ಮೊದಲು ಅಶೆಯಿದೆ ಎಂದು ತಿಳಿಸಿದರು; ಆ ಮೇಲೆ ಎಶ್ಯಾಟಿಕ್ ಬಿಲ್ ಮುಂದೆ ಹಾಕುವರು, ತತ್ಕಾಲಕ್ಕೆ ಚರ್ಚಿಸುವುದಿಲ್ಲವೆಂದರು; ನೋಡಲಿಕ್ಕೆ ಹೋದರೆ ಯೂನಿಯನ್ ಸರಕಾರವು ಹಿಂದೀ ಸರಕಾರದ ಒಂದು ವಿನಂತಿಯನ್ನು ಕೂಡ ಮನ್ನಿಸಲಿಕ್ಕೆ ಸಿದ್ಧವಿರಲಿಲ್ಲ! ಆ ಮೇಲೂ ಅಶೆ! ಈಗ ಪ್ರಚಾರ ಕಾರ್ಯಕ್ಕೆ ೫ ಲಕ್ಷ ರೂಪಾಯಿಯನ್ನು ಹಿಂದೂಸ್ಥಾನವು ಕೊಡಬೇಕು! ಪ್ರಚಾರ ಕಾರ್ಯವೆಲ್ಲಿ? ದಕ್ಷಿಣಾಫ್ರಿಕೆಯರು ಸ್ವೇಚ್ಛೆಯಿಂದ, ಸಂಸಾರದ ರೂ—ಅ—ಪೈಗಳ ಲೆಖ್ಖವನ್ನು ಗುಣಿಸಿ ಹಿಂದೀಯರನ್ನು ಹೊರಗೆ ಹಾಕಲು ನಿರ್ಣಯಿಸುವಾಗ ಈ ಪ್ರಚಾರ ಕಾರ್ಯವಾದರೂ ಯಾವ ಪ್ರಯೋಜನಕ್ಕೆ? ಹುಲಿಗಳ ಗವಿಗೆ ಹೋಗಿ ದನದ ಪಾವಿತ್ರ್ಯದ ವಿಷಯ ಎಷ್ಟು ಪ್ರಚಾರ ಕಾರ್ಯವಮಾಡಬಹುದೋ! ಇನ್ನು ಈ ಪ್ರಚಾರ ಕಾರ್ಯಕ್ಕೆ ಸಹಾಯವಾಗಿ ವಿಜ್ಞಾನವೇತ್ತರಾದ ಡಾ॥ ಭೋಸರನ್ನೂ, ಕವಿಶ್ರೇಷ್ಠರಾದ ಡಾ॥ ಠಾಕೂರರನ್ನೂ, ಅಲ್ಲಿಗೆ ಮೆರವಣಿಗೆ ಮಾಡಬೇಕಂತೆ! ಇವರ ಶ್ರೇಷ್ಠತ್ವವು ಅವರಿಗೆ ತಿಳಿದಿಲ್ಲವೆಂಬಂತೆ! ಇವರನ್ನು ಅಲ್ಲಿ ತೆಗೆದುಕೊಂಡುಹೋದ ಮಾತ್ರದಿಂದ ಎಶ್ಯಾಟಿಕ್ ಬಿಲ್ಲು ಬಿದ್ದು ಹೋಗುವುದಿದೆಯೇ? ಹಿಂದೀ ಗೌರವವು ಹೆಚ್ಚುವುದಿಯೇ? ಮಿಲಿಯ ಗಟ್ಟಲೆ ಜನರ ಸೋತ್ಸಾಹಸ್ವಾಗತಕ್ಕೆ ಪಾತ್ರರಾಗಿ ಹಿಂದುರುಗಿದ ಡಾ॥ ರವೀಂದ್ರನಾಥರ ಪ್ರಯಾಣದ ಅಂತರವಲ್ಲವೇ ಅಮೇರಿಕೆಯಲ್ಲಿ ಹಿಂದೀಯರಿಗೆ ಅಮೇರಿಕದ ನಾಗರಿಕ ಅಧಿಕಾರಗಳನ್ನು ತೆಗೆದು ಹಾಕಿದುದು? ಇಂತಹ ಅನುಭೂತಗಳಿಂದ ಉತ್ಕ್ರಾಂತಿಯನ್ನೈದುವ ದೇಶವು ಪಾಶ್ಚಾತ್ಯರದಲ್ಲ. ಅವರ ನರಗಳು ನಮ್ಮ ನರಗಳಿಗಿಂತಲೂ ಶಕ್ತಿವಂತವಿವೆ. ಇಂತಹ ಮೆರವಣಿಗೆಗಳು ಹಿಂದೂ ದೇಶಕ್ಕೆ ಅವಮಾನಕರವೆಂದೂ, ಈ ಹಿಂದೀಯ ಶ್ರೇಷ್ಠರು ಅಲ್ಲಿಗೆ ಹೋಗಲೊಪ್ಪಲಿಕ್ಕಿಲ್ಲವೆಂದೂ ನಾವೂ ಭಾವಿಸುವೆವು.

ಇದು ರೋಗವಲ್ಲ; ಗರ್ಭಸ್ವಭಾವ.

ಇವರ ಈ ಮಾನಸಿಕತೆಯು ನಿವಾರಿಸಲು ಸಾಧ್ಯವಾದ ರೋಗವೆಂದು ಭಾವಿಸುವುದೇ ತಪ್ಪು. ಇದು ಅವರ ಗರ್ಭಸ್ವಭಾವವಾಗಿದೆ. ಯಾವ ಸ್ವಭಾವದಿಂದ ಅಮೇರಿಕವು ಬಿಳೀ ಜನರಿಂದ ತುಂಬಿಹೋಯಿತೊ, ಯಾವ ಸ್ವಭಾವದಿಂದ ಹಿಂದೂಸ್ಥಾನವು ಅವರ ಕೈವಶವಾಯಿತೊ, ಅದೇ ಸ್ವಭಾವವೇ ಈ ದಿನ ಈ ಕೆಲಸಕ್ಕೆ ಅವರನ್ನು ಪ್ರೇರಿಸಿಯದೆ. ಎಲ್ಲಿ ಬಿಳಿ ಜನರಿರುವರೊ ಅಲ್ಲಿ ಈ ತರದ ಸ್ವಭಾವವು ವ್ಯಕ್ತವಾಗುತ್ತಿದೆ. ಸ್ವಾತಂತ್ರ್ಯದ ಜನ್ಮಭೂಮಿಯೆಂದು ಹೆಸರುಹೋದ ಇಂಗ್ಲೆಂಡ್-ಸ್ಕೊಟ್‌ಲೆಂಡಿನಲ್ಲಿಯೂ ಕೂಡ ಈ ಭಾವನೆಯು ಮುಂದೊತ್ತುತ್ತಾ ಬಂದಿದೆ. ಹಿಂದೊಂದು ಸಾರಿ, ಸ್ಕೊಟ್ಲೆಂಡಿನಲ್ಲಿ ಒಂದು ಊರಿನ ಮ್ಯುನಿಸಿಪಾಲಿಟಿಯಲ್ಲಿ ಕೆಲಸಮಾಡುತ್ತಿದ್ದ ಹಿಂದೀ ಡಾಕ್ಟರನನ್ನು, ಅವನು ಹಿಂದೀಯನಾದುದಕ್ಕೆ ಕೆಲಸದಿಂದ ನಿವೃತ್ತಪಡಿಸಿದ ವಿಷಯವನ್ನು ನಾವು ತಿಳಿಸಿದ್ದೇವೆ. ಈ ಬಾರಿ ನಾವೆಯೊಳಗೆ ಕೆಲಸಮಾಡಿರುವ ಕೆಲವು ಸ್ಕೊಟ್ಲೆಂಡಿನೊಳಗಿನ ಹಿಂದೀಯರಿಗೆ, Alien ಎಂದರೆ ಇತರ ಜನಾಂಗವೆಂಬ ನಿರ್ಬಂಧಕ್ಕೆ ಗುರಿಯಾಗಲು ಬ್ರಿಟಿಷ ಸರಕಾರದ ಸೆಕ್ರೆಟರಿ ಒಫ್ ಸ್ಟೇಟನವರು ಪತ್ರಾಯಪಡಿಸಿದ್ದಾರೆ. ಹಾಗಾದರೆ ಆ ಸಾಮ್ರಾಜ್ಯವಾದವೂ ಅದರ ಜನರ ಹಕ್ಕು ಮತ್ತು ಅಧಿಕಾರಗಳೂ ಎಲ್ಲಿ ಹೋದುವು? ಮುಖ್ಯವೇನೆಂದರೆ ಹಿಂದೀಯರು ಸ್ವಲ್ಪ ಸುಖವಾಗಿ ಎಲ್ಲಿಯಾದರೂ ಇದ್ದರೆ ನೋಡುವುದು ಸರ್ವಸಾಮಾನ್ಯವಾಗಿ ಎಲ್ಲ ಬಿಳಿಯರಿಗೂ ಆಗದ ವಿಷಯವಾಗಿದೆ.

ಫ್ರಾನ್ಸ ದೇಶದಲ್ಲಿ.

ಹಲವು ತಿಂಗಳುಗಳಿಂದ ಹಲವು ಸರಕಾರಗಳು ಬಂದು ಪ್ರಯತ್ನಿಸಿದರೂ ಫ್ರಾನ್ಸಿನ ಆರ್ಥಿಕ ಸುವ್ಯವಸ್ಥೆಯು ಇನ್ನೂ ಆಗಿಲ್ಲ. ಸೋತುಹೋದ ಜರ್ಮನಿಯಲ್ಲಿ ಕೂಡ ದೇಶದ ಅಂತರ್ವ್ಯವಸ್ಥೆಗೆ ಇಷ್ಟು ಕಷ್ಟವಾಗಿಲ್ಲವೆಷ್ಟುವಾಗ ಗೆದ್ದಿರುವ ಫ್ರಾನ್ಸಿನ ಧೋರಣೆವೇ ಇದರ ಕಾರಣವೆನ್ನಬೇಕಾಗುತ್ತದೆ. ಸಿರಿಯಾ ದೇಶವನ್ನು ಸಂರಕ್ಷಣೆಗಾಗಿ ಕೊಟ್ಟಿದ್ದಾದರೂ, ಫ್ರಾನ್ಸು ಅದನ್ನು ದಬ್ಬಾಳಿಕೆಯಿಂದಲೂ ಪತ್ರಾಯದಿಂದಲೂ ಆಳಿ ಬಹಳ ಹಣವನ್ನು ವ್ಯಯಿಸುತ್ತಿದೆ. ಸ್ವಾಧೀನತೆಗಾಗಿ ಕಾದಾಡುವ ಡ್ರೂಸ ಜನರು ಸಂಪೂರ್ಣ ಶರಣಾಗತರಾಗಬೇಕೆಂಬುದೇ ಇವರ ಪತಕ್ಷೆಯು. ರಾಜಿಯಿಂದ ತೀರ್ಮಾನಿಸಲು ಇವರು ಸಿದ್ಧರಿಲ್ಲ, ಜನರಲ್ ಸರ್ರೈಲರಿಗಿಂತ ಹೆಚ್ಚಿನದೇನೂ ಇವರು ಮಾಡಿದಂತೆ ತೋರುವುದಿಲ್ಲ. ಅತ್ತ ಮೊರೊಕ್ಕದ ದೀರ್ಘ ಯುದ್ಧವು ಫ್ರಾನ್ಸಿನ ಭಂಡಾರವನ್ನು ಖಾಲಿಮಾಡಿತು. ಈ ತರದ ಸ್ವಾರ್ಥಮಯವಾದ ಸಾಮ್ರಾಜ್ಯವಾದಕ್ಕೆ ಫ್ರಾನ್ಸು ಬಲಿಬಿದ್ದು ಅದರಿಂದ ಮೇಲೇಳಲಾರದಾಗಿದೆ. ಫ್ರಾನ್ಸು ಶಾಪ ಮಾಡಿದ್ದನ್ನು ತಾನೇ ಉಣ್ಣಲು ... ವನ್ನು ಮುಂದರಿಸುವುದಿಲ್ಲವಾಗಿ ಈಗಿನ ಪರಿಸ್ಥಿತಿಯನ್ನು ನೋಡಿದರೆ ... ಪರಿಣಾಮವು ಹೇಗೆಂದು ಹೇಳಲು ಬರುವುದಿಲ್ಲ. ಲಾಲಾ ಲಜಪತ ವಿಷಯಗಳನ್ನು ನೋಡಿದರೆ ಪ್ರಜಾಸತ್ತಾಧಿಕಾರದ ... ಕಿತಕ್ಕೂ ಹಿಂದು ತನೆಯಿದೆಯೆಂದೂ, ರಾಜ್ಯದ ಇತಿಹಾಸದಲ್ಲಿ ಹಿಂದೊಂದು ಬಾರಿ ಸಿಗ್ಗರ ಮುಸ್ಸೊಲಿನಿಯಂತಹನು ಬೇಕಾಗುತ್ತದೆಂದೂ ತಿಳಿಯದಿರದು. ಫಲತಃ ಜರ್ಮನಿಯು ಕೈಸರನನ್ನೂ, ರಶ್ಯಾದ ಝಾರನನ್ನು ಪುನಃ ಸಿಂಹಾಸನಕ್ಕೇರಿಸಲು ಹವಣಿಸುವವರೂ ಯುರೋಪಿನಲ್ಲಿರುವುದು ಆಶ್ಚರ್ಯವಲ್ಲ.

ಹಿಂದೂ ಮಹಾಸಭೆ

ಹಿಂದೂ ಮಹಾಸಭೆಯು ಚಳವಳವು ಹೆಚ್ಚೆಚ್ಚು ಪ್ರಾಧಾನ್ಯವನ್ನು ಹೊಂದುತ್ತಾ ಬರುತ್ತಿದೆ. ಡಾ॥ ಮುಂಜೆ, ಡಾ॥ ಜೈತರಾಮ, ಶ್ರೀ॥ ಶ್ರೀನಿವಾಸ ಐಯ್ಯಂಗಾರ ಮುಂತಾದ ರಾಜಕೀಯ ಧುರೀಣರೇ ಈ ಮಹಾಸಭೆಯ ಕೆಲಸದಲ್ಲಿ ಹೆಚ್ಚೆಚ್ಚು ಉತ್ಸಾಹವನ್ನು ತೋರುವುದನ್ನು ನೋಡಿದರೆ ಹಿಂದೂ ಮಹಾಸಭೆಯ ಸುಸಂಘಟನೆಯ ಅವಶ್ಯಕತೆಯು ಸ್ಪಷ್ಟವಾಗುವುದು. ಹಿಂದೂ ಮಹಾಸಭೆಯ ಈ ಬಾರಿಯ ಅಧಿವೇಶನವು ಡಿಲ್ಲಿಯಲ್ಲಾಗುವುದು. ಹಿಂದೂ ಮಹಾಸಭೆಯ ಸಂಘಟನೆಯಿಂದಲೂ ಅದರ ಉದಾರ ಧೋರಣದಿಂದಲೂ ಉತ್ತರ ಹಿಂದೂಸ್ಥಾನದಲ್ಲಿ ಹಿಂದುಗಳ ಸ್ಥಿತಿಯು ಬಹುಮಟ್ಟಿಗೆ ಘಟ್ಟಿಯಾಯಿತೆಂಬುದು ನಿರ್ವಿವಾದದ ವಿಷಯವಾಗಿದೆ. ಲಾಲಾ ಲಜಪತರಾಯರೇ ಹಿಂದೂ ಸಭೆಯ ಸಚೇತನ ಅಧ್ಯಕ್ಷರಿರುವಾಗ ಹಿಂದೂ ಮಹಾಸಭೆಯು ಹೆಚ್ಚು ಕಾರ್ಯಕಾರಿಯಾಗಲು ಸಂಶಯವಿರುವುದಿಲ್ಲ. ಸುಧಾರಣಾ ಪಕ್ಷದ ಲಾಲಾಜಿಯವರೂ, ಸಾಂಪ್ರದಾಯ ಪಕ್ಷದ ಮಾಲವೀಯರೂ, ರಾಜಕೀಯ ರಂಗದಲ್ಲಿಯೂ, ಮತಸಾಂಪ್ರದಾಯ ಕ್ರಮಗಳಲ್ಲೂ ಇಷ್ಟು ತೀಕ್ಷ್ಣವಾದ ಭೇದವುಳ್ಳವರಾದರೂ ಈ ಹಿಂದೂ ಮಹಾಸಭೆಯ ಸುಸಂಘಟನೆಯಲ್ಲಿ ಒಂದಾದುದು ಹಿಂದೂ ಮಹಾಸಭೆಯ ಕಾರ್ಯಕಾರಿತೆಯನ್ನು ಸೂಚಿಸುವುದಲ್ಲದೆ ಅದರ ಅನಿರ್ವಾಹ ಅವಶ್ಯಕತೆಯನ್ನೂ ತೋರಿಸುತ್ತಿದೆ. ಇಂತಹ ಸುಜ್ಞ ಧುರೀಣರ ಮಂತ್ರಾಲೋಚನೆಯೊಡನೆ ಬೆಳೆಯುತ್ತಿರುವ ಮಹಾಸಭೆಯು ಹಿಂದೂಗಳ ಉದ್ಧರಣೆಯನ್ನು ಸಾಧಿಸುವುದೆಂಬ 'ಆಶೆಯಿದೆ ಮತ್ತು ಹಿಂದೂವಿನ ಪತಿತ ಸ್ವಭಾವವು ಬೇಗನೆ ನಾಶಹೊಂದೀತೆಂದೂ ಆಶೆಯಿದೆ. ದೇಶದ ಇತರ ಕಡೆಗಳೂ ಈ ಸಭೆಯ ಶಾಖೆಗಳನ್ನು ತೆರೆದಿದ್ದರೆ ಉತ್ತಮವಿತ್ತು. ಹಿಂದೂಗಳ ಉದ್ಧರಣೆಯು ಇಂತಹ ಸುವ್ಯವಸ್ಥಿತ ರೀತಿಯಿಂದಲೇ ನಡೆದರೆ ಕಾರ್ಯಕಾರಿಯಾಗುವುದು.

ಸ್ವರಾಜ್ಯಪಕ್ಷದ ಅವಶ್ಯಕತೆ

ಎಸೆಂಬ್ಲಿಯಲ್ಲಿ ನಡೆದ ಘಟನೆಗಳಿಂದ ದೇಶದ ಪ್ರತಿ ಕಡೆಗಳಲ್ಲಿಯೂ ಸುವ್ಯವಸ್ಥಿತ ಸ್ವರಾಜ್ಯ ಪಕ್ಷಗಳು ಇರುವ ಅವಶ್ಯಕತೆಯು ತೋರುವುದು. ಸರಕಾರವನ್ನು ಸರಿಯಾಗಿ ನಿರೋಧಿಸುವ ಪಕ್ಷವೆಂದರೆ ಸ್ವರಾಜ್ಯಪಕ್ಷ ಒಂದೇ ಎಂದು ಹೇಳಬೇಕಾಗಿದೆ. ಸರಕಾರದ ವರ್ತನದ ವಿಷಯದಲ್ಲಿ ಯಾವ ಹಿಂದೀ ರಾಜಕೀಯ ಪುರುಷನಿಗಾದರೂ ಅಭಿಪ್ರಾಯ ಭೇದವಿಲ್ಲ. ಈ ಉಪಾಯಸಾಧನೆಗಳ ಭೇದಮಾತ್ರವೆ ಕಂಡುಬರುವಲ್ಲಿ; ಯಾವ ಉಪಾಯವು ಸರಿ, ಯಾವುದು ತಪ್ಪೆಂದು ಪ್ರತಿ ಒಬ್ಬನ ಸಾಮಾನ್ಯ ಬುದ್ಧಿಗೂ ತಿಳಿಯತಕ್ಕ ವಿಷಯವಾಗಿದೆ. ಸ್ವರಾಜ್ಯ ಪಕ್ಷದ ಸಂಖ್ಯೆಯನ್ನು ಬರುವ ಚುನಾವಣೆಯಲ್ಲಿ ಹೆಚ್ಚಿಸುವುದು ದೇಶದ ಕರ್ತವ್ಯವಾಗಿದೆ. ಅದರಲ್ಲಿಯೇ ದೇಶದ ಸ್ವಾಭಿಮಾನವೂ ಇದೆ. ನಮ್ಮ ಜಿಲ್ಲೆಯಲ್ಲಿ ಈ ಮೊದಲು ನಡೆದ ಸ್ವರಾಜ್ಯಪಕ್ಷದ ಕ್ರಮಗಳು ಎಷ್ಟು ಶಿಥಿಲವಿದ್ದವುಗಳಾಗಿವೆ ಎಂಬುದನ್ನು ನಾವು ಈ ಮೊದಲೇ ಸೂಚಿಸಿದ್ದೇವೆ. ಈ ಬಾರಿಯ ಚುನಾವಣೆಗಳಲ್ಲಿ ಸ್ಪರ್ಧೆಯು ಎಷ್ಟೋ ಪಾಲು ಹೆಚ್ಚಿರಲಿಕ್ಕೆ ಸಾಧ್ಯವಿದ್ದುದರಿಂದ ಸ್ವರಾಜ್ಯಪಕ್ಷವು ಮುಂಜಾಗ್ರತೆ ತೆಗೆದುಕೊಳ್ಳುವುದು ಅವಶ್ಯವಿದೆ. ಸ್ವರಾಜ್ಯಪಕ್ಷದ ಪರವಾಗಿ ಕೌನ್ಸಿಲಿಗೆ ನಿಲ್ಲಲು ಯೋಚಿಸುವವರ ಪೈಕಿ ಉಡುಪಿಯ ಎರಡು ಹೆಸರುಗಳು ಈ ಮೊದಲೇ ಬಂದಿವೆ. ಮತ್ಯಾರು ನಿಲ್ಲಲು ಯೋಚಿಸುವರೇಂಬುದು ತಿಳಿದು ಬಂದಿಲ್ಲ. ಹಲವು ಜನರಿದ್ದರೆ ಅವರೊಳಗೆ ಎಲ್ಲರಿಗೂ ಸಮಾಧಾನಕರವಾಗಿ ಚುನಾಯಿಸುವುದೂ ಕಷ್ಟವಿದೆ. ಮಾತ್ರವಲ್ಲದೆ ಸ್ವರಾಜ್ಯಪಕ್ಷವೂ ಓಟು ಕೂಡಿಸುವುದರಿಂದ ಹೆಚ್ಚು ಪ್ರೀತಿಯನ್ನೂ ಆದರವನ್ನೂ ಸಂಪಾದಿಸಲಿದೆ; ಅಲ್ಲದೆ ಜನತೆಯೊಳಗೂ ಪ್ರಚಾರಕಾರ್ಯವನ್ನು ಮಾಡಲಿದೆ. ಸ್ವರಾಜ್ಯಪಕ್ಷವು ಇವೆಲ್ಲ ಕೆಲಸಗಳನ್ನು ಹ್ಯಾಗೆ ವ್ಯವಸ್ಥೆಗೊಳಿಸಿಯದೆಂಬುದು ತಿಳಿದು ಬಂದಿಲ್ಲ. ಕಳೆದ ಚುನಾವಣೆಗಳಲ್ಲಿಯೂ ಅನೇಕರು ಸ್ವರಾಜ್ಯಪಕ್ಷದ ಕಡೆಗಿರಬೇಕಾದವರು ಉದಾಸೀನಭಾವವನ್ನು ತಾಳಿದುದು ವಿಷಾದಕರ. ಎಸೆಂಬ್ಲಿಯ ಈಗಿನ ಘಟನೆಯಿಂದ ಸ್ವರಾಜ್ಯಪಕ್ಷದ ಭವಿತವ್ಯದ ಕಡೆಗೆ ಹೆಚ್ಚು ಗಮನವಿಡುವುದು ಅವಶ್ಯವಿದೆ. ಸಮಾಜ ಧುರೀಣರೂ ಈ ಬಾರಿಯಾದರೂ ದೇಶದ ಹಿತದ ಎದುರಿನಲ್ಲಿ ದಾಕ್ಷಿಣ್ಯವನ್ನು ಬದಿಗೊತ್ತಿ ಸ್ವರಾಜ್ಯಪಕ್ಷವನ್ನೆ ಸುಸಂಘಟಿಸಿ ವಿಜಯಿಯಾಗಿ ಮಾಡಲೆಂದು ನಾವು ಆಶಿಸುವೆವು.

ಇಲ್ಲಿಯ ವಸ್ತ್ರದ ವ್ಯಾಪಾರಿಯಾದ ಲಿಂಗಪ್ಪನೆಂಬವನು ಸುಮಾರು ೨ ತಿಂಗಳ ಹಿಂದೆ ಪರವೂರಿಗೆ ಹೋಗಿದ್ದನು. ಅದಕ್ಕೆ ಕಾಶಿಯಿಂದ ಸ್ವಲ್ಪ ಹಣ ತನಗೆ ಖರ್ಚಿನ ಬಗ್ಗೆ ಮನಿಆರ್ಡರು ಮಾಡಬೇಕಾಗಿ ಮನೆಯವರಿಗೆ ಬರೆದ ಪ್ರಕಾರ ರವಾನಿಸೋಣಾದ ಮನಿಆರ್ಡರು ಪತ್ತೆ ಸಿಕ್ಕದೆ ವಾಪಾಸು ಬಂದಿರುವುದಾಗಿಯೂ ನಂತರ ಆತನು ಎಲ್ಲಿರುತ್ತಾನೆಂತ ತಿಳಿಯಲಿಲ್ಲವಾಗಿಯೂ ಕೇಳಬರುತ್ತದೆ.

ಕಾರ್ಕಳ: — ಇಲ್ಲಿಯ ಡಿಸ್ಟ್ರಿಕ್ಟ ಮುನ್ಸಿಫರಾದ ಶ್ರೀಯುತ ಎಸ್. ಕಾರದ ... ಎಲ್. ಎಲ್. ಬಿ. ಇವರು ಇಲ್ಲಿಯ ಕೆ. ಇ. ಎಮ್. ಅಸೆಕಾರದ ಪ್ರಜಾ... ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ವಿರೋಧ ತತ್ವಗಳನ್ನು ಪ್ರೇರಿಸುವರು.

ಸ್ವೀಕರಿಸಿ ಶ್ರೀ ಸುರೇಂದ್ರನಾಥ ... ಕಲಿಯುತ್ತಿರುವ ವಿದ್ಯಾರ್ಥಿಗಳ ದಾಸರ ನಿಧನದ ಸ್ವಲ್ಪ ಸಮಯದಲ್ಲಿ ... ನ್ನು ಕರೆದಿರುವರು. ಸುರೇಂದ್ರನಾಥ ಬೆನರ್ಜಿಯವರು ಮತ್ತೆ ... ನ್ನು ಮದರಾಸಿನಲ್ಲಿ ... ಸಿದರೂ, ಅಪ್ರತಿಮ ರಾಜಕಾರಣ ಪಟುಗಳಾ... ರಿಂದ ವುದರಲ್ಲಿ ಯಾವ ಸಂಶಯವೂ ಇಲ್ಲ. ಅವರು ತನ್ನ ಹೆಚ್ಚಿನ ಮುಪ್ಪಿನ ವಯಸ್ಸಿನಲ್ಲಿ ಕೂಡ ಕೆಲಸಮಾಡುತ್ತಿದ್ದರು. ಸಾಯುವ ಸಮಯದಲ್ಲಿ ಅವರು ಮಾಡಿದ ಉಯಿಲಿನಲ್ಲಿ ಅರ್ಧ ಲಕ್ಷ ರೂಪಾಯಿಯನ್ನು ಬಂಗಾಳದ ವಿದ್ಯಾರ್ಥಿ ಸಮುದಾಯಕ್ಕೆ ವೇತನ ಕೊಡುವುದಾಗಿ ಬಿಟ್ಟಿರುವರು. ಇದರಿಂದ ಅವರ ಔದಾರ್ಯವು ತಿಳಿಯುವುದು. ಹಿಂದೀ ಶ್ರೀಮಂತರಿಗೆ ಇಂತಹ ಘಟನೆಗಳು ಆದರ್ಶಕರವಾಗಿರಬೇಕು.

ನಿರಪರಾಧಿಗೆ ಶಿಕ್ಷೆ.

ಮದ್ರಾಸ ಸರಕಾರವು ತಾನು ಮಾಡಿದ ಅನ್ಯಾಯವನ್ನು ಇನ್ನೂ ತಿದ್ದಲು ಪ್ರಯತ್ನಿಸದಿರುವುದು ಶೋಚನೀಯವಿದೆ. ಶ್ರೀಯುತ ಎಮ್. ಪಿ. ನಾರಾಯಣ ಮೇನನರು ವಕೀಲರಿದ್ದರು. ಮಾಪಿಳ್ಳಾ ದಂಗೆಯ ಸಮಯದಲ್ಲಿ ಇವರು ದಂಗೆಕೋರರಿಂದ ಅನೇಕರ ಜೀವವನ್ನು ರಕ್ಷಿಸಲು ಪ್ರಯತ್ನಿಸಿದ್ದರು. ಆದರೂ ಇವರು ದಂಗೆಕೋರರಿಗೆ ಸಹಾಯಮಾಡಿದರೆಂಬ ಅಪವಾದದಿಂದ ಸರಕಾರವು ಇವರನ್ನು ಜೈಲಿಗೆ ದೊಬ್ಬಿದೆ. ಇಷ್ಟರೊಳಗೆ ಅನೇಕ ಅರ್ಜಿಗಳು ಊರಿನ ಪ್ರಮುಖರಿಂದಲೂ ಸಾಮಾನ್ಯರಿಂದಲೂ ಸರಕಾರಕ್ಕೆ ಕಳುಹಿಸಲ್ಪಟ್ಟಿರುವುವಾದರೂ ಸರಕಾರವು ತನ್ನ ಎದೆಯನ್ನು ಕಲ್ಲುಮಾಡಿಯೇ ಬಿಟ್ಟಿದೆ. ಸಭ್ಯ ಗೃಹಸ್ಥನನ್ನು, ಅದರಲ್ಲಿಯೂ ಊರಿನ ಅಸಾಮಾನ್ಯರಿಂದ ಅಫೀಸರರ ಅರೆಗೆ ದೇಕಾದವನನ್ನು ಸರಕಾರವು ಈ ರೀತಿಯಲ್ಲಿ ದಂಡಿಸುವುದನು ಸಹನೀಯವಲ್ಲ.

ಹಿಂದೀ ರಾಜರುಗಳು.

ಇಂಡೂರ ಮಹಾರಾಜನ ಸಿಂಹಾಸನತ್ಯಾಗದೊಡನೆ ಹಿಂದೀ ರಾಜರಿಗೆ ಒಂದು ಮುಂಜಾಗ್ರತೆ ಕೊಟ್ಟಂತಾಗಬೇಕು. ಆದರೆ ಈ ರಾಜರುಗಳು ಹೆಚ್ಚು ಅಧಿಕಾರವುಳ್ಳವರಾಗಿದ್ದು ಪ್ರಜೆಗಳ ಲಕ್ಷಾವಧಿ ರೂಪಾಯಿಗಳನ್ನು ಸ್ವೇಚ್ಛೆಯಂತೆ ಖರ್ಚು ಮಾಡಲು ತಕ್ಕವರಿದ್ದುದರಿಂದ ಸರಕಾರವು ಇವರ ಗೋಜಿಗೆ ಹೋಗುವುದು ಬಹಳ ಕಡಿಮೆಯಾಗಿದೆ. ಇಂಡೋರ ಮಹಾರಾಜರೊಡನೆ ಸರಕಾರಕ್ಕೆ ದಾಕ್ಷಿಣ್ಯದ ವಿಷಯವೇನೂ ಇರಲಿಲ್ಲವೊ ಏನೊ ಎಂದು ನಾವು ಸಂಶಯಪಡಬೇಕಾಗುತ್ತದೆ. ಏಕೆಂದರೆ ಇತರ ಅನೇಕ ರಾಜರುಗಳೂ ಇದಕ್ಕಿಂತಲೂ ಭಯಂಕರವಾದ ಪಾಪರಾಶಿಯನ್ನು ಕಟ್ಟಿಕೊಳ್ಳುವುದನ್ನು ಸರಕಾರವು ಲಕ್ಷಿಸುವಂತೆ ತೋರುವುದಿಲ್ಲ. ಈ ವಿಷಯದಲ್ಲಿ ಈಗ ಅನ್ಯಾಯವಾಗಿ ಗದ್ದಿಗೆಯಿಂದ ದೊಬ್ಬಲ್ಪಟ್ಟ ನಭಾ ಮಹಾರಾಜರು ಕೊಟ್ಟ ಕೆಲವು ವರ್ತಮಾನಗಳು ಸರಕಾರದಿಂದ ವಿಚಾರಿಸಲ್ಪಡುಲು ಯೋಗ್ಯವಿವೆ.

> "ಸಂತೆಯ ಮಾತಾಗಿ ಬೆಳೆದ ಈ ಮಹಾರಾಜನ ವಿಷಯವಾಗಿ ವಿಚಾರವಾಗುವುದೊ ಎಂದು ನೋಡಲಿದೆ. ಈ ಮಹಾರಾಜನು ತನ್ನ ಸಂಬಂಧಿಕನಾದ ಒಬ್ಬ ಶ್ರೀಮಂತನನ್ನು ಕೊಂದು ಕೂಡಲೆ ಅವನ ಹೆಂಡತಿಯನ್ನು, ಅವಳು ತನ್ನ ರಕ್ತಸಂಬಂಧವಾದರೂ, ಮದುವೆ ಮಾಡಿಕೊಂಡನು, ಮತ್ತು ಈ ಸಂಬಂಧವಾಗಿಯೇ ಈತನ ಕೋರ್ಟಿನಿಂದಲೇ ಶಿಕ್ಷೆಹೊಂದಿದ ಕೆಲವು ಜನರು ಈತನ ಜೈಲಿನಲ್ಲಿ ಕೊಳೆಯುತ್ತಾರೆ. ಒಬ್ಬ ಪ್ರಸಿದ್ಧ ಅಫೀಸರನನ್ನು ಇತ್ತೀಚೆಗೆ ಜೈಲಿಗೆ ಹಾಕಿ ಈತನು ಅವನ ಎಲ್ಲಾ ಸೊತ್ತುಗಳನ್ನು ರಾಜ ಭಂಡಾರಕ್ಕೆ ಸೇರಿಸಿದ್ದಾನೆ. ಗೈಕವಾರ, ಹೋಲ್ಕರರು ಕೂಡ ಹಿಂದೀಸರಕಾರಕ್ಕೆ ಜವಾಬ್ದಾರವಾಗಿರುವಾಗ ಇವನು ಮಾತ್ರ ಸ್ವೇಚ್ಛೆಯಂತಿರಲು ಸರಕಾರದ ಒಪ್ಪಿಗೆಯಿದೆಯೇ? ಇವನನ್ನು ಮುಟ್ಟಲು ಸರಕಾರವು ಹೆದರುವುದೇಕೆ?

ಇತ್ಯಾದಿಯಾಗಿ ಹಿಂದೀ ರಾಜರ ಪಾಪರಾಶಿಯನ್ನು ನಭಾ ರಾಜರು ಚಿತ್ರಿಸುತ್ತಿರುವರು. ಇದು ನಿಜವಾದರೆ ಸರಕಾರವು ಇದರ ಕಡೆಗೆ ಲಕ್ಷ್ಯಗೊಡುವುದು ಅವಶ್ಯವಿದೆ. ದೇಶೀ ರಾಜರೊಳಗೆ ರಾಜ್ಯಾಡಳಿತದ ಶಕ್ತಿಯಿಲ್ಲದಿದ್ದರೂ ಪ್ರಜಾಪೀಡನೆಯ ಶಕ್ತಿಯು ತುಂಬಾ ಇದೆ. ಅಲ್ಲದೆ ಅವರ ಶಾಲಾಬ್ಯದ ಅಭ್ಯಾಸವು ವೀರ ಭಾವನೆಯನ್ನೂ, ರಾಜನೀತಿಯನ್ನೂ ಪ್ರೇರಿಸುವಂತಹುದಾಗಿಲ್ಲ. ಸರಕಾರವು ಇದನ್ನೂ ಸರಿಯಾಗಿ ಪರಿಶೀಲಿಸಬೇಕು.

ಅನುಕ್ರಮಣಿಕೆ.

ಅಗ್ರಲೇಖ	ಪುಟ
ಹೊರ ನಡೆದರು	೬
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೭
ದಕ್ಷಿಣ ಕನ್ನಡ— ಕುಂಬಳೆ, ಕಾರ್ಕಳ, ಬಂಟ್ವಾಳ, ತಲ್ಪಾಡಿ ಮಂಜೇಶ್ವರ	೭—೮
ಮಂಗಳೂರು	೮
ಮೋಟರ್ ನೋಟು	,,
ಮದ್ರಾಸು ಸಂಸ್ಥಾನದ ಆಯವ್ಯಯ	,,

ಸ್ವದೇಶಾಭಿಮಾನಿ.

ಶಕ ೧೮೪೭ ಫಾಲ್ಗುಣ ಬ॥೧೩ಯು ಶುಕ್ರವಾರ.

ಹೊರನಡೆದರು.

ಈ ತಿಂಗಳ ತಾ. ೮ನೇ ದಿನವು ಹಿಂದೀ ರಾಜಕೀಯ ವಿಷಯಗಳಲ್ಲಿ ಅತೀ ಮುಖ್ಯವಾದುದಾಗಿದೆ. ಈ ದಿನವು ಆಂಗ್ಲ ಪ್ರಭುತ್ವದ ಕಲಂಕವನ್ನು ಜಗತ್ತಿಗೆ ಸ್ಪಷ್ಟವಾಗಿ ತೋರಿಸುವ ದಿನವಾಗಿದೆ. ಹಿಂದೀ ಪ್ರತಿನಿಧಿಗಳ ಕೈಯಲ್ಲಿದ್ದ ಏಕಮಾತ್ರ ಉಪಾಯವನ್ನು ಈ ದಿನ ಸ್ವರಾಜ್ಯಪಕ್ಷವು ಧೈರ್ಯದಿಂದ ಕೈಕೊಂಡು ಹಿಂದೀ ರಾಜಕಾರಣದ ಟೊಳ್ಳುತನವನ್ನು ಹೊರಗೆಡಹಿತು. ಲೋಕದ ನ್ಯಾಯವಿಧಾಯಕ ಸಮ್ಮೇಲನಗಳ ಇತಿಹಾಸದಲ್ಲಿ ಹಿಂದೀ ನ್ಯಾಯವಿಧಾಯಕ ಸಭೆಯ ಈ ದಿನವೂ ಬಹಳ ಪ್ರಾಮುಖ್ಯತೆಯನ್ನು ತಾಳದಿರದು.

ಹಿಂದೀ ರಾಜಕೀಯ ಸಮಸ್ಯೆಯು ಅತೀ ಕಠಿಣವಾದುದಾಗಿದೆ. ಏಕೆಂದರೆ ಅದರ ಸೂತ್ರಧಾರಿಗಳಾದ ಆಂಗ್ಲ ರಾಜನೀತಿಜ್ಞರು ಮಹಾಪ್ರವೀಣರಾದ ತಂತ್ರಜ್ಞರಾಗಿರುವರಲ್ಲದೆ, ಅವರ ಸೈನ್ಯಶಕ್ತಿಯೂ, ಸಂಘಟನಾ ಶಕ್ತಿಯೂ ನಿರೋಧಿಸಲಸಾಧ್ಯವಾದದಂತುಹುದಾಗಿದೆ. ಹಿಂದೀ ರಾಜಕೀಯ ರಂಗದಲ್ಲಿ ನವರೋಜಿಯವರಿಂದ ಹಿಡಿದು ಗೋಖಲೆಯ ವರೆಗಿನ ತಾಳ್ಮೆಯ ಮತ್ತು ಶಾಂತಶೀಲರಾದ ಧುರೀಣರು ಕೆಲಸ ಮಾಡಿ ಮಾಡಿ ನಿರಾಶರಾದರು. ಬೇಡುವಿಕೆಯಿಂದ ಸಿಕ್ಕುವುದೇನೂ ಇಲ್ಲವೆಂದು ಅವರು ತಿಳಿದೂತಿಳಿದೂ ಪ್ರಯತ್ನಿಸಿಯೂ ಮತ್ತೂ ಸೋತರು. ಮಧ್ಯದಲ್ಲಿ ಅತಿಗಾಮಿಗಳು ಬಂಗಾಳ ವಿಭಜನೆಯ ಕಾಲದಲ್ಲಿ ಬೆದರಿಕೆಯನ್ನೂ ಕೊಟ್ಟರು. ಆದರೆ ಪ್ರಬಲವಾದೀ ಸರಕಾರವು ಅದನ್ನಾದರೂ ಲಕ್ಷಿಸುವ ಚಿಹ್ನವನ್ನು ತೋರಲಿಲ್ಲ. ಆದರೂ ತಾವು ಬಿಗಿದುದು ಹೆಚ್ಚಾದೀತೆಂದು, ಯುಕ್ತಿಯುಕ್ತವಾಗಿ ಮೆಲ್ಲನೆ ಬಂಗಾಳ ವಿಭಜನೆಯನ್ನು ತಿದ್ದಿದರು. ಅಂತೂ ಬೇಡುವಿಕೆಗಾಗಲಿ, ಬೆದರುವಿಕೆಗೆ ಮಣಿಯುವ ಸರಕಾರವು ಇದಲ್ಲವೆಂದು ಹಿಂದಿನ ಮತ್ತು ಇಂದಿನ ಎಲ್ಲ ಧುರೀಣರಿಗೂ ತಿಳಿದೇ ಇದೆ. ಬ್ರಿಟಿಷ ಸರಕಾರದ ಒಂದೇ ಒಂದು ಇಚ್ಛೆಯು ದುಡ್ಡು ಗಳಿಸುವುದು. ಹಿಂದೀ ಸಾಮ್ರಾಜ್ಯದಿಂದ, ಹಿಂದೀ ಪುತ್ರರ ದಾರಿದ್ರ್ಯದಲ್ಲಿಯಾದರೂ, ಆಂಗ್ಲಪುತ್ರರು ಚಿರಜೀವಿಗಳಾಗಬಹುದೆಂಬುದೊಂದೇ ಆಂಗ್ಲ ಸರಕಾರಕ್ಕೆ ಹಿಂದೀ ರಾಜದಂಡದ ಮೇಲೆ ಅಷ್ಟು ಪ್ರೀತಿಯನ್ನುಂಟು ಮಾಡಿಯದೆ.

ತಮ್ಮ ರಾಜ್ಯಭಾರ ಕ್ರಮವನ್ನು ಚಿರಸ್ಥಾಯಿಯಾಗಿ ಮಾಡಲು, ತಮ್ಮ ಅಧಿಕಾರವನ್ನು ಘಟ್ಟಮಾಡಲು ಆಂಗ್ಲ ಸರಕಾರವು ಅನುಸರಿಸಿದ ಉಪಾಯವು ಯಾವುದು ಇಲ್ಲ. ಯಾವ ರಾಜತಂತ್ರರ ಆಂಗ್ಲಪ್ರಭುತ್ವಕ್ಕೆ ಇಡೀ ಹಿಂದುಸ್ಥಾನವನ್ನು ಒಪ್ಪಿಸಿಕೊಟ್ಟಿತೊ, ಅದೇ ರಾಜತಂತ್ರವೇ ಈ ದಿನ ಹಿಂದೀ ರಾಜಕೀಯ ಮುಂದಾಳುಗಳಲ್ಲಿ ಭೇದವನ್ನೂ, ಹಿಂದೀ ಪ್ರಜಾಸಮೂಹದಲ್ಲಿ ಅಂತಃಕಲಹಗಳನ್ನೂ ಬಿತ್ತಿ ಆಂಗ್ಲ ಸರಕಾರವನ್ನು ಸುದೃಢವಾಗಿ ಮಾಡಿಯದೆ.

ಅದಂತರಲಿ. ಈಗಿನ ರಾಜಕೀಯ ವಾತಾವರಣವಾದರೂ ಇಂಗ್ಲಿಷರ ಅಂತಹ ರಾಜಕಾರಣಕ್ಕೆ ತಡೆಯೊಡ್ಡುವಂತಹುದಾಗಿದೆ. ಕೌನ್ಸಿಲುಗಳ ಮೂಲಕ ಪ್ರಜಾಪ್ರತಿನಿಧಿಗಳ ವಶೀಕರಣವು ನಡೆಯುತ್ತದೆಂದೇ ಮಹಾತ್ಮರು ಕೌನ್ಸಿಲುಗಳಿಗೆ ಬಹಿಷ್ಕಾರವನ್ನಿತ್ತರು. ಆದರೆ ಆ ಬಹಿಷ್ಕಾರದಿಂದ ಸರಕಾರಕ್ಕೆ ಲಾಭವಾಯಿತೇ ಹೊರತು ಬೇರೇನೂ ಆಗಲಿಲ್ಲ. ಆದರಿಂದ ಸರಕಾರದ ಆಜ್ಞೆಗಳನ್ನು ಸವಿನಯವಾಗಿ ಅನುಸರಿಸುವಂತಹ ಹೆಸರಿಗೆ ಮಾತ್ರ ಪ್ರತಿನಿಧಿಗಳೆಂಬವರು ಕೌನ್ಸಿಲನ್ನು ಸೇರುವಂತಾಯಿತು. ಇದರಿಂದ ಹಿಂದೀ ಪ್ರಾತಿನಿಧ್ಯದ ಗೌರವವು ಕಡಿಮೆಯಾಯಿತಲ್ಲದೆ, ಇಂಗ್ಲಿಷನು ತನ್ನ ನೈಸರ್ಗಿಕ ಯುಕ್ತಿಬಲದಿಂದ ರಾಜಕೀಯ ರಂಗದಲ್ಲಿ ಸ್ವೇಚ್ಛೆಯಂತೆ ವಿಶೃಂಖಲವಾಗಿ ವರ್ತಿಸಲು ಆರಂಭಿಸಿದನು. ಅದರ ಫಲವನ್ನು ಎಲ್ಲರೂ ತಿಳಿದೇ ಇರುವರು.

ಆ ಕಾರಣದಿಂದಲೇ ದೇಶಬಂಧುಗಳು ಅದಕ್ಕಿಂತಲೂ ಕಾರ್ಯಕಾರಿಯಾದ ಉಪಾಯವನ್ನು ಆಲೋಚಿಸಿದರು. ಕೌನ್ಸಿಲು ಬಹಿಷ್ಕಾರವನ್ನು ಮಾಡುವುದು, ಸುಧಾರಣಾ ಸರಕಾರಕ್ಕೆ ನಮ್ಮ ಸಮ್ಮತಿ ಇಲ್ಲವೆಂದು ತೋರಿಸಲಿಕ್ಕೆ. ನಮ್ಮ ಸಮ್ಮತಿ ಇಲ್ಲವೆಂದು ತೋರಿಸಬೇಕಾದರೆ ನಮ್ಮ ಪ್ರತಿನಿಧಿಗಳು ಕೌನ್ಸಿಲಿನೊಳಗೆ ಇರಬಾರದು. ಬಹಿಷ್ಕಾರದಿಂದ ಇದು ಸಾಧ್ಯವಾಗುವುದಿಲ್ಲ. ಒಳಗೆ ಹೋಗಿ ಕೌನ್ಸಿಲು ಮಂದಿರಗಳನ್ನೇ ಮುಚ್ಚಿಸಿಬಿಡುವೆವೆಂಬ ಆಲೋಚನೆಯಿಂದ ದೇಶಬಂಧುಗಳು ಸ್ವರಾಜ್ಯಪಕ್ಷವನ್ನು ಸ್ಥಾಪಿಸಿದರು.

ಅಂದಿನಿಂದ ಈ ಪಕ್ಷವು ಹೇಗೆ ರಾಜಕೀಯ ಗುದ್ದಾಟಗಳನ್ನು ನಡೆದಿದೆ ಎಂಬುದನ್ನು ಎಲ್ಲರೂ ತಿಳಿದಿರುವರು. ಸ್ವರಾಜ್ಯಪಕ್ಷವು ಸ್ಥಾಪನೆಯಾದಂದಿನಿಂದ ಈ ವರೆಗೆ ಅನೇಕ ತರದ ಕಷ್ಟಗಳಲ್ಲಿಯೇ ಬಳಲಿರುವುದು. ಅದರ ಸ್ಥಾಪನೆಯ ಸಮಯದಲ್ಲಿ ಅದು ತನ್ನ ವರ್ಗವನ್ನೂ, ಸರಕಾರದ ನಿರೋಧವನ್ನೂ, ಅಪರಿವರ್ತನವಾದಿಗಳ ಅಭ್ಯಂತರಗಳನ್ನೂ ನಿವಾರಿಸಿ ಚುನಾವಣೆಗೆ ನಿಲ್ಲಬೇಕಾಯಿತು. ಈ ಸಮಯದಲ್ಲಿ ಸ್ವರಾಜ್ಯಪಕ್ಷವು ಅನೇಕರ ಅವಹೇಳನಕ್ಕೂ, ನಿಂದೆಗೂ ಪಾತ್ರವಾಗಬೇಕಾಯಿತು. ಆದರೂ ಲಕ್ಷಿಸದೆ, ಕೊಂಗ್ರೆಸಿನ ವಿರೋಧದ ಮುಖದಲ್ಲಿಯೇ ಕಾಂಗ್ರೆಸ್ಸಿನ ಗೌರವಕ್ಕಾಗಿ ಕಾದಾಡಿ, ಜನರ ವಿಶ್ವಾಸವನ್ನು ಪಡೆದು ಸ್ವರಾಜ್ಯಪಕ್ಷವು ಸಾಕಷ್ಟು ಸಂಖ್ಯೆಯಲ್ಲಿ ನ್ಯಾಯವಿಧಾಯಕ ಸಭೆಗಳನ್ನು ಸೇರಿ ಅಲ್ಲಿ ತನ್ನ ನಿರಂತರ ನಿರೋಧದ ಧೋರಣವನ್ನು ಆರಂಭಿಸಿತು. ಬಂಗಾಳ, ಮಧ್ಯಪ್ರಾಂತ ಮತ್ತು ಎಸೆಂಬ್ಲಿ ಈ ಮೂರು ಸಭೆಗಳಲ್ಲಿ ಸ್ವರಾಜ್ಯಪಕ್ಷವು ತನ್ನ ಧ್ಯೇಯದ ಪಾವಿತ್ರ್ಯದಿಂದಲೂ, ರಾಜನೀತಿಯ ಕೌಶಲದಿಂದಲೂ, ಇತರ ಪಕ್ಷಗಳೊಡನೆ ಸೌಹಾರ್ದದಿಂದಲೂ, ಯಶಸ್ಸನ್ನು ಉಂಟುಮಾಡಿಕೊಂಡಿತು.

ಸ್ವರಾಜ್ಯಪಕ್ಷವು ಈ ಮೂರು ಸಭೆಗಳಲ್ಲಿಯೂ ಬಜೆಟನ್ನು ತೆಗೆದುಹಾಕಿತು. ನಿರಂತರ ನಿರೋಧವನ್ನು ನಡಿಸಲು ಈ ಶಿಸ್ತಿನಲ್ಲಿ ನಡಿಯುವ ಏಕಮಾತ್ರ ಪಕ್ಷಕ್ಕೆ ಎಷ್ಟು ಸಾಧ್ಯವೆಂಬುದನ್ನು ಸ್ವರಾಜ್ಯಪಕ್ಷವು ತೋರಿಸಿಕೊಟ್ಟಿತು.

ಆ ಮೇಲೆ ಇತರ ಪಕ್ಷದ ಧುರೀಣರೂ, ಇಂಗ್ಲೀಷರೂ, ಹಿಂದೂಸ್ಥಾನದ ಸ್ನೇಹಿತರೂ ಸ್ವರಾಜ್ಯಪಕ್ಷವನ್ನು ದೂರಲಾರಂಭಿಸಿದರು. "ನಿಮಗೆ ಧ್ವಂಸಕರವಲ್ಲದೆ ನಿರ್ಮಾಣಕ ವಿಷಯದ ಜ್ಞಾನವಿಲ್ಲ"ವೆಂದು ಕೆಲವರು ಹೇಳಿದರು; ಕೆಲವರು ಸ್ವರಾಜ್ಯಪಕ್ಷದ ನಿರಂತರ ನಿರೋಧದಿಂದ ಹಿಂದೀಯರು ರಾಜ್ಯಾಡಳಿತಕ್ಕೆ ಯೋಗ್ಯರಲ್ಲವೆಂದು ತೋರಿಸಿದಂತಾಗುವುದೆಂದು ಹೇಳಿದರು. ಇನ್ನು ಕೆಲವರು ಸಹಕರಿಸಿರಿ; ಸರಕಾರವು ಆಗಲಾದರೆ ಸಹಕರಿಸಲಿಚ್ಛಿಸುವವರು ಎಂದು ಹೇಳಿದರು.

ಇಂಗ್ಲೆಂಡಿನ ಶಾಸನಕರ್ತವಾದ ಪಾರ್ಲಿಮೆಂಟಿನ ಮಹಾಸಭೆಯ ಮುಂದೆ ನಿಂತು ಲೊರ್ಡ ಬರ್ಕನ್ ಹೆಡ್ಡರೂ ಈ ಸಹಕಾರವನ್ನು ಕರೆದರು. "ಸಹಕರಿಸಿರಿ ಆಗ ಸರಕಾರವು ನಿಮ್ಮೊಡನೆ ಸಹಕರಿಸುವುದು" ಎಂದು ಲೊರ್ಡ ಬರ್ಕನ್ ಹೆಡ್ಡರು ತಮ್ಮ ಗಂಟೆಯನ್ನು ಬಾರಿಸಿಬಿಟ್ಟರು.

ದೇಶಬಂಧುಗಳು ಈ ಮೊದಲೇ ಸಹಕಾರದ ತತ್ವವನು ತೋರಿಸಿದ್ದರು. ಬಂಗಾಳ ಗವರ್ನರರು ಅವರನ್ನು ಕರೆದು ಸ್ವರಾಜ್ಯಪಕ್ಷದಿಂದ ಬಂಗಾಳದ ಮಂತ್ರಿ ವರ್ಗವು ರಚಿಸಲ್ಪಡಬೇಕೆಂದು ಕೇಳಿದಾಗ ಸಿದ್ಧರಿದ್ದೇವೆಂದು ದೇಶಬಂಧು ದಾಸರು ಹೇಳಿದ್ದರು. ಮಾತ್ರ ಪ್ರಾಂತಗಳಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೇಳಿದ್ದರು. ಆ ಮೇಲೆ ಸಹ ದೇಶಬಂಧುಗಳು ತಮ್ಮ ಸಹಕಾರದ ಕೈಯನ್ನು ಮುಂದೆ ನೀಡಿ ಅವಸಾನವಾದರು. ಆದರೆ ಸಹಕಾರದ ಕೈಯನ್ನು ಆಂಗ್ಲ ಪ್ರಭುತ್ವವು ಸ್ವೀಕರಿಸಲಾರದೆ ಹೋಯಿತು.

ಅವರ ಮರಣದ ಮೇಲಾದರೂ ಸ್ವರಾಜ್ಯಪಕ್ಷವು ತಮ್ಮ ಕೀರ್ತಿಶೇಷ ಧುರೀಣನ ಮಾತನ್ನೆತ್ತಿ ಹಿಡಿದರು. ಮತ್ತು ಸ್ವರಾಜ್ಯಪಕ್ಷದ ಅಖಿಲ ಭಾರತ ಸಭೆಯಲ್ಲಿ ಸ್ವರಾಜ್ಯಪಕ್ಷವು ಸ್ಪಷ್ಟವಾಗಿ ತನ್ನ ಕೈಯನ್ನು ಮುಂದೆ ಚಾಚಿತು. ಅದಕ್ಕೆ ಉತ್ತರ ಬಂದುದೇನು? ಅದರಿಂದ ಆದ ಫಲವಾದರೂ ಏನು?

ಅದರಿಂದಾದುದು ರಿಸ್ಪೊನ್ಸಿವ್ ಕೊ-ಒಪರೇಶನ್ ವಾದಿಗಳೆಂಬ ವಿಚಿತ್ರ ಧೋರಣದ ಪಂಗಡವೊಂದು; ಪ್ರತಿಪಕ್ಷದ ನಿಂದಾನುಡಿಗಳಿನ್ನೊಂದು. ಆ ಮೇಲೆ ಈ ಬಾರಿ ನ್ಯಾಯವಿಧಾಯಕ ಸಭೆಯನ್ನು ತೆರೆಯುವ ಸಮಯದಲ್ಲಿ ವೈಸರಾಯಿಯವರು ಆ ತಮ್ಮ ಉಚ್ಚಾಸನದಿಂದ ಹೇಳಿದುದು ಸಹಕಾರ ಕೊಟ್ಟುದು ಸರಿ, ಆದರೆ ಅಷ್ಟು ಸಾಕಾಗದು ಎಂದು ಸಾರಾಂಶವಾಗಿ, ವೈಸರಾಯಿಯವರು ಅವರು ಹೇಳಿದಂತೆ ಧುರೀಣರು ಕೇಳಿದರೆ ಮುಂದೆ ಆಲೋಚನೆ ಮಾಡಬಹುದು ಎಂದೇ ಅಭಿಪ್ರಾಯಪಡುವರು. ಇದರಷ್ಟು ಅವಮಾನಕರವಾದ ಪರಿಸ್ಥಿತಿ ಬೇರೆ ಇದೆಯೆಂದು ನೆನಸಲು ಸಾಧ್ಯವಿಲ್ಲ. ಮುಖತಃ ಯಾರೂ ಏನೇ ಹೇಳಿದರೂ ಕೌನ್ಸಿಲುಗಳೆಂದರೆ, ಆ ಎಸೆಂಬ್ಲಿ ಅಧ್ಯಕ್ಷರಾಗಿರುವ ಪಟೇಲರು ಹೇಳಿದಂತೆ ಸರಕಾರದ ಎಕ್ಸಿಕ್ಯೂಟಿವ ಕೌನ್ಸಿಲಿನ ತೀರ್ಮಾನಗಳಿಗೆ ಸಹಿ ಹಾಕುವ ಒಂದು ಯಂತ್ರಸಾಮಗ್ರಿ ಮಾತ್ರವಾಗಿ ಪರಿಣಮಿಸಿಯದೆ. ಜನರ ಹಕ್ಕು ಅಧಿಕಾರಗಳನ್ನು ಲಕ್ಷಿಸುವವರಿಲ್ಲ. ದೇಶ ಪರದೇಶಗಳಲ್ಲಿ ಹಿಂದೀಯರು ಅನುಭವಿಸುತ್ತಿರುವ ಅತ್ಯಾಚಾರಗಳಿಂದ ಅವರನ್ನು ರಕ್ಷಿಸಬೇಕೆಂಬ ಕರ್ತವ್ಯ ಜ್ಞಾನ ಕೂಡ ಇಲ್ಲದ ಈ ಸರಕಾರದ ಯಂತ್ರದಿಂದ ಯಾವ ಪ್ರಯೋಜನವೂ ಇಲ್ಲವೆಂದು ಲೋಕಕ್ಕೆಲ್ಲಾ ಖ್ಯಾತಪಡಿಸುವುದು ಸ್ವರಾಜ್ಯಪಕ್ಷದ ಉದ್ದೇಶವಿತ್ತು. ಆ ಉದ್ದೇಶದ ಮಟ್ಟಿಗೆ ಅದು ಈಗಲಾದರೆ ಕೃತಕಾರ್ಯವಾಯಿತೆನ್ನಬಹುದು.

ಹೀಗೆ ಸ್ವಾಭಿಮಾನ ಪೂರ್ವಕವಾದ ಸಹಕಾರವನ್ನು ತೋರಿಸಿಯೂ ಸುಧಾರಣಾ ಸರಕಾರವು ನಿಷ್ಪ್ರಯೋಜಕವಾಯದೆಂದು ತೋರಿಸುವ ಗೌರವವು ಸ್ವರಾಜ್ಯಪಕ್ಷಕ್ಕೆ ಸೇರಿದುದಾಗಿದೆ. ಇನ್ನು ಸ್ವರಾಜ್ಯಪಕ್ಷಕ್ಕಿದ್ದುದು ಒಂದೇ ಉಪಾಯ ಈ ನಿಷ್ಪ್ರಯೋಜಕ ಸಂಸ್ಥೆಗಳಿಂದೆದ್ದು ಹೊರಬರುವುದು.

ಕಳೆದ ಕಾನಪುರ ಕಾಂಗ್ರೆಸ್ಸಿನಲ್ಲಿ ಸ್ವರಾಜ್ಯಪಕ್ಷೀಯರು ಕೌನ್ಸಿಲುಗಳಿಂದೆದ್ದು ಹೊರಬರಬೇಕಾಗಿ ನಿಶ್ಚಯಿಸಲ್ಪಟ್ಟಿದ್ದಿತು. ಕಾಂಗ್ರೆಸ್ಸಿನ ಧುರೀಣರಾಗಲಿ, ಕಾಂಗ್ರೆಸ್ಸಿನಲ್ಲದ ಧುರೀಣರಾಗಲಿ, ದೇಶದ ಸಮಸ್ತ ಪಕ್ಷಗಳ ಧುರೀಣರು ಒಂದಾಗಿ ಕೇಳಿದ ಆ ಬೇಡಿಕೆಯನ್ನಾದರೂ ಕೊಡಲೊಪ್ಪದ ಸರಕಾರದಿಂದ ಹೆಚ್ಚಿನ ಲಾಭವೇನೂ ಸಿಕ್ಕುವಂತಿಲ್ಲವೆಂಬುದೇ ಕಾಂಗ್ರೆಸ್ಸಿನ ನಿರ್ಧಾರವಾಯಿತು. ಆದರೂ ಸರಕಾರಕ್ಕೆ ತನ್ನ ಕರ್ತವ್ಯವನ್ನು ಮಾಡಲಿಕ್ಕಾಗಿ ಇನ್ನೆರಡು ತಿಂಗಳು ಸಮಯ ಕೊಡಲ್ಪಟ್ಟಿತು. ಅದನ್ನೂ ಈ ಸರಕಾರವು ತನ್ನ ಶಕ್ತಿಯ ಬಲದಿಂದ ತಿರಸ್ಕರಿಸಿತು. ಸಹಜವಾಗಿ ಹೇಳುವುದಾದರೆ, ಎಸೆಂಬ್ಲಿ ಮೂಲಕ ಜವಾಬ್ದಾರಿ ಸರಕಾರದ ಬಗ್ಗೆ ವ್ಯವಸ್ಥೆಮಾಡಲು ಕೇಳಿಕೊಂಡ ಎಲ್ಲಾ ಧುರೀಣರೂ ಈ ತಿರಸ್ಕಾರವನ್ನನುಭವಿಸಿ ಕೌನ್ಸಿಲುಗಳಿಂದ ಎದ್ದು ಬರಬೇಕಿದ್ದಿತಾದರೂ, ಆ ಧೈರ್ಯವೂ, ಆ ಉತ್ಸಾಹವೂ ಸ್ವರಾಜ್ಯಪಕ್ಷದಲ್ಲಿ ಮಾತ್ರವೇ ಸಾಧ್ಯವಾಯಿತು. ಇತರ ಪಕ್ಷಗಳೂ ಸೇರಿದ್ದಾದರೆ ಮತ್ತಷ್ಟು ಪರಿಣಾಮಕಾರಿಯಾಗಬಹುದಿತ್ತು. ಆದರೆ ಭಾರತೀಯ ಸೌಭಾಗ್ಯವು ಅಷ್ಟು ಗೌರವದ್ದಾಗಿಲ್ಲ.

ಇನ್ನೊಂದು ವೈಶಿಷ್ಟ್ಯವೆಂದರೆ, ಕಾನಪುರ ಕಾಂಗ್ರೆಸ್ಸಿನ ನಂತರ ಸ್ವರಾಜ್ಯಪಕ್ಷವು ಸ್ವೇಚ್ಛೆಯಿಂದ ತನ್ನ ವೈಯಕ್ತಿಕತ್ವವನ್ನು ಕಳೆದು ಕಾಂಗ್ರೆಸ್ಸಿನಲ್ಲಿಯೇ ಲೀನವಾಗಿ ಕಾಂಗ್ರೆಸ್ಸಿನ ಆಜ್ಞಾಧಾರಕವಾದುದು. ಕಾನಪೂರಿನಲ್ಲಿ ಸ್ವರಾಜ್ಯಪಕ್ಷೀಯರು ಸರಕಾರಕ್ಕೆ ಸಮಯಕೊಟ್ಟು ಕೌನ್ಸಿಲಿನಿಂದ ಹೊರ ನಡೆದು ಬರಬೇಕೆಂದು ಕಾಂಗ್ರೆಸ್ಸೇ ತೀರ್ಮಾನಿಸಿದ್ದಲ್ಲದೆ, ಈ ಬಾರಿ ಅವರನ್ನು ಕೂಡಲೇ ಹೊರಗೆ ಬರಬೇಕೆಂದು ಕರೆದುದೂ ಕಾಂಗ್ರೆಸ್ಸಿನ ಆಜ್ಞೆಯೇ ಆಗಿದೆ. ಡಿಲ್ಲಿಯಲ್ಲಿ ಸೇರಿದ ಮೊನ್ನೆಯ ಒಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಈ ಆಜ್ಞೆಯು ಸ್ವರಾಜ್ಯಪಕ್ಷಕ್ಕೆ ಕೊಡಲ್ಪಟ್ಟಿತು.

ಪಂಡಿತ ಮೋತಿಲಾಲರು ಆವೇಶಪೂರ್ವಕ, ಈ ಎಸೆಂಬ್ಲಿ ಮಟ್ಟಿಗೆ ತಮ್ಮ ಕಡೆಯ ಭಾಷಣವನ್ನು ಕೊಟ್ಟು ಸ್ವರಾಜ್ಯ ಪಕ್ಷದ ಅಭಿಪ್ರಾಯಗಳನ್ನು ವಿವರಿಸಿ ಹೇಳಿದರು. ಆ ಭಾಷಣದಲ್ಲಿ, ಈ ಸರಕಾರದಿಂದುಂಟಾಗುವ ದೇಶದ ದುಃಖದ "ವಾರ್ಷಿಕ ಸಮಾರಾಧನೆ"ಯನ್ನು ಪಂಡಿತ ಮೋತಿಲಾಲರು, ಸರಕಾರವು ಉಂಡು, ತಿಂದು, ತೇಗಲೆಂದು ಮಾಡಿದರು.

ಅಲ್ಲಿ, ಆ ಎಸೆಂಬ್ಲಿ ಮಂದಿರದಲ್ಲಿ ನಿಂತು ಮೋತಿಲಾಲಜಿಯವರು ಕಾಂಗ್ರೆಸ್ಸಿನ ಸ್ಪಷ್ಟವಾದ ಆಜ್ಞೆಯನ್ನೂ ವಿವರಿಸಿದರು. ಕಾಂಗ್ರೆಸ್ಸಿನ ಕಾರ್ಯನಿರ್ವಾಹಕ ಶಕ್ತಿಯು ಅಲ್ಲಿ ತೋರಿಸಲ್ಪಟ್ಟು ಕಾಂಗ್ರೆಸ್ಸಿನ ಗೌರವವು ಆ ಮೂಲಕ ದೃಢಪಡಿಸಲ್ಪಟ್ಟಿತು.

ಮತ್ತು ಪಂಡಿತಜಿಯವರ ಆ ಭಾಷಣವು ಕೂಡ ಸ್ವರಾಜ್ಯ ಪಕ್ಷದ ಮೇಲಿನ ಎಲ್ಲಾ ತರದ ಅಪವಾದವನ್ನೂ ತೊಳೆಯುವಂತಹುದುದಿತ್ತು. ತಮ್ಮ ನಿಸ್ಸಹಾಯಕತ್ವದ ಸ್ವಾನುಭವ, ಸರಕಾರದ ಲಜ್ಜಾಸ್ಪದ ಕಾಠಿಣ್ಯ, ನಿಷ್ಪ್ರಯೋಜಕ ಮಡ್ಡಿಮಾನ್ ಕಮಿಟಿ, ಅಸಹಕಾರಿಗಳ ಸಹಕಾರ, ಸರಕಾರದ ನಿರಂತರ ತಿರಸ್ಕಾರ, ಲೀ ಕಮಿಶನ್ನಿನ ಸುಲಿಗೆ, ಇತ್ಯಾದಿ ಸರಕಾರ ಧೋರಣದ ಅಂತರ್ಯ ಶೋಧನೆಯ ಅತ್ಯಂತ ಪರಿಣಾಮಕಾರಿಯಾದ ಭಾಷಣದೊಡನೆ ಪಂಡಿತಜಿಯವರು ತನ್ನ ಅನುಯಾಯಿಗಳು ತನ್ನೊಡನೆ ಹೊರಬರಬೇಕೆಂದು ಹೇಳಿ, ಎಸೆಂಬ್ಲಿಯ ಸಭೆಯಿಂದ ಹೊರಹೋದರು. ಅವರ ಹಿಂದೆಯೇ ಇಡೀ ಸ್ವರಾಜ್ಯಪಕ್ಷವು ವಿಧೇಯವಾಗಿ ಎದ್ದು ಹೊರಹೋಯಿತು. ಇತರ ಪಕ್ಷೀಯರು ಇವರೊಡನೆಯೇ ಹೊರಹೋಗಲಾರದೆ ಹೋದುದೇ ವಿಷಾದದ ವಿಷಯ.

ಇದೇ ಪ್ರಕಾರವಾಗಿ ಮುಂಬಯಿ, ಪಂಜಾಬು, ಮಧ್ಯಪ್ರಾಂತ, ಬಿಹಾರ, ಅಸ್ಸಾಮು ಈ ಕೌನ್ಸಿಲುಗಳಿಂದಲೂ ಸ್ವರಾಜ್ಯಪಕ್ಷದ ಕೌನ್ಸಿಲು ಮೆಂಬರರು ಕಾಂಗ್ರೆಸ್ ಆಜ್ಞೆಗೆ ವಿಧೇಯವಾಗಿ ಹೊರಹೊರಟು ಬಂದರು. ಬೀಹಾರಿನಲ್ಲಿ ಸ್ವರಾಜ್ಯಪಕ್ಷೀಯರಲ್ಲದವರೂ ಹೊರಟು ಬಂದುದು ಅಭಿನಂದನೀಯ. ಇನ್ನು ಬಂಗಾಲ, ಸಂಯುಕ್ತ ಪ್ರಾಂತ, ಮತ್ತು ಮದ್ರಾಸಿನವರು ಹೊರಬರಲಿದೆ; ಮತ್ತು ಬೇಗನೆ ಇವರು ಹೊರಬರುವವರಾಗಿಯೂ ಇದ್ದಾರೆ. ಸ್ವರಾಜ್ಯಪಕ್ಷದ ಪ್ರಚಂಡ ಶಿಸ್ತು (discipline) ಇದರಿಂದ ಸುವ್ಯಕ್ತವಾಗುವುದು. ಮತ್ತು ಶಿಸ್ತುಸಹಿತವಾದ ಸ್ವರಾಜ್ಯಪಕ್ಷವು ಎಷ್ಟು ಕಾರ್ಯಕಾರಿಯಾಗಿಯೂ, ಗೌರವಪೂರ್ವಕವಾಗಿಯೂ ಕೆಲಸ ಮಾಡಬಲ್ಲುದೆಂದು ಇದರಿಂದ ತಿಳಿಯಬರುವುದು.

ಬಂದಾಯಿತು. ಮುಂದೇನು? ಮುಂದೆ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಕೌನ್ಸಿಲುಗಳನ್ನು ಸೇರುವ ಭಾರವು ಸ್ವರಾಜ್ಯಪಕ್ಷದ್ದಾಗಿದೆ. ದೇಶದ ಗೌರವವು ಕೂಡಾ ಇದರಲ್ಲಿದೆ. ಈ ಬಾರಿಯ ಚುನಾವಣೆಯಲ್ಲಿ ಸ್ವರಾಜ್ಯಪಕ್ಷವು ನಿರ್ಬಲವಾಯಿತೆಂದರೆ ಮುಂದೆ ದೇಶದ ಆಶಯಗಳನ್ನು ಸರಕಾರವು ಎಂದೆಂದಿಗೂ ಲಕ್ಷಿಸಲಿಕ್ಕಿಲ್ಲ. ದೇಶದ ರಾಜಕೀಯ ಬೇಡಿಕೆಗಳು ಸರಕಾರದ ಸ್ವೇಚ್ಛೆಯ ತಿರಸ್ಕಾರಕ್ಕೆ ಪಾತ್ರವಾಗುವುವು. ಆದುದರಿಂದ ದೇಶದ ಕರ್ತವ್ಯವಾದರೂ ಸುಸ್ಪಷ್ಟವಿದೆ. ಸ್ವರಾಜ್ಯಪಕ್ಷೀಯರ ಕಡೆಗೆ ಸರ್ವ ಬೆಂಬಲವನ್ನಿತ್ತು, ಸರಕಾರವನ್ನು ತಗ್ಗಿಸಲು ದೇಶವು ಪೂರ್ಣ ಸಹಾಯವನ್ನು ಕೊಡಬೇಕು. ನಿರ್ಭೀತವೂ, ಉತ್ಸಾಹಿಯೂ, ಸಾಹಸಿಯೂ ಆದ ಈ ಪಕ್ಷವನ್ನು ಸಬಲವಾಗಿ ದೇಶವು ಕೌನ್ಸಿಲುಗಳಿಗೆ ಕಳುಹಿಸದಿದ್ದರೆ ರಾಜಕೀಯ ಆತ್ಮಘಾತುಕತೆಯನ್ನು ಮಾಡಿದಂತಾಗುವುದು.

ವಿದೇಶ ವರ್ತಮಾನ.

—ಲಂಡನ್‌ನಿಂದ ಮುಂಬಯಿ ವರೆಗೆ ವೈಮಾನಿಕ ಸಂಚಾರವು ಆರಂಭವಾಗುವದಂತೆ.

—ಲೋಕಾರ್ನೊ ಪರಿಷತ್ತಿನಲ್ಲಿ ತೀರ್ಮಾನಿಸಿದ ಮೇರೆಗೆ ಜರ್ಮನಿಯು ಲೀಗ್ ಒಫ್ ನೇಶನ್ಸಿನ ಕಾಯಂ ಸದಸ್ಯಳಾಗುವಳು. ಅದರೆ ಅವಳೊಡನೆ ಪೊಲೆಂಡ್, ಸ್ಪೈಯಿನ್ ಇತ್ಯಾದಿ ದೇಶಗಳೂ ಕಾಯಂ ಸ್ಥಾನ ಕೇಳಿಕೊಂಡಿರುವರು. ತಾನು ಸೇರುವ ಮುಂಚೆ ಇತರ ಯಾರನ್ನೂ ಸೇರಿಸಿಕೊಳ್ಳಕೂಡದಾಗಿ ಜರ್ಮನಿಯು ಹೇಳುತ್ತಿದೆ. ಇಂಗ್ಲೀಷರೂ ಜರ್ಮನಿಯ ಪಕ್ಷಕೆ ನೈಗುಟ್ಟುವವರಾಗಿದ್ದಾರೆ, ಫ್ರಾನ್ಸು ಪೊಲೆಂಡ ಪಕ್ಷದ್ದಾಗಿದೆ. ಈ ವಿಷಯದಲ್ಲಿ ಬಹಳ ವಾದವಿದ್ದದೆ.

—ತುರ್ಕರಿಗೂ ಇಂಗ್ಲೀಷರಿಗೂ ಮೊಸುಲ್ ಸಂಬಂಧ ವಿವಾದವಿದ್ದು, ಲೀಗ್ ಒಫ್ ನೇಶನ್ಸ ಮಟ್ಟಿಗೆ ಅದು ತೀರ್ಮಾನವಾದರೂ ತುರ್ಕಿಯು ಅದನ್ನೊಪ್ಪಿಕೊಂಡಿಲ್ಲ. ಇತ್ತ ಫ್ರಾನ್ಸು ತುರ್ಕಿಯೊಡನೆ ಪ್ರತ್ಯೇಕ ಒಪ್ಪಂದವನ್ನು ಮಾಡಿಕೊಂಡಿದೆ.

—ಫ್ರಾಂಸಿನಲ್ಲಿ ಕೊಮ್ಯುನಿಷ್ಟ ಮಿಟಿಂಗು ಸೇರಿ, ಕಾದಿದವರೊಳಗೆ ಜಗಳವಾಗಿ, ಪೋಲಿಸರು ಬಂದು ಅವರನ್ನು ಚದರಿಸಬೇಕಾಯಿತು.

—ಸಿರಿಯಾದಲ್ಲಿ ಡ್ರೂಸರು ಸ್ವಾಧೀನತೆಗಾಗಿ ಮಾಡಿದ ಯುದ್ಧದಲ್ಲಿ, ಯಾವುದೊಂದು ಒಪ್ಪಂದವಾಗಬೇಕಾದರೆ ಡ್ರೂಸ ಜನರು ಆಯುಧಗಳನ್ನು ಕೆಳಗಿಟ್ಟು ಶರಣಾಗತರಾಗಬೇಕಾಗಿ ಅಲ್ಲಿನ ಫ್ರೆಂಚ ಗವರ್ನರ ಎಮ್. ಡಿ. ಜುವ್‌ನಲ್‌ರವರು ವಿಧಿಸಿರುತ್ತಾರೆ.

—ಜಗತ್ತಿನ ಎಲ್ಲಾ ಇಗರ್ಜಿಗಳ ಪರಿಷತ್ತು ಗ್ರೀಸ ದೇಶದಲ್ಲಿ ಕೂಡುವುದಿದೆ.

—ಸರ್ ಸಿಡ್ನಿಲಿ ಎಂಬ ಪ್ರಸಿದ್ಧ ಲೇಖಕನು ಇದೇ ತಾ. ೩ಕ್ಕೆ ಲಂಡನ್‌ನಲ್ಲಿ ಮಡಿದನು!

—ಐಗುಪ್ತ್ಯ ದೇಶದಲ್ಲಿ ಸರಕಾರವನ್ನು ಖಂಡಿಸಿದ ಇಬ್ಬರು ಸ್ತ್ರೀಯರನ್ನು ಕೈದುಮಾಡಿರುವರು.

—ತುರ್ಕಿಯೊಳಗಿನ ಎಲ್ಲಾ ಬ್ರಿಟಿಷ ಸಂಸ್ಥೆಗಳಲ್ಲಿ ತುರ್ಕಿಯರನ್ನೆ ನೌಕರರನ್ನಾಗಿ ಇಡಬೇಕೆಂದು ಸರಕಾರವು ಆ ಸಂಸ್ಥೆಗಳಿಗೆ ನೋಟೀಸು ಕೊಟ್ಟದೆ.

—ರಷ್ಯಾ ದೇಶಕ್ಕೆ ಹೊರಭಾರವನ್ನು ನೀಡುಸುವ ಬಗ್ಗೆ ಯುರೋಪಿನ ಇತರ ದೇಶಗಳಲ್ಲಿ ರಷ್ಯಾನರು ಕೂಡಿ ಪ್ರಯತ್ನಿಸುತ್ತಾರೆ.

—ಗ್ರೀಸ್ ದೇಶಕ್ಕೂ ಇಟಲಿಗೂ ಒಂದು ಒಪ್ಪಂದವಾಗುವ ಸಂಭವವಿದೆ.

—ಟಿಬೇಟಿನ ಲ್ಹಾಸಾ ಪಟ್ಟಣಕ್ಕೆ ಇತರ ದೇಶೀಯರಿಗೆ ಪ್ರವೇಶವಿಲ್ಲ. ಇಂಗ್ಲೆಂಡಿನಲ್ಲಿ ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಕಲಿತ ರಿಂಗ್‌ರಾಂಗ ಎಂಬ ಟಿಬೇಟಿನ ಶ್ರೀಮಂತನು ಕೆಲ್ವಿನ್ಸನ ಕಂಪೆನಿಯಿಂದ ೩೦ಂಟನ್ನು ಇಲೆಕ್ಟ್ರಿಲ್ ಯಂತ್ರಸಾಮಗ್ರಿಗಳನ್ನು ಕೊಂಡು ಆ ಪಟ್ಟಣಕ್ಕೆ ಕೊಂಡೊಯ್ಯುವಾಗ ದರೋಡೆಗಾರರು ರಿಂಗರಾಂಗ್ ಮತ್ತು ಅವನ ಜನರನ್ನು ಕೊಂದು ಯಂತ್ರಸಾಮಗ್ರಿಯನ್ನು ಗುಡ್ಡದ ಬದಿಗೆ ನೂಕಿ ನಾಶಮಾಡಿರುವರಾಗಿ ತಿಳಿದುಬರುತ್ತಿದೆ.

—ನ್ಯೂಯಾರ್ಕ ಪಟ್ಟಣದಲ್ಲಿ ಎರಡು ಚಿಮಿಣಿ ಎಣ್ಣೆ ಕಂಪೆನಿಗಳು ಕೂಡಿ ಒಂದೇ ಕಂಪೆನಿಯಾಗಿ ಮಾಡಲ್ಪಟ್ಟಿವೆ. ಅವುಗಳ ಈಗಿನ ಒಟ್ಟು ಸೊತ್ತು ೩೮ ಕೋಟಿ ಡೊಲ್ಲರು ಅಂದರೆ ೪೦ ಕೋಟಿ ರೂಪಾಯಿ.

ಒಳದೇಶ ವರ್ತಮಾನ.

—ಮದರಾಸಿನ ಸರ್ಜನ ಜನರಲರಾದ ಸ್ವಾಮಿನ್ನರವರು ಇಂಡಿಯದ ಡ್ಯಾರೆಕ್ಟರ್ ಜನರಲ್ ಒಫ್ ಮೆಡಿಕಲ್ ಸರ್ವಿಸ ಹುದ್ದೆಗೆ ನೇಮಿಸಲ್ಪಟ್ಟಿರುವರು.

—ಬರುವ ಜೂನ್ ೫ನೇ ತಾರೀಕು ಜೋರ್ಜ ಮಹಾರಾಜರವರ ಜನ್ಮದಿನವಾದ್ದರಿಂದ ಆ ದಿನವು ಸರಕಾರ ರಜಾದಿನವಾಗಿ ಆಚರಿಸಲ್ಪಡುವುದು.

—ಬುದ್ಧಗಯಾದಲ್ಲಿರುವ ಬುದ್ಧ ದೇವಸ್ಥಾನವನ್ನು ಬೌದ್ಧರಿಗೆ ಬಿಟ್ಟು ಕೊಡಬೇಕೆಂದು ಬರ್ಮ ನ್ಯಾಯವಿಧಾಯಕ ಸಭೆಯ ಮೆಂಬರರಾದ ಮಾಂಗ ಟಿನ್. ಕೆ. ಎಂಬವರು ತಂದ ಬಿಲ್ಲನ್ನು ನ್ಯಾಯವಿಧಾಯಕ ಸಭೆಗೆ ತರಬಹುದೆಂದು ಗವರ್ನರ ಜನರಲರವರು ಸೆಂಕ್ಷನ್‌ಕೊಟ್ಟಿರುತ್ತಾರೆ.

—ಮದರಾಸಿನ ಜನರಲ್ ಹೊಸಪಿಟಲನ್ನು ಇದ್ದಂತೆ ದುರುಸ್ತಿಪಡಿಸಬೇಕೊ ಅಥವಾ ಅದನ್ನು ಮತ್ತೊಂದು ಕಡೆಯಲ್ಲಿ ಹೊಸತಾಗಿ ಕಟ್ಟಸಬೇಕೊ ಎಂಬ ಸಂಗತಿಯು ಇನ್ನೂ ನಿರ್ಧಾರವಾಗಲಿಲ್ಲ.

—ಮುಂಬಯಿಯ ಕೌನ್ಸಿಲ್ ಹೋಲ್ಲಿನಲ್ಲಿ ಮಹಾರಾಜ ಜೋರ್ಜ ಸಾರ್ವಭೌಮರ ಬಸ್ಟನ್ನು ಅಮೊದಿನ ಟಾಕೂರರು ಕೊಟ್ಟದ್ದನ್ನು ಮುಂಬಯಿ ಗವರ್ನರರು ಅನಾವರಣಮಾಡಿದರು.

—ಇಂಡಿಯದ ವೈಸರೊಯಿಯವರಾದ ಲೊರ್ಡ ರಿಡಿಂಗರವರೂ ಅವರ ಧರ್ಮಪತ್ನಿಯವರೂ ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳಿಗೆ ಮಾರ್ಚಿ ೫ನೇ ತಾರೀಕಿಗೆ ಕಡೆಯ ಔತಣವನ್ನು ಕೊಟ್ಟರು.

—ಕಲ್ಲಿಕೋಟೆ ಮುನ್ಸಿಪಾಲಿಟಿಯಲ್ಲಿ ಸಮುದ್ರ ಕರಾವಳಿಯ ಮಾರ್ಗಕ್ಕೆ ದಾಮರ ಹಾಕುವದೆಂದು ನಿಶ್ಚಯಿಸಲಾಗಿಯದೆ.

—ಮಲಬಾರು ಕಲೆಕ್ಟರ್ ಕಚೇರಿಯಲ್ಲಿ ಕ್ಲಾರ್ಕರ ಸಂಬಳವನ್ನು ಸಂಘರು ಆಯಾ ಕ್ಲಾರ್ಕರಿಗೆ ಬಟ್ವಾಡೆಮಾಡಬೇಕೆಂದು ಟ್ರೆಜರಿ ಡಿಪ್ಯುಟಿ ಕಲೆಕ್ಟರು ಹುಕುಂ ಕೊಟ್ಟಿರುತ್ತಾರೆ.

—ಇಂದೋರು ಮಹಾರಾಜರ ಮಗನಿಗೆ ಇದೇ ತಿಂಗಳ ೧೧ನೇ ತಾರೀಕಿಗೆ ಪಟ್ಟಾಭಿಷೇಕವಾಗುವುದು. ೫ ಮಂದಿ ಮೆಂಬರರುವ ಒಂದು ಕೆಬಿನೆಟು ರಾಜ್ಯಭಾರವನ್ನು ನಡಿಸುವುದು.

—ಕಳೆದ ತಾ. ೬ಕ್ಕೆ ಡಿಲ್ಲಿಯಲ್ಲಿ ಸೇರಿದ ಅಲ್ ಇಂಡಿಯಾ ಸ್ವರಾಜ್ಯ ಪಾರ್ಟಿಯ ಸಭೆಯಲ್ಲಿ ಕೌನ್ಸಿಲಿನಲ್ಲಿದ್ದ ಎಲ್ಲಾ ಸ್ವರಾಜಿಸ್ಟ ಮೆಂಬರರು ಕೌನ್ಸಿಲನ್ನು ಬಿಟ್ಟುಬಿಡಬೇಕಾಗಿ ನಿಶ್ಚಯಿಸಿರುವರು ಮತ್ತು ಎಲ್ಲಾ ಸ್ವರಾಜಿಸ್ಟರು ತಾ. ೮ಕ್ಕೆ ತಂತಮ್ಮ ಮೆಂಬರ್‌ಶಿಪ್ಪಿಗೆ ರಾಜಿಕೊಟ್ಟು ಕೌನ್ಸಿಲಿನಿಂದ ಹೊರ ಬರುವವರಾಗಿ ನಿಶ್ಚಯಿಸಿರುವರು.

—ಮುಂಬಾಯಿಯ ಕೆಲವು ಸ್ವರಾಜಿಸ್ಟ ಮೆಂಬರರು ಅಲ್ಲಿಯ ಗವರ್ನರರ ಮೇಲೆ ಅವರ ಪ್ರಯಾಣದ ಮತ್ತು ಇತರ ಭತ್ಯೆಗಳ ಖರ್ಚಿನ ವಿಷಯ ತಂದ ದಾವೆಯು ಸ್ವರಾಜಿಸ್ಟ ಮೆಂಬರರು ಕೌನ್ಸಿಲಿನಿಂದ ಹೊರಬಂದುದರಿಂದ ಮುಂದಕ್ಕೆ ಈ ವ್ಯಾಜ್ಯವನ್ನು ಮುಂದರಿಸುವುದಿಲ್ಲವಾಗಿ ಹೋಮ ಮೆಂಬರರಿಗೆ ತಿಳಿಸಿರುವರು.

—ಡಿಲ್ಲಿಯಲ್ಲಿ ತಾ. ೧೦ಕ್ಕೆ ಖಾದಿಪ್ರದರ್ಶನವು ಲಾಲಾ ಲಜಪತರಾಯರಿಂದ ತೆರೆಯೋಣಾಯಿತು.

—ಇಂದೂರಿನ ಮಹಾರಾಜರು ತಮ್ಮ ಸಿಂಹಾಸನವನ್ನು ಬಿಟ್ಟು ಕೊಟ್ಟದ್ದರಿಂದ ಅವರ ಸ್ಟೇಟ್ಸಿನಲ್ಲಿ ತಾ. ೧೦ಕ್ಕೆ ಹರತಾಳವನ್ನು ಆಚರಿಸಬೇಕಾಗಿ ನಿಶ್ಚಯಿಸಿರುವರು. ಮಹಾರಾಜರ ಸವಾರಿಯು ಇತರ ೩೦ ಮಂದಿ ಪರಿವಾರದೊಡನೆ ಈ ತಿಂಗಳ ಅಂತ್ಯದೊಳಗೆ ಯುರೋಪಿಗೆ ಹೋಗುವರಾಗಿ ತಿಳಿದುಬರುತ್ತದೆ. ಯುರೋಪಿಗೆ ಹೋಗುವಾಗ ಇವರು ಕೊಲಂಬೊ ಮಾರ್ಗವಾಗಿ ಹೋಗುವರಂತೆ. ಬಹುಶಃ ಮುಂಬಾಯಿಯಿಂದ ಹೋಗಲಿಕ್ಕೆ ಕಷ್ಟ ವಾಗುತ್ತದೊ ಏನೋ! ಯುರೋಪಿನಲ್ಲಿ ಎಷ್ಟು ಸಮಯದ ವರೆಗೆ ಇರುವರೆಂದು ತಿಳಿದುಬಂದಿಲ್ಲ. ಬಹುಶಃ ಎರಡು ವರುಷದ ನಂತರ ಹಿಂತಿರುಗಿ ಬರುವರಾಗಿ ತಿಳಿಯುತ್ತೇವೆ. ಮಹಾರಾಜರು ಯುರೋಪಿಗೆ ಹೋಗುವ ಕಾರಣ ಯಾವುದೆಂದರೆ: ತನ್ನ ಸಿಂಹಾಸನತ್ಯಾಗದ ವಿಷಯ ಸೆಕ್ರಿಟರಿ ಅಫ್ ಸ್ಟೇಟ್ಸಿನವರ ಹತ್ತಿರ ಅಪೀಲು ಮಾಡುವ ಬಗ್ಗೆ ಎಂದು ತಿಳಿದು ಬಂದದೆ. ಇದರ ಫಲವು ಮುಂದೆ ಗೊತ್ತಾಗುವುದು.

—ಡಿಲ್ಲಿಯಲ್ಲಿ ಕಳೆದ ತಾ. ೬ಕ್ಕೆ ಅಲ್ಲಿಯ ಎಲಿಫಿನ್‌ಸ್ಟೇನ್ ಸಿನೆಮಾ ಕಂಪೆನಿಯ ಅನ್ವರ್ ಅಲಿ ಎಂಬ ಒಬ್ಬ ಕೆಲಸಗಾರನು ತನ್ನ ಅತ್ತೆ ಮತ್ತು ಎರಡು ಜನ ನಾದಿನಿಯವರನ್ನು ತನ್ನ ಹೆಂಡತಿಯ ಮೇಲಿನ ದ್ವೇಷದಿಂದ ಕೊಂದುಹಾಕಿರುವನು. ಪೋಲಿಸರು ಅಪಾದಿತನನ್ನು ಕೈದುಮಾಡಿರುವರು. ತನ್ನ ಹೆಂಡತಿಯ ಕೆಟ್ಟ ನಡತೆಯ ವಿಷಯ ತನ್ನ ಅತ್ತೆಯು ಎಚ್ಚರಿಕೊಟ್ಟದ್ದರಿಂದ ಅವರ ತರ್ಕವು ನಡೆಯುತ್ತಿರುವಾಗ್ಗೆ ಇಬ್ಬರೊಳಗೂ ಜಗಳ ಬಂದು ಸಿಟ್ಟಿನಿಂದ ತನ್ನ ಅತ್ತೆಯನ್ನು ಕೊಂದನು. ಕೊಂದ ತಾಯಿಯನ್ನು ಅವಳ ಇಬ್ಬರು ಮಕ್ಕಳು ನೋಡಿ ದುಃಖದಿಂದ ಅನ್ವರ್ ಅಲಿಗೆ ಹೊಡೆಯಲಿಕ್ಕಾಗಿ ಬಂದರು ಕೂಡಲೇ ಅವರ ಮೇಲೂ ಸಿಟ್ಟುಗೊಂಡು ಅವರಿಬ್ಬರನ್ನು ಕೊಂದಿರುವನು. ಜಗಳ ನಡಿಯುತ್ತಿರುವಾಗ್ಗೆ ಆತನ ಹೆಂಡತಿಗೂ ಮತ್ತು ಅವಳ ಅಣ್ಣನಿಗೂ ಕೆಲವು ಗಾಯಗಳಾಗಿ ಇಬ್ಬರೂ ಆಸ್ಪತ್ರೆಯಲ್ಲಿರುವರು. ಇದರ ತನ್ನಿಯು ನಡಿಯುತ್ತಿದೆ.

—ಮುಂಬಾಯಿಯಲ್ಲಿರುವ ಜಪಾನಿಸ್ ಕೋಟನ್ ಸಿಪ್ಪರ್ ಎಸೋಸಿಯೇಶನಿನವರು ಮುಂಬಾಯಿ ಗಿರಣಿಮಾಲಿಕರಿಗೆ ಕೆಲವು ಆಕರಣೆ ಶರ್ತಗಳನ್ನು ಹಾಕಿ ಜಪಾನ್ ಹತ್ತಿಯ ವ್ಯಾಪಾರದ ವಿಷಯ ಕೆಲವು ಸಂಗ್ತಿಗಳನ್ನು ಬರೆದಿರುವರು ಮತ್ತು ಜಪಾನ್ ವಸ್ತ್ರದ ವ್ಯಾಪಾರವು ಇಂಡಿಯದಲ್ಲಿ ಕಳೆದ ಎಂಟು ವರ್ಷಗಳಿಂದ ಮೇಲಕ್ಕೆ ಬಂದದ್ದು. ಇಂಡಿಯದ ವ್ಯಾಪಾರದಿಂದ ಅಲ್ಲವಾಗಿಯೂ ಲಂಕಶಾರ ವಸ್ತ್ರದ ವ್ಯಾಪಾರವು ಇಂಡಿಯದವರಿಗಿಂತ ಹೆಚ್ಚಾದುದರಿಂದ ತಮ್ಮ ವ್ಯಾಪಾರವು ಲಂಕಶಾರಿನವರಿಂದಲೇ ಅಭಿವೃದ್ಧಿಗೆ ಬಂದಿರುವುದೆಂದು ತಿಳಿಸಿರುವರು. ಮುಂಬಾಯಿ ಗಿರಣಿ ಎಸೋಸಿಯೇಶನವರು ಈ ವಿಷಯ ತಕ್ಕ ಉತ್ತರವನ್ನು ವಿವರಿಸಲಿಕ್ಕಿರುವರು.

—ಮಹಾತ್ಮಾಜಿಯವರು ತಮ್ಮ ಆತ್ಮವೃತ್ತವನ್ನು ಯಾರೂ ಪುಸ್ತಕರೂಪವಾಗಿ ಪ್ರಕಟಿಸಬಾರದೆಂದು 'ಯಂಗ ಇಂಡಿಯಾ'ದಲ್ಲಿ ಬರೆದಿದ್ದಾರೆ.

—ಕಲಕತ್ತೆಯಲ್ಲಿ ಅನ್ನತ್ಯಾಗಮಾಡಿದ ಬಂಗಾಲೀ ವೀರರ ಬಗ್ಗೆ ಹರತಾಳ ಮತ್ತು ಸಭೆಗಳು ನಡೆದವು.

—ಪಂಡಿತಜಿಯವರೂ ಮಹಾತ್ಮಾಜಿಯವರೂ ಸದ್ಯದ ರಾಜಕಾರಣದ ವಿಷಯವಾಗಿ ಆಲೋಚನೆಮಾಡಿದರು.

—ಮುಂಬಯಿಯನ್ನು ಬೆಳಸುವುದಕ್ಕೆ ೧೯೨೫ನೇ ವರ್ಷದ ಕೊನೆಯ ವರೆಗೆ ೧೨ ಕೋಟಿ ೯೮ ಲಕ್ಷ ೩೮ ಸಾವಿರ ರೂ.ಗಳು ಖರ್ಚಾದವು.

—ಕರಾಚಿಯಲ್ಲಿ ಒಬ್ಬ ಮುಸಲ್ಮಾನ ನೌಕರನು ಒಬ್ಬ ೧೧ ವರ್ಷದ ಹಿಂದೂ ಹುಡುಗನನ್ನು ಚನ್ನಟ್ಟಿ ಕೊಂದುಹಾಕಿದನು.

—ನಾ| ಶಾಸ್ತ್ರಿಯವರು ಶುದ್ಧೀ ಚಳವಳಿಯಲ್ಲಿ ಆಕ್ಷೇಪಾರ್ಹವಾದುದು ಏನೂ ಇಲ್ಲವೆಂದು ಒಂದು ಭಾಷಣದಲ್ಲಿ ಅಂದಿರುತ್ತಾರೆ.

ದಕ್ಷಿಣ ಕನ್ನಡ.

ಕುಂಬಳೆ:— ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಲವರ್ ಎಲಿಮೆಂಟರಿ ವ ಬಾಲಿಕಾ ಎಲಿಮೆಂಟರಿ ಪಾಠಶಾಲೆಗಳ ಸ್ಕೂಲ್‌ಡೇ ಸಮಾರಂಭವು ಇದೇ ಮಾರ್ಚಿ ತಾ. ೨೧ನೇ ಆದಿತ್ಯವಾರ ಮಂಗಳೂರು ಗವರ್ನಮೆಂಟ ಟ್ರೈನಿಂಗ್ ಹಾಯರ್ ಎಲಿಮೆಂಟರಿ ಶಾಲಾ ಮುಖ್ಯ ಉಪಾಧ್ಯಾಯರಾದ ಮ| ರಾ| ಉಳ್ಳಾಲ ಮಂಗೇಶರಾವ್ ಬಿ. ಎ. ಎಲ್. ಟಿ. ಯವರ ಅಧ್ಯಕ್ಷತೆಯಿಂದ ಇಲ್ಲಿಯ ಬೋರ್ಡು ಬಾಲಿಕಾ ಪಾಠಶಾಲೆಯಲ್ಲಿ ಜರಗುವುದು.

ವ್ಯಾಪಾರ ಉದ್ಯೋಗಗಳಿಂದ ಅಭಿವೃದ್ಧಿಗೆ ಬಂದಿದ್ದ ಈ ತಾಲೂಕಿನ ೨ನೇ ಶಹಾರಾಗಿರುವ ಇಲ್ಲಿ ಒಂದು ಔಟ್‌ಪೋಸ್ಟು ಸ್ಟೇಶನ್ ಅಗತ್ಯವಿದ್ದಾಗೂ ಪೋಲಿಸ್ ಇಲಾಖೆಯ ಹೊಸ ವಿಲೇವಾರಿಯ ಪ್ರಕಾರ ಈ ಗ್ರಾಮವನ್ನು ಮಂಜೇಶ್ವರಕ್ಕೆ ಸೇರಿಸುವರಂತೆ! ೧೧ ಮೈಲು ದೂರವಿರುವ ಮಂಜೇಶ್ವರದ ಬದಲಿಗೆ ಕೋರ್ಟು ಕಚೇರಿಗಳಿದ್ದು ೭ ಮೈಲು ಅಂತರವಿರುವ ಕಾಸರಗೋಡಿಗೆನೆ ಈ ಗ್ರಾಮವನ್ನು ಊರ್ಜಿತಪಡಿಸಿದ್ದಲ್ಲಿ ಗ್ರಾಮಸ್ಥರಿಗೆ ಕಷ್ಟನಷ್ಟಗಳು ಇರಲಾರವು. ಅದ್ದರಿಂದ ಸಮ್ಮಂಧಪಟ್ಟ ಅಧಿಕಾರಿಗಳು ಕಾಸರಗೋಡಿಗೆನೆ ಇರಗೊಡಿಸುವದು ನ್ಯಾಯವಾಗಿದೆ.

ಮ| ಕುಂಞಮ್ಮದ್‌ಶಾ ಮೊಗ್ರಾಲರ ಹೊಸ ಕಟ್ಟೋಣದ ಲಾಗ್ಯಾತು ಹೊಳೆ ಕಿನಾರೆ ವರೇಗಿನ ಇಲ್ಲಿಯ ಡಿಸ್ಟ್ರಿಕ್ಟ ಬೋರ್ಡಿನ ಬಜಾರ ರಸ್ತೆಯು ಅಲ್ಲಲ್ಲಿ ಯೇರುತಗ್ಗಾಗಿಯೂ ಇಕ್ಕಡೆಯಲ್ಲಿ ಸರಿಯಾದ ಪಾಲಿಗಳಿಲ್ಲದೆ ಅನೇಕ ಜನ ಗಾಡಿ ಅಮದರಪ್ತಿಗೆ ತೊಂದರೆಯಾಗುತ್ತೆ. ಮಾತ್ರವಲ್ಲ ಮಳೆಗಾಲದಲ್ಲಿ ಬಹಳ ತೊಂದರೆಗಳುಂಟಾಗುವುದರಿಂದ ಮಾನ್ಯ ಬೋರ್ಡಿನವರು ಪಾಲಿಗಳನ್ನು ಕಟ್ಟಿಸಿ ರಸ್ತೆ ಸಹಾ ಸರಿಪಡಿಸಿಕೊಡುವಂತೆ ಕಳೆದ ವರ್ಷ ಪತ್ರಿಕೆಯಿಂದ ಸೂಚಿಸಿದಾಗ್ಯೂ ಇದರ ಪ್ರಸ್ತಾಪವೆ ಇಲ್ಲದಿರುವದು ಆಶ್ಚರ್ಯ! ಈ ವರ್ಷವಾದರೂ ಈ ರಸ್ತೆ ವ ಪಾಲಿಗಳನ್ನು ಕಟ್ಟಿಸುವ ಸ್ಪೆಶಲ್ ದುರುಸ್ತಿ ಸೆಂಕ್ಷನ್ ಆದೀತೆಂಬ ಭರವಸೆಯಿದೆ.

ಇಲ್ಲಿಯ ರೈಲ್ವೆಸ್ಟೇಶನ್ ಬಳಿ ಕೊಸ್ಮೊಪೊಲಿಟಿನ್ ಕ್ಲಬ್ ಎಂಬ ಹೆಸರಿನಿಂದ ಒಂದು ವಾಚನ ಮಂದಿರವು ತೆರೆಯೋಣಾಗಿದೆ. ಇದು ಪೇಟೆ ಬಿಟ್ಟು ದೂರವಿರುವದು ಒಂದು ನ್ಯೂನತೆ. ಅದೂ ಅಲ್ಲದೆ ಈಗ ಕೊಡೋಣಾಗುವ ರೂ ೪ ಚಂದಿಗೆ ಟೌನಿನ ಮಧ್ಯದಲ್ಲಿ ಇರಗೊಡಿಸಿದರೆ ಚಲೋ ಇತ್ತು. ಇದೆಷ್ಟು ಕಾಲ ಬಾಳುವದೋ ಎಂದು ನೋಡೋಣಾಗಿದೆ.

ಇಲ್ಲಿಯ ವಸ್ತ್ರದ ವ್ಯಾಪಾರಿಯಾದ ಲಿಂಗಪ್ಪಸೆಟ್ಟಿ ಎಂಬವನು ಸುಮಾರು ೩ ತಿಂಗಳ ಹಿಂದೆ ಪರವೂರಿಗೆ ಹೋಗಿದ್ದನು. ಅಲ್ಲಿಗೆ ಕಾಶಿಯಿಂದ ಸ್ವಲ್ಪ ಹಣ ತನಗೆ ಖರ್ಚಿನ ಬಗ್ಗೆ ಮನಿಆರ್ಡರು ಮಾಡಬೇಕಾಗಿ ಮನೆಯವರಿಗೆ ಬರೆದ ಪ್ರಕಾರ ರವಾನಿಸೋಣಾದ ಮನಿಆರ್ಡರು ಪತ್ತೆ ಸಿಕ್ಕದೆ ವಾಪಾಸು ಬಂದಿರುವುದಾಗಿಯೂ ನಂತರ ಆತನು ಎಲ್ಲಿರುತ್ತಾನೆಂತ ತಿಳಿಯಲಿಲ್ಲವಾಗಿಯೂ ಕೇಳಬರುತ್ತದೆ.

ಕಾರ್ಕಳ:— ಇಲ್ಲಿಯ ಡಿಸ್ಟ್ರಿಕ್ಟ ಮುನ್ಸಿಫರಾದ ಶ್ರೀಯುತ ಎನ್. ಡಿ. ಪೈ. ಬಿ. ಎ. ಎಲ್. ಎಲ್. ಬಿ. ಇವರು ಇಲ್ಲಿಯ ಕೆ. ಇ. ಎಮ್. ಪಂಚಮಾ ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ಒಂದೊಂದು ಶರ್ಟನ್ನು ಕೊಟ್ಟಿರುವರು.

ಇಲ್ಲಿ ಬೋರ್ಡು ಹ್ಯಾಸ್ಕೂಲಿನಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಪ್ರಯೋಜನಾರ್ಥವಾಗಿ ಒಂದು ಕಾರ್‌ಪೆಂಟರಿ ಕ್ಲಾಸನ್ನು ತೆರೆದಿರುವರು. ಇದನ್ನು ಬಾಲಕರಿಗೆ ಕಲಿಸುವರೆ, ಇದರ ತರಬೇತಿಯನ್ನು ಮದರಾಸಿನಲ್ಲಿ ಪಡೆದ ಉಪಾಧ್ಯಾಯರೇ ಇರುವರು.

ಇಲ್ಲಿನ ಲೋಕಲ್ ಎಲಿಮೆಂಟರಿ ಶಾಲೆಗಳಲ್ಲಿ ಪೂರ್ವಾಹ್ನ ೧೦ರಿಂದ ೧೨-೩೦ರ ವರೇಗೆ ನಡಿಯುತ್ತಿದ್ದ ಶಾಲಾ ಸಮಯವನ್ನು ಸೆಕೆ ಸಮ್ಮಂಧ ಪ್ರಾತಃಕಾಲ ೭ರಿಂದ ೯-೩೦ ವರೆಗೆ ನಡಿಯಬೇಕೆಂದು ಮಾಡಿರುತ್ತಾರೆ.

ಇಲ್ಲಿನ ತಾಲೂಕು ಬೋರ್ಡು ಪ್ರೆಸಿಡೆಂಟರಾದ ಶ್ರೀಯುತ ಕೆ. ಸದಾಶಿವ ಭಟ್, ಬಿ. ಎ. ಬಿ. ಎಲ್., ಎಮ್. ಎಲ್. ಎ. ಇವರು ಕಳೆದ ಶನಿವಾರ ಸಾಯಂಕಾಲ ಇಲ್ಲಿಂದ ಎಸೆಂಬ್ಲಿ ಮಿಟಿಂಗಿಗೋಸ್ಕರ ಡಿಲ್ಲಿಗೆ ಹೋಗಿರುವರು.

ಕಾರ್ಕಳ ಸೆಂಟರ್ ಪ್ರಾಥಮಿಕ ಶಾಲಾ ಉಪಾಧ್ಯಾಯರ ೭ನೇ ಸಭೆಯು ಇದೇ ಮಾರ್ಚಿ ತಾ. ೨೦ನೇ ಶನಿವಾರ ಅಪರಾಹ್ನ ಗಂಟೆ ೨ಕ್ಕೆ ಸರಿಯಾಗಿ ಇಲ್ಲಿಂದ ಎರಡು ಮೈಲು ದೂರವಿರುವ ಅತ್ತೂರು ಇಗರ್ಜಿ ಶಾಲೆಯಲ್ಲಿ ಜರಗುವುದು.

ಇಲ್ಲಿನ ಶ್ರೀನಿವಾಸಾಶ್ರಮದಲ್ಲಿ ಪ್ರತಿ ಏಕಾದಶಿ ದಿನ ರಾತ್ರಿ, ಭಜನೆಯು ನಡದು ದ್ವಾದಶಿ ದಿನ ಪ್ರಾತಃಕಾಲ ಉಮೇದ್ವಾರರ ಲೆಕ್ಕಕ್ಕೆ ಚಿಕ್ಕ ಸಂತರ್ಪಣೆಯು ನಡೆಯುವುದು.

ಬಂಟ್ವಾಳ:— ಇಲ್ಲಿಯ ಬೋರ್ಡು ಶಾಲೆಯಲ್ಲಿಯೇ ಪ್ರತ್ಯೇಕವಾಗಿ ಹತ್ತು ಇಪ್ಪತ್ತು ಮಾಪಿಳಾ ಹುಡುಗರನ್ನು ಕಟ್ಟಿಕೊಂಡು ಒಂದು ಮಾಪಿಳಾ ಬೋರ್ಡು ಶಾಲೆ ತೆರೆಯಬೇಕೆಂದು ಪ್ರೆಸಿಡೆಂಟರ ಅಪ್ಪಣೆಯಂತೆ! ಬಂಟ್ವಾಳದಲ್ಲಿ ಸುಮಾರು ಹದಿನೈದು ವರ್ಷದಿಂದ ಮೂರು ಸಾರಿ ಮಾಪಿಳಾ ಶಾಲೆ ತೆರದಾಯಿತು, ಮುಚ್ಚಿದ್ದಾಯಿತು. ಮಾಜಿ ಹಿಂದುಸ್ಥಾನಿ ಶಾಲೆಯ ಸುಪರ್‌ವ್ಯಾಜರಾದ ಶಾಲಾಬಾಲಿ ಸಾಹೇಬರವರು ಒಂದು ಮಹಮ್ಮದಿ ಶಾಲೆ ತೆರದು ಕತಪ್ರಯತ್ನದಿಂದಲೂ ಒಂದು ವರ್ಷ ಪೂರಾ ನಡಿಯಲಿಲ್ಲ! ಈಗಿರುವ ಹುಡುಗರ ಶಾಲೆಯನ್ನೇ ಮಿಕ್ಸಡ್ ಶಾಲೆಯಾಗಿ ನಡಿಸಿದರೆ ಈಗಿರುವ ರೀತಿಯಲ್ಲಿಯೇ ಉತ್ತಮವಾಗಿ ನಡದೀತು. ಈಗ ಇದೇ ಶಾಲೆಯಲ್ಲಿ ಮಾಪಿಳಾ, ಕೆಥೋಲಿಕ್, ಬಿಲ್ಲವ, ಗೌಡಸಾರಸ್ವತ, ಗಾಣಿಗ, ಕುಂಬಾರ, ಮುಂತಾದ ಜಾತಿಯ ಮಕ್ಕಳಿರುತ್ತಾರೆ.

ಇಲ್ಲಿ ತಸ್ಕಿ ನಡಿಯುತ್ತಿದ್ದ ಕಾರಂಜೆ ಕೊಲೆಪಾತಕ ನಂಬ್ರ ಇವತ್ತು ನಾಳೆ ಅಸ್ಸೈಸು ಅಗ.ತ್ಯಾ ಬಂತು. ಇನ್ನು ಜೈಲುಕೋಣೆ ಮತ್ತು ಆಸ್ಪತ್ರೆಯಲ್ಲಿದ್ದ ಒಂದು ಅಪರಾಧಿಯ ಮಂಚ ಸಹ ಖಾಲಿಯಾಗುತ್ತದೋ ಎಂತ ಆಲೋಚಿಸುವಾಗಲೇ ರಾಯಿಗ್ರಾಮದ ಒಬ್ಬ ಕೆಥೋಲಿಕನನ್ನು ಒಂದು ಜೂಜಿನ ಕೋಳಿಗಾಗಿ ಚೂರಿಯಿಂದ ತಿವಿದುಕೊಂದ ನಂಬ್ರ ಬಂತೇ ಬಂತು. ಹೆಣದ ಪೋಸ್ಟುಮೊಟಮ್ ಆಗಿಯೇ ಹೋಯಿತು. ಅಪರಾಧಿಯು ಸಿಕ್ಕಿದ್ದಾನೊ ಇಲ್ಲವೊ ಎಂಬ ಸಂಗತಿ ಗೊತ್ತಿಲ್ಲ.

ಇಲ್ಲಿಯ ಟೆಂಪಲ್ ಸೆಕೆಂಡರಿ ಶಾಲೆಯ ವರ್ಷಾವಧಿ ಇನ್‌ಸ್ಪೆಕ್ಷನ್ ಜಿಲ್ಲಾ ಎಜ್ಯುಕೇಶನ್ ಅಧಿಕಾರಿರಿಂದಲೂ ಮಂಗಳೂರು ತಾಲೋಕು ಡಿಪ್ಯುಟಿ ಇನ್ಸಪೆಕ್ಟರವರಿಂದಲೂ ತಾ. ೧೧ಕ್ಕೆ ಜರಗಿತು.

ಇಲ್ಲಿಯ ಹವಾಮಾನವು ಬಹಳ ಕೆಟ್ಟ ತರದಲ್ಲಿ ಪರಿಣಮಿಸುತ್ತದೆ. ಪ್ರತಿ ದಿನ ಮಧ್ಯರಾತ್ರೆಯ ವರೆಗೆ ಸೆಕೆಯೂ; ನಂತರ ಚಳಿಯೂ ಕೆಲವು ದಿನಗಳಿಂದ ಇರುತ್ತದೆ. ಈಗಲೇ ಊರಿನಲ್ಲಿ ಜನರಿಗೆ ಅಲ್ಲಲ್ಲಿ ಮೈನೋವು ಜ್ವರ ಆರಂಭವಾಗಿದೆ. ಇನ್ನು ಜ್ವರ ಕಟಾವಿನ ಸಮಯವಾದ ಎಪ್ರಿಲ್ ಮೇ ತಿಂಗಳಲ್ಲಿ ಫಲನೋಡಲಿಕ್ಕಿದೆ.

ಇಲ್ಲಿಯ ಪೇಟೆಯ ಮಧ್ಯದಲ್ಲಿದ್ದ ಮಾರ್ಕೆಟಿನಲ್ಲಿ ದಿನಾಲು ಮಾರುತ್ತಿರುವ ಹಸಿ ಮೀನನ್ನು ಮಾರ್ಕೆಟ ಕಂಟ್ರಾಕ್ಟದಾರನ ಸುಂಕಕೊಟ್ಟು ಮುಂಚೆ ಮಾರುತ್ತಿದ್ದ ಸಂಕದ ಬಳಿ ಹೊಳೆ ಕಿನಾರೆಯಲ್ಲಿ ಮಾರಿದರೆ ಸೆಕೆಯಿಂದ ಕೊಳೆತು ನಾತಬರುವ ವಾಸನೆಯ ಬಾಧೆ ತಪ್ಪುತ್ತಿತ್ತು.

ತಲ್ಪಾಡಿ:— ಇದೇ ತಿಂಗಳ ತಾ. ೨-೩-'೨೬ನೇ ಮಂಗಳವಾರ ಪೂರ್ವಾಹ್ನ ಗಂಟೆ ೧೦ಕ್ಕೆ ತಲಪಾಡಿ ಬೋರ್ಡು ಎಲಿಮೆಂಟರಿ ಶಾಲೆಯ ಹೊಸ ಕಟ್ಟೋಣದಲ್ಲಿ ಶಾಲಾಗೃಹಪ್ರವೇಶವು ಆಚರಿಸಲ್ಪಟ್ಟಿತು. ಅಧ್ಯಕ್ಷರಾಗಬೇಕಾಗಿದ್ದ ಮ| ರಾ| ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರು ಬಾರದ್ದರಿಂದ ರಾ| ವೇದಮೂರ್ತಿಗಳಾದ ಕಲ್ಯಾಣೇಶ್ವರ ಕೃಷ್ಣ ಭಟ್ರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅಧ್ಯಕ್ಷರು ಶಾಲೆಯ ಶಿಕ್ಷಣದ ಕುರಿತು ಕೆಲವು ಉಪನ್ಯಾಸಗಳನ್ನು ಹೇಳಿ ತೀರಿಸಿದ ತರುವಾಯ ಶಾಲಾಮಕ್ಕಳು ದೇವರ ಪ್ರಾರ್ಥನೆ ವಗೈರೆ ಹಾಡುಗಳನ್ನು ಹಾಡಿ ಸಭಿಕರಿಗೆ ಆನಂದಗೊಳಿಸಿದರು. ಶಾಲೆಯ ವರದಿಯನ್ನು ಹೆಡ್ ಮಾಸ್ತರರಾದ ಕೆ. ಅನಂತ ಕಮ್ತಿಯವರು ಹೇಳಿದರು. ಮ| ರಾ| ದೊಡ್ಡಮನೆ ಮುಖ್ಯಾಲ್ಯರು ಸಮಯೋಚಿತ ಭಾಷಣ ಕೊಟ್ಟರು. ಅಧ್ಯಕ್ಷರಿಗೂ, ಸಭಿಕರಿಗೂ ಧನ್ಯವಾದ ಅರ್ಪಿಸಿ ಮಕ್ಕಳು ಮಂಗಳಪದ ವಗೈರೆ ಹಾಡಿ ನಂತರ ಮಿಠಾಯಿ ವಗೈರೆ ಹಂಚಿ ಮುಕ್ತಾಯವಾಯಿತು. ರಾತ್ರಿ ಶಾಳೆಮದ್ದಳೆಯು ಬಹಳ ಸಾಂಗ್ಯವಾದ ರೀತಿಯಿಂದ ನೆರವೇರಿತು.

ಮಂಜೇಶ್ವರ:— ಇಲ್ಲಿ ಹಾಲ್ಕೈದು ಪರಸ್ಪರ ಸಹಾಯಕ ಸಂಘಗಳು ಇವೆ. ಮಂಜೇಶ್ವರ ಪರಸ್ಪರ ಸಹಾಯಕ ಸಂಘದ ಬೋರ್ಡು ರಾ| ಭಕ್ತರ ಬಂಗ್ಲೆಯ ಗೋಡೆಗೆ ಎರಡು ಗ್ಲಾಸಿನ ಪೆಟ್ಟಿಗೆಯಿಂದ ಜೋಡಿಯಲ್ಪಟ್ಟಿದೆ. ಈ ಸಂಘವು ಮುಚ್ಚಿ ಹೋಗಿ ಹಾಲ್ಕೈದು ವರ್ಷಗಳಾದವು. ಇದನ್ನು ಪುನಹ ಸೃಷ್ಟಿಸಿದ್ದು ಕಂಡು ಬರುವುದಿಲ್ಲ. ಇನ್ನು ಇಲ್ಲಿಯ ಮದನಂತೇಶ್ವರ ದೇವಸ್ಥಾನದ ಪೌಳದ ಒಂದು ಸಂಘವಿದೆ. ಈ ಸಂಘದ ಮೆಂಬರರಲ್ಲಿ ಅನೇಕರು ಹಣಪಡೆಕೊಂಡು ತಿರಿಗಿ ಸಲ್ಲಿಸದೆ ಸಂಘವು ಅಶಕ್ತವಾಗಿದೆ. ಅಧಿಕಾರರು ಬರುತ್ತಾರೆ, ಹೋಗುತ್ತಾರೆ. ಸಂಘವನ್ನು ಮದನಂತೇಶ್ವರನೇ ಕಾಪಾಡಬೇಕೆಂದು ತೋರುತ್ತದೆ.

ಅವನು ಯಾವಾಗಲೂ ಸಿವಿಲ್‌ಕೋರ್ಟಿನ ವ್ಯಾಜ್ಯಗಳಲ್ಲಿದ್ದವರಿಂದ ಅವನಿಗೂ ನೆಮೆಯಿಲ್ಲ!

ಇನ್ನು ಕೀರ್ತಿಶ್ವರ ಎಂಬ ನಾಮಧೇಯವುಳ್ಳ ಒಂದು ಸಂಘದ ಬೋರ್ಡು ರೈಲುವೇ ಸ್ಟೇಶನಿನ ಎದುರುಗಡೆ ಇರುವ ಒಂದು ಮನೆಯ ಮಾಡಿಗೆ ತೂಗಾಡಿಸಿರುತ್ತದೆ. ಇವರಲ್ಲಿ ಪಂಚಾಯತದಾರರಿಗೆ ಬೇಕಾದವರಿಗೆ ಮಾತ್ರವೆ ಹಣ ಸಿಕ್ಕುತ್ತದಂತೆ! ಇವರ ಆಫೀಸರರು ಅನೇಕರು ಇದ್ದಾರಂತೆ! ಇನ್ನು ಬಂಗ್ರಮಂಜೇಶ್ವರದಲ್ಲಿ ಒಂದು ಮನೆಯ ಮಾಡಿಗೆ ಒಂದು ಬೋರ್ಡು ತೂಗಾಡುತ್ತದೆ. ಇದರಿಂದಲೂ ಯಾರಿಗೂ ಏನೊಂದೂ ಪ್ರಯೋಜನವೂ ಕಂಡುಬರುವುದಿಲ್ಲ. ಆದುದರಿಂದ ಈ ಇಲಾಖೆಯ ಸುಪೆರ್ನ್‌ಟೆಂಡೆಂಟರು ಈ ಸಂಘಗಳ ವಿಷಯ ಸರಿಯಾಗಿ ತನಿಖೆ ನಡಿಸಿ ಇವುಗಳಿಗೆ ಬೇರೆ ಪಂಚಾಯತದಾರರನ್ನಾಗಿ ಚುನಾಯಿಸಿ ಎಲ್ಲಾ ಜಾತಿಯ ಮೆಂಬರರನ್ನು ಪಂಚಾಯತರನ್ನಾಗಿ ಮಾಡಿಸಿ ಸಂಘಗಳು ಒಳ್ಳೇ ರೀತಿಯಲ್ಲಿ ನಡಿಸುವಂತೆ ಮಾಡಿಸಬೇಕು. ಇದು ಇಲಾಖಾ ಆಫೀಸರರಿಗೆ ಸಾಧ್ಯವಿಲ್ಲದಿದ್ದರೆ ಆ ಸಂಘಗಳನ್ನು ಮುಚ್ಚಿಬಿಟ್ಟು ಅವುಗಳನ್ನು ಪಟ್ಟಿಯಿಂದ ತೆಗೆದು ಹಾಕುವುದು ಉತ್ತಮ.

ಬಂಟವಾಳ:— ಮಂಜೇಶ್ವರದ ಕರ್ನಾಟಕ ಬ್ರಾಹ್ಮಣ ನರಸಿಂಗರಾಯನ ಹೆಂಡತಿ ಮಹಾಲಕ್ಷ್ಮಿಯು ಗಂಡನನ್ನು ಕೊಲ್ಲುವುದರಲ್ಲಿ ಭಾಗಿಯಾಗಿದ್ದಳೆಂಬ ಗುಮಾನಿಯಿಂದ ಕೈದುಮಾಡಲ್ಪಟ್ಟಿದ್ದಳು. ಐತಪ್ಪ ಸೆಟ್ಟಿ ಎಂಬವನು ಈ ಕೊಲೆಯನ್ನು ಮಾಡಿದನು ಎಂಬ ಗುಮಾನಿಯ ಮೇಲೆ ಕೈದುಮಾಡಲ್ಪಟ್ಟಿದ್ದರು. ಬಂಟವಾಳ ಮ್ಯಾಜಿಸ್ಟ್ರೇಟನು ಈ ನಂಬ್ರವನ್ನು ತನಿಖೆಮಾಡಿ ಐತಪ್ಪ ಸೆಟ್ಟಿಯ ಮೇಲೆ ತಪ್ಪಿಲ್ಲವೆಂದು ಬಿಟ್ಟುಬಿಟ್ಟರು. ಮಹಾಲಕ್ಷ್ಮಿಯನ್ನು ಸೆಶ್ಶನಿಗೆ ಕಮಿಟು ಮಾಡಿದರು. ನಂಬ್ರವು ಪುನಹ ತನಿಖೆಯಾಗಿ ಐತಪ್ಪ ಸೆಟ್ಟಿಯನ್ನು ತಿರಿಗಿ ಕೈದುಮಾಡಿ ಇಬ್ಬರು ತನಿಖೆ ನಡಿಸಿದರು. ಐತಪ್ಪ ಸೆಟ್ಟಿಯ ಮೇಲೆ ತಪ್ಪು ಕಾಣದ್ದರಿಂದ ಅವನನ್ನು ಖುಲಾಸು ಪಡಿಸಿದರು. ಮಹಾಲಕ್ಷ್ಮಿಯ ಮೇಲೆ ಕೇಸು ನಡಿಯಿತು. ಕಡೆಗೆ ಪಬ್ಲಿಕ್ ಪ್ರೊಸಿಕ್ಯೂಟರರು ಇವಳ ಮೇಲೆ ನಂಬ್ರ ಮಾಡಿದ್ದು ಶಾಸನಕ್ಕೆ ವಿರೋಧವೆಂದು ನಂಬ್ರವನ್ನು ಹಿಂತೆಗೆದರು. ಮಹಾಲಕ್ಷ್ಮಿಯು ಹೊರಗೆ ಬಂದಳು. ತನ್ನ ಮೇಲೆ ಅನ್ಯಾಯವಾಗಿ ತಪ್ಪು ತೋರಿಸಿದ್ದಕ್ಕಾಗಿ ಐತಪ್ಪ ಸೆಟ್ಟಿಯ ಮೇಲೆ ಮಾನನಷ್ಟಕ್ಕೆ ಇಲ್ಲಿಯ ಮ್ಯಾಜಿಸ್ಟ್ರೇಟರಲ್ಲಿ ಅರ್ಜಿಕೊಟ್ಟಳು. ಮ್ಯಾಜಿಸ್ಟ್ರೇಟರು ಅರ್ಜಿಯನ್ನು ತೆಗೆದು ಹಾಕಿದರು. ಈ ಜಡ್ಜರಲ್ಲಿ ಅಪೀಲು ಆಗುತ್ತದಂತೆ! ವಕೀಲರ ಪುಣ್ಯ!

ಬಂಟವಾಳದ ಸುತ್ತುಮುತ್ತಲೂ ಅನೇಕ ಕೊಲೆಪಾತಕಗಳು ಆಗುತ್ತಲೇ ಇದ್ದುದರಿಂದ ಒಳ್ಳೇ ಬುದ್ಧಿವಂತರಾದ ಇಬ್ಬರು ವಕೀಲರು ಇಲ್ಲಿ ಕಾಯಂ ವಾಸ್ತವ್ಯ ಮಾಡಿಕೊಂಡಿರುವುದು ಒಳ್ಳೇದು. ಸಂಪಾದನೆಗೇನೂ ಕಡಿಮೆಯಾಗಲಿಕ್ಕಿಲ್ಲ.

ಮಂಗಳೂರು.

ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣರ ಕ್ಲಬ್ಬಿನಲ್ಲಿ ವರ್ಷಂಪ್ರತಿ ನಡೆಯುವ ಟೆನಿಸ್ ಪಂದ್ಯಾಟವು ಇದೇ ಬರುವ ಎಪ್ರಿಲ್ ತಾ. ೩ಕ್ಕೆ ನಡೆಯಲಿಕ್ಕಿರುವುದು. ಜಾತೀಯ ಗೃಹಸ್ಥರು ಮಾತ್ರ ಈ ಪಂದ್ಯಾಟಕ್ಕೆ ಆಮಂತ್ರಿಸಲ್ಪಡುವರು. ಈ ಪಂದ್ಯಾಟದಲ್ಲಿ ಆಡಲಿಚ್ಛಿಸುವವರು ತಾ. ೩ರೊಳಗೆ ತಮ್ಮ ತಮ್ಮ ಹೆಸರುಗಳನ್ನು ದಾಖಲುಮಾಡಿಸಬೇಕಾಗಿ ಗೌಡಸಾರಸ್ವತ ಬ್ರಾಹ್ಮಣರ ಕ್ಲಬ್ಬಿನ ಟೆನಿಸ್ ಪಂದ್ಯಾಟದ ಕಾರ್ಯದರ್ಶಿಯವರು ತಿಳಿಸಿರುವರು.

ಮಂಗಳೂರು ತಾಲೂಕು ಬೋರ್ಡಿನ ಮಹಾ ಸಭೆಯು ಇದೇ ಬರುವ ತಾ. ೨೫ಕ್ಕೆ ಇಲ್ಲಿಯ ತಾಲೂಕು ಬೋರ್ಡು ಆಫೀಸಿನಲ್ಲಿ ಜರಗುವುದು.

ಇಲ್ಲಿಯ ಮುನ್ಸಿಪಾಲಿಟಿಯೊಳಗೆ ಕಳೆದ ವಾರದಲ್ಲಿ ೧೮ ಮರಣಗಳೂ ೩೩ ಜನನಗಳೂ ಆಗಿದ್ದವು. ಮರಣಗಳ ಪೈಕಿ ಇಲ್ಲಿಯ ಕೋರ್ಟು ಕಾಂಪೌಂಡಿನ ಕುಡಿಯಲಿ ರಾಡಿನಲ್ಲಿ ಒಂದು ಪ್ಲೇಗು ಮರಣವು ಆಗಿತ್ತು.

ಇಲ್ಲಿಯ ಮಕ್ಕಳ ಮತ್ತು ಸ್ತ್ರೀಯರ ಆಸ್ಪತ್ರೆಯ ವಿಸ್ತಾರ ಫಂಡಿನ ವರದಿಯಿಂದ ಈ ಫಂಡಿಗೆ ಈವರೆಗೆ ರೂ. [illegible] ಒಟ್ಟಾಗಿರುತ್ತದೆಂದು ತಿಳಿಯಬರುತ್ತದೆ. ಈ ಎಕ್ಸ್‌ಟೆನ್‌ಶನ್ ಸ್ಕೀಮಿಗೆ ಬೇಕಾದ ಸ್ಥಳದ ವಿಕ್ರಯವು ಮಂಗಳೂರು ಡಿವಿಜನಲ್ ಆಫೀಸರರ ತನ್ನಿಗೊಳಪಟ್ಟಿದೆ. ಅಲ್ಲದೆ ಮಂಗಳೂರು ಮುನ್ಸಿಪಾಲಿಟಿಯವರು ಸ್ಥಳ ಪಡೆಯುವುದಕ್ಕಾಗಿ ರೂ. ೨೦,೦೦೦ವನ್ನು ಸೆಂಕ್ಷನ್ ಮಾಡಿರುವರೆಂಬುದು ಸಂತೋಷಕರವಾಗಿದೆ.

ಹೊನ್ನಾವರದಿಂದ ಮಂಗಳೂರಿಗೆ ಬಂದ ಒಂದು ಪತ್ತೆಮಾರಿನ ಕೋಣೆಯೊಳಗೆ ಹುಲಿಯೊಂದು ಅಡಗಿದ್ದು ಕೋಣೆಯೊಳಗೆ ಹೋದ ಇಬ್ಬರ ಮೇಲೆ ಬಿದ್ದು ಘಾಯ ಮಾಡಿರುತ್ತದೆಂದೂ, ನಂತರ ಪೋರ್ಟು ಆಫೀಸರರು ಹೋಗಿ ಅದನ್ನು ಗುಂಡು ಹೊಡೆದು ಕೊಂದರೆಂದೂ ತಿಳಿದುಬರುತ್ತದೆ.

ಮೊನ್ನೆ ಬುಧವಾರ ಟೈನ್‌ಹಾಲಿನಲ್ಲಿ ತೆರಿಗೆ ಕೊಡುವವರ ಸಭೆಯೊಂದು ಮಾ। ರಾ। ಜೆ. ಎ. ಸಲ್ಡಾನರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀಮಾನ್ ಕಾರಂತರು ಮುನ್ಸಿಫಲ್ ಆಡಳಿತೆಯಲ್ಲಿರುವ ದೋಷಗಳನ್ನು ಹೇಳಿ ಈಗಿನ ಆಡಳಿತೆಯಲ್ಲಿ ಅಸಂತೋಷವನ್ನು ತೋರಿಸುವ ಠರಾವನ್ನು ಸಭೆಯ ಮುಂದಿಡಲಾಗಿ ಅದು ಪಾಸಾಯಿತು. ಆ ಮೇಲೆ ಮದ್ರಾಸು ಕೌನ್ಸಿಲಿನಲ್ಲಿ ಬರಲಿಕ್ಕಿರುವ ಮುನ್ಸಿಪಾಲಿಟಿ ಎಮೆಂಡ್‌ಮೆಂಟ್ ಆಕ್ಟಿನಿಂದ ಸ್ವಾತಂತ್ರ್ಯತೆಗೆ ಬಾಧೆಯುಂಟಾಗುವುದೆಂದು ಸೂಚಿಸಿ, ಅಧ್ಯಕ್ಷರು ಒಂದು ಕಾರ್ಯಕಾರಿ ಮಂಡಳಿಯ ಸಹಾಯದಿಂದ ಕೆಲಸಮಾಡುವಂತಾಗಬೇಕೆಂದು ಇನ್ನೊಂದು ಠರಾವನ್ನು ರಾ। ರಾಮಚಂದ್ರಾಚಾರರು ತಂದರು. ಸ್ವಲ್ಪ ಚರ್ಚೆಯಾದ ಮೇಲೆ ಇದೂ ಪಾಸಾಗಿ, ತೆರಿಗೆ ಕೊಡುವವರ ಸಂಘವೊಂದು ಕೊನೆಯಲ್ಲಿ ಸ್ಥಾಪಿತವಾಯಿತು.

ರೋಡ್ ಪರಂಬೋಕಿನಲ್ಲಿಯ ಮರಗಳ ಏಲಂ, ಬಜ್ಪೆಯಿಂದ ಕಿನ್ನಿಗೋಳಿಗೆ ಹೋಗುವ ರಸ್ತೆಯ ೧೨/[illegible]ರಿಂದ ೧೪/[illegible] ವರೆಗಿನ ಮತ್ತು ೧೪/[illegible]ರಿಂದ ೧೫/[illegible] ವರೆಗಿರುವ ಮರಗಳ ಏಲಂ ಬಜ್ಪೆ ಬಂಗ್ಲೆಯಲ್ಲಿ ತಾ. ೧೭—೩—'೨೬ಕ್ಕೂ, ೧೬/೧ರಿಂದ ೧೭/೮ರ ವರೆಗಿನ ಮರಗಳ ಏಲಂ ಕಟೀಲು ದೇವಸ್ಥಾನದ ಬಳಿಯ ಶಾಲೆಯಲ್ಲಿ ತಾ. ೧೮—೩—'೨೬ಕ್ಕೂ, ಬಜ್ಪೆಯಿಂದ ಕಟೀಲು ಹೊಳೆಯ ವರೆಗಿನ ರೋಡ್ ಪರಂಬೋಕಿನ ಮರಗಳನ್ನು ಸದರಿ ಶಾಲೆಗಳಲ್ಲಿರುವ ಸ್ಥಳದಲ್ಲಿ ತಾ. ೧೭—೩—'೨೬ಕ್ಕೂ, ಕಟೀಲು ದೇವಸ್ಥಾನದಿಂದ ಕಿನ್ನಿಗೋಳಿ ರಸ್ತೆ [illegible] ವರೆಗಿನ ಮರಗಳನ್ನು ಸದರಿ ಮರಗಳಿರುವ ಸ್ಥಳದಲ್ಲಿ ತಾ. ೧೮—೩—'೨೬ಕ್ಕೂ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರು ಏಲಂ ಮಾಡಲಿರುವರು.

ಮೋಟರ ನೋಟ್ಸ್.
Motor Notes.

ಮೋಟರ್ ಮೂಲಕ ಪ್ರಯಾಣ ಸೌಕರ್ಯ ಹೆಚ್ಚು ಬೆಳೆದುದರಿಂದ ಮೋಟರ ಪ್ರಶ್ನೆಯು ಸಾರ್ವಜನಿಕವಾಗಿ ಬಂದಿದೆ ಎಂದು ಈಗಲಾದರೆ ಹೇಳಬಹುದು. ಜನರಿಗೆ ತಾವು ಕೂತುಕೊಂಡು, ಅದೃಶ್ಯ ಶಕ್ತಿಯಿಂದ ತಮ್ಮನ್ನು ಎಳೆದುಕೊಂಡು ಹೋಗುವ ಈ ವಾಹನದ ಗುಟ್ಟೇನು? ಇದರ ಸಾಧಕಬಾಧಕಗಳೇನು? ಎಂದು ಮನಸ್ಸಿನಲ್ಲಿ ಪ್ರಶ್ನೆಗಳುಂಟಾಗಲು ಕಾರಣವಿದೆ. ಏಕೆಂದರೆ ಮೋಟರ ಪ್ರಯಾಣದಲ್ಲಿ ಎಷ್ಟು ಸೌಕರ್ಯವು ಹೆಚ್ಚಿದೆಯೋ, ಅಪಾಯದ ಸಂಭವವೂ ಅಷ್ಟೇ ಹೆಚ್ಚಿದೆ. ಪ್ರಯಾಣಿಕನು ತನ್ನ ದೇಹವನ್ನೂ, ಜೀವವನ್ನೂ ಗಾಡಿಯ ಸುವ್ಯವಸ್ಥೆಯಲ್ಲಿಯೂ, ಗಾಡಿಯ ನ್ನೋಡಿಸುವವನ ಬುದ್ಧಿವಂತಿಕೆಯಲ್ಲಿಯೂ ಸಂಪೂರ್ಣವಾಗಿ ಬಿಟ್ಟುಕೊಟ್ಟಿರುವರು. ಫಲತಃ ಈ ವಾಹನದ ಅಂತರ್ಯವನ್ನು ತಿಳಿಯಲು ಪ್ರತಿ ಪ್ರಯಾಣಿಕನೂ ಪ್ರಯತ್ನಪಡಬೇಕು. ಹೀಗೆ ಗಾಡಿಯ ತಿಳಿವು ಉಂಟುಮಾಡಿಕೊಳ್ಳುವುದರಿಂದ ಪ್ರಯಾಣಿಕನು ಹೆಚ್ಚು ಮುಂಜಾಗ್ರತೆಯನ್ನು ಪಡಕೊಳ್ಳಬಹುದಲ್ಲದೆ ಜೀವರಕ್ಷಣೆಯನ್ನು ಮಾಡಿಕೊಂಡಂತೆಯೂ ಆಗುವುದು.

• • • •

ಮೋಟರ ಡ್ರೈವರರು ಕೂಡ ತಮ್ಮ ಆ ಕಾಲಚಕ್ರವನ್ನು ಕೈಯಲ್ಲಿ ಹಿಡಿದು ಗಾಡಿಯನ್ನು ನೆಟ್ಟಗೆ ಓಡಿಸಲು ತಿಳಿದೆವೆಂಬ ಮನಸ್ಸಿನ ಧೈರ್ಯದಿಂದ ಇದ್ದರೆ ಸಾಲದು. ತಾವು ಓಡಿಸುವ ಗಾಡಿಯು ಬಹು ಬೆಲೆಯುಳ್ಳದು. ಅದರ ಮೇಲೆ ಕೂತುಕೊಳ್ಳುವ ಜನರ ಜೀವಗಳು ಮತ್ತಷ್ಟು ಬೆಲೆಯುಳ್ಳದು ಎಂಬುದನ್ನು ಮರೆಯಬಾರದು. ಚಕ್ರವನ್ನು ಕೈಯಲ್ಲಾಡಿಸಿ, ಬ್ರೇಕುಗಳನ್ನು ಒತ್ತಿ, ಲೀವರುಗಳನ್ನೆಳೆಯಲು ಕಲಿತ ಮಾತ್ರಕ್ಕೆ ತಮ್ಮ ಕೆಲಸವೂ, ಕರ್ತವ್ಯವೂ ಪೂರ್ಣವಾಯಿತೆಂದು ತಿಳಿಯುವುದು ತಪ್ಪು ಗ್ರಹಿಕೆ. ಡ್ರೈವರರಿಗೂ ತಾವು ಹೇಳಿದಂತೆ ಕೆಲಸಮಾಡುವ ಆ ಮೂಕ ವಸ್ತುವಿನ ಜ್ಞಾನವನ್ನುಂಟುಮಾಡುವ ಉಪಾಯವು ಇರುವುದಿಲ್ಲ.

• • • •

ಇಂತಹ ಅಜ್ಞ ಜನರಲ್ಲಿ ಸಾಮಾನ್ಯ ಪರಿಜ್ಞಾನವನ್ನುಂಟುಮಾಡಬೇಕೆಂಬುದೇ ಈ ವಿಭಾಗದ ಉದ್ದೇಶವಿದೆ. ನಮ್ಮ ಜಿಲ್ಲೆಯಲ್ಲಿ ನೂರಾರು ಗಾಡಿಗಳು ಓಡುತ್ತಿವೆ, ನೂರಾರು ಘಟನೆಗಳೂ ಆಗುತ್ತಿವೆ. ಸಾಮಾನ್ಯ ಜನರಿಗೂ, ಡ್ರೈವರರಿಗೂ ಯೋಗ್ಯವಾದ ಶಿಕ್ಷಣ ಇದ್ದುದಾದರೆ ಅನೇಕ ಅವಘಡಗಳು ತಪ್ಪಬಹುದಿತ್ತು; ಇಲ್ಲವೆ ಅಂತಹವುಗಳು ಮುಂದೆ ನಡೆಯದಂತೆ ಮುಂಜಾಗ್ರತೆಯನ್ನು ಪಡಕೊಳ್ಳಬಹುದಿತ್ತು. ಮೋಟರ ವ್ಯವಹಾರಗಳು ದಿನದಿಂದ ದಿನ ಹೆಚ್ಚಾಗುತ್ತಾ ಬರುವ ಈ ದಿವಸಗಳಲ್ಲಿ, ಇವರ ವಿಜ್ಞಾನವನ್ನು ಇನ್ನಾದರೂ ಸರ್ವಸಾಮಾನ್ಯವಾಗಿ ಮಾಡಬಹುದೆಂದು ನಮ್ಮ ಆಶಯವಿದೆ.

• • • •

ಮೋಟರ ವೃತ್ತಿಯಲ್ಲಿ ನಮ್ಮ ಒಂದು ಜಿಲ್ಲೆಯಲ್ಲಿ ಸಾವಿರಾರು ಜನರು ತಮ್ಮ ಜೀವನವನ್ನು ಹೊಂದುತ್ತಿರುವರು. ದಿನ ನಿತ್ಯದ ಪ್ರಯಾಣದ ಸೌಕರ್ಯಗಳ ಸಾಧನೆಯೊಡನೆ, ಪಾಪ, ಈ ನೌಕರರ ಜೀವನ ಕ್ರಮಗಳ ಅಸೌಕರ್ಯವೂ ಹೆಚ್ಚಾಗಿ ಬರುತ್ತಿದೆ. ಎಡೆಬಿಡದೆ ತಾವು ಮಾಡಲಿಕ್ಕಿದ್ದ ಕೆಲಸದ ಕಷ್ಟಗಳು ಒಂದೆಡೆ, ಸಂಸಾರವನ್ನು ಸುಸಂಘಟಿಸುವುದು ಇನ್ನೊಂದೆಡೆ, ಮೇಲಾಗಿ ಪೋಲೀಸ ಅಧಿಕಾರಿಗಳ ಕಡೆಗಣ್ಣಿನ ನೋಟದಿಂದ ತಪ್ಪಲಿರುವುದು ಮತ್ತೊಂದೆಡೆ, ಹೀಗಾಗಿ ಅವರ ತಾಪತ್ರಯಗಳ ತೀಕ್ಷ್ಣತೆಯು ಹೆಚ್ಚಾಗುತ್ತಾ ಬರುತ್ತಿದೆ. ಇವರೆಲ್ಲರು ಸುಖಸಾಧನೆಯೂ ಈ ವಿಭಾಗದ ಆಶಯಗಳಲ್ಲೊಂದಾಗಿದೆ.

• • • •

ಮೋಟರ ಸಂಸ್ಥೆಗಳು ಪ್ರತಿದಿನವೂ ಟಿಕೇಟು ಮಾರಾಟದಿಂದ ನಗದಿ ಹಣವನ್ನು ಕೂಡಿಸುವುವು; ನಮ್ಮ ಜನರಿಂದ ಕೂಡಿದ ಈ ಹಣವು ಹೇಗೆ ಖರ್ಚಾಗುತ್ತಿದೆ? ನೌಕರರ ಸಂಬಳ; ದುರುಸ್ತಿಯ ಖರ್ಚು; ಹೊಸ ಸಾಮಾನುಗಳ ಖರ್ಚು; ಟಾಯರ್, ಟ್ಯೂಬ್, ಪೆಟ್ರೋಲ್; ಮೊಬಿಲ್ ಒಯಿಲ್ ಇತ್ಯಾದಿಗಳ ಖರ್ಚು; ಮತ್ತೆ ಲಾಭ. ನೌಕರರ ಸಂಬಳವಾದರೂ ನಮ್ಮ ಜನರಿಗೇನೇ ಸಲ್ಲುವದಾಗುವುದರಿಂದ ಹೆಚ್ಚಾದ ತೊಂದರೆ ಇಲ್ಲ. ಆದರೆ ಹೊಸ ಸಾಮಾನು, ಟಾಯರ್, ಪೆಟ್ರೋಲ್ ಇತ್ಯಾದಿಗಳ ಖರ್ಚು ಪರ ಊರಿಗೆ ಹೋಗುವಂತವುಗಳು. ಇವುಗಳಿಂದ ಮೋಟರ ಕಂಪೆನಿಗಳಿಗೆ ಲಾಭ ಕಡಿಮೆಯಾಗುವುದಲ್ಲದೆ ನಮ್ಮ ಜಿಲ್ಲೆಗೆ ನಷ್ಟವಾಗುವುದು. ಆದುದರಿಂದ ಇವು ಸಾಧ್ಯವಿದ್ದಷ್ಟು ಕಡಿಮೆಯಾಗಿ ಖರ್ಚಾಗುವಂತೆ ನೋಡತಕ್ಕದ್ದಿದೆ.

• • • •

ದುರುಸ್ತಿ ಖರ್ಚು ಗಾಡಿಗಳ ಸುವ್ಯವಸ್ಥೆಯ ಮೇಲೆ ಹೊಂದಿದೆ. ದುರುಸ್ತಿ ಖರ್ಚುಗಳಿ, ಪೆಟ್ರೋಲ್ ಖರ್ಚು ಅಜಾಗ್ರತೆಯಿಂದ ಸಾವಿರಾರು ರೂಪಾಯಿ ಹಾಳುಮಾಡುವಂತಹುದಾಗಿದೆ. ಇದನ್ನು ಪರಿಶೋಧಿಸಿ ಇದರ ವಿಷಯ ವಿಚಾರಮಾಡುವುದೂ ಈ ವಿಭಾಗದ ಆಶಯವಿದೆ. ಈ ವಿಷಯದಲ್ಲಿ ಕಾರ್ಯಕಾರಿಯಾದ ಸೂಚನೆಗಳನ್ನು ಕೊಡಲು ನಮಗೆ ಪರದೇಶೀಯ ಪತ್ರಿಕೆಗಳ ಸಹಾಯವೂ, ಸ್ವಾನುಭವವೂ ಇರುವುದಲ್ಲದೆ, ಇತರ ಮೋಟರಿನ ಅನುಭವವಿದ್ದವರೂ ನಮ್ಮೊಡನೆ ಸಹಕರಿಸಬೇಕೆಂಬದಾಗಿ ನಮ್ಮ ವಿನಂತಿಯಿದೆ. ಈ ವಿಭಾಗ ಯಾವುದೊಂದು ಸಂಸ್ಥೆಯ ಪರವಾಗಿಯಾಗಿ ಮಾಡಿದುದಲ್ಲ. ಇದರಿಂದ ಮೋಟರಿನ ಸರ್ವಸಾಮಾನ್ಯ ವಿಜ್ಞಾನವನ್ನೂ, ಮೋಟರ ವೃತ್ತಿಯವರ ಹಿತವನ್ನೂ, ಮೋಟರಿನ ಕೆಲಸಗಳಲ್ಲಿ ಉತ್ತೇಜನವನ್ನೂ ಹೆಚ್ಚಿಸಲೆಂಬ ಒಂದೇ ಉದ್ದೇಶದಿಂದ ಇದನ್ನು ಏರ್ಪಡಿಸಿರುವೆವು. ಈ ವಿಭಾಗಕ್ಕೆ ಸಂಬಂಧಪಟ್ಟವರೆಲ್ಲರೂ ಆಗಾಗ ತಮ್ಮ ಸೂಚನೆಗಳನ್ನು ಇದಕ್ಕೆ ಕಳುಹಿಸಿ ಸಹಕರಿಸಿ, ವೃತ್ತಿಯಲ್ಲಿ ಎಷ್ಟೇ ಸ್ಪರ್ಧೆಯಿರುವುದಾದರೂ, ವಿಜ್ಞಾನದಲ್ಲಿ ಐಕ್ಯವನ್ನು ತೋರಿಸುವುದು ಅಗತ್ಯವಿದೆ.

• • • •

ಪ್ರತಿ ವೃತ್ತಿಯಲ್ಲಿಯೂ ಸ್ಪರ್ಧೆಯಿರುವುದೇನೊ ಸಹಜವೆ. ಸ್ಪರ್ಧೆಯುಳ್ಳದ ವೃತ್ತಿಯಲ್ಲಿ ಉತ್ಸಾಹಕ ವಿಷಯವಿಲ್ಲ. ಜೀವನ ಇಡಿಯೇ ಸ್ಪರ್ಧಾಮಯವಾದುದು. ಅಂತೆಯೇ ಈ ಮೋಟರ ವೃತ್ತಿಯಲ್ಲಿ ಹೊಸಬರು ಹೊಸತಾಗಿ ಲ್ಯಾನುಗಳನ್ನು ತೆರೆದೂ, ಹಳಬರು ಹೊಸಬರ ಲ್ಯಾನುಗಳಲ್ಲಿ ಹೋಗಿಯೂ ಸ್ಪರ್ಧಿಸುವುದು ವೃತ್ತಿಯ ಜೀವಾತ್ಮಕತೆಯ ಒಂದು ಚಿಹ್ನೆಯಾಗಿದೆ. ಆದರಿಂದ ಮೋಟರ ವೃತ್ತಿಯವರೊಳಗೆ ಕ್ಲೇಶವು ಹುಟ್ಟಬಾರದು. ವೃತ್ತಿಯ ಸ್ಪರ್ಧೆಯನ್ನೂ, ವೃತ್ತಿಯವರ ಬಂಧುತ್ವವನ್ನೂ ಒಟ್ಟುಗೂಡಿಸುವುದು ವೃತ್ತಿಗೇನೇ ಹಿತವಾದುದಲ್ಲ. [illegible] ಕೂಡ ವೃತ್ತಿಯೊಳಗೆ ಎಷ್ಟೇ ಸ್ಪರ್ಧೆ ಇದ್ದರೂ, ವೃತ್ತಿಯವರು ತಮ್ಮ [illegible] ಗಳನ್ನು ಸ್ಥಾಪಿಸಿ, ಸಂಘಟಿತರಾಗಿ ತಮ್ಮ ಸರ್ವಸಾಮಾನ್ಯ ಹಕ್ಕುಗಳನ್ನು

ನಿವಾರಿಸುತ್ತಾರೆ. ಹಿಂದೂಸ್ತಾನದಲ್ಲಿ ರೈಲ್ವೆ ಕಂಪೆನಿಗಳಲ್ಲಿ ಕೂಡ ಸ್ಪರ್ಧೆ ಇರುತ್ತದೆ. ಆದರೆ ಎಲ್ಲಾ ರೈಲ್ವೆ ಕಂಪೆನಿಗಳು ಒಂದಾಗಿ ರೈಲ್ವೆಯ ಹಕ್ಕು ಅಧಿಕಾರಗಳನ್ನು ಹೇಗೆ ನಿರಾತಂಕವಾಗಿ ಪಡೆಯುತ್ತಾರೊ ನಮ್ಮ ಜಿಲ್ಲೆಯ ಮೋಟರ ಸಂಸ್ಥೆಗಳೂ ಹಾಗೆಯೇ ತಮ್ಮ ಹಕ್ಕು ಅಧಿಕಾರಗಳನ್ನು ಸಾಧಿಸುವುದಕ್ಕೆ ಒಂದಾಗಬಹುದಾಗಿ ನಮ್ಮ ಸೂಚನೆ ಇದೆ.

ಮದ್ರಾಸು ಸಂಸ್ಥಾನದ ಆಯವ್ಯಯ.

ಮದ್ರಾಸು ಇಲಾಖೆಯ ಫೈನೆನ್ಸ ಮೆಂಬರರಾದ ಒಪೆಬಲ್ ಮೊಯಿತರವರು ಮದರಾಸು ಸರಕಾರದ ೧೯೨೬—೨೭ನೇ ಇಸವಿಯ ಆಯವ್ಯಯ ಪಟ್ಟಿ ಸಭೆಯ ಮುಂದಿಟ್ಟರು. ಈ ವರುಷದ ಆದಾಯವು ೧೭,೩೯·೨೦ ಲಕ್ಷ ರೂಪಾಯಿ ಎಂದು ಅಂದಾಜು ಹಿಡಿದದೆ. ಇದರಲ್ಲಿ ಭೂಕಂದಾಯವು, ಎಕ್ಸೈಜ್, ಸ್ಟಾಂಪ್ ಇವುಗಳಿಂದ ೧೪೭೯ [illegible] ಲಕ್ಷ ಸಿಕ್ಕುವುದು.

ಈ ವರುಷದ ಖರ್ಚು ೭,೨೫,೦೦೦ ರೂಪಾಯಿ. ಇದರಲ್ಲಿ ರೂ. ೧೪,೫೯,೦೦೦ ವಿದ್ಯಾ ಇಲಾಖೆಗೆ ಖರ್ಚಾಗುವುದು. ೩,೧೨ ಲಕ್ಷ ರೂಪಾಯಿ ಹೊಸ ಎಲಿಮೆಂಟರಿ ಶಾಲೆಗಳನ್ನು ತೆರಿಯಲಿಕ್ಕೂ, ಒಂದು ಲಕ್ಷ ರೂಪಾಯಿ ಆಂಧ್ರಾ ಯುನಿವರ್ಸಿಟಿಗೂ, ಒಂದು ಲಕ್ಷ ರೂಪಾಯಿ ಮದರಾಸು ಯುನಿವರ್ಸಿಟಿಯ ರಿಸರ್ಚ ಲೆಬೊರೇಟರಿಗಳಿಗೂ, ೫೯,೫೦೦ ಸಬೋರ್ಡಿನೇಟ ಇನ್ಸಪೆಕ್ಟಿಂಗ್ ಏಜನ್ಸಿಗಾಗಿಯೂ ಉಳಿದ ಹಣವನ್ನು ಶಾಲಾ ಕಟ್ಟೋಣಗಳಿಗೂ, ಎಯಿಡೆಡ್ ಶಾಲೆಗಳಿಗೆ ಉಪಕರಣಗಳನ್ನು ಒದಗಿಸಲಿಕ್ಕೂ, ಲೋಕಲ್ ಬೋರ್ಡುಗಳಿಗೂ ಸಹಾಯದ್ರವ್ಯಕ್ಕಾಗಿಯೂ ಖರ್ಚು ಮಾಡಲ್ಪಡುವುದು.

ವೈದ್ಯ ಇಲಾಖೆಗೆ—ರೂ ೪,೮೬,೩೦೦ ಗವರ್ನಮೆಂಟ ಆಸ್ಪತ್ರೆಗಳಲ್ಲಿ ಸಾಹಿತ್ಯಗಳನ್ನು ಒದಗಿಸುವುದಕ್ಕೂ ಹೆಚ್ಚಿಗೆ ಉದ್ಯೋಗಸ್ಥರನ್ನು ನೇಮಿಸುವುದಕ್ಕೂ, ಖಾಸಗಿ ಆಸ್ಪತ್ರೆಗಳಿಗೆ ಸಹಾಯದ್ರವ್ಯವನ್ನು ಕೊಡುವುದಕ್ಕೂ ಖರ್ಚುಮಾಡಲ್ಪಡುವುದು. ರೂ. ೩೫,೦೦೦ ಹಳ್ಳಿಯ ಆಸ್ಪತ್ರೆಗಳನ್ನು ಹೊಸತಾಗಿ ತೆರಿಯಲಿಕ್ಕೆ ಖರ್ಚು ಮಾಡಲ್ಪಡುವುದು.

ನೀರಾವರಿ ಕೆಲಸಕ್ಕೆ—ರೂ. ೪,೧೭,೩೦೦. ಈ ಹಣವನ್ನು ಚಿಲ್ಲರೆ ನೀರಾವರಿ ಕೆಲಸಗಳಿಗೆ ಉಪಯೋಗಿಸಲ್ಪಡುವುದು.

ಫೋರೆಸ್ಟ್ ಇಲಾಖೆಗೆ— ೧॥ ಲಕ್ಷ ರೂಪಾಯಿ ಖರ್ಚು ಮಾಡಲ್ಪಡುವುದು. ಈ ಹಣದಿಂದ ಕಾಡುಗಳಲ್ಲಿ ಯಾವ ಯಾವ ತರದ ಮರಗಳಿವೆಯೆಂದು ಶೋಧಿಸಲಿಕ್ಕೂ, ಕಾಡುಗಳಲ್ಲಿ ಮಾರ್ಗಗಳನ್ನು ತೆರಿಯಲಿಕ್ಕೂ ನೌಕರರಿಗೆ ಮನೆಗಳನ್ನು ಕಟ್ಟಿಸಲಿಕ್ಕೂ, ರೂಪಾಯಿ ೩೧,೦೦೦ ವನ್ನು ಆನೆಮಲೆ ಕಾಡಿನಲ್ಲಿ ಸ್ಲೀಪರುಗಳನ್ನು ತಯಾರಿಸುವ ಕಾರ್ಖಾನೆಗೂ ಖರ್ಚುಮಾಡಲ್ಪಡುವದು.

ಪೋಲಿಸ್ ಇಲಾಖೆಗೆ—ರೂ. ೧,೯೯,೦೦೦ವನ್ನು ಕೊಯಮುತ್ತೂರಲ್ಲಿ ಸೆಂಟ್ರಲ್ ರಿಕ್ರುಟ್ ಶಾಲೆಯನ್ನು ತಿರಿಗಿ ತೆರಿಯಲಿಕ್ಕೂ ಸ್ಪೆಶಿಯ ಪೋಲಿಸ್ ಇಲಾಖೆಯನ್ನು ಇಡಲಿಕ್ಕೂ ಅದಕ್ಕೆ ಬೇಕಾದ ಸಾಹಿತ್ಯ ಸಾಮಗ್ರಿ ಒದಗಿಸಲಿಕ್ಕೂ, ಮದರಾಸು ಪಟ್ಟಣದಲ್ಲಿ ವ್ಯಾಪಾರ ಸಹಾಯಕ್ಕೆ ಪ್ರತ್ಯೇಕ ಪೋಲಿಸ್ ಶಿಬಂದಿಯಿಡಲಿಕ್ಕೂ, ಕಳ್ಳರ ಎಂಬ ಜಾತಿಯ ಜಾಗ್ರತೆ ತೆಗೆದುಕೊಳ್ಳಲಿಕ್ಕೂ ಖರ್ಚುಮಾಡಲ್ಪಡುವುದು.

ಆರೋಗ್ಯ ಇಲಾಖೆ—ರೂ. ೨,೩೩,೫೦೦ನ್ನು ಹೆಚ್ಚಿಗೆ ಹೆಲ್ತ ಆಫೀಸರರನ್ನು ಹೆಲ್ತ ಇನ್ಸಪೆಕ್ಟರರನ್ನು ಸಾಕುಹಾಕುವ ಶಿಬಂದಿಗೂ ಖರ್ಚು ಮಾಲ್ಪಡುವುದು. ಹಳ್ಳಿಗಳಲ್ಲಿ ಭಾವಿ ತೋಡಿಸಲಿಕ್ಕೆ ರೂ. ೧,೩೭,೦೦೦ ಖರ್ಚುಮಾಡಲ್ಪಡುವುದು.

ಬೇಸಾಯ ಇಲಾಖೆ—ಇದರಲ್ಲಿ ಗೋರಕ್ಷಣೆ ಇಲಾಖೆಯೂ, ಕೊ-ಒಪರೇಟಿವ್ ಇಲಾಖೆಯೂ ಸೇರಿಯದೆ. ಇದಕ್ಕೆ ರೂ. ೧,೭೮,೩೦೦ ಖರ್ಚಾಗುವುದು. ಇದರಲ್ಲಿ ರೂ. ೮೫,೬೦೦ನ್ನು ಅನಕ ಪಳ್ಳಿಯ ವ್ಯವಸಾಯ ಫಾರ್ಮಿಗಾಗಿಯೂ ಕಬ್ಬಿನ ವ್ಯವಸಾಯಕ್ಕೂ ಖರ್ಚಾಗುವುದು.

ಕೈಗಾರಿಕೆ—ಈ ಇಲಾಖೆಗೆ ರೂ. ೧,೯೬,೦೦೦ ಖರ್ಚಾಗುವುದು. ಇದರಲ್ಲಿ ರೂಪಾಯಿ ೯೪,೫೦೦ ಇಂಡಸ್ಟ್ರಿಯಲ್ ಶಾಲೆಗಳಿಗೆ ಗ್ರೆಂಟ ಕೊಡಲಿಕ್ಕೂ ರೂ. ೫೨,೯೦೦ ಪಂಪಿಂಗ್ ಮತ್ತು ಬೋರಿಂಗ ಯಂತ್ರಸಾಧನೆಗಳನ್ನು ಕೊಂಡುಕೊಳ್ಳಲಿಕ್ಕೂ ಖರ್ಚಾಗುವುದು.

ಮಿಸಲೇನಿಯಸ್ ಇಲಾಖೆಗಳು—ಇದರಲ್ಲಿ ರೂ. ೪,೦೭,೧೦೦ ರನ್ನು ಡಿಪ್ರೆಸಡ್ ಜಾತಿಗಳನ್ನು ಉದ್ಧರಿಸಲೂ, ಕಳ್ಳರರಿಗಾಗಿಯೂ, ಕ್ರಿಮಿನಲ್ ಸೆಟ್ಲಮೆಂಟುಗಳಿಗೂ ಖರ್ಚಾಗುವುದು. ರೂ. ೬೪೦೦೦ನ್ನು ಇನ್ನು ಎರಡು ಜಿಲ್ಲೆಗಳಲ್ಲಿ ಈ ಜಾತಿಗಳ ವಿಷಯ ಕೆಲಸ ನಡಿಸಲಿಕ್ಕೂ ಖರ್ಚಾಗುವುದು.

ಸ್ಟೇಶನರಿ ಮತ್ತು ಪ್ರಿಂಟಿಂಗ್ ಇಲಾಖೆ—ರೂ. ೧,೧೫,೦೦೦ನ್ನು ಗವರ್ನಮೆಂಟ ಪ್ರೆಸ್ಸಿಗೆ ೬ ಲಿನೋಟೈಪ್ ಮಶಿನುಗಳನ್ನು ಕೊಂಡುಕೊಳ್ಳಲಿಕ್ಕೂ ಖರ್ಚಾಗುವುದು.

ಸಿವಿಲ್ ವರ್ಕ್ಸ—ಮಾರ್ಗಗಳನ್ನೂ, ಸೇತುವೆಗಳನ್ನೂ, ಮಾಡಲಿಕ್ಕೆ ಲೋಕಲ್ ಬೋರ್ಡುಗಳಿಗೆ ೭,೭೨,೦೦೦ ರೂಪಾಯಿ ಕೊಡಲ್ಪಡುವದು.

ಸಾಲದ ಬಜೇಟು,

೨೩೨·೬೧ ಲಕ್ಷ ರೂ. ಸಾಲ ತೆಗೆದುಕೊಳ್ಳಬೇಕಾಗುವುದು. ಇದರಲ್ಲಿ ಮೆಟೂರು ಪ್ರೊಜೆಕ್ಟಿಗೆ ಒಂದು ಕೋಟಿ ರೂಪಾಯಿ ಇನ್ನು ಮುಂದೆ ಇದರ ಖರ್ಚಿಗೆ ೬ ಕೋಟಿ ರೂಪಾಯಿ ಬೇಕಾಗುವುದು. ರೂ. ೨೮·೬೫ ಲಕ್ಷ ಇತರ ನೀರಾವರಿ ಕೆಲಸಗಳಿಗೂ, ೬ ಲಕ್ಷ ರೂಪಾಯಿ ಪೆನ್ಶನುಗಳಿಗೂ, ಸಿಂಕೋನಾ ಪ್ಲೆಂಟೆಶನಿಗೆ ರೂ. ೧,೭೯,೦೦೦ ಖರ್ಚಾಗುವುದು. ರೂಪಾಯಿ ೧೧·೮೫ ಸಿವಿಲ್ ಕಟ್ಟೋಣಗಳಿಗೆ ಖರ್ಚಾಗುವುದು. ಹತ್ತು ಲಕ್ಷ ರೂಪಾಯಿ ಪಾಲಕಾರಾ ಹ್ಯಾಡ್ರೊ ಇಲೆಕ್ಟ್ರಿಕ್ ಸ್ಕೀಮಿಗೆ ಖರ್ಚಾಗುವುದು. ಇದರ ಕೆಲಸ ಬರುವ ವರುಷ ಶುರುವಾಗುವುದು. ಕೊಚ್ಚಿನ್ ಮತ್ತು ಟುಟಿಕೊರಿನ್ ಹಾರ್ಬರ ಕೆಲಸಗಳಿಗೆ ೧೧ ಲಕ್ಷ ರೂಪಾಯಿ. ೬ ಲಕ್ಷ ರೂಪಾಯಿ ಲೋಕಲ್ ಬೋರ್ಡುಗಳಿಗೆ ಮಾರ್ಗ ಮತ್ತು ಸೇತುವೆ ಕಟ್ಟಿಸಲಿಕ್ಕೆ. ೧೫೪·೩೧ ರೂಪಾಯಿ ಮುನಿಸಿಪಾಲಿಟಿಗಳಿಗೆ. ಇದರಲ್ಲಿ ೫೦·೭೭ ರೂಪಾಯಿ ಕೊಯಮುತ್ತೂರು ತೀರಿನ ಸರಬರಾಯಿಗೆ. ೫ ಲಕ್ಷ ರೂ. ಮಧುರೆಯ ಡ್ರೈನೇಜ ಸ್ಕೀಮಿಗೆ. ೨೩·೬೨ ಲಕ್ಷ ರೂ. ಬೇಸಾಯಗಾರರಿಗೆ ಸಹಾಯದ್ರವ್ಯ ಕೊಡಲಿಕ್ಕೆ ಉಪಯೋಗಿಸಲ್ಪಡುವುದು.

ಸ್ವಾತಂತ್ರ್ಯ ಮುಂತಾದವುಗಳು ಯಾವ ಸಮಯದಲ್ಲಿ ಬರುತ್ತವೆಂದು ತಿಳಿಸಲಿಕ್ಕೆ ಇಲಾಖೆಯು ಈಗ ಸಕ್ತ ರೀತಿಯಲ್ಲಿ ಇಲ್ಲದೆ ಇದ್ದರೂ ಅದನ್ನು ಅಭಿವೃದ್ಧಿಪಡಿಸಲಿಕ್ಕೆ ಹಣವು ಸಾಕಾಗುವುದಿಲ್ಲ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀಮಿತ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಷ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ನೋಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೭ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸು, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—3—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದುನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ ಎಸ್. ಪಿ. ಆಚಾರ್ಯ ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಕುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | **ವಜ್ರಾಂಗ-ಬಿಂದು** | ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಆರ್ಕದಿಂದ ಉಪಯುಕ್ತವಾದ ಮತ್ತು ಉಚ್ಚ ತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನಸ್ಖಲನ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬವಳಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆನ್ನಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. [illegible], (ಜಿಲ್ಲಾ ಬೆಳಗಾಂವ.)

The Canara Public Conveyance Co., Ltd, Mangalore.

(Established 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕಟಪಾಡಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

— ರಥೋತ್ಸವ, ವಿವಾಹ ಉಪನಯನಗಳ ಸಮಯ —

ಸರ್ವರಿಗೂ ಉಡಿಗೆ ತೊಡಿಗೆಗಳು ಬೇಕಾಗುವ ಸಂದರ್ಭ.

ಯಾರು, ಯಾವುದನ್ನು ಎಲ್ಲಿ ಪಡೆಯಬೇಕೆಂಬ ಶಂಕೆಯಿಂದ ವಿಳಂಬ ಮಾಡಬೇಡಿರಿ. ಉಡಿಗೆತೊಡಿಗೆಗಳನ್ನು ಚುನಾಯಿಸಿ ನಿಮಗೆ ಬೇಕಾದ ಯಥಾರ್ಥ ಮಾಹಿತಿಯನ್ನು, ಕಳೆದ ಇಪ್ಪತ್ತೈದು ವರುಷಗಳಿಂದ ಪಡೆದು ನಮ್ಮಲ್ಲಿಯ ವ್ಯಾಪಾರವು ಗಿರಾಕಿಗಳಿಗೆ ಸರ್ವ ತೃಪ್ತಿಯಿಂದಲೂ ಲಾಭಕರವಾಗಿ ಪರಿಣಮಿಸುವಂತೆ ನಮ್ಮ ಜವಳಿ ಸಂಗ್ರಹವನ್ನು ಮಾಡಿರುತ್ತೇವೆ.

ಗುರ್ಪುರ್‌ಕರ್ ಬ್ರದರ್ಸ್, ರಥಬೀದಿ, ಮಂಗಳೂರು.

ಹೆಡ್ ಆಫೀಸು:—ರಥಬೀದಿ—(ಮೊದಲು ಸುಜೀರ ನಾಗಪ್ಪನಾಯಕ್, ಎಂಡ್ ಕೊ, ಇದ್ದಲ್ಲಿ; ಅಜಿಜುದ್ದೀನ್ ರಸ್ತೆಗೆ ತಿರುಗುವಲ್ಲಿ) ಮಂಗಳೂರು.

ಬ್ರೇಂಚ್ ಆಫೀಸು:—ರಥಬೀದಿ—(ಹಳೇ ತಾಲೂಕು ಕಚೇರಿಯ ಪಟಾರಕ್ಕೆ ಸಮೀಪವಿರುವ ಮಳಿಗೆ,) ಮಂಗಳೂರು.

ಈ ದೇಶದ ಪ್ರಖ್ಯಾತಪಟ್ಟ ನೇಯಿಗೆಯ ಕೇಂದ್ರಸ್ಥಳಗಳಾದ—ಬನಾರಸ್, ಪೂನಾ, ಅಹಮ್ಮದಾಬಾದ್, ಸುರತ್, ಬೆಂಗಳೂರು, ಧರ್ಮಾವರಮ್, ಕಂಜೀವರಮ್, ಕೊಯಮುತ್ತೂರು, ಮಧುರೆ, ತಂಜಾವೂರು, ಕುಂಭಕೋಣ, ಅರ್ನೆ, ಪಾಡಿಸೇಟಿ, ಹುಬ್ಬಳ್ಳಿ, ಇಳಕಲ್, ಗದಗ, ಮದ್ರಾಸು ಈ ಪ್ರಾಂತ್ಯಗಳಲ್ಲಿ ತಯ್ಯಾರಾದ

ಜರಿಸೀರೆಗಳು, ದುಪ್ಪಟಾ, ಜರಿಶಾಲು, ಪೇಟ್ಟಿ, ರೇಶ್ಮೆ ಸೀರೆಗಳು, ಅರಳಿಪೇಟೆ ಸೀರೆಗಳು, ಜಾರ್ಜೆಟ್ ರೇಶ್ಮೆ ಸೀರೆಗಳು, ಜರಿ ಅಂಚಿನ ಸೀರೆಗಳು, ರೇಶ್ಮೆ ಮಡಿಗಳು, ನಿತ್ಯ ಉಪಯೋಗದ ಸೀರೆಗಳು ಟವಲ್ಸ್, ಕರ್ಚಿಫ್ ಮಿಲ್ಲುಗಳ ವ ಇತರ ಮಿಲ್ಲುಗಳ ಶರ್ಟಿಂಗ್ ಕೋಟಿಂಗ್.

ಕೈಮಗ್ಗದಲ್ಲಿ ತಯಾರಿಸಿದ ಹೊಸರೀತಿ ಮಾಡಿದ—

ಖದ್ದರ್ ಶರ್ಟಿಂಗ್, ಖದ್ದರ್ ಕೋಟಿಂಗ್, ಖದ್ದರ್ ಜೋಪಿ, ಖದ್ದರ್ ಪೇಟ್ಟಿ, ಅಂಗವಸ್ತ್ರ; ಇತ್ಯಾದಿ—

ಮುಸಲ್ಮಾನರಿಗೆ ಬೇಕಾದ ನಮೂನೆಯ ಉಂಗಿ ಸೊತ್ತುಗಳು ವಗೈರೆ—

ಎಲ್ಲ ಸಂಗ್ರಹವನ್ನೂ ನಮ್ಮ ಪ್ರೊಪ್ರೈಟರರಾದ [illegible] ಪ್ರಭುಗಳು ತಾವೇ ಸ್ವತಃ ಆಯಾ ಊರುಗಳಿಗೆ ಹೋಗಿ ಸಂಗ್ರಹಿಸಿ ತಂದಿರುತ್ತಾರೆ.

ಕಮಿಶನ್—ನೋಟು ರಖಾವು 50ಕ್ಕೆ ಜಾಸ್ತಿ ಜವಳಿಯನ್ನು ಖರೀದಿಸುವವರಿಗೆ ಸೇಕಡಾ 6¼%; ರೂ. 50ರಿಂದ 250ರವರೆಗೆ ಸೇಕಡಾ 10%, ರೂ. 250 ರಿಂದ 1000ಕ್ಕೆ 12½% ಈ ರೀತಿ ಡಿಸ್ಕೌಂಟು ಕೊಡಲಾಗುವುದು.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರಿಂದ
ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಕೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ, ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಉಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಅಂದ ಬಹುಮಾನವು ಕೊಡಲ್ಪಡುತ್ತ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೫—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಬಿಲ್ರಾಂಚ್ ಆಫೀಸ್, "ಮಿಸ್ರಿ" ಬೆಂಗಳೂರು ಸಿಟಿ. | ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ಡಾಕ್ಟರ್. ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

[Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೧೯ನೇ ಶುಕ್ರವಾರ ಮಾರ್ಚಿ ೧೯೨೬. ಸಂಚಿಕೆ ೧೨.

Th Canara Banking Corporation, Udipi, Ltd.

ದಿ ಕೆನರಾ ಬ್ಯಾಂಕಿಂಗ್ ಕೂರ್ಪೊರೇಶನ್, ಉಡುಪಿ, ಲಿಮಿಟಡ್.

Head office: UDIPI. ಹೆಡ್ ಆಫೀಸು: ಉಡುಪಿ.	Branch: COONDAPOOR. ಶಾಖೆ: ಕುಂದಾಪುರ.
ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ವಿಕ್ರಿದ ಮೂಲಧನ	ರೂ. 2,25,000—0—0.
ವಸೂಲಾದ ಮೂಲಧನ	ರೂ. 1,80,690—9—11.
ಆಪದ್ಧನ ವಗೈರೆ ಎತ್ತಗಳು	ರೂ. 75,875—0—0.
ಸಾ. ಸೇ. ೬೦ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಏವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಾದ ಮೂಲಧನ 1,80,690—9—11, ಆಪದ್ಧನ ವ ಇತರ ಎತ್ತಗಳು 75,875—0—0, ಠೇವಣಾತಿಗಳು 6,30,003—14—8, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4700—0—0, ಏವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 40,274—3—11, ಜುಮ್ಲಾ ರೂ. 8,31,543—12—1.

ಆಸ್ತಿ ವ ಸೊತ್ತುಗಳು.

ಹಿಡ್ಲೆ ಕಟ್ಟೋಣ ಕಟ್ಟಿಸಿದ ಬ್ರಿಜಂಗಳು ವಗೈರೆ 3943—8—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,03,861—13—8, ಸಾ. ಸೇ. ೬೦ಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4700—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ) 22,795—0—6, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗ ಸಿಕ್ಕತಕ್ಕ ಶಿಲ್ಕು ಸಹಾ 10,452—15—11, ಜುಮ್ಲಾ ರೂಪಾಯಿ 8,31,543—12—1.

ನಿರಖು ಠೇವಣಾತಿಗಳನ್ನು ಕಾಲಕ್ಕನುಸರಿಸಿ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. ೬½ರ ದರದ ಬಡ್ಡಿ ಮೇಲೂ, ಮುಸುಮ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಿಂದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾಹುಕಾರಿ ಹುಂಡಿಗಳನ್ನೂ, ವಜ್ಜಾಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

N. Anand Rao,
Secretary.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ] ಅಗಸ್ತ್ಯ [ನೋಡಿ ತಕ್ಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಇಪ್ಪತ್ತೆಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1—9—0.

ವಿ. ಪಿ. ಖರ್ಚ ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಯಿರಿ.

ವಿಳಾಸ:— ದೇವಣ್ಣ ನಾರಾಯಣ ಸೇಟ್,
[illegible]
[illegible] (ದ. ಕ.)

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಡೆ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್, ಮುಂಬಯಿ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಅಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಅಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.	109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇವರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. Madras.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡ್‌ಗೋಲ್ಡ್ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೆಗೆ ಬಾಳುವುದು. 10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದ ನಿಜವಾದ ರೋಲ್ಡ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟ 5 ವರ್ಷದ ಗೆರೆಂಟ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟು ವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳೆ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . . ವಸಂತ
ನವಜೀವನಧಾರಕನೆಂದರೆ . . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಆಭರಣಗಳ ಭಂಡಾರವೆಂದರೆ . . . . . . ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ . . . . . . ವಸಂತ
ದೇಶಭಕ್ತನೆಂದರೆ . . . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ⅛ ಪುಟ ಸ್ಯಾಜನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

11 ಮಣಿಗಳಿದ್ದು ಬ್ರಿಜ್ ಮೂವ್ಮೆಂಟ್.

22 ಕೆರೆಟ್ ರೋಲ್ಡ್‌ಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0
9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
184 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

ಅಳ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ, ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕೂರ್ ಆಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಡೈರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦ "AGENTS WANTED"
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ಕಾರಿಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ „ 2—8—0.
„ ಸ್ಥಳೀಕರಿಗೆ ... „ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ದಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1¼ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಜರ್ ರೇಶ್ಮೆ ಮಡಿಗಳು, ಪಾಮುರಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಸಾಳಗ್ರಾಮ, ಶಾಳ, ಪನ್ನೀರ್‌ಬಾಣಿ, ಹಿತ್ತಾಳೆಯ ಉತ್ತಮ ಸಾಮಾನುಗಳು, ಫೋಟೋ ಉಂಗುರಗಳು ವಸ್ತ್ರ, ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂವತ್ಸರದ ಅಧಿಕ ಚೈತ್ರ ಶು॥ ೭ ಶನಿವಾರದಿಂದ ಕ್ಷಯ ಸಂವತ್ಸರದ ಅಧಿಕ ಚೈತ್ರ ಶು॥೧೩ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮಾನ ಸುಗ್ಗಿ.)

ತಾರೀಕು	ವಾರ	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಚಾಂದ್ರಮಾನ.	ಸೂರ್ಯ	
							ಉ.	ಅಸ್ತ.
20	ಶನಿ	೭	೫೨.೧೬	ರೋಹಿಣೀ	೧೬.೨೭	೭	6.37	6.40
21	ರವಿ	೮	೫೪.೩೨	ಮೃಗಶಿರಾ	೧೯.೪೪	೮	6 37	6 40
22	ಸೋಮ	೯	೫೮. ೨	ಆದ್ರ್ರಾ	೨೩.೧೬	೯	6.36	6.40
23	ಕುಜ	೧೦	೬೦. ೦	ಪುನರ್ವಸೂ	೨೯.೧೪	೧೦	6.35	6.41
24	ಬುಧ	೧೦	೨.೪೪	ಪುಷ್ಯಾ	೩೫.೧೫	೧೧	6.35	6.41
25	ಗುರು	೧೧	೭.೩೨	ಆಶ್ಲೇಷಾ	೪೧.೧೬	೧೨	6.34	6.41
26	ಶುಕ್ರ	೧೨	೧೨.೬೬	ಮಘಾ	೪೭.೫೯	೧೩	6 33	6.41

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು)		Rainfall. ಮಳೆ	
	Maximum ಅಧಿಕವಾದ	Minimum ಕಡಿಮೆ	ಇವತ್ತ ಮಳೆ	ಒಟ್ಟಾರೆ ಮಳೆ.
12	90—0	72—4	—	—
13	90—7	74—1	—	—
14	90—8	77—8	—	—
15	91—8	77—8	—	—
16	91—6	76—8	—	—
17	91—6	75—1	—	—
18	90—3	74—5	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ	8— 4	9— 4
ಹೊಸ ಗುಡ್ಡು ...	7— 14	8— 6
ಹೊಸ ರಾಶಿ ...	7— 0	7—12
ಅವ್ವಲ್ ಬೆಲ್ಲಿಗೆ ...	8— 0	9— 0
ರಂಗೂನು ಬೆಳ್ತಿಗೆ ಗೋಣಿ ೧ ...	13— 0	14— 0
ಗೋಧಿ ಗೋಣಿ ೧ಕ್ಕೆ ...	18— 0	19— 8
ಹುರುಳಿಗೋಣಿ ೧ಕ್ಕೆ ...	8— 4	9— 2
ಕಡಲೆಗೋಣಿ ೧ಕ್ಕೆ ...	13— 0	13— 8
ತೊಗರಿಗೋಣಿ ೧ಕ್ಕೆ ...	15— 4	15— 8
ತೊಗರಿಬೇಳೆ ಗೋಣಿ ೧ಕ್ಕೆ ...	16— 8	23— 0
ಉದ್ದುಗೋಣಿ ೧ಕ್ಕೆ ...	16— 8	—
ಹೆಸರುಗೋಣಿ ೧ಕ್ಕೆ ...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ ...	60— 0	65— 0
ಉಪ್ಪು ಗೋಣಿ ೧ಕ್ಕೆ ...	4—10	4—12
ಕೊಬ್ರಿ ಖಂಡಿ ೧ಕ್ಕೆ ...	105— 0	110— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	32— 0	—
ಎಳ್ಳಿಂಡಿ ಖಂಡಿ ೧ಕ್ಕೆ ...	47— 8	53—12
ಕೊಬ್ರಿ ಎಣ್ಣೆ ಮಣ ೧ಕ್ಕೆ ...	7—10	7—12
ಎಳ್ಳೆಣ್ಣೆ ಮಣ ೧ಕ್ಕೆ ...	7— 8	9— 0
ಹಿಪ್ಪೆ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-12-0	—
ಬೋರಿನ ಸಕ್ಕರೆ ಮಣ ೧ಕ್ಕೆ ...	4—12	4 —13
ಊರ ಮೆಣಸಿನಕಾಯಿ ಮಣ ೧ಕ್ಕೆ ...	6— 8	—
ಹುಣಿಸೆ ಮುಡಿ ೧ಕ್ಕೆ ...	9— 8	—
ಕೊತ್ತಂಬರಿ ಮುಡಿ ೧ಕ್ಕೆ ...	3— 8	4— 6
ಕಾಫಿ ಖಂಡಿ ೧ಕ್ಕೆ ...	360— 0	385— 0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳೆಯ ...	275— 0	300— 0
ಹೊಸ ಅಡಿಕೆ ಖಂಡಿ ೧ಕ್ಕೆ ...	210— 0	230— 0
ಕಾಳುಮೆಣಸು ಖಂಡಿ ೧ಕ್ಕೆ ...	285— 0	—
ಜೋಳಕ್ಕೆ ಮಣ ೧ಕ್ಕೆ ...	50— 0	60— 0
ಗೇರುಬೀಜ ಮುಡಿ ೧ಕ್ಕೆ ...	2—14	—
ಕಬ್ಬಿಣ ಖಂಡಿ ೧ಕ್ಕೆ ...	45— 0	65— 0
ಹಿಂದುಸ್ತಾನ ತಗಡು ಮಣ ೧ಕ್ಕೆ ...	16— 4	16—12
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	21— 0	—
ಚೀನಾ ಬೆಳ್ಳಿ ಸೇರು ೧ಕ್ಕೆ ...	18—10	—
ಹಿತ್ತಾಳೆ ತಗಡು ಮಣ ೧ಕ್ಕೆ ...	16— 8	—
ಪವನು	13— 6	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

PROPRIETOR RAJVAIDYA NARAYANJI KESHAVJI
NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದ್ದೇ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,
ಮಂಗಳೂರು.

ರೋಲ್ಡ್‌ಗೋಲ್ಡ್ ಎಂಟು ಮೂಲೆ ಕೈಗಡಿಯಾರ.

ಈ ಕೈಗಡಿಯಾರವು ಬಂಗಾರಕ್ಕೆ ಸರಿಸಮಾನವಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು.

ಕ್ರಯ ೧ಕ್ಕೆ ರೂ. 7—2—0.

— ಕಾಸಿನ ಸರ (ಮಾಲೆ). —

ಇದನ್ನು ಪ್ರತಿಯೊಬ್ಬರಿಗೂ ಅನುಕೂಲವಾಗಿರುವ ಹಾಗೆ 60 ಕಾಸುಗಳು ಇಟ್ಟು ತಯಾರಿಸಿದೆ. ಕುತ್ತಿಗೆಗೆ ಹಾಕಲು ತೆಗೆಯಲು ಮಧ್ಯದಲ್ಲಿ ಕೀಲು ಇಟ್ಟಿರುವುದು. ನೋಡಲು ಬಹು ಅಲಂಕಾರವಾಗಿದೆ. ಯಾವಾಗಲೂ ಬಣ್ಣವು ಕೆಡದಂತೆ ಎಲಕ್ಟ್ರೋ ಭಂಗಾರದ ಗಿಲೀಟು ಮಾಡಿರುವುದು.

ಕ್ರಯ ಮಾಲೆ ಸರ 1ಕ್ಕೆ ರೂ. 8—0—0.

ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ೧೨ ರೋಸ್ ಸೆಂಟ್ ಬಾಟ್ಲಿಗಳು ಇನಾಂ ಕೊಡುವೆವು.

ಪೌಂಟನ್‌ಪೇನಾ.

Fountain Pen.

ಈ ನಕ್ಷೆಯಲ್ಲಿ ಕಾಣಿಸಿರುವ ಪೇನಾಗಳು ವಿಲಾಯತಿಯಲ್ಲಿ ತಯಾರಿಸಲ್ಪಟ್ಟವು. ಇವಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಬರೆಯುವದು. ಈ ಪೇನಾವನ್ನು ಮೇಲಾದ ವಾಲ್ಕನೈಟ್‌ನಿಂದ ತಯಾರಿಸಲ್ಪಟ್ಟದ್ದು. ಇದಕ್ಕೆ 14 ಕ್ಯಾರಟ್ ಭಂಗಾರದ ಮುಳ್ಳು ಇರುವದು. ಇದರಲ್ಲಿ ಬರೆದ ಅಕ್ಷರಗಳು ಸ್ವಲ್ಪವೂ ವ್ಯತ್ಯಾಸವಿಲ್ಲದೆ ಒಂದೇ ಸಮನಾಗಿರುವವು. ಇದರ ಜೊತೆಯಲ್ಲಿ ಇಂಕಿಯನ್ನು ತುಂಬುವ ಗಾಜಿನ ಕೊಳವೆಯನ್ನು ಮುಫತ್ತಾಗಿ ಕೊಡುವೆವು. ಕ್ರಯ 1ಕ್ಕೆ 2—0

ವಿಳಾಸ:— ಎಸ್. ಆರ್. ಕೃಷ್ಣ ಅಂಡ್ ಕೋ
ನಂ॥ ೧ ತಂಬುಸಾಯಕನ ಬೀದಿ [illegible]

ಇನಾಮು! ಇನಾಮು!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಗಾಗಿಯೂ, ಪ್ರತಿಯೊಂದು ಕುಟುಂಬಕ್ಕೆ [illegible] ಗಳನ್ನು ಓದಿ ತಿಳಿದು ನಡೆದುಕೊಳ್ಳ[illegible] ಮರ್ಮಶಾಸ್ತ್ರವು ಇರುವುದು. [illegible] ಗೊತ್ತುಂಟೋ?

ಆದೇ [illegible]

"ಕಾಮಶಾಸ್ತ್ರ[illegible]

[illegible] ಎಂಬವರು "ಪ್ಯಾಯರಾ[illegible]

ಈಗಲೆ ತ[illegible] dishness in Adult [illegible]

ಸುಪ್ರಸಿದ್ಧ ಬರೆದಿರುವರು. ಆ [illegible]

ಜರೂರಾಗಿ ಬರೆಯುವ ಅಗಾಧವಾದ ಬೆಳವಣಿಗೆಯಾಗುವದು. [illegible]

ಕಳುಹಿಸಿಗೊಟ್ಟಿಯೂ ಹೆಚ್ಚದೆ ಹ ಔಷಧ[illegible]

ಅತಂಕನಿಗ್ರ[illegible] ಚೆನ್ನಾರವರು ಸ್ವರಾಜ್ಯ[illegible] ಪ್ರಾಪ್ತಿ[illegible]

ಇದೆ ಮೇಲೆ, ಎಸೆಂಬ್ಲಿಯಲ್ಲಿ [illegible]

[illegible]ಶರಕ್ಕೊಂಕಲೂ ಈ ಹುಡು[illegible]

[illegible] ಇಂಗ್ಲೆಂಡಿನಲ್ಲಿ [illegible]ವಾಗಿವೆ ಎಂದು [illegible] ಕ್ಷೀರುಬೀದಿ, [illegible] ಅವರೇಗೆ ದಂತಪರೀಕ್ಷೆಯನ್ನು [illegible] ಮತ್ತು ಧರ್ಮಾರ್ಥವಾಗಿ [illegible]

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲು 1ಕ್ಕೆ ರೂ. 3—2—0.
„ 2. „ „ ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಾಲಿ ವಧೆ ... ...
(3) ಇಂದ್ರಜಿತು ಕಾಳಗ ... ...
(4) ಚಂಡಪೀಡ ... ...
(5) ಮೈರಾವಣನ ಚರಿತ್ರೆ ... ...
(6) ಭೀಮನ ಕಪ್ಪದಿ ಚೋರ ಕಥೆ ... ...
(7) ಕುಶಲವ ರಾಮನ ಕಥೆ ... ...
(8) ಕೃಷ್ಣಲೀಲಾಮೃತ ... ...
(9) ಶ್ರೀ ಕೃಷ್ಣ ಸತ್ಯಭಾಮ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋದ್ಭವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣ ದೇವಾತ್ಮಯೋದ ಕಥಾ ... ...
(18) ಚಂದ್ರಾವಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷ್ಮೀಗ್ರಹ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಚ ಕಥೆ ... ...
(26) „ ಗೋವಿಂದ ಚರಿತ್ರೆ ... ...
(27) „ ದುಃಶ್ಯಾಸನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

ಶಾರದಾ ಛಾಪಖಾನೆ, ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

[illegible]ಳನ್ನೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
[illegible] ಸೈಜಿನ ಸಾದಾ ಡೈರಿ . . ೧೦ ಆಣೆ.
[illegible] ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸೈಜಿನ ಸಾದಾ ಡೈರಿ . . . ೮ ಆಣೆ.
ವ್ಯಾಪಾರಸ್ಥರಿಗೆ ಧಾರಾಳ ಕಮೀಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡ ಒಫಿಶಿಯಲ್ ರಿಸೀವರ ಕೋರ್ಟಿನಲ್ಲಿ
ದಿವಾಳಿ ಅರ್ಜಿ ನಂಬ್ರ 14/1926.

ಪಕ್ರುದ್ದೀನ್ ಬ್ಯಾರಿ ಹಮ್ಮಬ್ಬ ಬ್ಯಾರಿ ಮಗ, ಮಂಗಳೂರು ತಾಲೂಕು ಅಕುರ್ಳ ಗ್ರಾಮದ ಫರಂಗಿಪೇಟೆಯಲ್ಲಿರುವಂತವ. } ಅರ್ಜಿದಾರ.

ಮತ್ತು

1 ಸಿರ್ಟಟ್ಟು ವೆಂಕಟ್ರಮಣಯ್ಯ ಮಂಗೇಶಯ್ಯರ ಮಗ ಬಂಟವಾಳ ಕಸಬಾ, 2 ಚರ್ಪಪ್ಪ ಯಾನೆ ನಾರಾಯಣ ಶ್ಯಾನುಭಾಗ ಶ್ರೀನಿವಾಸ ಶ್ಯಾನುಭಾಗರ ಮಗ ಮೂಡುನೆಡುಗೋಡು ಗ್ರಾಮ, 3 ಶಂಮ್ಸುದ್ದೀನ್ ಸ್ಯಾಬ ಯಾನೆ ವಜರ್ ಸ್ಯಾಬ ನೌರುದ್ದೀನ್ ಸ್ಯಾಬರ ಮಗ ಮಂಗಳೂರು ಶಹಾರ್ ಮೈದಾನ್, 4 ಎ. ಆಲ್ವರಿಸ್ ಎಂಡ್ ಕೋ ಟೈಲ್ ವರ್ಕ್ಸ ಬೋಳಾರ, 5 ಅಮೀರುದ್ದೀನ ಸ್ಯಾಬ ನವರುದ್ದೀನ್ ಸ್ಯಾಬರ ಮಗ ಶಂಕರ ವಿಟ್ಟಲ್ ಮೋಟರ ಆಫೀಸಿನಲ್ಲಿರುವವ, 6 ಗ್ರಿಗೋರಿ ಜೊಸೆಫ ಕ್ವೊಲೋ ಸಬೊಸ್ತ್ಯಾಂಕ್ವೊಲೋರ ಮಗ ಕಂಕನಾಡಿ. } ರಿಸ್ಪಾಂಡೆಂಟ

ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿ ಎಂತ ಸ್ಥಾಪನೆ ಮಾಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿ ದಾಖಲುಮಾಡಿರುತ್ತಾನೆ. ಸದರಿ ಮೇಲ್ಕಂಡ ಅರ್ಜಿಯು ತಾ. 25—3—1926ಕ್ಕೆ ತನ್ಕಿಗೆ ಇಟ್ಟಿರುತ್ತದೆ. ಆಕ್ಷೇಪ ಹೇಳುವವರು ತಾ. 25—3—1926ನೇ ಮಧ್ಯಾಹ್ನ ಗಂಟೆ 2ರ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ಜ್ಯಾಹೀರುಮಾಡತಕ್ಕದೆಂತ ಈ ಮೂಲಕ ಪ್ರಕಟಿಸೋಣಾಗಿಯದೆ.

MANGALORE, 13—3—1926 } Bola Nagesha Rao, *Vakil for Petitioner.*

ನೋಟೀಸು.

ಈ ಕೆಳಗೆ ಹೆಸರುಕಾಣಿಸಿದವರು ತಮ್ಮ ಬಾಬ್ತು ನಗಗಳು ಕುದುಕೊಳ್ಳಿ ಕೃಷ್ಣಯ್ಯನವರೊಡನೆ ಅಡವಿಟ್ಟು ತಮ್ಮಿಂದ ಸಲ್ಲಬೇಕಾದ ಐವಜನ್ನು ರಿಜಿಸ್ಟ್ರಿನೋಟೀಸು ಕೊಟ್ಟಾಗ್ಯೂ ವಸೂಲುಕೊಡದೆ ಇರುವದರಿಂದ ಸದರಿ ನಗಗಳನ್ನು ಸದರಿ ಕೃಷ್ಣಯ್ಯನ ವಾರಿಸುದಾರನಾದ ನಾನು ಬಾಳ ಪಂಚ್ಯಾತಿಕೆ ಕೋರ್ಟಿನಲ್ಲಿ ತಾ. 27—3—1926ರಲ್ಲು ಅಷ್ಟರ ವರೆಗೆ ಸಮ್ಮಂಧಪಟ್ಟವರು ಐವೇಜು ವಸೂಲುಕೊಡದಿದ್ದಲ್ಲಿ ಬಹಿರಂಗವಾಗಿ ಘಂಟೆ 12ಕ್ಕೆ ಏಲಂಮಾಡಲ್ಪಡುವುದು. ತಿಳಿದಿರುವದು.

ಕುಡುಂಬೂರು ಚೈಯಬ್ಯಾರಿ (ಮಮ್ಮುಬ್ಯಾರಿ ಮಗ), ತೋಕೂರು ದಾಮಕೊಟ್ಯಾರಿ (ಪಕಿರಕೊಟ್ಯಾರಿ ಮಗ), ತೋಕೂರು ಹಮ್ಮದೆ ಬ್ಯಾರಿ (ಚಾಯಬ್ಯಾರಿ ಮಗ), ಬಂದದಡಿ ಐತಪ್ಪ ಪೂಜಾರಿ (ಬಸಪೂಜಾರಿ ಮಗ), ತೋಕೂರು ಹಮ್ಮದೆ ಬ್ಯಾರಿ (ಮಮ್ಮುಬ್ಯಾರಿ ಮಗ), ತೋಕೂರು ಹಮ್ಮದೆ ಬ್ಯಾರಿ (ಅಬ್ಬುಲ್ ಕಾದ್ರಿ ಬ್ಯಾರಿ ಮಗ) ತೋಕೂರು ಹಮ್ಮದೆ ಬ್ಯಾರಿ (ಹುಸೆನೆ ಬ್ಯಾರಿ ಮಗ), ತೋಕೂರು ಗುತ್ತು ಕಾಂತುಮಲ್ಲಿ (ಕುಂಞಾಳುವರ ಅಳಿಯ), ಪಣಂಬೂರು ಗೋಪಾಲ ರೈ (ತಿಮ್ಮರೈ ಅಳಿಯ), ಕುಕ್ಕರಬೆಟ್ಟು ಸೈಯದೆ ಬ್ಯಾರಿ (ಇದಿನೆ ಬ್ಯಾರಿ ಮಗ), ತೋಕೂರು ಗುತ್ತು ವಿಠಲಶೆಟ್ಟಿ (ರಾಮಯಶೆಟ್ಟಿ ಮಗ), ಪಡ್ಡೋಡಿ ಗುತ್ತು ಸಂಕಪ್ಪ ಸೆಟ್ಟಿ (ಕಾಂತುಶೆಟ್ಟಿ ಅಳಿಯ).

ಕುದುಕೊಳ್ಳಿ ಶ್ರೀನಿವಾಸ ರಾವ್.

ಅಹಲ್ಯಾಬಾಯಿ ಹೋಳ್ಕರ್ ಊ.

ಎ, ಎಮ್‌ದಾಸು.

(ಕಳೆದ ಸಂಚಿಕೆಯಿಂದ ಮುಂದರಿಸಿದುದು.)

ಆಕೆಯು ಸೂರ್ಯನು ಮೂಡುವ ಮೊದಲೆ ಎಚ್ಚರುವುದು, [illegible] ಕನ್ನು ನೆರವೇರಿಸಿ, ದೇವತಾರ್ಚನೆಯನ್ನು ಮಾಡಿದ ಬಳಿಕ ಬ್ರಾಹ್ಮಣರಿಂದ [illegible] ಶ್ರವಣ ಮಾಡುವುದು. ತರುವಾಯ ಧರ್ಮ, ಕೊನೆಗೆ ಹೇಳಿರುವರು. ಸ್ವಲ್ಪ ವಿಶ್ರಾಂತಿ ತರುವಾಯ ರಾಜಸಭೆಗೆ ಹೋಗಿ ಅರ್ಥಿಸುವವನಿಗಿಂ [illegible] ನೆರವೇರಿಸಿ ಸೂರ್ಯನು ಕಂತುವ ಸಮಯಕ್ಕೆ ಸರಿಮೆಯಿಂದೂ ಹೇ[illegible] ಸೇರುತ್ತಿದ್ದಳು. ಸಾಯಂಕಾಲ ಪೂಜೆಯಾದ ಮೇಲೆ, ಅಲ್ಲಲ್ಲಿ ಹುಡುಕಿ ಸರಿಪಡಿಸಿ ಹನ್ನೊಂದಕ್ಕೆ ಮಲಗುತ್ತಿದ್ದಳು. ಉಪವಾಸ [illegible] ವಯಸ್ಸಿಗೊಳಗಾದ ದಿವಸಗಳನ್ನು ದೇವತಾರ್ಚನೆಯಲ್ಲಿ, [illegible] ವಯಸ್ಸಿನಲ್ಲಿ [illegible] ಮಾಂಸವನ್ನು ಭಕ್ಷಿಸದ ಬ್ರಾಹ್ಮಣ ಸ್ತ್ರೀಯಂತೆ ನಡೆಯುವದೇ [illegible] ಮಂದಿ ಮರಣಹೊಂ[illegible]

ಈಕೆಯ ಧಾನಧರ್ಮಗಳು ವಿಶೇಷವಾಗಿವೆ. ದೇವಾಲಯವನ್ನು ಕಟ್ಟಿಸುವುದು; ಹಳೆಯವುಗಳನ್ನು [illegible] ದೇವತೆಗಳಿಗೆ ಗಂಗಾಭಿಷೇಕವನ್ನು ಸಾಂಗವಾಗಿ ಮಾಡಿ ನೋಡುವಲ್ಲಿ, [illegible] ಧರ್ಮಗಳನ್ನು ಹೇರಳವಾಗಿ ಮಾಡಿರುತ್ತಾಳೆ. [illegible] ವರೆಗಿನ ಸರ್ವರಿಗೂ ಈಕೆಯು ಹಿತಪ್ರದೆಯಾಗಿದ್ದಳು. [illegible] ದುಃಖವನ್ನು ಪರಿಹಂಸುವುದರ ಮೂಲಕ ತನ್ನ ದುಃಖರಹಿತಳಾಗುವರು. [illegible] ದ್ದಳು. ಅನೇಕ ಅನ್ನಸತ್ರಗಳನ್ನು ಸ್ಥಾಪಿಸಿ ಅನವರತ [illegible] ಜನರಿಗೆ ಅನ್ನದಾನವನ್ನು ಮಾಡುತ್ತಿದ್ದಳು. ಪಕ್ಷಿ[illegible] ದಿಂದ ತುಂಬಿರುವ ಹೊಲಗಳನ್ನು ಅವುಗಳಿಗಾಗಿ [illegible] ಕವಾಗಿ ತನ್ನ ಮೊದಲು ಇರಿಸಿದ್ದ ಹಣವೆಲ್ಲವನ್ನೂ ವಿನಿಯೋಗಿಸಿದಳು. ಇಂತು ಸ್ವಾರ್ಥತ್ಯಾಗಿಯಾದ ಅಹಲ್ಯಾಬಾಯಿಯು ಮಹಾರಾಷ್ಟ್ರ ಗ್ರಂಥಕರ್ತರಿಂದ ಈಗಲೂ ಸ್ತುತಿಸಲ್ಪಡುತ್ತಾಳೆ.

ಅಹಲ್ಯಾಬಾಯಿಯ ಶಾಸನಗಳು ಉಗ್ರವಾಗಿದ್ದುವು. ಯಾರಾದರೂ ಅನ್ಯಾಯವನ್ನು ಮಾಡಿದಲ್ಲಿ ಅಹಲ್ಯೆಯು ಅವರನ್ನು ಕಠಿಣವಾಗಿ ಶಿಕ್ಷಿಸುತ್ತಿದ್ದಳು. ತನಗೆ ಪದೇ ಪದೇ ಉಪದ್ರವ ಕೊಡುತ್ತಿದ್ದ ಗೊಂಡರನ್ನು ವಿಶೇಷವಾಗಿ ಶಿಕ್ಷಿಸಿದಳು. ಕಳ್ಳರು ಕಳ್ಳತನ ಮಾಡಬಾರದೆಂದು ಬಂಜರು ಭೂಮಿಯನ್ನು ಉಚಿತವಾಗಿ ಕೊಟ್ಟು ಅದನ್ನು ಅವರು ಕೃಷಿಮಾಡಿ ಜೀವಿಸುವಂತೆ ಆಜ್ಞೆ ಮಾಡಿದಳು, ಮತ್ತು ಕಳುವವರನ್ನು ಕ್ರೂರವಾಗಿ ದಂಡಿಸುತ್ತಿದ್ದಳು. ಸಂತಾನಹೀನನಾದ ದೇವಿಚಂದನ್ ಎಂಬ ಸಾಹುಕಾರನು ಪರಂಧಾಮವನ್ನೈದಿದ ಮೇಲೆ ತುಕೋಜಿಯು ಆತನ ಆಸ್ತಿಯನ್ನು ಜಪ್ತಿ ಮಾಡಿಸಿದನು. ಅಹಲ್ಯಾಬಾಯಿಯು ಇದನ್ನರಿತು ದೇವಿಚಂದನ ಪತ್ನಿಯನ್ನು ಕರೆಯಿಸಿ ದತ್ತು ತೆಗೆದುಕೊಂಡು ಅದನ್ನು ಅನುಭವಿಸುವಂತೆ ಹೇಳಿ ಆ ರೀತಿಯಾಗಿ ವ್ಯವಹಂಸಿದ ತುಕೋಜಿಯನ್ನು ಗಡಿಪಾರು ಮಾಡುವೆನೆಂದು ಹೇಳಲು ಆತನು ತನ್ನ ತಪ್ಪನೊಪ್ಪಿಕೊಂಡು ಇನ್ನು ಹಾಗೆ ಮಾಡಲಾರೆನೆಂದನು. ಸರ್ವರೂ ಕ್ರಮಪ್ರಕಾರ ಕಪ್ಪವನ್ನು ತಪ್ಪದೆ ಕೊಡುತ್ತಿದ್ದರು. ಒಮ್ಮೆ ಈಕೆಯು ರಾಮಪುರವನ್ನು ಕೊಳ್ಳೆ ಹೊಡೆಯಲು ಬಂದ ರಾಣನನ್ನು ತನ್ನ ಅಲ್ಪ ಸೇನೆಯ ಸಹಾಯದಿಂದ ಸೋಲಿಸಿದಳು. ಕಮಾವೀಸಾರ್ ನೆಂಬವನು ಲಂಚಪಡೆದನೆಂದು ಆತನನ್ನು ಅಧಿಕಾರದಿಂದ ತೆಗೆದುಹಾಕಿದಳು.

ಜನರಿಗೆ ಸ್ತುತಿಪಾಠಕರನ್ನು ಕಂಡರೆ ಬಹಳ ಸಂತೋಷ. ಅಹಲ್ಯಾಬಾಯಿಗೆ ಈ ಗುಣವು ಇರಲಿಲ್ಲ. ತನ್ನ ಮೇಲೆ ಕವಿತೆಯನ್ನು ರಚಿಸಿ ತಂದ ಒಬ್ಬ ಕವಿಯನ್ನು ಕುರಿತು “ಪರಮಾತ್ಮನನ್ನು ಸ್ತುತಿಸದೆ ನನ್ನನ್ನು ಸ್ತುತಿಸುವುದರಿಂದ ಫಲವಿಲ್ಲ”ವೆಂದಳು. ಪರರೊಡವೆಯಲ್ಲಿ ಈಕೆಗೆ ಎಳ್ಳಿನಷ್ಟು ಇರಲಿಲ್ಲವೆಂಬುದನ್ನು ಧೃಡಪಡಿಸುವುದಕ್ಕೆ ಒಂದು ಉದಾಹರಣೆ ಇದೆ. ತಾಪೀದಾಸ್, ಬನಾರಸ್‌ದಾಸ್ ಎಂಬಿರ್ವರು ಸಂತಾನವಿಲ್ಲದೆ ಮಡಿದು ಹೋದರು. ತಾಪಿದಾಸನ ಧರ್ಮಪತ್ನಿಯು ಅವರ ದ್ರವ್ಯಗಳನ್ನು ರಾಣಿಗೆ ಒಪ್ಪಿಸಲು ಆಕೆಯು “ನಿನ್ನ ಪತಿಯ ಹೆಸರಿನಲ್ಲಿ ಏನಾದರೊಂದು ಯೋಗ್ಯ ಕಾರ್ಯವನ್ನು ನೆರವೇರಿಸೆ”ಂದು ಹೇಳಲು ಆಕೆಯು ಹಾಗೆಯೇ ಮಾಡಿದಳು. ಪೇಷ್ವೆ ನಿಜಾಮ ಮತ್ತು ಟೀಪುಸುಲ್ತಾನರೆ ಮೊದಲಾದವರು ಅಹಲ್ಯಾಬಾಯಿಯನ್ನು ಬಹಳವಾಗಿ ಸನ್ಮಾನಿಸುತ್ತಿದ್ದರು. ಈಕೆಯ ಆಳ್ವಿಕೆಯಲ್ಲಿ ಪರಪಂಥದವರು ಇದ್ದರೂ ಈಕೆಯು ಅವರನ್ನು ಪೀಡಿಸುತ್ತಿರಲಿಲ್ಲ. ಪರರಲ್ಲಿರುವ ಸ್ವಾಭಾವಿಕ ದೋಷಗಳನ್ನು ಈಕೆಯು ಕ್ಷಮಿಸುತ್ತಿದ್ದಳು. ಜನರು ಈಕೆಯು ದೇವಾಂಶಸಂಭೂತೆ ಎಂದೆಣಿಸಿ ಈಕೆಯನ್ನು ಬಹಳವಾಗಿ ಸನ್ಮಾನಿಸುತ್ತಿದರು.

ಮಂಚಾಬಾಯಿ ಅಥವಾ ಮುಕ್ತಾಬಾಯಿ ಎಂಬ ಕುವರಿಯ ವಿವಾಹಿತೆಯಾಗಿದ್ದಳು. ಅಹಲ್ಯೆಯು ಅಳಿಯನನ್ನು ಮನೆಯಲ್ಲೇ ಇರಿಸಿಕೊಂಡಿದ್ದಳು. ಇವನು ಅಹಲ್ಯಾಬಾಯಿಯ ಮರಣಕ್ಕೆ ಕೆಲವು ದಿವಸಗಳ ಮೊದಲು ಮಡಿದುಹೋದನು. ಮುಕ್ತಾಬಾಯಿಯು ಸಹಗಮನವನ್ನು ಮಾಡಲು ಸಿದ್ಧಳಾದಳು. ಹಾಗೆ ಮಾಡಬೇಡವೆಂದು ತಾಯಿಯು ಎಷ್ಟು ಹೇಳಿದರೂ ಕೇಳದೆ ಆಕೆಯು ಸಹಗಮನಮಾಡಿದಳು. ಮಗಳು, ಅಳಿಯ, ಮೊಮ್ಮ, ತನ್ನ ಗಂಡನೇ ಮೊದಲಾದವರ ಅಗಲಿಕೆಯ ದೆಸೆಯಿಂದ ಅಹಲ್ಯಾಬಾಯಿಗೆ ಮನೋವ್ಯಾಧಿಯುಂಟಾಗಿ ೧೭೬೫ನೇ ಇಸವಿಯಲ್ಲಿ ಈಕೆಯು ಪರಲೋಕ ಯಾತ್ರೆಯನ್ನು ಮಾಡಿದಳು. ಕುರುಬರ ಕುಲದಲ್ಲಿ ಜನ್ಮಿಸಿದ ಸದಾಚಾರ ಸಂಪನ್ನೆಯಾದ ಅಹಲ್ಯಾಬಾಯಿಯು ನಿಜವಾಗಿಯೂ ಭಗವದಂಶಸಂಭೂತೆಯೇ ಸರಿ.

ಸಂಪೂರ್ಣ.

ಯಾರು ಹೆಚ್ಚುಕಾಲ ಬದುಕುವರು? ವಿವಾಹಿತರೇ? ಅವಿವಾಹಿತರೆ?

ಈ ಮೇಲೆ ಹೇಳಿದಂತೆ ಬಹಳ ಮುಖ್ಯವಾದ ಕೆಲವು ವಿಚಾರಗಳು ವೈದ್ಯಮಂಡಳಿಯಲ್ಲಿ ಚರ್ಚಾಸ್ಪದವಾಗಿ ಒಬ್ಬೊಬ್ಬರು ಒಂದೊಂದು ಪಕ್ಷವನ್ನು ಹಿಡಿದು ವಾದಿಸುತ್ತಿರುವರು. ಇದರ ನಿಜಾಂಶವನ್ನು ನಿರ್ಧರಿಸಬೇಕೆಂದು ಅನೇಕ ವೈದ್ಯಶೋಧಕರು ಎಷ್ಟೋ ಶ್ರಮವನ್ನು ವಹಿಸಿ, ಅನೇಕ ಶೋಧನೆಗಳನ್ನು ಮಾಡುತ್ತಿದ್ದರೂ, ಯಾವ ನಿರ್ಧಾರಣಕ್ಕೂ ಬಂದದಾಗಿಲ್ಲ. ಇಂತಹ ಶೋಧನೆಗಳಲ್ಲಿ ಬಹಳ ನಿಪುಣರಾದವರೂ ಕೂಡ ಅನುಭವದ ಮೇಲೆಯೂ, ನಿದರ್ಶನಗಳ ಮೇಲೆಯೂ ಅಲ್ಲಲ್ಲಿ ಅಂತಹ ಜನಸಂಖ್ಯೆಯನ್ನು ಎಣಿಸುವುದರ ಮೇಲೆಯೂ ಈ ಭಾಗದಲ್ಲಿ ತಮಗೆ ತೋರಿದಂತೆ ಬರೆದಿಟ್ಟಿರುವ ತೀರ್ಮಾನಗಳಲ್ಲಿ ಸಹ ಒಂದಕ್ಕೊಂದು ಭಿನ್ನಾಭಿಪ್ರಾಯಗಳು [illegible]ರುವುವು.

[illegible] ವಿಚಾರ, ಈಚೆಗೆ ಸ್ಕಾಟ್ಲೆಂಡಿನ ರಿಜಿಸ್ಟ್ರಾರ್ ಜನರಲ್ ಡಾಕ್ಟರ್ [illegible] ಬರೆಯುವ [illegible] ಎಂಬವರು, ಬಹಳ ಸೂಕ್ಷ್ಮವಿಚಾರಗಳಿಂದ ತಾವು ಮನುಷ್ಯರಿಂದ [illegible] ಮೇಲೆ, ಮನುಷ್ಯನು ಹೆಚ್ಚುಕಾಲ ಜೀವಿಸುವುದಕ್ಕೆ ಇವುಗಳಲ್ಲದೆ ಆಯೇ ಉತ್ತಮ ಮಾರ್ಗವೆಂದೂ, ಯೌವನಕಾಲದಲ್ಲಿ ವರ್ಗಗಳೂ, ಪ್ರಕಟಪರ್ಯದಲ್ಲಿರುವುದು ಮನುಷ್ಯನ ಆಯುಃಕ್ಷಯಕ್ಕೆ [illegible] ನಗರದ [illegible] ಅಲ್ಲದೆ ಇಂದ್ರಿಯ ಚಾಪಲ್ಯದಿಂದ ದುರ್ಮಾರ್ಗ [illegible] ಲೆಕ್ಕಗಳೂ, ಪ್ರತಿಫಲೂ, ವಿವಾಹವಿಲ್ಲದವನಿಗೆ ಆಯುಃಪರಿವರ್ತಕರೂ, ಸರ್ವರೂ [illegible]ರುವರು. ಇದಕ್ಕೆ ಆಧಾರವಾಗಿ ಮೇಲ್ಕಂಡ [illegible] ಸಂಗ್ರಹಿಸಿ ಕೊಟ್ಟಿರುವ ಲೆಕ್ಕದ ಮೇರೆಗೆ [illegible] ಪಟ್ಟಿರುವ ಒಂದು ಲಕ್ಷ ಮಂದಿ ವಿವಾ[illegible] ಪುರುಷರಿಗೆ [illegible] ಮರಣಹೊಂದಿರುವರು. ಅಂದೇ ಒಂದು [illegible] ಇತರರಿಗೆ, ಪರಸ್ಪರಕ್ಕೆ, ಅವಿವಾಹಿತರಾಗಿದ್ದ ಒಂದು ಲಕ್ಷ ಮಂದಿ [illegible] ಸ್ತ್ರೀಯರಿಗೆ ಇರುವರು.

ಸರಕಾರದಲ್ಲಿಯೂ ಪ್ರತಿ[illegible]ಯಸ್ಸಿನೊಳಗಿರುವ ಜನರ ಲೆಕ್ಕವನ್ನು ಪ್ರಕಾರದಲ್ಲಿರುವುದರಿಂದ, ಇದ[illegible] ಮೇರೆಗೆ ಅವಿವಾಹಿತರ ಮರಣ [illegible] ಅನುಕೂಲ. ಪ್ರಕಟನೆ[illegible]. ಎಂದರೆ [illegible] ಮೇಲೆ [illegible] ಬರೆದು ತಿಳಿಯಬಹುದು. [illegible] ವಿವಾಹಿತರಲ್ಲಿ, ವರ್ಷಕ್ಕೆ [illegible] ಮಂದಿ ವಿವಾಹಿತರಲ್ಲಿಯಾದರೋ [illegible] ವಿವರವಾಗಿ ತೋರಿಸುವಂತೆ [illegible] ಪರಿಶೋಧಿಸಿ ನೋಡಿದರೆ, [illegible]ಹಾಕಿರುವ ಪಟ್ಟಿಯನ್ನು ಪರಿಶೀಲಿಸಿ ನೋಡಿದರೆ, ೨೦ಕ್ಕೆ ಮೇಲೆ ೨೫ ವಯಸ್ಸಿಗೊಳಪಟ್ಟವರಲ್ಲಿ, ವಿವಾಹಿತರಿಗೂ, ಅವಿವಾಹಿತರಿಗೂ ಕಂಡುಬರುವ ಮರಣ ಸಂಖ್ಯೆಯ ತಾರತಮ್ಯವು ಮೇಲೆ ಹೇಳಿದ ಎರಡು ವರ್ಗಗಳಿಗಿಂತ ಹೆಚ್ಚಾಗಿ ಕಾಣುವುದು.

ಅವರು ಹಾಕಿರುವ ಪಟ್ಟಿಯ ಮೇರೆ ಆಯಾ ವಯಸ್ಸಿನಲ್ಲಿ ಲಕ್ಷಕ್ಕೆ ಈ ಕೆಳಗೆ ಕಂಡ ಮೇರೆಗೆ ಮರಣಗಳು ನಡೆದಿವೆ.

ವಯಸ್ಸು.	ವಿವಾಹಿತರು.	ಅವಿವಾಹಿತರು.
೨೦ರಿಂದ ೨೫ರ ವರೆಗೆ.	೬—೨೬,	೧೨—೩೧.
೨೫ ,, ೩೦ ,,	೮—೨೪,	೧೪—೯೪.
೩೦ ,, ೩೫ ,,	೮—೬೫,	೧೫—೯೪.
೩೫ ,, ೪೦ ,,	೧೧—೬೭,	೧೬—೦೨.
೪೦ ,, ೪೫ ,,	೧೪—೦೭,	೧೮—೩೫.
೪೫ ,, ೫೦ ,,	೧೭—೦೪,	೨೧—೧೮.
೫೦ ,, ೫೫ ,,	೧೯—೫೪,	೨೫—೩೪.
೫೫ ,, ೬೦ ,,	೨೬—೧೪,	೨೮—೫೪.
೬೦ ,, ೬೫ ,,	೩೫—೬೩,	೪೪—೫೪.
೬೫ ,, ೭೦ ,,	೫೨—೯೩,	೬೦—೨.
೭೦ ,, ೭೫ ,,	೮೧—೫೬,	೧೦೨—೭೧.
೭೫ ,, ೮೦ ,,	೧೧೭—೮೫,	೧೪೩—೯೪.
೮೦ ,, ೮೫ ,,	೧೭೩—೮೮,	೧೯೫—೪೦.

ಈ ಮೇಲಿನ ಪಟ್ಟಿಯಿಂದ ಅವಿವಾಹಿತರಿಗಿಂತಲೂ ವಿವಾಹಿತರೇ ಅಧಿಕಕಾಲ ಬದುಕುವರೆಂಬುದು ಸ್ಪಷ್ಟವಾಗುವುದು.

ಇದೇ ವಿಚಾರವಾಗಿ ಕ್ರಿಸ್ಟೋಫರ್ ವಾನ್‌ರೂಪ್ ಲಾಂಡ್ ಎಂಬವರು “ಆಯುರ್ವೃದ್ಧಿಸಾಧನೋಪಾಯಗಳು” The Art of Prolonging Life ಎಂಬ ಪುಸ್ತಕದಲ್ಲಿ ಅವಿವಾಹಿತರಿಗಿಂತಲೂ ವಿವಾಹಿತರೇ ಚಿರಜೀವಿಗಳೆಂಬುದನ್ನು ಅನೇಕ ನಿರೂಪಣೆಗಳಿಂದ ನಿರ್ಧರಿಸಿರುವುದಲ್ಲದೆ, ಇದಕ್ಕೆ ಪ್ರತಿಷೇಧವಾದ ನಿದರ್ಶನಗಳು ಹುಡುಕಿದರೂ ಒಂದಾದರೂ ಸಿಕ್ಕಲಿಲ್ಲವೆಂದೂ ಬರೆದಿರುವರು. ಅಲ್ಲದೆ ಬಹಳ ಕಾಲ ಜೀವಿಸಿ ವೃದ್ಧರಾದವರಲ್ಲಿ ಎರಡು ಮೂರು ಸಾರಿ ವಿವಾಹ ಮಾಡಿಕೊಂಡವರೇ ಹೆಚ್ಚು ಮಂದಿಯು ತಮ್ಮ ಲೆಕ್ಕಕ್ಕೆ ಬಂದ ಹಾಗೆಯೂ ತೋರಿಸಿರುವರು. ಗಂಡಸರಿಗೆ ಮಾತ್ರವಲ್ಲದೆ ಹೆಂಗಸರಿಗೂ ಇದೇ ವಿಧವಾದ ಗುಣವುಂಟೆಂದೂ ಕಾಣಿಸಲ್ಪಟ್ಟಿದೆ. ಆದರೆ ಇಂದ್ರಿಯನಿಗ್ರಹವನ್ನು ಮಾಡಿ ಬ್ರಹ್ಮಚರ್ಯೆಯಲ್ಲಿದ್ದವರೇ ಆರೋಗ್ಯ ದೃಢಕಾಯರಾಗಿರುವರೆಂದು ನಮ್ಮ ಗ್ರಂಥಗಳಲ್ಲಿ ಕಾಣಿಸಿದೆ. ಈ ವಿಚಾರದಲ್ಲಿ ಇನ್ನೂ ಹೀಗೆಂದು ನಿಶ್ಚಯಜ್ಞಾನವು ಏರ್ಪಟ್ಟಿಲ್ಲದೆ ವಿರುದ್ಧಾಭಿಪ್ರಾಯಗಳೇ ಹೊರಡುತ್ತಿವೆ. ಆದರೆ ಒಂದು ವಿಷಯವನ್ನು ಮಾತ್ರ ನಿರ್ಧರಿಸಿ ಹೇಳಬಹುದು. ಕೆಲಕೆಲವು ದೇಹಪ್ರಕೃತಿಗಳಿಗೆ ವಿವಾಹವಿಲ್ಲದುದರಿಂದಲೇ ದೇಹವು ಕೆಟ್ಟು ಕೊನೆಗೆ ಮರಣಕಾರಣವಾಗಿಯೂ ಪರಿಣಮಿಸ ಬಹುದು. “ಹೆಣ್ಣು ಕೊಟ್ಟು ಹೊರತು ಹುಚ್ಚು ಬಿಡದು! ಹುಚ್ಚು ಬಿಟ್ಟ ಹೊರತು ಹೆಣ್ಣು ಕೊಡರು!” ಎಂಬ ನಾಣ್ಣುಡಿಯೂ ಇದೇ ಅಭಿಪ್ರಾಯದಿಂದ ಹುಟ್ಟಿತೆಂಬುದರಲ್ಲಿ ಸಂದೇಹವಿಲ್ಲ.

ನೋಟೀಸು.

ಕಾಸರಗೋಡು ತಾಲೂಕು ಕವೆನಾಡು ಮಾಗಣೆ ಪೆರಿಯೆ ಗ್ರಾಮದ ತನ್ನಿತ್ತೋಡು ಎಂಬಲ್ಲಿರುವ ಪೆರುಂಬುದನಾಯ ಸುಬ್ರಾಯ ಭಟ್ಟರ ಮಗ ವಾಸುದೇವ ಭಟ್ಟನು ಇದರಿಂದ ಸರ್ವಜನರಿಗೂ ತಿಳಿಯಪಡಿಸುವುದೇನಂದರೆ:— ನನಗೆ ಕಾಸರಗೋಡು ತಾಲೂಕು ಪೆರಂಬಳೆ ಗ್ರಾಮದ ಬೈಲಂಗಡಿಯಲ್ಲಿರುವ ರಾಮ ಅಗ್ಗಿತ್ತಾಯರ ಮಗ ವಾಸುದೇವ ಅಗ್ಗಿತ್ತಾಯರು ತಾರೀಕು ೧೨—೪—೧೯೨೪ರಲ್ಲು ರೂಪಾಯಿ ೮೦೦—೦—೦ ಯೆಂಟುನೂರಕ್ಕೆ ಸೇಕಡ ೬—೪—೦ರ ಬಡ್ಡಿನಿಶಿ ಬರಕೊಟ್ಟ ಪ್ರೋನೋಟು ೧. ಮತ್ತು ಕಾಸರಗೋಡು ತಾಲೂಕು ಅಲವತ್ತನಾಡ ಮಾಗಣೆ ಪುಲ್ಲೂರು ಗ್ರಾಮದ ತನ್ನಿತ್ತೋಡು ಎಂಬಲ್ಲಿರುವ ಸುಬ್ರಾಯ ಸನ್ನಡ್ಕತ್ತಾಯರ ಮಗ ನಾರಾಯಣ ಸನ್ನಡ್ಕತ್ತಾಯರು ತಾರೀಕು ೧೨—೬—೧೯೨೪ರಲ್ಲು ರೂ. ೩೦೦—೦—೦ ಮುನ್ನೂರಕ್ಕೆ ಸೇಕಡ ೭—೮—೦ರ ಪ್ರಕಾರ ಬಡ್ಡಿನಿಶಿ ನನಗೆ ಬರಕೊಟ್ಟ ಪ್ರೋನೋಟು ೧. ಮತ್ತು ಕಾಸರಗೋಡು ತಾಲೂಕು ಕೂಡ್ಲು ಗ್ರಾಮದಲ್ಲಿರುವ ಪದ್ಮನಾಭ ಅರಳಿತ್ತಾಯರು ತಾರೀಕು ೧೯—೫—೧೯೨೫ರಲ್ಲು ರೂ. ೫೩೭—೮—೦ ಐನೂರಮೂವತ್ತೇಳು ೮ ಆಣೆಗೆ ಸೇಕಡ ೬—೪—೦ರಂತೆ ಬಡ್ಡಿನಿಶಿ ನನಗೆ ಬರಕೊಟ್ಟ ಪ್ರೋನೋಟು ೧. ಮತ್ತು ಕೆಲವು ಗೇಣಿಚೀಟುಗಳು ವಗೈರೆ ರಿಕಾರ್ಡುಗಳು ಸಮೇತ ತೆಗೆದುಕೊಂಡು ಕಾಸರಗೋಡಿಗೆ ತಾ. ೯—೩—'೨೬ರಲ್ಲು ಬಂದು ಸಾಯಂಕಾಲ ರೈಲ್ವೆಗಾಡಿಯಲ್ಲಿ ಹೊಸದುರ್ಗಕ್ಕೆ ಹೋಗುವಾಗ್ಯೆ ರೈಲಿನಲ್ಲಿ ಸದರಿ ರಿಕಾರ್ಡುಗಳ ಕಟ್ಟು ಗೈರುವಿಲೆಯಾಗಿ ಹೋಗಿರುತ್ತದೆ. ಅದ್ದರಿಂದ ಸದರಿ ನೋಟುಗಳು ವಗೈರೆ ರಿಕಾರ್ಡುಗಳು ಯಾರಿಗಾದರೂ ಸಿಕ್ಕಿದ್ದರೆ ಈ ಕೆಳಗಿನ ವಿಳಾಸಕ್ಕೆ ರವಾನಿಸಬೇಕಾಗಿ ಅಪೇಕ್ಷಿಸುತ್ತೇನೆ. ಹಾಗೆ ರವಾನಿಸಿ ಕೊಡುವವರಿಗೆ ಯಾ. ತಂದುಕೊಡುವವರಿಗೆ ೧೫—೦—೦ ಇನಾಮಾಗಿ ನಾನು ಕೊಡುವರೆ ಸಿದ್ಧವಿದ್ದೇನೆ. ಪೆರಿಯೆ ಗ್ರಾಮದ ತನ್ನಿತ್ತೋಡು ಎಂಬಲ್ಲಿರುವ ಸುಬ್ರಾಯ ಭಟ್ಟರ ಮಗ ವಾಸುದೇವ ಭಟ್ಟ, ಹೊಸದುರ್ಗ ಪೋಸ್ಟು.

ವಾಸುದೇವಭಟ್ಟನ ರುಜು.

ಸ್ಫುಟವಿಚಾರಗಳು.

ಹಿಂದೂಸ್ಥಾನಕ್ಕೊಂದು ನೌಕೆ!

ನಮ್ಮ ಅರಸರಿಗೆ ಒಂದೊಂದು ಬಾರಿಗೆ ತಲೆಗೆ ಹೊಳೆಯುವ ಅಗಾಧವಾದ ಆಲೋಚನೆಗಳನ್ನು ನೋಡಿದರೆ ನಮಗೇನೊ ದಿಗಿಲು ಬಿದ್ದು ಹೋಗುತ್ತದೆ. ಹಿಂದೂಸ್ಥಾನದ ಸೈನ್ಯದ ಖರ್ಚನ್ನು ನೋಡಿಯೇ ಬಡವರ ಹಟ್ಟಿಯಲ್ಲಿ ಆನೆಯನ್ನು ಸಾಕಿದಂತೆ ಅನುಭವವಾಗುತ್ತಿರುವಾಗ ಈ ನೌಕೆಯ ಸಂಭ್ರಮದ ಪರಿಣಾಮವು ಬೇರೆ ಹೇಳಬೇಕಿಲ್ಲ. ಎಂತೂ ಸರ್ ಬೇಸಿಲ್ ಬ್ಲೆಕೆಟ್ಟರು ವರ್ಷಾವಧಿ ನಾಲ್ಕೈದು ಕೋಟಿ ರೂಪಾಯಿಗಳ ಏನ ಲಾಭವನ್ನು ತೋರಿಸುತ್ತಿರುವಾಗ, ನಮ್ಮ ಅರಸರಿಗೆ ಅದನ್ನು ಖರ್ಚುಮಾಡಿ ತೆಗೆಯುವ ಉಪಾಯವನ್ನು ಹುಡುಕದಿರಲಿಕ್ಕೆ ಸಾಧ್ಯವೇ ಇರುವುದಿಲ್ಲವೆಂಬಂತೆ ಭಾಸವಾಗುತ್ತಿದೆ. “ಜೋಹುಕುಮ್” ವಾದಿಗಳಂತೂ “ಹೌದು ಸ್ವಾಮಿ” ಎಂದು ಸರಕಾರದ ಔದಾರ್ಯದ ಚಿಹ್ನೆಯನ್ನು ಇದರಲ್ಲಿ ಕಾಣಬಹುದು. ನೌಕೆಯ ಮೂಲಕ ಭಾರತ ಪುತ್ರರಿಗೆ ನೌಕಾಶಿಕ್ಷಣವಾಗುವುದೆಂಬ ಆ ದೊಡ್ಡ ಲಾಭವನ್ನೂ ಸರಕಾರವು ತೋರುವುದು. ಆದರೆ ಅತ್ತ ಅಮೇರಿಕವೂ ಇತ್ತ ಜಪಾನೂ ಸ್ಪರ್ಧೆಯಿಟ್ಟು ನೌಕೆಯನ್ನು ಬಲಪಡಿಸುತ್ತಿರುವಾಗ, ಇಂಗ್ಲೀಷ ಸರಕಾರವಾದರೂ ಸುಮ್ಮನೆ ಇರಲಿಕ್ಕಾಗುವುದಿಲ್ಲ. “ಸಿಂಗಪೂರ ಬೇಸ್” (Singapore Baze) ಎಂಬ ನೌಕಾಬಂದರನ್ನು ಇಂಗ್ಲೀಷ ಸರಕಾರವು ಪೂರ್ವ ದಿಕ್ಕಿನಲ್ಲಿ ರಚಿಸುತ್ತಿದೆ. ಅದರ ಪೂರ್ಣ ಪ್ರಯೋಜನವನ್ನು ಹೊಂದಬೇಕಾದರೆ ಪೂರ್ವದಲ್ಲಿ ಒಂದು ಉತ್ತಮ ನೌಕಾಪಡೆಯೂ ಅಗತ್ಯವಿದೆ. ಸಿಂಗಪೂರಿನಲ್ಲಿಯೇ ಅಂತಹ ನೌಕಾಪಡೆಯನ್ನು ಕಟ್ಟಲಿಕ್ಕೆ ಸಾಧ್ಯವಿಲ್ಲ. ಸಾಧ್ಯವಿದ್ದರೂ ಖರ್ಚನ್ನು ಹಿಂದೂಸ್ಥಾನದ ತಲೆಯ ಮೇಲೆ ಹೊಂಸಲಿಕ್ಕೆ ಸಾಧ್ಯವಿಲ್ಲ. ಅಲ್ಲದೆ ಸಾಮ್ರಾಜ್ಯವಾದದ, ಇಂಗ್ಲೆಂಡಿನ ಲಾಭದ, ದ್ರವ್ಯ ವಿನಿಯೋಗಕ್ಕೆ ಆಸ್ಟ್ರೇಲಿಯಾ ಕೆನಡಾ ಮೊದಲಾದ ವಸಾಹತಗಳೆಂತೂ ಗಂಟು ಬಿಚ್ಚುವುದಿಲ್ಲ. ಹೇಳಿದ ಹಾಗೆ ನಲಿಯುವ ಹಿಂದೂಸ್ಥಾನವಿದೆ. ಬ್ರಿಟಿಷರ ಅಂತರ್ರಾಷ್ಟ್ರೀಯ ತಂತ್ರಗಳಲ್ಲಿ ಹಿಂದೂಸ್ಥಾನವು ಈ ನೌಕಾಪಡೆಯ ಸ್ಥಾಪನೆಯಿಂದ ಒಳಗೆಳೆಯಲ್ಪಡುತ್ತಿದೆ. ಮತ್ತು ಮೆಸೊಪೊಟೋಮಿಯದ ಯುದ್ಧಕ್ಕೆ ಚೈನಾದ ಯುದ್ಧಕ್ಕೆ ಹೇಗೆ ಹಿಂದೀ ಸೈನ್ಯವೂ ಧನವೂ ಸ್ವೇಚ್ಛೆಯಂತೆ ಖರ್ಚಾಗಿ ಹೋಗುತ್ತದೊ, ಹಾಗೆ ನೌಕೆಯ ಮೂಲಕ ಹಿಂದೂಸ್ಥಾನದ ದ್ರವ್ಯಶೋಷಣವು ಹಿಂದೂಸ್ಥಾನಕ್ಕೆ ಕಾಸಿನ ಲಾಭವಿಲ್ಲದೆ ಅವಿರೋಧವಾಗಿ ನಡೆಯಲಿದೆ. ಇವರಿಂದ ಹಿಂದೂಸ್ಥಾನದ ಜನರಿಗೆ ರಾಜಕೀಯ ಪ್ರತಿಬಂಧಗಳು ಹೆಚ್ಚಾಗುವುದು; ಹಿಂದೂಸ್ಥಾನಕ್ಕೆ ನೌಕಾಶಿಕ್ಷಣ ದೊರಕದಿರುವುದು; ಹಿಂದೂಸ್ಥಾನದ ಖರ್ಚಿನಿಂದ ಇಂಗ್ಲೆಂಡಿನ ಖರ್ಚಿನಲ್ಲಿ ನಡೆಯಬೇಕಾಗಿದ್ದ ಪೂರ್ವ ಸಾಗರಗಳ ಪಹರೆಯು ನಡೆಯುವುದು; ಹಿಂದೂಸ್ಥಾನವು ಭಾವಿ ಅಂತರ್ರಾಷ್ಟ್ರೀಯ ಉತ್ಕ್ರಾಂತಿಗಳ ಕೇಂದ್ರಸ್ಥಾನವಾಗುವುದು. ಈ ರೀತಿಯಲ್ಲಿ ಹಿಂದೂಸ್ಥಾನಕ್ಕೆ ನಷ್ಟವಿದೆ. ಅಂದಮಾನ ದ್ವೀಪಗಳಲ್ಲಿ ನೌಕೆಯ ಬಂದರನ್ನು ಮಾಡಬೇಕೆಂಬ ಆಲೋಚನೆಯು, ಆ ದ್ವೀಪಗಳು ಸಿಂಗಪೂರದ ಹತ್ತಿರವಾಗುವುದರಿಂದ ಮತ್ತೂ ನಮ್ಮ ಮೇಲಿನ ಭಾವನೆಗಳನ್ನು ದೃಢಪಡಿಸುತ್ತಿದೆ. ಹಿಂದೀ ರಾಜಕೀಯ ಮುಖಂಡರು ಈ ಬಗ್ಗೆ ಏನು ಮಾಡುವರೆಂದು ನಾವು ನಿರೀಕ್ಷಿಸುವೆವು.

ಮದ್ರಾಸ ಕೌನ್ಸಿಲಿನಿಂದಲೂ ಹೊರಬಂದರು.

ಮದ್ರಾಸ ಕೌನ್ಸಿಲಿನಿಂದಲೂ ಸ್ವರಾಜ್ಯಪಕ್ಷೀಯರೂ ಅಲ್ಲದೆ ಇತರರು ಕೂಡ ಸ್ವರಾಜ್ಯಪಕ್ಷೀಯರೊಡನೆ ಹೊರಬಂದುದು ಅತ್ಯಂತ ಅಭಿನಂದನೀಯವಾಗಿದೆ. ಈ ಸಮಯದಲ್ಲಿ ಸ್ವರಾಜ್ಯಪಕ್ಷೀಯರಲ್ಲದವರಾಗಿಯೂ ಕಾಂಗ್ರೆಸ್ಸು ಸದಸ್ಯರಾಗಿ, ಕೌನ್ಸಿಲು ಪ್ರತಿಪಕ್ಷ (opposition)ದ ಮುಖಂಡರಾಗಿ ಭಾಷಣಮಾಡಿ ಹೊರಬಂದ ಶ್ರೀಯುತ ಸಿ. ವಿ. ಎಸ್. ನರಸಿಂಹರಾಜರವರ ಭಾಷಣವೂ ಸಂದರ್ಭಕ್ಕೆ ತಕ್ಕುದಾಗಿದ್ದಿತು. ಆ ಭಾಷಣದಲ್ಲಿ, ಮುಖ್ಯವಾಗಿ, ಅವರು, ತಾವು ಕಾಂಗ್ರೆಸ್ಸಿನ ಆಜ್ಞೆಯನ್ನು ಮಾನಿಸಿ ಹೊರಬಂದರೆ, ಏಕೆ ಅದು ತಮ್ಮನ್ನು ಚುನಾಯಿಸಿದವರಿಗೆ ಅನ್ಯಾಯಮಾಡಿದಂತಾಗುವುದಿಲ್ಲವೆಂಬುದನ್ನು ಸ್ಪಷ್ಟಗೊಳಿಸಿದರು. ಇತ್ತೀಚೆಗೆ ನಡೆದ ಚುನಾವಣೆಗಳನ್ನೂ, ಅದರಲ್ಲಿ ಸ್ವರಾಜ್ಯಪಕ್ಷೀಯರಿಗೆ ಸಿಕ್ಕಿದ ಜಯಲಾಭವನ್ನೂ ಇದಕ್ಕೆ ಮುಖ್ಯ ಆಧಾರವನ್ನಾಗಿ ತೋರಿಸಿದರು.

ಮಂತ್ರಿಪಕ್ಷವು ತನ್ನ ಕಾರ್ಯಗಳನ್ನು ಸಮರ್ಥಿಸಲು ಪ್ರಯತ್ನಿಸಿದರೂ ಅದನ್ನು ಮಾಡಲಾರದೆ ಹೋಯಿತು. ಮುಖ್ಯ ವಿಶೇಷವೇನೆಂದರೆ, ಮಂತ್ರಿಪಕ್ಷವಾಗಲಿ, ಸ್ವರಾಜ್ಯಪಕ್ಷವಾಗಲಿ, ಸ್ವತಂತ್ರಪಕ್ಷವಾಗಲಿ ಯಾರೊಬ್ಬರೂ ಸರಕಾರದ ಕಡೆಗೆ ಸದಭಿಪ್ರಾಯವನ್ನು ಕೊಡಲಾರದೆ ಹೋದರು. ಇನ್ನೊಂದು ವಿಶೇಷ ವಿಷಯವೆಂದರೆ ಆ ದಿನವೇ ಸರಕಾರದಿಂದ ಮಂತ್ರಿಪಕ್ಷವು ಪರಾಜಯ ಹೊಂದಿದುದು. ಈಗಲಾದರೆ ಮಂತ್ರಿಪಕ್ಷವು ತನ್ನ ನಿರ್ಬಲತೆಯನ್ನು ತಿಳಕೊಳ್ಳಲು ಅನುಕೂಲವಾಯಿತಲ್ಲದೆ, ತಾವು ಅನುಭವಿಸುವ ಅಧಿಕಾರಗಳು ಸರಕಾರದ ಇಚ್ಛಾಧೀನವೆಂಬುದನ್ನು ಸರಿಯಾಗಿ ತಿಳಿದುಕೊಳ್ಳುವಂತಾಯಿತು.

ಮದ್ರಾಸ ಕೌನ್ಸಿಲಿನ ಹೊರನಡೆದ ವಿಷಯವನ್ನೆತ್ತಿದಾಗ, ನಮ್ಮ ಜಿಲ್ಲೆಯವರಾದ ಶ್ರೀಯುತ ನಾಗಣ್ಣ ಹೆಗ್ಡೆಯವರೂ ಹೊರಬಂದ ವಿಷಯವನ್ನೂ ಇಲ್ಲಿ ಎತ್ತದಿರಲಾರೆವು. ಅಲ್ಲದೆ ನಮ್ಮ ಜಿಲ್ಲೆಯ ಹಲವು ಪ್ರಮುಖರೇ ಸೇರಿ ಕೌನ್ಸಿಲಿಗೆ ಕಳುಹಿಸಿದ ಶ್ರೀಯುತ ಮಂಜಯ್ಯ ಹೆಗ್ಡೆಯವರೂ ಕೌನ್ಸಿಲು ಆಸನದಲ್ಲಿ ಘಟ್ಟಿಯಾಗಿ ಕುಳಿತ ವಿಷಯವನ್ನೂ ಇಲ್ಲಿ ತಾರದಿರಲಾರೆವು. ಮತ್ತು ಈ ಎರಡು ಚುನಾವಣೆಗಳಲ್ಲಿ ಕೆಲಸಮಾಡಿದವರು ಈ ಘಟನೆಯ ಮೂಲಕ ಪಾಠವನ್ನು ತಿಳಿಯದಿರರೆಂದು ಭಾವಿಸುವೆವು. ಶ್ರೀಯುತ ನಾಗಣ್ಣ ಹೆಗ್ಡೆಯರ ಈ ಶಿಸ್ತುಪಾಲನೆಯಿಂದ ನಮ್ಮ ಜಿಲ್ಲೆಯ ಸ್ವರಾಜ್ಯಪಕ್ಷವು ಗೌರವಿತವಾಯಿತೆಂದು ಬೇರೆ ಹೇಳಬೇಕಾಗಿಲ್ಲ.

ವಿಷದ ಬೀಜ.

ಜನಾಂಗಗಳ ಸಂಘ (Leauge of Nations) ಎಂಬುದು ಮುಂದಿನ ವಿಷವೃಕ್ಷದ ಬೀಜಮಾತ್ರವಾಗಿಯೆಂದು ಹಲವರು ಭಾವಿಸುತ್ತಿದ್ದರು. ಆ ಬೀಜವು ಮೊಳೆಯುತ್ತಿರುವುದನ್ನು ನೋಡಿದರೆ ಆ ಭಾವನೆಯು ಸರಿಯೇನೊ ಎಂದು ಅನುಮಾನಪಡಬೇಕು. ಲೋಕಾರ್ನೊ ಸಂಧಿಯು ಯುರೋಪಿನ ಶಾಂತಿಯನ್ನು ಸ್ಥಾಪಿಸಿತೆಂದು ಒಂದು ಬಾರಿ ಎಲ್ಲರೂ ಆಲೋಚಿಸಿದರು. ಆದರೆ ಯುರೋಪಿಯ ರಾಜಕಾರಣಗಳಲ್ಲಿ ಹೊರಗಿನ ಸಂಧಿಗಳಿಗಿಂತಲೂ ಒಳಗೊಳಗಿನ ಸಂಧಿಗಳೇ ಗೂಢವಾಗಿಯೂ ಮಹತ್ವದ್ದಾಗಿಯೂ ಪರಿಣಮಿಸುವಾಗ ಆ ಹೊರಗಿನ ಸಂಧಿಗಳಿಂದ ಯಾವ ತರದ ತೀರ್ಮಾನವನ್ನೂ ಕಟ್ಟಿಕೊಳ್ಳಲಿಕ್ಕಾಗುವುದಿಲ್ಲ. ಲೋಕಾರ್ನೊ ಸಂಧಿಗೆ ಅನುಸಾರವಾಗಿ ಜರ್ಮನಿಯನ್ನು ಲೀಗ್ ಒಫ್ ನೇಶನ್ಸಿನ ಕೌನ್ಸಿಲಿಗೆ ಸೇರಿಸುವುದಾಗಿ ನಿಶ್ಚಯಿಸೋಣಾಗಿತ್ತು. ಈ ಕೌನ್ಸಿಲಿಗೆ ಪ್ರಮುಖ ರಾಷ್ಟ್ರಗಳಿಗೆ ಮಾತ್ರವೇ ಸದಸ್ಯತನವು ಸಿಕ್ಕುವುದು. ಆದರೆ ಹಂಗಾಮಿ ಸದಸ್ಯತನವು ಇತರ ರಾಷ್ಟ್ರಗಳಿಗೆ ಸಿಕ್ಕುವುದು. ಜರ್ಮನಿಯು ಪ್ರಮುಖ ರಾಷ್ಟ್ರವಾದುದರಿಂದ ಜರ್ಮನಿಗೆ ಕೌನ್ಸಿಲಿನ ಕಾಯಂ ಸದಸ್ಯತನವು ಕೊಡಲ್ಪಡುವುದಾಗಿ ಲೋಕಾರ್ನೊ ಸಂಧಿ ಶರತ್ತುಗಳಿಂದ ನಿರ್ಣಯಿಸೋಣಾಗಿತ್ತು. ಪ್ರಕೃತ ಕೌನ್ಸಿಲಿಗ ಇಂಗ್ಲೀಷು, ಫ್ರೆಂಚ್, ಇಟಲಿ, ಜಪಾನ್ ಇವರು ನಾಲ್ಕರೆ ಕಾಯಂ ಸದಸ್ಯರಿರುವರು. ಇವರೊಳಗೆ, ಇಂಗ್ಲೀಷ ಮತ್ತು ಜರ್ಮನಿಯು ಸೌಹಾರ್ದವನ್ನು ತಳೆಯುವ ಸಂಭವವಿದೆ. ಆ ಸಂಗತಿಯಲ್ಲಿ ಇಟಲಿಯಾಗಲಿ ಜಪಾನು ಜರ್ಮನಿಯ ಪಕ್ಷೀಯವಾಗುವುದೂ ಸಂಭವವಿದೆ. ಆಗ ತಾನು ಅಲ್ಪ ಪಕ್ಷೀಯಳಾದೆಳೆಂಬ ಹೆದರಿಕೆಯು ಫ್ರಾನ್ಸಿಗೆ ಇರಬಹುದು. ಅಲ್ಲದ ತಾನು ಹೇಳಿದಂತೆ ನಡೆಯುವ ಪೋಲಂಡನ್ನು ಇದರೊಳಗೆ ಸೇರಿಸಿದರೆ ತನ್ನ ಪಕ್ಷವು ಸಾಕಷ್ಟಾದರೂ ಘಟ್ಟಿಯಾದೀತೆಂದು ಫ್ರಾನ್ಸಿನ ವಿಶ್ವಾಸವಿರಬಹುದು. ಹೀಗಾಗಿ ಪ್ರಾಯಶಃ ಫ್ರಾನ್ಸಿನ ಪ್ರೇರಣೆಯಿಂದ ಪೋಲೆಂಡು ತನಗೂ ಸದಸ್ಯತನವನ್ನು ಕೊಡಬೇಕಾಗಿ ವತ್ತಾಯಪಡಿಸುತ್ತಿದೆ. ಪೋಲಂಡು ಪ್ರಮುಖ ರಾಷ್ಟ್ರವಲ್ಲವಾದುದರಿಂದ ಅದಕ್ಕೆ ಕಾಯಂ ಸ್ಥಾನಕೊಡುವುದು ಸಾಧ್ಯವಿಲ್ಲದೆ ಹೋಗಿಯದೆ. ಈಗ ಅದು ತನಗೆ ಹಂಗಾಮಿ ಸ್ಥಾನವನ್ನಾದರೂ ಕೊಡಬೇಕೆಂದು ವತ್ತಾಯಮಾಡುತ್ತಿದೆ. ಜರ್ಮನಿಯು ತನ್ನ ಪ್ರವೇಶದ ಸಮಯದಲ್ಲಿ ಈ ಅಭ್ಯಂತರಗಳನ್ನು ತಂದುದು ನ್ಯಾಯವಲ್ಲವೆಂದು, ತಾನು ಸೇರಿದ ಮೇಲಾದರೆ ಮುಂದೆ ಯಾರನ್ನೂ ಸೇರಿಸಿಕೊಳ್ಳಬಹುದೆಂದೂ, ಅದರ ಮೊದಲು ಕೂಡದೆಂದೂ ಹೇಳುತ್ತದೆ. ಎರಡು ಪಕ್ಷವೂ ತಾವು ಹೇಳಿದಂತೆಯೇ ನಡೆಯಬೇಕಾಗಿ ವತ್ತಾಯಮಾಡುವುದರಿಂದ ಯಾವ ತೀರ್ಮಾನವೂ ಆಗಿಲ್ಲ. ಮುಖ್ಯವಾಗಿ ಈ ಲೀಗಿನೊಳಗಿನ ವಾಗ್ವಾದವು ಒಳಗಿನ ಬಂಕಿಯ ಚಿಹ್ನೆ ಮಾತ್ರವಾಗಿದೆಯೆಂದು ಹೇಳಬಹುದಾಗುತ್ತದೆ; ಅಲ್ಲದ ಒಂದಲ್ಲ ಒಂದು ದಿನ ಬೆಂಕಿ ಹೊತ್ತಿಸಲಿಕ್ಕೂ ಇದು ಬಹುದಾಗಿ ತೋರುತ್ತಿದೆ. ಅಂತೂ ಶಾಂತಿ ಸ್ಥಾಪನೆಗಾಗಿ ರಚಿಸಲ್ಪಟ್ಟ ಈ ಜನಾಂಗಗಳ ಕೂಟದ ಪರಿಣಾಮವು ಏನಾಗಲಿದೆಯೊ!

ಮಿ| ಜಿನ್ನಾರವರ ಹುಡುಗಾಟಿಕೆ.

ಪ್ರೊಫೆಸರ್ ಡಾ| ಫ್ರೆಜರ್ ಹೆರ್ಸ್ ಎಂಬವರು “ಪ್ರಾಯಸ್ಥರಲ್ಲಿ ಹುಡುಗಾಟಿಕೆ” (childishness in Adult life) ಎಂಬ ಒಂದು ಲೇಖವನ್ನು ಬರೆದಿರುವರು. ಆ ಲೇಖದಲ್ಲಿ ಅವರು, ಈಗಿನ ವಿಜ್ಞಾನ ಅಗಾಧವಾದ ಬೆಳವಣಿಗೆಯೊಡನೆ ಮನುಷ್ಯನೊಳಗಿನ ಹುಡುಗಾಟಿಕೆಯೂ ಹೆಚ್ಚಿದೆ ಎಂದು ತೋರಿಸುತ್ತಿರುವರು. ಮಿ| ಜಿನ್ನಾರವರು ಸ್ವರಾಜ್ಯಪಕ್ಷದವರು ಎಸೆಂಬ್ಲಿಯಿಂದ ಹೊರಬಂದ ಮೇಲೆ, ಎಸೆಂಬ್ಲಿಯಲ್ಲಿ ಮಾಡಿದ ಭಾಷಣವನ್ನು ನಾವು ಪರಿಶೀಲಿಸಿದರೂ ಈ ಹುಡುಗಾಟಿಕೆಯು ಮಾನವ ದೌರ್ಬಲ್ಯದ ಫಲವೆಂದು ನಾವು ನೆನಸುವೆವು. ಪ್ರೇಮವನ್ನು ವ್ಯಕ್ತಪಡಿಸುವ ಚಾಯಮಾತುಗಳ [illegible]ದಿಂದ ಒಮ್ಮಿಂದೊಮ್ಮೆ ಸ್ವರಾಜ್ಯಪಕ್ಷೀಯರು ಸರಿದು [illegible]ಯ ಕೌತುಕಾವಹ ರಂಗಮಂದಿರದಿಂದ ಬೇಸರದ ಭಾವ[illegible] ಹೊರಬಂದು, ಈ ಮುಗ್ಧತೆಯ ಅಭಿನಯದಲ್ಲಿ ತಾವು ಸಂಪ್ಯಾಕರೇ ಇದ್ದುದನ್ನು ನೋಡಿ ಮಿ| ಜಿನ್ನರಿಗೆ [illegible] ಮನಸ್ಸಿನ ಬೇಸರವಾಗಿದ್ದಿರಬಹುದು. ಅದನ್ನವರ ಪಕ್ಷದ ದೂಷಣೆಯಲ್ಲಿ ಕಳೆವುದಾಗಿರಲಿಲ್ಲ. ತನ[illegible] ವೇನೊ ಸ್ವರಾಜ್ಯಪಕ್ಷೀಯರಷ್ಟೇ ತೀಕ್ಷ್ಣವಿದೆರೆ ಜಿನ್ನಾರವರು ಬೇಕಷ್ಟು ಹೇಳಿಕೊಳ್ಳುತ್ತಿರುವಾಗ ಅವರನ್ನು ಬಿಟ್ಟು ತಮ್ಮ ಪಕ್ಷಕ್ಕೆ ತಾವು ಕೆಲಸ [illegible]ಯನ್ನು ತೋರಿಸುವ ಬದಲು, ಅವರ ಹುಚ್ಚು [illegible] ಕಾರಕ್ಕೆ ತೋರಿಸಲು ಪ್ರಯತ್ನಿಸಿದುದು ಈ ಹುಡು[illegible] ಹಾಕಬಹುದಲ್ಲದೆ ಮತ್ತೇನಿಲ್ಲ. ಸರಕಾರವಾ[illegible] ಪ್ರಾಜ್ಞತೆಗೂ, ಸುಜ್ಞತೆಗೂ (Sanity)ಗೂ, ಗೌರವವನ್ನು ಕೊಟ್ಟಂತೆ ತೋರುವುದಿಲ್ಲ. ಮಿ| ಇತರರೂ ತಮ್ಮ ರಾಷ್ಟ್ರೀಯ ಸೂಚನೆಗಳ[illegible] ಹೀನವಾದ ಎಸೆಂಬ್ಲಿಯಲ್ಲಿ ಹಾಕಿ, ಭಾಷಣಗಳ[illegible] ಗೊಳಿಸಲು ಪ್ರಯತ್ನಿಸುವುದು, ಬಂಡೆಯ ಮೇಲೆ ಹೊಯ್ಯಂತಾಗಿದೆಯೇ ವಿನಹ ಮತ್ತೇನಿಲ್ಲ. [illegible]ರವರು ತಮ್ಮ ಸಹಾಯ ಹೀನತೆಯು ಪರಿಸ್ಥಿತಿಯ[illegible] ಸರಕಾರದ ಕಡೆಗೆ ಬೇಸರಿಸುವುದರ ಬದಲಿಗೆ ಸ್ವರಾ[illegible]ರನ್ನು ಖಂಡಿಸಲು ನಿಂತಿರುವ ಆ ತರ್ಕಹೀನ[illegible] ನಾವು ಹುಡುಗಾಟಿಕೆಯಲ್ಲದೆ ಬೇರೆನನ್ನೂ ಅನ[illegible]

ರಾಜ ನೀತಿಜ್ಞರಾಗಿ ಮಿ| ಜಿನ್ನಾರವರು [illegible] ಪ್ರಾಬಲ್ಯವನ್ನು ಹೇಳಿದುದೂ ಬಹಳ ದುಃ[illegible]ವಾಗಿದೆ. ಕಾಂಗ್ರೆಸ್ ಕಾರ್ಯಕ್ರಮವನ್ನು [illegible] ಕಾಂಗ್ರೆಸ್ ಕಾರ್ಯಕ್ರಮವನ್ನು ಮತದಾರರ[illegible] ಕಾಂಗ್ರೆಸ್ ಕಾರ್ಯಕ್ರಮಕ್ಕೆ ಮತದಾರರ [illegible] ಪಡೆದು ಆ ಮೂಲಕವೇ ಕಾಂಗ್ರೆಸ್ಸಿನ ಪ್ರಾಬಲ್ಯವನ್ನು [illegible]ವು ಪ್ರಕಟೀಕರಿಸಿದೆ. ಅಂತಿರುವಾಗ, ಮತದಾರರ ಸಂಸ್ಥೆ ಇಲ್ಲದಿರುವಾಗ, ಧ್ಯೇಯ ಸಹಿತವಾಗಿ ನಡೆಯ[illegible] ಮತದಾರರ ಒಪ್ಪಿಗೆಯನ್ನು ಪಡೆದ ಕಾಂಗ್ರೆಸ್ಸಿನ [illegible] ಮಾನಿಸುವುದಾದರೂ ಸ್ವರಾಜ್ಯಪಕ್ಷೀಯರ ಕರ್ತವ್ಯವಲ್ಲ[illegible]ರುವಾಗ ಮಿ| ಜಿನ್ನಾರವರೂ, ಬಿಪಿನಚಂದ್ರಪಾಲರು ಸ್ವತಂತ್ರಿಕರು ಸ್ವರಾಜ್ಯಪಕ್ಷವು ಕಾಂಗ್ರೆಸ್ಸಿನ [illegible] ಮಾನಿಸಿದುದಕ್ಕೆ ಖಂಡಿಸಿದುದು ವಿಚಿತ್ರಕರ. [illegible] ರಾಜಕೀಯ ಆಶಯಗಳನ್ನು ಪ್ರಕಟೀಕರಿಸುವ [illegible] ಸಂಸ್ಥೆಯ ಮೌಲ್ಯವನ್ನು ತಗ್ಗಿಸಲು ಪ್ರಯತ್ನಿ[illegible] ಮಿ| ಜಿನ್ನಾರವರಿಗೆ ಅವರ ರಾಜಕೀಯ ಆಶಯಗಳ[illegible] ಯಾಗುವಂತಿಲ್ಲ. ಅಂತಹ ತಪ್ಪು [illegible] ಎಸೆಂಬ್ಲಿಯಲ್ಲಿ ಆ ಮೇಲೆ ನಡೆದ ಘಟನಾವಳಿಗಳ[illegible]ರನ್ನು ನಿರಾತಂಕನ್ನಾಗಿ ಮಾಡದಿರವು.

ಭಾಷಾವಾರು ಪ್ರಾಂತರಚನೆ.

ಸರ್ ಶಂಕರನ್ ನಾಯರರು ಕೌನ್ಸಿಲ್ ಒಫ್ ಸ್ಟೇ[illegible] ತಂದ ತಮಿಳು ಪ್ರಾಂತರಚನೆಯ ಠರಾವು ಬಿದ್ದು ಹೋ[illegible] ಸರಕಾರೀ ಬಹುಮತವಿರುವ ಕೌನ್ಸಿಲ್ ಒಫ್ ಸ್ಟೇಟನ್ನಲ್ಲಿ ಕಾರವು ವಿರೋಧಿಸುವ ಯಾವ ಠರಾವೂ ಮಂಜೂ[illegible]ವುದು ಸಂಪೂರ್ಣವಾಗಿ ಅಸಾಧ್ಯ. ಅಂತೆಯೇ ಸರ್ [illegible]ರನ್ ನಾಯರರ ಠರಾವು ಬಿದ್ದು ಹೋದುದೇನೂ ಆ[illegible]ವಲ್ಲ. ಆದರೆ ಸ್ವರಾಜ್ಯಪಕ್ಷೀಯರು ಕೌನ್ಸಿಲ್ ಒ[illegible] ನಲ್ಲಿದ್ದುದಾದರೆ ಪ್ರಾಯಶಃ ಈ ಸಮಸ್ಯೆಯ ವ[illegible] ಸ್ಫೂರ್ತಿಯಿಂದ ನಡೆಯುತ್ತಿದ್ದಿತು. ಈ ಠರಾ[illegible] ಕಾರಣಗಳನ್ನು ಸರಕಾರವು ಪ್ರತಿಕೂಲವಾಗಿ ತೋ[illegible] (೧) ತಮಿಳು ಜನರು ಪ್ರಾಂತರಚನೆಯ ಬಗ್ಗೆ [illegible] ತೋರಿಸಿಲ್ಲ. (೨) ಪ್ರಾಂತಿಕ ಸ್ವಾತಂತ್ರ್ಯವನ್ನು ಅಧಿಕಾರವು ತತ್ಕಾಲಕ್ಕೆ ಸರಕಾರಕ್ಕಿಲ್ಲ.

ನಾವು ಈ ವಿಷಯಗಳನ್ನು ಕರ್ನಾಟಕ ಪ್ರಾ[illegible] ಆಲೋಚನೆಯ ಬಗ್ಗೆ ಮಾತ್ರವೇ ಇಲ್ಲಿ ಕೊಟ್ಟಿರುವು[illegible] ಮುದ ಕಾರಣವನ್ನು ಕರ್ನಾಟಕದ ಮಟ್ಟಿಗೆ ಸರಕಾ[illegible] ಸಲು ಕಾರಣವಿಲ್ಲ. ಏಕೆಂದರೆ ಕರ್ನಾಟಕವು ಅನೇ[illegible] ಗಳಿಂದ ಪ್ರಾಂತರಚನೆಗಾಗಿ ಬೊಬ್ಬಿಡುತ್ತಿದೆ. [illegible] ಣದ ಮಟ್ಟಿಗೆ, ಕರ್ನಾಟಕವು ಪ್ರಾಂತಿಕ ಸ್ವಾತ[illegible] ಇಚ್ಛಿಸುವುದಾದರೂ ಸಾಧ್ಯವಿಲ್ಲವಾದರೆ ಇದ್ದ [illegible] ಸರಕಾರವಾಗಿ ಪ್ರಾಂತರಚನೆಯಾದರೂ ಸಂತೋಷಿ[illegible] ಟಕ್ಕೆ ಇದು ಅಡ್ಡಿಯಾಗಿರಲಾರದು. ಆದರೆ [illegible] ಗಳು ಬಹಳಷ್ಟು. ಅದನ್ನು, ಕರ್ನಾಟಕೀಯರು [illegible] ಆಲೋಚಿಸುವುದು ಅಗತ್ಯ.

ಅನುಕ್ರಮಣಿಕೆ.

ದಕ್ಷಿಣಲೇಖ ... ಪುಟ
ಆಯುರ್ವೇದ ... ೩
ವಿಚಾರಗಳು ... ೫
ವರ್ತಮಾನಸಂಗ್ರಹಗಳು—
ಒಳದೇಶ ... ೬-೭
ದಕ್ಷಿಣ ಕನ್ನಡ— ಪುಂಜಾಲಕಟ್ಟೆ, ಬರಿಮಾರು, ಮೊಡಂಕಾಪು, ಪಾಣೆಮಂಗಳೂರು, ಕುರ್ಡಿಪಳ್ಳ, ಕುಂಬಳೆ, ಅಮಟಾಡಿ, ಮಂಜೇಶ್ವರ ಪೆರಡಾಲು, ಅಜ್ಜಾವರ, ಬಂಟ್ವಾಳ, ಕಾಸರಗೋಡು, ... ೮
ಮಂಗಳೂರು ... ೬-೮
ಯಾಣ ... ,,
ಮೂಡುನಿಡುಗೋಡು ... ,,
... ೪
ಸ್ವಾಬ ಯಾನೆ ಜಾಸ್ತಿಕಾಲ ಬದುಕುವರು? ವಿವಾಹಿತರೇ ಅವಿವಾಹಿತರೇ?

ಸ್ವದೇಶಾಭಿಮಾನಿ.

೧೯ ಅಧಿಕ ಚೈತ್ರ ಶು॥ಯು ಶುಕ್ರವಾರ.

ಆಯುರ್ವೇದ.

ಲೇಖಾಂಕ ೨.

ವೇದದ ಪರಿಣಾಮಕಾರಕ ಗುಣವನ್ನೂ, ಅದರ ಅವಶ್ಯಕತೆಯನ್ನೂ, ಅದರಲ್ಲಿ ನವೀನ ಭಾವನೆ ...ವುದರ ಅವಶ್ಯಕತೆಯನ್ನೂ ನಾವು ಮೊದಲಿನ ... ಸೂಚಿಸಿರುವೆವು. ಈಗ ಛಟ್ಟೆಯಾಗಿ ಬಂದು ...ರದ ಹಳ್ಳಿಪಳ್ಳಿಗಳಲ್ಲಿ ಕೂಡ ಹೊಕ್ಕು ಮನೆಮಾಡಿ ...ಡಲೆತ್ನಿಸುವ ಪಾಶ್ಚಾತ್ಯ ಕ್ರಮಗಳಿಂದ ಹಿಂದೀಯ ...ಬಕ್ಕೂ, ಆರ್ಥಿಕ ಹಿತಕ್ಕೂ ಬಹಳ ಬಾಧಕವಿದೆ ... ಪಾಶ್ಚಾತ್ಯ ಕ್ರಮಗಳ ಒಂದು ಪ್ರಚಂಡ ಬಾಧಕ ...ವು ಆಯುರ್ವೇದದ ಮೇಲಿನ ವಿಶ್ವಾಸವನ್ನು ಕೆಡಿಸು ...ರಿಗೂ ಅದರ ಪ್ರಯೋಜನವು ಸಾಧ್ಯವಿದ್ದುದಾದರೆ ...ವು ವಿಶೇಷವಾಗುತ್ತಿರಲಿಲ್ಲ. ಕಾರ್ಯತಃ, ಅದರ ...ದುದರಿಂದಲೂ, ಅದನ್ನುಪಯೋಗಿಸಲು ಸಾಮಾನ್ಯ ...ಲ್ಲ; ಅದರ ಸತರ್ಕತೆಯಿಂದ ಇತರ ಔಷಧಗಳಲ್ಲಿ ...ವುದಿಲ್ಲ.

...ಸದಿಂದಲೇ ಎಲ್ಲವೂ ಗುಣವಾಗುವುದೆಂಬುದನ್ನು ...ವಾಗಿ ಘಂಟಾಗಲಿ, ಅದರ ಸತ್ಯಸ್ಥಿತಿಯನ್ನು ಪರಿಶೋಧಿಸುವು ...ನಮ್ಮ ಉದ್ದೇಶವಿಲ್ಲ. ಪರಂತು ರೋಗಕ್ಕೆ ತಕ್ಕ ಮದ್ದು ...ದಾವಕೊಮೇಲೆ ವಿಶ್ವಾಸವೆಂಬುದೊಂದೂ ಅಗತ್ಯವಿದೆ ಎಂಬು ...(ಭಿನ್ನಾಭಿಪ್ರಾಯವಿದೆಯೆಂದು ನಾವು ತಿಳಿಯುವುದಿಲ್ಲ. ...ಪಾಶ್ಚಾತ್ಯರು ಮೂಢಭಾವನೆ (Superstitions) ...ವರೆಂದು ನೆನಸಬಹುದು. ಆದರೆ ಮಾನವ ಮಾನಸಿ... ಅಷ್ಟು ಕಠಿಣವಾಗಿಲ್ಲ. ಮೂಢವೋ, ತಿಳಿಯಲಾರ ...ದೊ, ತರ್ಕಕ್ಕೆ ಹೋಗದೆ ವಿಶ್ವಾಸಮಾಡುವ ವಿಷಯ ...ಜ್ಞರಿಂದ ಪ್ರಾಜ್ಞರ ವರೆಗೆ ಇದ್ದೇ ಇದೆ. ಪಾಶ್ಚಾ... ಈ ಕ್ರಮಕ್ಕೆ ಅಪವಾದವಲ್ಲ. ವಿಶ್ವಾಸದಿಂದ ಗುಣ ...ವುದೆಂದು ಒಂದು ಬಾರಿ ನಮ್ಮ ಜಿಲ್ಲೆಯಲ್ಲಿ ಒಬ್ಬ ಸನ್ಯಾ... ಹಿಂದುಗಡೆ ಸಾವಿರಾರು ಮಂದಿ ನೆರೆದು ಹಿಂಬಾಲಿಸು ...ತೆ ವಿಲಾಯತಿಯಲ್ಲಾದರೂ Faith cure ಎಂದು ...ು ಜನತೆಯ ವಿಶ್ವಾಸವನ್ನು ಉತ್ತೇಜಿಸುವುದೂ ಸಾವಿ...ಂದಿ ವಿಶ್ವಸಿಸುವುದೂ ಇದೆ. ಆದುದರಿಂದ ಕೇವಲ ...ಮೂಲಕದ ಗುಣದ ವಿಷಯ ನಾವು ಹೆಚ್ಚು ...ಳೀಗುವುದಿಲ್ಲ. ಪರಂತು ಈ ಎಲ್ಲಾ ಅನುಭವ ...ಸಿಸುವ ಔಷಧ ಸೇವನೆಗೆ ಅಗತ್ಯವೆಂದು ತಿಳಿದು

...ಶ್ಚಾತ್ಯ ಕ್ರಮದ ಪ್ರಚಂಡ ಹಾನಿಯೆಂದರೆ, ಔಷಧ ...ಲ್ಲಾ ಆಧಾರ ಸ್ವರೂಪವಾಗಿರುವ ಈ ವಿಶ್ವಾಸವನ್ನು ...ು. ಆಯುರ್ವೇದದ ಸ್ವಾಭಾವಿಕ ತರ್ಕಹೀನತೆ ...ಆಯುರ್ವೇದ ಪಂಡಿತರ ಅಧ್ಯಯನದ ಅಭಾವ ... ಆಯುರ್ವೇದವನ್ನು, ಕೆಲವು ಅಜ್ಞರೂ ಅಭ್ಯಸಿ... ಈ ವಿಶ್ವಾಸವು ಹೆಚ್ಚೆಚ್ಚಾಗಿ ಕೆಡುತ್ತಾ ಬರುವುದೂ ...ವಿಷಯ.

...ಶ್ಚಾತ್ಯರ ಸತರ್ಕತೆಯನ್ನು ಆಯುರ್ವೇದದಲ್ಲಿ ಗರ್ಭೀ... ಆಯುರ್ವೇದದ ಉಜ್ಜೀವನದಲ್ಲಿ ಚಿಂತಿತರಿರು... ...ವ್ಯೋದ್ದೇಶವಿರಬೇಕು. ಈ ಸತರ್ಕತೆಯು ಭಾವ ... ಷ್ಟು ಬೇಗನೆ ಆಯುರ್ವೇದದೊಳಗೆ ತೋರಿಸಿ ಅದ ... ಜನಸಾಮಾನ್ಯವೂ ಆಗಾಧವೂ ಆದ ವಿಜ್ಞಾನವಾಗಿ ... ತೋರಿಸಿದರೆ, ಅದು ಸಮಯಾಂತರದಲ್ಲಿ ಉತ್ಪ... ಕಲ್ಪರೂಪಿಯಾಗಲಿ ಬರಬೇಕಾಗುವುದು.

ವಿಶ್ವ ನಿರ್ಮಾಣಕ್ಕೆ ಪಂಚಭೂತಗಳೇ ಮೂಲ ಭೂತಗಳಾದುವೆಂದು ಹೇಗೆ ಹಿಂದು ಶಾಸ್ತ್ರವು ಹೇಳುವುದೊ, ಆಯುರ್ವೇದವಾದರೂ ವಾತ, ಪಿತ್ತ, ಕಫ ಇತ್ಯಾದಿ ವಿಭಾಗಗಳಿಂದ ರೋಗ ನಿರ್ಣಯ (Diagnosis) ಮಾಡುವುದು. ವಿಶ್ವ ನಿರ್ಮಾಣವು ಪಂಚ ಭೂತಗಳೆಂದು ಇಷ್ಟು ಸುಲಭವಾಗಿ ಆಗಿಲ್ಲವೆಂಬುದನ್ನು ಸಾಧಾರಣ ಮೂವತ್ತು ಮೂಲ ಭೂತಗಳ ಆವಿಷ್ಕಾರದೊಡನೆ ಆಧುನಿಕ ವಿಜ್ಞಾನವು ತೋರಿಸಿಯದೆ. ಹಾಗೆಯೇ ಆಧುನಿಕ ವೈದ್ಯ ವಿಜ್ಞಾನವೂ ರೋಗ ಕಾರಣಕ್ಕೆ ಅಸಂಖ್ಯ ಕಾರಣಗಳನ್ನೂ ಕ್ರಮಗಳನ್ನೂ ಶೋಧಿಸಿ ತಿಳಿದು ಕೊಂಡಿದೆ. ಇವುಗಳಲ್ಲಿ ಯಾವುದು ಸರಿ, ಯಾವುದು ದೋಷಕರವೆಂಬುದನ್ನು ಹೇಳುವುದು ಆಯುರ್ವೇದದ ಪೂರ್ಣ ಜ್ಞಾನವಿಲ್ಲದ ನಮ್ಮಿಂದ ಸಾಧ್ಯವಿಲ್ಲವಾಗಿದೆ. ಹಿಂದೂ ವಿಜ್ಞಾನಗಳನ್ನು ಪರಿಶೋಧಿಸುವಾಗ ಅವುಗಳಲ್ಲಿನ ಅನೇಕ ರಹಸ್ಯಗಳು ಬರೇ ತಾರ್ಕಿಕತೆಯಿಂದ ಕಂಡು ಹಿಡಿಯಲ್ಪಟ್ಟವುಗಳಿಗಿಂತ ಮನೋಬಲದಿಂದಲೂ, ಸಮಾಧಿಯಿಂದಲೂ ಕಂಡುಹಿಡಿಯಲ್ಪಟ್ಟವುಗಳೆಂದು ಅನುಮಾನಿಸಲು ಕಾರಣವಿದೆ. ಸಮಾಧಿಯಿಂದ ಕಂಡುಹಿಡಿಯಲ್ಪಟ್ಟ ಮಾತ್ರಕ್ಕೆ ಅವು ಪೂರ್ಣತೆಯುಳ್ಳವುಗಳೆಂದು ಹೇಳಬರುವುದಿಲ್ಲ. ಏಕೆಂದರೆ ಬೇರೆ ಬೇರೆ ಸಮಾಧಿಸ್ಥಿತರು ಬೇರೆ ಬೇರೆ ಆವಿಷ್ಕಾರಗಳನ್ನು ಮಾಡಿರುವರು.

ಮುಖ್ಯತಃ ನಮ್ಮ ಜನತೆಯೊಳಗೆ ಈಗ ಆ ತರದ ಸಮಾಧಿ ಮೂಲಕ ಶೋಧನೆಯ ಶಕ್ತಿಯು ಇಲ್ಲ. ಆದುದರಿಂದ ವಿಶ್ವಾಸವನ್ನು ಹುಟ್ಟಿಸಬೇಕಾದರೆ ನಮ್ಮ ಸಾಮಾನ್ಯ ಪರಿಜ್ಞಾನಕ್ಕೆ ಆಧಾರವಾಗುವ ಕ್ರಮಗಳಿಂದಲೇ ವೈದ್ಯಕೀಯ ಶೋಧಗಳೂ, ತತ್ವಗಳೂ ಉದ್ಘಾಟಿಸಲ್ಪಡಬೇಕು.

ನಾವು ಈ ಮೊದಲೇ ಸೂಚಿಸಿದಂತೆ ಆಯುರ್ವೇದದ ರೋಗನಿರ್ಣಯ ಕ್ರಮಕ್ಕಿಂತಲೂ ಔಷಧನಿರ್ಣಯ ಕ್ರಮವು ಉತ್ತಮವಿದೆ. ಆದರೆ ಜಗತ್ತಿನ ಶೀತೋಷ್ಣಗಳ ಪರಿಸ್ಥಿತಿಯೂ, ಮಾನವ ದೇಹರಚನೆಯ ಪರಿಸ್ಥಿತಿಯೂ ಯಾವಾಗಲೂ ಪರಿವರ್ತನವನ್ನು ಹೊಂದುತ್ತಲೇ ಇದೆ. ಜಗತ್ತಿನ ದೈಹಿಕ ಪರಿಸ್ಥಿತಿಯು ಎರಡು ಸಾವಿರ ವರ್ಷಗಳ ಹಿಂದಿಗಿಂತ ಈಗ ಎಷ್ಟೋ ಬದಲಾಗಿರುವುದು. ಫಲತಃ ಔಷಧ ಕ್ರಮವನ್ನೂ ಜಗತ್ತಿನ ಪರಿವರ್ತನಗಳೊಡನೆ ಅಡಿಯಿಡಿಸುವುದು ಅವಶ್ಯಕ.

ಇದಕ್ಕಾಗಿ ಆಯುರ್ವೇದ ಸಂಸ್ಥೆಗಳು ಸ್ಥಾಪಿಸಲ್ಪಟ್ಟು ದೊಡ್ಡದೊಡ್ಡ ಶಹರುಗಳಲ್ಲಿ ಧರ್ಮಾಸ್ಪತ್ರೆಗಳನ್ನು ತೆರೆದು, ಅವುಗಳಿಗೆ ಆಯುರ್ವೇದದಲ್ಲಿಯೂ, ಆಧುನಿಕ ಕ್ರಮಗಳಲ್ಲಿಯೂ ಚೆನ್ನಾಗಿ ನುರಿತ ವೈದ್ಯರನ್ನು ನೇಮಿಸಿ, ಲೋಕಲ್ ಫಂಡು ಆಸ್ಪತ್ರೆಗಳಂತೆಯೂ, ಜನರಲ್ ಹೊಸ್ಪಿಟಲುಗಳಂತೆಯೂ ರೂಪಿಸಿ, ಒಳರೋಗಿಗಳಿಗಾಗಿಯೂ ಸೌಕರ್ಯಗಳನ್ನೊದಗಿಸಿ, ಆಗಿಂದಾಗ್ಯೆ ಈ ಆಸ್ಪತ್ರೆಗಳಲ್ಲಿ ಸಿಕ್ಕುವ ರೋಗಸಂಖ್ಯೆ, ಗುಣಸಂಖ್ಯೆ ಮೊದಲಾದುವುಗಳನ್ನು ಪ್ರಕಟಿಸಬೇಕು. ಮಾತ್ರವಲ್ಲದೆ, ರೋಗಗಳ ಪರಿಸ್ಥಿತಿ (Stage)ಯಲ್ಲಿಯೂ ಕೂಡ ತಕ್ಕ ಔಷಧಗಳನ್ನು ಕೊಟ್ಟು, ಅವುಗಳ ಪರಿಣಾಮವನ್ನು ಚೆನ್ನಾಗಿ ಕಲಿತು, ಆ ಪರಿಣಾಮಗಳ ಮೇಲೆ ಆದರಿಸಿ ಔಷಧಗಳ ಹೆಚ್ಚುಕಡಿಮೆ ಮಾಡಿ ಸರಿಯಾದ ರೀತಿಯಲ್ಲಿ ಶೋಧಗಳನ್ನು ನಡೆಸಿದರೆ ಆಯುರ್ವೇದವು ಬೇಗನೆ ಜನತೆಯ ವಿಶ್ವಾಸವನ್ನು ಸಂಪಾದಿಸಬಹುದಾಗಿ ನಮಗೆ ಅನ್ನಿಸುತ್ತಿದೆ.

ಪಾಶ್ಚಾತ್ಯರ ಇಷ್ಟು ಶೋಧಗಳಾಗಿ, ಪಾಶ್ಚಾತ್ಯ ವೈದ್ಯ ಕ್ರಮವು ಇಷ್ಟು ಚೆನ್ನಾಗಿ ಬೆಳೆದಿರುವುದಾದರೂ, ಅಕಾಲ ಮರಣಗಳು ಕಡಿಮೆಯಾದಂತಾಗಲಿ, ರೋಗದ ಮೂಲೋಚ್ಛಾಟನೆ ಮಾಡಿದಂತಾಗಲಿ ತೋರುವುದಿಲ್ಲ. ಪಾಶ್ಚಾತ್ಯ ಕ್ರಮವು ಎಷ್ಟೋ ಸಾರಿ ಕೆಲವು ರೋಗಗಳನ್ನು ನಿವಾರಿಸಲಾರದ ಸಂದರ್ಭಗಳು ಅಸಂಖ್ಯವಿವೆ. ಅಂತೆಯೇ ಆಯುರ್ವೇದವು ಎಲ್ಲಾ ರೋಗಗಳನ್ನು ಗುಣಪಡಿಸಲಾರದಾದರೂ, ಅನೇಕ ತೀವ್ರ ರೋಗಗಳನ್ನು ಗುಣಪಡಿಸುತ್ತಿದೆ. ಹಾಗಿರುವಾಗ ಪಾಶ್ಚಾತ್ಯ ಕ್ರಮದ ಕಡೆಗೆ ಪಕ್ಷಪಾತವಾಗಲಿಕ್ಕೆ ಆ ಸತರ್ಕತೆಯೇ ಕಾರಣವಾಗಿದೆ. ಅದನ್ನು ಇಂತಹ ಆಸ್ಪತ್ರೆಗಳ ತೆರೆಯೋಣದರಿಂದಲೇ ಆಯುರ್ವೇದದಲ್ಲಿಯೂ ಗರ್ಭಿಸಬೇಕಾಗಿದೆ.

ಪಾಶ್ಚಾತ್ಯ ಕ್ರಮಗಳು ಒಂದೇ ಬಾರಿ ಬೆಳೆದುವುಗಳಲ್ಲ. ಅಲ್ಲದೆ ಅವುಗಳ ಬೆಳವಣಿಗೆಯಾದರೂ ಇಷ್ಟರಿಂದಲೇ ಮುಗಿದಿಲ್ಲ. ಲೋಕದಲ್ಲಿನ ಜನತೆಯ ವಾಹಿನಿಯೊಡನೆ ಪಾಶ್ಚಾತ್ಯ ವೈದ್ಯವಿಜ್ಞಾನವೂ ವಹಿಸುತ್ತಿದೆ. ಹಾಗೆಯೇ ಆಯುರ್ವೇದವೂ ಜನತೆಯೊಡನೆಯೇ ಪ್ರವಹಿಸಿದರೆ ಅದು ಕೃತಕಾರ್ಯವಾಗುವುದು.

ಪಾಶ್ಚಾತ್ಯ ಕ್ರಮಗಳ ವಿಕಾಸದಲ್ಲಿ ಎಷ್ಟೋ ವಿಜ್ಞಾನಶೋಧಕರು ಮೈದಣಿದು ಕಷ್ಟಮಾಡಿರುವರು. ಕೆಲವು ಸಂದರ್ಭಗಳಲ್ಲಿ ಶೋಧನೆಯ ನಿರ್ಣಯಕ್ಕಾಗಿ ತಮ್ಮ ಜೀವವನ್ನು ಕೂಡ ಕೊಡಲು ಬೆದರದ ಅಲ್ಲದೆ ನಿಜವಾಗಿಯೂ ಕೊಟ್ಟಿರುವ ವೈದ್ಯಕೀಯ ವೀರರಿಂದಲೇ ಪಾಶ್ಚಾತ್ಯ ವೈದ್ಯವಿಜ್ಞಾನವು ಬೆಳೆಯಿಸಲ್ಪಟ್ಟಿತು. ಶ್ರೀಮಂತರು ಅದಕ್ಕಾಗಿ ಬಹಳ ದ್ರವ್ಯವನ್ನು ದಾನಮಾಡಿರುವರು. ಸರಕಾರವು ಅದಕ್ಕೆ ಸರ್ವತರದ ಸಹಾಯವನ್ನು ಕೊಟ್ಟಿರುವರು. ಆದುದರಿಂದಲೇ ಅದು ಇಷ್ಟು ಬೆಳೆಯಿತು.

ಹಾಗೆಯೇ ವಿಜ್ಞಾನಕಾರಕರ ಅತ್ಯಯಜ್ಞದಿಂದಲೂ, ಶ್ರೀಮಂತರ ದಾನಶೀಲತೆಯಿಂದಲೂ, ಸರಕಾರದ ಸಹಾಯದಿಂದಲೂ ಆಯುರ್ವೇದವೂ ಹೆಚ್ಚು ವಿಕಾಸವಾಗಬೇಕು. ನಮ್ಮ ಸರಕಾರವು ಈ ವೈದ್ಯಕ್ಕೆ ಹೆಚ್ಚು ಸಹಾನುಭೂತಿಯನ್ನು ತೋರಿಸಲಾರರು. ಆದುದರಿಂದ ವಿಜ್ಞಾನಕಾರಕರೇ ಇದರ ಬಗ್ಗೆ ದೀಕ್ಷಾಬದ್ಧರಾಗುವುದು ಅವಶ್ಯಕವಿದೆ.

ಇವೆಲ್ಲ ಕಾರ್ಯಸಾಧನೆಗಳು ತತ್ಕಾಲಕ್ಕೆ ಸಾಧ್ಯವಿಲ್ಲದವುಗಳಾಗಿವೆ. ಇವುಗಳು ಸಾಧ್ಯವಾಗುವ ವರೆಗೆ ಆಯುರ್ವೇದ ಪಂಡಿತರೇ ಒಗ್ಗಟ್ಟಾಗಿ ತಮ್ಮ ತಮ್ಮ ಅನುಭವಗಳನ್ನು ಕೂಡಿಸಿ ಆಗಾಗ ಜನಸಾಮಾನ್ಯತೆಗಾಗಿ ಪ್ರಕಟಿಸಬಹುದು. ಈ ತರದ ಯಾವುದೊಂದೂ ಕಾರ್ಯಸಾಧನೆಯಾಗದಿದ್ದರೆ ಆಯುರ್ವೇದವು ಮುಂಬರಿದು ಬರುವ ಎಲ್ಲೋಪೆಥಿಗೆ ತನ್ನ ಸ್ಥಾನವನ್ನು ಒಪ್ಪಿಸಿಕೊಡಬೇಕಾಗುವುದು.

ವಿದೇಶ ವರ್ತಮಾನ.

— ಅಮೇರಿಕದ ವರ್ಜಿನಿಯಾ ತೀರದಲ್ಲಿ ನ್ಯೂಪೋರ್ಟ್ ಎಂಬ ಬಂದರದಲ್ಲಿ "ಅಮೇರಿಕಾ" ಎಂಬ ಹಡಗವನ್ನು ದುರುಸ್ತಿ ಮಾಡುವಾಗ ಹಡಗಕ್ಕೆ ಬೆಂಕಿ ತಗಲಿ ಎರಡು ಮಿಲಿಯ ಡೊಲ್ಲರ ನಷ್ಟವಾಗಿದೆ.

— ಇಂಗ್ಲಂಡಿನ ಸಿವಿಲ್ ಸರ್ವಿಸ್ ಎಸ್ಟಿಮೇಟಿನಲ್ಲಿ ೧೯೨೬-೨೭ನೇ ಇಸವಿಯಲ್ಲಿ ಹನ್ನೆರಡು ಮಿಲಿಯ ಪೌಂಡು ಖರ್ಚು ಕಡಿಮೆಮಾಡಿರುತ್ತಾರೆ.

— ಆಯರ್‌ಲೆಂಡಿನ ಮಿ॥ ಡಿವೆಲೆರಾರವರು ಸಿನ್‌ಫೇನ್ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆಕೊಟ್ಟಿರುವರು.

— ಈಜಿಪ್ಟ ದೇಶದಲ್ಲಿ ಶಾಲಾ ಹುಡುಗರು ಹೇಟುಗಳನ್ನು ಧರಿಸಬಾರದೆಂದೂ ರುಮಾಲನ್ನೇ ಕಟ್ಟಬೇಕೆಂದು ಅಲ್ಲಿಯ ವಿದ್ಯಾ ಮಂತ್ರಿಯವರು ಎಲ್ಲಾ ಶಾಲೆಗಳಿಗೆ ಸರ್ಕಿಲಾರು ಕಳುಹಿಸಿರುತ್ತಾರೆ. ಆ ಹೇಟುಗಳನ್ನು ಹಿಂದೂಸ್ಥಾನಕ್ಕೆ ಕಳುಹಿಸಿದರೆ ಒಳ್ಳೇ ಗಿರಾಕಿ ಸಿಕ್ಕುವುದರಲ್ಲಿ ಸಂದೇಹವಿಲ್ಲ!

— ಜಪಾನ್ ಪಾರ್ಲಿಮೆಂಟ ಸಭೆಯಲ್ಲಿ ಜಗಳಗಳಾಗಿ ಅನೇಕರಿಗೆ ತಲೆಗಳಿಗೂ ಮೂಗುಗಳಿಗೂ ಗಾಯಗಳಾಗಿವೆ.

— ಚೀನಾದೇಶದವರು ಜಪಾನ ಯುದ್ಧದ ಹಡಗುಗಳು ಕರಾವಳಿಗೆ ಬರಕೂಡದೆಂದು ಗುಂಡುಹಾರಿಸಿದರು. ಜಪಾನ ಕಲಾಸಿಗಳಿಗೆ ಗಾಯಗಳಾಗಿವೆ.

— ಬೆಲ್ಜಿಯಮಿನ ವೈಮಾನಿಕರು ಕ್ಯಾಥೋಪಟ್ಟಣಕ್ಕೆ ಬಂದಿರುತ್ತಾರೆ.

— ನ್ಯೂಯೋರ್ಕಿನಲ್ಲಿ ಒಂದು ರೈಲ್ವೆ ಟ್ರೇನಿನ ಭಯಂಕರವಾದ ಅಪಘಡದಲ್ಲಿ ೨೪ ಜನರು ಮಡಿದಿರುವರು. ಮತ್ತು ೯೩ ಜನರಿಗೆ ಜಖಂಗಳಾಗಿಯದೆ. ಟ್ರೇನಿನ ಮೂರು ಗಾಡಿಗಳು ಸಂಪೂರ್ಣವಾಗಿ ಚೂರುಚೂರಾಗಿವೆ. ಬಿದ್ದ ಗಾಡಿಗಳ ಪೈಕಿ ಒಂದು ಗಾಡಿಯು ಸಂಕದ ಮೇಲಿಂದ ಕೆಳಗೆ ನೀರಿನಲ್ಲಿ ಬಿದ್ದಿರುವುದು. ಬಾಕಿ ಗಾಡಿಗಳು ಸುಮಾರು ೧೯೦ ಫೀಟು ಎತ್ತರದಿಂದ ನೆಲವನ್ನು ಬಿಟ್ಟು ನೇತಾಡುತ್ತಿರುವವು. ಈ ಟ್ರೇನಿನಲ್ಲಿ ಸಾವಿರಾರು ಜನರು ಪ್ರಯಾಣ ಮಾಡುತ್ತಿದ್ದರು.

— ಇಂಗ್ಲೆಂಡಿನ ಯೋರ್ಕ್ ಶಾಯರಿನ ಇದ್ದಲಿನ ಖನಿಜದಲ್ಲಿ ಒಂದು ಕಂಬದ ಕೆಲಸವನ್ನು ಮಾಡುವಾಗ್ಯೆ ಕಂಬವು ಬಿದ್ದುಹೋಗಿ ೬ ಜನರು ಖನಿಜದ ಕೆಳಗೆ ಬಿದ್ದು ಸತ್ತುಹೋಗಿರುವರು. ಕಂಬವು ಇವರ ಮೇಲೆಯೇ ಬಿದ್ದಿರುವುದರಿಂದ ಅವರು ಅಲ್ಲಿಯೇ ಹೂತುಹೋಗಿರುವರು. ಈ ಖನಿಜವು ಯೋರ್ಕ ಶಾಯರಿನ ಖನಿಜಗಳ ಪೈಕಿ ಅತಿ ಆಳದಾಗಿತ್ತು.

—ಫ್ರೆಂಚರು ಶಾಯರಿನವರೊಳಗೆ ಯುದ್ಧವನ್ನು ನಡಿಸಿ ಅಲ್ಲಿಯ ನೊರ್ತ್‌ನೀಬೀಕ್ ಎಂಬ ಊರನ್ನು ಸೇರಿರುವರು. ಫ್ರೆಂಚರೊಳಗೆ ಪ್ರಾಣಹಾನಿಯು ಏನೂ ಉಂಟಾಗಲಿಲ್ಲ. ಈಗ ಅವರು ಮುಂದುವರಿಯುತ್ತಾ ಇದ್ದಾರೆ

— ಜರ್ಮನಿಯಲ್ಲಿ ಕಲಿಯುತ್ತಿದ್ದ ಒಬ್ಬ ಇಂಡಿಯದ ವಿದ್ಯಾರ್ಥಿಯು ಅಲ್ಲಿಯ ಅತಿ ದೊಡ್ಡದಾದ ಪರ್ವತಕ್ಕೆ ತನ್ನ ಜೊತೆಯಲ್ಲಿಯೇ ಕಲಿಯುತ್ತಿದ್ದ ಒಂದು ಹುಡುಗಿಯನ್ನು ಕರಕೊಂಡು ತಿರುಗಾಡಲಿಕ್ಕಾಗಿ ಹೋಗಿದ್ದನು. ಇವನು ಪರ್ವತದ ಮೇಲೆ ಹೋದಾಗ ಬಲವಾದ ಹಿಮದ ಮಳೆಯು ಬಂದು ಇವರಿಗೆ ನಿಲ್ಲಲಿಕ್ಕೆ ಸ್ಥಳ ಸಿಕ್ಕದಿದ್ದುದರಿಂದ ಅವರು ಅಲ್ಲಿಯೇ ಪ್ರಾಣವನ್ನು ಬಿಟ್ಟಿರುವರು.

— ಲಂಡನ್‌ನಿಂದ ಬರ್‌ಲಿನಿಗೆ ಟೇಲಿಫೋನ್ ಚಲಾವಣೆಯು ಸರ್ವ ಜನರ ಉಪಯೋಗಕ್ಕೆ ಇಟ್ಟಿರುವರು. ಈ ಟೇಲಿಫೋನ್ ಚಲಾವಣೆಯು ಕಳೆದ ತಾ. ೧೫ರಿಂದ ಪ್ರಾರಂಭವಾಗಿರುತ್ತದೆ. ಮೂರು ಮಿನೀಟು ಇಂಗ್ಲೆಂಡಿನಿಂದ ಬರ್ಲಿನಿಗೆ ಅಥವಾ ಬರ್ಲಿನ್‌ನಿಂದ ಇಂಗ್ಲೆಂಡಿಗೆ ಮಾತಾಡಬೇಕಾದರೆ ೧೬ ಸಿಲಿಂಗ್ ಚಾರ್ಜನ್ನು ಇಟ್ಟಿರುವರು. ರಾತ್ರಿಯ ವೇಳೆಯಲ್ಲಿ ಅರ್ಧ ಚಾರ್ಜು ಇಟ್ಟಿರುವರು.

— ಅಮೇರಿಕಾ ಖಂಡದ ಟೆಕ್ಸಾಸ್ ಎಂಬ ಪ್ರಾಂತ್ಯದಲ್ಲಿ ಬ್ರ್ಯಾನ್ ಡಾರ್ಸಿನ್ ಎಂಬೊಬ್ಬ ಮನುಷ್ಯನು ಇದ್ದಾನೆ. ಒಂದು ಹಡಗಿನಲ್ಲಿ ಅಗ್ನಿಯನ್ನು ಕಟ್ಟುವುದಕ್ಕೆ ಸಾಧಕವಾದ ಒಂದು ಸರಪಣಿಯು ಗೋಜುಬಿದ್ದು ಹಡಗಿಗೆ ಅಪಾಯ ಬರುವಂತಿತ್ತು. ಅದನ್ನು ಕತ್ತರಿಸುವ ಹರಾಗದು ಬಹಳ ಕಷ್ಟವಾಗಿತ್ತು. ಈ ಮನುಷ್ಯನು ಹಲ್ಲಿನಿಂದ ಸವರಿ ಸರಪಣಿಯನ್ನು ತುಂಡು ಮಾಡಿ ಅಪಾಯವನ್ನು ತಪ್ಪಿಸಿದನು. ಇವನಿಗೆ ಕಬ್ಬಿಣದ ಹಲ್ಲಿನವನೆಂದು ಹೆಸರಾಗಿರುವುದು.

ಒಳದೇಶ ವರ್ತಮಾನ.

— ಬಂಗಾಳಿ ಪತ್ರಿಕೆಗೆ ಮಿ॥ ಚಕ್ರವರ್ತಿಯವರು ಎಡಿಟರರಾಗಿರುವರು. ಹಿಂದೂದೇಶಕ್ಕೆ ಅದಷ್ಟು ಬೇಗನೆ ಸ್ವರಾಜ್ಯವು ಸಿಕ್ಕುವಂತೆ ಸಾಧಿಸುವುದೇ ಈ ಹೊಸ ಎಡಿಟರವರ ಧ್ಯೇಯವಾಗಿದೆ.

— ನಾಗಪುರದ ಡೊಕ್ಟರ ಅಗ್ನೆಸ್ ಹೆಂಡರಸನರು ಮೂರ ಮೆಮೊರಿಯಲ್ ಆಸ್ಪತ್ರೆಗೆ (ನಾಗಪುರ) ರೂ. ೫೦೦೦ ಧರ್ಮಾರ್ಥವಾಗಿ ಬಿಟ್ಟಿರುತ್ತಾರೆ.

— ಕುಂಭಕೋಣದ ಗವರ್ನಮೆಂಟ ಕೊಲೇಜ್‌ಡೇಯನ್ನು ಬಹಳ ವಿಜೃಂಭಣೆಯಿಂದ ಆಚರಿಸಿದರು. ಸರ್. ಸಿ. ಪಿ. ರಾಮಸ್ವಾಮಿ ಅಯ್ಯರವರು ಅಧ್ಯಕ್ಷರಾಗಿದ್ದರು.

— ಯುನ್ಯಾಟೆಡ್ ಪ್ರೊವಿನ್ಸಿಯಲ್ ಕೌನ್ಸಿಲಿನ ಸ್ವರಾಜ್ಯಪಾರ್ಟಿಯವರು ಬಜೆಟ ಮಿಟಿಂಗಿನ ಸಮಯ ಎಲ್ಲರೂ ಸಭೆಯನ್ನು ಬಿಟ್ಟು ಹೊರಗೆ ಹೋದರು. ಪಂಡಿತ ಗೋವಿಂದ ಬಲವ್‌ಪಂತರೂ ಈ ಪಾರ್ಟಿಯ ಮುಖ್ಯಸ್ಥರಾಗಿರುವರು.

— ಡೊಕ್ಟರ್ ಎನ್ನಿಬೆಸೆಂಟ ಅಮ್ಮನವರು ಕಲ್ಕತ್ತದಲ್ಲಿ ಕೊಮನ್‌ವೆಲ್ತ ಬಿಲ್ಲಿನ ವಿಷಯ ಭಾಷಣಕೊಡುವಾಗ ಹಿಂದೂದೇಶಕ್ಕೆ ಬ್ರಿಟಿಷ ಇತರ ಡೊಮಿನಿಯನುಗಳ ಹಾಗೆಯೇ ಪೂರ್ಣ ಹಕ್ಕು ಸ್ವಾತಂತ್ರ್ಯಗಳು ಸಿಕ್ಕಬೇಕೆಂದೂ, ಬ್ರಿಟನು ಸೈನ್ಯಕ್ಕಾಗಿಯೂ ಹಣಕ್ಕಾಗಿಯೂ ಇತರ ಡೊಮಿನಿಯನುಗಳ ಮೇಲೆ ಆಧರಿಸಿರುವುದರಿಂದ ಯಾವ ದೇಶಗಳೊಡನೆ ಯುದ್ಧ ಸುರುಮಾಡುವದಾದರೂ ಡೊಮಿನಿಯನುಗಳೊಡನೆ ಕೇಳಿಕೊಳ್ಳಬೇಕೆಂದೂ ಇಂಡಿಯದಲ್ಲಿ ಪ್ರಾಥಮಿಕ ವಿದ್ಯೆಯನ್ನು ಕಡ್ಡಾಯವಾಗಿಯೂ ಧರ್ಮಾರ್ಥವಾಗಿಯೂ ಕೊಡಬೇಕೆಂದೂ ಹೇಳಿದರು.

— ಮದರಾಸ ಕೊರ್ಪೊರೇಶನಿನ ೩೦ ವಾರ್ಡುಗಳಿಗೆ ಹತ್ತು ಮಂದಿ ಯುನಾನಿ, ಹತ್ತು ಮಂದಿ ಆಯುರ್ವೇದ, ಹತ್ತು ಮಂದಿ ಎಲೋಪಿತಿಕ್ ಡಾಕ್ಟರರನ್ನು ನೇಮಿಸಿ ಇವರು ತಮ್ಮ ತಮ್ಮ ವಾರ್ಡುಗಳಲ್ಲಿ ಆಸ್ಪತ್ರೆಯನ್ನಿಟ್ಟು ವಾರ್ಡಿನಲ್ಲಿರುವ ಪ್ರತಿ ಒಂದು ಮನೆಗೂ ಹೋಗಿ ಜನರಿಗೆ ವೈದ್ಯ ಸಹಾಯವನ್ನೂ, ಮದ್ದನ್ನೂ ಕೊಡಬೇಕೆಂದೂ ಇವರಿಗೆ ತಿಂಗಳಿಗೆ ರೂ. ೫೦ರಿಂದ ರೂ. ೧೦೦ರ ವರೆಗೆ ಸಂಬಳ ಕೊಡಲ್ಪಡುವದೆಂದೂ ಬಾಡಿಗೆ ಇಲ್ಲದ ಮನೆಯೂ ಸ್ಕಾಲರ್ ಎಲ್ಲೋವೆನ್ಸ ಕೊಡಲ್ಪಡುವದೆಂದೂ ಇವರು ಮುಖ್ಯ ಹೆಲ್ತ ಆಫೀಸರರ ಕೈಕೆಳಗೆ ಇರಬೇಕೆಂದೂ ನಿಶ್ಚಯವಾಗಿದೆ. ಇದಕ್ಕೆ ಒಂದು ಲಕ್ಷ ರೂಪಾಯಿ ಒಂದು ವರುಷಕ್ಕೆ ಬೇಕಂತೆ. ಮೂವತ್ತು ಮಂದಿ ಡಾಕ್ಟರರ ಸಂಬಳಕ್ಕೆ ರೂ. ೩೦,೦೦೦; ಇವರ ಮನೆ ಬಾಡಿಗೆಗೆ ರೂಪಾಯಿ ೧೫,೦೦೦; ಸ್ಕಾಲರ್ ಎಲ್ಲೋವೆನ್ಸ ರೂ. ೧,೮೦೦; ೩೦ ಮಂದಿ ಪೇದೆಗಳಿಗೆ ರೂ. ೯,೦೦೦; ಮದ್ದುಗಳಿಗೆ ರೂ. ೩೦,೦೦೦.

— ಮದರಾಸು ಯುನಿವರ್ಸಿಟಿಯ ಇಂಟರ್‌ಮಿಡಿಯೇಟ ಕೋರ್ಸನಲ್ಲಿ ಕೆಲವು ಹೊಸ ಬದಲಾವಣೆಗಳನ್ನು ಮಾಡಿರುತ್ತಾರೆ. ಇಂಗ್ಲಿಷಿಗೆ ೩ ಪೇಪರುಗಳು, ಎರಡನೇ ಭಾಷೆಗೆ ೨ ಪೇಪರುಗಳು, ಉಳಿದ ಒಪ್ಷನಲುಗಳಲ್ಲಿ ೩ಕ್ಕೆ ಒಂದೊಂದು ಪೇಪರ್ ಕೊಡಲ್ಪಡುವದು. ಮೂರನೇ ಕೋರ್ಸನ್ನು ಮೂರು ವಿಭಾಗ ಮಾಡಿರುತ್ತಾರೆ. ಎ. ಬಿ ಸಿ. ಎ ಗ್ರೂಪಿನಲ್ಲಿ ಸಾಯನ್ಸ, ಮೆಥಮೆಟಿಕ್ಸ; ಬಿ ಗ್ರೂಪಿನಲ್ಲಿ ಚರಿತ್ರೆ, ಭೂಗೋಳ, ಲೋಜಿಕ್; ಮತ್ತು ಸಿ ಗ್ರೂಪಿನಲ್ಲಿ ಕೊಮರ್ಸ, ಬೆಂಕಿಂಗ್, ಎಕೌಂಟೆನ್ಸಿ, ಎಗ್ರಿಕಲ್ಚರ್, ಇಲೆಕ್ಟ್ರಿಕ್, ಇಂಜಿನಿಯರಿಂಗ, ಗಾಯನ ಮೊದಲಾದವು ಸೇರಿವೆ. ಪಾಸಾಗಬೇಕಾದರೆ ಪ್ರತಿ ಒಂದರಲ್ಲಿ ಸೇಕಡಾ ೩೫ ಮಾರ್ಕು ಸಿಕ್ಕಬೇಕಾಗಿದೆ. ಈ ಹೊಸ ಕ್ರಮವು ೧೯೨೭ನೇ ಇಸವಿಯ ಎಪ್ರಿಲ್ ಒಂದನೇ ತಾರೀಕಿಗೆ ಜಾರಿಗೆ ಬಂದು ಮೊದಲನೇ ಪರೀಕ್ಷೆಯು ೧೯೨೮ರಲ್ಲಿ ಆಗುವದು.

— ಮೈಸೂರಿನ ಹೊಸ ದಿವಾನರಾದ ಮಿರ್ಜಾ ಎಂ. ಇಸ್ಮಯಿಲ್ ಸಿ. ಐ. ಇಯವರು ಮೇ ೧ನೇ ತಾರೀಕಿಗೆ ಮೈಸೂರು ದಿವಾನ ಪದವಿಗೆ ಬರುವರು.

— ಬೆರಿಹೂರಿನಲ್ಲಿ ೮ ಜನ ದರೋಡೆಕೋರರು ಬೆಳಗ್ಗೆ ಸುಮಾರು ೮ ಗಂಟೆ ಸಮಯಲ್ಲಿ ಅಲ್ಲಿಯ ಸ್ಟೇಶನ್ ಮಾಸ್ತರ ಮನೆಯನ್ನು ನುಗ್ಗಿ ಹೆಂಗಸರ ಮೈಮೇಲಿರುವ ಸುಮಾರು ೮೦೦ ರೂಪಾಯಿ ಕ್ರಯಬಾಳುವ ಚಿನ್ನಾಭರಣಗಳನ್ನು ಕೊಂಡುಹೋದರಂತೆ. ಆದರೆ ಯಾರಿಗೂ ಹಾನಿಯಾಗಲಿಲ್ಲ. ರೈಲ್ವೆ ಪೋಲೀಸರು ಇವರ ತಕ್ಕ ನಡಿಸುತ್ತಿರುವರು.

— ನರಸಪುರದಲ್ಲಿ ಒಬ್ಬ ಅಬ್ಕಾರಿ ಅಧೀಸರನ ಕೊಲೆ:— ರಾಘವಾಚಾರ್ಯರೆಂಬ ಒಬ್ಬ ಅಬ್ಕಾರಿ ಆಧೀಸರನು ತನ್ನ ಸಿಕ್ಕಗಟ್ಟೆಯ ಪರಿಶೋಧನಕ್ಕೆ ಅಲ್ಲಿಯೇ ಹತ್ತಿರದಿರುವ ಅಬ್ಬಿಕಟ್ಟೆ ಎಂಬ ಗ್ರಾಮಕ್ಕೆ ತನ್ನ ನಾಲ್ಕು ಜನ ಪೋಲೀಸ ಜವಾನರೊಂದಿಗೆ ನಡೆದರು. ಆ ಗ್ರಾಮದಲ್ಲಿ ಒಬ್ಬ ೧೮ ವರುಷದ ಹುಡುಗನು ಮೂರ್ತೆಯನ್ನು ಮಾಡುತ್ತಿದ್ದನು. ಈ ಅಧೀಸರನು ಮರದಿಂದ ಮುರ್ತೆಮಾಡಿ ತೆಗೆದ ಹೆಂಡವನ್ನು ಪರೀಕ್ಷಿಸುವುದಕ್ಕಾಗಿ ಆ ಹುಡುಗನನ್ನು ಮರದಿಂದ ಇಳಿಯಲು ಹೇಳಿ ಆತನು ತೆಗೆದ ಹೆಂಡವನ್ನು ಪರೀಕ್ಷಿಸಿದರು. ಅದರಲ್ಲಿ ಏನೊಂದು ತಪ್ಪು ಸಿಕ್ಕದೆ ಇರುವುದರಿಂದ ಇನ್ನೊಂದು ಮರದ ಹೆಂಡವನ್ನು ನೋಡಬೇಕೆಂದು ಹೇಳಿದರು. ಅದಕ್ಕೆ ಆ ಹುಡುಗನು ತಿರಸ್ಕರಿಸಿದನು. ಅಧೀಸರನು ತೋರಿಸಲೇ ಬೇಕೆಂದು ಬಲಾತ್ಕರಿಸಿದನು. ಒಡನೇ ಆ ಹುಡುಗನು ತನ್ನ ಹತ್ತಿರವಿದ್ದ ಹರಿತವಾದ ಕತ್ತಿಯಿಂದ ರಾಘವಾಚಾರ್ಯರ ಶಿರಸ್ಸನ್ನು ರುಂಡದಿಂದ ಹಾರಿಸಿಬಿಟ್ಟನು. ಅವರ ಹತ್ತಿರ ಇದ್ದ ಪೋಲೀಸಿನವರಿಗೆ ಇಷ್ಟು ಸಣ್ಣ ಹುಡುಗನು ಈ ಮಹತ್ಕಾದ ಕೆಲಸವನ್ನು ಮಾಡಲಿಕ್ಕಿಲ್ಲವೆಂದು ಸುಮ್ಮನೆ ನಿಂತಿದ್ದರು. ಹುಡುಗನು ಸಣ್ಣವನಾದರೂ ಧೈರ್ಯದಿಂದ ಕೊಲೆಯನ್ನು ಮಾಡಿಯೇ ಬಿಟ್ಟನು. ಕೂಡಲೇ ಪೋಲೀಸರು ಅಧೀಸರನ ಶವವನ್ನೂ, ಹುಡುಗನನ್ನೂ ನರಸಪುರಕ್ಕೆ ಕೊಂಡುಹೋದರು.

— ಸ್ವಾಮಿ ಶ್ರದ್ಧಾನಂದರು ಅಖಿಲ ಭಾರತ ಅಸ್ಪೃಶ್ಯ ಸಮ್ಮೇಳನಕ್ಕೆ ಸ್ವಾಗತಾಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು.

— ಮುಮ್ತಾಜ್‌ಬೇಗಂ ಈಕೆಯು ಅಮೃತಸರದ ಮಿ॥ ಅಬ್ದುರ್ ರಹಿಮಾನ್ನೆಂಬ ಚರ್ಮದ ವ್ಯಾಪಾರಿಯನ್ನು ಮದುವೆಯಾದಳೆಂದು ತಿಳಿಯಬರುತ್ತದೆ.

— ಇಂಗ್ಲಾಂಡಿನಲ್ಲಿ ಉದ್ಯೋಗ ಸಿಕ್ಕದೆ ಅಲೆಯುವವರ ಸಂಖ್ಯೆಯು ದಿನಕ್ರಮೇಣ ಕಡಿಮೆಯಾಗುತ್ತಿದೆ. ಇನ್ನೂ ೧೧೩೯,೦೦೦ ಜನಗಳು ಕೆಲಸವಿಲ್ಲದೆ ಅಲೆಯುತ್ತಾರೆ. ಇದು ಹೋದ ವರ್ಷಕ್ಕಿಂತ ಒಂದು ಲಕ್ಷ ಕಡಿಮೆಯಾಗಿರುವುದು.

ದಕ್ಷಿಣ ಕನ್ನಡ.

ಪುಂಜಾಲಕಟ್ಟೆ:— ಇದು ಕಳ್ಳಕಾರರ ಗುಂಪುಗಳಿರುವ ಮಧ್ಯಸ್ಥಳ. ಮೂರ್ತೆಯು ಈ ಕಳ್ಳಕಾಕರು ಅಡಗಿಕೊಂಡಿದ್ದು ಗಾಡಿಗಳನ್ನು ಸುಲಿಗೆ ಮಾಡಿ ಗಾಡಿಯವರನ್ನು ಅಥವಾ ಗಾಡಿಯಲ್ಲಿ ಇದ್ದವರನ್ನು ಕೊಂದು ಹಾಕುವ ಸ್ಥಳವಾಗಿ ಇದು ಬಂಟವಾಳದಿಂದಲೂ, ಬೆಳತಂಗಡಿಯಿಂದಲೂ ಹನ್ನೆರಡು ಮೈಲು ದೂರವಿದೆ. ರಾತ್ರೆಯಲ್ಲಿ ಬಂಟವಾಳದಿಂದಲೂ, ಬೆಳತಂಗಡಿಯಿಂದಲೂ ಪೋಲೀಸಿನವರ ರೋಂದು ಇರುವುದು ನಿಜ. ಒಂದೊಂದು ವೇಳೆ ನಡಕೊಂಡು ಹೋಗುವ ಪೋಲೀಸಿನವರನ್ನು ಹೊಡೆದು ಬಿಡುವುದೂ ಉಂಟು. ಆದುದರಿಂದ ಇಲ್ಲಿ ಅಡಗಿರುವ ಕಳ್ಳರ ಗುಂಪನ್ನು ಉಪಾಯದಿಂದ ತನಿಖೆ ನಡಿಸಿ ಹಿಡಿಯಲಿಕ್ಕೆ ಸಾಧಿಸುವದು ಬಂಟವಾಳ ಮತ್ತು ಬೆಳ್ತಂಗಡಿ ಪೋಲೀಸ ಅಧಿಕಾರಿಗಳ ಕೆಲಸವಾಗಿದೆ. ರಾತ್ರಿಯಲ್ಲಿ ಕೊಂದು ಹಾಕಿದ ಹೆಣವು ಮರುದಿನ ಗ್ರಾಮದವರು ಕಂಡ ಮೇಲೂ ಒಂದೊಂದು ಸಾರಿ ಎಲ್ಲಿಯಾದರೂ ಪೊದೆಯಲ್ಲಿ ಆ ಹೆಣವು ಇದ್ದು ಯಾರಿಗೂ ಕಾಣಿಸದೆ ನಾತ ಬಂದ ಮೇಲೂ ಪಟೇಲರು ಎಕ್ಸ್‌ಪ್ರೆಸ್ ಕಳುಹಿಸಿದ ಮೇಲೆ ಪೋಲೀಸಿನವರು ಹೆಣವನ್ನು ಬಂಟವಾಳ ಆಸ್ಪತ್ರೆಗೆ ಪೈದು ಪೋಸ್ಟು ಮೊರ್ಟೆಮ ಮಾಡಿಸುವರು. ಡಾಕ್ಟರರಿಗೆ ಸಿಗಿಯುವ ಕೆಲಸವಾಗುವುದೇನೋ ನಿಜ. ಕಳ್ಳರ ಗುಂಪು ಅಲ್ಲಿಯೇ. ಮೊದಲು ಪುಂಜಾಲಕಟ್ಟೆಯಲ್ಲಿ ಪೋಲೀಸ ಸ್ಟೇಶನು ಇರುವಾಗ ಇಲ್ಲಿ ಜುಗಾರಾಟಗಳೂ; ಕೊಲೆಗಳೂ ಬಹಳ ಕಡಿಮೆಯಾಗಿದ್ದವು. ಪೋಲೀಸಿನವರಿಗೆ ಕೆಲಸವೇನೂ ಇಲ್ಲವೆಂದು ಪುಂಜಾಲಕಟ್ಟೆ ಪೋಲಿಸ್ ಸ್ಟೇಶನ್ ತೆಗೆದರು. ಕೂಡಲೆ ಕೊಲೆಗಳ ಸಂಖ್ಯೆಯು ದಿನೇ ದಿನೇ ಹೆಚ್ಚೆಚ್ಚಾಗುತ್ತಾ ಬಂತು. ಆದುದರಿಂದ ಮಾನ್ಯ ಜಿಲ್ಲಾ ಕಲೆಕ್ಟರ ದೊರೆಗಳವರು ಈ ಸಂಗತಿಯನ್ನು ಚೆನ್ನಾಗಿ ಪರ್ಯಾಲೋಚಿಸಿ ಜಾಮಾಡಿಯಿಂದ ತೆಗೆದು ಹಾಕಲಿಕ್ಕಿರುವ ಪೋಲೀಸ ಸ್ಟೇಶನನ್ನು ಇಲ್ಲಿ ಇಡಿಸುವಂತೆ ಮಾಡುವುದು ಪ್ರಜಾಸುಖಕ್ಕೆಹಿತಾವಹವಾದ ಕೆಲಸವಾಗಿದೆ.

ಬರಿಮಾರು:— ಇಲ್ಲಿ ಬ್ರೆಂಚ್ ಪೋಸ್ಟಾಫೀಸು ಆಗುವ ಮೊದಲು ಈ ಗ್ರಾಮದವರಿಗೆ ಬಟ್ವಾಡೆ ಪೇದೆಯ ಮುಖಾಂತರ ಕಾಗದಗಳು ಬಟ್ವಾಡೆಯಾಗುತ್ತಿದ್ದವು. ದಾರಕ್ಕೆರಡಾವರ್ತಿ ಕಾಗದಗಳು ಸಿಕ್ಕುತ್ತಿದ್ದವು. ಈಗ ಇಲ್ಲಿ ಪೋಸ್ಟಾಫೀಸಾದರೂ ಬಟ್ವಾಡೆ ಪೇದೆ ಇಲ್ಲದ್ದರಿಂದ ಗ್ರಾಮಸ್ಥರೇ ಟಪ್ಪಾಲು ಆಫೀಸಿಗೆ ಬಂದು ಕಾಗದಗಳನ್ನು ಕೊಂಡುಹೋಗಬೇಕಾಗುತ್ತದೆ. ಆದುದರಿಂದ ಬಂಟವಾಳ ಪೋಸ್ಟು ಆಫೀಸಿನ ಒಬ್ಬ ಹಳ್ಳಿ ಬಟ್ವಾಡೆ ಪೇದೆಯನ್ನು ಈ ಆಫೀಸಿಗೆ ವರ್ಗಮಾಡಿ ಕೆಲವು ಗ್ರಾಮಗಳನ್ನು ಈ ಆಫೀಸಿಗೆ ಕೊಟ್ಟರೆ ಒಳ್ಳೇದಾಗುತ್ತಿತ್ತು.

ಮೊಡಂಕಾಪು:— ಇದು ಮೊದಲು ಬಂಟವಾಳ ಪಂಚಾಯತ ಕೋರ್ಟಿಗೆ ಸೇರಿತ್ತು. ಈಗ ಇಲ್ಲಿಯೇ ಒಂದು ಪ್ರತ್ಯೇಕ ಪಂಚಾಯತ ಕೋರ್ಟು ಸ್ಥಾಪನೆಯಾಗಿ ಮೆಂಬರರ ಚುನಾವಣೆಯಾಯಿತು.

ಪಾಣೆಮಂಗಳೂರು:— ಇಲ್ಲಿಯ ಸಂಕದ ಪಶ್ಚಿಮೋತ್ತರ ದಿಕ್ಕಿನ ಭಾಗವು ಜರಿದು ಬಿದ್ದುದರಿಂದ ಅದನ್ನು ಕಲ್ಲಿನಿಂದ ಕಟ್ಟಿಸುತ್ತಿದ್ದಾರೆ. ಆದರೆ ಇಲ್ಲಿರುವ ಸುಮಾರು ನೂರು ಇನ್ನೂರು ಕಬ್ಬಿಣದ ಅಡ್ಡಗಳು ಮಣ್ಣುಪಾಲಾಗುತ್ತಿವೆ. ಎಲ್ಲಿಯಾದರೂ ಸಣ್ಣ ಸಣ್ಣ ಸೇತುವೆಗಳನ್ನು ಕಟ್ಟಿಸಲಿಕ್ಕೆ ಉಪಯೋಗಿಸಬಾರದೇ? ಬೋರ್ಡಿನ ಹಣಕ್ಕೆ ಬೆಲೆಯಿಲ್ಲವೇ?

ಇಲ್ಲಿಯ ಸಹಕಾರಿ ಸಂಘದ ಕಾರ್ಯದರ್ಶಿಯರೂ, ಮತ್ತು ಮಹಮ್ಮದಿ ಕಟ್ಟಡ ಸಂಘದ ಕಾರ್ಯದರ್ಶಿಯರೂ ಹಾಗು ಬಂಟ್ವಾಳ ಸಹಕಾರಿ ಯೂನಿಯನಿನ ಕಾರ್ಯದರ್ಶಿಯರೂ ಆದ ರಾ॥ ಅಬ್ದುಲ ಖಾದರ ಅದ್ದ ಬ್ಯಾರಿರು ಸದ್ಯದಲ್ಲಿ ಕೂಡಲಿಕ್ಕಿರುವ ಬಂಟ್ವಾಳ ಲೋಕಲ್ ಕೊ-ಒಪರೇಟಿವ್ ಯೂನಿಯನಿನ ಮಹಾಸಭೆಯಲ್ಲಿ ಸದರಿ ಯೂನಿಯನ್ನಿನಲ್ಲಿ ತನಗಿರುವ ಕಾರ್ಯದರ್ಶಿ ಕೆಲಸಕ್ಕೆ ಪ್ರಕೃತದ ಸ್ಥಿತಿಯಲ್ಲಿ ರಾಜಿನಾಮೆ ಕೊಡಲಿಕ್ಕಿರುವರೆಂದು ನಮಗೆ ತಿಳಿಸಿರುವರು.

ಕುರ್ಡಿಪಳ್ಳ:— ಇಲ್ಲಿ ಹೊಸ ರೈಲು ಸ್ಟೇಶನನ್ನು ಕಟ್ಟಿಸುವ ಕೆಲಸವು ನಡಿಯುತ್ತದೆ. ಇಲ್ಲಿಂದ ಬಾಯಾರಿಗೂ ಪುತ್ತೂರಿಗೂ ಮೋಟಾರು ಚಲಾವಣೆಯದೆ. ಈ ದಾರಿಯಾಗಿ ಅಡಿಕೆ ವ್ಯಾಪಾರವು ನಡಿಯುತ್ತದೆ. ಇಲ್ಲಿ ಸಣ್ಣ ಪೇಟೆಯು ಬೆಳೆಯಲಾರಂಭವಾಗಿದ. ಸತ್ತುಹೋದ ಮಂಗಳಪಾಡಿ ಪೇಟೆಯು ಇಲ್ಲಿಗೆ ವರ್ಗವಾಗುವ ಸಂಭವ ಕಾಣುತ್ತದೆ.

ಕುಂಬಳೆ:— ಇಲ್ಲಿಯ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಕೆರೆಯು ಮುಚ್ಚಿಹೋಗಿ ಎಷ್ಟೋ ವರ್ಷಗಳಾದವು. ಕುಂಬಳೆಯ ಅರಸರೂ, ಸೀಮೆಯವರೂ ಈ ದೇವಸ್ಥಾನದ ಆಡಳಿತೆ ಮೊಕ್ತೇಸರರಾಗಿರುವರು. ಇವರಲ್ಲಿ ಎರಡು ಗುತ್ತಿನವರು ಲಕ್ಷಾಧಿಪತಿಗಳಾಗಿರುವರು. ಈಗಿನ ಅರಸುಗಳಾದ ವೆಂಕಟ್ರಮಣ ಅರಸುಗಳು ವಿದ್ಯಾವಂತರೂ, ಪರೋಪಕಾರಿಗಳೂ ನೇತ್ರವೈದ್ಯರೂ ಆಗಿರುವರು. ಆದುದರಿಂದ ಇವರೆಲ್ಲರೂ ಕೂಡಿ ಆಲೋಚಿಸಿ ಈ ಕೆರೆಯನ್ನು ದುರುಸ್ತಿ ಮಾಡಿಸುವದು ಉತ್ತಮವೆಂದು ಕಾಣುತ್ತದೆ.

ಅಮಟಾಡಿ:— ಈ ಗ್ರಾಮದ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಶಾಲೆಯು ಇಲ್ಲದೆ ಬಹಳ ಕಷ್ಟಪಡುತ್ತಿರುವರು. ಆದುದರಿಂದ ಈ ಗ್ರಾಮದಲ್ಲಿ ಬೋರ್ಡಿನವರು ಒಂದು ಶಾಲೆಯನ್ನು ಇಡಿಸಬೇಕೆಂದು ಪ್ರಾರ್ಥನೆ.

ಮಂಜೇಶ್ವರ:— ಈ ಸರ್ಕಲಿನ ತಾಲೂಕು ಬೋರ್ಡು ಮೆಂಬರರಾದ ರಾ॥ ಭವಾನಿಶಂಕರ ರಾಯರು ಕಳೆದ ಡಿಸೆಂಬರ ತಿಂಗಳ ತಾಲೂಕು ಬೋರ್ಡು ಮಿಟಿಂಗಿನಲ್ಲಿ "ಮಂಜೇಶ್ವರ ಹೊಳೆಯನ್ನು ದಾಟಿಕೊಂಡು ಬರುವ ಹೆಂಗಸರೂ, ಮಕ್ಕಳೂ, ಗಂಡಸರೂ ಬಹಳ ಕಷ್ಟಪಡುವುದರಿಂದಲೂ, ರೈಲುಸ್ಟೇಶನು, ಪೋಲೀಸು ಸ್ಟೇಶನು, ದೇವಸ್ಥಾನ, ಶಾಲೆ, ಆಸ್ಪತ್ರೆಗಳು ಎಲ್ಲವೂ ಮಂಜೇಶ್ವರದಲ್ಲಿರುವುದರಿಂದಲೂ, ಡಿಸ್ಟ್ರಿಕ್ಟ ಬೋರ್ಡಿನವರ ಸ್ವಾಧೀನ ಸಂಕಕ್ಕೆ ಯೋಗ್ಯವಾದ ಅನೇಕ ಕಬ್ಬಿಣದ ಅಡ್ಡಗಳು ಇರುವುದರಿಂದಲೂ, ಡಿಸ್ಟ್ರಿಕ್ಟ ಬೋರ್ಡಿನವರು ಕೂಡಲೇ ಈ ಹೊಳೆಗೆ ಒಂದು ಸೇತುವೆಯನ್ನು ಮಾಡಿಸಬೇಕೆಂದು" ಠರಾವು ತಂದರು. ಇದರ ಪ್ರಕಾರ ಈ ಠರಾವು ಎಲ್ಲಾ ಮೆಂಬರುಗಳಿಂದ ಮಂಜೂರುಮಾಡಲ್ಪಟ್ಟು ಡಿಸ್ಟ್ರಿಕ್ಟ ಬೋರ್ಡಿಗೆ ಕಳುಹಿಸಲಾಯಿತು. ಇನ್ನು ಡಿಸ್ಟ್ರಿಕ್ಟ ಬೋರ್ಡಿನವರು ಏನು ಮಾಡುತ್ತಾರೊ ನೋಡಲಿಕ್ಕಿದೆ.

ಇಲ್ಲಿಯ ರೈಲುವೆ ಸ್ಟೇಶನಿನ ಹತ್ತಿರದಿಂದ ಉದ್ಯಾವರ, ಕುಂಜತ್ತೂರು, ಬಡಾಜೆ, ಪಾವೂರು, ವರ್ಕಾಡಿಗಾಗಿ ಆನೆಕಲ್ಲು ಮಾರ್ಗಕ್ಕೆ ಒಂದು ಮಾರ್ಗವನ್ನು ಮಾಡಿಸಬೇಕೆಂಬ ಒಂದು ಠರಾವನ್ನು ರಾ॥ ತಿಮ್ಮಪ್ಪ ಶೆಟ್ಟರವರು ತಂದಿದ್ದನ್ನು ಬೋರ್ಡಿನವರು ... ಎಸ್ಟಿಮೇಟ ಮಾಡಲಿಕ್ಕೆ ಕಳುಹಿಸಲಾಯಿತು.

ಮಂಜೇಶ್ವರದಲ್ಲಿ ಮುಚ್ಚಿದ ಬೋರ್ಡು ಗರ್ಲ್ಸ ಸ್ಕೂಲನ್ನು ಶಿಕ್ಷ... ಯಲ್ಲಿ ತೆರೆಯುವದೆಂದು ಖಾಸಾಗಿಯದೆ.

ಪೆರಡಾಲು:— ಈ ಗ್ರಾಮದ ಬದಿಯಡ್ಕದಲ್ಲಿ ಈ ವರೆಗೆ ಇರುತ್ತಿದ್ದ ಏಡೆಡ್ ಶಾಲಾ ಕಟ್ಟೋಣವನ್ನು ಊರ ಜನರ ಅಪೇಕ್ಷೆ ಮಾನ್ಯ ಮೆಂಬರರ ಸಹಾನುಭೂತಿಯಿಂದ ತಾಲೂಕು ಬೋರ್ಡಿನವರು ಬೋರ್ಡಿಗೆ ತೆಗೆದುಕೊಂಡು ಕಳೆದ ೧೯೨೬ನೇ ಇಸವಿ ... ನೇ ತಾರೀಕಿನಿಂದ ನಡಿಸುತ್ತಿದ್ದಾರೆ. ಆದರೆ ಸದರಿ ಶಾಲೆಯು ಅತೀ ಚಿಕ್ಕದಾಗಿದ್ದು ಈ ಊರಿನ ವಿದ್ಯಾರ್ಥಿಗಳಿಗೆ ಸಾಲದೆಂಬದರಿಂದಲೂ ಸ್ವಲ್ಪ ನಾದುರುಸ್ತಿಯಲ್ಲಿದ್ದ ಕಾರಣದಿಂದ ಈ ಶಾಲೆಯನ್ನು ಹೈಯರ್ ಎಲಿಮೆಂಟರಿ ಮಾಡಬಹುದಾ ... ರಾ॥ ಪ್ರೆಸಿಡೆಂಟರವರು ಅಭಿಪ್ರಾಯಪಟ್ಟಿರುವುದರಿಂದಲೂ ... ರಾದ ಮಾಸ್ತರ್ ಪಂಜರಿಕೆ ಅನಂತ ಭಟ್ಟರು ಸಾಹುಕಾರ ಉಪೇಂದ್ರ ಶ್ಯಾನುಭಾಗರ ಸಹಾಯದಿಂದ ಪೂರಾ ... ನೂತನವಾಗಿ ಕಟ್ಟಿಸಿ, ಶಾಲಾ ಪ್ರವೇಶದ ಉತ್ಸವವನ್ನು ... ಮತ್ತು ಶಾಲಾ ವಿದ್ಯಾರ್ಥಿಗಳ ಪ್ರಾರ್ಥನೆ, ಗಾಯನ, ಮಂ... ಸಮೇತ ಸಭೆಯು ಮುಕ್ತಾಯವಾಯಿತು.

ಅಜ್ಜಾವರ:— ಇಲ್ಲಿಯ ಭಕ್ತದ ಸಂಘದ ಅಭಿವೃದ್ಧಿ ... ತಿಂಗಳ ತಾ. ೧೨ಕ್ಕೆ ಒಂದು ಮಹಾ ಸಭೆಯು ಸಂಘದ ದಿವ... ಯಿಂದ ಜರಗಿತು. ಸಂಘದ ಆಫೀಸು ದೇವಳಕ್ಕೂ ... ಶೃಂಗಾರಮಾಡಲ್ಪಟ್ಟಿತ್ತು. ಸಂಘದ ಮೆಂಬರರು ವ ... ಸೂರಾರು ಜನರು ಹಾಜರಿದ್ದರು. ಸಂಘದ ಪ್ರೆಸಿಡೆಂಟ್ ... ಸರ್ಕಲ ಇನ್ಸ್‌ಪೆಕ್ಟರವರಾದ ರಾ॥ ರಮಾನಾಥರಾಯರಿಂದಲೂ ... ಕಾರ್ಯದರ್ಶಿಯರಾದ ಬಿ. ಕೊರಗಪ್ಪ ರೈಗಳಿಂದಲೂ, ... ದಾರ ದಿವಾನಬಹದ್ದೂರ ಯಲ್. ಡಿ. ಸ್ವಾಮಿಕಣ್ಣು ಪಿಳ್ಳೆಯ... ಸಭೆಯಲ್ಲಿ ಅಧ್ಯಕ್ಷ ರಾ॥ ಬಿ. ಕರ್ಯಪ್ಪ ರೈಗಳಿಂದ ಪ್ರವರ್ತಕರ ಜೀವನಚರಿತ್ರೆ ಕಥಾ ಓದಿದರು. ಕಡೆದ ಸಭಿಕರಿಗೆ ... ತಾಂಬೂಲಾದಿಗಳಿಂದ ಸತ್ಕರಿಸಿ ಶ್ರೀ ದೇವರ ಪ್ರಾರ್ಥನೆ ... ಸಭೆಯು ಮುಕ್ತಾಯವಾಯಿತು.

ಬಂಟ್ವಾಳ:— ಇಲ್ಲಿ ರಾಜಬೀದಿಗಳ ಬದಿಗಳಲ್ಲಿ ಬೊಲ್ಲರ್ಗಳ ರಾಶಿ ಹಾಕಿರುವದರಿಂದ ರಾತ್ರಿ ಕಾಲಗಳಲ್ಲಿ ನೋವು ನಡಿಯುವ ಎಷ್ಟೋ ಜನರು ಆ ರಾಶಿಯನ್ನು ಎಡವಿ ಕೈ ಕಾಲು ... ಮಾಡಿಸಿಕೊಂಡು ಹೋಗುತ್ತಿರುವರು. ಆದುದರಿಂದ ಇಂಥಾ ರಾ... ವಾರ್ಗಬಿಟ್ಟು ದೂರಹಿತ್ತಲಕಡೆಗಳಲ್ಲಿ ಕೂಡಲೆ ಒಯ್ಯಬೇಕಾಗಿದೆ. ... ಲ್ಲದೆ ಮೋಟಾರುಗಳು ಓಡಾಡುತ್ತಿರುವಾಗ ಮಕ್ಕಳು ಎದುರುಗಡೆ ಪ್ರಾಣಾಪಾಯವಾಗುವುದರಲ್ಲಿ ಸಂಶಯವಿಲ್ಲ.

ರಾಯಿ ಗ್ರಾಮದಲ್ಲಿ ಗಂಡಹೆಂಡತಿಯ ಜಗಳದಲ್ಲಿ ... ಮಗುವನ್ನು ಕೊಂದರೆಂದು ಗುಮಾನಿಸ ಮೇಲೆ ಕೈದುಮಾಡಲ್ಪಟ್ಟ ... ವನ್ನು ಬಂಟ್ವಾಳ ಮೆಜಿಸ್ಟ್ರೇಟರವರು ಸೆಶನ್ಸಿಗೆ ಕಮಿಟು ಮಾಡಲ್ಪಟ್ಟ ... ರೋಪಿಯ ಹೆಂಗಸನ್ನು ಜಿದ್ದರು ಬಿಡುಗಡೆಮಾಡಿರುವರು.

ಕಾಸರಗೋಡು:— ಕಾಸರಗೋಡು ತಾಲೂಕು ಬೋರ್ಡು ಮಿಟಿಂಗು ಇದೇ ಬರುವ ತಾ. ೨೯ನೇ ಸೋಮವಾರ ೧ ಘಂಟೆಗೆ ಕಾಸರಗೋಡು ತಾಲೂಕು ಬೋರ್ಡು ಆಫೀಸಿನಲ್ಲಿ ಕೂಡುವುದಾಗಿ ಕೇಳುತ್ತೇವೆ.

ಇತ್ತೀಚೆಗೆ ಇಲ್ಲಿಯ ಹೊಸಬೆಟ್ಟು ಪಂಚಾಯತಿ ಕೋರ್ಟಿನಲ್ಲಿ ಹೊಸ ಹೊಸ ಕಾನೂನುಗಳು ಜಾರಿಗೆ ಬರುತ್ತಲಿವೆ. ಡಿಕ್ರಿ ಆಗಬೇಕಾಗಿ ಉಭಯ ಕಕ್ಷಿಗಾರರು ಸಮ್ಮತಿಯಿಂದ ಅರ್ಜಿ ಕೊಟ್ಟಲ್ಲಿ ನ್ಯಾಯದ ತೀರ್ಪು ಡಿಸ್‌ಮಿಸ್ ಆಗಿಯದೆಂತಲೂ, ಚಾರ್ಜು ಆಗಿ ಡಿಕ್ಲೆಯಲ್ಲಿ ಕೂಡ ತಪ್ಪು ಸಾಬೀತಾದ ಮೊಕದ್ದಮೆಗಳಲ್ಲಿ ಸಹಾ ಮುದ್ದೆ ಕಡೆ ರುಜುವಾತಿಲ್ಲವಾಗಿ ಡಿಸ್‌ಮಿಸ್ ಮಾಡುತ್ತಾರೆ. ಮೊನ್ನೆ ಹಾನಿ ಒಂದು ಫಿರ್ಯಾದಿಯನ್ನು ಕೋರ್ಟು ಮೆಂಬರರಲಿಕ್ಕಿಲ್ಲಬ್ಬರು ಬರದು ದಾಖಲು ಮಾಡಿದ್ದಾರೆಂತಲೂ ಭಕ್ತ ಹಣ ... ತಾವೇ ಕಟ್ಟಿದರೆಂತಲೂ ಕೇಳಲು ತುಂಬಾ ವ್ಯಸನಪಡಬೇಕಾಗು... ಬೇಲಿಯೇ ಹೊಲ ಮೇಯುವದೆಂದರೆ ಇದಲ್ಲವೇ? ಪ್ರೆಸಿಡೆಂಟರೇ ಈ ... ದಯಮಾಡಿ ಗಮನಕೊಡಿ! ಕೋರ್ಟು ಕಾನೂನನ್ನು ಸ್ವಲ್ಪ ಮಟ್ಟಿಗಾದರೂ ಮೆಂಬರರಿಗೆ ತಿಳಿಸಬಾರದೆ?

ಶ್ರೀ ಮದನಂತೇಶ್ವರ ಹಾಯರ್ ಎಲಿಮೆಂಟರಿ ಶಾಲೆಯ ಕಟ್ಟೋಣವನ್ನು ದುರುಸ್ತಿ ಪಡಿಸಿ ಹೊಸದಾಗಿ ಕಟ್ಟಿಸುತ್ತಾರಾದ್ದರಿಂದ ತತ್ಕಾಲಕ್ಕೆ ಶಾಲೆಯು ಸಾವಕಾರ ರಾ॥ ವೈಕುಂಠ ಭಟ್ಟರವರ ಕಟ್ಟೋಣಗಳಿಗೆ ವರ್ಗಾಯಿಸಲ್ಪಟ್ಟಿದೆ.

ಉಡ್ಪಿ:— ಉಡ್ಪಿಯ ಸಮೀಪದಲ್ಲಿ "ಇಂದ್ರಾಣಿ" ಎಂಬ ಅ... ಕಾರಣಿಕದ ಒಂದು ಪುರಾತನ ಪುಣ್ಯಕ್ಷೇತ್ರವಿದೆ. ಪ್ಯಾಕೋರ್ಟು ವ... ಶ್ರೀಮಾನ್ ಅರೂರು ಲಕ್ಷ್ಮೀನಾರಾಯಣ ರಾಯರವರು ಅಲ್ಲಿಯ ... ಸ್ಥಾನದ ಜೀರ್ಣೋದ್ಧಾರ ಕಾರ್ಯವನ್ನು ಕೈಕೊಂಡಿರುವುದು ಸ್ತುತ್ಯ... ವಾಗಿದೆ. ಶ್ರೀಯುತರು ಕೈಕೊಂಡ ಈ ಸತ್ಕಾರ್ಯವು ಸಾಂಗವಾಗಿ ನೆರವೇರುವಂತೆ ಭಗವಂತನು ಅನುಗ್ರಹಿಸಲಿ!

ಅರಳ:— ತಾ. ೧೪-೩-'೨೬ನೇ ಆದಿತ್ಯವಾರ ... ಪಟ್ಟಣ ಚಂದ್ರನಾಥ ಬಸ್ತಿಯ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿ... ವರ್ಧಂತ್ಯುತ್ಸವವು ಬಹಳ ವಿಜೃಂಭಣೆಯಿಂದ ಮಿ॥ ರಾ॥ ಪಿ. ಮಹಾ... ಭಂಡಾರಿಗಳ ಅಧ್ಯಕ್ಷತೆಯಲ್ಲಿ ಜರಗಿತು.

ಮಂಗಳೂರು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಬೋರ್ಡಿನ ಮಿಟಿಂಗು ಇದೇ ಬರುವ ೩ನೇ ಬುಧವಾರ ಅಪರಾಹ್ನ ಗಂಟೆ ೨-೩೦ಕ್ಕೆ ಕಲೆಕ್ಟರ ಆಫೀಸಿನಲ್ಲಿ ಜರಗಲಿಕ್ಕಿರುವುದು.

ಮಂಗಳೂರು ಪಟ್ಟಣ ಹೊಂಗರಕೇರಿ ರಸ್ತೆಯಲ್ಲಿರುವ ... ಜನವರ ಮಂದಿರದಲ್ಲಿ ಇದೇ ತಿಂಗಳ ತಾರೀಕು ...ನೇ ಆದಿತ್ಯವಾರ ... ಟೆ ಗಂಟೆಗೆ ರಾವ್‌ಸಾಹೇಬ್ ... ರಂಗರಾಯರು ... ರಾಧನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು. ... ಆರಾಧನೆ. ಸರ್ವರಿಗೂ ಸುಸ್ವಾಗತವಿದೆ.

ತಾ. ೧೪-೩-'೨೬ ... ಆದಿತ್ಯವಾರದ ... ಮುನಿಸಿಪಾಲಿಟಿಯಲ್ಲಿ ... ೧೫ ... ಈ ...

ಕಳೆದ ತಾ. ..ನೇ ಆದಿತ್ಯವಾರ ಅಪರಾಹ್ನ ಸುಮಾರು ೨ ಗಂಟೆಗೆ ದಕ್ಷಿಣ ವೆಸ್ಟ್‌ಸ್ಟರ್ ಮಾರ್ಕೆಟಿನ ಬಳಿ ಎಚ್. ಐರಪ್ಪ ನ್ಯಾಕರ ಮನೆಯಿಂದ ಸುಮಾರು ೪೦೦ ಜನ ಸಮೂಹದೊಡನೆ ಸಂಕೀರ್ತನೆ, ವಾಳಗ ಮೊದಲಾದ [illegible]ಂಕಾರಗಳಿಂದಲೂ, ಬಾವಟೆ ಮೊದಲಾದ ಅಲಂಕಾರಗಳಿಂದಲೂ ಶಂಖದ ಪಲ್ಲಕ್ಕಿ ಮಾರ್ಗವಾಗಿ ಬೋಳೂರು ಸ್ಮಶಾನಕ್ಕೆ ಮುಟ್ಟಿದರು. ಅಲ್ಲಿ ರಾ। ಮಂಗೆಶ್ ನಾಯ್ಕರು ತನ್ನ ದತ್ತದ ಪುತ್ರ ಚಿ। ಸುದರ್ಶನನ ಮರಣದ ಸ್ಮಾರಕ "ಸುದರ್ಶನಶಾಲೆ" ಎಂಬ ಹೆಸರಿನ ಒಂದು ಸಣ್ಣ ಕಟ್ಟೋಣವನ್ನು [illegible]. ಆ ಸ್ಥಳವು ನಮ್ಮ ಹಿಂದುಗಳ ಶವದಹನಮಾಡುವ ಮಂಗ[illegible]ಸ್ಮಶಾನವಾದುದರಿಂದ ಮಳೆಗಾಲದಲ್ಲಾಗಲಿ, ಬೇಸಿಗೆಯಲ್ಲಾಗಲಿ, [illegible] ಸಮಯ ಮೃತನ ಕುಟುಂಬದವರಿಗಾಗಲಿ, ಯಾ ಸಂಗಡ [illegible]ಮಿತ್ರರಿಗಾಗಲಿ ಅಂಥಾ ದುಃಖಕರ ಸಮಯವಾದರೂ ಸ್ವಲ್ಪ [illegible] ಕಟ್ಟೋಣವು ಆಶ್ರಯಕರವೆಂಬುದಕ್ಕೆ ಏನೂ ಸಂಶಯವಿರದು. [illegible] ಸಭೆಯನ್ನು ಅಲಂಕರಿಸಿದ್ದ ಇಂಡಿಯಾ ಇಂಪೀರಿಯಲ್ [illegible]ಟೆಂಡಾದ ಶ್ರೀ। ರಾವ್‌ಬಹದೂರ್ ಯು. ಅನಂದರಾಯರೂ, [illegible]ಲ್ ಓವರ್ಸಿಯರ್ ಶ್ರೀ। ಕೆ. ಶಿವರಾಯರೂ, ಹೈಕೋರ್ಟು [illegible] ಎನ್. ಹಾರ್ನಪ್ಪ ಸುವರ್ಣರೂ, ಮಾಜಿ ಸಿರಸ್ತೇದಾರ್ [illegible] ರಾಯಪ್ಪ ನಾಯ್ಕರೂ ಯಾ ಇನ್ನೂ ಅನೇಕ ಪ್ರಮುಖ[illegible] ದಯಮಾಡಿದ್ದರಲ್ಲದೆ, ಪ್ರಥಮತ ಶ್ರೀ। ಯು. ಆನಂದ[illegible]ವತಾ ಪ್ರಾರ್ಥನೆ ಮಾಡಿ, ಅಲ್ಲಿ ನೆರೆದಿರುವ ಸಭಿಕರೆಲ್ಲರಿಗೂ [illegible] ತುಳು ಭಾಷೆಯಲ್ಲಿ ಚಲೋ ಭಾಷಣವನ್ನಿತ್ತು ಸುದರ್ಶನಶಾಲೆ [illegible]ರಗಳನ್ನು ಕೆತ್ತಿದ ಒಂದು ಮಾರ್ಬಲ್ ಕಲ್ಲನ್ನು ತಾನು ಸದರಿ [illegible] ಒಂದು ಕಂಭದಲ್ಲಿ ಸ್ಥಾಪಿಸಿ ಅಲ್ಲಿ ನೋಡಲಿಕ್ಕೆ ಬಂದಿರುವ [illegible]ರಿಗೆ ತನ್ನ ಸ್ವಂತ ಹಣಕಾಸನ್ನು ಧರ್ಮಮಾಡಿದ್ದರು. ಬಂದ [illegible]ಕರಿಗೂ ಅಲ್ಲಿಯ ನೆರೆಯವರಿಗೂ ಪುಷ್ಪ ತಾಂಬೂಲದೊಡನೆ [illegible]ಭಜನೆಯು ಮಂಗಳವಾದ ನಂತರ ರಾ। ಶ್ರೀ। ಎನ್. ಎನ್. [illegible] ಕನ್ನಡ ಭಾಷೆಯಲ್ಲಿ ನಮ್ಮ ಅಂತ್ಯಕಾಲದಲ್ಲಿ ಪ್ರತಿಯೊಬ್ಬರೂ [illegible]ಧನವಾಗಿರುವದನ್ನೂ ಕೂಡಲೇ ಅದನ್ನು ಮರೆತುಬಿಡುವ ಸಂಗತಿ[illegible]ವನ್ನೂ ಸೂಚಿಸಿ—ಅಂಧಃಕಾರವಾಗಿ ಮಾರ್ಗ ಹಿಡಿಸುವ ಈ [illegible] ರಾ। ವೀರಪ್ಪನಾಯ್ಕರು ತನ್ನ ಸ್ವಂತ ಖರ್ಚಿನಿಂದಲೇ [illegible]ದ ಕೆಲಸಮಾಡಿಸಿದ್ದು ಬಹಳ ಜನೋಪಕಾರವಾದ ಕೆಲಸ [illegible]ದೆ ಸದರಿ ಕಟ್ಟೋಣವು ಇನ್ನು ಮುಂದಿನ ರಿಪೇರಿ ವಗೈರೆ ಕೆಲಸ [illegible]ಳೂರು ಮುನ್ಸಿಪಾಲಿಟಿಯವರು ಮಾಡಿಸುವುದು ಕರ್ತವ್ಯವೆಂದೂ [illegible] ರಾ। ಚೆಯರ್‌ಮೇನ್ ಶ್ರೀ। ನೆಲ್ಲಿಕಾಯಿ ವೆಂಕಟ್ರಾಯರಿಗೆ [illegible]ಸಿದರೂ ಏನೋ ಕಾರಣದಿಂದ ಬರಲಿಲ್ಲವಾಗಿರಬಹುದೆಂದೂ, ಕೂಡ ಚಿತ್ತೈಸಿದ್ದರೆ ಇನ್ನಷ್ಟು ಉತ್ತಮವಿತ್ತೆಂದೂ ಭಾಷಣವಿತ್ತರು. [illegible]ನ ಕೆಲಸವನ್ನು ನೋಡಿದ ಇನ್ನೂ ಕೆಲವು ಮುಖಂಡರ ಅಪೇಕ್ಷೆ ಮೇರೆಗೆ [illegible]ಳಕ್ಕೆ ಸುತ್ತಲೂ ಕಲ್ಲುಗೋಡೆ ಮಾಡಿಸಿದರೆ ಆಗಬಹುದೆಂತಲೂ, ಈ [illegible] ಕಾರ್ಯಗಳಿಗೆ "ದೇವರ ಭಯ"ವೇ ಮೂಲಕಾರಣವೆಂತಲೂ, [illegible] ಕೆಲಸಗಳಿಗೆ ನಾವು ಶಕ್ತ್ಯನುಸಾರ ಪ್ರಯತ್ನಮಾಡಬೇಕೆಂತಲೂ, ಆಗ [illegible]ವರು ನಮ್ಮೆಲ್ಲರಲ್ಲಿಯೂ ಕೃಪೆತೋರಿಸುವನೆಂತಲೂ, ಅಲ್ಲದೆ ಆ ಬಾಲ[illegible] ಆತ್ಮಕ್ಕೆ ದೇವರು ಚಿರಶಾಂತಿ ಕೊಡಲೆಂದೂ ವೀರಪ್ಪನಾಯ್ಕರು ಮಾಡಿದ [illegible]ರ್ಯವು ಬಹಳ ಸಂತೋಷಕರವಾದ್ದರಿಂದ ಅವರ ಕುಟುಂಬಕ್ಕೂ [illegible]ರೆದಿರುವ ಸಭೆಯವರ ಕುಟುಂಬವೆಲ್ಲಕ್ಕೂ ಶ್ರೀ ಪರಮಾತ್ಮನೇ [illegible]ನು. ಎಂಬ ಅನೇಕ ಬುದ್ಧಿವಚನಗಳನ್ನು ಸರ್ವರಿಗೂ ತಿಳಿಯುವಂತೆ [illegible]ದುವಚನಗಳಿಂದ ಶ್ರೀ। ಯು. ಆನಂದರಾಯರು ಕನ್ನಡದಲ್ಲಿ [illegible]ದಿತ್ತರು. ಕೂಡಲೇ ಕೆಲವು ಮುಖಂಡರು ತಂತಮ್ಮ ಶಕ್ತ್ಯಾನು[illegible] ಧನಸಹಾಯಕ್ಕೆ ವಾಗ್ದಾನವಿತ್ತರು. ಕಡೆಗೆ ಸುಮಾರು ೬ ಗಂಟೆಗೆ [illegible]ಕವಾಕ್ಯದೊಡನೆ ಸಭೆಯು ಮುಕ್ತಾಯವಾಯಿತು.

ಮಂಗಳೂರಿನಿಂದ ಸ್ಟೀಮರ ಮೂಲಕ ಗೋವಾ ಮಾರ್ಗವಾಗಿ ಆ [illegible] ರೈಲ್ವೆ ಮೂಲಕ ಹಾವೇರಿ, ಹುಬ್ಬಳ್ಳಿ, ಬೆಳಗಾಂವ, ಪಟ್ಟಣಗಳಿಗೆ ಸೀದಾ ಟಿಕೇಟುಗಳನ್ನು ಕೊಡಿಸುವ ಏರ್ಪಾಡು ಮಾಡೋಣಾಗಿದೆಯೆಂದೂ, ಈ ಮೂಲಕ ಗೋವಾದಲ್ಲಿಯ ಪೋರ್ತುಗೀಸ ಸರಕಾರದ ನಿಬಂಧನೆಗಳ [illegible]ಂದರೆಯು ಜನರಿಗೆ ತಪ್ಪುವುದೆಂದೂ, ಈ ಟಿಕೇಟಿನಿಂದ ಗೋವಾಗೆ ಇಳಿವ [illegible] ಪೋರ್ತುಗೀಸ ಸರಕಾರವು ನಿರಾತಂಕವಾಗಿ ಸೀದಾ ಹೊರಡಲು [illegible]ರುವುದೆಂದೂ ಮುಂಬಾಯಿ ಸ್ಟೀಮ ನೆವಿಗೇಶನ್ ಕಂಪೆನಿಯ [illegible] ಮಂಗಳೂರು ಏಜಂಟರು ತಿಳಿಸುತ್ತಿರುವರು.

ವಿವಿಧ ವಿಷಯಗಳು.

ನೆಕ್ಕಿ ಸೊಪ್ಪಿನ ಹೊಗೆ ಮಲೇರಿಯಾ ಜ್ವರದ ಸೊಳ್ಳೆಗಳನ್ನು ನಾಶಮಾಡುತ್ತವೆ.

ಸೊಳ್ಳೆಗಳು ವಾಯುಮಂಡಲದಲ್ಲಿ ಸಂಚರಿಸುವಾಗ ಬಾವಲಿಗಳು ಅವುಗಳನ್ನು ಹಿಡಿದು ತಿನ್ನುತ್ತವೆ. ಆದುದರಿಂದ ಬಾವಲಿಗಳು ಹೆಚ್ಚಿರುವ ಊರುಗಳಲ್ಲಿ ಮಲೇರಿಯಾ ಜ್ವರವು ಕಡಿಮೆಯಾಗುತ್ತದೆ. ಆದರೆ ಈ [illegible]ಗಳು ಮೊಟ್ಟೆಗಳನ್ನು ಕೊಳಕು ನೀರಿನ ಹೊಂಡಗಳಲ್ಲಿಯೂ ಕೆರೆಗಳ [illegible] ಒಟ್ಟಾರೆ ಹರಿಯದೆ ನಿಂತಲ್ಲಿಯೇ ನಿಂತಿರುವ ನೀರಾಶ್ರಯಗಳಲ್ಲಿ[illegible]ಳನ್ನು ನೆರವೇರಿಸುತ್ತವೆ. ಆದುದರಿಂದ ಮೊಟ್ಟೆಗಳಿರುವಾಗಲೇ ಇವುಗಳನ್ನು ನಾಶಮಾಡುವದು ಉತ್ತಮ ಒಳ್ಳೆಯದೆಂದು ಡಾಕ್ಟರುಗಳು ಬೇರೆ ಬೇರೆ ಉಪಾಯ ಸ್ವಲ್ಪ ದಿನಗಳನ್ನು ಹುಡುಕುತ್ತಿದ್ದರು. ಸ್ಟೇಟ ಸೆಟ್ಲ್‌ಮೆಂಟಿನಲ್ಲಿ ಮಲೇರಿಯಾ ಜ್ವರ ನಿವಾರಣೆಗೆ ಕೆಲಸಮಾಡುತ್ತಿರುವ ಸಿ. ಇ. ಪೂಲ್ಸ್ ಎಂಬ ಡಾಕ್ಟರರು ಸೇರುತ್ತಿದ್ದ ಭಂಗಾರ ವರ್ಣದ ಮಿಣುಗುಗಳು ಮಲೇರಿಯಾ ಜ್ವರದ ಮೊಟ್ಟೆಗಳನ್ನೂ ಸಣ್ಣ [illegible]ಗಳನ್ನೂ ನಾಶಮಾಡುತ್ತವೆಂದೂ, ಆದುದರಿಂದ ಇವುಗಳನ್ನು ಲಾಡ ದಿಲ್ಲಾ ಜಲಾಶಯಗಳಲ್ಲಿ ಸಾಕಿದರೆ ಮಲೇರಿಯಾ ಜ್ವರ ನಿವಾರಣೆಯಾಗುವ ಸಂಭವವಿದೆಂದೂ ತಿಳಿಸುತ್ತಾರೆ. ಆದರೆ ಇದಕ್ಕಾಗಿ ಹೆಚ್ಚು ಹಣವು ಬೇಕಾಗುವ[illegible]ದು ಇದೇ ವೈದ್ಯರು ಹೇಳುತ್ತಾರೆ. ಅದಕ್ಕಾಗಿ ಅವರು ಸುಲಭ [illegible]ನ ಉಪಾಯ ಹುಡುಕತೆಗೆದಿರುತ್ತಾರೆ. ಮನೆಗಳಲ್ಲಿ "ಟುಯಿ [illegible]" ಎಂಬ ಸ್ವರದಿಂದ ತಿರುಗಾಡುವ ಸೊಳ್ಳೆಗಳನ್ನು ಹಿಡಿದು ಕೊಲ್ಲು[illegible] ಒಂದು ಪೆಟ್ಟಿಗೆ ಮಾಡಬೇಕಂತೆ. ಒಂದು ಚಚ್ಚೌಕ ಅಡಿಯ [illegible] ಪೆಟ್ಟಿಗೆ ಮಾಡಿ ಅದಕ್ಕೆ ಒಳಗಡೆ [illegible] ಬಣ್ಣವನ್ನು ಕೊಡ[illegible]ಕಂತೆ. ಪೆಟ್ಟಿಗೆಗೆ ಒಂದು ಮುಚ್ಚಳವನ್ನು ಇಡಬೇಕಂತೆ. ಹಗಲಲ್ಲಿ [illegible] ಸೊಳ್ಳೆಗಳು ಒಟ್ಟು ಕೂಡುವಲ್ಲಿ ಈ ಪೆಟ್ಟಿಗೆಯನ್ನು ಇಡಬೇಕಂತೆ. ಆಗ [illegible]ಳ್ಳೆಗಳು ಈ ಪೆಟ್ಟಿಗೆಯೊಳಗೆ ಬರುವವಂತೆ. [illegible] ಗಂಟೆಗಳ [illegible]ತರ ಅದರ ಬಾಯಿಮುಚ್ಚಿ ಪೆಟ್ಟಿಗೆಯನ್ನು ಚನ್ನಾಗಿ ಅಲ್ಲಾಡಿಸಬೇಕಂತೆ. [illegible] ರೀತಿಯಲ್ಲಿ ತಾನು [illegible] ಸೊಳ್ಳೆಗಳನ್ನು ನಾಶಮಾಡಿದ್ದೇನೆಂದು [illegible] ಡಾಕ್ಟರೆ ಹೇಳುವರು. ಅವರ ಕೃತಿ ಒಂದಕ್ಕಾ[illegible] [illegible] ಡಾಕ್ಟರರು [illegible]

ಹಿಂದೂ ದೇಶದಲ್ಲಿ ಪುರಾತನ ಕಾಲದಿಂದಲೇ ಈ ಸೊಳ್ಳೆಗಳನ್ನು ಕೊಲ್ಲುವುದಕ್ಕೆ ಸಾಯಂಕಾಲ ನೆಕ್ಕಿಸೊಪ್ಪಿನ ಹೊಗೆಯನ್ನು ಎಲ್ಲಾ ಮನೆಗಳಲ್ಲಿಯೂ ಮಾಡುವ ವಾಡಿಕೆ ಇತ್ತು. ಸೊಳ್ಳೆಗಳು ಹೆಚ್ಚಾಗಿ ಸಾಯಂಕಾಲ ಮನೆಯೊಳಗೆ ಬರುತ್ತವೆ. ಅವುಗಳು "ಟುಯಿ" "ಟುಯಿ" ಎಂದು ಹಾಡುತ್ತಾ ಬರುವಾಗ ಇವುಗಳು ಬಂದವೆಂದು ತಿಳಿಯುತ್ತದೆ. ಈ ಹೊಗೆಯು ಪಾತ್ರೆಯನ್ನು ಮನೆಯ ಎಲ್ಲಾ ಭಾಗಗಳಲ್ಲಿಯೂ ತಿರುಗಿಸಿ ಹೊರಗಿನ ಚಾವಡಿಯಲ್ಲಿಡುತ್ತಿದ್ದರು. ಸೊಳ್ಳೆಗಳು ನೆಕ್ಕಿಸೊಪ್ಪಿನ ಹೊಗೆಯ ಖಾರವನ್ನು ತಡೆಯಲಾರದೆ ಸತ್ತುಹೋಗುತ್ತವೆ. ಹಳ್ಳಿಗಳಲ್ಲಿ ನೆಕ್ಕಿಸೊಪ್ಪು ಹೆಚ್ಚಾಗಿ ಧರ್ಮಾರ್ಥವಾಗಿ ಸಿಕ್ಕುತ್ತವೆ. ಪೇಟೆ ಶಹರುಗಳಲ್ಲಿ ಸಿಕ್ಕುವುದು ದುರ್ಲಭ. ಆದುದರಿಂದ ಎಲ್ಲರೂ ಈ ಮದ್ದನ್ನು ಮಾಡಿದರೆ ಸೊಳ್ಳೆಗಳು ಲಕ್ಷಗಟ್ಟಲೆಯಿಂದ ನಾಶವಾಗುವುದರಲ್ಲಿ ಸಂದೇಹವಿಲ್ಲ.

ಮೋಟರ ನೋಟ್ಸ್.
Motor Notes.

ಮೋಟರ ಬಂದಂದಿನಿಂದ ಕುದುರೆ ಗಾಡಿಗಳಲ್ಲಿ ಕೂತುಕೊಳ್ಳುವುದೇ ಅಸಾಧ್ಯವಾಗಿ ಬಂದಿದೆ. ಗಾಡಿಯ ಮಾತಂತೂ ಎತ್ತಲಿಕ್ಕೇ ಇಲ್ಲ. ಈ ವಾಹನಗಳಲ್ಲಿ ಈಗ ಕೂತುಕೊಳ್ಳುವುದು ಹಾಗಿರಲಿ, ನೋಡುವುದು ಕೂಡ ಆಗದ ವಿಷಯಗಳಾಗಿ ಪರಿಣಮಿಸಿಯವೆ. ಇದರಿಂದ ಮೋಟರಿನಲ್ಲಿ ನಮಗೆ ಅತ್ಯಂತ ಸಂತೋಷವಾಗುತ್ತದೆಂದು ನೆನಸಬೇಡಿರಿ. ಪ್ರಯಾಣ ಸೌಕರ್ಯವು ಹೆಚ್ಚಿದಂತೆ ನಮ್ಮ ಮೈಯ ಸೂಕ್ಷ್ಮತೆಯೂ ಹೆಚ್ಚಾಗುತ್ತದೋ ಏನೋ! ಇಲ್ಲವಾದರೆ ಹಿಂದಿನ ದಿನಗಳಲ್ಲಿ ರಾತ್ರಿ ಇಡೀ ಎತ್ತಿನ ಗಾಡಿಯಲ್ಲಿ ಹೂರ [illegible] ಸೋತುಹೋಗದವರು ಈಗ ಎರಡು ಘಂಟೆಯ ಮೋಟರ ಪ್ರಯಾಣದಿಂದ "ಅಬ್ಬ" ಎಂದು ಹೇಳುತ್ತಾರೆ. ಮೋಟರು ಬಂದ ಕೂಡಲೆ ಅದರಲ್ಲಿ ಒಂದು ತರದ ನವೀನತೆ ಇದ್ದಿತು. ಆಗ ಅದರಲ್ಲಿ ಕೂತುಕೊಳ್ಳಲಿಕ್ಕೂ ಒಂದು ಉತ್ಸಾಹವಿದ್ದಿತು. ಹಾಗಾಗಿ ಮೊದಲಿನ ವರ್ಷಗಳಲ್ಲಿ ಮೋಟರು ಪ್ರಯಾಣವು ಬಹಳ ಆನಂದವನ್ನು ಕೊಡುತ್ತಿದ್ದಿತು. ಈಗ ಜನರಿಗೆ ನೋಡಿದ್ದನ್ನೇ ನೋಡಿ ನೋಡಿ ಬೇಸರ ಹುಟ್ಟಿಹೋಗಿಯದೆ. ಉಪಾಯಾಂತರ ವಿಲ್ಲದೆ ಈ ಬಸ್ಸುಗಳನ್ನು ಹತ್ತಬೇಕಾಗಿದೆ. ಮತ್ತು ಬಸ್ಸು ಓಡುವಾಗ ತಮ್ಮ ಹಿಂದಿನಿಂದ ಓಡುವ ಮಾರ್ಗವನ್ನೇ ಲಕ್ಷಿಸುತ್ತ ಬೇಸರಪಡಬೇಕಾಗಿದೆ.

ಮೋಟರ ಪ್ರಯಾಣದಲ್ಲಿ ಯಾವಾಗಲೂ ಪ್ರಯಾಣದ ಈ ದೀರ್ಘ ಸಮಯವು ಬೇಸರದ್ದೆಂದು ನೆನಸಲು ಕಾರಣವಿಲ್ಲ. ಒಂದೊಂದು ಬಾರಿ ಪ್ರಯಾಣಿಕರಿಗೆ ಬಹಳ ಉತ್ಸಾಹವನ್ನೂ ಆನಂದವನ್ನೂ ಉಂಟುಮಾಡುವ ಸಮಯಗಳೂ ಈ ಪ್ರಯಾಣದಲ್ಲಿ ಬರುತ್ತವೆ. ಮುಖ್ಯವಾಗಿ ಎರಡು ಬಸ್ಸುಗಳು ಒಂದರ ಹಿಂದೆ ಒಂದಾಗಿ ಬರುವಾಗ, ಮುಂದಿನ ಬಸ್ಸು ಹಿಂದಿನ ಬಸ್ಸಿಗೆ ಮುಂದ ಹೋಗಲು ಎಡೆಕೊಡದಿರುವುದೂ, ಹಿಂದಿನ ಬಸ್ಸು ಮುಂದೆ ಹೋಗಲು ಪ್ರಯತ್ನಿಸುವುದೂ, ಫಲವಾಗಿ ಹಿಂದಿನ ಬಸ್ಸಿನ ಜನರು ಧೂಳಿಯಲ್ಲಿ ಮಿಂದುವುದೂ, ಮುಂದಿನ ಬಸ್ಸಿನ ಜನರಲ್ಲಿ ನಗುವನ್ನುಂಟುಮಾಡುವಂತಹುದೂ, ಹಿಂದಿನ ಬಸ್ಸಿನ ಜನರಲ್ಲಿ ಬೈಗಳನ್ನುಂಟುಮಾಡುವಂತಹುದೂ ಆದ ವಿಷಯವಾಗಿದೆ. ಎಂತೂ ಇಬ್ಬರಿಗೂ ಬಹಳ ಉತ್ತೇಜಕವಾದ ಸಮಯವೇ.

ಇಂತಹ ಘಟನೆಯಲ್ಲಿ ಇನ್ನೂ ಒಂದು ನಮೂನೆಯ ವಿನೋದವಿದೆ. ಮುಂದಿನ ಬಸ್ಸು ಹಿಂದೆ ಬೀಳಬಾರದೆಂದು ಓಡುವುದೂ, ಹಿಂದಿನ ಬಸ್ಸು ಸಿಕ್ಕಿದ ದಾರಿಯನ್ನೆಲ್ಲಾ ಮುಕ್ಕಿ ಮುಂದೆ ಓಡುವನೆಂದು ಬರುವುದೂ ಪ್ರಯಾಣಿಕರಿಗೆ ಅತೀ ಉತ್ತೇಜಕವಾಗಿ ತೋರುತ್ತದೆ. ಮಧ್ಯದಲ್ಲಿ ಡ್ರೈವರರ ಬುದ್ಧಿವಂತಿಕೆ, ಇಕ್ಕಟ್ಟು ಪ್ರದೇಶವಾದರೂ ಲೆಕ್ಕಿಸದೆ ಕೋಡುಗಳಿಂದಾದರೂ ಮುಂದಿನದರೊಡನೆ ಮೇಲಾಡಿಸಿ ಮುಂದೆ ಹೋಗುವುದು. ಹಿಂದಿನ ಬಸ್ಸಿನ ಪ್ರಯಾಣಿಕರಿಗೆ ಅತ್ಯಂತ ಸಂತೋಷವನ್ನುಂಟುಮಾಡುವಂತಹ ವಿಷಯವಾಗಿದೆ.

ಆದರೆ ಈ ಮೇಲಾಟವು ಸಂತೋಷಪಡುವುದಕ್ಕಿಂತಲೂ ದುಃಖಿಸಬೇಕಾದ ವಿಷಯವಾಗಿದೆ. ಇಂತಹ ಉತ್ತೇಜಕತೆಯು ಸಿನೆಮಾ ಮಂದಿರಗಳಲ್ಲಿ ನೋಡಲಿಕ್ಕೆನೇ ಯೋಗ್ಯವಲ್ಲದೆ, ಸಜೀವವಾಗಿ ತಾನು ಗಾಡಿಯಲ್ಲಿರುವಾಗ ಅನುಭವಿಸಲಿಕ್ಕೆ ತಕ್ಕದಾಗಿಲ್ಲ. ಏಕೆಂದರೆ ಇಂತಹ ಮೇಲಾಟವು ಅತೀ ಅಪಾಯಕರದ್ದಾಗಿದೆ. ಇದರಿಂದ ದೇಹಕ್ಕೂ ಜೀವಕ್ಕೂ ಹಾನಿಯಾಗುವ ಸಂಭವವಿದೆ. ಓಡಾಟದ ಮೇಲಾಟಕ್ಕಾಗಿ ಇಲ್ಲಿಯ ಬಸ್ಸುಗಳ ರಚನೆಯಾಗಿಲ್ಲ. ಬರೇ ಜನರನ್ನು ಕೊಂಡೊಯ್ಯುವುದೇ ಇವರ ಉದ್ದೇಶ. ಇವರಲ್ಲಿ ಕಸರತ್ತುಗಳನ್ನು ಮಾಡುವುದೆಲ್ಲ ಆನಂದಿಸಬಾರದು. ಮಾತ್ರವಲ್ಲದೆ ಮಾಡಲಿಕ್ಕೆ ಕೂಡ ಬಿಡಬಾರದು. ದೊಂಬರ ಸಾವು ಗಣೆಯ ಮೇಲೆ ಎಂಬಂತೆ, ಈ ಕಸರತ್ತುಗಾರರ ಅಪಘಾತಗಳು ಇಂತಹ ಉತ್ತೇಜಕತೆಯಲ್ಲದೆ. ಇಂತಹ ಮೇಲಾಟದಿಂದ ಗಾಡಿಯು ಕೆಡುವುದಲ್ಲದೆ ಪ್ರಯಾಣಿಕರಿಗೆ ಜೀವಹಾನಿಯಾಗುವುದು. ಪ್ರಯಾಣಿಕರು ಈ ಮಟ್ಟಿಗೆ ತಕ್ಕ ಎಚ್ಚರಿಕೆಯನ್ನು ತೆಗೆದುಕೊಳ್ಳುವುದು ಅವಶ್ಯಕ.

ಈ ಓಡಾಟದ ಮೇಲಾಟವು ಬರೇ ನಮ್ಮ ಜಿಲ್ಲೆಗೆ ಸಂಬಂಧಿಸಿದುದೆಂದು ನೆನಸಬೇಕಾಗಿಲ್ಲ. ಈ ಸ್ಪರ್ಧೆಯು ಗಾಡಿಯ ಚೋಫಿಯರರ ಸಾಧಾರಣ ಸ್ವಭಾವವಾಗಿದೆಯೆಂದು ಹೇಳಬಹುದು. ಇಂಗ್ಲೆಂಡಿನ ಒಂದು ಪತ್ರಿಕೆಯು ಇಂಗ್ಲೆಂಡಿನ ಮೋಟರ ಪ್ರಯಾಣದ ವಿಷಯವಾಗಿ ಬರೆಯುವಾಗ "ಓಡಾಟವನ್ನು ನಿಲ್ಲಿಸಬೇಕು" ಎಂಬ ಶಿರೋನಾಮೆಯಿಂದ ತನ್ನ ಅಭಿಪ್ರಾಯಗಳನ್ನು ಕೊಟ್ಟಿರುವುದು:—

ಬಸ್ಸು ಕಂಪೆನಿಗಳ ವ್ಯಾಪಾರಿಗಳು ಕೂಡಲೇ ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕಾದ ವಿಷಯಗಳಲ್ಲಿ ಮಾರ್ಗಗಳಲ್ಲಿಯ ಓಡಾಟದ ಮೇಲಾಟವನ್ನು ಮತ್ತಿತರ ಇಂತಹ ಘಟನೆಗಳನ್ನೂ ನಿಲ್ಲಿಸಬೇಕೆಂದುದೂ ಒಂದಾಗಿದೆ. ನಾವು ಇತ್ತೀಚೆಗೆ ಈ ತರದ ಮೇಲಾಟವನ್ನು ಖಂಡಿಸುವಾಗ, ಪೋಲೀಸರ ಕೈಗೆ ಸಿಕ್ಕಿ ಬೀಳುವ ಮತ್ತು ಜನತೆಯ ವಿಶ್ವಾಸವನ್ನು ಕೆಡಿಸುವ ಇಂತಹ ತಂತ್ರಗಳಲ್ಲಿ ಕೈಯಿಕ್ಕದೆ ಯೋಗ್ಯವಾದ ಸ್ಪರ್ಧೆಯನ್ನು ತೋರಿಸಲು ಇನ್ನೆಷ್ಟೊ ಉಪಾಯಗಳಿವೆಯೆಂದು ನಾವು ತೋರಿಸಿದ್ದೇವೆ.

ಸ್ವಲ್ಪ ಅಜಾಗರೂಕತೆಯಿಂದ ಜೀವಹಾನಿಯನ್ನು ತರಬಹುದಾದ ಈ ಮೋಟರ ಬಸ್ಸುಗಳ ವ್ಯವಹಾರವು ಬೆಳೆದಂತೆ ಪೋಲೀಸರೂ ಆ ಬಗ್ಗೆ ಹೆಚ್ಚು ಜಾಗ್ರತೆ ತೆಗೆದುಕೊಳ್ಳುವುದು ಅವಶ್ಯವೇ ಸರಿ. ಪೋಲೀಸ ಕ್ರಮಗಳು [illegible] ನಮ್ಮ ಆಕ್ಷೇಪವಿಲ್ಲ. ಆದರೆ ಕಾಯಿದೆಯಲ್ಲಿಯೂ ಒಂದು [illegible] ಮತ್ತು ವಿನಿಯೋಗ ಪ್ರಯೋಜನವಿಲ್ಲದ [illegible]

ಮೋಟರಿನವರನ್ನು ತೊಂದರೆಗೆ ತರುವುದೂ ಜನತೆಯ ಹಿತದಿಂದಲಾದರೂ ಉತ್ತಮವಲ್ಲ.

ಡ್ರೈವರರ ಲೈಸೆನ್ಸಿನ ವಿಷಯವಾಗಿ ಪೋಲೀಸರ ಒಂದೆರಡು ನಿಯಮಗಳು ಡ್ರೈವರರಿಗೆ ಅನ್ಯಾಯವಾಗಿ ಕಷ್ಟವನ್ನು ಕೊಡುತ್ತಿವೆ. ಮುಖ್ಯವಾಗಿ ಈ ಲೈಸೆನ್ಸಿನ ಸಮಯದ ಅವಧಿ ಮುಗಿದು ಒಂದು ದಿನ ಕಳೆದರೆ ಲೈಸೆನ್ಸನ್ನು ಪುನರ್ಜೀವಿಸಬೇಕಾದರೆ ಡ್ರೈವರರಿಗೆ ಅತ್ಯಂತ ಕಷ್ಟವಾಗುತ್ತಿದೆ. ಸಮಯದ ಅವಧಿ ಮುಗಿದಪ್ಪಕ್ಕೆ ಎರಡು ರೂಪಾಯಿ ದಂಡ ತೆರುವುದೇನೊ ಸಹಜ. ಅದರೂ ಪುನಃ ತಮ್ಮ ಲೈಸನ್ಸು ಪಡೆಯಬೇಕಾದರೆ ಹತ್ತು ಹದಿನೈದು ದಿನಗಳ ವರೆಗೆ ಪೋಲೀಸ ಆಫೀಸುಗಳಿನಲ್ಲಿ ಕಾಯಬೇಕೆಂಬುದು ಬಹಳ ಕಷ್ಟದ ವಿಷಯ. ಡ್ರೈವರರೆಂದರೆ ಬಹಳ ಕಷ್ಟದಿಂದ ಎಲ್ಲೆಲ್ಲಿ ಹೋಗಿ ತಮ್ಮ ಜೀವನಕ್ಕಾಗಿ ಬಳಲುವ ಜನರು. ಕೆಲವರಿಗೆ ಅಕ್ಷರಾಭ್ಯಾಸ ಕೂಡ ಇರುವುದಿಲ್ಲ. ಅವರಿಗೆ ಸಹಜವಾಗಿ ತಾರೀಖು ತಪ್ಪಿ ಹೋಗುತ್ತದೆ. ಅವರ ನೆನಪಿಗಾಗಿ ಪೋಲೀಸ್ ಆಫೀಸಿನಿಂದ ಕಾರ್ಡು ಹೋಗುವದಿರುತ್ತದೆ. ಅದನ್ನು ಸರಿಯಾಗಿ ಕಳುಹಿಸಿದರಾದರೂ ಚಿಂತೆ ಇರಲಿಲ್ಲ. ಅವನ್ನೂ ಕಳುಹಿಸದೆ, ಅವರು ಚಾಲಕರಿಯಿಂದ ತಪ್ಪಿಹೋದವಕ್ಕೆ ಹತ್ತು ಹದಿನೈದು ದಿನಗಳ ಕ್ರಿಮಿನಲ್ ಕೈದಿಗಳಿಗಿಂತಲೂ ಹೆಚ್ಚಿನದಂತೆ ಹೊಂಚನ್ನಿರಿಸಿ ಕಡೆಗೆ ಅದನ್ನು ಕೊಡಿಸುವುದು ಅವರಿಗೆ ಎಷ್ಟು ನಷ್ಟವನ್ನುಂಟುಮಾಡತಕ್ಕ ವಿಷಯವೆಂದು ಪೋಲೀಸರ ಭಾವಿಸಬಹುದು. ಆ ನೆನಪಿನ ಕಾರ್ಡನ್ನಾದರೂ ಕಳುಹಿಸಿದರೆ ಡ್ರೈವರರು ಪೋಲೀಸರ ಉಪಕಾರವನ್ನು ಮನ್ನಿಸುತ್ತಿದ್ದರು.

ಉಡುಪಿಯ ಶ್ರೀಮದ್ಧಮರು ಮಠದ ಶ್ರೀ ಪಾದಂಗಳವರು ಭೂಪರ್ಯಟನ ಬಗ್ಗೆ ೧೬ ಜನರು ಕೂತುಕೊಳ್ಳಬಹುದಾದ ಬಸ್ಸಿನ ಬಗ್ಗೆ ಒಂದು ಚೇಸಿಸ (chassis)ನ್ನು ತರಿಸಿರುವರಾಗಿಯೂ, ಸದರಿ ಚೇಸಿಸಿಗೆ ಬೋಡಿ (Body) ಕಟ್ಟಿಸುವ ಏಲಿವಾಂ ನಡಿಯುತ್ತದಾಗಿಯೂ ವರ್ತಮಾನವಿದೆ. ಇದರಲ್ಲಿ ಅಷ್ಟಮಠಗಳ ಪೈಕಿ ಮೂರು ಮಠದ ಶ್ರೀಪಾದಂಗಳವರು ಮತ್ತು ಅವರ ಬಂಟರುಂಗರು ಯಾತ್ರಾರ್ಥವಾಗಿ ಹೋಗುವರಂತೆ. ಮೋಟರು ಪ್ರಯಾಣವು ನಮ್ಮ ಜಿಲ್ಲೆಯಲ್ಲಿ ಯಾವ ಬಗೆಯಲ್ಲಿ ಮುಂದರಿಯುತ್ತಿದೆ ಯೆಂಬುದನ್ನು ಈ ವರ್ತಮಾನವು ತಿಳಿಸಿವದು.

ಕಾಸರಗೋಡು ತಾಲೂಕು
ದ್ರಾವಿಡ ಬ್ರಾಹ್ಮಣ ಬಂಧುಗಳಲ್ಲಿ ಸವಿನಯ ವಿನಂತಿ.

ಮಹನೀಯರೇ,

ದಕ್ಷಿಣ ಕನ್ನಡ ಜಿಲ್ಲಾ ದ್ರಾವಿಡ ಬ್ರಾಹ್ಮಣರ ಎಳನೇ ಪರಿಷದವನ್ನು "ವಸಿಷ್ಠಾಶ್ರಮ"ದಲ್ಲಿ ಜರಗಿಸಬೇಕೆಂದು ಶ್ರೀ ಸುಬ್ರಹ್ಮಣ್ಯ ಮಹಾಕ್ಷೇತ್ರದಲ್ಲಾದ ಆರನೇ ಪಂಕ್ತಿನಲ್ಲಿ ನಿರ್ಧಾರವಾಗಿರುವ ಸಂಗತಿಯು ತಮಗೆಲ್ಲ ತಿಳಿದೇ ಇದೆ. ಬರುವ ಏಪ್ರಿಲದಲ್ಲಿ ಜರಗಲಿಕ್ಕಿರುವ ಆ ಏಳನೇ ಪರಿಷತ್ತಿನ ಸಂಬಂಧವಾಗಿ ಒಂದು ಕಾರ್ಯನಿರ್ವಾಹಕ ಸಭೆಯನ್ನು ಆರಿಸಿ, ಮುಂದಿನ ಕೆಲಸವನ್ನು ಮುಂದರಿಸಿ, ಪರಿಷತ್ತನ್ನು ಯಶಸ್ವಿಯಾಗಿ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆಂದು ಹೇಳಬೇಕಾಗಿಲ್ಲ. ಆ ಬಗ್ಗೆ ಇದೇ ಬರುವ ಮೇ ತಿಂಗಳ ತಾ. ೧೬ನೇ ಮಧ್ಯಾಹ್ನ ೨ ಗಂಟೆಗೆ ತಾವೆಲ್ಲರೂ ವಸಿಷ್ಠಾಶ್ರಮಕ್ಕೆ ಚಿತ್ತೈಸಿ, ಕಾರ್ಯನಿರ್ವಾಹಕ ಮಂಡಲಿಯನ್ನು ನೇಮಿಸಿ, ನಮ್ಮೊಡನೆ ಸಹಕರಿಸಿ, ಮುಂದಿನ ಕಾರ್ಯದಲ್ಲಿ ಸಹಭಾಗಿಗಳಾಗಬೇಕಾಗಿ ಪ್ರಾರ್ಥಿಸುತ್ತೇವೆ.

ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ.
ಪಂಡಿತ ಶಂಕ್ರನಾರಾಯಣ ಭಟ್ಟ.
ಖಂಡಿಗೆ ಕೃಷ್ಣ ಭಟ್ಟ.
ಸರಂಗೋಲು ಹೃಷೀಕೇಶವ ಭಟ್ಟ.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್, ಗಣಪತಿರಾವ್ ಐಗಳ್—ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂದ್ರೂಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುಂಲೆ ಬಾ, ಬೆಲ್ಲದ ಬೈಲು ಬೇರ್ಸಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೋಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ಪಟಪಟ ಹನಿಯಪ್ಪ, ನಾಯಿಯೂ ಬೆಕ್ಕು, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕ ಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ಸ್ಥಳ:—

ಶಾರದಾ ಛಾಪಖಾನೆ,
ಮಂಗಳೂರು.

ಶಾಸ್ತ್ರೀಯ

ಅಮೂಲ್ಯ ಔಷಧಗಳು.

ಅಮೃತಾಶುಂಭುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಪ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೨—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನ್ನಿಗೆ ಮಾತ್ರ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯೆಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸ್ ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಶೆಡ್ಯೂಲ, ಪೇಮೆಂಟ್ ಶೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯುರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ ಎಸ್. ಪಿ. ಆಚಾರ್ಯ ಅವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಸಂಡಿಗೆ ಹಪ್ಪಳಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮಹೋಲ್ಲಾಸಿನಿ ಕಾಫಿ ಕ್ಲಬ್,
ಮಾರ್ಕೆಟು ರೋಡು,
ಮಂಗಳೂರು.
ಅಥವಾ
ಸದಾನಂದ ಕಾಫಿ ಕ್ಲಬ್,
ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | ವಜ್ರಾಂಗ-ಬಿಂದು | ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುದಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ತಿರುಗು ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦, ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಬೇಕೆನ್ನಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚ ಬೇರೆ ಕೊಡುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ರ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. [illegible], (ಜಿಲ್ಲಾ ಬೆಳಗಾಂವ.)

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು:
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಶೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ, ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ, ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೫—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ. | ಡಿ. ಮನ್ನಾಲಾಲ್, ಡಿಸ್ಟ್ರಿಕ್ಟ್ ಸೇಟಿನ್ ಡೀಲರ್, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

ಸ್ಪಿರಿಟ್ ಸ್ಟೋವ್ ಎಂಬ ಅಡಿಗೆಮಾಡುವ ಒಲೆ.

ಇವುಗಳನ್ನು ಬ್ರಿಟಿಷ್‌ನವರು ಹಸನಾದ ಹಿತ್ತಾಳಿಯಿಂದ ಮಾಡಿರುವರು. ಇದರಲ್ಲಿ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಬಹುದು. ಬೆರಣಿ, ಸೌದೆ, ಮುಂತಾದವುಗಳು ಹಾಕಿ ಒಲೆಯನ್ನು ಉರಿಸುವದರಿಂದ ಹೊಗೆತುಂಬಿ ಕಣ್ಣುಗಳು ಕೆಟ್ಟುಹೋಗುವವು ಆದರೆ ಇದರಿಂದ ಯಾವ ಕಷ್ಟವೂ ಇಲ್ಲ. ಸ್ವಲ್ಪ ಸೀಮೆ ಎಣ್ಣೆಯನ್ನು ಹಾಕಿ ಪಂಪುಮಾಡಿದರೆ ಸಾಕು. ಇದರಲ್ಲಿ ಎಷ್ಟು ಮಂದಿಗಾದರೂ ಅಡಿಗೆಯನ್ನು ಬಹು ಬೇಗನೆ ಮಾಡಬಹುದು.
ಕ್ರಯ 1ಕ್ಕೆ 3—0—0.

ಇನಾಂ! ಜರ್ಮನ್ ಟೇಬಲ್ ಟೈಂಪೀಸ್ ಇನಾಂ!



ಈ ನಕ್ಷೆಯಲ್ಲಿ ಕಂಡ ಪೌಂಟನ್‌ಪೆನ್ನು ಲಂಡನ್ ಪಟ್ಟಣದಲ್ಲಿ ತಯಾರಿಸಿದ್ದು. ಇದಕ್ಕೆ 14 ಕ್ಯಾರೆಕ್ಟ್ ಭಂಗಾರದ ಮುಳ್ಳು ಹಾಕಿರುವುದು. ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಲಕ್ಷಣವಾಗಿ ಕಾಣವವು. ಈ ವಾರದೊಳಗಾಗಿ ತರಿಸಿಕೊಳ್ಳುವವರಿಗೆ ಮೇಲೆ ತಿಳಿಸಿರುವ ಟೈಂಪೀಸನ್ನು ಇನಾಮಾಗಿ ಕೊಡುವೆವು.
ಕ್ರಯ ಪೆನ್ 1ಕ್ಕೆ ಟೈಂಪೀಸ್ ಸಹಿತ 3—8—0.

ದಿ "ಪಿಗ್ಮಿಫೋನ್"

—: ಎಂಬ ಹಾಡುಗಾರಿಕೆಯ ಯಂತ್ರ. :—

ಈ ಹಾಡುಗಾರಿಕೆಯ ಯಂತ್ರಗಳು ವಿಲಾಯತಿಯಲ್ಲಿ ತಯಾರಾಗಿ ಬಂದವು. ಬಹು ಘಟ್ಟಿ ಯಂತ್ರಗಳಿಂದ ತಯಾರಿಸಿದ್ದು. ಪದ ಹೇಳುವ (Horn) ಕೊಳವೆಯೂ, ಅತ್ಯುತ್ತಮವಾದ (Sound-box) ಸೌಂಡ್‌ಬೊಕ್ಸ್ ಸಹ ಇರುವುದು. ಇವನ್ನು ಪಾಠಕಚೇರಿಗಳಲ್ಲಿಯೂ, ನಾಟಕ ಶಾಲೆಗಳಲ್ಲಿಯೂ, ಮತ್ತು ಲಗ್ನದ ದಿನ ಮುಂತಾದ ಸಂತೋಷಕಾಲಗಳಲ್ಲಿ ಉಪಯೋಗಿಸಲು ಬಹು ಲಾಯಕಾಗಿವೆ. ದೊಡ್ಡ ದೊಡ್ಡ ಯಂತ್ರಗಳಿಗೂ ಇವಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲ. ಒಂದು ಪದಹೇಳುವ ರಿಕಾರ್ಡ್, ಒಂದು ಸೂಜಿಯ ಪೆಟ್ಟಿಗೆ ಸಹಿತ
ಕ್ರಯ 1ಕ್ಕೆ 10—12—0. ಟಪ್ಪಾಲು ಖರ್ಚು 1—0—0.

ವಿಳಾಸ:—ವೈ. ಎಮ್. ಸ್ವಾಮಿ ಅಂಡ್ ಕೊ, ಪಾರ್ಕರ್ ಟೌನ್, ಮದ್ರಾಸು.

Y. M. SWAMY & Co.,
No. 12. Nainiappa Naicken St.,
P. Town, MADRAS.

Edited, Printed & Published by V. S. Kamath at the M. T. A. Sharada Press, Mangalore.

Registered No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—6—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೨೬ನೇ ಶುಕ್ರವಾರ ಮಾರ್ಚಿ ೧೯೨೬. ಸಂಚಿಕೆ ೧೩.

Th Canara Banking Corporation,
UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೂರ್ಪೊರೇಶನ್,
ಉಡುಪಿ, ಲಿಮಿಟೆಡ್.

Head office: UDIPI. ಹೆಡ್ ಆಫೀಸು: ಉಡುಪಿ. | Branch: COONDAPOOR. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಶಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ	ರೂ. 2,25,000—0—0.
ವಸೂಲಾತ ಮೂಲಧನ	ರೂ. 1,80,690—9—11.
ಆಪದ್ಧನ ವಗೈರೆ ಎತ್ತಗಳು	ರೂ. 75,875—0—0.
ಸಾ. ಸೇ. ೬ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತ ಪತ್ರಗಳ ಮೇಲೆ	ರೂ. 25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಏವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಾತ ಮೂಲಧನ 1,80,690—9—11, ಆಪದ್ಧನ ವ ಇತರ ಎತ್ತಗಳು 75,875—0—0, ಠೇವಣಾತಿಗಳು 5,30,003-14-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4700—0—0, ಏವೇಜಿನ ಮೇಲಣ ಈ ವರಗಿನ ಬಡ್ಡಿ ಕೂಡ ಇತರ ಬಾಬುಗಳು 40,274—3—11, ಜುಮ್ಲಾ ರೂ. 8,31,543—12—1.

ಆಸ್ತಿ ವ ಸೊತ್ತುಗಳು.

ಹಿತ್ತಲು ಕಟ್ಟೋಣ ಕಟ್ಟಿದ ಟ್ರಿಜರಿಗಳು ವಗೈರೆ 3943—8—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,08,851—13—8, ಸಾ. ಸೇ. ೬ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4700—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ) 22,795—6—6, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 10,452—15—11, ಜುಮ್ಲಾ ರೂಪಾಯಿ 8,31,543—12—1.

ನಿರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. ೬½ರ ದರದ ಬಡ್ಡಿ ಮೇಲೂ, ಮುದತುವನ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತುಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾಹುಕಾರಿ ಹುಂಡಿಗಳನ್ನೂ, ವಟ್ಟಾಯಿಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

N. Anand Rao,
Secretary.

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುಧಾರಿಕ ಕ್ರಮದಲ್ಲಿ ಮಾಡಲ್ಪಟ್ಟವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್, ಮುಂಬಯಿ

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. | 109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮೂರು ದಿವಸಗಳಲಿ, ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

[ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ತಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೇಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಹಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.

ವಿಳಾಸ:— ದೇವಣ್ಣ ನಾರಾಯಣ ಸೇಟ್,
[illegible],
[illegible], (ದ. ಕ.)

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— **SWAN HOUSE,**
P. B. 308, P. T. MADRAS.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡ್‌ಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾ ದಕ್ಷಗಿಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ಕ್ಕೆ ಕ್ರಯ „ 2—12—0

ಕಂಬಾಕ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳೆ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರಂಚ್ ಬೆಡ್ ಫೋಟೋಗಳು ಡಜನ್ 1ಕ್ಕೆ ಕ್ರಯ ರೂ. 2—4—0.

Emarald Watch Co.,
P. T. MADRAS.

ಕನ್ನಡಿಗರೆ! **ವಸಂತ.** ಕಣ್ಣೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . . ವಸಂತ
ಸಮಾಜಸುಧಾರಕನೆಂದರೆ . . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ರಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರಾನ್ ¼ ಘಟ ಸ್ಯಾಜನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

11 ಮಣಿಗಳಿದ್ದು ಬ್ರಿಜ್ ಮ್ಯೂಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ಕ್ಕೆ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.

ಚಲೋದಾದ ಲವ್ ನಕ್ಲೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
184 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

ೞೞ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ, ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಟೂತ್ ಅಕ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಡೈರಿಯಾ ಮಿಕ್ಸ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦ "AGENTS WANTED"
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ಕಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಪಿ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಧಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ಶಾಸ್ತ್ರ ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಕೋಶಕರಿಗೆ	ರೂ. 3-0-0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	„ 2-8-0.
„ ಸ್ಥಳೀಕರಿಗೆ ...	„ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪ್ರತಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು. ಎಡಿಟರ್,

ದಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಆಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1¼ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಸಿಲ್ಕರ್ ರೇಷ್ಮೆ ಮಡಿಗಳು, ಧಾರ್ಮಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಸಾಲಿಗ್ರಾಮ, ಜಾಘಂಟೆ, ಶಂಖ, ಪನ್ನೀರ್‌ದಾನಿ, ಹಿತ್ತಾಳೆಯ ಚಿಕ್ಕ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನು ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂ||ರದ ಅಧಿಕ ಚೈತ್ರ ಶು|| ೧೩ ಶನಿವಾರದಿಂದ ಕ್ಷಯ ಸಂ||ರದ ಅಧಿಕ ಚೈತ್ರ ಬ|| ೪ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮಾರ್ಚಿ ಸುಗ್ಗಿ.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಚಂದ್ರನಕ್ಷತ್ರ	ಸೂರ್ಯ ಉ.	ಸೂರ್ಯ ಅಸ್ತ.
27	ಶನಿ	೧೩	೧೬.೨೮	ಪುಬ್ಬಾ	೫೪. ೧	೧೪	6.33	6.41
28	ರವಿ	೧೪	೨೧.೫೯	ಉತ್ತರಾ	೫೫.೩೨	೧೫	6.32	6.41
29	ಸೋಮ	⊙	೨೫.೩೨	ಹಸ್ತಾ	೬೦. ೦	೧೬	6.31	6.42
30	ಕುಜ	೧	೨೬.೪೪	ಹಸ್ತಾ	೩.೪೬	೧೭	6.31	6.42
31	ಬುಧ	೨	೨೮.೫೯	ಚಿತ್ರಾ	೬.೪೫	೧೮	6.30	6.42
1	ಗುರು	೩	೨೮.೪೨	ಸ್ವಾತೀ	೮.೩೨	೧೯	6.29	6.42
2	ಶುಕ್ರ	೪	೨೭.೧೬	ವಿಶಾಖಾ	೯.೧೬	೨೦	6.29	6.42

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆಯದ್ದು	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
19	90—8	75—1	—	—
20	90—5	76—3	—	—
21	90—4	75—8	—	—
22	92—2	77—9	—	—
23	92—3	7 —0	—	—
24	91—5	75—7	—	—
25	91—7	75—8	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಸರಿ	8— 4	9— 4
ಹೊಸ ಗುಡ್ಡು ...	7— 14	8— 6
ಹೊಸ ರಾಶಿ ...	7— 0	7—12
ಅನ್ನಲ್ ಬೆಳ್ತಿಗೆ ...	8— 0	9— 0
ರಂಗೂನು ಬೆಳ್ತಿಗೆ ಗೋಣಿ ೧ ...	13— 0	14— 0
ಗೋದಿ ಗೋಣಿ ೧ಕ್ಕೆ ...	18— 0	19— 8
ಹುರುಳಿಗೋಣಿ ೧ಕ್ಕೆ ...	8— 4	9— 2
ಕಡಲೆಗೋಣಿ ೧ಕ್ಕೆ ...	13— 0	13— 8
ತೊಗರಿಗೋಣಿ ೧ಕ್ಕೆ ...	15— 4	15— 8
ತೊಗರಿಬೇಳೆ ಗೋಣಿ ೧ಕ್ಕೆ ...	16— 8	23— 0
ಉದ್ದು ಗೋಣಿ ೧ಕ್ಕೆ ...	16— 8	—
ಹೆಸರುಗೋಣಿ ೧ಕ್ಕೆ ...	15— 4	15 — 8
ಊರು ಬೆಲ್ಲ ಖಂಡಿ ೧ಕ್ಕೆ ...	60— 0	65 — 0
ಉಪ್ಪು ಗೋಣಿ ೧ಕ್ಕೆ ...	4—10	4—12
ಕೊಬ್ರಿ ಖಂಡಿ ೧ಕ್ಕೆ ...	105— 0	110— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	32— 0	—
ಎಳ್ಳಿಂಡಿ ಖಂಡಿ ೧ಕ್ಕೆ ...	47— 8	53—12
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	7—10	7—12
ಎಳ್ಳೆಣ್ಣೆ ಮುಡಿ ೧ಕ್ಕೆ ...	7— 8	9— 0
ಹರಳೆ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-12-0	—
ದೋಸೆ ಸಕ್ಕರೆ ಮುಡಿ ೧ಕ್ಕೆ ...	4—12	4 —13
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	6— 8	—
ಸಾಸಿವೆ ಮುಡಿ ೧ಕ್ಕೆ ...	9— 8	—
ಕೊತ್ತಂಬರಿ ಮುಡಿ ೧ಕ್ಕೆ ...	3— 3	4— 6
ಕಾಫಿ ಖಂಡಿ ೧ಕ್ಕೆ ...	345— 0	354— 0
ಶೀಗೋಟು ಅಡಿಕೆ ಖಂಡಿ ೧ಕ್ಕೆ ಹಳಕು ...	275— 0	300— 0
ಹೊಸ ಅಡಿಕೆ ಖಂಡಿ ೧ಕ್ಕೆ ...	210— 0	230— 0
ಕಾಳುಮೆಣಸು ಖಂಡಿ ೧ಕ್ಕೆ ...	285— 0	—
ಯಾಲಕ್ಕಿ ಮುಡಿ ೧ಕ್ಕೆ ...	50— 0	60— 0
ಗೇರುಬೀಜ ಮುಡಿ ೧ಕ್ಕೆ ...	2—14	—
ಅಕ್ಕಿಬ ಖಂಡಿ ೧ಕ್ಕೆ ...	45— 0	65— 0
ಹುಂಡು ತಗಡು ಮುಡಿ ೧ಕ್ಕೆ ...	16— 4	16—12
ಹುಣ್ಣು ಪಾತ್ರಗಳು ಮುಡಿ ೧ಕ್ಕೆ ...	21— 0	—
ಚೀನಿ ಬೆಳ್ಳಿ ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮುಡಿ ೧ಕ್ಕೆ ...	16— 8	
ಜಸತು	13— 6	

ಬಿಟ್ಟಿ! ಇನಾಂ!! ಪುಗಸಟ್ಟೆ!!!



ವೈದ್ಯವಿದ್ಯ

NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,
ಮಂಗಳೂರು.

ರೋಲ್ಡ್‌ಗೋಲ್ಡ್ ಎಂಟು ಮೂಲೆ ಕೈಗಡಿಯಾರ.

ಈ ಕೈಗಡಿಯಾರವು ಬಂಗಾರಕ್ಕೆ ಸರಿಸಮಾನವಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು. ಕ್ರಯ ೧ಕ್ಕೆ ರೂ. 7—2—0.

— ಕಾಸಿನ ಸರ (ಮಾಲೆ). —

ಇದನ್ನು ಪ್ರತಿಯೊಬ್ಬರಿಗೂ ಅನುಕೂಲವಾಗಿರುವ ಹಾಗೆ 60 ಕಾಸುಗಳು ಇಟ್ಟು ತಯಾರಿಸಿದೆ. ಕುತ್ತಿಗೆಗೆ ಹಾಕಲು ತೆಗೆಯಲು ಮಧ್ಯದಲ್ಲಿ ಕೀಲು ಇಟ್ಟಿರುವುದು. ನೋಡಲು ಬಹು ಅಲಂಕಾರವಾಗಿದೆ. ಯಾವಾಗಲೂ ಬಣ್ಣವು ಕೆಡದಂತೆ ಎಲೆಕ್ಟ್ರೋ ಭಂಗಾರದ ಗಿಲೀಟು ಮಾಡಿರುವುದು. ಕ್ರಯ ಮಾಲೆ ಸರ 1ಕ್ಕೆ ರೂ. 8—0—0.

ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ೧೨ ರೋಸ್ ಸೆಂಟ್ ಬಾಟ್ಲಿಗಳು ಇನಾಂ ಕೊಡುವೆವು.

ಫೌಂಟನ್‌ಪೇನಾ.

Fountain Pen.

ಈ ನಕ್ಷೆಯಲ್ಲಿ ಕಾಣಿಸಿರುವ ಪೇನಾಗಳು ವಿಲಾಯತಿಯಲ್ಲಿ ತಯಾರಿಸಲ್ಪಟ್ಟವು. ಇವಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳು ಬರೆಯುವದು. ಈ ಪೇನಾವನ್ನು ಮೇಲಾದ ವಾಲ್ಕನೈಟ್‌ನಿಂದ ತಯಾರಿಸಲ್ಪಟ್ಟದ್ದು. ಇದಕ್ಕೆ 14 ಕ್ಯಾರೆಟ್ ಭಂಗಾರದ ಮುಳ್ಳು ಇರುವದು. ಇದರಲ್ಲಿ ಬರೆದ ಅಕ್ಷರಗಳು ಸ್ವಲ್ಪವೂ ವ್ಯತ್ಯಾಸವಿಲ್ಲದೆ ಒಂದೇ ಸಮನಾಗಿರುವವು. ಇದರ ಜೊತೆಯಲ್ಲಿ ಇಂಕಿಯನ್ನು ತುಂಬುವ ಗಾಜಿನ ಕೊಳವೆಯನ್ನು ಮುಫತ್ತಾಗಿ ಕೊಡುವೆವು. ಕ್ರಯ 1ಕ್ಕೆ 2—0—0

ವಿಳಾಸ:— ಎಸ್. ಆರ್. ಕೃಷ್ಣ ಅಂಡ್ ಕೊ.
ನಂ|| ೧ ತಂಬುನಾಯಕನ ಬೀದಿ, ಮದರಾಸು.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಸಾಧನಗಳನ್ನು ಓದಿ ತಿಳಿದು ನಡೆದುಕೊಳ್ಳುವುದಕ್ಕೂ ಒಂದು ದೇಹದ ಮರ್ಮಶಾಸ್ತ್ರವು ಇರುವುದು. ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೆ, ಮದ್ರಾಸ್.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲ 1ಕ್ಕೆ ರೂ. 3—2—0.
„ 2. „ „ ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಾಲಿ ವಧೆ ... ...
(3) ಇಂದ್ರಜೀತು ಕಾಳಗ ... ...
(4) ಚಂಡಭೀಮ ... ...
(5) ಮೈರಾವಣನ ಚರಿತ್ರೆ ... ...
(6) ಛಾಯಾ ಕಟ್ಟದ ಚೋರ ಕಥೆ ... ...
(7) ಕುಮಾರ ರಾಮನ ಕಥೆ ... ...
(8) ಕೃಷ್ಣದಾಸಾಮೃತ ... ...
(9) ಶ್ರೀಕೃಷ್ಣ ಸತ್ಯಭಾಮಾ ಸಂವಾದ ... ...
(10) ಚಿತ್ರಕೇತು ರಾಜನ ಕಥೆ ... ...
(11) ಬಕಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋತ್ಸವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣ ವಿಜಾಸ್ವಮೇದ ಕಥಾ ... ...
(18) ಚಂದ್ರಮೌಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) „ ಶನಿದೇವರ ಮಹಾತ್ಮೆ ... ...
(22) „ ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಅಭಿಮನ್ಯುವಿನ ಕಥೆ ... ...
(24) „ ಚೋರ ಕಥೆ ... ...
(25) „ ಪಾರ್ವತಿ ಕಾರವಂಚ ಕಥೆ ... ...
(26) „ ಗೋವಿನ ಚರಿತ್ರೆ ... ...
(27) „ ದುಷ್ಯಂತನ ಕಥೆ ... ...
(28) „ ಸಾನಂದ ಗಣೇಶ್ವರ ಕಥೆ ... ...
(29) „ ಅಂಗದ ಸಾಧನ ... ...

ಶಾರದಾ ಛಾಪಖಾನೆ, ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

The Canara Bank Ltd., Mangalore.

ದಿ ಕೆನರಾ ಬ್ಯಾಂಕು ಲಿಮಿಟೆಡ್, ಮಂಗಳೂರು.

ನೋಟೀಸು.

ಇದೇ ೧೯೨೬ನೇ ಇಸವಿ ಮಾರ್ಚಿ ತಿಂಗಳ ತಾ. ೨೫ರ ಸ್ವದೇಶಾಭಿಮಾನಿ ವಾರಪತ್ರಿಕೆಯಲ್ಲಿ ಪ್ರಕಟಿಸಿದ ನೋಟೀಸಿಗೆ ಅನುಸಾರವಾಗಿ ಈ ಕೆಳಗೆ ಹೆಸರು ಕಾಣಿಸಿದವರ ಬಾಬ್ತು ನಗಗಳನ್ನು ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಯೇಲಂ ಮಾಡಿ ಹುಟ್ಟಿಬಂದ ಐವೇಜಿನಲ್ಲಿ ಬ್ಯಾಂಕಿಗೆ ಬಹಾ ಅಸಲು ಬಡ್ಡಿ ವಗೈರೆ ಮೊಬಲಗು ಕಳದು ಬಾಕಿ ಇರುವ ಐವೇಜನ್ನು ಸದರೀಯವರು ಪಡೆದುಕೊಂಡು ಹೋಗತಕ್ಕದ್ದೆಂತ್ತಲೂ, ಹಾಗೆ ಕೊಂಡು ಹೋಗುವ ವರೇಗೆ ಸದರಿ ಐವೇಜು ಅಮಾನತ್ತು ಇಟ್ಟಿರುವುದಾಗಿಯೂ ಅದಕ್ಕೆ ಬಡ್ಡಿ ಶಿಕ್ಕಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸೋಣಾಗುತ್ತದೆ.

ಷರಾ:— ವಾರಿಸ್ದಾರರು ಐವೇಜು ಕೊಂಡುಹೋಗುವಾಗ ಈ ನೋಟೀಸಿನ ಖರ್ಚು ಕೊಡತಕ್ಕದ್ದು.

ಹೆಸರು.	ಏಲಮಿನಲ್ಲಿ ರು. ಆ. ಪೈ.	ಬ್ಯಾಂಕಿಗೆ ಬಹಾ ಅಸ್ಲು ಬಡ್ಡಿ.	ಬಾಕಿ ಉಳಿದ ಮೊಬಲಗು.
ಚಿಯಬ್ಬ ಬ್ಯಾರಿ	43–0–0,	17–14–9,	25–1–3.
ಇನಾಮಬಾನ	1040–0–0,	1026–8–4,	13–7–8.

Canara Bank Ltd., Mangalore, 25-3-'26. — K. Venkat Rao, *Secretary.*

ಏಲಂ ಇಸ್ತಿಹಾರು.

ಎಮ್. ಸುಬ್ರಾಯ ಕಾಮತರ ದಿವಾಳಿ ಬಾಬಿನಲ್ಲಿ (೧೯೨೨ನೇ ಇಸವಿಯ ನಂಬ್ರ 74ನೇ ಅರ್ಜಿ.)

ಮದ್ರಾಸ್ ಒಫಿಶಿಯಲ್ ಎಸ್ಸಾನಿಯವರ ಸೂಚನೆ ಅನುಜ್ಞೆಗಳ ಮೇರೆಗೆ, ಮೆಸರ್ಸ್ 'ಡಾಡನ್ ಮತ್ತು ಕಂಪೆನಿ' ಯವರು ಇದೇ ೧೯೨೬ನೇ ಇಸವಿ ಎಪ್ರಿಲ್ ತಾ. ೧ನೇ ಬ್ರಹಸ್ಪತಿವಾರ ಪ್ರಾತಃಕಾಲ ೮-೩೦ ಘಂಟೆಗೆ ಕೆಳಗೆ ಕಾಣಿಸಿದ ಆಸ್ತಿಗಳ ಮೇಲೆ ದಿವಾಳಿದಾರನಿಗೆ ಇರುವ ಹಕ್ಕು, ಅಧಿಕಾರ ಇತ್ಯಾದಿ ಯಾವತ್ತನ್ನೂ ದಕ್ಷಿಣಕನ್ನಡ ಜಿಲ್ಲಾ ಕಾಸರಗೋಡು ಪ್ರಯಾಣಿಕರ ಬಂಗ್ಲೆಯಲ್ಲಿ (ಅಸಿಸ್ಟಾಂಟ ಇಂಜಿನೀಯರರ ಆಫೀಸು ಬಳಿ) ಬಹಿರಂಗವಾಗಿ ಏಲಂ ಮಾಡುವರು:—

ಲೋಟ್ ನಂಬ್ರ ೧.

ಕಾಸರಗೋಡು ತಾಲೂಕು ಶೀರಾಗ್ರಾಮ ಸರ್ವೆ ನಂಬ್ರ ೧೦ (೧), ೬ (೨), ೬ (೩-B), ೭ (೧) ಮತ್ತು (೨)ಕ್ಕೆ ಸೇರಿದ್ದು ೯ ಎಕ್ರೆ ೧೨ ಸೆಂಟ್ಸು ವಿಸ್ತೀರ್ಣವಾಗಿ, ಚಿಬುಕು, ಗೇರೆಹಣ್ಣು, ತೆಂಗಿನ ಮರಗಳು ಇತ್ಯಾದಿ ಇರುವುದು.

ಲೋಟ್ ನಂಬ್ರ ೨.

ಕಾಸರಗೋಡು ತಾಲೂಕು ಕೊಯಿಪಾಡಿ ಗ್ರಾಮದ ಪಟ್ಟಾ ನಂಬ್ರ ೧೪೦ ಮತ್ತು ೩೭೧ಕ್ಕೆ ಸೇರಿರುವ ಸುಮಾರು ಅರ್ಧ ಎಕ್ರೆ ಸ್ಥಳದ ಮೇಲೆ ಇರುವ ಒಂದು ಮಾಳಿಗೆ ಮನೆ.

ನೋಟೀಸು.

ಮಂಗಳೂರ ಶಹಾರ ಗೌರೀ ಮಠ ಬಳಿಯಲ್ಲಿರುವ ಕಾಸರಗೋಡು ತಾಲೂಕು ಕೂಳೂರು ಗ್ರಾಮದ ಕೃಷ್ಣ ನಲ್ಲೂರಾಯರ ಮಗ ದೇರಂಬಳ ಸೀತಾರಾಮ ನಲ್ಲೂರಾಯನು ಇದರ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ:—ನಾನು ಮತ್ತು ಗದ್ದೆಕೇರಿಯಲ್ಲಿರುವ ಆಮ್ಮೆಂಬಳ ಶ್ರೀನಿವಾಸ ಕಮ್ತಿಯರ ಮಗ ಕೊಗ್ಗಣ್ಣ ಯಾನೆ ಅನಂತ ಕಮ್ತಿಯವರು ಕೂಡ ರೂ. 1400—0—0 ಸಾವಿರದ ನಾನ್ನೂರಕ್ಕೆ ನೆಟ್ಲ ಮುಡ್ನೂರು ಗ್ರಾಮದ ಕರಂತ ಶಿಬ್ರುರಾಯ ಕೃಷ್ಣಭಟ್ಟರ ದತ್ತದ ಮಗ ಕೃಷ್ಣ ಶಿಬ್ರುರಾಯರಿಗೆ ವಿನಾಮೆಯಾಗಿ ತಾ. 13-2-'26ರಲ್ಲು ಬರಕೊಟ್ಟ ಡಿ. ಪ್ರೋನೋಟು ಸದರಿಯವರು ನಮಗೆ ವಾಪಾಸುಕೊಟ್ಟದ್ದು ನಮ್ಮ ಹತ್ತಿರ ತಾ. 20—3—'26ರಲ್ಲು ಗೈರುವಿಲೆಯಾಗಿ ಹೋಗಿರುತ್ತದೆ. ಆದುದರಿಂದ ಸದರಿ ನೋಟು ಯಾರಿಗಾದರೂ ಸಿಕ್ಕಿದ್ದ ಪಕ್ಷದಲ್ಲಿ ಸೀತಾರಾಮ ನಲ್ಲೂರಾಯರಿಗೆ ವ ಕೊಗ್ಗಣ್ಣ ಕಮ್ತಿಯವರಿಗೆ ತಂದುಕೊಟ್ಟಲ್ಲಿ ಯಾ ರವಾನಿಸಿಕೊಟ್ಟಲ್ಲಿ ರೂ. 25 ಇಪ್ಪತ್ತೈದು ಇನಾಮಾಗಿ ನಾವು ಕೊಡುವರೇ ಸಿದ್ಧರಿದ್ದೇವೆ. ಹೊರತು ಸದರಿ ನೋಟು ಕೃಷ್ಣ ಶಿಬ್ರುರಾಯರಿಗೆ ಕೊಟ್ಟು ಆ ನೋಟನ್ನು ಬೇರೆ ಯಾರಿಗಾದರೂ [illegible] ಮಾಡಿದರೆ ಅದು ಸಿಂಧು ಆಗತಕ್ಕದಲ್ಲ. ವ ಸದರಿ [illegible] ಯಾರೂ ಪಡಕೊಳ್ಳಬಾರದು ಎಂಬ ಸಂಗತಿ ಈ [illegible] ಜನರಿಗೆ ತಿಳಿಯಪಡಿಸಿದ್ದೇವೆ.

ಸೀತಾರಾಮ ನಲ್ಲೂರಾಯ.
ಎ. ಕೊಗ್ಗಣ್ಣ ಯಾನೆ ಅನಂತಕಮ್ತಿ.

ನೋಟೀಸು.

ಮಿಜಾರ ತಿಮ್ಮಪ್ಪೈ ಮಂಗಳೂರು, ಈ ಕೆಳಗೆ ಹೆಸರು ಕಾಣಿಸಿದ ಆಸಾಮಿಗಳು ರಿಜಿಸ್ಟ್ರಿನೋಟೀಸುಗಳು ಕೊಟ್ಟಾಗ್ಯೂ ಚಿನ್ನ ಬೆಳ್ಳಿ ಆಭರಣಗಳ ಈಡಿನ ಮೇಲೆ ಪಡೆದ ಮೊಬಲಗನ್ನು ವಾಯಿದೆಗೆ ಕೊಡದೆ ಇದ್ದುದರಿಂದ ಅಸ್ಲು ಬಡ್ಡಿ ಐವಜು ಕೊಡಬೇಕಾಗಿ ತಿಳಿಸಿದ್ದಲ್ಲಿ ಕೂಡ ಆ ರೀತಿ ಅವರು ಕೊಡದೆ ಇದ್ದುದರಿಂದ ಸಹಾ ಇದೇ ಎಪ್ರಿಲ್ ತಾರೀಕು ೧೦ರ ಒಳಗೆ ಮೇಲಿನ ಆಸಾಮಿಗೆ ಸಲ್ಲತಕ್ಕ ಅಸ್ಲು ಮತ್ತು ಬಡ್ಡಿ ವ ಇತರ ಕರ್ಚು ತಂದುಕೊಟ್ಟು ಪಟ್ಟಿಯಲ್ಲಿ ತೋರುವ ಈಡಿಟ್ಟ ಆಭರಣಗಳು ಬಿಡಿಸದೆ ಇದ್ದರೆ ಅವುಗಳನ್ನು ಇದೇ ೧೯೨೬ನೇ ಇಸವಿ ಎಪ್ರಿಲ್ ತಾರೀಕು ೧೫ನೇ ದಿವಸ ಮಧ್ಯಾಹ್ನ ಗಂಟೆ ೧೨ರ ಸಮಯ ತೇರುಬೀದಿ ವಕೀಲ್ ಮಿಜಾರ ಗಣೇಶ ಪೈಗಳ ಆಫೀಸಿನ ಎದುರು ಬಹಿರಂಗವಾಗಿ ಏಲಂಮಾಡಲಾದೀತು.

ಹಳೇ ಮಚ್ಚಿಬಜಾರ ಚರಿಯಪಾಂಡೇಲ್ ಅಬ್ದುಲ್ ಕಾದ್ರಿ ಬ್ಯಾರಿ ಮಗ ಇಸ್ಮಾಯಿಲ್ ಬ್ಯಾರಿ ತಾರೀಕು ೭ ನವಂಬರ ೧೯೨೪ರಲ್ಲಿ ಅಡವಿಟ್ಟ ಸಾಲದ ಮೊಬಲಗು ರೂ. ೧೫–೦–೦, ಏಲಂ ತಾರೀಕು ವರೆಗೆ ಆಗುವ ಬಡ್ಡಿ ೭–೦–೦. ತಾ. ೨೧ ಜುಲಾಯಿ ೧೯೨೪ರಲ್ಲಿ ಅಡವಿಟ್ಟ ಸಾಲದ ಮೊಬಲಗು ರೂ. ೧೬–೦–೦ ಏಲಂ ತಾರೀಕು ವರೆಗೆ ಆಗುವ ಬಡ್ಡಿ ೫–೪–೦. ತಾ. ೨೦ ಸಪ್ಟಂಬರ ೧೯೨೪ರಲ್ಲಿ ಅಡವಿಟ್ಟ ಸಾಲದ ೬೫–೦–೦ ಏಲಂ ತಾರೀಕು ವರೆಗೆ ಆಗುವ ಬಡ್ಡಿ ೧೩–೦–೦. ತಾ. ೧೨ ನವಂಬರ ೧೯೨೪ರಲ್ಲಿ ಅಡವಿಟ್ಟ ಸಾಲದ ಮೊಬಲಗು ರೂಪಾಯಿ ೧೫–೦–೦ ಏಲಂ ತಾರೀಕು ವರೆಗೆ ಆಗುವ ಬಡ್ಡಿ ೪–೦–೦. ತಾ. ೨೨ ಎಪ್ರಿಲ್ ೧೯೨೫ರಲ್ಲಿ ಅಡವಿಟ್ಟ ಸಾಲದ ಮೊಬಲಗು ರೂಪಾಯಿ ೮–೦–೦ ಏಲಂ ತಾರೀಕು ವರೆಗೆ ಆಗುವ ಬಡ್ಡಿ ೧–೮–೦. ತಾ. ೨೯ ಜುಲೈ ೧೯೨೫ರಲ್ಲಿ ಅಡವಿಟ್ಟ ಸಾಲದ ಮೊಬಲಗು ರೂ. ೨೦–೦–೦ ಏಲಂ ತಾರೀಕು ವರೆಗೆ ಆಗುವ ಬಡ್ಡಿ ೨–೧೩–೦.

ಗೋಳಿಕಟ್ಟೆ ಬಜಾರ ವೈದಿನ ಬ್ಯಾರಿ ಮಗ ಎಮ್. ಹಮ್ಮದ ಬಾವ ಬ್ಯಾರಿ ತಾ. ೨೨ ಜನವರಿ ೧೯೨೫ರಲ್ಲು ಅಡವಿಟ್ಟ ಸಾಲದ ಮೊಬಲಗು ರೂ. ೨೦–೦–೦ ಏಲಂ ತಾರೀಕು ವರೆಗೆ ಆಗುವ ಬಡ್ಡಿ ೪–೧೨–೦.

ಟೌನ್ ಹಿಲ್ಲಿನಲ್ಲಿರುವ ಕೋಟ್ಯ ದಲಾಲ್ ಆಲಿ ಬ್ಯಾರಿ ಮಗ ಅಮದ ಬ್ಯಾರಿ ತಾ. ೨೬ ಜನವರಿ ೧೯೨೫ರಲ್ಲಿ ಅಡವಿಟ್ಟ ಸಾಲದ ಮೊಬಲಗು ರೂ. ೪೨೦–೦–೦ ಏಲಂ ತಾರೀಕು ವರೆಗೆ ಆಗುವ ಬಡ್ಡಿ ೬೫–೧೦–೦.

ಪದವು ಬಿಕರ್ನಕಟ್ಟೆಯಲ್ಲಿರುವ ಮಂಜೇಶ್ವರ ಪಾಂಡುರಂಗ ಪ್ರಭುಗಳ ಮಗ ಗಣಪತಿ ಪ್ರಭು ಏಟಿವ್ ೨ರಾ ಬಾಬ್ತು ತಾ. ೧೦ ನವಂಬರ ೧೯೨೪ರಲ್ಲಿ ಅಡವಿಟ್ಟ ಸಾಲದ ಮೊಬಲಗು ರೂ. ೫೪–೦–೦ ಏಲಂ ತಾರೀಕು ವರೆಗೆ ಆಗುವ ಬಡ್ಡಿ ೧೫–೩–೦.

ಗೋಳಿಕಟ್ಟೆ ಬಜಾರ ಶೇಕಲಿ ಬ್ಯಾರಿ ಮಗ ಅಬ್ದುಲ್ಲ ಬ್ಯಾರಿ ತಾ. ೨೨ ಜುಲಾಯಿ ೧೯೨೪ರಲ್ಲಿ ಅಡವಿಟ್ಟ ಸಾಲದ ಮೊಬಲಗು ರೂಪಾಯಿ ೯೦–೦–೦ ಏಲಂ ತಾರೀಕು ವರೆಗೆ ಆಗುವ ಬಡ್ಡಿ ೧೯–೧೧–೦.

ಮಿಜಾರ ತಿಮ್ಮಪ್ಪೈ ರುಜು.

ನೋಟೀಸು.

ದಕ್ಷಿಣ ಕನ್ನಡಾ ಒಫೀಶಿಯಲ್ ರಿಸೀವರರ
—: ಕೋರ್ಟಿನಲ್ಲಿ :—
I. P. No. 17/26.

ರಾಮಯ್ಯ ನಾಯ್ಕ—ಸೋಮಯ್ಯ ನಾಯ್ಕರ ಮಗ ಮಂಗಳೂರು ಶಹಾರ ಕಾಳಮ್ಮ ದೇವಸ್ಥಾನದ ಬಳಿಯಲ್ಲಿರುವವ:— } ಅರ್ಜಿದಾರ.

ಯಚ್. ರಾಮರಾವ್ ಕೂಡ ೬ ಜನರು—ಕ್ರೆಡಿಟರ್ಸರು.

ಮೇಲ್ಕಂಡ ಅರ್ಜಿದಾರನು ತನಗೆ ದಿವಾಳಿ ಮಾಡಬೇಕೆಂತ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು ೩೧ನೇ ಮಾರ್ಚಿ ೧೯೨೬ಕ್ಕೆ ಮಧ್ಯಾಹ್ನ ೩ ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆಕ್ಷೇಪವಿದ್ದವರು ತಮ್ಮ ಆಕ್ಷೇಪಣೆಗಳನ್ನು ಸದರಿ ಕೋರ್ಟಿನಲ್ಲಿ ಆ ದಿವಸ ಖುದ್ದಾಗಲಿ ಯಾ ವಕೀಲದ್ವಾರವಾಗಲಿ ಹಾಜರಾಗಿ ಆಕ್ಷೇಪಮಾಡಬೇಕೆಂತ ಈ ಮೂಲಕ ತಿಳಿಸೋಣಾಗುತ್ತದೆ.

ರಾಮನಾಯ್ಕನ ರುಜು.
[ಅರ್ಜದಾರ.]

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ,
O. P. No. 58/1926

1. ಚಂದು ಯಾನೆ ಸತ್ಯಭಾಮಮ್ಮ-ಮೃತ ಗೋಪಾಳ ಪೈಗಳವರ ವಿಧವೆ.
2. ಯಂ. ರಾಘವೇಂದ್ರಪೈ, } 1ನೇ ಅರ್ಜದಾರಳ ಮಕ್ಕಳು.
3. ಯಂ. ದಾಮೋಧರಪೈ.

} ಅರ್ಜಿದಾರರು.

ತಾ. 2—11—1909ರಲ್ಲು ಮಂಗಳೂರು ಶ್ಯಾಹಾರಿನಲ್ಲಿ ಮೃತಪಟ್ಟ ಯಂ. ಚಂದು ಯಾನೆ ಗೋಪಾಳಪೈ ಇವರ ಸಾಲ ವಗೈರೆ ವಸೂಲು ಮಾಡುವರೆ ಮೇಲ್ಕಂಡ ಅರ್ಜಿದಾರರು 2ನೇ ಅರ್ಜಿದಾರನ ಹೆಸರಲ್ಲಿ ಸಕ್ಸಸನ್ ಸರ್ಟಿಫಿಕೇಟು ಕೊಡಿಸಬೇಕೆಂತ ವಗೈರೆ ಕಾಣಿಸಿ ಸದರಿ ಮೇಲ್ಕಂಡ ಕೋರ್ಟಿನಲ್ಲಿ ಕೊಟ್ಟ ಅರ್ಜಿಯನ್ನು ತಾ. 29—3—'26ಕ್ಕೆ ಪೂರ್ವಾಹ್ನ 11 ಗಂಟೆಗೆ ತನ್ನಿಗೆ ಇಟ್ಟಿದೆ. ಆಕ್ಷೇಪ ಇದ್ದವರು ಅವರವರ ಆಕ್ಷೇಪಣೆಗಳನ್ನು ಸದರಿ ತಾರೀಕಿಗೆ ಸದರಿ ಕೋರ್ಟಿನಲ್ಲಿ ಜಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, 22-3-'26. } P. SANJIVA M. A. B. L. Vakil, K. GOPAL RAO B. A. B. L. Vakil
Vakil for petitioner.

ಮೋಟರ ನೋಟ್ಸ್. Motor Notes.

ಮೊನ್ನೆ ದಿನ ಮದ್ರಾಸಿನಿಂದ ಬಂದವರೊಬ್ಬರು ನಮ್ಮ ಮಾರ್ಗಗಳ ದುಸ್ಥಿತಿಯ ವಿಷಯವಾಗಿ ಮಾತನಾಡುತ್ತಿದ್ದಾಗ, ಅಲ್ಲಿನ ಮಾರ್ಗಗಳು ಹೀಗೆಯೇ ಇವೆಯೇ? ಎಂದು ನಾವು ಕೇಳಿದೆವು. ಇದಕ್ಕಿಂತ ಎಷ್ಟೋ ಚೆನ್ನಾಗಿದೆ ಎಂದು ಹೇಳಿದರು. "ನಿಮ್ಮತ್ತ ಮೈಲ್ ಟೆಕ್ಸ ಯಾವ ದರದಲ್ಲಿದೆ?" ಎಂದು ಕೇಳಿದೆವು. ಆ ಮಾತೇ ಅವರತ್ತಕಡೆ ಇಲ್ಲವಂತೆ. ಸಾವಿರಾರು ಗಟ್ಟಲೆಯಲ್ಲಿ ಬಸ್ಸು ಕಂಪೆನಿಗಳಿಂದ ರೂಪಾಯಿ ಪಡೆಯುವ ಡಿಸ್ಟ್ರಿಕ್ಟ ಬೋರ್ಡಿನ ವಿಚಾರವು ಸರಿಯಾಗಿ ಮಾರ್ಗದ ಕಡೆಗೆ ಏಕೆ ಹೋಗುವುದಿಲ್ಲವೊ ತಿಳಿಯದು.

• • • •

ಮಾರ್ಗ ದುರುಸ್ತಿಯು ವಿಚಿತ್ರರೀತಿಯಲ್ಲಿ ನಡೆಯುತ್ತಿದೆ. ಆಶ್ಚರ್ಯವೆಂದರೆ, ಪ್ರತಿಬಂಧವೆಲ್ಲ ಬಸ್ಸುಕಂಪೆನಿಗಳ ಮೇಲಲ್ಲದೆ ಮಾರ್ಗ ದುರುಸ್ತಿ ಕ್ರಮದ ಮೇಲಿಲ್ಲ. ಈಗಿನ ಮಾರ್ಗಗಳ ಅವಸ್ಥೆಯೇನು? ಈ ಮಾರ್ಗಗಳಿಂದ ನಮ್ಮ ಜಿಲ್ಲೆಗೆ ಬಹಳ ನಷ್ಟವುಂಟು. ಮಾರ್ಗವು ಚೆನ್ನಾಗಿ ದುರುಸ್ತಿಯಾಗಿ ಬಡ ಕೂಲಿಕಾರರಿಗೆ ಸಂಬಳ ಸಿಕ್ಕುವ ಬದಲಿಗೆ ಈಗ ಈ ಮಾರ್ಗದ ಅನಾವಸ್ಥೆಯಿಂದ ಬಸ್ಸುಗಳ, ಕಾರುಗಳ, ಅನೇಕ ಪಾರ್ಟುಗಳು ತುಂಡಾಗಿಯೂ ಪೆಟ್ರೋಲ್ ಖರ್ಚು ಹೆಚ್ಚಾಗಿಯೂ ದುಡ್ಡು ಪರದೇಶದವರಿಗೆ ಸಲ್ಲುತ್ತಿದೆ.

• • • •

ಪ್ರಾಯಶಃ ದುರುಸ್ತಿಯ ಅನುಕೂಲತೆಯು ಕರಾವಳಿ ಮಾರ್ಗಗಳಿಗೆ ಇದ್ದಷ್ಟು ಬೇರಾವ ಮಾರ್ಗಗಳಲ್ಲಿಯೂ ಇಲ್ಲ. ಆದರೆ ಮಾರ್ಗಗಳ ಪರಿಸ್ಥಿತಿ ನೋಡಿದರೆ ಅತ್ಯಂತ ತಿರಸ್ಕಾರವಾಗುತ್ತದೆ. ಮಾರ್ಗಕ್ಕೆ ಹಾಕಿದ ಜಲ್ಲಿಕಲ್ಲುಗಳು ದುರುಸ್ತಿಕ್ರಮದಿಂದ ಘಟ್ಟಿಯಾಗಿ ಕೂತುಕೊಳ್ಳದೆ ಮೋಟರುಗಳೇ ಅದರ ಮೇಲಿಂದ ಓಡುತ್ತಿರುವಾಗ್ಯೆ ಸ್ಟೀಮರೋಲರುಗಳಾಗಿ ಪರಿಣಮಿಸುತ್ತವೆ. ಮೋಟರಿನ ಓಡಾಟದಿಂದ ಚಕ್ರ ತಿರುಗುವ ಹಾದಿ ತಗ್ಗಾಗಿ ಘಟ್ಟಿಯಾಗುತ್ತಿದೆ; ಅಲ್ಲದೆ ಹಾಕಿದ ಕ್ರಮದ ದೋಷದಿಂದಲೂ, ಇತರ ಜಾಗಗಳು ಘಟ್ಟಿ ಇಲ್ಲದ್ದರಿಂದಲೂ, ಮೆಟಲು ಬಹಳ ತೆಳು ಆದ್ದರಿಂದಲೂ, ಈ ಘಟ್ಟಿಯಾದ ಚಕ್ರದ ಹಾದಿಕೂಡ ಪ್ರಯಾಣಕ್ಕೆ ಅಯೋಗ್ಯವಾಗುತ್ತಿದೆ.

• • • •

ಈಗಿನ ಪರಿಸ್ಥಿತಿಯೆಂದರೆ ಮಾರ್ಗಗಳು ಯಾವ ಪ್ರಯಾಣಕ್ಕೂ ಅನುಕೂಲಗಳಾಗಿಲ್ಲ. ಕಲ್ಲುಗಳು ಎದ್ದು ಒಂದು ಕಡೆ, ಧೂಳು ಎದ್ದು ಒಂದು ಕಡೆ, ಹೊಂಡ ಬಿದ್ದು ಒಂದು ಕಡೆ, ಈ ಪರಿಸ್ಥಿತಿಯಲ್ಲಿ ನಡೆದಾಟಕ್ಕೆ ಸಾಧ್ಯವಿಲ್ಲ; ಸ್ಯಾಕಲುಗಳಿಗೂ ಸಾಧ್ಯವಿಲ್ಲ; ಗಾಡಿಗಳ ಮಟ್ಟಿಗೆ ಎತ್ತುಗಳ ಕಷ್ಟಗಳೂ ಅವುಗಳ ಕಾಲಿಗೆ ಬಾಧಕವೂ ಹೇಳತೀರದು. ಮೋಟರಿನ ವಿಷಯ ಪ್ರತ್ಯೇಕವಾಗಿ ಹೇಳಬೇಕೆಂದೇ ಇಲ್ಲ.

• • • •

ಪ್ರಜೆಗಳ ಸಾವಿರಾರು ರೂಪಾಯಿಗಳನ್ನು ಈ ದಾರಿಯಲ್ಲಿ ಹಾಕುವ ಬೋರ್ಡು ಪ್ರಜೆಗಳಿಗೆ ಜವಾಬ್ದಾರವಾಗಿರಬೇಕು. ಪ್ರಜೆಗಳು, ತಮಗೆ ಇಷ್ಟು ಕಷ್ಟಕರವಾಗಿ ಪರಿಣಮಿಸಿರುವ ಮಾರ್ಗಗಳ ಪರಿಸ್ಥಿತಿಯ ಬಗ್ಗೆ ಬೋರ್ಡಿನೊಡನೆ ವಿಚಾರಮಾಡುವುದು ಅವಶ್ಯವೂ ಇದೆ. ಪ್ರಯಾಣ ವ್ಯವಹಾರಗಳು ಬೆಳೆದಿರುವ ಈ ದಿನಗಳಲ್ಲಿ ಬೋರ್ಡಿನವರು ಏಕೆ ಮಾರ್ಗಗಳ ಕಡೆಗೆ ಲಕ್ಷಕೊಡುವುದಿಲ್ಲವೆಂದು ಪ್ರತಿ ಒಬ್ಬರೂ ವಿಚಾರಿಸಬೇಕು. ನಮ್ಮ ಜಿಲ್ಲೆ ಬಗ್ಗೆ ನಾಲ್ಕು ಸ್ಟೀಮರೋಲರುಗಳನ್ನು ತರಿಸುವ ಆಲೋಚನೆಯನ್ನಾದರೂ ಮಾಡಬಹುದಿತ್ತು. ಒಳ್ಳೇ ಮಳೆಯಿಂದ ಬೇಕಾದಷ್ಟು ನೀರು ಸಿಕ್ಕುತ್ತದೆ; ಬಾವಿ ಎಳೆಯುವ ಆವಶ್ಯಕತೆ ಇಲ್ಲ. ಹಾದಿಯ ಬದಿಯಲ್ಲಿಯೇ ಬಂಡೆ ಶಿಲೆಕಲ್ಲುಗಳಿದ್ದು ಸುಲಭವಾಗಿ ಜಲ್ಲಿ ಗುದ್ದಿಸಿ ತಯಾರಿಸಬಹುದು. ದೂರದಿಂದ ತರುವ ಖರ್ಚು ವಿಶೇಷ ಹೆಚ್ಚಾಗಿ ಬೀಳುವುದಿಲ್ಲ. ಕೂಲಿಯಾದರೂ ನಮ್ಮ ಜಿಲ್ಲೆಯಲ್ಲಿ ಬಹಳ ಪ್ರಿಯವಾಗಿಲ್ಲ. ಆದುದರಿಂದ ಡಿಸ್ಟ್ರಿಕ್ಟ ಬೋರ್ಡಿಗೆ ಮಾರ್ಗದುರುಸ್ತಿಯು ಅಗ್ಗವೂ, ಸುಲಭವೂ ಆಗತಕ್ಕದು. ಅಂತಿರುವಾಗ ಅದರಲ್ಲಿಯೂ ಕಸರು ಮಾಡಿ ಮಾರ್ಗದ ಬಗ್ಗೆಯೆಂದು ಖರ್ಚುಮಾಡುವ ಹೇರಳ ಹಣವನ್ನು ವ್ಯರ್ಥಪಡಿಸುವುದು ದುಃಖಕರ.

• • • •

ಅಡುಗಳನ್ನೂ, ದನಗಳನ್ನೂ ಮೇಯಲಿಕ್ಕೆ ಉಪಯೋಗಿಸುವುದಕ್ಕಿಂತಲೂ ಹೆಚ್ಚು ಉಪಯೋಗವು ಮಾರ್ಗದಿಂದಾಗಲಿಕ್ಕಿದೆ ಎಂದು ನಮ್ಮ ಅಭಿಪ್ರಾಯವಿದೆ. ಆದರೆ ಪೋಲಿಸಿನವರು ಮಾತ್ರ ಭಿನ್ನಾಭಿಪ್ರಾಯವಿದ್ದವರಂತೆ ತೋರುತ್ತಿವೆ. ಇಲ್ಲವಾದರೆ ಮಂಗಳೂರಿನಂತಹ ದೊಡ್ಡ ಶಹರು ಮಾರ್ಗಗಳಲ್ಲಿ, ಅದರಲ್ಲಿಯೂ ಬಹಳ ಜನ ಸಂಚಾಲನವಿರುವ ರಥಬೀದಿಯಲ್ಲಿ; ಅದರಲ್ಲಿಯೂ, ಬಹು ಇಕ್ಕಟ್ಟಾಗಿ, ಮಾರ್ಕೆಟಿಗೆ ಹೋಗುವ ಜನರು ಗುಂಪುಕೂಡುವುದೂ, ಮೂರುನಾಲ್ಕು ಕಂಪೆನಿಯ ಬಸ್ಸುಗಳು ನಿಲ್ಲುವುದೂ ಆಗಿರುವ ಮಾರ್ಕೆಟ ಬಳಿಯ ಸಂದಿನಲ್ಲಿ, ಯಾವ ಪೋಲಿಸರಾದರೂ ದನಗಳನ್ನೂ ಅಡುಗಳನ್ನೂ ನಿಲ್ಲಲಿಕ್ಕೆ ಬಿಡುತ್ತಿರಲಿಲ್ಲ. ಅಕ್ಕಿತ್ತ ಅಂಗಡಿಗಳಲ್ಲಿನ ಎಲೆಗಳನ್ನು ತಿಂದೋ, ಮಾರ್ಕೆಟಿಗೆ ಬರುವ ಕಾಯಿಪಲ್ಯಗಳಲ್ಲಿ ಬಾಯಿ ತುರುಕಿಸಿಯೋ, ಈ ಯಾವುದೊ ಉತ್ತಮ ಹಿಂದೂಮನೆಗಳ ಗೋದೇವತೆಗಳು ನೈವೇದ್ಯ ಮಾಡಿಸಿಕೊಂಡು ಜಡತೆಯಿಂದ ಮಾರ್ಗದಲ್ಲಿ ಮೆಲ್ಲನೆ ಮೆಲುಕು ಹಾಕುತ್ತ, ಹೊರ್ನಬಿಟ್ಟು ಹೊಡೆದರೂ ಕದಲುವ ಸ್ಥಿತಿಯಲ್ಲಿ ಇಲ್ಲದಿರುವುದನ್ನು ಕಂಡರೆ, ಅಲ್ಲಿಯೇ ನಿಂತಿರುವ ಪೋಲಿಸ ಸಿಪಾಯಿಯ ಕರ್ತವ್ಯವೇನೆಂದು ನಮಗೆ ತಿಳಿಯುವುದಿಲ್ಲ.

• • • •

ಮಂಗಳೂರು ಶಹರಿನೊಳಗೆ ಜನಸಂಚಾಲನವು ಬೆಳೆಯುತ್ತಾ ಬರುತ್ತಿದೆ. ಅದರೊಡನೆ ಗಾಡಿಗಳ, ಕಾರುಗಳ, ಬಸ್ಸುಗಳ ಸಂಚಾಲನವೂ ಹೆಚ್ಚೆಚ್ಚಾಗುತ್ತಾ ಬರುತ್ತಿದೆ. ಆದುದರಿಂದ ಮಾರ್ಗಗಳು ಕೂಡುವ ಸ್ಥಳಗಳಲ್ಲಿ ನಿಲ್ಲುವ ಪೋಲಿಸರಿಗೆ ಈಗ ಇರುವ ತರಬೇತಿಗಿಂತಲೂ ಉತ್ತಮ ತರಬೇತು ಕೊಡುವ ಅವಶ್ಯಕತೆಯಿದೆ.

• • • •

ಮಾರ್ಗದ ಮಧ್ಯದಲ್ಲಿ ಚಿತ್ರಪ್ರತಿಮೆಯಂತೆ ನಿಂತು—ಆಗಾಗ ಸ್ವಲ್ಪ ವಿಶ್ರಾಮಕ್ಕಾಗಿ ಹತ್ತಿರದ ಅಂಗಡಿಕಾರನ ಆತಿಥ್ಯವನ್ನು ಸ್ವೀಕರಿಸಿ—ಮೋಟರ ಬಂದಾಗ ಕೈ ಅಲ್ಲಾಡಿಸುವುದಕ್ಕಿಂತಲೂ ಈ ಪೋಲಿಸರು ತಮಗೆ ಹೆಚ್ಚು ಕೆಲಸವಿದೆಯೆಂದು ತಿಳಿದುಕೊಂಡಿಲ್ಲ. ಮೋಟರ ಬಂದಾಗ ಕೈಅಲ್ಲಾಡಿಸುವುದು ಮಾತ್ರವಲ್ಲ (ಬಂದ ಮೋಟರನ್ನು ಅಗತ್ಯವಿದ್ದರೆ ತಡೆದು ಕಾಯ) ಹಾಜರು ಮಾಡಿಕೊಡುವುದೂ ಪೋಲಿಸರ ಕರ್ತವ್ಯವಿದೆ. ಜನಸಂಚಾಲನದಲ್ಲಿ ಸಮಯಕ್ಕೆ ಸರಿಯಾದ ಜಾಗ್ರತೆಯನ್ನು ತೆಗೆದುಕೊಳ್ಳಲಿಕ್ಕೆ ವಿಶೇಷ ಚಟುವಟಿಕೆಯೂ ಮಾನಸಿಕ ಜಾಗರೂಕತೆಯೂ ಅಗತ್ಯವಿದೆ.

ಸ್ಫುಟವಿಚಾರಗಳು.

ಮಂಗಳೂರು ಮುನ್ಸಿಪಾಲಿಟಿಗೆ ನೇಮಕ

ಶ್ರೀಯುತ ಕೆ. ರಘುಚಂದ್ರ ಬಲ್ಲಾಳರು ಮುನಿಸಿಪಾಲಿಟಿಗೆ ಕೌನ್ಸಿಲರಾಗಿ ನೇಮಕ ಹೊಂದಿರುವರಾಗಿ ನಾವು ಹಿಂದೂ ಪತ್ರಿಕೆಯಿಂದ ತಿಳಿದುಕೊಳ್ಳುತ್ತೇವೆ. ನೇಮಕದ ಅದೃಷ್ಟದ ಮಟ್ಟಿಗೆ ಶ್ರೀಯುತ ಬಲ್ಲಾಳರು ಭಾಗ್ಯಶಾಲಿಗಳೇ ಅಹುದು. ಆದರೆ ನೇಮಣೂಕಿನಲ್ಲಿ ಬೋರ್ಡು ಪ್ರೆಸಿಡೆಂಟರು ಯಾವ ತರದ ಧೋರಣವನ್ನನುಸರಿಸುವರೆಂಬುದು ಇಂತಹ ನೇಮಕಗಳಿಂದ ತಿಳಿದುಬರುವುದಿಲ್ಲ. ಮದ್ರಾಸ್ ಕೌನ್ಸಿಲಿನ ಮಹೋಲ್ಲಾಸ ಸ್ಥಾನಗಳನ್ನು ಶ್ರೀಯುತ ಬಲ್ಲಾಳರು ಅಲಂಕರಿಸುವರೇನೊ ನಿಜ. ಒಂದು ಬಾರಿ ಅವರು ಕನ್ನಡದಲ್ಲಿಯೇ ಒಂದು ಭಾಷಣವನ್ನು ಕೊಟ್ಟಿರುವರು. ಆದರೆ ನಮ್ಮ ಜಿಲ್ಲೆಗೆ ಉಪಕಾರಿಯಾದ ಯಾವ ಇತರ ಕೆಲಸವನ್ನೂ ಅವರು ಮಾಡಿರುವರಾಗಿ ನಾವು ತಿಳಿಯುವುದಿಲ್ಲ. ಅಲ್ಲದೆ ಜನಹಿತದ ಕಡೆಗೆ ಕೆಲಸ ಮಾಡಿ ಮೈದುಡಿದ ವಿಷಯವೂ ನಮಗೆ ತಿಳಿದಿಲ್ಲ. ಮಂತ್ರಿಪಕ್ಷವನ್ನು ಘಟ್ಟಿಯಾಗಿ ಅವಲಂಬಿಸಿ ಅವರ ಒಂದು ಕಾಯಂ ಓಟಾಗಿ ಪರಿಣತರಾದುದೇ ಈ ನೇಮಕಕ್ಕೆ ಕಾರಣವೋ ಇಲ್ಲವೆ ಇನ್ನೇನಾದರೂ ಇದೆಯೊ ಎಂದು ಚಿಂತಿಸತಕ್ಕದ್ದು. ಸ್ವೇಚ್ಛಾಪರವಾದ ನೇಮಕಗಳ ವಿಷಯವಾಗಿ ಕೌನ್ಸಿಲಿನಲ್ಲಿ ಮಂತ್ರಿಗಳನ್ನೇ ಪ್ರಶ್ನಿಸಿ ಕೌನ್ಸಿಲ್ ಮೆಂಬರರು ತೊಂದರೆಗೊಳಿಸಿರುವರು. ನಮ್ಮ ಜಿಲ್ಲೆಯಲ್ಲಿ ಇಂತಹ ನೇಮಕಗಳು ಅವಿರೋಧವಾಗಿ ನಡೆಯಬೇಕೆ?

ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಸಾಹೇಬರೂ ಮುಸ್ಲಿಮ್ ಹಿತವೂ

ದೇಶದಲ್ಲಿ ಹಿಂದೂ ಮುಸಲ್ಮಾನ ಭೇದಗಳು ತೀವ್ರವಾಗಿ ಬೆಳೆಯುತ್ತಾ ಬಂದ ಹಾಗೆ, ಜಾತೀಯ ಮುಖಂಡರು ಈ ಭೇದಗಳನ್ನು ಮತ್ತಷ್ಟು ತೀವ್ರ ಮಾಡುವುದೇ ಇವುಗಳನ್ನು ನಿವಾರಿಸಲಿಕ್ಕೆ ಅಸಾಧ್ಯವಾಗಿ ಮಾಡುವಂತಹ ವಿಷಯವಾಗಿದೆ. ಹಾಗೆಯೇ ದೇಶದಲ್ಲೆಲ್ಲಿಯೂ ಮುಸಲ್ಮಾನರು ಮುಸ್ಲಿಮ್ ಹಿತವೆಂದು ಚಳವಳವನ್ನೆಬ್ಬಿಸುತ್ತಿದ್ದಾಗ ಹಾಜಿ ಅಬ್ದುಲ್ಲಾ ಸಾಹೇಬರೂ ಆ ಚಳವಳವನ್ನೆತ್ತಿ ಹಿಡಿಯುವುದು ಜಾತೀಯ ದೃಷ್ಟಿಯಿಂದ ಸರಿಯೇ. ಆದರೆ ತಾವು ಮಾಡುವ ಸೂಚನೆಗಳ ಕಾರ್ಯಕಾರಿತೆಯನ್ನೂ ಅವರು ಚಿಂತಿಸುವುದು ಉತ್ತಮವಿತ್ತು; ಆ ಕಾರ್ಯಕಾರಿತೆಯನ್ನು ತಿಳಿದುಕೊಳ್ಳುವ ಸಂದರ್ಭಗಳಾದರೂ ಅವರಿಗೆ ಬೇಕಷ್ಟಿದ್ದವು. ಹಾಜಿ ಅಬ್ದುಲ್ಲಾ ಸಾಹೇಬರು ಉಡುಪಿ ತಾಲೂಕು ಬೋರ್ಡಿಗೆ ಹಲವು ವರ್ಷಗಳಿಂದ ಅಧ್ಯಕ್ಷರಾಗಿದ್ದರು. ಆ ಸಮಯದಲ್ಲಿ ಮುಸ್ಲಿಮ್ ಹಿತದ ಬಗ್ಗೆ ಕೆಲಸ ಮಾಡುವುದು ಎಷ್ಟು ಅವಶ್ಯವಾಯಿತೆಂದು ಅವರು ಯೋಚಿಸಿದರೆ ವಿದ್ಯಾ ಶಾಲೆಗಳಲ್ಲಿಯೂ, ನೌಕರಿಯ ನೇಮಕದಲ್ಲಿಯೂ ಮುಸ್ಲಿಮ್ ಹಿತವನ್ನು ಪ್ರತ್ಯೇಕಿಸುವ ಅನಾವಶ್ಯಕತೆಯು ಸ್ವತಃ ಸಿದ್ಧವಾಗುವುದು.

ರಿಸ್ಪೊನ್ಸಿವ್ ಕೊ-ಒಪರೇಶನಿನ ಭವಿತವ್ಯತೆ

ರಿಸ್ಪೊನ್ಸಿವ್ ಕೊ-ಒಪರೇಶನ್ ಹೇಗೆ ಹುಟ್ಟಿತೆಂಬುದರ ವಿಷಯವಾಗಿ ನಾವು ಅನೇಕ ಬಾರಿ ಚರ್ಚಿಸಿರುವೆವು. ಆಗಾಗ ರಿಸ್ಪೊನ್ಸಿವ್ ಕೊ-ಒಪರೇಶನ್ ವಾದಿಗಳು ಹೇಳುವ ಮಾತುಗಳಿಂದಲೂ ವ್ಯಕ್ತವಾಗುವುದು. ಕೆಲವು ದಿನಗಳ ಹಿಂದೆ ಡಾ| ಮುಂಜೆಯವರು—"ನಮಗೂ ಸ್ವರಾಜ್ಯ ಪಕ್ಷೀಯರಿಗೂ ಯಾವ ಭೇದವೂ ಇಲ್ಲ; ಆದರೆ ಪಂಡಿತ ನೆಹರುರವರು ಭೇದಗಳನ್ನು ನಿವಾರಿಸಲು ಪ್ರಯತ್ನಿಸಿಲ್ಲ" ಎಂದು ಹೇಳಿರುವರು. ತಾತ್ಪರ್ಯವೇನೆಂದರೆ ಪಂಡಿತ ನೆಹರುರವರು ರಿಸ್ಪೊನ್ಸಿವ್ ವಾದಿಗಳನ್ನು—ಅವರ ದೊಡ್ಡವರೆಂದು [illegible]—ಒಲಿಸಲು ಪ್ರಯತ್ನ ಮಾಡಿಲ್ಲ. ಮುಖ್ಯತಃ ಪಂಡಿತ ನೆಹರುರವರ ಧುರೀಣತೆಯನ್ನು ಕೇಳ್ಕರರಾದಿಯವರು ಒಪ್ಪದೆ ಹೋದರು. ಈ ರಿಸ್ಪೊನ್ಸಿವ್ ಕೊ-ಒಪರೇಶನ್ ರಂಗದಲ್ಲಿ ಕೂಡ ಅವರಿಗೆ ತಾವು ಇಚ್ಛಿಸಿದ ಆ ಧುರೀಣತೆಯು ಸಿಕ್ಕುವುದು ದುರ್ಲಭವೆಂಬಂತೆ ತೋರುತ್ತಿದೆ. ಲಿಬರಲ್ ಪಕ್ಷದವರು ಈ ರಿಸ್ಪೊನ್ಸಿವ್ ಕೊ-ಒಪರೇಶನಿನಲ್ಲಿ ಆತ್ಮರು ಆಶ್ರಯವನ್ನೂ, ಸಹಾಯವನ್ನೂ ಕಂಡುಕೊಂಡಿರುವರು. ಒಂದು ಕಡೆಯಿಂದ ಡಾ| ಎನ್ನಿಬೆಸೆಂಟ ಮತ್ತು ಡಾ| ಸಪ್ರು ಇನ್ನೊಂದು ಕಡೆಯಿಂದ ಪಂಡಿತ ಮದನಮೋಹನ ಮಾಲವೀಯ, ಮತ್ತೊಂದು ಕಡೆಯಿಂದ ಶ್ರೀಯುತ ಚಿಂತಾಮಣಿಯವರು ಈ ರಿಸ್ಪೊನ್ಸಿವ್ ಕೊ-ಒಪರೇಶನೆಂಬುದನ್ನು ಎತ್ತಿಹಿಡಿದು ಲಿಬರಲ್ ಪಕ್ಷವನ್ನು ಘಟ್ಟಿಮಾಡಲು ಪ್ರಯತ್ನಿಸುತ್ತಿರುವರು. ಈ ಪ್ರಸಂಗದಲ್ಲಿ ರಿಸ್ಪೊನ್ಸಿವ್ ಕೊ-ಒಪರೇಶನಿನ ಜನಕರೂ, ಪುನರುಜ್ಜೀವಕರೂ ಆದ ಕೇಳ್ಕರ, ಮುಂಜೆ, ಅಣೆ ಇತ್ಯಾದಿಯವರ ಹೆಸರೇ ಕೇಳಬರುವುದಿಲ್ಲ. ತಮ್ಮಿಂದಲೇ ಸ್ಥಾಪಿತವಾದ ಈ ಹೊಸ ರಂಗಭೂಮಿಯಲ್ಲಿ ಕೂಡ ಕೇಳ್ಕರರಾದಿಯವರಿಗೆ ನಾಯಕತ್ವವು ಸಿಕ್ಕುವುದು ಕಷ್ಟಸಾಧ್ಯವಾಗಿದೆ.

ಲೋಕದ ಪಾರ್ಲಿಮೆಂಟುಗಳಲ್ಲಿನ ಸಭ್ಯತೆ!

ನಮ್ಮ ದೇಶದ ಜನರ ಊನತೆಗಳನ್ನು ನೋಡಿ ನಮ್ಮನ್ನು ನಾವೇ ತಿರಸ್ಕರಿಸಿಕೊಳ್ಳುವಂತಹವರು ನಮ್ಮೊಳಗೆ ಅನೇಕರಿದ್ದಾರೆ. ಹಿಂದು ಜಗಳವಾದರೆ, ಕೂಡಲೆ ನಾವು ಸ್ವರಾಜ್ಯಕ್ಕೆ ಅರ್ಹರಲ್ಲವೆಂದು ಕೆಲವರು ಹೇಳುವರು. ಕೆಲವು ದಿನಗಳ ಹಿಂದೆ, ಮಾರ್ಚಿ ತಾ. ೮ರಲ್ಲು ಸ್ವರಾಜ್ಯಪಕ್ಷವು ಎಸೆಂಬ್ಲಿಯಿಂದ ಎದ್ದು ಹೊರಬಂದಾಗ, ಎಸೆಂಬ್ಲಿಯ ಅಧ್ಯಕ್ಷರಾಗಿರುವ ಶ್ರೀ ಪಟೇಲರು ಸರಕಾರಕ್ಕೆ ಕೆಲವು ಎಚ್ಚರದ ಮಾತುಗಳನ್ನು ಹೇಳಿದಾಗ, ಕೆಲವರು ಹಿಂದುಸ್ಥಾನದ ಸ್ವರಾಜ್ಯಕ್ಕೆ ಅನರ್ಹತೆಯನ್ನು ತೋರಿಸಲು ಹಿಂಜರಿಯಲಿಲ್ಲ. ಆದರೆ ಲೋಕದ ದೊಡ್ಡ ದೊಡ್ಡ ಪಾರ್ಲಿಮೆಂಟುಗಳಲ್ಲೇನು ನಡೆಯುತ್ತಿದೆ? ಅದನ್ನೂ ನಮ್ಮ ಜನರು ತಿಳಿದುಕೊಂಡು ಆತ್ಮವಿಶ್ವಾಸವನ್ನುಂಟು ಮಾಡಿಕೊಳ್ಳುವ ಆವಶ್ಯಕತೆಯಿದೆ. ಜಪಾನ್ ಪಾರ್ಲಿಮೆಂಟಿನಲ್ಲಿ ಬರೇ ಹದಿನೈದು ದಿನಗಳ ಹಿಂದೆ ಸರಿಯಾಗಿ ಒಬ್ಬರನ್ನೊಬ್ಬರು ಹೊಡೆದಾಡಿರುವರು. ಜರ್ಮನ್ ಪಾರ್ಲಿಮೆಂಟಿನಲ್ಲಿ ಒಬ್ಬ ಮಂತ್ರಿಯನ್ನು ಅವಹೇಳನ ಮಾಡಿ ಮಂತ್ರಿಯು ಉದ್ವಿಗ್ನರಾಗಿ ಹೋದರು. ಫ್ರೆಂಚ ಪಾರ್ಲಿಮೆಂಟಿನಲ್ಲಿ ಪಾರ್ಲಿಮೆಂಟಿನ ಮೆಂಬರರು ಒಬ್ಬ ಮಂತ್ರಿಯವರನ್ನು ಅವಹೇಳನ ಮಾಡಿ ಮಂತ್ರಿಯವರು ಪಾರ್ಲಿಮೆಂಟು ಸಭೆ ಮಧ್ಯದಲ್ಲಿ ಮಾತುಗಳ ತೀಕ್ಷ್ಣತೆಯನ್ನು ಸಹಿಸಲಾರದೆ ಸ್ಮೃತಿ ತಪ್ಪಿ ಬಿದ್ದಿರುತ್ತಾರೆ. ಇಂತಹ ಘಟನೆಗಳು ಲೋಕದ ಪ್ರತಿ ಪಾರ್ಲಿಮೆಂಟಿನಲ್ಲಿಯೂ ನಡೆಯುತ್ತಿವೆ. ಈ ಪಾರ್ಲಿಮೆಂಟುಗಳಿಗೆ ಚುನಾವಣೆಯಾಗುವಾಗ ಊರಲ್ಲಿ ಹೊಡೆದಾಟವು ಚೆನ್ನಾಗಿ ನಡೆಯುತ್ತಿದೆ. ಇಂತಹ ಘಟನೆಗಳು ನಮ್ಮ ಕೌನ್ಸಿಲು ಮಂದಿರಗಳಲ್ಲಾಗಲಿ ಚುನಾವಣೆಯ ಸ್ಥಳಗಳಲ್ಲಾಗಲಿ ನಡೆಯುವುದಿಲ್ಲ. ಹಾಗೆ ಒಂದೆರಡು ಕಡೆಗಳಲ್ಲಿ ನಡೆದರೂ ಇಷ್ಟು ದೊಡ್ಡ ದೇಶದಲ್ಲಿ ಇಂತಹ ಒಂದೆರಡು ಘಟನೆಗಳು ನಡೆಯುವುದು ಆಶ್ಚರ್ಯವಲ್ಲ.

ಸಾಂಪ್ರದಾಯ ವಾದಿಗಳು.-

ಅನೇಕ ವಿದ್ಯಾವಂತರು ಹಿಂದೂ ಮತದೊಳಗಿನ ಕೆಲವು ಅಸಾಧ್ಯ ವಿಷಯಗಳನ್ನೆತ್ತಿ ಹಿಂದೂ ಮೂಢ ಭಕ್ತಿ (Superstition)ಯನ್ನು ತೋರಿಸುವರು. ಆದರೆ ಇದು ಭಕ್ತಿಯಾಗಲಿ, ಮೂಢ ಭಕ್ತಿಯಾಗಲಿ, ಇದು ಪ್ರತಿ ಒಂದು ಮತದಲ್ಲಿ ಇದ್ದೇ ಇದೆ ಎಂಬುದೇನೊ ನಿಶ್ಚಯ. ವಿಜ್ಞಾನದ ನವೀನ ಆವಿಷ್ಕಾರಗಳಿಂದ ಬುದ್ಧಿಯು ತೀಕ್ಷ್ಣವಿರಬೇಕಾದ ಪಾಶ್ಚಾತ್ಯ ದೇಶಗಳಲ್ಲಿ ಕೂಡ ಈ ಮೂಢ ಭಕ್ತಿಯು ಸ್ವತಂತ್ರಾಭಿಪ್ರಾಯಗಳಿಗೆ ತಡೆಕಟ್ಟುತ್ತಿದೆ. ಹಿಂದೂ ದೇಶವು ಇಷ್ಟು ಹಿಂದುಳಿದಿರುವುದಾದರೂ, ಸ್ವತಂತ್ರಾಭಿಪ್ರಾಯಗಳಿಗೆ ವಿಶೇಷವಾಗಿ ತಡೆಯಿಟ್ಟಿದೆಂದು ತೋರುವುದಿಲ್ಲ. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಈ ಸ್ವತಂತ್ರಾಭಿಪ್ರಾಯಗಳು ವ್ಯಕ್ತಪಡಲಿಕ್ಕೆ ಬಹಳ ವಿರೋಧಗಳಿವೆ. ಕೆಲವು ತಿಂಗಳುಗಳ ಹಿಂದೆ, ಅಮೇರಿಕದಲ್ಲಿ, ಒಬ್ಬ ಪ್ರೊಫೆಸರರು, ಡಾರ್ವಿನನೆಂಬ ಮಹಾ ವಿಕಾಸವಾದಿಯೊಬ್ಬನು ಸ್ಥಾಪಿಸಿದ, ಮನುಷ್ಯನು ಮಂಗಗಳ ಕ್ರಮವಾದ ಸಹಸ್ರಾವಧಿ ವರ್ಷಗಳ ಪರಿವರ್ತನದ ಫಲವೆಂಬ ತತ್ವವನ್ನು ಶಾಲೆಗಳಲ್ಲಿ ಕಲಿಸಿದುದಕ್ಕೆ ಶಿಕ್ಷೆ ಹೊಂದಿರುವನು! ಇತ್ತೀಚೆಗೆ ಇನ್ನೊಂದು ಕಾರಣದಿಂದ ಒಬ್ಬ ಯಹೂದಿಯು ತಳ್ಳಲ್ಪಟ್ಟನು. ಬೈಬಲ್ ಗ್ರಂಥದ ಪ್ರಕಾರ ಮನುಷ್ಯನು ಸ್ತ್ರೀಯ ಪ್ರೇರಣೆಯಿಂದಲೂ, ಸ್ತ್ರೀಯು ಸರ್ಪದ ಪ್ರೇರಣೆಯಿಂದಲೂ ಪಾಪಮಾಡಿದರೆಂಬ ಉಲ್ಲೇಖವಿದೆ. ಸ್ತ್ರೀಯನ್ನು ಪಾಪದಲ್ಲಿ ಪ್ರೇರಿಸಲಿಕ್ಕಾಗಿ ಸೈತಾನನು ಸರ್ಪರೂಪದಿಂದ ಬಂದು ಸ್ತ್ರೀಯೊಡನೆ ಮಾತನಾಡಿದನೆಂದು ಇದೆ. ಎಮ್ಸ್ಟರ್ಡ್ಯಾಮಿನ ಗೀಲ್ ಕೆರ್ನ್ ಎಂಬ ಯೆಹೂದಿಯೂ ಸರ್ಪವು ಮಾತನಾಡಲಾರದೆಂದೂ, ಬೈಬಲ್ ಮಾತು ತಪ್ಪಾಗಿರಬಹುದೆಂದೂ ಸಮರ್ಥಿಸಿದನು. ಅದಕ್ಕಾಗಿ ಯೆಹೂದಿಯರ ಹಿರಿಯ-ಕೂಟವು ಸೇರಿ ಅವನನ್ನು ಬಹಿಷ್ಕರಿಸಿತು.

ದೇಶದ ಜವಾಬ್ದಾರಿ.

ಸ್ವರಾಜ್ಯಪಕ್ಷದ ಹೊರಬರುವಿಕೆಯೊಡನೆ ಕೌನ್ಸಿಲು ಸಭೆಗಳಲ್ಲಿ ಉತ್ಸಾಹವೇ ತೋರುವುದಿಲ್ಲ. ಬರೇ ಶಬ್ದಮಯ ಅರ್ಥ [illegible] ಹಿಂದೆ ಹೋಗುತ್ತಿವೆಯಲ್ಲದೆ ಕಾರ್ಯಕಾರಿಯಾದ ಯಾವ ಕೆಲಸವೂ ನಡೆಯುವುದು ತೋರುವುದಿಲ್ಲ. ಆದರೆ ಸ್ವರಾಜ್ಯಪಕ್ಷದ ಹೊರಬರುವಿಕೆಯೊಡನೆ ದೇಶದ ಜವಾಬ್ದಾರಿಯು ಹೆಚ್ಚಿಯದೆಂಬುದನ್ನೂ ನಾವು ಮರೆಯಬಾರದು, ಅಲ್ಲದೆ ಲಿಬರಲ್ ಪಕ್ಷದ ಧುರೀಣರು ಕಾಂಗ್ರೆಸ್ಸಿನ ಶಕ್ತಿಗೂ ಸ್ವರಾಜ್ಯಪಕ್ಷದ ಶಕ್ತಿಗೂ ಸ್ವರಾಜ್ಯಪಕ್ಷದ ಬುಡಕ್ಕೂ ಕೊಡಲಿ ಹಾಕುವ ಏರ್ಪಾಡನ್ನು ನಡಿಸುತ್ತಾರೆ. ಆದುದರಿಂದ, ದೇಶದ ಏಕ ಮಾತ್ರ ಕ್ರಮ ಬದ್ಧವಾದ ಪಕ್ಷವು ದೇಶದ ಉತ್ತೇಜನಕ್ಕೂ ಆಧಾರಕ್ಕೂ ಪಾತ್ರವಾಗಿಲ್ಲವೆಂದರೆ ದೇಶದ ಭಾವೀ ಉಜ್ಜೀವನವೂ, ರಾಜಕೀಯ ಉದ್ಧರಣೆಯೂ ಅಸಾಧ್ಯವಾಗಿ ಪರಿಣಮಿಸಬಹುದು. ಅಲ್ಲದೆ ಈಗ ಒಟ್ಟುಗೂಡಲು ಪ್ರಯತ್ನಿಸುವ ಪಕ್ಷವು, ಸರ್ವ ಸಾಮಾನ್ಯ ಧ್ಯೇಯವಿಲ್ಲದೆ, ಬರೇ ಸ್ವತಂತ್ರಾಭಿಪ್ರಾಯದಿಂದ ಕೂಡಿದವರಾಗಿ ಪಕ್ಷದ ಐಕ್ಯವಾಗಲಿ, ಪಕ್ಷದ ಸುದೃಢತೆಯಾಗಲಿ, ಹೊಂದಲು ಸಾಧ್ಯವಿಲ್ಲದುದಾಗಿದೆ. ಸ್ವರಾಜ್ಯಪಕ್ಷದ ಅಸ್ತಿತ್ವವೇ ಈ ಪಕ್ಷದ ಸ್ಥಾಪನೆಗೆ ಕಾರಣವಾಗಿದೆ. ಏಕೆಂದರೆ ಇಂತಹ ಸುಸಂಘಟಿತ ಪಕ್ಷವನ್ನು ಸಂಘಟನೆಯ ಮೂಲಕವೇ ಜಯಿಸಬೇಕೆಂಬ ಉದ್ದೇಶದಿಂದಲೇ ಈ ಹೊಸ ಪಕ್ಷದ ಸ್ಥಾಪನೆಯಾಗುತ್ತಿದೆಯಲ್ಲದೆ, ಅದರಲ್ಲಿ ಬೇರೆ ಸ್ಪಷ್ಟವಾದ ಉದ್ದೇಶವು ತೋರುವುದಿಲ್ಲ. ಅಲ್ಲದೆ ಈ ರೀತಿ ಹೊಸ ಪಕ್ಷವನ್ನು ಸ್ಥಾಪಿಸುವುದಕ್ಕಾಗಿ ಪ್ರಯತ್ನಮಾಡುವವರು ಕಾಂಗ್ರೆಸ್ಸಿನ ಗೌರವವನ್ನು ಕೂಡ ದೂಳಿಗೆಳೆಯಲು ಹಿಂಜರಿಯುವುದಿಲ್ಲ. ಕಾಂಗ್ರೆಸಿನೊಡನೆ ಎಷ್ಟೆ ಅಭಿಪ್ರಾಯವಿದ್ದವರಾದರೂ, ಕಾಂಗ್ರೆಸ್ಸಿನ ಪತನದೊಡನೆ ಹಿಂದೀ ರಾಜಕೀಯ ಸುಧಾರಣೆಯು ಅಸಾಧ್ಯವಾಗುವುದು ನಿಶ್ಚಯವೆಂದು ಯಾರೊಬ್ಬರೂ ತಿಳಿಯಬಹುದು. ಅಲ್ಲದೆ ಹಿಂದೂಸ್ಥಾನದ ರಾಜಕೀಯ ಸಂಸ್ಥೆಗಳಲ್ಲಿ ಅದರಷ್ಟು ವಿಶಾಲವೂ, ಶಕ್ತಿಮಾನವೂ ಆದ ಸಂಸ್ಥೆಯು ಬೇರೊಂದಿಲ್ಲ. ಅದರ ವಿಶೃಂಖಲತೆಯೆಂದರೆ, ಮತ್ತೆ ರಾಷ್ಟ್ರೀಯ ಪುನರುಜ್ಜೀವನವು ಸಾಧ್ಯವಿರದು. ಡಾ| ಚಿಂತಾಮಣಿಯಂತಹರು ಲಿಬರಲ್ ಪಕ್ಷದವರಾದ ಮಾತ್ರಕ್ಕೆ ಕಡಿಮೆ ದೇಶ ಪ್ರೇಮ ಉಳ್ಳವರಲ್ಲ. ಪಕ್ಷ ಸ್ವಾರ್ಥವನ್ನು ಬಿಟ್ಟರೆ ಅವರಾದರೂ ಕಾಂಗ್ರೆಸ್ಸಿನ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳಬಹುದು. ಆದರೂ ಇಂತಹ ಹರೆ ಅಭಿಪ್ರಾಯ ಭೇದ ಬಂದ ಒಂದೇ ಕಾರಣದಿಂದ ಕಾಂಗ್ರೆಸ್ಸಿನ ಗೌರವಕ್ಕೆ ಹಾನಿ ತರಲು ಉಜ್ಜುಗಿಸುವುದು ವಿಷಾದಕರ. ದೇಶದ ಈಗಿನ ಜಡತೆಯಲ್ಲಿಯೂ, ಮುಸಲ್ಮಾನರ ಈಗಿನ ಜಾತೀಯ ಸಾಧನೆಗಳಲ್ಲಿಯೂ ರಾಜಕೀಯ ಆಕಾಶವು ತಮೋಮಯವಾಗಿ, ಕಾಂಗ್ರೆಸ್ಸು ಇನ್ನೊಮ್ಮೆ ಚೇತನಾತ್ಮಕವಾಗಿ ಮೇಲೇಳುವ ಆವಶ್ಯಕತೆಯು ತೋರುತ್ತಿದೆ.

ಸ್ವರಾಜ್ಯಪಕ್ಷದ ಹೊರಬರುವಿಕೆಯೊಡನೆ ದೇಶದ ಜವಾಬ್ದಾರಿಯೂ ದೊಡ್ಡದಾಗಿದೆ. ದೇಶದ ಸರಿಯಾದ ಆಶಯವು ಮುಂದಿನ ಚುನಾವಣೆಯಲ್ಲಿ ಸ್ಪಷ್ಟವಾಗುವುದು. ಸ್ವರಾಜ್ಯಪಕ್ಷವು ಪರಾಜಯವಾಯಿತೆಂದರೆ ದೇಶದ ಎಲ್ಲಾ ಆಶಯಗಳೂ ದೂಳಿಪಾಲಾಗುವುವು. ದೇಶವು ಇಂಗ್ಲೀಷಿನ ಅಂತಃಕರಣದ ಕರುಣೆಯನ್ನೇ ನಿರೀಕ್ಷಿಸಿ ಕಾದಿರಬೇಕು. ಬೆಲೆಯಿಲ್ಲದ ನಿಷೇಧಗಳಿಂದಲೇ ತೃಪ್ತವಿರಬೇಕು. ಮತ್ತು ಎಂದಿನಂತೆ, ಸರಕಾರದ ಗಿಲಿಟಿನ ಹೊಸ ಹೊಸ ಸ್ಕೀಮುಗಳೊಡನೆ ದೇಶದ ದ್ರವ್ಯಹಾನಿಯು ನಡೆಯುವುದು.

ಸ್ವರಾಜ್ಯಪಕ್ಷವು ಬಡವರ ತಾಪತ್ರಯಗಳೊಡನೆ ಸಹಾನುಭೂತಿಯಿಂದ ಸರಕಾರದ ಲಾಭಕರವಾದ ನೌಕರಿಯನ್ನು ತುಚ್ಛೀಕರಿಸಿಯದೆ. ಮನಸ್ಸುಮಾಡಿದರೆ ಮೋತಿಲಾಲ ನೆಹರುರವರು ಅತ್ಯಂತ ಗೌರವದ ಮತ್ತು ದುಡ್ಡಿನ ಪದವಿಯನ್ನು ಹೊಂದಬಹುದು, ಏನೊಂದು ಶಕ್ತಿವಹಿಸವಿಲ್ಲದ ತಾಂಬೆಗೆ ಸರಕಾರವು ಒಲಿಸಲಿಕ್ಕಾಗಿ ಎಕ್ಸಿಕ್ಯೂಟಿವ್ ಪದವಿಯನ್ನು ಕೊಟ್ಟಿತಾದರೆ, ಹಲವರು ಸಾಮರ್ಥ್ಯವಾನ್ ಸ್ವರಾಜ್ಯಪಕ್ಷೀಯರು ಲಿಬರಲ್ ಪಕ್ಷ ಸೇರಿದರೆ ಸರಕಾರಿ ನೌಕರಿಯನ್ನು ಹೊಂದಬಹುದು. ಅವರ ತ್ಯಾಗವೇ ದೇಶವನ್ನುದ್ಧರಿಸಬೇಕು.

ಡಾ| ರವೀಂದ್ರನಾಥ ಠಾಕೂರರ ಅಸ್ವಸ್ಥ.

ಡಾ| ರವೀಂದ್ರನಾಥ ಠಾಕೂರರ ಅಸ್ವಸ್ಥದಿಂದ ದೇಶವು ಬಹಳವಾಗಿ ವ್ಯಾಥಿತವಾಗಿರುವುದು. ಪುತ್ರಶೋಕ ಸಂತಪ್ತವಾದ ಭಾರತೆಯು ಈ ಇನ್ನೊಂದು ಉಜ್ವಲ ಪುತ್ರ ರತ್ನದ ಮೇಲೆ [illegible] ತನ್ನ ಆದ್ರೆಳೆಯ ದೃಷ್ಟಿಯನ್ನು ಬೀರುವುದು. ನಮ್ಮ ರವೀಂದ್ರರು ಬೇಗನೆ ಸೌಖ್ಯವಾಗಲೆಂದು ಈಶ್ವರನನ್ನು ಪ್ರಾರ್ಥಿಸುವೆವು.

ಅನುಕ್ರಮಣಿಕೆ.

	ಪುಟ
ಅಗ್ರಲೇಖ	
ಹಿಂದೂ ಮಹಾಸಭೆ	೬
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೭
ದಕ್ಷಿಣ ಕನ್ನಡ— ಮಂಜೇಶ್ವರ, ಕುಂಬಳೆ, ಬಂಟ್ವಾಳ, ಪಾಣೆಮಂಗಳೂರು, ಅಗ್ರಹಾರ ಚರ್ಚ, ಫರಂಗಿಪೇಟೆ, ಕಾಪು	„
ಮಂಗಳೂರು	೭-೮
ವಿವಿಧ ವಿಷಯ	೮
ಮೋಟರ್ ನೋಟ್ಸು	೪

ಸ್ವದೇಶಾಭಿಮಾನಿ.

ಶಕ ೧೮೪೮ ಆ. ಚೈತ್ರ ಶು॥೧೨ಯು ಶುಕ್ರವಾರ.

ಹಿಂದೂ ಮಹಾಸಭೆ.

ಡಿಲ್ಲಿ ಅಧಿವೇಶನ.

ಹಿಂದೂಗಳ ಈಗಿನ ಪರಿಸ್ಥಿತಿಯು ಸ್ವಲ್ಪ ಮಟ್ಟಿಗೆ ವಿಚಿತ್ರತರವಾಗಿದೆ. ಏಕೆಂದರೆ ಹಿಂದೂಸ್ಥಾನವು ಒಂದು ಬಾರಿ ಹಿಂದೂಗಳವರದೇ ಆಗಿದ್ದು, ಈಗ ಹಿಂದೂಗಳೇ ಈ ದೇಶದಲ್ಲಿ ಬಹು ಸಂಖ್ಯಾಕರಾಗಿದ್ದರೂ, ಕಾರ್ಯತಃ ಅವರ ಶಕ್ತಿಯು ಅಲ್ಪ ಸಂಖ್ಯಾಕರಂತಿದೆಯೆಂಬುದನ್ನು ಹೆಚ್ಚು ಜನರು ತಿಳಿದಿರ ತೀರದಿರಲಿಕ್ಕಿಲ್ಲ. ಹಿಂದೂವೆಂಬ ಈ ವಿಶಾಲ ಸಮಾಜವನ್ನು ಒಂದೇ ಹೆಸರಿನಡಿಯಲ್ಲಿ ತಂದಿರುವರಾದರೂ, ಈ ಸಮಾಜದೊಳಗಿನ ಭೇದ ರಾಶಿಗಳನ್ನು ನೋಡಿದರೆ, ನಿಜವಾಗಿಯು ಈ ಎಲ್ಲಾ ಅಂತರ್ಭೇದಗಳನ್ನು ಒಂದೇ ಹೆಸರಿನಡಿಯಲ್ಲಿ ಇಡುವುದು ಅಸಾಧ್ಯವಾಗಿದೆ.

ಎಂದಿನ ವರೆಗೆ ಹಿಂದೂಗಳು ಜನಸಂಖ್ಯೆಯ ಸಾಧಾರಣ ಕಾಲುಪಾಲಷ್ಟಿರುವ ಅಸ್ಪೃಶ್ಯರನ್ನು ದೂರಮಾಡುವುದೊ ಅಂದಿನ ವರೆಗೆ ಹಿಂದೂಗಳು ಅವರನ್ನು ತಮ್ಮ ಸಂಖ್ಯೆಯೊಳಗೆ ಗಣಿಸಲಾರರು. ಈಗಿನ ಪರಿಸ್ಥಿತಿಯಲ್ಲಿ ಪಂಚಮರು ಯಾವ ಜಾತಿಯವರೆಂದು ನಿರ್ಣಯಿಸುವುದು ಕಷ್ಟವಿರುತ್ತದೆ. ಏಕೆಂದರೆ ಅವರ ಹಿತದ ದೃಷ್ಟಿಯಲ್ಲಿ ಯೋಚಿಸುವುದಾದರೆ ಅವರು ಇತರ ಜಾತಿಗೆ ಸೇರುವುದು ಹಿಂದೂಗಳಾಗಿರುವುದಕ್ಕಿಂತ ಮೇಲೆನ್ನಲೂ ಬಹುದಾಗುತ್ತದೆ.

ಇತ್ತ ಉಳಿದವರ ಪೈಕಿ ಇತ್ತೀಚೆಯ ಭೇದಗಳ ಪೈಕಿ ಹಿಂದೂಗಳು ಮತ್ತು ಸನಾತನಿಗಳು ಎಂಬ ಭೇದವಿದೆ. ಇನ್ನು ಆರ್ಯ ಸಮಾಜ, ಬ್ರಹ್ಮ ಸಮಾಜ ಮತ್ತು ಸನಾತನೀಯರೆಂಬ ಭೇದವೂ ಇದೆ. ಮಾತ್ರವಲ್ಲದೆ ಬ್ರಾಹ್ಮಣೇತರರೆಂಬ ಹೊಸ ಪಂಗಡವೊಂದು ಹೊರಟು, ಅಲ್ಪ ಸಂಖ್ಯಾಕ ಬ್ರಾಹ್ಮಣರ ಮೇಲಿನ ಕೋಪದಿಂದ, ಇತರ ಮತಸ್ಥರನ್ನಾದರೂ ತಮ್ಮ ಪಂಗಡಕ್ಕೆ ಸೇರಿಸಿ ಹಿಂದೂತ್ವದ ಅಭಿದಾನವನ್ನೇ ಕಳಕೊಳ್ಳಲೆತ್ನಿಸುತ್ತಾರೆ. ಬ್ರಾಹ್ಮಣೇತರ ಪಂಗಡವು ಹಿಂದೂವಾಗಿರಲಾರದು. ಏಕೆಂದರೆ, ಅದರಲ್ಲಿ ಮುಸಲ್ಮಾನ, ಕ್ರಿಸ್ತೀಯರಾದಿ ಇತರ ಮತಸ್ಥರೂ ಬಂದರು. ಹಿಂದೂವೆಂಬ ವಿಶಾಲ ಸಮಾಜದ ಬರೇ ಸಣ್ಣದೊಂದು ಶಾಖೆಯಾಗಿರುವ ಬ್ರಾಹ್ಮಣರ ಮೇಲಿನ ಕೋಪದಿಂದ ಬ್ರಾಹ್ಮಣೇತರರು ಹಿಂದೂತ್ವವನ್ನೇ ಕಳಕೊಳ್ಳಲು ಸಿದ್ಧರಾದುದು ದುಃಖಕರವಾದ ವಿಷಯ.

ಮುಸಲ್ಮಾನರೆಲ್ಲರೂ ತಮ್ಮ ತಮ್ಮೊಳಗಿನ ಭೇದಗಳನ್ನು ಅಡಗಿಸಿ ತಮ್ಮ ಅಖಂಡತೆಯನ್ನು ತೋರಿಸುವರು. ಕ್ರಿಸ್ತೀಯರಾದರೂ ಒಂದಾಗಲು ಹವಣಿಸುವರು. ಪಾರ್ಸಿ ಮುಂತಾದ ಇತರರೂ ಅಖಂಡತೆಯನ್ನು ತೋರಿಸುವರು. ಹಿಂದೂ ಸಮಾಜವು ಮಾತ್ರ ತತ್ವತಃ ಬಹು ಸಂಖ್ಯಾಕವಾಗಿದ್ದರೂ, ಕಾರ್ಯತಃ ಅನೈಕ್ಯದಿಂದ, ವಿಚ್ಛಿನ್ನವಾಗಿ, ಅಲ್ಪ ಸಂಖ್ಯಾಕವಾಗಿರುವುದು.

ಹಿಂದೂಮಹಾಸಭೆಯ ಸ್ಥಾಪನೆಯಾದಂದಿನಿಂದ ಹಿಂದೂಗಳ ಅಖಂಡತೆಯ ಕಡೆಗೆ ಅವಿಶ್ರಾಂತವಾಗಿ ಪ್ರಯತ್ನಗಳು ನಡೆಯುವುದು ಶುಭಚಿಹ್ನೆಯಾಗಿದೆ. ಹಿಂದೂಗಳು ಯಾವ ಬಾಹ್ಯ ಅವಮಾನವನ್ನಾಗಲೀ, ತತ್ವಾವರೋಧವನ್ನಾಗಲೀ ಏನೊಂದು ನಿಸೇಧವಿಲ್ಲದೇನೇ ಸಹಿಸುವರಾದರೂ, ಭ್ರಾತೃ ಭ್ರಾತೃಗಳ ಮಟ್ಟಿಗೆ ಹಿಂದೂ ಧಮನಿಯ ವೀರತೆಯು ಕಟ್ಟೆ ಬಿಚ್ಚಿ ಹೊರಹೊಮ್ಮುವುದು ಹಿಂದೂಗಳ ವೈಶಿಷ್ಟ್ಯ. ತಮ್ಮ ತಮ್ಮೊಳಗಿನ ವಾದಕ್ಕಾಗಿಯಾದರೆ ಜೀವವನ್ನು ಕೂಡ ಸಮರ್ಪಿಸಲು ಅವರು ಸಿದ್ಧರಿರುವವರು. ಹಿಂದೂ ಸುಧಾರಕರಾದರೂ ಅಸ್ಪೃಶ್ಯತೆಗಾಗಿ ಹೆಣಗಾಡಿದರೆ ಅವರಿಗೆ ಅಲ್ಲಿಸಿದು ಧರ್ಮ ಪ್ರೇಮವನ್ನು ವ್ಯಕ್ತಪಡಿಸುವಂತಹ ವೀರರು ಹಿಂದೂಗಳಲ್ಲಿರುವರು. ಅದೇ ಸರಕಾರವು ಪತ್ತಾಯದಿಂದ ಪಂಚಮರೊಡನೆ ಸಹ ಪಂಕ್ತಿಭೋಜನ ಮಾಡಿಸಿದಾಗ ಕೇಳುವವರಿಲ್ಲ. ಆ ಹಿಂದೂ ವೀರತೆಯು ಎಲ್ಲಿ ಅಡಗುವುದೊ, ಈ ತರದ ವೀರತೆಯು ನಮ್ಮ ಪೂರ್ವಜರಿಂದ ಜನ್ಮದತ್ತವಾಗಿ ಬಂದುದಾಗಿದೆ. ಭಾರತೇತಿಹಾಸವು ಈ ಪ್ರಚಂಡ ಸ್ವಾತ್ಮನಾಶದ ವೀರತೆಯ ಶಾಶ್ವತವಾದ ಸ್ಮಾರಕವಾಗಿದೆ.

ಆದುದರಿಂದ ಈ ವೀರತೆಯ ಭಯವೇ ಹಿಂದೂ ಮಹಾಸಭೆಯ ಭಾವೀ ಸುಖ ಜೀವನಕ್ಕೂ ಇದೆ. ಈ ವೀರತೆಯು ಈಗಲೂ ಕೂಡ ಕಾಂಗ್ರೆಸ್‌ನಲ್ಲಿಯೂ ಎಸೆಂಬ್ಲಿಯಲ್ಲಿ ಸ್ಪಷ್ಟವಾಗಿ ತಲೆದೋರುತ್ತಿದ್ದಾಗ, ಹಿಂದೂ ಮಹಾಸಭೆಯಲ್ಲಿಯೂ ಅದು ಬೇಗನೆ ಬರುವುದರಲ್ಲಿ ಹೆಚ್ಚಿನ ಸಂದೇಹವು ಕಾಣುವುದಿಲ್ಲ.

ಮೊನ್ನೆ ಡಿಲ್ಲಿಯಲ್ಲಿ, ಮಾರ್ಚಿ ತಾ. ೧೫—೧೬ರಲ್ಲಿ ನಡೆದ ಹಿಂದೂ ಮಹಾಸಭೆಯೊಳಗಿನ ಕೆಲವು ಘಟನೆಗಳು ಈ ತರದ ಹಿಂದೂ ತತ್ವಾಭಿಮಾನವನ್ನು ತೋರಿಸುತ್ತಿದೆ. ಪ್ರಬಲ ಹಿಂದೂವೂ, ಪ್ರಚಂಡ ಸಾಂಪ್ರದಾಯವಾದಿ (orthodox) ಯೂ ಆಗಿರುವ ಪಂಡಿತ ಮದನಮೋಹನ ಮಾಲವೀಯರೇ ಅಸ್ಪೃಶ್ಯತೆಗೂ ಶುದ್ಧೀಗೂ ಒಪ್ಪಿಗೆಯನ್ನಿತ್ತು ಹಿಂದೂ ಮಹಾಸಭೆಯಲ್ಲಿ ಅದನ್ನು ಮಂಜೂರು ಮಾಡಿಸಿರುವಾಗ ಹಿಂದೂಗಳಲ್ಲಿ ಸನಾತನಿಗಳೆಂಬ ಪಂಗಡದವರ ನಿಷೇಧವು ಬಲವಾಗಿ ಹೊರಟಿದೆ.

ತತ್ವಾಭಿಮಾನದಲ್ಲಿ ಹಿಂದೂಗಳು ಹಿಂದಲ್ಲ. ಅದರಲ್ಲಿ ಪೂರ್ವದಿಂದ ನಡೆದು ಬಂದ ಸಾಂಪ್ರದಾಯವಾದಿಗಳಾಗಿ ವೇದ ಪುರಾಣಗಳ ಆಧಾರಗಳನ್ನು ಶಬ್ದಗಳ, ಅಕ್ಷರಗಳ ಎಡೆ ಎಡೆಗಳಿಂದ ಕಿತ್ತು ತೆಗೆದು ತೋರಿಸಲಿಕ್ಕೆ ಹಿಂದೂಗಳು ಬಹಳ ಪ್ರತಿಭಾಶಾಲಿಗಳಾಗಿರುವರು. ಅಂತೆಯೇ ಅಸ್ಪೃಶ್ಯತೆಯನ್ನು ಸ್ಥಿರೀಕರಿಸಲಿಕ್ಕಾಗಿ ಸನಾತನ ಸಾಂಪ್ರದಾಯಗಳಲ್ಲಿ ಬಹು ಭಕ್ತಿಯಿಂದಿರುವ ಸನಾತನಿಗಳು ಬಹಳವಾಗಿ ಪ್ರಯತ್ನಿಸುತ್ತಿರುವುದು ಆಶ್ಚರ್ಯವಲ್ಲ. ಅಲ್ಲದೆ ವರ್ಣಾಶ್ರಮ ಭೇದಗಳಲ್ಲಿ ಅವಿಚಲ ಭಕ್ತಿ ಶ್ರದ್ಧೆಗಳನ್ನಿಟ್ಟ ಸನಾತನಿಗಳಿಗೆ ಶುದ್ಧಿಯು ಪ್ರಚಂಡ ಸಾಮರಕಾರ್ಯವಾಗಿ ತೋರುತ್ತಿದೆ. ಆದರೆ, ವರ್ಣಾಶ್ರಮ ಧರ್ಮವು ಸನಾತನವಾಗಿದ್ದರೆ, ಅದರೊಳಗೆ ಇತರ ಮತೀಯರಿಗೆ ಯಾವ ಸ್ಥಾನವಿದ್ದೀತೆಂಬುದನ್ನೂ ಯೋಚಿಸಬೇಕಾಗುತ್ತಿದೆ. ಅವರಿಗೆ ಆ ಭೇದಗಳಲ್ಲಿ ಸ್ಥಾನವಿಲ್ಲವಾದರೆ, ಆ ಭೇದವು ಪೂರ್ಣವಾಗಲಾರದು. ಭೇದವು ಅಪೂರ್ಣವಾದರೆ ಅದು ಸನಾತನವಾಗಲಾರದು.

ಈ ಚರ್ಚೆಯು ಹೇಗೂ ಇರಲಿ; ತತ್ವಗಳು ಸನಾತನೀಯರಿಗೆ ಅನುಕೂಲವಾಗಿಯೇ ಇರಬಹುದು. ಆದರೆ ಅದರಿಂದ ಹಿಂದೂ ಸಮಾಜಕ್ಕೆ ಹಾನಿಯೇನು ಎಂದು ಯೋಚಿಸಬೇಕು.

ಈ ಆರೇಳು ಮಿಲಿಯ ಪಂಚಮರು ಅಸ್ಪೃಶ್ಯರಾಗಿಯೇ ಇರತಕ್ಕುದಾದರೆ, ಅವರನ್ನು ಉದ್ಧರಿಸಲಿಕ್ಕೂ, ಅವರ ಜೀವನ ಕ್ರಮವನ್ನು ಪವಿತ್ರೀಕರಿಸಲಿಕ್ಕೂ, ಅವರ ವೃತ್ತಿಯನ್ನು ಸುಧಾರಿಸಲಿಕ್ಕೂ ಹಿಂದೂ ಸಮಾಜವು ಮೈದುಡಿಯದಿದ್ದರೆ, ಈ ಆರೇಳು ಮಿಲಿಯ ಜನರು ಕ್ರೈಸ್ತರಾಗಲಿ, ಮುಸಲ್ಮಾನರಾಗಲಿ ಏಕಾಗಬಾರದು? ಅವರು ಹೆಸರಿಗೆ ಮಾತ್ರ ಹಿಂದೂಗಳಲ್ಲದೆ, ಅವರಿಗೆ ದೇವರನ್ನು ನಾವು ಕೊಟ್ಟಿಲ್ಲ; ಪೂಜನವನ್ನು ನಾವು ಕೊಟ್ಟಿಲ್ಲ; ಆತ್ಮವನ್ನು ನಾವು ಕೊಟ್ಟಿಲ್ಲ; ಒಂದು ಜೀವನವನ್ನು ಕೂಡ ನಾವು ಕೊಟ್ಟಿಲ್ಲ. ಹಾಗಾದರೆ ಅವರ ಹಿತದಿಂದ ನೋಡುವುದಾದರೆ ಅವರೇಕೆ ಇತರ ಮತವನ್ನು ಮೆಲ್ಲನೆ ಸೇರುತ್ತಾ ಬಂದು ತಮ್ಮ ಜೀವನವನ್ನು ಸುಧಾರಿಸಿಕೊಳ್ಳಬಾರದು? ನಾವು ಅಸ್ಪೃಶ್ಯರ ಪ್ರಶ್ನೆಯನ್ನು ಕೇವಲ ಪಾರಮಾರ್ಥಿಕ ರೀತಿಯಲ್ಲಿ ತೆಗೆದುಕೊಂಡರೆ ಸಾಲದು. ಇತರ ಮತಗಳಲ್ಲಿದ್ದ ಮಾತ್ರಕ್ಕೆ ನರಕಕ್ಕೆ ಹೋಗುವರೆಂಬ ತತ್ವವು ಹಿಂದೂಗಳಲ್ಲಿಲ್ಲ. ಆದುದರಿಂದ ಯಾವ ಮತದಲ್ಲಿ ಅಸ್ಪೃಶ್ಯರಿಗೆ ಸ್ವಾರ್ಥವೂ, ಪರಮಾರ್ಥವೂ ಇಲ್ಲವೊ, ಅದನ್ನು ಅವರು ಬಿಟ್ಟು ಬೇರೊಂದರ ಕಡೆಗೆ ದೃಷ್ಟಿ ತಿರುಗಿಸಿದರೆ ಅದರಲ್ಲಿ ಯಾವ ಪಾಪವೂ ಇಲ್ಲ.

ನಿಸ್ವಾರ್ಥವಾಗಿ ಮಾತನಾಡುವುದಾದರೆ, ನಮ್ಮ ಜಿಲ್ಲೆಗೆ ಕ್ರೈಸ್ತ ಪಾದರಿಗಳು ಬಂದು ಅನೇಕರ ಜೀವವನ್ನು ಉಚ್ಚ ತರಗತಿಗೆ ತಂದರು. ಕ್ರೈಸ್ತ ಮತಕ್ಕೆ ಸೇರಿದವರ ಪೈಕಿ ಹೆಚ್ಚಿನವರು ಶೂದ್ರ ಜಾತಿಯವರಾಗಿರುವರು. ಈ ಜಾತಿಗಳು ಇನ್ನೂ ಕೋಂದಿ ತೆಗೆಯುವುದರಲ್ಲಿಯೂ, ಗಡಂಗು ನಡಿಸುವುದರಲ್ಲಿಯೂ, ಅರ್ಧ ಉಪವಾಸದಲ್ಲಿಯೂ ಇನ್ನೂ ಇವೆ. ಹಿಂದೂಗಳು ಇವರ ಉದ್ಧರಣೆಗಾಗಿ ಯಾವ ಕೆಲಸವನ್ನೂ ಮಾಡಿಲ್ಲ. ಆದರೆ ಕ್ರೈಸ್ತ ಪಾದರಿಗಳು ಅನೇಕರನ್ನು ಕ್ರೈಸ್ತರನ್ನಾಗಿ ಮಾಡಿ ಹಂಚಿನ ಕಾರಖಾನೆಗಳ ಮೂಲಕವೂ, ಕಬ್ಬಿಣದ ಕಾರಖಾನೆಗಳ ಮೂಲಕವೂ, ನೇಯುವ ಕಾರಖಾನೆಗಳ ಮೂಲಕವೂ, ಕೈಗಾರಿಕೆಗಳನ್ನು ಸ್ಥಾಪಿಸಿ ಅವರನ್ನು ಅವುಗಳಲ್ಲಿ ತಂಬೇತು ಮಾಡಿ ಜೀವನೋಪಾಯವನ್ನು ಕಲ್ಪಿಸಿದರು. ಮಾತ್ರವಲ್ಲದೆ ನಮ್ಮ ಜಿಲ್ಲೆಗೆ ನಿಜವಾಗಿ ಲಾಭಕರವಾದ ಕೈಗಾರಿಕೆಗಳು ಯಾವುವೆಂದು ತೋರಿಸಿಕೊಟ್ಟರು. ಒಂದು ದೃಷ್ಟಿಯಿಂದ ನೋಡಿದರೆ ಈ ಕ್ರೈಸ್ತರ ಈಗಿನ ಪರಿಸ್ಥಿತಿಯು ಹಿಂದಿನ ಅವರ ಸ್ಥಿತಿಗಿಂತ ಎಷ್ಟೋ ಮೇಲಾಗಿದೆಯೆಂದು ಒಪ್ಪಬೇಕು.

ಇತರ ಮತಸ್ಥರು ಈ ರೀತಿಯಲ್ಲಿ ತಮ್ಮ ಜಾತಿಗೆ ಸೇರಿದವರ ಬಗ್ಗೆ ಕೆಲಸ ಮಾಡಬಲ್ಲರಾದರೆ, ಮತ್ತು ಹಿಂದುಗಳು ವೇದಪುರಾಣಗಳ ಅಕ್ಷರಗಳನ್ನೇ ಎತ್ತಿ ಅವುಗಳ ಅರ್ಥವಿನ್ಯಾಸದಲ್ಲಿಯೇ ತೃಪ್ತರಾಗಿ, ಕೆಳಜಾತಿಯವರನ್ನು ಧರ್ಮದ ಹೆಸರಿನಲ್ಲಿ ತಿರಸ್ಕರಿಸುವರಾದರೆ ಅವರ ಹಿತದ ದೃಷ್ಟಿಯಲ್ಲಿ, ಅವರು ಹಿಂದುಗಳಾಗಿ ಪ್ರಯೋಜನವೇ ಇಲ್ಲವೆನ್ನಬೇಕಾಗುತ್ತದೆ.

ಹಿಂದೂ ಮಹಾಸಭೆಯು ಈ ವಿಷಯದಲ್ಲಿ ಸರಿಯಾದ ಅಭಿಪ್ರಾಯವನ್ನು ಪಡೆದು, ಪಂಚಮರಿಗೆ ದೇವಸ್ಥಾನಗಳಲ್ಲಿ ಕೂಡ ಪ್ರವೇಶ ಕೊಡಬೇಕಾಗಿ ವಿನಂತಿ ಮಾಡಿಕೊಳ್ಳುವಷ್ಟು ಮುಂಬರಿದುದು ಅಭಿನಂದನೀಯ. ಸನಾತನಿಗಳು ನಿಷೇಧಗಳನ್ನೆಬ್ಬಿಸಿ ಹಿಂದೂತ್ವದ ಶಿಥಿಲತೆಯನ್ನು ಸಾಧಿಸುವರೇ ವಿನಹ ಆ ಚಳವಳದಿಂದ ಬೇರೆ ಪ್ರಯೋಜನವಿಲ್ಲವೆನ್ನಬೇಕಾಗುತ್ತದೆ.

ಇನ್ನು ಶುದ್ಧಿಯ ವಿಷಯದಲ್ಲಿಯೂ ಸನಾತನಿಗಳ ನಿಷೇಧವಿದೆ. ಅಸ್ಪೃಶ್ಯತಾ ನಿವಾರಣೆಯನ್ನು ನಿರೋಧಿಸುವವರು ಶುದ್ಧಿಯನ್ನು ನಿರೋಧಿಸುವುದಾದರೂ, ಆ ಆದರ್ಶದಿಂದ ಸತರ್ಕವಿದೆ. ಆದರೂ ಕ್ರೈಸ್ತರೂ, ಮುಸಲ್ಮಾನರೂ ಹಿಂದುಗಳೊಳಗಿಂದಲೇ ತಮ್ಮ ಸಂಖ್ಯೆಯನ್ನು ಬಲಪಡಿಸಿಕೊಂಡು ಸಾಮಾಜಿಕ ರೂಪದಲ್ಲಿಯೂ ರಾಜಕೀಯ ರೂಪದಲ್ಲಿಯೂ ಪ್ರಬಲರಾಗಿ ಬರುತ್ತಿರುವ ಈ ಸಮಯದಲ್ಲಿ ಶುದ್ಧಿಯನ್ನು ನಿರೋಧಿಸುವುದು, ಆತ್ಮಘಾತುಕತೆಯ ಲಕ್ಷಣವಲ್ಲದೆ ಬೇರೆನೂ ಅಲ್ಲ. ಹಿಂದೂಗಳಲ್ಲಿ ಬಹುಮತವು ಶುದ್ಧಿಯನ್ನು ಅನುಮೋದಿಸುವುದರಲ್ಲಿರಬಹುದೆಂದು ನಾವು ಆಶಿಸುವೆವು. ಸಾಂಪ್ರದಾಯವಾದಿಗಳು ಹಿಂದೂ ಸಮಾಜದಲ್ಲಿ ಕಡಿಮೆಯಾಗಿಲ್ಲವಾದರೂ ಮುಹೂರ್ತದ ಅವಶ್ಯಕತೆಯನ್ನು ತಿಳಿದು ಎಲ್ಲರೂ ಶುದ್ಧಿಗೆ ಸಮ್ಮತಿಯನ್ನು ಕೊಡಬೇಕಾಗಿದೆ.

ಮುಸಲ್ಮಾನರು ಮುಸ್ಲಿಮ್ ಲೀಗ್ ಮುಖಾಂತರವೂ, ಅಲ್ಲದೆ ಇತರ ಮತಸಂಸ್ಥೆಗಳ ಮೂಲಕವೂ ತಮ್ಮ ಮತಾಧಿಕಾರಗಳನ್ನೂ, ರಾಜಕೀಯ ಅಧಿಕಾರಗಳನ್ನೂ ಬಲಪಡಿಸುತ್ತಿರುವಾಗ ಅದೇ ಚಳವಳವನ್ನು ಹಿಂದುಗಳು ನಡಿಸುವಾಗ ಹಿಂದೂ ಮುಸಲ್ಮಾನ ಐಕ್ಯದ ಉತ್ಸುಕತೆಯಲ್ಲಿ ಹಿಂದುಗಳೇ ಖಂಡಿಸುವುದು ದೋಷಕರವು. ಮುಖ್ಯವಾಗಿ, ಅಸ್ಪೃಶ್ಯತಾ ನಿವಾರಣೆ, ಶುದ್ಧಿ, ಸಂಘಟನೆ ಈ ಮೂರು ಚಳವಳಗಳನ್ನು ಹಿಂದೂ ಮಹಾಸಭೆಯು ಬಲವಾಗಿ ನಡಿಸಬೇಕು. ಆಗ ಮಾತ್ರವೇ ಹಿಂದೂ ತತ್ವಗಳು ಕಾರ್ಯಕಾರಿಯಾಗುವುವು. ಇಲ್ಲವಾದರೆ ಅವು ಬರೇ ಸುಷುಪ್ತ್ಯಾವಸ್ಥೆಯಲ್ಲಿಯೇ ಇರಬೇಕಾಗುವುದು.

ಹಿಂದೂ ಮಹಾಸಭೆಯಲ್ಲಿ ಬಂದ ಇನ್ನೊಂದು ಚಳವಳದ ವಿಷಯವಾಗಿಯೂ ನಮ್ಮ ಕೆಲಮಾತುಗಳನ್ನು ಇಲ್ಲಿ ಸೂಚಿಸದಿರಲಾರೆವು. ಅದೇನಂದರೆ—ಮುಸಲ್ಮಾನರು ಮುಸ್ಲಿಮ್ ಲೀಗ್ ಮೂಲಕ ಚುನಾವಣೆಗಳಿಗೆ ಉಮೇದ್ವಾರರನ್ನು ನಿಲ್ಲಿಸುವಾಗ, ಹಿಂದೂಗಳು ಹಿಂದೂ ಮಹಾಸಭೆಯ ಮೂಲಕ ಉಮೇದ್ವಾರರನ್ನು ನಿಲ್ಲಿಸಬೇಕೆಂಬುದು.

ಆದರೆ ಹಿಂದೂಗಳ ಪರಿಸ್ಥಿತಿಯೂ, ಮುಸಲ್ಮಾನರ ಪರಿಸ್ಥಿತಿಯೂ ಒಂದೇಯಾಗಿಲ್ಲ. ಮುಸಲ್ಮಾನರೊಳಗಿನ ಅಂತರ್ಭೇದಗಳು ಹಿಂದೂಗಳಿಗಿಂತ ಎಷ್ಟೋ ಪಾಲು ಕಡಿಮೆಯಿದೆ. ಅಲ್ಲದೆ ಇತ್ತೀಚೆಗೆ ಸಾಧಾರಣ ಎಲ್ಲವರ ರಾಜಕೀಯ ಧೋರಣವೂ ಒಂದೇಯಾಗಿದೆ. ಈ ಕಲವು ವರ್ಷಗಳಲ್ಲಿ ನಡೆದ ಹಿಂದೂ ಮುಸಲ್ಮಾನ ಕಲಹಗಳಲ್ಲಿ, ಸರಕಾರವು ಸಾಧಾರಣವಾಗಿ ಮುಸಲ್ಮಾನರನ್ನೆ ಹತ್ತಿರ ಮಾಡಿಕೊಂಡದರಿಂದಲೂ, ಮುಸಲ್ಮಾನ ಹಿತದ ಸಂಬಂಧವಾದ ಇತರ ಪ್ರಶ್ನೆಗಳಲ್ಲಿಯೂ ಮುಸಲ್ಮಾನ ಧುರೀಣರಿಗೂ ಇತರ ಧುರೀಣರಿಗೂ ಮಧ್ಯದಲ್ಲಿ ಅವಿಶ್ವಾಸವುಂಟಾದುದರಿಂದಲೂ ಮುಸಲ್ಮಾನರಿಗೆ ಬಹುವಾಗಿ ಸರಕಾರದ ಆಶ್ರಯವೇ ಹೆಚ್ಚಿನ ಲಾಭವಾಗಿ ಪರಿಣಮಿಸಿಯದೆ. ಪ್ರಾಯಶಃ ಎಲ್ಲವರೂ ಸ್ವತಂತ್ರಪಕ್ಷದವರೆ.

ಹಿಂದೂಗಳಲ್ಲಿ ಅನೇಕ ತರದ ಭೇದಗಳಿವೆ. ಪಂಡಿತ ಮೋತಿಲಾಲರು ಸೂಚಿಸಿದಂತೆ, ಹಿಂದೂಗಳಲ್ಲಿ ಲಿಬರಲ್, ಸ್ವರಾಜ್ಯಿಷ್ಟ, ಇಂಡಿಪೆಂಡೆಂಟ್, ರಿವೊಲ್ಯೂಶನೂ ಮೊದಲಾದ ರಾಜಕೀಯ ಧೋರಣಗಳಲ್ಲಿ ಭೇದವಿದ್ದವರಿದ್ದಾರೆ. ಅಲ್ಲದೆ ಬ್ರಾಹ್ಮಣ ಬ್ರಾಹ್ಮಣೇತರರೆಂದ ಭೇದವೂ ಇದೆ. ಅಲ್ಲದೆ ಚುನಾವಣೆಗಾಗಿ ಉಮೇದ್ವಾರರನ್ನು ಚುನಾಯಿಸುವ ಪ್ರಸಂಗದಲ್ಲಿ ಪರಸ್ಪರ ಅನುಮಾನಗಳು ಹುಟ್ಟಿ, ಮನಃಕ್ಲೇಶ ಉಂಟಾಗಲು ಕಾರಣವಿದೆ. ಇದರಿಂದ ಹಿಂದೂ ಅಖಂಡತೆಯಾಗುವ ಬದಲು ತೀಕ್ಷ್ಣ ವಿರೋಧಗಳು ಒಳಗೊಳಗೆ ಹುಟ್ಟಿ ಹಿಂದೂ ಮಹಾಸಭೆಯು ಶಿಥಿಲವಾಗಿ ಹೋಗಲಿದೆ. ಇವೆಲ್ಲವುಗಳ ಕಡೆಗೆ ಎಚ್ಚರವಿದ್ದು ಈ ಸಮಸ್ಯೆಯಲ್ಲಿ ಕೈಹಾಕುವುದು ಉತ್ತಮ.

ಡಿಲ್ಲಿಯ ಹಿಂದೂ ಮಹಾಸಭೆಯು, ಅದರ ಮುಂದಿನ ಪ್ರಾಮುಖ್ಯತೆಯನ್ನು ಚೆನ್ನಾಗಿ ಸೂಚಿಸುತ್ತದೆ. ಇಂತಹ ಅತೀ ಮುಖ್ಯವಾದ ವಿಷಯಗಳನ್ನು ಇಷ್ಟು ಬೇಗನೆ ಎತ್ತಿ ಚರ್ಚಿಸಿದುದೇ ಅದರ ಉತ್ಸಾಹದ ಮತ್ತು ಕಾರ್ಯಕಾರಿತೆಯ ಶುಭ ಚಿಹ್ನೆ. ಹಿಂದೂಗಳು ಈ ಮಹಾಸಭೆಯ ಅಡಿಯಲ್ಲಿ ಒಗ್ಗಟ್ಟನ್ನು ಹೊಂದಲೆಂದು ಹಿಂದೂ ಭಾಗ್ಯ ವಿಧಾತನಲ್ಲಿ ನಮ್ಮ ಮೊರೆಯಿದೆ.

ವಿದೇಶ ವರ್ತಮಾನ.

—ಯುನೈಟೆಡ್ ಸ್ಟೇಟ್ಸಿನ ನ್ಯೂಯೋರ್ಕ ಪಟ್ಟಣದಲ್ಲಿ ಮಾರ್ಚಿ ೧೬ನೇ ತಾರೀಕಿನ ಬೆಳ್ಗಿನ ಜಾವದಲ್ಲಿ ಮ್ಯೂಜಿಯಮಿಗೆ ಬೆಂಕಿ ಹಿಡಿದು ಅನೇಕ ಮೃಗಪಕ್ಷಿಗಳು ಮರಣಹೊಂದಿದವು. ಈ ರೀತಿಯಲ್ಲಿ ಇಷ್ಟರ ವರೆಗೆ ಮೃಗಗಳು ನಾಶವಾಗಲಿಲ್ಲವಂತೆ. ಒಂದು ಸಾವಿರ ಕೆನೆರಿಪಕ್ಷಿಗಳು; ಐನೂರು ಅಂದವಾದ ಇತರ ಪಕ್ಷಿಗಳು; ನೂರಐವತ್ತು ಮಂಗಗಳು ಮರಣಹೊಂದಿದವು. ಒಬ್ಬ ಪೋಲೀಸ ಕೊನ್ಸಟೇಬಲನು ಮಾರ್ಗದಿಂದ ಹೋಗುವಾಗ ಮಕ್ಕಿ ಮತ್ತು ಪೆರಕೀಟ ಪಕ್ಷಿಗಳ ಕೂಗು ಕೇಳಿಸಿತು. ಬೆಂಕಿ ನೊಂದಿಸಲಿಕ್ಕೆ ಹೋದವರು ಗೂಡಿನಲ್ಲಿದ್ದ ಮೃಗಪಕ್ಷಿಗಳು ಜ್ವಾಲೆಯನ್ನು ತಡೆಯಲಾರದ ಗೂಡಿನಿಂದ ತಪ್ಪಿಸಿಕೊಳ್ಳಲು ಸಾಧಿಸುತ್ತಿದ್ದವು. ಹಲವು ಅಲ್ಲಲ್ಲೇ ಜೀವಬಿಟ್ಟಿದ್ದವು. ಒಂದು ಬಬೂನು ಅದರ ಜೋಡಾದ ಮರಣಹೊಂದಿದ ಹೆಣ್ಣು ಬಬೂನಿನ ಶವದ ಹತ್ತಿರವೆ ಮಲಗಿ ದುಃಖಿಸುತ್ತಿತ್ತು! ಒಂದು ಮಂಗವು ತನ್ನ ಮರಿಯನ್ನು ಜ್ವಾಲೆಯಿಂದ ತಪ್ಪಿಸುವುದಕ್ಕಾಗಿ ಅದರ ಮೇಲೆ ಮಲಗಿ ತನ್ನ ಜೀವಬಿಟ್ಟಿದ್ದಿತು. ಒಂದು ಬೆಕ್ಕು ತನ್ನ ಮೂರು ಮರಿಗಳನ್ನು ಭದ್ರವಾದ ಸ್ಥಳಕ್ಕೆ ಒಯ್ಯುತ್ತಿತ್ತು.

—ಡೆನ್ಮಾರ್ಕಿನ ಬೊಟವೆಂಡ ಮತ್ತು ಬರ್ಕೆಂಡ ಎಂಬ ಇಬ್ಬರು ವೈಮಾನಿಕರು ಮಾರ್ಚಿ ೧೬ನೇ ತಾರೀಕಿನ ಬೆಳ್ಗೆ ೧೧ ಗಂಟೆಗೆ ವಿಮಾನಗಳಲ್ಲಿ ಕೈರೊ, ಬಗ್ದಾದ, ಕಲ್ಕತ್ತ, ಬೆಂಗಕೊಕ್, ಪೆಕಿಂಗ ದಾರಿಯಾಗಿ ಜಪಾನಿನ ರಾಜಧಾನಿಯಾದ ಟೋಕಿಯೊ ಪಟ್ಟಣಕ್ಕೆ ಹೊರಟರು.

—ಇಂಡಿಯದ ಸ್ಟೇಟಸೆಕ್ರೆಟರಿಯವರು ಹಿಂದೂದೇಶದ ಆಡಳಿತೆಯ ವಿಷಯ ತರಬಹುದಾದ ಯಾವ ಸಂಗತಿಯಲ್ಲಾದರೂ ಆಲೋಚಿಸುವದಕ್ಕೆ ಪಾರ್ಲಿಮೆಂಟಿನ ಎರಡೂ ಸಭೆಗಳ ಒಂದು ಕಮಿಟಿಯನ್ನು ನೇಮಿಸುವದಕ್ಕಾಗಿ ಹೌಸ್ ಒಫ್ ಲೋರ್ಡ್ಸಿನವರು ಒಪ್ಪಿಗೆಕೊಟ್ಟಿರುವರು.

—ಇಂಗ್ಲೆಂಡಿನ ಮೆಂಚೆಸ್ಟರಿನ ಹತ್ತಿ ಗಿರಣಿಗಳ ಸಂಘದ ಸಭೆಯ ಸಮಯ ಅಧ್ಯಕ್ಷರು:—ಇಂಗ್ಲೆಂಡಿನ ಸ್ತ್ರೀಯರ ಪೋಷಾಕಿನ ನಮೂನೆಯು ವಿಶೇಷವಾಗಿ ಹೆಂಗಸರು ಆದಾಮನ ಹೆಂಡತಿಯಾದ ಹವ್ವಳಂತೆ ಬೆತ್ತಲೆಯಾಗಿ ಕಾಣುತ್ತಾರೆಂತಲೂ, ಆದುದರಿಂದ ಇಂಗ್ಲೆಂಡಿನ ಸ್ತ್ರೀಯರು ಇಂಡಿಯದ ಹೆಂಗಸರಂತೆ ಪೂರ್ಣ ದುಸ್ತನ್ನು ಧರಿಸಿ ಹೆಂಗಸರ ಮರ್ಯಾದೆಯನ್ನು ಕಾಪಾಡಬೇಕೆಂದು ಹೇಳಿದರು.

—ತುರ್ಕಿದೇಶದಲ್ಲಿ ಇನ್ನು ನಾಲ್ಕು ವರುಷಗಳಲ್ಲಿ ಕಬ್ಬಿಣ ಮತ್ತು ಕಲ್ಲಿದ್ದಲ್ಲಿನ ಕೈಗಾರಿಕೆಗಾಗಿ ೧೮ ಮಿಲಿಯ ತುರ್ಕಿ ಪವನುಗಳನ್ನು ಖರ್ಚು ಮಾಡಬೇಕೆಂದು ತುರ್ಕಿ ಎಸೆಂಬ್ಲಿಯಲ್ಲಿ ಸೆಂಕ್ಷನ್ ಮಾಡಿರುತ್ತಾರೆ.

—ಲೋರ್ಡ ವಿಲಿಂಗ್ಡನರು ಪೆಕಿಂಗ್ ಬಂದರದಿಂದ ಶಂಗಹಾಯ ಬಂದರಕ್ಕೆ ಬಂದಿರುವರು.

ಚೀನಾದೇಶದ ರಾಜಧಾನಿಯಾದ ಪೆಕಿಂಗ್‌ಪಟ್ಟಣದಲ್ಲಿ ಮಂತ್ರಿಗಳ ಸಭೆಯಲ್ಲಿ ಜನ ಸುರುವಾಗಿ ಗುಂಡುಹೊಡೆದು ೩೦ ಮಂದಿ ಮಡಿದರು. ೭೦ ಮಂದಿಗೆ ಗಾಯವಾಗಿದೆ.

ಕೊಲೊನ್ ಪ್ರಾಂತ್ಯ ಜರ್ಮನಿಯವರ ಸ್ವಾಧೀನವಾಯಿತು:—ಜರ್ಮನಿಯ ಪಶ್ಚಿಮಕ್ಕೆ ರ್‍ಹೈನ್ ನದಿಯ ದಡದಲ್ಲಿರುವ ಪ್ರಾಂತ್ಯಗಳು ಕಳೆದ ಭಯಂಕರವಾದ ಯುದ್ಧದ ಸಮಯ ಅದ ಶರ್ತಿಗಾಗಿ ಇಂಗ್ಲಿಷ ಮತ್ತು ಫ್ರೆಂಚರ ಸ್ವಾಧೀನವಾಗಿತ್ತು. ಜರ್ಮನಿಯವರು ಫ್ರಾನ್ಸ ಮತ್ತು ಇಂಗ್ಲೀಷರ ಸಾಲವನ್ನು ತೀರಿಸಿ ಈಗ ರ್‍ಹೈನ ಪ್ರಾಂತ್ಯವನ್ನು ಸ್ವಾಧೀನಪಡಿಸಿಕೊಂಡರು. ಇದೇ ಮಾರ್ಚಿ ೨ನೇ ತಾರೀಕಿಗೆ ರ್‍ಹೈನ್ ಪ್ರಾಂತ್ಯದ ಮುಖ್ಯ ಪಟ್ಟಣವಾದ ಕೊಲೊನ್‌ನಲ್ಲಿ ಈ ಪ್ರಾಂತ್ಯವನ್ನು ವಹಿಸಿಕೊಳ್ಳುವ ಸಮಾರಂಭಗಳು ಜರಗಿದವು. ಕೆಥಿಡ್ರಲ್‌ನ ಮೇಲೆ, ಮುಖ್ಯವಾದ ಕಟ್ಟಡಗಳ ಮೇಲೆಯೂ ಕಪ್ಪು, ಕೆಂಪು ಮತ್ತು ಭಂಗಾರ ವರ್ಣದಿಂದ ಕೂಡಿರುವ ಜರ್ಮನಿಯ ರಿಪಬ್ಲಿಕನ್ ಧ್ವಜವು ಏರಿಸಲ್ಪಟ್ಟಿತು. ಜರ್ಮನಿಯ ಈಗಿನ ಪ್ರೆಸಿಡೆಂಟರಾದ ಫೊನ್ ಹಿಂಡನ್‌ಬರ್ಗರವರು ಧ್ವಜಪತಾಕೆಗಳಿಂದ ಕೂಡಿದ ಮೆರವಣಿಗೆಯಿಂದ ರ್‍ಹೈನಪ್ರಾಂತ್ಯವನ್ನು ಅನ್ಯದೇಶಿಯರ ಕೈಯಿಂದ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಬಂದರು. ನಂತರ ಬಹಳ ದೊಡ್ಡ ಸಭೆಯು ಜರಗಿತು. ಇಂಥಾ ಸಭೆಯು ಇಷ್ಟರ ವರೆಗೆ ಜರ್ಮನಿಯಲ್ಲಿ ಜರಗಲಿಲ್ಲವಂತೆ. ಜರ್ಮನಿಯ ಎಲ್ಲಾ ಭಾಗಗಳಿಂದಲೂ ಜನರು ಇಲ್ಲಿಗೆ ಬರುತ್ತಿರುವರು. ಎಲ್ಲಾ ಸಮಾರಂಭವು ತೀರಿದ ಮೇಲೆ ಕೊಲೊನ ಮುನಿಸಿಪಾಲಿಟಿಯವರು ಫೊನ್ ಹಿಂಡನ್ ಬರ್ಗರಿಗೆ ಒಂದು ಬಿರುದನ್ನು ಕೊಟ್ಟರು.

ಒಳದೇಶ ವರ್ತಮಾನ.

—ಮುಂಬಾಯಿಯ ಗವರ್ನರರಾದ ಸರ್ ವಿಲ್ಸನರ ಧರ್ಮಪತ್ನಿಯವರಾದ ಲೇಡಿ ವಿಲ್ಸನರವರಿಗೆ ಕಠಿಣ ಅಸ್ವಸ್ಥವಾದ್ದರಿಂದ ಅವರಿಬ್ಬರೂ ವಿಲಾಯತಿಗೆ ತೆರಳಿದರು. ಕೌನ್ಸಿಲಿನ ಸೀನಿಯರ್ ಮೆಂಬರರಾದ ಸರ್ ಹೆನ್ರಿ ಲೋರೆನ್ಸರವರು ಆಕ್ಟಿಂಗ್ ಗವರ್ನರರಾಗಿ ಚಾರ್ಜು ನೋಡುತ್ತಿರುವರು.

—ಮದರಾಸು ಯುನಿವರ್ಸಿಟಿಯಲ್ಲಿ ಗಾಯನ, ಚಿತ್ರಕಲೆ, ಶಿಲ್ಪಶಾಸ್ತ್ರ, ಆರ್ಕಿಯೊಲೊಜಿ ಇವುಗಳ ಪ್ರತ್ಯೇಕ ಡಿಗ್ರಿಗಳನ್ನು ಕೊಟ್ಟು ಈ ಕಲೆಗಳನ್ನು ಅಭಿವೃದ್ಧಿಗೆ ತರಬೇಕೆಂಬ ಠರಾವು ಸೆನೆಟ ಮೀಟಿಂಗಿನಲ್ಲಿ ಪಾಸಾಗಿ ಎಕೆಡೆಮಿಕ್ ಕೌನ್ಸಿಲಿನ ಆಲೋಚನೆ ಬಗ್ಗೆ ಕಳುಹಿಸಲಾಯಿತು. ಆಯುರ್ವೇದ ಮತ್ತು ಯುನಾನಿ ವೈದ್ಯರಿಗೂ ಡಿಗ್ರಿಗಳನ್ನು ಕೊಡಬೇಕೆಂಬ ಠರಾವು ಅದೇ ಕೌನ್ಸಿಲಿಗೆ ಕಳುಹಿಸಲ್ಪಟ್ಟಿತು. ಯುನಿವರ್ಸಿಟಿಗೆ ಸೇರಿದ ಕೊಲೇಜುಗಳಲ್ಲಿ ಹೊಸ್ತಲು ಇರಬೇಕೆಂದೂ ತುಮಿಳು ಡಿಕ್ಷನೇರಿಯ ಕೆಲಸವನ್ನು ೧೯೧೩ರಲ್ಲಿ ಶುರುಮಾಡಿದರೂ ಅದರ ಕೆಲಸವು ಇನ್ನೂ ಮುಗಿಯದೆ ಇರುವುದರಿಂದ ಅದರ ವಿಷಯ ತನಿಖೆ ನಡಿಸಿ ಬೇಗನೇ ಆ ಕೆಲಸವು ಆಗುವಂತೆ ಮಾಡಬೇಕೆಂದೂ ಸೆನೆಟ ಮೀಟಿಂಗಿನಲ್ಲಿ ಪಾಸಾಯಿತು.

—ಆಂಧ್ರ ಯುನಿವರ್ಸಿಟಿ ಆಕ್ಟ ೧೯೨೬ನೇ ಇಸವಿ ಎಪ್ರಿಲ್ ೨೬ನೇ ತಾರೀಕಿನಿಂದ ಜ್ಯಾರಿಗೆ ಬರುತ್ತದೆ. ಇದರ ಪ್ರಕಾರ ಗಂಜಾಂ, ವಿಶಾಖಪಟ್ಟಣ, ಗೋದಾವರಿ ಪೂರ್ವ, ಗೋದಾವರಿ ಪಶ್ಚಿಮ, ಕೃಷ್ಣ, ಗುಂಟೂರು, ನೆಲ್ಲೂರು, ಕಡಪ, ಕರ್ನೂಲು, ಬಳ್ಳಾರಿ, ಅನಂತಪುರ ಮತ್ತು ಚಿತ್ತೂರು ಜಿಲ್ಲೆಗಳಿಗಾಗಿ ಈ ಯುನಿವರ್ಸಿಟಿಯು ಸ್ಥಾಪಿಸಲ್ಪಡುವುದು.

—ಎಪ್ರಿಲ್ ೬ನೇ ತಾರೀಕಿನಿಂದ ೧೩ನೇ ತಾರೀಕು ವರೆಗೆ ನೇಶನಲ್ ವಾರವನ್ನು ಆಚರಿಸಬೇಕಾಗಿ ಯಂಗ್ ಇಂಡಿಯದಲ್ಲಿ ಮಹಾತ್ಮಾ ಗಾಂಧಿಯವರು ಬರೆದಿರುತ್ತಾರೆ. ಈ ಸಮಯದಲ್ಲಿ ಖದ್ದರ್ ಮಾರಬೇಕೆಂದೂ, ನೂಲು ಮಾಡಬೇಕೆಂದೂ, ಓಲ್ ಇಂಡಿಯಾ ದಾಸ ಮೆಮೋರಿಯಲ್ ಫಂಡಿಗೆ ಹಣ ಕೂಡಿಸಬೇಕೆಂದೂ, ಹರತಾಳವನ್ನು ಆಚರಿಸಬಾರದೆಂದೂ ಜಿಲಿಯನ್‌ವಾಲಾ ಬಾಗ್ ಬಿಲ್ಡಿಂಗನ್ನು ಮಾಡಬಾರದೆಂದೂ ವಿವರವಾಗಿ ಬರೆದಿರುವರು.

—ಎಂಗ್ಲೋ ಇಂಡಿಯನರ ಒಂದು ಪ್ರತ್ಯೇಕ ಸೈನ್ಯವನ್ನು ಇಡಬೇಕೆಂದು ಅವರು ಒಂದು ಮೆಮೋರಿಯಲ್ ಕಳುಹಿಸಿದ್ದರು. ಅದರ ಪ್ರಕಾರ ಅವರದೇ ಒಂದು ಪ್ರತ್ಯೇಕ ಸೈನ್ಯ ಮಾಡುವದೆಂದು ಇಂಡಿಯಾ ಸರಕಾರದವರು ನಿಶ್ಚಯಿಸಿರುತ್ತಾರೆ.

—ಡೊ। ರವೀಂದ್ರನಾಥ ಠಾಕೂರರವರ ಶಾಂತಿನಿಕೇತನದ ವಿದ್ವಾಂಸರಾದ ಇಟೇಲೀದೇಶದ ಕಾರ್ಲೊ ಫೊರ್ಮಿಚಿ ಎಂಬವರು ಮುಂಬಾಯಿಯಿಂದ ಜಿನೋವಾ ಊರಿಗೆ ಮಾರ್ಚಿ ೧೯ರಲ್ಲಿ ಹೊರಟು ಹೋದರು.

—ಬರೋಡ ಗವರ್ನರರು ರಂಗೂನ ಬಂದರದ ಪೋರ್ಟ ಕಮಿಶನರ ಅಧೀನಿನ ಬುಹಾದಿಕಲ್ಲನ್ನು ಹಾಕಿದರು.

—ಬಿಹಾರ ಮತ್ತು ಒರಿಸ್ಸಾ ರಿಸರ್ಚ ಸೊಸೈಟಿಯ ವರ್ಷಾವಧಿ ಸಭೆಗೆ ಅದೇ ಸಂಸ್ಥಾನ ಗವರ್ನರರು ಅಧ್ಯಕ್ಷರಾಗಿದ್ದರು.

—ಭೋಪಾಲ ಬೇಗಮರ ಕಿರೇ ಮಗನಾದ ಹಮಿದುಲ್ಲಖಾನರು ಬೇಗಮರ ಉತ್ತರಾಧಿಕಾರಿಯೆಂದು ಇಂಡಿಯಾ ಸರಕಾರದವರು ಅಪ್ಪಣೆಕೊಟ್ಟರು.

—ಬಲುಚಿ ಸಂಸ್ಥಾನದಲ್ಲಿರುವ ಕೊಜಾಕ್ ಪಾಸಿನ ಹತ್ತಿರ ಸನ್ ಒಬ್ಸರ್ವೇಟರಿಯನ್ನು ಸ್ಥಾಪಿಸಲಿಕ್ಕೆ ಯೋಗ್ಯವಾದ ಸ್ಥಳವೆಂದು ಆರಿಸಿರುತ್ತಾರೆ.

—ಕಲ್ಕತ್ತದ ಮೆಡಿಕಲ್ ಕೊಲೆಜ್ ಆಸ್ಪತ್ರೆಯಲ್ಲಿ ಒಂದು ಶಸ್ತ್ರಗಳ ಪೆಟ್ಟಿಗೆಯು ಕಾಣೆಯಾಯಿತು. ಅಲ್ಲಿ ಸುಮಾರು ೪೦೦ ಮಂದಿ ವೈದ್ಯ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಈ ವಿದ್ಯಾರ್ಥಿಗಳಲ್ಲಿ ಒಬ್ಬನು ಇದನ್ನು ತೆಗೆದಿರಬೇಕೆಂದು ಸರ್ಜನರು ಅವನನ್ನು ಗದರಿಸಿದರು. ೪೦೦ ಮಂದಿ ಹುಡುಗರು ತಮಗೆ ಅವಮಾನವಾಯಿತೆಂದು ಸ್ಟ್ರೈಕ್ ಮಾಡಿರುತ್ತಾರೆ. ಈ ಹುಡುಗರು ರೋಗಿಗಳ ಆರೈಕೆಯನ್ನು ನೋಡುತ್ತಿದ್ದುದರಿಂದ ಬಹಳ ಕಷ್ಟವಾಗಿಯದೆ.

—ಇಂಡಿಯದ ಹುಡುಗರಿಗೆ ನೌಕಾ ವಿದ್ಯೆಯಲ್ಲಿ ತರಬೇತಿ ಮಾಡಲಿಕ್ಕೆ ಒಂದು ಯುದ್ಧದ ಹಡಗವನ್ನು ತಯಾರಿಸಬೇಕೆಂದು ಎಸೆಂಬ್ಲಿಯಲ್ಲಿ ನಿಶ್ಚಯವಾಯಿತು.

—ಎಪ್ರಿಲ್ ಒಂದನೇ ತಾರೀಕಿಗೆ ಓಲ್ ಇಂಡಿಯಾ ಸ್ವರಾಜಿಸ್ಟರ ಒಂದು ಸಭೆಯು ಮುಂಬಾಯಿಯಲ್ಲಿ ಜರಗುವುದು.

ದಕ್ಷಿಣ ಕನ್ನಡ.

ಮಂಜೇಶ್ವರ:— ಶ್ರೀ ಮದನಂತೇಶ್ವರ ದೇವಸ್ಥಾನದ ಟ್ರಸ್ಟಿ ಮೆಂಬರಿಕೆಗೆ ರಾ. ಮಂಜುನಾಥರಾಯ ಕಿಣ್ವಿಯರು ಚುನಾಯಿಸಲ್ಪಟ್ಟಿದ್ದರಷ್ಟೆ. ಈಗ ಆ ಚುನಾವಣೆಯನ್ನು ರದ್ದುಪಡಿಸಬೇಕಾಗಿ ಅದೇ ಸ್ಥಾನಕ್ಕೆ ಉಮೇದುವಾರರಾಗಿದ್ದ ಉಮೇದುವಾರಿಕೆಯನ್ನು ಹಿಂತೆಗೆದ ರಾ. ಸರ್ವೋತ್ತಮ ಕಿಣ್ವಿಯರು ಮಂಗಳೂರ ಸಬ್ ಕೋರ್ಟಿನಲ್ಲಿ ಅರ್ಜಿ ಕೊಟ್ಟು ತತ್ಕಾಲಕ್ಕೆ ಒಂದು ಇಂಜಕ್ಷನ್ ಹುಕುಂ ಹೊಂಟಿದೆ. ಕುದುರೆ ಇದ್ದರೆ ಮೈದಾನಿಗೆ ಕಡಮೆಯೇ?

ಇದೇ ತಿಂಗಳ ತಾ. ೨೨ರಲ್ಲು ಕಾಸರಗೋಡು ಮುನ್ಸಿಫ್ ಕೋರ್ಟಿನಿಂದ ವಾರಂಟು ಜಾರಿಗೆ ಬಂದ ಒಬ್ಬ ಪ್ರೊಸೆಸ್ ಸರ್ವರಿಗೆ ಕೆಲವು ಮಾಪಿಳ್ಳೆಯರು ಕೂಡಿ ಚೆನ್ನಾಗಿ ಹೊಡೆದರೆಂತಲೂ, ಈ ವಿಷಯ ಪಟೇಲರು ರಿಪೋರ್ಟು ಪಡೆದು ಮುಂದಿನ ವ್ಯವಹರಣೆ ನಡೆಯುವದಾಗಿಯೂ ಕೇಳುತ್ತೇವೆ.

ಶ್ರೀ ಮದನಂತೇಶ್ವರ ದೇವಸ್ಥಾನದ ಕಡೆಯಿಂದ ಅಕ್ಕಿ ಡಿಲಿವರಿ ಬಗ್ಗೆ ಬಂದ ಅಧಿಕಾರಿಗೂ ಮತ್ತು ಇತರರಿಗೆ ಹೊಡೆದು ಅಪಮಾನ ಪಡಿಸಿದರೆಂಬ ಸಬಬಿನ ಮೇಲೆ ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರಿಂದ ಚಾರ್ಜು ಮಾಡಲ್ಪಟ್ಟ ಸಿಪ್ರೆಸ್ ಮೊಂತೇರೊ ಎಂಬವರಿಗೆ ರೂ. ೬೦ ಜುಲ್ಮಾನೆ ವಿಧಿಸೋಣಾಗಿಯದಾಗಿ ಕೇಳುತ್ತೇವೆ. ಅಪಾದನೆ ಪಟ್ಟವನು ಕೋರ್ಟು ಕ್ಷಾರ್ಕನಂತೆ! ಅಪ್ಪೀಲಾಗಲಿಕ್ಕೆ ಇದೆಯಂತೆ!

ಕುಂಬಳೆ:— ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಲವರ್ ಎಲಿಮೆಂಟರಿ, ಬಾಲಿಕಾ ಪಾಠಶಾಲೆ ಮತ್ತು ಆರಿಕಾಡಿ ಬೋರ್ಡು ಎಲಿಮೆಂಟರಿ ಶಾಲೆಗಳ ವಾರ್ಷಿಕ ವರ್ಧಂತ್ಯುತ್ಸವವು ಇದೇ ತಾ. ೨ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಬಾಲಿಕಾ ಪಾಠಶಾಲೆಯಲ್ಲಿ ಶ್ರೀಯುತ ನರಸಿಂಹ ಲಕ್ಷ್ಮಣಾಯರ್ ಕಲಿರತ್ನ ಇವರ ಅಧ್ಯಕ್ಷತೆಯಿಂದ ಆಚರಿಸಲ್ಪಟ್ಟಿತು. ಈ ಸಮಾರಂಭಕ್ಕೆ ಕೆನರಾ ಗರ್ಲ್ಸರೆಂಜಿನ ಡಿಪ್ಯುಟಿ ಇನ್ಸಪೆಕ್ಟ್ರೆಸರೂ ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲಾ ಮುಖ್ಯೋಪಾಧ್ಯಾಯಿನಿಯರೂ ಇಲ್ಲಿಯ ಸ್ಥಳೀಯ ಗೃಹಸ್ಥರನೇಕರೂ ದಯಮಾಡಿದ್ದರು. ಸಭಾರಂಭದಲ್ಲಿ ಭಗವತ್ ಪ್ರಾರ್ಥನೆಯಾಗಿ ಶಾಲಾ ವರದಿಗಳು ಆಯಾ ಶಾಲೆಗಳ ಮುಖ್ಯ ಉಪಾಧ್ಯಾಯರುಗಳಿಂದ ಓದೋಣಾದ ಮೇಲೆ ಬಾಲಿಕಾ ಪಾಠಶಾಲೆಯ ಬಾಲಿಕೆಯರು "ಧ್ರುವ ಚರಿತ್ರ" ನಾಟಕವನ್ನು ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳು "ಸಾಹುಕಾರನೂ ದಲಾಲಿಯೂ" ಯೆಂಬ ಫಾರ್ಸನ್ನು ಲವರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳು ನೂತನವಾದ "ಆರ್ಜಾಕ್ಷ್ಯಮು ಸಂವಾದ" ನಾಟಕವನ್ನು ಚಲೋರೀತಿಯಿಂದ ಅಭಿನಯಿಸಿ ಸಭಿಕರನ್ನು ಆನಂದಗೊಳಿಸಿದರು. ನಾಟಕಗಳು ಚಿತ್ತಾಕರ್ಷವಾದ್ದರಿಂದ ಹಲವರು ಶಾಲಾ ಸದನದಲ್ಲಿ ಸ್ಥಳದೊರೆಯದೆ ಹಿಂತಿರುಗಬೇಕಾಯಿತು. ಅನಂತರ ಶಾಲಾ ವಿದ್ಯಾರ್ಥಿಗಳಿಗೆ ಅಧ್ಯಕ್ಷರು ಇನಾಮುಗಳನ್ನು ಹಂಚಿ, ಚಲೋ ಭಾಷಣವಾದ ಮೇಲೆ ಕೃತಜ್ಞತಾ ಪೂರ್ವಕ ಪನ್ನೀರು ಹೂವು ತಾಂಬೂಲಾದಿಗಳಿಂದ ಸಭೆಯು ಮುಕ್ತಾಯವಾಯಿತು.

ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಉಪಾಧ್ಯಾಯರಿಂದಲೆ ಕಳದ ವರ್ಷ ಸ್ಥಾಪಿಸಲ್ಪಟ್ಟ ಶ್ರೀ ಕೃಷ್ಣ ಪುಸ್ತಕ ಭಂಡಾರಕ್ಕೆ ತಾಲೂಕು ವ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾದ ಇಲ್ಲಿಯ ಮ। ರಾ। ರಾ। ಐ. ಚೆಕ್ಕಣ್ಣ ಭಂಡಾರಿಗಳವರು ಹಲವು ಪುಸ್ತಕಗಳನ್ನೂ ಉಚಿತವಾಗಿ ಕೊಟ್ಟಿರುವರು. ಈ ಪುಸ್ತಕಭಂಡಾರವನ್ನು ಅಭಿವೃದ್ಧಿಗೊಳಿಸುವಂತೆ ಶ್ರೀ ಕೃಷ್ಣನು ಇವರ ಮಹಾಶಿಯರಿಗೂ ಬುದ್ಧಿಕೊಟ್ಟು ಕರುಣಿಸಲಿ!

ಬಂಟವಾಳ:— ಇಲ್ಲಿಯ ಲೋಕಲ್ ಫಂಡ್ ಮಾರ್ಕೆಟು ಕಟ್ಟಿ ಒಂದು ವರ್ಷವಾದರೂ ಅದನ್ನು ಕಟ್ಟಿಸಿದ ಕಂಟ್ರ್ಯಾಕ್ಟರರಿಗೆ ಇನ್ನು ಹಣಸಿಕ್ಕಲಿಲ್ಲವಂತೆ! ಮಾರ್ಕೆಟಿನಿಂದ ವಸೂಲು ಮಾಡಿದ ಸುಂಕದ ಹಣದಿಂದಲಾದರೂ ಈ ಹಣವನ್ನು ಕೊಡಬಹುದಿತ್ತಲ್ಲವೇ? ಓವರ್‌ಸೀಯರರು ಬಂಟವಾಳಕ್ಕೆ ಬರುತ್ತಾರೆ, ಹೋಗುತ್ತಾರೆ; ಚೆಕ್‌ಮೆಜರು ಮಾಡಲಿಕ್ಕೆ ಸಮಯವಿಲ್ಲವೆ?

ಇಲ್ಲಿಯೇ ಕಾರಂಜೆಯಲ್ಲಿ ನಡೆದ ಕೊಲೆಪಾತಕ ಸಂಬಂಧದಲ್ಲಿ ಅಪಾದಿತರಾದ ನಾಲ್ಕು ಮಂದಿಗೆ ನಾಲ್ಕು ನಾಲ್ಕು ವರ್ಷಗಳ ಕಠಿಣ ಶಿಕ್ಷೆಯು ಸೆಷ್ಯನ್ ಜಡ್ಜರವರಿಂದ ಕೊಡಲ್ಪಟ್ಟಿತು. ಐದನೆಯವನಾದ ಹುಡುಗನೊಬ್ಬನಿಗೆ ಅವನ ಗುಣನಡತೆಯ ವಿಷಯ ಜಾಮೀನು ತೆಗೆದುಕೊಳ್ಳಲಾಯಿತು. ಬಾಂಸೆಟ್ಟಿಯೆಂಬವನ ಮೇಲೆ ರುಜುವಾತು ಇಲ್ಲವೆಂದು ಬಿಡೋಣಾಯಿತು.

ಪಾಣೆಮಂಗಳೂರಿನ ಹತ್ತಿರ ಪಕ್ಕಳಿಕ ಮನೆಯಲ್ಲಿದ್ದ ಛತ್ರವನ್ನು ಬಲಾತ್ಕಾರದಿಂದ ಕೊಂಡುಹೋದ ಸಂಬಂಧ ಸಬ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ತನಿಖೆಯಾಗುತ್ತದೆ.

ಮಂಗಳೂರು ಡಿವಿಜನಲ್ ಆಫೀಸರರು ಇಲ್ಲಿಗೆ ಶನಿವಾರ ದಿವಸ ಸರ್ಕೀಟಿಗೆ ಬಂದಿರುವರು. ಬಂಟವಾಳ, ಪಾಣೆಮಂಗಳೂರು, ನಾವೂರು ಗ್ರಾಮಗಳಲ್ಲಿ ಮಾರ್ಗ ಅಗಲಮಾಡುವುದಕ್ಕೆ ಮಾರ್ಗದ ಬದಿಗಳಲ್ಲಿದ್ದ ಸ್ಥಳ ಎಕ್ವಾಯರ್ ಮಾಡಿದರ ಹಣವನ್ನು ಆಯಾ ಭೂಮಾಲಿಕರಿಗೆ ಕೊಡುತ್ತಿರುವರು.

ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಮೇಲಿನ ಮೂರು ದರ್ಜೆಗಳನ್ನು ಪುಂಜಾಲಕಟ್ಟೆಗೆ ಒಯ್ದು ಅಲ್ಲಿ ಹಾಯರ್ ಎಲಿಮೆಂಟರಿ ಶಾಲೆಯನ್ನು ತೆರಿಯುವರಂತೆ.

ಪಾಣೆಮಂಗಳೂರು:— ಈ ಸೆಂಟರಿನ ಕೋ-ಒಪರೇಟಿವ್ ಯೂನಿಯನ್ನಿನ ಮಹಾಸಭೆಯು ಜರಗಿ, ಬರುವ ಅಫೀಶಿಯಲ್ ವರುಷ ಆಯಾ ಸೊಸೈಟಿಗಳು ಬೇಂಕಿನಿಂದ ತೆಗಿಯಬೇಕಾದ ಹಣ ಇಂತಿಷ್ಟೆ ಎಂದು ನಿಶ್ಚಯಿಸಲಾಯಿತು. ಸೊಸೈಟಿಗಳು ಸರಿಯಾಗಿ ನಡಿಯದೆ ಇದ್ದರೂ ಮಹಾ ಸಭೆಗಳಿಗೇನೂ ಕಡಿಮೆ ಇಲ್ಲ!

ಅಗ್ರಹಾರ ಚರ್ಚ:— ಇದಕ್ಕೆ ಸಮ್ಮಂಧಪಟ್ಟ ಎಲಿಮೆಂಟರಿ ಶಾಲೆಯನ್ನು ಜಿಲ್ಲಾ ಎಜ್ಯುಕೇಶನ್ ಆಫೀಸರರು ಸಂದರ್ಶಿಸಿ ಶಾಲೆಯು ಒಳ್ಳೇ ರೀತಿಯಲ್ಲಿ ನಡಿಯುತ್ತದೆಂದು ಸಂತೋಷಪಟ್ಟು ತೆರಳಿದರು.

ಫರಂಗಿಪೇಟೆ:— ಜಿಲ್ಲಾ ಎಜ್ಯುಕೇಶನ್ ಆಫೀಸರರು ಕಳೆದವಾರ ಇಲ್ಲಿಯ ಶ್ರೀರಾಮಾಚಾರ್ಯರ್ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿ ಮಂಗಳೂರಿಗೆ ತೆರಳಿದರು.

ಕಾಪು:— ಇಲ್ಲಿ ಒಂದು ತಿಂಗಳ ಹಿಂದೆ ಶಾಣೆಯವರ ಬಗ್ಗೆ ಸರಕಾರದವರು, ಮಲ್ಲಾರು ಗ್ರಾಮದಲ್ಲಿ ಒಂದು ಹೊಸ ಶಾಲೆಯನ್ನು ತೆರೆದಿರುವರು.

ಇಲ್ಲಿಯ ತಾಲೂಕು ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ಹೆಚ್ಚೆಚ್ಚಾಗುತ್ತಾ ಬರುತ್ತದೆ. ಶಾಲೆಯ ಕಟ್ಟೋಣವಿಲ್ಲ. ಸ್ಥಳ ಸಾಲದೆ ಇರುವುದರಿಂದ ಮಾನ್ಯ ಪ್ರೆಸಿಡೆಂಟರರು ಪ್ರತ್ಯೇಕ ಒಂದು ಕಟ್ಟೋಣವನ್ನು ನಿರ್ಮಿಸಿದರೆ ಶಾಲೆಯಲ್ಲಿ ಇನ್ನೂ ಮಕ್ಕಳ ಸಂಖ್ಯೆಯು ಹೆಚ್ಚಾಗುವರೆ ಸಂಶಯವಿಲ್ಲ.

ಇಲ್ಲಿಯ ಕಾಪು ಶ್ರೀ ಮಾರಿಗುಡಿಯ ದೇವಸ್ಥಾನದ ಆಡಳ್ತೆ ಮೊಕ್ತೇಸರರು ತನ್ನ ಕೆಲಸಕ್ಕೆ ರಾಜಿಕೊಡುವರಾಗಿ ಊರಲ್ಲೆಲ್ಲಾ ಸುದ್ದಿ! ಇವರ ಸ್ಥಾನಕ್ಕೆ ಯಾರು ಬರಲಿಕ್ಕಿದ್ದಾರೆಂಬುದು ಇನ್ನು ನೋಡಬೇಕಷ್ಟೆ!

ಕಾಪು ಶ್ರೀ ವೆಂಕಟ್ರಮಣ ದೇವಸ್ಥಾನದ ಹಿಂದುಗಡೆಯಲ್ಲಿ ನಿರ್ಮಿಸಿರುವ ಕೆರೆಯ ಕೆಲಸವು ಅಂತ್ಯವಾಗುತ್ತಾ ಬಂತು, ಕೆರೆಯ ನೀರನ್ನು ಸ್ವಚ್ಛ ಇಡುವ ಕಾಲವು ಇನ್ನು ಯಾವಾಗ ಬರುವುದೊ?

ಮಂಗಳೂರು.

ಇದೇ ಬರುವ ಎಪ್ರಿಲ್ ತಿಂಗಳ ೨ನೇ ತಾರೀಕು ಶುಕ್ರವಾರ ನೇಶನಲ್ ಮಿಶನರಿ ಸೊಸೈಟಿಯ ಜನರಲ್ ಸೆಕ್ರೆಟರಿಯವರಾದ ರಾಯ್‌ಬಹದೂರ್ ಎ. ಸಿ. ಮುಕರ್ಜಿ ಬಿ. ಎ. ಇವರು ಮಂಗಳೂರಿಗೆ ಬರುವರು. ಇವರ ಕಾರ್ಯ ಕ್ರಮವು ಹೇಗೆಂದರೆ ಎಪ್ರಿಲ್ ೨ ಶುಕ್ರವಾರ ೬ ಗಂಟೆಗೆ ವೈ. ಯಂ. ಸಿ. ಎ. ಯಲ್ಲಿ ಭಾರತ ಕ್ರೈಸ್ತ ಸೇವಕ ಸಮಾಜ (ನೇಶನಲ್ ಮಿಶನರಿ ಸೊಸೈಟಿ)ಯ ಸಂಬಂಧ ಭಾಷಣ.

೧೯೨೬ನೇ ಇಸವಿ ಮಾರ್ಚಿ ತಿಂಗಳ ತಾರೀಕು ೨೩ರಲ್ಲು ಮಂಗಳೂರು ಶ್ರೀ ಗೋಕರ್ಣನಾಥ ವೆಂಕಟೇಶ ಸೇವಾ ಸಮಿತಿಯ ಅಧ್ಯಕ್ಷರಾಗಿರುವ ರಾ। ಬಿ. ಸುಬ್ಬಯ್ಯನವರು ದಕ್ಷಿಣ ಕನ್ನಡಾ ಜಿಲ್ಲೆಯ ಬಿಲ್ಲವರ ಅಭಿವೃದ್ಧಿ ಬಗ್ಗೆ ಕೆಳಗಿನ ವಿಜ್ಞಾಪನೆಯನ್ನು ಪ್ರಕಟಿಸಬೇಕಾಗಿ ಸಮಿತಿಯು ಸರ್ವ ಸಮ್ಮತದಿಂದ ನಿರ್ಣಯಿಸಿದ ಪ್ರಕಾರ ಮಹಾಜನರಲ್ಲಿ ಮಾಡುವ ವಿನಂತಿ:—

ಮೇಲೆ ಹೇಳಿದ ಶ್ರೀ ಗೋಕರ್ಣನಾಥ ವೆಂಕಟೇಶ ಸೇವಾ ಸಮಿತಿಯು ಜಿಲ್ಲೆಯ ಸಕಲ ಸಮಸ್ತ ಬಿಲ್ಲವರ ಏಳಿಗೆ ಬಗ್ಗೆ ೧೯೨೩ನೇ ಇಸವಿ ಅಕ್ಟೋಬರ ತಿಂಗಳ ತಾರೀಕು ೩೧ರಲ್ಲು ಸ್ಥಾಪಿಸಲ್ಪಟ್ಟಿತು. ಈ ಸಂಘದ ಉದ್ದೇಶವು ಹಳ್ಳಿಹಳ್ಳಿಗಳಲ್ಲಿರುವ ವಿದ್ಯಾರ್ಥಿಗಳ ಪ್ರೌಢ ವಿದ್ಯಾಭ್ಯಾಸವನ್ನು ಅಭಿವೃದ್ಧಿಗೊಳಿಸುವದೇ. ಮಂಗಳೂರಿಗೆ ಬಂದು ವಿದ್ಯಾಭ್ಯಾಸವನ್ನು ಮುಂದರಿಸುವರೆ ನಮ್ಮ ವಿದ್ಯಾರ್ಥಿಗಳಿಗೆ ತಕ್ಕ ಬಿಡಾರಗಳು ಸಿಕ್ಕದೆ ಹೆಚ್ಚಿನ ಅನಾನುಕೂಲಗಳಿಗೆ ಗುರಿಯಾಗುವದರಿಂದ ಈ ತೊಂದರೆಗಳನ್ನು ಹೋಗಲಾಡಿಸುವ ಗೋಸ್ಕರ ಒಂದು ವಿದ್ಯಾರ್ಥಿಭವನವು ಅವಶ್ಯವೆಂದು ಸದರಿ ಸಮಿತಿಯು ತೀರ್ಮಾನಿಸಿದ ಮೇರೆಗೆ ಆ ಸಮಯದಲ್ಲಿ ಜಿಲ್ಲಾ ಕಲೆಕ್ಟರರಾಗಿದ್ದ ಡಿ. ಸಿ. ಸೂಟರ್ (I. C. S.) ದೊರೆಗಳಿಗೆ ಸದರಿ ವಿದ್ಯಾರ್ಥಿಭವನದ ಬಗ್ಗೆ ಮಂಗಳೂರು ಟೌನಿನಲ್ಲಿ ಒಂದು ಸ್ಥಳ ದಯಪಾಲಿಸಬೇಕಾಗಿ ಮನವಿಮಾಡಿಕೊಂಡಲ್ಲಿ ಹಿಂದುಳಿದ ನಮ್ಮ ಸಮಾಜದ ಮೇಲೆ ದಯವಿಟ್ಟು ಪೆಂಟ್‌ಲೆಂಡ್ ಪೇಟೆಯಲ್ಲಿ ನಾವು ಆರಿಸಿದ ಖಾಲಿ ಸ್ಥಳವನ್ನು ಕ್ರಯ ವ ಶರ್ತ ಮಾಫಿಯಿಂದ ಸದರಿ ಸಂಘಕ್ಕೆ ಸಿಕ್ಕುವ ಹಾಗೆ ತಾನು ಅದನ್ನು ಪ್ರಯತ್ನ ಮಾಡುವೆನೆಂತ ವಾಗ್ದತ್ತ ಕೊಟ್ಟಿದ್ದಲ್ಲದೆ ಸದರಿ ಸ್ಥಳದಲ್ಲಿ ವಿದ್ಯಾರ್ಥಿಭವನ ಕಟ್ಟುವರೆ ದೊರೆಗಳು ತನ್ನ ದೊರೆಸಾನಿಯೊಂದಿಗೆ ಚಿಕ್ಕಾಸಿ ಆಮಂತ್ರಣ ಮೂಲಕ ನೆರದು ಬಂದ ಅನೇಕ ಮಾನ್ಯ ಗೃಹಸ್ಥರ ಸಮಕ್ಷಮದಲ್ಲಿ ೧೯೨೪ನೇ ಇಸವಿ ಮೇ ತಿಂಗಳ ತಾರೀಕು ೮ರಲ್ಲು ನೆರೆದ ಸಭೆಯಲ್ಲಿ ಅವರಿಗೆ ಸಂಘದ ಕಡೆಯಿಂದಲೂ ವಿದ್ಯಾರ್ಥಿಗಳ ಕಡೆಯಿಂದಲೂ ಎರಡು ಪ್ರತ್ಯೇಕ ಪ್ರತ್ಯೇಕ ಮಾನಪತ್ರಗಳನ್ನು ಓದಿ ನಂತರ ಬಹು ವಿಜೃಂಭಣೆಯ ಸಂಸ್ಕಾರಗಳಿಂದ ಅಸ್ತಿವಾರವನ್ನು ಹಾಕಿದರು. ಅನಂತರ ಅವರ ವ ಅವರ ದೊರೆಸಾನಿಯವರ ಮತ್ತು ನೆರೆದ ಸಭಿಕರ ಭಾವಚಿತ್ರಗಳನ್ನು ತೆಗಿಯಲಾಯಿತು.

ಆ ರಾಗ್ಯಾತು ಈ ವರೆಗೆ ಸರಕಾರದವರು ಮಾಡಿದ ತನಿಖೆಯಿಂದ ಬಿಲ್ಲವರಿಗೆ ಮಂಗಳೂರು ಟೌನಿನಲ್ಲಿ ಒಂದು ವಿದ್ಯಾರ್ಥಿಭವನ ಅವಶ್ಯವೆಂತ ಕಂಡುಬಂದದರಿಂದ ಅಸ್ತಿವಾರ ಹಾಕಲ್ಪಟ್ಟ ೧ ಎಕ್ರೆ ೩೨ ಸೆಂಟ್ಸ್ ವಿಸ್ತೀರ್ಣದ ಸ್ಥಳವನ್ನು ಕ್ರಯ ವ ಶರ್ತ ಮಾಫಿಯಿಂದ ಸದರಿ ಸಮಿತಿಗೆ ಕೊಡಲ್ಪಟ್ಟದೆ ಎಂಬುದಾಗಿ ದಯಾಳು ಸರಕಾರದವರ ಹುಕುಂ ಹಲ್ಲಿರುತ್ತದೆ.

ಸದರಿ ಹುಕುಮಿನಲ್ಲಿ ವಿದ್ಯಾರ್ಥಿಭವನದ ಕಟ್ಟೋಣವನ್ನು ಹುಕುಂ ಹಲ್ಲಿದ ಒಂದು ವರುಷದೊಳಗೆ ಕಟ್ಟಬೇಕಾಗಿ ಹುಕುಂ ಇರುತ್ತದೆ. ಆದುದರಿಂದ ಕಟ್ಟೋಣವನ್ನು ಬೇಗನೆ ಕಟ್ಟಿಸಿ ಮುಗಿಸುವರೆ ಜಾತಿ ವ ಧರ್ಮಾಭಿಮಾನಿ ಮಾನ್ಯ ಗೃಹಸ್ಥರು ಬಡ ವಿದ್ಯಾರ್ಥಿಗಳ ಮೇಲೆ ಕೃಪೆ ಇಟ್ಟು ಕೈಲಾದ ಮಟ್ಟಿಗೆ ಧನಸಹಾಯ ಮಾಡುವಂತೆ ಅಧ್ಯಕ್ಷರಾದ ರಾ। ಬಿ. ಸುಬ್ಬಯ್ಯನವರು ವಿನಯಪೂರ್ವಕವಾಗಿ ಬೇಡುತ್ತಾರೆ.

ಏಪ್ರಿಲ್ ೩ ಶನಿವಾರ ೬ ಗಂಟೆಗೆ ಮಿಶ್ಯನ್ ಹ್ಯಾಸ್ಕೂಲಿನಲ್ಲಿ "The call of Jesus Christ to the nation" ಎಂಬುವ ವಿಷಯದ ಮೇಲೆ ಭಾಷಣ.

ಏಪ್ರಿಲ್ ೪ ಆದಿತ್ಯವಾರ, ೩ ಗಂಟೆಗೆ ಬಲ್ಮಠ ಶಾಂತಿ ದೇವಾಲಯದಲ್ಲಿ ದೇವಾರಾಧನೆ. ಮತು ಏಪ್ರಿಲ' ೫ ಸೋಮವಾರ, ಉಡುಪಿಯತ್ತ ಕಡೆ ಪ್ರಯಾಣ; ಸರ್ವರಿಗೂ ಮೇಲಿನ ಭಾಷಣಗಳಿಗೆ ಸ್ವಾಗತವಿದೆ.

ಮಂಗಳೂರು ಮುನ್ಸಿಪಾಲಿಟಿಯಲ್ಲಿ ಕಳೆದ ತಾ. ೨೦ಕ್ಕೆ ಅಂತ್ಯವಾಗುವ ವಾರದಲ್ಲಿ ೭೫ ಮರಣಗಳು, ೪ ಜನರಿಗೆ ಸಿಡುಬು ಉಂಟಾಗಿರುವುದು. ೨೬ ಜನನಗಳಾಗಿರುವವು.

ಇದೇ ತಿಂಗಳ ತಾರೀಕು ೨೮ನೇ ಆದಿತ್ಯವಾರ ಬೆಳಗ್ಗೆ ೭॥ ಗಂಟೆಗೆ ಮಂಗಳೂರು ಶಹರ ಡೊಂಗರಕೇರಿಯಲ್ಲಿರುವ ಬ್ರಹ್ಮಸಮಾಜದ ಮಂದಿರದಲ್ಲಿ ರಾವ್‌ಸಾಹೇಬ ಕುದ್ಮುಲ ರಂಗರಾಯರಿಂದ, ಕನ್ನಡದಲ್ಲಿ ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನವಿರುವುದು. ವಿಷಯ:— ಉಪಕಾರಿಗಳಾದ ವಿಪದಗಾಮಿ ಧರ್ಮಬೋಧಕರು. (Eccentric Preachers as our benefactor) ಎಲ್ಲರಿಗೂ ಸುಸ್ವಾಗತವಿದೆ.

ಇಲ್ಲಿಯ ಹ್ಯಾಕೋರ್ಟು ವಕೀಲರಾದ ರಾ। ಶ್ರೀನಿವಾಸ ಪೈಗಳಿಗೆ ಕಾಶೀಮಠದ ಶ್ರೀಮತ್ಸುಕೃತೀಂದ್ರ ತೀರ್ಥರು, ತಮ್ಮ ಶಿಷ್ಯವೃಂದದೊಡನೆ ಸಂಪರ್ಕಮಾಡಬೇಕೆಂದು ಕೆಲವು ಐದು ವರ್ಷಗಳ ಹಿಂದೆ ರಾಯಸವನ್ನು ಕೊಟ್ಟಿದ್ದರು. ಈಗ ಅವರ ಮೇಲಿರುವ ಬಹಿಷ್ಕಾರವನ್ನು ಶ್ರೀಪಾದಂಗಳವರು ತೆಗೆದು ಶುದ್ಧರಾಯಸವನ್ನು ಕೊಟ್ಟಿರುವರಂತೆ.

ವಿವಿಧ ವಿಷಯಗಳು.

ಆರೋಗ್ಯಕ್ಕೆ ಉಪವಾಸವ್ರತಗಳೇ ಉತ್ತಮವಾದವುಗಳು.

ಆರೋಗ್ಯದಿಂದಿರಬೇಕಾದರೆ ಆಗಾಗ್ಗೆ ಉಪವಾಸ ವ್ರತಗಳನ್ನು ಆಚರಿಸುವುದೇ ಉತ್ತಮವಾದ ದಾರಿಯೆಂದು ಅಮೇರಿಕದ ಚಿಕಾಗೋ ಪಟ್ಟಣದ ಎ. ಜೆ. ಕಾರಸನ್ ಎಂಬ ಸಾಯಂಟಿಸ್ಟರು ಹೇಳುತ್ತಾರೆ. ಕೆಲವರು ಸ್ವಾಭಾವಿಕವಾಗಿ ಹೆಚ್ಚು ತಿಂದು ಕುಡಿಯುತ್ತಾರೆ. ಹೀಗೆ ಮಾಡಿದರೆ ಟೊಕ್ಸಿನ್ ಎಂಬ ವಿಷಪದಾರ್ಥಗಳು ಶರೀರದ ಆಹಾರ ಜೀರ್ಣಾಂಗಗಳಲ್ಲಿ ಉಂಟಾಗಿ ಈ ವಿಷಯಗಳು ರಕ್ತವನ್ನು ಸೇರಿ, ರಕ್ತನಾಡಿಗಳಲ್ಲಿ ಚಲಿಸಿ ಅನಾರೋಗ್ಯವನ್ನೂ ಮಂದಸ್ವಭಾವವನ್ನು ಉಂಟುಮಾಡುತ್ತವೆ. ಆದುದರಿಂದ ರಕ್ತನಾಡಿಗಳಲ್ಲಿ ವಿಷ ತುಂಬಿದ ಈ ರಕ್ತವನ್ನು ಕಡಿಮೆಮಾಡುವುದಕ್ಕೂ ಆಹಾರನಾಳಗಳನ್ನು ಸರಿಪಡಿಸುವುದಕ್ಕೂ ಉಪವಾಸವ್ರತವೇ ಒಳ್ಳೇ ಮದ್ದಾಗಿದೆ. ಒಂದು ಸಾರಿಗೆ ಮೂರು ದಿವಸ ಉಪವಾಸಮಾಡಿದರೆ ಸಾಕು. ಉಪವಾಸ ಕಾಲಗಳಲ್ಲಿ ಯಾವ ಕಷ್ಟ ಕೆಲಸಗಳನ್ನೂ ಮಾಡಬಾರದು. ನೀರನ್ನು ಹೆಚ್ಚಾಗಿ ಕುಡಿಯ ಬೇಕು. ಉಪವಾಸವ್ರತದ ಬೆಳಗ್ಗೆ ಮತ್ತು ಸಾಯಂಕಾಲ ಒಂದು ಕಿತ್ತಳೇ ಹಣ್ಣಿನ ಅಥವಾ ದ್ರಾಕ್ಷೆ ಹಣ್ಣಿನ ರಸವನ್ನಾಗಲೀ ಕುಡಿಯಬೇಕು.

ಉಪವಾಸದ ದಿವಸ ಇತರ ದಿವಸಗಳಂತೆ ಮೊದಲನೇ ಊಟದ ಸಮಯವು ಬರುವಾಗ ಹೊಟ್ಟೆ ಹಸಿವು ಆಗುವುದು ಆದರೆ ಇದನ್ನು ಲಕ್ಷ್ಯಕ್ಕೆ ತರಬಾರದು. ಇಪ್ಪತ್ತನಾಲ್ಕು ತಾಸುಗಳು ಕಳೆದ ಕೂಡಲೇ ಉಟಮಾಡಬೇಕೆಂಬ ಆಸೆಯೇ ಉಂಟಾಗುವುದಿಲ್ಲ. ಮೆದುಳು ಶುದ್ಧವಾಗಿ ಒಳ್ಳೇ ಆಲೋಚನೆಯು ಬರುವುದು.

ಈ ಸಮಯದಲ್ಲಿ ದೇಹಕ್ಕೆ ಒಳ್ಳೇ ವಿಶ್ರಾಂತಿಯು ಸಿಕ್ಕುವುದು, ಆಹಾರ ಜೀರ್ಣಾಂಗಗಳು ಶರೀರದಲ್ಲಿರುವ ಹೆಚ್ಚಿನ ಚರ್ಬಿಯನ್ನು ಕರಗಿಸುವವು. ಅವಲ್ಲದ ಆಹಾರ ಜೀರ್ಣಾಂಗಗಳಲ್ಲಿರುವ ವಿಷಪದಾರ್ಥಗಳು ಹೊರಬೀಳುವವು.

ಉಪವಾಸವ್ರತವು ಮುಗಿದಮೇಲೆ ಆಹಾರವನ್ನು ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಳ್ಳಬೇಕು.

ಹಿಂದೂಗಳಲ್ಲಿ ಉಪವಾಸ ವ್ರತವನ್ನು ಆಚರಿಸುವ ಕ್ರಮವು ಬಹಳ ಪುರಾತನಕಾಲದಿಂದಲೂ ಬ್ರಾಹ್ಮಣ, ಕ್ಷತ್ರಿಯ, ವೈಶ ಜಾತಿಯವರಲ್ಲಿ ಆಚರಣೆಯಲ್ಲಿದೆ. ಪ್ರತಿ ಒಬ್ಬ ಆಚಾರ್ಯರು ಪ್ರತಿ ಒಂದು ತಿಂಗಳಿನ ೩ ದಿವಸಗಳ ಉಪವಾಸ ವ್ರತಗಳನ್ನು ಆಚರಿಸಬೇಕೆಂದು ನಿಯಮಗಳನ್ನು ಮಾಡಬೇಕೆಂದು ಕಟ್ಟುಗಳನ್ನು ಮಾಡಿರುತ್ತಾರೆ. ತಿಂಗಳಿಗೆ ಎರಡು ಏಕಾದಶಿ, ಒಂದು ಶನಿವಾರ ಅಥವಾ ಸೋಮವಾರ, ಈ ದಿವಸಗಳಲ್ಲಿ ಬಿಂದು ಯಾವ ಕೆಲಸಗಳನ್ನೂ ಮಾಡದೆ ದೇವರ ಧ್ಯಾನವನ್ನು ಮಾಡುತ್ತಾ ಇರಬೇಕೆಂದು ನಿಯಮವಿದೆ. ದೇವರ ತೀರ್ಥವನ್ನೂ ಮಾತ್ರವೇ ತೆಗೆದುಕೊಳ್ಳಬೇಕು. ಮತ್ತು ಫಲಹಾರಮಾಡಬೇಕೆಂದು ಹೇಳಿರುತ್ತಾರೆ. ಯಾವ ತರದ ಫಲವೆಂದು ಹೇಳಲಿಲ್ಲ. ಉಪವಾಸದ ಮರುದಿನ ಬೆಳಗ್ಗೆ ಹೆಸರಿನ ಪದಾರ್ಥವನ್ನೂ ಒಂದೆಲಗದ ಚಟ್ನಿಯನ್ನೂ ಉಪಯೋಗಿಸಬೇಕೆಂದೂ ಹೇಳಿಯದೆ. ಒಂದೆಲಗವು ಎಂಥಾ ವಿಷಪದಾರ್ಥಗಳನ್ನೂ ನಾಶಮಾಡಲಿಕ್ಕೆ ಶಕ್ತಿಯಿರುವ ಮದ್ದಾಗಿದೆ. ಹೆಸರು ತಂಪಾದ ಧಾನ್ಯ. ಉಷ್ಣವಾದ ಶರೀರವನ್ನು ಮೆಲ್ಲಗೆ ತಂಪಾಗುವಂತೆ ಮಾಡುತ್ತದೆ. ಊಟವಾದಮೇಲೆ ಸ್ವಲ್ಪ ವಿಶ್ರಾಂತಿಯನ್ನು ಪಡೆಯಬೇಕಾಗಿದೆ.

ಈ ತರದ ಉಪವಾಸ ವ್ರತಗಳನ್ನು ಮೊದಲು ಕ್ರಮವಾಗಿ ಆಚರಿಸುತ್ತಿದ್ದ ಮೇಲೆ ಹೇಳಿದ ಮೂರು ವರ್ಣಗಳವರೂ ಕಾಯಶಕ್ತಿಯಲ್ಲಿಯೂ ಆರೋಗ್ಯದಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಮೇಲೆ ಬರಲು ಕಾರಣವಾಯಿತು. ಈಗೀಗ ಆ ಕ್ರಮಗಳನ್ನು ಬಿಟ್ಟು ಬಿಟ್ಟು ಪಾಶ್ಚಿಮಾತ್ಯ ನಾಗರೀಕತೆಯನ್ನು ಅನುಸರಿಸಿ ಆಹಾರ ತೆಗೆದುಕೊಳ್ಳುವುದರಲ್ಲಿಯೂ ಕಂಡಾಬಟ್ಟೆ ಆಹಾರವನ್ನು ತಿನ್ನುವುದರಿಂದಲೂ ಮೇಲು ಜಾತಿಯವರಲ್ಲಿ ಬುದ್ಧಿಶಕ್ತಿಯು ಕಡಿಮೆಯಾಗುತ್ತಾ ಬಂದು ಅನೇಕ ತರದ ಕ್ಷಯರೋಗಗಳೂ ಹೆಚ್ಚುತ್ತಾ ಇವೆ. ಈಗ ನಾವು ಮಾಡಿದ ತಪ್ಪುಗಳನ್ನು ಪಾಶ್ಚಿಮಾತ್ಯ ಡಾಕ್ಟರುಗಳು ಹುಡುಕಿ ತೋರಿಸಬೇಕಾಗಿದೆ. ನಮ್ಮ ದೇಶದ ಅನೇಕ ವೈದ್ಯಶಾಸ್ತ್ರದ ಪುಸ್ತಕಗಳನ್ನೂ, ಆರೋಗ್ಯಶಾಸ್ತ್ರದ ಪುಸ್ತಕಗಳನ್ನೂ ವಿದಾಯಿತಿಗೆ ವ್ಯದು ಅವುಗಳಲ್ಲಿರುವ ಸೂತ್ರಗಳನ್ನು ನಾವು ಕಂಡುಕೊಂಡಿದ್ದೇವೆ ಎಂದು ಪತ್ರಿಕೆಗಳಿಗೆ ಬರೆಯುತ್ತಿರುವರು. ಈ ಕ್ರಮವು ಸಮುದ್ರದಿಂದ ಆವಿಯಾಗಿ ಹೋದ ನೀರು ಮಳೆಯಾಗಿ ಬೀಳುವಾಗ ಸಮುದ್ರವು ಉಕ್ಕಿಬರುವ ರೀತಿಯಲ್ಲಿ, ಪಾಶ್ಚಿಮಾತ್ಯ ಜನರು ಇಂಗ್ಲಿಷಿನಿಂದ ಬರದು ಕಳುಹಿಸಿದ ಈ ಆರೋಗ್ಯ ಸೂತ್ರಗಳನ್ನು ಹೊಸ ಶೋಧನೆಗಳೆಂದು ತಿಳಿದುಕೊಂಡು ನಾವು ಅವರನ್ನು ಹೊಗಳುತ್ತೇವೆ. ನಮ್ಮ ಶಾಸ್ತ್ರಗಳು ಸಂಸ್ಕೃತ ಭಾಷೆಯಲ್ಲಿದ್ದು ನಾವು ಆ ವಿದ್ಯೆಯನ್ನು ಕಲಿಯದೆ ಅಜ್ಞಾನದಲ್ಲಿ ನರಳುತ್ತೇವೆ.

∴ ∴ ∴

ಇನ್ನು ಮುಂದಿನ ನೂರು ವರುಷಗಳಲ್ಲಿ ಭೂಲೋಕದ ಜನರ ವಾಸಸ್ಥಳಗಳು.

(ಒಬ್ಬ ಜರ್ಮನ್ ಶಾಸ್ತ್ರಜ್ಞರ ಶೋಧನೆ)

ಜರ್ಮನಿಯಲ್ಲಿರುವ ಬರ್ಲಿನ ಭೂಗೋಳ ಶಾಸ್ತ್ರದ ಕಲಾಶಾಲೆಯ ಪ್ರೊಫೆಸರರಾದ ಅಲ್ಬರ್ಟ ಪೆಂಕ್ ಎಂಬವರು ಭೂಲೋಕದ ಬೇರೆ ಬೇರೆ ಭಾಗಗಳಲ್ಲಿ ಇನ್ನು ಮುಂದೆ ಯಾವ ರೀತಿಯಲ್ಲಿ ಜನಸಮೂಹವು ಹರಡುವುದೆಂದು ವಿವರಿಸಿ ಹೇಳುತ್ತಾರೆ.

ಈಗ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ೭ ಸಾವಿರದ ಎಂಟು ನೂರು ಮಿಲಿಯ ಜನರು ಇರುತ್ತಾರೆ. ಆದರೆ ಭೂಲೋಕದ ಖಾಲಿ ಇರುವ ಸ್ಥಳಗಳ ಅಳತೆಯನ್ನು ತೆಗೆದು ನೋಡಿದರೆ ಭೂಲೋಕದಲ್ಲಿ ಈಗಿರುವ ಜನಸಂಖ್ಯೆಯ ಐದುಪಾಲಷ್ಟು ಜನರು ಇರಲಿಕ್ಕೆ ಅವಕಾಶವಿದೆ ಎಂದು ಕಾಣುತ್ತದೆ, ಈಗ ಹೆಚ್ಚು ಜನಸಂಖ್ಯೆಯಿಂದ ತುಂಬಿರುವ ಪ್ರದೇಶಗಳಿಂದ ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳಿಗೆ ಹೋಗಬೇಕಾಗುವುದು, ಈಗ ಉಷ್ಣವಲಯದ ಕಾಡುಗಳಿಂದ ತುಂಬಿರುವ ಪ್ರದೇಶವು ಐದುಸಾವಿರ ಆರುನೂರು ಮಿಲಿಯ ಜನರ ವಾಸ್ತವ್ಯಕ್ಕೆ ಬೇಕಾದಷ್ಟು ಸ್ಥಳದ ಅನುಕೂಲತೆ ಇದೆ. ಹವಾಮಾನವನ್ನೂ ರೋಗಗಳ ವಿಷಯವನ್ನೂ ಆಲೋಚಿಸಿದರೆ ಇದರ ಅರ್ಧಪಾಲು ಜನಸಂಖ್ಯೆಯು ಈ ಪ್ರದೇಶಗಳಲ್ಲಿ ಇರಲು ಅಡ್ಡಿಯಾಗಲಿಕ್ಕಿಲ್ಲ.

ಕಳೆದ ೫೦ ವರುಷಗಳಿಂದ ಭೂಲೋಕದಲ್ಲಿ ಜನಸಂಖ್ಯೆಯು ಅಭಿವೃದ್ಧಿಯಾದ ರೀತಿಯನ್ನು ವಿಚಾರಿಸಿ ನೋಡಿದರೆ ಈ ಶಾಸ್ತ್ರಜ್ಞರ ಹೇಳಿಕೆ ಮೇರೆಗೆ ಇನ್ನು ಮುನ್ನೂರು ವರುಷಗಳಲ್ಲಿ ಭೂಲೋಕದ ಎಲ್ಲಾ ಭಾಗಗಳಲ್ಲಿ ಜನರು ತುಂಬುವರು.

ಒಂದು ಕಾಲದಲ್ಲಿ ಬ್ರಜೀಲ ದೇಶದಲ್ಲಿ ಅತೀ ಹೆಚ್ಚು ಜನ ಸಂಖ್ಯೆಯು ತುಂಬುವದೆಂದು ಇವರು ಹೇಳುತ್ತಾರೆ. ಇದರಲ್ಲಿ ಸಾವಿರದ ಇನ್ನೂರು ಮಿಲಿಯ ಜನರ ವಾಸಸ್ಥಾನಕ್ಕೆ ಬೇಕಾದ ಸ್ಥಳವು ಇದೆ. ಚ್ಯಾನಾದಲ್ಲಿ ೬೦೦ ಮಿಲಿಯ ಜನರು ವಾಸವಾಗಿರುವಷ್ಟು ಸ್ಥಳವು ಇದೆ. ಆದರೆ ಈಗ ಇವರಲ್ಲಿ ನಾನ್ನೂರು ಮಿಲಿಯ ಜನರು ಮಾತ್ರವೇ ವಾಸವಾಗಿರುತ್ತಾರೆ. ಬ್ರಿಟಿಷ್ ಸಾಮ್ರಾಜ್ಯದಲ್ಲಿಯೂ ೬೦೦ ಮಿಲಿಯ ಜನಸಂಖ್ಯೆಯು ಇರಲು ಎಡೆಯದೆ. ಇಂಗ್ಲಂಡಿನಲ್ಲಿ ೩೦ ಮಿಲಿಯ, ಕೆನಡದಲ್ಲಿ ೬೦ ಮಿಲಿಯ ಒಸ್ಟ್ರೇಲಿಯಾದಲ್ಲಿ ೪೫೦ ಮಿಲಿಯ, ದಕ್ಷಿಣ ಅಫ್ರಿಕದ ಯೂನಿಯನಿನಲ್ಲಿ ೬೦ ಮಿಲಿಯ. ಈ ದೇಶಗಳಲ್ಲಿ ಈ ರೀತಿಯಲ್ಲಿ ಜನಸಂಖ್ಯೆಯು ಏರುವಾಗ ಇಂಡಿಯಾದೇಶವು ಬ್ರಿಟಿಷ್ ಸಾಮ್ರಾಜ್ಯದ ಒಂದು ಭಾಗವಾಗಿ ಉಳಿಯಲಿಕ್ಕಿಲ್ಲವೆಂದು ಈ ಶಾಸ್ತ್ರಜ್ಞರು ಹೇಳುತ್ತಾರೆ.

ಈ ಸಮಯದಲ್ಲಿ ಯುರೋಪ ಮತ್ತು ಆಸ್ಯಾಖಂಡದಲ್ಲಿ ಈಗಿರುವಷ್ಟು ಜನಸಂಖ್ಯೆಯು ಇಲ್ಲ ಭೂಲೋಕದ ಜನಸಂಖ್ಯೆಯ ಕಾಲು ಪಾಲು ಜನಸಂಖ್ಯೆಯು ಮಾತ್ರವೇ ಇರುವುದು. ಈಗ ಭೂಲೋಕದಲ್ಲಿ ಮುಕ್ಕಾಲು ಜನಸಂಖ್ಯೆಯು ಇದೆ. ಆ ಸಮಯದಲ್ಲಿ ಸಮಶೀತೋಷ್ಣವಲಯಗಳಲ್ಲಿ ಒಂದು ಚದರ ಕಿಲ್ಲೋಮಿಟರಿಗೆ ೩೪ ಮಂದಿ ಜನರೂ, ಉಷ್ಣವಲಯದಲ್ಲಿ ಒಂದು ಚದರ ಕಿಲೊಮಿಟರಿಗೆ ೧೦೬ ಮಂದಿಯೂ ವಾಸವಾಗಿರುವರು.

ಆದರೆ ಬಿಳಿ ಜನಾಂಗವು ಈ ಉಷ್ಣವಲಯದಲ್ಲಿ ವಾಸಿಸುವುದಕ್ಕೆ ಆರಂಭಿಸಿದರೆ ಶಿಖೆಯಿಂದ ಈ ಜನರ ಸ್ಥಿತಿಯು ಏನಾಗುವುದೋ? ಯಾವ ರೀತಿಯಲ್ಲಿ ಕಪ್ಪು ಮತ್ತು ಬಿಳಿ ಜನರ ಸಂತತಿಯು ಅಭಿವೃದ್ಧಿಯಾದೀತು? ಇವರಿಗಾಗಿ ಆಹಾರಜೀನಸುಗಳ ಅವಸ್ಥೆಯು ಹೇಗಿರುವುದು? ಇವುಗಳೆಲ್ಲ ವಿಚಾರಿಸತಕ್ಕ ಸಂಗತಿಗಳಾಗಿವೆ.

∴ ∴ ∴

ಮುಮ್ತಾಜಳ ಗಂಡ ದಿವಾಳಿ!

ಮುವ್‌ತಾಜ್ ಎಂಬವಳು ಒಬ್ಬ ವೇಶ್ಯಾಸ್ತ್ರೀಯಾಗಿರುತ್ತಾಳೆ. ಇವಳ ಸ್ನೇಹವನ್ನು ಬೆಳಸಿ ಇಂಡೋರ್ ಮಹಾರಾಜರಾದ ತುಕೋಜಿರಾವ್ ಹೋಲ್ಕರರು ತಮ್ಮ ಸಿಂಹಾಸನವನ್ನೇ ತ್ಯಾಗಮಾಡಬೇಕಾಯಿತು. ಅವರ ರಾಜಯೋಗವೇ ತಪ್ಪಿತು. ನಂತರ ಇವಳ ಸ್ನೇಹಾಚಾರವನ್ನು ಬೆಳಸಿದ ಬಾವ್ಲಾರವರು ತಮ್ಮ ಪ್ರಾಣವನ್ನೇ ಕಳಕೊಳ್ಳಬೇಕಾಯಿತು. ಬಾವ್ಲಾ ಮೊಕದಮೆಯು ಮುಗಿದ ಮೇಲೆ ಅಮೃತಸರದ ಮುನಿಸಿಪಲ್ ಕೌನ್ಸಿಲರರೂ ಚರ್ಮದ ವ್ಯಾಪಾರಿಯೂ ಆದ ಮಹಮದ್ ಶರೀಫ್ ಅಬ್ದುರಹಮಾನರು ಇವಳ ಸ್ನೇಹವನ್ನು ಬೆಳಸಿ ಇವಳನ್ನು ಮದುವೆಯಾದರು. ಇವರಿಗೆ ಕರಾಚಿಯಲ್ಲಿ ೨೦೦೦ ರೂ. ಆಸ್ತಿ ಇತ್ತು. ಇವರು ಸಿಂಧೂದೇಶದ ಸುಕ್ಕೂರಿನ ಒಬ್ಬ ಚರ್ಮದ ವ್ಯಾಪಾರಿಗೆ ೩೦೦೦ ರೂ. ಕೊಡಬೇಕಿತ್ತು. ಈಗ ಡಿಕ್ರಿಯಾಗಿ ಎಲ್ಲವೂ ಹೋಯಿತು.

ಒಂದು ವೇಶ್ಯೆಯಿಂದ ಸಿಂಹಾಸನ ತ್ಯಾಗ! ಪ್ರಾಣನಾಶ! ದಿವಾಳಿ ಈಷ್ಟೆಲ್ಲವೂ ಆದವು. ಇವುಗಳನ್ನೆಲ್ಲಾ ಕಣ್ಣಾರೆ ನೋಡಿಯೂ ಕಿವಿಯಿಂದ ಕೇಳಿಯೂ ಇನ್ನು ಇವಳ ಸ್ನೇಹವನ್ನು ಯಾರು ಬೆಳಸುತ್ತಾರೊ ನೋಡಲಿಕ್ಕಿದೆ.

∴ ∴ ∴

ಮದ್ರಾಸು ಸಂಸ್ಥಾನದಲ್ಲಿ ಹೈಡ್ರೊ ಇಲೆಕ್ಟ್ರಿಕ್ ಸ್ಕೀಮುಗಳು.

ನೀಲಗಿರಿಯ ಪ್ಯಾಕಾರಾ ನದಿಗೆ ಅಣೆಕಟ್ಟು ಕಟ್ಟಿ ೩೬,೨೦೦ ಕಿಲೊವೆಟ ವಿದ್ಯುಚ್ಛಕ್ತಿಯನ್ನು ಉಂಟುಮಾಡುವುದು ಇನ್ನು ಇದಕ್ಕೆ ಕೂಡಿಸಿ ಮೆಯೊರ್ ಸ್ಕೀಮು ಮಾಡಿ ೧೦,೫೬೦ ಕಿಲೊವೇಟ ವಿದ್ಯುಚ್ಛಕ್ತಿಯನ್ನುಂಟುಮಾಡುವುದು.

(೨) ಪಂಜಕಾವಿ ಮತ್ತು ಕುಂಬರ ಅಣೆಕಟ್ಟು ಕಟ್ಟಿ ೧೫,೦೦೦ ಕಿಲೊವೇಟ ವಿದ್ಯುಚ್ಛಕ್ತಿಯನ್ನುಂಟುಮಾಡುವುದು.

(೩) ಪಾಪನಾಶನಮ್ ಸ್ಕೀಮ್.

ಪ್ಯಾಕಾರ ಸ್ಕೀಮಿಗೆ ೨೮೮ ಲಕ್ಷ ರೂಪಾಯಿ ಬೇಕಾಗುವುದಂತೆ. ಇದರ ಕೆಲಸವು ಇದೇ ವರುಷ ಶುರುವಾಗುವದಂತೆ.

∴ ∴ ∴

ಮದ್ರಾಸಿನಲ್ಲಿ ಜರಗಿದ ಜೈನರ ಮಹಾಸಭೆ.

ಕಳೆದ ವಾರ ಮದ್ರಾಸಿನಲ್ಲಿ ಜೈನರ ಒಂದು ಮಹಾಸಭೆಯು ಜರಗಿತು. ಮದರಾಸು ಸಂಸ್ಥಾನದ ಬೇರೆ ಬೇರೆ ಪ್ರಾಂತ್ಯಗಳಿಂದ ಅನೇಕ ಮಹಾಶಯರು ಈ ಸಭೆಗೆ ಬಂದಿದ್ದರು. ನಮ್ಮ ಜಿಲ್ಲೆಯಿಂದ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರರಾದ ರಾ। ರಘುಚಂದ್ರ ಬಲ್ಲಾಳರವರೂ, ರಾ। ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರೂ ಹಾಜರಿದ್ದರು. ಈ ಸಭೆಯಲ್ಲಿ ಲೆಜಿಸ್ಲೇಟಿವ್ ಎಸೆಂಬ್ಲಿಗೆ ೪ ಮಂದಿ ಮೆಂಬರರನ್ನೂ, ಸ್ಟೇಟ ಕೌನ್ಸಿಲಿಗೆ ಇಬ್ಬರು ಮೆಂಬರರನ್ನೂ, ನ್ಯಾಯವಿಧಾಯಕ ಸಭೆಗೆ ೨ ಮಂದಿ ಮೆಂಬರರನ್ನೂ, ಡಿಸ್ಟ್ರಿಕ್ಟ ಬೋರ್ಡು, ತಾಲೂಕು ಬೋರ್ಡು ಮುನಿಸಿಪಾಲಿಟಿಗಳಿಗೆ ಮೆಂಬರುಗಳನ್ನೂ ಸರಕಾರದವರು ನೋಮಿನೇಟುಮಾಡಬೇಕೆಂದೂ, ಬಡ ಜೈನವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡಬೇಕೆಂದೂ ಠರಾವುಗಳು ಪಾಸಾಗಿ ಸರಕಾರಕ್ಕೆ ಕಳುಹಿಸಲಾದವು.

∴ ∴ ∴

ಭೂಪಾಲ ಬೇಗಮರ ಉತ್ತರಾಧಿಕಾರಿ.

ಭೂಪಾಲ ಸಂಸ್ಥಾನವನ್ನು ಕುಮಾರು ಒಂದು ಶತಮಾನದಿಂದ ಹೆಂಗಸರೇ ಆಳಿಕೊಂಡು ಬರುತ್ತಿರುವರು. ರಾಜವಂಶದವರು ಅಫಘಾನ ರಾಜವಂಶಕ್ಕೆ ಸೇರಿದವರು. ಈಗಿನ ಬೇಗಮರಿಗೆ ಇಬ್ಬರು ಗಂಡುಮಕ್ಕಳಿದ್ದರು. ಇವರ ಹಿರೇಮಗನು ಮೃತಪಟ್ಟಿರುವನು. ಈ ಮೃತ ಕುಮಾರನಿಗೆ ಒಬ್ಬ ಗಂಡು ಮಗನು ಇರುವನು. ಈ ಮಗುವು ಬೇಗಮರ ನಂತರ ಸಿಂಹಾಸನಕ್ಕೆ ಉತ್ತರಾಧಿಕಾರಿಯೆಂದು ಇಂಡಿಯಾ ಗವರ್ನಮೆಂಟಿನವರು ನಿಶ್ಚಯಿಸಿದ್ದರು. ಬೇಗಮರು ಇದು ಆಕ್ಷೇಪಕರವೆಂದು ಇಂಡಿಯಾ ಸರಕಾರಕ್ಕೆ ತಿಳಿಸಿದರು, ಇಂಡಿಯಾ ಸರಕಾರವು ಇದಕ್ಕೆ ಒಪ್ಪಲಿಲ್ಲ. ಇವರು ಅಫಘಾನ ವಂಶದವರಾದ್ದರಿಂದ ಇವರ ಕಟ್ಟುಕಟ್ಟಳೆಗಳು ಅಫಘಾನ ರೀತಿಯಲ್ಲಿಯೇ ಆಗಬೇಕಾಗಿದೆ. ಕುಟುಂಬದಲ್ಲಿ ಜೀವಂತನಾಗಿರುವ ಹಿರಿಯ ಗಂಡಸು ಪಟ್ಟಕ್ಕೆ ಉತ್ತರಾಧಿಕಾರಿಯಾಗಬೇಕಾಗಿದೆ.

ಇಂಡಿಯಾ ಗವರ್ನಮೆಂಟಿನವರು ಇದಕ್ಕೆ ಕೊಡದೆ ಇದ್ದುದರಿಂದ ಬೇಗಮರು ಇಂಗ್ಲಂಡಿಗೆ ಹೋಗಿ ಮಹಾರಾಜ ಜೋರ್ಜ ಸಾರ್ವಭೌಮರ ಭೇಟಿ ಮಾಡಿ ತನ್ನ ರಾಜವಂಶದ ಪದ್ಧತಿಗನುಸಾರವಾಗಿ ತನ್ನ ಕಿರಿಯ ಮಗನು ಮೊಮ್ಮಗನಿಗಿಂತ ಪ್ರಾಯದಲ್ಲಿ ದೊಡ್ಡವನಾದುದರಿಂದ ಅವನೇ ತನ್ನ ಉತ್ತರಾಧಿಕಾರಿಯಾಗಬೇಕೆಂದು ಇಂಡಿಯಾ ಸರಕಾರದವರು ಕೊಟ್ಟ ಹುಕ್ಕುಮನ್ನು ರದ್ದುಪಡಿಸಬೇಕೆಂದೂ ತಿಳಿಸಿದರು. ನಂತರ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಹತ್ತರವೂ ತಿಳಿಸಿದರು. ಕಡೆಗೆ ಎರಡನೆ ಮಗನೇ ಪಟ್ಟಕ್ಕೆ ಹಕ್ಕುದಾರನೆಂಬ ಭರವಸೆಯನ್ನು ಪಡೆದು ಇಂಡಿಯಾ ಸರಕಾರದ ಹುಕ್ಕುಂ ಬದಲಾಯಿಸಬೇಕೆಂದು ಸಾಧಿಸಿ ಇಂಡಿಯಕ್ಕೆ ಇತ್ತಲಾಗೆ ಬಂದಿರುವರು. ಇನ್ನು ಏನಾಗುವದೆಂದು ನೋಡಲಿಕ್ಕಿದೆ.

∴ ∴ ∴

ಖಾಸಗಿ ಸೆಕೆಂಡರಿ ಶಾಲೆಗಳೂ ಸ್ಪೆಶಲ್ ಟೀಚಿಂಗ ಗ್ರೇಂಟೂ.

ಸಾಧಾರಣವಾಗಿ ಮದರಾಸು ಸಂಸ್ಥಾನದ ಎಲ್ಲಾ ಖಾಸಗಿ ಸೆಕೆಂಡರಿ ಶಾಲೆಗಳಲ್ಲಿ ಹೆಚ್ಚಿನವುಗಳಲ್ಲಿ ಉಪಾಧ್ಯಾಯರಿಗೆ ಮೃತ ಜೀವನಕ್ಕೂ ಸರಿಯಾಗಿ ಸಂಬಳಕೊಡದೆ ಇರುವ ಸಂಗತಿಯನ್ನು ಸರಕಾರವು ತಿಳಿದು ಐದಾರು ವರುಷಗಳಿಂದ ತರಬೇತಾದ ಉಪಾಧ್ಯಾಯರಿಗೆ ಒಂದು ಸ್ಪೆಶಿಯಲ್ ಟೀಚಿಂಗ್ ಗ್ರೇಂಟನ್ನು ಕೊಡುತ್ತಾ ಬರುತ್ತಿದ್ದರು. ಕೆಲವು ಮೆನೆಜರರಿಗೆ ಇದನ್ನು ಶಾಲಾ ಫಂಡಿಗೆ ತೆಗಿಯಬೇಕೆಂದು ಆಶೆಯಿತ್ತು. ಆದರೆ ಸರಕಾರವು ಈ ಆಲೋಚನೆಗೆ ಒಪ್ಪದೆ ಆ ಗ್ರೇಂಟನ್ನು ಉಪಾಧ್ಯಾಯರಿಗೆನೆ ಕೊಡಬೇಕೆಂದು ಪತ್ತಾಯ ಪಡಿಸಿದರು. ನಂತರ ಟ್ರೇಂಡ್, ಅನ್‌ಟ್ರೇಂಡ್ ಉಪಾಧ್ಯಾಯರಿಗೆ ಹಂಚಿಕೊಡಬೇಕೆಂದು ಸರಕಾರದೊಡನೆ ಚರ್ಚಿದರು. ಸರಕಾರವು ಇದಕ್ಕೆ ಒಪ್ಪಲಿಲ್ಲ. ಯಾಕೆಂದರೆ ಅನ್‌ಟ್ರೇಂಡ್ ಆದ ಉಪಾಧ್ಯಾಯರು ಬೇರೆ ಕೆಲಸವು ಸಿಕ್ಕುವ ವರೆಗೆ ಸಿಕ್ಕಿದ ಕಾಸು ಸಿಕ್ಕಿತೆಂದು ಕೆಲಸ ಮಾಡುತ್ತಿರುವರು. ಸ್ವಲ್ಪ ಒಳ್ಳೇ ಕೆಲಸ ಸಿಕ್ಕಿದೊಡನೆಯೇ ಸುದ್ದಿಹೇಳದೆ ಮೆನೆಜರರಿಗೆ ಏನಾದರೂ ಠಕ್ಕು ನೆವನ ಹೇಳಿಹೋಗುತ್ತಿರುವರು. ಆದರೆ ಟ್ರೇಂಡ್ ಆದ ಉಪಾಧ್ಯಾಯರಿಗೆ ಇದು ಸಾಧ್ಯವಿಲ್ಲ. ಅವರು ವಿದ್ಯಾ ಇಲಾಖೆಯಲ್ಲಿಯೇ ತಮ್ಮ ಜೀವಕಾಲವನ್ನು ಕಳೆಯಬೇಂದು ಈ ಕೆಲಸಕ್ಕೆ ಸೇರಿರುವರು. ಆದುದರಿಂದ ಸರಕಾರವು ಮಾಡಿದ ಈ ಕಾನೂನು ಉಪಾಧ್ಯಾಯರ ಹಿತಕ್ಕಾಗಿಯೇ ಆಗಿದೆ. ಮೆನೆಜರರು ನಿರಾಶರಾಗಿ ಉಪಾಧ್ಯಾಯರಿಗೆ ಈ ಗ್ರೇಂಟೇ ಸಿಕ್ಕಬಾರದೆಂದು ಉಪಾಯಗಳನ್ನು ನಡಿಸುತ್ತಲೇ ಇದ್ದರು. ಈ ವರುಷ ಕೆಲವು ಶಾಲೆಗಳ ಮಟ್ಟಿಗೆ ಇದು ಫಲಿತಕ್ಕೆ ಬಂದು ಈ ವರುಷ ಕೆಲವು ಶಾಲೆಗಳಿಗೆ ಈ ಗ್ರೇಂಟನ್ನು ಸೆಂಕ್ಷನ್‌ಮಾಡಲೇ ಇಲ್ಲ. ಆದರೆ ಸರಕಾರವು ಉಪಾಧ್ಯಾಯರ ಮೇಲೆ ಈ ಅಸ್ತ್ರವನ್ನು ಬಿಟ್ಟದ್ದು ಯಾರಿಗೂ ಸರಿಕಾಣುವುದಿಲ್ಲ. ಆದುದರಿಂದ ಡಿಸ್ಟ್ರಿಕ್ಟ ಎಜ್ಯುಕೇಶನಲ್ ಆಫೀಸರರು ಈ ಸಂಗತಿಯನ್ನು ಪುನರಾಲೋಚಿಸಿ ಗ್ರೇಂಟ ಸಿಕ್ಕದೆ ಇರುವ ಶಾಲೆಗಳು ಉಪಾಧ್ಯಾಯರಿಗೆ ಗ್ರೇಂಟ ಕೊಡಿಸುವುದು ಒಳ್ಳೇಯದೆಂದು ಕೋರುತ್ತದೆ.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗೆನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್, ಗಣಪತಿರಾವ್ ಐಗಳ್ — ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂದ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ಬೈಲು ಬೆರ್ಚಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ತಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕಿಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ, ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ್ಕ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ಫೂರ್ತಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds „ 288,500—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸಾಪಿಸಲ್ಪಟ್ಟಿತು,
ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ
ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೦ಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟಿವಣಿಗೆ ಮಾತ್ರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಜತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸು, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ

ಎಸ್. ಪಿ. ಆಚಾರ್ಯ

ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಲ್ಪಟ್ಟ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ತುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್.

ಮಹೋಲ್ಲಾಸ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ

ವಜ್ರಾಂಗ-ಬಿಂದು

ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡತಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸಂಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ತಿರುಗಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇವರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚ ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಕೊಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೊ. ಚಿಕ್ಕೋಡಿ, (ಜಿಲ್ಲಾ ಬೆಳಗಾಂವ.)

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು {
ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.
}

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯು ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯು ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಸೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್‌ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

ಸ್ಪಿರಿಟ್ ಸ್ಟೊವ್ ಎಂಬ ಅಡಿಗೆಮಾಡುವ ಒಲೆ

ಇವುಗಳನ್ನು ಬ್ರಿಟಿಷ್‌ನವರು ಹಸನಾದ ಹಿತ್ತಾಳೆಯಿಂದ ಮಾಡಿರುವರು. ಇದರಲ್ಲಿ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಬಹುದು. ಬೆರಣಿ, ಸೌದೆ, ಮುಂತಾದವುಗಳು ಹಾಕಿ ಒಲೆಯನ್ನು ಉರಿಸುವದರಿಂದ ಹೊಗೆತುಂಬಿ ಕಣ್ಣುಗಳು ಕೆಟ್ಟುಹೋಗುವವು ಆದರೆ ಇದರಿಂದ ಯಾವ ಕಷ್ಟವೂ ಇಲ್ಲ. ಸ್ವಲ್ಪ ಸೀಮೆ ಎಣ್ಣೆಯನ್ನು ಹಾಕಿ ಪಂಪುಮಾಡಿದರೆ ಸಾಕು. ಇದರಲ್ಲಿ ಎಷ್ಟು ಮಂದಿಗಾದರೂ ಅಡಿಗೆಯನ್ನು ಬಹು ಬೇಗನೆ ಮಾಡಬಹುದು.

ಕ್ರಯ 1ಕ್ಕೆ 3—0—0.

ಇನಾಂ! ಜರ್ಮನ್ ಟೇಬಲ್ ಟೈಂಪೀಸ್ ಇನಾಂ!



ಈ ನಕ್ಷೆಯಲ್ಲಿ ಕಂಡ ಪೌಂಟನ್‌ಪೆನ್ನು ಲಂಡನ್ ಪಟ್ಟಣದಲ್ಲಿ ತಯಾರಿಸಿದ್ದು. ಇದಕ್ಕೆ 14 ಕ್ಯಾರೆಟ್ ಭಂಗಾರದ ಮುಳ್ಳು ಹಾಕಿರುವುದು. ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಲಕ್ಷಣವಾಗಿ ಕಾಣವವು. ಈ ವಾರದೊಳಗಾಗಿ ತರಿಸಿಕೊಳ್ಳುವವರಿಗೆ ಮೇಲೆ ತಿಳಿಸಿರುವ ಟೈಂಪೀಸನ್ನು ಇನಾಮಾಗಿ ಕೊಡುವೆವು.

ಕ್ರಯ ಪೆನ್ 1ಕ್ಕೆ ಟೈಂಪೀಸ್ ಸಹಿತ 3—8—0.

ದಿ "ಪಿಗ್ಮಿಫೋನ್"

—: ಎಂಬ ಹಾಡುಗಾರಿಕೆಯ ಯಂತ್ರ. :—

ಈ ಹಾಡುಗಾರಿಕೆಯ ಯಂತ್ರಗಳು ವಿಲಾಯತಿಯಲ್ಲಿ ತಯಾರಾಗಿ ಬಂದವು. ಬಹು ಘಟ್ಟಿ ಯಂತ್ರಗಳಿಂದ ತಯಾರಿಸಿದ್ದು. ಪದ ಹೇಳುವ (Horn) ಕೊಳವೆಯೂ, ಅತ್ಯುತ್ತಮವಾದ (Sound-box) ಸೌಂಡ್‌ಬೊಕ್ಸ್ ಸಹ ಇರುವುದು. ಇವನ್ನು ಪಾಠಕಚೇರಿಗಳಲ್ಲಿಯೂ, ನಾಟಕಶಾಲೆಗಳಲ್ಲಿಯೂ, ಮತ್ತು ಲಗ್ನದ ಮನೆ ಮುಂತಾದ ಸಂತೋಷಕಾಲಗಳಲ್ಲಿ ಉಪಯೋಗಿಸಲು ಬಹು ಲಾಯಖಾಗಿವೆ. ದೊಡ್ಡ ದೊಡ್ಡ ...ಗಳಿಗೂ ಇವಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲ. ಒಂದು ಪದಹೇಳುವ ರಿಕಾರ್ಡ್, ಒಂದು ಸೂಜಿಯು...

ಕ್ರಯ 1ಕ್ಕೆ 10—12—0. ಟಪ್ಪಾಲು ಖರ್ಚು 1—0—0.

...ಮ್. ಸ್ವಾಮಿ ಅಂಡ್ ಕೊ,
ಸಾಹುಕಾರ ಟೌನ್, ಮದ್ರಾಸು.

Y. M. SWAMY & Co.,
No. 12, Nainiappa Naicken St.,
P. Town, MADRAS.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಯಂ. ಜೆ. ಯ. ಅವರ್ಗಳಿಂದ
ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಶೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾ ಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ. | ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ಡಾಕ್ಟರ್, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವದ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೨ನೇ ಶುಕ್ರವಾರ ಎಪ್ರಿಲ್ ೧೯೨೬. ಸಂಚಿಕೆ ೧೪.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೂರ್ಪೊರೇಶನ್, ಉಡುಪಿ, ಲಿಮಿಟಡ್.

Head office: UDIPI. ಹೆಡ್ ಆಫೀಸು: ಉಡುಪಿ.	Branch: COONDAPOOR. ಶಾಖೆ: ಕುಂದಾಪುರ.
ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ವಿಕ್ರಿದ ಮೂಲಧನ	ರೂ. 2,25,000—0—0.
ವಸೂಲಾದ ಮೂಲಧನ	ರೂ. 1,80,690—9—11.
ಅಪದ್ಧನ ವಗೈರೆ ನಿಕ್ಷೇಪಗಳು	ರೂ. 75,875—0—0.
ಸಾ. ಸೇ. ೬೦ ದಂಡ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತಾ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ವಿವೇಚುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಾದ ಮೂಲಧನ 1,80,690—9—11, ಆಪದ್ಧನ ವ ಇತರ ನಿಕ್ಷೇಪಗಳು 75,875—0—0, ಠೇವಣಾತಿಗಳು 5,30,003-14-8, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕಾಂಸ್ಟಿಟ್ಯೂಯೆಂಟರಿಗೆ 4700—0—0, ಡಿವಿಡೆಂಡ್ ಮೇಲೂ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 40,274—3—11, ಜುಮ್ಲಾ ರೂ. 8,31,543—12—1.

ಆಸ್ತಿ ವ ಸೊತ್ತುಗಳು.

ಒಟ್ಟು ಅಸ್ವೀಕೃತ ಕಡ್ಡಾಯ ಋಣಗಳು ವಗೈರೆ 3943—8—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,08,851—13—8, ಸಾ. ಸೇ. ೬೦ಲ್ಲ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತಾ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4700—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ) 22,795—5—6, ಕೈಯಲ್ಲಿರುವ ಮತ್ತು ಬೇರೆ ಬ್ಯಾಂಕುಗಳಲ್ಲಿ ಸಿಕ್ಕತಕ್ಕ ಶಿಲ್ಕು ಸಹಾ 10,452—15—11, ಜುಮ್ಲಾ ರೂಪಾಯಿ 8,31,543—12—1.

ನಿರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕರೆಂಟ್ ಅವಧಿ ಠೇವಣಾತಿಗಳನ್ನು ಸಾ. ಸೇ. ೮½ರ ದರದ ಬಡ್ಡಿ ಮೇಲೂ, ಮುಸುಮ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾಹುಕಾರಿ ಹುಂಡಿಗಳನ್ನೂ, ವಸ್ತ್ರಾಭರಣ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಿವೇಚುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

N. Anand Rao,
Secretary.

ಮೂರು ದಿವಸಗಳಲಿ, ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದದಾಯಕವಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ] ಅಗಸ್ತ್ಯ [ನೋಡಿ ತಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಮೋಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ತಾಲ್ಪಕ್ಷಂತು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ವಿಳಾಸ— ದೇವಣ್ಣ ನಾರಾಯಣ ಶೇಟ್, ... ಗೋಕರ್ಣ.

ಅಪೂರ್ವ ಸಂದರ್ಭ.

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8

ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ನುದಾರಿಕ ಕ್ರಮದಲ್ಲಿ ಮಾಡಲ್ಪಟ್ಟವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

ವಿಲ್ಕ್‌ಸನ್ ವಾಚ್ ಕೊ.,
ಬೆರಾರ್ಡ್ ಎಸ್ಟೇಟ್, ಮುಂಬಯಿ

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ದೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ದೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ದೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಶಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುವು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 908, P. T. MADRAS.

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು:
- ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರು
- ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
- ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
- ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
- ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗು ಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು — ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣ ಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು — ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ [illegible] ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು [illegible] ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆ. [illegible] ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ [illegible] ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary
The Canara Public Conveyance Co., Ltd., Mangalore S. K.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು
ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸಮಾನ [illegible] ಪಿರಾರು ಗಂಟೆಯನ್ನು ತಿಳಿಸುವುದು. ಅತ್ಯುತ್ತಮವಾದ [illegible] ಸಾಮಾನು [illegible] ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ	10—0—0.
ಕೈಗಡಿಯಾರ ಮಾತ್ರ ರೂ	7—0—0.
ರೆಗ್ಯುಲೇಟರ್ ಗಡಿಯಾರ ರೂ	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

ಸ್ಪಿರಿಟ್ ಸ್ಟೋವ್ ಎಂಬ ಅಡಿಗೆಮಾಡುವ ಒಲೆ

ಇವುಗಳನ್ನು ಬ್ರಿಟಿಶ್‌ನವರು ಹೊಸ ನಮೂನೆಯಿಂದ ಮಾಡಿರುತ್ತಾರೆ. [illegible]

ಕ್ರಯ 1ಕ್ಕೆ 3—0—0

ಇನಾಂ! ಜರ್ಮನ್ ಟೇಬಲ್ ಟೈಂಪೀಸ್ ಇನಾಂ!



ಈ ನಿಕ್ಕಲ್ಲಿನ ಕಂಡ ಫೌಂಟನ್‌ಪೆನ್ನು [illegible] 14 ಕ್ಯಾರೆಕ್ಟ್ ಭಂಗಾರದ [illegible]

ಕ್ರಯ ಪೆನ್ 1ಕ್ಕೆ ಟೈಂಪೀಸ್ ಸಹಿತ 3—8—0

ದಿ "ಪಿಗ್ಮಿಫೋನ್"

—: ಎಂಬ ಹಾಡುಗಾರಿಕೆಯ ಯಂತ್ರ. :—

ಈ ಹಾಡುಗಾರಿಕೆಯ ಯಂತ್ರಗಳು ವಿಲಾಯಿತಿಯಲ್ಲಿ ತಯಾರಾಗಿ ಬಂದವು. ಬಹು ಘಟ್ಟಿ ಯಂತ್ರ ಸಣ್ಣದ ಹಾರ್ನ್ (Horn) ಕೊಳವೆಯೂ, ಅತ್ಯುತ್ತಮವಾದ (Sound-box) [illegible]

ಕ್ರಯ 1ಕ್ಕೆ 10—12—0. ಅಂಚೆ ಖರ್ಚು 1—0—0.

ವೈ. ಎಮ್. ಸ್ವಾಮಿ ಅಂಡ್ ಕೊ.,
Y. M. SWAMY & Co.,
No. 12, Nainiappa Naicken St.,
P. Town, MADRAS.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರಿಂದ ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನು ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ [illegible] ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮಾತ್ರೆಯನ್ನು [illegible] ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನು, ಸಂತತಿ [illegible] ಹೊಂದುವರು. [illegible] ಪತ್ಯವ್ಯವಹಾರವು [illegible] ಕ್ರಯ 20 ಮಾತ್ರೆಗಳ ಕುಪ್ಪಿ [illegible] ಪತ್ರವ್ಯವಹಾರವು ಇಂಗ್ಲೀಷಿನಲ್ಲಿ [illegible]

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

[illegible]

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಬಾಲಾಮಿಸ್ರಿ ಮುರಬ್ಬಾ [illegible] ಈ ಔಷಧವನ್ನು [illegible]

[illegible]

ಔಷಧಿಯ ಕ್ರಯ [illegible]

Registered No. M. 498.

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು [illegible] ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ತಿರುಪವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೨ನೇ ಶುಕ್ರವಾರ ಏಪ್ರಿಲ್ ೧೯೨೬. ಸಂಚಿಕೆ ೧೪.

Th Canara Banking Corporation, UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೂರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. — ಹೆಡ್ ಆಫೀಸು ಉಡುಪಿ.
Branch COONDAPOOR — ಬ್ರಾಂಚ್ ಕುಂದಾಪುರ

ನಿಯಮಿತ ಮೂಲಧನ	ರೂ. 3,00,[illegible]
ಚಂದಾ ಪಾಲಿಗೆ ಅರ್ಜಿತ ಮತ್ತು ಎತ್ತಿದ ಮೂಲಧನ	ರೂ. 2,[illegible]
ವಸೂಲಿಯಾದ ಮೂಲಧನ	ರೂ. 1,8[illegible]—9—11.
ಅಪದ್ಧನ ವಗೈರೆ ಪತ್ತಗಳು	ರೂ. [illegible]—0—[illegible]
ಸಾ. ಸೇ. ೬೦ ದರದ ಬಡ್ಡಿ ಸಿಕ್ಕುವ ಸರಕಾರಿ ಭದ್ರತೆ ಪತ್ರಗಳ ಮೇಲೆ ರೂ.	25,5[illegible]

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಏವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಿಯಾದ ಮೂಲಧನ 1,80,990—9—11, ಅಪದ್ಧನ ವಗೈರೆ ಪತ್ತಗಳು 76,870—0—0, ಠೇವಣಾತಿಗಳು 5,3[illegible]—14—6, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು [illegible] 4700—0—0, ಏಜೇಜನ ಮೇಲಾ [illegible] 40,274—3—11, ಜುಮ್ಲಾ ರೂ. 8,31,[illegible]—12—1

ಆಸ್ತಿ ವ ಹೊಣೆಗಳು.

[illegible] 8943—5—0, [illegible] 7,08,[illegible]—13—8, ಸಾ. ಸೇ. ೬೦ರ ಬಡ್ಡಿ ಸಿಕ್ಕುವ ಸರಕಾರಿ ಭದ್ರತೆ ಪತ್ರಗಳ ಮೇಲೆ 25,500—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4700—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ) [illegible],790—0—0, [illegible] 10,452—10—11, ಜುಮ್ಲಾ ರೂಪಾಯಿ 8,31,043—12—1.

ನಿರಖು ಠೇವಣಾತಿಗಳನ್ನು ಕಾಲಕ್ಕನುಸರಿಸಿ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, [illegible] ಠೇವಣಾತಿಗಳನ್ನು ಸಾ. ಸೇ. ೦½ರ ದರದ ಬಡ್ಡಿ ಮೇಲೂ, [illegible] ಠೇವಣಾತಿಗಳನ್ನು [illegible] ಮತ್ತು ಸೇವಿಂಗ್ಸ ಠೇವಣಾತಿಗಳನ್ನು [illegible] ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು [illegible] ಹುಂಡಿಗಳನ್ನು, [illegible] ಮತ್ತು ಯೋಗ್ಯ [illegible] ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಹೀವಾಟುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಬೇಕು.

N. Anand Rao,
Secretary.

ಅಪೂರ್ವ ಸಂದರ್ಭ.

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರಾದ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಉಗಿನ ಸುದಾರಿತ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆ [illegible] ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

ವಿಲ್ಸನ್ ವಾಚ್ ಕೊ.,
ಬಲಿಡಾರ್ ಎಸ್ಟೇಟ್, ಮುಂಬಯಿ

ದೇನೆ ಮುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ದೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ದೇನೆಯನ್ನು ನಿವಾರಣೆಮಾಡುವುದಕ್ಕೆ ಶಕ್ತ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ದೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಕುವುದರೊಳಗೆ ಗಜಕರ್ಣವು ಖಂಡಿತವಾಗಿ ವಾಸಿಯಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. — 109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಸು.

[illegible]

ಅಗಸ್ತ್ಯ [illegible]

ಮನ್ಮಥ ಚಿಂತಾಮಣಿ ಲೇಹ.

[illegible]

1 ಡಬ್ಬಿ ಕ್ರಯ 1ಕ್ಕೆ 3—0—0. [illegible] ಕ್ರಯ ಡಬ್ಬಿ 1ಕ್ಕೆ 1—9—0.

[illegible]

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ — ಮಾರಲ್ಪಡುವವು.

ರೂ. 14—0—0ರ ವಾಚು ರೂ. 7—0—0 ಕ್ಕೆ ಕೊಡಲ್ಪಡುವುದು.



ಈ ವಾಚುಗಳು [illegible]

[illegible]

The Canara Public Conveyance Co., Ltd, Mangalore.
(Established 1914.)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು {
ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು
ಕೊಳ್ಳುವವರಿಗೆ
ಮೋಡರ್ನ್ ರೆಗ್ಯುಲೇಟರ್
ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.



ಕ್ಯಾಪ್‌ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು.

ಸ್ಪಿರಿಟ್ ಸ್ಟೋವ್ ಎಂಬ ಅಡಿಗೆಮಾಡುವ ಒಲೆ

ಇವುಗಳನ್ನು ಬ್ರಿಟಿಷ್‌ನವರು ಹಸನಾದ ಹಿತ್ತಾಳೆಯಿಂದ ಮಾಡಿರುವರು. ಇದರಲ್ಲಿ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಬಹುದು. ಬೆರಣಿ, ಸೌದೆ, ಮುಂತಾದವುಗಳು ಹಾಕಿ ಒಲೆಯನ್ನು ಉರಿಸುವದರಿಂದ ಹೊಗೆತುಂಬಿ ಕಣ್ಣುಗಳು ಕೆಟ್ಟುಹೋಗುವವು ಆದರೆ ಇದರಿಂದ ಯಾವ ಕಷ್ಟವೂ ಇಲ್ಲ. ಸ್ವಲ್ಪ ಸೀಮೆ ಎಣ್ಣೆಯನ್ನು ಹಾಕಿ ಪಂಪುಮಾಡಿದರೆ ಸಾಕು. ಇದರಲ್ಲಿ ಎಷ್ಟು ಮಂದಿಗಾದರೂ ಅಡಿಗೆಯನ್ನು ಬಹು ಬೇಗನೆ ಮಾಡಬಹುದು.
ಕ್ರಯ 1ಕ್ಕೆ 3—0—0.

ಇನಾಂ! ಜರ್ಮನ್ ಟೇಬಲ್ ಟೈಂಪೀಸ್ ಇನಾಂ!



ಈ ನಕ್ಷೆಯಲ್ಲಿ ಕಂಡ ಫೌಂಟನ್‌ಪೆನ್ನು ಲಂಡನ್ ಪಟ್ಟಣದಲ್ಲಿ ತಯಾರಿಸಿದ್ದು. ಇದಕ್ಕೆ 14 ಕ್ಯಾರೆಕ್ಟ್ ಭಂಗಾರದ ಮುಳ್ಳು ಹಾಕಿರುವುದು. ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಲಕ್ಷಣವಾಗಿ ಕಾಣವವು. ಈ ವಾರದೊಳಗಾಗಿ ತರಿಸಿಕೊಳ್ಳುವವರಿಗೆ ಮೇಲೆ ತಿಳಿಸಿರುವ ಟೈಂಪೀಸನ್ನು ಇನಾಮಾಗಿ ಕೊಡುವೆವು.
ಕ್ರಯ ಪೆನ್ 1ಕ್ಕೆ ಟೈಂಪೀಸ್ ಸಹಿತ 3—8—0.

ದಿ "ಪಿಗ್ಮಿಫೋನ್"
—: ಎಂಬ ಹಾಡುಗಾರಿಕೆಯ ಯಂತ್ರ. :—

ಈ ಹಾಡುಗಾರಿಕೆಯ ಯಂತ್ರಗಳು ವಿಲಾಯತಿಯಲ್ಲಿ ತಯಾರಾಗಿ ಬಂದವು. ಬಹು ಘಟ್ಟಿ ಯಂತ್ರಗಳಿಂದ ತಯಾರಿಸಿದ್ದು. ಪದ ಹೇಳುವ (Horn) ಕೊಳವೆಯೂ, ಅತ್ಯುತ್ತಮವಾದ (Sound-box) ಸೌಂಡ್‌ಬೊಕ್ಸ್ ಸಹ ಇರುವುದು. ಇವನ್ನು ಪಾಠಕಚೇರಿಗಳಲ್ಲಿಯೂ, ನಾಟಕ ಶಾಲೆಗಳಲ್ಲಿಯೂ, ಮತ್ತು ಲಗ್ನದ ಮನೆ ಮುಂತಾದ ಸಂತೋಷಕಾಲಗಳಲ್ಲಿ ಉಪಯೋಗಿಸಲು ಬಹು ಲಾಯಖಾಗಿವೆ. ದೊಡ್ಡ ದೊಡ್ಡ [illegible]ಗಳಿಗೂ ಇವಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲ. ಒಂದು ಪದಹೇಳುವ ರಿಕಾರ್ಡ್, ಒಂದು ಸೂಜಿಯು [illegible]
[illegible]ಯ 1ಕ್ಕೆ 10—12—0. ಟಪ್ಪಾಲು ಖರ್ಚು 1—0—0.

[illegible]ಮ್. ಸ್ವಾಮಿ ಅಂಡ್ ಕೊ,
ಪಾರ್ಕ್ ಟೌನ್, ಮದ್ರಾಸು.

Y. M. SWAMY & Co.,
No. 12. Nainiappa Naicken St.,
P. Town, MADRAS.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜೆ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಕೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ, ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ
450 ಪುಟಗಳು ಕ್ರಯ ರೂ. 2—4—0
ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.
ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —



ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ, ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೫—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ. | ಡಿ. ಮನ್ನಾಲಾಲ್, ಹೋಲ್ ಸೇಲ್ ಡಾಕ್ಟರ್, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Registered: No. M. 498.
ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೨ನೇ ಶುಕ್ರವಾರ ಎಪ್ರಿಲ್ ೧೯೨೬. ಸಂಚಿಕೆ ೧೪.

Th Canara Banking Corporation, UDIPI, Ltd.
ದಿ ಕೆನರಾ ಬ್ಯಾಂಕಿಂಗ್ ಕೂರ್ಪೊರೇಶನ್, ಉಡುಪಿ, ಲಿಮಿಟೆಡ್.

Head office: UDIPI. ಹೆಡ್ ಆಫೀಸು: ಉಡುಪಿ. — Branch: COONDAPOOR. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲ್ಕೆ ಅರ್ಪಿಸಿದ ಮತ್ತು ವಿಕ್ರಯ ಮೂಲಧನ	ರೂ. 2,20,000—0—0.
ವಸೂಲಾದ ಮೂಲಧನ	ರೂ. 1,80,690—9—11.
ಅಪದ್ಧನ ವಗೈರ ವಿತ್ತಗಳು	ರೂ. 75,575—0—0.
ಸಾ. ಸೇ. ೮೦ ದರದ ಬಡ್ಡಿ ಸಿಕ್ಯೂರಿಟಿ ಸರಕಾರಿ ಭದ್ರತ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ವಿವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.
ವಸೂಲಾದ ಮೂಲಧನ 1,80,690—9—11, ಅಪದ್ಧನ ವ ಇತರ ವಿತ್ತಗಳು 75,875—0—0, ಠೇವಣಾತಿಗಳು 5,30,003-14-8, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4700—0—0, ಖರ್ಚಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 40,274—8—11, ಜುಮ್ಲಾ ರೂ. 8,31,043—12—1.

ಆಸ್ತಿ ವ ಸೊತ್ತುಗಳು.
ಕಿತ್ತು ಅಮ್ಯೋಣ ಕಟ್ಟಡದ ಕೈಪಡಿಗಳು ವಗೈರ 3043—8—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,08,851—13—8, ಸಾ. ಸೇ. ೮೦ಲ್ಲಿ ಬಡ್ಡಿ ಸಿಕ್ಯೂರಿಟಿ ಸರಕಾರಿ ಭದ್ರತ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4700—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರ ಕೂಡಿ) 22,795—8—6, ಕೈಯಲ್ಲಿರುವ ಮತ್ತು ಬೇಂಕರರ ಕೂಡ ಕೇಳಿದಾಗ್ಗ ಸಿಕ್ಕತಕ್ಕ ಶಿಲ್ಕು ಸಹಾ 10,452—15—11, ಜುಮ್ಲಾ ರೂಪಾಯಿ 8,31,043—12—1.

ಸ್ಥಿರತು ಠೇವಣಾತಿಗಳನ್ನು ಕಾಲಕ್ಕ್ರಮತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕಂಚಿ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸುಮ್ ಠೇವಣಾತಿಗಳನ್ನು ಕರಂಟು ಠೇವಣಾತಿಗಳನ್ನು ಬಿಲ್ಲಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವದಲ್ಲದ ಭಾರತೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾಹುಕಾರಿ ಹುಂಡಿಗಳನ್ನೂ, ವಟ್ಟಾಯಿಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಿವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

N. Anand Rao,
Secretary.

ಅಪೂರ್ವ ಸಂದರ್ಭ.
ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್, ಮುಂಬಯಿ

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ದೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ದೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.
ಅಮೃತಾಂಜನ
ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ದೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.
ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,
6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. — 109 ಫ್ರೇಯರ್ ರೋಡ್ ಮುಂಬಯಿ.
ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮೂರು ದಿವಸಗಳಲಿ, ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪೀಸು.
ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.
ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!
[ಟ್ರೇಡ್ ಮಾರ್ಕ್] ಅಗಸ್ತ್ಯ [ನೋಡಿ ಕೊಳ್ಳಿರಿ]
ಮನ್ಮಥ ಚಿಂತಾಮಣಿ ಲೇಹ.
(ರಿಜಿಸ್ಟರ್ ಆದದ್ದು)
ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.
ಮೇಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.
1 ಸೇರು [illegible] ದಿವಸಕ್ಕೆ ಸೇವಿಸಬಹುದು.
1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1—9—0.
[illegible] ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.
ವಿಳಾಸ— ದೇವಣ್ಣ ನಾರಾಯಣ [illegible] [illegible]

ಅಪೂರ್ವ ಸಂದರ್ಭ!
ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!
ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —
ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು. ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. [illegible], P. T. MADRAS.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾ ದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು. 10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟ 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟೈಮ್‌ಪೀಸ್ ಕ್ರಯ ರೂ. 5-0-0

ಡಬ್ಬಲ್ ಎ. " " " 6-0-0.

"ಬಿ" ಟೈಮ್‌ಪೀಸ್ ಕ್ರಯ ರೂ. 2—4—0

ಟಕ್—ಟಾಕ್ ವಾಚ್ 1ರ ಕ್ರಯ ,, 2—12—0

ಕಂಬಾಯಿಂಡ್ ಪೆಪರ್ ಕ್ಲಿಪ್ ಟೈಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಳಳ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕಿಂಗ್ ಆಫ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಟೈರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೀನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ಕಾರಿನಪತ್ತೆ:-CAWASHAPUR, BOMBAY.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ವಿ. ಪಿ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ವಸಂತ.

ಕನ್ನಡಿಗರೆ! ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . ವಸಂತ
ಸಮಾಜಸುಧಾರಕನೆಂದರೆ . . . . . ವಸಂತ
ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . . ವಸಂತ
ಕರ್ನಾಟಕ ಭಾಷಾಸೇವಕನೆಂದರೆ . . . . . ವಸಂತ
ದೇಶವಿದೇಶ ಬಂಧುವೆಂದರೆ . . . . . ವಸಂತ
ಕಾದಂಬರಿಗಳ ಭಂಡಾರವೆಂದರೆ . . . . . ವಸಂತ
ಚಿತ್ತಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ
ದೇಶಭಕ್ತನೆಂದರೆ . . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,
ಯಾರಿಗೆ ಬೇಡ?

48 (ಕ್ರೌನ್ ¼ ಷಿಟ ಸೈಜಿನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,
ವಸಂತ ಕಾರ್ಯಾಲಯ,
ಕುಂದಾಪುರ, ದಕ್ಷಿಣ ಕನ್ನಡ

11 ಮಣಿಗಳಿದ್ದು ಬ್ರಿಜ್ ಮೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟೈಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 " " " 26—0—0.
14 ,, 15 ಮಣಿ " 36—0—0.
9 " " " 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪ್ರಭುಗಳಿಗೆ	ರೂ. 3-0-0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	,, 2-8-0.
,, ಸ್ಥಳೀಕರಿಗೆ ...	,, 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ದಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಚಿಕ್ಕಪೇಟೆ, ಬೆಂಗಳೂರು, ಸಿಟಿ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಪಶ್ಮರ್ ರೇಷ್ಮೆ ಮಡಿಗಳು, ಪಾಮರಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಘಂಟೆ, ಶಂಖ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಪೋಟೋ ಚೌಕಟ್ಟುಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯಂ. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂವತ್ಸರದ ಅಧಿಕ ಚೈತ್ರ ಬ॥ ೫ ಶನಿವಾರದಿಂದ ಕ್ಷಯ ಸಂವತ್ಸರದ ಅಧಿಕ ಚೈತ್ರ ಬ॥ ೧೨ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮಾನ ಸುಗ್ಗಿ.)

ತಾರೀಕು	ವಾರ	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರಮಾನ ದಿ.	ಸೂರ್ಯ ಉ.	ಸೂರ್ಯ ಅಸ್ತ.
3	ಶನಿ	೫	೨೪.೪೪	ಅನುರಾಧಾ	೮.೪೪	೨೧	6.28	6.42
4	ರವಿ	೬	೨೧.೧೪	ಜ್ಯೇಷ್ಠಾ	೬. ೨	೨೨	6.28	6.42
5	ಸೋಮ	೭	೧೬.೪೪	ಮೂಲಾ	೪.೪೬	೨೩	6.27	6.42
6	ಕುಜ	೮	೧೧.೨೮	ಪೂ. ಷಾ.	೧.೩೦	೨೪	6.26	6.42
7	ಬುಧ	೯	೬. ೦	ಶ್ರವಣಾ	೫೩.೪೬	೨೫	6.26	6.42
8	ಗುರು	೧೦	೦.೧೬	ಧನಿಷ್ಠಾ	೪೯.೪೪	೨೬	6.25	6.42
9	ಶುಕ್ರ	೧೨	೪೮.೪೪	ಶತಭಿಷಾ	೪೫.೪೫	೨೭	6.24	6.42

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜನವರಿ ೧ರಿಂದ ಮಳೆ.
26	92—8	75—5	—	—
27	91—8	77—2	—	—
28	93—1	77—5	—	—
29	91—7	76—2	—	—
30	91—5	76—6	—	—
31	91—5	75—5	—	—
1	92—7	75—8	—	—

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಅ.	ವರೆಗೆ ರೂ. ಅ.
ಮುಸ್ಕತಿ		8— 4	9— 0
ಹೊಸ ಗುಡ್ಡು	...	7— 12	8— 4
ಹೊಸ ರಾಶಿ	...	7— 0	7—12
ಅವ್ವಲ್ ಬೆಳ್ತಿಗೆ	...	8— 0	9— 0
ರಂಗೂನು ಬೆಳ್ತಿಗೆ ಗೋಣಿ ೧	...	13— 0	14— 0
ಗೋಧಿ ಗೋಣಿ ೧ಕ್ಕೆ	...	18— 0	19— 8
ಹುರುಳಿಗೋಣಿ ೧ಕ್ಕೆ	...	8— 4	8— 8
ಕಡಲೆಗೋಣಿ ೧ಕ್ಕೆ	...	13— 0	13— 8
ಕೊಣಗಿಗೋಣಿ ೧ಕ್ಕೆ	...	15— 4	16— 8
ಕೊಣಗಿಬೇಳೆ ಗೋಣಿ ೧ಕ್ಕೆ	...	16— 8	23— 0
ಉದ್ದು ಗೋಣಿ ೧ಕ್ಕೆ	...	16— 8	—
ಹೆಸರುಗೋಣಿ ೧ಕ್ಕೆ	...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ	...	60— 0	65— 0
ಉಪ್ಪು ಗೋಣಿ ೧ಕ್ಕೆ	...	4— 8	4—12
ಕೊಬ್ರಿ ಖಂಡಿ ೧ಕ್ಕೆ	...	100— 0	105— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	32— 0	—
ಎಳ್ಳಿಂಡಿ ಖಂಡಿ ೧ಕ್ಕೆ	...	55— 0	60— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	7—10	7—12
ಎಳ್ಳೆಣ್ಣೆ ಮುಡಿ ೧ಕ್ಕೆ	...	7— 8	9— 0
[illegible] ಎಣ್ಣೆ ಪೆಟ್ಟಿಗೆ ೧ಕ್ಕೆ	...	8-12-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	4— 6	4 — 8
ಊರ ಮೆಣಸಿನಕಾಯಿ ಮುಡಿ ೧ಕ್ಕೆ	...	5—12	6— 4
ಸಾಸಿವೆ ಮುಡಿ ೧ಕ್ಕೆ	...	9— 8	—
ಕೊತ್ತಂಬರಿ ಮುಡಿ ೧ಕ್ಕೆ	...	3— 8	4— 6
ಕಾಫಿ ಖಂಡಿ ೧ಕ್ಕೆ	...	345— 0	360— 0
ಕಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	275— 0	280— 0
ಹೊಸ ಅಡಿಕೆ ಖಂಡಿ ೧ಕ್ಕೆ	...	210— 0	225— 0
ಕಾಳುಮೆಣಸು ಖಂಡಿ ೧ಕ್ಕೆ	...	285— 0	—
ಯಾಲಕ್ಕಿ ಮುಡಿ ೧ಕ್ಕೆ	...	50— 0	64— 0
ಗೇರುಬೀಜ ಮುಡಿ ೧ಕ್ಕೆ	...	2—12	—
ಕಶ್ಶಿಟ ಖಂಡಿ ೧ಕ್ಕೆ	...	45— 0	65— 0
[illegible] ಮುಡಿ ೧ಕ್ಕೆ	...	16— 4	16—12
[illegible] ಮುಡಿ ೧ಕ್ಕೆ	...	21— 0	—
[illegible] ಸೇರು ೧ಕ್ಕೆ	...	18—10	
[illegible] ಮುಡಿ ೧ಕ್ಕೆ	...	16— 8	
ಪವನು		13— 6	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ



PROPRIETOR RAJVAIDYA NAR[illegible]
NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

ಕೇಳಿರಿ! ಬರೆಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,
ಮಂಗಳೂರು.

ರೋಲ್ಡ್‌ಗೋಲ್ಡ್ ಎಂಟು ಮೂಲೆ ಕೈಗಡಿಯಾರ.

ಈ ಕೈಗಡಿಯಾರವು ಬಂಗಾರಕ್ಕೆ ಸಂಸಮಾನವಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು.

ಕ್ರಯ ೧ಕ್ಕೆ ರೂ. 7—2—0.

— ಕಾಸಿನ ಸರ (ಮಾಲೆ). —

ಇದನ್ನು ಪ್ರತಿಯೊಬ್ಬರಿಗೂ ಅನುಕೂಲವಾಗಿರುವ ಹಾಗೆ 60 ಕಾಸುಗಳು ಇಟ್ಟು ತಯಾರಿಸಿದೆ. ಕತ್ತಿಗೆ ಹಾಕಲು ತೆಗೆಯಲು ಮಧ್ಯದಲ್ಲಿ ಕೀಲು ಇಟ್ಟಿರುವುದು. ನೋಡಲು ಬಹು ಅಲಂಕಾರವಾಗಿದೆ. ಯಾವಾಗಲೂ ಬಣ್ಣವು ಕೆಡದಂತೆ ಎಲೆಕ್ಟ್ರೋ ಭಂಗಾರದ ಗಿಲೀಟು ಮಾಡಿರುವುದು.

ಕ್ರಯ ಮಾಲೆ ಸರ 1ಕ್ಕೆ ರೂ. 8—0—0.

ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ೧೨ ರೋಸ್ ಸೆಂಟ್ ಬಾಟ್ಲಿಗಳು ಇನಾಂ ಕೊಡುವೆವು.

ಫೌಂಟನ್‌ಪೇನಾ.

Fountain Pen.

ಈ ನಕ್ಷೆಯಲ್ಲಿ ಕಾಣಿಸಿರುವ ಪೇನಾಗಳು ವಿಲಾಯತಿಯಲ್ಲಿ ತಯಾರಿಸಲ್ಪಟ್ಟವು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ೩೦೦ ಮಾತುಗಳು ಬರೆಯುವವು. ಈ ಪೇನಾವನ್ನು ಮೇಲಾದ ವಲ್ಕನೈಟ್‌ನಿಂದ ತಯಾರಿಸಲ್ಪಟ್ಟದ್ದು. ಇದಕ್ಕೆ 14 ಕ್ಯಾರಟ್ ಭಂಗಾರದ ಮುಳ್ಳು ಇರುವದು. ಇದರಲ್ಲಿ ಬರೆದ ಅಕ್ಷರಗಳು ಸ್ವಲ್ಪವೂ ವ್ಯತ್ಯಾಸವಿಲ್ಲದೆ ಒಂದೇ ಸಮನಾಗಿರುವವು. ಇದರ ಜೊತೆಯಲ್ಲಿ ಇಂಕಿಯನ್ನು ತುಂಬುವ ಗಾಜಿನ ಕೊಳವೆಯನ್ನು ಮುಫತ್ತಾಗಿ ಕೊಡುವೆವು. ಕ್ರಯ 1ಕ್ಕೆ 2—0—0

ವಿಳಾಸ:— ಎಸ್. ಆರ್. ಕೃಷ್ಣ ಅಂಡ್ ಕೊ.
ನಂ॥ ೧ ತಂಬುಚಾಯಿಕನ ಬೀದಿ, ಮದರಾಸು.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆಯತಕ್ಕವಕ್ಕೆ ಒಂದು ದೇಶದ ಪೂರ್ವಶಾಸ್ತ್ರವು ಇರುವುದು. ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವವರಿಗೆ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, ಮದ್ರಾಸ್.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲು 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಾಲಿ ವಧೆ ... ...
(3) ಇಂದ್ರಜಿತು ಕಾಳಗ ... ...
(4) ಚಂಡಭೀಮ ... ...
(5) ವೃಷಸೇನನ ಚರಿತ್ರೆ ... ...
(6) ಭೀಮನ ಕಟ್ಟಿನ ಚೋರ ಕಥೆ ... ...
(7) ಕುವಲಯ ರಾಜನ ಕಥೆ ... ...
(8) ಕೃಷ್ಣಲೀಲಾಮೃತ ... ...
(9) ಶ್ರೀ ಕೃಷ್ಣ ಸತ್ಯಭಾಮೆ ಸಂವಾದ ... ...
(10) ಚಿತ್ರಸೇನ ಕಾಳಗ ಕಥೆ ... ...
(11) ಬಾಣಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣನೋಕ್ಷ್ಮದ ಯಕ್ಷಗಾನ ... ...
(16) ಸಭಾ ಲಕ್ಷ್ಮಣ ... ...
(17) ಶ್ರೀ ಕೃಷ್ಣ ಪಾರಿಜಾತದ ಕಥಾ ... ...
(18) ಚಂದ್ರಹಾಸ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) " ಶಾದೇವರ ಮಹಾತ್ಮೆ ... ...
(22) " ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಅಕ್ರೂರನ ಕಥೆ ... ...
(24) " ಚೋರ ಕಥೆ ... ...
(25) " ಪಾರ್ವತಿ ಕಾರವಂಶ ಕಥೆ ... ...
(26) " ಗೋವಿನ ಚರಿತ್ರೆ ... ...
(27) " ದುಶ್ಯಾಸನ ಕಥೆ ... ...
(28) " ಸಾನಂದ ಗಣೇಶ್ವರ ಕಥೆ ... ...
(29) " ಅಂಗದ ಸಾಧನ ... ...

ಶಾರದಾ ಛಾಪಖಾನೆ, ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.
ದೊಡ್ಡ ಸೈಜಿನ ಸಾದಾ ಡೈರಿ . . . ೧೦ ಆಣೆ.
ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿ ೧೨ ಆಣೆ.
ಸಣ್ಣ ಸೈಜಿನ ಸಾದಾ ಡೈರಿ . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ನೋಟೀಸು.

ಕಾಸರಗೋಡು ತಾಲೂಕು ಬಾಯಾರ ಗ್ರಾಮದ ಉಳ್ವಾನ ಗುಬ್ಬಿ ಯಾನೆ ನಾರಣ ಭಟ್ಟರ ಮಗ ಮಲಬಾರ ಜಿಲ್ಲಾ ವಲಯನಾಡು ತಾಲೂಕು ಅಂಚೆಕುನ್ನು ಅಂಶ ದೇಶದ ಯೆರಮಂಗಲದಲ್ಲಿರುವ ನಾರಾಯಣ ಭಟ್ಟನು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ:—ನಾನು ತಾ. 22—3—1926ರಲ್ಲು ನನ್ನ ಕುಟುಂಬದ ಸದರಿ ಉಳ್ವಾನ ನಾರಣ ಭಟ್ಟನು ವಾಸಿಸುವ ಮನೆಗೆ ಹೋಗಿದ್ದಾಗ ಅಲ್ಲಿ ನನ್ನ ಅಂಗಿ ಜೇಬಿನಲ್ಲಿದ್ದ ರೂಪಾಯಿ 5ರ ಬಾಬ್ತು 6 ಕರೆನ್ಸಿ ನೋಟು ಗಳು ಮತ್ತು ಸದರಿ ಉಳ್ವಾನ ವೆಂಕಪ್ಪ ಭಟ್ಟರ ಮಗ ನಾರಣ ಭಟ್ಟನು ನನ್ನಿಂದ ತಾ. 7—8—'24ರಲ್ಲು ರಿ. ನಿಶಿ ರೂಪಾಯಿ 7000ಕ್ಕೆ ಪಡದ ಕ್ರಯಚೀಟಿನ ಪ್ರತಿಫಲದ ಪೈಕಿ ರೂಪಾಯಿ 2500ಕ್ಕೆ ಆತನು ಅದೇ ಕ್ರಯಚೀಟು ಸಮಯದಲ್ಲಿ ಬರ ಕೊಟ್ಟ ಡಿ. ಪ್ರೊ. ನೋಟು ಒಂದು ಕೂಡಾ ಕಳವಾಗಿ ಹೋಗಿ ರುತ್ತದೆ. ಸದರಿ ನೋಟನ್ನು ಯಾರಾದರೂ ಟ್ರಿನ್ಸಫರ್ ಯಾ ಪ್ರತಿಫಲ ಬಂತು ಎಂತ ಹಿಂಬದಿ ರಶೀದಿಯಾಗಲಿ ಫೋರ್ಜರಿ ಮಾಡಿದ್ದಲ್ಲಿ ನಾನು ಜವಾಬ್ದಾರನಲ್ಲ. ಈ ವಿಷಯದಲ್ಲಿ ಸದರಿ ವೆಂಕಪ್ಪ ಭಟ್ಟರ ಮಗ ನಾರಣ ಭಟ್ಟನು ಮೊಸಹೋಗಬಾರದು.

ನಾರಾಯಣ ಭಟ್ಟನ ರುಜು.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. No. 56/1926.

1. ರುಕ್ಮಿಣಿ ಯಾನೆ ಸರಸ್ವತಿ.
2. ವೈಕುಂಟ ಕಮ್ತಿ
3. ರಾಮ ಕಮ್ತಿ.
4. ಬಾಬುರಾಯ. } ಮೈನರರು ಇವರ ಗಾರ್ಡಿಯನ್
5. ಪಾಂಡುರಂಗ. } 2ನೇ ಅರ್ಜಿದಾರ. } ಅರ್ಜಿದಾರರು.

ಮತ್ತು

ದೇವಕಮ್ಮಾ — ರಿಸ್‌ಪೊಂಡೆಂಟಳು.

ಕಾರ್ಕಳ ಕಸಬೆಯಲ್ಲಿ ವಾಸಿಸಿಕೊಂಡು ಇದ್ದು ಹಾಲಿ ಮುಂಬಯಿ ಪಟ್ಟಣದಲ್ಲಿ 1921ನೇ ಇಸವಿ ಫೆಬ್ರವರಿ ತಿಂಗಳಲ್ಲಿ ಮೃತಪಟ್ಟ ಸುಂದರಿ ಯಾನೆ ಸತ್ಯಭಾಮಾ ಇವಳ ಸಾಲಗಳನ್ನು ವಸೂಲು ಮಾಡುವರೆ ಮೇಲ್ಕಂಡ ಅರ್ಜಿದಾರರು ತಮ್ಮ ಪೈಕಿ 1ನೇಯವಳ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕೆಂತ ಅಪೇಕ್ಷಿಸಿ ಮೇಲ್ಕಂಡ ಕೋರ್ಟಿನಲ್ಲಿ ಕೊಟ್ಟ ಅರ್ಜಿಯನ್ನು ತನಿಖೆ ಬಗ್ಗೆ ತಾ. 15—4—'26ಕ್ಕೆ ಇಟ್ಟದೆ. ಆಕ್ಷೇಪ ಇದ್ದವರು ಅವರ ಆಕ್ಷೇಪಗಳನ್ನು ಸದರಿ ತಾರೀಕಿಗೆ ಸದರಿ ಕೋರ್ಟಿನಲ್ಲಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

MANGALORE, 30—3—1926 } K. SADASHIVA RAO, *Counsel for petr.*

ನೋಟೀಸು.

ಉಡುಪಿ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ.

O. P. No. 21/1929.

(1) ಸೂರಮ್ಮ ಸೆಟ್ತಿ—ಮಂಜಯ್ಯ ಶೆಟ್ಟಿ ವಿಧವೆ.
(2) ಮುತ್ತಕ್ಕ ಸೆಟ್ತಿ—ಸದರಿ ಮಂಜಯ್ಯ ಸೆಟ್ಟಿಯ ಸಹೋದರಿ, ಪೆರ್ಡೂರು ಕಸಬಾ ಗ್ರಾಮದಲ್ಲಿ ಇರುವವರು, } ಅರ್ಜಿದಾರರು

ಸದರಿ ಮಂಜಯ್ಯ ಸೆಟ್ಟಿಯೆಂಬವನು ಆತನು ಕಾಯಂ ವಾಸ್ತವಿಸಿಕೊಂಡಿದ್ದ ಪೆರ್ಡೂರು ಕಸಬಾ ಗ್ರಾಮದ ಹೆರಡೆ ಎಂಬಲ್ಲಿ ತಾರೀಕು 12—2—1926ರಲ್ಲಿ ಮೃತಪಟ್ಟು ಆತಗೆ 2ನೇ ಅರ್ಜಿದಾರಳೇ ವಾರಿಸುದಾರಳಾಗಿರುತ್ತಾಳೆ. ಅದರೂ ಕೆಳಗೆ ಕಾಣಿಸಿದ ಸಾಲ ವಸೂಲುಮಾಡಲಿಕ್ಕೆ ತನ್ನ ಹೆಂಡತಿ ಯಾದ 1ನೇ ಅರ್ಜಿದಾರಳನ್ನು ಆತನು Beneficially ಮಾಡಿದ ಕಾರಣ ಸದರಿ ಸಾಲವನ್ನು 1ನೇ ಅರ್ಜಿದಾರಳು ವಸೂಲುಮಾಡುವಲ್ಲಿ 2ನೇ ಅರ್ಜಿದಾರಳ ಆಕ್ಷೇಪ ಇಲ್ಲದಿರುವ ಕಾರಣ 2 ಜನ ಅರ್ಜಿದಾರರು ಕೂಡಿ ಕೆಳಗೆ ಕಾಣಿಸಿದ ಸಾಲ ವನ್ನು ವಸೂಲುಮಾಡಲಿಕ್ಕೆ 1ನೇ ಅರ್ಜಿದಾರಳಿಗನೇ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಈ ಕೋರ್ಟಿಗೆ O. P. 21/1926ನೇ ಅರ್ಜಿಯನ್ನು ದಾಖಲುಮಾಡಿರುತ್ತಾರೆ. ಈ ಕುರಿತು ಯಾರಿಗಾದರೂ ಆಕ್ಷೇಪಯಿದ್ದಪಕ್ಷಕ್ಕೆ ಈ ಕೋರ್ಟಿನ ಮುಂದೆ 1926ನೇ ಇಸವಿ ಜೂನು ತಿಂಗಳ 16ನೇ ತಾರೀಕಿನ ಹಗಲು 11 ಗಂಟೆಯ ಒಳಗಾಗಿ ಜ್ಯಾಹೀರುಮಾಡಿಕೊಳ್ಳ ತಕ್ಕದು.

ಸಾಲದ ವಿವರ:

Bombay Life Insurance Co. Ltd. Bombay.	Policy amount Rs. 1200/-including Bonus, Dividend Etc.	Policy no 2163 of the Bombay Life Insurance Co. Ltd Bombay. Date 13-6-1913 to H. Manjaya Shetty

Dt. Munsif's Court, UDIPI, 27—3—1926. } *By order* Ag. Head clerk.

ನೋಟೀಸು.

ದಕ್ಷಿಣಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ

O. P. No. 59/1926.

ಲಕ್ಷ್ಮಿ ಅಮ್ಮಾ ಕೂಡಾ.— ಅರ್ಜಿದಾರರು.

ಮತ್ತು

ವಾಸುದೇವ ಪೈ — ರಿಸ್‌ಪೊಂಡೆಂಟ.

ಮಂಗಳೂರು ತಾಲೂಕು ಬಂಟವಾಳ ಕಸಬೆಯಲ್ಲಿ ಮೃತ ಪಟ್ಟ ಬಿ. ಎಚ್. ಸರ್ವೋತ್ತಮ ಪೈಗಳ ಬಾಬ್ತು ಹೊರಗಿನಿಂದ ಬರತಕ್ಕ ಸಾಲ ವಸೂಲಿ ಕುರಿತು 5ನೇ ಅರ್ಜಿದಾರ ಬಿ. ಎಚ್. ನಾಗೇಶ ಪೈಗಳ ಹೆಸರಲ್ಲಿ ವಾರಿಸ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಕೊಟ್ಟ ಮೇಲ್ಕಾಣಿಸಿದ ಅರ್ಜಿಯು ತಾರೀಕು 15—4—'26ರಲ್ಲು ತನ್ಖಿಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪವಿದ್ದವರು ಸದರಿ ಕೋರ್ಟಿನಲ್ಲಿ ಜ್ಯಾಹೀರು ಮಾಡ ತಕ್ಕದ್ದು.

ಮಂಗಳೂರು, ತಾ. 27-3-'26. } A. VARAD RAO, ಅರ್ಜಿದಾರನ ಕಡೆ ವಕೀಲ.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ.

I. A. 18/'26 IN I. P. 7/'25.

ಎ. ಕೋರನ್ ಚರುಕಂದನ್ ಮಗ ಮಂಗಳೂರು ಶಹಾರ ರೈಲ್ವೆ ಗುಡ್ಸ್‌ಶೆಡ್ಡಿನ ಬಳಿ ಇರುವವ. } ಇನ್ಸೊಲ್ವೆಂಟ ಅರ್ಜಿದಾರ.

ಮತ್ತು

1. ಸರ್ಪಾಡಿ ವೈಕುಂಟ ಪೈ,
2. ಎ. ಬಿ. ಪಿಂಟೊ,
3. ಮಾರ್ಟಿನ್ ಡಿ'ಸೋಜ,
4. ರಾಮ ಪೈ,
5. ಮಂಜುನಾಥ ಮೇಸ್ತ.
6. ಕೆ. ಕುರುವನ್, } ಕ್ರೆಡಿಟರು. ರಿಸ್‌ಪೊಂಡೆಂಟರು.

ಮೇಲ್ಕಂಡ ದಿವಾಳಿ ಅರ್ಜಿದಾರನು ತನಗೆ ಯಬ್ಸೊಲ್ಯೂಟ್ ಡಿಸ್ ಚಾರ್ಜು ಕೊಡಿಸಬೇಕೆಂತ ವಗೈರೆ ಕಾಣಿಸಿ ಕೊಡಿಸಬೇಕೆಂತ ವಗೈರೆ ಕಾಣಿಸಿ ದಾಖಲು ಮಾಡಿದ ಮೇಲ್ಕಂಡ I. A. 18/1926ನೇ ಅರ್ಜಿಯು ಇದೇ ಬರುವ ಎಪ್ರಿಲ್ ತಾರೀಕು 12ಕ್ಕೆ ತನಖಿಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಸದರಿ ತಾರೀಕಿನ ವಳಗೆ ಮೇಲ್ಕಂಡ ಕೋರ್ಟಿಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗಿಯದೆ.

ಮಂಗಳೂರು, 29-3-'26. } P. D'SOUZA B. A. A. L. & L. C. PAIS B. A. B. L. ಅರ್ಜಿದಾರನ ಕಡೆ ವಕೀಲ.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್, ಗಣಪತಿರಾವ್ ಐಗಳ್—ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀ ಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂದ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುಲಿ ಬಾ, ಬೆಲ್ಲದ ಬೈಲು ಬೆರ್ಚಪ್ಪ, ಬ್ರಾಹ್ಮಣ ವೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಜೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ಪಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕ ಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ, ಮಂಗಳೂರು.

ಮೋಟರು ನೋಟ್ಸು.
Motor Notes.

ಹತ್ತು ಹದಿನೈದು ವರ್ಷದ ಹಿಂದೆ ಮೋಟರುಗಳಿಗೆ ವಿದ್ಯುತ್ ಉಪಕರಣ (Electrical Equipment) ಇರುತ್ತಿರಲಿಲ್ಲ. ಕಾರುಗಳಿಗಾದರೂ ಬೇಕಾದರೆ ಮಾತ್ರ ಡ್ಯಾನೆಮೊ (Dynamo)ವನ್ನು ಸ್ಪಾರ್ಕ್ ರನ್ನೂ ಕೂಡಿಸಿ ಕೊಡುತ್ತಿದ್ದರು. ಆದರೆ ಈಗ ಆ ವಿದ್ಯುತ್ ಉಪಕರಣಗಳು ಮೋಟರಿನ ಒಂದು ಕಾಯಂ ಅಂಗವಾಗಿ ಪರಿಣಮಿಸಿಯವೆ. ಈಗ ಬೇಡವೆಂದರೂ ಆ ಉಪಕರಣಗಳು ಗಾಡಿಯ ಒಟ್ಟಿಗೆ ಬರುತ್ತವೆ. ಆ ವಿದ್ಯುತ್ ಉಪಕರಣಗಳಿಂದ—ದೀಪ ಹಚ್ಚುವುದು ಮತ್ತು ಇಂಜಿನನ್ನು ಸ್ಟಾರ್ಟ ಮಾಡುವುದು ಈ ಕೆಲಸಗಳಾಗುತ್ತವೆ. ಆ ಮೊದಲು ದೀಪಗಳನ್ನು ಕಾರ್ಬೈಡು (Carbide) ಲ್ಯಾಂಪುಗಳಿಂದ ಹೊತ್ತಿಸುತ್ತಿದ್ದರು. ಆದರೆ ಕಾರ್ಬೈಡು ಲ್ಯಾಂಪುಗಳೆಂದರೆ ಯಾವಾಗಲೂ ತೊಂದರೆಕೊಡುವಂತಹವುಗಳಲ್ಲದೆ, ನಡಿಸಲಿಕ್ಕೆ ಖರ್ಚು ಸಹ ಹೆಚ್ಚು ತಗಲುವಂತಹವುಗಳಾಗಿವೆ. ಆದುದರಿಂದ ವಿದ್ಯುತ್ ಉಪಕರಣಗಳು ಸರಿಯಾಗಿ ನಡೆಯುವುದೇ ಆದರೆ ಈ ದೀಪ ಹೊತ್ತಿಸುವ ತೊಂದರೆಗಳು ಬಹುಮಟ್ಟಿಗೆ ಕಡಿಮೆಯಾಗುತ್ತವೆ.

• • •

ವಿಲಾಯತಿ ಜನರ ವೈಶಿಷ್ಟ್ಯವೆಂದರೆ ದಿವಸದಿಂದ ದಿವಸ ಹೊಸ ಹೊಸ ಸುಧಾರಣೆಗಳನ್ನೂ, ಅನುಕೂಲ್ಯಗಳನ್ನೂ ಕಲ್ಪಿಸುವುದಾಗಿದೆ. ಈ ಮೋಟರುಗಳ ಇತಿಹಾಸವನ್ನು ನೋಡಿದರೆ ಅವರು ಹೇಗೆ ಪ್ರತಿದಿನವೂ ಸುಧಾರಿಸಿ ಬರುತ್ತಾರೆಂಬುದು ತಿಳಿಯುವುದು. ಆರಂಭದ ಮೋಟರ ಗಾಡಿಗಳನ್ನೂ ಆ ಮೇಲೆ ದಿನೇ ದಿನೇ ಅವು ಸುಧಾರಿಸಿ ಬಂದ ರೀತಿಯನ್ನೂ ನಾವು ತಿಳಿದು ದಾದರೆ ಪಾಶ್ಚಾತ್ಯರ ಬುದ್ಧಿಶೀಲತೆಯೂ ವಿಜ್ಞಾನದ ಬೆಳವಣಿಗೆಯೂ ತಿಳಿಯದಿರದು; ಹೆಚ್ಚೇಕೆ, ನಾವು ಇತ್ತೀಚೆಗೆ ಎಂದು ನೆನಸಬಹುದಾದ ಹತ್ತು ವರ್ಷಗಳ ಹಿಂದಿನ ಗಾಡಿಗಳನ್ನೂ, ಅದೇ ಕಂಪೆನಿಯ ತಯಾರಿಯ ಇವತ್ತಿನ ಮೋಟರಗಾಡಿಗಳನ್ನೂ ನೋಡಿದರೆ, ಅವುಗಳೊಳಗಿನ ಬದಲಾವಣೆಗಳಿಂದ ನಮಗೆ ಆಶ್ಚರ್ಯವಾಗದಿರದು.

• • •

ಮೋಟರಗಾಡಿಗಳ ದಿನಂಪ್ರತಿ ಬದಲಾವಣೆಗಳಲ್ಲಿ ಈ ವಿದ್ಯುತ್ ಉಪಕರಣದ ವೈಶಿಷ್ಟ್ಯವು ಮುಖ್ಯವಾದುದಾಗಿದೆ. ಅಲ್ಲದೆ ಉಪಕರಣಗಳು ಸಾಧ್ಯವಾದ ಮಟ್ಟಿಗೆ ಏನೊಂದು ತಿಳಿಯದವರು ಕೂಡ ಉಪಯೋಗಿಸುವಂತೆ ಮಾಡಲ್ಪಡುತ್ತವೆ. ಚೋಫಿಯರರು ಕೆಲವು ಮುಖ್ಯ ಸೂಚನೆಗಳಿಗೆ ಲಕ್ಷ್ಯ ಕೊಟ್ಟು, ಸಿಕ್ಕಿದ ಕಡೆಗಳಲ್ಲಿ, ಕೈಹಾಕಿ ತೊಂದರೆ ಪಡಿಸದ್ದಲ್ಲಿ ಈ ಉಪಕರಣವು ಸಾಕಷ್ಟು ಸಮಯ ಬಾಳುವಿಕೆ ಬರಬಹುದು.

• • •

ಗಾಡಿಗಳು ದಿನೇ ದಿನೇ ಬದಲಾಗುವುದಾದರೆ, ಮುಂದೆ ಹತ್ತಿಪ್ಪತ್ತೈದು ವರ್ಷಗಳ ನಂತರ ಗಾಡಿಗಳು ಯಾವ ರೀತಿಯಲ್ಲಿ ಸಿಲಬಹುದು? ಎಂಬುದನ್ನೂ ಈಗಿನವರು ಸ್ವಲ್ಪ ಮಟ್ಟಿಗೆ ಆಲೋಚಿಸಿ, ನಮ್ಮ ಬುದ್ಧಿಶಕ್ತಿಯನ್ನು ಅವರ ಬೆಳವಣಿಗೆಗೆ ತಯಾರಿಸಿಡುವುದೂ ಅವಶ್ಯ. ಮುಖ್ಯವಾಗಿ ವಿದ್ಯುತ್ ವಿಜ್ಞಾನವು ಈಗ ಪ್ರಚಂಡವಾಗಿ ಬೆಳೆದಿದೆ. ಆಶ್ಚರ್ಯಕರವಾದ ಆ ವಿಷ್ಕಾರಗಳು ಅದರಿಂದ ಮಾಡಲ್ಪಟ್ಟಿವೆ. ಅಮೇರಿಕದಲ್ಲಿ ವಿದ್ಯುತ್ ವಿಜ್ಞಾನದ ಪ್ರಬಲತೆಯು ಹೆಚ್ಚಾಗಿ ಸಾಮಾನ್ಯ ಮನೆಗೆಲಸಗಳು ಕೂಡ ಆ ವಿದ್ಯುತ್ ಶಕ್ತಿಯಿಂದ ಆಗುತ್ತವೆ. ವಸ್ತ್ರ ಒಗೆಯುವುದು, ಅಡಿಗೆ ಮಾಡುವುದು, ಇತ್ಯಾದಿ ಸರ್ವಸಾಮಾನ್ಯ ಗೃಹಕೃತ್ಯಗಳನ್ನು ಯುರೋಪಿನಲ್ಲಿ ಮತ್ತು ಮುಖ್ಯವಾಗಿ ಅಮೇರಿಕದಲ್ಲಿ ವಿದ್ಯುಚ್ಛಕ್ತಿಯಿಂದ ಮಾಡುತ್ತಾರೆ. ಫಲತಃ ಈ ವಿದ್ಯುಕ್ತಿನ ಸಹಾಯವು ಮೋಟರುಗಳಲ್ಲಿಯೂ ಪ್ರಬಲವಾಗುವುದು ಸಹಜವಿದೆ

• • •

ನಮ್ಮ ದೇಶಕ್ಕೆ ಡ್ಯಾನೆಮೊ, ಸ್ಟಾರ್ಟರು, ಲ್ಯಾಂಪು ಮುಂತಾದ ಸಾಮಾನ್ಯ ವಿದ್ಯುತ್ ಉಪಕರಣಗಳಲ್ಲದೆ ಮತ್ತಾವ ವಿಶೇಷತರದ ಬದಲಾವಣೆಯ ಗಾಡಿಗಳೂ ಬಂದಿಲ್ಲ. ಆದರೆ ವಿಲಾಯತಿಯಲ್ಲಿ, ವಿದ್ಯುತ್ ಉಪಯೋಗವನ್ನು ಹೆಚ್ಚಿಸುವುದಕ್ಕಾಗಿ ಅನೇಕ ಪ್ರಯತ್ನಗಳು ನಡೆಯುತ್ತವೆ. ಅದರಲ್ಲಿ (Gear) ಬದಲಿಸುವ ಕೆಲಸವು ಈಗ ಕೈಯಿಂದಲೇ ನಡೆಯುವಂತಾದ್ದು, ಇನ್ನು ಮುಂದೆ ಒಂದು ಗುಬ್ಬಿ ಒತ್ತಿದ ಮಾತ್ರದಿಂದ ಆಗುವ ನಮೂನೆಯಲ್ಲಿ ಪ್ರಯತ್ನಗಳು ನಡೆಯುತ್ತಿವೆ. ಇದರಿಂದ ಡ್ರೈವರರ ಕೆಲಸವು ಬಹಳ ಸುಲಭವಾಗುವಂತಿದೆ.

• • •

ಆದರೆ ವಿದ್ಯುಕ್ತಿನ ಉಪಯೋಗವು ಮೋಟರಗಾಡಿಗಳಲ್ಲಿ ಇಷ್ಟಕ್ಕೇನೇ ಮುಗಿಯುವುದಿಲ್ಲ. ಮೋಟರಗಾಡಿಗಳು ವಿದ್ಯುಕ್ತಿನ ವಿಜ್ಞಾನಕ್ಕನುಸರಿಸಿ ಸಂಪೂರ್ಣವಾಗಿ ರೂಪಬದಲಾಗುವ ಪರಿಸ್ಥಿತಿಯು ಬೇಗನೆ ಬರುತ್ತಿದೆ. ಗಿಯರ್‌ಬೋಕ್ಸ, ಡಿಫರೆನ್ಸಲ್, ಇತ್ಯಾದಿಗಳೂ ಮೋಟರಗಾಡಿಗಳಿಂದ ತೆಗೆದು ಹಾಕಲ್ಪಟ್ಟು, ಇಂಜಿನಿನ ಒಟ್ಟಿಗೆ ಒಂದು ಡ್ಯಾನೆಮೊ ಮತ್ತು ಚಕ್ರಗಳ ಬಳಿ ಎರಡು ಇಲೆಕ್ಟ್ರಿಕ್ ಮೋಟರು ಇವಿಷ್ಟರಿಂದಲೇ ಚಲಾವಣೆಯಾಗುವ ಮೋಟರ ಗಾಡಿಗಳನ್ನು ಚಲಾವಣೆಗೆ ತರಲಿಕ್ಕಾಗಿ ವಿಲಾಯತಿಯಲ್ಲಿ ಕೆಲಸವು ನಾಗುತ್ತಿದೆ. ಇದರಿಂದ ಡ್ರೈವರನ ಕೆಲಸವು ಬಹಳ ಸುಲಭವಾಗುವುದಲ್ಲದೆ ಮೆಕೆನಿಕ್ ಕೆಲಸಗಳು ಬಹಳ ಕಡಿಮೆಯಾಗುವಂತಿದೆ.

• • •

ಇಷ್ಟೆಲ್ಲಾ ಸುಲಭ ಉಪಾಯಗಳು ಬಂದ ಮೇಲೆ, ಗಾಡಿಗಳು ದುರುಸ್ತಿಗೆ ಬೀಳುವುದು ಕಡಿಮೆಯೆಂದಾಗಲಿ, ದುರುಸ್ತಿಗೆ ಬಿದ್ದರೆ, ದುರುಸ್ತಿ ಮಾಡುವುದು ಸುಲಭವೆಂದಾಗಲಿ ಯಾರೂ ನೆನಸಕೂಡದು; ಯಾಕೆಂದರೆ ಇಲೆಕ್ಟ್ರಿಕ್ ಉಪಯೋಗವು ಹೆಚ್ಚಾಗುವಂತೆ ದುರುಸ್ತಿ ಪಡಿಸುವವರ ಮತ್ತು ಚಲಾಯಿಸುವವರ ಬುದ್ಧಿಶಕ್ತಿಯೂ ಹಾಗೆಯೇ ತೀಕ್ಷ್ಣವಿರಬೇಕಾಗಿದೆ.

• • •

ಮೋಟರ ವಿಜ್ಞಾನದಲ್ಲಿ ಆಗುವ ಈ ಬದಲಾವಣೆಗಳನ್ನು ಮೋಟರಿನ ಉದ್ಯೋಗದಲ್ಲಿರುವವರೆಲ್ಲರೂ ಚೆನ್ನಾಗಿ ಲಕ್ಷ್ಯದಲ್ಲಿಟ್ಟುಕೊಳ್ಳತಕ್ಕದ್ದು. ಏಕೆಂದರೆ ಮೋಟರಗಾಡಿಗಳಲ್ಲಿ ವರ್ಷವರ್ಷವೂ ಆಗುವ ಬದಲಾವಣೆಗಳಿಗಾಗಿ ನಾವು ಮುಂದಾಗಿಯೇ ಸಿದ್ಧರಾಗಿರತಕ್ಕದ್ದು. ಅದಕ್ಕಾಗಿ ಈಗ ಗಾಡಿಗಳಲ್ಲಿ ಬರುತ್ತಿರುವ ಮೋಟರ ಉಪಕರಣಗಳ ವಿಷಯದಲ್ಲಿ ಚೆನ್ನಾಗಿ ವಿಚಾರವನ್ನೂ ಪರಿಶೀಲನೆಯನ್ನೂ ಇಟ್ಟು ಅವುಗಳ ಉಪಯೋಗವನ್ನು ಕಾರ್ಯಕಾರಿಯಾಗಿ ಮಾಡಿಕೊಳ್ಳುವುದು ಅವಶ್ಯಕವಿದೆ; ಮತ್ತು ಒಂದು ರೀತಿಯಲ್ಲಿ ಪೂರ್ವತಯಾರಿಯೂ ಆಗುತ್ತದೆ.

• • •

ಮೋಟರಗಾಡಿಗಳಲ್ಲಿ ಬರುತ್ತಿರುವ ಉಪಕರಣಗಳ ವಿಷಯದಲ್ಲಿ ಮುಂದಿನ ವಾರದಲ್ಲಿ ನಾವು ಕೆಲವು ಕಾರ್ಯಕಾರಿಯಾದ ಸೂಚನೆಗಳನ್ನು ಕೊಡುವೆವು. ಮುಖ್ಯವಾಗಿ ಡ್ರೈವರರು ಅದನ್ನು ವಿಚಾರಮಾಡಿ ಬಳಕೆ ಮಾಡಿಕೊಂಡರೆ ಅವರಿಗೆ ಅವು ಬಹಳ ಉಪಯೋಗಕ್ಕೆ ಬೀಳುವುವು. ನಮ್ಮ ಜಿಲ್ಲೆಗೆ ಈಗ ಸಣ್ಣಗಾಡಿಯನ್ನೇ ಪಡಿಸಬೇಕೆಂಬ ನಿರ್ಬಂಧವಿದ್ದಕಾರಣದಿಂದ ಇಂತಹ ಗಾಡಿಗಳಲ್ಲಿ ಚೆನ್ನಾಗಿ ಈ ಉಪಕರಣಗಳಿದ್ದರಿಂದ ಪ್ರತಿ ಡ್ರೈವರನೂ ಇದನ್ನು ಚೆನ್ನಾಗಿ ತಿಳಿಯುವುದು ಅವಶ್ಯಕವಿದೆ.

ಸ್ಫುಟ ವಿಚಾರಗಳು.

ಜಿಲ್ಲಾ ಪರಿಷತ್ತು

ಕಳೆದ ವರ್ಷ ಕಾರಕಳದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು ಸೇರಿದ ತರುವಾಯ, ಮಂಗಳೂರು ತಾಲೂಕಿನಲ್ಲಿ ಈ ವರ್ಷದ ಪರಿಷತ್ತನ್ನು ಕೂಡಿಸುವುದಾಗಿ ನಿಶ್ಚಯಿಸೋಣಾ ಗಿತ್ತು. ಈಗಿನ ರಾಜಕೀಯ ವಾತಾವರಣದೊಳಗಿನ ಗಡಿಬಿಡಿಗಳ ಸಂಬಂಧ ಕಾರ್ಯಕಾರಿಯಾದ ಜಿಲ್ಲಾ ಪರಿಷತ್ತನ್ನು ಕೂಡಿಸುವುದರಲ್ಲಿ ಹೆಚ್ಚು ಸಾಹಸವು ಬೇಕಾಗುತ್ತಿದೆ. ಫಲತಃ ಮಂಗಳೂರು ತಾಲೂಕಿನಲ್ಲಿ ಪರಿಷತ್ತಿನ ತಯಾರಿಯು ಹಿಂದೆ ಬಿದ್ದಿತು. ಆದರೆ ಮಂಗಳೂರು ಕೊಂಗ್ರೆಸ್ ಕೆಲಸಗಾರರು ಪುನಃ ಧೈರ್ಯದಿಂದ ಆ ಪರಿಷತ್ತನ್ನು ವ್ಯವಸ್ಥೆಗೊಳಿಸಲು ಕೈ ಯಿಕ್ಕಿದ್ದುದು ಅಭಿನಂದನೀಯ. ಕೆಲವು ದಿನಗಳ ಹಿಂದೆ ಅತ್ತಾವರ ಬಾಲಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಆ ಪರಿಷತ್ತಿನ ತಯಾರಿ ಬಗ್ಗೆ ಸಭೆ ಸೇರಿತೆಂಬುದನ್ನು ತಿಳಿಸಲು ನಮಗೆ ಸಂತೋಷವಾಗುತ್ತಿದೆ. ಈಗಿನ ಪರಿಸ್ಥಿತಿಯ ಕಾರಣದಿಂದ ಮಂಗಳೂರು ಕೆಲಸಗಾರರಿಗೆ ಇದಕ್ಕಾಗಿ ಬಹಳ ಶ್ರಮಪಡಲಿದೆ. ನಮ್ಮ ಜಿಲ್ಲೆಯ ಜನತಾ ಜೀವನವನ್ನು ಪವಿತ್ರೀಕರಿಸಲಿಕ್ಕೆ ಕೊಂಗ್ರೆಸ್ ಒಂದೇ ಕಾರ್ಯಕಾರಿಯಾದ ಸಂಸ್ಥೆಯೆಂದು ನಮಗೆ ಅನ್ನಿಸುತ್ತಿದೆ. ಪರಸ್ಪರ ದೂಷಣೆ ಅಥವಾ ಸಂಶಯಗಳ ವಿಷಯಗಳನ್ನು ತೊಳೆದು ದೂರಮಾಡಿ, ಎಲ್ಲ ಜಾತೀಯರೂ ಏಕಸ್ಥರಾಗಿ ಕೂಡಿ, ಜನತೆಗೆ ಹಿತಕರವಾಗುವ ರೀತಿಯಲ್ಲಿ ವರ್ತಿಸಲು ಸಿದ್ಧರಿರುವವರು ಮುಂದಾಳುತನವನ್ನು ಸ್ವೀಕರಿಸಿ, ಜಾತೀಯತೆಯ ಭೇದಗಳಿಂದ ಐಕ್ಯಕ್ಕೆ ತೊಡಕುಂಟಾಗದಂತೆ ಮಾಡುವುದಾದರೆ, ಇದರೊಳಗೆ ಕೆಲಸ ಮಾಡುವವರಿಗೆ ಅತ್ಯಂತ ಶ್ರೇಯಸ್ಸುಂಟಾಗತಕ್ಕದಿದೆ. ಮತ್ತು ಜಿಲ್ಲೆಯ ಹಿತವೂ, ರಾಷ್ಟ್ರೀಯ ಹಿತವೂ ಚೆನ್ನಾಗಿ ಸಾಧಿಸಲ್ಪಡುವಂತಾಗುತ್ತಿದೆ.

ಮಾಲವೀಯರ ಹೊಸ ಪಕ್ಷ

ಪಂಡಿತ ಮದನಮೋಹನ ಮಾಲವೀಯರನ್ನು ಗೌರವಿಸದ ಹಿಂದೀಯನಾರೂ ಇರನು. ರಾಜಕೀಯ ರಂಗದಲಿ ನೈದುಡಿದು ಅವರಷ್ಟು ದಣಿದವರು ಈಗಿನ ರಾಜಕೀಯ ಕ್ಷೇತ್ರದಲ್ಲಿ ಯಾರೂ ಇಲ್ಲ. ಆಧುನಿಕದ ಇಂತಹ ವಿಜ್ಞರೂ, ಪ್ರತಿಭಾಶಾಲಿಗಳೂ ಒಂದು ಪಕ್ಷವನ್ನು ಸ್ಥಾಪಿಸುವುದಕ್ಕಾಗಿ ಪ್ರಯತ್ನಿಸುವುದು ಹಿತಕರವೇ ಎನ್ನಬಹುದಿತ್ತು; ಆದರೆ ಕಾರ್ಯತಃ ಮಾಲವೀಯರ ಸುತ್ತಲಿನ ವಾತಾವರಣವು ಅವರನ್ನು ಅಖಿಲ ಭಾರತೀಯ ರಾಷ್ಟ್ರೀಯ ಮುಖಂಡನಾಗಿ ಮಾಡಲು ಒಪ್ಪುವುದಿಲ್ಲವೆಂಬುದನ್ನೂ ನಾವೂ ತಿಳಿಯತಕ್ಕದಿದೆ. ಪಂಡಿತ ಮಾಲವೀಯರೂ ಅತ್ಯಂತ ದೇಶಭಕ್ತರು; ಆದರೆ ಜಾತೀಯ ಹಿತದಲ್ಲಿ ಅವರು ಚೆನ್ನಾಗಿ ಕೆಲಸ ಮಾಡಿರುವದರಿಂದ ಅವರನ್ನು ಇತರ ಮತಸ್ಥರು ಸಂಶಯದಿಂದಲೇ ನೋಡಿಕೊಳ್ಳುವುದು ಸಹಜವಿರುತ್ತದೆ. ಕಾಶಿಯ ಹಿಂದೂ ವಿಶ್ವವಿದ್ಯಾಲಯದ ಸಂಸ್ಥಾಪನೆಗೆ ಮಾಲವೀಯರೇ ಕಾರಣರೆನ್ನಬೇಕಾಗುತ್ತದೆ. ಹಿಂದೂಗಳ ಉನ್ನತಿ ಬಗ್ಗೂ, ಅವರ ರಾಜಕೀಯ ಹಿತಗಳ ಬಗ್ಗೂ ಪಂಡಿತ ಮಾಲವೀಯರು ಚಿಂತಿತರಿರುವಷ್ಟು ಬೇರಾರೂ ಇಲ್ಲ. ಇಂತಹ ಜಾತೀಯ ಹಿತ ಸಾಧಕರು ಹಿಂದೂಗಳ ಈಗಿನ ಪತಿತಾವಸ್ಥೆಯಲ್ಲಿ ಅಗತ್ಯವೇ. ಆದರೆ ಸಾರ್ವಜನಿಕ ವಿಷಯಗಳಲ್ಲಿ ಇಂತಹರು ಪ್ರವೇಶಿಸಿದರೆ ಇತರರಿಗೆ ಸಂಶಯವಾಗುವುದು ಸಹಜವೇ. ಇಂತಹರು ರಾಷ್ಟ್ರೀಯ ಪಕ್ಷಸ್ಥಾಪನೆಗಾಗಿ ಮುಂದುವರಿಯುವುದು ಹಿತಕರವಿದ್ದಿಲ್ಲ. ಇದರಿಂದ ಜಾತೀಯ ಕೆಲಸಕ್ಕೆ ನಾವು ತಿರಸ್ಕರಿಸುವೆವೆಂದು ತಿಳಿಯಬಾರದು; ಜಾತೀಯ ಕೆಲಸಗಳು ಅವಶ್ಯಕವೇ ಆದರೆ ಜಾತೀಯ ಹಿತದಲ್ಲಿ ಹೆಚ್ಚು ಚಿಂತಿತರಿರುವವರು, ರಾಜಕೀಯ ಕ್ಷೇತ್ರದಲ್ಲಿ ಮುಂದಾಳಾಗುವುದಕ್ಕಿಂತಲೂ, ತನಗೊಪ್ಪಿದ ಪಕ್ಷವನ್ನು ಸೇರಿ ಅದರಲ್ಲಿ ಇವರು ಅನುಕರಣೆ ಮಾಡುವುದು ಹಿತಕರವೆಂದು ತೋರುತ್ತಿದೆ. ಪಂಡಿತ ಮಾಲವೀಯರು ಕಾಂಗ್ರೆಸ್ ಧೋರಣವನ್ನು ಖಂಡಿಸಿ ತಮ್ಮ ಪಕ್ಷಕ್ಕಾಗಿ ಪ್ರಚಾರ ಕಾರ್ಯ ಮಾಡುವಾಗ, ಕಾಂಗ್ರೆಸ್ ವಿರೋಧವಾಗಿ ಕೆಲಸಮಾಡಿದಂತಾಗುವುದೇ ವಿನಹಾ ಪಕ್ಷವು ಸುದೃಢವಾಗುವುದೆಂದು ಹೇಳಲಾಗುವುದಿಲ್ಲ. ಜಾತೀಯ ಮುಂದಾಳುಗಳು ರಾಷ್ಟ್ರೀಯ ಹಿಂದಾಳುಗಳಾಗುವುದು ರಾಷ್ಟ್ರೀಯತೆಯ ಹಿತದ ದೃಷ್ಟಿಯಿಂದಲೂ ಅವಶ್ಯವಿದೆ.

ಲೀಗ್ ಒಫ್ ನೇಶನ್ಸಿನ ಭವಿತವ್ಯತೆ

ಜನಾಂಗಗಳ ಕೂಟದ ಕೌನ್ಸಿಲಿಗೆ ಜರ್ಮನಿಯನ್ನು ಸದಸ್ಯಳಾಗಿ ಸೇರಿಸಲಿಕ್ಕಾಗಿ ಮಾಡಿದ ಪ್ರಯತ್ನಗಳು ವಿಫಲಹೋದ ವಿಷಯವು ಇಡೀ ಯುರೋಪನ್ನು ಎಚ್ಚರಿಸಿದೆ, ಲೋಕಾರ್ನೋ ಸಂಧಿಯಾಗಿ, ಯುರೋಪಿನ ಪ್ರಮುಖ ರಾಷ್ಟ್ರಗಳೆಲ್ಲಾ ಜರ್ಮನಿಯನ್ನು ಲೀಗ್ ಒಫ್ ನೇಶನ್ಸಿಗೆ ಸೇರಿಸಿಕೊಳ್ಳಬೇಕೆಂದು ನಿಶ್ಚಯಿಸಿ, ಜರ್ಮನಿಯೊಡನೆ ಆ ಪ್ರಕಾರವೆ ಚರ್ಚಿಸಲು ಆರಂಭಿಸಿದ ಮೇಲೆ ಫ್ರಾನ್ಸಿಗೆ, ಯುದ್ಧದ ಸಮಯದಿಂದ ಇದ್ದ ಆ ಅವಿಶ್ವಾಸವು ಅಳಿದುಹೋಗಲಿಲ್ಲ. ಪುನಃ ಜರ್ಮನಿಯು ಹೇಗೆ ಸೇರದ ಹಾಗೆ ಮಾಡಬಹುದೆಂಬುದರಲ್ಲಿಯೇ ಫ್ರಾನ್ಸು ಚಿಂತಿತವಾಗಿದ್ದಂತೆ ತೋರುತ್ತಿದೆ. ಅದರಂತೆ ಫ್ರಾನ್ಸಿನ ವಿಧೇಯಂತಿರುವ ಪೋಲೆಂಡಿನ ಮೂಲಕ, ತನ್ನ ಈ ದುಸ್ಸಾಧನೆಯನ್ನು ಮಾಡಲು ಪ್ರಯತ್ನಿಸಿದುದನ್ನು ನಾವು ಈ ಮೊದಲೇ ಸ್ಪಷ್ಟೀಕರಿಸಿದ್ದೇವೆ. ಆದರೆ ಜನತೆಯ ಅಭಿಪ್ರಾಯವು ಫ್ರಾನ್ಸಿಗೆ ಪ್ರತಿಕೂಲವಾದರಿಂದಲೂ, ಜನಾಂಗಗಳೊಳಗಿನ ಪ್ರಯತ್ನಗಳ ಮೂಲಕವೂ ಹೇಗೂ ಪೋಲೆಂಡಿನ ಸಮಸ್ಯೆಯು ತೀರಿತೆನ್ನುವಾಗ ಅಮೇರಿಕದ ಇನ್ನೊಂದು ರಾಷ್ಟ್ರವಾಗಿರುವ ಬ್ರೆಜಿಲಿನ ರಾಯಭಾರಿಯು ತನ್ನ ಹಠಸಾಧನೆ ಮಾಡಿ ಜರ್ಮನಿಯ ಪ್ರವೇಶವೇ ಸಾಧ್ಯವಿಲ್ಲದೇ ಹೋಯಿತು. ಬ್ರೆಜಿಲ್ ಎಂದರೆ ದಕ್ಷಿಣ ಅಮೇರಿಕದೇಶ; ಜರ್ಮನಿಯ ಪ್ರವೇಶವು ಮುಖ್ಯವಾಗಿ ಯೂರೋಪಿಯ ಪ್ರಶ್ನೆಯಾಗಿದ್ದಿತು. ಇದಕ್ಕೆ ದಕ್ಷಿಣ ಅಫ್ರಿಕದ ಅಡ್ಡಿ ಬಂದುದರ ಕಾರಣವೇನು? ಬ್ರೆಜಿಲು ಇದನ್ನು ಸ್ವೇಚ್ಛೆಯಿಂದ ಸಾಧಿಸಿತೊ? ಎಂಬ ಪ್ರಶ್ನೆಯಿದೆ. ಬ್ರೆಜಿಲಿನ ಹಿಂದೆ ಯಾವುದೊ ಒಂದು ಯುರೋಪಿಯ ಪ್ರಬಲರಾಷ್ಟ್ರವಿರಬೇಕೆಂದು ಅನೇಕರ ಊಹನೆಯು. ಕೆಲವರು ಇಟಲಿಯು ಬ್ರೆಜಿಲಿನ ಹಿಂದೆ ಇದ್ದಿರಬೇಕೆಂದು ಅನುಮಾನಿಸುವರು. ಇನ್ನು ಕೆಲವರು ಫ್ರಾನ್ಸೇ ಬ್ರೆಜಿಲಿನ ಬೆನ್ನ ಹಿಂದೆ ಇದ್ದಿರಬಹುದೆಂದು ಆಲೋಚಿಸುವರು. ಎಂತೂ ಬೆನ್ನಹಿಂದೆಯ ರಾಜತಂತ್ರವು ಲೀಗ್ ಒಫ್ ನೇಶನ್ಸಿನ ಸ್ಥಾಪನೆಯೊಡನೆ ಹೆಚ್ಚುತ್ತಿದೆಯಲ್ಲದೆ ಕಡಿಮೆಯಾಗುವುದಿಲ್ಲ. ಲೀಗ್ ಒಫ್ ನೇಶನ್ಸ್ ಎಂಬುದು ಮುಂದಿನ ಶಾಂತಿಸ್ಥಾಪನೆ ಬದಲಿಗೆ ಯುದ್ಧಗಳ ಕಾರಣವಾಗುವುದೆಂದು ಈಗಿನ ಅದರ ಪರಿಸ್ಥಿತಿಯನ್ನು ನೋಡಿ ಹಲವರು ಹೇಳಲಾರಂಭಿಸಿರುವರು. ಜನಾಂಗಗಳು ಒಬ್ಬರನ್ನೊಬ್ಬರು ಅನುಮಾನ ದೃಷ್ಟಿಯಿಂದ ನೋಡುವುದನ್ನು ಲಕ್ಷಿಸಿದರೆ ಚಿರಶಾಂತಿಯು ಈ ಲೋಕದಿಂದ ಎಷ್ಟೋ ದೂರವಿದೆಯೆಂದೇ ಅನುಭವವಾಗುತ್ತದೆ.

ಹಿಂದೂ ಮಹಾ ಸಭೆ.

ಹಿಂದೂ ಮಹಾ ಸಭೆಯ ಕೆಲಸಗಳು ಅಷ್ಟೊಂದು ನಿರ್ವಿಘ್ನವಾಗಿ ನಡೆಯುವುದಿಲ್ಲವೆಂಬಂತೆ ತೋರುತ್ತಿದೆ. ಹಿಂದೂಗಳೊಳಗಿನ ಪ್ರತಿಯೊಬ್ಬರೂ ಹೆಚ್ಚಾಗಿ ತಮ್ಮ ತಮ್ಮ ಅಭಿಪ್ರಾಯಗಳಿಗಾಗಿಯೇ ಹಠಸಾಧಿಸುವರಲ್ಲದೆ ಸಂದರ್ಭಗಳಿಗನುಸಾರವಾಗಿ ತಮ್ಮ ಅಭಿಪ್ರಾಯಗಳನ್ನು ಬದಲಾಯಿಸುವುದಿಲ್ಲ. ಅಂತೆ ಸುಧಾರಕ ಪಂಗಡದವರು ಪತ್ತಾಯದಿಂದ ಮುಂದೆ ಬಂದು ಸುಧಾರಣೆಗಳನ್ನು ಠರಾವುಗಳ ಮೂಲಕ ಸ್ಥಾಪಿಸಲು ಪ್ರಯತ್ನಿಸುವುದು ಒಂದು ತರ; ಸುಧಾರಣೆಯ ಮಾತೆತ್ತಿದ ಕೂಡಲೆ ಹಿಂದೂ ಮತ ಹೋಯಿತೆಂದು ಹಿಂಜರಿಯುವ ಸಾಂಪ್ರದಾಯವಾದಿಗಳು ಇನ್ನೊಂದು ತರ; ಹೀಗೆ ತಮ್ಮ ತಮ್ಮ ಆಶಯಗಳನ್ನೆ ಪ್ರತಿಯೊಬ್ಬರೂ ಸಾಧಿಸಲೆತ್ನಿಸುವರಲ್ಲದೆ ಸಂದರ್ಭಕ್ಕೆ ಅನುಕೂಲವಾಗಿ ಇವರು ತಮ್ಮ ಅಭಿಪ್ರಾಯಗಳನ್ನು ಮಂದಗೊಳಿಸುವುದಿಲ್ಲ. ಹೀಗಾಗಿ ಹಿಂದೂ ಮಹಾ ಸಭೆಯು, ಹಿಂದೂಗಳ ಏಕೀಕರಣಕ್ಕಾಗಿ ಸ್ಥಾಪಿಸಲ್ಪಟ್ಟಿದ್ದು, ಹಿಂದೂಗಳ ಹೋರಾಟದ ರಂಗಭೂಮಿಯಾಗಿ ಪರಿಣತವಾಗುವುದೊ ಎಂದು ಭಯಪಡಬೇಕಾಗಿದೆ. ಸುಧಾರಣೆಯೆಂಬ ಹೆಸರಲ್ಲಿ ಸಮಾಜವನ್ನು ಸ್ವೇಚ್ಛೆಯಂತೆ ವಿಶೃಂಖಲಿಸಿ ಬಿಡುವುದು ಹಿತಕರವಾಗದು. ಹಾಗೆಯೇ ಸಾಂಪ್ರದಾಯವೆಂದು ಶಾಸ್ತ್ರಪುರಾಣಗಳ ಅಕ್ಷರಗಳನ್ನು ತಿರುವಿ ತಿರುವಿ ಒಣತರ್ಕದಲ್ಲಿ ಹೋಗಿ ಸಂದರ್ಭದ ಆವಶ್ಯಕತೆಯನ್ನು ಮರೆಯುವುದೂ ಹಿತಕರವಾಗದು. ಹಿಂದೂ ಮಹಾ ಸಭೆಯಲ್ಲಿ, ಈ ಎರಡು ಪಂಗಡಗಳ ಮಧ್ಯ ಮಾರ್ಗವನ್ನು ರಚಿಸಬಲ್ಲವನಾರಾದರೂ ಮುಂದಾಳಾದರೆ ಹಿಂದೂಗಳ ಏಕೀಕರಣಕ್ಕೆ ಅನುಕೂಲವಾಗುತ್ತಿತ್ತು. ಉತ್ತರ ಹಿಂದೂಸ್ಥಾನದ ಹಿಂದೂಗಳ ಕಷ್ಟ ಪರಿಸ್ಥಿತಿಯು ಅವರನ್ನು ಹತ್ತಿರ ತಂದಿದೆ, ಆದರೆ ಅದರಿಂದ ಅವರು ಲಾಭ ಹೊಂದುವರೊ ಇಲ್ಲವೊ ಎಂದು ನೋಡಲಿದೆ. ಇನ್ನು ಅವಶ್ಯಕವಾದ ಸುಧಾರಣೆಗಳನ್ನಾದರೂ, ಥಟ್ಟನೇ ಮಾಡುವುದಕ್ಕಿಂತ ಮೆಲ್ಲನೆ, ಇತರರನ್ನು ಒಲಿಸಿ ಮಾಡುವುದು ಉತ್ತಮವಿದೆ. ಸಾಂಪ್ರದಾಯವಾದಿಗಳಲ್ಲಿ ಪ್ರಮುಖರಾಗಿರುವ ಪಂಡಿತ ದೀನದಯಾಳುರವರು ಕೊಟ್ಟಿರುವ ಪ್ರಕಟಣೆಯಿಂದ ಸುಧಾರಕರು ತಮ್ಮ ಠರಾವನ್ನು ಮಂಜೂರು ಮಾಡಲಿಕ್ಕೆಂದು ಒಂದೊಂದು ಬಾರಿ ನ್ಯಾಯವಲ್ಲದ ಉಪಾಯಗಳನ್ನು ಉಪಯೋಗಿಸುವರಾಗಿ ತಿಳಿಸುವರು. ಇದು ಸರಿಯೆಂತಾದರೆ ಸುಧಾರಕರನ್ನು ಖಂಡಿಸಲೇ ಬೇಕಾಗುವುದು. ಠರಾವುಗಳ ಮೂಲಕ ಸುಧಾರಣೆಯ ಕಾರ್ಯವು ಸಾಧ್ಯವಾಗದು. ಸುಧಾರಣೆ ಬೇಕಾದುದು ಸಮಾಜದೊಳಗಿನ ಜನರಿಗೆ ಹಿತಕರವಾದ ಕೆಲಸ. ಆದುದರಿಂದ ಸುಧಾರಕರು ಹಿಂದೂ ಮಹಾ ಸಭೆಯನ್ನು ಸುಧಾರಣೆಯ ಕಡೆಗೆ ಒಲಿಸಲಿಕ್ಕೆ ಯತ್ನಿಸಿದರೆ ಸಾಕಾಗಬಹುದು. ಅದನ್ನು ಸುಧಾರಣೆಯ ಬಗ್ಗೆ ಒಂದು ಸಾಧನವಾಗಿ ಮಾರ್ಪಾಡು ಮಾಡಲು ಯತ್ನಿಸಿದರೆ ಸುಧಾರಕರ ಕಾರ್ಯವು ಕೆಡುವುದು ಮಾತ್ರವಲ್ಲದೆ, ಹಿಂದೂ ಮಹಾ ಸಭೆಯೊಳಗೆ ಭೇದಗಳನ್ನುಂಟುಮಾಡಿ ಅದನ್ನು ಬಲಹೀನವಾಗಿ ಮಾಡಿದಂತಾಗುವುದು. ಮುಖ್ಯವೇನಂದರೆ ಪ್ರತಿಯೊಬ್ಬರೂ ಅಭಿಪ್ರಾಯ ಭೇದಗಳನ್ನು ಗೌರವಿಸಲು ಕಲಿಯ ಬೇಕು.

ರಾಜಕೀಯ ಪಕ್ಷಗಳು.

ಐಗುಪ್ತ್ಯವು ಹಿಂದೂಸ್ಥಾನದಂತೆಯೇ ಇಂಗ್ಲೀಷ ಆಡಳಿತೆಯಲ್ಲಿದ್ದಿತು. ಅಲ್ಲಿಯ ತೀಕ್ಷ್ಣಪಕ್ಷದವರ ಚಳವಳವು ಪ್ರಬಲವಾಗಿ ಕಡೆಗೆ ಅದಕ್ಕೆ ಇಂಗ್ಲೀಷ ಸರಕಾರವು ಸ್ವತಂತ್ರವೆಂಬುದನ್ನು ಕೊಟ್ಟಿತು. ಆ ಸ್ವತಂತ್ರವು ಹೆಸರಿಗೆ ಮಾತ್ರವಲ್ಲದೆ ಕಾರ್ಯತಃ ಐಗುಪ್ತ್ಯ ಸರಕಾರವು ಇಂಗ್ಲೀಷರ ಹೆಬ್ಬೆಟ್ಟಿನ ಕೆಳಗಿದೆ. ಆದುದರಿಂದ ಅಲ್ಲಿ ತೀಕ್ಷ್ಣಪಕ್ಷದವರು ಝುಗಲೂಲ ಪಾಶಾನ ಮುಂದಾಳುತನದಲ್ಲಿ ಚಳವಳವನ್ನು ಹೂಡಿ, ಪಾರ್ಲಿಮೆಂಟು ಚುನಾವಣೆಯಲ್ಲಿ ಬಹುಮತವನ್ನು ಹೊಂದಿದರು, ಈ ಕಾರಣದಿಂದಲೇ ಅಲ್ಲಿಯ ಸರಕಾರವು ಪಾರ್ಲಿಮೆಂಟನ್ನು ತೆಗೆದುಹಾಕಿ ಅಧಿಕಾರದ ಅಭಿಲಾಷೆಯಿಂದ ರಾಜೀನಾಮೆ ಕೊಡದೇನೇ ಇದೆ. ಹಿಂದೂಸ್ಥಾನದಲ್ಲಿ ಇರುವಂತೆ ಐಗುಪ್ತ್ಯದಲ್ಲಿಯೂ ಅನೇಕ ರಾಜಕೀಯ ಪಕ್ಷಗಳಿವೆ. ಹಿಂದೂಸ್ಥಾನದೊಳಗಿನಂತೇ ಅಲ್ಲಿಯ ಎಲ್ಲಾ ಪಕ್ಷಗಳೂ ಸರಕಾರ ಬದಲಾವಣೆಯನ್ನು ಇಚ್ಛಿಸುತ್ತಿವೆ. ಪಾರ್ಲಿಮೆಂಟನ್ನು ಪುನಃ ರಚಿಸಲಿಕ್ಕಾಗಿ ಸರಕಾರವು ಪುನಃ ಚುನಾವಣೆ ಮಾಡುತ್ತಿದೆ. ಅದಕ್ಕಾಗಿ ಅಲ್ಲಿ ಎಲ್ಲಾ ಪಕ್ಷಗಳೂ ಒಟ್ಟುಗೂಡಿ ಒಂದಾಗಿ ಕೆಲಸ ಮಾಡುತ್ತಿವೆ. ಅಲ್ಲಿಗೂ ಇಲ್ಲಿಗೂ ಭೇದವೆಂದರೆ, ಅಲ್ಲಿ ಸರಕಾರವಿರೋಧವಾಗಿ ಎಲ್ಲಾ ಪಕ್ಷಗಳೂ ಕೂಡಿ ಸರಕಾರವನ್ನು ತೆಗೆದು ಹಾಕುವ ಪ್ರಯತ್ನದಲ್ಲಿದ್ದಾರೆ. ಇಲ್ಲಿ ಚಿಂತಾಮಣಿಯರಾದಿ ಪ್ರಮುಖರು ಸರಕಾರದ ಪ್ರತಿಯಾಗಿ ಎಲ್ಲಾ ಪಕ್ಷಗಳನ್ನು ಒಟ್ಟುಗೂಡಿಸುವ ಬದಲು ದೇಶದ ಸ್ವಾತಂತ್ರ್ಯಕ್ಕಾಗಿ ಹೆಣಗಾಡುವ ಸ್ವರಾಜ್ಯ ಪಕ್ಷವನ್ನು ನಿರೋಧಿಸಲಿಕ್ಕಾಗಿ ಎಲ್ಲಾ ಪಕ್ಷಗಳನ್ನು ಒಟ್ಟುಗೂಡಿಸುತ್ತಾರೆ. ಇದೀಗ ಎರಡು ಮಾನಸಿಕತೆಗಳು! ಈ ಮಾನಸಿಕತೆಯ ಪ್ರಭೇದಕ್ಕನುಸಾರವಾಗಿಯೇ ಬ್ರಿಟಿಷ ಸರಕಾರವು ಐಗುಪ್ತ್ಯಕ್ಕೆ ಸ್ವಾತಂತ್ರ್ಯವನ್ನು ಹೆಸರಿಗಾದರೂ ಕೊಟ್ಟಿತು; ಹಿಂದೂಸ್ಥಾನಕ್ಕಾಗಿ ಸರಕಾರದಲ್ಲಿ ತಿದ್ದುಪಡಿಗಳನ್ನು ಕೂಡ ಮಾಡಲಿಕ್ಕೆ ಅದು ಸಿದ್ಧವಾಗಿಲ್ಲ! ನಮ್ಮ ಧುರೀಣರು ಇಷ್ಟಾದರೂ ಕಣ್ಣು ತೆರೆಯದೆ, ಪರಸ್ಪರ ಬಡಿದಾಟಗಳಿಂದ ದೇಶವನ್ನು ಚಿರದಾಸ್ಯತ್ವದಲ್ಲಿಡುವುದು ಅತ್ಯಂತ ದುಃಖಕರ.

ವಾಯುವ್ಯ ಸರಹದ್ದಿಗೆ ಸುಧಾರಣಾ ಸರಕಾರ.

ಈ ಬಗ್ಗೆ ಕಳೆದ ಎಸೆಂಬ್ಲಿಯಲ್ಲಿ ಠರಾವು ತರಲ್ಪಟ್ಟಿದ್ದಿತು. ವಾಯುವ್ಯ ಸರಹದ್ದಿನ ಪ್ರಾಂತದಲ್ಲಿ ಸುಧಾರಣಾ ಸರಕಾರವು ಜ್ಯಾರಿಯಲ್ಲಿಲ್ಲ. ಅಲ್ಲಿ ಮುಸಲ್ಮಾನರೇ ಬಹು ಸಂಖ್ಯಾಕರಿರುವರಲ್ಲದೆ, ಅವರ ವರ್ತನವೂ ಕಠಿಣದ್ದಿದೆ. ಅಲ್ಲಿ ಮುಸಲ್ಮಾನರು ಹಿಂದೂಗಳ ಮೇಲೆ ಹಿಂದೆ ಅನೇಕ ಬಾರಿ ಅತ್ಯಾಚಾರಗಳನ್ನು ನಡೆಸಿರುವರು. ಕಳೆದ ವರ್ಷ ಅನೇಕ ಹಿಂದೂಗಳ ಮನೆಗಳನ್ನು ಸುಟ್ಟಿದ್ದರು. ಈ ಕಾರಣದಿಂದ ವಾಯುವ್ಯ ಸರಹದ್ದಿನ ಸರಕಾರವು ಒಂದು ತರದಲ್ಲಿ ಬಿಗಿಯಿರುವುದೇ ಉತ್ತಮವೆಂದು ಹಿಂದೂಗಳ ಅಂಬೋಣವಿದೆ. ಇತ್ತ ಮುಸಲ್ಮಾನರು ಸ್ವಾತಂತ್ರ್ಯವೆಂದರೆ ಒಬ್ಬರಿಗೆ ಒಂದು ಇನ್ನೊಬ್ಬರಿಗೆ ಒಂದಾಗಿಲ್ಲ; ಎಲ್ಲರಿಗೂ ಒಂದೇ. ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವಿರುವುದಾದರೆ ವಾಯುವ್ಯ ಸರಹದ್ದಿಗೂ ಅದು ಇರಲೇಬೇಕು. ಹಾಗೆಯೆ ಇಡೀ ಹಿಂದೂಸ್ಥಾನಕ್ಕೆ ಸುಧಾರಣಾ ಸರಕಾರವಿರುವಾಗ ವಾಯುವ್ಯ ಸರಹದ್ದಿಗೂ ಬೇಕೆನ್ನುವರು. ಈ ಬಗ್ಗೆ ಸ್ವರಾಜ್ಯಪಕ್ಷದ ಮುಸಲ್ಮಾನ ಮೆಂಬರರು ಎಸೆಂಬ್ಲಿಯಲ್ಲಿ ಠರಾವನ್ನು ತಂದರು. ಸ್ವರಾಜ್ಯಪಕ್ಷವು ತಾವು ಸುಧಾರಣಾ ಸರಕಾರವನ್ನೇ ನಿರೋಧಿಸುವಾಗ ಅದರ ಪ್ರತಿಷ್ಠೆಯ ಬಗ್ಗೆ ಅನುಮೋದನೆ ಕೊಡುವುದು ಹಾಸ್ಯಾಸ್ಪದವಿದೆ ಎನ್ನುವರು. ಹೀಗಾಗಿ ಸ್ವರಾಜ್ಯಪಕ್ಷವು ಇದರ ವಿಷಯದಲ್ಲಿ ತಟಸ್ಥವಿದೆ. ಸ್ವರಾಜ್ಯ ಪಕ್ಷದ ಮುಸಲ್ಮಾನ ಮೆಂಬರರು ಇದು ಹಿಂದೂಗಳ ಯುಕ್ತಿಯೆಂದು ಜಾತೀಯ ಭಾವನೆಯ ಅನುಮಾನಗಳಿಂದ ಪಕ್ಷದಿಂದ ರಾಜೀಕೊಟ್ಟಿರುವರು. ದೇಶದಲ್ಲಿ ಮುಹೂರ್ತ ಮುಹೂರ್ತವು ಮೇಲೇಳುತ್ತಿರುವ ಜಾತೀಯ ಭಾವನೆಯ ಪರಿಣಾಮವು ದೇಶವನ್ನು ಮುಗ್ಗರಿಸುತ್ತಾ ಇದೆ.

ಅನುಕ್ರಮಣಿಕೆ.

	ಪುಟ
ಅಗ್ರಲೇಖ	
ರಾಷ್ಟ್ರೀಯ ಎಪ್ರಿಲ್ ತಿಂಗಳು	೬
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೬-೭
ದಕ್ಷಿಣ ಕನ್ನಡ— ಸುಳ್ಯ, ಸಂಪಾಜೆ, ಮುಂಡಾಜೆ ನಂದಿಕೂರು, ತಲಪಾಡಿ, ಪೊಳಲಿ	೭
ಮಂಗಳೂರು	”
ವಿವಿಧ ವಿಷಯ	೭-೮
ನೋಟೀಸ್ ನೋಟ್ಸು	೮

ಸ್ವದೇಶಾಭಿಮಾನಿ.

ಶಕ ೧೮೪೮ ಅ. ಚೈತ್ರ ಬ॥ ೪ಯು ಶುಕ್ರವಾರ.

ರಾಷ್ಟ್ರೀಯ ಎಪ್ರಿಲ್ ತಿಂಗಳು.

ಹಿಂದೀಯ ರಾಷ್ಟ್ರೀಯತೆಯನ್ನು ಪ್ರತಿ ಒಬ್ಬ ಧುರೀಣನೂ ಸೌಹಾರ್ದದ ಮೇಲೆಯೇ ಕಟ್ಟಲು ಪ್ರಯತ್ನಿಸುವನು; ದ್ವೇಷವಲ್ಲ, ಪ್ರೇಮ; ಮಾತ್ಸರ್ಯವಲ್ಲ, ಸೌಹಾರ್ದ; ಈ ಮೂಲ ಸೂತ್ರಗಳಿಂದ ಹಿಂದೀ ರಾಷ್ಟ್ರೀಯತೆಯು ಘಟಿಸಲ್ಪಡುತ್ತಿದೆ. ಅಂತೆಯೇ ನಮ್ಮನ್ನು ಅಧೀನವಾಗಿ ಆಳುತ್ತಿರುವ ಆಂಗ್ಲ ಆಳರಸರ ಕಡೆಗೆ ನಮಗೆ ಯಾವ ತರದ ದ್ವೇಷವೂ ಇಲ್ಲ. ಕೇವಲ ನಮ್ಮ ಕರ್ಮಾಧಿಕಾರದ ಸ್ವಾಧೀನತಾಸಾಧನೆಯ ಉಚ್ಚ ಭಾವನೆಯೊಂದು ಹಿಂದೀಯ ಹೃದಯವನ್ನು ಆವರಿಸಿ ಅಧಿಕರಿಸಿ, ಉಚ್ಚ ಸಾಧನೆಗಳಲ್ಲಿ ಪ್ರೇರಿಸುತ್ತಿದೆ.

ಆದರೆ ಪರರ ಹಸ್ತಗಳಲ್ಲಿ ಪ್ರಾಣವನ್ನರ್ಪಿಸಿದ, ದೇಶದ, ಜನಾಂಗದ ಮತ್ತು ಸಮಷ್ಟಿಯ ಭಾವನೆಯಿಂದ ಉನ್ಮತ್ತವಾಗಿ ಆತ್ಮ ಯಜ್ಞದ ಮಹಾನಲದಲ್ಲಿ ತಮ್ಮ ಸರ್ವ ಜೀವನನ್ನು ಘೃತಾಹುತಿಯನ್ನಿತ್ತ, ಆ ಪ್ರಚಂಡ ದೇಶಭಕ್ತರನ್ನು ಭಾರತೆಯು ಮರೆಯುವಳೇ? ತನ್ನ ಉಡಿಯಲ್ಲಿಯೇ ಆಡಿ, ಓಡಿ, ತನಗಾಗಿ ಉತ್ಸುಕವಾಗಿ, ತನ್ನ ಕೈಗಳಲ್ಲಿಯೇ ಪರರ ಅಸ್ತ್ರಾಘಾತದಿಂದ ಮಡಿದ ತನ್ನ ವೀರಮಣಿ ಪುತ್ರ ಸಂತಾನವನ್ನು ಭಾರತೆಯು ಮರೆಯುವಳೇ? ಹಿಂದೀಯ ಕೃತಘ್ನತೆಯು ಅಷ್ಟು ಮೇರೆ ಮೀರಿದೆಯೆ?

ಕಲ್ಪಿತ ಕತ್ತಲೆಯ ಕೋಣೆಯು ಆಂಗ್ಲರಿಂದ ಚಿರ ಶಾಶ್ವತವಾಗಿ ಮಾಡಲ್ಪಟ್ಟಿದೆ. ಶತಾವಧಿ ಹಿಂದೀಯರ ಪ್ರಾಣನಷ್ಟದಿಂದ ಬ್ರಿಟಿಷ ಸಾಮ್ರಾಜ್ಯವನ್ನು ಕಟ್ಟಿದ ಲೊರೆನ್ಸನ ಖಡ್ಗಧಾರಿಯಾದ ಉಗ್ರ ಪ್ರತಿಮೆಯು ಭಾರತೆಯ ವಕ್ಷದ ಕೇಂದ್ರದಲ್ಲಿಯೇ ನೆಡಿಸಲ್ಪಟ್ಟಿದೆ! ಹಿಂದೀಯ ರಕ್ತ ಶೋಷಣಮಾಡಿದ ಕ್ಲೈವ, ಹೇಸ್ಟಿಂಗ್ಸ ಪ್ರಭೃತಿಗಳು ಚಿರಸ್ಮರಣೀಯರಾಗಿ ಮಾಡಲ್ಪಟ್ಟಿರುವರು. ಹಿಂದೀಯ ಪರಾಧೀನತೆಯಲ್ಲಿ ಪ್ರಮುಖ ಕೆಲಸಗಳನ್ನು ಮಾಡಿದ ಆ ಆಂಗ್ಲ ಅಧಿಕಾರಿಗಳಿಗೆ ಇಷ್ಟು ಸ್ಮಾರಕವೂ ಗೌರವವೂ ಲಭಿಸುವುದಾದರೆ, ಆಂಗ್ಲರು ಆಂಗ್ಲ ಲಾಭವನ್ನು ಮಾಡಿದ ತಮ್ಮ ಜನರನ್ನು ಈ ರೀತಿಯಲ್ಲಿ ಗೌರವಿಸಬಲ್ಲರಾದರೆ, ನಾವು ನಮ್ಮ ವೀರ ಶಿರೋಮಣಿಗಳನ್ನು, ದೇಶಕ್ಕಾಗಿ ಸರ್ವಸ್ವವನ್ನೂ ಅರ್ಪಿಸಲು ಹಿಂದೆ ಸರಿಯದ ಹಿಂದೀಯ ವೀರರನ್ನು ಎಷ್ಟು ಗೌರವಿಸಬೇಕೆಂಬುದನ್ನೂ, ಹೇಗೆ ಗೌರವಿಸಬೇಕೆಂಬುದನ್ನೂ ಕಲಿಯತಕ್ಕದ್ದಿದೆ.

ಹಿಂದೀಯ ಮಾನಸಿಕತೆಯು ವಿಚಿತ್ರ ತರದ್ದಿದೆ. ಹಿಂದೀಯ ಪೂಜನವೂ, ಗೌರವವೂ ಅನೇಕ ಬಾರಿ ಯೋಗ್ಯ ಸ್ಥಾನವನ್ನು ಸೇರುವುದಿಲ್ಲ. ಹಿಂದೀಯರೊಳಗೆ ಹೆಚ್ಚಾಗಿ ಪಾರಮಾರ್ಥಿಕ ತತ್ವವಿಸ್ತಾರಿಗಳಿಗೆ ಸಿಕ್ಕಿದಷ್ಟು ಸ್ಮಾರಕವೂ ಗೌರವವೂ ಹಿಂದೀಯ ಲೌಕಿಕ ವೀರರಿಗೆ ಸಿಕ್ಕಿಲ್ಲ. ಇದು ಹಿಂದೀಯರಿಗೆ ಗೌರವದ ವಿಷಯವೊ, ಅಗೌರವದ ವಿಷಯವೊ ಎಂದು ಪ್ರತಿ ಒಬ್ಬರೂ ಆಲೋಚಿಸಬೇಕು.

ಲೌಕಿಕ ವೀರತೆಯು ಸಾಮಾನ್ಯವಲ್ಲ. ಅಂತಹ ವೀರತೆಯಿಂದಲೇ ದೇಶದ ಇತಿಹಾಸವು ರಚಿಸಲ್ಪಡುತ್ತಿದೆ. ಅದರಿಂದಲೇ ದೇಶದ ಮಾನಸಿಕತೆಯು ಬೆಳೆಯುತ್ತದೆ. ಹಿಂದೀಯ ಬಾಲಕರು ಅದರ ಪಠನದಿಂದಲೇ ವೀರತೆಯ ಪ್ರೇರಣವನ್ನು ಹೊಂದ ಬಲ್ಲರು. ಯಾವ ದೇಶದಲ್ಲಿ ವೀರರ ಉಪಾಸನೆಯು ನಡೆಯುವುದಿಲ್ಲವೊ ಆ ದೇಶವು ಲೋಕೇತಿಹಾಸದಲ್ಲಿ ಹಿಂದೆ ಸರಿಯ ಬೇಕಾಗುವುದು.

ಎಪ್ರಿಲ್ ಆರಂಭದೊಡನೆಯೇ ನಮ್ಮ ಹೃದಯವನ್ನು ಪುಲಕಿಸ ಬಲ್ಲ, ನಮ್ಮ ಅಂಗಾಂಗಗಳನ್ನು ಕಂಪಿಸ ಬಲ್ಲ, ಆತ್ಮಯಜ್ಞ ಮಾಡಿದ ಹಿಂದೀಯರ ನೆನವರಿಕೆಯಾಗುತ್ತಿದೆ. ಸ್ವಾರ್ಥಮಯ ಜಗತ್ತಿನಲ್ಲಿ, ಸಂಕಷ್ಟಕರ ಸಂಸಾರದಲ್ಲಿ, ಸಮಷ್ಟಿಯ ಸೇವೆಗೆ ಸಮಯ ಸಿಕ್ಕುವುದೇ ದುಸ್ಸಾಧ್ಯವಾಗುತ್ತದೆ. ಜನತೆಯ ಸೇವೆಯ ಬಗ್ಗೆ, ದೇಶಹಿತದ ಬಗ್ಗೆ, ಆತ್ಮವನ್ನು ಬಲಿಯೀಯುವೆನೆಂಬ ಉನ್ಮತ್ತ ಉತ್ಸಾಹವು ಎಲ್ಲರಲ್ಲಿಯೂ ಬರಲಾರದು; ಎಲ್ಲಾ ಸಮಯದಲ್ಲಿಯೂ ಬರಲಾರದು. ಯಾವ ಮುಹೂರ್ತದಲ್ಲಿ, ಯುವ ಜನರಲ್ಲಿ ಅದು ಪ್ರೇರಿತವಾಗುವುದೊ, ಆ ಮುಹೂರ್ತವೂ, ಆ ಜನರೂ, ಪೂಜಾರ್ಹರೂ ಚಿರಸ್ಮರಣೀಯರೂ ಆಗತಕ್ಕವರಿರುವರು.

೧೯೧೯ನೆಯ ಇಸವಿಯ ಎಪ್ರಿಲ್‌ನಲ್ಲಿಯೇ ಮಹಾತ್ಮಾ ಗಾಂಧಿಯವರ ಸತ್ಯಾಗ್ರಹ ಪ್ರತಿಜ್ಞೆಯು ಸರ್ವ ಕಡೆಗೆ ಪ್ರಚಾರವಾಯಿತು. ಅನೇಕ ದೇಶ ಭಕ್ತರು ಆ ಪ್ರತಿಜ್ಞೆಯನ್ನು ಕೈಕೊಂಡರು. ದೇಶಕ್ಕಾಗಿ ಜೈಲನ್ನೂ ಮರಣವನ್ನೂ ಅಪೇಕ್ಷಿಸುವ ಆ ಮನೋಸ್ಥೈರ್ಯವೂ ಧೈರ್ಯವೂ ಪ್ರತಿ ದೇಶದಲ್ಲಿ ಬರೇ ಕೆಲವರಲ್ಲಿ ಮಾತ್ರವೇ ಇದೆ. ಹಿಂದೂಸ್ಥಾನದಲ್ಲಿಯಾದರೂ, ಅಂತಹ ವೀರರು ಕಡಿಮೆಯಿರಲಿಲ್ಲ. ಮಹಾತ್ಮರ ಪ್ರೇರಣೆಯೂ ಸಾಮಾನ್ಯವಿರಲಿಲ್ಲ. ಆ ಮಹಾ ದೀಕ್ಷೆಯನ್ನು ಸಹಿಸುವಷ್ಟು ಮಾತ್ರ ಅಬಲೆ ಭಾರತೆಯು ಶಕ್ತಿವಂತಳಿರಲಿಲ್ಲ!

ನೆನವರಿಕೆ ಮಾಡುವ! ಸತ್ಯಾಗ್ರಹದ ಘೋರ ಪ್ರತಿಜ್ಞೆಯು ಕೈಕೊಳ್ಳಲ್ಪಟ್ಟಿತು. ಸವಿನಯ ಕಾಯಿದೆ ಭಂಗವು ಪ್ರಾರಂಭಿಸಲ್ಪಟ್ಟಿತು. ನೂರಾರು ತರುಣರು ಸರಕಾರದ ಪ್ರತಿಯಾಗಿ ಮುಂದಾಗಿ ಹೋದರು. ಶ್ರೀಮತಿ ಸರೋಜಿನಿ ದೇವಿಯೇ ಸರಕಾರವು ಬಹಿಷ್ಕರಿಸಿದ ಪುಸ್ತಕಗಳ ಮಾರಾಟವನ್ನು ಆರಂಭಿಸಿದರು. ಯಾರು ರಾಜತಂತ್ರದಲ್ಲಿಯೂ ಪಾವಿತ್ರ್ಯಕ್ಕೆ ಸ್ಥಾನವಿದೆಯೆಂದು ತೋರಿಸಲು ಹೊರಹೊರಟನೊ, ಅವನ ಆ ಪವಿತ್ರ ಕರೆಗೆ ಸಮಗ್ರ ಭಾರತವು ಮುಗ್ಧವಾಗಿ ಹೋಯಿತು.

ಮಹಾತ್ಮರು ಪಂಜಾಬದತ್ತ ಪ್ರಯಾಣ ಬೆಳೆಸಿದರು. ಸಮಗ್ರ ಭಾರತವನ್ನು ಸಂಚರಿಸಿ ಸತ್ಯಾಗ್ರಹವನ್ನು ಕಾರ್ಯಕಾರಿಯಾಗಿ ಮಾಡುವೆನೆಂದು ಮಹಾತ್ಮರು ಹೊರಟರು. ಸರಕಾರಕ್ಕೆ ಸಹಿಸಲಾರದಾಯಿತು. ಮಹಾತ್ಮರನ್ನು ಸರಕಾರವು ಸೆರೆ ಹಿಡಿಯಿತು.

ಸಹಿಸಲಾರದ ಈ ವಾರ್ತೆಯು ಇಡೀ ದೇಶವನ್ನು ತಲ್ಲಣಿಸಿತು. ಪ್ರತಿ ಕಡೆಗಳಲ್ಲಿಯೂ ದೊಡ್ಡ ಸಭೆಗಳಾದವು. ಅದರಂತೆ ಪಂಜಾಬಿನಲ್ಲಿಯೂ ಸಭೆಗಳು ಸೇರಿದವು. ಆದರೆ ಇಂಗ್ಲಿಷ್ ಸ್ಟೀಲ್ ಫ್ರೇಮಿನ ಆಧಾರವಾದ ಒಡಾಯರನೇ ಅಲ್ಲಿ ಅಧಿಕರಿಸುತ್ತಿದ್ದನು. ಪ್ರಜೆಗಳ ಲಾಲನೆಯೂ ಪಾಲನೆಯೂ ಆಳರಸರ ಈ ಮಹಾ ಪ್ರತಿನಿಧಿಗೆ ತಿಳಿಯಲಾರದೆಹೋಯಿತು. ಅತ್ತ ಜನರಲ್ ಡಾಯರನ ಕೈಕೆಳಗೆ ಸಾಕಷ್ಟು ಸೈನ್ಯವೂ ಇದ್ದಿತು. ಜನರಲ್ ಡಾಯರನು ಸಾಮ್ರಾಜ್ಯವನ್ನು ಸಂರಕ್ಷಿಸಲಿಕ್ಕೆಂದು ಹೊರಟನು. ಜಲಿಯಾನವಾಲಾಭಾಗದ ಉತ್ತಮ ಪ್ರದೇಶದಲ್ಲಿ ಸಾವಿರಾರು ಮಂದಿ ನೆರೆದಿದ್ದರು. ಸಾಮ್ರಾಜ್ಯ ಸಂರಕ್ಷಣೆಗೆ ಇದಕ್ಕಿಂತ ಉತ್ತಮವಾದ ಸಂದರ್ಭವು ಬೇರಿಲ್ಲವೆಂದು ಜನರಲರಿಗೆ ಅನ್ನಿಸಿತು. ದ್ವಾರದೇಶದಲ್ಲಿ ಫಿರಂಗಿಗಳು ಇಡಲ್ಪಟ್ಟು ಓಡಿಹೋಗುವ ದ್ವಾರಗಳು ಕಡಿಮೆಯಾದುವು. ಗುಂಡುಗಳು ಹಾರಿಸಲ್ಪಟ್ಟವು. ಮದ್ದು ಇರುವವರೆಗೆ ಗುಂಡುಗಳು ಹಾರಿಸಲ್ಪಟ್ಟವು. ಏನೊಂದೂ ಸೂಚನೆಯಿಲ್ಲದೆ, ಯಾವುದೊಂದು ಕಾರಣವಿಲ್ಲದೆ ಜನರಲ್ ಡಾಯರನು ನಿರಪರಾಧಿಗಳ ಮೇಲೆ ಗುಂಡು ಹಾರಿಸಿ ಸಾಮ್ರಾಜ್ಯವನ್ನು ರಕ್ಷಿಸಿದನು! ಜನರಿಗೆ ಬುದ್ಧಿಗಲಿಸಿದನು!

ಸರ್ವ ತರದ ರಕ್ಷಣೆಯ ಉಪಾಯಗಳಿಂದ ಸಿದ್ಧಗೊಳಿಸಲ್ಪಟ್ಟ ಲಂಡನ್ನಿನ ಮೇಲೆ ಜೆಪ್ಪಲೀನುಗಳು ಹಾರಿ ಯುದ್ಧ ಸಮಯದಲ್ಲಿ ಗುಂಡು ಹಾರಿಸಿದುದಕ್ಕೆ ಜರ್ಮನರು ಬರ್ಬರರಾದರು; ನಿರ್ಜೀವ ಪುಸ್ತಕ ಭಂಡಾರಗಳನ್ನು ಸುಟ್ಟದಕ್ಕೆ ಜರ್ಮನರು ಬರ್ಬರಾದರು; ಬೇರೆ ಬೇರೆ ರೂಪದಿಂದ ಯುದ್ಧ ಸಾಮಾಗ್ರಿಗಳನ್ನು ಒಯುತ್ತಿದ್ದ ಹಡಗುಗಳ ಮೇಲೆ ಗುಂಡು ಹಾರಿಸಿದುದಕ್ಕೆ ಜರ್ಮನರು ಬರ್ಬರರಾದರು. ನಿಶ್ಶಸ್ತ್ರ, ನಿರಪರಾಧಿ ಶಾಂತ ಜನ ಮಂಡಳಿಯ ಮೇಲೆ ಮದ್ದು ಖರ್ಚಾಗುವ ವರೆಗೆ ಗುಂಡಿನ ವರ್ಷಣ ಮಾಡಿದುದು — — — ಬರೇ error of judgement! ಪಾಶ್ಚಾತ್ಯ ಮಾನಸಿಕತೆಯ ಲಕ್ಷಣವಿದು!

ಪಾಶ್ಚಾತ್ಯ ನಾಗರಿಕತೆಯು ಇದಕ್ಕಿಂತಲೂ ಹೆಚ್ಚು ಕರುಣಾಪೂರ್ಣವಿದ್ದಿತೆಂದು ನಮ್ಮ ಭಾವನೆಯಿದ್ದಿತು. ಪಾಶ್ಚಾತ್ಯ ನಾಗರಿಕತೆಯು ಬರ್ಬರತೆಯನ್ನು ಕಳೆದುಕೊಂಡಿತೆಂದು ನಾವು ನೆನಸಿದ್ದೆವು. ಯುದ್ಧದ ಮೇಲಾದರೂ ಪಾಶ್ಚಾತ್ಯ ಮಾನಸಿಕತೆಯು ಪುಟವಿದ್ದಿರಬಹುದೆಂದು ನಮ್ಮ ನಂಬಿಕೆಯಿದ್ದಿತು. ಆದರೆ ಮಹಾಯುದ್ಧದ ಮಿಲಿಯಗಟ್ಟಲೆ ಜನರ ಮಹಾ ಕೊಲೆಯು ಪಾಶ್ಚಾತ್ಯರ ಮನಸ್ಸನ್ನು ಮತ್ತಷ್ಟು ಕಠಿಣವಿರಿಸಿದೆಯೆಂದೇ ನಮಗೆ ಈಗ ತಿಳಿಯಿತು. ಯಾವನು ನಿಶ್ಶಸ್ತ್ರ ಪ್ರಜೆಗಳ ಮೇಲೆ, ಶಾಂತಶೀಲ ಪ್ರಜೆಗಳ ಮೇಲೆ ಗುಂಡು ಹಾರಿಸಬಲ್ಲನೊ, ಮದ್ದು ಖರ್ಚಾಗುವ ತನಕ ಗುಂಡನ್ನು ಹಾರಿಸಬಲ್ಲನೊ, ಅವನನ್ನು ನಾಗರಿಕ ಸಮಾಜದವನೆನ್ನುವುದು ಸಾಧ್ಯವಾಗಲಾರದು. ಆದರೆ ಅವನ ಮಾನಸಿಕತೆಯು ಸರ್ವ ಸಾಮಾನ್ಯ ಪಾಶ್ಚಾತ್ಯ ಮಾನಸಿಕತೆಯೊಳಗಿನ ಒಂದು ಅಪವಾದ (exception) ಎಂದು ತಿಳಿಯಬಾರದು. ಜನರಲ್ ಡಾಯರನ ಕೃತ್ಯವನ್ನು ಶ್ಲಾಘಿಸಿ, ಅವನಿಗೆ ಪುರಸ್ಕಾರವನ್ನು ಕೂಡ ಕೊಡುವಷ್ಟು ಹೃದಯಹೀನ ಜನತೆಯು ಇಂಗ್ಲೆಂಡಿನಲ್ಲಿದೆಯೆನ್ನುವಾಗ, ಪಾಶ್ಚಾತ್ಯ ಮಾನಸಿಕತೆಯ ಪೂರ್ಣಾವತಾರವನ್ನು ಮಾತ್ರವೇ ನಾವು ಜನರಲ್ ಡಾಯರನಲ್ಲಿ ಕಂಡದ್ದಲ್ಲದೆ ಮತ್ತೇನೂ ಅಲ್ಲವೆಂದು ಸರಿಯಾಗಿ ತಿಳಿಯದಿರದು.

ಈ ಎಪ್ರಿಲ್ ತಿಂಗಳು ನಮಗೆಂತೂ ರಾಷ್ಟ್ರೀಯ ತಿಂಗಳಾಗಿದೆ. ಇದರ ಪ್ರಥಮ ವಾರವು ನಮಗೆ ಪೂಜ್ಯಾರ್ಹವಿದೆ. ಏಕೆಂದರೆ ಒಬ್ಬ ಇಂಗ್ಲೀಷನು ಆಂಗ್ಲ ಸಾಮ್ರಾಜ್ಯವಾದವನ್ನು ಪ್ರಕಾಶಪಡಿಸಿದನು. ಅನೇಕ ಹಿಂದೀಯರು ಈ ಸಾಮ್ರಾಜ್ಯವಾದಕ್ಕೆ ಸಂತೋಷದಿಂದ ತಲೆಯೊಡ್ಡಿ ಬಲಿಬಿದ್ದರು.

ಅನೇಕ ನಿರ್ಮಲ ಅಂತಃಕರಣದ ಹಿಂದೀಯರ ಶೋಣಿತದಿಂದ ಈ ವಾರವು ವಿಧೌತವಾಗಿದೆ. ಹಿಂದೀಯನು ಯಾರು ಈ ವಾರವನ್ನು ಪವಿತ್ರವಾಗೆಣಿಸಲಾರನೊ ಅವನು ದೇಶಪ್ರೇಮಿಯಲ್ಲವೆಂದು ತಿಳಿಯಬೇಕು. ಯಾವ ಅತ್ಯಾಚಾರವು ಮಂದಗಾಮಿ ಸರ್ ಶಂಕರನ್ ನಾಯರರಲ್ಲಿ ಕೂಡ ಕರ್ತವ್ಯಜ್ಞಾನವನ್ನುಂಟು ಮಾಡಿತೊ, ಅದು ಇಡೀ ಹಿಂದೂಸ್ಥಾನಕ್ಕೆ ಚಿರಸ್ಮರಣೀಯವಾಗಿರಬೇಕು. ಅದರಿಂದ ನಮ್ಮ ದೇಶಪ್ರೇಮವು ಉಕ್ಕಿ ಬರಬೇಕು. ಹಿಂದೂಸ್ಥಾನವು ೩೦೦ ಮಿಲಿಯ ಸಹೋದರರಿಂದ ಕೂಡಿದೆ. ಒಬ್ಬನ ರಕ್ತವು ಅನ್ಯಾಯವಾಗಿ ಹರಿಯುತೆಂದರೆ ಇತರರಿಗೂ ದುಃಖವಾಗಬೇಕು.

ಯಾರು ನಮ್ಮನ್ನು ಆಳುವರೊ ಅವರೊಡನೆ ಕ್ಲೇಶಪಟ್ಟು ಇಲ್ಲವೆ ಅವರನ್ನು ದ್ವೇಷಿಸಿ ಫಲವಿಲ್ಲ. ಆಂಗ್ಲ ಅಸ್ತಿತ್ವವು ಹಿಂದೀ ಚಿರದಾಸ್ಯತ್ವದ ಮೇಲೆ ಹೊಂದಿದೆ. ಇದನ್ನು ಪ್ರತಿ ಒಬ್ಬರೂ ತಿಳಿಯ ಬೇಕು. ಅವರಾಗಿ ಹಿಂದೂಸ್ಥಾನವನ್ನು ಸ್ವಾಧೀನತೆಗೆ ಬಿಟ್ಟು ಕೊಡುವುದು ಸಾಧ್ಯವಾಗಲಾರದು; ಏಕೆಂದರೆ ಅದು ಆತ್ಮಘಾತುಕತೆಯ ಕಾರ್ಯವಾಗಿ ಪರಿಣಮಿಸಬಹುದು. ಅವರ ದೃಷ್ಟ್ಯಾ ಅವರಲ್ಲಿ ನಾವು ಇಚ್ಛಿಸಬೇಕಾದುದು ಹೆಚ್ಚೇನೂ ಇಲ್ಲ. ಆದರೆ ನಮ್ಮ ಹಿತಕ್ಕಾಗಿ ನಮ್ಮ ಚಿರ ಅಸ್ತಿತ್ವಕ್ಕಾಗಿ ಮತ್ತು ನಮ್ಮ ಉಜ್ಜೀವನಕ್ಕಾಗಿ ನಾವು ಸರ್ವ ತರದಲ್ಲಿಯೂ ಸ್ವಾಧೀನತೆಗಾಗಿ ಪ್ರಯತ್ನಿಸಲೇ ಬೇಕು. ನಮ್ಮ ವೀರರ ಸ್ಮರಣೆಯನ್ನು ಮಾಡಲೇಬೇಕು. ಮತ್ತು ನಮ್ಮ ವೀರರಿಂದ ನಮ್ಮ ವೀರತೆಯ ಪ್ರೇರಣೆಯನ್ನು ಉಸಿರಬೇಕು.

ಎಪ್ರಿಲನೊಡನೆ ಹಿಂದೀ ರಾಜಕೀಯ ರಂಗದಲ್ಲಿ ಹೊಸ ಬೆಳಕು ಹರಿಯಿತು. ಈ ಮೂಲಕವಾಗಿಯೂ ಎಪ್ರಿಲ್ ತಿಂಗಳು ನಮಗೆ ಚಿರಸ್ಮರಣೀಯವಿದೆ. ರಾಜಕೀಯ ಕ್ಷೇತ್ರದಲ್ಲಿ ಪಾವಿತ್ರ್ಯಕ್ಕೂ ಎಡೆಯಿದೆ ಎಂದು ಆಗ ತೋರಿಸಲ್ಪಟ್ಟಿತು. ಆ ಮೇಲಿನ ಘಟನೆಗಳು ಈ ವಿಶ್ವಾಸವನ್ನು ತೆಗೆದುಹಾಕುವಂತವುಗಳಾದರೂ, ಸರಿಯಾಗಿ ಸಾಧಿಸಿದರೆ, ರಾಜ ತಂತ್ರದಲ್ಲಿಯೂ ಒಂದು ಧರ್ಮವನ್ನು ಪ್ರೇರಿಸಬಹುದೆಂದು ತೋರಿಸಲ್ಪಟ್ಟಿತು. ಮತ್ತು ಆತ್ಮ ಯಜ್ಞದ ಮೌಲ್ಯವೂ, ಸಮಷ್ಟಿ ಸೇವೆಯ ಮಹತ್ವವೂ, ಸಾಮಾನ್ಯ ಜೀವನದ ಪಾವಿತ್ರ್ಯವೂ ಆ ದಿನ ಇಡೀ ಹಿಂದೂಸ್ಥಾನಕ್ಕೆ ಉಪದೇಶಿಸಲ್ಪಟ್ಟಿತು. ಆ ಮಹಾತ್ಮನ, ಆ ಮುಹೂರ್ತದ ಮತ್ತು ಆ ಜನತೆಯ ಮಹತ್ವವನ್ನು ಇಂದು ಹಿಂದೀಯನು ಕಾಣಲಾರನಾದರೆ ಅದು ಅಕ್ಷಮ್ಯವಾದ ಅಪರಾಧವೇ ಸರಿ.

ವಿದೇಶ ವರ್ತಮಾನ.

—ಲೀಗ್ ಕೌನ್ಸಿಲಿನ ಸಭೆಯು ಮೇ ೧೦ನೇ ತಾರೀಕಿಗೆ ಜರಗುವದು. ಇದರಲ್ಲಿ ಈಗಿರುವ ೫ ಜನಾಂಗಗಳ ಮೆಂಬರುಗಳಲ್ಲದೆ ಇನ್ನೂ ಅರ್ಜೆಂಟೈನ್, ಜರ್ಮನಿ, ಚೈನಾ; ಪೋಲೆಂಡ್ ಮತ್ತು ಸ್ವಿಜರ್‌ಲೆಂಡ್ ಕಡೆಯಿಂದ ಒಬ್ಬೊಬ್ಬ ಮೆಂಬರರು ಇರುವರು. ಹೀಗೆ ೧೦ ಮಂದಿ ಮೆಂಬರರಿರುವರು.

—ಇಂಗ್ಲೆಂಡಿನಲ್ಲಿ ಖಾಸಗಿ ಏರೋಪ್ಲೆನುಗಳನ್ನು ಇಡುವುದಕ್ಕೂ, ಕಟ್ಟುವುದಕ್ಕೂ ಎಲ್ ಮಿನಿಸ್ಟ್ರಿಯವರು ಲೈಸನ್ಸು ಕೊಡುವರು.

—ದಕ್ಷಿಣ ಅಮೇರಿಕದ ರಿಯೊ ಡಿ ಜನೆರೊ ಬಂದರದಿಂದ ೧೫೦೦ ಮೈಲು ದೂರ ಸಮುದ್ರದಲ್ಲಿ ಪಾಸ್ ಡಿ ಕರ್ರೆಲೊ ಎಂಬ ಹಡಗದಲ್ಲಿ ಬೆಂಕಿ ಹಿಡಿದು ೮೦ ಮಂದಿ ಪ್ರಯಾಣಿಕರೂ, ಹಡಗದ ಕೆಪ್ತನನೂ, ಇಬ್ಬರು ಉದ್ಯೋಗಸ್ಥರೂ ಮಡಿದು ಹೋದರು. ೭೫ ಮಂದಿ ಪ್ರಯಾಣಿಕರನ್ನೂ ೭ ಮಂದಿ ಕಲಾಸಿಗಳನ್ನೂ ಬಚಾವು ಮಾಡಿರುವರು. ಈ ಹಡಗದಲ್ಲಿ ಒಬ್ಬ ಪ್ರಯಾಣಿಕನು ಸಿಗರೇಟು ಸೇದುವಾಗ ಹಡಗದ ಮೇಲಿದ್ದ ಹಾಸಿಗೆ ಬೆಂಕಿ ಹತ್ತಿ ಬಿದ್ದು ಬೆಂಕಿಹಿಡಿಯಿತು. ಅವನು ಆ ಹಾಸಿಗೆಯನ್ನು ಸಮುದ್ರಕ್ಕೆ ಬಿಸಾಡುವಾಗ ಪೆಟ್ರೋಲಿನ ಡಬ್ಬೆಗಳಿಗೆ ಬೆಂಕಿ ಹಿಡಿಯಿತು, ಅಲ್ಲಿಂದ ಹಡಗದಲ್ಲಿದ್ದ ಮದ್ದಿಗೆ ಬೆಂಕಿ ಹಿಡಿಯುತಂತೆ ಹಡಗವು ಒಡೆದು ಹೋಯಿತು.

—ತುರ್ಕಿಸ್ಥಾನದಲ್ಲಿ ಪ್ರಾಚೀನ ಕಾಲದ ಇತಿಹಾಸದ ಕೆಲವು ಕುರುಹುಗಳು ಸಿಕ್ಕಿವೆಯಂತೆ.

—ಜರ್ಮನಿ ದೇಶದಲ್ಲಿ ಲಿಪ್‌ಜಿಗ್ ಎಂಬ ಪಟ್ಟಣದಲ್ಲಿ ನಡೆಯುವ ಸಂತೆಯನ್ನು ನೋಡಲಿಕ್ಕೆ ಪ್ರೆಸಿಡೆಂಟರಾದ ವೊನ್ ಹಿಂಡನ್ ಬರ್ಗರವರು ಬರುವಾಗ ೧೦೦ ಮಂದಿ ಪೋಲೀಸಿನವರು ಮೋದತಪ್ಪಿ ಬಿದ್ದರು. ಇವರು ಆ ದಿನ ತಿಂದ ಆಹಾರದಲ್ಲಿ ಜುಲಾಬಿನ ಮದ್ದು ಇದ್ದದ್ದೆ ಇದಕ್ಕೆ ಕಾರಣವೆಂದು ಹೇಳುತ್ತಾರೆ.

—ಜಪಾನಿನವರು ಆಫ್ರಿಕದಲ್ಲಿ ತಮ್ಮ ವ್ಯಾಪಾರವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಯೊಕಹಾಮಾ ಸ್ಪೆಸಿ ಬೇಂಕಿನ ಶಾಖೆಗಳನ್ನು ಅಫ್ರಿಕದ ಎಲ್ಲಾ ವ್ಯಾಪಾರ ಸ್ಥಳಗಳಲ್ಲಿಯೂ ಇಡಲಿಕ್ಕೆ ಇನ್ಸಪೆಕ್ಟರರನ್ನು ಕಳುಹಿಸಿರುವರು. ಎಪ್ರಿಲ್ ತಿಂಗಳಲ್ಲಿ ಆಲೆಕ್ಸಂಡ್ರಿಯದಲ್ಲಿ ಒಂದು ಶಾಖೆಯನ್ನು ತೆರಿಯುವರು. ಮೊಂಬಾಸಾದಲ್ಲಿ ಇನ್ಸಪೆಕ್ಟರುಗಳು ಹಿಂತಿರುಗಿ ಬಂದೊಡನೆ ತೆರಿಯಲಿಕ್ಕಿರುವರು.

—ಶೇಕ್ಸಪಿಯರ್ ಸ್ಮಾರಕ ಫಂಡಿಗೆ ೫೦೦೦ ಪವನುಗಳು ವಂತಿಗೆ ಯೂಗಿವೆ.

—ಇಂಡಿಯದ ರಾಜಭಾರದಲ್ಲಿ ಬೇಗನೇ ಹೊಸ ಬದಲಾವಣೆಗಳನ್ನು ಮಾಡಬೇಕೆಂಬುದರ ವಿಷಯ ಸರ್ ಪುರುಷೋತ್ತಮದಾಸ ಠಾಕೂರದಾಸರು ಲಂಡನಿನಲ್ಲಿ ಜರಗಿದ ಸಾಮ್ರಾಜ್ಯ ಪಾರ್ಲಿಮೆಂಟ ಸಭೆಯಲ್ಲಿ ಭಾಷಣ ಕೊಟ್ಟರು.

—ಕಾಬೂಲಿನ ಹತ್ತರ ಒಂದು ಹೊಸ ಪಟ್ಟಣವನ್ನು ನಿರ್ಮಾಣ ಮಾಡುವರು. ಇದು ಕಾಬೂಲಿನಿಂದ ೧೨ ಮೈಲು ದೂರವಿದ್ದು ದರೂಲ್ ಹೊನಮ ಎಂಬ ಹೆಸರಿನಿಂದ ಕರೆಯಲ್ಪಡುವುದು. ಕಾಬೂಲು ಪಟ್ಟಣದಲ್ಲಿಯೇ ಕಬ್ಬಿಣದ ಕಾರ್ಖಾನೆಗಳನ್ನೂ, ಉಣ್ಣೆ ವಸ್ತ್ರದ ಕಾರ್ಖಾನೆಗಳನ್ನೂ, ಆಯುಧ ಕಾರ್ಖಾನೆಯನ್ನೂ ಕಟ್ಟಿಸುವರು. ಎಲ್ಲಿ ನೋಡಿದರೂ ಖನಿಜಗಳನ್ನು ಅಗಿದು ತೆಗಿಯುತ್ತಿರುವರು.

—ಫ್ರಾನ್ಸ ದೇಶದಲ್ಲಿ ಮಂತ್ರಿ ಸಭೆಯು ತಿರಿಗಿ ಬಿದ್ದುಹೋಯಿತು.

—ಫ್ರಾನ್ಸಿಗೂ ಜರ್ಮನಿಗೂ ೫ ವರುಷ ವಾಯಿದೆಯ ಒಂದು ಕರಾರಾಗಿ ಫ್ರೆಂಚ ಮತ್ತು ಅಲ್ಸಸ ಬರ್ಗಪಿಗ್ ಆಯರ್ನ (ಅಶುದ್ಧ ಕಬ್ಬಿಣ)ನ್ನು ಜರ್ಮನಿಯವರಿಗೆ ಮಾರಬೇಕೆಂದೂ, ಜರ್ಮನಿಯವರು ಪಿಗ್ ಅಯರ್ನನ್ನು ಫ್ರೆಂಚ್ ಮಾರ್ಕೇಟುಗಳಲ್ಲಿ ಮಾರಕೂಡದೆಂದೂ ಫ್ರೆಂಚರು ತಾವೇ ಪಿಗ್ ಅಯರ್ನನ್ನು ಜರ್ಮನಿಗೆ ಕೊಂಡುಹೋಗಿ ಮಾರಕೂಡದೆಂದು ನಿಶ್ಚಯಿಸಲಾಯಿತು.

—ಲಂಡನ್ ಪಟ್ಟಣದಿಂದ ನ್ಯೂಜಿಲೆಂಡಿಗೆ ವ್ಯಾಪಾರ ನಡಿಸಲಿಕ್ಕೆ ಎರಡು ಹಡಗುಗಳನ್ನು ಕಟ್ಟಿಸಲಿಕ್ಕೆ ಕಂಟ್ರಾಕ್ಟಿಗೆ ಕೊಟ್ಟಿರುವರು. ಈ ಹಡಗುಗಳು ಪ್ರತಿ ಒಂದು ೨೦,೦೦೦ ಟನ್ ಭಾರವಿರುವದು. ಒಂದು ಸಾವಿರ ಪ್ರಯಾಣಿಕರಿಗೆ ಕೂತುಕೊಳ್ಳುವುದಕ್ಕೆ ಅನುಕೂಲವಿರುವುದು. ವೇಗವು ೧೭ ನೋಟ್. ಈಗ ಲಂಡನಿನಿಂದ ಪನಾಮಾ ಕೆನಲ್ ದಾರಿಯಾಗಿ ನ್ಯೂಜಿಲೆಂಡಿಗೆ ಹೋಗಲಿಕ್ಕೆ ೩೭ ದಿವಸ ಬೇಕಾಗುತ್ತಿತ್ತು. ಇನ್ನು ೩೦ ದಿವಸಗಳು ಬೇಕಾಗುವವು.

—ಒಸ್ಟ್ರೇಲಿಯದ ಚಿಮಿಣಿ ಎಣ್ಣೆಯ ಕೈಗಾರಿಕೆಯನ್ನು ವೃದ್ಧಿಪಡಿಸುವುದಕ್ಕೆ ೧ ಲಕ್ಷ ಪವನನ್ನು ಸರಕಾರವು ಸಂಕ್ಷನ್ ಮಾಡಿರುತ್ತದ. ಪರದೇಶದ ಎಣ್ಣೆಯು ಈ ಖಂಡಕ್ಕೆ ಬಾರದಂತೆ ಮಾಡುವುದೇ ಇದರ ಉದ್ದಿಶ್ಯ.

—ಬಲುಚಿಸ್ಥಾನದಲ್ಲಿ ಅಲ್ಲಿಯ ಪೋಲೀಸಿನವರು ೬ ಮಂದಿಯನ್ನು ಕೈದುಮಾಡಿರುವರು.

—ಸೀರಿಯದಲ್ಲಿ ಫ್ರೆಂಚರಿಗೂ ಡ್ರೂಸರಿಗೂ ಆಗುವ ಯುದ್ಧವು ಇನ್ನೂ ನಿಲ್ಲಲಿಲ್ಲ. ಡ್ರೂಸರು ದಮಸ್ಕಸಿನ ಹತ್ತರವಿರುವ ಕಟೂನಾ ಎಂಬ ಪಟ್ಟಣಕ್ಕೆ ಮುತ್ತಿಗೆ ಹಾಕಿ ಅದನ್ನು ಸುಟ್ಟುಹಾಕಿದರು. ಫ್ರೆಂಚರ ಕುದುರೆ ಸೈನ್ಯವೂ ವಿಮಾನ ಸೈನಿಕರೂ ಹೋಗಿ ಗುಂಡು ಹಾಕಿ ೧೦೦ ಮಂದಿಯನ್ನು ಕೊಂದು ಹಾಕಿದರು. ಉಳಿದವರು ಇವರ ಕೈಗೆ ಸಿಕ್ಕದೆ ಓಡಿಹೋದರು.

—ಕಾಯಿರೊ ಕರಾಚಿ ವಿಮಾನ ಸರ್ವಿಸಿಗೆ ೫ ವಿಮಾನಗಳು ತಯಾರಾಗುವವು. ಒಂದೊಂದಕ್ಕೆ ೪೫೦ ಕುದುರೆಗಳ ಶಕ್ತಿಯಿರುವುದು. ಇನ್ನು ೧೨ ತಿಂಗಳಲ್ಲಿ ಸರ್ವಿಸು ಶುರುವಾಗುವದು. ೨ ವಾರಗಳಿಗೊಮ್ಮೆ ಪ್ರಯಾಣ.

ಒಳದೇಶ ವರ್ತಮಾನ.

—ಸರೋಜಿನಿಯವರು ಅಲಹಾಬಾದಿನಲ್ಲಿದ್ದು ಭಾಷಣಗಳನ್ನು ಕೊಡುತ್ತಿರುವರು.

—ಹೈಕೋರ್ಟ ಜಡ್ಜರ ಸಿಬಂದಿ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕಾಗಿ ವಿಚಾರಿಸಲಿಕ್ಕೆ ಬಂದ ಫೋಲರ್ ಕಮಿಟಿಯವರು ಜಸ್ಟಿಸ್ ವೆಂಕಟಸುಬ್ಬರಾವ್, ಸರ್ ವಿ. ಕುಮಾರಸ್ವಾಮಿ ಶಾಸ್ತ್ರಿ, ಜಸ್ಟಿಸ್ ಕೃಷ್ಣನ್ ಇವರ ಮತ್ತು ಚೀಫ್ ಜಸ್ಟಿಸರ ಸಾಕ್ಷಿಯನ್ನು ವಿಚಾರಿಸಿ ಎಪ್ರಿಲ್ ೨ನೇ ವಾರದಲ್ಲಿ ತಮ್ಮ ಕೆಲಸವನ್ನು ಮುಗಿಸುವರಂತೆ.

—ಲೆಪ್ಟನೆಂಟ್ ಕರ್ನಲ್ ಚೌಧುರಿಯವರು ಮದರಾಸು ಸರ್ಜನ್ ಜನರಲ್‌ರವರ ಕೆಲಸವನ್ನು ನೋಡುತ್ತಿರುವರು.

—ಮುಂಬಾಯಿಯ ಪಾಕ್‌ಟೌನಿನ ಹತ್ತರ ಲೋರ್ಡ ರಿಡಿಂಗ ರೋಡ್ ಮತ್ತು ಲ್ಯಾಬ್ರರಿಯನ್ನು ಮುಂಬಾಯಿ ಗವರ್ನರರು ತೆರದರು.

—ಪಂಜಾಬಿನ ಗವರ್ನರರು ಲಾಲೋ ಹೆಸರಿನ ಸಾಂಕ್ರಾಮಿಕ ರೋಗಿಗಳ ಆಸ್ಪತ್ರೆಯ ಬುನಾದಿ ಕಲ್ಲನ್ನು ಹಾಕಿದರು. ಆಸ್ಪತ್ರೆಯ ಖರ್ಚು ೩ಲಕ್ಷ ರೂಪಾಯಿ. ಇದರಲ್ಲಿ ಯುರೋಪಿಯನರಿಗೂ ಇಂಡಿಯನರಿಗೂ ಪ್ರತ್ಯೇಕ ಸ್ಥಳಗಳಿರುವವು.

—ತಿರುವಾಂಕೂರಿನಲ್ಲಿರುವ ಗೌಡಸಾರಸ್ವತರ ಮಹಾಸಭೆಯು ಎಪ್ರಿಲ್ ತಿಂಗಳ ಅಂತ್ಯದಲ್ಲಿ ತಿರುವಾಂಕೂರಿನ ಮಧ್ಯಸ್ಥಳವಾದ ಕಾಯಂಕುಳಮಿನಲ್ಲಿ ಜರಗುವದು. ತಿರುವಾಂಕೂರು ಹೈಕೋರ್ಟು ಜಡ್ಜರಾದ ಎಚ್. ಜಿ. ನಾರಾಯಣಪಾಯರು ಅಧ್ಯಕ್ಷರಾಗುವರು. ಇದೇ ಸಮಯ ಸಾರಸ್ವತ ವಿದ್ಯಾರ್ಥಿಗಳ ಸಭೆಯು ಜರಗುವುದು.

—ಡ್ರೋಯಿಂಗ್ ಮತ್ತು ಇತರ ಟೆಕ್ನಿಕಲ್ ಪರೀಕ್ಷೆಯಲ್ಲಿ ಪಾಸಾದವರು ತಮ್ಮ ಸರ್ಟಿಫಿಕೇಟುಗಾಗಿ ಜಿಲ್ಲಾ ಕಲೆಕ್ಟರರಿಗೆ ಪಾಸುಲ್ಲಿನ ನಂಬ್ರ ಹಾಕಿ ಅರ್ಜಿ ಮಾಡಬೇಕಾಗಿದೆ. ಅರ್ಜಿಯನ್ನು ಜುಲೈ ತಿಂಗಳಿಂದ ಅಕ್ಟೋಬರ ತಿಂಗಳ ಅಖೈರಿಯೊಳಗೆ ಮಾಡಬೇಕಾಗಿದೆ. ಅನಂತರ ಅರ್ಜಿಮಾಡಿದವರು ಒಂದು ರೂಪಾಯಿ ದಂಡನೆ ಫೀಸನ್ನು ಖಜಾನೆಗೆ ಕಟ್ಟಿ ಚಲನ್‌ನ್ನೂ ಅರ್ಜಿಯನ್ನೂ ಕಳುಹಿಸಬೇಕಾಗುವುದು.

—ಬಂಗಾಳದ ಗವರ್ನರರಾದ ಲೋರ್ಡ ಲಿಟ್ಟನ್‌ರವರು ಡಾರ್ಜಿಲಿಂಗಿಗೆ ಹೋಗಿರುವರು.

—ಅಲಹಾಬಾದಿನಲ್ಲಿ ಆರ್ಯಸಮಾಜದ ಮೆರವಣಿಗೆಯು ಹೋಗುವಾಗ ಮುಸಲ್ಮಾನರು ತಡೆದು ಎರಡೂ ಕಡೆಯವರಿಗೂ ಜಗಳವಾಗಿ ಪೋಲೀಸಿನವರು ಗುಂಡುಹಾರಿಸಿ ಜಗಳವನ್ನು ನಿಲ್ಲಿಸಬೇಕಾಯಿತು.

—ಇಂದೋರ್ ಮಹಾರಾಜ ತುಕೋಜಿಯವರು ಶುಕ್ರವಾರ ೨೬ನೇ ತಾರೀಕು ೧೦ ಗಂಟೆಗೆ ಇಂದೋರಿನಿಂದ ಯುರೋಪಿಗೆ ಹೋಗಲಿಕ್ಕೆ ಹೊರಟರು. ರೈಲು ಸ್ಟೇಶನಿನಲ್ಲಿ ಅನೇಕ ಮಂದಿ ಉದ್ಯೋಗಸ್ಥರೂ, ಪ್ರಜೆಗಳೂ ಬಂದಿದ್ದರು. ಸ್ಟೇಶನಿನಿಂದ ಹೊರಟೊಡನೆ ರಾಜಮರ್ಯಾದೆಯ ೨೧ ಫಿರಂಗಿಗಳು ಹಾರಿಸಲ್ಪಟ್ಟವು. ಇವರು ೩ಗರಲ್ಲಿ ಕರಾಚಿಯಿಂದ ನೆಟ್ಟಗೆ ಹಡಗಕ್ಕೆ ಹೋಗಿ ವಿಲಾಯತಿಗೆ ಹೋದರು.

—ಮದರಾಸಿನಲ್ಲಿ ಚಹಾ ಮಾಡುವ ವಿದ್ಯೆಯನ್ನು ಕಲಿಸಲಿಕ್ಕೆ ಒಂದು ಶಾಲೆಯನ್ನು ಇದೇ ಮೇ ತಿಂಗಳಿಂದ ತೆರಿಯುವರು. ಈ ವಿದ್ಯೆಯನ್ನು ಎರಡು ವರ್ಷ ಕಲಿಯಬೇಕಾಗಿದೆ. ವರುಷಕ್ಕೆ ಶಾಲೆಗೆ ಸಂಬಳ ೧೦೦ ರೂಪಾಯಿ ಕೊಡಬೇಕಾಗಿದೆ ಎಂದು ಡಾರೆಕ್ಟರ್ ಒಫ್ ಇಂಡಸ್ಟ್ರಿಸ್ ಇವರು ಫೋರ್ಟು ಸೈಂಟ ಜೋರ್ಜ ಗಜೇಟಿನಲ್ಲಿ ಪ್ರಕಟಿಸಿರುವರು.

—ಬರ್ಮಾದ ಜೈಲುಗಳಲ್ಲಿ ಉಪವಾಸ ವ್ರತವನ್ನು ಕೈದಿಗಳು ಆಚರಿಸುವುದರಿಂದ ರಾಜದ್ರೋಹಿ ಕೈದಿಗಳನ್ನು ಮದರಾಸು ಸಂಸ್ಥಾನ ಜೈಲುಗಳಿಗೂ ಇಂಡಿಯದಲ್ಲಿರುವ ಇತರ ಜೈಲುಗಳಿಗೂ ತಂದು ಆ ಕೈದಿಗಳನ್ನು ಇಡುವರೆಂದು ವರ್ತಮಾನವಿದೆ.

—ಬಂಗಾಳದ ಫರಿದಪುರ ಜಿಲ್ಲೆಯ ಮಡರಿಪುರ ತಾಲೂಕಿನ ಕೆಲವು ಗ್ರಾಮಗಳಲ್ಲಿ ಕಠಿಣ ತರದ ಸುಂಟರ ಗಾಳಿಯು ಒಂದು ಬಹಳ ಅನಾಹುತಗಳಾಗಿವೆ. ೮೦೦ ಕುಟುಂಬಗಳಿಗೆ ಮನೆಗಳಿಲ್ಲ. ಅನೇಕ ದೋಣಿಗಳು ಅರಿಯಲಕ ನದಿಯಲ್ಲಿ ಕವಚಿ ಬಿದ್ದವು. ಅನೇಕ ಮನೆಗಳು ನಾಶವಾಗಿವೆ. ಮರಣಪಟ್ಟವರ ಸಂಖ್ಯೆ ತಿಳಿಯಲಿಲ್ಲ.

—ಮದರಾಸಿನಲ್ಲಿ ಬೇಗನೇ ಒಂದು ಗಾಜಿನ ಕಾರ್ಖಾನೆಯನ್ನು ಲಿಮಿಟೆಡ್ ಕಂಪೆನಿ ಮಾಡಿ ತೆರಿಯುವರು. ಭಂಡವಾಳ ೫೦೦೦೦ರೂ. ಶೇರು ಒಂದರ ೧೦೦ರೂ. ಡೈರೆಕ್ಟರರಾಗುವವರು ೨೫ ಶೇರುಗಳನ್ನು ತೆಗದುಕೊಳ್ಳಬೇಕು. ಇದನ್ನು ಮದರಾಸು ಪಟ್ಟಣದ ಉತ್ತರ ಭಾಗದಲ್ಲಿ ತೆರಿಯುವರು.

—ಸೆಂಟ್ರಲ್ ಸಿಖ್ ಲೀಗಿನವರು ಲಾಹೋರಿನಲ್ಲಿ ಎಪ್ರಿಲ್ ೨ನೇ ತಾರೀಕಿನಿಂದ ೪ನೇ ತಾರೀಕು ವರೆಗೆ ನಡೆಯಲಿಕ್ಕಿರುವ ಸಭೆಗೆ ಕೊಮಗಾಟ ಮಾರುವಿನ ವೀರರಾದ ಬಾಬಾ ಗುರುದಿತ್‌ಸಿಂಗರನ್ನು ಅಧ್ಯಕ್ಷರಾಗಿ ನೇಮಿಸಿರುವರು.

ದಕ್ಷಿಣ ಕನ್ನಡ.

ಸುಳ್ಯ:— ಇಲ್ಲಿಯ ಆಸ್ಪತೆಯನ್ನು ಪದೇ ಪದೇ ಮುಚ್ಚುವದರಿಂದ ಧೀರ್ಘ ರೋಗಿಗಳಿಗೆ ಔಷಧ ತೆಗೆದುಕೊಳ್ಳುವದಕ್ಕೂ ದೂರದಿಂದ ಬರುವ ರೋಗಿಗಳಿಗೆ ಬಹಳ ಕಷ್ಟವಾಗುವದರಿಂದ ದಯಾಳು ಸರಕಾರದವರು ನಮ್ಮ ಜಿಲ್ಲೆಗೆ ಸಹಾಯಕ (ರಿಜರ್ವ) ವೈದ್ಯ ಉದ್ಯೋಗಸ್ತರನ್ನು ಕೊಡುತ್ತಿದ್ದರೆ ಬಹಳ ಉಪಕಾರವಾಗುತಿತ್ತು.

ಸಂಪಾಜೆ:— ಕಳೆದ ತಿಂಗಳ ೨೧ನೇ ತಾರೀಕಿಗೆ ಸಂಪಾಜೆ ಶೇಲಾರು ರಾಮಚಂದ್ರಯ್ಯನವರು, ಬೆಳೆಯನ್ನು ಎಷ್ಟೊ ಸಮಯದಿಂದ ನಾಶಮಾಡುತ್ತಾ ಇದ್ದ ಇಷ್ಟರ ವರೆಗೆ ೧೬ ಗುಂಡಿನ ಪೆಟ್ಟುಗಳನ್ನು ತಿಂದರೂ ಸಾಯದೆ ಇದ್ದ ಒಂದು ಮಹಾ ಪೋಕ್ರಿ ಗಂಡು ಆನೆಯನ್ನು ಒಂದರ ಹಿಂದೆ ಒಂದು ೭ ಗುಂಡು ಹೊಡೆದು ಕೊಂದುಹಾಕಿದರು. ಇವರಿಗೆ ಸರಕಾರದವರು ಆನೆಯ ಎಲುಬುಗಳನ್ನು ಇನಾಮಾಗಿ ಕೊಡದೆ ಇರಲಾರರೆಂದು ಭಾವಿಸಲಾಗಿದೆ.

ಮುಂಡಾಜೆ:— ಈ ಊರಲ್ಲಿ ಮ॥ ರಾ॥ ಮಂಗಳೂರು ಪಿ. ಸುಬ್ರಾಯ ಪೈಯವರು ಇಟ್ಟ ಔಷಧಾಲಯದಲ್ಲಿ ಮದ್ದನ್ನು ಕ್ರಯಕ್ಕೆ ಕೊಡುತ್ತಿರುವದರಿಂದ ಬಡತನದಿಂದ ನರಳುತ್ತಿರುವ ಈ ಊರಿನವರಿಗೆ ಸಹಾಯಮಾಡುವುದಕ್ಕೆ ಸರಕಾರದವರು ಸಂಕ್ಷನ್‌ಮಾಡಿದ ೧೫೦ ಹಳ್ಳಿ ಆಸ್ಪತ್ರೆಗಳಲ್ಲಿ ಒಂದನ್ನು ಇಲ್ಲಿ ತೆರೆದರೆ ಸುತ್ತುಮುತ್ತಲಿನ ನಿವಾಸಿಕರು ಬಚಾವಾಗುತ್ತಿದ್ದರು.

ನಂದಿಕೂರು:— ಈ ಊರಿನ ಬಸ್ತಿಯ ಚಂದಯ್ಯ ಇಂದ್ರರ ಮನೆಯ ಒಂದು ದನವು ೨ ಹೋರಿಕರುಗಳನ್ನು ಒಂದು ಹೆಂಣೆಕರುವನ್ನು ಪ್ರಸವಿಸಿರುತ್ತದೆ.

ತಲಪಾಡಿ:— ಈ ಗ್ರಾಮದಲ್ಲಿ ರಾ॥ ಪಂಜಾಳ ಕೃಷ್ಣಪ್ರಭುಗಳು ಹೊಸತಾಗಿ ಕಟ್ಟಿಸಿದ ಶಾಲಾ ಕಟ್ಟೋಣದ ಪ್ರವೇಶ ಉತ್ಸವವು ರಾ॥ ಕಣ್ವತೀರ್ಥ ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಪೊಳಲಿ:— ಅಖಿಲ ಕರ್ನಾಟಕದ ಶಕ್ತಿ ದೇವಾಲಯಗಳಲ್ಲಿ ಪ್ರಖ್ಯಾತಿಪಡದಿರುವ ಪೊಳಲಿ ಶ್ರೀ ರಾಜರಾಜೇಶ್ವರೀ ಅಮ್ಮನವರ ದೇವಸ್ಥಾನದಲ್ಲಿ ತಾ. ೧೩-೩-೨೬ರಿಂದ ೧೨-೪-೨೬ರ ವರೆಗೆ ಕಾಲಾವಧಿ ವಾರ್ಷಿಕೋತ್ಸವವು ನಡಿಯುವುದು. ಈ ಮಧ್ಯ ತಾ. ೧೦-೪-೨೬ನೇ ಶನಿವಾರ ಪ್ರಚಂಡ ಕಡೆ ಚೆಂಡಾಟವು ಜರಗುವುದು. ಇದರೆಡೆಯಲ್ಲಿ ಭಜಕ ಮಂಡಲಿಗೆ ಅನುಕೂಲವಾಗುವಂತೆ ಸುಮಾರು ೩೦ ವರ್ಷಗಳ ಹಿಂದೆ ಶುರುಮಾಡಿದ ಪೊಳಲಿ ರಸ್ತೆಯ ಕಾಮಗಾರಿಯು ಬಹು ಜೋರಿನಿಂದ ನಡೆಯುತ್ತಿರುವುದು ಅತಿ ಸಂತೋಷ.

ಮಂಗಳೂರು.

ಕಳೆದ ಮಾರ್ಚ ತಿಂಗಳ ೨೩ನೇ ತಾರೀಕು ಮಂಗಳವಾರ ೨ ಗಂಟೆಗೆ ಮಂಗಳೂರು ತಾಲೂಕು ಬೋರ್ಡ ಮಿಟಿಂಗ ಜರಗಿತು. ಉಳ್ಳಾಲದ ಜನರೂ, ಸುತ್ತುಮುತ್ತಲಿನ ನಿವಾಸಿಕರೂ ವೈದ್ಯ ಸಹಾಯಕ್ಕಾಗಿ ಬಹಳ ಕಷ್ಟಪಡುತ್ತಿರುವುದರಿಂದ ಉಳ್ಳಾಲದಲ್ಲಿ ಒಂದು ರೂರಲ್ ಆಸ್ಪತ್ರೆಯನ್ನು ಇಡಬೇಕೆಂದು ನಿಶ್ಚಯಿಸಲಾಯಿತು. ಬಂಟವಾಳ ಡಾಕ್ಟರರು ತನ್ನ ವಾಸ್ತವ್ಯದ ಬಗ್ಗೆ ಆಸ್ಪತ್ರೆಯ ಹತ್ತಿರವಿರುವ ಅಸಿಸ್ಟಾಂಟ ಸರ್ಜನರ ಕ್ವಾಟರನ್ನು ತನಗೆ ಬಾಡಿಗೆ ಇಲ್ಲದೆ ಉಳುಕೊಳ್ಳುವದಕ್ಕೆ ಕೊಡಬೇಕೆಂದು ಸದರಿ ಡಾಕ್ಟರರು ಫೆಬ್ರವರಿ ೧ಕ್ಕೆ ಬರೆದ ಕಾಗದವನ್ನು ಚರ್ಚಿಸಿ, ಡಾಕ್ಟರರು ಆ ಮನೆಯಲ್ಲಿ ಇದ್ದು ಅವರಿಗೆ ತಿಂಗಳಿಗೆ ರೂ. ೧೫೦ ಸಂಬಳ ಆಗುವ ವರೆಗೆ ತಿಂಗಳು ಒಂದಕ್ಕೆ ರೂ. ೫ ಬಾಡಿಗೆ ಕೊಡಬೇಕೆಂದೂ, ಅನಂತರ ತಿಂಗಳಿಗೆ ರೂ. ೧೦ರ ಪ್ರಕಾರವೂ ಬಾಡಿಗೆ ಕೊಡಬೇಕೆಂದೂ ನಿಶ್ಚಯಿಸಲಾಯಿತು.

ಬಂಟವಾಳ ಗುರುಪುರ ಮಾರ್ಗದಲ್ಲಿ ಅತೀ ಜರೂರಿನಿಂದ ಕಲ್ವರ್ಟುಗಳನ್ನು ಕಟ್ಟಿಸುವುದಕ್ಕೆ ೩೦೦೦ ರೂ. ಸಂಕ್ಷನಾಯಿತು.

ಬಿಜಯಿಗೆ ಮತ್ತು ಚಿತ್ರಾಪಿಗೆ ಎರಡು ಬಾಲಿಕಾ ಪಾಠಶಾಲೆಗಳೂ ಸುರತ್ಕಲ್, ಉಚ್ಚಿಲ್ಲ್ಯಾರು, ಕನ್ನೂರು ಮತ್ತು ಮಂಜಾಡಿ ಈ ನಾಲ್ಕು ಊರುಗಳಲ್ಲಿ ೪ ಮಹಮ್ಮದೀಯರ ಶಾಲೆಗಳೂ, ಸೆಂಕ್ಷನ್ ಮಾಡಲಾಯಿತು. ಬಂಟವಾಳ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಉರ್ದು ಕಲಿಸಲು ಒಬ್ಬ ಮುಸಲ್ಮಾನ ಉಪಾಧ್ಯಾಯರನ್ನು ಇಡಬೇಕೆಂದಾಯಿತು. ಇದೇ ತಿಂಗಳ ತಾ. ೧ರಿಂದ ಎಲ್ಲಾ ಬೋರ್ಡು ಎಲಿಮೆಂಟರಿ ಶಾಲೆಗಳಲ್ಲಿ ಮೊದಲನೆಯ ಮತ್ತು ಎರಡನೆಯ ತರಗತಿಗಳಲ್ಲಿ ಧರ್ಮಾರ್ಥವಾಗಿ ಕಲಿಸಬೇಕೆಂದಾಯಿತು.

ಬಂಟವಾಳದಿಂದ ಪೊಳಲಿಯ ಮಾರ್ಗವಾಗಿ ಗುರುಪುರಕ್ಕೆ ಹೋಗುವ ರಸ್ತೆಯನ್ನು ಮುಗಿಸುವುದಕ್ಕಾಗಿ ರೂ. ೧೨೦೦೦ ಗ್ರೇಂಟನ್ನು ಸರಕಾರದಿಂದ ಕೇಳಬೇಕೆಂದು ರಾ॥ ಕರಿಯಂಗಳ ಮುತ್ತಯ್ಯ ಶೆಟ್ಟಿ ತಂದ ಠರಾವು ಮಂಜೂರಾಯಿತು. ಇಷ್ಟರ ತನಕ ಈ ರಸ್ತೆಗೆ ರೂ. ೮೦೦೦ ಖರ್ಚು ಮಾಡಲಾಗಿಯದೆ.

ಈ ತನಕ ಮೂಲ್ಕಿ, ಸುರತಕಲ್ ಮತ್ತು ಮಂಗಳೂರುಗಳಿಗೆ ಒಂದೇ ಪೋಲಿಂಗ ಸೆಂಟರಿದ್ದುದನ್ನು ಈಗ ೪ ಪೋಲಿಂಗ ಸೆಂಟರುಗಳನ್ನಾಗಿ ಮಾಡಬೇಕೆಂದಾಯಿತು. ಎರಡು ಸೆಂಟರುಗಳಿದ್ದ ಬಂಟವಾಳ ಮತ್ತು ಪಾಣೆ ಮಂಗಳೂರಿಗೆ ಇನ್ನು ಮುಂದೆ ಮೂರು ಸೆಂಟರುಗಳಿರಬೇಕೆಂದಾಯಿತು. ಮಂಗಳೂರು ತಾಲೂಕಿನಲ್ಲಿರುವ ಆರು ಸರ್ಕಲುಗಳಲ್ಲಿ ಪ್ರತಿ ಒಂದು ಸರ್ಕಲಿಗೆ ಎರಡೆರಡು ಪ್ರತಿನಿಧಿಗಳಿರಬೇಕೆಂದಾಯಿತು. ಇನ್ನು ಸುರತ್ಕಲ್ಲಿಗೆ ಎರಡು; ಮಂಗಳೂರಿಗೆ ಮೂರಲ್ಲಿ ಎರಡು ಮಾತ್ರ.

ಪ್ರೊವಿನ್ಸಿಯಲ್ ಕೊ-ಒಪರೇಟಿವ್ ಕೊನ್ಫರೆನ್ಸಿಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಮಿ॥ ಎಚ್. ಎನ್. ಸುವರ್ಣ, ಉಳ್ಳಾಲ ಮಂಗೇಶರಾವ್, ಎಸ್. ರಾಮಚಂದ್ರ ಅಯ್ಯರ್ ಇವರನ್ನು ಪ್ರತಿನಿಧಿಗಳಾಗಿ ಮದರಾಸಿಗೆ ಕಳುಹಿಸುವರು.

ದ. ಕ. ಜಿಲ್ಲಾ ಕಾಂಗ್ರೆಸು ಕಮಿಟಿಯ ತಾ. ೨೧-೩-'೨೬ನೇ ಮಹಾಸಭೆಯ ನಿರ್ಣಯದ ಪ್ರಕಾರ ಕೌನ್ಸಿಲ್‌ಪ್ರವೇಶ ಪಕ್ಷದವರೇ ಹೆಚ್ಚಿನ ಭಾಗತೆಕ್ಕೊಳ್ಳುವ ಹಾಗೆ ಜಿಲ್ಲಾ ಕಮಿಟಿಗೆ ಪ್ರತಿನಿಧಿಗಳನ್ನು ಪುನಃ ಚುನಾಯಿಸುವ ಬಗ್ಗೆ ಮಂಗಳೂರು ತಾಲೂಕು ಕಾಂಗ್ರೆಸು ಕಮಿಟಿಯ ಮಹಾಸಭೆಯು ತಾ. ೧೬-೪-'೨೬ನೇ ಶುಕ್ರವಾರ ಅಪರಾಹ್ನ ೪ ಘಂಟೆ ಹಕ್ಕೆ ಮಂಗಳೂರಲ್ಲಿ ಕರ್ನಾಟಕ ತಿಲಕ ವಿದ್ಯಾಲಯದಲ್ಲಿ ಜರಗುವುದು.

ವಿವಿಧ ವಿಷಯಗಳು.

ಮಂಗಳೂರು ಮುನಿಸಿಪಾಲಿಟಿಗೆ ವಿದ್ಯುಚ್ಛಕ್ತಿ ದೀಪಗಳು.

ಮಂಗಳೂರು ಮುನಿಸಿಪಾಲಿಟಿಯೊಳಗೆ ಇಲೆಕ್ಟ್ರಿಕ್ ಸಿಟಿಯನ್ನು ಪಸರಿಸುವುದಕ್ಕಾಗಿ ಮಿ॥ ಜಿ. ಆರ್. ಕೇಳಕರರಿಗೂ ಮತ್ತು ಪಡುಬಿದ್ರಿಯವರಿಗೂ ಜಿ. ಓ. ನಂ. ೩೪೪ ಬಿ. ಲೈಸನ್ಸನ್ನು ಹುಕುಂ ಮದರಾಸು ಸರಕಾರದವರಿಂದ ಕೊಡಲ್ಪಟ್ಟಿದೆ.

ಇವರು ಈ ಕೆಳಗಿನ ಮಾರ್ಗಗಳಲ್ಲಿ ಇಲೆಕ್ಟ್ರಿಕ್ ಲ್ಯಾಟನ್ನು ಇಡುವರು:— (೧) ರುಜಾರಿಯೊ ಚರ್ಚ ರೋಡು; (೨) ಕೆಂಟೋನ್‌ಮೆಂಟ್ ರೋಡು ಪೆಸ್ಕರುಜಾರಿಯೊ ಇಗರ್ಜಿಯಿಂದ ಸೆಂಟ ಪೋಲ್ಸ ಚರ್ಚಿನ ವರೇಗೆ; (೩) ಕೆಂಟೋನಮೆಂಟ ಈಸ್ಟರೋಡ್; (೪) ಪ್ಲೇಗ್ ಸ್ಕ್ವಾಪ್ ರೋಡ್; (೫) a) ಫಾಯರ್ ಪ್ರೂಫ್‌ಬಜಾರ, b) ಗೋಳಿಕಟ್ಟೆ ಬಜಾರ ಸ್ಟ್ರೀಟ್, c) ಕ್ಲೊತ್‌ಬಜಾರ ಸ್ಟ್ರೀಟ್; (೬) ಕಾರ್‌ಸ್ಟ್ರೀಟ ಅಜಿಜುದ್ದೀನ್ ರೋಡಿನಿಂದ ನ್ಯೂಕೋರ್ಟು ರೋಡ್ ವರೇಗೆ; (೭) ನ್ಯೂ ಕೋರ್ಟರೋಡ್; (೮) ಕೋರ್ಟ ರೋಡ್ ಫಾಯರ್ ಪ್ರೂಫ್ ಬಜಾರಿನಿಂದ ದಾಟಿ, ಕೊಡಿಯಾಲ ಬೈಲ ಚರ್ಚ ವರೇಗೆ ಆಗಿ ಕೂಳೂರು ಫೇರಿರೋಡು ವರೇಗೆ; (೯) ಕೂಳೂರು ಫೇರಿರೋಡಿನಿಂದ ದಕ್ಷಿಣಕ್ಕೆ ತಿರುಗಿ ಅಲ್ಲಿಂದ ಪೂರ್ವಕ್ಕೆ ಫಳನೀರ್ ರೋಡಿನಾಗಿ ಪೆಂಟಲೆಂಡ ಪೇಟೆಯ ಮುಖ್ಯ ಮಾರ್ಗದಲ್ಲಿ ಬೋಳಾರು ಬತ್ತೇರಿ ರೋಡ ವರೇಗೆ; (೧೦) ಕೋರ್ಟುರೋಡಿನಿಂದ ಕಂಕನಾಡಿ ರೋಡಾಗಿ ವೆಟರ್ನರಿ ಆಸ್ಪತ್ರೆಯ ವರೇಗೆ; (೧೧) ಫಳನೀರ್ ರೋಡ್ ಹಂಪನಕಟ್ಟೆಯಿಂದ ಸ್ಟರೆಕ್ ರೋಡಿನ ವರೆಗೆ; (೧೨) ಬಲ್ಮಠ ರೋಡ್ ಹಂಪನಕಟ್ಟೆಯಿಂದ ಪೂರ್ವಕ್ಕೆ; (೧೩) ಸೌತ್ ಇಂಡಿಯನ್ ರೈಲುವೆ ಲೈನ್ಸ.

ಕೋರ್ಟುರೋಡ್, ಕಾರಸ್ಟ್ರೀಟ, ಕ್ಲೋತ್‌ಬಜಾರ, ಗೋಳಿಕಟ್ಟೆ ಬಜಾರ, ಫಾಯರ್‌ಪ್ರೂಫ್ ಬಜಾರ ಇವುಗಳಲ್ಲಿ ಸರಿಗೆಗಳು ನೆಲದೊಳಗೆ ಇಡಲ್ಪಡಬೇಕಾಗಿದೆ.

ಮುನಿಸಿಪಾಲಿಟಿಗೆ ಯೂನಿಟಿಗೆ ೪ ಅಣೆ, ಮನೆಗಳಿಗೆ ಕಡಿಮೆಯಾದರೆ ತಿಂಗಳಿಗೆ ೩ರೂ. ಹೆಚ್ಚಾದರೆ ರೂ. ೧೦.

ಡಿಸ್ಟ್ರಿಕ್ಟ ಬೋರ್ಡು ಮೆಂಬರರನ್ನು ಓಟರರೇ ಚುನಾಯಿಸುವುದು ಹೊಸ ಬದಲಾವಣೆ.

ಈಗಿರುವ ಡಿಸ್ಟ್ರಿಕ್ಟ ಬೋರ್ಡುಗಳಿಗೆ ೩೬ ಮಂದಿ ಮೆಂಬರುಗಳು ಇರುವರು. ಇವುಗಳಲ್ಲಿ ಕಾಲುಪಾಲು ಮೆಂಬರುಗಳು ನೇಮಿಸಲ್ಪಟ್ಟಿರುವರು. ಪ್ರತಿ ಒಂದು ತಾಲೂಕು ಬೋರ್ಡಿನ ಪ್ರೆಸಿಡೆಂಟರುಗಳು ಎಕ್ಸ್ ಒಫಿಶಿಯೊ ಮೆಂಬರುಗಳು ಪ್ರತಿ ಒಂದು ತಾಲೂಕು ಬೋರ್ಡಿನಿಂದ ಚುನಾಯಿಸಲ್ಪಟ್ಟ ಇಬ್ಬರಿಬ್ಬರು ಮೆಂಬರುಗಳು. ಆದರೆ ಈ ನಮೂನೆಯ ಚುನಾವಣೆಯಿಂದ ಏನೊಂದೂ ಪ್ರಯೋಜನವಾಗಲಿಲ್ಲವೆಂದು ಸರಕಾರದವರು ಲೋಕಲ್ ಬೋರ್ಡು ಆಕ್ಟುಗಳಲ್ಲಿ ಹೊಸ ಬದಲಾವಣೆಗಳನ್ನು ಮಾಡಲಿಕ್ಕೆ ಎಲ್ಲಾ ತಾಲೂಕು ಬೋರ್ಡುಗಳೊಡನೆಯೂ ಡಿಸ್ಟ್ರಿಕ್ಟ ಬೋರ್ಡುಗಳೊಡನೆಯೂ ಆಲೋಚನೆ ಬಗ್ಗೆ ಕಳುಹಿಸಿದ್ದರು.

ಲೋಕಲ್ ಬೋರ್ಡುಗಳ ಇನ್ಸ್‌ಪೆಕ್ಟರ ಜನರಲರವರು ಓಟರರೇ ಡಿಸ್ಟ್ರಿಕ್ಟ ಬೋರ್ಡ ಮೆಂಬರರನ್ನು ಚುನಾಯಿಸುವುದು ಒಳ್ಳೇಯದೆಂದು ಬರೆದಿರುವರು.

ಇದರ ವಿಷಯ ಮೊಕದ್ದಮೆ [illegible] ಕಮಿಟಿಯವರು ಹೀಗೆ ಬರೆದಿರುವರು. ೧ ಡಿಸ್ಟ್ರಿಕ್ಟ ಬೋರ್ಡಿಗಿರುವ ಮೆಂಬರರಲ್ಲಿ ಕಾಲುಪಾಲು ಮೆಂಬರರನ್ನು ನೇಮಕಮಾಡಬೇಕು. ೨ ಬಾಕಿ ಮುಕ್ಕಾಲುಪಾಲು ಮೆಂಬರರನ್ನು ಓಟರುಗಳೇ ಚುನಾಯಿಸಬೇಕು. ೩ ಒಂದು ಜಿಲ್ಲೆಯ ಎಲ್ಲಾ ತಾಲೂಕು ಬೋರ್ಡುಗಳ ಪ್ರೆಸಿಡೆಂಟರುಗಳು ಎಕ್ಸ್ ಒಫಿಶಿಯೊ ಮೆಂಬರರಾಗಿರಬೇಕು. ೪ ಪ್ರತಿ ಒಂದು ತಾಲೂಕು ಬೋರ್ಡಿನಿಂದ ಒಬ್ಬೊಬ್ಬ ಮೆಂಬರರನ್ನು ಆಯಾ ತಾಲೂಕು ಬೋರ್ಡಿನವರು ಕಳುಹಿಸಬೇಕು. ೫ ತಾಲೂಕು ಬೋರ್ಡು ಮೆಂಬರರಾಗಿರುವವರು ಡಿಸ್ಟ್ರಿಕ್ಟಬೋರ್ಡು ಮೆಂಬರಿಗೆ [illegible] ಬಾರದು. [illegible] ತಾಲೂಕು ಬೋರ್ಡು ಮೆಂಬರಿಗೆ [illegible] ಡಿಸ್ಟ್ರಿಕ್ಟ ಬೋರ್ಡು ಮೆಂಬರಿಗೆ [illegible]

ಈ ಆಲೋಚನೆಗಳನ್ನು ಕಮಿಟಿಯವರು ಸರಕಾರಕ್ಕೆ ಕಳುಹಿಸಿರುವರು. ಗವರ್ನಮೆಂಟು ಏನು ಮಾಡುತ್ತದೊ ನೋಡಲಿಕ್ಕಿದೆ.

ಇಂಡಿಯವೂ ಬ್ರಿಟಿಷ ಸೋಸಿಯಲಿಸ್ಟರೂ.

ಇಂಡಿಪೆಂಡೆಂಟ ಲೇಬರ ಪಾರ್ಟಿಯವರ ಇಂಡಿಯದ ಎಡವಿಸಿರಿ ಪಾರ್ಟಿಯವರ ಕರ್ತವ್ಯ—

ಇಂಡಿಯಕ್ಕೆ ಸ್ವರಾಜ್ಯದ ಮೂಲಸೂತ್ರಗಳನ್ನೇ ಕೊಟ್ಟಿರುವುದಿಲ್ಲ. ಇಂಡಿಯದ ಜವಾಬ್ದಾರಿಯು ಬ್ರಿಟಿಷ್ ಪಾರ್ಲಿಮೆಂಟಿನವರ ಮೇಲೆಯೇ ಇದ್ದೀ. ಗವರ್ನರ ಜನರಲರನ್ನು ಅವರ ಕೌನ್ಸಿಲನ್ನು ಮಹಾರಾಜರೇ ನೇಮಿಸಿರುತ್ತಾರೆ. ಮತ್ತು ಇವರು ಇಂಗ್ಲೆಂಡಿನಲ್ಲಿರುವ ಸ್ಟೇಟ ಸೆಕ್ರೆಟರಿಯವರ ಅಪ್ಪಣೆಗಳಂತೆ ನಡಕೊಳ್ಳುತ್ತಾರೆ.

ಎರಡೂ ನ್ಯಾಯವಿಧಾಯಕ ಸಭೆಗಳ ಅಧಿಕಾರಗಳೂ ಪ್ರಾತಿನಿಧ್ಯವೂ ಮಿತಿಯುಳ್ಳದ್ದಾಗಿದೆ. ಸ್ಟೇಟ ಕೌನ್ಸಿಲಿನಲ್ಲಿ ಕಾಯಂ ಸರಕಾರ ಮೆಂಬರರೇ ಹೆಚ್ಚಾಗಿರುತ್ತಾರೆ. ಎಸೆಂಬ್ಲಿಯ ಮೂರನೆ ಒಂದುಪಾಲು ಮೆಂಬರರು ಸರಕಾರವೇ ನೇಮಿಸಿದವರು. ಎಸೆಂಬ್ಲಿಯವರು ಮಂಜೂರು ಮಾಡಿದ ಸಂಗತಿಗಳನ್ನು ರದ್ದು ಪಡಿಸುವ ಅಧಿಕಾರವು ಸ್ಟೇಟ ಕೌನ್ಸಿಲಿಗೆ ಇದೆ. ಎಸೆಂಬ್ಲಿಯವರು ನಿರಾಕರಿಸಿದ ಯಾವದೊಂದು ಸಂಗತಿಯನ್ನು ಜಾರಿಗೆ ತರುವ ಅಧಿಕಾರವು ಗವರ್ನರ ಜನರಲರಿಗೆ ಇದೆ. ಆಸ್ತಿ ಇದ್ದವರಿಗೂ, ಯುನಿವರ್ಸಿಟಿಯ ಗ್ರಾಜುವೇಟರುಗಳಿಗೂ ಮಾತ್ರವೇ ಓಟರರಾಗಬಹುದು. ಬ್ರಿಟಿಷ್ ಇಂಡಿಯದಲ್ಲಿರುವ ೨೪೭ ಮಿಲಿಯ ಜನಸಂಖ್ಯೆಯಲ್ಲಿ ೨೦ ಸಾವಿರ ಮಂದಿಗೆ ಮಾತ್ರವೇ ಕೌನ್ಸಿಲಿಗೆ ಓಟುಕೊಡುವ ಹಕ್ಕು ಇದೆ. ಎಸೆಂಬ್ಲಿಗೆ ಓಟುಕೊಡುವುದಕ್ಕೆ ಒಂದು ಲಕ್ಷ ಮಂದಿಗೆ ಮಾತ್ರವೇ ಹಕ್ಕಿದೆ.

ಪ್ರಾಂತಿಕ ಕೌನ್ಸಿಲುಗಳಿಗೆ ಓಟುಕೊಡಲಿಕ್ಕೆ ಸಂಸ್ಥಾನಗಳ ಜನರ ಸೇಕಡಾ ೩ ಮಂದಿಗೆ ಮಾತ್ರವೇ ಅಧಿಕಾರವಿದೆ. ಕೌನ್ಸಿಲಿನವರಿಗೆ ಲೊ, ಮತ್ತು ಒರ್ಡರ್, ಕಂದಾಯ, ಆಯವ್ಯಯ, ಕಾಡುಗಳು, ನೀರಾವರಿ ಕೆಲಸಗಳ ಮೇಲೆ ಕೌನ್ಸಿಲುಗಳಿಗೆ ಯಾವ ಅಧಿಕಾರವೂ ಇಲ್ಲ. ಸರಕಾರಕ್ಕೆ ಕಂದಾಯ ಸಿಕ್ಕುವ ದಾರಿಗಳು ಇವುಗಳೇ ಆಗಿವೆ.

ಸಿವಿಲ್ ಸರ್ವಿಸ್ ಮತ್ತು ಕ್ರಿಮಿನಲ್ ಸಂಗತಿಗಳಲ್ಲಿ ನ್ಯಾಯಸ್ಥಾನಗಳು ಬ್ರಿಟಿಷರ ಅಧಿಕಾರದೊಳಗೆ ಇವೆ. ಇವುಗಳ ಖರ್ಚನ್ನು ಮಾತ್ರವೇ ಇಂಡಿಯವು ತೆರಬೇಕಾಗಿದೆ. ಸರಕಾರದವರ ವಿಷಯ ಮಾತಾಡಲಿಕ್ಕೂ, ವರ್ತಮಾನ ಪತ್ರಿಕೆಗಳಲ್ಲಿ ಛಾಪಿಸಲಿಕ್ಕೂ, ಸಭೆಗಳನ್ನು ಮಾಡಲಿಕ್ಕೂ ಹಕ್ಕು ಸ್ವಾತಂತ್ರ್ಯಗಳಿಲ್ಲ. ಜನಸಂಖ್ಯೆಯ ಸೇಕಡಾ ೭೭ ಮಂದಿಗೆ ಮಾತ್ರವೇ ಓದಲೂ ಬರಿಯಲೂ ಬರುತ್ತದೆ. ಜನರ ಆರೋಗ್ಯದ ವಿಷಯ ತಕ್ಕ ಏರ್ಪಾಡುಗಳು ಇರುವುದಿಲ್ಲ. ನೀರಾವರಿ ಕೆಲಸಗಳು ಮತ್ತು ಮಾರ್ಗಗಳು ಮಾತ್ರವೇ ಒಳ್ಳೆ ಉತ್ಕೃಷ್ಟ ರೀತಿಯಲ್ಲಿ ಇವೆ.

ಆಫ್ರಿಕದವರನ್ನೂ ಬರ್ಮಾದೇಶದವರನ್ನೂ ಅವರ ಅನುಮತಿ ಇಲ್ಲದೆ ಬ್ರಿಟಿಷ್ ಇಂಡಿಯಕ್ಕೆ ಕೂಡಿಸಿರುತ್ತಾರೆ. ಇಂಡಿಯದಲ್ಲಿರುವ ಕೆಲವು ಆಶ್ರಿತ ರಾಜ್ಯಗಳಲ್ಲಿ ಕೆಲವು ವಿದ್ಯೆಯ ಮಟ್ಟಿಗೆ ಬ್ರಿಟಿಷ್ ಇಂಡಿಯಕ್ಕಿಂತಲೂ ಉತ್ತಮಸ್ಥಿತಿಯಲ್ಲಿದ್ದರೂ ಜನರ ಪ್ರತಿನಿಧಿ ಸಭೆಗಳು ಎಲ್ಲಾ ಆಶ್ರಿತರಾಜ್ಯಗಳಲ್ಲಿ ಇರುವುದಿಲ್ಲ.

ಇಂಡಿಯದವರನ್ನು ಒಸ್ಟ್ರೇಲಿಯಾ, ನ್ಯೂಜಿಲೆಂಡ್, ಈ ದೇಶಗಳಿಗೆ ಪ್ರವೇಶಿಸುವುದಕ್ಕೆ ಬಿಡುವುದಿಲ್ಲ. ಕೆನಡಾ ಯೂನಿಯನ್ ಒಫ್ ಸೌತ ಆಫ್ರಿಕಾ, ಇತರ ಕ್ರೌನ್ ಕೊಲೊನಿಗಳಲ್ಲಿ ಇಂಡಿಯದವರು ಕಪ್ಪು ಜನರೆಂಬ ನೆವನದಿಂದ ಇವರಿಗೆ ಯಾವ ತರದ ಹಕ್ಕು ಸ್ವಾತಂತ್ರ್ಯಗಳು ಇರುವುದಿಲ್ಲ.

ಇಂಡಿಯದಿಂದ ಲೀಗ್ ಒಫ್ ನೇಶನಿಗೆ ಹೋಗುವ ಮೆಂಬರರನ್ನು ಸರಕಾರವೇ ನೇಮಿಸುತ್ತದೆ. ಲೆಜಿಸ್ಲೇಟಿವ್ ಎಸೆಂಬ್ಲಿಯವರಿಗೆ ಈ ಅಧಿಕಾರವು ಇರುವುದಿಲ್ಲ. ವೈಸರಾಯರು ಶಿಫಾರಸು ಮಾಡಿದವರನ್ನು ಸ್ಟೇಟ್ ಸೆಕ್ರೆಟರಿಯವರು ನೇಮಿಸುವರು.

ಇಂಡಿಪೆಂಡೆಂಟ್ ಲೇಬರ ಪಾರ್ಟಿಯವರ ಪೊಲಿಸಿ.

ಈ ಪಾರ್ಟಿಯವರು ಇಂಡಿಯದ ಜನರಿಗೆ ಸ್ವರಾಜ್ಯವನ್ನು ಕೊಡಬೇಕೆಂದು ಅಂಗೀಕರಿಸುತ್ತದೆ. ಇಂಡಿಯದ ಜನಾಂಗವನ್ನು ಬ್ರಿಟಿಷ ಜನಾಂಗಗಳ ಸಮುದಾಯಕ್ಕೆ ಕೂಡಿಸುವುದಾದರೆ ಅವರಿಗೂ ಸರಿಸಮಾನ ಹಕ್ಕು ಸ್ವಾತಂತ್ರ್ಯಗಳನ್ನು ಕೊಡಬೇಕು.

ಇಂಡಿಯಾ ಗವರ್ನಮೆಂಟ ಆಕ್ಟಿನಲ್ಲಿ ೧೯೨೯ನೇ ಇಸವಿಯಲ್ಲಿ ಮಾತ್ರವೇ ಇಂಡಿಯದ ರಾಜ್ಯಭಾರದಲ್ಲಿ ಬದಲಾವಣೆಗಳನ್ನು ಮಾಡಬಹುದು ಎಂದು ಇದೆ. ಆದರೆ ಈ ಬದಲಾವಣೆಗಳನ್ನು ಈಗಲೇ ಮಾಡಬೇಕೆಂದು ಲೇಬರ ಪಾರ್ಟಿಯವರು ಒತ್ತಾಯಪಡಿಸಬೇಕು.

ಬ್ರಿಟಿಷ್ ಗವರ್ನಮೆಂಟಿನವರು ತಮಗಿರುವ ಹೊರಗಿನ ಅಧಿಕಾರವನ್ನು ತೆಗೆದುಬಿಡಲಿಕ್ಕೆ ಸಿದ್ಧವಿರಬೇಕಾಗಿದೆ. ಜನರ ಸ್ವಾತಂತ್ರ್ಯಕ್ಕೆ ವಿರೋಧವಾದ ಎಲ್ಲಾ ಕಾಯಿದೆ ಕಾನೂನುಗಳನ್ನು ತೆಗೆದುಹಾಕಬೇಕು. ರಾಜದ್ರೋಹಿಗಳಿಗೆ ಕೊಟ್ಟ ಶಿಕ್ಷೆಯನ್ನು ಮಾಫು ಬಿಟ್ಟು ಅವರನ್ನು ಸೆರೆಯಿಂದ ಬಿಟ್ಟುಬಿಡಬೇಕು. ಇಂಡಿಯಾ ಸರಕಾರದೊಳಗಿಲ್ಲದ ದೇಶಗಳಲ್ಲಿಟ್ಟ ಇಂಡಿಯದ ಸೈನ್ಯವನ್ನು ತೆಗೆದು ಇಂಡಿಯಕ್ಕೆ ತರಬೇಕು. ಬರ್ಮಾ ದೇಶವನ್ನು ಇಂಡಿಯದಿಂದ ಪ್ರತ್ಯೇಕಿಸಬೇಕು. ಇಂಗ್ಲಿಷರ ಕೈಕೆಳಗಿರುವ ಎಲ್ಲಾ ರಾಜ್ಯಗಳಲ್ಲಿ ಇಂಡಿಯದ ಜನರಿಗಿರುವ ಅನಾನುಕೂಲತೆಗಳನ್ನು ತೆಗೆದುಹಾಕಬೇಕು. ಎಲ್ಲಾ ಡೊಮಿನಿಯನುಗಳಲ್ಲಿಯೂ ಇತರ ದೇಶಗಳಲ್ಲಿಯೂ ಇಂಡಿಯದ ಜನರನ್ನು ಸರಿಸಮಾನತೆಯಿಂದ ನೋಡುವಂತೆ ತಮ್ಮ ಶಕ್ತಿಯನ್ನು ಉಪಯೋಗಿಸಬೇಕು. ಇಂಡಿಯದ ಎಸೆಂಬ್ಲಿಗೆ ಲೀಗ ಒಫ್ ನೇಶನಿಗೂ ಇಂಡಿಯದ ಪ್ರತಿನಿಧಿಗಳನ್ನು ನೇಮಿಸುವ ಅಧಿಕಾರವು ಇಂಡಿಯನ್ ಲೆಜಿಸ್ಲೇಟಿವ್ ಎಸೆಂಬ್ಲಿಗೆ ಅಧಿಕಾರ ಕೊಡಬೇಕು.

ಈಗಲೇ ಇಂಡಿಯಾ ಸರಕಾರದಲ್ಲಿ ಹೊಸ ಬದಲಾವಣೆಗಳನ್ನು ಮಾಡಲಿಕ್ಕೆ ಲೆಜಿಸ್ಲೇಟಿವ್ ಎಸೆಂಬ್ಲಿಯವರು ಕೇಳುವಂತೆ ಆ ತರದ ಬದಲಾವಣೆಗಳನ್ನು ತಯಾರಿಸಲಿಕ್ಕೆ ಒಂದು ಕನ್‌ವೆನ್‌ಶನ್ ಮೊಕದ್ದಮೆ ಮಾಡಬೇಕಾಗಿದೆ. ಈ ಕನ್‌ವೆನ್‌ಶನಿನಲ್ಲಿ ಇಂಡಿಯದ ಕೂಲಿಕಾರರ ಕಡೆಯ ಪ್ರತಿನಿಧಿಗಳೂ, ಬೇಸಾಯಗಾರ ಪ್ರತಿನಿಧಿಗಳೂ ಇಂಡಿಯದಲ್ಲಿರುವ ಎಲ್ಲಾ ಜಾತಿಯವರ ಪ್ರತಿನಿಧಿಗಳೂ ಇರಬೇಕು. ಈ ಕನ್‌ವೆನ್‌ಶನವರು ಕೊಮನ್ ವೆಲ್ತ್ ಒಫ್ ಇಂಡಿಯಾ ಬಿಲ್ಲನ್ನು ತಯಾರಿಸಬೇಕು, ಯಾಕೆಂದರೆ ಈಗ ತಯಾರಿಸಿದ ಕೊಮನ್‌ವೆಲ್ತ ಬಿಲ್ಲಿಗೆ ಇಂಡಿಯದ ಅನೇಕ ಜನರ ಆಕ್ಷೇಪಗಳು ಇವೆ.

ಈಗ ಇಂಡಿಯದಲ್ಲಿರುವ ಎಲ್ಲಾ ಪಾರ್ಟಿಯ ಮೆಂಬರುಗಳೂ ಮಧ್ಯ ತರಗತಿಯವರೂ, ಐಶ್ವರ್ಯವಂತರೂ ಆಗಿರುತ್ತಾರೆ. ಇಂಡಿಯದ ಕೂಲಿಕಾರರ ಪ್ರತಿನಿಧಿಗಳು ಈ ಪಾರ್ಟಿಗಳಲ್ಲಿ ಇರುವುದಿಲ್ಲ. ಆದುದರಿಂದ ಕೂಲಿಕಾರರ ಒಂದು ಪಾರ್ಟಿಯು ಅಗತ್ಯ ಮಾಡಬೇಕಾಗಿದೆ. ಇಂಡಿಯದ ಎಲ್ಲಾ ಸಂಸ್ಥಾನಗಳಲ್ಲಿ ಈಗಲೇ ಪ್ರಾಥಮಿಕ ವಿದ್ಯೆಯನ್ನು ಧರ್ಮಾರ್ಥವಾಗಿಯೂ ಕಡ್ಡಾಯವಾಗಿಯೂ ಕೊಡಬೇಕು. ಇಲ್ಲದಿದ್ದರೆ ತಮ್ಮ ಹಕ್ಕು ಸ್ವಾತಂತ್ರ್ಯಗಳೇನೆಂದು ಜನರಿಗೆ ತಿಳಿಯುವುದಿಲ್ಲ.

ಜನರ ಬಡತನ — ಇಂಡಿಯದ ಜನರ ಬಡತನವು ಭಯಂಕರವಾದದು. ಸರ್ ವಿಲಿಯಮ್ ಹಂಟರರು ಬರದ ಪ್ರಕಾರ ಇಂಡಿಯದ ಜನಸಂಖ್ಯೆಯಲ್ಲಿ ೪೦ ಮಿಲಿಯ ಜನರು ಒಂದು ಊಟದಿಂದ ದಿನಹರಣ ಮಾಡುತ್ತಾರೆ. ಸರ್. ಚಾರ್ಲಸ್. ಎಲಿಯಟರು ಬರಿಯುವ ಪ್ರಕಾರ ಇಂಡಿಯದಲ್ಲಿರುವ ೭೦ ಮಿಲಿಯ ಬೇಸಾಯಗಾರರಲ್ಲಿ ಅರೆವಾಸಿ ಜನರಿಗೆ ಒಂದು ವರುಷದಲ್ಲಿ ಒಂದು ಊಟವನ್ನಾದರೂ ಹೊಟ್ಟೆ ತುಂಬಾ ಉಣ್ಣಲಿಕ್ಕೆ ಅನುಕೂಲವಿಲ್ಲ. ಸರ್ ಗಿಲ್ಬರ್ಟಸ್ಲೇಟರರು ಬರಿಯುವ ಪ್ರಕಾರ ಒಬ್ಬನ ದಿನದ ಆದಾಯವು ೪॥ ಪೆನ್ಸ ಆಗಿದೆ (ಅಂದರೆ ಸುಮಾರು ೪ ಆಣೆ) ಮರಣಸಂಖ್ಯೆಯನ್ನು ವಿಚಾರಿಸಿದರೆ ಸಾವಿರಕ್ಕೆ ೩೦ರ ಪ್ರಕಾರ ಸಾಯುತ್ತಾರೆ ಈ ರೀತಿಯಲ್ಲಿ ಭೂಲೋಕದ ಯಾವ ರಾಜ್ಯದಲ್ಲಿಯೂ ಸಾಯುವುದಿಲ್ಲ. ಇಂಡಿಯದಲ್ಲಿ ಮರಣಹೊಂದುವ ಪ್ರಾಯವನ್ನು ಗುಣಿಸಿದರೆ ೨೩॥ ವರುಷದಲ್ಲಿಯೇ ಸಾಯುತ್ತಾರೆ. ಇಂಗ್ಲೆಂಡಿನಲ್ಲಿ ಸರಾಸರಿ ೫೩॥ ವರುಷಗಳಲ್ಲಿ ಸಾಯುತ್ತಾರೆ. ಮಕ್ಕಳು, ಮುಂಬಾಯಿ ೫೭೨ ಪ್ರಕಾರವೂ, ಕಲ್ಕತ್ತದಲ್ಲಿ ೩೮೭ರ ಪ್ರಕಾರವೂ ಸಾಯುತ್ತಾರೆ. ಬ್ರಿಟನಿನಲ್ಲಿ ೨೦೭ರ ಪ್ರಕಾರ ಮಕ್ಕಳು ಸಾಯುತ್ತಾರೆ.

ಬೇಸಾಯ:— ಇಂಡಿಯದ ಹೆಚ್ಚಿನ ಜನರ ವೃತ್ತಿಯು ಬೇಸಾಯವಾಗಿದೆ, ಜನ ಸಂಖ್ಯೆಯ ಸೇಕಡಾ ೧೦ರ ಪ್ರಕಾರ ಮಾತ್ರವೇ ಜನರು ಪಟ್ಟಣಗಳಲ್ಲಿ ವಾಸಿಸುತ್ತಾರೆ. ಸರಕಾರವೇ ಭೂಮಿಯ ಹಕ್ಕುದಾರರು ಆದರೆ ದೊಡ್ಡ ದೊಡ್ಡ ಭೂಮಾಲಿಕರು ಒಕ್ಕಲುಗಳಿಂದ ಅವರಿಂದ ಕೊಡಲಾರದಷ್ಟು ಗೇಣಿಯನ್ನು ವಸೂಲು ಮಾಡುತ್ತಾರೆ. ಈ ರೀತಿಯಲ್ಲಿ ಬಡತನದಲ್ಲಿ ನರಳುತ್ತಿರುವ ಒಕ್ಕಲುಗಳು ಇಂಡಿಯದಲ್ಲಿ ೪೦ ಮಿಲಿಯ ಇರುತ್ತಾರೆ. ಈ ಬೇಸಾಯಗಾರರೆಲ್ಲರೂ ಹಣ ಬಡ್ಡಿಗೆ ಕೊಡುವವರ ಕೈಗಳಲ್ಲಿ ಸಿಕ್ಕಿಬಿದ್ದಿರುತ್ತಾರೆ.

ಭೂಮಿಯನ್ನು ನ್ಯಾಯವಾದ ರೀತಿಯಲ್ಲಿ ಉಪಯೋಗಿಸುವಂತೆ ಸಾಧಿಸಬೇಕು. ಗೇಣಿ ಒಕ್ಕಲುಗಳಿಗೆ ಹಕ್ಕುದಾದ ಭದ್ರತೆಯನ್ನು ಮಾಡಿಕೊಡಬೇಕು. ಬೇಸಾಯಗಾರರಿಗೂ ಸರಕಾರಕ್ಕೂ ಮಧ್ಯಸ್ಥರಾಗಿರುವ ಭೂಮಾಲಿಕರನ್ನು ತೆಗೆದುಹಾಕಬೇಕು. ಭೂಮಿಯು ಇಂಡಿಯದ ಜನಾಂಗಕ್ಕೆ ವಹಿಸಿಕೊಡಬೇಕು.

ಬೇಸಾಯದ ಮತ್ತು ಕೊ-ಒಪರೇಟಿವ್ ಬೇಂಕುಗಳನ್ನು ಸ್ಥಾಪಿಸಬೇಕು. ಬೇಸಾಯಕ್ಕೆ ಬೇಕಾಗುವ ಶಾಸ್ತ್ರೀಯ ಸಾಮಾಗ್ರಿಗಳನ್ನು ಒದಗಿಸಿ ಕೊಟ್ಟು ಹುಟ್ಟಿದ ಬೆಳೆಗೆ ಒಳ್ಳೇ ಕ್ರಯವು ಸಿಕ್ಕುವಂತೆ ಮಾಡಬೇಕು. ಬೇಸಾಯದ ಕೊಲೆಜುಗಳನ್ನು ಇಟ್ಟು ಬೇಸಾಯಗಾರನಿಗೆ ಒಳ್ಳೇ ರೀತಿಯಲ್ಲಿ ಬೇಸಾಯ ಮಾಡುವುದನ್ನು ಬೋಧಿಸುವುದಕ್ಕಾಗಿ ಲೆಕ್ಚರರನ್ನು ಹಳ್ಳಿಗಳಿಗೆ ಕಳುಹಿಸಬೇಕು. ಒಂದೊಂದು ಗ್ರಾಮಕ್ಕೆ ಗ್ರಾಮದ ಎಲ್ಲಾ ಬೇಸಾಯಗಾರರಿಗೆ ಹಕ್ಕಿರುವ ಹೊಲಗಳನ್ನು ಮಾಡಿ ಗ್ರಾಮದ ಪಂಚಾಯತಿನವರು ಅವರಿಗೆ ಸಹಾಯ ಮಾಡುವಂತೆ ಸಾಧಿಸಬೇಕು.

ಈಗ ಬೇಸಾಯದ ಅಭಿವೃದ್ಧಿಯ ವಿಷಯ ನೇಮಕವಾದ ರೋಯಲ್ ಕಮಿಶನಿನ ತನಿಖಿಯಲ್ಲಿ ಭೂಸಾಗ್ವಳ್ಳಿಯ ಮೂಲ ತತ್ವಗಳನ್ನು ವಿಚಾರಿಸಿ ತನಿಖಿ ನಡಿಸಬೇಕು. ಮುಖ್ಯವಾಗಿ ಇದರಲ್ಲಿ ಒಕ್ಕಲುಗಳಿರುವ ಕಷ್ಟಗಳನ್ನು ನಿವಾರಿಸುವಂತೆ ಮಾಡಬೇಕು.

ಕೈಗಾರಿಕೆ;— ಹಿಂದೂದೇಶದಲ್ಲಿ ಕೈಗಾರಿಕೆಗಳನ್ನು ಮಾಡಿಕೊಂಡಿರುವವರ ಅವಸ್ಥೆಯು ಭಯಂಕರವಾಗಿದೆ. ಮುಂಬಾಯಿ ಸರಕಾರದವರು ಲೇಬರ ಆಫೀಸಿನ ಮುಖಾಂತರ ಮಾಡಿದ ತನಿಖಿಯಲ್ಲಿ ಕೂಲಿಕಾರರಲ್ಲಿ ಸರಾಸರಿ ಒಬ್ಬರ ಆದಾಯವು ವಾರಕ್ಕೆ ೧೭ ಶಿಲಿಂಗ್ ೧ ಪೆನ್ಸ್ (ರೂ. ೧೩) ಒಬ್ಬ ಮನುಷ್ಯನ ಸರಾಸರಿ ಕೂಲಿ ೧೪ ಶಿಲಿಂಗ್ ೧ ಪೆನ್ಸ್. ಒಂದು ಹೆಂಗಸಿನ ಮಜೂರಿ ಅರ್ಧ ದಿವಸಕ್ಕೆ ೪ ಶಿಲಿಂಗ್ ೭ ಪೆನ್ಸ್. ಕೂಲಿಕಾರರಲ್ಲಿ ಸೇಕಡಾ ೯೭ ಮಂದಿ ಒಂದು ಕೋಣೆಯಲ್ಲಿ ವಾಸಿಸುತ್ತಾರೆ.

ಫೆಕ್ಟರಿಗಳ ಮಾಲಿಕರು ಹೆಚ್ಚು ಹಣ ಸಂಪಾದನೆ ಮಾಡುತ್ತಿರುವರು. ಕಳದ ೧೦ ವರ್ಷಗಳಲ್ಲಿ ಪ್ರತಿಯೊಂದು ಕಾರ್ಖಾನೆಯರಿಗೆ ಸೇಕಡಾ ೯೦ರ ಪ್ರಕಾರ ಮುನಾಫೆ ಸಿಕ್ಕಿಯದೆ. ೧೯೨೦ನೇ ಇಸವಿಯಲ್ಲಿ ಕೆಲವು ಮಿಲ್ಲುಗಳಲ್ಲಿ ಸೇಕಡಾ ೧೨೦ರ ಪ್ರಕಾರ ಮುನಾಫೆಯು ಸಿಕ್ಕಿಯದೆ.

ತೋಟಗಳು:— (plantation) ರಬ್ಬರ, ಚಾ, ಕಾಫಿ ತೋಟಗಳ ಕೂಲಿಕಾರರ ಅವಸ್ಥೆಯನ್ನು ಹೇಳಿ ತೀರದು. ಕೆಲವು ತೋಟಗಳಲ್ಲಿ ಅಮಾನುಷ ಕೃತ್ಯಗಳು ನಡಿಯುತ್ತವೆ. ತೋಟಗಳಲ್ಲಿ ಕೂಲಿ ಆಳಿನ ಗಂಡಸಿನ ಸಂಬಳವು ವಾರಕ್ಕೆ ೩ ಶಿಲಿಂಗಿನ ವರೆಗಿವೆ. ಈ ಕೂಲಿಕಾರರು ಬಹಳ ಹತ್ತಿರ ವಾಸವಾಗಿರಬೇಕಾದುದರಿಂದ ವ್ಯಭಿಚಾರವು ವಿಶೇಷವಾಗಿ ನಡಿಯುತ್ತದೆ. ಇವರ ರಕ್ಷಣೆಗೆ ತಕ್ಕ ಕಾನೂನುಗಳು ಇರುವುದಿಲ್ಲ. ಈ ಕೂಲಿಕಾರರಿಗೆ ಬೇರೆ ಬೇರೆ ರೀತಿಯಲ್ಲಿ ಜರುಮಾನೆ ವಿಧಿಸದಂತೆ ಮಾಡಲ್ಲಿಟ್ರಕ್ ಎಕ್ಟ್ ಎಂಬ ಕಾನೂನು ಇಂಡಿಯದಲ್ಲಿ ಜಾರಿಯಲ್ಲಿರುವುದಿಲ್ಲ. ಕೆಲಸವಿಲ್ಲದ ದಿವಸಗಳಲ್ಲಿಯೂ, ಅಸ್ವಸ್ಥದಲ್ಲಿರುವಾಗಲೂ, ಮುದಿಪ್ರಾಯದಲ್ಲಿಯೂ, ಹೆತ್ತಸಮಯದಲ್ಲಿಯೂ ಇವರಿಗೆ ಸಂಬಳವಿಲ್ಲದೆ ಕಷ್ಟಪಡಬೇಕಾಗುತ್ತದೆ. ಹೆಂಗಸರು ಗರ್ಭಿಣಿಯರಾದಾಗ ಇಂತಿಷ್ಟು ತಿಂಗಳಾದ ಮೇಲೆ ಕೆಲಸ ಮಾಡಕೂಡದೆಂಬ ನಿಯಮವಿಲ್ಲ. ಹೆತ್ತ ಮೇಲೆ ಇಂತಿಷ್ಟು ತಿಂಗಳಾಗುವ ಮುಂಚೆ ಕೆಲಸಮಾಡಬಾರದೆಂಬುದಕ್ಕೂ ನಿಯಮವಿಲ್ಲ.

ವಂತಿಗೆಯನ್ನು ಕೊಡದಷ್ಟು ಬಡವರಾಗಿರುವುದರಿಂದಲೂ ವಿದ್ಯೆಯು ಇಲ್ಲದ್ದರಿಂದಲೂ, ಕೂಲಿಕಾರರು ನಿಂತಲ್ಲಿ ನಿಲ್ಲದಿರುವುದರಿಂದಲೂ ಕೂಲಿಕಾರರ ಸಂಘಗಳನ್ನು ಏರ್ಪಡಿಸಲಿಕ್ಕೆ ಸಾಧ್ಯವೇ ಇಲ್ಲ. ಮದರಾಸು, ಮುಂಬಾಯಿ ಮತ್ತು ಇತರ ಮಧ್ಯಸ್ಥಳಗಳಲ್ಲಿ ಈ ಕಷ್ಟಗಳನ್ನು ತಪ್ಪಿಸುವುದಕ್ಕೆ ಪ್ರಯತ್ನಗಳು ನಡಿಯುತ್ತವೆ. ಎಲ್ಲಾ ಕಡೆಗಳಲ್ಲಿಯೂ ಟ್ರೆಡ್ ಯೂನಿಯನುಗಳಲ್ಲಿ ೨॥ ಲಕ್ಷ ಮೆಂಬರರಿರುತ್ತಾರೆ. ಆದರೆ ಕಾರ್ಖಾನೆಗಳ ಮತ್ತು ಮ್ಯಾನಿಂಗ ಆಕ್ಟಿನ ಒಳಗೆ ಬರುವ ಕೂಲಿಕಾರರ ಸಂಖ್ಯೆಯು ೨ ಮಿಲಿಯ ಇವೆ.

ಮಾಡತಕ್ಕದ್ದೇನು?:— ಮೊದಲು ಕೆಲಸ ಮಾಡುವ ಗಂಟೆಗಳು ಇಂತಿಷ್ಟೆ ಎಂದು ನಿಶ್ಚಯಿಸಬೇಕು. ಕೂಲಿ, ಹೆರಿಗೆ ಖರ್ಚು, ಹೆಂಗಸರ ಕೆಲಸ ಇವುಗಳ ಸ್ಥಿತಿಯನ್ನು ವಿಚಾರಿಸಬೇಕು. ಫೆಕ್ಟರಿ ಇನ್ಸ್‌ಪೆಕ್ಟರ್‌ರ ಸಂಖ್ಯೆಯನ್ನು ಹೆಚ್ಚಿಸಬೇಕು; ಮತ್ತು ಅವರ ಸ್ಥಿತಿಯನ್ನು ವೃದ್ಧಿಪಡಿಸಬೇಕು. ಇದಕ್ಕಾಗಿ ಕಾನೂನು ಮಾಡಬೇಕು, ಮತ್ತು ಒಳ್ಳೇ ಮನೆಗಳನ್ನು ಒದಗಿಸಬೇಕು.

ಬ್ರಿಟಿಷ್ ಲೇಬರ್ ಮೂವ್‌ಮೆಂಟಿನ ಚಾಲಕರು ಇಂಡಿಯದ ಕೂಲಿ ... ಗೆ ಸಹಾಯ ಮಾಡಬೇಕು. ಇವುಗಳನ್ನೆಲ್ಲಾ ಕಲಿಯಲಿಕ್ಕೆ ಇಂಡಿಯದಲ್ಲಿ ಒಂದು ಲೇಬರ್ ಕೊಲೇಜ ಇದ್ದಬೇಕು.

ಗವರ್ನರ ಜನರಲರಾದ ಲೋರ್ಡ ರಿಡಿಂಗರ ಕಾಲದಲ್ಲಿ ಏರಿದ ಸುಂಕಗಳ ಪಟ್ಟಿ.

೧೯೨೧-೨೨: (೧) ಆಮದಾಗುವ ವಸ್ತುಗಳ ಮೇಲೆ ಸುಂಕ ಈ ರೀತಿಯಲ್ಲಿ ಏರಿಸಲಾಯಿತು:— ಸರಾಸರಿ ಸೇಕಡ ೭½ಯಿಂದ ೧೧ಕ್ಕೆ ಏರಿಸಲಾಯಿತು. (ಬೆಂಕಿಪೆಟ್ಟಿಗೆ ಮತ್ತು ಆಟದ ಸಾಮಾನು ಹೊರತು) ಒಂದು ಗ್ರೋಸ್ ಬೆಂಕಿಪೆಟ್ಟಿಗೆಗಳ ಮೇಲೆ ಸೇಕಡಾ ೭½ ಸುಂಕವನ್ನು ೧೪೪ ಪೆಟ್ಟಿಗೆಗಳಿಗೆ ೧೨ ಆಣೆ ಏರಿಸಲಾಯಿತು. ಸಕ್ಕರೆ ಮೇಲಿನ ಸುಂಕ ಸೇಕಡ ೧೫ಕ್ಕೆ ಏರಿತು. ಆಟದ ವಸ್ತುಗಳ ಮೇಲೆ ಸೇಕಡಾ ೨೦ಕ್ಕೆ ಏರಿತು. ಏಲ್, ಬೀರ್, ಮುಂತಾದವುಗಳಿಗೆ ಗೆಲನಿಗೆ ೬॥ ಆಣೆ ಸುಂಕವಾಯಿತು. ಸ್ಪಿರಿಟ್ ಮತ್ತು ಲಿಕ್ಕರಿಗೆ ಗೆಲನಿಗೆ ೧೮॥ ರೂಪಾಯಿ ಆಯಿತು. ಥಳಥಳಿಸುವ ವ್ಯಾನಿಗೆ ಗೆಲನಿಗೆ ೯ ರೂಪಾಯಿ ಸುಂಕ. ಇತರ ವ್ಯಾನಿಗೆ ಗೆಲನಿಗೆ ರೂ. ೪॥; ಹೊಗೆಸೊಪ್ಪಿನ ಮೇಲೆ ಸೇಕಡ ೫೦ರಂತೆ ಸುಂಕ ಏರಿತು.

(೨) ಆಹಾರ ಜಿನಸು, ದ್ವಿದಳ ಧಾನ್ಯ, ಕಟ್ಟಿಗೆ ಮತ್ತು ಬೈ ಹುಲ್ಲು ಇವುಗಳನ್ನು ಬಿಟ್ಟು ಮಿಕ್ಕ ಎಲ್ಲಾ ವಸ್ತುಗಳನ್ನು ರೈಲುವೆಯಲ್ಲಿ ಕೊಂಡುಹೋಗುವಾಗ ಸುಂಕವು ರೂಪಾಯಿಗೆ ೨॥ ಆಣೆ ಪ್ರಕಾರ ಏರಿಸಲಾಯಿತು. (ಆದರೆ ೧೯೨೨-೨೩ರಲ್ಲಿ ರೈಲುಟಿಕೇಟಿನ ದರವನ್ನು ಏರಿಸುವಾಗ ಇದನ್ನು ತೆಗೆದುಹಾಕಿದರು.)

(೩) ಟಪ್ಪಾಲು ದರಗಳನ್ನು ಈ ರೀತಿಯಲ್ಲಿ ಏರಿಸಿದರು. ಪುಸ್ತಕ, ಪೆಟರ್ನ ಮತ್ತು ಸೆಂಪಲ್ ಪೆಕೇಟುಗಳ ಮೇಲೆ ೧೦ ತೊಲೆಗೆ ॥ ಆಣೆಯಂತೆ ಇದ್ದದನ್ನು ಪ್ರತಿ ೫ ತೊಲೆಗೆ ॥ ಆಣೆಯಂತೆ ಮಾಡಲಾಯಿತು. ಮನಿಯಾರ್ಡರ ಕಮಿಶನಿನ ದರವನ್ನು ೧೯೦೨ನೇ ಇಸವಿ ಎಪ್ರಿಲ್ ತಿಂಗಳಲ್ಲಿ ಇದ್ದಂತೆ ಏರಿಸಲಾಯಿತು. ನ್ಯೂಸ್‌ಪೇಪರುಗಳ ಮೇಲೆ ೮ ತೊಲೆ ಭಾರಕ್ಕೆ ಇದ್ದ । ಆಣೆಯನ್ನು ೪೦ ತೊಲೆ ಬಾರಕ್ಕೆ ಇದ್ದ ಅರ್ಧ ಆಣೆಯನ್ನು ೮ಕ್ಕೆ ॥ ಆಣೆಯಂತೆಯೂ, ೨೦ಕ್ಕೆ ॥ ಆಣೆಯಂತೆಯೂ ಮಾಡಲಾಯಿತು. ಕಾಗದಗಳ ಪೋಸ್ಟೇಜು ॥ ತೊಲೆಗೆ ॥ ಆಣೆಯೂ, ೧ ತೊಲೆಗೆ ೯ ಪೈಯೂ ೨॥ ತೊಲೆಗೆ ೧ ಆಣೆಯೂ ಪ್ರತಿ ಹೆಚ್ಚಿನ ೨॥ ತೊಲೆಗೆ ೧ ಆಣೆಯಂತೆಯೂ ಮಾಡಲಾಯಿತು.

(೪) ಸುಪರ್‌ಟೇಕ್ಸನ್ನು ರೂಪಾಯಿಗೆ ೪ ಆಣೆಯಂತೆಯೂ ಇನ್‌ಕಮ್ ಟೆಕ್ಸ್ ರೂಪಾಯಿಗೆ ೧೬ ಪೈಯಂತೆಯೂ ಮಾಡಲಾಯಿತು.

೧೯೨೨-೨೩: (೫) ರೈಲುವೇ ಟಿಕೇಟುಗಳನ್ನು ಸರಾಸರಿ ಸೇಕಡ ೨೫ರಂತೆ ಏರಿಸಲಾಯಿತು.

(೬) ಕಾಲಾಣೆ ಕಾರ್ಡಿಗೆ ಅರ್ಧ ಆಣೆ ಆಯಿತು. ಅರ್ಧಾಣೆ ಮತ್ತು ೯ ಪೈ ಟಪ್ಪಾಲು ಚಾರ್ಜನ್ನು ತೆಗೆದು ಹಾಕಿ ಸರಾಸರಿ ೨॥ ತೊಲೆಗೆ ಒಂದಾಣೆ ಮಾಡಿದರು ಪ್ರತಿ ಒಂದು ಹೆಚ್ಚಿನ ೨॥ ತೊಲೆಗೆ ಒಂದಾಣೆಯಾಯಿತು.

(೭) ಸುಂಕವನ್ನು ಸರಾಸರಿಯಾಗಿ ಸೇಕಡ ೧೧ರಿಂದ ೧೫ಕ್ಕೆ ಏರಿಸಿದರು. ಪರದೇಶದಿಂದ ಬರುವ ಕಬ್ಬಿಣ, ಸ್ಟೀಲಿ ಮತ್ತು ರೈಲುವೆ ಸಾಮಗ್ರಿಗಳಿಗೆ ಸೇಕಡ ೨½ಯಿಂದ ೧೦ಕ್ಕೆ ಏರಿಸಲಾಯಿತು. ವಿದೇಶಿ ಸಕ್ಕರೆಗೆ ಸೇಕಡ ೧೫ರಿಂದ ೨೫ಕ್ಕೆ ಏರಿಸಲಾಯಿತು. ಆಟದ ವಸ್ತುಗಳ ಮೇಲೆ ಸೇಕಡ ೨೦ರಿಂದ ೩೦ಕ್ಕೆ ಏರಿಸಲಾಯಿತು. ಲಿಕ್ಕರುಗಳ ಮೇಲೆ ಸೇಕಡಾ ೨೦ರಂತೆ ಹೆಚ್ಚಿಗೆ ಏರಿಸಲಾಯಿತು. ಬೆಂಕಿಪೆಟ್ಟಿಗೆಗಳ ಮೇಲಿದ್ದ ಸುಂಕವನ್ನು ದುಬಾರ ಮಾಡಿದರು. ಅಂದರೆ ಒಂದು ಗ್ರೋಸ ಪೆಟ್ಟಿಗೆಗಳಿಗೆ ೧॥ ರೂ. ಸುಂಕವಾಯಿತು. ವಿದೇಶಿ ಮಾಲಿನ ಮೇಲೆ ಸೇಕಡ ೫ರಂತೆ ಏರಿಸಿದರು. ಇಂಡಿಯದಲ್ಲಿ ಆಗುವ ಚಿಮಿಣಿ ಎಣ್ಣೆಯ ಮೇಲೆ ಒಂದು ಗೆಲನಿಗೆ ಒಂದಾಣೆಯಂತೆ ಏರಿಸಿದರು. ಹೊರಗಿನಿಂದ ಬರುವ ಚಿಮಿಣಿ ಎಣ್ಣೆಯ ಮೇಲೆ ಇದೇ ರೀತಿ ಏರಿಸಿದರು.

(೮) ಸುಪರ್ ಟೆಕ್ಸ ತಿದ್ದುಪಡಿ ಮಾಡಿ ರೂಪಾಯಿಗೆ ಸರಾಸರಿ ೬ ಆಣೆಯಂತೆಯೂ ಇನ್‌ಕಮ್‌ಟೆಕ್ಸನ್ನು ೧೮ ಪೈಯಂತೆಯೂ ಮಾಡಿದರು.

೧೯೨೩-೨೪: (೯) ಉಪ್ಪಿನ ತೆರಿಗೆಯನ್ನು ೧-೪-೦ಯಿಂದ ರೂ. ೨॥ಗೆ ಏರಿಸಿದರು. (೧೯೨೪-೨೫ರಲ್ಲಿ ಇದನ್ನು ಇಳಿಸಿ ೧। ರೂಪಾಯಿಗೆ ಇಳಿಸಿದರು.)

(೧೦) ಸೆಕರಿನ್ ಸುಂಕ ಏರಿಸಿದ್ದಲ್ಲದೆ ಚಾ ಪೆಟ್ಟಿಗೆಗಳ ಮೇಲಿದ್ದ ವಿನಾಯಿತಿ ಸುಂಕವನ್ನು ತೆಗೆದುಹಾಕಿದರು.

೧೯೨೪-೨೫: ಮುಳುಗಿಸದೆ ಇರುವ ಬೆಂಕಿಕಡ್ಡಿಗಳ ಮೇಲೆ ರಾತಲಿಗೆ ೪॥ ಆಣೆಯನ್ನು ಪೆಟ್ಟಿಗೆ ತಗಡುಗಳ ಮೇಲೆ ರಾತಲಿಗೆ ೬ ಆಣೆಯಂತೆಯೂ ಸುಂಕವಿಧಿಸಿದರು.

(೧೧) ಕಬ್ಬಿಣ ಮತ್ತು ಕೆಲವು ಸ್ಟೀಲ್ ಸಾಮಾನುಗಳ ಮೇಲೆ ರಕ್ಷಣೆ ಸುಂಕ ವಿಧಿಸಿದರು.

ಒಟ್ಟಾರೆ ಲೋರ್ಡ ರಿಡಿಂಗರ ಸಾಧಾರಣ ಆರು ವರುಷಗಳ ರಾಜ್ಯಭಾರದಲ್ಲಿ ೫೦ ಕೋಟಿ ರೂಪಾಯಿ ಸುಂಕವನ್ನು ಹೆಚ್ಚಿಸಿದರು.

ಹಿಂದೂ ದೇಶದಲ್ಲಿದ್ದ ಪುರಾತನಕಾಲದ ವೈದ್ಯಶಾಸ್ತ್ರ.

ಡಾ॥ ಲಕ್ಷ್ಮೀಪತಿಯವರು ಮಧುರೆಯಲ್ಲಿ ಕೊಟ್ಟ ಭಾಷಣ.

ಡಾ॥ ಲಕ್ಷ್ಮೀಪತಿಯವರು ಮಧುರೆಯಲ್ಲಿ "ಇಂಡಿಯದ ಔಷಧಗಳು" ಎಂಬುದರ ವಿಷಯ ಒಂದು ಭಾಷಣ ಕೊಟ್ಟರು. ಇತ್ತಲಾಗೆ 'ಅರ್ಥಶಾಸ್ತ್ರ' ಎಂಬ ಪುಸ್ತಕವು ಛಾಪೆ ಆದಂದಿನಿಂದ ಪ್ರಾಚೀನ ಕಾಲದ ಹಿಂದೂ ದೇಶದ ಅರ್ಥಶಾಸ್ತ್ರದ ವಿಷಯ ತಿಳಿಸುವದಲ್ಲದೆ, ಎಲ್ಲಾ ಇಲಾಖೆಗಳ ಆಡಳಿತವು ಯಾವ ರೀತಿಯಲ್ಲಿ ನಡಿಯುತ್ತಿತ್ತೆಂದು ತಿಳಿಸುತ್ತದೆ. ಇದರಲ್ಲಿ ಇಂಡಿಯದ ಔಷಧಗಳ ವಿಷಯವೂ, ಜನರು ಆರೋಗ್ಯದಿಂದಿರುವಂತೆ ಮಾಡಿದ ಏರ್ಪಾಡುಗಳೂ ವಿವರವಾಗಿ ಕೊಡಲ್ಪಟ್ಟಿವೆ. ಈ ಪುಸ್ತಕದಲ್ಲಿ ಒಂದು ಬಹಳ ಪುರಾತನಕಾಲದ ವೈದ್ಯಪುಸ್ತಕದ ವಿಷಯವನ್ನು ತಿಳಿಸುತ್ತದೆ. ಪ್ರಜೆಗಳು ಅನಾರೋಗ್ಯ ರೀತಿಯಲ್ಲಿ ನಡೆದರೆ ಅವರಿಗೆ ಕೊಡುವ ಕಠಿಣ ತರದ ಶಿಕ್ಷೆಗಳ ವಿಷಯ ಇದರಲ್ಲಿ ಕೊಟ್ಟಿದೆ. ವೈದ್ಯರಿಗೆ ಹೆಚ್ಚು ಮರ್ಯಾದೆಯು ಸಿಕ್ಕುತ್ತಿತ್ತು. ಆರೋಗ್ಯದ ವಿಷಯ ಜಾಗ್ರತೆತೆಗೆದುಕೊಳ್ಳಲಿಕ್ಕೆ ಆರೋಗ್ಯ ಸಮಾಜಗಳೂ ಇದ್ದವು. ದೇಶದ ಪ್ರಜೆಗಳು ಆರೋಗ್ಯ ರೀತಿಯಿಂದ ಇರುವಂತೆ ವೈದ್ಯರು ಅರಸರಿಗೆ ಸಹಾಯ ಮಾಡುತ್ತಿದ್ದರು. ಯುದ್ಧರಂಗದಲ್ಲಿ ಎಲ್ಲಾ ಶಸ್ತ್ರಗಳಿಂದಲೂ ಒದಗಿಸಲ್ಪಟ್ಟ ರಾಜವೈದ್ಯರು ಸೈನ್ಯದೊಂದಿಗೆ ಇರುತ್ತಿದ್ದರು. ಒಟ್ಟಾರೆ ಪುರಾತನ ಕಾಲದಲ್ಲಿ ಬೇರೆ ಎಲ್ಲಾ ಜನಾಂಗಗಳಿಗಿಂತಲೂ ಸ್ವಚ್ಛ ರೀತಿಯಲ್ಲಿ ಇತ್ತು.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಂಕುಶವು ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ, ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ, ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀಮಿತ್ರಣಾ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪನಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೪ ಸೀಸೆಗೆ ೪—೧೦—೦. ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಫ್ ಕೊಸ್ಟ್ಸ್, ಮೆಮೊರಂಡಮ್ ಒಫ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದುನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಕುಂಡಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ಟೇಟ್‌ವಿಸಾಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | ವಜ್ರಾಂಗ-ಬಿಂದು | ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವವಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುನೀತಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ, ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಮೊದಲಾದ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬಿಳಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦, ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚ ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚ ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ: ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಚಿಕ್ಕೋಡಿ (ಜಿಲ್ಲಾ ಬೆಳಗಾಂವ.)

The Canara Pubic Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇವರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು, ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,

The Canara Public Conveyance Co., Ltd, Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,

ನಂ. 265 ಮದ್ರಾಸು.

ಸ್ಪಿರಿಟ್ ಸ್ಟೊವ್ ಎಂಬ ಅಡಿಗೆಮಾಡುವ ಒಲೆ

ಇವುಗಳನ್ನು ಬ್ರಿಟಿಷ್‌ನವರು ಹಸನಾದ ಹಿತ್ತಾಳೆಯಿಂದ ಮಾಡಿರುವರು. ಇದರಲ್ಲಿ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಬಹುದು. ಬಿರಣಿ, ಸೌದೆ, ಮುಂತಾದವುಗಳು ಹಾಕಿ ಒಲೆಯನ್ನು ಉರಿಸುವವರಿಂದ ಹೊಗೆಹುಂಬಿ ಕಣ್ಣುಗಳು ಕೆಟ್ಟುಹೋಗುವವು ಆದರೆ ಇದರಿಂದ ಯಾವ ಕಷ್ಟವೂ ಇಲ್ಲ. ಸ್ವಲ್ಪ ಸೀಮೆ ಎಣ್ಣೆಯನ್ನು ಹಾಕಿ ಉಪಯೋಗಿಸಿದರೆ ಸಾಲು. ಇದರಲ್ಲಿ ಎಷ್ಟು ಮಂದಿಗಾದರೂ ಅಡಿಗೆಯನ್ನು ಬಹು ಬೇಗನೆ ಮಾಡಬಹುದು.

ಕ್ರಯ 1ಕ್ಕೆ 3—0—0.

ಇನಾಂ! ಜರ್ಮನ್ ಟೇಬಲ್ ಟೈಂಪೀಸ್ ಇನಾಂ!

ಈ ನಕ್ಷೆಯಲ್ಲಿ ಕಂಡ ಫೌಂಟನ್‌ಪೆನ್ನು ಲಂಡನ್ ಪಟ್ಟಣದಲ್ಲಿ ತಯಾರಿಸಿದ್ದು. ಇದಕ್ಕೆ 14 ಕ್ಯಾರೆಕ್ಟ್ ಭಂಗಾರದ ಮುಳ್ಳು ಹಾಕಿರುವುದು. ಇದರಲ್ಲಿ ಬರೆಯುವವರಿಂದ ಅಕ್ಷರಗಳು ಬಹು ಲಕ್ಷಣವಾಗಿ ಕಾಣುವವು. ಈ ವಾರದೊಳಗಾಗಿ ತರಿಸಿಕೊಳ್ಳುವವರಿಗೆ ಮೇಲೆ ತಿಳಿಸಿರುವ ಟೈಂಪೀಸನ್ನು ಇನಾಮಾಗಿ ಕೊಡುವೆವು.

ಕ್ರಯ ಪೆನ್ 1ಕ್ಕೆ ಟೈಂಪೀಸ್ ಸಹಿತ 3—8—0.

ದಿ "ಪಿಗ್ಮಿಫೋನ್"

—: ಎಂಬ ಹಾಡುಗಾರಿಕೆಯ ಯಂತ್ರ. :—

ಈ ಹಾಡುಗಾರಿಕೆಯ ಯಂತ್ರಗಳು ವಿಲಾಯತಿಯಲ್ಲಿ ತಯಾರಾಗಿ ಬಂದವು. ಬಹು ಘಟ್ಟಿ ಯಂತ್ರಗಳಿಂದ ತಯಾರಿಸಿದ್ದು. ಪದ ಹೇಳುವ (Horn) ಕೊಳವೆಯೂ, ಅತ್ಯುತ್ತಮವಾದ (Sound-box) ಸೌಂಡ್‌ಬೋಕ್ಸ್ ಸಹ ಇರುವುದು. ಇವನ್ನು ಪಾಠಶಾಲೆಗಳಲ್ಲಿಯೂ, ನಾಟಕ ಶಾಲೆಗಳಲ್ಲಿಯೂ, ಮತ್ತು ಲಗ್ನದ ಮನೆ ಮುಂತಾದ ಸಂತೋಷಕಾಲಗಳಲ್ಲಿ ಉಪಯೋಗಿಸಲು ಬಹು ಲಾಯಖಾಗಿವೆ. ದೊಡ್ಡ ದೊಡ್ಡ ಯಂತ್ರಗಳಿಗೂ ಇವಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲ. ಒಂದು ಪದಹೇಳುವ ರಿಕಾರ್ಡ್, ಒಂದು ಸೂಜಿಯ ಪೆಟ್ಟಿಗೆ ಸಹಿತ

ಕ್ರಯ 1ಕ್ಕೆ 10—12—0. ಟಪ್ಪಾಲು ಖರ್ಚು 1—0—0.

ವಿಳಾಸ:—ವೈ. ಎಮ್. ಸ್ವಾಮಿ ಅಂಡ್ ಕೊ, ಪಾರ್ಕ್ ಟೌನ್, ಮದ್ರಾಸು.

Y. M. SWAMY & Co.,
No. 12, Nainiappa Naicken St.,
P. Town, MADRAS.

Edited, Printed & Published by V. S. Kamath at the M. T. A. SHARADA PRESS, MANGALORE.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,

ಕಾ. ವೇ. ಸುಬ್ಬರಾವ್, ಯಂ. ಜೆ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಾದರೂಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಕೂಡಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 3—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,

28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು

— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತದೆ. ನಾವು ಹಾಗೆ ಕೊಡದ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತದೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತಾರೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ. | ಡಿ. ಮುನ್ನಾಲಾಲ್, ಡಿಲ್ಲಿ ಸೇಟಿನ್ ಹಾಲ್ಸ್‌ರ್, ಸಾಲಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ ೨—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—18—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ತುರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೯ನೇ ಶುಕ್ರವಾರ ಎಪ್ರಿಲ್ ೧೯೨೬. ಸಂಚಿಕೆ ೧೫

Th Canara Banking Corporation,
UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೂರ್ಪೂರೇಶನ್, ಉಡುಪಿ, ಲಿಮಿಟಡ್.

Head office: UDIPI. ಹೆಡ್ ಆಫೀಸು: ಉಡುಪಿ. — Branch: COONDAPOOR. ಬ್ರಾಂಚ್: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ಹಾಕಲ್ಪಟ್ಟ ಅರ್ಪಿತವ ಮತ್ತು ಎತ್ತಿದ ಮೂಲಧನ	ರೂ. 2,20,000—0—0.
ಪೌಲ್ಯತತ್ತ ಮೂಲಧನ	ರೂ. 1,80,690—9—11.
ಆಪತ್ತಿನ ವಗೈರೆ ಎತ್ತಗಳು	ರೂ. 75,875—0—0.
ಸಾ. ಸೇ. ೬೦ ದಂತ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತಾ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರ್ಕುವ ಸದರಿ ಬ್ಯಾಂಕಿನ ವಿವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ಪೌಲ್ಯತತ್ತ ಮೂಲಧನ 1,80,690-9-11, ಆಪತ್ತಿನ ವ ಇತರ ಎತ್ತಗಳು 75,875-0-0, ಠೇವಣಾತಿಗಳು 5,30,003-14-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕಾಳಾಯಿಂಗಳಿಗೆ 4700-0-0, ವಿವೇಜಿನ ಮೇಲಣ ಈ ವರ್ಗದ ಬಡ್ಡಿ ಕೂಡ ಇತರ ಬಾಬುಗಳು 40,274-3-11, ಜುಮ್ಲಾ ರೂ. 8,31,543-12-1.

ಆಸ್ತಿ ವ ಸೊತ್ತುಗಳು.

ಕೈ ಶಿಲ್ಕು ಬಟ್ವಾಡೆ ಕಟ್ಟಡದ ಫ್ರೈಚರುಗಳು ವಗೈರೆ 3943-8-0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,05,851-13-8, ಸಾ. ಸೇ. ೬೦ಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತಾ ಪತ್ರಗಳ ಮೇಲೆ 20,800-0-0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4700-0-0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ) 24,795-0-0, ಕೈಯಲ್ಲಿರುವ ಮತ್ತು ಬ್ಯಾಂಕರು ಕೂಡ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 10,452-10-11, ಜುಮ್ಲಾ ರೂಪಾಯಿ 8,31,543-12-1.

ನಿರಖು ಠೇವಣಾತಿಗಳನ್ನು ಕಾಲಕ್ಲುಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕಾಲಾಂತ ಅವಧಿ ಠೇವಣಾತಿಗಳನ್ನು ಸಾ. ಸೇ. ೮½ರ ದರದ ಬಡ್ಡಿ ಮೇಲೂ, ಮುಸುಮ್ ಠೇವಣಾತಿಗಳನ್ನು ಕರಂಟು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವುಳ್ಳ ಶರ್ತುಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸ್ವಾಪ್ಪರಿಂ ಹುಂಡಿಗಳನ್ನೂ ವಸೂಲು ಮಾಡುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವಿವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

N. Anand Rao,
Secretary.

ಮೂರು ದಿವಸಗಳಲ್ಲಿ, ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಾಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಕ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಟ್ರೇಡ್ ಮಾರ್ಕ] ಅಗಸ್ತ್ಯ [ನೋಡಿ ತಕೊಳ್ಳಿರಿ

ಮನ್ಮಥ ಚಿಂತಾಮಣಿ ಲೇಹ.

(ರಿಜಿಸ್ಟರ್ ಆದದ್ದು)

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ದೇಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ.

1 ಸೇರು ಇಪ್ಪತ್ತೈಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ 1ಕ್ಕೆ 3—0—0. ½ ಸೇರು ಡಬ್ಬಿ 1ಕ್ಕೆ 1-9-0.

ವಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿಗೆ ಬರೆಯಿರಿ.

ವಿಳಾಸ:— ದೇವಣ್ಣ ನಾರಾಯಣ ಶೇಟ್, [illegible] ಮಂಗಳೂರು, (ದ. ಕ.)

ಅಪೂರ್ವ ಸಂದರ್ಭ.

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುವಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

ವಿಲ್ಸನ್ ವಾಚ್ ಕೊ.,

ಬೆಲಾರ್ಡ್ ಎಸ್ಟೇಟ್, ಮುಂಬಯಿ

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. — 109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ

— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುವಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

ಲಿವರ್ ಮೂವ್‌ಮೆಂಟ್ ವಾಚ್.

15 ಮಣಿಗಳಿದ್ದು ರೋಲ್ಡ್‌ಗೋಲ್ಡ್ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ್ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ್ ಗೋಲ್ಡ್ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟ್‌ವಾಚ್ ಕ್ರಯ ರೂ. 13—8—0.

ಎಲಾರ್ಮ್ ಜರ್ಮನ್ ಟೈಮ್‌ಪೀಸ್ ಕ್ರಯ ರೂ. 5-0-0

ಡಬ್ಬಲ್ ಎ. ,, ,, ,, 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0

ಟಿಕ್—ಟಿಕ್ ವಾಚ್ 1ರ ಕ್ರಯ ,, 2—12—0

ಕೆಂಬ್ರ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳೆ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫ್ಲೋಬೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,

P. T. MADRAS.

ಕನ್ನಡಿಗರೆ! **ವಸಂತ.** ಕಣ್ತೆರೆಯಿರಿ

ಈಗಾಗಲೇ ಎರಡನೇ ಸಂಪುಟವು ಆರಂಭಿಸಲಿದೆ.

ಇತಿಹಾಸನಿಧಿ ಎಂದರೆ . . . . . . ವಸಂತ

ಸಮಾಜಸುಧಾರಕನೆಂದರೆ . . . . . . ವಸಂತ

ಕೈಗಾರಿಕೆಯ ಸಾಮ್ರಾಜ್ಯವೆಂದರೆ . . . . ವಸಂತ

ಕರ್ಣಾಟಕ ಭಾಷಾಸೇವಕನೆಂದರೆ . . . . ವಸಂತ

ದೇಶವಿದೇಶ ಬಂಧುವೆಂದರೆ . . . . . . ವಸಂತ

ಕಾದಂಬರಿಗಳ ಭಂಡಾರವೆಂದರೆ . . . . . ವಸಂತ

ಚಿತ್ತಾಕರ್ಷ ಚಿತ್ರಶಾಲೆಯೆಂದರೆ . . . . . ವಸಂತ

ದೇಶಭಕ್ತನೆಂದರೆ . . . . ವಸಂತ

ಇಂತಹ ವಸಂತನು ಯಾರಿಗೆ ಬೇಕು,

ಯಾರಿಗೆ ಬೇಡ?

48 (ಕ್ರ್ಯಾನ್ ¼ ಪುಟ ಸ್ಯಾಜಿನ) ಪುಟಗಳನ್ನು ಮಿಕ್ಕಿದ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಅಂಚೆ ಸೇರಿ ರೂ. 3—4—0 ಮಾತ್ರ.

ವ್ಯವಸ್ಥಾಪಕ,

ವಸಂತ ಕಾರ್ಯಾಲಯ,

ಕುಂದಾಪುರ, ದಕ್ಷಿಣ ಕನ್ನಡ

11 ಮಣಿಗಳಿದ್ದು ಬ್ರಿಜ್ ಮ್ಯೂವ್‌ಮೆಂಟ್.

22 ಕೆರೆಟ್ ರೋಲ್ಡ್‌ಗೋಲ್ಡ್ ರಿಸ್ಟ್‌ವಾಚ್.

ಈ ವಾಚ್ ಎಂಟಾಕೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡ್‌ಗೋಲ್ಡ್ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.

14 ,, ,, ,, 26—0—0.

14 ,, 15 ಮಣಿ ,, 36—0—0

9 ,, ,, ,, 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,

134 NAINEAPPA NAICKEN ST.

P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,

Car-Street, MANGALORE.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಕ. ರೂ. ೧.

ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.

ಬಾಟ್ಲಿವಾಲರ ಕೊಪ್ ಆಪ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.

ಬಾಟ್ಲಿವಾಲರ ಜ್ವರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪

ಬಾಟ್ಲಿವಾಲರ ಕ್ವಿನೀನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦

ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"

LIBERAL DISCOUNT TO TRADE

ಕಾರಿನಪತ್ರ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell Road, Bombay, No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತಾರೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0

ಇತರರಿಗೆ, ವರ್ತಕರಿಗೆ, ಪೋಸ್ಟೇಜು ಸೇರಿ ,, 2—8—0.

,, ಸ್ಕೂಲಿನವರಿಗೆ ... ,, 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,

ಬಿ. ಹನುಮಂತಯ್ಯಗೌಡ,

ಅರ್ಥಸಾಧಕ ಪತ್ರಿಕೆ,

ಅರಳೇಪೇಟೆ, ಬೆಂಗಳೂರು, ಸಿಟಿ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ [illegible] ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2½ ಮಳ ಅಗಲ ರೂ. 6ರಿಂದ 12 ವರೆಗೆ, 10 ಮಳ ಉದ್ದ 2½ ಮಳ ಅಗಲ ರೂ. [illegible] ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಸಿಲ್ಕರ್ ರೇಷ್ಮೆ ಮಡಿಗಳು, ಪಾಯಿಜಾಮಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಸಾಲಿಗ್ರಾಮ, ತಾಳ, ಸನ್ನೀರ್ ದಾನಿ, ಹಿತ್ತಾಳೆಯ ಅಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುತ್ತವೆ. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯಂ. ನಾರಾಯಣಾಚಾರ್ಯ

ಮತ್ತು ಕಂಪೆನಿ, ಚೌಕಂಬ, ಕಾಶೀ ಕ್ಷೇತ್ರ.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂ|ರದ ಅಧಿಕ ಚೈತ್ರ ಬ| ೧೩ ಶನಿವಾರದಿಂದ ಕ್ಷಯ ಸಂ|ರದ ನಿಜ ಚೈತ್ರ ಶು| ೪ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮಾನ ಸುಗ್ಗಿ.)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
10	ಶನಿ	೧೩	೪೨.೩೨	ಪೂ. ಭಾ.	೪೧.೪೬	೨೮	6.24	6 42
11	ರವಿ	೧೪	೩೬.೩೦	ಉ. ಭಾ.	೩೮.೪೦	೨೯	6.23	6 42
12	ಸೋಮ	●	೩೩.೧೬	ರೇವತೀ	೩೬.೧೬	೩೦	6.22	6.42
13	ಕುಜ	೧	೨೯.೪೬	ಅಶ್ವಿನೀ	೩೪.೩೨	೩೧	6.22	6.42
14	ಬುಧ	೨	೨೬.೧೪	ಭರಣೀ	೩೩.೪೬	೧	6.21	6.42
15	ಗುರು	೩	೨೫.೪೬	ಕೃತ್ತಿಕಾ	೩೪.೧೪	೨	6.20	6.42
16	ಶುಕ್ರ	೪	೨೫.೩೨	ರೋಹಿಣೀ	೩೫.೪೬	೩	6 20	6.42

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಅಧಿಕವಾದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
2	91—8	76—	—	—
3	92—6	76—5	—	—
4	91—8	76—6	—	—
5	91—2	77—3	—	—
6	92—8	77—3	—	—
7	91—6	75—6	—	—
8	91—7	75—2	—	—

ಮಂಗಳೂರಿನ ಪೇಟೆ ಧಾರಣಿ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ.
ಮಸ್ಕತಿ	8— 4	9— 0
ಹೊಸ ಗುಡ್ಡೆ ...	7— 12	8— 4
ಹೊಸ ರಾಶಿ ...	7— 0	7—12
ಅವ್ವಲ್ ಬೆಲ್ತಿಗೆ ...	8— 0	9— 0
ರಂಗೂನು ಬೆಲ್ತಿಗೆ ಗೋಣಿ ೧ ...	1[illegible]— 0	14— 0
ಗೋಧಿ ಗೋಣಿ ೧ಕ್ಕೆ ...	18— 0	19— 8
ಹುರುಳಿಗೋಣಿ ೧ಕ್ಕೆ ...	8— 4	8— 8
ಕಡಲೆಗೋಣಿ ೧ಕ್ಕೆ ...	13— 0	13— 8
ತೊಗರಿಗೋಣಿ ೧ಕ್ಕೆ ...	15— 4	15— 8
ತೊಗರಿಬೇಳೆ ಗೋಣಿ ೧ಕ್ಕೆ ...	16— 8	23— 0
ಉದ್ದು ಗೋಣಿ ೧ಕ್ಕೆ ...	16— 8	—
ಹೆಸರುಗೋಣಿ ೧ಕ್ಕೆ ...	15— 4	15 — 8
ಊರು ಬೆಲ್ಲ ಖಂಡಿ ೧ಕ್ಕೆ ...	60— 0	65 — 0
ಉಪ್ಪು ಗೋಣಿ ೧ಕ್ಕೆ ...	4— 8	4—12
ಕೊಬ್ರಿ ಖಂಡಿ ೧ಕ್ಕೆ ...	100— 0	105— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	32— 0	—
ಎಳ್ಳಿಂಡಿ ಖಂಡಿ ೧ಕ್ಕೆ ...	55— 0	60— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	7—10	7—12
ಎಳ್ಳೆಣ್ಣೆ ಮುಡಿ ೧ಕ್ಕೆ ...	7— 8	9— 0
[illegible] ಎಣ್ಣೆ ಪೆಟ್ಟಿಗೆ ೧ಕ್ಕೆ ...	8-12-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	4— 6	4 — 8
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	5—12	6— 4
ಸಾಸಿವೆ ಮುಡಿ ೧ಕ್ಕೆ ...	9— 8	—
ಕೊತ್ತಂಬರಿ ಮುಡಿ ೧ಕ್ಕೆ ...	3— 8	4— 6
ಕಾಫಿ ಖಂಡಿ ೧ಕ್ಕೆ ...	345— 0	360— 0
ಕಳಗೊಟ್ಟು ಅಡಿಕೆ ಖಂಡಿ ೧ಕ್ಕೆ ಹಳತು ...	275— 0	290— 0
ಹೊಸ ಅಡಿಕೆ ಖಂಡಿ ೧ಕ್ಕೆ ...	210— 0	225— 0
ಕಾಳುಮೆಣಸು ಖಂಡಿ ೧ಕ್ಕೆ ...	285— 0	—
ಯಾಲಕ್ಕಿ ಮುಡಿ ೧ಕ್ಕೆ ...	50— 0	64— 0
ಗೇರುಬೀಜ ಮುಡಿ ೧ಕ್ಕೆ ...	2—12	—
ಶಲ್ಲಿಕ ಖಂಡಿ ೧ಕ್ಕೆ ...	45— 0	65— 0
[illegible] ತಗಡು ಮುಡಿ ೧ಕ್ಕೆ ...	16— 4	16—12
[illegible] ಮುಡಿ ೧ಕ್ಕೆ ...	21— 0	—
[illegible] ಸೇರು ೧ಕ್ಕೆ ...	18—10	
[illegible] ತಗಡು ಮುಡಿ ೧ಕ್ಕೆ ...	10— 8	
ಪವನು ...	13— 6	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

PROPRIETOR RAJVAIDYA NAR[illegible]

NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯುಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,

57, ಜೈನಾ ಬಜಾರ್, ರೋಡ್, ಮದ್ರಾಸು.

ಕೇಳಿರಿ! ಬರೆಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ಡಿ. ಊಲನ್ ಮಾರ್ಟ್,

ಮಂಗಳೂರು

ರೋಲ್ಡ್‌ಗೋಲ್ಡ್ ಎಂಟು ಮೂಲೆ ಕೈಗಡಿಯಾರ.

ಈ ಕೈಗಡಿಯಾರವು ಬಂಗಾರಕ್ಕೆ ಸಂಸಮಾನವಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು.

ಕ್ರಯ ೧ಕ್ಕೆ ರೂ. 7—2—0.

— ಕಾಸಿನ ಸರ (ಮಾಲೆ). —

ಇದನ್ನು ಪ್ರತಿಯೊಬ್ಬರಿಗೂ ಅನುಕೂಲವಾಗಿರುವ ಹಾಗೆ 60 ಕಾಸುಗಳು ಇಟ್ಟು ತಯಾರಿಸಿದೆ. ಕುತ್ತಿಗೆಗೆ ಹಾಕಲು ತೆಗೆಯಲು ಮಧ್ಯದಲ್ಲಿ ಕೀಲು ಇಟ್ಟಿರುವುದು. ನೋಡಲು ಬಹು ಅಲಂಕಾರವಾಗಿದೆ. ಯಾವಾಗಲೂ ಬಣ್ಣವು ಕೆಡದಂತೆ ಎಲೆಕ್ಟ್ರೋ ಭಂಗಾರದ ಗಿಲೀಟು ಮಾಡಿರುವುದು.

ಕ್ರಯ ಮಾಲೆ ಸರ 1ಕ್ಕೆ ರೂ. 8—0—0.

ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ೧೨ ರೋಸ್ ಸೆಂಟ್ ಬಾಟ್ಲಿಗಳು ಇನಾಂ ಕೊಡುವೆವು.

ಪೌಂಟನ್‌ಪೇನು.

ಈ ನಕ್ಷೆಯಲ್ಲಿ ಕಾಣಿಸಿರುವ ಪೇನಾಗಳು ವಿಲಾಯಿತಿಯಲ್ಲಿ ತಯಾರಿಸಲ್ಪಟ್ಟವು. ಇವಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ೮೦೦ ಮಾತುಗಳು ಬರೆಯಬಹುದು. ಈ ಪೇನಾವನ್ನು ಮೇಲಾದ ವಾಲ್ಕನೈಟ್‌ನಿಂದ ತಯಾರಿಸಲ್ಪಟ್ಟದ್ದು. ಇದಕ್ಕೆ 14 ಕ್ಯಾರಟ್ ಭಂಗಾರದ ಮುಳ್ಳು ಇರುವದು. ಇದರಲ್ಲಿ ಬರೆದ ಅಕ್ಷರಗಳು ಸ್ವಲ್ಪವೂ ವ್ಯತ್ಯಾಸವಿಲ್ಲದೆ ಒಂದೇ ಸಮನಾಗಿರುವವು. ಇವರ ಜೊತೆಯಲ್ಲಿ ಇಂಕಿಯನ್ನು ತುಂಬುವ ಗಾಜಿನ ಕೊಳವೆಯನ್ನು ಮುಫತ್ತಾಗಿ ಕೊಡುವೆವು. ಕ್ರಯ 1ಕ್ಕೆ 2—0—0

ವಿಳಾಸ:— ಎಸ್. ಆರ್. ಕೃಷ್ಣ ಅಂಡ್ ಕೊ.

ನಂ|| ೧ ತಂಬುನಾಯಕನ ಬೀದಿ, ಮದರಾಸು.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳತಕ್ಕ ಒಂದು ದೇಹದ ದುರ್ಮಾಶಾಸ್ತ್ರವು ಇರುವುದು. ಅಂತಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೇ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,

26 ಬ್ರಾಡ್ವೇ, ಮದ್ರಾಸ್.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲು 1ಕ್ಕೆ ರೂ. 3—2—0.

,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ನೇಕಡ 25ರಂತೆ ಕಮಿಶನ್ —

ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,

ಪುತ್ತೂರು, ದ. ಕನ್ನಡ.

— ಪ್ರಸಂಗದ ಪುಸ್ತಕಗಳು. —

(1) ಸೇತು ಬಂಧನ ... ...
(2) ವಸಿಷ್ಠ ಪುರಾಣ ... ...
(3) ಇಂದ್ರಜಿತು ಕಾಳಗ ... ...
(4) ಚಂಡಭೀಮ ... ...
(5) ಕೃಷ್ಣಸರಾಮನ ಚರಿತ್ರ ... ...
(6) ಧರ್ಮಿಷ್ಠ ಬಭ್ರುವಿ ಚೋರ ಕಥೆ ... ...
(7) ಅವನಾರಿ ರಾಮನ ಕಥೆ ... ...
(8) ಕೃಷ್ಣಬಾಲಾಮೃತ ... ...
(9) ಶ್ರೀ ಕೃಷ್ಣ ಸತ್ಯಭಾಮಾ ಸಂವಾದ ... ...
(10) ಚಿತ್ರಸೇನ ರಾಜನ ಕಥೆ ... ...
(11) ಬಾಣಾಸುರ ವಧೆ ... ...
(12) ಬಾಣಾಸುರನ ಕಥೆ ... ...
(13) ರಂಭಾಶುಕ ಸಂವಾದ ... ...
(14) ರುಕ್ಮಿಣೀ ಪರಿಣಯ ... ...
(15) ರಾವಣೋತ್ಸವ ಯಕ್ಷಗಾನ ... ...
(16) ಸಭಾ ಲಕ್ಷಣವು ... ...
(17) ಶ್ರೀ ಕೃಷ್ಣ ಧರ್ಮಾತ್ಮಜರ ಕಥಾ ... ...
(18) ಚಂದ್ರಮಾಳಿ ಕಾಳಗ ... ...
(19) ಚಿತ್ರವಿಚಿತ್ರ ಕಾಳಗ ... ...
(20) ಯಕ್ಷಗಾನ ಸಾರಂಗಧರನ ಕಥೆ ... ...
(21) ,, ಶನಿದೇವರ ಮಹಾತ್ಮೆ ... ...
(22) ,, ಹರಿಶ್ಚಂದ್ರನ ಕಥೆ ... ...
(23) ಯಕ್ಷಗಾನ ಲಕ್ಷಾಗೃಹ ಕಥೆ ... ...
(24) ,, ಚೋರ ಕಥೆ ... ...
(25) ,, ಪಾರ್ವತಿ ಕಾರವಂಟ ಕಥೆ ... ...
(26) ,, ಗೋವಿಂದ ಚರಿತ್ರ ... ...
(27) ,, ದುಷ್ಯಂತನ ಕಥೆ ... ...
(28) ,, ಸಾನಂದ ಗಣೇಶ್ವರ ಕಥೆ ... ...
(29) ,, ಅಂಗದ ಸಾಧನ ... ...

ಶಾರದಾ ಛಾಪಖಾನೆ, ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ! ಮಾರಾಟಕ್ಕೆ ಸಿದ್ಧವಿದೆ!!

1926ನೇ ವರುಷದ

ಪೊಕೆಟ್ ಡೈರಿ.

ಮುಚ್ಚಳವೂ ಪಾಕೇಟೂ ಇರುವ ದೊಡ್ಡ ಸೈಜಿನ ಡೈರಿ ೧೪ ಆಣೆ.

ದೊಡ್ಡ ಸೈಜಿನ ಸಾದಾ ಡೈರಿ . . . . ೧೨ ಆಣೆ.

ಸಣ್ಣ ಸೈಜಿನ ಮುಚ್ಚಳ ಮತ್ತು ಪಾಕೇಟು ಇರುವ ಡೈರಿಗೆ ೧೦ ಆಣೆ.

ಸಣ್ಣ ಸೈಜಿನ ಸಾದಾ ಡೈರಿ . . . . ೮ ಆಣೆ.

ವ್ಯಾಪಾರಸ್ಥರಿಗೆ ಧಾರಾಳ ಕಮಿಶನು ಕೊಡಲಾಗುತ್ತದೆ.

ವಿಳಾಸ— ಶಾರದಾ ಛಾಪಖಾನೆ,

ಮಂಗಳೂರು.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂಡ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುಲೆ ಬಾ, ಬೆಲ್ಲದ ಬೈಲು ಬೆರ್ಚಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ಟಪಟಪ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಚಾಕಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ನೋಟೀಸು,

ಉಪ್ಪಿನಂಗಡಿ ತಾಲೂಕು ಮುಂಡೂರು ಗ್ರಾಮದ ಕಲ್ಲಮರದಲ್ಲಿರುವ ಕೇಶವ ಜ್ಯೊಸರ ಮಗ ಕೃಷ್ಣ ಜ್ಯೊಸನು ಸಮಸ್ತರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಕನ್ಯಾನ ಗ್ರಾಮದ ಪಂಜಜೆಯಲ್ಲಿರುವ ಗಣಪತಿ ಭಟ್ಟನ ಮಗ ನನ್ನ ಅಳಿಯ ತಿಮ್ಮಪ್ಪ ಭಟ್ಟನು ಕೆಟ್ಟ ಜನರ ಸಹವಾಸದಿಂದ ಜುಗಾರುಖೋರನಾಗಿ ಹಣವನ್ನು ದುರ್ವ್ಯಯಮಾಡಿ ಆತನ ತಂದೆಗೂ ನನ್ನ ತಂಗಿ ಪರಮೇಶ್ವರಿಗೂ ಹೆಚ್ಚಿನ ಉಪದ್ರ ಕೊಡುತ್ತಾನಾಗಿ ನಾನು ತಿಳಿದು ಕನ್ಯಾನ ಗ್ರಾಮಕ್ಕೆ ಹೋಗಿ ತಾ. 6—3—'26ರಲ್ಲು ಊರಿಗೆ ವಾಪಾಸು ಬರುವಾಗ್ಯೆ ದ್ವೇಶದಿಂದ ನನ್ನ ಅಳಿಯ ತಿಮ್ಮಪ್ಪ ಭಟ್ಟ ವ ಸದರಿ ಗ್ರಾಮದ ರಾಮಯ್ಯ ಭಟ್ಟರ ಮಗ ಶಂಭಟ್ಟ ಕೂಡಾ 2 ಜನರು ನನ್ನನ್ನು ಬಲೋದ್ವಂದಿಯಿಂದ ಪಂಜಜೆ ಮನೆಗೆ ಕೊಂಡುಹೋಗಿ ಹೆದರಿಸಿ ವತ್ತಾಯದಿಂದ 4, 5 ಕಾಗದಗಳಿಗೆ ನನ್ನ ಎಡ ಹೆಬ್ಬೆಟ್ಟು ಒತ್ತಿಸಿರುತ್ತಾರೆ. ವ ಸದರಿ ಕಾಗದಗಳನ್ನು ಹಿಂದಿನ ವ ನಂತರದ ತಾರೀಖು ಹಾಕಿ ನೋಟೋ, ಕೈಕಾಗದಗಳೋ ಅಥವಾ ಯಾವದಾದರೂ ಮೋಸಕರದ ರಿಕಾರ್ಡುಗಳನ್ನು ಮಾಡಿಯಾರೆಂತ ಸಂಶಯಹುಟ್ಟಿರುತ್ತದೆ. ನಾನು ಮತ್ತು ನನ್ನ ತಮ್ಮ ಕೂಡಿ ಬರಕೊಟ್ಟದಲ್ಲದೆ ನಾನೊಬ್ಬನೇ ಈ ವರೆಗೆ ಯಾರೊಬ್ಬರಿಗೂ ನೋಟಾಗಲಿ, ಕೈಕಾಗದವಾಗಲಿ ಕನ್ಯಾನದವರಿಗೆ ಬರಕೊಟ್ಟದ್ದಿಲ್ಲ. ಅಂಥಾ ನೋಟುಗಳನ್ನು ವ ಕೈ ಕಾಗದಗಳನ್ನು ಯಾರು ಮೋಸದಲ್ಲಿ ಬಿದ್ದು ಮೇಲ್ಬಿಟು ಪಡಕೊಳ್ಳಬೇಡಿರಿ. ಈ ವಿಷಯದಲ್ಲಿ ತಾ. 7—3—'26ರಲ್ಲು ಪುತ್ತೂರು ಡಿ. ಮೆಜಿಸ್ಟ್ರೇಟರಿಗೂ ಪೊಲೀಸಿನವರಿಗೂ, ಅರ್ಜಿ ಮೂಲಕ ತಿಳಿಸಿಯದೆ.

ಪುತ್ತೂರು,
ತಾ. 23-3-'26. } ಕೃಷ್ಣಜ್ಯೊಸನ ರುಜು.

—: ವಿಮರ್ಶೆ :—

[illegible]

ನೇ ಅಧ್ಯಾಯದಲ್ಲಿ ಸೀಮಂತ (ಬಯಕೆ) ಹೂ ಸೀರೆ ಕೊಡುವುದು ಕೋಳಿ ಬಿಡುವುದು ಇತ್ಯಾದಿ ವಿವರಿಸಿರುತ್ತದೆ. ೫ನೇ ಅಧ್ಯಾಯದಲ್ಲಿ ವಿವಾಹವು, ನೆಂಟಸ್ತಿಕೆ, ನಿಶ್ಚಯತಾಂಬೂಲ, ಮದುವೆಯ ಚಪ್ಪರ, ಮುಹೂರ್ತದ ಕಂಥೆ ಅಗಸನ ಕೋಡಿ, ದಿಬ್ಬಣ ಬರುವುದು, ದಿಬ್ಬಣ ಹೊಕ್ಕುವುದು, ದಿಬ್ಬಣ ಎದುರುಗೊಳ್ಳುವುದು. ಮುಹೂರ್ತದ ಮನೆ ಕಟ್ಟುವುದು ಮುಖಾಸ್ತಿರ ಸೇಸೆ, ಲಗ್ನ, ಕಂಚಿ ಇಡುವುದು, ಸೀಮೆ ಕರೆಯುವುದು ಧಾರೆ ಹೊಯ್ಯುವುದು, ಶಿರಿದೆಚ್ಚಿ ಹಣ, ವರದಕ್ಷಿಣೆ, ಉಪಚಾರ, ಗಂಡನ ಎಂಜಲು ತಿನ್ನುವುದು, ದಿಬ್ಬಣ ಹೊರಡುವುದು, ಸಮ್ಮಾನದ ಊಟ, ಹೆಂಗಸಿಗೆ ಭಾವನ ಆಚಾರ, ಕೂಡಾವಳಿ, ಬುಡುಧಾರೆ, ಬಾಳೆಗೆ ಧಾರೆ ಇತ್ಯಾದಿಗಳನ್ನು ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ೬ನೇ ಅಧ್ಯಾಯವು ಮರಣ ಮತ್ತು ಕ್ರಿಯೆ, ಬೂದಿ ಒಟ್ಟಿಗೆಮಾಡುವುದು, ನಿತ್ಯಕ್ರಿಯೆ, ದಹನ, ಕಲ್ಲು ಹೊರಳಿಸುವುದು, ನೀರುಬಟ್ಟೆ ಹರಿಯುವುದು, ನೀರುಬಟ್ಟೆ ಹಾಕುವುದು. ನೆಂಟರಿಷ್ಟರ ಸ್ವಾಗತ, ದೋಸೆಗೆ ಅಕ್ಕಿ ಹಾಕುವುದು, ಅಕ್ಕಿ ಚೆಲ್ಲಲಿಕ್ಕೆ ಹೋಗುವುದು, ದೂಪೆ, ದ.ಜ ಮರ್ದೈ, ಗಾಣದ ಕೊಟ್ಟಿಗೆ, ದೋಳ ಗೂಡು ಇವುಗಳ ವಿವರಣೆ; ಎತ್ತು ಕಟ್ಟಿ ಹೂಡಿ ಹಣ ಬಿತ್ತುವುದು. ಉತ್ತರ ಕ್ರಿಯೆಗಳಲ್ಲಿ ಮೂರು ವಿಧ: ಕಾಗೆಗೆ ಅನ್ನ ಇಡುವುದು, ಮರುಬೊಜ್ಜ, ಅಸ್ತಿಯ ವಿಲೆವಾರಿ ಪ್ರೇತ ಒಳಗೆ ಕರಿಯುವುದು, ಪ್ರೇತವನ್ನು ಹದಿನಾರರ ಸಂಗಡ ಕೂಡಿಸುವುದು, ದಹನ ಮಾಡಿದವರ ಸಂಸ್ಕಾರ ಇತ್ಯಾದಿ ಕ್ರಮಗಳನ್ನು ವಿವರಿಸಿರುತ್ತದೆ.

ಮುಹೂರ್ತದ ಭಾಗಗಳು—ಶಾರಟಲ ನೋಡುವ ಕ್ರಮ, ರಜಸ್ವಲೆ, ಸೀಮಂತ, ಜಾತಕ್ರಮ, ನಾಮಕರಣ, ಅಕ್ಷರ ಮುಹೂರ್ತ ವಿವಾಹ, ಬೀಜ ಬಿತ್ತುವಿಕೆ, ಕೂಪಾರಂಭ, ಜಲಶಿಲ್ಪಿ, ಗೃಹಾರಂಭ, ಗೃಹಪ್ರವೇಶ ಇವುಗಳೆಲ್ಲಾ ನಡೆಯಬೇಕಾದರೆ ತಿಥಿವಾರ ನಕ್ಷತ್ರ ಮುಂತಾದ ಮುಹೂರ್ತ ನೋಡುವುದು. ಶಕುನಗಳು —ಕಾಗೆಯ ಶಕುನ, ಬೆಕ್ಕಿನ ಶಕುನ, ನಾಯಿಯ ಶಕುನ, ನರಿಯ ಶಕುನ, ಸರ್ಪಶಕುನ, ಹಲ್ಲಿ ಶಕುನ, ಹಲ್ಲಿ ಬೀಳುವಿಕೆ ಮುಂತಾದ ಶಕುನಗಳು ಇರುತ್ತವೆ. ಈ ಪುಸ್ತಕವು ಕ್ರೌನ್ ಸ್ಯಾಜಿನದ್ದಾಗಿ ೯೪ ಪುಟಗಳುಳ್ಳದ್ದು, ಕ್ರಯ ಎಂಟಾಣೆ. ಈ ಪುಸ್ತಕವು ಶಾರದಾ ಛಾಪಖಾನೆಯಲ್ಲಿಯೂ ಗ್ರಂಥಕರ್ತರಲ್ಲಿಯೂ ದೊರೆಯುವುದು. ಮದುವೆ ಇತ್ಯಾದಿ ಶುಭಕಾರ್ಯಗಳೂ ಬೊಜ್ಜ ಮುಂತಾದ ಅಶುಭ ಕಾರ್ಯಗಳೂ ಮಾಡುವಾಗ ಈ ಪುಸ್ತಕವು ಹತ್ತರ ಇದ್ದರೆ ರಾಜ ಪುರೋಹಿತರು ಇದ್ದಂತೆ ಯಾವ ಕಾರ್ಯಗಳೂ ತೊಂದರೆ ಇಲ್ಲದೆ ನಡೆಯುವುದು ಅಷ್ಟಲ್ಲದೆ ಯಾವದೊಂದು ಮುಹೂರ್ತಕ್ಕೆ ಜೋತಿಷ್ಯಕಾರರು ಸಹ ಹತ್ತಿರ ಇದ್ದಂತೆ ಕೆಲಸ ಆಗುತ್ತದೆ. ಆದುದರಿಂದ ಈ ಪುಸ್ತಕ ಪ್ರತಿ ಒಬ್ಬ ತುಳು ಜನರ ಅಗತ್ಯವಾಗಿ ಹಿಡಕೊಂಡು ಗ್ರಂಥಕರ್ತರನ್ನು ಪ್ರೋತ್ಸಾಹಪಡಿಸಬೇಕಾಗಿ ಅಪೇಕ್ಷಿಸುತ್ತೇವೆ.

ವಿವಿಧ ವಿಷಯಗಳು.

ಮಂಗಳೂರು ಹಾಸನ ರೈಲುವೇಯ ಗತಿ ಏನಾಯಿತು?

ಮಂಗಳೂರು ಅರಸಿಕೆರೆ ರೈಲುವೆಯನ್ನುಮಾಡಿಸಬೇಕೆಂದು ಸುಮಾರು ೩೫ ವರುಷಗಳ ಹಿಂದೆ ಸರ್ವೆ ಮಾಡಿದ್ದರು. ಈ ಮಾರ್ಗ ಸರ್ವೆ ಆದ ಮೇಲೆ ಬೇಪೂರಿನಲ್ಲಿದ್ದ ರೈಲುಮಾರ್ಗವು ಮಂಗಳೂರಿಗೆ ಬಂತು. ಅರಸಿಕೆರೆಯಿಂದ ಹಾಸನ ರೈಲಾಯಿತು. ಮೈಸೂರಿನಿಂದ ಹಾಸನಿಗೆ ರೈಲಾಯಿತು. ಇನ್ನು ಎಷ್ಟೋ ರೈಲುಮಾರ್ಗಗಳಾದವು. ಅನಂತರ ಮಂಗಳೂರು ಹಾಸನ್ ರೈಲುವೇಯ ಆಲೋಚನೆಯನ್ನು ಬಿಟ್ಟು ಮಂಗಳೂರು ಮಡಿಕೇರಿ ರೈಲುವೇ ಮಾಡಿಸಬೇಕೆಂದು ಮಂಗಳೂರಿನಿಂದ ಪಾಣೆಮಂಗಳೂರು ವರೇಗೆ ಸರ್ವೆ ಆಯಿತು. ರೈಲುವೇ ಸೆಸ್ ವಸೂಲಾಯಿತು. ಅನಂತರ ಆಲೋಚನೆಯು ಮೂಲೆಗೆ ಬಿತ್ತು. ೩೧ರ ಕಳೆದ ನವಂಬರ ತಿಂಗಳಲ್ಲಿ ಡಿಸ್ಟ್ರಿಕ್ಟ ಬೋರ್ಡ ಮೀಟಿಂಗಿನಲ್ಲಿ ಹಾಸನ್ ಮಂಗಳೂರು ರೈಲು ಸಂಕ್ಷನಾಯಿತು. ಬೋರ್ಡಿನವರು ಅದಕ್ಕೆ ಕೊಡಲಿಕ್ಕೆ ಒಪ್ಪಿದರು. ವರ್ತಮಾನ ಪತ್ರಿಕೆಗಳಲ್ಲವೂ ಈ ವರ್ತಮಾನದಿಂದ ತುಂಬಿದವು. ಈ ರೈಲು ಆಗುವ ದಾರಿಯಲ್ಲಿದ್ದ ಕೂಲಿಕಾರರು ಸಂತೋಷದಿಂದ ಹಿಗ್ಗಿದರು. ಕಡೆಗೆ ಈಗ ಸರ್ವೆ ಆದ ಮಂಗಳೂರು ಹಾಸನ ರೈಲು ಲೈನಿನಲ್ಲಿರುವ ಸರ [illegible]

ನೀಲಗಿರಿಯ ಪ್ಯಾಕಾರಾ ನದಿಯ ಹ್ಯಾಡ್ರೊ ಇಲೆಕ್ಟ್ರಿಕ್ ಸ್ಕೀಮ್

ಈ ಕೆಲಸವನ್ನು ಮಾಡುವ ಹಕ್ಕನ್ನು ಲಂಡನಿನಲ್ಲಿರುವ ಜನರಲ್ ಇಲೆಕ್ಟ್ರಿಕ್ ಕಂಪೆನಿಯವರಿಗೆ ಕೊಟ್ಟಿರುತ್ತಾರಂತೆ. ಇದರಿಂದ ೩೬ ಸಾವಿರ ಕಿಲೊವಟ್ ವಿದ್ಯುಚ್ಛಕ್ತಿಯು ಉಂಟಾಗುವದಂತೆ. ಇದರ ಯಂತ್ರ ಸಾಧನೆಗಳನ್ನು ಪ್ಯಾಕಾರಾನದಿಯ ಜೋಗಿನ ಹತ್ತರ ಇಡುವರು. ಮೊದಲು ಇದರ ವಿದ್ಯುಚ್ಛಕ್ತಿಯನ್ನು ನೀಲಗಿರಿಗೂ. ಕೊಯಮುತ್ತೂರಿಗೂ, ಉಪಯೋಗಿಸುವರು ನಂತರ ಡಿಂಡಿಗಲಿಗೂ, ವಿಲ್ಲುಪುರಕ್ಕೂ, ಮದರಾಸಿಗೂ ಉಪಯೋಗಿಸಲ್ಪಡುವದು. ಇದರ ಒಟ್ಟು ಖರ್ಚು ೨೪೮ ಲಕ್ಷ ರೂಪಾಯಿ ಆಗುವದು. ಇದರಿಂದ ಕೆಳಭಾಗ೧೦ ಯೂ ೧೧೧ರ ಪ್ರಕಾರ ಮುನಾಫೆಯು ಸಿಕ್ಕುವದಂತೆ. ಇದರ ಯಂತ್ರ ಸಾಧನೆಗಳನ್ನು ಇಂಗ್ಲೆಂಡಿನಿಂದ ತರಿಸುವರು.

∴ ∴ ∴

ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರುಗಳ ಭತ್ತೆ.

ಈ ವರ್ಷ ಈ ಮೆಂಬರುಗಳಿಗೆ ರೂ. ೧೯,೦೦೦ ಬೇಕಾಗಿದೆ ಎಂದು ಬಜೆಟ ಮಾಡಿದ್ದಾರೆ. ಇದರ ವಿಷಯ ಚರ್ಚಿಸುವಾಗ ರಾ। ಸಾಲ್ಯಾಂಘಾರ್ಯ ಹೀಗೆ ಹೇಳಿದರು. ಕೌನ್ಸಿಲ್ ಮೆಂಬರುಗಳು ಪ್ರಜಾ ಹಿತಕ್ಕಾಗಿ ಕೆಲಸ ಮಾಡುವುದಿಲ್ಲವಾದ್ದರಿಂದ ಅವರಿಗೆ ಪ್ರಯಾಣದ ಭತ್ತೆಯನ್ನು ಈ ಕೌನ್ಸಿಲಿನವರು ಸಂಕ್ಷನ್‌ಮಾಡಬಾರದು. ಗವರ್ನರರೇ ಬೇಕಾದರೆ ಅವರಿಗಿರುವ ಸರಟಿಫ್ಯಾ ಮಾಡುವ ಹಕ್ಕಿನಿಂದ ಸೆಂಕ್ಷನ್ ಮಾಡಲಿ ಎಂದರು.

ದ್ರಾವಿಡ ಭಾಷೆಗಳ ಅಭಿವೃದ್ಧಿ ವಿದ್ಯಾಲಯ,

ಮದರಾಸು ಸಂಸ್ಥಾನದಲ್ಲಿರುವ ದ್ರಾವಿಡ ಭಾಷೆಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಒಂದು ವಿದ್ಯಾಲಯವನ್ನು ಸ್ಥಾಪಿಸುತ್ತಾರಂತೆ! ಇದಕ್ಕೆ ಮದರಾಸು ಯೂನಿವರ್ಸಿಟಿಯ ಸಿಂಡಿಕೇಟಿನವರು ವರ್ಷಕ್ಕೆ ರೂ. ೩೧ ಸಾವಿರ ಬೇಕೆಂದು ಅಂದಾಜು ಮಾಡಿರುತ್ತಾರೆ. ಇದಕ್ಕಾಗಿ ಯೂನಿವರ್ಸಿಟಿಯವರು ರೂಪಾಯಿ ೧೦ ಸಾವಿರ ಸೆಂಕ್ಷನ್ ಮಾಡಿರುತ್ತಾರೆ. ಉಳಿದ ರೂಪಾಯಿ ೨೧ ಸಾವಿರ ಗವರ್ನಮೆಂಟಿನವರು ಸೆಂಕ್ಷನ್ ಮಾಡಬೇಕೆಂದು ಸರಕಾರಕ್ಕೆ ಬರೆದಿರುತ್ತಾರೆ. ಇದಕ್ಕಾಗಿ ಈ ವರ್ಷ ೧೪ ಸಾವಿರ ರೂಪಾಯಿ ಸೆಂಕ್ಷನ್ ಮಾಡಿದರು; ರಾ। ಸಾಲ್ಯಾಂಘಾರು ಇದರಲ್ಲಿ ಉರ್ದು ಭಾಷೆಯನ್ನು ಸೇರಿಸಬೇಕೆಂದರು.

∴ ∴ ∴

ಹಳ್ಳಿಯ ಮಾರ್ಗಗಳಿಗೂ ನೀರು ಸರಬರಾಯಿಗೂ ಸೆಂಕ್ಷನಾದ ಹಣ.

(ಮಂಗಳೂರು ತಾಲೂಕು ಬೊರ್ಡಿಗೆ ಸೂಚನೆ)

—ಈ ವರ್ಷದ ಮದರಾಸು ಬಜೆಟಿನಲ್ಲಿ ತಾಲೂಕು ಬೋರ್ಡು ಹಳ್ಳಿಯ ಮಾರ್ಗಗಳಿಗೂ ಬಾವಿಗಳಿಗಾಗಿಯೂ ೧೨॥ ಲಕ್ಷ ರೂಪಾಯಿ ಸೆಂಕ್ಷನ್ ಮಾಡಿರುತ್ತಾರೆ. ಇದರಲ್ಲಿ ದಕ್ಷಿಣ ಕನ್ನಡ ಸುಮಾರು ೫೦,೦೦೦ ರೂಪಾಯಿ ಬರುವದು. ಇದರಲ್ಲಿ ಒಂದೊಂದು ತಾಲೂಕು ಬೋರ್ಡಿಗೆ ಸಾಧಾರಣ ೮ ಸಾವಿರ ರೂಪಾಯಿ ಬರುವದು. ಮಂಗಳೂರು ತಾಲೂಕಿನಲ್ಲಿ ಅತೀ ಅಗತ್ಯ ಸುಮಾರು ೩೦ ವರ್ಷಗಳಿಂದಲೂ ಮೂಲೆಗೆ ಬಿದ್ದ ಮಾರ್ಗವು ಗುರುಪುರ ಬಂಟವಾಳ ಮಾರ್ಗ ಒಂದಾಗಿದೆ. ಈ ಹಣದ ಒಂದು ಅಂಶದಿಂದ ಈ ಮಾರ್ಗವು ಈ ವರ್ಷ ಪೂರ್ಣವಾದೀತೆಂದು ಭರವಸೆಯಿದೆ. ಕರಿಂಗಾಣ ಇಗಜೀ ಮಾರ್ಗಕ್ಕೆ ಸುಮಾರು ಒಂದು ಸಾವಿರ ಬೇಕಾದಿತು. ಇನ್ನು ಏನಾದರೂ ಉಳಿದರೆ ಬಂಟವಾಳದಿಂದ ಅಗ್ರಹಾರ ನಾವೂರು, ಸರಪಾಡಿ ದಾರಿಯಾಗಿ ಉಪ್ಪಿನಂಗಡಿಗೆ ಹೋಗುವ ಮಾರ್ಗವನ್ನು ಮಾಡಿಸಿದರೆ ಬಹಳ ಉಪಕಾರವಿತ್ತು. ಇದು ಬಹಳ ಜನರು ಅಮದುರಪ್ತಾಗುವ ಮಾರ್ಗವಾಗಿದೆ. ಬರಗಾಲ ಬಂದ ಸಮಯ ಜನರಿಗೆ ಅನ್ನ ಕೊಡುವುದಕ್ಕಾಗಿ ಊರಿನ ಜನರಿಂದ ಸ್ವಲ್ಪ ಸ್ವಲ್ಪ ಹಣ ಹಾಕಿ ಈ ಮಾರ್ಗವನ್ನು ಅಲ್ಲಲ್ಲಿ ದುರುಸ್ತಿ ಮಾಡಿಸಿದ್ದರು. ಈ ಮಾರ್ಗದಲ್ಲಿ ಒಂದೇ ಒಂದು ತುಂಡು ಸ್ಥಳವನ್ನು ಎಕ್ವಾಯರ ಮಾಡುವ ಅಗತ್ಯವಿರುವುದಿಲ್ಲ. ಇದು ಬಂಟವಾಳದಿಂದ ಉಪ್ಪಿನಂಗಡಿಗೆ ಹೋಗುವ ಹಳೇ ಮಾರ್ಗವಾಗಿದೆ. ಈ ಮಾರ್ಗದಲ್ಲಿ ನಾವೂರು, ಅಗ್ರಹಾರದಲ್ಲಿ ಒಂದು ಅತೀ ಅಗತ್ಯವಿರುವ ಕಲ್ವರ್ಟ ಕಟ್ಟಿಸಬೇಕೆಂದು ಜಮಾಬಂದಿಯ ಸಮಯ ನಾವೂರು ಗ್ರಾಮದ [illegible]

ಸ್ವತಂತ್ರ ವಿಚಾರಗಳು.

"ರಂಗಭೂಮಿ."

ಈ ವರೆಗೆ ಗದಗ ದತ್ತಾತ್ರೇಯ ನಾಟಕ ಮಂಡಳಿಯ ಪ್ರೊಪ್ರಾಯಟರರಾದ ಶ್ರೀಯುತ ಗರೂಡರವರ ಆಶ್ರಯದಲ್ಲಿದ್ದ ಈ ಮಾಸಿಕ ಪತ್ರಿಕೆಯು, ಆ ಆಧಾರಭೂತವಾದ ಆಶ್ರಯವನ್ನು ಕಳಕೊಳ್ಳುವುದಾಗಿ ರಂಗಭೂಮಿಯು ತಿಳಿಸಿ, ಕರ್ನಾಟಕದ ರಂಗಭೂಮಿಯ ಅಭಿನಯ ಮಂಡಳಿಗಳಿಗೆ ಸಹಾಯಕ್ಕಾಗಿ ವಿನಂತಿಮಾಡಿಕೊಂಡಿದೆ. ಶ್ರೀಯುತ ಗರೂಡರವರು ಇಂತಹ ಒಂದು ಚಿಕ್ಕ ಮಾಸಿಕವನ್ನು ಹೀಗೆ ಸಾಕಷ್ಟು ಪ್ರೋತ್ಸಾಹವನ್ನು ಕೊಡಲು ಅಶಕ್ತರಾದುದು ನಮಗೆ ಆಶ್ಚರ್ಯವೆನಿಸುವ ವಿಷಯವಾಗಿದೆ. ನಾವು ತಿಳಿದ ಮಟ್ಟಿಗೆ, ಶ್ರೀಯುತ ಗರೂಡರ ನಾಟಕ ಮಂಡಳಿಗೆ ಜನರ ಪ್ರೋತ್ಸಾಹವು ಕಡಿಮೆಯಾದುದು ನಮ್ಮ ಲಕ್ಷ್ಯಕ್ಕಿಲ್ಲ. ಇಷ್ಟು ಅಭಿನಯದಲ್ಲಿ ಅಭಿರುಚಿಗಳಿದ್ದವರಾಗಿರುವವರೂ, ರಂಗಭೂಮಿಯ ಸುಧಾರಣೆಯಲ್ಲಿಯೂ ಉದ್ಧರಣೆಯಲ್ಲಿಯೂ ಬದ್ಧಕಂಕಣರಿರುವರೆಂದು ಸಾವಿರಾರು ಬಾರಿ ರಂಗಭೂಮಿಯ ಮೇಲೆ ನಿಂತು ಸಾವಿರಾರು ಶ್ರೋತೃಗಳ ಸಮ್ಮುಖದಲ್ಲಿ ಹೇಳಿದವರು ಇದೊಂದು ನವೀನ ಚಳವಳಿಕ್ಕೆ ಕೈಕೊಡಲು ಹಿಂದೆಗೆದುದು ವಿಷಾದಕರ. ಕರ್ನಾಟಕದೊಳಗಿನ ಪತ್ರಿಕೆಗಳ ಪರಿಸ್ಥಿತಿಗಳ ಬಗ್ಗೆ ನಾವೇನೂ ಪ್ರತ್ಯೇಕ ಹೇಳುವುದಿಲ್ಲ. ಒಂದು ಬಾರಿ ಕರ್ನಾಟಕವು ವಹಿಸಲಾರದ ಭಾರವನ್ನು ತಾನೊಬ್ಬನೇ ಹೇಗೆ ವಹಿಸಲಿ? ವಹಿಸಿದರೂ ಏನು ಪ್ರಯೋಜನ? ಎಂದು ಶ್ರೀಯುತ ಗರೂಡರಿಗೆ ಅನ್ನಿಸಿರಬಹುದು. ಆದರೆ ಯಾವ ಭಾಷೆಯಲ್ಲಿಯೂ ವಾಙ್ಮಯವು ಒಮ್ಮಿಂದೊಮ್ಮೆಯೇ ಬೆಳೆಯಲಿಲ್ಲ. ಅದು ಅನೇಕರ ಪರಿಶ್ರಮದಿಂದಲೂ, ಆತ್ಮ ಯಜ್ಞದಿಂದಲೂ ಬೆಳೆದುದಾಗಿದೆ. "ರಂಗಭೂಮಿ"ಯ ಪ್ರಚಾರವಾದರೂ ಒಮ್ಮಿಂದೊಮ್ಮೆಯೇ ವಿಸ್ತರಿತವಾಗುವುದೆಂದು ಆಶಿಸಲಿಕ್ಕಾಗಲಿ, ಆಗದೇಕೆಂದು ಇಚ್ಛಿಸುವುದಾಗಲಿ ಯೋಗ್ಯವಲ್ಲ. ಇಂತಹ ಪತ್ರಿಕೆಗಳು ಕನ್ನಡದಲ್ಲಿ ಹೆಚ್ಚು ಪ್ರಸಾರಿತವಾಗಬೇಕಾದರೆ, ಜನರಲ್ಲಿ ರಂಗಭೂಮಿಯ ಮೇಲೆ ಶ್ರದ್ಧೆಯುಂಟಾಗಬೇಕಾದರೆ, ರಂಗಭೂಮಿಯು ನಿಜವಾದ ಒಂದು ಕಲೆಯಾಗಿ ಕರ್ನಾಟಕದಲ್ಲಿ ಬೆಳೆಯಬೇಕಾದರೆ ಇಂತಹ ಪ್ರತ್ಯೇಕ ಪತ್ರಿಕೆಗಳ ಆದರಪೂರ್ವಕವಾದ ಬೆಳವಣಿಗೆಯಿಂದಲೇ ಇದು ಸಾಧ್ಯವಾಗತಕ್ಕದಾಗಿದೆ. ಕರ್ನಾಟಕವು ಇಂತಹ ಪತ್ರಿಕೆಗಳನ್ನು ಪ್ರಶಂಸಿಸಲಿಕ್ಕಾಗಲಿ, ಇವುಗಳನ್ನು ಆದರಿಸಲಿಕ್ಕಾಗಲಿ ಕಲಿತಿಲ್ಲ. ಆದರೆ ಕರ್ನಾಟಕದ ಆದರವೆಂತೂ ಇರಲಿ. ಇಂತಹ ಪತ್ರಿಕೆಗಳು ಮಾಡುವಂತಹ ಕೆಲಸಗಳು ಚಿರಪರಿಣಾಮ ಉಳ್ಳವುಗಳಾಗಿವೆ. ಆದುದರಿಂದ ಶ್ರೀಯುತ ಗರೂಡರಾದರೂ ಈ ಪತ್ರಿಕೆಯ ಶ್ರೇಯೋಭಿವೃದ್ಧಿಯ ಬಗ್ಗೆ ಚಿಂತಿತರಿರುವುದು, ಅವರ ಅರ್ಜನೆಗೆ ಶ್ರೇಯಸ್ಸನ್ನುಂಟುಮಾಡುವ ವಿಷಯವಿದೆ.

ಅಭಿನಯಪಟು ವರದಾಚಾರ್ಯರು.!

ಸಮಗ್ರ ಕರ್ನಾಟಕ ರಂಗಭೂಮಿಯಲ್ಲಿಯೂ, ತಮಿಳು, ತೆಲುಗು ಪ್ರಾಂತಗಳಲ್ಲಿಯೂ ಅಭಿನಯದಲ್ಲಿ ಅಪ್ರತಿಮ ಪ್ರವೀಣರೆಂದು ವಿಖ್ಯಾತರಾದ ಶ್ರೀ। ಎ. ವಿ. ವರದಾಚಾರ್ಯರು ಎಪ್ರಿಲ್ ತಾ. ೪ಕ್ಕೆ ರಾತ್ರಿ ಗಂಟೆ ೮ಕ್ಕೆ ದೈವಾಧೀನರಾಗಿ ಕರ್ನಾಟಕವು ಒಬ್ಬ ಉಜ್ವಲ ಅಭಿನಯ ಕೇಸರಿಯನ್ನು ಕಳೆದುಕೊಂಡಿತು. ಕರ್ನಾಟಕದಲ್ಲಿ ಇವರಷ್ಟು ಖ್ಯಾತಿ ಹೊಂದಿದವರೂ ಪೌರ್ವಾತ್ಯ, ಪಾಶ್ಚಿಮಾತ್ಯರ ಪ್ರಶಂಸೆಗೆ ಪಾತ್ರರಾದವರೂ ಬೇರಾರೂ ಇಲ್ಲ. ಇವರ ರತ್ನಾವಳಿ ಥಿಯೆಟ್ರಿಕಲ್ ಕಂಪೆನಿಯು ನಮ್ಮ ಜಿಲ್ಲೆಗೆ ಬಂದು ಅನೇಕ ವರ್ಷಗಳಾದರೂ, ಅವರ ಅಭಿನಯ ಕೌಶಲವನ್ನೂ, ಕಂಪೆನಿಯ ಉತ್ತಮ ನಾಟಕಗಳನ್ನೂ ನೆನಸದವರು ವಿರಳ. ಇವರು ೧೮೬೯ನೇ ಇಸವಿ ಫೆಬ್ರುವರಿ ತಾ. ೨ರಲ್ಲು ಜನಿಸಿದವರಾಗಿಯೂ, ಇವರು ಮೆಟ್ರಿಕ್ಯುಲೇಶನ್ ಪರೀಕ್ಷೆ ಪಾಸಾಗಿ, ಎಫ್. ಎ. ತರಗತಿಗೆ ಸೇರಿ ಮತ್ತೆ ಕೊಲೇಜನ್ನು ಬಿಟ್ಟವರಾಗಿಯೂ ತಿಳಿಯುತ್ತಿದೆ. ನಾಟಕದ ಇನ್ನಿತರ ಜನತೆಯ ಮಧ್ಯದಲ್ಲಿ ಉಪಾರ್ಜನೆ ಮಾಡುತ್ತಿರುವವರಿಗೆ ಆಗಾಗ ಸಿಕ್ಕುವ ಉಪಹಾರ ಮೆಡಲುಗಳ ವಿಷಯದಲ್ಲಿ ನಾವು ಹೆಚ್ಚು ಪ್ರಾಮುಖ್ಯತೆಯನ್ನು ಕೊಡಲಾಗುವುದಿಲ್ಲವಾದರೂ, ಶ್ರೀ। ವರದಾಚಾರ್ಯರ ಮಟ್ಟಿಗೆ ಅವರಿಗೆ ಅನೇಕ ಗೌರವಿತ ಸ್ಥಾನಗಳಿಂದ ಪುರಸ್ಕಾರವು ದೊರಕಿದೆಯಲ್ಲದೆ, ಅವು ಅವರ ನೈಜ ಪ್ರಾವಿಣ್ಯತೆಗಾಗಿಯೇ ಕೊಡಲ್ಪಟ್ಟವುಗಳಾಗಿವೆ. ಕರ್ನಾಟಕವು ಈ ಉಜ್ವಲ ಪುತ್ರನನ್ನು ಕಳೆದುದಕ್ಕಾಗಿ ಶೋಕಿಸದಿರದು.

ಕಲ್ಕತ್ತಾದಲ್ಲಿ ಹಿಂದೂ ಮುಸಲ್ಮಾನ ಕಲಹ.

ಹಿಂದೂ ಮುಸಲ್ಮಾನ ಭೇದದ ತೀಕ್ಷ್ಣತೆಯು ವೃದ್ಧಿಯನ್ನೈದುತ್ತಾ ಬರುವುದು ಭಾರತದ ದೌರ್ಭಾಗ್ಯವಾಗಿದೆ. ಕಲ್ಕತ್ತಾದಲ್ಲಿ ಇಂತಹದೊಂದು ಕಲಹವಾರಂಭವಾಗಿ ಒಮ್ಮೆಲೆ ಬೆಳೆದು ಝುಟಾಪಟಿಯಿಂದ ಅನೇಕರು ಮಡಿದರು. ಮೂಲ ಕಾರಣವು ವಾದ್ಯದ ತಕರಾರು. ಹಿಂದೂಗಳ ಒಂದು ಮೆರವಣಿಗೆಯು ಒಂದು ಮುಸಲ್ಮಾನ ಮಶೀದಿಯ ಎದುರಿನಿಂದ ಹೋಗುವಾಗ, ವಾದ್ಯ ಮಾಡಬಾರದಾಗಿ ಮುಸಲ್ಮಾನರ ವತ್ತಾಯವೂ ಮಾಡುವೆವಾಗಿ ಹಿಂದೂಗಳ ವತ್ತಾಯವೂ ನಡೆಯಿತು, ಮಾತಿನಿಂದ ಮುಷ್ಟಿಗೆ ಬಂತು. ಬಂದದ್ದೇ ತಡ, ಮುಂದೆ ಬಡಿದಾಡಿದರು. ಇದು ವಿಸ್ತರಿಸಲಾರಂಭಿಸಿತು. ಹೀಗಾಗಿ, ಒಂದು ಮುಸಲ್ಮಾನ ಶವವನ್ನು ಕೊಂಡುಹೋಗುವುದನ್ನು ನೋಡಿಯೇ ಕೆಲವು ಮುಸಲ್ಮಾನರು ಹತ್ತಿರದ ಹಿಂದುಗಳನ್ನು ಹೊಡೆದರು. ಕಲ್ಕತ್ತಾ ಕೊರ್ಪೊರೇಶನಿನ ಅಧ್ಯಕ್ಷರೂ, ಬಂಗಾಳ ಸ್ವರಾಜ್ಯಪಕ್ಷದ ಅಧ್ಯಕ್ಷರೂ ಆಗಿರುವ ಶ್ರೀ. ಸೇನಗುಪ್ತರೇ ಈಗ ಸಮಾಧಾನದ ಕೆಲಸವನ್ನು ಕೈಕೊಂಡಿರುವರು. ಅಲ್ಲದೆ ಮುಂದೆ ಇಂತಹ ದುರ್ಘಟನೆಗಳಾಗದ ಹಾಗೆ ನೋಡಿಕೊಳ್ಳಲಿಕ್ಕೆ ಆಯಾ ವಿಭಾಗಗಳಿಗೆ ಒಂದೊಂದು ಕಮಿಟಿಯನ್ನು ರಚಿಸುವ ಏರ್ಪಾಡೂ ಮಾಡಲಾಗಿದೆ. ಇಂತಹ ಘಟನೆಗಳನ್ನು ಹೇಗೆ ಆಂಗ್ಲೆಯರು ತಮ್ಮ ಉಪಯೋಗಕ್ಕೆ ಕಟ್ಟಿಕೊಳ್ಳುತ್ತಾರೆಂಬುದು ಟ್ಯಾಮ್ಸ ಪತ್ರಿಕೆಯ ಕೆಳಗಿನ ಟೀಕೆಯಿಂದ ತಿಳಿಯುವುದು:—

ಕಲ್ಕತ್ತಾ ಮತ್ತು ಕೋಹತ್ತಿನಂತಹ ದೂರದೂರದ ಶಹೆರುಗಳಲ್ಲಿ ನಡೆಯುವ ದುರ್ಘಟನೆಗಳ ಮುಂದೆ ಹೆಚ್ಚು ತೀಕ್ಷ್ಣರಾದ ಸ್ವರಾಜ್ಯಪಕ್ಷೀಯರು, ಬ್ರಿಟಿಷ ಅಫೀಸರರ ಸಂಖ್ಯೆಯನ್ನು ಕಡಿಮೆಮಾಡಬೇಕೆಂಬ ಕೇಳುವಿಕೆಯು ಒಡೆದುಬೀಳುತ್ತಿದೆ. ಲೋರ್ಡ ಇರ್ವಿನ್ನರು ಬರುವ ಸಮಯದಲ್ಲಿಯೇ ಇದು ನಡೆದುದು ಶೋಚನೀಯ.

ಆದರೆ ಸ್ವರಾಜ್ಯಲಾಭದೊಡನೆ ಮಾತ್ರವೇ ಇಂತಹ ಪ್ರಭೇದಗಳು ಕಡಿಮೆಯಾಗುವ ಸಂಭವವಿದೆ ಎಂದು ಹಿಂದೂಸ್ಥಾನದ ಅನುಭವವಿದೆ ಎಂಬುದನ್ನು ಮಾತ್ರ ಇಂಗ್ಲೀಷರು ಈ ಅಭಿಪ್ರಾಯಗಳನ್ನು ಜನತೆಯ ಮೇಲೆ ಹೊರಿಸುವಾಗ ನೆನಪುಮಾಡಿಕೊಳ್ಳುವುದಿಲ್ಲ. ಹಿಂದುಸ್ಥಾನವು ಈಗಿರುವ ಅನೈಸರ್ಗಿಕ ಕೃತ್ರಿಮ ಸ್ಥಿತಿಯಿಂದಲೇ ಇಂತಹ ದುರ್ಘಟನೆಗಳು ನಡೆಯುತ್ತಿವೆ. ರಾಷ್ಟ್ರೀಯ ಸರಕಾರದಡಿಯಲ್ಲಿ, ರಾಷ್ಟ್ರೀಯ ಸರಕಾರಿ ನೌಕರರ ಅಧಿಕಾರದಲ್ಲಿ ಈ ಪರಿಸ್ಥಿತಿಯು ಸುಧಾರಿಸಲು ಕಾರಣವುಂಟು. ಹಿಂದೂ ಮುಸಲ್ಮಾನ ಸಮಸ್ಯೆಯು ಸ್ವರಾಜ್ಯಕ್ಕೆ ಅನರ್ಹತೆಯನ್ನು ಸೂಚಿಸುವುದಕ್ಕಿಂತ ಆವಶ್ಯಕತೆಯನ್ನೇ ಸೂಚಿಸುತ್ತಿದೆ.

ಪೌರ್ವಾತ್ಯ ಮಾನಸಿಕತೆ.

ಪಾಶ್ಚಾತ್ಯ ಮಾನಸಿಕತೆಯನ್ನೂ ಪೌರ್ವಾತ್ಯ ಮಾನಸಿಕತೆಯನ್ನೂ ಸರಿಹೋಲಿಸಿದರೆ ಪೌರ್ವಾತ್ಯ ಮಾನಸಿಕತೆಯಲ್ಲಿ ಏನೋ ಊಣತೆಯಿರಬೇಕೆಂದು ತೋರುತ್ತಿದೆ. ಪಾಶ್ಚಾತ್ಯ ಜನಾಂಗಗಳೊಳಗೆ ಎಷ್ಟೇ ಅಂತಃಕ್ಲೇಶವೂ ಭೇದವೂ ಇದ್ದರೂ ಅವು ರಾಷ್ಟ್ರೀಯ ಹಿತದ ಸಾಧನೆಗಾಗಿ ಎಲ್ಲಾ ಭೇದಗಳನ್ನೂ ಮರೆತು ಒಂದಾಗುವುವು. ಲೀಗ್ ಒಫ್ ನೇಶನ್ಸಿನಲ್ಲಿ ನಡೆದ ಘಟನಾವಳಿಗಾದರೂ ಪಾಶ್ಚಾತ್ಯರ ಕರ್ಮಕೌಶಲ್ಯವನ್ನು ತೋರಿಸುತ್ತಿವೆ. ಲೀಗ್ ಒಫ್ ನೇಶನ್ಸ ಫಲಕಾರಿಯಾಗಲಿ, ದುಷ್ಫಲಕಾರಿಯಾಗಲಿ, ಅದರ ಪರಿಣಾಮ ಹೇಗಾದೀತೆಂಬುದು ಹೇಗೂ ಇರಲಿ, ಈ ದಿನ ಸಮಾಧಾನದಿಂದಲೂ ತಾಳ್ಮೆಯಿಂದಲೂ ಎಲ್ಲಾ ಜನಾಂಗಗಳು ಅದರಲ್ಲಿ ಕೇಂದ್ರೀಕರಿಸಲ್ಪಟ್ಟರೆಂಬುದು ವಿಶೇಷ ಗೌರವದ ವಿಷಯವಾಗಿದೆ. ಇಷ್ಟು ಭೇದಗಳ ಮಧ್ಯದಲ್ಲಿಯೂ, ಇಷ್ಟು ಅಪ್ರತಿಮ ಅಗಾಧವಾದ ರಾಜತಂತ್ರಗಳ ಮಧ್ಯದಲ್ಲಿಯೂ ಲೀಗ್ ಒಫ್ ನೇಶನ್ಸ ಇನ್ನೂ ವಿಭಕ್ತವಾಗದಿರುವುದು, ಪೌರ್ವಾತ್ಯ ಮಾನಸಿಕತೆಗೆ ವಿಶೇಷ ಗೌರವವನ್ನು ಕೊಡುವ ವಿಷಯವಾಗಿದೆ. ಈಗ ಐಗುಪ್ತ್ಯವನ್ನಾದರೂ ಲಕ್ಷಿಸುವ, ಅಲ್ಲಿ, ಸರಕಾರದ ವಿರೋಧವಾದ ಅನೇಕ ಪಕ್ಷಗಳಿವೆ. ಒಂದು ಬಾರಿ ಒಂದು ಪಕ್ಷಕ್ಕೂ ಇನ್ನೊಂದು ಪಕ್ಷಕ್ಕೂ ಬದ್ಧ ವಿರೋಧವಿದೆ. ಆದರೆ ಈ, ಸರಕಾರದ ಕಡೆಗೆ ಎಲ್ಲ ಪಕ್ಷಗಳಿಗೂ ಅನಾದರವಿದ್ದಿರುವಾಗ ಅಲ್ಲಿಯ ಎಲ್ಲಾ ಪಕ್ಷಗಳೂ ಒಂದಾದರು. ಭೇದಗಳು ಮರೆಯಾದುವು. ರಾಷ್ಟ್ರದ ಹಿತವು ಒಂದೇ ಪ್ರಮುಖವೆನಿಸಿತು. ತುರ್ಕಿಯಲ್ಲಿ ಕೂಡ ಈ ರೀತಿಯ ಐಕ್ಯವೇ ಅದನ್ನು ಪಾಶ್ಚಾತ್ಯರ ಮುಂಗಮುಷ್ಟಿಯಿಂದ ಬಿಡಿಸಿತು. ಐರ್ಲ್ಯಾಂಡು ಇದೇ ಅಖಂಡ ಐಕ್ಯದಿಂದ ಶತಮಾನದ ಪರಾಧೀನತೆಯನ್ನು ಕಳೆದುಕೊಂಡಿತು. ಆದರೆ ನಮ್ಮ ಪೌರ್ವಾತ್ಯರ ಪರಿಸ್ಥಿತಿಯೇನು? ಜಪಾನಿನ ವಿಷಯವನ್ನು ನಾವು ಹೆಚ್ಚು ತಿಳಿದಿಲ್ಲ. ಆದರೆ ತಿಳಿದುದರಲ್ಲಿ ರಾಷ್ಟ್ರೀಯ ಹಿತದ ದೃಷ್ಟಿಯಿಂದಾಗಲಿ ಲೋಕಹಿತದ ದೃಷ್ಟಿಯಿಂದಾಗಲಿ ಜಪಾನಿನಲ್ಲಿ ಆ ಉದಾರ ಐಕ್ಯದ ಭಾವವು ತೋರುವುದಿಲ್ಲ. ಇಲ್ಲವಾದರೆ ಚೈನಾದ ಮೇಲೆ ಸದಾಕಾಲ ಲೋಭದ ದೃಷ್ಟಿಯನ್ನಿಟ್ಟು, ಚೈನಾದ ಸೌಹಾರ್ದವನ್ನು ಕಳೆದುಕೊಂಡು, ಚೈನಾವನ್ನು ನಿರ್ಬಲತೆಯೊಳಗೆ ಪ್ರೇರಿಸಿ, ಅದರ ಮೇಲೆ ಪಾಶ್ಚಾತ್ಯರ ಅಧಿಕಾರವನ್ನು ಹೆಚ್ಚಿಸಿ, ತನ್ನ ದೇಶದ ಹತ್ತಿರವೇ ಪಾಶ್ಚಾತ್ಯರಿಗೆ ಪ್ರಾಮುಖ್ಯತೆಯನ್ನು ಕೊಟ್ಟು ತನ್ನ ಅಸ್ತಿತ್ವಕ್ಕೆ ಬಾಧಕ ಕಟ್ಟಿಕೊಳ್ಳುತ್ತಿರಲಿಲ್ಲ. ಇತ್ತ ಚೈನಾದೇಶವು ಕೂಡ ಸ್ವಾರ್ಥ ರಣಧೀರರ ಕೈಯಲ್ಲಿ ಬಲಿಬಿದ್ದು ಅಂತಃಕಲಹಗಳಿಂದ ಬಳಲಿ, ಉಜ್ಜೀವನದ, ಉದ್ಧರಣೆಯ ಮಾರ್ಗವನ್ನೇ ಕಡಿದು ಹಾಕುತ್ತಿರುವುದು ಅತ್ಯಂತ ದುಃಖಕರ ವಿಷಯವಾಗಿದೆ. ಇತ್ತ ಹಿಂದೂಸ್ಥಾನದ ಪರಿಸ್ಥಿತಿಯೇನು? ಧುರೀಣರೆಲ್ಲರೂ ಸ್ವಾಭಿಪ್ರಾಯಗಳನ್ನು ವತ್ತಾಯಪಡಿಸುವುದರಲ್ಲಿಯೇ ಹೆಚ್ಚು ಉತ್ಸುಕರಾಗಿ ರಾಷ್ಟ್ರೀಯತೆಯ ಪವಿತ್ರ ಭಾವನೆಯ ವಿನಾಶದಲ್ಲಿ ಬದ್ಧಕಂಕಣರೆಂಬಂತಿರುವರು. ಹೀಗಿರುವಾಗ ಪಾಶ್ಚಾತ್ಯರು ದಿನದಿನವೂ ಅಧೀಕೃತರಾಗುತ್ತಾ ಬರುವುದರಲ್ಲಿ ಆಶ್ಚರ್ಯವೇನು? ಮತ್ಸರವೇಕೆ? ಡಾರ್ವಿನಿನ ತತ್ವವು ಸುಳ್ಳಾಗದು—ಯೋಗ್ಯರೇ ಬಾಳುವರು. ಅಂತೂ ಪಾಶ್ಚಾತ್ಯರ ಪ್ರಕೃತದ ಮಾನಸಿಕತೆಯೂ ಸಂದರ್ಭಕ್ಕೆ ಸೇರಿ ಹೋಗುವ ಯುಕ್ತತೆಯೂ ಚೆನ್ನಾಗಿಯೇ ಅವರನ್ನು ಲೋಕದಲ್ಲಿ ಪ್ರಮುಖರನ್ನಾಗಿ ಮಾಡಿದುವು.

ಆಂಗ್ಲಭಕ್ತರು.

ಲೋರ್ಡ ಸಿಂಹರು ಮಹಾ ಭಕ್ತರು. ಅವರಿಗೆ ಆಂಗ್ಲ ರಾಜತಂತ್ರದ ಮೇಲೆ ಅಸೀಮ ಭಕ್ತಿ ಇದೆ. ಹಿಂದೂದೇಶದಲ್ಲಿ ಲಿಬರಲರು ಕೂಡ ಭಕ್ತಿಯನ್ನು ಕಳಕೊಂಡಿರುವಾಗ ಲೋರ್ಡ ಸಿಂಹರು ತಮ್ಮ ಅವಿಚಲ ಶ್ರದ್ಧೆಯನ್ನು ತೋರಿಸಿ ಆಂಗ್ಲ ರಾಜತಂತ್ರವನ್ನು ಗೌರವಿಸಿರುವರು. ಆದರೆ ನಿಜವಾದ ಪರಿಸ್ಥಿತಿ ಏನು? ಅದನ್ನು ಆಂಗ್ಲರೇ ಹೇಳಲಿ:—ಬ್ರಿಟಿಷ ಸಾಮ್ರಾಜ್ಯವನ್ನು ಸುತ್ತಿ ಬ್ರಿಟಿಷ ಸಾಮ್ರಾಜ್ಯದ ಮಹಿಮೆಯನ್ನು ಗಾನಮಾಡಿ ಬಂದ ಶ್ರೀ. ಶ್ರೀನಿವಾಸ ಶಾಸ್ತ್ರಿಯವರಿಗೆ ಆಸ್ಟ್ರೇಲಿಯದ ಡಾ. ಆರ್. ಡಬ್ಲ್ಯೂ. ಹೊರ್ನಬ್ರುಕ್‌ರವರು ಹೀಗೆ ಬರೆಯುತ್ತಿರುವರು.—

ಮೆದುವಾದ ಮಾತುಗಳು ಅವವುಗಳ ಸ್ಥಳದಲ್ಲಿ ಚೆನ್ನಾಗಿಯೇ ಇವೆ. ಆದರೆ ಅವು ಸರಿಯಾದ ಕಾರ್ಯದ ನಂತರ ಬರಬೇಕಲ್ಲದೆ ಮುಂದೆಯಲ್ಲ. • • • • ಬ್ರಿಟಿಷ ಸಾಮ್ರಾಜ್ಯದ ರಾಜನೀತಿಜ್ಞನು ಎಲ್ಲಿಯಾದರೂ ಒಂದೇ ಬದಿಗೆ ತಳ್ಳಬಹುದೆಂಬ ಆ ಸೂಕ್ಷ್ಮ ಸಾಧ್ಯತೆ ಕೂಡ ಇದ್ದರೆ, ಅವನು ತನ್ನ ಪ್ರತಿಜ್ಞೆಯನ್ನು ಎಂದಿಗೂ ಪಾಲಿಸುವುದಿಲ್ಲ. ಸಂದರ್ಭಗಳು ಅವನನ್ನು ವತ್ತಾಯಪಡಿಸಿದಾಗ, ಅವನು ಕೂಡಲೆ ಮುಂದೆ ಬಂದು—"ನೋಡು, ನಾನು ಎಷ್ಟು ಒಳ್ಳೆಯವನು. ನಾನು ಯಾವಾಗಲೂ ನನ್ನ ಮಾತನ್ನು ಪಾಲಿಸುವವನು"—ಪಾಲಿಸುವುದು ಮಾತ್ರ ಆಚ್ಚೆರಿಯಲ್ಲಿ.

ಇದರ ಮೇಲೆ ಶ್ರೀಯುತ ಶ್ರೀನಿವಾಸ ಶಾಸ್ತ್ರಿಗಳು ಬರೆಯುವರು—ಇಂಗ್ಲೆಂಡು ಹಿಂದೂಸ್ಥಾನಕ್ಕಿಂತಲೂ ಹೆಚ್ಚಿನದಾಗಿ ಎಣಿಸಲು ಕಾರಣವಿಲ್ಲ. ಅಲ್ಲಿಯೂ ಇಲ್ಲಿಯಂತೆಯೇ ರಾಜಕೀಯ ಪಕ್ಷಗಳಿವೆ. ಮೊಂಟೆಗ್ಯುವಿನ ನಿಧನದ ಮೇಲೆ ಅತ್ಯಂತ ಕಡುತರದ ಸಾಮ್ರಾಜ್ಯವಾದವು ಅಲ್ಲಿ ಬೆಳೆಯುತ್ತಾ ಬಂದಿದೆ. ಇದು ಹಿಂದೂಸ್ಥಾನದಲ್ಲಿ ಎಲ್ಲರಿಗೂ ತಿಳಿದಿದ್ದರೆ ಉತ್ತಮವಿತ್ತು.

ಲಿಬರಲರೊಳಗೆ ಲಿಬರಲರಾದ ಶ್ರೀ. ಶ್ರೀನಿವಾಸ ಶಾಸ್ತ್ರಿಗಳ ಮತವೇ ಹೀಗಿರುವಾಗ ಹಿಂದೀಯ ಜನತೆಯು ಹೇಗೆ ವರ್ತಿಸಬೇಕೆಂದು ಪ್ರತಿಯೊಬ್ಬರೂ ತಿಳಕೊಳ್ಳಬಹುದು.

ಗಮನಾಗಮನ.

ಹಳೆ ವೈಸರಾಯಿಗಳ ಮತ್ತು ಹೊಸ ವೈಸರಾಯಿಗಳ ಗಮನಾಗಮನದ ಗದ್ದಲದಲ್ಲಿಯೇ ಈಗ ಹಿಂದೀ ಸರಕಾರವು ಇದ್ದಿರಬೇಕು. ಈ ಸಮಯದಲ್ಲಿ ಹಳಬರ ಆಡಳಿತದ ಮೇಲಿನ ಸಿಂಹಾವಲೋಕನವನ್ನೂ, ಹೊಸಬರ ಭವಿತವ್ಯತೆಯ ಮೇಲಿನ ಊಹನೆಯನ್ನೂ ಪ್ರಕಟಿಸುವುದು ಸಾಮಾನ್ಯವಾಗಿ ಒಂದು ಪದ್ಧತಿ ಇದೆ. ಲೋರ್ಡ ರೀಡಿಂಗರ ವೈಸರಾಯತ್ವದ ವಿಷಯದಲ್ಲಿ ಎರಡು ಪ್ರಬಲವಾದ ಅಭಿಪ್ರಾಯಗಳಿವೆ—ಒಂದನೇದು ಅದು ಸಫಲವಾದುದೆಂದು; ಇನ್ನೊಂದು ಅದು ವಿಫಲವಾದುದೆಂದು ನಾವು ಎರಡನ್ನೂ ಮಾನಿಸುವೆವು. ಏಕೆಂದರೆ ಬ್ರಿಟಿಷರ ಕೈಗಳನ್ನು ಹಿಂದೂಸ್ಥಾನದ ಮೇಲೆ ಇಷ್ಟು ಯುಕ್ತಿಯುಕ್ತವಾಗಿ ಬಿಗಿದವರು ಬೇರೆ ಯಾರೂ ಇಲ್ಲ. ಅಸಹಕಾರದ ಪ್ರಚಂಡ ಸಮಯದಲ್ಲಿ ಅವರು ಅತ್ಯಂತ ಚಾತುರ್ಯದಿಂದ ಇಡೀ ಪರಿಸ್ಥಿತಿಯನ್ನು ಕೈಯೊಳಗೆ ಮಾಡಿದರು. ಮಹಾತ್ಮರೊಡನೆ ಭೇಟಿ ತೆಗೆದು ಕೊಂಡುದು ಈ ಚಾತುರ್ಯದ ಪರಮಾವಧಿಯಾಗಿದೆ. ಆದರೆ ಈ ವಿಶಾಲವಾದ, ೩೦೦ ಮಿಲಿಯ ಜನದಿಂದ ತುಂಬಿರುವ, ಈ ಮಹಾ ದೇಶದ ಬಗ್ಗೆ ಅವರೇನು ಮಾಡಿರುವರು? ಕರ್ಮಗಳಿಗೆ ಪಾರಮಾರ್ಥಿಕ ಬೆಲೆ ಇರುವುದಾದರೆ, ಲೋರ್ಡ ರೀಡಿಂಗರು ಅನೇಕ ದುಷ್ಕೃತ್ಯಗಳನ್ನು ಮಾಡಿದರೆನ್ನಬೇಕಾಗಿದೆ. ಸಹಸ್ರಾವಧಿ ಉತ್ಸಾಹೀ ದೇಶಭಕ್ತರ ಸಹನೆಯ ಪ್ರತಿಕ್ರಿಯೆಯು ದೈವವಿಲಾಸದ ಗರ್ಭದಿಂದ ಏನೆಂತ ಮೊಳೆಯುವದು?

ಅನುಕ್ರಮಣಿಕೆ.

ಅಗ್ರಲೇಖ	ಪುಟ
ಐಕ್ಯ	೬
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೭
ದಕ್ಷಿಣ ಕನ್ನಡ— ಬಂಟವಾಳ, ತಲಪಾಡಿ, ಸೋಮೇಶ್ವರ, ಮಂಜೇಶ್ವರ, ಕಟ್ಟಿಕ್ಕಲ, ಕಾಸರಗೋಡು, ಉಡ್ಪಿ, ಕಾಪು	೭-೭
ಮಂಗಳೂರು	,,
ಕಲ್ಕತ್ತದಲ್ಲಿ ಹಿಂದು—ಮುಸಲ್ಮಾನರೊಳಗಿನ ಕಲಹ	,,
ನಾಟ್ಯದ ಹೇಳಿಕೆ	,,
ಪತ್ರವ್ಯವಹಾರ ೧	,,
ವಿವಿಧ ವಿಷಯ	೪

ಸ್ವದೇಶಾಭಿಮಾನಿ.

ಶಕ ೧೮೪೮ ಅ. ಚೈತ್ರ ಬ॥ ೧೨ಯು ಶುಕ್ರವಾರ.

ಐಕ್ಯ.

ಯಾವಾಗ ಹಿಂದೀ ರಾಜಕೀಯ ಕ್ಷೇತ್ರದಲ್ಲಿ ಐಕ್ಯವು ಸ್ಥಾಪಿಸಲ್ಪಡುವುದೊ, ಆಗ ಭಾರತ ಸೌಭಾಗ್ಯ ಸೂರ್ಯನ ಉದಯವಾಯಿತೆಂದು ಹೇಳಲು ಯಾವ ಸಂಶಯವೂ ಇರುವುದಿಲ್ಲ. ಈ ಬಗ್ಗೆ ಹಲವು ಸಮಯದಿಂದ ಹಲವು ಜನರಿಂದ ಹಲವು ರೀತಿಗಳಿಂದ ಪ್ರಯತ್ನಗಳು ನಡೆದಿವೆ, ಮತ್ತು ಆ ಪ್ರಯತ್ನಗಳ ಫಲವಾದರೂ ಎಲ್ಲರಿಗೂ ತಿಳಿದೇ ಇದೆ. ಆದರೆ ಇತ್ತೀಚೆಗೆ ಮುಂಬಯಿಯಲ್ಲಿ ನಡೆದ ಐಕ್ಯ ಪರಿಷತ್ತಿನ ವಿಷಯವನ್ನು ಬಹು ವಿಚಿತ್ರವಾಗಿ ಎಣಿಸಬೇಕಾಗಿದೆ. ಏಕೆಂದರೆ ಅದರ ಪ್ರಯತ್ನಗಳು ಸ್ಥಿರವಾದ ಧ್ಯೇಯದಿಂದ ಹುಟ್ಟಿದುವಲ್ಲ.

ಮುಂಬಯಿ ಐಕ್ಯ ಪರಿಷತ್ತಿನ ವೈಚಿತ್ರ್ಯವು ಇಷ್ಟೇ ಆಗಿಲ್ಲ. ಅಲ್ಲಿ ಬ್ರಾಹ್ಮಣರ ಕಡುತರದ ಧುರೀಣನೂ ಬ್ರಾಹ್ಮಣರ ಪ್ರಮುಖ ಧುರೀಣನೂ ತಮ್ಮ ತಮ್ಮ ಮಾನಸಿಕತೆಯಲ್ಲಿ ಯಾವ ರಾಷ್ಟ್ರೀಯತೆಯ ಪ್ರೇರಣೆಗೂ ಎಡೆಕೊಡದೆ ಅಲ್ಲಿ ಬಂದಿದ್ದರು. ಹಿಂದೂಗಳ ಮುಖಂಡನೂ, ಮುಸಲ್ಮಾನರ ಮುಖಂಡನೂ ತಮ್ಮ ತಮ್ಮ ಜಾತೀಯ ಭಾವನೆಯ ಅಖಂಡತೆಯೊಡನೆಯೇ ಅಲ್ಲಿ ಸೇರಿದ್ದರು. ರಾಜಕೀಯ ವಿಷಯದಲ್ಲಿಯೂ ಇಂಡಿಪೆಂಡೆಂಟನು ಇಂಡಿಪೆಂಡೆಂಟನಾಗಿಯೂ, ಲಿಬರಲನು ಲಿಬರಲನಾಗಿಯೂ, ಲೊಯಲಿಸ್ಟನು ಲೊಯಲಿಸ್ಟನಾಗಿಯೂ, ರಿಸ್ಪೊನ್ಸಿವ ಕೊ-ಒಪರೇಟರನು ರಿಸ್ಪೊನ್ಸಿವ್ ಕೊ-ಒಪರೇಟರನೇ ಆಗಿಯೂ ಅಲ್ಲಿ ಬಂದಿದ್ದರು. ತಮ್ಮ ಧೋರಣವನ್ನು ಬದಲಿಸದೆ, ತಮ್ಮ ಭಾವನೆಗಳನ್ನು ತಿದ್ದಿಕೊಳ್ಳದೆ, ತಮ್ಮದೇ ಆದ ಒಂದು ಕಾರ್ಯಕ್ರಮವನ್ನು ರಚಿಸದೆ, ಕೆಲವು ಠರಾವುಗಳಿಂದಲೇ ಈ ಚುನಾವಣೆಯ ಸಮಯದಲ್ಲಿ ಒಂದು ಹೊಸ ಪಕ್ಷವನ್ನು ರಚಿಸುವ ಆವಶ್ಯಕತೆಯೇನು, ಅದರ ಉದ್ದೇಶವೇನು, ಅದರ ಪರಿಣಾಮವೇನು? ಇತ್ಯಾದಿಯಾಗಿ ಚಿಂತಿಸುವುದೂ ಆವಶ್ಯಕವಿದೆ.

ಒಂದು ಬಾರಿ ಮುಂಬಯಿಯಲ್ಲಿಯೇ ಎಲ್ಲಾ ಧುರೀಣರ ಪರಿಷತ್ತು ಜರುಗಿತ್ತು. ಇದಕ್ಕಾಗಿ ಕಾಂಗ್ರೆಸ್ ಮುಖಂಡರೇ ಬಹಳವಾಗಿ ಪ್ರಯತ್ನಿಸಿದ್ದರು. ಮತ್ತು ರಾಜಕೀಯ ಕಾರ್ಯಕ್ಷೇತ್ರದಲ್ಲಿ ಐಕ್ಯವನ್ನು ತರಲಿಕ್ಕಾಗಿ ಬಹಳ ಪ್ರಯತ್ನಗಳು ನಡೆದಿದ್ದುವು. ಆದರೆ ಈ ಧುರೀಣರಿಗೆ ರಾಷ್ಟ್ರೈಕ್ಯಕ್ಕಿಂತಲೂ ಸ್ವಾಭಿಪ್ರಾಯಗಳೇ ದೊಡ್ಡವಾಗಿ ಮಾತು ಮಾತುಗಳ ಪ್ರಸಂಗದಲ್ಲಿಯೇ ರಾಷ್ಟ್ರಹಿತವು ಮರೆಯಲ್ಪಟ್ಟಿತು. ಅದನ್ನು ಕರೆದುದು ಕಾಂಗ್ರೆಸು ಮುಂದಾಳುಗಳು—ಮತ್ತು ಕಾಂಗ್ರೆಸ್ ಮುಂದಾಳುಗಳಿಗೆ ಚುನಾವಣೆಯ ತಯಾರಿಯ ಕೆಲಸವು ಆಗಿರಲಿಲ್ಲ. ಕೇವಲ ಐಕ್ಯದ ಒಂದು ಸದುದ್ದೇಶವೇ ಅವರ ಎದೆಯಲ್ಲಿ ಕಂಪಿಸುತ್ತಿದ್ದಿತು. ಆದರೆ ಐಕ್ಯವಾಗಲಿಲ್ಲ. ಮತ್ತು ಹಿಂದೀ ರಾಜಕೀಯ ಪಕ್ಷಗಳು ತಮ್ಮ ಮೃತ್ಯುವಿನ ತಾಂಡವ ನೃತ್ಯದಲ್ಲಿಯೇ ವಿಲೋಲರಾದರು!

ಈಗ ಪುನಃ ಐಕ್ಯದ ಆಶಯವು ಉಂಟಾಯಿತು. ಯಾರಿಗೆ? ಸ್ವರಾಜ್ಯಪಕ್ಷರಲ್ಲದವರಿಗೆ. ಏಕೆ? ಬರುವ ಚುನಾವಣೆಯ ತಯಾರಿಗೆ! ಈ ಐಕ್ಯದ ಉದ್ದೇಶವು ರಾಷ್ಟ್ರಹಿತವಾಗಿರಲಿಲ್ಲ. ರಾಷ್ಟ್ರಹಿತವಾಗಿದ್ದುದಾದರೆ ಸ್ವರಾಜ್ಯಪಕ್ಷೀಯರಿಗೂ ದೇಶದ ಏಕಮಾತ್ರ ಪ್ರಬಲವೂ ಪರಿಣಾಮಕಾರಿಯೂ ಆದ ಪಕ್ಷಕ್ಕೂ ಅಲ್ಲಿ ಆಹ್ವಾನವಿರುತ್ತಿದ್ದಿತು. ಮತ್ತು ಆ ಪಕ್ಷವು ಸೇರಿದ್ದರೇನೇ ಈ ಐಕ್ಯವು ನಿಜವಾದುದೂ ಫಲಕಾರಿಯಾದುದೂ ಆಗಿರುತ್ತಿದ್ದಿತು. ಆದರೆ ಸ್ವರಾಜ್ಯಪಕ್ಷೀಯರೊಡನೆ ಐಕ್ಯವಾಗಲು ಮತ್ತು ಅವರನ್ನು ಹತ್ತಿರಮಾಡಿಕೊಳ್ಳಲು ಉಳಿದ ಇಷ್ಟು ಪಕ್ಷಗಳಿಗೂ ಧೈರ್ಯವಾಗಲಿಲ್ಲ. ಏಕೆಂದರೆ ಆ ಮಾನಸಿಕ ಬಲವೂ, ಆ ದೇಶಹಿತದ ಗಭೀರ ಪ್ರತಿಜ್ಞೆಯೂ ಬೇರೆ ಪಕ್ಷಗಳಲ್ಲಿರಲಿಲ್ಲ.

ಈ ಧುರೀಣರಿಗೆ ಜನತೆಯ ವಿಶ್ವಾಸ ಕೂಡ ಇರಲಿಲ್ಲ. ಕಾಂಗ್ರೆಸ್ಸಿನ ಪ್ರಚಂಡ ಕಾರ್ಯಕ್ರಮವು ರಚಿತವಾಗುತ್ತಿದ್ದಾಗ ಕೂಡ, ಕಾಂಗ್ರೆಸ್ಸಿನ ವಿಷಯನಿಯಾಮಕ ಕಮಿಟಿಯಲ್ಲಿಯೇ, ಆ ಕಮಿಟಿಯ ಎಲ್ಲಾ ಕೆಲಸಗಳೂ, ತರ್ಕಗಳೂ ಗೂಢವಾಗಿಯೇ ನಡಿಯಬೇಕಿದ್ದಿತಾದರೂ, ಕಾಂಗ್ರೆಸ್ಸು ಜನತೆಯೊಡನೆ ತನಗೆ ಯಾವ ರಹಸ್ಯವೂ ಇರುವುದಿಲ್ಲವೆಂದು ಬಹಿರಂಗವಾಗಿ ಈ ಕಮಿಟಿಯನ್ನು ಕೂಡಿಸಿತು. ಪ್ರೇಕ್ಷಕರೂ, ಪತ್ರಪ್ರತಿನಿಧಿಗಳೂ ವಿಷಯನಿಯಾಮಕ ಕಮಿಟಿಯನ್ನು ನೋಡಿ ಅಲ್ಲಾಗುವ ವಾದವಿವಾದಗಳನ್ನು ಬಹಿರಂಗ ಪಡಿಸಿರುವರು. ಈ ಬಹಿರಂಗಕ್ಕೆ ಕಾಂಗ್ರೆಸ್ಸು ಎಳ್ಳಷ್ಟೂ ಹೆದರಲಿಲ್ಲ. ಆದರೆ ಈ ಕೋಮನವೆಲ್ತ ಬಿಲ್ಲಿನ ಡಾ॥ ಎನ್ನಿಬಿಸೆಂಟರೂ, ರಿಸ್ಪೊನ್ಸಿವ್ ಕೊ-ಒಪರೇಶನಿನ ಜಯಕರರೂ, ಇಂಡಿಪೆಂಡೆಂಟ ಜಿನ್ನರೂ, ಧ್ಯೇಯಹೀನಪಾಲರೂ, ಹಿಂದೂ ಸಭೆಯ ಪಂಡಿತ ಮಾಲವೀಯರೂ, ಅಬ್ರಾಹ್ಮಣ ರೆಡ್ಡಿಯವರೂ, ಲಿಬರಲ್ ಚಿಂತಾಮಣಿಯವರೂ ಹೀಗೆ ಸ್ವರಾಜ್ಯ ಪಕ್ಷ ಒಂದು ಬಿಟ್ಟು ಉಳಿದೆಲ್ಲವರೂ ಸೇರಿರುವ ಈ ಧುರೀಣ ಪರಿಷತ್ತಿಗೆ ಬಹಿರಂಗವಾಗಿ ಸೇರಲು ಸಾಹಸವು ಸಾಲದಾಯಿತು. ಈ ಪರಿಷತ್ತಿನಲ್ಲಿ ನಡೆದುದೇನು? ಇದರಲ್ಲಿ ಯಾವ ರೀತಿಯಲ್ಲಿ ಈ ಅನ್ಯೋನ್ಯ ಪ್ರಭೇದಗಳು ಗ್ರಥಿಸಲ್ಪಟ್ಟವೆ? ಇವರ ನಿಜವಾದ ಕಾರ್ಯಕ್ರಮವೇನು? ಇವರ ಈ ಜೋಡಣೆಯು ಎಷ್ಟು ಕಾಲ ಒಂದಾಗಿ ಇರಬಹುದು? ಎಂಬುದನ್ನು ಜನಸಾಮಾನ್ಯರು ತಿಳಿಯಲಾರರು. ಅವರು ತಿಳಿಯಬೇಕೆಂಬ ಧೈರ್ಯವೂ ಈ ಧುರೀಣರೊಳಗಿಲ್ಲವೆಂದೂ ಕಾಣುತ್ತಿದೆ.

ಇದರಲ್ಲಿ ಧ್ಯೇಯವಿಲ್ಲ—ಇದು ಚುನಾವಣೆಯ ತಯಾರಿ ಮಾತ್ರವೆಂಬುವುದು ಕೇವಲ ಸ್ಪಷ್ಟವಿದೆ. ಇದು ದೇಶಕ್ಕಾಗಿ ಒಂದು ಕಾರ್ಯಕ್ರಮವನ್ನು ರಚಿಸಲೆಂದು ಮಾಡಿದುದಲ್ಲ—ಚುನಾವಣೆಯಲ್ಲಿ ಮತದಾರರನ್ನು ಹುಚ್ಚು ಮಾಡಲೆಂದು ಪ್ರಯತ್ನಿಸಲಿಕ್ಕೆ—ಇದು ಐಕ್ಯವನ್ನು ಸ್ಥಾಪಿಸಲೆಂದು ಮಾಡಿದುದಲ್ಲ—ಯಾವ ಪಕ್ಷವು ನಿಸ್ವಾರ್ಥವಾಗಿಯೂ ಎಲ್ಲಾ ಕಷ್ಟಗಳನ್ನು ಸಹಿಸಿಯೂ, ಹೊರಗಿನ ಒಳಗಿನ ಆಘಾತಗಳನ್ನು ತಿಂದೂ, ತಲೆಯೆತ್ತಿ ನಿಂತದೊ, ಅದನ್ನು ನಿರೋಧಿಸಲು ಶಕ್ತಿಸಾಲದೆ ಅದನ್ನು ನಿರೋಧಿಸಲಿಕ್ಕೆ ಬಲಗೂಡಿಸಲೆಂದು.

ಕಾಂಗ್ರೆಸ್ಸಿನ ಅಧ್ಯಕ್ಷರಾಗಿರುವ ಶ್ರೀಮತಿ ಸರೋಜಿನಿ ದೇವಿಯವರು ಹೇಳುವಂತೆ ಈ ಪರಿಷತ್ತು ಕಾಂಗ್ರೆಸ್ಸಿನ ಗೌರವವನ್ನು ಹೆಚ್ಚು ಮಾಡಿಯದೆ. ಕಾಂಗ್ರೆಸ್ಸ್ ಕಾರ್ಯಕ್ರಮ ಬಿಟ್ಟು ಬೇರಾವ ಪರಿಣಾಮಕಾರಿಯಾದ ಅವರ ಸ್ವಂತದ ಕಾರ್ಯಕ್ರಮವನ್ನು ಅವರು ಉದ್ಘಾಟಿಸಿಲ್ಲ. ಕಾಂಗ್ರೆಸ್ಸಿಗೂ ಅವರಿಗೂ ಭೇದವೆಂದರೆ—ಅವರಿಗೆ ಕಾರ್ಯಕ್ರಮವು ಅದಲ್ಲದೆ ಬೇರಾವುದೂ ಆಗಲಾರದೆಂದು ತಿಳಿದಿರುವಾ. ಅದಕ್ಕಾಗಿ ಅಡ್ಡಿಗಳನ್ನು ಲಕ್ಷ್ಯಕ್ಕೆ ತಾರದೆ ಕೆಲಸ ಮಾಡಲು ಸಿದ್ಧರಿಲ್ಲ. ಕಾಂಗ್ರೆಸ್ಸು ಮಾತ್ರ ಯಾವಾಗ ತನ್ನ ಧ್ಯೇಯವನ್ನು ಆ ಮೂಲಕ ಸಾಧಿಸಬೇಕೆಂದು ಅನುಭವಿಸಿತೊ, ಅದಕ್ಕಾಗಿ ತನ್ನ ಸರ್ವಸ್ವವನ್ನೂ ಒಲಿಯೋಯಲು ಸಿದ್ಧವಾಯಿತು. ಎಂತೂ ಹೊಸ ಏಕೀಕರಣದ ಪರಿಷತ್ತು ಕಾಂಗ್ರೆಸ್ಸಿನ ಧ್ಯೇಯವನ್ನೇ ಸ್ವೀಕರಿಸಿಯದೆ—ಆದರೆ ಮುಖ್ಯ ತಾರತಮ್ಯವೆಂದರೆ ಅದು ಕಾಂಗ್ರೆಸ್ಸಿನ ಯಾ ಸಾಹಸಕರವಾದ, ನಿಸ್ವಾರ್ಥತೆಯ ಮತ್ತು ಸಹನೆಯ ವಿಷಯಗಳಿದ್ದವೊ ಅವೆಲ್ಲವನ್ನೂ ತೆಗೆದುಹಾಕಿ ಅದು ಆ ಧ್ಯೇಯವನ್ನು ಸ್ವೀಕರಿಸಿಯದೆ. ಸಂಕ್ಷೇಪತಃ ಕಾಂಗ್ರೆಸ್ಸ್ ಕಾರ್ಯಕ್ರಮವನ್ನು ಪ್ಲೇಟ್‌ಫೋರ್ಮ ಸಾಧನೆಗೆ ಅದು ಸೇರಿಸಿಯದ್ದೆ, ಇದು ಅದರ ವಿಷಯ ಸದಭಿಪ್ರಾಯವನ್ನು ಕೊಡುವುದು.

ಮುಖ್ಯತಃ ಸ್ವರಾಜ್ಯಪಕ್ಷೀಯರ ಮೇಲೆ ಸಮಗ್ರ ದೇಶಕ್ಕೆ ವಿಶ್ವಾಸವಾಗಿಯದೆ ಮತ್ತು ಅವರ ತ್ಯಾಗಮಯ ಕಾರ್ಯಕ್ರಮದಲ್ಲಿ ಜನತೆಗೆ ಶ್ರದ್ಧೆಯದೆಯೆಂಬುದೇ ಇತರ ಪಕ್ಷೀಯರಿಗೆ ಸಹಿಸಲಾರದ ವಿಷಯವಾಗಿಯದೆ. ಕಳೆದ ಚುನಾವಣೆಗಳಲ್ಲಿ ಲಿಬರಲರಿಗೆ ಪ್ರಚಂಡವಾದ ಪರಾಜಯವಾಯಿತು; ಇಂಡಿಪೆಂಡೆಂಟರು ಅನೇಕ ಕಡೆಗಳಲ್ಲಿ ಸ್ವರಾಜ್ಯಪಕ್ಷೀಯರ ಔದಾರ್ಯದಿಂದ ಗೆಲ್ಲಬೇಕಾಯಿತು. ಇತ್ತೀಚೆಗೆ ಮದರಾಸಿನಲ್ಲಿ ಬ್ರಾಹ್ಮಣೇತರರ ಪಕ್ಷಬಲ್ಯವು ಕೂಡ ಸ್ವರಾಜ್ಯ ಪಕ್ಷದ ಮುಂದೆ ತಗ್ಗಿಹೋಯಿತು. ಈ ಭಯವೇ ಈಗ ಐಕ್ಯ ಹೊಂದಿದ ಪಕ್ಷಗಳೊಳಗಿನ ಒಮ್ಮತದ ವಿಷಯ! ಈ ಭಯವೇ ಈ ಎಲ್ಲಾ ಪಕ್ಷಗಳನ್ನು ಒಟ್ಟುಗೂಡಿಸಿಯದೆ.

ಜನತೆಯು ತಮ್ಮ ಅಭಿಪ್ರಾಯವನ್ನೂ, ತಮ್ಮ ವಿಚಾರಶಕ್ತಿಯನ್ನೂ ತೋರಿಸುವ ಸಮಯವು ಬಂದಿದೆ. ಮಾತವಲ್ಲ, ದೇಶದ ದೃಢ ನಿರ್ಧಾರವನ್ನೂ ಇನ್ನೂ ಘಟ್ಟಿಮಾಡಬೇಕೊ, ಇಲ್ಲವೆ ತ್ಯಾಗಿಯಾಗಲಾರದವರ ವ್ಯಾಮೋಹಕ್ಕೆ ಬಿದ್ದು ಅದನ್ನು ಕಲುಕಿಸಿ ಪಾಶ್ಚಾತ್ಯರ ಸಮ್ಮುಖದಲ್ಲಿ ನಮ್ಮ ನಿರ್ಬಲತೆಯನ್ನು ತೋರಬೇಕೆ? ಎಂಬುದನ್ನು ನಾವು ಆಲೋಚಿಸಬೇಕು.

ಯಾವ ಧುರೀಣರ ಪರಿಷತ್ತು ಮುಂಬಯಿಯಲ್ಲಿ ಕೂಡಿತೊ ಅದರ ಪರಿಣಾಮವನ್ನು ನಾವು ತಗ್ಗಿಸಲಾರೆವು. ಈ ಐಕ್ಯದಿಂದ ನಿಜವಾಗಿಯೂ ಸ್ವರಾಜ್ಯಪಕ್ಷಕ್ಕೆ ಪ್ರಬಲವಾದ ಪ್ರತಿರೋಧವಿದೆ. ಅಲ್ಲದೆ ಇತ್ತೀಚೆಗೆ ಆಗಾಗ ಆದ ಕೆಲವು ರಾಜೀನಾಮೆಗಳಿಂದಲೂ ಸ್ವರಾಜ್ಯಪಕ್ಷವು ಸಹಿಸಲಾಗದ ನಿರ್ಬಲತೆಯನ್ನು ಹೊಂದಿದೆ. ಸ್ವರಾಜ್ಯಪಕ್ಷದಲ್ಲಿ ವೈಶಿಷ್ಟ್ಯವೆಂದರೆ, ಅದರಲ್ಲಿ ವ್ಯಕ್ತಿಯ ಪ್ರಾಮುಖ್ಯತೆಯಿಲ್ಲ, ಅದರಲ್ಲಿ ಧ್ಯೇಯಕ್ಕೂ ಸಾಧನೆಗೂ ಪ್ರಾಮುಖ್ಯತೆಯಿದೆ. ಸ್ವರಾಜ್ಯಪಕ್ಷೀಯರು ನಿರಂತರ ನಿರೋಧವೆಂಬ ಧೋರಣವನ್ನು ಹೇಳಿಕೊಂಡು ಕಾರ್ಯತಃ ರಿಸ್ಪೊನ್ಸಿವ್ ಕೊ-ಒಪರೇಶನನ್ನೇ ಆಚರಿಸುವರೆಂದು ಇತರರು ಹಳಿಯುವುದಾದರೆ, ರಿಸ್ಪೊನ್ಸಿವ್ ಕೊ-ಒಪರೇಶನ್ ವಾದಿಗಳು ರಿಸ್ಪೊನ್ಸಿವ್ ಕೊ-ಒಪರೇಶನ್ ಹೆಸರಿನಲ್ಲಿ ಕೊ-ಒಪರೇಶನ್ ಧೋರಣವನ್ನೇ ಕೈಕೊಳ್ಳಿರುವರು. ಈ ಕಾರಣದಿಂದಲಾದರೂ ಸ್ವರಾಜ್ಯಪಕ್ಷೀಯರು ರಿಸ್ಪೊನ್ಸಿವ್ ಕೊ-ಒಪರೇಶನನ್ನು ಆಚರಿಸಿದರೂ ಧೋರಣ ಮೂಲಕ ಸ್ವೀಕರಿಸುವುದರ ಹಾನಿಯು ವ್ಯಕ್ತವಾಗುವುದು.

ಈ ಹೊಸ ಐಕ್ಯದ ಪಕ್ಷದ ಮುಖ್ಯ ಧೋರಣವು ದೊಡ್ಡ ದೊಡ್ಡ ಹುದ್ದೆಗಳನ್ನು ಸ್ವೀಕರಿಸುವುದಾಗಿದೆ. ಈ ಹುದ್ದೆಗಳ ಸ್ವೀಕಾರದಿಂದ ಆಯಾ ವ್ಯಕ್ತಿಗಳಿಗೆ ಬೇಕಷ್ಟು ಪುಣ್ಯವೂ, ಗೌರವವೂ ಸಿಕ್ಕುವುದಲ್ಲದೆ ಮತ್ತಾವ ದೇಶಹಿತವೂ ಇರುವುದಿಲ್ಲ, ದೊಡ್ಡ ಅಧಿಕಾರ ಸ್ವೀಕಾರದಲ್ಲಿ ಯಾವ ತರದ ತ್ಯಾಗವಿದೆ ಎಂದು ನಮಗೆ ತಿಳಿಯುವುದಿಲ್ಲ. ಯಾವುದೊಂದು ತ್ಯಾಗವಿಲ್ಲದೆ, ಆಳರಸರ ಅಜ್ಞಾದಾಯಕವಾದ ಮತ್ತು ಅವರ ಕೈದಾನದ ಈ ಅಧಿಕಾರಗಳ ದುರ್ದಿನ ದಾಕ್ಷಿಣ್ಯಕ್ಕೆ ಬಿದ್ದ ಮೇಲೆ ಇವರಿಂದ ಎಷ್ಟು ದೇಶಹಿತವಾದೀತೆಂಬುದನ್ನು ಪ್ರತ್ಯೇಕ ಹೇಳಬೇಕಿಲ್ಲ. ಶ್ರೀಯುತ ತಾಂಬೆಯವರೇ ಇದಕ್ಕೆ ನಿದರ್ಶನ. ಸ್ವೀಕರಿಸಿದವರಾದರೂ ಅದರಿಂದ ತಾವು ಒಳ್ಳೇದು ಮಾಡಿರುವನೆಂದು ಅದನ್ನು ತೋರಿಸಿಕೊಡಬಹುದಿತ್ತು. ಅದು ಕೂಡ ಮಾಜಿ ಮಂತ್ರಿಗಳು ತೋರಿಸಿಕೊಟ್ಟಿಲ್ಲ, ಮಾತ್ರವಲ್ಲದೆ ಉಪಕಾರಿಯಾದ ಯಾವ ಕಾರ್ಯವನ್ನೂ ಮಾಡುವುದು ಸಾಧ್ಯವಿಲ್ಲವೆಂದು ಮಾಜಿ ಮಂತ್ರಿಗಳಾದ ಶ್ರೀ ಚಿಂತಾಮಣಿ ಮೊದಲಾದವರೇ ಹೇಳಿರುವರು.

ಎಂತೂ ಈ ದಿನ ಈ ಹೊಸ ಐಕ್ಯದ ಪಕ್ಷವಾಯಿತು. ಅದು ನಿಜವಾಗಿಯೂ ಒಂದೇ ಪಕ್ಷವಾಗಿ ಇದ್ದು ವಿಛಿನ್ನವಾಗದಿರುವುದಾದರೆ, ದೇಶದಲ್ಲಿ ಎರಡೇ ಪಕ್ಷಗಳಿವೆಯೆಂಬ ಭಾವನೆಯುಂಟಾಗಲಾದರೂ, ಇದರ ವ್ಯವಸ್ಥಾಪಕರನ್ನು ಅಭಿನಂದಿಸಬಹುದು. ಧುರೀಣರೊಬ್ಬೊಬ್ಬರು ಒಂದೊಂದು ಪಕ್ಷವಾಗಿ ದೇಶದ ರಾಜಕೀಯ ಚಳವಳವು ಕ್ಷೀಣವಾಗಿ ಹೋಗುವುದಕ್ಕಿಂತಲೂ ಇದು ಎಷ್ಟೋ ಮೇಲು. ಆದರೆ ಜಿನ್ನರೂ, ಪಂಡಿತ ಮಾಲವೀಯರೂ, ರೆಡ್ಡಿಯರೂ, ಕೇಳ್ಕರರೂ ಎಷ್ಟರ ವರೆಗೆ ಒಟ್ಟಿಗೆ ಇರುವರೆಂಬುದು ಚಿಂತನೀಯವಿದೆ. ಇದರಿಂದ ಇನ್ನು ಧುರೀಣರೊಳಗಿನ ಮನಕ್ಲೇಶಗಳಿಗೆ ಎಡೆ ಹೆಚ್ಚಾದಿದ್ದರೆ ದೇಶದ ಸೌಭಾಗ್ಯವೆನ್ನಬೇಕು.

ಈ ಪಕ್ಷವು ಸರಿಯಾಗಿ ಅಖಂಡವಾಗಿ ನಿಲ್ಲುವುದಾದರೆ ನಮಗೆ ಅತ್ಯಂತ ಸಂತೋಷವಿದೆ. ನಮಗವರ ಧೋರಣದಲ್ಲಿ ವಿಶ್ವಾಸವಿರದಿರಬಹುದು. ಆದರೆ ದೇಶಕ್ಕೆ ರಾಜಕೀಯ ಸುಧಾರಣೆ ಬೇಕು, ದೇಶದ ಆರ್ಥಿಕ ಉನ್ನತಿ ಬೇಕು ಎಂದು ಸಾಧಿಸುವರ ದೇಶದ ಸಮಗ್ರ ಶಕ್ತಿಯನ್ನು ಒಟ್ಟುಗೂಡಿಸಬಲ್ಲ ಇನ್ನೊಂದು ಪಕ್ಷವು ಬಂತೆಂದರೆ ಅದು ಅವಹೇಳನ ಮಾಡತಕ್ಕ ವಿಷಯವಲ್ಲ. ನಾವು ನಮ್ಮ ಅನುಮಾನಗಳನ್ನು ಮಾತ್ರ ಪ್ರಕಟ ಪಡಿಸಿದ್ದೇವೆ. ಕಾರ್ಯದಲ್ಲಿ ಈ ಹೊಸ ಪಕ್ಷವು ಹೆಚ್ಚು ಕೆಲಸಮಾಡಬಲ್ಲುದಾದರೆ, ಅದರಿಂದ ದೇಶಕ್ಕೆ ಲಾಭವಾಗುವುದಾದರೆ ಅದರಲ್ಲಿ ನಮಗೆ ಆನಂದವಲ್ಲದೆ ಬೇರೆಯಿಲ್ಲ.

ಆದರೆ ಇತಿಹಾಸವನ್ನು ಮರೆಯಲಾಗುವುದಿಲ್ಲ. ಆಂಗ್ಲ ರಾಜತಂತ್ರ ಪ್ರಭುತ್ವವೂ, ಹಿಂದೀ ಸ್ವಾರ್ಥಮಯ ನಿರ್ಬಲತೆಯೂ ಶತಮಾನದಿಂದ ಪರಿಸ್ಪರ್ಶವಾಗಿ ಬಂದ ಸ್ತೋತ್ರವಾಗಿದೆ. ಅದು ಬಿದ್ದುಹೋದರೆ ಹಿಂದೂಸ್ಥಾನದ ಪರಾಧೀನತೆಯೂ ಬಿದ್ದುಹೋಗುವುದು.

ವಿದೇಶ ವರ್ತಮಾನ.

—ರಶ್ಯ ದೇಶದಲ್ಲಿ ಸನ್ಯಾಸಿಗಳೆಲ್ಲರೂ ತಮ್ಮ ಸನ್ಯಾಸ ವ್ರತವನ್ನು ತ್ಯಜಿಸಬೇಕೆಂದು ರಶ್ಯ ದೇಶದ ಸೋವಿಯೆಟ್ ಸರಕಾರದವರು ಘೋಷಿಸಿಪಟ್ಟದಿಂದ ಹುಕುಂ ಕೊಟ್ಟಿರುತ್ತಾರೆ.

—ಬ್ರಿಟಿಷ್ ಪಾರ್ಲಿಮೆಂಟಿನ ಒಬ್ಬ ಮೆಂಬರರು ಮೃತಪಟ್ಟಿರುವರ ಬದಲಾಗಿ ಚುನಾವಣೆಯಾಗಿ ಒಬ್ಬ ಲೇಬರ್ ಮೆಂಬರರು ಚುನಾಯಿಸಲ್ಪಟ್ಟರು. ಕೂಲಿಕಾರರಿಗೆ ಸಂಬಳವನ್ನು ಕಡಿಮೆ ಮಾಡಿದ್ದರಿಂದ ಅವರು ಚಳಿವಳಿಯಿಂದ ತಮ್ಮ ಕಡೆಯ ಮೆಂಬರರನ್ನು ಚುನಾಯಿಸಿರುವರು.

—ಜರ್ಮನಿಯಲ್ಲಿ ರಿಪಬ್ಲಿಕಿನ ರಕ್ಷಣೆಗಾಗಿ ಸ್ಥಾಪಿಸಿದ ಸುಪ್ರೀಮ ಕೋರ್ಟನ್ನು ಅಗತ್ಯವಿಲ್ಲವೆಂದು ತೆಗೆದುಹಾಕಿರುವರು.

—ಜರ್ಮನಿಯಲ್ಲಿ ಎಪ್ರಿಲ್ ೧ನೇ ತಾರೀಕಿನಿಂದ ಒಂದು ಸ್ಟೀಲ ಕಂಪೆನಿಯನ್ನು ಸ್ಥಾಪಿಸಿರುವರು. ಇದರ ಬಂಡವಾಳವು ೮೦೦ ಮಿಲಿಯ ಮಾರ್ಕುಗಳ ಸ್ಟೀಲ ಕೈಗಾರಿಕೆಯ ಮಧ್ಯಸ್ಥಳ [illegible] ಪಟ್ಟಣ ಕಲ್ಲಿದ್ದಲನ್ನು ಎಸ್ಸೆನ್‌ನಿಂದ ಕೊಂಡುಹೋಗುವರು.

—ಸಿ. ಆರ್. ದಾಸರ ಜೀವನಚರಿತ್ರೆಯನ್ನು ಪ್ರಫುಲ್ಲಚಂದ್ರರಾಯರವರು ಬರೆದಿರುವರು. ಇದರಲ್ಲಿ ಸಿ. ಆರ್. ದಾಸರ ಜೀವನ ಚರಿತ್ರೆ ಮಾತ್ರವಲ್ಲದೆ ಬಂಗಾಳದ ೩೦ ವರ್ಷಗಳ ಹಿಂದಿನ ರಾಜ್ಯಭಾರದ ಚರಿತ್ರೆಯೂ ಅಡಗಿರುವುದು. ಈ ಪುಸ್ತಕವು ಬರುವ ತಿಂಗಳಲ್ಲಿ ಲಂಡನಿನಲ್ಲಿ ಅಚ್ಚಾಗುವದು.

—ತುರ್ಕಿರಾಜ್ಯದಲ್ಲಿರುವ ಫೊರೈನ್ ಆಫೀಸನ್ನು ಅಂಗೋರಕ್ಕೆ ತರುತ್ತಾರೆಂದು ತುರ್ಕಿಯಲ್ಲಿರುವ ಅನ್ಯದೇಶದ ಎಲ್ಲಾ ರಾಯಭಾರಿಗಳಿಗೂ ತುರ್ಕಿ ಸರಕಾರದವರು ತಿಳಿಸಿರುವರು.

—ಇಂಗ್ಲೆಂಡಿನಲ್ಲಿ ಈಗ ಇಡೀ ದೇಶಕ್ಕೆ ವಿದ್ಯುಚ್ಛಕ್ತಿಯನ್ನು ಪಡೆಸುವ ಸುಮಾರು ೫೦೦ ವಿದ್ಯುಚ್ಛಕ್ತಿಯ ಸ್ಟೇಶನುಗಳನ್ನು ತೆಗೆದು ೬೦ ದೊಡ್ಡ ಸ್ಟೇಶನುಗಳನ್ನು ಕಟ್ಟುವರಂತೆ. ಇದರಿಂದ ವರ್ಷಕ್ಕೆ ೫೦ ಮಿಲಿಯ ಪೌಂಡು ಖರ್ಚು ಉಳಿಯುವದಂತೆ! ಇದಕ್ಕಾಗಿ ಒಂದು ಇಲೆಕ್ಟ್ರಿಕ್ ಬೋರ್ಡನ್ನು ನೇಮಿಸುವುದರಲ್ಲಿದ್ದಾರೆ.

—ಫ್ರೆಂಚರಾಜ ಕುಟುಂಬದವರಲ್ಲಿ ಹಿರಿಯ ಮೆಂಬರರಾದ ಡ್ಯೂಕ್ ಒಫ್ ಓರ್ಲಿಯನ್ಸರು ಮರಣಹೊಂದಿದರು!

—ನಮ್ಮ ಮಹಾರಾಜ ಸಾರ್ವಭೌಮರ ಸಹೋದರಿಯರಾದ ಪ್ರಿನ್ಸೆಸ್ ವಿಕ್ಟೋರಿಯಾರವರು ಕಠಿಣ ತರದ ಜ್ವರದಿಂದ ಪೀಡಿತರಾಗಿರುವರು.

—ಈ ವರ್ಷ ಬ್ರಿಟಿಷ್ ಬಜೆಟಿನಲ್ಲಿ ೪ ಮಿಲಿಯ ಪೌಂಡು ಉಳಿಯುವದಂತೆ!

—ಲಂಡನ್ ಪಟ್ಟಣದ ಲೋಯಿಡ ಬ್ಯಾಂಕಿನ ಫೋಟ್ಸಮೌತ ಊರಿನಲ್ಲಿ ಬ್ರಾಂಚ್ ಬ್ಯಾಂಕಿನ ಮ್ಯಾನೇಜರನು ಬಾಗಿಲಲ್ಲಿ ನಿಂತಿದ್ದನಂತೆ! ಆಗ ಒಳ್ಳೇದಾಗಿ ಪೋಷಾಕು ಹಾಕಿಕೊಂಡ ಒಬ್ಬ ಹುಡುಗನು ಬಂದು "ನಿನ್ನ ಮೇಜಿನ ಮೇಲಿರುವ ಹಣವನ್ನು ಕೊಡುತ್ತೀಯೊ ಗುಂಡು ಹೊಡೆಯಬೇಕೊ" ಎಂದು ಕೇಳಿದಕ್ಕೆ ಮ್ಯಾನೇಜರನು ಸ್ವಲ್ಪ ಆಚೆ ನೋಡುವಷ್ಟರಲ್ಲಿ ಬಂದವನು ಮೇಜಿನ ಮೇಲಿದ್ದ ೫೦ ಪೌಂಡಿನ ಒಂದು ನೋಟನ್ನು ಹಿಡಕೊಂಡು ಓಡಿದನು. ಮ್ಯಾನೇಜರನು ಅವನ ಹಿಂದಿನಿಂದ ಓಡಿದನು. ಕಳ್ಳನು ಅಲ್ಲಿಯೆ ಯಾರೋ ಇಟ್ಟಿದ್ದ ಒಂದು ಸೈಕಲನ್ನು ಹತ್ತಿ ಓಡಿದನು. ಅಷ್ಟರಲ್ಲಿ ಒಂದು ಮೋಟರಲಾರಿನವರು ಓಡಿ ಅವನನ್ನು ಹಿಡಿದರು. ಕಳ್ಳನು ಬಿದ್ದಲ್ಲಿಂದ ಎದ್ದು ಕೈಯಲ್ಲಿರುವ ರಿವೊಲ್ವರಿನಿಂದ ಕಾರಿನಲ್ಲಿರುವ ಗಾಜಿನ ಕಿಟಿಕಿಗಳನ್ನೂ ಟಾಯರನ್ನೂ ಗುಂಡು ಹಾರಿಸಿ ಒಡೆದು ಹಾಕಿದನು. ಅಷ್ಟರಲ್ಲಿ ಇನ್ನೊಂದು ಮೋಟರ ಲೋರಿಯಲ್ಲಿ ಬರುತ್ತಿದ್ದ ಒಬ್ಬ ಪೋಲೀಸನವನು ಲೋರಿಯಿಂದ ಕೆಳಗೆ ಹಾರಿ ಕಳ್ಳನೊಡನೆ ಉರುಳಾಡಿ ಅವನನ್ನು ಹಿಡಿದನು.

—ಸಿರಿಯಾ ಮತ್ತು ಪೆಲೆಸ್ಟೈನಿನ ವಿಷಯ ಖಾಸಗಿಯಾಗಿ ಅವುಗಳ ಗವರ್ನರರಾದ ಬೆರನ್ ಪ್ಲೂಮರರೊಡನೆ ಮಾತಾಡಲಿಕ್ಕೆ ಡಿ. ಜುವೆನೆಲ್ಲಿ ಎಂಬ ಫ್ರೆಂಚ ಮಂತ್ರಿಯೊಬ್ಬರು ಜರುಸಲೇಮಿಗೆ ಹೋಗಿರುವರು.

—ತುರ್ಕಿಯಲ್ಲಿ ಒಂದು ಜರ್ಮನ ನ್ಯೂಸ್ ಪೇಪರ ಕಂಪೆನಿಯವರು ಇದ್ದು ತುರ್ಕಿಸ್‌ಪೋಸ್ಟ್ ಎಂಬ ದೈನಿಕ ಪತ್ರಿಕೆಯನ್ನು ಹೊರಡಿಸುವರು.

—ಚೀನಾ ದೇಶದಲ್ಲಿ ಯುದ್ಧವು ಮುಂದರಿಸುತ್ತಲೇ ಇದೆ. ಒಂದು ತಂಡದವರು ರಾಜಧಾನಿಯಾದ ಪೆಕಿಂಗ ಪಟ್ಟಣಕ್ಕೆ ಸೈನ್ಯ ಸಮೇತ ಹೋಗುತ್ತಿರುವರು. ಚೈನಾ ದೇಶದಲ್ಲಿರುವ ರಶ್ಯನರು ಚೈನಾ ದೇಶವನ್ನು ಬಿಟ್ಟು ಹೋಗುತ್ತಿರುವರು.

—ಪೋಲೆಂಡಿಗೂ ರುಮೇನಿಯಕ್ಕೂ ರಾಜಿಕರಾರಾಯಿತು.

—ಪರ್ಸಿಯಾ ದೇಶದಲ್ಲಿ ಅಫಿಮು ಬೆಳೆಸುವ ವಿಧಾನವನ್ನು ನೋಡಲಿಕ್ಕೆ ಲೀಗ್ ಒಫ್ ನೇಶನ್ಸಿನವರು ಕಳುಹಿಸಿದ ಕಮಿಶನಿನವರು ತೆಹರಾನಿಗೆ ಬಂದಿರುವರು.

—ನಮ್ಮ ಯುವರಾಜರವರು ಸೌಖ್ಯವನ್ನು ಹೊಂದುತ್ತಿರುವರು. ಕಿವಿಯ ಹತ್ತಿರ ಸ್ವಲ್ಪ ಒಪರೇಶನ್ ಮಾಡಿದ್ದರು.

—ಇಜಿಪ್ತ ದೇಶದ ಕೈರೊ ಪಟ್ಟಣದಲ್ಲಿ ಬೆಂಕಿ ಹಿಡಿದು ೬೧೨ ಮನೆಗಳು ೨೪ ತಾಸುಗಳ ವರೆಗೆ ಸುಟ್ಟು ಬೂದಿಯಾದವು. ಇದರಲ್ಲಿ ೩೨ ಮಂದಿ ಮಡಿದುಹೋದರು, ೪೦೦೦ ಜನರು ಮನೆಮಾರು ಕಳಕೊಂಡಿರುವರು.

—ಚೀನಾದೇಶದ ಪೆಕಿಂಗ ಪಟ್ಟಣದಲ್ಲಿ ವಿರೋಧ ಪಕ್ಷದವರು ಬಾಂಬುಗಳನ್ನು ವಿಮಾನಗಳಿಂದ ಹಾಕುತ್ತಲೇ ಇರುವರು. ಎರಡೂ ಕಡೆಯವರಿಗೆ ರಾಜಿಯಾಗುವ ಸಂಭವವು ಕಾಣುತ್ತದೆ.

—ಸಿರಿಯಾ ದೇಶದಲ್ಲಿ ಫ್ರೆಂಚರು ಡ್ರೂಸರ ಮುಖ್ಯ ಠಾಣ್ಯವಾಗಿದ್ದ ಜೆರಮನ್ ಪರ್ವತವನ್ನು ಸ್ವಾಧೀನಪಡಿಸಿರುವರು. ಇನ್ನು ಡ್ರೂಸರ ಹಾವಳಿಯು ಕಡಿಮೆಯಾದೀತೆಂದು ಹೇಳಬಹುದು.

—ಸ್ಪೈಯಿನ್ ದೇಶದ ಇಬ್ಬರು ವೈಮಾನಿಕರು ರಾಜಧಾನಿಯಾದ ಮೆಡ್ರಿಡ್‌ನಿಂದ ಹೊರಟು ಫಿಲಿಪ್ಪಾಯಿನ ದ್ವೀಪಗಳಿಗೆ ಹೋಗಲು ಹೊರಟಿರುವರು. ಇವರು ೮ ತಾಸಿನಲ್ಲಿ ಮೆಡ್ರಿಡ್‌ನಿಂದ ಆಫ್ರಿಕದ ಅಲ್‌ಜೀರಸಿಗೆ ಹಾರಿ ಬಂದಿರುವರು.

ಒಳದೇಶ ವರ್ತಮಾನ.

—[illegible] ರೈಲ್ವೆಯ ಮ್ಯಾನೇಜಿಂಗ್ ಡ್ಯಾರೆಕ್ಟರರಾದ ಎ. [illegible] [illegible] ಇನ್ನು ಆಗಬೇಕಾಗಿರುವ ಲ್ಯಾನುಗಳನ್ನು, ಸ್ಟೇಶನುಗಳನ್ನು, ಕೋಟಿ, ಕಡಲ ದಾರಿ ಮತ್ತು [illegible] ಕೊಡಲೆಂದು ಬಹಳ ಬೇಗ ಇಂಗ್ಲೆಂಡಿಗೆ ತೆರಳಿದರು.

—ಮುಂಬಯಿ ಸಂಸ್ಥಾನದಲ್ಲಿದ್ದ ಲೇಬರ್ ಡ್ಯಾರೆಕ್ಟರರ ಹುದ್ದೆಯನ್ನು ತೆಗೆದು ಹಾಕಿರುವರು. ಇನ್ನು ಈ ಕೆಲಸವನ್ನು ಡ್ಯಾರೆಕ್ಟರ್ ಒಫ್ ಇನ್‌ಫೋರ್ಮೇಶನಿನವರೇ ಮಾಡುವರು.

ಜೌರಾ ಸ್ಟೇಶನಿನಲ್ಲಿ ಆದ ರೈಲ್ವೆ ಅಪಘಾತದಲ್ಲಿ ಇಂಜಿನ್ ಡ್ರೈವರನ ಮೇಲೆ ಚಾರ್ಜು ಮಾಡಿರುವರು.

—ಕಳೆದ ೨೮ನೇ ತಾರೀಕಿನಲ್ಲಿ ಖಾದಿ ಪ್ರದರ್ಶನವು ಜರಗಿತು. ಇಂಡಿಯದ ಎಲ್ಲಾ ಭಾಗಗಳಿಂದಲೂ ಉತ್ತಮವಾದ ಖಾದಿ ವಸ್ತ್ರವೂ, ಬಹಳ ಸಲೂಲವಾದ ನೂಲೂ ಬಂದಿದ್ದವು.

—ಮತಾಂತರ ಹೊಂದಿದ ಅಥವಾ ಹೊಂದುವ ಜನರ ಲೆಕ್ಕವನ್ನು ತಯಾರಿಸುವುದಕ್ಕೆ ಡೋಕ್ಟರ್ ಆರ್. ಪಿ. ಪರಾಂಜಪೇಯವರು ಮುಂಬಯಿ ನ್ಯಾಯವಿಧಾಯಕ ಸಭೆಯಲ್ಲಿ ಒಂದು ಬಿಲ್ಲನ್ನು ತರುವರು.

—ಬಂಗಾಳದ ಬಾರಿಸಾಲ ಜಿಲ್ಲೆಯ ಪಟುವಾಕಳಿ ಪಾಟುಖಾಲಿ ಲೋಕಾಶಿಯೆಂಬ ಊರಿನಲ್ಲಿ ಜನರ ಅನುಮತಿಗೆ ವಿರೋಧವಾಗಿ ಯೂಥಿಯನ್ನು ಸ್ಥಾಪಿಸಿದ್ದರಿಂದ ಅವರು ಹೊಸತಾಗಿ ವಿಧಿಸಿದ ಟೇಕ್ಸನ್ನು ಕೊಡುವುದಿಲ್ಲವೆಂದು ನಿರ್ಧರಿಸಿರುವರು.

—ಮೌಲಾನಾ ಶೌಕತ್ ಅಲಿಯವರು ಕಲ್ಕತ್ತಕ್ಕೆ ಬಂದಿರುವರು.

—ಗಿರಗಾಂ ಪೋಲಿಸ್ ಕೋರ್ಟಿನಲ್ಲಿ ಮ್ಯಾಜಿಸ್ಟ್ರೇಟರು ಸಂಚಿ ತನಿಖೆ ಮಾಡುವಾಗ ಒಬ್ಬ ಕೈದಿಯು ಒಂದು ಪಾದರಕ್ಷೆಯನ್ನು ತೆಗೆದು ಮ್ಯಾಜಿಸ್ಟ್ರೇಟರ ಕಡೆಗೆ ಬಿಸಾಡಿದನು. ಆದರೆ ದೈವಸಹಾಯದಿಂದ ಅದು ಅವರಿಗೆ ತಾಗದೆ ಕಿಟಿಕಿಗೆ ತಾಗಿತು. ಈ ತಪ್ಪಿಗಾಗಿ ಆ ಕೈದಿಗೆ ೧೮ ತಿಂಗಳ ಶಿಕ್ಷೆಯನ್ನು ವಿಧಿಸಿದರು.

—ಮಹಾತ್ಮಾಜಿಯವರು ಈಗ ಅಹ್ಮದಾಬಾದಿನಲ್ಲಿಯೇ ಇರುವರು. ಮತ್ತು ಈಗ ಆರೋಗ್ಯದಿಂದಿರುವರು.

—ಮೈಸೂರು ಭಂಗಾರದ ಕಂಪೆನಿಯ ವರ್ಷಾವಧಿ ರಿಪೋರ್ಟಿನಲ್ಲಿ ಕಂಪೆನಿಗೆ ೧೯೨೫ನೇ ಇಸವಿಯಲ್ಲಿ ೩೦೪,೧೫೫ ಪೌಂಡು ಲಾಭವಿದೆಯೆಂದೂ ಪಾಲುಗಾರರಿಗೆ ಶೇಕಡಾ ೨೫ರ ಪ್ರಕಾರ ಮುನಾಫೆ ಸಿಕ್ಕಿಯದೆಂದೂ ಪ್ರಕಟವಾಗಿದೆ.

—ಮುಂಬಾಯಿ ಸಂಸ್ಥಾನದ ಆದಿ ದ್ರಾವಿಡರು (ಮಹಾರ್) ತಮ್ಮನ್ನು ಸೈನಿಕರಾಗಿ ಮೊದಲಿದ್ದಂತೆ ಈಗಲೂ ಕೂಡಿಸಿಕೊಳ್ಳಬೇಕೆಂದು ಇಲ್ಲವಾದರೆ ತಮ್ಮಲ್ಲಿದ್ದ ಯುದ್ಧಶಕ್ತಿಯು ಕಡಿಮೆಯಾಗಿ ನಶ್ಶಹೋಗುವದೆಂದು ಸರ್ವಸೇನಾಧಿಪತಿಗಳಿಗೆ ಒಂದು ಮನವಿಯನ್ನು ಮಾಡಿರುವರು.

—ಡೆರಾಡೂನ್ ಇಲೆಕ್ಟ್ರಿಕ್ ಟ್ರೇಮವೇ ಕಂಪೆನಿಯವರು ಕಂಪೆನಿಯನ್ನು ಮುಚ್ಚಿರುವರವರು.

—ಬೇರಾರನ್ನ ತನಗೆ ಕೊಡಬೇಕೆಂದು ಹೈದರಾಬಾದ ನೈಜಾಮರು ಇಂಡಿಯಾ ಸರಕಾರಕ್ಕೆ ಮಾಡಿದ ಮನವಿಯನ್ನು ತೆಗೆದು ಹಾಕಿರುವರು.

—ಅಲ್ಲಾಹಾಬಾದಿನಲ್ಲಿ ಒಬ್ಬ ರೈಲ್ವೆ ಅಧಿಕಾರಿಯ ಪತ್ನಿಯು ರೈಲ ಪಟ್ಟಿಯನ್ನು ದಾಟಿಕೊಂಡು ಹೋಗುವಾಗ್ಯೆ ಅತ್ಯಂತ ರಭಸದಿಂದ ಆಗಲೇ ಬರುತ್ತಿದ್ದ ರೈಲ್ವೆ ಬಂಡಿಯ ಅಡಿಯಲ್ಲಿ ಬಿದ್ದು ಶೋಚನೀಯವಾದ ಮರಣಕ್ಕೆ ಗುರಿಯಾದಳು.

—ಒರ್ಡಿನೆನ್ಸ ಕಾಯಿದೆ ಪ್ರಕಾರ ಕೈಸೆರೆಮಾಡಲ್ಪಟ್ಟ ಅಂಬಿಕಾಪ್ರಸಾದ ಎಂಬವರೊಬ್ಬರು ಅಲಿಪುರದ ಸೆಂಟ್ರಲ್ ಜೈಲಿನಲ್ಲಿ ಮೈಗೆ ಬೆಂಕಿಯನ್ನು ಹಿಡಿಸಿ ಆತ್ಮಹತ್ಯ ಮಾಡಿಕೊಂಡಿರುವರು.

—ಪಂಜಾಬಿನ ಕೊಂಗ್ರೆಸು ಕಾರ್ಯಕಾರಿ ಕಮಿಟಿಯ ಸಾವಜನಿಕ ಕಾರ್ಯದರ್ಶಿಗಳಾದ ಡೋಕ್ಟರ ಸತ್ಯಪಾಲರಿಗೂ ಮತ್ತು ಲಾಲಾಲಜಪತರಾಯರಿಗೆ ಇವರೊಳಗೆ ವಾದವಿವಾದಗಳು ನಡೆದು ಲಾಲಾಜಿಯವರು ಮತ್ತು ಇತರ ಅನೇಕರು ತಮ್ಮ ಮೆಂಬರಿಕೆಗೆ ರಾಜಿಕೊಟ್ಟಿರುವರು.

—ತಂಜಾವೂರಿನ ಮುನ್ಸಿಪಾಲಿಟಿಯವರು ಅಲ್ಲಿಯ ತರಕಾರಿ ಮಾರ್ಕೇಟಿನ ವ್ಯಾಪಾರಿಗಳ ಮೇಲೆ ತೆರಿಗೆಯನ್ನು ಏರಿಸಿದ್ದಕ್ಕಾಗಿ ಅಲ್ಲಿಯ ವ್ಯಾಪಾರಿಗಳೆಲ್ಲರೂ ಸೇರಿ ನಾಲ್ಕು ದಿನಗಳ ವರೆಗೆ ಮುಷ್ಕರ ಹಿಡಿದ ನಂತರ ಯಾವುದೊಂದು ತರದ ರಿಯಾಯಿತಿ ಮಾಡದಿದ್ದ ಕಾರಣ ಅವರು ತರಕಾರಿಗಳ ಕ್ರಯವನ್ನು ಏರಿಸಿರುವರು.

—ಲಕ್ನೋದಲ್ಲಿ ಸಾಯಂಕಾಲ ಸುಮಾರು ಆರು ಗಂಟೆಯ ಹೊತ್ತಿನಲ್ಲಿ ಆರ್ಯಸಮಾಜದವರ ಮೆರವಣಿಗೆಯು ಅಮೀನಾಬಾದ್ ಪಾರ್ಕಿನಿಂದ ಹೋಗುತ್ತಿರುವಾಗ್ಯೆ ಕೆಲವು ಮಂದಿ ಮಹಮ್ಮದೀಯರು ಅದೇ ಪಾರ್ಕಿನಲ್ಲಿ ಪ್ರಾರ್ಥನೆ ಮಾಡುತ್ತಿದ್ದರು. ಮತದ್ವೇಷವು ಪ್ರಬಲವಾಗಿರುವುದರಿಂದ ಪಾರ್ಕಿನಲ್ಲಿ ದಣಿ ಗೋಂದಲವೆದ್ದಿತು. ಆರ್ಯಸಮಾಜ ಪಂಗಡದ ಕೆಲವು ಮಂದಿ ಪ್ರಾಣಭಯದಿಂದ ಓಡುವವರನ್ನು ಮಹಮ್ಮದೀಯರು ಹಿಡಿದು ನಿಲ್ಲಿಸಿ ಅವರನ್ನು ಬಹಳವಾಗಿ ಹೊಡೆದು ಒಬ್ಬನನ್ನು ಕೊಂದಿದ್ದರು. ನಂತರ ಪೋಲಿಸ್ ವಿಚಾರಣೆಯು ನಡೆದು ಆರು ಮಂದಿ ಮಹಮ್ಮದೀಯರನ್ನು ಶಿಕ್ಷಿಸಿರುವರು.

—ಕಳೆದ ವಾರ ಕಲ್ಕತ್ತದ ಮಡಾರಿಪುರವೆಂಬಲ್ಲಿ ಪ್ರಬಲವಾದ ಸುಂಟರಗಾಳಿ ಎದ್ದು ಸುಮಾರು ೭೩ ಮಂದಿ ಗಾಯಪಟ್ಟವರಲ್ಲಿ ಅನೇಕರು ಮೃತರಾಗಿರುವರು, ಅನೇಕ ಕುಟುಂಬದವರು ಮನೆಮಾರಿಲ್ಲದೆ ಅಲೆದಾಡುತ್ತಿರುವರು.

—ಕಲ್ಕತ್ತದ ಕೋರ್ಪೊರೇಶನಿನ ವಿಶೇಷ ಸಭೆಯೊಂದು ಕಳೆದವಾರ ನಡೆದು, ರಾ॥ ಸೇನಗುಪ್ತರನ್ನೇ ಪುನಃ ಅಲ್ಲಿಯ ಕೋರ್ಪೊರೇಶನಿನ ಅಧ್ಯಕ್ಷರನ್ನಾಗಿ ಚುನಾಯಿಸಿರುವರು.

—ಅಹಮ್ಮದಾಬಾದಿನ ಪಾಲಿಟಾಣಾ ಎಂಬ ಪ್ರಾಂತ್ಯದಲ್ಲಿ ಅಲ್ಲಿಯ ರಾಜರು ಪಾಲಿಟಾಣಕ್ಕೆ ಹೋಗುವ ಯಾತ್ರಿಕರ ಮೇಲೆ ತೆರಿಗೆಯನ್ನು ಹೊರಿಸಿದರಿಂದ ಅಲ್ಲಿಯ ನಿವಾಸಿಗಳೆಲ್ಲರೂ ಒಂದು ಮಹಾ ಹರತಾಳವನ್ನು ಆಚರಿಸಿದರು. ಸಾಯಂಕಾಲ ಒಂದು ಮಹಾಸಭೆ ಜರಗಿ, ಅನೇಕರು ಯಾತ್ರಿಕರ ಮೇಲೆ ಹೇರಿದ ಸುಂಕವನ್ನು ಖಂಡಿಸಿ ಮಾತನಾಡಿ ಅದನ್ನು ತೆಗೆದು ಹಾಕುವರೆ ವೈಸರಾಯರೊಡನೆ ಅಂಗಲಾಚಿಕೊಂಡಿರುವರು.

—ಹರಿದ್ವಾರದಲ್ಲಿರುವ ಗುರುಕುಲದ ವರ್ಧಂತ್ಯೋತ್ಸವವು ಕಳೆದವಾರ ಬಹಳ ಆಡಂಬರದಿಂದ ಜರಗಿತು. ಹಿಂದೂಸ್ಥಾನದ ಎಲ್ಲಾ ಕಡೆಗಳಿಂದ ಸಾವಿರಾರು ಜನರು ಆ ದಿವಸ ನೆರೆದಿದ್ದರು. ಈ ವರ್ಷ ೯೬ ಮಂದಿ ಹೊಸ ಬ್ರಹ್ಮಚಾರಿಗಳನ್ನು ಶಾಲೆಗೆ ಸೇರಿಸಿರುವರು. ಈ ವರ್ಷ ರಜಾಬಾಯಿ [illegible] ಎಂಬವರಿಂದ ವರ್ಷಕ್ಕೆ ರೂ. ೩,೦೦೦ದ ಪ್ರಕಾರ ನಾಲ್ಕು ವರ್ಷಗಳ ವರೆಗೆ ಸಹಾಯದ್ರವ್ಯವನ್ನು ಪಡೆಯುವರು.

—ಇದುವರೆಗೆ ಕಲ್ಕತ್ತೆಯಲ್ಲಿ ಅಖಿಲ ಕರ್ನಾಟಕದ ಜನರ ಗೌರವಕ್ಕೂ ತೀರ್ಥಗಳಿಗೂ ಪಾತ್ರರಾಗಿದ್ದ [illegible] ಎ. ಪಿ. ವರದಾಚಾರ್ಯರವರು ಬೆಂಗಳೂರಿನಲ್ಲಿ ಕಳೆದ ತಾ. ೬ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ಬಹಳ ವಿಷಾದಪಡುತ್ತೇವೆ.

—ಪದಚ್ಯುತರಾದ ಇಂದೋರಿನ ಮಹಾರಾಜರು ವಿಲಾಯತಿಗೆ ತೆರಳುವುದಕ್ಕಾಗಿ ಹಡಗದಲ್ಲಿರುವಾಗ, ಒಬ್ಬ ಪ್ರೆಸ್ಸಿನ ಪ್ರತಿನಿಧಿಯು 'ಇಂದೋರಿನ ಮಹಾರಾಜರ ದರ್ಶನ ಸಿಕ್ಕಬಹುದೊ?' ಎಂದು ಹಡಗದಲ್ಲಿರುವ ಒಬ್ಬ ವ್ಯಕ್ತಿಯ ಕೂಡೆ ಕೇಳಿದನು. ಅದಕ್ಕಾ ವ್ಯಕ್ತಿಯು ಮಹಾರಾಜರಿಗೆ ಸ್ವಲ್ಪ ದೇಹಾಲಸ್ಯವಿರುವುದರಿಂದ ಅವರ ದರ್ಶನ ಸಿಕ್ಕುವುದು ಅಸಾಧ್ಯವೆಂದನು. ಕೊನೆಗೆ ಈ ಪ್ರೆಸ್ಸಿನ ಪ್ರತಿನಿಧಿಯು ಇಂದೋರ್ ಮಹಾರಾಜರ ವಿಷಯ ಹಡಗದಲ್ಲಿರುವ ಇತರರೊಡನೆ ಕೇಳಲಾಗಿ, 'ದರ್ಶನವು ದುರ್ಲಭ' ಎಂದು ಹೇಳಿದವರೇ ಇಂದೋರಿನ ಮಹಾರಾಜರೆಂದು ತಿಳಿದರು.

—ದೇಶದಲ್ಲಿರುವ ಅನೇಕ ರಾಜಕೀಯ ಪಕ್ಷಗಳ ಸಮ್ಮೇಳನವನ್ನು ಮಾಡಿ ಎಲ್ಲಾ ಪಕ್ಷಗಳನ್ನು ಏಕೀಕರಿಸುವ ಬಗ್ಗೆ ಕಳೆದ ವಾರ ಮುಂಬಯಿಯಲ್ಲಿ ಒಂದು ಪರಿಷತ್ತು ಜರಗಿತು. ಇದಕ್ಕೆ ತೇಜ್ ಬಹದೂರ್ ಸಪ್ರುಗಳು ಅಧ್ಯಕ್ಷರಾಗಿದ್ದರು. ಈ ಪರಿಷತ್ತಿನವರು ಅಖಿಲ ಭಾರತದ ರಾಷ್ಟ್ರೀಯ ಪಕ್ಷವನ್ನು ಸ್ಥಾಪಿಸಿರುವರು.

—ಕರ್ನಲ್ ಎಫ್. ಎಚ್. ಜಿ. ಹಚ್ಚಿನ್‌ಸನರು ಮದರಾಸಿನ ಸರ್ಜನ ಜನರಲ್‌ರಾಗಿ ನೇಮಕಹೊಂದಿರುವರು. ಇವರು ಇಂಡಿಯಾ ಗವರ್ಮೆಂಟಿನವರೊಡನೆ ಪಬ್ಲಿಕ್ ಹೆಲ್ತ ಕಮಿಶನರಾಗಿದ್ದರು. ಇವರಿಗೆ ೧೯೨೨ರಲ್ಲಿ ಸಿ. ಐ. ಇ. ಬಿರುದು ಸಿಕ್ಕಿತು.

ದಕ್ಷಿಣ ಕನ್ನಡ.

ಬಂಟವಾಳ:— ಇಲ್ಲಿಯ ಸಬ್ ಇನ್ಸ್‌ಪೆಕ್ಟರರಾದ ರಾ॥ ಪೇಜಾವರ ರಾಮಕೃಷ್ಣರಾಯರಿಗೆ ಮಂಗಳೂರಿಗೆ ಪ್ರೊಸಿಕ್ಯೂಟಿಂಗ್ ಸಬ್ ಇನ್ಸ್‌ಪೆಕ್ಟರರಾಗಿ ವರ್ಗವಾಗಿಯದೆ. ರಾ॥ ಲಕ್ಷ್ಮೀನಾರಾಯಣಯ್ಯನವರು ಬಂಟವಾಳ ಸಬ್ ಇನ್ಸ್‌ಪೆಕ್ಟರರಾಗಿ ಬಂದು ೫ನೇ ತಾರೀಕು ಸೋಮವಾರ ಬೆಳಿಗ್ಗೆ ಚಾರ್ಜು ವಹಿಸಿಕೊಂಡಿರುವರು.

೫ನೇ ತಾರೀಕಿನ ಸಾಯಂಕಾಲ ಇಲ್ಲಿಯ ಎಲ್ಲಾ ಸರಕಾರಿ ಹುದ್ದೇದಾರರೂ, ತಾಲೂಕು ಬೋರ್ಡು ಮೆಂಬರರಾದ ಬಿ. ಎಲ್. ಹಾಮದ್ ಸಾಹೇಬರೂ, ರಾ॥ ಕೊಡಿಯಾಲ ಅನಂತರಾಯರೂ, ಎಲ್ಲೂರು ಸಂಜೀವರಾಯರೂ, ಕೇಶವಮೂರರಾಯರೂ, ಇಲ್ಲಿಯ ಬೋರ್ಡು ಲೋವರ್ ಎಲಿಮೆಂಟರಿ ಶಾಲೆಯಲ್ಲಿ ಸಭೆ ಸೇರಿ ವರ್ಗವಾಗಿ ಹೋಗುವ ರಾ॥ ಪೇಜಾವರ ರಾಮಕೃಷ್ಣರಾಯರಿಗೆ ಧನ್ಯವಾದಗಳನ್ನು ಕೊಟ್ಟರು. ಅನಂತರ ಕೂಡಿದ ಸಭಿಕರಿಗೆ ಫಲಾಹಾರ ತಾಂಬೂಲ, ಪುಷ್ಪಹಾರಗಳನ್ನು ಹಂಚಿ ಸಭೆಯು ಮುಕ್ತಾಯವಾಯಿತು.

೬ನೇ ತಾರೀಕಿನ ಬೆಳಿಗ್ಗೆ ಮೇಲಿನ ಸದ್‌ಗೃಹಸ್ಥರ ಒಂದು ಗ್ರೂಪ್ ಫೋಟೋ ತೆಗಿಯಲಾಯಿತು.

ತಲಪಾಡಿ:— ಇಲ್ಲಿಯ ಹೊಳೆಗೆ ಒಂದು ಸೇತುವೆ ಇಲ್ಲದೆ ಮಂಜೇಶ್ವರಕ್ಕೆ ಮಂಗಳೂರಿನಿಂದ ತರುವ ವ್ಯಾಪಾರಕ್ಕೆ ಬಹಳ ಕಷ್ಟವಾಗುತ್ತದೆ. ಮಳೆಗಾಲದಲ್ಲಿ ಈ ಹೊಳೆಯಲ್ಲಿ ನೀರು ತುಂಬಿ ಸಾಮಾನಿನ ಗಾಡಿಗಳನ್ನು ಕೊಂಡುಹೋಗಲಿಕ್ಕೆ ಬಹಳ ಕಷ್ಟಪಡಬೇಕಾಗುತ್ತದೆ. ಹಾಗೆ ಮಂಗಳೂರು ಸಂಕದ ಎರಡೂ ಕಡೆಗಳಲ್ಲಿ ತೆಗೆದು ಹಾಕಿದ ಈ ತಲಪಾಡಿ ಸಂಕಕ್ಕೆ ಯೋಗ್ಯವಾದ ಕಬ್ಬಿಣದ ಅಡ್ಡಗಳು ಎಷ್ಟೋ ಇವೆ. ಕಂಬಗಳಿಗೆ ಬೇಕಾದ ಶಿಲೆಕಲ್ಲು ತಲಪಾಡಿ ಹೊಳೆಯ ಹತ್ತಿರವೇ ಇವೆ. ಆದುದರಿಂದ ಮಂಗಳೂರು ತಾಲೂಕು ಬೋರ್ಡಿನ ಕಡೆಯಿಂದ ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಮೆಂಬರರಾಗಿರುವವರು ಇದಕ್ಕೊಂದು ಸಂಕವನ್ನು ಮಾಡುವಂತೆ ಸೆಂಕ್ಷನ್ ಮಾಡಿಸಿದರೆ ಊರಿನವರು ಓಟುಕೊಟ್ಟು ಮೆಂಬರರಾಗಿ ಕಳುಹಿಸಿದ್ದಕ್ಕೆ ಸಾರ್ಥಕವಾಗುತ್ತಿತ್ತು.

ಸೋಮೇಶ್ವರ:— ಇಲ್ಲಿಯ ಆದ್ಯ ಭಗವತಿ ದೇವಸ್ಥಾನದಲ್ಲಿ ಜಾತ್ರೆಯು ಬಹಳ ವಿಜೃಂಭಣೆಯಿಂದ ಜರಗಿತು. ಸುಮಾರು ೨-೩ ಸಾವಿರ ಜನರು ನೆರೆಗ್ರಾಮಗಳಿಂದಲೂ, ಮಂಗಳೂರು ಪಟ್ಟಣದಿಂದಲೂ ಬಂದು ನೆರೆದಿದ್ದರು.

ಮಂಜೇಶ್ವರ:— ಶ್ರೀ ಮದನಂತೇಶ್ವರ ದೇವಸ್ಥಾನದ ಕಡೆಯಿಂದ ಸ್ಥಾಪಿಸಿದ ಶ್ರೀ ಮದನಂತೇಶ್ವರ ಹಾಯರ್ ಎಲಿಮೆಂಟರಿ ಶಾಲೆಯ ಕಟ್ಟಡದ ಕೆಲಸವು ನಡಿಯುತ್ತಾ ಇದೆ. ಸರಕಾರದವರು ಹಾಯರ್ ಎಲಿಮೆಂಟರಿ ಶಾಲೆಗಳನ್ನು ತೆಗೆದು ಹಾಕಿರುವುದರಿಂದ ಇನ್ನು ಮುಂದೆ ಈ ಶಾಲೆಯನ್ನು ಮುಚ್ಚಬೇಕಾಗುವುದು. ಇಲ್ಲವಾದರೆ ಅದನ್ನೇ ಸೆಕೆಂಡರಿ ಶಾಲೆಯಾಗಿ ಮಾಡಿ ಫೋರ್ತ ಫೋರ್ಮ ವರೆಗೆ ಇಡಬೇಕಾಗುವುದು. ಎಲ್. ಟಿ. ಹೆಡ್‌ಮಾಸ್ತರನ್ನು ಇಡಬೇಕಾಗುವುದು. ಈಗ ಕಟ್ಟುವ ಶಾಲಾ ಕಟ್ಟೋಣವನ್ನು ಸೆಕೆಂಡರಿ ಶಾಲೆಗೆ ಬೇಕಾದ ನಮೂನೆಯಲ್ಲಿಯೇ ಕಟ್ಟಬೇಕಾಗುವುದು. ಕ್ಲಾಸಿಗೆ ಒಂದು ಕೋಣೆಯನ್ನು ಕಟ್ಟಸಬೇಕಾಗಿದೆ. ಈಗ ಈ ಕಟ್ಟೋಣಕ್ಕೆ ಇಟ್ಟ ಬಾಗಿಲುಗಳನ್ನೂ, ಕಿಟಿಕಿಗಳನ್ನೂ ಎಜ್ಯುಕೇಶನ್ ರೂಲ್ಸಿಗೆ ವಿರೋಧವಾಗಿ ಇಟ್ಟಿರುತ್ತಾರೆ. ಕಿಟಿಕಿ ಬಾಗಿಲುಗಳು ಎದುರು ಎದುರಾಗಿ ಇಡಬೇಕಲ್ಲದೆ, ಕಟ್ಟುವವರ ಮನಬಂದಂತೆ ಇಡುವುದಲ್ಲ. ಒಂದು ಸಾರಿ ಹಜಾರು ಕಟ್ಟಿ, ಖಿದಿಂನ ಭಾವಾಗಿ ಸುಮಾರು ೨ ಸಾವಿರ ರೂಪಾಯಿ ಖರ್ಚಾಯಿತು. ಈಗ ತಿರಿಗಿ ಒಂದು ೭-೮ ಸಾವಿರ ರೂಪಾಯಿ, ಅನಂತರ ಇಲಾಖೆಯವರು ಕಟ್ಟೋಣ ಸರಿಯಲ್ಲ ಇದನ್ನು ರಿಕೊಗ್‌ನ್ಯಾಯಿಜ್ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳಿದರೆ ಇನ್ನೊಂದು ಸಾರಿ ಕಟ್ಟಸಲಿಕ್ಕೆ ಕೆಲವು ಸಾವಿರ ರೂಪಾಯಿ. ಒಟ್ಟಿನಲ್ಲಿ ಮದನಂತೇಶ್ವರನ ಹಣಕ್ಕೆ ಬೆಲೆಯೇ ಇಲ್ಲ!

ಕಾಸರಗೋಡು ಪೋಲೀಸ್ ಸ್ಟೇಶನಿಗೆ ಸೇರಿದ ಗ್ರಾಮಗಳ ಪೈಕಿ ಮೂಗ್ರಾಲ, ಕಣ್ಣೂರು, ಪಟ್ಲ, ಮೈಪೆ, ಬೇಳ, ಯಡನಾಡು ಮತ್ತು ಕೈಪಾಡಿ ಗ್ರಾಮಗಳನ್ನು ಇದೇ ತಿಂಗಳ ತಾ. ೧೫ರಿಂದ ಮಂಜೇಶ್ವರ ಸ್ಟೇಶನಿಗೆ ಕೂಡಿಸುತ್ತಾರಾಗಿ ವರ್ತಮಾನವಿದೆ.

ಕಟ್ಟೆಯಿಂದ ಇದೇ ಕಳೆದ ತಾ. ೩ಕ್ಕೆ ಇಲ್ಲಿಗೆ ಬಂದ [illegible] ರಾ॥ [illegible] ತಾ. [illegible] ಇಲ್ಲಿಯ ದೇವಸ್ಥಾನದಲ್ಲಿ [illegible] ಎಲ್ಲಾ ಬ್ರಾಹ್ಮಣರಿಗೂ [illegible] ತಾ. [illegible] [illegible]

The Canara Public Conveyance Co., Ltd, Mangalore.
(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು {
ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗಿಂದಲ್ಲಿಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು

— ಕೀಲಡ್ಡಿಗೆ ಪದಕ. —

ಈ ಅಡ್ಡಿಗೆಯನ್ನು ರೋಲ್ಡ್ ಗೋಲ್ಡ್ ಎಂಬ ಭಂಗಾರದಲ್ಲಿ ಇಮಿಟೇಶನ್ ವಜ್ರದ ಕಲ್ಲುಗಳನ್ನು ಇಟ್ಟು ನೋಡಲು ಮುದ್ದಾಗಿರುವಂತೆ ತಯಾರಿಸಿದೆ ಮತ್ತು ಇದರ ಹರಳನ್ನು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ತಯಾರಿಸಿದೆ. ಇದನ್ನು ಯಾವಾಗಲು ಕಟ್ಟಿಕೊಳ್ಳಲು ಚೆನ್ನಾಗಿರುವವು. ಎಲ್ಲ ಮಂತಾದವು ಸೇರಿದರೂ ಕೆಡವು. ಇದರ ಬಣ್ಣವು ಎಂದಿಗೂ ಕೆಡದಂತೆ ಸವರನ್ ಬಂಗಾರದ ಬಣ್ಣ ಕೊಟ್ಟಿರುವವು. ಶ್ರೀಮಂತರೂ, ಗರೀಬರೂ ಉಪಯೋಗಿಸಲು ಲಾಯಖಾದದ್ದು. ಕ್ರಯ 1ಕ್ಕೆ 4/8.

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ

— ಡಾಬುಗಳು. —

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿ ಹೊಂದಿದ ಕೆಲಸಗಾರರಿಂದ ಬಹುಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕೊಂಡಿ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ.

ಗೆಜ್ಜೆಡಾಬು 1ಕ್ಕೆ 3—0—0.

— ಇಮಿಟೇಶನ್ ವಜ್ರದ ಬೆಂಡೋಲಿಗಳು. —

ಈ ಬೆಂಡೋಲಿಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವುದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡುವವರು ನಿಜವಾದ ವಜ್ರದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7ಕಲ್ಲಿನ ಬಿಳಿಯ ಓಲೆ ಜೊತೆ 3—0—0.
„ „ ಕೆಂಪುಕಲ್ಲಿನ ಓಲೆ ಜೊತೆ 3—8—0.

ವಿಳಾಸ:—ವೈ. ಎಮ್. ಸ್ವಾಮಿ ಅಂಡ್ ಕೊ.,
ಪಾರ್ಕ್ ಟೌನ್, ಮದ್ರಾಸು.

Y. M. SWAMY & Co.,
No. 12. Nainiappa Naicken St.,
P. Town, MADRAS

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜೆ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಕುಲ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ ೭ ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನೂ ದೂರ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ರದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೫—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ಷರ್ತು ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

[illegible]

Registered No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವನ್ನುಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಳವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೧೬ನೇ ಶುಕ್ರವಾರ ಏಪ್ರಿಲ್ ೧೯೨೬. ಸಂಚಿಕೆ ೧೬.

Th Canara Banking Corporation,
UDIPI, Ltd.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್,
ಉಡುಪಿ, ಲಿಮಿಟೆಡ್.

Head office: UDIPI. Branch: COONDAPOOR.
ಹೆಡ್ ಆಫೀಸು: ಉಡುಪಿ. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000—0—0.
ಚಂದಾ ದಾರರಿಗೆ ಅರ್ಪಿಸಿದ ಮತ್ತು ಎತ್ತಿನ ಮೂಲಧನ	ರೂ. 2,25,000—0—0.
ವಸೂಲಾದ ಮೂಲಧನ	ರೂ. 1,80,690—9—11.
ಆಪದ್ಧನ ವಗೈರೆ ಎತ್ತಗಳು	ರೂ. 75,875—0—0.
ಸಾ. ಸೇ. ೮ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತಾ ಪತ್ರಗಳ ಮೇಲೆ ರೂ.	25,800—0—0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಏವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ವಸೂಲಾದ ಮೂಲಧನ 1,80,690—9—11, ಆಪದ್ಧನ ವ ಇತರ ಎತ್ತಗಳು 75,875—0—0, ಠೇವಣಾತಿಗಳು 5,30,003-14-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಂಗಳಿಗೆ 4700—0—0, ಏವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 40,274—3—11, ಜುಮ್ಲಾ ರೂ. 8,31,543—12—1.

ಆಸ್ತಿ ವ ಸೊತ್ತುಗಳು.

ಹಿತ್ತಲ ಕಟ್ಟೋಣ ಕಬ್ಬಿಣದ ಪೆಟ್ಟಿಗೆಗಳು ವಗೈರೆ 3943—8—0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,58,851—13—8, ಸಾ. ಸೇ. ೮ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತಾ ಪತ್ರಗಳ ಮೇಲೆ 25,800—0—0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4700—0—0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ) 22,795—6—6, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 16,452—15—11, ಜುಮ್ಲಾ ರೂಪಾಯಿ 8,31,543—12—1.

ನಿರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸುದ್ ಠೇವಣಾತಿಗಳನ್ನು ಅಂತು ಠೇವಣಾತಿಗಳನ್ನು ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾಹುಕಾರಿ ಹುಂಡಿಗಳನ್ನೂ, ವಸೂಲು ಮಾಡುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿಂ.

N. Anand Rao,
Secretary.

ಲಿವರ್ ಮೂವ್‌ಮೆಂಟ್ ವಾಚ್
15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0, ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.
ಎಲಾರ್ಮ್ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.
"ಏ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟೈಮ್—ಪಾಕ್ ವಾಚ್ 1ರ ಕ್ರಯ „ 2—12—0
[illegible] ಟ್ಯಾಮ್‌ಪೀಸ [illegible] ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. [illegible] ಡಜನ್ 1ರ ಕ್ರಯ ರೂ. 9—4—0.

Emerald Watch Co.,
P. T. MADRAS.

ಅಪೂರ್ವ ಸಂದರ್ಭ.

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For
Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುಧಾರಿತ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್, ಮುಂಬಯಿ

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.
109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— **SWAN HOUSE,**
P. B. 508, P. T. MADRAS.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯು

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್ — ಗ್ರಂಥಕರ್ತರು

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂಡ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ಬೈಲು ಬೆರ್ಜಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ನೋಹನ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ದುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ಪಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಜಣ್ಣಗಳು, ಜಾಕ ಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲು 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

11 ಮಣಿಗಳಿದ್ದು ಬ್ರಿಜ್ ಮ್ಯೂವ್‌ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8
18 ಕೆರೆಟು ಇಲೆಕ್ಟ್ರೋ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ರಾಮ್‌ಪೀಸ ರೂ. 2-4-0
9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0
9 ,, ,, ,, 32—0—0.
ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
184 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಸ್ಚರ್ ಪಿಲ್ಸ್ — ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕೂರ್ ಆರ್ ಬಾಮ್ — ತಲೆನೋವು, ದಾಹ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಟೈಫಿಯಾ ಮಿಕ್ಸ್ಚರ — ಟಾಂಕಿಫೇಡ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪.
ಬಾಟ್ಲಿವಾಲರ ಕ್ವಿನೀನ ಚೀಟುಗಳು — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು — ಧಾತು ಪುಷ್ಟಿಕರ. ರೂ. ೧—೩—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦ "AGENTS WANTED"
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್,
Sayani Road, P. O. Cadell Road, Bombay, No. 14.

ಸಣ್ಣ ಹುಡುಗರ ಸಲುವಾಗಿ!

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ರಾಶಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3-0-0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	,, 2-8-0.
,, ಸ್ಥಳೀಕರಿಗೆ ...	,, 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ಅತೀಹವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು. ಎಡಿಟರ್,

ಬಿ. [illegible]ಯ್ಯಗೌಡ,
ಅರ್ಥಸಾಧಕ ಪತ್ರಿಕೆ,
[illegible], ಬೆಂಗಳೂರು, [illegible]

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1½ ಮಳ ಅಗಲ ರೂ. 1½ರಿಂದ 2 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2½ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2½ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಮನ್ [illegible] ಮುಡಿಗಳೂ ಶಾಮುಡಿಗಳು, ಕಾಶೀ ಪೀತಾಂಬರಗಳು, ಜುಬ್ಬಿನ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಚಾಪುಂಟಿ, ಕಾಳ, ಪಶ್ಮೀರ್‌ಶಾಲ, ಹಿತ್ತಾಳೆಯ ಆಟದ ಸಾಮಾನುಗಳು, ಪೋಟೋ ಆಲಂಗರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವವು. ಕ್ಯಾಟಲಾಗ್ ಇನಾಂ.

ವಿಳಾಸ—

ತಿರುಮಣಿ ಯು. [illegible]
ಮತ್ತು ಕಂಪೆನಿ, [illegible], [illegible] ಕ್ಷೇತ್ರ.

ಶಾಲಿವಾಹನಶಕೆ ೧೮೫೮ನೆಯ ಕ್ಷಯ ಸಂವತ್ಸರದ ನಿಜ ಚೈತ್ರ ಶು॥ ೫ ಶನಿವಾರದಿಂದ ಕ್ಷಯ ಸಂವತ್ಸರದ ನಿಜ ಚೈತ್ರ ಶು॥ ೧೧ ಶುಕ್ರವಾರದ ವರೆಗಿನ ಪಂಚಾಂಗ.

(೧೯೩೬ನೆಯ ಮಾನ ಸುಗ್ಗಿ.)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಗೋಚರರಾಶಿ	ಸೂರ್ಯ ಉ.	ಸೂರ್ಯ ಅಸ್ತ.
17	ಶನಿ	೫	೨೬.೪೦	ಮೃಗಶಿರಾ	೪೮.೪೪	೪	6.19	6.42
18	ರವಿ	೬	೨೮.೪೬	ಆರ್ದ್ರಾ	೪೨.೪೫	೫	6.18	6.42
19	ಸೋಮ	೭	೩೨.೧೪	ಪುನರ್ವಸು	೪೬.೪೬	೬	6.18	6.42
20	ಕುಜ	೮	೩೬.೩೨	ಪುಷ್ಯ	೫೩.೪೪	೭	6.17	6.43
21	ಬುಧ	೯	೪೧.೨೮	ಆಶ್ಲೇಷಾ	೬೦. ೦	೮	6.16	6.43
22	ಗುರು	೧೦	೪೬.೨೬	ಆಶ್ಲೇಷಾ	೬.೩೨	೯	6.16	6.43
23	ಶುಕ್ರ	೧೧	೫೧.೧೬	ಮಘಾ	೧೨.೪೪	೧೦	6.15	6.43

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
9	91—3	76—6	—	—
10	92—0	75—8	—	—
11	91—2	73—4	—	—
12	98—6	73—4	—	—
13	90—5	72—3	—	—
14	89—9	73—2	—	—
15	91—2	75—8	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ	8— 4	9— 0
ಹೊಸ ಗುಡ್ಡ ...	7— 8	8— 4
ಹೊಸ ರಾಶಿ ...	6—13	7— 8
ಅವ್ವಲ್ ಬೆಳ್ತಿಗೆ ...	8—0	9— 0
ರಂಗೂನು ಬೆಳ್ತಿಗೆ ಗೋಣಿ ೧ ...	13— 0	14— 0
ಗೋಧಿ ಗೋಣಿ ೧ಕ್ಕೆ ...	18— 0	19— 8
ಹುರುಳಿಗೋಣಿ ೧ಕ್ಕೆ ...	7—14	8— 4
[illegible]ಗೋಣಿ ೧ಕ್ಕೆ ...	13— 0	13— 8
ತೊಗರಿಗೋಣಿ ೧ಕ್ಕೆ ...	15— 4	15— 8
ತೊಗರಿಬೇಳೆ ಗೋಣಿ ೧ಕ್ಕೆ ...	16— 8	23— 0
ಉದ್ದು ಗೋಣಿ ೧ಕ್ಕೆ ...	15— 8	—
ಹೆಸರುಗೋಣಿ ೧ಕ್ಕೆ ...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ ...	60— 0	65— 0
ಉಪ್ಪು ಗೋಣಿ ೧ಕ್ಕೆ ...	4— 8	4—12
ಕೊಬ್ಬರಿ ಖಂಡಿ ೧ಕ್ಕೆ ...	96— 0	100— 0
ಕೊಪ್ಪರಿ ಹಿಂಡಿ ಖಂಡಿ ೧ಕ್ಕೆ ...	30— 0	32— 0
ಎಳ್ಳಿಂಡಿ ಖಂಡಿ ೧ಕ್ಕೆ ...	55— 0	65— 0
ಕೊಬ್ಬರಿ ಎಣ್ಣೆ ಮಣ ೧ಕ್ಕೆ ...	7— 9	7—10
ಎಳ್ಳೆಣ್ಣೆ ಮಣ ೧ಕ್ಕೆ ...	7— 8	9— 0
[illegible] ಎಣ್ಣೆ ಡಬ್ಬಿಗೆ ೧ಕ್ಕೆ ...	8-12-0	—
ಮೋರಿಸ ಸಕ್ಕರೆ ಮಣ ೧ಕ್ಕೆ ...	4— 4	4 — 6
ಊರ ಮೆಣಸಿನಕಾಯಿ ಮಣ ೧ಕ್ಕೆ ...	5—8	5 —12
ಸಾಸಿವೆ ಮುಡಿ ೧ಕ್ಕೆ ...	9— 0	—
ಕೊತ್ತಂಬರಿ ಮುಡಿ ೧ಕ್ಕೆ ...	3— 8	4— 6
[illegible] ಖಂಡಿ ೧ಕ್ಕೆ ...	345— 0	360— 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	265— 0	270— 0
ಹೊಸ ಅಡಿಕೆ ಖಂಡಿ ೧ಕ್ಕೆ ...	185— 0	200— 0
ಕಾಳುಮೆಣಸು ಖಂಡಿ ೧ಕ್ಕೆ ...	263— 0	—
ಯಾಲಕ್ಕಿ ಮಣ ೧ಕ್ಕೆ ...	50— 0	64— 0
ಗೇರುಬೀಜ ಮುಡಿ ೧ಕ್ಕೆ ...	3— 2	—
[illegible] ಖಂಡಿ ೧ಕ್ಕೆ ...	45— 0	65— 0
[illegible] ಮಣ ೧ಕ್ಕೆ ...	16— 4	16—12
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	21— 0	—
[illegible] ಸೇರು ೧ಕ್ಕೆ ...	18—10	
ಹಿತ್ತಾಳೆ [illegible] ಮಣ ೧ಕ್ಕೆ ...	16— 8	
ಪವನು	13— 6	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಚೈನಾ ಬಜಾರ್, ರೋಡ್, ಮದ್ರಾಸು.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,
ಮಂಗಳೂರು.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವದಕ್ಕೂ ಒಂದು ದೇಹದ ಮರ್ಮಶಾಸ್ತ್ರವು ಇರುವುದು ಅಂಥಾ ಪುಸ್ತಕವು ನಿಮಗೆ ಗೊತ್ತುಂಟೊ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.
ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಪ್ರಾಡ್ವೇ, ಮದ್ರಾಸ್.

ಇಂಗ್ಲೀಷು ಡಾಕ್ಟರುಗಳು ರಬ್ಬರಿನಲ್ಲಿ ತಯಾರಿಸಲ್ಪಟ್ಟ,

ಸುಖಾನಂದ

ಎಂಬ ಮರ್ಮದ ಚೀಲವು.

ಈ ಪ್ರಪಂಚದಲ್ಲಿ ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷು ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವುದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಗಂಡಸರದು ರೂ. 0-12-0. ಹೆಂಗಸರದು ರೂ. 3-4-0.

ವಿಳಾಸ—ಎಸ್. ಪಾಲ್ ಅಂಡ್ ಕೊ,
ಪಿ. ಬಿ. ನಂಬರ್ 542,
ಪಾರ್ಕ್‌ಟೌನ್ ಮದ್ರಾಸು.

ಮೊಗವೀರ ಶ್ರೀ ಜ್ಞಾನೋದಯ ಸಮಾಜದ ಹದಿನಾರನೇ ವಾರ್ಷಿಕೋತ್ಸವವೂ ಶಾಲಾ ವರ್ಧಂತ್ಯುತ್ಸವವೂ.

ಕಳೆದ ಬುಧವಾರ ಸೌರಯುಗಾದಿ ದಿವಸ ಮ॥ ರಾ॥ ರಾವ್‌ಸಾಹೇಬ್ ಕೆ. ರಂಗರಾಯರವರ ಅಧ್ಯಕ್ಷತೆಯಲ್ಲಿ ಬಹಳ ಸಂಭ್ರಮದಿಂದ ನೆರವೇರಿಸಲ್ಪಟ್ಟಿತು. ಅಂದು ಬೆಳಿಗ್ಗೆ ಸೂರ್ಯೋದಯಕಾಲದಲ್ಲಿ ಸಮಾಜದ ಸುಮಾರು ನೂರ ಐವತ್ತು ಸದಸ್ಯರು ಸಮುದ್ರ ಬದಿಯಲ್ಲಿ ಕೂಡಿ ಸ್ನಾನ, ಹೋಮ, ಸಂಧ್ಯಾವಂದನೆಗಳನ್ನು ಮಾಡಿ, ಪ್ರತಿ ಒಬ್ಬರೂ ಪ್ರಮಾಣಗಳನ್ನು ಉಚ್ಚರಿಸಿ ತಮ್ಮ ಮಧ್ಯಪಾನತ್ಯಾಗ ವ್ರತವನ್ನು ನವೀಕರಿಸಿಕೊಂಡರು. ಪ್ರಾತಃ ೯ ಘಂಟೆಗೆ ಜ್ಞಾನೋದಯ ಶಾಲಾ ವಿದ್ಯಾರ್ಥಿಗಳಿಂದ ವಿವಿಧ ಸಂಘದಾಟಗಳನ್ನು ಮಾಡಿಸಿ, ಅವರಿಗೆ ಫಲಹಾರ ಪಾನಕಗಳನ್ನು ಹಂಚಲಾಯಿತು.

ಸಾಯಂಕಾಲ ೪॥ ಘಂಟೆಗೆ ಸರಿಯಾಗಿ ತಳಿರುತೋರಣಗಳಿಂದಲೂ ವಿವಿಧ ಧ್ವಜಪತಾಕೆಗಳಿಂದಲೂ ಅಲಂಕೃತವಾದ ಜ್ಞಾನೋದಯ ಮಂದಿರದಲ್ಲಿ ಮೊಗವೀರ ಸ್ತ್ರೀಪುರುಷ ಬಾಲಬಾಲಕಿಯರ ಮಹಾಸಭೆಯು ನೆರೆದು ಬಂತು. ಸಭಾಮಂದಿರವೆಲ್ಲ ಜನಸಮೂಹದಿಂದ ಕಿಕ್ಕಿರಿದುಹೋಗಿ ಎಷ್ಟೋ ಜನರು ಕಿಟಕಿ ಬಾಗಿಲುಗಳ ಹಿಂದೆ ನಿಲ್ಲಬೇಕಾಯಿತು. ಪ್ರಥಮತಃ ವೈದಿಕ ಮಂತ್ರಘೋಷದಿಂದ ಈಶ್ವರ ಸ್ತುತಿ ಪ್ರಾರ್ಥನಾದಿಗಳು ಮಾಡಲ್ಪಟ್ಟು ಸಭಾಕಾರ್ಯಗಳು ಪ್ರಾರಂಭವಾದವು. ವಿದ್ಯಾಲಯದ ವಾರ್ಷಿಕ ವರದಿಯು ಮುಖ್ಯೋಪಾಧ್ಯಾಯರಾದ ಶ್ರೀ. ಕೆ. ಮಹಾಲಿಂಗ ಪಂಡಿತರಿಂದ ಓದಲಾಗಿ ಯೋಗ್ಯ ವಿದ್ಯಾರ್ಥಿಗಳಿಗೆಲ್ಲ ಅಧ್ಯಕ್ಷರ ಮೂಲಕ ವಿವಿಧ ಪಾರಿತೋಷಕಗಳು ಕೊಡಲಾದವು. ಸಮಾಜದ ವಾರ್ಷಿಕ ವರದಿಯನ್ನು ಶ್ರೀಯುತ ಮೋಹನಪ್ಪ ತಿಂಗಳಾಯರು ಓದಿದರು. ತರುವಾಯ ಸಮಾಜದ ಕಾರ್ಯದರ್ಶಿಯವರು ಸಭಿಕರಿಗೆ ಕೆಲ ವೀರ ಮದ್ಯಪಾನ ತ್ಯಾಗಿಗಳ ಪರಿಚಯಮಾಡಿಸಿಕೊಟ್ಟರು. ಇವರಲ್ಲಿ ಬೆಂಗರೆಯ ರಾ॥ ತಿಮ್ಮಪ್ಪ ಕರಿಯದಣ್ಣಾಯರು —"ಹಾಲ್ಕೈದು ವರ್ಷಗಳ ಮೊದಲು ಮದ್ಯಪಾನಾಸಕ್ತನಾಗಿದ್ದ ತನಗಾದ ದುರವಸ್ಥೆಯನ್ನು ಹೇಳಿ ಸಮಾಜಕ್ಕೆ ಸೇರಿದ ನಂತರ ಆ ಕೆಟ್ಟ ಅಭ್ಯಾಸವು ಬಿಟ್ಟುಹೋಯಿತೆಂದೂ ಅದರ ಜೀಕ್ಯದಲೆಯೊಂದಿಗೆ ಉದ್ದದ ಹೊಗೆಸೊಪ್ಪು ತಿನ್ನುವ ಮತ್ತು ಕ್ಷಣಕ್ಷಣಕ್ಕೂ ಬೀಡಿ ಸಿಗರೇಟು ಎಳೆಯುವ ಅಭ್ಯಾಸಕ್ಕೆ ಬಲಿಬಿದ್ದು ತನ್ನ ಜೀರ್ಣಶಕ್ತಿಯು ಕೆಟ್ಟುಹೋಗಿ ವಿವಿಧ ರೋಗಗಳಿಗೆ ಗುರಿಯಾಗಿಹೋದರೂ ಮತ್ತೂ ಮತ್ತೂ ಆ ಅಭ್ಯಾಸವನ್ನು ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಮಾಡುತ್ತಿದ್ದೆನೆಂತಲೂ ಕಳೆದ ವರುಷ ಸಮಾಜದ ಒಂದು ಸಭೆಯಲ್ಲಿ ತಾನು ಪ್ರಮಾಣಮಾಡಿ ಒಂದೇ ಸಲ ಆ ಅಭ್ಯಾಸವನ್ನು ತ್ಯಾಗಮಾಡಿಬಿಟ್ಟೆನೆಂದೂ, ಈಗ ತನ್ನ ಜೀರ್ಣಶಕ್ತಿಯು ಅಭಿವೃದ್ಧಿಯಾಗಿ ಪೂರ್ಣ ಸೌಖ್ಯದಲ್ಲಿ ಇದ್ದೇನೆಂದೂ" ತಿಳಿಸಿದರು.

ಅನಂತರ ಸಭಾಧ್ಯಕ್ಷರು—ಸ್ತ್ರೀ ವಿದ್ಯಾಪ್ರಚಾರ, ಬಾಲವಿವಾಹ ನಿಷೇಧ, ಮದ್ಯಪಾನ ತ್ಯಾಗ, ಇತ್ಯಾದಿ ವಿಷಯಗಳಲ್ಲಿ ಸ್ಫೂರ್ತಿದಾಯಕವೂ ಮನೋರಂಜಕವೂ ಆದ ಭಾಷಣಮಾಡಿ, ಜ್ಞಾನೋದಯ ವಿದ್ಯಾಲಯದಲ್ಲಿ ಮೊಗವೀರ ಸ್ತ್ರೀ ವಿದ್ಯಾರ್ಥಿಗಳ ಸಂಖ್ಯೆಯು ಪ್ರಕೃತ ೩೧ ಇದ್ದು ಈ ಶಾಲೆಯಲ್ಲಿ ಉತ್ತೀರ್ಣರಾಗಿ ಹೋದ ಕೆಲ ವಿದ್ಯಾರ್ಥಿನಿಗಳು ಸೆಕೆಂಡರಿ ಶಾಲೆಯಲ್ಲಿ ಕಲಿಯುತ್ತಿರುವುದು, ಮೊಗವೀರರ ಐಳಿಗೆಯ ಕುಟುಂಬಿಕೆಯಿಂದೂ, ಕಳೆದ ಮೂರು ನಾಲ್ಕು ವರುಷಗಳಿಂದ, ಸಮಾಜಕ್ಕೆ ಸಿಕ್ಕುವ ಧನಸಹಾಯವು ತೀರ ಕಡಿಮೆಯಾಗಿ ಸಮಾಜದ ದ್ರವ್ಯಭಂಡಾರವು ಬರಿದಾಗಿಹೋದದ್ದು ತನಗೆ ವ್ಯಸನವನ್ನುಂಟುಮಾಡುತ್ತಿದೆಯಾದರೂ, ಸಮಾಜದಲ್ಲಿದ್ದ ಜ್ಞಾನಭಂಡಾರಕ್ಕೂ ತ್ಯಾಗಪೂರ್ವಕವಾದ ಕಾರ್ಯಶೀಲತೆಗೂ ಅಷ್ಟೊಂದು ಕೊರತೆ ಇಲ್ಲದೆ, ವಾರ್ಷಿಕ ವರದಿಯಿಂದ ತೋರುವ, ಅದರ ವಿವಿಧ ಕಾರ್ಯಸಿದ್ಧಿಯ ವಿಜಯೋವಾರ್ತೆಗಳು ತನ್ನನ್ನು ಆನಂದಗೊಳಿಸುತ್ತಿದೆಯೆಂದೂ, ಸಮಾಜದವರ ಧರ್ಮಬುದ್ಧಿ, ಈಶ್ವರಭಕ್ತಿ, ವಿಶ್ವಾಸಗಳೇ ಅವರ ಉದ್ದೇಶಸಿದ್ಧಿಗೆ ಕಾರಣವಾಗಿ ಮೊಗವೀರರು ಭಾರತಮಾತೆಯ ವೀರಪುತ್ರರಾಗಲೆಂದು ಹರಸಿದರು.

ತರುವಾಯ ಗಣಪತಿ ಹೈಸ್ಕೂಲಿನ ಉಪಾಧ್ಯಾಯರಾದ ಬಿ. ಕೃಷ್ಣಯ್ಯನವರು ಈ ಸಂದರ್ಭಕ್ಕಾಗಿ ತಯಾರಿಸಿದ ಸತೀ ಸಂಯುಕ್ತೆ ಎಂಬ ಚಿಕ್ಕ ನಾಟಕವನ್ನು ಶಾಲಾ ವಿದ್ಯಾರ್ಥಿಗಳಿಂದ ಆಡಿ ತೋರಿಸಲಾಯಿತು. ನಟರ ಪೈಕಿ ಶರದಿನಿಯ ಪಾತ್ರಮಾಡಿದ ಸೇಚಮ್ಮ ಎಂಬ ಎಂಟು ವರುಷ ಪ್ರಾಯದ ಬಾಲಕಿಯ ಅಭಿನಯವು ಸಭಿಕರಿಗೆ ಆಶ್ಚರ್ಯಗೊಳಿಸಿತು. ಇವಳಿಗೂ, ಸಂಯುಕ್ತೆ ಮತ್ತು ಹಾಸ್ಯಗಾರ ಪಾತ್ರವಹಿಸಿದ ಇನ್ನಿಬ್ಬರು ಚಿಕ್ಕ ವಿದ್ಯಾರ್ಥಿಗಳಿಗೂ, ಸಭಿಕರಲ್ಲಿ ಕೆಲವರು ಬಹುಮಾನಗಳನ್ನು ಕೊಟ್ಟರು.

ನೋಟೀಸು.

೧೯೩೬ನೇ ಇಸ್ವಿ ಮಾರ್ಚಿ ತಾರೀಕು ೨೭ನೆಯ ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆ ಮಾಡಿದ ಪ್ರಕಾರ ಈ ಕೆಳಗೆ ಕಾಣಿಸಿದ ಅಸಾಮಿಯವರ ಬಾಬ್ತು ಚಿನ್ನ ಬೆಳ್ಳಿಯ ಆಭರಗಳು ಮಿಜಾರ ಗಣೇಶ ಪೈಗಳ ಆಫೀಸಿನ ಎದುರುಗಡೆಯಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿಬಂದ ಐವೇಜಿನಲ್ಲಿ ಈ ಕೆಳಗೆ ಕಾಣಿಸಿದ ಪ್ರಕಾರ ಅಸಲು ಬಡ್ಡಿ ಮತ್ತು ಇತರ ಖರ್ಚು ಸಹಾ ಕಳದು ಕಮ್ಮಿ ಬಿದ್ದ ಐವೇಜಿನ ವಿವರವು ಈ ಕೆಳಗೆ ಕಾಣಿಸಿದ ಪ್ರಕಾರ ಆಯಾಯ ಅಸಾಮಿಯವರು ಕಮ್ಮಿ ಬಿದ್ದ ಐವೇಜು ಈ ವಿಷಯದಲ್ಲಿ ಬಿಟ್ಟ ನೋಟೀಸಿನಲ್ಲಿ ಕಾಣಿಸಿದ ಪ್ರಕಾರ ನೋಟೀಸು ತಲ್ಪಿದ ಒಂದು ವಾರದೊಳಗೆ ಯಾವ ವಿಧದಿಂದಲೂ ಹಣ ಪಾವತಿ ಮಾಡುವರೆ ತಪ್ಪಿದರೆ, ಆ ವಿಷಯದಲ್ಲಿ ನಾನು ಮಾಡುವ ಸಕಲ ದಾವೆಯ ಖರ್ಚಿಗೆ ಆಯಾಯ ಅಸಾಮಿಯವರು ಜವಾಬ್ದಾರರಾಗಿರುತ್ತಾರೆ.

ಹಳೇಮುಚ್ಚಿ ಬಜಾರ ಚೆರಿಯ ಪಾಂಡೆಲ್ ಅಬ್ದುಲ್‌ಕಾದ್ರಿ ಬ್ಯಾರಿ ಮಗ ಇಸ್ಮಾಯಿಲ್ ಬ್ಯಾರಿಯ ಆೈಟಮ್ ೪ ರಾ। ಬಾಬ್ತು ಅಸಲು ಬಡ್ಡಿ ಇತರ ಖರ್ಚು ರೂ. ೧೩೪—೯—೦, ಏಲಮಿನಲ್ಲಿ ಹುಟ್ಟಿಬಂದ ಮೊಬಲಗು ೧೩೪—೦—೦, ಬಾಕಿ ಬರತಕ್ಕ ಮೊಬಲಗು ೦—೯—೦.

ಗೋಳಿಕಟ್ಟೆ ಬಜಾರ ಮೈದಿನ್ ಬಾರಿ ಮಗ ಎಮ್. ಅಹಮದ್ ಬಾವ ಬ್ಯಾರಿಯ ಆೈಟಮ್ ೧ ರಾ। ಬಾಬ್ತು ಅಸಲು ಬಡ್ಡಿ ಇತರ ಖರ್ಚು ರೂ. ೩೭—೪—೦, ಏಲಮಿನಲ್ಲಿ ಹುಟ್ಟಿಬಂದ ಮೊಬಲಗು ೩೭—೦—೦, ಬಾಕಿ ಬರತಕ್ಕ ಮೊಬಲಗು ೦—೪—೦.

ಬಿಕರ್ನಕಟ್ಟೆಯಲ್ಲಿರುವ ಮಂಜೇಶ್ವರ ಪಾಂಡ್ರಂಗ ಪ್ರಭುಗಳವರ ಮಗ ಗಣಪತಿ ಪ್ರಭುಗಳ ಆೈಟಮ್ ೩ ರಾ। ಬಾಬ್ತು, ಅಸಲುಬಡ್ಡಿ ಇತರ ಖರ್ಚು ರೂ. ೭೩—೩—೦, ಏಲಮಿನಲ್ಲಿ ಹುಟ್ಟಿಬಂದ ಮೊಬಲಗು ೬೯—೦—೦, ಬಾಕಿ ಬರತಕ್ಕ ಮೊಬಲಗು ೪—೩—೦.

ಗೋಳಿಕಟ್ಟೆ ಬಜಾರ ಶೇಕಲ ಬ್ಯಾರಿಯ ಮಗ ಅಬ್ದುಲ್ಲ ಬ್ಯಾರಿಯ ಆೈಟಮ್ ೧ ರಾ। ಬಾಬ್ತು ಅಸಲುಬಡ್ಡಿ ಇತರ ಖರ್ಚು ರೂ. ೧೧೩—೧೧—೦, ಏಲಮಿನಲ್ಲಿ ಹುಟ್ಟಿಬಂದ ಮೊಬಲಗು ೧೦೮—೦—೦, ಬಾಕಿ ಬರತಕ್ಕ ಮೊಬಲಗು ೫—೧೧—೦.

-ಮಿಜಾರ ತಿಮ್ಮಪ್ಪ ಪೈ.

ಜಪಾನದೇಶದ ಸ್ತ್ರೀಯರ ಉದ್ಯೋಗಗಳು.

ಯಾವ ದೇಶದಲ್ಲಿ ಸ್ತ್ರೀಯರು ಯೋಗ್ಯ ವಿದ್ಯಾಭ್ಯಾಸವನ್ನು ಪಡೆದು ದೇಶಸೇವಾಕಾರ್ಯಗಳಲ್ಲಿ ತತ್ಪರರಾಗಿದ್ದು, ಪುರುಷರು ಮಾಡುವಂಥಾ ಕೆಲಸಗಳಲ್ಲಿ ಸಹಭಾಗಿಗಳಾಗುತ್ತಾರೋ ಆ ದೇಶದಲ್ಲಿ ಸಮೃದ್ಧಿ ಉಂಟಾಗದಿರದು. ಉದಾಹರಣೆಗಾಗಿ ಜಪಾನಿನ ಪರಿಸ್ಥಿತಿಯನ್ನು ನೋಡೋಣ. ಇಲ್ಲಿ ಸ್ತ್ರೀಯರು ನಿರಂತರವು ಉದ್ಯೋಗದಲ್ಲಿಯೇ ಇರಲು ಆಸಕ್ತರಾಗಿರುವರು. ಬಡಸ್ತ್ರೀಯರಿಗಂತು ಯಾವದಾದರೊಂದು ವೃತ್ತಿಯನ್ನು ಕೈಕೊಳ್ಳದೆ ತಮ್ಮ ಜೀವನಮಾಡಲು ಬೇರೆ ಉಪಾಯವಿರದು. ಶ್ರೀಮಂತ ಸ್ತ್ರೀಯರು ಬೇಕಾದಷ್ಟು ಹಣ ವೆಚ್ಚಮಾಡಿ ತಮ್ಮ ಇಚ್ಛೆಯಂತೆ ಸುಖಪಡಬಹುದಾದರೂ, ಅವರು ಅಂಥ ಸುಖಗಳಿಗೆ ತಿಲಾಂಜಲಿಯನ್ನಿತ್ತು ಯಾವದಾದರೊಂದು ವೃತ್ತಿಯನ್ನು ಮಾಡುತ್ತಿರುವರು.

ಈ ದೇಶದ ಯಾವದೊಂದು ಹಳ್ಳಿಯಲ್ಲಿಯಾಗಲಿ ನಾವು ಸದಾಕಾಲವೂ ಕಪ್ಪಾದ ಹೊಗೆಯನ್ನು ಬಿಡುತ್ತಿರುವ ಕಾರಖಾನೆಯ ಚಿಮಿಣಿಗಳನ್ನು ಕಾಣಬಹುದು. ಈ ಚಿಹ್ನೆಯು ದೇಶದಲ್ಲಿ ತುಂಬ ಕೈಗಾಂಕೆಲಸವಿರುವುದೆಂದು ಸೂಚಿಸುತ್ತದೆ. ಅಧಿಕಾಂಶ ಸ್ತ್ರೀಯರು ತಮ್ಮ ತಮ್ಮ ಗಂಡಂದಿಯರು ಮಾಡುವಂಥಾ ಫೋಟೋಗ್ರಾಫಿಕ್, ಲಿಥೋಗ್ರಾಫಿಕ್ ಮುಂತಾದ ಕೆಲಸಗಳಲ್ಲಿ ಸಹಭಾಗಿಗಳಾಗಿರುವರು. ದೇಶದಲ್ಲಿರುವ ಎಲ್ಲಾ ಕ್ಷೌರಿಕರ ಅಂಗಡಿಗಳಲ್ಲಿ ಸ್ತ್ರೀಯರೇ ಕ್ಷೌರವೃತ್ತಿಯನ್ನು ಮಾಡುತ್ತಿರುವರು.

ಕಾರಖಾನೆಗಳಲ್ಲಿ, ಅಂಗಡಿಗಳಲ್ಲಿ ಮತ್ತು ವ್ಯವಸಾಯದಲ್ಲಿ ಕೆಲಸ ಮಾಡುತ್ತಿರುವವರ ಕುರಿತು ವಿಶೇಷವೇನೂ ಹೇಳಬೇಕೆಂತಿಲ್ಲ. ಇವರು ಇತರ ದೇಶದ ಕೆಲಸಗಾರರಂತೆಯೇ ಇರುವರು. ಆದರೆ ಇವರಲ್ಲಿ ಒಂದು ಲಕ್ಷಣವು ಮಾತ್ರ ಹೆಚ್ಚಿನದಾಗಿರುವುದು. ಅದು ಯಾವುದೆಂದರೆ—ಎಂಥ ಕೀಳು ಕೆಲಸದವನೇ ಆಗಲಿ; ಅವನು ಪ್ರಾಥಮಿಕ ಶಿಕ್ಷಣವನ್ನು ಸಂಪೂರ್ಣವಾಗಿ ಹೊಂದಿದವನಾಗಿರುವನು. ಈ ದೇಶದಲ್ಲಿ ಬಡವನಾಗಲಿ ಅಥವಾ ಶ್ರೀಮಂತನಾಗಲಿ; ಸ್ತ್ರೀಯಾಗಲಿ ಅಥವಾ ಪುರುಷನಾಗಲಿ ಧರ್ಮಾರ್ಥವಾಗಿ ಕೊಡಲ್ಪಡುವಂಥ ಪ್ರಾಥಮಿಕ ಶಿಕ್ಷಣವನ್ನು ಪ್ರತಿಯೊಬ್ಬನೂ ಪಡೆಯಬೇಕು. ಈ ತರದಲ್ಲಿ ಆರು ವರ್ಷಗಳ ವರೆಗೆ ಧರ್ಮಾರ್ಥವಾಗಿ ಕೊಡಲ್ಪಡುವ ಶಿಕ್ಷಣವು ನಮ್ಮ ದೇಶದ ಮೆಟ್ರಿಕ್ಯುಲೇಶನ್ ಶಿಕ್ಷಣದಷ್ಟೇ ಯೋಗ್ಯವಿರುವುದು. ಈ ಕಾರಣದಿಂದಲೇ ಇಲ್ಲಿ ಕೆಲಸಗಾರರು ತಮ್ಮ ತಮ್ಮ ಉದ್ಯೋಗವನ್ನು ಬಹಳ ಯೋಗ್ಯರೀತಿಯಿಂದಲೂ ಮತ್ತು ಶ್ರದ್ಧೆಯಿಂದಲೂ ಮಾಡಲು ಸಮರ್ಥರಿರುವರು. ಕಾರಖಾನೆಗಳಲ್ಲಿ ಕೆಲಸಮಾಡುವವರ ಮುಂದಾಳುಗಳು ಹೆಚ್ಚಾಗಿ ಸ್ತ್ರೀಯರೇ ಆಗಿರುವರು. ಹಾರ್ಮೋನಿಯಮ್ ಮುಂತಾದ ರಾಗದ ಪೆಟ್ಟಿಗೆಗಳನ್ನು ತಯಾರು ಮಾಡುವ ಕಾರಖಾನೆಗಳಲ್ಲಿ ಸ್ತ್ರೀಯರೇ ಹೆಚ್ಚಾಗಿದ್ದು, ಸ್ವರವನ್ನು ಪರೀಕ್ಷಿಸುವಂಥ ಕೆಲಸಗಳನ್ನು ಅಲ್ಲಿ ಸ್ವರದ ವಿಷಯ ಕಲಿಸುವ ಕಾಲೇಜುಗಳಲ್ಲಿ ತೇರ್ಗಡೆಯಾದ ಸ್ತ್ರೀಯರೇ ಆಗಿರುವರು.

ನೇಯಿಗೆ, ಹೊಲಿಗೆ, ಕೃತಿಮ ಹೂವುಗಳನ್ನು ಮಾಡುವಿಕೆ ಮುಂತಾದುವುಗಳನ್ನು ಸ್ತ್ರೀಯರೇ ಮಾಡುತ್ತಲಿದ್ದು ಹೇರಳ ದ್ರವ್ಯಸಂಪಾದನೆ ಮಾಡುವರು. ನಮ್ಮ ದೇಶದಲ್ಲಿಯೂ ಕೂಡ ಇಂಥ ಕೆಲಸವನ್ನು ಮಾಡುವವರು ಅನೇಕರಿರುವರು. ಆದರೆ ನಮ್ಮ ದೇಶದ ಕೆಲಸಗಾರರಲ್ಲಿ ಮತ್ತು ಜಪಾನ ದೇಶದ ಕೆಲಸಗಾರರಲ್ಲಿ ವಿಶೇಷವಾದ ವ್ಯತ್ಯಾಸವಿರುವುದು. ಅದು ಯಾವುದೆಂದರೆ ಇಲ್ಲಿಯ ನೇಯಿಗೆ ಮತ್ತು ಹೊಲಿಗೆ ಕೆಲಸಮಾಡುವವರು ಈ ವೃತ್ತಿಯನ್ನು ಕಲಿಸುವ ದೇಶದಲ್ಲಿರುವ ಯಾವುದಾದರೊಂದು ಕಾಲೇಜಿನಲ್ಲಿ ಸರ್ಟಿಫಿಕೇಟು ಹೊಂದಿದವರಾಗಿರುವರು. ನಮ್ಮ ದೇಶದಲ್ಲಿ ಈ ತರದ ವೃತ್ತಿ ಶಿಕ್ಷಣವನ್ನು ಕೊಡುತ್ತಿರುವ ಒಂದೇ ಒಂದು ಶಾಲೆ ಇರುವುದಿಲ್ಲ. ಸ್ತ್ರೀಯರು ತಮ್ಮ ವಿವಹವೃತ್ತಿಯನ್ನು ತೀರಿಸಿದ ನಂತರ ಟೆಂಕಿಟೆಟ್ಟಿಗೆಯನ್ನು ಮಾಡುವುದರಲ್ಲಿ ಆಸಕ್ತರಾಗಿದ್ದು, ಅದು ಆದ ಹಾಗೆಯೇ ಕಾರಖಾನೆಯವರಿಗೆ ಕೊಟ್ಟು ತಮ್ಮ ಮಜೂರಿಯನ್ನು ಪಡಕೊಂಡು, ವ್ಯರ್ಥವಾಗಿ ಕಾಲಹರಣ ಮಾಡುವಂಥ ಸಮಯದಲ್ಲಿ ಕೂಡ ದ್ರವ್ಯಸಂಪಾದನೆ ಮಾಡುವರು.

ಹುಡುಗಿಯರು ಟೈಪ್‌ರೈಟಿಂಗ್ ವೃತ್ತಿಯನ್ನು ಹುಡುಗರಕ್ಕಿಂತಲೂ ಚೆನ್ನಾಗಿ ಮಾಡಬಲ್ಲರು. ಈ ಕಾರಣದಿಂದ ದೇಶದಲ್ಲಿರುವ ದೊಡ್ಡ ದೊಡ್ಡ ಮಳಿಗೆಗಾರರು ಸ್ತ್ರೀಯರನ್ನೇ ಟೈಪ್‌ರೈಟಿಂಗ್ ವೃತ್ತಿಗಾಗಿ ನೇಮಿಸುತ್ತಾರೆ. ಇತರ ದೇಶಗಳಲ್ಲಿದ್ದಂತೆ ಅಸ್ಪತ್ರೆಯ ಶುಶ್ರೂಷೆಗಳನ್ನು ಮಾಡಲು ಇಲ್ಲಿ ಕೂಡ ಸ್ತ್ರೀಯರೇ ಇರುವರು. ಈ ವರ್ಗದವರ ಉಡುಪು ಬಿಳುಪಾಗಿದ್ದು ಇವರನ್ನು ನಾವು ಬೇರೆ ವರ್ಗದವರಿಂದ ಸುಲಭವಾಗಿ ಪ್ರತ್ಯೇಕಿಸಬಹುದು. ಇವರು ತಮ್ಮ ಉದ್ಯೋಗವನ್ನು, ಈ ವೃತ್ತಿಯನ್ನು ಹೇಳಿಕೊಡುವ ಶಾಲೆಗಳಲ್ಲಿ ಕಲಿತವರಾಗಿದ್ದು ಸರ್ಟಿಫಿಕೇಟುವುಳ್ಳವರಾಗಿರುವರು. ಇಂಥ ಸರ್ಟಿಫಿಕೇಟು ಇಲ್ಲದೆ ಇರುವವರನ್ನು ಎಲ್ಲಿಯೂ ಅಂಗೀಕರಿಸುವುದಿಲ್ಲ. ರೈಲ್ವೆ ಸ್ಟೇಶನುಗಳಲ್ಲಿಯೂ ಪೋಸ್ಟು ಆಫೀಸುಗಳಲ್ಲಿಯೂ ಸಾಮಾನ್ಯ ನೌಕರಿಯ ಮತ್ತು ಟೆಲಿಫೋನ್ ಸ್ಟೇಶನುಗಳಲ್ಲಿಯೂ ಸಂಪೂರ್ಣವಾಗಿ ಸ್ತ್ರೀಯರೇ ಕೆಲಸಮಾಡುತ್ತಿರುವರು. ಇಂಥ ಕೆಲಸಗಳು ಬಹಳ ವಿಕಲಕ್ಷದವುಗಳಾಗಿರುವುದರಿಂದ ಇವನ್ನು ನಿರ್ವಹಿಸಲು ಶಾಂತ ಮತ್ತು ಸಮಾಧಾನಕರವಾದ ಗುಣವು ಅವಶ್ಯಕವು. ಇವು ಸ್ತ್ರೀಯರಲ್ಲಿ ಹೆಚ್ಚಾಗಿರುವುದರಿಂದ ಇಂಥ ಕೆಲಸಗಳನ್ನು ಸ್ತ್ರೀಯರಿಗೆ ವಿನಹಾ ಪುರುಷರಿಗೆ ಕೊಡಲಾಗುವುದಿಲ್ಲ. ಜನರ ಪಾಂಡಿತ್ಯ ಮತ್ತು ಪ್ರಭೋದವು ಅಭಿವೃದ್ಧಿಯಾಗಲೂ ಅಲ್ಲಿ ಹೆಚ್ಚಿನ ಆಶಯ ಇರುವುದು.

ಪತ್ರಿಕಾಕರ್ತರಲ್ಲಿ ಅನೇಕ ಮಂದಿಗಳು ಸ್ತ್ರೀಯರಾಗಿದ್ದು, ನಾನಾ ದೇಶಗಳನ್ನು ಸಂಚಾರಮಾಡುತ್ತಲಿದ್ದು ಅನೇಕರು ರಾಜತಂತ್ರದಲ್ಲಿ ಪ್ರವೀಣರಾಗಿರುವರು. ಇಡೀ ಜನಾಂಗಕ್ಕೆ ವೃದ್ಧಿಯನ್ನು ಮತ್ತು ಶ್ರೇಯಸ್ಸನ್ನು ತರುವ ಒಂದು ವರ್ಗ ಇರುವುದು; ಈ ವರ್ಗದವರು ಶಾಲೆ, ಕಾಲೇಜುಗಳಲ್ಲಿ ಶಿಕ್ಷಣವನ್ನು ಕೊಡುವ ಅಧ್ಯಾಪಕ ವರ್ಗದವರು. ಈ ವರ್ಗದಲ್ಲಿಯೂ ಕೂಡ ಸ್ತ್ರೀಯರೇ ಹೆಚ್ಚಾಗಿ ಕೆಲಸವನ್ನು ಮಾಡುತ್ತಾರೆ.

ಸಾರ್ವಜನಿಕ ಕೆಲಸದ ಅನೇಕಾನೇಕ ಸಂಘಗಳಲ್ಲಿ ಸ್ತ್ರೀಯರೇ ಪ್ರಮುಖರಿದ್ದು ಮತಸಂಬಂಧವಾದ ಕೆಲಸಗಳಿಗೂ ಕೂಡ ಸ್ತ್ರೀಯರೇ ಮುಖ್ಯ ಆಧಾರರಾಗಿರುವರು. ಜಪಾನಿನಲ್ಲಿರುವ ಎಲ್ಲಾ ಸಂಘಗಳಲ್ಲಿ ಶ್ರೇಷ್ಠವಾದ ಸಂಘವು 'ಸ್ತ್ರೀಯರ ದೇಶಸೇವಾ ಸಂಘ'ವೆಂಬುದು. ಮಾತೃದೇಶಸೇವೆಯನ್ನು ಮಾಡಲಿಚ್ಛಿಸುವವರು ಈ ಸಂಘದ ಮೆಂಬರರಾಗಿ ಸೇರತಕ್ಕದ್ದು. ಈ ಸಂಘದವರ ಕೇಂದ್ರಸ್ಥಾನವು ಟೋಕಿಯೋದಲ್ಲಿದ್ದು, ಇದರ ಅನೇಕ ಉಪಸಂಘಗಳು ದೇಶದ ಅನೇಕ ಭಾಗಗಳಲ್ಲಿ ಹರಡಿಕೊಂಡಿರುವವು. ಸಾಧಾರಣ ಸಮಯದಲ್ಲಿ ಈ ಸಂಘದವರು ಸಮಾಜಸುಧಾರಣೆಯ ಕೆಲಸ ಮಾಡುತ್ತಲಿದ್ದು ಯುದ್ಧದ ಸಮಯದಲ್ಲಿ ಸೇನೆಯ ಒಳ್ಳಿತದ ಕೆಲಸವನ್ನು ಮಾಡುವರು. ಈ ರೀತಿಯಲ್ಲಿ ಜಪಾನಿನ ಪ್ರತಿಯೊಬ್ಬ ಸ್ತ್ರೀಯು ತನ್ನಿಂದ ಕೊಡುವಷ್ಟು ದೇಶಸೇವೆ, ಮತಸೇವೆ, ಸಮಾಜಸೇವೆ ಮಾಡುತ್ತಲಿರುವಳು.

ನಮ್ಮ ದೇಶದ ಸ್ತ್ರೀಯರ ಪರಿಸ್ಥಿತಿಯು ಎಷ್ಟು ಶೋಚನೀಯವಾದದ್ದು ಅಧಿಕಾಂಶ ಸ್ತ್ರೀವರ್ಗ ವಿದ್ಯಾಭ್ಯಾಸದ ಗಂಧವೇ ಇರದು. ಮಿಕ್ಕ ಉಳಿದವರಿಗೆ ಅಲ್ಪಸ್ವಲ್ಪ ವಿದ್ಯೆ ತಿಳಿದಿದ್ದರೂ ಅದರಿಂದ ಸಮಾಜಕ್ಕೆ ಯಾವ ಪ್ರಯೋಜನವನ್ನು ಲಭಿಸಲು ಅಶಕ್ತರಾಗಿರುವರು. ಜಪಾನಿನಲ್ಲಿ ಸ್ತ್ರೀಯರಿಂದ ದೇಶದ ಸಮೃದ್ಧಿಕಾರ್ಯವು ನಡೆಯುವುದು. ಸ್ತ್ರೀಯರು ಪುರುಷರ ಸಮವಿರುವರು. ನಮ್ಮ ದೇಶದಲ್ಲಿಯೂ ಕೂಡ ಸ್ತ್ರೀಯರು ತಕ್ಕ ವಿದ್ಯಾಭ್ಯಾಸವನ್ನು ಪಡೆದು ಪುರುಷರು ಮಾಡುವಂಥಾ ಕಾರ್ಯಗಳಲ್ಲಿ ಸಹಭಾಗಿಗಳಾಗಿದ್ದರೆ, ನಮ್ಮ ದೇಶದ ಸ್ಥಿತಿಯು ಎಷ್ಟೋ ಉತ್ತಮ ಸ್ಥಿತಿಗೆ ಬರುತ್ತಿತು. ಜಪಾನ ದೇಶದ ಸ್ತ್ರೀಯರ ನಡವಳಿಕೆಗಳನ್ನು ಆದರ್ಶವಾಗಿಟ್ಟುಕೊಂಡು ನಡೆಯಲು ಅರ್ಹವಾಗಿರುವವು.

ವಿವಿಧ ವಿಷಯಗಳು.

ಕಿವುಡ ಮತ್ತು ಮೂಕರಿಗೆ ಶಿಕ್ಷಣ.

ಹಿಂದುಸ್ಥಾನದಲ್ಲಿ ಸುಮಾರು ೨,೦೦,೦೦೦ ಕಿವುಡರು ಮತ್ತು ಮೂಕರು ಇರುವರು. ಈ ಪೈಕಿ ಬಂಗಾಲದಲ್ಲಿ ೩೩,೦೦೦ ಕಿವುಡರು ಮತ್ತು ಮೂಕರು ಇರುವರು. ಈ ೩೩,೦೦೦ ಕಿವುಡಮೂಕರಲ್ಲಿ ಬರೇ ೧೫೦ ಮಂದಿಗಳೇ ಬಂಗಾಲದ ಕಿವುಡ ಮತ್ತು ಮೂಕರ ಶಾಲೆಯಲ್ಲಿ ಶಿಕ್ಷಣ ಪಡೆಯುವರೆಂದು ಆ ಶಾಲೆಯ ಮುಖ್ಯ ಅಧ್ಯಾಪಕರಾದ ಎ. ಆರ್. ಚಾಟರ್ಜಿಯವರು ಈ ಶಾಲೆಯ ವರ್ಧಂತ್ಯುತ್ಸವದ ಭಾಷಣದಲ್ಲಿ ಹೇಳಿರುವರು.

ಕೊಲಂಬೊದಲ್ಲಿ ಕಳ್ಳತನ.

ಕೊಲಂಬೊವಲ್ಲಿ ದಾಸನಯಾಕ ಎಂಬವನೊಬ್ಬನು ವರ್ಷ ಒಂದಕ್ಕೆ ನಾಲ್ಕು ಲಕ್ಷ ತೆಂಗಿನಕಾಯಿಗಳನ್ನು ಒಬ್ಬ ಚೆಟ್ಟಿಯಾರನಿಗೆ ಒದಗಿಸಿಕೊಡುವುದಕ್ಕಾಗಿ ಕೆಲವು ಶರ್ತಗಳನ್ನು ಮಾಡುವ ಬಗ್ಗೆ ನಾಲ್ಕು ಸಾವಿರ ರೂಪಾಯಿಗಳನ್ನು ಹಿಡಕೊಂಡು ಆ ಚೆಟ್ಟಿಯಾರನ ಮನೆಗೆ ಹೋದನು. ಚೆಟ್ಟಿಯಾರನು ಬಂದವನ್ನು ಕುಳ್ಳಿರಿಸಿ ಇಸ್ಪೀಟು ಆಡಲು ಪ್ರೇರೇಪಿಸಿ ಅವನ ಕೈಯಲ್ಲಿ ಮೂರು ಕಾರ್ಡುಗಳನ್ನು ಕೊಟ್ಟು ಇಬ್ಬರು ಆಟಕ್ಕೆ ಕೂತುಕೊಂಡರು ಆಟದ ಶರ್ತ ಮುಂತಾದುವುಗಳನ್ನು ಹೇಳದೆ ಚೆಟ್ಟಿಯಾರನು ಪಕ್ಕನೆ ದಾಸನಯಾಕನ ಕೈಯಲ್ಲಿದ್ದ ನಾಲ್ಕು ಸಾವಿರ ರೂಪಾಯಿಯ ಗಂಟನ್ನು ಕಸಿದುಕೊಂಡು 'ಅದು ನನ್ನ ಪಾಲಿಗೆ ಬಂದದೆ' ಎಂದು ಪಲಾಯನಮಾಡಲು ಪ್ರಾರಂಭಿಸಿದನು. ಓಡುವವನನ್ನು ಪೋಲೀಸ್‌ನವರು ಕೈದು ಮಾಡಿ ೨೦೦ ರೂಪಾಯಿ ಜಾಮೀನಿನ ಮೇಲೆ ಬಿಟ್ಟಿರುವರು.

ನಾಗರಹಾವಿನ ಕಡಿತಕ್ಕೆ ಜಲಚಿಕಿತ್ಸೆ.

ಭಾವನಗರದ ಬಾತಮಿದಾರರೊಬ್ಬರು ಹಿಂದೂ ಪತ್ರಿಕೆಗೆ ಬರೆದಿರುವುದೇನೆಂದರೆ:—ಇತ್ತಲಾಗೆ ಒಂದು ದಿನ ಭಾವನಗರ ಸಂಸ್ಥಾನದ ಧಂಡೇರಿಯಾ ಗ್ರಾಮದಲ್ಲಿ ವಾಸಮಾಡುತ್ತಿದ್ದವನೊಬ್ಬನು, ಹಾವಿನ ಕಡಿತದಿಂದ ಪ್ರಜ್ಞೆತಪ್ಪಿ ಬಿದ್ದಿದ್ದನು. ಇವನ ತಲೆಗೆ ಬಕೆಟ್ಟುಗಳ ತುಂಬ ನೀರನ್ನು ಸುರಿಯುತ್ತ ಬಂದ ಮೇಲೆ ಅವನಿಗೆ ಪ್ರಜ್ಞೆಬಂದ ಚಿಹ್ನೆಗಳು ಕಾಣಿಸಿಕೊಂಡವು. ಆಗ ಅವನು 'ನನಗೆ ಬಹಳ ಚಳಿಯಾಗುತ್ತಿದೆ ನೀರನ್ನು ಸುರಿಯಬೇಡಿರಿ' ಎಂದು ಕೂಗಿಕೊಂಡನು. ಬಳಿಕ ಅವನಿಗೆ ಸಕ್ಕರೆಗೆ ಬದಲಾಗಿ ಉಪ್ಪನ್ನು ಸೇರಿಸಿದ ಕಾಫಿಯನ್ನು ಕೊಟ್ಟು ಇಬ್ಬರು ಕೈಹಿಡಿದುಕೊಂಡು ಅತ್ತಿತ್ತ ನಡೆಸಿದರು. ಹೀಗೆ ಮೂರುಗಂಟೆ ಸಮಯದ ಮೇಲೆ ಅವನ ಪ್ರಾಣವು ಉಳಿಯಿತು. ಹೀಗೆ ಅನೇಕರು ನಾಗರಹಾವಿನ ಕಡಿತಕ್ಕೆ ತಲೆಯ ಮೇಲೆ ನೀರು ಸುರಿಯುದೇ ಅನುಕೂಲವಾದ ಚಿಕಿತ್ಸೆಯಾಗಿ ಕಂಡುಬಂದಿದೆ ಎಂದೂ ಈ ಬಾತಮಿದಾರರೇ ನಾಗರಹಾವು ಕಡಿತದ ಒಬ್ಬ ಮನುಷ್ಯನಿಗೆ ಈ ಚಿಕಿತ್ಸೆಯಿಂದ ಪ್ರತ್ಯಕ್ಷವಾಗಿ ನೋಡಿರುವೆನೆಂದು ಹೇಳಿರುವರು. [ಹೆಲ್ತ]

ಹೆಚ್ಚು ಮಾತನಾಡುವುದು ಮತ್ತು ಓದುವುದು.

ಅನಾವಶ್ಯವಾಗಿ ಮಾತಾಡುವುದರಲ್ಲಿ ನಮ್ಮ ನರಗಳ ಶಕ್ತಿಯು ತಗ್ಗುವುದು. ಬಲಹೀನರು ಅಧಿಕವಾಗಿ ಮಾತಾಡಕೂಡದು. ನಾವು ಮಲಗಿಕೊಳ್ಳುವಾಗ ಒಂದು ಗಂಟೆಯ ಕಾಲಕ್ಕೆ ಮೊದಲಿನಿಂದಲೇ ಮಿತಭಾಷಿಗಳಾಗಬೇಕು ಹೆಚ್ಚು ಮಾತಾಡಿದರೆ ನಿದ್ರೆಯು ಬಾರದು. ರೋಗಿಗಳ ಹತ್ತಿರ ಅಧಿಕಕಾಲ ನಿಂತಿರಬಾರದು ಮತ್ತು ಹೆಚ್ಚು ಮಾತಾಡುವ ಸ್ವಭಾವವುಳ್ಳವರನ್ನು ರೋಗಿಯ ಹತ್ತಿರ ಸೇರಲೂ ಬಿಡಬಾರದು. ಬುದ್ಧಿಗೆ ವಿಶೇಷ ಕೆಲಸವನ್ನು ಕೊಡದೆ ಸ್ವಲ್ಪವಾಗಿ ಓದಿಗುವುದು ಉತ್ತಮ ವಿನೋದವಾದ ನಾವಲುಗಳನ್ನಾಗಲಿ ಅಥವಾ ಅಂದವಾದ ಸಣ್ಣ ಕಥೆಗಳನ್ನಾಗಲಿ ಓದುವುದು ಒಳ್ಳೆಯದು. ಮುಖ್ಯವಾಗಿ ಅದು ನಮ್ಮ ದೇಹಕ್ಕೆ ಆಯಾಸ ಉಂಟುಮಾಡಬಾರದು.

ಅನನ್ವಯವಾದ ವಿವಾಹಗಳ ಫಲ.

ಕಲ್ಕತ್ತಾದ ಬಳಿ ಒಂದು ಗ್ರಾಮದಲ್ಲಿ ಗೋಪಾಲಚಂದ್ರ ಬಾನರ್ಜಿಯೆಂಬ ವೃದ್ಧನು ಚಿಕ್ಕ ವಯಸ್ಸಿನ ಹೆಂಗಸನ್ನು ಮದುವೆಮಾಡಿಕೊಂಡಿದ್ದನು. ಆಕೆಯು ತನ್ನ ಗಂಡನ ತಮ್ಮನ ಮಗನೊಡನೆ ಪರಸ್ಥಳಕ್ಕೆ ಓಡಿಹೋಗಲು ಪ್ರಯತ್ನಪಟ್ಟಳೆಂದು ಗಂಡನು ಆಕೆಯನ್ನು ಹಿಂದಕ್ಕೆ ಕರತಂದು ಆಕೆಯ ತಲೆಕೂದಲನ್ನೆಲ್ಲಾ ಕತ್ತರಿಸಿ ಹಾಕಿ ಕೈಕಾಲುಗಳಿಗೆ ಹಗ್ಗವನ್ನು ಬಿಗಿದು ನಿರ್ಬಂಧದಲ್ಲಿಟ್ಟನು. ಇವನ ಹಿರೇ ಹೆಂಡತಿಯ ವಿಧವಾ ಮಗಳು ಕನಿಕರಪಟ್ಟು ಚಿಕ್ಕಮ್ಮನ ಮೈಕಟ್ಟನ್ನು ಬಿಚ್ಚಿದಳು. ಕೂಡಲೆ ಆಕೆಯು ತನ್ನ ಬಟ್ಟೆಗೆ ಸೀಮೆ ಎಣ್ಣೆಯನ್ನು ಹೊಯ್ದು ಬೆಂಕಿಹೊತ್ತಿಸಿಕೊಂಡು ಮೃತಪಟ್ಟಳು. ಈಗ ಗಂಡನನ್ನು ಪೋಲಿಸಿನವರು ದಸ್ತಗಿರಿ ಮಾಡಿರುವರು.

ಬಂಟವಾಳ ಗುರ್ಪುರ ಮಾರ್ಗ.

(ಬಂಟವಾಳದಿಂದ ಪೊಳಲಿಗೆ ಪ್ರಯಾಣ).

ಬಂಟವಾಳದಿಂದ ಗುರ್ಪುರ ಮಾರ್ಗವೆಂದು ಇದಕ್ಕೆ ಹೆಸರಿದ್ದರೂ ಈ ಮಾರ್ಗವು ನಿಜವಾಗಿ ೧೮ನೇ ಮೈಲು ಕಲ್ಲಿನ ಹತ್ತಿರದಿಂದ ಮೂಡಗ್ರಾಮದ ಇಗರ್ಜಿಗಾಗಿ ಹೋಗುತ್ತದೆ. ಮಂಗಳೂರಿಗೆ ಹೋಗುವ ಮಾರ್ಗದಿಂದ ಈ ಮಾರ್ಗವನ್ನು ಇಗರ್ಜಿ ವರೆಗೆ ಇಗರ್ಜಿಕಡೆಯಿಂದ ಮಾಡಿಸಿದ್ದರು. ಇಗರ್ಜಿಯ ಹತ್ತಿರದಿಂದ ಕಳ್ಳಿಗೆ ಬಂಗ್ಲೆಯ ವರೆಗೆ ಬಂಟವಾಳ ಸಾಹುಕಾರ ಕೃಷ್ಣಪ್ರಭುಗಳು ಮಾಡಿಸಿದ್ದರು. ಈ ಕಳ್ಳಿಗೆ ಬಂಗ್ಲೆಯ ನಂತರ ಬೋರ್ಡಿನವರು ಮಾಡಿಸಿದ ಮಾರ್ಗವು ಮನುಷ್ಯರಿಗೂ, ಗಾಡಿಗಳಿಗೂ, ಸ್ಕೂಕಲುಗಳಿಗೂ, ಮೋಟರಕಾರುಗಳಿಗೂ ಹೋಗಲಿಕ್ಕೆ ಅಸಾಧ್ಯವಾದ ಇಳಿಜಾರಾದ ಮಾರ್ಗವಾಗಿದೆ. ಈ ಇಳಿಜಾರಿನ ಮಾರ್ಗವನ್ನು ತೆಗೆದು ೨ನೇ ಮೈಲು ೭ನೇ ಫರ್ಲಾಂಗಿನ ಹತ್ತರದಿಂದ ಇದನ್ನು ಕೆಳಗಿನಿಂದ ತೆಗೆದುಕೊಂಡು ಹೋಗಿ ಸುಮಾರು ೩ನೇ ಮೈಲು ೭ನೇ ಫರ್ಲಾಂಗಿನ ಹತ್ತರ ಕೂಡಿಸಿದರೆ ಮಾರ್ಗವು ಒಳ್ಳೇದಾದೀತು. ಈ ದಾರಿಯಲ್ಲಿ ಮಾರ್ಗವನ್ನು ಕೊಂಡು ಹೋಗಲಿಕ್ಕೆ ಸ್ಥಳ ಎಕ್ವಾಯರ್ ಮಾಡುವ ಅಗತ್ಯವಿಲ್ಲ. ಸರಕಾರಿ ಖಾಲಿ ಸ್ಥಳವಾಗಿದೆ. ೬ನೇ ಫರ್ಲಾಂಗಿನಿಂದ ೪ನೇ ಮೈಲು ೧ ಫರ್ಲಾಂಗಿನ ವರೇಗೆ ಮಾರ್ಗವನ್ನು ಇಷ್ಟರ ವರೆಗೆ ಮಾಡಿಸಲೆ ಇಲ್ಲ. ನಾಲ್ಕನೇ ಮೈಲು ಕಲ್ಲನ್ನು ಒಂದು ಪಾಂಪಿಗೆ ಹಾಕಿರುತ್ತಾರೆ. ಇದರ ನಂತರ ಪೊಳಲಿ ದೇವಸ್ಥಾನದ ವರೆಗೆ ತಡದ ಮಾರ್ಗವು ಬಹಳ ಒಳ್ಳೇದಾಗಿದೆ. ಇದನ್ನು ಸರ್ವೆ ಮಾಡಿ ಎಸ್ಟಿಮೇಟ್ ಮಾಡಿದ ಇಂಜಿನಿಯರರ ಬುದ್ಧಿವಂತಿಕೆಯನ್ನು ಎಷ್ಟು ಹೊಗಳಿದರೂ ಸಾಲದು. ಇದು ಹಳ್ಳಿಯ ಮಾರ್ಗವಾದರೂ ಟ್ರಂಕ್ ರೋಡಿನಂತೆಯೇ ಆಗಿದೆ. ಚಡಾವುಗಳೆ ಇಲ್ಲ. ತಿರ್ವಗಳೂ ಹೊಸ ಕ್ರಮಕ್ಕನುಸಾರವಾಗಿಯೇ ಇವೆ; ಅಲ್ಲಲ್ಲಿ ಕಲವರ್ಟುಗಳು ಆಗಿವೆ. ಎರಡು ಮೂರು ಕಲವರ್ಟುಗಳು ಮಾತ್ರವೇ ಬಾಕಿ ಇವೆ. ಇವುಗಳ ಕೆಲಸವೂ ನಡಿಯುತ್ತಲಿದೆ.

ತಾಲೂಕು ಬೋರ್ಡಿನವರು ಕಳ್ಳಿಗೆಯ ಚಡಾವನ್ನು ತೆಗಿಯದೆ ಇದ್ದರೆ ಈ ಮಾರ್ಗವನ್ನು ಮಾಡಸಿ ಏನೊಂದೂ ಸಾರ್ಥಕವಾಗಲಿಕ್ಕಿಲ್ಲ. ಇದರ ನಿಜಸ್ಥಿತಿಯನ್ನು ಮಾನ್ಯ ಪ್ರೆಸಿಡೆಂಟರೂ ಬಂಟವಾಳ ಸರ್ಕಲಿನ ತಾಲೂಕು ಬೋರ್ಡು ಮೆಂಬರರೂ ಸ್ವತಹಾ ನೋಡಿ ಇಂಜಿನಿಯರರಿಂದ ಪ್ಲೇನ ಎಸ್ಟಿಮೇಟ ಮಾಡುವದು ಉತ್ತಮವಾಗಿರುತ್ತದೆ. ನಾಲ್ಕನೇ ಮೈಲು ಕಲ್ಲಿನಿಂದ ಪೊಳಲಿ ವರೇಗೆ ಮಾರ್ಗ ಮಾಡಿಸಿದ ಕಂಟ್ರಾಕ್ಟುದಾರರಾದ ರಾ। ಬಡ್ಡಬೈಲು ಪರಮೇಶ್ವರಯ್ಯನವರು ಮಾಡಿಸಿದ ಕೆಲಸವು ಶ್ಲಾಘನೀಯವಾದುದು. ಇವರು ಹಣದಾಸೆಯಿಲ್ಲದೆ ಈ ಕೆಲಸವನ್ನು ಮಾಡಿಸಿರುವರು. ಆದುದರಿಂದ ೪ನೇ ಮೈಲಿನಿಂದ ೨ನೇ ಮೈಲು ೭ ಫರ್ಲಾಂಗಿನ ವರೇಗೆ ಇರುವ ಮಾರ್ಗವನ್ನು ಇವರಿಗೆ ಕಂಟ್ರಾಕ್ಟಿಗೆ ಕೊಟ್ಟರೆ ಮಾರ್ಗವು ಉತ್ತಮರೀತಿಯಲ್ಲಿ ಆದೀತೆಂಬದರಲ್ಲಿ ಸಂದೇಹವಿಲ್ಲ.

ಬೆಳ್ಳುಳ್ಳಿಯ ಪ್ರಯೋಜನಗಳು.

ಬೆಳ್ಳುಳ್ಳಿಯು ಹಿಂದು ದೇಶದಲ್ಲಿ ಸಮಗ್ರವಾಗಿ ಬೆಳೆಯುತ್ತದೆ. ಈ ಪದಾರ್ಥವು ಬಹಳ ಪ್ರಯೋಜನವುಳ್ಳದ್ದಾಗಿರುತ್ತದೆ. ಹಿಂದುಸ್ಥಾನದ ಪ್ರತಿಯೊಂದು ಗೃಹದಲ್ಲಿಯೂ ಇದನ್ನು ಪದಾರ್ಥಗಳಿಗೆ ಒಗ್ಗರಣೆ ಹಾಕಲಿಕ್ಕೆ ಉಪಯೋಗಿಸುತ್ತಾರೆ ಇದು ಹಿಂದುಸ್ಥಾನದಲ್ಲಿ ಅತೀ ಪುರಾತನಕಾಲದಲ್ಲಿ ಇದ್ದಿತೆಂದೂ ಮತ್ತು ಗೃಹ್ಯಕ ಔಷಧಿಯಾಗಿ ಉಪಯೋಗಿಸುತ್ತಿದ್ದರೆಂಬುದೂ ಪುರಾತನ ಲೇಖಗಳಿಂದ ಖಚಿತವಾಗುತ್ತದೆ.

ಹಿಂದು ವೈದ್ಯಶಾಸ್ತ್ರದಲ್ಲಿ ಇದನ್ನು ಒಡಕಾದ ಎಲುಬುಗಳಿಗೂ, ಎಲಾ ತರದ ಮಾಂಸಸಂಬಂಧವಾದ ರೋಗಗಳಿಗೆ ಉಪಯೋಗಿಸುತ್ತಾರೆ. ಮಾತ್ರವಲ್ಲದೆ ಇದನ್ನು ಕಂಠ ಬಲವಾಗುವುದಕ್ಕೆ, ಜ್ಞಾನಶಕ್ತಿ ಅಭಿವೃದ್ಧಿಯಾಗಲು, ವ ತ್ತು ತೇಜಸ್ಸು ಬರುವುದಕ್ಕೆ ಮುಖ್ಯ ಫಲಕಾರಿಯಾಗಿರುವುದು.

ಇದು ಇಂಗ್ಲಿಷರ ಮತ್ತು ಅಮೇರಿಕದ ಪಾಮಾರಿಕೋಪಿಯದಲ್ಲಿಯೂ ಕೂಡ ಅತ್ಯಂತ ಪ್ರಯೋಜನದ ಔಷಧಿ ಎಂದು ಬರೆದಿರುವರು. ಇದನ್ನು ಫ್ರಾನ್ಸಿನಲ್ಲಿ ಎದೆಯ ಸಮ್ಬಂಧವಾದ ರೋಗಗಳಿಗೆ ಉಪಯೋಗಿಸುತ್ತಾರೆ. ಇದರಲ್ಲಿ ಎಲ್ಲೈಲ್ ಎಂಬ ವಸ್ತುವಿನ ಸಲ್ಫೈಡ್ ಇರುವುದೆಂದು ಪಾಶ್ಚಾತ್ಯರು ಪರಿಶೋಧಿಸಿರುವರು.

ಸ್ಫುಟ ವಿಚಾರಗಳು.

ಅಮೇರಿಕವು ಯುದ್ಧವನ್ನು ಸೇರಿದುದು ಏಕೆ?

ಮಹಾ ಯುದ್ಧದ ಸಮಯದಲ್ಲಿ ಅಮೇರಿಕದಷ್ಟು ಉದಾರಬುದ್ಧಿಯವರೂ, ಪರೋಪಕಾರಿಗಳೂ ಯಾರು ಇಲ್ಲ ನೆಂಬಂತೆ ಚಿತ್ರಿಸಲ್ಪಟ್ಟಿದ್ದಿತು. ಜರ್ಮನರ ಬರ್ಬರತೆಯು ಮೇಲೆ ಮೀರಿದುದರಿಂದ, ಧರ್ಮಾಗ್ರಾಣಿಯಾಗಿ, ಧರ್ಮ ಸಂಸ್ಥಾಪನೆಗಾಗಿ ಅಮೇರಿಕವು ಯುದ್ಧವನ್ನು ಸೇರಿತು ಎಂಬ ಅಭಿಪ್ರಾಯವು ಆಗ ಉಂಟುಮಾಡಲ್ಪಟ್ಟಿದ್ದಿತು. ತಾತ್ಕಾಲಿಕ ಕಾರಣವು, ಜರ್ಮನರು ನಿರಪರಾಧಿಗಳಾದ ಹೆಂಗಸರು ಮಕ್ಕಳಿದ್ದ ಅಮೇರಿಕ ಹಡಗವನ್ನು ಅತ್ಯಂತ ಕಠಿಣವಾದ ಬರ್ಬರತೆಯಿಂದ ಮುಳುಗಿಸಿದುದಾಗಿದೆ. ಆದರೆ ಹೆಂಗಸರು ಮಕ್ಕಳಿದ್ದ ಈ ಹಡಗನ್ನು (ಹಡಗಿನ ಹೆಸರು "ಲುಸಿಟಾನಿಯಾ") ಜರ್ಮನರು ಅಷ್ಟು ಕ್ರೂರತನದಿಂದ ಮುಳುಗಿಸಿದ್ದರೇ? ನಿಜವಾಗಿ ನೋಡಿದರೆ, (ಇತ್ತೀಚೆಗೆ ಈ ಸಂಗತಿಗಳ ನಿಜಸ್ಥಿತಿಯು ಹೊರಗೆ ಬೀಳಲು ಆರಂಭವಾಗಿಯದೆ.) ಜರ್ಮನರ ಬರ್ಬರತೆಯಾಗಲಿ ತಪ್ಪಾಗಲಿ ಏನೂ ಇದರಲ್ಲಿರಲಿಲ್ಲ. ಜಲಿಯಾನವಾಲಾ ಬಾಗದ ಹತ್ಯಾಕಾಂಡದ ಆ ಆಂಗ್ಲ ಭೀಕರತೆಯ ಶತಮಾಂಶ ಕೂಡ ಇಲ್ಲಿರಲಿಲ್ಲ. ಜರ್ಮನಿಗೆ ಬರತಕ್ಕ ಆಹಾರ ಸಾಮಾಗ್ರಿಯನ್ನು ಕೂಡ ಇಂಗ್ಲಿಷ—ಫ್ರೆಂಚರು ತಡೆದು ಇರುತ್ತಿರುವಾಗ, ಇಂಗ್ಲೀಷರ ಯುದ್ಧ ಸಾಮಗ್ರಿಗಳನ್ನು ಅವರಿಗೆ ತಲ್ಪದಂತೆ ಮಾಡುವುದು ಜರ್ಮನರ ತಪ್ಪಾಗದು. ಕಾರ್ಯತಃ ಈ ನಿರಪರಾಧಿ ಹೆಂಗಸರು ಮಕ್ಕಳ ಹೊರಗಿನ ಹೆಸರಿನಲ್ಲಿ ಲುಸಿಟಾನಿಯಾದಲ್ಲಿ ಇಂಗ್ಲೀಷರು ಯುದ್ಧ ಸಾಮಗ್ರಿಗಳನ್ನು ಹೊರಿಸುತ್ತಿದ್ದರು. ಇದರ ಗುಟ್ಟು ಅಮೇರಿಕದ ನೆನೆಪಿನಲ್ಲಿ ಸೆನೆಟ್ ಮೆಂಬರರ ವಾಚಾಟದಿಂದ ಹೊರಬಿದ್ದದೆ. "ಮದ್ದು ಗುಂಡುಗಳನ್ನು ನಿರಾತಂಕವಾಗಿ ಕಳುಹಿಸಲಿಕ್ಕೆ ಆ ಹಡಗಿನ ಮೇಲೆ ಹೆಂಗಸರು ಮಕ್ಕಳನ್ನು ತುಂಬಿಸಬೇಕಿರಲಿಲ್ಲ" ಎಂದು ಸೆನೆಟ್ ಡಿಲ್ಲರು ಅಮೇರಿಕದ ಪಾರ್ಲಿಮೆಂಟಿನಲ್ಲಿ ಸ್ಪಷ್ಟವಾಗಿ ಹೇಳಿದರು. "ಜರ್ಮನಿಯು ಬೆಲ್ಜಿಯಮಿನ ಮೇಲೆ ದಂಡೆತ್ತಿ ಬಂದುದಕ್ಕಾಗಿಯೂ, ಲುಸಿಟಾನಿಯವನ್ನು ಮುಳುಗಿಸಿದುದಕ್ಕಾಗಿಯೂ ಮಹಾ ಯುದ್ಧವನ್ನು ಸೇರಿತು ಎಂಬುದಕ್ಕಿಂತ ದೊಡ್ಡ ಮೋಸಕೃತ್ಯವು ಅಮೇರಿಕನರಿಂದ ಎಂದೂ ನಡೆಯಲಿಲ್ಲ ನಮ್ಮ ವ್ಯಾಪಾರಕ್ಕೆ ತೊಂದರೆಗಟ್ಟುತ್ತದೆಂದೇ ನಾವು ಯುದ್ಧವನ್ನು ಸೇರಿದೆವು. ಅದು ವಾಣಿಜ್ಯದ ಪ್ರಶ್ನೆಯಾಗಿದ್ದಿತು" ಎಂದು ಸೆನೆಟ ಡಿಲ್ಲರು ಹೇಳಿದರು. ಪಾಶ್ಚಾತ್ಯ ಮಾನಸಿಕತೆಯ ಲಕ್ಷಣವು ಪ್ರತ್ಯೇಕ ಬೇಕೆ?

ತಾಲೂಕುಬೋರ್ಡು ಅಧ್ಯಕ್ಷರರಿಗೆ ಶಿಕ್ಷೆ.

ಈಗಿನ ಈ ಸುಧಾರಣಾ ಸಂಕರಾದ ಅಡಿಯಲ್ಲಿ, ಮಂತ್ರಿ ವರ್ಗದ ಸ್ವಾರ್ಥಮಯವಾದ ವಾತಾವರಣದಲ್ಲಿ ಎಷ್ಟು ಅನ್ಯಾಯಗಳು ಆಗುತ್ತವೆಂದು ಹೇಳಿ ತೀರದು. ನರಸರಾವ್ ಪೇಟ ಎಂಬ ತಾಲೂಕಿನ, ತಾಲೂಕುಬೋರ್ಡಿಗೆ ಅಸಹಕಾರದ ಸಮಯದಲ್ಲಿ ರಾವುರಿ ರಂಗಯ್ಯ ಎಂಬವರು ಅಧ್ಯಕ್ಷರಾಗಿದ್ದರು. ಇವರು ಸ್ವಲಕ್ಷಾಧೀಶರು ಮತ್ತು ರಾಷ್ಟ್ರೀಯ ಭಾವನೆಯುಳ್ಳವರು. ಯಾವುದೊ ತಾಲೂಕುಬೋರ್ಡಿನ ಕೆಲಸಕ್ಕಾಗಿ ಟ್ರೆಜರಿಯಿಂದ ೩೦೦೦ದಷ್ಟು ರೂಪಾಯಿಗಳನ್ನು ಹೆಡ್‌ಕ್ಲಾರ್ಕರ ಹೇಳಿಕೆಯಂತೆ ಇವರು ತೆಗೆದರು. ಆದರೆ ಸದರಿ ಕೆಲಸವು ಕೂಡಲೆ ಜ್ಯಾರಿಯಾಗದ್ದರಿಂದ ರೂಪಾಯಿ ಕೈಯಲ್ಲಿ ಉಳಿಯಿತು, ಇವರ ಸಂಬಂಧಿಕರೊಬ್ಬರು ಖಾದಿ ವ್ಯಾಪಾರವನ್ನು ನಡಿಸುತ್ತಿದ್ದರು, ಇಷ್ಟು ದೊಡ್ಡ ಐವೇಜನ್ನು ತನ್ನೊಡನೆ ಇಟ್ಟುಕೊಳ್ಳುವುದು ಒಳ್ಳೇಯದಲ್ಲವೆಂದೂ ಆದರೆ ಒಂದೆರಡು ದಿನಗಳಲ್ಲಿಯೇ ಉಪಯೋಗಿಸಬೇಕಾದುದರಿಂದ ಟ್ರೆಜರಿಗೆ ಹಿಂದೆ ಕೊಡುವುದೂ ಅಗತ್ಯವಿಲ್ಲವೆಂದು, ಹೆಡ್‌ಕ್ಲಾರ್ಕರು ಅದನ್ನು ಆ ಖಾದಿ ಸಾಹುಕಾರರ ಹತ್ತರ ವಿಶ್ವಾಸದಿಂದ ಕೊಟ್ಟರು ಮತ್ತು ಎರಡು-ಮೂರು ದಿನಗಳ ಮೇಲೆ ಅದನ್ನು ವಾಪಾಸು ಪಡೆದರು. ಅಧಿಕಾರಿಗಳು ಹಲವು ವರುಷಗಳ ಮೇಲೆ, ಈಗ, ಹಣದ ದುರ್ವ್ಯಯವೆಂದು ಅಧ್ಯಕ್ಷರ ಮೇಲೆ ದಾವೆ ತಂದರು. ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಇವರಿಗೆ ೩॥ ವರುಷದ ಕಠಿಣ ಸಜೆ ವಿಧಿಸಿದರು, ಸೆಶ್ಶನ್ ಜಡ್ಜರು ಅದನ್ನೇ ಕಾಯಂ ಮಾಡಿದರು. ಹ್ಯಾಕೋರ್ಟು ಅಪೀಲಿನಲ್ಲಿ ಚೀಫ್ ಜಸ್ಟೀಸರು ಅಪರಾಧಿತರನ್ನು ಖುಲಾಸೆಪಡಿಸಿದರಲ್ಲದೆ—ಈ ದಾವೆಯು ರಾಜಕೀಯ ಉದ್ದೇಶದಿಂದ ಮಾಡಲ್ಪಟ್ಟಿದ್ದೆಂದೂ ಅಧಿಕಾರಿಗಳು ಈ ದಾವೆಗಾಗಿ ಜನರ ದುಡ್ಡನ್ನೂ ಸಮಯವನ್ನೂ ಹಾಳುಮಾಡಿದುದು ವಿಷಾದಕರವೆಂದೂ—ಹೇಳಿದರು. ಕೇವಲ ಶಬ್ದಾರ್ಥದ ಅಪರಾಧಕ್ಕಾಗಿ ಈ ರೀತಿಯಲ್ಲಿ ಕಾನೂನು ಜ್ಯಾರಿಗೆ ಬರುವುದಾದರೆ ಅಷ್ಟವೇ ಸರಿ, ಕಾನೂನಿಗಿಂತಲೂ ನ್ಯಾಯವು ಬೇರೊಂದುಂಟು ಎಂಬುದನ್ನು ಚೀಫ್ ಜಸ್ಟೀಸರಾದರೂ ತಿಳಿಕೊಂಡುದು ಅಭಿನಂದನೀಯ.

ರೀಫ್ ಯುದ್ಧವು ಕೊನೆಗಾಣುವುದೇ?

ಸ್ವಂತ ಬಲದ ಹೆಮ್ಮೆಯಿಂದ ಮೊರೊಕ್ಕೊದ ರೀಫ್ ಜನರನ್ನು ಸದೆಬಡಿಯುವವೆಂದು ಹೊರಟ ಫ್ರಾನ್ಸು, ಈಗ ತನ್ನ ನಿರ್ಬಲತೆಯನ್ನು ತಿಳಕೊಂಡಂತೆ ತೋರುತ್ತಿದೆ. ಮನೆಖರ್ಚಿಗೆನೇ ದುಡ್ಡಿಲ್ಲದಿದ್ದಾಗ, ಇತರರ ಮನೆ ಹೊಕ್ಕು ಯುದ್ಧವನ್ನಾರಂಭ ಮಾಡಿ ಅವರ ಮನೆಯನ್ನು ತನ್ನದಾಗಿ ಮಾಡುವವೆಂದು ಹೊರಟ ಸ್ವಾರ್ಥವು ಕೊನೆಗಾಣದೆ ಹೋಯಿತು. ರೀಫರು ಅಷ್ಟು ಸುಲಭದ ಜನರಲ್ಲವೆಂದು ಫ್ರೆಂಚರಿಗೆ ಈಗಾಗಲೇ ತಿಳಿದಂತೆ ತೋರುತ್ತಿದೆ. ಫ್ರೆಂಚರ ಎಷ್ಟು ಯುಕ್ತಿವಾದವಿದ್ದಿತೊ ಅದನ್ನೆಲ್ಲಾ ಅವರು ಖರ್ಚು ಮಾಡಿ ನೋಡಿದರು. ಯಾವುದೂ ಪ್ರಯೋಜನವಾಗಲಿಲ್ಲ. ರೀಫ್ ಮುಖಂಡನಾದ ಅಬ್ದುಲ್ ಕರೀಮನ ತಲೆತಂದು ಕೊಟ್ಟವರಿಗೆ ಮಿಲಿಯಗಟ್ಟಲೆ ಫ್ರಾಂಕಿನ ಲೋಭ ತೋರಿಸಿದರು. ಅಬ್ದುಲ್‌ಕರೀಮನು ಆರಂಭದಲ್ಲಿಯೇ ವಶನಾಗಿದ್ದರೆ ಅವನ ಸರ್ವಸ್ವವನ್ನೂ ನಾಶಪಡಿಸುವುದಾಗಿ ಅವನನ್ನು ಹೆದರಿಸಿದರು. ಅವನಡಿಯಲ್ಲಿದ್ದ ಜನರು ಅವನ ಮೇಲೆ ದಂಗೆಯೇಳುವಂತೆ ಪ್ರಯತ್ನಿಸಿದರು, ಅವನು ಎಲ್ಲಾ ಕ್ರಿಸ್ತಿಯಾನರ ಮೇಲೆ ದ್ವೇಷ ಪಟ್ಟು ಅವರ ನಾಶಕ್ಕಾಗಿ ಮುಂದೆ ಬಂದಿರುವನೆಂಬ ಸುದ್ದಿ ಹರಡಿಸಿ ಇತರ ಕ್ರಿಸ್ತೀಯ ಜನಾಂಗಗಳೂ ತನಗೆ ಸಹಾಯಕ್ಕಾಗಿ ಬರಲೆಂದು ಯತ್ನಿಸಿದರು, ಯಾವುದೂ ಫಲಕಾರಿಯಾಗಲಿಲ್ಲ. ಎರಡು ಪಾಶ್ಚಾತ್ಯ ದೊಡ್ಡ ಜನಾಂಗಗಳನ್ನು ನಿರೋಧಿಸಿಯೂ ಅಬ್ದುಲ್‌ಕರೀಮನು ಯುದ್ಧ ಮಾಡಿದನು. ಅಬ್ದುಲ್‌ಕರೀಮನ ಸಾಹಸವನ್ನು ಮೆಚ್ಚದವರಾರು? ಈಗ ಫ್ರಾನ್ಸು ಮೆಲ್ಲನೆ ಅಬ್ದುಲ್‌ಕರೀಮನನ್ನು ಸಂಧಿ ಬಗ್ಗೆ ಕರೆದಿದೆ. ಫ್ರಾನ್ಸಿನ ದಂಡನೀತಿಯು ನಡೆಯಲಿಲ್ಲ. ರೀಫ್‌ರೇ ಜಯಪ್ರದರಾದರು, ಅಬ್ದುಲ್‌ಕರೀಮನೂ, ಕ್ರೂರಿಯಾಗಲಿ, ಅವಿಚಾರಿಯಾಗಲಿ, ಅಲ್ಲವೆಂಬುದು ಅವನು ಇಂಗ್ಲಂಡಿನ "ಟೈಮ್ಸ್" ಪತ್ರಿಕೆಗೆ ಬರಕೊಟ್ಟ ಒಂದು ಪತ್ರದಿಂದ ತಿಳಿದು ಬರುವುದು. "ನಾವು ಸಾಮಾನ್ಯರು ನಮಗೆ ಫ್ರೆಂಚರ ಯುಕ್ತಿವಾದವು ಬರುವುದಿಲ್ಲ. ನಾವು ಯಾವಾಗಲೂ ಶಾಂತಿಯನ್ನೇ ಇಚ್ಛಿಸುವವರು; ಆದರೆ ಫ್ರಾನ್ಸು ಬಿಡುವುದಿಲ್ಲ. ನಾವು ನಮ್ಮ ಸ್ವಾಧೀನತೆಗಾಗಿ ಕಡೆತನಕ ಯುದ್ಧ ಮಾಡುವೆವು. ಒಂದೇ ಒಂದು ಪರ್ವತ ಶಿಖರ ಮಾತ್ರವೆ ನಮ್ಮ ಕೈಯಲ್ಲಿ ಉಳಿಯುವ ವರೆಗೆ ನಾವು ಯುದ್ಧ ಮಾಡುವೆವು—ಫ್ರೆಂಚರು ನಮ್ಮ ನಷ್ಟದ ವಿಷಯ, ನಮ್ಮ ಸೋಲಿನ ವಿಷಯ ಬಹಳ ವರ್ತಮಾನಗಳನ್ನು ಹಬ್ಬಿಸುತ್ತಾರೆ. ಆದರೆ ನಿಜವಾಗಿ ನಾವು ಅವರಿಗೆ ಬಹಳ ನಷ್ಟವನ್ನುಂಟುಮಾಡಿದ್ದೇವೆ. ನಾವು ಸೋಲುವುದಾದರೂ ಫ್ರಾನ್ಸಿಗೆ ಬಹಳ ನಷ್ಟವಾಗದೆ ಹೋಗದು." ಎಂದಿತ್ಯಾದಿಯಾಗಿ ಅಬ್ದುಲ್‌ಕರೀಮನು ಬರೆಯುವನು. ಫ್ರಾನ್ಸು ಡ್ರೂಸರ ಸಂಬಂಧದಲ್ಲಿಯೂ ಸಂಧಿಗಾಗಿ ಅವರನ್ನು ಕರೆದರೆ ಫ್ರೆಂಚರಿಗೆ ಲಾಭವಿತ್ತು.

ಹಿಂದೂಸ್ಥಾನದ ಕೃಷಿಯೂ, ರೋಯಲ್ ಕಮಿಶನ್ನೂ.

ಹೊಸ ವ್ಯಾಸರಾಯಿಗಳವರ ನೇಮಕದೊಡನೆ ಹಿಂದೂಸ್ಥಾನದ ಕೃಷಿಯ ಪರಿಶೀಲನ ಮಾಡುವ ಬಗ್ಗೆ ಒಂದು ಕಮಿಶನ್ನು ನೇಮಕವಾಗಿಯದೆ. ಕಮಿಟಿಕಮಿಶನ್ನುಗಳ ಮಟ್ಟಿಗೆ ನಮ್ಮ ದೇಶಕ್ಕೇನೂ ಬಡತನವಿಲ್ಲ. ಪ್ರತಿ ವರುಷವೂ ಕಮಿಶನ್ನುಗಳೂ ಕಮಿಟಿಗಳೂ ನೇಮಕವಾಗುತ್ತಾ ಇವೆ; ರಿಪೋರ್ಟುಗಳು ಹೊರಬೀಳುತ್ತಾ ಇವೆ; ಕೆಲವು ಹೊರಬೀಳದಿರುವುದೂ ಉಂಟು. ಆದರೆ ಯಾವ ಫಲಕಾರಿ ಕಾರ್ಯವು ಈ ಕಮಿಟಿಗಳ ರಿಪೋರ್ಟುಗಳ ಮೇಲೆ ನಡೆದಿಲ್ಲ. ರಿಪೋರ್ಟುಗಳು ಸರಕಾರಕ್ಕೆ ಸಹಕಾರಿಯಾದರೆ—ಉದಾಹರಣೆಯಾಗಿ ಲೀ ಕಮಿಶನ್ನು—ಅವುಗಳ ಸೂಚನೆಗಳು ಬೇಗನೆ ಜ್ಯಾರಿಗೆ ಬರುತ್ತಿವೆ. ಅದೇ ವಿರೋಧವಿದ್ದರೆ ಅವು ಮತ್ತೆ ಬೆಳಕನ್ನು ಕೂಡ ಕಾಣುವುದಿಲ್ಲ. ದೇಶವೆಂತೂ ಇವುಗಳ ಖರ್ಚನ್ನು ವಹಿಸಲೂ ಬೇಕೂ, ಸಹಿಸಲೂ ಬೇಕು. ಈ ಬಾರಿ ಕೃಷಿ ವಿಷಯವಾಗಿ ಏರ್ಪಟ್ಟ ಈ ಹೊಸ ಕಮಿಶನ್ನಿನಿಂದ ನಮಗೇನು ಲಾಭ? ವ್ಯಾಸರಾಯಿಯವರು ಇಂಗ್ಲೆಂಡಿನಲ್ಲಿ ಕೃಷಿ ಇಲಾಖೆಯಲ್ಲಿ ಕೆಲಸಮಾಡಿದವರಂತೆ. ಹಿಂದೂಸ್ಥಾನದ ಪ್ರಮುಖ ಉದ್ಯೋಗವು ಕೃಷಿಯಂತೆ. ವ್ಯಾಸರಾಯಿಯವರು ದೇಶದ ಪ್ರಮುಖ ಉದ್ಯೋಗವಾಗಿರುವ ಕೃಷಿಯ ಪರಿಸ್ಥಿತಿಯ ಬಗ್ಗೆ ಬೇಚಾರು ವರಂತೆ. ಅವರಿಗೆ ಸಹಾಯಮಾಡಲೆಂಬಂತೆ ಈ ಕೃಷಿಯ ಕಮಿಶನ್ನು ನೇಮಕಹೊಂದಿದೆಯಂತೆ. ಅನ್ನವಾಗ ದೇಶದ ಕೃಷಿಯು ಸುಧಾರಿಸಲೇ ಬೇಕು ಎಂದ ಹಾಗಾಯಿತು.

ಆದರೆ ನಿಜವಾದ ಸ್ಥಿತಿ ಏನು? ಈ ಕಮಿಶನ್ನಿಗೆ ಕೃಷಿ ಮೇಲಿನ ತೆರಿಗೆ ಇತ್ಯಾದಿ ಅತ್ಯಂತ ಮುಖ್ಯವಾದ ಪ್ರಶ್ನೆಗಳನ್ನು ತರ್ಕಿಸುವ ಸ್ವಾತಂತ್ರ್ಯವಿಲ್ಲ. ಹಿಂದೂಸ್ಥಾನದ ಭೂಕಂದಾಯದ ಪರಿಮಾಣವು ಬೇರೆ ಯಾವ ದೇಶದಲ್ಲೂ ಇಲ್ಲವೆಂಬುದೂ ಎಲ್ಲರಿಗೂ ತಿಳಿದ ವಿಷಯವಾಗಿ, ಯಾವ ಉದ್ಯೋಗದಿಂದ ಹಿಂದೂಸ್ಥಾನವು ತನ್ನ ಹೊಟ್ಟೆಯನ್ನು ಹೊರಕೊಂಡು ಜಗತ್ತಿನ ಇತರ ಜನಾಂಗಗಳನ್ನೆ ಶ್ರೀಮಂತವಾಗಿ ಮಾಡುತ್ತಿದೆಯೊ, ಅದರ ಮೇಲೆ ಅತ್ಯಾಧಿಕವಾದ ಕಂದಾಯವನ್ನು ಹೊರಿಸಿ ಬೆಳೆಯ ಬೆಳವಣಿಗೆಗೆ ತಡೆಯೊಡುವುದು ಅಕ್ಷಮ್ಯವಾಗಿದೆ. ನಿಷ್ಪಕ್ಷಪಾತಿಯಾಗಿರುವ ಕಮಿಶನ್ನು ಎಂದೂ ಈ ವಿಷಯವನ್ನು ಚರ್ಚಿಸದಿರದು. ಈ ವಿಷಯವನ್ನು ಚರ್ಚಿಸದ ರಿಪೋರ್ಟು ಕೂಡ ಹಿಂದೂಸ್ಥಾನದ ಕೃಷಿ ಬಗ್ಗೆ ಹೆಚ್ಚು ಉಪಕಾರಿಯಾಗದು.

ಫ್ರೆಂಚರೂ ರೀಫ್‌ರೂ.

ನಾವು ಫ್ರೆಂಚರ ಮೊರೊಕ್ಕೊ ಯುದ್ಧದ ವಿಷಯ ಬರೆದ ಮೇಲೆ, ಈಗಾಗಲೇ ಕೆಲವು ಸಂಧಿ ಶರ್ತಗಳ ಊಹನೆಗಳು ಹೊರಬೀಳಲಾರಂಭಿಸಿಯವೆ. ಅವುಗಳಲ್ಲಿ, ಮೊದಲನೇದು, ರೀಫರು ಯುದ್ಧ ಸಾಮಗ್ರಿಗಳನ್ನು ಫ್ರೆಂಚರಿಗೆ ಒಪ್ಪಿಸಿ ಶರಣಾಗತರಾಗಬೇಕು; ಎರಡನೇದು ರೀಫ್ ಮುಖಂಡನಾದ ಅಬ್ದುಲ್ ಕರೀಮನು ತಕ್ಕ ಪುರಸ್ಕಾರದೊಡನೆ ದೇಶವನ್ನು ಬಿಟ್ಟು ತೆರಳಬೇಕು ಎಂಬುದು. ಇಂತಹ ಕಠಿಣ ಶರ್ತಗಳನ್ನು ಅವರ ಮೇಲೆ ಹೊರಿಸುವಷ್ಟು ರೀಫ್‌ರು ಯುದ್ಧದಲ್ಲಿ ಸೋತಿರುವರೆಂಬ ಚಿಹ್ನವು ಈ ವರೆಗಿನ ಯುದ್ಧವಾರ್ತೆಗಳಿಂದ ತಿಳಿಯುವುದಿಲ್ಲ. ಒಬ್ಬ ರೀಫ್‌ನು ಸತ್ತರೆ ಸಾವಿರ ಸತ್ತರೆಂದು ಹಬ್ಬಿಸುವ ಫ್ರೆಂಚರಿಗೆ ನಿಜವಾದ ಜಯಲಾಭಗಳಾಗಿದ್ದರೆ ವರ್ತಮಾನಗಳಲ್ಲಿ ಅತಿಶಯೋಕ್ತಿಗಳು ಬಹಳ ಬರುತ್ತಿದ್ದುವು. ಅವು ಯಾವುವೂ ಬಂದಿಲ್ಲ. ಹಾಗಾದರೆ ಈ ವರ್ತಮಾನಗಳ ನಿಜಸ್ಥಿತಿ ಏನು? ಫ್ರೆಂಚರ ರಾಜಕೀಯ ತಂತ್ರಗಳಲ್ಲಿ ಇದೂ ಒಂದೇ? ಇದು ನಿಜವಾದರೆ ರೀಫ್ ಸಂಧಿಯು ಸಾಧ್ಯವಾದೀತೆ? ಸಂಧಿಯು ಆಗದೆ ಹೋದರೆ ಇನ್ನೂ ಯುದ್ಧ ಮಾಡಲಿಕ್ಕೆ ಫ್ರಾನ್ಸಿನ ಈಗಿನ ಕನಿಕರವಾದ ಆರ್ಥಿಕ ಪರಿಸ್ಥಿತಿಯಲ್ಲಿ ಯುದ್ಧಮಾಡಲು ಶಕ್ತಿ ಸಾಕಾದೀತೆ? ಎಂಬ ಪ್ರಶ್ನೆಗಳಿವೆ? ಮುಂದಿನ ವರ್ತಮಾನ ಸರಣಿಯೇ ಇದನ್ನು ನಿಶ್ಚಯಿಸಬೇಕು.

ದಕ್ಷಿಣ ಅಫ್ರಿಕದ ಸಮಸ್ಯೆ.

ದಕ್ಷಿಣ ಅಫ್ರಿಕದ ಸಮಸ್ಯೆಯು ಇನ್ನೂ ತೀರಿಲ್ಲ. ರೆವರೆಂಡ ಸಿ. ಎಫ್. ಎಂಡ್ರೂಸರು ಬೇಗನೆ ಇತ್ತ ಬರುವವರಿದ್ದಾರೆ.

ದಕ್ಷಿಣ ಅಫ್ರಿಕವೂ ಹಿಂದೀಯರೂ.

ದಕ್ಷಿಣ ಆಫ್ರಿಕದ ಕ್ಲಾಸ್ ಏರಿಯಾಸ್ ಬಿಲ್ ಎಂಬ ಹಿಂದೀಯರಿಗೆ ಬಾಧಕತಟ್ಟುವ ಬೀಲು ಇನ್ನೂ ಮಂಜೂರಾಗಿಲ್ಲ. ರೆವರೆಂಡ ಸಿ. ಎಫ್. ಎಂಡ್ರೂಸರು ಹಿಂದೀಯರ ಹಕ್ಕನ್ನು ಸಾಧಿಸುವರೆ ಹೋದವರು ಬಿಲ್ ಪಾಸಾಗದಿರುವ ಸಂಭವದ ಆಶೆಪಟ್ಟು ಹಿಂದಿರುಗುವರಿರುವರು. ಹಿಂದೀಯರ ಹಕ್ಕು ಸಮರ್ಥಿಸಲ್ಪಡುವ ಆಶೆಯನ್ನು ಕೆಲವರು ಅಲ್ಲಲ್ಲಿ ತೋರುತ್ತಿರುವರು. ಆದರೆ ಅಫ್ರಿಕದ ಸರಕಾರವು ಸಮಯವನ್ನು ಕಾದು ನಿಂತಿರುವಂತೆ ತೋರುತ್ತಿದೆ. ಮಂಜೂರಾಗುವ ಮಾತು ಮುಂದೆ ಬಿದ್ದಿರುವುದಾದರೂ ಮಂಜೂರಾಗುವ ಸಂಭವವು ಕಡಿಮೆಯಾದಂತೆ ತೋರುವುದಿಲ್ಲ. ಅಲ್ಲಿಯ ಸರಕಾರವೆಂತೂ ಈ ಬಿಲ್ಲನ್ನು ಮಂಜೂರುಮಾಡುವ ದೃಢ ನಿಶ್ಚಯವನ್ನು ಮಾಡಿಕೊಂಡಂತೆ ತೋರುತ್ತಿದೆ. ಹಿಂದೀ ಸರಕಾರವೂ ತನ್ನ ನಿಷೇಧವನ್ನು ಅಷ್ಟೊಂದು ಉತ್ಸುಕತೆಯಿಂದ ತೋರುವುದಿಲ್ಲ. ದಕ್ಷಿಣ ಅಫ್ರೀಕದ ಸರಕಾರವು ಹಿಂದೀಯರನ್ನು ಈ ತರದ ಕಷ್ಟಕ್ಕೂ ಅವಮಾನಕ್ಕೂ ಗುರಿಮಾಡುವಾಗ ಹಿಂದೀಯರು ಯಾವ ರೀತಿಯಲ್ಲಿ ಇದರ ಪ್ರತಿಶೋಧವನ್ನು ನಿಶ್ಚಯಿಸಬೇಕು ಎಂಬುದನ್ನು ಎಲ್ಲರೂ ಆಲೋಚಿಸುವುದು ಉತ್ತಮ.

"ಹಿಂದೀ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿರಿ!"

ಇಂಗ್ಲೆಂಡಿನಲ್ಲಿ ಟಪ್ಪಾಲು ಚೀಟಿಗೆ ಟಪ್ಪಾಲು ಆಫೀಸಿನಲ್ಲಿ ಮೋಹರು ಹಾಕುವಾಗ "ಬ್ರಿಟಿಷ ಸಾಮಾನುಗಳೇ ಉತ್ತಮವಾದುವುಗಳು" ಎಂಬ ಅರ್ಥದ ವಾಕ್ಯವು ಮೊಹರಾಗಿ ಹೊಡೆಯಲ್ಪಡುತ್ತಿದೆ. ಈ ಮೂಲಕ ಬ್ರಿಟಿಷ ದೇಶದಲ್ಲಿ ಬ್ರಿಟಿಷ ಸಾಮಾನುಗಳ ಮೇಲೆ ಶ್ರದ್ಧೆಯೂ ಪ್ರೇಮವೂ ಹುಟ್ಟುವಂತಾಗಿ ದೇಶ ಪ್ರೇಮವೂ ಅಭಿವರ್ಧಿಸುವುದು. ಹಿಂದೂಸ್ಥಾನದಲ್ಲಿಯೂ ಹಾಗೆಯೇ ಹಿಂದೀ ಕೈಗಾರಿಕೆಗಳ ಪರವಾಗಿ ಮೊಹರನ್ನು ಮಾಡಬೇಕೆಂದು ಕೆಲವರು ಕೇಳಿಕೊಂಡರು. ಮೊದಲು ಪೋಸ್ಟ್‌ಮಾಸ್ಟರ್ ಜನರಲರು ನಿರಾಕರಿಸಿದರೂ ಈಗ "ಹಿಂದೀ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿರಿ" ಎಂಬ ಮೊಹರನ್ನು ಸ್ಟಾಂಪಿನ ಮೇಲೆ ಹೊಡೆಯಲು ಸಮ್ಮತಿಸಿರುವರಾಗಿ ತಿಳಿಯುತ್ತೇವೆ. ಇದಕ್ಕಾಗಿ ನಾವು ಪೋಸ್ಟ್ ಅಧಿಕಾರಿಗಳನ್ನು ಅಭಿನಂದಿಸಬೇಕಾಗಿದೆ.

ಅನುಕ್ರಮಣಿಕೆ.

	ಪುಟ
ಅಗ್ರಲೇಖ	
ಸ್ಫುಟವಿಚಾರಗಳು	೫—೬
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೭
ದಕ್ಷಿಣ ಕನ್ನಡ— ಬಂಟವಾಳ, ಪಾಣೆಮಂಗಳೂರು, ಪಳ್ಳಿಕೆರೆ, ಪೊಳಲಿ, ಉಪ್ಪಿನಂಗಡಿ, ಮಂಜೇಶ್ವರ, ಕಾರ್ಕಳ	೭—೮
ಮಂಗಳೂರು	,,
ಜಯಕರ್ನಾಟಕವೂ ಕೊಂಕಣಿ ಭಾಷೆಯೂ	೮
ದಾಕು ಹಾಕುವ ವಿಷಯ ಹೊಸ ಹುಕುಂ	,,
ಪತ್ರವ್ಯವಹಾರ ೧	,,
ವಿವಿಧ ವಿಷಯ	೪

ಸ್ವದೇಶಾಭಿಮಾನಿ.

ಶಕ ೧೮೪೮ ನಿ. ಚೈತ್ರ ಶು| ೪ಯು ಶುಕ್ರವಾರ.

ಮಹಾತ್ಮಾಜೀಯವರ ಸಂದೇಶ.

ರಾಷ್ಟ್ರೀಯ ವಾರದ ಆಚರಣೆಗಾಗಿ ಮುಂಬಾಯಿಯಲ್ಲಿ ಸೇರಿದ ಸಭೆಗಳಲ್ಲಿ ಮಹಾತ್ಮಾಜೀಯವರ ಕೆಳಗಿನ ಸಂದೇಶವು ಓದಲಾಯಿತು:—

೧೯೧೯ನೇ ಇಸವಿ ಎಪ್ರಿಲ್ ತಾ. ೧೩ರಲ್ಲಿ ಇಚ್ಛಾಪೂರ್ವಕವಾಗಿ ಜಲಿಯಾನವಾಲಾ ಬಾಗಿನಲ್ಲಿ ನಡೆದ ಹತ್ಯಾಕಾಂಡವು, ನಾವು ಎಷ್ಟು ಬಾರಿ ತಲೆಯನ್ನೆತ್ತಲು ಪ್ರಯತ್ನಿಸುವೆವೊ ಮತ್ತು ಈ ಬಂಧನದಲ್ಲಿ ಜೀವಿಸಲು ಇಚ್ಛಿಸುವುದಿಲ್ಲವೊ ಅಷ್ಟು ಸರ್ತಿಯೂ, ಅದು ಪುನಃ ಸಂಘಟಿಸುವುದೆಂದು ಚಿರಕಾಲವೂ ನೆನಪು ಕೊಡತಕ್ಕ ವಿಷಯವಾಗಿದೆ. ಬ್ರಿಟಿಷ ಆಳ್ವಿಕೆಯು ಹಿಂದೀಯರ ಸೇವೆಯಲ್ಲಿ ಹಿಂದೀಯರಿಂದ ಹೀರಿಕೊಳ್ಳಬಹುದಾದ ಲಾಭಕ್ಕಾಗಿ ಹಿಂದೀಯರ ಮೇಲೆ ಹೊರಿಸಲ್ಪಟ್ಟಿದೆ. ಅವರ ವ್ಯಾಪಾರದ ಸಂರಕ್ಷಣೆಗಾಗಿಯೇ ಅದು ಹಿಂದೂಸ್ಥಾನದ ಮೇಲೆ ಹೊರಿಸಲ್ಪಟ್ಟಿದೆ. ಈ ವ್ಯಾಪಾರದ ಕೇಂದ್ರವು ಮೆಂಚೆಸ್ಟರಿನ ಹತ್ತಿಯ ಸಾಮಾನುಗಳಾಗಿವೆ.

ಜಲಿಯಾನವಾಲಾದ, ಮತ್ತು ಹೊಟ್ಟೆಯ ಮೇಲೆ ಹರಿದಾಡಿಸಿದ ಓಣಿಯ ಅವಮಾನದ ಪ್ರತಿಶೋಧವನ್ನು ಮಾಡುವೆವಾದರೆ, ನಾವು ವಿದೇಶಿ ಬಟ್ಟೆಗಳನ್ನುಡುವುದನ್ನು ನಿಲ್ಲಿಸಿ, ಕೈನೂಲಿನ ಖಾದಿ ಬಟ್ಟೆಯನ್ನುಡಲು ಪ್ರತಿಜ್ಞಾಬದ್ಧರಾಗಬೇಕು. ವಿದೇಶಿ ಬಟ್ಟೆಯು ಬ್ರಿಟಿಷ ವ್ಯಾಪಾರಕ್ಕೆ ಆಧಾರವಾಗಿದೆ; ಖಾದಿಯು ನಮ್ಮನ್ನು ನಾವು ಈ ವರೆಗೆ ದುರ್ಲಕ್ಷಿಸಿದ ಬಡವರ ಕಡೆಗೆ ಎಳೆಯುತ್ತಿದೆ. ನಾವು ಇತರ ದೇಶಗಳ ಮೂಲಕ ಲಾಭಹೊಂದಲು ಪ್ರಯತ್ನಿಸಿದ್ದರೂ, ಬಡವರ ಕಷ್ಟಗಳ ಮೂಲಕ ಲಾಭಹೊಂದಿ ದೈಹಿಕಸುಖವನ್ನು ಸಾಧಿಸಿರುವೆವು. ನಾವು ಪರದೇಶೀ ಬಟ್ಟೆಗಳನ್ನು ನಿರಾಕರಿಸಲು ಒಪ್ಪದಿದ್ದರೆ, ಖಾದಿಯು ನಮಗೆ ಅಸುಖಕರವೆಂದಾದರೆ ನಾವು ಎಂದೆಂದಿಗೂ ದಾಸ್ಯತ್ವಕ್ಕೇನೇ ಅನುಕೂಲರಾಗಬೇಕು. ದೈಹಿಕ ಸುಖವನ್ನೂ, ಇನ್ನಿತರ ವಿಷಯಗಳನ್ನೂ ದೇಶಕ್ಕಾಗಿ ತ್ಯಾಗಮಾಡಲು ನಾವು ಹೆದರುವುದಾದರೆ ನಾವು ಹೊಂದಬಹುದಾದ ಎಲ್ಲಾ ಸುಧಾರಣೆಗಳೂ ಧೂಳಿಪಾಲಾಗುವುವು.

ಹಿಂದೂ ಮಹಾಸಭೆಯೂ ಪಂಡಿತ ಮಾಲವೀಯರೂ

ಪಂಡಿತ ಮದನ ಮೋಹನ ಮಾಲವೀಯರು ಅಪ್ರತಿಮ ದೇಶಭಕ್ತರೆಂದೂ, ಒಳ್ಳೇ ವಿಚಾರವಂತರೆಂದೂ ಹೆಸರು ಹೊಂದಿದವರಾಗಿರುವರು. ಆದರೆ ಇತ್ತೀಚೆಗಿನ ಅವರ ಸ್ವಪ್ನೋಕ್ತಿಗಳು ಅವರ ಕಡೆಗಿನ ಗೌರವಭಾವನೆಯನ್ನು ಕಡಿಮೆ ಮಾಡುವಂತಹುದಾಗಿರಬೇಕು. ಅವರು ಇತ್ತೀಚೆಗೆ ಸ್ವರಾಜ್ಯಪಕ್ಷೀಯರನ್ನು ಇತರ ಪಕ್ಷಸ್ವಾರ್ಥದ ಜನರು ದೂರುವಂತೆ ದೂರಲು ಆರಂಭಿಸಿರುವರಲ್ಲದೆ, ಕಾಂಗ್ರೆಸ್ಸಿನ ಅಭಿಮಾನವನ್ನು ಕೂಡ ಕಳೆದುಕೊಂಡಿರುವರು. ರಾಜಕೀಯ ಕ್ಷೇತ್ರದಲ್ಲಿ ಇವರು ಈ ರೀತಿಯಲ್ಲಿ ಪರಿವರ್ತನವನ್ನು ಹೊಂದಿರುವದಲ್ಲದೆ, ಹಿಂದೂ ಸಭೆಯ ಸಂಘಟನೆಯ ಮೂಲಕರ್ತರಾಗಿಯೂ, ಹಿಂದೂ ಸಭೆಯ ಕಡೆಗಿನವರ ದೂರದರ್ಶಿತ್ವವು ಕಡಿಮೆಯಾಗುತ್ತಾ ಬಂದಿದೆಯೆಂಬುದನ್ನೂ ನಾವು ಅತ್ಯಂತ ಖೇದಪೂರ್ವಕ ತಿಳಿದುಕೊಳ್ಳಬೇಕಾಗುತ್ತದೆ. ಹಿಂದೂ ಮಹಾಸಭೆಯ ಸುಸಂಘಟನೆಗೆ ಹಿಂದೂ ಸಮಾಜದೊಳಗಿನ ಅಸಂಖ್ಯ ಮತಭೇದಗಳೂ, ಜಾತಿಭೇದಗಳೂ, ಅಭಿಪ್ರಾಯ ಭೇದಗಳೂ ಸಾಕಷ್ಟು ಕಷ್ಟಗಳನ್ನು ಕೊಡುತ್ತಿವೆ. ಇದಕ್ಕೆ ಕಳೆದ ಡಿಲ್ಲಿ ಅಧಿವೇಶನವೇ ನಿದರ್ಶನವಾಗಿದೆ. ಹಿಂದೂ ಮಹಾಸಭೆಯೂ ಹಿಂದೂ ಮತಭೇದಗಳ ರಂಗಭೂಮಿಯಾಗಿ ಪರಿಣಮಿಸುವುದೆಂಬ ನಮ್ಮ ಭಯವು, ಹಿಂದೂಗಳ ಕಷ್ಟಸ್ಥಿತಿಯೇ ಇವರನ್ನೊಟ್ಟಿಗೆ ತರುವುದರಲ್ಲಿ ಸಹಕಾರಿಯಾಗುವುದೆಂಬ ಆಶೆಯಿಂದ ಕಡಿಮೆಯಾಗಿದ್ದಿತು. ಆದರೆ ಮುಸಲ್ಮಾನರೊಳಗಿನ ಹಿಂದೂ ಪ್ರತಿಬಿಂಬವನ್ನು ನಿರ್ಮಿಸುವ ಲವಲವಿಕೆಯಲ್ಲಿ, ಪಂಡಿತಜಿಯವರ ದೂರದೃಷ್ಟಿಯು ಸಂಕುಚಿತವಾಯಿತೆನ್ನಬೇಕಾಗಿದೆ. ಇಲ್ಲವಾದರೆ ಪಂಡಿತಜಿಯವರು ತಮ್ಮ ರಾಜಕೀಯ ಧೋರಣದ ಪ್ರಸಾರಕ್ಕಾಗಿ ಹಿಂದೂ ಮಹಾಸಭೆಯನ್ನು ಆರಿಸುತ್ತಿರಲಿಲ್ಲ. ಹಿಂದೂ ಮಹಾಸಭೆಯ ಅಗ್ರಧುರೀಣರಲ್ಲಿ ಪಂಡಿತಜಿಯವರು ಹೇಗೊ ಲಾಲಾಜಿಯವರೂ ಹಾಗೆಯೇ ಆಗಿರುವರು. ಈ ಇಬ್ಬರು ಧುರೀಣರು, ಹಿಂದೂಗಳನ್ನು ಏಕೀಕರಿಸಲಿಕ್ಕಾಗಿ ರಚಿಸಿದ ಈ ಹಿಂದೂ ಮಹಾಸಭೆಯ ರಂಗಭೂಮಿಯಲ್ಲಿ ತಮ್ಮ ತಮ್ಮ ರಾಜಕೀಯ ಪ್ರಭೇದಗಳ ಹೋರಾಟವನ್ನು ತೋರಿಸುವುದಾದರೆ ಹಿಂದೂ ಮಹಾಸಭೆಯ ದೃಶ್ಯವು ಅಸಹನೀಯವಾಗುವುದು. ಹಿಂದೂಗಳು ರಾಜಕೀಯಕ್ಕಿಂತಲೂ ಹೆಚ್ಚು ಲಕ್ಷ ಕೊಡತಕ್ಕ ವಿಷಯಗಳೇನಕವಿವೆ. ಮತಭೇದಗಳೊಡನೆ ರಾಜಕೀಯ ಪ್ರಭೇದಗಳೂ ಕೂಡಿ ಹಿಂದೂ ಮಹಾಸಭೆಯಲ್ಲಿ ಕೋಲಾಹಲವನ್ನೆಬ್ಬಿಸುವುದಾದರೆ ಅದು ಎಲ್ಲ ಹಿಂದುಗಳಿಗೂ ಅತ್ಯಂತ ದಾರುಣವಾದ ವ್ಯಥೆಯನ್ನು ಕೊಡತಕ್ಕದ್ದು.

ನಮ್ಮ ಜಿಲ್ಲೆಗೆ ಕರ್ನಾಟಕ ಧುರೀಣರ ಆಗಮನ.

ನಮ್ಮ ಜಿಲ್ಲಾ ಪರಿಷತ್ತು ಮಂಗಳೂರಿನಲ್ಲಿಯೇ ಬೇಗನೆ ಕೂಡುವುದಾಗಿ ನಾವು ತಿಳಿಯುತ್ತೇವೆ, ಅಲ್ಲದೆ ಅದೇ ಸಮಯದಲ್ಲಿಯೇ ಶ್ರೀಯುತ ಶ್ರೀನಿವಾಸ ಕೌಜಲಗಿಯವರೂ, ಶ್ರೀಯುತ ನಾ. ಸು. ಹರ್ಡೀಕರರೂ ಬರುವರಾಗಿಯೂ ವರ್ತಮಾನವಿದೆ. ಕಾಂಗ್ರೆಸ್ಸಿನ ಅಭಿಮಾನವು ನಮ್ಮ ಜಿಲ್ಲೆಯಲ್ಲಿ ಮೆಲ್ಲನೆ ಮರವಿಗೆ ಸೇರುವ ಈ ಸಮಯದಲ್ಲಿ ಕರ್ನಾಟಕದ ಗೌರವಕ್ಕೆ ಪಾತ್ರರಾಗಿರುವ ಈ ಧುರೀಣರು ಬರುವುದು ಅತೀ ಆನಂದದ ವಿಷಯ. ಅಲ್ಲದೆ ಶ್ರೀಯುತ ಶ್ರೀನಿವಾಸ ಕೌಜಲಗಿಯವರು ಕರ್ನಾಟಕ ಏಕೀಕರಣದಲ್ಲಿ ಚಿಂತಿತರಿರುವವರಾಗಿರುವರು; ಮತ್ತು ಕರ್ನಾಟಕ ಪ್ರಾಂತರಚನೆಯ ಬಗ್ಗೆ ಅನೇಕ ವಿಧದಲ್ಲಿ ಯೋಚಿಸಿ ಉಪಾಯಗಳನ್ನು ಕಲ್ಪಿಸುವವರಾಗಿರುವರು. ಆದುದರಿಂದ ಶ್ರೀಯುತರ ಆಗಮನದಿಂದ ಎರಡು ಸಮಸ್ಯೆಗಳೂ ಚೆನ್ನಾಗಿ ತರ್ಕಿಸಲ್ಪಡಲು ಅನುಕೂಲವಿದೆ ದಕ್ಷಿಣ ಕನ್ನಡ ಜಿಲ್ಲೆಯ ಮೂಲಕವೇ ಕರ್ನಾಟಕ ಏಕೀಕರಣದ ಸಮಸ್ಯೆಯು ಮುಂದೊತ್ತಲ್ಪಟ್ಟರೆ, ಅದು ಕಾರ್ಯಕಾರಿಯಾಗಲು ಕಾರಣವಿದೆಯೆಂದು ನಮಗೆ ಅನ್ನಿಸುತ್ತಿದೆ. ಈ ಬಗ್ಗೆ ಉತ್ತರ ಕರ್ನಾಟಕದವರು ಹಲವು ಸಮಯದಿಂದ ಪ್ರಯತ್ನಿಸುತ್ತಿದ್ದರೂ, ದಕ್ಷಿಣ ಕನ್ನಡವು ಇದರ ಕಡೆಗೆ ಇತ್ತೀಚೆಗನೇ ಜಾಗೃತವಾಗಿದೆ. ಆದರೆ ದಕ್ಷಿಣ ಕನ್ನಡವು ಜಾಗೃತವಾದರೆ ಸಾಲದು. ಅದು ಸಚೇತನ ಸಾಧನೆಗಳಲ್ಲಿಯೂ ನಿಯುಕ್ತವಾಗಬೇಕು. ನಮ್ಮ ಜಿಲ್ಲೆಗೆ ಬರುವ ನಮ್ಮ ಅತಿಥಿಗಳು ಜಿಲ್ಲೆಯ ಎಲ್ಲಾ ಪಂಗಡಗಳ ಮುಖಂಡರೊಂದಿಗೆ ಕರ್ನಾಟಕ ಏಕೀಕರಣ ಸಮಸ್ಯೆಯನ್ನು ತರ್ಕಿಸಿ ಆ ಬಗ್ಗೆ ಯೋಗ್ಯವಾದ ಸಂಘಟನೆಯನ್ನು ರಚಿಸುವುದು ಅಗತ್ಯವಿದೆ. ಕರ್ನಾಟಕದ ಪ್ರಮುಖ ಶಹರುಗಳಲ್ಲಿ ಕರ್ನಾಟಕ ಏಕೀಕರಣ ಸಭೆಗಳನ್ನು ವ್ಯವಸ್ಥೆಗೊಳಿಸುವ ಆಲೋಚನೆಯನ್ನು ಮಾಡಬಹುದು. ಈ ಸಭೆಗಳಲ್ಲಿ ರಾಜಕೀಯ ವಿವಾದಗಳಿಗೆ ಎಡೆಕೊಡದೆ, ಸರಕಾರ ನೌಕರರೂ, ಸ್ವತಂತ್ರ ವೃತ್ತಿಯವರೂ ಇತ್ಯಾದಿ ಎಲ್ಲರೂ ತೊಂದರೆಯಿಲ್ಲದೆ ಸೇರುವಂತಾದರೆ ಕರ್ನಾಟಕ ಏಕೀಕರಣವು ಸುಲಭ ಸಾಧ್ಯವಾಗಬಹುದೆಂದು ತೋರುತ್ತಿದೆ. ಆದರೆ ಈ ಸಭೆಗಳ ವ್ಯವಸ್ಥೆಯು ಸುಲಭವೊ? ವ್ಯವಸ್ಥೆಗೊಳಿಸಲ್ಪಟ್ಟರೆ ಈ ಸಭೆಗಳೊಳಗೇನೇ ಏಕೀಕರಣವಾದೀತೊ? ಇಲ್ಲವೇ ಸಾಹಿತ್ಯ ಸಭೆಯಂತೆ ಭಿನ್ನಭಾವನೆಗಳನ್ನು ಹೆಚ್ಚಿಸುವುದೊ? ಎಂಬುದನ್ನೂ ಯೋಚಿಸಬೇಕು. ಕರ್ನಾಟಕ ಧುರೀಣರು ಇದರ ಬಗ್ಗೆ ಮಂಗಳೂರಿನಲ್ಲಿ ಕೆಲಸ ಮಾಡಲು ಸಾಕಷ್ಟು ಸಾಧನೆಗಳಿವೆ.

ಖಾದಿ ಪ್ರಚಾರ

ಪಾಶ್ಚಾತ್ಯ ರೀತಿಗಳೂ, ವ್ಯವಸ್ಥೆಯೂ ಹಿಂದೂಸ್ಥಾನದಲ್ಲಿ ಇನ್ನೂ ಪ್ರಚಾರವಾಗಲು ಕಷ್ಟವಾಗುತ್ತಿದೆ. ಖಾದಿ ಪ್ರಚಾರದ ರೀತಿಯು ಹಿಂದೀಯ ಸ್ವಭಾವಕ್ಕೆ ಅಪವಾದವಾಗಿಲ್ಲ. ಖಾದಿಪ್ರಚಾರವು ಕೇವಲ ಹೃದಯದ ಅನುಭೂತಿಯಿಂದ ಸಾಧಿಸಲ್ಪಡುತ್ತಿದೆಯಲ್ಲದೆ ಸಮ್ಮಂಧಪಟ್ಟ ಸಂಖ್ಯಾಗಣನೆ (Statistical calculation)ಯಿಂದ ಮುಂದೆ ಸಾಗುವುದಿಲ್ಲ. ಖಾದಿಯಿಂದ ಬಡವರಿಗೆ ಪ್ರೋತ್ಸಾಹ ದೇಶದ ಆರ್ಥಿಕ ಉನ್ನತಿ, ಜನತೆಯೊಳಗೆ ಶಿಸ್ತು, ದೇಶದಲ್ಲಿ ರಾಷ್ಟ್ರೀಯತೆಯ ಸ್ಥಿರತೆ, ಇತ್ಯಾದಿ ಲಾಭವಾಗುವುದು ನಿಜ. ಆದರೆ ಖಾದಿಪ್ರಚಾರವು ಎಲ್ಲೆಲ್ಲಿ ಹೇಗೆ ನಡೆಯುತ್ತಿದೆ, ಒಂದೊಂದು ಕಡೆಯಲ್ಲಿ ಹತ್ತಿ ಎಲ್ಲಿಂದ ಬರಬೇಕು, ನೂಲು ಎಷ್ಟು ತಯಾರಾದೀತು, ಹತ್ತಿ ಬೆಲೆಗೂ ತಯಾರಾದ ನೂಲಿನ ಬೆಲೆಗೂ ಎಷ್ಟು ಅಂತರವಿದೆ, ಕೆಲಸದವರಿಗೆ ಎಷ್ಟು ಕೂಲಿ ಸಿಕ್ಕುವುದು, ಆಯಾ ಸ್ಥಳದ ದೈನಿಕ ಕೂಲಿ ಎಷ್ಟಿದೆ, ಜನತೆಗೆ ಖಾದಿಯಿಂದ ಹೇಗೆ ಪ್ರಯೋಜನವಾದೀತು, ತಯಾರಾದ ಹತ್ತಿಯು ಎಲ್ಲಿ ಹೇಗೆ, ಯಾವ ಬೆಲೆಗೆ ಮಾರಬಹುದು ಇತ್ಯಾದಿ ಅನೇಕ ಪ್ರಶ್ನೆಗಳನ್ನು ಖಾದಿವಿಚಾರದಲ್ಲಿ ಆಯಾ ಸ್ಥಳಕ್ಕನುಸಾರವಾಗಿ ನಿರ್ಣಯಿಸತಕ್ಕುದಿದೆ. ನಮ್ಮ ಜಿಲ್ಲೆಯಲ್ಲಿ ನೀಲೇಶ್ವರವು ಖಾದಿಪ್ರಚಾರಕ್ಕೆ ಯೋಗ್ಯ ಸ್ಥಳವೆಂದು ಹಲವರ ಅಭಿಪ್ರಾಯವಿದೆ. ಆದರೆ ಈ ಮೊದಲು ಅಲ್ಲಿ ನಡೆದ ಕೆಲಸದ ಸರಿಯಾದ ವಿಮರ್ಶೆಯನ್ನು ಯಾರೂ ಮಾಡಿದಂತೆ ತೋರುವುದಿಲ್ಲ; ಮುಂದೆ ಹೇಗೆ ಸುಧಾರಿಸಬಹುದೆಂಬುದನ್ನೂ ನಿರ್ಣಯಿಸಿದಂತೆ ತೋರುವುದಿಲ್ಲ. ಬರೇ ಅನುಭೂತಿಯಿಂದ ಕೆಲಸವಾರಂಭಿಸುವುದೂ, ಪರಿಣಾಮವು ಒಳ್ಳೆಯದಲ್ಲದಿದ್ದಾಗ ಬಿಟ್ಟುಬಿಡುವುದೂ ಖಾದಿಪ್ರಚಾರಕ್ಕೆ ಹಾನಿ ತರುವಂತಹ ವಿಷಯವಾಗಿದೆ. ನಮ್ಮ ಜಿಲ್ಲೆಯಲ್ಲಿ ನೀಲೇಶ್ವರದಂತಹ ಸ್ಥಳವನ್ನು ಚೆನ್ನಾಗಿ ಪರಾಮರ್ಶಿಸಿ, ಯೋಗ್ಯವಾದ ಸಂಖ್ಯಾ ಗಣನೆಯಿಂದ ಖಾದಿ ತಯಾರಿಯನ್ನು ಮಾಡಿಸಬಹುದು.

ಮುಂದಿನ ಚುನಾವಣೆ

ಶ್ರೀಯುತ ಶ್ರೀನಿವಾಸ ಅಯ್ಯಂಗಾರರವರ ಧುರೀಣತ್ವದಲ್ಲಿ ಮದ್ರಾಸಿನ ತಮಿಳು-ತೆಲುಗು ಜಿಲ್ಲೆಗಳಲ್ಲಿ ಕಾಂಗ್ರೆಸ್ ಪ್ರಚಾರ ಕಾರ್ಯವು ಚೆನ್ನಾಗಿ ಸಾಗುತ್ತಿದೆ. ಶ್ರೀಯುತ ಅಯ್ಯಂಗಾರರ ಅವಿಶ್ರಾಂತ ಪರಿಶ್ರಮದ ಕಡೆಗೆ ಯಾರೊಬ್ಬರೂ ತಲೆದೂಗದಿರರು. ಬಂಗಾಳ ಪ್ರಾಂತಕ್ಕೆ ದಿವಂಗತ ದೇಶಬಂಧು ಚಿತ್ತರಂಜನ ದಾಸರು ಹೇಗೊ ಶ್ರೀಯುತ ಅಯ್ಯಂಗಾರರು ಮದ್ರಾಸ ಪ್ರಾಂತಕ್ಕೆ ಅಷ್ಟೇ ಸೇವೆಯನ್ನು ಮಾಡಿ ಗೌರವವನ್ನು ತಂದಿರುವರು. ಇಷ್ಟು ಉತ್ಸಾಹದಿಂದಲೂ ಶಕ್ತಿಯಿಂದಲೂ ಶ್ರೀಯುತ ಶ್ರೀನಿವಾಸ ಅಯ್ಯಂಗಾರರು ಕೆಲಸ ಮಾಡಿದುದರಿಂದಲೇ ಮದ್ರಾಸಿನ ಕಾಂಗ್ರೆಸ್ ಕೆಲಸವು ಗೌರವಪೂರ್ವಕ ನಡೆಯುತ್ತಿದೆ. ಆದರೆ ನಮ್ಮ ಜಿಲ್ಲೆಯೊಳಗೆ ಸ್ವರಾಜ್ಯಪಕ್ಷದ ಮತ್ತು ಕಾಂಗ್ರೆಸ್ ಕೆಲಸದ ಭರಭರಾಟವೇ ಇರುವುದಿಲ್ಲ. ಸರಿಯಾದ ಪ್ರಚಾರ ಕಾರ್ಯವು ನಡೆದರೇನೆ ಕಾಂಗ್ರೆಸಿನ ಗೌರವವು ಉಳಿಯುವುದು. ಈಗಿನ ರಾಜಕೀಯ ಗದ್ದಲಗಳಲ್ಲಿ ಶಿಸ್ತು ಸಹಿತವಾದ, ಅಖಂಡವಾದ ಈ ಸ್ವರಾಜ್ಯ ಪಕ್ಷವು ಹೆಚ್ಚು ಪ್ರಾಶಸ್ತ್ಯವನ್ನು ಪಡೆಯದಿದ್ದರೆ ಹಿಂದೀ ಸ್ವರಾಜ್ಯವು ಬಹಳ ದೂರಕ್ಕೆ ಹೋಗುವುದಲ್ಲದೆ, ಹಿಂದೀಯರು ಅನೇಕ ನಷ್ಟಗಳಿಗೂ ಒಳಗಾಗಬೇಕು. ಈ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಈ ಕಾಲಕ್ಕೆ ಸರಿಯಾಗಿ ಪ್ರಚಾರ ಕಾರ್ಯವನ್ನು ಮಾಡಬಲ್ಲವರು ತೋರುವುದಿಲ್ಲ. ಇದ್ದವರಿಗೆ ಸಮಯ ಸಾಕಾಗುವುದಿಲ್ಲ. ಆದರೂ ಜನತೆಯೂ, ಹಿಂದೀ ರಾಷ್ಟ್ರೀಯ ಉಜ್ಜೀವನ ಇತಿಹಾಸದಲ್ಲಿ ನಮ್ಮ ಜಿಲ್ಲೆಯನ್ನು ಹಿಂದಿನ ಸ್ಥಾನದಲ್ಲಿರಿಸರೆಂದು ಆಶಿಸುವೆವು.

ಜಯಕರ್ನಾಟಕವೂ ಕೊಂಕಣಿ ಭಾಷೆಯೂ.

ಈ ವಿಷಯವಾಗಿ ಕೆಲವು ಸಮಯದ ಹಿಂದೆ ಜಯಕರ್ನಾಟಕವು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಟೀಕಿಸಿ ನಾವು ಬರೆದುದಕ್ಕೆ ಜಯಕರ್ನಾಟಕವು ಪರಸ್ಪರವಾಗಿ ಉಂಟಾದ ತಪ್ಪು ತಿಳುವಳಿಕೆಯನ್ನು ನಿವಾರಿಸಲಿಕ್ಕೆ ಕೊಟ್ಟ ತನ್ನ ಸದಭಿಪ್ರಾಯಗಳನ್ನು ಇನ್ನೊಂದು ಕಡೆ ಪ್ರಕಟಿಸಿರುವೆವು. ಜಯಕರ್ನಾಟಕದ ನಿಜ ಅಭಿಪ್ರಾಯಗಳ ಸ್ಪಷ್ಟೀಕರಣಕ್ಕಾಗಿ ಸ್ವದೇಶಾಭಿಮಾನಿಯು ಜಯಕರ್ನಾಟಕ್ಕೆ ಆಭಾರಿಯಿದೆ, ಮತ್ತು ಅಷ್ಟು ಉದಾರಭಾವನೆಯಿರುವಾಗ ಜಯಕರ್ನಾಟಕದ ಕರ್ನಾಟಕ ಏಕೀಕರಣದ ಪ್ರಯತ್ನಗಳು ಎಂದೂ ವಿಫಲವಾಗಲಾರವು. ಕರ್ನಾಟಕ ಏಕೀಕರಣವು, ಕೆಲವರು ನೆನಸುವಂತೆ, ಪರ ಅಪಹಾಸದಿಂದಲೂ, ದೂಷಣೆಯಿಂದಲೂ, ದ್ವೇಷದಿಂದಲೂ, ಬಯ್ಯಾಟದಿಂದಲೂ ಸಾಧ್ಯವಾಗುವಂತಿಲ್ಲ. ಕರ್ನಾಟಕ ಏಕೀಕರಣವು ಗೌರವಾನ್ವಿತ ರೀತಿಯಿಂದ ಮೂಲ್ಯವಾನ್ ಮಾತುಗಳಿಂದ, ಸವಿನಯ ಸೌಹಾರ್ದದಿಂದ ಸಾಧ್ಯವಾಗತಕ್ಕುದಿದೆ. ಈ ತರದ ಪ್ರಯತ್ನಗಳನ್ನು "ಜಯಕರ್ನಾಟಕವು" ಮಾಡಿಯದೆಂಬುದನ್ನು ನಾವು ಬಲ್ಲೆವು. ಜಯಕರ್ನಾಟಕವು ಕೊಟ್ಟ ಈ ಅಭಿಪ್ರಾಯಗಳು ಸಹಜವೂ, ಕರ್ನಾಟಕ ಏಕೀಕರಣಕ್ಕಾಗಲಿ, ಕನ್ನಡದ ಏಳಿಗೆಗಾಗಲಿ ಸ್ಥಿರವಾದ ಆಧಾರವೂ ಆಗುವುವು. ಅಲ್ಲದೆ ಇತರ ನುಡಿಗಳ ನಾಶದ ಮೇಲೆ ಕರ್ನಾಟಕದ ಸ್ಥಿರತೆಯನ್ನು ಕಟ್ಟಿಕೊಳ್ಳಲು ಯತ್ನಿಸುವವರು ಆಕಾಶಕುಸುಮವನ್ನು ಹುಡುಕಿ ಹೋಗುವವರೇ ಎನ್ನಬೇಕಾಗುತ್ತಿದೆ. ಮತ್ತು ಕೊಂಕಣಿ ಭಾಷೆಯು ಕರ್ನಾಟಕ ದೇಶದಲ್ಲಿ ಕನ್ನಡಕ್ಕೆ ಸವತಿರೂಪದಿಂದ ಬಂದಿಲ್ಲ, ಅದು ಒಂದು ಸಮಾಜದ ಸುಸಂಘಟನೆಯ ಬಗ್ಗೆ ಮಾತ್ರವೇ ಚಿಂತಿತವಿದೆಯಲ್ಲದೆ ಕನ್ನಡದೊಡನೆ ಸ್ಪರ್ಧಿಸುವಷ್ಟು ಇಚ್ಛೆಯುಳ್ಳವಳಾಗಲಿ ಶಕ್ತಿಯುಳ್ಳವಳಾಗಿಲ್ಲವೆಂಬುದನ್ನು ಕರ್ನಾಟಕಸ್ಥರಿಗೆ ದೃಢೀಕರಿಸಬಲ್ಲೆವು.

ವಿದೇಶ ವರ್ತಮಾನ.

—ಬಾಗ್‌ದಾದ್‌ನಲ್ಲಿ ಪ್ರಚಂಡ ನೆರೆ ಬಂದಿರುವುದು. ಅಲ್ಲಿಯ ಟೈಗ್ರಿಸ್ ನದಿಯಲ್ಲಿ ನೀರು ಹೆಚ್ಚಾಗಿ ಪ್ರವಾಹವು ಉಕ್ಕೇರಿ ಬಂದು ನುಮಾರು ಎರಡು ಮೈಲು ಅಸುಪಾಸಿನ ಸ್ಥಳದಲ್ಲಿ ನೆರೆ ನೀರು ತುಂಬಿರುವುದು. ಅಲ್ಲಿಯ ಅರಸರ ಅರಮನೆ, ರೈಲ್ವೇ ಸ್ಟೇಶನು ಮುಂತಾದವುಗಳು ನೆರೆನೀರಿನಲ್ಲಿ ಮುಳುಗಿ ಹೋಗಿರುವವು. ನದಿಯ ದಂಡೆಯಲ್ಲಿ ಒಂದು ಒಡಕು ಬಿದ್ದುದರಿಂದ, ನೆರೆ ನೀರು ಇಡೀ ಬಾಗ್‌ದಾದ್‌ನ್ನು ಆವರಿಸಿರುವದೋ ಎಂಬ ಅಂಜಿಕೆಯು ಉಂಟಾಗಿದೆ.

—ಚಕ್ರವರ್ತಿ ಸಾರ್ ಭಾವರ ಸಹೋದರಿಯರಾದ ವಿಕ್ಟೋರಿಯಾ ರಾಜಕುಮಾರಿಯು ದೇಹಾಲಸ್ಯದಿಂದ ಮಲಗಿದ್ದವರು ಈಗ ಸಂಧಾರಣ ಗುಣ ಹೊಂದಿರುತ್ತಾರೆ.

—ಇಟಲಿ ದೇಶದ ತರುಣಿಯೊಬ್ಬಳ ಚಿತ್ರವನ್ನು ನೋಡಿ ಭ್ರಾಂತನಾಗಿ, ಆಕೆಯು ಯಾರೆಂದೂ, ಮತ್ತು ಎಲ್ಲಿರುವಳೆಂದೂ ಪತ್ತೆಮಾಡಿ, ಆಕೆಯನ್ನು ಮದುವೆಮಾಡಬೇಕೆಂಬ ಮಹಾ ಕಾಂಕ್ಷೆಯುಳ್ಳ ಒಬ್ಬ ಯೌವನಸ್ಥನು ನಾನಾ ದೇಶಗಳನ್ನು ತಿರುಗಿ ಕಡೆಗೆ ಆಕೆಯನ್ನು ಅಮೇರಿಕದಲ್ಲಿ ಕಂಡು ತನ್ನನ್ನು ಮದುವೆಮಾಡಿಕೊಳ್ಳಬೇಕೆಂದು ಪ್ರಾರ್ಥಿಸಿದನು. ಆಕೆಯು ಮೊದಲೇ ವಿವಾಹಿತಳಾದ್ದರಿಂದ, ಇನ್ನು ಮುಂದೆ ಆ ಯೌವನಸ್ಥನು ಆಕೆಯ ಗೊಡವೆಗೆ ಹೋಗಬಾರದೆಂದು ಅಲ್ಲಿಯ ಮ್ಯಾಜಿಸ್ಟ್ರೇಟರು ಆತನಿಗೆ ಎಚ್ಚರಿಸಿರುತ್ತಾರೆ.

—ವಿಲಾಯತಿಯಲ್ಲಿ ೨ ಆಕಾಶನಾವೆಗಳು ಒಂದಕ್ಕೊಂದು ತಗಲಿ ಪ್ರಚಂಡವಾದ ಅಗ್ನಿಯುಂಟಾಗಿ, ಎರಡು ನಾವೆಗಳು ಭಸ್ಮವಾಗಿರುವವು. ಆಕಾಶನಾವೆಗಳನ್ನು ತಯಾರುಮಾಡುವುದರಲ್ಲಿ ಪ್ರವೀಣರಾದ ಇಬ್ಬರು ಈ ದುರ್ಘಟನೆಯಿಂದ ಮೃತಪಟ್ಟರು.

—ನೋರ್ವೆ ದೇಶದ ಅಮುನ್ಸಡೆನ್ ಎಂಬೊಬ್ಬ ಪ್ರವೀಣ ಆಕಾಶನಾವೆಗಾರನು ಉತ್ತರ ಧ್ರುವಕ್ಕೆ ಆಕಾಶ ಮಾರ್ಗವಾಗಿ ಹೋಗುವೆನೆಂದು ನಿಶ್ಚಯ ಮಾಡಿರುವರು.

—ಪೆರಿಸಿನಲ್ಲಿ, ಅಫೀಮು, ಕೊಕೈನ್ ಮುಂತಾದ ಮಾದಕ ದ್ರವ್ಯಗಳನ್ನು ಅಂತರಂಗದಿಂದ ಮಾರುವ ಅನೇಕರನ್ನು ದಸ್ತಗಿರಿ ಮಾಡಿರುವರು. ಮೊನ್ನೆ ತಾನೇ ಒಬ್ಬ ನಟಿಶಿರೋಮಣಿಯು ಇಂಥ ಮಾದಕ ದ್ರವ್ಯವನ್ನು ಸೇವಿಸಿ ಕಾಲವಶಳಾದಳಂತೆ; ಹೀಗೆಯೇ ಅನೇಕರು ಈ ದ್ರವ್ಯಗಳನ್ನು ಸೇವಿಸಿ ವಿಷಮ ಸ್ಥಿತಿಗೆ ಬಂದಿರುವರು.

—ಬ್ರಿಟಿಷ್ ರೋಯಲ್ ವೈಮಾನಿಕರು ಅಫ್ರಿಕಾಖಂಡದ ಉತ್ತರದಲ್ಲಿರುವ ಕ್ಯಾರೊ ಪಟ್ಟಣದಿಂದ ಅದೇ ಖಂಡದ ದಕ್ಷಿಣ ಕೊನೆಯಲ್ಲಿರುವ ಕೇಪ್ ಟೌನಿಗೆ ವಿಮಾನದಲ್ಲಿ ಕೂತು ಬಂದಿರುವರು.

—ರೊಮೇನಿಯದ ರಾಜಕುಟುಂಬದವರನ್ನು ಕೊಲ್ಲಬೇಕೆಂದು ಸಾಧಿಸುತ್ತಿರುವಾಗ ಬುಕಾರೆಸ್ಟಿನ ಪೋಲಿಸಿನವರು ಹೊಂಚುಗಾರರನ್ನು ಹಿಡಿದಿರುವರು. ಇವನು ತಿರೋಡರ್ ಎಂಬ ಹೆಸರಿನ ಒಬ್ಬ ಜರ್ಮನನಂತೆ.

—ಶೆಕ್ಸ್‌ಪಿಯರ್ ಮೆಮೋರಿಯಲ್ ಫಂಡಿಗೆ ೧೬,೦೦೦ ಪೌಂಡ್ ವಂತಿಗೆಯಾಗಿದೆಯಂತೆ.

—ಉತ್ತರಧ್ರುವಕ್ಕೆ ಹೋಗಲಿಕ್ಕೆ "ನೋರ್ಜ" ಎಂಬ ವಿಮಾನವು ಸಿದ್ಧವಾಗಿ ರೋಮ ಪಟ್ಟಣದಿಂದ ರಷ್ಯಾ ದೇಶದ ಪುಲ್‌ಹಾಮ ಪಟ್ಟಣಕ್ಕೆ ಬಂದಿದೆ. ಇಲ್ಲಿ ಇದಕ್ಕೆ ಬೇಕಾದ ಕಲ್ಲಿದ್ದಲ್ಲನ್ನೂ ಹ್ಯಾಡ್ರೊಜನ್ ವಾಯುವನ್ನೂ ತುಂಬಿಸಿ ತಯಾರಿಸಿರುವರು. ಇದು ಎಪ್ರಿಲ್ ೨೦ನೇ ತಾರೀಕಿಗೆ ಸ್ಪಿಟ್ಸಬರ್ಗನ ದ್ವೀಪಕ್ಕೆ ಹೊರಡುವುದು. ಅಲ್ಲಿಂದ ಉತ್ತರಧ್ರುವಕ್ಕೆ.

—ಅಮೇರಿಕದಿಂದ ಇಂಗ್ಲೆಂಡಿನಲ್ಲಿ ಸಂಚರಿಸಿ ಇಂಗ್ಲಂಡಿನ ಹೋಟೆಲುಗಳನ್ನು ನೋಡುವುದಕ್ಕೆ ಅನೇಕ ಮಂದಿ ಹೋಟೆಲುಕೀಪರುಗಳು ಬಂದಿರುವರು. ಇವರು ಗ್ರೇಟ ವೆಸ್ಟರ್ನ ರೈಲುವೆಯಲ್ಲಿ ಪ್ಲಿಮತ್ ಬಂದರದಿಂದ ಲಂಡನ್ ಪಟ್ಟಣಕ್ಕೆ ೩ ಗಂಟೆ ೫೮ ಮಿನಿಟುಗಳಲ್ಲಿ ಬಂದು ತಲುಪಿದರು. ಪ್ಲಿಮತ್‌ನಿಂದ ಲಂಡನಿಗೆ ೨೨೬ ಮೈಲುಗಳು ಇವೆ. ಡ್ರ್ಯಾವರನು ಗಂಟೆಗೆ ೬೦ ಮೈಲಿನ ಪ್ರಕಾರ ಟ್ರೈನು ಓಡಿಸಿದರು. ಇದಕ್ಕಾಗಿ ಹೋಟೆಲುಕೀಪರರ ಮುಖ್ಯಸ್ಥನು ಈ ಡ್ರ್ಯಾವರನಿಗೆ ಬಹಳ ಶಿಫಾರಸು ಕೊಟ್ಟನು. ಈ ರೀತಿಯಲ್ಲಿ ಟ್ರೈನು ಓಡಿಸಿದುದು ಇದು ಮೊದಲನೇಸಾರಿಯಾಗಿದೆಯಂತೆ.

—ಮೊರಕೊ ದೇಶದಲ್ಲಿ ಆದ ಯುದ್ಧದಲ್ಲಿ ರಾಜಿಯಾಗಿ ಅರಬಿ ಮುಖ್ಯಸ್ಥನಾದ ಅಬ್ದುಲ್ ಕರಿಮ್ ಎಂಬವನನ್ನು ಅಪರಾಧ ಕೊಟ್ಟು ದೇಶಭ್ರಷ್ಟನಾಗಿ ಮಾಡುವರಂತೆ.

—ಸಾಮ್ರಾಜ್ಯದ ವಾಯರ್‌ಲೆಸ್ ಕೆಲಸವನ್ನು ಶುರುಮಾಡುವುದಕ್ಕಾಗಿ ಇಂಗ್ಲೆಂಡ, ಕೆನಡಾ ಮತ್ತು ದಕ್ಷಿಣ ಅಫ್ರಿಕಕ್ಕೆ ನಡಿಸುವ ಸ್ಟೇಶನುಗಳ ಕೆಲವು ಇಂಗ್ಲೆಂಡ ಕೆನಡಾ ಮತ್ತು ದಕ್ಷಿಣ ಅಫ್ರಿಕದಲ್ಲಿ ಮೇ ತಿಂಗಳಲ್ಲಿ ಮುಗಿಯುವುದು, ಎಂಗ್ಲೊ ಒಸ್ಟ್ರೇಲಿಯನ್ ಮತ್ತು ಎಂಗ್ಲೊ ಇಂಡಿಯನ್ ಸ್ಟೇಶನುಗಳ ಕೆಲಸವು ಜುಲಾಯಿ ಅಂತ್ಯದಲ್ಲಿ ಮುಗಿಯುವುದು.

—ಗ್ರೀಸ್‌ದೇಶದಲ್ಲಿ ಪ್ರೆಸಿಡೆಂಟರ ಚುನಾವಣೆಯಾಗಿ ಜನರಲ್ ಪೆಂಗೆಲೋಸರು ಅಧ್ಯಕ್ಷರಾದರು.

—ದಕ್ಷಿಣ ಅಮೇರಿಕದ ಅರ್ಜಂಟ್ಯಾನ ದೇಶದಲ್ಲಿ ಪರದೇಶಕ್ಕೆ ಕಳುಹಿಸುವುದಕ್ಕೆ ೩೨ ಲಕ್ಷ ಟನ್ ಗೋಧಿಯೂ ೧೨ ಲಕ್ಷ ಟನ್ ಲಿನ್‌ಸೀಡ ಬೀಜವೂ ತಯಾರಿದೆಯಂತೆ.

—ಜರ್ಮನಿಯು ಯುದ್ಧದ ಖರ್ಚಿಗಾಗಿ ಇಂಗ್ಲಿಷ್ ಸರಕಾರಕ್ಕೆ ಕೊಡಲಿಕ್ಕಿರುವ ೧೬,೫೬೩,೦೦೦ ಮಾರ್ಕುಗಳನ್ನು ಕಳೆದ ಮಾರ್ಚ ಅಖೈರಿಗೆ ಬ್ರಿಟಿಷ್ ಸರಕಾರಕ್ಕೆ ಕೊಟ್ಟಿರು.

—ಈ ವರುಷ ಇಂಡಿಯಕ್ಕೆ ಅಪೋಸ್ತಲ ಡೆಲಿಗೇಟರಾಗಿ ಮೊಗೆ ಯಾರ್ ಎಡವರ್ಡ್ ಮೂನಿಯವರು ಬೇಗನೇ ರೋಮಿನಿಂದ ಹೊರಡುವರು. ಪೋಪ್‌ಸಾಹೇಬರು ಇವರಿಗೆ ಅಪ್ಪಣೆಯನ್ನು ಕೊಟ್ಟಿರುತ್ತಾರೆ.

—ಸಿರಿಯಾದೇಶದಲ್ಲಿ ನಡೆಯುತ್ತಿದ್ದ ಡ್ರೂಸರ ಯುದ್ಧದಲ್ಲಿ ಇಬ್ಬರು ಮುಖ್ಯಸ್ಥರು ಶರಣಾಗತರಾಗಿರುವರು.

—ಜರ್ಮನಿಯವರು ಯುದ್ಧದ ಸಮಯ ಕಳಕೊಂಡ ಕೊಲೊನಿಗಳಲ್ಲಿಯೂ ಇತರ ಬ್ರಿಟಿಷ್ ಕೊಲೊನಿಗಳಲ್ಲಿಯೂ ವ್ಯಾಪಾರಸ್ಥರಾಗಿ ಹೋಗಿ ಸ್ಥಳ ಕ್ರಯಕ್ಕೆ ಪಡಕೊಂಡು ಭಂಡಸಾಲೆಗಳನ್ನು ತೆರೆಯುತ್ತಿರುವರು. ಟ್ಯಾಂಗನಿಯಕ್ಕೆ ಹೋಗಿ ದಲ್ಲಾಲ ಮತ್ತು ಚಿಲ್ಲರೆಯ ವ್ಯಾಪಾರವನ್ನು ಮಾಡುತ್ತಿರುವರು. ಅಫ್ರಿಕ ಖಂಡದ ಕೆಮರೂನ್ ದೇಶದಲ್ಲಿ ಆಸ್ತಿಯನ್ನು ಕ್ರಯಕ್ಕೆ ಕೊಂಡುಕೊಂಡು ಅನೇಕ ಜರ್ಮನ ಸಾಹುಕಾರರು ಅಲ್ಲಿಯೇ ವಾಸಮಾಡಿಕೊಂಡಿರುವರು. ಯುದ್ಧದ ಮುಂಚೆ ಈ ಪ್ರದೇಶವು ಜರ್ಮನರ ಸ್ವಾಧೀನದಲ್ಲಿತ್ತು.

—ಇರಾಕ್ ದೇಶವನ್ನು ಫೈಜುಲ್ ಅರಸರ ಆಳ್ವಿಕೆಗೆ ಒಳಪಡಿಸಿ, ಇಂಗ್ಲಿಷರ ಪೋಲ್ಸಿಚಾರದಲ್ಲಿ ಇಟ್ಟಿದ್ದರು. ಅಲ್ಲಿರುವ ಕುರ್ಡಿಶ್ ಎಂಬ ಜನರು ತಮ್ಮ ಜನರನ್ನೇ ಹೆಚ್ಚಾಗಿ ಅಧಿಕಾರಿಗಳಾಗಿ ಇಡಬೇಕೆಂದೂ, ಕುರ್ಡ ಭಾಷೆಯನ್ನೇ ಕೋರ್ಟು ಕಚೇರಿಗಳಲ್ಲಿಯೂ ಶಾಲೆಗಳಲ್ಲಿಯೂ ಉಪಯೋಗಿಸಬೇಕೆಂದು ಇಂಗ್ಲಿಷರಿಗೆ ತಿಳಿಸಿದ್ದರು. ಅವರ ಇಚ್ಛೆಗೆ ಅನುಸಾರವಾಗಿ, ಪ್ಯಾಕೆಸ್ಟ ಮೆಂಬರರ ಕೈಕೆಳಗಿರು ೫೬ ಮಂದಿ ಹುದ್ದೆದಾರರಲ್ಲಿ ೪೩ ಮಂದಿಯೂ ನ್ಯಾಯಸ್ಥಾನಗಳಲ್ಲಿ, ೧೩ ಮಂದಿಯಲ್ಲಿ ೧೧ ಮಂದಿಯೂ ಇತರ ಇಲಾಖೆಗಳಲ್ಲಿ ೮೫ರಲ್ಲಿ ೭೮ ಮಂದಿಯೂ ಕುರ್ಡರೇ ಆಗಿರುತ್ತಾರೆ. ಅನ್ಯದೇಶೀಯ ಉದ್ಯೋಗಸ್ಥರ ಸಂಖ್ಯೆಯು ಕಡಿಮೆ ಆಗುತ್ತಾ ಬರುತ್ತಿದೆ. ಯೋಗ್ಯವಾದ ಕುರ್ದರು ಸಿಕ್ಕಿದಲ್ಲಿ ಅವರನ್ನೇ ನೇಮಿಸುತ್ತಿರುವರು.

ಒಳದೇಶ ವರ್ತಮಾನ.

—ಹಿಂದೂಸ್ಥಾನದ ವೈಸರಾಯರಾದ ಲೋರ್ಡ ಇರ್ವಿನ್‌ರವರಿಗೆ ಸ್ವಲ್ಪ ದೇಹಾಲಸ್ಯವಿರುವುದರಿಂದ ಸುಲಿಮಾಂಕ ಮತ್ತು ಲಾಹೋರ್ ದೇಶಗಳ ಸಂದರ್ಶನೆಯನ್ನು ಮುಂದರಿಸಿರುವರು.

—ಅಖಿಲ ಹಿಂದೂಸ್ಥಾನದ ಕಮಾಂಡರ್ ಇನ್-ಚೀಫ್‌ರಾದ ಮೆ| ಸರ್. ಡಬ್ಲ್ಯು ಬರ್ಡವುಡ್‌ರವರು ಪೂನೆಗೆ ಬಂದಿರುವರು. ಇವರು ಪೂನೆಯಲ್ಲಿರುವ ಅನೇಕಾನೇಕ ಸೈನ್ಯಗಳನ್ನು ಪರೀಕ್ಷಿಸುವರು.

—ಗವರ್ನರ್ ಜನರಲರ ಎಕ್ಸಿಕ್ಯುಟಿವ್ ಕೌನ್ಸಿಲಿನ ಕೈಗಾರಿಕೆಯ ಮೆಂಬರರಾದ ಸರ್ ಬಿ. ಎನ್. ಮಿತ್ರರವರು ಅಹಮ್ಮದಾಬಾದಿನಲ್ಲಿರುವ ವಸ್ತ್ರದ ಗಿರಣಿಗಳನ್ನು ಪರೀಕ್ಷಿಸುವುದಕ್ಕಾಗಿ ಅಲ್ಲಿಗೆ ಬಂದಿರುವರು.

—ಕರ್ನಲ್ ಹಚ್ಚಿನ್‌ಸನ್‌ರವರನ್ನು, ಅವನಕ್ಕಿಂತಲೂ ಯೋಗ್ಯಸ್ಥಾನದಲ್ಲಿರುವ ಕರ್ನಲ್ ಚೌಧುರಿಗಳ ಬದಲಾಗಿ ಮದ್ರಾಸಿನ ಸರ್ಜನ್ ಜನರಲರಾಗಿ ನೇಮಿಸಿದ್ದುದರಿಂದ ಸಿವಿಲ್ಲಾದ ಪತ್ರಿಕೆಗಳು ತಮ್ಮ ವಿರೋಧ ಭಾವವನ್ನು ಪ್ರಕಟಿಸಿರುವವು.

—ರಂಗೂನಿನ ಒಬ್ಬ ಹಿಂದೂ ಪೋಲಿಸ್ ಹೆಡ್ ಕೊನ್ಸಟೇಬಲನನ್ನು ಅಲ್ಲಿಯ ಪಂಜಾಬ ಮೋಟರ್ ವರ್ಕ್ಸ್‌ನಲ್ಲಿರುವ ಒಬ್ಬ ಕ್ಲಾರ್ಕನು ಕತ್ತಿಯಿಂದ ತಿವಿದುದರಿಂದ ಕೊನ್ಸಟೇಬಲನು ಅಸ್ಪತ್ರೆಯಲ್ಲಿ ಮರಣಪಟ್ಟಿರುವನು. ಕೊಲೆಪಾತಕನನ್ನು ಕೈದುಮಾಡಿರುವರು.

—ಲಕ್‌ನೌದಲ್ಲಿ ಲಿಬರಲರ, ಜಮೀನುದಾರರ ಮತ್ತು ಹಿಂದೂ ಮಹಾಸಭೆಯ ಮೆಂಬರರ ಒಂದು ಮಹಾಸಭೆಯು ಜರಗಿ ಇನ್ನು ಬರಲಿಕ್ಕಿರುವ ಚುನಾವಣೆಯಲ್ಲಿ ಐಕ್ಯದಿಂದ ಕೆಲಸಮಾಡಲು ನಿಶ್ಚಯಿಸಿರುವರು.

—ಮೈಸೂರಿನ ವಕೀಲರ ಕೊನ್ಫರೆನ್ಸು ಕಳೆದ ವಾರ ಜರಗಿತು. ಅದರಲ್ಲಿ ಖದ್ದರನ್ನೇ ಧರಿಸಬೇಕೆಂಬ ಸಂದೇಶವನ್ನು ಓದಲಾಯಿತು.

—ಅಖಿಲ ಹಿಂದೂಸ್ಥಾನದ ಆಯುರ್ವೇದಿಕ್ ಪ್ರದರ್ಶನೆಯೊಂದು ಕಳೆದವಾರ ರಾ| ರೆಸೋಲಡ್ಸರವರ ಅಧ್ಯಕ್ಷತೆಯಲ್ಲಿ ನಡೆಯಿತು.

—ಲೋ ಮೆಂಬರರಾದ ರಾ| ಸಿ. ಪಿ. ರಾಮಸ್ವಾಮಿಗಳವರು ಮಾಯಾವರಮಿಗೆ ತೆರಳಿರುವರು.

—ಲಾಹೋರಿನ ಹಿಸರ್ ಎಂಬಲ್ಲಿ ಪ್ಲೇಗಿನ ಹಾವಳಿಯು ಜೋರಾಗಿದ್ದುದರಿಂದ ಅಲ್ಲಿಯ ಗವರ್ನರರವರು ಕೋರ್ಟು, ಶಾಲೆ ಮುಂತಾದವುಗಳಿಗೆ ಒಂದು ತಿಂಗಳಿನ ರಜೆ ಕೊಟ್ಟಿರುವರು.

—ಮಹಾತ್ಮಾ ಗಾಂಧಿಯವರಿಗೆ ತನ್ನ ಅಮೇರಿಕದ ಕೆಲವು ಮಿತ್ರರು ೧೯೫ ಡೊಲರು ಸುಮಾರು ೩೦೦ ರೂಪಾಯಿಗಳನ್ನು ಕಳುಹಿಸಿರುವರು. ಇದನ್ನು ಹಿಂದೂ-ಮುಸಲ್ಮಾನರ ಐಕ್ಯಕ್ಕೂ, ಮತ್ತು ಅಸ್ಪೃಶ್ಯತಾ ನಿವಾರಣೆಗಾಗಿ ವಿನಿಯೋಗಿಸುವೆನೆಂದು ಮ| ಗಾಂಧಿಗಳು ಪ್ರಕಟಿಸಿರುವರು.

—ದೀನಬಂಧು ಸಿ. ಎಫ್. ಅಂಡ್ರ್ಯುಸರು ಆಫ್ರಿಕದ ಪಯಣವನ್ನು ಕೊನೆಗಾಣಿಸಿಕೊಂಡು ಕಳೆದ ತಿಂಗಳ ತಾ. ೧೨ರಲ್ಲಿ ಕರಗೋಲಾ ಹಡಗದಲ್ಲಿ ಹಿಂದುಸ್ಥಾನಕ್ಕೆ ಬರುವರು.

—ಕಲ್ಕತ್ತದಲ್ಲಿ ಈಗ ಗಲಾಟೆಯು ನಿಂತಿರುವುದು. ಅಂಗಡಿಗಳು ಪೋಸ್ಟು ಆಫೀಸುಗಳು ತೆರೆಯಲ್ಪಟ್ಟು ಮುಂಚಿನಂತೆಯೇ ಕೆಲಸಕ್ಕಾರಂಭವಾಗಿರುವುದು. ಟ್ರೇಮು ಮತ್ತು ಮೋಟಾರುಗಳ ಚಲಾವಣೆಯು ಸರಿಯಾಗಿ ಆಗುತ್ತದೆ. ದಾರಿಯಲ್ಲಿ ಅಲ್ಲಲ್ಲಿ ಜಗಳವಾಡುವವರ ವಾರ್ತೆ ಕೇಳಬರುತ್ತಿದೆಯಾದರೂ ಹಾನಿಕರವಾದ ಜಗಳಗಳು ಸಂಭವಿಸಲಿಲ್ಲ. ಅಲ್ಲಲ್ಲಿ ಹಾಳಾದ ದೇವಸ್ಥಾನ, ಮಸೀದಿ ಮತ್ತು ಇತರ ಮಂದಿರಗಳನ್ನು ಸರಿಮಾಡಲು ತೊಡಗಿರುವರು.

—ಕಲ್ಕತ್ತದ ಗೌರಿಪುರದ ಒಂದು ಮಿಲ್ಲಿನಲ್ಲಿ ಸುಮಾರು ಒಂದು ಸಾವಿರ ಕೂಲಿಕಾರರು ಮುಷ್ಕರ ಹಿಡಿದಿರುವರು. ಯಾವನೋ ಒಬ್ಬ ಯುರೋಪಿಯನ್ ಮೇಸ್ತ್ರಿಯು ಒಬ್ಬ ಕೂಲಿಯವನನ್ನು ಹೊಡೆದದ್ದೇ ಮುಷ್ಕರಕ್ಕೆ ಮೂಲಕಾರಣವಂತೆ.

—ಆಂಧ್ರ ಯುನಿವರ್ಸಿಟಿಯ ವ್ಯಾಸಚಿನ್ಸಲರರಾದ ಸಿ. ಆರ್. ರೆಡ್ಡಿಯವರಿಗೆ ಮದರಾಸಿನಲ್ಲಿ ಒಂದು ಟೀಪಾರ್ಟಿಯನ್ನು ಕೊಟ್ಟಾಗ ಮಂತ್ರಿಮಂಡಳರಾದ ಪನಗಲ್ ರಾಜರವರು ಈ ಮಹಶೀಯರ ವಿಷಯ ಹೀಗೆಂದರು:— ಇವರು ಯುರೋಪ್ ಮುಂತಾದ ಪಾಶ್ಚಿಮಾತ್ಯ ದೇಶಗಳಲ್ಲಿರುವ ಯೂನಿವರ್ಸಿಟಿಗಳ ವಿಷಯ ಚೆನ್ನಾಗಿ ತಿಳಿದವರು ಅದಲ್ಲದೆ ಇಂಡಿಯದ ಯೂನಿವರ್ಸಿಟಿಗಳ ವಿಷಯವು ಚೆನ್ನಾಗಿ ಅನುಭವವುಳ್ಳವರು. ಅದೂ ಅಲ್ಲದೆ ಇವರು ಆಂಧ್ರ ದೇಶದವರೇ ಆಗಿರುತ್ತಾರೆ. ಆದುದರಿಂದ ಇವರನ್ನು ಮೊದಲನೇ ವ್ಯಾಸ ಚೆನ್ಸಲರರಾಗಿ ಮಾಡಿದ ವಿಷಯವು ಯುನಿವರ್ಸಿಟಿಯ ಮುಂದಿನ ಅಭಿವೃದ್ಧಿಗೆ ಶುಭಸೂಚನೆಯಾಗಿದೆ.

—ಮುಂಬಾಯಿಯ ಹತ್ತಿ ವ್ಯಾಪಾರಿಯ ನೌಕರನಾಗಿದ್ದ ಪ್ರಭುದಾಸ ವಲ್ಲಭದಾಸ ಎಂಬವನೂ ಅವನ ಹೆಂಡತಿ ಮಕ್ಕಳೂ ಎಪ್ರಿಲ್ ೧ನೇ ತಾರೀಕಿನಲ್ಲಿ ವಿಕ್ಟೋರಿಯಾ ಟರ್ಮಿನಸ್ ಸ್ಟೇಶನಿನಲ್ಲಿ ಒಂದು ರೈಲುಗಾಡಿಯ ಕೋಣೆಯೊಳಗೆ ಟಿಕೇಟು ತೆಗೆದುಕೊಂಡು ಕುಳಿತಿದ್ದರು. ಅಷ್ಟರಲ್ಲಿ ಸ್ಟೇಶನ್ ಮಾಸ್ತರನು ಬಂದು ಈ ಕೋಣೆಯು ಯುರೋಪಿಯನ್ ಮತ್ತು ಯುರೇಶಿಯನರಿಗೆ ರಿಜರ್ವ ಮಾಡಿತ್ತೆಂದೂ. ಕೋಣೆಯಿಂದ ಹೊರಗೆ ಬರಬೇಕೆಂದೂ ಗದರಿಸಿದನು. ಆದರೆ ಇವರು ಕೆಳಗಿಳಿಯಲಿಲ್ಲ. ಯಾಕೆಂದರೆ ಆ ಕೋಣೆಗೆ "ರಿಜರ್ವ್‌ಡ್" ಎಂಬ ಚೀಟು ಇರಲಿಲ್ಲ. ಅನಂತರ ಇಬ್ಬರು ಯುರೋಪಿಯನರು ಕೋಣೆಯೊಳಗೆ ಬಂದು ಇವರನ್ನು ಬೈದು ಹೊರಗೆ ಎಳೆದರು. ಅನಂತರ ಸ್ಟೇಶನ್‌ಮಾಸ್ತರನೂ ಆ ಇಬ್ಬರು ಯುರೋಪಿಯನರೂ ಹೋಗಿ ಇಬ್ಬರು ಯುರೋಪಿಯನ್ ಸಾರ್ಜಂಟರನ್ನು ಕರೆತಂದರು. ಕೋಣೆಯಲ್ಲಿದ್ದವರನ್ನು ಕುತ್ತಿಗೆಗೆ ಕೈಹಾಕಿ ಹೊರಗೆ ದೂಡಿದರು. ಅಲ್ಲಿಂದ ಕೋಣೆಯಲ್ಲಿದ್ದವರನ್ನೆಲ್ಲಾ ಪೋಲಿಸ ಸ್ಟೇಶನಿಗೆ ಕರೆದೊಯ್ದು ಹೆಚ್ಚಾಗಿ ಜವಾಬನ್ನು ಕೇಳಿ ಕೊಂಡರು. ಅನಂತರ ಮಧ್ಯರಾತ್ರಿ ಅವರೆಲ್ಲರನ್ನು ಜಾಮೀನಿನ ಮೇಲೆ ಬಿಟ್ಟರು. ಪ್ರಭುದಾಸ ವಲ್ಲಭದಾಸರು ಈ ೫ ಮಂದಿಯ ಮೇಲೂ ಮುಂಬಾಯಿಯ ೩ನೇ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಲ್ಲಿ ಫಿರ್ಯಾದು ಕೊಟ್ಟಿರುತ್ತಾರೆ.

—ಬರ್ಮಾದೇಶದಲ್ಲಿ ಅಪ್ಪರ್ ಬರ್ಮಾದಲ್ಲಿ ಒಂದು, ಲೋವರ್ ಬರ್ಮಾದಲ್ಲಿ ಒಂದು, ಹೀಗೆ ಎರಡು ಹ್ಯಾಕೋರ್ಟುಗಳು ಈಗ ಇವೆ. ಇವುಗಳಲ್ಲಿ ಮಂಡಲೆಯ ಹ್ಯಾಕೋರ್ಟನ್ನು ತೆಗೆದು ರಂಗೂನಿನಲ್ಲಿಯೇ ದೊಡ್ಡದೊಂದು ಹ್ಯಾಕೋರ್ಟನ್ನು ಏರ್ಪಡಿಸಬೇಕೆಂದು ಬರ್ಮಾ ಸರಕಾರಕ್ಕೆ ಆಲೋಚನೆ ಇತ್ತು. ಆದರೆ ಅಪ್ಪರ ಬರ್ಮಾದ ಜನರು ಇದಕ್ಕೆ ವಿರೋಧವಾಗಿರುವುದರಿಂದ ೧೯೩೦ರ ವರೆಗೆ ಈ ಎರಡೂ ಕೋರ್ಟುಗಳು ಈಗಿರುವಂತೆ ಇರಬಹುದೆಂದು ಬರ್ಮಾ ಗವರ್ನರರು ಹುಕುಂ ಕೊಟ್ಟಿರುವರು.

—ಮುಂಬಾಯಿಯ ಎಸಪಲನೇಡ್ ಪೋಲಿಸ್ ಸ್ಟೇಶನಿನ ಲೋಕಪ್ಪಿನಲ್ಲಿ, ಮುಂಬಾಯಿಯಲ್ಲಿಯೂ ಅದರ ಸುತ್ತುಮುತ್ತಲೂ ದರೋಡೆ ಕಳ್ಳತನ ಮಾಡಿದ ನಾರಾಯಣ ರಾಮಜಿ ಯಾನೆ ಬಾಪುಚೆಸ್ವಾವಾಲಾ ಮತ್ತು ಅವನ ಕಡೆಯ ೨೪ ಮಂದಿ ದರೋಡೆಕಳ್ಳರನ್ನು ರಿಮಾಂಡಿನಲ್ಲಿಟ್ಟಿದ್ದರು. ಈ ಕಳ್ಳರ ಶಿಖಾಮಣಿಯಾದ ನಾರಾಯಣನು ಎಪ್ರಿಲ್ ೧೨ನೇ ತಾರೀಕಿನ ಮಧ್ಯರಾತ್ರಿ ಕಿಟಿಕಿಯ ಕಬ್ಬಿಣದ ಸರಳನ್ನು ಬಗ್ಗಿಸಿ, ಹೊರಗಿನಿಂದಿರುವ ಕಬ್ಬಿಣದ ಸರಿಗೆಯ ಬಲೆಯನ್ನು ಹರಿದು ಕೆಳಗಿಳಿದು ತಪ್ಪಿಸಿಕೊಂಡು ಹೋಗಿರುವನು.

—ಜಲಿಯನ್‌ವಾಲಾಬಾಗ ದಿವಸವನ್ನು ಮುಂಬಾಯಿ, ನಾಗಪುರ, ಲಾಹೋರ ಮುಂತಾದ ಊರುಗಳಲ್ಲಿ ೧೨, ೧೩ನೇ ತಾರೀಕುಗಳಲ್ಲಿ ಮೆರವಣಿಗೆ, ಭಾಷಣ ಮುಂತಾದವುಗಳಿಂದ ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟವು.

—ಪೇಶಾವರದ ಹತ್ತಿರದ ಹಳ್ಳಿಯಲ್ಲಿ ಕೆಲವು ದಂಗೆಕೋರರು ಒಂದು ಮನೆಯೊಳಗೆ ಅಡಗಿಕೊಂಡಿದ್ದಾರೆಂದು ತಿಳಿದೊಡನೆ ಕಮಾಂಡ್‌ಡೆಂಟ ಹೆಂಡಿಸ್ಸಾಡ ಎಂಬವನು ಮಿಲಿಟರಿ ಪೋಲಿಸಿನವರನ್ನು ಕರಕೊಂಡು ಅವರಿದ್ದ ಮನೆಗೆ ಸುತ್ತು ಹಾಕಿ ಮನೆಯ ಬಾಗಿಲು ತೆರಿಯಬೇಕೆಂದು ಹೇಳಿದನು. ಮನೆಯ ಒಳಗಿಂದ ಹೊಡೆದ ಒಂದು ಗುಂಡಿನ ಪೆಟ್ಟು ಹೆಂಡಿಸ್ಸಾಡನಿಗೆ ಎದೆಗೆ ತಾಗಿ ಅವನು ಕೂಡಲೆ ಪ್ರಾಣಬಿಟ್ಟನು. ನಂತರ ಇನ್ನೊಬ್ಬ ಆಫೀಸರನು ಮನೆಯ ಬಾಗಿಲು ತೆಗಿಯಬೇಕೆಂದು ಹೇಳಿದನು. ಆಗ ಮನೆಯೊಳಗಿದ್ದ ಒಬ್ಬನು ಹೊರಗೆ ಬಂದು ತನ್ನ ಕೋವಿಯನ್ನು ಒಪ್ಪಿಸಿ ಶರಣಾಗತನಾದನು. ಆದರೆ ಮನೆಯೊಳಗಿದ್ದ ಇನ್ನೊಬ್ಬನು ಹೊರಗೆ ಬರಲಿಕ್ಕೆ ಒಪ್ಪದೆ, ಹೊರಗೆ ಬಾ ಎಂದು ಹೇಳಿದೊಡನೆ ಗುಂಡು ಹಾರಿಸುತ್ತಲೇ ಇದ್ದನು. ಕಡೆಗೆ ಆಫೀಸರನು ಮನೆಯೊಳಗೆ ಒಂದು ಬೊಂಬ ಹಾಕಿದನು ಅದರ ಪೆಟ್ಟು ಅವನ ತೊಡೆಗೆ ತಾಗಿ ಅವನು ಕೂಡಲೆ ಜೀವ ಬಿಟ್ಟನು. ಹೆಂಡಿಸ್ಸಾಡನ ಹೆಣವನ್ನು ಮಿಲಿಟರಿ ಮರ್ಯಾದೆಯಿಂದ ಪೇಶಾವರಿನಲ್ಲಿ ಹೂಣಿಟ್ಟರು.

—ಭಾವಲ್‌ಪುರದ ರಾಜರು ತನ್ನ ರಾಜ್ಯದ ಬೇಸಾಯವನ್ನು ನೀರಿನ ಸರಬರಾಯಿಯನ್ನು ಹೆಚ್ಚಿಸುವುದಕ್ಕೆ ಸಟ್ಲೆಜ ನದಿಗೆ 'ಸೂಲೆಮಂಕಿ' ಎಂಬಲ್ಲಿ ಹಾಕಿಸಿದ ಆಣೆಕಟ್ಟಿನಿಂದ ಭಾವಲಪುರ ರಾಜ್ಯದಲ್ಲಿ ತೆರೆದ ಕಾಲುವೆಗಳಿಗೆ ನೀರನ್ನು ಬಿಡುವ ಸಮಾರಂಭವನ್ನು ವ್ಯಾಸರಾಯಿಯವರಿಗೆ ಅಸ್ವಸ್ಥವಾದ್ದರಿಂದ ಪಂಜಾಬಿನ ಗವರ್ನರರು ನಡಿಸಿದರು.

—ಮುಂಬಾಯಿಯ ಮುನಿಸಿಪಾಲಿಟಿಯ ಮೆಯೋರರನ್ನು ಚುನಾಯಿಸುವ ಸಂಗತಿಯಲ್ಲಿ ಸರಕಾರದವರು ಕೈಹಾಕಿದ್ದಾರೆಂದು ತಿಳಿದುಬರುತ್ತದೆ.

—ಅಖಿಲ ಭಾರತ ಪೋಸ್ಟಲ್ ಮತ್ತು ರೈಲುವೇ ಮೈಲ ಸರ್ವಿಸಿನ ನೌಕರರ ಸಭೆಯು ಮೇ ೧೫ರಿಂದ ೧೭ರ ವರೆಗೆ ಲಖ್ನೌ ಪಟ್ಟಣದಲ್ಲಿ ಜರಗುವದು. ಪಂಡಿತ ಮದನಮೋಹನ ಮಾಲವೀಯರು ಅಧ್ಯಕ್ಷರಾಗುವರೆಂದು ಸೂಚನೆಗಳು ಕಂಡುಬರುತ್ತವೆ.

—ಫತೆಪುರ ದರೋಡೆ ನಂಬ್ರದಲ್ಲಿ ಅಲ್ಲಹಾಬಾದ ಸೆಶನ್ ಜಡ್ಜರು ೬ ಮಂದಿಯ ಮೇಲೆ ಕೊಲೆಪಾತಕ ಮತ್ತು ದರೋಡೆಯ ಚಾರ್ಜು ಮಾಡಿ ಮೂವರಿಗೆ ಮರಣಾಂತ ಶಿಕ್ಷೆಯನ್ನೂ, ಮೂವರಿಗೆ ೭ ವರುಷಗಳ ಕಠಿಣ ಕಾಮಗಾರಿ ಶಿಕ್ಷೆಯನ್ನು ವಿಧಿಸಿದರು. ನಾಲ್ಕು ಮಂದಿಯನ್ನು ಖುಲಾಸು ಪಡಿಸಿದರು.

—ಇಂಡಿಯದ ಕೆಲವು ಟಪ್ಪಾಲು ಆಫೀಸುಗಳಲ್ಲಿ ಇನ್ನು ಮುಂದೆ ಚೀಟುಗಳನ್ನು ರದ್ದುಪಡಿಸುವ ಮೊಹರಿನಲ್ಲಿ "ಇಂಡಿಯದ ಕೈಗಾರಿಕೆಗಳನ್ನು ವೃದ್ಧಿಪಡಿಸಿರಿ" ಎಂಬದನ್ನು ಬರೆದ ಮೊಹರನ್ನು ಉಪಯೋಗಿಸಬಹುದೆಂದು ಡ್ಯಾರೆಕ್ಟರ ಜನರಲ್ ಒಫ್ ಪೋಸ್ಟ ಒಫಿಸಸ್ ಇವರು ಹುಕುಂ ಕೊಟ್ಟಿರುವರಂತೆ.

—ಮದರಾಸು ಸಂಸ್ಥಾನದಲ್ಲಿ ಹೊಸ ನೀರಾವರಿ ಕೆಲಸಗಳನ್ನು ಶುರುಮಾಡುವ ಆಲೋಚನೆ ಆಗಿಯದೆ. ಈಗ ತತ್ಕಾಲಕ್ಕೆ "ಭವಾನಿ ನದಿಯ ನೀರಾವರಿ ಕೆಲಸವು ಶುರುವಾಗುವುದು. ಇದನ್ನು ಮಾಡಿದರೆ ೧,೬೦,೦೦೦ ಸಾವಿರ ಒಂದು ಬೆಳೆಯ ಗದ್ದೆಗೂ, ೫೦,೦೦೦ ಎರಡನೇ ಬೆಳೆಯ ಗದ್ದೆಗಳಿಗೂ ನೀರು ಸಿಕ್ಕುವುದು. ಇದರ ಖರ್ಚು ೫ ಕೋಟಿ ರೂಪಾಯಿ ಆಗುವದಂತೆ. ಇದರ ತನಖೆಗಾಗಿ ಮದರಾಸು ರೆವಿನ್ಯೂ ಬೋರ್ಡಿನ ಸೀನಿಯರ್ ಮೆಂಬರರಾದ ಎನ್ ಮಕವಿಂಕಾಯೇಲರು ಕೊಯಮುತ್ತೂರಿಗೆ ಬಂದಿರುವರು. ಇವರು ಬೇಸಾಯಗಾರರೊಡನೆ ಇದರಿಂದುಂಟಾಗುವ ಸಾಧಕಬಾಧಕಗಳ ವಿಷಯ ವಿಚಾರಿಸುವರು. ಈ ಮೆಂಬರರೇ ಉತ್ತರ ಹಿಂದೂಸ್ಥಾನಕ್ಕೆ ಹೋಗಿ ಅನೇಕ ನೀರಾವರಿ ಕೆಲಸಗಳನ್ನು ನೋಡಿ ಬಂದಿರುವರು.

ದಕ್ಷಿಣ ಕನ್ನಡ.

ಬಂಟವಾಳ:—ದಕ್ಷಿಣ ಕನ್ನಡ ಜಿಲ್ಲೆಯ ಹುಡುಗಿಯರ ಶಾಲೆಯ ಡಿಪುಟಿ ಇನ್ಸ್‌ಪೆಕ್ಟರರವರು ಇಲ್ಲಿಯ ಹುಡುಗಿಯರ ಶಾಲೆಯನ್ನು ಕಳೆದ ವಾರದಲ್ಲಿ ಸಂದರ್ಶಿಸಿ ಹೋದರು.

ಇಲ್ಲಿಯ ಪೋಲಿಸ್ ಸರ್ಕಲನ್ನು ತೆಗೆದು ಹಾಕಿರುವುದರಿಂದಲೂ ಮೂಡಬಿದ್ರೆಯಲ್ಲಿ ಮೂಡಬಿದರೆ ಎಂಬ ಹೊಸ ಸರ್ಕಲನ್ನು ತೆರೆದಿರುವುದರಿಂದಲೂ ೧೪ನೇ ತಾರೀಕಿನ ದಿವಸ ರಾತ್ರಿ ಇಲ್ಲಿಯ ಸರ್ಕಲ್ ಆಫೀಸಿನ ಸಾಮಾನು ಮೂಡಬಿದರೆಗೆ ಹೋಯಿತು.

ಬಂಟವಾಳ ಸ್ಟೇಶನಿನಿಂದ ಒಬ್ಬ ಕೊನ್ಸಟೇಬಲರನ್ನೂ, ಒಬ್ಬ ಹೆಡ್ ಕೊನ್ಸಟೇಬಲರನ್ನೂ, ಒಬ್ಬ ಸಬ್ ಇನ್ಸ್‌ಪೆಕ್ಟರರನ್ನೂ ತೆಗೆದುಹಾಕಿರುವರು. ಇನ್ನು ಮುಂದೆ ಇಲ್ಲಿ ೨೦ ಮಂದಿ ಕೊನ್ಸಟೇಬಲರೂ, ಇಬ್ಬರು ಹೆಡ್ ಕೊನ್ಸಟೇಬಲರುಗಳೂ, ಒಬ್ಬ ಸಬ್ ಇನ್ಸ್‌ಪೆಕ್ಟರರೂ ಮಾತ್ರವೇ ಇರುವರು.

ಇಲ್ಲಿಯ ಕಂಚಿಗಾರ ಕಟ್ಟೆಯ ಮಾರ್ಗದಲ್ಲಿ ದೊಡ್ಡ ದೊಡ್ಡ ಹೊಂಡಗಳು ಆಗಿ ಗಾಡಿ ಸೈಕಲುಗಳ ಚಲಾವಣೆಗೆ ಬಹಳ ಕಷ್ಟವಾಗಿಯದೆ.

ಪಾಣೆಮಂಗಳೂರು:— ಇಲ್ಲಿಯ ವೀರವಿಠಲ ದೇವಸ್ಥಾನದ ಬಳಿ ಮಾರ್ಗ ಅಗಲ ಮಾಡುವುದಕ್ಕಾಗಿ ಸ್ಥಳ ಎಕ್ವಾಯರ್ ಮಾಡಿರುವರು. ಕಳೆದ ಶನಿವಾರ ಇಲ್ಲಿಯ ಹುಡುಗಿಯರ ಶಾಲೆಯನ್ನು ಡಿಸ್ಟ್ರಿಕ್ಟ್ ಇನ್ಸ್ಪೆಕ್ಟರವರು ಸಂದರ್ಶಿಸಿದರು.

ಪಳ್ಳಿಕೆರೆ:— ಇಲ್ಲಿಯ ಹೊಳೆಯು ಬಹಳ ಆಳವಾಗಿದೆ. ಈ ಹೊಳೆಯ ಒಂದು ಕಡೆಯಲ್ಲಿ ತ್ರಿಕನಾಡು ಎಂಬ ಊರು ಇದೆ. ಇನ್ನೊಂದು ಕಡೆಯಲ್ಲಿ ಬೇಕಲ ಊರು ಇದೆ. ಈ ಹೊಳೆಯನ್ನು ದಾಟುವದು ಕಷ್ಟ. ದೋಣಿಯಲ್ಲಿ ದಾಟುವಾಗಲೂ ದೋಣಿಯು ಅಲ್ಲಾಡಿ ದಾಟುವವರಿಗೆ ಬಹಳ ಹೆದರಿಕೆಯಾಗುತ್ತದೆ. ಆದುದರಿಂದ ಡಿಸ್ಟ್ರಿಕ್ಟ್ ಬೋರ್ಡಿನವರು ಈ ಹೊಳೆಗೆ ಒಂದು ಸಣ್ಣ ಸೇತುವೆಯನ್ನು ಮಾಡಿಸುವದು ಅತೀ ಅಗತ್ಯವಾದ ಕೆಲಸವಾಗಿರುತ್ತದೆ.

ಪೊಳಲಿ:— ಇಲ್ಲಿಯ ರಾಜರಾಜೇಶ್ವರಿ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಕಡೇ ಚೆಂಡಾಟದ ಮಹೋತ್ಸವವು ಇದೇ ತಾ. ೧೦ಕ್ಕೆ ನಡೆಯಿತು. ಈ ದಿನ ರಾತ್ರಿಯಲ್ಲಿ ಕೂಡಿದ ಜನಸ್ತೋಮವು ಐದಾರು ಸಾವಿರಕ್ಕೆ ಕಡಿಮೆ ಆಗಲಿಕ್ಕಿಲ್ಲ. ಇಲ್ಲಿಗೆ ಯಾವ ದಿಕ್ಕಿನಿಂದಲೂ ಗಾಡಿ ಇತ್ಯಾದಿಗಳು ಬರಲಿಕ್ಕೆ ಅನ್ಕೂಲವಿರುತ್ತಿದ್ದರೆ ಇದರ ಇಮ್ಮಡಿ ಜನ ಸಮೂಹವಾಗುತ್ತಿತ್ತು. ಕಾಫಿತಿಂಡಿಯ ಹೋಟೇಲುಗಳೂ, ಸಣ್ಣ ಸಣ್ಣ ಕಾಫಿ ಅಂಗಡಿಗಳೂ ಸುಮಾರು ನೂರಕ್ಕೆ ಹತ್ತಿರವಿದ್ದವು. ಈ ವರ್ಷದಷ್ಟು ಜನರು ಹಿಂದಿನ ಕೆಲವು ವರ್ಷಗಳಿಂದ ಕೂಡಿಲ್ಲ. ದೇವರ ಚೆಂಡೆ ಸುತ್ತಿನ ಬಳಿಯಲ್ಲಿ ನಗರಿ ಕೃಷ್ಣಭಟ್ಟ ಎಂಬ ಯೌವನಸ್ಥರು ಬಿದ್ದು ಬಲಕೈ ಮುರಿದು ಹೋಯಿತು, ಕೂಡಲೆ ಬಂಟವಾಳ ಆಸ್ಪತ್ರೆಗೆ ಒಯ್ದಿರುತ್ತಾರೆ. ಇಲ್ಲಿಯ ಉತ್ಸವಕ್ಕೆ ಬಹಳ ದೂರದಿಂದ ಹೆಂಗಸರು ದೇವರ ಬಲಿಯನ್ನು ನೋಡಬೇಕೆಂದು ಅನ್ನನೀರು ಬಿಟ್ಟು ಆಶೆಯಿಂದ ಓಡಿ ಬಂದರೂ ಪ್ರಯೋಜನವಿಲ್ಲ. ಯಾಕಂದರೆ ದೇವಸ್ಥಾನದ ಸುತ್ತಲು ಬಂಟ ಮಹನೀಯರ ಗುತ್ತಿನವರು ಒಂದೊಂದು ಗುಡಿಯನ್ನು ಕಟ್ಟಿ ಅದಕ್ಕೆ ಮಹಡಿ ಹಾಕಿರುತ್ತಾರೆ. ಹೀಗೆ ಎದುರುಗಡೆ ಐದಾರು ಗುಡಿಕಟ್ಟುಗಳು ಇರುವದರಿಂದ ಕೂದ್ರಾದಿ ಹೆಂಗಸರಿಗೆ ಸ್ಥಳವಿಲ್ಲ. ಅಂಥಾ ಗುಡಿಕಟ್ಟುಗಳನ್ನು ಕಟ್ಟಿದ್ದಾಗ್ಯೂ ಚಿಂತೆ ಇದ್ದಿಲ್ಲ ಕೆಳಗಡೆ ಖುಲ್ಲಾ ಖಾಲಿ ಜಾಗೆ ಬಿಟ್ಟು ಅವರ ಹೆಂಗಸರಿಗೋಸ್ಕರ ಮಹಡಿ ಮಾತ್ರ ಸಾಕಿತ್ತು. ಇಷ್ಟು ವರ್ಷಕ್ಕಿಂತ ಈ ಕಾಲ ಬಾಣಬಿರುಸುಗಳು ಅಧಿಕವಾಗಿತ್ತು. ಇಲ್ಲಿಯ ವಾಹನಗಳೆಲ್ಲ ನಾದುರುಸ್ತಿಯಲ್ಲಿದ್ದು ಬಣ್ಣಗಳು ಹೋಗಿರುತ್ತವೆ. ರಥದ ಹಲಿಗೆಗಳಿಗೂ ಆಳು ಪಲ್ಲಕ್ಕಿ ಬಂಡಿಯಲ್ಲಿರುವ ಗಂಡು ಹೆಣ್ಣು ಪ್ರತಿಮೆಗಳಿಗೂ ಮಯೂರಾಸನಕ್ಕೂ ಬಣ್ಣ ಕೊಟ್ಟು ದುರುಸ್ತಿಪಡಿಸಿ ಮುಂಚಿನಂತೆ ಶೃಂಗರಿಸಿದರೆ ದೇವಸ್ಥಾನದ ಆಡಳಿತದಾರರಿಗೆ ಕೀರ್ತಿಯಾಗುತ್ತಿತ್ತು. ಅಲ್ಲಲ್ಲಿ ಪೋಲಿಸಿನವರು ತುಂಬಾ ಜಾಗ್ರತೆ ತೆಗೆದುಕೊಂಡದ್ದರಿಂದ ಕಳವು ಆಗಲಿ ಜಗಳವಾಗಲಿ ಆಗದೆ ಇದ್ದುದು ಪೋಲಿಸಿನವರಿಗೆ ತುಂಬಾ ಸ್ತುತ್ಯವೇ. ಹೆಲ್ತ ಇನ್ಸಪೆಕ್ಟರರು ಕಸವನ್ನು ಸರಿಯಾಗಿ ತೋಟಿಗಳಿಂದ ಗುಡಿಸಿ ಸ್ವಚ್ಛವಾಗಿ ಇಡಿಸಿದ್ದರು. ಬೇಸಾಯದ ಇಲಾಖೆಯ ಡೆಮೊನ್‌ಸ್ಟ್ರೇಟರು ಬೇರೆ ಬೇರೆ ತರದ ಬೀಜಗಳನ್ನೂ ನೇಗಿಲುಗಳನ್ನೂ, ಬೆಳೆ ನಾಶಮಾಡುವ ಕ್ರಿಮಿಗಳ ಚಿತ್ರಗಳನ್ನೂ ತೋರಿಸಿ ವಿವರಿಸಿ ಹೇಳಿದರು.

ಉಪ್ಪಿನಂಗಡಿ:— ದಕ್ಷಿಣ ಕನ್ನಡ ಜಿಲ್ಲೆಯ ಮುಸ್ಲಿಮ್ ವಿದ್ಯಾಭ್ಯಾಸದ ಒಂದು ಪರಿಷತ್ತು ಕಾಸರಗೋಡು ಜನಾಬ್ ಮಹಮ್ಮೂದ್ ಶೆಮ್ನಾಡ್ ಎಂ. ಎಲ್. ಎ.ರವರ ಅಧ್ಯಕ್ಷತೆಯಲ್ಲಿ ಇದೇ ಬರುವ ಮೇ ತಿಂಗಳ ತಾ. ೧೨ರಲ್ಲು ಉಪ್ಪಿನಂಗಡಿ ತಾಲೂಕು ಎಲಿಮಲೆಯಲ್ಲಿ ಜರಗುವುದು. ತಾ. ೧೧-೫-'೨೬ರಲ್ಲು ಉಪ್ಪಿನಂಗಡಿ ತಾಲೂಕು ಬೋರ್ಡಿನ ಮೀಟಿಂಗು ಸಹಾ ಅಲ್ಲಿಯೇ ಜರಗುವುದು.

ಮಂಜೇಶ್ವರ:— ಕಾಸರಗೋಡು ತಾಲೂಕು ಬೋರ್ಡು ಮೆಂಬರರಾದ ರಾ। ಭವಾನಿಶಂಕರರಾಯರು ರಾಜಿನಾಮೆ ಕೊಟ್ಟು ಖಾಲಿ ಬಿದ್ದ ಸ್ಥಾನದ ಚುನಾವಣೆಯು ಬರುವ ತಿಂಗಳ ತಾ. ೨೮ರಲ್ಲು ಇಲ್ಲಿಯ ಲೋಕಲ್ ಫಂಡ ಬಂಗ್ಲೆಯಲ್ಲಿ ಜರಗುವದು. ನೋಮಿನೇಶನ್ ಪೇಪರುಗಳನ್ನು ಇದೇ ತಿಂಗಳ ತಾ. ೩೦ಕ್ಕೆ ಕೊಡಬೇಕಾಗಿದೆ. ಸದರಿ ಸ್ಥಾನಕ್ಕೆ ರಾ। ನಾರಾಯಣ ಪೈಗಳವರೂ, ಪಟೇಲ ಮಂಜಂಣಾಳ್ವರೂ ಮತ್ತು ಲಿಂಗಪ್ಪ ಭಂಡಾರಿಗಳೂ ಪ್ರಯತ್ನಿಸುತ್ತಲಿದ್ದಾರೆ.

ಶ್ರೀ ಮದನಂತೇಶ್ವರ ದೇವಸ್ಥಾನದ ಪರಸ್ಪರ ಸಹಾಯಕ ಸಂಘದ ಲೆಕ್ಕಪತ್ರಗಳು ಬನಾವಣೆಯಾಗಿ ಕೆಲವು ಹಣ ಪಂಚಾಯತ ಮೆಂಬರರಿಂದ ದುರ್ವ್ಯಯವಾಗಿರುವದರ ಕುರಿತು ಮೆಂಬರರ ತನಖಿ ನಡಿಯುತ್ತದಂತೆ. ಅಸಿಸ್ಟಂಟ ರಿಜಿಸ್ಟ್ರಾರವರು ಖುದ್ದು ಯಾ ಯೋಗ್ಯ ಓಡಿಟರರ ಮೂಲಕ ತನಖಿ ನಡಿಸುವದು ಉತ್ತಮ.

ಮೇಲಣ ದೇವಸ್ಥಾನದ ಲವರ್ ಎಲಿಮೆಂಟರಿ ಶಾಲೆಯೊಂದು ಜೂನ್ ತಿಂಗಳಿನಿಂದ ಬಂಗ್ರಮಂಜೇಶ್ವರದಲ್ಲಿ ಸ್ಥಾಪಿಸಲ್ಪಡಲಾಗುವದಂತೆ. ಹಾಯರ್ ಎಲಿಮೆಂಟರಿ ಶಾಲೆಗೆ ಬಿ. ಎ. ಎಲ್. ಟಿ. ಕಲಿತ ಉಪಾಧ್ಯಾಯರುಗಳೂ ಅಗತ್ಯವಿದೆಯಂತೆ. ಬರುವ ಜೂನ್ ತಿಂಗಳಿನಿಂದ ಶಾಲೆಯು ಹೊಸ ಕಟ್ಟೋಣಕ್ಕೆ ಪ್ರವೇಶಮಾಡುವುದರೊಳಗಾಗಿ ಕೆಲವು ಹೊಸ ಉಪಾಧ್ಯಾಯರುಗಳನ್ನು ನೇಮಿಸುವದರಲ್ಲಿರುತ್ತಾರಾಗಿ ಕೇಳುತ್ತೇವೆ. ಹೊಸ ಕಟ್ಟೋಣದ ಕುರಿತು ಇದೇ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಒಂದು ಟಾಕ್ಕು ಇತ್ತಷ್ಟೆ. ಆದರೆ ಈ ಶಾಲೆಗೆ ರಿಕಾಗ್ನಿಶನ್ ಅಗತ್ಯವಿಲ್ಲವೆಂತಲೂ ಇದನ್ನು ಕೆನರಾ ಹ್ಯಾಸ್ಕೂಲಿಗೆ ಸೇರಿಸುತ್ತಾರೆಂತಲೂ ಕೇಳುತ್ತೇವೆ.

ಕಾರ್ಕಳ:— ಇಲ್ಲಿ ವರ್ಷಂಪ್ರತಿ ನಡಿಯತಕ್ಕ ಮಾರಿಪೂಜೆಯು ಮೇ ೮ಕ್ಕೆ ನಡೆಸುವದೆಂದು ಇದೇ ಕಳೆದ ಮಂಗಳವಾರ, ದಿನ ಇಟ್ಟಿದ್ದಾರೆ.

ಈ ಸೆಂಟರ್ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಭೆಯು ಇದೇ ಬರುವ ಶನಿವಾರ ತಾ. ೧೭-೪-'೨೬ನೇ ದಿವಸ ಮಧ್ಯಾಹ್ನ ೩ ಗಂಟೆಗೆ ಸರಿಯಾಗಿ ಇಲ್ಲಿಂದ ೪ ಮೈಲು ದೂರವಿರುವ ನಕ್ರೆ ಎಲಿಮೆಂಟರಿ ಶಾಲೆಯಲ್ಲಿ ಜರಗುವುದು. ಈ ನಕ್ರೆ ಎಂಬಲ್ಲಿ ಒಂದು ದೊಡ್ಡ ಪ್ರಾಚೀನ ಶಿಲಾಶಾಸನವು ಇರುವುದರಿಂದ ಅದನ್ನು ನೋಡಬೇಕೆಂಬ ಕುತೂಹಲದಿಂದ ಕೆಲವು ವಿದ್ಯಾರ್ಥಿಗಳು ಸಹ ಆ ದಿನ ಅಲ್ಲಿಗೆ ಹೋಗಲಿಕ್ಕಿರುವರು.

ಮಂಗಳೂರು.

ತಿರುವಾಂಕೂರಿನ ಮಾಜಿ ದಿವಾನ್‌ರಾದ ಬಹದ್ದೂರು ಟಿ. ರಾಘವಯ್ಯರವರು ನಮ್ಮ ಜಿಲ್ಲೆಗೆ ಚಿತ್ತಯಿಸಿ ಅನೇಕ ಸ್ಥಳಗಳನ್ನು ಸಂದರ್ಶಿಸಿರುವರು. ಇವರು ಮದ್ರಾಸಿನ ರೆವೆನ್ಯೂ ಬೋರ್ಡಿನ ಮೆಂಬರರಾಗಿರುವರು.

ಇಲ್ಲಿಯ ಮುನ್ಸಿಫಲ್ ಕೌನ್ಸಿಲಿನ ವಿ. ಸಿ. ಅಬ್ದುಲ್‌ರವರ ಸ್ಥಾನದಲ್ಲಿ ಹಂಪನಕಟ್ಟೆಯಲ್ಲಿರುವ ಮಾರ್ಡನ್ ಸ್ಟೋರ್ಸಿನ ಪ್ರೊಪ್ರೈಟರರಾದ ಮಿ॥ ಜಾರಪ್ಪ, ಎ. ಫುತ್ರನ್‌ರವರು ನೋಮಿನೇಟೆಡ್ ಮೆಂಬರರಾಗಿ ನೇಮಕ ಹೊಂದಲಿರುವರೆಂದು ತಿಳಿಯುತ್ತೇವೆ.

ಇಲ್ಲಿಯ ಮುನ್ಸಿಪಾಲಿಟಿಯಲ್ಲಿ ಬಿಲ್ ಕಲೆಕ್ಟರ ಕೆಲಸವನ್ನು ಮಾಡುತ್ತಿರುವ ರಾಮಚಂದ್ರನೆಂಬವನು ಸ್ವಲ್ಪ ಹಣ ತೆಗೆದುಕೊಂಡು ಪರಾರಿಯಾಗಿರುವನು. ಪೋಲಿಸರು ಆತನನ್ನು ಹುಡುಕುತ್ತಿರುವರು.

ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಲೋನ್ ಟೆನ್ನಿಸ್ ಪಂದ್ಯಾಟವು ನಡದು ಸಿಂಗಲ್ಸಿನಲ್ಲಿ ಶ್ರೀ ರಂಗಪ್ಪ ಸುವರ್ಣರೂ ಡಬಲ್ಸಿನಲ್ಲಿ ಇವರೂ ಮತ್ತು ಸಂಗಾತಿಯರಾದ ಎ. ಎಸ್. ಕಾಟಿಯವರೂ ಜಯಪ್ರದರಾಗಿರುವರು.

ಉಡುಪಿಯ ಸರ್ಕಲ್ ಇನ್ಸ್‌ಪೆಕ್ಟರರಾದ ರಾ। ಗಣೇಶ ಸುಂದರರಾಯರನ್ನು ಭವಾನಿ ಎಂಬಲ್ಲಿಗೆ ವರ್ಗಾಯಿಸಲ್ಪಟ್ಟಿರುವರು. ರಾ। ಕಲ್ಯಾಣಪುರ ಸುಂದರರಾಯರು ಇವರ ಚಾರ್ಜನ್ನು ನೋಡುವರು.

ಇದೇ ತಿಂಗಳ ತಾ. ೨೧ನೇ ಬುಧವಾರ ಸಂಜೆ ೫ ಘಂಟೆಗೆ ಡಿಸ್ಟ್ರಿಕ್ಟ್ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನಿನ ಸಭೆಯೊಂದು ಹಜೂರು ಆಫೀಸಿನಲ್ಲಿ ಜರಗುವುದು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸು ಕಮಿಟಿಯ ಅಧ್ಯಕ್ಷರಾದ ಶ್ರೀ। ಶ್ರೀನಿವಾಸರಾಯ ಕೌಜಲ್ಗಿಯವರು ಮತ್ತು ಶ್ರೀಗಳಾದ ದಿವಾಕರರಾಯರು, ಮಧ್ವರಾಯ ಕೆಂಭಾವಿಯವರು ಮತ್ತು ಹರ್ಡೀಕರರು ಇದೇ ತಿಂಗಳ ತಾ. ೨೦ಕ್ಕೆ ನಮ್ಮ ಜಿಲ್ಲೆಗೆ ಬಂದು ಒಂದು ವಾರದ ತನಕ ಇಲ್ಲಿ ಇರುವರಾಗಿ ಬರೆದಿರುತ್ತಾರೆ. ಅವರೊಟ್ಟಿಗೆ ಶ್ರೀಯುತ ಗಂಗಾಧರರಾಯ ದೇಶಪಾಂಡೆಯವರೂ ಬರಲಿಕ್ಕೆ ಸಾಕು; ಅವರಿಗೆ ಈ ಕೆಳಗೆ ಕಾಣಿಸಿದ ಕಾರ್ಯಕ್ರಮವನ್ನು ಈ ಕಚೇರಿಯಿಂದ ಶಿಫಾರಸು ಮಾಡಿಯದೆ. ತಾರೀಕು ೨೦ ಮತ್ತು ೨೧ ಪುತ್ತೂರು, ತಾ. ೨೧ ಮತ್ತು ೨೨ ಕಾಸರಗೋಡು, ೨೨ ಮತ್ತು ೨೩ ಮಂಗಳೂರು, ೨೩ ಮತ್ತು ೨೪ ಕಾರ್ಕಳ, ೨೪ ಮತ್ತು ೨೫ ಉಡುಪಿ, ೨೫ ಮತ್ತು ೨೬ ಕುಂದಾಪುರ, ೨೬, ೨೭, ೨೮, ಮಂಗಳೂರು ಜಿಲ್ಲಾ ಪರಿಷತ್ತು ವಗೈರೆ,

(ಅ. ಭೋಜರಾಯ, ಕಾರ್ಯದರ್ಶಿ.)

ಜಯಕರ್ನಾಟಕದ ಬಿಡಿನುಡಿಗಳ ಮೇಲಿನ ಸ್ವದೇಶಾಭಿಮಾನಿಯ ಟೀಕೆಗೆ ಜಯಕರ್ನಾಟಕವು ಹೀಗೆ ಉತ್ತರವನ್ನಿತ್ತದೆ:—

ಜಯಕರ್ನಾಟಕವೂ ಕೊಂಕಣಿ ಭಾಷೆಯೂ.

ಜಯಕರ್ನಾಟಕದ ಹೋದ ಸಂಚಿಕೆಯಲ್ಲಿ "ಕರ್ನಾಟಕದ ಒಳನುಡಿಗಳು" ಎಂಬ ನಮ್ಮ ಲೇಖದ ವಿಷಯವಾಗಿ "ಸ್ವದೇಶಾಭಿಮಾನಿ" ಪತ್ರಿಕೆಗೆ ತಪ್ಪುತಿಳುವಳಿಕೆಯುಂಟಾಗಿದೆ. ಅದನ್ನು ದೂರಮಾಡುವುದಕ್ಕೋಸ್ಕರ ಎರಡು ಮಾತುಗಳನ್ನು ಬರೆಯುತ್ತೇವೆ.

ಮಾತೃಭಾಷೆಯನ್ನು "ಒಮ್ಮೆಲೆ" ಮರೆಯುವುದು ಯಾರಿಗೂ ಸಾಧ್ಯವಿಲ್ಲವೆಂದು ನಾವು ಬರೆದಿರುವುದರಿಂದ ನಮ್ಮ ಮನಸ್ಸಿನಲ್ಲಿ ಕೊಂಕಣಿ ಭಾಷೆಯನ್ನು ಆ ಜನರು ಮರೆತುಬಿಡಬೇಕೆಂದು ಇಚ್ಛೆ ಇರುತ್ತದೆಂದು ಊಹಿಸಿ, "ಸ್ವದೇಶಾಭಿಮಾನಿ"ಯು ನಮ್ಮ ಮೇಲೆ ಟೀಕಿಸಿರುವುದು, ಆದರೆ ನಮ್ಮ ಇಡೀ ಲೇಖವನ್ನು ಓದಿದರೆ ನಮ್ಮ ಆಶಯವು ಹಾಗಿಲ್ಲವೆಂಬುದು ಗೊತ್ತಾಗುವುದು. "ಈ ಮೂರೂ ಜನಾಂಗಗಳಲ್ಲಿ ತಮ್ಮ ಈ ಒಳನುಡಿಗಳ ಉದ್ಧಾರ ಮಾಡುವ ಲವಲವಿಕೆಯು ಹುಟ್ಟಿರುವದು ಸ್ವಾಭಾವಿಕವು. ಏಕೆಂದರೆ, ಈಗ ಎಲ್ಲೆಲ್ಲಿಯೂ ಭಾಷಾಪ್ರೇಮವು ಉಕ್ಕುತ್ತಿರುವಾಗ ಈ ಜನರಲ್ಲಿ ಹಾಗೆ ಉಕ್ಕಿಬಂದರೆ ಆಶ್ಚರ್ಯವೇನು? ಹೀಗೆ ಅವರು ತಮ್ಮ ಮಾತೃಭಾಷೆಯನ್ನು ಪ್ರೀತಿಸಿದರೆ ಯಾರು ಬೇಡೆನ್ನುವರು" ಎಂಬದಾಗಿ ನಾವು ಹೇಳಿ ಕೊನೆಗೆ, "ಹಿಂದೀ ಭಾಷೆಯು ಇಡೀ ದೇಶದ ವ್ಯವಹಾರ ಭಾಷೆಯು ಆಯಾ ಪ್ರಾಂತಭಾಷೆಗಳು ವಾಙ್ಮಯ ಭಾಷೆಗಳು, ಒಳನುಡಿಗಳು ಮನೆನುಡಿಗಳು— ಹೀಗೆ ಇಟ್ಟುಕೊಳ್ಳಲಿಕ್ಕೆ ಯಾವ ಆತಂಕವೂ ತೋರುವುದಿಲ್ಲ"ವೆಂದು ಹೇಳಿರುವೆವು. ಮತ್ತು ಹಿಂದುತ್ವದ ಹೊಟ್ಟೆಯಲ್ಲಿ ಅನೇಕ ಜಾತಿಗಳಿರುವಂತೆ ಇವೆಲ್ಲವೂ ಇರತಕ್ಕದ್ದೆಂದು ನಮ್ಮ ಈಗಿನ ಅಭಿಪ್ರಾಯವನ್ನು ಕೊಟ್ಟಿರುವೆವು. ಅಲ್ಲದೆ "ಒಳನುಡಿಗಳ ವಿಷಯವು ಸೂಕ್ಷ್ಮವಾಗಿರುವುದರಿಂದ ಈ ವಿಷಯದಲ್ಲಿ ಯಾವದೊಂದು ಮತವನ್ನು ನಿರ್ಧಾರ ಮಾಡುವ ಮುಂಚೆ ನಾವು ಆ ನಮ್ಮ ಬಾಂಧವರ ವಿಚಾರಗಳನ್ನು ತಿಳಿದುಕೊಳ್ಳಲಿಚ್ಛಿಸುತ್ತೇವೆ" ಎಂದು ಬರೆದಿರುವೆವು. ಇದರಿಂದ ನಮ್ಮ ಆಶಯವು ಏನಿರುವದೆಂಬುದು ತಿಳಿದು ಬರುವುದು. ಒಂದೇ ಧರ್ಮ ಒಂದೇ ಭಾಷೆ ಇರಬೇಕೆಂಬ ಕನಸು ಕೆಲವರಿಗೆ ಬೀಳುತ್ತವೆ ಅವರಿಗೆ ಉತ್ತರಕೊಡುವುದಕ್ಕೋಸ್ಕರವೇ ನಾವು "ಮಾತೃಭಾಷೆಯನ್ನು ಮರೆಯುವುದು ಒಮ್ಮೆಲೆ ಯಾರಿಗೂ ಸಾಧ್ಯವಿಲ್ಲ"ವೆಂದು ಬರೆದಿರುವೆವು. ಜಾತಿಗಳನ್ನು ಮುರಿಯಲಿಕ್ಕೂ ಜಯಕರ್ನಾಟಕವು ಒಪ್ಪುವದಿಲ್ಲ. ಅದೇ ಮೇರೆಗೆ ಭಾಷೆಗಳನ್ನು ಮರೆಯಲಿಕ್ಕೂ ಅದು ಹೇಳಲಾರದು. "ಒಮ್ಮೆಲೆ" ಎಂಬ ಶಬ್ದದಿಂದ ಹಾಗೆ ತಿಳುವಳಿಕೆಯುಂಟಾಗಿದ್ದರೆ ಸ್ವದೇಶಾಭಿಮಾನಿಯು ಅದನ್ನು ಮರೆಯಬೇಕೆಂದು ಬೇಡಿಕೊಳ್ಳುತ್ತೇವೆ.

ಶ್ರೀ. ಬಿ. ರಾಮರಾವ್, ಶ್ರೀ. ಪಾವಂಜೆ ಮಂಗೇಶರಾವ ಶ್ರೀ. ಉಳ್ಳಾಲ ಮಂಗೇಶರಾವ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪಕರಾದ ಕೈ. ಶ್ಯಾಮರಾವ ಇವರೇ ಮುಂತಾದ ಕನ್ನಡ ನುಡಿಯ ಏಳಿಗೆ ವಿಶೇಷವಾಗಿ ಪರಿಶ್ರಮಪಟ್ಟ ಮತ್ತು ಪಡುತ್ತಿರುವ ಕನ್ನಡಿಗರನ್ನು ಕರ್ನಾಟಕವು ಹೇಗೆ ಮರೆಯುವುದು? ಸತ್ಯಾಗ್ರಹಿ, ಸ್ವದೇಶಾಭಿಮಾನಿ ಮುಂತಾದ ಪತ್ರಿಕೆಗಳು ಈಗಲೂ ಮಾಡುತ್ತಿರುವ ಕನ್ನಡ ಭಾಷಾಸೇವೆಯನ್ನು ಅಲ್ಲಗಳೆಯುವದೆಂತು? ಕೊಡಗು, ತುಳವು ಮತ್ತು ಕೊಂಕಣಿ ಈ ಭಾಷೆಗಳ ಸಂಬಂಧದಿಂದ ಇತ್ತಕಡೆಯ ಜನರಿಗೆ ವಿಶೇಷಸಂಗತಿಗಳು ಗೊತ್ತಿಲ್ಲ. ಅದನ್ನು ಮಾಡಿಕೊಡುವುದಕ್ಕೆ ಯತ್ನಿಸುತ್ತಿದ್ದೇವೆ. ಅದರ ಬಟ್ಟೆನಮೇಲೆ ಹಿಂದುಸ್ಥಾನದ ಹಿತವೇ ನಮ್ಮ ಮುಖ್ಯ ಧ್ಯೇಯವು. ಪ್ರಾಂತಪ್ರೇಮ, ಭಾಷಾಪ್ರೇಮ ಇವೆಲ್ಲವೂ ಆ ಮುಖ್ಯ ಧ್ಯೇಯಕ್ಕೆ ಸಾಧನಗಳು ಈ ದೃಷ್ಟಿಯಿಂದಲೇ ನಾವು ಯಾವತ್ತು ವಿಷಯಗಳನು ನೋಡುತ್ತ ಬಂದಿರುವೆವೆಂಬುದು ಜಯಕರ್ನಾಟಕದ ಎಲ್ಲಕ್ಕೂ ಹೊದಲಿನ ಲೇಖವನ್ನೋದಿದರೆ ಗೊತ್ತಾಗದಿರದು. ಈ ದೃಷ್ಟಿಯಲ್ಲಿ ಒಟ್ಟು ಬರವಣಿಗೆ ಕರ್ನಾಟಕತ್ವವನ್ನು ಬೆಳಸುವುದೇ ಅದರ ಧ್ಯೇಯ. ಹಾಗೆ ಅದು ಅಪ್ಪಟವೆಂದು ಯಾರಾದರೂ ಸಿದ್ಧಮಾಡಿದರೆ ಕರ್ನಾಟಕತ್ವವನ್ನು ಕಲ್ಲು ಕಟ್ಟಿ ಸಮುದ್ರದಲ್ಲಿ ಮುಳುಗಿಸಲಿಕ್ಕೂ ನಾವು ಸಿದ್ಧ. ಹಿಂದೀ ಭಾಷೆಯು ರಾಷ್ಟ್ರಭಾಷೆಯಾಗಬೇಕೆಂದೂ ಬಿಟ್ಟ ಎಲ್ಲಾ ಭಾಷೆಗಳೂ ಹಿಂದುಳಿದುಹೋಗಬೇಕೆಂದೂ ಅನೇಕರಿಗೆ ಪ್ರಮಾಣಿಕವಾದ ಅಭಿಪ್ರಾಯವಿರುತ್ತದೆ. ಅದು ನಮಗಂತೂ ಸಾಧ್ಯವೆನಿಸುವುದಿಲ್ಲ. ಆದರೆ ಕಾಲನ ಹೊಟ್ಟೆಯಲ್ಲಿ ಏನಿರುವುದೆಂಬುದು ಯಾರಿಗೆ ಗೊತ್ತು? ಹಾಗೆ ಕಾಲಾಂತರದಿಂದ ಕನ್ನಡವು ಪಚ್ಯೂತವಾಗಿ ಹಿಂದೀ ಭಾಷೆಯೇ ಇಡೀ ರಾಷ್ಟ್ರಭಾಷೆಯಾದರೆ ಅದರಿಂದ ನಮಗೇನೂ ದುಃಖವಿಲ್ಲ. ಹಾಗೆ ಒಮ್ಮೆಲೆ ಆಗುವದಂತೂ ಅಸಾಧ್ಯವಾಗಿರುವ ಕಾರಣ, ಆ ಕಾಲ್ಪನಿಕ ಸ್ಥಿತಿಯನ್ನು ಬಿಟ್ಟು ನಡುವಿನ ವ್ಯಾವಹಾರಿಕ ಮಾರ್ಗವನ್ನು ತೋರಿಸಿರುತ್ತೇವೆ. ಅದೆಲ್ಲ, ನಮ್ಮ ವಿಚಾರಸರಣಿಯು ತಪ್ಪಿದರೆ ಹಿಂದಕ್ಕೆ ತೆಗೆದುಕೊಳ್ಳಲು ಸಿದ್ಧರಿದ್ದೇವೆ.

ದಾಕು ಹಾಕುವ ವಿಷಯ ಹೊಸ ಹುಕುಂ.

ದಾಕು ಹಾಕುವ ಕೆಲಸವನ್ನು ವೆಕ್ಸಿನೇಟರುಗಳು ಇತ್ತೀಚಿನ ವರೆಗೆ ಒಳ್ಳೇ ರೀತಿಯಲ್ಲಿ ಮಾಡದಿರುವುದರಿಂದ ಇಂಡಿಯಾ ಸರಕಾರದವರು ಒಂದು ಹೊಸ ಹುಕುಮನ್ನು ಕೊಟ್ಟಿರುವರು. ಈ ವೆಕ್ಸಿನೇಟರುಗಳು ಸರಿಯಾಗಿ ಕೆಲಸ ನಡಿಸುವಂತೆ ತಾಲೂಕು ಬೋರ್ಡಿನವರು ಜಾಗ್ರತೆಯನ್ನು ತೆಗೆದುಕೊಳ್ಳಬೇಕು. ಇವರಿಗೆ ಈಗ ಸಿಕ್ಕುವ ಸಂಬಳವು ಕಡಿಮೆಯಾದ್ದರಿಂದ ಇವರ ಸಂಬಳವನ್ನು ಏರಿಸಬೇಕು. ವೆಕ್ಸಿನೇಟರುಗಳಿಗೆ ಒದಗಿಸಿಕೊಡುವ ಲಿಂಫನ್ನು ಒಳ್ಳೇ ರೀತಿಯಲ್ಲಿ ತಯಾರಿಸಿ ಇಪ್ಪತ್ತು ಜನರಿಗೆ ದಾಕು ಹಾಕುವಷ್ಟು ಲಿಂಫನ್ನು ಒಂದು ಗಾಜಿನನಳಿಗೆಯಲ್ಲಿ ಹಾಕಿ ಕಳುಹಿಸಬೇಕು. ಈ ನಳಿಗೆಗೆ ಲಿಂಫ ತುಂಬಿಸಿದ ತಾರೀಕನ್ನೂ ಸಂಖ್ಯೆಯನ್ನೂ ಯಾವ ತಾರೀಕಿನ ವರೆಗೆ ಉಪಯೋಗಿಸಬಹುದೆಂಬುದನ್ನು ತೋರಿಸುವ ಚೀಟನ್ನು ಹಚ್ಚಬೇಕು.

ಈ ವೆಕ್ಸಿನೇಟರುಗಳಿಗೆ ದಾಕು ಹಾಕುವ ಎರಡು ಲೆನ್‌ಸೆಟ್, ಸಾಬೂನು, ೧೨ ಟವೆಲುಗಳು, ಒಂದು ಸ್ಪಿರಿಟ್ ಲೆಂಪ್ ನೀರು ಬಿಸಿಮಾಡಲಿಕ್ಕೆ ಒಂದು ಎನೆಮಲ ಪಾತ್ರ, ಒಂದು ಮರದ ಹಲಿಗೆ ಇವುಗಳನ್ನು ಒದಗಿಸಿ ಕೊಡಬೇಕು.

ವೆಕ್ಸಿನೇಟರುಗಳು ಗ್ರಾಮಚಾವಡಿಗೆ ಮಕ್ಕಳನ್ನು ಕರತರುವಂತೆ ಪಟೇಲರ ಮುಖಾಂತರ ಹಳ್ಳಿಯವರಿಗೆ ತಿಳಿಸಬೇಕು. ದಾಕನ್ನು ಬೆಳಿಗ್ಗೆ ಮಾತ್ರವೇ ಹಾಕಬೇಕು. ತಂಪಾದ ಮರದ ಅಡಿಯಲ್ಲಿಯೂ ನಿಂತು ಹಾಕಬಹುದು.

ದಾಕು ಹಾಕುವ ಕ್ರಮ:—ಮೊದಲು ಎರಡು ಲೆನ್‌ಸೆಟ್, ಲಿಂಪ್ ಇರುವ ನಳಿಗೆ, ನೀರಿನ ಪಾತ್ರ, ಸ್ಪಿರಿಟ್ ಲೆಂಪ್, ಸಾಬೂನು, ಮಡಿಮಾಡಿದ ೩ ಟವೆಲ್ ಇವುಗಳನ್ನು ಹಲಿಗೆಯ ಮೇಲೆ ಇಡಬೇಕು. ಅನಂತರ ನೀರು ಬಿಸಿಮಾಡಿ ಚೆನ್ನಾಗಿ ಕುದಿಸಬೇಕು. ಅನಂತರ ಈ ಬಿಸಿನೀರಿನಿಂದ ವೆಕ್ಸಿನೇಟರರು ಸಾಬೂನು ಹಾಕಿ ತನ್ನ ಕೈಗಳನ್ನು ಚೆನ್ನಾಗಿ ತೊಳೆಯಬೇಕು ಇದಾದ ಮೇಲೆ ಲೆನ್‌ಸೆಟುಗಳನ್ನು ನೀರಿನಲ್ಲಿ ಚೆನ್ನಾಗಿ ಕುದಿಸಬೇಕು, ಕುದಿಸಿ ಆದ ಮೇಲೆ ಲೆನ್ಸೆಟುಗಳನ್ನು ನೀರಿನಿಂದ ತೆಗೆದು ಅವುಗಳ ತುದಿಗಳು ಹಲಿಗೆಗೆ ತಾಗದಂತೆ ಹಲಿಗೆಯ ಮೇಲೆ ಇಡಬೇಕು. ಅನಂತರ ಒಂದೊಂದು ಸರ್ತಿಗೆ ಮೂರು ಮಂದಿ ಮಕ್ಕಳ ಕೈಗಳನ್ನು ಸಾಬೂನು ಹಚ್ಚಿ ಬಿಸಿನೀರಿನಿಂದ ಚೆನ್ನಾಗಿ ತೊಳೆದು ಮಡಿಯಾದ ಟವೆಲಿನಿಂದ ಒರಸಬೇಕು. ಇದಾದ ಮೇಲೆ ಲಿಂಫ್ ಇರುವ ನಳಿಗೆಯ ಬಾಗಿಲು ತೆರೆದು ಕೈ ತೊಳೆದ ಒಂದೊಂದೇ ಮಗುವಿನ ಕೈಗೆ ದಾಕುಹಾಕಬೇಕು. ದಾಕುಹಾಕಿದ ಮೇಲೆ ೧೫ ನಿಮಿಷದ ವರೆಗೆ ಅವರಿಗೆ ಸ್ವಲ ಕೂತುಕೊಳ್ಳುವಂತೆ ನಮ್ರಭಾವದಿಂದ ಹೇಳಬೇಕು ಅದಲ್ಲದೆ ಅವರ ಮೇಲೆ ಧೂಳು ಕೂತುಕೊಳ್ಳದಂತೆ ಜಾಗ್ರತೆಯಿಂದ ಇರುವ ಹಾಗೆ ಹೇಳಬೇಕು.

ವೆಕ್ಸಿನೇಟರುಗಳ ಲೆನ್ಸೆಟುಗಳನ್ನೂ ಇತರ ಸಾಹಿತ್ಯಗಳನ್ನು ಹೆಲ್ತ ಇನ್ಸ್‌ಪೆಕ್ಟರುಗಳು ಆಗಾಗ್ಯೆ ತನಖಿಮಾಡಬೇಕು.

ಇಷ್ಟು ಹುಕುಂ ಗವರ್ನಮೆಂಟಿನಿಂದ ಬಂದಿರುತ್ತದೆ. ಆದರೆ ವೆಕ್ಸಿನೇಟರು ಇದೇ ರೀತಿ ವರ್ತಿಸುವಂತೆ ಊರಿನ ಜನರು ಜಾಗ್ರತೆ ತೆಗೆದುಕೊಳ್ಳಬೇಕಾಗಿದೆ. ಯಾಕಂದರೆ ಲೆನ್ಸೆಟುಗಳನ್ನು ಚೆನ್ನಾಗಿ ಬಿಸಿಮಾಡದೆಯೂ ಅಥವಾ ಒಂದು ಮಗುವಿಗೆ ಹಾಕಿ ಇನ್ನೊಂದು ಮಗುವಿಗೆ ದಾಕು ಹಾಕಬೇಕಾದರೆ ತೊಳೆದೆಯೂ ಇದ್ದರೆ ಒಂದು ಮಗುವಿನ ದೋಷವು ಇನ್ನೊಂದು ಮಗುವಿಗೆ ಹೋಗಿ ಸೌಖ್ಯದಲ್ಲಿರುವ ಮಕ್ಕಳ ಆರೋಗ್ಯವು ಕೆಟ್ಟುಹೋಗಿ ಮಕ್ಕಳ ಜನ್ಮವೇ ಹಾಳಾಗುವುದು.

ಪತ್ರವ್ಯವಹಾರ.

ತಾಲೂಕು ಬೋರ್ಡುಗಳೂ ತಾಲೂಕು ಬೋರ್ಡು ಮೆಂಬರುಗಳು.

ಪ್ರತಿ ಒಂದು ತಾಲೂಕು ಬೋರ್ಡುಗಳಿಗೆ ಮೆಂಬರನ್ನು ಚುನಾಯಿಸುವಾಗ ವೋಟರುಗಳ ಮನೆಮನೆಗಳಿಗೆ ತಮ್ಮಕಡೆಯ ಏಜಂಟರುಗಳನ್ನು ಕಳುಹಿಸಿಯೂ ಕೆಲವರಲ್ಲಿ ತಾವೇ ಸ್ವತಹಾ ಹೋಗಿಯೂ ತನಗೆ ಓಟು ಕೊಡಬೇಕೆಂದು ಹೇಳುವ ಪದ್ಧತಿಯು ನಡಿಯುತ್ತಾ ಬರುತ್ತದೆ. ಓಟರರು ಸ್ನೇಹಭಾವದಿಂದಲೋ, ಜಾತಿ ವಾತ್ಸಲ್ಯದಿಂದಲೋ ಇವರಿಗೆ ಓಟು ಕೊಟ್ಟು ತಮ್ಮ ತಮ್ಮ ಮನೆಗಳಿಗೆ ಹೋಗುವದು ಚುನಾವಣೆಯಾದ ಮೇಲೆ ತಾವು ಯಾವ ಸರ್ಕಲಿಗೆ ಚುನಾಯಿಸಲ್ಪಟ್ಟಿದ್ದಾರೊ ಆ ಸರ್ಕಲಿನಲ್ಲಿ ವಾಸವಾಗಿರುವ ಜನರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸುವ ಆಲೋಚನೆಯನ್ನು ಬೋರ್ಡಿಗೆ ತರುವದು ಬಹಳ ಕಡಿಮೆ. ಆದುದರಿಂದ ಪ್ರತಿ ಒಂದು ತಾಲೂಕು ಬೋರ್ಡು ಮೆಂಬರರುಗಳು ತಾವು ಮೆಂಬರರಾದ ದಿವಸದಿಂದ ಪ್ರತಿ ಒಂದು ಮೀಟಿಂಗಿನಲ್ಲಿ ತಮ್ಮ ಸರ್ಕಲಿನ ಜನರ ಹಿತಕ್ಕಾಗಿ ಏನೇನು ಮಾಡಿದ್ದಾರೆಂದು ಸ್ಥಳೀಕ ವರ್ತಮಾನ ಪತ್ರಿಕೆಗಳಿಗೆ ಬರೆದು ಜನರಿಗೆ ತಾವು ಮಾಡಿದ ಕೆಲಸಗಳು ತಿಳಿಯುವಂತೆ ಮಾಡಬೇಕು. ಹೀಗೆ ಮಾಡಿದರೆ ಮೆಂಬರರು ಏನೇನು ಮಾಡಿದ್ದಾರೆಂದು ಎಲ್ಲರಿಗೂ ತಿಳಿಯುತ್ತದೆ. ಮಾತ್ರವಲ್ಲ, ಇನ್ನೊಂದು ಚುನಾವಣೆಯ ಸಮಯ ದೇಶಹಿತಕ್ಕಾಗಿ ಕೆಲಸಮಾಡಿದ ಮೆಂಬರರಿಗೆ ಓಟು ಕೊಟ್ಟು ಚುನಾಯಿಸಬೇಕೆಂದು ವೋಟರರಿಗೆ ಮನಸ್ಸಾಗುತ್ತದೆ. ಅದುದರಿಂದ ಇನ್ನು ಎಲ್ಲಾ ತಾಲೂಕು ಬೋರ್ಡು ಮೆಂಬರರುಗಳು ಈ ರೀತಿ ತಾವು ಮಾಡಿದ ಕೆಲಸಗಳನ್ನು ವರ್ತಮಾನ ಪತ್ರಿಕೆಗಳಿಗೆ ಬರೆದು ವೋಟರುಗಳ ತಿಳುವಳಿಕೆಗೆ ತರಬೇಕೆಂದು ಕೋರುವ,

ವೋಟರ್,

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀರಮಿತ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ಸಂಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಸಮಾಚಾರಕ್ಕೆ "ಆರೋಗ್ಯರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಚಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಅಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೪ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟಿಪಣಿಗೆ ಮಾತ್ರ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಆಫ್ ಕೊಸ್ಟ್ಸ್, ಮೆಮೊರಂಡಮ್ ಆಫ್ ಎಪ್ಪಿಯರೆನ್ಸ, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದುನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ ಎಸ್. ಪಿ. ಆಚಾರ್ಯ ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಲಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ತುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್, ಮಾರ್ಕೇಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | **ವಜ್ರಾಂಗ-ಬಿಂದು** | ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚ ತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವದಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ತಿವಳಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦, ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಯು ಒಂದು ಬಾಟ್ಲಿಯು ಉಚಿತ. ಟಪ್ಪಾಲು ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ಮಾಡಿ, ಕಮಿಶನ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡವೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪನಿ,
ಮು. ಪೋ. ಹುಬ್ಬಳ್ಳಿ, (ಜಿಲ್ಲಾ ಧಾರವಾಡ)

The Canara Public Conveyance Co., Ltd, Mangalore.
(ESTABLISHED 1914.)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು –

ಮಂಗಳೂರು {
ಕರಾವಳಿ ಮಾರ್ಗವಾಗಿ – ಮುಲ್ಕಿ – ಉಡ್ಪಿ – ಕುಂದಾಪುರ – ಗಂಗೊಳ್ಳಿ – ಬೈಂದೂರು
ಬಂಟವಾಳ – ಬೆಳ್ತಂಗಡಿ – ಚಾರ್ಮಾಡಿ.
ಪಾಣೆಮಂಗಳೂರು – ಪುತ್ತೂರು – ಸುಳ್ಯ – ಮಡಿಕೇರಿ.
ಪುತ್ತೂರು – ಉಪ್ಪಿನಂಗಡಿ – ಬೆಳ್ತಂಗಡಿ.
ಮಡಿಕೇರಿ – ಪುತ್ತೂರು – ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು – ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು – ಬೈಂದೂರು ರ್ವಿಸು ಅನುಕೂಲ.

ಮುಂಬಯಿ – ಮದ್ರಾಸು – ಕರೂರು – ಚಿಕ್ಕಮಗಳೂರು – ಚಾರ್ಮಾಡಿ – ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು – ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

ಆಯುರ್ವೇದ ಶಾಸ್ತ್ರ ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಯಂ. ಜಿ. ಯು. ಅವರ್ಗಳಿಂದ ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟಿದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 6 ದಿವಸಗಳಲ್ಲಿ ಗುಣಪಡಿಸುವವು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2–0–0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0
ಪುಸ್ತಕಗಳು ಸಿಕ್ಕುವ ವಿಳಾಸ:–
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು
ಕೊಳ್ಳುವವರಿಗೆ
ಮೋಡರ್ನ್ ರೆಗ್ಯುಲೇಟರ್
ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು

– ಕೀಲಡ್ಡಿಗೆ ಪದಕ. –

ಈ ಅಡ್ಡಿಗೆಯನ್ನು ರೋಲ್ಡ್ ಗೋಲ್ಡ್ ಎಂಬ ಭಂಗಾರದಲ್ಲಿ ಇಮಿಟೇಶನ್ ವಜ್ರದ ಕಲ್ಲುಗಳನ್ನು ಇಟ್ಟು ನೋಡಲು ಮುದ್ದಾಗಿರುವಂತೆ ತಯಾರಿಸಿದೆ ಮತ್ತು ಇದರ ಹರಳನ್ನು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ತಯಾರಿಸಿದೆ. ಇದನ್ನು ಯಾವಾಗಲು ಕಟ್ಟಿಕೊಳ್ಳಲು ಚೆನ್ನಾಗಿರುವದು. ಎಷ್ಟು ಮುಂಚಾದರೂ ಸೇರಿದರೂ ಕೆಡದು. ಇದರ ಬಣ್ಣವು ಎಂದಿಗೂ ಕೆಡದಂತೆ ಸವರನ್ ಬಂಗಾರದ ಬಣ್ಣಕೊಟ್ಟಿರುವದು. ಶ್ರೀಮಂತರೂ, ಗರೀಬರೂ ಉಪಯೋಗಿಸಲು ಲಾಯಖಾದದ್ದು. ಕ್ರಯ 1ಕ್ಕೆ 4/8.

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ
– ಡಾಬುಗಳು. –

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿ ಹೊಂದಿದ ಕೆಲಸಗಾರರಿಂದ ಬಹುಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ.

ಗೆಜ್ಜೆಡಾಬು 1ಕ್ಕೆ 3–0–0.

– ಇಮಿಟೇಶನ್ ವಜ್ರದ ಬೆಂಡೋಲೆಗಳು. –

ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವುದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇವನ್ನು ನೋಡಿದವರು ನಿಜವಾದ ವಜ್ರದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7ಕಲ್ಲಿನ ಬಿಳಿಯ ಓಲೆ ಜೊತೆ 3—0—0.
„ „ ಕೆಂಪುಕಲ್ಲಿನ ಓಲೆ ಜೊತೆ 3—8—0.

ವಿಳಾಸ:– ವೈ. ಎಮ್. ಸ್ವಾಮಿ ಅಂಡ್ ಕೊ,
ಪಾರ್ಕ್ ಟೌನ್, ಮದ್ರಾಸು.

Y. M. SWAMY & Co.,
No. 12. Nainiappa Naicken St.,
P. Town, MADRAS.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ ಯಾ ೪ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಭವ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨–೦–೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦–೬–೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ. | ಡಿ. ಮನ್ನಾಲಾಲ್, ಡಿಲ್ಲಿ ಸ್ಟೇಟ್ ಡಾಕ್ಟರ್. ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ:– ವರ್ಷ ಒಂದಕ್ಕೆ ರೂಪಾಯಿ 2–0–0. ಟಪ್ಪಾಲು ಹಾಸಲು ಸೇರಿ ರೂಪಾಯಿ 2–13–0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ್ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೨೩ನೇ ಶುಕ್ರವಾರ ಎಪ್ರಿಲ್ ೧೯೨೬. ಸಂಚಿಕೆ ೧೭.

Th Canara Banking Corporation,
UDIPI, Ltd.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್,
ಉಡುಪಿ, ಲಿಮಿಟೆಡ್.

Head office: UDIPI. Branch: COONDAPOOR.
ಹೆಡ್ ಆಫೀಸು: ಉಡುಪಿ. ಶಾಖೆ: ಕುಂದಾಪುರ.

ನಿಯಮಿತ ಮೂಲಧನ	ರೂ. 3,50,000 – 0 – 0.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ವಿಕ್ರಿದ ಮೂಲಧನ	ರೂ. 2,25,000 – 0 – 0.
ಮೌಲ್ಯಕೆತ್ತ ಮೂಲಧನ	ರೂ. 1,80,690 – 9 – 11.
ಆಪದ್ಧನ ವಗೈರೆ ಎತ್ತಗಳು	ರೂ. 75,875 – 0 – 0.
ಸಾ. ಸೇ. ೬ರ ದರದ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ ರೂ.	25,800 – 0 – 0.

ತಾರೀಕು 31-10-'25ಕ್ಕೆ ತೋರುವ ಸದರಿ ಬ್ಯಾಂಕಿನ ಏವೇಜುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.

ಮೌಲ್ಯಕೆತ್ತ ಮೂಲಧನ 1,80,690–9–11, ಆಪದ್ಧನ ವ ಇತರ ಎತ್ತಗಳು 75,875–0–0, ಠೇವಣಾತಿಗಳು 5,30,003-14-3, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ 4700–0–0, ಏವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು 40,274–3–11, ಜುಮ್ಲಾ ರೂ. 8,31,543–12–1.

ಆಸ್ತಿ ವ ಸೊತ್ತುಗಳು.

ಹಿಸ್ಸೆ ಕಟ್ಟೋಣ ಕಟ್ಟಡದ ಟ್ರಜರಿಗಳು ವಗೈರೆ 3943–8–0, ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟ ಹಣ 7,58,851–13–8, ಸಾ. ಸೇ. ೬ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ 25,800–0–0, ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು 4700–0–0, ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ) 22,795–6–6, ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ 15,452–15–11, ಜುಮ್ಲಾ ರೂಪಾಯಿ 8,31,543–12–1.

ನಿರಖು ಠೇವಣಾತಿಗಳನ್ನು ಕಾಲಕ್ಲುಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. ೮½ರ ದರದ ಬಡ್ಡಿ ಮೇಲೂ, ಮುಸುಮ್ ಠೇವಣಾತಿಗಳನ್ನು ಕಂತು ಠೇವಣಾತಿಗಳನ್ನು, ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನು ಸಾವುಕಾರಿ ಹುಂಡಿಗಳನ್ನೂ, ವಟ್ಟಾಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.–

N. Anand Rao,
Secretary.

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8

ಈ ವಾಚುಗಳು ಬಲವಾದ ಮತ್ತು ಹೆಸರುವಾಸಿ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್. ಮುಂಬಯಿ

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕ್ಷಣದಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—1—0

ಗಜಕರ್ಣದ ಮುಲಾಮು:– ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:– ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ,
6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. — 109 ಫ್ರೇಯರ್ ರೋಡ್ ಮುಂಬಯಿ.
ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಲಿವರ್ ಮೂವ್‌ಮೆಂಟ್ ವಾಚ್
೧೫ ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0,

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.
"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೇಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೊಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
– ಮಾರಲ್ಪಡುವವು. –

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುವಾಸಿ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟದೆ.

ಎಮ್. ಗಣಪತಿರಾವ್ ಐಗಳ್ —ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂದ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ಬೈಲು ಬಿರ್ಜಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ಟಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲು 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

11 ಮಣಿಗಳಿದ್ದು ಬ್ರಿಜ್ ಮ್ಯೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8 18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.

ಚಲೋದಾದ ಲವ್ ನಕ್ಸೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ, ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕೊರ್ ಆರ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಟೈಫಾಯಿಡ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ ... ... ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ ,, 2—8—0.
,, ಸ್ಥಳೀಕರಿಗೆ ... ,, 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ದಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 5 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2½ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2½ ಮಳ ಅಗಲ ರೂ. 9 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜಮ್ನರ್ ರೇಷ್ಮೆ ಮಡಿಗಳು ಪಾಮ್ರಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ ಬಾಣಲಿಂಗ, ಚಾಭಂಡೆ, ತಾಳ, ಪಶ್ಮೀರ್‌ದಾಣಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂವತ್ಸರದ ನಿಜ ಚೈತ್ರ ಶು|| ೧೧ ಶನಿವಾರದಿಂದ ಕ್ಷಯ ಸಂವತ್ಸರದ ನಿಜ ಚೈತ್ರ ಬ|| ೨ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮೇಷ ಪಗ್ಗ.)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
24	ಶನಿ	೧೨	೫೩.೩೨	ಹುಬ್ಬಾ	೧೮. ೦	೧೧	6.15	6.43
25	ರವಿ	೧೩	೫೯. ೦	ಉತ್ತರಾ	೨೩.೩೧	೧೨	6 14	6.43
26	ಸೋಮ	೧೪	೬೦. ೦	ಹಸ್ತಾ	೨೬. ೨	೧೩	6.14	6.43
27	ಕುಜ	೧೪	೧.೩೨	ಚಿತ್ರಾ	೨೮.೧೪	೧೪	6.13	6.43
28	ಬುಧ	○	೨.೧೬	ಸ್ವಾತಿ	೨೯.೪೪	೧೫	6.13	6.43
29	ಗುರು	೧	೨.೧೪	ವಿಶಾಖಾ	೨೮.೩೨	೧೬	6.13	6.43
30	ಶುಕ್ರ	೨	೦.೪೬	ಅನುರಾಧಾ	೨೬.೩೧	೧೭	6 12	6.43

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
16	91—4	75—3	—	—
17	90—6	74—8	—	—
18	91—8	77—0	—	—
19	92—0	77—4	—	—
20	92—2	77—5	—	—
21	91—2	77—0	0—01	—
22	90—8	76—1	0—70	—
				138-46

ಮಂಗಳೂರಿನ ಪೇಟೆ ಧಾರಣೆ.

ದೇಣಸು		ಇಂದ ರೂ. ಅ.	ವರೆಗೆ ರೂ. ಅ.
ಮಕ್ಕಿ		8— 4	9— 0
ಹೊಸ ಗುಡ್ಡು	...	7— 8	8— 4
ಹೊಸ ರಾಶಿ	...	6—13	7— 8
ಅನ್ವರ್ ಬೆಳ್ತಿಗೆ	...	8— 0	9— 0
ರಂಗೂನು ಬೆಳ್ತಿಗೆ ಗೋಣಿ ೧	...	1[illegible]— 0	14— 0
ಗೋಧಿ ಗೋಣಿ ೧ಕ್ಕೆ	...	18— 0	19— 8
ಹುರುಳಿಗೋಣಿ ೧ಕ್ಕೆ	...	7—14	8— 4
ಅವರೆಗೋಣಿ ೧ಕ್ಕೆ	...	12— 8	13— 0
ತೊಗರಿಗೋಣಿ ೧ಕ್ಕೆ	...	16— 0	16— 8
ಕೊಗ್ರಿಬೇಳೆ ಗೋಣಿ ೧ಕ್ಕೆ	...	16— 8	23— 0
ಉದ್ದು ಗೋಣಿ ೧ಕ್ಕೆ	...	15— 8	—
ಹೆಸರುಗೋಣಿ ೧ಕ್ಕೆ	...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ	...	60— 0	65— 0
ಉಪ್ಪು ಗೋಣಿ ೧ಕ್ಕೆ	...	4— 8	4—12
ಕೊಬ್ರಿ ಖಂಡಿ ೧ಕ್ಕೆ	...	96— 0	100— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	29— 0	30— 0
ಎಳ್ಳಿಂಡಿ ಖಂಡಿ ೧ಕ್ಕೆ	...	55— 0	62— 8
ಕೊಬ್ರಿ ಎಣ್ಣೆ ಮಣ ೧ಕ್ಕೆ	...	7— 0	8— 8
ಎಳ್ಳೆಣ್ಣೆ ಮಣ ೧ಕ್ಕೆ	...	7— 8	9— 0
ಹರಳ ಎಣ್ಣೆ ಪೆಟ್ಟಿಗೆ ೧ಕ್ಕೆ	...	8-12-0	—
ಮೋರಿಸ ಸಕ್ಕರೆ ಮಣ ೧ಕ್ಕೆ	...	4— 7	4— 8
ಊರ ಮೆಣಸಿನಕಾಯಿ ಮಣ ೧ಕ್ಕೆ	...	5—8	5 12
ಸಾಸಿವೆ ಮುಡಿ ೧ಕ್ಕೆ	...	9— 4	—
ಕೊತ್ತಂಬರಿ ಮುಡಿ ೧ಕ್ಕೆ	...	3—14	4— 6
ಅಡಿಕೆ ಖಂಡಿ ೧ಕ್ಕೆ	...	345— 0	360— 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	265— 0	280— 0
ಹೊಸ ಅಡಿಕೆ ಖಂಡಿ ೧ಕ್ಕೆ	...	200— 0	—
ಕಾಳುಮೆಣಸು ಖಂಡಿ ೧ಕ್ಕೆ	...	265— 0	—
ಯಾಲಕ್ಕಿ ಮಣ ೧ಕ್ಕೆ	...	50— 0	64— 0
ಗೇರುಬೀಜ ಮುಡಿ ೧ಕ್ಕೆ	...	3— 2	—
ಕಳ್ಳಿಜ ಖಂಡಿ ೧ಕ್ಕೆ	...	45— 0	65— 0
ತಾಂಬ್ರ ತಗಡು ಮಣ ೧ಕ್ಕೆ	...	16— 4	16— 12
ತಾಮ್ರ ಪಾತ್ರೆಗಳು ಮಣ ೧ಕ್ಕೆ	...	21— 0	—
ಚೀನಿ ಬೆಳ್ಳಿ ಸೇರು ೧ಕ್ಕೆ	...	18—10	
ಹಿತ್ತಾಳೆ ತಗಡು ಮಣ ೧ಕ್ಕೆ	...	16— 8	
ಪವನು		13— 6	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

PROPRIETOR RAJVAIDYA NARAYANJI KESHAVJI
NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರಿವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಚೈನಾ ಬಜಾರ್, ರೋಡ್, ಮದ್ರಾಸು.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,
ಮಂಗಳೂರು.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವುದಕ್ಕೂ ಒಂದು ದೇಹದ ಮರ್ಮಶಾಸ್ತ್ರವು ಇರುವುದು ಅಂಥಾ ಪುಸ್ತಕವು ನಿಮಗೆ ಗೊತ್ತುಂಟೊ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, ಮದ್ರಾಸ್.

ಇಂಗ್ಲೀಷು ಡಾಕ್ಟರುಗಳು ರಬ್ಬರಿನಲ್ಲಿ ತಯಾರಿಸಲ್ಪಟ್ಟ,

ಸುಖಾನಂದ

ಎಂಬ ಮರ್ಮದ ಚೀಲವು.

ಈ ಪ್ರಪಂಚದಲ್ಲಿ ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮುಸುಕು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷು ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವುದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವವು.

ಗಂಡಸರದು ರೂ. 0-12-0. ಹೆಂಗಸರದು ರೂ. 3-4-0.

ವಿಳಾಸ—ಎಸ್. ಪಾಲ್ ಅಂಡ್ ಕೊ,
ಪಿ. ಬಿ. ನಂಬರ್ 542,
ಪಾರ್ಕ್‌ಟೌನ್ ಮದ್ರಾಸು.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು—

ಸರ್ವಿಸಿನ ಹೆಸರು.	ತಲಪುವ ಸ್ಥಳ.	ಹೊರಡುವ ಘಂಟೆ.
ಜನರಲ್	ಕಾರ್ಕಳ—ಆಗುಂಬೆ—ತೀರ್ಥಹಳ್ಳಿ	ಪೂ. 6¼
ಸಿ. ಪಿ. ಸಿ.	ಉಡುಪಿ—ಕುಂದಾಪುರ—ಬೈಂದೂರು	,, 6¾, 9¾
	ಉಡುಪಿ	ಮ. 12¾
	ಮುಲ್ಕಿ ವರೆಗೆ ಮಾತ್ರ	ಅ. 3¾
	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ.	ಪೂ. 7, ಮ. 1
	ಕಾರ್ಕಳ—ವೇಣೂರಿನಿಂದ	
	ಬಂಟ್ವಾಳಕ್ಕೆ ಮಾತ್ರ	,, 10¾, ಅ. 4¾
	ಪುತ್ತೂರು—ಸಂಪಾಜೆ—ಮಡಿಕೇರಿ	,, 7½
	ಪುತ್ತೂರು	ಪೂ. 10½ ಅ. 2
ಕಾರ್ಕಳ	ಕಾರ್ಕಳ—ಉಡುಪಿ—ಕುಂದಾಪುರ	ಪೂ. 6
	ಕಾರ್ಕಳಕ್ಕೆ ಮಾತ್ರ	ಅ. 1
ಹನುಮಾನ್	ಕಾರ್ಕಳ—ಉಡುಪಿ—ಕುಂದಾಪುರ	ಪೂ. 7
	ಕಾರ್ಕಳಕ್ಕೆ ಮಾತ್ರ	ಮ. 12
ಶಂಕರ್ ವಿಟ್ಠಲ್	ಪುತ್ತೂರು—ಮಡಿಕೇರಿಗೆ	ಪೂ. 7
	ಪುತ್ತೂರು ಉಪ್ಪಿನಂಗಡಿ	ಅ. 1½
	ವಿಟ್ಲಕ್ಕೆ	ಪೂ. 8, ಅ. 2½
	ಉಡುಪಿ	ಪೂ. 7½ ಅ. 1½
ಸ್ಟಾರ್	ಮುಲ್ಕಿ—ಉಡುಪಿ	,, 7, ಮ. 1
	ಬಂಟ್ವಾಳ	,, 10½, ಅ. 4½
ಇಂಡಿಯನ್	ಮುಲ್ಕಿ ಉಡುಪಿ,	,, 6½, ಮ. 12½
ಪೊಪ್ಯುಲರ್	ಬಂಟ್ವಾಳ ಬೆಳ್ತಂಗಡಿ—ಚಾರ್ಮಾಡಿ	ಪೂ. 7½ ಮ. 12½

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ—

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲ್	ಬೆಳಗ್ಗೆ 8	ಸಂಜೆ 5-30
ಲೋಕಲ್	,, 10	,, 4-30
ಶಟಲ್	ಸಂಜೆ 5-40	ಬೆಳಗ್ಗೆ 9-55

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ಣಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

ಪ್ರಕಟಣೆ

ಸರ್ವಜನರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ- ಮಂಗಳೂರು ಶಹರಿನಲ್ಲಿರುವ ಕಂಚಿ ಭೀಮರಾಯರ ಮಗ ಕಂಚಿ ಶ್ರೀನಿವಾಸರಾಯರೆಂಬವರು ನನ್ನ ಏಜಂಟರೆಂತ ಹೇಳಿ ಕೊಂಡು ಬರುತ್ತಾರಾಗಿ ನಾನು ತಿಳಿಯುತ್ತೇನೆ. ಸದ್ರಿಯವರು ನನ್ನ ಏಜಂಟರಲ್ಲ; ಈ ವರೆಗೆ ಏಜಂಟರಾಗಿ ಇದ್ದದ್ದೂ ಇಲ್ಲ. ಅವರಿಗೆ ನನ್ನ ಕಡೆಯಿಂದ ಯಾವ ತರದ ಅಧಿಕಾರವೂ ಇರುವದಿಲ್ಲ. ಅದ್ದರಿಂದ ನನ್ನ ಹೆಸರಲ್ಲಿ ಸದ್ರಿಯವರು ಲೇವಾದೇವಿ ನಡಿಸಿದ್ದಿದ್ದರೆ ಯಾ ಇನ್ನು ಮುಂದೆ ನಡಿಸಿದರೆ ಅದಕ್ಕೆಲ್ಲಾ ನಾನು ಜವಾಬ್ದಾರನಲ್ಲ.

ಮಂಗಳೂರು,
ತಾ. 21-4-'26. } N. Ramachandra Rao.

—: ಸಿಡುಬು. :—

ಸಿಡುಬು ರೋಗವು ಮಂಗಳೂರಲ್ಲಿ ದಿನೇ ದಿನೇ ಪ್ರಬಲವಾಗುತ್ತಾ ಬರುವುದರಿಂದ ಈ ಕೆಳಗಿನ ವಿಷಯಗಳನ್ನು ಸರ್ವ ಜನರ ತಿಳುವಳಿಕೆ ಬಗ್ಗೆ ಕರಲುದ್ಯುಕ್ತನಾಗಿರುತ್ತೇನೆ.

ಮೈಲಿಗೆ ವ ಸಿಡುಬು ರೋಗವು ಸಿಡುಬು ರೋಗದ ವಿಷದಾಗುವುದರಿಂದ ಉಂಟಾಗುತ್ತದೆ. ಈ ರೋಗದ ಸೋಂಕು ಗಾಳಿಯಲ್ಲಾಗಲೀ ರೋಗಿಗಳ ಬಟ್ಟೆ ಬರೆ ಮುಂತಾದುವುಗಳ ಮೂಲಕವಾಗಲೀ, ರೋಗಿಗಳನ್ನು ಮುಟ್ಟುವುದರಿಂದಾಗಲೀ ಬೇರೆ ಕಡೆಗೆ ಹರಡುವುದು. ಈ ರೋಗವನ್ನು ಹಬ್ಬಿಸುವುದರಲ್ಲಿ ನೊಣಗಳು ಹೆಚ್ಚಿನ ಅಂಶಕಾರಿಗಳಾಗಿರುತ್ತವೆ. ರೋಗದ ಸುರುವಾಗಾಯಿತು ಹುಣ್ಣಿನ ಪರೆಗಳು ಒಣಗಿ ಬೀಳುವ ವರೆಗೆ ಜ್ವರವು ಇರುತ್ತದೆ. ರೋಗದ ಬೊಕ್ಕೆಗಳು ನೀರು ತುಂಬಿ ತಗ್ಗುವ ವರೆಗೆ ಸಿಡುಬಿನ ಬಲವು ಜೋರಿರುವುದು. ರೋಗದ ವಿಷವು ಬಾಯಿಯಲ್ಲಿಯೂ ಕಫದಲ್ಲಿಯೂ ಚರ್ಮದ ಮೇಲಣ ಬೊಕ್ಕೆಗಳಲ್ಲಿಯೂ ಇದ್ದು ಒಣಗಿದ ಪರೆಗಳ ಮೂಲಕ ಗಾಳಿಯಲ್ಲಿ ದೂರಕ್ಕೆ ಒಯ್ಯಲ್ಪಡುತ್ತದೆ.

ಸಿಡುಬುರೋಗವು ಬಾರದಂತೆ ತಡೆಯುವುದಕ್ಕೆ ದಾಕು ಹಾಕಿಸಿಕೊಳ್ಳುವುದರಿಂದ ಕಂಡುಬಂದಷ್ಟು ಪ್ರಯೋಜನವು ಇನ್ಯಾವ ಬಗೆಯಿಂದಲೂ ಇರಲಾರದು. ದಾಕುಹಾಕಿಸಿಕೊಳ್ಳುವುದರಿಂದ ಅವರ ಜೀವಕಾಲದಲ್ಲಿ ಮೈಲಿಗೆಯ ಬಾಧೆ ತಗಲದೆ ಇದ್ದ ಅನೇಕರನ್ನು ಕಾಣಬಹುದು. ಹ್ಯಾಗೂ ದಾಕಿನ ಶಕ್ತಿಯು ೮ ವರ್ಷದ ವರೆಗೆ ಇರುತ್ತದೆ. ಅದ್ದರಿಂದ ಪ್ರತಿ ೬ ವರ್ಷಕೊಮ್ಮೆ ವ ಸಿಡುಬು ಊರಲ್ಲಿ ತಲೆದೋರಿದಾಗ ದಾಕು ಹಾಕಿಸಿಕೊಳ್ಳುವುದು ಉತ್ತಮ. ಜರ್ಮನ್ ದೇಶದಲ್ಲಿ ದಾಕು ಹಾಕಿಸಿಕೊಳ್ಳುವುದೂ ೬ ವರ್ಷಕ್ಕೊಮ್ಮೆ ತಿರುಗಿ ದಾಕುಹಾಕಿಸಿಕೊಳ್ಳುವುದೂ ಒತ್ತಾಯಕರವಾಗಿರುತ್ತದೆ. ಪಶ್ಚಿಮ ದೇಶಗಳಲ್ಲಿ ಈ ರೀತಿ ಕ್ರಮವಾಗಿ ದಾಕು ಹಾಕಿಸಿಕೊಳ್ಳುವುದರಿಂದ ಅಲ್ಲಿ ಮೈಲಿಗೆಯ ಸೋಂಕು ಇಲ್ಲ. ನಮ್ಮ ದೇಶದಲ್ಲಿ ನಾವು ಈ ರೀತಿ ಮಾಡಿದರೆ ನಮಗೂ ಈ ಬಾದೆ ತಗಲದು. ದಾಕು ಹಾಕಿಸಿಕೊಳ್ಳುವುದರಿಂದ ಸಿಡುಬು ರೋಗ ತಗಲಿದವರಿಗೆ ಅಪಾಯವೂ ಊನವೂ ಆಗದೆ ಇರುವಂಥಾದ್ದು ದಾಕಿನಿಂದಾಗುವ ದೊಡ್ಡ ಪ್ರಯೋಜನ. ದಾಕು ಹಾಕಿಸಿಕೊಳ್ಳುವುದರಿಂದ ಯಾರೂ ಸಾಯುವುದಿಲ್ಲ. ಅದು ಮೈಲಿಗೆಯಿಂದ ಕಾಪಾಡಿ ಸುರಕ್ಷಿತಪಡಿಸುತ್ತದೆ. ದಾಕಿನ ಶಕ್ತಿಯು ಬಹು ತಡವಾಗಿರುವುದರಿಂದ ಯುವನಸ್ಥರೂ, ಮುದುಕರೂ, ಬಲಹೀನರೂ ಏನೊಂದೂ ಸಂದೇಹವಿಲ್ಲದೆ ಹಾಕಿಸಿಕೊಳ್ಳಲೇನೂ ಅಡ್ಡಿ ಇಲ್ಲ.

ಈಗ ಮಂಗಳೂರಲ್ಲಿ ಮೈಲಿಗೆಯು ತಲೆದೋರಿರುವದರಿಂದ ಅದು ಹಬ್ಬದಂತೆ ತಡೆಕಟ್ಟುವ ಬಗ್ಗೆ ದಾಕು ಹಾಕಿಸಿಕೊಳ್ಳದವರೆಲ್ಲರೂ ಹಾಕಿಸಿಕೊಂಡವರೂ ಎರಡನೇ ಸರ್ತಿ ದಾಕುಹಾಕಿಸಿಕೊಳ್ಳುವುದು ಬಹು ಅಗತ್ಯ. ಆ ಬಗ್ಗೆ ಬೇಕಾದ ಸೌಕರ್ಯಗಳನ್ನು ಮುನ್ಸಿಪಲ್ ಅಧೀಸರರು ವೆಕ್ಸಿನೇಟರರೂ ಮಾಡುವರು.

ಸಿಡುಬು ತಗಲಿದವರನ್ನು ಪ್ರತ್ಯೇಕವಿರಿಸುವುದು ಬಹು ಉತ್ತಮ ಮತ್ತು ಅಗತ್ಯ. ಸಾಧ್ಯವಾದಷ್ಟು ಸಿಡುಬು ರೋಗಿಗಳನ್ನು ಆ ರೋಗ ಚಿಕಿತ್ಸೆಗಾಗಿ ಏರ್ಪಡಿಸಿದ ಆಸ್ಪತ್ರೆಗೆ ಕಳುಹಿಸುವುದು ಉತ್ತಮ. ಇದು ಸಾಧ್ಯವಿಲ್ಲದೆ ಪಕ್ಷದಲ್ಲಿ ಮನೆಯಲ್ಲೇ ಪ್ರತ್ಯೇಕರಿಸತಕ್ಕದ್ದು. ರೋಗಿಯ ಬಗ್ಗೆ ಒಂದು ಕೋಣೆಯನ್ನೂ ಆತನನ್ನು ಪರಾಮರಿಸುವವರ ಬಗ್ಗೆ ಇನ್ನೊಂದನ್ನೂ ಹೀಗೆ ಎರಡು ಕೋಣೆಗಳನ್ನು ಬಿಂಗಡಿಸಿಡತಕ್ಕದ್ದು. ರೋಗಿಯ ಕೋಣೆಯ ಕಿಟಿಕಿಗಳನ್ನೆಲ್ಲಾ ತೆರದಿಡಬೇಕು. ರೋಗಿಯ ಉಪಚಾರಕ್ಕಾಗಿ ಮೊದಲು ಸಿಡುಬುರೋಗ ಆದವರನ್ನಾಗಲಿ ವ ಆ ರೋಗದವರ ಸಂಪರ್ಕದಲ್ಲಿದ್ದು ರೋಗ ತಗಲದೆ ಇದ್ದವರನ್ನಾಗಿ ಅರಿಸತಕ್ಕದ್ದು. ಅಂಥವರು ಏನಿಂದು ವಸ್ತ್ರಗಳನ್ನು ಬದಲಾಯಿಸಿಕೊಳ್ಳದೆ ಬೇರೆಯವರನ್ನು ಮುಟ್ಟಬಾರದು. ಅವರ ಮೈಲಿಗೆ ಆದ ವಸ್ತ್ರಗಳನ್ನು ದೋಬಿಗೆ ಕಳುಹಿಸುವ ಮೊದಲು ಅದನ್ನು ಚೆನ್ನಾಗಿ ಬೇಯಿಸಿಕೊಳ್ಳತಕ್ಕದ್ದು. ರೋಗಿಯನ್ನು ನೋಡಬರುವವರನ್ನು ಕೋಣೆಯ ಒಳಗೆ ಹೋಗಬಿಡಬಾರದು. ರೋಗ ತಗಲಿದ ಮನೆಯ ಮಕ್ಕಳನ್ನು ಶಾಲೆಗೆ ಕಳುಹಿಸಲೂ ಇತರ ಮಕ್ಕಳೊಡನೆ ಕೂಡಲಿಕ್ಕೂ ಬಿಡಬಾರದು. ಗಾಳಿಯಿಂದ ಪರೆಕರೆಗೆ ರೋಗವು ಹಬ್ಬದಂತೆ ನಾಲ್ಕು ಪಾಸಿಗೊಮ್ಮೆ Salicylic acid, Starch and Glycerine ಈ ಮೂರು ಕೂಡಿದ ಒಂದು ತೈಲವನ್ನು ರೋಗಿಯ ಮೈಮೇಲೆ ತೊಳೆಯುವುದು ಉತ್ತಮ. ಅದರಿಂದ ಒಣಗಿದ ಪರೆಗಳು ಗಾಳಿಗೆ ಹಾರುವುದಿಲ್ಲ. ಸಂಪೂರ್ಣ ಗುಣವಾದ ನಂತರ ರೋಗಿಯನ್ನು ಚೆನ್ನಾಗಿ ಮೀಯಿಸಿ, ವಸ್ತ್ರಗಳನ್ನೆಲ್ಲಾ ಬದಲಾಯಿಸತಕ್ಕದ್ದು. ಕೋಣೆಯನ್ನು ಕ್ರಿಮಿನಾಶಕ ದ್ರಾವಕದ ಮುಖಾಂತರ ಚೆನ್ನಾಗಿ ತೊಳೆದು ಶುಚಿಪಡಿಸತಕ್ಕದ್ದು.

ಸಾಧ್ಯವಿದ್ದ ನಿವಾರಣಾ ಬಗೆಗಳನ್ನು ಸಾಧಿಸುವ ಬಗ್ಗೆ ಸಿಡುಬು ತಗಲಿದ ವರ್ತಮಾನವನ್ನು ಮುನ್ಸಿಪಲ್ ಹೆಲ್ತ್ ಆಫೀಸರರಿಗಾಗಲೀ ಸೆಟಿಟರಿ ಇನ್ಸ್ಪೆಕ್ಟರರಿಗಾಗಲೀ ತಿಳಿಸಿದರೆ ಉತ್ತಮ.

ಮು. ಹೆ. ಆಫೀಸು,
ಮಂಗಳೂರು,
ತಾ. 31-3-'26. } ಮುನಿಸಿಪಲ್ ಹೆಲ್ತ್ ಆಫೀಸರ್.

ಪ್ರಕಟಣೆ.

ನಮ್ಮ ಈ ವರುಷದ ಜಿಲ್ಲಾ ಪರಿಷತ್ತಿನ ಕಾರ್ಯಕ್ರಮವನ್ನು ಈ ಕೆಳಗೆ ಕೊಟ್ಟಿರುತ್ತದೆ. ತಾವು ಅದರಲ್ಲಿ ಕಾಣಿಸಿದ ವಿಷಯ ನಿಯಾಮಕ ಮಂಡಲಿಯ ಸಭೆಗೂ, ಜಿಲ್ಲಾ ಕಾಂಗ್ರೆಸು ಕಮಿಟಿಯ ಮಹಾಸಭೆಗೂ ತಾ. ೨೭-೪-'೨೬ನೇ ಅಪರಾಹ್ನ ಘಂಟೆ ೩ಗೆ ಮಂಗಳೂರು ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಜರಗುವ ಜಿಲ್ಲಾ ಕಾಂಗ್ರೆಸು ಕಮಿಟಿಯ ಮಹಾಸಭೆಗೂ ಅಗತ್ಯ ಬರಬೇಕಾಗಿ ವಿನಂತಿ.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯ ಕಾರ್ಯಕ್ರಮ.

I ತಾ. ೨೭-೪-'೨೬ಕ್ಕೆ ಪರಿಷತ್ತಿನ ನಿಯಮಗಳಲ್ಲಿ ತಿದ್ದುಪಡಿ.

I ತಾ. ೨೮-೪-'೨೬ಕ್ಕೆ ಜಿಲ್ಲಾ ಪರಿಷತ್ತಿನ ನಿರ್ಣಯಗಳ ಸಂಬಂಧ ಈ ಕಮಿಟಿಯವರು ಮಾಡತಕ್ಕ ಕೆಲಸವನ್ನು ನಿರ್ಣಯಿಸುವುದು.

II ಬಳ್ಳಾರಿ ಜಿಲ್ಲೆಯಲ್ಲಿ ಜರಗತಕ್ಕ ಪ್ರಾಂತಿಕ ಪರಿಷತ್ತಿಗೆ ಅಧ್ಯಕ್ಷರನ್ನು ಶಿಫಾರಸು ಮಾಡುವುದು.

III ಲೆಜಿಸ್ಲೇಟಿವ್ ಎಸೆಂಬ್ಲಿಗೂ, ಕೌನ್ಸಿಲುಗಳಿಗೂ ನಮ್ಮ ಉಮೇದ್ವಾರರನ್ನು ಗೊತ್ತುಮಾಡುವುದು.

IV ಅಖಿಲ ಮಹಾಸಭೆಯ ನಿರ್ಣಯ ಪ್ರಕಾರ ಹೊಸ ಕಾರ್ಯಕಾರಿ ಮಂಡಲಿಯವರನ್ನೂ, ಉದ್ಯೋಗಸ್ಥರನ್ನೂ ಚುನಾಯಿಸುವುದು.

V ಅಖಿಲ ಭಾರತೀಯ ನೂಲುವವರ ಸಂಘಕ್ಕೆ ಸಂಬಂಧಪಡುವ ವಿಷಯಗಳು.

VI ನಿರಿಹಾವಳಿ ನಿವೃತ್ತಿ ಕಮಿಟಿಗೆ ಸಂಬಂಧಪಟ್ಟ ವಿಷಯಗಳು.

VII ನಿಯಮಗಳ ತಿದ್ದುಪಡಿ.

VIII ಅಧ್ಯಕ್ಷರ ಅಪ್ಪಣೆಯಿಂದ ಸಭೆಯ ಮುಂದೆ ಬರಬಹುದಾದ ಇತರ ಜರೂರು ವಿಷಯಗಳು.

ಪರಿಷತ್ತಿನ ಕಾರ್ಯಕ್ರಮ.

ಸ್ಥಳ:— ಮಂಗಳೂರು ರಾಷ್ಟ್ರೀಯ ಬಾಲಿಕಾ ಪಾಠಶಾಲೆ.

ಮಂಗಳವಾರ ತಾ. ೨೭ನೇ— ಅಪರಾಹ್ನ ೩ರಿಂದ-೫ರ ವರೇಗೆ ವಿಷಯ ನಿಯಾಮಕ ಮಂಡಲಿಯ ಸಭೆ; ಅಪರಾಹ್ನ ೬ರಿಂದ-೮ರ ವರೇಗೆ ಪರಿಷತ್ತಿನ ಅಧಿವೇಶನ.

ಬುಧವಾರ ತಾ. ೨೮ನೇ — ಪೂರ್ವಾಹ್ನ ೭-೩೦ರಿಂದ—೧೦-೩೦ರ ವರೇಗೆ — ಪರಿಷತ್ತಿನ ಅಧಿವೇಶನ; ಅಪರಾಹ್ನ ೩ರಿಂದ-೫ರ ವರೇಗೆ— ಜಿಲ್ಲಾ ಕಾಂಗ್ರೆಸು ಕಮಿಟಿ ಮತ್ತು ಕಾರ್ಯಕಾರಿ ಮಂಡಲಿಯ ಸಭೆಗಳು.

ಅ. ಭೋಜರಾಯ,
ತಾ. ೨೦-೪-೧೯೨೬. ಕಾರ್ಯದರ್ಶಿ.

ದನಕರುಗಳ ಅಭಿವೃದ್ಧಿಗೆ ಉಪಾಯಗಳು.

ಕಾಲ್ನಡೆಗಳು ಮನುಷ್ಯನಿಗೆ ನಾನಾ ವಿಧಗಳಲ್ಲಿ ಉಪಯೋಗವಾಗುತ್ತವೆ. ಮನುಷ್ಯನು ತಾನು ತಿನ್ನತಕ್ಕ ಧಾನ್ಯವನ್ನೂ, ಉಡತಕ್ಕ ಬಟ್ಟೆಯನ್ನೂ ಅವುಗಳ ಮೂಲಕ ಬೇಸಾಯ ಮಾಡುವುದರಿಂದ ಪಡೆಯುವನು. ದನಕರುಗಳಿಲ್ಲದವನು ರೈತನೆನಿಸಿಕೊಳ್ಳಲಾರನು. ಆವನಿಗೆ ದನಕರುಗಳೇ ಧನವು. ಈ ದೇಶದಲ್ಲಿ ಭಾವಿಗಳಿಂದ ನೀರು ಎತ್ತುವುದು, ಗಾಡಿ ಎಳೆಯುವುದು, ಎಣ್ಣೆ ಮತ್ತು ಕಬ್ಬಿನ ಗಾಣ ತಿರುಗಿಸುವುದು, ಭೂಮಿಯನ್ನು ಹದಗೊಳಿಸುವುದು ಇವೆಲ್ಲಾ ಎತ್ತು ಕೋಣಗಳಿಂದಲೇ ನಡಿಯುವವು. ಯುರೋಪ ಮತ್ತು ಅಮೇರಿಕಾ ಖಂಡಗಳಲ್ಲಿ ಉಪಯೋಗಿಸುವ ಹಾಗೆ ಈ ದೇಶದಲ್ಲಿ ಕುದುರೆಗಳನ್ನು ಬೇಸಾಯದ ಕೆಲಸಗಳಿಗೆ ಉಪಯೋಗಿಸುವುದಿಲ್ಲ. ಇಲ್ಲಿ ಎತ್ತು ಕೋಣಗಳನ್ನೇ ಉಪಯೋಗಿಸುವುದಕ್ಕೆ ಅನೇಕ ಕಾರಣಗಳಿವೆ. ಇವು ಕುದುರೆಗಿಂತ ಹೆಚ್ಚಾಗಿ ಕಷ್ಟಪಟ್ಟು ಕೆಲಸಮಾಡುತ್ತವೆ. ಅವುಗಳನ್ನು ಪೋಷಿಸುವುದು ಅತೀ ಸುಲಭ. ಬಿಸಿಲಿನಲ್ಲಿಯೂ ಬೇಸರವಿಲ್ಲದೆ ಬಹಳ ಹೊತ್ತು ಕೆಲಸಮಾಡುತ್ತವೆ. ಕುದುರೆಗಳು ಬಿಸಿಲನ್ನು ತಡೆಯಲಾರವು. ಕುದುರೆಗಳ ಹಾಗೆ ಎತ್ತುಗಳಿಗೆ ಉಳುಕುವುದು, ಕಾಲುಗಳ ಕೀಲು ತಪ್ಪುವುದು ಮುಂತಾದ ಅಪಾಯಗಳು ಆಗಾಗ ಸಂಭವಿಸುವುದಿಲ್ಲ. ಕುದುರೆಗಳು ಈ ದೇಶದ ನೇಗಿಲುಗಳಿಗೆ ತಕ್ಕವುಗಳಲ್ಲ. ಜೇಡಿಮಣ್ಣಿನ ಭೂಮಿಗಳಲ್ಲಿಯೂ ಕೆಸರುಗದ್ದೆಗಳಲ್ಲಿಯೂ ವಿಶೇಷವಾಗಿ ಕಾಲುಜಾಡಿಸುವವು. ಆದುದರಿಂದ ನಮ್ಮ ದೇಶದಲ್ಲಿ ಎತ್ತುಗಳೂ ಕೋಣಗಳೂ ವ್ಯವಸಾಯಕ್ಕೆ ಮುಖ್ಯವಾಗಿವೆ. ಇವುಗಳನ್ನು ಪೋಷಿಸಿ ಅಭಿವೃದ್ಧಿಪಡಿಸಬೇಕಾದುದು ಎಲ್ಲಾ ರೈತರಿಗೂ ಅತ್ಯಾವಶ್ಯಕವಾದ ಕೆಲಸ. ನಮ್ಮ ದೇಶದಲ್ಲಿ ಎತ್ತು, ದನ ಎಮ್ಮೆ ಕೋಣ ಇವೇ ರೈತನಿಗೆ ಇರತಕ್ಕ ಮುಖ್ಯ ಕಾಲ್ನಡೆಗಳು.

ದನಗಳ ಅಭಿವೃದ್ಧಿ.

ಪೂರ್ವಕಾಲದಲ್ಲಿ ಜನರು ದನಕರುಗಳನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದರು. ಆ ಕಾಲದಲ್ಲಿ ಬೀಜದ ಹೋರಿಗಳನ್ನು ಚೆನ್ನಾಗಿ ಕಾಪಾಡಿ ಅವುಗಳಿಂದ ಕ್ಲಪ್ತ ಕಾಲಗಳಲ್ಲಿ ಗರ್ಭಕಟ್ಟಿಸುತ್ತಿದ್ದರು. ಹೀಗೆ ಗರ್ಭಕಟ್ಟಿದ ದನಗಳಲ್ಲಿ ನೂರಕ್ಕೆ ತೊಂಬತ್ತರ ಮೇಲೆ ಕರುಹಾಕುತ್ತಿದ್ದವು. ಈಗ ಬೀಜದ ಹೋರಿಗಳನ್ನು ಸರಿಯಾಗಿಡದೆ ಇದ್ದ ಕಾರಣ ಹೋರಿಯಿಂದ ಗರ್ಭವಾದ ದನದಲ್ಲಿ ಹುಟ್ಟುವ ದನ ಎತ್ತುಗಳು ಗಿಡ್ಡಾಗಿಯೂ ನಿತ್ರಾಣವಾಗಿಯೂ ಇರುತ್ತವೆ. ಎತ್ತುಗಳು ಬಲವಾಗಿದ್ದರೆ ಬೇಸಾಯವು ಚೆನ್ನಾಗಿ ಆಗುತ್ತದೆಂಬ ಅಂಶವು ರೈತರಿಗೆ ತಿಳಿದಿದ್ದರೂ ಅಂತಹ ಎತ್ತುಗಳನ್ನು ಸರಿಯಾಗಿ ಕಾಪಾಡುವುದರಲ್ಲಿ ಆಸಕ್ತರಾಗಿರುವುದಿಲ್ಲ. ಹಸುಗಳು ಗರ್ಭವಾಗಿರುವ ಕಾಲದಲ್ಲಿ ಹುಲ್ಲು ನೀರು ಸರಿಯಾಗಿ ಹಾಕದೆ ಬಡಕಲಾಗುವಂತೆ ಬಿಡುವುದರಿಂದ ಅವುಗಳಲ್ಲಿ ಹುಟ್ಟಿದ ಕರುಗಳು ಸಹ ಬಲವಿಲ್ಲದವುಗಳಾಗುತ್ತವೆ. ಪೂರ್ವ ಕಾಲದಲ್ಲಿ "ಗೂಳಿ ಬಸವ" ಎಂಬ ಹೆಸರಿನಿಂದ ದೇವರಿಗೋಸ್ಕರವೆಂದು ಪ್ರತಿ ಗ್ರಾಮದಲ್ಲಿಯೂ ೩-೪ ಬೀಜದ ಹೋರಿಗಳನ್ನು ಬಿಡುತ್ತಿದ್ದರು. ಆ ವಾಡಿಕೆ ಈಗ ಅಷ್ಟು ವಿಶೇಷವಾಗಿರುವುದಿಲ್ಲ. ಗ್ರಾಮದವರು ಒಕ್ಕಟ್ಟಾಗಿ ಸೇರಿ ಬೀಜದ ಎತ್ತುಗಳನ್ನು ಇಡಬೇಕು. ಸಾಧಾರಣವಾಗಿ ೧೦೦ ದನಗಳಿರುವ ಒಂದು ಗ್ರಾಮಕ್ಕೆ ೨ ಬೀಜದ ಎತ್ತುಗಳಿದ್ದರೆ ಸಾಕು. ಅವುಗಳು ಒಂದುವೇಳೆ ಮೇವಿಗಾಗಿ ಹೊಲಗದ್ದೆಗಳಿಗೆ ನುಗ್ಗಿದರೆ ಅಟ್ಟಬೇಕೆ ಹೊರತು ದೊಡ್ಡಿ ಮೊದಲಾದವುಗಳಿಗೆ ಕೂಡಿ ನಿರ್ಬಂಧಿಸಬಾರದು. ಗೂಳಿ ಬಿಡಲಿಕ್ಕೆ ಬೀಜದ ಎತ್ತು ೩ ವರ್ಷದ ವಯಸ್ಸಿನ ಮೇಲೆ ೬ ವರ್ಷದ ವಯಸ್ಸಿನೊಳಗಿರಬೇಕು. ಅನಂತರ ಅದಕ್ಕೆ ಹುಟ್ಟುವ ಕರುಗಳು ದುರ್ಬಲವಾಗುತ್ತವೆ. ಗ್ರಾಮದ ಹೋರಿಗಳಲ್ಲಿ ಲಕ್ಷಣವಾಗಿರತಕ್ಕ ಹೋರಿಗಳನ್ನು ಮೂರು ವರ್ಷಗಳ ವರೆಗೆ ಬೀಜದ ಎತ್ತಾಗಿ ಬಿಟ್ಟು ಅನಂತರ ಬೀಜ ಒಡೆದು ವ್ಯವಸಾಯಕ್ಕಾಗಲಿ ಗಾಡಿಗಳನ್ನು ಎಳೆಯಲಿಕ್ಕಾಗಲೀ ಒದಗಿಸಿಕೊಳ್ಳಬಹುದು. [illegible] ಕರುಗಳನ್ನು ೨ ವರ್ಷದ ವಯಸ್ಸಿನೊಳಗೆ ಬೀಜ ಒಡೆದು ಕೆಲಸಗಳಿಗೆ ಇಟ್ಟುಕೊಳ್ಳಬಹುದು. ಗಿಡ್ಡ ಹೋರಿಗಳ ಬೀಜ ಒಡೆಯದಿರುವ ಕಾರಣದಿಂದಲೇ ನಮ್ಮ ದೇಶದ ದನಗಳು ಗಿಡ್ಡಾಗಿಯೂ ಬಲಹೀನವಾಗಿಯೂ ಇವೆ. ಅದುದರಿಂದ ದನಗಳನ್ನು ವೃದ್ಧಿಪಡಿಸುವುದು ಮತ್ತು ಅವುಗಳನ್ನು ಆಸಕ್ತಿಯಿಂದ ಸಾಕುವುದು ಅತ್ಯಾವಶ್ಯಕವಾಗಿದೆ.

ದನಗಳನ್ನು ಅಭಿವೃದ್ಧಿಗೆ ತರುವ ವಿಧಗಳು:—ಮೊದಲು ಒಳ್ಳೆಯ ದನಗಳನ್ನು ಆಯಿಸಿ ಅವುಗಳಿಗೆ ಉತ್ತಮವಾದ ಕರುಗಳು ಪಡೆಯುವ ಉದ್ದೇಶದಿಂದ ಲಕ್ಷಣವಾದ ಒಂದು ಬೀಜದ ಎತ್ತನ್ನು ಇಟ್ಟುಕೊಳ್ಳಬೇಕು. ದನಗಳನ್ನೂ ಗೂಳಿಗಳನ್ನೂ ಆಯಿಸುವುದು ಅವಶ್ಯಕವಾದರೂ ಬೀಜದ ಎತ್ತನ್ನು ಆಯಿಸುವುದಕ್ಕೆ ಶ್ರಮತೆಗೆದುಕೊಳ್ಳುವುದು ಮುಖ್ಯವಾಗಿದೆ. ಯಾವ ಲಕ್ಷಣಗಳೂ ದುರ್ಗುಣಗಳೂ ಇದ್ದರೆ ಅಂಥಾ ಬೀಜದ ಎತ್ತಿನ ಲಕ್ಷಣಗಳುಳ್ಳ ಕರುಗಳನ್ನೆ ಈಯುವವು. ಹೀಗೆ ಪ್ರತಿ ವರ್ಷವೂ ಆಗುವುದರಿಂದ ಸ್ವಲ್ಪ ಕಾಲದಲ್ಲಿಯೇ ದನಗಳೆಲ್ಲಾ ಕೆಡುವವು.

ಅಳಿಯಸಂತಾನ ಕಟ್ಟಿನ ಶುಭಾಶುಭ ಕಟ್ಟುಕಟ್ಟಳೆಗಳು.

ಮೇಲಿನ ಹೆಸರಿನ ಒಂದು ಪುಸ್ತಕವು ಇತ್ತಲಾಗೆ ಶಾರದಾ ಛಾಪಖಾನೆಯಲ್ಲಿ ಅಚ್ಚಾಗಿತ್ತು. ಸ್ವದೇಶಾಭಿಮಾನಿಯಲ್ಲಿ ಅವರ ವಿಷಯ ಬರೆದ ವಿಮರ್ಶೆಯನ್ನು ಓದಿನೋಡಿ, ಅದರ ಒಂದು ಪ್ರತಿಯನ್ನು ನಾನು ಮಂಗಳೂರು ಶಾರದಾ ಪ್ರೆಸ್ಸಿನಿಂದ ೮ ಆಣೆ ಕ್ರಯಕ್ಕೆ ಪಡಕೊಂಡೆ. ತುಳುದೇಶವು ಪುರಾತನ ಕಾಲದಲ್ಲಿ ಒಂದು ಪ್ರತ್ಯೇಕ ರಾಜ್ಯವಾಗಿತ್ತು. ಈ ದೇಶವನ್ನು ತುಳು ಜನರೇ ಆಳಿಕೊಂಡಿದ್ದರು. ಅವರ ರಾಜ್ಯಭಾರವು ನಡಿಯುವ ಕಾಲದಲ್ಲಿ ನಾಡವ, ಬಂಟರು, ಕುಂಬಾರರೂ, ಗಾಣಿಗರೂ ಮೈಲಿಯವರೂ, ಬಡಿಗೆಯವರೂ, ಬಿಲ್ಲವರೂ, ಮೊಗೇರರೂ, ಕ್ಷೌರಿಕರೂ, ಮುಂತಾದ ಅನೇಕ ಜಾತಿಯವರು ಒಗ್ಗಟ್ಟಿನಿಂದ ಇದ್ದುಕೊಂಡು ಪರಸ್ಪರ ಪ್ರೀತಿಯಿಂದ ನಡಿಯುತ್ತಾ ಸುಖದಿಂದ ಇದ್ದರು.

ಈ ಎಲ್ಲಾ ಜಾತಿಯವರ ಸಾಮಾಜಿಕ ಪದ್ಧತಿಗಳೂ, ಇವರು ನಂಬಿಕೊಂಡು ಬರುವ ದೈವಗಳೂ, ಶುಭಾಶುಭ ಕಾರ್ಯಗಳಲ್ಲಿ ನಡಿಯತಕ್ಕ ಕಾರ್ಯಕ್ರಮಗಳೂ ಒಂದೇಯಾಗಿದ್ದವು. ಜೈನರು ಈ ತುಳುರಾಜ್ಯಕ್ಕೆ ಬಂದು ಆಳಲಾರಂಭಿಸಿದೊಡನೆ ಅವರಲ್ಲಿ ಭೂತಾಳಪಾಂಡ್ಯನೆಂಬ ಅರಸನು ಅಳಿಯಸಂತಾನ ಕಟ್ಟನ್ನು ಸ್ಥಾಪಿಸಿದನು. ಮೇಲಿನ ಜಾತಿಯವರು ಈ ಅಳಿಯಸಂತಾನ ಕಟ್ಟಿನ ಪ್ರಕಾರ ನಡಿಯಲಿಕ್ಕೆ ಒಪ್ಪಿಕೊಂಡರು. ಅವನು ಹದಿನಾರು ಕಟ್ಟು ಹದಿನಾರು ಕಟ್ಟಳೆಗಳನ್ನು ಬರಿಸಿದನು.

ಆದರೆ ಈ ಅಳಿಯಸಂತಾನ ಕಟ್ಟಿನ ತುಳುಜನರು ನಡಕೊಳ್ಳಬೇಕಾದ ಕಟ್ಟುಕಟ್ಟಳೆಗಳು ವಾಡಿಕೆಯಂತೆ ನಡೆದು ಬರುತ್ತಿದ್ದವು. ಈ ತೌಳವರು ನಾಗರೀಕತೆಯಲ್ಲಿ ಪರಸ್ಪರ ಪ್ರೀತಿಯಿಂದ ಇದ್ದು ನಾಗರೀಕರಾಗಿದ್ದರೂ ಈ ಕಟ್ಟುಕಟ್ಟಳೆಗಳನ್ನು ಇಷ್ಟರ ವರೆಗೆ ಪುಸ್ತಕ ರೂಪದಲ್ಲಿ ಬರೆದಿಟ್ಟಿದ್ದಿಲ್ಲ.

ದಕ್ಷಿಣಕನ್ನಡ ಜಿಲ್ಲೆಯ ಅಳಿಯಸಂತಾನ ಕಟ್ಟಿನ ವಿಷಯ ಮಾಜಿ ಹಜೂರು ಶಿರಸ್ತೆದಾರರಾದ ಒಬ್ಬ ಪಿಳ್ಳೆ ಮಹನೀಯರು ಭೂತಾಳಪಾಂಡ್ಯನ ಅಳಿಯಕಟ್ಟು ಎಂಬ ಪುಸ್ತಕವನ್ನೂ, ರಾ। ಗಂಗೊಳ್ಳಿ ಕೃಷ್ಣರಾಯರು "ಅಳಿಯಸಂತಾನ ಲೊ" ಎಂಬ ಪುಸ್ತಕವನ್ನೂ, ರಾ। ಅಮುಣಜೆ ಗುತ್ತು ಶೀನಪ್ಪ ಹೆಗ್ಗಡೆಯವರೂ ಭೂತಾಳಪಾಂಡ್ಯ ಕಟ್ಟಿನ ವಿಷಯ ಹೆಚ್ಚು ಶೋಧನೆ ಮಾಡಿ ಅಳಿಯಸಂತಾನ ಕಟ್ಟು ಅಥವಾ ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆಯೆಂಬ ಪುಸ್ತಕವನ್ನು ರಾ। ಎಂ. ಜಿ. ಐಗಳ್ ಎಂಬವರು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಆಳಿದ ಎಲ್ಲಾ ರಾಜವಂಶಾವಳಿಗಳ ವಿಷಯ ಸಂಗ್ರಹಿಸಿ ದಕ್ಷಿಣಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ ಎಂಬ ಪುಸ್ತಕವನ್ನು ತುಳುರಾಜ್ಯದ ದೈವಗಳಾದ ದೈಯೊಂಗುಳು, ಕಲ್ಲುರ್ಟಿ, ಕಲ್ಕುಡ, ಮುಂಡತ್ತಾಯ ಬೊಬ್ಬರ್ಯ, ತೋಡಕಿನಾರ್ ಮುಂತಾದ ಪುಸ್ತಕಗಳನ್ನು ಬರೆದಿರುವರು.

ಇನ್ನು ಈ ತುಳುರಾಜ್ಯದಲ್ಲಿರುವ ಎಲ್ಲಾ ದೊಡ್ಡ ದೊಡ್ಡ ದೇವಸ್ಥಾನಗಳ ಸ್ಥಳಪುರಾಣಗಳನ್ನು ಸಂಸ್ಕೃತಭಾಷೆಯಲ್ಲಿ ತುಳುಮಲೆಯಾಳ ಬರಹದಲ್ಲಿ ಅನೇಕ ಬ್ರಾಹ್ಮಣ ಮಹನೀಯರು ಬರೆದಿದ್ದಿರುವರು. ಅವುಗಳನ್ನೆಲ್ಲಾ ಎಂ. ಜಿ. ಐಗಳರವರು ಸಂಗ್ರಹಿಸಿ ೩ನೇ ೮ನೇ ದರ್ಜೆಯ ಚರಿತ್ರೆ ಮತ್ತು ಕಥೆಗಳು ಎಂಬ ಪುಸ್ತಕಗಳಲ್ಲಿಯೂ ಮಂಜೇಶ್ವರ ಮತ್ತು ಕಾರಂಜೆ ಸ್ಥಳಪುರಾಣಗಳಲ್ಲಿಯೂ ವಿವರವಾಗಿ ಬರೆದಿರುವರು.

ಮೇಲಿನ ಯಾವುದೊಂದು ಪುಸ್ತಕದಲ್ಲಿಯಾದರೂ ತುಳುದೇಶದ ಅಳಿಯಸಂತಾನ ಕಟ್ಟಿನ ತುಳು ಜನರು ಎಷ್ಟೋ ಪುರಾತನ ಕಾಲದಿಂದ ಅನುಸರಿಸಿಕೊಂಡು ಬರುತ್ತಿದ್ದ ಕಟ್ಟುಕಟ್ಟಳೆಗಳ ವಿಷಯವಾಗಿ ಏನೊಂದು ಸಂಗತಿಯೂ ಕಂಡುಬರುವುದಿಲ್ಲ. ಆ ಪುಸ್ತಕಗಳ ಉದ್ದೇಶವೇ ಬೇರೆಯಾಗಿದೆ.

ಆದುದರಿಂದ ಬಂಟವಾಳ ಟೆಂಪಲ್ ಎಲಿಮೆಂಟರಿ ಶಾಲೆಯ ಸಹಾಯಕ ಉಪಾಧ್ಯಾಯರಾದ ಬಿ. ಪಕೀರಮಾಸ್ತರರು ಬಹಳ ಕಷ್ಟಪಟ್ಟು ಸಂಗ್ರಹಿಸಿ ಅಚ್ಚು ಹಾಕಿಸಿದ ಈ "ಅಳಿಯಸಂತಾನ ಕಟ್ಟಿನ ತುಳುಜನರ ಕಟ್ಟುಕಟ್ಟಳೆಗಳು" ಎಂಬ ಪುಸ್ತಕವು ಈ ತೌಳವ ಜನರಲ್ಲಿದ್ದ ಒಂದು ಕುಂದುಕೊರತೆಯನ್ನು ಹೋಗಲಾಡಿಸಿದಂತಾಯಿತು. ಈ ಕಟ್ಟುಕಟ್ಟಳೆಗಳು ರೂಢಿಯಲ್ಲಿ ಇದ್ದಂತೆಯೇ ಬರೆಯಲ್ಪಟ್ಟಿವೆ. ನಾನೂ ಅಳಿಯಸಂತಾನ ಕಟ್ಟಿನ ಪ್ರಕಾರವೇ ನಡಿಯುವವನಾದುದರಿಂದಲೂ, ಅನೇಕ ಶುಭಾಶುಭ ಕಾರ್ಯಗಳಿಗೆ ಹೋಗಿ ಅನುಭವವುಳ್ಳವನಾದ್ದರಿಂದಲೂ ನನಗೆ ಈ ಪುಸ್ತಕವನ್ನು ಓದುವಾಗ ಏನೊಂದು ಕುಂದುಕೊರತೆಗಳಾಗಲಿ ಹೊಸ ಕೃತಕಗಳಾಗಲಿ ಇದರಲ್ಲಿ ನನಗೆ ಕಂಡುಬರಲಿಲ್ಲ.

ಬ್ರಾಹ್ಮಣ ಜಾತಿಯವರಿಗೆ ಜನನ, ನಾಮಕರಣ, ಅನ್ನಪ್ರಾಶನ ಕಿವಿಚುಚ್ಚುವುದು, ಚೌಲ, ಉಪನಯನ, ಮದುವೆ ಗರ್ಭದಾನ, ಶ್ರೀಮಂತ, ಉತ್ತರಕ್ರಿಯೆ ಮುಂತಾದ ಶೋಭಕೋಪಚಾರಗಳ ವಿಷಯ ನಡಿಯಬೇಕಾದ ಕ್ರಮಗಳು ಆಶ್ವಲಾಯನ, ಆಪಸ್ತಂಭ, ಗಾರ್ಗ ಮುಂತಾದ ಮಹರ್ಷಿಗಳು ಬರೆದ ಗ್ರಾಹ್ಯ ಸೂತ್ರಗಳು ಇವೆ. ಆದರೆ ತುಳು ಜನರಲ್ಲಿ ಉಪನಯನದ ಹೊರತು ಬೇರೆ ಎಲ್ಲಾ ಪದ್ಧತಿಗಳು ರೂಢಿಯಲ್ಲಿದ್ದರೂ ಅವುಗಳನ್ನು ಒಟ್ಟುಗೂಡಿಸಿ ಬರೆದಿಟ್ಟಿರಲಿಲ್ಲ. ಆದುದರಿಂದ ರಾ। ಬಿ. ಪಕೀರ ಮಾಸ್ತರರು ಬರೆದ "ಅಳಿಯ ಸಂತಾನ ಕಟ್ಟಿನ ತುಳು ಜನರ ಕಟ್ಟುಕಟ್ಟಳೆಗಳು" ಎಂಬ ಪುಸ್ತಕವು ತುಳು ಜನರಿಗೆ ಒಂದು ಸೂತ್ರದಂತೆ ಆಯಿತು. ಈ ಪುಸ್ತಕವನ್ನು ತುಳು ಜನರೆಲ್ಲರೂ ಮುಖ್ಯವಾಗಿ ಪ್ರತಿ ಜಾತಿಯ ಕೂಡುಕಟ್ಟಿನ ಗುರಿಕಾರರು ಇದನ್ನು ಕೊಂಡುಕೊಂಡು ಗ್ರಂಥಕರ್ತರನ್ನು ಪ್ರೋತ್ಸಾಹಿಸುವರಾಗಿ ನಂಬುತ್ತೇನೆ.

'ಅಳಿಯ ಸಂತಾನ ಕಟ್ಟಿನವ.'

ಸ್ಫುಟ ವಿಚಾರಗಳು.

ಹಿಂದೂ ಮುಸಲ್ಮಾನ ಕಲಹಗಳಿಗೆ ಪ್ರೇರಣೆ ಎಲ್ಲಿಂದ?

ಹಿಂದೂಸ್ಥಾನದಲ್ಲಿ ಇತ್ತೀಚೆಗೆ ಹಿಂದೂ ಮುಸಲ್ಮಾನ ಕಲಹಗಳು ಹೆಚ್ಚಾಗುತ್ತಾ ಬಂದಿವೆ. ಮಾತ್ರವಲ್ಲದೆ ಪ್ರತಿ ಒಂದು ಕಡೆಯಲ್ಲಿನ ಘಟನಾವಳಿಯಲ್ಲಿಯೂ ಒಂದು ತರದ ಸಮಾನತೆಯು ಕಾಣುತ್ತಿದೆ. ಕಲ್ಕತ್ತಾದಲ್ಲಿ ಹಿಂದೂ ಮೆರವಣಿಗೆ ಹೋಗುವ ವ್ಯಾಜ್ಯದಲ್ಲಿ ಕಠಿಣವಾದ ದಂಗೆಗಳೆದ್ದುವು. ಈ ದಂಗೆಗಳು ಹೇಗೆ ನಾಲ್ಕೈದು ದಿನಗಳ ವರೆಗೆ ಕಡಿಮೆಯಾಗುವ ಬದಲು ಹೆಚ್ಚಾಗುತ್ತಲೇ ಬಂದವು. ಇಷ್ಟು ದಿನಗಳ ವರೆಗೆ ಪೋಲೀಸರು ಯಾವ ರೀತಿಯಲ್ಲಿ ಕೆಲಸಮಾಡುತ್ತಿದ್ದರು? ಒಂದೆರಡು ದಿನಗಳಲ್ಲಿಯೇ ಈ ಕಲಹಗಳನ್ನು ಮುಚ್ಚಲಾರದಷ್ಟು ನಮ್ಮ ಈಗಿನ ಸರಕಾರದ ಪೋಲೀಸು ವ್ಯವಸ್ಥೆಯು ಶಿಥಿಲವಿದೆಯೇ? ೩೦೦ ಮಿಲಿಯ ಜನರನ್ನು ಸ್ವಾಧೀನತೆಯ ಎಚ್ಚರದಿಂದ ಮುರಿದಿಡಬಲ್ಲ ಸರಕಾರಕ್ಕೆ ಈ ಸಣ್ಣ ಕಲಹಗಳನ್ನು ಸಮಯಕ್ಕೆ ಸರಿಯಾಗಿ ಅಡಗಿಸುವುದು ಅಸಾಧ್ಯವೇ? ಹಿಂದೂ ಮುಸಲ್ಮಾನರ ಸೌಹಾರ್ದವು ಅಷ್ಟು ಅಸಾಧ್ಯವೇ ಇತ್ಯಾದಿ ಹಲವು ವಿಚಾರಗಳನ್ನು ಆಲೋಚಿಸಲಿದೆ. ಮತ್ತು ಈ ವರೆಗೆ ನಡೆದ ಎಲ್ಲಾ ಕಲಹಗಳ ಇತಿಹಾಸವನ್ನು ಇದರಲ್ಲಿ ಯಾವುದೋ ಒಂದು ಅದೃಶ್ಯ ಹಸ್ತವು ಕೆಲಸಮಾಡುತ್ತಿದೆ ಎಂಬ ಅನುಮಾನವಾಗುತ್ತಿದೆ.

ಕಲ್ಕತ್ತಾದಲ್ಲಿ ನಡೆದ ಕಲಹಗಳ ಪರಿಣಾಮವಾಗಿ ಸಿರಾಜಗಂಜ ಎಂಬಲ್ಲಿಯೂ ಕೆಲವು ದಂಗೆಗಳಾದುವುವಂತೆ. ಇವುಗಳು ಆದ ವಿವರವು ಕಲ್ಕತ್ತಾದ ಫೊರ್ವರ್ಡ ಪತ್ರಿಕೆಯಲ್ಲಿ ಪ್ರಕಟವಾಗಿಯದೆ. ಕಲ್ಕತ್ತಾದ ಘಟನೆಗಳ ತರುವಾಯ ಎಲ್ಲಾ ಕಡೆಗಳಲ್ಲಿಯೂ ಇಲ್ಲದ ಸುದ್ದಿಗಳು ಹರಡಲಾರಂಭಿಸಿದವು. ಸಿರಾಜಗಂಜಿನಲ್ಲಿ ಮುಸಲ್ಮಾನರನ್ನು ಆವೇಶಿಸುವ ಅನಾಮಧೇಯ ಪತ್ರಿಕೆಯೊಂದು ಹೊರಪಟ್ಟಿತು. ಇದರಲ್ಲಿ ಕಲ್ಕತ್ತಾ ಕಲಹಗಳ ಬಗ್ಗೆ ಹಿಂದೂಗಳ ಮೇಲಿನ ಪ್ರತಿಮೇಧ ತೀರಿಸಲು ಮುಸಲ್ಮಾನರಿಗೆ ಪ್ರೇರಣೆ ಇದ್ದಿತು. ಅಲ್ಲದೆ 'ಈದ್' ಸಮಯದಲ್ಲಿ ಮುಸಲ್ಮಾನರು ಪಟ್ಟಣದ ಒಂದು ಕಡೆಯಲ್ಲಿ ಕೂಡಿ ಪ್ರಾರ್ಥಿಸಬೇಕಾಗಿಯೂ, ಕೂಡುವಾಗ ದೊಣ್ಣೆಗಳನ್ನು ಹಿಡಿದು ಬರಬೇಕಾಗಿಯೂ, ಬರೆಯಲ್ಪಟ್ಟಿದ್ದಿತು. ಈ ಪತ್ರಿಕೆಯ ಕಡೆಗೆ ಒಬ್ಬರು ಪ್ರಮುಖ ಹಿಂದೂಗಳು ಸರಕಾರದ ಪ್ರಮುಖ ಅಧಿಕಾರಿಗಳ ಲಕ್ಷ್ಯವನ್ನೆಳೆದರು. ಇಂತಹ ಹಾನಿಕರವಾದ ಅನಾಮಧೇಯ ಪತ್ರಿಕೆಗಳ ಕಡೆಗೆ ಸರಕಾರದ ಲಕ್ಷ್ಯವನ್ನು ಪ್ರತ್ಯೇಕವಾಗಿ ಎಳೆಯುವ ಆವಶ್ಯಕತೆಯೇ ಇರಬಾರದು. ಅವರಾಗಿಯೇ ಇದನ್ನು ತಿಳಿದುಕೊಂಡು, ಮುಂದೆ ದುರ್ಘಟನೆಗಳಾಗದ ಹಾಗೆ ನೋಡಬೇಕಿತ್ತು. ಆದರೆ ಹೀಗೆ ಅವರ ಲಕ್ಷ್ಯವೆಳೆಯಲ್ಪಟ್ಟಿದ್ದರೂ ಕೂಡ ಅಧಿಕಾರಿಗಳು ತಕ್ಕ ಮುಂಜಾಗ್ರತೆ ತೆಗೆದುಕೊಳ್ಳಲಿಲ್ಲ. ಫಲವಾಗಿ ಕೆಲವು ಅತ್ಯಾಚಾರಗಳು ನಡೆದೆ ಹೋದವಾಗಿ ವರ್ತಮಾನ ಬಂದಿದೆ. ಕೋಹತ್ತಿನ ಪ್ರಚಂಡ ಅನಾಚಾರಗಳು ಹೀಗೆಯೇ ಆಗಿದ್ದುವು. ಕಾಬಾದಿನಲ್ಲಿಯೂ ಹಿಂದೂ ಮುಸಲ್ಮಾನ ಕಲಹಗಳ ಸಂಭವವು ಬಂದಿದೆ. ಆದರೆ ಇಲ್ಲಿ ಪೋಲೀಸರು ಮುಂದಾಗಿ ಜಾಗ್ರತೆ ತೆಗೆದುಕೊಂಡುದರಿಂದ ಯಾವ ಅಪಾಯಗಳೂ ಸಂಭವಿಸಲಿಲ್ಲ. ಹೆಚ್ಚಿನ ಹಿಂದೂ ಮುಸಲ್ಮಾನ ಕಲಹಗಳು ಸುಳ್ಳು ಸುದ್ದಿಗಳ ಮೂಲ್ಯೆಯೇ ಹೊಂದಿರುತ್ತವೆ. ಆದರೆ ಪೋಲೀಸ ಮುಂಜಾಗ್ರತೆಯು ಸರಿಯಾಗಿದ್ದರೆ ಯಾವ ಕಡೆಗಳಲ್ಲೂ ಈ ಅನಾಚಾರಗಳು ಸಂಭವಿಸಲು ಕಾರಣವಿಲ್ಲ. ಆದರೆ ಪೋಲೀಸರು ಸಾಕಷ್ಟು ಪರಿಶ್ರಮವನ್ನೇಕೆ ತೆಗೆದುಕೊಳ್ಳುವುದಿಲ್ಲ? ಎಂಬುದನ್ನು ಪ್ರತಿ ಹಿಂದೂವೂ ಮುಸಲ್ಮಾನನೂ ಸರಿಯಾಗಿ ಚಿಂತಿಸಬೇಕಾದ ವಿಷಯ.

ಮಿತವ್ಯಯವೂ ಸಹಕಾರವೂ.

ಪಂಜಾಬಿನಲ್ಲಿ ಎಲ್ಲ ರೀತಿಯಲ್ಲಿಯೂ ಸಹಕಾರವು ಜನತೆಯ ಬಗ್ಗೆ ಕೆಲಸಮಾಡುತ್ತಿದೆ. ಅಲ್ಲಿನ ಇತ್ತಲಾಗಿನ ಸಹಕಾರದ ಕಾರ್ಯಕಾರಿ ಪ್ರಯತ್ನವೆಂದರೆ ಮಿತವ್ಯಯದ ಸಲುವಾಗಿ. ಹಳ್ಳಿಹಳ್ಳಿಗಳಲ್ಲಿ ತೀರಾ ಬಡವರಾದರು ಕೂಡ, ಸಾಲ ತೆಗೆದಾದರೂ, ಬಹಳ ವಿಜೃಂಭಣೆಯಿಂದ ಮದುವೆ ಉತ್ಸವಗಳನ್ನು ನಡಿಸುವುದು ಸಾಮಾನ್ಯ ಎಲ್ಲ ಕಡೆಗಳಲ್ಲಿಯೂ ಒಂದೇ ಆಗಿದೆ. ಪಂಜಾಬಿನಲ್ಲಿಯ ರಾವಲ್‌ಪಿಂಡಿಯ ಡೆಪ್ಯುಟಿ ಕಮಿಶನರನು ಸಹಕಾರದ ಚಳವಳದ ಮೂಲಕ ಜನತೆಯ ಖರ್ಚಿನ ಕಡೆಗೂ ಲಕ್ಷ್ಯಕೊಡುತ್ತಿರುವರು, ಮತ್ತು ಮುಖ್ಯವಾಗಿ ಈ ಮದುವೆ ಸಾಲಗಳನ್ನು ಇಳಿಸಲಿಕ್ಕೇನೇ ಪ್ರಯತ್ನಿಸುತ್ತಿರುವರು. ಅದರ ಫಲವಾಗಿ ಈಗ ಒಬ್ಬೊಬ್ಬರು ಹೆಚ್ಚು ರೂಪಾಯಿಯೊಳಗೆ ಖರ್ಚುಮಾಡಿ ಮದುವೆಮಾಡುತ್ತಿರುವರು. ಅಲ್ಲದೆ ಒಬ್ಬ ಒಳ್ಳೇ ಕುಟುಂಬಸ್ಥರು ಬರೇ ಏಳು ರೂಪಾಯಿ ಖರ್ಚಿನಿಂದ ಒಂದು ಮದುವೆಯನ್ನು ಸಾಗಿಸಿದರೆಂದೂ, ಅದರಿಂದ ಅವರ ಸಮಾಜ ಗೌರವಕ್ಕೆ ಯಾವ ತೊಂದರೆಯೂ ಬಂದಿಲ್ಲವೆಂದೂ ನಾವು ತಿಳಿಯುವೆವು. ಮದುವೆಯ ಒಂದೆರಡು ದಿನಗಳ ವಿಜೃಂಭಣೆಗಾಗಿ ಸಾಲಮಾಡಿ ಜನರು ವರ್ಷಗಟ್ಟಲೆಯಲ್ಲಿ ಸಾಲ ತೀರಿಸಲಾಗದ ಕಷ್ಟಪಡುವ ಬದಲಿಗೆ, ಈ ವಿಜೃಂಭಣೆಯನ್ನೇ ಕಡಿಮೆಮಾಡುವುದು ಎಷ್ಟೋ ಮೇಲೆಂಬುದನ್ನು ಎಲ್ಲರೂ ತಿಳಿಯತಕ್ಕ ಮಾತು. ಆದರೆ ಸಮಾಜ ಗೌರವದ ಅಭಿಲಾಷೆಯಿಂದ ಜನತೆಯು ಹೀಗೆ ಖರ್ಚುಮಾಡಿ ಇಷ್ಟೆಲ್ಲ ಕಷ್ಟಗಳಿಗೆ ಗುರಿಯಾಗುತ್ತಿದೆ. ಈ ಮಾನಸಿಕತೆಯನ್ನು ಪಂಜಾಬಿನಲ್ಲಿ ತೆಗೆದು ಹಾಕಿದಂತೆ ನಮ್ಮ ಜಿಲ್ಲೆಯಲ್ಲಿಯೂ ಹಾಕುವುದು ಅವಶ್ಯವಿದೆ. ಇಂತಹ ಕೆಲಸಗಳನ್ನು ಮಾಡಿದರೆ ಮಾತ್ರವೇ ಸಹಕಾರವು ಸಾರ್ಥಕವಾಗುವುದು.

ಬಿಹಾರ ಹಿಂದೂ ಪರಿಷತ್ತು.

ಹಿಂದೂ ಮಹಾಸಭೆಯು ದಿನದಿನವೂ ಪ್ರಬಲವಾಗುತ್ತಾ ಬರುವುದು ಹಿಂದೂ ಏಳಿಗೆಯ ಶುಭ ಚಿಹ್ನೆಯಾಗಿದೆ. ಇಂತಹ ಹಿಂದೂ ಸಭೆಗಳು ಕಳೆದ ಕಳೆದ ಎರಡು ತಿಂಗಳುಗಳೊಳಗೆ, ಮುಂಬಾಯಿ, ಸಿಂದ, ಪಂಜಾಬು, ಸಂಯುಕ್ತ ಪ್ರಾಂತ, ಬಂಗಾಳ ಇತ್ಯಾದಿ ಅನೇಕ ಸ್ಥಳಗಳಲ್ಲಿ ಸೇರಿದುವು ಅಲ್ಲದೆ, ಬೀಹಾರಿನಲ್ಲಿ ಕಳೆದ ೧೭ನೇ ತಾರೀಕಿನಲ್ಲಿ ಒಂದು ಪರಿಷತ್ತು ಸೇರಿತ್ತು. ಎಂದಿನಂತೆ ಪಂಡಿತ ಮಾಲವೀಯರೇ ಈ ಸಭೆಯ ಪ್ರಮುಖರಾಗಿದ್ದರು: ಮತ್ತು ಅಧ್ಯಕ್ಷರಾಗಿ ಆಮಂತ್ರಣ ಹೊಂದಿದ್ದ ಈ ಬಾರಿಯ ಪಂಡಿತ ಮಾಲವೀಯರ ಭಾಷಣವು ಉತ್ತಮವಿತ್ತು.

"ನಾನು ಹಿಂದೂ ರಾಜ್ಯದ್ದಾಗಲಿ, ಹಿಂದೂ ಸಾಮ್ರಾಜ್ಯದ ಕಲ್ಪನೆಯನ್ನು ಮಾಡಿಲ್ಲ. ಸ್ವರಾಜ್ಯಕ್ಕಾಗಿ ಹಿಂದೂಗಳ ಮತ್ತು ಮುಸಲ್ಮಾನರಾಡಿ ಇತರ ಜಾತಿಗಳ ಐಕ್ಯವು ಅಗತ್ಯವೆಂದು ನಾನು ತಿಳಿದಿದ್ದೇನೆ. ಆದರೆ ಹಿಂದೂಗಳು ಆತ್ಮರಕ್ಷಣೆಗಾಗಿಯೂ, ಹಿಂದೀ ನಾರಿಯ ಪಾವಿತ್ರ್ಯ ರಕ್ಷಣೆಗಾಗಿಯೂ, ಹಿಂದೂಗಳು ಸಿದ್ಧರಿರಬೇಕೆಂದೂ, ಈ ವಿಷಯದಲ್ಲಿ ಮುಸಲ್ಮಾನರು ಕೂಡ ಅವರಿಗೆ ಕಷ್ಟ ಬಂದಾಗ ಆತ್ಮರಕ್ಷಣೆಗಾಗಿ ಸಿದ್ಧರಿರಬೇಕೆಂದು ತಾನು ಇಚ್ಛಿಸುವೆನೆಂದೂ" ಪಂಡಿತಜಿಯವರು ಹೇಳಿದರು.

ಚೈನಾದೊಳಗಿನ ಯುದ್ಧ

ಚೈನಾ ದೇಶವು ಅಂತಃಕಲಹಗಳಿಂದ ಜರ್ಝರಿತವಾಗುವುದು ಬಹಳ ವಿಷಾದದ ವಿಷಯ. ಚೈನಾ ದೇಶದಿಂದ ಹಲವು ತಿಂಗಳುಗಳಿಂದ ಬರುತ್ತಿರುವ ವರ್ತಮಾನಗಳನ್ನು ಕೇಳಿದರೆ ಚೈನಾದೇಶದ ಒಳಗಿನ ಪರಿಸ್ಥಿತಿಯು ಹೇಗಿದೆ ಎಂಬುದನ್ನು ಕಲ್ಪಿಸಲು ಕೂಡ ಸಾಧ್ಯವಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಚೈನಾದೇಶದ ರಾಷ್ಟ್ರೀಯ ಬೆಳವಣಿಗೆಯು ಬಹಳವಾಗಿ ತಡೆಕಟ್ಟಿ ಹೋಗಿರಬೇಕು. ಮತ್ತು ಅದು ಇಷ್ಟರೊಳಗೆ ಪರರಾಷ್ಟ್ರಗಳ ಅಧೀನವಾಗಿ ಹೋಗಿರದಿದ್ದರೆ, ಜಗತ್ತಿನ ಇತರ ರಾಷ್ಟ್ರಗಳೊಳಗಿನ ಪರಸ್ಪರ ಅಸೂಯೆಯೇ ಇದಕ್ಕೆ ಕಾರಣವಲ್ಲದೆ ಚೈನಾದ ಆತ್ಮರಕ್ಷಣೆಯ ಸಾಮರ್ಥ್ಯವಲ್ಲವೆಂಬುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದೇ ಇರುವ ವಿಷಯ. ಜನತೆಗೆ ಸೈನಿಕ ವ್ಯಕ್ತಿಗಳು ಧುರೀಣರಾದರೆ ಯಾವ ದೇಶದ ಪರಿಸ್ಥಿತಿಯಾದರೂ ಇದೇ ಪರಿಣಾಮಕ್ಕೆ ಬರುವುದು ಸಂಭವ. ಆದರೆ ಜಗತ್ತಿನಲ್ಲಿ ಏಕಮಾತ್ರ ವಿಶಾಲವೂ, ಶಕ್ತಿಯುಳ್ಳದೂ ಆಗಿರುವ ಈ ಆಸ್ಯಖಂಡದ ರಾಜ್ಯವು ಅಂತಃಕಲಹಗಳಿಂದಲೇ ಕ್ಷತವಿಕ್ಷತವಾಗ, ತನ್ನನ್ನೂ ಇಡೀ ಆಸ್ಯ ಖಂಡವನ್ನೂ ಪರರಾಜ್ಯದ ಆಜ್ಞಾವಾಹಕವಾಗಿ ಮಾಡಿದುದು ಚೈನಾದ ಮಟ್ಟಿಗೆ ಅಕ್ಷಮ್ಯವಾಗಿದೆ. ಚೈನಾದ ಪ್ರಬಲತೆಯಿಂದ ಆಸ್ಯ ಖಂಡದ ಗೌರವವು ಪುನಃ ಸ್ಥಾಪಿತವಾಗಬೇಕು. ಆದರೆ ಈ ಅಂತಃಕಲಹಗಳಿಂದ ಇದೆಲ್ಲಾ ಸಾಧ್ಯವಾಗುವುದು ಬಹಳ ಕಷ್ಟವಿದೆ.

ಹಿಂದೀ ಮಹಾರಾಜರ ಔದಾರ್ಯ!

ಹಿಂದೀ ಮಹಾರಾಜರಷ್ಟು ದಾಂಡಿಕರು ಇತರ ದೇಶದಲ್ಲಿ ಯಾರಾದರೂ ಇರುವರೋ ಎಂಬುದು ಸಂಶಯಕರ. ಪಶುಪ್ರಾಯವಾಗಿ, ಸ್ವಾತ್ಮಸ್ವಾರ್ಥ, ಸ್ವಾತ್ಮಗೌರವ, ಇತ್ಯಾದಿ ಪ್ರಚಂಡ ಸ್ವಾರ್ಥಕ್ಕೂ ದಂಭಕ್ಕೂ ಈ ಮಹಾರಾಜರುಗಳು ದಾಸರಾಗಿ ಹಿಂದೀ ದ್ರವ್ಯವನ್ನು, ತಮ್ಮ ಅರ್ಧ ಉಪವಾಸದ ಪ್ರಜೆಗಳ ಬೆವರಿನ ಕಾಲುವೆಯನ್ನು ಪರದೇಶದಲ್ಲಿ ಪ್ರವಹಿಸುವುದು ಅತ್ಯಂತ ಖೇದಜನಕವಾದುದಾಗಿದೆ. ಅವರ ಈ ವಿಶ್ವಂಬಲ ವರ್ತನದಲ್ಲಿ ಇನ್ನೊಂದು ಉದಾಹರಣೆಯು ಈಗ ತಾನೆ ಬಂದಿದೆ. ಫ್ರಾನ್ಸದೇಶವು ಬಡ ರಿಫ್ ಜನರ ದೇಶವನ್ನೂ ಡ್ರೂಸ ಜನರ ದೇಶವನ್ನೂ ಒಳಹಾಕಲು ಪ್ರಯತ್ನಿಸಿ ಆರ್ಥಿಕ ನಷ್ಟಗಳಲ್ಲಿ ಬಿದ್ದಿದೆ. ಇದರಿಂದ ಸರಕಾರಕ್ಕೆ ಸಾಲವಾಗಿ ಈಗ ಸಾಮಾನ್ಯ ಉಪಾಯಗಳಿಂದ ಸರಕಾರವು ತನ್ನ ವ್ಯಯವನ್ನು ಆಯಕ್ಕೆ ಸರಿಮಾಡಲಾರದಾಗಿದೆ. ಈಗ ಅದು ನೂತನ ಉಪಾಯಗಳಿಂದ ತನ್ನ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸುತ್ತದೆ. ಇದೇ ಆ ಸುಲಭಸಾಧ್ಯವಾದ ಯಾಚನೆಯ ಉಪಾಯ. ದೊಡ್ಡವರು ಬೇಡಲಿಕ್ಕೆ ಬಂದಾಗ ಧಾಂಧಿಕರು ಉದಾರರಾಗುವುದು ಮನುಷ್ಯನ ಮಾನಸಿಕತೆಯ ಲಕ್ಷಣ. ದೇಶದ ಪ್ರಜಾಹಿತಸಾಧನೆಗಾಗಿ ಮಹಾರಾಜರುಗಳ ಕೈಯಲ್ಲಿ ಕಾಸಿಲ್ಲದಿದ್ದರೂ ಇಂತಹ ಸಮಯಗಳಲ್ಲಿ ಅವರ ಧನ ಭಂಡಾರವು ತೆರೆಯುವುದು. ಅಂತೆ ಒಬ್ಬ ಮಹಾರಾಜರು ೫೦,೦೦೦ ಫ್ರಾಂಕು ಅಂದರೆ ೫೦೦೦ ರೂಪಾಯಿಯನ್ನು ಫ್ರಾನ್ಸಿಗೆ ದಾನ ಮಾಡಿರುವರು!

ಸ್ವರಾಜ್ಯಸ್ವರೂ ರಿಸ್ಪೊನ್ಸಿವ್ ಕೊ-ಒಪರೇಟರರೂ

ಗಾಂಧಿಯವರ ವಿಶ್ವಾಸಘಾತುಕತೆಯೇ ರಿಸ್ಪೊನ್ಸಿವ್ ಕೊ-ಒಪರೇಟರರ ಪಕ್ಷಸ್ಥಾಪನೆಗೆ ಮೂಲಹೇತುವಾಗಿರುವುದು ರಿಸ್ಪೊನ್ಸಿವ್ ಚಳವಳದ ವಿಷಯದಲ್ಲಿ ಸದಭಿಪ್ರಾಯವನ್ನು ಕೊಡತಕ್ಕ ವಿಷಯವಲ್ಲವೆಂಬುದನ್ನು ಎಲ್ಲರೂ ತಿಳಿದೇ ಇರುವರು. ಆದರೂ ಅದನ್ನಾದರೂ ಸ್ವೀಕರಿಸಿ ಅನುಸರಿಸುವಂತಹ ಕ್ಷುದ್ರ ದೃಷ್ಟಿಯವರು ಬೇಕಷ್ಟು ಜನರಿರುವಾಗ ಅದನ್ನು ಮಾನಿಸುವುದು ಅಗತ್ಯವೇ.

ಮಹಾರಾಷ್ಟ್ರದ ಮಟ್ಟಿಗೆ ರಿಸ್ಪೋನ್ಸಿವ್ ಕೊ-ಒಪರೇಟರರ ಪ್ರಾಬಲ್ಯವು ಸಾಕಷ್ಟಿದೆ. ಇತರ ಪ್ರಾಂತಗಳಲ್ಲಿ ಸ್ವರಾಜ್ಯ ಪಕ್ಷೀಯರೂ, ಮಹಾರಾಷ್ಟ್ರದಲ್ಲಿ ರಿಸ್ಪೋನ್ಸಿವ್ ಕೊ-ಒಪರೇಟರರೂ ಇದ್ದು, ಲಿಬರಲರಿಗೆ ಯಾವುದೊಂದು ಚುನಾವಣೆಯಲ್ಲಿಯೂ ಎಡೆ ಸಿಕ್ಕುವುದು ದುರ್ಲಭವೆಂತಾದುದರಿಂದಲೇ, ರಿಸ್ಪೋನ್ಸಿವ್ ಕೊ-ಒಪರೇಟರರ ತಗ್ಗಿದ ಮಾನಸಿಕತೆಯನ್ನು ಒಲಿಸಿ ಲಿಬರಲರು ತಮ್ಮ ಪಕ್ಷವನ್ನು ಗಟ್ಟಿಮಾಡಲೆಂದು ಮುಂಬಾಯಿ ಸ್ವರಾಜಿಸ್ಟರಲ್ಲದವರೆಲ್ಲರ ಪರಿಷತ್ತು ಜರಗಿತು. ರಿಸ್ಪೋನ್ಸಿವ್ ಕೊ-ಒಪರೇಟರರಿಗೆ ಆ ಸಮಯದಲ್ಲಿ ಉಭಯಸಂಕಟವಾಗಿದ್ದಿತು. ತಮ್ಮ ಕಾರ್ಯಕ್ರಮ—ಸರಿಯಾಗಿ ನೋಡಿದರೆ ಅದರಲ್ಲಿ ತಮ್ಮದೆನ್ನುವ ಯಾವ ಕಾರ್ಯಕ್ರಮವೂ ಇಲ್ಲ. ಪೂರ್ಣ ಲಿಬರಲರದೇ ಕಾರ್ಯಕ್ರಮ—ವನ್ನು ಸ್ವೀಕರಿಸಿದರೆಂದು ಅವರನ್ನು ಸೇರಬೇಕೆಂಬಾಸೆ; ಆದರೆ ಪೂರ್ವರೀತಿ ಹಾಸದ ಆ ವೀರಸಂಬಂಧವನ್ನು ಹೇಗೆ ಕಡಿದುಹಾಕಲೆಂಬ ಚಿಂತೆ.

ರಿಸ್ಪೋನ್ಸಿವ್ ಕೊ-ಒಪರೇಟರರ ಪ್ರತ್ಯೇಕತೆಯೊಡನೆ ಸ್ವರಾಜ್ಯ ಪಕ್ಷವು ನಿರ್ಬಲವಾಗಿಲ್ಲವೆನ್ನುವುದು ನಮ್ಮನ್ನು ನಾವೇ ಮೋಸಮಾಡಿದಂತೆಯೇ ಸರಿ. ನಾವು ಈ ಮೊದಲೇ ಇದನ್ನು ಒಪ್ಪಿಕೊಂಡಿರುವೆವು. ಅದರಲ್ಲೂ, ದೇಶದಲ್ಲಿ ದೊಡ್ಡ ಹುದ್ದೆಗಳನ್ನಲಂಕರಿಸಿದವರೂ, ಹೆಚ್ಚು ದುಡ್ಡಿನ ತ್ರಾಣ ಇರುವಂಥವರೂ ಒಟ್ಟುಗೂಡಿ ಸ್ವರಾಜಿಸ್ಟರಲ್ಲದವರ ಪರಿಷತ್ತನ್ನು ಸೇರಿಸಿ ಚುನಾವಣೆಗಳ ರಂಗವನ್ನು ಪ್ರತ್ಯೇಕಿಸಲು ಸೊಂಟಕಟ್ಟಿದದು, ಸ್ವರಾಜ್ಯಪಕ್ಷವು ಅಲಕ್ಷಿಸತಕ್ಕ ಘಟನೆಯಲ್ಲ.

ಇಂತಹ ಸಮಯದಲ್ಲಿ, ರಾಷ್ಟ್ರಕ್ಕೂ ಪಕ್ಷಕ್ಕೂ ಹಾನಿಕರವಾದ ಈ ಘಟನಾವಳಿಗಳನ್ನು ತಡಿಸಲಿಕ್ಕಾಗಿ ಮೋತಿಲಾಲ ನೆಹರುರವರು ತಮ್ಮ ಸ್ವಾರ್ಥ ಅಭಿಮಾನವನ್ನು ತೊರೆದು, ರಿಸ್ಪೊನ್ಸಿವ್ ಕೊ-ಒಪರೇಟರರನ್ನು ಕರೆಯಿಸಲು ಮಹಾತ್ಮಾ ಗಾಂಧಿಯವರನ್ನು ಕೇಳಿಕೊಂಡಿದುದು ಅವರ ನೈಜ ದೇಶಪ್ರೇಮವನ್ನು ತೋರಿಸುತ್ತಿದೆಯೆನ್ನಬೇಕು.

ಮಹಾತ್ಮಾ ಗಾಂಧಿಯವರು ಶಾಂತಿಸ್ಥಾಪಕರಾಗಿ ಸೌಹಾರ್ದವನ್ನೂ ಈ ಸಂಬಂಧದಲ್ಲಿ ಇತ್ತಂಡದವರೊಳಗೆ ಪ್ರೇರಿಸಿದುದು ಸಾಮಾನ್ಯ ವಿಷಯವಲ್ಲ. ಮಹಾತ್ಮರ ತಾಳ್ಮೆಯು ದೇಶಹಿತದ ಕಡೆಗಿನ ಅವರ ನಿರಂತರ ಯೋಚನೆಯೂ ಇದರಿಂದ ಅಭಿವ್ಯಕ್ತವಾಗುವುದು.

ಹೇಗೂ ರಾಜಿಯೊಂದಾದುದು ಅಭಿನಂದನೀಯ. ಈಗ ನಾವಿದರ ಬಾಧಕಗಳನ್ನು ಲೆಕ್ಕಿಸುವುದಿಲ್ಲ. ಇದ್ದ ಪರಿಸ್ಥಿತಿಯಲ್ಲಿ ಹೇಗೆ ಸ್ವರಾಜ್ಯಪಕ್ಷೀಯ ರಾಜಕೀಯ ಧೋರಣವನ್ನು ಮುಂದೊತ್ತಬಹುದೊ ಅಷ್ಟರ ಮಟ್ಟಿಗೆ ಮೋತಿಲಾಲ ನೆಹರುರವರು ಒಂದೇ ಚಿಂತನೆಯಿಂದ ಮಾಡಿದರು.

ನಾವು ಈ ಈ ರಾಜಿಯ ವಿಷಯವಾಗಿಯೂ, ಇದರಿಂದ ದೇಶದ ಮೇಲಾಗುವ ಪರಿಣಾಮದ ವಿಷಯವಾಗಿಯೂ ಮುಂದಿನ ಸಂಚಿಕೆಯಲ್ಲಿ ಬರೆಯುವೆವು. ಈ ರಾಜಿಯಿಂದ ರಾಜಕೀಯ ವಾಚಾಟವು ತಗ್ಗಿದುದು ಒಂದೇ ಲಾಭವೆನ್ನಬೇಕಾಗುವುದು. ಇದನ್ನು ಮುಂದಿನ ಸಂಚಿಕೆಯಲ್ಲಿ ವಾದಿಸುವೆವು.

ಅನುಕ್ರಮಣಿಕೆ.

ಅಗ್ರಲೇಖ	ಪುಟ
ಡಿಸ್ಟ್ರಿಕ್ಟ್ ಬೋರ್ಡು ಅಧ್ಯಕ್ಷರು	೬
ಕರ್ನಾಟಕ ರಂಗಭೂಮಿ.	"
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೬
ದಕ್ಷಿಣ ಕನ್ನಡ— ಬಂಟವಾಳ, ವಿಟ್ಲ, ಮಂಜೇಶ್ವರ, ಬೆಳ್ಳಾರೆ, ಕುಂಬಳೆ, ಕಾಸರಗೋಡು, ಉಳ್ಳಾಲ ಅಡುಂಬುಕುದುರು, ಬೆಲ್ಲೂರು, ಚಾಮರ್ಾಡಿ	೬–೮
ಮಂಗಳೂರು	೮
ಪತ್ರವ್ಯವಹಾರ ೧	"
ವಿವಿಧ ವಿಷಯ	"
ಸಿಡುಬು	೯
ವನಕರುಗಳ ಅಭಿವೃದ್ಧಿಗೆ ಉಪಾಯಗಳು	"
ಅಳಿಯಸಂತಾನ ಕಟ್ಟಿನ ಶುಭಾಶುಭ ಕಟ್ಟುಕಟ್ಟಳೆಗಳು	"

ಸ್ವದೇಶಾಭಿಮಾನಿ.

ಶಕ ೧೮೪೮ ನೆ. ಚೈತ್ರ ಶು। ೧೧ಯು ಶುಕ್ರವಾರ.

ಡಿಸ್ಟ್ರಿಕ್ಟ್ ಬೋರ್ಡು ಅಧ್ಯಕ್ಷರು.

ಜನತೆಯು ಸ್ವೇಚ್ಛೆಯಿಂದ ವ್ಯಕ್ತಿಗಳಿಗೆ ಅಧಿಕಾರವನ್ನು ಕೊಡುವ ಹುದ್ದೆಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಅಧ್ಯಕ್ಷತನವು ಪ್ರಮುಖವೂ ಅತ್ಯಂತ ಗೌರವ ಯುಕ್ತವೂ ಆಗಿದೆ. ಒಂದು ಕಲೆಕ್ಟರ್ ಪದವಿಯೊ, ಜಡ್ಜ್ ಪದವಿಯೊ, ಇತ್ಯಾದಿ ಪದವಿಗಳು ಆಡಳಿತೆಯ ಸಂಘಟನೆಗೆ ಅನುಗುಣವಾಗಿ, ಅಧಿಕಾರಿಗಳಿಂದ ಲಾಭವಾಗತಕ್ಕವುಗಳಾಗಿವೆ. ಇಂತಹ ನೇಮಕಗಳ ಮೇಲೆ ಜನತೆಯ ಯಾವ ಇಚ್ಛೆಯೂ ನಡೆಯುವುದಿಲ್ಲ. ಆದರೆ ಸ್ಥಳೀಕ ಸ್ವರಾಜ್ಯ ಸಂಸ್ಥೆಗಳೆಂಬ ಈ ಬೋರ್ಡುಗಳ ಅಧ್ಯಕ್ಷರಿಗೆ ಜನತೆಯ ಮೇಲೆ ಬಹಳ ಅಧಿಕಾರಗಳಿವೆ; ಮತ್ತು ಆ ಅಧಿಕಾರಿಗಳು ಜನತೆಯಿಂದಲೇ ಬರತಕ್ಕವುಗಳಾಗಿವೆ.

ಜನತೆಗೇ ಮೇಲಿನ ಅಧಿಕಾರಗಳನ್ನು ಜನತೆಯೇ ಕೊಡುವ ಈ ಅಧಿಕಾರ ದಾನದ ಮಹತ್ವವು ಜನತೆಯು ಎಷ್ಟು ವ್ಯಕ್ತಿಗಳಿಗೆ ತಿಳಿದಿರಬಹುದೆಂಬುದು ಹೇಳಲಾಗುವುದಿಲ್ಲ. ನಮ್ಮ ಮುಂದಿನ ಸಾರ್ವಜನಿಕ ಸುಖಕಷ್ಟಗಳೂ, ಸೌಕರ್ಯಗಳೂ ಸಾಧಿಸಬೇಕಾದ ಈ ಅಧಿಕಾರಸ್ಥಾನವನ್ನು ಒಬ್ಬನೇ ವ್ಯಕ್ತಿಯ ಅಧೀನವಾಗಿ ಮಾಡುವಾಗ, ಕೂಡಲೇ ನಾವೂ ಆ ವ್ಯಕ್ತಿಯ ಅಧೀನರಾಗುತ್ತೇವೆ ಎಂಬುದನ್ನು ನಾವು ತಿಳಿದು, ನಮ್ಮ ಅಧೀನತೆಯು ಯಾವ ವ್ಯಕ್ತಿಯ ಕೈಕೆಳಗೆ ಸುರಕ್ಷಿತವಾಗುವುದೆಂಬುದೊಂದು ಯೋಚನೆ ಮಾತ್ರವೇ ಈ ಅಧಿಕಾರ ದಾನದ ಸಮಯದಲ್ಲಿ ನಮ್ಮಲ್ಲಿ ಪ್ರಾಮುಖ್ಯತೆಯನ್ನು ತಾಳಬೇಕು.

ಈ ಅಧ್ಯಕ್ಷಸ್ಥಾನಗಳಿಗೆ ಅಷ್ಟು ಅಧಿಕಾರವಿದ್ದುದರಿಂದಲೇ ಅನೇಕರಿಗೆ ಇವುಗಳ ಮೇಲೆ ಲೋಭವಾಗುತ್ತದೆ. ಮತ್ತು ಇವುಗಳಿಗಾಗಿ ಅನೇಕರೊಳಗೆ ಸ್ಪರ್ಧೆಯುಂಟಾಗಿ ದುಡ್ಡಿನ ವ್ಯಯವು ಬಹಳವಾಗಿ ಆಗುತ್ತಿದೆ. ಇವುಗಳನ್ನು ಹೊಂದಲಿಕ್ಕಾಗಿ ಅತ್ಯಂತ ಗಾಢವಾದ ತಂತ್ರಗಳೂ ನಡೆಯುತ್ತಿವೆ. ಕಟ್ಟಕಡೆಗೆ, ಒಂದೊಂದು ಬಾರಿ ಇವು ಕೋರ್ಟು ವ್ಯಾಜ್ಯಗಳಲ್ಲಿಯೂ ಪರ್ಯವಸಾನವನ್ನು ಹೊಂದುತ್ತವೆ.

ಪ್ರಕೃತ ನಮ್ಮ ವಿಚಾರವು ನಮ್ಮ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷಸ್ಥಾನದ ವಿಷಯವಾಗಿದೆ. ಈ ಅಧ್ಯಕ್ಷಸ್ಥಾನವನ್ನು ಅನೇಕ ವರ್ಷಗಳಿಂದ ಶ್ರೀಯುತ ಎನ್. ಸುಬ್ಬರಾಯರೇ ಅಲಂಕರಿಸಿದ್ದರು. ಕಳೆದ ಶನಿವಾರ ದಿವಸ ಪುನಃ ಚುನಾವಣೆ ನಡೆದು ಈಗ ಈ ಗೌರವದ ಸ್ಥಾನವನ್ನು ಮಹಾಬಲ ಹೆಗ್ಗಡೆಯವರು ಹೊಂದಿರುವರು.

ನಿವೃತ್ತರಾಗುವ ಅಧ್ಯಕ್ಷರ ಆಡಳಿತೆಯ ವಿಚಾರದಲ್ಲಿ ಕೆಲವು ವಿಮರ್ಶೆಗಳನ್ನು ಬರೆಯುವುದು ಸ್ಥಳೀಕ ಪತ್ರಿಕೆಗಳ ಕರ್ತವ್ಯವಿದೆ. ಆ ವಿಷಯವಾಗಿ ನಾವಾದರೂ ಕೆಲವು ವಿಚಾರಗಳನ್ನು ಬರೆಯುವವರಿರುವೆವು. ಸಂಕ್ಷೇಪತಃ ಮಾಜಿ ಅಧ್ಯಕ್ಷರ ಆಡಳಿತ ಕ್ರಮವು ಅಷ್ಟೊಂದು ವಿಶಾಲವೂ, ಉದಾರವೂ ಇರಲಿಲ್ಲವೆನ್ನಲೇಬೇಕಾಗುವುದು. ಅವರ ಕೈಕೆಳಗೆ ನಮ್ಮ ಜಿಲ್ಲೆಯು ಪ್ರಯೋಜನವನ್ನು ಹೊಂದಿಲ್ಲವೆಂದು ಹೇಳಬರುವುದಿಲ್ಲ. ಆದರೆ ಅವರು ಹೆಚ್ಚು ಉದಾರಭಾವನೆಯಿಂದ ನಡೆಸಿದ್ದಾದರೆ ಅವರ ಆಡಳಿತವು ಜನತೆಗೆ ಹೆಚ್ಚು ಪ್ರಯೋಜನಕಾರಿಯಾಗುತ್ತಿದ್ದಿತು. ಇಂತಹ ಮಹಾಗೌರವದ ಸ್ಥಾನದಲ್ಲಿ ವ್ಯಕ್ತಿಯು ಅತ್ಯಂತ ಜಾಗ್ರತೆಯಿಂದ ವರ್ತಿಸಬೇಕಾಗುತ್ತದೆ. ಈ ಅಧಿಕಾರದಲ್ಲಿರುವ ವ್ಯಕ್ತಿಯು ಜನತೆಯ ಬಗ್ಗೆ ಸದಾಕಾಲ ಚಿಂತಿತನಿದ್ದು, ಜನತೆಯ ಏಳಿಗೆಗಾಗಿ ಅವಿಶ್ರಾಂತವಾಗಿ ಕೆಲಸ ಮಾಡತಕ್ಕದಿದೆ. ಏಕೆಂದರೆ ಈ ಸ್ಥಾನವು ಜನತೆಯ ದಾನದಿಂದ ಬರತಕ್ಕದು; ಜನತೆಯು ಒಂದು ಸರ್ತಿ ಒಬ್ಬ ವ್ಯಕ್ತಿಯನ್ನು ತಮ್ಮ ಭಾಗ್ಯವಿಧಾತನಾಗಿ ನೇಮಿಸಿದ ಮೇಲೆ ಪ್ರತಿ ದಿವಸವೂ ಆ ವ್ಯಕ್ತಿಯ ಶಕ್ತಿಯನ್ನು ಅಳೆಯುವುದು.

ಮಾಜಿ ಅಧ್ಯಕ್ಷರು ಜನತೆಯ ಹಿತದ ಬಗ್ಗೆ, ಅವರ ಅಭಿವೃದ್ಧಿಯ ಬಗ್ಗೆ, ಮತ್ತು ಅವರ ಸೌಕರ್ಯಗಳ ಬಗ್ಗೆ ಸಾಕಷ್ಟು ಪ್ರಯತ್ನಗಳನ್ನು ಮಾಡಿರುವರಾಗಿ ಹೇಳಬರುವುದಿಲ್ಲ. ಪರಂತು ಜನತೆಗೆ ಬಾಧಕ ತಟ್ಟುವ ರೀತಿಯಲ್ಲಿ ವರ್ತಿಸಿಲ್ಲವೆಂಬುದೇ ಅವರ ಪರವಾಗಿ ಹೇಳಲಿರುವ ಪ್ರಶಂಸೆಯ ಮಾತಾಗಿದೆ.

ರಾ। ಮಹಾಬಲ ಹೆಗ್ಗಡೆಯವರ ಚುನಾವಣೆಯೊಡನೆ ಡಿಸ್ಟ್ರಿಕ್ಟ್ ಬೋರ್ಡಿನ ಮೇಲೆ ಸಂಪೂರ್ಣ ಪರಿವರ್ತನವು ಉಂಟಾಗಲು ಕಾರಣವಿದೆ. ರಾ। ಮಹಾಬಲ ಹೆಗ್ಗಡೆಯವರು ಹೊಸತಾಗಿ ಈ ಅಧಿಕಾರವನ್ನು ಪಡೆಯುವವರಾಗಿರುವರು. ಜಿಲ್ಲೆಯ ಸೌಕರ್ಯಗಳ ಬಗ್ಗೆ ಹೆಚ್ಚು ಉತ್ಸಾಹವುಳ್ಳವರಾಗಿರುವರೆಂದೂ ತೋರುವುದು. ಪ್ರಾಯಶಃ ರಾ। ಹೆಗ್ಗಡೆಯವರಿಂದ ಜನತೆಯು ಅನೇಕ ಸುಧಾರಣೆಗಳನ್ನು ಆಶಿಸಬಹುದು.

ರಾ। ಮಹಾಬಲ ಹೆಗ್ಗಡೆಯವರು ಬ್ರಾಹ್ಮಣೇತರರು. ಬ್ರಾಹ್ಮಣೇತರರ ಪರವಾಗಿ ಮದ್ರಾಸ ಕೌನ್ಸಿಲಿಗೆ ಚುನಾಯಿಸಲ್ಪಟ್ಟಿದ್ದರು. ಆ ಮೇಲೆ ಜಸ್ಟೀಸ್ ಪಕ್ಷದ ಸಹಾನುಭೂತಿಯಿಂದ ಪಬ್ಲಿಕ್ ಪ್ರೊಸಿಕ್ಯೂಟರ್ ಪದವಿಯನ್ನು ಹೊಂದಿದ್ದರು, ಮತ್ತು ಆ ಕಾರಣದಿಂದ ತಮ್ಮ ಕೌನ್ಸಿಲರ್ ಪದವಿಯನ್ನು ಕಳೆದುಕೊಂಡು ಅವರು ಪುನಃ ಚುನಾವಣೆಗೆ ನಿಂತು ಪರಾಜಯ ಹೊಂದಿದ್ದರು.

ಈ ಹಿಂದಿನ ಘಟನೆಗಳಿಂದ ರಾ। ಹೆಗ್ಗಡೆಯವರು ಜಸ್ಟಿಸ್ ಪಕ್ಷದ ವಿಷಮಯ ಸ್ವಾರ್ಥಕ್ಕೆ ಬಲಿಬಿದ್ದು ಈ ಜಿಲ್ಲೆಯಲ್ಲಿ ಸಾಧಾರಣವಾಗಿ ಚೆನ್ನಾಗಿ ಘಟ್ಟಿಯಿರುವ ಸೌಹಾರ್ದವನ್ನು ಒಡೆಯುವರೊ ಎಂದು ಅನೇಕರು ಅನುಮಾನಪಡಬಹುದು. ಆದರೆ ಅಧ್ಯಕ್ಷಚುನಾವಣೆಯೇ ಈ ವಿಷಯದಲ್ಲಿ ರಾ। ಹೆಗ್ಗಡೆಯವರಿಗೆ ಪಾಠ ಕೊಟ್ಟು, ಜಸ್ಟೀಸ್ ಪಾರ್ಟಿಯ ಪ್ರತ್ಯೇಕತೆಯ ಕಾರ್ಯಕ್ರಮದ ಬಾಧಕವನ್ನು ತೋರಿಸಿಕೊಟ್ಟಿರಬೇಕು. ಆದುದರಿಂದ ರಾ। ಹೆಗ್ಗಡೆಯವರು ತಮ್ಮ ಈ ಗೌರವಲಾಭವನ್ನು ಜಾತೀಯತೆಯ ಸ್ವಾರ್ಥಸಾಧನೆಯ ವಿಜಯಕ್ಕಿಂತಲೂ, ಅಂತರ್ಜಾತೀಯ ಸೌಹಾರ್ದ ಪ್ರಕಟಣೆಯ ವಿಜಯವೆಂದು ತಿಳಿಯುವರಾಗಿ ನಾವು ನೆನಸುವೆವು.

ಮದ್ರಾಸ ಪ್ರಾಂತದ ಇತರ ಭಾಗಗಳಲ್ಲಿ ಹೇಗಿದ್ದರೂ, ನಮ್ಮ ಜಿಲ್ಲೆಯಲ್ಲಿ ಜಸ್ಟೀಸ ಪಕ್ಷದ ಸೂತ್ರಗಳ ಪ್ರಚಾರವು ಅಗತ್ಯವಿದೆಯೆಂದು ತೋರುವುದಿಲ್ಲ. ಇಲ್ಲಿಯ ಬ್ರಾಹ್ಮಣ ಬ್ರಾಹ್ಮಣೇತರರೊಳಗಿನ ಸಂಬಂಧವು ಇತರ ಭಾಗಗಳಿಗಿಂತ ಎಷ್ಟೊ ಮೇಲಾಗಿ ಇದೆ. ಇದರಿಂದ ಬ್ರಾಹ್ಮಣರಾಗಲಿ ಬ್ರಾಹ್ಮಣೇತರರ ಜಾತೀಯ ಸಾಧನೆಗಳು ನಡೆಯುವುದಿಲ್ಲವೆಂದು ಹೇಳಲಾಗುವುದಿಲ್ಲ. ಚುನಾವಣೆಗಳಲ್ಲಿ ವ್ಯಕ್ತಿಗಳ ಸಾಧನೆಗಳಲ್ಲಿ ಮತದಾರರ ಜಾತೀಯತೆಯ ಭಾವನೆಯನ್ನು ಹುರಿಗೊಳಿಸುವುದು ಅತ್ಯಂತ ಮುಖ್ಯವಾದುದಾಗಿದೆ. ಅಂತಹ ಸಾಧನೆಗಳ ಫಲವಾಗಿ ಆಗಾಗ ಚುನಾವಣೆಗಳಲ್ಲಿ ಜಾತೀಯತೆಯ ಭಾವನೆಗಳು ಬಂದಿದ್ದಿರಬಹುದು. ಆದರೆ ದಕ್ಷಿಣ ಕನ್ನಡದ ಜನತೆಯ ಮನಸ್ಸು ಹೆಚ್ಚು ಸೌಹಾರ್ದವುಳ್ಳದೂ, ವಿಶಾಲವಾದುದೂ ಎಂದು ನಮ್ಮ ಅಭಿಪ್ರಾಯವಿದೆ. ಬ್ರಾಹ್ಮಣರು ಬ್ರಾಹ್ಮಣೇತರರೊಡನೆಯೂ, ಬ್ರಾಹ್ಮಣೇತರರು ಬ್ರಾಹ್ಮಣರೊಡನೆಯೂ ಸಮಾನತೆಯ ಭಾವದಿಂದ ವರ್ತಿಸುವರು. ಆದುದರಿಂದ ಜಸ್ಟೀಸ ಪಕ್ಷದತತ್ವಪ್ರಕಾಶದ ಆವಶ್ಯಕತೆಯು, ನಮ್ಮ ಜಿಲ್ಲೆಯ ಜನತೆಯ ಹಿತದ ದೃಷ್ಟಿಯಲ್ಲಿ ಮಾತ್ರವಲ್ಲ ಬ್ರಾಹ್ಮಣೇತರರ ಹಿತದ ದೃಷ್ಟಿಯಲ್ಲಿ ಯಾದರೂ ಆವಶ್ಯಕವಿರದು.

ಇನ್ನು ಬೋರ್ಡು ಆಡಳಿತದ ವಿಚಾರವಾಗಿ ಆಲೋಚಿಸುವುದಾದರೆ ರಾ। ಮಹಾಬಲ ಹೆಗ್ಗಡೆಯವರು ಅನನುಭವಸ್ಥರು ಎಂದು ಹೇಳಬರುವುದಿಲ್ಲ. ಅವರು ಡಿಸ್ಟ್ರಿಕ್ಟ ಬೋರ್ಡಿನ ಉಪಾಧ್ಯಕ್ಷರಾಗಿ ಹಲವು ಸಮಯದಿಂದಿದ್ದರು. ಡಿಸ್ಟ್ರಿಕ್ಟ ಬೋರ್ಡಿನ ಕೆಲಸಗಳ ವಿಷಯವಾಗಿ ಹೆಚ್ಚು ಪರಿಜ್ಞಾನವಿದ್ದಿರಬೇಕು. ಆದುದರಿಂದ ಅವರು ಪೂರ್ವಜ್ಞಾನದಿಂದಲೇ ತಮ್ಮ ಈ ಅಧಿಕಾರವನ್ನು ಕೈಕೊಳ್ಳುವರಾಗಿರುವರು. ಆದುದರಿಂದ ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಇವರ ಕೈಕೆಳಗೆ ಹಲವು ಸುಧಾರಣೆಗಳನ್ನು ಆಶಿಸಬಹುದಾಗಿದೆ.

ಕರ್ನಾಟಕ ರಂಗಭೂಮಿ.

(ಲೇಖಾಂಕ ೧).

ಸಾರ್ವಜನಿಕ ವಿದ್ಯಾಭ್ಯಾಸಕ್ಕೆ ರಂಗಭೂಮಿಯು ಅತ್ಯಂತ ಪರಿಣಾಮಕಾರಿಯಾದ ಉಪಾಯವಾಗಿದೆ. ಜನರಿಗೆ ಮನೋರಂಜನೆಯನ್ನುಂಟುಮಾಡುತ್ತಾ, ಅದೇ ಸಮಯದಲ್ಲಿ ಅವರೊಳಗೆ ನಾಟಕದ ಕಥೆಗನುಸಾರವಾಗಿ ಭಾವವಿಕಾರಗಳನ್ನುಂಟುಮಾಡಿ, ಜನರಲ್ಲಿ ಸ್ಥಿರವಾದ ಕೆಲವು, ಒಳ್ಳೇಯದಾಗಲಿ, ಕೆಟ್ಟದಾಗಲಿ ಆದರ್ಶವನ್ನು ಚೆನ್ನಾಗಿ ಅಂಕಿಸುವುದಕ್ಕೆ ರಂಗಭೂಮಿಗೆ ಸರಿಯಾದ ಬೇರೊಂದು ವಿದ್ಯಾಸಂಸ್ಥೆಯಿರುವುದಿಲ್ಲ. ಇತರ ವಿದ್ಯಾಸಂಸ್ಥೆಗಳು ನಮ್ಮ ತರ್ಕಬುದ್ಧಿಯನ್ನು ತರಬೇತು ಮಾಡುವಂತಹವುಗಳಾಗಿವೆ. ಇಂತಹ ವಿದ್ಯಾಸಂಸ್ಥೆಗಳಿಂದ ಎಷ್ಟಾದರೂ ಸಾಕಷ್ಟು ಕಾರ್ಯಕಾರಿ ಪರಿಜ್ಞಾನವು ಉಂಟಾಗುವುದಿಲ್ಲ. ಇವುಗಳಿಂದ ಆರ್ಜಿಸಿದ ವಿದ್ಯೆಯೊಂದಿಗೆ ಲೋಕಾನುಭವವು ಜೀವನ ಸಾರ್ಥಕತೆಗೆ ಬೇಕಾಗುತ್ತದೆ. ರಂಗಭೂಮಿಯಲ್ಲಿ ವಿದ್ಯಾಭ್ಯಾಸವೂ ಲೋಕಾನುಭವವೂ ಏಕ ಕಾಲದಲ್ಲಿ ಉಂಟಾಗುತ್ತದೆ.

ಆದುದರಿಂದ ಜನತೆಯ ಅಭಿವೃದ್ಧಿಯಲ್ಲಿ ಈ ರಂಗಭೂಮಿಗಳು ಕಾರ್ಯಕಾರಿಯಾದ ಸಂಸ್ಥೆಗಳಾಗಿರುವುವು. ಈ ಕಾರಣದಿಂದಲೇ ಇವುಗಳ ಪರಿಸ್ಥಿತಿಯ ಬಗ್ಗೆ, ಇವುಗಳ ಊನತೆಗಳ ಕಡೆಗೆ, ಮತ್ತು ಇವುಗಳ ಸುಧಾರಣೆಗಾಗಿ, ಎಲ್ಲರೂ ಹೆಚ್ಚು ಲಕ್ಷ್ಯಕೊಡುವುದು ಅವಶ್ಯವಿದೆ. ಇವುಗಳ ಪರಿಣಾಮವು ಆ ಬಾಲ ವೃದ್ಧವನಿತೆಯರ ಮೇಲೆ ಉಂಟಾಗುವಷ್ಟು ವಿಶಾಲವಿದ್ದುದರಿಂದಲಾದರೂ ಸಾರ್ವಜನಿಕ ಅಭಿಪ್ರಾಯವೂ, ಪ್ರೋತ್ಸಾಹದ ಕ್ರಮವೂ, ವಿಮರ್ಶೆಯ ದೃಷ್ಟಿಯೂ, ತರಬೇತಾಗುವುದು ಅವಶ್ಯವಿದೆ.

ನಾಟಕವು ನಾಗರಿಕತೆಯ ಲಕ್ಷಣದ ಒಂದು ಪ್ರಮುಖ ಕಲೆಯಾಗಿದೆ. ಇದನ್ನು ಪೂರ್ವದ ಸಂಸ್ಕೃತ ಪಂಡಿತರು ಒಂದು ವಿಜ್ಞಾನದ ರೂಪದಲ್ಲಿಯೇ ಪರಿಗಣಿಸಿ, ಅದಕ್ಕೆ ತಕ್ಕುದಾದ ಶಾಸ್ತ್ರವನ್ನು ರಚಿಸಿರುವರು.

ಈಗಿನ ನಾಟಕಗಳು ಆ ಪೂರ್ವದ ಶಾಸ್ತ್ರಗಳಿಗೆ ಸರಿಯಾಗಿ ಆಗಲಿ, ಈಗಿನ ನಾಗರಿಕತೆಯ ವಿಚಾರಗಳಿಗೆ ಯೋಗ್ಯವಾಗಿ ಆಗಲಿ, ನಾಟಕಗಳ ಪ್ರಾಮುಖ್ಯತೆಯನ್ನು ತಿಳಿದುಕೊಂಡಂತಾಗಿಯಾಗಲಿ, ಜನತೆಯ ವಿದ್ಯಾಭ್ಯಾಸದ ಕಡೆಗಿನ ಜವಾಬ್ದಾರಿಯನ್ನು ಪಡೆದಾಗಲಿ, ಅಭಿನಯಿಸಲ್ಪಡುವುದಿಲ್ಲ. ಈಗಿನ ನಾಗರಿಕತೆಯ ಒಂದು ಲಕ್ಷಣವೆಂದರೆ ಪ್ರಚಂಡ ಧನಸ್ವಾರ್ಥ. ಇಷ್ಟರ ಮಟ್ಟಿಗೆ ಈಗಿನ ನಾಟಕಗಳು ಈಗಿನ ನಾಗರಿಕತೆಯನ್ನು ಲಕ್ಷಿಸಿವೆ. ಆದರೆ ಅಭಿನಯದ ಪ್ರಾವೀಣ್ಯ, ಪಾತ್ರಗಳ ಯುಕ್ತಾಯುಕ್ತತೆ, ಘಟನೆಗಳ ಉಚ್ಚತೆ ಮತ್ತು ಮಾತುಗಳ ಪಾವಿತ್ರ್ಯ ಇವುಗಳಿಗೆ ಸರಿಯಾದ ಪ್ರಾಮುಖ್ಯತೆಯು ಈಗಿನ ನಾಟಕಗಳಲ್ಲಿ ಇರುವುದು ಬಹಳ ಕಡಿಮೆ.

ಕರ್ನಾಟಕ ಪತ್ರಿಕೆಗಳೂ, ಕರ್ನಾಟಕದ ಧುರೀಣರೂ, ಕರ್ನಾಟಕದ ಜನತೆಯೂ, ಕರ್ನಾಟಕ ಜನಾಂಗ ರಚಯಿಕವಾದ ಈ ರಂಗಭೂಮಿಯ ಪಾವಿತ್ರ್ಯದ ಕಡೆಗೂ ಸಾಫಲ್ಯದ ಕಡೆಗೂ ಹೆಚ್ಚಿನ ಲಕ್ಷ್ಯಕೊಡುವುದು ಅವಶ್ಯಕವಿದೆ. ನಾಟಕಾಭಿನಯಗಳಿಂದ ಹೇಗೆ ಜನತೆಗೆ ವಿಶೇಷ ವಿದ್ಯಾಲಾಭವಾಗಿ ಕೊಡಬಹುದೊ ಹಾಗೆಯೇ ಅದರಿಂದ ಪ್ರಚಂಡ ಹಾನಿಯನ್ನೂ ಮಾಡಿಕೊಡಬಹುದು. ಕಾರ್ಯತಃ, ಜನತೆಯ ರುಚಿಯು ಬೆಳೆಯದಿದ್ದುದರಿಂದಲೂ, ನಾಟಕ ವ್ಯವಸ್ಥಾಪಕರು ಜನರನ್ನು ಆಕರ್ಷಿಸುವುದನ್ನೇ ಹೆಚ್ಚು ಪ್ರಯತ್ನಿಸುವುದರಿಂದಲೂ, ನಾಟಕಗಳ ಪ್ರಯೋಜನಕ್ಕಿಂತ ಅದರಿಂದಾಗುವ ಹಾನಿಯೇ ಹೆಚ್ಚಾಗಿ ಬಂದಿದೆ.

ಇತರ ದೇಶಗಳ ಮತ್ತು ಇತರ ಭಾಷೆಗಳ ರಂಗಭೂಮಿಯ ಅನುಭವವನ್ನು ನಾವು ಹೆಚ್ಚು ಹೇಳಲಾರೆವು, ಆದರೆ ಕರ್ನಾಟಕ ರಂಗಭೂಮಿಯನ್ನು ಆದರ್ಶದ ದೃಷ್ಟ್ಯಾ ಪರಿಶೀಲಿಸಿ, ಕರ್ನಾಟಕ ರಂಗಭೂಮಿಯು ಆದರ್ಶವನ್ನು ಬಿಟ್ಟು ಎಷ್ಟು ಕೆಳಗಿಳಿದಿದೆ ಎಂಬುದನ್ನು ತೋರಿಸಿ, ಹೇಗೆ ಯಾವ ಆದರ್ಶವನ್ನು ಅದು ಅನುಸರಿಸಬಹುದೆಂಬುದನ್ನು ತೋರಿಸಬೇಕೆಂಬುದು ನಮ್ಮ ಪ್ರಕೃತದ ಇಚ್ಛೆಯಾಗಿದೆ. ನಮ್ಮ ಲೇಖವು ಯಾವುದೊಂದು ಪ್ರತ್ಯೇಕ ನಾಟಕಾಭಿನಯಗಳನ್ನು ಅನ್ವಯಿಸದೆ ಸರ್ವಸಾಮಾನ್ಯ ವಿಷಯಗಳನ್ನು ಮಾತ್ರವೇ ಲಕ್ಷಿಸಿ ಸಾಮಾನ್ಯ ಸೂಚನೆಗಳನ್ನು ಕೊಡುವುದಾಗಿದೆ.

ಯಾವ ನಾಟಕ ಮಂಡಳಿಗಳೂ ನಾಟಕದ ಆದರ್ಶಗಳನ್ನು ಅನುಸರಿಸಲಾರವು ಎಂಬುದನ್ನು ನಾವು ಬಲ್ಲೆವು. ಹಾಗೆ ಅನುಸರಿಸಬೇಕೆಂಬ ವತ್ತಾಯವೂ ನಮ್ಮದಲ್ಲ. ನಾಟಕ ವ್ಯವಸ್ಥಾಪಕರಿಗೆ ಧನದ ಜವಾಬ್ದಾರಿಯು ದೊಡ್ಡದಿದೆ. ಆದುದರಿಂದ ಜನತೆಯ ಪ್ರೋತ್ಸಾಹವನ್ನೇ ಅವರು ಯಾವಾಗಲೂ ನಿರೀಕ್ಷಿಸಬೇಕಾಗಿದೆ. ಫಲತಃ ಜನತೆಯ ಮೇಲೆ ನಾಟಕ ಕರ್ತೃಗಳು ತಮ್ಮ ಆದರ್ಶಗಳನ್ನು ಹೊರಿಸುವುದಕ್ಕಿಂತಲೂ ಜನಸಾಮಾನ್ಯತೆಯ ರುಚಿಯೇ ನಾಟಕ ವ್ಯವಸ್ಥಾಪಕರ ಮೇಲೆ ಹೊರಿಸಲ್ಪಡುತ್ತಿದೆ.

ಕರ್ನಾಟಕ ರಂಗಭೂಮಿಯ ಪ್ರೇಕ್ಷಕ ವರ್ಗವೂ ಕಲಾಭಿಜ್ಞತೆಯಿಂದಾಗಲಿ, ವಿಜ್ಞಾನದ ರುಚಿಯಿಂದಾಗಲಿ ಬರುವುದಕ್ಕಿಂತಲೂ, ಬರೇ ರಸವಿಕಾರದ ಮನೋಭಾವಗಳಿಂದಲೇ ಬರುವುದು ಹೆಚ್ಚು. ಆದುದರಿಂದ ಪ್ರೇಕ್ಷಕರ ನಾಟಕ ಕಲೆಯ ಪರಿಜ್ಞಾನವೂ ನಾಟಕದ ಆದರ್ಶದ ಕಡೆಗಿನ ಸುಧಾರಣೆಯೂ ಏಕಕಾಲದಲ್ಲಿ ಉಂಟಾಗಬೇಕಾಗಿದೆ. ಆದರೆ ನಾಟಕ ವ್ಯವಸ್ಥಾಪಕರ ಪರಿಶ್ರಮದಿಂದಲೂ, ನಿಶ್ಚಿತ ಧೋರಣದಿಂದಲೂ, ನಾಟಕದ ಆದರ್ಶವನ್ನು ಜನತೆಯ ರುಚಿಯ ಸ್ವಲ್ಪ ಮುಂದಾಗಿಟ್ಟು, ಜನತೆಯ ರುಚಿಯು ಅಭಿವರ್ಧಿಸಬಹುದು. ಆ ಆದರ್ಶವಾವುದು, ಅದನ್ನು ಹೇಗೆ ಸಾಧಿಸಬಹುದು, ಎಂಬುದನ್ನು ನಾವು ಕ್ರಮಶಃ ಈ ಲೇಖಗಳಲ್ಲಿ ಚರ್ಚಿಸಲಿರುವೆವು.

ವಿದೇಶ ವರ್ತಮಾನ.

— ರೀಫ್ ಯುದ್ಧವು ಕೊನೆಗಾಣುತ್ತಾ ಬರುತ್ತಿದೆ. ಅನೇಕ ಮಂದಿ ಪಂಗಡೀಯರು ಶರಣಾಗತರಾಗಿರುವರು.

— ಗ್ರೀಸ್ ದೇಶದ ಹೊಸ ಪ್ರೆಸಿಡೆಂಟರಾದ ಜನರಲ್ ಪೆಂಗಲೋಸ್ ರವರು ತಮ್ಮ ಕೆಲಸವನ್ನು ತಾ. ೧೮ಕ್ಕೆ ವಹಿಸಿಕೊಡುವರು. ಇವರು ಕೂಡಲೆ, ಎಲ್ಲಾ ರಾಜದ್ರೋಹಿಗಳನ್ನೂ, ಪತ್ರಿಕಾಕರ್ತರನ್ನೂ, ಸೆರೆಯಿಂದ ಬಿಡಬೇಕೆಂದು ಅಪ್ಪಣೆ ಕೊಟ್ಟಿರುವರು.

— ಇಂಡಿಯದ ವೈಸರೋಯಿಯವರಾದ ಲೋರ್ಡ ರೆಡಿಂಗರವರು ಎಪ್ರಿಲ್ ೧೭ಕ್ಕೆ ಲಂಡನಿಗೆ ತಲಪಿದರು.

ಹೌಸ್ ಒಫ್ ಕೋಮನ್ಸಿನ ಕನ್‍ಸರವೇಟಿವ್ ಮೆಂಬರರಲ್ಲಿ ಕೆಲವರು ಯುದ್ಧದ ನಂತರ ರಷ್ಯ ದೇಶದ ಸ್ಥಿತಿಯು ಹೇಗಿದೆ ಎಂಬದನ್ನು ತಿಳುಕೊಳ್ಳಲು ೧೭ನೇ ತಾರೀಕಿಗೆ ಹೊರಟಿರುವರು.

— ಲಂಕಶಯರಿನ ೧೦೦ ಗಿರಣಿಗಳ ಮಾಲೀಕರು ತಮ್ಮ ಕಂಪೆನಿಗಳ ವಸ್ತ್ರ ಮತ್ತು ನೂಲು ನಷ್ಟವಾಗದಂತೆ ಮಾರುವ ರೀತಿಯಲ್ಲಿ ಜಾಗ್ರತೆ ತೆಗೆದುಕೊಳ್ಳಲಿಕ್ಕೆ ಒಂದು ಸಂಘವನ್ನು ಏರ್ಪಡಿಸಿರುವರು.

— ಪರ್ಶಿಯದ ಅಫೀಮಿನ ಬೆಳೆಯ ವಿಷಯ ತನಿಖೆ ಮಾಡುವಿಕ್ಕೆ ಹೋದ ಲೀಗ್ ಒಫ್ ನೇಶನಿನ ಕಮಿಶನಿನವರು ಪರ್ಶಿಯಕ್ಕೆ ಹೋಗಿ ತನ್ನಿಖೆ ಮಾಡುತ್ತಾ ಇರುವಾಗ ಶಿರಾಜದಲ್ಲಿದ್ದ ಅವರ ಮನೆಯು ಬೆಂಕಿಯಿಂದ ಸುಟ್ಟು ಹೋಗಿ ಸಾಮಾನೆಲ್ಲವೂ ನಷ್ಟವಾಗಿ ಹೋಯಿತಂತೆ. ಆದರೆ ಪ್ರಾಣಹಾನಿಯಾಗಲಿಲ್ಲವಂತೆ.

— ಇಂಗ್ಲೆಂಡಿನ ಇಬ್ಬರು ವೈಮಾನಿಕರು ಏರೋಪ್ಲೇನಿನಲ್ಲಿ ಕೂತು ಬೆಲ್ಜಿಯನ ದೇಶದಲ್ಲಿ ಸಂಚರಿಸುವಾಗ, ವಿಮಾನವು ಒಡದು ಮರಣ ಹೊಂದಿದರು.

— ಈಜಿಪ್ತ ದೇಶದ ಕೌನ್ಸಿಲಿನ ಹೊಸ ಚುನಾವಣೆಯಲ್ಲಿ ಜಗಲುಲ್ ಕಡೆಯಿಂದ ೧೫೫ ಮಂದಿ ಚುನಾಯಿಸಲ್ಪಟ್ಟಿರುವರು.

— ಒಸ್ಟ್ರಿಯ ಮತ್ತು ಪೋಲೆಂಡಿಗೆ ಒಪ್ಪಂದದ ಕರಾರಾಯಿತು.

— ಲಂಡನಿನಲ್ಲಿ ಇಂಗ್ಲೆಂಡ ಸ್ಕೊಟಲಂಡ್ ಮತ್ತು ವೇಲ್ಸ ದೇಶದ ಕೂಲಿಕಾರರ ಕಡೆಯಿಂದ ಸುಮಾರು ೩೦ ಸಾವಿರ ಮಂದಿ ಹೆಂಗಸರ ಒಂದು ಸಭೆಯು ಲಂಡನ್ ಪಟ್ಟಣದ ಅಲ್ಬರ್ಟ ಹೋಲಿನ ಹತ್ತಿರ ಕೂಡಿತ್ತು. ಇಲ್ಲಿ ಅವರ ಸಂಘಕ್ಕಾಗಿ ೬೦೦೦ ಪೌಂಡು ವಂತಿಗೆ ಮಾಡಿ ಅವರ ಸಂಘದ ಮುಖ್ಯಸ್ಥಳಾದ ಲೇಡಿ ಮೊರಿಯಲ್‌ಗೋರ್ ಬ್ರೌನ್ ಎಂಬ ಹೆಂಗಸಿನ ವಶಕ್ಕೆ ಕೊಟ್ಟರು. ಇವರು ಕೈಗಳಲ್ಲಿ ಧ್ವಜಪತಾಕೆಗಳನ್ನು ಹಿಡಕೊಂಡು ಹಾಡುತ್ತಾ ಬ್ಯಾಂಡುವಾಲಗದೊಡನೆ ಬಂದಿದ್ದರು. ನೊರ್ಥಂಬ್ರಿಯದ ೭೩ ವರ್ಷ ಪ್ರಾಯದ ಒಂದು ಮೊಗೆರ ಹೆಂಗಸು ೫ ಮೈಲು ನಡಕೊಂಡು ಲಂಡನಿಗೆ ಬಂದಿದ್ದಳು. ಕೂಲಿಕಾರರು ಸ್ಟ್ರೈಕ್ ಮಾಡಬಾರದೆಂದು ಬೋಧಿಸುವದೇ ಹೆಂಗಸರ ಮುಖ್ಯ ಉದ್ದೇಶ.

— ಮೆಡಿಟರೇನಿಯನ್ ಸಮುದ್ರದ ಸುತ್ತಲೂ ಇರುವ ರಾಜ್ಯಗಳಲ್ಲಿ ಯುದ್ಧದ ಮೋಡಗಳು ಕಂಡುಬರುತ್ತವೆ. ಇಟಲಿ ದೇಶದವರು ಗ್ರೀಸ್ ದೇಶದವರಿಗಾಗಿ ಯುದ್ಧ ಸಾಮಗ್ರಿಗಳನ್ನು ತಯಾರಿಸಿ ಕೊಡುತ್ತಾರಂತೆ. ತುರ್ಕಿಯಲ್ಲಿ ಯುದ್ಧಕ್ಕಾಗಿ ಸೈನ್ಯವನ್ನು ಕೂಡಿಸುತ್ತಾರಂತೆ.

— ದಕ್ಷಿಣ ಆಫ್ರಿಕದ ಹಿಂದೂ ಜನರ ಸ್ಥಿತಿಯನ್ನು ವಿಚಾರಿಸಲಿಕ್ಕೆ ಹೋದ ಕಮಿಶನಿನವರು ಮೇ ೧೫ನೇ ತಾರೀಕಿಗೆ ಮುಂಬಾಯಿಗೆ ಬರುವರು.

— ಇಂಡಿಯದಲ್ಲಿ ಯಾವ ತರದ ಮಿಲಿಟರಿ ಕೊಲೆಜುಗಳನ್ನು ಇಡಬೇಕೆಂದು ಈಗ ಕೆನಡದಲ್ಲಿ ಸಂಚರಿಸುವ ಸ್ಕೀನ್ ಕಮಿಟಿಯವರು ಯುನೈಟೆಡ್ ಸ್ಟೇಟಿನಲ್ಲಿರುವ ಬಹಳ ದೊಡ್ಡದಾದ ವೆಸ್ಟ್‌ಪೊಯಿಂಟ್ ಮಿಲಿಟರಿ ಎಕೆಡಮಿಯನ್ನು ಸಂದರ್ಶಿಸುವರಂತೆ.

— ಬೆಲ್ಜಿಯಮಿನ ಅರಸರು ಎವರೆಸ್ಟ ಶಿಖರವನ್ನು ಹತ್ತಲು ಪ್ರಯತ್ನಿಸಿದ ಲೆಫ್ಟಿನೆಂಟ ಕರ್ನಲ್ ಸ್ರಟರಿಗೆ ಒಂದು ಬಂಗಾರದ ಮೆಡ್ಲನ್ನು ಕೊಟ್ಟರು.

— ಚೀನಾ ದೇಶದಲ್ಲಿ ಮುಖ್ಯ ಮಂತ್ರಿಯವರಾದ ಚೆಹುಚಿ ಎಂಬವರು ತನ್ನ ಹುದ್ದೆಗೆ ರಾಜಿನಾಮೆ ಕೊಟ್ಟಿರುವರು. ಚೆಂಗ್ ಎಂಬವರು ಹೊಸ ಮಂತ್ರಿಗಳಾಗಿರುವರು. ರಾಜಧಾನಿಯಾದ ಪೆಕಿಂಗಿನಲ್ಲಿ ಯಾವ ತರದ ಗಲಾಟೆಗಳೂ ಆಗದಂತೆ ಮೊದಲಿನ ೬ ಮಂದಿ ಮಂತ್ರಿಗಳು ಮುಂಜಾಗ್ರತೆಯನ್ನು ತೆಗೆದುಕೊಳ್ಳುತ್ತಿರುವರು.

— ಪೆಸಿಫಿಕ್ ಸಾಗರದಲ್ಲಿರುವ ಹವ್ಯಾ ದ್ವೀಪದಲ್ಲಿ ಹೂವಾಲೋವಾ ಎಂಬ ಗ್ರಾಮದಲ್ಲಿ ಒಂದು ಜ್ವಾಲಾಮುಖಿಯು ಕಾದುಕರಗಿದ ಲೋಹ ಪ್ರವಾಹಗಳನ್ನು ಕಾರಲಾರಂಭಿಸಿ ಆ ಗ್ರಾಮದ ೧೮ ಮೈಲು ಸುತ್ತುವಲಯದಲ್ಲಿ ಮುಚ್ಚಿಕೊಂಡಿತು. ಕಾನಾ ಎಂಬ ಸ್ಥಳದಲ್ಲಿ ೫೦ ಅಡಿ ಲಾವ ಎಂಬ ಕರಗಿದ ಪದಾರ್ಥವು ಮನೆಗಳ ಮೇಲೆ ಬಿದ್ದು ಮನೆಗಳು ಅದರಲ್ಲಿ ಹೂತು ಹೋಗಿವೆ. ಕಾದುಕರಗಿದ ಬಂಡೆಗಳು ಸಮುದ್ರದಲ್ಲಿ ಬಿದ್ದು ಕೆಲವು ನೂರು ಅಡಿಗಳ ವರೇಗೆ ಸಮುದ್ರದ ನೀರು ಕುದಿಯುತ್ತಲಿದೆ. ಈ ದ್ವೀಪದ ಮೇಲ್ಗಡೆ ಆಕಾಶದಲ್ಲಿ ಹೊಗೆಯು ತುಂಬಿಕೊಂಡಿದೆ. ಮೂರು ಸಾವಿರ ಅಡಿಗಳ ಮೇಲೆ ಆಕಾಶದಲ್ಲಿ ನಿಂತು ಫೋಟೊ ತೆಗೆದರು. ಅಷ್ಟು ಎತ್ತರದಲ್ಲಿಯೂ ವಾಯುವು ಬಹಳ ಬಿಸಿಯಾಗಿತ್ತಂತೆ. ಈ ಲಾವಾದ ಬಣ್ಣದಿಂದ ಆಕಾಶದಲ್ಲಿ ವಿಚಿತ್ರ ತರದ ಬಣ್ಣಗಳು ಕಂಡುಬರುತ್ತಿದ್ದವು. ಈ ಸಮಯದಲ್ಲಿ ಆ ದ್ವೀಪದ ವೃದ್ಧರು "ಪೆಲಿ" ಎಂಬ ಕುಲದೇವತೆಯ ಸ್ತೋತ್ರ ಮಾಡುತ್ತಾ ಇದ್ದರಂತೆ.

— ಚೀನಾದೇಶದಲ್ಲಿ ಕೆಂಟೋನಿಂದ ಶಾಂಗಾಹಾಯಿಗೆ ವಿಮಾನದಲ್ಲಿ ಹಾರಿಹೋಗಿ ಬೊಟವಿಡ್ ಎಂಬ ಡೇನ್ ವೈಮಾನಿಕನು ಕಾಣುವುದಿಲ್ಲವಂತೆ.

ಒಳದೇಶ ವರ್ತಮಾನ.

— ಮೊನ್ನೆ ಹಾಸಿ ಕಲ್ಕತ್ತದಲ್ಲಿ ನಡೆದ ಹಿಂದೂ ಮುಸಲ್ಮಾನರ ಕಲಹದ ಸಮ್ಮಂಧ ಅನೇಕರನ್ನು ಕೈದುಮಾಡಿದರಷ್ಟೇ, ಆ ಪೈಕಿ ೬೫ ಜನರನ್ನು, ದಾರಿಯಲ್ಲಿ ಐದಕ್ಕಿಂತ ಹೆಚ್ಚು ಜನರು ಸೇರಬಾರದೆಂಬ ಕಾಯಿದೆಯನ್ನು ಉಲ್ಲಂಘಿಸಿದಕ್ಕಾಗಿ ಎಚ್ಚರಿಕೆಹೇಳಿ ಬಿಟ್ಟರು. ಈ ೬೫ ಮಂದಿಗಳಲ್ಲಿ, ಹಿಂದುಗಳೂ, ಮುಸಲ್ಮಾನರೂ, ಮಾರ್ವಾರಿಗಳೂ, ಬಂಗಾಲಿಗಳೂ ಮತ್ತು ಕಾಬೂಲಿಗಳೂ ಇದ್ದರು. ಪೋಲಿಸ್ ಆಕ್ಟಿನ ೫೫ನೇ ಕಲಮಿನ ಪ್ರಕಾರ ಬಂಧಿಸಲ್ಪಟ್ಟ ೨೧ ಮಂದಿಗಳನ್ನು ೧೫ ದಿವಸ ಮತ್ತು ೧ ತಿಂಗಳ ಶಿಕ್ಷೆಗೆ ಗುರಿಪಡಿಸಿದರು. ದೊಂಬಿಯನ್ನು ಮಾಡಿದ ೨೪ ಜನರನ್ನು ದಸ್ತಗಿರಿ ಮಾಡಿ ೧೦೦ ರೂಪಾಯಿಯ ಜಾಮೀನು ತೆಗೆದುಕೊಂಡು ಬಂಧವಿಮೋಚನೆ ಮಾಡಿದರು. ಮನೆ ಅಂಗಡಿಗಳನ್ನು ಸೂರೆಮಾಡಿದವರ ವಿಚಾರಣೆಯು ಮುಂದರಿಸಿ ಇಡಲಾಗಿದೆ.

— ಕಹಾಬಾದಿನಲ್ಲಿ ಒಬ್ಬ ಮುಸಲ್ಮಾನನಿಗೂ ಒಬ್ಬ ಹಿಂದುವಿಗೂ ವಿಶೇಷವಾದ ಜಗಳ ಆಗುತ್ತಿತ್ತು. ಆಗ ಲೋಕಕಂಟಕರಾದ ಕೆಲವರು ಮತದ್ವೇಷವನ್ನು ಉಂಟುಮಾಡಿ ದೊಂಬಿಯನ್ನು ಮಾಡಿದ ಬಗ್ಗೆ ಅಲ್ಲಸಲ್ಲದ ವಾರ್ತೆಯನ್ನು ಊರಲ್ಲೆಲ್ಲಾ ಹಬ್ಬಿಸಿದರು. ಮರುದಿವಸ ಕೆಲ ಮಂದಿ ಅಂಗಡಿಗಾರರು ಹೆದರಿ ತೆರೆದ ಅಂಗಡಿಗಳನ್ನು ಮುಚ್ಚಿ ಪಲಾಯನ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಲೆಕ್ಟರರು ಆಯುಧಪಾಣಿಗಳಾದ ಪೋಲೀಸರೊಡನೆ ಜಗಳವಾದ ಸ್ಥಳಕ್ಕೆ ಬಂದು ಕಲಹವಾಗುವ ಚಿಹ್ನೆಗಳನ್ನು ನಿರ್ಮೂಲಮಾಡಿದರು. ಈಗ ಶಾಂತತೆಗೆ ಬಂದಿರುವುದು.

— ಲಾಲಾಲಜಪತರಾಯರು ವಿಲಾಯಿತಿಗೆ ಪ್ರಯಾಣ ಬೆಳಸುವ ಮುಂದಿನ ದಿನ ಒಬ್ಬ ಪ್ರೆಸ್ಸಿನ ಪ್ರತಿಥಿಯು ಅವರು ಬಂಗಾಲದ ಕೊಂಗ್ರೆಸ್ಸು ಕಮಿಟಿಯ ಕಾರ್ಯಕಾರಿ ಕಮಿಟಿಯಿಂದ ಹೊರಬರಲು ಕಾರಣವೇನೆಂದು ಕೇಳಲು ಅವರು ಉತ್ತರ ಕೊಡಲು ನಿರಾಕರಿಸಿರುವರು.

— ಮಹಾತ್ಮಾ ಗಾಂಧಿಗಳವರು ನೋನ್‌ಕೋಅಪರೇಶನನ್ನು ಮೊದಲನೇ ಸಲ ಪ್ರಚಾರಮಾಡಿದ್ದಾಗ್ಗೆ, ಮದ್ರಾಸಿನಲ್ಲಿ ೧೫ ವರಷ ಪ್ರಾಯದ ಒಬ್ಬ ಹುಡುಗನು ಇಂಗ್ಲಿಷು ಶಾಲೆಗಳಿಗೆ ಬಹಿಷ್ಕಾರ ಹಾಕಿ ತನ್ನ ತಾಯಿತಂದೆಗಳನ್ನು ತೊಲಗಿ ಬಂಗಾಲಿಗೆ ಹೋದನು. ಬಂಗಾಳದಲ್ಲಿ ಈ ಹುಡುಗನು ಸುಮಾರು ೫ ವರ್ಷ ನಿಂತು ತನ್ನ ವಿದ್ಯಾಭ್ಯಾಸವನ್ನು ಮುಂದರಿಸಿ ಈಗ ಮದ್ರಾಸಿಗೆ ಬಂದಿರುವನು. ಇವನು ಈಗ ತನ್ನ ಮಾತೃಭಾಷೆಯನ್ನು ಮರೆತಿರುವನು. ಮತ್ತು ತಾಯಿತಂದೆಗಳ ಮನೆ ಎಲ್ಲಿರುವುದು ಎಂದು ಸಹ ಹುಡುಕಲು ಅಶಕ್ತನಾಗಿ ಮದ್ರಾಸಿನ ಎಸ್. ಸಿಂಗರೆವಲುರವರಿಂದ ತಾನು ಬಂದಿರುವೆನೆಂದು ವರ್ತಮಾನಪತ್ರಿಕೆಗಳಲ್ಲಿ ಬಹಿರಂಗಮಾಡಿರುವನು. ಅವನು ಚೆನ್ನಾಗಿ ಬಂಗಾಲಿಯನ್ನು ಆಡುತ್ತಾನೆ. ಇದೀಗ ಸೋಜಿಗ ಸಮಾಚಾರವು.

— ರಂಗೂನಿನಲ್ಲಿ ಒಬ್ಬ ಮಾಂಸ ವ್ಯಾಪಾರಿಯನ್ನು ಯಾರೋ ದುರಾತ್ಮರು ಕೊಂದುಹಾಕಿರುವರು.

— ಲಾಹೋರಿನ ಸರಕಾರದವರು ಒಳ್ಳೇ ಶ್ರದ್ಧೆಯಿಂದ ಕೆಲಸ ಮಾಡುತ್ತಿರುವರು. ಇಲ್ಲಿಯ ಕೊಓಪರೇಟಿವ್ ಬೇಂಕ್ ಮುಂತಾದ ಸ್ಥಳೀಕ ಸಂಸ್ಥೆಗಳ ಮೂಲಕ ದೇಶದ ಆರ್ಥಿಕ ಸ್ಥಿತಿಯನ್ನು ಬಹಳ ಅಭಿವೃದ್ಧಿ ಸ್ಥಿತಿಗೆ ತಂದಿರುವರು. ಇತ್ತಲಾಗೆ ಅಲ್ಲಿಯ ಡೆಪ್ಯುಟಿ ಕಮಿಶನರರವರು ಊರಿನವರನ್ನು ಒಟ್ಟುಗೂಡಿಸಿ ಮದುವೆಯ ಮತ್ತು ಉತ್ತರಕ್ರಿಯೆಗಳ ಖರ್ಚನ್ನು ಕಡಿಮೆಮಾಡಬೇಕೆಂದು ಭಾಷಣಕೊಟ್ಟಿರುವರು. ಈ ಮೇರೆಗೆ ಊರಿನ ಒಬ್ಬ ಶ್ರೀಮಂತನು ತನ್ನ ಎರಡನೇ ವಿವಾಹವನ್ನು ಕೇವಲ ಐದು ರೂಪಾಯಿಯೊಳಗೆ ತೀರಿಸಿರುವನು!

— ಮಹಾತ್ಮಾ ಗಾಂಧಿಗಳ ಆರೋಗ್ಯ ಸ್ವಲ್ಪ ಮಟ್ಟಿಗೆ ಕುಂದಿದನ್ನು ಶೇಟ ಜಮನಾಲಾಲ್ ಬಜಾಜರು ಅವರನ್ನು ಮುಸ್ಸೋರಿನಲ್ಲಿ ಕೆಲವು ಸಮಯ ವಸತಿ ಮಾಡುವ ಬಗ್ಗೆ ಕೇಳಿಕೊಂಡಿದ್ದರು. ಈಗ ಗಾಂಧಿಗಳ ಆರೋಗ್ಯವು ವೃದ್ಧಿಗೆ ಬಂದಿರುವುದರಿಂದ ಮುಸ್ಸೋರಿನ ಪ್ರಯಾಣವನ್ನು ನಿರಸ್ತು ಮಾಡಿರುವರು.

— ಅಲಿಪುರದಲ್ಲಿ ಕೆಲವು ಸಮಯದಿಂದ ದರೋಡೆ ಕಳ್ಳರ ಉಪಟಳಗಳು ಹೆಚ್ಚಾಗುತ್ತಲಿವೆ. ಕಳೆದ ವಾರ ಕೆಲವು ಮಂದಿ ಜನರು ಸ್ವಲ್ಪ ಆಭರಣಗಳನ್ನು ವಿಕ್ರಯಮಾಡುವುದಕ್ಕೆ ಒಬ್ಬ ಅಕ್ಕಸಾಲಿಗನಲ್ಲಿಗೆ ಹೋದರು. ಅಲ್ಲಿ ಅವರನ್ನು ಸಂಶಯದಿಂದ ಕೈದುಮಾಡಿದರು. ಅನಂತರ ಇವರ ವಿಚಾರಣೆ ಮಾಡಿದಾಗ, ಇವರು ಅನೇಕ ತಿಂಗಳಿಂದ ದರೋಡೆ ಮಾಡುವ ಕಳ್ಳರ ಸಂಘದವರೆಂದು ಗೊತ್ತಾಗಿರುವುದು. ಇವರಲ್ಲಿ ೩೦ ಮಂದಿಯನ್ನು ಸೆರೆಹಿಡಿದಿರುವರು. ಇವರ ಮನೆಗಳಲ್ಲಿಯೂ ಹೌರದಲ್ಲಿ ಕಳವು ಮಾಡಿದ ಅನೇಕ ಚಿನ್ನಾಭರಣಗಳು ಸಿಕ್ಕಿದವು.

— ಸ್ವರಾಜ್ಯ ಪಾರ್ಟಿಯವರನ್ನೂ ಮತ್ತು ರಿಸ್ಪೋನ್ಸಿವ್ ಪಾರ್ಟಿಯವರನ್ನೂ ಏಕೀಕರಿಸುವುದಕ್ಕಾಗಿ ಮಹಾತ್ಮಾ ಗಾಂಧಿಗಳವರು ಸಬರಮತಿಯಲ್ಲಿ ಒಂದು ಕೊನ್ಪರೆನ್ಸನ್ನು ನಡಸಬೇಕೆಂದು ಶ್ರೀ। ಪಂಡಿತ ಮೋತಿಲಾಲ ನೆಹರುರೊಡನೆ ಕೇಳಿಕೊಂಡಿದ್ದರು. ಇದಕ್ಕೆ ಉಭಯತರರೂ ಒಪ್ಪಿದುದರಿಂದ ಕಳೆದ ತಾ. ೨೧ಕ್ಕೆ ಕೊನ್ಪರೆನ್ಸು ನಡೆದಿರುವುದು.

— ಸೌತ್ ಇಂಡಿಯನ್ ರೈಲುವೇ ಪ್ರಯಾಣ ಮಾಡುವ ಸೀಜನ್ ಟಿಕೇಟುಗಳ ದರವು ಬರುವ ಮೇ ತಿಂಗಳ ೧ನೇ ತಾರೀಕಿನಿಂದ ಕಡಿಮೆ ಮಾಡಲ್ಪಡುವದು.

— ಸತ್ಯಮಂಗಲದಲ್ಲಿ ನಡೆದ ದಂಗೆಯಲ್ಲಿ ೧೬ ಮಂದಿಯನ್ನು ಕೈದುಮಾಡಿ ಕಪಿಸ್ಥಳದಲ್ಲಿ ಸೆರೆಯಲ್ಲಿಟ್ಟಿರುತ್ತಾರೆ.

— ಬ್ರಿಟಿಷ್ ಟ್ರೇಡ್ ಯೂನಿಯನಿನ ಪ್ರತಿನಿಧಿಗಳು ಇಂಡಿಯದಲ್ಲಿರುವ ಮುಂಬಾಯಿ, ಮದರಾಸು, ಕಲ್ಕತ್ತಾ ಮುಂತಾದ ಕೈಗಾರಿಕೆಯ ಮಧ್ಯಸ್ಥಳಗಳನ್ನು ಸಂಚರಿಸಿ ನೋಡಲಿಕ್ಕೆ ಬೇಗನೆ ಬರುವರಂತೆ.

— ಮದರಾಸಿನ ಜೋರ್ಜ ಟೌನಿನಲ್ಲಿ ಮುತ್ಯೆ ಮುದಲೀ ಸ್ಟ್ರೀಟಿನಲ್ಲಿ ಒಂದು ಮೊಟಾರು ಕಾರಿಗೆ ಬೆಂಕಿ ಹಿಡಿದು ಸುಟ್ಟುಹೋಯಿತು. ರಾತ್ರೆಯಲ್ಲಿ ಪೆಟ್ರೋಲನ್ನು ಬೆಂಕಿಯಲ್ಲಿ ಹೊಯ್ದು ಪೆಟ್ರೋಲ್ ಸಾಕಷ್ಟು ಇದೆಯೊ ಎಂದು ಡ್ರ್ಯಾವರನು ದೀಪಹಿಡಿದು ನೋಡುವಾಗ ಪೆಟ್ರೋಲಿಗೆ ಬೆಂಕಿ ಹಿಡಿಯಿತು. ಒಂದು ನಿಮಿಷದಲ್ಲಿ ಇಡೀ ಕಾರಿಗೆ ಬೆಂಕಿ ಹಿಡಿಯಿತು. ಡ್ರ್ಯಾವರನ ಒಂದು ಕೈ ಸುಟ್ಟುಹೋಗಿಯದೆ, ಮೋಟಾರಿನಲ್ಲಿ ಕೂತುಕೊಂಡಾಗ ಬೀಡಿ ಸಿಗರೇಟು ಮುಂತಾದವನ್ನು ಸೇದುವದು ಪ್ರಾಣಹಾನಿಕರವಾಗಿದೆ.

— ಪಂಜಾಬಿನ ಕಾಂಗ್ರಾ ವೆಲ್ಲಿಯಲ್ಲಿ ಒಂದು ರೈಲು ಮಾರ್ಗವನ್ನು ತೆರೆಯುವುದಕ್ಕಾಗಿ ಬರುವ ಮೇ ತಿಂಗಳ ೩ನೇ ತಾರೀಕಿನ ಬೆಳಗ್ಗೆ ಸಮಾರಂಭವು ಪಂಜಾಬ ಗವರ್ನರರಿಂದ ಮಾಡಲ್ಪಡುವದು.

— ಮಕ್ಕಕ್ಕೆ ಯಾತ್ರಿಕರಾಗಿ ಹೊರಟವರಲ್ಲಿ ೬೦೪ ಮಂದಿ ಯಾತ್ರಿಕರು 'ಜಾಯೂನಿ' ಎಂಬ ಹಡಗದಲ್ಲಿಯೂ, ೩೦೪ ಮಂದಿ 'ಗೋರ್ಜಸ್ತಾನ್' ಎಂಬ ಹಡಗದಲ್ಲಿಯೂ ಮುಂಬಾಯಿಯಿಂದ ಎಪ್ರಿಲ್ ೧೯ಕ್ಕೆ ಹೊರಟಿರುವರು. ಇವರಲ್ಲಿ ೧೦೦ ಮಂದಿ ಜಾವಾ ಮುಸಲ್ಮಾನ ಯಾತ್ರಿಕರಾಗಿರುತ್ತಾರೆ.

— ರಂಗೂನಿನ ಬೊಂಬೆ ಲ್ಯಾಫ್ ಇನ್ಶೂರೆನ್ಸ ಕಂಪೆನಿಯ ಮುಖ್ಯ ಏಜಂಟನು ರೂಪಾಯಿ ನಾಲ್ಕು ಸಾವಿರ ದುರುಪಯೋಗಮಾಡಿದನೆಂದು ೯ ತಿಂಗಳ ಶಿಕ್ಷೆಯಾಯಿತು.

— ಮುಂಬಾಯಿ ಬಂದರದಿಂದ ಒಂದು ಹಾಯಿ ಹಡಗದಲ್ಲಿ ಕಳ್ಳತನದಿಂದ ಅಫೀಮನ್ನು ರಂಗೂನಿಗೆ ಒಯ್ಯುವಾಗ ಮುಂಬಾಯಿ ಕಸ್ಟಮ್ ಅಧಿಕಾರಿಗಳು ಹಡಗವನ್ನು ಶೋಧಿಸಿದಾಗ ಅಫೀಮಿನ ನಾಲ್ಕು ಉಂಡೆಗಳು ಸಿಕ್ಕಿದವು. ಇವರಿಗೆ ೬೦೦ ರೂಪಾಯಿ ಜುಲುಮಾನೆಯಾಯಿತು.

— ಬಿಹಾರಿನ ಗವರ್ನರರು ರಾಂಚಿಗೆ ಹೋಗಿರುವರು.

— ಎವರೆಸ್ಟ ಪರ್ವತವನ್ನು ಹತ್ತುವದರಲ್ಲಿ ಸಾಹಸಪಟ್ಟ ಜನರಲ್ ಬ್ರೂಸ್ ಎಂಬವರು ಈಗ ಸ್ವಿಟ್ಸರ್ಲಿನಲ್ಲಿ ಇರುವರು. ಇವರು ಮೇ ೧೯ಕ್ಕೆ ಇಂಗ್ಲೆಂಡಿಗೆ ತೆರಳುವರು.

— ಸ್ಪೆಯಿನ್ ದೇಶದಿಂದ ಇಂಡಿಯಕ್ಕೆ ಸಂಚಾರ ಮಾಡಲಿಕ್ಕೆ ಬಂದ ವೈಮಾನಿಕರು ಆಗ್ರಾಪಟ್ಟಣವನ್ನು ನೋಡಿ ಕಲ್ಕತ್ತಕ್ಕೆ ಬಂದಿರುವರು. ಇವರು ಎಪ್ರಿಲ್ ೫ನೇ ತಾರೀಕಿಗೆ ಸ್ಪೆಯಿನ್ ದೇಶದ ರಾಜಧಾನಿಯಾದ ಮೆಡ್‍ರಿಡ್‍ನಿಂದ ಹೊರಟು ಎಲ್‍ಜೀರಸ್, ಟ್ರಿಪೊಲಿ ಬೆಂಗಾಸಿ, ಕಾಯಿರೊ ಬಗದಾದ್, ಬಂದರ್ ಎಬ್ಬಾಸ್, ಕರಾಚಿ, ಆಗ್ರಾ, ಅಲ್ಲಿಂದ ಕಲ್ಕತ್ತದಿಂದ ಡವ್‌ಡವಿಗೆ ಎಪ್ರಿಲ್ ೧೮ಕ್ಕೆ ಬಂದಿರುವರು. ಎಪ್ರಿಲ್ ೨೦ಕ್ಕೆ ಕಲ್ಕತ್ತದಿಂದ ಹೊರಟು ರಂಗೂನು, ಬೆಂಕೊಕ್ ಅಲ್ಲಿ ಸಾಯಿಗೊನ್ ಹೊಂಗ್‍ಕೊಂಗ್ ಹೋಗಿ ಅಲ್ಲಿಂದ ಫಿಲಿಪ್ಪಾನ್ ದ್ವೀಪದಲ್ಲಿರುವ ಮನಿಲಕ್ಕೆ ಹೋಗುವರಂತೆ.

— ರಂಗೂನಿನಲ್ಲಿ ರಾತ್ರೆ ಎಂಟು ಗಂಟೆಗೆ ಎರಡು ಮೋಟರು ಸ್ಯಾಕಲು ಎದುರೆದುರಾಗಿ ಬರುವಾಗ ಒಂದಕ್ಕೊಂದು ತಾಗಿ ಒಂದು ಸ್ಯಾಕಲಿನವರು ಕಠಿಣ ಗಾಯಪಡದು ಮರುದಿನ ಆಸ್ಪತ್ರೆಯಲ್ಲಿ ಸತ್ತನು. ಇನ್ನೊಂದು ಸ್ಯಾಕಲಿಗೆ ಸ್ಯಾಡ್‍ಕಾರ್ ಇತ್ತಂತೆ ಅದರಲ್ಲಿ ಒಂದು ಮಗುವಿನೊಡನೆ ಕೂತಿದ್ದ ಒಂದು ಬರ್ಮ ಹೆಂಗಸಿಗೆ ಸ್ವಲ್ಪ ಮಾತ್ರವೇ ಪೆಟ್ಟುತಾಗಿಯದಂತೆ.

— ಮುಂಬಾಯಿಯ ಪೋಲಿಸ್ ಲೋಕಪ್ಪಿನಿಂದ ಬಾಬು ಬೆನ್ನಾವಾಲಾ ಎಂಬ ದರೋಡೆಕಳ್ಳನು ತಪ್ಪಿಸಿಕೊಂಡು ಹೋಗುವಾಗ ಪೋಲಿಸಿನವರು ಜಾಗ್ರತೆ ತೆಗೆದುಕೊಳ್ಳದೆ ಇದ್ದುದಕ್ಕಾಗಿ ಒಬ್ಬ ಹೆಡ್ ಕೊನಿಸ್ಟೇಬಲನನ್ನೂ, ಮೂವರು ಪೋಲಿಸಿನವರನ್ನೂ ಮುಂಬಾಯಿಯ ಪೋಲಿಸ್ ಕಮಿಶನಿನವರು ಡಿಸ್‍ಮಿಸ್ ಮಾಡಿರುವರು.

— ರಂಗೂನ ಪಟ್ಟಣದ ಪಶ್ಚಿಮ ಭಾಗದಲ್ಲಿ ಜೂರುಟಿನ ವ್ಯಾಪಾರ ಮಾಡುತ್ತಿದ್ದ ಒಬ್ಬ ವ್ಯಾಪಾರಿಯು ಇದ್ದನು. ಇವನು ಮದುಕನು; ಇವನ ಹೆಂಡತಿ, ಮಗಳು ಮತ್ತು ಅಳಿಯನು ನ್ಯೂರ್‍ತಿಲ ಎಂಬ ಪಟ್ಟಣಕ್ಕೆ ಹೋಗಿದ್ದರು. ಒಬ್ಬ ಮೇಸ್ತ್ರಿಯು ಮಾಸ್ತ್ರ ಕೆಲಸಕ್ಕೆ ಸಿಕ್ಕಿದ್ದನು. ಮರುದಿವಸ ಬೆಳಗ್ಗೆ ಈ ಕೆಲಸವನ್ನು ತನ್ನ ಮನೆಯಿಂದ ಬರುವಾಗ ಮನೆಯ ಬಾಗಲು ತೆರೆದಿತ್ತು; ಒಳಗಿಯ ಬಾಗಲೂ ತೆರೆದಿತ್ತು. ಇವನು ಒಳಗೆ ಹೋಗುವಾಗ ಈ ಬ್ರಾಹ್ಮಣನನ್ನು ಕೊಚ್ಚಿ ಕೊಚ್ಚಿ ಕೊಂದುಹಾಕಿರುವುದನ್ನು ಕಂಡನು. ಟ್ರೆಜರಿಯ ಬೀಗದ ಕೈಗಳು ರಕ್ತದಲ್ಲಿ ಮುಳುಗಿದ್ದವು. ಅದರಲ್ಲಿದ್ದ ಹಣ ಚಿನ್ನಾಭರಣಗಳೆಲ್ಲವೂ ಕದ್ದುಹೋಗಿದ್ದವು. ತನಿಖೆ ನಡಿಯುತ್ತಲಿದೆ.

— ನೀಲಗಿರಿಯ ಪ್ಯಾಕಾರಾ ಹೈಡ್ರೊ ಇಲೆಕ್ಟ್ರಿಕ್ ಸ್ಕೀಮ್ ಕೆಲಸವು ಪ್ರಾರಂಭವಾಗಿ ಮದರಾಸು ಗವರ್ನರರು ಇದೇ ೧೯ನೇ ತಾರೀಕಿನಲ್ಲಿ ಬುನಾದಿ ಕಲ್ಲನ್ನು ಹಾಕಿರುವರು.

— ಅಮೃತಸರದಿಂದ ಲಾಹೋರ ಖಜಾನೆಗೆ ಕೊಂಡುಹೋಗುವಾಗ ದಾರಿಯಲ್ಲಿ ಕಳವಾದ ೬೦ ಸಾವಿರ ರೂಪಾಯಿ ನೋಟುಗಳು ಒಂದೇ ಗಂಟಿನಿಂದ ಸಿಕ್ಕಿವೆಯಂತೆ. ಕಳ್ಳರನ್ನು ಹಿಡಿದು ತನಿಖೆಯು ನಡಿಯುತ್ತದೆ.

— ತಂಜಾವೂರು ಜಿಲ್ಲೆಯ ತಿರುಲಂಪೂರು ಎಂಬಲ್ಲಿ ಮಹಮ್ಮದಿಯರೊಳಗೆ ದೊಡ್ಡ ಜಗಳವಾಯಿತು. ಈ ಗ್ರಾಮದಲ್ಲಿರುವ ಮಹಮ್ಮದಿಯರೊಳಗೆ ಎರಡು ತಂಡಗಳಾಗಿದ್ದವು. ಕಳೆದ ಆದಿತ್ಯವಾರ ಈ ಎರಡು ತಂಡಗಳೊಳಗೆ ಜಗಳವಾಯಿತು. ಬಡವರಿಗೆ ಹಂಚಲಿಕ್ಕೆ ತಯಾರಿಸಿದ ಗಂಜಿಯನ್ನು ಕೆರೆಗೆ ಬಿಸಾಡಿದ್ದೇ ಇದಕ್ಕೆ ಕಾರಣವಂತೆ. ಇದರಲ್ಲಿ ಪೆಟ್ಟಾಗಿ ಇಬ್ಬರು ಮರಣ ಹೊಂದಿದರು ಮತ್ತು ಅನೇಕರು ಗಾಯಹೊಂದಿ ಆಸ್ಪತ್ರೆಯಲ್ಲಿರುವರು.

— ಪಂಜಾಬಿನ ದಿನಾನಗರ, ಮುಜಾಫರನಗರ, ಲ್ಯಾಲಪುರ, ಸ್ಯಾಲಕೋಟ್, ಫಿರೋಜಪುರ, ಭಿವಾನಿ, ಮುಲ್ತಾನ, ಅಮೃತಸರ, ಕರ್ನಾಲ, ಹಿಸ್ಸಾರ ಮುಂತಾದ ಊರುಗಳಲ್ಲಿಯೂ ಜಿಲ್ಲೆಗಳಲ್ಲಿಯೂ ಪ್ಲೇಗಿನ ಹಾವಳಿಯು ಬಹಳ ಹೆಚ್ಚಾಗಿಯದೆ.

ದಕ್ಷಿಣ ಕನ್ನಡ.

ಬಂಟವಾಳ:— ಇಲ್ಲಿಯ ಸಬ್ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಸುಳ್ಳೆರಿಯಲ್ಲಿ ತನ್ನ ಹೆಂಡತಿಯನ್ನು ತಿವಿದುಕೊಂದ ಐತಪ್ಪ ಶೆಟ್ಟಿಯ ನಂಬ್ರವು ತನಖೆಯಾಗಿ ಅವನನ್ನು ಸಬ್ ಮೆಜಿಸ್ಟ್ರೇಟರು ಸೆಶ್ಶನಿಗೆ ಕಮಿಟ್ ಮಾಡಿದರು.

ಪೇಟೆಯಲ್ಲಿ ಸಂಚರಿಸುವ ಜನಸಮೂಹವು ಹೆಚ್ಚಾಗಿರುವದರಿಂದ ಗಾಡಿಗಳನ್ನೂ ಬ್ಯಾಸಿಕಲುಗಳನ್ನೂ ಮೋಟಾರುಕಾರುಗಳನ್ನೂ ತಮ್ಮ ಬಲದಿಕ್ಕಿನಿಂದಲೆ ಕೊಂಡುಹೋಗಬೇಕೆಂತಲೂ, ೫ ಮೈಲಿಗಿಂತ ಹೆಚ್ಚು ವೇಗದಿಂದ ಓಡಿಸಕೂಡದೆಂತಲೂ ಇಲ್ಲಿಯ ಪೋಲಿಸ್ ಅಧಿಕಾರಿಗಳು ತಿಳಿಸಿರುವರು. ರಾತ್ರಿ ವೇಳೆಯಲ್ಲಿ ಸುಮಾರು ಹತ್ತು ಹನ್ನೆರಡು ಘಂಟೆಯ ವರೆಗೆ ಮಾರ್ಗದಲ್ಲಿ ಏನೊಂದು ಕೆಲಸವಿಲ್ಲದೆ ಸುಮ್ಮನೆ ಸ್ಯಾಕಲುಗಳನ್ನು ಓಡಿಸುವ ಪದ್ಧತಿ ಮತ್ತು ರಾತ್ರಿ ಸಮಯದಲ್ಲಿ ಮಾರ್ಗದಲ್ಲಿಯೇ ಸ್ಯಾಕಲು ಬಿಡುವ ಕ್ರಮವನ್ನು ಕಲಿತುಕೊಳ್ಳುವುದು ಇವೆರಡನ್ನು ನಿಲ್ಲಿಸಿದರೆ ಬಹಳ ಒಳ್ಳೇದಾಗುತಿತ್ತು.

ಇಲ್ಲಿಂದ ೩ ಮೈಲು ದೂರವಿರುವ ಬ್ರಹ್ಮರಕೂಟಲಿನಲ್ಲಿ ಈಗ ಸರತಿನ ದೋಣಿಗಳು ನಿಲ್ಲುತ್ತವೆ. ಬಂಟವಾಳಕ್ಕೆ ಬರುವುದಕ್ಕೆ ನೀರು ಸಾಲದು. ಈ ಬ್ರಹ್ಮರಕೂಟಲಿನ ಹೊಳೆಬದಿಯಲ್ಲಿ ಹಂಗಾಮಿ ಅಂಗಡಿಗಳು ಇವೆ. ದೋಣಿಯಿಂದ ಇಳವಾದ ಮಾಲು ಈ ಅಂಗಡಿಗಳಲ್ಲಿ ಗುಟ್ಟಿನಿಂದ ಮಾರಲ್ಪಡುತ್ತದೆ. ಕೆಲವು ದಿವಸಗಳ ಹಿಂದೆ ಉಪ್ಪಿನಂಗಡಿ ಸಾಹುಕಾರ ನರಸಿಂಹನ್ನಾಯಕರ ಭಂಡಸಾಲೆಗೆ ದೋಣಿಯಲ್ಲಿ ಹೋಗುತ್ತಿದ್ದ ಸುಮಾರು ೩೦ ಗೋಣಿ ಉಪ್ಪು ಕಳವಾಯಿತಂತೆ. ಅದನ್ನು ಬಂಟವಾಳದ ಒಬ್ಬಿಬ್ಬರು ಅಂಗಡಿಗಾರರು ಕೆಗೆದುಕೊಂಡರಂತೆ. ಆ ಸಂಗತಿಯು ನರಸಿಂಹ ನಾಯ್ಕರ ಭಂಡಸಾಲೆಯವರಿಗೆ ತಿಳಿದು ಅವರು ಬಂಟವಾಳಕ್ಕೆ ಬಂದು ವಿಚಾರಿಸುವಾಗ ನಿಜಸ್ಥಿತಿಯು ತಿಳಿದುಬಂತು. ಮೊದಲು ವಾಪಿಳೆಯು ಬಾಕಿ! ಆದರೆ ಈಗ ಇಲ್ಲಿ ಹೊಸತಾಗಿ ವರ್ಗವಾಗಿ ಬಂದಿರುವ ರಾ। ಲಕ್ಷ್ಮೀನಾರಾಯಣಯ್ಯನವರು ಕಳ್ಳರನ್ನು ಪತ್ತೆ ಮಾಡುವುದರಲ್ಲಿ ಬಹು ಚಟುವಟಿಕೆಯುಳ್ಳವರಾದುದರಿಂದ ಕಾಣೆಯಾದ ಮಾಪಿಳ್ಳೆಯನ್ನು ಪತ್ತೆ ಪ್ರಯತ್ನ ಮಾಡಿ ಪತ್ತೆ ಮಾಡಿಯಾರೆಂದು ತಿಳಿಯುತ್ತೇವೆ.

ಇನ್ನು ಕೆಲವು ದಿವಸಗಳಲ್ಲಿ ಅದೇ ಬಂಡಸಾಲೆಗೆ ಹೋಗುತ್ತಿದ್ದ ೧೨ ಲಾಟೀನುಗಳು ಕಳವಾದವು. ಬ್ರಹ್ಮರಕೂಟಲಿನ ಅಂಗಡಿ ಮಾಲಿಕೆಯು ಅದರಲ್ಲಿ ಒಂದು ಲಾಟೀನನ್ನು ತಂದು ಪೇಟೆಯಲ್ಲಿ ಯಾರೋ ಒಬ್ಬ ಹಳ್ಳಿಯ ಗಾಣಿಯವನಿಗೆ ಮಾರಿದನಂತೆ. ಮರು ದಿನ ಅದೇ ಮಾಪಿಳ್ಳೆ

೩-೬ ರಟಾನು ಗೋಣಿಯಲ್ಲಿ ಕಟ್ಟಿ ಪೇಟೆಗೆ ಮಾರಲಿಕ್ಕೆ ತಂದನು. ಇಲ್ಲಿಯ ಕಟ್ಲೆರಿ ಸಾಹುಕಾರರಲ್ಲಿ ಒಬ್ಬರು ಪೋಲಿಸ್ ಸ್ಟೇಶನಿಗೆ ಸೂಚನೆ ಕೊಟ್ಟರು. ಪೋಲಿಸಿನವರು ಬಂದು ಕೂಡಲೆ ಅವನನ್ನು ಕೈದುಮಾಡಿ ಬ್ರಹ್ಮರಕೂಟ್ಲಿನಲ್ಲಿದ್ದ ಅವನ ಅಂಗಡಿಯನ್ನು ಪತ್ತೆಮಾಡುವಾಗ ಉಳಿದ ರಟಾನುಗಳು ಸಿಕ್ಕಿದವಂತೆ. ಉಪ್ಪಿನಂಗಡಿ ಸಾಹುಕಾರರಿಗೆ ಸ್ಕೂಕಲಿನಲ್ಲಿ ಜನ ಹೋಗಿ ಸಾಹುಕಾರರು ಇಲ್ಲಿಗೆ ಬಂದೇಬಂದರು. ದೋಣಿ ಮಾಪಿಳ್ಳೆಯನ್ನು, ಅಂಗಡಿ ಮಾಪಿಳ್ಳೆಯನ್ನೂ ಕೈದುಮಾಡಿ ಮೆಜಿಸ್ಟ್ರೇಟರು ೧೦ ದಿವಸಗಳ ರಿಮಾಂಡು ಕೊಟ್ಟಿರುತ್ತಾರೆ. ನಂಬ್ರವು ೨೯ನೇ ತಾರೀಕಿಗೆ ತನಿಖೆಗೆ ಇಟ್ಟಿದೆ.

ಸಂದ್ರವಾರದಲ್ಲಿ ಕಳವಾಗಿ ಹೋದ ಎರಡು ಗೋಣಿ ಕಾಫಿಯನ್ನು ರಾ। ಲಕ್ಷ್ಮೀನಾರ್ಣಪ್ಪಯ್ಯನವರು ಹಿಡಿದಿರುವರು.

ಇಲ್ಲಿಯ ಟೆಂಪಲ್ ಸೆಕೆಂಡರಿ ಶಾಲೆಗೆ ಕಳೆದ ೧೯ನೇ ತಾರೀಕಿನಿಂದ ಸೆಖೆ ರಜೆಯನ್ನು ಕೊಟ್ಟಿರುವರು. ಬರುವ ಜೂನ್ ೭ನೇ ತಾರೀಕಿಗೆ ಶಾಲೆಯು ತಿರುಗಿ ತೆರೆಯಲ್ಪಡುವದು.

ಇಲ್ಲಿಯ ಶ್ರೀ ಸೀತಾರಾಮ ದೇವಸ್ಥಾನದ ರಥೋತ್ಸವವು ಬಹಳ ವಿಜೃಂಭಣೆಯಿಂದ ಈ ವಾರದಲ್ಲಿ ಜರಗಿತು. ಬೇರೆ ಬೇರೆ ಊರುಗಳಿಂದ ಕೆಲವು ಮಂದಿ ಸಾರಸ್ವತ ಬ್ರಾಹ್ಮಣರು ಬಂದಿದ್ದರು.

ಮಹಾಲಿಂಗೇಶ್ವರ ದೇವಸ್ಥಾನದ ಕಾಲಾವಧಿ ರಥೋತ್ಸವವನ್ನು ಇದರ ಮೊಕ್ತೇಸರ ಅಡಳಿತದಾರರಾದ ರಾ। ಪಣಂಬೂರು ವಾಸುದೇವರಾಯರು ಒಳ್ಳೇ ರೀತಿಯಿಂದ ನಡಿಸಿದರು.

ಊರಿನ ಎರಡು ಮೂರು ಕೇರಿಗಳಲ್ಲಿ ವೈಲಿಗೆಯು ತಲೆದೋರಿಯದೆ. ವೆಕ್ಸಿನೇಟರರು ಬಂದು ದಾಖಲುಹಾಕುತ್ತಿರುವರು. ಈ ವಿಷಯ ಡಿಸ್ಟ್ರಿಕ್ಟ ಹೆಲ್ತ ಆಫೀಸರರು ಈ ರೋಗವನ್ನು ದೂರಪಡಿಸುವ ಪ್ರಯತ್ನಗಳನ್ನು ಮಾಡ್ಯಾರೆಂದು ನಂಬುತ್ತೇವೆ.

ವರ್ಷಾವಧಿಯ ಮಾರಿಪೂಜೆಯು ಪೇಟೆಯ ಹತ್ತುಸಮಸ್ತರ ಸಹಾನುಭೂತಿಯಿಂದ ನಡಿಯಿತು.

ಬಂಟವಾಳ ನಂಬ್ರ ೧೧೧೨ನೇ ಪರಸ್ಪರ ಸಹಾಯಕ ಸಂಘವು ಸರಿಯಾಗಿ ನಡಿಯುತ್ತಾ ಇದೆ. ಆದರೆ ಹೊರಗಿನಿಂದ ಬರಬೇಕಾದ ಹಣವು ಬಾಕಿಯಿರುವುದರಿಂದ ಈ ವರುಷದ ಒಡಿಟ್ ರಿಪೋರ್ಟಿನಲ್ಲಿ ಸಂಘಕ್ಕೆ ರೂ. ೨೫೭-೯-೮ ನಷ್ಟವಾಗಿಯದೆಂದು ಕಂಡುಬರುತ್ತದೆ.

ಇಲ್ಲಿಯ ವ್ಯಾಪಾರಸ್ಥರ ಸಂಘವು ನಿಂತುಹೋಗಿಯದೆ. ಆದರೆ ಕೊಟ್ಟ ಸಾಲಕ್ಕೆ ಮರುಬಡ್ಡಿಯು ವಸೂಲಾಗುವುದರಿಂದ ಇದರಲ್ಲಿ ರೂಪಾಯಿ ೭೪೩-೧೧-೦ ಲಾಭವಾಗಿಯದಂತೆ.

ಕಟ್ಟಡ ಸಂಘದಲ್ಲಿ ರೂ. ೨೮೯-೩೩-೫ ನಷ್ಟವಾಗಿಯದಂತೆ.

ವಿಟ್ಲ:— ಇಲ್ಲಿಯ ಸೆರೆಗ್ರಾಮದಲ್ಲಿ ಜಗಳವಾಗಿ ಇಬ್ಬರು ಕೊಲ್ಲಲ್ಪಟ್ಟಿರುವರು. ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರು ಸ್ಥಳ ತನಿಖೆ ಬಗ್ಗೆ ಹೋಗಿರುವರು.

ಮಂಜೇಶ್ವರ:— ಇಲ್ಲಿಯ ಮದನಂತೇಶ್ವರ ಹಾಯರ್ ಎಲಿಮೆಂಟರಿ ಶಾಲೆಗೆ ರಿಕೊಗ್ನಿಶನ್ ಬೇಡವಂತೆ. ಕೆನರಾ ಹ್ಯಾಸ್ಕೂಲಿಗೆ ಎಫಿಲಿಯೇಟ್ ಮಾಡಿದರೆ ರಿಕೊಗ್ನಿಶನ್ ಬೇಡವಂತೆ! ಒಂದು ವೇಳೆ ಸರಕಾರಿ ಗ್ರೆಂಟ ಬೇಡವೆಂದು ಹೇಳಬಹುದು. ರಿಕೊಗ್ನಿಶನ್ ಬೇಡವೆಂದು ಹೇಳಲಿಕ್ಕೆ ಇಷ್ಟರ ವರೆಗೆ ಇರುವ ಯಾವ ಕಾನೂನೂ ಕಂಡುಬರುವುದಿಲ್ಲ. ಮಂಜೇಶ್ವರಕ್ಕಾಗಿ ಹೊಸ ಕಾನೂನು ಮಾಡಿದ್ದಾರೋ ಮದನಂತೇಶ್ವರನೆ ಬಲ್ಲ.

ಇಲ್ಲಿ ಅಲ್ಲಲ್ಲಿ ಕೋರಾ ರೋಗವು ತಲೆದೋರಿಯದೆ.

ಮಾನ್ಯ ಜಿಲ್ಲಾ ಕಲೆಕ್ಟರ ಧೊರೆಗಳವರು ತಾ ೧೮ನೇ ರವಿವಾರ ದಿನ ಇಲ್ಲಿಗೆ ಚಿತ್ತೈಸಿ ಕೆಲವು ಸ್ಥಳಗಳನ್ನು ಸಂದರ್ಶಿಸಿ ಮಾರಣೆ ದಿನವೇ ಕಾಸರಗೋಡಿಗೆ ತೆರಳಿರುವರು. ಅಲ್ಲಿಂದ ಹೊಸದುರ್ಗ ಅತ್ತಕಡೆಗೆ ಹೋಗಿ ಬರುವ ತಿಂಗಳ ತಾ. ೧ರಿಂದ ೫ರ ವರೇಗೆ ಕುಂಬಳೆಯಲ್ಲಿದ್ದು ಮಂಗಳೂರಿಗೆ ಹಿಂತೆರಳುವರಾಗಿ ಕೇಳುತ್ತೇವೆ.

ಶ್ರೀ ಮದನಂತೇಶ್ವರ ದೇವಸ್ಥಾನದ ಟ್ರಸ್ಟಿ ಮೆಂಬರ ರಾ। ಮಂಜುನಾಥರಾಯ ಕಮ್ತಿರ ಮೇಲೆ ಸಬ್ ಕೋರ್ಟಿನಿಂದ ಕೊಡೋಣಾದ ಇಂಜಕ್ಷನ್ ಹುಕುಂ ರದ್ದಾಗಲು ಅಪ್ಪೀಲಿನಲ್ಲಿ ಡಿಸ್ಟ್ರಿಕ್ಟ ಕೋರ್ಟಿನಿಂದ ಪುನಹಾ ಹೊರಟಿದೆ. ಸ್ಕೀಮ್ ಡಿಕ್ರಿ ಶರ್ತಪ್ರಕಾರ ಲೆಕ್ಕ ಆಡಿಟ್ ಮಾಡಿಸದೆ ಇದ್ದು, ಅನೇಕ ಶರ್ತಗಳನ್ನು ಜಾರಿಗೆ ತಾರದೆ ಟ್ರಸ್ಟಿ ಕೌನ್ಸಿಲನ್ನು ಮುರಿದು ಬಿಡುವ ಬಗ್ಗೆ (To dissolve the Board) ಈ ಎಲ್ಲಾ ಪ್ರಯತ್ನಗಳು ಕೃಷ್ಣಾವತಾರವನ್ನು ತಾಳಿದ ಮೆನೇಜಿಂಗ್ ಟ್ರಸ್ಟಿಯವರಿಂದಲೇ ನಡೆಯುತ್ತದಾಗಿಯೂ, ಈ ಕುರಿತು ಕೋರ್ಟು ಪ್ರಾರಂಭನಾದೊಡನೆ ಇವರ ಮೇಲೆ ವ್ಯವಹರಣೆ ನಡೆಯುತ್ತದಾಗಿಯೂ ಕೇಳುತ್ತೇವೆ. ಈ ಸಮಯದಲ್ಲಿ ಮದನಂತೇಶ್ವರನು ಯಾವ ಅವತಾರವನ್ನು ಧರಿಸುತ್ತಾನೊ ನೋಡಲಿಕ್ಕಿದೆ.

ಪರಸ್ಪರ ಸಹಾಯಕ ಸಂಘಗಳ ಇನ್ಸಪೆಕ್ಟರ್ ಬಗ್ಗೆ ೨-೩ ಜನ ಇನ್ಸಪೆಕ್ಟರುಗಳು ಬಂದಿರುತ್ತಾರೆ. ಮದನಂತೇಶ್ವರ ಸಂಘದ ಸೆಕ್ರೆಟರಿಗಳು ಕರದು ಬಂದಿರುವರಾಗಿ ಕೇಳುತ್ತೇವೆ. ಇನ್ನು ಸದ್ಯದಲ್ಲೆ ಹೊಸ ಪಂಚಾಯಿತರನ್ನು ಮೊಳಕ್ರರು ಮಾಡುವರಂತೆ. ಅನೆಕಲ್ಲು ಗ್ರಾಮದ ಫೊರಂಬೋಕ್ ಸ್ಥಳದಿಂದ ೩ ಮರಗಳನ್ನು ಕಡದ ಬಗ್ಗೆ ರೂ. ೨೦೦ನ್ನು ಕಂಪಾಂಡಾಗಿ ನಿಶ್ಚಯಿಸಿಯದಾಗಿ ಇದೇ ಸೆಕ್ರೆಟರಿಗಳಿಗೊಂದು ನೋಟೀಸು ಬಂದಿದೆ.

ತಾ. ೨೦ನೇ ರಾತ್ರಿ ಬಂಗ್ರಮಂಜೇಶ್ವರದಲ್ಲಿರುವ ಬೀಡಿ ವ್ಯಾಪಾರದ ಕುಕ್ಕೃತ್ತ ಎಂಬವನ ಹೆಂಡತಿಯ ಮಾನಭಂಗವಾದಲೆತ್ನಿಸಿದ ಮೊಯಿದೆಬ್ಯಾರಿ ಎಂಬವನು ಮನೆಯೊಳಗೆ ಹೊಕ್ಕುದಾಗ್ಯೆ ಇದನ್ನು ಅರಿತು ಒಳಗೆ ಅವಿತುಕೊಂಡಿದ್ದ ಆಕೆಯ ಗಂಡನು ಕತ್ತಿಯಿಂದ ಹೊಡೆಯಲು ಆ ಪೆಟ್ಟು ಕೋಳಿಗೆ ಬಿತ್ತೆಂತಲೂ ಪೆಟ್ಟು ತಿಂದವನು ಕಾಣೆಯಾಗಿರುತ್ತಾನಾಗಿಯೂ ಈ ಕುರಿತು ಪೋಲಿಸ ತನಖಿ ನಡೆಯುತ್ತದಾಗಿಯೂ ಕೇಳುತ್ತೇವೆ.

ಬೆಳ್ಳಾರೆ:— ಇಲ್ಲಿಯ ೧೩೧೩ನೇ ಸಹಕಾರಿ ಸಂಘಕ್ಕಾಗಿ ಹೊಸತಾಗಿ ಕಟ್ಟಿಸಿದ ಕಟ್ಟೋಣದ ಪ್ರವೇಶವು ಬರುವ ಮೇ ತಿಂಗಳ ೩ನೇ ತಾರೀಕಿಗೆ ಜರಗುವದು.

ಕುಂಬಳೆ:— ರೈಲುವೆ ಇಲಾಖೆಯವರು ಅವರ ಸೌಕರ್ಯಕ್ಕಾಗಿ ಇದೇ ತಿಂಗಳ ೧ನೇ ತಾರೀಕಿನಿಂದ ರೈಲು ಸ್ಟೇಶನಿಂದ ಕಾಸರಗೋಡಿಗೂ ಮಂಜೇಶ್ವರಕ್ಕೂ ಟೆಲಿಫೋನ್ ಸರ್ವಿಸು ಇಟ್ಟಿರುವರು.

ಕಾಸರಗೋಡು:— ರಾಮರಾಜಕ್ಷತ್ರಿಯವರ ಜಾತಿಯವರನ್ನು ಬೇಕ್‌ವರ್ಡ ಜಾತಿಯ ಪಟ್ಟಿಯಲ್ಲಿ ಸೇರಿಸಬೇಕಾಗಿ ಮದರಾಸು ವಿದ್ಯಾ ಇಲಾಖೆಯವರ ಹುಕುಂ ಬಂದಿರುತ್ತದೆ.

ಉಳ್ಳಾಲ ಅಡುಂಬುಳದುರು:— ಇಲ್ಲಿ ಕಲ್ಲಿನ ಬೆಲ್ಲ ಮತ್ತು ಗೇರುಹಣ್ಣಿನ ಶರಾಬನ್ನು ಎಷ್ಟೋ ವರುಷಗಳಿಂದ ಕಳ್ಳ ಕರಾವು ತಯಾರು ಮಾಡುತ್ತಿದ್ದವರನ್ನು ಮೊನ್ನೆ ತಾ. ೧೧ನೇ ದಿವಸ ಅಬ್ಕಾರಿ ಸಬ್ ಇನ್ಸಪೆಕ್ಟರವರು ಹಿಡಿದಿರುವರು.

ವೆಲ್ಲೂರು:— ಇಲ್ಲಿ ಉತ್ಸವಕ್ಕೋಸ್ಕರ ತರಿಸಿದ್ದ ಆನೆಯನ್ನು ಒಬ್ಬ ೧೨ ವರ್ಷ ಪ್ರಾಯದ ಬಾಲಕನು ಅದನ್ನು ಕಲ್ಲಿನಿಂದ ಹೊಡೆದು ಹಿಂಸಿಸುತ್ತಾ ಇದ್ದನು. ರಾತ್ರಿ ಉತ್ಸವಕ್ಕೆ ತಂದಿದ್ದಾಗ ಆನೆಯು ತನ್ನನ್ನು ಹಿಂಸಿಸಿದ ಹುಡುಗನ ಮೇಲೆ ದ್ವೇಷದಿಂದ ನೆರೆದಿದ್ದ ಜನಸಮೂಹದಲ್ಲಿ ಆ ಹುಡುಗನನ್ನು ತನ್ನ ಸೊಂಡಿಲಿನಲ್ಲಿ ಹಿಡಿದು ಅಲ್ಲಿಯೇ ಹತ್ತಿರವಿದ್ದ ಕಂಭಕ್ಕೆ ಅಪ್ಪಳಿಸಿ ಬಾಲಕನ ಪ್ರಾಣವನ್ನು ನಾಶಮಾಡಿತು. ಅಲ್ಲದೆ ೩-೪ ಜನರಿಗೆ ಬಹಳವಾಗಿ ಘಾಯವಾಗಿರುತ್ತದೆ. ಕೂಡಲೇ ಮಾವುತನು ಬಂದು ಆನೆಯನ್ನು ಹಿಡಿದು ನಿಲ್ಲಿಸಿದನು.

ಚಾರ್ಮಾಡಿ:— ಇಲ್ಲಿಯ ಪೋಲಿಸು ಸ್ಟೇಶನು ತೆಗೆದುಹಾಕಿದರು ಬಹಳ ವಿಷಾದಕರವಾದ ಸಂಗತಿಯಾಗಿರುತ್ತದೆ. ಪೋಲಿಸ್ ಸ್ಟೇಶನು ಇರುವಾಗ್ಯೆ ಇಲ್ಲಿ ಘಟ್ಟದ ಮೇಲಿಂದ ಗಾಡಿಗಳಲ್ಲಿ ಬರುವ ಕಾಫಿ ಇತರ ಸರಕುಗಳನ್ನು ಗಾಡಿ ಹೋಗುವಾಗಲೇ ಕದಿಯುವ ಪದ್ಧತಿ ಇತ್ತು. ಆದರೆ ಇನ್ನು ಮೇಲೆ ಗಾಡಿಗಳನ್ನು ಹಿಡಿದು ನಿಲ್ಲಿಸಿ ಅದರಲ್ಲಿದ್ದ ಸರಕುಗಳನ್ನು ಗಾಡಿಯವರ ಹತ್ತಿರ ಇರುವ ಹಣವನ್ನು ಬಲಾತ್ಕಾರದಿಂದ ದರೋಡೆಮಾಡುವ ಪದ್ಧತಿಯು ರೂಢಿಗೆ ಬರುತ್ತದೊ ಏನೋ. ಕಾಫಿ ತೋಟಗಳಿಂದ ಕೂಲಿಯಾಳುಗಳು ಬರುವಾಗ ಅವರು ಕೂಡಿ ತಾವು ಕಷ್ಟಪಟ್ಟು ಸಂಗ್ರಹಿಸಿದ ಹಣವನ್ನು ತರುವುದುಂಟು. ಹೆಚ್ಚಾಗಿ ರಾತ್ರಿವೇಳೆಯಲ್ಲಿ ಕೂಲಿಯಾಳುಗಳು ಚಾರ್ಮಾಡಿಯಲ್ಲಿ ವಿಶ್ರಾಂತಿ ಬಗ್ಗೆ ಉಳಕೊಳ್ಳುವುದರಿಂದ ಅಲ್ಲಿ ಇವರ ಕೂಡೆ ಇದ್ದ ಹಣವನ್ನು ಸುಲಿಗೆಮಾಡುವವರು ಕೆಲವರಿದ್ದಾರೆ. ಅದಲ್ಲದೆ ಸುರಾದೇವಿಯ ಪ್ರತಾಪದಿಂದ ಅಥವಾ ಇತರ ದ್ವೇಷದಿಂದ ಜಗಳಗಳೂ ಕೊಲೆಪಾತಕಗಳೂ ಸಂಭವಿಸಿದರೆ ಪೋಲೀಸಿನವರ ತಕ್ಕ ಸಹಾಯವಿಲ್ಲದೆ ಹೋದರೆ ದಿನೇ ದಿನೇ ಕೊಲೆಪಾತಕಗಳು ಹೆಚ್ಚುತ್ತಾ ಬರುವುದರಲ್ಲಿ ಏನೂ ಸಂಶಯವಿಲ್ಲ. ಇಲ್ಲಿಯ ಪೋಲಿಸ್ ಸ್ಟೇಶನ್ ತೆಗೆದು ಹಾಕಿದುದರಿಂದ ಪೋಲಿಸ್ ಇಲಾಖೆಗೆ ಯಾವ ತರದ ಲಾಭವುಂಟೊ! ದೇವರೆ ಬಲ್ಲ. ಆದುದರಿಂದ ಮಾನ್ಯ ಸರಕಾರದವರು ಈ ವಿಷಯ ತಕ್ಕ ತನ್ನಿಖೆಯನ್ನು ಮಾಡಿ ಚಾರ್ಮಾಡಿಯಲ್ಲಿ ಒಂದು ಪೋಲಿಸು ಸ್ಟೇಶನನ್ನು ಇರಿಸುವದು ಅತಿ ಅಗತ್ಯದ್ದಾಗಿದೆ.

ಮಂಗಳೂರು.

ದೇಶಭಕ್ತರುಗಳಾದ ಶ್ರೀನಿವಾಸರಾವ್ ಕೌಜಲಗಿ, ದಿವಾಕರರಾವ್, ಹರಡೀಕರ್ ಮತ್ತು ಕೆಂಭಾವಿಯವರು ಈ ದಿನ ಬೆಳಿಗ್ಗೆ ೧೦ ಘಂಟೆಯ ಶಟಲ್‌ರೈಲಿನಲ್ಲಿ ಇಲ್ಲಿಗೆ ಬಂದಿಳಿದರು. ಶ್ರೀಯುತರುಗಳಾದ ಎಸ್. ಬಿ. ಭಿಡೆ, ಕೆ. ಆರ್ ಆಚಾರ್, ಕೆ. ಆರ್. ಕಾರಂತ, ಪಿ. ಎಲ್ ಪುಣಿಂಚತ್ತಾಯ, ಅ. ಭೋಜರಾವ್, ರಾಮಚಂದ್ರರಾವ್, ಎಲ್. ಪಿ. ಗೋಕರ್ಣ ಮೊದಲಾದವರು ಸ್ಟೇಶನಿನಲ್ಲಿ ಇವರನ್ನು ಇದಿರುಗೊಂಡು ಪುಷ್ಪಹಾರಗಳನ್ನರ್ಪಿಸಿದ ಮೇಲೆ ಅತಿಥಿಗಳು ಮೋಟರಿನಲ್ಲಿ ಕುಳಿತು ಶ್ರೀಯುತ ಕಾರಂತರಲ್ಲಿಗೆ ಹೋದರು. ಇದೇ ದಿನ ಸಾಯಂಕಾಲ ೬ ಘಂಟೆಗೆ ಟೈನ್‌ಮೈದಾನಿನಲ್ಲಿ ಒಂದು ಸಾರ್ವಜನಿಕ ಸಭೆಯಾಗುವುದು. ಸರ್ವರಿಗೂ ಸುಸ್ವಾಗತವಿದೆ.

ಹರಿದಾಸ ಶ್ರೀ. ವೇ. ಶಿವಾನಂದ ಭಟ್ಟರ ಮನೆಯಲ್ಲಿ 'ರಾಮನವಮಿ'ಯ ಸಪ್ತಾಹವು ಪ್ರತಿ ವರ್ಷದಂತೆ ಈ ವರ್ಷವೂ ಸಾಂಗವಾಗಿ ನೆರವೇರಿತು. ಭಜನೆ ಪಾರಾಯಣಗಳೂ, ಹರಿದಾಸರ ನೀತಿಬೋಧಕವಾದ ಉಪನ್ಯಾಸಗಳೂ ಪ್ರತಿದಿನವೂ ಹೆಚ್ಚೆಚ್ಚಾಗಿ ಜನರನ್ನು ಆಕರ್ಷಿಸುತ್ತಿದ್ದು ಅತೀ ಮನೋಹರವಾಗಿದ್ದವು. ಈ ಸುವ್ರತವನ್ನು ಶ್ರದ್ಧೆಯಿಂದ ಜರಗಿಸಿದ ಶ್ರೀ ಭಟ್ಟರ ಸಕಲ ಮನೋರಥವನ್ನೂ ಭಗವಂತನು ಸಿದ್ಧಿಗೊಳಿಸಲಿ!

ಇದೇ ತಿಂಗಳ ತಾ. ೨೫ನೇ ಆದಿತ್ಯವಾರ ದಿವಸ ಪ್ರಾತಃಕಾಲ ಘಂಟೆ ೮ಕ್ಕೆ ಮಂಗಳೂರು ಆರ್ಯಸಮಾಜ ಮಂದಿರದಲ್ಲಿ ಶ್ರೀಯುತ ಎಮ್. ಮಾಧವ ರಾವ್ ಬಿ. ಎ. ಬಿ. ಎಲ್. ರವರು ಆರ್ಯರ ಧರ್ಮ ಮತ್ತು ನಾಗರಿಕತೆ ಕುರಿತು ಭಾಷಣ ಮಾಡುವರು.

ಮಂಗಳೂರು ತಾಲೂಕು ಕಾಂಗ್ರೆಸು ಕಮಿಟಿಯ ಬರುವ ಸಾಧಾರಣ ಮಹಾ ಸಭೆಯು ತಾ. ೯-೫-'೨೬ನೆ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಮಂಗಳೂರು ಕರ್ನಾಟಕ ತಿಲಕ ವಿದ್ಯಾಲಯದಲ್ಲಿ ಜರಗುವುದು. ಕಾರ್ಯಕ್ರಮವು ಜಿಲ್ಲಾ ಕಾಂಗ್ರೆಸು ಕಮಿಟಿಯ ಕಚೇರಿಯ ಕಟ್ಟಡದಲ್ಲಿಯೇ ಇರುವ ಕಚೇರಿಯಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ, ಅ. ಭೋಜರಾಯ.

ಸಿದ್ಧ ಸಮಾಜದ ೫ನೇ ಪರಿಷತ್ತು ಇದೇ ತಿಂಗಳ ತಾ. ೧೧ನೇ ಆದಿತ್ಯವಾರ ಹಿಂದೂಸ್ತಾನ ಸಿನೆಮಾ ಹೋಲಿನಲ್ಲಿ ಕಲ್ಲಿಕೋಟೆಯ ಶ್ರೀ ಕಿಜಾಕೆ ಕೋವಿಲ ಗಾತ್ ಮನ ವಿಶ್ವನಾಥ್. ಬಿ. ಎ. ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದಕ್ಕೆ ದಕ್ಷಿಣ ಕನ್ನಡ ಮಲಬಾರುಗಳಿಂದ ಅನೇಕ ಪ್ರತಿನಿಧಿಗಳು ಬಂದಿದ್ದರು ಈ ಸಮಾಜದ ಪ್ರಚಾರ ಕಾರ್ಯದ ಕುರಿತು ಕೆಲವು ಠರಾವುಗಳು ಪಾಸಾದುವು. ೬ನೆಯ ಪರಿಷತ್ತನ್ನು ಮುಂಬಾಯಿಯಲ್ಲಿ ಜರಗಿಸಬೇಕೆಂದು ನಿರ್ಣಯವಾಯಿತು

ಒಸ್ಕೃ ರಾಜಕೊಟ್ಟ ತಾಲೂಕು ಬೋರ್ಡು ಮೆಂಬರನ ರಾಜಿನಾಮೆಯನ್ನು ಪುನರಾಲೋಚಿಸ ಹೇಳುವ ಸ್ವತಂತ್ರವು ಬೋರ್ಡು ಪ್ರೆಸಿಡೆಂಟರಿಗಿರುವುದೋ ಎಂಬೀ ಕುರಿತು ಲೋಕಲ್ ಸೆಲ್ಫ ಗವರ್ನ್ಮೆಂಟಿನ ಮಂತ್ರಿಯವರು ಈ ಸ್ವತಂತ್ರವು ಪ್ರೆಸಿಡೆಂಟರಿಗಿಲ್ಲವೆಂದು ಹುಕುಂಮಾಡಿರುತ್ತಾರೆ. ಈ ಪ್ರಕಾರ ಕಾಸರಗೋಡು ತಾಲೂಕು ಬೋರ್ಡು ಮೆಂಬರರಾದ ಮಂಜೇಶ್ವರ ಭವಾನಿಶಂಕರರಾಯರು ರಾಜಿಕೊಟ್ಟ ಸ್ಥಾನಕ್ಕೆ ಮೆಂಬರನೊಬ್ಬನನ್ನು ಆರಿಸಲು ಪುನಃ ಚುನಾವಣೆಯು ನಡೆಯಲಿರುವುದು.

ಇಲ್ಲಿಯ ಮಕ್ಕಳ ಮತ್ತು ಹೆಂಗಸರ ಅಸ್ಪತ್ರೆಯ ವಿಸ್ತಾರಕ್ಕೆ ಬೇಕಾದ ಸ್ಥಳವನ್ನು ಕ್ರಯಕ್ಕೆ ಪಡೆಯುವ ಸರ್ವವೆಚ್ಚವನ್ನೂ ಮುನ್ಸಿಪಾಲಿಟಿಯವರೇ ಕೊಡಬೇಕೆಂದೂ, ಸರಕಾರವು ಕಟ್ಟೋಣದ ಬಗ್ಗೆ ಸಾರ್ವಜನಿಕ ಮಂತಿಗೆಯು ಎಷ್ಟು ಸಂಗ್ರಹವಾಗುತ್ತದೆಯೋ ಅಷ್ಟು ಹಣವನ್ನು ಮಾತ್ರ ಕೊಡಲು ಸಿದ್ಧವಿದೆಯೆಂದೂ ತಿಳಿದುಬರುತ್ತದೆ.

ಈ ವಾರದಲ್ಲಿ ಹವೆಯ ಸ್ಥಿತಿಯು ಬದಲಾಗಿಯದೆ. ಮಳೆ ಮೋಡಗಳು ದಿನೆ ದಿನೆ ಕಾಣುತ್ತವೆ. ಮೊನ್ನೆಯ ದಿವಸ ಎಂದರೆ ಬುಧವಾರ ತಾ. ೨೧ಕ್ಕೆ ಸಾಯಂಕಾಲ ಮಳೆಯು ಚೆನ್ನಾಗಿ ಸುರಿದಿದೆ, ಈಗಲೂ ಮೋಡಗಳು ಕಾಣುತ್ತವೆ.

ನಮ್ಮ ಮುನ್ಸಿಪಾಲಿಟಿಯು ಸರಹದ್ದಿನಲ್ಲಿದ್ದ ಎಲ್ಲಾ ಲಾಟೀನುಕಂಭಗಳಿಗೆ ನಂಬ್ರಗಳನ್ನು ಆಯಾ ವಾರ್ಡಿನಲ್ಲಿ ಹಾಕಿಸಿರುತ್ತಾರೆ ಆದರೆ ದೀಪಗಳನ್ನು ಸರಿಯಾಗಿ ಕ್ಲಪ್ತ ಸಮಯದಲ್ಲಿ ಉರಿಸುತ್ತಾರೊ ಇಲ್ಲವೊ ಎಂಬ ವಿಷಯ ಸರಿಯಾಗಿ ಯಾರೂ ಈ ಕಡೆ ಗಮನ ಕೊಡುವುದಿಲ್ಲ. ಕೆಲವು ಲಾಟೀನು ಕಂಭಗಳಲ್ಲಿ ದೀಪಗಳು ಬೆಳಿಗ್ಗೆ ೧೦ ಘಂಟೆಯ ವರೆಗೆ ಉರಿಯುತ್ತಾ ಇವೆ. ಆದರೆ ಕೆಲವು ಕಡೆಗಳಲ್ಲಿ ದೀಪ ಹಚ್ಚಿಸಿದ ಅರ್ಧ ಘಂಟೆಯೊಳಗೆ ನಂದಿಹೋಗುವ ದೀಪಗಳು ಇವೆ. ಬೆಂದೂರ್‌ವೆಲ್ ಪೇಟೆಯಲ್ಲಿ ಜೋಡುಕಟ್ಟೆಯ ಹತ್ತಿರ ಇರುವ ಲಾಟೀನು ಕಂಭಕ್ಕೆ ಸರಿಯಾಗಿ ಯಾವಾಗಲೂ ದೀಪವನ್ನು ಹಚ್ಚುವುದಿಲ್ಲ. ಹಚ್ಚಿಸಿದರೂ ಕೂಡ ಅದು ಸರಿಯಾಗಿ ಪ್ರಕಾಶವನ್ನು ಕೊಡುವುದಿಲ್ಲ. ಆದ್ದರಿಂದ ಮುನ್ಸಿಪಾಲಿಟಿಯ ಲ್ಯಾಟಿಂಗ್ ಡಿಪಾರ್ಟಮೆಂಟಿನವರು ಈ ವಿಷಯದಲ್ಲಿ ತಕ್ಕ ಗಮನ ಕೊಡುವುದು ಅಗತ್ಯ.

ವಿವಿಧ ವಿಷಯಗಳು.

ಹಾಸನ ಮಂಗಳೂರು ರೈಲುವೇ.

ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರಾದ ಮಿ। ಶಮ್ಮಾಚರವರು ತನ್ನ ಪ್ರಶ್ನೆಗಳಿಗೆ ಎಸೆಂಬ್ಲಿಯಲ್ಲಿ ದೊರಕಿದ ಉತ್ತರದ ಆಧಾರದಿಂದ ಈ ಸಂಗತಿಯನ್ನು ಹೊರಗೆ ತಂದಿರುವರು. ತಲಚೇರಿಯಿಂದ ಮಾನಂತೋಡಿಯ ವರೆಗೆ ಒಂದು ರೈಲುವೇ ಲ್ಯಾನು ಬೇಗನೆ ಮಾಡುವರು. ಅದರ ಒಂದು ಶಾಖೆಯು ಕೊಡಗಿನ ಗಡಿಯಾದ ಮಾಕುಟ್ಟದ ವರೆಗೆ ತೆರೆಯಲಾಗುವುದು. ಈ ಲ್ಯಾನಿನ ಸರ್ವೆ ಕೆಲಸಕ್ಕಾಗಿ ಬಜೆಟಿನಲ್ಲಿ ಹಣವನ್ನು ಪ್ರತ್ಯೇಕಿಸಿಟ್ಟಿದೆ. ಮಂಗಳೂರು ಹಾಸನ ರೈಲುವೆಯು ಮಟ್ಟಿಗೆ ಜನರು ಸರಕಾರದವರೊಡನೆ ಹಟಹಿಡಿದು ವಾದಿಸಿ ಮದರಾಸು ನ್ಯಾಯವಿಧಾಯಕ ಸಭೆಯಲ್ಲಿಯೂ ಎಸೆಂಬ್ಲಿಯಲ್ಲಿಯೂ ಈ ಪ್ರಶ್ನೆಯನ್ನು ಮುಂದೆಬರುವಂತೆ ಮಾಡಿದರೆ ಈ ಕೆಲಸವು ಬೇಗನೇ ನೆರವೇರುವುದು. ಈಗ ಸರಕಾರದ ಭಂಡಾರದಲ್ಲಿ ಹಣವು ಕಡಿಮೆಯಾಗಿದೆ. ಆದರೂ ಹಾಸನ ಮಂಗಳೂರು ಲ್ಯಾನನ್ನು ತೆರೆಯುವ ಅವಶ್ಯಕತೆಯನ್ನು ಸರಕಾರಕ್ಕೆ ತೋರಿಸಿಕೊಡದ ಹೊರತು ನಮ್ಮ ಉದ್ದೇಶವು ಕೈಗೂಡುವಂತಿಲ್ಲ.

ಈಗ ಕೌನ್ಸಿಲುಗಳಿಗೆ ಹೊಸ ಚುನಾವಣೆಯು ಆಗಲಿಕ್ಕಿದೆ. ಆದುದರಿಂದ ಮೆಂಬರಿಕೆಗೆ ಉಮೇದುವಾರರಾಗಿ ನಿಲ್ಲುವವರು ಈ ಮಂಗಳೂರು ಹಾಸನ ರೈಲುವೆಯನ್ನು ಮಾಡಿಸಿಕೊಡುತ್ತೇವೆಂದು ಭರವಸ ಕೊಡುವ ಮೆಂಬರರಿಗೆ ಮಾತ್ರವೇ ಓಟುಕೊಡಬೇಕಲ್ಲದೆ ತಮ್ಮ ಶಿಫಾರಸಿಗಾಗಿಯೂ ಜಾತಿವಾತ್ಸಲ್ಯದಿಂದಲೂ, ತಮ್ಮ ಸ್ವಾರ್ಥಕ್ಕಾಗಿಯೂ ಮೆಂಬರರಾಗುವವರಿಗೆ ಓಟುಕೊಟ್ಟು ಮೆಂಬರರಾಗಿ ಕಳುಹಿಸುವುದು ಉಚಿತವಲ್ಲ. ಓಟರರು ಇದನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಸಂಗತಿಯು ಇದೇ ಆಗಿರಬೇಕಾಗಿದೆ.

ಪತ್ರವ್ಯವಹಾರ.

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವದೇ.]

—: ಪೊಳಲಿ ಚೆಂಡು. :—

ಅಖಿಲ ಕರ್ನಾಟಕದಲ್ಲಿ ಪ್ರಖ್ಯಾತಿಪಡೆದ ಪೊಳಲಿ ಶ್ರೀ ರಾಜರಾಜೇಶ್ವರೀ ಅಮ್ಮನವರ ದೇವಳದ ಕಾಲಾವಧಿ ಕಡೆ ಚೆಂಡು ಮಹೋತ್ಸವವು ತಾ. ೧೦-೪-೨೬ನೇ ಶನಿವಾರ ಬಹು ವಿಜೃಂಭಣೆಯಿಂದ ಏನೊಂದೂ ತೊಡಕುಗಳಿಲ್ಲದೆ ನೆರವೇರಿತು. ಚೆಂಡಾಟದಲ್ಲಿ ಮಾತ್ರ ಅಮ್ಮುಂಜೆ ಪಾರ್ಟಿಯವರು ಎದುರಾಡದಿದ್ದುದರಿಂದ ಉಳಿಪಾಡಿ ಕಡೆಯವರಿಗೆ ನಿರಾಯಾಸವಾಗಿ ಜಯವದಗಿತು. ಸುಮಾರು ೩೫ ವರ್ಷಗಳಲ್ಲಿ ಇಷ್ಟು ಸಭೆ ಸೇರಿದಿಲ್ಲವೆಂದು ಅನುಭವಿಕ ಪ್ರಾಯಸ್ಥರು ಹೇಳುತ್ತಾರೆ. ಕೂಡಿದ ಜನಸಮುದಾಯವು ೧೫ರಿಂದ ೨೦ ಸಾವಿರದ ಅಂದಾಜು ಮಾಡಲ್ಪಟ್ಟಿದೆ. ಬಹುಪಕ್ಷದವರು ನಿಲ್ಲಲು ಕೂಡಾ ಸ್ಥಳವಿಲ್ಲದೆ ಹಿಂದಿರುಗಿ ಹೋದದ್ದು ವ್ಯಸನಕರ. ಉತ್ಸವಕ್ಕೆ ಲೇಬರ್ ಆಫೀಸರರಾದ ರಾ। ತಿಮ್ಮಪ್ಪಪೂಂಜರೂ ಮಂಗಳೂರು ತಾ. ಬೋ. ಪ್ರೆಸಿಡೆಂಟ ರಾಮಕೃಷ್ಣ ಪೂಂಜರೂ, ಲೋ. ಫ. ಓವರ್ಸಿಯರ್ ರಾ। ಸುಬ್ರಹ್ಮಣ್ಯ ಅಯ್ಯರರೂ, ಎಗ್ರಿಕಲ್ಚರ್ ಡಿಮೋನ್ಸ್ಟ್ರೇಟರ್ ರಾ। ಮಂಗೇಶರಾಯರೂ ಚಿತ್ತೈಸಿದ್ದರು. ಚೆಂಡುನೋಡುವ ಆತುರದಿಂದ ಬರುತ್ತಿದ್ದ ಬಂಟ್ವಾಳ ಡಿ. ತಹಶಿಲ್ದಾರರು ಕಾಲುನೋವಿನ ದೆಸೆಯಿಂದ ಬೆಳ್ಳಾರಲ್ಲೇ ನಿಂತು ವಾಪಸುತೆರಳಿದ್ದಕ್ಕಾಗಿ ವಿಷಾದಪಡಬೇಕಾಗಿದೆ. ಹೆಲ್ತ್ ಇನ್ಸ್‌ಪೆಕ್ಟರ್ ರಾ। ಸೂರ್ಯನಾರಾಯಣಯ್ಯರರು ಆರೋಗ್ಯ ಮತ್ತು ಸ್ವಚ್ಛತೆಯ ವಿಷಯ ರಾತ್ರಿಹಗಲೆನ್ನದೆ ಪ್ರಯಾಸಪಟ್ಟು ದೇವರ ಅವಭೃತ ಸ್ಥಳದ ವರೆಗೂ ಬಂದು ಪರಿಶ್ರಮಪಟ್ಟು ಗೆಯಿದ ಕೆಲಸವನ್ನು ಎಷ್ಟು ಸ್ತಾಘಿಸಿದರೂ ಸಾಲದು. ಇದರೆಡೆಯಲ್ಲಿ ೧೦ ವರ್ಷಗಳ ಹಿಂದೆಯೇ ಬಡಕಬೈಲು ಪರಮೇಶ್ವರಯ್ಯನವರ ಪ್ರಯತ್ನದಿಂದ ನಿರ್ಮೂಲವಾಗಿ ಪ್ರಕೃತ ಮೆಲ್ಲನೆ ತಲೆಎತ್ತುತ್ತಿರುವ ಜುಗಾರಾಟದ ಸದ್ದಡಗಿಸುವ ಬಂದೋಬಸ್ತಿಗೆ ಬಂದ ಪೋಲೀಸಿನವರ ಆಚರಣೆಯು ಪೂರ್ಣ ಸಮಾಧಾನಕರ. ಭಜಕರಲ್ಲಿ, ದೇವರ ಮೇಲೆ ಹೆಚ್ಚಿನ ವಿಶ್ವಾಸಿಕರಾದ ರಿಟಾಯರ್ಡ ಶಿರಸ್ತೆದಾರ ಮಂಗಳೂರು ಅಚ್ಚುತಯ್ಯನವರು ಅಗಾಗ ಮಲಿನವಾಗುತ್ತಿರುವ ದೇವಳ ಒಳ ಅಂಗಳಕ್ಕೆ ಹಾಸುಕಲ್ಲು ಮುಚ್ಚಿಸಿ ಶಿಲಾಮಯ ಮಾಡಬೇಕೆಂದು ಸುಮಾರು ೧೫೦೦ರೂಪಾಯಿ ಅಂದಾಜುಮಾಡಲ್ಪಟ್ಟು ಭಕ್ತ ಮಂಡಲಿಯಿಂದ ವಂತಿಗೆ ಸಹಾಯಪಡೆಯುವರೆ (೧ ಮಂಗಳೂರು ಅಚ್ಯುತಯ್ಯ, ೨ ಕರಿಯಂಗಳ ಮುತ್ತಯ್ಯಶೆಟ್ರು ೩, ಬಡಕಬೈಲ್ ಪರಮೇಶ್ವರಯ್ಯ, ೪ ಬೇರದ ಅನಂತಯ್ಯ, ೫ ಅಮ್ಮುಂಜೆ ಗುತ್ತು ಸಂಕುಸೆಟ್ರು, ೬ ಅಡಿಗಳ ಪದ್ಮನಾಭ ಭಟ್ರು) ಇವರ ಒಂದು ಕಮಿಟಿಯನ್ನು ಏರ್ಪಡಿಸಿ ಬರುವ ಶ್ರಾವಣದ ಒಳಗೆ ಕೆಲಸ ಪ್ರಾರಂಭಿಸುವರಾಗಿ ನಿಶ್ಚಯಿಸಿದ್ದು ಬಹು ಸಂತೋಷಕರ. ಈ ಮಹೋತ್ಸವದೆಡೆಯಲ್ಲಿ ಗುರುಪುರದವರ ಅಟ್ಟೀರಿ ಅಂಗಡಿಗೆ ಬೆಂಕಿತಾಗಿದ್ದು ಒಂದಲ್ಲದೆ ಬೇರೇನೂ ತೊಂದರೆಗಳೊದಗಲಿಲ್ಲ. ಮಂಗಳೂರು ಸೋಡದಂಗಡಿಗೆ ಮಹಾರಥವು ತಗಲಿ ಸ್ವಲ್ಪ ನಷ್ಟವಾದರೂ ಇನ್ನು ಮುಂದೆ ರಥಬೀದಿಯಲ್ಲಿ ಜಾಗ್ರತೆಯಿಂದ ಸಂತೆಗಳನ್ನು ಕಟ್ಟಿದರೆ ಅಂಥಾ ಬಾಧಕಗಳೇನೂ ಬರಲಾರದು. ದೇವಳ ಅಂಗಳದಲ್ಲಿ ೧೦-೧೫ ಗಜ ದೂರ ಹೊಡಿಯುವ ಆನೆ, ಕುದುರೆ, ಪಿಷ್ಟ್ಯಾ, ಸಿಂಹ ಜೋಡುಗೊಂಬೆ, ಗಗನಮಾಲೆ ಇತ್ಯಾದಿ ಬಾರೂಮುಗಳು ಜಾತ್ರೆಗೆ ಬಂದ ಹೆಂಗಸು ಮಕ್ಕಳು ಜನರ ಗುಂಪಿಗೆ ಬೀಳುತ್ತಿರುವುದರಿಂದ ಈಗ ಹಲವು ವರ್ಷಗಳಿಂದ ನೋಡಿ ನೋಡಿ ದೇವಳ ಮೊಕ್ತೇಸರರು ಸುಮ್ಮಗಿರುವದು ಬಹು ವ್ಯಸನಕರ. ಅದರಿಂದ ಬೆಂಕಿಯ ಅನಾಹುತಗಳು ಕೂಡ ಒದಗುವ ಕಾರಣವಿರುವುದರಿಂದ ಇನ್ನು ಮುಂದಾದರೂ ಆ ರೀತಿ ಆಗದಂತೆ ಅಧಿಕಾರಸ್ಥರು ಜಾಗ್ರತೆ ವಹಿಸಿಕೊಳ್ಳಬೇಕಾಗಿ ಆಗ್ರಹಪೂರ್ವಕ ಪ್ರಾರ್ಥಿಸುತ್ತೇವೆ. ಬರುವ ವರ್ಷ ಜಾತ್ರೆಯೊಳಗಾದರೂ ಬಂಟ್ವಾಳ ಗುರುಪುರ ರಸ್ತೆಯನ್ನು ದಯಾಳು ಬೋರ್ಡಿನವರಿಂದ ಪೂರೈಸಿದರೆ ಸಂಪೂರ್ಣ ಅದರಿಂದ ಮಾಣಿಕವು ಕಳಶ ಜೋಡಿಸಿದಂತೆ ಕರ್ನಾಟಕದ ಮಹಾ ಮಹಾ ರಾಜರ ಸೇವೆಗಳನ್ನು ಪಡೆಯುತ್ತಿದ್ದ ಮಹಾದೇವಿಯು ತಿರಿಗಿ ಪ್ರಸನ್ನತೆಯನ್ನು ಪಡೆವಳೆಂದು ನಿರಾತಂಕವಾಗಿ ಹೇಳಬಹುದು. ಇತಿ,

ಪೊಳಲಿ, ತಾ. 13-4-26. ದುರ್ಗಾದಾಸ,

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕ್ಷಂಕುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀಮಿತ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2—0—0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಸೂಚನೆಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯೆಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.
K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.



ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೪ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ. ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.	ಏಜಂಟರು:— ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ, ಮಂಗಳೂರು ಟವನಿಗೆ ಮಾತ್ರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಫ್ ಕೋಸ್ಟ್ಸ್, ಮೆಮೊರಂಡಮ್ ಒಫ್ ಎಪ್ಪಿಯರೆನ್ಸ, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದುನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಕುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್. ಮಾರ್ಕೆಟು ರೋಡು, ಮಂಗಳೂರು.	ಅಥವಾ	ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | **ವಜ್ರಾಂಗ-ಬಿಂದು** | ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉತ್ಕೃಷ್ಟದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು,

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ನಿರ್ಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುಶಂಕೆಗಿಂತ ಮೊದಲು. ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬಿವಳಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳ ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆನ್ನುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.
ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ನಿಪ್ಪಾಣಿ, (ಜಿಲ್ಲಾ ಬೆಳಗಾಂವ.)

The Canara Pubic Conveyance Co., Ltd, Mangalore.
(ESTABLISHED 1914.)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು:
- ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರು
- ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
- ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
- ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
- ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇತರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್‌ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು

— ಕೀಲಡ್ಡಿಗೆ ಪದಕ. —



ಈ ಅಡ್ಡಿಗೆಯನ್ನು ರೋಲ್ಡ್ ಗೋಲ್ಡ್ ಎಂಬ ಭಂಗಾರದಲ್ಲಿ ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟುನೋಡಲು ಮುದ್ದಾಗಿರುವಂತೆ ತಯಾರಿಸಿದೆ ಮತ್ತು ಇದರ ಪರಡನ್ನು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ತಯಾರಿಸಿದೆ. ಇದನ್ನು ಯಾವಾಗಲೂ ಕಟ್ಟಿಕೊಳ್ಳಲು ಚೆನ್ನಾಗಿರುವದು. ಎಷ್ಟು ಮುಂತಾದವು ಸೇರಿದರೂ ಕೆಡದು. ಇದರ ಬಣ್ಣವು ಎಂದಿಗೂ ಕೆಡದಂತೆ ಸವರನ್ ಬಂಗಾರದ ಬಣ್ಣಕೊಟ್ಟಿರುವದು. ಶ್ರೀಮಂತರೂ, ಗರೀಬರೂ ಉಪಯೋಗಿಸಲು ಲಾಯಖಾದದ್ದು. ಕ್ರಯ 1ಕ್ಕೆ 4/8.

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ
— ಡಾಬುಗಳು. —

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿ ಹೊಂದಿದ ಕೆಲಸಗಾರರಿಂದ ಬಹುಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇವಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ.

ಗೆಜ್ಜೆಡಾಬು 1ಕ್ಕೆ 3—0—0.

— ಇಮಿಟೇಶನ್ ವಜ್ರದ ಬೆಂಡೋಲೆಗಳು. —

ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವುದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7ಕಲ್ಲಿನ ಬಿಳಿಯ ಓಲೆ ಜೊತೆ 3—0—0
" " ಕೆಂಪುಕಲ್ಲಿನ ಓಲೆ ಜೊತೆ 3—8—0.

ವಿಳಾಸ:—ವೈ. ಎಮ್. ಸ್ವಾಮಿ ಅಂಡ್ ಕೊ,
ಪಾರ್ಕ್ ಟೌನ್, ಮದ್ರಾಸು.

Y. M. SWAMY & Co.,
No. 12. Nainiappa Naicken St.,
P. Town, MADRAS

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಟಿ. ಪೇ. ಸುಬ್ಬರಾವ್, ಯಂ. ಜೆ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ, ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಡಬ್ಬಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ
ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦.
ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦.
ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್,
" ಮಿಸ್ರಿ "
ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್,
ಡಿಪ್ಟಿ ಸೇಟಿನ್ ಡಾಕ್ಟರ್,
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ನಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷದ ಪುಟುಕ ಬರುತಿರ್ಪ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೩ನೇ ಶುಕ್ರವಾರ ಏಪ್ರಿಲ್ ೧೯೩೬. ಸಂಚಿಕೆ ೧೮.

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. ಹೆಡ್ ಆಫೀಸು—ಉಡುಪಿ.
Branch:—COONDAPOOR. ಶಾಖೆ:—ಕುಂದಾಪುರ.

ನಿಯಮಿತ ಮೂಲಧನ ರೂ. 3,50,000.
ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

ತಾ. 28—2—36ಕ್ಕೆ ತೋರುವ ಸದರಿ ಬ್ಯಾಂಕಿನ ವಹಿವಾಟುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.		ಆಸ್ತಿ ವ ಸೊತ್ತುಗಳು.	
ವಸೂಲು ಆದ ಮೂಲಧನ	1,80,690—9—11	ಒತ್ತು ಕಟ್ಟೋಣ ಕಚ್ಚಿಣದ ಪೆಟ್ಟಿಗೆಗಳು ವಗೈರೆ	3943—8—0,
ಅವಶ್ಯದ ವ ಇತರ ನಿಧಿಗಳು	75,875—0—0,	ಯೋಗ್ಯಜವಾಬ್ದಾರಿ ಮೇಲೆ ಸಾಲಕೊಟ್ಟದ್ದು	7,58,851-13-8,
ಠೇವಣಾತಿಗಳು	5,30,003-14-3,	ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	25,800—0—0,
ವಸೂಲಿ ಬಗ್ಗೆ ಬಂದ ಹುಂಡಿ ಪತ್ರಗಳ ಬಾಬ್ತು ಕಳುಹಿಸಿದವರಿಗೆ	4,700—0—0,	ವಸೂಲಿ ಬಗ್ಗೆ ಬಂದ ಹುಂಡಿ ಪತ್ರಗಳ ಬಾಬ್ತು	4,700—0—0.
ಖರ್ಚಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು	40,274—3—11,	ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ)	22,795—6—6,
		ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ	15,452—15—11,
ಜುಮ್ಲಾ ರೂ.	8,31,543-12-1	ಜುಮ್ಲಾ ರೂ.	8,31,543-12-1.

ನಿರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಖಂ ಠೇವಣಾತಿಗಳನ್ನೂ ಕಂತು ಠೇವಣಾತಿಗಳನ್ನೂ ಚಾಲ್ತಿ ಮತ್ತು ಸೇವಿಂಗ್ಸ್ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನೂ, ಸಾವುಕಾರಿ ಹುಂಡಿಗಳನ್ನೂ, ವಟ್ಟಾಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಖಚೇರಿಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು,
ಉಡುಪಿ, ತಾ. ೨೮—೨—'೨೬.

ನಯಂಪಳ್ಳಿ ಆನಂದರಾವ್, ಸೆಕ್ರೆಟರಿ.

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣವು ದೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ದೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ತಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ದೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಅಣೆ. ಡಜನ್ 1ಕ್ಕೆ ರೂ. 6—[illegible]—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಅಣೆ.

ಅಮೃತಾಂಜನ ಡಿಪೊ.

[illegible] 7 [illegible],
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ [illegible] ಮಾರ್ಕೆಟ್, ಹಂಪನಕಟ್ಟೆ, ಇವರಲ್ಲಿಯೂ ದೊರೆಯುವುದು.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ನಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ...

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, " ಮಿಸ್ರಿ " ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀ ಯುವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮು ಮತ್ತು ಸೀತೆ, ಅಂದ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಡತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ಬೈಲು ಬೆರ್ಜಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಜೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ಚಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ, ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲ 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

11 ಮಣಿಗಳಿದ್ದು ಬ್ರಿಜ್ ಮ್ಹೂಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟವಾಚ್.



ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8 18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ದಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.

ಚಲೋದಾದ ಲವ್ ನಕ್ಲೆಸಗಳು ಡಜನ್ 1ಕ್ಕೆ ರೂ. 2/4

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ, ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.
ಬಾಟ್ಲಿವಾಲರ ಕಾರ್ ಆರ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಟೈರಿಯನ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩.
ಬಾಟ್ಲಿವಾಲರ ಕ್ವಿನೇನ ಚೀಟುಗಳು—೨ಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ಕಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಕಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

The Canara Pubic Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು—
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂವರದ ನಿಜ ಚೈತ್ರ ಬ| ೪ ಶನಿವಾರದಿಂದ ಕ್ಷಯ ಸಂವರದ ನಿಜ ಚೈತ್ರ ಬ| ೧೦ ಶುಕ್ರವಾರದ ವರೆಗಿನ ಪಂಚಾಂಗ

(೧೯೨೬ನೆಯ ಮೇಷ ಪಕ್ಷ.)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
1	ಶನಿ	೪	೫೪.೧೬	ಜ್ಯೇಷ್ಠಾ	೨೭.೫೧	೧೮	6.12	6.44
2	ರವಿ	೫	೪೯.೧೪	ಮೂಲಾ	೨೫.೧೬	೧೯	6 12	6.44
3	ಸೋಮ	೬	೪೪.೨೮	ಪೂ. ಷಾ.	೨೨.೧೪	೨೦	6.11	6 44
4	ಮಂಗಳ	೭	೩೮.೪೪	ಉ. ಷಾ.	೧೮.೪೬	೨೧	6.11	6.44
5	ಬುಧ	೮	೩೩. ೦	ಶ್ರವಣಾ	೧೪ ೪೪	೨೨	6.11	6.44
6	ಗುರು	೯	೨೬.೫೮	ಧನಿಷ್ಠಾ	೧೦.೪೩	೨೩	6 10	6.44
7	ಶುಕ್ರ	೧೦	೨೧. ೨	ಶತಭಿಷಾ	೬.೪೫	೨೪	6 10	6.45

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
23	90—6	76—2	—	—
24	92—0	79—8	—	—
25	91—6	78—5	—	—
26	92—1	76—3	—	—
27	90—7	78—7	—	—
28	92—5	81—1	—	—
29	93—0	81—4	—	— 103-46

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ	8— 4	9— 0
ಹೊಸ ಗುಡ್ಡು ...	7— 10	8— 4
ಹೊಸ ರಾಶಿ ಸುಗ್ಗಿ ...	7— 2	7—12
ಅವ್ವಲ್ ಬೆಸ್ತಿಗೆ ...	8— 0	9— 0
ರಂಗೂನು ಬೆಸ್ತಿಗೆ ಗೋಣಿ ೧ ...	13— 0	14— 0
ಗೋದಿ ಗೋಣಿ ೧ಕ್ಕೆ ...	18— 0	20— 0
ಹುರುಳಿಗೋಣಿ ೧ಕ್ಕೆ ...	7—14	8— 8
ಕಡಲೆಗೋಣಿ ೧ಕ್ಕೆ ...	12— 8	13— 0
ತೊಗರಿಗೋಣಿ ೧ಕ್ಕೆ ...	16— 0	16— 8
ತೊಗರಿಬೇಳೆ ಗೋಣಿ ೧ಕ್ಕೆ ...	18— 0	23— 0
ಉದ್ದಿನಗೋಣಿ ೧ಕ್ಕೆ ...	15— 8	—
ಹೆಸರುಗೋಣಿ ೧ಕ್ಕೆ ...	15— 4	15 8
ಊರು ಬೆಲ್ಲ ಖಂಡಿ ೧ಕ್ಕೆ ...	60— 0	65— 0
ಉಪ್ಪು ಗೋಣಿ ೧ಕ್ಕೆ ...	4— 8	4—12
ಕೊಬ್ರಿ ಖಂಡಿ ೧ಕ್ಕೆ ...	96— 0	100— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	29— 0	30— 0
ಎಳ್ಳಿಂಡಿ ಖಂಡಿ ೧ಕ್ಕೆ ...	55— 0	62— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	7— 8	8— 8
ಎಳ್ಳೆಣ್ಣೆ ಮುಡಿ ೧ಕ್ಕೆ ...	7— 8	9— 0
[illegible] ...	8.12.0	—
[illegible] ಮುಡಿ ೧ಕ್ಕೆ ...	4—10	4—11
[illegible] ಮುಡಿ ೧ಕ್ಕೆ ...	5— 4	5— 8
[illegible] ಮುಡಿ ೧ಕ್ಕೆ ...	9— 4	9— 8
[illegible] ಮುಡಿ ೧ಕ್ಕೆ ...	3—14	4— 8
ಕಾಫಿ ಖಂಡಿ ೧ಕ್ಕೆ ...	360— 0	372— 0
[illegible] ಅಡಿಕೆ ಖಂಡಿ ೧ಕ್ಕೆ [illegible] ...	265— 0	280— 0
ಹೊಸ ಅಡಿಕೆ ಖಂಡಿ ೧ಕ್ಕೆ ...	200— 0	—
ಕಾಳುಮೆಣಸು ಖಂಡಿ ೧ಕ್ಕೆ ...	265— 0	—
[illegible] ಮುಡಿ ೧ಕ್ಕೆ ...	50— 0	64— 0
[illegible] ಮುಡಿ ೧ಕ್ಕೆ ...	3— 9	3—10
[illegible] ಖಂಡಿ ೧ಕ್ಕೆ ...	45— 0	65— 0
[illegible] ಮುಡಿ ೧ಕ್ಕೆ ...	16— 4	16—12
[illegible] ಮುಡಿ ೧ಕ್ಕೆ ...	21— 0	—
[illegible] ೧ಕ್ಕೆ ...	18—10	
[illegible] ಮುಡಿ ೧ಕ್ಕೆ ...	16— 8	
[illegible]	13—10	

ಬಿಟ್ಟಿ! ಇನಾಂ!! ಪುಗಸಟ್ಟೆ!!!



ವೈದ್ಯವಿದ್ಯ

NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುಧಾರಿಕ ಕ್ರಮದಲ್ಲಿ ಮಾಡಲ್ಪಟ್ಟವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

ವಿಲ್ಕಿನ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್, ಮುಂಬಯಿ.

ಕೇಳಿರಿ! ಬರೆಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ— ಡಿ. ಊಲನ್ ಮಾರ್ಟ್,
ಮಂಗಳೂರು.

ಇಂಗ್ಲೀಷು ಡಾಕ್ಟರುಗಳು ರಬ್ಬಿನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಈ ಪ್ರಪಂಚದಲ್ಲಿ ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಬಾಕಿ, ಪರ್ಮ, ಮುಹುಳು, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಅದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷು ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವುದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಗಂಡಸರದು ರೂ. 0-12-0. ಹೆಂಗಸರದು ರೂ. 3-4-0.

ವಿಳಾಸ—ಎಸ್. ಪಾಲ್ ಅಂಡ್ ಕೊ,
ಪಿ. ಬಿ. ನಂಬರ್ 542,
ಪಾರ್ಕಟೌನ್ ಮದ್ರಾಸು.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು—

ಸರ್ವಿಸಿನ ಹೆಸರು.	ತಲುಪುವ ಸ್ಥಳ.	ಹೊರಡುವ ಘಂಟೆ.
ಜನರಲ್	ಕಾರ್ಕಳ—ಆಗುಂಬೆ—ತೀರ್ಥಹಳ್ಳಿ	ಪೂ. $6\frac{1}{2}$
ಸಿ. ಪಿ. ಸಿ.	ಉಡುಪಿ—ಕುಂದಾಪುರ—ಬೈಂದೂರು	,, $6\frac{3}{4}$, $9\frac{3}{4}$
	ಉಡುಪಿ	ಮ. $12\frac{3}{4}$
	ಮುಲ್ಕಿ ವರೆಗೆ ಮಾತ್ರ	ಅ. $3\frac{3}{4}$
	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ.	ಪೂ. 7, ಮ. 1
	ಕಾರ್ಕಳ—ಬೇಲೂರಿನಿಂದ	
	ಬಂಟ್ವಾಳಕ್ಕೆ ಮಾತ್ರ	,, $10\frac{3}{4}$, ಅ. $4\frac{3}{4}$
	ಪುತ್ತೂರು—ಸಂಪಾಜೆ—ಮಡಿಕೇರಿ	,, $7\frac{1}{2}$
	ಪುತ್ತೂರು	ಪೂ. $10\frac{1}{2}$ ಅ. 2
ಕಾರ್ಕಳ	ಕಾರ್ಕಳ—ಉಡುಪಿ—ಕುಂದಾಪುರ	ಪೂ. 6
	ಕಾರ್ಕಳಕ್ಕೆ ಮಾತ್ರ.	ಅ. 1
ಹನುಮಾನ್	ಕಾರ್ಕಳ—ಉಡುಪಿ—ಕುಂದಾಪುರ	ಪೂ. 7
	ಕಾರ್ಕಳಕ್ಕೆ ಮಾತ್ರ.	ಮ. 12
ಶಂಕರ್ ವಿಠ್ಠಲ್	ಪುತ್ತೂರು—ಮಡಿಕೇರಿಗೆ	ಪೂ. 7
	ಪುತ್ತೂರು—ಉಪ್ಪಿನಂಗಡಿ	ಅ. $1\frac{1}{2}$
	ವಿಟ್ಲಕ್ಕೆ	ಪೂ. 8, ಅ. $2\frac{1}{2}$
	ಉಡುಪಿ	ಪೂ. $7\frac{1}{2}$ ಅ. $1\frac{1}{2}$
ಸ್ಟಾರ್	ಮುಲ್ಕಿ—ಉಡುಪಿ	,, 7, ಮ. 1
	ಬಂಟ್ವಾಳ	,, $10\frac{1}{2}$, ಅ. $4\frac{1}{2}$
ಇಂಡಿಯನ್	ಮುಲ್ಕಿ—ಉಡುಪಿ,	,, $6\frac{1}{2}$, ಮ. $12\frac{1}{2}$
ಪೊಪ್ಯುಲರ್	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ	ಪೂ. $7\frac{1}{2}$ ಮ. $12\frac{1}{2}$

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ, ಹೊರಡುವವು.

ರೈಲುಮಾರ್ಗವಾಗಿ—

ಗಾಡಿಗಳು	ಹೊರಡುವ ಘಂಟೆ	ತಲುಪುವ ಘಂಟೆ
ಮೈಲ್	ಬೆಳಗ್ಗೆ 8	ಸಂಜೆ 5-30
ಲೋಕಲ್	,, 10	,, 4-30
ಸೆಟಲ್	ಸಂಜೆ 5-40	ಬೆಳಗ್ಗೆ 9-55

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ಹಾಗು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಫೋಷಕರಿಗೆ	... ...	ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಫೋಸ್ಟೇಜು ಸೇರಿ		„ 2—8—0.
„ ಸ್ಥಳೀಕರಿಗೆ	...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ ೪ ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, ೮ ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 5 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಬುಶ್ಮರ್ ರೇಶ್ಮೆ ಮಡಿಗಳು, ಜಾಮ್ದಾನಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು, ಕಂಪೆನಿ, ಚೌಕಂಬಾ. ಕಾಶೀ ಕ್ಷೇತ್ರ.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಶುಭಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸ್ವಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವಹಾಗೆ ಒಂದು ದೇಶದ ಮರ್ಮಶಾಸ್ತ್ರವು ಇರುವುದು ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.
ಸುಪ್ರಸಿದ್ಧವಾದದ್ದು.
ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, ಮದ್ರಾಸ್.

ನೋಟೀಸು.

ಮೂಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ವೋಟರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—ಶ್ರೀ ದೇವಸ್ಥಾನದ ಆಡಳಿತೆ ಕ್ರಮಗಳಿಗನುಸಾರವಾಗಿ ಈ ಮುಂಚೆ ಮೊಕ್ತೇಸರರೇ ಕೌನ್ಸಿಲಿಗೆ ಚುನಾಯಿಸಲ್ಪಟ್ಟ ಐದು ಜನ ಮೊಕ್ತೇಸರರೂ ಒಮ್ಮೆಲೇ ಎಂಬಂತೆ ತಮ್ಮ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟಿರುವುದರಿಂದ, ಸದರಿ ಕೌನ್ಸಿಲರರ ಸ್ಥಾನಗಳನ್ನು ಭರ್ತಿ ಮಾಡುವ ಬಗ್ಗೆ ಇದೇ 1926ನೇ ಇಸವಿ ಮೇ ತಿಂಗಳ ತಾ. 10ನೇ ಸೋಮವಾರ ಶ್ಯಾಮ ಘಂಟೆ 7ಕ್ಕೆ ಮಹಾಸಭೆ ಕೂಡಬೇಕಾಗಿ ಇದೇ ಎಪ್ರಿಲ್ ತಾ. 20ರಲ್ಲು ಕೂಡಿದ ವೋಟರರ ಮಹಾಸಭೆಯಲ್ಲಿ ನಿರ್ಣಯಿಸಿರುವುದರಿಂದ ಎಲ್ಲಾ ಓಟರರು ಸದರಿ ದಿನ ಕ್ಲಪ್ತ ಸಮಯದಲ್ಲಿ ಶ್ರೀ ದೇವಸ್ಥಾನದ ಮಸಂತಮಂಟಪದ ಆಫೀಸಿನಲ್ಲಿ ಸಭೆ ಸೇರಬೇಕಾಗಿ ಅಪೇಕ್ಷಿಸುತ್ತೇನೆ.

ಶ್ರೀ ವೆಂಕಟರಮಣ ದೇವಸ್ಥಾನ
ಮೂಲ್ಕಿ, ತಾ. 23-4-26.

U. N. Shenai,
Manager.

NOTICE.

Intending applicants for Scholarships to the A. Subba Rao Memorial Fund are requested to send their applications, with the nccessary testimonials of proficiency and of want of means, so as to reach the undersigned by the 22nd May 1926.

29—4—'26.

M. Madhava Rau,
Secretary,
A. S. R. MEOMRIAL FUND,
Kodialbail P. O. Mangalore.

ಮಂಗಳೂರು ತಾಲೂಕು ಬೋರ್ಡು.

ಶ್ರೀಯುತ ಕೆ. ರಘುಚಂದ್ರ ಬಲ್ಲಾಳ್, ಎಮ್. ಎಲ್. ಸಿ., ಮೆಂಬರ್, ತಾಲೂಕು ಬೋರ್ಡ್, ಇವರು ಮೇಲ್ಕಂಡ ಬೋರ್ಡಿನ ಬರುವ ಸಭೆಯಲ್ಲಿ ಕೆಳಗಣ ಪ್ರಶ್ನೆಗಳನ್ನು ಕೇಳುವರೆಂದು ಸದರಿ ಬೋರ್ಡಿನ ಪ್ರೆಸಿಡೆಂಟರಿಗೆ ಸೂಚಿಸಿರುತ್ತಾರೆ.

ಪ್ರಶ್ನೆಗಳು.

೧ (a) ಇದೇ ಇಸವಿ ಜನವರಿ ಲಾಗಾಯ್ತು ಮಂಗಳೂರು ತಾಲೂಕ ಬೋರ್ಡಿನ ಆಡಳಿತೆಯಲ್ಲಿರುವ ರಸ್ತೆ ಸಾಲುಮರಗಳ ಪೈಕಿ ಎಷ್ಟು ಮರಗಳನ್ನು ಮಾರಾಟಮಾಡೋಣಾಗಿಯದೆ?

(b) ಸದರಿ ಮರಗಳು ಯಾವ್ಯಾವ ರಸ್ತೆಗಳಲ್ಲಿ ಇರುತ್ತಿದ್ದವು? ಮತ್ತು ಯಾವ್ಯಾವ ಜಾತಿಯವುಗಳು?

(c) ಸದರಿ ಮರಗಳನ್ನು ಮಾರಾಟ ಮಾಡಲಿಕ್ಕೆ ಕಾರಣವೇನು? ಸದರಿ ಮಾರಾಟಗಳು ಬೋರ್ಡಿನ ಯಾವ್ಯಾವ ಸಭೆಗಳಲ್ಲಿ ಸೆಂಕ್ಷನ್ ಮಾಡಲ್ಪಟ್ಟಿದ್ದವು?

(d) ಸದರಿ ಮರಗಳನ್ನು ಮಾರಾಟದಲ್ಲಿ ಪಡೆದವರ ಹೆಸರು ಮತ್ತು ವಿಳಾಸ ಯಾವದು?

(e) ಸದರಿ ಮರಗಳ ಮಾರಾಟದಿಂದ ಹುಟ್ಟಿಬಂದ ಒಟ್ಟು ಮೊಬಲಗು ಎಷ್ಟು? ಅದನ್ನು ಯಾವ ಬಗ್ಗೆ ವಿನಿಯೋಗಿಸಿಯದೆ ಅಥವಾ ವಿನಿಯೋಗಿಸುವರೆ ಆಲೋಚಿಸಿಯದೆ?

(f) ಕಳೆದ ಮೂರು ಅಫೀಶಿಯಲ್ ವರುಷಗಳಲ್ಲಿ ಮಾರಾಟ ಮಾಡೋಣಾದ ಮರಗಳ ತಪಶೀಲು ಪಟ್ಟಿಯನ್ನು ಮೇಜಿನ ಮೇಲೆ ಇಡಬಹುದೇ?

೨ (a) ೧೯೨೫ನೇ ಇಸವಿ ಎಪ್ರಿಲ್ ಲಾಗ್ಯಾತು ಈ ವರೇಗೆ ಮಂಗಳೂರ ತಾಲೂಕು ಬೋರ್ಡ ಶಾಲೆಗಳಲ್ಲಿ ನೇಮಿಸ್ಪರು ಹೊಂದಿದ ತರ್ಬೇತಾದ ಉಪಾಧ್ಯಾಯರು ಯಾರ್ಯಾರು? ಯಾವ್ಯಾವ ಶಾಲೆಗಳಲ್ಲಿ? ಅಂಥವರ ಪೈಕಿ ಬೋರ್ಡಿನಿಂದ ತರ್ಬೇತ ವೇತನ ಪಡೆದವರು ಯಾರ್ಯಾರು? ಅವರೆಲ್ಲರೂ ತರ್ಬೇತ ಸರ್ಟಿಫಿಕೇಟ ಹೊಂದಿದ್ದಾರೋ?

(b) ಸದರಿ ಕಾಲದಲ್ಲಿ ಬೋರ್ಡು ಶಾಲೆಗಳಲ್ಲಿ ತರ್ಬೇತಾಗದೆ ಇದ್ದವರನ್ನು ಉಪಾಧ್ಯಾಯರಾಗಿ ನೇಮಕ ಮಾಡಿಯದೊ? ಮಾಡಿದ್ದಾದರೆ ಯಾವ ಸಬಬಿನ ಮೇಲೆ? ಯಾವ್ಯಾವ ಶಾಲೆಗಳಿಗೆ?

(c) ಸದರಿ ಕಾಲದಲ್ಲಿ ನೇಮಕಪಟ್ಟ ತರ್ಬೇತಾದ ವ ತರ್ಬೇತಾಗದ ಉಪಾಧ್ಯಾಯರುಗಳ ಜಾತಿ, ಮತ, ವಿದ್ಯಾಯೋಗ್ಯತೆ ಕುರಿತು ಒಂದು ತಪಶೀಲು ಪಟ್ಟಿಯನ್ನು ಮೇಜಿನ ಮೇಲೆ ಇಡಬಹುದೇ?

ವಿದೇಶ ವರ್ತಮಾನ.

—ಚೀನಾದೇಶದಲ್ಲಿ ಕ್ಯುಮಿನ್‌ಜನನು ಪೆಕಿಂಗ್ ಪಟ್ಟಣವನ್ನು ಬಿಟ್ಟು ಕೊಡುವಾಗ ಕೆಬಿನೆಟ್ ಹೌಸನ್ನು ಕಾಯುತ್ತಿದ್ದ ಗಾರ್ಡರನ್ನು ಕೊಂದು ಹಾಕಬೇಕೆಂದು ಸೇನಾಪತಿಗೆ ಅಪ್ಪಣೆ ಕೊಟ್ಟನು. ಈ ಗಾರ್ಡರು ೪೦೦ ಮಂದಿ ಇದ್ದರು. ಇವರಲ್ಲಿ ೧೦೦ ಮಂದಿಯನ್ನು ಮೆಶಿನ್‌ಗನ್ನುಗಳಿಂದ ಕೊಂದುಹಾಕಿದರು.

ಪರದೇಶ ವರ್ತಮಾನ.

ದಕ್ಷಿಣ ಕನ್ನಡ.

ಪಾಣೆಮಂಗಳೂರು:—ಇಲ್ಲಿ ಬೋರ್ಡು ಹುಡುಗಿಯರ ಶಾಲೆ, ಬೋರ್ಡು ಮಾಪಿಳ್ಳ ಶಾಲೆ, ವಿಠಲಸ್ವಾಮಿ ಎಲಿಮೆಂಟರಿ ಶಾಲೆ ಎಂಬ ೩ ಹೆಸರಿನ ೩ ಎಲಿಮೆಂಟರಿ ಶಾಲೆಗಳು ಇವೆ. ಆದರೆ ಇವುಗಳಲ್ಲಿ ಸಿಐವಿಗಿ ಹುಡುಗರ ಸಂಖ್ಯೆ ಸರಿ ಇರುವ ಶಾಲೆಯು ವಿಠಲಸ್ವಾಮಿ ಎಲಿ…

ಮಂಗಳೂರು.

ದಕ್ಷಿಣ ಕನ್ನಡದ ಚತುರ್ಥ ರಾಜಕೀಯ ಪರಿಷತ್ತು.

ಸ್ವಾಗತ ಕಮಿಟಿಯ ಅಧ್ಯಕ್ಷರಾದ ಎಂ. ಸಾಹುಕಾರರು ಶುದ್ಧ ಸ್ವದೇಶಿ ಉಡುಪನ್ನೆ ತೊಟ್ಟುಕೊಂಡು ಬಂದಿದ್ದರು. ಅವರು ತನ್ನ ಭಾಷಣದಲ್ಲಿ "ನಮ್ಮ ಜಿಲ್ಲೆಯು ಒಂದು ಮೂಲೆಯಲ್ಲಿದ್ದುದಿನೊಂದು ಅಲಕ್ಷ್ಯಕಾರಣವೆ ಇದೆ ನಮ್ಮ ಜನರು ಹೆಚ್ಚಿನ ಮಟ್ಟಿಗೆ ರಾಜಕಾರಣದಲ್ಲಿ ಮುಂದರಿದಿರುವುದಿಲ್ಲ. ಆದರೂ ನಮ್ಮ ಕೆಲವರಲ್ಲಿ ದೇಶಾಭಿಮಾನೋತ್ಸಾಹವು ಅಧಿಕವಾಗಿರುತ್ತದೆ. ನಾವು ಪಂಗಡಪಂಗಡಗಳಾಗಿ ವಿಭಕ್ತರಾಗಿದ್ದರೂ ಸ್ವರಾಜ್ಯ ಅಂದರೆ ಸಾಮ್ರಾಜ್ಯಾಂತರ್ಗತ ಹೋಮ್ ರೂಲನ್ನು ಪಡೆವುದರಲ್ಲಿ ನಾವ…

ಅನು ಕ್ರಮ ಣಿ ಕೆ.

ಅಗ್ರಲೇಖ	ಪುಟ
ಸಬರ್ಮತಿಯ ರಾಜಿ	೬
ಕರ್ನಾಟಕ ರಂಗಭೂಮಿ	"
ಸ್ಫುಟವಿಚಾರಗಳು	೬-೭
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೫
ದಕ್ಷಿಣ ಕನ್ನಡ—ಪಾಣೆಮಂಗಳೂರು, ಬಂಟವಾಳ	"
ಮಂಗಳೂರು	"
ದಕ್ಷಿಣ ಕನ್ನಡದ ಚತುರ್ಥ ರಾಜಕೀಯ ಪರಿಷತ್ತು	"
ವಿವಿಧ ವಿಷಯ	೮
ಮಂಗಳೂರು ತಾಲೂಕು ಬೋರ್ಡು	೪

ಸ್ವದೇಶಾಭಿಮಾನಿ.

ಶಕ ೧೮೪೮ ನಿ. ಚೈತ್ರ ಬ| ೪ಯು ಶುಕ್ರವಾರ.

ಸಬರ್ಮತಿಯ ರಾಜಿ.

ಸ್ವರಾಜ್ಯ ಪಕ್ಷೀಯರಲ್ಲದವರೆಲ್ಲಾ ಪಕ್ಷದ ಧುರೀಣರು ಒಟ್ಟುಗೂಡಿದ ಮೇಲೆ, ಸ್ವರಾಜ್ಯ ಪಕ್ಷೀಯರು ತಮ್ಮ ಪಕ್ಷವನ್ನು ಮತ್ತಷ್ಟು ಘಟ್ಟಿ ಮಾಡುವುದೂ, ಮುಂದೆ ಪುನಃ ಕ್ಷೀಣಿಸದಂತೆ ನೋಡುವುದು ಕೇವಲ ಆವಶ್ಯಕವಾದ ವಿಷಯವಾಯಿತು. ಈ ದೃಷ್ಟಿಯಿಂದಲೇ ಪ್ರತೀ ರಾಷ್ಟ್ರೀಯ ಪಕ್ಷದವರು ಸಬರ್ಮತಿ ಪರಿಷತ್ತನ್ನು ಅಭಿನಂದಿಸುವರಲ್ಲದೆ ಬೇರಲ್ಲ.

ಸಬರ್ಮತಿ ಠರಾವುಗಳ ವಿಷಯದಲ್ಲಿ ಒಂದೊಂದು ಪಕ್ಷದವರು ಒಂದೊಂದು ಅಭಿಪ್ರಾಯಗಳನ್ನು ಕೊಡುತ್ತಾರೆ. ಲಿಬರಲ್, ಇಂಡಿಪೆಂಡೆಂಟ್ ಇತ್ಯಾದಿ ಮೊನ್ನೆ ಕೂಡಿದ ನೆಶನಲಿಸ್ಟ ಪಕ್ಷದವರು, ಈ ರಾಜಿಯಿಂದ ರಿಸ್ಪೊನ್ಸಿವ್ ಕೊ-ಒಪರೇಟರರು ಮೋಸಹೋದರೆಂದು ಹೇಳುತ್ತಾರೆ. ಕಾರ್ಯತಃ ಇದರಿಂದ ಈ ನೆಶನಲಿಸ್ಟ ಪಕ್ಷದವರೇ ಮೋಸಹೋದರು. ನೆಶನಲಿಸ್ಟ ಪಕ್ಷಸ್ಥಾಪನೆಯ ಮೂಲಕರ್ತರು ರಿಸ್ಪೊನ್ಸಿವ್ ಕೊ-ಒಪರೇಟರರ ಸಹಾಯದ ಮೇಲೂ, ಅವರನ್ನು ಸೇರಿಸಿಕೊಳ್ಳುವ ಆಶೆಯ ಮೇಲೂ, ಈ ಕೆಲಸಕ್ಕೆ ಕೈಹಾಕಿದ್ದರು. ದೇಶಕ್ಕೆ ಲಿಬರಲ್ ತತ್ವಗಳು ಬೇಡವಾಗಿವೆ. ಈಗಲೇ ರಾಷ್ಟ್ರೀಯ ಪಕ್ಷದಿಂದ ಹೊರಬಂದಿರುವ ರಿಸ್ಪೊನ್ಸಿವ್ ಕೊ-ಒಪರೇಟರರ ರಾಷ್ಟ್ರೀಯತೆಯಿಂದಲಾದರೂ ದೇಶದ ಮುಂದೆ ಚುನಾವಣೆಗಾಗಿ ಹೋಗಲೆಂದು ಅವರು ಧೈರ್ಯಪಟ್ಟಿದ್ದರು; ಮತ್ತು ಅವರನ್ನು ಒಲಿಸಲೆಂದೇ ಮಿತ್ರಸತ್ಯಾಗ್ರಹದ ಆಚರಣೆಯನ್ನೂ ತಮ್ಮ ಕಾರ್ಯಕ್ರಮದಲ್ಲಿ ಸೇರಿಸಿ ಬಿಟ್ಟಿದ್ದರು. ಈಗ ನೋಡಿದರೆ ಯಾರ ಸಹಕಾರದ ಮೇಲೆ ಈ ನೆಶನಲಿಸ್ಟರು ಹೊಂದಿಕೊಂಡಿದ್ದಾರೊ ಅವರೇ ತಪ್ಪಿಹೋದರು. ಫಲತಃ ನೆಶನಲಿಸ್ಟ ಪಕ್ಷವೇ ಮೋಸಹೋಯಿತು.

ಈಗ ಸದ್ಯಕ್ಕೆ ಉಂಟಾಗಿರುವ ರಾಜಿಯಿಂದ, ಮುಂದಿನ ಚುನಾವಣೆ ಬಗ್ಗೆ ಸ್ವರಾಜ್ಯ ಪಕ್ಷೀಯರಿಗೆ ಸ್ವಲ್ಪ ಬಲವಾಯಿತು ನಿಜ; ಆದರೆ ಸ್ವರಾಜ್ಯ ಪಕ್ಷೀಯರ ಮತ್ತು ರಿಸ್ಪೊನ್ಸಿವ್ ಕೊ-ಒಪರೇಟರರ ಪುನರ್ಮಿಲನವು ಬರೇ ಕೃತಿಮವಾಗಿದೆಯೆಂದು ನಾವು ಒಪ್ಪಲೇ ಬೇಕಾಗಿದೆ. ಹೊಸ ನೆಶನಲಿಸ್ಟ ಪಕ್ಷದ ಐಕ್ಯದ ಪ್ರಯತ್ನಕ್ಕಾಗಿ ಅವರನ್ನು ನಾವು ಎಷ್ಟು ಮಾನಿಸಬಹುದೊ, ಈ ರಾಷ್ಟ್ರೀಯ ಪಕ್ಷಗಳ ಐಕ್ಯದ ಪ್ರಯತ್ನಕ್ಕಾಗಿ ಈ ಧುರೀಣರನ್ನು ನಾವು ಅಷ್ಟೇ ಮಾನಿಸಬೇಕಾಗಿದೆ. ಏಕೆಂದರೆ, ಆ ಐಕ್ಯದ ಉದ್ದೇಶವೂ, ಸಾಧನೆಯೂ, ಪರಿಣಾಮವೂ ಈ ಐಕ್ಯದ ಉದ್ದೇಶವೂ, ಸಾಧನೆಯೂ, ಪರಿಣಾಮವೂ ಒಂದೇ ಆಗಿದೆ.

ಈ ಸಬರ್ಮತಿ ರಾಜಿಯಿಂದ ಸ್ವರಾಜ್ಯ ಪಕ್ಷದ ಧುರೀಣರಾಗಲಿ, ರಿಸ್ಪೊನ್ಸಿವ್ ಕೊ-ಒಪರೇಟರರ ಧುರೀಣರಾಗಲಿ ಎರಡು ಕಡೆಯವರಿಗೂ ತೃಪ್ತಿಯಿದ್ದಂತೆ ಕಾಣುವುದಿಲ್ಲ. ಸ್ವರಾಜ್ಯ ಪಕ್ಷೀಯರಾದ ಶ್ರೀಯುತ ಪ್ರಕಾಶಮರು ಕಾಂಗ್ರೆಸ್ಸು ಕಾನಪುರದಲ್ಲಿಯೇ ಸಾಕಷ್ಟು ತನ್ನ ಕಾರ್ಯಕ್ರಮವನ್ನು ತಗ್ಗಿಸಿಯದೆ, ಇನ್ನೂ ತಗ್ಗಿಸಲು ಯಾವ ಕಾರಣವೂ ಇರುವುದಿಲ್ಲವೆಂದೂ, ರಿಸ್ಪೊನ್ಸಿವ್ ಕೊ-ಒಪರೇಟರರು ತಮ್ಮ ಕಾರ್ಯಕ್ರಮವೇ ಜಗನ್ಮಾನ್ಯವೆಂದು ಭಾವಿಸುವರಾದರೆ, ಕಾಂಗ್ರೆಸ್ಸು ಬಹುಮತವನ್ನು ಹೊಂದಿ ಆ ಮೇಲೆ ಅದನ್ನು ಸಾಧಿಸಲಿ ಎಂದು ಹೇಳುವರು. ಶ್ರೀಯುತ ಶ್ರೀನಿವಾಸ ಐಯ್ಯಂಗಾರರು ಈ ರಾಜಿ ಶರ್ತಗಳನ್ನು ಪ್ರಶಂಸಿಸಲಾರರಾದರೂ ಶ್ರೀಯುತ ಸತ್ಯಮೂರ್ತಿಯವರು ಈ ರಾಜಿಯ ವಿಷಯವಾಗಿ ಅಸಮ್ಮತಿಯನ್ನೆ ಪ್ರಕಟಿಸಿರುವರು.

ರಿಸ್ಪೊನ್ಸಿವ್ ಕೊ-ಒಪರೇಟರರಾದ ಶ್ರೀಯುತ ಕೇಳ್ಕರರೂ, ದಳವಿಯವರೂ ಒಂದು ಐಕ್ಯವಾಗಬೇಕೆಂಬ ಸೂತ್ರದಿಂದ ರಾಜಿಗೆ ಒಪ್ಪಿಗೆ ಕೊಟ್ಟಿರುವಂತೆ ತೋರುತ್ತಿದೆ. ತಮಗೆ ಬೇಕಾದ ಹಾಗೆ ಎಲ್ಲ ಶರ್ತಗಳು ಆಗಿರದಿದ್ದರೂ, ಜನತೆಯು ಕ್ರಮೇಣ ತಮ್ಮ ಮತಕ್ಕೇನೆ ಬರುತ್ತಿದೆ ಎಂದು ಈ ರಾಜಿಯು ಸೂಚಿಸುವುದೆಂದು ಅವರು ತಮ್ಮ ಧೋರಣವನ್ನೇ ಡಂಗುರ ಹಾಕುತ್ತಿರುವರು. ಇವೆಲ್ಲರ ಅಭಿಪ್ರಾಯಗಳನ್ನು ಒಟ್ಟು ಮಾಡುವಾಗ ಈ ರಾಜಿಯು ಒಂದು ಚುನಾವಣೆಯ ವಿಷಯವನ್ನು ಬಿಟ್ಟರೆ ಹೆಚ್ಚು ಪರಿಣಾಮಕಾರಿಯಾದೀತೊ ಎಂಬುದು ಸಂದೇಹಕರವಿದೆ.

ಹೇಗೂ ಚುನಾವಣೆಯ ಕ್ಷೇತ್ರದಲ್ಲಿ ನಾಲ್ಕಿಪ್ಪತ್ತು ಪಕ್ಷಗಳು ಸೊಂಟ ಕಟ್ಟಿ ಎದುರಾಡುವುದಕ್ಕಿಂತ ಈಗಿನ ಈ ಪಕ್ಷಗಳ ರಚನೆಯು ಉತ್ತಮವಾಯಿತು, ಮತ್ತು ರಾಜಕೀಯ ರಂಗದೊಳಗಿನ ಪರಸ್ಪರ ದೋಷೋದ್ಘಾಟನದ ಮನಸ್ಸಿಗೆ ಬೇಸರವನ್ನುಂಟುಮಾಡುವ ಪರಿಸ್ಥಿತಿಯು ಹೋಯಿತು. ಮತದಾರರ ಮೇಲೆ ಉತ್ತಮ ಪರಿಣಾಮವಾಯಿತು. ಇಷ್ಟಕ್ಕಾಗಿ ನಾವು ಈ ರಾಜಿಯನ್ನು ಒಪ್ಪುವೆವು.

ಆದರೆ ರಿಸ್ಪೋನ್ಸಿವ್ ಕೊ-ಒಪರೇಶನ್ ಮತ್ತು ಒಬ್‌ಸ್ಟ್ರಕ್ಷನ್ (obstruction) ಇವೆರಡನ್ನು ಮತದಾರರೊಳಗೆ ಪುಟಕ್ಕಿಡುವ ಒಂದು ಸಂದರ್ಭವು ಕಳೆಯಿತು. ರಾಜಕೀಯ ಕ್ಷೇತ್ರದಲ್ಲಿ ಧುರೀಣರ ತರ್ಕಶಕ್ತಿಯ ಸಾಮರ್ಥ್ಯವನ್ನು ನೋಡುವುದರಲ್ಲಿಯೇ ನಾವು ತೃಪ್ತರಾಗುವುದಕ್ಕಿಂತಲೂ ಜನತೆಯು ಈ ತರ್ಕಗಳನ್ನು ಹೇಗೆ ಸ್ವೀಕರಿಸಿಯದೆಂಬುದನ್ನು ನೋಡುವುದು ಉತ್ತಮವಿತ್ತು. ರಿಸ್ಪೊನ್ಸಿವ್ ಕೊ-ಒಪರೇಶನಿಗೂ, ಸ್ವರಾಜ್ಯ ಪಕ್ಷದ ಧೋರಣಕ್ಕೂ ಭೇದವಿದೆ ಎಂಬುದು ರಿಸ್ಪೊನ್ಸಿವ್ ಕೊ-ಒಪರೇಟರರೇ ಸ್ಥಾಪಿಸಿರುವರಲ್ಲದೆ. ಸ್ವರಾಜ್ಯಪಕ್ಷೀಯರೂ ಅದನ್ನು ಸ್ಪಷ್ಟವಾಗಿ ತಿಳಿದಿರುವರು. ಹೀಗೆ ಈ ಭೇದಗಳನ್ನು ತಿಳಿದೂತಿಳಿದೂ ಒಟ್ಟಿಗೆ ಹಾಕಿ ಅನಿರ್ಬಂಧಿತ ಪರಿಸ್ಥಿತಿಯನ್ನು ಕಲ್ಪಿಸುವುದಕ್ಕಿಂತಲೂ ಎಲ್ಲವನ್ನೂ ದೇಶದ ತೀರ್ಮಾನಕ್ಕೆ ಬಿಟ್ಟಿದಾದರೂ ಚಿಂತೆಯಿರಲಿಲ್ಲ.

ಈಗಿನ ಪರಿಸ್ಥಿತಿಯಲ್ಲಿ, ಈಗಿನ ರಾಜಿಯ ಮೂಲಕ ಯುಕ್ತಿಯುಕ್ತ ನಮ್ಮ ಸರಕಾರಕ್ಕೆ ಮುಂದೆ ನಮ್ಮೊಳಗೆ ಭೇದದ ಬೀಜವನ್ನು ಬಿತ್ತಲಿಕ್ಕೆ ಉತ್ತಮ ಅನುಕೂಲತೆಯನ್ನು ಕಲ್ಪಿಸಿ ಕೊಟ್ಟಂತಾಯಿತು. ಇಂತಹ ಅನುಕೂಲತೆಯಿಲ್ಲದಿದ್ದಾಗ ಕೂಡ ತಾಂಬಿಯವರ [illegible] ಸರಕಾರವು ಭೇದವನ್ನು ಕಲ್ಪಿಸಲು ಶಕ್ತವಾಯಿತು. ಅನ್ಯವಾಗ ಸ್ವರಾಜ್ಯಪಕ್ಷದ ಧೋರಣವನ್ನೆ ಶಿಥಿಲವಾಗಿಟ್ಟು, ರಾಜಿಪಂಚಾಯತಿಕೆ ಮಾಡಿ, ಶರ್ತಗಳನ್ನು ನಿರ್ಣಯಿಸಿ, ಆ ಶರ್ತಗಳಿಗೆ ಪಂಡಿತ ಮೋತಿಲಾಲರು ಒಂದರ್ಥವನ್ನೂ ಶ್ರೀಯುತ ಕೇಳ್ಕರರು ಇನ್ನೊಂದರ್ಥವನ್ನೂ ಮಾಡಿಕೊಂಡಿರುವಾಗ ಇವರಿಬ್ಬರೊಳಗಿನ ಈ ರಾಜಿಯನ್ನು ಮುರಿದಿಡಿಸುವುದು ನಮ್ಮ ವಿಜ್ಞ ಸರಕಾರಕ್ಕೆ ಕಷ್ಟತರವಾದ ಕೆಲಸವಾಗಲಿಕ್ಕಿಲ್ಲ. ಮರಾಠಿಗರ ಮಂತ್ರಿಪದವಿಯ ಪ್ರಚಂಡ ಲೋಭದೊಡನೆ ಮರಾಠಾರಿಸ್ಪೊನ್ಸಿವ್ ಕೊ-ಒಪರೇಶನ್ ಧೋರಣವು ಸರಕಾರಕ್ಕೆ ಸಾಕಷ್ಟು ಮಿತ್ರಗಾಗಲಿದೆ. ಸ್ವರಾಜ್ಯಪಕ್ಷೀಯರು ಇದೀ ತೀರ್ಮಾನವನ್ನೇ ದೇಶದ ಮುಂದಿಟ್ಟಿದಾದರೆ ಉತ್ತಮವಿತ್ತು. ದೇಶಕ್ಕೆ ಬೇಡವಾದ ಧೋರಣವನ್ನು ಪಕ್ಷಗಳು ಕಟ್ಟಿಕೊಂಡು ಏನು ಮಾಡಲು ಶಕ್ತಿಯುಳ್ಳವುಗಳಾದಾವು?

ದೇಶದ ಮೇಲೂ ಒಂದೆರಡು ವರ್ಷಗಳಿಂದ ಒಂದು ತರದ ಪರಿವರ್ತನವು ಉಂಟಾಗಲಾರಂಭಿಸಿಯದೆ. ಆ ಅವಿಚಲ ರಾಷ್ಟ್ರೀಯ ಭಾವವೂ, ಆ ಸುಸ್ಥಿರ ಉಚ್ಚ ಧ್ಯೇಯವೂ ಮೆಲ್ಲನೆ ಹಿಂದೀ ಜನತೆಯಿಂದ ಹಿಂದೆ ಸರಿಯುತ್ತಿದೆ. ಹಿಂದೂ ಮುಸಲ್ಮಾನ ಜಗಳ, ಧುರೀಣರೊಳಗಿನ ಭೇದ ಮತ್ತು ಅಂತಃಕ್ಲೇಶ, ಸರಕಾರದ ಪ್ರಬಲತೆಯ ಮುಂದೆ ರಾಜಕೀಯ ಪಕ್ಷಗಳ ಸಹಾಯಹೀನತೆ, ಸರ್ವತ್ರ ಪರಿವ್ಯಾಪ್ತವಾಗಿರುವ ಆರ್ಥಿಕ ದುಸ್ಥಿತಿ, ಇವೆಲ್ಲವುಗಳಿಂದ ಜನರ ವಿಶಾಲದೃಷ್ಟಿಯು ಸಂಕುಚಿತವಾಗಿದೆ. ಜನತೆಯ ದೇಶಹಿತದ ಯೋಚನೆಯು ಸಂಕುಚಿತವಾಗಿ ಸಂಸಾರ ಹಿತದ ಕಡೆಗೆ ಕೇಂದ್ರಿತವಾಗಿದೆ. ಜನತೆಯ ಸ್ವರಾಜ್ಯ ಸಾಧನೆಯ ಕಡೆಗಿನ ಆಶಯವೂ ತಮ್ಮ ಭೋಗಸಾಧನೆಯ ಕಡೆಗೆ ತಿರುಗಿದೆ. ಪ್ರಚಂಡ ಆತ್ಮಯಜ್ಞದ ಭಾವನೆಯಿಂದ ಜನರ ಮನಸ್ಸು ಅವಿಶ್ರಂಖಲ ಸ್ವಾರ್ಥದ ಕಡೆಗೆ ಹರಿದಿದೆ. ಫಲತಃ ರಾಜಕೀಯ ಸಮಸ್ಯೆಗಳ ಕಡೆಗೆ ಜನತೆಯು ಅನುದಾರವೂ ಅಲಸವೂ ಆಗಿದೆ.

ಫಲತಃ ಚುನಾವಣೆಯಾದರೂ ದೇಶಹಿತದ ಉದಾರ ಭಾವನೆಯ ಕಡೆಗೆ ಲಕ್ಷ್ಯವಿದ್ದು ಆದೀತೊ ಎಂಬುದು ಸಂದೇಹವಿದೆ. ನಮ್ಮ ಹಿತಸಾಧನೆಯು ಇತರರ ದಾಕ್ಷಿಣ್ಯ, ಜಾತೀಯ ಭಾವನೆ ಇತ್ಯಾದಿ ಅನೇಕ ದೇಶಕ್ಕೆ ಹಾನಿಕರವಾದ ಧೋರಣಗಳೇ ಚುನಾವಣೆಗಳಲ್ಲಿ ಮೇಲ್ಪಂಕ್ತಿಯನ್ನು ಹೊಂದುತ್ತಿವೆ. ಅಂಥಾ ಪರಿಸ್ಥಿತಿಯಲ್ಲಿ ಸ್ವರಾಜ್ಯ ಪಕ್ಷವು ತನ್ನ ಬರೇ ಆತ್ಮಯಜ್ಞದ ಅಥವಾ ತ್ಯಾಗದ ಧೋರಣವನ್ನು ಮುಂದೊತ್ತಿ ವಿಜಯಿಯಾಗುವುದು ಕಷ್ಟವಿದೆ. ಈ ಪರಿಸ್ಥಿತಿಯನ್ನು ತಿಳಿದೇ ಸ್ವರಾಜ್ಯ ಪಕ್ಷವು ತನ್ನ ಕಾರ್ಯಕ್ರಮವನ್ನು ಬಹಳ ಶಿಥಿಲವಾಗಿ ಮಾಡಿಬಿಟ್ಟಿದ್ದಿತು. ಜನತೆಯು ಅಷ್ಟು ಶಿಥಿಲತೆಯಿಂದ ಕೂಡ ತೃಪ್ತವಿಲ್ಲವಾದರೆ ಬರಿ ಪಕ್ಷದ ಅಸ್ತಿತ್ವಕ್ಕೆ ಕಾರಣವಿರದು.

ಸಂಕ್ಷೇಪತಃ, ನಮ್ಮ ಅಭಿಪ್ರಾಯವು ಈ ಚುನಾವಣೆಯಲ್ಲಿಯೇ ರಿಸ್ಪೊನ್ಸಿವ್ ಕೋಒಪರೇಶನನ್ನೂ, ಸ್ವರಾಜ್ಯ ಪಕ್ಷೀಯ ಧೋರಣವನ್ನೂ ಜನತೆಯ ಮತಗಳಿಂದ ತೂಕಿಬಿಡುವುದು ಉತ್ತಮವಿದ್ದಿತು ಎಂದಿದೆ. ಆದರೆ ರಿಸ್ಪೊನ್ಸಿವ್ ಕೊ-ಒಪರೇಟರರು ಪಕ್ಷದ ಶಿಸ್ತಿಗೆ ಒಳಪಟ್ಟು ಸರಿಯಾಗಿ ವರ್ತಿಸಿದರೆ, ಮತ್ತು ಪಂಡಿತ ಮೋತಿಲಾಲ ನೆಹರುರವರು ಹೆಚ್ಚು ದೂರದರ್ಶಿತೆಯನ್ನು ಉಪಯೋಗಿಸಿದರೆ, ಈ ರಾಜಿಯು ಸತ್ಪರಿಣಾಮಕಾರಿಯು ಆಗಬಹುದು. ಆ ಪರಿಣಾಮವು ಹೇಗೆ ಆಗುವುದೆಂಬುದನ್ನೇ ನಾವು ನಿರೀಕ್ಷಿಸಿ ಇರುವೆವು.

ಕರ್ನಾಟಕ ರಂಗಭೂಮಿ.

ಲೇಖಾಂಕ ೩:—ಪಾತ್ರಗಳ ರಚನೆ.

ಈಗಿನ ಕರ್ನಾಟಕ ನಾಟಕಮಂಡಳಿಗಳ ಪಾತ್ರರಚನೆಯ ವಿಷಯವಾಗಿ ಟೀಕಿಸುವ ಮೊದಲು, ನಾಟಕ ವ್ಯವಸ್ಥಾಪಕರ ಪಾತ್ರಸಂಗ್ರಹದ ಕಷ್ಟಗಳನ್ನೂ ಆಲೋಚಿಸಬೇಕಾಗಿದೆ.

ಪ್ರಥಮತಃ ನಾಟಕರಚನೆಯೇ ಅಭಿನಯದಲ್ಲಿ ಹೆಚ್ಚು ಮುಖ್ಯವಾದುದಾಗಿದೆ. ಸಾಹಿತ್ಯದ ನಾಟಕಗಳು ಅಭಿನಯಕ್ಕೆ ಯೋಗ್ಯವಿರಬೇಕೆಂದಿಲ್ಲ. ಹೆಚ್ಚಾಗಿ ಇವು ಅಭಿನಯಕ್ಕೆ ಅನುಕೂಲವಲ್ಲದವುಗಳೇ ಆಗಿವೆ. ಇದರ ವಿರೋಧಾಭಿಪ್ರಾಯದಂತೆ, ಅಭಿನಯಕ್ಕಾಗಿ ರಚಿಸಲ್ಪಡುವ ನಾಟಕಗಳಲ್ಲಿ, ಸಾಹಿತ್ಯವಿರಬಾರದೆಂಬುದು ಮಾತ್ರ ಒಪ್ಪತಕ್ಕ ಮಾತಲ್ಲ.

ಕರ್ನಾಟಕದ ಅಭಿನೀತ ನಾಟಕಗಳು, ಇತ್ತಿಚೆಗೆ ಕೆಲವು ಉತ್ತಮ ವರ್ಗದವುಗಳು ರಚಿಸಲ್ಪಟ್ಟಿರುವುವಾದರೂ, ಹೆಚ್ಚಾಗಿ ಸಾಹಿತ್ಯದಲ್ಲಿ ಪ್ರಾಶಸ್ತ್ಯಿಯನ್ನು ಪಡೆಯುವಂತಹವುಗಳಾಗಿಲ್ಲ. ವಿಶೃಂಖಲ ರಚನೆಯೂ, ವಿಚಿತ್ರ ಭಾವನೆಯೂ, ನೀರಸ ಶೈಲಿಯೂ ಕರ್ನಾಟಕ ನಾಟಕಗಳಲ್ಲಿ ಹೆಚ್ಚಿನವುಗಳಲ್ಲಿ ತೋರಿ ಬರುತ್ತಿವೆ.

ನಾಟಕಗಳ ಶೈಲಿಯನ್ನು ವಿಶೇಷ ಉಚ್ಚವಾಗಿಟ್ಟರೆ ನಾಟಕಪಾತ್ರಗಳು ಅವುಗಳನ್ನು [illegible] ಪ್ರೇಕ್ಷಕ ವರ್ಗಕ್ಕೆ ಅದರ ಅರ್ಥವಾಗಲಿಕ್ಕಾಕಲಿ ಕಷ್ಟವಾಗುವುದು. ಹಾಗೆಂದು ಬರೇ ಸಾಮಾನ್ಯ ಶೈಲಿಯನ್ನೇ ಉಪಯೋಗಿಸಿದರೆ, ಜನತೆಗೆ ಭಾವನೆಯ ಆಭಾಸವಾಗುವುದು ಕಷ್ಟಸಾಧ್ಯವಾಗುವುದು.

ನಾಟಕದ ರಚನೆಯು ಆಯಾ ಪಾತ್ರಗಳ ಶಕ್ತಿಯನ್ನು ಲಕ್ಷಿಸುವಂತಹುದಾಗಿರಬೇಕು. ಅಲ್ಲದೆ ಸಂಗೀತದ ಉಪಯೋಗವೂ ಮಿತಿಯುಳ್ಳದ್ದಾಗಿರಬೇಕು. ಕೆಲವು ನಾಟಕಗಳಲ್ಲಿ ಸಂಗೀತಕ್ಕೇನೇ ಹೆಚ್ಚು ಸ್ಥಾನವಿರುತ್ತದೆ. ತುದಿಯಿಂದ ಕಡೆಯವರೆಗೆ ಸಂಗೀತವೇ ಇರುವುದರಿಂದ ಪಾತ್ರಗಳಿಗೆ ಆಯಾಸವೂ, ಪ್ರೇಕ್ಷಕರಿಗೆ ಬೇಸರವೂ ಉಂಟಾಗುವುದು. ಸಣ್ಣಸಣ್ಣ ಪಾತ್ರಗಳಿಗೆ ದೊಡ್ಡದೊಡ್ಡ ಗಾಯಕರು ಹೇಳುವ ಹಾಡುಗಳನ್ನು ಕೊಟ್ಟರೆ ನಾಟಕಕ್ಕೆ ಅದರಿಂದ ಬಾಧಕವೇ ಅಲ್ಲದೆ ಬೇರೇನಿಲ್ಲ. ಎಷ್ಟೋ ಉತ್ತಮ ಹಾಡಾದರೂ, ಹೇಳುವವರೇ ಹೇಳುವ ರೀತಿಯಲ್ಲಿ ಹೇಳಬೇಕಲ್ಲದೆ, ಅನ್ಯಸ್ಥಾನಗಳಲ್ಲಿ ಅದಕ್ಕೆ ಶೋಭೆ ಇರುವುದಿಲ್ಲ.

ನಾಟಕರಚನೆಯಲ್ಲಿ ಪಾತ್ರಗಳ ಸಂಬಂಧವಾದ ಕೆಲವು ವಿಷಯಗಳನ್ನು ಮಾತ್ರ ಮೇಲೆ ಕೊಟ್ಟಿರುವೆವು.

ಇನ್ನು ಪಾತ್ರಗಳ ರಚನೆಯ ವಿಷಯ ನಾಟಕದ ವ್ಯವಸ್ಥಾಪಕರಿಗೆ ಪ್ರಬಲವಾದ ತೊಂದರೆಯೆಂದರೆ ಯೋಗ್ಯವಾದ ಪಾತ್ರಗಳನ್ನು ಹೊಂದುವುದು. ನಾಟಕವೃತ್ತಿಯು ಹಿಂದೂ ಸಮಾಜದಲ್ಲಿ ಗೌರವಿತವಲ್ಲ. ಅಭಿನಯಿಗಳು ಕೇವಲ ಹೀನ ವರ್ಗಗಳಿಂದಲೇ ಬರುವವರು ಹೆಚ್ಚಾಗಿರುವರು. ಈ ವರ್ಗಗಳೊಳಗಿನ ಸ್ವಾಭಾವಿಕ ದುರಭ್ಯಾಸಗಳಿಂದಲೂ ದುರ್ಭಾವನೆಗಳಿಂದಲೂ, ಇವರ ಪ್ರತ್ಯೇಕ ಪಾತ್ರವನ್ನು ವಹಿಸಿಕೊಳ್ಳುವ ಶಕ್ತಿಯು ಕುಗ್ಗುವುದು. ಒಂದು ಥಾರಿ ನಾಟಕದಲ್ಲಿ ಸೇರುವ ಪ್ರಥಮ ದಿನಗಳಲ್ಲಿ ಆ ಶಕ್ತಿಯು ಇದ್ದರೂ, ನಾಟಕದ ವಾತಾವರಣದ ಪರಿಣಾಮವಾಗಿ ಅನೇಕ ಪಾತ್ರಗಳು ಕಟ್ಟ ಕಡೆಗೆ ಅಭಿನಯಕ್ಕೆ ಯೋಗ್ಯರೇ ಅಲ್ಲವಾಗಿಹೋಗುತ್ತಾರೆ.

ಉತ್ತಮವಾದ ನಾಟಕವನ್ನೂ ಉತ್ತಮರಾದ ನಟರನ್ನೂ ಹೊಂದುವುದೇ ನಾಟಕದ ವ್ಯವಸ್ಥಾಪಕರಿಗೆ ಕಷ್ಟವಾಗುತ್ತಿದೆ. ಅವರ ಈ ಕಷ್ಟಗಳನ್ನು ನಾವು ಬಲ್ಲೆವು. ಆದರೆ ಪರಿಸ್ಥಿತಿಯನ್ನು ಸುಧಾರಿಸುವುದು ಅಸಾಧ್ಯವಾಗಲಾರದು. ಆದರ್ಶವನ್ನು ಲಕ್ಷ್ಯದಲ್ಲಿಟ್ಟು, ಒಂದೇಬಾರಿಯಲ್ಲವಾದರೂ ಕ್ರಮೇಣವಾಗಿ ನಾಟಕಗಳನ್ನು ಸುಧಾರಿಸಲು ನೋಡುವುದು ನಾಟಕಗಳ ವ್ಯವಸ್ಥಾಪಕರ ಕರ್ತವ್ಯವಿದೆ.

ಸ್ಫು ಟ ವಿ ಚಾ ರ ಗ ಳು.

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು.

ನಮ್ಮ ಜಿಲ್ಲೆಯ ನಾಲ್ಕನೇ ರಾಜಕೀಯ ಪರಿಷತ್ತು ಈ ಬಾರಿ ಎಪ್ರಿಲ್ ತಾ. ೨೭ನೇ ಸಂಜೆಗೆ ಶ್ರೀಯುತ ಶ್ರೀನಿವಾಸ ರಾವ್ ಕೌಜಲಗಿಯವರ ಅಧ್ಯಕ್ಷತೆಯಲ್ಲಿ ಮಂಗಳೂರಲ್ಲಿ ರಾಷ್ಟ್ರೀಯ ಬಾಲಿಕಾ ಪಾಠಶಾಲೆ (ನೇಶನಲ್ ಗರ್ಲ್‌ಸ್ಕೂಲ್) ಯಲ್ಲಿ ಸೇರಿತು. ಈ ಸಂದರ್ಭದಲ್ಲಿ, ಶ್ರೀ ಗಂಗಾಧರರಾವ್ ದೇಶಪಾಂಡೆ, ಹನುಮಂತ ರಾವ್ ಕೌಜಲಗಿ, ಹರ್ಡೀಕರ ಇತ್ಯಾದಿ ಕರ್ನಾಟಕ ಪ್ರಮುಖರೂ ಹಾಜರಿದ್ದುದು ಅಭಿನಂದನೀಯ. ಆದರೆ ಸ್ಥಳೀಕ ಹಾಜರಿಯು ಬಹಳ ಕಡಿಮೆ ಇದ್ದುದು ಮಂಗಳೂರಿಗೂ, ಇಡೀ ಜಿಲ್ಲೆಗೂ ಅ ಗೌರವದ ವಿಷಯವಾಗಿದೆಯಲ್ಲದೆ, ಜನತೆಯೊಳಗಿನ ಪ್ರಕೃತ ರಾಜಕೀಯ ಆಲಸ್ಯದ ಚಿಹ್ನೆಯೂ ಆಗಿರುವುದು. ಇಡೀ ಪರಿಷತ್ತಿಗೆ ಬರೇ ೩೫ ಮಂದಿ ಪ್ರತಿನಿಧಿಗಳೂ, ೪೦ ಮಂದಿ ಪ್ರೇಕ್ಷಕರೂ ಎನ್ನುವಾಗ ಪರಿಷತ್ತು ಪರಿಣಾಮಕಾರಿಯಾಗಲು ಕಷ್ಟಸಾಧ್ಯವಿದೆಯೆಂದು ನೆನೆಸಬೇಕಾಗುತ್ತದೆ.

ಜಿಲ್ಲಾ ಪರಿಷತ್ತಿನ ಅಭಿಪ್ರಾಯ ಪರಿವರ್ತನ.

ಪರಿಷತ್ತಿನ ಕಳೆದ ನಾಲ್ಕು ಅಧಿವೇಶನಗಳೊಳಗೆ ಕಾಲಕ್ರಮವಾಗಿ ಉಂಟಾದ ರಾಜಕೀಯ ಧೋರಣದ ಪರಿವರ್ತನವನ್ನು ಲಕ್ಷಿಸಬಹುದು. ಪ್ರಥಮ ಪರಿಷತ್ತಿನಲ್ಲಿ ಸ್ವರಾಜ್ಯವು ಪಕ್ಷದ ಮಾತು ಕೂಡ ಎತ್ತಲಿಕ್ಕಿರಲಿಲ್ಲ. ಆಗ ಶ್ರೀಯುತ ದಿವಾಕರರೇ ಅಧ್ಯಕ್ಷರಾಗಿದ್ದರು. ಪರಿಷತ್ತು ಉಡುಪಿಯಲ್ಲಿ ಕೂಡಿತು. ಆ ಮೇಲೆ ಶ್ರೀಯುತ ಗಂಗಾಧರ ರಾಯರ ಅಧ್ಯಕ್ಷತೆಯಲ್ಲಿ ಕುಂದಾಪೂರದಲ್ಲಿ ಕೂಡಿದ ಪರಿಷತ್ತಿನಲ್ಲಿ ಶ್ರೀಯುತ ಗಂಗಾಧರ ರಾಯರು ಖಾದಿಪ್ರಚಾರಕರಾಗಿಯೂ ಅಸಹಕಾರ ತತ್ವಸ್ಥಾಪಕರಾಗಿಯೂ ಬಂದಿದ್ದರು. ಈ ಬಾರಿ ಸ್ವರಾಜ್ಯ ಪಕ್ಷಕ್ಕೆ ವಿಶೇಷ ಅನುಕೂಲತೆ ಸಿಕ್ಕದಿದ್ದರೂ ಸ್ಥಳೀಕ ಸಂಸೆಗಳನ್ನು ಸೇರಬಹುದೆಂದಾಯಿತು. ಮೂರನೇ ಪರಿಷತ್ತು ಶ್ರೀಯುತ ದತ್ತಾತ್ರೇಯ ಬಾಲಕೃಷ್ಣ ಕಲೇಲ್ಕಾರರ ಅಧ್ಯಕ್ಷತೆಯಲ್ಲಿ ಕಾರ್ಕಳದಲ್ಲಿ ಕೂಡಿತು. ಅಲ್ಲಿ ಸ್ವರಾಜ್ಯ ಪಕ್ಷಕ್ಕೆ ಮಾನ್ಯತೆ ಸಿಕ್ಕಿತು ಮಾತ್ರವಲ್ಲ, ಶ್ರೀಯುತ ಶ್ರೀನಿವಾಸ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಸ್ವರಾಜ್ಯ ಪರಿಷತ್ತು ಕೂಡಿತು. ಈ ಬಾರಿ ಶ್ರೀಯುತ ಶ್ರೀನಿವಾಸ ರಾವ್ ಕೌಜಲಗಿಯವರ ಅಧ್ಯಕ್ಷತೆಯಲ್ಲಿ ಮಂಗಳೂರಿನಲ್ಲಿ ಪರಿಷತ್ತು ಕೂಡಿತು. ಸ್ವರಾಜ್ಯ ಪಕ್ಷದ ಧೋರಣವನ್ನು ಕೂಡ ಮೆತ್ತಗೆ ಮಾಡುವ ಆ ಸಭರ್ಮತಿ ರಾಜಿಕೆ ಈ ದಿನ ಈ ಜಿಲ್ಲಾ ಪರಿಷತ್ತು ಒಪ್ಪಿಗೆ ಕೊಡುತ್ತಿದೆ.

ಇದರಲ್ಲಿ ಹೀನವಾದುದಾಗಲಿ ಅಗೌರವವಾದ ವಿಷಯವನ್ನು ನಾವು ಕಂಡಿದ್ದೇವೆಂದಲ್ಲ. ಜನತೆಯೊಳಗೆ ಹೇಗೆ ಪರಿವರ್ತನೆಗಳು ವಿಕಸಿತವಾಗುತ್ತವೆ ಎಂಬುದನ್ನು ತೋರಿಸಲೆಂದೇ ನಾವು ಈ ವಿಚಾರವನ್ನು ಮಾಡಿದೆವು. ಹೇಗೂ ಜನತೆಯು ರಾಜಕೀಯ ಜಡತೆಯನ್ನು ಸೇರುತ್ತಿದೆ; ಅಥವಾ ಸೇರಿದೆ ಎಂದು ಜಿಲ್ಲಾ ಪರಿಷತ್ತಿನ ಹಾಜರಿಯಿಂದಲೂ, ಈ ಅಭಿಪ್ರಾಯ ಪರಿವರ್ತನದಿಂದಲೂ, ತೋರುವುದು.

ಖಾದಿ ಸಂದೇಶ.

ಶ್ರೀಯುತ ಹನುಮಂತರಾವ್ ಕೌಜಲಗಿಯವರು ಶ್ರೀಯುತ ಗಂಗಾಧರರಾವ್ ದೇಶಪಾಂಡೆಯವರೂ ಖಾದಿ ಸಂದೇಶವನ್ನು ಹಿಡಿದು ಬಂದಿದ್ದರು. ಖಾದಿಯಿಂದ ಸ್ವರಾಜ್ಯ ಸಿಕ್ಕುತ್ತದೆ, ಖಾದಿ ಪ್ರಸಾರ ಒಂದರಿಂದ ಇಂಗ್ಲಿಷರು ತಮ್ಮ ಹಿಡಿತವನ್ನು ಸಡಿಲಿಸುವರು ಎಂಬ ವಿಶ್ವಾಸಕ್ಕೆ ನಾವು ಭಾಗಿಯಲ್ಲ. ಆದರೆ [illegible]ದ ಆರ್ಥಿಕ ಉನ್ನತಿಯಲ್ಲಿ ಖಾದಿಯು ಪ್ರಚಂಡ ಕೆಲಸ ಮಾಡಲಿದೆಯೆಂದೂ, ಬಡವರ ಹೊಟ್ಟೆ ಹಸಿವೆಯನ್ನು ತಣಿಸುವುದೆಂದೂ, ನಮಗೆ ಅನ್ನಿಸುತ್ತಿದೆ; ಮತ್ತು ಅದರ ಪ್ರಚಾರವು ಹೆಚ್ಚಾಗಲೆಂಬ ಆಶೆಯೂ ಇದೆ. ಮಿ| ಸಾಲ್ಡಾಂಞಾರೂ ಖಾದಿಯ ಉಡುಪಿನಿಂದ ಒಂದು ಪರಿಷತ್ತನ್ನು ಅಲಂಕರಿಸಿದುದೂ ಅಭಿನಂದನೀಯ. ಆದರೆ ಖಾದಿಯ ಪ್ರತಿಜ್ಞೆಯಾಗಲಿ ಸ್ವದೇಶಿ ಪ್ರತಿಜ್ಞೆಯು ಮೆಲ್ಲನೆ ಸಡಲಿಸುತ್ತಿದೆಯೆಂಬುದೂ ಸುಸ್ಪಷ್ಟವಿದೆ. ಮಂಗಳೂರಿನಲ್ಲಿ ಖಾದಿ ಉಡುಪು ಈ ಒಂದೆರಡುವರ್ಷಗಳಲ್ಲಿ ಬಹಳ ಕಡಿಮೆಯಾಗಿದೆ. ಇತರ ಕಡೆಗಳಲ್ಲೂ ಇದು ತಗ್ಗಿದೆಯೆಂದೂ ಹೇಳಬಹುದು. ಆದರೆ ಹೊರಗಿನ ತೋರಿಕೆಗಿಂತ ಒಳಗಿನ ಉಪಯೋಗವೇ ಇತ್ತೀಚೆಗೆ ಹೆಚ್ಚಾಗಿಯದೆಂದು ಹಲವರು ಹೇಳುವುದು ನಿಜವಿದ್ದರೂ ಇರಬಹುದು. ಕಿಂತು ಖಾದಿಯು ನಿಜವಾದ ಪರಿಣಾಮಕಾರಿಯಾದ ಪ್ರಚಾರವಾಗಬೇಕಾದರೆ ಅದರ ಪ್ರತಿ ಜನರ ಅಂಗಡಿಗಳಲ್ಲೂ ಸಿಕ್ಕುವಂತೆ ಮಾಡಬೇಕು.

ನೀಲೇಶ್ವರದ ಖಾದಿ.

ಶ್ರೀಯುತ ಗಂಗಾಧರರಾಯರ ನೀಲೇಶ್ವರದ ಚಿತ್ರವು ಬಹಳ ಸಂತಾಪಜನಕವಿದೆ. ಅಲ್ಲಿ ಬೇಕಾದಷ್ಟು ಹತ್ತಿಯಿದೆ. ಬೇಕಷ್ಟು ನೂಲುವವರು ಇದ್ದಾರೆ. ಅಲ್ಲದೆ ನೂಲು ನೇಯುವವರೂ ಬೇಕಷ್ಟು ಮಂದಿ ಇರುವರು. ಆದರೂ ಅವರೊಳಗೆ ಅರ್ಧ ಉಪವಾಸದವರು ಹಲವರಿರುವರಂತೆ! ಈ ಪಾಪವು ನಮ್ಮ ಜಿಲ್ಲೆಯವರಿಗೇನೇ ಸೇರತಕ್ಕದ್ದಿದೆ. ಈ ಮೊದಲು ನೀಲೇಶ್ವರವನ್ನು ನೂಲುವಿಕೆಯ ಮಧ್ಯಸ್ಥಳವಾಗಿ ಮಾಡುವ ಬಗ್ಗೆ ನಮ್ಮ ಜಿಲ್ಲೆಯ ನೂಲುವ ಸಂಘವು ಕೇಳಿಕೊಂಡಿದ್ದಂತೆಯೂ ಶ್ರೀ ಗಂಗಾಧರರಾಯರು ಆ ಸರ್ತಿ ವಿಶೇಷ ಉತ್ತೇಜನಕೊಡದಿರದಂತೆಯೂ ನಾವು ಕೇಳಿದ್ದೆವು. ಈ ಬಾರಿ ಶ್ರೀಯುತ ಗಂಗಾಧರರಾಯರು ಆ ಸ್ಥಳವನ್ನೂ ಆ ಜನರನ್ನೂ ಸ್ವತಹಾ ನೋಡಿರುವರು. ಇನ್ನಾದರೂ ಅದನ್ನು ಸುವ್ಯವಸ್ಥೆಗೊಳಿಸಲು ಅಡ್ಡಿ ಇರಬಾರದು. ಸಧ್ಯದಲ್ಲಿಯೇ ಆ ಖಾದಿಸ್ಥಾನವು ಕಾರ್ಯಕಾರಿಯಾಗಿ ಪರಿಣಮಿಸಬಹುದೆಂದು ಆಶಿಸುವೆವು.

ಕರ್ನಾಟಕ ಏಕೀಕರಣದ ಸಂದೇಶ.

ಶ್ರೀಯುತ ಶ್ರೀನಿವಾಸರಾವ್ ಕೌಜಲಗಿಯವರು ಕರ್ನಾಟಕ ಏಕೀಕರಣದ ಸಂದೇಶವನ್ನು ತಂದಿದ್ದರು. ಕರ್ನಾಟಕ ಏಕೀಕರಣದ ವಿಷಯವಾಗಿ ನಾವು ಈ ಮೊದಲೇ ಅನೇಕ ಲೇಖಗಳನ್ನು ಪ್ರಕಟಿಸಿರುವೆವು. ಅಷ್ಟಾದರೂ ಕರ್ನಾಟಕ ಏಕೀಕರಣದ ಪ್ರಶ್ನೆಯು ಗಾಢವಾದುದಾಗಿದೆ. ಕರ್ನಾಟಕ ಏಕೀಕರಣಕ್ಕಾಗಿ ಈ ವರೆಗೆ ನಡೆದ ಸಾಧನೆಯ ಕ್ರಮಗಳು ಸರಿಯಾಗಿಲ್ಲ. ಒಬ್ಬಿಬ್ಬರ ಹೊರತು ಇತರ ಅನೇಕ ಜನರ ಕರ್ನಾಟಕ ಏಕೀಕರಣದ ಕಡೆಗಿನ ಚಿಂತನೆಯು ಮನಃಪೂರ್ವಕವಾಗಿಲ್ಲ. ಕರ್ನಾಟಕ ಏಕೀಕರಣಕ್ಕಾಗಿ ಕಾರ್ಯಕಾರಿಯಾದ ಯಾವ ಸೂಚನೆಯೂ ಈ ವರೆಗೆ ಹೊರಬಂದಿಲ್ಲ. ಏಕೀಕರಣವೆಂಬ ಒಂದೇ ಕೂಗು ಕೇಳಿಬರುತ್ತಿದೆಯಲ್ಲದೆ ಬೇರೇನೂ ಇಲ್ಲ. ಶ್ರೀಯುತ ಶ್ರೀನಿವಾಸರಾವ್ ಕೌಜಲಗಿಯವರು ಈ ಸಮಸ್ಯೆಯ ಪರವಾಗಿ ಬಹಳ ಚಿಂತನೆಮಾಡುತ್ತಾರೆಂಬುದನ್ನು ನಾವು ಬಲ್ಲೆವು. ಆದರೆ ಅವರು ಏನಾದರೊಂದು ಕಾರ್ಯಕಾರಿ ಸೂಚನೆಯನ್ನು ತಂದಿರುವರೊ ಎಂಬುದು ನಮಗೆ ಇನ್ನೂ ತಿಳಿದಿಲ್ಲ.

ಕರ್ನಾಟಕ ವಿಶ್ವವಿದ್ಯಾಲಯ.

ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆ ಬಗ್ಗೆ ಮಿ| ಸಾಲ್ಡಾಂಞಾರು ಕೂಡ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದುದು ಕರ್ನಾಟಕದ ಸುಧಾರಣೆಯ ಶುಭಚಿಹ್ನೆ ಎನ್ನಬಹುದು. ಮಿ| ಸಾಲ್ಡಾಂಞಾರು ರೋಮನ್ ಕಥೋಲಿಕರು. ರೋಮನ್ ಕಥೋಲಿಕ್ ಮತಪ್ರಚಾರ ಕ್ರಮವು ಹೆಚ್ಚಾಗಿ ಪಾಶ್ಚಾತ್ಯ ರೀತಿನೀತಿಗಳಿಗೆ ಉತ್ತೇಜನ ಕೊಡುವಂತಹುದು. ಇತ್ತೀಚೆಗೆ ರೋಮನ್ ಕಥೋಲಿಕ್ ಗೃಹ ಧರ್ಮವು ಕೂಡ ಪಾಶ್ಚಾತ್ಯ ಪದ್ಧತಿಯನ್ನೇ ಅವಲಂಭಿಸಲಾರಂಭಿಸಿಯದೆ. ಇಂತಹ ಸಮಯದಲ್ಲಿ ಮಿ| ಸಾಲ್ಡಾಂಞಾರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಉತ್ತೇಜನ ಕೊಟ್ಟುದು, ಅವರ ಜಾತಿಯವರೊಳಗೆ ನೂತನ ಜಾಗೃತಿಯನ್ನು ಉಂಟುಮಾಡತಕ್ಕುದಾಗಿದೆ. ಮತ್ತು ರೋಮನ್ ಕಥೋಲಿಕರೂ ಇವರನ್ನು ಅನುಸರಿಸುವರಾಗಿ ಆಶಿಸುವೆವು.

ಕರ್ನಾಟಕ ವಿಶ್ವವಿದ್ಯಾಲಯದ ಮಾತು ಈಗ ಅಸಾಧ್ಯವೆಂದು ನಮಗೆ ಅನ್ನಿಸುತ್ತಿದೆ. ಕರ್ನಾಟಕಕ್ಕೆ ಒಂದು ಪ್ರತ್ಯೇಕ ವಿಶ್ವವಿದ್ಯಾಲಯದ ಆವಶ್ಯಕತೆ ಇದೆ ನಿಜ. ಆದರೆ ಕರ್ನಾಟಕ ಏಕೀಕರಣದ ಸಮಸ್ಯೆಯು ತೀರದೆ ಇದನ್ನೆತ್ತಿ ಏನೂ ಪ್ರಯೋಜನವಿಲ್ಲವೆಂದು ನಮ್ಮ ಅಭಿಮತ. ಕರ್ನಾಟಕ ಏಕೀಕರಣವಾಯಿತೆಂದರೆ ಕರ್ನಾಟಕ ವಿಶ್ವವಿದ್ಯಾಲಯವು ತಾನಾಗಿಯೇ ಆಗುವುದು. ಆದರೆ ಏಕೀಕರಣವಾಗದೆ ವಿಶ್ವವಿದ್ಯಾಲಯ ಒಂದು ಆಗುವುದು ಅಸಂಭವವಿದೆ. ಸಾಧ್ಯವಾದರೂ, ಅಂತಹ ವಿಶ್ವವಿದ್ಯಾಲಯದಿಂದ ಕರ್ನಾಟಕ ಜನರಿಗೆ ಬಾಧಕವೇ ಇದೆ.

ಸ್ವಯಂಸೇವೆಯ ಸಂದೇಶ.

ಡಾ| ಹರ್ಡೀಕರರು ಸ್ವೇಚ್ಛಾಸೇವೆಯ ಸಂದೇಶವನ್ನು ನಮ್ಮ ಜಿಲ್ಲಾ ಪರಿಷತ್ತಿಗೆ ತಂದಿದ್ದರು. ಪ್ರತಿ ಒಂದು ದೇಶದ ಸ್ವಾಧೀನತೆಯ ಸಾಧನೆಯಲ್ಲಿ ಸ್ವೇಚ್ಛಾ ಸೇವಕ ದಳದ ಪ್ರಾಧಾನ್ಯವು ಇದ್ದೇ ಇದ್ದಿತು. ದೇಶದ ಸ್ವಾಧೀನತೆಗೆ ಕಾರ್ಯತಃ ಈ ಸ್ವೇಚ್ಛಾಸೇವಕ ದಳವೇ ಕಾರಣವಾಗಿರುವುದು. ಹಿಂದೂಸ್ಥಾನದಲ್ಲಿಯೂ ಇಂತಹ ಪ್ರಬಲವಾದ ದಳದ ಆವಶ್ಯಕತೆಯನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈ ಅತ್ಯಂತ ಮುಖ್ಯವಾದ ಕಾರ್ಯವನ್ನೇ ಶ್ರೀಯುತ ಹರ್ಡೀಕರರು ವಹಿಸಿಕೊಂಡಿರುವರು. ಶ್ರೀಯುತ ಹರ್ಡೀಕರರ ಅವಿಶ್ರಾಂತ ಪರಿಶ್ರಮದಿಂದ ಒಂದು ಸುವ್ಯವಸ್ಥಿತವಾದ ದಳವು ರಚಿತವಾಗಿಯದೆ. ಇದನ್ನು ಪ್ರತಿಯೊಬ್ಬ ತರುಣನೂ ಸೇರುವುದು ಉಚಿತವಿದ್ದಿತು. ಆದರೆ ಈಗಿನ ತರುಣರಲ್ಲಿ ಆ ಕಷ್ಟ ತೆಗಿಯುವ ಸ್ವಭಾವವೂ, ದೇಶಸೇವೆಯ ಉತ್ಕಟ ಇಚ್ಛೆಯ ಪ್ರೇರಣೆಯೂ ಇಲ್ಲದಿರುವಾಗ ಏನು ಮಾಡಲಾದೀತು. ಆದರೂ ಕರ್ನಾಟಕದ ತರುಣ ಮಂಡಳಿಗೆ ನಮ್ಮ ವಿನಂತಿಯಿದೆ. ದೇಶದ ಸೇವೆಗಾಗಿಯೂ, ಜನತೆಯ ಸೇವೆಗಾಗಿಯೂ ಸುವ್ಯವಸ್ಥಿತವಾಗಿ ಸ್ವೇಚ್ಛಾಸೇವಕರಾಗಿ ಕೆಲಸಮಾಡಿರೆಂದು.

ಏಸ್ಯಾಟಿಕ್ ಬಿಲ್ಲಿನ ಭವಿತವ್ಯ

ಹಿಂದೀಯರು ಬೊಬ್ಬಿಟ್ಟು ಸರಕಾರವನ್ನು ಬಹಳ ವತ್ತಾಯಪಡಿಸಿದ ಮೇಲೆ ಹೇಗೂ ಈ ಬಿಲ್ಲು ಮುಂದೆ ಹಾಕಲ್ಪಟ್ಟಿತು. ಸರಕಾರದ ಕ್ರಮದಿಂದಲೂ, ಉದಾಸ ಭಾವದಿಂದಲೂ, ಜನತೆಗೆ ಹಿಂದೀ ಸರಕಾರದ ಮೇಲೆ ಮನಸ್ಸು ಮುರಿದೇ ಹೋಗಿದ್ದಿತು. ಆದುದರಿಂದ ಸರಕಾರವು ಬೇಗನೆ ಎಚ್ಚೆತ್ತು ಹೇಗೂ ಪ್ರಯತ್ನ ಮಾಡಿ, ಸಂಬಂಧಪಟ್ಟವರ ಪರಿಷತ್ತನ್ನು ಕೂಡಿಸಲು ಯೂನಿಯನ್ ಸರಕಾರದಿಂದ ಒಪ್ಪಿಗೆ ಪಡೆಯಿತು. ಇದರ ಮೊದಲು ಯೂನಿಯನ್ ಸರಕಾರವು ಈ ಪರಿಷತ್ತನ್ನು ನಿರಾಕರಿಸಿಯೇ ಬಿಟ್ಟಿತ್ತು. ಈಗ ಅದು ಒಪ್ಪಿಗೆ ಕೊಟ್ಟಿದೆ. ಏಸ್ಯಾಟಿಕ್ ಬಿಲ್ಲು ತೆಗೆದುಹಾಕಲ್ಪಟ್ಟಿಲ್ಲವೆಂಬುದನ್ನು ನಾವು ಮರೆಯಬಾರದು. ಅದನ್ನು ಮುಂದಿನ ವರ್ಷಕ್ಕೆ ಮಂಜೂರು ಮಾಡಲಿಕ್ಕೆಂದು ಮುಂದರಿಸಿರುವರು. ಆದುದರಿಂದ ಮನಸ್ಸಿನ ಆಶೆಯಿಂದ ಸುಮ್ಮಗಿರಬಹುದೇ ಹೊರತು ಆ ಬಿಲ್ಲು ಪಾಸಾಗದೆಂದು ಖಂಡಿತ ಮಾಡಲಾಗದು. ಇನ್ನು ಈ ಪರಿಷತ್ತಿನಲ್ಲಿ ಯಾರು ನೇಮಕಹೊಂದುವರೆಂದೂ ನೋಡಲಿದೆ. ದಕ್ಷಿಣ ಆಫ್ರಿಕದ ಸಮಸ್ಯೆಯನ್ನು ಬಲ್ಲವರೇ ಇದರಲ್ಲಿ ನೇಮಕ ಹೊಂದಬೇಕು. ಮತ್ತು ಹಿಂದೀ ರಾಷ್ಟ್ರೀಯ ಭಾವನೆಯುಳ್ಳ ಹಿಂದೀಯರೇ ಹೆಚ್ಚಾಗಿರಬೇಕು.

ನಿಂಬೆಹುಳಿಯ ಶಿಪ್ಪೆಯು ಆಹಾರಕ್ಕೆ ಪ್ರಯೋಜನಕರವಾಗಿದೆಯೆ?

ನಾಲ್ಕನೇ ಜಾತಿಯ ವಿಟಾಮಿನ್ ಎಂಬ ವಸ್ತುವು ನಿಂಬೆಹುಳಿಯ ಶಿಪ್ಪೆಯಲ್ಲಿಯೂ, ಕಿತ್ತಳೆ ಹಣ್ಣಿನ ಶಿಪ್ಪೆಯಲ್ಲಿಯೂ ಇದೆ ಎಂದೂ, ಇದು ಶರೀರಕ್ಕೆ ಹೆಚ್ಚು ಶಕ್ತಿಯನ್ನು ಕೊಡುತ್ತದೆಂದೂ ಇಂಗ್ಲೆಂಡ ದೇಶದ ಕೇಂಬ್ರಿಜ್ ಊರಿನ ಬಾಯೊ ಕೆಮಿಸ್ಟ್ರಿ ಶಾಲೆಯಲ್ಲಿ ಶೋಧನೆಯನ್ನು ಮಾಡಿ ಕಂಡುಹಿಡಿದಿರುತ್ತಾರೆ.

ವಿಟಾಮಿನ್ ಎಂಬ ವಸ್ತುವು ಇದೆ ಎಂದು ಸರ್. ಎಫ್. ಗೌಲೆಂಡ ಹೋಪ್‌ಕಿನ್ಸ್ ಎಂಬವರು ಮೊದಲು ಶೋಧನೆಮಾಡಿ ಕಂಡುಹಿಡಿದಿದ್ದರು. ಇಷ್ಟರ ವರೆಗೆ ವಿಟಾಮಿನ್ A, ವಿಟಾಮಿನ್ B, ವಿಟಾಮಿನ್ C, ಎಂಬ ಮೂರು ಬಗೆ, ಇವುಗಳನ್ನು ಮಾತ್ರವೇ ಕಂಡುಹಿಡಿದಿದ್ದರು. ಈ ಮೂರು ತರದ ವಿಟಾಮಿನುಗಳನ್ನು ಡೊಕ್ಟರ್ ಎಸ್. ಜಿ. ವಿಲ್‌ಮೊಂಟ ಎಂಬವರು ಎರಡು ವರ್ಷಗಳ ವರೆಗೆ ಶೋಧನೆಮಾಡಿ ಕಂಡುಹಿಡಿದಿರುವರು. ಇವರು ಇಲಿಗಳಲ್ಲಿಯೂ ಗಿನಿ ಹಂದಿಗಳಲ್ಲಿಯೂ ಇದರ ಶೋಧನೆಯನ್ನು ಪರೀಕ್ಷಿಸಿ ಸಿಟ್ರಸ್ (ಲಿಂಬೆ) ಜಾತಿಯ ಹಣ್ಣುಗಳ ಶಿಪ್ಪೆಗಳಲ್ಲಿ ಈ ವಿಟಾಮಿನ್ ಪದಾರ್ಥವು ಬೇರೆ ಬೇರೆ ದಾಮಾಷಾಯದಲ್ಲಿ ಇದೆ ಎಂದು ಕಂಡುಹಿಡಿದಿರುವರು.

ಡೊಕ್ಟರ್ ವಿಲ್‌ಮೊಂಟರರು ಹೀಗೆ ಹೇಳುತ್ತಾರೆ:—ಇಷ್ಟರ ವರೆಗೆ ನಿಂಬೆಹುಳಿಯ ಶಿಪ್ಪೆಯಲ್ಲಿ ಏನಿದೆ ಎಂದು ಯಾರಿಗೂ ತಿಳಿದಿರಲಿಲ್ಲ. ಆದರ ಈ ಶಿಪ್ಪೆಗಳನ್ನು ಇಲಿಗಳಿಗೆ ಆಹಾರವಾಗಿ ಕೊಟ್ಟು ವಿಟಾಮಿನ್ B ಜಾತಿಯು ನಿಂಬೆ ಹಣ್ಣಿನ ಶಿಪ್ಪೆಯಲ್ಲಿ ಇದೆ ಎಂದು ಗೊತ್ತಾಯಿತು. ಈ ವಿಟಾಮಿನ್ B ಜಾತಿಯು ನರಗಳಿಗೆ ಉತ್ತಮವಾದ ಆಹಾರವಾಗಿದೆ. ಇದೇ ಹಣ್ಣಿನ ಶಿಪ್ಪೆಯಲ್ಲಿ A ಮತ್ತು C ಜಾತಿಯ ವಿಟಾಮಿನ್ ಸಹ ಸ್ವಲ್ಪ ಸ್ವಲ್ಪ ಇದೆ. ಈ ಶಿಪ್ಪೆಯನ್ನು ಸೂಕ್ಷ್ಮದರ್ಶಕ ಯಂತ್ರದಲ್ಲಿಟ್ಟು ನೋಡಿದಾಗ ಮಲಿನ ರಕ್ತವಾಹಿನಿಗಳಂತೆಯೂ ಶುದ್ಧ ರಕ್ತನಾಡಿಗಳಂತೆಯೂ ಇರುವ ರಕ್ತನಾಡಿಗಳು ಇವೆ ಎಂದು ಕಂಡುಬಂದದೆ. ಈ ಲಿಂಬೆ ಗಿಡವು ಸೂರ್ಯನ ಪ್ರಕಾಶದ ಸಹಾಯದಿಂದ ಸಂಪಾದಿಸಿದ ವಿಟಾಮಿನ್ ಎಂಬ ವಸ್ತುವು ಈ ನಾಡಿಗಳ ಮುಖಾಂತರ ಹಣ್ಣಿನೊಳಗೆ ಕಳುಹಿಸಲ್ಪಡುತ್ತದೆಂದು ಕಾಣುತ್ತದೆ.

ವಿಟಾಮಿನ್ ಎಂಬ ವಸ್ತುವು ಕಿತ್ತಳೆ, ದ್ರಾಕ್ಷೆ ಹಣ್ಣುಗಳ ಶಿಪ್ಪೆಯಲ್ಲೂ ಇದೆ ಎಂದು ಕಾಣುತ್ತದೆ. ಇದನ್ನು ಶೋಧನೆಮಾಡಿದರೆ ಇದರಿಂದ ಹೆಚ್ಚು ಲಾಭವಿರುವುದು. ಈ ಹಣ್ಣುಗಳ ರಸಗಳಲ್ಲಿ ಸೂರ್ಯಪ್ರಕಾಶವು ಕೂಡಿದ ಎಂದೂ ಕಂಡುಹಿಡಿದಿರುವರು. ಇನ್ನು ಶಿಪ್ಪೆಯಲ್ಲಿ ವಿಟಾಮಿನ್ ಎಂಬ ವಸ್ತುವು ಇದೆ ಎಂದು ಕಂಡುಕೊಂಡರೆ ಇಷ್ಟರ ವರೆಗೆ ಹಾಳಾಗಿ ಕೊಳತು ಹೋಗುತ್ತಿದ್ದ ಕಿತ್ತಳೆ ಹಣ್ಣಿನ ಶಿಪ್ಪೆಯು ಬಹಳ ಪ್ರಯೋಜನಕ್ಕೆ ಬೀಳುವುದು.

ಇನ್ನು ವಿಟಾಮಿನ್ D ಎಂಬುದರ ವಿಷಯ ಏನೆಂದು ಕೇಳಿದಾಗ ಡೊಕ್ಟರ್ ವಿಲ್‌ಮೊಂಟರು ಅದು ವಿಟಾಮಿನ್ Aಯ ಒಂದು ಒಳವಿಭಾಗವಾಗಿದೆ ಎಂದು ಹೇಳಿದರು. ಒಂದು ಆಹಾರದಲ್ಲಿ ವಿಟಾಮಿನ್ A ಕಡಿಮೆಯಾಗಿದ್ದರೆ ಆ ಆಹಾರದಿಂದ ಕಣ್ಣಿಗೆ ತೊಂದರೆಯುಂಟಾಗಿ ಶರೀರದ ಬೆಳವಣಿಗೆಯು ಕಡಿಮೆಯಾಗುವುದು. ಇದರ ಸತ್ಯಸ್ಥಿತಿಯನ್ನು ಯುದ್ಧದ ನಂತರ ವಿಯನ್ನಾ ಮತ್ತು ಇತರ ಸ್ಥಳಗಳಲ್ಲಿ ಕಂಡುಹಿಡಿದಿದ್ದಾರೆ. ವಿಟಾಮಿನ್ Dಯು ಗ್ರಹಣೀ ದೋಷವನ್ನು ತಡೆಗಟ್ಟುತ್ತದೆ. ವಿಟಾಮಿನ್ D ವಸ್ತುವು ಕೊಡಲಿವರ್ ಎಣ್ಣೆಯಲ್ಲಿಯೂ, ಹಸುರುಮಾಂಸದಲ್ಲಿಯೂ, ಹಾಲಿನಲ್ಲಿಯೂ ಬಹಳ ಹೆಚ್ಚಾಗಿರುತ್ತದೆ. ಸೂರ್ಯಪ್ರಕಾಶದಲ್ಲಿಯೂ ಇದು ಇದೆ.

ಈ ಹೊಸ ಶೋಧನೆಯನ್ನು ಮಾಡಿದುದರಿಂದ ಇಷ್ಟರ ವರೆಗೆ ಶೋಧಿಸಿ ಮಾಡಿದ ಆಹಾರ ಜಿನಸುಗಳಲ್ಲಿಯೂ ವಿಟಾಮಿನ್ ಎಂಬ ವಸ್ತುವು ಎಷ್ಟಿದೆ ಎಂಬುದನ್ನು ತಿರಿಗಿ ಶೋಧನೆಮಾಡುವ ಅಗತ್ಯವಿದೆ. [illegible] ನವ ಜನಿಯ ವಿಟಾಮಿನ್ [illegible] ಎಂಬುದನ್ನು [illegible] ಕೇಂಬ್ರಿಜ್‌ನಲ್ಲಿ ಈ ಶೋಧನೆ ಇನ್ನೂ [illegible].

ಸರಕಾರ ಕಡೆಯವರೋ ಏನೆಂದು ಭೀತಿಯಿಂದ ಕರ ಹೆಚ್ಚಿಸಲಿಕ್ಕೆ ಬಂದಿದ್ದೇವೋ ಏನೆಂತ ಅಂಜಿಕೊಂಡು ಸತ್ಯವನ್ನು ಹೇಳಲಾರರು. ಹೀಗೆ ಜನರಲ್ಲಿ ಅವಿಶ್ವಾಸ ಮತ್ತು ವಿದೇಶಿ ಪೋಷಕು ಹಾಕಿಕೊಳ್ಳುವವರನ್ನು ಅನುಕರಿಸೋಣ ಈ ಎರಡು ಮುಖ್ಯ ದುರ್ಗುಣಗಳು ಇವೆ. ನಿನ್ನೆ ದಿನದ ಪರಿಷತ್ತಿನೊಳಗೆ ಬರೇ ಅಲ್ಪ ಸಂಖ್ಯಾ ಜನರು ನೆರೆದಿದ್ದರು. ಸಾಮಾನ್ಯ ಜನರಂತೂ ಬರಲೇ ಇಲ್ಲ. ಇದು ಅತ್ಯಂತ ದುಃಖಾಸ್ಪದವಾದ ಸಂಗತಿಯಾಗಿರುತ್ತದೆ. ಇದರಿಂದ ನಮ್ಮ ಆಂದೋಲನಕ್ಕೆ ಅವರ ಪ್ರೋತ್ಸಾಹವಿಲ್ಲ. ಅಂದರೆ ನಮ್ಮ ಸಾಮಾನ್ಯಕೆಲಸಕ್ಕೂ ಅವರಿಗೂ ನಡುವೆ ಅತ್ಯಂತರವೂ ಇರುವುದಿಲ್ಲವೆನ್ನಿಸುತ್ತದೆ. ಹೀಗೆ ಪರಿಸ್ಥಿತಿಗಳು ಇರುವಾಗ ಬರುವ ಚುನಾವಣೆಯಾದರೂ ಹೇಗೆ ಸಾಗಬೇಕು? ಪತ್ರಿಕೆಗಳನ್ನು ಓದೋಣ ಕಿವಿಗಳಿಂದ ಕೇಳೋಣ ಪುಸ್ತಕ ಬಂದಲ್ಲಿ ನೋಡೋಣ ಇಷ್ಟೇ ಹೊರತು ಇನ್ನು ಯಾವುದನ್ನು ಕಾರ್ಯರೂಪದಲ್ಲಿ ತರುವಂತಿಲ್ಲ. ಜನರು ಓಟನ್ನು ಕೊಡುವಾಗ ಪುಗಸಟ್ಟೆ ಕೊಡುವ ಪದ್ಧತಿಯೇ ಕಡಿಮೆ. ಕಾಫಿ, ರೊಕ್ಕ, ಜಾತಿವಿಚಾರ ಇವುಗಳ ಕಡೆಗೆ ಮುಂದಿಗಳ ಲಕ್ಷ್ಯ, ಓಟುಕೊಡುವ ವೇಳೆ ಹೋಗುತ್ತದೆ ಹೊರತು ನಿಜವಾದ ಗುಣವನ್ನು ಗ್ರಹಣಮಾಡುವಶಕ್ತಿ ಜನರಲ್ಲಿ ಇರುವುದಿಲ್ಲ. ಜನರಲ್ಲಿ ಪೂಜ್ಯಬುದ್ಧಿ ಕಡಿಮೆಯಾಗಿದೆ. ಇನ್ನು ಸ್ವರಾಜ್ಯಪಕ್ಷೀಯರು ಕೌನ್ಸಿಲು ಮಹಲು ಬಿಟ್ಟು ಹೊರಬಿದ್ದರೆ ಸರಕಾರವು ಕೇಳುವುದು "ಜನತೆಯು ಎಲ್ಲಿ ನಿಮ್ಮ ಹಿಂದೆ ಇರುತ್ತದೆಂತ" ಇದಕ್ಕೆ ಏನು ಉತ್ತರವನ್ನೀಯಬೇಕು. ಜನತೆಯು ಸಂಪೂರ್ಣ ಉಪೇಕ್ಷೆಭಾವದಿಂದ ಇರುತ್ತದೆ. ಇಂಥಾ ಪ್ರಸಕ್ತಿಗಳು ದೂರವಾಗದ ವಿನಹಾ ಕಲ್ಯಾಣವು ಎಂದೂ ಆಗಲಾರದು. ಮೊದಲಾಗಿ ಖಾದಿಯನ್ನು ಜೋರಿನಿಂದ ಮುಂದೊತ್ತಬೇಕು ಮತ್ತು ಕೌನ್ಸಿಲುಗಳಿಗೆ ಸ್ವರಾಜ್ಯಪಕ್ಷೀಯರನ್ನು ಕಳುಹಿಸುವುದು ಇದು ಕರ್ನಾಟಕರ ಪ್ರಥಮ ಕರ್ತವ್ಯವಾಗಿರಬೇಕೆಂದು" ಪ್ರಾರ್ಥನಾಪೂರ್ವಕ ಸಭಿಕರಿಗೆ ವಿಜ್ಞಾಪಿಸಿ ಭಾಷಣವನ್ನು ಮುಕ್ತಾಯಗೊಳಿಸಿದರು.

ಅನಂತರ ಅಧ್ಯಕ್ಷರು ದೇ. ಭ. ಗಂಗಾಧರ ದೇಶಪಾಂಡೆಯವರನ್ನು ಭಾಷಣಕ್ಕೆ ಕರೆದರು, ಅವರು ತನ್ನ ಅತ್ಯಂತ ಗಂಭೀರವಾದ ಹಾಗೂ ತುಂಬಾ ವಿಷಯಮಯವಾಗಿರುವ ಭಾಷಣಮಾಡಿದರು. ಅದರ ಸಾರಾಂಶವಾದರೋ ಹೀಗಿರುತ್ತದೆ. ಬಂಧುಗಳೇ, ನನ್ನ ಮಿತ್ರ ಹನುಮಂತರಾಯ ಕೌಜಲಗಿಯವರು ಖಾದಿಯ ವಿಷಯವೆ ಭಾಷಣವನ್ನಿತ್ತರು. ಇನ್ನಂತೂ ನಾನೂ ಆಡುವ ವಿಚಾರ "ಖಾದಿ" ಮಾತ್ರ ಇರುತ್ತದೆ. ನನ್ನ ಯಾವತ್ತು ಜೀವನವನ್ನು ಖಾದಿಗಾಗಿಯೇ ಅರ್ಪಿಸುತ್ತೇನೆ. ಇದಕ್ಕಿಂತ ಸಾರ್ವಜನಿಕ ಪ್ರಯೋಜನದ ಕೆಲಸವು ಬೇರೊಂದು ಇರುವುದಿಲ್ಲ. ಲೊ. ಮಾ. ತಿಲಕರ ಬಹಿಷ್ಕಾರ ಚಳವಳದ ಮೊದಲುಗೊಂಡು ನಾನು ಯಾವತ್ತು ಸಾರ್ವಜನಿಕ ಕೆಲಸದಲ್ಲಿಯೇ ಕೈಹಚ್ಚಿರುತ್ತೇನೆ. ಈಗಲಂತೂ ಬೆಳಗಾಂವಿನ ಕೊಂಗ್ರೆಸು ನಂತರ ಖಾದಿಯ ಹೊರತು ಬೇರೆ ಯಾವ ಕೆಲಸ ಮಾಡುವುದಿಲ್ಲ. ಇದೇ ನನ್ನ ಮನಸ್ಸಿನ ಸಿದ್ಧಾಂತವಾಗಿರಬೇಕೆಂತ ಇಚ್ಛೆಪಡುತ್ತೇನೆ. ಲೋಕಲ್ ಫಂಡುಗಳನ್ನೂ ಮ್ಯುನಿಸಿಪಾಲಿಟಿಗಳನ್ನೂ ಮತ್ತು ಕಾಯಿದೆಕೌನ್ಸಿಲುಗಳನ್ನೂ ನಾನು ಈ ೨೫ ವರ್ಷಗಳ ಸಾರ್ವಜನಿಕ ಜೀವಮಾನದಲ್ಲಿ ಸಂಪೂರ್ಣವಾಗಿ ತಿಳಿದಿರುವೆನು. ಇವುಗಳ ಮೇಲೆ ನನಗೆ ಯಾವ ಅಭಿಮಾನ ಇರುವುದಿಲ್ಲ. ಕಾಯಿದೆಕೌನ್ಸಿಲುಗಳು ಕೂಡ ಏನೆಂತ ಬಲ್ಲೆ. ಆದರೆ ಅದರೊಳಗೆ ಹೋಗುವ ಸಂದರ್ಭ ಬರಲಿಲ್ಲ. ಇನ್ನು ಕೂಡ ಬರಲಾರದು. ಅವುಗಳ ವಿಷಯದಲ್ಲಿ ನನಗೆ ಹೆಚ್ಚೇನೂ ಕಂಡು ಬರುವುದಿಲ್ಲ. ನಾನು ವೃದ್ಧ; ನನ್ನ ಸಾರ ಜೀವನದ ಅನುಭವ ಮೂಲಕ ಹೇಳುವುದಾದರೆ ಖಾದಿಯಿಂದ ಮಾತ್ರ ದೇಶವನ್ನು ಉದ್ಧರಿಸಲಿಕ್ಕೆ ಸಾಧ್ಯವಿರುತ್ತದೆ ಎಂತ ಹೇಳಬಲ್ಲೆ. ಮೊತ್ತ ಮೊದಲು ನಾನು ಕೂಡ ಈ ಖಾದಿಯಲ್ಲಿ ಸಂಪೂರ್ಣ ಅವಿಶ್ವಾಸವುಳ್ಳವನಿದ್ದೆ. ಇಂಥಾ ಗಿರಣಿಗಳ ಕಾಲದಲ್ಲಿ ಖಾದಿಯು ನಡಿಯಲಾರದು ಎಂತ ಖಚಿತ ಪಟ್ಟುಕೊಂಡಿದ್ದ ಈ ವಿಷಯದಲ್ಲಿ ಮುಂಬಯಿಯಲ್ಲಿ ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ನೆರೆದ ಸಭೆಯಲ್ಲಿ ಅವರಿಗೆ ವಿರುದ್ಧವಾಗಿ ಮತವನ್ನು ಕೊಟ್ಟೆನು. ಅಲ್ಲದೆ ಚೆನ್ನಾಗಿ ಚರ್ಚಿಸಿದೆ. ಚರಕವು ಆರ್ಥಿಕ ದೃಷ್ಟಿಯಿಂದ ನಿಷ್ಪ್ರಯೋಜನವೆಂದು ಅಭಿಪ್ರಾಯಪಟ್ಟೆ. ಅಂಗ್ರೇಜಿಯರು ರಾಜಕೀಯ ಶಕ್ತಿಯಿಂದ ತಮ್ಮ ವ್ಯಾಪಾರೀ ಶಕ್ತಿಯನ್ನು ಇಲ್ಲಿ ಬೆಳಸುತ್ತಾರೆ. ವ್ಯಾಪಾರ ಶಕ್ತಿಯು ಕ್ಷೀಣವಾದೊಡನೆ ರಾಜಕೀಯ ಕ್ರಮವಾಗಿ ಅಧೋಗತಿಗೆ ಬರುತ್ತವೆಂತ ನಂಬಿಕೊಂಡು ಅದಕ್ಕೆ ಅಂಗ್ರೇಜಿಯ ಯಾವತ್ತು ಬಟ್ಟೆಗಳನ್ನು ಬಹಿಷ್ಕರಿಸಿ ಜರಾಸು, ಅಮೇರಿಕ ಇತ್ಯಾದಿ ಕಡೆಗಳಿಂದ ನಾವು ವ್ಯಾಪಾರ ನಡಿಸಿಕೊಳ್ಳಬೇಕು. ಇಲ್ಲವೆ ಈಗಿರುವ ಗಿರಣಿಗಳ ಸಂಖ್ಯೆ ದಶಪಾಲಿನಿಂದ ಹೆಚ್ಚಿಸಬೇಕೆಂದೂ, ಈ ಎರಡು ಸರಳ ಮಾರ್ಗಗಳನ್ನು ಬಿಟ್ಟು ಬಿಟ್ಟು ಮಂದಿಗೆ ಖಾದಿ ಹಾಕಿಕೊಳ್ಳಿರಿ ಎಂದು ಹೇಳುವುದು ಪೂರ್ಣ ಅವ್ಯವಹಾರಿ ಎಂದು ಖಂಡನೆಮಾಡಿದೆ. ಮಹಾತ್ಮಾ ಗಾಂಧಿಯವರ ಅನುಜ್ಞೆ ಮೇರೆಗೆ ೮ ದಿನಗಳ ವರೆಗೆ ಅವರ ಕರಿ ಮುಂಬಾಯಿಯಲ್ಲಿ ನಿಂತೆ. ದಿನವಹಿ ಚರ್ಚಾನಂತರ ೫ನೇ ದಿನದಲ್ಲಿ ನನಗೆ ಬುದ್ಧಿ ಗ್ರಾಹ್ಯವಾಯಿತು. ನನ್ನ ಮುಂಚಿನ ಎರಡು ಅಭಿಪ್ರಾಯಗಳನ್ನು ತ್ಯಜಿಸಿಬಿಟ್ಟೆನು. ಈಗ ಬೆಳಗಾಂವ ಕೊಂಗ್ರೆಸ್ಸು ನಂತರ ಖಾದಿ ಪುನಹಾ ೨ನೆಯ ದರದಲ್ಲಿ ಕೈಹಾಕುವುದಿಲ್ಲವೆಂತ ನಿರ್ಧಾರಮಾಡುತ್ತೇನೆ. ಈಗ ನಾನು ಶಹರು ಬಿಟ್ಟು ನಮ್ಮ ಹಳ್ಳಿಗಳಲ್ಲಿ ವಸತಿಮಾಡುತ್ತಾ ಇದ್ದೇನೆ. ಖಾದಿಯ ಹೊರತು ಜನಜಾಗೃತಿ ಹುಟ್ಟಿಸುವ ಮಾರ್ಗವಿಲ್ಲ. ಕೌನ್ಸಿಲು ವಾದಿಗಳು ನಾವು Electorate educate ಮಾಡುತ್ತೇವೆ ಅಂದರೆ ಮತದಾರರನ್ನು ತಯಾರು ಮಾಡುತ್ತೇವೆ ಅನ್ನಬಹುದು. ಅದೇನು ತೀರಾ ಅಸಾಧ್ಯದ ಮಾತು. ಇಂಗ್ರೇಜು ಸರಕಾರವು ತಕ್ಕ ಬಂದೋಬಸ್ತು ಮೊದಲೆ ಮಾಡಿಕೊಂಡಿಯದೆ. ಯಾಕೆಂದರೆ ಶಿಕ್ಷಣ ಪದ್ಧತಿಯು ಅಷ್ಟು ನೀಚ ಸ್ವಭಾವದ್ದು ಇರುತ್ತದೆ. ಇದರಿಂದ ಸುಶಿಕ್ಷಿತ ಜನರ ಮೇಲೆ ಪ್ರೇಮವಿಲ್ಲ. ಅವರೊಳಗೆ ಮೈತ್ರಿಯಿಲ್ಲ. ಅಂದಮೇಲೆ ಮತದಾರರ ತಯಾರು ಆದರೂ ಹೇಗೆ ಆಗಬೇಕು ಇಂಗ್ರೇಜು ಸರಕಾರವು ಅತೀ ಧೂರ್ತಸರಕಾರವಿರುತ್ತದೆ. ಮಾನಸಿಕ ಪ್ರತೀಕಾರ ಬಲವನ್ನು ಈ ಶಿಕ್ಷಣ ಮುಖಾಂತರ ಎಳೆದು ಅಪಹರಿಸಿ ತೆಗೆದಿರುತ್ತಾರೆ. ಮಾನಸಿಕ ದೌರ್ಬಲ್ಯ ಮತ್ತು ಶಾರೀರಕ ದೌರ್ಬಲ್ಯ ನಡುವೆ ಈ ಜನತೆಯ ಸುಧಾರಣೆಯಾದರೂ ಹೇಗೆ ಆಗಬೇಕು.

ಎಲ್ಲಿ ಪ್ರತೀಕಾರ ಶಕ್ತಿಯುಂಟೊ ಅಲ್ಲಿ ಸ್ವಾಭಿಮಾನ ಉಂಟು. ಕೊಂಗ್ರೆಸು ಈ ಸ್ವಾಭಿಮಾನವನ್ನು ಎತ್ತಿ ಹಿಡಿಯಲು ಬದ್ಧಕಂಕಣವಾಗಿಯದೆ. ಈ ದಿವ ನಾನು ಹಿರೇಕೆರೂರಕ್ಕೆ ಹೋಗಿ ಬಂದಿದ್ದೇನೆ. ಅಲ್ಲಿಯ ವಿದ್ಯಮಾನಗಳನ್ನು ನೋಡುತ್ತಲೇ ಮನಗೆ ಅತ್ಯಂತ ದುಃಖವಾಗುತ್ತದೆ. ಖಾದಿಯ ವಿಷಯಕ್ಕೆ ಹಿರೇಕೆರೂರದಂತಹ ಊರು ನನ್ನ ತಿಳುವಳಿಕೆಗೆ ಹಿಂದೂಸ್ಥಾನದಲ್ಲಿ ಎಲ್ಲೆಲ್ಲಿಯೂ ಇಲ್ಲ. ಹತ್ತಿಬೆಳೆಯುವುದು, ಹಿಂಜುವುದು,

ನೂಲುವುದು, ಮತ್ತು ನೇಯುವುದು ಈ ಎಲ್ಲಾ ವಿಧಾನಗಳು ಒಂದೇ ಮನೆಯಲ್ಲಿರುವುದು. ಇಂಥಾ ಅದ್ವಿತೀಯ ಊರಿನ ಜನರು ಉಪವಾಸ ಬೀಳುತ್ತಾರೆ. ಸಾಧಾರಣ ೨೦೦ ಮನೆಗಳಲ್ಲಿ ಜೀವನೋಪಾಯವಿಲ್ಲದೆ ನರಳುತ್ತಿರುವರು. ಕೊ-ಒಪರೇಟಿವ್ ಸೊಸೈಟಿಗೆ ೩೦೦೦ರೂಪಾಯಿಗಳಷ್ಟು ಬರಬೇಕಾಗಿಯದೆ. ಅವರ ದಿನವಹಿ ಸಂಪಾದನೆ ೩ ಆಣೆ ಇದ್ದರೆ ೧ ಆಣೆ ಕಳ್ಳಿಗೆ ಹೋಗುತ್ತದೆ. ಬಾಕಿ ೨ ಆಣೆಯ ಉಳಿಕೆಯಿಂದ ಕುಟುಂಬ ಜೀವನ ಮಾಡುತ್ತಾರೆ. ಹೀಗೆ ಸ್ವಾವಲಂಬನೆಯಿಲ್ಲದೆ ಕಷ್ಟದಿಂದ ನರಳುತ್ತಿರುವ ಮತ್ತು ಕುಡಿಕತನದಿಂದ ಭ್ರಾಂತರಾಗಿರುವವರ ಮುಂದೆ ನಿಮ್ಮ ರಾಜಕಾರಣ ಹೇಗೆ ಸಾಧ್ಯವಾಗಬಹುದು. ಇಂಥಾ ಮತದಾರವರ್ಗವು ಇರುತ್ತಾ ನೀವು ಲೆಜಿಸ್ಲೇಟಿವ್ ಸ್ಥಾನಗಳಲ್ಲಿ ಏನು ಮಾಡಬಹುದು, ಮೊದಲಾಗಿ ಇವರ ಉದ್ಧಾರವಾಗದೆ ಯಾವ ಕೆಲಸವೂ ಪ್ರಯೋಜನವಿಲ್ಲ. ವರ್ಷದಲ್ಲಿ ೬ ತಿಂಗಳುಗಳ ತನಕ ಕೆಲಸವಿಲ್ಲದೆ ದಾರಿದ್ರ್ಯದಿಂದ ನರಳುತ್ತಿರುವ ಜನರಿಗೆ ಉದ್ಯೋಗ ಹಚ್ಚಿ ಕೊಡಿರಿ. ಅಂಥ ದರಿದ್ರರಿಂದ ಮಾಡಲ್ಪಟ್ಟ ಬಟ್ಟೆಯನ್ನೆ ಧರಿಸಿ ಅದೇ ಒಂದು ಫೆಶನನ್ನಾಗಿ ಮಾಡಿ ಖಾದಿ ಬಟ್ಟೆಯನ್ನು ಧರಿಸುವುದರಿಂದ ನಿಮ್ಮ ಪ್ರತಿಷ್ಠೆಯು ಹಾಳಾಗಲಾರದು. ಮಹಾತ್ಮಾಜಿಯವರು ಬರೇ ಲಂಗೋಟಿಯಲ್ಲಿದ್ದಾರೆ. ಮೋತಿಲಾಲ ನೆಹರುರವರು ಈ ಒರಟು ಬಟ್ಟೆಯನ್ನು ಉಡುತ್ತಾರೆ. ಅದರಿಂದ ಅವರ ಪ್ರತಿಷ್ಠೆಯು ಕಡಿಮೆಯಾಗಿಯದೆಯೋ? ಈಗಲಂತೂ ಖಾದಿ ಬಟ್ಟೆಯು ೫ ವರ್ಷಗಳ ಸುಧಾರಣೆಯಿಂದ ಅತೀ ಸಾಜೂಕಾಗಿಯದೆ. ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಅಖಿಲ ಭಾರತ ನೂಲುವವರ ಸಂಘವು ನಡಿಯುತ್ತಿದೆ. ಅದರ ಮೂಲಕ ಬಟ್ಟೆಯು ದಿನೇ ದಿನೇ ಉತ್ತಮವಾಗಿಕೊಂಡು ಬರುತ್ತದೆ. ಗಿರಣಿ ಬಟ್ಟೆಗಳಿಂದ ಖಾದಿ ಬಟ್ಟೆಯು ಉತ್ತಮವಿರುತ್ತದೆ. ಕಾರಣ ಗಿರಣಿಮಾಲಿನ ಹತ್ತಿಯು ಒಳ್ಳೇಯ ಮತ್ತು ಕೆಟ್ಟ ಹತ್ತಿಗಳ ಮಿಲನದಿಂದ ಆಗುತ್ತದೆ. ಈ ಕ್ರಮಕ್ಕೆ ಮಿಲನಪದ್ಧತಿಯೆನ್ನುತ್ತಾರೆ. ಆದರೆ ನಮ್ಮ ಖಾದಿಯ ಹತ್ತಿಯು ಉತ್ತಮವಾಗಿದ್ದು ಹೆಚ್ಚು ಬಾಳುವಿಕೆಯುಳ್ಳದ್ದಾಗಿರುತ್ತದೆ. ಇದರ ವಿಷಯದಲ್ಲಿ ನಾವು ಖಾದಿಹುಚ್ಚರು ಹೇಳುವುದು ಮಾತ್ರವಲ್ಲ, ಇಂದೋರ್ ರಾಜ್ಯಪ್ರಕಟಣೆಗಳಲ್ಲಿ ಒಂದಾಗಿರುವ ೧೨ ಆಣೆ ಬೆಲೆಯ, ರಾ। ತಾಲ್ಕರ್‌ಕರರಿಂದ ಬರೆಯಲ್ಪಟ್ಟ ಗಿರಣಿ ನೂಲಿಗಿಂತ ಹೆಚ್ಚು ಚರಕ ನೂಲಿನ ಶ್ರೇಷ್ಠತೆ ಎಂಬ ಪುಸ್ತಕದಲ್ಲಿ ಬರೆದುದನ್ನು ನೋಡಿದರೆ ನಿಮಗೆ ಚರಕದ ಮಹತ್ವವು ಮತ್ತು ಉತ್ಕೃಷ್ಟತೆಯು ಮಂದಟ್ಟಾಗುವುದು. ಅದು ಕಾರಣ ತಮ್ಮಂತವರು ಅಗತ್ಯ ಈ ಕೈಗಾರಿಕೆ ಪ್ರೋತ್ಸಾಹವನ್ನೀಯಬೇಕು. ಈ ದಿನ ನಾನು ಹಿರೇಕೆರೂರದಿಂದ ಬರುವಾಗ್ಗೆ ಒಂದು ನಿರ್ಧಾರಮಾಡಿಕೊಂಡು ಬಂದಿದ್ದೇನೆ. ಅಲ್ಲಿಯ ದುರವಸ್ಥೆಯನ್ನು ನೋಡಿ ಹೊಟ್ಟೆಯಲ್ಲಿ ಬೆಂಕಿ ಬಿದ್ದವನಾಗಿ ತಮ್ಮ ಕೂಡ ಅರಿಕೆ ಮಾಡಿಕೊಳ್ಳಲು ಬಂದೆನು. ನಾನು ಆಡಿದುದರಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ದಯವಿಟ್ಟು ಕ್ಷಮಿಸಬೇಕು. ಇನ್ನೊಮ್ಮೆ ೪ ಅಥವಾ ೬ ತಿಂಗಳಲ್ಲಿ ಇಲ್ಲಿಗೆ ಬರುತ್ತೇನೆ. ಅಗ್ಗೆ ಅದರೂ ಹಿರೇಕೆರೂರದ ಸ್ಥಿತಿಯು ನಿಮ್ಮೆಲ್ಲರ ಪ್ರೋತ್ಸಾಹದಿಂದ ಉತ್ತಮವಾದೀತೆಂತ ಆಶಿಸಿಡುತ್ತೇನೆ ಇಷ್ಟು ಮಾತುಗಳನ್ನಾಡಿದ ನಂತರ ತಮ್ಮ ಭಾಷಣವನ್ನು ಸಮಾಪ್ತಿಗೊಳಿಸಿದರು. ಭಾಷಣ ಸಮಾಪ್ತಿಯಾದ ನಂತರ ಮಹನೀಯರಾದ ಅಧ್ಯಕ್ಷರು ಭಾಷಣಗಾರರನ್ನು ತುಂಬಾ ಶ್ಲಾಘಿಸಿ, ತಮ್ಮ ಕೈಲಾದಷ್ಟು ಮಟ್ಟಿಗೆ ಅವರು ಹೇಳಿದ ಕೆಲಸವನ್ನು ಮಾಡಬೇಕೆಂದು ಜನರಿಗೆ ಬೋಧಿಸಿ. ಸಭೆಯು ಮುಕ್ತಾಯ...

ವಿವಿಧ ವಿಷಯಗಳು.

ಮನುಷ್ಯರಂತೆ ಕುಯುಕ್ತಿಯುಳ್ಳ ಪಕ್ಷಿ.

ದಕ್ಷಿಣ ಸಾಗರದ ದ್ವೀಪಗಳಲ್ಲಿ "ಫ್ರಿಗೇಟ್" ಎಂಬ ಪಕ್ಷಿಯ ಜಾತಿ ಇದೆ. ಇದರಲ್ಲಿ ಮೂತಿಯು ಮೇಲ್ಭಾಗವು ಡೊಂಕಾಗಿದೆ. ಇದರ ರೆಕ್ಕೆಗಳು ಹಂಸಪಕ್ಷಿಗಳಷ್ಟೆ ದೊಡ್ಡದಾಗಿವೆ. ಇದರ ಬಾಲವು ಬಹಳ ಉದ್ದವಾಗಿದೆ. ಇದರ ಶರೀರವು ಬಹಳ ಹಗುರವಾಗಿರುವುದರಿಂದ ಬಹಳ ದೂರ ಸುಲಭವಾಗಿ ಹಾರಬಲ್ಲುದು. ಇವುಗಳಿಗೆ ಮೊಟ್ಟೆಯಿಂದ ಹೊರಬಂದೊಡನೆ ಇವುಗಳ ಕತ್ತು, ತಲೆ, ಕೊಕ್ಕು ಮತ್ತು ಎದೆ, ಬೆಳ್ಳಗಿವೆ. ಬೆಳೆದು ದೊಡ್ಡದಾದ ಮೇಲೆ ಕಪ್ಪು ಚೊಕ್‌ಲೇಟ್ ಬಣ್ಣವಾಗುವುದು. ಮೈಯು ಚೆನ್ನಾಗಿ ಮಿಂಚುವುದು.

ನೌರಿಫೊಕ್‌ರ್ಲ್ ಮತ್ತು ಸೊಲೊಮೊನ್ ದ್ವೀಪಗಳಲ್ಲಿ ವಾಸಿಸುವ ಪ್ರತಿ ಒಬ್ಬರೂ ಬಹಳ ಪ್ರೀತಿಯಿಂದ ಈ ಪಕ್ಷಿಗಳನ್ನು ಸಾಕುತ್ತಿರುವರು. ಈ ಪಕ್ಷಿಯು ಒಂದು ಕಳ್ಳಪಕ್ಷಿ. ಅದಲ್ಲದೆ ವಿಶ್ವಾಸಘಾತಕಿ. ಒಬ್ಬ ಗ್ರಂಥಕರ್ತರು ಇದನ್ನು ಗರಿಗಳುಳ್ಳ ಕಳ್ಳನೆಂದು ಕರೆದಿರುವರು. ಇದು ಬಹಳ ಕೆಳಗಡೆಯಿಂದ ಹಾರಬಲ್ಲುದು, ಕಡಲುಕಾಗೆಗಳು ತಮ್ಮ ಬಾಯಿಗಳಲ್ಲಿ ಹಿಡಿದಿರುವ ಮೀನುಗಳನ್ನು ಕದಿಯುವುದು. ಮತ್ತು ಈ ಪಕ್ಷಿಗಳನ್ನು ತಮ್ಮ ಯಜಮಾನರ ಕೈಗೆ ಒಪ್ಪಿಸುವವು. ಇದು ಒಂದು ಅಂದವಾದ ಪಕ್ಷಿಯಲ್ಲ. ಇದು ಒಂದು ವಿಶೇಷ ತರದಪಕ್ಷಿ. ಕದಿಯಲಿಕ್ಕೆ ಹೋಗದೆ ಇರುವಾಗ ತನ್ನ ಗೂಡಿನಲ್ಲಿ ಸುಮ್ಮನೆ ಮಲಗಿ ನಿದ್ರೆಮಾಡುವುದು. ಯಜಮಾನನು ಬೇರೆ ಬೇರೆ ಪಕ್ಷಿಗಳನ್ನು ಹಿಡಿಯಲಿಕ್ಕೆ ಕಲಿಸಿದರೆ ಬಹಳ ಜಾಣತನದಿಂದ ಅವುಗಳನ್ನು ಹಿಡಿಯುವುದು.

ಹಬ್ಬದ ದಿವಸಗಳಲ್ಲಿ ಈ ದ್ವೀಪಗಳ ನಿವಾಸಿಕರು ಒಟ್ಟುಕೂಡಿ ತಮ್ಮ ತಮ್ಮ ಪಕ್ಷಿಗಳ ಜಾಣತನವನ್ನು ಪರೀಕ್ಷಿಸುವರು. ಈ ಸಭೆಗೆ ಆ ದ್ವೀಪಗಳ ರಾಜನೇ ಅಧ್ಯಕ್ಷನಾಗಿ ಕುಳಿತುಕೊಳ್ಳುವನು.

ಈ ಪಕ್ಷಿಗಳನ್ನು ಬಿಟ್ಟು ಒಡನೆಯೇ ಬೇರೆ ಯಾವ ಜಾತಿಯ ಪಕ್ಷಿಯಾದರೂ ಕಂಡುಬರುವುದಿಲ್ಲ. ಸ್ವಲ್ಪ ಹೊತ್ತಿನ ವರೆಗೆ ಇವುಗಳು ಮಾಯವಾಗುತ್ತವೆ. ಸ್ವಲ್ಪ ಸಮಯದಲ್ಲಿ ಬೇರೆ ಬೇರೆ ಇತರ ಜಾತಿಯ ಪಕ್ಷಿಗಳನ್ನು ಅಟ್ಟಿಕೊಂಡು ಬರುತ್ತವೆ. ಈ ಫ್ರಿಗೇಟ ಪಕ್ಷಿಗಳ ಯಜಮಾನರು ಇವುಗಳು ಬೇಟೆಯಾಡಿ ತರುವ ಪಕ್ಷಿಗಳಿಗಾಗಿ ಗೂಡುಗಳನ್ನು ಕಟ್ಟಿ ಇಡುವರು. ಆದರೆ ಇವರು ಅಟ್ಟಿಕೊಂಡು ಬಂದ ಪಕ್ಷಿಗಳು ಗೂಡಿನಲ್ಲಿ ಹೊಕ್ಕಲಿಕ್ಕೆ ಸಂಶಯಪಡುತ್ತವೆ. ಮತ್ತು ಓಡಿಹೋಗಲಿಕ್ಕೆ ಪ್ರಯತ್ನಿಸುತ್ತವೆ. ಆದರೆ ಫ್ರಿಗೇಟ್ ಪಕ್ಷಿಗಳು ಇವುಗಳನ್ನು ಓಡಿಹೋಗಲಿಕ್ಕೆ ಬಿಡುವುದಿಲ್ಲ. ತಮ್ಮ ಬಾಯಿಯನ್ನು ತೆರೆದು ಅವುಗಳನ್ನು, ಕಟ್ಟಿ, ರೆಕ್ಕೆಗಳಿಂದ ಬಡಿದು ಗೂಡಿನೊಳಗೆ ಹೋಗುವಂತೆ ಮಾಡುತ್ತವೆ. ಯಾರ ಗೂಡಿನಲ್ಲಿ ಹೆಚ್ಚು ಪಕ್ಷಿಗಳು ಬಿದ್ದಿವೆಯೋ ಅವರಿಗೆ ಮರ್ಯಾದೆಯು ಸಿಗುವುದು. ಅನಂತರ ಕುಣಿತಗಳೂ ಊಟೋಪಚಾರಗಳೂ ಆಗುವುದು.

ಸ್ಟೀಮು ಎಂಜನಿನ ಆಯುಸ್ಸು ಮುಗಿಯಿತೇ? ಬ್ರಿಟಿಷ ರೈಲ್ವೆಗಳ ಮುಂದಿನ ಸ್ಥಿತಿ.

ಕಳೆದ ಹೌಸ ಒಫ್ ಕೋಮನ್ಸ ಸಭೆಯಲ್ಲಿ ಟ್ರೆನ್ಸಪೋರ್ಟ ಮಂತ್ರಿಗಳು ಹೀಗೆಂದರು:—ಹೆಚ್ಚು ವರ್ಷ ಬದುಕಬೇಕೆಂದಿರುವ ಪ್ರತಿ ಒಬ್ಬನು ಸೀಜನ ಟಿಕೇಟು ತೆಗೆದುಕೊಂಡು ರೈಲುಗಾಡಿಯಲ್ಲಿ ಪ್ರಯಾಣಮಾಡಬೇಕು. ಯಾಕೆಂದರೆ ಕಳೆದ ಐದು ವರ್ಷಗಳಲ್ಲಿ ರೈಲುಗಾಡಿಯಲ್ಲಿ ಪ್ರಯಾಣಮಾಡಿದ ೧೬೫ ಮಿಲಿಯ ಜನರಿಗೆ ಒಬ್ಬನ ಪ್ರಕಾರ ಮಾತ್ರವೇ ಮರಣ ಹೊಂದಿರುವನು.

ಮಾರ್ಗಗಳಲ್ಲಿ ನಡೆಕೊಂಡು ಪ್ರಯಾಣಮಾಡುವಾಗ ಜನರಿಗೆ ಅನೇಕ ಕಷ್ಟಗಳು ಬಂದೊದಗುತ್ತವೆ. ಕಳೆದ ವರ್ಷ ಗ್ರೇಟಬ್ರಿಟನ್ನಿನಲ್ಲಿ ಮೂರು ಸಾವಿರ ಜನರು ಮಾರ್ಗಗಳಲ್ಲಿ ನಡಿಯುತ್ತಿರುವಾಗ ಮರಣಪಟ್ಟಿರುವರು. ಆದರೆ ರೈಲುಪ್ರಯಾಣದಲ್ಲಿ ಈ ತರದ ಭಯವು ಇರುವುದಿಲ್ಲ.

ಬ್ರಿಟಿಷ ರೈಲ್ವೆಗಳು ಬಹಳ ಉತ್ಕೃಷ್ಟ ಸ್ಥಿತಿಯಲ್ಲಿವೆ. ನೂರು ವರ್ಷಗಳ ಹಿಂದೆ ರೈಲ್ವೆ ಏನೆಂಬುದು ಯಾರಿಗೂ ತಿಳಿದಿರಲಿಲ್ಲ. ದೇಶ ಪ್ರೇಮವುಳ್ಳ ಕೆಲವರು ಉತ್ತರ ಇಂಗ್ಲೆಂಡಿನಲ್ಲಿ ರೈಲುಮಾರ್ಗಗಳನ್ನು ಮಾಡಿಸಿದರು. ಅನಂತರ ಸಾವಿರಾರು ಜನರು ಮಂತಿಗೆಯಿಂದ ಹಣ ಕೂಡಿಸಿ ಬ್ರಿಟಿಷ ಜನಾಂಗದ ಒಳ್ಳಿತಕ್ಕಾಗಿ ಕೆಲಸ ನಡಿಸಿ ರೈಲುಮಾರ್ಗಗಳನ್ನು ಹೆಚ್ಚಿಸಿದರು. ಈಗ ಗ್ರೇಟಬ್ರಿಟನ್ನಿನಲ್ಲಿ ೫೧,೦೦೦ ಮೈಲು ರೈಲುಮಾರ್ಗಗಳು ಇವೆ. ಅಂದರೆ ಈ ಕಬ್ಬಿಣ ಪಟ್ಟಿಗಳನ್ನು ಭೂಗೋಳದ ಸುತ್ತಲೂ ಹಾಕಿದ ಎರಡು ಸುತ್ತು ಹಾಕಬಹುದು.

ಎಲ್ಲಾ ದೇಶಗಳನ್ನು ಹಾಳುಮಾಡಿದ ಮಹಾಭಯಂಕರವಾದ ಕಳೆದ ಯುದ್ಧವು ಇಂಗ್ಲಿಷ ರೈಲ್ವೆಗಳಿಗೂ ಸರಿಯಾದ ಪೆಟ್ಟನ್ನು ಕೊಟ್ಟಿದೆ. ೧೯೧೪ರಿಂದ ೧೯೨೧ರ ವರೆಗೆ ರೈಲುಕಂಪೆನಿಗಳೆಲ್ಲವೂ ಸರಕಾರ ಸ್ವಾಧೀನದಲ್ಲಿಯೇ ಇದ್ದವು.

∴ ∴ ∴

ಯುದ್ಧದ ನಂತರ ರೈಲ್ವೆಯಲ್ಲಿ ಆದ ಬದಲಾವಣೆ.

ಯುದ್ಧವು ಮುಗಿಯುವ ವರೆಗೆ ರೈಲ್ವೆಗಳಲ್ಲಿ ಯಾವ ತರದ ಬದಲಾವಣೆಗಳನ್ನು ಮಾಡಲಿಕ್ಕೂ ಆಯಾ ಕಂಪೆನಿಗಳಿಗೆ ಸಾಧ್ಯವಾಗಲಿಲ್ಲ. ಆದರೆ ೧೯೨೧ನೇ ಇಸವಿಯ ರೈಲ್ವೆ ಆಕ್ಟ ಪ್ರಕಾರ ಸರಕಾರವು ರೈಲ್ವೆಗಳನ್ನು ಕಂಪೆನಿಗಳಿಗೆ ವಹಿಸಿಕೊಡಲೇ ಇಲ್ಲ. ೧೯೨೨ನೇ ಇಸವಿಯ ಅಂತ್ಯದಲ್ಲಿ ಜನರಿಗೆ ಗೋಚರವಾಗದ ರೀತಿಯಲ್ಲಿ ರೈಲ್ವೆಗಳಲ್ಲಿ ಹೊಸ ಬದಲಾವಣೆಗಳು ಉಂಟಾದವು. ೧೯೨೩ನೇ ಇಸವಿಯ ಆರಂಭದಲ್ಲಿ ಇಂಗ್ಲೆಂಡಿನಲ್ಲಿದ್ದ ಸಣ್ಣ ಸಣ್ಣ ರೈಲು ಕಂಪೆನಿಗಳು ಮಾಯವಾದವು. ಯುದ್ಧವು ಇವುಗಳನ್ನು ಕೊಂದಿತು. ಸುಮಾರು ಹತ್ತು ವರ್ಷಗಳಿಂದ ಸರಕಾರದವರ ಸ್ವಾಧೀನವಿರುವ ಎಲ್ಲಾ ಸಣ್ಣ ಸಣ್ಣ ಕಂಪೆನಿಗಳನ್ನು ತೆಗೆದುಹಾಕಿ ನಾಲ್ಕು ದೊಡ್ಡ ಕಂಪೆನಿಗಳನ್ನು ಸ್ಥಾಪಿಸಿದರು. ಇದರಿಂದ ರೈಲುಗಾಡಿಗಳಿಗೂ ಇಂಜಿನುಗಳಿಗೂ ಸ್ವಲ್ಪ ವಿಶ್ರಾಂತಿ ಸಿಕ್ಕಿದಂತಾಯಿತು. ೨೪,೦೦೦ ಸಾವಿರ ಇಂಜಿನುಗಳನ್ನು ದುರುಸ್ತಿಮಾಡುವ ಅಗತ್ಯವಿತ್ತು. ಸ್ಟೇಶನುಗಳಿಗೆ ಹೆಚ್ಚು ವರ್ಷಗಳಿಂದ ಬಣ್ಣ ಹಾಕಿರಲಿಲ್ಲ. ಜನರು ಪ್ರಯಾಣಮಾಡುವ ಮತ್ತು ಸಾಮಾನು ಸಾಗಿಸುವ ಮುಕ್ಕಾಲು ಮಿಲಿಯ ರೈಲುಗಾಡಿಗಳನ್ನು ಬಿಚ್ಚಿ ದುರುಸ್ತಿಮಾಡಬೇಕಿತ್ತು. ರೈಲುಮಾರ್ಗಗಳಿಗೆ ಅಲ್ಲಲ್ಲಿ ಯುದ್ಧದ ಸಮಯ ಹಾಕಿದ ಜೋಡು ಕಂಬಿಗಳು ಹಾಳಾಗಿದ್ದವು. ಆದುದರಿಂದ ಪ್ರಯಾಣದ ಸೌಕರ್ಯವನ್ನು ಈಗಿರುವ ಸ್ಥಿತಿಗೆ ತರುವ ಮೊದಲು ಮೇಲೆ ಹೇಳಿದ ಕೆಲಸಗಳನ್ನು ಮಾಡುವ ಅಗತ್ಯವಿತ್ತು.

ರೈಲುಗಾಡಿಗಳನ್ನು ಹೊಸದಾಗಿ ಕಟ್ಟಿಸಿ ಹೊಸ ರೈಲುಗಳನ್ನು ಹಾಕುವುದಕ್ಕಿಂತ ಮುಂಚೆ ರೈಲ್ವೆ ಖರ್ಚನ್ನು ಕಡಿಮೆಮಾಡುವ ಅಗತ್ಯವಿತ್ತು. ೧೯೨೩ನೇಇಸವಿಯಿಂದ ಬ್ರಿಟಿಷ ಕೈಗಾರಿಕೆಗಳಿಗೆ ಬಹಳ ಕಷ್ಟಗಳು ಬಂದೊದಗಿವೆ. ಕಳೆದ ವರ್ಷ ೧೦೦೦ ಮಿಲಿಯ ಜನರು ರೈಲ್ವೆಯಲ್ಲಿ ಪ್ರಯಾಣಮಾಡಿದರೂ ೧೬ ಮಿಲಿಯ ದನಕರುಗಳನ್ನು ಅವುಗಳಲ್ಲಿ ಕೊಂಡುಹೋದರೂ ೩೦೧ ಮಿಲಿಯ ಟನ್ ಇತರ ಸಾಮಗ್ರಿಗಳನ್ನು ಕೊಂಡುಹೋದರೂ ರೈಲು ವ್ಯಾಪಾರವು ಬಹಳ ದೀನಾವಸ್ಥೆಗೆ ಬಂದಿತ್ತು.

ರೈಲ್ವೆಗಳು ಉನ್ನತಸ್ಥಿತಿಗೆ ಬರಬೇಕಾದರೆ ರೈಲ್ವೆಕೆಲಸಗಾರರಲ್ಲಿ ಹೆಚ್ಚಿನ ಉತ್ತೇಜನವಿರಬೇಕು. ರೈಲುನೌಕರರು ಹಗಲೂ ರಾತ್ರಿಯೂ ರಾಜ್ಯದ ಒಂದು ಕೊನೆಯಿಂದ ಇನ್ನೊಂದು ಕೊನೆಯ ವರೆಗೆ ಕೆಲಸ ನಡಿಸುತ್ತಿರುವರು ೧೯೨೩ರಿಂದ ಆಗುತ್ತಿರುವ ಹೊಸಬದಲಾವಣೆಗೆ ಈ ನೌಕರರು ಸಹಾಯಕರಾಗಿರುವರು.

ಇನ್ನುಮುಂದಿನ ಗತಿಯು ಏನಾಗುವುದು? ವ್ಯಾಪಾರವು ಕಾಲಗತಿಯಿಂದ ನಡಿಯಬೇಕು. ಎಲ್ಲರೂ ಒಂದೇ ಮನಸ್ಸಿನಿಂದ ಕೆಲಸಮಾಡಿದರೆ ಸ್ಥಿತಿಯು ಒಳ್ಳೇದಾದೀತು. ಇತ್ತಲಾಗೆ ವಿದ್ಯುಚ್ಛಕ್ತಿಯನ್ನು ರೈಲ್ವೇಗಳ ಎಲ್ಲಾ ಕೆಲಸಗಳಿಗೂ ಉಪಯೋಗಿಸಬೇಕೆಂಬ ಆಲೋಚನೆಗಳು ನಡಿಯುತ್ತಲಿವೆ. ಕಲ್ಲಿದ್ದಲ್ಲು ಕಡಿಮೆಯಾಗುತ್ತಾ ಬರುತ್ತಿದೆ. ಆದುದರಿಂದ ವಿದ್ಯುಚ್ಛಕ್ತಿಯ ಯಂತ್ರಗಳನ್ನು ನಡಿಸಲಿಕ್ಕೂ ಕಲ್ಲಿದ್ದಲ್ಲು ಬೇಕಾಗಿರುವುದರಿಂದ ಮುಂದೆ ಹೆಚ್ಚಿನ ಕಷ್ಟಗಳು ಕಾದಿವೆ.

ಕಡಿಮೆ ಖರ್ಚಿನಿಂದ ವಿದ್ಯುಚ್ಛಕ್ತಿಯನ್ನು ಉಂಟುಮಾಡುವುದಾದರೆ ಒಳ್ಳೆ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ. ವಿದ್ಯುಚ್ಛಕ್ತಿಯ ಬಲದಿಂದ ನಡಿಯುವ ಎಂಜಿನು ಇನ್ನು ಬಾಲ್ಯಾವಸ್ಥೆಯಲ್ಲಿಯೇ ಇದೆ. ಸ್ವಲ್ಪ ಸಮಯದ ಹಿಂದೆ ಬ್ರಿಟಿಷ ದ್ವೀಪಗಳಲ್ಲಿ ವಿದ್ಯುಚ್ಛಕ್ತಿಯ ಬಲದಿಂದ ನಡಿಯುವ ೮೧ ಎಂಜಿನುಗಳು ಮಾತ್ರವೇ ಇದ್ದವು. ಸ್ಟೀಮಿನ ಬಲದಿಂದ ನಡಿಯುವ ಎಂಜಿನುಗಳು ಕಾಲು ಮಿಲಿಯ ಇವೆ.

ಈಗಿನ ಅರ್ಧ ಖರ್ಚಿನಿಂದ ವಿದ್ಯುಚ್ಛಕ್ತಿಯನ್ನು ಉಂಟುಮಾಡುವುದಾದರೆ ಸ್ಟೀಮು ಎಂಜಿನಿಗಿಂತಲೂ ಒಳ್ಳೇ ವೇಗದಿಂದ ಇಲೆಕ್ಟ್ರಿಕ್ ಎಂಜಿನು ಓಡುವುದು. ಆದರೆ ಸ್ಟೀಮು ಎಂಜಿನುಗಳನ್ನು ಪೂರ್ತಿ ತೆಗೆದುಹಾಕಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ.

ಇಂಗ್ಲೆಂಡಿನಲ್ಲಿ ರೈಲ್ವೇಮಾರ್ಗಗಳಲ್ಲಿ ಲಾಯಿನುಗಳನ್ನು ಅಗಲಮಾಡಬೇಕಾಗಿದೆ. ಹೊಸ ಸ್ಟೇಶನುಗಳನ್ನು ಕಟ್ಟುವ ಅಗತ್ಯವಿದೆ. ಸಿಗ್ನಲು ಕಂಬಗಳನ್ನು ಹೊಸ ರೀತಿಯಲ್ಲಿ ಮಾಡಬೇಕಾಗಿದೆ.

ಇನ್ನು ಮೋಟರು ಗಾಡಿಗಳು ಹೆಚ್ಚೆಚ್ಚಾಗುತ್ತಾ ಬರುವುದರಿಂದ ರೈಲುಮಾರ್ಗಗಳಲ್ಲಿ ನಡಿಯುವ ವ್ಯಾಪಾರವು ಕಡಿಮೆಯಾಗಲಿಕ್ಕಿಲ್ಲ. ಯಾಕೆಂದರೆ ರೈಲುಗಾಡಿಗಳಲ್ಲಿ ಎಲ್ಲಾ ತರದ ಸಾಮಾನುಗಳನ್ನೂ ಎಲ್ಲಾ ತರದ ಜನರನ್ನೂ ತೆಗೆದುಕೊಳ್ಳುತ್ತಾರೆ. ಆದುದರಿಂದ ಮೋಟರ್ ಮತ್ತು ರೈಲ್ವೆಗಳಲ್ಲಿ ಇನ್ನೂ ಅನೇಕ ತರದ ಅಭಿವೃದ್ಧಿಯು ಆಗುವುದು.

ಶಾಸ್ತ್ರೀಯ

ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ, ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ಮೂರಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳೆಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ವಿಶೇಷ ಮಾಹಿತಿಗೆ "[illegible]" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,

ಆಯುರ್ವೇದ ಭೂಷಣ,

ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಪ್ಲುಯೆಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

ರಥಬೀದಿ, ಮಂಗಳೂರು.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds ,, 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರಕೊಳ್ಳುವದು.

Canara Bank Ltd., Mangalore, 9th Feb. 1926.

K. Venkat Rao, Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪನಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ. [illegible], ಮಹಾರಾಜರ ವೈದ್ಯಶಾಲಾ, ಮೈಸೂರು.

ಏಜಂಟರು:— ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ, ಮಂಗಳೂರು ಜನರಿಗೆ ಮಾತ್ರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಶೈಡ್ಯೂಲ, ಪೇಮೆಂಟ್ ಶೈಡ್ಯೂಲ, ಬತ್ತಾ ನೋಟು, ಮೆಮೊ ಒಫ್ ಕೊಸ್ಟ್ಸ್, ಮೆಮೊರಂಡಮ್ ಒಫ್ ಎಪ್ಪಿಯರೆನ್ಸು, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,

ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—3—0.

ಶಾರದಾ ಛಾಪಖಾನೆ,

ತೇರು ಬೀದಿ, ಮಂಗಳೂರು.

ಬಂದುನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ ಎಸ್. ಪಿ. ಆಚಾರ್ಯ ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಕುಂಡಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ

ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತಶುದ್ಧಿ — ವಜ್ರಾಂಗ-ಬಿಂದು — ವೀರ್ಯವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉತ್ಕೃಷ್ಟತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವವಲ್ಲದೆ, ಸ್ವಪ್ನಜನ್ಯ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ತಿರುಗಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦, ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು. ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಕೊಡುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,

ಮು. ಪೋ. [illegible], (ಜಿಲ್ಲಾ ಬೆಳಗಾಂವ.)

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ

— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ	10—0—0
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್‌ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸು

— ಕೀಲಡ್ಡಿಗೆ ಪದಕ. —



ಈ ಅಡ್ಡಿಗೆಯನ್ನು ರೋಲ್ಡ್ ಗೋಲ್ಡ್ ಎಂಬ ಭಂಗಾರದಲ್ಲಿ ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟುನೋಡಲು ಮುದ್ದಾಗಿರುವಂತೆ ತಯಾರಿಸಿದೆ. ಮತ್ತು ಇದರ ಹರಳನ್ನು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ತಯಾರಿಸಿದೆ. ಇದನ್ನು ಯಾವಾಗಲು ಕಟ್ಟಿಕೊಳ್ಳಲು ಚೆನ್ನಾಗಿರುವದು. ಎಷ್ಟು ಮುಂತಾದವು ಸೇರಿದರೂ ಕೆಡದು. ಇದರ ಬಣ್ಣವು ಎಂದಿಗೂ ಕೆಡದಂತೆ ಸವರನ್ ಬಂಗಾರದ ಬಣ್ಣ ಕೊಟ್ಟಿರುವದು. ಶ್ರೀಮಂತರೂ, ಗರೀಬರೂ ಉಪಯೋಗಿಸಲು ಲಾಯಖಾದದ್ದು. ಕ್ರಯ 1ಕ್ಕೆ 4/8.

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ — ಡಾಬುಗಳು. —

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿ ಹೊಂದಿದ ಕೆಲಸಗಾರರಿಂದ ಬಹುಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇವಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ.

ಗೆಜ್ಜೆಡಾಬು 1ಕ್ಕೆ 3—0—0.

— ಇಮಿಟೇಶನ್ ವಜ್ರದ ಬೆಂಡೋಲೆಗಳು. —



ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವುದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7ಕಲ್ಲಿನ ಬಿಳಿಯ ಓಲೆ ಜೋತೆ 3—0—0.
" " ಕೆಂಪುಕಲ್ಲಿನ ಓಲೆ ಜೋತೆ 3—8—0.

ವಿಳಾಸ:—ವೈ. ಎಮ್. ಸ್ವಾಮಿ ಅಂಡ್ ಕೊ,
ಪಾರ್ಕ್ ಟೌನ್, ಮದ್ರಾಸು.

Y. M. SWAMY & Co.,
No. 12. Nainiappa Naicken St,
P. Town, MADRAS.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಬಿ. ಯೆ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದೀಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಕೇರಿಯೋ ವ ಮೂತ್ರಚಲನೆಯ ಹಿಂದೋ, ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ, ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಲಿವರ್ ಮೂವ್‌ಮೆಂಟ್ ವಾಚ್

15 ಮಣಿಗಳಿದ್ದು ರೋಲ್ಡ್‌ಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇಗೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.
ಎಲಾರ್ಮ್ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. " " " 6-0-0.
"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ ,, 2—12—0
ಕಂಬ್ಯಾಂಡ್ ಪೇಪರ್ ಕ್ಲಿಪ್ ಟ್ಯಾಮ್‌ಪೀಸ್ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳ ಸೆಟ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

Registered: No. M. 498.

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೭ನೇ ಶುಕ್ರವಾರ ಮೇ ೧೯೨೬. ಸಂಚಿಕೆ ೧೯.

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. ಹೆಡ್ ಆಫೀಸು:—ಉಡುಪಿ.

Branch:—COONDAPOOR. ಶಾಖೆ:—ಕುಂದಾಪುರ.

ನಿಯಮಿತ ಮೂಲಧನ ರೂ. 3,50,000.

ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

ತಾ. 28—2—'26ಕೆ ತೋರುವ ಸದರಿ ಬ್ಯಾಂಕಿನ ವಹಿವಾಟುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.		ಆಸ್ತಿ ವ ಸೊತ್ತುಗಳು.	
ವಾಸ್ತು ತೆತ್ತ ಮೂಲಧನ	1,80,690—9—11	ಹಿತ್ತಲ ಕಟ್ಟೋಣ ಕಬ್ಬಿಣದ ಟ್ರಿಜರಿಗಳು ವಗೈರೆ	3943—8—0,
ಅಪದ್ಧನ ವ ಇತರ ನಿಧಿಗಳು	75,875—0—0,	ಯೋಗ್ಯಜವಾಬ್ದಾರಿ ಮೇಲೆ ಸಾಲಕೊಟ್ಟದ್ದು	7,58,851-13-8,
ಠೇವಣಾತಿಗಳು	5,30,003-14-3,	ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	25,800—0—0,
ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ	4,700—0—0,	ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು	4,700—0—0,
ಐವೇಜನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬಿಗಳು	40,274—3—11,	ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ)	22,795—6—6,
		ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಲೇಕದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ	15,452—15—11,
ಜುಮ್ಲಾ ರೂ.	8,31,543-12-1	ಜುಮ್ಲಾ ರೂ.	8,31,543-12-1.

ನಿರಖು ಠೇವಣಾತಿಗಳನ್ನು ಕಾಲಲಕ್ಷ್ಯತೆಗೆ ಅನುಗುಣವಾಗಿ ಸಾ. ಸೇ. 7ಂತೆ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸುಂ ಠೇವಣಾತಿಗಳನ್ನೂ, ಕಂತು ಠೇವಣಾತಿಗಳನ್ನೂ, ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕಿನವರ ಚೆಕ್ಕು ವ ಡ್ರಾಫ್ಟುಗಳನ್ನೂ, ಸಾವುಕಾರಿ ಹುಂಡಿಗಳನ್ನೂ, ವಸೂಲು ಮಾಡುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಐವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು,
ಉಡುಪಿ, ತಾ. 28—2—'26.

ನಯಂಪಳ್ಳಿ ಆನಂದರಾವ್, ಸೆಕ್ರೆಟರಿ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಗುಲಫ್ ಮಾರ್ಕ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ನಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —



ಇದರ ಸೇವನೆಯಿಂದ ನಿರ್ಬಲರಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗದಲ್ಲಿ ಶೀಘ್ರ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ, ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಸ್ಟ್ರಿಕ್ಟ್ ಸರ್ಜನ್ (?), ಸಾಲಾಮಿಸ್ರಿ ಮುರಬ್ಬಾ ಡಿಪೋ, ಬೆಂಗಳೂರು ಸಿಟಿ.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಆಂಡ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುಂಲೆ ಬಾ, ಬೆಲ್ಲದ ಬೈಲು ಬೆರ್ಚಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ತಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲ 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

---

11 ಮಣಿಗಳಿದ್ದ ಬ್ರಿಜ್ ಮೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್ ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8
18 ಕೆರೆಟು ಇಲಿಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ದಿ" ಟ್ಯಾಮ್‌ಪೀಸ ರೂ. 2-4-0
9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.
ಚಲೋದಾದ ಲವ್ ನಕ್ಲೆಸ್‌ಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
184 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

---

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕಿಲರ್ ಆಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಟೈರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕತ್ತಿ ಔಷಧ. ರೂ. ೦—೬—೦ **"AGENTS WANTED"**
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ಕಾರಿನಪಕ್ಕ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay, No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

The Canara Pubic Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕೆಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು {
ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇತರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂವತ್ಸರದ ನಿಜ ಚೈತ್ರ ಬ॥೧೧ ಶನಿವಾರದಿಂದ ಕ್ಷಯ ಸಂವತ್ಸರದ ನಿಜ ಚೈತ್ರ ಬ॥ ೩ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮೇಷ ಪಗ್ಗು.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರದಿನ	ಸೂರ್ಯ ಉ.	ಅಸ್ತ
8	ಶನಿ	೧೧	೧೫.೩೧	ಪೂ. ಭಾ.	೨೪.೬೬	೨೫	6.10	6.45
9	ರವಿ	೧೨	೧೦.೧೬	ರೇವತೀ	೫೬.೪೬	೨೬	6 9	6 45
10	ಸೋಮ	೧೩	೫.೩೨	ಅಶ್ವಿನೀ	೫೪.೪೪	೨೭	6 9	6.45
11	ಕುಜ	●	೧.೪೬	ಭರಣೀ	೫೩.೪೪	೨೮	6. 9	6.45
12	ಬುಧ	೧	೫೭.೩೨	ಕೃತ್ತಿಕಾ	೫೩.೪೬	೨೯	6. 9	6.46
13	ಗುರು	೨	೫೭.೧೪	ರೋಹಿಣೀ	೫೫.೧೪	೩೦	6 8	6.46
14	ಶುಕ್ರ	೩	೫೮.೧೬	ಮೃಗಶಿರಾ	೫೭.೪೬	೩೧	6 8	6.46

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
30	92—4	79—2	—	—
1	92—4	79—4	—	—
2	93—0	79—7	—	—
3	93—1	79—4	—	—
4	92—7	79—5	—	—
5	93—3	81—1	—	—
6	94—0	80—3	—	— 188-46

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ	8— 4	9— 4
ಹೊಸ ಗುಡ್ಡು ...	7— 12	8— 4
ಹೊಸ ರಾಶಿ ಸುಗ್ಗಿ ...	7— 2	7—12
ಅನ್ವರ್ ಬೆಳ್ತಿಗೆ ...	8— 0	9— 0
ರಂಗೂನು ಬೆಳ್ತಿಗೆ ಗೋಣಿ ೧ ...	13— 0	14— 0
ಗೋಧಿ ಗೋಣಿ ೧ಕ್ಕೆ ...	18— 0	20— 0
ಹುರುಳಿಗೋಣಿ ೧ಕ್ಕೆ ...	8— 0	8— 8
ತೊಗರೆಗೋಣಿ ೧ಕ್ಕೆ ...	12— 8	13— 0
ಕಡಗಂಗೋಣಿ ೧ಕ್ಕೆ ...	16— 0	16— 8
ಕಡಗಂಬೇಳೆ ಗೋಣಿ ೧ಕ್ಕೆ ...	18— 0	23— 0
ಉದ್ದು ಗೋಣಿ ೧ಕ್ಕೆ ...	15— 8	—
ಹೆಸರುಗೋಣಿ ೧ಕ್ಕೆ ...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ ...	60— 0	65— 0
ಉಪ್ಪು ಗೋಣಿ ೧ಕ್ಕೆ ...	4— 8	4—14
ಕೊಬ್ರಿ ಖಂಡಿ ೧ಕ್ಕೆ ...	96— 0	100— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	—	32— 0
ಎಳ್ಳಿಂಡಿ ಖಂಡಿ ೧ಕ್ಕೆ ...	55— 0	62— 8
ಕೊಬ್ರಿ ಎಣ್ಣೆ ಮಣ ೧ಕ್ಕೆ ...	7— 8	8— 8
ಎಳ್ಳೆಣ್ಣೆ ಮಣ ೧ಕ್ಕೆ ...	7— 8	9— 0
ಕ್ಷಿಪ್ರಾಂತ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-12-0	—
ಮೋರಿಸ ಸಕ್ಕರೆ ಮಣ ೧ಕ್ಕೆ ...	4—10	4—11
ಊರ ಮೆಣಸಿನಕಾಯಿ ಮಣ ೧ಕ್ಕೆ ...	5— 4	5— 8
ಸಾಸಿವೆ ಮುಡಿ ೧ಕ್ಕೆ ...	9— 4	9— 8
ಕೊತ್ತಂಬರಿ ಮುಡಿ ೧ಕ್ಕೆ ...	3—14	4— 8
ಕಾಫಿ ಖಂಡಿ ೧ಕ್ಕೆ ...	360— 0	372— 0
ಚಾಲಗೋಟು ಅಡಿಕೆ ಖಂಡಿ ೧ಕ್ಕೆ ಹಳೆಯ ...	265— 0	280— 0
ಹೊಸ ಅಡಿಕೆ ಖಂಡಿ ೧ಕ್ಕೆ ...	209— 0	210— 0
ಕಾಳುಮೆಣಸು ಖಂಡಿ ೧ಕ್ಕೆ ...	300— 0	—
ಯಾಲಕ್ಕಿ ಮಣ ೧ಕ್ಕೆ ...	59— 0	64— 0
ಗೇರುಬೀಜ ಮುಡಿ ೧ಕ್ಕೆ ...	3— 9	3—10
ಶೆಲ್ಲಕ ಖಂಡಿ ೧ಕ್ಕೆ ...	45— 0	65— 0
ತಾಂಬ್ರ ತಗಡು ಮಣ ೧ಕ್ಕೆ ...	16— 4	16—12
ತಾಮ್ರ ಪಾತ್ರಗಳು ಮಣ ೧ಕ್ಕೆ ...	21— 0	—
ಹೊಸ ಬೆಳ್ಳಿ ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮಣ ೧ಕ್ಕೆ ...	16— 8	
ಪವನು	13— 9	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

PROPRIETOR RAJVAIDYA NAR...

NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ. ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟವೆ. ಇದರ್ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆರಾರ್ ಎಸ್‌ಟೇಟ್, ಮುಂಬಯಿ.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,
ಮಂಗಳೂರು

ಇಂಗ್ಲೀಷು ಡಾಕ್ಟರುಗಳು ರಬ್ಬರನಲ್ಲಿ ತಯಾರಿಸಲ್ಪಟ್ಟ

ಸುಖಾನಂದ

ಎಂಬ ಮರ್ಮದ ಚೀಲವು.

ಈ ಪ್ರಪಂಚದಲ್ಲಿ ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರಮ, ಮುಸಕ್ರಾ, ಭಗೇಂದ್ರಿಯ, ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವವೂ ಸೇರದಂತೆ ಇಂಗ್ಲೀಷು ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ಹೇಳಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಗಂಡಸರದು ರೂ. 0-12-0. ಹೆಂಗಸರದು ರೂ. 3-4-0.

ವಿಳಾಸ—ಎಸ್. ಪಾಲ್ ಅಂಡ್ ಕೊ.,
ಪಿ. ಬಿ. ನಂಬರ್ 542,
ಪಾರ್ಕ್‌ಟೌನ್ ಮದ್ರಾಸು.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು—

ಸರ್ವಿಸಿನ ಹೆಸರು.	ಕಲ್ಪುವ ಸ್ಥಳ.	ಹೊರಡುವ ಘಂಟೆ
ಜನರಲ್	ಕಾರ್ಕಳ—ಆಗುಂಬೆ—ತೀರ್ಥಹಳ್ಳಿ.	ಪೂ. 6½
ಸಿ. ಪಿ. ಸಿ.	ಉಡುಪಿ—ಕುಂದಾಪುರ—ಬೈಂದೂರು	,, 6⅝, 9⅞
	ಉಡುಪಿ	ಮ. 12⅞
	ಮುಲ್ಕಿ ವರೆಗೆ ಮಾತ್ರ	ಅ. 3⅞
	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ.	ಪೂ. 7, ಮ. 1
	ಕಾರ್ಕಳ—ವೇಣೂರಿನಿಂದ	
	ಬಂಟ್ವಾಳಕ್ಕೆ ಮಾತ್ರ	,, 10½, ಅ. 4½
	ಪುತ್ತೂರು—ಸಂಪಾಜೆ—ಮಡಿಕೇರಿ	,, 7½
	ಪುತ್ತೂರು	ಪೂ. 10½ ಅ. 2
ಕಾರ್ಕಳ	ಕಾರ್ಕಳ—ಉಡುಪಿ—ಕುಂದಾಪುರ.	ಪೂ. 6
	ಕಾರ್ಕಳಕ್ಕೆ ಮಾತ್ರ.	ಅ. 1
ಹನುಮಾನ್	ಕಾರ್ಕಳ—ಉಡುಪಿ—ಕುಂದಾಪುರ.	ಪೂ. 7
	ಕಾರ್ಕಳಕ್ಕೆ ಮಾತ್ರ.	ಮ. 12
ಕಾರ್ಕಳ ಎಕ್ಸೆಲ್	ಪುತ್ತೂರು—ಮಡಿಕೇರಿಗೆ	ಪೂ. 7
	ಪುತ್ತೂರು—ಉಪ್ಪಿನಂಗಡಿ	ಅ. 1½
	ವಿಟ್ಲಕ್ಕೆ	ಪೂ. 8, ಅ. 2½
	ಉಡುಪಿ	ಪೂ. 7½ ಅ. 1½
ಸ್ಟಾರ್	ಮುಲ್ಕಿ—ಉಡುಪಿ.	,, 7, ಮ. 1
	ಬಂಟ್ವಾಳ	,, 10½, [illegible]
ಇಂಡಿಯನ್	ಮುಲ್ಕಿ ಉಡುಪಿ.	,, 6½, ಮ. 12½
ಪೊಪ್ಯುಲರ್	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ	ಪೂ 7½ ಮ 12½

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ದಾರಿಯಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ—

ಗಾಡಿಗಳು	ಹೊರಡುವ ಘಂಟೆ	ತಲುಪುವ ಘಂಟೆ
ಮೈಲ್	ಬೆಳಿಗ್ಗೆ 8	ಸಂಜೆ 5-30
ಲೋಕಲ್	,, 10	,, 4-30
ಶಟಲ್	ಸಂಜೆ 5-40	ಬೆಳಿಗ್ಗೆ 9-55

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಲೋಕಲ್‌ರಿಗೆ	ರೂ. ೩-೦-೦
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	,, 2-8-0.
,, ಸ್ಕೂಲ್‌ರಿಗೆ ...	,, 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು. ಎಡಿಟರ್,

ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 9 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 5 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜಿನ್ನರ್ ರೇಶ್ಮೆ ಮಡಿಗಳು, ಸಾಮರ್ಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಚಾಪೆಂಟಿ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆಸಿಕೊಳ್ಳುವುದಕ್ಕೂ, ಒಂದು ದೇಹದ ಮರ್ಮಶಾಸ್ತ್ರವು ಇರುವುದು ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಆರ್ಡರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, ಮದ್ರಾಸ್.

ಮ|| ರಾ|| ರಾ|| ಸಿ. ಕಣ್ಣನ್ ನಾಯರ್ ಅಸಿಸ್ಟಾಂಟ ರಿಜಿಸ್ಟ್ರಾರರ

ಪ್ರಕಟಣೆ.

ದಕ್ಷಿಣ ಕನ್ನಡ ಜಿಲ್ಲಾ ಉಪ್ಪಿನಂಗಡಿ ತಾಲೂಕು ರಾಮಕುಂಜ ಗ್ರಾಮದಲ್ಲಿ ಸ್ಥಾಪಿಸೋಣಾಗಿರುವ ನಂಬ್ರ 2884ನೇ ರಾಮಕುಂಜ ಸಹಕಾರ ಸಂಘವು ರಿಜಿಸ್ಟ್ರಿಮಾಡಲ್ಪಟ್ಟದ್ದನ್ನು ರದ್ದು ಮಾಡಿರುವುದರಿಂದಲೂ, ಸಂಘದ ಕಾರ್ಯಗಳನ್ನು ವ್ಯವಸ್ಥೆಪಡಿಸುವ ಬಗ್ಗಾಗಿ ತಕ್ಕ ವಿಲೆವಾರಿ ಮಾಡುವುದರಿಂದಲೂ, ಸದರಿ ಸಂಘದ ಮೇಲೆ ದಾವೆ ಇರುವ ಎಲ್ಲಾ ಜನರು ತಮ್ಮ ದಾವೆಗಳನ್ನು ಸದರಿ ಸಂಘದ ಲಿಕ್ವಿಡೇಟರರಾದ ಮಂಗಳೂರು ಸೆಕ್ಷನ್ ಸಹಕಾರ ಸಂಘಗಳ ಅಸಿಸ್ಟಾಂಟ ರಿಜಿಸ್ಟ್ರಾರವರ ಮುಂದೆ ಪ್ರಕಟನೆಯ ತಾರೀಕಿನಿಂದ ಮೂರು ತಿಂಗಳೊಳಗೆ ತರತಕ್ಕದೆಂತ ಈ ಮೂಲಕ ತಿಳಿಸೋಣಾಗಿಯದೆ.

(sd) C. Kannan Nair,
Assistant Registrar.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ,

ಕ್ರಮನಂಬ್ರ 256/1926.

ಖಾರ್ವಿ ಚಂದ್ರ ಕೂಡ—ವಾದಿಯರು,

ಸೆಕ್ರೆಟರಿ ಒಫ್‌ಸ್ಟೇಟ್ ಫೋರ್ ಇಂಡಿಯ ಕೂಡ ಪ್ರತಿವಾದಿಯರು.

ಉಡ್ಪಿ ತಾಲೋಕು ಕೋಡಿಗ್ರಾಮದಲ್ಲಿರುವ ಖಾರ್ವಿ ಜನರು ಹಂಗಾರಕಟ್ಟೆ ಹೊಳೆಯಲ್ಲಿ ಮಾಮೂಲು ಲಾಗ್ಯಾತು ಮಚವೆಗಳ ಆಮದು ರಫ್ತಿಗೆ 420 ಫೀಟು ಮಾತ್ರ ಬಿಟ್ಟು ಗುಟ್ಟೆಗಳನ್ನು ನಟ್ಟುಬಂದ ಸ್ಥಾನಗಳಲ್ಲಿ ಗುಟ್ಟೆಗಳನ್ನು ನಟ್ಟು ಮೀನು ಹಿಡಿಯಲಿಕ್ಕೆ ಅರ್ಹರೆಂತ ಸ್ಥಾಪಿಸಿ ಡಿಕ್ಲರೇಶನ್ ವಗೈರೆ ನಿವೃತ್ತಿಗಳನ್ನು ಕೊಡಬೇಕಾಗಿ ಸದರಿ ಗ್ರಾಮದ 5 ಜನ ಖಾರ್ವಿ ಜನರು ಈ ದಾವೆಯನ್ನು ಮಾಡಿದ್ದಾರೆ. ಸದರಿ ನಿವೃತ್ತಿಗಳನ್ನು ಹೊಂದಲಿಕ್ಕೆ ವಾದೀರಲ್ಲದೆ ಕೋಡಿಗ್ರಾಮದ ಮಿಕ್ಕ ಖಾರ್ವಿ ಜನರು ಕೂಡ ಅರ್ಹರಾಗಿರುತ್ತಾರೆ. ಸದರಿಯವರ ಪರವಾಗಿ ಈ ದಾವೆಯನ್ನು ನಡಿಸಲಿಕ್ಕೆ ವಾದೀರು ಕೊಟ್ಟ ಅರ್ಜಿಯು ತಾ. 5—7—'26ಕ್ಕೆ ತನಖಿಗೆ ಇಟ್ಟದೆ. ಎಂಬ ಸಂಗತಿಯನ್ನು ಈ ಮೂಲಕ ತಿಳಿಸೋಣಾಗುತ್ತದೆ.

ಮೊಕ್ಕಾಂ ಕುಂದಾಪುರ,
ತಾ. 27—4—'26.

S. A. UDPA,
Vakil for Plaintiffs

MANGALORE MUNICIPALITY.

Applications are invited for the post of a Revenue Officer. Pay Rs. 150-5-200 annual plus cycle allowance Rs 5, Cash security for Rs. 1,000 with two personal securities for Rs. 1,000 each, has to be furnished. Selected candidate will be on probation for one year. Applications with particulars as to age, qualifications, and past experience etc, should reach the Chairman by 31st May 1926, and the successful candidate should be prepared to join duty on 1st July 1926.

MUNICIPAL OFFICE,
Mangalore, 1-6-26,
M. A.

Nellikai Venkat Rao,
Chairman M. C.

ನೋಟೀಸು.

ನಾನು ಇಂದಿನಿಂದ ನನ್ನ ವಾಸಸ್ಥಾನ ವ ವೃತ್ತಿ, ಇಲ್ಲಿಂದ ಕಲ್ಲಿಕೋಟೆ ನನ್ನ ಮಗ ಇರುವಲ್ಲಿ ವರ್ಗಾಯಿಸಿದ್ದೇನೆ. ತಿಳಿದಿರುವುದು.

ಮಂಗಳೂರು,
ತಾ. 7—5—'26.

ಉ. ರಾಮನಾಯಕ,
ಮಾಜಿ ಶಿರಸ್ತೇದಾರ.

ದಕ್ಷಿಣ ಕನ್ನಡ ಜಿಲ್ಲಾ ಮುಸಲಿಂ ವಿದ್ಯಾಭ್ಯಾಸ ಕೋನ್ಫರನ್ಸ್.

ಪ್ರಿಯ ಮುಸಲಿಂ ಮಹನೀಯರೇ:—

ನಮ್ಮ ದಕ್ಷಿಣ ಕನ್ನಡಾ ಜಿಲ್ಲೆಯ ಮುಸಲಿಮ್‌ಗಳು, ಇತರ ಮತಸ್ಥರಕ್ಕಿಂತ ಎಷ್ಟೋ ಹೀನ ಸ್ಥಿತಿಯಲ್ಲಿರುವರು. ಇದರಿಂದ ಅನ್ಯ ಮತೀಯರು ನಮ್ಮನ್ನು ಹೀನವಾಗಿ ಕಾಣುವರು. ಇದಕ್ಕೆ ನಮ್ಮವರಿಗೆ ಸಮರ್ಪಕವಾದ ವಿದ್ಯೆ ಇಲ್ಲದಿರುವುದೇ ಕಾರಣವಲ್ಲದೆ ಬೇರೆಯಲ್ಲ. ನಮ್ಮ ಜಿಲ್ಲೆಯ ಹಳ್ಳಿ ಗ್ರಾಮಗಳಲ್ಲಿ ನೋಡಿದರೆ ಅಲ್ಲಿ ನಮ್ಮ ಜಾತಿಯ ವಿದ್ಯೆಯು ಕಡಿಮೆಯಾಗಿಯೇ ಕಂಡುಬರುತ್ತದೆ. ಇದಕ್ಕಿಂತ ಬೇರೆ ಕುಂದುಯಾವುದು? ಇಂಥಾ ಸಂಗತಿಗೆ ನಾವು ಕಣ್ಣುಮುಚ್ಚಿಕೊಂಡಂತೆ ಇರುವುದು ಎಷ್ಟುಕಾಲ ಸರಿಯಲ್ಲವಲ್ಲವೆ?

ಆದುದರಿಂದ ಪ್ರತಿಯೊಂದು ಗ್ರಾಮಸ್ಥರೂ ಅವರವರ ಗ್ರಾಮಗಳಲ್ಲಿ ವಿದ್ಯಾಹೀನರಾಗಿರುವ ನಮ್ಮ ಮಕ್ಕಳ ಏಳಿಗೆಗೆ ಅವಶ್ಯಕವಿರುವ ಸಹಾಯವನ್ನು ಒದಗಿಸಬೇಕಾಗಿ ನಮ್ಮ ವಿನಂತಿ.

ಆ ಸಂಬಂಧವಾಗಿ ನಾವು ಮೊದಲು ಒಂದು ಶಾಲೆಯನ್ನು ತೆರೆದು ಅದು ಚೆನ್ನಾಗಿ ನಡೆಯಲಿಕ್ಕೆ ಅಗತ್ಯವಿರುವ ಸಹಾಯವನ್ನು ಒದಗಿಸಿಕೊಂಡು ಅನಂತರ ಗ್ರಾಮಗಳಲ್ಲಿ ಎಲ್ಲಾ ಹುಡುಗರ ಮನಸ್ಸು ಶಾಲೆಯ ಕಡೆಗೆ ಆಕರ್ಷಿಸುವಂತೆ ಏರ್ಪಾಡು ಮಾಡಿಸಬೇಕು. ಮತ್ತು ನಮ್ಮವರಲ್ಲಿ ನೂರಕ್ಕೆ ಎಂಭತ್ತು ಜನ ಬಡವರಾಗಿಯೂ ವಿದ್ಯಾಹೀನರಾಗಿಯೂ ಇರುತ್ತಾರೆ. ಉಳಿದ ಜನರಲ್ಲಿ ಕೆಲವರು ಮಾತ್ರ ಸಣ್ಣ ಸಣ್ಣ ಉದ್ಯೋಗಿಗಳಾಗಿಯೂ, ಇನ್ನವರಲ್ಲಿ ಕೆಲವರು ಕೇವಲ ಸ್ವಾರ್ಥಪರರಾಗಿದ್ದು ಜಾತಿಯ [illegible] ಇದೇ ಬಗೆಯಲ್ಲಿ ಇದ್ದರೆ [illegible] ಮುಂದಿನ ಗತಿಯು ಹೇಗೆ ಸಾಧ್ಯ?

ನಾವು ತಕ್ಕ ರೀತಿಯಿಂದ ಪ್ರಯತ್ನಿಸಿದರೆ ಕಾರ್ಯವು ಸಾಧ್ಯವಾಗುವುದೆಂಬುದಕ್ಕೆ ಕೆಳಗಿನದೊಂದು ದೃಷ್ಟಾಂತವು ಯುಕ್ತವಾಗಿದೆ. ನಾನು ಮೊದಲು ಒಂದು ಗ್ರಾಮದಲ್ಲಿ ಸಂಚರಿಸಿ ಅಲ್ಲಿ ಒಂದು ಶಾಲೆಯನ್ನು ತೆರೆದೆನು. ಎರಡು ಮೂರು ದಿನಗಳಲ್ಲಿಯೇ ಮಕ್ಕಳ ಸಂಖ್ಯೆಯು ಒಂಭತ್ತು ಏರಿತು. ಮಾತ್ರವಲ್ಲ ಕಟ್ಟಡವನ್ನು ಕಟ್ಟಿಸುವುದಕ್ಕೂ ಆರಂಭವಾಯಿತು. ಅನಂತರ ಕೇಳುವುದೇನು? ಎಷ್ಟೋ ಗ್ರಾಮಗಳಿಂದ ಇದೇ ರೀತಿ ಶಾಲೆಗಳನ್ನು ಏರ್ಪಡಿಸಬೇಕೆಂಬ ಆತುರಪೂರ್ವಕವಾದ ಅಭಿಪ್ರಾಯಗಳು ಬಂದವು. ಆದರೆ "ಕಾನ್‌ಫರೆನ್ಸ್"ನ ಕಾರ್ಯದರ್ಶಿಗಳಿಂದಲೂ ಇತರ ಅನಾನುಕೂಲತೆಗಳಿಂದಲೂ, ಉಪಾಧ್ಯಾಯರು ಸಧ್ಯಕ್ಕೆ ಸಿಕ್ಕದುದರಿಂದಲೂ, ಸಾಧ್ಯವಾಗಲಿಲ್ಲ.

ಮಹನೀಯರೇ, ಅಂತಹ ಮಹಾ ಕಾರ್ಯವು ನಮ್ಮಿಂದಿರುವ ಅಶಕ್ತಿಯಿಂದ ಸಾಧ್ಯವಾಗಬಹುದೇ? ಎಂಬುದನ್ನು ನೀವೇ ವಿಚಾರಿಸಿ ನೋಡಿರಿ. ಆದಕಾರಣ "ದಕ್ಷಿಣ ಕನ್ನಡಾ ಜಿಲ್ಲಾ ಮುಸಲಿಂ ವಿದ್ಯಾಭ್ಯಾಸ ಸಂಘ" ಎಂಬ ಹೆಸರಿನಿಂದೊಂದು ಸಂಘವನ್ನು ಏರ್ಪಡಿಸಿ ಅದರಲ್ಲಿ ಜಿಲ್ಲೆಯ ಮಾನ್ಯರಿಂದೊಳಗೊಂಡ ಒಂದು "ಕಮಿಟಿ"ಯನ್ನು ಪ್ರಧಾನ ಕಾರ್ಯಾಲಯ (ಹೆಡ್ ಆಫೀಸ್) ಕಾಸರಗೋಡಿನಲ್ಲಿ ಯಾ ಬೇರೆ ಸ್ಥಳಗಳಲ್ಲಿ ಆಗಾಗ ಸಭೆ ಮಾಡಿ ಮುಂದಣ ವ್ಯವಸ್ಥೆಗಳನ್ನು ನಿರ್ಣಯಿಸುವಂತೆ ತಕ್ಕ ಏರ್ಪಾಡು ಮಾಡಬೇಕಾಗಿ ನನ್ನ ಅಭಿಪ್ರಾಯವಿದೆ. ಈ ರೀತಿ ಏರ್ಪಡಿಸಿದರೆ ನಮ್ಮ ಮಕ್ಕಳು ಬಹು ಬೇಗನೆ ಅಭಿವೃದ್ಧಿಯನ್ನು ಹೊಂದಬಹುದಾಗಿ ನಂಬುತ್ತೇನೆ. ಈ ಎಲ್ಲಾ ವಿಷಯಗಳನ್ನು ಆಲೋಚಿಸುವುದಕ್ಕೆ ಇದೇ ಮೇ ತಿಂಗಳ ೧೯ನೇ ಬೇಗ್ಗೆ ೧೦ ಘಂಟೆಗೆ ಕುಂಬಳೆಯ ಸಮೀಪ ಮೊಗ್ರಾಲ್ ಎಂಬಲ್ಲಿಗೆ ಬಹುಮಾನಪಟ್ಟ ಮ|| ರಾ|| ಕೇರಳಲೀಡರ್ ಕೆ. ಎಂ. ಸೀದಿ ಬಿ. ಎ. ಬಿ. ಎಲ್ ಇವರ ಅಧ್ಯಕ್ಷತೆಯಲ್ಲಿ ಒಂದು "ಕಾನಫರೆನ್ಸ್" ಪ್ರಾರಂಭಿಸಿ ಕಾರ್ಯಕ್ರಮ ಪಟ್ಟಿ (ಪ್ರೋಗ್ರಾಮ್) ಗನುಸರಿಸಿ ಮರುದಿನ ರಾತ್ರಿ ೧೦ ಘಂಟೆಗೆ ತೀರ್ಮಾನಿಸುವುದಾಗಿ ನಿಶ್ಚಯಿಸಿರುತ್ತೇವೆ. ಎಲ್ಲಾ ಮುಸಲಿಮ್ ಬಂಧುಗಳು ಮನಗೊಟ್ಟು ಈ "ಕಾನ್‌ಫರೆನ್ಸ್" ನಿರ್ಣಯಗಳ ಮೇರೆಗೆ ಸೇರಬೇಕಾಗಿ ಕೋರಿಕೆ. ಈ ಸಭೆಯ ಸ್ವಾಗತ ಮಂಡಳಕ್ಕೆ ಅಧ್ಯಕ್ಷರಾಗಿರುವ ಬಹುಮಾನಪಟ್ಟ ಉಡುಪಿ ಖಾನ್‌ಬಹದ್ದೂರರವರು ಹಾಜಿ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬ ಬಹದ್ದೂರರವರು ಯಂ. ಎಲ್. ಸಿ. ಅವರ್ಗಳ್, ಇದಕ್ಕೆ ಸಂಪೂರ್ಣ ಸಹಾಯಮಾಡುತ್ತಲಿರುವರು.

ಎಲ್ಲಾ ಗ್ರಾಮಗಳಲ್ಲಿಯೂ ಶಾಲೆಗಳನ್ನು ತೆರೆದು, ಅವೆಲ್ಲವುಗಳನ್ನು ಒಂದೇ ರೀತಿಯಲ್ಲಿ ನಡಿಸುವಂತೆ ಶಾಲೆಗಳ ಮೇಲ್ವಿಚಾರ ನಡಸುವುದಕ್ಕೆ ಕೂಡಾ ಸಹಾಯ ಮಂಡಳಿಗಳನ್ನು ನಿಶ್ಚಯಿಸುವುದಕ್ಕಾಗಿ ಈ "ಕಾನಫರೆನ್ಸ್"ಗೆ ಜಿಲ್ಲೆಯ ಎಲ್ಲಾ ಜಮಾತ ಸ್ಥಳಗಳ ಮೊಕ್ತೇಸರರಿಗೂ ನೋಟಿಸುಗಳನ್ನು ಕಳುಹಿಸಿರುತ್ತೇವೆ. ಕಾನ್‌ಫರೆನ್ಸ್ ಕೂಡಿಸುವುದರ ಕುರಿತು ಎಲ್ಲಾ ಕಡೆಗಳಿಂದಲೂ ಸಂತೋಷ ಪತ್ರಗಳು ಬಂದಿರುತ್ತವೆ. ಈ ಸಂಗತಿಗಳನ್ನು ತಿಳಿದು ಕೇರಳದ ಮುಸ್ಲಿಯಾರ್ಸ್ಗಳಾದ ಚೆರುಶೇರಿ ಮೌಲವಿ, ಕುತುಬಿ ಮೌಲವಿ, ಪಾರಕಡವತ್ ಮೌಲವಿ, ಕನ್ನಂವೀಟಿಲ್ ಮೌಲವಿ, ಪೊನ್ನಾನಿ ಮುಸಲಿಯಾರ್, ಇ. ಕೆ. ಮೌಲವಿ, ವಿಧಾನ್ ಮೌಲವಿ, ಯಂ. ಸಿ. ಸಿ. ಮೌಲವಿ, ಕೆ. ಮಹಮ್ಮದ್ ಎಂ. ಎ. ಬಿ. ಫೋಕ್ಕರ್ ಬಿ. ಎ. ಬಿ. ಎಲ್ ಅಬ್ದುಲ್ಲಕುಟ್ಟಿ ಬಿ. ಎ. ಬಿ. ಎಲ್., ಕೆ. ಕೆ. ಫೋಕ್ಕರ್ ಬಿ. ಎ. ಬಿ. ಎಲ್, ಮಣಪ್ಪಾಟ್ ಕುಂಞ ಮಹಮ್ಮದ್ ಎಂ. ಎಲ್. ಸಿ., ಮಹಮ್ಮದ್ ಸಿಕ್ಕಂದರ್ ಬಿ. ಎ. ಮೊದಲಾದವರಿಗೂ ಮತ ಪಂಡಿತರಿಗೂ, ಉತ್ಕೃಷ್ಟ ಪರೀಕ್ಷೆ ತೇರ್ಗಡೆ ಹೊಂದಿದವರಿಗೂ ಪ್ರಸಂಗಿಗಳಿಗೂ, ಅಲ್ ಅಮೀನ್, ಮಲಬಾರ ಅಲ್ ಇಸ್ಲಾಹ ಎಂಬ ಎಲ್ಲಾ ಇಸ್ಲಾಂ ಪತ್ರಾಧಿಕಾರಿಗಳಿಗೂ ಶಾಲೆಯ ಮನೇಜರುಗಳಿಗೂ ವಿದ್ಯಾವಂತರಿಗೂ ೧೦೦ಕ್ಕಿಂತ ಹೆಚ್ಚಿಗೆ ಪತ್ರಗಳನ್ನು ಕಳುಹಿಸಿದಲ್ಲಿ ಅವರೆಲ್ಲರೂ ಬರುವುದಾಗಿ ಸಮ್ಮತಿಸಿರುವರು. ಇದೊಂದು ನಮ್ಮ ಭಾಗ್ಯೋದಯವೇ ಸರಿ. ಕೊಚ್ಚಿ, ತಿರುವಾಂಕೂರು, ಮಲಬಾರು, ಮೊದಲಾದ ಪ್ರದೇಶಗಳಲ್ಲಿರುವ ಮುಸಲ್ಮಾನ ಬಂಧುಗಳನ್ನು ಕಂಡು ಅತಿ ಸಂತೋಷಪಡುವುದಕ್ಕೆ ಯೋಗ್ಯ ಸಂದರ್ಭವನ್ನು ಒದಗಿಸಿಕೊಡುವ ಈ ಕಾನ್ಫರೆನ್ಸಿಗೆ ಎಲ್ಲಾ ಮಹನೀಯರೂ ಚಿತ್ತೈಸಬೇಕಾಗಿ ಅಪೇಕ್ಷಿಸೋಣಾಗುತ್ತದೆ. ಎಷ್ಟೋ ನಮ್ಮವರು ನಾಟಕ ಮೊದಲಾದ ಇತರ ನಿಷ್ಪ್ರಯೋಜನ ಕೃತ್ಯಗಳಿಗಾಗಿ ಎಷ್ಟೋ ಹಣವನ್ನು ವೆಚ್ಚಮಾಡುವರು, ಇನ್ನಾದರೂ ಅಂಥಾವನ್ನು ಬಿಟ್ಟು ಇಂತಹ ಬಹುಮಾನ ಸಭೆಗೆ ಬಂದು ವಿದ್ಯಾಭ್ಯಾಸ ಪ್ರಚಾರದಲ್ಲಿ ಧನ ವೆಚ್ಚಮಾಡಿದರೆ ಮುಂದೆ ಇದರಿಂದ ಲಭಿಸುವ ಆದಾಯವು ಬೇರೆ ಯಾವ ಕೆಲಸದಲ್ಲಿಯೂ ಸಿಕ್ಕಲಿಕ್ಕಿಲ್ಲವೆಂದು ಬಯಿಬಲ್, ರಿಸಾಲತ್ತು, ಹದೀಸ್ ಎಂಬೀ ಕಿತಾಬುಗಳಲ್ಲಿ ಹೇಳುತ್ತದೆ. ಸಮಸ್ತರಿಗೂ ಸಂತೋಷವಾಗುವಂತೆ ಟಿಕೇಟು ಇಲ್ಲದೆ ಕಾನ್ಫರೆನ್ಸ್ ಜರಗಿಸುವುದಕ್ಕೆ ನಮಗೆ ತುಂಬಾ ಆತುರವಿದ್ದರೂ ಅದರ ಅತಿಯ ವೆಚ್ಚವನ್ನು ವಹಿಸುವುದಕ್ಕೆ ನಮ್ಮಲ್ಲಿ ಬಂಡವಾಳ ಇಲ್ಲದುದರಿಂದ ಕೆಳಗೆ ವಿವರಿಸಿದಂತೆ ಟಿಕೇಟು ಪಡೆದು ಸಭೆಯನ್ನು ಪ್ರವೇಶಿಸಬೇಕಾಗಿ ವಿನಂತಿ.

ಪ್ಲೇಟ್‌ಫೋರ್ಮ್ ಟಿಕೇಟು ರೂ. 10—0—0, Iನೇ ಕ್ಲಾಸು 5—0—0, IIನೇ ಕ್ಲಾಸು 3—0—0, IIIನೇ ಕ್ಲಾಸು 1—0—0, IVನೇ ಕ್ಲಾಸು 0—8—0.

ಖರ್ಚು ಕಳೆದು ಮಿಕ್ಕಿದ ಹಣವನ್ನು ಸಭೆಗೆ ವಹಿಸಿಕೊಟ್ಟು ಅದರ ಪ್ರಾಫಲ ಎಲ್ಲಾ ಶಾಲೆಗಳಿಗೂ ಸಿಕ್ಕುವಹಾಗೆ ಮಾಡುವುದರಿಂದ ಟಿಕೇಟಿಗೆ ಕೊಡುವ ಹಣವು ಹೆಚ್ಚಿಗೆ ಫಲಕಾರಿಯಾಗಿದೆ. ಮಹನೀಯರು ಆದಷ್ಟು ಬೇಗ ಟಿಕೇಟುಗಳನ್ನು ಪಡೆದು, ಸ್ನೇಹಿತರ ಮೂಲಕ ಪ್ರೋತ್ಸಾಹದಿಂದ ಸಭೆಗೆ ಬರುವಿರಾಗಿ ನಂಬುತ್ತೇನೆ. ಪಂಚಾಯ್ತಿಯವರಿಗೆ ಕೊಂಪ್ಲಿಮೆಂಟ್ ಟಿಕೇಟುಗಳೂ, ವಲಂಟಿಯರರಿಗೆ ಫ್ರೀ ಟಿಕೇಟುಗಳೂ, ಶಾಲಾ ಹುಡುಗರಿಗೆ 100ಕ್ಕೆ ೫1ನೇ ಕ್ಲಾಸು ಟಿಕೇಟು ಪ್ರಕಾರವೂ ಕೊಡೋಣಾಗುವುದು. ವಲಂಟಿಯರರಿಗೆ ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯೂ ಮೇ ತಾ. ೧೮ ವರೆಗೆ ಮಾತ್ರ ಸೇರಿಸಲಾದೀತು. ಸಭೆಗೆ ಬಂದ ಮಹಾನುಭಾವರಿಗೋಸ್ಕರ ಆವಶ್ಯವಿರುವ ಏರ್ಪಾಡುಗಳನ್ನು ಮಾಡೋಣಾಗುವುದು. ಹೊರಗಿನಿಂದ ಬರುವವರು ಹಾಸಿಕೊಳ್ಳುವ ವಸ್ತ್ರ ಮೊದಲಾದುವನ್ನು ತರುವುದು ಒಳ್ಳೇದು. ಕಾನ್ಫರೆನ್ಸಿನ ದಿನ ಮೊಗ್ರಾಲ್ ಕಡವಿನ ಕಂಬ ಕೊಡಬೇಕೆಂದಿಲ್ಲ. ಸಭೆಯ ದಿನ ಕಾರ್ಯಕ್ರಮವು (ಪ್ರೋಗ್ರಾಂ) ಛಾಪ್ಸಿಸಲ್ಪಡುವುದು. ಹೆಚ್ಚಿನ ವಿವರ ಕೆಳಗಿನ ವಿಳಾಸದಾರರಿಂದ ತಿಳಿಯಲ್ಪಡುವುದು.

ಕೆನರಾ ಜಿಲ್ಲಾ ಮುಸಲಿಂ ವಿದ್ಯಾಭ್ಯಾಸ ಕೋನ್ಫರನ್ಸ್ ಆಫೀಸು ಕುಂಬಳೆ.

ಮೊಗ್ರಾಲ್ ಎಂ. ಸಿ. ಮಮ್ಮು,
ಜನರಲ್ ಸೆಕ್ರೆಟರಿ.

ಸ್ಫುಟವಿಚಾರಗಳು.

ಎಂಡೋಮೆಂಟ ಎಕ್ಟ್ಸು, ಜಿಲ್ಲಾ ಪರಿಷತ್ತು.

ಕಳೆದ ವಾರದಲ್ಲಿ ಜರುಗಿದ ಜಿಲ್ಲಾ ಪರಿಷತ್ತಿನಲ್ಲಿ, ಮುಂದೆ ಕೌನ್ಸಿಲ್ ಉಮೇದ್ವಾರರಾಗುವವರು ಹಿಂದೂ ಮತ ಸಂಸ್ಥೆಗಳ ಶಾಸನಪರವಾದ ಕಾನೂನನ್ನು ನಿರೋಧಿಸುವವರಾಗಿರಬೇಕೆಂಬ ಶರ್ತವನ್ನು ಹೊರಿಸಿದುದು ಕಾಂಗ್ರೆಸ್ ಕಾರ್ಯದ ವಿಶಾಲತೆಗೆ ವಿರೋಧವಿದೆಯಲ್ಲದೆ, ಅದನ್ನು ಮಂಜೂರು ಮಾಡುವ ಸಮಯದಲ್ಲಿ, ಅದರಿಂದ ಕಾಂಗ್ರೆಸ್ ಧೋರಣದ ಮೇಲಾಗುವ ಪರಿಣಾಮವನ್ನೂ ಜನತೆಯ ಲಾಭವನ್ನೂ ಚೆನ್ನಾಗಿ ಆಲೋಚಿಸಿಕೊಂಡಂತೆ ತೋರುವುದಿಲ್ಲ. ಮುಂದಿನ ಸ್ವರಾಜ್ಯ ಪಕ್ಷವು ನಿರಂತರ ನಿರೋಧದ ಧೋರಣವನ್ನು ಕೈಕೊಳ್ಳುವುದಾದರೆ, ಈ ಎಕ್ಟನ್ನು ಪ್ರತ್ಯೇಕವಾಗಿ ನಮೂದಿಸಿ ಕ್ಷುದ್ರತೆಯನ್ನು ತೋರಿಸಿದುದು ಸರಿಯಲ್ಲ. ಇಲ್ಲವೆ ರಿಸ್ಪೋನ್ಸಿವ್ ಕೊ-ಓಪರೇಶನನ್ನು ಕಾಲಕ್ರಮದಲ್ಲಿ ಸ್ವೀಕರಿಸುವರಾದರೆ, ಈ ಎಕ್ಟಿನ ನಾಶಕ್ಕಾಗಿ ಬದ್ಧಪ್ರತಿಜ್ಞೆ ಕೈಕೊಳ್ಳಲು ಕಾರಣವಿರುವುದಿಲ್ಲ. ಮತ ಸಂಸ್ಥೆಗಳು ಅತ್ಯಂತ ಪತಿತಾವಸ್ಥೆಯಲ್ಲಿರುವು ಎಂಬುದನ್ನೂ, ಇವುಗಳನ್ನು ಕೇಳುವವರಿರುವುದು ಅವಶ್ಯಕವೆಂಬುದನ್ನೂ, ಈ ಕಂಠಾವಿನ ಪ್ರೇಕ್ಷಕರೂ, ಸೂಚಕರೂ, ಎಲ್ಲರೂ ತಿಳಿದೇ ಇರುವರು. ದಿನೆ ದಿನೇ ಸ್ವಾರ್ಥಮಯವಾಗಿಯೂ, ಕಲುಷಿತವಾಗಿಯೂ ಬರುತ್ತಿರುವ ಈ ಸಂಸ್ಥೆಗಳ ಮೇಲೆ ತಂದಿರುವ ಈ ಪ್ರತಿಬಂಧಕವನ್ನು ಒಮ್ಮೆಲೆ ತೆಗೆದು ಹಾಕುವುದು ಹಿತಕರವಾಗಿರದು. ನಮಗೂ ಈ ಬಿಲ್ಲಿನಿಂದ ಮತ ಸಂಸ್ಥೆಗಳಿಗೂ ಪ್ರಜಾವರ್ಗಕ್ಕೂ ಬಾಧಕವಿದೆ ಎಂದು ಗೊತ್ತಿದೆ. ಆದರೆ ಅದನ್ನು ಸುಧಾರಿಸಬೇಕಲ್ಲದೆ, ಅದನ್ನು ತೆಗೆದುಹಾಕುವುದಕ್ಕೆ ನಿಂತರೆ ಅದರಿಂದ ಈ ಸಂಸ್ಥೆಗಳು ಮತ್ತು ಕೆಡುವುದೆಂಬುದರಲ್ಲಿ ಸಂಶಯವಿಲ್ಲ. ಆಗಾಗ ಅಲ್ಲಲ್ಲಿ ಮತ ಸಂಸ್ಥೆಗಳಲ್ಲಿಯೂ, ಮತ ಸಂಸ್ಥೆಗಳೊಳಗೂ ನಡೆಯುವ ಹೇಯ ದುರ್ಘಟನೆಗಳನ್ನು ಲಕ್ಷಿಸಿದರೆ ಇಂತಹ ಎಕ್ಟು ಅತ್ಯಂತ ಅವಶ್ಯವಿದೆ ಎಂದು ತಿಳಿಯಬಹುದು. ಹಿಂದೂ ಸಮಾಜವು ತರ್ಕವಿಲ್ಲದೆ ಬರೀ ಅನುಭೂತಿಗೆ ಮರುಳಾಗಿ ಎಂಡೋಮೆಂಟ ಬಿಲ್ಲನ್ನು ನಿವಾರಿಸಲಿಕ್ಕೆ ಯತ್ನಿಸುವುದಕ್ಕಿಂತ ಅದನ್ನು ಹೇಗೆ ಹಾನಿಕರವಾಗದ ಹಾಗೆ ಪರಿವರ್ತಿಸಬಹುದೆಂದು ಚಿಂತಿಸುವುದು ಅವಶ್ಯವಿದೆ.

ಕಲ್ಕತ್ತಾ ಅತ್ಯಾಚಾರಗಳು.

ಕಲ್ಕತ್ತಾದಲ್ಲಿ ಹಿಂದೂ-ಮುಸಲ್ಮಾನ ಕಲಹಗಳಾಗಿ, ಅವು ಮುಗಿದ ಮೇಲೆ ಪುನಃ ಹದಿನೈದು ದಿವಸಗಳ ನಂತರ ಪ್ರಚಂಡ ಅನಾಚಾರಗಳೆದ್ದುದರ ಸಾರವೇನು? ನಾಗರಿಕ ಜೀವನದಲ್ಲಿಯ ಸಾಮಾನ್ಯ ಶಾಂತತೆಯನ್ನು ಕೂಡ ರಕ್ಷಿಸಲಾರದಷ್ಟು ಈ ಬ್ರಿಟಿಷ ಸರಕಾರವು ಸಾಮರ್ಥ್ಯವಿಲ್ಲದುದಾಯಿತೇ? ಹಿಂದೂ-ಮುಸಲ್ಮಾನ ವಿದ್ವೇಷವು ಇಷ್ಟು ತೀಕ್ಷ್ಣತೆಗೆ ಏಳುವಷ್ಟು ಕಾರಣವು ಇದೆಯೆ? ಕಲ್ಕತ್ತಾದ ಹಿಂದೂ-ಮುಸಲ್ಮಾನ ದುರ್ಘಟನೆಗಳು ಕಲ್ಕತ್ತೆಯನ್ನು ಮಾತ್ರ ಸಂಬಂಧಿಸಿದವುಗಳಾಗಿಲ್ಲ. ಕಲ್ಕತ್ತೆಯ ಘಟನಾವಳಿಗಳ ಸಮಾಚಾರವು ಪ್ರಸರಿಸಿದೊಡನೆ ಇತರ ಪಟ್ಟಣಗಳಲ್ಲಿಯೂ ಈ ವಿಷಯದ ಗಾಳಿಯು ಸೋಂಕಿದ್ದಂತೆ ತೋರುತ್ತಿದೆ. ಕಲ್ಕತ್ತಾದಲ್ಲಿ ಸಿಕ್ಕಿದ ಕಡೆಯಲ್ಲಿ ಹಿಂದೂವನ್ನೂ, ಮುಸಲ್ಮಾನನನ್ನೂ, ಮುಸಲ್ಮಾನನನ್ನು ಹಿಂದೂವೂ ಕೊಲ್ಲುತ್ತಿದ್ದ ಘಟನೆಯ ಭೀಕರ ರೂಪವನ್ನು ನೋಡಿದರೆ ಇದು ಬರೇ ಮಾನವ ಮತ ಶ್ರದ್ಧೆಯಲ್ಲ. ಇದು ಬರೆ ಮತ ಮತಗಳೊಳಗಿನ ವಿದ್ವೇಷವಲ್ಲ; ಇದು ಹಿಂದೂ-ಮುಸಲ್ಮಾನ ಕ್ಲೇಶ ಮಾತ್ರವಲ್ಲವೆಂದೇ ಊಹಿಸಬೇಕಾಗುತ್ತದೆ. ಘಟನೆಯಾಗುವುದೊಂದು, ಸುದ್ದಿ ಹರಡುವುದಿನ್ನೊಂದು. ಇದು ಸರ್ವಸಾಮಾನ್ಯವಾಗಿ ಸಾರ್ವಜನಿಕ ಜೀವನದ ರೂಢಿಯಾಗಿದೆ. ಆದರೆ ಹಿಂದೂ-ಮುಸಲ್ಮಾನ ಕಲಹಗಳುಂಟಾಗಲು ಕಾರಣವಾಗಿರುವ ಸುಳ್ಳು ಸುದ್ದಿಗಳು ಸಾರ್ವಜನಿಕ ಜೀವನದ ರೂಢಿಯೊ, ಅಥವಾ ಉದ್ದೇಶಪೂರ್ವಕ ಆಗುವ ವಿಷಯಗಳೊ ಎಂಬುದನ್ನು ಕಾಂಗ್ರೆಸ್ಸು ಅದರೂ ವಿಚಾರಿಸುವುದು ಅಗತ್ಯವಿತ್ತು. ಎರಡು ಮೂರು ವರ್ಷಗಳಿಂದ ಹಿಂದೂ-ಮುಸಲ್ಮಾನ ಸಂಬಂಧವು ಇಷ್ಟು ಬೇದಾತ್ಮಕ ಪರಿಸ್ಥಿತಿಗೆ ಇಳಿದಿರುವಾಗ ಕಾಂಗ್ರೆಸ್ಸು ಇದರ ಮೂಲ ಶೋಧನೆಯ ಬಗ್ಗೆ ಏಕೆ ಒಂದು ಕಮಿಟಿಯನ್ನು ನಿರ್ಮಿಸಿ ವಿಚಾರಿಸುವುದಿಲ್ಲವೆಂಬುದನ್ನು ನಾವು ತಿಳಿಯಲಾರೆವು. ಇನ್ನೇನಲ್ಲದಿದ್ದರೂ, ಈ ವರೆಗೆ ಉಂಟಾದ ಎಲ್ಲಾ ಹಿಂದೂ-ಮುಸಲ್ಮಾನ ಸಂಘರ್ಷಣದ ಕಾರಣಗಳ ಶೋಧನೆ, ಆಗಾಗ ಹರಡಲ್ಪಡುವ ಸುಳ್ಳು ಸುದ್ದಿಗಳ ಮೂಲ ಶೋಧನೆ ಇತ್ಯಾದಿ ವಿಷಯಗಳನ್ನು ಪರಿಶೀಲಿಸಿ ತಿಳಿಯುವುದು ಅಗತ್ಯವಿತ್ತು. ಆದರೆ ಕಾಂಗ್ರೆಸ್ಸು ಇತ್ತಂಡದ ಧುರೀಣರನ್ನು ಕೂಡಿಸಿ [illegible] ಪ್ರಯತ್ನಿಸುತ್ತಿದೆಯಲ್ಲದೆ, ಮೂಲ ಶೋಧನೆಯಲ್ಲಿ ಚಿಂತಿತವಾಗಿಲ್ಲ. ಧುರೀಣರ ಸಮಾಗಮದಿಂದಲೂ ಅಭಿಪ್ರಾಯ ವಿನಿಮಯದಿಂದಲೂ, ಅವಿಶ್ವಾಸನೇ ಹೆಚ್ಚಾಗಿ ನಿವಾರಣೋಪಾಯಗಳು ಮತ್ತಷ್ಟು ತಡೆಹೊಂದುತ್ತಿವೆಯಲ್ಲದೆ ಬೇರಾವ ಲಾಭವೂ ಇಲ್ಲ.

ಈಗಿನ ಮಹಮ್ಮದಲ್ಲಿಯವರು.

ಹಿಂದಿನ ಮಹಮ್ಮದಲ್ಲಿಯವರು, ಮಹಾತ್ಮರ ಪದತಲದಲ್ಲಿ ಸಾನುನಯದಿಂದ ಶಿಷ್ಯತ್ವವನ್ನು ಗ್ರಹಣ ಮಾಡಿ ಅಹಿಂಸಾ ತತ್ವಕ್ಕೆ ಪ್ರತಿಜ್ಞಾ ಬದ್ಧರಾಗಿದ್ದ, ಹಿಂದೂಗಳು ತಮ್ಮ ಅತ್ಯಂತ ಪ್ರೀತಿಯ ಸೋದರರೆಂದು ತಿಳಿದುಕೊಂಡಿದ್ದ ಆ ಮಹಮ್ಮದಲ್ಲಿಯವರು ಕೂಡ ಪರಿವರ್ತನವನ್ನು ಹೊಂದಿರುವರು. ಮುಸ್ಲಿಮ್ ಲೀಗ್, ತಾಂಜೀಮ್ ಮುಂತಾದ ಅನೇಕ ಮುಸಲ್ಮಾನ್ ಸಂಸ್ಥೆಗಳು ತಮಗಿದ್ದರೂ, ಹಿಂದೂಗಳು ಹಿಂದೂ ಮಹಾ ಸಭೆಯನ್ನು ರಚಿಸಿದುದಕ್ಕೆ ಉಗ್ರಕೋಪವನ್ನು ತೋರಿಸುವ ಈಗಿನ ಮಹಮ್ಮದಲ್ಲಿಯವರ ಈ ಪರಿವರ್ತನವನ್ನು ನಾವು ಚೆನ್ನಾಗಿ ಲಕ್ಷಿಸಬೇಕು. ತುರ್ಕಿಯ ಸ್ವಾತಂತ್ರ್ಯದೊಡನೆ ಖಲೀಫನ ಪತನವೂ, ಖಲೀಫನ ಪತನದೊಡನೆ ಖಿಲಾಫತ್ ಕಮಿಟಿಗಳ ಅನಾವಶ್ಯಕತೆಯೂ ಸ್ಪಷ್ಟವಿದ್ದಾಗ, ಖಿಲಾಫತ್ ಕಮಿಟಿಗಳು ಇನ್ನೂ ಇದ್ದು, ಜಾತೀಯ ಕಾರ್ಯವನ್ನೆ ಮಾಡುತ್ತಿರುವಾಗ, ಮಹಮ್ಮದಲ್ಲಿಯವರಂತಹರು ಕೂಡ ಹಿಂದೂ ಮಹಾ ಸಭೆಯ ಅಭಿವೃದ್ಧಿಯನ್ನು ಕಾಣಲಾರರಾದರೆ ಅದು ಹಿಂದೂಗಳ ತಪ್ಪಲ್ಲ. ಹಿಂದೂ-ಮುಸಲ್ಮಾನ ಬಂಧುತ್ವವು ಈ ರೀತಿಯಲ್ಲಿ ಒಡೆದುದನ್ನು ನೋಡಿದರೆ ಎದೆಯೊಡೆಯುತ್ತಿದೆ. ಹಿಂದೆ ಮೌಲಾನರು ಪ್ರಕಟಿಸುತ್ತಿದ್ದ ಮಹಾತ್ಮರೊಡನೆಯ ಸೌಹಾರ್ದವು ಕೂಡ ಈಗ ಅವರ ಮಾತಿನ ಕಾಠಿಣ್ಯದಲ್ಲಿ ಕಾಣುವುದಿಲ್ಲ. ಇಷ್ಟು ನಿಷ್ಕಲಂಕ ನಿಸ್ವಾರ್ಥ ಅಭಿಪ್ರಾಯದ ಮಹಾತ್ಮಗಾಂಧಿಯವರೊಡನೆ ಕೂಡ ಮುಸಲ್ಮಾನರೊಳಗಿನ ಅತ್ಯಂತ ಉಗ್ರ ರಾಷ್ಟ್ರೀಯ ಧುರೀಣನು ಸೌಹಾರ್ದವನ್ನು ತೋರಿಸಲಾರನಾದರೆ ಹಿಂದೂ-ಮುಸಲ್ಮಾನ ಐಕ್ಯದ ವಿಷಯದಲ್ಲಿ ನಾವು ನಿರಾಶೆಯನ್ನೆ ತೋರಿಸಬೇಕಾಗುತ್ತಿದೆ.

ಮೌಲಾನರು ಹೀಗೆ ಬದಲಾಗುವುದಕ್ಕೆ ಕಾರಣವಿದೆ. ಕೆಲವು ಸಮಯ ಅವರು ಹಿಂದೂ-ಮುಸಲ್ಮಾನ ಐಕ್ಯಕ್ಕಾಗಿ ಪ್ರಯತ್ನಿಸಿದರು. ಮುಸಲ್ಮಾನರು ತಪ್ಪು ಮಾಡಿದ ಸಮಯದಲ್ಲಿ ತಪ್ಪೆಂದು ತೋರಿಸಿದರು. ಆದರೆ ಆ ಮಾತನ್ನು ಮುಸಲ್ಮಾನರೊಳಗೆ ಯಾರೂ ಕೇಳುವವರೇ ಇಲ್ಲವಾಯಿತು. ಖಿಲಾಫತ್ ಪ್ರಶ್ನೆಯ ನಿರ್ವಾಣದೊಡನೆ ಖಿಲಾಫತ್ ಭಂಡಾರವು ನಿರ್ವಾಣವನ್ನು ಹೊಂದಲಾರಂಭಿಸಿತು. ಅದರೊಡನೆ ಮುಸಲ್ಮಾನ ಜನತೆಯ ಅನುಕರಣವೂ ಹೋಗಲಾರಂಭಿಸಿತು. ಮತ್ತು ಖಿಲಾಫತ್ತಿನ ಸೂತ್ರಧಾರಿಗಳ ಕೈಯು ಬರಿದಾಗುತ್ತಾ ಬಂದಿತು. ಫಲವಾಗಿ ಖಿಲಾಫತ್ ಧುರೀಣರು ತಮ್ಮ ಧುರೀಣತ್ವವನ್ನು ಇಟ್ಟುಕೊಳ್ಳಬೇಕಾದರೆ ಜನತೆಯ ಮಾನಸಿಕತೆಯನ್ನು ಅನುಸರಿಸಬೇಕಾಯಿತು. ಮೌಲಾನರು ಈಗ ಅದೇ ಯುಕ್ತಿ ಯುಕ್ತಾಕ್ಕೆ ಉಪಾಯವನ್ನಾರಂಭಿಸಿರುವರು. ಖಿಲಾಫತ್ ಕಮಿಟಿಯನ್ನು ಮುಚ್ಚಿ, ಮೌಲಾನರು ಮುಸ್ಲಿಮ್‌ಲೀಗನ್ನಾದರೂ ಭಟ್ಟಿಮಾಡಬಹುದಿತ್ತು. ಆದರೆ ಆ ಸಂದರ್ಭದಲ್ಲಿ ಖಿಲಾಫತ್ತಿನ ಸೂತ್ರಧಾರಿಗಳ ಪ್ರಾಮುಖ್ಯತೆಯು ಇಳಿದು ಹೋಗುವುದು. ಆದುದರಿಂದ ಖಿಲಾಫತ್ ಕಮಿಟಿ ಮೂಲಕ ಸರ್ವ ತರದ ಮುಸಲ್ಮಾನ ಹಿತ ಬಯಸುವುದೇ ಈಗ ಮೌಲಾನರ ಉದ್ದೇಶವಿದೆ, ಖಿಲಾಫತ್ ಕಮಿಟಿ ಕೂಡ ಕಾಂಗ್ರೆಸ್ಸಿನಿಂದ ಹೊರಗಾದಂತೆಂದೇ ನಾವು ಭಾವಿಸಬೇಕಾಗುತ್ತದೆ.

ಇಂಗ್ಲೆಂಡಿನಲ್ಲಿ ಕೂಲಿಕಾರರ ಮುಷ್ಕರ.

ಅನೇಕ ದಿನಗಳಿಂದ ಇದ್ದಲು ಗಣಿಗಳ ಮ್ಹಾಲಿಕರೂ, ಇದ್ದಲು ತೆಗಿಯುವ ಕೂಲಿಕಾರರೂ, ಬ್ರಿಟಿಷ ಸರಕಾರದ ಮಧ್ಯಸ್ಥಿಕೆಯೊಡನೆ ಪಂಚಾಯತಿಕೆ ನಡಿಸಿ, ಕೊನೆಗೆ ಆಗುವುದೇ ಆಯಿತು. ಒಂದೂವರೆ ಮಿಲಿಯ ಕೂಲಿಗಳು ಈಗ ಕೆಲಸವಿಲ್ಲದೆ ತಿರುಗುತ್ತಿರುವರು. ಕೂಲಿಕಾರರ ಮಜೂರಿ ಇಳಿಸಲಿಕ್ಕೆಂದು ಗಣಿಗಳ ಮ್ಹಾಲಿಕರು ಪ್ರಯತ್ನಿಸಿದುದೇ ಇದರ ಕಾರಣ. ಈ ಮುಷ್ಕರದಿಂದ ಇಂಗ್ಲೆಂಡಿನ ಎಲ್ಲಾ ವ್ಯಾಪಾರ ವಹಿವಾಟುಗಳೂ ತಟಸ್ಥವಾಗಲಿದೆ. ಈ ಮುಷ್ಕರದಿಂದ ದೈನಿಕ ಪತ್ರಿಕೆಗಳ ಪ್ರಕಟನವು ಕೂಡ ಅಸಾಧ್ಯವಾಗಲು ಬಂದಿದೆ.

ಕಲ್ಲಿದ್ದಲು ಇಂಗ್ಲೆಂಡಿನ ಮತ್ತು ಇಡೀ ಪಾಶ್ಚಾತ್ಯ ನಾಗರಿಕತೆಯ ಮೂಲ ವಿಷಯವಾಗಿದೆ, ಇದ್ದಲಿನಿಂದಲೇ ರೈಲ್ವೆಗಳೂ, ಕಾರಖಾನೆಗಳೂ ನಡಿಯಬೇಕು. ಮನೆಯ ಒಲೆ ಕೂಡ ಇದ್ದಲಿನಿಂದ ಉರಿಯಬೇಕು. ಇಂಗ್ಲೆಂಡಿನಲ್ಲಿ ಪ್ರತಿದಿನವೂ ಟನ್ ಗಟ್ಟಲೆಯಲ್ಲಿ ಇದ್ದಲು ಗಣಿಯಿಂದ ತೆಗೆಯಲ್ಪಟ್ಟು ಖರ್ಚಾಗುತ್ತಿದೆ. ಎರಡು ದಿನ ಇದ್ದಲು ತೆಗಿಯುವುದನ್ನು ನಿಲ್ಲಿಸಿದರೆ, ಎಲ್ಲಾ ಕೆಲಸಗಳೂ ನಿಲ್ಲಬೇಕಾಗುತ್ತದೆ.

ಇಂಗ್ಲೆಂಡು ಈಗ ಇಂತಹ ಕಠಿಣ ಪರಿಸ್ಥಿತಿಗೆ ಬಂದಿದೆ. ಅಲ್ಲದೆ ಹದಿನೈದು ಲಕ್ಷ ಜನರು ಕೆಲಸವಿಲ್ಲದೆ ತಿರುಗುವಾಗ ಸಾಮಾನ್ಯ ಪೋಲಿಸರಿಗೂ, ದಂಡಿಗೂ ಅದನ್ನು ನಿರ್ಬಂಧಿಸಲು ಆ ವಿಶಾಲ ಜನತೆಯೊಳಗೆ ಶಾಂತಿರಕ್ಷಣೆ ಮಾಡಲು ಸಾಕಾಗದು. ಅದಕ್ಕಾಗಿ ಸರಕಾರವು ಸ್ವಯಂಸೇವಕರನ್ನು ಕೂಡುತ್ತಾರೆಂಬುದನ್ನು ನೋಡಿದರೆ ಇಂಗ್ಲಿಷ ನಾಗರಿಕರು ಸಮಾಜಹಿತದ ಬಗ್ಗೆ ಎಷ್ಟು ಉತ್ಸಾಹಿಗಳೆಂಬುದು ತಿಳಿದು ಬರುವುದು.

ಇಂಗ್ಲೆಂಡಿನ ಇದ್ದಲು ಕೆಲಸಗಾರರ ಮುಷ್ಕರರು ಜರ್ಮನಿನ ಇದ್ದಲಿನ ಮ್ಹಾಲಿಕರಿಗೆ ಸಂತೋಷವಾಗಿಯದೆ, ಇಂಗ್ಲೆಂಡಿನ ಇದ್ದಲಿನ ಸ್ಪರ್ಧೆಯಿಂದ ಜರ್ಮನ್ ಇದ್ದಲು ಯುರೋಪಿನಲ್ಲಿ ಮಾರಾಟವಾಗಲು ಕಷ್ಟವಾಗುತ್ತಿತ್ತು. ಈಗ ಇಂಗ್ಲೆಂಡಿಗೇನೇ ಜರ್ಮನಿಯಿಂದ ಇದ್ದಲನ್ನು ತರಿಸುವ ಅವಶ್ಯಕತೆಯಿದೆ, ಆದುದರಿಂದ ಜರ್ಮನಿನ ಇದ್ದಲಿಗೆ ಗಿರಾಕಿ ಹೆಚ್ಚಿದಂತೆಯೂ ಬೆಲೆಯು ಹೆಚ್ಚು ಬಂದಂತೆಯೂ ಆಗಿ ಜರ್ಮನಿಗೆ ಒಳ್ಳೇ ಲಾಭವಾಗಲಿದೆ.

ಈ ಮುಷ್ಕರ ಸಮಯದಲ್ಲಿ ಇಂಗ್ಲೆಂಡಿನಲ್ಲಿ ಅನೇಕ ಅನಾಚಾರಗಳು ನಡಿಯುವುವು. ದರೋಡೆ, ಕಳವು, ಡಕಾಯಿತಿ, ಹತ್ಯ ಇತ್ಯಾತಿ ಸರ್ವ ಕೃತ್ಯಗಳೂ ಇಂಗ್ಲೆಂಡಿನಲ್ಲಿ ನಡಿಯುವುವು. ಹಿಂದೂಸ್ಥಾನದಲ್ಲಿ ಹಿಂದೂ-ಮುಸಲ್ಮಾನ ಕಲಹವನ್ನು ನೋಡಿ ನಮ್ಮನ್ನು ಸ್ವರಾಜ್ಯಕ್ಕೆ ಅರ್ಹರಲ್ಲವೆಂದು ಹೇಳುವ ಇಂಗ್ಲೀಷರು ಈ ಘಟನೆಗಳನ್ನು ಮನಸ್ಸಿಗೆ ತೆಗೆದುಕೊಳ್ಳಬಹುದು.

ಯುರೋಪಿನ ಶ್ರೀಮಂತರ ಮತ್ತು ಕೂಲಿಕಾರರೊಳಗಿನ ಸಂಬಂಧ.

ಇಂಗ್ಲೆಂಡಿನ ಈ ಮುಷ್ಕರವೂ, ಕೆಲಸ ಮಾಡುವವರ ಮತ್ತು ಮಾಡಿಸುವವರೊಳಗಿನ ವಿವಾದವೂ ಅಂತಃಕ್ಲೇಶವೂ ಇಂಗ್ಲೆಂಡಿನ ವೈಶಿಷ್ಟ್ಯ ಮಾತ್ರವಲ್ಲ. ಈ ತರದ ವರ್ಗೀಯ ವಿವಾದಗಳು ಪಾಶ್ಚಾತ್ಯ ಎಲ್ಲಾ ರಾಜ್ಯಗಳಿಗೂ ಅನ್ವಯಿಸುವುವು; ಅಲ್ಲದೆ ಪೌರ್ವಾತ್ಯ ರಾಜ್ಯಗಳಲ್ಲಿ ಕೂಡ ಈ ವಿವಾದಗಳ ಮೊಳಕೆಯು ತಲೆದೋರಿರುವುದು. ಈ ತರದ ವರ್ಗೀಯ ಸ್ವಾರ್ಥ (Class interests) ಗಳು ಸಾಧನೆಯಿಂದ ಸಮಾಜ ಜೀವನವು ದಿನೇ ದಿನೇ ಕೆಡುತ್ತಾ ಬರುತ್ತವೆ. ಅಂತಃಕ್ಲೇಶಗಳೂ ಮತ್ತಷ್ಟು ಗಾಢವೂ ಪ್ರಬಲವೂ ಆಗುತ್ತಿವೆ. ಎಲ್ಲಿ ಯಾರು ಪ್ರಬಲರೊ ಅಲ್ಲಿ ಅವರೇ ಶಕ್ತಿವಂತರಿರುತ್ತಾರೆ. ಇಟಲಿಯಲ್ಲಿ ಫೆಸಿಸ್ಟ ಚಳವಳ ಬಂದು ಕೂಲಿಕಾರರನ್ನು ನಿರ್ಬಂಧಿಸಿ ಹೇಳಿದ ಹಾಗೆ ನಡಿಯುವಂತೆ ಮಾಡಿತು. ರಶ್ಯಾದಲ್ಲಿ ಕೂಲಿಕಾರರೇ ಪ್ರಬಲರಾಗಿ ಎಲ್ಲಾ ಶ್ರೀಮಂತರು ನಾಶಹೊಂದಿದರು. ಫ್ರಾನ್ಸಿನಲ್ಲಿ ಕೂಲಿಕಾರರು ನಿರ್ಬಲರಾಗಿ, ಆಗಾಗ ತಮ್ಮ ಅಧಿಕಾರಕ್ಕಾಗಿ ತಲೆಯೆತ್ತಿ ಸರಕಾರದ ಆಘಾತದೊಡನೆ ಕೆಳಗೆ ಮಾಡುವರು. ಜರ್ಮನಿಯಲ್ಲಿಯೂ ಕೊಮ್ಯುನಿಸ್ಟರು ಸಾಧ್ಯವಿದ್ದಷ್ಟು ತೊಂದರೆಗಳನ್ನೆಳಸಲು ಪ್ರಯತ್ನಿಸುತ್ತಿರುವರು. ಇಂಗ್ಲೆಂಡಿನಲ್ಲಿ ಕೆಲಸಮಾಡುವವರೂ ಮಾಡಿಸುವವರೂ ಸಮಬಲವುಳ್ಳವರಾಗಿರುವರು. ಯಾವ ಕಾಲ ಯುರೋಪಿನಲ್ಲಿ ಉತ್ಕ್ರಾಂತಿಯಾಗಿ ಹೋದೀತೆಂದು ಹೇಳಲಾಗುವುದಿಲ್ಲ.

ಯುದ್ಧದಿಂದ ದಣಿದ ಜರ್ಮನಿ.

ಯುದ್ಧದಿಂದ ಬಹಳ ದಣಿದಿದ್ದರೂ ಫ್ರಾನ್ಸು ಜರ್ಮನಿಯ ಮೇಲೆ ಹೊರಲಾರದಂತೆ ಶರ್ತಗಳನ್ನು ಕೊಟ್ಟು ಸಂಧಿ ಮಾಡಿಸಿದ್ದಾದರೂ, ಜರ್ಮನಿಯು ಎಷ್ಟು ಬೇಗನೆ ಅವುಗಳೆಲ್ಲವುಗಳನ್ನು ವಹಿಸಿ ಸುಖವಾಗಿ ನಿಂತದೆ ಎಂದು ನೋಡಿದರೆ ಜರ್ಮನಿಯ ಶಕ್ತಿಯು ತಿಳಿಯ ಬರುವುದು. ಫ್ರಾನ್ಸಿನಲ್ಲಿ ಫೈನೆನ್ಸು ಪಾಸಾಗಲಿಕ್ಕೆ ನಾಲ್ಕಾರು ತಿಂಗಳುಗಳೂ, ನಾಲ್ಕಾರು ಸರಕಾರಗಳೂ ಬೇಕಾದುವು. ಆದರೆ ಜರ್ಮನಿಯ ಆಯವ್ಯಯದ ಪಟ್ಟಿಯು ವರ್ಷದಿಂದ ವರ್ಷ ಸುಧಾರಿಸುತ್ತಾ ಬರುತ್ತಿದೆ.

ಜರ್ಮನಿಯ ಪ್ರಧಾನರಾಗಿರುವ ಡಾ|| ಲೂತರರು ಜರ್ಮನ್ ವ್ಯಾಪಾರ ಮತ್ತು ಕೈಗಾರಿಕೆಯ ಪರಿಷತ್ತಿನಲ್ಲಿ ಹೀಗೆ ಹೇಳಿದರು:—

ಬ್ರಿಟಿಷರು ತಮ್ಮ ಸರಕಾರಕ್ಕೆ ೧೭ ಕೋಟಿ ರೂಪಾಯಿ ಹೆಚ್ಚು ಕರ ತೆರೆಯಬೇಕಾಗುವಾಗ ಜರ್ಮನರು ತಮ್ಮ ಸರಕಾರಕ್ಕೆ ೩೩ ಕೋಟಿ ರೂಪಾಯಿ ಕಡಿಮೆ ತೆರುವರು. ಕರವನ್ನು ಇಳಿಸುವುದೆಂದು ರಫ್ತು ಹೆಚ್ಚಾಗುವುದು. ಜರ್ಮನಿನ ಸಾಮಾನುಗಳ ಹೊರದೇಶ ಮಾರಾಟವು ಹೆಚ್ಚಾಗುವಂತೆ ಸರಕಾರವು ಸರ್ವತರದಲ್ಲಿಯೂ ಪ್ರಯತ್ನಿಸುತ್ತಿದೆ. ಅದಕ್ಕಾಗಿಯೇ ಕರತೆರುವವರ ಭಾರವನ್ನು ಈ ವರ್ಷ ಕಡಿಮೆ ಮಾಡೋಣಾಯಿತು. ಇದರಿಂದ ಈಗ ಕೆಲಸವಿಲ್ಲದಿರುವ ೨೫ ಲಕ್ಷ ಕೂಲಿಕಾರರಿಗೆ ಆ ಕೆಲಸ ಸಿಕ್ಕುವಂತಾಗುವುದು.

ಜರ್ಮನ್ ವ್ಯವಸ್ಥಾಪಕ ಶಕ್ತಿಯು ಎಷ್ಟು ವಿಶ್ವವಿದೆಯೆಂದು ಇದರಿಂದ ತಿಳಿಯುವುದು.

ಅನುಕ್ರಮಣಿಕೆ.

ಅಗ್ರಲೇಖ	ಪುಟ
ಜಯಕರ ನೆಹರು ರಾಜಿ	೬
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೫
ದಕ್ಷಿಣ ಕನ್ನಡ— ಮಂಜೇಶ್ವರ, ಬಂಟವಾಳ, ಚಂಡ್ರಿಮಾರು, ಅಜ್ಜಿಬೆಟ್ಟು, ಫರಂಗಿಪೇಟೆ	,,
ಮಂಗಳೂರು	,,
ವಿವಿಧ ವಿಷಯ	೭—೮
ಪತ್ರವ್ಯವಹಾರ ೧, ೨, ೩, ...	೮

ಸ್ವದೇಶಾಭಿಮಾನಿ.

ಶಕ ೧೮೪೮ ನಿ. ಚೈತ್ರ ಬ| ೧೦ಯು ಶುಕ್ರವಾರ.

ಜಯಕರ ನೆಹರು ರಾಜಿ.

ಅಹಮ್ಮದಾಬಾದಿನ ನೆಹರು ಜಯಕರ ರಾಜಿಯು ಇಡೀ ರಾಜಕೀಯ ವಾತಾವರಣದಲ್ಲಿ ಬಹಳ ಬದಲಾವಣೆಗಳನ್ನು ಮಾಡಿಯದೆ. ನೆಹರು, ಶ್ರೀನಿವಾಸ ಐಯ್ಯಂಗಾರ ಮತ್ತಿತರ ಕಾಂಗ್ರೆಸ್ ಧುರೀಣರು ಮುಂಬಾಯಿಗೆ ಹೋಗಿ ಅಲ್ಲಿ ಸೆಟಲ್ವಾಡ ಮುಂತಾದ ಲಿಬರಲ್ ಧುರೀಣರನ್ನು ಕಂಡು ಮುಂದಿನ ಐಕ್ಯಕ್ಕೆ ಉಪಾಯವಿದೆಯೊ ಎಂದು ಆಲೋಚಿಸಿರುವರು. ನೆಹರು ಜಯಕರ ಒಪ್ಪಂದವು ಲಿಬರಲರನ್ನು ಹತ್ತರ ತರಲಿಕ್ಕೆ ಸಹಾಯ ಮಾಡುವಂತಹುದುದೆಂಬ ಅಭಿಪ್ರಾಯವೂ ಅಲ್ಲಲ್ಲಿದೆ. ಶ್ರೀಯುತ ಚಿಂತಾಮಣಿಯವರು ಅಹಮ್ಮದಾಬಾದಿಗೆ ಮಹಾತ್ಮಾ ಗಾಂಧಿಯವರೊಡನೆ ಮಾತನಾಡಲಿಕ್ಕೆ ಹೋಗಿದ್ದಾರೆ. ಹೀಗೆ ನೆಹರು ಜಯಕರ ರಾಜಿಯು ಲಿಬರಲರನ್ನು ಹತ್ತರ ತರಲು ಸಹಾಯ ಮಾಡುವುದಾದರೂ, ಆ ಒಪ್ಪಂದವು ಕಾಂಗ್ರೆಸ್ಸಿನ ಧೋರಣಕ್ಕೆ ಸರಿಯಾದುದಲ್ಲವೆಂದೂ, ಅದರಿಂದ ಸ್ವರಾಜ್ಯ ಪಕ್ಷೀಯ ಕಾರ್ಯಕ್ರಮಕ್ಕೆ ಹಾನಿಯಾಗುವುದೆಂದೂ, ಅದಕ್ಕೂ ಲಿಬರಲ್ ಧೋರಣಕ್ಕೆ ವಿಶೇಷ ಹೆಚ್ಚು ಕಡಿಮೆಯಿಲ್ಲವೆಂದೂ, ರಾಜಿಶರ್ತಗಳಲ್ಲಿ ಬೇಕಾದಂತೆ ಅರ್ಥಮಾಡಿಕೊಳ್ಳಲಿಕ್ಕಾಗಿ ಮುಂದೆ ಕಾರ್ಯ ನಿರ್ಣಯವು ಸ್ವೇಚ್ಛೆಯಂತಾಗಬಹುದೆಂದೂ ಅನೇಕ ಸ್ವರಾಜ್ಯ ಪಕ್ಷೀಯರು ಹೇಳುತ್ತಿರುವರು.

ರಾಜಿಶರ್ತಗಳ ಶ್ಲೇಷವೇ ಈ ರಾಜಿಯನ್ನು ಸಾಧ್ಯವಾಗಿ ಮಾಡಿತು; ಇದೇ ಶ್ಲೇಷವು ಈ ರಾಜಿಯನ್ನು ಮುರಿದುಬಿಟ್ಟಿತು. ರಾಜಕೀಯ ಧುರೀಣರೊಳಗೆ ಒಂದು ಉದ್ದೇಶವು ಮುಂದಿದ್ದರೆ, ಅದರ ಸಾಧನೆಗಾಗಿ ಸ್ಪಷ್ಟ ವರ್ತನಕ್ಕೆ ಎಡೆ ಇರದಿರುವುದೇ ಇಂತಹ ಶ್ಲೇಷೋಕ್ತಿಗಳಿಗೆ ಕಾರಣವಾಗುತ್ತಿದೆ. ಪಂಡಿತ ನೆಹರುರವರೂ, ಜಯಕರರೂ ರಾಜಿಯನ್ನಿಚ್ಛಿಸಿದರು. ಅತಿಗಾಮಿಯಾದ ತಿಲಕರ ಶಿಷ್ಯರು ಈಗ ದೇಶದ ಸ್ವಾತಂತ್ರ್ಯದ ಹವ್ಯಾಸವೇ ಇರದ ಲಿಬರಲರ ಹೆಗಲ ಮೇಲೆ ಕೈಹಾಕುವುದು, ಒಮ್ಮೆಂದೊಮ್ಮೆ ಈ ಮರಾಠಾ ಧುರೀಣರಿಗೆ ಒಳ್ಳೆತೆಂದು ಅನ್ನಿಸಲಿಲ್ಲ. ಆದುದರಿಂದ, ಪ್ರಾಯಶಃ ಪಂಡಿತನೆಹರುರವರ ಆ ಮಂತ್ರಣವನ್ನು ಸ್ವೀಕರಿಸಿ ಜಯಕರರಾದಿಯವರು ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಕೂಡಿ ರಾಜಿಯನ್ನಾಲೋಚಿಸಿದರು. ಆದರೆ ಮಂತ್ರಿಪದವಿಯ ಅಭಿಲಾಷೆಯು ತಣ್ಣಗಾಗದೆ ಇದ್ದಾಗ ಈ ರಾಜಿಯು ಶ್ಲೇಷೋಕ್ತಿಗಳಿಂದಲೇ ಮುಗಿಯಬೇಕಾಯಿತು. ಈ ರಾಜತಂತ್ರಜ್ಞರ ಶಬ್ದವಿನ್ಯಾಸದಲ್ಲಿಯೂ, ಶಾಬ್ದಿಕ ವಿಜ್ಞಾನದಲ್ಲಿಯೂ ತಮ್ಮ ತಮ್ಮ ಉದ್ದೇಶಗಳನ್ನೇ ಸೇರಿಸಿ ರಾಜಿಯಾಗುತ್ತಿದ್ದ ಆ ರಾಜತಂತ್ರ ವೈಚಿತ್ರ್ಯವನ್ನು ಕಂಡು ಮಹಾತ್ಮಾ ಗಾಂಧಿಯವರಿಗೆ ಏನು ಅನ್ನಿಸಿತೊ!

ರಾಜಿಯು ಚುನಾವಣೆಯ ಉದ್ದೇಶದಿಂದಾದುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಮೋತಿಲಾಲ ನೆಹರುರವರು ಕಾಂಗ್ರೆಸ್ಸಿಗೆ ಜವಾಬ್ದಾರರಾದುದರಿಂದಲೂ, ಜಯಕರರು ತಮ್ಮ ಇಚ್ಛೆಯೆ ಮೇಲಾಗಬೇಕೆಂದು ಸಾಧಿಸುವರಾದುದರಿಂದಲೂ ರಾಜಿಯು ಅದಕ್ಕಿಂತಲೂ ಬೇಗನೆ ಬಿದ್ದುಹೋಗುವುದು ಕೇವಲ ಸ್ವಾಭಾವಿಕವಾಗಿದೆ. ರಾಜಿಯ ಶರ್ತಗಳು ಈ ರೀತಿಯಲ್ಲಿ ಶ್ಲೇಷಾಭಿಪ್ರಾಯವುಳ್ಳವುಗಳಾಗಿ ಪ್ರಮುಖ ಧುರೀಣರೇ ಸಂಶಯವುಳ್ಳವರಾಗಿರುವಾಗ, ನಮ್ಮ ಜಿಲ್ಲಾ ರಾಜಕೀಯ ಪರಿಷತ್ತು ಆ ರಾಜಿಶರ್ತಗಳ ಅಂತರ್ಯ ಶೋಧನೆಮಾಡದೆ, ಆಲ್ ಇಂಡಿಯಾ ಕಮಿಟಿಯ ಅಭಿಪ್ರಾಯಗಳನ್ನೂ ನಿರೀಕ್ಷಿಸದೆ, ಅವನ್ನು ಮಂಜೂರುಮಾಡಿದುದು, ನಮ್ಮ ಜಿಲ್ಲೆಯ ಉತ್ಸಾಹಿಗಳ ಅವಸರವನ್ನೂ ಅಲಕ್ಷ್ಯವನ್ನೂ ತೋರಿಸುವುದೆನ್ನಬೇಕು.

ಈ ರಾಜಿಯ ವಿಷಯವಾಗಿ ಕೆಲವು ಧುರೀಣರು ಕೊಟ್ಟ ಅಭಿಪ್ರಾಯಗಳನ್ನು ನಾವು ಮನನ ಮಾಡಿಕೊಳ್ಳುವುದೂ ಉತ್ತಮವಿದೆ. ಶ್ರೀಯುತ ಶ್ರೀನಿವಾಸ ಅಯ್ಯಂಗಾರರು ಹೀಗೆ ಹೇಳುವರು:—

ನನಗೆ ಐಕ್ಯವು ಬೇಕು; ಆದರೆ ಆ ಐಕ್ಯವು ಕೆಲಸದೊಳಗಿನ ಐಕ್ಯವಾಗಿರಬೇಕು. ಸರಕಾರವನ್ನು ನಿರೋಧಿಸುವ ಧೋರಣವನ್ನು ನಾವು ಕಳಕೊಳ್ಳಬಾರದು. ಸ್ವಲ್ಪ ಆದರ್ಶ ಮತ್ತು ಸ್ವಲ್ಪ ನಿರೋಧ, ಇವುಗಳು ನನಗೆ ಬೇಕು. ನಾವು ಪ್ರೀತಿಸುವಂತಹವುಗಳನ್ನೂ, ನಮ್ಮ ಕಾರ್ಯ ಸೂತ್ರಗಳನ್ನೂ ಬಲಿಯಿತ್ತು ಐಕ್ಯವನ್ನು ಪಡೆಯುವುದರಲ್ಲಿ ನಾನು ವಿಶ್ವಾಸವುಳ್ಳವನಾಗಿಲ್ಲ. ನಾವು ಶಕ್ತಿಹೀನರಾದ ಕಾರಣ ಸುಧಾರಣಾ ಸರಕಾರವನ್ನು ನಡಿಸಬೇಕೆಂಬುದು ಆಶಾಭಗ್ನತೆಯ ಬುದ್ಧಿವಾದವಾಗಿದೆ. ಹಾಗಾದರೆ, ಸ್ವರಾಜ್ಯವು ಸಿಕ್ಕುವುದು ಕಷ್ಟವಿದೆ. ಆದುದರಿಂದ ಸ್ವರಾಜ್ಯದ ಆದರ್ಶವನ್ನು ಬಿಟ್ಟುಕೊಡಿರಿ ಎಂದು ಹೇಳಬಹುದು. ಸರಕಾರಕ್ಕೆ ಶರಣು ಬಂದು ಜಾತೀಯ ಪರಿಸ್ಥಿತಿಯು ಸುಧಾರಿಸುವುದೆಂದು ನಾನು ನಂಬುವುದಿಲ್ಲ. ಆದರಿಂದ ಪರಿಸ್ಥಿತಿಯು ಇನ್ನೂ ಕೆಡುವುದು. ದೇಶವು ಅಂತರ್ಯದಲ್ಲಿ ಸರಿಯಿದೆ. ಸ್ವಾತ್ಮ ವಿಶ್ವಾಸದ ಮತ್ತು ರಾಷ್ಟ್ರೀಯ ನಿರೋಧದ ಧ್ವಜವನ್ನು ಎತ್ತರವಾಗಿ ಎತ್ತಿ ಹಿಡಿಯುವ ಸ್ಥಿರ ನಿರ್ಧಾರವೇ ಈಗ ಬೇಕಾದುದಾಗಿದೆ.

ಸಾಬರ್ಮತಿ ರಾಜಿಯ ವಿಷಯವಾಗಿ ಅವರು ಸಾಬರ್ಮತಿ ಒಪ್ಪಂದವು ಏಕಪಕ್ಷೀಯವಾಗಿದೆ. ಅದು ಎದುರು ಪಕ್ಷಕ್ಕೆ ಪೂರ್ಣ ಶರಣು ಬಂದಂತಿದೆ. ಅದರಲ್ಲಿ ಯಾರೊಬ್ಬರೂ ಭಾಗಿಯಾಗಲಾರರು" ಎಂದು ಹೇಳುವರು.

ಶ್ರೀಯುತ ಎ. ರಂಗಸ್ವಾಮಿ ಅಯ್ಯಂಗಾರರು ಸಾಬರ್ಮತಿ ಒಪ್ಪಂದದ ಅಭಿಪ್ರಾಯವೇನು? ಮಂತ್ರಿಪದವಿಯನ್ನು ಸರಕಾರವು ಕೊಡುವುದೇ ಸರಕಾರವು ಜನತೆಗೆ ಕೊಡುವ ಸಹಕಾರವೆಂದು ಈಗಿನ ಒಪ್ಪಂದದ ಪ್ರಕಾರ ಅರ್ಥಮಾಡಿಕೊಳ್ಳಬಹುದಾಗುತ್ತದೆ. ಇತರ ನಿರೋಧದ ನಿಷ್ಫಲತೆಯ ನೈರಾಶದಲ್ಲಿ, ಸುಧಾರಣಾ ಸರಕಾರವನ್ನು ಇದಕ್ಕಿದ್ದ ಹಾಗೆ ಸ್ವೀಕರಿಸುವುದೆಂದಾದರೆ, ಕಾಂಗ್ರೆಸ್ಸಿನ ವಿಶೇಷ ಅಧಿವೇಶನವನ್ನು ಕರೆಯುವುದೇ ಈಗ ಗೌರವಕರವಾದ ರೀತಿಯಾಗಿದೆ. ಒಪ್ಪಂದದ ಉದ್ದೇಶವಾಗಲಿ ಅರ್ಥವಾಗಲಿ ಅದಲ್ಲದಿದ್ದರೆ, ಒಪ್ಪಂದದ ಶಬ್ದಗಳನ್ನು ಬದಲಿಸಿ ಉದ್ದೇಶವನ್ನು ಸ್ಪಷ್ಟಪಡಿಸುವುದೇ ಅಗತ್ಯವಿದೆ" ಎಂದು ಹೇಳಿರುವರು.

ಮುಖ್ಯತಃ ಮೊನ್ನೆ ಅಹಮ್ಮದಾಬಾದಿಗೆ ಕರೆದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ಈ ಒಪ್ಪಂದಕ್ಕೆ ಹೆಚ್ಚು ಅನುಮೋದನವು ಸಿಕ್ಕಿಲ್ಲ. ಪಂಡಿತ ಮದನಮೋಹನ ಮಾಲವೀಯರು ಕಾಂಗ್ರೆಸ್ಸಿನ ವಿಶೇಷ ಅಧಿವೇಶನವನ್ನು ಕರೆಯಿಸಬೇಕಾಗಿ ಸೂಚಿಸಿದರು. ವಿಶೇಷ ಅಧಿವೇಶನವೆಂದರೆ ಸಾಮಾನ್ಯದ ಮಾತಲ್ಲ. ಅದಕ್ಕೆ ತಯ್ಯಾರಿಯ ಕೆಲಸವೂ, ವೆಚ್ಚವೂ, ಪ್ರತಿನಿಧಿಗಳ ಸಮಯವೂ ಹಣವೂ, ಬಹಳವಾಗಿ ಬೇಕಾಗಿದೆ. ಈ ಒಂದು ವಿಷಯವು ಇಷ್ಟು ಖರ್ಚು ಮಾಡುವಷ್ಟು ಪ್ರಮುಖವೊ ಎಂಬುದನ್ನು ಚೆನ್ನಾಗಿ ತೂಕಿ ನೋಡಬೇಕು. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ಈ ಸೂಚನೆಗೆ ಮಾನ್ಯತೆ ಸಿಕ್ಕದುದು ಸತರ್ಕವಿದೆ.

ಆ ಒಪ್ಪಂದವನ್ನು ಮತ್ತೂ ಸ್ಪಷ್ಟವಾಗಲೆಂದು ಈ ಕೆಳಗಿನ ಉಪಸೂಚನೆಗಳು ಅದಕ್ಕೆ ಕೂಡಿಸಲ್ಪಟ್ಟವು.

(೧) ಎಸೆಂಬ್ಲಿಯ ೧೯೨೪ನೇ ಫೆಬ್ರುವರಿ ೧೮ರ ಠರಾವನ್ನು ಸರಕಾರವು ಮನ್ನಿಸುವುದು ಆ ಮೇಲೆ ಎಸೆಂಬ್ಲಿಯಲ್ಲಿ ೧೯೨೫ನೇ ಸಪ್ಟಂಬರ ೮ರಲ್ಲಿ ಮಂಜೂರಾದ ಠರಾವಿನ ಕ್ರಮಗಳನ್ನು ಸರಕಾರವು ಅನುಸರಿಸುವುದು, ಸದ್ಯಕ್ಕೆ ಸರಕಾರದ ಸಹಕಾರವೆಂದು ತಿಳಿಯಬಹುದು.

(೨) ಇವಲ್ಲದೆ, ತಾನಾಗಿ ಜವಾಬ್ದಾರಿ ಸರಕಾರವು ಹಿಂದೂಸ್ಥಾನಕ್ಕೆ ಬರುವಂತೆ ಒಂದು ಕ್ರಮವನ್ನೇರ್ಪಡಿಸಿ, ಮಧ್ಯದಲ್ಲಿ ಪ್ರಾಂತಿಕ ಸ್ವಾತಂತ್ರ್ಯವನ್ನು ಕೊಟ್ಟರೆ, ಮಂತ್ರಿಪದವಿ ಸ್ವೀಕಾರ ಮತ್ತು ಬಜೇಟು ತರ್ಕಕ್ಕೆ ಸಾಕಷ್ಟು ಸಹಕಾರವೆಂದು ತಿಳಿದುಕೊಳ್ಳಬಹುದು. ಆದರೆ ಈ ಸಂದರ್ಭದಲ್ಲಿ ಸರಕಾರವು ಕೆಳಗಿನ ವಿಷಯಗಳನ್ನು ಮಾನಿಸದೆ ಮಂತ್ರಿಪದವಿಯು ಸ್ವೀಕರಿಸೋಣಾಗಬಾರದು.

(ಅ) ವಿಚಾರಣೆ ಇಲ್ಲದೆ ಜೈಲಿನಲ್ಲಿರುವ ರಾಜಕೀಯ ಕೈದಿಗಳನ್ನು ಬಿಟ್ಟುಬಿಡುವುದು.

(ಆ) ದಬ್ಬಾಳಿಕೆ ಕಾನೂನುಗಳನ್ನು ತೆಗೆದುಹಾಕುವುದು

(ಇ) ಕೈದಿನಲ್ಲಿದ್ದವರ ಮೇಲೆ ಚುನಾವಣೆಗೆ ನಿಲ್ಲಬಾರದೆಂದಿರುವ ನಿರ್ಬಂಧವನ್ನು ತೆಗೆದುಹಾಕುವುದು.

(ಈ) ಕೌನ್ಸಿಲು ಮೆಂಬರಿಕೆಗೆ ಬೇಸರಕಾರಿ ನೇಮಕಗಳನ್ನು ತೆಗೆದುಹಾಕಿ ಆ ಸ್ಥಾನಗಳನ್ನು ಚುನಾವಣೆಗೆ ಬಿಟ್ಟುಕೊಡುವುದು.

(ಉ) ಪ್ರತ್ಯೇಕ ಪ್ರಾಂತ್ಯದ ಸರಕಾರದ ಸಹಕಾರವು ಪ್ರತಿಸಹಕಾರಕ್ಕೆ ಸಾಕೊ ಎಂಬುದನ್ನು ಆ ಪ್ರಾಂತದ ಕೌನ್ಸಿಲಿನ ಕಾಂಗ್ರೆಸು ಮೆಂಬರರು ವರ್ಕಿಂಗ್ ಕಮಿಟಿಯ ಮೂಲಕ ನಿಶ್ಚಯಿಸತಕ್ಕದ್ದು.

ಈ ಉಪಸೂಚನೆಯನ್ನು ಕಂಡ ಕೂಡಲೇ ಜಯಕರ ಕೇಳ್ಕರರು ಕೋಪಗೊಂಡುದುದು ಅತೀ ವಿಷಾದಕರವಿದೆ. ನೆಶನಲ್ ಪಕ್ಷದ ಡಾ| ಪರಾಂಜಪೆ, ಸರ್ ಮೊರೊಪಂತ ಜೋಶಿ, ದಳವಿ, ಮಾಲವೀಯ ಇತ್ಯಾದಿಯವರು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೆ ಬಂದಿದ್ದಾದರೂ, ಜಯಕರ ಕೇಳ್ಕರರು ಸಭೆಗೆ ಬಂದು ಸೇರಲು ನಿರಾಕರಿಸಿದರು. ಈ ಮರಾಠಾ ಪ್ರಾಂತಿಕತೆಯು ಸ್ಪಷ್ಟವಾಗಿಯೂ ರಾಷ್ಟ್ರೀಯ ಹಿತಕ್ಕೆ ಹಾನಿಕರವಿದೆ. ಸಾಧ್ಯವಿರಲಿ ಇಲ್ಲದಿರಲಿ, ಬಂದು ಸ್ವತಹಾ ಮಾತನಾಡಿ ಏನೊಂದು ತೀರ್ಮಾನವನ್ನು ಹೊಂದಿಸುವುದು ಕೇಳ್ಕರರಾದಿಯವರ ಕರ್ತವ್ಯವಿತ್ತು. ಆದರೆ ಈ ಮರಾಠಾ ಧುರೀಣರು ತಮ್ಮ ಕಹಳೆಗೇನೇ ಶಬ್ದ ದೊಡ್ಡದೆಂದು ಅಂದು ಸಗರ್ವದಿಂದ ರಾಷ್ಟ್ರೀಯ ಅಖಂಡತೆಯನ್ನು ಅಲಕ್ಷಿಸಿ ಕೂತುಕೊಳ್ಳುವುದನ್ನು ನೋಡಿ ಯಾರಿಗೂ ಖೇದವಾಗದಿರದು.

ಕೇಳ್ಕರರಾದಿಯವರು ಒಂದೇ ಸವನೆ ಮಂತ್ರಿಪದವಿ ಸ್ವೀಕಾರಕ್ಕಾಗಿ ಹಠವಾಡುವುದನ್ನು ನೋಡಿದರೆ ಮಂತ್ರಿಪದವಿಗಳು ಕಾಲಡಿಯಲ್ಲಿ ಹೊರಳಾಡುತ್ತಿರುವಂತೆ ತೋರಬೇಕು, ಈ ಮಂತ್ರಿಪದವಿಗಳನ್ನು ಸರಕಾರವು ತನ್ನ ಇಷ್ಟದವರಿಗೆನೇ ಕೊಟ್ಟೀತಲ್ಲದೆ, ಶಕ್ತಿವಂತರೂ ದೇಶಹಿತವನ್ನು ಸಾಧಿಸಲು ಯೋಗ್ಯರಿರುವವರೂ ಆಗಿರುವವರಿಗೆ ಕೊಡುವಂತಿಲ್ಲ. ಹಾಗೆ ಕೇಳ್ಕರರು ತಮ್ಮ ಕಲ್ಪನಾ ದೃಷ್ಟಿಯಲ್ಲಿ ಆ ಮಂತ್ರಿಪದವಿಯ ಗೌರವಮಂದಿರವನ್ನೆ ಕಾಣುವರಾದರೆ, ಅವರನ್ನದರ ಸೌಭಾಗ್ಯಕ್ಕೇನೇ ಬಿಟ್ಟುಕೊಟ್ಟು ಕಾಂಗ್ರೆಸ್ಸು ತನ್ನ ಧ್ಯೇಯ ಸಾಧನೆಯ ಕಡೆಗೆ ಹೋಗಬೇಕಾಗಿದೆ.

ಈ ಮರಾಠಾ ದಂಗೆಯನ್ನು ಕಾಂಗ್ರೆಸ್ಸಿನ ಎಲ್ಲಾ ಹಿತವಾದಿಗಳೂ ಖಂಡಿಸದಿರರು. ವಿಚಾರವಂತರು ಯಾರೂ ಈ ರಿಸ್ಪೊನ್ಸಿವ್ ಕೊ-ಒಪರೇಟರರ ಸತರ್ಕತೆಯನ್ನು ಕಾಣುವುದಿಲ್ಲ. ಹೆಸರು ರಿಸ್ಪೊನ್ಸಿವ್ ಕೊ-ಒಪರೇಶನ್ ಎಂದು ಹಾಕಿ, ಸರಕಾರವು ಏನೊಂದು "ರಿಸ್ಪೊನ್ಸ"ನ್ನು ತೋರಿಸದಿದ್ದರೂ, ಈ ರಾಜತಂತ್ರಜ್ಞರು "ಕೊ-ಒಪರೇಟ್" ಮಾಡಬೇಕೆಂದು ವಕ್ತಾಯಪಡಿಸುವುದು. ರಿಸ್ಪೊನ್ಸಿವ್ ಕೊ-ಒಪರೇಶನ್ನಿನ ವೈಚಿತ್ರ್ಯ ವೈಶಿಷ್ಟ್ಯವೇ ಸರಿ ಪ್ರಾಯಶಃ ಮರಾಠಾ ಜನತೆಯು ತಮ್ಮನ್ನು ಅನುಸರಿಸುವುದೆಂದು ಅವರು ಭಾವಿಸಬಹುದು, ಪ್ರಾಂತಿಕ ಭಾವನೆಯಿಂದ ಮರಾಠರೂ ಇವರನ್ನು ಅನುಸರಿಸಬಹುದು, ಆದರೆ ಮುಂಬಾಯಿ ಕ್ರೊನಿಕಲ್ಲು ಹೇಳುವಂತೆ—

ಕಾಂಗ್ರೆಸ್ ಜನರ ಕರ್ತವ್ಯವು ಸ್ಪಷ್ಟವಿದೆ. ಅತ್ಯುತ್ತಮರೂ, ಯೋಗ್ಯರೂ ಆದವರೇ ಕಾಂಗ್ರೆಸ್ ಕಡೆಯಿಂದ ನೇಮಕ ಹೊಂದುವಂತೆಯೂ, ಸಹಾಯವನ್ನು ಹೊಂದುವಂತೆಯೂ, ಚುನಾವಣೆಯಲ್ಲಿ ಆರಿಸಲ್ಪಡುವಂತೆ ಸರ್ವತರದಲ್ಲಿಯೂ ಪ್ರಯತ್ನಗಳು ನಡೆಯುವಂತೆಯೂ ನೋಡಿ, ಪ್ರತಿ ಕೌನ್ಸಿಲಿನಲ್ಲಿ ಬಹುಮತವು ಸಿಕ್ಕುವಂತೆ ಅವರು ನೋಡತಕ್ಕದ್ದು. ಹಿಂದಿದ್ದಂತೆ ಈಗಲೂ, ಸ್ವರಾಜ್ಯಪಕ್ಷೀಯರಿಗೆ ಪ್ರತ್ಯೇಕ ವೈಶಿಷ್ಟ್ಯವಿದೆ, ಮತ್ತು ರಿಸ್ಪೊನ್ಸಿವ್ ಕೊ-ಒಪರೇಟರರೂ ಇತರರೂ ಲಿಬರಲ್ಲರಾಗಿಯೇ ಪರಿಗಣಿಸಲ್ಪಡುವರು. ಸ್ವರಾಜ್ಯಪಕ್ಷೀಯರು ರಿಸ್ಪೊನ್ಸಿವ್ ಕೊ-ಒಪರೇಟರರಂತೆಯೇ ಎಂದು ತೋರಿಸಲು ಮಾಡಿದ ಪ್ರಯತ್ನಗಳು ವ್ಯರ್ಥವಾದುವು. ಹಾಗೆಯೇ ಸಬರ್ಮತಿಯೊಡನೆ ಸ್ವರಾಜ್ಯಪಕ್ಷೀಯರು ಸುಧಾರಣಾ ಸರಕಾರದ ಕಡೆಗೆ ಒಲಿಯುವಷ್ಟು ಪರಿವರ್ತಿಸಿದೆವೆಂಬ ರಿಸ್ಪೊನ್ಸಿವ್ ಕೊ-ಒಪರೇಟರರ ಹೆಗ್ಗಳಿಕೆಯ ಭಾವನೆಯೂ ವ್ಯರ್ಥವಾಯಿತು.

ಅಂತೂ ರಾಜಿಯು ಮುರಿಯಿತು. ದೇಶದೊಳಗಿನ ರಾಜಕೀಯ ಪಕ್ಷಗಳ ಸಂಖ್ಯೆಯು ಕಡಿಮೆಯಾಯಿತೆಂಬ ಆ ಆತ್ಮ ಸಂತೋಷ ಕೂಡ ಭಾರತಿಗೆ ಇರುವುದು ಅಸಾಧ್ಯವಾಯಿತು. ಧುರೀಣ—ಧುರೀಣರೊಳಗಿನ ವಾಚಾಟದಲ್ಲಿಯೂ, ಪರಿಷತ್ತು—ಪರಿಷತ್ತುಗಳ ರಿಸೊಲ್ಯೂಶನ್ ರಾಶಿಗಳಲ್ಲಿಯೂ ದೇಶದ ರಾಜಕೀಯ ಜೀವನವು ಎಂದಿನಂತೆಯೇ ಪತಿತವಾಗುವುದು. ಅದರಲ್ಲಿಯೂ ಕೇಳ್ಕರರಂತಹ ಮರಾಠಾ ಪಕ್ಷೀಯರು ಪ್ರತಿರೋಧದ ಸ್ಥಾನವನ್ನು ವಹಿಸಿಕೊಂಡಿದೆಯೆನ್ನುವಾಗ ರಾಜಕೀಯ ಜೀವನದ ಕಾಠಿಣ್ಯವು ತನ್ನಷ್ಟಕ್ಕೆ ವಿದಿತವಾಗಲಿದೆ.

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಚೆನ್ನಾಗಿಯೇ ನಿರ್ಧರಿಸಿತು. ಮರಾಠಾ ಹಠ ಸಾಧನೆಗೆ ಕಾಂಗ್ರೆಸು ತನ್ನ ಸೂತ್ರಗಳನ್ನು ಬಲಿಯೀಯದೆ ಇದ್ದುದು ಉಚಿತವೇ ಆಯಿತು. ಇನ್ನು ಕಾಂಗ್ರೆಸು ತನ್ನ ಶಕ್ತಿಯ ಜನತೆಯು ತನ್ನ ಮೇಲೆ ತೋರಿಸುವ ಶ್ರದ್ಧೆಯ ಪರಿಮಾಣವನ್ನು ಈ ಚುನಾವಣೆಯಲ್ಲಿ ತೋರಿಸಲಿದೆ. ಜನತೆಯೂ ಅಲಸರಾಗಿ ಉಲ್ಲಾಸ್ಯದಿಂದಿರುವರಾದರೆ ಹಾಗಾದರೂ ಕಾಂಗ್ರೆಸು ತನ್ನ ಸೂತ್ರಗಳ ಸ್ಪಷ್ಟತೆಯನ್ನು ತೋರಿಸಿಕೊಡಬೇಕು. ಆತ್ಮ ಗೌರವದ ಕಾರ್ಯಕ್ರಮಕ್ಕೆ ಕಾಂಗ್ರೆಸನ್ನು ಜನರು ಅನುಮೋದಿಸಲಾರರಾದರೆ, ಉಳಿದ ಕೆಲಸಕ್ಕೆ ಉದಾರ ಮತವಾದಿಗಳು ಇರುವರು, ಆ ಮೂಲಕ ರಾಜಕೀಯ ಸಾಧನೆಗಳು ಸಾಧ್ಯವಾಗುವಷ್ಟು ಸಾಧಿಸಲ್ಪಡಬಹುದು.

ವಿದೇಶ ವರ್ತಮಾನ.

—ವಿಲಾಯತಿಗೆ ಹೋದ ಇಂದೊರ ಮಹಾರಾಜರು ಇಂಗ್ಲೆಂಡಿಗೆ ಹೋಗಿ ಅಲ್ಲಿ ತಾನು ಸಿಂಹಾಸನ ತ್ಯಾಗ ಮಾಡಿದುದರ ವಿಷಯ ಲೋರ್ಡ್ ಬರ್ಕನ್ ಹೆಡ್ಡರೊಡನೆ ವಿಚಾರಿಸುವರು. ಇವರ ಜವಾಹೀರುಗಳನ್ನು ಮಾರಲಿಕ್ಕಿರುವರೆಂದೂ ವಾರ್ತೆಯಿದೆ.

—ಪರ್ಶಿಯಾದೇಶದ ಹೊಸ ಶಹಾರವರ ಪಟ್ಟಾಭಿಷೇಕ ಮಹೋತ್ಸವವು ಎಪ್ರಿಲ್ ೨೫ರಲ್ಲಿ ಹಳೆ ಗುಲಿಸ್ತಾನ ಅರಮನೆಯ ಮ್ಯೂಸಿಯಮ್ ಹೋಲಿನಲ್ಲಿ ನಡಿಯಿತು. ಈ ಮಂದಿರದ ಒಂದು ಭಾಗದಲ್ಲಿ ಮಯೂರಾಸನವನ್ನು ಇಟ್ಟಿದ್ದರು. ಇವರ ಕೆಳಗಡೆಯಲ್ಲಿ ರಾಜಧ್ವಜವನ್ನು ಹಿಡಿದುಕೊಂಡ ಎಡಿಕೊಂಗರು ನಿಂತಿದ್ದರು. ಇವರಿಂದ ಸ್ವಲ್ಪ ದೂರ ಸದರಿ ಸಿಂಹಾಸನವನ್ನು ಇಟ್ಟಿದ್ದರು. ಸುಮಾರು ೩ ಮುಕ್ಕಾಲು ಗಂಟೆಗೆ ಯುವರಾಜನೂ ಮಂತ್ರಿ, ಸೇನಾಧಿಪತಿಗಳೂ ಟೆಹರಾನ್ ಕೋರ್ಟಿನ ಗವರ್ನರರೂ ಸೆಕ್ರೆಟರಿಗಳೂ ಈ ಮಂದಿರವನ್ನು ಪ್ರವೇಶಿಸಿದರು. ಮುಖ್ಯ ಪ್ರಧಾನಿಯು ಕೆಯನ್ ಕಿರೀಟವನ್ನೂ ರಾಜಸಭೆಯ ಮುಖ್ಯ ಮಂತ್ರಿಯು ಪಟ್ಟಾಭಿಷೇಕಕ್ಕಾಗಿ ತಯಾರಿಸಿದ ಪೆಹ್ಲ್ವಿ ಕಿರೀಟವನ್ನೂ ಯುದ್ಧ ಮಂತ್ರಿಯು ಜಹಾಂಗೀರ ಖಡ್ಗವನ್ನೂ ಟಪ್ಪಾಲ ಮತ್ತು ಟೆಲಿಗ್ರಾಫ್ ಇಲಾಖೆಯ ಮಂತ್ರಿಯು ಮುತ್ತಿನ ಕಿರೀಟವನ್ನೂ, ನ್ಯಾಯಮಂತ್ರಿಯು ರಾಜದಂಡವನ್ನೂ, ಇಂಜಿನಿಯರಿಂಗ ಇಲಾಖೆ ಮಂತ್ರಿಯು ದರಾಯನೂರವನ್ನೂ, ಒಳಪ್ರಾಂತ್ಯಗಳ ಮಂತ್ರಿಯು ಮೇಸ್ನ್ನೂ, ಕೋಶಾಧಿಕಾರಿ ಮಂತ್ರಿಯು ಶಹಾನ ಭಾವಚಿತ್ರವನ್ನೂ ೯ ಸೇನಾಧಿಪತಿಗಳು ಪ್ರಾಚೀನ ಕಾಲದ ಆಯುಧಗಳನ್ನೂ ಹಿಡಿದುಕೊಂಡಿದ್ದರು. ಇವರಲ್ಲಿ ಒಬ್ಬನು ನಾದಿರಶಹಾನ ಧನುಸ್ಸನ್ನು ಹಿಡಿದುಕೊಂಡಿದ್ದನು. ಯುವರಾಜನು ನಾದಿರ ಸಿಂಹಾಸನದ ಬಲಗಡೆಯಲ್ಲಿ ನಿಂತುಕೊಂಡನು ಮಂತ್ರಿಗಳೆಲ್ಲರೂ ಅರ್ಧಚಂದ್ರಾಕಾರದಲ್ಲಿ ಸ್ವಲ್ಪ ಕೆಳಗಡೆ ನಿಂತುಕೊಂಡರು. ಮಯೂರಾಸನದ ಬಲಗಡೆಯಲ್ಲಿ ಉಲೇಮರೂ, ಪಾದರಿಗಳೂ ನ್ಯಾಯಾಧಿಪತಿಗಳೂ, ದೊಡ್ಡ ಪ್ರಭುಗಳೂ, ದೊಡ್ಡ ಸಾಹುಕಾರರೂ ನಿಂತಿದ್ದರು. ಎಡಗಡೆಯಲ್ಲಿ ಅನ್ಯದೇಶದ ರಾಯಭಾರಿಗಳೂ, ಸ್ತ್ರೀಯರೂ, ಸೇನಾಧಿಪತಿಗಳೂ, ಪತ್ರಿಕೆಗಳ ಪ್ರತಿನಿಧಿಗಳೂ, ಅನ್ಯದೇಶಗಳ ಪ್ರಜೆಗಳೂ ನಿಂತಿದ್ದರು.

ಇವರೆಲ್ಲರೂ ನಿಂತುಕೊಂಡಿರುವಾಗ ೪ ಗಂಟೆಗೆ ಹೊಸ ಶಹಾರಾದ ರಿಜಾ ಶಾ. ಪೆಹ್ಲ್ವಿಯವರು ಪಟ್ಟಾಭಿಷೇಕಕ್ಕೆ ಯೋಗ್ಯವಾದ ಉಡುಪುಗಳನ್ನು ಧರಿಸಿಕೊಂಡು ರಾಜದೂತರೊಡನೆ ಬಂದರು. ಇವರು ಬಂದು ಮಯೂರಾಸನದ ಮೇಲೆ ಕೂತರು. ಮುಖ್ಯ ಉಲೆಮರು ಆಶೀರ್ವಾದವನ್ನು ಕೊಟ್ಟರು ಅನಂತರ ಕಿರೀಟವನ್ನು ಶಹಾರ ಕೈಯಲ್ಲಿ ಕೊಟ್ಟರು ಶಹಾರು ಅದನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡರು. ಅನಂತರ ರಾಜದಂಡವನ್ನು ಇತರ ರಾಜ ಬಿರುದಾವಳಿಗಳನ್ನು ಕೊಟ್ಟರು. ನಂತರ ೬ ಮಿನಿಟುಗಳ ವರೆಗೆ ಶಹಾರು ಒಂದು ಭಾಷಣವನ್ನು ಕೊಟ್ಟರು. ಅನಂತರ ಶಹಾರು ಯುವರಾಜರೊಡನೆ ಅರಮನೆಗೆ ತೆರಳಿದರು.

ಕೋರ್ಟು ಕಚೇರಿಗಳಿಗೆ ೩ ದಿವಸಗಳ ರಜೆಯು ಕೊಡಲ್ಪಟ್ಟಿದೆ. ಹೊಸ ಶಹಾರ ಹೆಸರಲ್ಲಿ ಪೆಹ್ಲ್ವಿ ವಾಯರ್‌ಲೆಸ್ ಸ್ಟೇಶನ್ ಎಂಬ ಹೊಸ ಸ್ಟೇಶನು ಕಟ್ಟಲ್ಪಡುವದು.

—ಇಂಡಿಯದ ಯಾರೋ ಒಬ್ಬ ರಾಜರು ಬಹಳ ಗುಟ್ಟಿನಿಂದ ಅನೇಕ ಜವಾಹೀರುಗಳನ್ನು ಲಂಡನಿನಲ್ಲಿ ವಿಕ್ರಯಿಸುತ್ತಿರುವರು. ಈಗಲೇ ೨೫೦-೦೦೦ ಪೌಂಡು ಬೆಲೆ ಬಾಳುವ ರತ್ನಗಳು ಮಾರಲ್ಪಟ್ಟಿವೆ. ಇನ್ನು ೫೦೦-೦೦೦ ಪೌಂಡು ಬೆಲೆ ಬಾಳುವ ರತ್ನಗಳು ಬೇಗನೇ ಲಂಡನಿಗೆ ಬಂದು ತಲಪುವವಂತೆ. ಒಟ್ಟಾರೆ ಒಂದು ಮಿಲಿಯ ಪೌಂಡು ಬೆಲೆ ಬಾಳುವ ರತ್ನಗಳು ಮಾರಲ್ಪಡುವವಂತೆ. ಗೋರ್ಡನ್ ನಾಥನ್ ಎಂಬ ರತ್ನ ವ್ಯಾಪಾರಿಯು ಇವುಗಳನ್ನು ಕೊಂಡುಕೊಳ್ಳುವನಂತೆ. ಇದರಲ್ಲಿ ರತ್ನಖಚಿತವಾದ ಒಂದು ಕಿರೀಟವು ಇದೆಯಂತೆ!

ಒಳದೇಶ ವರ್ತಮಾನ.

—ಅಮೇರಿಕದಿಂದ ಇಂಡಿಯದಲ್ಲಿ ಸಂಚರಿಸಲಿಕ್ಕೆ ಬಂದ ೬೫೦ ಮಂದಿ ಪ್ರಯಾಣಿಕರು ಎಪ್ರಿಲ್ ೧೬ಕ್ಕೆ ಮುಂಬಾಯಿಂದ ಅಮೇರಿಕಕ್ಕೆ ತೆರಳಿದರು. ಇವರಲ್ಲಿ ೧೫೦ ಮಂದಿ ಡಿಲ್ಲಿ, ಆಗ್ರಾ ಮುಂತಾದ ಉತ್ತರ ಹಿಂದೂದೇಶದ ಪ್ರದೇಶಗಳನ್ನು ಸಂಚರಿಸಿ ಹಿತ್ತಾಳೆಯ ಮತ್ತು ಚಿಂತದ ನಾನಾ ತರದ ಸಾಮಾನುಗಳನ್ನು ಕೊಂಡುಕೊಂಡಿರುವರು. ಅನೇಕ ಮಂದಿ ಹೆಂಗಸರು ಚಂತದ ಮಣಿಗಳ ಸರಗಳನ್ನು ಧರಿಸಿಕೊಂಡಿರುವರು.

—ಅಲ್ವಾರಿನ ಮಹಾರಾಜರು ಸಿಮ್ಲಾಕ್ಕೆ ಬಂದು ವೈಸರಾಯರಿಗೆ ಭೇಟಿಕೊಟ್ಟು ಅಲ್ಲಿಂದ ಬೇಗನೇ ವಿಲಾಯತಿಗೆ ತೆರಳುವರು. ಹಿಂದೂ ರಾಜರ ಹಣವೆಲ್ಲಾ ವಿಲಾಯತಿ ಪ್ರಯಾಣಕ್ಕೆ ಆಯಿತು!

—ಬೇಸಾಯದ ವಿಷಯ ತನಖಿ ಮಾಡಲಿಕ್ಕೆ ನೇಮಕ್ಕಿರಾದ ರೋಯಲ್ ಕಮಿಶನಿಗೆ ಇಂಡಿಯಾ ಆಫೀಸಿನ ಮಿ| ಫ್ರಾನ್ಸಿಸ್ ವಿಲಿಯಮ್ ಹೆಡ್ಸ್ಮಿತ್ ಮತ್ತು ಮಿ| ಜನಾರ್ಧನ ಆತ್ಮಾರಾಮ ಮದನ ಐ. ಸಿ. ಯಸ್. ಇವರಿಬ್ಬರನ್ನು ಸೆಕ್ರೆಟರಿಗಳಾಗಿ ನೇಮಕ್ಕರು ಮಾಡಿರುತ್ತಾರೆ. ಇಂಡಿಯದ ಪೋಸ್ಟಾಫೀಸಿನ ಇಲಾಖೆಯವರಾದ ಡೆವಿಡ್ ಕ್ಲಾರ್ಕ್‌ಸನ್ ಸಿ. ಐ ಇವರನ್ನು ಇಂಡಿಯಾ ಮತ್ತು ಪ್ರಾಂತಿಕ ಸರಕಾರಗಳ ಕಡೆಯ ಮೆಂಬರರಾಗಿ ನೇಮಿಸಿರುತ್ತಾರೆ.

—ಲೋಕಮಾನ್ಯ ಬಾಲಗಂಗಾಧರ ತಿಲಕರನ್ನು ದೂಷಿಸಿ ಬಡ್ ಮತ್ತು ಜವಾಲಕರ್ ಎಂಬವರು ಪದ್ಯಗಳನ್ನು ಬರೆದು ಪ್ರಕಟಿಸಿದಕ್ಕಾಗಿ ಲೋಕಮಾನ್ಯರ ಮಗಂದಿಯರು ಇವರಿಬ್ಬರ ಮೇಲೆ ಮಾನನಷ್ಟದ ವ್ಯಾಜ್ಯ ದಾಖಲು ಮಾಡಿದ್ದರು. ಪೂನದ ಸಿಟಿ ಮ್ಯಾಜಿಸ್ಟ್ರೇಟರು ಇವರಲ್ಲಿ ಪ್ರತಿ ಒಬ್ಬರಿಗೆ ೫೦೦ ರೂಪಾಯಿ ಜುಲುಮಾನೆ ಆ ಜುಲುಮಾನೆ ಕೊಡದಿದ್ದರೆ ೫-೫ ತಿಂಗಳ ಸಜೆಯನ್ನು ವಿಧಿಸಿದರು. ರಾವ್‌ಬಹದೂರ್ ಅಪ್ಟೆಯವರು ತಿಲಕರ ಕಡೆ ವಕೀಲರಾಗಿದ್ದರು.

—ಇಂಡಿಯದ ಅಸ್ಥಿರ ರಾಜರ ಸ್ಟೆಂಡಿಂಗ ಕಮಿಟಿಯ ಮೀಟಿಂಗ್ ಸಿಮ್ಲಾದಲ್ಲಿ ಮೇ ೨೬ಕ್ಕೆ ಜರಗುವುದು.

—ಮೇ ೭ನೇ ತಾರೀಕಿನಲ್ಲಿ ಸೇರುವ ಕೋರ್ಟ್ ಫಿಲ್ಮ್ ಇಂಡಿಯಾ ಬಿಲ್ಲಿನ ವಿಷಯ ಆಲೋಚಿಸುವ ಸಭೆಯ ಸ್ವಾಗತ ಕಮಿಟಿಗೆ ಎನ್. ಸಿ. ಕೇಳ್ಕರರು ಅಧ್ಯಕ್ಷರಾಗಿರುವರು.

—ಮದ್ರಾಸಿನ ಗವರ್ನರರಾಗಿದ್ದ ಲೋರ್ಡ್ ವಿಲಿಂಗ್ಡನರು ಕೆನಡಾ ದೇಶದ ಗವರ್ನರ ಜನರಲರಾಗಿ ನೇಮಕ ಹೊಂದಿರುವರೆಂದು ವಾರ್ತೆಯಿದೆ.

—೧೯೨೫ರಲ್ಲಿ ಬಂಗಾಳದ ಗವರ್ನರರು ಕಲ್ಕತ್ತದಲ್ಲಿ ಇಸ್ಲಾಮಿಯ ಕೋಲೆಜಿನ ಬುನಾದಿ ಕಲ್ಲನ್ನು ಹಾಕುವಾಗ ಬೆಂಗಾಲ ಸರಕಾರು ಮುಸಲ್ಮಾನ ಹುಡುಗರಿಗೆ ಸ್ಕೋಲರಶಿಪ್ ಕೊಡುವುದಕ್ಕಾಗಿ ೨೦,೦೦೦ ರೂಪಾಯಿ ಕೊಟ್ಟಿದ್ದರು. ಈ ಹಣವು ಸಾಕಾಗದೆ ಇದ್ದುದರಿಂದ ಇನ್ನು ೬ ವರ್ಷಗಳ ವರೆಗೆ ವರ್ಷಕ್ಕೆ ರೂ. ೧,೫೦೦ ಪ್ರಕಾರ ಕೊಡುತ್ತೇನೆಂದು ಈ ಫಂಡಿನಿಂದ ಸಿಕ್ಕುವ ಬಡ್ಡಿ ರೂ. ೩,೦೦೦ವನ್ನು ವಿಲಾಯತಿಗೆ ವಿದ್ಯೆ ಕಲಿಯಲಿಕ್ಕೆ ಹೋಗುವ ವಿದ್ಯಾರ್ಥಿಗಳಿಗೆ ಕೊಡಬೇಕೆಂದು ತಿಳಿಸಿರುವರು.

ದಕ್ಷಿಣ ಕನ್ನಡ.

ಮಂಜೇಶ್ವರ:—ಸಹಕಾರಿ ಎಡ್ಮಿನಿಸ್ಟ್ರೇಟಿವ್ ಇನ್ಸಪೆಕ್ಟರವರು ಬಂದು ಕೆಲವು ಸಂಘಗಳನ್ನು ತನಖಿ ನಡಿಸಿ ಪೂರಾ ಮುಗಿಸದೆ ಹೋದದ್ದು ಆಶ್ಚರ್ಯಕರವಾಗಿದೆ. ಅಸಿಸ್ಟಾಂಟ ರಿಜಿಸ್ಟ್ರಾರವರು ಖುದ್ದು ಬಂದು ಇಲ್ಲಿಯ ಎಲ್ಲಾ ಸಂಘಗಳನ್ನು ಒಮ್ಮೆ ಪುನಹಾ ತನಖಿ ನಡಿಸಲಾರರೇ? ಸಂಘಗಳು ನಿರ್ಜೀವವಾಗಿವೆ.

ಕೆಲವು ಮನಿಆರ್ಡರುಗಳನ್ನು ಫೋರ್ಜರಿ ಮಾಡಿದ ವಿಲ್ಲೇಜ್ ಪೋಸ್ಟಮೇನರ ಡಿಪಾರ್ಟಮೆಂಟಲ್ ತನಖಿಯು ಮುಗಿದುದಂತೆ. ಸದ್ಯದಲ್ಲಿ ಕೋರ್ಟಿಗೆ ಪ್ರವೇಶಿಸುವದಾಗಿ ವರ್ತಮಾನವಿದೆ.

ಶ್ರೀ ಮದನಂತೇಶ್ವರ ದೇವಸ್ಥಾನದ ಮೆನೇಜಿಂಗ್ ಟ್ರಸ್ಟಿಯವರು ಹ್ಯಾಗೂ ಹಪ್ತೆಗೊಂದಾವರ್ತಿ ಬರುವದು ಸಹಾ ಅಪರೂಪ. ಆದರೂ ಭತ್ತೆ ಹಣಕ್ಕೆ ಕಡಿಮೆ ಇಲ್ಲ. ಇದರ ಆಡಳಿತೆಯನ್ನು ಕಾರ್ಕೂನರ ಮೇಲೆ ಬಿಟ್ಟುಹೋಗುವದು ಯಾವ ಧೈರ್ಯವೊ ಆ ಮದನಂತೇಶ್ವರನೇ ಬಲ್ಲ.

ಬಂಟವಾಳ:—ಅಕ್ಷಯ ಸಂವತ್ಸರದಲ್ಲಿ ಖೂನಿ ನಂಬ್ರ ಇಲ್ಲವೆನ್ನುವಾಗ ಅಜ್ಜಿಬೆಟ್ಟಿನಿಂದ ಒಂದು ಹೆಂಗಸಿನ ಶ್ರವವು ಆಸ್ಪತ್ರೆಗೆ ಪೋಸ್ಟುಮಾರ್ಟೆಮಿನ ಬಗ್ಗೆ ಬಂತು. ಶ್ರವದ ಮೈತುಂಬಾ ಚೂರಿಯ ಘಾಯ್ಯಗಳು ಇತ್ತು. ಈ ಕೃತ್ಯ ಕಳ್ಳರಿಂದಾಯಿತಂತೆ!

ಪುಂಜಾಲಕಟ್ಟೆ:—ಇಲ್ಲಿಂದ ಕಾವಳಕಟ್ಟೆಗೆ ಹೋಗುವ ದಾರಿ ಮುಚ್ಚಿ ಎಂಬಲ್ಲಿ ಕಳ್ಳರ ಕಾಟವು ದಿನೇ ದಿನೇ ಅಧಿಕವಾಗುತ್ತಾ ಬರುತ್ತದೆ. ಎಪ್ರಿಲ್ ತಾ. ೨೭ನೇ ರಾತ್ರಿ ಮೂರು ಗಾಡಿಗಳಿಗೆ ಬಹಳವಾಗಿ ಉಪದ್ರಿಸಿದರೆಂದು ತಿಳಿದುಬರುತ್ತದೆ

ಚಂಡ್ರಿಮಾರು:—ಇದು ಬಂಟ್ವಾಳದಿಂದ ಒಂದೂವರೆ ಮೈಲು ದೂರದಲ್ಲಿರುವ ಊರು. ಇಲ್ಲಿ ರಾಜಾರಸ್ತೆಗೆ ಮಳೆಗಾಲದಲ್ಲಿ ಕೆಸರು ಇರುವಾಗ ಆ ಹೊಂಡಕ್ಕೆ ದೊಡ್ಡ ದೊಡ್ಡ ಕಲ್ಲು ಹಾಕಿದ್ದರು. ಈಗ ಸುತ್ತಮುತ್ತಲಿನ ಮಣ್ಣು ಪುಡಿಪುಡಿ ಆಗಿ ಕಲ್ಲು ಮೇಲಕ್ಕೆ ಬಂದು ಮನುಷ್ಯರಿಗೂ ಜಾನುವಾರುಗಳಿಗೂ ಆ ದಾರಿಯಿಂದ ನಡದುಹೋಗಲಿಕ್ಕೂ ಬಹಳ ತೊಂದರೆಯಾಗಿದೆ. ಮೋಟಾರುಗಳು ಅಲ್ಲಿ ಥಕ್ಕನೆ ನಿಂತುಬಿಡುತ್ತವೆ. ಇತ್ತಲಾಗೆ ಪುಂಜಾಲಕಟ್ಟೆ ಅತ್ತಕಡೆ ಸರ್ಕೀಟಿಗೆ ಹೋಗಿದ್ದ ಡಿಸ್ಟ್ರಿಕ್ಟ್ ಹೆಲ್ತ ಆಫೀಸರರು ಕೂಡಾ ಅಲ್ಲಿ ತಮ್ಮ ಮೋಟಾರು ಸ್ಟಾಕಲನ್ನು ಕೈಯಿಂದ ದೂಡಿ ತರಬೇಕಾಯಿತು. ಆದುದರಿಂದ ಈ ತರದ ಜನರಿಗೆ ಕಷ್ಟಕೊಡುವ ಮಾರ್ಗವನ್ನು ಸಮ್ಬಂಧಪಟ್ಟ ಇಲಾಖೆಯವರು ಬೇಗನೆ ದುರುಸ್ತಿಪಡಿಸಿಯಾರು ಎಂತ ನಂಬುತ್ತೇವೆ.

ಅಜ್ಜಿಬೆಟ್ಟು:—ಇಲ್ಲಿ ಒಂದು ಮನೆಯಲ್ಲಿ ಜೈನಜಾತಿಯವರ ಒಂದು ವಿಧವೆ ಹೆಂಗಸನ್ನು ರಾತ್ರಿಯಲ್ಲಿ ಮಲಗಿರುವ ಸಮಯ ಯಾರೊ ದುಸ್ಸಾನರು ಬಂದು ಅವಳ ಮೈತುಂಬಾ ಚೂರಿಯ ಘಾಯಪಡಿಸಿ ಅವಳನ್ನು ಕೊಂದು ಮನೆಯಲ್ಲಿರುವ ಸುಮಾರು ಐನೂರು ರೂಪಾಯಿ ಬಾಳುವ ನಗನಾಣ್ಯಗಳನ್ನು ಕದ್ದೊಯಿದರು. ಬಂಟ್ವಾಳ ಸಬ್ ಇನ್ಸಪೆಕ್ಟರರು ಇಲ್ಲಿಗೆ ಬಂದು ತನಿಖೆ ನಡಿಸುತ್ತಿರುವರು.

ಫರಂಗಿಪೇಟೆ:—ಇಲ್ಲಿಯ ಫರಂಗಿಪೇಟೆ ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವ ಮತ್ತು ಶ್ರೀರಾಮ ಹಾಯರ್ ಎಲಿಮೆಂಟರಿ ಶಾಲೆಯ ನವಮಿ ವರ್ಧಂತಿ ಉತ್ಸವವು ತಾ. ೨೧-೪-'೨೬ನೇ ಬುಧವಾರ ರಾಮನವಮಿ ದಿನ ಬಹಳ ವಿಜೃಂಭಣೆಯಿಂದ ನಡೆಯಿತು.

ಬೆಳಿಗ್ಗೆ ಶಾಲಾ ವಿದ್ಯಾರ್ಥಿಗಳಿಗೂ ಸಂಘದ ಮೆಂಬರರಿಗೂ ಉಪಹಾರ ಕೊಡಲ್ಪಟ್ಟಿತು. ಸಾಯಂಕಾಲ ಶ್ರೀಯುತ ಎಮ್. ಮಾಧವರಾವ್ ಹ್ಯಾಕೋರ್ಟು ವಕೀಲ ಇವರ ಅಧ್ಯಕ್ಷತೆಯಲ್ಲಿ ಸಭಾಕಾರ್ಯವು ಪ್ರಾರಂಭವಾಯಿತು.

ಶಾಲಾ ಪ್ರಾರ್ಥನೆಯಾದ ತರುವಾಯ ಹಳೇ ವಿದ್ಯಾರ್ಥಿಯಾದ ಎ. ಕೃಷ್ಣ ಶೆಣೈಯವರು ಶಾಲಾ ಹಿತವನ್ನು ಬಯಸಿ ಚಲೋ ಉಪನ್ಯಾಸ ಓದಿದರು. ಹೆಡ್ ಮಾಸ್ತರರಾದ ಎ. ರಾಮಚಂದ್ರ ಹೆಗ್ಡೆಯವರು ಶಾಲಾ ರಿಪೋರ್ಟನ್ನು ಓದಿದರು. ನಂತರ ಮಾನ್ಯ ಅಧ್ಯಕ್ಷರಿಂದ ಇನಾಮುಗಳು ಹಂಚೋಣಾದವು. ಶಾಲಾ ಹಿತೈಷಿಗಳಲ್ಲಿ ಒಬ್ಬರಾದ ಕೆನರಾ ಹ್ಯಾಸ್ಕೂಲ್ ಉಪಾಧ್ಯಾಯ ರಾ| ಕೆ. ಪದ್ಮನಾಭ ಕಿಣಿಯವರು ಈಗಿನ ವಿದ್ಯಾಭ್ಯಾಸಕ್ಕೆ ಅನುಕೂಲವಾದ ಬುದ್ಧಿವಾದದಿಂದೊಡಗೂಡಿದ ಮಾತುಗಳಿಂದ ಶಾಲಾಹಿತವನ್ನು ಬಯಸಿದರು. ತರುವಾಯ ಅಧ್ಯಕ್ಷರು ತನ್ನ ಸರಸವಾದ ಮಾತುಗಳಿಂದ ಶಾಲಾಹಿತವನ್ನು ಬಯಸಿದರು. ತನ್ನ ಸರಸವಾದ ಮಾತುಗಳಿಂದ ಶಾಲೆಯಲ್ಲಿ ನಡೆಯುವ ವಿವಿಧ ಚಟುವಟಿಕೆಗಳನ್ನು ಕುರಿತು ಹೊಗಳಿ, ತಾನು ಈ ಶಾಲೆಯಲ್ಲಿ, ಹಿಂದುಗಳೂ ಮಹಮ್ಮದೀಯರೂ ಭ್ರಾತೃಭಾವದಿಂದ ನಡಿಯುವುದನ್ನು ಕಂಡು ಆಶ್ಚರ್ಯಪಡುತ್ತೇನೆಂದೂ ಮುಂದೆ ಇದೇ ಐಕ್ಯವು ನಡಿಯುತ್ತಾ ಇತರ ಶಾಲೆಗಳಿಗೂ ಇದು ಮಾದರಿಯಾಗಿರಬೇಕೆಂದೂ ಒತ್ತಿಹೇಳಿದರು. ರಾ| ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರು ಇತರ ಸಂಸ್ಥೆಗಳಿಗೆ ಸಹಾಯ ಮಾಡಿದ್ದರೆಂತಲೂ ಈ ಶಾಲೆಯ ಕಡೆ ಇಷ್ಟೊಂದು ಪ್ರೀತಿ ತೋರಿಸಿದ್ದು ತುಂಬಾ ಸಂತೋಷಕರವೆಂದೂ ಮುಂದೆ ಇತರ ಗ್ರಾಮಾಭಿವೃದ್ಧಿಯ ಕಡೆಗೆ ಈ ಮಹಾನುಭಾವರ ದೃಷ್ಟಾಂತವನ್ನು ತೆಗೆದುಕೊಳ್ಳಬೇಕೆಂದೂ ಇತ್ಯಾದಿ ಕಾಲೋಚಿತ ಭಾಷಣ ಮಾಡಿದರು.

ನಂತರ ಇದೇ ಶಾಲೆಯ ಅಧ್ಯಾಪಕ ರಾ| ಎಸ್. ಸುಬ್ಬರಾಯರಿಂದ ರಚಿಸಲ್ಪಟ್ಟ "ಕಬೀರದಾಸ" ಎಂಬ ನಾಟಕದ ಎರಡು ದರ್ಶಗಳನ್ನು ಶಾಲಾ ವಿದ್ಯಾರ್ಥಿಗಳು ಬಹಳ ಉತ್ತಮ ತರಗತಿಯಲ್ಲಿ ಆಡಿತೋರಿಸಿದರು. ಅಧ್ಯಕ್ಷರು "ಈ ತರದ ನಾಟಕವು ಇಂಥಾ ಹಳ್ಳಿಯಲ್ಲಿ ಆದದ್ದೇ ತನಗೆ ಆಶ್ಚರ್ಯವನ್ನುಂಟುಮಾಡಿದೆ, ಆದ್ದರಿಂದ ಈ ನಾಟಕವನ್ನು ರಜಾಸಮಯದಲ್ಲಿ ಟಿಕೇಟು ಇಟ್ಟು ಆಡಬೇಕು" ಎಂದೂ ಹೆಡ್ ಮಾಸ್ತರರನ್ನೂ ಸಂಘದ ಮೆಂಬರರನ್ನೂ ಅಪೇಕ್ಷಿಸಿದರು.

ನಂತರ ಸಂಘದ ಮೆಂಬರರಾದ ರಾ| ಎ. ಗೋವಿಂದನಾಯರು (ಪಟೇಲು) ಬಂದ ಅತಿಥಿಗಳಿಗೆ ತನ್ನ ಕೃತಜ್ಞತಾ ವಂದನೆಗಳನ್ನು ಅರ್ಪಿಸಿದರು.

ಮಂಗಳೂರಿನ ಅನೇಕ ಮಂದಿ ಸಹಜೀಯರ ಅಪೇಕ್ಷೆಯಂತೆ ಈ ನಾಟಕವನ್ನು ಮತ್ತು "ಪತಿವ್ರತಾಪ್ರಭಾವ" ಎಂಬ ಇನ್ನೊಂದು ಹೊಸ ನಾಟಕವನ್ನು "ಶಾಲಾ ಸೇವಾ ಸಮಿತಿಯವರು" ರಜಾ ಸಮಯದಲ್ಲಿ ಆಡಿತೋರಿಸುವರು.

ಎಲ್ಲರೂ ಶಾಲೆಯ ಅಭಿವೃದ್ಧಿಯ ಕಡೆಗೆ ದೃಷ್ಟಿಯನ್ನಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮಂಗಳೂರು.

ಈ ತಿಂಗಳ ತಾ. ೧೫ನೇ ಶನಿವಾರ ದಕ್ಷಿಣ ಕನ್ನಡ ಜಿಲ್ಲಾ ಡಿಸ್ಟ್ರಿಕ್ಟ ಬೋರ್ಡಿಗೆ ವೈಸ್‌ಪ್ರೆಸಿಡೆಂಟರನ್ನು ಚುನಾಯಿಸುವುದಕ್ಕಾಗಿ ಒಂದು ವಿಶೇಷ ಸಭೆಯು ಕಲೆಕ್ಟರರ ಆಫೀಸಿನಲ್ಲಿ ಮಧ್ಯಾಹ್ನ ೨-೩೦ ಘಂಟೆಗೆ ನಡೆಯಲಿರುವುದು.

ಈ ತಿಂಗಳ ತಾ. ೧೮ನೇ ಮಂಗಳವಾರ ಮಂಗಳೂರು ತಾಲೂಕು ಬೋರ್ಡಿನ ಜನರಲ್ ಮೀಟಿಂಗು ತಾಲೂಕು ಬೋರ್ಡು ಆಫೀಸಿನಲ್ಲಿ ಮಧ್ಯಾಹ್ನ ಘಂಟೆ ೩ಕ್ಕೆ ಜರಗಲಿರುವುದು.

ಈಗ ಕೆಲವು ವರುಷಗಳಿಂದ ಬಡರೋಗಿಗಳ ಉಪಯೋಗಾರ್ಥವಾಗಿ ಸ್ಥಾಪಿಸಿ ಪ್ರಖ್ಯಾತಕ್ಕೆ ಬಂದ "ದಿ ಫ್ಲವರ್ ಸರ್ವಿಸ್ ಲೀಗ್" ಎಂಬ ಸಂಸ್ಥೆಯ ಐದನೇ ವಾರ್ಷಿಕೋತ್ಸವವು ಮ| ರಾ| ವಕೀಲ್ ಅಲ್ಬನ್ ಮಸ್ಕರೇಜರ ಅಧ್ಯಕ್ಷಸ್ಥಾನದಲ್ಲಿ ಇದೇ ತಾ. ೨ರಲ್ಲಿ ಬಿಜೈಯಲ್ಲಿ ಬಹಳ ಸಂಭ್ರಮದಿಂದ ಜರಗಿತು. ಸುಮಾರು ೮೦೦ ಮಂದಿ ಪ್ರೋತ್ಸಾಹಕರೂ, ಔಷಧಿ ಪಡೆಯುವವರೂ ಸಭೆ ಕೂಡಿದ್ದರು ಎಂದೊಂದು ಬಾತ್ಮಿ.

ವಿವಿಧ ವಿಷಯಗಳು.

೧೯೫೦ನೇ ಇಸವಿಯಲ್ಲಿ ಭೂಲೋಕದ ಸ್ಥಿತಿಯು ಹೇಗಿರುವುದು?

ಹತ್ತಿರವಿರುವ ಒಂದು ತಪ್ಪಲನ್ನು ನೋಡುವುದಕ್ಕಿಂತಲೂ ದೂರದಲ್ಲಿರುವ ಒಂದು ಪರ್ವತವನ್ನು ನೋಡುವುದು ಸುಲಭ. ಇನ್ನು ಮುಂದಕ್ಕೆ ಯಾವ ತರದ ಸುಖವು ನಮಗೆ ಸಿಕ್ಕೀತು ಎಂದು ನಾವು ಸಾಧಿಸುತ್ತೇವೆ. ಆದರೆ ಕಾಲದ ಮಂಜು ತಪ್ಪಲುಗಳನ್ನು ಮುಚ್ಚಿಕೊಂಡಿದ್ದು ದಿಗಂತದಲ್ಲಿ ದೂರದಿಂದ ಕಾಣುವ ಎತ್ತರವಾದ ಶಿಖರಗಳು ಕಾಣಬರುತ್ತವೆ.

ಇನ್ನು ಮುಂದೆ ಬರಲಿಕ್ಕಿರುವ ಹಿಮದ ಯುಗದ ಕಾಲವನ್ನಾದರೂ ಗಣಿಸಬಹುದು. ಆದರೆ ೧೯೫೦ನೇ ಇಸವಿಯಲ್ಲಿ ಪೆರಿಸ್ ಪಟ್ಟಣದ ಫೆಶನ್ ಯಾವ ರೀತಿಯಲ್ಲಿದ್ದೀತೆಂದು ನಿಶ್ಚಯಿಸುವುದು ಅಸಾಧ್ಯವಾದ ಕೆಲಸವಾಗಿದೆ.

ಸಾಧಾರಣ ೨೦ ವರುಷಗಳಲ್ಲಿ ನಮಗೆ ಮೋಟರ್‌ಕಾರುಗಳೂ, ವಿಮಾನಗಳೂ, ಎಣ್ಣೆಯ ಬಲದಿಂದ ನಡಿಯುವ ಹಡಗಗಳೂ ನಮಗೆ ಸಿಕ್ಕಿದವು. ಇನ್ನು ಮುಂದಿನ ಜನಾಂಗದವರು ಎಂಥಾ ಆಶ್ಚರ್ಯಕರವಾದ ಯಂತ್ರಸಾಧನೆಗಳನ್ನು ಉಂಟುಮಾಡಲಿಕ್ಕಿರುವರೋ ನೋಡಲಿಕ್ಕಿದೆ.

ಎಲ್ಲಾ ವಾಹನಗಳ ವೇಗವು ಹೆಚ್ಚಿಚ್ಚಾಗುತ್ತಾ ಬರುತ್ತಿದೆ. ಒಂದು ಗಂಟೆಗೆ ೨೦೦ ಮೈಲುಗಳ ವೇಗವು ಈಗ ನಮಗೆ ಬಹಳ ಕಡಿಮೆ ಎಂದು ಕಾಣುತ್ತದೆ. ಇನ್ನು ವೈಮಾನಿಕರು ಮೋಡಗಳೂ, ಮಂಜೂ ಮುಂತಾದ ಯಾವ ತೊಡಕುಗಳೂ ಇಲ್ಲದೆ ಇದ್ದು, ಸೂರ್ಯನು ಸರಿಯಾಗಿ ಪೂರ್ಣತೇಜೋಬಲದಿಂದ ಪ್ರಕಾಶಿಸುವನೊ, ಎಲ್ಲಿ ಆಕಾಶವು ಕಪ್ಪಾಗಿ ಕಂಡು ಬರುವುದೊ, ಎಲ್ಲಿ ನಕ್ಷತ್ರಗಳು ವಜ್ರದ ಹರಳುಗಳಂತೆ ಮಿಂಚುವದನ್ನು ಕಾಣಬಹುದೋ ಅಂಥಾ ೬ ಮೈಲು ಎತ್ತರ ಪ್ರದೇಶದಿಂದ, ವಿಮಾನಗಳನ್ನು ನಡಿಸಿಕೊಂಡು ತಾವು ನಿಶ್ಚಯಿಸಿದ ಸ್ಥಳಕ್ಕೆ ಹೋಗುವರೋ ಆ ಕಾಲದಲ್ಲಿ ಗಂಟೆಗೆ ಈಗಿರುವ ೨೦೦ ಮೈಲುಗಳ ವೇಗವು ಏನೂ ವಿಶೇಷವಾಗಿ ಕಂಡು ಬರಲಿಕ್ಕಿಲ್ಲ.

೧೯೫೦ನೇ ಇಸವಿಯಲ್ಲಿ ಭೂಮಿಯ ಮೇಲೆ ಈಗಿರುವುದಕ್ಕಿಂತಲೂ ಹೆಚ್ಚು ಪ್ರಕಾಶವು ಬೀಳುವುದು. ೧೯೦೦ನೇ ಇಸವಿಯಿಂದ ಆದ ಅಭಿವೃದ್ಧಿಯನ್ನು ವಿಚಾರಿಸಿ ನೋಡೋಣ. ಆ ಸಮಯದಲ್ಲಿ ಮನೆಗಳಲ್ಲಿಯೂ ನಾಟಕ ಶಾಲೆಗಳಲ್ಲಿಯೂ ಕಾರ್ಬನ್ ಗೇಸಿನ ದೀಪಗಳು ಇದ್ದವು. ನಂತರ ಗೇಸ್ ತುಂಬಿದ್ದ ದೀಪಗಳು ಉಂಟಾದವು ಇದಕ್ಕೆ ೨೦೦ ಮೇಣದ ಬತ್ತಿಗಳ ಶಕ್ತಿ ಇತ್ತು. ಇದರಿಂದ ೬ರಷ್ಟು ಲಾಭವು ಸಿಕ್ಕಿದಂತಾಯಿತು. ಆದರೆ ಮಿಂಚುಹುಳಗಳಲ್ಲಿ ಕಾಣುವ ವಿದ್ಯುಚ್ಛಕ್ತಿಯು ಈ ದೀಪದ ಶಕ್ತಿಗಿಂತಲೂ ಹೆಚ್ಚಾಗಿಯದೆ. ಅಷ್ಟು ಶಕ್ತಿಯು ಈಗಿನ ಇಲೆಕ್ಟ್ರಿಕ್ ದೀಪಗಳಿಗೆ ಬರಬೇಕಾದರೆ ಇನ್ನು ೨೫ ಪಾಲಷ್ಟು ಹೆಚ್ಚಿಸಬೇಕಾಗುವುದು. ಆದರೆ ಶಕ್ತಿಯನ್ನು ಉಂಟುಮಾಡಲೂ ನಾಶಮಾಡಲೂ ಸಾಧ್ಯವಿಲ್ಲ. ಇದರ ರೂಪವನ್ನು ಬದಲಾಯಿಸಬಹುದು. ಈಗ ನಾವು ೨ ಆಣೆ ಬೆಲೆಬಾಳುವ ಬೆಳಕಿಗೆ ೨ ರೂಪಾಯಿ ಕೊಡುತ್ತೇವೆ. ೧೯೫೦ನೇ ಇಸವಿಯಲ್ಲಿರುವ ಇಂಜಿನಿಯರರು ೨ ಆಣೆಯ ಬೆಳಕನ್ನು ೨ ಆಣೆಗೆ ಕೊಡಲಿಕ್ಕೆ ಶಕ್ತಿಯುಳ್ಳವರಾಗುವರು.

ಆ ಸಮಯದಲ್ಲಿ ನಮ್ಮ ರಾತ್ರಿಗಳು ಇನ್ನೂ ಪ್ರಕಾಶವುಳ್ಳವುಗಳಾಗುವವು. ಆಗಿನ ಕಾಲದ ಬೆಳಕು ನಮ್ಮ ಕಣ್ಣುಗಳಿಗೆ ಹಿತಕರವಾದದ್ದಾಗಿರುವದು. ಈಗಲೇ 'ನಿಯೋನಿನ' ಕೆಂಪು ಪ್ರಕಾಶವನ್ನು ಪಾದರಸದ ಉಗಿಯ ಹಸುರು ಪ್ರಕಾಶವನ್ನೂ ಕೂಡಿಸಿ ಕೃತಕ ನಮೂನೆಯ ಸೂರ್ಯ ಪ್ರಕಾಶವನ್ನು ಉಂಟುಮಾಡಲಿಕ್ಕಾಗುವದು. ಮುಂದಿನ ಕಾಲದಲ್ಲಿ ಬಹಳ ಸುಲಭ ರೀತಿಯಿಂದ ಹಗಲಿನಲ್ಲಿರುವ ಸೂರ್ಯಪ್ರಕಾಶದ ಬೆಳಕೇ ರಾತ್ರಿಯಲ್ಲಿಯೂ ಸಿಕ್ಕುವ ನಮೂನೆಯ ದೀಪಗಳು ಉಂಟಾಗುವವು.

ಭೂಲೋಕವೇ ಒಂದು ನಾಟಕ ಶಾಲೆಯಾಗುವದು.

ಈಗಲೇ ಒಂದು ಕಡೆಯಲ್ಲಿ ಕೂತರೆ ಬಹಳ ದೂರದಲ್ಲಿ ಹಾಡುವ ಗಾಯನವು ಕೇಳಿಸುವ ನಮೂನೆಯ ಯಂತ್ರಸಾಧನೆಗಳು ಉಂಟಾಗಿವೆ. ಇನ್ನು ನಾಟಕ ಶಾಲೆಯಲ್ಲಿ ಹಾಡುವ ಹಾಡುಗಳನ್ನೂ ನಾಟಕವನ್ನೂ ನಾಟಕ ಶಾಲೆಗೆ ಹೋಗದೆ ತಮ್ಮ ಮನೆಗಳಲ್ಲಿಯೇ ಕೂತು ನೋಡುವ ನಮೂನೆಯ ಯಂತ್ರಸಾಧನೆಗಳು ಉಂಟಾಗುವವು. ಇಡೀ ಭೂಲೋಕದಲ್ಲಿಯೇ ಗಾಯನಗಳೂ, ಭಾಷಣಗಳೂ ಕೇಳಿಸುವಷ್ಟು ಶಕ್ತಿಯುಳ್ಳ ಒಂದು ಯಂತ್ರಸಾಧನೆಯನ್ನು ಉಂಟುಮಾಡಿದರೆ ಏನೂ ಕಷ್ಟಗಳಿಲ್ಲದೆ ಭಾಷಣಗಳನ್ನೂ ಗಾಯನವನ್ನೂ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ಕೂತು ಕೇಳಬಹುದು. ಆ ಸಮಯದಲ್ಲಿ ಮನುಷ್ಯ ಜಾತಿಗೆ ಇನ್ನು ೧೦ ಸಾವಿರ ನಾಲಿಗೆಗಳೂ, ೧೦ ಮಿಲಿಯ ಕಿವಿಗಳೂ ಹೆಚ್ಚಿಗೆ ದೇವರು ಕೊಟ್ಟಂತಾಗುವುದು. ಆಗ ಕಿವಿಗಳಿಗೆ ಭೂಲೋಕದ ಯಾವ ಭಾಗದಲ್ಲಿ ಉಂಟಾದ ಸ್ವರವನ್ನೂ ಕೇಳುವ ಶಕ್ತಿಯು ಬರುವದು.

ತಿಂಗಳಿಗೆ ಅಪಾರವಾದ ಈ ಶಕ್ತಿಯು ಬರುವಾಗ ಕಣ್ಣುಗಳಿಗೂ ಭೂಲೋಕದ ಪ್ರತಿ ಒಂದು ಭಾಗದಲ್ಲಿಯೂ ಆಗುವ ಕೆಲಸಗಳನ್ನು ನೋಡುವ ಶಕ್ತಿಯು ಬರುವದು. ಈಗ ಇಂಗ್ಲೆಂಡ, ಫ್ರಾನ್ಸ ಮತ್ತು ಅಮೇರಿಕಾ ದೇಶಗಳಲ್ಲಿ ಇವುಗಳ ಕೆಲಸವು ಸುರುವಾಗಿದೆ. ಇನ್ನೂ ಬಾಲ್ಯಾವಸ್ಥೆಯಲ್ಲಿದೆ.

∴ ∴ ∴

೨೦೦೦ನೇ ಇಸವಿಯಲ್ಲಿ ವೈದ್ಯರ ಅಗತ್ಯವಿಲ್ಲ.

ವೈದ್ಯರೂ, ದಾಕ್ತಾರರೂ ಎಂಬವರು ಏನೂ ಪ್ರಯೋಜನಕ್ಕೆ ಬೀಳಲಾರರು. ಎಲ್ಲಾ ಶಾಲೆಗಳಲ್ಲಿಯೂ ಆರೋಗ್ಯ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನಿಗೆ ಕಲಿಸುತ್ತಾ, ಬಂದರೆ ಪ್ರತಿ ಒಂದು ರೋಗಕ್ಕೂ ಇಂಥಾದ್ದೇ ಮದ್ದನ್ನು ಕೊಡಬೇಕೆಂದು ಪ್ರತಿಯೊಬ್ಬರಿಗೆ ಗೊತ್ತಾದಾಗ ಪ್ರತಿ ಒಂದು ರೋಗದ ಲಕ್ಷಣಗಳು ಹೀಗೆಯೇ ಇವೆ ಎಂದು ಪ್ರತಿ ಒಬ್ಬ ಪ್ರಾಯಸ್ಥನಿಗೂ ತಿಳಿಯುವಾಗ ವೈದ್ಯರನ್ನೂ, ದಾಕ್ತಾರರನ್ನೂ ಯಾರೂ ಕರಿಯಲಿಕ್ಕಿಲ್ಲ. ವೈದ್ಯವು ಮರಣಹೊಂದಿದರೂ ಶಸ್ತ್ರ ಚಿಕಿತ್ಸೆಯು ಮರಣಹೊಂದಲಾರದು. ಪ್ರತಿಯೊಬ್ಬನಿಗೂ ಶಸ್ತ್ರವಿದ್ಯೆಯನ್ನು ಕಲಿಯಲು ಸಾಧ್ಯವಾಗಲಿಕ್ಕಿಲ್ಲ.

ಒಟ್ಟಾರೆ ಹೇಳುವುದಾದರೆ ೧೯೫೦ನೇ ಇಸವಿಯಲ್ಲಿ ಎಲ್ಲಾ ತರದ ಸುಖಸಂತೋಷಗಳು ಹೆಚ್ಚಾಗುವವು.

∴ ∴ ∴

ಕೂದಲು ಬಾಚುವಾಗ ಹಿಡಿದ ಬೆಂಕಿ.

ಫ್ರಾನ್ಸದೇಶದ ಮುಖ್ಯಪಟ್ಟಣವಾದ ಪೆರಿಸ್ ಪಟ್ಟಣದಲ್ಲಿ ೧೭ ವರುಷ ಪ್ರಾಯದ ಒಬ್ಬ ಹುಡುಗಿಯ ತಲೆಯನ್ನು ಒಬ್ಬ ತಲೆ ಬಾಚುವವಳು ಬಾಚುವಾಗ ಅದಕ್ಕೆ "ಇಥರೊತಿ" ಎಂಬ ಪದಾರ್ಥವನ್ನು ಹಚ್ಚಿ ಬಾಚಿದಳು. ಆದರೆ ಬಾಚುವ ಮುಂಚೆ ಕೂದಲನ್ನು ಚೆನ್ನಾಗಿ ತಿಕ್ಕುವಾಗ ಕೂದಲಿಗೆ ಬೆಂಕಿ ಹಿಡಿಯಿತು. ಕೂಡಲೆ ಕೂದಲು ಬಾಚುವವಳು ಕಂಬಳಿಗಳನ್ನು ತಲೆಗೆ ಸುತ್ತಿ ಬೆಂಕಿಯನ್ನು ನೊಂದಿಸಲಿಕ್ಕೆ ಸಾಧಿಸಿದಳು. ಆದರೆ ಬೆಂಕಿಯ ಸೆಕೆಯಿಂದ ಹುಡುಗಿಯು ಎರಡು ದಿವಸಗಳಲ್ಲಿ ಮರಣ ಹೊಂದಿದಳು.

ಸರಕಾರದವರು ಈ ಹುಡುಗಿಯ ತಂದೆಗೆ ೮೦೦ ಪೌಂಡುಗಳನ್ನು ಹುಡುಗಿಯು ಸತ್ತದ್ದಕ್ಕಾಗಿ ಪರಿಹಾರ ದ್ರವ್ಯವನ್ನು ಕೊಡಿಸಿದರು. ಅದಲ್ಲದೆ ಇಥರಿನ ಯಾವದೊಂದು ವಸ್ತುವನ್ನು ಉಪಯೋಗಿಸುವಾಗಲೂ ಗಾಳಿಯು ಇಲ್ಲದಂಥಾ ಸ್ಥಳದಲ್ಲಿ ಉಪಯೋಗಿಸಬೇಕೆಂದು ತಿಳಿಸಿರುವರು.

ಪೆರಿಸ್ ಪಟ್ಟಣದಲ್ಲಿ ಗಂಡಸರ ತಲೆಯ ಕೂದಲು ಕತ್ತರಿಸಿ ಸರಿಪಡಿಸುವ 'ಹೆಯರ್ ಡ್ರೆಸಿಂಗ್ ಸೆಲೂನು'ಗಳು ಇರುವಂತೆ ಹೆಂಗಸರ ಕೂದಲನ್ನು ಬಾಚಿ ಸರಿಪಡಿಸುವ ಸೆಲೂನುಗಳು ಇವೆ. ಇಂಡಿಯಕ್ಕೆ ಇವು ಇನ್ನೂ ಬರಲಿಲ್ಲ.

∴ ∴ ∴

ಹೆಂಡತಿಯನ್ನು ಮಾರುವುದು!

ಬಂಗಾಳದ ದಿನಾಜಪುರ ಎಂಬ ಊರಿನ ಸೆಶ್ಶನ ಕೋರ್ಟಿನಲ್ಲಿ ಒಂದು ವಿಚಿತ್ರತರದ ನಂಬ್ರವು ನಡಿಯುತ್ತದೆ.

ವಸಂತ ಕುಮಾರನೆಂಬವನು ತನ್ನ ಎಳೆಪ್ರಾಯದ ಹೆಂಡತಿಯಾದ ಲಕ್ಷ್ಮಿಯನ್ನು ಕರಕೊಂಡು ದಿನಾಜಪುರಕ್ಕೆ ಬಂದನು. ಅಲ್ಲಿ ಸುರೇಂದ್ರನೆಂಬವನು ಅವಳನ್ನು ೧೫೦ ರೂಪಾಯಿಗೆ ಕೊಂಡುಕೊಳ್ಳಲಿಕ್ಕೆ ಒಪ್ಪಿದನು. ಆದ್ದರಿಂದ ವಸಂತನೂ, ಲಕ್ಷ್ಮಿಯೂ, ಸುರೇಂದ್ರನೂ ಒಬ್ಬ ಎಲೆಮಾರುವವಳ ಅಂಗಡಿಗೆ ಹೋಗಿ ಅವಳನ್ನು ಪುಸಲಾಯಿಸಿದರು. ಲಕ್ಷ್ಮಿಯು ಗಂಡನನ್ನು ಬಿಟ್ಟಿರಲಿಕ್ಕೆ ಒಪ್ಪಲಿಲ್ಲ. ಗಂಡನು ಪತ್ತಾಯಪಡಿಸಿದನು. ಲಕ್ಷ್ಮಿಯು ಮನೆಯಿಂದ ಓಡಿಹೋಗಿ ಪೋಲೀಸಿನವರಿಗೆ ತಿಳಿಸಿದಳು. ಈಗ ಎಲ್ಲರನ್ನು ಕೈದುಮಾಡಿ ನಂಬ್ರವು ನಡಿಯುತ್ತದೆ.

∴ ∴ ∴

ಟೆಲಿಫೋನಿನಿಂದ ಫೋಟೊ ಕಳುಹಿಸುವುದು.

ಟೆಲಿಫೋನಿನಿಂದ ಫೋಟೊ ಕಳುಹಿಸುವ ಕೆಲಸವು ಬಹಳ ಸುಲಭ ರೀತಿಯಲ್ಲಿ ಆಗುವುದರಿಂದ ಇತ್ತಲಾಗೆ ಯುನ್ಯಾಟೆಡ್ ಸ್ಟೇಟ್ಸಿನಲ್ಲಿ ನ್ಯೂಯೋರ್ಕ, ಚಿಕಾಗೊ, ಸೇನಾ ಫ್ರಾನ್ಸಿಸ್ಕೊ ಮುಂತಾದ ದೊಡ್ಡ ದೊಡ್ಡ ಊರುಗಳಿಗೆ ಈ ವ್ಯಾಪಾರವನ್ನು ನಡಿಸುವ ಕಂಪೆನಿಗಳನ್ನು ಇಟ್ಟಿರುತ್ತಾರೆ. ೭ ಇಂಚು ಉದ್ದ ೫ ಇಂಚು ಅಗಲವಿರುವ ಒಂದು ಫೋಟೊ ಕಳುಹಿಸಲಿಕ್ಕೆ ಏಳುವರೆ ಮಿನಿಟು ಬೇಕಾಗುವುದು.

ಚಿಕಾಗೊ ಪಟ್ಟಣದಲ್ಲಿ ಎಕ್ಸರೇಸ್‌ನಿಂದ ಒಬ್ಬ ಮನುಷ್ಯನ ರೋಗದ ವಿಷಯ ತೆಗೆದ ಫೋಟೋವನ್ನು ನ್ಯೂಯೋರ್ಕಿನಲ್ಲಿರುವ ಒಬ್ಬ ಡೋಕ್ಟರರಿಗೆ ಬಹಳ ಕಡಿಮೆ ಖರ್ಚಿನಿಂದ ಕಳುಹಿಸಿರುತ್ತಾರೆ. ಅಮೇರಿಕದಲ್ಲಿ ಪೋಲಿಸ್ ಇಲಾಖೆಯಲ್ಲಿ ಕಳ್ಳರನ್ನು ಪತ್ತೆ ಮಾಡಲಿಕ್ಕೆ ಅವರ ಚಹರೆಯನ್ನು ತೆಗೆದ ಫೋಟೋವನ್ನು ಕಳುಹಿಸಲಿಕ್ಕೆ ಇದು ಬಹಳ ಪ್ರಯೋಜನಕ್ಕೆ ಬಿದ್ದದೆ.

ಅಮೇರಿಕದಲ್ಲಿ ಒಂದು ಕೈಗಾರಿಕೆ ಕಂಪೆನಿಯನ್ನು ಸ್ಥಾಪಿಸಿ ಅದರ ಪಾಲು ಭಂಡವಾಳದ ವಿಷಯ ನೋಟೀಸುಗಳು ಈ ಯಂತ್ರದ ಸಹಾಯದಿಂದ ಅಮೇರಿಕದ ಎಲ್ಲಾ ಭಾಗಗಳಿಗೂ ಬಹಳ ಬೇಗನೇ ಪ್ರಕಟಿಸಲ್ಪಟ್ಟವೆ. ಮೊದಲು ಈ ಪೋಸ್ಟ್ಕ್ರಸಿನ ಫೋಟೊ ತೆಗೆದರು. ಅಲ್ಲಿಂದ ನ್ಯೂಯೋರ್ಕಿನಿಂದ ೩೦೦೦ ಮೈಲು ದೂರವಿರುವ ಸೇನ್‌ಫ್ರಾನ್ಸಿಸ್ಕೊ ಪಟ್ಟಣಕ್ಕೆ ಕಳುಹಿಸಿದರು. ಸೇನ್‌ಫ್ರಾನ್ಸಿಸ್ಕೊ ಪಟ್ಟಣದಲ್ಲಿರುವ ಪ್ರಿಂಟರನು ಈ ಫೋಟೊವಿನ ಪ್ರತಿಕೃತಿಯನ್ನು ನೋಡಿ ಅದನ್ನು ಛಾಪಿಸಿದನು.

ಕಲ್ಕತ್ತ ದಂಗೆ.

ಕಲ್ಕತ್ತದ ದಂಗೆಯು ಇನ್ನೂ ಶಾಂತವಾಗಲಿಲ್ಲ. ದಂಗೆಯು ಪಟ್ಟಣದ ಎಲ್ಲಾ ಭಾಗಗಳಿಗೂ ಹಬ್ಬುತ್ತಾ ಇದೆ. ಇದು ಒಂದು ದೊಡ್ಡ ದಂಗೆಯಲ್ಲವಾದರೂ ಅಲ್ಲಲ್ಲಿ ಲೂಟಿ, ಕಳವು, ಕೊಲೆಗಳು ಉಂಟಾಗುವುದರಿಂದ ನಿವಾಸಿಗಳಿಗೆ ಹೊರಗೆ ಬರಲು ಹೆದರಿಕೆಯುಂಟಾಗಿಯದೆ. ಶಾಲೆಗಳನ್ನೂ, ಕೋಲೆಜುಗಳನ್ನೂ, ಮುಚ್ಚಬೇಕಾಯಿತು. ಸ್ಮೊಲಕೋಸ್ ಕೋರ್ಟಿನಲ್ಲಿ ಕಕ್ಷಿಗಾರರು ಬಾರದಿದ್ದುದರಿಂದ ಕೋರ್ಟನ್ನು ಮುಚ್ಚಬೇಕಾಯಿತು. ಚಿಟ್‌ಪೂರ ಮತ್ತು ಹೆರಿಸನ್ ರೋಡುಗಳಲ್ಲಿ ಮೋಟರುಕಾರ, ಟ್ರೇಮುಕಾರ, ಜಟ್ಕಾ, ರಿಕ್ಷಾ ಇವುಗಳ ಓಡಾಟವು ಬಹಳ ಕಡಿಮೆಯಾಗಿದೆ. ಕಲ್ಕತ್ತದ ಉತ್ತರ ಭಾಗದಲ್ಲಿರುವ ಎಲ್ಲಾ ಅಂಗಡಿಗಳೂ, ಮುನ್ಸಿಪಾಲಿಟಿಗಳ ಎರಡು ಮಾರ್ಕೇಟುಗಳೂ ಮುಚ್ಚಲ್ಪಟ್ಟಿವೆ. ಮಾರ್ಗಗಳೆಲ್ಲಾ ಕೊಳಕಿನಿಂದ ತುಂಬಿವೆ. ಕೆಲವು ಕಸಗುಡಿಸುವವರಿಗೆ ಪೆಟ್ಟು ಬಿದ್ದುದರಿಂದ ಅವರು ಕೆಲಸಕ್ಕೆ ಬರುವುದಿಲ್ಲ.

ನ್ಯೂಮಾರ್ಕೆಟ್, ಕೊಲೇಜ ಸ್ಟ್ರೀಟ ಮಾರ್ಕೆಟ್, ಬೌಬಜಾರ ಮಾರ್ಕೆಟ್, ಶ್ರೀಮನಿ ಬಜಾರ ಮಾರ್ಕೆಟು ಮುಂತಾದ ಮಾರ್ಕೆಟುಗಳು ಮುಚ್ಚಲ್ಪಟ್ಟಿವೆ. ಜೀನಸುಗಳ ಧಾರಣೆಯು ಜೀನಸುಗಳು ಇಲ್ಲದಿದ್ದುದರಿಂದ ಏರಿಯದೆ.

ಬಾಬುಬಜಾರಿನಲ್ಲಿ ಒಬ್ಬ ಮುಸಲ್ಮಾನನು ಒಬ್ಬ ಹಿಂದೂವನ್ನು ಕೊಲ್ಲು ಹಾಕಿದನು. ಕೂಡಲೇ ಈ ವರ್ತಮಾನವು ಪೇಟೆಯಲ್ಲೆಲ್ಲಾ ಹಬ್ಬಿ ಹಿಂದೂ-ಮುಸಲ್ಮಾನರಿಗೆ ಜಗಳವು ಹತ್ತಿತು. ಕಲ್ಲುಗಳ ಬಡಿದಾಟವು ಹೆಚ್ಚಾದುದರಿಂದ ಬಂದ ಪೋಲಿಸ ಅಧಿಕಾರಿಗಳಿಗೂ ಪೆಟ್ಟಾಯಿತು. ಕೂಡಲೆ ದಂಗೆಗಾರರು ಓಡಿಹೋಗಿ ಕೆಡರ್ ಫೀರ್ ಒರ್ಫನೇಜ ಮಾರ್ಕೆಟಿನಲ್ಲಿರುವ ಒಂದು ಅಕ್ಕಿಯ ಭಂಡಸಾಲೆಗೆ ಬೆಂಕಿ ಕೊಟ್ಟರು. ಪೋಲಿಸಿನವರು ೫೦ ಮಂದಿ ಮಹಮ್ಮದಿಯರನ್ನು ಸೆರೆ ಹಿಡಿದಿರುವರು.

ಹಿಂದೂಗಳು ಹೆರಿಸನ್ ರೋಡಿನಲ್ಲಿ ಸುಮ್ಮನೆ ಹೋಗುತ್ತಿದ್ದ ಒಬ್ಬ ಮುಸಲ್ಮಾನ ಫಕೀರನನ್ನು ತಿವಿದು ಕೊಂದರು. ಕ್ಲೈವ್ ಸ್ಟ್ರೀಟಿನಲ್ಲಿ ಇನ್ನೊಬ್ಬ ಮಹಮ್ಮದಿಯನನ್ನು ಕೊಂದುಹಾಕಿದರು.

ಈ ರೀತಿಯ ದಂಗೆಗಳು ಹೆಚ್ಚಾಗುತ್ತಾ ಬರುವುದರಿಂದ ಮಾರ್ಶಲ್ ಲೊ ಜಾರಿಗೆ ತರುವುದು ಒಳ್ಳೇಯದೆಂದು ಸರಕಾರಕ್ಕೆ ಸೂಚಿಸುತ್ತಿರುವರು.

ಈ ರೀತಿಯಲ್ಲಿ ದಂಗೆಗಳು ಹೆಚ್ಚಾಗುವುದರಿಂದ ಆಹಾರ ಜೀನಸುಗಳು ಕಡಿಮೆ ಕಡಿಮೆಯಾಗುತ್ತಾ ಬರುತ್ತಿವೆ.

ಪತ್ರವ್ಯವಹಾರ.

[ಬಂತ್ತಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ ಸ್ವದೇ.]

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡ್ರ ಹೊಸ ಪ್ರೆಸಿಡೆಂಟರೊಡನೆ ಒಂದು ವಿನಂತಿ.

ಸ್ವಾಮಿ ನವೀನ ಪ್ರೆಸಿಡೆಂಟರವರೇ,

ತಮಗೆ ಈ ಸಾರಿ ಡಿಸ್ಟ್ರಿಕ್ಟ್‌ಬೋರ್ಡ ಪ್ರೆಸಿಡೆಂಟ ಉದ್ಯೋಗವನ್ನು ಒದಗಿಸಿದ ಭಗವಂತನು ತಮ್ಮ ಪ್ರತಿ ಒಂದು ಉತ್ತಮ ಕಾರ್ಯಗಳಲ್ಲಿ ಸಹಾಯಕನಾಗಿರಲಿ ಎಂಬುದೇ ನನ್ನ ಪ್ರಾರ್ಥನೆ. ಇನ್ನು ಮುಂದೆ ತಮ್ಮ ಮೂರು ವರ್ಷ ಕಾಲಗಳಲ್ಲಿ ಮಾಡಬೇಕಾದ ಎಷ್ಟೋ ಅಗತ್ಯದ ಕೆಲಸಗಳು ಇದ್ದಾಗ್ಯೂ ನಮ್ಮ ಜಿಲ್ಲೆಗೂ, ಜಿಲ್ಲೆಯ ಯಾವತ್ತು ಪ್ರಜೆಗಳಿಗೂ ಸರ್ವ ಜನೋಪಕಾರಿಯಾದ ಒಂದೇ ಒಂದು ಮಹತ್ವದ ಕೆಲಸವು ತಮ್ಮನ್ನು ಕಾಯುತ್ತಿದೆ. ಅದು ಯಾವದೆಂದರೆ "ಹಾಸನಮಂಗಳೂರು ರೇಲ್ವೆ" ಈ ಮೊದಲು ಮದ್ರಾಸು ನ್ಯಾಯವಿಧಾಯಕ ಸಭೆಗೆ ಮತ್ತು ಎಸೆಂಬ್ಲಿಗೂ ಮೆಂಬರರಾಗಲಿಕ್ಕೆ ಉಮೇದ್ವಾರರಾಗಿ ನಿಲ್ಲುವಾಗ ನಾವು ಲೋಕೋಪಕಾರ ಕೆಲಸ ಬಹಳ ಮಾಡಿದ್ದೇವೆ. ಇನ್ನೂ ಮಾಡುತ್ತೇವೆ. ಹಾಸನ ರೇಲ್ವೆ ವಿಷಯಕ್ಕೆ ನಮ್ಮ ಕೈಯಲ್ಲಾಗುವ ಪ್ರಯತ್ನ ಮಾಡುತ್ತೇವೆ ಎಂತ ಎದೆ ಬಡಕೊಂಡು ಮೆಂಬರರಾಗಿ ಬರೇ ಮೂರು ವರ್ಷ ಕಾಲ ಕಳೆದ ಸಂಗತಿ ಎಲ್ಲರಿಗೂ ವಿದಿತವಾದ ಸಂಗತಿ. ಅಯ್ಯಾ ಪ್ರೆಸಿಡೆಂಟರವರೇ ತಮ್ಮ ಕಾಲದಲ್ಲಿ ಹೆಚ್ಚಿನ ಬದಲಾವಣೆಗಳಿಗಿಂತ ಮುಖ್ಯವಾದ ಆಚಂದ್ರಾರ್ಕವಾದ ಕಾಲದವರೆಗೆ ಯಶಸ್ಸಿಗೆ ಪಾತ್ರವಾದ ಹಾಸನಮಂಗಳೂರು ರೈಲ್ವೆ ಲ್ಯಾನನ್ನು ತೆರೆಯುವ ಸಾಧನೆಯನ್ನು ಸಾಧಿಸಿದರೆ ತಮ್ಮ ನಾಮವು ಕೀರ್ತಿಶೇಷವಾಗುವದು. ಇಷ್ಟದಾಯಕನಾದ ಭಗವಂತನು ತಮ್ಮ ಪ್ರಯತ್ನಕ್ಕೆ ಬೆಂಬಲವಾಗಿರುವನು. ಈ ವಿಷಯದಲ್ಲಿ ಕಾನೂನಾಗಲಿ, ಪ್ರಯತ್ನವಾಗಲಿ, ಸಾಧನೆಯಾಗಲಿ ಯಾರ ಹತ್ತರಲೂ ತಮಗೆ ಕಲಿಯಬೇಕೆಂತಿಲ್ಲ. ಈ ರೈಲು ಆಗದ ವಿನಹ ನಮ್ಮ ಜಿಲ್ಲೆಯ ದರಿದ್ರಾವಸ್ಥೆಯು ನೀಗಲಿಕ್ಕಿಲ್ಲ. ಯಾಕಂದರೆ ದಕ್ಷಿಣ ಹಿಂದುಸ್ಥಾನದ ಪಶ್ಚಿಮ ಘಟ್ಟಗಳು ತರದ ವಿನಹ ಯಾವದೊಂದು ಅಭಿವೃದ್ಧಿ ಕಾರ್ಯ ಸಾಗಲಿಕ್ಕಿಲ್ಲ. ಮಂಗಳೂರು ಅಜೆಕಲ ರೈಲ್ವೆ ಬಂದು ಜನರ ಸೌಕರ್ಯಕ್ಕೆ ಪ್ರಯೋಜನವಿಲ್ಲ ಎಂತ ಅನೇಕರ ಅಭಿಪ್ರಾಯವಿದೆ. ಹಾಸನಮಂಗಳೂರು ರೈಲ್ವೆಯಲ್ಲಿ ಮಂಗಳೂರಿಂದ ಬೇರೆ ಕಡೆಗೆ ಪ್ರಯಾಣ ಬೆಳೆಸುವವರಿಗೆ ಬಹಳ ಸುಲಭವಾಗುವದು. ಈಗ ಅನೇಕರು ಬೊಂಬಾಯಿ, ಹುಬ್ಬಳ್ಳಿ, ಗದಗ ಅತ್ತಕಡೆಗೂ, ಬೆಂಗಳೂರು ಮದ್ರಾಸಿಗೂ ಮೋಟರಕಾರಿನಿಂದಾಗಲಿ, ಬಸ್ಸಿನಿಂದಾಗಲಿ, ಚಾರ್ಮಾಡಿ ಮಾರ್ಗದಿಂದ ಕಡೂರು ರೈಲ್ವೆಗೆ ಹೋಗಿ ಕೂತುಕೊಂಡು ಪ್ರಯಾಣ ಮಾಡಿದ್ದರಿಂದ ಸಮಯ ಲಭ್ಯವೂ, ಹಣದ ಆದಾಯವೂ ಆಗುತ್ತದೆ. ಮೈಸೂರು ಸೀಮೆಗಳಿಂದ ನಮ್ಮ ಜಿಲ್ಲೆಗೆ ಭತ್ತ, ಬೆಲ್ಲ, ಮೆಣಸು, ರಾಗಿ, ಕಾಫಿ, ಕೊತ್ತಂಬರಿ, ಎಳ್ಳುಹಿಂಡಿ, ನೀರುಳ್ಳಿ, ಬೆಳ್ಳುಳ್ಳಿ, ಇತ್ಯಾದಿ ಸಾಮಾನು ಬರುತ್ತಿರುವದರಿಂದ ಜನರಿಗೆ ತುಂಬಾ ಸೌಕಾರಿಯಾಗಿದೆ. ಮೈಸೂರು [illegible]ನಕ್ಕೆ ಹೆಚ್ಚಿನ ವಿಲಾಯತಿ ಮಾಲು ಈಗ ಬರುವ ದಾರಿಗಿಂತ ಮಂಗಳೂರು ಹಾಸನ ರೈಲ್ವೆಯ ದಾರಿಯೇ ಹತ್ತರವಾಗಿದೆ. ನಮ್ಮ ಜಿಲ್ಲೆಯಿಂದ ಅಕ್ಕಿ ಮೈಸೂರಿಗೆ ಹೋಗುವ ಹಾಗಿಲ್ಲ. ಈಗ ಸಾವಿರಾರು ಕಾಫಿ ತೋಟಗಳಿಗೆ ಹೋಗುವ ಕೂಲಿಯಾಳುಗಳ ಕುಟುಂಬಕ್ಕೆ ಹೆಚ್ಚಿನ ಪ್ರಯೋಜನವೂ, ಪಶ್ಚಿಮ ಘಟ್ಟಗಳಲ್ಲಿ ಬಹಳವಾಗಿ ಬೆಳೆದಿರುವ ಮರಮಟ್ಟುಗಳಿಗೂ ಒಂದು ಗತಿ ಆಗುತ್ತಿತ್ತು. ಮಂಗಳೂರು ಆಜೆಕಲ್ ರೈಲ್ವೆ ಬರುವ ಮುಂಚೆ ನಮ್ಮ ಜಿಲ್ಲೆ ಉಂಟೆಂದು ಅನೇಕರಿಗೆ ಗೊತ್ತಿಲ್ಲ. ಈಗ ಅನೇಕರ ಕಣ್ಣು ತೆರೆದದರಿಂದಲೇ ಗಾಯನಪ್ರಿಯ ಮನೋಹರ ಬರ್ವೆಯವರೂ, ನಾಟಕಶಿರೋಮಣಿಯಾದ ವರದಾಚಾರ್ಯರವರ ಕಂಪೆನಿಯೂ, ಬೇರೆಬೇರೆ ಮತದ ವೃದ್ಧಿಯ ಮುಂದಾಳುಗಳು ಬಂದು ತಮ್ಮ ಲೆಕ್ಚರುಗಳನ್ನು ಕೊಡುತ್ತಿರಲಿಕ್ಕೆ ಸಹಾಯವಾಯಿತು. ಆದುದರಿಂದ ನವೀನ ಪ್ರೆಸಿಡೆಂಟರಾದ ತಾವು ತಮ್ಮ ತನುಮನಧನ ಅರ್ಪಿಸಿ, ತಮ್ಮ ಪ್ರೆಸಿಡೆಂಟ ಅವಧಿಯೊಳಗೆ ಮಂಗಳೂರು-ಹಾಸನ ರೈಲ್ವೆ ಲ್ಯಾನನ್ನು ತೆರೆಯುವ ಹಾಗೆ ಮಾಡಿದರೆ ತಮ್ಮ ಉಪಕಾರ ಜನರಿಗೆ ಸದಾ ಇರುತ್ತಿತ್ತು.

ಪ್ರಯಾಣಸ್ಥ.

ಬರುವ ತಿಂಗಳ ತಾ. ೨೦ಕ್ಕೆ ಓಟಿನ ಆಟವೂ, ಉಮೇದುವಾರರ ಕಾಟವೂ, ಓಟರರ ಓಡಾಟವು ಮಂಜೇಶ್ವರದಲ್ಲಿ ಜರಗುವದಂತೆ. ಉಮೇದುವಾರರು ಈಗ ತಿಳಿದಮಟ್ಟಿಗೆ ೫ ಜನರಂತೆ. ಕೇಳಿಬರುವ ಮಟ್ಟಿಗೆ ರಾ| ಅವರಲ್ಲಿಬ್ಬರು ಶೂರರಂತೆ. ಇವರಿಗೆ ಓಟು ಕೊಟ್ಟವರಿಗೆ ವೃತ್ತಿ ತೆರಿಗೆ ಮಾಫಿಯಂತೆ. ಓಟು ಕೊಡದವರಿಗೆ ವೃತ್ತಿ ತೆರಿಗೆ ಹೆಚ್ಚುವುದಂತೆ. ಇವರ ಈ ಪ್ರತಾಪಗಳನ್ನು ಕೂಗಳಿ ಮನೆಮನೆಗೆ ಹೋಗುವದು ಉಗ್ರಾಣಿ ದೇವರಂತೆ. ದೃಷ್ಟಿಗೆ ಯಮನಂತೆ. ಇದನ್ನು ಕೇಳಿ ಕೆಲವರಿಗೆ ಹೆದರಿಕೆಯಂತೆ. ಮೊದಲೊಂದು ದಫೆ ಇವರು ಇದೇ ಬೋರ್ಡಿನಲ್ಲಿ "[illegible]" ಪಾಸುಮಾಡಿದರಂತೆ. ಈ ಸಲ ಯಾವ ಠರಾವಂತ ತಿಳಿಯಲಿಲ್ಲವಂತೆ. ಇವರ ಸಹಪಾಠಿಗಳಾದ ರಾ| ಇನ್ನೊಬ್ಬರು ಛೇಮ್ಮ್ಯವಹಾರ ತಾಳ ಯಾರೊಡನೆಯೂ ಹೇಳದ ಸರಳವಂತ ಸೌಂದರಂತೆ. ಇವರಿಗೆ ಓಟು ಕೊಡದವರಿಗೆ ತೆರಿಗೆ ಹೆಚ್ಚುವದಾಗಿ ಗವರ್ನಮೆಂಟ ಆರ್ಡರ್ (ಹುಕುಂ) ಈ ವರೆಗೆ ಬರಲಿಲ್ಲವಂತೆ. ಶಾಲೆಯ ಬೋರ್ಡಿಗೆ ಈ ಆರ ಕೆಯಲ್ಲಿ ಖರ್ಚು ಮತ್ತು ಕಿಟಂದಿ ಕಡಿಮೆಯಂತೆ. ಉಪಾಧ್ಯಾಯರಿಗೆ ಸಂಬಳ ಮೊದಲಿನಂತೆಯೇ ೨-೩ ತಿಂಗಳಿಗೊಮ್ಮೆಯಂತೆ. ಇವರು ಈಗ ಸೇರುವ ಉದ್ದೇಶವನ್ನೂ, ನಡಿಸಲಿರುವ ಸತ್ಕಾರ್ಯಗಳನ್ನೂ ಬಹಿರಂಗವಾಗಿ ತಿಳಿಸಿದರೆ ಬಹಳ ಉಪಕಾರವಂತೆ. ಇದೇ ಈಗ ಅಂತಯುವನ ಚಿಂತೆ.

ಓರ್ವ ಗ್ರಾಮಸ್ಥ.

ನಿಮ್ಮ ತಾ. 23-4-1926ನೆಯ ಸಂಚಿಕೆಯಲ್ಲಿ ಕೇರುಬೀದಿ ಜನಾಬ್ ಅಥಾನಿ ಸಾಹೇಬರ ಮನೆಯಲ್ಲಿ ಎಸೆಂಬ್ಲಿಗೂ, ಕೌನ್ಸಿಲಿಗೂ ಯೋಗ್ಯ ಮುಸ್ಲಿಮ್ ಮೆಂಬರುಗಳನ್ನು ಆಂಶುವುದಕ್ಕೆ ಆಲೋಚಿಸುವ ಬಗ್ಗೆ ಮುಸ್ಲಿಮ್ ಓಟರರ ದೊಡ್ಡ ಸಭೆ ಸೇರಿತೆಂತ ಒಂದು ಹೊಸ ವಾರ್ತೆಯನ್ನು ನೋಡಿ ನಾನು ಬಹಳ ಆಶ್ಚರ್ಯಪಡುತ್ತೇನೆ. ನಾನು ಮಂಗಳೂರು ಪಟ್ಟಣದಲ್ಲಿ ವಾಸವಾಗಿರುವ ಒಬ್ಬ ಮುಸ್ಲಿಮ್ ಓಟರನಾಗಿರುತ್ತೇನೆ. ಆದರೆ ಇಂತಹ ಒಂದು ಸಭೆಯಾದ ಸಂಗತಿ ನಾನು ತಿಳಿದದ್ದೇ ಇಲ್ಲ. ಅದಲ್ಲದೆ ನಾನು ಬೇರೆ ಓಟರರ ಕಡೆ ಸಹಾ ವಿಚಾರಿಸಿದ್ದಲ್ಲಿ ಇದು ಸಾಧು ಓಟರರಿದ್ದರೆ ಅವರನ್ನು ಮೋಸಪಡಿಸುವ ಇರಾಧೆಯಿಂದ ನಿರ್ಮಿಸಿದ ಒಂದು ಇಲೆಕ್ಶನ್ ಪ್ರಚಾರವೆಂದು ಕಂಡುಬಂತು. ಖಾನ್‌ಬಹದ್ದೂರ್ ಹಾಜಿ ಅಬ್ದುಲ್ಲಾ ಸಾಹೇಬರು ಜನಾಬ್ ಅಥಾನಿ ಸಾಹೇಬರ ಮನೆಗೆ ಸಹ ಒಂದೆರಡು ಸಾರಿ ಅವರ ಎಸೆಂಬ್ಲಿ ಉಮೇದ್ವಾರಿಕೆಯ ಕುರಿತು ಆಲೋಚಿಸುವ ಬಗ್ಗೆ ಹೋಗಿದ್ದರಂತೆ. ಅಂತಹ ಸಭೆ ಕೂಡಿದ್ದರೆ ಆ ಸಂಗತಿ ತಿಳಕೊಳ್ಳಲಿಕ್ಕೂ ಆ ವಿಷಯದಲ್ಲಿ ನಮಗಿರುವ ಸಂಶಯವನ್ನು ಹೋಗಲಾಡಿಸುವದಕ್ಕೆ ತಕ್ಕವರು ಖಾನ್‌ಬಹದೂರರೇ. ಈ ಕುರಿತು ನನಗೆ ಸಿಕ್ಕಿದ ಸುದ್ದಿಯು ತಪ್ಪಾಗಿದ್ದರೆ ಆ ಕುರಿತು ತಮ್ಮ ಪತ್ರ ಮುಖಾಂತರ ನನ್ನನ್ನು ಸರಿಪಡಿಸುವುದಕ್ಕಾಗಿ ಖಾನ್ ಬಹದೂರರ ಕಡೆ ನಾನು ಕೇಳಿಕೊಳ್ಳುತ್ತೇನೆ. ಜನಾಬ್ ಎಚ್. ಎಮ್. ಪುತ್ತೂರು ಸಾಹೇಬರ ಉಮೇದ್ವಾರಿಕೆಯ ಉದ್ದೇಶವು ಸಫಲವಾಗಬೇಕಾದರೆ ಅವರ ಸ್ವಾಲ ಗಾಡಿಯನ್ನು ಖಾನ್‌ಬಹದ್ದೂರರ ಗಾಲಿಗೆ ಕಟ್ಟಿಬಿಟ್ಟಲ್ಲಿ ಅದು ಎರಡನ್ನೂ ಎಳೆದುಕೊಂಡು ಹೋಗುವದೋ ಏನೋ? ಇದು ಯಾವ ನಮೂನೆಯ ಇಲೆಕ್ಶನ್ ಪ್ರಚಾರ?

ಮುಸ್ಲಿಮ್ ಓಟರ್.

ಮುಲ್ಕಿ ಬೋರ್ಡ್ರ ಹಾಯರ್ ಎಲಿಮೆಂಟರಿ ಶಾಲೆಯ ವರ್ಷ ವರ್ಧಂತ್ಯುತ್ಸವದ ವರದಿ.

ಸೂಚೀಪತ್ರದಲ್ಲಿ ಕಾಣಿಸಿದಂತೆ ಶಾಲಾ ಬಾಲಕರಿಗಾಗಿಯೂ, ಊರ ಮಹಿಳೆಯರು ಮತ್ತು ಬಾಲಕಿಯರಿಗಾಗಿಯೂ ತಾ. ೨೮ ಮತ್ತು ೨೯ನೇ (ಎಪ್ರಿಲ್ ೧೯೨೬ನೇ ಇಸವಿ) ದಿವಸಗಳಲ್ಲಿ ಪ್ರತ್ಯೇಕಪ್ರತ್ಯೇಕವಾಗಿ ನಾಟಕ ಇತ್ಯಾದಿಗಳು ಪ್ರದರ್ಶಿಸಲ್ಪಟ್ಟಿತ್ತು. ಅದೇ ದಿನದ ಸಮಾರಂಭವು ತಾ. ೩೦ನೇ ಶುಕ್ರವಾರ ದಿನ ಕೂಡಿಬಂತು. ಶಾಲಾ ಕಟ್ಟೋಣವು ತಳಿರ ಧೋರಣಗಳಿಂದಲೂ, ಧ್ವಜಪತಾಕೆಗಳಿಂದಲೂ, ಮನೋಹರವಾಗಿ ಶೃಂಗರಿಸಲ್ಪಟ್ಟಿತ್ತು. ಅಂದು ಪೂರ್ವಾಹ್ನ ೮ರಿಂದ ೧೦ ಗಂಟೆ ವರೆಗೆ ವಿವಿಧ ಪಂದ್ಯಾಟಗಳು ಮ| ರಾ| ರಾ| ಎನ್. ಆರ್. ಪೂಂಜ ಅವರ್ಗಳ್, ಮಂಗಳೂರು ತಾಲೂಕು ಬೋರ್ಡ ಪ್ರೆಸಿಡೆಂಟರವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟು, ನಂತರ ಕೂಡಿಬಂದ ಮಕ್ಕಳಿಗೆ ಪಂಚಕಜ್ಜಾಯ, ಬಾಳೆಹಣ್ಣು ವಗೈರೆ ಹಂಚಲ್ಪಟ್ಟವು. ಅನಂತರ ಅಪರಾಹ್ನ ಘಂಟೆ ೩-೧೫ಕ್ಕೆ ಬೇಂಡ್ ವಾದ್ಯಗಳಿಂದ ಅಂದಿನ ಸಮಾರಂಭಕ್ಕೆ ಅಧ್ಯಕ್ಷಸ್ಥಾನವನ್ನು ಅಲಂಕರಿಸಬೇಕಾದ ನಮ್ಮ ಹೊಸ ಡಿಸ್ಟ್ರಿಕ್ಟ್ ಪ್ರೆಸಿಡೆಂಟರನ್ನೂ, ಪುರನಿವಾಸಿಗಳನ್ನೂ ಬರಮಾಡಿಕೊಂಡ ಮೇಲೆ ಮ| ರಾ| ರಾ| ಡಾಕ್ಟರ್ ಯಂ. ಆರ್. ಕಾಮತ್‌ರವರ ಸೂಚನೆಯನ್ನು ಮ| ರಾ| ರಾ| ಯಂ. ಕೆ. ಬಸಪ್ಪನವರು ಅನುಮೋದಿಸಲು, ಮ| ರಾ| ರಾ| ರಾವ್‌ಸಾಹೇಬ್ ಬಿ. ಮಹಾಬಲ ಹೆಗ್ಗೆ, ಅವರ್ಗಳ್, ಬಿ. ಎ., ಬಿ. ಎಲ್.ರವರು ಅಧ್ಯಕ್ಷಪೀಠವನ್ನು ಏರಿದರು. ನಂತರ ಶಾಲಾ ಬಾಲಕರು ದೇವತಾ ಪ್ರಾರ್ಥನೆಯನ್ನು ಮಾಡಿದರು. ಇಲ್ಲಿಯ ಶ್ರೀ ವೆಂಕಟ್ರಮಣ ದೇವಳದ ಮೆನೇಜರ್ ಮ| ರಾ| ರಾ| ಯು. ವಿ. ಶೆಣೈ ಅವರ್ಗಳ್‌ರವರು, ತಮ್ಮ ಸುರಸವಾದ ಮಾತುಗಳಿಂದ ಅರ್ಥಗರ್ಭಿತವಾದ ಶಾಲಾಭಿನಂದನವನ್ನು ಮಾಡಿ ಪೂರೈಸಿದರು. ಆ ಮೇಲೆ ಶಾಲಾ ಹೆಡ್ ಮಾಸ್ತರರು ಶಾಲಾ ವರದಿಯನ್ನು ಓದಿ ಹೇಳಿದರು. ಇದಾಗಲು ಕೂಡಿಬಂದ ಮಹನೀಯರ ಪೈಕಿ ರಾ| ಬೋಳ ಮಾಧವರಾಯರು, ರಾ| ಎನ್. ಆರ್. ಪೂಂಜರವರು, ರಾ| ಯಸ್. ಸುಬ್ಬರಾಯರು (ಕಾಸರಗೋಡು ಬೋರ್ಡ ಹ್ಯಾಸ್ಕೂಲಿನ ಕನ್ನಡ ಪಂಡಿತರು) ರಾ| ಯಂ. ಮುಕುಂದರಾಯರು ವಗೈರೆರು ಶಾಲಾಭಿವೃದ್ಧಿ, ಇಂತಹ ಸಮಾರಂಭಗಳ ಅವಶ್ಯಕತೆ, ಈ ಊರಿಗೆ ಅತ್ಯಗತ್ಯ ಬೇಕಾದ ಹೈಸ್ಕೂಲ್ ಇತ್ಯಾದಿಗಳ ಕುರಿತು ಸಮಂಜಸವಾಗಿ ಒತ್ತಿ ಹೇಳಿ, ಅಮೂಲ್ಯವಾದ ಭಾಷಣಗಳನ್ನು ಕೊಟ್ಟರು. ಅನಂತರ ಕ್ಲಾಸಿನಲ್ಲಿ ಒಳ್ಳೇ ಯೋಗ್ಯತೆ ಹೊಂದಿದ ಮತ್ತು ಪಂದ್ಯಾಟಗಳಲ್ಲಿ ಗೆದ್ದ ಬಾಲಕರಿಗೆ ಅಧ್ಯಕ್ಷರ ಕೈಯಿಂದ ಇನಾಮುಗಳನ್ನು ಕೊಡಿಸಲ್ಪಟ್ಟಿತು. ಸನ್ಮಾನ್ಯ ಅಧ್ಯಕ್ಷರು ತಮ್ಮ ನಯ ಮತ್ತು ಗಂಭೀರವಾದ ವಾಕ್ಸರಣಿಯಿಂದ ಈ ಊರಿಗೆ ಅತ್ಯಾವಶ್ಯಕವಾದ ಹೈಸ್ಕೂಲು ಸ್ಥಾಪಿಸೋಣಾಗುವ ವಿಷಯ ತನ್ನಿಂದಾಗುವಷ್ಟು ಪ್ರಯತ್ನಿಸುತ್ತೇನೆಂದೂ, ಬಡ ಉಪಾಧ್ಯಾಯರಿಗೆ ಸಾಕಷ್ಟು ಸಂಬಳವು ದೊರೆಯದ್ದರಿಂದ ಅವರಿಂದ ಹೆಚ್ಚಿನ ಕೆಲಸವನ್ನು ಪಡೆಯಲು ಮಾರ್ಗವಿಲ್ಲವೆಂದೂ, ತನ್ನ ಕಾಲದಲ್ಲಿ ತಾನು ನ್ಯಾಯಬುದ್ಧಿಯಿಂದ ಕೆಲಸವನ್ನು ಮುಂದೊತ್ತುತ್ತೇನೆಂತಲೂ, ಹೇಳಿದ್ದಲ್ಲದೆ, ತನ್ನ ಈಗೆ ಸಮಾರಂಭದಿಂದ ಉಂಟಾದ ಸಂತೋಷವನ್ನು ವ್ಯಕ್ತಗೊಳಿಸಿದರು. ಆ ಮೇಲೆ ಸ್ಕೂಲ್ ಡೇ ಕಮಿಟಿಯ ಪರವಾಗಿ ಇಲ್ಲಿಯ ಸಬ್ ರಿಜಿಸ್ಟ್ರಾರ್, ರಾ| ಯಚ್. ವಿಷ್ಣುಭಟ್ರು ಅಧ್ಯಕ್ಷ ಮಹಾಶಯರಿಗೆ ಹೂವಿನ ಹಾರ ಹಾಕಿದರು. ಇದಾದ ಮೇಲೆ ಶಾಲಾಮಕ್ಕಳಿಂದ ಯಕ್ಷಗಾನ "ಗಯಚರಿತ್ರೆ" ಮತ್ತು "ಧ್ರುವಚರಿತ್ರೆ" ನಾಟಕವು ಕ್ರಮವಾಗಿ ಅಭಿನಯಿಸಲ್ಪಟ್ಟಿತು. ಯಕ್ಷಗಾನ ವ ನಾಟಕವು ಕೂಡಿದ ಸಭ್ಯಗೃಹಸ್ಥರಿಗೆ ಒಪ್ಪುವ ರೀತಿಯಲ್ಲಿದ್ದವು. ಯಕ್ಷಗಾನದಲ್ಲಿ ಕೃಷ್ಣ, ಗಯ ಮತ್ತು ಭಾಗವತ ಪಾತ್ರಗಳನ್ನು ವಹಿಸಿಕೊಂಡ ಮಕ್ಕಳಿಗೂ, ನಾಟಕದಲ್ಲಿ ಧ್ರುವ, ನಾರದ, ಉತ್ತಾನಪಾದ, ಉತ್ತಮ, ಮೊದಲಾದ ಪಾತ್ರಗಳನ್ನು ಹಾಕಿದ ಮಕ್ಕಳಿಗೂ ಇನಾಮುಗಳು ಹಂಚೋಣಾದವು. ಕಡೆಗೆ ಶಾಲಾ ಮುಖ್ಯ ಉಪಾಧ್ಯಾಯರು ಕೂಡಿಬಂದ ಎಲ್ಲಾ ಮಹನೀಯರಿಗೂ, ಡಿಸ್ಟ್ರಿಕ್ಟ್ ವ ತಾಲೂಕು ಬೋರ್ಡ ಪ್ರೆಸಿಡೆಂಟರಿಗೂ ಉಪಕಾರಸ್ಮರಿಸಲು ರಾಷ್ಟ್ರಗೀತದಿಂದ ಅಂದಿನ ಸಂತೋಷ ಸಮಾರಂಭವು ಸಮಾಪ್ತಿಯಾಯಿತು. ಈ ಊರಲ್ಲಿ ಇಷ್ಟು ಚೆಲೋ ರೀತಿಯಲ್ಲಿ ಇಂತಹ ಸಮಾರಂಭವು ನೆರೆದುದು ಇದೇ ಮೊದಲಿನ್ನುಬಹುದು.

"ಪ್ರೇಕ್ಷಕ".

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕಲಂಕರುದ್ರ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ್ಯ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಕ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀಮಿತ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds „ 288,500—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT.
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರಿಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಹಾಲಸ್ಯಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.



ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೪ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟಿಪಹಗೆ ಮಾತ್ರ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ.

ಆಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದುನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳು, ಮಸಾಲೆಪುಡಿಗಳೂ, ಕುಂಕುಮರುದ್ರಾಕ್ಷಿಗಳು, ಹಾಗೆ ರುದ್ರಾಕ್ಷಿ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಆರ್ಡರ್ ಕೊಟ್ಟಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

[illegible]

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | **ವಜ್ರಾಂಗ-ಬಿಂದು** | ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂಥ ವನಸ್ಪತಿಗಳ ಅರ್ಕದಿಂದ [illegible] ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ವಜ್ರಾಂಗಬಿಂದುವಿನ ಸೇವನೆಯಿಂದ [illegible].

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, [illegible]

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

[illegible]

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
[illegible]

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ

— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುವಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಸೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್‌ಟನ್ ವಾಚ್ ಕಂಪೆನಿ.
ನಂ. 265 ಮದ್ರಾಸ

— ಕೀಲಡ್ಡಿಗೆ ಪದಕ. —



ಈ ಅಡ್ಡಿಗೆಯನ್ನು ರೋಲ್ಡ್ ಗೋಲ್ಡ್ ಎಂಬ ಭಂಗಾರದಲ್ಲಿ ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ನೋಡಲು ಮುದ್ದಾಗಿರುವಂತೆ ತಯಾರಿಸಿದೆ. ಮತ್ತು ಇದರ ಪದಕವನ್ನು ಅಪರಂಜಿ ಭಂಗಾರಕ್ಕೆ ಸಂಸಮವಾದ ಸೀಮೆಯ ಭಂಗಾರದಿಂದ ತಯಾರಿಸಿದೆ. ಇದನ್ನು ಯಾವಾಗಲು ಕಟ್ಟಿಕೊಳ್ಳಲು ಚೆನ್ನಾಗಿರುವದು. ಎಲ್ಲ ಮುಂತಾದವು ಸೇರಿದರೂ ಕೆಡದು ಇದರ ಬಣ್ಣವು ಎಂದಿಗೂ ಕೆಡದಂತೆ ಸವರನ್ ಭಂಗಾರದ ಬಣ್ಣ ಕೊಟ್ಟಿರುವದು. ಶ್ರೀಮಂತರೂ, ಗರೀಬರೂ ಉಪಯೋಗಿಸಲು ಲಾಯಖಾದದ್ದು. ಕ್ರಯ 1ಕ್ಕೆ 4/8.

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ

— ಡಾಬುಗಳು. —

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿ ಹೊಂದಿದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಬಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ.

ಗೆಜ್ಜೆ ಡಾಬು 1ಕ್ಕೆ 3—0—0.

— ಇಮಿಟೇಶನ್ ವಜ್ರದ ಬೆಂಡೋಲೆಗಳು. —

ಈ ಬೆಂಡೋಲೆಗಳನ್ನು ಬಹು ಹೆಸರಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮವಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವುದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7ಕಲ್ಲಿನ ಬಿಳಿಯ ಓಲೆ ಜೊತೆ	3—0—0.
„ „ ಕೆಂಪುಕಲ್ಲಿನ ಓಲೆ ಜೊತೆ	3—8—0.

ವಿಳಾಸ:—ವೈ. ಎಮ್. ಸ್ವಾಮಿ ಅಂಡ್ ಕೊ, ಪಾರ್ಕ ಟೌನ್, ಮದ್ರಾಸು.

Y. M. SWAMY & Co.,
No. 12, Nainiappa Naicken St.,
P. Town, MADRAS.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ, ಕಾ. ವೇ. ಸುಬ್ಬರಾವ್, ಯಂ. ಜೆ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲ್ಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಬಲಸಿಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ, ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಲಿವರ್ ಮೂವ್‌ಮೆಂಟ್ ವಾಚ್

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೆಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0. ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0. ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0

ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕೆಂಟ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳೆ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನಾಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

Registered: No. M. 498.

ಚಂದಾನಿರ್ಣಯ:—ವರ್ಷ 1ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯುಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೧೪ನೇ ಶುಕ್ರವಾರ ಮೇ ೧೯೨೬. ಸಂಚಿಕೆ ೨೦.

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branch:—COONDAPOOR.
ಶಾಖೆ:—ಕುಂದಾಪುರ.

ನಿಯಮಿತ ಮೂಲಧನ ರೂ. 3,50,000.

ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

ತಾ. 28—2—'26ಕೆ ತೋರುವ ಸದರಿ ಬ್ಯಾಂಕಿನ ವಹಿವಾಟುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.		ಆಸ್ತಿ ವ ಸೊತ್ತುಗಳು.	
ವಾಲ್ಯು ಕಟ್ಟ ಮೂಲಧನ	1,80,690—9—11	ಹಿತ್ತು ಕಟ್ಟೋಣ ಕಟ್ಟಿದ ಟ್ರಿಜರಿಗಳು ವಗೈರೆ	3943—8—0,
ಅವಧ್ಯನ ವ ಇತರ ನಿಧಿಗಳು	75,875—0—0,	ಯೋಗ್ಯಜವಾಬ್ದಾರಿ ಮೇಲೆ ಸಾಲಕೊಟ್ಟದ್ದು	7,58,851-13-8,
ಠೇವಣಾತಿಗಳು	5,30,003-14-3,	ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	25,800—0—0,
ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕೊಳುವವರಿಗೆ	4,700—0—0,	ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು	4,700—0—0,
ಬರೇಬರ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು	40,274—3—11,	ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ)	22,795—6—6,
		ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಠೇವಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ	15,452—15—11,
ಜುಮ್ಲಾ ರೂ.	8,31,543—12—1	ಜುಮ್ಲಾ ರೂ.	8,31,543—12—1.

ನಿರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸುಂ ಠೇವಣಾತಿಗಳನ್ನೂ ಕಂತು ಠೇವಣಾತಿಗಳನ್ನೂ ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನೂ ಸಾವುಕಾರಿ ಹುಂಡಿಗಳನ್ನೂ, ವಟ್ಟಾಸ್ತು ವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ವ್ಯವಹಾರಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು, ಉಡುಪಿ, ತಾ. 28—2—'26.

ನಯಂಪಳ್ಳಿ ಆನಂದರಾವ್, ಸೆಕ್ರೆಟರಿ.

ಸ್ವದೇಶಾಭಿಮಾನಿ

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ನಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

. ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರೆಕುವುದು.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು

— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನು, ದಾರ್ಢ್ಯತೆಯನ್ನು ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು ಶಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ ೩—೦—೦.

ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦.

ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಇಲ್ಲಿ ನೇಟಿವ್ ಡಾಕ್ಟರ್, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂದ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಡತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ಬೈಲು ಬೆರ್ಜಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ತಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕ ಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದ್ದು ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲ್ 1ಕ್ಕೆ ರೂ. 3—2—0
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ನೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

11 ಮಣಿಗಳಿದ್ದು ಬ್ರಿಜ್ ಮ್ಯೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8
18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ದಿ" ಟ್ಯಾಮ್‌ಪೀಸ ರೂ. 2-4-0
9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.
ಚಲೋದಾದ ಲವ್ ನಕ್ಲೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

ಳಳ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ, ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕಿಂಗ್ ಆಫ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಡೈರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೀನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ, ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತ ಸೇವನದಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

The Canara Pubic Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು.- ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂವತ್ಸರದ ವೈಶಾಖ ಶು॥ ೪ ಶನಿವಾರದಿಂದ ಕ್ಷಯ ಸಂ॥ರದ ವೈಶಾಖ ಶು॥ ೯ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ವೃಷಭ ಬೇಶ.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಅಸ್ತ
15	ಶನಿ	೪	೬೦. ೦	ಆದ್ರಾ	೬೦ ೦	೧	6. 8	6.46
16	ರವಿ	೪	೦.೩೨	ಆದ್ರಾ	೦.೩೨	೨	6 8	6.46
17	ಸೋಮ	೫	೪. ೧	ಪುನರ್ವಸು	೬.೩೧	೩	6 7	6 47
18	ಕುಜ	೬	೮. ೫	ಪುಷ್ಯಾ	೧೨.೧೪	೪	6. 7	6.47
19	ಬುಧ	೭	೧೩. ೨	ಆಶ್ಲೇಷಾ	೧೮ ೩೨	೫	6. 7	6.47
20	ಗುರು	೮	೧೬.೪೬	ಮಘಾ	೨೫ ೦	೬	6 7	6 48
21	ಶುಕ್ರ	೯	೨೨.೩೧	ಹುಬ್ಬಾ	೩೧.೧೪	೭	6 6	6.48

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚೆಂದರೆ	Minimum ಕಡಿಮೆ	Rainfall. ಮಳೆ ದಿವಸ ಮಳೆ	ಒಟ್ಟು ಮಳೆ.
7	93—7	81—1	—	—
8	93—5	79—7	—	—
9	93—2	82—5	—	—
10	93—6	81—8	—	—
11	92—5	80—3	—	—
12	93—8	78—7	—	—
13	94—6	81—6	—	— 138-46

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ ಆ	ವರೆಗೆ ರೂ ಆ
ಮಸ್ಸಿ.		8— 4	9— 4
ಹೊಸ ಗುಡ್ಡೆ	...	7— 12	8— 4
ಹೊಸ ರಾಶಿ ಸುಗ್ಗಿ	...	7— 2	7— 12
ಅನ್ವಲ್ ಬೆಳ್ತಿಗೆ	...	8— 0	9 0
ರಂಗೂನು ಬೆಳ್ತಿಗೆ ಗೋಣಿ ೧	...	14— 8	15— 0
ಗೋಧಿ ಗೋಣಿ ೧ಕ್ಕೆ	...	18— 0	20 0
ಹುರುಳಿಗೋಣಿ ೧ಕ್ಕೆ	...	8— 0	9 0
ಕಡಲೆಗೋಣಿ ೧ಕ್ಕೆ	...	12— 8	13— 8
ಕೊಗಂಗೋಣಿ ೧ಕ್ಕೆ	...	16— 0	16— 8
ಕೊಗಂಬೇಳೆ ಗೋಣಿ ೧ಕ್ಕೆ	...	18— 0	23— 0
ಉದ್ದು ಗೋಣಿ ೧ಕ್ಕೆ	...	15— 8	-
ಹೆಸರುಗೋಣಿ ೧ಕ್ಕೆ	...	15— 4	15 8
ಊರು ಬೆಲ್ಲ ಖಂಡಿ ೧ಕ್ಕೆ	...	60— 0	65— 0
ಉಪ್ಪು ಗೋಣಿ ೧ಕ್ಕೆ	...	5— 0	5— 4
ಕೊಬ್ರಿ ಖಂಡಿ ೧ಕ್ಕೆ	...	96— 0	100— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	33— 8	34— 0
ಎಳ್ಳಿಂಡಿ ಖಂಡಿ ೧ಕ್ಕೆ	...	50— 0	62— 8
ಕೊಬ್ರಿ ಎಣ್ಣೆ ಮಣ ೧ಕ್ಕೆ	...	7— 8	8 8
ಎಳ್ಳೆಣ್ಣೆ ಮಣ ೧ಕ್ಕೆ	...	7— 8	9— 0
ಹರಳೆಣ್ಣೆ ಪೆಟ್ಟಿಗೆ ೧ಕ್ಕೆ	...	8-12-0	-
ಮೋರಿಸ ಸಕ್ಕರೆ ಮಣ ೧ಕ್ಕೆ	...	4—12	4 14
ಊರ ಮೆಣಸಿನಕಾಯಿ ಮಣ ೧ಕ್ಕೆ	...	5— 8	5 12
ಸಾಸಿವೆ ಮುಡಿ ೧ಕ್ಕೆ	...	9— 4	9— 8
ಕೊತ್ತಂಬರಿ ಮುಡಿ ೧ಕ್ಕೆ	...	3—14	4— 8
ಕಾಫಿ ಖಂಡಿ ೧ಕ್ಕೆ	...	375— 0	380— 0
ಹೊಳೆಗೋಟು ಅಡಿಕೆ ಖಂಡಿ ೧ಕ್ಕೆ ಹಳತು	...	300— 0	310— 0
ಹೊಸ ಅಡಿಕೆ ಖಂಡಿ ೧ಕ್ಕೆ	...	200— 0	215—0
ಕಾಳುಮೆಣಸು ಖಂಡಿ ೧ಕ್ಕೆ	...	300— 0	—
ಹುಣಸೆಹುಳಿ ಮಣ ೧ಕ್ಕೆ	...	50— 0	64— 0
ಗೇರುಬೀಜ ಮುಡಿ ೧ಕ್ಕೆ	...	3— 9	3—10
ಶುಂಠಿ ಖಂಡಿ ೧ಕ್ಕೆ	...	45— 0	65— 0
ತಾಂಬ್ರ ತಗಡು ಮಣ ೧ಕ್ಕೆ	...	16— 4	16— 12
ತಾಮ್ರ ಪಾತ್ರೆಗಳು ಮಣ ೧ಕ್ಕೆ	...	21— 0	—
ಬೀಳಿ ಬೆಳ್ಳಿ ತೋಲ ೧ಕ್ಕೆ	...	18—10	
ಹಿತ್ತಾಳೆ ತಗಡು ಮಣ ೧ಕ್ಕೆ	...	16— 8	
ಪವನು		13— 9	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

NOPRICENOPOSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For
Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್, ಮುಂಬಯಿ.

ಕೇಳಿರಿ! ಬರೆಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,
ಮಂಗಳೂರು.

ಇನಾಂ! ಜರ್ಮನ್ ಟ್ಯಾಂಪೀಸ್ ಇನಾಂ!

— ಫ್ಯಾನ್ಸಿ ಪಾಕೆಟ್ ವಾಚ್ —

ಈ ಗಡಿಯಾರಗಳು ಸೀಮೆಯಲ್ಲಿ ತಯಾರಾದದ್ದು. ಬಹು ದೃಢವಾದ ಸಾಮಾನುಗಳಿಂದಲೂ ಲೀವರ್ ಮೂವೆಂಟ್‌ಗಳಿಂದಲೂ ತಯಾರಿಸಿದೆ. ಬೆಳ್ಳಿಯ ಮುಚ್ಚಳವಿರುವದು ಮತ್ತು ಈ ಗಡಿಯಾರವು ನೋಡಲಿಕ್ಕೂ ಜೇಬಿನಲ್ಲಿಡಲಿಕ್ಕೂ ಲಾಯಕಾದದ್ದು. ಬೇಗನೆ ಕೆಡದು. ಇದಕ್ಕೆ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಕೊಡುವೆವು. ಈ ತಿಂಗಳೊಳಗಾಗಿ ಈ ಪಾಕೆಟ್ ವಾಚನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಅಲಾರಂ ಟ್ಯಾಂಪೀಸು ಇನಾಂ ಕೊಡುವೆವು. ಕ್ರಯ ಇನಾಂ ಟ್ಯಾಂಪೀಸು ಸಹಿತ ರೂ. 5—8—0.

— ಸೇಫ್ಟಿರೇಜರ್ —

ಈ ರೇಜರನ್ನು ಸ್ವಂತ ಉಪಯೋಗಕ್ಕೋಸ್ಕರವಾಗಿ ತಯಾರಿಸಿದೆ. ಇದರಲ್ಲಿ ಒಬ್ಬರ ಸಹಾಯವಿಲ್ಲದೆ ತಾವಾಗಿಯೇ ಮುಖಕ್ಷೌರವಮಾಡಿಕೊಳ್ಳಬಹುದು. ಈ ರೇಜರುಗಳಲ್ಲಿ ಮುಖ ಕ್ಷೌರವನ್ನು ಮಾಡಿಕೊಳ್ಳುವದಕ್ಕೆ ಯಾವ ಕಷ್ಟವೂ ಇರದು. ಕ್ರಯ 1ಕ್ಕೆ ರೂ. 1—4—0.

ವಿಳಾಸ— ಎಲ್ಜಿನ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 1251,
ಮದರಾಸು.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು —

ಸರ್ವಿಸಿನ ಹೆಸರು.	ತಲಪುವ ಸ್ಥಳ.	ಹೊರಡುವ ಘಂಟೆ.
ಜನರಲ್	ಕಾರ್ಕಳ—ಆಗುಂಬೆ—ತೀರ್ಥಹಳ್ಳಿ	ಪೂ. 6¼
ಸಿ. ಪಿ. ಸಿ.	ಉಡುಪಿ—ಕುಂದಾಪುರ—ಬೈಂದೂರು	,, 6¾, 9¾
	ಉಡುಪಿ	ಮ. 12¾
	ಮುಲ್ಕಿ ವರೆಗೆ ಮಾತ್ರ	ಅ. 3¾
	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ. ಕಾರ್ಕಳ—ವೇಣೂರಿನಿಂದ	ಪೂ. 7, ಮ. 1
	ಬಂಟ್ವಾಳಕ್ಕೆ ಮಾತ್ರ	,, 10¾, ಅ. 4¾
	ಪುತ್ತೂರು—ಸಂಪಾಜೆ—ಮಡಿಕೇರಿ	,, 7½
	ಪುತ್ತೂರು	ಪೂ. 10½ ಅ. 2
ಕಾರ್ಕಳ	ಕಾರ್ಕಳ—ಉಡುಪಿ—ಕುಂದಾಪುರ	ಪೂ. 6
	ಕಾರ್ಕಳಕ್ಕೆ ಮಾತ್ರ	ಅ. 1
ಹನುಮಾನ್	ಕಾರ್ಕಳ—ಉಡುಪಿ—ಕುಂದಾಪುರ	ಪೂ. 7
	ಕಾರ್ಕಳಕ್ಕೆ ಮಾತ್ರ.	ಮ. 12
ಕೆಂಕರ್ ವಿಟ್ಲ್	ಪುತ್ತೂರು—ಮಡಿಕೇರಿಗೆ	ಪೂ. 7
	ಪುತ್ತೂರು—ಉಪ್ಪಿನಂಗಡಿ	ಅ. 1½
	ವಿಟ್ಲಕ್ಕೆ	ಪೂ. 8, ಅ. 2½
	ಉಡುಪಿ	ಪೂ. 7½ ಅ. 1½
ಸ್ವಾಮಿ	ಮುಲ್ಕಿ—ಉಡುಪಿ	,, 7, ಮ. 1
	ಬಂಟ್ವಾಳ	,, 10½, ಅ. 4½
ಇಂಡಿಯನ್	ಮುಲ್ಕಿ—ಉಡುಪಿ,	,, 6¾, ಮ. 12¾
ಪೀಪ್ಲ್ಸ್ ಲರ್	ಬಂಟ್ವಾಳ ಬೆಳ್ತಂಗಡಿ—ಚಾರ್ಮಾಡಿ	ಪೂ. 7½ ಮ. 12½

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ವರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ—

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ.
ಮೈಲ್	ಬೆಳಗ್ಗೆ 8	ಸಂಜೆ 5-30
ಲೋಕಲ್	,, 10	,, 4-30
ಕೆಟಲ್	ಸಂಜೆ 5-40	ಬೆಳಗ್ಗೆ 9-55

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ವಾಂಸರೂ ಕಾರ್ಯದಕ್ಷರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ತಿಳಿಸುವ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	... ...	ರೂ. 5-0-0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ		„ 2-8-0
„ ಸ್ಥಳೀಕರಿಗೆ	...	„ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಶುದ್ಧ ರೋಮದ ಧಾವಳಿಗಳು.

1 ಮೊಳ ಉದ್ದ 1¼ ಮೊಳ ಅಗಲ ರೂ. 1¼ರಿಂದ 2 ವರೆಗೆ, 5 ಮೊಳ ಉದ್ದ 1½ ಮೊಳ ಅಗಲ ರೂ. 1½ರಿಂದ 9 ವರೆಗೆ, 6 ಮೊಳ ಉದ್ದ 1½ ಮೊಳ ಅಗಲ ರೂ. 2½ರಿಂದ 6 ವರೆಗೆ, 8 ಮೊಳ ಉದ್ದ 2 ಮೊಳ ಅಗಲ ರೂ. 3½ರಿಂದ 10 ವರೆಗೆ, 12 ಮೊಳ ಉದ್ದ 2¼ ಮೊಳ ಅಗಲ ರೂ. 6ರಿಂದ 12 ವರೆಗೆ, 16 ಮೊಳ ಉದ್ದ 2¼ ಮೊಳ ಅಗಲ ರೂ. 5ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಷ್ಮೆ ಮಡಿಗಳು, ಪಾವುರ್ಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ, ಉಂಗುರಗಳು ಮುಂತಾದ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಮು. ನಾರಾಯಣಾಚಾರ್ಯರ್
ಮತ್ತು ಕಂಪೆನಿ, ಬಂಗಾಳ, ಕಾಶೀ ಕ್ಷೇತ್ರ

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆಸಿಕೊಳ್ಳುವದಕ್ಕೆ ಒಂದು ದೇಶದ ಮಾರ್ಗಶಾಸ್ತ್ರವು ಇರುವುದು. ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.
ಸುಪ್ರಸಿದ್ಧವಾದದ್ದು.
ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, ಮದ್ರಾಸ್.

MANGALORE MUNICIPALITY.

Applications are invited for the post of a Reveuue Officer. Pay Rs. 150-5-200 annual plus cycle allowance Rs. 5, Cash securities for Rs. 1,000 with two personal securities for Rs. 1,000 each, has to be furnished. Selected candidate will be on probation for one year. Applications with particulars as to age, qualifications, and past experience etc. should reach the Chairman by 31st May 1926, and the successful candidate should be prepared to join duty on 1st July 1926.

MUNICIPAL OFFICE, Mangalore, 1-5-'26. M. A. — *Nellikai Venkat Rao,* Chairman M. C.

ನೋಟೀಸು.

ಕಟೀಲು ಶ್ರೀ ದುರ್ಗಾಪರಮೇಶ್ವರಿ ಎಲಿಮೆಂಟರಿ ಶಾಲಾ ಮ್ಯಾನೇಜರ್ ಕೆ. ಕೋಟಿ ಸೆಟ್ಟಿಯು ಸದರಿ ಶಾಲೆಯಲ್ಲಿ ಮೊದಲು ಹೆಡ್‌ಮಾಸ್ತರರಾಗಿದ್ದ ಎಮ್. ವೆಂಕಟಸುಬ್ಬರಾವ್ ಇವರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ:—

No. Dis No. 2. P. E. Dated 2—4—'26 ನೇ ಹುಕುಂ ಮೇರೆಗೆ ನಿಮ್ಮ ಹೆಸರ ಪಾಸು ಪುಸ್ತಕವು ನಮಗೆ ಅಗತ್ಯವಿರುವುದರಿಂದ ನಾವು ನಿಮಗೆ-ಇದೇ ಕಳದ ತಾರೀಕು 16—3—1926ರಲ್ಲಿ ಕೊಟ್ಟ S. D. E. No. 17/26ನೇ ನೋಟೀಸಿನಲ್ಲಿ ತೋರುವಂತೆ ಸದರಿ ಪಾಸು ಪುಸ್ತಕವನ್ನು ನಮಗೆ ಪಾವತಿ ಮಾಡಿ ನಮ್ಮಿಂದ ರಶೀದಿ ಪಡಕೊಳ್ಳತಕ್ಕದ್ದು. ಇಲ್ಲವಾದರೆ ಆ ಪುಸ್ತಕದ ದ್ವಿಪ್ರತಿ ಬಗ್ಗೆ ಬರಕೊಳ್ಳುತ್ತೇವೆ. ಎಂಬ ಸಂಗತಿಯನ್ನು ಈ ಮೂಲಕ ತಿಳಿದಿರತಕ್ಕದ್ದು.

ಕಟೀಲು ಶ್ರೀ ದುರ್ಗಾಪರಮೇಶ್ವರಿ ಎಲಿಮೆಂಟರಿಸ್ಕೂಲ್, ತಾ 28-4-1926. — ಕೋಟಿ ಸೆಟ್ಟಿ, ಮ್ಯಾನೇಜರ್.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ
ಓ. ಪಿ. ನಂಬ್ರ 63/1926.

ಭವಾನಿ ಯಾನೆ ಶಾಂತಾಬಾಯಿ—ಕವಳಿಗೆ ಸುಂದರರಾಯರ ವಿಧವೆ ಮಂಗಳೂರು ಶಹಾರ . . . . . } ಅರ್ಜಿದಾರಳು.

ಸದರಿ ಮೃತಪಟ್ಟ ಸುಂದರರಾಯರಿಗೆ ಬೊಂಬಾಯಿ ಲೈಫ್ ಎಸ್ಸುರೆನ್ಸ ಕಂಪೆನಿಯಿಂದ ಬರತಕ್ಕ ರೂ. 1,000 ವಸೂಲು ಮಾಡುವರೆ ತನ್ನ ಹೆಸರಿಗೆ ಸರ್ಟಿಫಿಕೇಟು ಕೊಡಿಸಬೇಕಾಗಿ ಸದರಿ ಅರ್ಜಿದಾರಳು ಮೇಲ್ಕಂಡ ಕೋರ್ಟಿಗೆ ಸದರಿ ಅರ್ಜಿ ದಾಖಲು ಮಾಡಿರುತ್ತಾಳೆ. ಆ ಅರ್ಜಿಯು ತಾ. 26-6-'26ಕ್ಕೆ ತನಖಿಗೆ ಇಟ್ಟಿದೆ. ಯಾರಾದರೂ ಆಕ್ಷೇಪವುಳ್ಳವರು ಸದರಿ ತಾರೀಕು ಒಳಗೆ ಮೇಲ್ಕಂಡ ಕೋರ್ಟಿಗೆ ದಾಖಲು ಮಾಡಬೇಕಾಗುತ್ತದೆ ಎಂಬ ಸಂಗತಿ ಸರ್ವ ಜನರಿಗೆ ತಿಳಿಸೋಣಾಗುತ್ತದೆ.

ಮಂಗಳೂರು, ತಾ. 8-5-1926. — **K. P. Gopalkrishna Rao,** *Vakil for Petitioner.*

ವ್ಯವಸಾಯ ಇಲಾಖೆಯ ಡೈರೆಕ್ಟರರ ಭಾಷಣದ — ಸಾರಾಂಶ. —

ಕಳೆದ ಎಪ್ರಿಲ್ ತಿಂಗಳ ತಾ. ೧೭ನೇ ಸಾಯಂಕಾಲದಲ್ಲಿ ಡಿಸ್ಟ್ರಿಕ್ಟ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನಿನ ಸಭೆಯು, ಕಲೆಕ್ಟರ್ ವೆಲ್ಸ ದೊರೆಗಳವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ ವ್ಯವಸಾಯ ಇಲಾಖೆ ಡ್ಯಾರೆಕ್ಟರರಾದ ರ್‍ಯಾಂಡೊಲ್ಫ ಡಿ. ಎನ್ಫೀಲ್ಡ್ ದೊರೆಗಳವರು ಕೊಟ್ಟ ಭಾಷಣದ ಸಾರಾಂಶವನ್ನು ಈ ಕೆಳಗೆ ಕೊಟ್ಟಿದೆ.

ಈ ಸಂಘದವರು ಮೂರು ಬೀಜದ ಹೋರಿಗಳನ್ನು ಇಟ್ಟಿರುತ್ತಾರೆ. [illegible]

ಪತ್ರವ್ಯವಹಾರ.

[ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

ಅಯ್ಯಾ ಸಂಪಾದಕರೆ,

[illegible]

Abdulrahiman Affani.

ವಿದೇಶ ವರ್ತಮಾನ.

—ಫ್ರೆಂಚ್ ಸ್ಪೈನ್ ಮತ್ತು ರಿಫ್ ರೊಳಗೆ ಆಗಲಿಕ್ಕಿರುವ ಒಪ್ಪಂದದ ಶರ್ತಗಳು ಬಿದ್ದುಹೋದವು. ರಿಫರು ಸ್ಪೈನಿನ ಸಂಗಡ ಯುದ್ಧ ಮಾಡಲು ಆರಂಭಿಸಿರುವರು.

[illegible]

ಒಳದೇಶ ವರ್ತಮಾನ.

[illegible]

ದಕ್ಷಿಣ ಕನ್ನಡ.

[illegible]

ಅನುಕ್ರಮಣಿಕೆ.

	ಪುಟ.
ಅಗ್ರಲೇಖ	
ಇದು ಉತ್ಕ್ರಾಂತಿಯೊ?	೬-೭
ಸ್ಫುಟವಿಚಾರಗಳು	೭
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೫
ದಕ್ಷಿಣ ಕನ್ನಡ – ಬಂಟವಾಳ, ಪಾಣೆಮಂಗಳೂರು, ಫರಂಗಿಪೇಟೆ, ಮಂಜೇಶ್ವರ, ಪಂಜ, ಕಾಸರಗೋಡು, ಸುರತಕಲ್ಲು	"
ಮಂಗಳೂರು	೮
ವಿವಿಧ ವಿಷಯ	"
ವ್ಯವಸಾಯ ಇಲಾಖೆಯ ಡ್ಯಾರೆಕ್ಟರರ ಭಾಷಣದ ಸಾರಾಂಶ	೪
ಪತ್ರವ್ಯವಹಾರ	"

ಸ್ವದೇಶಾಭಿಮಾನಿ.

ಶಕ ೧೮೪೮ ವೈಶಾಖ ಶು|| ೩ಯು ಶುಕ್ರವಾರ.

ಇದು ಉತ್ಕ್ರಾಂತಿಯೊ?

ಇಂಗ್ಲೀಷ ಅಸಹಕಾರ.

ಈಗ ಹತ್ತು ದಿನಗಳಿಂದ ಇಂಗ್ಲೆಂಡಿನ ಸಮಸ್ತ ಮಜೂರಿ ಕಾರರು ತಮ್ಮ ತಮ್ಮ ಕೆಲಸಗಳನ್ನು ನಿರಾಕರಿಸಿ ಮುಷ್ಕರ ಹಿಡಿದು ಕೂಡಿರುವ ಸಂಗತಿಯ ವಿಶೇಷತೆಯು ಪ್ರಾಯಶಃ ಈ ಶಾಂತ ವಾತಾವರಣದ ಹಿಂದೂಸ್ಥಾನದಲ್ಲಿ ನಮಗೆ ಹೆಚ್ಚಿನವರಿಗೆ ತಿಳಿಯಲಿಕ್ಕಿಲ್ಲ. ಅಲ್ಲದೆ ಇಡೀ ಲೋಕದ ಜನಾಂಗಗಳ ದೃಷ್ಟಿಯು ಆಂಗ್ಲ ದೇಶದ ಕಡೆಗೂ, ಆಂಗ್ಲ ಜನತೆಯ ಕಡೆಗೂ, ಆಂಗ್ಲ ಮಾನಸಿಕತೆಯ ಕಡೆಗೂ ಅವಿಚಲವಾಗಿ ಲಕ್ಷಿಸುತ್ತಿದೆ ಎಂಬ ವಿಷಯವೂ ನಮಗೆ ತಿಳಿಯದಿರಬಹುದು. ಇಂಗ್ಲೆಂಡಿನ ಈ ದಿನ ಕಠಿಣವಾದ ಮತ್ತು ಸಂದಿಗ್ಧವಾದ ಸಮಯಕ್ಕೆ ತುಲನಾತ್ಮಕವಾದ ಸಮಯವೂ ಇಡೀ ಭೂಲೋಕದ ಯಾವ ಜನಾಂಗದ ಇತಿಹಾಸದಲ್ಲಿಯೂ ಕಾಣಬಹುದೆಂದು ಹೇಳಲಾಗುವುದಿಲ್ಲ. ಇದರ ಗಭೀರತೆಯು ಪ್ರಾಯಶಃ ೧೯೨೧ನೇ ಇಸವಿಯ ಹಿಂದೂಸ್ಥಾನವನ್ನು ಲಕ್ಷಿಸಿದರೆ ಮನೋಗತವಾಗಬಹುದೊ ಏನೊ!

ಹೇಗೆ ಮಹಾತ್ಮಾ ಗಾಂಧಿಯು ಹಿಂದೂಸ್ಥಾನದಲ್ಲಿ ಅಹಿಂಸಾತ್ಮಕ ಉತ್ಕ್ರಾಂತಿಯನ್ನುಂಟುಮಾಡಲು ತನ್ನ ಅಸಹಯೋಗ ಸಾಧನವನ್ನು ಮುಂದೊತ್ತಿದರೊ, ಪ್ರಾಯಶಃ ಆಂಗ್ಲ ಮಜೂರ ಪಕ್ಷವೂ, ಹಾಗೆಯೇ ಈ ಮುಷ್ಕರ ರೂಪವಾದ ಅಹಿಂಸಾತ್ಮಕ ಅಸಹಯೋಗ ವ್ರತವನ್ನು ಧಾರಣೆ ಮಾಡಿರುವರು. ಮುಷ್ಕರವೆಂಬುದು ಸ್ಪಷ್ಟವಾದ ಅಸಹಯೋಗ ವ್ರತವೆಂಬುದನ್ನು ನಮ್ಮ ಕನ್ಸ್ಟಿಟ್ಯೂಶನಲ್ ಮೆತಡ್ಸ ಎಂದು ಕೂಗುವ ಅಪ್ರತಿಮ ವಿಜ್ಞ ಹಿಂದೀಯ ರಾಜಕೀಯ ಧುರೀಣರು ತಿಳಿದುಕೊಳ್ಳುವುದು ಅವಶ್ಯವಿದೆ. ಮತ್ತು ಬರೇ ಜೀವನದ ಲೌಭದ ಏರಿಳಿತಗಳಿಗಾಗಿ ಒಂದು ಜನಾಂಗದ ಬಿದ್ದಂಶವು ಈ ಅಸಹಕಾರವನ್ನು ಅನುಕರಿಸಬಹುದಾದರೆ, ಇಡೀ ಜನಾಂಗದ ಉದ್ಧರಣೆಗಾಗಿ ಈ ಸಾಧನೆಯನ್ನು ಅನುಕರಿಸುವುದು ಕೇವಲ ನ್ಯಾಯವೂ ಅವಶ್ಯವೂ ಆಗಿದೆಯೆಂದು ನಾವು ತಿಳಿಯಬಹುದು!

ಹಿಂದೂಸ್ಥಾನದಲ್ಲಿ ಅಸಹಯೋಗವು ಪ್ರಚಂಡ ಆವೇಗದಿಂದಲೂ ಉತ್ಸಾಹದಿಂದಲೂ ನಡಿಯುತ್ತಿದ್ದಾಗ ಹಿಂದೀಯರ ಮಿತ್ರರೆನ್ನಿಸಿಕೊಳ್ಳುವ ಆಂಗ್ಲ ಮಜೂರಿ ಧುರೀಣರು, ಕರ್ನಲ್ ವೆಜ್‌ವುಡ್, ರಾಮ್ಸೆ ಮೆಕ್ಡೊನಾಲ್ಡ ಮುಂತಾದವರು ಈ ಅಸಹಯೋಗವನ್ನು ಖಂಡಿಸಿದ್ದರು. ಹಿಂದೂಸ್ಥಾನದ ಉದ್ದೇಶವು ಉಚ್ಚವಿದ್ದಿತು; ಆಶಯವು ಉಚ್ಚವಿದ್ದಿತು; ಸಾಧನೆಯು ಉಚ್ಚವಿದ್ದಿತು. ಆದರೂ ಈ ಹಿಂದೀಯ ಮಿತ್ರಮಹಾಶಯರು ಈ ಸಂದರ್ಭಗಳಲ್ಲಿ ತಮ್ಮ ಅಸಮ್ಮತಿಯನ್ನು ಸೂಚಿಸಲು ಹಿಂದೆಗೆಯಲಿಲ್ಲ. ಆದರೆ ಈಗವರು ಏನನ್ನುವರು. ಕೇವಲ ಸಾಮಾನ್ಯವಾದ ಉದ್ದೇಶಕ್ಕಾಗಿ, ಸಾಮಾನ್ಯವಾದ ಆಶಯಕ್ಕಾಗಿ ಈ ಸಾಮಾನ್ಯ ತರದ ಅಸಹಯೋಗವನ್ನು, ಜನಾಂಗದ ಇತರ ಅಂಶವೇ ಬಹಳ ಬಳಲುವಂತಿರುವಾಗ, ಪುಷ್ಟೀಕರಿಸುವರೇ? ಹಿಂದೀಯರ ವಿಷಯದಲ್ಲಿಯೂ ಸ್ವಜನರ ವಿಷಯದಲ್ಲಿಯೂ ಈ ನಿಷ್ಪಕ್ಷಪಾತ ಉದಾರಿಗಳೆನ್ನಿಸುವವರಿಗೆ ಬೇರೆ ಬೇರೆ ಅಭಿಪ್ರಾಯಗಳಿವೆಯೇ?

ಮಜೂರ ಧುರೀಣರ ಭಿನ್ನವರ್ತನ (Inconsistent conduct)ದ ವಿಷಯವಾಗಿ ನಾವು ಹೆಚ್ಚು ಆಲೋಚಿಸುವುದಿಲ್ಲ. ಬ್ರಿಟಿಷರು ಮಜೂರರಾಗಲಿ, ಲಿಬರಲರಾಗಲಿ, ಕನ್ಸರ್ವೇಟಿವರಾಗಲಿ ಎಲ್ಲರೂ ಅಧೀನ ಜನಾಂಗಗಳ ಮಟ್ಟಿಗೆ ಸಾಮ್ರಾಜ್ಯವಾದಿಗಳೇ ಆಗಿರುವರು.

ಇನ್ನು, ಸುಧಾರಣಾ ಸರಕಾರವನ್ನು ನಿರೋಧಿಸಿದ ಮಾತ್ರದಿಂದ ಹಿಂದೀಯರು ಸ್ವರಾಜ್ಯಕ್ಕೆ ಅನರ್ಹರಾದರೆ, ಹಿಂದೂ ಮುಸಲ್ಮಾನ ಕಲಹಗಳು ತಲೆದೋರಿದ ಕಾರಣದಿಂದ ಹಿಂದೀಯರು ಸ್ವರಾಜ್ಯಕ್ಕೆ ಅನರ್ಹರಾದರೆ, ರಾಜಕೀಯ ಪಂಗಡಗಳು ಹೆಚ್ಚಿದ ಮಾತ್ರದಿಂದ ಹಿಂದೀಯರು ಸ್ವರಾಜ್ಯಕ್ಕೆ ಅನರ್ಹರಾದರೆ, ನಿಶ್ಚಯವಾಗಿಯೂ, ಆಂಗ್ಲರ ಈ ದಿನ ಸ್ವಾಧೀನರಿರಲು ಯಾವ ಯೋಗ್ಯತೆಯೂ ಅವರೊಳಗಿಲ್ಲ. ಅದಕ್ಕೆ ಈ ಪ್ರಚಂಡವಾದ ವರ್ಗೀಯ ಸಂಗ್ರಾಮ (Class war)ವೇ ಸಾಕ್ಷಿಯಾಗಿದೆ. ಹಿಂದೀಯರೊಳಗೆ ಜಾತೀಯ (communal) ಕಲಹಗಳಿದ್ದರೆ, ಪಾಶ್ಚಾತ್ಯರಲ್ಲಿ ವರ್ಗೀಯ (class) ಕಲಹಗಳಿವೆ. ಹಿಂದೀಯರೊಳಗೆ ರಾಜಕೀಯ ಭೇದಗಳು ಬಹಳವಿದ್ದರೆ, ಪಾಶ್ಚಾತ್ಯರಲ್ಲಿ ಈ ಭೇದಗಳು ಕಡಿಮೆಯಿಲ್ಲ. ಹಿಂದೀಯರ ಅನಾಚಾರಿಗಳೆಲ್ಲಾ ದಂಗೆ ಖೋರರಿರುವುದಾದರೆ ಆಂಗ್ಲರಲ್ಲಿ ಅಂತಹರು ಕಡಿಮೆಯಿಲ್ಲ. ಹಿಂದೀಯರ ಊನತೆಗಳನ್ನು ನೋಡಿ, ಹಿಂದೀಯ ಸಾಸಿವೆಗಳನ್ನು ಹೆಕ್ಕಿ ಜಗಕ್ಕೆ ದೊಡ್ಡದಾಗಿ ತೋರಿಸುವ ಆಂಗ್ಲರ ಸ್ವಾರ್ಥಪರಮೌಢ್ಯವನ್ನು ನಾವು ತಿರಸ್ಕಾರದಿಂದಲೇ ಕಾಣಬೇಕಾಗಿದೆ.

ಇಂಗ್ಲೆಂಡಿನ ಸಂಪತ್ತು.

ಅವೆಲ್ಲ ವಿಷಯಗಳಂತಿರಲಿ. ಪ್ರಕೃತ ನಮ್ಮ ದೃಷ್ಟಿಯು ಈ ಮುಷ್ಕರದ ಪ್ರಾಮುಖ್ಯತೆಯ ಮೇಲೂ ಪರಿಣಾಮದ ಮೇಲೂ ಕೇಂದ್ರಿತವಾಗುವುದು ಆವಶ್ಯಕವಿದೆ. ಆಂಗ್ಲರೊಳಗೆ ಹೇಗೆ ಈ ಪ್ರಚಂಡ ಮುಷ್ಕರವು ಪ್ರಾರಂಭವಾಯಿತು, ಹೇಗೆ ಮುಂದೆ ನಡೆದೀತು, ಮತ್ತು ಯಾವ ಪರಿಣಾಮವನ್ನು ಹೊಂದೀತು ಎಂಬುದನ್ನು ಚೆನ್ನಾಗಿ ಪರಿಶೀಲಿಸಿ ಆಲೋಚಿಸುವುದೇ ನಮ್ಮ ಪ್ರಕೃತದ ಉದ್ದೇಶವಿದೆ.

ಸಾಮ್ರಾಜ್ಯವಾದದ ಒಳಗುಟ್ಟು.

ನಾವು ಈ ಮುಷ್ಕರದ ವಿಷಯವಾಗಿ ಆಲೋಚಿಸುವಾಗ' ಇಂಗ್ಲೆಂಡು, ಬರೇ ಕೈಗಾರಿಕೆಯ ದೇಶವೆಂಬುದನ್ನೂ, ಅದರ ಪವರ ಹೌಸುಗಳ (Power Houses) ನಿತ್ಯ ಸಂಚಾಲನವೇ ಇಂಗ್ಲೆಂಡಿನ ಆ ಸಂಪತ್ತಿನ ಏಕ ಮಾತ್ರ ಆಧರವಾಗಿದೆ ಎಂಬುದನ್ನೂ ನಾವು ಮರೆಯಬಾರದು. ಬೇಕಾದ ಹಸಿ ಸಾಮಗ್ರಿಗಳು (Raw Materials) ಪರದೇಶದಿಂದಲೇ ಬರಬೇಕು. ತಯಾರಾದ ಕಾರಖಾನೆ ಮ್ಹಾಲುಗಳು ಪರದೇಶಕ್ಕೇನೇ ಹೋಗಬೇಕು. ಈ ಆಮದು ರಫ್ತುಗಳ ಅಂತರವೇ ಇಂಗ್ಲೆಂಡಿನ ಜೀವನವನ್ನು ಸಾಗಿಸಬೇಕು. ಫಲತಃ ಇಂಗ್ಲೆಂಡಿನ ಸರ್ವ ಶ್ರೀಮಂತಿಕೆಯೂ ಕೂಲಿ ಜೀವನದ ಮೇಲೆ ಆದರಿಸಿದೆ,

ಇಂಗ್ಲೆಂಡು ಕೈಗಾರಿಕೆ ರಾಷ್ಟ್ರಗಳಲ್ಲಿ ಶ್ರೇಷ್ಠವಾದುದು. ಪೂರ್ವದಿಂದಲೂ ಅದು ತನ್ನ ಸಂಪತ್ತನ್ನು ಹೆಚ್ಚಿಸುತ್ತ ಬಂದಿದೆಯಲ್ಲದೆ; ತನ್ನ ಸಾಮ್ರಾಜ್ಯವನ್ನು ಎಲ್ಲೆಲ್ಲೂ ಪ್ರಸಾರಿಸಿ, ಸರ್ವ ಕಡೆಗಳಲ್ಲಿಯೂ ಇಂಗ್ಲೆಂಡಿನ ಮ್ಹಾಲಿನ ಗಿರಾಕಿಗಳು ಹೆಚ್ಚುವಂತೆ ಪ್ರಯತ್ನಿಸುತ್ತಿದೆ. ಇಂಗ್ಲೆಂಡಿನ ಉದಾರ ಸಾಮ್ರಾಜ್ಯವಾದದ ಒಳಗುಟ್ಟು ಸಹ ಇದೇ ಆಗಿದೆ. ಈ ಕೈಗಾರಿಕೆಗಳ ಮೂಲಕ ಇತರ ದೇಶಗಳ ದ್ರವ್ಯವನ್ನು ಶೋಷಣ ಮಾಡಿ ಇಂಗ್ಲೆಂಡು ದಿನೇ ದಿನೇ ಶ್ರೀಮಂತವಾಗುತ್ತಿದೆ.

ವರ್ಗೀಯ ಸಮರ.

ಪಾಶ್ಚಾತ್ಯ ನಾಗರಿಕತೆಯ ಅತೀ ಮುಖ್ಯವಾದ ಲಕ್ಷಣವೆಂದರೆ ಅದರ ಸಂಘ ಶಕ್ತಿಯ ಸುವ್ಯವಸ್ಥೆ. ಪ್ರತಿ ಒಂದು ವಿಜ್ಞಾನವೂ, ಪ್ರತಿಯೊಂದು ಜಾತಿಯೂ, ಪ್ರತಿಯೊಂದು ವರ್ಗವೂ ಸಂಘ ಮೂಲಕವಾಗಿಯೇ, ನೈಜ ಹಿತವನ್ನೂ ಉನ್ನತಿಯನ್ನೂ ಸಾಧಿಸುತ್ತಿವೆ. ಸಂಘ ಮೂಲಕವಾದ ಸಂಘಟನೆಯು ಸಂಘ ಮೂಲಕ ಪ್ರಕಟವಾದ ಬಹುಮತಕ್ಕೆ ವಿಧೇಯತ್ವವೂ ಪಾಶ್ಚಾತ್ಯ ನಾಗರಿಕತೆಯ ಲಕ್ಷಣವಾಗಿದೆ.

ಇಂಗ್ಲೆಂಡಿಗೆ ಕೈಗಾರಿಕೆಗಳ ಮೂಲಕ ಲಾಭವಾಗುತ್ತಿರುವ ಸಂಪತ್ತನ್ನು ಸಂಪಾದಿಸುವುದರಲ್ಲಿ ಮಜೂರಿ ವರ್ಗವೂ ಧನಿಕರೂ ಪರಸ್ಪರ ಈರ್ಷೆಯಿಂದ ಪ್ರಯತ್ನಿಸುವುದೇ ಈಗಿನ ಈ ಮುಷ್ಕರದ ಮೂಲಕಾರಣವೆನ್ನಬಹುದು. ಇದಕ್ಕಾಗಿ ಮಜೂರರು ಟ್ರೇಡ ಯೂನಿಯನ್ ಕಾಂಗ್ರೆಸ್ (Trade Union-Congress)ವೆಂಬ ಮಜೂರ ಸಮ್ಮಿಲನವನ್ನು ರಚಿಸಿರುವರು. ಮತ್ತು ಧನಿಕರು, ಮೈನ್ ಓನರ್ಸ (Mine owners). ಮಿಲ್ ಓನರ್ಸ (Mill Owners) ಈ ರೀತಿಯಾಗಿ ಆಯಾ ಕೈಗಾರಿಕೆಗೆ ಸಂಬಂಧವಾದ ಸಂಸ್ಥೆಗಳನ್ನು ರಚಿಸಿರುವರು. ಧನಿಕರ ಈ ಎಲ್ಲಾ ಸಂಸ್ಥೆಗಳು ಇಂಗ್ಲೀಷ ಸರಕಾರದಲ್ಲಿ ಐಕ್ಯ ಹೊಂದಿವೆ ಎನ್ನಬಹುದು. ಏಕೆಂದರೆ ಇಂಗ್ಲೀಷು ಸರಕಾರವು ಅತೀ ಉದಾರ ಸೂತ್ರಗಳಿಂದ ಸಂಚಲಿತವಿರುವ ಪಾರ್ಲಿಮೆಂಟಿನ ಮೂಲಕ ನಡೆಯುವುದಾದರೂ, ಸಾಮಾನ್ಯವಾಗಿ ಧನಿಕ ಪ್ರತಿನಿಧಿಗಳಿಗೇನೇ ಪಾರ್ಲಿಮೆಂಟಿನಲ್ಲಿ ಬಹುಮತವಿದ್ದು, ಸರಕಾರವು ಧನಿಕರ ಅಡಿಕೈಯಾಗಿದೆ. ಆದುದರಿಂದ ಸಾಮಾನ್ಯವಾಗಿ ಟ್ರೇಡ್ ಯೂನಿಯನ್ ಕಾಂಗ್ರೆಸ್ ಒಂದು ಕಡೆಗೂ, ಧನಿಕ ಸರಕಾರವು ಎದುರುಗಡೆಗೂ ಇದ್ದು ಎಂದಿನಿಂದಲೂ ಸಣ್ಣ ಸಣ್ಣ ಕಾಳಗಗಳು ಇಂಗ್ಲೆಂಡಿನಲ್ಲಿ ನಡಿಯುತ್ತಲೇ ಇದ್ದುವು.

ಪ್ರಥಮದ ಪರಾಜಯ.

ಎರಡು ವರ್ಷಗಳ ಹಿಂದೆ ಗಣಿಯ ಕೂಲಿಕಾರರಿಗೂ, ಗಣಿಯ ಮ್ಹಾಲಿಕರಿಗೂ ಇದೇ ತರದ ವಿವಾದವು ಉಂಟಾಗಿತ್ತು ಮತ್ತು ಗಣಿಯ ಕೂಲಿಕಾರರು, ತಮ್ಮ ಮೇಲಿನ ಸಹಾನುಭೂತಿಯಿಂದ ರೈಲ್ವೆ ಮತ್ತು ಇತರ ಕೆಲಸದ ಕೂಲಿಗಳೂ ಮುಷ್ಕರ ಹಿಡಿಯುವರೆಂಬ ವಿಶ್ವಾಸದಿಂದ ಮುಷ್ಕರ ಹಾಕಿದರು. ಆ ಸಮಯದಲ್ಲಿ ನೌಕೆ, ರೈಲ್ವೆ, ಗಣಿ ಈ ಮೂರು ಕೂಲಿಸಂಸ್ಥೆಗಳೊಳಗೆ (Triple Alliance) ಎಂಬ ಒಪ್ಪಂದವು ಆಗಿತ್ತು. ಆದರೆ ಗಣಿಯ ಕೂಲಿಗಳು ತಮ್ಮ ಹಿತಕ್ಕಾಗಿ ಮುಷ್ಕರ ಹಾಕಿದರೂ, ಇತರ ಎರಡು ಕೂಲಿ ಸಂಸ್ಥೆಗಳು ಧೈರ್ಯಪಡದೆ, ಗಣಿಯ ಕೂಲಿಕಾರರ ಮುಷ್ಕರವು ಒಡೆದು ಹೋಗಿತ್ತು.

ಮಜೂರ ಸರಕಾರ.

ಆ ಮೇಲೆ ಮಜೂರ ಪಕ್ಷದ ಸರಕಾರವು ಇಂಗ್ಲೆಂಡಿನ ಮೇಲೆ ಅಧಿಕರಿಸಿತು. ಕೂಲಿಪಕ್ಷಗಳೊಳಗೆ ಆಶಾಂಕುರವಾಯಿತು. ತಮ್ಮನ್ನು ಮಾನಿಸಲು ಜನಾಂಗವು ಸಿದ್ಧವಿದೆ, ತಮ್ಮ ಧುರೀಣತ್ವವನ್ನು ಅನುಕರಿಸಲು ಜನಾಂಗಕ್ಕೆ ಇಚ್ಛೆಯಿದೆ ಎಂದಿತ್ಯಾದಿ ಉಚ್ಚ ಆಶೆಗಳಿಂದ ಮಜೂರ ಪಕ್ಷವು ಹಿರಿಹಿರಿ ಹಿಗ್ಗಿತು. ಆದರೆ ಸ್ವಲ್ಪ ಸಮಯದಲ್ಲಿಯೇ ಈ ವಿಶ್ವಾಸವು ಒಡೆದುಹೋಯಿತು. ಮೆಕ್ಡೊನಾಲ್ಡ ಸರಕಾರವು ಇಂಗ್ಲೆಂಡನ್ನು ಸಗೌರವವಾಗಿ ಅಧಿಕರಿಸಿತು; ಇಂಗ್ಲೆಂಡಿನ ಸಾಮ್ರಾಜ್ಯವಾದವನ್ನು ಪುಷ್ಟೀಕರಿಸಿತು; ಇಂಗ್ಲೆಂಡಿನ ವ್ಯಾಪಾರಗಳಿಗಾಗಿ ಹೊಸ ಹೊಸ ರಸ್ತೆಗಳನ್ನು ಹುಡುಕಿತು. ಮತ್ತು ಇಂಗ್ಲೆಂಡಿನ ಆತ್ಮ ಶಾಂತಿಯನ್ನೀಯಲು ಯತ್ನಿಸಿತು. ಮೆಕ್ಡೊನಾಲ್ಡ ಸರಕಾರವು ಇನ್ನು ಕೆಲವು ಸಮಯವಿದ್ದುದಾದರೆ, ಹಿಂದೂಸ್ಥಾನದ ಮಟ್ಟಿಗೆ ಅಲ್ಲವಾದರೂ, ಲೋಕದ ಮಟ್ಟಿಗೆ ರಾಷ್ಟ್ರಗಳ ವ್ಯವಹಾರವನ್ನು ಪವಿತ್ರೀಕರಿಸಬಹುದಿತ್ತು.

ಕನ್ಸರ್ವೆಟಿವರ ಸಂಕುಚಿತ ಧೋರಣ.

ಇಂಗ್ಲೆಂಡಿನ ಕನ್ಸರ್ವೆಟಿವ್ ಪಕ್ಷವು ಈ ಅನನುಭವಿಕ ಮಜೂರ ಪಕ್ಷಕ್ಕೊಂದು ಸಹಾನುಭೂತಿಪೂರ್ವಕ ಸಂದರ್ಭವನ್ನು ಒದಗಿಸಿಕೊಡುವಷ್ಟು ಉದಾರವಿಲ್ಲದೆ ಹೋಯಿತು. ಅದರ ಹೆಸರಿನಷ್ಟೇ ಅದರ ಧೋರಣವೂ ಸಂಕುಚಿತವಾಯಿತು. ಮತ್ತು ಮೆಕ್ಡೊನಾಲ್ಡ ಸರಕಾರವನ್ನು ಅಧಿಕಾರದಿಂದ ತಳ್ಳಲು ಈ ಕನ್ಸರ್ವೆಟಿವ್ ಪಕ್ಷವು ಯಾವ ಹೀನ ಉಪಾಯಗಳನ್ನು ಸಾಧಿಸಲಿಕ್ಕೂ ಹಿಂಜರಿಯದೆ ಹೋಯಿತು.

ಮೆಕ್ಡೊನಾಲ್ಡ ಸರಕಾರವು ಅಧಿಕಾರಕ್ಕೆ ಬಂದ ಅಲ್ಪ ಸಮಯದಲ್ಲಿಯೇ ಅಧಿಕಾರದಿಂದ ನಿವೃತ್ತವಾಗಬೇಕಾಯಿತು. ಆಗಲೇ ಮಜೂರ ಪಕ್ಷದ ನಿರಾಶೆಯು ವ್ಯಕ್ತವಾಯಿತು. ತಮ್ಮ ಸಾಧುವಾದ ಉದ್ದೇಶಗಳನ್ನು ಕೂಡ ಈ ಸಂಕುಚಿತ ಭಾವನೆಯುಳ್ಳ ಧನಿಕ ಜನಾಂಗವು ಮಾನಿಸುವುದಿಲ್ಲವೆಂದು ಮಜೂರ ಪಕ್ಷವು ತಿಳಿಯಿತು. ಮೆಕ್ಡೊನಾಲ್ಡರಂತಹ ರಾಜತಂತ್ರಜ್ಞರು ತಮ್ಮ ಈ ಪರಾಜಯವನ್ನು ಹೃದಯದ ನೈರಾಶದ ನೀರವತೆಯಲ್ಲಿಯೇ ಮುಳುಗಿಸಿದರಾದರೂ, ಸ್ಪಷ್ಟ ವಕ್ತೃಗಳಾದ ತೊಮಸ್ ಕುಕ್‌ರಂತಹ ಮಜೂರಪಕ್ಷದ ಧುರೀಣರು ಸುಮ್ಮಗಾಗಲಿಲ್ಲ. ಮಜೂರ ಪಕ್ಷವು ಬಲವಾಗಬೇಕು; ಮಜೂರ ಪಕ್ಷವು ಧನಿಕರಿಗೆ ತಲೆತಗ್ಗಿಸಬಾರದು; ಮಜೂರ ಪಕ್ಷವು ಧನಿಕರ ಸಮ್ಮುಖದಲ್ಲಿ ಸರಿಸಮಾನತೆಯಿಂದಿರಬೇಕು; ಎಂಬ ಧೋರಣವನ್ನು ಈ ಧುರೀಣರು ಹೆಚ್ಚು ಸ್ಪಷ್ಟವಾಗಿ ಬೋಧಿಸಲಾರಂಭಿಸಿತು. ಟ್ರೇಡ್ ಯೂನಿಯನ್ ಕಾಂಗ್ರೆಸು ಮತ್ತಷ್ಟು ಬಲವಾಗಲಾರಂಭಿಸಿತು. ಮಜೂರ ಸಂಸ್ಥೆಗಳೊಳಗಿನ ಸಹಕಾರವೂ, ಐಕ್ಯವೂ ಹೆಚ್ಚಾಗಲಾರಂಭವಾಯಿತು.

ಟ್ರೇಡ್ ಯೂನಿಯನ್ ಕಾಂಗ್ರೆಸು ಅಖಂಡವೂ ಅಭೇದ್ಯವೂ ಮಾಡಲ್ಪಟ್ಟಿತು.

ನಿಮಿತ್ತಮಾತ್ರದ ಕಾರಣ.

ಗಣಿಗಳ ಕೂಲಿಕಾರರ ಮಜೂರಿ ಸಂಬಂಧವಾದ ವಿವಾದವು ಈ ಮುಷ್ಕರಕ್ಕೆ ನಿಮಿತ್ತ ಮಾತ್ರವಾಗಿದೆಯಲ್ಲದೆ, ಏಕ ಮಾತ್ರ ಕಾರಣವಾಗಿಲ್ಲ. ತೊಮಸ್ ಕುಕ್‌ರು ಎಂದಿನಿಂದಲೂ ತಮ್ಮ ಶಬ್ದಗಳ ಖಡ್ಗವನ್ನು ಝಳಪಿಸುತ್ತಲೇ ಇದ್ದರು. ಗಣಿಗಳ ಕೂಲಿಕಾರರ ವಿವಾದವು ಅವರಿಗೆ ನೆವಮಾತ್ರವಾಯಿತು. ವಿವಾದವು ಕೂಲಿಕಾರರ ಮುಖಂಡರು ಒಂದು ಕಡೆ ಗಣಿಗಳ ಮ್ಹಾಲಿಕರು ಒಂದು ಕಡೆ, ಸರಕಾರವು ಮಧ್ಯವರ್ತಿಯಾಗಿ ವಿವಾದವು ಚರ್ಚಿಸಲ್ಪಡುವಾಗಲೆ ಜನರಲ್ ಸ್ಟ್ರೈಕ್ (General Strike) ಸೂಚನೆಯಾಗಿ ಡೈಲಿಮೈಲಿನ ಕೆಲಸಗಾರರು ಮುಷ್ಕರ ಹಾಕಿದರು. ಬಾಲ್ಡವಿನ್ ಸರಕಾರಕ್ಕೆ ತಾವು ಹೆದರುವವರಲ್ಲವೆಂದು ತೋರಿಸಲಿಕ್ಕಿದ್ದಿತು. ಸ್ಟ್ರೈಕಿನ ಪ್ರತಿಯಾಗಿ ಸರಕಾರವು ರಾಜಿಪಂಚಾಯಿತಿಕೆಯನ್ನು ನಿಲ್ಲಿಸಿಬಿಟ್ಟಿತು. ಕೂಡಲೇ ಸಮಸ್ತ ಕೆಲಸಗಾರರೂ ಕೆಲಸವನ್ನು ನಿಲ್ಲಿಸಿದರು. ರೈಲು ನಡಿಸಲಿಕ್ಕೆ ಜನವಿಲ್ಲ; ಪತ್ರಿಕೆಗಳನ್ನು ಮುದ್ರಿಸಲಿಕ್ಕೆ ಜನವಿಲ್ಲ; ಗಣಿಗಳನ್ನು ಅಗಿಯಲಿಕ್ಕೆ ಜನವಿಲ್ಲ; ಆಹಾರ ಸಾಮಗ್ರಿಗಳನ್ನೊಯ್ಯಲಿಕ್ಕೆ ಜನವಿಲ್ಲ. ಹೀಗೆ ಸರ್ವ ತರದ ಕೆಲಸಗಳೂ ನಿಲ್ಲಿಸಲ್ಪಡುವಂತಾಗಿಯದೆ. ಅತ್ಯಂತ ಮುಖ್ಯವಾದ ಕೆಲಸಗಳನ್ನು ಮಾಡಿ ಸಮಾಜ ಪ್ರವಾಹವು ನಿಲ್ಲದಂತೆ ಮಾಡುವ ಬಗ್ಗೆ ಸ್ವಯಂಸೇವಕರು ಕರೆಯಲ್ಪಟ್ಟು, ಈಗ ಹಲವು ವ್ಯವಹಾರದ ಕೆಲಸಗಳೂ, ಆಹಾರ ಸಾಮಗ್ರಿಗಳನ್ನು ಒಯ್ಯುವ ಕೆಲಸವೂ, ಈ ಸ್ವಯಂಸೇವಕರಿಂದ ನಡೆಯಲ್ಪಡುತ್ತಿವೆ.

ಇಂತಹ ಪ್ರಚಂಡವಾದ ಮುಷ್ಕರದಿಂದ ಜನತೆಗೆ ಅದೇ ಪರಿಮಾಣದಲ್ಲಿ ಅನಾನುಕೂಲವಾಗಲೇ ಬೇಕು. ಸರಕಾರವು ಈ ಸ್ವಯಂಸೇವಕ ದಳದಿಂದಲೂ, ವಿದ್ರೋಹಿ ಕೂಲಿಗಳಿಂದಲೂ, ಎಲ್ಲಾ ಅಗತ್ಯವಾದ ಕೆಲಸಗಳೂ ನಡೆಯುತ್ತಿವೆ, ಮುಷ್ಕರದಿಂದ ದೊಡ್ಡದಾಗುವಂತಹ ಬಾಧಕವೇನೂ ಇಲ್ಲ, ಮುಷ್ಕರವು ಮುರಿಯುತ್ತಾ ಬರುತ್ತಿದೆ ಎಂಬ ಆಶಾಜನಕ ವರ್ತಮಾನಗಳನ್ನು, ಈ ಮುಷ್ಕರ ಸಮಯಕ್ಕಾಗಿಯೇ ನವೀನವಾಗಿ ಪ್ರಕಟಿಸುತ್ತಿರುವ ತನ್ನ "ಬ್ರಿಟಿಷ ಗಜೆಟ್" ಎಂಬ ಪತ್ರದಲ್ಲಿಯೂ ವರ್ತಮಾನವಿತರಣಾ ಸಂಸ್ಥೆಯಾಗಿರುವ ರ್‍ಯಾಟರನ ಮೂಲಕವೂ ಹಬ್ಬಿಸುತ್ತಿದೆಯಾದರೂ, ಮುಷ್ಕರವು ಅಷ್ಟು ಸುಲಭವಾಗಿ ಮುರಿಯಲ್ಪಡುವುದೆಂದು ವಿಶ್ವಾಸಿಸಲು ಕಾರಣವಿಲ್ಲ.

ಕೂಲಿಕರ ಸಂಘಟನೆ

ಏಕೆಂದರೆ ಸರಕಾರದ ಸಂಸ್ಥೆಯು ಎಷ್ಟೇ ಸುಸಂಘಟಿತವಿರುವುದಾದರೂ ಕೂಲಿಕಾರರ ಸಂಸ್ಥೆಯೂ ಕಡಿಮೆ ಸುಸಂಘಟಿತವಾಗಿಲ್ಲ. ಟ್ರೇಡ್ ಯೂನಿಯನ್ ಕಾಂಗ್ರೆಸಿಗೆ ದೇಶದ ಎಲ್ಲಾ ಭಾಗಗಳಿಂದಲೂ ಧನಸಹಾಯವು ಬರುತ್ತಿದೆ. ಅಲ್ಲದೆ ಸರಕಾರದ ಏಕಪಕ್ಷೀಯ ವರ್ತಮಾನಗಳನ್ನು ನಿರೋಧಿಸಿ ತಮ್ಮ ಪಕ್ಷದ ವರ್ತಮಾನಗಳನ್ನು ಹಬ್ಬಿಸಲಿಕ್ಕೆ "ಬ್ರಿಟಿಷ್ ಗಜೇಟ್"ನಂತೆಯೇ "ದಿ ಬ್ರಿಟಿಷ್ ವರ್ಕರ" ಎಂಬ ಮುಷ್ಕರ ಸಮಯಕ್ಕಾಗಿ ಮಾತ್ರವೇ ಹೊಸದೊಂದು ದೈನಿಕ ಪತ್ರಿಕೆಯನ್ನು ಟ್ರೇಡ್ ಯೂನಿಯನ್ ಕಾಂಗ್ರೆಸು ಹೊರಡಿಸಿಯದೆ.

ಇದು ಮಜೂರಿಗಾಗಿ ಬಡ ಕೂಲಿಕಾರರು ಪಡುವ ಯಂತ್ರಣೆಯಲ್ಲ; ಇದು ಬರೇ ಸಾಮಾನ್ಯವಾದ ಮುಷ್ಕರವಲ್ಲ; ಇದು ಕೂಲಿಕಾರರ ಮತ್ತು ಧನಿಕರ; ಕೂಲಿಕಾರರ ಮತ್ತು ಸರಕಾರದ ಮಧ್ಯದಲ್ಲಿ ನಡಿಯುವ ಸಂಗ್ರಾಮವೆಂದು ಸ್ವಲ್ಪ ಚೆನ್ನಾಗಿ ಆಲೋಚಿಸಿದರೆ ತಿಳಿಯಬರುವುದು.

ಪರಿಣಾಮ.

ಸಮಸ್ತ ಜಗತ್ತು ಈ ಮುಷ್ಕರವನ್ನು ಇದೇ ರೀತಿಯಲ್ಲಿ ನೋಡುತ್ತಿದೆ. ಅಮೇರಿಕದಲ್ಲಿ ಇದು ನಿರಸ್ತ್ರವಾದ ಉತ್ಕ್ರಾಂತಿ ಎಂದು ಹಲವರು ಅನ್ನುವರು. ಇತರ ದೇಶಗಳಲ್ಲಿಯೂ ಬಹಳ ಉದ್ವಿಗ್ನರಾಗಿ ಸರಕಾರಗಳು ಈ ನೀರವ ಸಂಗ್ರಾಮದ ಫಲಿತವನ್ನು ನಿರೀಕ್ಷಿಸುವರು. ಲೋಕನಾಯಕತ್ವದ ಲೋಭದಲ್ಲಿ ಲೇಬರ ಆಗಲಿ, ಲಿಬರಲ್ ಆಗಲಿ, ಕನ್ಸರ್ವೇಟಿವ್ ಪಕ್ಷವು ಭಿನ್ನಾಭಿಪ್ರಾಯವುಳ್ಳದ್ದಾಗಿಲ್ಲವಾದರೂ, ರಾಷ್ಟ್ರೀಯ ಹಿತಕ್ಕಾಗಿ ಇಂಗ್ಲೆಂಡು ಅತೀ ಅನುಮಾನಕರವಾದ ಸಂದರ್ಭಗಳಲ್ಲಿ ಕೂಡ ಒಮ್ಮಿಂದೊಮ್ಮೆ ಒಂದಾಗಿ ಹೋಗುವುದು ಆಂಗ್ಲ ಜನತೆಯ ಒಂದು ಗರ್ಭಸ್ಥಿಭಾವವಾಗಿದ್ದರೂ, ಈ ಅಂತರ್ಯುದ್ಧದ ಸಮರ ರಂಗವು ಹೇಗೆ ಪರಿಣತವಾದೀತೆಂದು ಹೇಳುವುದು ಸಾಧ್ಯವಲ್ಲವಾಗಿದೆ. ವಿಷದ ಬೀಜವು ಎಂದೊ ಬಿತ್ತುಹೋಗಿಯದೆ. ಇದು ಪ್ರಾಯಶಃ ವಿಷವೃಕ್ಷವಾಗಿ ಕೆಲವು ಸಮಯ ಬೆಳೆಯಲೂ ಬಹುದು. ಪ್ರಾಯಶಃ ಬೆಲ್ಲನೆ ಈ ಮುಷ್ಕರವು ಮುಗಿಯಲೂ ಬಹುದು; ಇಲ್ಲವೆ ಸರಕಾರವು ಮಜೂರಿ ಪಕ್ಷದ ಕೇಳಿಕೆಗೆ ತಲೆ ತಗ್ಗಿಸಲೂ ಬಹುದು; ಆದರೆ ಇದರ ವಿಷಫಲವೇನೊ ಭವಿತವ್ಯಕ್ಕಾಗಿ ಬೆಳೆಯುವುದೆಂಬುದು ವ್ಯಕ್ತವಿದೆ. ಬ್ರಿಟಿಷ ರಾಜತಂತ್ರವು ಇದನ್ನು ದೂರವಮಾಡಬಲ್ಲುದಲ್ಲದೆ ನಾಶಮಾಡಲಾರದು. ಆದರೆ ಪ್ರಕೃತದಲ್ಲಿ ಈ ಸಂದಿಗ್ಧ ಸಮಯವನ್ನು ನಾವು ಮುಹೂರ್ತ ಮುಹೂರ್ತವೂ ಲಕ್ಷಿಸಬೇಕು. ಹಿಂದೀ ಸ್ವರಾಜ್ಯ ಯುದ್ಧದ ರಂಗಭೂಮಿಯು ಎಲ್ಲಿಯೆಂದು ಯಾರಿಗೆ ಗೊತ್ತು?

ಸ್ಫುಟವಿಚಾರಗಳು.

ಮಾರ್ಗಗಳ ಬಗ್ಗೆ ಒಂದು ಬೋರ್ಡು.

ನಮ್ಮ ಜಿಲ್ಲೆಯಲ್ಲಿ ಪ್ರಯಾಣ ಸೌಕರ್ಯಗಳು ಹೇಗೆ ಹೆಚ್ಚುತ್ತಾ ಬಂದಿವೆಯೆಂದೂ, ಆ ಕಾರಣವಾಗಿ ಹೇಗೆ ಮಾರ್ಗಗಳು ಬಹಳ ಕೆಡಕಾದ ಸ್ಥಿತಿಗೆ ಬಂದು, ಪ್ರಯಾಣ ಸಾಧನಗಳ ನಾಜೂಕಿನಂತೆ ಮಾರ್ಗಗಳೂ ಉತ್ತಮವಾಗುವ ಆವಶ್ಯಕತೆಯು ಏಕೆ ಇದೆಯೆಂದೂ, ಈ ಬಗ್ಗೆ ಡಿಸ್ಟ್ರಿಕ್ಟ ಬೋರ್ಡಿನವರು ಮಾರ್ಗಗಳ ದುರುಸ್ತಿಯ ಕಡೆಗೆ ವಿಶೇಷ ಲಕ್ಷ್ಯಕೊಡಬೇಕೆಂದೂ ನಾವು ಈ ಮೊದಲೇ ಸೂಚಿಸಿದ್ದೆವು. ಇತ್ತೀಚೆಗೆ ಮುಂಬಾಯಿ ಪ್ರಾಂತಿಕ ಸರಕಾರದವರು ಇದೇ ಅಭಿಪ್ರಾಯದಿಂದ ಒಂದು ಪ್ರತ್ಯೇಕ ಬೋರ್ಡನ್ನೇ ಸ್ಥಾಪಿಸಿರುವರಾಗಿ ನಾವು ತಿಳಿಯುತ್ತೇವೆ. ವಿಲಾಯತಿಯಲ್ಲಿ ಮೋಟರ ಪ್ರಯಾಣವು ಬಹಳವಾಗಿ ಉಚ್ಚಸ್ಥಿತಿಗೆ ಬಂದದೆ. ಅಲ್ಲಿ ನಾಲ್ಕಾರು ಟನ್ನಗಳ ಗಾಡಿಗಳು ಕೂಡ ಚಲಾವಣೆಯಲ್ಲಿವೆ. ಒಂದೊಂದು ಗಾಡಿಯಲ್ಲಿ ೪೦-೬೦ ಜನರು ಸುಖವಾಗಿ ಕೂತುಕೊಳ್ಳುವ ಏರ್ಪಾಡಿರುತ್ತದೆ. ಮೋಟರ ಗಾಡಿಗಳು, ವಿದ್ಯುತ್ತಿನಿಂದ ನಡಿಯುವ ಟ್ರಾಮ ಗಾಡಿಗಳೊಡನೆ ಸ್ಪರ್ಧಿಸಿ ಅವುಗಳನ್ನು ಕೂಡ ಹಿಂದೆ ಹಾಕುತ್ತಾ ಬರುತ್ತಿದೆ. ಅನ್ನುವಾಗ ಅಲ್ಲಿಯ ಮಾರ್ಗಗಳು ಎಷ್ಟು ಉತ್ತಮವಿವೆ ಎಂಬುದನ್ನು ನಾವು ಚೆನ್ನಾಗಿ ತಿಳಿಯಬಹುದು. ನಮ್ಮ ಜಿಲ್ಲೆಯಲ್ಲಿ ಒಂದು ಟನ್ನಿನ, ೧೬ ಜನರು ಕೂಡ್ರುವ ಗಾಡಿಯು ಕೂಡ, ನ್ಯೂಮೆಟಿಕ್ ಟಾಯರುಗಳಿದ್ದೂ ಸರಿಯಾಗಿ ನಡಿಯಲು ಈ ಮಾರ್ಗಗಳಲ್ಲಿ ಕಷ್ಟವಾಗುತ್ತಿದೆ. ಮುಂಬಾಯಿ ಸರಕಾರವು ಪ್ರಾಯಶಃ ಈ ಪರಿಸ್ಥಿತಿಯನ್ನು ತಿಳಿದೇ ರಸ್ತೆಗಳ ಬಗ್ಗೆ ಪ್ರತ್ಯೇಕ ಒಂದು ಬೋರ್ಡನ್ನು ಸ್ಥಾಪಿಸಿದರೆಂದು ತಿಳಿಯುತ್ತದೆ. ರಸ್ತೆಗಳ ಕಡೆಗೆ ಇಂತಹ ಪ್ರತ್ಯೇಕ ಲಕ್ಷ್ಯವು ಅಗತ್ಯವಿದೆಯೆಂದು ನಾವು ಬೇರೆ ಹೇಳಬೇಕಾಗಿಲ್ಲ. ಮದ್ರಾಸ ಸರಕಾರವೂ ಇಂತಹ ಪ್ರತ್ಯೇಕ ಒಂದು ಬೋರ್ಡನ್ನು ರಚಿಸಿದರೆ ಉತ್ತಮವಿತ್ತು. ನಮ್ಮ ಜಿಲ್ಲೆಯೂ ಈ ನಿದರ್ಶನವನ್ನು ಅನುಕರಿಸುವುದು ಅಗತ್ಯವಿದೆ.

ಹಿಂದೂ ಮುಸಲ್ಮಾನ.

ದಿನ ದಿನವೂ ಹಿಂದೂ ಮುಸಲ್ಮಾನರೊಳಗೆ ಐಕ್ಯವು ಹೆಚ್ಚುವ ಬದಲು ಭೇದವು ಹೆಚ್ಚಾಗುತ್ತಾ ಬರುತ್ತಿದೆ. ಕೆಲವು ಸ್ವಾರ್ಥಪರ ತುಂಟರಿಂದ ಪ್ರಾರಂಭವಾದ ಈ ಭೇದವು ಈಗ ಧುರೀಣರ ಸೇರುವಿಕೆಯಿಂದ ಘಟ್ಟಿಯಾಗುತ್ತಿರುವಂತೆ ತೋರುತ್ತಿದೆ. ಮುಸಲ್ಮಾನ ಧುರೀಣರು ಹಿಂದೂಗಳನ್ನು ಸ್ವೇಚ್ಛೆಯಂತೆ ಹಳಿಯುತ್ತಿರುವರು. ಮೊನ್ನೆ ಕೂಡಿದ ಖಿಲಾಫತ್ ಪರಿಷತ್ತಿನಲ್ಲಿ ಈ ಐಕ್ಯಕ್ಕೆ ಅನುಕೂಲವಾದ ಭಾಷಣಗಳಿರುವುದಕ್ಕಿಂತಲೂ, ಚಿರಕಲಹದ ಸೂಚನೆಯನ್ನು ಕೊಡುವ ಭಾಷಣಗಳೇ ಹೆಚ್ಚಿದ್ದುವು. ಮುಖ್ಯವಾಗಿ ಹಿಂದೂ ಮಹಾಸಭೆ, ಸಂಗತನ ಚಳವಳ ಮತ್ತು ಶುದ್ಧಿ ಈ ಮೂರು ವಿಷಯಗಳಿಗೆ ಎಲ್ಲಾ ಮುಸಲ್ಮಾನರು ವಿರೋಧವು ಇದ್ದಿತು. ಮುಖ್ಯವಾಗಿ ಶುದ್ಧಿಯೇ ಮುಸಲ್ಮಾನ ಜನತೆಯನ್ನು ಆ ಕಾರಣವಾಗಿ ಮುಸಲ್ಮಾನ ಧುರೀಣರನ್ನೂ ಕೆಣಕಿಸಿಯದೆ. ಮಹಾಸಭೆಯು ಜಾತೀಯ ಸ್ವಾರ್ಥತೆಯ ಚಿಹ್ನೆಯೆಂದೂ, ಅಂತಹ ಜಾತೀಯ ಸ್ವಾರ್ಥತೆಯ ಸಂಸ್ಥೆಯನ್ನು ಮುಸಲ್ಮಾನರು ರಚಿಸಿಲ್ಲವೆಂದೂ, ಹಿಂದೂಗಳೇ ಹಿಂದೂ ಮುಸಲ್ಮಾನ ಐಕ್ಯಕ್ಕೆ ಅಡ್ಡಿಯಾಗುತ್ತಿರುವರೆಂದೂ ಮುಸಲ್ಮಾನ ಧುರೀಣರ ಅಂಬೋಣವಿದೆ. ಹಿಂದೂಗಳ ಈ ದುರಾಚಾರಗಳನ್ನು ನಿರೋಧಿಸಲಿಕ್ಕೆ ಮುಸಲ್ಮಾನರು ಸೊಂಟಕಟ್ಟಿ ಸಿದ್ಧರಿರುವುದೇ ಉತ್ತಮ ಉಪಾಯವೆಂದೂ, ಹತ್ತು ಸಾವಿರ ಸ್ವಯಂ ಸೇವಕರನ್ನು ಸಿದ್ಧಮಾಡಿ ಮೌಲಾನಾ ಮಹಮ್ಮದಲ್ಲಿಯವರ ಅಧೀನತೆಯಲ್ಲಿ ಕೊಟ್ಟರೆ ಈ ಹಿಂದೂಗಳು ಹತ್ತಿರ ಬರಲಿಕ್ಕಿಲ್ಲವೆಂದೂ, ಈ ರೀತಿಯಲ್ಲಿಯೇ ಮುಸಲ್ಮಾನ ಹಿತವು ಸ್ಥಿರವಾಗುವುದೆಂದೂ ಒಬ್ಬರ ಅಂಬೋಣವಿದೆ. ಇವೆಲ್ಲ ಮಾತುಗಳನ್ನು ಕೇಳುವಾಗ ಹಿಂದೂ ಮುಸಲ್ಮಾನ ಐಕ್ಯದ ವಿಷಯದಲ್ಲಿ ಸಂಪೂರ್ಣ ನಿರಾಶೆಯುಂಟಾಗುತ್ತಿದೆ. ಹಿಂದೂ ಮುಸಲ್ಮಾನ ಐಕ್ಯವು ಸುಲಭಸಾಧ್ಯವಲ್ಲವೆಂದು ಅದಕ್ಕಾಗಿ ಅತ್ಯಂತ ದೃಢವಾದ ಮಾನಸಿಕತೆಯುಳ್ಳ ಧುರೀಣರು ಇತ್ತಂಡದಲ್ಲಿಯೂ ಇದ್ದರೆ ಮಾತ್ರವೇ ಹಿಂದೂ ಮುಸಲ್ಮಾನ ಐಕ್ಯವು ಸಾಧ್ಯವಾದೀತೆಂದೂ, ಈಗಿನ ಪರಿಸ್ಥಿತಿಯಲ್ಲಿ ಐಕ್ಯಕ್ಕಿಂತ ಭಿನ್ನತೆಯೇ ಹೆಚ್ಚೆಚ್ಚಾಗಿ ಬೆಳೆಯುತ್ತಿದೆಯೆಂದೂ ತೋರುತ್ತಿದೆ.

ಭದ್ರಾವತಿಯ ಕಬ್ಬಿಣದ ಕಾರಖಾನೆ.

ಮೈಸೂರು ದೇಶದ ಕೈಗಾರಿಕೆಗಳನ್ನು ಉತ್ತಮ ತರಗತಿಗೆ ತರಲು ಚಿಂತಿತವಾಗಿದ್ದ, ಸರ್. ಎಮ್. ವಿಶ್ವೇಶ್ವರಯ್ಯನವರ ಮೈಸೂರು ಸರಕಾರವು ತನ್ನ ಅನೇಕ ಉದ್ಯೋಗಿಕ ಸಂಸ್ಥೆಗಳ ರಚನೆಯಲ್ಲಿ, ಭದ್ರಾವತಿ ಕಾರಖಾನೆಯನ್ನೂ ಸ್ಥಾಪಿಸಿತು. ಹಿಂದೂಸ್ಥಾನದಲ್ಲಿ ಕಬ್ಬಿಣದ ಕಾರಖಾನೆಗಳು ಬಹಳ ಕಡಿಮೆ ಇರುವುದೆಂದರೆ ಒಂದು ತಾತಾ ಕಂಪೆನಿಯವರದು, ಇನ್ನೊಂದು ಬಂಗಾಳ ಆಯರ್ನ ಎಂಡ್ ಸ್ಟೀಲ್ ಕಂಪೆನಿ, ಮೂರನೆಯದಾಗಿ ಭದ್ರಾವತಿ ಕಾರಖಾನೆ. ಇದರ ಮೇಲೆ ದೀಕತಕ್ಕ ಮೂಲಧನವು ಕಾರಣಾಂತರದಿಂದ ಅಗತ್ಯವಿದ್ದುದಕ್ಕಿಂತಲೂ ಹೆಚ್ಚಾಗಿ ಬಿದ್ದಿತೆಂದೂ, ಇಂತಹ ದೊಡ್ಡ ಸಂಸ್ಥೆಗಳು ಫಲಪ್ರದವಾಗಬೇಕಾದರೆ ಸಮಯ ಹೋಗಬೇಕೆಂದೂ, ಭದ್ರಾವತಿಯು ಈಗ ಸ್ವಲ್ಪ ನಷ್ಟಕರವಾಗಿ ಇದ್ದರೂ, ಮುಂದೆ ಲಾಭಕರವಾಗುವುದೆಂದೂ, ಇಂತಹ ಕೈಗಾರಿಕೆಗಳು ಸರಕಾರವಲ್ಲದೆ ಖಾಸಗಿ ಜನರು ಮಾಡಿದರೂ, ಇತರ ದೇಶಗಳಲ್ಲಿ ಸರಕಾರವೇ ಅವರಿಗೆ ನಷ್ಟಬೀಳದಂತೆ ಸಹಾಯ ದ್ರವ್ಯವನ್ನು ಕೊಡುವಾಗ, ಮೈಸೂರು ಸರಕಾರವು ಸ್ವಲ್ಪ ನಷ್ಟವನ್ನು ಹಾಕಿಕೊಳ್ಳುವುದು ಹೆಚ್ಚಿನ ವಿಷಯವಲ್ಲವೆಂದೂ, ಇಂತಹ ಸಂಸ್ಥೆಗಳ ವಿಚಾರವಾಗಿ ಟೀಕಿಸುವಾಗ, ಬರೇ ಲಾಭ ನಷ್ಟಗಳನ್ನೇ ಎಣಿಸದೆ, ದೇಶಕ್ಕೆ ಸರ್ವಸಾಮಾನ್ಯವಾಗಿ ಉಂಟಾಗುವ ಹಿತವನ್ನು ಲಕ್ಷಿಸಬೇಕೆಂದೂ, ಸರ್. ಎಮ್. ವಿಶ್ವೇಶ್ವರಯ್ಯ ಮೊದಲಾಗಿ ಅದರ ಆಡಳಿತೆಗೆ ಸಂಬಂಧಪಟ್ಟವರು, ಮೈಸೂರಿನ ಪತ್ರಿಕೆಗಳ ವಿರೋಧ ಟೀಕೆಗೆ ಪ್ರತಿಯಾಗಿ ಒಂದು ಪ್ರಕಟಣೆಯನ್ನು ಕೊಟ್ಟಿರುವರು.

ಮೈಸೂರು ಪತ್ರಿಕೆಗಳಲ್ಲೂ, ಮದ್ರಾಸು ಪತ್ರಿಕೆಗಳಲ್ಲೂ ಮೈಸೂರಿನವರು ಈ ದೊಡ್ಡ ಉದ್ಯೋಗಿಕ ಸಂಸ್ಥೆಯನ್ನು ಖಂಡಿಸುವುದನ್ನು ನೋಡಿದರೆ ವಿಷಾದವಾಗುತ್ತದೆ. ಮೇಲಿನ ಪ್ರಕಟಣೆಯಂತೆ ಇಂತಹ ಸಂಸ್ಥೆಗಳ ವಿಷಯದಲ್ಲಿ ಬರೇ ಲಾಭ ನಷ್ಟವನ್ನು ಗುಣಿಸಿ ಟೀಕಿಸಿದರೆ ಸರಿಯಾದ ಫಲವು ದೊರಕುವುದಿಲ್ಲ. ಮೈಸೂರಿಗೆ ಈ ಕಾರಖಾನೆಯಿಂದ ಆಗುವ ದ್ರವ್ಯ ನಷ್ಟಕ್ಕಿಂತಲೂ ಇತರ ಲಾಭವು ಹೆಚ್ಚಿದೆ. ಸಾವಿರಾರು ಮಂದಿ ದುಡಿಯುವುದು, ಮೈಸೂರು ಗಣಿಗಳಿಗೆ ಮೌಲ್ಯ ಬರುವುದು, ಇತ್ಯಾದಿ ಪ್ರಯೋಜನವಿದೆ. ತಾತಾ ಕಂಪೆನಿಗೇನೇ ಹಿಂದೀ ಸರಕಾರವು ಲಕ್ಷಾವಧಿ ರೂಪಾಯಿ ಸಹಾಯ ದ್ರವ್ಯ ಕೊಟ್ಟಿರುವಾಗ ಮೈಸೂರು ಸರಕಾರವು ಈ ಕಾರಖಾನೆಗಾಗಿ ತತ್ಕಾಲಕ್ಕೆ ಕೆಲವು ಲಕ್ಷ ನಷ್ಟ ಹಾಳುವುದು ದೊಡ್ಡ ಮಾತಲ್ಲ.

ಸುಮ್ಮನೆ ಕೂತಲ್ಲಿ ಟೀಕೆಮಾಡುವುದಕ್ಕಿಂತಲೂ ಕಾರಖಾನೆಗೆ ಬಂದು ಭೇಟಿಯಾಗಿ ನಿಜಸ್ಥಿತಿಯನ್ನು ತಿಳಿದುಕೊಳ್ಳಬೇಕಾಗಿ ಆ ಪ್ರಕಟಣೆಯಲ್ಲಿ ಅವರು ಮಾಡಿದ ವಿನಂತಿಯು ಮಾನನೀಯವಿದೆ. ಮೈಸೂರಿನವರು ಈ ದೊಡ್ಡ ಕಾರಖಾನೆಯ ಮೇಲೆ ಅಭಿಮಾನಪಡಲು ಕಾರಣವಿದೆ. ಮತ್ತು ಅದನ್ನು ಕಿತ್ತು ಹಾಕುವ ಯೋಚನೆಗಿಂತಲೂ ಅದನ್ನು ಸುಧಾರಿಸಿ ಲಾಭಕರವಾಗಿ ಮಾಡುವ ಸೂಚನೆಗಳನ್ನು ಟೀಕಾಕಾರರು ಕೊಡುವುದು ಉತ್ತಮವಿದೆ.

ಕರ್ನಾಟಕ ಸಾಹಿತ್ಯ ಸಮ್ಮೇಲನ.

ಈ ಬಾರಿ ಬಳ್ಳಾರಿಯಲ್ಲಿ ಕೂಡಲಿರುವ ಕರ್ನಾಟಕ ಸಾಹಿತ್ಯ ಸಮ್ಮೇಲನಕ್ಕೆ ಕೊಟ್ಟ ಆಮಂತ್ರಣದೊಡನೆ, ನಮ್ಮ ಜಿಲ್ಲೆಯಲ್ಲಿಯೆ ಮುಂದಿನ ಸಮ್ಮೇಲನವು ಕೂಡಬೇಕೆಂಬ ಆಶೆಯು ಪ್ರಕಟವಾಗಿಯದೆ. ಮತ್ತು ದಕ್ಷಿಣಕನ್ನಡ ಜಿಲ್ಲೆಯವರು ಜರೂರು ಹಾಜರಿದ್ದು ಆಮಂತ್ರಿಸಬೇಕೆಂದೂ ಆಶಿಸಲ್ಪಟ್ಟದೆ. ನಮ್ಮ ಜಿಲ್ಲೆಯಲ್ಲಿ ಹುಟ್ಟನಲ್ಲಿಯೇ ಅಡಗಿಹೋದ ಜಿಲ್ಲಾ ಸಾಹಿತ್ಯ ಪರಿಷತ್ತಿನ ವಿಷಯ ತಿಳಿದವರಿಗೆ ತಿಳಿದೆ ಇದೆ. ಸಾಹಿತ್ಯ ಪರಿಷತ್ತಿಗಾಗಿ ಜನರು ಎಷ್ಟು ಉತ್ಸುಕರಿರುವರೆಂದು ಇದೊಂದೇ ತಿಳಿಸಬಹುದು. ಅಲ್ಲದೆ, ನಮ್ಮ ಜಿಲ್ಲೆಗೆ ಇತರ ಕಡೆಯ ಸಾಹಿತ್ಯ ಪರಿಷತ್ತಿನ ಅಭಿಮಾನಿಗಳು ಎಷ್ಟು ಜನರು ಬರಬಹುದೆಂಬುದೂ ವಿಚಾರಣೀಯವಿದೆ. ಆದರೂ ಉತ್ಸಾಹಿಗಳಿದ್ದಲ್ಲಿ, ಸಾಹಿತ್ಯ ಪರಿಷತ್ತನ್ನು ಮಂಗಳೂರಿನಲ್ಲಿ ನೆರೆಯಿಸುವುದು ಕಷ್ಟಕರವಾಗದು.

(ಹನೇ ಪೇಜಿಯಿಂದ ಮುಂದುವರಿದುದು)

ಬಹುದಲ್ಲವೇ? ಗ್ರಾಮಸ್ಥರು ಕೂಡಿ ಒಂದು ಗ್ರಾಮಪಂಚಾಯತವನ್ನಾದರೂ ಸ್ಥಾಪಿಸಲಾರರೇ?

ತಾಲೂಕು ಬೋರ್ಡು ಮೆಂಬರಿಕೆಗೆ ರಾ। ಗಳಾದ ಲಕ್ಷ್ಮಣ ಶೆಟ್ಟಿಯವರೂ ಲಿಂಗಪ್ಪ ಭಂಡಾರಿಗಳೂ, ಮಂಜಣ ಆಳ್ವರೂ, ನಾರಾಯಣ ಪೈಗಳವರೂ ಉಮೇದ್ವಾರರಾಗಿ ಆರಿಸಲ್ಪಟ್ಟಿರುತ್ತಾರೆ. ಆದರೆ ಪ್ರಥಮದ ಮೂವರ ಪೈಕಿ ಯಾರಾದರೂ ಒಬ್ಬರು ನಿಂತು ಬಾಕಿಯವರು ಹಿಂತೆಗೆಯುವಂತೆ ಒಂದು ಸಭೆಯು ಮಂಗಳೂರಿನಲ್ಲಿ ಜರಗುವದಂತೆ. ನಾಲ್ಕನೆಯವರು ಸಹಾ ಸೇರಿ ಒಂದು ಒಪ್ಪಂದ ಮಾಡಿದರೆ ಈ ಬೇಸಿಗೆ ಕಾಲದಲ್ಲಿ ಓಟರರ ಓಡಾಟವು ಅಗತ್ಯವಿಲ್ಲವಿತ್ತು. ಉಮೇದ್ವಾರರಿಗೆ ಅನಾವಶ್ಯಕ ಖರ್ಚು ಸಹಾ ಬೇಡವಿತ್ತು.

ಹೊಸಬೆಟ್ಟು ಪಂಚಾಯತ ಕೋರ್ಟಿನ ಪ್ರೆಸಿಡೆಂಟರಾದ ರಾ। ನಾರಾಯಣ ಪೈಗಳವರು ತಮ್ಮ ಹುದ್ದೆಗೆ ರಾಜಿನಾಮೆ ಕೊಟ್ಟಿರುವರಾಗಿಯೂ ಇದು ಅಂಗೀಕರಿಸಲ್ಪಡಲಿಲ್ಲವಾಗಿಯೂ ಒಂದು ಬಿರುಗಾಳಿ ಊರಲ್ಲೆಲ್ಲಾ ಹಬ್ಬಿದೆ. ಇದನ್ನು ನಂಬಿ ಅದೇ ಕೋರ್ಟಿನ ಮೆಂಬರರಲ್ಲೊಬ್ಬರು ಸದರಿ ಸ್ಥಾನಕ್ಕೆ ಪ್ರಯತ್ನಿಸುತ್ತಲಿದ್ದಾರೆ.

ಪಂಜ:— ಉಪ್ಪಿನಂಗಡಿ ತಾಲೂಕಿನ ಯಡಮಂಗ್ಲ ಗ್ರಾಮದ ಮ। ರಾ। ಬಳ್ಳಜೆ ಪರಮೇಶ್ವರ ಗೌಡರ ಮನೆಯಲ್ಲಿ ತಾ. ೨೯–೪–'೨೬ನೇ ದಿವಸ ಅವರ ಮಗ ಸುಬ್ರಾಯಗೌಡರ ಲಗ್ನವಾಗಿತ್ತು. ಸದರಿ ಲಗ್ನದ ಉದ್ದಿಶ್ಯ ಅನೇಕ ಮಂದಿ ಸ್ವಜಾತಿ ಗೃಹಸ್ಥರು ನೆರೆದಿದ್ದರು. ಈ ದಿವಸ ನೆರೆದ ಸಭಿಕರ ಪೈಕಿ ಮ। ರಾ। ಪಂಜ ಪೋಸ್ಟುಮಾಸ್ತರ್ ಏನಡ್ಕ ಕುಕ್ಕಪ್ಪನವರೂ, ಮತ್ತು ಬಾಳಿಲ ಶಾಲಾ ಮಾಸ್ಟರ್ ಟಿ. ಹೊನ್ನಪ್ಪನವರೂ ಕೂಡ ಇವರು ದಕ್ಷಿಣ ಕನ್ನಡ ಗೌಡ ವಿದ್ಯಾವರ್ಧಕ ಸಂಘದ ಉದ್ದೇಶಗಳನ್ನು ಮತ್ತು ಸಂಘದ ಅಭಿವೃದ್ಧಿಗೆ ತಾವು ಮಾಡಬೇಕಾದ ಕರ್ತವ್ಯವನ್ನು ವಿವರಿಸಿ ಹೇಳಿದ್ದಲ್ಲದೆ ಇವರು ಸಂಘದ ಪರವಾಗಿ ಹೆಚ್ಚಿನ ಉತ್ತೇಜನ ಪಟ್ಟಿರುವ ಕಾರಣ ಸದರಿ ಲಗ್ನದಲ್ಲಿ ಸ್ವಜಾತಿ ಮಹನೀಯರಿಂದ ಉಚಿತಾರ್ಥವಾಗಿ ರೂ. ೬–೧–೦ ಮತ್ತು ವಧೂವರರ ಕಡೆಯಿಂದ ರೂ. ೩–೦–೦, ಅಂತೂ ರೂ. ೧೦–೧–೦ ವಸೂಲು ಆಗಿಯದೆ. ಸದರಿ ಐವಜನ್ನು ಸಂಘದ ಆಡಳ್ತೆ ಮೆಂಬರ ರಾ। ಮಸ್ತರ್ ಟಿ. ಕಂಯಪ್ಪನವರ ವಶ ಜಮೆ ಬಗ್ಗೆ ಕೊಟ್ಟಿದೆ. ಇದೇ ರೀತಿ ಅಲ್ಲಲ್ಲಿ ನಡಿಯತಕ್ಕ ನಮ್ಮ ಸ್ವಜಾತಿಯ ಶುಭಶೋಭಾನಾದಿ ಕಾರ್ಯಗಳಲ್ಲಿ ಸಂಘದ ಎಲ್ಲಾ ಮೆಂಬರರೂ, ಮತ್ತು ಇತರ ಮಹನೀಯರು ಮನಗೊಟ್ಟು ಸಂಘದ ಹಿತವನ್ನು ಬಯಸಬೇಕಾಗಿ ಮೆಂಬರರಲ್ಲೊಬ್ಬರು ಅಪೇಕ್ಷಿಸುತ್ತಾರೆ.

ಕಾಸರಗೋಡು:— ದಕ್ಷಿಣಕನ್ನಡ ಜಿಲ್ಲಾ ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಏಳನೇ ಸಮ್ಮೇಲನಕ್ಕೆ ಕಾರ್ಯನಿರ್ವಾಹಕ ಮಂಡಳಿಯನ್ನು ಆರಿಸುವ ಸಭೆಯು ಇದೇ ಬರುವ ತಾ. ೧೬ನೇ ಆದಿತ್ಯವಾರ ಶ್ರೀ ವಸಿಷ್ಠಾಶ್ರಮದಲ್ಲಿ ಜರಗಲಿಕ್ಕಿದೆ. ಈ ತಾಲೂಕಿನ ಸ್ವಜಾತಿ ಬಾಂಧವರು ಬಂದು ಸಹಕರಿಸಲಿ.

ಸುರತಕಲ್ಲು:— ಇದೇ ಕಳೆದ ಆದಿತ್ಯವಾರ ವಿದ್ಯಾದಾಯಿನೀ ಶಾಲೆಯ ವಾರ್ಷಿಕೋತ್ಸವವು ಅತಿ ಸಂಭ್ರಮದಿಂದ ಜರಗಿತು. ಮ। ರಾ। ಪಣಂಬೂರು ರಾಘವೇಂದ್ರ ರಾವ್ ಎಮ್. ಎ ಇವರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಯು. ಸಿ. ಕೃಷ್ಣಭಟ್. ಯಂ. ಅನಂತಶಾಸ್ತ್ರಿ, ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ, ಪಾವಂಜೆ ನರಹರಿರಾವ್, ಬಾಳಿಲ್ಯ ದಾಸಣ್ಣಾಚಾರ್ಯ, ದೇರೆಬೈಲು ವಾಸುದೇವರಾವ್, ಪಂಡಿತ ಸೀತಾರಾಮಾಚಾರ್ಯ, ಇಡ್ಯ ವಾಸುದೇವಯ್ಯ ಮೊದಲಾದ ಮಹನೀಯರನೇಕರು ಸಭೆಯನ್ನಲಂಕರಿಸಿದ್ದರು. ಕರ್ಣಾಟಕ ಪಂಡಿತ ಎಸ್. ಸುಬ್ಬರಾಯರು ಶಾಲಾಭಿನಂದನವನ್ನು ಮಾಡಿದರು. ವಿದ್ಯಾರ್ಥಿಗಳು ಮನೋಹರವಾಗಿ ನಾಟಕವನ್ನಭಿನಯಿಸಿದರು. ನಂತರ ಮುಖ್ಯೋಪಾಧ್ಯಾಯರು ವರದಿಯನ್ನು ಓದಿದರು. ಮಹನೀಯರು ಸದಾಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಅನಂತರ ಅಧ್ಯಕ್ಷರ ಸರಸಭಾಷಣವಾಗಿ ಸಭೆಯು ಮುಕ್ತಾಯವಾಯಿತು. ಶ್ರೀಮಾನ್ ಇಡ್ಯ ಕೃಷ್ಣಯ್ಯನವರ ನೇತೃತ್ವದಲ್ಲಿ ಈ ಶಾಲೆಯು ಚಿರಾಯುವಾಗಿ ಅಭಿವೃದ್ಧಿ ಹೊಂದುತ್ತಿರುವಂತೆ ಭಗವಂತನು ಅನುಗ್ರಹಿಸಲಿ!

ಮಂಗಳೂರು.

ಇದೇ ತಿಂಗಳ ತಾರೀಕು ೧೬ನೇ ಆದಿತ್ಯವಾರ ಬೆಳಿಗ್ಗೆ ೭॥ ಘಂಟೆಗೆ ಮಂಗಳೂರು ಬ್ರಹ್ಮಸಮಾಜದ ಮಂದಿರದಲ್ಲಿ ರಾವ್‌ಸಾಹೇಬ ಕುದ್ಮುಲ ರಂಗರಾಯರಿಂದ ಕನ್ನಡದಲ್ಲಿ ಆರಾಧನೆಯೂ ಧರ್ಮವ್ಯಾಖ್ಯಾನವೂ ಇರುವುದು. ವ್ಯಾಖ್ಯಾನದ ವಿಷಯ "ಹೊಗೆಸೊಪ್ಪು".

ಮ। ರಾ। ಪುತ್ತೂರು ಕಲ್ಲಿ ಪೂವಣಿ ಹೆಗ್ಡೆರಲ್ಲಿ ತಾ. ೩–೫–೨೬ಲ್ಲು ನಡೆದ ಮದುವೆ ಸಮಯ ದಯಮಾಡಿಸಿದ್ದ ಮ। ರಾ। ಧರ್ಮಸ್ಥಳ ಮಂಜಯ್ಯ ಹೆಗ್ಡೆ M. L. C. ಯವರಿಗೆ ಸದರಿ ಪೂವಣಿ ಹೆಗ್ಡೆಯವರು ಉಡುಗೊರೆ ಮಾಡಿದ ರೂ ೭೫–೦–೦ನ್ನು ಮಂಗಳೂರು ಬೋರ್ಡಿಂಗಿನಲ್ಲಿ ಕಲಿಯುವ ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಕೊಟ್ಟಿರುತ್ತಾರೆ. ಜಾತಿಯ ಸದ್ಗೃಹಸ್ಥರು ಇವರ ಮೇಲುಪಂಕ್ತಿಯನ್ನು ಅನುಸರಿಸುವುದು ಶ್ಲಾಘನೀಯವಾಗಿದೆ. ಸದರಿ ಸ್ಕಾಲರ್‌ಶಿಪ್ಪನ್ನು ಅಪೇಕ್ಷಿಸುವವರು ಈ ತಿಂಗಳ ಅಂತ್ಯದೊಳಗೆ ತಿಳಿಸಿದ್ದಲ್ಲಿ ಸದರಿಯವರ ಅನುಮತಿ ಪಡದು ಸಹಾಯಧನವಾಗಿ ಕೊಡಲ್ಪಡುವುದು.

ಬಿಲ್ಲವರ ಶ್ರೀ ಶಿವಭಕ್ತಿಯೋಗ ಸಂಘದ ೧೫ನೇ ವರ್ಷದ ವರ್ಧಂತ್ಯುತ್ಸವವು ಗವರ್ನಮೆಂಟ್ ಟ್ರೈನಿಂಗ್ ಶಾಲಾ ಹೆಡ್‌ಮಾಸ್ಟರ್ ರಾ। ಉಳ್ಳಾಲ ಮಂಗೇಶರಾವ್ ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಿಂದ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ತಾ. ೯–೫–'೨೬ರಲ್ಲು ಬಹಳ ಸಂಭ್ರಮದಿಂದ ನೆರವೇರಿ ಸೋಣಾಯಿತು.

ಇದೇ ಬರುವ ಅಕ್ಷಯ ಸಂವತ್ಸರದ ವೈಶಾಖ ಶುದ್ಧ ೫ಯು ಆದಿತ್ಯವಾರ ಸರಿಯಾದ (೧೬–೫–೧೯೨೬) ಶ್ಯಾಮ ಗಂಟೆ ೫ಗೆ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಗೀತಾಧರ್ಮ ಮಂಡಲದ ಕಡೆಯಿಂದ ಆದಿ ಶಂಕರಾಚಾರ್ಯರ ಜಯಂತ್ಯುತ್ಸವವು ನಡಿಸಲ್ಪಡುವುದು. ಈ ಸಂದರ್ಭದಲ್ಲಿ ಅಭಿಮಾನಿಗಳೆಲ್ಲರೂ ಸ್ವಸಾನ್ನಿಧ್ಯಗಳಿಂದ ಸಭೆಯನ್ನು ಅಲಂಕರಿಸಿ ಉಪನ್ಯಾಸ ಪ್ರವಚನಗಳನ್ನು ಕೇಳಿ ಪವಾಶ್ಚೀಗಳನ್ನು ಸ್ವೀಕರಿಸಿ ಉತ್ಸವವನ್ನು ಯಶಸ್ವಿಯಾಗಿ ಮಾಡಿಸಬೇಕಾಗಿ ಪ್ರಾರ್ಥನೆ. ಇನ್ನು ಈ ಸಮಯದಲ್ಲಿ ಆದಿ ಶಂಕರಾಚಾರ್ಯರ ಜೀವನ ಚರಿತ್ರೆ, ಅದ್ವೈತ ಸಿದ್ಧಾಂತದ ಮರ್ಮ ಮೊದಲಾದುವುಗಳನ್ನು ಕುರಿತು ಭಾಷಣ ಮಾಡುವವರಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆ ಇರುವದು.

ಎಸ್. ರಾಮಚಂದ್ರ ಐಯರ್,

ವಿವಿಧ ವಿಷಯಗಳು.

ನ್ಯೂಯೋರ್ಕ ಪಟ್ಟಣದ ಅಭಿವೃದ್ಧಿ.

ನ್ಯೂಯೋರ್ಕ ಪಟ್ಟಣವು ಯುನ್ಯಾಟೆಡ್ ಸ್ಟೇಟ್ಸಿನಲ್ಲಿ ಬಹಳ ದೊಡ್ಡ ಪಟ್ಟಣವಾಗಿದೆ. ಈಗ ಈ ಪಟ್ಟಣಕ್ಕೆ ೩೦೦ ವರುಷ ಪ್ರಾಯವಾಯಿತು. ಈ ಪಟ್ಟಣವನ್ನು ೧೬೨೬ರಲ್ಲಿ ಮನ್‌ಹಟನ್ ಎಂಬ ದ್ವೀಪದಲ್ಲಿ ಸ್ಥಾಪಿಸಿದರು. ಇದಕ್ಕೆ ಆ ಸಮಯದಲ್ಲಿ ನ್ಯೂಯೋರ್ಕ ಎಂಬ ಹೆಸರು ಇರಲಿಲ್ಲ. ಈ ಹೆಸರನ್ನು ಅದಕ್ಕೆ ೧೬೬೪ರಲ್ಲಿ ಕೊಟ್ಟರು. ಈ ವರುಷ ೨ನೇ ಚಾರ್ಲ್ಸನು ಅದನ್ನು ತನ್ನ ತಮ್ಮನಾದ ಜೇಮ್ಸ್‌ಡ್ಯೂಕ್ ಒಫ್ ಯೋರ್ಕ ಇವರಿಗೆ ಕೊಟ್ಟನು. ಇಲ್ಲಿ ೧೬೧೩ರಲ್ಲಿ ಡಚ್ಚರು ಕೆಲವು ಗುಡಿಸಲುಗಳನ್ನು ಕಟ್ಟಿದ್ದರು. ೧೬೨೩ರಲ್ಲಿ ಕೆಲವು ವ್ಯಾಪಾರಸ್ಥರು ಬಂದು ಬಲವಾದ ಕಟ್ಟೋಣಗಳನ್ನು ೧೬೨೬ರಲ್ಲಿ ಕಟ್ಟಿ ಇಲ್ಲಿಯೇ ನಿಂತರು. ಇವುಗಳನ್ನು ಇವರು ವೃತ್ತಾಕಾರದಲ್ಲಿ ಕಟ್ಟಿದ್ದರಿಂದ ಇವುಗಳನ್ನು ಒಂದು ಕೋಟೆಯಂತೆ ಕಾಣುತ್ತಿದ್ದವು. ಈಗ ಈ ಸ್ಥಳದಲ್ಲಿ ಕಸ್ಟಮ್‌ಹೌಸ್ ಇವೆ. ನಂತರ ಡಚ್ಚರು ಇಲ್ಲಿ ಡಚ್ ವೆಸ್ಟ ಇಂಡಿಯಾ ಕಂಪೆನಿಯನ್ನು ಸ್ಥಾಪಿಸಿ ಈ ದ್ವೀಪವನ್ನು ಇಂಡಿಯನರಿಂದ ೫ ಪೌಂಡು ಬೆಲೆಗೆ ಕೊಂಡುಕೊಂಡರು.

ಆ ಸಮಯದಲ್ಲಿ ಡೊಲ್ಲರ್ ಎಂಬ ನಾಣ್ಯವು ಇರಲಿಲ್ಲ. ಆಗ ಇಂಡಿಯನರ ನಾಣ್ಯವೇ ಪ್ರಚಾರದಲ್ಲಿತ್ತು. ಆ ಸಮಯದಲ್ಲಿ ಬಿಳೀ ಚಿಪ್ಪುಗಳಿಂದ ತಯಾರಿಸಿದ ವಾಂಪುಮ್ ಎಂಬ ನಾಣ್ಯವೂ, ಇದರ ಎರಡು ಪಾಲಷ್ಟು ಬೆಲೆಯುಳ್ಳ ಕಪ್ಪು ಚಿಪ್ಪುಗಳಿಂದ ತಯಾರಿಸಿದ ಮಣಿಗಳು ಇನ್ನೊಂದು ನಾಣ್ಯವೂ ಚಾಲ್ತಿಯಲ್ಲಿತ್ತು. ಯುರೋಪಿಯನರು ಇದನ್ನು ಭೂತಗಳ ನಾಣ್ಯವೆಂದು ಕರೆಯುತ್ತಿದ್ದರು. ಅನಂತರ ೨೦ ವರುಷಗಳಲ್ಲಿ ಮಾಲೆಯಾಗಿ ಮಾಡದೆ ಇಪ್ಪ ವೆಂಪುಮ್ ಎಂಬ ನಾಣ್ಯಕ್ಕೆ ಬೆಲೆಯಿಲ್ಲವೆಂದು ಆ ಸಮಯದ ಅಧಿಕಾರಿಯಾಗಿದ್ದ ಪಿಟರ್ ಸ್ಟೈವಸೆಂಟನು ಹುಕುಂ ಕೊಟ್ಟನು. ಆಗ ಸ್ವಲ್ಪ ಗಲಭೆ ಎದ್ದಿತು.

ಅಷ್ಟರಲ್ಲಿ ಇಲ್ಲಿ ಮಿಲ್ಲನ್ನು ಸ್ಥಾಪಿಸಿದರು. ಇದನ್ನು ವಾರದ ದಿವಸಗಳಲ್ಲಿ ಒಂದು ಕುದುರೆಯು ಎಳೆಯುತ್ತಿತ್ತು. ಆದಿತ್ಯವಾರ ಭಕ್ತಿಯುಳ್ಳವರು ಎಳೆಯುತ್ತಿದ್ದರು. ಈ ಕಟ್ಟೋಣದ ಮಾಳಿಗೆಯು ಇಗರ್ಜಿಯಾಗಿತ್ತು. ೧೬೪೭ರಲ್ಲಿ ಇಲ್ಲಿ ಎರಡು ಇಗರ್ಜಿಗಳನ್ನೂ ಒಂದು ಗಡಂಗನ್ನೂ ಸ್ಥಾಪಿಸಿದರು. ಮೂರನೇ ಗವರ್ನರನಾದ ಕೀಪ್ಪನ ಕಾಲದಲ್ಲಿ ಇಂಡಿಯನರಿಗೂ ಇವನಿಗೂ ಮನಕ್ಲೇಶ ಉಂಟಾಗಿದ್ದಿತು. ಪಟ್ಟಣವು ಕೋಟೆಯ ಹೊರಗೂ ಬೆಳೆಯಿತು. ಆಗ ನಾಲ್ಕನೇ ಗವರ್ನರನು ಈ ಪಟ್ಟಣದ ಉತ್ತರ ಭಾಗದಲ್ಲಿ ಒಂದು ಮರದ ಬೇಲಿಯನ್ನು ಹಾಕಿಸಿದನು. ಈ ಮರದ ಗೋಡೆಯಿಂದ ವೊಲ್‌ಸ್ಟ್ರೀಟ್ ಎಂಬ ಹೆಸರು ಬಂತು. ೧೬೬೪ರಲ್ಲಿ ಡ್ಯೂಕ್ ಒಫ್ ಯೋರ್ಕನು ಇದನ್ನು ಹಿಡಿದನು. ಅಂದಿನಿಂದ ಈ ಪಟ್ಟಣಕ್ಕೆ ನ್ಯೂಯೋರ್ಕ ಎಂಬ ಹೆಸರು ಬಂತು.

ಈ ರೀತಿಯಲ್ಲಿ ಡಚ್ಚರ ಅಥವಾ ನಿಕರ್ ಬೋಕರರ ಕಾಲವು ಕಳೆಯಿತು. ಇಂಗ್ಲಿಷರ ಕೈಗೆ ಬಂದ ಮೇಲೆ ಈ ಪಟ್ಟಣವು ಇನ್ನೂ ದೊಡ್ಡದಾಗಿ ಅಭಿವೃದ್ಧಿಯನ್ನು ಹೊಂದಿತು. ಈ ಸಮಯದಲ್ಲಿ ಕೆಪ್ಟನ್‌ಕಿಡ್ ಎಂಬ ಹಡಗುಕಳ್ಳರ ಶಿರೋಮಣಿಯು ವೊಲ್‌ಸ್ಟ್ರೀಟಿನಲ್ಲಿ ಬಂದು ನೆಲೆನಿಂತನು. ಇವನು ಒಬ್ಬ ಖಲಾಸಿಯ ತಲೆಯನ್ನು ಒಡೆದು ಕೊಂದುದಕ್ಕಾಗಿ ಇವನನ್ನು ಡೊಕಿನಲ್ಲಿ ಫಾಸಿಗೆ ಕೊಟ್ಟರು. ಇವನು ಸತ್ತು ೫೦ ವರುಷಗಳ ವರೆಗೂ ವೊಲ್‌ಸ್ಟ್ರೀಟಿನಲ್ಲಿ ಅನೇಕ ಮಂದಿ ಹಡಗು ಕಳ್ಳತನದಿಂದ ಜೀವಿಸುತ್ತಿದ್ದರು.

ಇವರ ಬಾಧೆಯನ್ನು ೧೮ನೇ ಶತಮಾನದ ಅಂತ್ಯದಲ್ಲಿ ತಡಿಯಲಿಕ್ಕಾಗದೆ ಇಂಗ್ಲೆಂಡಿನಲ್ಲಿ ಇದಕ್ಕಾಗಿ ಪ್ರತ್ಯೇಕ ಕಾನೂನು ಮಾಡಬೇಕಾಯಿತು. ಕಡೆಗೆ ೧೭೮೯ನೇ ಎಪ್ರಿಲ್ ೩೦ನೇ ತಾರೀಕಿನಲ್ಲಿ ಅಮೇರಿಕವು ಇಂಗ್ಲಿಷರ ಕೈಯಿಂದ ತಪ್ಪಿ ಜೋರ್ಜ ವೊಶಿಂಗಟನನು ಅದರ ಮೊದಲನೇ ಪ್ರೆಸಿಡೆಂಟನಾದನು. ಅಮೇರಿಕವು ಸ್ವತಂತ್ರವಾದರೂ ನ್ಯೂಯೋರ್ಕ ಪಟ್ಟಣವು ಮತ್ತೂ ಅಭಿವೃದ್ಧಿಯನ್ನು ಹೊಂದಿತು. ಆದರೆ ಪಟ್ಟಣವು ಈಗಿನಷ್ಟು ಆರೋಗ್ಯಸ್ಥಿತಿಯಲ್ಲಿರಲಿಲ್ಲ. ಆಗ ಹಂದಿಗಳೇ ತೋಟಿಗಳ ಕೆಲಸವನ್ನು ಮಾಡುತ್ತಿದ್ದವು.

ಕಳೆದ ಶತಮಾನದ ಮಧ್ಯ ಭಾಗದಲ್ಲಿ ವ್ಯಾಪಾರದ ಚಲಾವಣೆಯು ಹೆಚ್ಚಾಗುತ್ತಾ ಬಂತು. ಕುದುರೆಯ ಗಾಡಿಗಳು ಬಹಳ ಹೆಚ್ಚಾಗಿದ್ದವು. ಅನೇಕ ದೇಶಗಳಿಂದ ಜನರು ಬಂದು ನಿಲ್ಲಲಾರಂಭಿಸಿದರು. ಪಟ್ಟಣವು ಬೆಳೆಯಿತು. ಕಡೆಗೆ ಸ್ಥಳವು ಸಾಕಾಗದೆ ಆಕಾಶದಲ್ಲಿ ಸ್ಥಳ ತೆಗೆದುಕೊಂಡು ಮಾಳಿಗೆಯ ಮೇಲೆ ಮಾಳಿಗೆ ಕಟ್ಟಬೇಕಾಯಿತು.

ತುರಿಕಜ್ಜಿಗೆ ದಿವ್ಯ ಔಷಧ.

ತುರಿಕಜ್ಜಿಯು ಒಂದು ತರದ ಅಂಟುರೋಗವಾಗಿರುವುದು. ಈ ಚರ್ಮರೋಗವು ಮೈಯನ್ನು ಶುಚಿತ್ವದಲ್ಲಿಡದಿದ್ದರೆ ಅಥವಾ ರಕ್ತವು ಅಶುದ್ಧವಿದ್ದರೆ ಉಂಟಾಗುತ್ತದೆ. ಈ ಕಜ್ಜಿಯು ತುರಿಸಿಕೊಂಡರೆ ಇದು ಅಂಗಾಂಗಗಳಲ್ಲಿ ಪಸರಿಸುವುದು. ಇಂಗ್ಲಿಷ್ ವೈದ್ಯರು ಈ ರೋಗಕ್ಕೆ ಏಕ್ಸರೇ ಮುಂತಾದುವುಗಳನ್ನು ಕೊಟ್ಟು ಚಿಕಿತ್ಸೆ ಮಾಡುವುದು ಅಷ್ಟೊಂದು ಫಲಕಾರಿ ಆಗಲಿಲ್ಲ. ಇತ್ತಲಾಗೆ ದಕ್ಷಿಣ ಆಫ್ರಿಕದ ಡಾ। ಮೆಕಿನ್‌ಸನ್ ಎಂಬವರು ಈ ರೋಗಕ್ಕೆ ದಿವ್ಯ ಔಷಧವನ್ನು ಹುಡುಕಿರುವರು. ಇವರ ಕ್ರಮದ ಮೇರೆಗೆ ತುರಿಕಜ್ಜಿ ಇದ್ದ ಸ್ಥಳವನ್ನು ಸ್ಪಿರಿಟ್‌ನಿಂದ ಚೆನ್ನಾಗಿ ತಿಕ್ಕಿ ತೊಳೆಯಬೇಕು. ನಂತರ ಫೋರ್ಮಲಿನ್ ಎಂಬ ಔಷಧವನ್ನು ಅದರ ಮೇಲೆ ಹಾಕಿಸಬೇಕು. ಹೀಗೆ ಒಂದಾವರ್ತಿ ಮಾಡಿದ್ದಲ್ಲಿ ತುರಿಕಜ್ಜಿಯು ನಿರ್ಮೂಲವಾಗುವುದು. ಗುಣವಾಗದಿದ್ದರೆ ಇದನ್ನು ನಂತರ ಎರಡು ಸಲ ಹಾಕಿಸಿದರೆ ತುರಿಕಜ್ಜಿಯು ಸಂಪೂರ್ಣವಾಗಿ ಗುಣವಾಗುವುದು.

ಗಂಗಾನದಿಯ ಉದಕವು ಏಕೆ ಪವಿತ್ರವಾಗಿರುವುದು?

ಹಿಂದೂದೇಶದ ಪ್ರಾಮುಖ್ಯವಾದ ನದಿಗಳಲ್ಲಿ ಗಂಗಾನದಿಯು ಒಂದಾಗಿರುವುದು. ಈ ನದಿಯು ಅನೇಕ ಸಾವಿರ ಚದರ ಮೈಲು ಪ್ರದೇಶದಲ್ಲಿ ಹರಿಯುತ್ತಲಿದ್ದು ಉತ್ತರ ಹಿಂದೂಸ್ಥಾನದ ವ್ಯಾಪಾರ ಮತ್ತು ಕೃಷಿಯ ಅಭಿವೃದ್ಧಿಗೆ ಮುಖ್ಯ ಕಾರಣವಾಗಿರುವುದು. ಹಿಂದುಗಳು ಈ ನದಿಯನ್ನು ಗಂಗಾದೇವಿಯೆಂದು ಬಹಳ ಭಕ್ತಿಭಾವದಿಂದ ಪೂಜಿಸುತ್ತಾರೆ. ಇದರ ಪಾವಿತ್ರತೆಯು ಪುರಾಣದಲ್ಲಿ ಚೆನ್ನಾಗಿ ಖಚಿತವಾಗುತ್ತದೆ. ಪೂರ್ವ ಕಾಲದಲ್ಲಿ ಭಗೀರಥ ರಾಜನ ೬೦೦೦೦ ಮಂದಿ ಪುತ್ರರು ಋಷಿಶಾಪದಿಂದ ಭಸ್ಮವಾಗಿ ಹೋಗಲು, ಅವರನ್ನು ಪುನರುಜ್ಜೀವನ ಮಾಡಿ ಸ್ವರ್ಗಲೋಕ ಪ್ರಾಪ್ತಿಯಾಗುವಂತೆ ಮಾಡಲು ಭಗೀರಥನ ತಪಸ್ಸಿನಿಂದ ಪ್ರಸನ್ನಳಾಗಿ ದೇವಲೋಕದಲ್ಲಿ ಇದ್ದ ಗಂಗೆಯನ್ನು ಭೂಲೋಕಕ್ಕೆ ತರಿಸಿದರು. ಎಂದು ಪುರಾಣವಚನವಿರುವುದು. ನಮ್ಮ ಈ ಭಾವನೆಯ ನವನಾಗರಿಕರಾದ ಆಂಗ್ಲೇಯರು ಕೂಡ ಪುಷ್ಟೀಕರಿಸಿರುವರು. ಇ. ಎಚ್. ಹೇಂಕಿನ್ ಎಂಬವರು ಗಂಗಾನದಿಯ ನೀರಿನಲ್ಲಿ ಕೊಲೇರಾ ರೋಗವನ್ನು ನಿಲ್ಲಿಸುವ ಶಕ್ತಿ ಇರುವದೆಂದು ತಿಳಿಸಿರುತ್ತಾರೆ. ಈ ನದಿಯ ನೀರು ಮಲೀನವಾದ ವಸ್ತು ರಹಿತವಾಗಿರುವುದಲ್ಲದೆ ನೀರು ಒಳ್ಳೇದಾಗಿರುವುದು. ಇದರಲ್ಲಿ ಕೋಲೆರಾ ರೋಗದ ಮೈಕ್ರೊಬ್‌ಗಳನ್ನು ನಾಶಮಾಡುವ ಒಂದು ಎಂಟಿಸೆಪ್ಟಿಕ್ ಇರುವುದೆಂದು ತಿಳಿಸಿರುವರು.

ಲಾಹೋರಿನಲ್ಲಿದ್ದ ಲೋರೆನ್ಸರ ಶಿಲಾಪ್ರತಿಮೆ.

ಲಾಹೋರಿನಲ್ಲಿದ್ದ ಲೋರ್ಡ ಲೋರೆನ್ಸರ ಶಿಲಾಪ್ರತಿಮೆಯ ಒಂದು ಕೈಯಲ್ಲಿ ಕತ್ತಿಯೂ, ಒಂದು ಕೈಯಲ್ಲಿ ಲೇಖಣಿಯೂ ಇತ್ತು. ಅದರ ಬುಡದಲ್ಲಿ ನಿಮ್ಮನ್ನು "ಕತ್ತಿಯಿಂದ ಆಳಬೇಕೊ ಲೇಖಣಿಯಿಂದ ಆಳಬೇಕೊ" ಎಂದು ಬರೆದಿತ್ತು. ಈ ರೀತಿಯಲ್ಲಿದ್ದ ಈ ಶಿಲಾಪ್ರತಿಮೆಯನ್ನು ತೆಗೆದು ಪಟ್ಟಣದ ಹೊರಗೆ ಇಡಿಸಬೇಕೆಂದು ಎಷ್ಟೊ ವರುಷಗಳಿಂದ ಜನರು ಸರಕಾರದೊಡನೆ ಕೇಳುತ್ತಿದ್ದರು. ಸರಕಾರವು ಕಿವಿಗೊಡಲಿಲ್ಲ. ಕಡೆಗೆ ಸ್ವದೇಶಿ ವೊಲಂಟಿಯರರು ಅದನ್ನು ತೆಗೆದುಹಾಕಲಿಕ್ಕೆ ಪ್ರಯತ್ನಿಸಿದರು. ಸರಕಾರವು ಅವರ ಸುತ್ತಲೂ ಪಹರೆಯನ್ನಿಟ್ಟಿತು. ಕಡೆಗೆ ಜನರೂ ಸರಕಾರವೂ ಅದರ ಗೊಡವೆಯನ್ನೇ ಬಿಟ್ಟು ಬಿಟ್ಟರು. ಈ ಸಮಯದಲ್ಲಿ ಯಾರೊ ಒಬ್ಬರು ಅದರ ಕೈಯಲ್ಲಿದ್ದ ಲೇಖಣಿಯನ್ನೂ ಕತ್ತಿಯನ್ನೂ ತುಂಡುಮಾಡಿ ಹಾಕಿದರು. ಆದರೆ ಸರಕಾರದವರು ಅವನ್ನು ತಿರಿಗಿ ಹೊಸತು ಮಾಡಿ ಇರಿಸಿದರು. ಮತ್ತು ಕೆಳಗೆ ಬರದ ಬರವಣಿಗೆಯನ್ನು ತೆಗೆದು "With pen and sword I served you" ಅಂದರೆ ನಾನು ಲೇಖಣಿಯಿಂದಲೂ, ಕತ್ತಿಯಿಂದಲೂ ನಿಮಗಾಗಿ ಕೆಲಸ ಮಾಡಿದೆ" ಎಂದು ಬರೆಸಿದರು. ಆದರೆ ಇದನ್ನು ಬರೆಸಿದ ಸಂಗತಿಯು ಇದೇ ತಿಂಗಳ ೩ನೇ ತಾರೀಕು ವರೆಗೆ ಯಾರಿಗೂ ತಿಳಿದಿರಲಿಲ್ಲ. ಕಡೆಗೆ ಯಾರೊ ಅದನ್ನು ಥಕ್ಕನೇ ನೋಡಿ ಊರಿನಲ್ಲೆಲ್ಲಾ ವರ್ತಮಾನ ಹಬ್ಬಿಸಿದರು. ಜನರು ಸಾವಿರಗಟ್ಲೆಯಿಂದ ಬಂದು ಅದನ್ನು ನೋಡಲಾರಂಭಿಸಿದರು.

ತುರ್ಕಿ ದೇಶದಲ್ಲಿ ಅರಬಿ ಲಿಪಿಯ ಬದಲಾಗಿ ಲೆಟಿನ ಲಿಪಿ.

ತುರ್ಕಿ ದೇಶದಲ್ಲಿ ಎಲ್ಲಾ ಶಾಸ್ತ್ರದ ಪುಸ್ತಕಗಳೂ ಇಷ್ಟರ ವರೆಗೆ ಅರಬಿ ಲಿಪಿಯಲ್ಲಿ ಬರೆಯಲ್ಪಡುತ್ತಿದ್ದವು. ಆದರೆ ಈ ಬರಹವನ್ನು ಕಲಿಯುವುದು ಬಹಳ ಕಷ್ಟವಾಗಿದೆ. ಕೆಲವರಿಗೆ ಮಾತ್ರವೇ ಇದನ್ನು ಕಲಿಯಲಿಕ್ಕೆ ಸಾಧ್ಯವಿದೆ. ಆದುದರಿಂದ ಊರಿನ ಎಲ್ಲಾ ಜನರು ತುರ್ಕಿಯಲ್ಲಿರುವ ಎಲ್ಲಾ ಗ್ರಂಥಗಳನ್ನು ಓದಿ ಬರೆಯಲು ಸುಲಭವಾಗಿ ಕಲಿಯುವಂತೆ ಈಗಲೆ ಲೆಟಿನ ಲಿಪಿಯಲ್ಲಿ ಪುಸ್ತಕಗಳನ್ನು ಛಾಪಿಸಬೇಕೆಂದು ತುರ್ಕಿ ಸರಕಾರವು ಅಪ್ಪಣೆ ಕೊಟ್ಟಿದೆ. ಇದರಿಂದ ಬೇಗನೆ ವಿದ್ಯಾಭಿವೃದ್ಧಿಯಾಗುವದಂತೆ.

ಇಂಡಿಯಾ ಸರಕಾರಕ್ಕೆ ಬೇಕಾದ ಸ್ಟೇಶನರಿಯನ್ನು ಇಂಡಿಯದಲ್ಲಿಯೆ ಕೊಂಡುಕೊಳ್ಳಬೇಕೆಂಬ ಹುಕುಂ.

ಇಂಡಿಯದಲ್ಲಿರುವ ಎಲ್ಲಾ ಸರಕಾರಿ ಆಫೀಸುಗಳಿಗೆ ಬೇಕಾದ ಕಾಗದ ಲಕೋಟೆಯ ಕಾಗದ, ಶಾಯಿ, ಬ್ಲೋಟಿಂಗ ಪೇಪರ, ಮೊಳೆ, ಪಿನ್ ಮುಂತಾದವುಗಳನ್ನು ಇಷ್ಟರ ವರೆಗೆ ವಿಲಾಯತಿಯಿಂದಲೇ ತರಿಸುತ್ತಿದ್ದರು. ಇನ್ನು ಮುಂದೆ ಈ ಎಲ್ಲಾ ವಸ್ತುಗಳು ಇಂಡಿಯದಲ್ಲಿಯೆ ಆಗುವುದರಿಂದ ಇವುಗಳನ್ನು ಇಂಡಿಯದಲ್ಲಿರುವ ಕಾರ್ಖಾನೆಗಳಿಂದಲೇ ಕೊಂಡುಕೊಳ್ಳಬಹುದೆಂದು ರಾಜಕೀಯ ಕರಣೀಕರ ಹುಕುಂ ಬಂದಿದೆ.

ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರಿಗೆ ಮಂಜೇಶ್ವರ ಬಂಗ್ರಮಂಜೇಶ್ವರ ನಿವಾಸಿಗಳ ವಿನಂತಿ.

ಮಂಜೇಶ್ವರ ಮತ್ತು ಬಂಗ್ರಮಂಜೇಶ್ವರಕ್ಕೆ ಮಧ್ಯದಲ್ಲಿ ಒಂದು ಹೊಳೆಯಿದೆ. ಈ ಎರಡೂ ಊರುಗಳ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುವ ಅಗತ್ಯವಿದೆ. ದೇವಸ್ಥಾನ, ಶಾಲೆ, ಪೋಲಿಸ್ ಸ್ಟೇಶನ್, ಆಸ್ಪತ್ರೆ, ರೈಲುಸ್ಟೇಶನ್, ಬಂಗ್ಲೆ ಮುಂತಾದವುಗಳು ಮಂಜೇಶ್ವರದಲ್ಲಿವೆ. ದೊಡ್ಡ ಜೀನಸಿನ ಅಂಗಡಿ ಭಂಡಸಾಲೆಗಳೂ, ಹೆಚ್ಚಿನ ನಿವಾಸಿಕರೂ ಬಂಗ್ರಮಂಜೇಶ್ವರದಲ್ಲಿರುತ್ತಾರೆ. ಆದುದರಿಂದ ಈ ಹೊಳೆಗೆ ಒಂದು ಸೇತುವೆಯನ್ನು ಮಾಡಿಸಬೇಕೆಂದು ಎಷ್ಟೋ ಅರ್ಜಿಗಳನ್ನು ಡಿಸ್ಟ್ರಿಕ್ಟ ಬೋರ್ಡಿಗೆ ಕಳುಹಿಸಿದ್ದಾಯಿತು. ಮಾಜಿ ಪ್ರೆಸಿಡೆಂಟರವರು ಇದಕ್ಕೆ ಕಿವಿಕೊಡಲೇ ಇಲ್ಲ. ಕಳೆದ ಸಾರಿಯ ಕಾಸರಗೋಡು ತಾಲೂಕು ಬೋರ್ಡು ಮೀಟಿಂಗಿನಲ್ಲಿ ಈ ಸಂಕವನ್ನು ಕೂಡಲೇ ಮಾಡಿಸಬೇಕೆಂದು ಠರಾವು ಪಾಸು ಮಾಡಿ ಡಿಸ್ಟ್ರಿಕ್ಟ ಬೋರ್ಡಿಗೆ ಕಳುಹಿಸಿರುತ್ತಾರೆ. ಆದುದರಿಂದ ಹೊಸ ಪ್ರೆಸಿಡೆಂಟರವರು ಇದನ್ನು ಇದೇ ವರುಷ ಆಗುವಂತೆ ಮಾಡಿಸಿದರೆ ಇದನ್ನು ಮಾಡಿಸಿದ ಪುಣ್ಯವು ತಮಗೆ ಸಿಕ್ಕಿದಂತಾಗುವುದು.

ಮೋಟರ್ ಅಪಘಾತದಿಂದ ತಪ್ಪಿಸುವ ಉಪಾಯ.

ಬೀದಿಗಳಲ್ಲಿ ಮೋಟರುಗಳ ಓಡ್ಯಾಟದಿಂದ ದಾರಿಗರು ಮೋಟರಿನ ಅಡಿಗೆ ಬಿದ್ದು ಅಪಮೃತ್ಯುವಿನ ಪಾಲಾಗಿ ಹೋಗುವುದನ್ನು ತಪ್ಪಿಸುವುದಕ್ಕೆ ಈಗ ತಾನೆ ಒಂದು ನವೀನ ಉಪಾಯವನ್ನು ಕಂಡುಹಿಡಿದಿರುವರು. ಇದರ ಮೂಲಕ ಇಂಡಿಯಾ ರಬ್ಬರಿನ ಬಲೆಯೋಪಾದಿ ಇರುವ ಒಂದು ಯಂತ್ರವು ಕಾರಿನ ಮುಂದೆ ತಾಟಿಸಲ್ಪಡುವುದು. ಅಡ್ಡವಾಗಿ ಬಂದ ಮನುಷ್ಯನು ಇದರಲ್ಲಿ ಸಿಲುಕಿಕೊಂಡು ಅಪಘಾತದಿಂದ ಸಂರಕ್ಷಿಸಲ್ಪಡುವನು. ಇಂಥಾದೊಂದು ನವೀನೋಪಾಯವು ಸಾರ್ವತ್ರಿಕ ಉಪಯೋಗಕ್ಕೆ ಇವನ್ನು ಬೇಗನೆ ಬರುತ್ತಿದ್ದರೆ ಮೋಟಾರುಕಾರುಗಳಿಂದ ಉಂಟಾಗುವ ಅಪಮೃತ್ಯುಗಳು ತೀರ ಕಡಿಮೆಯಾಗುತ್ತಿದ್ದವು.

ಯುನೈಟೆಡ್ ಸ್ಟೇಟ್ಸ್ ಒಫ್ ಅಮೇರಿಕಾದಲ್ಲಿ ಪ್ರಕೃತ ೨೦ ಮಿಲಿಯ ಮೋಟಾರುಕಾರುಗಳು ಪ್ರಚಲಿತವಾಗಿರುವವು. ಅಂದರೆ ಕಳೆದ ವರ್ಷಕ್ಕಿಂತ ಸೇಕಡಾ ೧೩ರಂತೆ ೨,೩೭೦,೬೦೦ ಕಾರುಗಳು ಹೆಚ್ಚಾಗಿರುವುವು. ಪ್ರತಿ ೫.೩ ಜನಗಳಿಗೆ ಒಂದೊಂದು ಕಾರಿನಂತೆ ಇರುವುದು. ಮತ್ತು ಪ್ರತಿಯೊಬ್ಬ ಗಂಡಸು, ಹೆಂಗಸು, ಮತ್ತು ಮಗುವಿಗೆ ಪ್ರತಿಯೊಂದು ಕಾರನ್ನು ಇಟ್ಟುಕೊಳ್ಳಲಿಕ್ಕೆ ಸಾಮಾನ್ಯ ೧೧೭ ಡೊಲರುಗಳು ತಗಲುತ್ತದೆ. (ಒಂದು ಡೊಲರು ಅಂದರೆ ಸಾಮಾನ್ಯ ರೂ. ೩।-) ಯುನೈಟೆಡ್ ಸ್ಟೇಟ್ಸ್ ಅಫ್ ಅಮೇರಿಕಾದ ಎಲ್ಲಾ ಕಾರ್ಖಾನೆಗಳಲ್ಲಿ ವರ್ಷ ೧೧ರ ಒಟ್ಟು ೪ ಮಿಲಿಯ ಕಾರುಗಳು ಸಿದ್ಧವಾಗುತ್ತವೆ. ಇವುಗಳ ಪೈಕಿ ೩೦–೫೦ ಮಿಲಿಯ ಹೊಸ ಕಾರುಗಳು ಪರದೇಶಕ್ಕೆ ರವಾನೆಯಾಗುತ್ತವೆ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:— ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:— ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀಮಿತ್ರಣ! ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು— ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2–0–0. ಪೋಸ್ಟೇಜು ವಗೈರೆ ಬೇರೆ.

ಚಿಕಿತ್ಸಾ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯೆಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000–0–0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 288,500–0–0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಫ್ ಕೊಸ್ಟ್ಸ್, ಮೆಮೊರಂಡಮ್ ಒಫ್ ಎಪ್ಪಿಯರೆನ್ಸ, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದುನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಹುಂಡಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ಟೀಟ್‌ಮಿಟ್ ಮಾರ್ಟ.

ಮಹಾಲಕ್ಷ್ಮಿ ಕಾಫಿ ಕ್ಲಬ್. ಮಾರ್ಕೆಟ್ ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | **ವಜ್ರಾಂಗ-ಬಿಂದು** | ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುನಾಶ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಚಿಮಕಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಆದರ ಜೊತೆಯಲ್ಲಿ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆನ್ನುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅಹವಾಲ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪನಿ,
ಮು. ಪೋ. ಹಿಪ್ಪರಗಿ, (ಜಿಲ್ಲಾ ಬೆಳಗಾಂವ)

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಆರಿವಾಸಿ ಬೆಲೆಗೆ ಕೊಂಚ ಸಮಯದ ವರೆಗೆ

— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ೧೦ರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.



ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ ವಾಚ್ ಕಂಪೆನಿ.
ನಂ. 265 ಮದ್ರಾಸ

— ಕೀಲಡ್ಡಿಗೆ ಪದಕ. —

ಈ ಅಡ್ಡಿಗೆಯನ್ನು ರೋಲ್ಡ್ ಗೋಲ್ಡ್ ಎಂಬ ಭಂಗಾರದಲ್ಲಿ ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟುನೋಡಲು ಮುದ್ದಾಗಿರುವಂತೆ ತಯಾರಿಸಿದೆ. ಮತ್ತು ಇದರ ಹರಳನ್ನು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ತಯಾರಿಸಿದೆ. ಇದನ್ನು ಯಾವಾಗಲು ಕಟ್ಟಿಕೊಳ್ಳಲು ಚೆನ್ನಾಗಿರುವದು. ಎಷ್ಟು ಮುಂತಾದವು ಸೇರಿದರೂ ಕೆಡದು. ಇದರ ಬಣ್ಣವು ಎಂದಿಗೂ ಕೆಡದಂತೆ ಸವರನ್ ಬಂಗಾರದ ಬಣ್ಣಕೊಟ್ಟಿರುವದು. ಶ್ರೀಮಂತರೂ, ಗರೀಬರೂ ಉಪಯೋಗಿಸಲು ಲಾಯಖಾದದ್ದು. ಕ್ರಯ 1ಕ್ಕೆ 4/8.

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ

— ಡಾಬುಗಳು. —

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿ ಹೊಂದಿದ ಕೆಲಸಗಾರರಿಂದ ಬಹುಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ.

ಗೆಜ್ಜೆ ಡಾಬು 1ಕ್ಕೆ 3—0—0.

— ಇಮಿಟೇಶನ್ ವಜ್ರದ ಬೆಂಡೋಲೆಗಳು. —

ಈ ಬೆಂಡೋಲೆಗಳನ್ನು ಬಹು ಹೆಸರಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವುದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರನಿಂದ ಅಪರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7ಕಲ್ಲಿನ ಬಿಳಿಯ ಓಲೆ ಜೊತೆ 3—0—0.
" " ಕೆಂಪುಕಲ್ಲಿನ ಓಲೆ ಜೊತೆ 3—8—0.

ವಿಳಾಸ:—ವೈ. ಎಮ್. ಸ್ವಾಮಿ ಅಂಡ್ ಕೊ, ಪಾರ್ಕ್ ಟೌನ್, ಮದ್ರಾಸು.

Y. M. SWAMY & Co.,
No. 12. Nainiappa Naicken St.,
P. Town, MADRAS.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಯಂ. ಜೆ. ಯು. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುವೃದ್ಧಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನು ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2-0-0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಲಿವರ್ ಮೂವ್‌ಮೆಂಟ್ ವಾಚ್

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೆಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇಗೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟವಾಚ್ ಕ್ರಯ ರೂ. 13—8—0.
ಎಲಾರ್ಮ್ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. " " " 6-0-0.
"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ ರೂ. 2—12—0

ಕೆಂಬ್ರ್ಯಾಂಡ್ ಪೇಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯೂ ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಕಕ್ಷೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೨೧ನೇ ಶುಕ್ರವಾರ ಮೇ ೧೯೨೬. ಸಂಚಿಕೆ ೨೧.

THE CANARA BANKING CORPORATION,
UDIPI, LIMITED.

'ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branch:—COONDAPOOR.
ಶಾಖೆ:—ಕುಂದಾಪುರ.

ನಿಯಮಿತ ಮೂಲಧನ ರೂ. 3,50,000.

ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

ತಾ. 28—2—'26ಕೆ ತೋರುವ ಸದರಿ ಬ್ಯಾಂಕಿನ ವಹಿವಾಟುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.		ಆಸ್ತಿ ವ ಸೊತ್ತುಗಳು.	
ವಸೂಲು ತೆತ್ತ ಮೂಲಧನ	1,80,690—9—11	ಹಿತ್ತಲು ಕಟ್ಟೋಣ ಕಟ್ಟಿದ ಟ್ರೆಜರಿಗಳು ವಗೈರೆ	3943-8-0,
ಆಪದ್ಧನ ವ ಇತರ ನಿಕ್ಷೇಪಗಳು	75,875-0-0,	ಯೋಗ್ಯಜವಾಬ್ದಾರಿ ಮೇಲೆ ಸಾಲಕೊಟ್ಟದ್ದು	7,58,851-13-8,
ಠೇವಣಾತಿಗಳು	5,30,003-14-3,	ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	25,800-0-0,
ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕೊಡುವವರಿಗೆ	4,700-0-0,	ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು	4,700-0-0,
ಖರ್ಚು ಮೇಲಾಗಿ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು	40,274-3-11,	ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ)	22,795-6-6,
		ಕೈಯಲ್ಲಿರುವ ಮತ್ತು ಬೇಂಕರರ ... ಠೇವದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹ	...15—11,
ಜುಮ್ಲಾ ರೂ.	8,31,543-12-1.	ಜುಮ್ಲಾ	...43-12-1.

ನಿರಖು ಠೇವಣಾತಿಗಳನ್ನು ಕಾಲಕ್ಲೃಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ... ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸುಂ ಠೇವಣಾತಿಗಳನ್ನೂ ಕಂತು ಠೇವಣಾತಿಗಳನ್ನೂ ... ಸೇವಿಂಗ್ಸ್ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತುಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ... ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನೂ ಸಾವುಕಾರಿ ಹುಂಡಿಗಳನ್ನೂ, ವಸೂಲು ಮಾಡುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲ ... ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಬಾಬೇತುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು,
ಉಡುಪಿ, ತಾ. 28—2—'26.

ನಯಂಪಳ್ಳಿ ಆನಂದರಾವ್, ಸೆಕ್ರೆಟರಿ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುಗಳಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ... ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ... ವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣಾದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತ; ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ... ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್, ಮುಂಬಯಿ.

ಮಂಗಳೂರಲ್ಲಿ—... ಮಾರ್ಕೆಟ್, ಹಂಪನಕಟ್ಟೆ, ಇವರಲ್ಲಿಯೂ ದೊರೆಯುವುದು.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ನಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ... ಹೆಸರು ... ಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ.

ಇದರ ಸೇವನೆಯಿಂದ ... ಇನ್ನರೂ ಸ್ವಸ್ಥೇಂದ್ರಿಯವಾದರೂ, ... ಮೊದಲೇ ... ಮೂತ್ರದೊಂದಿಗೆ ಹೋಗುತ್ತಿದ್ದರೂ ... ದೋಷರಹಿತವಾಗಿ ಶರೀರಕ್ಕೆ ಆರೋಗ್ಯ ... ಸುಖವನ್ನು ದಾರ್ಢ್ಯತೆಯನ್ನೂ ಉಂಟುಮಾಡುವುದು. ... ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ... ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು ಹಾದಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ, ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಅಶಕ್ತರವರಿಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦.

ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦.
ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ. — ಡಿ. ಮುನ್ನಾಲಾಲ್, ... ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂದ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ಬೈಲು ಬೆರ್ಚಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೂ ಕ್ಕೊ ಕೋಳಿ, ಜೋಡು ನಕ್ಷತ್ರ, ಕಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯು ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲು 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ ಕ್ಯಾಸ್ತ್ಯ,
ಪುತ್ತೂ...ರು, ದ. ಕನ್ನಡ.

ಲೋಕಪ್ರಸಿದ್ಧ ಔಷಧಗಳು.

ಳಳ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.
ಬಾಟ್ಲಿವಾಲರ ಕಿಂಗ್ ಆಫ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಡೈರಿಯಾ ಮಿಕ್ಸ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
ಬಾಟ್ಲಿವಾಲರ ಕ್ವಿನೈನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦ "AGENTS WANTED"
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ಕಾರಿನಪತ್ರ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾ... ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ...ರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ, ಮಂಗಳೂರು.

11 ಮಣಿಗಳಿದ್ದು ... ಬ್ರಿಜ್ ಮ್ಯೂಮೆಂಟ್.

22 ಕೆರೆಟ್ ... ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ದಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

The Canara Pubic Conveyance Co., Ltd, Mangalore.

(ESTABLISHED 1914.)

ಕೆನರಪ್ಲಿಕ್ ಕನ್ವೆಯನ್ಸ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂ...
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾದದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—...ದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂ॥ರದ ವೈಶಾಖ ಶು॥ ೧೦ ಶನಿವಾರದಿಂದ ಕ್ಷಯ ಸಂ॥ರದ ವೈಶಾಖ ಬ॥ ೧ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ವೃಷಭ ದೇಶ.)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಯೋಗನಾಡಿ	ಸೂರ್ಯ ಉ.	ಅಸ್ತ.
22	ಶನಿ	೧೦	೨೬.೩೨	ಉತ್ತರಾ	೩೬.೧	೮	6. 6	6.48
23	ರವಿ	೧೧	೩೦.೩೧	ಹಸ್ತಾ	೪೫.೪೪	೯	6. 6	6.49
24	ಸೋಮ	೧೨	೩೨.೩೦	ಚಿತ್ತಾ	೪೫.೧೫	೧೦	6. 6	6.49
25	ಕುಜ	೧೩	೩೩.೨೮	ಸ್ವಾತಿ	೪೭.೪೬	೧೧	6. 6	6.50
36	ಬುಧ	೧೪	೩೨.೫೮	ವಿಶಾಖಾ	೪೯ ೨	೧೨	6 5	6.50
27	ಗುರು	○	೩೧.೨೪	ಅನುರಾಧಾ	೪೮.೪೬	೧೩	6 5	6.51
28	ಶುಕ್ರ	೧	೨೮.೪೪	ಜ್ಯೇಷ್ಠಾ	೪೭.೪೪	೧೪	6 5	6.51

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ಇಂದಿನ ಮಳೆ	ಇದುವರೆಗಿನ ಮಳೆ.
14	94—2	80—3	—	0—04
15	93—0	82—0	—	—
16	91—2	79—8	—	—
17	93—4	79—9	—	—
18	93—8	82—4	—	—
19	94—3	83—6	—	—
20	93—8	80—3	—	—
				138-50

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
	8— 4	9— 4
ಮಸ್ಸಿ ...	7— 12	8— 6
ಹೊಸ ಗುಡ್ಡು ...	7— 8	8— 0
ಸುಗ್ಗಿ ...	8— 0	9— 0
ಅವ್ವಲ್ ಬೆಲ್ಲಗೆ ...	14— 8	15— 0
ರಂಗೂನು ಬೆಲ್ಲಗೆ ಗೋಣಿ ೧ ...	18— 0	20— 0
ಗೋದಿ ಗೋಣಿ ೧ಕ್ಕೆ ...	8— 0	9— 0
ಹುರುಳಿಗೋಣಿ ೧ಕ್ಕೆ ...	12— 8	13— 8
ಕಡಲೆಗೋಣಿ ೧ಕ್ಕೆ ...	16— 0	16— 8
ಕೊಡಂಗೋಣಿ ೧ಕ್ಕೆ ...	18— 0	23— 0
[illegible] ...	15— 8	—
ಉದ್ದು ಗೋಣಿ ೧ಕ್ಕೆ ...	15— 4	15— 8
ಹೆಸರುಗೋಣಿ ೧ಕ್ಕೆ ...	60— 0	65— 0
ಊರು ಬೆಲ್ಲ ಕಂಡಿ ೧ಕ್ಕೆ ...	5— 0	5— 4
ಉಪ್ಪು ಗೋಣಿ ೧ಕ್ಕೆ ...	96— 0	100— 0
ಕೊಬ್ರಿ ಕಂಡಿ ೧ಕ್ಕೆ ...	33— 8	34— 0
ಕೊಬ್ರಿ ಹಿಂಡಿ ಕಂಡಿ ೧ಕ್ಕೆ ...	50— 0	60— 0
ಎಳ್ಳಿಂಡಿ ಕಂಡಿ ೧ಕ್ಕೆ ...	7— 8	8 - 8
ತೆಂಗಿನ ಎಣ್ಣೆ ಮುಡಿ ೧ಕ್ಕೆ ...	7— 8	9— 0
ಎಳ್ಳೆಣ್ಣೆ ಮುಡಿ ೧ಕ್ಕೆ ...	8-12-0	—
[illegible] ...	4—12	—
[illegible] ...	5—12	6— 0
[illegible] ...	9— 4	9— 8
ಸಾಸಿವೆ ಮುಡಿ ೧ಕ್ಕೆ ...	3—14	4—12
[illegible] ...	375— 0	380— 0
ಕಾಫಿ ಕಂಡಿ ೧ಕ್ಕೆ ...	300— 0	310— 0
[illegible] ...	195— 0	220— 0
[illegible] ...	300— 0	—
[illegible] ...	50— 0	64— 0
[illegible] ...	3— 9	3—10
[illegible] ...	45— 0	65— 0
[illegible] ...	16— 4	16—12
[illegible] ...	21— 0	—
[illegible] ...	18—10	
[illegible] ...	16— 8	
[illegible]	13— 0	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಅವತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರಿವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

ಅಪೂರ್ವ ಸಂದರ್ಭ.

ಉತ್ತಮ ಮ್ಯಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ Swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುಧಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬಿರಾರ್ ಎಸ್ಟೇಟ್, ಮುಂಬಯಿ.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ಡಿ. ಊಲನ್ ಮಾರ್ಟ,
ಮಂಗಳೂರು.

ಇನಾಂ! ಜರ್ಮನ್ ಟ್ಯಾಂಪೀಸ್ ಇನಾಂ!

— ಫ್ಯಾನ್ಸಿ ಪಾಕೆಟ್ ವಾಚ್ —

ಈ ಗಡಿಯಾರಗಳು ಸೀಮೆಯಲ್ಲಿ ತಯಾರಾದದ್ದು. ಬಹು ದೃಢವಾದ ಸಾಮಾನುಗಳಿಂದಲೂ ಲೀವರ್ ಮೂವ್‌ಮೆಂಟ್ಸ್‌ಗಳಿಂದಲೂ ತಯಾರಿಸಿದೆ. ಬೆಳ್ಳಿಯ ಮುಚ್ಚಳವಿರುವದು ಮತ್ತು ಈ ಗಡಿಯಾರವು ನೋಡಲಿಕ್ಕೂ ಜೇಬಿನಲ್ಲಿಡಲಿಕ್ಕೂ ರಾಯಲಾದದ್ದು. ಬೇಗನೆ ಕೆಡದು. ಇವಕ್ಕೆ 4 ವರುಷಗಳ ವಾರಿಯಾದ ಗ್ಯಾರಂಟಿ ಕೊಡುವೆವು. ಈ ತಿಂಗಳೊಳಗಾಗಿ ಈ ಪಾಕೆಟ್ ವಾಚನ್ನು ತರಿಸಿಕೊಳ್ಳುವವರಿಗೆ ಮೇಲ್ಪಂಡ ಅಲಾರಂ ಟ್ಯಾಂಪೀಸು ಇನಾಂ ಕೊಡುವೆವು. ಕ್ರಯ ಇನಾಂ ಟ್ಯಾಂಪೀಸು ಸಹಿತ ರೂ. 5—8—0.

— ಸೇಫ್ಟಿರೇಜರ್ —

ಈ ರೇಜರನ್ನು ಸ್ವಂತ ಉಪಯೋಗಕ್ಕೋಸ್ಕರವಾಗಿ ತಯಾರಿಸಿದೆ. ಇದರಲ್ಲಿ ಒಬ್ಬರ ಸಹಾಯವಿಲ್ಲದೆ ತಾವಾಗಿಯೇ ಮುಖ ಕ್ಷೌರಮಾಡಿಕೊಳ್ಳಬಹುದು. ಈ ರೇಜರುಗಳಲ್ಲಿ ಮುಖ ಕ್ಷೌರವನ್ನು ಮಾಡಿಕೊಳ್ಳುವದಕ್ಕೆ ಯಾವ ಕಷ್ಟವೂ ಇರದು. ಕ್ರಯ 1ಕ್ಕೆ ರೂ. 1—4—0.

ವಿಳಾಸ— ಎಲ್ಗಿನ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 1251,
ಮದರಾಸು.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು—

ಸರ್ವಿಸಿನ ಹೆಸರು.	ತಲಪುವ ಸ್ಥಳ.	ಹೊರಡುವ ಘಂಟೆ.
ಜನರಲ್	ಕಾರ್ಕಳ—ಆಗುಂಬೆ—ತೀರ್ಥಹಳ್ಳಿ.	ಪ್ರಾ. 6½
ಸಿ. ಪಿ. ಸಿ.	ಉಡುಪಿ—ಕುಂದಾಪುರ—ಬೈಂದೂರು	,, 6½, 9½
	ಉಡುಪಿ	ಮ. 12½
	ಮುಲ್ಕಿ ವರೆಗೆ ಮಾತ್ರ	ಅ. 3½
	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ.	ಪ್ರಾ. 7, ಮ. 1
	ಕಾಸರಗೋಡು—ತಲಪಾಡಿಯಿಂದ	
	ಬಂಟ್ವಾಳಕ್ಕೆ ಮಾತ್ರ	,, 10½, ಅ. 4½
	ಪುತ್ತೂರು—ಸಂಪಾಜೆ—ಮಡಿಕೇರಿ	,, 7½
	ಪುತ್ತೂರು	ಪ್ರಾ. 10½ ಅ. 2
ಕಾರ್ಕಳ	ಕಾರ್ಕಳ—ಉಡುಪಿ—ಕುಂದಾಪುರ.	ಪ್ರಾ. 6
	ಕಾರ್ಕಳಕ್ಕೆ ಮಾತ್ರ.	ಅ. 1
ಹನುಮಾನ್	ಕಾರ್ಕಳ—ಉಡುಪಿ—ಕುಂದಾಪುರ	ಪ್ರಾ. 7
	ಕಾರ್ಕಳಕ್ಕೆ ಮಾತ್ರ.	ಮ. 12
ಶಂಕರ್ ವಿಟ್ಠಲ್	ಪುತ್ತೂರು—ಮಡಿಕೇರಿಗೆ	ಪ್ರಾ. 7
	ಪುತ್ತೂರು—ಉಪ್ಪಿನಂಗಡಿ	ಅ. 1½
	ವಿಟ್ಲಕ್ಕೆ	ಪ್ರಾ. 8, ಅ. 2½
	ಉಡುಪಿ	ಪ್ರಾ. 7½ ಅ. 1½
ಸ್ಟಾರ್	ಮುಲ್ಕಿ—ಉಡುಪಿ.	,, 7, ಮ. 1
	ಬಂಟ್ವಾಳ	,, 10, ಅ. 4½
ಇಂಡಿಯನ್	ಮುಲ್ಕಿ—ಉಡುಪಿ.	,, 6½, ಮ. 12½
ಪೋರ್ವೆಲ್	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ	ಪ್ರಾ. 7½ ಮ. 12½

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ—

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲ್	ಬೆಳಿಗ್ಗೆ 8	ಸಂಜೆ 5-30
ಲೋಕಲ್	,, 10	,, 4-30
ಮಿಕ್ಸ್ಡ್	ಸಂಜೆ 5-40	ಬೆಳಿಗ್ಗೆ 9-55

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾ ರ ಪ ತ್ರಿ ಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	... ...	ರೂ. ೩–0–0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ		„ 2–8–0.
„ ಸ್ಥಳೀಕರಿಗೆ	...	„ 1–8–0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ ೪ ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2¾ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 5 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಶ್ಮೆ ಮಡಿಗಳು, ಶಾಮಗ್ರಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—.

ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವುದಕ್ಕೂ ಒಂದು ದೇಹದ ಮರ್ಮಶಾಸ್ತ್ರವು ಇರುವುದು ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—
"ಕಾಮಶಾಸ್ತ್ರವೆಂಬುವುದು"
ಈಗಲೆ ತಯಾರಾಗಿದೆ.
ಸುಪ್ರಸಿದ್ಧವಾದದ್ದು.
ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, ಮದ್ರಾಸ್.

ಪ್ರಕಟಣೆ.

ಸುಬ್ರಹ್ಮಣ್ಯ ಶ್ರೀಮಠದಿಂದ.

ಶ್ರೀಮಠದಲ್ಲಿ ಮಾಮೂಲ್‌ಮೇರೆ ಪ್ರತಿ ಸಂ॥ರದ ವೈಶಾಖ ಮಾಸದಲ್ಲು ನಡಿಯಬೇಕಾಗಿದ್ದ ಶ್ರೀ ನರಸಿಂಹಜಯಂತಿ ಉತ್ಸವವು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಮೆನೇಜರ್ ಕೆಲಸಕ್ಕೆ ಬಾಗ್ಲೋಡಿ ಅನಂತರಾಮಯ್ಯನವರು ಬಂದನಂತರ ಕೆಲವು ಚರ್ಚೆಗಳಿಗೆ ಕುರುವಾಗಿ ಕಳೆದ 1920ನೆ ಇಸವಿಯಿಂದ ಬಾಕಿಯಾಗಿ ಆ ಬಾಬಿನಲ್ಲಿ ನಡೆದ ಸಿವಿಲ್ ವ್ಯವಹರಣೆಯಲ್ಲಿ ಸದರಿ ಉತ್ಸವಾದಿಗಳನ್ನು ಮಠದಕಡೆಯಿಂದ ಸ್ವತಂತ್ರವಾಗಿ ನಡಿಸುವಾಗ ದೇವಸ್ಥಾನದವರು ಆಕ್ಷೇಪಿಸಕೂಡದಾಗಿ ವಗೈರೆ ತೀರ್ಮಾನವಾಗಿಯದೆ. ಆದ್ದರಿಂದ ಇದೇ ವೈಶಾಖದಲ್ಲಿ ಆಗಬೇಕಾದ ನರಸಿಂಹಜಯಂತಿ ಉತ್ಸವವು ಇದೇ ಮೇ ತಾರೀಕು 26, 27, 28 ಈ 3 ದಿವಸಗಳಲ್ಲಿ ನೆರವೇರುವದೆಂಬ ಸಂಗತಿ ಸಮಸ್ತ ಭಕ್ತಮಂಡಲಿಯುವರ ತಿಳುವಳಿಕೆ ಬಗ್ಗೆ ಈ ಮೂಲಕ ಪ್ರಕಟಪಡಿಸಿಯದೆ. ಸರ್ವರಿಗೂ ಸುಸ್ವಾಗತವಿದೆ,

ಸುಬ್ರಹ್ಮಣ್ಯ,
ತಾ. 15–5–1926.

ಶ್ರೀಗಳವರ ಅಪ್ಪಣೆ ಪ್ರಕಾರ,
K. L. Acharya,
ಮಠದ ಏಜಂಟ್.

ನೋಟೀಸು.

ಉಪ್ಪಿನಂಗಡಿ ತಾಲೂಕು ಕೊಡಿಂಬಾಡಿ ಗ್ರಾಮದಲ್ಲು ಇರುವ ಕೊಡಿಂಬಾಡಿ ಗುತ್ತಿನ ಮಂಜಪ್ಪ ಶೆಟ್ಟರ ಅಳಿಯ ಶಾಂತಿರಾಜ ಯಾನೆ ಕಾಂತು ಶೆಟ್ಟಿಯು ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ—

ನನ್ನ ಮಾವ ಮಂಜಪ್ಪ ಶೆಟ್ರ ವಶ ಕುಟುಂಬದ ಬಾಬ್ತು ಕೊಡಿಂಬಾಡಿ, ನರಿಮೊಗರು, ಕೆದಿಯೂರು ಇಷ್ಟು ಗ್ರಾಮಗಳಲ್ಲಿ ಸ್ಥಿರಾಸ್ತಿಗಳು ಇರುವುವಲ್ಲದೇ ಸುಮಾರು ರೂ. 25000 ಹೊರಗಿನಿಂದ ಬರತಕ್ಕ ಮೂಲವೂ ಇರುತ್ತದೆ. ಸದರಿ ಮಂಜಪ್ಪ ಶೆಟ್ರಿಗೆ ಈಗ ಸಾಧಾರಣ 88 ವರ್ಷಗಳಷ್ಟು ಪ್ರಾಯ ಆಗಿ ಬುದ್ಧಿಸಾಮರ್ಥ್ಯ ಕಡಿಮೆ ಆಗಿಯದೆ. ಈಗ ಸುಮಾರು 1½ ವರ್ಷದಿಂದ ಅವರಿಗೆ ಕಾಲಿನಲ್ಲಿ ಒಂದು ಹುಣ್ಣಾಗಿ ನಡಿಯ ಕೂಡದೆ ಕಾಯಿಲೆಯಲ್ಲಿದ್ದು ಪರತಂತ್ರರಾಗಿದ್ದಾರೆ. ಶರೀರದಲ್ಲಿರುವ ಕಾಯಿಲೆ ದೆಸೆಯಿಂದಲೂ ಪ್ರಾಯ ಹೆಚ್ಚಾದ ಸಂಗತಿಯಿಂದ ಸಹಾ ಸ್ವತಹಾ ಗ್ರಹಿಸುವ ಸಾಮರ್ಥ್ಯಹೀನರಾಗಿರುತ್ತಾರೆ. ಹೀಗಿದ್ದದ್ದರಿಂದ ಅವರ ಸೇವೆಗಾಗಿ ನಿಲ್ಲಿಸಿದ ಕೇಶವ್ವ ಶೇಮಿತನಿಗೆ ಒಳಸಂಚಿಗೆ ಪಡೆದು ಅವರಿಗೆ ಪುಸಲಾಯಿಸಿ ಕರಕೊಂಡುಹೋಗಿ ಕಾಸುಕೊಡದೆ ಇತ್ಲಾಗೆ ಕೆಲವರು ತಮಗೆ ಬೇಕಾದಂತೆ ರಿಕಾರ್ಡುಗಳನ್ನು ಮಾಡಿಸಿಕೊಂಡಿದ್ದಾರೆಂತಲೂ ಇನ್ನು ಕೆಲವರು ಮಾಡಿಸುವುದರಲ್ಲಿ ಸಹಾ ಇದ್ದಾರೆಂತಲೂ ಕೇಳುತ್ತೇನೆ. ಆ ಮಂಜಪ್ಪ ಶೆಟ್ರಿಗೆ ಅಂಥಾ ರಿಕಾರ್ಡುಗಳು ಮಾಡಿಕೊಡುವಷ್ಟರ ಅಗತ್ಯ ಏನೂ ಇರಲಿಲ್ಲ. ಹಕ್ಕು ಇರುವುದೂ ಇಲ್ಲಾ. ನಾನು ಅವರ ಖಾಸಾ ಅಳಿಯನಾಗಿ ಆ ಆಸ್ತಿಗಳಿಗೆ ಹಕ್ಕುದಾರನಾಗಿರುತ್ತೇನೆ. ಸ್ವಸಾಮರ್ಥ್ಯಹೀನರಾದಂಥವರಿಂದ ಆಸ್ತಿ ವ ಹಣಗಳ ಬಾಬಿನಲ್ಲಿ ಹಿಂದೆ ಮಾಡಿಸಿಕೊಂಡ ರಿಕಾರ್ಡುಗಳು ವ ಇನ್ನು ಮಾಡಿಸಬಹುದಾದ ರಿಕಾರ್ಡುಗಳು ಸಹಾ ನನ್ನ ನ್ಯಾಯವಾದ ಹಕ್ಕಿಗೆ ಬಾಧಿಸುವಂಥವುಗಳಲ್ಲಾ ಎಂಬುದು ಸರ್ವರೂ ತಿಳಿದಿರಬೇಕು.

ತಾ. 15-5-26. ಶಾಂತಿರಾಜ ಯಾನೆ ಕಾಂತುಶೆಟ್ರ ರುಜು.

ತಾ. 28—4—1926ನೇ ಅಪರಾಹ್ನ ಘಂಟೆ 3ಕ್ಕೆ ಮಂಗಳೂರು ಬಾಲಿಕಾ ಪಾಠಶಾಲೆಯಲ್ಲಿ ಮಿ| ಜಿ. ಎ. ಸಾಲ್ಡಾನರ ಅಧ್ಯಕ್ಷತೆಯಲ್ಲಿ ಜರಗಿದ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸು ಕಮಿಟಿಯ ವರದಿ:—

೧ ಆ ಪರಿಷತ್ತಿನ ೯ನೇ ನಿರ್ಣಯವನ್ನು ಜಾರಿಗೆ ತರುವರೆ ಈ ಕೆಳಗಿನ ಉಪಕಮಿಟಿಯನ್ನು ಏರ್ಪಡಿಸಲಾಯಿತು

(ಅ) ಮಿ| ಜಿ. ಎ. ಸಾಲ್ಡಾನರು, (ಆ) ನಾಗಪ್ಪ ಹೆಗ್ಡೆಯವರು, (ಇ) ಕೆ. ಆರ್. ಕಾರಂತರು (Convener), (ಈ) ಕೆ. ಆರ್. ಆಚಾರ್ರು, (ಉ) ರಾಮರಾಯ ಮಲ್ಯರು.

೨ ಹಿಂದುಸ್ಥಾನಿ ಸೇವಾದಲ ಪರಿಷತ್ತಿನ ೮ನೇ ಠರಾವಿನ ವಿಷಯ ನಮ್ಮ ಜಿಲ್ಲೆಯಲ್ಲಿ ಸದರಿ ದಲದ ಶಾಖೆಯನ್ನು ಏರ್ಪಡಿಸುವರೆ ಟಿ. ನಾರಪ್ಪ ಮತ್ತು ಕೆ. ಆರ್. ಆಚಾರ್ರು ಕಮಿಟಿಯನ್ನು ಏರ್ಪಡಿಸಿರುತ್ತದೆ.

೩ ಬಳ್ಳಾರಿ ಪ್ರಾಂತಿಕ ಪರಿಷತ್ತು:—ಇದಕ್ಕೆ ಶ್ರೀಯುತ ಶ್ರೀನಿವಾಸ ಅಯ್ಯಂಗಾರರು ಯಾ ಬಿ. ಜಿ. ಹೊರ್ನಿಮನರು ಅಧ್ಯಕ್ಷರಾಗಿ ಚುನಾಯಿಸುವರೆ ಶಿಫಾರಸುಮಾಡಬೇಕಾಗಿ ನಿರ್ಣಯಿಸಲಾಯಿತು. ಸದರಿ ಪರಿಷತ್ತಿಗೆ ಇಲ್ಲಿಂದ ಹೋಗುವ ಎಲ್ಲಾ ಕಾಂಗ್ರೆಸು ಮೆಂಬರರು ಪ್ರತಿನಿಧಿಗಳಾಗಬಹುದು.

೪ ಜಿಲ್ಲಾ ಕಮಿಟಿಯ ಕಾರ್ಯಕಾರಿ ಮಂಡಳಿ ವಗೈರೆ ಚುನಾವಣೆ:—೧ ಅಧ್ಯಕ್ಷರು ಶ್ರೀ| ಜಿ. ಎ. ಸಾಲ್ಡಾನರು, ೨ ಉಪಾಧ್ಯಕ್ಷರು ಶ್ರೀ| ನಾಗಪ್ಪ ಹೆಗ್ಡೆಯವರು, ೩ ಕಾರ್ಯದರ್ಶಿ ಶ್ರೀ| ಕೆ. ಆರ್. ಕಾರಂತರು, ೪ ಜೊತೆಕಾರ್ಯದರ್ಶಿ ಶ್ರೀ| ರಾಮರಾಯ ಮಲ್ಯರು, ೫ ಕೋಶಾಧ್ಯಕ್ಷ ಶ್ರೀ| ಉಳ್ಳಾಲ ಸಂಜೀವರಾಯರು.

ಕಾರ್ಯಕಾರಿ ಮಂಡಳಿಗೆಮೇಲಿನ ಸದಸ್ಯರಲ್ಲದೆ ಈ ಕೆಳಗಿನ ಸದಸ್ಯರನ್ನು ಕೂಡಾ ಚುನಾಯಿಸಲಾಯಿತು.

ಕುಂದಾಪುರ—೬ ಶ್ರೀ| ಸೂರಪ್ಪಯ್ಯ ಹೆಬ್ಬಾರರು, ೭ ಶ್ರೀ| ಕೃಷ್ಣರಾಯ ಕೊಡಗಿಯವರು. ಕಾರ್ಕಳ—೮ ಶ್ರೀ| ಕೆ. ಎಲ್. ಕುಡುವರು, ೯ ಶ್ರೀ| ಕೌಡೂರು ಶ್ರೀನಿವಾಸ ಹೆಗ್ಡೆಯವರು. ಪುತ್ತೂರು—೧೦ ಶ್ರೀ| ಬೈಂದೂರು ಶಿವರಾಮಹೊಳ್ಳರು. ಉಡುಪಿ—೧೧ ಶ್ರೀ| ಹಿರಿಯಡ್ಕ ನಾರಾಯಣ ರಾಯರು; ೧೨ ಶ್ರೀ| ಕೊಟ್ಟಿಕಾರ ಪಾಂಡುರಂಗಪೈಗಳು. ಕಾಸರಗೋಡು—೧೩ ಶ್ರೀ| ಶೆಡ್ಡೆ ಲಕ್ಷ್ಮಣರಾಯರು. ಮಂಗಳೂರು—೧೪ ಶ್ರೀ| ಎಮ್. ಕೆ. ವೈದ್ಯರು, ೧೫ ಮಿ| ಅಬ್ದುಲ್‌ಖಾದರ್ ಆಸಾದಿ ಸಾಹೇಬರು, ೧೬ ಶ್ರೀ| ಅ. ಭೋಜರಾಯರು, ೧೭ ಶ್ರೀ| ಗಂಗೊಳ್ಳಿ ಕೃಷ್ಣರಾಯರು. ಬಾಕಿವುಳ್ಳ ಸ್ಥಾನಗಳಿಗೆ ಅಗತ್ಯವುಳ್ಳಂತೆ ಇತರರನ್ನು ಸೇರಿಸಿಕೊಳ್ಳುವರೆ ಕಾರ್ಯಕಾರಿ ಮಂಡಳಿಯವರಿಗೆ ಪೂರ್ಣ ಹಕ್ಕು ಕೊಟ್ಟಿರುತ್ತದೆ.

೫ ಎಸೆಂಬ್ಲಿಯ ಚುನಾವಣೆ ಬಗ್ಗೆ ಮಿ| ಜಿ. ಎ. ಸಾಲ್ಡಾನರನ್ನು ಸರ್ವಸಮ್ಮತದಿಂದ ನಿಲ್ಲಿಸಬೇಕಾಗಿಯೂ ಮತ್ತು ಕೇರಳ ಪ್ರಾಂತಿಕ ಕಮಿಟಿಯ ಕಾರ್ಯಕಾರಿ ಮಂಡಳಿಯನ್ನು ಇವರಿಗೆ ಸಹಾನುಭೂತಿಕೊಡುವರೆ ಕೇಳಿಕೊಳ್ಳಬೇಕಾಗಿಯೂ ಕೂಡ ನಿರ್ಣಯಿಸಲಾಯಿತು.

೬ ಲೆಜಿಸ್ಲೇಟಿವ್ ಕೌನ್ಸಿಲ್ ಮಟ್ಟಿಗೆ ಬೇರೆ ಯಾರಾದರೂ ಉಮೇದ್ವಾರರು ಇದ್ದಾರೋ ಎಂತ ತಿಳಕೊಳ್ಳುವರೆ ಇನ್ನೂ ಸ್ವಲ್ಪ ಪುರುಸೊತ್ತು ಅಂದರೆ ತಾ. ೭ರ ಒಳಗೆ ಕಾರ್ಯದರ್ಶಿಯರಿಗೆ ತಿಳಿಸಿ ಪ್ಲೆಜ್ಜಿಗೆ ದಸ್ಕತ್ತು ಹಾಕುವರೆ ಪ್ರಕಟಿಸತಕ್ಕದ್ದು ಮತ್ತು ಕಾರ್ಯಕಾರಿ ಮಂಡಳಿಯ ಸಭೆಯನ್ನು ಈ ಚುನಾವಣೆ ಬಗ್ಗೆ ಮೇ ತಾ. ೮ಕ್ಕೆ ಜಿಲ್ಲಾ ಕಾಂಗ್ರೆಸು ಆಫೀಸು, ಮಂಗಳೂರಿನಲ್ಲಿ ಸಾಯಂಕಾಲ ೫ ಘಂಟೆಗೆ ಜರಗಿಸಬೇಕಾಗಿ ನಿರ್ಣಯಿಸಲಾಯಿತು.

೭ ಈ ಸಮಯದಲ್ಲಿ ಸಭೆಯಲ್ಲಿ ಕನಿಷ್ಠಹಾಜರಿಯಿಲ್ಲದೆ ಇರುವುದರಿಂದ ಸದರಿ ಸಭೆಯನ್ನು ಹೆಚ್ಚಿನ ಆಲೋಚನೆ ಬಗ್ಗೆ ನಾಳೆಬೆಳಿಗ್ಗೆ ೮ ಘಂಟೆಗೆ National Girl's Schoolನಲ್ಲಿ ಮುಂದರಿಸಿದಲಾಯಿತು.

ತಾ. ೨೯–೪–'೨೬ನೇ ಪೂರ್ವಾಹ್ನ ಘಂಟೆ ೮ಕ್ಕೆ ಮಂಗಳೂರು ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಮಿ| ಜಿ. ಎ. ಸಾಲ್ಡಾನರ ಅಧ್ಯಕ್ಷತೆಯಲ್ಲಿ ಜರಗಿದ ದ. ಕ. ಜಿಲ್ಲಾ ಕಾಂಗ್ರೆಸು ಕಮಿಟಿಯ ಮುಂದರಿಸಿದ್ದ ಮೀಟಾಂಗಿನ ವರದಿ:—

೧ ಉಡುಪಿ ನೆಶನಲ್ ಶಾಲೆಯ ವಿಷಯವನ್ನು ಪ್ರಥಮದಲ್ಲಿ ನಿರ್ಣಯಿಸಲಾಯಿತು.

ಶ್ರೀಯುತ ಪ. ರಾಮಚಂದ್ರರಾಯರು ತಾ. ೧೬–೧೧–'೨೩ರಲ್ಲು ರಿಜಿಸ್ಟ್ರಿ ಸೆಟ್ಲುಮೆಂಟು ಡೀಡ್ ಮೂಲಕ ಜಿಲ್ಲಾ ಕಾಂಗ್ರೆಸು ಕಮಿಟಿಗೆ ಕೊಟ್ಟ ಬಡಗಬೆಟ್ಟು ಗ್ರಾಮದ ಸ. ನಂಬ್ರ ೯೩/೧೧ನೇ ಸ್ಥಳದ ಪೈಕಿ ಪೂರ್ವದಲ್ಲಿ ದಕ್ಷಿಣ ಬದಿಯ ಸುಮಾರು ೨ ಎಕ್ರೆ ಸ್ಥಳವನ್ನು ಉಡುಪಿ ತಾಲೂಕು ಕಾಂಗ್ರೆಸು ಕಮಿಟಿಯವರು ಸದರಿ ದಸ್ತಾವೇಜಿನ ಉದ್ದೇಶವನ್ನು ಜಾರಿಗೆ ತರುವ ಬಗ್ಗೆ ಸದರಿ ಸ್ಥಳದಲ್ಲಿ ಉಡುಪಿ ರಾಷ್ಟ್ರೀಯ ಶಿಕ್ಷಣ ಮಂಡಳದವರು ಕಟ್ಟಿಸಿದ ಕಟ್ಟೋಣವನ್ನು ತಮಗೆ ಟ್ರಾನ್ಸ್‌ಫರ್‌ಮಾಡಿ ಪಡಕೊಳ್ಳುವ ಶರ್ತದ ಮೇಲೆ ಸದರಿ ಆಸ್ತಿಗೆ ಸಂಬಂಧಪಟ್ಟ ಮೂಲಗೇಣಿಚೀಟಿನ ಶರ್ತಗಳಿಗೆ ಒಳಪಟ್ಟು ಅಗತ್ಯವಿದ್ದಲ್ಲಿ ಮೂಲಗಾರರ ಅನುಮತಿ ಪಡೆದು ಸದರಿ ಸ್ಥಳವನ್ನು ಇಂದಿನಿಂದ ಈ ಮೊದಲಿನ ಸ್ವಾಧೀನತೆ ಮೂಲಕ ಸ್ವಾಧೀನಗಾರರಾಗಿ ಅನುಭವಿಸಬೇಕಾಗಿಯೂ ಮತ್ತು ಸದರಿ ಸೆಟ್ಲುಮೆಂಟು ಡೀಡಿನ ಉದ್ದೇಶಗಳು ಯಾ ಆ ಪೈಕಿ ಯಾವದನ್ನಾದರೂ ನೆರವೇರಿಸಲಿಕ್ಕೆ ಉಡುಪಿ ತಾಲೂಕು ಕಾಂಗ್ರೆಸು ಕಮಿಟಿಗೆ ಅಸಾಧ್ಯವಾದಲ್ಲಿ ಯಾ ಅವರು ಅಂಥಾ ಕೆಲಸವನ್ನು ನಿಲ್ಲಿಸಿದ ಸಂದರ್ಭದಲ್ಲಿ ಸದರಿ ಸ್ಥಳ ವ ಅದರಲ್ಲಿ ಇರಬಹುದಾದ ಕೃತಗಳು ಕೂಡಾ ಜಿಲ್ಲಾ ಕಾಂಗ್ರೆಸು ಕಮಿಟಿಗೆ ಸೇರಬೇಕಾಗಿರುತ್ತದೆ. ಉಡುಪಿ ತಾಲೂಕ್ ಕಾಂಗ್ರೆಸು ಕಮಿಟಿಯವರು ಸದರಿ ದಸ್ತಾವೇಜಿನ ಉದ್ದೇಶಗಳನ್ನು ನೆರವೇರಿಸುತ್ತಾರೋ ಯಾ ಇಲ್ಲವೋ ಎಂಬ ಸಂಗ್ತಿಯನ್ನು ನಿರ್ಣಯಿಸುವ ಹಕ್ಕು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಗೆ ಕೂಡಿರುತ್ತದೆ. ಹಾಗೆ ಉಡುಪಿ ತಾಲೂಕ್ ಕಾಂಗ್ರೆಸ್ ಕಮಿಟಿಯವರು ಸದರಿ ಡೀಡಿನ ಯಾವದಾದರೂ ಉದ್ದೇಶವನ್ನು ನಡಿಸುವುದಿಲ್ಲವಾಗಿ ಯೋಗ್ಯ ಕಾರಣಗಳ ಮೇಲೆ ಜಿಲ್ಲಾ ಕಾಂಗ್ರೆಸು ಕಮಿಟಿಯವರು ನಿರ್ಣಯಿಸಿದ್ದಲ್ಲಿ ಸದರಿ ತಾಲೂಕು ಕಾಂಗ್ರೆಸು ಕಮಿಟಿಯವರು ಸದರಿ ಸ್ಥಳದಲ್ಲಿ ಮಾಡಿದ ಯಾ ಇನ್ನು ಮುಂದೆ ಮಾಡಬಹುದಾದ ಕೃತಗಳ ಮೌಲ್ಯದ ಬಗ್ಗೆ ರೂಪಾ ೨೦೦೦ ಎರಡು ಸಾವಿರಕ್ಕೆ ಮೀರದ ಐವೇಜನ್ನು ಪಡೆದ ಸದರಿ ಸ್ಥಳದ ಕೃತಗಳನ್ನು ಏನೊಂದು ಆಕ್ಷೇಪ ಹೇಳದೆ ಜಿಲ್ಲಾ ಕಾಂಗ್ರೆಸು ಕಮಿಟಿಗೆ ಬಿಟ್ಟುಕೊಡತಕ್ಕದ್ದು. ಸದರಿ ಸ್ಥಳದಲ್ಲಿ ಹಾಲಿ ಇರುವ ಯಾ ಇನ್ನು ಮುಂದೆ ಮಾಡಬಹುದಾದ ಯಾವತ್ತು ಕೃತಗಳನ್ನು ತೆಗಿಯುವರೆ ಉಡುಪಿ ತಾಲೂಕು ಕಾಂಗ್ರೆಸು ಕಮಿಟಿಯವರಿಗೆ ಹಕ್ಕಿರುವುದಿಲ್ಲ. ಸದರಿ ಸ್ಥಳ ವ ಅದರಲ್ಲಿರುವ ಯಾ ಇನ್ನು ಮುಂದೆ ಮಾಡಬಹುದಾದ ಯಾವತ್ತು ಕೃತಗಳನ್ನು ಯಾ ಈ ಪೈಕಿ ಎಷ್ಟು ಮಾತ್ರದ ಅಂಶವನ್ನಾದರೂ ಪರಾಧೀನಮಾಡುವರೆಯೂ ಯಾ ಕೋರ್ಟು ಇಂಜಕ್ಷನ್ ಜಪ್ತಿ ವಗೈರೆಗೆ ಗುರಿಪಡಿಸಲಿಕ್ಕೂ ಉಡುಪಿ ತಾಲೂಕು ಕಾಂಗ್ರೆಸು ಕಮಿಟಿಗೆ ಹಕ್ಕಿರುವುದಿಲ್ಲ. ಇದಕ್ಕೆ ವಿರೋಧವಾಗಿ ಅವರು ನಡೆದರೆ ಅಂಥಾ ಪರಾಧೀನ ರದ್ದಾಗಿ ಸದರಿ ಸ್ಥಳ ವ ಕೃತಗಳನ್ನು ಸಹ ಸ್ವಾಧೀನ ಪಡೆಯುವರೆ ಜಿಲ್ಲಾ ಕಾಂಗ್ರೆಸು ಕಮಿಟಿಯವರು ಸಂಪೂರ್ಣ ಹಕ್ಕುದಾರರಾಗಿರುತ್ತಾರೆ. ಈ ವಿಷಯ ಅಗತ್ಯವಿರುವ ದಸ್ತಾವೇಜನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಾಜಿ ಕಾರ್ಯದರ್ಶಿಯವರಾದ ರಾ| ಕಾರ್ನಾಡು ಸದಾಶಿವರಾಯರು ಯಾ ಹಾಲಿ ಸದರಿ ಕಮಿಟಿಯ ಜೊತೆಕಾರ್ಯದರ್ಶಿಯವರು ಯಾ ಮೂವರು ಜೊತೆಯಿಂದ ಉಡುಪಿ ತಾಲೂಕು ಕಾಂಗ್ರೆಸು ಕಮಿಟಿಯ ಪರವಾಗಿ ಸದರಿ ಕಮಿಟಿಯ ಕಾರ್ಯದರ್ಶಿಯವರಿಗೆ ಬರೆದುಕೊಡಬೇಕಾಗಿ ನಿರ್ಣಯಿಸಲಾಯಿತು.

೨ ಜಿಲ್ಲಾ ಕಾಂಗ್ರೆಸು ಕಮಿಟಿಯ ನಿಯಮ ೨೨ರಲ್ಲಿ "೧೫ ದಿವಸಗಳ ಮುಂಚೆ" ಎಂಬದರ ಬದಲಾಗಿ "೮ ದಿವಸಗಳ ಮುಂಚೆ"ಯೆಂದು ತಾ ೨೯–೩–'೨೬ಕ್ಕೆ ಮಾಡಿದ ಬದಲಾವಣೆಯನ್ನು ಕಾಯಂಮಾಡಲಾಯಿತು.

೩ ಪ್ರಾಂತಿಕ ಸ್ವಯಂಸೇವಕರ ಪರಿಷತ್ತಿಗೆ ಪ್ರತಿನಿಧಿಗಳನ್ನು ಚುನಾಯಿಸುವರೆ ವಗೈರೆ ಕೆಲಸಮಾಡಲಿಕ್ಕೆ ಸಂಬಂಧಪಟ್ಟ ಕೆಲಸಗಾರರಿಗೆ ಅಧಿಕಾರಕೊಡಲಾಯಿತು.

೪ ಶ್ರೀ| ಕೆ. ಆರ್. ಕಾರಂತರನ್ನು ಆಡಳಿತ ಕಾರ್ಯದರ್ಶಿಯಾಗಿ ಮಾಡಲಾಯಿತು.

ತಾ. ೮–೫–'೨೬ನೇ ಅಪರಾಹ್ನ ಘಂಟೆ ೫ಕ್ಕೆ ಮಂಗಳೂರಲ್ಲಿ ಜಿಲ್ಲಾ ಕಾಂಗ್ರೆಸು ಕಮಿಟಿಯ ಕಚೇರಿಯಲ್ಲಿ ಜಿಲ್ಲಾ ಕಾಂಗ್ರೆಸು ಕಮಿಟಿಯ ಕಾರ್ಯಕಾರಿ ಮಂಡಲಿಯ ಸಭೆಯು ಸೇರಿ ಕನಿಷ್ಠ ಹಾಜರಿ ಇಲ್ಲವಾದ್ದರಿಂದ ಮುಂದರಿಸಿಟ್ಟ ಸದರಿ ಸಭೆಯು ತಾ. ೯–೫–'೨೬ನೇ ಆದಿತ್ಯವಾರ ಅಪರಾಹ್ನ ಘಂಟೆ ೫||ಗೆ ಜಿಲ್ಲಾ ಕಮಿಟಿಯ ಕಚೇರಿಯಲ್ಲಿ ಸೇರಿ ಶ್ರೀ| ಕೆ. ಆರ್. ಕಾರಂತರ ಕಚೇರಿಗೆ ಮುಂದರಿಸಿ ಅಲ್ಲಿ ಸಭೆ ನಡೆಯಿತು.

ಸಭೆಯ ವರದಿ—

೧ ಮದ್ರಾಸು ಕೌನ್ಸಿಲಿಗೆ ಉಮೇದ್ವಾರರಾದ ಶ್ರೀಗಳಾದ ಆರೂರು ಲಕ್ಷ್ಮೀನಾರಾಯಣ ರಾಯರು, ಅರಿಬೈಲು ಭೋಜರಾಯರು ಮತ್ತು ಕೆ. ಆರ್. ಕಾರಂತರುಗಳ ಪೈಕಿ ಶ್ರೀ| ಆರೂರು ಲಕ್ಷ್ಮೀನಾರಾಯಣರಾಯರು ತಮ್ಮ ಅರ್ಜಿಯನ್ನು ತಾ. ೫–೫–'೨೬ನೇ ಪತ್ರದ ಪ್ರಕಾರ ಹಿಂತೆಗೆದಿರುತ್ತಾರೆ. ಬಾಕಿ ಉಳಿದ ಅರ್ಜಿಗಳ ಪೈಕಿ ಶ್ರೀ| ಕೆ. ಆರ್. ಕಾರಂತರನ್ನು ಈ ಕಮಿಟಿಯು ಶಿಫಾರಸು ಮಾಡುತ್ತದೆ.

ಎಸೆಂಬ್ಲಿಯ ವಿಷಯ ಈ ಮೊದಲೇ ಮಿ| ಸಾಲ್ಡಾನರನ್ನು ಶಿಫಾರಸು ಮಾಡಿರುತ್ತದೆ. ಶ್ರೀ| ಡಾಕ್ಟರ್ ರಾಮಚಂದ್ರರಾಯರ ಅರ್ಜಿಯನ್ನು ಕೂಡ ಈ ಮೇಲೆ ಕಾಣಿಸಿದ ಅರ್ಜಿಗಳು ವ ಈ ಕಮಿಟಿಯ ಶಿಫಾರಸು ಸಮೇತ ಪ್ರಾಂತಿಕ ಕಮಿಟಿಗೆ ಕಳುಹಿಸಿಕೊಡತಕ್ಕದ್ದು.

ಇನ್ನು ಇತರ ಸ್ಥಳಗಳಿಗೆ ಅರ್ಜಿಗಳು ಬಂದರೆ ಅವುಗಳನ್ನು ಪ್ರಾಂತಿಕ ಕಮಿಟಿ ಕಾರ್ಯದರ್ಶಿಯವರಿಗೆ ಕಳುಹಿಸಿಕೊಡತಕ್ಕದ್ದು.

ಈ ಸಭೆಯ ಕಾರ್ಯಕ್ರಮದಲ್ಲಿ ಕಾಣಿಸಿದ ಇತರ ವಿಷಯಗಳನ್ನು ಇತ್ಯರ್ಥಮಾಡುವುದಕ್ಕೂ, ಕಾರ್ಯಕಾರಿ ಮಂಡಲಿಯ ಸಭೆಯನ್ನು ತಾ. ೬–೬–'೨೬ನೇ ಅಪರಾಹ್ನ ಘಂಟೆ ೫||ಗೆ ಮಂಗಳೂರಲ್ಲಿ ಕೆ. ಆರ್. ಕಾರಂತರ ಕಚೇರಿಯಲ್ಲಿ ಸೇರತಕ್ಕದ್ದು. ಈ ಸಮಯದಲ್ಲಿ ಶ್ರೀ| ಅಬ್ದುಲ್ ಖಾದರ್ ಆಸಾದಿಯವರು ಮಹಮ್ಮದನ್ ಕಾನ್‌ಸ್ಟಿಟ್ಯುಯನ್ಸಿ ಬಗ್ಗೆ ಅರ್ಜಿ ಕೊಟ್ಟುದುದರಿಂದ, ಅವರನ್ನು ಆ ಕಾನ್‌ಸ್ಟಿಟ್ಯುಯನ್ಸಿ ಬಗ್ಗೆ ಶಿಫಾರಸು ಮಾಡಿರುತ್ತದೆ.

ದ. ಕ. ಜಿ. ಕಾ. ಕ. ಕ.
ಮಂಗಳೂರು,
ತಾ. 19–5–1926.

ಅ. ಭೋಜರಾಯ,
ಕಾರ್ಯದರ್ಶಿಯವರ ಬಗ್ಗೆ.

ಸ್ಫುಟವಿಚಾರಗಳು.

ಫ್ರಾನ್ಸಿನ ಕ್ರೂರ ಸ್ವಾರ್ಥ.

ಫ್ರಾನ್ಸು ರೀಫ ಜನರೊಡನೆ ಸಂಧಿಗೆ ಸಿದ್ಧವಾಯಿತು—ಶರ್ತ, ಅವರ ಮುಖಂಡನಾದ ಅಬ್ದುಲ್ ಕರೀಮನು ಊರು ಬಿಟ್ಟು ಹೋಗಬೇಕೆಂದು! ಇಂತಹ ಸಂಧಿಯು ಸಾಧ್ಯವಾಗದೆಂದು ನಾವು ಈ ಮೊದಲೇ ಸೂಚಿಸಿರುವೆವು. ಸಂಧಿಯು ಬಿದ್ದುಹೋಯಿತು. ಅಬ್ದುಲ್ ಕರೀಮನು ಪುನಃ ಯುದ್ಧಕ್ಕೆ ಉಪಸ್ಥಿತನಾದನು. ಆಧುನಿಕ ನಾಗರಿಕತೆಯ ಸರ್ವಾನುಕೂಲಗಳಿದ್ದ ಎರಡು ಪ್ರಬಲ ರಾಷ್ಟ್ರಗಳು ಒಂದು ಚಿಕ್ಕ ವೀರ ಜನಾಂಗದ ಮೇಲೆ ಬಿದ್ದು ಹೋರಾಡುತ್ತಿರುವುವು! ಚಿಕ್ಕ ರಾಷ್ಟ್ರಗಳ ಸ್ವಾತಂತ್ರ್ಯದ ಹೆಸರಿನಲ್ಲಿ ಅಂದು ಜರ್ಮನಿಯೊಡನೆ ಹೋರಾಡಿದ ಆ ರಾಷ್ಟ್ರಗಳು ಈಗ ತಮಗಿಂತಲೂ ಶಕ್ತಿಯಲ್ಲಿಯೂ ಸೌಕರ್ಯಗಳಲ್ಲಿಯೂ ಬಹಳೇ ನಿರ್ಬಲವಿರುವ ಈ ಸಣ್ಣ ವೀರ ಮಂಡಲಿಯ ಮೇಲೆ ಬ್ರಹ್ಮಾಸ್ತ್ರವನ್ನು ಬಿಡುವುದನ್ನು ನೋಡಿದರೆ ಬಹಳ ನಾಚಿಕೆಗೇಡು ಅನ್ನಿಸುತ್ತಿದೆ. ಫ್ರಾನ್ಸಿನ ನಾಣ್ಯದ ಬೆಲೆಯು ದಿನಗಳೆದಷ್ಟಕ್ಕೆ ಇಳಿಯುತ್ತಾ ಬರುತ್ತಿದೆ; ಫ್ರಾನ್ಸಿನ ಸಾಲವು ದಿನಗಳೆದಷ್ಟಕ್ಕೆ ಏರುತ್ತಾ ಬರುತ್ತಿದೆ. ಆದರೂ ತನ್ನ ಆರ್ಥಿಕ ಸ್ಥಿತಿಯನ್ನು ಕೂಡ ಲಕ್ಷಿಸದ ಈ ಅವಿಚಾರಿ ಜನಾಂಗವು ಆ ಸಣ್ಣ ಜನತೆಯನ್ನು ಪೀಡಿಸುವುದರಲ್ಲಿ ಉದ್ಯುಕ್ತವಾಗುವುದನ್ನು ನೋಡಿದರೆ ಇಂದಿನ ನಾಗರಿಕತೆಯ ಮೇಲೆ ಅಸಹ್ಯವು ಹುಟ್ಟುತ್ತಿದೆ. ಫ್ರಾನ್ಸು, ರೀಫ ಜನರಿಗೆ ವೈದ್ಯ ಸಹಾಯವು ಕೂಡ ಹೋಗದಂತೆ ಮಾಡಲು ಪ್ರಯತ್ನಿಸುತ್ತಿದೆ; ಎಂತಹ ಬರ್ಬರತೆ! ಇಷ್ಟಾದರೂ ಆ ರೀಫ ಜನಾಂಗವು ಸುಲಭವಾಗಿ ಇವರಿಗೆ ವಿಜಯವನ್ನೊಪ್ಪಿಸುವಂತೆ ಕಾಣುವುದಿಲ್ಲ. ರೀಫ ಜನರ ಮುಖ್ಯಪಟ್ಟಣವನ್ನೇ ತಾವು ಹಿಡಕೊಂಡಿರುವರಾಗಿ ಇವರ ವರ್ತಮಾನಗಳು ಬರುವುವಾದರೂ, ಕಾರ್ಯತಃ ಪರಿಸ್ಥಿತಿಯು ಹೇಗೆಂದು ಹೇಳಬರುವುದಿಲ್ಲ. ರೀಫ ಸೈನ್ಯದ ಸಂಘಟನೆಯ ವಿಷಯವಾಗಿಯೂ, ವ್ಯವಸ್ಥೆಯ ವಿಷಯವಾಗಿ, ಎದುರಾಡುವ ಶಕ್ತಿಯ ವಿಷಯವಾಗಿಯೂ ಅನೇಕ ಇತರ ಪಾಶ್ಚಾತ್ಯ ಜನರೇ ಉತ್ತಮ ಅಭಿಪ್ರಾಯಗಳನ್ನು ಕೊಟ್ಟಿರುವರು. ರೀಫರು ಈ ವರೆಗೆ ಈ ಎರಡು ದೊಡ್ಡ ಜನಾಂಗಗಳನ್ನು ಪ್ರತಿರೋಧಿಸಿ ನಿಂತುದೇ ಇದಕ್ಕೆ ಸಾಕಾದ ಸಾಕ್ಷಿಯಾಗಿದೆ. ಈಗ ನಡೆಯುವ ಯುದ್ಧದಲ್ಲಿ ಕೂಡ ಸ್ಪೈಯಿನ್ ದೇಶಕ್ಕೆ ಪ್ರಚಂಡ ನಷ್ಟವಾಗಿದೆ. ಇಷ್ಟು ಸಾಹಸಿಯೂ ವೀರತೆಯುಳ್ಳದೂ ಆದ ಈ ಸಣ್ಣ ಜನಾಂಗವು ಭೂಲೋಕದಿಂದ ಅಳಿದುಹೋದದ್ದೆ ಲೋಕಕ್ಕೆ ದೊಡ್ಡದೊಂದು ನಷ್ಟವೇ ಸಂಭವಿಸಿದಂತಾಗುವುದು.

ಬಳ್ಳಾರಿ ನಾಗರಿಕರ ಸಹಾನುಭೂತಿ ಎಲ್ಲಿ?

ಬಳ್ಳಾರಿಯನ್ನು ಆಂಧ್ರ ವಿದ್ಯಾಪೀಠಕ್ಕೆ ಕೂಡಿಸಿದುದರ ಸಲುವಾಗಿ ಇಡೀ ಕರ್ನಾಟಕವು ನಿಷೇಧವನ್ನೂ ಖಂಡನೆಯನ್ನು ತೋರಿಸಿಯದೆ. ಬಳ್ಳಾರಿ ಜನರೂ ಆಂಧ್ರ ವಿದ್ಯಾಪೀಠಕ್ಕೆ ಸೇರುವುದಕ್ಕೆ ವಿರೋಧವಾಗಿಯೇ ಇರುವರೆಂದು ನಮ್ಮ ಭಾವನೆಯಿದ್ದಿತು. ಆದರೆ ಬಳ್ಳಾರಿ ನಾಗರಿಕರ ಕಡೆಯಿಂದ ಆಂಧ್ರ ವಿದ್ಯಾಪೀಠಕ್ಕೆ ಧನಸಹಾಯವಾಗಿದೆಯೆಂದು ನಾವು ತಿಳಿಯುತ್ತೇವೆ. ಈ ಧನ ಸಹಾಯದ ಮೂಲ ತತ್ವವೇನೆಂದು ಶೋಧಿಸುವುದು ಅಗತ್ಯವಿದೆ. ಈ ಧನ ಸಹಾಯವು ಮೂರು ಕಾರಣಗಳಿಂದ ಆಗಲು ಸಾಧ್ಯವಿದೆ. (೧) ಜನರು ವಿದ್ಯಾಪೀಠದ ಅಧೀನತೆಗೆ ಒಪ್ಪಿಗೆ ಕೊಟ್ಟಾಗಿರಬಹುದು. (೨) ಆಂಧ್ರರು ಬಳ್ಳಾರಿಯು ತಮಗೇ ಸೇರಿದುದೆಂದು ತೋರಿಸಲಿಕ್ಕಾಗಿ ಈ ಮೂಲಕ ಮಾಡಿದ್ದಿರಬಹುದು. (೩) ಬಳ್ಳಾರಿ ಜನರ ಸಹಜ ಔದಾರ್ಯದಿಂದಾಗಿರಬಹುದು. ಈ ಧನ ಸಹಾಯವು ಯಾವ ಭಾವನೆಯಿಂದ ಕೊಡಲ್ಪಟ್ಟಿದೆ ಎಂದು ಕರ್ನಾಟಕಸ್ಥರು ನೋಡುವುದು ಉತ್ತಮವಿದೆ. ಆಂಧ್ರ ವಿದ್ಯಾಪೀಠಕ್ಕೆ ಕರ್ನಾಟಕಸ್ಥರು ಯಾವ ತರದ ಸಹಾನುಭೂತಿಯನ್ನೂ ತೋರಿಸಬಾರದೆಂದು ನಮ್ಮ ಅಭಿಪ್ರಾಯವಲ್ಲ. ಆದರೆ ಈ ಸಹಾನುಭೂತಿಯು ಕರ್ನಾಟಕ ಅಖಂಡತೆಗೆ ಬಾಧಕಬಾರದಂತಹುದಾಗಿರುವಂತೆ ನೋಡುವುದು ಮಾತ್ರ ನಮ್ಮ ಕರ್ತವ್ಯವಿದೆ.

ನಮ್ಮ ದೇಶದಲ್ಲಿ ಔದ್ಯೋಗಿಕ ವಿದ್ಯಾಭ್ಯಾಸ.

ನಮ್ಮ ಯುವಕರಿಗೆ ಪ್ರಯೋಜನಕಾರಿಯಾದ ಔದ್ಯೋಗಿಕ ವಿದ್ಯಾಭ್ಯಾಸವನ್ನು ಕೊಡುವ ಸಂಸ್ಥೆಗಳಿಲ್ಲದೆ ದೇಶದಲ್ಲಿ ವಿದ್ಯಾವಂತ ಯುವಕರ ಅರ್ಜನೆಯ ಪ್ರಶ್ನೆಯು ಕಠಿಣವಾಗುತ್ತ ಬರುತ್ತಿದೆಯಲ್ಲದೆ, ದೇಶದ ಆರ್ಥಿಕ ಜೀವನದ ಉನ್ನತಿಗೂ ತಡೆಯೊದಗಿದೆ. ಪ್ರಸ್ತುತದ ಔದ್ಯೋಗಿಕ ವಿದ್ಯಾಭ್ಯಾಸದಲ್ಲಿ ವೈಜ್ಞಾನಿಕ ವೈಶಿಷ್ಟ್ಯಗಳಿಗೂ ಸಂಶೋಧನಗಳಿಗೂ ಪ್ರಾಧಾನ್ಯವಿಲ್ಲದುದರಿಂದ, ಈ ವಿದ್ಯಾಭ್ಯಾಸವನ್ನು ಹೊಂದಿದವರು ಪಾಶ್ಚಾತ್ಯ ಯಂತ್ರ ಸಾಮಾಗ್ರಿಗಳನ್ನುಪಯೋಗಿಸುವರಲ್ಲದೆ, ಸ್ವತಂತ್ರಸಂಸ್ಥೆಗಳನ್ನು ಕಟ್ಟಿ, ಬಡವರಿಗೆ ಜೀವನೋಪಾಯಗಳನ್ನು ಕಲ್ಪಿಸಿ, ಪರದೇಶೀಯ ಆಮದುಗಳಿಗೆ ತಡೆಹಾಕಿಸಿ, ದೇಶದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಶಕ್ತರಾಗುವುದಿಲ್ಲ. ಬರೇ ಅರುವತ್ತು ವರ್ಷಗಳೊಳಗೆ ಜಪಾನ ದೇಶವು ಸಮಸ್ತ ಕೈಗಾರಿಕೆಗಳನ್ನೂ ಕಟ್ಟಿಕೊಂಡಿತು. ಹತ್ತಿಯಿಲ್ಲದಿದ್ದರೂ, ವಸ್ತ್ರದ ಗಿರಣಿಗಳನ್ನೂ, ಕಬ್ಬಿಣವಿಲ್ಲದಿದ್ದರೂ ಹಡಗು ಕಾರ್ಖಾನೆಗಳನ್ನು ಅದು ರಚಿಸಲು ಶಕ್ತವಾಯಿತು. ಅಲ್ಲದೆ ಅದಕ್ಕೆ ನೈಸರ್ಗಿಕ ಪ್ರತಿರೋಧಗಳು ಅನೇಕವಿದ್ದರೂ, ಯಂತ್ರ ಸಾಮಾಗ್ರಿಗಳ ತಯಾರಿಯನ್ನು ಮಾಡುವುದರಲ್ಲಿ ಅದಕ್ಕೆ ಸಾಧ್ಯವಾಯಿತು. ನಮ್ಮ ದೇಶದಲ್ಲಿ ಕಬ್ಬಿಣವಿದೆ, ಕಲ್ಲಿದ್ದಲಿದೆ, ಹತ್ತಿಯಿದೆ, ಅಲ್ಲದೆ ಕೈಗಾರಿಕೆಗಳಿಗೆ ಬೇಕಾದ ಇತರ ಅನೇಕ ಅನುಕೂಲ್ಯಗಳಿವೆ. ಆದರೂ ಕೈಗಾರಿಕೆ ಸಾಮಾನುಗಳಿಗಾಗಿ ಹಿಂದೂದೇಶವು ಪರದೇಶಗಳ ಮೇಲೆಯೇ ಹೊಂದಿಕೊಂಡಿರಬೇಕು. ತನ್ನಲ್ಲಿ ಮಿಲಿಯಗಟ್ಟಲೆ ಜನರು ಉಪವಾಸವಿರುವಾಗ, ಇತರ ಜನಾಂಗಗಳಿಗೆ ಕೂಲಿಯನ್ನು ಕೊಟ್ಟು ರಾಷ್ಟ್ರದ ದ್ರವ್ಯಹಾನಿಯಾಗುವುದು ಬಹಳ ವಿಷಾದಕರವಿದೆ. ಇದಕ್ಕೆ ಕಾರಣವೆಂದರೆ ಉತ್ತಮ ಔದ್ಯೋಗಿಕ ವಿದ್ಯಾಭ್ಯಾಸದ ಅಭಾವ ಮತ್ತು ಕೈಗಾರಿಕೆಗಳಲ್ಲಿ ಸರಕಾರದ ಪ್ರೋತ್ಸಾಹದ ಅಭಾವ. ಹಿಂದೆ ಇಂಡಸ್ಟ್ರಿಯಲ್ ಕಮಿಶನ್ ರಿಪೋರ್ಟು ಒಂದು ತಯಾರಾಗಿತ್ತು. ಅದರಲ್ಲಿ ಅಖಿಲ ಭಾರತಕ್ಕೆ ಒಂದು ಔದ್ಯೋಗಿಕ ಸಂಸ್ಥೆಯನ್ನು ರಚಿಸುವ ಸೂಚನೆಯಿದ್ದಿತು. ಜನಾಂಗದ ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡಿ, ಕಮಿಶನು ನಡಿಸಿ ಈ ರಿಪೋರ್ಟು ಹೊರತಂದುದಾಯಿತೇ ಅಲ್ಲದೆ ಬೇರಾವ ಪ್ರಯೋಜನವೂ ಆಗಿಲ್ಲ. ಸರಕಾರದ ಲಕ್ಷ್ಯವು ಇನ್ನಾದರೂ ಇತ್ತಕಡೆ ಹರಿದರೆ ಉತ್ತಮವಿತ್ತು. ಇಲ್ಲವೇ ದೇಶದ ಶ್ರೀಮಂತರೇ ಇದಕ್ಕೆ ಬೇಕಾದ ಧನವನ್ನು ಸಂಗ್ರಹಿಸಿ ಈ ಸಂಸ್ಥೆಯನ್ನು ಆದರ್ಶಕರವಾಗಿ, ಇಡೀ ಲೋಕದಲ್ಲಿ ಪ್ರಮುಖವೆಂದೆನ್ನಿಸುವಂತೆ ರಚಿಸುವುದು ಉತ್ತಮವಿತ್ತು. ಇದರಿಂದ ಶ್ರೀಮಂತರ ಔದಾರ್ಯವು ಸುವ್ಯಕ್ತವಾಗುವುದಲ್ಲದೆ, ಈ ವಿದ್ಯಾಭ್ಯಾಸದ ಪ್ರಚಾರದಿಂದುಂಟಾಗುವ ಲಾಭಕ್ಕೆ ಈ ಶ್ರೀಮಂತರೇ ಭಾಗಿಯಾಗಬಹುದು. ಜನಹಿತದ ದೃಷ್ಟಿಯಿಂದಲೂ ಶ್ರೀಮಂತರ ಹಿತದ ದೃಷ್ಟಿಯಿಂದಲೂ ಶ್ರೀಮಂತರು ಇಂತಹ ಸಂಸ್ಥೆಯ ರಚನೆಗೆ ಕೈಹಚ್ಚುವುದು ಆವಶ್ಯಕವಿದೆ. ಜನತೆಯ ಜೀವನದಲ್ಲಿ ಯಂತ್ರಸಾಮಗ್ರಿಗಳ ಪ್ರಾಮುಖ್ಯತೆಯು ಹೆಚ್ಚುತ್ತಾ ಬರುತ್ತಿದೆಯಾದುದರಿಂದ ಇವುಗಳ ಕಡೆಗೆ ಹಿಂದೀಯ ಲಕ್ಷ್ಯವು ಹೆಚ್ಚುವುದು ಅತ್ಯಾವಶ್ಯಕವಿದೆ.

ಇಂಗ್ಲೆಂಡಿನ ಕೂಲಿಕಾರರ ಮುಷ್ಕರದ ಅಂತ್ಯ

ಇಂಗ್ಲೆಂಡಿನ ಜನರಲ್ ಸ್ಟ್ರೈಕ್ (ಎಲ್ಲಾ ಕೂಲಿಕಾರರ ಮುಷ್ಕರವು) ಅಂತ್ಯವಾಯಿತು. ಕೂಲಿಕಾರರ ಈ ಅಸಹಕಾರವು ಎಷ್ಟು ಪ್ರಚಂಡವಿದೆಯೆಂದು ಸರಕಾರವೂ, ಜನತೆಯೂ ತಿಳಿಯುವಂತಾಯಿತಲ್ಲದೆ, ಕೂಲಿಕಾರರಿಗೂ ಸಹನೆಯೂ, ಆತ್ಮಯಜ್ಞ ಎಂದರೆ ಏನೆಂದು ಅನುಭವವಾಯಿತು. ಕೂಲಿಕಾರರ ಮುಷ್ಕರದ ಅಖೈರಿಯೊಡನೆ ಈ ವರ್ಗೀಯ ಕಲಹದ ತೀರ್ಮಾನವಾಯಿತೆಂದ್ಯು ಎಣಿಸಲು ಕಾರಣವಿಲ್ಲ. ವಿವಾದವು ಅಲ್ಲಲ್ಲಿಯೇ ಮುಚ್ಚಿಟ್ಟು ಈ ರಾಜಿಯು ನಡೆದಿದೆ. ಈ ಮುಷ್ಕರದಲ್ಲಿ ಮಜೂರಪಕ್ಷಕ್ಕೆ ಲಾಭವಾಯಿತೊ, ನಷ್ಟವಾಯಿತೊ ಎಂದು ಹೇಳಲಿಕ್ಕೆ ಬರುವ ಹಾಗಿಲ್ಲ. ಸರಕಾರಕ್ಕೆ ಇದರ ಅಖೈರಿಯ ಬಗ್ಗೆ ಅಭಿನಂದನ ಕೊಡಲ್ಪಟ್ಟಿದೆ. ಮಿ| ಬಾಲ್ಡವಿನ್ನರಿಗೆ ಎಲ್ಲಾ ಕಡೆಗಳಿಂದಲೂ ಅಭಿನಂದನ ತಂತಿಗಳು ಬಂದಿವೆ. ಸರಕಾರವು ಮಜೂರ ಪಕ್ಷದ ಕಡೆಗೆ ತಗ್ಗಿದ ಸ್ವರದಿಂದಲೇ ಮಾತನಾಡುತ್ತಿದ್ದುದನ್ನು ನೋಡಿದರೆ, ಜನರಲ್ ಸ್ಟ್ರೈಕಿನ ವಿಷಯದಲ್ಲಿ ಸರಕಾರವು ಸ್ವಲ್ಪ ಮಟ್ಟಿಗೆ ದಣುಹೊಂದಿದೆಯೆಂದು ಅನ್ನಬೇಕಾಗುತ್ತಿದೆ. ಇತ್ತ ಮಜೂರ ಸಂಸ್ಥೆಗಳು ಅಂತ ರ್ರಾಷ್ಟ್ರೀಯ ಐಕ್ಯದಿಂದ ಬಲವಾಗುತ್ತಾ ಬರುತ್ತಿವೆ. ಇನ್ನು ಕೆಲವೇ ಸಮಯದಲ್ಲಿ ಇಂತಹ ಜನರಲ್ ಸ್ಟ್ರೈಕುಗಳಿಂದ ಅಧಿಕರಿಸುವ ಸರಕಾರಗಳನ್ನು ತಳ್ಳಿಬಿಡಲು ಮಜೂರ ಪಕ್ಷಕ್ಕೆ ಕಷ್ಟಸಾಧ್ಯವೆಂದು ತೋರುವುದಿಲ್ಲ. ಈ ವರ್ಗೀಯ ಕಲಹಗಳು ಹಿಂದೂಸ್ಥಾನದ ಜಾತೀಯ ಕಲಹಗಳಿಗಿಂತಲೂ ಕಠಿಣವಾಗಲಿವೆ ಎಂಬುದಕ್ಕೆ ಸಾಕಷ್ಟು ಚಿಹ್ನೆಯು ಈಗಲೇ ತೋರುತ್ತಿದೆ. ಇಂಗ್ಲೆಂಡದ ಈ ಮುಷ್ಕರದ ಅಖೈರಿಯೊಡನೆ ಈ ಸಮಸ್ಯೆಯು ತೀರ್ಮಾನ ಹೊಂದಿಲ್ಲ.

ದುರ್ಭಾಗ್ಯ ಬಂಗಾಳ.

ದುರ್ಭಾಗ್ಯ ಬಂಗಾಳದ ಇತಿಹಾಸವು ಅದು ಸಹಿಸಿದ ಪ್ರಚಂಡ ಆಘಾತ ಅಪಘಾತಗಳ ಸರಣಿಯಾಗಿದೆ. ಅತೀ ಪೂರ್ವಕಾಲದಿಂದಲೂ ಅಳರಸರ ದ್ವೇಷಾಸೂಯೆಗಳಿಂದ ರಣಭೂಮಿಯೇ ಆಗಿದ್ದ ಬಂಗಾಳವು ಸಾಮ್ರಾಜ್ಯ ಸಂಗ್ರಾಮಗಳ ಕ್ಷೇತ್ರವಾಗಿದೆ. ಎಲ್ಲಿ ಪಠಾಣರ ಶಾಹಶಾಹಿ, ಮೊಗಲರ ದಬ್ಬಾಳಿಕೆಯೂ, ಸಿರಾಜುದ್ದೌಲನ ಕ್ರೂರವರ್ತನೆಯೂ, ಕಂಪೆನಿ ಸರಕಾರದ ಸುಲಿಗೆಯೂ ನಡೆಯಿತೊ, ಅದೇ ರಾಜ್ಯವು ಈ ಶಾಂತಿಮಯ ವಾತಾವರಣದಲ್ಲಿ ಕೂಡ ಹದಿನೇಳನೇ ಶತಮಾನದ ಸುಖವನ್ನು ಅನುಭವಿಸುತ್ತದೆ. ಅದರ ಉಜ್ವಲ ಪುತ್ರರೇ ಕಾರಾಗೃಹಗಳ ಪ್ರಾಚೀರದಲ್ಲಿ ಅಡಗಿಸಲ್ಪಟ್ಟಿರುವರು. ಅದರ ಉತ್ಸಾಹಿತ ಯುವಕಮಂಡಳಿಯೇ ವಿಚಾರಣೆಯಿಲ್ಲದೆ ಬಂಧನದಲ್ಲಿ ಬಿದ್ದಿತು. ಅಸಹಕಾರ ಸಮಯದಲ್ಲಿ ಆತ್ಮಯಜ್ಞ ಮಾಡಿದ ಯುವಕರ ಸಂಖ್ಯೆಯು ಬಂಗಾಳದಲ್ಲಿಯೇ ಹೆಚ್ಚಾಗಿತ್ತು. ಅಸಹಕಾರದ ಚಳವಳದ ಸಹನೆಯ ಪಾಠವನ್ನು ವಹಿಸಿದ ಧೀರರೂ ಬಂಗಾಳದಲ್ಲಿ ಹೆಚ್ಚು. ಇನ್ನು ಈಗ ಹಿಂದೂ ಮುಸಲ್ಮಾನರ ಕೈ ಕೈ ಜಗಳವೂ, ಪರಸ್ಪರ ಹತ್ಯೆಯೂ, ಭೀಕರ ದ್ವೇಷದ ದೃಶ್ಯಗಳೂ ಅಲ್ಲಿಯೇ ಹೆಚ್ಚು. ಬಂಗಾಳವನ್ನು ಈ ಸಂಕಷ್ಟಗಳಿಂದ ಉದ್ಧರಿಸುವ ಬದಲು ಸರಕಾರವು ಆ ಶತಮಾನಗಳ ಹಿಂದಿನ ಪದ್ಧತಿಯಂತೆಯೇ ಹೊಸ ಹೊಸ ಕಾನೂನುಗಳಿಂದ ಬಂಗಾಳವನ್ನು ಬಂಧಿಸುತ್ತಿದೆ. ಓರ್ಡಿನೆನ್ಸ್ ಆಕ್ಟು ಮೊದಲಾದ ವ್ಯಕ್ತಿ ಸ್ವಾತಂತ್ರ್ಯಾಪಹಾರಕ ಆಕ್ಟುಗಳನ್ನೆಷ್ಟೊ ಸರಕಾರವು ಜಾರಿಗೆ ತಂದಿತು. ಆದರೂ ತೃಪ್ತಿಯಿಲ್ಲ. ಕಾಳೀಘಾಟಿನ ಕಾಳಿಕಾಂಬೆಯಂತೆಯೇ ಕಲ್ಕತ್ತದ ಸರಕಾರದ ಭೀಕರ ಪಿಪಾಸೆ! ಕಲ್ಕತ್ತದಲ್ಲಿ ನಡೆದ ಹಿಂದೂ ಮುಸಲ್ಮಾನ ಕಲಹದ ನೆವದಿಂದ ಸರಕಾರವು ಹೊಸದೊಂದು ಶೃಂಖಲೆಯನ್ನು ರಚಿಸಿಬಿಟ್ಟಿತು! ಸರಕಾರದ ದೌರ್ಬಲ್ಯಕ್ಕಾಗಿ ಜನತೆಯೇ ಸ್ವಾತಂತ್ರ್ಯವನ್ನು ಬಿಟ್ಟುಕೊಡಬೇಕೆಂಬ ಈ ಸೂತ್ರವು ಅತೀ ಗರ್ಹಣೀಯವಿದೆ. ಇಂತಹ ಕಲಹಗಳನ್ನು ಅಡಗಿಸಲಿಕ್ಕೆ ಸರಕಾರದ ಸಾಮಾನ್ಯ ಶಕ್ತಿಯು ಸಾಲದಾಗಿದ್ದರೆ, ಅದು, ಆ ಅಧಿಕಾರವನ್ನು ಅನುಭೋಗಿಸಲು ತಕ್ಕುದಲ್ಲವೆಂದೇ ಅನ್ನಬೇಕು. ಇದಕ್ಕೂ ತಲೆತಗ್ಗಿಸುವ ಕ್ಷುದ್ರ ದೃಷ್ಟಿಯ ಹಿಂದೀಯರಿರುವುದೇ ಎಲ್ಲವಕ್ಕಿಂತಲೂ ಹೆಚ್ಚಿನ ದೌರ್ಭಾಗ್ಯ.

ಉಡುಪಿ ತಾಲೂಕು ಬೋರ್ಡಿನ ಸ್ವರಾಜ್ಯಪಕ್ಷೀಯರ ವರದಿ.

ಈ ವರದಿಯ ಒಂದು ಪ್ರತಿಯು ನಮ್ಮ ಕೈಸೇರಿಯದೆ. ಇಂತಹ ಪ್ರಕಟಣೆಗಳಿಂದ ಜನರಿಗೆ ತಮ್ಮ ಪ್ರತಿನಿಧಿಗಳು ಏನು ಮಾಡುವರೆಂದು ತಿಳಿಯಲು ಅನುಕೂಲವಾಗುತ್ತದೆ. ಮತ್ತು ಯಾವ ಪ್ರತಿಜ್ಞೆಯಿಂದ ಈ ಮೆಂಬರರು ಉಮೇದ್ವಾರರಾಗಿ ಚುನಾವಣೆ ಹೊಂದಿದರೊ, ಅದನ್ನು ಪಾಲಿಸಿರುವರೊ ಎಂದು ತಿಳಿಯಲಿಕ್ಕೂ ಅನುಕೂಲವಿದೆ. ಉಡುಪಿ ತಾಲೂಕುಬೋರ್ಡಿನ ಮೆಂಬರರ ಪ್ರಕಟಣೆಯಂತೆ ಇತರ ಬೋರ್ಡಿನ ಮೆಂಬರರೂ, ತಮ್ಮತಮ್ಮ ಪಕ್ಷದ ಕಡೆಯಿಂದಾಗಲಿ, ಸ್ವತಂತ್ರವಾಗಿಯಾಗಲಿ ವರದಿಯನ್ನು ಕೊಟ್ಟರೆ ಉತ್ತಮವಿತ್ತು.

ವರದಿಯಲ್ಲಿ ಅನೇಕ ಉತ್ತಮ ಕೆಲಸಗಳ ವಿವರ ಕೊಡಲ್ಪಟ್ಟಿದೆ. ಆದರೆ ಅಸ್ಪೃಶ್ಯರ ಅಭಿವೃದ್ಧಿ ಬಗ್ಗೆ ಯಾವುದೊಂದು ಕೆಲಸ ಮಾಡಿಯದೊ ಇಲ್ಲವೊ, ಅವರ ವಿದ್ಯಾಭ್ಯಾಸಕ್ಕಾಗಿ, ಶೌಚಕ್ಕಾಗಿ ಮತ್ತು ಅವರಿಗೆ ಕೆಲಸ ದೊರಕಲಿಕ್ಕಾಗಿ ಬೋರ್ಡಿನ ಮೂಲಕ ಯಾವ ಕೆಲಸ ಮಾಡಿಯದೆಂಬುದಕ್ಕೆ ಈ ವರದಿಯಲ್ಲಿ ಯಾವ ಸೂಚನೆಯೂ ಇಲ್ಲ. ಮತ್ತು ಅಸ್ಪೃಶ್ಯರ ವಿಷಯವೆಂದ ಮದ್ಯಪಾನ ನಿಷೇಧಕ್ಕಾಗಿ ಬೋರ್ಡು ಮೂಲಕ ಯಾವ ಕೆಲಸವೂ ನಡೆದಂತೆ ರಿಪೋರ್ಟಿನಲ್ಲಿ ಕಾಣುವುದಿಲ್ಲ.

ವರದಿಯ ವಿಷಯವಾಗಿ ಈ ಬಾರಿ ಸ್ಥಳಾಭಾವದಿಂದ ನಾವು ಹೆಚ್ಚು ಬರೆಯ ಹೋಗುವುದಿಲ್ಲ. ಆದರೆ ಸ್ವರಾಜ್ಯ ಪಕ್ಷೀಯರಾದುದರಿಂದಲೇ ಇದನ್ನು ಸಹಿಮಾಡಿದ ಈ ಎರಡು ಸದಸ್ಯರಿಗೆ ತಮ್ಮ ಜವಾಬ್ದಾರಿ ತಿಳಿದು ಬಂದಿದೆಯೆಂದು ಈ ಈ ಪ್ರಕಟಣೆಯಿಂದ ತಿಳಿಯಬಹುದಲ್ಲದೆ ಹೀಗೆಯೇ ಸ್ವರಾಜ್ಯ ಪಕ್ಷೀಯರನ್ನೇ ಚುನಾಯಿಸುವುದರಿಂದ ಜನತೆಗೆ ಉಂಟಾಗುವ ಲಾಭವೂ ತಿಳಿಯಬಹುದು. ಈ ವರದಿಯ ವಿಷಯವಾಗಿ ಜನತೆಗೆ ಬಿನ್ನಾಭಿಪ್ರಾಯವಿದ್ದರೆ ಅದನ್ನು ಬಹಿರಂಗವಾಗಿ ಚರ್ಚಿಸುವುದು ಉತ್ತಮವಿದೆ. ಅಂತಹ ಯೋಗ್ಯ ಚರ್ಚೆಗಳಿದ್ದರೆ ನಾವದನ್ನು ಪ್ರಕಟಿಸಲು ಸಿದ್ಧರಿದ್ದೇವೆ.

ಇತರ ತಾಲೂಕು ಬೋರ್ಡುಗಳ ಅಥವಾ ಮ್ಯುನಿಸಿಪಾಲಿಟಿಯ ಸ್ವರಾಜ್ಯಪಕ್ಷೀಯ ಸದಸ್ಯರು ಈ ರೀತಿಯಲ್ಲಿಯೇ ವರದಿಯನ್ನು ವರ್ಷಕ್ಕೊಂದು ಬಾರಿ ಕೊಡುವುದು ಉತ್ತಮವಿದೆ.

ಅನುಕ್ರಮಣಿಕೆ.

ಅಗ್ರಲೇಖ	ಪುಟ.
ರೋಯಲ್ ಕಮಿಶನು	೬
ಕರ್ನಾಟಕ ಕೀರ್ತನ ಸಮ್ಮೇಳನ	,,
ಸ್ಫುಟವಿಚಾರಗಳು	೮
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೭-೮
ದಕ್ಷಿಣ ಕನ್ನಡ— ಕಾರ್ಕಳ	,,
ಮಂಗಳೂರು	,,
ವಿವಿಧ ವಿಷಯ	,,
ತಲಚೇರಿಯಲ್ಲಿ ಜರಗಿದ ಮುಸ್ಲಿಮ ಸಭೆಯ ಅಧ್ಯಕ್ಷರ ಭಾಷಣದ ಸಾರಾಂಶ	೮
ಕುಷ್ಠರೋಗ ನಿವಾರಣೆ	,,

ಸ್ವದೇಶಾಭಿಮಾನಿ.

ಶಕ ೧೮೪೮ ವೈಶಾಖ ಶು| ೯ಯು ಶುಕ್ರವಾರ.

ರೊಯಲ್ ಕಮಿಶನು.

ಈ ವಿಸ್ತಾರವಾದ ಭರತಭೂಮಿಯಲ್ಲಿನ, ಸಮಸ್ತ ನೈಸರ್ಗಿಕ ಸೌಕರ್ಯಗಳೂ ಇರುವ ಈ ದೇಶದಲ್ಲಿನ ಭೂವ್ಯವಸಾಯವೂ ಕೂಡ ಇತರ ದೇಶಗಳಷ್ಟು ಅಭಿವೃದ್ಧಿಗೆ ಬಾರದಿರುವುದು ನಮ್ಮ ದೇಶದ ಹೀನಪರಿಸ್ಥಿತಿಯನ್ನು ತೋರಿಸುತ್ತಿದೆ. ಸುಜಲಾ, ಸುಫಲಾ, ಶ್ಯಾಮಲಾ, ಈ ಭರತ ಭೂಮಿಯಲ್ಲಿ, ಹಾಳುಬಿದ್ದ ಸ್ಥಳಗಳೆಷ್ಟೊ ಇವೆ; ಮತ್ತು ಫಲಿಸುವ ಕ್ಷೇತ್ರಗಳ ಬೆಳೆಯು ಉತ್ತಮವಾಗಿ ಆಗುವುದಿಲ್ಲ. ಸುಧಾರಿತ ದೇಶಗಳಲ್ಲಿ ಸಿಕ್ಕುವ ಪೈರನ್ನು ನಮ್ಮ ದೇಶದ ಪೈರಿನೊಂದಿಗೆ ಹೋಲಿಸಿದರೆ ಎಷ್ಟೊ ತಾರತಮ್ಯವು ಆಗ ಕಂಡುಬರುವುದು. ರೈತರಿಗೆ ವಿದ್ಯಾಭ್ಯಾಸವಿಲ್ಲದಿರುವುದೂ, ಜಮೀನುದಾರರಿಗೆ ಪೈರಿನ ಕಡೆಗೆ ಲಕ್ಷ್ಯವಿಲ್ಲದಿರುವುದೂ ಇದರ ಮುಖ್ಯ ಕಾರಣವಿದೆ.

ನಮ್ಮ ದೇಶದ ಜಮೀನುದಾರರು ತಮ್ಮ ಹೊಲಗದ್ದೆಗಳ ಕಡೆಗೂ ಕೃಷಿಯ ಕಡೆಗೂ ತಮ್ಮ ಶಕ್ತಿಯನ್ನು ವಿನಿಯೋಗಿಸದಿರುವುದು ವಿಷಾದಕರ. ಪೈರು ಒಳ್ಳೆಯದಾಗಲಿ ಹಾಳಾಗಲಿ, ಎಷ್ಟು ಸಿಕ್ಕಲಿಕ್ಕೆ ಸಾಧ್ಯವುಂಟೊ ಅಷ್ಟನ್ನೂ ಪ್ರತಿವರ್ಷವೂ ಒಕ್ಕಲುಗಳಿಂದ ಪಡೆಯಬಹುದೆಂಬ ಧೈರ್ಯವು ಜಮೀನುದಾರರನ್ನು ತಮ್ಮ ಹೊಲಗದ್ದೆಗಳ ಅಭಿವೃದ್ಧಿಯ ಕಡೆಗೆ ಪ್ರೇರಿಸುವುದಿಲ್ಲ. ಆದಷ್ಟು ಹೆಚ್ಚು ಗೇಣಿ ಹೊರಿಸುವುದೂ, ಅದನು ವರ್ಷದಿಂದ ವರ್ಷಕ್ಕೆ ಹೇಗೆ ಹೆಚ್ಚಿಸಬಹುದೆಂದು ನೋಡುವುದೂ, ಇಂತಹ ಆತ್ಮಘಾತುಕವಾದ ಸ್ವಾರ್ಥದ ಕಡೆಗನೇ ಜಮೀನುದಾರರ ಲಕ್ಷ್ಯವಿದ್ದು, ಜಮೀನನ್ನು ಅಭಿವೃದ್ಧಿಗೆ ತಂದು ಬೆಳೆ ಹೆಚ್ಚು ಮಾಡಿ ಆ ಮೂಲಕ ಗೇಣಿ ಹೆಚ್ಚಿಸಿ ಲಾಭಮಾಡಿಕೊಳ್ಳಬೇಕೆಂಬ ದೂರದರ್ಶಿತ್ವವು ನಮ್ಮ ದೇಶದ ಜಮೀನುದಾರರೊಳಗೆ ಬಹುಮಂದಿಯಲ್ಲಿ ಇಲ್ಲವೇ ಇಲ್ಲ.

ಅಲ್ಲದೆ ಯೋಗ್ಯ ಕೃಷಿ ವಿಜ್ಞಾನದ ಮಾಹಿತಿಯನ್ನು ಉಂಟುಮಾಡತಕ್ಕ ವಿದ್ಯಾಸಂಸ್ಥೆಗಳೂ ಇರುವುದಿಲ್ಲ. ಕೊಯಮುತ್ತೂರಿನಂತಹ ಕಾಲೇಜುಗಳು ಇದ್ದರೂ, ಅವುಗಳಿಂದ ಹೆಚ್ಚು ಪರಿಣಾಮಕಾರಿಯಾದ ಪ್ರಯೋಜನವು ದೇಶಕ್ಕೆ ಲಭಿಸಿಲ್ಲ. ಅಲ್ಲದೆ ಆ ಕಾಲೇಜೂ ವ್ಯವಸಾಯ ಇಲಾಖೆಯು ಪಾಶ್ಚಾತ್ಯ ಶೋಧನಗಳನ್ನು ಹಿಂದೀಯ ಕೃಷಿಯ ವೈಶಿಷ್ಟ್ಯಗಳಿಗೆ ಸರಿಮಾಡುವುದರಲ್ಲಿ ಕೃತಕೃತ್ಯರಾಗಿಲ್ಲ.

ನಮ್ಮ ಕೃಷಕರೂ ಹೊಸ ರೀತಿಗಳೆಂದರೆ ಬಹಳ ಅನುಮಾನದಿಂದ ನೋಡುವವರಾಗಿರುವರು. ನವೀನ ಕ್ರಮಗಳಿಂದ ಕೃಷಿ ಮಾಡಲು ಅವರಿಗೆ ಬೋಧಿಸಿದರೆ ಅವರದನ್ನು ಮಾನ್ಯಮಾಡುವುದಿಲ್ಲ. ಶತಮಾನಗಳಿಂದ ನಡೆದು ಬಂದ ಸಾಂಪ್ರದಾಯಗಳನ್ನು ಮುರಿಯುವುದು ಬಹಳ ಕಷ್ಟವಿದೆ. ಹಿರಿಯರು ಮಾಡಿದ ಕ್ರಮವೆಂದು ಅದರಂತೆ ಎಳ್ಳಷ್ಟೂ ತಪ್ಪದೆ ಈಗಿನ ಕೃಷಕರು ತಮ್ಮ ಹೊಲವನ್ನು ಉತ್ತು ಬಿತ್ತು ಪೈರು ಮಾಡುತ್ತಾರೆ. ಇಂತಹ ಮಾನಸಿಕತೆಯು ಬದಲಾಗಬೇಕಾದರೆ ಉತ್ತಮವಾದ ಮತ್ತು ರಾಷ್ಟ್ರೀಯವಾದ ವಿದ್ಯಾಭ್ಯಾಸವೇ ಕಾರ್ಯಕಾರಿಯಾದ ಉಪಾಯವಾಗಿದೆ. ರೈತರ ಮಕ್ಕಳಿಗೆ ಪ್ರತ್ಯೇಕವಾಗಿ ರಚಿಸಲ್ಪಟ್ಟ ಕ್ರಮದಿಂದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡುವುದು ಅವಶ್ಯವಾಗಿದೆ.

ಆದರೆ ಈ ವಿದ್ಯಾಭ್ಯಾಸದ ಕ್ರಮವನ್ನು ಬಹಳ ಜಾಗ್ರತೆಯಿಂದ ರಚಿಸಬೇಕು. ಸಾಮಾನ್ಯವಾಗಿ ಈಗಿನ ಶಾಲಾವಿದ್ಯಾಭ್ಯಾಸದಿಂದ ಕೈಗೆಲಸಗಳ ಮೇಲೆ ತಿರಸ್ಕಾರ ಉಂಟಾಗಿ ವಿದ್ಯಾಭ್ಯಾಸ ಹೊಂದಿದವನು ಉಪಕಾರಿಯಾದ ವ್ಯಕ್ತಿಯಾಗುವುದಿಲ್ಲ. ರೈತರ ಮಕ್ಕಳಿಗೆ ಈ ತರದ ವಿದ್ಯಾಭ್ಯಾಸವನ್ನು ಕೊಟ್ಟರೆ ಖಂಡಿತವಾಗಿಯೂ ಕೃಷಿ ಉದ್ಯಮವು ಕೆಟ್ಟುಹೋಗುವುದು. ಈ ಕಾರಣದಿಂದ ಚೆನ್ನಾಗಿ ಆಲೋಚಿಸಿ, ಜನತೆಯ ವೈಶಿಷ್ಟ್ಯಗಳಿಗೆ ಅನುಕೂಲವಾಗಿಯೂ ಅವರವರ ವೃತ್ತಿಗೆ ಸಹಾಯಕವಾಗಿಯೂ ಇರುವಂತಹ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮವನ್ನು ರಚಿಸಿ ರೈತರಿಗೆ ಆ ತರದ ವಿದ್ಯಾಭ್ಯಾಸವನ್ನು ಕೊಟ್ಟರೆ, ಆ ಮೇಲೆ ಅವರೊಳಗೆ ಪ್ರಯೋಜನಕರವಾದ ಕೃಷಿಯ ರೀತಿಗಳನ್ನು ಬೋಧಿಸಿ ಅವರವುಗಳನ್ನು ಆಚರಿಸಿ ಲಾಭಪಡೆಯುವಂತೆ ಮಾಡಬಹುದು.

ಹಿಂದೀಯ ಕೃಷಿ ಉದ್ಯೋಗದ ಅಭಿವೃದ್ಧಿಗಾಗಿ ಇಂತಹ ಅನೇಕ ಪ್ರಶ್ನೆಗಳನ್ನು ಆಲೋಚಿಸಲಿದೆ. ಹಿಂದೂಸ್ಥಾನವು ಮೊದಲಾಗಿ ಕೃಷಿ ದೇಶವು. ಕೃಷಿಯೊಂದರಿಂದ ಮಾತ್ರವೇ ದೇಶವು ತನ್ನೊಳಗೆ ಪರದೇಶಿಯರಿಂದ ನಡೆಯುವ ಪ್ರಚಂಡ ಸೂರೆಯನ್ನು ಸಹಿಸಬಲ್ಲದಾಗಿದೆ. ಈ ನೈಸರ್ಗಿಕ ಸಂಪತ್ತಿನ ಬೆಳೆಯನ್ನೂ ನಾವು ಹೆಚ್ಚಿಸುವುದಕ್ಕಾಗಿ ವ್ಯವಸ್ಥೆಗೊಳಿಸಲಾರೆವಾದರೆ ನಮ್ಮ ಆರ್ಥಿಕ ಜೀವನವು ಎಂದೂ ಉನ್ನತಿಯನ್ನು ಹೊಂದದು.

ದೇಶದ ಜನತೆಯ ಸಾಂಸಾರಿಕ ಜೀವನ ಸುಖಕ್ಕೂ ಪಾರಮಾರ್ಥಿಕ ಜೀವನ ಸುಖಕ್ಕೂ ಕಾರಣವಾದ ಕೃಷಿಯ ಅಭಿವೃದ್ಧಿಯನ್ನು ಪ್ರತಿ ಸ್ವತಂತ್ರ ರಾಷ್ಟ್ರದ ಸರಕಾರವು ತಾನಾಗಿ ನೋಡಿಕೊಳ್ಳುತ್ತಿದೆ. ಕೃಷಿಯ ಅಭಿವೃದ್ಧಿಗಾಗಿ ಪ್ರತ್ಯೇಕ ಇಲಾಖೆಯಿದ್ದು, ಆ ಇಲಾಖೆಯು ಜನತೆಗೆ ಜವಾಬ್ದಾರವಿರುತ್ತದೆ. ನಮ್ಮ ಸರಕಾರವು ಜನತೆಗೆ ಜವಾಬ್ದಾರರಲ್ಲದ ಕಾರಣ ಜನತೆಗೆ ಬೇಕಾದ ಹಿತವನ್ನು ಅದು ಸಾಧಿಸಲಾರದು. ಅದುದರಿಂದಲೇ ನಮ್ಮ ದೇಶದ ಕೃಷಿ ಉದ್ಯಮವು ತಿರಸ್ಕೃತ ರೀತಿಯಲ್ಲಿದ್ದು ದೇಶವು ಪ್ರತಿ ವರ್ಷವೂ ಬೆಳೆಗಳು ಹಾಳಾಗಿಯೂ, ಬೆಳೆಗಳು ಚೆನ್ನಾಗಿ ಆಗದೆಯೂ ಬಹಳ ನಷ್ಟವನ್ನು ಅನುಭವಿಸುತ್ತಿದೆ.

ಸರಕಾರವು ಈ ಬಾರಿ ಜನತೆಯನ್ನು ಒಲಿಸಲೆಂದೊ, ಮತ್ಯಾವ ಉದ್ದೇಶದಿಂದಲೊ ಕೃಷಿ ವಿಷಯಗಳನ್ನು ವಿಚಾರಿಸಲಿಕ್ಕೆ ಒಂದು ರೊಯಲ್ ಕಮಿಶನನ್ನೂ ಕೃಷಿಯ ಇಲಾಖೆಯಲ್ಲಿ ಕೆಲಸಮಾಡಿದ್ದ ಒಬ್ಬ ವ್ಯಾಸರಾಯಿಯನ್ನೂ ಹಿಂದೂಸ್ಥಾನಕ್ಕೆ ಕಳುಹಿಸಿಕೊಟ್ಟದೆ.

ಕಮಿಶನ್ನೆಂದರೆ ಅನೇಕರಿಗೆ ವಿಶ್ವಾಸ. ಅದರಲ್ಲಿಯೂ ರೊಯಲ್ ಕಮಿಶನ್ನೆಂದರೆ ಹಿಂದೀಯ ಮೊಡರೇಟರಿಗೆ ಇಲ್ಲದ ಆನಂದವು ಉಕ್ಕೇರಿ ಬರುತ್ತದೆ. ಪ್ರಾಯಶಃ ಈ ರೊಯಲ್ ಕಮಿಶನ್ನಿನ ಪ್ರದರ್ಶನದಿಂದ ಈ ಮೊಡರೇಟರಿಗೆ ತೃಪ್ತಿ ಇದ್ದೀತೊ ಏನೊ. ಆದರೆ ಇದರಿಂದ ಹಿಂದೂಸ್ಥಾನಕ್ಕೆ ಇದರಿಂದ ಸಾಧಕವೊ ಬಾಧಕವೊ ಎಂಬುದನ್ನು ಚೆನ್ನಾಗಿ ಆಲೋಚಿಸಬೇಕಾಗುತ್ತದೆ. ರಾಜತಂತ್ರ ಪ್ರವೀಣರಾದ ಇಂಗ್ಲೀಷರ ಈ ನೇಮಕದ ಉದ್ದೇಶವೇನು? ಇದರಿಂದ ಅವರಿಗೆಷ್ಟು ಲಾಭ, ಹಿಂದೀಯರಿಗೆ ಎಷ್ಟು ಲಾಭ ಎಂಬಿತ್ಯಾದಿಯನ್ನು ನಾವು ಆಲೋಚಿಸುವುದು ಅಗತ್ಯವಿದೆ.

ರೊಯಲ್ ಕಮಿಶನಿನ ವಿಷಯವಾಗಿ ನಮ್ಮ ಅನುಮಾನಗಳನ್ನು ನಾವು ಈ ಮೊದಲೇ ಕೊಟ್ಟಿರುವೆವು. ದೇಶದ ಹಿತದ ಬಗ್ಗೆ ಎಂದು ಇದರ ಹಿಂದೆ ಅನೇಕ ಕಮಿಶನುಗಳು ನಡೆದು ಹೋದುವು. ಅವುಗಳ ಹಾಗೆಯೇ ಇದು ಎಂದು ಹೇಳಲಿಕ್ಕಾಗದಿದ್ದರೂ, ಇವುಗಳ ಸೂಚನೆಗಳು ಅಷ್ಟು ಪರಿಣಾಮಕಾರಿಯಾದಾವೇ ಎಂಬುದಕ್ಕೆ ಸ್ವಲ್ಪ ಸಂಶಯಪಡಬೇಕಾಗಿದೆ.

ರೊಯಲ್ ಕಮಿಶನಿನ ಬಗ್ಗೆ ಮಹಾತ್ಮಾ ಗಾಂಧಿಯವರೊಡನೆಯೂ ಆಲೋಚಿಸಲಾಗುವುದು. ಇದಕ್ಕಾಗಿ ಮುಂಬ್ಯಾ ಗವರ್ನರರು ಮಹಾತ್ಮಾ ಗಾಂಧಿಯವರೊಡನೆ ಮೊನ್ನೆ ದೀರ್ಘಾಲೋಚನೆ ಮಾಡಿರುವರು. ಮಹಾತ್ಮರಿಂದ ಅತೀ ಉಪಯೋಗಕರವಾದ ಸೂಚನೆಗಳು ಸರಕಾರಕ್ಕೆ ಸಿಕ್ಕಬಹುದೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಸರಕಾರವು ಆ ಸೂಚನೆಗಳನ್ನು ಮಾನ್ಯ ಮಾಡುವಷ್ಟು ಔದಾರ್ಯವನ್ನು ತೋರಿಸೀತೊ ಎಂಬುದೇ ಈಗಿನ ಅನುಮಾನವಿದೆ.

ಜನರನ್ನು ಅಸಹಕಾರ ಧೋರಣದಿಂದಲೂ, ಸ್ವರಾಜ್ಯ ಪಕ್ಷದ ನಿರಂತರ ನಿರೋಧದ ಧೋರಣದಿಂದಲೂ ತಿರುಗಿಸಲಿಕ್ಕಾಗಿ ಈ ಕಮಿಶನು ರಚಿಸಲ್ಪಟ್ಟಿರಲೂ ಬಹುದು. ಈ ಕಮಿಶನ್ನಿನೊಡನೆ ಮಹಾತ್ಮರಂತಹ ನಿಸ್ಪೃಹ ಧುರೀಣರೇ ಸಹಕರಿಸಿರುವರೆಂದ ಮೇಲೆ ಅಸಹಕಾರ ಧೋರಣವು ವಿಸ್ಮೃತಿಯ ಗಾಢಾಂಧಕಾರದಲ್ಲಿ ಸೇರಿಸಿದಂತೆಯೇ ಎಂದು ನೆನಸಬೇಕು. ಸರಕಾರವು ಇಂತಹ ಯುಕ್ತಿಯುಕ್ತ ವಿಜಯವನ್ನೇ ಇಚ್ಛಿಸುವುದು. ರೊಯಲ್ ಕಮಿಶನ್ ಬರಲಿ ಹೋಗಲಿ—ಸರಕಾರವು ನಿಜವಾದ ಸಹಾನುಭೂತಿಯನ್ನು ದೇಶದ ದಾರಿದ್ರ್ಯದ ಕಡೆಗೆ ತೋರಿದರೇನೇ ಯಾವುದೊಂದು ಆಲೋಚನೆಯು ಸಾರ್ಥಕವಾಗುವುದು. ಆದರೆ ಎಂದಿನ ವರೆಗೆ ಇಂಗ್ಲೆಂಡಿನ ಹಿತವು ಒಂದು ಕಡೆಗೂ, ಹಿಂದೀಯ ಹಿತವನ್ನು ಇನ್ನೊಂದು ಕಡೆಗೂ ಇಟ್ಟು ತೂಕಮಾಡಬೇಕೊ ಹಿಂದೀ ಸರಕಾರವು ಅದು ಜನತೆಗೆ ಜವಾಬ್ದಾರವಾಗಿರದಿರುವ ವರೆಗೆ, ಇಂಗ್ಲೆಂಡಿನ ಹಿತವೇ ಅದಕ್ಕೆ ಹೆಚ್ಚು ಭಾರವಾಗಿ ತೋರಿ, ಹಿಂದೀ ಹಿತವು ಮರೆಯಲ್ಪಡುವುದು.

ಕರ್ನಾಟಕ ಕೀರ್ತನ ಸಮ್ಮೇಳನ.

ಈ ಪ್ರಖರವಾದ ಸಂಸಾರದಲ್ಲಿ ಸಹನೆಯ ಶಕ್ತಿಯನ್ನೂ ಮಾನಸಿಕ ಶಾಂತಿಯನ್ನೀಯುವ ಭಕ್ತಿಯನ್ನೂ ಕರ್ನಾಟಕೀಯರೊಳಗೆ ಯಾರಾದರೂ ಪ್ರಸರಿಸಿ ಜನತೆಯಲ್ಲಿ ಮನೋಶಾಂತಿಯನ್ನು ಸ್ಥಾಪಿಸಿರುವರಾದರೆ ಆ ಪುಣ್ಯ ಕೆಲಸವು ಕೀರ್ತನಕಾರರಿಂದಲೇ ನಡೆದಿದೆ. ಪುರಂದರ ದಾಸ, ಕನಕದಾಸರಾದಿಯಾಗಿ ಅನೇಕಭರಿತರೂ ಉನ್ನತರೂ ಆದ ಹರಿದಾಸರನೇಕರು ದೈವಭಕ್ತಿಯ ಪ್ರೇರಣೆಯಿಂದಲೂ ಉಚ್ಚ ಆದರ್ಶದಿಂದಲೂ, ಜನತೆಯೊಳಗೆ ತುಂಬಿ ತಿರುಗಾಡಿ ದೇವರ ಮೇಲಿನ ಅನಂತ ಭಕ್ತಿಯನ್ನು ಪ್ರಕಟಿಸಿ ಗೌರವವನ್ನು ಸಂಪಾದಿಸಿದರು.

ಜನತೆಯ ನಡೆನುಡಿಗಳನ್ನು ಸರಿಯಾದ ರೀತಿಯಲ್ಲಿಡಲಿಕ್ಕೆ ಈ ಕೀರ್ತನಕಾರರ ಕೀರ್ತನೆಗಳ ಪರಿಣಾಮವು ಅಷ್ಟಿಷ್ಟಲ್ಲ. ತಮ್ಮ ಸುಮಧುರ ಕಂಠದಿಂದ ಹೃದಯವನ್ನು ಮುಗ್ಧ ಮಾಡಿ, ತಮ್ಮ ಪ್ರೇಮಭರವಕ್ತೃತೆಯಿಂದ ಹೃದಯವನ್ನು ಉನ್ನತವಾಗಿ ಮಾಡಿ, ತತ್ವದ ಸತರ್ಕತೆಯಿಂದ ಮನಸ್ಸನ್ನೂ ನೈಜಶ್ರದ್ಧೆಯಿಂದ ಹೃದಯವನ್ನು ಜನತೆಯಿಂದ ಒಲಿಸಿ, ಸಂಸಾರದ ಕಠಿಣವಾದ ನಾಸ್ತಿಕ್ಯವಾದವನ್ನು ಹರಿಸಿದ ಈ ಕೀರ್ತನಕಾರರ ಮಹತ್ವವು ಸಾಮಾನ್ಯವಲ್ಲ.

ಪುರಂದರ ದಾಸ, ಕನಕದಾಸರ ನಂತರ ಅನೇಕರು ವೈರಾಗಿಗಳಾಗಿ ದಾಸರಾದುದೂ ಇದೆ. ಅಂತಹರು ಹಳ್ಳಿ ಹಳ್ಳಿಗಳಲ್ಲಿಯೂ, ಪಟ್ಟಣಪಟ್ಟಣಗಳಲ್ಲಿಯೂ ಸಂಚರಿಸಿ ಕೀರ್ತನೆಯನ್ನೂ ಜನರೊಳಗೆ ಭಕ್ತಿಬೋಧೆಯನ್ನೂ ಮಾಡುತ್ತಿರುವರು. ಹಾಗೆಯೇ ಒಳ್ಳೇ ಸುಶ್ರಾವ್ಯ ಕಂಠವಿದ್ದವರೂ, ತತ್ವವೇತ್ತರೂ, ದಾಸರಿಗೆ ಯೋಗ್ಯವಾದ ವೈರಾಗ್ಯವಿಲ್ಲದವರಾದರೂ ತಮ್ಮ ಜ್ಞಾನ ಮತ್ತು ವಕ್ತೃತೆಯ ಬಲದಿಂದ ಕೀರ್ತನೆಮಾಡುವುದನ್ನು ವೃತ್ತಿಯಾಗಿ ಮಾಡಿ ಕರ್ನಾಟಕದಲ್ಲಿ ಸದುಪದೇಶವನ್ನು ಕೊಡುತ್ತಿರುವರು.

ನವಸುಧಾರಣೆಯೊಂದಿಗೆ ಇಂತಹ ಪರಿಣಾಮಕಾರಿಯಾದ ಬೋಧಕವರ್ಗವು ಕಡಿಮೆಯಾಗಹತ್ತಿದೆ. ಹಿಂದೂ ವಿದ್ಯಾವಂತರಲ್ಲಿ ಒಂದು ಕಡೆಯಿಂದ ಭಕ್ತಿಯೂ ಇನ್ನೊಂದು ಕಡೆಯಿಂದ ವಿಶ್ವಾಸವೂ ಕಡಿಮೆಯಾಗಿ ಮೆಲ್ಲನೆ ಪಾರಮಾರ್ಥಿಕ ವಿಷಯದಲ್ಲಿ ಶೂನ್ಯತೆಯು ವಿಕಸಿತವಾಗಲಾರಂಭಿಸಿಯದೆ. ಈ ಕಾರಣದಿಂದಲಾದರೂ ಕೀರ್ತನಕಾರರ ಆವಶ್ಯಕತೆಯು ಅಗತ್ಯವಿದೆ.

ಕೀರ್ತನಕಾರರನ್ನು ಸುಸಂಘಟಿಸುವ ಬಗ್ಗೆ ಕೆಲವು ಹಿಂದೆ ಒಂದು ಬಾರಿ ಕೀರ್ತನಕಾರರ ಸಮ್ಮೇಲನವು ಜರುಗಿತು. ಹಾಗೆಯೇ ಈ ವರ್ಷವೂ ರಾಜಕವಿಭೂಷಣ ಲಿಂಗರಾಜ ಅರಸುರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಕೀರ್ತನಕಾರರ ಸಮ್ಮೇಲನವು ಜರುಗಿತ್ತು. ಅಧ್ಯಕ್ಷರು ಕೀರ್ತನೆಯ ಪೂರ್ವೇತಿಹಾಸವನ್ನು ಹೇಳಿ, ಕೀರ್ತನೆಯಿಂದ ಜನತೆಯೊಳಗೆ ಆಗುವ ನೈತಿಕ ವಿದ್ಯಾಭ್ಯಾಸದ ವಿಷಯವಾಗಿ ಹೇಳಿದರು.

ಕೀರ್ತನಕಾರರ ವಿಷಯವಾಗಿ ಒಂದು ಮಾತನ್ನು ಉಲ್ಲೇಖಿಸಲಿದೆ. ಜನರ ನೈತಿಕ ಅಭಿವೃದ್ಧಿಯನ್ನು ಬೋಧಿಸುವ ಈ ವರ್ಗದ ವ್ಯಕ್ತಿಗಳ ಗುಣವೂ ನಡತೆಯೂ ನಿರ್ಮಲವಿರಬೇಕು. ಕೀರ್ತನಕಾರರಲ್ಲಿ ದೋಷವಿರಬಾರದೆಂದು ನಾವು ಹೇಳವುದಲ್ಲ. ಅವು ಸಾಮಾನ್ಯ ಪ್ರತಿ ಒಬ್ಬನಲ್ಲಿ ಇದ್ದೇ ಇರುತ್ತವೆ. ಆದರೆ ಅಂತಹ ದೋಷಗಳು ಆದಷ್ಟು ಕಡಿಮೆಯೂ ಕ್ಷಮಾರ್ಹವೂ ಇರಬೇಕು. ಇದನ್ನು ಪ್ರತಿ ಕೀರ್ತನಕಾರನೂ ಮನಸ್ಸಿನಲ್ಲಿಡಬೇಕು. ಸ್ವೇಚ್ಛಾಪ್ರವರ್ತಕನಾದವನು ಎಂದೂ ಕೀರ್ತನೆಯನ್ನು ಮಾಡಬಾರದು.

ಹಿಂದೂಗಳೊಳಗೆ ಮತಶ್ರದ್ಧೆಯನ್ನು ತಿಳಿಸುವ ಕೆಲವೇ ಸಾಧನೆಗಳಲ್ಲಿ ಕೀರ್ತನೆಕಾರರು ಒಂದಾಗಿರುವರು. ಕರ್ನಾಟಕಕ್ಕೆ ಈ ವರ್ಗವು ಅತೀ ಅಗತ್ಯವಾಗಿ ಬೇಕಾಗಿದೆ. ಉತ್ತಮ ಮಾತುಗಳನ್ನಾಡಬಲ್ಲವರೂ, ಹಾಡಬಲ್ಲವರೂ ಆದವರು ಕರ್ನಾಟಕೀಯ ಜನತೆಯ ಉನ್ನತಿಯ ಬಗ್ಗೆ ಈ ಸೇವೆಯನ್ನು ಕೈಕೊಳ್ಳುವುದು ಅವಶ್ಯಕ.

ವಿದೇಶ ವರ್ತಮಾನ.

—ಚೀನಾದೇಶದಲ್ಲಿ ಪೆಕಿಂಗ್‌ಪಟ್ಟಣದಿಂದ ಹೆಂಕೌ ಪಟ್ಟಣಕ್ಕೆ ಮೇ ೧೩ರಲ್ಲಿ ಹೋಗುತ್ತಿದ್ದ ಒಂದು ಗುಡ್ಸ್ ಟ್ರೈನ್ ರೈಲುಕಂಬಿಗಳಿಂದ ತಪ್ಪಿ ಮಗುಚಿಬಿದ್ದು ೫೦ ಮಂದಿ ಜನರು ಮರಣಪಟ್ಟರು. ಅನೇಕರಿಗೆ ಗಾಯವಾಗಿದೆ. ಮರಣ ಹೊಂದಿದವರೂ ಗಾಯಪಟ್ಟವರೂ ಗಾಡಿಗಳ ಮಗುಚಿನ ಮೇಲೆ ಕುಳಿತುಕೊಂಡಿದ್ದರು.

—ಪೋಲೆಂಡಿನಲ್ಲಿ ಎರಡು ರಾಜಕೀಯ ತಂಡಗಳೊಳಗೆ ಜಗಳಗಳುಂಟಾಗಿ ಮಾರ್ಗಗಳಲ್ಲಿ ಎರಡೂ ತಂಡಗಳ ಕಡೆಯ ಸೈನಿಕರು ಹೊಡೆದಾಡಿಕೊಂಡು ಅನೇಕರು ಮರಣಪಟ್ಟರು.

—ಜರ್ಮನಿಯಲ್ಲಿ ರಿಪಬ್ಲಿಕ್ ಸರಕಾರವನ್ನು ತೆಗೆದು ಹಾಕಿ ತಿರಿಗಿ ಕೈಸರರನ್ನೇ ರಾಜರಾಗಿ ನೇಮಿಸಬೇಕೆಂದು ಚಳವಳಗಳು ನಡಿಯುತ್ತವೆ.

—ಸುಮಾತ್ರಾ ದ್ವೀಪದ ಬೊಲುಮ್ಯಾನ್ ಮತ್ತು ಸುಮಜ ಬಂದರುಗಳಲ್ಲಿ ಪ್ಲೇಗು ತಲೆದೋರಿಯದೆ.

—ಚೀನಾದೇಶದಲ್ಲಿ ಮೊದಲಿದ್ದ ಮಂತ್ರಿಸಭೆಯು ಬಿದ್ದುಹೋಗಿ ಡೊಕ್ಟರ್ ಎನ್ ಎಂಬವರು ಮುಖ್ಯ ಪ್ರಧಾನಿಗಳಾಗಿ ಹೊಸ ಮಂತ್ರಿ ಸಭೆಯನ್ನು ಉಂಟುಮಾಡಿರುವರು.

—ಜರ್ಮನಿಯಲ್ಲಿ ಸೈನ್ಯದ ಮಂತ್ರಿಗಳಾದ ಡೊಕ್ಟರ್ ಲೂಥರ್ ಎಂಬವರು ರಾಜಿನಾಮೆಯನ್ನು ಕೊಟ್ಟಿರುವರು. ಪ್ರೆಸಿಡೆಂಟರಾದ ಫೊನ್ ಹಿಂಡನ್ ಬರ್ಗರವರು ಇದನ್ನು ಅಂಗೀಕರಿಸಿರುವರು.

—ಮೆಡಿಟರೇನಿಯನ್ ಸಮುದ್ರದಲ್ಲಿ ವಿಹಾರಾರ್ಥಕ್ಕಾಗಿ ಸುಮಾರು ೫೦೦ ಮಂದಿಯನ್ನು ತೆಗೆದುಕೊಂಡು ಸಂಚರಿಸುತ್ತಿದ್ದ ಒಟರೆಂಟೊ ಎಂಬ ಹಡಗವು ಕೇಪ್ ಮೆಟಪಾನಿನ ಹತ್ತಿರ ಒಂದು ಬಂಡೆಕಲ್ಲಿಗೆ ಬಡಿದು ಒಡೆದು ಹೋಯಿತು. ಪ್ರಯಾಣಿಕರನ್ನು ಅಲ್ಲಿಯೆ ಒಂದು ದ್ವೀಪದಲ್ಲಿ ಇಳಿಸಿತು.

—ರಷ್ಯಾದೇಶದಲ್ಲಿ ನೆರೆಯಹಾವಳಿಯಿಂದ ೩೬ ಗ್ರಾಮಗಳೂ, ೩೦೦೦ ಮನೆಗಳೂ ೩೦ ಸಂಕಗಳೂ ನೀರುಪಾಲಾದವು.

—ಅಮೇರಿಕದ ಯುನ್ಯಾಟೆಡ್ ಸ್ಟೇಟ್ಸಿನಲ್ಲಿ ೨೮ ಅಡಿ ವ್ಯಾಸವುಳ್ಳ ಒಂದು ಮರದ ಬುಡದಲ್ಲಿರುವ ಮರದ ಟೊಳ್ಳಾದ ಭಾಗದಲ್ಲಿ ಕಳ್ಳತನದಿಂದ ಮದ್ಯವನ್ನು ತಯಾರಿಸುತ್ತಿದ್ದರು. ಎಕ್ಸೈಜ್ ಇಲಾಖೆಯವರು ಇದನ್ನು ಗೊತ್ತುಹಚ್ಚಿ ಹಿಡಿದಾಗ ೫೦ ಗೆಲನ್ ಮದ್ಯವೂ ಯಂತ್ರಗಳೂ ದೊರೆತವು.

—ನ್ಯೂಫೌಂಡ್‌ಲೆಂಡಿನ ಸೈಂಟ್ ಜೊನ ನಗರದಲ್ಲಿ ಒಂದು ಅನಾಥಾಲಯಕ್ಕೆ ಬೆಂಕಿ ಬಿದ್ದು ೬ ಲಕ್ಷ ರೂಪಾಯಿಗಳ ನಷ್ಟವುಂಟಾಯಿತು. ಆದರೆ ಇದರಲ್ಲಿದ್ದ ೧೮೦ ಮಕ್ಕಳಿಗೆ ಹಾನಿಯಾಗಲಿಲ್ಲ.

—ಸಿಲೋನಿನಲ್ಲಿ ಕೆಂಡಿಯ ಹತ್ತಿರ ಮಾವುತನು ಒಂದು ಆನೆಯನ್ನು ವಿಹರಿಸುವಾಗ ಆನೆಯು ನೀರಿನಲ್ಲಿ ಮಲಗಿದ್ದಲ್ಲಿಂದ ಎದ್ದಿತು. ಮಾವುತನು ಅದನ್ನು ತಿರಿಗಿ ಮಲಗಲಿಕ್ಕೆ ಹೇಳಿದನು. ಆಗ ಅದು ಸಿಟ್ಟಿನಿಂದ ಅವನನ್ನು ತುಳಿದು ಕೊಂದುಹಾಕಿತು. ಅನಂತರ ಹತ್ತಿರವಿದ್ದ ಇತರ ಆನೆಗಳ ಮೇಲೆ ಬಿದ್ದು ಜಗಳಮಾಡಿ ನದಿಯ ತೀರದಲ್ಲಿದ್ದ ಹಳ್ಳಿಯಲ್ಲೆಲ್ಲಾ ಓಡಾಡಿತು. ಮರುದಿನ ಬೆಳಗ್ಗೆ ಅದು ತನ್ನ ಲಾಯದಲ್ಲಿ ಮಲಗಿಕೊಂಡಿತ್ತು.

—ನಮ್ಮ ಮಹಾರಾಜರ ೨ನೇ ಕುಮಾರರಾದ ಡ್ಯೂಕ್ ಒಫ್ ಯೋರ್ಕರ ಮಗಳಿಗೆ ಎಲಿಜಬೆತ್ ಎಲೆಕ್ಸಂಡ್ರಾ ಮೆರಿ ಎಂಬ ಹೆಸರನ್ನು ಹಾಕಿರುವರು.

—ಸಿಲೋನಿನಲ್ಲಿ ಇಷ್ಟರ ವರೆಗೆ ಇದ್ದ ತಲೆತೆರಿಗೆಯನ್ನು ತೆಗೆದು ಹಾಕಿರುವರು.

—ಇಂಗ್ಲೆಂಡ ಸ್ಕೊಟಲೆಂಡಿನಲ್ಲಿ ಉಂಟಾದ ಮುಷ್ಕರವು ನಿಂತು ಹೋಗಿ ಎಲ್ಲಾ ಕೂಲಿಕಾರರು ಕೆಲಸಕ್ಕೆ ಸುರುಮಾಡಿರುವರು. ಈ ಮುಷ್ಕರ ಕಾಲದಲ್ಲಿ ಇತರರು ಸಂಬಳವಿಲ್ಲದೆ ಕೆಲಸ ಮಾಡಿದ್ದರಿಂದ ೨೦೦ ಮಿಲಿಯ ಪೌಂಡು ಮಾತ್ರವೇ ನಷ್ಟವಾಯಿತಂತೆ.

—ಸ್ಪೈಯಿನ್‌ದೇಶದವರು ಲೀಗ್ ಕೌನ್ಸಿಲಿನಲ್ಲಿ ತಮ್ಮ ಕಡೆಯ ಒಬ್ಬ ಕಾಯಂ ಪ್ರತಿನಿಧಿಯು ಇರಬೇಕೆಂದೂ ಇಲ್ಲವಾದರೂ ತಾವೂ ಕೌನ್ಸಿಲಿಗೆ ಹಂಗಾಮಿಯಾಗಿ ಪ್ರತಿನಿಧಿಗಳನ್ನು ಕಳುಹಿಸಲಿಕ್ಕಿಲ್ಲವೆಂದೂ ಹಟಹಿಡಿದಿರುವರು.

—ತುರ್ಕಿಯ ಮಾಜಿ ಸುಲ್ತಾನರಾದ ೬ನೇ ಮಹಮ್ಮದರು ಅಕಸ್ಮಾತ ರೋಗದಿಂದ ಮೇ ೧೬ರಲ್ಲಿ ಸೇನ್‌ರೇಮೊ ಎಂಬಲ್ಲಿ ಕಾಲವಾದರು.

—ಉತ್ತರ ಧ್ರುವದ ಒಂದು ಸುತ್ತು ತೆಗೆದು ಹಿಂದಕ್ಕೆ ಬಂದ ಕೆಪ್ಟನ್ ಅಮುಂಡಸೇನರ ವಿಮಾನವು ಟೆಲ್ಲರ ಎಂಬ ಬಂದರಕ್ಕೆ ಬಂದು ಇಳಿದಿರುವದು. ಈ ಪಟ್ಟಣದಲ್ಲಿ ಸುಮಾರು ೨೦೦ ಮಂದಿ ಎಸ್ಕಿಮೊ ಜನರು ವಾಸವಾಗಿರುವರು.

—ಹಜಾಜಿಗೆ ಯಾತ್ರಿಕರಾಗಿ ಹೋಗುವ ಮುಸಲ್ಮಾನ ಯಾತ್ರಿಕರಿಗೆ ಈಗ ಹಜಾಜಿನ ಅರಸರಾಗಿರುವ ಇಬನ್ ಸೌದರವರು ಮಹ್ಮದರ ಸಮಾಧಿಯನ್ನು ಕೈಯಿಂದ ಮುಟ್ಟಿ ಮುದ್ದಿಡಬಾರದೆಂದೂ, ಹೊಗೆಸೊಪ್ಪನ್ನು ಗುರುಗಳ ಕಾಲದಲ್ಲಿ ಉಪಯೋಗಿಸುತ್ತಿದ್ದರೂ ಈಗ ಅದು ಆರೋಗ್ಯಕ್ಕೆ ಹಾನಿಕರವೆಂದು ಕಂಡು ಬಂದದರಿಂದ ಅದನ್ನು ಯಾವ ತರದಲ್ಲಿಯೂ ಉಪಯೋಗಿಸಕೂಡದೆಂದೂ, ಯಾವ ತರದ ವಾದ್ಯವನ್ನೂ ಹಾಡನ್ನೂ ಹಾಡಕೂಡದೆಂದೂ ವಿಧಿಸಿರುವರು.

—ಇಟಲಿದೇಶದ ಬೇರೆ ಬೇರೆ ಭಾಗಗಳಲ್ಲಿ ನೆರೆಯು ಬಂದಿದೆ. ಎಡಿಜೆ ಮತ್ತು ವೆರೋನಾ ಎಂಬಲ್ಲಿ ೩ ಹೊಳೆಗಳು ಸಿಕ್ಕಿವೆ. ದೇಶದ ಹೆಚ್ಚಿನ ಭಾಗವು ಮುಳುಗಿಯದೆ. ಅನೇಕ ಕಡೆಗಳಲ್ಲಿ ಗುಡ್ಡಗಳು ಜರಿದು ಬಿದ್ದು ಮಾರ್ಗಗಳಲ್ಲಿ ಚಲಾವಣೆಗೆ ಅಡ್ಡಿಯಾಗಿದೆ. ಪೊನವಿಯಲ್ಲಿ ನೆರೆ ಬಂದು ೩ ಜಿಲ್ಲೆಗಳನ್ನೇ ಪ್ರತ್ಯೇಕಿಸಿದಂತಾಗಿದೆ. ಸುಮಾರು ೬೦೦೦ ಅಡಿ ಎತ್ತರವಿರುವ ಅಡಮೆಲ್ಲೊ ಎಂಬಲ್ಲಿ ಹಿಮವು ರಾಶಿರಾಶಿಯಾಗಿ ಬಿದ್ದು ಅನೇಕ ಕೂಲಿಯಾಳುಗಳು ಮರಣಹೊಂದಿರುವರು.

—ಭೋಪಾಲದ ಬೇಗಮ್ಮನವರು ತಮ್ಮ ಇಂಗ್ಲೆಂಡಿನ ಪ್ರಯಾಣವನ್ನು ಮುಗಿಸಿ ಕಳೆದ ತಾ. ೧೪ಕ್ಕೆ ಅಲ್ಲಿಂದ ಹೊರಟಿರುವರು.

—ದೇಶಕ್ಕೆ ಇಷ್ಟರ ವರೆಗೆ ಇದ್ದ ಕಿಂಗಡಮ್ ಒಫ್ ರುಮೇನಿಯಾ ರುಮೇನಿಯಾ ಎಂಬ ಹೆಸರನ್ನು ತೆಗೆದು ಎಂಪಾಯರ್ ಒಫ್ ಗ್ರೇಟರ್ ರುಮೇನಿಯಾ ಎಂಬ ಹೆಸರನ್ನು ಇಡುವರು. ಈಗಿನ ರುಮೇನಿಯವು ಮೊದಲಿನ ರುಮೇನಿಯದ ಮೂರು ಪಾಲಷ್ಟು ದೊಡ್ಡದಾಗಿದೆ.

ಒಳದೇಶ ವರ್ತಮಾನ.

—ಮುಂಬಾಯಿ ಪಟ್ಟಣದಲ್ಲಿರುವ ಗಡಂಗುಗಳನ್ನು ಇಂತಿಷ್ಟೇ ಗಡಂಗುಗಳನ್ನು ಇಂಥಾ ಕಡೆಯಲ್ಲಿಯೇ ಇಡಬೇಕೆಂಬ ಹಕ್ಕು ಸ್ವಾತಂತ್ರ್ಯವನ್ನು ಮುನಿಸಿಪಾಲಿಟಿಗೆ ಕೊಡಬೇಕೆಂಬ ಸಂಗತಿಯನ್ನು ಸರಕಾರಕ್ಕೆ ಬರೆದಿರುವರು.

—ಗುಜರಾಥ ದೇಶದಲ್ಲಿಯ "ದಿ ಪೊರ್" ಎಂಬ ವರ್ತಮಾನ ಪತ್ರಿಕೆಯಲ್ಲಿ ಛಂದು ಚಿತ್ರಗಳನ್ನು ಪ್ರಕಟಿಸಿದ್ದಕ್ಕಾಗಿ ಅದರ ಎಡಿಟರರನ್ನೂ ಅದನ್ನು ಪ್ರಿಂಟುಮಾಡಿದ ಛಾಪಖಾನೆಯ ಮಾಲೀಕರರನ್ನೂ ಕೈದುಮಾಡಿ ಜಾಮೀನಿನ ಮೇಲೆ ಬಿಟ್ಟಿರುವರು.

—ಸಿಂಧೂ ದೇಶದ ಹೈದರಾಬಾದ್ ಪಟ್ಟಣ ಮತ್ತು ಅದರ ಸುತ್ತುಮುತ್ತಲೂ ಮೇ ೧೩ಕ್ಕೆ ಕಲ್ಮಳೆಯು ಬಿದ್ದು ಮನುಷ್ಯ, ಮೃಗ, ಪಕ್ಷಿಗಳಿಗೂ ಗಿಡಮರಗಳಿಗೂ ಹಾನಿಯುಂಟಾಗಿದೆ.

—ಬಂಗಾಳ ಗವರ್ನರರಾದ ಲೋರ್ಡ ಲಿಟನ್‌ರವರು ಮೇ ೧೪ಕ್ಕೆ ಡಾರ್ಜಲಿಂಗಿಗೆ ಹೋಗಿರುವರು.

—ವಿಶಾಖ ಪಟ್ಟಣದಲ್ಲಿರುವ ಮೆಡಿಕಲ್ ಕೊಲೇಜಿನಲ್ಲಿ ಕಲಿಯುತ್ತಿದ್ದ ವೆಂಕಟೇಶ್ವರಲು ಎಂಬ ವಿದ್ಯಾರ್ಥಿಯು ಕೆಲವು ತಿಂಗಳ ಮುಂಚೆ ಅಕಸ್ಮಾತ್ತಾಗಿ ಸ್ವಲ್ಪ ವಿಷ ಕುಡಿದನಂತೆ. ಕೂಡಲೇ ಅವನ ಗಂಟಲಿನಲ್ಲಿದ್ದ ಆಹಾರ ನಾಳವು ಸಪೂರವಾಗಿ ಆಹಾರ ತೆಗೆದುಕೊಳ್ಳಲಿಕ್ಕಾಗಲಿಲ್ಲ. ಒಬ್ಬ ನೇಟಿವ್ ವೈದ್ಯನು ಹೆಚ್ಚು ಮದ್ದು ಮಾಡಿದರೂ ಗುಣವಾಗಲಿಲ್ಲ. ಕಡೆಗೆ ಮದರಾಸಿನ ಜನರಲ್ ಆಸ್ಪತ್ರೆಗೆ ತೆಗೆದುಕೊಂಡು ಬಂದರು. ಅಲ್ಲಿಯೂ ಸಾಧ್ಯವಾಗದೆ ಅವನು ಮರಣಹೊಂದಿದನು. ಅವನು ಯಾವ ವಿಷವನ್ನು ತಿಂದನೆಂದು ಹೇಳ ತಿಳಿದು ತನಖಿ ನಡಿಯುತ್ತದೆ.

—ಸರ್ ಶಂಕರನ್ನಾಯರರ ಪತ್ನಿಯವರು ಬದರಿನಾಥದಲ್ಲಿ ಮೇ ೧೧ರಲ್ಲಿ ವಿಧಿವಶರಾದರು. ಇವರು ದೇವರ ಮೇಲೆ ಬಹಳ ಭಕ್ತಿಯುಳ್ಳವರಾಗಿದ್ದು ಹಿಂದೂದೇಶದಲ್ಲಿರುವ ಎಲ್ಲಾ ಯಾತ್ರಾಸ್ಥಳಗಳಿಗೂ ದೇವಸ್ಥಾನಗಳಿಗೂ ಹೋಗಿ ಪೂಜಾದಿಗಳನ್ನು ಮಾಡಿಸಿ ಹೆಚ್ಚು ಹಣವನ್ನು ಆ ದೇವಸ್ಥಾನಗಳಿಗೆ ಕೊಟ್ಟಿರುವರು. ಇವರು ತನ್ನ ಪತಿಗಳೊಡನೆ ಎರಡಾವರ್ತಿ ವಿಲಾಯತಿಗೆ ಹೋಗಿ ಬಂದಿರುವರು. ಇವರು ಮಲಬಾರಿನಲ್ಲಿ ಬಹಳ ಪುರಾತನ ಕಾಲದಿಂದಲೂ ಹೆಸರು ಹೊಂದಿದ ಪಲತ್ ಎಂಬ ಮನೆತನಕ್ಕೆ ಸೇರಿದವರು. ಇವರಿಗೆ ಮರಣಕಾಲದಲ್ಲಿ ೫೪ ವರುಷ ಪ್ರಾಯವಾಗಿತ್ತು.

—ಅಲ್ಲಾಹಾಬಾದಿನ ಪೋಸ್ಟುಮೇನುಗಳು ತಮಗೆ ಮನೆಬಾಡಿಗೆಯನ್ನು ಕೊಡಬೇಕೆಂದು ಮಾಡಿದ ಮನವಿಗೆ ತಾನು ಅದನ್ನು ಕೊಡಲಿಕ್ಕೆ ಸಿಪಾರಸು ಮಾಡಿದ್ದೇನೆಂದು ಪೋಸ್ಟುಮಾಸ್ತರ ಜನರಲರವರು ಬರೆದಿರುವರು.

—ಮುಂಬಾಯಿಯ ಹ್ಯಾಕೋರ್ಟಿಗೆ ತಿರಿಗಿ ಸರ್ ನೊರ್ಮನ್ ಮೆಕ್‌ಲಿಯೊಡ್ ಎಂಬ ಯುರೋಪಿಯನರನ್ನೆ ಚೀಫ್ ಜಸ್ಟಿಸರಾಗಿ ನೇಮಿಸಿರುವರು. ಇಂಡಿಯನರು ಯಾರೂ ಇಲ್ಲವೆ?

—ಜಾನ್ಸಿಯ ಹತ್ತಿರ ಒಂದು ರೈಲುಗಾಡಿಯು ಪಟ್ಟಿಗಳಿಂದ ತಪ್ಪಿಹೋಯಿತು. ಆದರೆ ಪ್ರಯಾಣಿಕರಿಗೆ ಅಪಾಯವಾಗಲಿಲ್ಲ.

—ಬಿಹಾರ ಮತ್ತು ಒರಿಸ್ಸಾ ದೇಶದ ಮುಖ್ಯಪಟ್ಟಣವಾದ ಪಾಟ್ನಾದಲ್ಲಿ ಅಗಲವಾದ ಮಾರ್ಗಗಳನ್ನು ಮಾಡಿಸಲಿಕ್ಕೂ ಆರೋಗ್ಯಕರವಾದ ಮನೆಗಳನ್ನು ಕಟ್ಟಿಸಲಿಕ್ಕೂ ಪಾಟ್ನಾ ಮುನಿಸಿಪಾಲಿಟಿಗೆ ೮ ಲಕ್ಷ ರೂಪಾಯಿ ಕೊಟ್ಟಿದ್ದರು. ಆದರೆ ಮುನಿಸಿಪಾಲಿಟಿಯವರು ಪಟ್ಟಣವನ್ನು ಸರಿಯಾಗಿ ಅಭಿವೃದ್ಧಿ ಮಾಡದೆ ಇದ್ದುದರಿಂದ ಇನ್ನು ಮುಂದೆ ಹಣ ಕೊಡಲಿಕ್ಕಾಗುವದಿಲ್ಲವೆಂದು ತಿಳಿಸಿರುವರು.

—ಹೆಜಾಜನಲ್ಲಿ ಜರಗಲಿಕ್ಕಿರುವ ಭೂಲೋಕದಲ್ಲಿರುವ ಎಲ್ಲಾ ಮುಸಲ್ಮಾನರ ಸಭೆಗೆ ಇಂಡಿಯದ ಕಡೆಯಿಂದ ಪ್ರತಿನಿಧಿಗಳಾಗಿ ಮೌಲಾನಾ ಮಹಮ್ಮದಲ್ಲಿ ಮುಂತಾದ ಸುಮಾರು ೧೦ ಮಂದಿ ಮುಸಲ್ಮಾನ ಮಹನೀಯರು ಮುಂಬಾಯಿಯಿಂದ ಮೇ ೧೩ಕ್ಕೆ ಹೊರಟಿರುವರು.

—ಪಂಜಾಬಿನ ಸ್ಯಾರ ಎಂಬ ಪಟ್ಟಣದಲ್ಲಿ ಪ್ಲೇಗಿನ ಹಾವಳಿಯು ಹೆಚ್ಚಾಗಿದ್ದುದರಿಂದ ನಿವಾಸಿಕರೆಲ್ಲರೂ ಪಟ್ಟಣವನ್ನು ಬಿಟ್ಟುಹೋಗಿರುವರು.

—ಡೊಕ್ಟರ್ ರವೀಂದ್ರನಾಥ ಟಾಗೋರರವರು ಇಟಲಿ ದೇಶದಲ್ಲಿ ಸಂಚರಿಸಿ ತನ್ನ ಮಗ ಮತ್ತು ಸೊಸೆಯಂದಿರೊಡನೆ ಮೇ ೧೮ಕ್ಕೆ ಮುಂಬಾಯಿ ಬಂದರದಲ್ಲಿ ಬಂದು ಇಳಿದಿರುವರು.

—ಮೇ ೨೯ ಮತ್ತು ೩೦ರಲ್ಲಿ ಪಂಜಾಬಿನ ದಾಕ್ತಾರರ ಒಂದು ಸಭೆಯು ಲಾಹೋರಿನಲ್ಲಿ ಜರಗುವದು.

—ಮೋತಿಲಾಲನೇಹರುರವರು ಅಸೌಖ್ಯದಲ್ಲಿರುವುದರಿಂದ ಯೂರೋಪಿಗೆ ಹೋಗುವ ಪಯಣವನ್ನು ನಿಲ್ಲಿಸಿರುವರು. ಅವರ ಬದಲಿಗೆ ಎಸ್. ಶ್ರೀನಿವಾಸ ಅಯ್ಯಂಗಾರರವರು ಹೋಗುವರು.

—ಬರ್ಮಾ ದೇಶದಲ್ಲಿದ್ದು ಚರ್ಮದ ಮತ್ತು ರಬ್ಬರಿನ ವ್ಯಾಪಾರವು ನಡಿಸುತ್ತಿದ್ದ ಸುಮಾರು ೬೫ ವರ್ಷ ಪ್ರಾಯದ ಜೆ. ಡಿ. ಪೆಪ್ಪಡಾ ವಿಟ್ರಾರಿಓ ಎಂಬ ಗ್ರೀಕ್ ದೇಶದ ವ್ಯಾಪಾರಿಯು ಕಾಲವಾದರು.

—ಮದರಾಸಿನ ಮೈಲಾಪುರದಲ್ಲಿ ಮದರಾಸಿನ ಲೆಜಿಸ್ಲೆಟಿವ್ ಕೌನ್ಸಿಲರ ಸೆಕ್ರಿಟರಿಯವರಾದ ರಾವ್ ಬಹದೂರ ಆರ್. ವಿ. ಕೃಷ್ಣ ಅಯ್ಯರವರ ಮನೆಯಿಂದ ರಾತ್ರೆ ೧೧,೦೦೦ ರೂಪಾಯಿ ಕ್ರಯ ಬಾಳುವ ವಸ್ತುಗಳು ಕಳವಾಗಿ ಹೋದವು. ತನಖಿಯು ನಡಿಯುತ್ತದೆ.

—ನ್ಯಾನಿಟಾಲಿನಲ್ಲಿ ಸುಮಾರು ೬ ವರುಷಗಳಿಂದಲೂ ಜನರನ್ನು ಪೀಡಿಸುತ್ತಿದ್ದು ಸುಮಾರು ೨೫ ಮನುಷ್ಯರನ್ನು ಕೊಂದು ತಿಂದ ಒಂದು ಚಿರತೆಯನ್ನು ಕೆಪ್ಟನ್ ಕೊರ್‌ಬೆಟ್ ಎಂಬವರು ಮೇ ೧೧ರಲ್ಲಿ ಕೊಂದರು. ಇದು ೭ ಅಡಿ ೧೦ ಇಂಚು ಉದ್ದವಾಗಿತ್ತು.

—ಮಲಬಾರಿನಲ್ಲಿ ಸಬ್ ಮ್ಯಾಜಿಸ್ಟ್ರೇಟರಾಗಿದ್ದ ತಿಯ್ಯ ಜಾತಿಯ ರಾಮನ್ ಎಂಬವರು ತನ್ನನ್ನು ಸಸ್‌ಪೆಂಡ್ ಮಾಡಿದಕ್ಕಾಗಿ ಹುಚ್ಚರಂತೆ ಜಿಲ್ಲಾ ಕಲೆಕ್ಟರರಿಗೆ ಬರೆದ ಒಂದು ಪತ್ರಕ್ಕೆ ಕಲೆಕ್ಟರು ಇವರಿಗೆ ಸಂಬಳ ಸಮೇತ ರಜೆ ಕೊಟ್ಟಿರುವರು. ಮನಃ ತಪ್ಪಿನಾಗಿ ಇವರನ್ನು ಸಸ್‌ಪೆಂಡ ಮಾಡಿದ್ದರಿಂದ ಈಗ ಸಸ್‌ಪೆನ್‌ಶನ್ ಕಾಲವನ್ನು ರಜೆಯಾಗಿ ಮಾಡಿರುವರು.

—ಬನಾರಸಿನಲ್ಲಿ ಈಗಿರುವ ಈಸ್ಟ್ ಇಂಡಿಯನ್ ರೈಲುವೇ ಬ್ರಿಡ್ಜಿನಲ್ಲಿ ವ್ಯಾಪಾರ ವಹಿವಾಟಗಳಿಗೆ ಬಹಳ ತೊಂದರೆಯಿದ್ದುದರಿಂದ ವ್ಯಾಪಾರಕ್ಕಾಗಿ ಗಂಗಾನದಿಗೆ ಒಂದು ಹೊಸ ಸೇತುವೆಯನ್ನು ಕಟ್ಟಿಸುವದಕ್ಕೆ ಸಂಕಲ್ಪ ಆಗಿಯದೆ.

—ತಿರುಚಿನಾಪಳ್ಳಿ ಮುನ್ಸಿಪಾಲಿಟಿಯ ಶಾಲೆಗಳಲ್ಲಿ ಸುಬ್ರಮಣ್ಯ ಭಾರತಿಗಳ ಹಾಡುಗಳನ್ನು ಕಲಿಸಬಹುದೆಂದು ಮುನ್ಸಿಪಾಲಿಟಿಯ ಮೀಟಿಂಗಿನಲ್ಲಿ ಪಾಸು ಮಾಡಿರುವರು.

—ಮುಂಬಾಯಿಯಲ್ಲಿ ವೇಶ್ಯಾವೃತ್ತಿಯನ್ನಿಟ್ಟು ಹೆಂಗಸರನ್ನು ದುರ್ಮಾರ್ಗಕ್ಕೆ ಎಳೆಯುತ್ತಿದ್ದ ಒಬ್ಬ ವೇಶ್ಯೆಯನ್ನು ಕೈದು ಮಾಡಿ ಮ್ಯಾಜಿಸ್ಟ್ರೇಟರು ಅವಳಿಗೆ ಎರಡು ತಿಂಗಳ ಸಾದಾ ಸಜೆಯನ್ನೂ, ಅದರ ಮೇಲೆ ೧೦೦ ರೂ. ಜುಲುಮಾನೆಯನ್ನೂ ವಿಧಿಸಿದರು. ಆದರೆ ಜಡ್ಜರು ಈ ಸಂಬ್ರವನ್ನು ತಿರಿಗಿ ತನಿಖೆ ಮಾಡಿ ಅವಳಿಗೆ ೧½ ವರ್ಷದ ಕಠಿಣ ಸಜೆಯನ್ನೂ, ೩೦೦ ರೂಪಾಯಿ ಜುಲುಮಾನೆಯನ್ನೂ ವಿಧಿಸಿದರು.

—ಮೈಸೂರು ದೇಶದ ಕೆಳ ತರಗತಿಯ ರೆವಿನ್ಯು ಆಫೀಸುಗಳಲ್ಲಿ ಕನ್ನಡ ಭಾಷೆಯಲ್ಲಿಯೇ ಪತ್ರವ್ಯವಹಾರ ನಡಿಸಬೇಕೆಂದು ಸರಕಾರದ ಅಪ್ಪಣೆಯಾಗಿದೆ.

—ಕಲ್ಕತ್ತದಲ್ಲಿ ೧೬ನೇ ತಾರೀಕಿಗೆ ಕಠಿಣ ತರದ ಮಳೆಯು ಬಂದು ಮಾರ್ಗದಲ್ಲೆಲ್ಲಾ ನೀರು ತುಂಬಿ ವ್ಯಾಪಾರ ವಹಿವಾಟಗಳಿಗೆ ತೊಂದರೆಯಾಯಿತು.

—ಬಂಗಾಳದ ಬಾರಿಸಾಲಿನಲ್ಲಿ ಒಬ್ಬ ಹಿಂದೂ ಹುಡುಗಿಗೆ ಸಂತೋಷವಿಲ್ಲದ ಒಬ್ಬ ಹುಡುಗನಿಗೆ ಮದುವೆ ಮಾಡಿಕೊಡಲಿಕ್ಕೆ ತಂದೆಯು ನಿಶ್ಚಯಿಸಿದ್ದರಿಂದ ಹುಡುಗಿಯು ಲಗ್ನಕ್ಕೆ ಸ್ವಲ್ಪ ಸಮಯಕ್ಕೆ ಮುಂಚಿತವಾಗಿ ಅಫೀಮು ತಿಂದು ಪ್ರಾಣತ್ಯಾಗ ಮಾಡಿಕೊಂಡಳು.

—ಮುಂಬಾಯಿಯ ದಾದಾರ ಎಂಬಲ್ಲಿ ಲೆಡಿಜಮಸೆಡ್‌ಜಿ ರೋಡಿನಲ್ಲಿ ಡಿಸಿಲ್ವ ಎಂಬ ಬಂದೊಕು ದುರುಸ್ತಿ ಮಾಡುವವನಲ್ಲಿ ಕಳವಾಗಿ ಹೋದ ಒಂದು ಪಿಸ್ತುಲು ಇದೆಯೋ ಎಂದು ಹುಡುಕುವಾಗ ಅನೇಕ ಕೋವಿಗಳೂ ರ್‍ಯಾಫಲುಗಳೂ, ರಿವೊಲವರುಗಳೂ ೩೦೦೦ ತೋಟೆಗಳೂ ಸಿಕ್ಕಿದವು. ಡಿಸಿಲ್ವನನ್ನು ಕೈದು ಮಾಡಿರುವರು.

—ರಂಗೂನಿನಲ್ಲಿ ಕಳೆದ ವಾರದಲ್ಲಿ ಸುಮಾರು ೬೫ ಮನೆಗಳಿಗೆ ಬೆಂಕಿಹಿಡಿದು ಸಂಪೂರ್ಣ ಸುಟ್ಟುಹೋಗಿಯವೆ. ಅವುಗಳ ಪೈಕಿ ಹೆಚ್ಚಿನ ಅಕ್ಕಿ ವ್ಯಾಪಾರಸ್ಥರ ಮನೆಯಾಗಿದ್ದು ಅವುಗಳಲ್ಲಿ ಸುಮಾರು ಒಂದು ಲಕ್ಷ ರೂಪಾಯಿ ಮೌಲ್ಯವಾಗುವಷ್ಟು ಅಕ್ಕಿ ವಗೈರೆ ಸಾಮಾನುಗಳಿಗೆ ಬೆಂಕಿ ಹಿಡಿದು ಅಕ್ಕಿ ವ್ಯಾಪಾರಸ್ಥರಿಗೆ ಅಪಾರ ನಷ್ಟವನ್ನುಂಟುಮಾಡಿರುವುದು.

ದಕ್ಷಿಣ ಕನ್ನಡ.

ಕಾರ್ಕಳ:—ಕಾರ್ಕಳದ ದಾನ್ಶಾಲೆ ಮಠದ ಸ್ವಾಮಿಗಳವರಾದ ಶ್ರೀ ಲಲಿತಕೀರ್ತಿ ಭಟ್ಟಾರಕಪಟ್ಟಾಚಾರ್ಯವರ್ಯ ಸ್ವಾಮಿಗಳವರು ಇದೇ ಮೇ ತಿಂಗಳ ತಾ. ೧೭ನೇ ಸೋಮವಾರ ದಿವಸ ದಿವಂಗತರಾದರೆಂದು ತಿಳಿಸಲು ತುಂಬಾ ವ್ಯಸನವಾಗುತ್ತದೆ. ಇವರು ಇಂಗ್ಲೀಷು ವಿದ್ಯಾಭ್ಯಾಸವನ್ನು ಪಡೆದವರಾಗಿಯೂ, ಸಂಸ್ಕೃತದಲ್ಲಿ ಒಳ್ಳೇ ಪಾಂಡಿತ್ಯವನ್ನು ಸಂಪಾದಿಸಿಕೊಂಡವರಾಗಿಯೂ ಇದ್ದರು. ಪರಮಾತ್ಮನು ಇವರ ಆತ್ಮಕ್ಕೆ ನಿತ್ಯ ಶಾಂತಿಯನ್ನು ದಯಪಾಲಿಸಲಿ!

ಮಂಗಳೂರು.

ಜಿಲ್ಲಾ ಲೇಬರ್ ಆಫೀಸರರಾದ ಮ| ರಾ| ಅತ್ತಾವರ ತಿಮ್ಮಪ್ಪ ಪೂಂಜರವರು ಕುಂದಾಪುರ ಆಕ್ಟಿಂಗ್ ಡಿಪ್ಯುಟಿ ಕಲೆಕ್ಟರರಾಗಿ ನೇಮಕ ಹೊಂದಿರುವರು.

ಮ| ಚಾರಪ್ಪ, ಎ. ಪುತ್ರನ್ ಮತ್ತು ಕೋಡಿಗುಡ್ಡೆ ಗುರುವ ಎಂಬವರು ಇಲ್ಲಿಯ ಮುನ್ಸಿಪಾಲ ಕೌನ್ಸಿಲಿಗೆ ನೋಮಿನೇಟೆಡ್ ಮೆಂಬರರಾಗಿ ನೇಮಕ ಹೊಂದಿರುವರು. ಒಬ್ಬ ಕುಂಬಾರ ಮೆಂಬರರನ್ನು ನೇಮಕ ಮಾಡಿದರೆ ಆಗುವುದಿಲ್ಲವೆ?

ಬರುವ ಜೂನ್ ೧ನೇ ತಾರೀಕಿನಿಂದ ಸೌತ್ ಇಂಡಿಯನ್ ರೈಲುವೆ ಚಲಾವಣೆಯ ಸಮಯವು ಈ ಕೆಳಗಿನಂತೆ ಬದಲಾವಣೆಯಾಗುವುದು. ಬೆಳಗ್ಗಿನ ಶಟಲ್ ಬಂಡಿಯು ೯-೨೫ಕ್ಕೆ ಮಂಗಳೂರಿಗೆ ಬಂದು ತಲುಪುವುದು. ಕಲ್ಲಿಕೋಟೆಯಿಂದ ಈಗ ಬರುವ ಮಿಕ್ಸೆಡ್ ಟ್ರೈನ್ ರಾತ್ರೆ ೧೦-೪೦ಕ್ಕೆ ಮಂಗಳೂರಿಗೆ ಬರುವುದು. ನಂಬ್ರ ೧೨ನೇ ಮೈಲುಬಂಡಿಯು ಮದರಾಸಿನಿಂದ ಸಂಜೆ ೫-೨೫ಕ್ಕೆ ಬರುವುದು. ಅದಲ್ಲದೆ ಮದರಾಸು ಮತ್ತು ಮಂಗಳೂರಿನ ಮಧ್ಯೆ ಒಂದು ಪೆಸೆಂಜರ್ ಟ್ರೈನ್ ಚಲಾವಣೆಯಾಗುವುದು.

—ಮಂಗಳೂರು ಮುನ್ಸಿಪಾಲಿಟಿಯಲ್ಲಿ ಈ ಕೆಳಗಿನ ಕೆಲಸಗಳು ಸಂಕಲ್ಪವಾಗಿರುವುದು. (೧) ಅಲ್ಬಾರಿಸ್ ಲೇನನ್ನು ಅಗಲಪಡಿಸುವುದು, (೨) ನಂದಿಗುಡ್ಡೆ ಜಪ್ಪು ಮಾರ್ಗವನ್ನು ಕಡಿಯುವುದು, (೩) ಸನ್ಯಾಸಿಗುಡ್ಡೆಯ ಮಾರ್ಗವನ್ನು ಪೂರ್ತಿ ಮಾಡುವುದು, (೪) ಅಡ್ಯಾರಿನಲ್ಲಿ ಒಂದು ಮಾರ್ಕೆಟನ್ನು ಮಾಡುವುದು, (೫) ಬ್ಯಾರಿಪಳ್ಳದಲ್ಲಿ ಒಂದು ಮಾರ್ಕೆಟು ತೆರಿಯುವುದು, (೬) ಗುಳಿಗ ಹಿತ್ತಲನ್ನು ಕೊಂಡುಕೊಳ್ಳುವುದು.

ಇದೇ ತಾ. ೨೦ನೇ ರಾತ್ರಿ ಶ್ರೀ ಗಡೆಗ ದತ್ತಾತ್ರೇಯ ಕಂಪೆನಿಯವರ ಉದಾರಾಶ್ರಯದಲ್ಲಿ ಇಲ್ಲಿಯ "ಅಭಿನವಾನಂದ ನಾಟಕ ಮಂಡಲಿ"ಯವರ "ಭರತಜನ್ಮ" ಎಂಬ ನಾಟಕವನ್ನಾಡಿದರು. ನಾಟಕಾಂತ್ಯದಲ್ಲಿ ಕರ್ನಾಟಕ ರಂಗಭೂಮಿಯ ಅಭಿವೃದ್ಧಿಯ ಕುರಿತಾಗಿ ಕವಿ ಶ್ರೀಯುತ ಲಕ್ಷ್ಮೀನಾರಾಯಣ ಪುಣಿಂಚತ್ತಾಯರು ಭಾಷಣಮಾಡಿ, "ಅಭಿನವಾನಂದ ನಾಟಕ ಮಂಡಳಿ"ಯವರನ್ನು ದೇಶಬಂಧುಗಳು ಪ್ರೋತ್ಸಾಹಿಸಬೇಕೆಂದು ವಿನಂತಿ ಮಾಡಿಕೊಂಡರು. ಮ| ರಾ| ಕುಡ್ಪಿ ವೆಂಕಟರಾವ್, ಬಿ. ಎ. ಬಿ. ಎಲ್. ಇವರು ಭರತನ ಪಾರ್ಟನ್ನು ವಹಿಸಿದ ಬಾಲಕನನ್ನು ಸಮಯೋಚಿತವಾಗಿ ಬಹುಮಾನಿಸಿದರು. ಈ ನಾಟಕದ ಉತ್ಪತ್ತಿಯನ್ನು ಇಲ್ಲಿಯ ಪ್ರೇಮಾಶ್ರಮದ(?)ಯ ಭಜನ ಮಂಡಲಿಗಾಗಿ ವಿನಿಯೋಗಿಸಲಿಕ್ಕಿರುವುದು ಸ್ತುತ್ಯವೇ ಸರಿ.

ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘದ ದ್ವಿತೀಯ ಪರಿಷತ್ತು ಇದೇ ಮೇ ತಿಂಗಳ ತಾ. ೨೯, ೩೦, ೩೧ರಲ್ಲಿ ಮಂಗಳೂರು ಹೊಯಿಗೆ ಬಜಾರದಲ್ಲಿ ಇರುವ ಶ್ರೀ ಜ್ಞಾನೋದಯ ಸಮಾಜ ಮಂದಿರದಲ್ಲಿ ಕುಲಗುರು ಶ್ರೀಮಾನ್ ಮಾಧವ ಮೆಂಡನ ಪೂಜಾರ್ಯರವರ ಅಧ್ಯಕ್ಷತೆಯಲ್ಲಿ ಜರಗುವುದು. ಜಿಲ್ಲೆಯ ಎಲ್ಲಾ ಮೊಗವೀರ ಗ್ರಾಮಗಳಿಂದಲೂ ಕ್ರಮದಂತೆ ಯೋಗ್ಯ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬೇಕಾಗಿಯೂ ಕುಲಹಿತೈಷಿಗಳಾದ ಪ್ರೇಕ್ಷಕರು ವಿಶೇಷ ಸಂಖ್ಯೆಯಿಂದ ಬರಬೇಕಾಗಿಯೂ ಪ್ರಾರ್ಥನೆ. ಪರಿಷತ್ತಿಗೆ ಬರತಕ್ಕ ಪ್ರತಿನಿಧಿಗಳಿಗೂ, ಪ್ರೇಕ್ಷಕರಿಗೂ ಪ್ರವೇಶ

ಮತ್ತು ಊಟೋಪಚಾರಗಳ ಬಗ್ಗೆ ಯಾವ ಫೀಸೂ ತೆರಬೇಕಾಗಿರುವುದಿಲ್ಲ. ರೈಲ್ವೆ ಮತ್ತು ಮೋಟರು ಸ್ಟೇಶನುಗಳಲ್ಲಿ ಈ ಪರಿಷತ್ತಿಗೆ ಬರತಕ್ಕವರನ್ನೆಲ್ಲ ಪರಿಷದ್‌ಮಂದಿರಕ್ಕೆ ಕರೆದೊಯ್ಯಲು ತಾ. ೨೮, ೨೯ಕ್ಕೆ ನಮ್ಮ ಸ್ವಯಂ ಸೇವಕರು ಸಿದ್ಧರಾಗಿ ನಿಲ್ಲುವರು.

ತಾ. ೩೧ನೇ ಸಾಯಂಕಾಲ ಪರಿಷತ್ತಿನ ಪ್ರೀತ್ಯರ್ಥವಾಗಿ ಅರ್ಯ ವೊಗವೀರ ನಾಟಕ ಮಂಡಳಿಯವರು "ಮೊಗವೀರ ಅಭ್ಯುದಯ" ಎಂಬ ಹೊಸ್ತ ಕರುಣರಸಭರಿತವಾದ ಒಂದು ಐತಿಹಾಸಿಕ ನಾಟಕವನ್ನು ಅಭಿನಯಿಸುವರು. (ಮೊಗವೀರ ಪತ್ರಿಕೆಯ ಕಾರ್ಯದರ್ಶಿ.)

ವಿವಿಧ ವಿಷಯಗಳು.

ಭೂಪಾಲ ಬೇಗಮರ ಸಿಂಹಾಸನತ್ಯಾಗ.

ಇಪ್ಪತ್ತು ವರೆಗೆ ಭೂಪಾಳ ಸಂಸ್ಥಾನವನ್ನು ಆಳುತ್ತಿದ್ದ ಬೇಗಮು ಸಾಹೇಬರು ೨೫ ವರುಷಗಳ ವರೆಗೆ ಒಳ್ಳೇ ರೀತಿಯಲ್ಲಿ ರಾಜ್ಯಭಾರ ನಡಿಸಿದರು. ಇವರು, ಇವರ ಮೊದಲು ಆಳಿದ ತನ್ನ ಮಾತೋಶ್ರೀಯವರಂತೆಯೂ ಅಂತಹ ಇತರ ರಾಜರಂತೆಯೂ ಉನ್ನತ ಸ್ಥಿತಿಯಿಂದ ರಾಜ್ಯ ವಾಳಿದರು. ಇವರ ಭೂಪಾಲ ರಾಜ್ಯವು ೭,೦೦೦ ಚದರ ಮೈಲು ವಿಸ್ತಾರವಾಗಿದ್ದು ೮ ಲಕ್ಷ ಪ್ರಜೆಗಳು ಇರುತ್ತಾರೆ. ಈ ಬೇಗಮು ಸಾಹೇಬರು ಇಂಗ್ಲಿಷ, ಅರಬಿ, ಪರ್ಶಿಯನ್ ಮತ್ತು ಪುಷ್ಟು ಭಾಷೆಗಳಲ್ಲಿ ಸರಿಯಾಗಿ ಮಾತನಾಡಬಲ್ಲರು. ಇವರ ಅಜ್ಜಿಯ ಜೀವನ ಚರಿತ್ರೆಯನ್ನು ಇವರು ಬರೆದಿರುವರು. ಅವಲ್ಲದೆ ಇನ್ನು ಇತರ ಪುಸ್ತಕಗಳನ್ನೂ, ತನ್ನ ಸ್ವಂತ ಜೀವನ ಚರಿತ್ರೆಯನ್ನೂ ಬರೆದಿರುವರು. ಇವರು ವಿಲಾಯತಿಯ ದೇಶಗಳಲ್ಲಿ ಸಂಚರಿಸಿ ಅಲ್ಲಿಯ ರಾಜ್ಯಭಾರ ಕ್ರಮಗಳನ್ನು ವಿಚಾರಿಸಿ ಅವುಗಳಲ್ಲಿ ಸಾಧ್ಯವಾದುದನ್ನು ತನ್ನ ರಾಜ್ಯದಲ್ಲಿ ಜ್ಯಾರಿಗೆ ತಂದಿರುವರು. ಇವರು ತನ್ನ ರಾಜ್ಯದಲ್ಲಿ ವಿದ್ಯೆಯನ್ನು ಒಳ್ಳೇ ರೀತಿಯಲ್ಲಿ ಪ್ರಚಾರಕ್ಕೆ ತಂದಿರುವರು. ಅದಲ್ಲದೆ ತನ್ನ ರಾಜ್ಯದ ಹೊರಗಿರುವ ವಿದ್ಯಾಶಾಲೆಗಳಿಗೂ ಧನಸಹಾಯ ಮಾಡಿರುವರು. ಇವರು ವಿದ್ಯಾಭಿವೃದ್ಧಿಯಲ್ಲಿ ಹೆಚ್ಚು ಮನಸ್ಸು ಕೊಟ್ಟುದರಿಂದ ಇವರನ್ನು ಅಲಿಗಾಡಾ ಯುನಿವರ್ಸಿಟಿಯ ಚೆನ್ಸಲರರಾಗಿ ನೇಮಿಸಿದರು. ಇವರು ಮುಸಲ್ಮಾನ ಮತದ ಮೇಲೆ ಒಳ್ಳೇ ಆಸಕ್ತಿಯುಳ್ಳವರು. ಆದರೆ ಇವರ ರಾಜ್ಯದಲ್ಲಿ ಹಿಂದುಗಳೂ, ಮುಸಲ್ಮಾನರೂ, ಕ್ರೈಸ್ತರೂ ಮತ್ತು ಇತರ ಎಲ್ಲಾ ಮತದವರೂ ಪರಸ್ಪರ ಪ್ರೀತಿಯಿಂದ ಇದ್ದು ರಾಜಾಶ್ರಯವನ್ನು ಪಡೆಯುವರು. ಬೇರೆ ರಾಜರುಗಳು ಕುಡಿಕತನವನ್ನು ನಿಲ್ಲಿಸಲು ಉಪಾಯಗಳನ್ನು ಹುಡುಕುತ್ತಿರುವಾಗ ಇವರು ತನ್ನ ರಾಜ್ಯದಲ್ಲಿ ಕುಡಿಕತನವನ್ನು ನಿಲ್ಲಿಸಿಯೇ ಬಿಟ್ಟರು. ಕಳೆದ ಯುದ್ಧದ ಸಮಯ ಇವರು ಸೈನ್ಯದ ರೂಪದಲ್ಲಿಯೂ, ಹಣದ ರೂಪದಲ್ಲಿಯೂ ಇಂಡಿಯಾ ಸರಕಾರಕ್ಕೆ ಸಹಾಯ ಮಾಡಿರುವರು. ಸರಕಾರದವರು ಇವರಿಗೆ ಇದಕ್ಕಾಗಿ ಹೆಚ್ಚು ಬಿರುದುಗಳನ್ನು ಕೊಟ್ಟಿರುವರು. ಇವರಿಗೆ ಈಗ ೬೮ ವರುಷ ಪ್ರಾಯ. ಇವರು ತನ್ನ ಮಗನಾದ ನವಾಬಜಾದಾ ಹಮಿದುಲ್ಲಾ ಖಾನರಿಗೆ ರಾಜ್ಯಭಾರವನ್ನು ವಹಿಸಿಕೊಟ್ಟಿರುವರು.

∴ ∴ ∴

ಇಂಡಿಯದಲ್ಲಿರುವ ವೇಶ್ಯಾಸ್ತ್ರೀಯರು.

ಇಂಡಿಯದಲ್ಲಿ ವೇಶ್ಯಾಸ್ತ್ರೀಯರೆಂಬ ಹೆಸರಿನಿಂದಲೂ ತುಂಡು ಸೂಳೆಯರೆಂಬ ಹೆಸರಿನಿಂದಲೂ ಅನೇಕ ಮಂದಿ ಹೆಂಗಸರು ವ್ಯಭಿಚಾರ ವೃತ್ತಿಯಿಂದ ಕಾಲಕ್ಷೇಪ ಮಾಡುತ್ತಿರುವರು. ಇವರು ಮುದುಕಿಯವರಾಗುತ್ತ ಬರುವಾಗ ತಮಗೆ ರೂಪವತಿಯರಾದ ಮಕ್ಕಳು ಇಲ್ಲದಿದ್ದರೆ ಬಡವರಿಂದಲೂ ಬೇಡುವವರಿಂದಲೂ, ಕಳ್ಳತನದಿಂದಲೂ ರೂಪವತಿಯರಾದ ಹುಡುಗಿಯರನ್ನು ಕ್ರಯಕ್ಕೆ ಪಡೆದು ಅವರನ್ನು ಸಾಕಿ ನಂತರ ಅವರ ಜನ್ಮವನ್ನೇ ವ್ಯಭಿಚಾರ ವೃತ್ತಿಯಿಂದ ಹಾಳುಮಾಡುತ್ತಿರುವರು. ಇವರ ಬಾಧೆಯು ಈಗೀಗ ಬಯಲಿಗೆ ಬಂದು ಕೆಲವರಿಗೆ ಶಿಕ್ಷೆಯಾಯಿತು.

ಆದುದರಿಂದ ಈ ವ್ಯಭಿಚಾರಿಣಿಯರಾದ ಸ್ತ್ರೀಯರ ವಿಷಯ ತನಖಿ ನಡಿಸುವುದಕ್ಕಾಗಿ ಲೀಗ್ ಒಫ್ ನೇಶನ್ಸಿನವರು ಒಂದು ಕಮಿಟಿಯನ್ನು ಬೇಗನೆ ಇಂಡಿಯಕ್ಕೆ ಕಳುಹಿಸುವುದರಲ್ಲಿದ್ದಾರೆ. ಮದರಾಸು, ಕಲ್ಕತ್ತ, ಮುಂಬಾಯಿ ಮುಂತಾದ ದೊಡ್ಡ ದೊಡ್ಡ ಊರುಗಳಲ್ಲಿ ಈ ಹಾವಳಿಗೆ ತಡೆಗಟ್ಟುವ ಉಪಾಯಗಳನ್ನು ಹುಡುಕಿ ಇಂಡಿಯಾ ಸರಕಾರದವರಿಂದಲೂ ಪ್ರಾಂತಿಕ ಸರಕಾರಗಳಿಂದಲೂ ಈ ವ್ಯಭಿಚಾರಿ ವೃತ್ತಿಯನ್ನು ನಿಲ್ಲಿಸಲು ಕಾನೂನನ್ನು ಜಾರಿಗೆ ತರಲು ಸಾಧಿಸುತ್ತಿರುವರು.

∴ ∴ ∴

ಉತ್ತರ ಧ್ರುವದಲ್ಲಿ ನೆಲವಿಲ್ಲವಂತೆ.

ಉತ್ತರ ಧ್ರುವದ ಸುತ್ತಲೂ ಕೆಳ್ಳಗಾದ ಹಿಮವೂ ನೀರೂ ಇದೆ ಎಂದೂ, ಅರ್ಕಟಿಕ್‌ಬಂಜರು ಭೂಮಿಯು ನೆಲವಿಲ್ಲವೆಂದೂ ಅಲ್ಲಿಗೆ ಹೋಗಿ ಬಂದಿರುವ ನೋರ್ಜ ಎಂಬ ವಿಮಾನದಲ್ಲಿ ಹೋದ ರಿಸ್ ಲಾರ್ಸನ್ ಎಂಬವರು ಹೇಳುತ್ತಿರುವರು. ನೋರ್ಜ ಎಂಬ ವಿಮಾನವು ೭೨ ಗಂಟೆಗಳ ವರೆಗೆ ಉತ್ತರ ಧ್ರುವದ ಮೇಲ್ಭಾಗದಲ್ಲಿ ೬೦೦ ಅಡಿ ಎತ್ತರದಲ್ಲಿ ನಿಂತಿತು. ಇಲ್ಲಿ ಚಳಿಯು ಹೆಚ್ಚಾಗಿದ್ದುದರಿಂದ ವಿಮಾನದ ಕೆಲವು ಭಾಗಗಳು ಹಾಳಾಗುವುದರಲ್ಲಿದ್ದವು ಅಷ್ಟರಲ್ಲಿ ವಿಮಾನವು ಅಲ್ಲಿಂದ ಹೊರಡಿತು.

ಮದರಾಸು ಸಂಸ್ಥಾನದಲ್ಲಿ ಹಳ್ಳಿ ಆಸ್ಪತ್ರೆಗಳು.

೧೯೨೪ನೇ ಇಸವಿಯ ಅಕ್ಟೋಬರ ೨೫ನೇ ತಾರೀಕಿಗೆ ಹಳ್ಳಿಯ ಆಸ್ಪತ್ರೆಗಳ ವಿಷಯ ಸರಕಾರದವರು ಒಂದು ಹುಕುಮನ್ನು ಕೊಟ್ಟಿದ್ದರು. ಇದಕ್ಕನುಸಾರವಾಗಿ ೧೯೨೫-೨೬ನೇ ಇಸವಿಯ ಸಿವಿಲ್ ಬಜೇಟಿನಲ್ಲಿ ಒಂದೊಂದು ತಾಲೂಕು ಬೋರ್ಡು ಸರಹದ್ದಿನೊಳಗೆ ಎರಡೆರಡು ಹಳ್ಳಿಯ ಆಸ್ಪತ್ರೆಗಳನ್ನು ತೆರೆಯುವುದಕ್ಕಾಗಿ ಹಣ ಸೆಂಕ್ಷನ್ ಮಾಡಿದ್ದರು. ಈ ಇಸವಿಯಲ್ಲಿ ೨೨೯ ಹಳ್ಳಿಯ ಆಸ್ಪತ್ರೆಗಳು ತೆರೆಯಲ್ಪಟ್ಟವು.

ಈ ಮದರಾಸು ಸಂಸ್ಥಾನದಲ್ಲಿ ೯೮೮ ಎಲೋಪತಿಕ್ ಆಸ್ಪತ್ರೆಗಳು ಇವೆ. ಇವುಗಳಲ್ಲಿ ೩೫೯ ಹಳ್ಳಿಯ ಆಸ್ಪತ್ರೆಗಳು. ಇಷ್ಟು ಆಸ್ಪತ್ರೆಗಳಿಂದ್ದರೂ ಜನರಿಗೆ ವೈದ್ಯಸಹಾಯವು ಸಾಕಷ್ಟು ಇಲ್ಲದಿರುವುದರಿಂದ ೧೫೫ ಹಳ್ಳಿಯ ಹೊಸ ಆಸ್ಪತ್ರೆಗಳನ್ನು ತೆರಿಯಲಿಕ್ಕೆ ಈ ವರುಷ ಹಣ ಸೆಂಕ್ಷನ್ ಮಾಡಿಯದೆ. ಇದರ ಪ್ರಕಾರ ಪ್ರತಿಯೊಂದು ತಾಲೂಕು ಬೋರ್ಡಿನಲ್ಲಿ ಒಂದೊಂದು ಹೊಸ ಆಸ್ಪತ್ರೆಯನ್ನು ತೆರಿಯಲು ಸಾಧ್ಯವಾಗುವದು.

∴ ∴ ∴

ಶಾಲೆಗಳನ್ನು ತೆರಿಯಲಿಕ್ಕೆ ಹಳ್ಳಿ ಪಂಚಾಯತುಗಳಿಗೆ ಹಣ ಸೆಂಕ್ಷನ್.

ಹಳ್ಳಿ ಪಂಚಾಯತುಗಳು [illegible] ಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಇದೇ ವರುಷ ತೆರಿಯುವುದಕ್ಕಾಗಿ ಹಣ ಸೆಂಕ್ಷನ್ ಮಾಡಿ ಪಂಚಾಯತುಗಳ ರಿಜಿಸ್ಟ್ರಾರ ಜನರಲರವರ ಸ್ವಾಧೀನ ಕೊಟ್ಟಿರುತ್ತಾರೆ. ಒಬ್ಬ ಉಪಾಧ್ಯಾಯನಿಗೆ ವರುಷಕ್ಕೆ ೧೮೦ ರೂಪಾಯಿ ಸಂಬಳ. ಸಾಮಾನಿಗೆ ರೂ ೮೦. ಈ ರೀತಿಯಲ್ಲಿ ೫ ವರುಷಗಳ ವರೆಗೆ ಕೊಡಲ್ಪಡುವುದು. ಪಂಚಾಯತುಗಳು ಶಾಲಾ ಕಟ್ಟೋಣವನ್ನು ಎಲ್ಲಾ ಜಾತಿಯ ಮಕ್ಕಳಿಗೆ ಬರಲಿಕ್ಕೆ ಅನುಕೂಲವಾಗುವ ಸ್ಥಳದಲ್ಲಿ ಕಟ್ಟಿಸಬೇಕಾಗಿಯದೆ. ಅಥವಾ ಬಾಡಿಗೆಗೆ ಕಟ್ಟೋಣವನ್ನು ತೆಗೆದುಕೊಳ್ಳಬೇಕು. ಕಟ್ಟೋಣದ ಖರ್ಚನ್ನು ಅಥವಾ ಬಾಡಿಗೆಯನ್ನು ಪಂಚಾಯತಿನವರೆ ಕೊಡಬೇಕು. ಇದಕ್ಕಾಗಿ ಸರಕಾರವು ಗ್ರೆಂಟ್ ಕೊಡುವುದಿಲ್ಲ. ಸರಕಾರವು ಕೊಟ್ಟ ಗ್ರೆಂಟಿಗಿಂತ ಹೆಚ್ಚಿಗೆ ಖರ್ಚಾಗುವ ಹಣವನ್ನು ಪಂಚಾಯತಿನವರೇ ಖರ್ಚುಮಾಡಬೇಕು. ಈ ಶಾಲೆಗಳನ್ನು ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರು ಪರೀಕ್ಷಿಸುವರು. ಜಿಲ್ಲಾ ಎಜ್ಯುಕೇಶನ್ ಕೌನ್ಸಿಲಿನವರು ಇದನ್ನು ಮಂಜೂರು ಮಾಡುವರು.

ತಲಚೇರಿಯಲ್ಲಿ ಜರಗಿದ ಮುಸ್ಲಿಮ ಸಭೆಯ ಅಧ್ಯಕ್ಷರ ಭಾಷಣದ ಸಾರಾಂಶ.

ಮಾಪಿಳ್ಳೆ ವಿದ್ಯಾಭ್ಯಾಸ.

ಇತ್ತಲಾಗೆ ಇಂಡಿಯಾ ಸರಕಾರದವರು, ವಾಯುವ್ಯ ಗಡಿಪ್ರಾಂತ್ಯದ ಮುಸಲ್ಮಾನರು ವಿದ್ಯಾಹೀನರಾಗಿರುವುದನ್ನು ಕಂಡು ಮುಸಲ್ಮಾನರಿಗಾಗಿ ಒಂದು ಫಸ್ಟ್ ಗ್ರೇಡ ಕೋಲೇಜನ್ನು ಸ್ಥಾಪಿಸಿರುವರು. ಮಲಬಾರಿನ ಮಾಪಿಳ್ಳೆಯವರು ವಿದ್ಯೆಯಲ್ಲಿ ಬಹಳ ಹಿಂದುಳಿದುದರಿಂದ ಅವರ ವಿದ್ಯಾಭಿವೃದ್ಧಿಗಾಗಿ ಮಲಬಾರಿನಲ್ಲಿಯೂ ಮಾಪಿಳ್ಳೆಯರಿಗಾಗಿ ಒಂದು ಕೋಲೇಜನ್ನು ಸ್ಥಾಪಿಸುವುದು ಅತೀ ಅಗತ್ಯವಾದ ಸಂಗತಿಯಾಗಿದೆ.

ಮುಸಲ್ಮಾನರು ವಿದ್ಯೆಯಲ್ಲಿ ಹಿಂದುಳಿಯಲು ಕಾರಣ:

ಮತಸಮ್ಬಂಧವಲ್ಲದ ಶಾಲೆಗಳಲ್ಲಿ ಕಲಿಯುವ ಹುಡುಗರು ಸಹ ಮೊದಲು ಮತ ಸಮ್ಬಂಧವಾದ ವಿದ್ಯೆಯನ್ನು ಮೊದಲು ಕಲಿಯಲೇ ಬೇಕು. ಈ ವಿದ್ಯೆಯನ್ನು ಕಲಿಯಲು ಹೆಚ್ಚು ಸಮಯ ಬೇಕಾಗುತ್ತದೆ. ಅನಂತರ ಇತರ ಪಾಠಗಳನ್ನು ಕಲಿಯಲು ಸಮಯವು ಸಿಕ್ಕುವುದಿಲ್ಲ. ಅವಲ್ಲದೆ ಖುರಾನು ಶಾಲೆಗಳಲ್ಲಿ ಕಲಿಸುವ ಕ್ರಮವು ಬಹಳ ಪುರಾತನ ಕಾಲದ್ದು. ಎರಡನೇ ಕಾರಣವೇನೆಂದರೆ ಮುಸಲ್ಮಾನರಲ್ಲಿ ಹೆಚ್ಚಿನವರು ಬೇಸಾಯ ವೃತ್ತಿಯನ್ನು ಅನುಸರಿಸಿಕೊಂಡಿರುತ್ತಾರೆ. ತಮ್ಮ ಮಕ್ಕಳಿಗೆ ಶಾಲೆಗಳಲ್ಲಿ ಉರ್ದು ಭಾಷೆಯನ್ನೆ ಕಲಿಸಿದರೆ ಸಾಕೆಂದು ಮಕ್ಕಳ ಹೆತ್ತವರು ಪತ್ತಾಯ ಪಡಿಸುವುದು ಮೂರನೇ ಕಾರಣವಾಗಿದೆ.

ಸರಕಾರದವರು ಆಯಾ ಸ್ಥಳೀಕ ಸ್ಥಿತಿಗನುಸಾರವಾಗಿ ಮುಸಲ್ಮಾನರ ವಿದ್ಯಾಭಿವೃದ್ಧಿಗಾಗಿ ಮಹಮ್ಮದಿಯ ಇನ್ಸ್‌ಪೆಕ್ಟರರನ್ನೂ ಮಹಮ್ಮದಿ ಉಪಾಧ್ಯಾಯರನ್ನೂ ನೇಮಿಸಿ, ಮಹಮ್ಮದಿಯರಿಗಾಗಿ ಪ್ರತ್ಯೇಕ ಶಾಲೆಗಳನ್ನು ಸ್ಥಾಪಿಸಿರುತ್ತಾರೆ. ಅವಲ್ಲದೆ ಸ್ಕೊಲರಶಿಪ್ಪುಗಳನ್ನು ಕೊಟ್ಟಿರುತ್ತಾರೆ.

ಮತಸಮ್ಬಂಧವಾದ ಪಠ್ಯ ಪುಸ್ತಕಗಳು.

ಮತಸಮ್ಬಂಧವಾದ ವಿದ್ಯೆಯನ್ನು ಕೊಡುವುದಕ್ಕಾಗಿ ಟೆಕ್ಸ್‌ಬುಕ್ ಕಮಿಟಿಯವರು ಯೋಗ್ಯವಾದ ಪುಸ್ತಕಗಳನ್ನು ತಯಾರಿಸಿರುತ್ತಾರೆ. ಖೊರಾನನ್ನು ಬಾಯಿಪಾಠ ಕಲಿಯುವ ಪದ್ಧತಿಯು ಜನರಲ್ಲಿ ರೂಢಿಯಲ್ಲಿರುವುದರಿಂದ ಅದನ್ನು ಥಕ್ಕನೆ ನಿಲ್ಲಿಸಲು ಅಸಾಧ್ಯವಾಗಿರುವುದರಿಂದಲೂ ಈಗಲೇ ಅದನ್ನು ನಿಲ್ಲಿಸಲು ಸಾಧ್ಯವಿಲ್ಲ. ವಿನಯಂಬಾಡಿ ಇಸ್ಲಾಮಿಯಾ ಹೈಸ್ಕೂಲಿನವರು ಯೋಗ್ಯವಾದ ಪಾಠ ಪಟ್ಟಿಯನ್ನು ತಯಾರಿಸಿರುವರು. ಉತ್ತರ ಹಿಂದೂದೇಶದಲ್ಲಿ ಖುರಾನಿನ ತರ್ಜಮೆಯನ್ನು ಮಾಡಿರುತ್ತಾರೆ. ಅವಲ್ಲದೆ ಅವರಲ್ಲಿ ಮುಖ್ಯವಾದ ಮೂಲಸೂತ್ರಗಳನ್ನು ತೆಗೆದು ಪ್ರತ್ಯೇಕ ಛಾಪಿಸಿರುತ್ತಾರೆ. ಇವರು ಖುರಾನಿ ಏ ಶರೀಫ್ ಮತ್ತು ಹದೀ ಎಂಬುದರಿಂದಲೂ ಸಾರಾಂಶವನ್ನು ತೆಗೆದು ಇರುತ್ತಾರೆ. ಆದುದರಿಂದ ಟೆಕ್ಸ್ಟ್ ಬುಕ್ ಕಮಿಟಿಯವರು ಈ ಪುಸ್ತಕಗಳನ್ನು ತಮ್ಮ ಆಲೋಚನೆಗೆ ತಂದು ಪದ್ಯಪುಸ್ತಕಗಳನ್ನು ತಯಾರಿಸುವುದು ಒಳ್ಳೇದು. ಇವನ್ನು ಕಲಿಸುವ ಉಪಾಧ್ಯಾಯರಿಗೂ ಇತರ ವಿದ್ಯೆಯೂ ಸರಿಯಾಗಿ ಇರುವುದು ಅಗತ್ಯ.

ಪ್ರಾಥಮಿಕ ವಿದ್ಯಾಭ್ಯಾಸ.

ಮಾಪಿಳ್ಳೆ ಪ್ರಾಥಮಿಕ ಶಾಲೆಗಳಲ್ಲಿ ಮತಸಮ್ಬಂಧವಾದ ವಿದ್ಯೆಯನ್ನು ಮಾತ್ರವೇ ಕಲಿಸದೆ ಇತರ ಪಾಠಗಳನ್ನು ಪ್ರಾಥಮಿಕ ಶಾಲಾಪಾಠ ಪಟ್ಟಿಗನುಸಾರವಾಗಿ ಕಲಿಸಬೇಕಾಗಿದೆ. ಹೀಗೆ ಮಾಡಿದರೆ ಈಗಿರುವ ಮುಕ್ತಾಬಾಗಳು ಇತರ ಶಾಲೆಗಳಂತೆಯೇ ಅಭಿವೃದ್ಧಿಯನ್ನು ಹೊಂದುವವು. ಮಲಬಾರು ದಂಗೆ ಆದ ಸ್ಥಳಗಳಲ್ಲಿ ಈಗಲೇ ಪ್ರಾಥಮಿಕ ವಿದ್ಯಾಭ್ಯಾಸವನ್ನು ಜಾರಿಗೆ ತರುವುದು ಅಗತ್ಯವಾಗಿದೆ. ಈ ರೀತಿಯಲ್ಲಿ ಮಾಡಿದ ಬೇಸಾಯಮಾಡುವ ಮಾಪಿಳ್ಳೆಯರೂ ಕೂಲಿಕೆಲಸ ಮಾಡುವ ಮಾಪಿಳ್ಳೆಯರೂ ವಿದ್ಯೆಯೂ ಸ್ವಭಾವದಲ್ಲಿಯೂ ಬೇಗನೇ ಅಭಿವೃದ್ಧಿ ಹೊಂದುವರು.

ವೊಕೇಶನಲ್ ತರಬೇತಿ.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ಸೆಕೆಂಡರಿ ವಿದ್ಯಾಭ್ಯಾಸವನ್ನು ಮುಂದರಿಸುವವರು ಮುಂದರಿಸಬಹುದು. ಆದರೆ ಪ್ರಾಥಮಿಕ ವಿದ್ಯೆಯನ್ನು ಕಲಿತುಬಿಡುವವರಿಗೆ ಏನಾದರೂ ಒಂದು ವೃತ್ತಿಯನ್ನು ಅನುಸರಿಸಲಿಕ್ಕೆ ಯೋಗ್ಯವಾದ ವಿದ್ಯೆಯನ್ನು ಕಲಿಸಬೇಕು. ಅಗತ್ಯವಿರುವ ಸ್ಥಳಗಳಲ್ಲಿ ಪ್ರತ್ಯೇಕ ಕೈಗಾರಿಕೆ ಶಾಲೆಗಳನ್ನು ಸ್ಥಾಪಿಸಬೇಕು. ಇವುಗಳು ಮದ್ರಾಸು, ವೆಲ್ಲೂರು, ಮೇಲವಿಶ್ರಾಮ ಮುಂತಾದ ಊರುಗಳಲ್ಲಿರುವ ಶಾಲೆಗಳನ್ನು ದೃಷ್ಟಾಂತವಾಗಿ ಅನುಸರಿಸಬೇಕು. ಈ ರೀತಿಯ ಕೈಗಾರಿಕೆಯ ವಿದ್ಯೆಯನ್ನು ಮಾಪಿಳ್ಳಾ ಹುಡುಗರಿಗೆ ಕೊಟ್ಟರೆ ಅವರಲ್ಲಿರುವ ಬಡತನವನ್ನು ಹೊಗಲಾಡಿಸಿದಂತಾಗುವುದು.

ಉರ್ದು ಭಾಷೆಯು ಇಂಗ್ಲಿಷು ಭಾಷೆಯ ಹಾಗೆಯೇ ಹಿಂದೂದೇಶದ ಎಲ್ಲಾ ಭಾಗಗಳಲ್ಲಿಯೂ ಪ್ರಚಾರಕ್ಕೆ ಬರುವುದರಿಂದ ಮಳೆಯಾಳಿ ಭಾಷೆಯೊಡನೆ ಇದನ್ನು ಶಾಲೆಗಳಲ್ಲಿ ಕಲಿಸಲು ಪ್ರಾರಂಭಿಸಬೇಕು. ಬರ್ಮದಲ್ಲಿ ಮುಸಲ್ಮಾನರು ಸಹ ಉರ್ದುಭಾಷೆಯನ್ನು ಕಲಿಸಲು ಆರಂಭಿಸಿರುವರು.

ಸ್ತ್ರೀ ವಿದ್ಯಾಭ್ಯಾಸ.

ಸ್ತ್ರೀ ವಿದ್ಯಾಭ್ಯಾಸದ ವಿಷಯ ಆಲೋಚಿಸುವುದು ಬಹಳ ಆವಶ್ಯಕವಾಗಿದೆ. ಆದರೆ ಅದನ್ನು ಈಗಲೇ ಪ್ರಚಾರಪಡಿಸಿ ಸ್ತ್ರೀವಿದ್ಯಾಭ್ಯಾಸವನ್ನು ಕೊಡಲು ಶುರುಮಾಡುವ [illegible] ಅಭಿವೃದ್ಧಿಗೆ [illegible] ದಂತಾಗುವುದು.

ಯೋಗ್ಯರಾದ ಉಪಾಧ್ಯಾಯರು ಅಗತ್ಯವಿರುವರು.

ಶಾಲೆಗಳಲ್ಲಿ ವಿದ್ಯಾಭ್ಯಾಸವನ್ನು ಹೊಂದಿದ ಮಾಪಿಳ್ಳಾ ಹುಡುಗರ ಸಂಖ್ಯೆಯು ಬಹಳ ಕಡಿಮೆಯಾಗಿದೆ. ೧೯೨೪-೨೫ರಲ್ಲಿ ೬೩,೬೪೨ ಮಕ್ಕಳು ಮಾತ್ರವೇ ಶಾಲೆಗಳಲ್ಲಿ ಕಲಿಯುತ್ತಿದ್ದರು. ಆದರೆ ಮಾಪಿಳ್ಳಾ ಉಪಾಧ್ಯಾಯರು ಬಹಳ ಕಡಿಮೆ ಇರುತ್ತಾರೆ. ಮಲಬಾರು ಜಿಲ್ಲೆಯಲ್ಲಿ ೧೦ಲಕ್ಷ ಮಾಪಿಳ್ಳೆಯರು ಇರುತ್ತಾರೆ. ಅಂದರೆ ಇಡೀ ಮದರಾಸು ಸಂಸ್ಥಾನದಲ್ಲಿರುವ ಮುಸಲ್ಮಾನರ ⅓ ಪಾಲು ಮಲಬಾರಿನಲ್ಲಿರುತ್ತಾರೆ.

ಮಲಬಾರಿನಲ್ಲಿ ಮಾಪಿಳ್ಳೆಯರಿಗಾಗಿ ಸ್ಥಾಪಿಸಿರುವ ಒಂದು ಹೈಸ್ಕೂಲ್ ಮತ್ತೊಂದು ಮಿಡ್ಲಸ್ಕೂಲಿನಲ್ಲಿ ೯೩೨ ಮಂದಿ ಮಾತ್ರವೇ ಕಲಿಯುತ್ತಿರುವರು. ಇತರ ಹುಡುಗರ ಹೆತ್ತವರು ಬಡವರಾಗಿರುವುದರಿಂದ ಅವರಿಗೆ ಬೇಕಾದ ಶಾಲೆಗಳು ಬಹಳ ದೂರವಿರುವುದರಿಂದ ವಿದ್ಯಾಭ್ಯಾಸವನ್ನು ಮುಂದರಿಸಲು ಸಾಧ್ಯವಿಲ್ಲ.

ಪ್ರಾಥಮಿಕ ವಿದ್ಯೆಯಲ್ಲಿ ಹಿಂದುಳಿಯಲು ಕಾರಣ.

ಮಲಬಾರಿನಲ್ಲಿರು ಹೆಚ್ಚಿನ ಮಾಪಿಳ್ಳೆಯರು ಬೇಸಾಯಗಾರರಾಗಿರುವುದರಿಂದಲೂ ಗೇಣಿದಾರರುಗಳಾಗಿದ್ದು ಸ್ವಂತ ಭೂಮಿ ಇಲ್ಲದವರಾಗಿರುವುದರಿಂದ ಪ್ರಾಥಮಿಕ ವಿದ್ಯೆಯಲ್ಲಿ ಮುಂದರಿಯಲು ತೊಡಕುಂಟಾಗಿದೆ. ಆದುದರಿಂದ ಇನ್ನು ಮುಂದೆ ಸೆಕೆಂಡರಿ ಮತ್ತು ಕೈಗಾರಿಕೆ ವಿದ್ಯಾಭ್ಯಾಸವನ್ನು ಮುಂದರಿಸುವುದು ಅತೀ ಅಗತ್ಯವಾಗಿದೆ. ಕೋಲೇಜುಗಳಿಗೂ ಹೈಸ್ಕೂಲುಗಳಿಗೂ ಹೊಸ್ಟೆಲುಗಳು ಅಗತ್ಯವಾಗಿದೆ. ಸೆಕೆಂಡರಿ ವಿದ್ಯಾಭ್ಯಾಸವನ್ನು ಮುಂದರಿಸಲಿಕ್ಕೆ ಸರಕಾರದವರು ಮಾಪಿಳ್ಳಾ ಹುಡುಗರಿಗೆ ಯೋಗ್ಯವಾದ ಸ್ಕೊಲರಶಿಪ್ಪುಗಳನ್ನು ಕೊಟ್ಟು ವಿದ್ಯೆಯನ್ನು ಅಭಿವೃದ್ಧಿಪಡಿಸಬೇಕಾಗಿದೆ.

ಕೆಲವರು ಸೈನದ ಕೆಲಸಕ್ಕೆ ಸೇರಬಹುದು. ಈ ರೀತಿಯಲ್ಲಿ ಭಾಷಣವನ್ನು ಕೊಟ್ಟು ಸಭಾಧ್ಯಕ್ಷರಾದ ಮಿ। ಎ. ಹಮೀದ ಹುಸ್ಸೇನ್ ಬಿ. ಎ. ಎಮ್. ಎಲ್. ಬಿ. ಯವರು ಸಭೆಯನ್ನು ಮುಕ್ತಾಯಗೊಳಿಸಿದರು.

— ಕುಷ್ಠರೋಗ ನಿವಾರಣೆ. —

ಕಳೆದ ವರುಷದಲ್ಲಿ ಹಿಂದೂಸ್ಥಾನದಲ್ಲಿ ಈ ಸಮ್ಬಂಧ ಮಿ। ಲೋರ್ಡ ರೀಡಿಂಗ್ ಧೊರೆಗಳವರು ಧನಸಹಾಯದ ಬಗ್ಗೆ ಒಂದು ವಿನಂತಿ ಬರೆದು ಪ್ರಾಂತಿಕ ಸರಕಾರಗಳಿಗೆ ಕಳುಹಿಸಿದ್ದರು. ಈ ವಿಷಯ ಬ್ರಿಟಿಷ್‌ಸಾಮ್ರಾಜ್ಯದ ಕುಷ್ಠರೋಗ ನಿವಾರಣದ ಇಂಡಿಯಾ ಕೌನ್ಸಿಲಿನ ಒಂದು ಸಭೆ ಈ ಕುರಿತು ನಡಿಸಿದ ಪ್ರಯತ್ನಗಳೆಲ್ಲಾ ಎಲ್ಲಾ ವಿಷಯಗಳಲ್ಲಿ ಸಾರ್ಥಕವೆನಿಸಬಹುದು.

ಹಿಂದೂಸ್ಥಾನದಲ್ಲಿ ಸಾಧಾರಣ ಎರಡು ಲಕ್ಷ ಕುಷ್ಠರೋಗಿಗಳು ಇರುವರು. ಇದು ದಕ್ಷಿಣ ಅಫ್ರಿಕದ ಪಶ್ಚಿಮ ಭಾಗದಲ್ಲಿರುವುದಕ್ಕಿಂತ ನಾಲ್ಕುಮಡಿಯಾಗಿಯೂ, ಮಧ್ಯದ ಅಫ್ರಿಕದಕ್ಕಿಂತ ಎಳ್ಮಡಿಯಾಗಿಯೂ, ದಕ್ಷಿಣ ಅಫ್ರಿಕದಲ್ಲಿ ಸ್ಟೇಟ್ ಸೆಟ್ಲಮೆಂಟಿನಲ್ಲಿಗಿಂತ ಮೂಮ್ಮಡಿಯಾಗಿಯೂ, ಇರುತ್ತದೆ. ಹೀಗಿರುತ್ತ ಹಿಂದೂದೇಶದಲ್ಲಿ ಇರುವಷ್ಟು ಕುಷ್ಠರೋಗಿಗಳ ಸಂಖ್ಯೆಯು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಎಲ್ಲಿಯೂ ಇರುವುದಿಲ್ಲ. ಆದ ಕಾರಣ ಮಿ। ರೀಡಿಂಗ ಧೊರೆಗಳವರು ಆ ಕುರಿತು ಒಂದು ವಿನಂತಿ ಪತ್ರವನ್ನು ಕಳೆದ ೧೯೨೫ನೇ ಇಸವಿಯಲ್ಲಿ ಬರೆದು ಪ್ರಾಂತಿಕ ಸರಕಾರಗಳಿಗೆ ಕಳುಹಿಸಿದ್ದರು. ಅದನ್ನು ಅನುಸರಿಸಿ ಪ್ರಾಂತಿಕ ಗವರ್ನರ ಧೊರೆಗಳವರು ಅದೇ ರೀತಿಯಿಂದ ಹಿಂದೂದೇಶದ ಉಪನ್ಯಾಸ ಮಂಡಳೀಕರು ವಗೈರೆಯವರ ಪುಷ್ಟೀಕರಣದಿಂದ, ಈ ಎಲ್ಲಾ ಧರ್ಮಕಾರಣ ಪ್ರಯತ್ನಗಳಿಂದ ೩೩೩೩೦೦೦ ರೂಪಾಯಿ ಈ ಬಗ್ಗೆ ಶೇಖರಿಸಿದ್ದಾರೆ. ಈ ಪೈಕಿ ನಮ್ಮ ಪ್ರಾಂತಾಧಿಪರು ೧೫೫೦೦೦ ರೂಪಾಯಿಗಳನ್ನು ಶೇಖರಿಸಿದರು. ಇದು ಮುಂಬಾಯಿ ಪ್ರಾಂತದ ½ದಷ್ಟು ಆಗುತ್ತದೆ. ರಾಜಧಾನಿಯಲ್ಲಿ ಈ ಬಗ್ಗೆ ರೂಪಾಯಿ ೨೫೬೦೦೦ ಮಾತ್ರವಂತೆ.

ಇವಲ್ಲದೆ ಮುಂಬಾಪುರಿಯ ಮಾನ್ಯ ಗೃಹಸ್ಥರೊಬ್ಬರು ಈ ಸಂಘದ ಕಟ್ಟಡವು ತಮ್ಮ ಪಟ್ಟಣದ ಸಮೀಪದ ದ್ವೀಪಾಂತರದಲ್ಲಿ ಇರಗೊಡಿಸುವ ಕಾಂಕ್ಷೆಯಿಂದ ಒಂದು ಲಕ್ಷ ರೂಪಾಯಿ ವಾಗ್ದಾನಮಾಡಿರುವುದರಿಂದ ಸರಕಾರದವರು ಈ ವಿಷಯ ಅವರೊಡನೆ ಪತ್ರವ್ಯವಹಾರ ನಡಿಸುತ್ತ ಇರುವರು.

ಈ ಸಂಸ್ಥೆಯ ಚಾಲಕರು ಈ ರೋಗವನ್ನು ನಿವಾರಿಸುವ ಮತ್ತು ಅಂಥಾ ಕೆಲಸದ ಬಗ್ಗೆ ಉಪಕ್ರಮಗಳನ್ನು ಆಲೋಚಿಸುತ್ತ ಇರುವವರು ಪ್ರಥಮತಃ ಶೇಖರಿಸಿದ ಹಣದ ಉತ್ಪನ್ನದ್ರವ್ಯದಿಂದಲೇ ಈ ಸಂಘದ ಉದ್ದೇಶವನ್ನು ಪೂರೈಸುವುದು ಎಂತ ನಿರ್ಣಯಿಸಿಯದೆ. ತತ್ಕಾಲಕ್ಕೆ ಈ ಚಾಲಕ ಮಂಡಳವು (೧) ರೋಗದ ಶೋಧ; (೨) ರೋಗದ ನಿಧಾನ ಮತ್ತು ಚಿಕಿತ್ಸೆ ಕುರಿತು ಯುವಕರ ತರ್ಬೇತು; (೩) ಈ ಅನುಭವಗಳ ಪ್ರಚಾರದ ಕೆಲಸಗಳನ್ನು ಕೈಕೊಂಡಿರುತ್ತಾರೆ. ಈ ವರೆಗೆ ನಡಿಸಿದ ಶೋಧೆಯ ಅನುಭವದಿಂದ ಈ ರೋಗ ಚಿಕಿತ್ಸೆಗಳಿಂದ ಹಿಂದೂದೇಶದಲ್ಲಿ ಈ ರೋಗವನ್ನು ಪರೀಕ್ಷಿಸಿ ನಾಶಗೊಳಿಸುವುದು ಬಹು ಸುಲಭ. ರೋಗ ತಗಲಿದೊಡನೆಯೇ ಚಿಕಿತ್ಸೆ ನಡಿಸಿದರೆ ಉಪಶುಸಾಧ್ಯ. ಆಗ ಯೋಗ್ಯರೀತಿಯಲ್ಲಿ ಅನುಪಾನ ವ್ಯಾಯಾಮ, ಹವಾಮಾನದಿಂದಲೇ ಈ ರೋಗವನ್ನು ಗುಣಪಡಿಸಬಹುದು. ಈ ಸಮಯದಲ್ಲಿ ರೋಗಿಗೆ ಇತರ ರೋಗಗಳ ಶಾರೀರಕ ಸಾಂಸರ್ಗಿಗಳ ದೋಷಗಳು ತಟ್ಟದಂತೆ ಜಾಗ್ರತೆ ಇಡುವದೇ ಮುಖ್ಯ ಕೆಲಸ. ಆಹಾರ ಕೂಡ ಚಲೋರೀತಿಯಿಂದ ನಡಿಸಬೇಕಾಗುವದು. ಈ ಸಮ್ಬಂಧ ಒಂದು ವರ್ಷದಲ್ಲಿ ಕಲ್ಕತ್ತ ಪಟ್ಟಣದಲ್ಲಿ ನವಂಬರ ಮತ್ತು ಫೆಬ್ರುವರಿ ತಿಂಗಳಲ್ಲಿ ಯುವಕರಿಗೆ ತರಬೇತಿಗೆ ಚುನಾಯಿಸುವ ಕೆಲಸವು ನಡಿಸಲಾಗುವುದು. ಕಳೆದ ಸಾರಿ ೩೪ ಜನ ಯುವಕರನ್ನು ಚುನಾಯಿಸಿದ್ದಾಯಿತು. ಇವರಲ್ಲಿ ಹೆಚ್ಚಿನವರು ಮಧ್ಯಪ್ರಾಂತ್ಯದ ಯುವಕರಾಗಿರುವರು. ನಮ್ಮ ಸ್ವದೇಶದ ಮೆಡಿಕಲ್ ಡಿಗ್ರಿಪಡೆದವರೇ, ಆಯುರ್ವೇದ ಪೀಠ ಪಡೆದ ತರುಣರೇ ಈ ಕಡೆಗೆ ಮನಸ್ಸು ತರುಗಿರಿ. ಕುಷ್ಠರೋಗ ಬಾಧೆಯು ನಮ್ಮ ಜಿಲ್ಲೆಯಲ್ಲಿಯೂ ಇರುವದು. ಬೀದಿ ಬೀದಿಗಳಲ್ಲಿ, ಮೋಟರ ತಂಗುವ ಸ್ಥಳ, ಗಾಡಿಚ್‌ಕ, ಆದವಿನ ಬಾಗಿಲು, ರೈಲುಸ್ಟೇಷನುಗಳಲ್ಲಿ ಇರುವರು. ಪೂರ್ವ ಪಾಶ್ಚಿಮಾತ್ಯ ಚಿಕಿತ್ಸಾ ಸಾಧನಗಳನ್ನು ಮಹಾಪುರುಷರುಗಳು ಆದ ಚರಕ, ಸುಶ್ರುತ, ವಾಗ್ಭಟ, ಧನ್ವಂತ್ರಿ ವಗೈರರು ಗ್ರಂಥಗಳನ್ನು ಕುಷ್ಠರೋಗ ಪೀಡಿತರ ವಿಷಯ ವಿವರವಾಗಿ ಬರೆದಿರುವರು. ಕ್ರೈಸ್ತ ಮಿಶನರಿಗಳು ಮಾತ್ರ [illegible] ರೋಗಿಗಳನ್ನು ಉಪ್ಕಾರ ನೋಡುವದಿಲ್ಲ. ಹಿಂದು ಜಾತಿಗಳು ಸ್ವದೇಶ [illegible] ಚೇಯರ್, [illegible] ಈ ಕೆಲಸದ ವಿಷಯ ಆಲೋಚಿಸುವುದಿಲ್ಲ. ಆದುದರಿಂದ ಈ ಜಿಲ್ಲೆಯಲ್ಲಿರುವ ಹಿಂದೂ ಕುಷ್ಠರೋಗಿಗಳನ್ನು ಇರಿಸಲಿಕ್ಕೆ ಇಡೀ ಜಿಲ್ಲೆಗೊಂದು ಸಂಸ್ಥೆಯನ್ನು ಜನರ ನಿವಾಸಸ್ಥಾನದಿಂದ ದೂರವಿರುವ ಸ್ಥಳದಲ್ಲಿ ಸ್ಥಾಪಿಸುವುದು ಅತೀ ಅಗತ್ಯವಾದ ಕೆಲಸವಾಗಿದೆ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಳುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ಎ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.
K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಚಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಅಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,
ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.
ಏಜಂಟರು:— ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ, ಮಂಗಳೂರು ಟವರಿಗೆ ಮಾತ್ರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಫ್ ಕೊಸ್ಟ್ಸ್, ಮೆಮೊರಂಡಮ್ ಒಫ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—3—0.
ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ತುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್
ಮಹಾಲಕ್ಷ್ಮೀ ಕಾಫಿ ಕ್ಲಬ್, ಮಾರ್ಕೇಟು ರೋಡು, ಮಂಗಳೂರು. | ಬ್ರಾಂಚ್ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | ## ವಜ್ರಾಂಗ-ಬಿಂದು | ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಅಡಿಯುಕ್ತವಾದ ಮತ್ತು ಉತ್ಕೃಷ್ಟತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನಸ್ಖಲನ ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಅಧುನಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ಹಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ತಲೆ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಕೊಡುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ರೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
[illegible] (ಜಿಲ್ಲಾ [illegible])

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ

— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ನೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು, ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್‌ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸ

— ಕೀಲಡ್ಡಿಗೆ ಪದಕ. —

ಈ ಅಡ್ಡಿಗೆಯನ್ನು ರೋಲ್ಡ್ ಗೋಲ್ಡ್ ಎಂಬ ಭಂಗಾರದಲ್ಲಿ ಇಮಿಟೇಶನ್ ವಜ್ರದ ಕಲ್ಲುಗಳನ್ನು ಇಟ್ಟುನೋಡಲು ಮುದ್ದಾಗಿರುವಂತೆ ತಯಾರಿಸಿದೆ. ಮತ್ತು ಇದರ ಹರಡನ್ನು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ತಯಾರಿಸಿದೆ. ಇದನ್ನು ಯಾವಾಗಲು ಕಟ್ಟಿಕೊಳ್ಳಲು ಚೆನ್ನಾಗಿರುವದು, ಎಷ್ಟು ಮುಂತಾದವು ಸೇರಿದರೂ ಕೆಡದು. ಇದರ ಬಣ್ಣವು ಎಂದಿಗೂ ಕೆಡದಂತೆ ಸವರನ್ ಬಂಗಾರದ ಬಣ್ಣಕೊಟ್ಟಿರುವದು. ಶ್ರೀಮಂತರೂ, ಗರೀಬರೂ ಉಪಯೋಗಿಸಲು ಲಾಯಖಾದದ್ದು. ಕ್ರಯ 1ಕ್ಕೆ 4/8.

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ

— ಡಾಬುಗಳು. —

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿ ಹೊಂದಿದ ಕೆಲಸಗಾರರಿಂದ ಬಹುಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು, ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ.

ಗೆಜ್ಜೆಡಾಬು 1ಕ್ಕೆ 3—0—0.

— ಇಮಿಟೇಶನ್ ವಜ್ರದ ಬೆಂಡೋಲೆಗಳು. —

ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವುದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7ಕಲ್ಲಿನ ಬಿಳಿಯ ಓಲೆ ಜೊತೆ 3—0—0.
" " ಕೆಂಪುಕಲ್ಲಿನ ಓಲೆ ಜೊತೆ 3—8—0.



ವಿಳಾಸ:—ವೈ. ಎಮ್. ಸ್ವಾಮಿ ಅಂಡ್ ಕೊ,
ಪಾರ್ಕ್ ಟೌನ್, ಮದ್ರಾಸು.

Y. M. SWAMY & Co.,
No. 12. Nainiappa Naicken St.,
P. Town, MADRAS.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನರಾದವರನ್ನು ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಲಿವರ್ ಮೂವ್‌ಮೆಂಟ್ ವಾಚ್

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇಗೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ್ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. " " " 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ " 2—12—0

ಕಂಬರ್ಲ್ಯಾಂಡ್ ಪೆಪರ್ ಕ್ವಿಸ್ ಟ್ಯಾಮ್‌ಪೀಸ ಹಿತ್ತಾಳೆ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಆಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

Edited, Printed & Published by V. S. Kamath at the M. T. A. Sharada Press, Mangalore.

Registered No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೨೮ನೇ ಶುಕ್ರವಾರ ಮೇ ೧೯೨೬. ಸಂಚಿಕೆ ೨೨.

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branch:—COONDAPOOR.
ಶಾಖೆ:—ಕುಂದಾಪುರ.

ನಿಯಮಿತ ಮೂಲಧನ ರೂ. 3,50,000.

ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

ತಾ. 28—2—'26ಕ್ಕೆ ತೋರುವ ಸದರಿ ಬ್ಯಾಂಕಿನ ವಹಿವಾಟುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.		ಆಸ್ತಿ ವ ಸೊತ್ತುಗಳು.	
ವಾಸ್ತು ತೆತ್ತ ಮೂಲಧನ	1,80,690—9—11	ಹಿತ್ತಲು ಕಟ್ಟೋಣ ಕಛ್ಚೇರಿಯ ಪೀಠೋಪಕರಣಗಳು ವಗ್ಯೆರೆ	3943—8—0,
ಅಪದ್ದನ ವ ಇತರ ನಿಕ್ಷೆಪಗಳು	75,875—0—0,	ಯೋಗ್ಯಜವಾಬ್ದಾರಿ ಮೇಲೆ ಸಾಲಕೊಟ್ಟಿದ್ದು	7,58,851-13-8,
ಠೇವಣಾತಿಗಳು	5,30,003-14-3,	ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	25,800—0—0,
ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ	4,700—0—0,	ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು	4,700—0—0,
ಐವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು	40,274—3—11,	ಇತರ ಬಾಬುಗಳು (ಠೇವಣಾತಿ ಬಡ್ಡಿ ವಗ್ಯೆರೆ ಕೂಡಿ)	22,795—6—6,
		ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಯೆ ಸಿಕ್ಕತಕ್ಕ ಶಿಲ್ಕು ನಗದು	15,452—15—11,
ಜುಮ್ಲಾ ರೂ.	8,31,543-12-1	ಜುಮ್ಲಾ ರೂ.	8,31,543-12-1.

ನಿರಖು ಠೇವಣಾತಿಗಳನ್ನು ಕಾಲಕ್ಲೃಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸುಂ ಠೇವಣಾತಿಗಳನ್ನೂ ಕಂತು ಠೇವಣಾತಿಗಳನ್ನೂ ಚಾಲ್ತಿ ಮತ್ತು ಸೇವಿಂಗ್ಸ್ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನೂ ಸಾವುಕಾರಿ ಹುಂಡಿಗಳನ್ನೂ, ವಜ್ಯಾಮನ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏರ್ಪಾಟುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು,
ಉಡುಪಿ, ತಾ. 28—2—'26.

ನಯಂಪಳ್ಳಿ ಆನಂದರಾವ್, ಸೆಕ್ರೆಟರಿ.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ಣಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು

— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು, ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ ೩—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ಡಾಕ್ಟರ್, ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಹಿಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ತಿವಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಕಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜಾರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ತ್ವರೆಮಾಡಿರಿ! ತಯಾರಾಗಿದೆ

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್ — ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಆಂಡ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ಧೈಲು ಬೆರ್ಕಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೋಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ತಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಚಾಕಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲು 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

11 ಮಣಿಗಳಿದ್ದು ಬ್ರಿಜ್ ಮೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಚೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟೆ ಇದೆ. ಕ್ರಯ ರೂ. 12/8 18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ದಿ" ಟ್ಯಾಮ್‌ಪೀಸ ರೂ. 2-4-0

9 ಲಾಯಿನ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.

ಚಲೋದಾದ ಲವ್ ಪಕ್ಷಿಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAIOKEN ST.
P. T. MADRAS.

Fresh Arrivals

Pear's Solid Brilliantine, Evan's Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಸ್ಚರ್ ಪಿಲ್ಸ್ — ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.
ಬಾಟ್ಲಿವಾಲರ ಕಾರ್ ಅರ್ ಬಾಮ್ — ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಧೈರಿಯಾ ಮಿಕ್ಸ್ಚರ — ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
ಬಾಟ್ಲಿವಾಲರ ಕ್ವಿನೇನ ಚೀಟುಗಳು — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು — ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ಕಾರಿನಪತ್ತೆ:—CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

The Canara Pubic Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರು
- ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
- ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
- ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
- ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು — ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು — ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯು ಮಂಗಳೂರು — ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂ||ರದ ವೈಶಾಖ ಬ|| ೨ ಶನಿವಾರದಿಂದ ಕ್ಷಯ ಸಂ||ರದ ವೈಶಾಖ ಬ|| ೯ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ವೃಷಭ ಬೇಶ.)

ತಾರೀಖು	ವಾರ	ತಿ.	ಘಳಿ.	ನಕ್ಷತ್ರ	ಘಳಿ.	ಸೌರಮಾನ.	ಸೂರ್ಯ ಉ.	ಸೂರ್ಯ ಅಸ್ತ.
29	ಶನಿ	೨	೨೫.೧೬	ಮೂಲಾ	೪೫.೪೬	೧೫	6. 5	6.51
30	ರವಿ	೩	೨೦.೪೬	ಪೂ. ಷಾ.	೪೩. ೧	೧೬	6. 5	6.52
31	ಸೋಮ	೪	೧೫.೩೨	ಉ. ಷಾ.	೩೯.೧೪	೧೭	6, 5	6.52
1	ಕುಜ	೫	೯.೪೬	ಶ್ರವಣಾ	೩೫.೩೨	೧೮	6. 5	6.52
2	ಬುಧ	೬	೪. ೦	ಧನಿಷ್ಠಾ	೩೧.೩೧	೧೯	6. 5	6.52
3	ಗುರು	೮	೫೧.೪೬	ಶತಭಿಷಾ	೨೭.೧೬	೨೦	6 5	6 52
4	ಶುಕ್ರ	೯	೪೬. ೧	ಪೂ. ಭಾ.	೨೩.೩೨	೨೧	6 5	6.53

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
21	93—5	80—8	—	—
22	93—7	75—8	—	0—46
23	92—3	80—0	—	—
24	93—2	82—1	—	—
25	94—2	82—9	—	—
26	93—8	83—4	—	—
27	94—4	83—2	—	—

ಮಂಗಳೂರಿನ ಪೇಟೆ ಧಾರಣಿ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ.
ಮಸ್ಕತಿ	8— 4	9— 4
ಹೊಸ ಗುಡ್ಡು ...	7— 12	8— 6
ಸುಗ್ಗಿ ...	7— 8	8— 0
ಅನ್ವಲ್ ಬೆಳ್ತಿಗೆ ...	8— 0	9— 0
ರಂಗೂನು ಬೆಳ್ತಿಗೆ ಗೋಣಿ ೧ ...	14— 8	15— 0
ಗೋದಿ ಗೋಣಿ ೧ಕ್ಕೆ ...	18— 0	20— 0
ಹುರುಳಿಗೋಣಿ ೧ಕ್ಕೆ ...	8— 0	9— 0
ಕಡಲೆಗೋಣಿ ೧ಕ್ಕೆ ...	12— 8	13— 8
ತೊಗರಿಗೋಣಿ ೧ಕ್ಕೆ ...	16— 0	16— 8
ತೊಗರಿಬೇಳೆ ಗೋಣಿ ೧ಕ್ಕೆ ...	19— 0	23— 0
ಉದ್ದುಗೋಣಿ ೧ಕ್ಕೆ ...	15— 8	—
ಹೆಸರುಗೋಣಿ ೧ಕ್ಕೆ ...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ ...	60— 0	65— 0
ಉಪ್ಪು ಗೋಣಿ ೧ಕ್ಕೆ ...	5— 0	5— 8
ಕೊಬ್ರಿ ಖಂಡಿ ೧ಕ್ಕೆ ...	96— 0	100— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	33— 8	34— 0
ಎಳ್ಳಿಂಡಿ ಖಂಡಿ ೧ಕ್ಕೆ ...	50— 0	57— 8
ಕೊಬ್ರಿ ಎಣ್ಣೆ ಮಣ ೧ಕ್ಕೆ ...	7— 8	8— 8
ಎಳ್ಳೆಣ್ಣೆ ಮಣ ೧ಕ್ಕೆ ...	7— 8	9— 0
ಹಿಪ್ಪೆ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-12-0	—
ಮೋರಿಸ ಸಕ್ಕರೆ ಮಣ ೧ಕ್ಕೆ ...	4—14	—
ಊರ ಮೆಣಸಿನಕಾಯಿ ಮಣ ೧ಕ್ಕೆ ...	5—12	6— 0
ಜಾಪಿವ ಮುಡಿ ೧ಕ್ಕೆ ...	9— 4	9— 8
ಕೊತ್ತುಂಬರಿ ಮುಡಿ ೧ಕ್ಕೆ ...	3—14	4—12
ಕಾಫಿ ಖಂಡಿ ೧ಕ್ಕೆ ...	385— 0	400— 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	300— 0	310— 0
ಹೊಸ ಅಡಿಕೆ ಖಂಡಿ ೧ಕ್ಕೆ ...	195— 0	220— 0
ಕಾಳುಮೆಣಸು ಖಂಡಿ ೧ಕ್ಕೆ ...	360— 0	—
ಯಾಲಕ್ಕಿ ಮಣ ೧ಕ್ಕೆ ...	50— 0	64— 0
ಗೇರುಬೀಜ ಮುಡಿ ೧ಕ್ಕೆ ...	3— 9	3—10
ಕಬ್ಬಿಣ ಖಂಡಿ ೧ಕ್ಕೆ ...	45— 0	65— 0
ಕಂಚಿನ ತಗಡು ಮಣ ೧ಕ್ಕೆ ...	16— 4	16—12
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	21— 0	—
ಹಾಲು ಬೆಣ್ಣೆ ಸೇರು ೧ಕ್ಕೆ ...	18—10	
ಹಿತ್ತಾಳೆ ತಗಡು ಮಣ ೧ಕ್ಕೆ ...	16— 8	
ತವರ	13— 9	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

PROPRIETOR RAJVAIDYA NARAYANJI ...
NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಎಷ್ಟೋ ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ, ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್, ಮುಂಬಯಿ.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,
ಮಂಗಳೂರು.

ಇನಾಂ! ಜರ್ಮನ್ ಟ್ಯಾಂಪೀಸ್ ಇನಾಂ!

— ಫ್ಯಾನ್ಸಿ ಪಾಕೆಟ್ ವಾಚ್ —

ಈ ಗಡಿಯಾರಗಳು ಸೀಮೆಯಲ್ಲಿ ತಯಾರಾದವುಗಳು. ಬಹು ದೃಢವಾದ ಸಾಮಾನುಗಳಿಂದಲೂ ಲೀವರ್ ಮೂವ್ಮೆಂಟ್ಸ್‌ಗಳಿಂದಲೂ ತಯಾರಿಸಿದೆ. ಬೆಳ್ಳಿಯ ಮುಚ್ಚಳವಿರುವದು ಮತ್ತು ಈ ಗಡಿಯಾರವು ನೋಡಲಿಕ್ಕೂ ಜೇಬಿನಲ್ಲಿಡಲಿಕ್ಕೂ ಲಾಯಖಾದದ್ದು. ಬೇಗನೆ ಕೆಡದು. ಇವಕ್ಕೆ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಕೊಡುವೆವು. ಈ ತಿಂಗಳೊಳಗಾಗಿ ಈ ಪಾಕೆಟ್ ವಾಚನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಅಲಾರಂ ಟ್ಯಾಂಪೀಸು ಇನಾಂ ಕೊಡುವೆವು. ಕ್ರಯ ಇನಾಂ ಟ್ಯಾಂಪೀಸು ಸಹಿತ ರೂ. 5—8—0,

— ಸೇಫ್ಟಿರೇಜರ್ —

ಈ ರೇಜರನ್ನು ಸ್ವಂತ ಉಪಯೋಗಕ್ಕೋಸ್ಕರವಾಗಿ ತಯಾರಿಸಿದೆ. ಇದರಲ್ಲಿ ಒಬ್ಬರ ಸಹಾಯವಿಲ್ಲದೆ ತಾವಾಗಿಯೇ ಮುಖಕ್ಷೌರವಮಾಡಿಕೊಳ್ಳಬಹುದು. ಈ ರೇಜರುಗಳಲ್ಲಿ ಮುಖ ಕ್ಷೌರವನ್ನು ಮಾಡಿಕೊಳ್ಳುವವಕ್ಕೆ ಯಾವ ಕಷ್ಟವೂ ಇರದು. ಕ್ರಯ 1ಕ್ಕೆ ರೂ. 1—4—0.

ವಿಳಾಸ— ಎಲ್ಗಿನ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 1251,
ಮದರಾಸು.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು—

ಸರ್ವಿಸಿನ ಹೆಸರು.	ತಲಪುವ ಸ್ಥಳ.	ಹೊರಡುವ ಘಂಟೆ.
ಜನರಲ್	ಕಾರ್ಕಳ — ಆಗುಂಬೆ — ತೀರ್ಥಹಳ್ಳಿ	ಪೂ. $6\frac{1}{4}$
ಸಿ. ಪಿ. ಸಿ.	ಉಡುಪಿ — ಕುಂದಾಪುರ — ಬೈಂದೂರು	,, $6\frac{3}{4}$, $9\frac{3}{4}$
	ಉಡುಪಿ	ಮ. $12\frac{3}{4}$
	ಮುಲ್ಕಿ ವರೆಗೆ ಮಾತ್ರ	ಅ. $3\frac{3}{4}$
	ಬಂಟ್ವಾಳ — ಬೆಳ್ತಂಗಡಿ — ಚಾರ್ಮಾಡಿ.	ಪೂ. 7, ಮ. 1
	ಕಾರ್ಕಳ — ಬೇಣೂರಿನಿಂದ	
	ಬಂಟ್ವಾಳಕ್ಕೆ ಮಾತ್ರ	,, $10\frac{3}{4}$, ಅ. $4\frac{1}{4}$
	ಪುತ್ತೂರು — ಸಂಪಾಜೆ — ಮಡಿಕೇರಿ	,, $7\frac{1}{2}$
	ಪುತ್ತೂರು	ಪೂ. $10\frac{1}{2}$ ಅ. 2
ಕಾರ್ಕಳ	ಕಾರ್ಕಳ — ಉಡುಪಿ — ಕುಂದಾಪುರ	ಪೂ. 6
	ಕಾರ್ಕಳಕ್ಕೆ ಮಾತ್ರ.	ಅ. 1
ಹನುಮಾನ್	ಕಾರ್ಕಳ — ಉಡುಪಿ — ಕುಂದಾಪುರ	ಪೂ. 7
	ಕಾರ್ಕಳಕ್ಕೆ ಮಾತ್ರ.	ಮ. 12
ಕೇಶರ್ ಎಕ್ಸ್ಪ್ರೆಸ್	ಪುತ್ತೂರು — ಮಡಿಕೇರಿಗೆ	ಪೂ. 7
	ಪುತ್ತೂರು — ಉಪ್ಪಿನಂಗಡಿ	ಅ. $1\frac{1}{2}$
	ವಿಟ್ಲಕ್ಕೆ	ಪೂ. 8, ಅ. $2\frac{1}{2}$
	ಉಡುಪಿ	ಪೂ. $7\frac{1}{2}$ ಅ. $1\frac{1}{2}$
ಸ್ವಾಂ	ಮುಲ್ಕಿ — ಉಡುಪಿ.	,, 7, ಮ. 1
	ಬಂಟ್ವಾಳ	,, $10\frac{1}{2}$, ಅ. $4\frac{1}{2}$
ಇಂಡಿಯನ್	ಮುಲ್ಕಿ — ಉಡುಪಿ,	,, $6\frac{1}{2}$, ಮ. $12\frac{1}{2}$
ಪೊಪ್ಯುಲರ್	ಬಂಟ್ವಾಳ — ಬೆಳ್ತಂಗಡಿ — ಚಾರ್ಮಾಡಿ	ಪೂ. $7\frac{1}{2}$ ಮ. $12\frac{1}{2}$

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ—

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲ್	ಬೆಳಗ್ಗೆ 8	ಸಂಜೆ 5-30
ಲೋಕಲ್	,, 10	,, 4-30
ಶಟಲ್	ಸಂಜೆ 5-40	ಬೆಳಗ್ಗೆ 9-55

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾ ರ ಪ ತ್ರಿ ಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3-0-0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	,, 2-8-0.
,, ಸ್ಥಳೀಕರಿಗೆ ...	,, 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,

ಬಿ. ಹನುಮಂತಯ್ಯಗೌಡ,

ಅರ್ಥಸಾಧಕ ಪತ್ರಿಕೆ,

ಅರಳೇಪೇಟೆ, ಬೆಂಗಳೂರು, ಸಿಟಿ

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 4 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 5 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಜರ್ ರೇಶ್ಮೆ ಮಡಿಗಳು, ಜರ್ಮಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಸೊಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ

ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವದಕ್ಕೂ ಒಂದು ದೇಹದ ಮರ್ಮಶಾಸ್ತ್ರವು ಇರುವುದು ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,

26 ಬ್ರಾಡ್ವೇ, ಮದ್ರಾಸ್.

ನೋಟೀಸು.

ಕೊಡಿಯಾಲ್‌ಬೈಲಲ್ಲಿರುವ ಕೆ. ಕೃಷ್ಣಶೆಟ್ಟಿಯು ತಿಳಿಯಪಡಿಸುವದೇನೆಂದರೆ—

ನಾನು ಕೊಡಿಯಾಲ್‌ಬೈಲ್ ಈಸ್ಟ್ ವಾರ್ಡಿಗೆ ಮುನ್ಸಿಪಾಲ್ ಕೌನ್ಸಿಲ್ ಸ್ಥಾನಕ್ಕೆ ಬರುವ ಚುನಾವಣೆಗೆ ಉಮೇದ್ವಾರನಾಗಿ ನಿಲ್ಲುವ ಸಂಭವವಿರುವದರಿಂದ ನಾನು ಮ| ರಾ| ರಾ| ವಕೀಲ್ J. H. A. ಮಸ್ಕರೆಂಞಾಸರ ಕ್ಲಾರ್ಕ ಕೆಲಸಕ್ಕೆ ಈ ದಿನ ರಾಜೀಕೊಟ್ಟಿರುತ್ತೇನೆ. ಇನ್ನು ಮುಂದೆ ನಾನು ಯಾವ ವಕೀಲರ ಕ್ಲಾರ್ಕನಾಗಿರುವುದಿಲ್ಲವೆಂಬ ಸಂಗತಿ ಸರ್ವರಿಗೂ ಈ ಮೂಲಕ ಮನವಿಮಾಡಿಕೊಂಡಿದ್ದೇನೆ.

ಮಂಗಳೂರು. ತಾ. 25-5-'26.

K. Krihna Shetty,
Secretary,
East Codiyalbail C. S.,
MANGALORE.

ನೋಟೀಸು.

ಉಪ್ಪಿನಂಗಡಿ ತಾಲೂಕು ಕೊಡಿಂಬಾಡಿ ಗ್ರಾಮದಲ್ಲು ಇರುವ ಕೊಡಿಂಬಾಡಿ ಗುತ್ತಿನ ಮಂಜಪ್ಪ ಶೆಟ್ಟರ ಅಳಿಯ ಶಾಂತಿರಾಜ ಯಾನೆ ಶಾಂತುಶೆಟ್ಟಿಯು ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ—

ನನ್ನ ಮಾವ ಮಂಜಪ್ಪ ಶೆಟ್ರ ವಶ ಕುಟುಂಬದ ಬಾಬ್ತು ಕೊಡಿಂಬಾಡಿ, ನರಿಮೊಗರು, ಕಣಿಯೂರು ಇಷ್ಟು ಗ್ರಾಮಗಳಲ್ಲಿ ಸ್ಥಿರಾಸ್ತಿಗಳು ಇರುವುದಲ್ಲದೇ ಸುಮಾರು ರೂ. 25000 ಹೊರಗಿನಿಂದ ಬರತಕ್ಕ ಮೂಲವೂ ಇರುತ್ತದೆ. ಸದರಿ ಮಂಜಪ್ಪ ಶೆಟ್ರಿಗೆ ಈಗ ಸಾಧಾರಣ 88 ವರ್ಷಗಳಷ್ಟು ಪ್ರಾಯ ಆಗಿ ಬುದ್ಧಿಸಾಮರ್ಥ್ಯ ಕಡಿಮೆ ಆಗಿಯದೆ. ಈಗ ಸುಮಾರು 1½ ವರ್ಷದಿಂದ ಅವರಿಗೆ ಕಾಲಿನಲ್ಲಿ ಒಂದು ಕುಣ್ಣಾಗಿ ನಡಿಯಕೂಡದೆ ಕಾಯಿಲೆಯಲ್ಲಿದ್ದು ಪರತಂತ್ರರಾಗಿದ್ದಾರೆ. ಶರೀರದಲ್ಲಿರುವ ಕಾಯಿಲೆ ದೆಸೆಯಿಂದಲೂ ಪ್ರಾಯ ಹೆಚ್ಚಾದ ಸಂಗತಿಯಿಂದ ಸಹಾ ಸ್ವತಹಾ ಗ್ರಹಿಸುವ ಸಾಮರ್ಥ್ಯಹೀನರಾಗಿರುತ್ತಾರೆ. ಹೀಗಿದ್ದದ್ದರಿಂದ ಅವರ ಸೇವೆಗಾಗಿ ನಿಲ್ಲಿಸಿದ ಶೇಶಪ್ಪ ಶೇಮಿತನಿಗೆ ಒಳಸಂಚಿಗೆ ಪಡೆದು ಅವರಿಗೆ ಪುಸಲಾಯಿಸಿ ಕರಕೊಂಡುಹೋಗಿ ಕಾಸುಕೊಡದೆ ಇತ್ಲಾಗೆ ಕೆಲವರು ತಮಗೆ ಬೇಕಾದಂತೆ ರಿಕಾರ್ಡುಗಳನ್ನು ಮಾಡಿಸಿಕೊಂಡಿದ್ದಾರೆಂತಲೂ ಇನ್ನು ಕೆಲವರು ಮಾಡಿಸುವುದರಲ್ಲಿ ಸಹಾ ಇದ್ದಾರೆಂತಲೂ ಕೇಳುತ್ತೇನೆ. ಆ ಮಂಜಪ್ಪ ಶೆಟ್ರಿಗೆ ಅಂಥಾ ರಿಕಾರ್ಡುಗಳು ಮಾಡಿಕೊಡುವಷ್ಟರ ಅಗತ್ಯ ಏನೂ ಇರಲಿಲ್ಲ. ಹಕ್ಕು ಇರುವುದೂ ಇಲ್ಲಾ. ನಾನು ಅವರ ಖಾಸಾ ಅಳಿಯನಾಗಿ ಆ ಆಸ್ತಿಗಳಿಗೆ ಹಕ್ಕುದಾರನಾಗಿರುತ್ತೇನೆ. ಸ್ವಸಾಮರ್ಥ್ಯಹೀನರಾದಂಥವರಿಂದ ಆಸ್ತಿ ವ ಹಣಗಳ ಬಾಬಿನಲ್ಲಿ ಹಿಂದೆ ಮಾಡಿಸಿಕೊಂಡ ರಿಕಾರ್ಡುಗಳು ವ ಇನ್ನು ಮಾಡಿಸಬಹುದಾದ ರಿಕಾರ್ಡುಗಳು ಸಹಾ ನನ್ನ ನ್ಯಾಯವಾದ ಹಕ್ಕಿಗೆ ಬಾಧಿಸುವಂಥವುಗಳಲ್ಲಾ ಎಂಬುದು ಸರ್ವರೂ ತಿಳಿದಿರಬೇಕು.

ತಾ. 15-5-26. ಶಾಂತಿರಾಜ ಯಾನೆ ಶಾಂತುಶೆಟ್ರ ರುಜು.

ಉಡುಪಿ ತಾಲೂಕಿನ ಉಪಾಧ್ಯಾಯರ ಸಂಘ.

ಈ ಸಂಘದ ಮಾಸಿಕ ಮಿಟಿಂಗ್, ಬರುವ ಜೂನ್ ತಿಂಗಳ ತಾರೀಕು ೫ರಲ್ಲು ಮ| ರಾ| ರಾ| ಉಡುಪಿ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ ಜರಗುವುದು. ಸದರಿ ದಿವಸ ಸಂಘದ ಜನರಲ್ ಮಿಟಿಂಗೂ, ನೋನ್‌ಮಿಷನ್ ಯೈಡೆಡ್ ಶಾಲೆಗಳ ಮಿಟಿಂಗೂ, ಬೋರ್ಡು ಶಾಲೆಗಳ ಮಿಟಿಂಗೂ, ಕೂಡಾ ಜರಗಿಸಬೇಕಾಗಿ ನಿಶ್ಚಯಿಸಿಯದೆ. ಆದುದರಿಂದ ಅಂದಿನ ಸಭೆಗೆ ತಾಲೂಕಿನ ಎಲ್ಲಾ ಉಪಾಧ್ಯಾಯರೂ, ಟೀಚರ್ ಮ್ಯಾನೇಜರರೂ, ತಪ್ಪದೆ ಬರಬೇಕಾಗಿ, ಮ| ರಾ| ಡಿಪ್ಯುಟಿ ಇನ್ಸ್‌ಪೆಕ್ಟರರಿಂದ ದೊರಕಿದ ಅಪ್ಪಣೆಯನ್ನು ಎಲ್ಲರ ಅವಗಾಹನೆ ಬಗ್ಗೆ ತಿಳಿಸೋಣಾಗಿಯದೆ

ಕುರುಕಾಲು, ತಾ. 25-5-'26.

ಕೆ. ಗಣಪಯ್ಯ ಶೆಟ್ಟಿ,
ಸೆಕ್ರೆಟರಿ,
ನೋನ್‌ಮಿಷನ್ ಯೈಡೆಡ್ ಶಾಲೆಗಳ ಸಂಘ.

ದಕ್ಷಿಣ ಕನ್ನಡ ಜಿಲ್ಲಾ ಮುಸ್ಲಿಮ್ ಎಜ್ಯುಕೇಶನಲ್ ಕೊನ್ಫರೆನ್ಸ್.

ಇದೇ ತಿಂಗಳ ತಾ. ೧೯ನೇ ದಿನ ಪೂರ್ವಾಹ್ನ ೧೦ ಘಂಟೆಯ ಸಮಯಕ್ಕೆ ಸರಿಯಾಗಿ ದಕ್ಷಿಣ ಕನ್ನಡ ಜಿಲ್ಲಾ ಮುಸ್ಲೀಮ್ ಎಜ್ಯುಕೇಶನಲ್ ಕಾನ್‌ಫರೆನ್ಸು ಮೊಗ್ರಾಲಿನಲ್ಲಿ ತಳಿರುದೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ಶೃಂಗರಿಸಲ್ಪಟ್ಟ ಭವ್ಯವಾದ ನವಪೆಂಡೇಲಿನಲ್ಲಿ 'ಕೇರಳಾ ಲೀಡ'ರೆಂಬ ಹೆಸರು ಪಡೆದ ಜನಾಬ್ ಸೀದಿ ಮಹಮ್ಮದ್ ಸಾಹೇಬ್ ಬಹದ್ದೂರ್ ಬಿ. ಎ. ಬಿ. ಎಲ್.ರವರ ಅಧ್ಯಕ್ಷತೆಯಲ್ಲಿ ನೆರೆಯಿತು. ಮಹಾ ಸಭೆಗೆ ದಕ್ಷಿಣ ಕನ್ನಡ, ಮಲಬಾರು, ಕೊಚ್ಚಿ, ಕೊಯಮುತ್ತೂರು ಮೊದಲಾದ ಬೇರೆ ಬೇರೆ ಜಿಲ್ಲೆಗಳಿಂದ ಸುಮಾರು ೨೦೦೦ ಮುಸ್ಲಿಮ್ ಮಹಾಜನಗಳೂ ಹಲವು ಇತರ ಸದ್‌ಗೃಹಸ್ಥರೂ ದಯಮಾಡಿಸಿದ್ದರು. ಸಭಾರಂಭದಲ್ಲಿ ಕುರಾನ್ ಓದಿ ಭಗವತ್ಪ್ರಾರ್ಥನೆಯೊಡನೆ ಪರಿಷತ್ತಿನ ಕಾರ್ಯಕ್ರಮಕ್ಕಾರಂಭವಾಗಿ ಸ್ವಾಗತ ಮಂಡಳಿಯ ಅಧ್ಯಕ್ಷರಾದ ಜನಾಬ್ ಖಾನ್ ಬಹದೂರ್ ಹಾಜಿ ಅಬ್ದುಲ್ಲ ಸಾಹೇಬ್ ಬಹದೂರ್ ಎಮ್. ಎಲ್. ಸಿ. ಯವರು ಇಂಗ್ಲಿಷಿನಲ್ಲಿ ಓದಿದ ಸ್ವಾಗತಪತ್ರವನ್ನು ಜನಾಬ್ ಕೆ. ಕೆ. ಪೋಕರ ಅವರ್ಗಳ್ ಬಿ. ಎ. ಬಿ. ಎಲ್.ರವರು ಮಲಿಯಾಳ ಭಾಷಾಂತರಿಸಿದೊಡನೆಯೇ, ಸಭಾಧ್ಯಕ್ಷರು ಆಗ್ರಾಸೀನರಾಗಿ ಮಳಿಯಾಳ ಭಾಷೆಯಲ್ಲಿ ಅರ್ಥಗರ್ಭಿತವಾದ ಸುರಸಭಾಷಣವನ್ನಿತ್ತ ತರುವಾಯ ಸಭೆಯೊಳಗಿಂದ ೬೨ ಜನಗಳನ್ನು ಸಬ್ಜೆಕ್ಟ್ ಕಮಿಟಿ ಮೆಂಬರರುಗಳಾಗಿ ಆರಿಸಿ ಮಹಾಸಭೆಯನ್ನು ರಾತ್ರಿ ೮ ಘಂಟೆಗೆ ಮುಂದರಿಸಿಡಲಾಯಿತು.

ಅಪರಾಹ್ನ ೩|| ಘಂಟೆಗೆ ಸರಿಯಾಗಿ ಸಬ್ಜೆಕ್ಟ್ ಕಮಿಟಿಯವರ ಸಭೆ ಜರಗಿ ಹಲವು ತರದ ಚರ್ಚೆಗಳು ನಡೆದು ಮುಸ್ಲೀಮ್ ಜನಾಂಗದ ವಿದ್ಯಾಭಿವೃದ್ಧಿಗಾಗಿ ಅತ್ಯಾವಶ್ಯಕವಾದ ೬ ಠರಾವುಗಳನ್ನು ಮಹಾಸಭೆಯ ಮುಂದಿಡುವಂತೆ ನಿಶ್ಚಯಿಸಿದರು.

ರಾತ್ರಿ ಘಂಟೆ ೮ಕ್ಕೆ ಸರಿಯಾಗಿ ಮಹಾಸಭೆಯ ದ್ವಿತಿಯ ಕೂಟಕೂಡಿ ಕೇರಳದೇಶದ ಬಹುಮಾನಪಟ್ಟ ಅರಬಿ ಮಲೆಯಾಳಂ ಪತ್ರಿಕೆಯ ಸಂಪಾದಕರಾದ ಜನಾಬ್ ಇ. ಮೊಯಿದುನವರು ಮುಸ್ಲೀಮ್ ವಿದ್ಯಾಭಿವೃದ್ಧಿ ಎಂಬ ವಿಷಯವಾಗಿಯೂ, ಮಲಿಯಾಳ ಜಿಲ್ಲೆಯೊಳಗಿನ ಮಹಿಳ ಮಾಸ ಪತ್ರಿಕೆಯ ಎಡಿಟರರಾದ ಬಹುಮಾನಪಟ್ಟ ಜನಾಬ್ ಮೂಸಾಕುಟ್ಟಿಯವರು ಮುಸ್ಲಿಮ್ ಸ್ತ್ರೀ ವಿದ್ಯಾಭ್ಯಾಸ ವಿಷಯವಾಗಿ ಸುರಸ ಭಾಷಣವಿತ್ತ ತರುವಾಯ ಅಂದಿನ ಸಭೆಯು ಕೊನೆಗೊಂಡು ತಾ. ೨೦-೫-'೨೬ನೇ ದಿನ ಬೆಳಗಾತ ಘಂಟೆ ೮ಕ್ಕೆ ಮುಂದರಿಸಿಡಲಾಯಿತು.

ತಾ. ೨೦-೫-'೨೬ನೇ ಬೆಳಗಾತ ೮ ಘಂಟೆಗೆ ಸರಿಯಾಗಿ ಪರಿಷತ್ತಿನ ತೃತೀಯ ಕೂಟವು ಕೂಡಿ ಸಬ್ಜೆಕ್ಟ್ ಕಮಿಟಿಯವರು ನಿಶ್ಚಯಿಸಿದಂತೆ ದಕ್ಷಿಣ ಕನ್ನಡ ಜಿಲ್ಲಾ ಮುಸ್ಲಿಮ್ ಎಜ್ಯುಕೇಶನಲ್ ಸಂಘ ಎಂಬ ಒಂದು ಸಂಘವನ್ನು ಏರ್ಪಡಿಸಬೇಕೆಂತಲೂ ಅದಕ್ಕೆ ಉಡ್ಪಿಯ ಖಾನ್‌ಬಹದ್ದೂರ್ ಹಾಜಿ ಅಬ್ದುಲ್ಲ ಸಾಹೇಬ್ ಬಹದ್ದೂರ್ ಎಮ್. ಎಲ್. ಸಿ.ಯವರನ್ನು ಅಧ್ಯಕ್ಷರನ್ನಾಗಿಯೂ, ಜನಾಬ್ ಮಹಮ್ಮದ್ ಚೆಮನಾಡ ಎಮ್. ಎಲ್. ಎ.ಯವರು ಉಪಾಧ್ಯಕ್ಷರನ್ನಾಗಿಯೂ, ಜನಾಬ್ ಎಚ್. ಎಮ್. ಪುತ್ತೂರು ಸಾಹೇಬ್ ಬಹದೂರರವರನ್ನು ಜನರಲ್ ಸಕ್ರೆಟರಿ, ಮಹಮ್ಮದ್ ಶೆರೂಲ ರವರು ಖಜಾನ್ಚಿ, ಕಾಸರಗೋಡು ತಾಲೂಕಿಗೆ ಎಮ್. ಸಿ. ಮಮ್ಮಿಯವರು, ಮಂಗಳೂರು ತಾಲೂಕಿಗೆ ಎಮ್. ಕುಂಞಾಮು, ಉಡ್ಪಿ ತಾಲೂಕಿಗೆ ಉಸ್ಮಾನ್ ಸಾಹೇಬ್ ಬಿ. ಎ. ಎಲ್. ಎಲ್. ಬಿ.ಯವರು ಕುಂದಾಪುರ ತಾಲೂಕಿಗೆ ಯೂಸೂಫ್ ಜಿ. ಮೊಯಿದಿನ್‌ಸಾಹೇಬ್, ಕಾರ್ಕಳ ತಾಲೂಕಿಗೆ ಎ. ಎಸ್. ಮಿರ್ ಹೈದರ್ ಸಾಹೇಬ್, ಪುತ್ತೂರು ತಾಲೂಕಿಗೆ ಎಲಿಮಲೆ ಮಮ್ಮಿಕುಂಞ'ಯವರು ಈ ರೀತಿಯಾಗಿ ೬ ತಾಲೂಕುಗಳಿಗೆ ೬ ಜನರು ಸೆಕ್ರೆಟರಿಗಳಾಗಿಯೂ, ಪ್ರತೀ ಸೆಕ್ರೆಟರಿಗಳಿಗೆ ೪ ಜನ ಮೆಂಬರರಿಂದ ಕೂಡಿ ಒಂದೊಂದು ಸಭೆ ಇರಬೇಕೆಂದೂ ಕೂಡ ಸಭೆಯ ಮುಂದಿಟ್ಟ ಠರಾವು ಸರ್ವಸಮ್ಮತದಿಂದ ಮಂಜೂರುಮಾಡಲಾಯಿತು.

ಮೇಲ್ತೋರುವ ಸಂಘದ ರೂಲ್ಸು ಬೈಲಾಸ್ ಡ್ರಾಫ್ಟನ್ನು ಮಂಜೂರು ಮಾಡಬೇಕೆಂದು ಮಹಮ್ಮದ್ ಚೆಮನಾಡ್ ಎಮ್. ಎಲ್. ಎ. ಯವರು ಸೂಚಿಸಿದ ಠರಾವನ್ನು ಹಗಲ್‌ವಾಡಿ ಜನಾಬ್ ಹುಸೇನ್ ಸಾಹೇಬರವರು ಅನುಮೋದಿಸಿದಂತೆಯೂ, ಕಾರ್ಕಳ ಬೋರ್ಡು ಹ್ಯಾಸ್ಕೂಲಿನಲ್ಲಿ ಒಬ್ಬ ಉರ್ದು ಮುನ್ಷಿಯನ್ನಿಡುವಂತೆ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರನ್ನು ಕೇಳಿಕೊಳ್ಳಬೇಕೆಂದು ಜನಾಬ್ ಹಾಜಿ ಹುಸೇನ್ ಸಾಹೇಬ್ ಬಹದೂರ್ ಬಿ. ಎ. ಬಿ. ಎಲ್‌ರವರು ಸಭೆಯ ಮುಂದಿಟ್ಟ ಠರಾವನ್ನು ಜನಾಬ್ ಎಚ್. ಎಮ್. ಪುತ್ತೂರು ಸಾಹೇಬರವರು ಅನುಮೋದಿಸಿ, ಜನಾಬ್ ಬಿ. ಎಲ್. ಅಹಮ್ಮದರವರು ಪುಷ್ಟೀಕರಿಸಿದಂತೆಯೂ, ಮಲಬಾರು ಜಿಲ್ಲೆಯ ಮಹಮ್ಮದೀಯ ಶಾಲೆಗಳ ಸ್ಪೆಶಲ್ ಆಫೀಸರರಾದ ಜನಾಬ್ ಕೆ. ಮಹಮ್ಮದ್ ಎಮ್. ಎ. ಯವರೂ, ದಕ್ಷಿಣಕನ್ನಡ ಜಿಲ್ಲೆಯೊಳಗಿನ ಮಹಮ್ಮದೀಯ ಶಾಲೆಗಳ ಮೇಲ್ವಿಚಾರಣೆಯನ್ನು ನೋಡುವ ಏರ್ಪಾಡು ಮಾಡುವಂತೆ ಗವರ್ನಮೆಂಟಿನವರನ್ನು ಕೇಳಿಕೊಳ್ಳಬೇಕೆಂತಲೂ, ಈ ಜಿಲ್ಲೆಯಲ್ಲಿ ಮಹಮ್ಮದೀಯ ಜನರು ಹೆಚ್ಚಾಗಿರುವ ಪ್ರತೀ ಕಡೆಗಳಲ್ಲಿಯೂ ಮುಸ್ಲೀಮ್ ಗರ್ಲ್‌ಸ್ಕೂಲನ್ನು ತೆರೆಯುವಂತೆ ಪ್ರತೀ ಲೋಕಲ್ ಬೋರ್ಡಿನವರನ್ನು ಕೇಳಿಕೊಳ್ಳಬೇಕೆಂತಲೂ ಜನಾಬ್ ಹಮೀದ್ ಹಸನ್ ಚೆಮನಾಡ್‌ರವರು ಸಭೆಯ ಮುಂದಿರಿಸಿದ ಸೂಚನೆಯನ್ನು ಬಿ. ಎಲ್. ಅಹಮ್ಮದರವರು ಪುಷ್ಟೀಕರಿಸಿದಂತೆಯೂ, ನಮ್ಮ ಡಿಸ್ಟ್ರಿಕ್ಟಿನೊಳಗಿರುವ ಪ್ರತೀ ಮಹಮ್ಮದೀಯ ಶಾಲೆಯಲ್ಲಿಯೂ ಉರ್ದು ಭಾಷೆಯನ್ನು ಕಡ್ಡಾಯವಾಗಿ ಕಲಿಸುವ ಏರ್ಪಾಡು ಮಾಡುವಂತೆ ಪ್ರತೀ ಲೋಕಲ್‌ಬೋರ್ಡಿನವರನ್ನೂ ಗವರ್ನಮೆಂಟ್ ಟ್ರೈನಿಂಗ್ ಶಾಲೆಗೆ ತರ್ಬೇತಿಗಾಗಿ ಬರುವ ಪ್ರತಿಯೊಬ್ಬ ಮಹಮ್ಮದೀಯ ಉಪಾಧ್ಯಾಯನಿಗೂ ಕುರಾನ್ ಕಲಿಸುವ ಟ್ರೈನಿಂಗ್ ಕೊಡುವಂತೆ, ಗವರ್ನಮೆಂಟಿನವರನ್ನು ಮಹಮದೀಯ ಜನಸಂಖ್ಯೆಯು ಅಧಿಕವಾಗಿರುವ ಪ್ರತೀ ಕಡೆಗಳಲ್ಲಿಯೂ ಮಹಮ್ಮದೀಯರಿಗೋಸ್ಕರ ಪ್ರತ್ಯೇಕ ಶಾಲೆಯನ್ನು ತೆರೆಯಬೇಕೆಂದು ಲೋಕಲ್ ಬೋರ್ಡಿನವರನ್ನು ಕೇಳಿಕೊಳ್ಳಬೇಕೆಂದು ಜನಾಬ್ ಎಚ್. ಎಮ್. ಪುತ್ತೂರು ಸಾಹೇಬ್ ಬಹದೂರರವರು ಸಭೆಯ ಮುಂದಿಟ್ಟ ಠರಾವನ್ನು ಜನಾಬ್ ಎಮ್. ಕುಂಞಾಮ್ ಜನಾಬ್ ಬಿ. ಎಲ್. ಅಹಮ್ಮದ್ ಜನಾಬ್, ಎ. ಎಚ್. ಎಸ್. ಹುಸೇನ್ ಸಾಹೇಬ್ ಬಿ. ಎ. ಬಿ. ಎಲ್., ಜನಾಬ್, ಕರುವುಡಿ ಮಮ್ಮುಂಞ' ಜನಾಬ್, ಯು. ಎನ್. ಸೀರ್ಸಬ್ಬ, ಯು. ಪಳ್ಳಿಬ್ಯಾರಿ, ಹಾಜಿ ಹಮ್ಮದ್ ಫಕೀರ್, ಮೊದಲಾದವರು ಪುಷ್ಟೀಕರಿಸಿದಂತೆಯೂ ಮೇಲ್ಕಂಡ ಎಲ್ಲಾ ಠರಾವುಗಳು ಸರ್ವಸಮ್ಮತದಿಂದ ಸಭೆಯ ಮುಂದೆ ಮಂಜೂರು ಮಾಡಲಾಯಿತಲ್ಲದೆ ಹನ್ನೊಂದು ಗಂಟೆಗೆ ಸಭೆಯನ್ನು ಮುಗಿಸಿ ಅಪರಾಹ್ನ ಗಂಟೆ ಒಂದಕ್ಕೆ ಮುಂದರಿಸಿಡಲಾಯಿತು.

ಅಪರಾಹ್ನ ಗಂಟೆ ೧ಕ್ಕೆ ಸರಿಯಾಗಿ ಪರಿಷತ್ತಿನ ಕೊನೆಯ ಕೂಟವು ಜರಗಿ ಜನಾಬ್ ವಾಲ್ಸಿ ಅರಬಿ ಚೆಮನಾಡ್, ಜನಾಬ್ ಕುಂಞ' ಅಹಮ್ಮದ್ ಮುಸ್ಲಿಯಾರ್ ಮೊದಲಾದ ಅನೇಕ ಭಾಷಣಗಳಾದ ತರುವಾಯ ಕೊಚ್ಚಿನ್ ದೇಶದ ಕ್ರೈಸ್ತ ಮತದ ಇಗ್ನೇಶಸ್ ಎಂಬ ಎಫ್. ಎ. ಕ್ಲಾಸಿನ ವಿದ್ಯಾರ್ಥಿಯು ಇಸ್ಲಾಮ್ ಧರ್ಮದ ಕುರಿತು ಸರಸ ಭಾಷಣವನ್ನು ಮಾಡಿ ಸಭಿಕರನ್ನು ಚಕಿತಗೊಳಿಸಿದರು. ತರುವಾಯ ಜನಾಬ್ ಮಹಮ್ಮದ್ ಯಾಕೂಬರವರು ಮೊಹರಮ್ ತಿಂಗಳಲ್ಲಿ ಮಹಮ್ಮದೀಯ ಮತಧರ್ಮಕ್ಕೆ ಪೂರ್ಣವಿರೋಧವಾದ ಕೆಲವು ಆಚರಣೆಗಳು ನಡಿಯುವದನ್ನು ನಿಲ್ಲಿಸುವಂತೆ ಸರ್ವೇ ಮುಸ್ಲೀಮರು ಪ್ರಯತ್ನಿಸಬೇಕೆಂದು ತಂದ ಸೂಚನೆಯನ್ನು ಸಭೆಯಲ್ಲಿ ಸರ್ವಸಮ್ಮತದಿಂದ ಪಾಸುಮಾಡಲಾಯಿತು. ಕೂಡಲೇ ಅಧ್ಯಕ್ಷರು ಕಲ್ಲೆದೆಯವನ ಹೃದಯವಾದರೂ ನೀರಾಗುವಂತ ಅರ್ಥಗರ್ಭಿತವಾದ ಸುರಸವಾದ ಭಾಷಣವನ್ನಿತ್ತ ಮೇಲೆ ಕಾನ್ಫರೆನ್ಸಿನ ಜನರಲ್ ಸೆಕ್ರೆಟರಿಯವರಿಂದ ಸಭಾಧ್ಯಕ್ಷರಿಗೂ, ಸಭಿಕರಿಗೂ, ವಲಂಟಿಯರಿಗೂ, ಕಾನ್ಫರೆನ್ಸಿಗೆ ಸಹಾಯ ಮಾಡಿದ ಇತರ ಸಂಭಾವಿತರಿಗೂ ವಂದನೋಕ್ತಿಗಳನ್ನು ಅರ್ಪಿಸಿ, ಸಭೆಯು ಮುಕ್ತಾಯ ಮಾಡಲಾಯಿತು.

ವಿವಿಧ ವಿಷಯಗಳು.

ದಕ್ಷಿಣ ಕನ್ನಡ ಜಿಲ್ಲೆಯ ರೀಸರ್ವೆ.

ಮಿ| ಜೆ. ಎಲ್. ಸಾಲ್ಡಾನರು ಮದರಾಸು ನ್ಯಾಯವಿಧಾಯಕ ಸಭೆಯಲ್ಲಿ ತಂದ ಠರಾವಿನ ಪ್ರಕಾರ ಈ ಜಿಲ್ಲೆಯ ಇತರ ತಾಲೂಕುಗಳ ಸರ್ವೆಯು ಅಗತ್ಯವಿಲ್ಲವೆಂದೂ ಕಾಸರಗೋಡು ತಾಲೂಕಿನ ರೀಸರ್ವೆಯು ಮಾತ್ರವೇ ಸಾಕೆಂದೂ ಬಾಕಿ ಇಟ್ಟಿದ್ದರು. ಆದರೆ ಈ ಸರ್ವೆಯನ್ನು ಮಾಡುವುದು ಅತಿ ಅಗತ್ಯವೆಂದೂ ಆದುದರಿಂದ ಉಳಿದ ಮಂಗಳೂರು, ಉಪ್ಪಿನಂಗಡಿ, ಉಡುಪಿ, ಕಾರ್ಕಳ, ಕುಂದಾಪುರ ತಾಲೂಕುಗಳನ್ನು ಸರ್ವೆ ಮಾಡಬೇಕೆಂದೂ ಸರ್ವೆಯ ಅಸಿಸ್ಟೆಂಟ ಡೈರೆಕ್ಟರವರು ಒಂದು ಭಾಷಣ ಕೊಟ್ಟರು. ಈ ಅಧೀಸರರು ಇದರ ಅಗತ್ಯವನ್ನು ತೋರಿಸುವುದಕ್ಕಾಗಿ ಮಂಗಳೂರು ತಾಲೂಕಿನ ತಿರುವೈಲ ಗ್ರಾಮವನ್ನು ಸರ್ವೆ ಮಾಡಿ ಇದೇ ತಿಂಗಳ ೩೦ನೇ ತಾರೀಕಿನಲ್ಲಿ ತೋರಿಸುವರು.

ಟೀಪುಸುಲ್ತಾನರ ಒಂದು ಸ್ಮಾರಕ ವಸ್ತು ಲಂಡನಿನಲ್ಲಿ ಸಿಕ್ಕಿಯದೆ.

ಟೀಪು ಸುಲ್ತಾನರ ವಶದಲ್ಲಿದ್ದ ಮೈಸೂರು ರಾಜ್ಯವನ್ನು ಡ್ಯೂಕ್ ಒಫ್ ವೆಲ್ಲಿಂಗಟನರು ಹಿಡಿದಾಗ ಮೈಸೂರು ಖಜೇರಿಯಲ್ಲಿದ್ದ ಚೀನಾ ದೇಶದಲ್ಲಿ ಸುಮಾರು ೧೬೬೨-೧೭೨೨ ತಯಾರಿಸಿದ ಒಂದು ವೆಲ್‌ವೆಟ್ ವಸ್ತ್ರವು ಲಂಡನಿನ ಸೆಂಟ್ ಸ್ಟೀಫನ್ ಇಗರ್ಜಿಯಲ್ಲಿ ಇದೆ. ಡ್ಯೂಕರು ಇದನ್ನು ಬೆರೊನೆಟ್ ಬರೆಡೆಟ್ ಎಂಬ ಸ್ತ್ರೀಗೆ ಕೊಟ್ಟಿದ್ದರು. ಅವರು ಅದನ್ನು ಆ ಇಗರ್ಜಿಗೆ ಕೊಟ್ಟರು. ಈಗ ಈ ಇಗರ್ಜಿಯ ಗುರುಗಳು ಇದನ್ನು ಆಲ್ಬರ್ಟ ಮ್ಯೂಸಿಯಮಿಗೆ ಕೊಟ್ಟಿರುತ್ತಾರೆ.

ವಿದೇಶ ವರ್ತಮಾನ.

—ನ್ಯೂಯಾರ್ಕ್ ಪಟ್ಟಣದಲ್ಲಿರುವ ಪೆನ್ಸಿಲ್ವೇನಿಯ ಹೊಟೇಲಿನಲ್ಲಿ ಅಭ್ಯಾಗತರು ಇಳಿದುಕೊಳ್ಳುವ ೨೨೦೦ ಕೊಠಡಿಗಳಿವೆ. ಇವರ ಸಲುವಾಗಿಯೇ ಅದೇ ಹೊಟೇಲಿನಲ್ಲಿ ಗ್ರೇಸ್ ಓಕ್ಸ್ ಎಂಬಾಕೆಯ ಸಂಪಾದಕತ್ವದಲ್ಲಿ ಒಂದು ದೈನಂದಿನ ವರ್ತಮಾನ ಪತ್ರಿಕೆಯು ಅಚ್ಚುಹಾಕಲ್ಪಟ್ಟು ಬೆಳಗಿನ ೫ ಗಂಟೆಯೊಳಗಾಗಿ ಪ್ರತಿಯೊಂದು ಕೊಠಡಿಯ ಬಾಗಿಲಲ್ಲಿಯೂ ಇಡಲ್ಪಡುವುದು. ಅಭ್ಯಾಗತರು ಇನ್ನೂ ಹಾಸಿಗೆಯಲ್ಲಿದ್ದಂತೆಯೇ ಹೊರಗಿನ ಪ್ರಪಂಚದ ವರ್ತಮಾನಗಳನ್ನು ಇದರಿಂದ ತಿಳಿಯಲು ಸಾಧ್ಯವಾಗಿದೆ.

—ಅಮೇರಿಕದವರು ಮೋಟಾರುಗಾಡಿಗಳ ಉಪಯೋಗವನ್ನು ವರ್ಷ ಹೋಗುತ್ತಾ ಹೆಚ್ಚಿಸುತ್ತಿರುವರು. ಕಾರ್ಖಾನೆಗಳವರು ಪ್ರಜೆಗಳ ಅನುಕೂಲಕ್ಕೋಸ್ಕರ ಮೋಟಾರುಗಳನ್ನು ಕಂತುಪ್ರಕಾರ ಮಾರುತ್ತಿರುವರು. ಈ ಪದ್ಧತಿ ಪ್ರಕಾರ ಕಳೆದ ವರ್ಷ ೬೦ ಕೋಟಿ ಸವರಿನ್ ಬೆಲೆಬಾಳುವ ಮೋಟಾರುಗಳು ಮಾರಿರುವರು. ಇದರಿಂದ ಅಲ್ಲಿನ ಜನರು ಕಾಲದ ಮೌಲ್ಯವನ್ನು ಕಂಡವರಾಗಿ ಕಾರ್ಯತತ್ಪರರಾದ್ದರಿಂದ ಮೋಟಾರುಗಳನ್ನು ಎಷ್ಟು ಹೆಚ್ಚಾಗಿ ಉಪಯೋಗಿಸುತ್ತಿರುವರೆಂದೂ, ಅವರಿಗೆ ಕಾರ್ಖಾನೆಗಳು ಎಷ್ಟರಮಟ್ಟಿನ ಸಹಾಯಕೊಡುತ್ತಿರುವವೆಂದೂ ಗೊತ್ತಾಗುವುದು.

—ಮೊರೊಕ್ಕೊದಿನಲ್ಲಿ ಫ್ರೆಂಚರು ಜಯಶೀಲರಾಗಿ ಅಬ್ದುಲ್ ಕರೀಮ್‌ರವರು ತಮ್ಮ ವೀರಶೂರತನ ತೋರಿಸಿದ್ದಕ್ಕೆ ಝ್ಯುರೀಝ್ಯುರ್‌ಝ್ಯುರೀ ಎಂಬಂತೆ ಸದರಿ ಮಹಾವೀರರು ಸಮ್ಮತಿಸಿದ ರಾಜಿ ಒಡಂಬಡಿಕೆ ಶರ್ತಗಳಿಗೆ ಫ್ರೆಂಚದೇಶದ ಕಾರ್ಯಕಾರಿ ಮಂತ್ರಿಮಂಡಳದವರು ಕಬೂಲಿ ಮಾಡಲಿಲ್ಲ.

—ಇಂಗ್ಲಿಷ್ ತುರ್ಕಿಯವರ ಮೋಸಲ್ ಕುರಿತಾದ ರಾಜಕೀಯ ಒಪ್ಪಂದಗಳು ನಡೆಯುತ್ತಿರುವವು. ತುರ್ಕಿಯವರು ಈ ಒಪ್ಪಂದಗಳು ತಡೆಯಲೇಬೇಕೆಂತ ಸರಳರೂಪದಿಂದ ಪ್ರಯತ್ನಿಸುವರು. ಎಲ್ಲಾ ಕೆಲಸಗಳು ಯೋಗ್ಯ ರೀತಿಯಿಂದಲೇ ನಡದವಂತೆ.

—ಐಗುಪ್ತ ದೇಶದ ಪಿತೂರಿ ಮೊಕದ್ದಮೆಯಲ್ಲಿ ಅಪರಾಧಿಗಳೆಲ್ಲರನ್ನು ಖುಲಾಸ್ತಪಡಿಸಿ ಬಿಡುಗಡೆಪಡಿಸಿದರು. ಒಬ್ಬ ಯುರೋಪಿ (ಪ್ಲಾಮಿ) ಯನನ್ನು ಮಾತ್ರ ಬಿಡಲಿಲ್ಲ.

—ಜರ್ಮನಿಯ ಮ್ಯೂನಿಚ್ ಪಟ್ಟಣದಲ್ಲಿ ಎರಡು ಪ್ರಯಾಣಿಕ ರೈಲುಗಳು ಒಂದಕ್ಕೊಂದು ತಗಲಿ ೨೪ ಜನರನ್ನು ಸ್ವರ್ಗಾರೋಹಣ ಮಾಡಿಸಿತು. ಎರಡು ಟ್ರೈನುಗಳಲ್ಲಿ ಲೋಕಭ್ರಮಣಕ್ಕೆ ಹೊರಟವರೇ ಇದ್ದರಂತೆ. ಕಡೇ ೨ ಗಾಡಿಗಳು ಒಂದು ರೈಲಿಗೆ ಸಮಂಧಪಟ್ಟವು ಧೂಳಿಪಟವಾಯಿತಂತೆ ೩೦ ಜನರಿಗೆ ಜಖಮಾಗಿ ಬಾಕಿ ಉಳಿದ ಜನರನ್ನು ಮೇಲಕ್ಕೆ ಹಾಕುವುದರ ಕೆಲಸವು ಬಹಳ ಕಷ್ಟದಿಂದ ನೆರವೇರಿತಂತೆ. ಸತ್ತವರು ಅಸಹ್ಯ ರೀತಿಯಿಂದ ನುಜ್ಜುಗುಜ್ಜಾಗಿರುವರಂತೆ. ಈ ಅವಘಡದಲ್ಲಿ ತಾ. ೨೬ರ ವರೆಗೆ ೩೩ ಜನರು ಸತ್ತು ೧೦೦ ಜನರಿಗೆ ಜಖಮು ಆಗಿಯದಂತೆ.

—ಮುಷ್ಕರ ಸಮಯದಲ್ಲಿ ಕೆಲಸಮಾಡಿದ ಪೋಲಿಸರಿಗೆ ಇತ್ತಂಡದವರು ಧನ್ಯವಾದವನ್ನಿಟ್ಟು ಹಣವನ್ನು ಅವರಿಗೆ ಹಂಚಲಿಕ್ಕೆ ಶೇಖರಿಸುವ ಪ್ರಯತ್ನಗಳು ಎಷ್ಟು ಸ್ತುತ್ಯ ಹೇಗೆ ೧೬೮೦೦೦ ಪವನುಗಳು ಜಮೆಯಾಗಿವೆ. ಒಂದು ಶಿಲಿಂಗಿಗಿಂತ ಕಮ್ಮಿ ಆಗಿದ್ದರೂ ಸಾವಿರಾರು ಪವನುಗಳು ಶೇಖರಿಸಲ್ಪಟ್ಟಿವೆ.

—ಅಂಗ್ಲಾಂಡದಲ್ಲಿ ಮಂತ್ರಿಮುಖಂಡರು ದೇಶದ ಏಳಿಗೆಯನ್ನು ಸಾಧಿಸುತ್ತಿರುವರು. ಕೂಲಿಯವರು ಅವರ ಯಜಮಾನರಿಂದ ಧಂಡವಾಳವಾದರೂ ದೇಶದ ಉದ್ಧರಣೆ ಬಗ್ಗೆ ಸಾಧಿಸಬೇಕೆಂತ ದೀನತೆಯಿಂದ ಬೇಡಿಕೊಳ್ಳಲು ಉಪಕ್ರಮಿದ್ದಾರೆ. ವಾಸ್ತ ಅಂಗ್ಲಾಂಡದವರೇ ನಮ್ಮ ಭರತಮಾತೆಯಲ್ಲಿ ನಿಮ್ಮಂಥಾ ದೇಶವಾತ್ಸಲದವರನು ಎಷ್ಟು ಪ್ರಯತ್ನಿದರೂ ಜನಿಸಲಾಗಲಿಲ್ಲವಲ್ಲವೇ, ಉತ್‌ಕ್ರಾಂತಿಮಂಡಲವನ್ನು ಏಷ್ಟು ಚಕ್ರದಂತೆ ದೇಶಉದ್ಧಾರ ಚಕ್ರದಿಂದ ಖಂಡಿಸಿ ಸೋವಿಯಟರನ್ನು ಅವರ ಪಕ್ಷದವರು ಸೋವಿಯಟಸವಿಯತೀ ಎಂಬ ಆಕಾಶಮಂಡಳಕ್ಕೆ ಕಳುಹಿಸಿದ್ದು ಎಷ್ಟು ಸ್ತುತ್ಯ.

—ಅಬ್ದುಲ್ ಕರೀಮನು ಫ್ರೆಂಚರ ಕಡೆ ಶರಣಾಗತರಾಗಿರುವನು. ಇವನನ್ನು ಟಾಜ್ ಎಂಬಲ್ಲಿ ಫ್ರಾನ್ಸಿನವರ ಬಧ್ರತೆಯಲ್ಲಿರಿಸುವ ಬಗ್ಗೆ ಕೊಂಡುಹೋಗಿರುವರು. ಆದರೆ ಅಬ್ದುಲ್‌ಕರೀಮನು ಫ್ರಾನ್ಸಿಗೆ ಹೋಗುವ ಮುಂಚೆ ತಾನು ಬಂಧಪದಲ್ಲಿಟ್ಟಿದ್ದ ಫ್ರಾನ್ಸ್, ಸ್ಪೆನಿಸ್, ಮತ್ತು ನೇಟಿವ್ ಕೈದಿಗಳನ್ನು ಬಿಟ್ಟಿರುವನು.

—ಪ್ಯಾರಿಸ್‌ನಿಂದ ಬರ್ಲಿನಿಗೆ ಒಂದು ಜರ್ಮನ ಕಂಪೆನಿಯವರು ವಾಯುವಿಮಾನದ ಸರ್ವಿಸನ್ನು ಇಟ್ಟಿರುವರು. ಇದು ಕಳದ ತಾ. ೨೬ ರಿಂದ ಪ್ರಾರಂಭಿಸಿರುವರು.

—ಜಪಾನಿನಲ್ಲಿ ಜ್ವಾಲಾಮುಖಿಯ ಸಂಭಂದ ಅನೇಕ ನದಿಗಳಲ್ಲಿ ನೀರು ಉಕ್ಕಿಬಂದು ಹಳ್ಳಿಗಳಲ್ಲಿ ಅನೇಕ ಮನೆಗಳು ನಾಶವಾಗಿ ಹೋಗಿರುವವು. ಮತ್ತು ಸುಮಾರು ೧೫೦ ಮಂದಿಗಳು ಲಾವಾನೀರಿನಲ್ಲಿ ಬಿದ್ದು ಸತ್ತಿರುವರು. ಅದಲ್ಲದೆ ಇನ್ನೂ ಅನೇಕ ಮಂದಿಗಳಿಗೆ ಜಖಂ ಉಂಟಾಗಿರುವುದು. ಮತ್ತು ಕಿಟ್ಟುಲಾ ಎಂಬಲ್ಲಿ ಬ್ಯಾಂಕಿನ ಕಟ್ಟೋಣಗಳೂ ಪೋಸ್ಟ್ ಆಫೀಸು, ಬ್ಯಾಸ್ಕೋಪು ಥಿಯೇಟರು, ಅದಲ್ಲದೆ ಅನೇಕ ದೊಡ್ಡ ದೊಡ್ಡ ಕಟ್ಟೋಣಗಳೂ ನಾಶವಾಗಿರುವವು. ಜಪಾನಿನ ಉತ್ತರ ದಿಕ್ಕಿಗೆಲ್ಲಾ ಇನ್ನೂ ಹೆಚ್ಚಿನ ನಷ್ಟಉಂಟಾಗಿದೆಂದು ತಿಳಿದುಬರುತ್ತದೆ.

—ಪೋಲೆಂಡದಲ್ಲಿ ಫಿಲುಡಿಸ್ಕಿ ಎಂಬ ಅವತಾರ ಪುರುಷರು ಬಹು ಸಮಾಧಾನದಿಂದ ರಾಜ್ಯಕ್ರಾಂತಿಯನ್ನು ತರಿಸಿ ರಕ್ತಪಾತವನ್ನು ನಿಲ್ಲಿಸಿದ್ದು ತುಂಬಾ ಸಂತೋಷಕರ. ಈ ಭರತಖಂಡದಲ್ಲಿ ಹಿಂದೂಮು-ಸಲ್ಮಾನರಲ್ಲಿ ಇಂಥವರು ಇಲ್ಲವೇ?

ಒಳದೇಶ ವರ್ತಮಾನ.

—ಮದ್ರಾಸಿನಲ್ಲಿ ಭಿಕ್ಷುಕರ ಕ್ಷೇಮಚಿಂತನೆಯಿಂದ ಅವರಿಗಾಗಿ ಸ್ಥಾಪಿಸಬೇಕೆಂದಿರುವ ಆಲಯವನ್ನು ನೋಡಿಕೊಳ್ಳುವುದಕ್ಕೆ ೧೦ ವರ್ಷದ ಸರ್ವಿಸಿಗೂ ಮತ್ತು ಸಬ್ ಅ ಸರ್‌ಜನ್ ಗ್ರೇಡಿಗೂ ಕಡಿಮೆಯಿಲ್ಲದ ಒಬ್ಬ ಸೂಪರಿಂಟೆಂಡೆಂಟರನ್ನೂ, ರೋಗಿಗಳನ್ನು ಉಪಚರಿಸಬಲ್ಲ ಮತ್ತು ಸೂಲಗಿತ್ತಿತನವನ್ನು ತಿಳಿದಿರುವ ಒಬ್ಬ ಮೇಟ್ರನ್‌ನನ್ನೂ ನೇಮಿಸಬೇಕೆಂದು ಅಲ್ಲಿನ ಕಾರ್ಪೋರೇಷನಿನವರು ಠರಾವನ್ನು ಪಾಸ್‌ಮಾಡಿರುವರು.

—ಬಳ್ಳಾರಿಯಲ್ಲಿ ಈ ತಿಂಗಳ ೨೦ನೇ ತಾರೀಖಿನಲ್ಲಿ ನಡೆದ ವಾಲಂಟಿಯರುಗಳ ಕಾನ್‌ಫರೆನ್ಸಿಗೆ ಶ್ರೀಯುತ ಹೊಸಕೊಪ್ಪ ಕೃಷ್ಣರಾಯರೂ, ತಾ. ೨೩ನೆಯ ದಿನ ನಡೆದ ಗೋರಕ್ಷಣ ಮಹಾಸಭೆಗೆ ಶ್ರೀಯುತ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರೂ, ಅದೇ ದಿನ ನಡೆದ ಭಗಿನಿ ಮಂಡಲ ಮಹಾಸಭೆಗೆ ಶ್ರೀಮತಿ ಅನಕಲಕ್ಷ್ಮಮ್ಮಾಳ್ ಎಮ್. ಎ. ಯವರೂ ಈ ದಿನ ನಡೆದ ಕರ್ನಾಟಕ ಕೀರ್ತನಸಮ್ಮೇಳನಕ್ಕೆ ಶ್ರೀಯುತ ರಾಜಸಭಾಭೂಷಣ ಅಣ್ಣಿಗೆರೆ ಅಣಸಪ್ಪರವರೂ ಅಧ್ಯಕ್ಷರಾಗಿದ್ದರು.

—ವ್ಯವಸಾಯಾಭಿವೃದ್ಧಿಗಾಗಿ ಸರ್ಕಾರದಿಂದ ತಕಾವಿ ಸಾಲಗಳನ್ನು ಪಡೆಯುವವರು, ಶಾಖ ಕೊಳ್ಳುವ ಎಂಜಿನ್ ಮುಂತಾದ ಯಂತ್ರಸಾಧನಗಳ ಸಹಾಯದಿಂದ ಅಕ್ಕಿ ಮಾಡುವ, ಬೀಸುವ, ಎಣ್ಣೆ ತೆಗೆಯುವ, ಅಲೆಯಾಡುವ ಉಪಸಾಧನೆಗಳನ್ನು ಇಟ್ಟುಕೊಂಡು ಅವುಗಳಿಂದಲೂ ಹೆಚ್ಚು ಪ್ರತಿಫಲವನ್ನು ಪಡೆಯಲೆಂಬ ಅಭಿಪ್ರಾಯದಿಂದ, ಹೆಚ್ಚಿಗೆ ಹಣವನ್ನು ಸಾಲಕೊಡುವುದಕ್ಕೂ, ಸಾಲಪಡೆಯುವವರು ಅದನ್ನು ಮೇಲ್ಕಂಡ ಕೆಲಸಗಳಿಗೆ ನಿರ್ಬಂಧವಿಲ್ಲದೆ ಉಪಯೋಗಿಸುವುದಕ್ಕೂ ಅನುಕೂಲಿಸುವಂತೆ ಮದ್ರಾಸ್ ಸರ್ಕಾರದವರು ಒಂದು ಶಾಸನವನ್ನು ಮಾಡುವವರಾಗಿದ್ದಾರೆ.

—ಕಲ್ಕತಾದಲ್ಲಿ ಕಳೆದ ತಾ. ೨೪ಕ್ಕೆ ಒಂದು ದೊಡ್ಡ ಬಿರುಗಾಳಿಯ ಸಮ್ಮಂಧ ಜೋರಾದ ಮಳೆಯು ಬಂದು ಅನೇಕ ದೊಡ್ಡ ದೊಡ್ಡದಾದ ಮರಗಳು ರಾಜರಸ್ತೆಯಲ್ಲಿಯೇ ಬಿದ್ದಿರುವವು. ಇಂಥಾ ಹಾನಿಯುಂಟಾದ್ದರಿಂದ ಗಾಡಿ, ಮೋಟರು, ಟ್ರೇಮುಗಳ ಚಲಾವಣೆಯು ನಿಂತುಹೋಗಿತ್ತು. ಕಿಂಗ್ ಜೋರ್ಜ ಡೊಕ್ಸನಲ್ಲಿ ಅನೇಕ ಕೂಲಿಗಳಿಗೆ ಬಲವಾದ ಪೆಟ್ಟುಗಳಾಗಿವೆ. ಆದರೆ ಇಷ್ಟರ ತನಕ ಪ್ರಾಣಹಾನಿಯಾಗಿಲ್ಲ.

—ಭೂಪಾಲಿನ ನವಾಬರು ಮಳ್ವಾ ದೇಶವನ್ನು ಅಲ್ಲಿಯ ಗವರ್ನರೊಂದಿಗೆ ಸಂದರ್ಶಿಸುತ್ತಿರುವರು.

—ಬಿಹಾರಿನ ಖಿಲಾಫತ್ ಕಮಿಟಿಯವರು ಕೌನ್ಸಿಲುಗಳ ಬರುವ ಚುನಾವಣೆಗೆ ಸ್ವರಾಜಿಸ್ಟರನ್ನು ಸ್ವರಾಜ್ಯ ಕಮಿಟಿಯವರು ಆರಿಸುವುದರ ವಿಷಯ ತಮ್ಮ ವಿರೋಧಮತವನ್ನು ಸೂಚಿಸಿರುವರು.

ಕಲ್ಕತ್ತೆಯಲ್ಲಿ ನಡೆದ ದಂಗೆಯ ವಿಷಯದಲ್ಲಿ ಅಲ್ಲಿಯ ಮಾತೃಭಾಷೆಯ "ಹೆನ್ಸಾಫಿಜಯತ್" ಎಂಬ ದಿನಪತ್ರಿಕೆಯಲ್ಲಿ ನಡೆದ ದಂಗೆಯ ಮತ್ತು ದಂಗೆಯಾಗಲು ಕಾರಣ ಯಾರು? ಎಂದು ಸಂಕ್ಷೇಪವಾಗಿ ಬರೆದುದಕ್ಕಾಗಿ ಆ ಪತ್ರಿಕೆಯ ಸಂಪಾದಕರ ಮೇಲೆಯೂ, ಮತ್ತು ಛಾಪೆಕಾರರ ಮೇಲೆಯೂ ತಂದ ದಾವೆಯ ವಿಚಾರಣೆಯು ಅಲ್ಲಿಯ ಚೀಫ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡಿಯುತ್ತಿರುವುದು.

—ಕಳೆದ ಕಲ್ಕತ್ತಾ ದಂಗೆಯಲ್ಲಿ ಹೆಚ್ಚು ಪರಿಶ್ರಮ ಪಟ್ಟು ಮತ್ತು ದಂಗೆಯನ್ನು ತಕ್ಕ ಶಾಂತತೆಗೆ ತರಲಿಕ್ಕೆ ಪ್ರಯತ್ನಪಟ್ಟ ಎಂಟು ಜನ ಸಾರ್‌ಜಂಟರುಗಳಿಗೆ ಅಲ್ಲಿಯ ಪೋಲಿಸ್ ಕಮಿಶನರು ಅವರು ಮಾಡಿದ ಒಳ್ಳೇ ಕೆಲಸದ ವಿಷಯ ಅವರಿಗೆ ತಕ್ಕ ಸನ್ಮಾನವನ್ನು ಕೊಟ್ಟಿರುವರು.

—ಕಲ್ಕತ್ತೆಯಲ್ಲಿ ಕಂಕಿನಾರ ಎಂಬ ನಾರು ತಯಾರಾಗುವ ಒಂದು ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ ಹೆಂಗಸರು ಕಳೆದ ತಾ. ೧೭ಕ್ಕೆ ತಮ್ಮ ಕೆಲಸಕ್ಕೆ ಮುಷ್ಕರವನ್ನು ಹಾಕಿದ್ದರು ಯಾಕೆಂದರೆ ಇತರ ಗಿರಣಿಗಳಲ್ಲಿ ಕೂಲಿಯಾಳುಗಳಿಗೆ ಯಾವ ರೀತಿಯಲ್ಲಿ ಕೂಲಿಯಿರುವುದೊ ಅದರಂತೆಯೆ ಕೂಲಿಯನ್ನು ಏರಿಸಬೇಕೆಂದು ಇದಕ್ಕೆ ಅಲ್ಲಿಯ ಲೇಬರ್ ಯೂನಿಯನವರು ಹೆಚ್ಚು ಕೂಲಿಕೊಡಬಹುದೆಂದು ನಿಶ್ಚಯಿಸಿರುವುದರಿಂದ ಕೂಲಿಯಾಳುಗಳೆಲ್ಲಾ ತಮ್ಮ ತಮ್ಮ ಕೆಲಸಕ್ಕೆ ಪುನಃ ಸೇರಿರುವರು.

—ಪಂಜಾಬ ಯೂನಿವರ್ಸಿಟಿಯ ಮುಂಚಿನ ವೈಸ್ ಚಾನ್ಸಲರಾಗಿದ್ದ ಸದರ್ಲೆಂಡ್ ರೋಬರ್ಟ ಎಂಬವರು ಕಳೆದ ತಾ. ೨೪ಕ್ಕೆ ಇಂಗ್ಲೆಂಡಿನಲ್ಲಿ ಮರಣ ಹೊಂದಿರುವರು.

—ಪಾಟ್ನಾದಲ್ಲಿ ಪಂಡಿತ ಮಾಲವಿಯರು ಅಲ್ಲಿ ನಡೆದ ಒಂದು ಮುಸ್ಲಿಮ್ ಸಭೆಯಲ್ಲಿ ನಡೆದ ಸಂಘಟನ್ ಚಳವಳದ ವಿಷಯ ತಮ್ಮ ಭಾಷಣ ಕೊಟ್ಟಿರುವರು.

—ಕಲ್ಕತ್ತೆಯಲ್ಲಿ ಕಳೆದ ತಾ. ೨೫ಕ್ಕೆ ಬಂದ ಬಿರುಗಾಳಿಗೆ ಅಲ್ಲಿಯ ಬಂದರದಲ್ಲಿ ನಿಂತಿರುವ ಅನೇಕ ಸ್ಟೀಮರುಗಳ ಪೈಕಿ ಕೆಲವು ಒಡೆದು ಹೋಗಿಯವೆ. ನಂತರ ಇನ್ನೂ ಕೆಲವು ಸಂಪೂರ್ಣವಾಗಿ ಮುಳುಗಿಯುವೆ. ಹಾಗ್ಲಿ ಅತ್ತಕಡೆ ಇತರ ಸಣ್ಣ ಸಣ್ಣ ದೋಣಿಗಳೂ ಕೂಡ ಮುಳುಗಿಹೋಗಿರುವವು. ಬರೀ ನಾಲ್ಕು ಜನರು ಮಾತ್ರ ನೀರುಪಾಲಾಗಿರುವರು. ಈ ತರದ ಬಿರುಗಾಳಿಯು ಇಷ್ಟರ ತನಕ ಕಲ್ಕತ್ತಾ ಅತ್ತಕಡೆ ಬಂದಿಲ್ಲವಾಗಿ ತಿಳಿದುಬರುತ್ತದೆ.

—ರಿಸ್ಪೋನ್ಸಿವ್ ಕೊ-ಓಪರೇಶನಿನಲ್ಲಿ ಮುಖ್ಯ ಪಾರ್ಟಿನ್ನು ವಹಿಸಿದ್ದ ಜಯಕರರೂ, ಕೇಳಕರರೂ, ಮತ್ತು ಮರಾಠಾ ಪತ್ರಿಕೆಯ ಸಂಪಾದಕರಾದ ಡಿ. ವಿ. ಗೋಕುಲೆಯವರು ಇಂಡಿಯನ್ ನೇಶನಲ್ ಪಾರ್ಟಿಯನ್ನು ಸೇರಿರುವರು.

—ಕಲ್ಕತ್ತೆಯ ರಾಜಹರಿ ಎಂಬ ಒಂದು ಹಳ್ಳಿಯಲ್ಲಿ ಕೆಲವು ದರೋಡೆಯಾಯಿತು ಕಳೆದ ತಾ. ೨೨ಕ್ಕೆ ರಮಾನಾಥ್ ಎಂಬವನ ಮನೆಗೆ ಸುಮಾರು ೧೨ ಗಂಟೆ ರಾತ್ರಿಗೆ ಒಳನುಗ್ಗಿ ಮನೆಯೊಳಗೆ ಊಟಮಾಡುತ್ತಿರುವಾಗ್ಗೆ ರಮಾನಾಥ್‌ನ ಮನೆಯಲ್ಲಿರುವ ಆತನ ವಿಧವೆಯಾದ ತಂಗಿಯು ಒಂದು ಹರಿತವಾದ ದೊಡ್ಡ ಚೂರಿಯನ್ನು ಹಿಡಿದುಕೊಂಡು ದರೋಡೆಯವರ ಎದುರಿಗೆ ಹೋಗಿ ಚೂರಿಯಿಂದ ಅವರನ್ನು ಹೊಡೆಯಲು ಪ್ರಯತ್ನಿಸಿರುವಾಗ್ಗೆ ಅಲ್ಲಿರುವ ದರೋಡೆಯವರು ಎಲ್ಲರೂ ಗುಂಪಾಗಿ ಸೇರಿ ಅವಳನ್ನು ಚೆನ್ನಾಗಿ ಗಾಯಪಡಿಸಿದರು. ಅಲ್ಲದೆ ಮನೆಯಲ್ಲಿದ್ದ ಇತರರು ಕೂಡ ಈಕೆಯ ಸಹಾಯಕ್ಕಾಗಿ ಹೋದರೆ ತಮಗೆ ಅಪಾಯಉಂಟಾದೀತೆಂಬ ಭಾವನೆಯಿಂದ ಇವಳ ಗೊಡವೆಗೆ ಹೋಗಲಿಲ್ಲ.

—ಜೋಧಪುರ ಮಹಾರಾಜರು ನೀಲಗಿರಿಗೆ ಬೇಟೆಯಾಡಲಿಕ್ಕೋದಾಗ ಅಲ್ಲಿ ಒಂದು ಕಾಡಾನೆಯನ್ನು ಬೇಟೆಯಾಡಿದರು. ಅವರಿಗೆ ಸ್ವಲ್ಪ ಗಾಯಗಳು ಉಂಟಾಗಿವೆಯಾದರೂ ಆನೆಯನ್ನು ಕೊಂದಿರುವರು.

—ಕಳದ ತಾ. ೨೬ಕ್ಕೆ ಕಲ್ಕತ್ತಾ ಕೊರ್ಪೊರೇಶನಿನ ಸಭೆಯಲ್ಲಿ ದಿವಂಗತ ದಾಸರ ನೆನಪಿಗಾಗಿ ಕೊರ್ಪೊರೇಶನಿನ ಚೆಂಬರ್ ಹೋಲಿನಲ್ಲಿ ಅವರ ಒಂದು ಛಾಯಚಿತ್ರವನ್ನು ಇಡಿಸಬೇಕಾಗಿಯೂ, ಮತ್ತು ಮುನ್ಸಿಫಲ್ ಸೆಂಟ್ರಲ್ ಕಟ್ಟೋಣದಲ್ಲಿ ಒಂದು ಶಿಲಾಪ್ರತಿಮೆಯನ್ನು ಇಡಿಸಬೇಕೆಂದೂ ನಿಶ್ಚಯಿಸಿರುವರು.

—ಕಲ್ಕತ್ತೆಯಲ್ಲಿ ಹೊಗ್ಲಿ ನದಿಗೆ ಈಗ ಇರುವ ಸೇತುವೆಯು ಬಹಳ ಅನಾನುಕೂಲವಾದುದರಿಂದ ಇನ್ನೊಂದು ಒಳ್ಳೇತರದ ಸೇತುವೆಯನ್ನು ಕಟ್ಟಿಸಬೇಕೆಂದು ೧೨ ಜನ ಮಾನ್ಯ ಗೃಹಸ್ಥರು ಕೂಡಿ ಒಂದು ಸಭೆಯನ್ನು ಸೇರಿಸಿ ಅದರಲ್ಲಿ ಠರಾವನ್ನು ಪಾಸು ಮಾಡಿ ಸರಕಾರದವರಿಗೆ ಬರೆದುಕೊಂಡಿರುವರು.

—ಮುಂಬಾಯಿಯಲ್ಲಿ ಮಡಿಕಲ್ ರೀಸರ್ಚ ಕೋಲೇಜಿನ ಬಗ್ಗೆ ಕಟ್ಟಿಸುವ ಹೊಸ ಕಟ್ಟೋಣದ ಬುನಾದಿ ಕಲ್ಲನ್ನು ಸಿ. ಎಫ್. ಎಂಡ್ರೂಜರ್‌ರವರು ಬಹು ಸಂಭ್ರಮದಿಂದ ಹಾಕಿರುವರು.

—ಕಲ್ಕತ್ತೆಯಿಂದ ಸುಮಾರು ಏಳು ಮೈಲು ದೂರವಿರುವ ಮಡರ್‌ಹಾ ಎಂಬ ಹಳ್ಳಿಯಲ್ಲಿರುವ ಒಂದು ಕಾಳಿದೇವಸ್ಥಾನಕ್ಕೆ ಕೆಲವು ಮಹಮ್ಮದೀಯರು ಬಲತ್ಕಾರದಿಂದ ಒಳನುಗ್ಗಿ ಕಾಳಿಯ ಪ್ರತಿಮೆಯನ್ನು ಸಂಪೂರ್ಣವಾಗಿ ನಾಶಪಡಿಸಿರುವರು. ಇತ್ತೀಚೆಗೆ ಮನುಷ್ಯರನ್ನು ಹಿಡಿದು ಲುಟಾಯಿಸುವ ಬದಲಾಗಿ ದೇವಸ್ಥಾನಗಳ ಒಳನುಗ್ಗಿ ವಿಗ್ರಹಗಳನ್ನು ಧ್ವಂಸಮಾಡಿ ಅವರ ಮೇಲಿರುವ ಚಿನ್ನಾಭರಣಗಳನ್ನು ದೋಚಿಕೊಂಡು ಹೋಗುವ ರೂಢಿಯು ಪದ್ಧತಿಗೆ ಬರುತ್ತಿದೆ.

—ಬರ್ಮಾದೇಶದ ಆರಕಾನಿನಲ್ಲಿ ಕಳದ ತಾ. ೨೨ರಲ್ಲು ಬಿರುಗಾಳಿಯ ಸಮ್ಮಂಧ ಅನೇಕ ದೊಡ್ಡ ಸರಕಾರ ಕಟ್ಟೋಣಗಳೂ, ದವಸಧಾನ್ಯಗಳನ್ನು ಇಟ್ಟಿದ್ದ ಅನೇಕ ಕಟ್ಟಡಗಳೂ ನಾಶವಾಗಿರುವವು.

—ಕಲ್ಕತ್ತೆಯಲ್ಲಿ ಮೊನ್ನೆ ತಾನೆ ನಡೆದ ದೊಂಭಿಯ ಸಮ್ಮಂಧ ಇನ್ನು ೨೫ ಮಂದಿ ಜನರನ್ನು ಕೈದು ಮಾಡಿರುವರು. ಇವರ ನಂಬ್ರದ ತನ್ಖಿಯು ಈಗಲೂ ನಡಿಯುತ್ತಿದೆ.

—ಚಿಟ್‌ಗೊಂಗ್‌ನಿಂದ ಸುಮಾರು ೬ ಮೈಲು ದೂರವಿರುವ ಕೊಯಸ್ ಎಂಬ ಹಳ್ಳಿಯಲ್ಲಿ ೨೫ ಮಂದಿ ದರೋಡೆಯವರು ಕೂಡಿ ಒಬ್ಬ ಐಶ್ವರ್ಯವಂತನ ಮನೆಯೊಳನುಗ್ಗಿ ಸುಮಾರು ೩೫೦೦೦ ರೂಪಾಯಿ ಕ್ರಿಯ ಬಾಳುವ ವಸ್ತುಗಳನ್ನು ಲುಟಾಯಿಸಿಕೊಂಡು ಹೋಗಿರುವರು.

—ಹಾಲಿನಲ್ಲಿ ನೀರು ಬೆರಸುವವರಿಗೆ ೧೦೦ ರೂಪ್ಯಾಗಳಿಂದ ೫೦೦ ರೂಪಾಯಿಗಳ ತನಕ ದಂಡ ವಿಧಿಸಲಾಗುವುದೆಂದು ಮದ್ರಾಸು ಸರಕಾರದ ತೀರ್ಮಾನವಾಗಿರುವದು.

—ಪೂನೆಯಿಂದ ಬೆಂಗಳೂರಿಗೆ ಹೋಗುತ್ತಿದ್ದ ಪ್ರಯಾಣಿಕರ ಗಾಡಿಗೂ, ಕೂಲಿಯವರನ್ನು ಕರಕೊಂಡು ಹೋಗುತ್ತಿದ್ದ ಉಗಿಬಂಡಿಗೂ ಒಂದಕ್ಕೊಂದು ತಗಲಿ ಮಧ್ಯಕ್ಕೆ ಇಟ್ಟರು ಸಿಕ್ಕಿ ಸತ್ತಿರುವರು. ಕೆಲವರಿಗೆ ಗಾಯಗಳಾಗಿವೆ.

—ಅಫ್ರಿಕದ ಎಸೆಂಬ್ಲಿಯಲ್ಲಿ "ಕಲರ್ ಬಾರ್ ಬಿಲ್ಲು" ಬಹುಮತದ ಬೆಂಬಲದಿಂದ ಮಂಜೂರಾಯಿತು.

—ಕಲ್ಕತ್ತದಲ್ಲಿ ಜೆ. ಆರ್. ಗುಂತರ್ ಎಂಬವನು ವಿಷಮಿಶ್ರವಾದ ಚೊಕಲೆಟನ್ನು ಮಾರಾಟ ಮಾಡಿದನೆಂಬ ತಪ್ಪಿಗಾಗಿ ಸೆಶ್ಯನ್ ಜಡ್ಜರು ಅವನಿಗೆ ೧೦ ವರ್ಷದ ಕಠಿಣ ಸಜೆಯನ್ನು ವಿಧಿಸಿರುವರು.

—ಸರಕಾರಿ ಆಫೀಸುಗಳಿಗೆ ಬೇಕಾಗುವ ಸ್ಟೇಶನರಿ ಮತ್ತು ಛಾಪಖಾನೆಯ ಸಾಮಾನುಗಳನ್ನು ಹಿಂದೂಸ್ಥಾನದ ಕೈಗಾರಿಕೆಗಳಿಂದ ಉತ್ಪತ್ತಿಯಾದವುಗಳನ್ನೇ ಕೊಂಡುಕೊಳ್ಳುವುದಾಗಿ ಇಂಡಿಯಾ ಸರಕಾರದವರು ಪ್ರಕಟಿಸಿರುವರು.

—ಪಂಜಾಬ್ ಇಲಾಖೆಯಲ್ಲಿ ರಾಜಕೀಯ ಕೈದಿಗಳಾಗಿ ಜೀವನಕ್ಕೆ ಕಷ್ಟಪಡತಕ್ಕಂಥವರ ವ್ಯವಸ್ಥೆ ಮಾಡುವಂತೆ ಅಲ್ಲಿಯ ಕಾಂಗ್ರೆಸ್ ಕಮಿಟಿಯವರು ಏರ್ಪಾಡುಮಾಡುತ್ತಿದ್ದಾರೆ.

—ಸ್ವರ್ಗವಾಸಿ ಕಾಗಲದ ಸಂಸ್ಥಾನಿಕರು ಅನೇಕ ಪಂದ್ಯದ ಕುದುರೆಗಳನ್ನು ಇಟ್ಟಿದ್ದಾರೆ. ಕೊಲ್ಲಾಪುರದ ಮಹಾರಾಜರು ಈ ಕುದುರೆಗಳನ್ನೆಲ್ಲಾ ತಕ್ಕೊಳ್ಳುವರಾಗಿರುವರು.

—ಮದ್ರಾಸ್ ಮುನಿಸಿಪಾಲಿಟಿಯವರು ಸಾರ್ವಜನಿಕ ಹಬ್ಬಗಳ ಮತ್ತು ಆನಂದೋತ್ಸವಗಳ ದಿವಸ ತಮ್ಮ ರಿಪನ್ ಕಟ್ಟಡಗಳ ಮೇಲೆ ಯೂನಿಯನ್ ಜಾಕ್ ಜೊತೆ ಹಿಂದೀ ರಾಷ್ಟ್ರದ ನಿಶಾನೆಯನ್ನು ಹಾಕಬೇಕೆಂದು ಠರಾವು ಮಾಡಿರುತ್ತಾರೆ.

—ಡೋಕ್ಟರ್ ರವೀಂದ್ರನಾಥ ಟಾಗೋರರಿಗೆ ಇಟಲಿ ಸರಕಾರದಿಂದ ಆಮಂತ್ರಣವು ಬಂದದ್ದರಿಂದ ಅವರು ಇಟಲಿಗೆ ಹೋಗುವುದಕ್ಕಾಗಿ ಕಳೆದ ಶುಕ್ರವಾರ ಮುಂಬಯಿ ಬಂದರವನ್ನು ಬಿಟ್ಟರು.

—ಪೂನಾದಲ್ಲಿ ಕಳೆದ ತಾ. ೨೬ಕ್ಕೆ ಸರ್‌ವೆಂಟ್ ಒಫ್ ಇಂಡಿಯಾ ಸೊಸ್ಯಾಟಿಯವರ ಆಡಳಿತೆಯಲ್ಲಿದ್ದ ಆರ್ಯಭೂಷಣ್ ಮತ್ತು ದಯಾಪ್ರಕಾಶ ಪ್ರೆಸ್ ಎಂಬ ಒಂದು ದೊಡ್ಡ ಛಾಪಖಾನೆಯು ಅಕಸ್ಮಾತ್ ಬೆಂಕಿಹಿಡಿದು ಸಂಪೂರ್ಣವಾಗಿ ಸುಟ್ಟುಹೋಗಿಯದೆ. ಈ ಛಾಪಖಾನೆಯು ಪ್ರಾರಂಭವಾಗಿ ಇವತ್ತಿಗೆ ನೂರಐವತ್ತು ವರುಷಗಳಾದವು. ಇದರಲ್ಲಿ ಸರ್ವೆಂಟ್ ಒಫ್ ಇಂಡಿಯಾ ಸೊಸ್ಯಾಟಿಯ ಮೂಲಕ ೩೦ ವರ್ಷಗಳಿಂದ ಹೊರಡುತ್ತಿದ್ದ ದಯಾನ್' ಪ್ರಕಾಶಕ ಎಂಬ ಮರಾಠಿ ವಾರಪತ್ರಿಕೆಯು ಅಚ್ಚಾಗುತ್ತಿತ್ತು. ಬೆಂಕಿಯನ್ನು ನೊಂದಿಸುವುದಕ್ಕಾಗಿ ಅನೇಕ ಪ್ರಯತ್ನಗಳನ್ನು ನಡಿಸಿದ್ದಾಗ್ಯೂ, ಯಾವುದೂ ಫಲಿತವಾಗಲಿಲ್ಲ. ಅನೇಕ ಲಕ್ಷ ರೂಪಾಯಿ ಕ್ರಯಬಾಳುವ ಯಂತ್ರಸಾಮಗ್ರಿಗಳು ಸಂಪೂರ್ಣವಾಗಿ ಹಾಳಾಗಿಹೋಗಿಯವೆ. ನಷ್ಟ ಎಷ್ಟು ಲಕ್ಷರೂಪಾಯಿ ಎಂದು ಲೆಕ್ಕಹಿಡಿಯಲು ಸಾಧ್ಯವಾಗಲಿಲ್ಲ.

—ಬಂಗಾಳ ನ್ಯಾಯವಿಧಾಯಕ ಸಭೆಯಲ್ಲಿ ಕಲ್ಕತ್ತೆ ಗಲಭೆಗಳ ಸಮ್ಮಂದ ಉಂಟಾದ ಅವಸರ ಸಂದರ್ಭದ ಕಾನೂನನ್ನು ಮಸೂದೆಮಾಡಿದ್ದು ಎಮರು ಪ್ರಜಾಪಕ್ಷದವರಿಂದಲೂ ಬಹುಮತದಿಂದ ಮಂಜೂರಿಯು ಆಯಿತು.

—ಬಂಗಾಳ ಪ್ರಾಂತಿಕ ಸಭೆಯು ಹಿಂದೂ ದೇಶದ ದುರಾದೃಷ್ಟದಿಂದ ಅಯೋಗ್ಯಕಾಲದಲ್ಲಿ ನೆರೆದಿದ್ದರಿಂದ ದೈವವು ವಿಮುಖವಾಗಿ ಕಂಡುಬಂತು ಎಂತ ಮಿ| ಸರೋಜಿನಿ ದೇವಿಯವರ ಅಭಿಪ್ರಾಯ.

—ಬಿಹಾರ ಸರಕಾರವು ದೇಶೀಯ ವೈದ್ಯಕಕ್ಕೆ ಉತ್ತೇಜನ ಕೊಡಬೇಕೆಂದು ನಿಶ್ಚಯಿಸಿದುದು ಒಂದು ಸಂತೋಷ. ಅದಕ್ಕಾಗಿ ಎರಡು ಕಾಲೇಜುಗಳನ್ನು ಸ್ಥಾಪಿಸಿ, ಒಂದರಲ್ಲಿ ಆಯುರ್ವೇದ ವೈದ್ಯಕವನ್ನೂ ಇನ್ನೊಂದರಲ್ಲಿ ಯುನಾನೀ ವೈದ್ಯಕವನ್ನೂ ಕಲಿಸತಕ್ಕವರಿದ್ದಾರೆ. ಈ ವೈದ್ಯಕಗಳೊಡನೆ ಅವಶ್ಯವಾದ ಶಸ್ತ್ರಕ್ರಿಯಾದಿ ಶಿಕ್ಷಣವನ್ನೂ ಕೊಡುವರು. ಮದ್ರಾಸು ಮತ್ತು ಬಿಹಾರ ಸರಕಾರಗಳ ಈ ಕೃತ್ಯವು ಸ್ತುತ್ಯವಾಗಿದೆ. ಇದನ್ನು ಮುಂಬಾಯಿ ಇಲಾಖೆಯವರು ಅನುಸರಿಸಿದರೆ ಬಹಳ ಒಳ್ಳೆದಿತ್ತು.

—ಮೌ| ಮಹಮ್ಮದ ಅಲ್ಲಿಯವರು ಒಂದು ಸಂಭಾಷಣೆಯಲ್ಲಿ "ಆರ್ಯಸಮಾಜಿಷ್ಟರೂ, ಹಿಂದೂಮಹಾಸಭೆಯವರೂ ಹಿಂದೂಮುಸಲ್ಮಾನರಲ್ಲಿ ತಂಟೆಯನ್ನೆಬ್ಬಿಸಲು ಪ್ರಯತ್ನಿಸುತ್ತಿರುವರು. ಹಿಂದೂಮಹಾಸಭೆಯು ಹೀಗೇ ಕೆಲಸ ನಡಿಸಿದರೆ ನಾವು ಸಮ್ಮನೆ ಕೂಡ್ರದೆ, ಖಿಲಾಫತ್ ಕಮಿಟಿಯ ಮುಖಾಂತರ ೧೩೦೦ ವರ್ಷದ ಹಿಂದೆ ಪ್ರಾರ್ಥನೆ ಮಾಡಿದಂತೆ ಈಗ ಮಾಡಬೇಕಾಗುವುದು" ಎಂದು ಅಂದಿರುತ್ತಾರೆ. ಹಿಂದೂಗಳು ದಿಕ್ಕಾಪಾಲಾಗಿ ಹರಡಿ ಸಂಘಟನೆಯಿಲ್ಲದೆ ಇರುವಾಗ ಮುಸಲ್ಮಾನರು ಮಾಡಿದ್ದೇ ಕಾರಭಾರವಾಗಿತ್ತು. ಈಗ ಹಿಂದುಗಳು ತೀರಿಗೆ ಸವಾಲ್‌ಜೀರು ಕೊಡಹತ್ತಿದ್ದಾರೆ.

—ಕೊಂಕಣಪಟ್ಟಿಯಲ್ಲಿ ನಾಗೋಠಣೆ ಎಂಬ ಊರಲ್ಲಿ ಅಸ್ಪೃಶ್ಯರು ಸರಾಯಿಯ ಅಂಗಡಿಯಲ್ಲಿ ಸರಾಯಿ ಕುಡಿದರೆಂದು ಸ್ಪೃಶ್ಯ ವರ್ಗದ ಕಾರು ಕರು ಆ ಅಂಗಡಿಯ ಮೇಲೆ ಬಹಿಷ್ಕಾರ ಹಾಕಿದರಂತೆ. ಆಗಿಂತಲೆ ಒಬ್ಬ ಬ್ರಾಹ್ಮಣನು ಭೂರಿ ದಕ್ಷಿಣೆ ತಕ್ಕೊಂಡು ಅಂಗಡಿಯನ್ನೂ ಸರಾಯಿಯನ್ನೂ

(ಇನ್ನೂ ಬೇರೆ ಮುಂದುವರಿಯುವುದು).

ವಿ ಶೇ ಷ ಸೂ ಚ ನೆ.

ಈ ಸಂಚಿಕೆಯು ಅಚ್ಚಾಗುತ್ತಿರುವಾಗ ಮುದ್ರಣಯಂತ್ರದಲ್ಲಿ ಕೆಲವು ದೋಷಗಳು ಬಂದದ್ದರಿಂದ ಸಕಾಲದಲ್ಲಿ ಈ ಸಂಚಿಕೆಯನ್ನು ಪ್ರಕಟಿಸಗೊಳಿಸಲಿಕ್ಕೆ ಅಗಡೆ ಇದ್ದದಕ್ಕೆ ವಿಷಾದಪಡುತ್ತೇವೆ.

ಅ ನು ಕ್ರ ಮ ಣಿ ಕೆ.

ಅಗ್ರಲೇಖ — ಪುಟ.
ನಮ್ಮ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮಾರ್ಗ ದುರುಸ್ತಿ ೬
ಸ್ಫುಟವಿಚಾರಗಳು . . . . ೬—೭
ವರ್ತಮಾನಸಂಗ್ರಹಗಳು—
ವಿದೇಶ, ಒಳದೇಶ. ೫-೮
ದಕ್ಷಿಣ ಕನ್ನಡ— ಬಂಟ್ವಾಳ, ಕುರುಕಾಲು, ಪೆರುವಾಯ್, ಮಂಜೇಶ್ವರ, ಕುರ್ಚಿಪಳ್ಳ, ಕಾಸರಗೋಡು, ಫರಂಗಿಪೇಟೆ „
ಮಂಗಳೂರು . . . . . . „
ಉಡುಪಿ ತಾಲೂಕಿನ ಉಪಾಧ್ಯಾಯರ ಸಂಘ . ೪
ದಕ್ಷಿಣ ಕನ್ನಡ ಜಿಲ್ಲಾ ಮುಸ್ಲಿಮ್ ಎಜ್ಯುಕೇಶನಲ್ ಕೊನ್ಫರೆನ್ಸ್ „
ವಿವಿಧ ವಿಷಯ . . . . . . „

ಸ್ವದೇಶಾಭಿಮಾನಿ.

ಶಕ ೧೮೪೮ ವೈಶಾಖ ಶು|| ೯ಯು ಶುಕ್ರವಾರ.

ನಮ್ಮ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮಾರ್ಗದುರುಸ್ತಿ.

ಎರಡುಮೂರು ವರುಷಗಳಿಂದ ನಮ್ಮ ಜಿಲ್ಲೆಯಲ್ಲಿ ಬರುವ ನೆರೆಗಳಿಂದ ಸಂಕಗಳು ಅಲ್ಲಲ್ಲಿ ಕುಸಿದುಬಿದ್ದು ಜಿಲ್ಲೆಯ ಹಲವು ಕಡೆಗಳಲ್ಲಿ ಮಾರ್ಗಗಳು ಯಾವ ರೀತಿ ಹಾಳಾಗಿ ಹೋಗಿವೆಯೆಂಬುದನ್ನು ವಿವರಿಸುವದು ಅಗತ್ಯವಿಲ್ಲ. ಇವೆಲ್ಲವುಗಳ ದುರುಸ್ತಿಯ ಬಗ್ಗೆ ಸರಕಾರದಿಂದ ಪ್ರೊವಿನ್ಸಿಯಲ್ ಗ್ರಾಂಟು ಸಹ ದೊರಕಿರುವದು. ನೆರೆಗಳು ಬಂದು ಹೋದಂದಿನಿಂದ ಇಂದಿನ ವರೆಗೆ ಹೀಗೆ ಹಾಳಾಗಿ ಹೋದ ಮಾರ್ಗಗಳ ಮತ್ತು ಸಂಕಗಳ ದುರುಸ್ತಿಯು ಮುಖ್ಯವಾದ ಮಾರ್ಗಗಳಲ್ಲಿ ಬಾಕಿಯಲ್ಲಿದ್ದು ಅತ್ತಿತ್ತ ಹೋಗುತ್ತಿರುವ ಗಾಡಿ ಹೊಡಿಯುವವರ ಮತ್ತು ಹೋರಿಗಳ ಇನ್ನು ಬಸ್ಸು ಮಾಲಿಕರ ಗೋಳಾಟದ ಕಣ್ಣೀರನ್ನು ಒಟ್ಟುಕೂಡಿಸಿಡಲು ಸಾಧ್ಯವಿದ್ದರೆ ಅದು ಚಿಕ್ಕದೊಂದು ಸಮುದ್ರರಾಶಿಯಾಗಿ ಹೋಗುತ್ತಿತ್ತು. ಒಂದೆರಡು ಅಥವಾ ಮೂರು ವರುಷಗಳಿಂದ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಿಗೂ, ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರಿಗೂ ಸರಿ ಹೋಗದೆ ಇದ್ದದರಿಂದ ಡಿಸ್ಟ್ರಿಕ್ಟ್ ಬೋರ್ಡಿನ ಮಾರ್ಗದುರುಸ್ತಿಯ ಚಟುವಟಿಕೆಯು ಉಭಯತರ ಪತ್ರವ್ಯವಹಾರದ ರಾಶಿಯಿಂದ ಮುಂದುವರಿಯಲು ಸಾಮರ್ಥ್ಯವಿಲ್ಲದೆ ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿಯೂ ಇಂಜಿನಿಯರ್ ಆಫೀಸಿನಲ್ಲಿಯೂ ಅಡಗಿಹೋಯಿತು. ಈ ರೀತಿಯ ಅವಸ್ಥೆಯು ಪ್ರಾಪ್ತವಾಗಿ ಗವರ್ನಮೆಂಟು ಗ್ರಾಂಟುಗಳನ್ನು ಸಹ ಆಯಾ ವರುಷಗಳ ಅಂತ್ಯದೊಳಗೆ ವಿನಿಯೋಗಿಸಲು ಅವಕಾಶವಿಲ್ಲದೆ ಹಲಕೆಲವು ಗ್ರೇಂಟುಗಳೂ ಸಹ ಸರಕಾರದ ಬೊಕ್ಕಸವನ್ನು ಸೇರಿವವು. ಈಗಲೂ ಕೆಲವು ಸಂಕಗಳ ಪ್ರಸ್ತಾಪಗಳು ಅಲ್ಲಲ್ಲಿ ಅರೆವಾಸಿಯಲ್ಲಿ ಬಿದ್ದುಕೊಂಡು 'ಗೋಕರ್ಣಾ'ವಸ್ಥೆಯಲ್ಲಿವೆ. ಕಾರ್ಕಳ ಪಡುಬಿದ್ರೆ ಮಾರ್ಗದಲ್ಲಿರುವ ಅಡ್ಯಾ ಸಂಕ, ವೇಣೂರ ಸಂಕ ಇವುಗಳ ಕೆಲಸವು ಸಂಪೂರ್ಣವಾಗದೆ ಪ್ರಯಾಣಿಕರ ಅಡಚಣಿಗಳು, ರೈತರ ಕಷ್ಟಗಳು, ವ್ಯಾಪಾರಸ್ಥರ ನಷ್ಟಗಳನ್ನು ಹೇಳಿ ತೀರದು. ಜನರಿಗೆ ಈ ಕಷ್ಟಗಳಿಂದ ನಿವಾರಣೆಯನ್ನು ಕಲ್ಪಿಸಿಕೊಡುವ ಹಾದಿಯನ್ನು ಅಲ್ಲಿಯೇ ಕಣ್ಣುಮುಚ್ಚಿ ಬಿಟ್ಟುಕೊಂಡು ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರೊಂದಿಗೆ ನಡಿಸಿದ ಪತ್ರವ್ಯವಹಾರ ರಾಶಿಯು ಸಮುದ್ರಮಥನವನ್ನು ಮಾಡಿ ಆ ಆಫೀಸರರನ್ನು ಇಲ್ಲಿಂದ ವರ್ಗಾಯಿಸಬೇಕೆಂಬ ಮಹತ್ವದ ಠರಾವನ್ನು ನಿಶ್ಚಯಿಸಿ ಇಲ್ಲಿಗೆ ತಮ್ಮ ಕರ್ತವ್ಯವು ಮುಗಿಯಿತೆಂದು ಡಿಸ್ಟ್ರಿಕ್ಟ್ ಬೋರ್ಡಿನವರು ಕೈಕಟ್ಟಿ ಸುಮ್ಮನಿರುವರು. ಇಂಥಾ ತಟಸ್ಥಾವಸ್ಥೆಯಲ್ಲಿ ಬೋರ್ಡಿಗೆ ಹೊಸ ಪ್ರೆಸಿಡೆಂಟರ ಚುನಾವಣೆಯಾಯಿತು. ಹೊಸ ಪ್ರೆಸಿಡೆಂಟರು ಸಂಕಗಳ ಮತ್ತು ಮಾರ್ಗಗಳ ಈ 'ಗೋಕರ್ಣಾವಸ್ಥೆ'ಯನ್ನು ನೋಡಿಕೊಂಡು ಸಾಧ್ಯವಾದಷ್ಟು ಬೇಗ ಈ ಅವಸ್ಥೆಯನ್ನು ಮುಗಿಸಬೇಕೆಂದು ಅಡ್ಯಾಸಂಕದ ಮೊದಲಿನ ಮತ್ತು ಈಗಿನ ಇಂಜಿನಿಯರರ ಎಸ್ಟಿಮೇಟುಗಳನ್ನು ಪುನರಾಲೋಚನೆ ಬಗ್ಗೆ ಡಿಸ್ಟ್ರಿಕ್ಟ್ ಬೋರ್ಡು ಸಭೆಯ ಮುಂದೆ ಇತ್ತಲಾಗೆ ಇಟ್ಟರು. ಆದರೆ ದುರ್ದೈವದಿಂದ ಇಷ್ಟು ಸಣ್ಣ ಸಂಕದ ಪ್ರಸ್ತಾಪವನ್ನು ಇಲ್ಲಿ ಪುನರಾಲೋಚನೆಯಲ್ಲಿ ತೀರಿಸಲಾಗದೆ ಚೀಫ್ ಇಂಜಿನಿಯರರ ಅಭಿಪ್ರಾಯದ ಬಗ್ಗೆ ಮದ್ರಾಸಿಗೆ ಕಳುಹಿಸಿಕೊಡಬೇಕೆಂದು ಬೋರ್ಡಿನವರು ತೀರ್ಮಾನಿಸಿರುತ್ತಾರೆ. ಈ ತೀರ್ಮಾನವು ಒಳ್ಳೇದೇ ಸರಿ. ಆದರೆ ಅಭಿಪ್ರಾಯವು ಚೀಫ್ ಇಂಜಿನಿಯರರಿಂದ ಬಂದು ಬಿಡಬೇಕಾದರೆ ಎಷ್ಟು ಮಳೆಗಾಲಗಳು ಕಳೆದುಹೋಗಬೇಕೋ ತಿಳಿಯದು. ಇನ್ನು ವೇಣೂರ ಸಂಕದ ಗತಿಯೇನೋ? ಸಂಪಾಜೆಯಲ್ಲಿ ಬಿದ್ದುಹೋದ ಮಾರ್ಗವು ಇನ್ನು ಯಾವಾಗ ಸರಿಯಾಗುವುದೋ? ಕೊಲ್ಲೂರು ಮಾರ್ಗದ ಪ್ರಸ್ತಾಪವೇ ಇಲ್ಲ. ಉಪ್ಪಿನಂಗಡಿ ಸಕಲೇಶಪುರ ರಸ್ತೆಯಲ್ಲಿ ಬಿದ್ದುಹೋದ ಸಂಕಗಳೂ, ಕಲ್ವರ್ಟು ಗಳೂ ಹಾಗೆಯೇ ಇವೆ. ಸಕಲೇಶಪುರದಿಂದ ನಮ್ಮ ಗಡಿಯ ವರೆಗೆ ಸಾಧಾರಣ ಐದಾರು ಸಂಕಗಳೂ, ಕೆಲವು ಕಲ್ವರ್ಟುಗಳೂ ಕುಸಿದುಹೋಗಿದ್ದವು. ಮೈಸೂರು ಸರಕಾರದವರು ಇವನ್ನೆಲ್ಲಾ ಸರಿಗೊಳಿಸಿ ಬಹುಶಃ ಈ ಮಳೆಗಾಲವು ಪ್ರಾರಂಭವಾಗುವ ಮೊದಲೇ ಸಕಲೇಶಪುರದಿಂದ ನಮ್ಮ ಗಡಿಯ ವರೆಗಿನ ರಸ್ತೆಯು ನೆಟ್ಟಗಾಗುವದು. ಈ ರಸ್ತೆಯಲ್ಲಿ ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನವರಿಂದ ಅಗತಕ್ಕ ಕೆಲಸವು ಮೈಸೂರು ಸರಕಾರದವರು ಸರಿಗೊಳಿಸಿದ ಎರಡು ಸಂಕಗಳಷ್ಟು ಸಹ ಇಲ್ಲ. ಎರಡು ಮಳೆಗಾಲಗಳು ಕಳೆದುಹೋಗಿ ಮೂರನೇ ಮಳೆಗಾಲದ ಪ್ರಾರಂಭದಲ್ಲಿರುವೆವಾದರೂ ಮುರಿದುಹೋದ ಸಂಕಗಳು ಸಿರಾಡಿ ಮುಂದಕ್ಕೆ ಹಾಗೆಯೇ ಇವೆ. ಈ ಸಂಕಗಳ ದುರುಸ್ತಿ ಕೆಲಸವು ಡಿಸ್ಟ್ರಿಕ್ಟ್ ಬೋರ್ಡಿನ ಯಾವ ಪತ್ರವ್ಯವಹಾರದಲ್ಲಿ ಎಲ್ಲಿ ಸಿಕ್ಕಿಬಿದ್ದಿರುವದೋ ತಿಳಿಯದು. ಈ ಎಲ್ಲ ಅವಸ್ಥೆಯನ್ನು ಆಲೋಚಿಸಿಕೊಂಡು ತಾವು ಅಧಿಕಾರವನ್ನು ವಹಿಸಿಕೊಂಡ ಕೆಲವು ದಿನಗಳಲ್ಲಿ ಜಿಲ್ಲೆಯ ಮುಖ್ಯ ಮಾರ್ಗಗಳನ್ನು ನೋಡಿಕೊಂಡು ಬಂದು ಆದಷ್ಟು ಬೇಗನೆ ಈ ಎಲ್ಲ ದುರುಸ್ತಿ ಕೆಲಸಗಳನ್ನು ನೆರವೇರಿಸಬೇಕೆಂಬ ಕುತೂಹಲದಲ್ಲಿ ಈಗಿನ ಪ್ರೆಸಿಡೆಂಟರಿರುವರು. ಇವರ ಈ ಕುತೂಹಲಕ್ಕೂ ಆಸಕ್ತಿಗೂ ತಕ್ಕಂತೆ ಇವರಿಗೆ ಅಗತ್ಯವಿರುವ ಸಹಕಾರವನ್ನು ಜಿಲ್ಲಾ ಜನರ ಹಿತದೃಷ್ಟಿಯಲ್ಲಿ ಬೋರ್ಡಿನವರು ಕೊಡುವದು ಅಗತ್ಯವಿದೆ. ಮಾರ್ಗಗಳ ದುರುಸ್ತಿ ಇತ್ಯಾದಿ ಬೋರ್ಡಿನ ಕೆಲಸದ ಬಗ್ಗೆ ಒಳ್ಳೇ ಮಾಹಿತಿಯ ಆಫೀಸರರನ್ನು ಬಹಳ ಸಂಬಳಕೊಟ್ಟು ಬೋರ್ಡಿನ ಬಗ್ಗೆ ಸರಕಾರದವರು ಸಂಗ್ರಹಿಸಿ ಕೊಡುತ್ತಿರುವಾಗ ಇಂಥವರಿಂದ ಹೇಗೂ ಕೆಲಸಮಾಡಿಸುವದು ಜಾಣತನವಲ್ಲದೆ ಪತ್ರವ್ಯವಹಾರ ನಡಿಸಿಕೊಂಡು ಬುದ್ಧಿವಂತಿಕೆಯನ್ನು ಸಂಪೂರ್ಣವಾಗಿ ಪತ್ರವ್ಯವಹಾರ ರಾಶಿಯಲ್ಲಿಯೇ ಅದ್ದಿಬಿಡುವುದು ಉಚಿತವಲ್ಲ. ಇಷ್ಟರ ವರೇಗಿನ ಅನುಭವದಿಂದ ತಮ್ಮ ಕರ್ತವ್ಯವೇನೆಂಬುದನ್ನು ಸರಿಯಾಗಿ ಆಲೋಚಿಸಿಕೊಂಡು ಬೋರ್ಡು ಮೆಂಬರರೂ ಮತ್ತು ಬೋರ್ಡಿನ ಕಾರ್ಯಕಾರಿ ಆಫೀಸರರಾದ ಪ್ರೆಸಿಡೆಂಟರೂ ಕಾಗದ ಪತ್ರಗಳಲ್ಲಿ ಸೆಣದಾಡುವ ಆಫೀಸು ಕ್ರಮಗಳಿಗೆ ಸ್ವಲ್ಪ ತಡೆಕಟ್ಟಿ ಪ್ರಜಾವರ್ಗದ ಯಥಾರ್ಥವಾದ ಸೇವಾಪ್ರಯತ್ನಗಳನ್ನು ಕೈಕೊಳ್ಳುವಂತಾಗಿ ಕೋರುತ್ತೇವೆ.

ಸ್ಫುಟ ವಿ ಚಾ ರ ಗ ಳು.

ಮೈಸೂರು ಇಂಡಿಯನ್ ಕಾಫಿ ಪ್ಲಾಂಟರ್ಸ್ ಕಾನ್ಫರೆನ್ಸ್.

ಈ ಕಾನ್ಫರೆನ್ಸಿನ ಎರಡನೇ ಸಮ್ಮೇಳನವು ಚಿಕ್ಕಮಗಳೂರಿನಲ್ಲಿ ಇದೇ ತಿಂಗಳ ತಾ. ೨೦ಕ್ಕೆ ಕೂಡಿತು. ಈ ಸಮ್ಮೇಳನದಲ್ಲಿ ಹಲವು ಮಹತ್ವದ ನಿರ್ಣಯಗಳು ಮಂಜೂರಾಗಿರುವವು. ಪ್ಲಾಂಟರುಗಳ ಬಗ್ಗೆ ಒಂದು ಬೇಂಕಿನ ಸ್ಥಾಪನೆ, ಮೈಸೂರಿನ ನ್ಯಾಯವಿಧಾಯಕ ಸಭೆಗೆ ಇಂಡಿಯನ್ ಪ್ಲೇಂಟರುಗಳಿಂದ ಒಬ್ಬ ಸಭಾಸದರನ್ನು ನೇಮಿಸುವುದು, ಕಡೂರು ಚಿಕ್ಕಮಗಳೂರು ರೈಲ್ವೆಯನ್ನು ಶೀಘ್ರದಲ್ಲಿ ತೆರಿಯೋಣಾಗುವಂತೆ ಮಹಾರಾಜರವರನ್ನು ವಿಜ್ಞಾಪಿಸಿಕೊಳ್ಳುವುದು ಇತ್ಯಾದಿ ನಿರ್ಣಯಗಳು ಕಾನ್ಫರೆನ್ಸಿನ ಈ ಅಧಿವೇಶನದಲ್ಲಿ ಮಂಜೂರಾಗಿವೆ. ಕಾಫಿ ತೋಟಗಳು ವಿಶೇಷವಾಗಿ ಮೈಸೂರು ಸಂಸ್ಥಾನದ ಮಲೆನಾಡು ಪ್ರದೇಶಗಳಲ್ಲಿ ಇರುವಂಥವುಗಳು. ಈ ಪ್ರಾಂತಗಳಲ್ಲಾದ ಫಸಲನ್ನು ವೈಯ್ಯಲಿಕ್ಕಿರುವ ಅಭ್ಯಂತರಗಳು ಕಾಡುಬೆಟ್ಟಗಳ ಈ ಮಲೆನಾಡು ಪ್ರದೇಶಗಳಲ್ಲಿ ಅತಿ ವಿಶೇಷವಾಗಿರುವವು. ಕಡೂರು ಚಿಕ್ಕಮಗಳೂರು ರೈಲ್ವೆಮಾರ್ಗದ ಸ್ಥಾಪನೆಯೊಂದರಿಂದಲೇ ಇವುಗಳ ನಿವಾರಣೆಯಾಗದು. ಇತರ ರಸ್ತೆಗಳೂ ಮತ್ತು ಮಲೆನಾಡು ಪ್ರಾಂತ್ಯಗಳ ಉತ್ಪತ್ತಿಯು ಬಿಕರಿ ಬಗ್ಗೆ ವೈಯ್ಯೋಣಾಗುವ ಮುಖ್ಯ ರಸ್ತೆಗಳೂ ಮಲೆನಾಡು ಪ್ರಾಂತ್ಯಗಳಲ್ಲಿ ಇನ್ನೂ ಬೇಕಾಗಿವೆ. ಪ್ರಕೃತ ಈ ಬಗ್ಗೆ ಇರುವ ರಸ್ತೆಗಳನ್ನು ನೋಡಿದರೆ ಇವುಗಳ ಕಠಿಣ ದುಸ್ಥಿತಿಯು ಎಂದಾದರೂ ಸರಕಾರದವರು ಗಮನಕ್ಕೆ ತಂದಿರುವರೆಂಬಂತೆ ಕಾಣುವುದಿಲ್ಲ. ಕೊನ್ಫರೆನ್ಸಿನವರು ಈ ವಿಷಯದಲ್ಲಿ ಮಾಡಿರುವ ಮನವಿಯನ್ನು ಸಂಸ್ಥಾನದ ಸರಕಾರದವರು ಮಲೆನಾಡುಗಳ ಅಭಿವೃದ್ಧಿದೃಷ್ಟಿಯಿಂದ ತಮ್ಮಲಕ್ಷ್ಯಕ್ಕೆ ತಂದುಕೊಂಡಾರೆಂಬುದಾಗಿ ನಂಬುತ್ತೇವೆ. ಮೈಸೂರು ಸಂಸ್ಥಾನದ ಹಲವು ಮಲೆನಾಡು ಪ್ರಾಂತ್ಯಗಳ ಕಾಡುಗಳನ್ನು ನಾಡಾಗಿ ಮಾಡುವುದರಲ್ಲಿ ವಿಶೇಷವಾಗಿ ಕೂಲಿಜನರು ನಮ್ಮ ಜಿಲ್ಲೆಯಿಂದ ಹೋಗುತ್ತಿರುವರು. ನಮ್ಮ ಜಿಲ್ಲೆಯ ಇನ್ನು ಕೆಲವರು ಮಲೆನಾಡುಗಳ ಕಾಫಿ ತೋಟಗಳಲ್ಲಿ ವಿಶೇಷ ದ್ರವ್ಯವನ್ನು ವಿನಿಯೋಗಿಸಿರುವರು. ಮತ್ತು ಕೆಲವರು ಅಲ್ಲಿಯೇ ನಿವಾಸಿಸಿರುವರು. ಇಂಥವರ ಮೂಲಕ ಮಲೆನಾಡು ಪ್ರಾಂತ್ಯಗಳ ಕೃಷಿ ಕೆಲಸಗಳು ನಡಿಯುವಂಥಾದ್ದಾಗಿವೆ. ಈ ದೃಷ್ಟಿಯಿಂದ ಇಂಡಿಯನ್ ಕಾಫಿ ಪ್ಲೆಂಟರ್ಸ್ ಕಾನ್ಫರೆನ್ಸುಗಳ ಕಾರ್ಯಚಟುವಟಿಕೆಗಳಲ್ಲಿ ಈ ಜಿಲ್ಲೆಯವರೂ ಭಾಗಿಗಳಾಗುವುದು ಅಗತ್ಯ. ಮತ್ತು ಹೀಗೆ ಭಾಗಿಗಳಾದ್ದಲ್ಲಿ ನಮ್ಮ ಜಿಲ್ಲಾ ಜನರ ಸಹಕಾರವನ್ನು ಮೈಸೂರು ದೇಶದ ನಮ್ಮ ನೆರೆಯ ಬಂಧುಗಳು ಯೋಗ್ಯ ರೀತಿಯಲ್ಲಿ ಸ್ವೀಕರಿಸದೆ ಇರಲಿಕ್ಕಿಲ್ಲವೆಂಬುದಾಗಿ ಧಾವಿಸುತ್ತೇವೆ. ಪ್ಲಾಂಟರುಗಳಿಗೆ ಬೇಕಾದ ಬೇಂಕುಗಳು ವೈಯ್ಯೋಣ ಸೌಕರ್ಯ ಇವೆಲ್ಲವುಗಳಿಗೆ ಮಿಕ್ಕಿರುವ ಕೂಲಿಗಳ ಸರಬರಾಯಿ ಅವರ ಲಾಲನೆ ಪಾಲನೆ ಈ ವಿಷಯಗಳು ಸಮ್ಮೇಳನದಲ್ಲಿ ವಿಶೇಷವಾಗಿ ಬಂದದ್ದು ತೋರುವುದಿಲ್ಲ. ಇನ್ನುಮುಂದಣ ಸಮ್ಮೇಳನಗಳಲ್ಲಾದರೂ ಕೂಲಿ ಜನಗಳಿಗೂ ತೋಟಗಳ ಅಭಿವೃದ್ಧಿಗೂ ಇರಬೇಕಾಗಿರುವ ಪರಸ್ಪರ ಸಂಬಂಧಗಳ ವಿಷಯವನ್ನು ವಿಮರ್ಶಿಸುವರಾಗಿ ಕೋರುತ್ತೇವೆ.

ಶಾಲೆಗಳ ಮೆಡಿಕಲ್ ಇನ್ಸ್‌ಪೆಕ್ಷನ್.

ಈ ವಿಷಯ ಮದ್ರಾಸು ಸರಕಾರದವರು ಒಂದು ಹುಕುಮನ್ನು ಹೊರಡಿಸಿರುವರು. ಲೋಕಲ್‌ಬೋರ್ಡುಗಳ ಆಡಳಿತದಲ್ಲಿರುವ ಶಾಲೆಗಳಲ್ಲಿಯೂ ಮತ್ತು ಖಾಸಗಿ ಶಾಲೆಗಳಲ್ಲಿಯೂ ವಿದ್ಯಾರ್ಥಿಗಳ ಆರೋಗ್ಯದ ಪರಿಶೋಧನೆಯನ್ನು ಐಚ್ಛಿಕವಾಗಿ ಡಾಕ್ಟರುಗಳ ಮೂಲಕ ಮಾಡಿಸಬಹುದೆಂದು ಈ ತನಕ ಸರಕಾರದವರ ಹುಕುಮಿತ್ತು. ಆದರೆ ಇದರ ಪ್ರಯೋಜನವನ್ನು ಇಷ್ಟರ ತನಕ ಸರಿಯಾಗಿ ಶಾಲೆಗಳಲ್ಲಿ ಪಡಿಯದೆ ಇದ್ದದ್ದರಿಂದ ಕ್ರಮೇಣ ಮೆಡಿಕಲ್ ಇನ್ಸ್‌ಪೆಕ್ಷನನ್ನು ಎಲ್ಲಾ ಶಾಲೆಗಳಲ್ಲಿಯೂ ಕಡ್ಡಾಯವಾಗಿ ಜಾರಿಗೆ ತರುವ ಉದ್ದೇಶವನ್ನು ಈಗಿನ ಹುಕುಮಿನಲ್ಲಿ ಪ್ರಸ್ತಾಪಿಸಿರುತ್ತಾರೆ. ಇದಕ್ಕನುಗುಣವಾಗಿ ಇದೇ ಬರುವ ಜೂನು ತಿಂಗಳಿನಿಂದ ಸರಕಾರದ ಎಲ್ಲಾ ಸೆಕೆಂಡರಿ ಶಾಲೆಗಳಲ್ಲಿಯೂ ಮತ್ತು ಕೊಲೇಜುಗಳ ಸ್ಕೂಲ್ ಡಿಪಾರ್ಟುಮೆಂಟಿನಲ್ಲಿಯೂ ಇರುವ ವಿದ್ಯಾರ್ಥಿಗಳ ಆರೋಗ್ಯವನ್ನು ಪರೀಕ್ಷಿಸಿ ನೋಡುವ ಕ್ರಮವನ್ನು ಕಡ್ಡಾಯವಾಗಿ ಜಾರಿಗೆ ತರಬೇಕಾಗಿದೆ. ಎಲ್ಲಾ ಲೋಕಲ್ ಬೋರ್ಡುಗಳು ಇದೇ ಜೂನು ತಿಂಗಳಿಂದಿನಿಂದ ತಮ್ಮ ಸೆಕೆಂಡರಿ ಶಾಲೆಗಳಲ್ಲಿ ಮೆಡಿಕಲ್ ಇನ್ಸ್‌ಪೆಕ್ಷನಿನ ಈ ಕ್ರಮವನ್ನು ಜಾರಿಗೆ ತರಬೇಕೆಂದು ಸರಕಾರದವರು ಸೂಚಿಸಿರುವರು. ಖಾಸಗಿ ಶಾಲೆಗಳಲ್ಲಿ ಮೆಡಿಕಲ್ ಇನ್ಸ್‌ಪೆಕ್ಷನನ್ನು ಕಡ್ಡಾಯವಾಗಿ ಆಚರಿಸೋಣಾಗುವಂತೆ ಇದನ್ನು ಶಾಲೆಗಳ ಮಂಜೂರಾತಿಯ ಒಂದು ಶರ್ತವನ್ನಾಗಿ ಏರ್ಪಡಿಸುವರು. ಈ ಶರ್ತದ ಜಾರಿಯು ೧೯೨೭ನೇ ಮೇ ತಿಂಗಳಿಂದಾಗುವುದು. ವಿದ್ಯಾರ್ಥಿಗಳ ಆರೋಗ್ಯರಕ್ಷಣೆಯ ಬಗ್ಗೆ ಈ ರೀತಿ ಕ್ರಮವನ್ನು ಜಾರಿಗೆ ತಂದದ್ದು ಸ್ತುತ್ಯವಾಗಿದೆ. ಆದರೆ ಸರಕಾರಿ ಲೋಕಲ್ ಬೋರ್ಡು ಮತ್ತು ಖಾಸಗಿಶಾಲೆಗಳ ವಿದ್ಯಾರ್ಥಿಗಳ ಆರೋಗ್ಯ ರಕ್ಷಣೆಯ ಈ ಏರ್ಪಾಡಿಗೆ ಇಟ್ಟಿರುವ ತಾರತಮ್ಯವು ಉಚಿತ ಕಾಣುವುದಿಲ್ಲ. ವಿದ್ಯಾರ್ಥಿಗಳ ಆರೋಗ್ಯರಕ್ಷಣೆಯ ಈ ಏರ್ಪಾಡು ಎಲ್ಲಾ ಶಾಲೆಗಳಲ್ಲಿಯೂ ಒಂದೇ ರೀತಿಯಲ್ಲಿರಬೇಕಾಗಿರುವುದು. ಮತ್ತು ಇದರ ಜಾರಿಯು ಏನೂ ಭೇದವಿಲ್ಲದೆ ಎಲ್ಲಾ ಶಾಲೆಗಳಲ್ಲಿಯೂ ಒಂದೇ ರೀತಿಯಾಗಿರುವಂತೆ ಸರಕಾರದವರು ಈ ಬಗ್ಗೆ ಅಗತ್ಯವಿದ್ದಲ್ಲಿ ಪ್ರತ್ಯೇಕ ಗ್ರೇಂಟುಗಳನ್ನಾದರೂ ಕೊಡುವುದು ಅಗತ್ಯವಿತ್ತು. ಏಕಂದರೆ ನಮ್ಮ ಭಾವೀಜನಾಂಗದ ಈ ಆರೋಗ್ಯರಕ್ಷಣೆಯ ಏರ್ಪಾಡನ್ನು ಎಲ್ಲಾ ಕಡೆಗಳಲ್ಲಿಯೂ ಜಾರಿಗೆ ತರುವಂಥಾದ್ದು ಸರಕಾರದ ಕರ್ತವ್ಯವಾಗಿರುತ್ತದೆ.

ದಕ್ಷಿಣ ಕನ್ನಡಾ ಕೊ-ಒಪರೇಟಿವ್ ಸೆಂಟ್ರಲ್‌ಬೇಂಕ್.

ಇತ್ತೀಚೆಗೆ ಈ ಬೇಂಕಿನ ಮಹಾಸಭೆಗಳಲ್ಲಿ ನಡೆದ ವೃತ್ತಾಂತಗಳ ವಿಷಯವೂ, ಬೇಂಕಿನ ಸಿಬಂದಿಯ ವಿಷಯವಾಗಿಯೂ ನಮ್ಮಲ್ಲಿಯ ಇತರ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಪತ್ರವ್ಯವಹಾರಗಳನ್ನು ಜಿಲ್ಲೆಯ ಸಹಕಾರಿಗಳಲ್ಲಿ ಅನೇಕರು ಓದಿಂಬಹುದು. ಬೇಂಕಿನ ಹೆಡ್ ಆಫೀಸನ್ನು ಪುತ್ತೂರಿನಿಂದ ಮಂಗಳೂರಿಗೆ ಒಯ್ಯುವಂಥಾದ್ದು, ಮತ್ತು ಬೇಂಕಿನ ಖರ್ಚನ್ನು ಕಡಿಮೆಮಾಡುವಂತೆ ಬೇಂಕು ಸಿಬಂದಿಗೆ ಸಂಬಂಧಪಟ್ಟ ಆಫೀಸರರ ನೇಮಕಗಳು, ಈ ಎರಡು ವಿಷಯಗಳ ಚರ್ಚೆಯು ಬಹಳ ಕಠಿಣವಾದ ರೀತಿಯಲ್ಲಿ ನಡಿಯುತ್ತಿರುವುದು. ಇತ್ತಲಾಗೆ ಕೂಡಿದ ಮಹಾಸಭೆಯಲ್ಲಿ ಈ ವಿಷಯ ನಿಶ್ಚಿತವಾದ ತೀರ್ಮಾನಗಳಲ್ಲಿ ಈ ಚರ್ಚೆಯು ಕೊನೆಗಾಣದೆ ಇನ್ನೊಂದು ಮಹಾಸಭೆಯನ್ನು ಬರುವ ಜೂನು ತಿಂಗಳ ತಾ. ೧೯ರಲ್ಲಿ ಆಮಂತ್ರಿಸುವ ಪ್ರಸಂಗವು ಬಂದೊದಗಿರುವುದು. ದೇಶದ ಆರ್ಥಿಕ ಸ್ಥಿತಿಯು ಹಲವು ಕಾರಣಗಳಿಂದ ಕುಗ್ಗಿಹೋಗಿ ಬೇಂಕುಗಳಂಥಾ ಆರ್ಥಿಕ ಸಂಸ್ಥೆಗಳಿಗೂ ಮತ್ತು ವ್ಯಕ್ತಿಗಳಿಗೂ ಸಹ ವಿಪರೀತಾವಸ್ಥೆಯು ಪ್ರಾಪ್ತವಾಗಿದೆ. ಸೆಂಟ್ರಲ್ ಬೇಂಕೂ ಇದಕ್ಕೆ ಯೋಜಿಸಲ್ಪಟ್ಟ ಹಲವು ಸಹಕಾರಿ ಸಂಘಗಳೂ ನಮ್ಮ ಜಿಲ್ಲೆಯಲ್ಲಿ ಸಹ ಇಂಥಾ ವಿಪರೀತಾವಸ್ಥೆಗೆ ಗುರಿಯಾಗಿರುವಂಥಾದ್ದು ಗುಟ್ಟಿನ ಮಾತಲ್ಲ. ಸೆಂಟ್ರಲ್

ಬೇಂಕಿನ ಡ್ಯಾರೆಕ್ಟರರು, ಇದರ ವ್ಯಕ್ತಿ ಮೆಂಬರರು ಮತ್ತು ಸಂಯೋಜಿತ ಸಂಘಗಳ ಚಾಲಕರು ಈಗಿನ ಈ ಸ್ಥಿತಿಯನ್ನು ಎಷ್ಟರಮಟ್ಟಿಗೆ ತಿಳಕೊಂಡು ಈ ಸ್ಥಿತಿಯಿಂದ ಉಂಟಾಗಿರುವ ಅಡಚಣಿಗಳ ನಿವಾರಣೆಗೆ ಯಾವ ಪ್ರಯತ್ನಗಳನ್ನು ನಡಿಸುತ್ತಿದ್ದಾರೆ ಅಥವಾ ನಡಿಸಲಿಕ್ಕಿರುವರೆಂಬುದು ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಈ ಪತ್ರವ್ಯವಹಾರಗಳಲ್ಲಾಗಲಿ ಅಥವಾ ಇತರ ಸಹಕಾರಿ ಪ್ರಕಟಣೆಗಳಲ್ಲಾಗಲಿ ಸರಿಯಾಗಿ ಕಂಡುಬರುವುದಿಲ್ಲ. ಇದರ ಬದಲಾಗಿ, ಮಹಾಸಭೆಗಳಲ್ಲಿ ನಡಿಯುತ್ತಿರುವ ಸಂಪೂರ್ಣ ವೃತ್ತಾಂತಗಳನ್ನು ತಿಳಕೊಂಡರೆ, ಐಕ್ಯದ ಬಲವು ಬೇಂಕಿಗೆ ಸರಿಯಾಗಿಲ್ಲದೆ ಕಲಹಗಳೆಲ್ಲಡೆಯಲ್ಲಿ ಬೇಂಕಿನ ಉದ್ದೇಶದ ದೃಷ್ಟಿಯು ತಪ್ಪಿಹೋಗಿ ಹಣದ ಸಂಕಷ್ಟದೊಡನೆ ಅನೈಕ್ಯದ ಸ್ವಾರ್ಥಪಿಶಾಚಿಯ ಬಾಧೆಗೆ ಬೇಂಕಿನಲ್ಲಿ ಹೆಚ್ಚಿನ ಅವಕಾಶವು ದೊರಕುತ್ತಿದೆಂಬುದು ಸ್ಪಷ್ಟವಾಗುವದು. ಇದು ಬಹಳ ವಿಷಾದದಸಂಗತಿಯಾಗಿದೆ. ಹಣದ ಅಡಚಣಿಯು ಸಂಕಷ್ಟ ಅಥವಾ ಬೇಂಕಿಗೆ ನಷ್ಟದ ಸಂಭವಗಳು ಯಾವ್ಯಾವವಿವೆ, ಇವು ಯಾವ ಮೂಲಕ ಬಂದವು, ಇದನ್ನೆಲ್ಲ ತಿದ್ದುವ ಮಾರ್ಗವು ಯಾವುದು ಎಂಬೀ ವಿಷಯಗಳನ್ನು ಬೇಂಕಿನ ಚಾಲಕರು ಆಗಿಂದಾಗ್ಗೆ ಪರ್ಯಾಲೋಚಿಸಿಕೊಂಡು ಸಂಯೋಜಿತ ಸಂಘಗಳಿಂದ ಯಾವ ರೀತಿಯ ಸಹಕಾರವು ಬೇಕೆಂಬುದನ್ನೂ ಬೇಂಕಿನ ಅಭಿವೃದ್ಧಿಗೆ ಅಗತ್ಯವುಳ್ಳ ತಮ್ಮ ಮಾಹಿತಿಯನ್ನೂ ಬೇಂಕಿನ ಮೆಂಬರರ ಮುಂದಿಡಲು ಆಗಿಂದಾಗ್ಗೆ ಮಹಾ ಸಭೆಗಳನ್ನು ಜರಗಿಸುವುದು ಅಗತ್ಯ. ಇದರ ಬದಲಾಗಿ ಒಣಹರಟೆಗಳ ಇತ್ಯರ್ಥದ ಬಗ್ಗೆ ಇಂಥಾ ಮಹಾಸಭೆಗಳನ್ನು ಆಮಂತ್ರಿಸಿ ಆಯುಷ್ಯಕಾಲದ ವೆಚ್ಚವನ್ನು ಮಾಡುವದು ವಿಹಿತವಲ್ಲ. ಬೇಂಕಿಗೆ ಸಂಬಂಧಪಟ್ಟವರು ಎಂದೂ ಈ ರೀತಿ ವರ್ತಿಸರು; ಮತ್ತು ಇಂಥಾ ಅಂಬೋಣಗಳಿಗೆ ಸಹ ಆಸ್ಪದ ಕೊಡರೆಂಬುದು ನಮಗೆ ಖಾತ್ರಿಯಿದೆ. ನಮ್ಮ ಈ ವಿಶ್ವಾಸವನ್ನು ಜೂನು ತಾ. ೧೯ನೇ ದಿನ ಕೂಡುವ ಮಹಾಸಭೆಯು ಕಾರ್ಯಕ್ರಮವನ್ನು ನಡೆಸುವುದರಲ್ಲಿ ಸಮರ್ಥಿಸಿ ಪತ್ರವ್ಯವಹಾರಗಳಿಂದ ಹೊರಹೊಮ್ಮುವ ಅನೈಕ್ಯದ ಪಿಶಾಚಿಗೆ ಆಸ್ಪದ ಕೊಡರೆಂಬುದಾಗಿ ಧಾವಿಸುತ್ತೇವೆ.

ಉಪ್ಪಿನಂಗಡಿ ತಾಲೂಕಿನ ವರ್ಗದಾರರ ಮತ್ತು ರೈತರ ಪರಿಷತ್ತು

ಪುತ್ತೂರು ನಮ್ಮ ಜಿಲ್ಲೆಯ ಮುಖ್ಯಪಟ್ಟಣವಾಗಿರುವುದಿಲ್ಲವಾದರೂ ಮುಖ್ಯಪಟ್ಟಣವಾದ ಮಂಗಳೂರಿನಂತಹ ಶಹರಿನಲ್ಲಿ ಪ್ರಾರಂಭವಾಗಬೇಕಾದಹ ಲವು ಚಟುವಟಿಕೆಗಳು ಪ್ರಥಮದಲ್ಲಿ ಪುತ್ತೂರಿನಲ್ಲಿ ಪ್ರಾರಂಭವಾಗುವವು. ಸಹಕಾರ ಚಟುವಟಿಕೆಯು ಇದರ ನಿದರ್ಶನವಾಗಿದೆ. ಈ ಸರ್ತಿ ವರ್ಗದಾರರ ಮತ್ತು ರೈತರ ಪರಿಷತ್ತಿಗೆ ಮುಹೂರ್ತವು ಪುತ್ತೂರಿನಲ್ಲಿಯೇ ಆಗಿದೆ. ಮೊದಲೊಮ್ಮೆ ಉಪ್ಪಿನಂಗಡಿ ವರ್ಗದಾರರ ಸಂಘವು ಪುತ್ತೂರಲ್ಲಿಯೇ ಏರ್ಪಡಿಸಲ್ಪಟ್ಟಿತು. ಮತ್ತು ಈ ಸಂಘದ ಕಡೆಯಿಂದ ಒಂದೆರಡು ಪರಿಷತ್ತುಗಳು ಸಹ ನಡದಿವೆ. ಆದರೆ ಈ ಸಂಘವು ಸ್ವಲ್ಪ ಸಮಯದಲ್ಲಿಯೇ ಬಿದ್ದುಹೋಯಿತು. ಜಂಗ್ಲಿ ಇಲಾಖೆಯವರಿಂದ ಪ್ರಾಪ್ತವಾಗುವ ಸಂಕಷ್ಟಗಳ ನಿವಾರಣೆಯೇ ಮುಂಚಿನ ಸಂಘದ ಮುಖ್ಯ ಧ್ಯೇಯವಾಗಿದ್ದು ಇಂಥಾ ನಿವಾರಣೆಯು ಆಗುತ್ತಾ ಬರುವಾಗ ಸಂಘವನ್ನು ಇರಗೊಡಿಸುವುದು ಯಾರಿಗೂ ಅಗತ್ಯವಲ್ಲವೆಂತ ತೋರಿಬಂದು ಮುಂಚಿನ ಸಂಘವು ತನ್ನಂತೆಯೇ ಬಿದ್ದುಹೋಯಿತು. ತತ್ಕಾಲಿಕ ಅಡಚಣೆಗಳ ನಿವಾರಣೆಯ ಧ್ಯೇಯವನ್ನು ಮಾತ್ರ ಇಟ್ಟುಕೊಂಡು ಯಾವ ಸಂಘವನ್ನು ಸ್ಥಾಪಿಸಿದರೂ ಅದು ದೀರ್ಘಕಾಲ ಬಾಳುವದಿಲ್ಲ. ನಮ್ಮ ಜಿಲ್ಲೆಯ ಎಲ್ಲಾ ಕಡೆಗಳಲ್ಲಿರುವ ವರ್ಗದಾರರ ಮತ್ತು ರೈತರ ಸ್ಥಿತಿಯನ್ನು ಸರಿಯಾಗಿ ಪರ್ಯಾಲೋಚಿಸಿ ನೋಡಿದ್ದಲ್ಲಿ ನಿರಂತರ ಕೆಲಸ ಸಾಧನೆಗಳನ್ನು ಕೈಕೊಳ್ಳುವ ಸಂಘವು ಇಡೀ ಜಿಲ್ಲೆಯ ಬಗ್ಗೆ ಏರ್ಪಡಿಸುವಂಥಾದ್ದು ಅಗತ್ಯವಿದೆ. ಈಗಿನ ಕಾಲದಲ್ಲಿ ಚೆನ್ನಾಗಿ ಗೊತ್ತಿರಬೇಕಾದ ಪ್ರಜಾಧರ್ಮನೀತಿ, ತಮ್ಮ ಕರ್ತವ್ಯ ಜವಾಬ್ದಾರಿ ಈ ಮೂಲಕ ತಮಗಿರಬೇಕಾದ ಹಕ್ಕು ಸ್ವಾತಂತ್ರ್ಯಗಳು ಇದೇನೆಂಬುದನ್ನು ನಮ್ಮ ಕೃಷಿಕರ ವರ್ಗವು ತಿಳಕೊಳ್ಳಬೇಕಾದರೆ ವರ್ಗದಾರರ ಸಂಘದ ಸಂಸ್ಥೆಗಳು ದೀರ್ಘಕಾಲ ಕೆಲಸ ನಡಿಸಬೇಕಾಗಿದೆ. ಇಂಥಾ ಧ್ಯೇಯಗಳನ್ನಿಟ್ಟುಕೊಂಡು ಉಪ್ಪಿನಂಗಡಿ ತಾಲೂಕಿಗೆ ಒಂದು ಸಂಸ್ಥೆಯನ್ನು ಏರ್ಪಡಿಸಬೇಕೆಂದು ಉಪ್ಪಿನಂಗಡಿ ತಾಲೂಕಿನ ಪ್ರಮುಖ ವರ್ಗದಾರರೂ ಹ್ಯಾಕೋರ್ಟು ವಕೀಲರೂ ಆಗಿರುವ ಮ|| ರಾ|| ರಾ|| ಬಿ. ದಾಸಪ್ಪಗಳವರು ಇದೇ ತಿಂಗಳ ತಾ. ೨೨ರಲ್ಲಿ ತಮ್ಮ ತಾಲೂಕಿನ ವರ್ಗದಾರರ ಒಂದು ಪರಿಷತ್ತನ್ನು ಆಮಂತ್ರಿಸಿದರು. ಧರ್ಮಸ್ಥಳದ ಮ|| ರಾ|| ರಾ|| ಮಂಜಯ್ಯ ಹೆಗ್ಗಡೆ ಎಮ್. ಎಲ್. ಸಿ. ಯವರು ಈ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಉಪ್ಪಿನಂಗಡಿ ತಾಲೂಕಿನ ಬಗ್ಗೆ ಆ ತಾಲೂಕಿನ ವರ್ಗದಾರರ ಮತ್ತು ರೈತರ ಒಂದು ಸಂಘವನ್ನು ಸ್ಥಾಪಿಸುವುದು ಅಗತ್ಯವೆಂತ ಈ ಪರಿಷತ್ತಿನಲ್ಲಿ ನಿರ್ಣಯಿಸಲ್ಪಟ್ಟಿತು. ವರುಷ ಒಂದಕ್ಕೆ ನಾಲ್ಕಾಣೆ ವಂತಿಗೆಯನ್ನು ಕೊಡುವ ಯಾವ ವರ್ಗದಾರ ಅಥವಾ ರೈತನನ್ನು ಈ ಸಂಘದ ಮೆಂಬರರನ್ನಾಗಿ ಮಾಡಿಕೊಳ್ಳಬಹುದೆಂದು ನಿಶ್ಚಯಿಸಲ್ಪಟ್ಟಿತು. ಪರಿಷತ್ತಿನಲ್ಲಿ ಹಾಜರಿದ್ದ ಹಲವರು ಈ ವಂತಿಗೆಯನ್ನು ಕೊಟ್ಟು ಕೂಡಲೆ ಮೆಂಬರರಾದರು. ಪರಿಷತ್ತಿನ ಅಧ್ಯಕ್ಷರು ರೂ. ೨೦ನ್ನು ಸಹಾಯ ದ್ರವ್ಯವಾಗಿ ಕೊಟ್ಟು ಪ್ರತಿ ವರುಷದಲ್ಲಿಯೂ ರೂಪಾಯಿ ೨೦ರ ಪ್ರಕಾರ ಸಹಾಯದ್ರವ್ಯವನ್ನು ಕೊಡುವೆನೆಂತ ವಾಗ್ದತ್ತ ಮಾಡಿರುವರು. ೪೦ ಜನ ಮೆಂಬರರ ಒಂದು ಕಮಿಟಿಯು ಇಡೀ ತಾಲೂಕಿನಲ್ಲಿ ಕೆಲಸ ನಡಿಸುವ ಬಗ್ಗೆ ಪರಿಷತ್ತಿನವರಿಂದ ಏರ್ಪಡಿಸಲ್ಪಟ್ಟಿತು. ದೇಶದ ಕೃಷಿಯ ವಿಚಾರದ ಬಗ್ಗೆ ರೋಯಲ್ ಕಮಿಶನು ಕೆಲಸ ನಡಿಸಲಿಕ್ಕಿರುವ ಈ ಸಮಯದಲ್ಲಿ ಇಂಥಾ ಸಂಘವು ಜನ್ಮವೆತ್ತಿರುವಂಥಾದ್ದು ಅನುಕೂಲವೆಂತ ಹೇಳಬೇಕು. ಆದರೆ ಯಾರ್‍ಯಾರೆಲ್ಲ ಇಂಥಾ ಸಂಘಗಳ ಕೆಲಸಗಳನ್ನು ಕೈಕೊಂಡು ಮುಂದುವರಿಯುವರೆಂಬುದನ್ನು ನೋಡಲಿಕ್ಕಿದೆ.

ತಿರುವಾಂಕೂರು ಸಂಸ್ಥಾನದಲ್ಲಿ ವೃತ್ತಪತ್ರಿಕೆಗಳ ನಿರ್ಬಂಧ.

ವರ್ತಮಾನಪತ್ರಗಳನ್ನು ಸಂಪೂರ್ಣವಾಗಿ ಸರಕಾರದ ಆಟೋಪದಲ್ಲಿ ಡೋಣಾಗುವಂಥ ಕಾನೂನು ತಿರುವಾಂಕೂರು ಸಂಸ್ಥಾನದಲ್ಲಿ ಜಾರಿಗೆ ಬರಲಿಕ್ಕಿದೆ. ಈ ನಿರ್ಬಂಧದ ಪ್ರಕಾರ ಪತ್ರಪ್ರಕಟಣೆಯ ಮುಂಚೆ ಆ ಬಗ್ಗೆ ಒಂದು ಲೈಸನ್ಸನ್ನು ಪಡಕೊಳ್ಳತಕ್ಕದ್ದು. ಲೈಸನ್ಸ ಫೀಸು ಪ್ರಥಮಸರ್ತಿಗೆ ರೂ. ೫೦೦ಕ್ಕೆ ಮೀರಿರದು. ತಿರುವಾಂಕೂರು, ಸಂಸ್ಥಾನದ ಅಣ್ಣರ, ಅಥವಾ ಬ್ರಿಟಿಷ್ ಸಾಮ್ರಾಜ್ಯಾಧಿಪತಿಗಳಾದ ಸಾರ್ವಭೌಮ ಚಕ್ರವರ್ತಿಗಳ ಸರಕಾರದ ಅಥವಾ ಹಿಂದೂಸ್ಥಾನದ ಸರಕಾರದ ಕಡೆಗೆ ದೋಷ, ನಿಂದೆ ಇತ್ಯಾದಿಗಳನ್ನು ವ್ಯಕ್ತಗೊಳಿಸುವ ಬರವಣಿಕೆಗಳು ಪತ್ರಗಳಲ್ಲಿ ಕಂಡುಬಂದರೆ, ಅಥವಾ ತಿರುವಾಂಕೂರು ಸಂಸ್ಥಾನದ ಪ್ರಜಾಜನಗಳಲ್ಲಿ ಪರಸ್ಪರ ದ್ವೇಷವನ್ನುಂಟುಮಾಡುವ ಬರವಣಿಕೆಗಳನ್ನು ಪ್ರಕಟಿಸುವ, ಇತ್ಯಾದಿ ವರ್ತಮಾನ ಪತ್ರಿಕೆಗಳ ತಲೆಯ ಮೇಲೆ ಸಾಮಾನ್ಯವಾಗಿ ಹೊರಿಸೋಣಾಗುವ ದೋಷಗಳ ದುರಾಗ್ರಹಕ್ಕೆ ಪಾತ್ರವಾದೊಡನೆ ಲೈಸನ್ಸು ವಜಾವಾಡಲ್ಪಟ್ಟು ಲೈಸನ್ಸು ಹಣವು ಸರಕಾರದ ಬೊಕ್ಕಸವನ್ನು ಸೇರುವುದು. ಹೀಗೆ ಒಂದಾವರ್ತಿ ದೋಷಪಾತ್ರರಾದವರಿಗೆ ಪುನರಾಲೋಚನೆ ಮೇಲೆ ಇನ್ನೊಮ್ಮೆ ಪತ್ರಪ್ರಕಟಣೆಯ ಲೈಸನ್ಸು ಕೊಡಬಹುದು. ಆದರೆ ಈ ರೀತಿ ಎರಡನೇ ಸರ್ತಿಯ ಲೈಸನ್ಸಿಗೆ ಫೀಸು ರೂಪಾಯಿ ೨,೫೦೦ಕ್ಕೆ ಮಿಕ್ಕಿರಕೂಡದು. ಎರಡನೇ ದಫೆ ಲೈಸನ್ಸು ಪಡೆದನಂತರವೂ ಅಂಥಾ ವರ್ತಮಾನಪತ್ರಗಳು ದೋಷಬದ್ಧಗಳಾದರೆ ಲೈಸನ್ಸು ಫೀಸು ಸರಕಾರದ ಪಾಲಿಗೆ ಸೇರುವುದು. ಆದರೆ ಎರಡನೇ ಲೈಸನ್ಸು ಪಡಕೊಂಡವರನ್ನು ತಪ್ಪಿತಸ್ಥರನ್ನಾಗಿ ಮಾಡುವ ಸರಕಾರದ ಹುಕುಮಿನ ಮೇಲೆ ಹ್ಯಾಕೋರ್ಟಿನಲ್ಲಿ ಅಪೀಲು ನಡಿಸಬಹುದು. ಹಿಂದುದೇಶವು ವಿಚಿತ್ರವಾದ ದೇಶವು. ಪೃಥ್ವಿಯ ಎಲ್ಲಾ ಭಾಗಗಳಲ್ಲಿರುವ ವಿವಿಧ ಹವಾಗುಣಗಳಿರುವ ಪ್ರಾಂತ್ಯಗಳು ಈ ಒಂದೇ ದೇಶದಲ್ಲಿ ಸೇರಿಕೊಂಡಿವೆ. ಕಾಲಾವಸ್ಥೆಯು ಸಹ ಇದೇ ರೀತಿ ಇರುವುದೆಂತ ಕಾಣುತ್ತದೆ. ಕೆಲವು ಕಡೆಗಳಲ್ಲಿ ಇಪ್ಪತ್ತನೆ ಶತಮಾನಗಳ ಕಾಲವು ನಡಿಯುತ್ತಿರುವಾಗ ೧೬—೧೭ನೇ ಶತಮಾನಗಳ ಕಾಲವು ತಿರುವಾಂಕೂರು ಅಂತಹ ಸಂಸ್ಥಾನದಲ್ಲಿ ನಡಿಯುತ್ತಿರವುದು. ಇದು ಸೋಜಿಗ, ವೃತ್ತಪತ್ರಗಳ ಈ ನಿರ್ಬಂಧವೂ ಸೋಜಿಗವಾಗಿದೆ. ಗಾಳಿಗೆ ಬೇಲಿಕಟ್ಟುವುದರಿಂದ ಯಾವ ಉದ್ದೇಶವು ನೆರವೇರುವುದು? ಅದೇ ರೀತಿ ಪ್ರಜಾಭಿಪ್ರಾಯದ ಬೆಳವಣಿಕೆಗೂ ವೃತ್ತಪತ್ರಿಕೆಗಳ ಸ್ವಾತಂತ್ರ್ಯಕ್ಕೂ ತಡೆಕಟ್ಟುವುದರಿಂದ ಯಾವ ಉದ್ದೇಶವೂ ನೆರವೇರದು.

ಸ್ವರಾಜ್ಯ ಸುಖವನ್ನು ಅನುಭವಿಸುವ ಔಸ್ಟ್ರಾಲಿಯಾ.

ಔಸ್ಟ್ರಾಲಿಯಾ ದೇಶವು ಸ್ವರಾಜ್ಯಪ್ರಾಪ್ತಿಯ ದೇಶವೆಂದು ಎಲ್ಲರಿಗೂ ಗೊತ್ತಿರುವ ವಿಷಯ. ಅಲ್ಲಿಯ ಪ್ರಜಾಜನರ ಸುಖಸಂಪತ್ತು ಆರೋಗ್ಯ ವಿದ್ಯೆ ಮಜೂರಿಗಾರರ ಕೂಲಿ ದರ ಜಗತ್ತಿನ ಮಿಕ್ಕ ಎಲ್ಲಾ ಕಡೆಗಳಿಗಿಂತಲೂ ಅಧಿಕವಾಗಿದೆ. ಅಮೇರಿಕದ ಯುನೈಟೆಡ್ ಸ್ಟೇಟುಗಳಲ್ಲಿ ಕೂಲಿದರವು ಅತ್ಯಧಿಕವಾಗಿರುವದಾದರೂ ಅಲ್ಲಿಯ ಜೀವನ ಖರ್ಚು ಕೂಡ ಅದೇ ದಾಮಾಷಾಯಿಯಲ್ಲಿ ವಿಪರೀತವಾಗಿರುವುದರಿಂದ ಇದನ್ನು ಔಸ್ಟ್ರಾಲಿಯಾ ದೇಶದ ದರಗಳಿಗೆ ಹೋಲಿಸತಕ್ಕದ್ದಲ್ಲ. ಲೇಬರ್ ಅಥವಾ ಮಜೂರಿಗಾರರ ಆಟೋಪದಲ್ಲಿ ದೇಶದ ಆಳಿತೆಯು ಇರುವುದು. ೧೯೧೦ನೇ ಇಸವಿಯಿಂದ ಆಗಿಂದಾಗ್ಗೆ ಒಂಭತ್ತು ಸಲ ಆರಿಸಲ್ಪಟ್ಟ ಅಲ್ಲಿಯ ಪಿಡರೇಶನ್ ಪಾರ್ಲಿಮೆಂಟ ಸಭೆಗಳಲ್ಲಿ ಲೇಬರ್ ಪಾರ್ಟಿಯವರ ಪ್ರಾಬಲ್ಯವೇ ಅಧಿಕವಾಗಿತ್ತು. ಮತ್ತು ಹೀಗೆ ಲೇಬರಪಾರ್ಟಿಯು ಅಧಿಕಾರದಲ್ಲಿರುವಾಗ ತಮ್ಮ ಅಧಿಕಾರ ಬಾಹುಳ್ಯವನ್ನು ತೋರಿಸಲು ಅಲ್ಲಿಯ ಲೇಬರ ಪಾರ್ಟಿಯು ಹಿಂಜರಿಯಲಿಲ್ಲ. ಕೂಲಿಯ ದರಗಳ ಮಿತಿಯು ದೇಶದಲ್ಲಿ ನಿರ್ಧರಿಸಲ್ಪಟ್ಟದೆ. ಅಲ್ಲಿಯ ಕಾಯಿದೆಗನುಗುಣವಾಗಿ ಪ್ರಾಯಸ್ಥ ಕೂಲಿಗಾರನಿಗೆ ಹಪ್ತೆಯೊಂದಕ್ಕೆ ೪|| ಪವನುಗಳಿಗಿಂತ ಕಡಮೆ ಕೊಡಲೇ ಕೂಡದು. ಕಾರ್ಖಾನೆಗಳಲ್ಲಿ ಕೆಲಸಮಾಡುತ್ತಿರುವಂಥ ಮಜೂರರಿಗೆ ೪|| ಪವನುಗಳಿಗಿಂತ ಸ್ವಲ್ಪ ಹೆಚ್ಚಿನ ಕೂಲಿ ದರವು ಸಿಗುತ್ತದೆ. ಕಾಯಿದೆ ಪ್ರಕಾರ ನಿರ್ಮಿತವಾದ ಮಜೂರಿಯನ್ನು ನಿರ್ಣಯಿಸುವ ಬೋರ್ಡುಗಳು ಮತ್ತು ಕಾರ್ಖಾನೆಗಳ ಪಂಚಾಯತಿ ಬೋರ್ಡುಗಳು ಆ ದೇಶದಲ್ಲಿದ್ದು ಕೆಲಸಗಾರರು ಕೆಲಸಮಾಡತಕ್ಕ ಸಮಯದ ಮಿತಿ ಅವರ ಕೂಲಿ ದರ ಇತ್ಯಾದಿಗಳು ಈ ಸಂಸ್ಥೆಗಳಿಂದಲೇ ವ್ಯವಸ್ಥೆಗೊಳಿಸಲ್ಪಡುತ್ತಿವೆ. ಬಹಳ ಮಟ್ಟಿಗೆ ಮನೆಬಾಡಿಗೆಗಳ ದರಗಳನ್ನೂ ವ್ಯಾಪಾರ ಜೀನಸುಗಳ ಕ್ರಯಗಳನ್ನು ಹೆಚ್ಚು ಕಡಮೆ ಮಾಡುವ ಅಧಿಕಾರವನ್ನು ಅಲ್ಲಿಯ ಸರಕಾರವೇ ಇಟ್ಟುಕೊಂಡಿರುವರು. ೧೯೧೪ನೇ ಇಸವಿಯಲ್ಲಿ ಆಹಾರ ಜೀನಸುಗಳ ಬಗ್ಗೆ ಎಷ್ಟು ಖರ್ಚಿಗೆ ಬೇಕಾಗುತಿತ್ತೊ ಅಷ್ಟೇ ಖರ್ಚು ಈಗಲೂ ತಗಲುವುದು. ಆದರೆ ಮನೆಬಾಡಿಗೆಯ ದರಗಳು ಮಾತ್ರ ಹೆಚ್ಚಿವೆ.

ಸ್ವರಾಜ್ಯ ಸುಖದ ಆ ದೇಶದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಸ್ಥಿತಿಯೇನು? ಈ ವಿದ್ಯಾಭ್ಯಾಸವು ಅಲ್ಲಿ ಕಡ್ಡಾಯವಾಗಿಯೂ, ಉಚಿತವಾಗಿಯೂ ಇರುವದು. ವಿದ್ಯಾರ್ಥಿವೇತನಗಳು ಮತ್ತು ಇತರ ಸಹಾಯವು ವಿದ್ಯಾರ್ಥಿಗಳಿಗೆ ಧಾರಾಳವಾಗಿ ಸಿಕ್ಕುವದರಿಂದ ಬಡಪತ್ತಿನ ಕಾರಣದಿಂದ ಸಮರ್ಥರಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಬೇಕಾಗಿರುವ ವಿದ್ಯಾಭ್ಯಾಸವು ದೊರಕದೆ ಹೋಗದು. ವಿದ್ಯಾರ್ಥಿಗಳ ಮೆಡಿಕಲ್ ಇನ್ಸ್‌ಪೆಕ್ಷನಿನ ಏರ್ಪಾಡು ಅಲ್ಲಿ ಕಡ್ಡಾಯವಾಗಿ ಜಾರಿಯಲ್ಲಿರುವದು. ಜನಸಂಖ್ಯೆಯು ಕಡಿಮೆಯಿರುವ ಪ್ರಾಂತ್ಯಗಳಲ್ಲಿ ಹಂಗಾಮಿ ಶಾಲೆಗಳನ್ನು ತೆರಿಯುವ ಏರ್ಪಾಡು ಇದೆ. ಇಂಥಾ ಶಾಲೆಗಳಲ್ಲಿ ಸಾಧಾರಣವಾಗಿ ಹದಿನೆರಡು ವಿದ್ಯಾರ್ಥಿಗಳು ಕ್ರಮಪ್ರಕಾರ ಈ ಹಂಗಾಮಿ ಶಾಲೆಗಳಿಗೆ ಹಾಜರಾಗುತ್ತಾರೆಂಬುದು ತಿಳಿದುಬಂದ ಕೂಡಲೇ ಅಂಥಾ ಶಾಲೆಗಳನ್ನು ಕಾಯಂ ಶಾಲೆಗಳಾಗಿ ಮಾಡುವರು. ಹಂಗಾಮಿ ಶಾಲೆಯನ್ನು ತೆರಿಯುವಷ್ಟು ವಿದ್ಯಾರ್ಥಿಗಳು ಇಲ್ಲದ ಪ್ರಾಂತ್ಯಗಳಲ್ಲಿ ಹಾಫ್ ಟ್ಯಾಮ್ ಅಂದರೆ ಅರ್ಧ ಹೊತ್ತು ಕೆಲಸ ನಡಿಸುವ ಶಾಲೆಗಳನ್ನು ತೆರಿಯುವರು. ಇಂಥಾ ಶಾಲೆಗಳಲ್ಲಿ ಉಪಾಧ್ಯಾಯರು ಒಂದು ದಿನ ಬಿಟ್ಟು ಮತ್ತೊಂದು ದಿನ ಬಂದು ವಿದ್ಯಾರ್ಥಿಗಳನ್ನು ಕಲಿಸುವರು. ಇನ್ನೂ ಜನಸಂಖ್ಯೆಯು ಕಡಮೆಯಾದ ಪ್ರಾಂತಗಳಲ್ಲಿ ಉಪಾಧ್ಯಾಯರು ಮನೆಯಿಂದ ಮನೆಗೆ ಹೋಗಿ ಕಲಿಸುವ ಏರ್ಪಾಡು ಇದೆ. ಹೀಗೆ ೧೯೨೩ನೇ ವರುಷದಲ್ಲಿ ಕ್ವೀನ್ಸ್‌ಲೇಂಡ್ ಎಂಬ ಒಂದು ಪ್ರಾಂತದಲ್ಲಿಯೇ ೧೭ ಜನ ಉಪಾಧ್ಯಾಯರು ೫೯,೫೪೪ ಮೈಲುಗಳ ಸಂಚಾರಮಾಡಿ ೧,೪೪೫ ಜನ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಟ್ಟಿರುತ್ತಾರೆ. ಇಷ್ಟೇ ಅಲ್ಲ, ಪತ್ರವ್ಯವಹಾರ, ಕೃಷಿ, ಕೈಗಾರಿಕೆಗಳು ಇತ್ಯಾದಿಗಳನ್ನು ಕಲಿಸುವ ಸರ್ಕೀಟು ಶಾಲೆಗಳೂ ಸಹ ಇವೆ. ವಿದ್ಯಾಭ್ಯಾಸದ ಸಲುವಾಗಿ ಈ ರೀತಿ ಆ ದೇಶದ ಸ್ವರಾಜ್ಯ ಸರಕಾರದವರು ಜನಸಂಖ್ಯೆಯ ಪ್ರತಿಯೊಂದು ವ್ಯಕ್ತಿಯ ಸಲುವಾಗಿ £1—11—2ನ್ನು ಖರ್ಚು ಮಾಡುತ್ತಿರುವರು. ಈ ಮೊಬಲಗಿನ ಪೈಕಿ £1—6—2 ಪ್ರಾಥಮಿಕ ವಿದ್ಯಾಭ್ಯಾಸದ ಸಲುವಾಗಿ ಖರ್ಚಾಗುವದು. ಸ್ವರಾಜ್ಯ ಸುಖಪ್ರಾಪ್ತಿಯ ಆ ರಾಷ್ಟ್ರದ ಮುಂದೆ ಹಿಂದೂದೇಶದ ಸ್ಥಿತಿಯೇನು?

ಪ್ರಜಾ ಆರೋಗ್ಯಪಾಲನೆಯ ವ್ಯವಸ್ಥೆಯನ್ನು ಪರಿಶೀಲಿಸಿದರೆ ಔಸ್ಟ್ರಾಲಿಯಾ ದೇಶವು ಆರೋಗ್ಯ ಉನ್ನತಿಯ ಶಿಖರದಲ್ಲಿರುವದು. ಅಲ್ಲಿಯ ಜನರ ಸರಾಸರಿ ಆಯುಷ್ಯ ಕಾಲವು ೬೦ ವರುಷಗಳಿಗೆ ಕಡಮೆಯಿಲ್ಲ, ಮತ್ತು ಹನ್ನೆರಡು ತಿಂಗಳುಗಳಿಗೆ ಕಡಮೆ ಪ್ರಾಯದ ಶಿಶುಗಳ ಮೃತ್ಯುಸಂಖ್ಯೆಯು ಆ ದೇಶದಲ್ಲಿ ಕಡಮೆ ಇರುವಷ್ಟು ಮಿಕ್ಕ ಯಾವ ದೇಶದಲ್ಲಿಯೂ ಇರದು. ಆರೋಗ್ಯಪಾಲನೆಯ ಬಗ್ಗೆ ವಿಧಾಯಿಸಲ್ಪಟ್ಟ ನ್ಯಾಯಕ್ರಮಗಳು ಜನಾಂಗದಲ್ಲಿ ಯಾವ ರೋಗಕ್ಕೂ ಬೆಳಿಯಲು ಇಂಬನ್ನು ಕೊಡವು. ಶಿಶುಪಾಲನೆಯ ವಿಷಯ ಆ ದೇಶದವರು ವಿಶೇಷವಾದ ಪರಿಶ್ರಮವನ್ನು ತಕ್ಕೊಳ್ಳುವರು. 1912ನೇ ಇಸವಿಯಲ್ಲಿ ಜಾರಿಗೆ ಬಂದ ಮೆಟರ್ನಿಟಿ ಎಕ್ಟ ಪ್ರಕಾರ ಪ್ರತಿ ಸರ್ತಿ ಬಾಳಂತಿಯಾದ ಸ್ತ್ರೀಯರಿಗೆ ಪ್ರತಿ ಸರ್ತಿ ಐದು ಪವನುಗಳಂತೆ ಸಹಾಯದ್ರವ್ಯವು ಸರಕಾರದಿಂದ ಕೊಡೋಣಾಗುವುದು. 1923ರಲ್ಲಿ ಈ ಬಗ್ಗೆ ಕೊಡೋಣಾದ ಸಹಾಯದ್ರವ್ಯದ ಜುಮ್ಲಾ ಮೊಬಲಗು ೬೭೦,೧೨೫ ಪವನುಗಳಾಗಿವೆ. ಹೆರುವ ತಾಯಿಗಳ ಮತ್ತು ಶಿಶುಗಳ ಪಾಲನೆಯನ್ನು ಕೈಕೊಳ್ಳುವ ಇತರ ಅನೇಕ ಸರಕಾರಿ ಸಂಸ್ಥೆಗಳೂ ಇವೆ. ಇವುಗಳಿಗೆ ಆ ದೇಶದ ಸರಕಾರವು ಬಹಳ ಉದಾರ ರೀತಿಯಿಂದ ಸಹಾಯವನ್ನು ಮಾಡುತ್ತಿರುವದು. ಮಜೂರರಿಗೆ ಎಕ್ಸಿಡೆಂಟ್ಸ್‌ಗಳ ಮೂಲಕ ಉಂಟಾಗುವ ಆಪತ್ತುಗಳ ನಿವಾರಣೆ ಬಗ್ಗೆ ಸರಕಾರದ ಸಮರ್ಥವಾದ ವಿಧಿಗಳು ಇರುವವು. ಅಂಟುರೋಗಗಳ ತಡೆಗೂ ಇದೇ ರೀತಿ ವ್ಯವಸ್ಥೆ ಇರುವದು. ಮಹಾರೋಗಗಳು ಇರುವಂಥವರೂ ಅಂಟುರೋಗಗಳಿಗೆ ಗುರಿಯಾಗಿರುವಂಥವರೂ, ವಿವಾಹಿತರಾಗದ ಹಾಗೆಯೂ, ಆಹಾರ ತಿಂಡಿ ಸಾಮಗ್ರಿಗಳನ್ನು ತಯಾರಿಸುವ ಸ್ಥಳಗಳಲ್ಲಿ ಇಂಥವರಿಗೆ ಪ್ರವೇಶ ದೊರಕದಂತೆಯೂ ಕಾನೂನಿನ ನಿರ್ಬಂಧವಿದೆ.

ಶುದ್ಧಮಾಡಿದನಂತೆ. ಬ್ರಾಹ್ಮಣರು ದಕ್ಷಿಣೆಯ ಹೆಬ್ಬಾಸೆಯಿಂದ ಇನ್ನಾವ ಅಧಮ ಕೃತ್ಯವನ್ನು ಮಾಡಿ ಹಿಂದೂಧರ್ಮವನ್ನು ಘಾತಮಾಡಲಿಕ್ಕಿರುವರೆಂದು ನೋಡಲಿಕ್ಕಿದೆ!

—ಕಳೆದ ದಂಗೆಯ ಸಮಯಕ್ಕೆ ಕಲ್ಕತ್ತೆಯ ೧ನೇ ಮತ್ತು ೨ನೇ ವಾರ್ಡುಗಳಲ್ಲಿ ಕಸ ಉಡುಗಲಿಕ್ಕೆ 'ಝಾಡಮಾಲ್ಲಿಗಳು' ಆಂಚಬರಲಿಲ್ಲವಂತೆ. ಕೂಡಲೇ ಕಲ್ಕತ್ತಾ ಕಾರ್ಪೋರೇಶನಿನ ಕೆಲವರು ಸಭಿಕರೂ ಸ್ವಯಂಸೇವಕರೂ ಕೂಡಿ ಸ್ವಚ್ಛವಾಗಿ ಕಸವನ್ನು ಝಾಡಿಸಿಬಿಟ್ಟರು. ಇದನ್ನು ಮೇಯರರೂ ಚೀಫ ಎಗ್ಜಿಕ್ಯೂಟಿವ್ ಅಧಿಕಾರಿಗಳೂ ಒಂದು ಪತ್ರಿಕೆಯನ್ನು ಹೊರಡಿಸಿ ಪ್ರಸಿದ್ಧಪಡಿಸಿದ್ದಾರೆ. ನಿಸ್ಸ್ಪೃಹರೂ ಜನಸೇವಕರೂ ಆದ ಗೃಹಸ್ಥರು ಸಭಿಕರಾದರೆ ಹೀಗೆ. ಅದೇ ಖುರ್ಚಿಯ ಮೇಲೆ ಕುಳಿತು ಸಲಾಂ ನಮಸ್ಕಾರಗಳಿಗಾಗಿ ಹಾರೈಸುತ್ತಿರುವವರೇ ಸಭಿಕರಾದರೆ? ನಮ್ಮ ಕಡೆಗಂತೂ ಅಂತಹರೇ ಹೆಚ್ಚಲ್ಲವೇ?

—ರಾಜ್ಯಸುಧಾರಣೆ ಮೊಳ್ಳೆ—ಪಂಜಾಬದೇಶದ ಅಂಬಾಲ ಎಂಬ ಶಹಾರಿನಲ್ಲಿ ಹಿಂದು ಧರ್ಮಸ್ಥಾಪನೆಯಲ್ಲಿ ಡಾ। ಮುಂಜಿ ಎಂಬ ಮಹಾಪುರುಷರು ಹಿಂದುಗಳ ಏಳಿಗೆ ಬಗ್ಗೆ ಮುಸಲ್ಮಾನರನ್ನು ಜರಿದು ಜಾತಿ ವೈಷಮ್ಯವನ್ನು ಉಂಟುಮಾಡಿದ್ದರಿಂದ ತಪ್ಪುಗಾರರು ಎಂಬ ವಗೈರೆ ಆರೋಪಗಳನ್ನು ಪಂಜಾಬದ ಲೋಕಸಭೆಯಲ್ಲಿ ಸೂಚಿಸಿದ ಹೊ। ಮಿಯಾನ್ ಅಬ್ದುಲ್ ಹೈದರವರ ಸೂಚನೆಗೆ ಸರಕಾರದವರು ಕಾಲಕ್ಕೆತಕ್ಕ ಕೋಲನೆಯ್ಯ ಈಗಣ ರಾಜ್ಯರಚನೆ ಕ್ರಮದ ದೃಷ್ಟಿಯಿಂದ ಆಲೋಚಿಸಿದರೆ ಇಂಥಾ ಭಾಷಣಗಳಿಂದ ಅವಿದ್ಯಾಪೌಢರಿಗೆ ಮಾತ್ರ ನೆವ ತೋರುವದು ಶಿವ್ಯಾ ವಿದ್ಯಾವಂತರು ಇಂಥಾ ಭಾಷಣಗಳಿಂದ ಏನೂ ಪ್ರಯೋಜನವಿಲ್ಲವೆಂತ ಅರಿದು ಇರುವರು. ಇತ್ತಂಡಿನವರು ವಾದವಿವಾದಗಳನ್ನು ನಡಿಸಿದ್ದರಿಂದ ಸತ್ಯಪ್ರಕಟವಾಗುವದು. ರಾಜ್ಯಕ್ರಾಂತಿ ಉಪಕ್ರಮಿಸಿದರೆ ತಕ್ಕಕಾಲದಲ್ಲಿ ಶಾಂತತೆ ನೆಲೆಗೊಳಿಸಲಿಕ್ಕೆ ಸರಕಾರದವರು ಅರಿತಿರುವರು. ಎಷ್ಟು ವಿಚಕ್ಷಣೆಯ ಭಾಷಣ.

—ಪಂಜಾಬ ದೇಶದ ಲಾಹೋರಿನ ಸಮೀಪದ ಮಂಗಿಮಂಜಿಲ್ಲೆಯ ಪಾಕಪಟ್ಟಿನ್ ನಿರಾವರಿ ಕೆಲಸದ (ಇಂಜಿನಿಯರ್) ಮಿ॥ ಮೆಕ್‌ಡರವೋಟ್ ಎಂಬ ಆಫೀಸರನನ್ನು, ಅವನ ಕೈಕೆಳಗೆ ಕೆಲಸ ನೋಡುತ್ತಿದ್ದ ಹುದ್ದೆದಾರನೊಬ್ಬನು ಹೊಕ್ಕಿ ಆಟದ ದಂಡದಿಂದ ಯಮದಂಡದಂತೆ ಪ್ರಯೋಗಿಸಿ ಯಮಲೋಕಕ್ಕೆ ವೈಷಮ್ಯದಿಂದ ಕಳುಹಿಸಿದನಂತೆ. ಎಷ್ಟು ನಿಂದ್ಯವಾದ ರಾಕ್ಷಸಾಧಮನ ಕೆಲಸ!

—ಹವಾಗುಣ ಲಕ್ಷಣ:—ಮಳೆಗಾಲ ಪ್ರಾರಂಭ ರೋಹಿಣಿ ನಕ್ಷತ್ರ ಮುಗಿಯುವ ವರೆಗೆ ಇಲ್ಲವೆಂತ ಕಂಡುಬರುತ್ತದೆ. ಮೀನರಾಶಿ ಕುಜ ಪ್ರವೇಶನಾಗದೆ ಮಳೆನಿಶಾನಿ ಹುಟ್ಟಲಿಕ್ಕಿಲ್ಲ. ಸಾಧಾರಣ ಜೂನ ೧೪ರಕ್ಕಿಂತ ಮುಂಚೆ ಮಳೆ ಅಭಾವವೆನ್ನಬಹುದು. ಬಾವಿ ಪಾತಾಳಕ್ಕೆ ನೀರು ಕುಜಮರಾಶಿಗೆ, ಕುಂಭರಾಶಿಯಲ್ಲಿ ಉತ್ತರಕ್ಕೆ ಮಳೆಘಾಳಿ, ದಕ್ಷಿಣದಳಗಳಲ್ಲಿ ನೀರಿನ ಅಭಾವವನ್ನು ಉಂಟುಮಾಡಿ ಶನಿಚಂದ್ರ ಸಮಾಗಮವಾಗಿ ಗುರು ಕೇಂದ್ರವಾಗದೆ ಮಳೆಬಾರದು. ಸ್ಪಷ್ಟವೆಂತ ಸರಕಾರದವರು ತಮ್ಮ ಹವಾಸ್ಥಿತಿ ಲಕ್ಷಣದಲ್ಲಿ ಮೇ ತಾ. ೨೬ರಲ್ಲಿ ಹೊರಡಿಸಿರುವರು. ರೈತರೇ ಜಾಗ್ರತೆಮಾಡಿಕೊಳ್ಳಬೇಕು.

ಮನುಷ್ಯರನ್ನು ತಿನ್ನುವ ಚಿರತೆ.

ಘರಾವಲಿಗೆ ಸೇರಿದ ರುದ್ರಪ್ರಯಾಗವೆಂಬ ಸ್ಥಳದಲ್ಲಿ ಮನುಷ್ಯರನ್ನು ಹೊಡೆದು ತಿನ್ನುವ ಚಿರತೆಯು ಸೇರಿಕೊಂಡು ೭ ವರ್ಷಗಳಿಂದಲೂ ಆ ಸುತ್ತುಮುತ್ತಿನ ಪ್ರದೇಶಗಳಲ್ಲಿ ವಿಶೇಷವಾದ ಭೀತಿಯನ್ನು ಉಂಟುಮಾಡುತ್ತಿತ್ತು. ಅದರ ಚರಿತ್ರೆಯು ವಿಸ್ಮಯಕರವಾಗಿ ಪರಿಣಮಿಸಿತ್ತು. ಇದುವರೆಗೂ ಈ ಕ್ರೂರಮೃಗವು ೧೨೫ ಮನುಷ್ಯರನ್ನು ಹಿಡಿದು ಕೊಂದು ತಿಂದುಹಾಕಿತ್ತು. ರಾತ್ರಿ ಹೊತ್ತಿನಲ್ಲೇ ಈ ಮೃಗವು ಊರಿನೊಳಕ್ಕೆ ಬಂದು ನಿದ್ದೆಮಾಡುತ್ತಾ ಮಲಗಿದ್ದವರನ್ನು ಸದ್ದಿಲ್ಲದೆ ಹಾರಿಸಿಕೊಂಡು ಹೋಗುವುದೇ ಅದರ ಪದ್ಧತಿಯಾಗಿತ್ತು. ಇಂಥಾ ವಿನಾಶಕರವಾದ ದುಷ್ಟಮೃಗವನ್ನು ಕೊಂದುಹಾಕಬೇಕೆಂದು ಬಹಳ ಕಾಲದಿಂದಲೂ ಅನೇಕ ಮಂದಿ ದೇಶೀಯ ಮತ್ತು ಬ್ರಿಟಿಷ್ ಶಿಕಾರಿದಾರರು ಎಷ್ಟೆಷ್ಟೋ ಸಾಹಸಪ್ರಯತ್ನಗಳನ್ನು ಮಾಡಿದಾಗ್ಯೂ ಅದು ಯಾರಿಗೂ ಸಿಕ್ಕದೆ ತಪ್ಪಿಸಿಕೊಳ್ಳುತ್ತಾ ಬಂದಿತ್ತು. ಇಷ್ಟೇ ಅಲ್ಲ, ವಿಷಹಾಕಿದ ತಿಂಡಿ ಪದಾರ್ಥಗಳನ್ನು ಇಟ್ಟು ಅದನ್ನು ಕೊಲ್ಲಬೇಕೆಂದು ಪ್ರಯತ್ನಗಳು ನಡೆದವು. ಆ ಮೃಗವಾದರೋ ಆ ಪದಾರ್ಥಗಳನ್ನೇನೊ ತಿಂದುಬಿಡುತ್ತಿತ್ತು. ಆದರೆ ವಿಷವು ಕೂಡ ಅದಕ್ಕೆ ಕೆಂದುತ್ತಿರಲಿಲ್ಲ. ಅದು ಸಿಕ್ಕಿಬೀಳುವಂತೆ ನಾನಾ ಉಪಾಯಗಳನ್ನು ಮಾಡಿದರೂ ಒಂದಕ್ಕೂ ಸಿಕ್ಕದೆ ಬಹಳ ಬುದ್ಧಿವಂತಿಕೆಯಿಂದ ತಪ್ಪಿಸಿಕೊಂಡು ಹೋಗುತ್ತಿತ್ತು. ಹಿಂದೆ ಎರಡಾವರ್ತಿ ಅದನ್ನು ಹಿಡಿದಿದ್ದರಾದರೂ ಎರಡು ಸಾರಿಯೂ ಅದು ತಪ್ಪಿಸಿಕೊಂಡು ಹೋಗಿಬಿಟ್ಟಿತ್ತು. ಇಂಥಾ ಕ್ರೂರವಾದ ಮೃತ್ಯುಸ್ವರೂಪದ ಮೃಗವು ಒಂದು ಪಿಶಾಚಿ ಎಂಬದಾಗಿ ಆ ಪ್ರಾಂತ್ಯದ ಪ್ರಜೆಗಳು ನಿಶ್ಚಯಿಸಿಕೊಂಡಿದ್ದರು. ಸರ್ಕಾರದವರಾದರೋ ಈ ಮೃಗವನ್ನು ಕೊಂದು ಅದರ ಚರ್ಮವನ್ನು ತಂದುಕೊಡುವವರಿಗೆ ೫೦೦ ರೂಪಾಯಿ ಬಹುಮಾನಮಾಡುವುದಾಗಿ ಸಾರಿಸಿದ್ದರು.

ಮೂರು ವಾರಗಳ ಹಿಂದೆ ಅಂದರೆ ಮೇ ತಾ. ೧ರಲ್ಲಿ ಕ್ಯಾಪ್ಟನ್ ಕೋರ್ಬೆಟ್‌ರವರು ಈ ಕ್ರೂರ ಚಿರತೆಯನ್ನು ಸಂಹಾರಮಾಡಿರುತ್ತಾರೆ. ಅವರೂ ಡೆಪ್ಯುಟಿಕಮಿಷನ್‌ರೂ ಅದನ್ನು ಹುಡುಕಾಡುತ್ತಾ ಹತ್ತು ವಾರಗಳನ್ನು ಕಳೆದರು. ಆ ಚಿರತೆಯು ಕೊಂದುತಿಂದು ಬಿಟ್ಟುಹೋಗಿದ್ದ ಮನುಷ್ಯರ ಶವಗಳ ಸಮೀಪದಲ್ಲಿ ಅವರಿಬ್ಬರೂ ಮೃಗದ ನಿರೀಕ್ಷಣೆಯಿಂದ ಹಲವು ರಾತ್ರಿಗಳಲ್ಲಿ ನಿದ್ದೆಗೆಟ್ಟು ಕಾಯುತ್ತಿದ್ದರು. ಕಡೆಗೆ ಅವರ ಶ್ರಮವೆಲ್ಲಾ ಸಾರ್ಥಕವಾಯಿತು. ಆ ಮೃಗವನ್ನು ಸಿಕ್ಕಿಸಿಕೊಂಡು ಗುಂಡಿನಿಂದ ಹೊಡೆದು ಕೊಂದು ಸುತ್ತುಮುತ್ತಣ ಪ್ರದೇಶಗಳನ್ನು ಅದರ ಹಾವಳಿ ಮತ್ತು ಭೀತಿಯಿಂದ ನಿವಾರಣೆಮಾಡಿರುತ್ತಾರೆ. ಕ್ಯಾಪ್ಟನ್ ಕೋರ್ಬೆಟ್‌ರವರು ಅದನ್ನು ಸಂಹಾರಮಾಡಿದ್ದಾಗ್ಯೂ ಅದಕ್ಕಾಗಿ ಸರಕಾರದ ಮೇಲ್ಗಂಡ ಬಹುಮಾನವು ತಮಗೆ ಬೇಕಾಗಿಲ್ಲವೆಂದು ತಿಳಿಸಿರುತ್ತಾರೆ. [ವೃ. ಪ.]

ಗಂಡರ ವಿರುದ್ಧ ಹೆಂಡರ ಕಟ್ಟು.

ರಶಿಯದ ಕರ್ಮವಾ ಎಂಬ ಹಳ್ಳಿಯಲ್ಲಿ ಒಬ್ಬ ಒಕ್ಕಲಿಗನು ಹೆಂಡತಿಯು ತನ್ನ ಮನಸ್ಸಿನ ವಿರುದ್ಧವಾಗಿರುವ ಸಾಮಾಜಿಕ ಚಳವಳಿಗಳನ್ನು ಸೇರಲಾರಂಭಿಸಿದ್ದನ್ನು ಕಂಡು ಅವಳಿಗೆ ಒಂದೇಟು ಕೊಟ್ಟನು. ಆಗವಳು ಹಳ್ಳಿಯ ಹೆಂಗಸರನ್ನೆಲ್ಲಾ ಕಟ್ಟಿಕೊಂಡು ತನಗಾದ ಅನ್ಯಾಯ ಪ್ರತೀಕಾರಕ್ಕಾಗಿ ಕಟ್ಟುಮಾಡಲು ಅನುವಾದಳು. ಇನ್ನು ಮೇಲೆ ಗಂಡಂದಿರು ತಮ್ಮ ಗಂಡಸುತನದ ಗಮಜನಲ್ಲಿ ಹೆಂಗಸರ ಮೇಲೆ ಕೈಎತ್ತಲಿಕ್ಕಿಲ್ಲೆಂದೂ ವಚನ ಕೊಡುವ ವರೆಗೆ ಈ ಕಟ್ಟನ್ನು ನಡಿಸಬೇಕೆಂದು ನಿರ್ಧರಿಸಿದರು.

ಆ ಘೋರ ಕಾಲೆಯಲ್ಲಿ ಹೆಂಗಸರೆಲ್ಲರೂ ಸೇರಿಕೊಂಡು ಭದ್ರವಾದ ಕೋಟೆಯಲ್ಲಿ ಯುದ್ಧಕ್ಕೆ ಸನ್ನದ್ಧರಾಗುವಂತೆ ಕುಳಿತುಕೊಂಡರು. ಮನೆಮನೆಗಳಲ್ಲೆಲ್ಲಾ ಕೆಲಸಗಳು ಅಲ್ಲಲ್ಲೇ ಬಿದ್ದವು. ಒಂದು ಮನೆಯಲ್ಲಾದರೂ ಒಲೆ ಹೊತ್ತಲಿಲ್ಲ. ದನಕರು ನೀರುಕುಡಿ ಕಾಣಲಿಲ್ಲ. ಕೂಸುಕುನ್ನಿಗಳ ಆಕ್ರೋಶವು ತೆರಪಿಲ್ಲದೆ ನಡೆಯಿತು. ನಮ್ಮಿಂದೆ ಹೆಂಗಸರಾಟವೇನು ನಡೆದೀತೆಂದು ಗಂಡಸರು ಕೆಲಹೊತ್ತು ಕಾದರು. ಕಡೆಗೆ ಕಾಯ್ದು ತಳಮಳಿಸುತ್ತಿದರೂ ಹೆಂಗಸರು ಮಣಿಯಲಿಲ್ಲ. ಮುಂದೆ ಉಪಾಯಗಾಣದೆ ಗಂಡಸರು ಹೆಂಗಸರಿಗೆ ಬಾಗಿ ಬೇಡಿಕೊಂಡರು. ಆಗ ಹೆಂಗಸರು ಅವರ ಸಹಿಯ ಒಂದು ಕರಾರನಾಮೆಯನ್ನು ಬರಿಸಿಕೊಂಡು ಮನೆಕೆಲಸಗಳಿಗೆ ಹೋದರು. [ಲೋಕಮತ.]

ದಕ್ಷಿಣ ಕನ್ನಡ.

ಬಂಟ್ವಾಳ:—ರಾಯಿಯಲ್ಲಿ ಒಂದೆರಡು ತಿಂಗಳ ಹಿಂದೆ ಒಬ್ಬ ಕೆಥೋಲಿಕನನ್ನು ಕೊಂದ ಅಪರಾಧಿಯು ತಲೆತಪ್ಪಿಸಿಕೊಂಡವನು ಈ ತನಕ ಪೋಲೀಸಿನವರ ತಲಾಸಿಗೆ ಸಿಕ್ಕದೆ ತನ್ನಿಂದ ತಾನೇ ಕಳೆದ ವಾರದಲ್ಲಿ ಬಂಟ್ವಾಳ ಮೆಜಿಸ್ಟ್ರೇಟರವರ ಸಮಕ್ಷಮದಲ್ಲಿ ಹಾಜರಾಗಿರುತ್ತಾನೆ. ಈತನ ನಂಬ್ರ ಇದೇ ಶನಿವಾರ ತಕ್ಕಿಗೆ ಇಟ್ಟಿರುತ್ತದೆ.

ಅಜ್ಜಬೆಟ್ಟಿನಲ್ಲಿ ಒಬ್ಬ ಜೈನ ಹೆಂಗಸನ್ನು ಚೂರಿಯಿಂದ ಕೊಚ್ಚಿಕೊಂದ ನಂಬ್ರದಲ್ಲಿ ಕೈದುಮಾಡಲ್ಪಟ್ಟ ಐದು ಜನರನ್ನು ಜಾಮೀನಿನ ಮೇಲೆ ಬಿಟ್ಟಿರುತ್ತಾರೆ.

ಇಲ್ಲಿಯ ಮಾರ್ಕೇಟಿನೊಳಗೆ ಸಾಮಾನುಗಳನ್ನು ಕೊಂಡುಹೋಗುವವರು ಸರಕಾರದ ನಿಗದಿ ಇರುವ ಒಂದು ಹೊರೆಗೆ ಒಂದು ಪೈ ಬದಲಾಗಿ ಈಗಿನ ಕಂಟ್ರಾಕ್ಟುದಾರರು ಕೆಲವರಿಂದ ಮೂರು ಪೈ ವಸೂಲು ಮಾಡುವುದನ್ನು ತಾಲೋಕು ಬೋರ್ಡು ಪ್ರೆಸಿಡೆಂಟರವರು ಗಮನಕ್ಕೆ ತೆಕ್ಕೊಳ್ಳಬೇಕಾಗಿಯೂ ಬೋರ್ಡಿನವರೇ ಕಟ್ಟಿಸಿರುವ ಕಟ್ಟೋಣದಲ್ಲಿಟ್ಟವರಿಗೆ ಪ್ರತಿ ಒಬ್ಬನು ದಿನಕ್ಕೆ ಒಂದಾಣೆ ಎರಡಾಣೆ ಕಂಟ್ರಾಕ್ಟುದಾರರಿಗೆ ವಸೂಲಿ ಕೊಡಬೇಕಂತೆ. ಅದಲ್ಲದೆ ಮಾರ್ಕೇಟಿಗೆ ತಿರುಗುವಲ್ಲಿ ಮಾರ್ಗದಲ್ಲಿ ಕಾಯಂ ಆಗಿ ಒಂದು ಅಂಗಡಿ ಒಬ್ಬರು ಕಟ್ಟಿ ವ್ಯಾಪಾರ ನಡಿಸುವುದರಿಂದ ಮಾರ್ಕೇಟಿಗೆ ಹೋಗಿ ಬರುವ ಜನರಿಗೆ ಇಕ್ಕಟ್ಟಾಗಿದೆ. ಮಾರ್ಗದಲ್ಲಿ ಅಂಗಡಿ ಕಟ್ಟಿರುವುದು ಕಾನೂನಿಗೆ ವಿರೋಧವಲ್ಲವೇ?

ಇಲ್ಲಿ ಮತ್ತು ಇಲ್ಲಿಯ ಸುತ್ತುಮುತ್ತಲಿನ ಗ್ರಾಮಗಳಲ್ಲಿ ಜಾನುವಾರುಗಳಿಗೆ ವೈಲಿಗೆಯ ರೋಗ ತಗಲಿ ಅನೇಕ ಕರುಗಳು ಮರಣಪಡುತ್ತಿರುವವು.

ಇಲ್ಲಿ ಈ ತನಕ ಒಂದೇ ಒಂದು ಮಳೆಯಾದರೂ ಬಾರದೆ ಇದ್ದದರಿಂದ ಮುಂದಿನ ಬೆಳೆಗೆ ಬೇಕಾದ ನೇಜಿ ಮೊಳಕೆ ಬಾರದೆ ಬೆಳೆಯ ಭವಿಷ್ಯತು ಹೇಳಲಿಕ್ಕೆ ಸಾಧ್ಯವಿಲ್ಲ. ಹಳ್ಳಿಪಳ್ಳಿಗಳಲ್ಲಿ ಕುಡಿಯಲಿಕ್ಕೆ ನೀರು ಇಲ್ಲದಿರುವುದರಿಂದ ಜನರು ಬಹಳ ಕಷ್ಟಪಡುತ್ತಿರುವರು.

ಮಾರ್ಗಗಳ ಬದಿಗಳಲ್ಲಿ ಜಲ್ಲಿಕಲ್ಲು ಮತ್ತು ದೊಡ್ಡ ಕಲ್ಲುಗಳ ರಾಶಿ ಹಾಕಿರುವದರಿಂದ ಮೋಟಾರುಗಳ ಚಲಾವಣೆಯು ಆಚೆ ಈಚೆ ಹಾದು ಹೋಗುತ್ತಿರುವುದರಿಂದ ಗಾಡಿ, ಸ್ಯಾಕಲ ಮತ್ತು ಪ್ರಯಾಣಿಕರಿಗೆ ತುಂಬಾ ಕಷ್ಟವಾಗುವುದರಿಂದ ಮೂರು ನಾಲ್ಕು ತಿಂಗಳು ಮಾರ್ಗದ ಬದಿಗಳಲ್ಲಿ ರಾಶಿ ಬಿದ್ದಿರುವದಕ್ಕಿಂತ ಮೊದಲು ಬೇರೆ ಎಲ್ಲಾದರೂ ಇಟ್ಟುಬಿಟ್ಟು ಮಾರ್ಗಕ್ಕೆ ಹಾಸುವ ಸ್ವಲ್ಪ ದಿವಸಕ್ಕೆ ಮುಂಚೆ ರಾಶಿ ಹಾಕಿದರೆ ಆಗುವುದಿಲ್ಲವೇ.

ಕುರುಕಾಲು:—ಕುರುಕಾಲು ಶ್ರೀ ಗಣಪತಿ ಹಾಯರ್ ಎಲಿಮೆಂಟರಿ ಶಾಲೆಯ ಪಂಚಮ ವಾರ್ಷಿಕ ವರ್ಧಂತಿ ಉತ್ಸವವು ಇದೇ ಮೇ ತಿಂಗಳ ತಾರೀಕು ೩೦ನೇ ಭಾನುವಾರ ದಿವಸ ಜರಗುವುದು. ಸದರಿ ವರ್ಧಂತಿ ಉತ್ಸವಕ್ಕೆ ಶಾಲೆಯ ಅಭಿಮಾನಿಗಳೆಲ್ಲರೂ ದಯಮಾಡಿ ಬರಬೇಕಾಗಿ, ಮೆನೇಜರರಾದ ಕೆ. ಗಣಪಯ್ಯ ಸೆಟ್ಟಿಯ ವಿನಂತಿ.

ಪೆರುವಾಟ್:—ಇಲ್ಲಿ ತಾ. ೨೦—೫—'೨೬ನೇ ರಾತ್ರಿ ೧೨ ಘಂಟೆಗೆ ಇಲ್ಲಿ ದಕ್ಷಿಣಕನ್ನಡ ಜಿಲ್ಲಾ ಮುಸ್ಲೀಮ್ ಖಂಡದ ಒಂದು ಸಭೆ ಸೇರಿತು ಇದಕ್ಕೆ ರಾ। ಎಂ. ಸಿ. ಮಮ್ಮಿಯವರನ್ನು ಅಧ್ಯಕ್ಷರಾಗಿ ಆರಿಸಿದ್ದರು. ಮೊಗ್ರಾಲ್ ಕೋನ್‌ಫರನ್ಸಿಗೆ ಅಧ್ಯಕ್ಷರಾಗಿ ಬಂದ ರಾ। ಸೀದಿ ಸಾಹೇಬ್ ಬಿ. ಎ. ಬಿ. ಎಲ್. ರವರಿಗೆ ಒಂದು ಮಂಗಳ ಪತ್ರವು ಸಭೆಯಲ್ಲಿ ಕೊಡಲ್ಪಟ್ಟಿತ್ತು. ಅದಕ್ಕೆ ಸದ್ರಿಯವರ ಸಮರ್ಪಕವಾದ ಉತ್ತರವೂ ಆ ಕುರಿತು ಅಧ್ಯಕ್ಷರ ಭಾಷಣವೂ ಆದ ನಂತರ ಸಭಿಕರ ಅಪೇಕ್ಷೆ ಮೇರೆಗೆ ರಾ। ಶೆರಿಫ್‌ರವರು ವಿದ್ಯೆಯಲ್ಲಿ ಹಿಂದುಳಿದ ನಮ್ಮವರಿಗೆ ವಿದ್ಯೆ ಸಿಗುವಂತೆ ಒಂದು ಜಿಲ್ಲಾ ಮುಸ್ಲಿಮು ಸಂಘವನ್ನು ಸ್ಥಾಪಿಸುವರೆ ಆಲೋಚಿಸಿ ಲಾಭನಷ್ಟವನ್ನು ನೋಡದೆ ತನ್ನ ಕೈಯಿಂದ ಸುಮಾರು ೨೦೦೦ ರೂಪ್ಯಾ ಕರ್ಚು ಹಾಕಿ ಒಂದು ತಿಂಗಳಿಂದ ಸರಿಯಾದ ಊಟಉಪಚಾರವಿಲ್ಲದೆ ಕಷ್ಟಪಟ್ಟು ತನ್ನ ಊರಿನವರಾದ ವ ಇತರ ಊರಿನವರಾದ ವಲಂಟಿಯರಿಂದ ಪ್ರತಿಫಲವಿಲ್ಲದೆ ಕೆಲಸಗಳು ನಡಿಸಿ ಚಂದವಾಗಿ ನಡಿಸಿದ ಕಾನ್‌ಫರೆನ್ಸಿನ ಸೆಕ್ರಿಟರಿಯಾದ ರಾ। ಎಂ. ಎಂ ಸಿ. ಮಮ್ಮಿಯವರನ್ನು ಈ ಕಾನ್‌ಫರೆನ್ಸಿನ ಕುರಿತು ಶ್ರಮಪಟ್ಟದಕ್ಕೂ ಅನೇಕ ಕಾಲಗಳಿಂದ ಅವರು ಮಾಡುತ್ತಿರುವ ಅನೇಕ ತರದ ಸತ್ಕಾರ್ಯಕ್ಕೂ ಸದ್ರಿಯವರನ್ನು ಬಹಳವಾಗಿ ಅಭಿನಂದಿಸಿ ಭಾಷಣ ಕೊಟ್ಟು ಸದ್ರಿ ಮಮ್ಮಿಯವರಿಗೂ, ರಾ। ಸೀದಿ ಸಾಹೇಬರಿಗೂ ಹೂಮಾಲೆಗಳನ್ನು ಹಾಕಿದ ನಂತರ ರಾತ್ರಿ ೧೨ ಘಂಟೆಗೆ ಸಭೆ ಮುಗಿಯಿತು.

ಮಂಜೇಶ್ವರ:—ಇಲ್ಲಿಯ ನರಸಿಂಹ ಜಯಂತಿ ಉತ್ಸವವೂ ವೈಶಾಖ ಹುಣ್ಣಿಮೆಯ ಕಾಲಾವಧಿ ಉತ್ಸವವೂ ಬಹಳ ವಿಜೃಂಭಣೆಯಿಂದ ಜರಗಿದವು. ಪರವೂರಿನ ಅನೇಕ ಮಂದಿ ಸದ್ಗೃಹಸ್ಥರು ಬಂದಿದ್ದರು.

ಇಲ್ಲಿಯ ಲೋಕಲ್ ಫಂಡ ಲಾಟಾನುಗಳಲ್ಲಿ ಒಂದೆರಡನ್ನು ಮಾತ್ರವೇ ಹಚ್ಚುತ್ತಾರೆ. ಉಳಿದ ಲಾಟಾನುಗಳಲ್ಲಿ ದಿವಗೆಳೇ ಕಾಣುವುದಿಲ್ಲ. ಮೆಂಬರರಾಗಿ ನಿಂತು ಶಿಫಾರಸು ಪಡಿಯಬೇಕೆಂಬ ಉಮೇದು ಮಾತ್ರವೇ ಕಂಡುಬರುತ್ತದೆ. ಮಾಡಿದ ಕೆಲಸವೇನೂ ಕಂಡುಬರುವುದಿಲ್ಲ.

ಈ ಸೆಂಟರಿನ ಖಾಲಿಬಿದ್ದ ಮೆಂಬರಿಕೆಗೆ ರಾ। ನಾರಾಯಣ ಬೈಗಳೂ, ರಾ। ಲಕ್ಷ್ಮಣಶೆಟ್ರು ಉಮೇದುವಾರರಾಗಿ ನಿಂತಿದ್ದರು. ಚುನಾವಣೆಯ ಅಂದಾಜು ನೋಡುವಾಗ ರಾ। ಲಕ್ಷ್ಮಣಶೆಟ್ರಿಗೆ ಸಿಕ್ಕುವ ಸಂಭವವು ಕಾಣುತ್ತದೆ.

ಕುಂಜೇಶ್ವರಳ್ಳ:—ಇಲ್ಲಿಯ ಪ್ಲೆಟಫೋರ್ಮು ಸ್ಟೇಶನ ಮಾಸ್ತರರ ಮನೆಗಳು ಸಜ್ಜದೊಂದು ಸ್ಟೇಶನು ಕಟ್ಟಲ್ಪಟ್ಟಿದೆ. ದೊಡ್ಡ ಸ್ಟೇಶನು ಕಟ್ಟಲಿಕ್ಕೆ ಸ್ಥಳವನ್ನು ಹಾಗೆಯೆ ಬಾಕಿ ಇಟ್ಟಿದೆ. ಬಹುಶಃ ಇಲ್ಲಿ ಒಂದು ಜಂಕ್ಷನ್ ಆಗುವ ಸಂಭವಕಾಣುತ್ತದೆ.

ಕಾಸರಗೋಡು (ವಸಿಷ್ಠಾಶ್ರಮ):—ಬರುವ ಡಿಸೆಂಬರದಲ್ಲಿ ಜರಗಲಿಕ್ಕಿರುವ ದಕ್ಷಿಣ ಕನ್ನಡ ಜಿಲ್ಲಾ ದ್ರಾವಿಡ ಬ್ರಾಹ್ಮಣ ಪರಿಷತ್ತಿನ ೭ನೇ ಸಮ್ಮೇಲನದ ಕಾರ್ಯನಿರ್ವಾಹಕ ಮಂಡಳಿಯನ್ನು ಆರಿಸುವ ಸಭೆಯು ಇದೇ ತಾ. ೧೬ಕ್ಕೆ ಜರಗಿತು. ಶ್ರೀ. ವೇ. ಪೇಜಾವರ ನಾರಾಯಣಾಚಾರ್ಯರವರು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಶ್ರೀ. ವೇ ಪೇಜಾವರ ಸೀತಾರಾಮಾಚಾರ್ಯರವರು ಅನೇಕ ಉಪಯುಕ್ತ ಸೂಚನೆಗಳಿಂದ ಸಭಿಕರನ್ನು ಪ್ರೋತ್ಸಾಹಿಸಿದರು. ಆ ಮೇಲೆ ಮುಂದಿನ ಕಾರ್ಯವನ್ನು ನಿರ್ವಹಿಸುವ ಬಗ್ಗೆ ಶ್ರೀ. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯ, ವೈದ್ಯ ಶಂಕರನಾರಾಯಣ ಭಟ್ಟ, ಖಂಡಿಗೆ ಈಶ್ವರಭಟ್ಟ, ಪರಮೇಶ್ವರ ಶಾಸ್ತ್ರಿ, ಹೃಷಿಕೇಶ ಭಟ್ಟ, ಇಳಂತೋಡಿ ಕೃಷ್ಣಭಟ್ಟ ಇವರಿಂದ ಕೂಡಿದ ಮಂಡಳಿಯನ್ನು ಆರಿಸಿ, ಸಭೆಯು ಮುಕ್ತಾಯವಾಯಿತು. ಕಾಸರಗೋಡು ತಾಲೂಕಿನ ಸ್ವಜಾತಿ ಗೃಹಸ್ಥರು ಇವರಿಗೆ ಬೆಂಬಲವಾಗಿ ನಿಂತು ಕರ್ತವ್ಯದಕ್ಷರಾಗಿರಲಿ.

ಫರಂಗಿಪೇಟೆ:—ಇಲ್ಲಿಯ ಶ್ರೀರಾಮ ಜೂನಿಯರ್ ಎಲಿಮೆಂಟರಿ ಶಾಲೆಯ ಸೇವಾಸಮಿತಿಯವರು ಈ ಶಾಲೆಗೆ ಇದ್ದ ಹಿಂದಿನ ಸಾಲಗಳನ್ನೆಲ್ಲಾ ಪರಿಹರಿಸಿ ಸ್ಥಿರವಾಗಿ ಒಂದು ಫಂಡನ್ನು ಏರ್ಪಡಿಸುವ ಉದ್ದಿಶ ಎರಡು ನಾಟಕಗಳನ್ನು ಇದೇ ತಿಂಗಳ ತಾ. ೧೧ ಮತ್ತು ೧೪ರಲ್ಲಿ ಫರಂಗಿಪೇಟೆಯಲ್ಲಿ ನಡಿಸಿ ಖರ್ಚು ಕಳದು ರೂ. ೧೦೦ನ್ನು ಸೇಕರಿಸಿದ್ದಲ್ಲದೆ, ಮಂಗಳೂರು ಮಹನೀಯರ ಪ್ರೋತ್ಸಾಹದಿಂದ ಸದರಿ ಸಮಿತಿಯವರು ಇದೇ ತಿಂಗಳ ತಾ. ೨೩ನೇ ಭಾನುವಾರ ಗದಗ ಶ್ರೀ ದತ್ತಾತ್ರೇಯ ನಾಟಕ ಕಂಪೆನಿಯವರ ಉದಾರ ಆಶ್ರಯದಲ್ಲಿ ಏನೊಂದೂ ಪ್ರತಿಫಲಕೊಡದೆ "ಪತಿವ್ರತಾ ಪ್ರಭಾವ" ಎಂಬ ಹೊಸ ನಾಟಕವನ್ನು ಆಡಿ ಖರ್ಚು ಕಳದು ರೂ. ೨೦೦ನ್ನು ಸೇಕರಿಸಿರುತ್ತಾರೆ.

ಹಿಂದಿನ ಸಾಲಗಳನ್ನೆಲ್ಲಾ ಪರಿಹರಿಸಿದ್ದಲ್ಲದೆ ಮುಂದಿನ ಶಾಲಾ ಫಂಡಿಗೆ ಬುನಾದಿಯಾಗಿ ರೂ. ೫೦ನ್ನೂ ಸಿರಖು ಠೇವಣಾತಿಯಾಗಿ ಇಡುವರೇ ನಿರ್ಣಯಿಸಿದ್ದು ಸ್ತುತ್ಯವೇ ಸರಿ. ಮುಂದೆ ಈ ಫಂಡನ್ನು ಸೇವಾಸಮಿತಿಯವರೂ, ಸಂಘದ ಮೆಂಬರರೂ ಕೂಡಿ ವೃದ್ಧಿಗೊಳಿಸುವರಾಗಿ ನಮ್ಮೆಲ್ಲರ ನಂಬಿಕೆ.

ಈ ಸೇವಾಸಮಿತಿಯ ಮೆಂಬರರಾಗಿ ಹೆಚ್ಚಿನ ಪರಿಶ್ರಮವನ್ನು ತೆಗೆದುಕೊಂಡು ಶಶಾಂಕನ ಪಾರ್ಟನ್ನು ಅಭಿನಯಿಸಿದ ಶ್ರೀ। ಎಸ್. ಸುಬ್ಬರಾವ್ ಮತ್ತು ಯುವತಿಯ ಸ್ತ್ರೀಪಾರ್ಟನ್ನು ನಡಿಸಿದ ಚಿ। ಪಿ. ರಘುನಾಥ ಶೆಣೈ ಇವರಿಬ್ಬರಿಗೂ ಫರಂಗಿಪೇಟೆಯಲ್ಲಿ ಆದ ನಾಟಕದಲ್ಲಿ ಸಂಘದವರು ತಮ್ಮ ನೆನಪಾರ್ಥವಾಗಿ ಎರಡು ಚಿನ್ನದ ಪದಕಗಳನ್ನು ಬಹುಮಾನವಾಗಿ ಕೊಟ್ಟಿರುವರು.

ಮಂಗಳೂರು.

ಇದೇ ೧೮ನೇ ತಾರೀಕು ಮಂಗಳವಾರ ೩ ಗಂಟೆಗೆ ಮಂಗಳೂರು ತಾಲೂಕು ಬೋರ್ಡು ಸಭೆಯು ಜರಗಿತು. ಹೊಸ ಮೆಂಬರರಾದ ಎಮ್. ಎಸ್. ಎಕಂಬರಾವ್ ಬಿ. ಎ. ಎಲ್. ಟಿಯವರು ಪ್ರಮಾಣ ಮಾಡಿ ಮೆಂಬರರಾದರು. ರಾ। ಕೆ. ರಘುಚಂದ್ರ ಬಲ್ಲಾಳರವರು ಕೇಳಿದ ಹಲವು ಪ್ರಶ್ನೆಗಳಿಗೆ ಉತ್ತರಗಳು ಮೇಜಿನ ಮೇಲೆ ಇಡಲ್ಪಟ್ಟವು. ಉಳ್ಳಾಲ ಗ್ರಾಮ ಪಂಚಾಯತ ಕೋರ್ಟು ಸಭೆಯನ್ನು ಜರಗಿಸಲಿಕ್ಕೆ ಉಳ್ಳಾಲ ಬೋರ್ಡು ಮಾಪಿಳ್ಳಾ ಶಾಲೆಯ ಕಟ್ಟೋಣವನ್ನು ಶುಕ್ರವಾರ ದಿವಸ ಕೊಡಬಹುದಾಗಿ ನಿಶ್ಚಯಿಸಲಾಯಿತು.

ಎಗ್ರಿಕಲ್ಚರ ರೆಸ್ಟೋಂಡೆಂಟ್ಸ್ ಯೂನಿಯನಿನವರು ತಾವು ಆಚರಿಸುವ ಜುಬಿಲಿಗೆ ತಾಲೂಕು ಬೋರ್ಡಿನಿಂದ ರೂ. ೧೦೦ ಧನಸಹಾಯ ಮಾಡಬೇಕೆಂದು ಬರೆದ ಪತ್ರಕ್ಕೆ ಬೋರ್ಡಿನಲ್ಲಿ ಹಣದ ಅಭಾವವಿದ್ದುದರಿಂದ ಅದನ್ನು ಕೊಡಲು ಸಾಧ್ಯವಿಲ್ಲವೆಂದು ತಿಳಿಸಲಾಯಿತು.

ತಾಲೂಕು ಬೋರ್ಡು ಮೀಟಿಂಗುಗಳನ್ನು ತಿಂಗಳಿಗೊಂದಾವರ್ತಿ ಬೇರೆ ಬೇರೆ ಸೆಂಟರುಗಳಲ್ಲಿ ಜರಗಿಸಿ ವೃತ್ತಿ ತೆರಿಗೆ ಅಪೀಲುಗಳನ್ನು ಅಲ್ಲಲ್ಲಿಯೇ ತೀರ್ಮಾನಿಸಬೇಕೆಂದು ರಾ। ರಘುಚಂದ್ರ ಬಲ್ಲಾಳರೂ, ಬಂಟವಾಳ ವೆಂಕಟರಾಯ ಪ್ರಭುಗಳೂ, ತಂದ ಠರಾವು ಸರ್ವಾನುಮತದಿಂದ ಪಾಸಾಯಿತು.

ಸರಕಾರ ಜಿ. ಓ ಗಳನ್ನು ಪ್ರತಿಯೊಬ್ಬ ತಾಲೂಕು ಬೋರ್ಡು ಮೆಂಬರರುಗಳಿಗೂ ಒದಗಿಕೊಡಬೇಕೆಂದು ರಾ। ರಘುಚಂದ್ರ ಬಲ್ಲಾಳರು ತಂದ ಠರಾವಿಗೆ ಅನುಸಾರವಾಗಿ ಅದರ ವಿಷಯ ಆಲೋಚಿಸಲಿಕ್ಕೆ ಮಿ। ಸಿಕೇರಾ ರಾ। ರಾಮಪ್ಪಾ ಮತ್ತು ರಾ। ಬಲ್ಲಾಳರು ಇವರ ಒಂದು ಕಮಿಟಿಯು ನೇಮಿಸಲಾಯಿತು.

ಮಂಗಳೂರು ಮುನ್ಸಿಪಾಲಿಟಿಯಲ್ಲಿ ಕಳೆದವಾರ ಸಿಡುಬಿನಿಂದ ಎರಡು ಮರಣಗಳೂ, ಅತಿಸಾರದಿಂದ ಎರಡು ಮರಣಗಳೂ, ಶ್ವಾಸಸ್ಪಾಸರೋಗಗಳಿಂದ ೮ ಮರಣಗಳೂ ಇತರ ರೋಗಗಳಿಂದ ೧೧ ಮರಣಗಳೂ ಆದವು.

ಕೆಥೋಲಿಕ್ ಪ್ರೊವಿಡೆಂಟ ಫಂಡಿನವರು ವರ್ಷಾವಧಿ ರಿಪೋರ್ಟಿನ ಪ್ರಕಾರ ಈ ಫಂಡಿನಲ್ಲಿ ಒಳ್ಳೇ ಅಭಿವೃದ್ಧಿಯು ಉಂಟೆಂದು ಕಂಡುಬರುತ್ತದೆ.

ಕೆನರಾ ಹ್ಯಾಸ್ಕೂಲ ಸ್ಕೊಲರಶಿಪ್ ಫಂಡಿಗೆ ತಲಚೇರಿಯ ಸಿವಿಲ್ ಸರ್ಜನರಾದ ಡೋಕ್ಟರ್ ಸಿ ರಾಮಕಾಮತರು ರೂ. ೬೦೦೦ವನ್ನೂ, ತಲಚೇರಿಯ ಕೃಷ್ಣಭಕ್ತರು ರೂ. ೫೦೦೦ರನ್ನೂ ದಾನಮಾಡಿರುತ್ತಾರೆ.

ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ದಕ್ಷಿಣಕನ್ನಡ ಜಿಲ್ಲೆಯ ಪರವಾಗಿ ಬರುವ ಲೆಜಿಸ್ಲೇಟಿವ್ ಕೌನ್ಸಿಲ ಮೆಂಬರಿಕೆಯ ಚುನಾವಣೆಗೆ ಉಮೇದುವಾರರಾಗಿರುವರಂತೆ.

ಶ್ರೀ ಗೋಕರ್ಣನಾಥ ವೆಂಕಟೇಶ ಸೇವಾಸಮಿತಿಯವರು ತಮ್ಮ ಹುಡುಗರ ಪರವಾಗಿ ಒಂದು ವಿದ್ಯಾರ್ಥಿಭವನವನ್ನು ಕಟ್ಟಿಸಬೇಕೆಂಬದಾಗಿ ನಿಶ್ಚಯಿಸಿರುವುದರಿಂದ ಗದಗ ಶ್ರೀ ದತ್ತಾತ್ರೇಯ ನಾಟಕ ಮಂಡಳಿಯ ಯಜಮಾನರಾದ ಮಿ। ರಾ। ಸದಾಶಿವರಾವ್ ಗರೂಡ್‌ರವರು ಸದರಿ ಕಾರ್ಯಕ್ಕೆ ಅನುಕೂಲವಾಗಿ ಇದೇ ತಿಂಗಳ ತಾ. ೨೧ರಲ್ಲಿ ಆಡಿದ ನಾಟಕದಲ್ಲಿ ಹುಟ್ಟಿಬಂದ ಐವೇಜಿನ ಪೈಕಿ ರೂಪ್ಯಾ ೧೦೧ನ್ನು ಈ ದಿನ ಸಮಿತಿಗೆ ಉಚಿತಾರ್ಥವಾಗಿ ಕೊಟ್ಟ ವರ್ತಮಾನವನ್ನು ಸರ್ವ ಜನರಿಗೆ ತಿಳಿಸಲಿಕ್ಕೆ ಸಂತೋಷಪಡುತ್ತೇನೆ. ಅವರು ಮಾಡಿದ ಈ ಉಪಕಾರಕ್ಕಾಗಿ ಪ್ರತ್ಯೇಕ ಧನ್ಯವಾದವನ್ನು ಸಮಿತಿಯ ಕಡೆಯಿಂದ ಅವರಿಗೆ ಕಳುಹಿಸಿರುತ್ತದೆ. ಇದೇ ಇಸವಿ ಎಪ್ರಿಲ್ ತಿಂಗಳಲ್ಲಿ ಮಾಸ್ತರ್ ಭಾರ್ಗವರವರು ತಮ್ಮ ಗಾಯನದಿಂದ ಹುಟ್ಟಿಬಂದ ಐವೇಜಿನ ಪೈಕಿ ರೂ. ೨೦೧—೧—೬ನ್ನು ಸದರಿ ವಿದ್ಯಾರ್ಥಿಭವನದ ಸಹಾಯಾರ್ಥವಾಗಿ ಸಮಿತಿಗೆ ಕೊಟ್ಟ ವರ್ತಮಾನವನ್ನು ಸಹ ಸರ್ವ ಜನರಿಗೆ ತಿಳಿಸಲಿಕ್ಕೆ ಸಂತೋಷಪಡುತ್ತೇನೆ ಎಂದು ಸಮಿತಿಯ ಅಧ್ಯಕ್ಷರಾದ ಬಿ. ಸುಬ್ಬಯ್ಯನವರು ತಿಳಿಸುತ್ತಾರೆ. (ಜಾ.-ಕ.-'ಟ.)

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ್ಯಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಸ್ಫೂರ್ತಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಹಿಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರೋಗ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. | 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0
Reserve and other sinking Funds „ 288,500—0—0

ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪನಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿಂಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ನಾಮೆ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸು, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—3—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದು ನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ತುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

'ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.'

ಮನೋಲ್ಲಾಸಿನಿ ಕಾಫಿ ಕ್ಲಬ್, ಮಾರ್ಕೇಟು ರೋಡು, ಮಂಗಳೂರು. | ಅಥವಾ | 'ಸದಾನಂದ ಕಾಫಿ ಕ್ಲಬ್' ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತಶುದ್ಧಿ | **ವಜ್ರಾಂಗ-ಬಿಂದು** | ವೀರ್ಯವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನಜನ್ಯ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಜೀವ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆನ್ನುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಚಿಕ್ಕೋಡಿ, (ಜಿಲ್ಲಾ ಬೆಳಗಾಂವ.)

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿಂ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ

— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತು ಕೆಲಸಗಾರಿಕೆಯು ಬಹು ಚೆನ್ನಾಗಿದೆ ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ನೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

---

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.



ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸ

— ಕೀಲಡ್ದಿಗೆ ಪದಕ. —

ಈ ಅಡ್ದಿಗೆಯನ್ನು ರೋಲ್ಡ್ ಗೋಲ್ಡ್ ಎಂಬ ಭಂಗಾರದಲ್ಲಿ ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟುನೋಡಲು ಮುದ್ದಾಗಿರುವಂತೆ ತಯಾರಿಸಿದೆ. ಮತ್ತು ಇದರ ಸರವನ್ನು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ತಯಾರಿಸಿದೆ. ಇದನ್ನು ಯಾವಾಗಲು ಕಟ್ಟಿಕೊಳ್ಳಲು ಚೆನ್ನಾಗಿರುವದು. ಎಷ್ಟು ಮುಂತಾದವು ಸೇರಿದರೂ ಕೆಡದು. ಇದರ ಬಣ್ಣವು ಎಂದಿಗೂ ಕೆಡದಂತೆ ಸವರನ್ ಬಂಗಾರದ ಬಣ್ಣಕೊಟ್ಟಿರುವದು. ಶ್ರೀಮಂತರೂ, ಗರೀಬರೂ ಉಪಯೋಗಿಸಲು ಲಾಯಖಾದದ್ದು. ಕ್ರಯ 1ಕ್ಕೆ 4/8.

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ

— ಡಾಬುಗಳು. —

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿ ಹೊಂದಿದ ಕೆಲಸಗಾರರಿಂದ ಬಹುಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಬಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ.

ಗೆಜ್ಜೆ ಡಾಬು 1ಕ್ಕೆ 3—0—0.

— ಇಮಿಟೇಶನ್ ವಜ್ರದ ಬೆಂಡೋಲೆಗಳು. —

ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡಿ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವುದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7ಕಲ್ಲಿನ ಬಿಳಿಯ ಓಲೆ ಜೊತೆ 3—0—0.
„ „ ಕೆಂಪುಕಲ್ಲಿನ ಓಲೆ ಜೊತೆ 3—8—0.

ವಿಳಾಸ:—ವೈ. ಎಮ್. ಸ್ವಾಮಿ ಅಂಡ್ ಕೊ,
ಪಾರ್ಕ್ ಟೌನ್, ಮದ್ರಾಸು.

Y. M. SWAMY & Co.,
No. 12. Nainiappa Naicken St.,
P. Town, MADRAS.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಎಂ. ಬಿ. ಎ. ಅವರುಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ, ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಜಲವೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನು ಸಂತತಿಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ನಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಲಿವರ್ ಮೂವ್‌ಮೆಂಟ್ ವಾಚ್
15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು, 10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.
ಎಲಾರ್ಮ್ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.
"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0
ಕಂಬೈಂಡ್ ಪೇಪರ್ ಕ್ಲಿಪ್ ಟ್ಯಾಮ್‌ಪೀಸ್ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನಮಲ್ ರೂ. 7—0—0. ಫ್ರೆಂಚ್ ಬೆಡ್ ಫೊಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಆಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತರದ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲುನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೪ನೇ ಶುಕ್ರವಾರ ಜೂನ್ ೧೯೨೬. ಸಂಚಿಕೆ ೨೩.

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branch:—COONDAPOOR.
ಶಾಖೆ:—ಕುಂದಾಪುರ.

ನಿಯಮಿತ ಮೂಲಧನ ರೂ. 3,50,000.

ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

ತಾ. 28—2—26ಕ್ಕೆ ತೋರುವ ಸದರಿ ಬ್ಯಾಂಕಿನ ವಹಿವಾಟುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.		ಆಸ್ತಿ ವ ಸೊತ್ತುಗಳು.	
ವಸೂಲು ಆದ ಮೂಲಧನ	1,80,690—9—11	ಹಿತ್ತಾ ಕಟ್ಟೋಣ ಕಲ್ಪಿನದ ಸ್ಟ್ರಜರಿಗಳು ವಗೈರೆ	3943—8—0,
ರಿಜರ್ವ ವ ಇತರ ನಿಧಿಗಳು	75,875—0—0,	ಯೋಗ್ಯಜವಾಬ್ದಾರಿ ಮೇಲೆ ಸಾಲಕೊಟ್ಟಿದ್ದು	7,58,851-13-8,
ಠೇವಣಾತಿಗಳು	5,30,003-14-3,	ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	25,800—0—0,
ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳುವಾರಿಗಳಿಗೆ	4,700—0—0,	ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು	4,700—0—0,
ಏವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು	40,274—3—11,	ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ)	22,795—6—6,
		ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಠೇವಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ	15,452—15—11,
ಜುಮ್ಲಾ ರೂ.	8,31,543—12—1	ಜುಮ್ಲಾ ರೂ.	8,31,543-12-1.

ನಿರಖು ಠೇವಣಾತಿಗಳನ್ನು ಕಾಲಕ್ಕೆ ತಕ್ಕಂತೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸುಂ ಠೇವಣಾತಿಗಳನ್ನೂ ತಂತು ಠೇವಣಾತಿಗಳನ್ನೂ ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಪ್ಟುಗಳನ್ನೂ ಸಾವುಕಾರಿ ಹುಂಡಿಗಳನ್ನೂ, ವಜ್ಮಾಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು,
ಉಡುಪಿ, ತಾ. 28—2—'26.

ನಯಂಪಳ್ಳಿ ಆನಂದರಾವ್, ಸೆಕ್ರೆಟರಿ.

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ದೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ದೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇನೆಯು ಒಂದೆ ಕ್ಷಣದಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ದೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.
ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಅಲಿಯನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ಣಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವದು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು

— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧಿ. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು ಹಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳ ಉಪಯೋಗದಿಂದ ಪೂರ್ತಿಯಾಗಿ ಗುಣವನ್ನು ಹೊಂದುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೫—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.

ಡಿ. ಮುನ್ನಾ ಲಾಲ್, ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ
ಚರಿತ್ರ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್ — ಗ್ರಂಥಕರ್ತರು.

ಇದರಲ್ಲಿ, (ಸಿಂಡರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂದ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲಿ ಬಾ, ಬೆಲ್ಲದ ಧೈಲು ಬೆರ್ಣಿಸ್ಸ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಬೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊಕ್ಕೊ ಕೋಳಿ, ಜೋಡು ನಕ್ಷತ್ರ, ತಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯು ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ

ಪುಸ್ತಕ ದೊರಕುವ ವಿಳಾಸ: —

ಶಾರದಾ ಛಾಪಖಾನೆ,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲು 1ಕ್ಕೆ ರೂ. 3—2—0.
„ 2. „ „ ರೂ. 1—8—0.

— ವ್ಯಾಪಾರಸ್ಥರಿಗೆ ನೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

---

11 ಮಣಿಗಳಿದ್ದು ಬ್ರಿಜ್ ಮ್ಯೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8
18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ಬಿ" ಟ್ಯಾಮ್‌ಪೀಸ ರೂ. 2-4-0
9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 „ „ „ 26—0—0.
14 „ 15 ಮಣಿ „ 36—0—0.
9 „ „ „ 32—0—0.
ಚಲೋದಾದ ಲವ್ ಪಕ್ಷಿಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-j ice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

---

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್ — ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಟೂತ್ ಅರ್ ಬಾಮ್ — ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಟೋನಿಯಾ ಮಿಕ್ಶ್ಚರ — ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ಕೃಷ್ಟವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಚೀಟುಗಳು — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು — ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ಕಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಖ. 9 ಆಣೆ.

ನಮ್ಮ ವಿಳಾಸ: — ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

The Canara Pubic Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು —

ಮಂಗಳೂರು:
- ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರ
- ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
- ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
- ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
- ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು — ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು — ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು — ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂವತ್ಸರದ ವೈಶಾಖ ಬ| ೧೦ ಶನಿವಾರದಿಂದ ಕ್ಷಯ ಸಂವತ್ಸರದ ಜ್ಯೇಷ್ಠ ಶು| ೧ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ವೃಷಭ ಬೇಶ.)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ನಿತ್ಯಯೋಗ	ಸೂರ್ಯ ಉ.	ಅಸ್ತ.
5	ಶನಿ	೧೦	೪೦.೪೬	ಉ. ಭಾ.	೨೦. ೦	೨೨	6. 5	6.53
6	ರವಿ	೧೧	೩೬. ೨	ರೇವತೀ	೧೬.೫೯	೨೩	6. 5	6.53
7	ಸೋಮ	೧೨	೩೨.೧೪	ಅಶ್ವಿನೀ	೧೪.೪೬	೨೪	6. 5	6.54
8	ಮಂಗಳ	೧೩	೨೯.೩೨	ಭರಣೀ	೧೩.೪೪	೨೫	6. 5	6.54
9	ಬುಧ	೧೪	೨೭.೪೬	ಕೃತ್ತಿಕಾ	೧೩.೩೨	೨೬	6 5	6.54
10	ಗುರು	●	೨೬.೧೪	ರೋಹಿಣೀ	೧೪.೪೬	೨೭	6 5	6.54
11	ಶುಕ್ರ	೧	೨೫.೧೪	ಮೃಗಶಿರಾ	೧೭. ೦	೨೮	6 5	6.55

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
28	93—3	81—2	—	—
29	93—6	83—3	—	—
30	93—8	81—3	—	—
31	93—4	80—3	—	—
1	93—4	81—3	—	—
2	93—6	83—4	—	—
3	92—5	78—9	—	—

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ	ವರೆಗೆ ರೂ. ಆ
ಮಸ್ಕತಿ	8— 4	9— 4
ಹೊಸ ಗುಡ್ಡು ...	8— 4	8—10
ಸುಗ್ಗಿ ...	7—14	8— 6
ಅವ್ವಲ್ ಬೆಳ್ತಿಗೆ ...	8— 0	9— 6
ರಂಗೂನು ಬೆಳ್ತಿಗೆ ಗೋಣಿ ೧ ...	14— 8	15— 0
ಗೋಧಿ ಗೋಣಿ ೧ಕ್ಕೆ ...	18— 0	20— 0
ಹುರುಳಿಗೋಣಿ ೧ಕ್ಕೆ ...	8— 0	9— 0
ಕಡಲೆಗೋಣಿ ೧ಕ್ಕೆ ...	13— 8	14— 8
ತೊಗರಿಗೋಣಿ ೧ಕ್ಕೆ ...	16— 0	16— 8
ತೊಗರಿಬೇಳೆ ಗೋಣಿ ೧ಕ್ಕೆ ...	19— 0	26— 0
ಉದ್ದು ಗೋಣಿ ೧ಕ್ಕೆ ...	15— 8	—
ಹೆಸರುಗೋಣಿ ೧ಕ್ಕೆ ...	15— 4	15— 8
ಊರು ಬೆಲ್ಲ ಖಂಡಿ ೧ಕ್ಕೆ ...	75— 0	77— 8
ಉಪ್ಪು ಗೋಣಿ ೧ಕ್ಕೆ ...	5— 4	5—10
ಕೊಬ್ಬರಿ ಖಂಡಿ ೧ಕ್ಕೆ ...	96— 0	100— 0
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ ...	34— 8	35— 0
ಎಳ್ಳಿಂಡಿ ಖಂಡಿ ೧ಕ್ಕೆ ...	50— 0	55— 0
ಕೊಬ್ಬರಿ ಎಣ್ಣೆ ಮುಡಿ ೧ಕ್ಕೆ ...	7— 8	8— 8
ಎಳ್ಳೆಣ್ಣೆ ಮುಡಿ ೧ಕ್ಕೆ ...	7— 8	9— 0
ಬೇವಿನ ಎಣ್ಣೆ ಬುದ್ದಿಗೆ ೧ಕ್ಕೆ ...	8-12-0	—
ಬೋರಿನ ಸಕ್ಕರೆ ಮುಡಿ ೧ಕ್ಕೆ ...	5— 2	—
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	5—12	6— 0
ಸಾಸಿವೆ ಮುಡಿ ೧ಕ್ಕೆ ...	9— 4	9— 4
ಕೊತ್ತಂಬರಿ ಮುಡಿ ೧ಕ್ಕೆ ...	5—	5— 4
ಕಾಫಿ ಖಂಡಿ ೧ಕ್ಕೆ ...	385— 0	400— 0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ ಹಳತು ...	300— 0	310— 0
ಹೊಸ ಅಡಿಕೆ ಖಂಡಿ ೧ಕ್ಕೆ ...	195— 0	220— 0
ಕಾಳುಮೆಣಸು ಖಂಡಿ ೧ಕ್ಕೆ ...	360— 0	—
ಹುಣಸೆ ಮುಡಿ ೧ಕ್ಕೆ ...	50— 0	64— 0
ಗೇರುಬೀಜ ಮುಡಿ ೧ಕ್ಕೆ ...	4— 0	4— 2
ಕಬ್ಬಿಣ ಖಂಡಿ ೧ಕ್ಕೆ ...	45— 0	65— 0
ತಾಮ್ರ ತಗಡು ಮಣ ೧ಕ್ಕೆ ...	16— 4	16—12
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	21— 0	—
ಚೀನಿ ಬೆಳ್ಳಿ ನೂರು ೧ಕ್ಕೆ ...	18—10	
ಹಿತ್ತಾಳೆ ತಗಡು ಮಣ ೧ಕ್ಕೆ ...	16— 8	
[illegible]	13— 9	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ



NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಎಷ್ಟೋ ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER

A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ, ಸುಧಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಚೆಲಾರ್ಡ್ ಎಸ್ಟೇಟ್. ಮುಂಬಯಿ.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ಡಿ. ಊಲನ್ ಮಾರ್ಟ್,
ಮಂಗಳೂರು.

ಇನಾಂ! ಜರ್ಮನ್ ಟ್ಯಾಂಪೀಸ್ ಇನಾಂ!

— ಫ್ಯಾನ್ಸಿ ಪಾಕೆಟ್ ವಾಚ್ —

ಈ ಗಡಿಯಾರಗಳು ಸ್ವಿಸಿಯಲ್ಲಿ ತಯಾರಾದದ್ದು. ಬಹು ದೃಢವಾದ ಸಾಮಾನುಗಳಿಂದಲೂ ಲೀವರ್ ಮೂವ್ಮೆಂಟ್ಸ್‌ಗಳಿಂದಲೂ ತಯಾರಿಸಿದೆ. ಬೆಳ್ಳಿಯ ಮುಚ್ಚಳವಿರುವದು ಮತ್ತು ಈ ಗಡಿಯಾರವು ನೋಡಲಿಕ್ಕೂ ಜೇಬಿನಲ್ಲಿಡಲಿಕ್ಕೂ ಲಾಯಖಾದದ್ದು. ಬೇಗನೆ ಕೆಡದು. ಇದಕ್ಕೆ 4 ವರುಷಗಳ ಖಾತ್ರಿಯಾದ ಗ್ಯಾರಂಟಿ ಕೊಡುವೆವು. ಈ ತಿಂಗಳೊಳಗಾಗಿ ಈ ಪಾಕೆಟ್ ವಾಚನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಅಲಾರಂ ಟ್ಯಾಂಪೀಸು ಇನಾಂ ಕೊಡುವೆವು. ಕ್ರಯ ಇನಾಂ ಟ್ಯಾಂಪೀಸು ಸಹಿತ ರೂ. 5—8—0.

— ಸೇಫ್ಟಿರೇಜರ್ —

ಈ ರೇಜರನ್ನು ಸ್ವಂತ ಉಪಯೋಗಕ್ಕೋಸ್ಕರವಾಗಿ ತಯಾರಿಸಿದೆ. ಇದರಲ್ಲಿ ಒಬ್ಬರ ಸಹಾಯವಿಲ್ಲದೆ ತಾವಾಗಿಯೇ ಮುಖಕ್ಷೌರಮಾಡಿಕೊಳ್ಳಬಹುದು. ಈ ರೇಜರುಗಳಲ್ಲಿ ಮುಖ ಕ್ಷೌರವನ್ನು ಮಾಡಿಕೊಳ್ಳುವದಕ್ಕೆ ಯಾವ ಕಷ್ಟವೂ ಇರದು. ಕ್ರಯ 1ಕ್ಕೆ ರೂ. 1—4—0.

ವಿಳಾಸ— ಎಲ್ಗಿನ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 1251,
ಮದರಾಸು.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು —

ಸರ್ವಿಸಿನ ಹೆಸರು.	ತಲಪುವ ಸ್ಥಳ.	ಹೊರಡುವ ಘಂಟೆ.
ಜನರಲ್ .	ಕಾರ್ಕಳ — ಆಗುಂಬೆ — ತೀರ್ಥಹಳ್ಳಿ .	ಪೂ. $6\frac{1}{2}$
ಸಿ. ಪಿ. ಸಿ. .	ಉಡುಪಿ — ಕುಂದಾಪುರ — ಬೈಂದೂರು	„ $6\frac{3}{4}$, $9\frac{3}{4}$
	ಉಡುಪಿ	ಮ. $12\frac{3}{4}$
	ಮುಲ್ಕಿ ವರೆಗೆ ಮಾತ್ರ . .	ಅ. $3\frac{3}{4}$
	ಬಂಟ್ವಾಳ — ಬೆಳ್ತಂಗಡಿ — ಚಾರ್ಮಾಡಿ.	
	ಕಾರ್ಕಳ — ಹೇಜಾಡಿಯಿಂದ . .	ಪೂ. 7, ಮ. 1
	ಬಂಟ್ವಾಳಕ್ಕೆ ಮಾತ್ರ . .	„ $10\frac{3}{4}$, ಅ. $4\frac{3}{4}$
	ಪುತ್ತೂರು — ಸಂಪಾಜೆ — ಮಡಿಕೇರಿ .	„ $7\frac{1}{2}$
	ಪುತ್ತೂರು	ಪೂ. $10\frac{1}{2}$ ಅ. 2
ಕಾರ್ಕಳ .	ಕಾರ್ಕಳ — ಉಡುಪಿ — ಕುಂದಾಪುರ .	ಪೂ. 6
	ಕಾರ್ಕಳಕ್ಕೆ ಮಾತ್ರ. . .	ಅ. 1
ಹನುಮಾನ್ .	ಕಾರ್ಕಳ — ಉಡುಪಿ — ಕುಂದಾಪುರ .	ಪೂ. 7
	ಕಾರ್ಕಳಕ್ಕೆ ಮಾತ್ರ. . .	ಮ. 12
ಕೆಂಕರ್ ಎಟ್ಕಿಲ್	ಪುತ್ತೂರು — ಮಡಿಕೇರಿಗೆ . .	ಪೂ. 7
	ಪುತ್ತೂರು — ಉಪ್ಪಿನಂಗಡಿ . .	ಅ. $1\frac{1}{2}$
	ವಿಟ್ಲಕ್ಕೆ	ಪೂ. 8, ಅ. $2\frac{1}{2}$
	ಉಡುಪಿ	ಪೂ. $7\frac{1}{2}$ ಅ. $1\frac{1}{2}$
ಸ್ಟಾರ್ .	ಮುಲ್ಕಿ — ಉಡುಪಿ . . .	„ 7, ಮ. 1
	ಬಂಟ್ವಾಳ	„ $10\frac{1}{2}$, ಅ. $4\frac{1}{2}$
ಇಂಡಿಯನ್ .	ಮುಲ್ಕಿ - ಉಡುಪಿ. . .	„ $6\frac{1}{2}$, ಮ. $12\frac{1}{2}$
ಪೊಪ್ಯುಲರ್ .	ಬಂಟ್ವಾಳ — ಬೆಳ್ತಂಗಡಿ — ಚಾರ್ಮಾಡಿ	ಪೂ. $7\frac{1}{2}$ ಮ. $12\frac{1}{2}$

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ —

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲ್ .	ಬೆಳಗ್ಗೆ 8 . .	ಸಂಜೆ 5-30
ಲೋಕಲ್ .	„ 10 . .	„ 4-30
ಶಟಲ್ .	ಸಂಜೆ 5-40 . .	ಬೆಳಗ್ಗೆ 9-55

ಹೊಸ ಮುದ್ರಣ! ಶುದ್ಧ ಪಾಠ!!

ಶ್ರೀ ಶಂಕರ ಭಗವತ್ಪಾದಾಚಾರ್ಯ ಪ್ರಣೀತವಾದ

ಶಿವಾನಂದಲಹರಿ

ಎಂಬ

ಪರಮಶಿವನ ಸ್ತೋತ್ರವು.

ಪ್ರಶಂಸೆ:—

ಈ ಗ್ರಂಥದಲ್ಲಿ ಅಡಗಿರುವ ೧೦೦ ಶ್ಲೋಕಗಳ ಪೈಕಿ ಪ್ರತಿಯೊಂದು ಶ್ಲೋಕವೂ ಆರಿಸಿ ಪೋಣಿಸಿದ ಆಣಿಮುತ್ತುಗಳಂತೆ ಅತಿ ಶ್ಲಾಘ್ಯಗಳಾಗಿ ಶಬ್ದಾಲಂಕಾರ ಅರ್ಥಾಲಂಕಾರ ಭಾವರಸ ಲಕ್ಷಣಗಳಿಂದ ಕೂಡಿ ಓದುವವರ ಮನಸ್ಸಿನಲ್ಲಿ ಆನಂದವನ್ನು ಹುಟ್ಟಿಸುವುದಲ್ಲದೆ, ಉಪಾಸ್ಯದೇವರಲ್ಲಿ ನಿರತಿಶಯ ಭಕ್ತಿಯನ್ನು ಹುಟ್ಟಿಸುತ್ತದೆ. ಪ್ರತಿಯೊಂದು ಶ್ಲೋಕಕ್ಕೂ ಕೊಟ್ಟಿರುವ ಪ್ರತಿಪದಾರ್ಥಭಾವಾರ್ಥಗಳು ಸ್ತೋತ್ರದ ಅರ್ಥವನ್ನು ಪುಷ್ಟೀಕರಿಸಿ ಶ್ರದ್ಧೆಯನ್ನು ಹೆಚ್ಚಿಸುವುದರೊಡನೆ ಸಂಸ್ಕೃತ ಭಾಷಾಜ್ಞಾನವನ್ನುಂಟುಮಾಡುವುದು.

ಶ್ರೀ ಶಿವಗೀತಾ

ಟೀಕಾಸಹಿತವಾಗಿ ಪಂಡಿತರಿಂದ ಪರಿಶೋಧಿಸಲ್ಪಟ್ಟಿದೆ.

ಇದು ಪದ್ಮಪುರಾಣೋಕ್ತವಾದ ಬ್ರಹ್ಮವಿದ್ಯಾಪ್ರತಿಪಾದಕವಾದ ಉಪನಿಷದ್ರತ್ನವು. ಇದು ಶ್ರೀ ಭಗವದ್ಗೀತೆಯಂತೆ ಪಾರಾಯಣಾರ್ಹವಾದ ಗ್ರಂಥವು. ಗೀತೆಯ ಚರಮೋಪದೇಶವು ಇದರಲ್ಲಿರುವುದು.

ಪ್ರತಿಯೊಂದಕ್ಕೆ ಬೆಲೆ 0–8–0. ಟಪ್ಪಾಲು ಖರ್ಚು 0–2–0.

ಮೂರು ಪುಸ್ತಕಗಳ ಕ್ರಯವನ್ನು ಮುಂಗಡವಾಗಿ ಕಳುಹಿಸಿದರೆ ಟಪ್ಪಾಲುಖರ್ಚಿಲ್ಲದೆ ಕಳುಹಿಸಲ್ಪಡುತ್ತ.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕದ ವ್ಯಾಪಾರಿಗಳು,
ಚಿಕ್ಕಪೇಟೆ ಬೆಂಗಳೂರು ಸಿಟಿ.

The Canara Bank Ltd., Mangalore.

ದಿ ಕೆನರಾ ಬ್ಯಾಂಕು ಲಿಮಿಟೆಡ್, ಮಂಗಳೂರು.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಐವೇಜಿನ ಬಡ್ಡಿ ಕೊಡದೆ ಇರುವ ಕಾರಣ ಸದರಿಯವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳು ಸದರಿಯವರ ಪೈಕಿ 1ನೇಯವರು ಕಾಣಸಿಕ್ಕಲಿಲ್ಲವಾಗಿಯೂ, 2ನೇ ಮತ್ತು 3ನೇಯವರು ಮೃತಪಟ್ಟಿರುವರಾಗಿಯೂ ವಾಪಾಸು ಬಂದ ಕಾರಣ ಸದರಿ ಅಡವಿಟ್ಟ ನಗಗಳನ್ನು ತಾ. 15—6—1926ರ ಒಳಗೆ ಬಿಡಿಸಿಕೊಂಡು ಹೋಗದೆ ಇದ್ದರೆ ಅವುಗಳನ್ನು ತಾ. 24—6—1926ನೇ ಗುರುವಾರ ದಿವಸ ಮಧ್ಯಾಹ್ನ 12 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವುದು.

ಜಂಪ್ರಾ ನಂಬ್ರ	ಐವೇಜು ಪಡೆದವನ ಹೆಸರು	ಪಡೆದ ತಾರೀಕು	ಅಸಲು ಮೊಬಲಗು	ತಾ. 24ಕ್ಕೆರ ವರೆಗಿನ ಬಡ್ಡಿ ವಗೈರೆ
1.	ಎಸ್. ಎಸ್. ಮಾರ್ಟಿನ್	2-3-23	ರೂ. 150ರ ಪೈಕಿ 125/,	7-7-1
2.	ಯು. ವೆಂಕಪ್ಪಯ್ಯ	17-9-24	ರೂ. 165ರ ಪೈಕಿ 155/,	7-10-11
3.	ಡಿ.	20-12-24	ರೂ. 60/,	4-2-0

Canara Bank Ltd., Mangalore, 27-5-'26. K. Venkat Rao, *Secretary*.

ನೋಟೀಸು.

ದಕ್ಷಿಣ ಕನ್ನಡ ಒಫಿಶಿಯಲ್ ರಿಸೀವರ ಕೋರ್ಟಿನಲ್ಲಿ.

ದಿವಾಳಿ ಅರ್ಜಿ ನಂಬ್ರ 20/1926.

ಕೆ. ಎಸ್. ಹಾಮುದ್, ಇದ್ದಿನಬ್ಬನ ಮಗ, ಮಂಗಳೂರು ಶಹರು ಕುದ್ರೋಳಿಯಲ್ಲಿರುವವ } ಅರ್ಜಿದಾರ.

1. ಶರ್ಬಟ್ ವೆಂಕಟ್ರಮಣಯ್ಯ
2. ಚರ್ಕಲ್ ಕಾಂತರಾಮರಾವು
3. ಕೃಷ್ಣಶೆಟ್ಟಿ
4. ಚೆರ್ದಪ್ಪ ಯಾನೆ ನಾರಾಯಣ ಕ್ಯಾನುಭಾಗ } ಸಾಲಗಾರರು.

ಸದರಿ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ದಾಖಲುಮಾಡಿದ ಮೇಲ್ಕಾಣಿಸಿದ ಅರ್ಜಿಯು ತಾ. 7—6—1926ನೇ ದಿವಸ ಮಧ್ಯಾಹ್ನ ಘಂಟೆ 11ಕ್ಕೆ ಸದರಿ ಕೋರ್ಟಿನ ಮುಂದೆ ತನಿಕೆಗೆ ತೆಗೆಯಲ್ಪಡುವುದು, ಸದರಿ ಅರ್ಜಿಯನ್ನು ಆಕ್ಷೇಪಿಸುವವರು ತಮ್ಮ ಆಕ್ಷೇಪಣೆಯನ್ನು ಸದರಿ ತಾರೀಕಿನೊಳಗೆ ಜಾಹೀರುಮಾಡಿಕೊಳ್ಳತಕ್ಕದ್ದು.

ಮಂಗಳೂರು, ತಾ. 3—6—1926. A. C. Gonsalves, *Vakil for Petitioner*

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	... ...	ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ		„ 2—8—0.
„ ಸ್ಥಳೀಕರಿಗೆ	...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಶುದ್ಧ ರೋಮದ ಶಾಲುಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 9 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 5 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಷ್ಮೆ ಮಡಿಗಳು, ಸಾವರ್ಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್ ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ, ಕಾಶೀ ಕ್ಷೇತ್ರ.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವುದಕ್ಕೂ ಒಂದು ದೇಹದ ಮರ್ಮಶಾಸ್ತ್ರವು ಇರುವುದು ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, ಮದ್ರಾಸ್.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು.

ಓ. ಪಿ. 56/1926.

ಎಮರಶಿ ಯಾನೆ ಗೊನ್ಸಾಲ್ವೆಸ್ ಕೂಡ ಅರ್ಜಿದಾರರು.

ಕುಂದಾಪುರ ತಾಲೂಕು ಆನಗಳ್ಳಿ ಗ್ರಾಮದ ನಿವಾಸಿಕನಾಗಿದ್ದ ಫ್ರಾನ್ಸಿಸ್ಕ ಕ್ಷೆವಿಯರ್ ಫಡ್ತಾದನು ತಾರೀಕು 30–11–1925ರಲ್ಲಿ ಮೃತಪಟ್ಟವನಾದ್ದರಿಂದ ಆತನ ಲೈಫ್ ಎಸ್ಸುರೆನ್ಸ ಪೋಲಿಸಿಯ ಹಣ ವಸೂಲ್ ಮಾಡಲಿಕ್ಕೆ ಆತನ ವಿಧವೆಯಾದ 1ನೇ ಅರ್ಜಿದಾರಳು ವ ಮಗನಾದ 2ನೇ ಅರ್ಜಿದಾರನು ಸಹಾ ಎರಡು ಜನರು ಕೊಟ್ಟ ಮೇಲ್ಕಂಡ ಅರ್ಜಿಯು ತಾ. 14—6—1926ಕ್ಕೆ ತನ್ನಿಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪವಿರುವವರು ಆ ದಿವಸ ಹಗಲು 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರುಮಾಡತಕ್ಕದ್ದು. ತಪ್ಪಿದರೆ ಆ ಅರ್ಜಿಯ ಕುರಿತು ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕುಂದಾಪುರ, 1—6—1926. K. Narayana Shenoy, *Pleader*, ಅರ್ಜಿದಾರರ ವಕೀಲು.

ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘದ ದ್ವಿತೀಯ ಪರಿಷತ್ತು.

ಕಳೆದ ಮೇ ತಾರೀಕು ೨೯, ೩೦, ೩೧ರಲ್ಲಿ ಮಂಗಳೂರಿನ ಮೊಗವೀರ ಜ್ಞಾನೋದಯ ಸಮಾಜದಲ್ಲಿ ಕೂಡಿ ಬಂತು. ಪ್ರಥಮ ದಿನ ಮಧ್ಯಾಹ್ನ ೨ ಘಂಟೆಗೆ ಸಂಘದ ಆಡಳಿತ ಸಭೆಯು ಮಲ್ಪೆಯ ಕೆ. ಯಂ. ಸೋಮನವರ ಅಧ್ಯಕ್ಷತೆಯಲ್ಲಿ ಕೂಡಿ ಬಂದು ಪರಿಷತ್ತಿನಲ್ಲಿ ಇಡತಕ್ಕ ವಿಷಯಗಳನ್ನು ಚರ್ಚಿಸಿ ನಿರ್ಧರಿಸಿದರು. ಅದೇ ದಿನ ರಾತ್ರಿ ೭ ಘಂಟೆಗೆ ನೆರೆದ ಮಹಾ ಸಭೆಯವರಿಗೆ ಶ್ರೀ ಮೋಹನಪ್ಪ ತಿಂಗಳಾಯರು ಬೀಡಿ, ಸಿಗರೇಟು, ಚುರೂಟು ಹೊಗೆಸೊಪ್ಪುಗಳ ಕೆಡಕುಗಳನ್ನು ಮನೋರಂಜಕವಾಗಿ ವರ್ಣಿಸಿ ಭಾಷಣ ಮಾಡಿದರು. ಅನೇಕರು ಈ ದುರ್ವ್ಯಸನವನ್ನು ಬಿಟ್ಟುಬಿಡಲು ವಾಗ್ದತ್ತ ಮಾಡಿದರು. ತಾ. ೩೦ನೇ ಬೆಳಗ್ಗೆ ಪರಿಷತ್ತಿನ ಕಾರ್ಯವು ಪ್ರಾರಂಭವಾಗಿ ಸಾಮಾಜಿಕ ದೋಷಗಳನ್ನು ಮಾಡಿದವರಿಗೆ ಗ್ರಾಮ ಸಂಘದವರು ಕೊಟ್ಟ ತೀರ್ಮಾನಗಳ ಮೇಲೆ ಬಂದ ಅಪೀಲುಗಳನ್ನು ವಿಮರ್ಶಿಸಿ ತೀರ್ಪು ಕೊಡಲಾಯಿತು. ಅಂದು ಸಾಯಂಕಾಲ ೭ ಘಂಟೆಗೆ ಕೂಡಿ ಬಂದ ಮಹಾಸಭೆಯಲ್ಲಿ ಶ್ರೀ ಮೋಹನಪ್ಪ ತಿಂಗಳಾಯರು "ಆರೋಗ್ಯಭಾಗ್ಯ"ವೆಂಬ ವಿಷಯದ ಮೇಲೆ ಸಂಗೀತದೊಂದಿಗೆ ಚಿತ್ತಾಕರ್ಷಕವಾದ ಭಾಷಣಮಾಡಿದರು. ತಾ. ೩೧ನೇ ಮಧ್ಯಾಹ್ನ ಕುಲಗುರು ಶ್ರೀಮಾನ್ ಮಾಧವ ಮಂಗಲ ಪೂಜಾರ್ಯರ ಅಧ್ಯಕ್ಷತೆಯಲ್ಲಿ ಮಹಾಸಭೆಯು ನೆರೆದು ಬಂತು. ಪ್ರಥಮತಃ ಭಗವತ್ ಪ್ರಾರ್ಥನೆಗಳಾಗಿ ಮಹಾಜನ ಸಂಘದ ವಾರ್ಷಿಕ ವರದಿಯನ್ನು ಮೋಹನಪ್ಪ ತಿಂಗಳಾಯರೂ, ಲೆಕ್ಕಪತ್ರಗಳನ್ನು ಎಮ್ಮೆಲ್ಲು ಕೊರಗಪ್ಪ ಪುತ್ರನ್ನಾಯರೂ ಓದಿದರು. ವಿದ್ಯಾಪ್ರಚಾರನಿಧಿಗಾಗಿ ಈ ವರೆಗೆ ಎಲ್ಲಾ ಖರ್ಚು ಕಳೆದು ೬,೫೦೦ರೂಪಾಯಿಗಳು ಬ್ಯಾಂಕಿನಲ್ಲಿ ಮೂಲಧನವಾಗಿ ಉಳಿದಿವೆ ಎಂಬುದು ವರದಿಯಿಂದ ತಿಳಿದು ಬಂತು. ನಂತರ ಶ್ರೀ ಜ್ಞಾನೋದಯ ಸಮಾಜದ ಕೆಲವು ಸದಸ್ಯರು, ಎರಡು ಪಕ್ಷವಾಗಿ ನಿಂತು ತುಳು ಭಾಷೆಯಲ್ಲಿ ಸಂಗೀತ ರೂಪವಾಗಿ ಮದ್ಯಪಾನ ವ್ಯಸನದ ಹಿತಾಹಿತದ ಕುರಿತು ಸಂವಾದಗಳನ್ನು ನಡಿಸಿದರು. ಪರಿಷತ್ತಿಗೆ ಪ್ರೇಕ್ಷಕರಾಗಿ ದಯಮಾಡಿ ಬಂದಿದ್ದ ಶ್ರೀಯುತ ಅತ್ತಾವರ ಬಾಲಕೃಷ್ಣ ಶೆಟ್ಟಿಯವರು ಅಭಿವೃದ್ಧಿಕರವಾದ ವಿವಿಧ ಸೂಚನೆಗಳನ್ನು ಮಾಡಿದರು. ಮತ್ತು ಸಾಯಂಕಾಲ ೭ ಘಂಟೆಗೆ ಆರ್ಯ ಮೊಗವೀರ ನಾಟಕ ಮಂಡಳಿಯವರು "ಮೊಗವೀರರ ಅಭ್ಯುದಯ" ಎಂಬ ಅತ್ಯಂತ ಬೋಧಪ್ರದವೂ ಮನೋರಂಜನವೂ ಆದ ಇತಿಹಾಸಿಕ ನಾಟಕವನ್ನಾಡಿ ಪರಿಷತ್ತಿನವರನ್ನು ಆನಂದಗೊಳಿಸಿದರು.

ಜೂನು ತಾ ೧ರಲ್ಲು ಬೆಳಗ್ಗೆ ಕುಲಗುರು ಶ್ರೀಮಾನ್ ಮಾಧವ ಮಂಗಲ ಪೂಜಾರ್ಯರ ಅಧ್ಯಕ್ಷತೆಯಲ್ಲಿ ಪರಿಷತ್ತು ಪ್ರಾರಂಭವಾಗಿ, ಮುಂಬಾಯಿ, ಮದರಾಸು, ಶಿವಮೊಗ್ಗ, ಪ್ರಾಂತ್ಯಗಳಿಂದ ಕೆಲವು ಮಹನೀಯರು ಪರಿಷತ್ತಿನ ವಿಜಯವನ್ನು ಬಯಸಿ ಬರೆದ ತಂತಿ ಮತ್ತು ಪತ್ರಗಳನ್ನು ಓದಲಾಯಿತು. ಮತ್ತು ಪರಿಷತ್ತಿನ ಮುಂದೆ ಬಂದ ವಿವಿಧ ಸೂಚನೆಗಳನ್ನು ವಿಶೇಷವಾಗಿ ಚರ್ಚಿಸಿ ಆ ಪೈಕಿ ಈ ಕೆಳಗಿನ ಸೂಚನೆಗಳನ್ನು ಮಾತ್ರ ಅನುಮೋದಿಸಿ ನಿರ್ಣಯಿಸಲಾಯಿತು.

೧. ಮೀನು ಹಿಡಿತದ ಕುರಿತು ಈ ವರೆಗೆ ಇದ್ದ ಕೆಲವು ಹಳೇ ಪದ್ಧತಿಯ ನಿರ್ಬಂಧಗಳನ್ನು ತೆಗೆದುಹಾಕಿ ಯಾರೂ ಯಾವ ಸಮಯದಲ್ಲಿಯೂ ಯಾವ ವಿಧಾನವನ್ನೂ ಕೈಕೊಳ್ಳಬಹುದು. (ಸೂಚಕರು ಶ್ರೀ ಕೆ. ಯಂ. ಸೋಮನವರು ಮತ್ತು ಬಪ್ಪನಾಡ ಶ್ರೀ ಕೊರಗಪ್ಪ ಮಂದಣ್ಣಾಯರು.)

೨. ಬರುವ ಜುಲಾಯಿ ತಿಂಗಳ ಅಂತ್ಯದಲ್ಲಿ ಬಾರ್ಕೂರು ಮತ್ತು ಮಂಗಳೂರು ಹೋಬಳಿಗಳಿಗೆ ಸೇರಿದ ಎಲ್ಲಾ ಮೊಗವೀರರ ಖಾನೆಸುಮಾರಿಯನ್ನು ತೆಗಿಯಬೇಕು. (ಸೂಚಕ-ಶ್ರೀ ಉದಿಯಾವರ ಸದಿಯನವರು.)

೩. ಪ್ರತೀ ಮನೆಯಲ್ಲಿ ೧೨ ವರುಷದ ಒಳಗಿನ ಒಬ್ಬ ಬಾಲಕ ಯಾ ಬಾಲಕಿಯಾದರೂ ಶಾಲೆಗೆ ಹೋಗುವಂತೆ ಎಲ್ಲಾ ಗ್ರಾಮ ಕೂಡುಕಟ್ಟಿನವರು ಮತ್ತಾಯಗೊಳಿಸಬೇಕು. (ಸೂಚಕ-ಶ್ರೀ ಯ. ಕೆ. ಬಸಪ್ಪನವರು ಮೂಳ್ಳು)

೪. ವಿವಾಹ ಕಾರ್ಯಗಳನ್ನು ಒಂದೇ ದಿನ ಒಂದೇ ಊಟದೊಳಗೆ ಮುಗಿಸಬೇಕು. ಮತ್ತು ಯಾವ ತರದ ಮದ್ಯಮಾಂಸವನ್ನಾದರೂ ಅಂದು ಯಾರಿಗೂ ಯಾವ ಸಂದರ್ಭದಲ್ಲಿಯೂ ಕೊಡಕೂಡದು. (ಸೂಚಕ—ಪುದ್ದು ಬಸಪ್ಪ ಸಾಲ್ಯಾನರು, ಕದಿಕೆ.)

೫. ಹತ್ತು ವರುಷದ ಒಳಗಿನ ಹುಡುಗರನ್ನೂ ಹುಡುಗಿಯರನ್ನೂ ಕಳ್ಳು ಶರಾಬು ಅಂಗಡಿಗಳಿಗೆ ಕಳುಹಿಸಲೂ ಕೊಂಡುಹೋಗಲೂ ಕೂಡದು. (ಸೂಚಕ — ಕೈಪುಂಜಾಲು ಚೆನ್ನಪ್ಪನವರು.)

೬. ವಿಷ ಅಥವಾ ತೋಟೆ ಹಾಕಿ ಮೀನುಗಳನ್ನು ನಾಶಮಾಡಕೂಡದು. ಇತರ ಸಮುದಾಯದವರೂ ಅಂಥ ಕೃತ್ಯ ಮಾಡದಂತೆ ಕಠಿಣವಾದ ಕಾನೂನುಗಳನ್ನು ಜ್ಯಾರಿಗೆ ತರಬೇಕಾಗಿ ಸಂಘದ ಮೂಲಕ ಸರಕಾರವನ್ನು ಕೇಳಿಕೊಳ್ಳಬೇಕು. (ಸೂಚಕ-ಶ್ರೀ ಮೋಹನಪ್ಪ ತಿಂಗಳಾಯರು)

ವಿದ್ಯಾಪ್ರಚಾರಕ್ಕಾಗಿ ೧೦ ವರುಷಗಳೊಳಗೆ ಒಂದು ಲಕ್ಷ ರೂಪಾಯಿಗಳ ಮೂಲಧನವನ್ನು ಯಾವ ವಿಧದಿಂದ ಸಂಗ್ರಹಿಸಬಹುದೆಂಬುದಕ್ಕೆ ವಿವಿಧ ಸೂಚನೆಗಳನ್ನು ಚರ್ಚಿಸಿ ನಿಶ್ಚಯಿಸಲ್ಪಟ್ಟಿತು. ಐನೂರಮೂವತ್ತು ರೂಪಾಯಿಗಳ ದಾನವು ನಗದಾಗಿ ಪರಿಷತ್ತಿನ ದಿವಸಗಳಲ್ಲೇ ವಸೂಲುಮಾಡಲ್ಪಟ್ಟವು. ಜಿಲ್ಲೆಯ ಬೇರೆ ಬೇರೆ ಗ್ರಾಮಗಳಿಂದ ೧೧೦ ಪ್ರತಿನಿಧಿಗಳೂ ಸುಮಾರು ೩೦೦ ಜನ ಪ್ರೇಕ್ಷಕರೂ ಈ ಪರಿಷತ್ತಿಗೆ ಕೂಡಿದ್ದರು. ಜ್ಞಾನೋದಯ ಸಮಾಜದವರಿಂದ ಮಾಡೋಣಾದ ಇವರ ಊಟಉಪಚಾರಗಳ ಪೂರಾ ಖರ್ಚುಗಳನ್ನು ಮಂಗಳೂರಿಗೆ ಸೇರಿದ ಒಂಭತ್ತು ಪಟ್ಣ ಸಂಘದವರು ವಹಿಸಿಕೊಳ್ಳುತ್ತಾರಾಗಿ ಅವರ ಕಡೆಯಿಂದ ಕುದ್ರೋಳಿಯ ಶ್ರೀ ತ್ಯಾಂಪ ಗುರಿಕಾರರು ಸಭಾಂತ್ಯದಲ್ಲಿ ತಿಳಿಸಿದರು. ಮುನ್ಸಿಫಲ್ ಕೌನ್ಸಿಲರ್ ಶ್ರೀಯುತ ಜೆ. ಎ. ಪುತ್ರನ್ನಾಯರ ಮುಂದಾಳುತನದಿಂದ ಇಪ್ಪತ್ತೈದು ಜನ ಯುವಕ ವಿದ್ಯಾರ್ಥಿಗಳು ಈ ಪರಿಷತ್ತಿನ ಸ್ವಯಂಸೇವಕರಾಗಿ ಮಾಡಿದ ಉತ್ತಮ ಸೇವೆಯಿಂದ ಅತಿಥಿಗಳಿಗೆ ಯಾವ ಕೊರತೆಯೂ ಉಂಟಾಗಲಿಲ್ಲ. ಬರುವ ವರುಷದ ಮೂರನೇ ಪರಿಷತ್ತು ಮಲ್ಪೆಯಲ್ಲಿ ಜರಗಿಸಬೇಕಾಗಿ ನಿಶ್ಚಯಿಸಲಾಯಿತು.

ತಾ. ೪–೬–'೨೬. ಬಿ. ಮೋಹನಪ್ಪ ತಿಂಗಳಾಯ.

ಸ್ಫುಟ ವಿಚಾರಗಳು.

ರೀಫ್ ಸ್ವಾತಂತ್ರ್ಯಹರಣ.

ಅನೇಕ ವರ್ಷಗಳ ಕಡುತರ ಯುದ್ಧದ ಮೇಲೆ, ಆಧುನಿಕ ಸರ್ವ ತರದ ಸನ್ನಾಹ ಸೌಕರ್ಯವಿದ್ದ ಎರಡು ಪ್ರಬಲ ಜನಾಂಗಗಳ ಸೈನ್ಯಗಳನ್ನು ನಿರೋಧಿಸಿ, ಕಟ್ಟಕಡೆಗೆ, ಆ ರೀಫ್ ವೀರನಾದ ಅಬ್ದುಲ್ ಕರೀಮನು ತನ್ನ ಆಯುಧಗಳನ್ನು ಕೆಳಗಿಳಿಸಿ ಫ್ರೆಂಚರಿಗೆ ಶರಣುಹೋದನು. ಲೋಕದ ವಿರಳವಾದ ವೀರ ಇತಿಹಾಸಗಳಲ್ಲಿ ಮತ್ತು ಸಣ್ಣ ಜನಾಂಗಗಳ ಸ್ವಾತಂತ್ರ್ಯ ಪ್ರೇಮದ ಮತ್ತು ಆತ್ಮಯಜ್ಞದ ಇತಿಹಾಸಗಳಲ್ಲಿ ಅಬ್ದುಲ್ ಕರೀಮನ ಈ ಅಸೀಮ ಸಾಹಸವು ಸುವರ್ಣಾಕ್ಷರಗಳಿಂದ ಉಲ್ಲಿಖಿತವಾಗಲು ಯೋಗ್ಯವಿದೆ. ಜಗತ್ತಿನಲ್ಲಿ ನ್ಯಾಯ ರಕ್ಷಣೆಗೆ ಎಡೆಯಿಲ್ಲ; ಮತ್ತು ಧರ್ಮವೇ ಜಯಿಸಬೇಕೆಂಬ ನಿರ್ಬಂಧವಿಲ್ಲವೆಂಬುದು ಇಂತಹ ಹೃದಯದ್ರಾವಕ ಘಟನೆಗಳಿಂದ ನಾವು ತಿಳಿದುಕೊಳ್ಳಬೇಕಾಗಿದೆ. ಲೋಕದ ಮುಂದೆ ಈ ಎರಡು ಜನಾಂಗಗಳು ತಮ್ಮ ಈ ಅನ್ಯಾಯದ ಕೃತ್ಯಕ್ಕಾಗಿ ನಾಚಲು ಕಾರಣವಿದೆಯೆನ್ನಲಿಕ್ಕೆ ಲೋಕವೊಂದರೆ ಯಾರು? ಪರಸ್ವಾಪಹರಣದಿಂದ, ಪ್ರಚಂಡ ಸ್ವಾರ್ಥದಿಂದ ರಾಜ್ಯವನ್ನೂ ಸಾಮ್ರಾಜ್ಯವನ್ನೂ ಕಟ್ಟಿದವರೇ ಈಗ ಲೋಕದ ಗೌರವದ ನಾಗರಿಕರಾಗಿರುವರು, ಅನ್ಯವಾಗ ಫ್ರಾನ್ಸು ಸ್ಪೈಯಿನು ದೇಶಗಳಿಗೆ ಈ ವಿಜಯವು ಒಂದು ಹೆಗ್ಗಳಿಕೆಯ ವಿಷಯವೇ ಆಗಿದೆ. ಸಂಸಾರದಲ್ಲಿ ಸಾಮಾನ್ಯತಃ ದೈಹಿಕ ಬಲವೇ ನ್ಯಾಯಾನ್ಯಾಯದ ತೀರ್ಮಾನಕರ್ತನಾಗಿದೆ. ಅಂತೂ ಈಗ ಅದರೊಡನೆ ವೈಜ್ಞಾನಿಕ ಅಗಾಧ ಪರಿಶೋಧನೆಗಳೂ ಕೂಡಿ ಆ ದೈಹಿಕ ಬಲವನ್ನು ಪುಷ್ಟೀಕರಿಸಿವೆ. ಲೀಗ್ ಒಫ್ ನೇಶನ್ಸ್, ಸೆಲ್ಫ ಡಿಟರ್ಮಿನೇಶನ್ಸ, ರೈಟ್ಸ ಒಫ್ ಮ್ಯಾನ್‌ಕೈಂಡ್, ಸಣ್ಣ ಜನಾಂಗಗಳ ಸ್ವಾತಂತ್ರ್ಯ ಇತ್ಯಾದಿ ದೊಡ್ಡ ದೊಡ್ಡ ತತ್ವಗಳನ್ನು ಪಾಶ್ಚಾತ್ಯ ರಾಜನೀತಿಜ್ಞರು ಗುಡುಗುಡಾಯಿಸಿ, ಬಿಳೇ ಅಲ್ಲದ ಇತರ ಜನಾಂಗಗಳ ರಕ್ಷಣೆಯ ಭಾರವನ್ನು ತೆಗೆದುಕೊಳ್ಳುವೆವೆಂದು, ಯಾವ ರಾಜಧರ್ಮವೂ ಒಪ್ಪದಂತಹ ಪಾಪಕಾರ್ಯಗಳನ್ನು ಮಾಡುವರು. ಈ ಅನಂತಸ್ವಾರ್ಥದ ಮತ್ತು ಇದಕ್ಕಾಗಿ ಉಪಯೋಗಿಸುವ ಅಪ್ರತಿಮ ಯುಕ್ತಿವಾದದ ಅಂತ್ಯವು ಎಲ್ಲಿಯೋ? ಯಾರು ಬಲ್ಲರು? ಅಂತೂ ಫ್ರೆಂಚ್ ಜನಾಂಗಕ್ಕೆ ಬಹಳ ಲಾಭವನ್ನು ತರಬಹುದೆಂದು ನಿರೀಕ್ಷಿಸಲ್ಪಟ್ಟ ಆ ಮೊರೊಕ್ಕೊ ರಾಜ್ಯವು ಸಂಪೂರ್ಣವಾಗಿ ಫ್ರೆಂಚರ ಅಧೀನತೆಗೆ ಬಂದಂತಾಯಿತು.

ಹಿಂದೂ ಮುಸಲ್ಮಾನ ಸಮಸ್ಯೆ.

ಉತ್ತರ ಹಿಂದೂಸ್ಥಾನದಲ್ಲಿ ಈ ಸಮಸ್ಯೆ ಅತೀ ತೀವ್ರವಾಗಿ ಬಂದಿದೆ. ಬಂಗಾಳದ ಉದ್ರೇಕದ ನಂತರ ಶಾಂತಿಯು ಇನ್ನೂ ಸ್ಥಾಪಿತವಾಗಿಲ್ಲ. ಸಮಗ್ರ ಬಂಗಾಳವೂ, ಸಂಯುಕ್ತ ಪ್ರಾಂತವೂ ಹಿಂದೂ ಮುಸಲ್ಮಾನರ ಸಮರಭೂಮಿಯಾಗಿ ಪರಿಣಮಿಸಿಯದೆ. ಒಂದು ದಿನ ಒಂದು ದೇವಸ್ಥಾನದ ಮೂರ್ತಿಯೇ ಚೂರಾಗಿ ಬೀಳುತ್ತಿದೆ. ಇನ್ನೊಂದು ದಿನ ಒಬ್ಬ ಮುಸಲ್ಮಾನನು ಸಾಯುವ ವರೆಗೆ ಹೊಡೆಯಲ್ಪಡುತ್ತಾನೆ. ಮತ್ತೊಂದು ದಿನ ಒಬ್ಬ ಮುಸಲ್ಮಾನನು ಒಬ್ಬ ಹಿಂದೂವನ್ನು ಕೊಂದುಬಿಡುತ್ತಾನೆ. ಹೀಗೆ ಕೇವಲ ಅಸಹ್ಯಕರವೂ, ಅಮಾನುಷಕರವೂ, ರೀತಿಯಲ್ಲಿ ಈ ಮತಾಭಿಮಾನಿಗಳು ತಮ್ಮ ಆಸ್ತಿಕ್ಯವನ್ನು ತೋರಿಸುವ ಆ ಹೃದಯವಿದಾರಕ ಭೀಕರ ದೃಶ್ಯಗಳನ್ನು ನೋಡಿದರೆ ಅಂಗಾಂಗಗಳು ಕಂಪಾಯಮಾನವಾಗುತ್ತಿವೆ. ಅತ್ತ ಕೆಲವು ಧುರೀಣರೂ "ಕಾಲಕ್ಕೆ ತಕ್ಕ ಕೋಲು"ವೆಂದು ಜನತೆಯ ಈ ಉನ್ಮತ್ತ ಮೃತ್ಯುನೃತ್ಯದ ಸೂತ್ರವನ್ನು ಎತ್ತಿ ಹಿಡಿದು ಮತ್ತೂ ಅವರನ್ನು ಕುಣಿಸಲು ಪ್ರಯತ್ನಿಸುವರು.

ಈ ಮಹಾ ಸಮಸ್ಯೆಯನ್ನು ಬಿಡಿಸಲು ಯತ್ನಿಸಿದಷ್ಟು ಅದು ಮತ್ತೂ ಗಡುಸಾಗಿ ಬರುತ್ತಿದೆಯೆ ವಿನಹ ಪ್ರಯೋಜನವೇ ಆಗಿಲ್ಲ. ಧುರೀಣರು ಧುರೀಣರು ಕೂಡಿ ಠರಾವುಗಳ ರಾಶಿಯನ್ನು ಹೊರಗೆಡಹುತ್ತಿರುವರಲ್ಲದೆ ಇನ್ನಾವ ಕಾರ್ಯಕಾರಿಯಾದ ಕೆಲಸವನ್ನೂ ಮಾಡುವುದಿಲ್ಲ. ಉತ್ತಮವಾದ ರಾಷ್ಟ್ರೀಯತೆಯ ಪ್ರಚಾರವೇ ಇದಕ್ಕೆ ಪರಮೌಷಧವಾಗಿದೆ. ಆದರೆ ಇಂತಹ ಉತ್ತಮ ಕೆಲಸವನ್ನು ಯಾರೂ ಸಾಧಿಸಲೆತ್ನಿಸುವದಿಲ್ಲ.

ಮುಂದಿನ ಚುನಾವಣೆಗೆ ಉಮೇದ್ವಾರರು

ನಮ್ಮ ಜಿಲ್ಲೆಯ ರಾಜಕೀಯ ಪರಿಷತ್ತು ಕೂಡಿಹೋಯಿತು. ಉದ್ದದ ಠರಾವುಗಳೂ ಮಂಜೂರಾಗಿ ಹೋದುವು. ಆದರೆ ಮುಂದಿನ ಚುನಾವಣೆ ಬಗ್ಗೆ ಯಾವ ಪ್ರಚಾರ ಕಾರ್ಯವಾಗಬೇಕೊ ಅದರ ಯಾವ ವಿಚಾರವೂ ತೋರುವುದಿಲ್ಲ. ಸ್ವರಾಜ್ಯ ಪಕ್ಷವು ಯಾವ ವಿಧಾಯಕ ಕಾರ್ಯಕ್ರಮವನ್ನು ಮಾಡಬೇಕೊ ಅದರ ಸುಳಿವಿಲ್ಲ. ಮುಂದಿನ ಉಮೇದ್ವಾರರೆಂಬುವರ ವಿಷಯದಲ್ಲಿಯೂ ಸರಿಯಾದ ನಿರ್ಧಾರವು ಇನ್ನೂ ಆಗಿರುವಂತೆ ತೋರುವುದಿಲ್ಲ. ಮಂಗಳೂರು ಸ್ವರಾಜ್ಯಪಕ್ಷವು ಉಮೇದುವಾರರನ್ನು ನಿಲ್ಲಿಸುವುದರಲ್ಲಿ ಯೋಗ್ಯ ವಿವೇಚನೆ ನಡಿಸುವುದೊ, ಇಲ್ಲವೆ ಸ್ವೇಚ್ಛೆಯಂತೆ, ಆದರ್ಶವೆಂದು, ಚುನಾವಣೆಯ ಉತ್ಸಾಹದಿಂದ ಬಾಡದೆ ವಿಜಯ ಹೊಂದಬಲ್ಲವರನ್ನು ಬಿಟ್ಟು ಅನ್ಯರನ್ನು ನಿಲ್ಲಿಸುವುದೊ ಎಂಬುದೂ ಅನುಮಾನಾಸ್ಪದವಿದೆ. ದೇಶದ ರಾಜಕೀಯ ಪರಿಸ್ಥಿತಿಯಲ್ಲಿ ಸ್ವರಾಜ್ಯಪಕ್ಷವು ಸಾಧ್ಯವಿದ್ದಷ್ಟು ವಿಜಯಿಯಾಗುವುದು ಆವಶ್ಯಕವಿದೆ. ದೇಶದ ಜನತೆಯ ರಾಷ್ಟ್ರೀಯತೆಯ ಉತ್ಸಾಹವು ತಣ್ಣಗಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ಮರೆಯಬಾರದು. ಇಂತಹ ಪರಿಸ್ಥಿತಿಯಲ್ಲಿ ಆತ್ಮಸ್ವಾರ್ಥದಿಂದ ಉಮೇದ್ವಾರರನ್ನು ನಿಲ್ಲಿಸದೆ, ಜನತೆಯೊಳಗೆ ಗೌರವಿತರಾದ, ಜನತೆಯಿಂದ ಸಹಾನುಭೂತಿಯನ್ನು ಪಡೆಯಬಲ್ಲನೆಂದು ಧೈರ್ಯವಿರುವ, ಜನತೆಯ ಪರಿಚಯವಿದ್ದ, ಖರ್ಚಿಗೆ ಸಾಕಷ್ಟು ಹಣವಿದ್ದ, ಸ್ವರಾಜ್ಯಪಕ್ಷದ ಆದರ್ಶಗಳ ಮೇಲೆ ಅಭಿಮಾನವಿದ್ದ, ಉಮೇದ್ವಾರರನ್ನು ನಿಲ್ಲಿಸುವುದು ಆವಶ್ಯಕವಿದೆ. ನಮ್ಮ ಜಿಲ್ಲೆಯ ಕಾಂಗ್ರೆಸು ಕಮಿಟಿಯಾಗಲಿ, ಸ್ವರಾಜ್ಯಪಕ್ಷವಾಗಲಿ ಹಣವಿದ್ದವುಗಳಲ್ಲ. ಇತರ ಕಡೆಯಿಂದ ದ್ರವ್ಯಸಹಾಯವು ಒದಗೀತೆಂದು ಆಶಿಸುವುದೂ ಸರಿಯಲ್ಲ. ಏಕೆಂದರೆ ಈ ಚುನಾವಣೆಗಳಿಗೆ ದ್ರವ್ಯವಿನಿಮಯವು ಬಹಳವಾಗಿ ನಡೆಯಲೇಬೇಕು. ಅಷ್ಟೂ ದ್ರವ್ಯಸಹಾಯವು ಹೊರಜನರಿಂದ ಬಂಬಹುದೆಂದು ನಿರೀಕ್ಷಿಸಲಾಗುವುದಿಲ್ಲ. ಆದುದರಿಂದ ಇವೆಲ್ಲ ವಿಷಯಗಳನ್ನು ಸರಿಯಾಗಿ ಆಲೋಚಿಸಿ ಆದಷ್ಟು ಬೇಗನೆ ಉಮೇದ್ವಾರರನ್ನು ನೇಮಿಸಿ ಮತದಾರರೊಳಗೆ ಪ್ರಚಾರಕಾರ್ಯವನ್ನು ಆರಂಭಿಸುವುದು ಅಗತ್ಯವಿದೆ. ಈ ಬಾರಿಯ ಚುನಾವಣೆಗಳಲ್ಲಿಯೇ ಕಾಂಗ್ರೆಸಿನ ಗೌರವ ನಿರ್ಣಯವಾಗಲಿದೆ. ಕಾಂಗ್ರೆಸ್ಸು ಉಮೇದ್ವಾರರು ಪರಾಜಯ ಹೊಂದಿದರೆಂದರೆ ಕಾಂಗ್ರೆಸ್ಸಿನ ಗೌರವದ ಆಖೈರಿ ಮಾತನ್ನು ಹೇಳಿದಂತಾಗುವುದು. ಆದುದರಿಂದ ಕಾಂಗ್ರೆಸು ಮತ್ತು ಸ್ವರಾಜ್ಯಪಕ್ಷೀಯ ಸಂಸ್ಥೆಗಳು ಚೆನ್ನಾಗಿ ಜಾಗರೂಕರಿರುವುದು ಅಗತ್ಯವಿದೆ.

ಬಂಗಾಳ ಪ್ರಾಂತಿಕ ಪರಿಷತ್ತು.

ದೇಶದಲ್ಲಿ ಅಸಹಕಾರ ಚಳವಳದ ನಂತರ ಉಂಟಾದ ನಿರುತ್ಸಾಹವು ಜಡತೆಯನ್ನೂ ಆಲಸತೆಯನ್ನೂ ಉಂಟುಮಾಡಿ ಜನರಲ್ಲಿ ರಾಜಕೀಯ ಆಶಯಗಳನ್ನು ಕಡಿಮೆಮಾಡಿಸಿಯದೆನ್ನಬಹುದು. ಅದರೊಡನೆ ಜಾತೀಯ ಕಲಹಗಳೂ ಕೂಡಿ, ಜನರೊಳಗಿನ ರಾಷ್ಟ್ರೀಯತೆಯ ಭಾವನೆಯನ್ನು ತೀರಾ ಸಂಕುಚಿತವಾಗಿ ಮಾಡಿ, ಈಗ ಜನರ ಲಕ್ಷ್ಯವನ್ನು ಸ್ವರಾಜ್ಯ ಸಾಧನೆಯ ಕಡೆಗೆ ತಿರುಗಿಸುವುದೇ ಕಷ್ಟಸಾಧ್ಯವಾಗಿ ಪರಿಣಮಿಸಿಯದೆ. ಆದುದರಿಂದಲೇ ಒಂದು ಬಾರಿ ಅಸಂಖ್ಯ ಜನರನ್ನು ಆಕರ್ಷಿಸುತ್ತಿದ್ದ ಕಾಂಗ್ರೆಸ್ ಸಮ್ಮೇಳನಗಳು ಈಗ ಅಲಕ್ಷಿತವಾಗಿ ಬಾಡಿಹೋಗುತ್ತಿವೆ. ಕಾಂಗ್ರೆಸ್ಸಿನ ಜಿಲ್ಲಾ, ಪ್ರಾಂತಿಕ ಪರಿಷತ್ತುಗಳಿಗೆ ಜನರು ಕೂಡುವುದೇ ದುರ್ಲಭವಾಗಿದೆ. ಆದರೂ ಬಂಗಾಳದಲ್ಲಿ ಈ ಉತ್ಸಾಹವು ಸ್ವಲ್ಪಮಟ್ಟಿಗೆ ಇದೆ ಎಂದು ನಮ್ಮ ಅಭಿಪ್ರಾಯವಿದ್ದಿತು. ಆದರೆ ಅಲ್ಲಿ ಇತ್ತೀಚೆಗೆ ಉಂಟಾದ ಹಿಂದೂ ಮುಸಲ್ಮಾನ ಸಂಘರ್ಷಣದ ಕಾರಣದಿಂದ ಅಲ್ಲಿ ಕೂಡ ಈ ರಾಜಕೀಯ ಉತ್ಸಾಹವು ನಿರ್ವಾಣೋನ್ಮುಖವಾಗಿದ್ದಂತೆ ತೋರುತ್ತಿದೆ. ಕಳೆದ ತಿಂಗಳಲ್ಲಿ ಕೃಷ್ಣನಗರದಲ್ಲಿ ಕೂಡಿದ್ದ ಬಂಗಾಳ ಪ್ರಾಂತಿಕ ಪರಿಷತ್ತು ಅತ್ಯಂತ ದುಃಖಕರವಾದ ರೀತಿಯಲ್ಲಿ ಪರ್ಯವಸಾನವನ್ನು ಹೊಂದಿತು. ಆ ಪರಿಷತ್ತಿಗಾಗಿ ಚುನಾಯಿಸಲ್ಪಟ್ಟ ಅಧ್ಯಕ್ಷರ ಅಧ್ಯಕ್ಷ ಭಾಷಣದ ವಿಷಯವಾಗಿ ಅನೇಕರು ನಿಷೇಧವನ್ನು ತೋರಿಸಿದುದರಿಂದ ಅಧ್ಯಕ್ಷರು ಅಧ್ಯಕ್ಷತನಕ್ಕೆ ರಾಜೀಕೊಟ್ಟರು. ಮುಂದೆ ಅಧ್ಯಕ್ಷರನ್ನು ಆರಿಸಲು ಆಲೋಚಿಸಲಿಕ್ಕಾಗಿ ಕೂಡಿದ ಸಭೆಯು ಗಲಭೆಯಲ್ಲಿ ಪರಿಣಮಿಸಿ ಮುಕ್ತಾಯಹೊಂದಿತು. ಬಂಗಾಳ ಪ್ರಾಂತಿಕ ಪರಿಷತ್ತು ಕೂಡಿಯೂ ಕೂಡದೆ ಹೋದಂತಾಯಿತು. ಕಾಂಗ್ರೆಸ್ಸಿನ ಅಭಿವೃದ್ಧಿಗೆ ಇಂತಹ ಘಟನೆಗಳು ಶುಭ ಸೂಚನೆಯಾಗಿಲ್ಲ.

ಸ್ವತಂತ್ರ ಐಗುಪ್ತ!

ಇಂಗ್ಲೀಷರು ಐಗುಪ್ತ ದೇಶಕ್ಕೊಂದು ಸ್ವಾತಂತ್ರ್ಯವನ್ನು ಕೊಟ್ಟರು! ಆ ಸ್ವಾತಂತ್ರ್ಯವನ್ನು ಕೈರೋದೊಳಗೆ ತಮ್ಮ ಸೈನ್ಯವನ್ನಿಟ್ಟೇ ರಕ್ಷಿಸಬೇಕಾಗಿದೆ. ಐಗುಪ್ತದಲ್ಲಿ ಪಾರ್ಲಿಮೆಂಟಿಗಾಗಿ ಹಿಂದೊಂದು ಬಾರಿ ಚುನಾವಣೆಯಾಗಿತ್ತು. ಅದರಲ್ಲಿ ಐಗುಪ್ತ ದೇಶದ ಶ್ರೇಷ್ಠ ಪಕ್ಷದ ಝುಗಲೂಲ ಪಾಶನು ಬಹುಮತ ಹೊಂದಿದನು. ಝುಗಲೂಲನು ಸುದಾನ ದೇಶವು ಐಗುಪ್ತಕ್ಕೆ ಸೇರಿದುದೆಂದೂ, ಇಂಗ್ಲಿಷ್ ಸೈನ್ಯವು ಕೈರೋದಲ್ಲಿರುವ ಆವಶ್ಯಕತೆಯಿಲ್ಲವೆಂದೂ ಅನ್ನುವವನಾಗಿರುವನು. ಸುದಾನ ದೇಶದಲ್ಲಿ ಉತ್ತಮವಾದ ಹತ್ತಿ ಬೆಳೆಯುತ್ತಿದೆ. ಇಂತಹ ಲಾಭಕರವಾದ ದೇಶದ ಆಡಳಿತವನ್ನು ಇಂಗ್ಲೀಷರು ಬಿಟ್ಟುಕೊಡುವುದಿಲ್ಲ, ಹೀಗಾಗಿ ಝುಗಲೂಲನ ಬಹುಮತವು ಆಂಗ್ಲಹಿತಕ್ಕೆ ವಿರೋಧವಿದ್ದುದರಿಂದಲೂ ಆಗಿನ ಸರಕಾರವು ಆಂಗ್ಲ ಅಧಿಕಾರಿಗಳಿಗೆ ವಿಧೇಯವಿದ್ದುದರಿಂದಲೂ ಚುನಾಯಿಸಲ್ಪಟ್ಟ ಪಾರ್ಲಿಮೆಂಟು ಕೂಡಲೆ ಕೊನೆಗಾಣಿಸಲ್ಪಟ್ಟಿತು. ಆದರೆ ದಿವಸ ಹೋದಂತೆ ಅಧಿಕೃತ ಸರಕಾರವು ಜನರ ತಿರಸ್ಕಾರಕ್ಕೆ ಹೆಚ್ಚೆಚ್ಚು ಪಾತ್ರವಾಗುತ್ತಾ ಬಂದು, ಕಟ್ಟಕಡೆಗೆ ಈ ಸರಕಾರಕ್ಕೆ ಪ್ರತಿಯಾಗಿ ಐಗುಪ್ತದ ಎಲ್ಲಾ ಪಕ್ಷಗಳೂ ಒಟ್ಟುಗೂಡಿ ಬಂದಾದವು. ಐಗುಪ್ತದಲ್ಲಿ ಪುನಃ ಚುನಾವಣೆಗಳಾದುವು. ಅದರಲ್ಲಿ ಝುಗಲೂಲಪಾಶನಿಗೆ ಮುಂಚೆಗಿಂತಲೂ ಹೆಚ್ಚು ವಿಜಯವಾಗಿದೆ. ಅವನಿಗೆ ಈಗ ಒಂದಕ್ಕೆ ಮೂರರಂತೆ ಬಹುಮತವಿದೆ. ಆದರೆ ಇಷ್ಟು ದೀರ್ಘ ಸಮಯದಲ್ಲಿ, ಝುಗಲೂಲನು ಏರಿದ ಪ್ರಾಯದ ಕಾರಣದಿಂದಲೂ, ಮೈಯಲ್ಲಿರುವ ಅಸ್ವಸ್ಥದ ಕಾರಣದಿಂದಲೂ ಸ್ವಲ್ಪ ತಗ್ಗಿರಬಹುದೆಂದು ಇಂಗ್ಲೀಷರ ಆಶೆಯಿದ್ದಿತು. ಅವನ ಸರಿ ಮನಸ್ಸನ್ನು ತಿಳಿಯಲೆಂದು ಇಂಗ್ಲೀಷ ರೆಸಿಡೆಂಟನು ಅವನಿಗೆ ಬಹುಮತವಿದೆಯೆಂದು ತಿಳಿದ ಕೂಡಲೆ ಅವನನ್ನು ಒಂದು ಮಿತ್ರ ಭೋಜನ ಸಮಾರಂಭಕ್ಕೆ ಕರೆದು ಅವನ ಮನೋಗತವನ್ನು ತಿಳಿದನು. ಝುಗಲೂಲನು ಎಂದಿನಂತೆಯೇ ಸ್ಥಿರ. ಇದನ್ನು ತಿಳಿದ ಕೂಡಲೆ ಬ್ರಿಟಿಷ್ ಯುದ್ಧನಾವೆಯು ಕೈರೊ ಬಂದರವನ್ನು ಸೇರಿತು. ಇದು ಯಾವ ತರದ ನ್ಯಾಯವೆಂದು ಯಾರೂ ಊಹಿಸಲಾರರು. ಬ್ರಿಟಿಷ್ ಸರಕಾರವು ಹೀಗೆ ಬೆದರಿಸಿ ಐಗುಪ್ತವನ್ನು ಪೀಡಿಸುವುದು ಪಾಶ್ಚಾತ್ಯ ಸಾಮ್ರಾಜ್ಯವಾದದ ಸ್ವಾಭಾವಿಕ ಚಿಹ್ನೆಯಾಗಿದೆ. ಯಾವ ಮಾನಸಿಕತೆಯಿಂದ ಫ್ರಾನ್ಸು ರೀಫ್ ಪ್ರದೇಶವನ್ನು ಸೂರೆಗೊಂಡಿತೊ, ಅದೇ ಮಾನಸಿಕತೆಯೇ ಆಂಗ್ಲ ಯುದ್ಧನಾವೆಯನ್ನು ಕೈರೊಗೆ ತಂದದೆ. ಐಗುಪ್ತದ ಮುಂದಿನ ಘಟನೆಗಳು ಬಹಳ ವಿಶೇಷವಿದ್ದಿರಬಹುದು.

ಐಗುಪ್ತದ ಚುನಾವಣೆಗಳ ಫಲಿತಾಂಶಗಳನ್ನು ನೋಡಿದರೆ ಅಲ್ಲಿಯ ಜನತೆಯು ರಾಜಕೀಯ ಚಳವಳಗಳ ವಿಷಯ ಎಷ್ಟು ಉತ್ಸಾಹಿತರಿರುವರೆಂದು ತಿಳಿಯುವುದು. ಐಗುಪ್ತದ ವಿದ್ಯಾರ್ಥಿಗಳು ಐಗುಪ್ತದ ಸ್ವಾತಂತ್ರ್ಯದ ಹೋರಾಟದಲ್ಲಿ ಮಾಡಿದ ಪ್ರಯತ್ನಗಳು ಎಲ್ಲರಿಗೂ ತಿಳಿದೇ ಇವೆ. ದೇಶದ ಎಲ್ಲಾ ಶಾಲೆಗಳು ಒಂದು ಕಾಲದಲ್ಲಿ ಬಹು ಸಮಯದ ವರೆಗೆ ಮುಚ್ಚಿಯೇ ಇರಬೇಕಾಗಿದ್ದವು. ಹಿಂದೂಸ್ಥಾನದ ಜನತೆಯಲ್ಲಿ ಅಂತಹ ಉತ್ಸಾಹವೂ, ಆಕಾಂಕ್ಷೆಯೂ ಇಲ್ಲದುದರಿಂದಲೆ ಹಿಂದೂಸ್ಥಾನಕ್ಕೆ ಇಷ್ಟು ವರ್ಷಗಳಾದರೂ ಸ್ವಾತಂತ್ರ್ಯದ ಕಡೆಗೆ ಒಂದು ಹೆಜ್ಜೆ ಕೂಡ ಮುಂದಿಡಲೂ ಸಾಧ್ಯವಿಲ್ಲವಾಗಿ ಹೋಗಿಯದೆ. ಸಾಮಾನ್ಯ ಜನತೆ ಕೂಡ ಆ ರಾಷ್ಟ್ರೀಯತೆಯ ಭಾವವನ್ನು ಅನುಭವಮಾಡುವ ಬದಲಿಗೆ ತಿರಸ್ಕಾರ ಮಾಡುವುದೇ ಹೆಚ್ಚಾಗಿ ಕಾಣುತ್ತಿದೆ.

ಸರ್ವೆಂಟ ಒಫ್ ಇಂಡಿಯಾ ಸೊಸ್ಯಾಟಿಯವರ ನಷ್ಟ.

ಪೂನಾದಲ್ಲಿ ಸರ್ವೆಂಟ್ಸ ಒಫ್ ಇಂಡಿಯಾ ಸೊಸ್ಯಾಟಿಯವರಿಂದ ಪ್ರಕಟಿಸಲ್ಪಡುತ್ತಿರುವ ಧ್ಯಾನಪ್ರಕಾಶ, ಮತ್ತು ಸರ್ವೆಂಟ ಒಫ್ ಇಂಡಿಯಾ ಎಂಬ ಪತ್ರಿಕೆಗಳನ್ನು ಮುದ್ರಿಸುತ್ತಿದ್ದ ಅದೇ ಸೊಸ್ಯಾಟಿಯ ಆರ್ಯಭೂಷಣ ಮುದ್ರಣಾಲಯಕ್ಕೂ, ಪತ್ರಿಕೆಗಳ ಆಫೀಸಿಗೂ ಬೆಂಕಿ ತಗುಲಿ ಎಲ್ಲವೂ ಸುಟ್ಟುಹೋಗಿ, ಸೊಸ್ಯಾಟಿಗೆ ಮೂರು ನಾಲ್ಕು ಲಕ್ಷ ರೂಪಾಯಿಯಷ್ಟು ನಷ್ಟವಾಗಿಯದೆಂದು ತಿಳಿಯಲು ನಮಗೆ ಬಹಳ ವಿಷಾದವೆನಿಸುತ್ತಿದೆ. ಈ ಸೊಸ್ಯಾಟಿಯು ಕೀರ್ತಿಶೇಷ ಗೋಖಲೆಯಂತಹ ಅಪ್ರತಿಮ ದೇಶಭಕ್ತರ ಸ್ವಾರ್ಥತ್ಯಾಗದಿಂದ ಕಟ್ಟಲ್ಪಟ್ಟು ಬಂದುದಾಗಿದೆ. ಇದರ ನಷ್ಟದಲ್ಲಿ ಹಿಂದೀಯನು ಪ್ರತಿಯೊಬ್ಬನೂ ತನ್ನ ಸಹಾನುಭೂತಿಯನ್ನು ತೋರಬೇಕು. ಮಹಾತ್ಮಾ ಗಾಂಧಿಯವರು ಮೇಲಿನ ಪತ್ರಿಕೆಗಳ ಮುದ್ರಣದ ಬಗ್ಗೆ ತಮ್ಮ ಯಂಗ ಇಂಡಿಯಾದ ಮುದ್ರಾಲಯವನ್ನು ಉಪಯೋಗಿಸಬಹುದಾಗಿ ಕೇಳಿಕೊಂಡಿರುವರು. ಮುಂಬಾಯಿ ಕಾಗದ ವ್ಯಾಪಾರಿಗಳು ಧರ್ಮಾರ್ಥವಾಗಿ ಕಾಗದ ಕಟ್ಟುಗಳನ್ನು ಕೊಡುತ್ತಿರುವರು. ಅನೇಕರು ಧನಸಹಾಯಕೊಡುತ್ತಿರುವರು. ಇಂತಹ ಸಹಾಯವು ಇನ್ನೂ ಮುಂದೆ ಬಂದು ಸೊಸ್ಯಾಟಿಯು ಮುಂಚಿನಂತೆಯೇ ತನ್ನ ಮುದ್ರಾಲಯವನ್ನು ಕಟ್ಟಿಕೊಳ್ಳುವುದಾಗಿ ಆಶಿಸುವೆವು.

ಹೊಸ ಮುದ್ರಣ! ಶುದ್ಧ ಪಾಠ!!

ಶ್ರೀ ಶಂಕರ ಭಗವತ್ಪಾದಾಚಾರ್ಯ ಪ್ರಣೀತವಾದ

ಶಿವಾನಂದಲಹರಿ

ಎಂಬ

ಪರಮಶಿವನ ಸ್ತೋತ್ರವು.

ಪ್ರಶಂಸೆ:—

ಈ ಗ್ರಂಥದಲ್ಲಿ ಅಡಗಿರುವ ೧೦೦ ಶ್ಲೋಕಗಳ ಪೈಕಿ ಪ್ರತಿಯೊಂದು ಶ್ಲೋಕವೂ ಆರಿಸಿ ಪೋಣಿಸಿದ ಆಣಿಮುತ್ತುಗಳಂತೆ ಅತಿ ಶ್ಲಾಘ್ಯಗಳಾಗಿ ಶಬ್ದಾಲಂಕಾರ ಅರ್ಥಾಲಂಕಾರ ಭಾವರಸ ಲಕ್ಷಣಗಳಿಂದ ಕೂಡಿ ಓದುವವರ ಮನಸ್ಸಿನಲ್ಲಿ ಆನಂದವನ್ನು ಹುಟ್ಟಿಸುವುದಲ್ಲದೆ, ಉಪಾಸ್ಯದೇವರಲ್ಲಿ ನಿರತಿಶಯ ಭಕ್ತಿಯನ್ನು ಹುಟ್ಟಿಸುತ್ತದೆ. ಪ್ರತಿಯೊಂದು ಶ್ಲೋಕಕ್ಕೂ ಕೊಟ್ಟಿರುವ ಪ್ರತಿಪದಾರ್ಥಭಾವಾರ್ಥಗಳು ಸ್ತೋತ್ರದ ಅರ್ಥವನ್ನು ಪುಷ್ಟೀಕರಿಸಿ ಶ್ರದ್ಧೆಯನ್ನು ಹೆಚ್ಚಿಸುವುದರೊಡನೆ ಸಂಸ್ಕೃತ ಭಾಷಾಜ್ಞಾನವನ್ನುಂಟುಮಾಡುವುದು.

ಶ್ರೀ ಶಿವಗೀತಾ

ಟೀಕಾಸಹಿತವಾಗಿ ಪಂಡಿತರಿಂದ ಪರಿಶೋಧಿಸಲ್ಪಟ್ಟಿದೆ.

ಇದು ಪದ್ಮಪುರಾಣೋಕ್ತವಾದ ಬ್ರಹ್ಮವಿದ್ಯಾಪ್ರತಿಪಾದಕವಾದ ಉಪನಿಷದ್ರತ್ನವು. ಇದೂ ಶ್ರೀ ಭಗವದ್ಗೀತೆಯಂತೆ ಪಾರಾಯಣಾರ್ಹವಾದ ಗ್ರಂಥವು. ಗೀತೆಯ ಚರಮೋಪದೇಶವು ಇದರಲ್ಲಿರುವುದು.

ಪ್ರತಿಯೊಂದಕ್ಕೆ ಬೆಲೆ 0–8–0. ಟಪ್ಪಾಲು ಖರ್ಚು 0–2–0.

ಮೂರು ಪುಸ್ತಕಗಳ ಕ್ರಯವನ್ನು ಮುಂಗಡವಾಗಿ ಕಳುಹಿಸಿದರೆ ಟಪ್ಪಾಲುಖರ್ಚಿಲ್ಲದೆ ಕಳುಹಿಸಲ್ಪಡುತ್ತ.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕದ ವ್ಯಾಪಾರಿಗಳು,
ಚಿಕ್ಕಪೇಟೆ ಬೆಂಗಳೂರು ಸಿಟಿ.

The Canara Bank Ltd., Mangalore.
ದಿ ಕೆನರಾ ಬ್ಯಾಂಕು ಲಿಮಿಟೆಡ್, ಮಂಗಳೂರು.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಐವೇಜಿನ ಬಡ್ಡಿ ಕೊಡದೆ ಇರುವ ಕಾರಣ ಸದರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಸದರಿಯವರ ಪೈಕಿ 1ನೇಯವರು ಕಾಣಸಿಕ್ಕಲಿಲ್ಲವಾಗಿಯೂ, 2ನೇ ಮತ್ತು 3ನೇಯವರು ಮೃತಪಟ್ಟಿರುವರಾಗಿಯೂ ವಾಪಾಸು ಬಂದ ಕಾರಣ ಸದರಿ ಅಡವಿಟ್ಟ ನಗಗಳನ್ನು ತಾ. 15—6—1926ರ ಒಳಗೆ ಬಿಡಿಸಿಕೊಂಡು ಹೋಗದೆ ಇದ್ದರೆ ಅವುಗಳನ್ನು ತಾ. 24—6—1926ನೇ ಗುರುವಾರ ದಿವಸ ಮಧ್ಯಾಹ್ನ 12 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂಮಾಡೋಣಾಗುವುದು.

ಸಂಚ್ಯಾ ನಂಬ್ರ	ಐವೇಜು ಪಡೆದವನ ಹೆಸರು	ಪಡೆದ ತಾರೀಕು	ಅಸಲು ಬಾಬಲುಗು	ತಾ. 24ಕ್ಕೆರವರೆಗಿನ ಬಡ್ಡಿ ವಗೈರೆ	
1.	ಎಸ್. ಎಮ್. ಮಾರ್ಟಿಸ್	2–3–23	ರೂ. 150ರ ಪೈಕಿ 125/,	7-7--1	[illegible]
2.	ಯು. ವೆಂಕಪ್ಪಯ್ಯ	17–9–24	ರೂ. 165ರ ಪೈಕಿ 155/,	7-10-11	
3.	ಡಿ.	20-12-24	ರೂ. 60/,	4-2--0	

Canara Bank Ltd., Mangalore, 27-5-'26. } K. Venkat Rao, *Secretary.*

ನೋಟೀಸು.

ದಕ್ಷಿಣ ಕನ್ನಡ ಒಫಿಶಿಯಲ್ ರಿಸೀವರ ಕೋರ್ಟಿನಲ್ಲಿ.

ದಿವಾಳಿ ಅರ್ಜಿ ನಂಬ್ರ 20/1926.

ಕೆ. ಎಸ್. ಹಾಮದ್, ಇದ್ದಿನಬ್ಬನ ಮಗ, ಮಂಗಳೂರು ಶಹರು ಕುದ್ರೋಳಿಯಲ್ಲಿರುವವ } ಅರ್ಜಿದಾರ.

1. ಕಬರ್ಟ್ ವೆಂಕಟ್ರಮಣಯ್ಯ
2. ಚಕರಲ್ ಕಾಂತರಾಮರಾವ
3. ಕೃಷ್ಣಶೆಟ್ಟಿ
4. ಜೆರ್ಪಸ್ತ ಯಾನೆ ನಾರಾಯಣ ಶ್ಯಾನುಭಾಗ

} ಕ್ರೆಡಿಟರು.

ಸದರಿ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ದಾಖಲುಮಾಡಿದ ಮೇಲ್ಕಾಣಿಸಿದ ಅರ್ಜಿಯು ತಾ. 7—6—1926ನೇ ದಿವಸ ಮಧ್ಯಾಹ್ನ ಘಂಟೆ 11ಕ್ಕೆ ಸದರಿ ಕೋರ್ಟು ಮುಂದೆ ತನಿಕೆಗೆ ತೆಗೆಯಲ್ಪಡುವುದು, ಸದರಿ ಅರ್ಜಿಯನ್ನು ಆಕ್ಷೇಪಿಸುವವರು ತಮ್ಮ ಆಕ್ಷೇಪಣೆಯನ್ನು ಸದರಿ ತಾರೀಕಿನೊಳಗೆ ಜಾಹೀರುಮಾಡಿಕೊಳ್ಳತಕ್ಕದ್ದು.

ಮಂಗಳೂರು, ತಾ. 3–6–1926. } A. C. Gonsalves, *Vakil for Petitioner.*

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. ೩–0–0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	,, 2–8–0
,, ಸ್ಥಳೀಕರಿಗೆ ...	,, 1–8–0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ ೪ ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 5 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಷ್ಮೆ ಮಡಿಗಳು, ಸಾವರ್ಣಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಸಾಲಿಗ್ರಾಮ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಪೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ ಮತ್ತು ಕಂಪೆನಿ, [illegible]

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವುದಕ್ಕೂ ಒಂದು ದೇಹದ ಮರ್ಮಶಾಸ್ತ್ರವು ಇರುವುದು ಅಂಥಾ ಪುಸ್ತಕವು ನಿಮಗೆ ಗೊತ್ತುಂಟೊ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, ಮದ್ರಾಸ್.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟು.

ಓ. ಪಿ. 56/1926.

ಎಮರಶಿ ಯಾನೆ ಗೊನ್ಸಾಲ್‌ವೆಸ್ ಕೂಡ ಅರ್ಜಿದಾರರು.

ಕುಂದಾಪುರ ತಾಲೂಕು ಆನಗಳ್ಳಿ ಗ್ರಾಮದ ನಿವಾಸಿಕನಾಗಿದ್ದ ಫ್ರಾನ್ಸಿಸ್ಕ ಕ್ಷೆವಿಯರ್ ಫಡ್ತಾದನು ತಾರೀಕು 30–11–1925ರಲ್ಲಿ ಮೃತಪಟ್ಟವನಾದ್ದರಿಂದ ಆತನ ಲೈಫ್ ಎಸ್ಸುರೆನ್ಸ ಪೋಲಿಸಿಯ ಹಣ ವಸೂಲ್ ಮಾಡಲಿಕ್ಕೆ ಆತನ ವಿಧವೆಯಾದ 1ನೇ ಅರ್ಜಿದಾರಳು ವ ಮಗನಾದ 2ನೇ ಅರ್ಜಿದಾರನು ಸಹಾ ಎರಡು ಜನರು ಕೊಟ್ಟ ಮೇಲ್ಕಂಡ ಅರ್ಜಿಯು ತಾ. 14—6—1926ಕ್ಕೆ ತನ್ನಿಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪಯಿರುವವರು ಆ ದಿವಸ ಹಗಲು 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡತಕ್ಕದ್ದು. ತಪ್ಪಿದರೆ ಆ ಅರ್ಜಿಯು ಕುರಿತು ಯೋಕಪಕ್ಷವಾಗಿ ತೀರ್ಮಾನಿಸಲಾದೀತು.

ಕುಂದಾಪುರ, 1—6—1926. } K. Narayana Shenoy, *Pleader,* ಅರ್ಜಿದಾರರ ವಕೀಲ.

ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘದ ದ್ವಿತೀಯ ಪರಿಷತ್ತು.

ಕಳೆದ ಮೇ ತಾರೀಕು ೨೯, ೩೦, ೩೧ರಲ್ಲಿ ಮಂಗಳೂರಿನ ಮೊಗವೀರ ಜ್ಞಾನೋದಯ ಸಮಾಜದಲ್ಲಿ ಕೂಡಿ ಬಂತು. ಪ್ರಥಮ ದಿನ ಮಧ್ಯಾಹ್ನ ೩ ಘಂಟೆಗೆ ಸಂಘದ ಆಡಳಿತ ಸಭೆಯು ಮಲಪೆಯ ಕೆ. ಯಂ. ಸೋಮನವರ ಅಧ್ಯಕ್ಷತೆಯಲ್ಲಿ ಕೂಡಿ ಬಂದು ಪರಿಷತ್ತಿನಲ್ಲಿ ಇಡತಕ್ಕ ವಿಷಯಗಳನ್ನು ಚರ್ಚಿಸಿ, ನಿಶ್ಚಯಿಸಿದರು. ಅದೇ ದಿನ ರಾತ್ರಿ ೭ ಘಂಟೆಗೆ ನೆರೆದ ಮಹಾ ಸಭೆಯವರಿಗೆ ಶ್ರೀ ಮೋಹನಪ್ಪ ತಿಂಗಳಾಯರು ಬೀಡಿ, ಸಿಗರೇಟು, ಚುರೂಟು ಹೊಗೆಸೊಪ್ಪುಗಳ ಕೆಡಕುಗಳನ್ನು ಮನೋರಂಜಕವಾಗಿ ವರ್ಣಿಸಿ ಭಾಷಣ ಮಾಡಿದರು. ಅನೇಕರು ಈ ದುರ್ವ್ಯಸನವನ್ನು ಬಿಟ್ಟುಬಿಡಲು ವಾಗ್ದತ್ತ ಮಾಡಿದರು. ತಾ. ೩೦ನೇ ಬೆಳಿಗ್ಗೆ ಪರಿಷತ್ತಿನ ಕಾರ್ಯವು ಪ್ರಾರಂಭವಾಗಿ ಸಾಮಾಜಿಕ ದೋಷಗಳನ್ನು ಮಾಡಿದವರಿಗೆ ಗ್ರಾಮ ಸಂಘದವರು ಕೊಟ್ಟ ತೀರ್ಮಾನಗಳ ಮೇಲೆ ಬಂದ ಅಪೀಲುಗಳನ್ನು ವಿಮರ್ಶಿಸಿ ತೀರ್ಪು ಕೊಡಲಾಯಿತು. ಅಂದು ಸಾಯಂಕಾಲ ೭ ಘಂಟೆಗೆ ಕೂಡಿ ಬಂದ ಮಹಾಸಭೆಯಲ್ಲಿ ಶ್ರೀ ಮೋಹನಪ್ಪ ತಿಂಗಳಾಯರು "ಆರೋಗ್ಯಭಾಗ್ಯ"ವೆಂಬ ವಿಷಯದ ಮೇಲೆ ಸಂಗೀತದೊಂದಿಗೆ ಚಿತ್ತಾಕರ್ಷಕವಾದ ಭಾಷಣಮಾಡಿದರು. ತಾ. ೩೧ನೇ ಮಧ್ಯಾಹ್ನ ಕುಲಗುರು ಶ್ರೀಮಾನ್ ಮಾಧವ ಮಂಗಲ ಪೂಜಾರ್ಯರ ಅಧ್ಯಕ್ಷತೆಯಲ್ಲಿ ಮಹಾಸಭೆಯು ನೆರೆದು ಬಂತು. ಪ್ರಥಮತಃ ಭಗವದ್ ಪ್ರಾರ್ಥನೆಗಳಾಗಿ ಮಹಾಜನ ಸಂಘದ ವಾರ್ಷಿಕ ವರದಿಯನ್ನು ಮೋಹನಪ್ಪ ತಿಂಗಳಾಯರೂ, ಲೆಖ್ಖಪತ್ರಗಳನ್ನು ಎವರ್ಷಲು ಕೊರಗಪ್ಪ ಪುತ್ರನ್ನಾಯರೂ ಓದಿದರು. ವಿದ್ಯಾಪ್ರಚಾರನಿಧಿಗಾಗಿ ಈ ವರೇಗೆ ಎಲ್ಲಾ ಖರ್ಚು ಕಳೆದು ೬೫೦೦ರೂಪಾಯಿಗಳು ಬ್ಯಾಂಕಿನಲ್ಲಿ ಮೂಲಧನವಾಗಿ ಉಳಿದಿವೆ ಎಂಬುದು ವರದಿಯಿಂದ ತಿಳಿದು ಬಂತು. ನಂತರ ಶ್ರೀ ಜ್ಞಾನೋದಯ ಸಮಾಜದ ಕೆಲವು ಸದಸ್ಯರು, ಎರಡು ಪಕ್ಷವಾಗಿ ನಿಂತು ತುಳು ಭಾಷೆಯಲ್ಲಿ ಸಂಗೀತ ರೂಪವಾಗಿ ಮದ್ಯಪಾನ ವ್ಯಸನದ ಹಿತಾಹಿತದ ಕುರಿತು ಸಂವಾದಗಳನ್ನು ನಡಿಸಿದರು. ಪರಿಷತ್ತಿಗೆ ಪ್ರೇಕ್ಷಕರಾಗಿ ದಯಮಾಡಿ ಬಂದಿದ್ದ ಶ್ರೀಯುತ ಅತ್ತಾವರ ಬಾಲಕೃಷ್ಣ ಶೆಟ್ಟಿಯವರು ಅಭಿವೃದ್ಧಿಕರವಾದ ವಿವಿಧ ಸೂಚನೆಗಳನ್ನು ಮಾಡಿದರು. ಮತ್ತು ಸಾಯಂಕಾಲ ೭ ಘಂಟೆಗೆ ಅಧ್ಯ ಮೊಗವೀರ ನಾಟಕ ಮಂಡಲಿಯವರು "ಮೊಗವೀರರ ಅಭ್ಯುದಯ" ಎಂಬ ಅತ್ಯಂತ ಬೋಧಪ್ರದವೂ ಮನೋರಂಜನವೂ ಆದ ಇತಿಹಾಸಿಕ ನಾಟಕವನ್ನಾಡಿ ಪರಿಷತ್ತಿನವರನ್ನು ಆನಂದಗೊಳಿಸಿದರು.

ಜೂನು ತಾ ೧ನಲ್ಲು ಬೆಳಿಗ್ಗೆ ಕುಲಗುರು ಶ್ರೀಮಾನ್ ಮಾಧವ ಮಂಗಲ ಪೂಜಾರ್ಯರ ಅಧ್ಯಕ್ಷತೆಯಲ್ಲಿ ಪರಿಷತ್ತು ಪ್ರಾರಂಭವಾಗಿ, ಮುಂಬಾಯಿ, ಮದರಾಸು, ಶಿವಮೊಗ್ಗಾ, ಪ್ರಾಂತ್ಯಗಳಿಂದ ಕೆಲವು ಮಹನೀಯರು ಪರಿಷತ್ತಿನ ವಿಜಯವನ್ನು ಬಯಸಿ ಬರೆದ ತಂತಿ ಮತ್ತು ಪತ್ರಗಳನ್ನು ಓದಲಾಯಿತು. ಮತ್ತು ಪರಿಷತ್ತಿನ ಮುಂದೆ ಬಂದ ವಿವಿಧ ಸೂಚನೆಗಳನ್ನು ವಿಶೇಷವಾಗಿ ಚರ್ಚಿಸಿ ಅ ಪೈಕಿ ಈ ಕೆಳಗಿನ ಸೂಚನೆಗಳನ್ನು ಮಾತ್ರ ಅನುಮೋದಿಸಿ ನಿರ್ಣಯಿಸಲಾಯಿತು.

೧. ವಿಧವಾ ಹಿಡಿತದ ಕುರಿತು ಈ ವರೇಗೆ ಇದ್ದ ಕೆಲವು ಹಳೇ ಪದ್ಧತಿಯ ನಿರ್ಬಂಧಗಳನ್ನು ತೆಗೆದುಹಾಕಿ ಯಾರೂ ಯಾವ ಸಮಯದಲ್ಲಿಯೂ ಯಾವ ವಿಧಾನವನ್ನೂ ಕೈಕೊಳ್ಳಬಹುದು. (ಸೂಚಕರು ಶ್ರೀ ಕೆ. ಯಂ. ಸೋಮನವರು ಮತ್ತು ಬಪ್ಪನಾಡ ಶ್ರೀ ಕೊರಗಪ್ಪ ಮಂದನ್ನಾಯರು.)

೨. ಬರುವ ಜುಲಾಯಿ ತಿಂಗಳ ಅಂತ್ಯದಲ್ಲಿ ಬಾರ್ಕೂರು ಮತ್ತು ಮಂಗಳೂರು ಹೋಬಳಿಗಳಿಗೆ ಸೇರಿದ ಎಲ್ಲಾ ಮೊಗವೀರರ ಖಾನೆಸುಮಾರಿಯನ್ನು ತೆಗಿಯಬೇಕು. (ಸೂಚಕ-ಶ್ರೀ ಉದಿಯಾವರ ಪದಿಯನವರು.)

೩. ಪ್ರತೀ ಮನೆಯಲ್ಲಿ ೧೨ ವರುಷದ ಒಳಗಿನ ಒಬ್ಬ ಬಾಲಕ ಯಾ ಬಾಲಕಿಯಾದರೂ ಶಾಲೆಗೆ ಹೋಗುವಂತೆ ಎಲ್ಲಾ ಗ್ರಾಮ ಕೂಡುಕಟ್ಟಿನವರು ಪತ್ತಾಯಗೊಳಿಸಬೇಕು. (ಸೂಚಕ-ಶ್ರೀ ಯು. ಕೆ. ಬಸಪ್ಪನವರು ಮೂಳೂರು)

೪. ವಿವಾಹ ಕಾರ್ಯಗಳನ್ನು ಒಂದೇ ದಿನ ಒಂದೇ ಊಟದೊಳಗೆ ಮುಗಿಸಬೇಕು. ಮತ್ತು ಯಾವ ತರದ ಮದ್ಯಮಾಂಸವನ್ನಾದರೂ ಅಂದು ಯಾರಿಗೂ ಯಾವ ಸಂದರ್ಭದಲ್ಲಿಯೂ ಕೊಡಕೂಡದು. (ಸೂಚಕ— ಪುದ್ದು ಬಸಪ್ಪ ಸಾಲ್ಯಾನರು, ಕದಿಕೆ.)

೫. ಹತ್ತು ವರುಷದ ಒಳಗಿನ ಹುಡುಗರನ್ನೂ ಹುಡುಗಿಯರನ್ನೂ ಕಳ್ಳು ಶರಾಬು ಅಂಗಡಿಗಳಿಗೆ ಕಳುಹಿಸಲೂ ಕೊಂಡುಹೋಗಲೂ ಕೂಡದು. (ಸೂಚಕ— ಕೈಪುಂಜಾಲು ಚೆನ್ನಪ್ಪನವರು.)

೬. ವಿಷ ಅಥವಾ ಕೋಟೆ ಹಾಕಿ ಮೀನುಗಳನ್ನು ನಾಶಮಾಡಕೂಡದು. ಇತರ ಸಮುದಾಯದವರೂ ಅಂಥ ಕೃತ್ಯ ಮಾಡದಂತೆ ಕಠಿಣವಾದ ಕಾನೂನುಗಳನ್ನು ಜ್ಯಾರಿಗೆ ತರಬೇಕಾಗಿ ಸಂಘದ ಮೂಲಕ ಸರಕಾರವನ್ನು ಕೇಳಿಕೊಳ್ಳಬೇಕು. (ಸೂಚಕ-ಶ್ರೀ ಮೋಹನಪ್ಪ ತಿಂಗಳಾಯರು)

ವಿದ್ಯಾಪ್ರಚಾರಕ್ಕಾಗಿ ೧೦ ವರುಷಗಳೊಳಗೆ ಒಂದು ಲಕ್ಷ ರೂಪಾಯಿಗಳ ಮೂಲಧನವನ್ನು ಯಾವ ವಿಧದಿಂದ ಸಂಗ್ರಹಿಸಬಹುದೆಂಬುವದಕ್ಕೆ ವಿವಿಧ ಸೂಚನೆಗಳನ್ನು ಚರ್ಚಿಸಿ ನಿಶ್ಚಯಿಸಲ್ಪಟ್ಟಿತು. ಐನೂರಮೂವತ್ತು ರೂಪಾಯಿಗಳ ದಾನವು ನಗದಾಗಿ ಪರಿಷತ್ತಿನ ದಿವಸಗಳಲ್ಲೇ ವಸೂಲುಮಾಡಲ್ಪಟ್ಟಿವು. ಜಿಲ್ಲೆಯ ಬೇರೆ ಬೇರೆ ಗ್ರಾಮಗಳಿಂದ ೧೧೦ ಪ್ರತಿನಿಧಿಗಳೂ ಸುಮಾರು ೩೦೦ ಜನ ಪ್ರೇಕ್ಷಕರೂ ಈ ಪರಿಷತ್ತಿಗೆ ಕೂಡಿದ್ದರು. ಜ್ಞಾನೋದಯ ಸಮಾಜದವರಿಂದ ಮಾಡೋಣಾದ ಇವರ ಊಟಉಪಚಾರಗಳ ಪೂರಾ ಖರ್ಚುಗಳನ್ನು ಮಂಗಳೂರಿಗೆ ಸೇರಿದ ಒಂಭತ್ತು ಪಟ್ಣ ಸಂಘಗಳವರು ವಹಿಸಿಕೊಳ್ಳುತ್ತಾರಾಗಿ ಅವರ ಕಡೆಯಿಂದ ಕುದ್ರೋಳಿಯ ಶ್ರೀ [illegible] ಗುರಿಕಾರರು ಸಭಾಂತ್ಯದಲ್ಲಿ ತಿಳಿಸಿದರು. ಮುನ್ಸಿಪಲ್ ಕೌನ್ಸಿಲರ್ ಶ್ರೀಯುತ ಜೆ. ಎ. ಪುತ್ರನ್ನಾಯರ ಮುಂದಾಳುತನದಿಂದ ಇಪ್ಪತ್ತೈದು ಜನ ಯುವಕ ವಿದ್ಯಾರ್ಥಿಗಳು ಈ ಪರಿಷತ್ತಿನ ಸ್ವಯಂಸೇವಕರಾಗಿ ಮಾಡಿದ ಉತ್ತಮ ಸೇವೆಯಿಂದ ಅತಿಥಿಗಳಿಗೆ ಯಾವ ಕೊರತೆಯೂ ಉಂಟಾಗಲಿಲ್ಲ. ಬರುವ ವರುಷದ ಮೂರನೇ ಪರಿಷತ್ತು ಮಲಪೆಯಲ್ಲಿ ಜರಗಿಸಬೇಕಾಗಿ ನಿಶ್ಚಯಿಸಲಾಯಿತು.

ತಾ. ೪–೬–'೨೬. ಬಿ. ಮೋಹನಪ್ಪ ತಿಂಗಳಾಯ.

ಸ್ಫುಟ ವಿಚಾರಗಳು.

ರೀಫ್ ಸ್ವಾತಂತ್ರ್ಯಹರಣ.

ಅನೇಕ ವರ್ಷಗಳ ಕಡುತರ ಯುದ್ಧದ ಮೇಲೆ, ಆಧುನಿಕ ಸರ್ವ ತರದ ಸನ್ನಾಹ ಸೌಕರ್ಯವಿದ್ದ ಎರಡು ಪ್ರಬಲ ಜನಾಂಗಗಳ ಸೈನ್ಯಗಳನ್ನು ನಿರೋಧಿಸಿ, ಕಟ್ಟಕಡೆಗೆ, ಆ ರೀಫ್ ವೀರನಾದ ಅಬ್ದುಲ್ ಕರೀಮನು ತನ್ನ ಆಯುಧಗಳನ್ನು ಕೆಳಗಿಳಿಸಿ ಫ್ರೆಂಚರಿಗೆ ಶರಣುಹೋದನು. ಲೋಕದ ವಿರಳವಾದ ವೀರ ಇತಿಹಾಸಗಳಲ್ಲಿ ಮತ್ತು ಸಣ್ಣ ಜನಾಂಗಗಳ ಸ್ವಾತಂತ್ರ್ಯ ಪ್ರೇಮದ ಮತ್ತು ಆತ್ಮಯಜ್ಞದ ಇತಿಹಾಸಗಳಲ್ಲಿ ಅಬ್ದುಲ್ ಕರೀಮನ ಈ ಅಸೀಮ ಸಾಹಸವು ಸುವರ್ಣಾಕ್ಷರಗಳಿಂದ ಉಲ್ಲಿಖಿತವಾಗಲು ಯೋಗ್ಯವಿದೆ. ಜಗತ್ತಿನಲ್ಲಿ ನ್ಯಾಯ ರಕ್ಷಣೆಗೆ ಎಡೆಯಿಲ್ಲ; ಮತ್ತು ಧರ್ಮವೇ ಜಯಿಸಬೇಕೆಂಬ ನಿರ್ಬಂಧವಿಲ್ಲವೆಂಬುದು ಇಂತಹ ಹೃದಯದ್ರಾವಕ ಘಟನೆಗಳಿಂದ ನಾವು ತಿಳಿದುಕೊಳ್ಳಬೇಕಾಗಿದೆ. ಲೋಕದ ಮುಂದೆ ಈ ಎರಡು ಜನಾಂಗಗಳು ತಮ್ಮ ಈ ಅನ್ಯಾಯದ ಕೃತ್ಯಕ್ಕಾಗಿ ನಾಚಲು ಕಾರಣವಿದೆಯೆನ್ನಲಿಕ್ಕೆ ಲೋಕವೆಂದರೆ ಯಾರು? ಪರಸ್ವಾಪಹರಣದಿಂದ, ಪ್ರಚಂಡ ಸ್ವಾರ್ಥದಿಂದ ರಾಜ್ಯವನ್ನೂ ಸಾಮ್ರಾಜ್ಯವನ್ನೂ ಕಟ್ಟಿದವರೇ ಈಗ ಲೋಕದ ಗೌರವದ ನಾಗರಿಕರಾಗಿರುವರು. ಅನ್ಯಾಯವಾಗ ಫ್ರಾನ್ಸು ಸ್ಪೈಯಿನು ದೇಶಗಳಿಗೆ ಈ ವಿಜಯವು ಒಂದು ಹೆಗ್ಗಳಿಕೆಯ ವಿಷಯವೇ ಆಗಿದೆ. ಸಂಸಾರದಲ್ಲಿ ಸಾಮಾನ್ಯತಃ ದೈಹಿಕ ಬಲವೇ ನ್ಯಾಯಾನ್ಯಾಯದ ತೀರ್ಮಾನಕರ್ತನಾಗಿದೆ. ಅಂತೂ ಈಗ ಅದರೊಡನೆ ವೈಜ್ಞಾನಿಕ ಅಗಾಧ ಪರಿಶೋಧಗಳೂ ಕೂಡಿ ಆ ದೈಹಿಕ ಬಲವನ್ನು ಪುಷ್ಟೀಕರಿಸಿವೆ. ಲೀಗ್ ಒಫ್ ನೇಶನ್ಸ್, ಸೆಲ್ಫ ಡಿಟರ್ಮಿನೇಶನ್, ರೈಟ್ಸ ಒಫ್ ಮ್ಯಾನೊರಿಟಿಸಿ, ಸಣ್ಣ ಜನಾಂಗಗಳ ಸ್ವಾತಂತ್ರ್ಯ ಇತ್ಯಾದಿ ದೊಡ್ಡ ದೊಡ್ಡ ತತ್ವಗಳನ್ನು, ಪಾಶ್ಚಾತ್ಯ ರಾಜ ನೀತಿಜ್ಞರು ಗುಡುಗುಡಾಯಿಸಿ, ಬಿಳೇ ಅಲ್ಲದ ಇತರ ಜನಾಂಗಗಳ ರಕ್ಷಣೆಯ ಭಾರವನ್ನು ತೆಗೆದುಕೊಳ್ಳುವೆಂದು, ಯಾವ ರಾಜಧರ್ಮವೂ ಒಪ್ಪದಂತಹ ಪಾಪಕಾರ್ಯಗಳನ್ನು ಮಾಡುವರು. ಈ ಅನಂತಸ್ವಾರ್ಥದ ಮತ್ತು ಇದಕ್ಕಾಗಿ ಉಪಯೋಗಿಸುವ ಅಪ್ರತಿಮ ಯುಕ್ತಿವಾದದ ಅಂತ್ಯವು ಎಲ್ಲಿಯೊ? ಯಾರು ಬಲ್ಲರು? ಅಂತೂ ಫ್ರೆಂಚ್ ಜನಾಂಗಕ್ಕೆ ಬಹಳ ಲಾಭವನ್ನು ತರಬಹುದೆಂದು ನಿರೀಕ್ಷಿಸಲ್ಪಟ್ಟ ಆ ಮೊರೊಕ್ಕೊ ರಾಜ್ಯವು ಸಂಪೂರ್ಣವಾಗಿ ಫ್ರೆಂಚರ ಅಧೀನತೆಗೆ ಬಂದಂತಾಯಿತು.

ಹಿಂದೂ ಮುಸಲ್ಮಾನ ಸಮಸ್ಯೆ.

ಉತ್ತರ ಹಿಂದೂಸ್ಥಾನದಲ್ಲಿ ಈ ಸಮಸ್ಯೆ ಅತೀ ತೀವ್ರವಾಗಿ ಬಂದಿದೆ. ಬಂಗಾಳದ ಉದ್ರೇಕದ ನಂತರ ಶಾಂತಿಯು ಇನ್ನೂ ಸ್ಥಾಪಿತವಾಗಿಲ್ಲ. ಸಮಗ್ರ ಬಂಗಾಳವೂ, ಸಂಯುಕ್ತ ಪ್ರಾಂತವೂ ಹಿಂದೂ ಮುಸಲ್ಮಾನರ ಸಮರಭೂಮಿಯಾಗಿ ಪರಿಣಮಿಸಿಯದೆ. ಒಂದು ದಿನ ಒಂದು ದೇವಸ್ಥಾನದ ಮೂರ್ತಿಯೇ ಚೂರಾಗಿ ಬೀಳುತ್ತಿದೆ. ಇನ್ನೊಂದು ದಿನ ಒಬ್ಬ ಮುಸಲ್ಮಾನನು ಸಾಯುವ ವರೆಗೆ ಹೊಡೆಯಲ್ಪಡುತ್ತಾನೆ, ಮತ್ತೊಂದು ದಿನ ಒಬ್ಬ ಮುಸಲ್ಮಾನನು ಒಬ್ಬ ಹಿಂದೂವನ್ನು ಕೊಂದುಬಿಡುತ್ತಾನೆ. ಹೀಗೆ ಕೇವಲ ಅಸಹ್ಯಕರವೂ, ಅಮಾನುಷಕರವೂ, ರೀತಿಯಲ್ಲಿ ಈ ಮತಾಂಧಿಮಾನಿಗಳು ತಮ್ಮ ಅಸ್ತಿತ್ವವನ್ನು ತೋರಿಸುವ ಆ ಹೃದಯವಿದಾರಕ ಭೀಕರ ದೃಶ್ಯಗಳನ್ನು ನೋಡಿದರೆ ಅಂಗಾಂಗಗಳು ಕಂಪಾಯಮಾನವಾಗುತ್ತಿವೆ. ಅತ್ತ ಕೆಲವು ಧುರೀಣರೂ "ಕಾಲಕ್ಕೆ ತಕ್ಕ ಕೋಲು"ವೆಂದು ಜನತೆಯ ಈ ಉನ್ಮತ್ತ ಮೃತ್ಯುನೃತ್ಯದ ಸೂತ್ರವನ್ನು ಎತ್ತಿ ಹಿಡಿದು ಮತ್ತೂ ಅವರನ್ನು ಕುಣಿಸಲು ಪ್ರಯತ್ನಿಸುವರು.

ಈ ಮಹಾ ಸಮಸ್ಯೆಯನ್ನು ಬಿಡಿಸಲು ಯತ್ನಿಸಿದಷ್ಟು ಅದು ಮತ್ತೂ ಗಡುಸಾಗಿ ಬರುತ್ತಿದೆಯೆ ವಿನಹ ಪ್ರಯೋಜನವೇ ಆಗಿಲ್ಲ. ಧುರೀಣರು ಧುರೀಣರು ಕೂಡಿ ಠರಾವುಗಳ ರಾಶಿಯನ್ನು ಹೊರಗೆಡಹುತ್ತಿರುವರಲ್ಲದೆ ಇನ್ನಾವ ಕಾರ್ಯಕಾರಿಯಾದ ಕೆಲಸವನ್ನೂ ಮಾಡುವುದಿಲ್ಲ. ಉತ್ತಮವಾದ ರಾಷ್ಟ್ರೀಯತೆಯ ಪ್ರಚಾರವೇ ಇದಕ್ಕೆ ಪರಮೌಷಧವಾಗಿದೆ. ಆದರೆ ಇಂತಹ ಉತ್ತಮ ಕೆಲಸವನ್ನು ಯಾರೂ ಸಾಧಿಸಲೆತ್ನಿಸುವುದಿಲ್ಲ.

ಮುಂಬರುವ ಚುನಾವಣೆಗೆ ಉಮೇದ್ವಾರರು

ನಮ್ಮ ಜಿಲ್ಲೆಯ ರಾಜಕೀಯ ಪರಿಷತ್ತು ಕೂಡಿಹೋಯಿತು. ಉತ್ಸವ ಠರಾವುಗಳು ಮಂಜೂರಾಗಿ ಹೋದುವು. ಆದರೆ ಮುಂಬರುವ ಚುನಾವಣೆ ಬಗ್ಗೆ ಯಾವ ಪ್ರಚಾರ ಕಾರ್ಯವಾಗಬೇಕೊ ಅದರ ಯಾವ ವಿಚಾರವೂ ತೋರುವುದಿಲ್ಲ. ಸ್ವರಾಜ್ಯ ಪಕ್ಷವು ಯಾವ ವಿಧಾಯಕ ಕಾರ್ಯಕ್ರಮವನ್ನು ಮಾಡಬೇಕೊ ಅದರ ಸುಳಿವಿಲ್ಲ. ಮುಂದಿನ ಉಮೇದ್ವಾರರೆಂಬುದರ ವಿಷಯದಲ್ಲಿಯೂ ಸರಿಯಾದ ನಿರ್ಧಾರವು ಇನ್ನೂ ಆಗಿರುವಂತೆ ತೋರುವುದಿಲ್ಲ. ಮಂಗಳೂರು ಸ್ವರಾಜ್ಯಪಕ್ಷವು ಉಮೇದುವಾರರನ್ನು ನಿಲ್ಲಿಸುವುದರಲ್ಲಿ ಯೋಗ್ಯ ವಿವೇಚನೆ ನಡಿಸುವುದೊ, ಇಲ್ಲವೆ ಸ್ವೇಚ್ಛೆಯಂತೆ, ಆದರ್ಶವೆಂದು, ಚುನಾವಣೆಯ ಉತ್ಸಾಹದಿಂದ ಬಾಡದೆ ವಿಜಯ ಹೊಂದಬಲ್ಲವರನ್ನು ಬಿಟ್ಟು ಅನ್ಯರನ್ನು ನಿಲ್ಲಿಸುವುದೊ ಎಂಬುದೂ ಅನುಮಾನಾಸ್ಪದವಿದೆ. ದೇಶದ ರಾಜಕೀಯ ಪರಿಸ್ಥಿತಿಯಲ್ಲಿ ಸ್ವರಾಜ್ಯಪಕ್ಷವು ಸಾಧ್ಯವಿದ್ದಷ್ಟು ವಿಜಯಿಯಾಗುವುದು ಆವಶ್ಯಕವಿದೆ. ದೇಶದ ಜನತೆಯ ರಾಷ್ಟ್ರೀಯತೆಯ ಉತ್ಸಾಹವು ತಣ್ಣಗಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ಮರೆಯಬಾರದು. ಇಂತಹ ಪರಿಸ್ಥಿತಿಯಲ್ಲಿ ಆತ್ಮಸ್ವಾರ್ಥದಿಂದ ಉಮೇದ್ವಾರರನ್ನು ನಿಲ್ಲಿಸದೆ, ಜನತೆಯೊಳಗೆ ಗೌರವಿತರಾದ, ಜನತೆಯಿಂದ ಸಹಾನುಭೂತಿಯನ್ನು ಪಡೆಯಬಲ್ಲನೆಂದು ಧೈರ್ಯವಿರುವ, ಜನತೆಯ ಪರಿಚಯವಿದ್ದ, ಖರ್ಚಿಗೆ ಸಾಕಷ್ಟು ಹಣವಿದ್ದ, ಸ್ವರಾಜ್ಯಪಕ್ಷದ ಆದರ್ಶಗಳ ಮೇಲೆ ಅಭಿಮಾನವಿದ್ದ, ಉಮೇದ್ವಾರರನ್ನು ನಿಲ್ಲಿಸುವುದು ಆವಶ್ಯಕವಿದೆ. ನಮ್ಮ ಜಿಲ್ಲೆಯ ಕಾಂಗ್ರೆಸು ಕಮಿಟಿಯಾಗಲಿ, ಸ್ವರಾಜ್ಯಪಕ್ಷವಾಗಲಿ ಹಣವಿದ್ದವುಗಳಲ್ಲ. ಇತರ ಕಡೆಯಿಂದ ದ್ರವ್ಯಸಹಾಯವು ಒದಗೀತೆಂದು ಆಶಿಸುವುದೂ ಸರಿಯಲ್ಲ. ಏಕೆಂದರೆ ಈ ಚುನಾವಣೆಗಳಿಗೆ ದ್ರವ್ಯವಿನಿಮಯವು ಬಹಳವಾಗಿ ನಡೆಯಲೇಬೇಕು. ಅಷ್ಟೂ ದ್ರವ್ಯಸಹಾಯವು ಹೊರಜನರಿಂದ ಬಂಬಹದೆಂದು ನಿರೀಕ್ಷಿಸಲಾಗುವುದಿಲ್ಲ. ಆದುದರಿಂದ ಇವೆಲ್ಲ ವಿಷಯಗಳನ್ನು ಸರಿಯಾಗಿ ಆಲೋಚಿಸಿ ಆದಷ್ಟು ಬೇಗನೆ ಉಮೇದ್ವಾರರನ್ನು ನೇಮಿಸಿ ಮತದಾರರೊಳಗೆ ಪ್ರಚಾರಕಾರ್ಯವನ್ನು ಆರಂಭಿಸುವುದು ಅಗತ್ಯವಿದೆ. ಈ ಬಾರಿಯ ಚುನಾವಣೆಗಳಲ್ಲಿಯೇ ಕಾಂಗ್ರೆಸಿನ ಗೌರವ ನಿರ್ಣಯವಾಗಲಿದೆ. ಕಾಂಗ್ರೆಸ್ಸಿನ ಉಮೇದ್ವಾರರು ಪರಾಜಯ ಹೊಂದಿದರೆಂದರೆ ಕಾಂಗ್ರೆಸ್ಸಿನ ಗೌರವದ ಆಖೈರಿ ಮಾತನ್ನು ಹೇಳಿದಂತಾಗುವುದು. ಆದುದರಿಂದ ಕಾಂಗ್ರೆಸು ಮತ್ತು ಸ್ವರಾಜ್ಯಪಕ್ಷೀಯ ಸಂಸ್ಥೆಗಳು ಚೆನ್ನಾಗಿ ಜಾಗರೂಕರಿರುವುದು ಅಗತ್ಯವಿದೆ.

ಬಂಗಾಳ ಪ್ರಾಂತಿಕ ಪರಿಷತ್ತು.

ದೇಶದಲ್ಲಿ ಅಸಹಕಾರ ಚಳವಳದ ನಂತರ ಉಂಟಾದ ನಿರುತ್ಸಾಹವು ಜಡತೆಯನ್ನೂ ಆಲಸತೆಯನ್ನೂ ಉಂಟುಮಾಡಿ ಜನರಲ್ಲಿ ರಾಜಕೀಯ ಆಶಯಗಳನ್ನು ಕಡಿಮೆಮಾಡಿಸಿಯದೆನ್ನಬಹುದು. ಅದರೊಡನೆ ಜಾತೀಯ ಕಲಹಗಳೂ ಕೂಡಿ, ಜನರೊಳಗಿನ ರಾಷ್ಟ್ರೀಯತೆಯ ಭಾವನೆಯನ್ನು ತೀರಾ ಸಂಕುಚಿತವಾಗಿ ಮಾಡಿ, ಈಗ ಜನರ ಲಕ್ಷ್ಯವನ್ನು ಸ್ವರಾಜ್ಯ ಸಾಧನೆಯ ಕಡೆಗೆ ತಿರುಗಿಸುವುದೇ ಕಷ್ಟಸಾಧ್ಯವಾಗಿ ಪರಿಣಮಿಸಿಯದೆ. ಆದುದರಿಂದಲೇ ಹಿಂದು ಬಾರಿ ಅಸಂಖ್ಯ ಜನರನ್ನು ಆಕರ್ಷಿಸುತ್ತಿದ್ದ ಕಾಂಗ್ರೆಸ್ ಸಮ್ಮೇಳನಗಳು ಈಗ ಅಲಕ್ಷಿತವಾಗಿ ಬಾಡಿ ಹೋಗುತ್ತಿವೆ. ಕಾಂಗ್ರೆಸ್ಸಿನ ಜಿಲ್ಲಾ, ಪ್ರಾಂತಿಕ ಪರಿಷತ್ತುಗಳಿಗೆ ಜನರು ಕೂಡುವುದೇ ದುರ್ಲಭವಾಗಿದೆ. ಆದರೂ ಬಂಗಾಳದಲ್ಲಿ ಈ ಉತ್ಸಾಹವು ಸ್ವಲ್ಪಮಟ್ಟಿಗೆ ಇದೆ ಎಂದು ನಮ್ಮ ಅಭಿಪ್ರಾಯವಿದ್ದಿತು. ಆದರೆ ಅಲ್ಲಿ ಇತ್ತೀಚೆಗೆ ಉಂಟಾದ ಹಿಂದೂ ಮುಸಲ್ಮಾನ ಸಂಘರ್ಷಣದ ಕಾರಣದಿಂದ ಅಲ್ಲಿ ಕೂಡ ಈ ರಾಜಕೀಯ ಉತ್ಸಾಹವು ನಿರ್ವಾಣೋನ್ಮುಖವಾಗಿದ್ದಂತೆ ತೋರುತ್ತಿದೆ. ಕಳೆದ ತಿಂಗಳಲ್ಲಿ ಕೃಷ್ಣನಗರದಲ್ಲಿ ಕೂಡಿದ್ದ ಬಂಗಾಳ ಪ್ರಾಂತಿಕ ಪರಿಷತ್ತು ಅತ್ಯಂತ ದುಃಖಕರವಾದ ರೀತಿಯಲ್ಲಿ ಪರ್ಯಾವಸಾನವನ್ನು ಹೊಂದಿತು. ಆ ಪರಿಷತ್ತಿಗಾಗಿ ಚುನಾಯಿಸಲ್ಪಟ್ಟ ಅಧ್ಯಕ್ಷರ ಅಧ್ಯಕ್ಷ ಭಾಷಣದ ವಿಷಯವಾಗಿ ಅನೇಕರು ನಿಷೇಧವನ್ನು ತೋರಿಸಿದುದರಿಂದ ಅಧ್ಯಕ್ಷರು ಅಧ್ಯಕ್ಷತನಕ್ಕೆ ರಾಜೀನಾಮೆಕೊಟ್ಟರು. ಮುಂದೆ ಅಧ್ಯಕ್ಷರನ್ನು ಆರಿಸಲು ಆಲೋಚಿಸಲಿಕ್ಕಾಗಿ ಕೂಡಿದ ಸಭೆಯು ಗಲಭೆಯಲ್ಲಿ ಪರಿಣಮಿಸಿ ಮುಕ್ತಾಯಹೊಂದಿತು. ಬಂಗಾಳ ಪ್ರಾಂತಿಕ ಪರಿಷತ್ತು ಕೂಡಿಯೂ ಕೂಡದೆ ಹೋದಂತಾಯಿತು. ಕಾಂಗ್ರೆಸ್ಸಿನ ಅಭಿವೃದ್ಧಿಗೆ ಇಂತಹ ಘಟನೆಗಳು ಶುಭ ಸೂಚನೆಯಾಗಿಲ್ಲ.

ಸ್ವತಂತ್ರ ಐಗುಪ್ತ!

ಇಂಗ್ಲೀಷರು ಐಗುಪ್ತ್ಯ ದೇಶಕ್ಕೊಂದು ಸ್ವಾತಂತ್ರ್ಯವನ್ನು ಕೊಟ್ಟರು! ಆ ಸ್ವಾತಂತ್ರ್ಯವನ್ನು ಕೈರೊದೊಳಗೆ ತಮ್ಮ ಸೈನ್ಯ ಪನ್ನಿಟ್ಟೇ ರಕ್ಷಿಸಬೇಕಾಗಿದೆ. ಐಗುಪ್ತ್ಯದಲ್ಲಿ ಪಾರ್ಲಿಮೆಂಟಿಗಾಗಿ ಹಿಂದೊಂದು ಬಾರಿ ಚುನಾವಣೆಯಾಗಿತ್ತು. ಅದರಲ್ಲಿ ಐಗುಪ್ತ್ಯ ದೇಶದ ರಾಷ್ಟ್ರಪಕ್ಷದ ಝುಗಲೂಲ ಪಾಶನು ಬಹುಮತ ಹೊಂದಿದನು. ಝುಗಲೂಲನು ಸುದಾನ ದೇಶವು ಐಗುಪ್ತ್ಯಕ್ಕೆ ಸೇರಿದುದೆಂದೂ, ಇಂಗ್ಲಿಷ್ ಸೈನ್ಯವು ಕೈರೊದಲ್ಲಿರುವ ಆವಶ್ಯಕತೆಯಿಲ್ಲವೆಂದೂ ಅನ್ನುವವನಾಗಿರುವನು. ಸುದಾನ ದೇಶದಲ್ಲಿ ಉತ್ತಮವಾದ ಹತ್ತಿ ಬೆಳೆಯುತ್ತಿದೆ. ಇಂತಹ ಲಾಭಕರವಾದ ದೇಶದ ಆಡಳಿತವನ್ನು ಇಂಗ್ಲೀಷರು ಬಿಟ್ಟುಕೊಡುವುದಿಲ್ಲ. ಹೀಗಾಗಿ ಝುಗಲೂಲನ ಬಹುಮತವು ಆಂಗ್ಲಹಿತಕ್ಕೆ ವಿರೋಧವಿದ್ದುದರಿಂದಲೂ ಆಗಿನ ಸರಕಾರವು ಆಂಗ್ಲ ಅಧಿಕಾರಿಗಳಿಗೆ ವಿಧೇಯವಿದ್ದುದರಿಂದಲೂ ಚುನಾಯಿಸಲ್ಪಟ್ಟ ಪಾರ್ಲಿಮೆಂಟು ಕೂಡಲೆ ಕೊನೆಗಾಣಿಸಲ್ಪಟ್ಟಿತು. ಆದರೆ ದಿವಸ ಹೋದಂತೆ ಅಧಿಕೃತ ಸರಕಾರವು ಜನರ ತಿರಸ್ಕಾರಕ್ಕೆ ಹೆಚ್ಚೆಚ್ಚು ಪಾತ್ರವಾಗುತ್ತಾ ಬಂದು, ಕಟ್ಟಕಡೆಗೆ ಈ ಸರಕಾರಕ್ಕೆ ಪ್ರತಿಯಾಗಿ ಐಗುಪ್ತ್ಯದ ಎಲ್ಲಾ ಪಕ್ಷಗಳೂ ಒಟ್ಟುಗೂಡಿ ಬಂದಾದವು. ಐಗುಪ್ತ್ಯದಲ್ಲಿ ಪುನಃ ಚುನಾವಣೆಗಳಾದುವು. ಅದರಲ್ಲಿ ಝುಗಲೂಲಪಾಶನಿಗೆ ಮುಂಚಿಗಿಂತಲೂ ಹೆಚ್ಚು ವಿಜಯವಾಗಿದೆ. ಅವನಿಗೆ ಈಗ ಒಂದಕ್ಕೆ ಮೂರರಂತೆ ಬಹುಮತವಿದೆ. ಆದರೆ ಇಷ್ಟು ದೀರ್ಘ ಸಮಯದಲ್ಲಿ, ಝುಗಲೂಲನು ಏರಿದ ಪ್ರಾಯದ ಕಾರಣದಿಂದಲೂ, ಮೈಯಲ್ಲಿರುವ ಅಸ್ವಸ್ಥದ ಕಾರಣದಿಂದಲೂ ಸ್ವಲ್ಪ ತಗ್ಗಿರಬಹುದೆಂದು ಇಂಗ್ಲೀಷರ ಆಶೆಯಿದ್ದಿತು. ಅವನ ಸರಿ ಮನಸ್ಸನ್ನು ತಿಳಿಯಲೆಂದು ಇಂಗ್ಲೀಷ ರೆಸಿಡೆಂಟನು ಅವನಿಗೆ ಬಹುಮತವಿದೆಯೆಂದು ತಿಳಿದ ಕೂಡಲೆ ಅವನನ್ನು ಒಂದು ಮಿತ್ರ ಭೋಜನ ಸಮಾರಂಭಕ್ಕೆ ಕರೆದು ಅವನ ಮನೋಗತವನ್ನು ತಿಳಿದನು. ಝುಗಲೂಲನು ಎಂದಿನಂತೆಯೇ ಸ್ಥಿರ. ಇದನ್ನು ತಿಳಿದ ಕೂಡಲೆ ಬ್ರಿಟಿಷ್ ಯುದ್ಧನಾವೆಯು ಕೈರೊ ಬಂದರವನ್ನು ಸೇರಿತು. ಇದು ಯಾವ ತರದ ನ್ಯಾಯವೆಂದು ಯಾರೂ ಊಹಿಸಲಾರರು. ಬ್ರಿಟಿಷ್ ಸರಕಾರವು ಹೀಗೆ ಬೆದರಿಸಿ ಐಗುಪ್ತ್ಯವನ್ನು ಪೀಡಿಸುವುದು ಪಾಶ್ಚಾತ್ಯ ಸಾಮ್ರಾಜ್ಯವಾದದ ಸ್ವಾಭಾವಿಕ ಚಿಹ್ನೆಯಾಗಿದೆ. ಯಾವ ಮಾನಸಿಕತೆಯಿಂದ ಫ್ರಾನ್ಸು ರೀಫ್ ಪ್ರದೇಶವನ್ನು ಸೂರೆಗೊಂಡಿತೊ, ಅದೇ ಮಾನಸಿಕತೆಯೇ ಆಂಗ್ಲ ಯುದ್ಧನಾವೆಯನ್ನು ಕೈರೊಗೆ ತಂದದೆ. ಐಗುಪ್ತ್ಯದ ಮುಂದಿನ ಘಟನೆಗಳು ಬಹಳ ವಿಶೇಷವಿದ್ದಿರಬಹುದು.

ಐಗುಪ್ತ್ಯದ ಚುನಾವಣೆಗಳ ಫಲಿತಾಂಶಗಳನ್ನು ನೋಡಿದರೆ ಅಲ್ಲಿಯ ಜನತೆಯು ರಾಜಕೀಯ ಚಳವಳಗಳ ವಿಷಯ ಎಷ್ಟು ಉತ್ಸಾಹಿತರಿರುವರೆಂದು ತಿಳಿಯುವುದು. ಐಗುಪ್ತ್ಯದ ವಿದ್ಯಾರ್ಥಿಗಳು ಐಗುಪ್ತ್ಯದ ಸ್ವಾತಂತ್ರ್ಯದ ಹೋರಾಟದಲ್ಲಿ ಮಾಡಿದ ಪ್ರಯತ್ನಗಳು ಎಲ್ಲರಿಗೂ ತಿಳಿದೇ ಇವೆ. ದೇಶದ ಎಲ್ಲಾ ಶಾಲೆಗಳು ಒಂದು ಕಾಲದಲ್ಲಿ ಬಹು ಸಮಯದ ವರೆಗೆ ಮುಚ್ಚಿಯೇ ಇರಬೇಕಾಗಿದ್ದವು. ಹಿಂದೂಸ್ಥಾನದ ಜನತೆಯಲ್ಲಿ ಅಂತಹ ಉತ್ಸಾಹವೂ, ಆಕಾಂಕ್ಷೆಯೂ ಇಲ್ಲದುದರಿಂದಲೆ ಹಿಂದೂಸ್ಥಾನಕ್ಕೆ ಇಷ್ಟು ವರ್ಷಗಳಾದರೂ ಸ್ವಾತಂತ್ರ್ಯದ ಕಡೆಗೆ ಒಂದು ಹೆಜ್ಜೆ ಕೂಡ ಮುಂದಿಡಲೂ ಸಾಧ್ಯವಿಲ್ಲವಾಗಿ ಹೋಗಿಯದೆ. ಸಾಮಾನ್ಯ ಜನತೆ ಕೂಡ ಆ ರಾಷ್ಟ್ರೀಯತೆಯ ಭಾವವನ್ನು ಅನುಭವಮಾಡುವ ಬದಲಿಗೆ ತಿರಸ್ಕಾರ ಮಾಡುವುದೇ ಹೆಚ್ಚಾಗಿ ಕಾಣುತ್ತಿದೆ.

ಸರ್ವೆಂಟ ಒಫ್ ಇಂಡಿಯಾ ಸೊಸೈಟಿಯವರ ನಷ್ಟ.

ಪೂನಾದಲ್ಲಿ ಸರ್ವೆಂಟ್ಸ ಒಫ್ ಇಂಡಿಯಾ ಸೊಸೈಟಿಯವರಿಂದ ಪ್ರಕಟಿಸಲ್ಪಡುತ್ತಿರುವ ಧ್ಯಾನಪ್ರಕಾಶ, ಮತ್ತು ಸರ್ವೆಂಟ ಒಫ್ ಇಂಡಿಯಾ ಎಂಬ ಪತ್ರಿಕೆಗಳನ್ನು ಮುದ್ರಿಸುತ್ತಿದ್ದ ಅದೇ ಸೊಸೈಟಿಯ ಆರ್ಯಭೂಷಣ ಮುದ್ರಣಾಲಯಕ್ಕೂ, ಪತ್ರಿಕೆಗಳ ಆಫೀಸಿಗೂ ಬೆಂಕಿ ತಗುಲಿ ಎಲ್ಲವೂ ಸುಟ್ಟುಹೋಗಿ, ಸೊಸೈಟಿಗೆ ಮೂರು ನಾಲ್ಕು ಲಕ್ಷ ರೂಪಾಯಿಯಷ್ಟು ನಷ್ಟವಾಗಿಯದೆಂದು ತಿಳಿಯಲು ನಮಗೆ ಬಹಳ ವಿಷಾದವೆನಿಸುತ್ತಿದೆ. ಈ ಸೊಸೈಟಿಯು ಕೀರ್ತಿಶೇಷ ಗೋಖಲೆಯಂತಹ ಅಪ್ರತಿಮ ದೇಶಭಕ್ತರ ಸ್ವಾರ್ಥತ್ಯಾಗದಿಂದ ಕಟ್ಟಲ್ಪಟ್ಟು ಬಂದುದಾಗಿದೆ. ಇದರ ನಷ್ಟದಲ್ಲಿ ಹಿಂದೀಯನು ಪ್ರತಿಯೊಬ್ಬನೂ ತನ್ನ ಸಹಾನುಭೂತಿಯನ್ನು ತೋರಬೇಕು. ಮಹಾತ್ಮಾ ಗಾಂಧಿಯವರು ಮೇಲಿನ ಪತ್ರಿಕೆಗಳ ಮುದ್ರಣದ ಬಗ್ಗೆ ತಮ್ಮ ಯಂಗ ಇಂಡಿಯಾದ ಮುದ್ರಾಲಯವನ್ನು ಉಪಯೋಗಿಸಬಹುದಾಗಿ ಕೇಳಿಕೊಂಡಿರುವರು. ಮುಂಬಯಿಯ ಕಾಗದ ವ್ಯಾಪಾರಿಗಳು ಧರ್ಮಾರ್ಥವಾಗಿ ಕಾಗದ ಕಟ್ಟುಗಳನ್ನು ಕೊಡುತ್ತಿರುವರು. ಅನೇಕರು ಧನಸಹಾಯ ಮಾಡುತ್ತಿರುವರು. ಇಂತಹ ಸಹಾಯವು ಇನ್ನೂ ಮುಂದೆ ಬಂದು ಸೊಸೈಟಿಯು ಮುಂಚಿನಂತೆಯೇ ತನ್ನ ಮುದ್ರಾಲಯವನ್ನು ಕಟ್ಟಿಕೊಳ್ಳುವುದಾಗಿ ಆಶಿಸುವೆವು.

ಅನುಕ್ರಮಣಿಕೆ.

ಅಗ್ರಲೇಖ	ಪುಟ.
ಔದ್ಯೋಗಿಕ ವಿದ್ಯಾಭ್ಯಾಸ	೬
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ.	೭–೮
ದಕ್ಷಿಣ ಕನ್ನಡ-ಕಾರ್ಕಳ, ಮೊಗ್ರಾಲ್, ಮಂಜೇಶ್ವರ, ಮರವಂತೆ ಕಾಸರಗೋಡು,	,,
ಮಂಗಳೂರು	೮
೧೨ನೇ ಕರ್ನಾಟಕ ಸಾಹಿತ್ಯ ಪರಿಷತ್ತು	,,
ದಕ್ಷಿಣಕನ್ನಡ ಮೊಗವೀರ ಮಹಾಜನ ಸಂಘದ ದ್ವಿತೀಯ ಪರಿಷತ್ತು	೪

ಸ್ವದೇಶಾಭಿಮಾನಿ.

ಶಕ ೧೮೪೮ ವೈಶಾಖ ಬ| ೯ಯು ಶುಕ್ರವಾರ.

ಔದ್ಯೋಗಿಕ ವಿದ್ಯಾಭ್ಯಾಸ.

ನಮ್ಮ ದೇಶವು ಪ್ರಥಮವಾಗಿ ಕೃಷಿ ದೇಶವಾಗಿದೆ. ಪರದೇಶದ ದ್ರವ್ಯಶೋಷಣವನ್ನು ನಮ್ಮ ದೇಶವು ಸ್ವಲ್ಪ ಮಟ್ಟಿಗಾದರೂ ತಡೆದು ಸಹಿಸಿಕೊಂಡಿರುವುದಾದರೆ ಅದು ಈ ಭೂವ್ಯವಸಾಯದ ಬಲದಿಂದಾಗಿದೆ. ಆದರೆ ದೇಶದ ಭೂವ್ಯವಸಾಯದ ಪರಿಸ್ಥಿತಿಯು ಚೆನ್ನಾಗಿದೆಯೆಂದು ಹೇಳಲಾಗುವುದಿಲ್ಲ. ದೇಶದ ಭೂಮ್ಯುತ್ಪತ್ತಿಯು ಹೇಗೆ ಸಾಧ್ಯವಿದ್ದುದಕ್ಕಿಂತಲೂ ಅತೀ ಕಡಿಮೆಯಾಗಿ ಇದೆಯೆಂಬುದನ್ನು ನಾವು ಈ ಮೊದಲು ಚರ್ಚಿಸಿರುವೆವು. ಮಹಾತ್ಮರು ಹೇಳುವಂತೆ ಕೃಷಿಯೂ, ಕೈಗಾರಿಕೆಯೂ ಒಂದು ದೇಶದ ಎರಡು ಶ್ವಾಸಕೋಶಗಳು. ಅಂತೆ ಆ ಶ್ವಾಸಕೋಶಗಳು ಚೆನ್ನಾಗಿ ಅಭಿವೃದ್ಧಿಸ್ಥಿತಿಯಲ್ಲಿರುವಂತೆ ಮಾಡುವುದು ದೇಶಹಿತಕರ್ತನ ಕರ್ತವ್ಯವಿದೆ.

ಕೃಷಿಯ ಅಭಿವೃದ್ಧಿ ಸಾಧನೆಯನ್ನು ವಿಚಾರಿಸಲಿಕ್ಕೆಂದು ಹೇಗೂ ಒಂದು ರೋಯಲ್ ಕಮಿಶನು ನೇಮಕವಾಗಿಯದೆ. ಕೃಷಿಸುಧಾರಣೆಯ ಬಗ್ಗೆ ಯಾವ ಸಾಧನಗಳನ್ನು ಮಾಡಬಹುದೆಂಬುದಕ್ಕೂ, ನಾವು ಈ ಮೊದಲು ಬರೆದಿರುವೆವು. ಪ್ರಕೃತ ದೇಶದ ಇನ್ನೊಂದು ಶ್ವಾಸಕೋಶವೆಂದಿರುವ ಕೈಗಾರಿಕೆಯ ಪರಿಸ್ಥಿತಿಯೇನು, ಅದರ ಬಗ್ಗೆ ಯಾವ ತರದ ವಿದ್ಯಾಭ್ಯಾಸವು ಹೇಗೆ ನಡೆಯಬೇಕು ಎಂಬುದರ ವಿಷಯವಾಗಿಯೂ ವಿಚಾರಿಸಲೆಂದು ನಮ್ಮ ಇಚ್ಛೆಯಿದೆ.

ದೇಶದ ಹೆಚ್ಚಿನ ದ್ರವ್ಯಶೋಷಣವು ಪರದೇಶಗಳ ಕೈಗಾರಿಕೆಗಳ ಮೂಲಕವೇ ನಡೆಯುತ್ತಿದೆ. ಜೀವನಸೌಕರ್ಯಗಳು ಇತ್ತೀಚೆಗೆ ಬಹಳ ಸುಧಾರಣೆ ಹೊಂದಿವೆ. ಆ ಸೌಕರ್ಯಗಳು ಆಧುನಿಕ ಔದ್ಯೋಗಿಕ ಅಭಿವೃದ್ಧಿಯೊಡನೆಯೇ ಬೆಳೆದಿವೆ. ಆದರೆ ಆ ಔದ್ಯೋಗಿಕ ಅಭಿವೃದ್ಧಿಯು ಪರದೇಶಗಳಲ್ಲಿ ಅಂದರೆ ಸ್ವತಂತ್ರವಾದ ಪರಂಪರೆಗಳಲ್ಲಿ ನಡೆದಿದೆಯೇ ವಿನಹ ಹಿಂದೂದೇಶದಲ್ಲಿ ಆ ಔದ್ಯೋಗಿಕ ಅಭಿವೃದ್ಧಿಯಾಗಲಿ ಉದ್ಯೋಗಗಳ ಸ್ಥಾಪನೆಯಾಗಲಿ ನಡೆದಿಲ್ಲ. ನಡೆದವುಗಳಿದ್ದರೆ, ಅವು ದೇಶದ ಔದ್ಯೋಗಿಕ ಕಲೆಯನ್ನು ಬೆಳೆಸುವಂತಹವುಗಳಾಗಿಲ್ಲ ಮತ್ತು ಅವುಗಳಿಂದ ಪರದೇಶದ ದ್ರವ್ಯಶೋಷಣ ಕಾರ್ಯವು ಕಡಿಮೆ ಮಾಡಲ್ಪಟ್ಟಿಲ್ಲ. ಎಂದಿನ ವರೆಗೆ, ಯಾವ ಕೈಗಾರಿಕೆಯು ದೇಶದ ದ್ರವ್ಯಹಾನಿಯನ್ನು ನಿಲ್ಲಿಸಲು ಶಕ್ತವಾಗದೊ, ಅಂದಿನ ವರೆಗೆ ಆ ಕೈಗಾರಿಕೆಯು ನಿಜವಾಗಿಯೂ ದೇಶಕ್ಕೆ ಕಾರ್ಯಕಾರಿಯಾದ ಉಪಕಾರವನ್ನು ಮಾಡಲಾರದು.

ಆದುದರಿಂದ ದೇಶದ ಲಕ್ಷ್ಯವು ಯಾವ ತರದ ಕೈಗಾರಿಕೆಗಳಿಂದ ದೇಶದ ದ್ರವ್ಯಹಾನಿಯನ್ನು ತಡೆಯಬಹುದೊ, ಅರ್ಥಾತ್ ಯಾವ ಕೈಗಾರಿಕೆಯು ದೇಶದ ವ್ಯಾಪಾರದಲ್ಲಿ ಪರದೇಶದ ಅಂತಹ ಕೈಗಾರಿಕೆಯೊಡನೆ ಸ್ಪರ್ಧಿಸಬಲ್ಲುದೊ ಅಂತಹ ಕೈಗಾರಿಕೆಯನ್ನೇ ದೇಶದಲ್ಲಿ ಪ್ರಚುರಪಡಿಸಲು ಪ್ರಯತ್ನಿಸುವುದು ಅಗತ್ಯವಿದೆ. ಅಂತಹ ಕೈಗಾರಿಕೆಗಳ ಸಂಸ್ಥೆಗಳು ಸ್ಥಾಪಿಸಲ್ಪಡಬೇಕು; ಪರದೇಶೀಯ ಸಾಮಾನುಗಳಷ್ಟೆ ಉತ್ತಮವಾದವುಗಳು ಅದೇ ಕ್ರಯದಲ್ಲಿ ಅಥವಾ ಅದಕ್ಕಿಂತ ಕಡಿಮೆ ಕ್ರಯದಲ್ಲಿ ಮಾರಲು ಸಾಧ್ಯವಾದುವುಗಳು ತಯಾರಿಸಲ್ಪಡಬೇಕು; ದೇಶದ ಆದರ್ಶವು ಈ ತೆರನಿರಬೇಕು. ಕೈಗಾರಿಕೆಗಳು, ಗಿರಾಕಿಯ ದೇಶಪ್ರೇಮ ಮತ್ತು ಸ್ವಾರ್ಥತ್ಯಾಗ ಇವುಗಳ ಮೇಲೆಯೆ ಹೊಂದಿಕೊಂಡಿದ್ದರೆ ಕೈಗಾರಿಕೆಗಳ ಅಭಿವೃದ್ಧಿಯೂ ಸರಿಯಾಗಿ ಆಗಲಾರದು, ಹೆಚ್ಚುಕಾಲ ಬಾಳುವುದೂ ಸಾಧ್ಯವಾಗಲಾರದು. ಆದುದರಿಂದ ಯಾವುದೊಂದು ದೇಶೀ ಕೈಗಾರಿಕೆಯಾದರೂ ನಿಜವಾದ ವಹಿವಾಟೀ ಸೂತ್ರಗಳ ಮೇಲೆಯೇ ಹೊಂದಿ ನಡೆಸಲ್ಪಡಬೇಕು.

ದೇಶದಲ್ಲಿ ಯೋಗ್ಯವಾದ ರೀತಿಯಲ್ಲಿ ಎಲ್ಲಾ ತರದ ಕೈಗಾರಿಕೆಗಳು ಅಭಿವೃದ್ಧಿ ಹೊಂದಬೇಕಾದರೆ, ದೇಶದ ತರುಣರಿಗೆ ಉತ್ತಮವಾದ ಔದ್ಯೋಗಿಕ ವಿದ್ಯಾಭ್ಯಾಸವನ್ನು ಕೊಡುವುದು ಆವಶ್ಯಕವಿದೆ. ಈ ವಿದ್ಯಾಭ್ಯಾಸವು ಬರೇ ಸಾಮಾನ್ಯವಾಗಿರದೆ ವಿದ್ಯಾರ್ಥಿಗಳಲ್ಲಿ ನವೀನ ಭಾವಗಳನ್ನೂ, ಶೋಧನಾ ಶಕ್ತಿಯನ್ನೂ, ಸಂಘಟನಾ ಸಾಮರ್ಥ್ಯವನ್ನೂ ಪ್ರೇರಿಸುವಂತಿರಬೇಕು.

ಪ್ರಕೃತ ಅಂತಹ ಉತ್ತಮವಾದ ಔದ್ಯೋಗಿಕ ವಿದ್ಯಾಸಂಸ್ಥೆಗಳಿವೆಯೆಂದು ಹೇಳಲಾಗುವುದಿಲ್ಲ. ಬೆಂಗಳೂರು, ಮದ್ರಾಸು, ಕಲ್ಕತ್ತಾ ಮೊದಲಾದ ಕಡೆಗಳಲ್ಲಿ ಕೆಲವು "ಟೆಕ್ನಿಕಲ್ ಸ್ಕೂಲು"ಗಳಿವೆಯಾದರೂ ಇವು ಬರೇ ಸಾಮಾನ್ಯವಾದ ಯಂತ್ರಜ್ಞಾನ ಕೊಡುವುವೇ ವಿನಹ ಹುಡುಗರ ಮೇಧಾಶಕ್ತಿಗಳನ್ನು ಬೆಳೆಸುವಂತಹವುಗಳಾಗಿಲ್ಲ. ಮದ್ರಾಸಿನಲ್ಲಿ ಇಂಜಿನಿಯರಿಂಗ್ ಕಾಲೇಜೂ, ಬೆಂಗಳೂರಲ್ಲಿ ಟಾಟಾ ಸಾಯನ್ಸ್ ಇನ್ಸ್ಟಿಟ್ಯೂಟೂ, ಮುಂಬೈ ಮಾತುಂಗದಲ್ಲಿ ವಿಕ್ಟೋರಿಯಾ ಜ್ಯುಬಿಲಿ ಟೆಕ್ನಿಕಲ್ ಇನ್ಸ್ಟಿಟ್ಯೂಟೂ, ಕಾಶಿಯಲ್ಲಿ ಹಿಂದೂ ವಿಶ್ವವಿದ್ಯಾಲಯವೂ, ಔದ್ಯೋಗಿಕ ವಿದ್ಯಾಭ್ಯಾಸವನ್ನು ಕೊಡುವಂತಹವುಗಳಾಗಿವೆ. ಆದರೆ ಇವುಗಳೊಂದರಲ್ಲಿ ಯಾದರೂ ದೇಶಕ್ಕೆ ಉಪಕಾರಿಯಾದ ವಿದ್ಯಾವ್ಯಾಸಂಗವಾಗುತ್ತದೊ ಎಂಬುದರ ವಿಷಯ ಅನುಮಾನವನ್ನು ತೋರಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಅತೀ ಸಾಮಾನ್ಯವಾದ ಪರಿಜ್ಞಾನವು ಕೊಡಲ್ಪಡುತ್ತಿದೆಯೇ ವಿನಹ ಸರಿಯಾದ ಮತ್ತು ಗೂಢವಾದ ಔದ್ಯೋಗಿಕ ತತ್ವಗಳು ಇಲ್ಲಿ ಬೋಧಿಸಲ್ಪಡುವುದಿಲ್ಲ.

ಟಾಟಾ ಸಾಯನ್ಸ್ ಇನ್ಸ್ಟಿಟ್ಯೂಟಿನಲ್ಲಿ ಸರಿಯಾದ ಶಿಕ್ಷಣವೇ ಸಿಗದೆಂದೂ, ವಿದ್ಯಾರ್ಥಿಗಳು ಬಂದು ತಮಗೆ ತಿಳಿದಂತೆ ಮಾಡುವರೇ ವಿನಹ ಅಧ್ಯಾಪಕರು ಅವರಿಗೆ ಯಾವ ಪ್ರೇರಣೆಯನ್ನೂ ಕೊಡುವುದಿಲ್ಲವೆಂದೂ, ಟಾಟಾರವರ ಆ ದೊಡ್ಡ ಸಂಪತ್ತು ಹಿಂದೂದೇಶದ ಉಪಯೋಗಕ್ಕೆಂದು ಇಲ್ಲಿ ವ್ಯಯಿಸಲ್ಪಟ್ಟದ್ದಾದರೂ, ಅವರ ಆಶಯಗಳು ಪೂರ್ಣ ಹೊಂದುವುದಿಲ್ಲವೆಂದೂ ಈ ಮೊದಲೇ ಅನೇಕ ಬಾರಿ ಅನೇಕ ಪತ್ರಿಕೆಗಳಲ್ಲಿ ವಿಷಾದಿಸಲ್ಪಟ್ಟದೆ. ಮದ್ರಾಸ ಇಂಜಿನಿಯರಿಂಗ್ ಕಾಲೇಜಿನಲ್ಲಿ ಔದ್ಯೋಗಿಕ ವೈಶಿಷ್ಟ್ಯದ ಕಡೆಗೆ ಯಾವ ಗಮನವೂ ಕೊಡಲ್ಪಡುವುದಿಲ್ಲ. ಅಲ್ಲದೆ ಇತರ ಕಾಲೇಜುಗಳಲ್ಲಿ ಯಾದರೂ ಈ ಔದ್ಯೋಗಿಕ ವೈಶಿಷ್ಟ್ಯದ ಕಡೆಗೆ ಹೆಚ್ಚು ಲಕ್ಷ್ಯವಿಡಲ್ಪಡುತ್ತಿದೆಯೆಂದು ಹೇಳಬರುವುದಿಲ್ಲ. ಮತ್ತು ಇಂತಹ ಸಂಸ್ಥೆಗಳಿಗೆ ಅತೀ ಅಗತ್ಯವಿರುವ ಸಂಶೋಧನಾ ಮಂದಿರಗಳೂ (Research Laboratories) ಇವುಗಳೊಡನೆ ಇರುವುದಿಲ್ಲ. ಮುಖ್ಯವಾಗಿ ಹಿಂದೂಸ್ಥಾನದಲ್ಲಿ ಔದ್ಯೋಗಿಕ ವಿದ್ಯಾಭ್ಯಾಸವು ಅರ್ಧಮನಸ್ಸಿನಿಂದ ಸಾಗುತ್ತಿದೆಯೇ ವಿನಹ ಅದು ಕಾರ್ಯಕಾರಿಯಾಗುವ ರೀತಿಯಲ್ಲಿ ನಡೆಯುವುದಿಲ್ಲ.

ಕೆಲವು ವರ್ಷಗಳ ಹಿಂದೆ ಹಿಂದೀ ಸರಕಾರದಿಂದ ನೇಮಿಸಲ್ಪಟ್ಟ ಇಂಡಸ್ಟ್ರಿಯಲ್ ಕಮಿಶನ್ನು ತನ್ನ ವರದಿಯಲ್ಲಿ ಒಂದು ಮಧ್ಯಸ್ಥಾಯಿ ಅಖಿಲ ಭಾರತ ಔದ್ಯೋಗಿಕ ವಿದ್ಯಾಸಂಸ್ಥೆಯನ್ನು ರಚಿಸಬೇಕಾಗಿ ಸೂಚಿಸಿದ್ದಿತು. ಪಂಡಿತ ಮದನ ಮೋಹನ ಮಾಲವೀಯರು ಅದೇ ಕಮಿಶನ್ನಿನ ಮೆಂಬರರಿದ್ದು ತಮ್ಮ ಪ್ರತ್ಯೇಕ ವರದಿಯನ್ನೂ ಕೊಟ್ಟಿದ್ದರು. ಅದು ಇತರ ಕೆಲವು ಉತ್ತಮ ಸೂಚನೆಗಳನ್ನೂ ಕೊಟ್ಟದ್ದಿತು. ಎಲ್ಲದಕ್ಕಿಂತಲೂ ಈ ವಿದ್ಯಾಸಂಸ್ಥೆಯನ್ನು ರಚಿಸುವ ಕೆಲಸವನ್ನಾದರೂ ಸರಕಾರವು ಕೈಕೊಳ್ಳಬಹುದಿತ್ತು. ವರದಿಯ ಸಮಯದಲ್ಲಿ ಯುದ್ಧದ ಅಭ್ಯೆರಿಯ ಸಮಯವೆಂದೂ, ಸರಕಾರದ ಕೈಯಲ್ಲಿ ಹಣವಿಲ್ಲವೆಂದೂ ಇತ್ಯಾದಿ ನೆವದಿಂದ ಈ ಆಲೋಚನೆಯನ್ನು ಹಿಂದೆ ಹಾಕಿದ್ದಿರಬಹುದು. ಈಗ ವ್ಯಯಕ್ಕಿಂತಲೂ ಆಯವು ಹೆಚ್ಚಾಗುವ ವರ್ಷಗಳು ಬಂದಿವೆ, ಈಗ ಹಣವಿಲ್ಲವೆಂಬ ನೆವ ಸಾಲದು. ಸರಕಾರವು ತನ್ನಿಂದಲೇ ನೇಮಿಸಲ್ಪಟ್ಟ ಆ ಕಮ್ಮಿಶನ್ನಿನ ವರದಿಯನ್ನು ಮಾನ್ಯಮಾಡುವುದು ಅಗತ್ಯವಿದೆ. ಈಗಲಾದರೂ ಈ ವಿದ್ಯಾಸಂಸ್ಥೆಯನ್ನು ರೂಪಿಸುವ ಕೆಲಸವನ್ನು ಸರಕಾರವು ಕೈಕೊಳ್ಳಬೇಕು. ಇದರಿಂದ ದೇಶಕ್ಕೆ ನಿಜವಾದ ಲಾಭವಿದೆ. ಇಂತಹ ಸಂಸ್ಥೆಗಳಿರದೆ, ವರ್ಷವರ್ಷವೂ ಬರೇ ವಿಶ್ವವಿದ್ಯಾಲಯಗಳನ್ನೂ ಕಾಲೇಜುಗಳನ್ನೂ ಹೆಚ್ಚಿಸುತ್ತಾ ಬಂದರೆ, ವಿದ್ಯಾವಂತ ಯುವಕರ ಸಂಖ್ಯೆಯನ್ನು ಹೆಚ್ಚಿಸಿ ಅವರಿಗೆ ತಕ್ಕುದಾದ ಜೀವನೋಪಾಯದ ಕೆಲಸಗಳು ಸಿಕ್ಕದೆ ಅವರು ಬಳಲುವಂತೆ ಮಾಡಬಹುದು ಮಾತ್ರವಲ್ಲದೆ ಬೇರಾವ ಪ್ರಯೋಜನವೂ ಆಗಲಾರದು.

ಆದರೆ ಸರಕಾರದ ಔದಾರ್ಯವು ಬಿಚ್ಚುವ ವರೆಗೆ ಹಿಂದೂಸ್ಥಾನವು ಕಾದಿರಲಾರದು. ಹಿಂದೂ ಯುವಕನು ಸುಮ್ಮನಿರಬಾರದು. ಪರದೇಶಗಳಿಗೆ ಹೋಗಿ ಪರದೇಶದ ಔದ್ಯೋಗಿಕ ವಿದ್ಯಾಸಂಸ್ಥೆಗಳನ್ನು ಸೇರಿ ಅಲ್ಲಿ ವಿದ್ಯಾವ್ಯಾಸಂಗ ಮಾಡಿ ಅಲ್ಲಿಯ ಕೈಗಾರಿಕೆ ಸಂಸ್ಥೆಗಳೊಡನೆ ಕಲೆತು, ಅಲ್ಲಿನ ಗೂಢ ತತ್ವಗಳನ್ನೂ, ವ್ಯವಸ್ಥಾಕ್ರಮಗಳನ್ನೂ ಕಂಡುಕೊಂಡು ದೇಶಕ್ಕೆ ಹಿಂದಿರುಗುವುದು ವ್ಯಕ್ತಿಹಿತದ ದೃಷ್ಟಿಯಲ್ಲಿಯೂ ದೇಶಹಿತದ ದೃಷ್ಟಿಯಲ್ಲಿಯೂ ಉತ್ತಮವಿದೆ.

ನಮ್ಮ ದೇಶವು ಬ್ರಿಟಿಷರ ಆಳುವಿಕೆಯಲ್ಲಿರುವುದರಿಂದ ಬ್ರಿಟಿಷ ವಿಶ್ವವಿದ್ಯಾಲಯಗಳ ಪದವಿಗಳ ಹೊರತು ಇತರ ಪದವಿಗಳಿಗೆ ಇಲ್ಲಿ ಗೌರವವು ಸಿಕ್ಕುವುದಿಲ್ಲ. ನಿಜವಾಗಿ ನೋಡಿದರೆ ಇಂಗ್ಲೀಷ ವಿಶ್ವವಿದ್ಯಾಲಯಗಳ ವಿದ್ಯಾಭ್ಯಾಸವು ಒಳ್ಳೇಯದಿರಬಹುದಾದರೂ, ಔದ್ಯೋಗಿಕ ವಿದ್ಯಾಭ್ಯಾಸದ ಮಟ್ಟಿಗೆ, ಆ ವಿದ್ಯಾಭ್ಯಾಸಕ್ಕೆ ಬೇಕಾಗುವ ಕಾರ್ಯಜ್ಞಾನ (Practical knowledge)ವು ಅಲ್ಲಿ ಹಿಂದೀ ವಿದ್ಯಾರ್ಥಿಗಳಿಗೆ ಸಿಕ್ಕುವುದಿಲ್ಲ. ಹಿಂದೀ ವಿದ್ಯಾರ್ಥಿಗಳಿಗೆ ಇಂಗ್ಲೀಷ ಕೈಗಾರಿಕೆ ಸಂಸ್ಥೆಗಳು ಪ್ರವೇಶಕೊಡುವುದಿಲ್ಲ, ಕೊಟ್ಟರೂ ತಮ್ಮ ಗೂಢ ತತ್ವಗಳ ಕಡೆಗೆ ಪ್ರವೇಶಿಸಲು ಬಿಡುವುದಿಲ್ಲ ಎಂದು ಇಂಡಸ್ಟ್ರಿಯಲ್ ಕಮಿಶನಿನ ವರದಿಯೇ ಹೇಳುತ್ತಿದೆ. ಆದುದರಿಂದ ಔದ್ಯೋಗಿಕ ವಿದ್ಯಾಭ್ಯಾಸದ ಮಟ್ಟಿಗೆ ನಮಗೆ ಆಂಗ್ಲ ವಿಶ್ವವಿದ್ಯಾಲಯಗಳಿಂದ ಹೆಚ್ಚು ಸಹಾಯವಾಗುವಂತಿಲ್ಲ.

ಯೋಗ್ಯ ರೀತಿಯಿಂದ ಸಾಧಿಸಿದರೆ ಅಮೇರಿಕದಲ್ಲಿಯೂ ಜರ್ಮನಿಯಲ್ಲಿಯೂ ಹಿಂದೀ ವಿದ್ಯಾರ್ಥಿಗಳಿಗೆ ಸಾಕಷ್ಟು ಸೌಕರ್ಯವು ಸಿಕ್ಕಬಹುದೆಂದು ತೋರುತ್ತಿದೆ. ಜರ್ಮನಿಯು ಔದ್ಯೋಗಿಕ ಅಭಿವೃದ್ಧಿಯ ವಿಷಯದಲ್ಲಿ ಮೊದಲೇ ಹೆಸರುವಾಸಿಯಾಗಿದೆ. ಅಮೇರಿಕವೂ ಈಗ ದೊಡ್ಡದೊಡ್ಡ ಕೈಗಾರಿಕೆಗಳನ್ನು ಕಟ್ಟಿಕೊಂಡು ಹೆಚ್ಚು ಪ್ರಬಲವಾಗಿ ಬಂದಿದೆ. ಆದರೆ ಅಮೇರಿಕದಲ್ಲಿ ವರ್ಣಭೇದವು ಬಹಳವಿದೆ. ಈ ವರ್ಣಭೇದದ ಸ್ವಾರ್ಥವು ಬಿಳೇ ಜನಾಂಗವೆಲ್ಲಕ್ಕೂ ಸರ್ವಸಾಮಾನ್ಯವಿದ್ದರೂ ಒಂದು ಕಡೆಯಲ್ಲಿ ಹೆಚ್ಚು ಒಂದು ಕಡೆಯಲ್ಲಿ ಕಡಮೆಯಾಗಿ ತೋರಬರುತ್ತಿದೆ. ಆದರೆ ವಿದ್ಯಾರ್ಥಿಗಳ ಮಟ್ಟಿಗೆ ಅಮೇರಿಕದಲ್ಲಿ ಹೆಚ್ಚು ತೊಂದರೆಯಿರಲಿಕ್ಕಿಲ್ಲ. ಜರ್ಮನಿಯಲ್ಲಿ ಹಿಂದೀಯರಿಗೆ ಆದರವಿದೆಯೆಂಬ ಭಾವನೆಯಿದೆ. ಪ್ರಾಯಶಃ ಅದು ನಿಜವಾಗಿರಬಹುದು. ಹಿಂದೀ ವಿದ್ಯಾರ್ಥಿಗಳು ಈ ಎರಡು ದೇಶಗಳ ಕಡೆಗೆ ಔದ್ಯೋಗಿಕ ವಿದ್ಯಾಭ್ಯಾಸಕ್ಕಾಗಿ ನೋಡಬಹುದು.

ಮುಖ್ಯವಾಗಿ ಹಿಂದುಸ್ಥಾನದ ವಿಶ್ವವಿದ್ಯಾಲಯದ ಉತ್ತಮವಾಗಿ ಉತ್ತೀರ್ಣರಾದ ಹುಡುಗರೇ ಈ ಔದ್ಯೋಗಿಕ ವಿದ್ಯಾವ್ಯಾಸಂಗಕ್ಕೆ ಲಕ್ಷ್ಯಕೊಡುವುದು ರಾಷ್ಟ್ರೀಯ ಅರ್ಥನೀತಿಗೆ ಅನುಕೂಲವಾದ ವಿಷಯವಿದೆ.

ಕರ್ನಾಟಕ ಸಾಹಿತ್ಯ ಪರಿಷತ್ತು

ಬಳ್ಳಾರಿಯಲ್ಲಿ ಕೂಡಿದ ಹದಿನೆಂಡನೆ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ರಾವ್‌ಸಾಹೇಬ ಪಿ. ಜಿ. [illegible] ಯವರ ಭಾಷಣದ ಕೆಲವು ಅಂಶಗಳನ್ನು ನಾವು ಇತರ ಕಡೆಗೆ ಪ್ರಕಟಿಸಿರುವೆವು. ಅಧ್ಯಕ್ಷ ಭಾಷಣವು ಕರ್ನಾಟಕ ವಿಶ್ವವಿದ್ಯಾಲಯ, ಕರ್ನಾಟಕ ಏಕೀಕರಣ, ಗ್ರಂಥರಚನಾ ಇತ್ಯಾದಿ ಅನೇಕ ವಿಶಾಲವೂ, ಪ್ರಮುಖವೂ ಆದ ವಿಷಯಗಳನ್ನು ಚರ್ಚಿಸಿದೆ. ರಾವ್‌ಸಾಹೇಬರ ಈ ಉತ್ತಮವಾದ ಭಾಷಣದ ಬದಲಿಗೆ ನಾವು ಅವರನ್ನು ಅಭಿನಂದಿಸದಿರಲಾರೆವು. ಆದರೂ ಅವರ ಹಲಕೆಲವು ಅಭಿಪ್ರಾಯಗಳನ್ನು ಪುನರಾವಲೋಕಿಸಿ ನಮ್ಮ ಕೆಲವು ಮಾತುಗಳನ್ನು ಹೇಳುವುದಿದೆ. ಅವನ್ನು ಮುಂದಿನ ಸಂಚಿಕೆಯಲ್ಲಿ ಸಂಕ್ಷೇಪವಾಗಿ ಮಾಡುವೆವು. ಕರ್ನಾಟಕದಲ್ಲಿ ದಿನೇದಿನೇ ಪ್ರವರ್ಧಮಾನವಾಗಿ ಬೆಳೆಯುತ್ತಿದ್ದ ಆ ಕರ್ನಾಟಕೀ ಭಾವನೆಯು ಕರ್ನಾಟಕದ ಭಾವೀ ಉದ್ಧರಣೆಯ ಶುಭಚಿಹ್ನೆಯಾಗಿದೆ. ಬಳ್ಳಾರಿಯಲ್ಲಿ ಆ ಪ್ರಾಂತೀಯ ಭಾವನೆಯು ಈ ಬಾರಿ ಅನೇಕ ಪರಿಷತ್ತುಗಳ ಮೂಲಕ ಪ್ರಕಟವಾದುದೂ ಕರ್ನಾಟಕೀಯ ಜಾಗೃತಿಯ ಶುಭಸೂಚನೆಯೆನ್ನಬೇಕು. ಕರ್ನಾಟಕದ ನವತರುಣರ ಉತ್ಸಾಹದಿಂದ, ಕರ್ನಾಟಕ ಹಿರಿಯ ಧುರೀಣರ ಬುದ್ಧಿಶಕ್ತಿಯಿಂದಲೂ ಕರ್ನಾಟಕವು ತನ್ನ ಅಖಂಡತೆಯ ಮಾರ್ಗವನ್ನು ಕಂಡುಕೊಳ್ಳುವುದಾಗಿ ಆಶಿಸುವೆವು.

ವಿದೇಶ ವರ್ತಮಾನ.

—ಭೂಲೋಕದ ಎಲ್ಲಾ ರಾಜ್ಯಗಳ ಪಾರ್ಲಿಮೆಂಟಿನ ಮೆಂಬರರ ವ್ಯಾಪಾರದ ಸಭೆಯು ಲಂಡನಿನಲ್ಲಿ ಜರಗಿತು. ನಮ್ಮ ಮಹಾರಾಜ ಸಾರ್ವಭೌಮರು ಇವರಿಗೆ ಭೇಟಿಕೊಟ್ಟು ಕಲ್ಲಿದ್ದಲ್ಲನ್ನು ಅಗೆದುತೆಗೆದು ಅದನ್ನು ಬೇರೆ ಬೇರೆ ದೇಶಗಳಿಗೆ ಕಳುಹಿಸುವುದು, ಹಡಗುಗಳು, ಕಾಯದೆ ಕಾನೂನುಗಳು, ಸುಂಕ ಇವುಗಳ ವಿಷಯ ಆಲೋಚಿಸುವುದು ಬ್ರಿಟನ ಮತ್ತು ಎಲ್ಲಾ ರಾಜ್ಯಗಳ ಮುಖ್ಯ ಕರ್ತವ್ಯವಾಗಿದೆ. ಎಂದು ಹೇಳಿದರು.

—ಕಾಯರೊ ಪಟ್ಟಣದಿಂದ ಕೇಪ್‌ಟೌನಿಗೆ ವಿಮಾನದಲ್ಲಿ ಸಂಚಾರ ಮಾಡಿ ಬರಲಿಕ್ಕೆ ಇಂಗ್ಲೆಂಡಿನಿಂದ ಹೋದ ರೋಯಲ್ ಎಯರ್ ಫೋರ್ಸಿನವರು ಕೇಪ್‌ಟೌನಿನಿಂದ ಕಾಯರೊ ಪಟ್ಟಣಕ್ಕೆ ಹಿಂತಿರುಗಿ ಬಂದಿರುವರು. ಇವರು ಇಲ್ಲಿಂದ ಇಂಗ್ಲೆಂಡಿಗೆ ಹೊರಟು ಹೋಗುವರು.

ಮೇ ೨೪ನೇ ತಾರೀಕಿನ ದಿವಸ ವಿಕ್ಟೋರಿಯಾ ಚಕ್ರವರ್ತಿನಿಯವರ ಜನ್ಮದಿನವನ್ನು ಆಚರಿಸಿದರು.

—ಮುಳುಗಿಹೋದ ಇಜಿಪ್ಟ ಎಂಬ ಹಡಗವನ್ನು ತೆಗಿಯಲಿಕ್ಕೆ ಸಾಧನೆಗಳು ಹೆಚ್ಚಿಚ್ಚಾಗಿ ನಡೆಯುತ್ತವೆ.

—ಎಲ್ಲಾ ರಾಜ್ಯಗಳಲ್ಲಿಯ ಆಯುಧಗಳನ್ನು ಕಡಿಮೆಮಾಡುವ ಉದ್ದಿಷ್ಟ ಕೊಡುವ ಎಲ್ಲಾ ರಾಜ್ಯಪ್ರತಿನಿಧಿಗಳ ಸಭೆಯು ೧೯೨೭ನೇ ಇಸವಿಯ ಆದಿಭಾಗದಲ್ಲಿ ಜರಗುವುದು.

—ಇಂಗ್ಲೆಂಡಿನಲ್ಲಿ ಆದ ಕೂಲಿಕಾರರ ಮುಷ್ಕರ ಸಮ್ಮಂಧ ಕೆಲವರಿಗೆ ಶಿಕ್ಷೆಯಾಯಿತು. ಈ ಮುಷ್ಕರದಿಂದ ೪ ರೈಲು ಕಂಪೆನಿಗಳಿಗೆ ೬॥ ಲಕ್ಷ ಪವನು ನಷ್ಟವಾಯಿತಂತೆ.

—ಆಫ್ರಿಕದಲ್ಲಿ ನಡೆಯುತ್ತಿದ್ದ ಯುದ್ಧದಲ್ಲಿ ಫ್ರೆಂಚರಿಗೆ ಜಯ ಸಿಕ್ಕಿದ್ದರಿಂದ ಫ್ರಾಂಕಿಗೆ ಬೆಲೆ ಏರಿದ್ದರಿಂದಲೂ ಈಗಿರುವ ಫ್ರಾನ್ಸಿನ ಮಂತ್ರಿಸಭೆಯು ಸ್ಥಿರವಾಗಿ ನಿಲ್ಲುವುದು.

—ಪರ್ಶಿಯಾ ರಾಜ್ಯದಲ್ಲಿ ನಾದರಶಾಹಾನು ಡಿಲ್ಲಿಯಿಂದ ತೆಗೆದುಕೊಂಡು ಹೋದ ಮೊಗಲಾಯ ಬಾದಶಹಾರ ಮಯೂರಾಸನವು ಇಷ್ಟರ ವರೆಗೆ ಅಂತಃಪುರದ ಮೂಲೆಯಲ್ಲಿ ಇತ್ತಂತೆ. ಇಷ್ಟರ ವರೆಗೆ ಪರ್ಶಿಯಾ ದೇಶದ ಶಹರಿಗೆ ಪಟ್ಟವಾದ ಸಿಂಹಾಸನವು ನಿಜವಾದ ಮಯೂರಾಸನವಲ್ಲವಂತೆ. ಅದು ಫತೆ ಅಲಿಶಹಾರ ರಾಣಿಯ ಮಂಚವಾಗಿತ್ತಂತೆ. ನೋಡುವುದಕ್ಕೆ ಮಾತ್ರವೇ ಮಯೂರಾಸನದಂತೆ ಕಾಣುತ್ತದಂತೆ. ಮೊನ್ನೆ ಆದ ಶಹಾರಿಗೆ ಮೊಗಲಾಯ ಚಕ್ರವರ್ತಿಗಳ ಮಯೂರಾಸನದ ಮೇಲೆಯೇ ಕೂತು ಪಟ್ಟಾಭಿಷೇಕವಾಯಿತು.

—ಜಿನೇವಾದಲ್ಲಿ ಕೂಡಿಬಂದ ಲೀಗಿನ ಕೊನ್ಫರೆನ್ಸಿಗೆ ೩೭ ರಾಜ್ಯಗಳ ಪ್ರತಿನಿಧಿಗಳು ಹಾಜರಿದ್ದರು. ಕೈಗಾರಿಕೆಗಳಲ್ಲಿ ಸೇರದೆ ಇದ್ದ ೧೯ ರಾಜ್ಯಗಳ ಪ್ರತಿನಿಧಿಗಳು ಹಾಜರಿರಲಿಲ್ಲ. ಇಂಡಿಯದ ಹ್ಯಾಕಮಿಶನರು ಈ ಕೊನ್ಫರೆನ್ಸಿಗೆ ಕಮಿಟಿಯ ಅಧ್ಯಕ್ಷರಾಗಿರುವರು.

—ಹಂಗೇರಿಯಲ್ಲಿ ಫೋರ್ಜರಿ ನೋಟುಗಳನ್ನು ಮಾಡಿದ್ದಕ್ಕಾಗಿ ಅನೇಕ ಅಧಿಕಾರಿಗಳಿಗೆ ಕಠಿಣ ತರದ ಶಿಕ್ಷೆಯು ವಿಧಿಸಲಾಗಿಯದೆ.

—ಸರ್ ಚಾರ್ಲ್ಸ್‌ವಾಲಪೂಲ ಎಂಬ ಮಹನೀಯರು ಸನ್‌ಸ್ಟ್ರೋಕಿನಿಂದ ಮರಣಹೊಂದಿದರು.

—ಯುನ್ಯಾಟೆಡ್ ಸ್ಟೇಟ್ಸಿನವರಿಗೆ ಯುದ್ಧಕಾಲದಲ್ಲಿ ಸಹಾಯ ಮಾಡಿದವರು ಯಾವ ತರದ ಶರ್ತಗಳಿಲ್ಲದೆ ಯುನ್ಯಾಟೆಡ್ ಸ್ಟೇಟ್ಸಿನೊಳಗೆ ಬರಬಹುದಾಗಿ ಕಾನೂನು ಮಾಡಿರುತ್ತಾರೆ.

—ಆಫ್ರಿಕದಲ್ಲಿ ನಡೆಯುತ್ತಿದ್ದ ರೀಫ್‌ಯುದ್ಧದಲ್ಲಿ ಅಬ್ದುಲ್ ಕರೀಮ್ ಎಂಬವರು ಫ್ರೆಂಚರಿಗೆ ಶರಣಾಗತರಾಗಿರುತ್ತಾರೆ. ಇನ್ನು ಇತರ ಎರಡು ತಂಡಗಳು ಇವೆ. ಇವುಗಳು ಶರಣಾಗತರಾಗದೆ ಯುದ್ಧಮಾಡುತ್ತಿರುವುವು.

—ಈಜಿಪ್ಟದೇಶದಲ್ಲಿ ಸ್ವಾತಂತ್ರ್ಯನಾಯಕರಾದ ಜಗಲೂಲ್ ಪಾಶಾರವರಿಗೆ ನಡೆದ ಚುನಾವಣೆಯಲ್ಲಿ ಮಹಾವಿಜಯವುಂಟಾಗಿದೆ. ಪ್ರತಿನಿಧಿ ಸಭೆಗಳಲ್ಲಿ ಈ ಪಕ್ಷದವರದೇ ಬಹುಮತ.

—ತುರ್ಕಿಸ್ಥಾನದ ಪದಚ್ಯುತ ಬಾದಶಹನಾದ ೬ನೇ ಮಹಮ್ಮದನು ಲಂಡನ್ನಿನಲ್ಲಿ ಮೇ ೧೬ನೇ ತಾರೀಕಿನ ರಾತ್ರಿ ಮರಣ ಹೊಂದಿದನು.

ಒಳದೇಶ ವರ್ತಮಾನ.

ಡಿಲ್ಲಿಯಲ್ಲಿ ಒಂದು ಮಾರ್ಗವಾಗಿ ಒಂದು ಹಿಂದೂ ಮದುವೆ ಮೆರವಣಿಗೆ ಒಂದು ಮದರಾಸಾ ಅಂದರೆ ಮುಸಲ್ಮಾನ ವಿದ್ಯಾಲಯದ ಮುಂಭಾಗದಿಂದ ಹೋಗುತ್ತಿತ್ತು. ಆ ವಿದ್ಯಾಶಾಲೆಯು ನಮಾಜಿಗಾಗಿ ಉಪಯೋಗಿಸಲ್ಪಡುವುದರಿಂದ ಅದರ ಮುಂದಿನಿಂದ ವಾದ್ಯದಿಂದ ಹೋಗಕೂಡದೆಂದು ಕೆಲವು ಮಂದಿ ಮುಸಲ್ಮಾನರು ತಡೆಗಟ್ಟಿದರು. ಮೆರವಣಿಗೆಯವರು ವಾದ್ಯದಿಂದ ಹೋಗುವುದಕ್ಕೆ ತಮಗೆ ಪೋಲಿಸ ಲೈಸನ್ಸ ಉಂಟೆಂದು ವಾದಿಸಿದರು. ಎರಡೂ ಕಡೆಯವರಿಗೆ ಜಗಳವು ಸುರುವಾಯಿತು. ಪೋಲಿಸಿನವರು ಒಬ್ಬ ಮಹಮ್ಮದೀಯನನ್ನು ಕೈದುಮಾಡಿರುವರು.

—ಡಿಲ್ಲಿಯ ಮಹಾರಾಟದೀರ ಎಂಬ ವರ್ತಮಾನಪತ್ರಿಕೆಯ ಎಡಿಟರನು ಜಾತಿಗಳೊಳಗೆ ಕಲಹಗಳನ್ನುಂಟುಮಾಡುವ ಲೇಖನಗಳನ್ನು ಬರೆದುದಕ್ಕಾಗಿ ಅವನಿಂದ ಒಂದು ಸಾವಿರ ರೂಪಾಯಿ ಜಾಮೀನನ್ನು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ತೆಗೆದುಕೊಂಡಿರುತ್ತಾರೆ.

—ಕಳೆದ ವರುಷ ಬಂಗಾಳದ ತಾರಕೇಶ್ವರದಲ್ಲಿರುವ ಮಠದ ಆಸ್ತಿಯ ವಿಷಯ ಇರುವ ವ್ಯಾಜ್ಯದ ತೀರ್ಮಾನವಾಗಿ ಮಹಂತರ ಖಾಸಗಿ ಆಸ್ತಿಯನ್ನು ಅವರಿಗೆ ಬಿಟ್ಟುಕೊಡಬೇಕೆಂದು ತೀರ್ಮಾನವಾಗಿತ್ತು. ಆದರೆ ಮೊಕದ್ದಮೆಯ ರಿಸೀವರನು ದೇವಸ್ಥಾನ ಮತ್ತು ಮಹಂತರ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡು ಗೇಣಿ ವಸೂಲುಮಾಡುತ್ತಿರುವುದರಿಂದ ಇದರ ವಿಷಯ ಪ್ರಿವಿಕೌನ್ಸಿಲಿಗೆ ಅಪೀಲು ಆಗಿಯದೆ.

—[illegible] ಎಂಬ ಒಂದು ತಮಿಳು ವರ್ತಮಾನ ಪತ್ರಿಕೆಯ ಎಡಿಟರು [illegible] ಎಂಬ ಲೇಖನವನ್ನು ಬರೆದುದಕ್ಕಾಗಿ ಜಾಮೀನು ಮುಚ್ಚಳಿಕೆಯನ್ನು ತೆಗೆದುಕೊಂಡಿರುತ್ತಾರೆ.

—ಮುಂಬಾಯಿಯಲ್ಲಿ ೧೧ ಲಕ್ಷ ರೂಪಾಯಿ ಖರ್ಚಿನಿಂದ ಕಟ್ಟಿಸಿದ [illegible] ತೋಟವನ್ನು ತೆರೆಯುವ ಸಮಾರಂಭವು ಮೇ ೨೭ [illegible]

—ಚಿಟ್ಟಗೋಂಗ ಬಂದರದಲ್ಲಿ ಬಹಳ ಕೆಸರಿರುವುದರಿಂದ ಆ ಬಂದರವನ್ನು ದುರುಸ್ತಿಪಡಿಸಿ ಯೋಗ್ಯವಾದ ಬಂದರವಾಗಿ ಮಾಡುವುದಕ್ಕೆ ಅಸ್ಸಾಮು ಬಂಗಾಳ ರೈಲುವೇ ಕಂಪೆನಿಯವರು ಹೆಚ್ಚು ಹಣ ಸಂಕ್ಷನ್ ಮಾಡಿರುತ್ತಾರೆ. ಇದರಿಂದ ಪೂರ್ವ ಬಂಗಾಳ ಮತ್ತು ಅಸ್ಸಾಮು ಸಂಸ್ಥಾನಗಳಲ್ಲಿರುವ ಅನೇಕ ಪ್ರದೇಶಗಳಿಗೆ ಪ್ರಯೋಜನವಿದೆ. ಬಂಗಾಳ ಸರಕಾರದವರು ಇದಕ್ಕಾಗಿ ೫೦ ಲಕ್ಷ ರೂಪಾಯಿ ಸಾಲಕೊಡಲು ಒಪ್ಪಿರುತ್ತಾರೆ.

—ಬಂಗಾಳದಲ್ಲಿ ಚಾರಮಠ ಎಂಬ ಗ್ರಾಮದಲ್ಲಿ ವಾಸಿಸಿಕೊಂಡಿದ್ದ ಒಬ್ಬರೆ ಹಿಂದೂ ಮಹನೀಯರಾದ ಮನಮೋಹನ ಸಿಲ್ ಎಂಬವರ ಮನೆಯೊಳಗೆ ಒಬ್ಬ ಕಾಬೂಲಿದಾರರೂ ಇತರ ೫ ಮಂದಿ ಮಹಮ್ಮದೀಯರೂ ಗಂಡಸರಿಲ್ಲದ ಸಮಯ ಮನೆಯ ಒಳನುಗ್ಗಿ ಆ ಮನೆಯವರ ದೇವರನ್ನು ತೆಗೆದು ಅದನ್ನು ಒಂದು ತೋಡಿನೊಳಗೆ ಬಿಸಾಡಿ ಹೋಗಿಬಿಟ್ಟರಂತೆ. ಮನೆಯೊಳಗಿದ್ದ ಹೆಂಗಸರು ಬೊಬ್ಬೆ ಹೊಡೆದಾಗ ಅವರಿಗೆ ಗುಂಡು ಹೊಡೆದು ಕೊಲ್ಲುತ್ತೇವೆಂದು ಆ ಅಧಮರು ಹೆದರಿಸಿದರಂತೆ. ಪೋಲಿಸ ತನಖಿಯು ನಡೆಯುತ್ತಿದೆ.

—ಡಿಲ್ಲಿ ಮುನಿಸಿಪಾಲಿಟಿಯವರು ಬರುವ ಜುಲಾಯಿ ೧ನೇ ತಾರೀಕಿನಿಂದ ಪ್ರಾಥಮಿಕ ವಿದ್ಯೆಯನ್ನು ಕಡ್ಡಾಯವಾಗಿ ಕೊಡಬೇಕೆಂದು ನಿಶ್ಚಯಿಸಿರುತ್ತಾರೆ. ಮುನಿಸಿಪಾಲಿಟಿಯೊಳಗಿರುವವರೆಲ್ಲರೂ ೬ ವರುಷ ಪ್ರಾಯದಿಂದ ೧೧ ವರುಷ ಪ್ರಾಯದ ಮಕ್ಕಳನ್ನು ಶಾಲೆಗೆ ಕಳುಹಿಸಲೇ ಬೇಕಾಗುವುದು.

—ಕಲ್ಕತ್ತದಲ್ಲಿ ಜಾರಿಗೆ ಬಂದ ಹೊಸ ಕಾನೂನಿನ ಪ್ರಕಾರ ೩೦೦ ಮಂದಿ ಹಿಂದೂ ಮುಸಲ್ಮಾನರ ಮೇಲೆ ತಪ್ಪು ಸ್ಥಾಪನೆಯಾಗುತ್ತದೆಂದು ಸಿ. ಐ. ಡಿ. ಇಲಾಖೆಯವರು ಸರಕಾರಕ್ಕೆ ತಿಳಿಸಿರುತ್ತಾರೆ.

—ಕುಡಿಕತನದಿಂದ ಕಳೆದ ಸಾರಿಯ ದಂಗೆಯು ವೃದ್ಧಿಹೊಂದಲಿಕ್ಕೆ ಕಾರಣವೆಂದು ಸರಕಾರಕ್ಕೆ ತಿಳಿದು ಬಂದದರಿಂದ ಕಲ್ಕತ್ತಾ ಪಟ್ಟಣದೊಳಗಿರುವ ಹಲವು ಗಡಂಗುಗಳನ್ನು ಮುಚ್ಚಿಸಿರುವರು ಆದರೆ ಅಪಾಯಕರವಲ್ಲದ ಜನರು ಕುಡಿಯುವ ಗಡಂಗುಗಳನ್ನು ಮುಚ್ಚಿಸಲಿಲ್ಲ.

—ಗೋಧಾವರಿಯಲ್ಲಿ ಆದಿ ಆಂಧ್ರ ಮಾತಂಗರ ಸಭೆಯು ಜರಗಿತು. ಮಿ| ಎಲ್. ಸಿ. ಗುರುಸ್ವಾಮಿ ಎಮ್. ಎಲ್. ಸಿ.ಯವರು ಅಧ್ಯಕ್ಷರಾಗಿದ್ದರು. ಇವರು, ಡಿಪ್ರೆಸ್ಡ್ ಜಾತಿಗಳಲ್ಲಿ ಆದಿದ್ರಾವಿಡರೂ, ಆದಿ ಆಂಧ್ರರೂ ಇರುತ್ತಾರೆಂದೂ, ಇವರಲ್ಲಿಯೂ ಅನೇಕ ಜಾತಿಗಳು ಇರುತ್ತವೆಂದೂ, ಈ ಜಾತಿಗಳಲ್ಲಿ ಕೆಲವು ಜಾತಿಗಳು ಮಾತ್ರವೇ ಸ್ವಲ್ಪ ಉನ್ನತ ಸ್ಥಿತಿಗೆ ಬಂದಿರುತ್ತಾರೆಂದೂ, ಆದಿದ್ರಾವಿಡರಿಗೆ ಸರಕಾರದವರು ಹೆಚ್ಚು ಸ್ಥಳವನ್ನು ದರಕಾಸ್ತಿಗೆ ಕೊಟ್ಟಿರುತ್ತಾರೆಂದೂ ಆದರೆ ಅರುಂಧತಿಯರಾದ ಮಾತಂಗರಿಗೆ ದರಕಾಸ್ತಿಗೆ ಸಿಕ್ಕಿದ ಸ್ಥಳವು ಬಹಳ ಅಲ್ಪವಾಗಿರುತ್ತದೆಂದೂ, ತಾವು ಇತರ ಜಾತಿಯವರೊಡನೆ ಪ್ರೀತಿಭಾವದಿಂದಲೆ ಇರಬೇಕೆಂದೂ, ಸಾವಿರಾರು ವರುಷಗಳಿಂದ ಇತರ ಜಾತಿಯವರು ದೂರಮಾಡಿಕೊಂಡು ಬರುವುದರಿಂದ ಭಕ್ಷನೆ ಅವರು ತಮ್ಮನ್ನು ಮುಟ್ಟಲು ಅಂಜುವರೆಂದೂ, ತಾವು ಉನ್ನತಿಗೆ ಬಂದರೆ ಅವರು ಕಾಲಕ್ರಮೇಣ ತಮ್ಮನ್ನು ಹತ್ತಿರ ಬರಲಿಕ್ಕೆ ಬಿಡುವರೆಂದೂ, ಕ್ರೈಸ್ತ ಮಿಶನರಿಗಳು ತಮ್ಮನ್ನು ಅಭಿವೃದ್ಧಿಗೆ ತರಲು ಬಹಳ ಸಾಹಸಪಡುತ್ತಾರೆಂದೂ ಆದರೆ ಅದೇ ಸಮಯದಲ್ಲಿ ಅವರು ತಮ್ಮ ಕ್ರೈಸ್ತ ಮತಕ್ಕೆ ಹಲವರನ್ನು ಕೂಡಿಸಿಕೊಳ್ಳುತ್ತಾರೆಂದೂ ಹೇಳಿ ಭಾಷಣವನ್ನು ಮುಗಿಸಿದರು.

—ಬಂಗಾಳದಲ್ಲಿ ಮಟ್ರಿಕ್ಯುಲೇಶನ್ ಪರೀಕ್ಷೆ ವರೆಗೆ ದೇಶಭಾಷೆಯಿಂದಲೇ ವಿದ್ಯೆಯನ್ನು ಕಲಿಸಬೇಕೆಂದು ಕಲ್ಕತ್ತಾ ಯುನಿವರ್ಸಿಟಿಯವರು ನಿಶ್ಚಯಿಸಿರುವರು. ಬಂಗಾಳದಲ್ಲಿರುವ ಜನರಲ್ಲಿ ಶೇಕಡಾ ೯೨ ಮಂದಿ ಜನರು ಬಂಗಾಳಿ ಭಾಷೆಯನ್ನೆ ಆಡುತ್ತಿರುವರು. ಶೇಕಡಾ ೮ ಮಂದಿ ಮಾತ್ರವೇ ಉರ್ದು ಭಾಷೆಯನ್ನು ಆಡುತ್ತಿರುವರು. ಕೆಲವು ಮಂದಿ ಮುಸಲ್ಮಾನರು ಉರ್ದು ಭಾಷೆಯನ್ನು ಉಪಯೋಗಿಸಬೇಕೆಂದು ವಾದಿಸುತ್ತಿರುವರು.

—ಮಲಬಾರಿಗೆ ಸಾಧು ಶಿವಪ್ರಸಾದ ಎಂಬ ಆರ್ಯಸಮಾಜದ ಮತಪ್ರಸಾರಕರು ಬಂದು ಮಲಬಾರಿನ ಹೆಚ್ಚಿನ ಭಾಗವನ್ನು ಸಂಚರಿಸಿ ಅನೇಕ ಮಂದಿ ಕ್ರೈಸ್ತರನ್ನೂ, ಆದಿ ದ್ರಾವಿಡರನ್ನೂ ಆರ್ಯಸಮಾಜಕ್ಕೆ ಮತಾಂತರ ಮಾಡಿ ಕೂಡಿಸಿರುವರು.

—ಕುಂಬಕೋಣದಲ್ಲಿ ೧೨ ವರ್ಷ ಪ್ರಾಯದ ಮಂಗಳೆ ಎಂಬ ಹುಡುಗಿಯು ಹೊಟೆಲಿಗೆ ಹೋಗಿ ಕಾಫಿ ತೆಗೆದುಕೊಂಡು ಹಿಂತಿರುಗಿ ಬರುವಾಗ ಒಂದು ತೆಂಗಿನ ಮರವು ಅವಳ ತಲೆಯ ಮೇಲೆ ಬಿದ್ದು ಮರಣ ಹೊಂದಿದಳು. ತೆಂಗಿನ ಮರ ಬಿದ್ದು ಇಷ್ಟರ ವರೆಗೆ ಯಾರೂ ಸಾಯಲಿಲ್ಲ ಎಂಬ ಮಾತಿಗೆ ಇದೊಂದು ಆಕ್ಷೇಪಣೆಯಂತೆ ಆಯಿತು.

—ತಿರುವಾಂಕೂರಿನ ದಿವಾನರಾಗಿ ಇತ್ತಲಾಗೆ ನಿಯಮಿಸಲ್ಪಟ್ಟ ಮಿ| ವಟ್ಸ್ ಎಂಬವರು ತನ್ನ ಕೆಲಸಕ್ಕೆ ರಾಜೀ ಕೊಟ್ಟು ಹೋಗಿರುವರಂತೆ. ತಿರುವಾಂಕೂರಿನಲ್ಲಿರುವ ಯುರೋಪಿಯನರ ತೋಟಗಳ ದಾರಿಯಾಗಿ ಹೆಚ್ಚು ಖರ್ಚು ತಗಲುವ ರೈಲ್ವೇ ಸ್ಕೀಮನ್ನು ಇವರು ತಯಾರಿಸಿದ್ದು ಒಂದು ಕಾರಣವೆಂದೂ, ಯುರೋಪಿಯನರನ್ನು ಹೆಚ್ಚಾಗಿ ತಂದು ನಿಲ್ಲಿಸಲಿಕ್ಕೆ ಸಾಧಿಸಿದ್ದು ಇನ್ನೊಂದು ಕಾರಣವೆಂದೂ ತಿರುವಾಂಕೂರು ರಾಜ್ಯದಲ್ಲೆಲ್ಲಾ ಗುಜುಗುಟ್ಟುತ್ತಿರುವರು.

—ಮಹಾತ್ಮರ ಅನುಜ್ಞೆಯಂತೆ ಶ್ರೀ ರಾಮೇಶ್ವರೀ ದಾಸಬಿರ್ಲಾರವರು ಅಸ್ಪೃಶ್ಯರಿಗಾಗಿ ಅಮರೇಳಿಯಲ್ಲಿ ದೇವಾಲಯ ಕಟ್ಟಲು ೨೫,೦೦೦ ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿರುವರು.

—ಮುಂಬಾಯಿ ಪಟ್ಟಣದ ಜಾನ್‌ಪತಿ ಪ್ರಿಂಟಿಂಗ್ ಆಫೀಸಿನ ಯಜಮಾನನಾದ ಟಿ. ಜೋಸಿಯನ್ನೂ, ಪೋರಾ ಎಂಬ ಮರಾಟಿ ವಾರಪತ್ರಿಕೆಯ ಎಡಿಟರಾದ ಪ್ರಭಾಸಿಸ್ರಗಳ ಎಂಬಾತನನ್ನೂ, ಲಜ್ಜಾಸ್ಪದವಾದ ಚಿತ್ರಗಳನ್ನು ಆ ಪತ್ರಿಕೆಯಲ್ಲಿ ಪ್ರಕಟಿಸಿದರೆಂದು ಗುಪ್ತ ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ.

—ಬಿ. ಎಲ್ ಪರೀಕ್ಷೆಯನ್ನು ಒಂದು ತಿಂಗಳ ಮುಂದೆ ಹಾಕಿದ್ದರಿಂದ ಓರ್ವ ವಿದ್ಯಾರ್ಥಿಯು ಮದ್ರಾಸಿನ ವೈಸ್‌ಛಾನ್ಸಲರ ಮೇಲೆ ಪಿರ್ಯಾದಿ ಮಾಡಿರುವನು.

—ಶ್ರೀಮತಿ ಸರೋಜಿನಿ ದೇವಿಯವರು ಬಂಗಾಳದಲ್ಲಿ ಒಂದು ತಿಂಗಳ ವರೆಗೆ ತಿರುಗಾಡಿ ಹಿಂದೂ-ಮುಸಲ್ಮಾನ ಕಲಹದ ಕಾರಣಗಳನ್ನು ತಿಳಕೊಳ್ಳುವರು. ಇವರು ಯಾವತ್ತು ಜಾತಿಯ ಮುಖಂಡಜನರ ಭೇಟಿಯನ್ನು ಕಂಡುಕೊಳ್ಳುವರು.

ದಕ್ಷಿಣ ಕನ್ನಡ.

ಕಾರ್ಕಳ:—ಇಲ್ಲಿಯ ಆಯುರ್ವೇದ ವೈದ್ಯ ಶ್ರೀ. ಕೆ. ನಾರಾಯಣರಾಯರಿಂದ ಕೆಲವು ವರ್ಷಗಳಿಂದಲೂ ನಡೆಸಲ್ಪಡುತ್ತಿದ್ದ ಶ್ರೀ ಮಂಗಾರ್ ಪ್ರಸಾದ ವೈದ್ಯ ಶಾಲೆಯನ್ನು ಮೊದಲಿನ ಸ್ಥಳದಿಂದ ಇಲ್ಲಿನ ಸುಪ್ರಸಿದ್ಧ ಅನಂತಶಯನ ದೇವಾಲಯದ ಗೋಪುರದ ಉತ್ತರ ಪಾರ್ಶ್ವದಲ್ಲಿರುವ ಚಲೋದಾದ ಕಟ್ಟೋಣಕ್ಕೆ ಇದೇ ಕಳೆದ ತಾ. ೨೬-೫-'೨೬ಕ್ಕೆ ಒಯ್ಯಲ್ಪಟ್ಟಿತು. ಈ ಸುಸಂದರ್ಭದಲ್ಲಿ ಆಯುರ್ವೇದ ಭೂಷಣ ಎ. ಆರ್. ಶಾಸ್ತ್ರಿ, ಡಾ| ಬಿ. ವಾಸುದೇವರಾವ್, ಬಿ. ವೆಂಕಟರಾವ್, ಬಿ. ಎ. ಎಲ್. ಎಲ್.ಬಿ. ಶ್ರೀ| ಕೆ. ಸದಾಶಿವ ಭಟ್ ಎಮ್. ಎಲ್. ಡಾ| ಜನಾರ್ಧನರಾವ್, ಡಾ| ಎನ್. ಎಮ್. ಅಧ್ಯಂತಾಯ, ಡಾ| ಕೆ. ರಾಮರಾವ್, ವಕೀಲ್ ನಂಜಪ್ಪ ಸೆಟ್ಟಿ, ರೆವಿನ್ಯೂ ಇನ್ಸ್‌ಪೆಕ್ಟರ್ ನರಸಿಂಹ ಕಾಮತ್, ವಕೀಲ್ ಬಾಬುರಾಯ ಜೋಶಿ, ಶ್ರೀ| ಎಸ್. ರಾಮಶೆಟ್ಟಿ, ಪಿ. ನಾರಾಯಣ ಜೋಶಿ ಈ ಮೊದಲಾದ ಮಹನೀಯರನೇಕರು ಚಿತ್ತೈಸಿದ್ದರು. ನಮ್ಮ ಪಟ್ಟಣಿಗರಲ್ಲಿ ಒಳ್ಳೇ ಸುಪರಿಚಿತರಾಗಿಯೂ, ಜನರ ನಂಬಿಕೆಗೆ ಪಾತ್ರರಾಗಿಯೂ ಇರುವ ವೈದ್ಯ ನಾರಾಯಣ ರಾಯರ ಈ ಔಷಧಾಲಯವು ಶ್ರೀಯೋಭಿವೃದ್ಧಿ ಹೊಂದಲೆಂದು ನಮ್ಮೆಲ್ಲವರ ಹೃತ್ಪೂರ್ವಕವಾದ ಕೋರಿಕೆ.

ಮೊಗ್ರಾಲ್:—ಇಲ್ಲಿ ತಾ. ೨೬-೫-೨೬ರಲ್ಲಿ ಮುಸ್ಲಿಂ ಯುವ ಜನಸಂಘದೊಂದು ಸಭೆಯು ರಾ| ಕೆ. ಕುಂಞಮ್ಮದೆ ವೈಲದಿಯವರ ಅಧ್ಯಕ್ಷತೆಯಲ್ಲಿ ಸೇರಿ ಕೆಳಗಿನ ನಿರ್ಣಯಗಳು ಪಾಸುಮಾಡಲಾಯಿತು.

ಸದರಿ ಸಂಘಕ್ಕೆ ಕೆಲವು ಪತ್ರಗಳು ತರಿಸಬೇಕೆಂತಲೂ ಅದರ ಪ್ರಕಿ ಸ್ವದೇಶಾಭಿಮಾನಿ ಮತ್ತು ಅಲ್ ಅಮೀನ್ ಎಂಬ ಎರಡು ಪತ್ರಗಳು ಸದರಿ ಸಂಘದ ಸೆಕ್ರೆಟರಿಗಳಾದ ರಾ| ಎಂ. ಎ. ಇಬ್ರಾಹಿನ್ ಕುಂಞಮ್ಮದೆಯವರು ಅಲ್ ಇಸ್ಲಾಹ್ ಎಂಬ ಅರಬಿಮಲೆಯಾಳ ಪತ್ರವೂ ರಾ| ಯು. ಕೆ. ಹುಸನ್‌ಕುಂಞ'ಯವರು ಕಂಠೀರವ ಮತ್ತು ಮಲಬಾರಿ ಪತ್ರವು ತರಿಸುವರೆ ಒಪ್ಪಿದರು.

ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲ್ ಬರುವ ಇಲಕ್ಷನಿಗೆ ನಮ್ಮ ಜಿಲ್ಲೆಯಿಂದ ಎಚ್. ಮಹಮ್ಮದ್ ಫುತ್ತೂರುಸಾಹೇಬ್ ಬಹದೂರರವರಿಗೆ ನಮ್ಮ ಓಟುಗಳನ್ನು ಕೊಡಬೇಕಲ್ಲದೆ ನಮ್ಮ ನಮ್ಮ ನೆರೆ ಗ್ರಾಮಗಳಿಗೆ ಹೋಗಿ ಆಯಾಯ ಸ್ಥಳದಲ್ಲಿ ಒಂದೊಂದು ಸಭೆಕರದು ಅವರಿಗೆನೆ ಓಟು ಕೊಡಿಸುವರೆ ಪ್ರಯತ್ನಪಡಬೇಕೆಂತ ಸರ್ವಸಮ್ಮತದಿಂದ ಪಾಸುಮಾಡಲಾಯಿತು. ಅನಂತರ ಸದರಿ ಸಂಘಾಭಿವೃದ್ಧಿ ಕುರಿತು ಅಧ್ಯಕ್ಷರು ಭಾಷಣಮಾಡಿ ಸಭೆಯು ಮುಕ್ತಾಯವಾಯಿತು.

ಮಂಜೇಶ್ವರ:—ಕಳೆದ ೨೪ನೇ ಸೋಮವಾರ ತಾಲೂಕು ಬೋರ್ಡು ಇಲೆಕ್ಷನ್ ಹ್ಯಾಗೂ ೭॥ ಗಂಟೆಗೆ ಪ್ರಾರಂಭವಾಗಲು ವೋಟರರು ಗುಂಪುಗುಂಪಾಗಿ ಬಂದು ರಾ| ಶೆಟ್ರಿಗೆ ಓಟನ್ನು ಕೊಡಲಾರಂಭಿಸಿದರು. ೯ ಗಂಟೆಯಾಗುವುದರೊಳಗಾಗಿ ಆಶಾಭಗ್ನರಾದ ರಾ| ಪೈಗಳವರು ಪೋಲಿಂಗ ಸ್ಟೇಶನಿನಿಂದ ಸ್ವಸ್ಥಾನಕ್ಕೆ ಹಿಂತಿರಿಯಬೇಕಾಯಿತು. ಪೋಲಿಂಗ ಆಫೀಸರರ ಸುತ್ತಲೂ ಜನರು ಮುತ್ತಿಗೆಹಾಕಿದುದರಿಂದ ಅವರ ಮುಖವನ್ನು ಸಹಾ ಕಾಣಲಾಗದೆ ಅನೇಕ ಓಟರರು ೨-೩ ಸಾರಿ ಹೋಗಬೇಕಾಯಿತು. ರಾ| ಶೆಟ್ರಿಕಡೆಯಿಂದ ಓಟರರಿಗೆ ಎಲ್ಲಾ ಸೌಕರ್ಯಗಳು ನಡೆದಿದ್ದವು. ಆದುದರಿಂದಲೂ, ಸಕಲರಿಗೂ ಪರಿಚಿತರಾಗಿದ್ದುದರಿಂದಲೂ ಇವರು ತಮ್ಮ ಎದುರ ದಶಾಂಶಕ್ಕೆ ಏರಿ ಓಟು ಪಡೆದರು. ಈಗಣ ಈ ಬೋರ್ಡಿಗೆ ಇವರು ಯೋಗ್ಯರೇ ಸರಿ.

ಊರಿನಲ್ಲಿ ನೀರಿನ ಕ್ಷಾಮವು ತಲೆದೋರಿದೆ. ಇನ್ನು ೮-೧೦ ದಿನಗಳೊಳಗೆ ಮಳೆ ಬಾರದಿದ್ದರೆ ಹೊಳೆಯ ನೀರೇ ಗತಿ. ಸರಕಾರಿ ಬಾವಿಗಳಿಗೂ ಮೆಂಬರರ ಸಂಖ್ಯೆಗೂ ಕಡಿಮೆ ಇಲ್ಲ. ಮೆಂಬರರು ಇನ್ನಾದರೂ ಕಣ್ಣು ತೆರೆದು ಬಾವಿಗಳನ್ನು ಹಣಿಕಿ ನೋಡಿ, ಬರುವ ಬೇಸಿಗೆಗಾದರೂ ಈ ಕ್ಷಾಮವು ತಲೆದೋರದಂತೆ ಮಾಡಲಾರರೇ, ಸರಕಾರಿ ಆಸ್ಪತ್ರೆಗೆ ಸಹಾ ೪ ಮೈಲು ದೂರದಿಂದ ನೀರು ತರಬೇಕಾಗಿದೆ. ಅನೇಕರಿಗೆ ರಾ| ಛತ್ರರವರು ನೀರಿನ ಧರ್ಮಮಾಡುತ್ತಿರುವರು, ದೇವರ ಇವರಿಗೆ ದೀರ್ಘಾಯುಷ್ಯವನ್ನೀಯಲಿ.

ಪೋಲೀಸ ಸ್ಟೇಶನಿಗೆ ಒಂದು ಟಪ್ಪಾಲ ಪೆಟ್ಟಿಗೆ ಇಟ್ಟದ್ದು ತುಂಬಾ ಉಪಕಾರ, ಅತೀ ಅಗತ್ಯ ಇರುವ ಒಂದು ಟೆಲಿಗ್ರಾಫ್ ಆಫೀಸನ್ನು ಟಪ್ಪಾಲು ಆಫೀಸಿಗೆ ಸೇರಿಸಿದರೆ ಆ ಉಪಕಾರವನ್ನು ಎಂದೆಂದಿಗೂ ಮರೆಯಲಾರರು. ಡಿಪಾರ್ಟಮೆಂಟಿನವರು ಈ ಕಡೆ ನಿಗಾಕೊಡಬೇಕಾಗಿದೆ.

ತೆಂಕಲಾಗಿನಿಂದ ವೇಷಧಾರಿಗಳಾದ ಒಬ್ಬಿಬ್ಬರು ಅಕ್ಕಸಾಲಿಗರು ಇಲ್ಲಿ ಬಂದು ಕಳವು ಮಾಡಲಾರಂಭಿಸಿದ್ದಾರೆ. ಅಧಿಕಾರಿಗಳು ಈ ಕಡೆ ನಿಗಾಕೊಡಬೇಕಾಗಿದೆ.

ಹೊಸಬೆಟ್ಟು ಪಂಚಾಯತ ಕೋರ್ಟ ಪ್ರೆಸಿಡೆಂಟರವರು ತಮ್ಮ ಹುದ್ದೆಗೆ ಶರಣುಹೊಡೆದಿರುವರು (ರಾಜೀ ತೆತ್ತಿರುವರು). ಈ ಸ್ಥಾನಕ್ಕೆ ರಾ| ಭವಾನಿ ಶಂಕರರಾಯರೂ, ಮಂಜಣ್ಣಾಳ್ವರೂ, ಸದಾಶಿವರಾಯರೂ ಪ್ರಯತ್ನಿಸುತ್ತಾರಾಗಿ ಗುಸುಗುಸ ಕೇಳಬರುತ್ತದೆ. ಈ ಚುನಾವಣೆಯು ಮೆಂಬರರಿಂದಲೇ ನಡೆಯಲಿರುವದಾದುದರಿಂದ ಸ್ವಾರ್ಥತೆ ಇಲ್ಲದೆ ನಿಷ್ಪಕ್ಷಪಾತದಿಂದ ನ್ಯಾಯಗಳನ್ನು ತೀರ್ಮಾನಿಸಲು ಯೋಗ್ಯರಾದವರನ್ನು ಚೆನ್ನಾಗಿ ಪರಿಯಾಲೋಚಿಸಿ ಚುನಾಯಿಸಬೇಕಾಗಿ ಗ್ರಾಮಸ್ಥರ ಕೋರಿಕೆ.

ಮರವಂತೆ:—ಇದೇ ತಾ. ೨೩-೫-೨೬ನೇ ಭಾನುವಾರ ಕುಂದಾಪುರ ತಾಲೂಕು ಮರವಂತೆ ಬೋರ್ಡು ಎಲಿಮೆಂಟರಿ ಶಾಲಾ ನೂತನ ಗೃಹಪ್ರವೇಶ ಸಮಾರಂಭವು ಅತಿ ವಿಜೃಂಭಣೆಯಿಂದ ನೆರವೇರಿತು. ಶಾಲಾ ಮಂದಿರವು ತಳಿರುತೋರಣ, ಚಿತ್ರಪಟ ರಾಜಪತಾಕೆಗಳಿಂದಲಂಕರಿಸಲ್ಪಟ್ಟಿದ್ದಿತು. ಶಾಲಾ ಉಪಾಧ್ಯಾಯರುಗಳೂ, ಬಾಲಕ ಬಾಲಕಿಯರೂ ಗ್ರಾಮ ಉದ್ಯೋಗಸ್ಥರೂ ಇತರ ಮಹಾಜನಗಳೂ ಸೇರಿ ಸಾವಿರಾರು ಜನರು ನೆರೆದಿದ್ದರು. ಈ ಮೊದಲು ಶಾಲೆ ನಡೆಯುತ್ತಿದ್ದ ಯಕ್ಷಿಣೀ ದೈವಸ್ಥಾನದಿಂದ ವಾದ್ಯಘೋಷದೊಡನೆ ಜನಸಂದಣಿಯು ಮೆರವಣಿಗೆ ಹೊರಟು ವರಾಹಸ್ವಾಮಿ ಗಂಗಾಧರೇಶ್ವರ ದೇವಾಲಯಗಳಿಗೆ ಪ್ರವೇಶಿಸಿ ದೇವಪ್ರಾರ್ಥನೆಯನ್ನು ಮಾಡಿ ಮರಳಿ ಯಕ್ಷಿಣೀ ದೈವಸ್ಥಾನಕ್ಕೆ ಬಂದು ಯಕ್ಷಿಣಿಯೇ ಮೊದಲಾದ ದೈವಗಳನ್ನು ಸಂಪ್ರಾರ್ಥಿಸಿಕೊಂಡು, ಶುಮುಹೂರ್ತದಲ್ಲಿ ಸ್ವಸ್ತಿವಾಚನಪೂರ್ವಕ ನೂತನ ಶಾಲಾಗೃಹವನ್ನು ಪ್ರವೇಶಿಸಿದರು.

ಕಾಸರಗೋಡು:— ಇದೇ ಳಿಳದ ತಾ. ೩ಗನೆಯ ಸೋಮವಾರ ದಿನ ಶ್ಯಾಮ ಘಂಟೆ ೫-೩೦ಕ್ಕೆ ಇಲ್ಲಿಯ ಮುನ್ಸಿಫ್ ಕೋರ್ಟಿನ ಹಿಂಬದಿಯ ಟೆನ್ನಿಸ್ ಕೋರ್ಟಿನಲ್ಲಿ ನಮ್ಮ ಸಂಸ್ಥಾನದಲ್ಲಿ ಪ್ರಖ್ಯಾತಪಟ್ಟ ಬೋಯ್ ಸ್ಕೌಟ್ (Boys' scouts) ಪಂಗಡದ, ಪ್ರೊವಿನ್ಸಿಯಲ್ ಸೆಕ್ರಿಟರಿಯವರಾದ, ರಾ। ಸಂಜೀವ ಕಾಮತರವರ ಚೆಲೋ ಭಾಷಣವು ನಮ್ಮ ಆಕ್ಟಿಂಗ ಜಿಲ್ಲಾ ಕಲೆಕ್ಟರರವರಾದ ಎ. ಎಸ್. ಪಿ. ಅಯ್ಯರ್ ಅವರ್ಗಳರವರ ಅಧ್ಯಕ್ಷತೆಯಲ್ಲಿ ಕೊಡಲ್ಪಟ್ಟಿತು. ರಾ। ಸಂಜೀವ ಕಾಮತರವರು ಸದರಿ ಮೇಲೆ ಹೇಳಿದ ಪಂಗಡದ ಕುರಿತು ಹೆಚ್ಚಿನ ಸಂಗತಿಗಳನ್ನು ವಿವರವಾಗಿ ತಿಳಿಸಿದ್ದಲ್ಲದೆ, ನಮ್ಮ ಜಿಲ್ಲೆಯಲ್ಲಿಯೂ ಕೂಡ ಇಂಥ ಸಂಸ್ಥೆಗಳನ್ನೂ ಅದಷ್ಟು ತ್ವರ್ಯದಲ್ಲಿ ಹೆಚ್ಚಿನ ಶ್ರದ್ಧೆಯಿಂದ ಸ್ಥಾಪಿಸಬೇಕಾಗಿಯೂ ಇದರಿಂದ ಇಡೀ ಜನಾಂಗದವರಿಗೆ ಸಿಕ್ಕುವ ಎಷ್ಟೆಷ್ಟೋ ಪ್ರಯೋಜನಗಳನ್ನೂ ಸಮಗ್ರವಾಗಿ ವಿವರಿಸಿ, ಈ ವಿಷಯದಲ್ಲಿ ಜಿಲ್ಲೆಯ ಮಹನೀಯರೆಲ್ಲರೂ ಯಾವ ಸಂಕೋಚವೂ ಪಡದೆ, ಮುಂದರಿದು ಕಾರ್ಯಸಾಧಿಸಬೇಕಾಗಿಯೂ ಪುನಃ ಪುನಃ ಒತ್ತಿಹೇಳಿದರು. ಇದಲ್ಲದೆ ಮಾನ್ಯ ಅಧ್ಯಕ್ಷರು ಮೇಲಿನ ಸಂಸ್ಥೆಯ ಕುರಿತು ಇನ್ನೂ ಹೆಚ್ಚಿನ ಮಾಹಿತಿಯನ್ನು ಕೊಟ್ಟು ತಮ್ಮ ಚೆಲೋ ಭಾಷಣದಿಂದ ಕೂಡಿದ ಸಭಿಕರನ್ನು ಹೆಚ್ಚಿನ ಸಂತೋಷಕ್ಕೆ ಪಾತ್ರರಾಗಿ ಮಾಡಿದ ತರುವಾಯ ರಾ। ಕಾಮತರಿಗೂ ಅಧ್ಯಕ್ಷರಿಗೂ ವಂದನೆಗಳನ್ನು ಅರ್ಪಿಸಿ ಸಭೆಯು ಮುಗಿಯಿತು. ಈ ಸಭೆಗೆ ಊರ ಹೆಚ್ಚಿನ ಮಾನ್ಯಗೃಹಸ್ಥರು ಹಾಜರಿದ್ದದ್ದಲ್ಲದೆ, ಈ ನಮೂನೆಯ ಭಾಷಣ ವ ಅಧ್ಯಕ್ಷರ ಕೊನೆಯ ಭಾಷಣಗಳು ಸಭಿಕರನ್ನು ಈ ವರೆಗೆ ಈ ರೀತಿಯಲ್ಲಿ ಆನಂದಪರವಶರಾಗುವಂತೆ ಮಾಡಿದ್ದಿಲ್ಲ.

ಕ್ಲಾರ್ಕರೊಳಗಿನ ಕೊಲೆಗಳು ಇನ್ನೂ ಮುಗಿಯಲಿಲ್ಲ. ಕೆಲದಿನಗಳ ಹಿಂದೆ ಒಬ್ಬ ಕ್ಲಾರ್ಕ ಯುವಕನು ತನ್ನ ಮಾವನಾದ ಕೇಳು ಎಂಬವನೊಬ್ಬನನ್ನೂ ಚೂರಿಯಿಂದ ತಿವಿದು, ಆತನು ಇಲ್ಲಿಯ ಆಸ್ಪತ್ರಿಯಲ್ಲಿ ಮೃತಪಟ್ಟನು. ಅಪರಾಧಿತನು ರಿಮಾಂಡಿನಲ್ಲಿರುವನು.

ಮಳೆಯೇ ಇಲ್ಲ! ಬಿಸಿಲಿನ ತಾಪವು ಸಹಿಸಲಸಾಧ್ಯವಾಗಿರುತ್ತದೆ! ಊರಲ್ಲೆಲ್ಲಾ ನೀರಿನ ಕ್ಷಾಮವೂ ಅಲ್ಲಲ್ಲಿ ತೋರಹತ್ತಿದೆ! ಮಳೆಯ ನಿರೀಕ್ಷಣೆ ಮೇಲೆ ಬಿತ್ತಿದ ನೇಜಿಯು ಎಲ್ಲೆಲ್ಲಿಯೂ ಸುಟ್ಟು ನಾಶವಾಯಿತು! ಅಕ್ಕಿಯ ಬೆಲೆಯು ಏರುತ್ತಾ ಹೋಗುತ್ತದೆ! ಇತರ ಜೀನಸುಗಳಿಗೂ ಬೆಲೆ ಏರುತ್ತಾ ಬರುತ್ತಿದೆ! ಇನ್ನೇನು ಆಗುತ್ತದೋ ನೋಡಲಿಕ್ಕಿದೆ!!

೧॥ ತಿಂಗಳ ರಜೆ ಪಡಕೊಂಡ, ಇಲ್ಲಿಯ ತಹಶೀಲ್ದಾರ ರಾ। ಟಿ. ಬಿ. ಶಂಕರರಾಯರ ಬದಲಿಗೆ ರಾ। ವರ್ಕಾಡಿ ವೆಂಕಟ್ರಾಯರವರು ನೇಮಕ ಹೊಂದಿ ನಿನ್ನೆ ದಿನ ಚಾರ್ಜುಪಡಕೊಂಡಿರುತ್ತಾರೆ.

ಮಂಗಳೂರು.

ಮಳೆಗಾಲವು ಸಮೀಪಿಸುತ್ತಾ ಬರುತ್ತಿದೆ. ಈ ವರ್ಷ ನಮ್ಮ ಮುನ್ಸಿಪಾಲಿಟಿಯೊಳಗೆ ಮಾರ್ಗಗಳ ದುರುಸ್ತಿಯು ಬಹು ಚೆಲೋದಾಗಿ ನಡೆಯುವುದು ಎಂದು ತಿಳಿಯುತ್ತೇವೆ. ಮಾರ್ಗಗಳಿಗೆಲ್ಲಾ (ಗ್ರೇನಾಯಟ್ ಮೇಟಲ್)ಎಂದರೆ, ಜಲ್ಲಿಕಲ್ಲಿನ ಪುಡಿಯನ್ನು ಹಾಕಿ ಮಾರ್ಗವನ್ನು ದುರುಸ್ತಿ ಪಡಿಸುವರು; ಈಗಾಗಲೆ ಮಾರ್ಗಗಳ ಬದಿಗಳಲ್ಲಿ ಎಲ್ಲಿ ನೋಡಿದರೂ ಜಲ್ಲಿಕಲ್ಲುಗಳ ರಾಶಿಗಳು ಕಾಣಸುತ್ತವೆ. ಈ ರಾಶಿಗಳು ಕೆಲವು ಇಕ್ಕಟ್ಟಾದ ರಸ್ತೆಗಳಲ್ಲಿ ಹೆಚ್ಚಾದ ಸ್ಥಳವನ್ನು ಆಕ್ರಮಿಸಿಕೊಂಡದ್ದರಿಂದ ರಾತ್ರಿವೇಳೆಯಲ್ಲಿ ಜನರು ನಡೆದು ಹೋಗುತ್ತಿರುವಾಗ್ಗೆ ಕತ್ತಲೆಗೆ ಜಲ್ಲಿಕಲ್ಲುಗಳ ರಾಶಿ ಕಾಣದೆ, ಕಲ್ಲು ತುಂಡುಗಳ ರಾಶಿಗಳ ಮೇಲೆ ಬಿದ್ದು ಬಿಡುವರು. ಕುದುರೆಗಾಡಿಗಳು ಕೂಡ ಅದೇ ರೀತಿಯಲ್ಲಿ ಒಂದೊಂದು ಸಲ ಇದರ ಮೇಲಿಂದ ಹೋಗುತ್ತಿವೆ. ಈ ವರ್ಷ ನಮ್ಮ ಕೌನ್ಸಿಲರುಗಳು ಮಾರ್ಗ ದುರುಸ್ತಿಗಳಲ್ಲಿ ಗಮನ ಇಟ್ಟ ಹಾಗೆಯೇ ಮಾರ್ಗಗಳ ಬದಿಯಲ್ಲಿರುವ ಜಲ್ಲಿಕಲ್ಲುಗಳ ಹತ್ತಿರ ಒಂದೊಂದು (Danger Light) ಅಪಾಯ ತೋರಿಸುವ ನಿಶಾನಿಯ ದೀಪಗಳನ್ನು ಉರಿಸಿ, ಅಕ್ಕ ನಿಶಾನಿಯನ್ನು ಇಟ್ಟರೆ ಕಲ್ಲಿನ ರಾಶಿಯ ಮೇಲೆ ಬಿದ್ದು ಪೆಟ್ಟಾಗಿ ಆಸ್ಪತ್ರೆಗೆ ಹೋಗುವ ಜನರ ಸಂಖ್ಯೆ ಕಡಿಮೆಯಾಗುವುದು. ಮತ್ತು ಬಡಜನರಿಗೆ ಒಂದು ಮಹತ್ವಾದ ಉಪಕಾರವಾಗುವುದು. ಈ ವಿಷಯದಲ್ಲಿ ಕೂಡ ನಮ್ಮ ಮುನ್ಸಿಪಾಲಿಟಿಯ ಕೌನ್ಸಿಲರುಗಳು ಕೂಡಲೆ ತಕ್ಕ ಆಲೋಚನೆ ಮಾಡಿ ದೀಪಗಳನ್ನು ಇಡಿಸುವ ಏಲವಾರಿ ಮಾಡುತ್ತಾರೆಂದು ಕೋರುತ್ತೇವೆ.

ನಮ್ಮ ಮುನ್ಸಿಪಾಲಿಟಿಯ ಕಳೆದ ಅಂತ್ಯವಾಗುವ ವಾರದಲ್ಲಿ ೫೩ ಜನನಗಳೂ ಮತ್ತು ೨೮ ಮರಣಗಳೂ ಆಗಿರುವವು. ಇವುಗಳಲ್ಲಿ ೩ ಮೈಲಿಗಜ್ವರದಿಂದಾಗಿದ್ದವು.

ಕಳೆದ ಆದಿತ್ಯವಾರ ಮೈದಾನಿನ ಹತ್ತಿರ ಮೆಕ್ಕೀನ್ ಗಾರ್ಡನಿನಲ್ಲಿ ೭ ಮನೆಗಳು ಬೆಂಕಿ ತಗಲಿ ಸುಟ್ಟುಹೋಗಿರುವವು. ಬೆಂಕಿಯನ್ನು ನೊಂದಿಸಲು ಪೋಲೀಸರ ಮತ್ತು ಇತರ ಜನರ ಸಹಾಯವು ವಿಶೇಷವಾಗಿತ್ತು. ಆದರೆ ಬೆಂಕಿಯ ಪ್ರತಾಪವು ವಿಶೇಷವಾಗಿದ್ದುದರಿಂದ ಹೆಚ್ಚು ಸಮಯದವರೆಗೆ ಬೆಂಕಿಯನ್ನು ಹವನಿಸಲು ಆಗಲಿಲ್ಲ. ನಮ್ಮ ಮುನ್ಸಿಪಾಲಿಟಿಯವರು ಇಲ್ಲಿಯ ಮಾರ್ಗಗಳ ದುರುಸ್ತಿ ಬಗ್ಗೆ ಒಂದು ಹೊಸದಾದ ಸ್ಟೀಮ ರೋಲರ್ ಎಂಬ ಮಾರ್ಗ ದುರುಸ್ತಿಯ ಯಂತ್ರವನ್ನು ತರಿಸಿರುವರು. ಮಾರ್ಗದುರುಸ್ತಿಯ ಯಂತ್ರವನ್ನು ತರಿಸಿದ ಹಾಗೆಯೇ ಜಲಯಂತ್ರಗಳನ್ನು ಯಾಕೆ ತರಿಸಲಿಲ್ಲವೋ ತಿಳಿಯದು. ಈಗಿನ ಕೌನ್ಸಿಲಿನಲ್ಲಿ ಬಹು ಚಟುವಟಿಕೆಯಿಂದ ಕೆಲಸವನ್ನು ಮಾಡುತ್ತಿದ್ದ ನಮ್ಮ ಸ್ವರಾಜ್ಯಸ್ಥ ಕೌನ್ಸಿಲರಾದರೂ ಈ ವಿಷಯ ಸ್ವಲ್ಪ ಗಮನವನ್ನು ಕೊಡಬಾರದೇ?

ಇಲ್ಲಿಯ ಮುನ್ಸಿಪಾಲಿಟಿಯ ಸೆಕ್ರೆಟರಿಯವರು ಮುನ್ಸಿಪಾಲಿಟಿಯ ಹಣ ವಂಚನೆ ಮಾಡಿದ ಕುರಿತು ಸರಕಾರದವರು ತನಿಖೆ ನಡಿಸಿದ್ದಲ್ಲಿ ಸರಿಯಾದ ರುಜುವಾತು ಇಲ್ಲದಿದ್ದರಿಂದ ಸೆಕ್ರೆಟರಿಯವರ ಮೇಲೆ ದಾವೆಯನ್ನು ನಡಿಸಲು ಆಗುವುದಿಲ್ಲವಾಗಿ ಮತ್ತು ಅವರು ಕೊಟ್ಟ ರಾಜಿನಾಮೆಯನ್ನು ಸ್ವೀಕರಿಸಬಹುದಾಗಿ ಸರಕಾರದ ಅಭಿಮತದ ಮೇರೆಗೆ ಮುನ್ಸಿಪಲ್ ಚೆಯರ್‌ಮೇನರು ರಾಜಿನಾಮೆಯನ್ನು ಸ್ವೀಕರಿಸಿ ಅವರನ್ನು ಕೆಲಸದಿಂದ ಖುಲಾಸ ಮಾಡಿರುವರು.

ಬರುವ ಸೋಮವಾರ ದಿನ ತಾ. (೭-೬-'೨೬)ನೇ ರಾತ್ರೆ ೯ಕ್ಕೆ ಸರಿಯಾಗಿ ಗಣಪತಿ ಹ್ಯಾಸ್ಕೂಲಿನಲ್ಲಿ ಸದರಿ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘದವರು "ಏಕಚ್ ಪ್ಯಾಲಾ" ಎಂಬ ನಾಟಕವನ್ನು (ಕನ್ನಡ ಸಂಗೀತ ನಾಟಕ) ಮಾಡಿ ಆಡಿತೋರಿಸುವರು.

೧೨ನೇ ಕರ್ಣಾಟಕ ಸಾಹಿತ್ಯ ಪರಿಷತ್ತು.

[ಅಧ್ಯಕ್ಷರಾದ ಶ್ರೀ ರಾವ್ ಸಾಹೇಬ್ ಪಿ. ಜಿ. ಹಳಕಟ್ಟಿಯವರ ಭಾಷಣದ ಮುಖ್ಯ ಭಾಗಗಳು]

ಸಭ್ಯ ಗೃಹಸ್ಥರೇ! ಈಗಿನಕಾಲಕ್ಕೆ ಹಿಂದೂಸ್ಥಾನ ದೇಶದ ಬೇರೆ ಬೇರೆ ವಿಭಾಗಗಳು ಚೈತನ್ಯಗೊಳ್ಳಹತ್ತಿವೆ. ರಾಜಕೀಯ, ಸಮಾಜಿಕ ಮತ್ತು ವಾಣಿಜ್ಯಾತ್ಮಕ ಪ್ರಯತ್ನಗಳಲ್ಲಿ ಹೆಸರುವಾಸಿಗಳಾದ ಮಹಾಜನರು ಅಲ್ಲಲ್ಲಿ ಹೊರಡಹತ್ತಿದ್ದಾರೆ. ಆದರೆ

ಕರ್ನಾಟಕತ್ವದ ಅವಶ್ಯಕತೆ

ಇದಕ್ಕೆ ನಮ್ಮ ಕರ್ನಾಟಕ ದೇಶವು ಮಾತ್ರ ಅಪವಾದಾತ್ಮಕವಾಗಿ ಉಳಿದಿದೆಯೆಂದು ನಾವೆಲ್ಲರೂ ಖಿನ್ನತೆಯಿಂದ ಒಪ್ಪಬೇಕಾಗುತ್ತದೆ. ರವೀಂದ್ರನಾಥ ಟಗೋರ, ಮಹಾತ್ಮಾ ಗಾಂಧಿ, ಚಿತ್ತರಂಜನದಾಸ ಅಥವಾ ಪ್ರೊಫೆಸರ ಕರ್ವೆ, ಇವರಂಥ ಕಾರ್ಯದಕ್ಷರೂ ಸ್ವಾರ್ಥತ್ಯಾಗಿಗಳೂ ಆದ ಮಹಾತ್ಮರು ನಮ್ಮ ಕರ್ನಾಟದೇಶದಲ್ಲಿ ಎಷ್ಟು ಜನರು ಇರಬಹುದು? ಇಂಥವರು ನಮ್ಮ ದೇಶದಲ್ಲಿ ಬಹಳ ಸ್ವಲ್ಪ ಅಥವಾ ಇಲ್ಲವೆಂತಲೇ ಹೇಳಬಹುದು. ಇಂಥ ಕನಿಕರ ಸ್ಥಿತಿಯು ದೇಶಕ್ಕೆ ಒದಗಲಿಕ್ಕೆ ಏನು ಕಾರಣವೆಂಬುದನ್ನು ನಾವು ವಿಚಾರಿಸಿದರೆ ಅದಕ್ಕೆ ಮುಖ್ಯ ಕಾರಣವು ಒಂದೇ ಎಂದು ನನಗೆ ತೋರುತ್ತದೆ. ಏನಂದರೆ ನಮ್ಮ ದೇಶದ ಜನರಲ್ಲಿ ಕರ್ನಾಟಕತ್ವದ ತೇಜಃಪುಂಜವಾದ ಭಾವನೆಯು ಇಲ್ಲದೇ ಇರುತ್ತದೆ. ಈ ಭಾವನೆಯು ಇಲ್ಲದ್ದರಿಂದ ಸ್ವಜನಪ್ರೀತಿಯೂ, ನಿಃಸ್ವಾರ್ಥಬುದ್ಧಿಯೂ ನಮ್ಮಲ್ಲಿ ಹೊರಟು ಹೋಗಿವೆ. ಈ ಸ್ಥಿತಿಯುಂಟಾಗಿರುವದರಿಂದ ನಮ್ಮ ಜನರನ್ನು ಎಚ್ಚರಿಸಲು ನಾವು ಪ್ರಯತ್ನಿಸುವುದಿಲ್ಲ. ಇದರಿಂದ ಕರ್ನಾಟಕಸ್ಥರಿಂದ ಯಾವ ಮಹತ್ವದ ಕಾರ್ಯಗಳೂ ಆಗಿರುವುದಿಲ್ಲ.

ನಾನು ವಿವರಿಸಿದ ಈ ಕರ್ನಾಟಕತ್ವದ ಭಾವನೆ ಎಂದರೆ ಪರನಾಡಿಗರನ್ನು ಹಳಿಯುವದು ಅಲ್ಲ. ಈ ಭಾವನೆಯು ಉಚ್ಚತಮವಾಗಿದೆ.

ಕರ್ನಾಟಕತ್ವ ವೆಂದರೇನು?

ಕರ್ನಾಟಕತ್ವವೆಂದರೆ, ತನ್ನ ದೇಶದ ಸಂಸ್ಕೃತಿಯ ಅರಿವು ಮತ್ತು ಅದನ್ನು ಅರಿತು ಆಚರಿಸುವುದು. ಇಂಥ ಆಚರಣೆಯೇ ದೇಶದ ಪ್ರಗತಿಯ ಕುರುಹು. ಆದರೆ ಈಗಿನ ಕರ್ನಾಟಕಸ್ಥರು ತಮ್ಮದನ್ನು ತಾವು ಮರೆತುಬಿಟ್ಟಿರುವರು. ಕರ್ನಾಟಕವು ಪೂರ್ವಕಾಲದಿಂದಲೂ ಪ್ರಸಿದ್ಧವಾದ ದೇಶವು. ಇಲ್ಲಿ ಹುಟ್ಟಿದ ಮಹಾ ವಿಭೂತಿಗಳು ಹಿಂದೂಧರ್ಮದ ಜ್ಞಾನಮಂದಿರದಲ್ಲಿ ಶ್ರೇಷ್ಠವಾದ ಸ್ಥಾನವನ್ನು ಅಲಂಕರಿಸಿದ್ದಾರೆ. ಆದರೆ ಅವರ ಅರಿವು ನಮ್ಮಲ್ಲಿ ಸಂಪೂರ್ಣವಾಗಿ ಹಾರಿಹೋಗಿದೆ ಮತ್ತು ಈಗ ನಾವು ದುರ್ಬಲರು, ನಮ್ಮಿಂದೇನೂ ಆಗಲಾರದು ಎಂಬ ಭಾವನೆಯನ್ನು ತಾಳಿಕೊಂಡು ಹತಾಶರಾಗಿ ಉಳಿದಿದ್ದೇವೆ. ಈ ದುಃಸ್ಥಿತಿಯನ್ನು ತೊಲಗಿಸುವುದರಲ್ಲಿಯೇ ಕರ್ನಾಟಕತ್ವದ ಮಹತ್ವವು ಇದೆ.

ಈ ತೆರದ ಶ್ರೇಷ್ಠ ಭಾವನೆಯನ್ನು ಎಲ್ಲಾ ಕಡೆಗೂ ಬೀರವುದೇ ಸಾಹಿತ್ಯ ಸಮ್ಮೇಲನದ ಮುಖ್ಯ ಉದ್ದೇಶವಾಗಿರುತ್ತದೆ. ಆದ್ದರಿಂದ ಇದರ ಅಧಿ

ಸಮ್ಮೇಲನದ ಉದ್ದೇಶ

ವೇಶನಗಳು ಕರ್ನಾಟಕದ ಬೇರೆ ಬೇರೆಭಾಗಗಳಲ್ಲಿ ಆಗುತ್ತ ಬಂದಿವೆ. ಮತ್ತು ಇವುಗಳ ಪರಿಣಾಮಗಳಾದರೂ ಕನ್ನಡಿಗರ ನಿದರ್ಶನಕ್ಕೆ ಪ್ರತಿ ವರುಷ ಹೆಚ್ಚೆಚ್ಚಿಗೆ ಬರಹತ್ತಿವೆ. ಇದರಿಂದ ಪ್ರಾಂತಿಕಭಾಷೆಗಳ ಭಿನ್ನತೆಗಳು ಕಡಿಮೆಯಾಗಹತ್ತಿವೆ. ಬೇರೆ ಬೇರೆ ಪ್ರಾಂತಗಳ ವಿದ್ವಜ್ಜನರಲ್ಲಿ ಪರಸ್ಪರ ಸಹಾನುಭೂತಿ ಸೌಹಾರ್ದತೆಗಳು ಹೆಚ್ಚೆಚ್ಚು ಮಾಡತೊಡಗಿವೆ. ಈ ಕಾಲಕ್ಕೆ ಪ್ರತಿಯೊಬ್ಬ ಕರ್ನಾಟಕಸ್ಥನ ಹೃದಯದಲ್ಲಿ ಕರ್ನಾಟಕದ ಏಕೀಕರಣ, ಕರ್ನಾಟಕ ವಿಶ್ವವಿದ್ಯಾಲಯ, ಕರ್ನಾಟಕದ ಬಂದರುಗಳು ಎಂಬಿವೇ ಮೊದಲಾದ ವಿಷಯಗಳ ಅವಶ್ಯಕತೆಯು ಹೆಚ್ಚೆಚ್ಚು ಭಾಸವಾಗಹತ್ತಿವೆ. ಈ ತೆರದ ಪ್ರೇರಣೆಗಳಿಗೆ ಸಾಹಿತ್ಯ ಪರಿಷತ್ತಿನ ಅಧಿವೇಶನಗಳೇ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಕಾರಣವಾಗುತ್ತಿವೆ ಎಂದು ಹೇಳಬಹುದು. ಈ ಅಧಿವೇಶನಗಳ ಕಾಲಕ್ಕೆ ಕರ್ನಾಟಕಸ್ಥರು ತಮ್ಮತಮ್ಮೊಳಗಿನ ನಾನಾವಿಧ ರಾಜಕೀಯ ಜಾತಿವಿಷಯಕ ಭೇದ ಭಾವಗಳನ್ನು ಮರೆತುಬಿಟ್ಟು ಕರ್ನಾಟಕವಾಗ್ದೇವಿಯ ವಿದ್ಯಾಮಂದಿರದ ಶಾಂತಿ ಮತ್ತು ಸಾತ್ವಿಕವಾತಾವರಣದಲ್ಲಿ ಕೆಲವು ಹೊತ್ತಾದರೂ ಆಲಿಂಗಡು ತ್ತೇವೆ. ಆದ್ದರಿಂದ ಈ ಪರಿಷತ್ತಿನ ಕಾರ್ಯಗಳು ಶ್ರೇಷ್ಠತರವಿದ್ದು ಇದನ್ನು ಪರಿಪೋಷಿಸುವದರಲ್ಲಿಯೇ ಕರ್ನಾಟಕದ ಕೆಚ್ಚಳವಿರುತ್ತದೆ.

ಆದರೆ ೧೪ನೇ ಶತಮಾನದ ತರುವಾಯ ಕರ್ನಾಟಕಕ್ಕೆ ಕತ್ತಲೆಯ ಯುಗವು ಪ್ರಾರಂಭವಾಯಿತೆಂದು ಹೇಳಬಹುದು. ಈ ಕಾಲದವರೆಗೆ

ಕರ್ನಾಟಕದ ಅವನತ ಕಾಲವು

ನಮ್ಮ ದೇಶದ ಬಹು ದೊಡ್ಡ ಭಾಗವು ಬಲಾಢ್ಯರಾಜರ ಆಡಳಿತಗಳಿಗೆ ಸೇರಿದ್ದು. ಅದರ ಸಂಸ್ಕೃತಿಯು ಹೆಚ್ಚುತ್ತಾಹೋಯಿತು ಆದರೆ ೧೭-೧೮ನೇ ಶತಮಾನದಲಿ ಉತ್ತರಕರ್ನಾಟಕರ ನಿಜಾಮ ಮತ್ತು ಪೇಶ್ವೆಯವರ ಆಡಳಿತಗೆ ಒಳಪಟ್ಟಿದ್ದರಿಂದಲೂ ಮಧ್ಯ ಮತ್ತು ದಕ್ಷಿಣ ಕರ್ನಾಟಕವು ಸಣ್ಣಸಣ್ಣ ರಾಜರ ವಶವರ್ತಿಯಾಗಿ ಉಳಿದು ಎತ್ತಲೂ ಅನಾಯಕತನವು ಒದಗಿದ್ದರಿಂದಲೂ ಕರ್ನಾಟಕದ ಸಂಸ್ಕೃತಿಗೆ ಕಷ್ಟಮಯಕಾಲವು ಪ್ರಾಪ್ತವಾಯಿತು. ಮುಂದೆ ಇಂಗ್ಲಿಷರ ರಾಜ್ಯವು ನೆಲಸಿದ ಬಳಿಕ ಸಹ ಇದೇ ಸ್ಥಿತಿಯು ಮುಂದೆ ಕೆಲವು ಕಾಲ ಉಳಿಯಿತು. ಅವರ ಕಾಲಕ್ಕೆ ಕರ್ನಾಟಕದ ಬೇರೆ ಬೇರೆ ಭಾಗಗಳು ಬೇರೆ ಬೇರೆ ಕಾಲಕ್ಕೆ ಅವರ ಅಂಕಿತಕ್ಕೆ ಬರಲು, ಆಗಿನ ಪರಿಸ್ಥಿತಿಗೆ ಸರಿಯಾಗಿ, ಅವುಗಳು ಬೇರೆ ಬೇರೆ ಅಧಿಪತ್ಯಕ್ಕೆ ಸೇರ್ಪಡೆಯಾದವು ಇದರಿಂದ ಕರ್ನಾಟಕವು ಮುಂಬಯಿ ಮದ್ರಾಸ, ಹೈದರಾಬಾದ, ಕೊಡಗು, ಮೈಸೂರು ಈ ಮೇರೆಗೆ ಬೇರೆ ಬೇರೆ ಪ್ರಾಂತಗಳಲ್ಲಿ ಹಂಚಿಹಾಕಲ್ಪಟ್ಟಿತು. ಇದರಿಂದ ಆಯಾ ಭಾಗಗಳಲ್ಲಿಯ ಕರ್ನಾಟಕಸ್ಥರು ಅಲ್ಪಸಂಖ್ಯಾತರಾಗಿ ಉಳಿದು, ಪರನಾಡಿಗರ ವರ್ಚಸ್ಸಿನಿಂದ ತಮ್ಮ ಕರ್ನಾಟಕತ್ವದ ಮೊದಲಿನ ಉಜ್ವಲಸ್ಥಿತಿಯನ್ನು ಮರೆತುಬಿಟ್ಟರು ಉತ್ತರ ಕನ್ನಡಿಗರು ಮರಾಟರ, ಪೂರ್ವಕ್ಕೆ ಕನ್ನಡಿಗರು ತೆಲುಗರ, ದಕ್ಷಿಣ ಕನ್ನಡಿಗರು ತಮಿಳರ, ನಿಜಾಮಕನ್ನಡಿಗರು ಮುಸಲ್ಮಾನರ ಹಿಡಿತಕ್ಕೆ ಒಳಗಾಗಿ, ತಮ್ಮ ಮೊದಲಿನ ಸಂಸ್ಕೃತಿಯನ್ನು ವಿಸ್ಮರಿಸಿದರು. ಹೀಗೆ ಅವರು ತಮ್ಮದನ್ನು ಮರೆತು ಬಿಟ್ಟರೂ, ಅವರು ಈ ತರದ ಅವನತಸ್ಥಿತಿಯನ್ನು ಹೊಂದಿದ್ದಾರೆ.

ಆದರೆ ಕರ್ನಾಟಕದ ಸುದೈವದಿಂದ ಅವರ ಕರ್ನಾಟಕತ್ವವನ್ನು ಪುನರುಜ್ಜೀವನಗೊಳಿಸುವ ಸುಕಾಲವು ಪ್ರಾಪ್ತವಾಗುವ ಚಿನ್ಹೆಗಳು ಇತ್ತೀಚೆಗೆ

ಕರ್ನಾಟಕದ ಎಚ್ಚರಿಕೆ

ಹೆಚ್ಚೆಚ್ಚಿಗೆ ಮೂಡತೊಡಗಿವೆ. ಇದರ ಉಗಮಕಾಲವು ೧೮೭೦-೧೮೮೦ ಇಸ್ವಿಗಳ ಮಧ್ಯದಲ್ಲಿ ಆಯಿತೆಂದು ಹೇಳಬಹುದು. ಆ ಕಾಲಕ್ಕೆ ಮುಂಬಯಿ ಕರ್ನಾಟಕದಲ್ಲೆಲ್ಲ ಮರಾಠೀ ಶಾಲೆಗಳೇ ಇದ್ದವು. ಆದರೆ ಕೈ. ವಾ. ಚೆನ್ನಬಸಪ್ಪ ಧಾರವಾಡ ಇವರು ತಾಲೂಕಾಶಾಲೆಯ ಡಿಪ್ಯುಟಿಗಳಾದ ಬಳಿಕ ಇವರ ಪ್ರಯತ್ನದಿಂದ ಮರಾಠೀ ಶಾಲೆಗಳ ಬದಲಾಗಿ, ಕನ್ನಡ ಶಾಲೆಗಳು ಸ್ಥಾಪಿಸಲ್ಪಡಹತ್ತಿದವು.

ಅದೇ ಕಾಲಕ್ಕೆ ಕನ್ನಡ ಪಠ್ಯಪುಸ್ತಕಗಳೂ ನಿರ್ಮಿಸಲ್ಪಟ್ಟವು. ಮತ್ತು ಅನೇಕ ಕನ್ನಡ ಅಭಿಮಾನಿಗಳು ಕನ್ನಡದಲ್ಲಿ ಗ್ರಂಥಗಳನ್ನು ಬರೆಯತೊಡಗಿದರು. ಆ ವಿನೀತ ಉತ್ತರಕರ್ನಾಟಕದಲ್ಲಿ ಕರ್ನಾಟಕತ್ವದ ಭಾವನೆಯು ತಲೆದೋರಹತ್ತಿತು. ಆದರೆ ಮೈಸೂರು ಕರ್ನಾಟಕಸ್ಥರಿಗೆ ಮಾತ್ರ ಅವರ ಸುದೈವದಿಂದ ಕರ್ನಾಟಕ ವಿದ್ಯೆಗೆ ಆಶ್ರಯವು ಯಾವಾಗಲೂ ದೊರೆಯುತ್ತಲೇ ಇತ್ತು. ಅವರಲ್ಲಿ ಕೃಷ್ಣರಾಜ ಮತ್ತು ಚಾಮರಾಜರ ಕಾಲದಿಂದ ಈ ವರೆಗೂ ಅನೇಕ ಕನ್ನಡ ವಿದ್ವಾಂಸರು ಹುಟ್ಟಿ, ಕನ್ನಡ ನುಡಿಗೆ ಅದೂ ವಿಶೇಷ ಸಹಾಯಮಾಡುತ್ತಾ ಬಂದಿದ್ದಾರೆ. ಆದರೆ ಮದ್ರಾಸ ಕರ್ನಾಟಕ, ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳು ಇವು ಮಾತ್ರ ಪರಭಾಷೆಗಳ ಹಿಡಿತದಿಂದ ಇನ್ನೂ ಪಾರಾಗಿರುವುದಿಲ್ಲ. ಆದರೂ ಇತ್ತಿತ್ತ ಅವು ಮೆಲ್ಲಗೆ ಚೇತರಿಸಿಕೊಳ್ಳಹತ್ತಿವೆ. ಹೀಗೆ ಯಾವ ಯಾವ ಭಾಗಗಳಲ್ಲಿ ಚೈತನ್ಯವು ಪ್ರಾಪ್ತವಾಗುತ್ತ ನಡೆದಿದೆಯೋ ಹಾಗೆ ಅವುಗಳನ್ನು ಒಟ್ಟುಗೂಡಿಸುವ ಕಾರ್ಯಗಳೂ ಮೆಲ್ಲಮೆಲ್ಲಗೆ ಬೇರೆಬೇರೆ ಸಂಘಗಳು ಮಾಡತೊಡಗಿವೆ. ಈ ಕಾರ್ಯವನ್ನು ಮೊದಲು ಧಾರವಾಡ ಕರ್ನಾಟಕದ ವಿದ್ಯಾವರ್ಧಕ ಸಂಘವು ಕೈಕೊಳ್ಳಲು ಅದರ ಪ್ರಯತ್ನದಿಂದ ಮೈಸೂರು ಮತ್ತು ಧಾರವಾಡ ಕನ್ನಡಿಗರು ಒತ್ತಟ್ಟಿಗೆ ಸೇರತೊಡಗಿದರು. ಮುಂದೆ ಕೆಲವು ವರ್ಷಗಳಾದ ಬಳಿಕ ಸಾಹಿತ್ಯಪರಿಷತ್ತು ಸ್ಥಾಪಿತವಾಗಲು, ಅದರ ಪ್ರಯತ್ನಗಳಿಂದ ಕರ್ನಾಟಕದ ಸಂಸ್ಕೃತಿಯ ಜಾಗ್ರತೆಯು ಇಡೀ ಕರ್ನಾಟಕದಲ್ಲಿ ನಡೆಯಹತ್ತಿದ್ದು ಅದು ಈಗ ದಿನೇದಿನೇ ವೃದ್ಧಿಂಗತವಾಗಲಿಕ್ಕೆ ಹತ್ತಿರುತ್ತದೆ.

ಈ ಮೇರೆಗೆ ನಾವು ಕೆಲಮಟ್ಟಿಗೆ ಚೇತರಿಸಿಕೊಂಡರೂ, ನಾವು ಮಾಡತಕ್ಕ ಮುಂದಿನ ಕಾರ್ಯಗಳು ಅಪಾರವಾಗಿವೆ. ಅದರಂತೆಯೇ ನಮ್ಮ

ಮಾಡತಕ್ಕ ಕಾರ್ಯಗಳು

ಸುತ್ತಮುತ್ತಲಿನ ಪರಿಸ್ಥಿತಿಯಾದರೂ ತೊಂದರೆಯುದ್ಧಿರುತ್ತದೆ! ಇದಕ್ಕೋಸ್ಕರ ನಾವು ಸತತ ಪ್ರಯತ್ನಗಳನ್ನು ವ್ಯವಸ್ಥೆಯಿಂದಲೂ ಸಂಘಟಿತ ಸ್ವರೂಪದಿಂದಲೂ ಮಾಡುವುದು ಅವಶ್ಯವದೆ. ಇದನ್ನು ನಿರ್ಧರಿಸುವದೇ ಈಗಿನ ನಮ್ಮೆಲ್ಲರ ಮುಖ್ಯ ಕಾರ್ಯವಾಗಿರುವುದು.

ನಾವು ಈಗ ಮಾಡತಕ್ಕ ಕಾರ್ಯಗಳಲ್ಲಿ ನಾವು ಕೆಳಗೆ ಕಾಣಿಸಿದಂತೆ ವಿಭಾಗಗಳನ್ನು ಮಾಡಬಹುದು. ಏನೆಂದರೆ—(೧) ಯೋಗ್ಯ ಶಿಕ್ಷಣ ಕ್ರಮವನ್ನು ಏರ್ಪಡಿಸುವುದು. (೨) ಕರ್ನಾಟಕದ ಪ್ರಾಚೀನ ಸಂಸ್ಕೃತಿಯನ್ನು ಸಂಶೋಧಿಸುವುದು. (೩) ಗ್ರಂಥ ರಚನಾಕಾರ್ಯಗಳಿಗೆ ವ್ಯವಸ್ಥಿತ ಸ್ವರೂಪ ಕೊಡುವದು. (೪) ಯೋಗ್ಯ ಸಂಘಟನೆ ಮತ್ತು ಪ್ರಚಾರಣೆಯ ಕಾರ್ಯಗಳು. ಈ ಸಂಗತಿಗಳ ಬಗ್ಗೆ ನಾವು ಹೆಚ್ಚಾಗಿ ಯತ್ನಿಸುವುದು ಅವಶ್ಯಕವೆಂದು ತೋರುತ್ತದೆ.

ಕರ್ನಾಟಕಕ್ಕೆ ಒಂದು ಸ್ವತಂತ್ರ ವಿಶ್ವವಿದ್ಯಾಲಯದ ಅವಶ್ಯಕತೆಯು ಬಹಳ ಇರುತ್ತದೆ. ಇದರಿಂದ ಕರ್ನಾಟಕಸ್ಥರಿಗೆ ತಮ್ಮ

ಕರ್ನಾಟಕ ವಿಶ್ವವಿದ್ಯಾಲಯ

ಶಿಕ್ಷಣಕ್ರಮವು ಹ್ಯಾಗೆ ಇರಬೇಕೆಂಬದನ್ನು ಗೊತ್ತುಪಡಿಸಿ ಅದರಂತೆ ಪ್ರವರ್ತಿಸಲು ಅವರಿಗೆ ಸಾಧ್ಯವಾಗುತ್ತದೆ. ಆದ್ದರಿಂದಲೇ ಈ ಪ್ರಯತ್ನವು ಬಹಳ ಮಹತ್ವದ್ದಿರುತ್ತದೆ. ಇದಿಲ್ಲದೆ ಹೋದರೆ, ಮೇಲ್ಕಂಡ ಕಾರ್ಯಗಳನ್ನು ಮಾಡುವ ಭಾರವು ಲೋಕಲ್ ಬೋರ್ಡು ಮುನ್ಸಿಪಾಲಿಟಿ ಅಥವಾ ಸ್ಥಾನಿಕ ವಿದ್ಯಾವರ್ಧಕ ಸಂಸ್ಥೆಗಳು ಇವುಗಳ ಮೇಲೆ ಬೀಳುತ್ತದೆ. ಆದರೆ ಇವುಗಳು ಮಾಡುವ ಪ್ರಯತ್ನಗಳಲ್ಲಿ ಪರಸ್ಪರ ಸಹಕಾರಿತೆಯು ಆಗುವುದು ತೊಂದರೆಯುದ್ಧಿರುವುದರಿಂದ ಅವ್ಯವಸ್ಥೆಯು ಉತ್ಪನ್ನವಾಗುತ್ತದೆ. ಇವಲ್ಲದೆ ಈ ಕಾರ್ಯಗಳಿಗೆ ಧನಸಹಾಯವು ಬಹಳಬೇಕು. ಆದರೆ ವಿಶ್ವವಿದ್ಯಾಲಯವನ್ನು ಸ್ಥಾಪಿಸುವದರಿಂದ ಈ ತೆರದ ತೊಂದರೆಗಳು ದೂರಾಗುತ್ತವೆ. ಒಂದು ವೇಳೆ ಮೈಸೂರು ವಿಶ್ವವಿದ್ಯಾಲಯವನ್ನೊಡಗೂಡಿ ಇಡೀ ಕರ್ನಾಟಕಕ್ಕೆ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಶಕ್ಯವಾದರೆ, ಬಹಳ ಉತ್ತಮವು. ಆದರೆ ಮೈಸೂರು ವಿಶ್ವವಿದ್ಯಾಲಯವು ಒಂದು ಸಂಸ್ಥಾನಕ್ಕೆ ಸಂಬಂಧಪಟ್ಟದ್ದಿರುವದರಿಂದ ಅದನ್ನೊಡಗೂಡಿಕೊಂಡು ಒಂದು ಇಡೀ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಿಕ್ಕೆ ಅನೇಕ ತೊಂದರೆಗಳು ಬರುವ ಸಂಭವವದೆ. ಆ ಪಕ್ಷದಲ್ಲಿ ಬ್ರಿಟಿಷ್ ಕರ್ನಾಟಕಕ್ಕಾದರೂ ಒಂದು ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಕರ್ನಾಟಕಸ್ಥರು ಪ್ರಯತ್ನಿಸುವುದು ಅವಶ್ಯವದೆ. ಮತ್ತು ಈ ವಿಶ್ವವಿದ್ಯಾಲಯದವರು ಮೈಸೂರು ವಿಶ್ವವಿದ್ಯಾಲಯದೊಡನೆ ಸಹಕಾರಿತೆಯಿಂದ ವರ್ತಿಸಬಹುದು. (ವಿಶ್ವಕರ್ನಾಟಕ)

(ಮುಂದುವರಿಯುವುದು)

ನೋಟೀಸು.

ಉಪ್ಪಿನಂಗಡಿ ತಾಲೂಕು ಕೊಡಿಂಬಾಡಿ ಗ್ರಾಮದಲ್ಲಿ ಇರುವ ಕೊಡಿಂಬಾಡಿ ಗುತ್ತಿನ ಮಂಜಪ್ಪ ಶೆಟ್ಟಿರ ಅಳಿಯ ಶಾಂತಿರಾಜ ಯಾನೆ ಕಾಂತು ಶೆಟ್ಟಿಯು ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ—

ನನ್ನ ಮಾವ ಮಂಜಪ್ಪ ಶೆಟ್ರ ವಶ ಕುಟುಂಬದ ಬಾಬ್ತು ಕೊಡಿಂಬಾಡಿ, ನರಿಮೊಗರು, ಕಣಿಯೂರು ಇಷ್ಟು ಗ್ರಾಮಗಳಲ್ಲಿ ಸ್ಥಿರಾಸ್ತಿಗಳು ಇರುವುದಲ್ಲದೇ ಸುಮಾರು ರೂ. 25000 ಹೊರಗಿನಿಂದ ಬರತಕ್ಕ ಮೂಲವೂ ಇರುತ್ತದೆ. ಸದರಿ ಮಂಜಪ್ಪ ಶೆಟ್ರಿಗೆ ಈಗ ಸಾಧಾರಣ 88 ವರ್ಷಗಳಷ್ಟು ಪ್ರಾಯ ಆಗಿ ಬುದ್ಧಿಸಾಮರ್ಥ್ಯ ಕಡಿಮೆ ಆಗಿಯದೆ. ಈಗ ಸುಮಾರು 1½ ವರ್ಷದಿಂದ ಅವರಿಗೆ ಕಾಲಿನಲ್ಲಿ ಒಂದು ಹುಣ್ಣಾಗಿ ನಡಿಯ ಕೂಡದ ಕಾಯಿಲೆಯಲ್ಲಿದ್ದು ಪರತಂತ್ರರಾಗಿದ್ದಾರೆ. ಶರೀರದಲ್ಲಿರುವ ಕಾಯಿಲೆ ದೆಸೆಯಿಂದಲೂ ಪ್ರಾಯ ಹೆಚ್ಚಾದ ಸಂಗತಿಯಿಂದ ಸಹಾ ಸ್ವತಹಾ ಗ್ರಹಿಸುವ ಸಾಮರ್ಥ್ಯಹೀನರಾಗಿರುತ್ತಾರೆ. ಹೀಗಿದ್ದದ್ದರಿಂದ ಅವರ ಸೇವೆಗಾಗಿ ನಿಲ್ಲಿಸಿದ ಶೇಶಪ್ಪ ಶೇಡಿಮತ್ತರಿಗೆ ಒಳಸಂಚಿಗೆ ಪಡೆದು ಅವರಿಗೆ ಪುಸಲಾಯಿಸಿ ಕರಕೊಂಡುಹೋಗಿ ಕಾಸುಕೊಡದೆ ಇತ್ಯಾಗೆ ಕೆಲವರು ತಮಗೆ ಬೇಕಾದಂತೆ ರಿಕಾರ್ಡುಗಳನ್ನು ಮಾಡಿಸಿಕೊಂಡಿದ್ದಾರೆಂತಲೂ ಇನ್ನು ಕೆಲವರು ಮಾಡಿಸುವುದರಲ್ಲಿ ಸಹಾ ಇದ್ದಾರೆಂತಲೂ ಕೇಳುತ್ತೇನೆ. ಆ ಮಂಜಪ್ಪ ಶೆಟ್ರಿಗೆ ಅಂಥಾ ರಿಕಾರ್ಡುಗಳು ಮಾಡಿಕೊಡುವಷ್ಟರ ಅಗತ್ಯ [illegible] ಇಲ್ಲ, ಹಕ್ಕು ಇರುವುದೂ ಇಲ್ಲಾ. ನಾನು ಅವರ ಖಾಸಾ ಅಳಿಯನಾಗಿ ಆ ಆಸ್ತಿಗಳಿಗೆ ಹಕ್ಕುದಾರನಾಗಿರುತ್ತೇನೆ. [illegible] ಆಸ್ತಿ ವ ಹಣಗಳ ಬಾಬಿನಲ್ಲಿ ಹಿಂದೆ ಮಾಡಿಸಿಕೊಂಡ [illegible] ಇನ್ನು ಮಾಡಿಸಬಹುದಾದ ರಿಕಾರ್ಡುಗಳು ಸಹಾ [illegible] ಬಾಧಿಸುವಂಥವುಗಳಲ್ಲಾ ಎಂಬುದು ಸರ್ವರೂ ತಿಳಿಯಬೇಕು.

ತಾ. 15-5-26. ಶಾಂತಿರಾಜ ಯಾನೆ ಕಾಂತುಶೆಟ್ರ ರುಜು,

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕಳಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀಮಿತ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯೆಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೊಡಲ್ಪಟ್ಟ ಮೂಲಧನವು ರೂ. 300,000—0—0
Reserve and other sinking Funds ,, 288,500-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿಂಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೭ಕ್ಕೆ ೧—೪—೦, ೧೫ ಸೀಸೆಗೆ ೨—೭—೦, ೩೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವರಿಗೆ ಸಮೀಪ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬಟ್ಟಾ ನೋಟು, ಮೆಮೊ ಒಫ್ ಕೊಸ್ಟ್ಸ, ಮೆಮೊರಂಡಮ್ ಒಫ್ ಎಪ್ಪಿಯರೆನ್ಸು, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದುನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ ಎಸ್. ಪಿ. ಆಚಾರ್ಯ ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಹುಂಡಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

"ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್."

ಮನೋಲ್ಲಾಸ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು | ಅಥವಾ | "ಸದಾನಂದ ಕಾಫಿ ಕ್ಲಬ್" ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | ವಜ್ರಾಂಗ-ಬಿಂದು | ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುಶಂಕೆಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ತಿರುಗಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಯು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲ ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆನ್ನಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಕೊಡುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಚಿಕ್ಕೋಡಿ, (ಜಿಲ್ಲಾ ಬೆಳಗಾಂವ.)

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ

— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ವಿನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ನೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ತಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.



ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸ

— ಕೀಲಡ್ಡಿಗೆ ಪದಕ. —

ಈ ಅಡ್ಡಿಗೆಯನ್ನು ರೋಲ್ಡ್ ಗೋಲ್ಡ್ ಎಂಬ ಭಂಗಾರದಲ್ಲಿ ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟುನೋಡಲು ಮುದ್ದಾಗಿರುವಂತೆ ತಯಾರಿಸಿದೆ. ಮತ್ತು ಇದರ ಹರಳನ್ನು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ತಯಾರಿಸಿದೆ. ಇದನ್ನು ಯಾವಾಗಲು ಕಟ್ಟಿಕೊಳ್ಳಲು ಚೆನ್ನಾಗಿರುವದು. ವಿಲ್ಲ ಮುಂತಾದವು ಸೇರಿದರೂ ಕೆಡದು. ಇದರ ಬಣ್ಣವು ಎಂದಿಗೂ ಕೆಡದಂತೆ ಸವರನ್ ಬಂಗಾರದ ಬಣ್ಣಕೊಟ್ಟಿರುವದು. ಶ್ರೀಮಂತರೂ, ಗರೀಬರೂ ಉಪಯೋಗಿಸಲು ಲಾಯಖಾದದ್ದು. ಕ್ರಯ 1ಕ್ಕೆ 4/8.

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ

— ಡಾಬುಗಳು. —

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿ ಹೊಂದಿದ ಕೆಲಸಗಾರರಿಂದ ಬಹುಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ.

ಗೆಜ್ಜೆಡಾಬು 1ಕ್ಕೆ 3—0—0.

— ಇಮಿಟೇಶನ್ ವಜ್ರದ ಬೆಂಡೋಲೆಗಳು. —

ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವುದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7ಕಲ್ಲಿನ ಬಿಳಿಯ ಓಲೆ ಜೊತೆ 3—0—0.
" " ಕೆಂಪುಕಲ್ಲಿನ ಓಲೆ ಜೊತೆ 3—8—0.

ವಿಳಾಸ:—ವೈ. ಎಮ್. ಸ್ವಾಮಿ ಅಂಡ್ ಕೊ,
ಪಾರ್ಕ್ ಟೌನ್, ಮದ್ರಾಸು.

Y. M. SWAMY & Co.,
No. 12, Nainiappa Naicken St.,
P. Town, MADRAS

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಯಂ. ಜಿ. ಯು. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲೋ ಗಳಿಸಿಕೊಳ್ಳ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಕೇರಿಯೋ ಮೂತ್ರಚಲಿಸಿಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 6 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ, ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಆಮ್ಯ ತಾ ಶ್ರ ಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಲಿವರ್ ಮೂವ್‌ಮೆಂಟ್ ವಾಚ್

15 ಮಣಿಗಳಿದ್ದು ರೋಲ್ಡ್‌ಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೆಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇಗೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0. ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. [illegible]-0. ಡಬ್ಬಲ್ ಎ. " " " 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0.
ಟಿಕ್—ಟಾಕ್ ವಾಚ್ 1ರ ಕ್ರಯ " 2—12—0

ಕಂಟ್ಯಾಂಡ್ ಪೆಪರ್ ಕ್ಲಿಸ್ ಟ್ಯಾಮ್‌ಪೀಸ ಹಿತ್ತಾಳೆ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತರದ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered No. M. 498.

ಚಂದಾನಿಣಿಕಯ—ವರ್ಷಕ್ಕೆ ಮುಂಗಡ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲುಹುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೧೧ನೇ ಶುಕ್ರವಾರ ಜೂನ್ ೧೯೨೬. ಸಂಚಿಕೆ ೨೪.

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branch:—COONDAPOOR.
ಶಾಖೆ:—ಕುಂದಾಪುರ.

ನಿಯಮಿತ ಮೂಲಧನ ರೂ. 3,50,000.

ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

ತಾ. 28—2—26ಕ್ಕೆ ತೋರುವ ಸದರಿ ಬ್ಯಾಂಕಿನ ವಹಿವಾಟುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.		ಆಸ್ತಿಪಾಸ್ತಿಗಳು.	
ವಸೂಲಾದ ಮೂಲಧನ	1,80,690—9—11	[illegible] ಕಟ್ಟೋಣ [illegible]	3943—8—0,
ಅವಲ್ಲನ ವ ಇತರ ನಿಧಿಗಳು	75,875—0—0,	ಯೋಗ್ಯಜವಾಬ್ದಾರಿ ಮೇಲೆ ಸಾಲಕೊಟ್ಟದ್ದು	7,68,851-13-8,
ಠೇವಣಾತಿಗಳು	6,30,003-14-3,	ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	25,800—0—0,
ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕೊಡತಕ್ಕದ್ದು	4,700—0—0,	ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು	4,700—0—0,
ಐವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು	40,274—3—11,	ಇತರ ಬಾಬುಗಳು ([illegible])	[illegible]
		ಕೈಯಲ್ಲಿರುವ ಮತ್ತು ಬೇಂಕರರ ಕಡೆ ಕೇಳಿದಾಗ್ಲೆ ಸಿಕ್ಕತಕ್ಕ ಶಿಲ್ಕು ಸಹಾ	15,452—15—11,
ಜುಮ್ಲಾ ರೂ.	8,31,543-12-1	ಜುಮ್ಲಾ ರೂ.	8,31,543-12-1.

ನಿರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸುಂ ಠೇವಣಾತಿಗಳನ್ನೂ ಕಂತು ಠೇವಣಾತಿಗಳನ್ನೂ ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನೂ ಸಾವುಕಾರಿ ಹುಂಡಿಗಳನ್ನೂ, ವಸೂಲುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು,
ಉಡುಪಿ, ತಾ. 28—2—'26.

ನಯಂಪಳ್ಳಿ ಆನಂದರಾವ್, ಸೆಕ್ರೆಟರಿ.

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ದೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ದೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ದೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.
109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರೆಯುವುದು.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ಣಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು — ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ಜೋಪರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು ಹಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ ಯಾ ೪ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.

ಪಿ. ಮನ್ನಾಲಾಲ್, ಡಿಸ್ಟ್ರಿಕ್ಟ್ ವೆಟರ್ ಡಾಕ್ಟರ್, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್ —ಗ್ರಂಥಕರ್ತರು.

ಇವರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಆಂಡ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ದೈಲು ಬಿರ್ಚಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ಚಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ
ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲ 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

11 ಮಣಿಗಳಿದ್ದು ಬ್ರಿಜ್ ಮ್ಯೂಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8
18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ದಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ, ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಕ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕಾರ್ ಆಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಜ್ವರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೩—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ಕಾರಿನಪತ್ರ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್,
Sayani Road, P. O. Cadell Road, Bombay, No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

The Canara Pubic Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇವರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯೆ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂವತ್ಸರದ ಜ್ಯೇಷ್ಠ ಶು॥ ೨ ಶನಿವಾರದಿಂದ ಕ್ಷಯ ಸಂ॥ರದ ಜ್ಯೇಷ್ಠ ಶು॥ ೮ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮಿಥುನ ಕಾರ್ತೆಲ್.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಯೋಗ	ಸೂರ್ಯ ಉ.	ಅಸ್ತ.
12	ಶನಿ	೨	[illegible]	ಆರ್ದ್ರಾ	[illegible]	[illegible]	6. 5	6.55
13	ರವಿ	೩	[illegible]	ಪುನರ್ವಸು	[illegible]	[illegible]	6. 6	6.55
14	ಸೋಮ	೪	[illegible]	ಪುಷ್ಯಾ	[illegible]	[illegible]	6. 6	6.55
15	ಕುಜ	೫	[illegible]	ಆಶ್ಲೇಷಾ	[illegible]	೧	6. 6	6.56
16	ಬುಧ	೬	[illegible]	ಮಘಾ	[illegible]	[illegible]	6. 6	6.56
17	ಗುರು	೭	[illegible]	ಪುಬ್ಬಾ	[illegible]	[illegible]	6. 6	6.56
18	ಶುಕ್ರ	೮	[illegible]	ಉತ್ತರಾ	[illegible]	[illegible]	6 6	6.56

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
4	94—0	79—6	—	—
5	93—4	72—7	1—28	—
6	89—8	72—3	0—43	—
7	91—8	77—3	1—05	—
8	90—1	77—3	0—33	—
9	86—5	75—7	0—74	—
10	85—8	74—3	2—68	6—51

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮುಸ್ಯಾ?	9— 0	9— 8
ಹೊಸ ಗುಡ್ಡು	8— 8	9— 0
ಸುಗ್ಗಿ	8— 6	8—12
ಅನ್ನರ್ ಬೆಳ್ತಿಗೆ	8— 0	9— 6
ರಂಗೂನು ಬೆಳ್ತಿಗೆ ಗೋಣಿ ೧	14— 8	15— 0
ಗೋಧಿ ಗೋಣಿ ೧ಕ್ಕೆ	18— 0	20— 0
ಹುರುಳಿಗೋಣಿ ೧ಕ್ಕೆ	8— 8	9— 8
[illegible] ೧ಕ್ಕೆ	13— 0	14— 8
[illegible] ೧ಕ್ಕೆ	16— 0	16— 8
ತೊಗರಿಬೇಳೆ ಗೋಣಿ ೧ಕ್ಕೆ	19— 0	26— 0
ಉದ್ದುಗೋಣಿ ೧ಕ್ಕೆ	16— 8	17— 0
[illegible] ೧ಕ್ಕೆ	16— 0	17— 8
[illegible] ೧ಕ್ಕೆ	65— 0	70— 0
[illegible] ಗೋಣಿ ೧ಕ್ಕೆ	5— 8	5—12
[illegible] ಖಂಡಿ ೧ಕ್ಕೆ	96— 0	100— 0
[illegible] ಖಂಡಿ ೧ಕ್ಕೆ	34— 8	35— 0
[illegible] ಖಂಡಿ ೧ಕ್ಕೆ	45— 0	47— 8
[illegible] ಮುಡಿ ೧ಕ್ಕೆ	7— 8	8— 8
[illegible] ಮುಡಿ ೧ಕ್ಕೆ	7— 8	9— 0
[illegible] ೧ಕ್ಕೆ	8-12-0	—
[illegible] ಮುಡಿ ೧ಕ್ಕೆ	5— 4	—
[illegible] ಮುಡಿ ೧ಕ್ಕೆ	6—12	7— 0
[illegible] ಮುಡಿ ೧ಕ್ಕೆ	9— 4	9— 4
[illegible] ಮುಡಿ ೧ಕ್ಕೆ	5— 4	5— 8
[illegible] ಖಂಡಿ ೧ಕ್ಕೆ	385— 0	400— 0
[illegible] ಖಂಡಿ ೧ಕ್ಕೆ	300— 0	310— 0
[illegible] ಖಂಡಿ ೧ಕ್ಕೆ	195— 0	220— 0
[illegible] ಖಂಡಿ ೧ಕ್ಕೆ	360— 0	—
[illegible] ಮುಡಿ ೧ಕ್ಕೆ	58— 0	64— 0
[illegible] ಮುಡಿ ೧ಕ್ಕೆ	4— 0	4— 4
[illegible] ಖಂಡಿ ೧ಕ್ಕೆ	45— 0	65— 0
[illegible] ಮುಡಿ ೧ಕ್ಕೆ	16— 4	16—12
[illegible] ಮುಡಿ ೧ಕ್ಕೆ	21— 0	—
[illegible] ೧ಕ್ಕೆ	18—10	
[illegible] ಮುಡಿ ೧ಕ್ಕೆ	16— 8	
[illegible]	13— 9	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರಿವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

ಅಪೂರ್ವ ಸಂದರ್ಭ.

ಉತ್ತಮ ಮ್ಯಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್. ಮುಂಬಯಿ.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,
ಮಂಗಳೂರು.

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18 ಮೊಳ ಉದ್ದವೂ, 2½ ಮೊಳ ಅಗಲವೂ ಇದೆ. ಈ ಸೀರೆಗಳನ್ನು ಹಸನಾದ ಇಮಿಟೇಷನ್ ಸಿಲ್ಕ ಗಟ್ಟಿ ದಾರದಿಂದ ತಯಾರಿಸಿದೆ. ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವುದಲ್ಲದೆ ಅಂದವಾದ ಅಂಚು, ಸುಂದರವಾದ ಸಾಚಾ ರೇಷ್ಮೆಯ ಸೆರಗೂ ಇರುವದು. ಈ ಮಾದರಿ ಸೀರೆಗಳು ಬೇರೆ ಯಾರಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರದು. ಈ ಸೀರೆಗಳು ಶ್ರೀಮಂತರೂ, ಗರೀಬರೂ, ಉಡಲಿಕ್ಕೆ ಬಹು ಚಲೋದಾದವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಆದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ರೂ. 7—8—0.

ಇಂದ್ರಿಯಸ್ತಂಭನ ಗುಳಿಗೆ.

ಈ ಅದ್ಭುತವಾದ ಮಾತ್ರೆಯನ್ನು ನುಂಗುವದಕ್ಕೆ ಒಂದು ಗಂಟೆಯ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತುವೃದ್ಧಿಯೂ ಗಟ್ಟಿಯಾಗುವುದು. ಈ ಔಷಧವನ್ನು ತಿಂದು 1 ಗಂಟೆಯ ಕಾಲ ಕಳೆದು ಸಂಭೋಗ ಮಾಡಿದರೆ, ಬೇಗನೆ ಸ್ಖಲನವಾಗದೆ ಶಕ್ತಿಯನ್ನು ಕೊಡುವುದು. ತರಿಸಿ ಪರೀಕ್ಷಿಸಿರಿ, ಕ್ರಯ ಡಬ್ಬಿ 1ಕ್ಕೆ ರೂ. 1—6—0.

ವಿಳಾಸ:— ಎಸ್. ಆರ್. ಕೃಷ್ಣ ಅಂಡ್ ಕೋ,
ನಂ. ೧, ಪಟ್ಟುನ್ನಾಳನ ಬೀದಿ,
ಸೈ. ಪು. ಮದ್ರಾಸ್.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು—

ಸರ್ವಿಸಿನ ಹೆಸರು.	ತಲಪುವ ಸ್ಥಳ.	ಹೊರಡುವ ಘಂಟೆ.
ಜನರಲ್	ಕಾರ್ಕಳ—ಆಗುಂಬೆ—ತೀರ್ಥಹಳ್ಳಿ	ಪೂ. 6¼
ಸಿ. ಪಿ. ಸಿ.	ಉಡುಪಿ—ಕುಂದಾಪುರ—ಬೈಂದೂರು	,, 6¾, 9¾
	ಉಡುಪಿ	ಮ. 12½
	ಮುಲ್ಕಿ ವರೆಗೆ ಮಾತ್ರ	ಅ. 3¾
	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ	
	ಕಾರ್ಕಳ—ಮೂಡಬಿದರೆಯಿಂದ	ಪೂ. 7, ಮ. 1
	ಬಂಟ್ವಾಳಕ್ಕೆ ಮಾತ್ರ	,, 10¾, ಅ. 4½
	ಪುತ್ತೂರು—ಸಂಪಾಜೆ—ಮಡಿಕೇರಿ	,, 7½
	ಪುತ್ತೂರು	ಪೂ. 10½ ಅ. 2
ಕಾರ್ಕಳ	ಕಾರ್ಕಳ—ಉಡುಪಿ—ಕುಂದಾಪುರ	ಪೂ. 6
	ಕಾರ್ಕಳಕ್ಕೆ ಮಾತ್ರ.	ಅ. 1
ಹನುಮಾನ್	ಕಾರ್ಕಳ—ಉಡುಪಿ—ಕುಂದಾಪುರ	ಪೂ. 7
	ಕಾರ್ಕಳಕ್ಕೆ ಮಾತ್ರ.	ಮ. 12
ಶಂಕರ್ ವಿಟ್ಠಲ್	ಪುತ್ತೂರು—ಮಡಿಕೇರಿಗೆ	ಪೂ. 7
	ಪುತ್ತೂರು—ಉಪ್ಪಿನಂಗಡಿ	ಅ. 1½
	ವಿಟ್ಲಕ್ಕೆ	ಪೂ. 8, ಅ. 2½
	ಉಡುಪಿ	ಪೂ. 7½ ಅ. 1½
ಸ್ಟಾರ್	ಮುಲ್ಕಿ—ಉಡುಪಿ.	,, 7, ಮ. 1
	ಬಂಟ್ವಾಳ	,, 10½, ಅ. 4½
ಇಂಡಿಯನ್	ಮುಲ್ಕಿ—ಉಡುಪಿ,	,, 6½, ಮ. 12½
ಪೂರ್ಣಲಕ್ಷ್ಮಿ	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ	ಪೂ. 7½ ಮ. 12½

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಪಂಪವೆಲ್ಲಿಯಿಂದಲೂ ಹೊರಡುವವು.

ರೈಲುಮಾರ್ಗವಾಗಿ—

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲ್	ಬೆಳಿಗ್ಗೆ 8-5	ಸಂಜೆ 5-25
ಲೋಕಲ್	,, 9-45	ರಾತ್ರಿ 10-40
ಪಾಸ್ಸೆಂಜರ್	ಮಧ್ಯಾಹ್ನ 12-30	ಮಧ್ಯಾಹ್ನ 2-40
ಶಟಲ್	ಸಂಜೆ 5-40	ಬೆಳಿಗ್ಗೆ 9-25

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾ ರ ಪ ತ್ರಿ ಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. ೩-0-0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	,, 2-8-0.
,, ಸ್ಥಳೀಕರಿಗೆ ...	,, 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪ್ರತಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 9 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2½ ಮಳ ಅಗಲ ರೂ. 5 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಷ್ಮೆ ಮಡಿಗಳು, ಜಾಮ್ದಾನಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

೧೨ನೇ ಕರ್ಣಾಟಕ ಸಾಹಿತ್ಯ ಪರಿಷತ್ತು.

[ಅಧ್ಯಕ್ಷರಾದ ಶ್ರೀ ರಾವ್ ಸಾಹೇಬ್ ಪಿ. ಜಿ. ಹಳಕಟ್ಟಿಯವರ ಭಾಷಣದ ಮುಖ್ಯ ಭಾಗಗಳು]

(ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು).

ಈ ಮೇರೆಗೆ ಕರ್ಣಾಟಕ ವಾಙ್ಮಯವನ್ನು ನಮ್ಮ ಶಿಕ್ಷಣ ಸಂಸ್ಥೆಗಳ ದ್ವಾರಾ ಪ್ರಕಟಮಾಡಬೇಕಾದರೆ ಕೆಲವು ಸ್ಥಾಪಿತ ತೊಂದರೆಗಳು ಇರುತ್ತವೆ. ಇವುಗಳನ್ನು ನಾವು ದೂರಮಾಡಲಿಕ್ಕೆ ಯತ್ನಿಸಲಿಕ್ಕೆ ಬೇಕು. ಇವುಗಳಲ್ಲಿ ಮಹತ್ವವಾದ ಕೆಲವುಗಳನ್ನು ಇಲ್ಲಿ ವಿವರಿಸುತ್ತೇವೆ.

ಕರ್ಣಾಟಕದ ಅನೇಕ ಭಾಗಗಳಲ್ಲಿ ಕನ್ನಡ ಶಾಲೆಗಳಿರುವುದಿಲ್ಲ. ಇದರಿಂದ ಕರ್ಣಾಟಕ ವಿದ್ಯಾಪ್ರಸಾರಕ್ಕೆ ತೊಂದರೆಯುಂಟಾದಾಗಿರುತ್ತದೆ.

ಕರ್ಣಾಟಕದ ಅನೇಕ ಭಾಗಗಳಲ್ಲಿ ಪ್ರಾಥಮಿಕ ಕನ್ನಡಶಾಲೆಗಳಿಲ್ಲ.

ಈ ತರದ ಸ್ಥಿತಿಯು ಇನ್ನೂ ವರೆಗೂ ಇರುವದೆಂದರೆ, ಇದು ನಮ್ಮ ಕರ್ಣಾಟಕದ ಹೀನದೆಶೆಯನ್ನು ತೋರಿಸುತ್ತದೆ. ಈ ಪ್ರಕಾರ ಸುಮಾರು ೨೦ ಲಕ್ಷ ಕನ್ನಡಿಗರು ಸ್ವಭಾಷೆಯನ್ನು ಕಲಿಯದೆ ಪರಭಾಷೆಯನ್ನು ಕಲಿಯುತ್ತಲಿದ್ದಾರೆ. ಈ ಸ್ಥಿತಿಯು ಈ ಕೆಳಗೆ ಕಾಣಿಸಿದ ಭಾಗಗಳಲ್ಲಿ ತೋರಿಬರುತ್ತದೆ.

ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳು.

ಮಿರಜ, ಸಾಂಗಲಿ, ಕೋಲ್ಹಾಪುರ, ಮುಧೋಳ, ಅಕ್ಕಲಕೋಟ ಜತ್ತ ಮೊದಲಾದ ಸಂಸ್ಥಾನಗಳಲ್ಲಿ ಕನ್ನಡಿಗರು ಬಹು ಸಂಖ್ಯಾತರಿದ್ದರೂ ಅಲ್ಲಿ ಕನ್ನಡ ಕಲಿಸುವ ಶಾಲೆಗಳೇ ಇಲ್ಲ. ಈ ಸ್ಥಿತಿಯನ್ನು ದೂರ ಮಾಡಲಿಕ್ಕೆ ಸಾಹಿತ್ಯ ಪರಿಷತ್ತಿನವರೂ ಮೊದಲಿನಿಂದಲೂ ಪ್ರಯತ್ನಿಸುತ್ತಲಿರುವರು. ಆದರೆ ಇನ್ನು ಅವರಿಗೆ ಯಶಸ್ಸು ದೊರೆತಿರುವದಿಲ್ಲ. ಈ ವಿಷಯವಾಗಿ ನಾವು ಮತ್ತಿಷ್ಟು ಹೆಚ್ಚಿಗೆ ಪ್ರಯತ್ನಿಸತಕ್ಕದ್ದು.

ಕೊಲ್ಹಾಪುರದಲ್ಲಿ.

ಈ ಜಿಲ್ಲೆಯಲ್ಲಿ ಒಂದು ತಾಲೂಕು ಸಂಪೂರ್ಣ ಕನ್ನಡವಿರುತ್ತದೆ, ಹೇಗಾದರೂ ಅಲ್ಲಿ ಸಹ ಒಂದು ಕನ್ನಡ ಶಾಲೆ ಇರುವದಿಲ್ಲ. ಇನ್ನು ಮೇಲೆ ಇಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣವು ಪ್ರಾರಂಭವಾಗುವದಿದ್ದು, ಅಲ್ಲಿಯ ಕನ್ನಡಿಗರಿಗೆ ಮರಾಠೀ ಶಿಕ್ಷಣವು ಒತ್ತಾಯದಿಂದ ಪ್ರಾರಂಭಿಸಲ್ಪಡುವದಿದೆ. ಇದು ಅಲ್ಲಿಯ ಕನ್ನಡಿಗರಿಗೆ ಅತ್ಯಂತ ಹಾನಿಕಾರಕವಾಗಿ ಪರಿಣಮಿಸದೆ ಇರಲಾರದು. ಆದ್ದರಿಂದ ಈ ಸ್ಥಿತಿಯು ಒದಗದಂತೆ ನಾವು ಯತ್ನಿಸಲೇ ಬೇಕು.

ಹೈದರಾಬಾದ ಸಂಸ್ಥಾನ.

ಈ ಭಾಗದಲ್ಲಿ, ಗುಲಬುರ್ಗಿ ಬೀದರ ಮೊದಲಾದ ಜಿಲ್ಲೆಗಳಲ್ಲಿ ಕನ್ನಡ ಭಾಷೆಯು ಪ್ರಚಲಿತವಿದ್ದರೂ ಅಲ್ಲಿ ಕನ್ನಡ ಶಾಲೆಗಳಿಲ್ಲ. ಆದ್ದರಿಂದ ಇತ್ತಲಾಗಿ ಕನ್ನಡ ಶಾಲೆಗಳಾಗುವಂತೆ ನಾವು ಯತ್ನಿಸತಕ್ಕದ್ದು.

ಮದ್ರಾಸ ಇಲಾಖೆ.

ಇದೇ ಮೇರೆಗೆ ಮದ್ರಾಸ ಇಲಾಖೆಯ ಬೇರೆ ಬೇರೆ ಭಾಗಗಳಲ್ಲಿ ವಾಸಿಸುವ ಕನ್ನಡಿಗರಿಗೆ ಸ್ವಭಾಷೆಯು ಕಲಿಸಲ್ಪಡದೆ ಪರಭಾಷೆಗಳು ಕಲಿಸಲ್ಪಡುತ್ತಲಿವೆ. ಈ ದುಸ್ಥಿತಿಯನ್ನು ಹೋಗಲಾಡಿಸಲು ನಾವು ಪ್ರಯತ್ನಿಸಲಿಕ್ಕೆ ಬೇಕು.

ಕನ್ನಡಭಾಷೆ ಪ್ರಸಾರಕಾರ್ಯಕ್ಕೆ ಇದೊಂದು ಎರಡನೇ ತೊಂದರೆ ಇರುತ್ತದೆ. ಮೇಲ್ಕಂಡ ಭಾಗಗಳಲ್ಲಿಯ ಸರಕಾರಿ ಕಾಗದಪತ್ರಗಳು ಬೇರೆ ಬೇರೆ ಭಾಷೆಗಳಲ್ಲಿ ನಡೆಯುತ್ತಿರುವದರಿಂದ ಕನ್ನಡಭಾಷೆಯ ಪ್ರಸಾರಕ್ಕೆ ಆ ದೊಡ್ಡ ಆತಂಕವು ಬರುತ್ತದೆ. ಆದ್ದರಿಂದ ಕನ್ನಡವಿಲ್ಲದ್ದು. ಈ ಸರಕಾರದವರು ತಮ್ಮ ಭಾಗಗಳಲ್ಲಿ ತಮ್ಮ ದಫ್ತರುಗಳನ್ನು ಕನ್ನಡದಲ್ಲಿ ಇಡಲಿಕ್ಕೆ ನಾವು ಪ್ರಯತ್ನಿಸತಕ್ಕದ್ದು. ಈ ವ್ಯವಸ್ಥೆಯು ಆದರೆ, ಈ ಭಾಗಗಳಲ್ಲಿ ಕನ್ನಡ ಶಾಲೆಗಳೂ ತೀವ್ರವಾಗಿ ಆಗಲಿಕ್ಕೆ ಬಹಳ ಅನುಕೂಲವಾಗುತ್ತದೆ.

ಕೆಲವು ಜಿಲ್ಲೆಗಳಲ್ಲಿ ಬೇರೆಬೇರೆ ಭಾಷೆಗಳನ್ನಾಡುವವರಿರುವದರಿಂದ ಕನ್ನಡ ಶಾಲೆಗಳನ್ನು ಸ್ಥಾಪಿಸಲು ತೊಂದರೆಯಾಗುತ್ತದೆ. ಆದ್ದರಿಂದ

ಜಿಲ್ಲೆಗಳ ಪುನರ್ಘಟನೆ.

ಭಾಷಾನುಗುಣವಾಗಿ ಜಿಲ್ಲೆಗಳ ಪುನರ್ಘಟನೆಯಾಗುವದು ಅವಶ್ಯವಾಗಿರುವದು. ಒಂದು ಜಿಲ್ಲೆಯಲ್ಲಿ ಒಂದೇ ಭಾಷೆಯು ಇದರಿಂದ ಅಲ್ಲಿ ಬೇರೆಬೇರೆ ಭಾಷೆಗಳನ್ನಾಡುವವರಲ್ಲಿ ಅನಾವಶ್ಯಕ ಕಿರ್ಕಿಟವು ಉತ್ಪನ್ನವಾಗಿರುತ್ತದೆ. ಆದ್ದರಿಂದ ಈ ಸ್ಥಿತಿಯು ಇದ್ದಂಥ ಜಿಲ್ಲೆಗಳಲ್ಲಿ ಒಂದು ಭಾಷೆಯನ್ನಾಡತಕ್ಕಂತವರನ್ನು ಒಕ್ಕಟ್ಟಿಗೆ ಸೇರಿಸಿ ಬೇರೆ ಜಿಲ್ಲಾ ಸ್ಥಳಗಳನ್ನು ಮಾಡತಕ್ಕದ್ದು. ಉದಾ: ಸಾತಾರಾ ಮತ್ತು ಸೋಲಾಪುರ ಜಿಲ್ಲೆಗಳಲ್ಲಿಯ ಕನ್ನಡ ಗ್ರಾಮಗಳನ್ನು ಅವುಗಳಿಗೆ ಸಮೀಪವಿರುವ ಬೆಳಗಾಂವ ಮತ್ತು ಬಿಜಾಪುರ ಜಿಲ್ಲೆಗಳಿಗೆ ಸೇರಿಸಬಹುದು. ಮತ್ತು ಇದೇ ರೀತಿಯಾಗಿ ಬಳ್ಳಾರಿ ಅನಂತಪುರ ಜಿಲ್ಲೆಗಳಲ್ಲಿಯೂ ದಕ್ಷಿಣಕಡೆಯ ಮದ್ರಾಸ ಇಲಾಖೆಯ ಕನ್ನಡ ಭಾಗಗಳಲ್ಲಿಯೂ ಯೋಗ್ಯ ವ್ಯವಸ್ಥೆ ಮಾಡಿ ಒಂದು ಭಾಷೆಯನ್ನಾಡುವ ಜನರನ್ನು ಒಕ್ಕಟ್ಟಿಗೆ ಸೇರಿಸಿ ಹೊಸ ಜಿಲ್ಲೆಗಳನ್ನು ರಚಿಸತಕ್ಕದ್ದು. ಇದರಿಂದ ಕನ್ನಡ ಶಾಲೆಗಳನ್ನು ಸ್ಥಾಪಿಸಲಿಕ್ಕೂ ಕಚೇರಿಗಳಲ್ಲಿ ಕನ್ನಡ ಕಾಗದಪತ್ರ ಇಡಲಿಕ್ಕೂ ಅನುಕೂಲವಾಗುವದು. ಈ ಬಗ್ಗೆ ಆಯಾ ಪ್ರಾಂತದ ಕಾಯಿದೇ ಕೌನ್ಸಿಲ್ಲಿನ ಮೆಂಬರರು ತಮ್ಮ ತಮ್ಮ ಕೌನ್ಸಿಲುಗಳಲ್ಲಿ ಯತ್ನಿಸತಕ್ಕದ್ದು.

ಕರ್ಣಾಟಕದ ರಾಜಕೀಯ ಏಕೀಕರಣ.

ಕರ್ಣಾಟಕದ ಏಕೀಕರಣವು ಭಾಷಾದೃಷ್ಟಿಯಿಂದ ಬಹುಮಹತ್ವದಿರುತ್ತದೆ. ಇದು ಕೈಗೂಡಿದರೆ ಕನ್ನಡ ಭಾಷೆಯನ್ನು ಊರ್ಜಿತ ಸ್ಥಿತಿಗೆ ತರುವ ಮಾರ್ಗಗಳು ಬಹು ಸುಲಭವಾಗುವವು. ಈ ಪ್ರಯತ್ನಕ್ಕೆ ಪೋಷಕವಾಗುವಂತೆ ನಾವು ಪ್ರಯತ್ನಿಸತಕ್ಕದ್ದು. ಆದರೆ ಈ ವಿಷಯವು ವಿಶೇಷವಾಗಿ ರಾಜಕೀಯವಿರುವುದರಿಂದ ಈ ಬಗ್ಗೆ ನಾನು ಇಲ್ಲಿ ಹೆಚ್ಚಿಗೆ ಪ್ರಸ್ತಾಪಿಸುವುದಿಲ್ಲ.

ಈ ರೀತಿಯಿಂದ ನಾವು ಪ್ರಯತ್ನಿಸಿದರೆ ಬೇರೆ ಬೇರೆ ಭಾಗಗಳಲ್ಲಿ ವಾಸಿಸುತ್ತಲಿರುವ ಕನ್ನಡಿಗರಲ್ಲಿ ಕರ್ಣಾಟಕತ್ವದ ಉಜ್ವಲ ಭಾವವು ಹೆಚ್ಚುತ್ತ ಹೋಗುವದು. ಮತ್ತು ಎಲ್ಲಾ ಕಡೆಗೂ ಕನ್ನಡಭಾಷೆಯನ್ನು ಪ್ರವೃದ್ಧಿಸ್ಥಿತಿಗೆ ತರುವುದಕ್ಕೆ ತಕ್ಕ ಪರಿಸ್ಥಿತಿಯು ಉಂಟಾಗುವದು. ಮತ್ತು ಇದರಿಂದ ಕರ್ಣಾಟಕದ ವಾಙ್ಮಯದ ಬೆಳವಣಿಗೆಯೂ ತೀವ್ರವಾಗಿ ಆಗಹತ್ತುವದು.

ಈ ಕಾರ್ಯವು ಬಹಳ ಮಹತ್ವದ್ದದೆ. ಕರ್ಣಾಟಕಸ್ಥರಲ್ಲಿ ಕರ್ಣಾಟಕತ್ವದ ಬಗ್ಗೆ ಅಭಿಮಾನ ಮತ್ತು ಪ್ರೀತಿಯು ಹುಟ್ಟಲಿಕ್ಕೆ ಈ ತರದ ಪ್ರಯತ್ನಗಳು ಬಲವಾಗಿ ನಡಿಯಲಿಕ್ಕೆ ಬೇಕು. ಈ ಕಾರ್ಯಕ್ಕೆ ವಿಶೇಷ ಉತ್ತೇಜನ ಕೊಡುವದು ಎಲ್ಲಾ ಕರ್ಣಾಟಕಸ್ಥರ ಕರ್ತವ್ಯ.

ಕರ್ಣಾಟಕದ ಪ್ರಾಚೀನ ಸಂಸ್ಕೃತಿಯನ್ನು ಪರಿಶೋಧಿಸುವದು.

ವಾಗಿರುತ್ತದೆ. ಆದರೆ ಈ ತರದ ಪರಿಶೋಧನೆಯ ಕಾರ್ಯಗಳು ನಮ್ಮಲ್ಲಿ ಭರದಿಂದ ಸಾಗಿಲ್ಲ. ಮೈಸೂರ ಸರಕಾರದವರು ಈ ಬಗ್ಗೆ ಒಂದು ಸ್ವತಂತ್ರ ಖಾತೆಯನ್ನು ಏರ್ಪಡಿಸಿರುವರು. ಆದರೆ ಅದರಂತೆ ಬೇರೆ ಭಾಗಗಳಲ್ಲಿಯ ಸರಕಾರದವರು ಸಾಕಷ್ಟು ಲಕ್ಷ ಪೂರೈಸಿರುವುದಿಲ್ಲ. ಇದರ ಸಲುವಾಗಿ ನಾವು ಅವರನ್ನು ಒತ್ತಾಯಪಡಿಸುವುದು ಅವಶ್ಯವಿದೆ. ಅದರಂತೆಯೇ ನಮ್ಮಲ್ಲಿಯ ಸಂಶೋಧಕರೂ ಒಕ್ಕಟ್ಟಿಗೆ ಸೇರಿ ತಮ್ಮ ಮಂಡಲಗಳನ್ನು ಸ್ಥಾಪಿಸಿ ಈ ಕಾರ್ಯವನ್ನು ಮಾಡತಕ್ಕದ್ದು. ಸಂಶೋಧನ ಕಾರ್ಯವು ಈ ವಿಷಯದಲ್ಲಿ ಪ್ರೀತಿಯುಳ್ಳ ಜನರಿಂದ ಹೇಗೆ ತೃಪ್ತಿಕರವಾಗಿ ಜರಗಬಹುದೋ ಹಾಗೆ ಸರಕಾರೀ ಅಮಲದಾರರಿಂದ ಆಗಲಾರದು. ನಮ್ಮ ದೇಶದಲ್ಲಿ ಅಸಂಖ್ಯ ಶಿಲಾಶಾಸನಗಳೂ ತಾಮ್ರಪಟಗಳೂ ಇರುತ್ತವೆ. ಅವುಗಳನ್ನು ಸಂಶೋಧಿಸಿ ಕರ್ಣಾಟಕ ಇತಿಹಾಸದ ನಿಜವಾದ ಸಂಗತಿಗಳನ್ನು ಹೊರಗೆಡಹುದು ನಮ್ಮ ಕರ್ತವ್ಯವಾಗಿದೆ. ಈ ಕಾರ್ಯವನ್ನು ಫ್ಲೀಟ್ಸ್ ಮತ್ತು ಪ್ರಾಕ್ಟನ್ ವಿಮರ್ಶನ್ ರಾ| ಬ| ಆರ್. ನರಸಿಂಹಾಚಾರ್ಯ ಇವರ ಹೊರತಾಗಿ ಬೇರೆ ನಮ್ಮ ಸುಶಿಕ್ಷಿತರು ವಿಶೇಷವಾಗಿ ಮನಸು ಹಾಕಿರುವುದಿಲ್ಲ. ಇಂಥ ವಿಷಯಗಳ ಬಗ್ಗೆ ಮಹಾರಾಷ್ಟ್ರಿಗರೂ, ತಮಿಳರೂ ಹೆಚ್ಚಾಗಿ ಲಕ್ಷವನ್ನು ಪೂರೈಸಿ ತಮ್ಮ ಇತಿಹಾಸವನ್ನು ಹೊರಗೆಡಹತ್ತಿದ್ದಾರೆ. ಅವರ ಅನುಕರಣವನ್ನು ನಾವು ಮಾಡತಕ್ಕದ್ದು.

ಇದರಂತೆಯೇ ನಾವು ನಮ್ಮ ಪ್ರಾಚೀನ ವಾಙ್ಮಯ ಶೋಧದಲ್ಲಿಯೂ ತೊಡಗುವದು ಅವಶ್ಯವಿದೆ. ಜೈನರ ಅಸಂಖ್ಯ ಗ್ರಂಥಗಳು ಇನ್ನೂ ಶೋಧಿಸಲ್ಪಟ್ಟಿಲ್ಲ. ವೀರಶೈವರ ಗ್ರಂಥಸಂಗ್ರಹವಾದರೂ ಅಪಾರವಾದದ್ದದೆ. ಇದೂ ಇನ್ನೂ ಹೊರಗೆಡವಲ್ಪಟ್ಟಿಲ್ಲ. ವೈಷ್ಣವದಾಸರೂ, ಸಾಧುಗಳೂ ನಮ್ಮ ದೇಶದಲ್ಲಿ ಅಸಂಖ್ಯಾವಾಗಿದ್ದಾರೆ. ಅವರ ಕೃತಿಗಳು ಇನ್ನೂ ಪ್ರಸಿದ್ಧಿಸಲ್ಪಟ್ಟಿಲ್ಲ. ಈ ಮಹಾನುಭಾವರೆಲ್ಲರೂ ಕರ್ಣಾಟಕದಲ್ಲಿ ಮಹತ್ವದ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಯನ್ನು ಮಾಡಿರುತ್ತಾರೆ. ಈ ವಾಙ್ಮಯವನ್ನು ಆಯಾ ಪಂಗಡದವರು ಅಂದರೆ ಜೈನ, ಲಿಂಗಾಯತ, ಮತ್ತು ಬ್ರಾಹ್ಮಣ ಸಮಾಜದವರು ಪ್ರಸಿದ್ಧಗೊಳಿಸುವ ಕಾರ್ಯವನ್ನು ಕೈಕೊಂಡರೆ ಈ ಕಾರ್ಯವು ಶೀಘ್ರವಾಗಿ ನೆರವೇರುವದು.

ಈ ಮೇರಿಗೆ ಪ್ರಾಚೀನ ಗ್ರಂಥಭಾಂಡಾರವನ್ನು ಹೊರಗೊಡುವುದಲ್ಲದೆ, ಈಗಿನ ಕಾಲ ಪರಿಸ್ಥಿತಿಗೆ ಅನುಸರಿಸಿ ಹೊಸ ಗ್ರಂಥಗಳನ್ನು ರಚಿಸಲಿಕ್ಕೆ ಕನ್ನಡ ಗ್ರಂಥಕಾರರು ಯತ್ನಿಸತಕ್ಕದ್ದು. ನಮ್ಮ

3 ಗ್ರಂಥರಚನಾ ಕಾರ್ಯಗಳು.

ಪ್ರಾಚೀನ ವಾಙ್ಮಯವು ಧಾರ್ಮಿಕವಾಗಿರುತ್ತದೆ. ಆದರೆ ಈಗಿನಕಾಲಕ್ಕೆ ವ್ಯವಹಾರಿಕ ವಾಙ್ಮಯವನ್ನು ಪ್ರಕಟಿಸುವದು ಅವಶ್ಯವಿದೆ. ಈಗಿನ ಹೊಸ ನಾಗರೀಕತೆಯ ಅರಿವನ್ನು ಬಹುಜನಸಮಾಜದಲ್ಲಿ ಮಾಡಿಕೊಡುವದು ನಮ್ಮ ಕರ್ತವ್ಯವಿರುತ್ತದೆ. ಈ ಕಾರ್ಯವನ್ನು ಹಿಂದೂಸ್ಥಾನದ ಬೇರೆಬೇರೆ ಭಾಗದವರು ಬಹು ಒತ್ತಾಯದಿಂದ ನಡಿಸಿದ್ದಾರೆ. ಮರಾಠಿ, ಗುಜರಾಥಿ, ಬಂಗಾಲಿ, ತೆಲುಗು, ಹಿಂದೀ ಮೊದಲಾದ ಭಾಷೆಗಳಲ್ಲಿ ಪ್ರತಿವರ್ಷ ಸಾವಿರಾರು ಗ್ರಂಥಗಳು ಹೊರಡುತ್ತವೆ. ಇವುಗಳ ಸಂಖ್ಯೆಗೂ ಕನ್ನಡದಲ್ಲಿ ಹೊರಡುವ ಗ್ರಂಥಗಳ ಸಂಖ್ಯೆಗೂ ತುಲನೆ ಮಾಡಿದರೆ, ಪ್ರತಿಯೊಬ್ಬ ಕನ್ನಡಿಗನು ಲಜ್ಜೆಯಿಂದ ತನ್ನ ತಲೆಯನ್ನು ಕೆಳಗೆ ಮಾಡಬೇಕಾಗುತ್ತದೆ. ಕನ್ನಡಿಗರು ಬೇರೆ ಭಾಷೆಗಳ ಬಲವುಗಳಿಗೆ ಒಳಗಾಗಿ ಸಿಕ್ಕಿರುವುದೇ ಈ ಅವನತಿಗೆ ಕಾರಣವಾಗಿರುವದು. ಇದಲ್ಲದೆ ಅವರಲ್ಲಿ ಜ್ಞಾನಾರ್ಜನೆಯ ಮತ್ತು ಜ್ಞಾನಪ್ರಸಾರದ ಕಾರ್ಯಗಳು ಹಿಂಕುಹೋಗಿರುತ್ತವೆ. ಈ ಸ್ಥಿತಿಯನ್ನು ನಾವು ದೂರಮಾಡಲಿಕ್ಕೆ ಯತ್ನಿಸತಕ್ಕದ್ದು. ನಮ್ಮಲ್ಲಿ ಕಾದಂಬರಿಗಳು, ನಿಬಂಧಗಳೂ, ರಾಜಕೀಯ ಗ್ರಂಥಗಳೂ, ನಾಟಕಗಳೂ ಬಹಳ ಸ್ವಲ್ಪ ಇರುತ್ತವೆ. ಇಂಥ ಗ್ರಂಥಗಳನ್ನು ನಮ್ಮ ಸುಶಿಕ್ಷಿತರು ಬರೆಯುವದು ಅವಶ್ಯವಿದೆ.

ಹೀಗೆ ಗ್ರಂಥಗಳನ್ನು ಬರೆಯುವ ಕಾರ್ಯದಲ್ಲಿ ಕೆಲವು ತೊಂದರೆಗಳು ಬರುವದುಂಟು. ಅವುಗಳನ್ನು ದೂರಮಾಡಲಿಕ್ಕೆ ನಾವು ವ್ಯವಸ್ಥಿತ ರೀತಿಯಿಂದ ಪ್ರಯತ್ನಿಸುವದು ಅವಶ್ಯವಿದೆ. ಇವುಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ನಾನು ಇಲ್ಲಿ ನಿರ್ದೇಶಿಸುತ್ತೇನೆ.

ಕರ್ಣಾಟಕವು ಬೇರೆಬೇರೆ ಪ್ರಾಂತಗಳಲ್ಲಿ ಹಂಚಿಕೆಯಾಗಿರುವದರಿಂದ, ಅವುಗಳಲ್ಲಿ ಪ್ರಚಲಿತವಿರುವ ಭಾಷೆಗಳಲ್ಲಿಯೂ ಭಿನ್ನತೆಗಳು ತಲೆದೋರಿರುತ್ತವೆ. ಈ ತರದ ಭಿನ್ನತೆಗಳು ಇರುವದರಿಂದ

ಭಾಷಾಭೇದಗಳು.

ಒಂದು ಪ್ರಾಂತದ ಪುಸ್ತಕಗಳು ಬೇರೊಂದು ಕಡೆಗೆ ಪ್ರಸಾರವಾಗುವದಕ್ಕೆ ತೊಂದರೆಯಾಗುತ್ತದೆ. ಈ ಭಿನ್ನತೆಗಳು ಶಬ್ದಪ್ರಯೋಗ ವಾಕ್ಯರಚನೆ ಮತ್ತು ವ್ಯಾಕರಣ ನಿಯಮಗಳಲ್ಲಿ ಸಹ ಕಂಡುಬರುತ್ತವೆ. ಆದ್ದರಿಂದ ಈ ತರದ ಭೇದಗಳನ್ನು ಆದಷ್ಟು ಮಟ್ಟಿಗೆ ನಾವು ದೂರಮಾಡುವದು ಅವಶ್ಯವಿರುತ್ತದೆ. ಈ ಬಗ್ಗೆ ಸಾಹಿತ್ಯಪರಿಷತ್ತಿನ ಪ್ರಾರಂಭಕಾಲದಲ್ಲಿ ಅನೇಕ ಲೇಖಗಳು ಬರೆಯಲ್ಪಟ್ಟಿವೆ. ಮತ್ತು ಪ್ರಯತ್ನಗಳು ಮಾಡಲ್ಪಟ್ಟವು. ಆದರೆ ಈ ವಿಷಯವಾಗಿ ಯಾವ ಮಾರ್ಗಸ್ವರೂಪವು ಇನ್ನುವರೆಗೂ ಮಾಡಲ್ಪಟ್ಟಿರುವದಿಲ್ಲ. ಆದ್ದರಿಂದ ಬೇರೆಬೇರೆ ಪ್ರಾಂತಗಳ ವಿದ್ವಜ್ಜನರು ಒಟ್ಟಿಗೆ ಸೇರಿ, ಇಂಥ ವ್ಯತ್ಯಾಸಗಳನ್ನು ಕಂಡುಹಿಡಿದು ಯೋಗ್ಯರೂಪಗಳನ್ನೂ, ಪ್ರಯೋಗಗಳನ್ನು ನಿಶ್ಚಯಿಸಲಿಕ್ಕೆ ಅವರು ಯತ್ನಿಸಬೇಕು. ಇದರಿಂದ ಈಗ ಕಂಡುಬರುವ ಭಾಷಾಭೇದಗಳು ಕಡಿಮೆಯಾಗುತ ಹೋಗಲು ಆಸ್ಪದವಾಗುತ್ತದೆ.

ಇದರಂತೆಯೇ ವೈಜ್ಞಾನಿಕ ವಿಷಯಗಳಲ್ಲಿ ಬರುವ ಶಬ್ದಗಳ ಸಂಬಂಧವಾಗಿಯೂ ನಾವು ಪ್ರಯತ್ನಿಸತಕ್ಕದ್ದು. ರಸಾಯನಿಕ ಶಾಸ್ತ್ರ, ಉದ್ಭಿಜ ಶಾಸ್ತ್ರ ಮೊದಲಾದ ವಿಷಯಗಳಲ್ಲಿ ಮೇಲಿಂದ ಮೇಲೆ ಬರುವ ಇಂಥ ಶಬ್ದಗಳ ಬಗ್ಗೆ ಕನ್ನಡದಲ್ಲಿ ಯಾವ ಪ್ರತಿಶಬ್ದಗಳನ್ನು ಉಪಯೋಗಿಸಬೇಕೆಂಬುದನ್ನು ನಾವು ನಿಶ್ಚಯಿಸತಕ್ಕದ್ದು. ಈಗಿನ ಕಾಲಕ್ಕೆ ವೈಜ್ಞಾನಿಕ ವಿಷಯಗಳ ಜ್ಞಾನವನ್ನು ಜನಸಮುದಾಯದಲ್ಲಿ ಹಂಚುವದು ಅವಶ್ಯವಾಗಿರುತ್ತದೆ. ಆದ್ದರಿಂದ ಈ ವಿಷಯವಾಗಿಯೂ ನಾವು ಪ್ರಯತ್ನಿಸತಕ್ಕದ್ದು.

ವೈಜ್ಞಾನಿಕ ವಿಷಯಗಳಲ್ಲಿಯ ಶಬ್ದಗಳು.

ಬೇರೆಬೇರೆ ಪ್ರಾಂತಗಳಲ್ಲಿಯ ಅಕ್ಷರ ಬರೆಯುವ ಪದ್ಧತಿಯೂ ಬೇರೆಬೇರೆ ಇರುತ್ತದೆ. ಈ ತರದ ವ್ಯತ್ಯಾಸಗಳು ಕೈಬರಹದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಬಳ್ಳಾರಿಯ ಕಡೆಯ ಅಕ್ಷರಗಳು ಮೈಸೂರಿನವರಿಗೂ, ಮೈಸೂರಿನವರ ಅಕ್ಷರಗಳು ಉತ್ತರ ಕರ್ನಾಟಕಸ್ಥರಿಗೂ ತಿಳಿಯದಂತೆ ಆಗಿರುತ್ತದೆ. ಆದ್ದರಿಂದ ಒಂದು ಲೇಖನಪದ್ಧತಿಯನ್ನು ಗೊತ್ತುಪಡಿಸಿ, ಅದು ಬೇರೆಬೇರೆ ಪ್ರಾಂತಗಳಲ್ಲಿಯ ಶಾಲೆಗಳಲ್ಲಿ ಪ್ರಚಾರದಲ್ಲಿ ಬರುವಂತೆ ನಾವು ಯತ್ನಿಸತಕ್ಕದ್ದು.

ಅಕ್ಷರ ಯೋಜನೆ.

ಈ ಕಾರ್ಯಗಳನ್ನು ನೆರವೇರಿಸಲು ನಾವು ಒಂದು ಸಾಮಾನ್ಯ ಹೊಸ ಗನ್ನಡ ವ್ಯಾಕರಣವನ್ನು ಮಾಡತಕ್ಕದ್ದು. ಅದರಂತೆಯೇ ಒಂದು ಶಬ್ದಕೋಶ ಮತ್ತು ಅಕ್ಷರಬರಹ ಪದ್ಧತಿಯನ್ನು ಏರ್ಪಡಿಸಬೇಕು. ಈ ಕಾರ್ಯವು ಸಕೃದ್ದರ್ಶನಕ್ಕೆ ಕಠಿಣವಾಗಿ ತೋರಬಹುದು. ಆದರೆ ಬೇರೆ ಬೇರೆ ನಾಡಿನ ವಿದ್ವಜ್ಜನರು ಒಕ್ಕಟ್ಟಿಗೆ ಸೇರಿ ಈ ವಿಷಯಗಳನ್ನು ಆಲೋಚಿಸಿದರೆ, ಏಕವಾಕ್ಯತೆಯು ಆಗುವ ಸಂಭವವಿದೆ. ಇದರಿಂದ ಬೇರೆಬೇರೆ ಪ್ರಾಂತದವರಲ್ಲಿ ಈಗ ಕಂಡುಬರುವ ವ್ಯತ್ಯಾಸಗಳು ಹೋಗಿ, ಭಾಷೆಯ ಏಕೀಕರಣವು ಉಂಟಾಗಲಿಕ್ಕೆ ಆಸ್ಪದವಾಗುತ್ತದೆ. ಇದರಿಂದ ಒಂದು ಭಾಗದಲ್ಲಿಯ ಪುಸ್ತಕಗಳು ಬೇರೊಂದು ಕಡೆಗೆ ಪ್ರಸಾರವಾಗಲು ಈಗ ಒದಗುತ್ತಿರುವ ತೊಂದರೆಗಳು ದೂರಾಗುತ್ತ ಹೋಗುವವು.

ಮೇಲ್ಕಂಡ ಕಾರ್ಯಗಳು ಅಬಾಧಿತವಾಗಿ ನಡೆಯಬೇಕಾದರೆ ಅವುಗಳಿಗೋಸ್ಕರ ಸಹಾನುಭೂತಿಯನ್ನು ಹುಟ್ಟಿಸುವ ಪ್ರಯತ್ನಗಳನ್ನು ನಾವು ಎಲ್ಲ ಪ್ರಾಂತಗಳಲ್ಲಿ ಸತತವಾಗಿ ಮಾಡಲಿಕ್ಕೆ ಬೇಕು. ಈ ಬಗ್ಗೆ ಪ್ರತಿಯೊಂದು ಜಿಲ್ಲೆಯವರು ತಮ್ಮಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಿ ಅದರ ದ್ವಾರದಿಂದ ಈ ತರದ ಭಾಷೋತ್ತೇಜಕ ಪ್ರಯತ್ನಗಳನ್ನು ಮಾಡುವದು ಅವಶ್ಯವದೆ.

ಯೋಗ್ಯ ಸಂಘಟಣೆ ಮತ್ತು ಪ್ರಚಾರಣೆಯ ಕಾರ್ಯಗಳು.

ದೇಶದಲ್ಲೆಲ್ಲ ಜಾಗ್ರತೆಯನ್ನುಂಟುಮಾಡಲಿಕ್ಕೆ ಒಂದೇ ಒಂದು ಮಧ್ಯವರ್ತಿ ಸಾಹಿತ್ಯಪರಿಷತ್ತಿಗೆ ಶಕ್ಯವಾಗಲಾರದು. ಅದರ ಸಹಾಯಕ್ಕೋಸ್ಕರ ಎಲ್ಲ ಕಡೆಗೆ ಶಾಖಾಸಂಘ ಸಂಸ್ಥೆಗಳು ಆಗುವದು ಅವಶ್ಯವದೆ. ಈ ತರದ ಜಾಗ್ರತೆಯನ್ನು ಹುಟ್ಟಿಸಲಿಕ್ಕೆ ಸಾಹಿತ್ಯಪರಿಷತ್ತಿನವರು ವಿಶೇಷ ಶ್ರಮವನ್ನು ವಹಿಸಲಿಕ್ಕೆ ಬೇಕು. ಸಾಹಿತ್ಯ ಸಮ್ಮೇಲನವನ್ನು ಒಂದು ವರ್ಷ ಎಲ್ಲಾದರೂ ಕೂಡಿಸಿದರೆ ನಾವು ಇಚ್ಛಿಸಿದ ಕಾರ್ಯಗಳು ನೆರವೇರಲಾರವು. ಪ್ರತಿಯೊಂದು ಜಿಲ್ಲೆಯ ಕನ್ನಡ ಭಾಷೆಗಳು ತಮ್ಮ ಜಿಲ್ಲೆಯಲ್ಲಿಯೂ ಅದರಂತೆಯೇ ತಮ್ಮ ಹಿಂದೆ ಬಿದ್ದ ನೆರೆ ಜಿಲ್ಲೆಗಳಲ್ಲಿಯೂ ಕರ್ಣಾಟಕತ್ವದ ಭಾವನೆಯನ್ನು ಜಾಗ್ರತಪಡಿಸಲಿಕ್ಕೆ ಸದಾ ಪ್ರಯತ್ನಿಸುತ್ತಿರಬೇಕು, ಅವರು ಕರ್ಣಾಟಕ ವಾಙ್ಮಯ ಮತ್ತು ಇತಿಹಾಸವನ್ನು ವಿಶೇಷ ಅಭ್ಯಾಸ ಮಾಡಿದವರನ್ನು ತಮ್ಮಲ್ಲಿಗೆ ಆಗಿಂದಾಗ್ಗೆ ಬರಮಾಡಿಕೊಂಡು ಅವರ ಜ್ಞಾನದ ಲಾಭವನ್ನು ಜನರಿಗೆ ಮಾಡಿಕೊಡುತ್ತಿರಬೇಕು. ಈ ಕಾರ್ಯದಲ್ಲಿ ಕನ್ನಡ ಕೀರ್ತನಕಾರರು ಬಹಳ ಉಪಯೋಗಕ್ಕೆ ಬೀಳುವರು. ಇವರು ಕರ್ಣಾಟಕದಲ್ಲಿಯ ವಿಭೂತಿಗಳ ಸಂಬಂಧವಾಗಿ ತಮ್ಮ ಕೀರ್ತನೆಗಳಲ್ಲಿ ಹೆಚ್ಚಾಗಿ ವಿವರಿಸತಕ್ಕದ್ದು. ಅದರಂತೆಯೇ ಕರ್ಣಾಟಕ ಭಾಷೆಯಲ್ಲಿ ಮನೋವೇಧಕವಾದ ಸುಂದರ ನಾಟಕಗಳನ್ನು ರಚಿಸಲಿಕ್ಕೆ ಗ್ರಂಥಕಾರರಿಗೆ ಉತ್ತೇಜನ ಕೊಡತಕ್ಕದ್ದು. ಇವುಗಳ ರಚನೆಗಳಲ್ಲಿ ಕರ್ಣಾಟಕಕ್ಕೆ ಸಂಬಂಧಿಸಿದ ವಿಷಯಗಳಿಗೆ ಮಹತ್ವದ ಸ್ಥಾನವನ್ನು ಕೊಡತಕ್ಕದ್ದು. ಇದರಂತೆಯೇ ಗ್ರಾಮಾಂತರಗಳಲ್ಲಿ ವಾಚನಾಲಯಗಳು ಹೆಚ್ಚಾದ ಹಾಗೆ ಕನ್ನಡ ಓದುವವರ ಸಂಖ್ಯೆಯೂ ಹೆಚ್ಚಾಗುತ್ತಾ ಹೋಗುವುದು. ಇವುಗಳಿಗೆ ಧಾರ್ಮಿಕಯಾಗಿ ಕನ್ನಡ ಗ್ರಂಥಗಳೂ, ವರ್ತಮಾನ ಪತ್ರಗಳೂ ಒದಗುವಂತೆ ಆಯಾ ಜಿಲ್ಲೆಗಳ ಶ್ರೀಮಂತರು ತಕ್ಕ ವ್ಯವಸ್ಥೆಯನ್ನು ಮಾಡತಕ್ಕದ್ದು. ಇದರಂತೆಯೇ ಕನ್ನಡ ಗ್ರಂಥಕಾರರು ಜನರಿಗೆ ಉಪಯೋಗ ಬೀಳುವ ವಿಷಯಗಳ ಬಗ್ಗೆ ಸುಲಭ ಭಾಷೆಯಲ್ಲಿ ಗ್ರಂಥಗಳನ್ನು ಬರೆಯತಕ್ಕದ್ದು. ವಿಶೇಷವಾಗಿ ಬಾಲಕರಿಗೂ, ಸ್ತ್ರೀಯರಿಗೂ ಉಪಯೋಗ ಬೀಳುವಂಥ ಗ್ರಂಥಗಳನ್ನು ಬರೆಯತಕ್ಕದ್ದು. ಈ ಮೇರೆಗೆ ನಾನಾ ಬಗೆಯಾಗಿ ಎಲ್ಲ ತರಗತಿಯ ಜನರಲ್ಲಿ ಕರ್ಣಾಟಕದ ಮಹತ್ವವನ್ನು ತಿಳಿಸಿಕೊಡುವ ಪ್ರಯತ್ನಗಳನ್ನು ಮಾಡಲಿಕ್ಕೆ ಹತ್ತಬೇಕು. ಇಂಥ ಕಾರ್ಯಗಳು ಪ್ರತಿಯೊಂದು ಜಿಲ್ಲೆಯಲ್ಲಿ ಯಾವಾಗಲೂ ನಡೆಯುವ ಬಗ್ಗೆ ಅಲ್ಲಿಯ ಪ್ರಮುಖ ಕನ್ನಡಿಗರು ಯತ್ನಿಸತಕ್ಕದ್ದು. ಈ ತರದ ಪ್ರಯತ್ನಗಳಿಂದಲೇ ನಿಜವಾದ ಚೈತನ್ಯವು ಜನರಲ್ಲಿ ಉದ್ಭವಿಸುವದು. ಮತ್ತು ಇದೇ ನಮ್ಮ ನಿಜವಾದ ಸುಧಾರಣೆಯ ತಳಹದಿಯಾಗಿರುತ್ತದೆ.

ಸ್ಫುಟ ವಿ ಚಾ ರ ಗ ಳು.

ಪರಸ್ಪರ ಸಹಾಯಕ ಸಂಘ

ಪರಸ್ಪರ ಸಹಾಯಕ ಸಂಘಗಳ ತತ್ವಗಳನ್ನೂ, ಮಹತ್ವವನ್ನೂ, ಸಹಕಾರಿಗಳ ವರ್ಷಾವಧಿ ಸಭೆಗಳಿಂದ ತಿಳಿಯಬೇಕು! ಆದರೆ ನಿಜವಾಗಿ ಪ್ರತಿ ಊರಿನ ಪರಿಸ್ಥಿತಿಯನ್ನು ವಿಚಾರಿಸಿದರೆ ಬಹಳ ನಿರಾಶೆಯಾಗುತ್ತದೆ. ಪರಸ್ಪರ ಸಹಾಯಕ ಸಂಘಗಳಿಂದ ಯಾವ ಪರಸ್ಪರ ಸಹಾಯವು ಉದ್ದೇಶಿಸಲ್ಪಟ್ಟಿದ್ದಿತೊ, ಪರಿಣಾಮದಲ್ಲಿ, ಅದರ ತೀರಾ ವಿರೋಧವೇ ನಡೆಯುತ್ತದೆ. ಈ ಸಂಘಗಳನ್ನು ಸೇರುವವರು ಸಹಕಾರದ ಉಚ್ಚ ತತ್ವಗಳನ್ನು ಯೋಚಿಸಿ ಸೇರುವುದಕ್ಕಿಂತಲೂ ಹಣದ ಅಡಚಣೆಯಿಂದ ಸೇರುವವರೇ ಆಗಿರುವರು. ಇದರ ಸೂತ್ರಧಾರಿಗಳು ಸಹಕಾರ ತತದಲ್ಲಿ ಹೆಚ್ಚು ಆಸಕ್ತರಿರುವುದಕ್ಕಿಂತಲೂ ಅಧಿಕಾರದ ಗೌರವಾನುಭವದಲ್ಲಿ ಆಸಕ್ತರಿರುವುದೇ ಹೆಚ್ಚು. ಪರಸ್ಪರ ಸಹಾಯಕ ಸಂಘಗಳ ವಹಿವಾಟುಗಳೊಳಗಿನ ದೋಷಗಳನ್ನು ಲೆಕ್ಕಮಾಡಿ, ನಮ್ಮ ಇಡೀ ಜಿಲ್ಲೆಗೆ ಒಂದು ಸಂಖ್ಯೆಯ ಪಟ್ಟಿ (statistics) ಯನ್ನು ಯಾರು ಮಾಡಿದರೆ ಪರಸ್ಪರ ಸಹಾಯಕ ಸಂಘಗಳಿಂದಾಗುವ ನಿಜವಾದ ಲಾಭದ ಒಂದು ಅಂದಾಜಾದರೂ ಸಿಕ್ಕಬಹುದು. ಅಲ್ಲದೆ ಪರಸ್ಪರ ಸಹಾಯಕ ಸಂಘಗಳ ವರ್ಷಾವಧಿ ಜನರಲ್ ಮೀಟಿಂಗುಗಳೊಳಗೆ ನಡೆಯುವ ಗಡಿಬಿಡಿಯ ಕೋಲಾಹಲದ ಘಟನೆಗಳನ್ನೂ ತಿಳಿದರೆ, ಈ ಪರಸ್ಪರ ಸಹಾಯವು ಯಾವ ರೀತಿಯಲ್ಲಿ ನಡೆಯುತ್ತದೆ ಎಂಬುದು ತಿಳಿಯಬಹುದು. ಪರಸ್ಪರ ಸಹಾಯಕ ಸಂಘಗಳ ಆಡಳಿತದಲ್ಲಿ ತೋರಿಬರುವ ಈ ನ್ಯೂನತೆಗಳನ್ನು ಸರಿಯಾಗಿ ವಿಚಾರಿಸಿ, ಪರಿಸ್ಥಿತಿಯನ್ನು ಹೇಗೆ ಸುಧಾರಿಸಬಹುದೆಂದು ಆಲೋಚಿಸುವುದು ಅಗತ್ಯವಿದೆ. ಇದಕ್ಕಾಗಿ ಒಂದು ಪ್ರಾಂತಿಕ ಕಮಿಶನು ನೇಮಕವಾಗುವುದು ಉತ್ತಮವಿತ್ತು. ಕಡೆಯ ಪಕ್ಷಕ್ಕೆ ನಮ್ಮ ಜಿಲ್ಲೆಯ ಕಡೆಯಿಂದ ಒಂದು ಕಮಿಶನು ನೇಮಕವಾಗಿ ಈ ವಿಷಯವು ಮಥಿಸಲ್ಪಡುವುದು ಅಗತ್ಯವಿದೆ.

ಮಾರ್ಗಗಳ ದುರುಸ್ತಿ

ಮೊದಲಿನ ಮಳೆಗಳೊಡನೆ ಮಾರ್ಗದ ದುರುಸ್ತಿಯೂ ಪ್ರಾರಂಭವಾಗುವುದು. ಈ ಕೆಲಸದ ಬಗ್ಗೆ ಸಂಬಂಧಪಟ್ಟ ಡಿಪಾರ್ಟಮೆಂಟಿನವರು ಜಲ್ಲಿಕಲ್ಲಿನ ರಾಶಿಯನ್ನು ಮಾರ್ಗದ ಬದಿಯಲ್ಲಿ ರಾಶಿ ಕಟ್ಟುವರು. ಮಾರ್ಗದಲ್ಲಿ ವ್ಯವಹಾರದ ಬಗ್ಗೆ ಸಾಕಷ್ಟು ಸ್ಥಳವಿದೆಯೊ, ಮಾರ್ಗಕ್ಕೆ ಇದರಿಂದ ಬಹಳ ಅಡಚಣೆಯಾಗುವುದೊ ಎಂಬ ಯಾವ ವಿಚಾರವನ್ನೂ ಗಮನಿಸದೆ ಡಿಪಾರ್ಟಮೆಂಟಿನವರು ಈ ರೀತಿಯಲ್ಲಿ ಕಲ್ಲುಗಳನ್ನು ರಾಶಿಮಾಡುವುದನ್ನು ನೋಡಿದರೆ ಇವರಿಗೆ ಮಾರ್ಗದ ಸೌಕರ್ಯದ ಕಲ್ಪನೆಯೇ ಇಲ್ಲವೆನ್ನಬೇಕಾಗುತ್ತದೆ. ಹಾಗಾದರೂ ರಾತ್ರಿವೇಳೆಯಲ್ಲಿ, ಅದೂ ಈಗಿನ ಮಳೆ ಬಂದು ಗಾಢಾಂಧಕಾರದಿಂದ ಮುಚ್ಚಿರುವ ರಾತ್ರಿಗಳಲ್ಲಿ ಹಾದಿಹೋಕರಿಗೆ ಈ ಕಲ್ಲುಗಳ ರಾಶಿಯು ಪ್ರಾಣಸಂಕಟದ ವಿಷಯವೇ ಆಗುತ್ತಿದೆ. ಹೆಚ್ಚು ವ್ಯವಹಾರವಿರುವ ಮಂಗಳೂರು ಶಹರು ರಸ್ತೆಗಳಲ್ಲಿ ಕೂಡ ಈ ರಾಶಿಗಳು ಬಿದ್ದುಕೊಂಡಿವೆ. ರಾತ್ರಿಯ ಹಾದಿಹೋಕರಿಗೆ ಸಹಾಯವಾಗುವಂತೆ, ಇಂತಹ ಕಡೆಗಳಲ್ಲಿ ಸಣ್ಣ ಲಾಟಾನುಗಳನ್ನಾದರೂ ಇಡಬಹುದಿತ್ತು. ಮ್ಯುನಿಸಿಪಾಲಿಟಿಗಾಗಲಿ, ಬೋರ್ಡಿಗಾಗಲಿ ವಿಶೇಷವಾಗಿ ಹೆಚ್ಚು ಖರ್ಚಾಗದ ಈ ಸಾಮಾನ್ಯ ಸೌಕರ್ಯವನ್ನು ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಕೊಡಿಸುವರಾಗಿ ಆಶಿಸುವೆವು. ಅದಿಲ್ಲದೆ, ಈಗ ಪಥಿಕರು ಕಲ್ಲುರಾಶಿಗಳ ಮೇಲೆ ಬಿದ್ದು, ಮೈಗಾಯ ಮಾಡಿಕೊಂಡು, ಕೈಕಾಲುಗಳಿಂದ ಹಾದಿ ಹುಡುಕುವ ಪ್ರಕೃತದ ಪರಿಸ್ಥಿತಿಯು ಯಾವ ಸಂಸ್ಥೆಗೂ ಗೌರವಕರವಲ್ಲ.

ಹಿಂದೂಸ್ಥಾನದೊಡನೆ ಜರ್ಮನ್ ವ್ಯಾಪಾರ.

ಮಹಾಯುದ್ಧವು ಮುಗಿದು ಎಂಟು ವರ್ಷಗಳಾದುವು. ಅದರಲ್ಲಿಯೂ ಸರಕಾರಿ ನಿರ್ಬಂಧಗಳು ತೆಗೆದು ಹಾಕಲ್ಪಟ್ಟು ಬರೇ ಐದಾರು ವರ್ಷಗಳಾದುವು. ಆದರೂ ಜರ್ಮನ್ ವ್ಯಾಪಾರವು ಅತೀ ಆಶ್ಚರ್ಯಕರವಾದ ರೀತಿಯಲ್ಲಿ ಹಿಂದೂಸ್ಥಾನದೊಡನೆ ಬೆಳೆದಿದೆ. ಯುದ್ಧದ ಇಷ್ಟು ನಷ್ಟಗಳನ್ನು ಹೊರಲಿಕ್ಕಿದ್ದರೂ ಜರ್ಮನಿಯು ತನ್ನ ವ್ಯಾಪಾರವನ್ನು ಯುದ್ಧದ ಪೂರ್ವದಂತೆಯೇ ಕಟ್ಟಿಕೊಂಡದ್ದು ಅದರ ವ್ಯವಸ್ಥೆಯ ಶಕ್ತಿಯನ್ನು ತೋರಿಸುತ್ತಿದೆ. ಬ್ರಿಗೆಡಿಯರ್ ಜನರಲ್ ಕೋ ಎಂಬವರು, ಹೀಗೆ ಬರೆಯುತ್ತಿರುವರು:—

ನನ್ನ ಹೆಂಡತಿ ಮತ್ತು ನಾನು ಸಿಲೋನ್, ಬರ್ಮಾ ಮತ್ತು ಇಂಡಿಯಾ ದೇಶಗಳನ್ನು ಸಂಚರಿಸಿ ಈಗ ಕಾಶ್ಮೀರಿಗೆ ಬಂದಿರುವೆವು. ಪ್ರತಿ ಆ ಊರಿನಲ್ಲಿಯೂ ಜರ್ಮನ್ ವ್ಯಾಪಾರದ ಶಕ್ತಿಯು ಕಾಣುತ್ತಿದೆ. ಪ್ರತಿ ಪಟಿತ್ರ ಪೋಸ್ಟು ಕಾರ್ಡುಗಳಲ್ಲಿ "Printed in Saxony" ಎಂದಿದೆ. ಕಾಗದ, ಕವರು, ಲಾಟಾನು, ಮೇಣದ ಬತ್ತಿ, ಇತ್ಯಾದಿ ನಿತ್ಯದ ಉಪಯೋಗದ ಎಲ್ಲಾ ಸಾಮಾನುಗಳ ಮೇಲೆ "Made in Germany" ಎಂದಿದೆ ಇತ್ಯಾದಿ—

ಜರ್ಮನ್ ವ್ಯಾಪಾರವು ಈ ರೀತಿಯಲ್ಲಿ ಹಿಂದೂಸ್ಥಾನದಲ್ಲಿ ಕ್ರಮವಾಗಿ ಪ್ರಬಲವಾಗುತ್ತಾ ಬಂದಿದೆ. ಮಾತ್ರವಲ್ಲದೆ ಈಗ ವ್ಯಾಪಾರದಲ್ಲಿ ಮುಂದೆ ಹೋಗುತ್ತಿದ್ದ ಅಮೇರಿಕದ ವ್ಯಾಪಾರ ಕ್ರಮಗಳನ್ನು ತಿಳಿಯುವ ಬಗ್ಗೆ ಜರ್ಮನಿಯು ತನ್ನ ಜನರನ್ನು ಅಮೇರಿಕಕ್ಕೆ ಕಳುಹಿಸುತ್ತಿದೆ. ಈ ಮೊದಲು ಅಮೇರಿಕದಿಂದ ಜರ್ಮನಿಗೆ ವ್ಯಾಪಾರ ಕಲಿಯಲಿಕ್ಕೆಂದು ಜನರು ಬರುತ್ತಿದ್ದರು. ಯುದ್ಧದಿಂದ ಅಮೇರಿಕದ ಅಂತರಾಷ್ಟ್ರೀಯ ವ್ಯಾಪಾರವು ಬೆಳೆದು, ಅದು ತನ್ನ ವ್ಯಾಪಾರ ಕ್ರಮವನ್ನು ಸುಧಾರಿಸಿತು. ಜರ್ಮನಿಯು ತನ್ನ ಪೂರ್ವದ ಶ್ರೇಷ್ಠತೆಯನ್ನು ನೆನಸಿ ಸುಮ್ಮಗೆ ಕೂತುಕೊಳ್ಳಲಿಲ್ಲ. ಈಗ ತನ್ನ ತರುಣರನ್ನು ಅಲ್ಲಿಗೆ ಕಳುಹಿಸಿ ಅವರ ವ್ಯಾಪಾರ ಕ್ರಮವನ್ನು ಜರ್ಮನಿಯು ಕಲಿಯುತ್ತಿದೆ. ಅನ್ನುವಾಗ ಜರ್ಮನಿಯು ವ್ಯಾಪಾರದ ಅಭಿವೃದ್ಧಿಗಾಗಿ ಎಷ್ಟು ಸಾಧಿಸುತ್ತಿದೆ ಎಂದು ತಿಳಿಯುವುದು.

ಬ್ರಿಟಿಷ ತುರ್ಕಿ ಸಂಧಿ.

ಬಹಳ ಸಮಯದಿಂದ ವಿವಾದದಲ್ಲಿಯೇ ಇದ್ದ ಮೊಸುಲ್ ಪ್ರಶ್ನೆಯು ಈ ಹೊಸ ಸಂಧಿಯಿಂದ ತೀರ್ಮಾನವನ್ನು ಹೊಂದಿತು. ಜನಾಂಗ, ಜನಾಂಗಗಳೊಳಗಿನ ಗುಟ್ಟು ಸಂಧಿಗಳ ಆವಶ್ಯಕತೆಯನ್ನು ಕಡಿಮೆ ಮಾಡಿ, ಐಕ್ಯವನ್ನು ಬೆಳೆಸಲಿಕ್ಕಾಗಿ ಸ್ಥಾಪಿತವಾದ ಲೀಗ್-ಒಫ್ ನೇಶನ್ಸಿನಿಂದ ಸಾಧ್ಯವಾಗದೆ ಕಡೆಗೆ ಖಾಸಗಿ ಸಂಧಿಯಿಂದಲೇ ಈ ಐಕ್ಯವು ಸಾಧ್ಯವಾದುದು ಲೀಗ್-ಒಫ್ ನೇಶನ್ಸಿನ ಅಸಹಾಯತೆಯ ನಮ್ಮ ಅಭಿಪ್ರಾಯವನ್ನು ಮತ್ತಷ್ಟು ಘಟ್ಟಿ ಮಾಡುತ್ತಿದೆ.

ಈ ಖಾಸಗಿ ಸಂಧಿಯು ತೋರಿಕೆಗೆ ಬರೇ ಬ್ರಿಟಿಷ ತುರ್ಕಿ ಸಂಬಂದದ್ದಾದರೂ ಇದರಲ್ಲಿ ಅಂತರಾಷ್ಟ್ರೀಯ ಪ್ರಾಮುಖ್ಯತೆಯಿದೆಯೆಂದೂ ಚೆನ್ನಾಗಿ ವಿಚಾರಿಸಿದರೆ ತಿಳಿಯುವುದು. ಸಿರಿಯಾದ "ಮೆಂಡೇಟ್"ನಿಂದ ಪ್ರತೀಚ್ಯ ದೇಶಗಳಲ್ಲಿ ಫ್ರಾನ್ಸಿನ ಪ್ರಾಮುಖ್ಯತೆಯು ಬೆಳೆದು, ಡ್ರ್ಯೂಸ್ ಮತ್ತು ಮೊರೊಕ್ಕೊದ ರೀಫ್ ಪರಾಜಯದೊಡನೆ ಫ್ರೆಂಚರ ಮೆಡಿಟರೇನಿಯನ್ ಪ್ರಾಬಲ್ಯವು ಘಟ್ಟಿ ಕಟ್ಟಿದುದನ್ನು ಬ್ರಿಟಿಷರು ಚೆನ್ನಾಗಿಯೇ ತಿಳಿದು ಈ ಸಂಧಿಗೆ ಕೈ ಹಾಕಿದ್ದಾಗಿರಬೇಕು. ಅಲ್ಲದೆ ಸಿರಿಯಾದಲ್ಲಿ ಪರಿಸ್ಥಿತಿಯು ಕಠಿಣವಾದಾಗ ಫ್ರೆಂಚರು ತುರ್ಕಿಯೊಡನೆ ಸಂಧಿಯನ್ನು ಮಾಡಿ ತುರ್ಕಿ, ಮೆಸೊಪೊಟೆಮಿಯಾ, ಪರ್ಸಿಯಾ ಈ ಕಡೆಗಳಲ್ಲಿ ಫ್ರೆಂಚರು ತಮ್ಮ ಪ್ರಾಬಲ್ಯಕ್ಕೆ ಉಪಾಯ ಹೂಡಿದುದೂ ಇಂಗ್ಲೀಷ ಲಕ್ಷ್ಯಕ್ಕೆ ಹೋಗಿ, ತುರ್ಕಿಯೊಡನೆ ಬೇಗನೆ ಸಂಧಿ ಮಾಡದೆ ಬ್ರಿಟಿಷರಿಗೆ ಬೇರೆ ಉಪಾಯವಿಲ್ಲದೆ ಹೋಯಿತು.

ಫ್ರೆಂಚ್ ಮತ್ತು ಬ್ರಿಟಿಷರ ಈ ಸಂಧಿಗಳಿಂದ ತುರ್ಕಿಯ ಅಂತರಾಷ್ಟ್ರೀಯ ಸ್ಥಾನವು ಸ್ಥಿರವಾಯಿತು. ಅಲ್ಲದೆ, ಮೊಸಲ್ ಪ್ರಾಂತವನ್ನು ಕಳಕೊಂಡರೂ ತುರ್ಕಿಗೆ ಇತರ ಕೆಲವು ಲಾಭಗಳು, ಗಣಿಗಳ ಉತ್ಪನ್ನದಲ್ಲಿ ಪಾಲೂ ಸಿಕ್ಕಿತು.

ಬ್ರಿಟಿಷ-ತುರ್ಕಿ ಸಂಧಿಯು ಅಂತರಾಷ್ಟ್ರೀಯ ದೃಷ್ಟಿಯಿಂದ ಪ್ರಮುಖವಿದೆ. ಮಾತ್ರವಲ್ಲದೆ, ಹಿಂದೂಸ್ಥಾನಕ್ಕೂ ಹತ್ತಿರದ ಸಂಬಂಧವಿದೆ. ಐಗುಪ್ತ್ಯದ ಮೇಲೆ ಬ್ರಿಟಿಷರು ಮಾಡುವ ದಾಳಿಯೂ, ಮೆಸೊಪೊಟೊಮಿಯದ ರಕ್ಷಣೆಯ ಭಾರವನ್ನು ವಹಿಸಿದುದೂ, ತುರ್ಕಿಯೊಡನೆ ಸಂಧಿ ಮಾಡಿದುದೂ ಹಿಂದೂಸ್ಥಾನದ ಬ್ರಿಟಿಷ ಆಡಳಿತದ ಸ್ಥಿರತೆಗೆ ಸಂಬಂಧವಿದ್ದುದಾಗಿದೆ.

ಮತಾಂತರ ಅಥವಾ ಶುದ್ಧಿ

ಹಿಂದುವು ಕ್ರೈಸ್ತನಾಗುವುದಾಗಲಿ, ಕ್ರೈಸ್ತನು ಹಿಂದುವಾಗುವುದಾಗಲಿ, ಈ ಮತಾಂತರ ಕ್ರಮವು ಮತಶ್ರದ್ಧೆಗಳಿಗೆ ಸಂಬಂಧಪಟ್ಟ ವಿಷಯವಲ್ಲ. ಕೇವಲ ನೈತಿಕ ದೃಷ್ಟಿಯಿಂದ ನೋಡಿದರೆ, ಒಬ್ಬ ಹಿಂದುವು ಮತಾಂತರ ಹೊಂದದೇನೇ ಕ್ರೈಸ್ತನಾಗಲಿ, ಮುಸಲ್ಮಾನನಾಗಲಿ ಆಗಬಹುದು. ಹಾಗೆಯೇ ಒಬ್ಬ ಮುಸಲ್ಮಾನನು ಶುದ್ಧಿ ಹೊಂದದೇನೇ ಹಿಂದೂವಾಗಬಹುದು. ಯಾವ ಮತವಾದರೂ ಅಂತಃಶುದ್ಧಿಗಿಂತ ಬಾಹ್ಯ ಡಂಭಾಚಾರಗಳಿಗೆ ಹೆಚ್ಚು ಬೆಲೆ ಕೊಡುವುದಾಗಿ ನಾವು ನಂಬುವುದಿಲ್ಲ. ನಿಜವಾಗಿ ಆಲೋಚಿಸಿದರೆ, ಯಾವ ಮತವೂ ಡಂಭಾಚಾರಗಳನ್ನು ಲಕ್ಷಿಸುವುದಿಲ್ಲ. ಆತ್ಮವನ್ನು ವಿಶಾಲ ಮಾಡಬೇಕೆಂದೂ, ಮನಸ್ಸನ್ನು ಪವಿತ್ರವಿರಿಸಬೇಕೆಂದೂ ಪ್ರತಿ ಮತವೂ ಇಚ್ಛಿಸುವುದು. ಇನ್ನು ಆಯಾ ಮತಗಳ ಕೆಲವು ವೈಶಿಷ್ಟ್ಯಗಳಿದ್ದರೂ ಅವಕ್ಕಾಗಿ ಮತಾಂತರ ಹೊಂದುವ ಆವಶ್ಯಕತೆಯಿಲ್ಲ. ಇದರಿಂದ ಮತಾಂತರದ ಸಮಸ್ಯೆ ನೈತಿಕವಾಗಲಿ, ಮತವಿಷಯಿಕವಿರದೆ, ಅದು ಬರೇ ಸಾಮಾಜಿಕ ಮತ್ತು ರಾಜಕೀಯವಿದೆಯೆಂದು ಸ್ಪಷ್ಟವಾಗುವುದು. ಮತಾಂತರವು ಒಂದು ಪಂಗಡದ ಸಂಖ್ಯೆಯನ್ನು ಬೆಳಸಿ, ಆ ಪಂಗಡವನ್ನು ನೆರೆಯ ಇನ್ನೊಂದದಕ್ಕಿಂತ ಬಲವಾಗಿಡಲಿಕ್ಕಾಗಿ ಉದ್ದೇಶಿಸಲ್ಪಟ್ಟದ್ದಲ್ಲದೆ, ಬೇರೆ ಅಲ್ಲ. ಇಂತಹ ಕೇವಲ ಐಹಿಕ ಉದ್ದೇಶವಿದ್ದುದರಿಂದಲೇ ಹಿಂದೂಮತವು ಮತಾಂತರವನ್ನು ಮುಂದೊತ್ತಲಿಲ್ಲ.

ಆದರೆ ಕೇವಲ ನೈತಿಕ ವಿಷಯಗಳ ಪೂರ್ಣಸಾಧನೆಯ ಆರ್ಯರ ಆ ದಿನಗಳು ಕಳೆದಿವೆ, ಐಹಿಕದ ತತ್ವವೇ ಈಗ ಪ್ರಬಲವಾಗಿದೆ. ಇಂತಹ ಸಮಯದಲ್ಲಿ ಹಿಂದುವೂ ತನ್ನ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವುದು ಅವಶ್ಯವಿದೆ. ಮಿಶನ್ ಪ್ರಚಾರದಿಂದಲೂ, ರೋಮನ್ ಕೆಥೋಲಿಕರ ಸಾಧನೆಯಿಂದಲೂ, ಮುಸಲ್ಮಾನರ ಸಾಧನೆಯಿಂದಲೂ ಹಿಂದೂ ಸಂಖ್ಯೆಯು ಕ್ಷೀಣಿಸುತ್ತ ಬರುತ್ತಿದೆ. ಆ ಕಾರಣದಿಂದ ಹಿಂದುಗಳಿಗೆ ದ್ವಿಗುಣಿತ ನಷ್ಟವಿದೆ. ಪ್ರಥಮತಃ ತಾವು ಕ್ಷೀಣವಾಗುವುದು; ದ್ವಿತೀಯತಃ ಇತರ ಮತಸ್ಥರ ಸಂಖ್ಯೆಯು ಬೆಳೆಯುವುದು. ಇದರಿಂದ ಹಿಂದೂ ಸಮಾಜದ ನಿರ್ಬಲತೆಯೂ, ರಾಜಕೀಯ ನಷ್ಟಗಳೂ ಉಂಟಾಗುವವು.

ಆದುದರಿಂದ ಆರ್ಯಸಮಾಜವು ಆದರ್ಶವನ್ನಿತ್ತಂತೆ ಶುದ್ಧಿಯನ್ನು ಪ್ರಸರಿಸಿ, ಮತಾಂತರ ಹೊಂದಿದ ಹಿಂದೂಗಳನ್ನು ಪುನಃ ಮತಾಂತರ ಹೊಂದಿಸುವುದು ಅಗತ್ಯವಿದೆ. ಪ್ರತಿ ಹಿಂದೂವಿನ ಆತ್ಮರಕ್ಷಣೆಗಾಗಿಯೂ, ಹಿಂದೂಸಮಾಜದ ಸುಸ್ಥಿರತೆಗಾಗಿಯೂ ಶುದ್ಧಿಯನ್ನು ಪ್ರಚಾರಗೊಳಿಸುವುದು ಅಗತ್ಯವಿದೆ. ಸಾಂಪ್ರದಾಯವಾದಿಗಳು ತಮ್ಮ ಅವಿಚಾರದ ನಿರೋಧದಿಂದ ಆತ್ಮನಾಶವನ್ನೇ ಸಾಧಿಸುತ್ತಿರುವರು.

ಬಂಗಾಳ ಹಿಂದೂ–ಮುಸಲ್ಮಾನ ಒಪ್ಪಂದ.

ದೇಶಬಂಧು ದಾಸರು ತಮ್ಮ ಅನೇಕ ಶಕ್ತಿಮಾನ್ ರಾಜಕೀಯ ಕೆಲಸಗಳಲ್ಲಿ ಇದೊಂದು ಒಪ್ಪಂದವನ್ನು ರಚಿಸಿದ್ದರು. ಇದಕ್ಕೆ ಮುಸಲ್ಮಾನ ಬಂಧುಗಳ ಒಪ್ಪಿಗೆ ಇದ್ದಿತು. ಇದರಿಂದ ಮುಸಲ್ಮಾನರಿಗೆ ಸ್ವಲ್ಪ ಮಟ್ಟಿಗೆ ಹೆಚ್ಚು ಪ್ರಯೋಜನವಿದ್ದಿತು. ಈ ಕಾರಣದಿಂದ ಕಾಂಗ್ರೆಸ್ಸಿನಲ್ಲಿ ಇದಕ್ಕೆ ನಿರೋಧವಿದ್ದಿತು. ಆದರೆ ಬಂಗಾಳದ ವೈಶಿಷ್ಟ್ಯಕ್ಕೆ ಅನುಕೂಲವಾಗಿ ತಾನು ಅದನ್ನು ರಚಿಸಿರುವೆನೆಂದೂ ಬಂಗಾಳದ ಮಟ್ಟಿಗೆ ಅದೂ ಜಾರಿ ಇರಬೇಕೆಂದೂ ಹೇಳಿ ಬಂಗಾಳಕ್ಕಾಗಿ ಅದಕ್ಕೆ ಕಾಂಗ್ರೆಸ್ ಮುಖ್ಯಸ್ಥರ ಒಪ್ಪಿಗೆಯನ್ನು ಅವರು ಪಡೆದಿದ್ದರು.

ಆ ಒಪ್ಪಂದದ ಫಲವಾಗಿ ಬಂಗಾಳದ ಸ್ವರಾಜ್ಯ ಪಕ್ಷವು ಬಲವಾಯಿತು. ಮತ್ತು ಬಂಗಾಳ ಕೌನ್ಸಿಲಿನಲ್ಲಿ ಸ್ವರಾಜ್ಯ ಪಕ್ಷಕ್ಕೆ ಬಹುಮತವು ಸಿಕ್ಕಿ ಸರಕಾರದ ಎಲ್ಲಾ ರಾಜತಂತ್ರಗಳನ್ನು ಅದು ಸೋಲಿಸಿ ಬಿಟ್ಟಿತು. ದೇಶಬಂಧುಗಳು ಜೀವಂತವಿರುವ ವರೆಗೆ ಸ್ವರಾಜ್ಯ ಪಕ್ಷವು ನಿರ್ವಿಘ್ನವಾಗಿ ನಡೆಯಿತು.

ಆದರೆ ಅವರ ನಿಧನದ ನಂತರ ಸ್ವರಾಜ್ಯ ಪಕ್ಷವನ್ನು ಎಲ್ಲಾ ಅಭ್ಯಂತರಗಳಿಂದ ತಪ್ಪಿಸಿ ನಡೆಸುವ ಸಾಮರ್ಥ್ಯವಂತರು ಬೇರಾರೂ ಇಲ್ಲದೆ ಹೋದರು. ಮೇಲಾಗಿ ಕೊರ್ಪೋರೇಶನ್ ಸ್ಥಳದಲ್ಲಿ ಹುಗಿದ ಒಬ್ಬ ಮೃತ ಮಹಮದೀಯನ ಶವವನ್ನು ಹೊರತೆಗೆದು ಬೇರೆ ಕಡೆಗೆ ಸಾಗಿಸಬೇಕಾಗಿ ಉಂಟಾದ ವಾದವು ಹಿಂದೂ-ಮುಸಲ್ಮಾನ ವೈಷಮ್ಯಕ್ಕೆ ಬೀಜವನ್ನು ಬಿತ್ತಿತು. ಆ ಮೇಲೆ ಸುಹ್ರವರ್ದಿಯವರು ಲೆಜಿಸ್ಲೇಟಿವ್ ಕೌನ್ಸಿಲ್ ಅಧ್ಯಕ್ಷತನಕ್ಕೆ ಸ್ವರಾಜ್ಯ ಪಕ್ಷದ ಕಡೆಯಿಂದ ಉಮೇದ್ವಾರರಾಗಿ ನಿಂತು ಸೋತುಹೋಗಲು ಆ ನಿರಾಶೆಯೂ ಹಿಂದೂ-ಮುಸಲ್ಮಾನ ಕ್ಲೇಶಕ್ಕೆ ಕಾರಣವಾಗುತ್ತಾ ಬಂದಿತು. ಆ ಮೇಲೆ ಮಸೀದಿ ಮುಂದೆ ವಾದ್ಯಮಾಡುವ ವಿವಾದದ ಮೇಲೆ ಹಿಂದೂ-ಮುಸಲ್ಮಾನ ಕಲಹಗಳು, ಹತ್ಯೆಗಳು, ಅನಾಚಾರಗಳು ಎದ್ದುಬಿಟ್ಟವು.

ಈಗ ಸ್ವಭಾವತಃ ಎರಡೂ ಮತಸ್ಥರೊಳಗೆ ವೈಷಮ್ಯವು ಗಟ್ಟಿಯಾಗಿ ಬೇರೂರಿದೆ. ರಾಷ್ಟ್ರೀಯತೆಯು ಬಂಗಾಳದಿಂದ ಅಂತರ್ಹಿತವಾಗಿ ಜಾತೀಯತೆಯು ನೆಲಸಿದೆ. ಎರಡೂ ಜಾತಿಗಳು ಒಬ್ಬರನ್ನೊಬ್ಬರು ಮೇಲಾಡಿಸಿ ಪೀಡಿಸುವುದರಲ್ಲಿ ಸ್ಪರ್ಧಿಸುತ್ತಿವೆ. ಫಲತಃ ಬಂಗಾಳದ ಈ ಒಪ್ಪಂದಕ್ಕೆ ಈಗ ಹಿಂದೂಗಳೆಲ್ಲರೂ ವಿರೋಧವಿದ್ದು ಅದನ್ನು ಮುರಿಯುವ ಪ್ರಯತ್ನಗಳು ನಡೆಯುತ್ತಿವೆ.

ಶ್ರೀಯುತ ಸೇನಗುಪ್ತರು, ಈ ವರೆಗೆ ಧುರೀಣತ್ವದಲ್ಲಿ ಹೆಚ್ಚು ಚಾತುರ್ಯವನ್ನು ತೋರಿಸಿದಂತೆ ಕಾಣುವುದಿಲ್ಲ. ಈಗವರು ಹಿಂದೂಗಳೊಳಗೂ ಮುಸಲ್ಮಾನರೊಳಗೂ ವಿಶ್ವಾಸವನ್ನು ಕಳಕೊಂಡಂತೆ ತೋರುತ್ತಿದೆ. ಇಂತಹ ಜಾತೀಯ ಸಮರದಲ್ಲಿ ರಾಷ್ಟ್ರೀಯತಾವಾದಿಗಳು ವಿಶ್ವಾಸವನ್ನು ಕಳಕೊಳ್ಳುವುದು ಸಹಜ. ಇಂತಹ ಪರಿಸ್ಥಿತಿಯಲ್ಲಿ ಮಹಾತ್ಮಾ ಗಾಂಧಿಯವರು ಕೂಡ ತಮ್ಮ ಸಹಾಯಹೀನತೆಯನ್ನು ಪ್ರಕಟಿಸಿರುವರು. ಆದುದರಿಂದ ಸೇನಗುಪ್ತರೂ ಎಲ್ಲರ ಅವಿಶ್ವಾಸಕ್ಕೆ ಪಾತ್ರರಾಗುವುದು ಆಶ್ಚರ್ಯವಲ್ಲ.

ಆದರೆ ಬಂಗಾಳ ಒಪ್ಪಂದವು ಹೋದರೆ ರಾಷ್ಟ್ರೀಯತೆಗೆ ಅಪ್ಪೆರಿಯನ್ನು ಹಾಕಿದಂತಾಗುವುದು. ಜಾತೀಯ ಸಮರವು ರಾಷ್ಟ್ರೀಯತೆಯನ್ನು ಕಳೆದು ಜನತೆಯನ್ನು ಅವನತಿಗೆಳೆಯುವುದು ಅತೀ ವಿಷಾದಕರ.

ಅನುಕ್ರಮಣಿಕೆ.

ಅಗ್ರಲೇಖ ಪುಟ.
೧೨ನೆ ಕರ್ನಾಟಕ ಸಾಹಿತ್ಯ ಪರಿಷತ್ತು. ೬
ಸ್ಫುಟವಿಚಾರಗಳು ೫
ವರ್ತಮಾನಸಂಗ್ರಹಗಳು—
ವಿದೇಶ, ಒಳದೇಶ. ೬-೭
ದಕ್ಷಿಣ ಕನ್ನಡ-ಕಂಚೀವರಂ, ಮಂಜೇಶ್ವರ, ಬಂಟವಾಳ, ಫರಂಗಿಪೇಟೆ, ಮಂಗಳೂರು ೭
ಮದರಾಸು ಸಂಸ್ಥಾನದಲ್ಲಿ ಸುರಕ್ಷಿತಪಡಿಸಿದ ಮರಗಳೂ, ಮರಗಳ ಉಪಯೋಗವೂ . . . . ”
ಮಂಗಳೂರು ತಾಲೂಕು ಬೋರ್ಡು. ೭-೮
ಪತ್ರವ್ಯವಹಾರ ೧, ... ”
೧೨ನೇ ಕರ್ನಾಟಕ ಸಾಹಿತ್ಯ ಪರಿಷತ್ತು ೪

ಸ್ವದೇಶಾಭಿಮಾನಿ.

ಶಕ ೧೮೪೮ ಜ್ಯೇಷ್ಠ ಶು|| ೧೧ಯು ಶುಕ್ರವಾರ.

೧೨ನೆ ಕರ್ನಾಟಕ ಸಾಹಿತ್ಯ ಪರಿಷತ್ತು.

ರಾವ್ ಸಾಹೇಬ್ ಪಿ. ಜಿ. ಹಳಕಟ್ಟಿಯವರ ಅಧ್ಯಕ್ಷ ಭಾಷಣವು ಈಗಿನ ಕರ್ನಾಟಕದ ಎಲ್ಲಾ ಆಶಯಗಳನ್ನೂ ವ್ಯಕ್ತಪಡಿಸಿಯದೆ. ಈ ರೀತಿಯಲ್ಲಿ ನೋಡಿದರೆ ರಾವ್ ಸಾಹೇಬರ ಅಧ್ಯಕ್ಷ ಭಾಷಣವು ಪ್ರಮುಖವೂ ಸರಿಯಾದ ಅಭಿಪ್ರಾಯಗಳನ್ನು ಸೂಚಿಸಿರುವಂತಹುದೂ ಆಗಿದೆಯೆನ್ನಬಹುದು. ರಾವ್ ಸಾಹೇಬರ ಭಾಷಣವು ಕರ್ನಾಟಕತ್ವವನ್ನು ಸರಿಯಾಗಿ ಅಂಕಿಸುವಂತಹುದುದಾಗಿ ಕರ್ನಾಟಕದ ಪುನರುಜ್ಜೀವನದ ಸರಿಯಾದ ಚಿತ್ರವನ್ನು ಬಿಡಿಸುವಂತಹುದುದಾಗಿದೆ.

ಕರ್ನಾಟಕ ಚೇತನಕ್ಕಾಗಿ ಅವರು ಸೂಚಿಸಿರುವ ನಾಲ್ಕು ಕಾರ್ಯಗಳು—(೧) ಯೋಗ್ಯ ಶಿಕ್ಷಣ ಕ್ರಮ, (೨) ಕರ್ನಾಟಕ ಪ್ರಾಚೀನ ಸಂಸ್ಕೃತಿಯ ಶೋಧನ, (೩) ಗ್ರಂಥರಚನಾ ಕಾರ್ಯಕ್ಕೆ ವ್ಯವಸ್ಥಿತ ರೂಪನಿರ್ಮಾಣ, (೪) ಯೋಗ್ಯ ಸಂಘಟನೆ ಮತ್ತು ಪ್ರಚಾರಣ,—ಪ್ರಾಯಶಃ ಸಾಧಿಸಿದರೆ ಬಹಳ ಕಾರ್ಯಕಾರಿಯಾಗುವಂತಹುದುದಾಗಿದೆ. ಆದರೆ ಪ್ರಥಮದ ವಿಷಯವು ಸಾಧ್ಯವಾಗಬೇಕಾದರೆ ಕರ್ನಾಟಕದ ವಿಶ್ವವಿದ್ಯಾಲಯದ ಸ್ಥಾಪನೆಯಾಗುವ ಆವಶ್ಯಕತೆಯಿದೆ; ಮತ್ತು ಈ ವಿಷಯವನ್ನೂ ರಾವ್ ಸಾಹೇಬರು ಚೆನ್ನಾಗಿ ತಿಳಿದುಕೊಂಡಿರುವರು ಮತ್ತು ವಿಶ್ವವಿದ್ಯಾಲಯದ ವಿಷಯವಾಗಿಯೂ ಚರ್ಚಿಸಿರುವರು.

ವಿಶ್ವವಿದ್ಯಾಲಯದ ಏರ್ಪಾಡಿನ ವಿಷಯದಲ್ಲಿ ಇರುವ ತೊಂದರೆಗಳೂ ರಾವ್ ಸಾಹೇಬರ ಲಕ್ಷ್ಯಕ್ಕೆ ಬಾರದೆ ಇಲ್ಲ. ಆದರೆ ವಿಶ್ವವಿದ್ಯಾಲಯ ರಚನೆಗಾಗಿ ಅವರು ಕೊಟ್ಟ ಸೂಚನೆಯು ಮಾತ್ರ ಅಷ್ಟು ಕಾರ್ಯಕಾರಿಯೆಂದು ಹೇಳಲಾಗುವುದಿಲ್ಲ. ಕರ್ನಾಟಕ ವಿಶ್ವವಿದ್ಯಾಲಯ ರಚನೆಯೂ ಕರ್ನಾಟಕ ಏಕೀಕರಣವೂ ಅತೀ ಹತ್ತಿರದ ಸಂಬಂಧವುಳ್ಳ ಪ್ರಶ್ನೆಗಳಾಗಿವೆ. ಮುಖ್ಯತಃ ಕರ್ನಾಟಕ ವಿಶ್ವವಿದ್ಯಾಲಯ ರಚನೆಯು ಕರ್ನಾಟಕ ಏಕೀಕರಣದ ಮೇಲೆಯೇ ಹೊಂದಿಕೊಂಡಿದೆ. ಯಾವಾಗ ಕರ್ನಾಟಕ ಏಕೀಕರಣದ ಸಮಸ್ಯೆಯು ತೀರಿ ಕರ್ನಾಟಕ ಏಕೀಕರಣವಾಗುವುದೊ ಆಗ ಮಾತ್ರವೇ ಕರ್ನಾಟಕ ವಿಶ್ವವಿದ್ಯಾಲಯದ ರಚನೆಯು ಸಾಧ್ಯವಾಗುವುದು.

ಮಾತ್ರವಲ್ಲದೆ ಗ್ರಂಥರಚನೆಗೂ, ಸಂಘಟನೆ ಮತ್ತು ಪ್ರಚಾರಣೆಗೂ ಕರ್ನಾಟಕ ಏಕೀಕರಣವೇ ಅಡಿಗಲ್ಲಾಗಬೇಕಾಗಿದೆ. ಕರ್ನಾಟಕೀಯರೂ ಯಾವ ಪ್ರಶ್ನೆಗಿಂತಲೂ ಇದನ್ನು ಮುಂದಾಗಿಟ್ಟು ತಮ್ಮ ಶಕ್ತಿಯನ್ನೆಲ್ಲಾ ಕೇಂದ್ರೀಕರಿಸುವುದು ಅಗತ್ಯವಿದೆ. ಕರ್ನಾಟಕ ಏಕೀಕರಣದಿಂದ ಮತ್ತು ಪ್ರಾಂತ ರಚನೆಯಿಂದ ಉಳಿದ ಕರ್ನಾಟಕ ಉಜ್ಜೀವನಕ್ಕೆ ಅಗತ್ಯವಾದ ಎಲ್ಲಾ ಸಾಧನೆಗಳು ತನ್ನಷ್ಟಕ್ಕೆ ಸಾಧ್ಯವಾಗುವವು.

ಕರ್ನಾಟಕ ಏಕೀಕರಣದ ಸಮಸ್ಯೆಯನ್ನು ಬರೇ ರಾಜಕೀಯವೆಂಬ ಕಾರಣದಿಂದ ರಾವ್ ಸಾಹೇಬರು ಹಿಂದೆ ದೂಡಿದ ಕ್ರಮವು ಬಹಳ ವಿಚಿತ್ರವಿದ್ದಿದೆ. ರಾವ್ ಸಾಹೇಬರಿಗೆ ರಾಜಕೀಯ ಸಮಸ್ಯೆಗಳ ಮೇಲೆ ಅನಾದರವೊ ಇಲ್ಲವೆ ಅವುಗಳ ಹೆದರಿಕೆಯೊ ಏಕಿದೆ ಎಂಬುದು ನಮಗೆ ತಿಳಿಯುವುದಿಲ್ಲ. ರಾಜಕೀಯ ಶಬ್ದವನ್ನು ಕೇಳಿದ ಮಾತ್ರದಿಂದ ಎದೆ ಇಳಿದುಹೋಗತಕ್ಕಂತಹ ರಾಜಭಕ್ತರಲ್ಲಿ ರಾವ್ ಸಾಹೇಬರೂ ಒಬ್ಬರೆಂದು ನಾವು ವಿಶ್ವಸಿಸುವುದಿಲ್ಲ. ಕರ್ನಾಟಕ ಏಕೀಕರಣವು, ರಾವ್ ಸಾಹೇಬರು ಚರ್ಚಿಸಿದ ಇತರ ಎಲ್ಲಾ ಪ್ರಶ್ನೆಗಳಿಗೆ ಸಂಬಂಧಪಟ್ಟದ್ದಾಗಿದ್ದು, ಅದನ್ನು ಸಂಪೂರ್ಣವಾಗಿ ಚರ್ಚಿಸುವುದು ಅಗತ್ಯವಿದ್ದಿತು. ಹೊಸ ಜಿಲ್ಲೆಗಳ ರಚನೆಗಳ ವಿಷಯ ಕೂಡ ವಿವರವಾಗಿ ಚರ್ಚಿಸಿರುವ ರಾವ್ ಸಾಹೇಬರು ಕರ್ನಾಟಕ ಪ್ರಾಂತರಚನೆಯ ಬಗ್ಗೆಯಾದರೂ ಕೆಲವು ಉತ್ತಮ ಸೂಚನೆಗಳನ್ನು ಕೊಡಬಹುದಿತ್ತು. ಕರ್ನಾಟಕ ಸಾಹಿತ್ಯ ಸಮ್ಮೇಲನದ ಸುಸಂಘಟನೆಗೆ ಕೂಡ ಕರ್ನಾಟಕ ಏಕೀಕರಣವೇ ಕಾರಣವಾಗತಕ್ಕದಿದೆ. ಅಂತಿರುವಾಗ ಈ ಸಮಸ್ಯೆಯು ರಾವ್ ಸಾಹೇಬರ ಕೈಯಲ್ಲಿ ಇಷ್ಟು ಅನಾದರಕ್ಕೆ ಪಾತ್ರವಾಗುವಂತಹುದುದಾಗಿರಲಿಲ್ಲ.

ಪ್ರಾಚೀನ ಸಂಸ್ಕೃತಿಯ ಶೋಧನೆಯ ಬಗ್ಗೆ ಮತ್ತು ಗ್ರಂಥರಚನೆಯ ಬಗ್ಗೆ ಅಧ್ಯಕ್ಷರು ಅತ್ಯಂತ ಆಕಾಂಕ್ಷೆಯನ್ನು ತೋರಿಸಿರುವರಲ್ಲದೆ ಅನೇಕ ಸೂಚನೆಗಳನ್ನೂ ಕೊಟ್ಟಿರುವರು. ಆದರೆ ಇವು ಕಾರ್ಯಕಾರಿಯಾಗಲಿ ತತ್ಕಾಲಕ್ಕೆ ಸಾಧ್ಯವಿದ್ದವುಗಳಾಗಲಿ ಆಗಿಲ್ಲ. ಏಕೆಂದರೆ ಕರ್ನಾಟಕದಲ್ಲಿ ವಾಚನಾಭಿರುಚಿಯು ದಿನದಿಂದ ದಿನ ಕಡಿಮೆಯಾಗುತ್ತಾ ಬರುತ್ತಿದೆಯೇ ವಿನಹ ಅದು ಹೆಚ್ಚಾಗುವ ಸಂಭವ ತೋರುವುದಿಲ್ಲ. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕರ್ನಾಟಕೀಯ ವಾಚನಾಭಿರುಚಿಯನ್ನು ಹೆಚ್ಚಿಸುವ ವಿಷಯದಲ್ಲಿ ಲಕ್ಷ್ಯವನ್ನೇ ಕೊಟ್ಟಿಲ್ಲ. ಮುದ್ರಾಶಾಲೆಗಳು ಕರ್ನಾಟಕದಲ್ಲಿ ಹೆಚ್ಚುತ್ತಲೇ ಇವೆ. ಕೆಲವು ಉತ್ತಮವಾಗಲಿ ಸಾಮಾನ್ಯ ಗ್ರಂಥಕಾರರೂ ಕರ್ನಾಟಕದಲ್ಲಿ ಇದ್ದೇ ಇರುವರು. ಗ್ರಂಥಗಳು ಮುದ್ರಿತವಾಗಿ ಹೊರಬರಲಿಕ್ಕೆ ಯಾವ ತಡೆಯೂ ಇಲ್ಲ. ಆದರೆ ಓದುವವರಾಗಲಿ ಕೊಳ್ಳುವವರಾಗಲಿ ಯಾರೆಂಬುದೇ ಈ ವರೆಗೆ ನಿಶ್ಚಯಿಸಲ್ಪಡದ ವಿಷಯವಾಗಿದೆ. ಸಂಘಟಣೆ ಮತ್ತು ಪ್ರಚಾರಣೆ ಕಾರ್ಯಗಳನ್ನು ಅಧ್ಯಕ್ಷರು ಸೂಚಿಸುವ ರೀತಿಯಲ್ಲಿ ಮಾಡಿದರೂ ವಾಚನಾಭಿರುಚಿಯ ಈ ಅಭಾವವು ದೂರ ಹೋದೀತೆಂದು ನೆನಸಲಿಕ್ಕೆ ಆಗುವುದಿಲ್ಲ. ವಾಚನಾಲಯಗಳ ಪರಿಸ್ಥಿತಿಯನ್ನು ಬಲ್ಲವರು ಬಲ್ಲರು. ಗ್ರಾಮಗಳಲ್ಲಿಯೂ ಶಹರುಗಳಲ್ಲಿಯೂ ಎಷ್ಟೊ ಕನ್ನಡ ವಾಚನಾಲಯಗಳೂ ಗ್ರಂಥಭಾಂಡಾರಗಳೂ ರಚಿಸಲ್ಪಟ್ಟು ಅಲ್ಪಕಾಲದಲ್ಲಿಯೇ ಕಾಣೆಯಾಗಿ ಹೋಗಿವೆ.

ಜನತೆಯೊಳಗೆ ಕರ್ನಾಟಕ ವಾಚನಾಭಿರುಚಿಯನ್ನು ಉಂಟುಮಾಡುವ ಬಗ್ಗೆ ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಹೆಚ್ಚು ಲಕ್ಷ್ಯಕೊಡತಕ್ಕದ್ದು. ಸರಿಯಾದ ವಾಚನವಿದ್ದರೆ, ಪುಸ್ತಕಗಳನ್ನು ಕ್ರಯ ಕೊಟ್ಟು ಕೊಂಡುಕೊಳ್ಳುವವರಿದ್ದರೆ, ಉತ್ತಮ ಗ್ರಂಥರಚನೆಗಾಗಿಯಾಗಲಿ, ಪ್ರಾಚೀನ ಸಂಸ್ಕೃತಿ ಶೋಧನೆಗಾಗಿಯಾಗಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಹೆಚ್ಚು ಪರಿಶ್ರಮ ಪಡಬೇಕಾದ ಕೆಲಸವಿಲ್ಲ. ಸಾಕಷ್ಟು ಪುರಸ್ಕಾರವು ಸಿಕ್ಕುತ್ತದೆಂದಾದರೆ, ಆಯಾ ವಿಷಯಗಳಲ್ಲಿ ಅಭಿರುಚಿಯುಳ್ಳವರು ಅದರ ಬಗ್ಗೆ ಹೆಚ್ಚು ಉತ್ಸಾಹವನ್ನು ಸಹಜವಾಗಿಯೂ ಪಡೆಯುವರು. ಮರಾಠಿ, ಗುಜರಾಥಿ, ಹಿಂದಿ, ಬಂಗಾಳಿ, ತೆಲುಗು ಮುಂತಾದ ಭಾಷೆಗಳಲ್ಲಿ ಉತ್ತಮವಾದ ಪುಸ್ತಕಗಳ ರಚನೆಯಾಗಲಿಕ್ಕೆ ಕಾರಣವೇ ಅವರ ಭಾಷಾಭಿಮಾನ ಮತ್ತು ವಾಚನಾಭಿರುಚಿ. ಅಂತಹ ಅಭಿಮಾನವನ್ನೂ, ಅಭಿರುಚಿಯನ್ನೂ ಹುಟ್ಟಿಸಿದರೆ ಮಾತ್ರವೇ ಕರ್ನಾಟಕ ಗ್ರಂಥರಚನೆಯು ಉತ್ತಮ ತರಗತಿಯನ್ನು ಸೇರಬಹುದು. ಇದು ಸಾಧ್ಯವಾಗದಿದ್ದರೆ, ಈಗಿನಂತೆ ಕರ್ನಾಟಕವು ದ್ವಿತೀಯ ತರಗತಿಯ ವಾಙ್ಮಯದಿಂದಲೇ ತೃಪ್ತಿಹೊಂದಬೇಕು.

ಕರ್ನಾಟಕ ಭಾಷಾಭಿವೃದ್ಧಿಗಾಗಿಯೂ, ಕರ್ನಾಟಕ ಭಾಷಾ ಭೇದಗಳ ನಿವಾರಣೆಗೂ, ಕರ್ನಾಟಕ ಪ್ರಾಂತರಚನೆಗಾಗಿಯೂ, ಸಂಘಟನೆಯೂ, ಪ್ರಚಾರ ಕೆಲಸವೂ ಆವಶ್ಯಕವೆಂಬುದೇನೊ ನಿಜ. ಅಂತಹುದು ಪ್ರತಿ ಕಡೆಯಲ್ಲಿಯೂ ಅವಶ್ಯವಾಗಿ ಆಗತಕ್ಕದ್ದು. ಕರ್ನಾಟಕ ಪ್ರಾಂತರಚನೆಯ ಸಮಸ್ಯೆಗಳನ್ನು ರಾಜಕೀಯವೆಂದು ಹೊರದೂಡದೆ ಕರ್ನಾಟಕ ಸಾಹಿತ್ಯ ಪರಿಷತ್ತು ಮುಂದೊತ್ತುವುದು ಅಗತ್ಯವಿದೆ. ಅದರ ಶಾಖೆಗಳೂ ಉಪಶಾಖೆಗಳೂ ಪ್ರತಿ ಶಹರಿನಲ್ಲಿಯೂ, ಊರಿನಲ್ಲಿಯೂ, ಗ್ರಾಮದಲ್ಲಿಯೂ ಸ್ಥಾಪಿಸಲ್ಪಡುವುದು ಅಗತ್ಯವಿದೆ. ಆದರೆ ಕರ್ನಾಟಕವು ಸಂಘಟನೆಯ ಮೇಲೆ ಅಷ್ಟು ಪ್ರೀತಿಯುಳ್ಳದಂತಹುದಲ್ಲ. ಇದಕ್ಕೆ ನಮ್ಮ ಜಿಲ್ಲೆಯೇ ಒಂದು ನಿದರ್ಶನ. ಇಲ್ಲಿ ಒಂದು ಸಾಹಿತ್ಯ ಸಮ್ಮೇಲನವನ್ನು ರಚಿಸಲಿಕ್ಕೆ ಮಾಡಿದ ಪ್ರಯತ್ನಗಳು ಧೂಳಿಗೆ ಬಿದ್ದುಹೋದ ವಿಷಯವು ಎಲ್ಲರಿಗೂ ವಿದಿತವಿದೆ. ಅಲ್ಲದೆ ಎಷ್ಟೊ ಸಂಘಗಳು ಆಗಾಗ್ಗೆ ಅಲ್ಲಲ್ಲಿ ಸ್ಥಾಪಿಸಲ್ಪಟ್ಟು ಸ್ವಲ್ಪ ಸಮಯದಲ್ಲಿಯೇ ಅವು ನಾಶವನ್ನು ಹೊಂದುತ್ತಿವೆ. ಸಂಘಟನೆಯ ವಿಷಯದಲ್ಲಿ ಮೇಲಿನ ಸೂಚನೆಗಳನ್ನು ಕೊಡುವಾಗ ಈ ವಿಷಯವನ್ನು ನಾವು ಆಲೋಚಿಸಬೇಕು. ಪ್ರಾಯಶಃ ಅನೇಕ ಉತ್ಸಾಹಿಗಳು ಕೂಡಿದ ಒಂದು ಪ್ರಾಂತಿಕ ಸಂಸ್ಥೆಯೇ ಹೆಚ್ಚು ಪರಿಣಾಮಕಾರಿಯಾಗಬಹುದೆಂದು ನಮಗೆ ಕಾಣುತ್ತಿದೆ.

ಅಧ್ಯಕ್ಷ ಭಾಷಣದಲ್ಲಿ ಎಷ್ಟೆ ಲೋಪಗಳಿದ್ದರೂ ನಾವು ಈ ಭಾಷಣಕ್ಕಾಗಿ ಅಧ್ಯಕ್ಷರನ್ನೂ ಸಾಹಿತ್ಯ ಪರಿಷತ್ತನ್ನೂ ಅಭಿನಂದಿಸದಿರಲಾರೆವು. ಅಧ್ಯಕ್ಷ ಭಾಷಣವು ಕರ್ನಾಟಕದ ಎಲ್ಲಾ ಆಶಯಗಳನ್ನು ಸುಂದರವಾಗಿ ಗ್ರಥಿಸಿ ಕರ್ನಾಟಕದ ಮುಂದಿಟ್ಟಿದೆ. ಅದನ್ನು ಪ್ರಯೋಜನಕ್ಕಾಗಿ ಉಪಯೋಗಿಸುವ ಕೆಲಸವು ಕರ್ನಾಟಕ ಮುಂದಾಳುಗಳ ಮತ್ತು ಜನತೆಯದಾಗಿದೆ.

ವಿದೇಶ ವರ್ತಮಾನ.

— ಫ್ರಾನ್ಸದೇಶದಲ್ಲಿ ಪ್ರತಿ ವರ್ಷವೂ ಫ್ರೆಂಚ ಸುಪ್ರಿಮ್ ಕೋರ್ಟು ತೆರೆಯುವ ಸಮಯ ಮುಖ್ಯ ಪಟ್ಟಣವಾದ ಪೆರಿಸ್ ಪಟ್ಟಣದಲ್ಲಿ ಬ್ಯಾರಿಸ್ಟರರ ಒಂದು ಸಭೆ ಕೂಡುವದಿದೆ. ಈ ಸಭೆಗೆ ಭೂಲೋಕದ ಎಲ್ಲಾ ರಾಜ್ಯಗಳಲ್ಲಿಯ ಪ್ರಸಿದ್ಧಿ ಹೊಂದಿದ ಬ್ಯಾರಿಸ್ಟರುಗಳನ್ನು ಆಮಂತ್ರಿಸುವರು. ಈ ಸಮಯದಲ್ಲಿ ಪ್ರಖ್ಯಾತಿಪಟ್ಟ ಬ್ಯಾರಿಸ್ಟರರು ಲೋಕದಲ್ಲಿ ನಡೆದ ಯಾವದಾದರೂ ಪ್ರಾಮುಖ್ಯ ವ್ಯಾಜದ ವಿಷಯ ಭಾಷಣ ಕೊಡುವರು. ಈ ವರುಷ ಇಂಗ್ಲೆಂಡಿನ ಲೋರ್ಡ ಚೀಫ್ ಜಸ್ಟಿಸರು ಬರಲಿಕ್ಕಿರುವರು. ಆಗ ಅಮೇರಿಕದ ಒಂದು ಯುನಿವರ್ಸಿಟಿಯಲ್ಲಿ ಪದವೀಧರರೂ ಫ್ರೆಂಚ ಬ್ಯಾರಿಸ್ಟರರೂ ಆದ ಡೊಕ್ಟರ್ ಜುಲಿಯಟ್ ವಿಲಿಯರರು ಅಹಮದಾಬಾದಿನಲ್ಲಿ ಮಹಾತ್ಮಾ ಗಾಂಧಿಯವರ ಮೇಲೆ ನಡೆದ ನ್ಯಾಯದ ವಿಷಯ ಭಾಷಣ ಕೊಡುವರು.

— ಮಕ್ಕಾ ಪಟ್ಟಣದ ಸ್ಥಿತಿಯನ್ನು ವಿಚಾರಿಸುವುದಕ್ಕಾಗಿ ಮಕ್ಕಕ್ಕೆ ಹೊರಟ ತುರ್ಕಿದೇಶದ ಪ್ರತಿನಿಧಿಗಳು ಅಲ್ಲಿಗೆ ತಲಪಿರುವರು. ಅಫಘಾನಿಸ್ಥಾನದ ಕಡೆಯಿಂದ ಇಬ್ಬರು ಪ್ರತಿನಿಧಿಗಳೂ ಪ್ರಖ್ಯಾತಿಪಟ್ಟ ಒಬ್ಬ ಮುಲ್ಲರೂ ಹೊರಟಿರುವರು.

— ಇಟಲಿ ದೇಶದ ಈ ವರ್ಷದ ಜಮಾ ಖರ್ಚಿನಲ್ಲಿ ೬೩೮ ಮಿಲಿಯ ಲಾಯರುಗಳು (ಇಟಲಿ ನಾಣ್ಯ) ಮುನಾಫೆ ಉಳಿದಿರುವವು. ಸರಕಾರದವರು ಖರ್ಚನ್ನು ಕಡಿಮೆಮಾಡಿ ದೇಶದ ಉತ್ಪತ್ತಿಯನ್ನು ಹೆಚ್ಚಿಸಿ, ಪರರಾಜ್ಯಗಳಿಗೆ ಕೊಡತಕ್ಕ ಸಾಲವನ್ನು ತೀರಿಸಿದ್ದರಿಂದ ಮುನಾಫೆ ಉಳಿಯಲು ಕಾರಣವಾಯಿತು.

ಒಳದೇಶ ವರ್ತಮಾನ.

— ಮುಂಬಾಯಿಯ ಮಿಲ್ಲುಗಳ ಮ್ಹಾಲಿಕರ ಸಂಘದವರು ಇಂಗ್ಲೆಂಡಿನ ಮಜ್ದುರಗಾರರಿಗೆ ೧೦ ಪವನುಗಳನ್ನು ಕಳುಹಿಸಿರುವರು.

— ಡೊಕ್ಟರ ಸೈಪುದ್ದೀನ ಕಿಚಲು ಮತ್ತು ಪಂಡಿತ ಮದನಮೋಹನ ಮಾಲವೀಯರು ಚಿಟ್ಟಗೊಂಗ ಬಂದರಕ್ಕೆ ಬಂದು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರೊಡನೆ ಬಂದರದ ವಿಷಯ ವಿಚಾರಿಸುತ್ತಲಿರುವರು.

— ಲಕ್ನೌ ಮುನ್ಸಿಪಾಲಿಟಿಯವರು ಹಿಂದೂ ಮುಸಲ್ಮಾನರೊಳಗೆ ಕಲಹಗಳು ಉಂಟಾಗದಂತೆ ಮೊಹಲ್ಲಾ ಕಮಿಟಿಗಳನ್ನು ನೇಮಿಸುತ್ತಿರುವರು. ಕೌಲೇಶ್ವರ ದೇವಸ್ಥಾನದ ಬಳಿಯಲ್ಲಿ ಹಿಂದೂ-ಮುಸಲ್ಮಾನರೊಳಗೆ ಆದ ಕಾಳಗದಲ್ಲಿ ೬ ಮಂದಿಯನ್ನು ಕೈದುಮಾಡಿರುವರು. ಅನೇಕರ ಕೈಯಲ್ಲಿದ್ದ ದೊಣ್ಣೆಗಳನ್ನೂ ಎಳೆದುಕೊಂಡಿರುವರು. ಈ ಪಟ್ಟಣದ ನಿವಾಸಿಕರಲ್ಲಿ ಹಲವರು ಪಟ್ಟಣವನ್ನು ಬಿಟ್ಟು ಹೋಗುತ್ತಿರುವರು.

— ಪಂಜಾಬ ಖಿಲಾಫತ್ ಕಮಿಟಿಯ ಇಲೆಕ್ಷನ್ ಬೋರ್ಡಿನವರು ಪಂಜಾಬ ಸಂಸ್ಥಾನದ ಎಲ್ಲಾ ಜಿಲ್ಲೆಗಳ ಮುಖ್ಯ ಪಟ್ಟಣಗಳಲ್ಲಿ ಖಿಲಾಫತ್ ಬೋರ್ಡುಗಳನ್ನು ನೇಮಿಸಬೇಕಾಗಿ ನಿರ್ಣಯಿಸಿರುವರು.

— ಲಾಲಾ ಲಜಪತರಾಯರೂ ಪಂಡಿತ ಸಂತಾನಮ್‌ರೂ ಪಂಜಾಬ ಕೊಂಗ್ರೆಸ ಕಮಿಟಿಗೆ ರಾಜಿನಾಮೆಯನ್ನು ಕೊಟ್ಟಿರುವುದರಿಂದ ರಾವಲ್‌ಪಿಂಡಿ ಕೊಂಗ್ರೆಸ ಕಮಿಟಿಯವರು ಪ್ರತ್ಯೇಕ ಸ್ವತಂತ್ರ ಕಮಿಟಿಯನ್ನು ಮಾಡಿರುವರು.

— ೧೯೨೫ನೇ ಮಾರ್ಚಿ ೩೧ಕ್ಕೆ ಅಂತ್ಯವಾಗುವ ವರುಷದಲ್ಲಿ ಬರ್ಮಾ ದೇಶದಲ್ಲಿ ೩೬೪ಲಕ್ಷ ರೂಪಾಯಿ ಕ್ರಯಬಾಳುವ ೬೦,೪೧೩ ಹಂಡ್ರಡ್‌ವೇಟ ಕೋಲರಗು ಬರ್ಮಾದೇಶದಲ್ಲಿ ತಯಾರಾಗಿಯದಂತೆ. ಈ ಕೈಗಾರಿಕೆಯನ್ನು ಬರ್ಮಾ ದೇಶದಲ್ಲಿ ಇನ್ನೂ ಅಭಿವೃದ್ಧಿಗೆ ತರುವಂತೆ ಇಬ್ಬರು ಉದ್ಯೋಗಸ್ಥರನ್ನು ಸೆಂಟ್ರಲ್ ಪ್ರೊವಿನ್ಸಸಿಗೆ ಬರ್ಮಾ ಸರಕಾರದವರು ಕಳುಹಿಸಿದ್ದರು. ಇವರು ಈಗ ಬರ್ಮಾಕ್ಕೆ ಬಂದು ಮೈಯಮೊ ಮತ್ತು ಫೆಡರೇಟೆಡ್ ಮಲೆಸ್ಟೇಟಿನಲ್ಲಿ ಕೋಲರಗಿನ ವಿಷಯ ಶೋಧನೆ ನಡಿಸುತ್ತಿರುವರು.

— ಮಹಾರಾಜ ಜೋರ್ಜ ಸಾರ್ವಭೌಮರ ಜನ್ಮದಿನವನ್ನು ಸಿಕಂದರಾಬಾದ ಮಿಲಿಟರಿ ಮೈದಾನಿನಲ್ಲಿ ಸೈನಿಕರು ವಿಜೃಂಭಣೆಯಿಂದ ಆಚರಿಸಿದರು. ಇಂಡಿಯದ ದಕ್ಷಿಣ ಭಾಗದ ಸೈನ್ಯಗಳ ಕಮಾಂಡಿಂಗ್ ಇನ್ ಚೀಫರು ಮೈದಾನಿನಲ್ಲಿ ಹಾಜರಿದ್ದು ಸೆಲ್ಯುಟನ್ನು ಮರ್ಯಾದಾಪೂರ್ವಕ ಅಂಗೀಕರಿಸಿದರು.

— ಮುಂಬಾಯಿಯ ಜುಹು ಎಂಬಲ್ಲಿ ಸಮುದ್ರ ಮೀಯಲಿಕ್ಕೆ ಇಳಿದ ಒಂದು ಪಾರ್ಸಿ ಹೆಂಗಸೂ ಗಂಡಸೂ ಮುಳುಗಿ ಸತ್ತರು.

— ಬರ್ಮಾದೇಶದ ಅರಕಾನ ಜಿಲ್ಲೆಯಲ್ಲಿ ಸ್ಯಾಕ್ಲೋನಿನಿಂದ ಬಹಳ ಹಾನಿಯೂ ನಷ್ಟವೂ ಉಂಟಾಗಿಯದೆ. ಅಲ್ಲಲ್ಲಿ ರಿಲೀಫ್ ಕಮಿಟಿಗಳನ್ನು ಸರಕಾರದವರು ಏರ್ಪಡಿಸಿರುವರು.

— ಕರೆನ್ಸಿ ಕಮಿಶನಿನ ರಿಪೋರ್ಟು ಈ ತಿಂಗಳ ಅಂತ್ಯದಲ್ಲಿ ಹೊರಬೀಳುವದು.

— ಬರುವ ಸೋಮವಾರ ವ್ಯಾಸರೋಯಿಯವರು ಹಿಂದೂದೇಶದ ಎಲ್ಲಾ ಭಾಗಗಳ ಬೇಸಾಯದ ಇಲಾಖೆಯ ಮಂತ್ರಿಗಳ ಸಭೆಯನ್ನು ಸಿಮ್ಲಾದಲ್ಲಿ ಕರೆಯುವರು.

— ರಂಗೂನ್ ಟೈಮ್ಸ್ ಎಂಬ ವರ್ತಮಾನ ಪತ್ರಿಕೆಯ ಅರಕಾನ ಸ್ಯಾಕ್ಲೋನ್ ಹಾವಳಿಗಾಗಿ ತೆರೆದ ಫಂಡಿಗೆ ರೂ. ೩ ಸಾವಿರ ಜಮೆಯಾಗಿದೆ.

— ಪಂಜಾಬಿನ ಬೇರೆ ಬೇರೆ ಭಾಗಗಳಲ್ಲಿ ಕೊಂಗ್ರೆಸ್ ಸೂತ್ರಗಳ ಪ್ರಚಾರಕ್ಕಾಗಿಯೂ, ತಿಲಕ ಸ್ವರಾಜ್ಯ ಫಂಡಿನ ವಂತಿಗೆಗಾಗಿಯೂ ಕೆಲವು ಕೊಂಗ್ರೆಸ್ ಮೆಂಬರರು ಸಂಚರಿಸುತ್ತಿರುವರು.

— ಪಂಜಾಬಿನ ೧೨ ಜಿಲ್ಲೆಗಳಲ್ಲಿ ಪ್ಲೇಗಿನ ಹಾವಳಿಯು ಹೆಚ್ಚಾಗಿರುವದು.

— ದಕ್ಷಿಣ ಆಫ್ರಿಕದ ಯೂನಿಯನ್ ಸರಕಾರಕ್ಕೆ ಇಂಡಿಯಾ ಸರಕಾರದ ಡೆಪ್ಯುಟೇಶನ್‌ನಿನ ಮುಖ್ಯಸ್ಥರಾದ ಜಿ. ಎಫ್. ಪೆಡಿಸನ್‌ರವರು ಮದರಾಸು ಸರಕಾರದ ಲೇಬರ್ ಕಮಿಶನರಾಗಿ ನೇಮಕಹೊಂದಿರುವರು.

— ಬರ್ಮಾ ಸರಕಾರದ ಹೋಮ್ ಮೆಂಬರರಾದ ಮಾ|| ಬಿಂಗ್ ಎಂಬವರು ಕಠಿಣ ತರದ ಅಸ್ವಸ್ಥದಲ್ಲಿರುವರು.

— ಮುಂಬಾಯಿಯ ಮುನ್ಸಿಪಾಲ ಕೊರ್ಪರೇಶನಿನವರು ಮುನ್ಸಿಪಾಲಿಟಿಯ ಕೆಲಸಗಳು ಎಲ್ಲಾ ಜನರಿಗೆ ತಿಳಿಯುವಂತೆ ಒಂದು ಗಜೇಟನ್ನು ಹೊರಡಿಸಲಿಕ್ಕೆ ಆಲೋಚಿಸುತ್ತಿರುವರು.

— ಸರೋಜಿನಿದೇವಿಯವರು ಯುನೈಟೆಡ್ ಪ್ರೊವಿನ್ಸಸಿನ ಹಳ್ಳಿಹಳ್ಳಿಗಳಲ್ಲಿಯೂ ಕೊಂಗ್ರೆಸ್ ಕೆಲಸಕ್ಕಾಗಿ ಸಂಚರಿಸುತ್ತಿರುವರು.

— ಉರಿಯಾ ಭಾಷೆಯನ್ನಾಡುವ ಜನರಿರುವ ಪ್ರಾಂತ್ಯವನ್ನು ಒಟ್ಟುಕೂಡಿಸಿ ಒಂದು ಪ್ರತ್ಯೇಕ ಸಂಸ್ಥಾನವನ್ನಾಗಿ ಮಾಡಿ ಒಬ್ಬ ಲೆಪ್ಟನೆಂಟ ಗವರ್ನರರ ಕೈಕೆಳಗೆ ಇರಿಸಬೇಕಾಗಿ ಬೀಹಾರಿನಲ್ಲಿರುವ ಉರಿಯಾ ಜನರು ಇಂಡಿಯಾ ಸರಕಾರಕ್ಕೆ ಮನವಿ ಮಾಡಿದ್ದರು. ಅದಕ್ಕಾಗಿ ನೇಮಕ್ಕಾದ ಕಮಿಶನಿನವರು ಸಹ ಒಂದು ಪ್ರತ್ಯೇಕ ಉರಿಯಾ ಸಂಸ್ಥಾನವನ್ನು ಮಾಡಬೇಕೆಂದು ಶಿಫಾರಸು ಮಾಡಿದ್ದರು. ಆದರೆ ಸೆಂಟ್ರಲ್ ಪ್ರೊವಿನ್ಸಸ್‌ನ ಜನರು ಆ ಸಂಸ್ಥಾನಕ್ಕೆ ಸೇರಿದ ಉರಿಯಾ ಭಾಗವನ್ನೂ, ಬಂಗಾಳಕ್ಕೆ ಸೇರಿದ ಉರಿಯಾ ಜಿಲ್ಲೆಗಳನ್ನೂ, ಮದರಾಸು ಸಂಸ್ಥಾನಕ್ಕೆ ಸೇರಿದ ವಿಜಯನಗರ ಏಜನ್ಸಿ ಟ್ರ್ಯಾಕ್ಟಿನ ಮುಖ್ಯ ಅರಸರಾದ ವಿಜಯನಗರ ಮಹಾರಾಜರು ಆಕ್ಷೇಪಿಸುತ್ತಿರುವರು.

— ಚಿಟ್ಟಗೊಂಗ ಮುನ್ಸಿಪಾಲಿಟಿಯವರು ತಮ್ಮ ಸರಹದ್ದಿನೊಳಗಿರುವ ೬ ವರುಷಗಳಿಂದ ೧೦ ವರುಷಗಳ ವರೆಗಿನ ಮಕ್ಕಳಿಗೆ ಪ್ರಾಥಮಿಕವಿದ್ಯೆಯನ್ನು ಕಡ್ಡಾಯವಾಗಿ ಕೊಡಬೇಕೆಂದು ನಿಶ್ಚಯಿಸಿ ಸರಕಾರಕ್ಕೆ ಬರೆದಿರುವರು.

— ಇಂಡಿಯದ ಎಲ್ಲಾ ಭಾಗಗಳಿಗೂ ಎಲ್ಲಾ ತರದ ವಾರ್ತೆಗಳು ತಿಳಿಯಪಡಿಸುವುದಕ್ಕಾಗಿ ಇಂಡಿಯನ್ ಬ್ರೊಡ್ ಕಾಸ್ಟಿಂಗ್ ಕಂಪೆನಿ ಎಂಬ ಹೆಸರಿನ ಒಂದು ಕಂಪೆನಿಯು ಮುಂಬಾಯಿಯಲ್ಲಿ ಸ್ಥಾಪಿಸಲ್ಪಡುವುದು. ಇದರ ಮೂಲಧನವು ೧೫ಲಕ್ಷ ರೂಪಾಯಿ, ೧೫೦,೦೦೦ ಪಾಲುಗಳು. ಒಂದೊಂದು ಪಾಲಿನ ಬೆಲೆಯು ೧೦ರೂ. ಈ ಶೇರುಗಳಲ್ಲಿ ೬೦ ಸಾವಿರ ಶೇರುಗಳು ಮಾತ್ರವೇ ಮಾರಲ್ಪಡುವವು. ಈ ಕಂಪೆನಿಯವರು ಸರಕಾರದ ಸಂಕ್ಷನ್ ಸಿಕ್ಕಿದೊಡನೆ ಮುಂಬಾಯಿಯಲ್ಲಿಯೂ ಕಲ್ಕತ್ತದಲ್ಲಿಯೂ ಎರಡು ಸ್ಟೇಶನುಗಳನ್ನು ಕಟ್ಟುವರು. ಈ ಸ್ಟೇಶನುಗಳು ಲಂಡನ್ ಸ್ಟೇಶನಿನಷ್ಟೇ ದೊಡ್ಡದಾಗಿರುವುದು.

— ಭೋಪಾಲ ಬೇಗಮರೂ ಅವರ ಉತ್ತರಾಧಿಕಾರಿಯಾದ ನವಾಬ ಹಮಿದುಲ್ಲಾ ಖಾನರೂ, ಕಚ್ ಮಹಾರಾಜರೂ ವಿಲಾಯತಿಯಿಂದ ಮುಂಬಾಯಿಗೆ ಬಂದಿಳಿದರು.

— ಜಿ. ಐ. ಪಿ. ರೈಲುವೇ ಕಂಪೆನಿಯವರು ಮುಂಬಾಯಿಯಲ್ಲಿರುವ ವಿಕ್ಟೋರಿಯಾ ಟರ್ಮಿನಸ್ ಸ್ಟೇಶನಿನಿಂದ ಬಾಂದ್ರಾ ಮತ್ತು ಥಾನಾ ಸ್ಟೇಶನುಗಳ ವರೆಗೆ ಚಲಾವಣೆಯಾಗುವ ರೈಲುಗಳನ್ನು ವಿದ್ಯುಚ್ಛಕ್ತಿಯ ಬಲದಿಂದ ನಡಿಸಲು ಆರಂಭಿಸಿರುವರು. ಬರುವ ಸಪ್ಟೆಂಬರಿನೊಳಗೆ ಕುರ್ಲಾ ವರೆಗೆ ಇದೇ ರೀತಿಯಲ್ಲಿ ನಡಿಸಲ್ಪಡುವವು. ೧೯೨೭ನೇ ಇಸವಿಯ ಅಂತ್ಯದೊಳಗೆ ಕಲ್ಯಾಣದ ವರೆಗೂ, ೧೯೨೮ರಲ್ಲಿ ಪೂನದ ವರೆಗೂ, ೧೯೩೦ರಲ್ಲಿ ಇಗುತಪುರಿ ವರೆಗೂ ಇದೇ ರೀತಿಯಲ್ಲಿ ಟ್ರೈನುಗಳು ನಡಿಯುವವು.

ದಕ್ಷಿಣ ಕನ್ನಡ.

ಕಂಚೀವರಂ:— ಇದೇ ತಿಂಗಳ ತಾ. ೩ರಲ್ಲಿ ಇಲ್ಲಿಯ ಸರ್ವತೀರ್ಥಂ ಸರೋವರದಲ್ಲಿ ಸ್ನಾನಕ್ಕೆಂದು ಹೋಗಿದ್ದ ವೈಶ್ಯ ಯುವಕರಿಬ್ಬರು ವಿನೋದದಿಂದ ಜಲದಲ್ಲಿ ಒಬ್ಬರಿಗೊಬ್ಬರು ದೂಡಾಡಿಕೊಂಡು ಇರುವಲ್ಲಿ ಕಾಲುಜಾರಿ ಮುಳುಗಿ ಮೃತರಾದರು. ಇವರು ಪೆರುಂಬಳ್ಳಿ ಪಕ್ಕಂ ಗ್ರಾಮಸ್ಥರಾಗಿದ್ದು ಮೃತಿಯನ್ನು ಹೊಂದುವ ಕಾಲದಲ್ಲಿ ಅಕ್ಕತಂಗಿಯರಾದ ಇವರ ಹೆಂಡಂದಿರು ಇಬ್ಬರೂ ಸರೋವರದ ಕಿನಾರೆಯಲ್ಲಿ ಕೂತುಕೊಂಡಿದ್ದರು. ಮೃತರ ಶವಗಳನ್ನು ಮಜೂರಿಯವರ ಮೂಲಕ ಸರೋವರದಿಂದ ಮೇಲಕ್ಕೆ ತೆಗಿಸಬೇಕಾಯಿತು.

ಮಂಜೇಶ್ವರ:— ರಸ್ತೆಯ ಕಿನಾರೆಯಲ್ಲಿ ಜಲ್ಲಿಕಲ್ಲುಗಳ ರಾಶಿಗಳು ಹಾಕಲ್ಪಟ್ಟಿವೆ. ಇಷ್ಟು ಸೇರಾಗಿರುವ ಮಾರ್ಗದಲ್ಲಿ ಇದನ್ನು ದಾಸ್ತಾನು ಮಾಡಿ ಇಟ್ಟ ಲಾಟಾನುಗಳನ್ನು ಸಹಾ ತೆಗಿಸಿದುದರಿಂದ ಅನೇಕರು ಕತ್ತಲಲ್ಲಿ ಈ ಜಲ್ಲಿರಾಶಿಗಳನ್ನು ಅಪ್ಪಿಹಿಡಿದು ಚುಂಬನ ಕೊಡಬೇಕಾಗುತ್ತದೆ. ಇದನ್ನು ಕೂಡಲೆ ತೆಗಿಸಿದರೆ ಅತೀ ಉತ್ತಮ.

ಕಳೆದ ಸಂಚಿಕೆಯಲ್ಲಿ ಪ್ರಸ್ತಾಪಿಸಿದಂತೆ ರಾ|| ಭಕ್ತರಲ್ಲದೆ ರಾ|ಗಳಾದ ಜನಾರ್ದನ ಶೆಣೆಗಳವರೂ, ವಿಟ್ಠಭಟ್ಟರವರೂ ನೀರಿನ ಧರ್ಮಗಳನ್ನು ಮಾಡುತ್ತಿದ್ದರು. ಕಳೆದ ತಾ. ೫ರಿಂದ ಮಳೆಯ ನಿಶಾನಿಯು ಕಂಡುಬಂದು ಮಳೆ ಬರುತ್ತಲಿದೆ. ಆದರೆ ಬಾವಿಗಳಲ್ಲಿ ನೀರು ಏರಲಿಲ್ಲ.

ಶ್ರೀ ಮದನಂತೇಶ್ವರ ದೇವಸ್ಥಾನದ ಅರ್ಚಕರೂ, ದರ್ಶನ ಪಾತ್ರಿಗಳೂ ಆಗಿದ್ದ ರಾ|| ದಯಾನಂದ ಭಟ್ಟರವರು ಕಳೆದ ಗುರುವಾರ ದಿನ ೪೪ನೇ ವರುಷ ಪ್ರಾಯದಲ್ಲಿ ವಿಧಿವಶರಾದರೆಂದು ತಿಳಿಸಲು ತುಂಬಾ ವ್ಯಸನಪಡುತ್ತೇವೆ. ಭಗವಂತನು ಇವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ!

ಬಂಟ್ವಾಳ:— ಜೂನ್ ಮೊದಲನೇ ತಾರೀಕಿನಿಂದ ಮಳೆಗೆ ಪ್ರಾರಂಭವಾಗಿ ಈಗ ದಿನಕ್ಕೆ ಒಂದೆರಡು ಮಳೆ ಬರುತ್ತಿದೆ. ಬೇಸಾಯಗಾರರು ಸಾಗ್ವಳಿಗೆ ಪ್ರಾರಂಭಿಸಿರುವರು. ಈ ಕಾಲ ಮುಳಿ ಮತ್ತು ಮಡಲಿಗೆ ಬೆಲೆ ಬಹಳ ಕಡಿಮೆಯಾಗಿದೆ.

ಇಲ್ಲಿಯ ಪಂಚಾಯತ ಕೋರ್ಟನ್ನು ಮೂಡಗ್ರಾಮಕ್ಕೆ ಒಯ್ಯಬೇಕಾಗಿ ಮೂಡಗ್ರಾಮದವರು ಮಾಡಿದ ಅರ್ಜಿಗೆ ಬಂಟ್ವಾಳಕ್ಕೆ ಒಂದು, ಮೂಡಗ್ರಾಮಕ್ಕೆ ಒಂದು, ಎಂತ ಪ್ರತ್ಯೇಕ ಪ್ರತ್ಯೇಕ ನಿರ್ಣಯಿಸಿ, ಬಂಟ್ವಾಳ ಪಂಚಾಯತ ಕೋರ್ಟಿಗೆ ಮ|| ರಾ|| ಸರ್ವೆಟ್ ಗಣಪತಿರಾವ್ ಎಂಬವರನ್ನು ಪ್ರೆಸಿಡೆಂಟರಾಗಿಯೂ, ಮೂಡಗ್ರಾಮ ಫಿರ್ಕೆಗೆ ಒಬ್ಬ ಬಂಟ ಮಹಾಶಯರನ್ನು ಪ್ರೆಸಿಡೆಂಟರಾಗಿ ನೇಮಿಸಿರುತ್ತಾರಂತೆ.

ಅಯ್ಯನಾಯ್ಕರ ಹಿತ್ತಿಲನ್ನು ಬಂಡಾರಿಬೆಟ್ಟಿನ ತೋಡಿಗೆ ಹಾಕಿರುವ ಸಂಕದ ಲೆವಲಿಗೆ ಸರಿಯಾಗಿ ಈ ಕಾಲ ಬೋರ್ಡಿನವರು ಮಣ್ಣು ತುಂಬಿಸಿ ಭರ್ತಿಮಾಡಿಸಿರುತ್ತಾರಷ್ಟೆ. ಅದು ಒಂದೆರಡು ಮಳೆಯಿಂದಲೇ ಸಂಕದ ಹತ್ತಿರ ಒಂದು ಬದಿಗೆ ಕಲ್ಲು ಕಟ್ಟಿಕೊಳ್ಳದೆ ಇದ್ದದರಿಂದ ಮಣ್ಣು ಕುಸಿದು ಹೋಗಿ ಬೇಗನೆ ಹೊಂಡಬೀಳುವುದರಲ್ಲಿ ಸಂಶಯವಿಲ್ಲ. ಆದುದರಿಂದ ಬೋರ್ಡಿನವರು ಇದರ ವಿಷಯದಲ್ಲಿ ಕೂಡಲೇ ಆಲೋಚನೆ ಮಾಡದೆ ಇದ್ದರೆ ಜಾಸ್ತಿನ ನಷ್ಟಕಷ್ಟಪಡುವದಕ್ಕೆ ಕಾರಣವಾಗುತ್ತದೆ.

ಸುಮಾರು ಮುಕ್ಕಾಲು ಮೈಲು ಉದ್ದಕ್ಕೆ ಇರುವ ಬಂಟ್ವಾಳ ಪಟ್ಟಣದೊಳಗೆ ಮೋಟಾರು ಬಸ್ಸುಗಳನ್ನು ಜೋರಾಗಿ ಓಡಿಸದೆ ಎತ್ತುಗಳ ಗಾಡಿಯಷ್ಟೇ ಮೆಲ್ಲಗೆ ಚಾಲು ಮಾಡಬೇಕಾಗಿ ಇಲ್ಲಿಯ ಮಹಾಶಯರುಗಳು ಕಲೆಕ್ಟರ ಧೊರೆಗಳಿಗೆ ಅರ್ಜಿಮಾಡುವುದರಲ್ಲಿದ್ದಾರೆ. ಇಲ್ಲಿ ಉದ್ದಕ್ಕೆ ಒಂದೇ ಮಾರ್ಗ ಇರುವದರಿಂದ ಗಾಡಿಗಳೂ, ಸ್ಯಾಕಲುಗಳೂ, ತಲೆಹೊರೆ ಹುಲ್ಲು ಸೌದೆ ಮಾರುವವರೂ, ಪ್ರಯಾಣಸ್ಥ ಗಂಡಸರೂ, ಹೆಂಗಸರೂ, ಶಾಲೆ ಮಕ್ಕಳೂ ಸಂಚರಿಸುತ್ತಿರುವುದರಿಂದ ಯಾರಿಗೂ ತೊಂದರೆಯಾಗದಂತೆ ಅರ್ಜಿಮಾಡಲಿಕ್ಕೆ ಕಾರಣವಾಗಿದೆ.

ಇಲ್ಲಿಯ ಲೋಂಡ್ ಲೋರ್ಡ ಎಸ್. ವೆಂಕಟರಮಣಯ್ಯನವರು ಫೋಸ್ಟು ಆಫೀಸಿಗಾಗಿ ಸುಮಾರು ಮೂರು ನಾಲ್ಕು ಸಾವಿರ ರೂಪಾಯಿ ವೆಚ್ಚಮಾಡಿ ಕಟ್ಟಿಸಿದ ಕಟ್ಟೋಣವು ತಯಾರಾಗುತ್ತಾ ಬಂದದೆ. ಜುಲಾಯಿ ೫ರ ಒಳಗೆ ಯಾವ ಆತಂಕವಿಲ್ಲದೆ ಪ್ರವೇಶ ಆಗಬಹುದಾಗಿ ತೋರುತ್ತದೆ.

ಫರಂಗಿಪೇಟೆ:— ಇಲ್ಲಿ ೧೯೨೫ನೇ ಆಗೋಸ್ತು ತಿಂಗಳಲ್ಲಿ ಬಂದ ನೆರೆಗೆ ಕೊಚ್ಚಿಹೋದ ಸುಮಾರು ನೂರು ಗಜ ಉದ್ದದ ಮಾರ್ಗದ ಕೆಲಸವು ಮೂರು ವರ್ಷದಿಂದಲೂ ಆಗುತ್ತಾ ಉಂಟು. ಈ ಕೆಲಸದ ಕ್ರಮ ಹ್ಯಾಗೆಂದರೆ ಬೇಸಿಗೆಯಲ್ಲಿ ಇದರ ಗೊಡವೆ ಇಲ್ಲ. ಮಳೆಗಾಲದಲ್ಲಿ ಶುರುಮಾಡಿದರೆ ಮೋಟಾರು ಬಸ್ಸಿನವರಿಗೂ ಪ್ರಯಾಣಿಕರಿಗೂ ಹೇಳತೀರದ ಕಷ್ಟ. ಕಳೆದ ವರ್ಷ ಈ ಮಾರ್ಗಕ್ಕೆ ಮಣ್ಣು ತುಂಬಿಸಿ ಜೆರಿಯಾಗದಂತೆ ಉದ್ದಕ್ಕೆ ಗೋಣಿಪಟ್ಟೆಯನ್ನು ಹೊದಿಸಿದ್ದರು. ಮಾರ್ಗದಲ್ಲಿ ಬಸ್ಸುಗಳು ಹೂತುಹೋಗದಂತೆ ಕಲ್ಲಿನ ಬೋರ್ಡರ್ಸ್ಸಗಳನ್ನು ಹಾಸಿ ಮಾರ್ಗ ಉದ್ದಕ್ಕೆ ಮರದ ಸಿಲ್ಪರುಗಳನ್ನು ಮುಚ್ಚಿದರು. ಕಳೆದ ವರ್ಷ ಇಷ್ಟೆಲ್ಲಾ ಕಷ್ಟಪಟ್ಟು ಅನುಭವಿಸಿದವರು ತಿರಿಗಿ ಮಳೆಗಾಲ ಬರುವ ವರೆಗೆ ಯಾಕೆ ಕಾದುಕೊಂಡರಪ್ಪಾ! ಡಿಸ್ಟ್ರಿಕ್ಟ್‌ಬೋರ್ಡು ಮೆಂಬರರಲ್ಲಿ ಯಾರಾದರೂ ಸ್ವಲ್ಪ ಇಲ್ಲಿಯ ವರೇಗೆ ದಯಮಾಡಿ ಬಂದು ಈ ಮಾರ್ಗ ದುರುಸ್ತಿಯ ವಿಷಯ ಸ್ವತಹ ನೋಡಿ ಈ ರೀತಿಯಲ್ಲಿ ಬೋರ್ಡಿನ ಹಣ ಯಾಕೆ ಹಾಳುಮಾಡುತ್ತಾರೆಂದು ವಿಚಾರಿಸಬಹುದಲ್ಲವೆ?

ಮಂಗಳೂರು.

ಇಲ್ಲಿಯ ವೈ. ಎಂ. ಸಿ. ಎ., ಯ ನಾಯಕ ಸಭೆಯವರು ಮ. ಅಸಯೇಲ್ ಎಸ್. ವತ್ಸ ಬಿ. ಎ. ಇವರನ್ನು ಗೌರವ ಕಾರ್ಯದರ್ಶಿಯಾಗಿ ನೇಮಿಸಿದ್ದಾರೆ. ಸದರಿ ಮ. ವತ್ಸರು ನಿನ್ನೆಯಿಂದ ತನ್ನ ಉದ್ಯೋಗವನ್ನು ಕೈಗೊಂಡಿದ್ದಾರೆ.

ಮಂಗಳೂರು ತಾಲೂಕು ಬೋರ್ಡಿನ ಮೆಂಬರರ ಜನರಲ್ ಸಭೆಯು ಮೂಲ್ಕಿ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ೧೯ನೇ ಜೂನ್ ಶನಿವಾರ ಬೆಳಗ್ಗೆ ಘಂಟೆ ೯-೩ಕ್ಕೆ ಕೂಡುವುದಾಗಿ ಈ ಮೂಲಕ ಜ್ಯಾಹೀರು ಪಡಿಸೋಣಾಗಿಯದೆ.

ವಿವಿಧ ವಿಷಯಗಳು.

ಭೂಲೋಕದಲ್ಲಿರುವ ಅತೀ ದೊಡ್ಡ ಶಿಲಾಪ್ರತಿಮೆ.

ಪುರಾತನಕಾಲದವರು ಅನೇಕ ಮಹತ್ವದ ಕೆಲಸಗಳನ್ನು ಮಾಡಿರುವರು. ಈಜಿಪ್ತದೇಶದಲ್ಲಿರುವ ಪಿರಮಿಡುಗಳ ಪರಿಮಾಣವನ್ನು ಅವುಗಳನ್ನು ಕಟ್ಟಲಿಕ್ಕೆ ಉಪಯೋಗಿಸಿದ ಸಾಧನೆಗಳ ಭಾರವನ್ನು ವಿಚಾರಿಸಿನೋಡಿದರೆ ಇದನ್ನು ಸರಿತೋಲಿಸುವಂಥಾದ್ದು ಭೂಲೋಕದಲ್ಲಿ ಮತ್ತೊಂದಿರುವುದಿಲ್ಲ. ನೀಲನದಿಯ ಮುಖಜ ಭೂಮಿಯು ಸರಿಯಾಗಿ ಸಮತಟ್ಟಾಗಿರುವುದನ್ನು ನೋಡಿ ಹಳೆ ಇಜಿಪ್ತಿನವರು ಸುತ್ತಲೂ ಇರುವ ಪರ್ವತಗಳಷ್ಟು ಎತ್ತರವಾದ ಕಟ್ಟಡಗಳನ್ನು ಕಟ್ಟಲಾರಂಭಿಸಿದರು. ರೊಡಸಸ್‌ನಲ್ಲಿರುವ ಕೊಲೊಸಸ್ ಎಂಬ ಪ್ರತಿಮೆಯಷ್ಟು ದೊಡ್ಡದು ಈಗಲೂ ಮತ್ತೊಂದಿರುವುದಿಲ್ಲ. ಪುರಾತನಕಾಲದಲ್ಲಿ ಇದರ ಎರಡು ಕಾಲುಗಳ ಮಧ್ಯದಿಂದ ಹಡಗಗಳು ಹೋಗುವಾಗು ಅವುಗಳ ಕುವೆಮರಗಳು ಈ ಪ್ರತಿಮೆಯ ಮೊಣಕಾಲಿಗೆ ಸಹ ತಾಗುತ್ತಿರಲಿಲ್ಲ. ಇದರ ಎತ್ತರವು ೧೨೬ ಅಡಿ. ಇದರ ಒಂದೊಂದು ಕೈಬೆರಳುಗಳು ಒಬ್ಬ ಮನುಷ್ಯನಷ್ಟು ದೊಡ್ಡದಾಗಿತ್ತು. ಇದನ್ನು ಲಂಡನ್ ಪಟ್ಟಣದ ಚಾರ್ಲ್ಸ ಎಂಬವನು ಮಾಡಿದನು. ಇದು ೫೬ ವರುಷಗಳ ವರೆಗೆ ಅಲ್ಲಿಯೇ ಇತ್ತು. ಅನಂತರ ಒಂದು ಭೂಕಂಪದಿಂದ ಬಿದ್ದುಹೋಯಿತು.

ಮದರಾಸು ಸಂಸ್ಥಾನದಲ್ಲಿ ಸುರಕ್ಷಿತಪಡಿಸಿದ ಕಾಡುಗಳೂ ಮರಗಳ ಉಪಯೋಗವೂ.

ಮದರಾಸು ಸಂಸ್ಥಾನದಲ್ಲಿ ೧೯೦೦೦ ಚದರಮೈಲು ಸುರಕ್ಷಿತಪಡಿಸಿದ ಕಾಡುಗಳು ಫೋರೆಸ್ಟ ಇಲಾಖೆಯ ಕೈಕೆಳಗಿವೆ. ಇದರಲ್ಲಿ ೧೦೦೦ ಚದರಮೈಲು ಕಾಡುಗಳು ಮನುಷ್ಯನಿಗೆ ಹೋಗಲು ಅಸಾಧ್ಯವಾದ ಪ್ರದೇಶಗಳಾಗಿರುವುದರಿಂದ ಅವುಗಳಲ್ಲಿರುವ ಮರಗಳನ್ನು ಯಾವತರದ ಉಪಯೋಗಕ್ಕೂ ತರಲಿಕ್ಕೆ ಸಾಧ್ಯವಿಲ್ಲ. ಯುದ್ಧದ ಸಮಯ ಸೈನ್ಯಕ್ಕೆ ಹೆಚ್ಚು ಮರಗಳು ಬೇಕಾದುದರಿಂದಲೂ, ಕೆಲವು ಸುರಕ್ಷಿತಪಡಿಸಿದ ಕಾಡುಗಳನ್ನು ಗ್ರಾಮಪಂಚಾಯತುಗಳಿಗೆ ಬಿಟ್ಟುಕೊಡಬೇಕಾದುದರಿಂದಲೂ ಈ ಸುರಕ್ಷಿತಪಡಿಸಿದ ಕಾಡುಗಳಲ್ಲಿ ಯಾವಯಾವ ತರದ ಮರಗಳು ಇವೆ ಎಂದು ತನಿಖೆಮಾಡುವ ಆಗತ್ಯವು ಸರಕಾರದ ಪಾಲಿಗೆ ಬಂತು. ಅಷ್ಟರ ವರೆಗೆ ಕೆಲಸವಾಗಿ ಹೋಗುತ್ತಿದ್ದ ಎಷ್ಟೋ ಬೇರೆಬೇರೆ ಜಾತಿಯ ಮರಗಳ ಉಪಯೋಗವನ್ನು ಫೋರೆಸ್ಟ ಇಲಾಖೆಯ ಆಫೀಸರರು ಕಂಡುಕೊಳ್ಳುವ ಅಗತ್ಯವಿತ್ತು.

ರೈಲುವೇ ಬೋರ್ಡಿನವರು ತಮಗೆ ಬೇಕಾಗುವ ಸ್ಲಿಪರುಗಳನ್ನು, ಗಾಡಿಗಳಿಗೆ ಬೇಕಾದಮರಗಳನ್ನೂ ಇಂಡಿಯದಲ್ಲಿಯೇ ಕೊಂಡುಕೊಳ್ಳುವಂತೆ ಮಾಡಲಿಕ್ಕೆ ಅನುಕೂಲವಿದೆಯೋ ಎಂದು ಫೋರೆಸ್ಟ ಇಲಾಖೆಯವರೊಡನೆ ವಿಚಾರಿಸಿದ್ದರಿಂದಲೂ ದೇಶಹಿತೈಷಿಗಳು, ಯಂತ್ರಸಾಧನೆಗಳನ್ನಿಟ್ಟು ಮರದ ಕೈಗಾರಿಯನ್ನು ಅಭಿವೃದ್ಧಿಪಡಿಸಬೇಕೆಂದು ಹಟಹಿಡಿದುದರಿಂದಲೂ ಫೋರೆಸ್ಟ ಇಲಾಖೆಯವರು ಮರಗಳ ಶೋಧನೆಯನ್ನು ಮತ್ತಷ್ಟು ಮನಸ್ಸುಕೊಟ್ಟು ಮುಂದರಿಸಬೇಕಾಯಿತು.

ಮದರಾಸು ಸಂಸ್ಥಾನದಲ್ಲಿ ಕಟ್ಟಡಗಳಿಗೂ, ಪೆಟ್ಟಿಗೆಗಳಿಗೂ, ಚಿತ್ರಗಳ ಗೂಡುಗಳಿಗೂ ರೈಲುವೆ ಸ್ಲೀಪರಗಳಿಗೂ ಬೇಕಾಗುವ ಮರಮಟ್ಟುಗಳನ್ನು ಪರದೇಶಗಳಿಂದ ತರಿಸುತ್ತಿರುವರು. ಮದರಾಸು ಸಂಸ್ಥಾನದಲ್ಲಿರುವ ಸುರಕ್ಷಿತಪಡಿಸಿದ ಕಾಡುಗಳಿಂದ ೧/೩ನೇ ಪಾಲು ಮರಗಳನ್ನು ಮಾತ್ರವೇ ಮೇಲಿನ ಕಾರ್ಯಗಳಿಗೆ ಉಪಯೋಗಿಸುತ್ತಿದ್ದರು. ಅವುಗಳಿಗೆ ಬೇಕಾಗುವಷ್ಟು ಮರಗಳನ್ನು ಒಂದೆರಡು ವರುಷಗಳಲ್ಲಿ ತಯಾರಿಸುವುದು ಸುಲಭಕಾರ್ಯವಲ್ಲ. ಪರದೇಶಗಳಲ್ಲಿಯೂ ಈ ಮರದ ಕೈಗಾರಿಕೆಗಳ ಅಭಿವೃದ್ಧಿಯು ಸಹ ಬೇಗನೆ ಆಗಲಿಲ್ಲ. ಹೊಸ ನಮೂನೆಯಲ್ಲಿ ಮರಮಟ್ಟುಗಳನ್ನು ತಯಾರಿಸಲಿಕ್ಕೂ, ಮರಗಳನ್ನು ಶಿಗಿಯುವ ಯಂತ್ರಸಾಧನೆಗಳನ್ನು ನಡಿಸಲಿಕ್ಕೂ, ಕಾಡುಗಳ ಸರ್ವೆಮಾಡಿ ಬೇರೆಂದ ಕಡೆಗಳಲ್ಲಿ ಸುಲಭವಾದ ಮಾರ್ಗಗಳನ್ನು ಮಾಡಿಸಲಿಕ್ಕೂ, ಯಾವಯಾವ ಜಾತಿಯ ಎಷ್ಟೆಷ್ಟು ಬೆಲೆಯ ಎಷ್ಟು ಮರಗಳು ಯಾವಯಾವ ಕಾಡುಗಳಲ್ಲಿ ಇವೆ ಎಂದು ತನಿಖೆಮಾಡಲಿಕ್ಕೂ ಉದ್ಯೋಗಸ್ಥರನ್ನು ತರಬೇತುಮಾಡಬೇಕಾಗಿದೆ. ಇಷ್ಟರ ವರೆಗೆ ಜನರು ಉಪಯೋಗಿಸದೆ ಇರುವ ಅನೇಕ ಜಾತಿಯ ಮರಗಳನ್ನು ಕಾಡುಗಳಿಂದ ಶಿಗಿದು ತಂದು ಅವುಗಳು ಹೆಚ್ಚು ವರುಷಗಳ ವರೆಗೆ ಹಾಳಾಗದಂತೆ ಮಾಡುವ ಉಪಾಯಗಳನ್ನು ಕಂಡುಹಿಡಿದು ಜನರಿಗೆ ಕ್ರಮೇಣ ಆ ಮರಗಳ ಉಪಯೋಗವು ತಿಳಿಯುವಂತೆ ಮಾಡಬೇಕು.

ಇಷ್ಟರ ವರೆಗೆ ಈ ಸಂಸ್ಥಾನದಲ್ಲಿರುವ ಜೆಸ್ತಿನ ಕಾಡುಗಳಲ್ಲಿರುವ ಮರಗಳ ವಿಷಯ ತನಿಖೆಯು ಸಂಪೂರ್ಣವಾಗಿಯದೆ. ಆದರೆ ಹೇರಳ ಹಣವನ್ನು ಖರ್ಚುಮಾಡುವ ಮೊದಲು ಚೆನ್ನಾಗಿ ಆಲೋಚಿಸಬೇಕಾಗಿದೆ. ಒಲವೊಕೋಟಿನ ಹತ್ತಿರ ಮರದ ಕೈಗಾರಿಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಹಳೆಯ ನಮೂನೆಯಲ್ಲಿ ಹೇರಳ ಹಣ ಖರ್ಚಾಗಿಯದೆ. ಈ ಹಣವು ವ್ಯರ್ಥವಾಗದಂತೆ ಹೊಸ ಉಪಾಯಗಳಿಂದ ಈ ಕೈಗಾರಿಯನ್ನು ಮುಂದರಿಸಬೇಕಾಗಿದೆ. ಜನರು ಇಷ್ಟರ ವರೆಗೆ ಉಪಯೋಗಿಸದೆ ಇರುವ ಮರಗಳ ಅಡ್ಡಗಳನ್ನೂ ಹಲಿಗೆಗಳನ್ನೂ ಜನರು ಥಟ್ಟನೆ ಉಪಯೋಗಿಸುವಂತಿಲ್ಲ. ಆದುದರಿಂದ ಒಲವೊಕೋಟಿನಲ್ಲಿ ಮರ ಶಿಗಿಯುವ ಒಂದು ಸಣ್ಣ ಯಂತ್ರವನ್ನೂ, ಪೆಟ್ಟಿಗೆಗಳನ್ನು ಮಾಡುವ ಒಂದು ಸಣ್ಣ ಯಂತ್ರವನ್ನೂ ಶಿಗಿದ ಮರಗಳನ್ನು ಒಣಗಿಸುವ ಒಂದು ಯಂತ್ರಸಾಧನೆಯನ್ನೂ ಇಡಬೇಕಾಯಿತು. ಇದಕ್ಕಾಗಿ ಅನೇಕ ಶೋಧನೆಗಳನ್ನು ಮಾಡಬೇಕಾಯಿತು. ಶೋಧನೆಯ ಸಮಯ ಅನೇಕ ಹೊಸ ಸಂಗತಿಗಳು ತಿಳಿದು ಬಂದವು. ಯಂತ್ರಗಳು ಬಂದು ಒಲವೊಕೋಟಿಗೆ ತಲಪಲಿಕ್ಕೆ ಹೆಚ್ಚು ಸಮಯಬೇಕಾಯಿತು. ಬಂದ ಮೇಲೆ ಯಂತ್ರದ ಒಂದು ಭಾಗವು ಮುರಿದು ಹೊಸ ಭಾಗವನ್ನು ತರಿಸಲಿಕ್ಕೆ ಸ್ವಲ್ಪ ಸಮಯ ಬೇಕಾಯಿತು. ಯಂತ್ರದಲ್ಲಿ ಶಿಗಿದ ಮರಗಳು ಕಡಿಮೆಯಾಗಿ ಮರದ ಕ್ರಯವು ಏರಿತು. ಕೆಲವು ಮರಗಳು ಅಲ್ಲಿಯೇ ಕೆಲಸವಾಗಿ ಹೋದವು. ಈಗ ಇಲ್ಲಿ ಒಳ್ಳೆ ತರದ ಕೆಲಸವು ನಡೆದು ಮುನಾಫೆಯು ಉಳಿಯುತ್ತದೆ.

ಹಸಿ ಮರಗಳನ್ನು ಕಡಿದು ತಂದು ಅವುಗಳನ್ನು ಶಿಗಿದು ಯಂತ್ರದಲ್ಲಿ ಒಣಗಿಸಿದುದರಿಂದ ಇಷ್ಟರ ವರೆಗೆ ಜನರು ಏನೂ ಪ್ರಯೋಜನಕ್ಕೆ ಬೀಳುವುದಿಲ್ಲವೆಂದು ಹೇಳಿದ ಮರಗಳು ಈಗ ಉಪಯೋಗಕ್ಕೆ ಬಂದಿವೆ. ಉಗಿಯ ಶೆಖೆಯಿಂದ ಈ ಮರಗಳನ್ನು ಒಣಗಿಸುವುದರಿಂದ ಮರವನ್ನು ಹಾಳುಮಾಡುವ ಕ್ರಿಮಿಕೀಟಗಳೂ ಆಳಂಬಿಯ ಬೀಜಗಳೂ ಸತ್ತುಹೋಗಿ ಇವುಗಳ ಬಾಧೆಯಿಂದ ಮರವು ಸುರಕ್ಷಿತವಾಗುತ್ತದೆ. ಮರಗಳು ಒಡದುಹೋಗುವುದಿಲ್ಲ. ಹೆಚ್ಚು ವರುಷಬಾಳುತ್ತವೆ. ಈ ಮರಗಳಿಗೆ ಈಗ ಗಿರಾಕಿಗಳು ಹೆಚ್ಚೆಚ್ಚಾಗುತ್ತಾ ಬರುತ್ತಾರೆ. ಕೆಲವು ಮರಗಳನ್ನು ಸಾಗ್ವಾನಿ ಮರಗಳ ಬದಲಾಗಿಯೂ, ಕೆಲವನ್ನು ಮೊಟರ ಬಸ್ಸುಗಳ ಬೊಡಿಯನ್ನು ಕಟ್ಟುವುದಕ್ಕೂ ಉಪಯೋಗಿಸುತ್ತಾರೆ. ಅದಲ್ಲದೆ ಜನರಿಗೆ ಉಪಯೋಗಕ್ಕೆ ಬೇಕಾದ ನಮೂನೆಯ ಅಡ್ಡಗಳನ್ನೂ, ಹಲಿಗೆಗಳನ್ನೂ, ರೀಪುಗಳನ್ನೂ ಕೊಯ್ದು ತಯಾರಿಸುವುದರಿಂದ ಜನರು ಇವುಗಳನ್ನೇ ಕೊಂಡುಕೊಳ್ಳುತ್ತಿರುವರು. ಹೀಗೆ ಮಾಡುವುದರಿಂದ ಇಷ್ಟರ ವರೆಗೆ ವ್ಯರ್ಥವಾಗಿ ಹಾಳಾಗುತ್ತಿದ್ದ ಮರಗಳು ಮಾರಾಟಕ್ಕೆ ಸಿದ್ಧವಾಗಿ ಸರಕಾರಕ್ಕೆ ಸಿಕ್ಕುವ ಆದಾಯವು ಹೆಚ್ಚಾಗುವುದು.

ಡೆರಾಡೂನ್ ಫೋರೆಸ್ಟ ಇನ್ಸ್ಟಿಟ್ಯೂಟಿನಲ್ಲಿ ರೈಲುವೆ ಸ್ಲಿಪರುಗಳಿಗೂ ಗಾಡಿಕಟ್ಟಲಿಕ್ಕೂ ಬೇಕಾದ ಮರಗಳ ವಿಷಯ ತನಿಖೆ ನಡಿಸುವ ರೀತಿಯಲ್ಲಿಯೇ ಇಲ್ಲಿಯೂ ತನಿಖೆನಡಿಸುವುದು ಅತೀ ಅಗತ್ಯವಾಗಿದೆ. ಈಗ ರೈಲುವೆಗಳಿಗೆ ಬೇಕಾಗುವ ಲಕ್ಷಾಂತರ ರೂಪಾಯಿ ಕ್ರಯಬಾಳುವ ಸ್ಲಿಪರುಗಳನ್ನು ಒಸ್ಟ್ರೇಲಿಯದಿಂದಲೂ, ಅಮೇರಿಕಾ ಖಂಡದ ಕೆನಡಾ ದೇಶದಿಂದಲೂ ತರಿಸುತ್ತಿರುವರು. ಆದುದರಿಂದ ಸ್ಲಿಪರುಗಳನ್ನು ಇಲ್ಲಿಯೇ ಕೊಂಡುಕೊಂಡರೆ ರೈಲುವೇ ಖರ್ಚು ಕಡಿಮೆಯಾಗುವುದು. ಆದುದರಿಂದ ಸ್ಲಿಪರುಗಳನ್ನು ತಯಾರಿಸಿ ಒಣಗಿಸುವ ಯಂತ್ರಗಳನ್ನು ಸ್ಥಾಪಿಸಬೇಕಾಗಿದೆ. ಪರದೇಶಗಳಲ್ಲಿಯೂ ಸ್ಲಿಪರುಗಳನ್ನು ಇದೇ ರೀತಿಯಲ್ಲಿ ತಯಾರಿಸುತ್ತಾರೆ.

ಪೆಟ್ಟಿಗೆಗಳನ್ನು ತಯಾರಿಸಲಿಕ್ಕೆ ಬೇಕಾದ ಮರಗಳು ಎಷ್ಟೊ ಇವೆ. ಈಗ ದಕ್ಷಿಣಹಿಂದೂದೇಶಕ್ಕೆ ೪ ಮಿಲಿಯ ಪೆಟ್ಟಿಗೆಗಳನ್ನು ಪರದೇಶಗಳಿಂದ ತರಿಸುತ್ತಾರೆ. ಜಾವಾ ಮತ್ತು ಪಿಲಿಫೈನ ದ್ವೀಪಗಳಲ್ಲಿ ಮೊದಲು ಪರದೇಶಗಳಿಂದ ತರಿಸುತ್ತಿದ್ದ ಪೆಟ್ಟಿಗೆಗಳನ್ನು ಈಗ ಅಲ್ಲಿರುವ ಮರಗಳಿಂದಲೇ ತಯಾರಿಸುತ್ತಿರುವರು.

ಪ್ರತಿ ಒಂದು ಹೊಸ ಕೈಗಾರಿಕೆಯು ದೇಶದ ಐಶ್ವರ್ಯವನ್ನು ವೃದ್ಧಿಪಡಿಸುತ್ತಿರುವದು. ಬೇಸಾಯಮಾಡಿ ಕುಟುಂಬಜೀವನನಡಿಸಲಿಕ್ಕೆ ಸಾಧ್ಯವಾಗದೆ ಇರುವ ಜನರು ಬೇಸಾಯದ ಕೆಲಸವು ಮುಗಿದನಂತರ ಮರದ ಕೈಗಾರಿಕೆಯನ್ನು ಮಾಡಿ ಸುಖದಿಂದ ಜೀವನಮಾಡಲಿಕ್ಕೆ ಬೇಕಾದ ಹಣವನ್ನು ಸಂಪಾದಿಸಬಹುದು.

ಇಂಡಿಯದಲ್ಲಿ ಕಾಗದದ ಕೈಗಾರಿಕೆಯನ್ನು ಮಾಡಲಿಕ್ಕೆ ಯಾವಯಾವ ತರದ ಸಾಹಿತ್ಯಗಳು ಇಂಡಿಯದಲ್ಲಿ ಇವೆ ಎಂದು ತನಿಖೆ ನಡಿಸಲಿಕ್ಕೆ ಇಂಡಿಯಾ ಸರಕಾರದವರು ಒಬ್ಬ ಪಲ್ಪಿನ ವಿದ್ವಾಂಸನನ್ನು ಕರತರಿಸಿ ತನಿಖೆ ನಡಿಸಿದರು. ಇವರು ಬಿದಿರು ಮತ್ತು ಕೆಲವು ಹುಲ್ಲುಗಳಿಂದ ಕಾಗದವನ್ನು ತಯಾರಿಸಬಹುದೆಂದೂ ಅದರಲ್ಲಿಯೂ ಇಟಾ ಎಂಬ ಜಾತಿಯ ಬಿದಿರಿನಿಂದ ಉತ್ತಮವಾದ ಕಾಗದವನ್ನು ತಯಾರಿಸಬಹುದೆಂದೂ ಹೇಳಿರುವರು. ಪಾಪನಾಶನಮ್ ಹ್ಯಾಡ್ರೊ ಇಲೆಕ್ಟ್ರಿಕ್ ಯಂತ್ರಸಾಧನೆಯ ಕೆಲಸವು ಶುರುವಾದೊಡನೆ ಅದರ ಹತ್ತಿರವೇ ವಿದ್ಯುಚ್ಛಕ್ತಿಯ ಬಲದಿಂದ ನಡಿಯುವ ಒಂದು ಕಾರ್ಖಾನೆಯನ್ನು ಇಟ್ಟರೆ ಒಳ್ಳೇದಿತ್ತು. ಹೀಗೆ ಮಾಡಿದ್ದರೆ ಅನ್ಯದೇಶದ ಕಾಗದಕ್ಕೆ ಕೊಡುವ ಹಣವು ದೇಶದಲ್ಲಿಯೇ ಉಳಿದಂತಾಗುವುದು.

ದೊಡ್ಡ ದೊಡ್ಡ ಮರಗಳನ್ನು ಕಡದರೆ ಕಾಡುಗಳು ನಾಶವಾಗುತ್ತವೆಂದು ಕೆಲವರು ಹೇಳುತ್ತಿರುವರು. ಆದರೆ ಈ ದೊಡ್ಡ ಮರಗಳ ಅಡಿಯಲ್ಲಿ ಸಣ್ಣ ಮರಗಳಿಗೆ ಸರಿಯಾದ ಸೂರ್ಯಕಿರಣಗಳು ಸಿಕ್ಕಿದೊಡನೆ ಅವುಗಳು ಬೆಳೆದು ದೊಡ್ಡ ಮರಗಳಾಗತ್ತವೆ. ಕಾಡುಗಳು ಮತ್ತೂ ಅಭಿವೃದ್ಧಿಹೊಂದುತ್ತವೆ. ಆದುದರಿಂದ ಮದರಾಸು ಸರಕಾರವು ದೇಶದ ಏಳಿಗೆಗಾಗಿ ಕಾಡುಗಳ ಸ್ಥಿತಿಯನ್ನು ವೃದ್ಧಿಪಡಿಸುತ್ತಿರುವುದು.

—: ಮಂಗಳೂರು ತಾಲೂಕು ಬೋರ್ಡು. :—

ಶ್ರೀಯುತ ಕೆ. ರಘುಚಂದ್ರ ಬಲ್ಲಾಳ್, ಎಮ್. ಎಲ್. ಸಿ. ಇವರು ಮೇಲ್ಕಂಡ ಬೋರ್ಡಿನ ಮೆಂಬರರ ಬರುವ ಸಭೆಯಲ್ಲಿ ಕೆಳಗಣ ಪ್ರಶ್ನೆಗಳನ್ನು ಕೇಳುವರಾಗಿ ಸದರಿ ಬೋರ್ಡಿನ ಪ್ರೆಸಿಡೆಂಟರಿಗೆ ನೋಟೀಸು ಕೊಟ್ಟಿರುತ್ತಾರೆ.

ಪ್ರಶ್ನೆಗಳು.

೧. (a) ಈ ತಾಲೂಕು ಬೋರ್ಡು ಅಧಿಕಾರಕ್ಕೆ ಒಳಪಟ್ಟ ಸಂತೆ ಮಾರ್ಕೇಟುಗಳು ಯಾವವು?

(b) ಸದರಿ ಮಾರ್ಕೇಟುಗಳನ್ನು ಕಳೆದ ಎರಡು ವರುಷಗಳಲ್ಲಿ ಕಂಟ್ರಾಕ್ಟಿಗೆ ಪಡಕೊಂಡವರು ಯಾರ್‍ಯಾರು?

(c) ಸದರಿ ಮಾರ್ಕೇಟುಗಳ ಬಾಬ್ತು ತಾಲೂಕು ಬೋರ್ಡಿಗೆ ಆ ಕಾಲದಲ್ಲಿ ವಸೂಲಾಗತಕ್ಕ ಮೊಬಲಗು ಎಷ್ಟು?

(d) ಸದರಿ ಮಾರ್ಕೇಟುಗಳ ಕಂಟ್ರಾಕ್ಟದಾರರಿಂದ ಕಳೆದ ಎರಡು ವರುಷಗಳಲ್ಲಿಯೂ ವಸೂಲಾಗದೆ ಬಾಕಿ ನಿಂತ ಮೊಬಲಗು ಎಷ್ಟು? ಯಾರ್‍ಯಾರ ಮೇಲೆ?

(e) ಬಂಟ್ವಾಳ ಸಂತೆ ಮಾರ್ಕೇಟಿನ ಬಾಬ್ತು ಈ ಬೋರ್ಡಿಗೆ ಕಂಟ್ರಾಕ್ಟರನಿಂದ ಬರತಕ್ಕ ಕಂತುಗಳ ಐವೇಜು ದೀರ್ಘಕಾಲದಿಂದ ವಸೂಲಾಗದೆ ಬಾಕಿ ನಿಕ್ಕದೆ ಎಂಬುದು ನಿಜವೋ? ಹಾಗಾದರೆ ಆ ಬಾಕಿ ಐವೇಜು ಎಷ್ಟು? ಬಾಕಿಯಾಗುವದರೆ ಕಾರಣವೇನು? ಅದರ ವಸೂಲಿಗೆ ಯಾವ ಯತ್ನಗಳು ಜರಗಿಸಲ್ಪಟ್ಟಿವೆ?

(f) ಈ ಪೈಕಿ ಕೆಲವು ಐವೇಜು ಬಂಟ್ವಾಳ ಕಸಬಾ ಪಟೇಲರು ವಸೂಲು ಮಾಡಿ ಈ ಬೋರ್ಡಿಗೆ ಈ ವರೇಗೆ ತಲ್ಪಿಸಲಿಲ್ಲವೆಂಬುದು ನಿಜವೋ? ನಿಜವಾದರೆ ಆ ಬಾಬಿನಲ್ಲಿ ಏನು ವ್ಯವಸ್ಥೆ ಮಾಡಲಾಗುವುದು?

೩. (a) ಈ ತಾಲೂಕು ಬೋರ್ಡಿನ ಪರವಾಗಿ ಮೂಲ್ಕಿ ಕಸಬೆಯಲ್ಲಿ ಒಂದು ಪಬ್ಲಿಕ್ ಟೇಂಕ್ ಯಾನೆ ಕೆರೆಯನ್ನು ದುರುಸ್ತಿಯಿಂದ ಪುನಃ ಕಟ್ಟುವ ಬಗ್ಗೆ ಕಾಮಗಾರಿಯು ಹಾಲಿ ನಡಿಯುತ್ತ ಇದೆಯೆಂಬುದು ನಿಜವೋ?

(b) ಸದರಿ ಕಾಮಗಾರಿ ಕುರಿತು ಈ ಬೋರ್ಡಿನವರ ಯಾವ ತಾರೀಕಿನ ಸಭೆಯಲ್ಲಿ ಸೆಂಕ್ಷನ್ ಆಗಿತ್ತು? ಯಾವ್ಯಾವ ಮೆಂಬರುಗಳು ಹಾಜರಿದ್ದರು? ಸದರಿ ವಿಷಯವನ್ನು ಸಭೆಯ ಮುಂದಿಟ್ಟದ್ಯಾರು? ಅನುಮೋದಿಸಿದ್ಯಾರು? ಪುಷ್ಟೀಕರಿಸಿದ್ಯಾರು?

(c) ಸದರಿ ಕೆರೆಯು ಸರಕಾರಿ ಪೊರಂಬೋಕೆಂಬುದು ನಿಜವೋ?

(d) ಸದರಿ ಕೆರೆಯಿಂದ ಸಾರ್ವಜನಿಕ ಉಪಯೋಗವಿರುತ್ತದೋ? ಇರುವದಾದರೆ ಯಾವ ಬಗ್ಗೆ? ಆ ಕುರಿತು ಸರ್ವಜನರ ಕಡೆಯಿಂದ ಸರಕಾರಕ್ಕೆ ಯಾ ಈ ಬೋರ್ಡಿಗೆ ಅರ್ಜಿಗಳು ಬಂದಿದ್ದವೋ? ಬಂದಿರುವದಾದರೆ ಯಾರ್ಯಾರಿಂದ? ಅಂಥ ಅರ್ಜಿಗಳನ್ನು ಮೇಜಿನ ಮೇಲೆ ಇಡಬಹುದೋ?

(e) ಸದರಿ ಕೆರೆಯನ್ನು ಸರಕಾರಿ ಪೊರಂಬೋಕಿನಿಂದ ಈ ಬೋರ್ಡಿನವರಿಗೆ ವರ್ಗಾಯಿಸಿರುತ್ತದೋ? ಇರುವದಾದರೆ ಯಾವಾಗ್ಗೆ ವರ್ಗಾಯಿಸಿದ್ದು? ಸದರಿ ಕೆರೆಯ ನೀರು ಕುಡಿಯುವ ಉಪಯೋಗಕ್ಕೊ ಯಾ ಅನ್ಯ ಉಪಯೋಗಕ್ಕೋ?

(f) ಸದರಿ ಕೆರೆಯು ಆಸಪಾಸಿನಲ್ಲಿ ವರ್ಗದಾರರ ಭೂಮಿಗಳಿರುತ್ತಾವೆಂಬುದು ನಿಜವೋ?

(g) ಸದರಿ ಕೆರೆಯ ಬಗ್ಗೆ ಸೆಂಕ್ಷನಾದ ಮೊಬಲಗೆಷ್ಟು? ಆ ಬಗ್ಗೆ ನಕ್ಷೆ ವ ಅಂದಾಜು ಪಟ್ಟಿ ಯಾವ ಆಫೀಸರರಿಂದ ತರಿಸಿಕೊಂಡದೆ? ಅವುಗಳನ್ನು ಮೇಜಿನ ಮೇಲೆ ಇಡಬಹುದೋ?

(h) ಸದರಿ ಕೆರೆಯ ದುರುಸ್ತಿ ಕಾಮಗಾರಿಯನ್ನು ಕಂಟ್ರಾಕ್ಟಿಗೆ ವಹಿಸಿಕೊಂಡವರು ಈ ತಾಲೂಕು ಬೋರ್ಡು ಪ್ರೆಸಿಡೆಂಟರ ಮಾವ ಎಂಬದು ನಿಜವೋ? ಸದರಿಯವರಿಗೆ ಕಂಟ್ರಾಕ್ಟಿಗೆ ಕೊಟ್ಟದ್ದು ಯಾರು? ಮತ್ತು ಅವರಿಗೆ ಕೊಡಲಿಕ್ಕೆ ಕಾರಣವೇನು? ಅವರು ಮೊದಲು ಈ ಬೋರ್ಡಿನ ಬಾಬ್ತು ಯಾವದಾದರೂ ಕಾಮಗಾರಿಯನ್ನು ಕಂಟ್ರಾಕ್ಟಿಗೆ ವಹಿಸಿಕೊಂಡಿದ್ದಾರೋ?

(i) ಸದರಿ ಕಾಮಗಾರಿ ಕುರಿತು ಟೆಂಡರ್ ಕೇಳಿ ನೋಟೀಸನ್ನು ಯಾಕೆ ಪ್ರಕಾಶ್ ಮಾಡಲಿಲ್ಲ?

(j) ಸದರಿ ಕಂಟ್ರಾಕ್ಟದಾರರು ಆ ಕಾಮಗಾರಿಯನ್ನು ಎಷ್ಟು ಸಮಯದೊಳಗೆ ಪೂರೈಸಿಕೊಡಲಿಕ್ಕೆ ಒಪ್ಪಿದ್ದಾರೆ? ಆ ಬಗ್ಗೆ ಅವರು ಕರಾರು ಬರಕೊಟ್ಟಿದ್ದಾರೋ? ಇರುವದಾದರೆ ಆ ಕರಾರನ್ನು ಮೇಜಿನ ಮೇಲೆ ಇಡಬಹುದೋ? ಸದರಿ ಕೆರೆಗೆ ಆದಿದ್ರಾವಿಡರು ಪ್ರವೇಶಿಸಕೂಡದೆಂದು ವಿಧಿಸಿದ್ದೆಂಬದು ನಿಜವೋ?

(k) ಸದರಿ ಕಂಟ್ರಾಕ್ಟದಾರರು ಬಪ್ಪನಾಡ ದೇವಸ್ಥಾನದ ಮೊಕ್ತೇಸರರೆಂಬದು ನಿಜವೋ?

(l) ಸದರಿ ದೇವಸ್ಥಾನದ ಬಾಬ್ತು ತಲಾಯಿಶಿಯಿಂದ ಎರಡು ಸಾವಿರ ಮುರಕಲ್ಲು ಸದರಿ ಕಾಮಗಾರಿಯ ಬಗ್ಗೆ ಸದರಿ ಕಂಟ್ರಾಕ್ಟರರಿಂದ ಕ್ರಯಕ್ಕೆ ಪಡದ್ದೆಂಬದು ನಿಜವೋ? ನಿಜವಾದರೆ ಯಾವ ದರದಲ್ಲಿ?

೩. (a) ಈ ತಾಲೂಕು ಬೋರ್ಡು ಆಡಳಿತೆ ಒಳಗೆ ಇರುವ ಹುಡುಗಿಯರ ಶಾಲೆಗಳು ಯಾವವು?

(b) ಸದರಿ ಶಾಲೆಗಳ ಪೈಕಿ ಹಾಯರ್ ಎಲಿಮೆಂಟರಿ ಶಾಲೆಗಳು ಯಾವವು?

(c) ಸೆಕೆಂಡರಿ ಶಾಲೆಗಳು ಇದ್ದಾವೋ?

(d) ಸದರಿ ಎಲ್ಲಾ ಶಾಲೆಗಳಲ್ಲಿ ತರಬೇತಾದ ಉಪಾಧ್ಯಾಯಿನಿಯರು ಯಾರ್ಯಾರು?

(e) ಸದರಿ ಶಾಲೆಗಳಲ್ಲಿ ಕಳದ ಅಫೀಶಿಯಲ್ ವರ್ಷದಲ್ಲಿ ನೇಮಿಸಲ್ಪಟ್ಟ ವ ವರ್ಗಾಯಿಸಲ್ಪಟ್ಟ ಉಪಾಧ್ಯಾಯಿನಿಯರು ಯಾರ್ಯಾರು? ಅವರುಗಳ ಯೋಗ್ಯತೆಗಳು ಯಾವವು? ಮತ್ತು ವರ್ಗಾವರ್ಗಿ ಆಗಿರುವದಾದರೆ ಅದರ ಕಾರಣವೇನು?

(f) ಸದರಿ ಶಾಲೆಗಳಲ್ಲಿ ಉಪಾಧ್ಯಾಯರು ಯಾರಾದರೂ ಇರುತ್ತಾರೋ? ಇರುವದಾದರೆ ಯಾವ್ಯಾವ ಶಾಲೆಗಳಲ್ಲಿ ಯಾರ್ಯಾರು?

೪. (a) ಉಳ್ಳಾಲದಲ್ಲಿ ಈ ತಾಲೂಕು ಬೋರ್ಡಿನ ಬಾಬ್ತು ಒಂದು ಆಸ್ಪತ್ರೆಯನ್ನು ಸ್ಥಾಪಿಸಲಿಕ್ಕೆ ಆಲೋಚಿಸಿಯದೆಯೆಂಬದು ನಿಜವೋ?

(b) ನಿಜವಾದರೆ ಸದರಿ ಆಸ್ಪತ್ರೆಯ ಬಗ್ಗೆ ಯಾವ ಅಗತ್ಯ ತೋರಿತು?

(c) ಸದರಿ ಆಸ್ಪತ್ರೆ ಸ್ಥಾಪಿಸಬೇಕೆಂತ ಈ ಬೋರ್ಡಿನವರಿಗೆ ಸಾರ್ವಜನಿಕ ಅರ್ಜಿ ಬಂದಿತ್ತೋ? ಬಂದಿರುವದಾದರೆ ಅದನ್ನು ಮೇಜಿನ ಮೇಲೆ ಇಡಬಹುದೋ?

(d) ಉಳ್ಳಾಲದಿಂದ ಮಂಗಳೂರಿಗೆ ಎರಡು ಮೈಲಿಗಿಂತ ಕಡಿಮೆ ಫಾಸಲೆಯೆಂಬದು ನಿಜವೋ?

(e) ಮಂಗಳೂರಿಂದ ಮೂಡಬಿದ್ರೆ ವರೇಗಿನ ಸುಮಾರು ೨೨ ಮೈಲು ಫಾಸಲೆಗೆ ಮಧ್ಯದಲ್ಲಿ-ವ-ಮಂಗಳೂರಿಂದ ಮೂಲ್ಕಿ ವರೇಗಿನ ಸುಮಾರು ೨೧ ಮೈಲು ಫಾಸಲೆ ಮಧ್ಯದಲ್ಲಿ ಮತ್ತು ಮಂಗಳೂರಿಂದ ಬಂಟ್ವಾಳ ವರೇಗಿನ ಸುಮಾರು ೧೬ ಮೈಲು ಫಾಸಲೆ ಮಧ್ಯದಲ್ಲಿ ಆಸ್ಪತ್ರೆಗಳು ಇರುವುದಿಲ್ಲವೆಂಬುದು ನಿಜವೋ?

(f) ಆಸ್ಪತ್ರೆಗಳಿಲ್ಲದ ಅಂಥ ಮಧ್ಯಸ್ಥಳಗಳಲ್ಲಿ ಈ ತಾಲೂಕು ಬೋರ್ಡಿನ ಆಸ್ಪತ್ರೆಗಳನ್ನು ಯಾಕೆ ಸ್ಥಾಪಿಸಲಿಲ್ಲ?

೫. (a) ತಾ. ೧೪-೫-೨೬ರಲ್ಲು ಕೂಡಿದ ಸಭೆಯಲ್ಲಿ ಕೇಳಿದ ಪ್ರಶ್ನೆಗಳ ಪೈಕಿ ೧ (c)ಗೆ ಕೊಟ್ಟ ಉತ್ತರದಲ್ಲಿ—"ಬೆಳದ ಮರಗಳಾಗಿದ್ದು ರಸ್ತೆ ಕಿನಾರೆಯಲ್ಲಿ ಇತರ ಮರಗಳೊಡನೆ ಮುಜಾಹೆ ಸಿಕ್ಕುವ ಬಗ್ಗೆ ಏಲಂ ಮಾಡಿದ್ದು" ಎಂತ ಹೇಳೋಣಾಗುತ್ತದೆ. ಸದರಿ ಮರಗಳು ಅಪಾಯಕರವಾಗಿದ್ದವೋ? ಆ ಕುರಿತು ಇಂಜಿನಿಯರ್ ಇಲಾಖೆಯವರು ರಿಪೋರ್ಟು ಮಾಡಿದ್ದಾರೋ? ಮಾಡಿರುವುದಾದರೆ ಅದನ್ನು ಮೇಜಿನ ಮೇಲೆ ಇಡಬಹುದೋ?

(b) ಅದೇ ಪ್ರಶ್ನೆಯ (c)ಗೆ ಕೊಟ್ಟ ಉತ್ತರದಲ್ಲಿ—ಇತರ ಮರಗಳ ಕ್ರಯ ಕೂಡಾ ಎಂದು ಹೇಳೋಣಾಗುತ್ತದೆ. ಆ ಮರಗಳು ಯಾವವು? ಯಾವಾಗ್ಗೆ ಮಾರಾಟಮಾಡಿದ್ದು? ಅವುಗಳ ಕ್ರಯದ ಮೊಬಲಗು ಎಷ್ಟು?

(c) ಲೋಕಲ್‌ಬೋರ್ಡು ಆಕ್ಟಿನ Vನೇ ಶೆಡ್ಯೂಲಿನ "B ತಾಲೂಕು ಫಂಡ್" ಎಂಬ ಶಿರೋನಾಮೆಯ ಕೆಳಗಡೆ ತೋರುವ (೨)ನೇ ರೂಲು ಪ್ರಕಾರ ಒಂದು ತಾಲೂಕು ಬೋರ್ಡಿನ ಫಂಡಿನಿಂದ ರಸ್ತೆಗಳ ಮೇಲೆ ಸಾಲುಮರಗಳನ್ನು ನೆಡೋಣ ವ ಕಾಪಾಡೋಣದ ಉದ್ದಿಶ್ಯಗಳಿಗೆ ವಿನಿಯೋಗಿಸಲ್ಪಡತಕ್ಕದ್ದೆಂದು ವಿಧಿಸಿರುತ್ತಾ ಅದಕ್ಕೆ ವಿರೋಧವಾಗಿ ಸದರಿ ಮರಗಳನ್ನು ಪ್ರೆಸಿಡೆಂಟರು ಏಲಂಮಾಡಿಸಿದ್ದೇಕೆ?

(d) ಸದರಿ ರೂಲು ಪ್ರೆಸಿಡೆಂಟರ ಗಮನಕ್ಕೆ ಆ ಕಾಲದಲ್ಲಿ ಬರಲಿಲ್ಲವೇ?

೬. (a) ಬಂಟವಾಳದಿಂದ ಪೂಳಲಿಗಾಗಿ ಗುರುಪುರಕ್ಕೆ ಒಂದು ರಸ್ತೆಯನ್ನು ತೆರೆಯುವ ಬಗ್ಗೆ ಈ ತಾಲೂಕು ಬೋರ್ಡಿನವರು ಇತ್ಯರ್ಥಿಸಿ ಸುಮಾರು ಐದು ವರ್ಷಕ್ಕಿಂತ ಜಾಸ್ತಿ ಕಾಲ ಗತಿಸಿಹೋಗಿಯದೆಂಬದು ನಿಜವೋ? ನಿಜವಾದರೆ ಆ ಇತ್ಯರ್ಥವನ್ನು ಜಾರಿಗೆ ತಾರದೆ ಇರಲಿಕ್ಕೆ ಕಾರಣವೇನು?

(b) ಇನ್ನಾದರೂ ಜಾರಿಗೆ ತರಲಿಕ್ಕೆ ಆಕ್ಷೇಪವೇನು?

(c) ಮೊದಲು ಆದ ಇತ್ಯರ್ಥವನ್ನು ರದ್ದುಪಡಿಸಿ ಪುನಃ ಬೇರೆ ಏನಾದರು ಇತ್ಯರ್ಥಮಾಡಿದೆಯೋ?

೭. (a) ೧೯೨೬ನೇ ಇಸವಿ ಎಪ್ರಿಲ್ ಲಾಗ್ಯಾತು ಈ ತಾಲೂಕು ಬೋರ್ಡಿನ ಯಾವ್ಯಾವ ಸರ್ಕಲುಗಳಲ್ಲಿ ಎಷ್ಟೆಷ್ಟು ರಸ್ತೆಗಳು, ಮೋರಿಗಳು ಸಂಕಗಳು, ಭಾವಿಗಳು, ವ ಶಾಲೆಗಳು ಆಗಿಯವೆ?

(b) ಅವುಗಳ ಸಂಬಂಧ ಎಷ್ಟೆಷ್ಟು ಖರ್ಚಾಗಿದೆ?

(c) ಆ ಖರ್ಚುಗಳು ಯಾವಾಗ್ಗೆ ಬೋರ್ಡಿನಿಂದ ಸೆಂಕ್ಷನ್ ಮಾಡಲ್ಪಟ್ಟಿದ್ದವು?

(d) ಆ ಖರ್ಚುಗಳು ಬೋರ್ಡಿನ ಯಾವ ಆದಾಯ ಮೂಲಗಳಿಂದ ಮಾಡಲ್ಪಟ್ಟಿವೆ?

೮. (a) ಈ ಬೋರ್ಡಿನವರು ಯಾವ್ಯಾವ ಸ್ಥಳಗಳಲ್ಲಿ ಯಾತ್ರಿಕರ ಮೇಲಣ ತೆರಿಗೆಯನ್ನು ಹೊರಿಸಿದ್ದಾರೆ? ಹೊರಿಸಿರುವದಾದರೆ ಕಳೆದ ಅಫೀಶಿಯಲ್ ವರ್ಷದಲ್ಲಿ ಹೊರಿಸಿದ ತೆರಿಗೆ ಮೊಬಲಗು ಎಷ್ಟು?

(b) ಸದರಿ ತೆರಿಗೆ ಹೊರಿಸಲಿಲ್ಲವಾದರೆ ಕಾರಣವೇನು?

(c) ಈ ಬೋರ್ಡಿನ ಎಲ್ಲೆಯ ಒಳಗೆ ಯಾವ್ಯಾವ ಯಾತ್ರೆ ಸ್ಥಳಗಳಿವೆ? ಸದರಿ ಸ್ಥಳಗಳಲ್ಲಿ ಯಾತ್ರಿಕರ ಮೇಲೆ ತೆರಿಗೆಯನ್ನು ಇನ್ನಾದರೂ ಹೊರಿಸಲಿಕ್ಕೆ ಆಕ್ಷೇಪವೇನು?

೯. (a) ಈ ತಾಲೂಕು ಬೋರ್ಡಿನ ಆಡಳಿತೆಯೊಳಗೆ ಇರುವ ಗಾಡಿಟಾಣಗಳು, ಛತ್ರಗಳು, ಪ್ರಯಾಣಸ್ಥರ ವಿರಾಮ ಗೃಹಗಳು ಯಾವವು?

(b) ಅವುಗಳಿಗೆ ಕಳೆದ ಅಫೀಶಿಯಲ್ ವರ್ಷಕ್ಕೆ ಸಿಕ್ಕಿದ ಮುನಾಫೆ ಮತ್ತು ಅವುಗಳಿಗೆ ತಗಲಿದ ಖರ್ಚು ಎಷ್ಟು?

೧೦. (a) ಈ ಬೋರ್ಡಿನ ಆಡಳಿತೆ ಒಳಗೆ ಇರುವ ಆಸ್ಪತ್ರೆಗಳು ಯಾವವು?

(b) ಸದರಿ ಆಸ್ಪತ್ರೆಗಳಲ್ಲಿರುವ ವೈದ್ಯ ಉದ್ಯೋಗಸ್ಥರು ಯಾರ್ಯಾರು? ಅವರುಗಳ ಯೋಗ್ಯತೆಗಳು ಯಾವವು ವ ಸಂಬಳಗಳು ಎಷ್ಟೆಷ್ಟು?

(c) ಸದರಿ ಉದ್ಯೋಗಸ್ಥರು ಎಷ್ಟು ಕಾಲದ ಲಾಗ್ಯಾತು ಸದರಿ ಆಸ್ಪತ್ರೆಗಳಲ್ಲಿ ಕೆಲಸಮಾಡಿಕೊಂಡಿದ್ದಾರೆ?

(d) ಸದರಿ ಆಸ್ಪತ್ರೆಗಳಲ್ಲಿ ಕಳೆದ ಅಫೀಶಿಯಲ್ ವರ್ಷದಲ್ಲಿ ವೈದ್ಯಸಹಾಯ ಪಡದವರ ಸಂಖ್ಯೆ ಎಷ್ಟು? ಆ ಪೈಕಿ ಗಂಡಸರೆಷ್ಟು? ಹೆಂಗಸರೆಷ್ಟು? ಮತ್ತು ಮಕ್ಕಳೆಷ್ಟು?

(e) ಸದರಿ ಆಸ್ಪತ್ರೆಗಳ ಸಂಬಂಧ ಬೋರ್ಡಿಗೆ ತಗಲಿದ ಬಾಬ್ತು ಕಳೆದ ೩ ವರುಷಗಳ ಖರ್ಚು ಎಷ್ಟು?

(f) ಸದರಿ ಆಸ್ಪತ್ರೆಗಳಿಗೆ ಸರಕಾರದವರಿಂದ ಸಿಕ್ಕಿದ ಬಾಬ್ತು ಕಳೆದ ೩ ವರುಷಗಳ ದ್ರವ್ಯಸಹಾಯವೆಷ್ಟು?

(g) ಆ ಮೊಬಲಗನ್ನು ಯಾವ ವಿಧದಲ್ಲಿ ವಿನಿಯೋಗಿಸಿಯದೆ?

೧೧. (a) ಈ ತಾಲೂಕು ಬೋರ್ಡಿನ ಎಲ್ಲೆಯಲ್ಲಿ ಕಳೆದ ಅಫೀಶಿಯಲ್ ವರ್ಷದಲ್ಲಿ ಬೋರ್ಡು ರಸ್ತೆಗಳಲ್ಲಿ ಚಪ್ಪರ ಹಾಕುವ ಬಗ್ಗೆ ಅಪ್ಪಣೆ ಕೇಳಿ ಪ್ರೆಸಿಡೆಂಟರವರಿಗೆ ಎಷ್ಟನ್ನಾದರೂ ಅರ್ಜಿಗಳು ಬಂದಿರುತ್ತವೋ? ಬಂದಿರುವದಾದರೆ ಯಾರ್ಯಾರಿಂದ? ಪೈಕಿ ಎಷ್ಟು ಜನರಿಗೆ ಅಪ್ಪಣೆಕೊಟ್ಟದೆ? ಆ ಬಾಬ್ತು ಎಷ್ಟು ಫೀಸು ವಸೂಲಾಗಿಯದೆ?

(b) ಅಂಥಾ ಅರ್ಜಿಗಳ ಪೈಕಿ ತಿರಸ್ಕರಿಸಲ್ಪಟ್ಟ ಅರ್ಜಿಗಳ್ ಇವೆಯೋ? ಇರುವದಾದರೆ ಯಾರ್ಯಾರ ಅರ್ಜಿಗಳು? ಅಂಥಾ ತಿರಸ್ಕಾರಕ್ಕೆ ಕಾರಣವೇನು?

೧೨. (a) ಬೋರ್ಡಿನ ಹಣಗಳನ್ನು ಬೋರ್ಡಿನವರ ಸೆಂಕ್ಷನ್ ನಿರೀಕ್ಷಣೆ ಮೇಲೆ ಪ್ರೆಸಿಡೆಂಟರವರು ಎಷ್ಟರ ಮಟ್ಟಿಗೆ ಖಜಾನೆಯಿಂದ ತರಿಸಿಕೊಳ್ಳಬಹುದು? ಎಷ್ಟರ ಮಟ್ಟಿಗೆ ಖರ್ಚುಮಾಡಬಹುದು?

(b) ಆ ರೀತಿಯಲ್ಲಿ ಈಗಿನ ಪ್ರೆಸಿಡೆಂಟರು ಎಷ್ಟು ಹಣಗಳನ್ನು ಒಟ್ಟಿಗೆ ತರಿಸಿಕೊಂಡಿದ್ದಾರೆ? ಆ ಹಣಗಳನ್ನು ಯಾವ್ಯಾವ ಬಗ್ಗೆ ಖರ್ಚುಮಾಡಿಯದೆ?

(c) ಆ ಹಣಗಳ ಪೈಕಿ ಖರ್ಚಾಗದೆ ಬಾಕಿ ಉಳಿದ ಹಣವೆಷ್ಟು? ಅದು ಯಾರ ಕೈಯಲ್ಲಿ ಇದೆ?

ಪತ್ರವ್ಯವಹಾರ.

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವದೇ.]

ಇಲ್ಲಿಯ ಪೋಲಿಸ್ ಸಬ್ ಇನ್ಸ್‌ಪೆಕ್ಟರಿಗೆ ಬೇಗನೇ ವರ್ಗವಾಗುವದಂತೆ. ಪೋಲಿಸ್ ಸ್ಟೇಶನು ದೂರಕ್ಕೆ ಒಯ್ಯಲ್ಪಡುವವಂತೆ. ಟಪ್ಪಾಲ ಪೆಟ್ಟಿಗೆಯೊಂದು ಸ್ಟೇಶನಿಗೆ ತೂಗಾಡಿಸಿದೆಯಂತೆ. ಟೆಲಿಗ್ರಾಫು ಆಫೀಸೊಂದು ಅತೀ ಅಗತ್ಯವಂತೆ; ಇನ್ನು ಮೈಲ್ ಬಂಡಿಯು ಇಲ್ಲಿ ನಿಲ್ಲುವದಿಲ್ಲವಂತೆ; ರಾತ್ರಿ ೧೦ ಗಂಟೆಗೆ ಪೆಸೆಂಜರ್ ಬಂಡಿಯಂತೆ; ಇದರಲ್ಲಿ ಅನೇಕ ಕಳ್ಳಕಾಕರು ಬರಲು ಎಡೆಯುಂಟಂತೆ; ಬೀಟಿನ ಪೋಲಿಸಿನವರು ಎಚ್ಚರಿರಬೇಕಂತೆ; ಈಗಲೇ ಚಿಲ್ಲರೆ ಕಳವುಗಳು ಆಗುತ್ತದಂತೆ; ವ್ಯವಹಾರಕ್ಕೆ ಕಾಸರಗೋಡಿಗೆ ಹೋಗುವ ಅಕ್ಷಿಗಾರರು ದುಮುದಿಗೆ ಹೋಗುವಂತೆ ಒಂದು ದಿನ ಮುಂಚಿತವಾಗಿ ಹೋಗಬೇಕಂತೆ; ಕಾಸರಗೋಡಿನಲ್ಲಿ ಒಂದೊಂದು ಸಂಟ್ರಿಸಿ ಬೆಳಿಸುವುದು ಚಲೋದಂತೆ; ಈ ವರ್ಷ ಕುಡಿಯಲು ನೀರಿಲ್ಲದೆ ಎಲ್ಲವರೂ ಬಹಳ ಕಷ್ಟಪಟ್ಟರಂತೆ; ಬರುವ ವರ್ಷ ಹೀಗಾಗದಂತೆ ತಾಲೂಕುಬೋರ್ಡು ಮೆಂಬರರು ಮುಂದಾಗಿ ಎಚ್ಚರಿರಬೇಕಂತೆ; ಲೋಕಲ್‌ಫಂಡಿನ ಲಾಟಾನುಗಳು ಉರಿಯುವುದಿಲ್ಲವಂತೆ; ಮೊನ್ನೆ ಬಂದ ಮಳೆಗೆ ಕತ್ತಲಲ್ಲಿ ನಾಲ್ಕೈದು ಜನರು ಬಿದ್ದು ಮಾರ್ಗದ ಉದ್ದಳತೆ ನೋಡಿದರಂತೆ; ಮಂಜೇಶ್ವರ ಹೊಳೆಗೆ ಒಂದು ಸಂಕವು ಅಗತ್ಯವಂತೆ; ಕೇವಲ ಬಡವರಿಗೆ ವೃತ್ತಿ ತೆರಿಗೆ ಹೊರಿಸಬಾರದಂತೆ; ಪಟೇಲರು ತಾರತಮ್ಯ ನೋಡಬೇಕಂತೆ; ಉಪಾಧ್ಯಾಯರಿಗೆ ಕಳೆದ ೩ ತಿಂಗಳಿನಿಂದ ಸಂಬಳ (ತಲಬು) ದೊರೆಯಲಿಲ್ಲವಂತೆ; ಪರಸ್ಪರ ಸಹಾಯಕ ಸಂಘಗಳಲ್ಲಿ ಸಾಲ ದೊರೆಯುವದಿಲ್ಲವಂತೆ; ಕೊಟ್ಟ ಸಾಲವನ್ನು ಕೇಳುವದಿಲ್ಲವಂತೆ; ಇದರ ಇತ್ಯರ್ಥ ಈ ವರೆಗೆ ಆಗಲಿಲ್ಲವಂತೆ; ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತುಂಬಾ ಉಪಾಧ್ಯಾಯರಂತೆ; ಖರ್ಚು ಕಡಿಮೆ ಇಲ್ಲವಂತೆ; ವರ್ಷಾವಧಿ ಪರೀಕ್ಷೆಯು ಹೊರಗಿನವರಿಂದ ನಡೆಯುತಂತೆ; ಪ್ರತೀ ಕ್ಲಾಸಿನಲ್ಲಿ ೨-೩ ಜನ ಪಾಸಂತೆ; ಇದೇ ಉಪಾಧ್ಯಾಯರ ಶಿಕ್ಷಣವಂತೆ; ಶಾಲೆಗೆ ಹೊಸ ಕಟ್ಟೋಣವು ಆಗುತ್ತಾ ಬಂತಂತೆ; ಕಟ್ಟೋಣವು ನಾಜೂಕಾದೀತಂತೆ; ಒಳ್ಳೇ ಕಲಿತ ಉಪಾಧ್ಯಾಯರನ್ನು ತರಬೇಕಂತೆ, ಸಂಸ್ಕೃತ ವಿದ್ಯಾಶಾಲೆ ಮುಚ್ಚಬೇಕಂತೆ; ವೈದ್ಯಶಾಲೆ ಬೇಕಂತೆ; ಮದನಂತೇಶ್ವರನ ಬೋರ್ಡು ಅಪೂರ್ಣವಂತೆ; ಹೊಸ ಚುನಾವಣೆಯು ಸಮಾಪಿಸಿತಂತೆ; ಸ್ಕೀಮಿನ ಶರ್ತಗಳನ್ನು ಜಾರಿಗೆ ತರಲು ಈ ಸಮಯವು ಬೋರ್ಡಿಗೆ ಸಾಲದೆ ಹೋಯಿತಂತೆ; ಮೊದಲಿನಂತೆ ಪ್ರತೀ ಗ್ರಾಮಕ್ಕೆ ಒಬ್ಬೊಬ್ಬ ಪಟೇಲರು ಬರುತ್ತಾರಂತೆ; ಇನ್ನು ಮುಂದೆ ಜಮಾಬಂದಿಯು ಕಾಸರಗೋಡಿನಲ್ಲಂತೆ; ಡಿವಿಜನಲ್ ಆಫೀಸರರ ಸರ್ಕೀಟು ಈ ಕಡೆ ವರ್ಷಕ್ಕೊಮ್ಮೆಯಾದರೂ ಇಲ್ಲವಂತೆ; ವೆಂಡರರ ಕೂಡೆ ಸಾಕಷ್ಟು ಸ್ಟಾಂಪುಗಳು ಇರುವುದಿಲ್ಲವಂತೆ; ಸ್ಟಾಂಪು ಹಸೆಗಳು ಮನೆಯಲ್ಲಂತೆ; ಬೈಠಕವು ದೇವಳದಲ್ಲಂತೆ; ಇದು ಬಹಳ ತೊಂದರೆಯಂತೆ; ಸೆಟ್ಲಮೆಂಟಿನವರು ಈ ಮಳೆಗಾಲದಲ್ಲಿ ಪಟ್ಟೆಗಳನ್ನು ಕೊಡಬಾರದಂತೆ; ಇದೆಲ್ಲಾ ಗಡಿಬಿಡಿ ನರಸಣ್ಣನ ಸುದ್ದಿಯಂತೆ! ಇನ್ನೂ ಇದೆಯಂತೆ ಇನ್ನೊಮ್ಮೆ ಬೇಗನೇ ಕಾಣುವನಂತೆ.

ಮಂಜೇಶ್ವರ,
ತಾ. ೮—೬—'೨೬. } "ಗಡಿಬಿಡಿ ನರಸಣ್ಣ"

ಹೊಸ ಮುದ್ರಣ! ಶುದ್ಧ ಪಾಠ!!

ಶ್ರೀ ಶಂಕರ ಭಗವತ್ಪಾದಾಚಾರ್ಯ ಪ್ರಣೀತಮಾದ

ಶಿವಾನಂದಲಹರಿ

ಎಂಬ

ಪರಮಶಿವನ ಸ್ತೋತ್ರವು.

ಪ್ರಶಂಸೆ:—

ಈ ಗ್ರಂಥದಲ್ಲಿ ಅಡಗಿರುವ ೧೦೦ ಶ್ಲೋಕಗಳ ಪೈಕಿ ಪ್ರತಿಯೊಂದು ಶ್ಲೋಕವೂ ಆರಿಸಿ ಪೋಣಿಸಿದ ಆಣಿಮುತ್ತುಗಳಂತೆ ಅತಿ ಶ್ಲಾಘ್ಯಗಳಾಗಿ ಶಬ್ದಾಲಂಕಾರ ಅರ್ಥಾಲಂಕಾರ ಭಾವರಸ ಲಕ್ಷಣಗಳಿಂದ ಕೂಡಿ ಓದುವವರ ಮನಸ್ಸಿನಲ್ಲಿ ಆನಂದವನ್ನು ಹುಟ್ಟಿಸುವುದಲ್ಲದೆ, ಉಪಾಸ್ಯದೇವರಲ್ಲಿ ನಿರತಿಶಯ ಭಕ್ತಿಯನ್ನು ಹುಟ್ಟಿಸುತ್ತದೆ. ಪ್ರತಿಯೊಂದು ಶ್ಲೋಕಕ್ಕೂ ಕೊಟ್ಟಿರುವ ಪ್ರತಿಪದಾರ್ಥಭಾವಾರ್ಥಗಳು ಸ್ತೋತ್ರದ ಅರ್ಥವನ್ನು ಪುಷ್ಟೀಕರಿಸಿ ಶ್ರದ್ಧೆಯನ್ನು ಹೆಚ್ಚಿಸುವುದರೊಡನೆ ಸಂಸ್ಕೃತ ಭಾಷಾಜ್ಞಾನವನ್ನುಂಟುಮಾಡುವುದು.

ಶ್ರೀ ಶಿವಗೀತಾ

ಟೀಕಾಸಹಿತವಾಗಿ ಪಂಡಿತರಿಂದ ಪರಿಶೋಧಿಸಲ್ಪಟ್ಟಿದೆ.

ಇದು ಪದ್ಮಪುರಾಣೋಕ್ತವಾದ ಬ್ರಹ್ಮವಿದ್ಯಾಪ್ರತಿಪಾದಕವಾದ ಉಪನಿಷದ್ರತ್ನವು. ಇದು ಶ್ರೀ ಭಗವದ್ಗೀತೆಯಂತೆ ಪಾರಾಯಣಾರ್ಹವಾದ ಗ್ರಂಥವು. ಗೀತೆಯ ಚರಮೋಪದೇಶವು ಇದರಲ್ಲಿರುವುದು.

ಪ್ರತಿಯೊಂದಕ್ಕೆ ಬೆಲೆ 0-8-0. ಟಪ್ಪಾಲು ಖರ್ಚು 0-2-0.

ಮೂರು ಪುಸ್ತಕಗಳ ಕ್ರಯವನ್ನು ಮುಂಗಡವಾಗಿ ಕಳುಹಿಸಿದರೆ ಟಪ್ಪಾಲುಖರ್ಚಿಲ್ಲದೆ ಕಳುಹಿಸಲ್ಪಡುತ್ತ.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕದ ವ್ಯಾಪಾರಿಗಳು,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವದಕ್ಕೂ ಒಂದು ದೇಶದ ಮರ್ಮಶಾಸ್ತ್ರವು ಇರುವುದು ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬಡ್ರೈ, ಮದ್ರಾಸ್.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ್ಯ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀರಿಮಿತ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಮೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಪ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತದೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೆಳೆಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.



ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಪ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೪ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟಿವಣಿಗೆ ಮಾತ್ರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಿಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಜತ್ತಾ ನೋಟು, ಮೆಮೊ ಆಪ್ ಕೊಸ್ಟ್ಸ್, ಮೆಮೊರಂಡಮ್ ಆಪ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದುನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ ಎಸ್. ಪಿ. ಆಚಾರ್ಯ ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ, ಕುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ

ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್

ಮಸೋರ್ಕ್ಯಾಟ್ ಕಾಫಿ ಕ್ಲಬ್, ಮಾರ್ಕೇಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | # ವಜ್ರಾಂಗ-ಬಿಂದು | ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆದರಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸಂಯೊಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬಿಳಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಚಿಕ್ಕೋಡಿ, (ಜಿಲ್ಲಾ ಬೆಳಗಾಂವ.)

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ

— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ೧೦ರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರ್ಯಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 503, P. T. MADRAS.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್‌ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸ

— ಕೀಲಡ್ಡಿಗೆ ಪದಕ. —



ಈ ಅಡ್ಡಿಗೆಯನ್ನು ರೋಲ್ ಗೋಲ್ಡ್ ಎಂಬ ಭಂಗಾರದಲ್ಲಿ ಇಮಿಟೇಶನ್ ವಜ್ರದ ಕಲ್ಲುಗಳನ್ನು ಇಟ್ಟು ನೋಡಲು ಮುದ್ದಾಗಿರುವಂತೆ ತಯಾರಿಸಿದೆ. ಮತ್ತು ಇದರ ಹರಳನ್ನು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ತಯಾರಿಸಿದೆ. ಇದನ್ನು ಯಾವಾಗಲು ಕಟ್ಟಿಕೊಳ್ಳಲು ಚೆನ್ನಾಗಿರುವದು. ಎಣ್ಣೆ ಮುಂತಾದವು ಸೇರಿದರೂ ಕೆಡದು. ಇದರ ಬಣ್ಣವು ಎಂದಿಗೂ ಕೆಡದಂತೆ ಸವರನ್ ಬಂಗಾರದ ಬಣ್ಣ ಕೊಟ್ಟಿರುವದು. ಶ್ರೀಮಂತರೂ, ಗರೀಬರೂ ಉಪಯೋಗಿಸಲು ಲಾಯಖಾದದ್ದು. ಕ್ರಯ 1ಕ್ಕೆ 4/8.

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ — ಡಾಬುಗಳು. —



ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿ ಹೊಂದಿದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ.

ಗೆಜ್ಜೆ ಡಾಬು 1ಕ್ಕೆ 3—0—0.

— ಇಮಿಟೇಶನ್ ವಜ್ರದ ಬೆಂಡೋಲೆಗಳು. —

ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವುದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7ಕಲ್ಲಿನ ಬಿಳಿಯ ಓಲೆ ಜೊತೆ 3—0—0.
" " ಕೆಂಪುಕಲ್ಲಿನ ಓಲೆ ಜೊತೆ 3—8—0.

ವಿಳಾಸ:—ವೈ. ಎಮ್. ಸ್ವಾಮಿ ಅಂಡ್ ಕೊ,
ಪಾರ್ಕ್ ಟೌನ್, ಮದ್ರಾಸು,

Y. M. SWAMY & Co.,
No. 12, Nainiappa Naicken St.,
P. Town, MADRAS

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಲಿವರ್ ಮೂವ್‌ಮೆಂಟ್ ವಾಚ್

15 ಮಣಿಗಳಿದ್ದು ರೋಲ್ಡ್‌ಗೋಲ್ಡ್ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೆಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡ್ ಗೋಲ್ಡ್ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ್ ಗೋಲ್ಡ್ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. " " " 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0

ಟಿಕ್—ಟಾಕ್ ವಾಚ್ 1ರ ಕ್ರಯ ,, 2—12—0

ಕಂಬ್ಯಾಂಡ್ ಪೇಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯೂ ಮಾಡಲ್ಪಡುವುದು.

ದಂತ ಪರೀಕ್ಷೆ ಮುಫತ.

Registered: No. M. 498.

ಚಂದಾನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೧೧ನೇ ಶುಕ್ರವಾರ ಜೂನ್ ೧೯೨೬. ಸಂಚಿಕೆ ೨೫.

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. ಹೆಡ್ ಆಫೀಸು:—ಉಡುಪಿ.

Branch:—COONDAPOOR. ಶಾಖೆ:—ಕುಂದಾಪುರ.

ನಿಯಮಿತ ಮೂಲಧನ ರೂ. 8,50,000.

ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

ತಾ. 28—2—'26ಕ್ಕೆ ತೋರುವ ಸದರಿ ಬ್ಯಾಂಕಿನ ವಹಿವಾಟುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.		ಆಸ್ತಿ ವ ಸೊತ್ತುಗಳು.	
ವಸೂಲು ತೆತ್ತ ಮೂಲಧನ	1,80,690 - 9 - 11	ಹಿತ್ತಲು ಕಟ್ಟೋಣ ಕಬ್ಬಿಣದ ಟ್ರಿಜರಿಗಳು ವಗೈರೆ	3943-8-0,
ಅಪದ್ಧನ ವ ಇತರ ನಿಧಿಗಳು	75,875-0-0,	ಯೋಗ್ಯಜವಾಬ್ದಾರಿ ಮೇಲೆ ಸಾಲಕೊಟ್ಟದ್ದು	7,58,851-13-8,
ಠೇವಣಾತಿಗಳು	5,30,003-14-3,	ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	25,800-0-0,
ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕೊಳುವಾರರಿಗೆ	4,700-0-0,	ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು	4,700-0-0,
ಏವೇಜಿನ ಮೇಲಿನ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು	40,274-3-11,	ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ)	22,795-6-6,
		ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಠೇವಣಿಗೆ ಸಿಕ್ಕತಕ್ಕ ಶಿಲ್ಕು ಸಹಾ	15,452—15—11,
ಜುಮ್ಲಾ ರೂ.	8,31,543-12-1.	ಜುಮ್ಲಾ ರೂ.	8,31,543-12-1.

ನಿರಖು ಠೇವಣಾತಿಗಳನ್ನು ಕಾಲಕ್ಲ್ಪಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸುಂ ಠೇವಣಾತಿಗಳನ್ನೂ ಕಂತು ಠೇವಣಾತಿಗಳನ್ನೂ ಚಾಲ್ತಿ ಮತ್ತು ಸೇವಿಂಗ್ಸ್ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನೂ, ಸಾವುಕಾರಿ ಹುಂಡಿಗಳನ್ನೂ, ವಟ್ಟಾಯಿಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಏವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು, ಉಡುಪಿ, ತಾ. 28—2—'26.

ನಯಂಪಳ್ಳಿ ಆನಂದರಾವ್, ಸೆಕ್ರಿಟರಿ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣಘಾತಕ ಬೇನೆಗಳಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಹಿಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿಲವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ, ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ಣಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು — ತೆಗೆದುಕೊಳ್ಳಿರಿ. —



ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ಹಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ ಯಾ ೪ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ ೨—೦—೦. ಟಪ್ಪಾಲು ಖರ್ಚು ೧ ರಿಂದ ೪ ಡಬ್ಬಿಗಳವರೆಗೆ ೦—೮—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಇಲ್ಲಿ ನೇಟಿವ್ ಡಾಕ್ಟರ್, ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್ —ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂದ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ಬೈಲು ಬೆರ್ಜಸ್ಸ, ಬ್ರಾಹ್ಮಣ ವೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ತಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲ 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

11 ಮಣಿಗಳಿದ್ದು ಬ್ರಿಜ್ ಮ್ಯೂಮೆಂಟ್.

22 ಕೆರಿಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ದಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0.
9 ,, ,, ,, 32—0—0.

ಚಲೋದಾದ ಲವ್ ನಕ್ಷೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

ಳಳ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೨.
ಬಾಟ್ಲಿವಾಲರ ಕಿಂಗ್ ಆಫ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಟೈರಿಯಾ ಮಿಕ್ಸ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೨
ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೬.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ, ಮಂಗಳೂರು.

The Canara Pubic Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

ಶಾಲಿವಾಹನಶಕೆ ೧೮೪೮ನೆಯ ಕ್ಷಯ ಸಂ|ರದ ಜ್ಯೇಷ್ಠ ಶು| ೯ ಶನಿವಾರದಿಂದ ಕ್ಷಯ ಸಂ|ರದ ಜ್ಯೇಷ್ಠ ಶು| ೧೫ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮಿಥುನ ಕಾರ್ತೆಲ್.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
19	ಶನಿ	೯	೫೯.೩೨	ಹಸ್ತಾ	೬೦. ೦	೫	6. 7	6.57
20	ರವಿ	೧೦	೬೦. ೦	ಹಸ್ತಾ	೦.೩೨	೬	6. 7	6.57
21	ಸೋಮ	೧೦	೦.೧೪	ಚಿತ್ರಾ	೪.೧೬	೭	6. 7	6.57
22	ಕುಜ	೧೧	೩. ೧	ಸ್ವಾತೀ	೭. ೦	೮	6. 7	6.57
23	ಬುಧ	೧೨	೨.೪೬	ವಿಶಾಖಾ	೮.೩೨	೯	6. 8	6.58
24	ಗುರು	೧೩	೧.೧೪	ಅನುರಾಧಾ	೮.೪೬	೧೦	6. 8	6.58
25	ಶುಕ್ರ	○	೫೪.೪೬	ಜ್ಯೇಷ್ಠಾ	೭.೩೨	೧೧	6. 8	6.58

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿವಸದ ಮಳೆ	ಒಟ್ಟು ಮಳೆ
11	84—1	74—5	3—15	—
12	85—4	73—7	2—15	—
13	87—3	73—0	1—88	—
14	84—2	74—1	0—79	—
15	85—5	76—5	0—36	—
16	86—8	75—1	1—00	—
17	86—6	74—5	1—95	17—79

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಸಿ...	9— 0	9— 8
ಹೊಸ ಗುದ್ದು ...	8— 8	9— 0
ಸುಗ್ಗಿ ...	8— 6	8—12
ಅನ್ನರ್ ಬೆಳ್ತಿಗೆ ...	8— 0	9— 6
ರಂಗೂನು ಬೆಳ್ತಿಗೆ ಗೋಣಿ ೧ ...	14— 8	15— 0
ಗೋದಿ ಗೋಣಿ ೧ಕ್ಕೆ ...	18— 0	20— 0
ಹುರುಳಿಗೋಣಿ ೧ಕ್ಕೆ ...	8— 8	9—12
ಕಡಲೆಗೋಣಿ ೧ಕ್ಕೆ ...	13— 0	14— 8
ತೊಗರಿಗೋಣಿ ೧ಕ್ಕೆ ...	16— 0	16— 8
ತೊಗರಿಬೇಳೆ ಗೋಣಿ ೧ಕ್ಕೆ ...	19— 0	26— 0
ಉದ್ದು ಗೋಣಿ ೧ಕ್ಕೆ ...	16— 8	17— 0
ಹೆಸರುಗೋಣಿ ೧ಕ್ಕೆ ...	16— 0	17— 8
[illegible]ರು ಬೆಲ್ಲ ಖಂಡಿ ೧ಕ್ಕೆ ...	65— 0	70—0
ಉಪ್ಪು ಗೋಣಿ ೧ಕ್ಕೆ ...	5— 8	5—12
ಕೊಬ್ರಿ ಖಂಡಿ ೧ಕ್ಕೆ ...	96— 0	100— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	34— 8	35— 0
ಎಳ್ಳಿಂಡಿ ಖಂಡಿ ೧ಕ್ಕೆ ...	45— 0	47— 8
ಕೊಬ್ರಿ ಎಣ್ಣೆ ಮಣ ೧ಕ್ಕೆ ...	7— 8	8— 8
ಎಳ್ಳೆಣ್ಣೆ ಮಣ ೧ಕ್ಕೆ ...	7— 8	9— 0
ಅಡಿವ ಎಣ್ಣೆ ಪೆಟ್ಟಿಗೆ ೧ಕ್ಕೆ ...	8-12-0	—
ಮೋರಿಸ ಸಕ್ಕರೆ ಮಣ ೧ಕ್ಕೆ ...	5— 6	5— 8
ಊರ ಮೆಣಸಿನಕಾಯಿ ಮಣ ೧ಕ್ಕೆ ...	6—12	7— 0
ಸಾಸಿವೆ ಮುಡಿ ೧ಕ್ಕೆ ...	9— 4	9— 4
ಕೊತ್ತಂಬರಿ ಮುಡಿ ೧ಕ್ಕೆ ...	5— 6	5—12
ಕಾಫಿ ಖಂಡಿ ೧ಕ್ಕೆ ...	385— 0	460— 0
ಹಳೆಗೋಟು ಅಡಿಕೆ ಖಂಡಿ ೧ಕ್ಕೆ ಚಾಳಿ ...	300— 0	310— 0
ಹೊಸ ಅಡಿಕೆ ಖಂಡಿ ೧ಕ್ಕೆ ...	195— 0	220—0
ಕಾಳುಮೆಣಸು ಖಂಡಿ ೧ಕ್ಕೆ ...	360— 0	—
ಯಾಲಕ್ಕಿ ಮಣ ೧ಕ್ಕೆ ...	50— 0	64— 0
ಗೇರುಬೀಜ ಮುಡಿ ೧ಕ್ಕೆ ...	4— 0	4— 4
[illegible] ಖಂಡಿ ೧ಕ್ಕೆ ...	45— 0	65— 0
[illegible] ಮಣ ೧ಕ್ಕೆ ...	16— 4	16—12
[illegible] ಮಣ ೧ಕ್ಕೆ ...	21— 0	—
[illegible] ಸೇರು ೧ಕ್ಕೆ ...	18—10	
[illegible] ಮಣ ೧ಕ್ಕೆ ...	16— 8	
[illegible]	13— 9	

ಬಿಟ್ಟಿ! ಇನಾಂ!! ಪುಗಸಟ್ಟೆ!!!



ವೈದ್ಯವಿದ್ಯ

NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರಿವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮ ದ್ರಾ ಸು.

ಅಪೂರ್ವ ಸಂದರ್ಭ.

ಉತ್ತಮ ಮ್ಯಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ್ಗವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ ಎಸ್ಟೇಟ್. ಮುಂಬಯಿ.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,
ಮಂಗಳೂರು.

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18 ಮೊಳ ಉದ್ದವೂ, $2\frac{1}{2}$ ಮೊಳ ಅಗಲವು ಇದೆ. ಈ ಸೀರೆಗಳನ್ನು ಹಸನಾದ ಇಮಿಟೇಷನ್ ಸಿಲ್ಕ್ ಗಟ್ಟಿ ದಾರದಿಂದ ತಯಾರಿಸಿದೆ. ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವುದಲ್ಲದೆ ಅಂದವಾದ ಅಂಚೂ, ಸುಂದರವಾದ ಸಾಚಾ ರೇಷ್ಮೆಯ ಸೆರಗೂ ಇರುವದು. ಈ ಮಾದರಿ ಸೀರೆಗಳು ಬೇರೆ ಯಾರಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರದು. ಈ ಸೀರೆಗಳು ಶ್ರೀಮಂತರೂ, ಗರೀಬರೂ, ಉಡಲಿಕ್ಕೆ ಬಹು ಚಲೋದಾದವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಆದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ರೂ. 7—8—0.

ಇಂದ್ರಿಯಸ್ತಂಭನ ಗುಳಿಗೆ.

ಈ ಅದ್ಭುತವಾದ ಮಾತ್ರೆಯನ್ನು ನುಲುಗುವುದಕ್ಕೆ ಒಂದು ಗಂಟೆಯ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತುವೃದ್ಧಿಯಾಗಿ ಗಟ್ಟಿಯಾಗುವುದು. ಈ ಔಷಧವನ್ನು ತಿಂದು 1 ಗಂಟೆಯ ಕಾಲ ಕಳೆದು ಸಂಭೋಗ ಮಾಡಿದರೆ, ಬೇಗನೆ ಸ್ಖಲನವಾಗದೆ ಶಕ್ತಿಯನ್ನು ಕೊಡುವುದು. ತರಿಸಿ ಪರೀಕ್ಷಿಸಿರಿ, ಕ್ರಯ ಡಬ್ಬಿ 1ಕ್ಕೆ ರೂ. 1—6—0.

ವಿಳಾಸ:— ಎಸ್. ಆರ್. ಕೃಷ್ಣ ಅಂಡ್ ಕೋ,
ನಂ. ೧, ಚಂಬುಸ್ವಾಮಿಚೆಟ್ಟಿ ಬೀದಿ,
ಸ್ಟೆ. ಮ. ಮದ್ರಾಸ್.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು—

ಸರ್ವಿಸಿನ ಹೆಸರು.	ತಲುಪುವ ಸ್ಥಳ.	ಹೊರಡುವ ಘಂಟೆ.
ಜನರಲ್	ಕಾರ್ಕಳ—ಆಗುಂಬೆ—ತೀರ್ಥಹಳ್ಳಿ	ಪೂ. $6\frac{1}{2}$
ಸಿ. ಪಿ. ಸಿ.	ಉಡುಪಿ—ಕುಂದಾಪುರ—ಬೈಂದೂರು	,, $6\frac{3}{4}$, $9\frac{3}{4}$
	ಉಡುಪಿ	ಮ. $12\frac{3}{4}$
	ಮುಲ್ಕಿ ವರೆಗೆ ಮಾತ್ರ	ಅ. $3\frac{3}{4}$
	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ.	ಪೂ. 7, ಮ. 1
	[illegible]	
	ಬಂಟ್ವಾಳಕ್ಕೆ ಮಾತ್ರ	,, $10\frac{1}{2}$, ಅ. $4\frac{1}{2}$
	ಪುತ್ತೂರು—ಸಂಪಾಜೆ—ಮಡಿಕೇರಿ	,, $7\frac{1}{2}$
	ಪುತ್ತೂರು	ಪೂ. $10\frac{1}{2}$ ಅ. 2
ಕಾರ್ಕಳ	ಕಾರ್ಕಳ—ಉಡುಪಿ—ಕುಂದಾಪುರ	ಪೂ. 6
	ಕಾರ್ಕಳಕ್ಕೆ ಮಾತ್ರ.	ಅ. 1
ಹನುಮಾನ್	ಕಾರ್ಕಳ—ಉಡುಪಿ—ಕುಂದಾಪುರ	ಪೂ. 7
	ಕಾರ್ಕಳಕ್ಕೆ ಮಾತ್ರ.	ಮ. 12
ಕೆನರ್ ಎಕ್ಸ್‌ಪ್ರೆಸ್	ಪುತ್ತೂರು—ಮಡಿಕೇರಿಗೆ	ಪೂ. 7
	ಪುತ್ತೂರು—ಉಪ್ಪಿನಂಗಡಿ	ಅ. $1\frac{1}{2}$
	ವಿಟ್ಲಕ್ಕೆ	ಪೂ. 8, ಅ. $2\frac{1}{2}$
	ಉಡುಪಿ	ಪೂ. $7\frac{1}{2}$ ಅ. $1\frac{1}{2}$
ಸ್ಟಾರ್	ಮುಲ್ಕಿ—ಉಡುಪಿ.	,, 7, ಮ. 1
	ಬಂಟ್ವಾಳ	,, $10\frac{1}{2}$, ಅ. $4\frac{1}{2}$
ಇಂಡಿಯನ್	ಮುಲ್ಕಿ—ಉಡುಪಿ.	,, $6\frac{1}{2}$, ಮ. $12\frac{1}{2}$
ಪೋಪ್ಯುಲರ್	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ	ಪೂ. $7\frac{1}{2}$ ಮ. $12\frac{1}{2}$

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ—

ಗಾಡಿಗಳು	ಹೊರಡುವ ಘಂಟೆ	ತಲುಪುವ ಘಂಟೆ
ಮೈಲ್	ಬೆಳಗ್ಗೆ 8-5	ಸಂಜೆ 5-35
ಲೋಕಲ್	,, 9-45	ರಾತ್ರಿ 10-40
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-30	ಮಧ್ಯಾಹ್ನ 2-40
ಟೆಟೆಲ್	ಸಂಜೆ 5-40	ಬೆಳಗ್ಗೆ 9-2

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾ ರ ಪ ತ್ರಿ ಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವುವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	... ...	ರೂ. ೩-0-0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ		„ 2-8-0.
„ ಸ್ಥಳೀಕರಿಗೆ	...	„ 1-8-0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

ಹೊಸ ಮುದ್ರಣ! ಶುದ್ಧ ಪಾಠ!!

ಶ್ರೀ ಶಂಕರ ಭಗವತ್ಪಾದಾಚಾರ್ಯ ಪ್ರಣೀತಮಾದ

ಶಿವಾನಂದಲಹರಿ

ಎಂಬ

ಪರಮಶಿವನ ಸ್ತೋತ್ರವು.

ಪ್ರಶಂಸೆ:—

ಈ ಗ್ರಂಥದಲ್ಲಿ ಅಡಗಿರುವ ೧೦೦ ಶ್ಲೋಕಗಳ ಪೈಕಿ ಪ್ರತಿಯೊಂದು ಶ್ಲೋಕವೂ ಆರಿಸಿ ಪೋಣಿಸಿದ ಆಣಿಮುತ್ತುಗಳಂತೆ ಅತಿ ಶ್ಲಾಘ್ಯಗಳಾಗಿ ಶಬ್ದಾಲಂಕಾರ ಅರ್ಥಾಲಂಕಾರ ಭಾವರಸ ಲಕ್ಷಣಗಳಿಂದ ಕೂಡಿ ಓದುವವರ ಮನಸ್ಸಿನಲ್ಲಿ ಆನಂದವನ್ನು ಹುಟ್ಟಿಸುವುದಲ್ಲದೆ, ಉಪಾಸ್ಯದೇವರಲ್ಲಿ ನಿರತಿಶಯ ಭಕ್ತಿಯನ್ನು ಹುಟ್ಟಿಸುತ್ತದೆ. ಪ್ರತಿಯೊಂದು ಶ್ಲೋಕಕ್ಕೂ ಕೊಟ್ಟಿರುವ ಪ್ರತಿಪದಾರ್ಥಭಾವಾರ್ಥಗಳು ಸ್ತೋತ್ರದ ಅರ್ಥವನ್ನು ಪುಷ್ಟೀಕರಿಸಿ ಶ್ರದ್ಧೆಯನ್ನು ಹೆಚ್ಚಿಸುವುದರೊಡನೆ ಸಂಸ್ಕೃತ ಭಾಷಾಜ್ಞಾನವನ್ನುಂಟುಮಾಡುವುದು.

ಶ್ರೀ ಶಿವಗೀತಾ

ಟೀಕಾಸಹಿತವಾಗಿ ಪಂಡಿತರಿಂದ ಪರಿಶೋಧಿಸಲ್ಪಟ್ಟಿದೆ.

ಇದು ಪದ್ಮಪುರಾಣೋಕ್ತವಾದ ಬ್ರಹ್ಮವಿದ್ಯಾಪ್ರತಿಪಾದಕವಾದ ಉಪನಿಷದ್ರತ್ನವು. ಇದೂ ಶ್ರೀ ಭಗವದ್ಗೀತೆಯಂತೆ ಪಾರಾಯಣಾರ್ಹವಾದ ಗ್ರಂಥವು. ಗೀತೆಯ ಚರಮೋಪದೇಶವು ಇದರಲ್ಲಿ ರೂವುದು.

ಪ್ರತಿಯೊಂದಕ್ಕೆ ಬೆಲೆ 0-8-0. ಟಪ್ಪಾಲು ಖರ್ಚು 0-2-0.

ಮೂರು ಪುಸ್ತಕಗಳ ಕ್ರಯವನ್ನು ಮುಂಗಡವಾಗಿ ಕಳುಹಿಸಿದರೆ ಟಪ್ಪಾಲುಖರ್ಚಿಲ್ಲದೆ ಕಳುಹಿಸಲ್ಪಡುತ್ತೆ.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕದ ವ್ಯಾಪಾರಿಗಳು,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವುದಕ್ಕೂ ಒಂದು ದೇಹದ ಮರ್ಮಶಾಸ್ತ್ರವು ಇರುವುದು ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸು ಪ್ರ ಸಿ ದ್ಧ ವಾ ದ ದ್ದು.

ಜರೂರಾಗಿ ಬರೆಯುವರಿಗೆ ಅಂಚೆಕೂಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 [illegible] ಮದ್ರಾಸ್.

ಶುದ್ಧ ರೋಮದ ಛಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 9 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ, 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 5 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಪರ್ ರೇಶ್ಮೆ ಮಡಿಗಳು, ಪಾಮರಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಜಾಘಂಟೆ, ತಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಜೌಳಂಬಾ, ಕಾಶೀ ಕ್ಷೇತ್ರ,

ನೋಟೀಸು.

ಮಿಜಾರ ತಿಮ್ಮಪ್ಪೈ, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದ ಅಸಾಮಿಗಳು ರಿಜಿಸ್ತ್ರಿ ನೋಟೀಸುಗಳನ್ನು ಕೊಟ್ಟಾಗ್ಯೂ ಚಿನ್ನ ಬೆಳ್ಳಿ ಆಭರಣಗಳ ಈಡಿನ ಮೇಲೆ ಪಡೆದ ಮೊಬಲಗನ್ನು ವ್ಯಾದೆಗೆ ಕೊಡದೆ ಇದ್ದದರಿಂದ ಅಸಲು ಬಡ್ಡಿ ಐವೇಜು ಕೊಡಬೇಕಾಗಿ ತಿಳಿಸಿದಲ್ಲಿ ಕೂಡಾ, ಆ ರೀತಿ ಅವರು ಕೊಡದೆ ಇದ್ದದರಿಂದ ಸಹಾ ಇದೇ ಜೂನು ತಾರೀಕು ೨೮ರ ವಳಗೆ ಮೇಲಿನ ಅಸಾಮಿಗೆ ಸಲ್ಲತಕ್ಕ ಅಸಲುಬಡ್ಡಿ ವ ಇತರ ಖರ್ಚು ತಂದುಕೊಟ್ಟು ಪಟ್ಟಿಯಲ್ಲಿ ತೋರುವ ಈಡಿಟ್ಟ ಆಭರಣಗಳನ್ನು ಬಿಡಿಸದೆ ಇದ್ದರೆ ಅವುಗಳನ್ನು ಇದೇ ೧೯೨೬ನೇ ಇಸ್ವಿ ಜೂನು ತಾರೀಕು ೩೦ನೇ ದಿವಸ ಮಧ್ಯಾಹ್ನ ಗಂಟೆ ೧೨ರ ಸಮಯ ತೇರುಬೀದಿ ವಕೀಲ್ ಮಿಜಾರ ಗಣೇಶ ಪೈಗಳ ಆಫೀಸಿನ ಎದುರು ಬಹಿರಂಗವಾಗಿ ಏಲಂ ಮಾಡಲಾದೀತು:—

ಅರ್ಕುಳದಲ್ಲಿರುವ ಬೈಲ ಮಾಮ್ಮುಬ್ಯಾರಿಯ ಮಗ ಮಮ್ಮದಸ್ಸಾಬ ಬ್ಯಾರಿಯು ಅಡವಿಟ್ಟ ತಾರೀಕು ೨೮—೬—೧೯೨೪, ಸಾಲದ ಮೊಬಲಗು ರೂ. 30—0—0, ಏಲಂ ತಾರೀಕು ವರೆಗೆ ಆಗುವ ಬಡ್ಡಿ ರೂಪಾಯಿ 15—0—0.

ಅರ್ಕುಳದಲ್ಲಿರುವ ಮಮ್ಮದ್‌ಸ್ಸಾಬ ಬ್ಯಾರಿಯ ಮಗ ಬಿ. ಮಾಮ್ಮು ಬ್ಯಾರಿಯು ಅಡವಿಟ್ಟ ತಾರೀಕು ೨೬—೬—೧೯೨೩, ಸಾಲದ ಮೊಬಲಗು ರೂ. 30—0—0, ಏಲಂ ತಾರೀಕು ವರೆಗೆ ಆಗುವ ಬಡ್ಡಿ ರೂಪಾಯಿ 11—4—0. ಅದಲ್ಲದೆ ಸದರಿಯವನ ಬಾಬ್ತು ಅಡವಿಟ್ಟ ತಾರೀಕು ೬—೬—೧೯೨೩, ಸಾಲದ ಮೊಬಲಗು ರೂ. 30—0—0, ಏಲಂ ತಾರೀಕು ವರೆಗೆ ಆಗುವ ಬಡ್ಡಿ ರೂಪಾಯಿ 11—4—0.

ವಾಮಂಜೂರ ಮಾಗಣೆ ಉಳ್ಳಾಬೆಟ್ಟು ಗ್ರಾಮದ ಮುಡಿಪಿನಲ್ಲಿರುವ ಲಕ್ಕಣ್ಣಾಳ್ವ ಅಳಿಯ ವೆಂಕಪ್ಪರೈಯ ಅಡವಿಟ್ಟ ತಾರೀಕು ೧೬—೧೨—೧೯೨೪, ಸಾಲದ ಮೊಬಲಗು ರೂ 200—0—0, ಏಲಂ ತಾರೀಕು ವರೆಗೆ ಆಗುವ ಬಡ್ಡಿ ರೂಪಾಯಿ 55—8—0.

ದೇರೆಬೈಲ ಕೊಟ್ಟಾರದಲ್ಲಿರುವ ಕಿಟ್ಟಪ್ಪಾಳ್ವ ಅಳಿಯ ರಾಮಣ್ಣ ಶೆಟ್ಟಿಯ ಅಡವಿಟ್ಟ ತಾರೀಕು ೨೯—೧೨—೧೯೨೩, ಸಾಲದ ಮೊಬಲಗು ರೂ. 30—0—0, ಏಲಂ ತಾರೀಕು ವರೆಗೆ ಆಗುವ ಬಡ್ಡಿ ರೂಪಾಯಿ 9—8—0. ಸದರಿಯವನ ಬಾಬ್ತು ಅಡವಿಟ್ಟ ತಾರೀಕು ೨೯—೧೨—'೨೩, ಸಾಲದ ಮೊಬಲಗು ರೂ. 20—0—0 ಏಲಂ ತಾರೀಕು ವರೆಗೆ ಆಗುವ ಬಡ್ಡಿ ರೂಪಾಯಿ 9—8—0. ಸದರಿಯವನ ಅಡವಿಟ್ಟ ತಾರೀಕು ೧೬—೬—೧೯೨೫, ಸಾಲದ ಮೊಬಲಗು ರೂ. 202—0—0, ಏಲಂ ತಾರೀಕು ವರೆಗೆ ಆಗುವ ಬಡ್ಡಿ ರೂಪಾಯಿ 28—0—0. ಸದರಿಯವನ ಅಡವಿಟ್ಟ ತಾರೀಕು ೬—೮—೧೯೨೫, ಸಾಲದ ಮೊಬಲಗು ರೂ. 14—0—0, ಏಲಂ ತಾರೀಕು ವರೆಗೆ ಆಗುವ ಬಡ್ಡಿ ರೂ. 2—8—0.

ಗೋಳಿಕಟ್ಟೆ ಬಜಾರದಲ್ಲಿರುವ ಪೋಕಬ್ಯಾರಿ ಮಗ ಅಮದಬ್ಯಾರಿಯ ಅಡವಿಟ್ಟ ತಾರೀಕು ೧೫—೩—೧೯೨೫, ಸಾಲದ ಮೊಬಲಗು ರೂ. 150—0—0, ಏಲಂ ತಾರೀಕು ವರೆಗೆ ಆಗುವ ಬಡ್ಡಿ ರೂ. 36—0—0, ಸದರಿಯವನ ಬಾಬ್ತು ಅಡವಿಟ್ಟ ತಾರೀಕು ೧೦—೧೧—೧೯೨೫, ಸಾಲದ ಮೊಬಲಗು 20—0—0, ಏಲಂ ತಾರೀಕು ವರೆಗೆ ಆಗುವ ಬಡ್ಡಿ 2—8—0. ಸದರಿಯವನ ಬಾಬ್ತು ಅಡವಿಟ್ಟ ತಾರೀಕು ೧೦—೧೧—'೨೫ ಸಾಲದ ಮೊಬಲಗು 10—0—0, ಏಲಂ ತಾರೀಕು ವರೆಗೆ ಆಗುವ ಬಡ್ಡಿ ರೂಪಾಯಿ 1—4—0.

ಹರೇಕಳ ಬೈಲಾದ ಕೋಟಿದಲ್ಲಿರುವ ಹಸನ್ಬ್ಯಾರಿ ಮಗ ಹುಸೇನಬ್ಯಾರಿಯ ಅಡವಿಟ್ಟ ತಾರೀಕು ೫—೩—೧೯೨೫, ಸಾಲದ ಮೊಬಲಗು ರೂ. 350—0—0, ಏಲಂ ತಾರೀಕು ವರೆಗೆ ಆಗುವ ಬಡ್ಡಿ ರೂಪಾಯಿ 84—0—0.

ಮಳಲೂರದಲ್ಲಿರುವ ಹಮ್ಮದೆ ಬ್ಯಾರಿಯ ಮಗ ಮೋಣಿ ಬ್ಯಾರಿಯ ಅಡವಿಟ್ಟ ತಾರೀಕು ೧೦—೧೨—೧೯೨೩, ಸಾಲದ ಮೊಬಲಗು ರೂ. 13—0—0, ಏಲಂ ತಾರೀಕು ವರೆಗೆ ಆಗುವ ಬಡ್ಡಿ ರೂಪಾಯಿ 6—8—0.

ಕುದ್ರೋಳಿಯಲ್ಲಿರುವ ಮಮ್ಮಿಬ್ಯಾರಿಯ ಮಗ ಬಾವ ಯಾನೆ ಮಂಮ್ಮು ಬ್ಯಾರಿಯು ಅಡವಿಟ್ಟ ತಾರೀಕು ೩೦—೬—೧೯೨೫, ಸಾಲದ ಮೊಬಲಗು ರೂ. 110—0—0, ಏಲಂ ತಾರೀಕು ವರೆಗೆ ಆಗುವ ಬಡ್ಡಿ ರೂಪಾಯಿ 20—0—0.

ಬೆಂಕ್ರೆಬೈಲಿನಲ್ಲಿರುವ ಅಲಿ ಬ್ಯಾರಿಯ ಮಗ ಚಮ್ಮಬ ಬ್ಯಾರಿಯ ಅಡವಿಟ್ಟ ತಾರೀಕು ೧೮—೫—೧೯೨೪, ಸಾಲದ ಮೊಬಲಗು ರೂ. 75—0—0, ಏಲಂ ತಾರೀಕು ವರೆಗೆ ಆಗುವ ಬಡ್ಡಿ ರೂಪಾಯಿ 30—0—0. ಸದರಿಯವನ ಬಾಬ್ತು ಅಡವಿಟ್ಟ ತಾರೀಕು ೨೫—೬—'೨೪, ಸಾಲದ ಮೊಬಲಗು ರೂ. 70—0—0, ಏಲಂ ತಾರೀಕು ಆಗುವ ಬಡ್ಡಿ ರೂಪಾಯಿ 29—0—0.

ಮಿಜಾರ ತಿಮ್ಮಪ್ಪೈ ರುಜು.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. No. 65/1926.

ಕೇಚಪ್ಪಾಜ್ಜ, ಚಂದಯ್ಯಾಜ್ಜರ ಅಳಿಯ ಮಂಗಳೂರು ತಾಲೂಕು ಪಿಲಿಕ್ಕಬೆಟ್ಟು ಗ್ರಾಮದಲ್ಲಿರುವವ } ಅರ್ಜಿದಾರ.

ಮೇಲಿನ ಅರ್ಜಿಯಲ್ಲಿ ಸದರಿ ಅರ್ಜಿದಾರನನ್ನು ಅತನ ಮ್ಯಾನರ ಮಗ ನಾಗರಾಜ ಪೆರ್ಗಡೆಯ ದೇಹದ ಮತ್ತು ಸೊತ್ತಿನ ಗಾರ್ಡಿಯಾನನಾಗಿ ನೇಮಕವಾಡಬೇಕಾಗಿ ವಗೈರೆ ಕುರಿತು ಅಪೇಕ್ಷಿಸಿರುತ್ತಾನೆ. ಸದರಿ ಅರ್ಜಿಯು ತಾರೀಕು 30—6—1926ನೇ ದಿವಸ ಬೆಳಿಗ್ಗೆ 11 ಗಂಟೆಗೆ ಸದರಿ ಕೋರ್ಟಿನಲ್ಲಿ ತನ್ಖಿಗೆ ಇಟ್ಟಿರುತ್ತದೆ. ಆದುದರಿಂದ ಆಕ್ಷೇಪವುಳ್ಳವರು ಅವರ ಹೇಳಿಕೆಗಳನ್ನು ಸದರಿ ತಾ. 30-6-1926 ನೇ ದಿವಸ 11 ಗಂಟೆ ಒಳಗೆ ಜಾಹೀರುಮಾಡಬಹುದು.

ಮಂಗಳೂರು, } B. Vaikunta Baliga,
ತಾ. 11-6-'26. } ಅರ್ಜಿದಾರನ ಕಡೆ ವಕೀಲ್.

ಗೇಣಿವಕ್ಕಲುಗಳಿಗೆ ಧನಿಗಳು ಕೊಡುವ ರಶೀದಿ.

ವರ್ಗದಾರರು ತಾವು ತಮ್ಮ ಭೂಮಿಯನ್ನು ಸ್ವತಃ ಸಾಗುವಳಿ ಮಾಡುವುದೂ ಇದೆ. ಬೇರೆಯವರಿಗೆ ಗೇಣಿಗೆ ಕೊಡುವುದೂ ಇದೆ. ಗೇಣಿಗೆ ಬೇಸಾಯ ಮಾಡುವವರು ತಮಗೆ ಬೇಕಾದ ಗೊಬ್ಬರವನ್ನೂ, ಎತ್ತು ಕೋಣಗಳನ್ನೂ, ನೊಗನೇಗಲುಗಳನ್ನೂ, ಬಿತ್ತಲಿಕ್ಕೆ ಬೇಕಾದ ಬೀಜವನ್ನೂ ಯಾತಗಳನ್ನೂ ತಾವೇ ಒದಗಿಸಿಕೊಳ್ಳಬೇಕಾಗಿದೆ. ಧನಿಗಳು ಇದನ್ನು ಒದಗಿಸಿ ಕೊಡುವುದಿಲ್ಲ. ಹೆಚ್ಚಿನ ವರ್ಗದಾರರ ಭೂಮಿಗಳಲ್ಲಿ ನೀರಾವರಿಯು ಕಡಿಮೆ. ಈ ಬೇಸಾಯಗಾರರಿಗೆ ಜೂನ್, ಜುಲೈ, ಆಗೋಸ್ತು ತಿಂಗಳಲ್ಲಿ ಊಟಕ್ಕಾಗಿಯೂ, ಅಲ್ಲದೆ ಗದ್ದೆ ಕೆಲಸಕ್ಕೆ ಕೂಲಿಕೊಡುವುದಕ್ಕಾಗಿಯೂ, ಅಕ್ಕಿಯನ್ನು ಹೊಲಿಗೆ ತರುವರು. ಇದನ್ನು ಅವರು ಸ್ವಲ್ಪ ವ್ಯಾದೆಗೆ ಅಂದರೆ ಸಾಧಾರಣ ೬ ತಿಂಗಳ ವ್ಯಾದೆಗೆ ತರುವರು. ತಂದ ಅಕ್ಕಿಯನ್ನು ಹಿಂದೆ ಕೊಡುವಾಗ, ಒಂದು ಮುಡಿ ಅಕ್ಕಿಗೆ ನಾಲ್ಕು ಕಳಸಿಗೆ ಕೊಡಬೇಕಾಗಿದೆ. ಮುಡಿಗೆ ೯ ರೂಪಾಯಿ ಕ್ರಯ ಹಿಡಿದರೆ ಅವನು ಹಿಂತಿರುಗಿ ಕೊಡುವಾಗ ೧೨ ರೂಪಾಯಿ ಕೊಡಬೇಕಾಗಿದೆ. ಅವನು ೬ ಮುಡಿ ಅಕ್ಕಿ ಸಾಲ ತಂದರೆ ಅದರ ಕ್ರಯ ೫೪ ರೂಪಾಯಿ ಅಸಲು, ೧೮ ರೂಪಾಯಿ ಬಡ್ಡಿ ಕೂಡಿಸಿ ಕೊಡಬೇಕಾಗುವುದು. ಈ ೧೮ ರೂಪಾಯಿ ಬಡ್ಡಿ ೫೪ ರೂಪಾಯಿಗೆ ಆರು ತಿಂಗಳಿಗೆ ಅಂದರೆ ಒಂದು ವರ್ಷಕ್ಕೆ ೫೪ ರೂಪಾಯಿಗಳಿಗೆ ೩೬ ರೂಪಾಯಿ ಬಡ್ಡಿ ಕೊಟ್ಟಂತಾಯಿತು. ಅಂದರೆ ೧೦೦ ರೂಪಾಯಿಗಳಿಗೆ ಒಂದು ವರ್ಷಕ್ಕೆ ೬೬ ರೂಪಾಯಿ ಬಡ್ಡಿ ಕೊಟ್ಟಂತಾಯಿತು. ಈ ದರದಲ್ಲಿ ಬಡ್ಡಿ ಕೊಡುವುದರಿಂದ ಗೇಣಿ ವಕ್ಕಲುಗಳು ದಿನೇ ದಿನೇ ಬಡವರಾಗುತ್ತಾ ಬಂದರು. ಧನಿಗಳು ಇವರಿಗೆ ಸಹಾಯ ಮಾಡುವುದಿಲ್ಲ. ಒಂದು ವೇಳೆ ಮಾಡುವುದಾದರೆ ಇದೇ ತರದ ಸಹಾಯ.

ಗೇಣಿವಕ್ಕಲುಗಳು ಧನಿಗಳಿಗೆ ಗೇಣಿ ಕೊಡಬೇಕಾದರೆ ಅವರು ಮೊದಲು ಈ ಹೊಲಿಗೆ ತಂದ ಅಕ್ಕಿಯನ್ನು ಕೊಟ್ಟು ಸಹಾಯ ಮಾಡಿದ ಸಾಲಗಾರರ ಬಾದೆಯಿಂದ ತಪ್ಪಿಸಿಕೊಳ್ಳುವರು.

ಗೇಣಿ ವಕ್ಕಲುಗಳು ಧನಿಗಳಿಗೆ ಪ್ರತಿವರ್ಷವೂ ಗೇಣಿಚೀಟು ಬರೆದು ಕೊಡುವ ವಾಡಿಕೆಯಿದೆ. ಅದು ರಿಜಿಸ್ತ್ರಿ ಆಫೀಸಿನಲ್ಲಿ ರಿಜಿಸ್ತ್ರಿಯಾಗುವುದೂ ಇದೆ. ಗೇಣಿಚೀಟಿನಲ್ಲಿ ಗೇಣಿ ವಕ್ಕಲುಗಳನ್ನು ೨೫ ವಿಧಗಳಲ್ಲಿ ಕೈಕಾಲು ಕಟ್ಟಿಹಾಕುವ ವಕ್ಕಣೆಯು ಇದೆ. ಈ ರೀತಿಯಲ್ಲಿ ಗೇಣಿ ವಕ್ಕಲು ಯಾವ ಉಪಾಯದಿಂದಲಾದರೂ ತಪ್ಪಿಸಿಕೊಳ್ಳದಂತೆ ಭದ್ರಮಾಡಿಕೊಳ್ಳುವರು.

ಆದರೆ ಗೇಣಿ ವಕ್ಕಲಿಗೆ ಗೇಣಿ ತಂದು ಕೊಟ್ಟುದಕ್ಕೆ ಯಾವ ತರದ ಭದ್ರತೆಯೂ ಇಲ್ಲ. ಹೆಚ್ಚು ಮಂದಿ ವರ್ಗದಾರರಲ್ಲಿ ವಕ್ಕಲು ಗೇಣಿ ಅಕ್ಕಿ ತಂದುಕೊಟ್ಟರೆ ರಶೀದಿ ಕೊಡುವ ವಾಡಿಕೆಯೇ ಇಲ್ಲವಂತೆ. ಪೂರ್ವಕಾಲದಲ್ಲಿ ಗೇಣಿಚೀಟು ಬರೆದುಕೊಡುವ ವಾಡಿಕೆಯುಳ್ಳದ್ದಿದ್ದರೂ ವರ್ಗದಾರರ ಭದ್ರತೆಗೆ ಗೇಣಿಚೀಟು ಬರಕೊಳ್ಳುವ ರಿವಾಜು ಮಾತ್ರವೆ ಎಲ್ಲಾ ವರ್ಗದಾರರಲ್ಲಿಯೂ ಇದೆ.

ಗೇಣಿ ವಕ್ಕಲುಗಳು ಸಾಧಾರಣವಾಗಿ ಅವರು ಅಕ್ಕಿಯನ್ನು ತಯಾರಿಸಿದಂತೆಯೇ ಧನಿಗಳ ಮನೆಗೆ ತಂದುಕೊಡುವರು. ಆದರೆ ಧನಿಗಳು ಈ ಅಕ್ಕಿ ಮುಡಿಗೆ ರಶೀದಿ ಕೊಡುವದಿಲ್ಲ. ಪೂರಾ ಗೇಣಿ ಬಂದ ಮೇಲೆ ಒಂದೇ ರಶೀದಿ ಕೊಟ್ಟರೆ ಸಾಕೆಂದು ಹೇಳುವರು. ಆದಿಗೆ ರಶೀದಿಯಿಂದೇನು ಇಷ್ಟರ ವರೆಗೆ ನಾವೇನಾದರೂ ಕೊಟ್ಟದ್ದೂ ಇಲ್ಲ; ನೀನು ತೆಗೆದುಕೊಂಡದ್ದೂ ಇಲ್ಲ; ಎಂದು ಅವನಿಗೆ ಎಲೆಅಡಿಕೆ ತಿನ್ನಲಿಕ್ಕೆ ಕೊಟ್ಟು ಕಳುಹಿಸುವರು.

ಆದರೆ ಗೇಣಿ ವಕ್ಕಲಿನ ಮೇಲೆ ಏನಾದರೂ ಒಂದು ವಿಧಾನದಿಂದ ದ್ವೇಷ ಹುಟ್ಟಿದರೆ, ಅಥವಾ ಅವನು ಕೊಡುವ ಗೇಣಿಯಲ್ಲಿ ಒಂದೆರಡು ಮುಡಿ ಬಾಕಿ ಇದ್ದರೆ ಅವನ ಮೇಲೆ ಪೂರಾ ಗೇಣಿಗೆ ಮುನ್ಸೀಫ್ ಕೋರ್ಟಿನಲ್ಲಿ ವ್ಯಾಜ್ಯ ದಾಖಲುಮಾಡುವರು. ಮುನಸೀಫರು ಗೇಣಿ ವಕ್ಕಲಿನ ಹತ್ತರ ನೀನು ಗೇಣಿ ಪಾವತಿ ಮಾಡಿದ್ದಕ್ಕೆ ಧನಿಯ ರಶೀದಿ ಇದೆಯೋ ಎಂದು ಕೇಳುವರು. ವಕ್ಕಲು ತಾನು ನಾಲ್ಕೈದು ಮುಡಿ ಮಾತ್ರವೇ ಕೊಡಲಿಕ್ಕಿದೆ. ಬಾಕಿ ಎಲ್ಲಾ ಸಲಾಯಿಸಿದ್ದೇನೆಂದು ಇದ್ದ ಸ್ಥಿತಿಯನ್ನು ಹೇಳಿಕೊಳ್ಳುವನು. ಆದರೆ ರಶೀದಿ ಇಲ್ಲದ್ದರಿಂದ ಮುನಸೀಫರು ಗೇಣಿ ವಕ್ಕಲಿನ ಮೇಲೆ ಪೂರಾ ಗೇಣಿಗೆ ಡಿಕ್ರಿಮಾಡುವರು.

ಗೇಣಿ ವಕ್ಕಲು ಸಾಲ ತಂದು ಬೇಸಾಯಮಾಡಿಯೂ, ತನ ಹೆಂಡತಿ ಮಕ್ಕಳಿಗೆ ಹೊಟ್ಟೆಗಿಲ್ಲದೆಯೂ ನರಳುತ್ತಾ ಇದ್ದು, ಅದಿಗೆ ಅವನು ಡಿಕ್ರಿ ಆದ ಹಣ ಕೊಡಲಿಕ್ಕಿಲ್ಲದೆ ಒಂದಕ್ಕೆರಡು ಪಾಲು ಹಣಕ್ಕೆ ನೋಟುಬರೆಕೊಡಬೇಕಾಗುವದು.

ಆದುದರಿಂದ ಈ ರೀತಿಯಲ್ಲಿ ಧನಿಗಳು ವಕ್ಕಲುಗಳಿಗೆ ರಶೀದಿಯನ್ನು ಗೇಣಿ ಅಕ್ಕಿ ತಂದಂತೆ ಕೊಡುವುದು ನ್ಯಾಯರೀತಿಗೆ ಸರಿಯಾಗಿದೆ. ಅದಲ್ಲದೆ, ಸಾಧಾರಣ ೧೨ರ ಬಡ್ಡಿಗಾದರೂ ಸಾಲಕೊಟ್ಟು ವಕ್ಕಲುಗಳನ್ನು ಬಚಾವುಮಾಡುವುದೂ ವಿಹಿತವಾಗಿದೆ.

ಸ್ಫುಟ ವಿ ಚಾ ರ ಗ ಳು.

ಇಂಗ್ಲೆಂಡಿನಲ್ಲಿ ಕೂಲಿಕಾರರ ಪಕ್ಷ.

ಇಂಗ್ಲೆಂಡಿನಲ್ಲಿ ಉಂಟಾಗಿ ಕೆಲವು ದಿನಗಳಿದ್ದು ಮತ್ತೆ ಒಮ್ಮಿಂದೊಮ್ಮೆ ನಿಂತುಹೋದ ಎಲ್ಲಾ ಕೂಲಿಕಾರರ ಮುಷ್ಕರದೊಡನೆ ಆರಂಭವಾದ ಇದ್ದಲು ಗಣಿಗಳ ಕೂಲಿಕಾರರ ಮುಷ್ಕರವು ಇಷ್ಟು ಸಮಯವಾದರೂ ನಿಂತುಹೋಗಿಲ್ಲ. ಗಣಿಗಳ ಮ್ಹಾಲೀಕರು, ಪ್ರಕೃತದ ದಿನ ಒಂದಕ್ಕೆ ೭ ಗಂಟೆ ಕೆಲಸದಿಂದ ನಷ್ಟವಾಗುತ್ತಿದೆಯೆಂದೂ, ಆದುದರಿಂದ ಕೂಲಿ ಕಡಿಮೆಮಾಡಬೇಕೆಂದೂ ಇಲ್ಲವಾದರೆ ಕೆಲಸ ೮ ಗಂಟೆಗೆ ಏರಿಸಬೇಕೆಂದೂ ಹೇಳುವರು. ಮಜೂರಿಕಾರರ ಕೂಲಿಯನ್ನು ಒಂದು ಪೈಯಷ್ಟಾದರೂ ತಗ್ಗಿಸಬಾರದೆಂದೂ, ಕೆಲಸವನ್ನು ಒಂದು ಮಿನಿಟಿನಷ್ಟಾದರೂ ಏರಿಸಬಾರದೆಂದೂ ಹೇಳುವರು. ಈ ದೊಡ್ಡ ವಾದದಿಂದ ಇಂಗ್ಲೆಂಡಿನ ಗಣಿಗಳು ಒಂದುವರೆ ತಿಂಗಳಿಂದ ಮುಚ್ಚಿಯೇ ಇವೆ. ಇದ್ದಲು ಇಲ್ಲದೆ ಇಂಗ್ಲೆಂಡಿನ ಇತರ ಕಾರಖಾನೆಗಳೂ ವಾರಕ್ಕೆ ಒಂದೆರಡು ದಿನ ಮುಚ್ಚಲು ಆರಂಭಿಸಿವೆ. ಅಲ್ಲದೆ ವಿಲಿಯುಗಟ್ಟಲೆ ಕ್ರಯದ ಇದ್ದಲು ಪರದೇಶದಿಂದ ಇಂಗ್ಲೆಂಡಿಗೆ ಬರಲು ಆರಂಭಿಸಿಯದೆ. ಮ್ಹಾಲೀಕರ ಮತ್ತು ಕೂಲಿಕಾರರ ಈ ಹಟಸಾಧನೆಯಿಂದ ಅವರ ಪರಸ್ಪರ ಸಂಬಂಧವು ಕೆಡುತ್ತಾ ಬರುತ್ತಿದೆ. ಒಂದು ದೇಶದ ಸ್ಥಿರತೆಗೆ ಅಗತ್ಯವಾದ ಅನ್ಯೋನ್ಯವು ತಪ್ಪಿ ಇಂಗ್ಲೆಂಡಿನ ಭಾವೀ ಇತಿಹಾಸಕ್ಕೆ ಇದು ದುಶ್ಚಿಹ್ನೆಗಳನ್ನು ತೋರಿಸುತ್ತಿದೆ. ಇತ್ತ ಸರಕಾರವು ಜನರಲ್ ಸ್ಟ್ರೈಕಿನ ಸಹಾಯಕ್ಕೆ ರಶ್ಯಾ ದೇಶದಿಂದ ಬಂದ ದ್ರವ್ಯ ಸಹಾಯಕ್ಕೆ ನಿಷೇಧವನ್ನು ತೆಗೆದಿದೆ. ರಶ್ಯಾ ದೇಶದ ಸಹಾಯವು ಬ್ರಿಟಿಷರ ಹಾನಿಗಾಗಿ ಕಳುಹಿಸಲ್ಪಟ್ಟದ್ದೆಂದು ಸರಕಾರದ ಹೇಳಿಕೆ. ಹಾಗೆ ಅದನ್ನು ಸ್ವೀಕರಿಸಿದ ಮಜೂರ ಪಕ್ಷವು ದೇಶದ ಹಾನಿಯನ್ನು ಸಾಧಿಸುತ್ತಿದೆ ಎಂಬ ಅಭಿಪ್ರಾಯವನ್ನು ಸರಕಾರವು ಪ್ರಚಾರಕ್ಕೆ ತರಲು ಆರಂಭಿಸಿಯದೆ. ಮ್ಹಾಲೀಕರ ಸರಕಾರದ ಮತ್ತು ಮಜೂರ ಪಕ್ಷದ ಈ ಮೂರು ಪಕ್ಷಗಳ ಹಟಸಾಧನೆಯೇ ಇಂತಹ ಮುಷ್ಕರಗಳಿಗೆ ಕಾರಣವಾಗಿರಲು, ಮಜೂರ ಪಕ್ಷದ ಮೇಲೆಯೇ ಅಪಕೀರ್ತಿಯನ್ನು ಸರಕಾರವು ಹೊರಿಸುವುದು ಮಜೂರ ಪಕ್ಷದ ಅನ್ಯೋನ್ಯವನ್ನು ಮತ್ತಷ್ಟು ದೂರವಾಡಿದಂತಾಯಿತು. ಇಂಗ್ಲೆಂಡಿನ ಭಾವೀ ಔದ್ಯೋಗಿಕ ಗಡಿಬಿಡಿಗಳಿಗೆ ಈಗಲೇ ಪೀಠಿಕೆ ಹಾಕಿದಂತೆ ತೋರುತ್ತಿದೆ.

ಬ್ರಿಟಿಷ ನ್ಯಾಯ!

ಈಗ ಬ್ರಿಟಿಷ ನ್ಯಾಯವೆಂಬುದು ಹಿಂದೂಸ್ಥಾನದಲ್ಲಿ ಗಾದೆಗೆ ಬಿದ್ದುಹೋಗಿಯದೆ. ಎಲ್ಲಿ ನಿರಪರಾಧಿಗಳಿಗೆ ಶಿಕ್ಷೆಯಾಗುತ್ತದೆ ಅಲ್ಲಿ ಬ್ರಿಟಿಷರ ನ್ಯಾಯವು ತೋರಿಸಲ್ಪಡುತ್ತಿದೆಯೆನ್ನುವರು. ಬ್ರಿಟಿಷರು ಹಿಂದೀಯರ ಮೇಲೆ ಆಗಾಗ ನಡಿಸುವ ಅನ್ಯಾಯಗಳೇ ಇದಕ್ಕೆ ಕಾರಣವಾಗಿಯದೆ. ಕೆಲವರು ಇಂತಹ ಅನ್ಯಾಯಗಳು ಹಿಂದೂಸ್ಥಾನ ಅಥವಾ ವಸಾಹತುಗಳಲ್ಲಿ ಮಾತ್ರ, ಇಂಗ್ಲೆಂಡಿನಲ್ಲಿ ಹಾಗಲ್ಲ; ಅಲ್ಲಿಯ ಅಧಿಕಾರಿಗಳಿಗೂ ಜನರೂ ನಿಷ್ಪಕ್ಷಪಾತಿಗಳೆನ್ನುವರು. ಒಡ್ವಾಯರ್-ನಾಯರ ಮೊಕದ್ದಮೆಯೂ ಇದರ ಪೂರ್ವದ ಅನೇಕ ಘಟನೆಗಳೂ ಈ ವಿಶ್ವಾಸದ ಟೊಳ್ಳುತನವನ್ನು ತೋರಿಸುವುವು. ಬ್ರಿಟಿಷ ಪಾರ್ಲಿಮೆಂಟು ಕೂಡ ತನ್ನ ದೇಶದ ಜನತೆಯ ಸ್ವಾತಂತ್ರ್ಯದ ವಿಷಯದಲ್ಲಿ ಬಹಳ ಜಾಗರೂಕವಿದ್ದರೂ, ಹಿಂದೂಸ್ಥಾನದ ಮಟ್ಟಿಗೆ ಆ ಸಾಮ್ರಾಜ್ಯ ಮದದ ದರ್ಪವನ್ನೇ ತೋರಿಸುತ್ತಿದೆ. ಬಂಗಾಳದ ಸುಬಾಸ ಚಂದ್ರಬೋಸರಂತಹ ನಿಸ್ಪೃಹ ಧುರೀಣರು ತಮ್ಮ ನಿರಪರಾಧಿತ್ವವನ್ನು ಹೈಕೋರ್ಟಿನಲ್ಲಿ ಕೂಡ ಸ್ಥಾಪಿಸಿ ಸಾವಿರಗಟ್ಟಲೆ ಮಾನನಷ್ಟವನ್ನು ಹೊಂದಿದ್ದರೂ, ಸರಕಾರವು ಅವರನ್ನು ಇನ್ನೂ ಬಂಧನದಲ್ಲಿಡಲು ಬರೆವಣಿಗೆಯ ಸಾಕ್ಷ್ಯವಿದೆಯೊ ಎಂದು ಪಾರ್ಲಿಮೆಂಟಿನಲ್ಲಿ ಕೇಳಿದ್ದಕ್ಕೆ ಅರ್ಲ ವಿಂಟರ್ಟನ್ನರು, ಬಂಗಾಳ ಸರಕಾರ, ಹಿಂದೀ ಸರಕಾರ ಮತ್ತು ಲೋರ್ಡ ಬರ್ಕನ್‌ಹೆಡ್ ಇವರ ಅಭಿಪ್ರಾಯದಲ್ಲಿ ಅವರು ಅಪರಾಧಿಗಳೆಂಬ ಜವಾಬು ಸಿಕ್ಕಿತು. ಇಂತಹ ನಿರಾಧಾರವಾದ ಜವಾಬನ್ನು ನಿಷೇಧಿಸುವಷ್ಟು ಔದಾರ್ಯವುಳ್ಳವರು ಅನ್ಯಾಯ ರಚಯಿತರಾದ ಪಾರ್ಲಿಮೆಂಟ ಮೆಂಬರರಲ್ಲೊಬ್ಬರೂ ಇಂದೆ ಹೋದರು! ಸಾಮ್ರಾಜ್ಯದ ಆ ಅಧಿಕಾರಾಭಿಲಾಷೆಯು ಇಂಗ್ಲೆಂಡಿನ ಕೂಲಿಯವರಿಂದ ಕನ್ಸರ್ವೇಟಿವರ ವರೆಗೆ ಧಮನಿ-ಧಮನಿಗಳಲ್ಲಿ ಸೇರಿ, ಈಗ ಬೆಳೆಯುತ್ತಾ ಬರುತ್ತಿದೆ. ಹಿಂದೀಯರ ಸಾಮಾನ್ಯ ನ್ಯಾಯವನ್ನು ಕೋರುವ ಕ್ಷೀಣ ಧ್ವನಿಯನ್ನು ಕೂಡ ಅವರಿಗೆ ಹೇಗೆ ಕೇಳಿಸೀತು?

ಸೇನಗುಪ್ತರ ವಿಜಯ.

ಬಂಗಾಳದಲ್ಲಿ ಕೆಲವು ಕಾಲದ ಹಿಂದೆ ನಡೆದ ಮತ್ತು ಇನ್ನೂ ಅಲ್ಲಲ್ಲಿ ಆಗಾಗ ನಡೆಯುತ್ತಿರುವ ಹಿಂದೂ-ಮುಸಲ್ಮಾನ ವಿವಾದದ ಅತ್ಯಾಚಾರದ ಘಟನಾವಳಿಗಳಿಂದ ಅಲ್ಲಿ ಇತ್ತಂಡದವರಲ್ಲಿ ಪ್ರಚಂಡ ಜಾತೀಯ (Communal) ಭಾವನೆಯು ಉಂಟಾಗಿ, ರಾಷ್ಟ್ರೀಯತೆಯ ಮರವು ಉಂಟಾದ ವಿಷಯವನ್ನು ಈ ಮೊದಲೇ ನಾವು ಬರೆದಿರುವೆವು. ಅಲ್ಲದೆ ಕೃಷ್ಣಾಗರ ಪಟ್ಟಣದಲ್ಲಿ ನಡೆಯಲಿದ್ದ ಪ್ರಾಂತಿಕ ಪರಿಷತ್ತು ಕೂಡ ಈ ಕಾರಣದಿಂದಲೇ ಶೂನ್ಯಾಂತ್ಯವಾಯಿತು. ಆ ನೇಲೆ ಕೂಡಿದ ಬಂಗಾಳ ಕೊಂಗ್ರೆಸ ಕಮಿಟಿ ಮೀಟಿಂಗು ಕೂಡ ಈ ಜಾತೀಯತೆಯ ಭಾವನೆಯ ಉದ್ವೇಗದಿಂದ ಕಲುಷಿತವಾಗಿದ್ದಿತು. ಬಂಗಾಳದ ಅಗ್ರ ಧುರೀಣರಾಗಿರುವ ಸೇನಗುಪ್ತರು ರಾಷ್ಟ್ರಹಿತದೃಷ್ಟಿಯಿಂದ ಬಂಗಾಳದ ದೇಶಬಂಧು ದಾಸರಿಂದ ನಿರ್ಮಿಟ್ಟ ಹಿಂದೂ-ಮುಸಲ್ಮಾನ ಒಪ್ಪಂದವನ್ನು ಸ್ವೀಕರಿಸಲು ಚಿಂತಿತರಿದ್ದರು. ಇತರ ಅನೇಕರು ಅದನ್ನು ತೆಗೆದುಹಾಕುವುದರಲ್ಲಿ ಧೀಕ್ಷಾಬದ್ಧರಿದ್ದರು. ಕಾಂಗ್ರೆಸ್ಸಿನೊಳಗೆ ಈ ಎರಡು ಪಂಗಡಗಳಾಗಿ ಈ ಎರಡು ಪಂಗಡಗಳೂ ಸಮಬಲಉಳ್ಳವುಗಳಾಗಿದ್ದವು. ಸೇನಗುಪ್ತರು ತಮ್ಮ ಧುರೀಣತ್ವವನ್ನು ಕಳಕೊಳ್ಳುವರೊ ಎಂಬ ಅನುಮಾನ ಕೂಡ ಇದ್ದಿತ್ತು. ಆದರೆ, ಕಟ್ಟಕಡೆಗೆ, ಸೇನಗುಪ್ತರೇ ವಿಜಯಿಯಾದರು, ಅವರ ಇಚ್ಛೆಯಂತೆ ಬಂಗಾಳದ ಒಪ್ಪಂದದ ಮೇಲೆ ತೀರ್ಮಾನವನ್ನು, ಈ ಸಮಯದಲ್ಲಿ ಮಾಡಬಾರದೆಂದೂ ನಿರ್ಣಯವಾಯಿತು. ಸೇನಗುಪ್ತರಿಗೆ ಬೇಕಾದ ಕಾರ್ಯನಿರ್ವಾಹಕರೇ ಆರಿಸಲ್ಪಟ್ಟರು.

ಆದುದರಿಂದ ಬಂಗಾಳದ ಕಾಂಗ್ರೆಸ್ ಮತ್ತು ಸ್ವರಾಜ್ಯ ಪಕ್ಷದ ಕಾರ್ಯಕಾರಿ ಕಾರ್ಯನಿರ್ವಾಹದ ಜವಾಬ್ದಾರಿಯು ಸೇನಗುಪ್ತರ ಮೇಲೆ ಇದೆ. ಮುಂದಿನ ಚುನಾವಣೆಯಲ್ಲಿ ಸೇನಗುಪ್ತರ ಧುರೀಣತ್ವದ ಪರೀಕ್ಷೆಯಾಗಲಿದೆ. ಸೇನಗುಪ್ತರು ಇದರಲ್ಲಿಯೂ ವಿಜಯಿಗಳಾದರೆಂದರೆ, ಸೇನಗುಪ್ತರಿಗೆ ಬಹಳ ಯಶಸ್ಸು ಬರಲಿದೆ!

ಬಂಗಾಳದ ಜಾತೀಯ ಭಾವನೆ.

ಹಿಂದೂ-ಮುಸಲ್ಮಾನ ಕಲಹಗಳಿಂದ ಸಮಗ್ರ ಬಂಗಾಳವು ಕಳವಳಗೊಳ್ಳುವುದು ಸಹಜವೇ. ಈ ಹಿಂದೂ-ಮುಸಲ್ಮಾನ ಕಲಹಗಳಿಂದ ಹಿಂದೂ ಮಹಾ ಸಭೆಯು ದಿನೇ ದಿನೇ ಪ್ರಬಲವಾಗುತ್ತಾ ಬರುತ್ತಿದೆಯಲ್ಲದೆ ಈ ವರೆಗೆ ರಾಷ್ಟ್ರೀಯ ಭಾವನೆಯಿಂದ ಅದರಿಂದ ದೂರವಿದ್ದವರು ಈಗ ಅದನ್ನು ಸೇರಿ ಅದನ್ನು ಪ್ರಬಲವಾಡಲಿದ್ದಾರೆ. ಈ ಜಾತೀಯ ಭಾವನೆಯ ಪ್ರಾಬಲ್ಯದಿಂದಲೂ, ಹಿಂದೂ ಮಹಾ ಸಭೆಯ ಪ್ರಾಬಲ್ಯದಿಂದಲೂ ಸ್ವರಾಜ್ಯ ಪಕ್ಷಕ್ಕೂ ಸೇನಗುಪ್ತರಿಗೂ ಬಹಳ ಕಷ್ಟವಾಗಲಿದೆ. ಜನತೆಯ ರಾಷ್ಟ್ರೀಯತೆಯ ಕಡೆಗಿನ ಭಾವನೆಯು ಜಾತೀಯತೆಯ ಕಡೆಗೆ ತಿರುಗಿದೆ. ಮತ್ತು ಹಿಂದೂ ಮಹಾ ಸಭೆಯೂ ತನ್ನವರಿಂದ ಚುನಾವಣೆಗೆ ಉಮೇದ್ವಾರರನ್ನು ನಿಲ್ಲಿಸುವುದು. ಆದುದರಿಂದ ಸ್ವರಾಜ್ಯ ಪಕ್ಷವು ಒಂದು ಕಡೆಯಿಂದ ಮುಸಲ್ಮಾನ ಅನುಮಾನವನ್ನೂ, ಇನ್ನೊಂದು ಕಡೆಯಿಂದ ಹಿಂದೂ ಮಹಾ ಸಭೆಯ ಉಮೇದ್ವಾರರನ್ನೂ ನಿರೋಧಿಸಲಿದೆ. ಅವಿಶ್ರಾಂತ ಪ್ರಚಾರ ಕಾರ್ಯವೇ ಬಂಗಾಳದಲ್ಲಿ ಸ್ವರಾಜ್ಯ ಪಕ್ಷವನ್ನು ಉಳಿಸಬಲ್ಲುದೆಂದು ಆಶಿಸಬಹುದು.

ರಿಸ್ಪೋನ್ಸಿವ್ ಕೊ-ಒಪರೇಟರರು.

ಲೋಕಮಾನ್ಯ ತಿಲಕರ ಶಿಷ್ಯರೆನ್ನುವ ಈ ಮರಾಠಾ ಮಂಡಳಿಯು, ಸಿಕ್ಕಿದ ಹುದ್ದೆಗಳನ್ನು ತೆಗೆದುಕೊಂಡು ಸ್ವರಾಜ್ಯವನ್ನು ತರಲು ಪ್ರಯತ್ನಿಸುವುದರಲ್ಲಿ ಪ್ರತಿ ಪಕ್ಷದ ಯಾರ ಗೌರವವನ್ನು ಕೂಡ ಮಾನಿಸುವುದಿಲ್ಲ. ಯಾವ ಪಕ್ಷಕ್ಕೂ ಸೇರಿಂದೆ, ಕೇವಲ ತಮ್ಮ ಶಾಂತವೂ ಶಬ್ದಹೀನವೂ ಆದ ಕಲಸದಲ್ಲಿಯೇ ಇರುವ ಮಹಾತ್ಮಾ ಗಾಂಧಿಯವರು ಕೂಡ ಇವರ ನಿಂದೆಯ ಮಾತುಗಳಿಂದ ತಪ್ಪಿಲ್ಲ. ಧುರೀಣರ ಸಾಂಬಂಧಿಕ ಗೌರವವನ್ನು ಲಕ್ಷಿಸದೆ, ಮನಬಂದಂತೆ ಇವರು ನಿಂದಿಸುವುದನ್ನು ನೋಡಿದರೆ ಬಹಳ ವಿಷಾದವಾಗುತ್ತಿದೆ. ಪ್ರಕೃತ ಅವರಿಗ ಪರದೂಷಣೆ ಮತ್ತು ಪರರ ಮೇಲೆ ಅನುಮಾನ ಹುಟ್ಟಿಸುವುದಲ್ಲದೆ ರಿಸ್ಪೋನ್ಸಿವ್ ಕೊ-ಒಪರೇಶನನ್ನು ಸಮರ್ಥಿಸಬಹುದಾದ ಯೋಗ್ಯವಾದ ಬೇರೆ ತರ್ಕವು ಇರುವುದಿಲ್ಲ. ಶ್ರೀಯುತ ಶ್ರೀನಿವಾಸ ಐಯ್ಯಂಗಾರರು ಗುಟ್ಟಿನಲ್ಲಿ ಹುದ್ದೆ ಸ್ವೀಕರಿಸಬಹುದೆಂದು ಹೇಳಿದ್ದಾರೆ. ಶ್ರೀ. ಸತ್ಯಮೂರ್ತಿಯವರ ಭಾಷಣದ ಶಬ್ದಗಳನ್ನು ಇಲ್ಲಿಂದ ಅಲ್ಲಿ ಹಾಕಿದರೆ ಮಂತ್ರಿ ಪದವಿ ಸ್ವೀಕರಿಸಬೇಕೆಂಬ ಅರ್ಥವಾಗುತ್ತಿದೆ. ಮೋತಿಲಾಲನೇಹರುರವರು ಖಾಸಗಿ ಮಾತಿನಲ್ಲಿ ಪದವಿ ಸ್ವೀಕರಿಸಬಹುದೆಂದು ಒಪ್ಪಿರುತ್ತಾರೆಂದು ಇತ್ಯಾದಿಯಾಗಿ ನಿರಾಧಾರವಾದ ಮಾತುಗಳೇ ಮರಾಠಾ ಕೇಸರಿಯಂತಹ ಮರಾಠಿಗರ ಪ್ರಮುಖ ಪ್ರೇತದಿಂದ ಅವಿರೋಧವಾಗಿ ಹರಿಯುತ್ತಿವೆ. ರಿಸ್ಪೋನ್ಸಿವ್ ಕೊ-ಒಪರೇಟರರು ತಮ್ಮ ಧೋರಣಕ್ಕೆ ಇದಕ್ಕಿಂತಲೂ ಹೆಚ್ಚಿನ ಆಧಾರಗಳನ್ನು ಹುಡುಕುವುದು ಅವಶ್ಯಕವಿದೆ.

ಲೀಗ್ ಒಫ್ ನೇಶನ್ಸ.

ಲೀಗ್ ಒಫ್ ನೇಶನ್ಸ ಎಂಬ ರಾಷ್ಟ್ರ ಸಂಘದ ಗುಟ್ಟು ರಟ್ಟಾಗಲಾರಂಭಿಸಿಯದೆ. ಲೋಕಾರ್ನೊ ಪರಿಷತ್ತಿನಲ್ಲಿ ಜರ್ಮನಿಯು ಲೀಗ್ ಒಫ್ ನೇಶನ್ಸನ್ನು ಸೇರುವುದೆಂದು ಆದ ಮೇಲೆ, ಆ ಮೇಲಿನ ಲೀಗಿನ ಸಭೆಯಲ್ಲಿ ಚರ್ಚೆಗೆ ಆರಂಭವಾಗಿ ಅಮೇರಿಕಾ ಖಂಡದೊಳಗಿನ ಬ್ರೆಜಿಲ್ ಎಂಬ ದೇಶವು ಜರ್ಮನಿಯಂತೆ ತನಗೂ ಲೀಗ್ ಕೌನ್ಸಿಲಿನಲ್ಲಿ ಕಾಯಂ ಸ್ಥಾನವನ್ನು ಕೊಡಬೇಕೆಂದು ವಾದಿಸಿತು. ಬ್ರೆಜಿಲ್ ದೇಶವು ತನ್ನ ಕೇಳಿಕೆಯನ್ನು ಎಷ್ಟು ಮಾತ್ರಕ್ಕೂ ಹಿಂದೆಗೆಯದಿದ್ದುದರಿಂದಲೂ, ಜರ್ಮನಿಯು ಅಂತಹ ಕಾಯಂ ಸ್ಥಾನವನ್ನು ಸೇರುವಾಗ ಇನ್ಯಾರೂ ಸೇರಬಾರದೆಂದೂ ಲೋಕಾರ್ನೊ ಸಂಧಿಯ ಜನಾಂಗಗಳ ತಮ್ಮತಮ್ಮೊಳಗಿನ ನಿರ್ಧಾರವಿದ್ದುದರಿಂದಲೂ, ಜರ್ಮನಿಯೂ ತಾನು ಸೇರುವ ಸಮಯದಲ್ಲಿ ಇನ್ಯಾರನ್ನೂ ಸೇರಿಸಬಾರದೆಂದು ವತ್ತಾಯಪಡಿಸಿದುದರಿಂದಲೂ ಆ ಸಮಯದಲ್ಲಿ ಜರ್ಮನಿಗೆ ಸೇರಲಿಕ್ಕೆ ಆಗಲಿಲ್ಲ. ಬ್ರೆಜಿಲಿಗೆ ಕೌನ್ಸಿಲಿನೊಳಗಣ ಕಾಯಂಸ್ಥಾನ ಸಿಕ್ಕಲೂ ಇಲ್ಲ.

ಈ ಕಾರಣದಿಂದ ಬ್ರೆಜಿಲು ಯುರೋಪಿನ ಶಾಂತತೆಗೆ ವಿರೋಧವಾಗಿ ನಡೆಯುತ್ತದಾಗಿ ಬ್ರೆಜಿಲಿನ ಮೇಲೆ ಅಪವಾದವು ಬಂತು. ಈಗ ಬ್ರೆಜಿಲು ಲೀಗ್ ಒಫ್ ನೇಶನ್ಸ ಸದಸ್ಯತನಕ್ಕೆ ತನ್ನ ರಾಜೀನಾಮೆಯನ್ನು ಕೊಟ್ಟದೆ. ಮತ್ತು ಹಿಂದಿನ ಕಾಲದಲ್ಲಿ ಯುರೋಪದಲ್ಲಿ ಸ್ವಾರ್ಥಕ್ಕಾಗಿ ಉಂಟಾಗಿದ್ದ "ಹೋಲಿ ಎಲ್ಲಾಯನ್ಸ" (Holy Alliance)ನಂತೆ ಇದು ಆಗಿ ಯುರೋಪಿನ ಕೆಲವೇ ಪ್ರಬಲ ರಾಷ್ಟ್ರಗಳು ಒಟ್ಟುಗೂಡಿ ಇತರರ ಮೇಲೆ ಅಧಿಕರಿಸಲು ಪ್ರಯತ್ನಿಸುತ್ತಿವೆ ಎಂದು ಬ್ರೆಜಿಲು ತನ್ನ ರಾಜೀನಾಮೆಗೆ ಕಾರಣವನ್ನು ಕೊಟ್ಟದೆ. ಅಮೇರಿಕದ ಒಂದು ರಾಷ್ಟ್ರದ ಆಲೋಚನೆಯಿಂದ ಉಂಟಾದ ಲೀಗ್ ಒಫ್ ನೇಶನ್ಸ ಎಂಬ ರಾಷ್ಟ್ರ ಸಂಘವು ಅದೇ ರಾಷ್ಟ್ರದ ಅನುಮಾನದ ದೃಷ್ಟಿಗೆ ಬಿದ್ದು ಈಗ ಅಮೇರಿಕದ ಇನ್ನೊಂದು ರಾಷ್ಟ್ರದಿಂದ ತಿರಸ್ಕೃತವಾಯಿತು. ಮುಂದಾದರೂ ಸ್ವಾರ್ಥಮಯ ರಾಷ್ಟ್ರಗಳಿಂದ ಕೂಡಿದ ಈ ರಾಷ್ಟ್ರಸಂಘವು ಅಂತರ್ರಾಷ್ಟ್ರೀಯ ದ್ವೇಷ ಮತ್ತು ಸ್ವಾರ್ಥಗಳಿಂದ ಸಂಕುಚಿತವಾಗುತ್ತಾ ಬಂದು ಕಡೆಗೆ ಶಾಂತಿ ಸ್ಥಾಪನೆಯ ಬದಲು ಯುದ್ಧಕ್ಕೆ ಕಾರಣವಾಗಲೂ ಬಹುದು.

ದೇಶಬಂಧು ದಾಸರ ಸ್ಮಾರಕದಿನ.

ಕಳೆದ ಜೂನ್ ತಾ. ೧೬ಕ್ಕೆ ದೇಶಬಂಧು ದಾಸರು ನಿಧನ ಹೊಂದಿ ಒಂದು ವರ್ಷವಾಗುವುದು. ದೇಶಬಂಧುಗಳ ದೇಶದ ಮೇಲಿನ ಅಖಂಡ ಪ್ರೇಮದ ವಿಷಯವಾಗಿ ನಾವು ಪ್ರತ್ಯೇಕವಾಗಿ ಬರೆಯಬೇಕಾಗಿಲ್ಲ. ದೇಶಕ್ಕಾಗಿ ಪ್ರಚಂಡ ಆತ್ಮಯಜ್ಞವನ್ನು ಮಾಡಿದವರೆಂದು ಹೆಸರುಹೊಂದಿದವರಲ್ಲಿ ಮಹಾತ್ಮಾಗಾಂಧಿಗಳ ನಂತರ ದೇಶಬಂಧುಗಳ ಹೆಸರೇ ಸುವರ್ಣಲಿಖಿತವಾಗುವುದು. ಮಹಾತ್ಮರ ದೇಶಪ್ರೇಮವು ಪ್ರಶಾಂತವೂ, ಜ್ಯೋತ್ಸ್ನೆಯಂತೆ ಸ್ನಿಗ್ಧವೂ ಆಗಿರುವಾಗ ದೇಶಬಂಧುಗಳ ದೇಶಪ್ರೇಮವು ಉದ್ವಿಗ್ನವೂ, ನಿದಾಘದಂತೆ ಪ್ರಖರವೂ ಆಗಿದ್ದಿತು. "ಸ್ವರಾಜ್ಯಕ್ಕೆ ಅಡ್ಡಿ ತರುವಂತಹ ಯಾವ ಕೃತ್ಯವಾದರೂ ಉತ್ತಮವೆಂದಿರದು; ಸ್ವರಾಜ್ಯವನ್ನು ಹತ್ತಿರ ತರಬಲ್ಲ ಯಾವ ಉಪಾಯವೂ ಹೇಯವಾಗಿರದು." ಈ ಮಾತುಗಳಿಂದ ದೇಶಬಂಧುಗಳು "ಫೋರ್ವರ್ಡ" ಪತ್ರಿಕೆಯನ್ನು ಪತ್ರಿಕೆ ಆರಂಭಿಸಿದರು. ತತ್ವವೇತ್ತರು ಈ ಮಾತುಗಳನ್ನು ಟೀಕಿಸಬಹುದು. ಆದರೆ ಕಾರ್ಯಕರ್ತರು ಇವುಗಳ ಉಚ್ಚತೆಯನ್ನೂ, ಇವನ್ನು ಉಸುರಿದ ಆ ಮಹಾಭಾರತಪುತ್ರನ ಹೃದಯಪ್ರಬಲೇಚ್ಛೆಯನ್ನೂ ಅನುಭವಿಸದಿರರು.

ದೇಶಬಂಧುಗಳ ನಿಧನವು ಭಾರತಕ್ಕೆ ಸಾಮಾನ್ಯ ನಷ್ಟವಲ್ಲವೆಂಬುವುದು ಆ ಮೇಲಿನ ಘಟನಾವಳಿಗಳೇ ತೋರಿಸುವುವು. ಯಾವ ಸ್ವರಾಜ್ಯಪಕ್ಷವನ್ನು ಅವರು, ಭಿನ್ನಾಭಿಪ್ರಾಯವಿದ್ದವರನ್ನು ಒಲಿಸಿಯೂ, ಮುಸಲ್ಮಾನರೊಡನೆ ಸಂಧಿ ಮಾಡಿಯೂ, ಮಹಾತ್ಮರೊಡನೆ ವಿಧೇಯತೆಯನ್ನು ತೋರಿಸಿಯೂ, ಜನತೆಗಾಗಿ ಆತ್ಮಯಜ್ಞವನ್ನು ಮಾಡಿಯೂ, ಸರಕಾರದೊಡನೆ ಅಸಹಕಾರ ಮಾಡಿಯೂ, ಘಟ್ಟಿಮಾಡಿದರೊ, ಅವರ ನಿಧನದ ಸ್ವಲ್ಪ ಸಮಯದಲ್ಲಿಯೇ ಅದು ವಿಶೃಂಖಲಿತವಾಯಿತು. ದೇಶಬಂಧುಗಳನ್ನು ಟೀಕಿಸುವವರು ಕಡಿಮೆ ಇರಲಿಲ್ಲ. ಸ್ವರಾಜ್ಯಪಕ್ಷದ ಹೊರತಾಗಿ, ಬಾಕಿ ಎಲ್ಲವರೂ ಅವರ ಕಾರ್ಯಗಳನ್ನೂ ಭಾಷಣಗಳನ್ನೂ ಖಂಡಿಸುವವರೇ ಆಗಿದ್ದರು. ಅವರೂ ಅವರು ಎಲ್ಲಾ ನಿರೋಧಗಳನ್ನೂ ಪ್ರತಿರೋಧಿಸಿ ತಮ್ಮ ಪಕ್ಷವನ್ನು ಘಟ್ಟಿಮಾಡಿದರು. ಅಷ್ಟೇ ಶಕ್ತಿಮಾನನಾದ ಬೇರೆ ದುರೀಣನು ಅವರ ಉತ್ತರಾಧಿಕಾರಿಯಾಗಿ ಭಾರತಿಗೆ ಸಿಕ್ಕದುದೇ ಭಾರತೆಯ ದೌರ್ಭಾಗ್ಯ.

ಅನುಕ್ರಮಣಿಕೆ.

ಅಗ್ರಲೇಖ	ಪುಟ.
ಮೈಸೂರು ಬಜೆಟು.	೬
ಸ್ಫುಟಿವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೭
ದಕ್ಷಿಣ ಕನ್ನಡ.-ಕಾಸರಗೋಡು, ಬಂಟವಾಳ, ಪಾಣೆಮಂಗಳೂರು	
ಮಂಜೇಶ್ವರ, ಸುಬ್ರಹ್ಮಣ್ಯ	೭–೮
ಮಂಗಳೂರು	೮
ವಿವಿಧ ವಿಷಯಗಳು.	,,
ಕಾವೇರಿ ನದಿ.	,,
ಪತ್ರವ್ಯವಹಾರ ೧,	,,
ಗೇಣಿಒಕ್ಕಲುಗಳಿಗೆ ಧನಿಗಳು ಕೊಡುವ ರಶೀದಿ.	೪

ಸ್ವದೇಶಾಭಿಮಾನಿ.

ಶಕ ೧೮೪೮ ಜ್ಯೇಷ್ಠ ಶು॥ ೮ಯು ಶುಕ್ರವಾರ.

ಮೈಸೂರು ಬಜೆಟು.

ಮೈಸೂರು ಎಸೆಂಬ್ಲಿಯ ಭಾಷಣದಿಂದ ನಿರ್ಣಯಿಸುವುದಾದರೆ, ಮೈಸೂರಿನ ಈಗಿನ ದಿವಾನರಾಗಿರುವ ಮಿ. ಮಿರ್ಜಾ ಮಹಮ್ಮದ ಇಸ್ಮಾಯೇಲ್ ಸಿ. ಐ. ಈ. ಒ. ಬಿ. ಈ. ಇವರು ದಿವಾನಗಿರಿಯಿಂದ ಮೈಸೂರಿನ ಸಮಸ್ತ ಜೀವನ ವಿಭಾಗಗಳು ಉಜ್ಜೀವಿತವಾಗುವುವೆಂಬ ದೃಢ ವಿಶ್ವಾಸವಾಗುತ್ತಿದೆ.

ದಿವಾನರ ಭಾಷಣವು ನವೀನವಾಗಿ ಲಭಿಸಿದ ಅಧಿಕಾರದ ದರ್ಪದ ಕಿಂಚಿನ್ಮಾತ್ರ ಸ್ಪರ್ಶವಾದರೂ ಇಲ್ಲದುದಾಗಿದ್ದಿತು. ಅದು ಮಹಾರಾಜರ ಮೇಲಿನ ಭಕ್ತಿಯನ್ನೂ ಜನತೆಯ ಮೇಲಿನ ನಿಸ್ಸೀಮ ಪ್ರೇಮವನ್ನೂ, ರಾಷ್ಟ್ರದ ಸಮಷ್ಟಿ ರೂಪದ ಹಿತದ ಅತಿಶಯ ಆಕಾಂಕ್ಷೆಯನ್ನೂ ವ್ಯಕ್ತಪಡಿಸುತ್ತಿದ್ದಿತು. ದೇಶದ ಆರ್ಥಿಕ ಮತ್ತು ರಾಜಕೀಯ ಸುಧಾರಣೆಗಳ ಕಡೆಗೆ ಹೆಚ್ಚಿನ ಆಶಯವನ್ನು ಅವರು ದೇಶದಲ್ಲಿ ಪ್ರೇರಿಸಿರುವರು.

"ದೇಶದಲ್ಲಿಯೇ ಉಂಟಾಗುವುದು, ದೇಶದಲ್ಲಿಯೇ ತಯಾರಾಗುವುದು, ದೇಶದಲ್ಲಿಯೇ ಉಪಯೋಗಿಸುವುದು ಇವು ಮೂರು ರೀತಿಯಲ್ಲಿ ದೇಶದ ಸಂಪತ್ತು ಖವು ವೃದ್ಧಿಯಾಗುವುದು. ಇದಕ್ಕಾಗಿ ಕೃಷಿ ಬೆಳೆಗಳ ಬಗ್ಗೆ ಹೆಚ್ಚು ಪ್ರಯೋಜನಕರವಾದ ರೀತಿಗಳನ್ನು ಉಪಯೋಗಿಸುವುದೇ ಇದರ ಕಡೆಗೆ ಪ್ರಥಮ ಪ್ರಯತ್ನವಾಗಿದೆ. ಇದಕ್ಕಾಗಿ ಸರಕಾರವು ಸಾಧ್ಯವಿದ್ದ ಎಲ್ಲಾ ಸಹಾಯವನ್ನೂ ಕೊಡುವರು" ಎಂದು ದಿವಾನರು ದೇಶದ ಉನ್ನತಿಯ ಸೂಕ್ಷ್ಮವನ್ನರಿತೇ ಹೇಳುವರು. ಅಲ್ಲದೆ ಕೈಗಾರಿಕೆಯ ಅಭಿವೃದ್ಧಿಯ ಕಡೆಗೂ ಅವರ ಪೂರ್ಣ ಲಕ್ಷ್ಯವಿದೆ. "ಸ್ಥಳೀಕ ಕೈಗಾರಿಕೆಗಳಾಗಲಿ, ವ್ಯಾಪಾರವಾಗಲಿ ಇತರ ಸಣ್ಣ ಸಣ್ಣ ಮನೆಕೈಗಾರಿಕೆಗಳಾಗಲಿ ಇವುಗಳ ವಿಷಯ ಚೆನ್ನಾಗಿ ಆಲೋಚಿಸಿ ಕಾರ್ಯಕಾರಿಯಾದ ಸೂಚನೆಗಳನ್ನು ಯಾರಾದರೂ ಕೊಟ್ಟರೆ, ಸರಕಾರವು ಅಂತಹ ಸೂಚನೆಗಳನ್ನು ಸಂತೋಷದಿಂದ ಸ್ವೀಕರಿಸುವುದು" ಎಂದು ದಿವಾನರು ಜನತೆಯ ಮೇಲೂ ಮೈಸೂರಿನ ಅಭಿವೃದ್ಧಿಯ ಜವಾಬ್ದಾರಿಯನ್ನು ಹೊರಿಸಿರುವರು. ಇಷ್ಟು ಉದಾರ ಭಾವನೆಗಳನ್ನು ವ್ಯಕ್ತಪಡಿಸಿದ ದಿವಾನರೊಡನೆ ಮೈಸೂರು ಹೇಗೆ ಸಹಕರಿಸುವುದೆಂದು ನೋಡಲಿದೆ.

ಹೀಗೆ ಕೃಷಿ, ಕೈಗಾರಿಕೆ, ಗ್ರಾಮಗಳಲ್ಲಿ ಆರೋಗ್ಯ ಮತ್ತು ಗೃಹರಚನೆ, ವಿದ್ಯಾಭ್ಯಾಸ ಇತ್ಯಾದಿಗಳ ಅಭಿವೃದ್ಧಿ ಬಗ್ಗೆ ತನ್ನ ಮತ್ತು ತನ್ನ ಸರಕಾರದ ಆಶಯಗಳನ್ನು ವ್ಯಕ್ತಪಡಿಸಿದ ಮೇಲೆ, ದಿವಾನರು ದೇಶದ ರಾಜಕೀಯ ಸುಧಾರಣೆಗಳಿಗಾಗಿಯೂ ಜನತೆಯಲ್ಲಿ ವಿಶ್ವಾಸ ಹುಟ್ಟುವಂತೆ ಭಾಷಣ ಮಾಡಿರುವರು. "ಹಿಂದೂಸ್ಥಾನದ ಇತರ ಭಾಗಗಳು ಲಕ್ಷ್ಯಕೊಟ್ಟು ಕಲಿಯಲಿಕ್ಕೂ, ಆದರ್ಶವಾಗಿ ತೆಗೆದು ಅದರಂತೆ ತಮ್ಮ ಸರಕಾರಗಳನ್ನು ರಚಿಸಲಿಕ್ಕೂ ಇಚ್ಛಿಸುವಂತಹ ರೂಪದ ಸರಕಾರವನ್ನು ಕ್ರಮವಾಗಿ ರಚಿಸಲಿಕ್ಕೆ ಮೈಸೂರು ಎಲ್ಲಿಯೂ ಇಲ್ಲದ ಸಂದರ್ಭವನ್ನು ಕೊಡುತ್ತಿದೆ" ಎಂದು ದಿವಾನರು ಹೇಳಿದ ಮಾತಿನಲ್ಲಿ ದಿವಾನರ ಅತ್ಯುಚ್ಚ ಆಶಯಗಳು ಸ್ಪಷ್ಟವಾಗಿ ವ್ಯಕ್ತವಾಗುತ್ತಿವೆ. "ಕಾರ್ಯವು ತತ್ವದ ಗುರುವು; ಆದುದರಿಂದ ಜನತೆಯ ಸ್ಥಿತಿಯನ್ನು ಸುಧಾರಿಸಲಿಕ್ಕಾಗಿ ಅವಿಶ್ರಾಂತವಾಗಿ ಕೆಲಸ ಮಾಡುವುದೇ ರಾಜಕೀಯ ಮತ್ತು ಆರ್ಥಿಕ ಜ್ಞಾನವನ್ನು ಉಂಟುಮಾಡುವುದು" ಎಂದು ದಿವಾನರು ಹೇಳಿದ ಮಾತುಗಳು ಪ್ರತಿ ಒಬ್ಬನಿಂದಲೂ ಅನುಸರಿಸಲ್ಪಡಲು ಯೋಗ್ಯವಿವೆ.

ಇವೆಲ್ಲ ಪ್ರಥಮದ ಆಶಯಗಳನ್ನೂ ಸಿದ್ಧಾಂತಗಳನ್ನೂ ಸಾಮಾನ್ಯವಾಗಿ ಹೇಳಿದ ಮೇಲೆ ದಿವಾನರು ೧೯೨೬-೨೭ನೇ ಆಯವ್ಯಯದ ಅಂದಾಜು ಪತ್ರಿಕೆಯನ್ನು ವಿವರಿಸಿರುವರು. ಈ ಅಂದಾಜು ಪತ್ರಿಕೆಯಲ್ಲಿ ೩೪೧ ಲಕ್ಷ ರೂಪಾಯಿ ಆಯವೂ ೩೪೦॥ ಲಕ್ಷ ರೂಪಾಯಿ ವ್ಯಯವೂ ಕಂಡು ॥ ಲಕ್ಷ ರೂಪಾಯಿ ಉಳಿತಾಯವಿದೆ.

ಮೈಸೂರಿನ ವೈಶಿಷ್ಟ್ಯವಾಗಲಿ, ಅದರ ವಿಶೇಷದ ಆವಶ್ಯಕತೆಗಳಾಗಲಿ, ಬ್ರಿಟಿಷ ಇಂಡಿಯದ ನಾವು ಬಲ್ಲೆವೆಂದು ಹೇಳಲಾಗುವುದಿಲ್ಲ. ಆದುದರಿಂದ ಬಜೆಟು ಎಷ್ಟು ಮಟ್ಟಿಗೆ ಮೈಸೂರಿನ ಆವಶ್ಯಕತೆಯನ್ನು ಪೂರಯಿಸಿಯದೆ ಎಂದು ನಾವು ಹೇಳಲಾರೆವು. ಆದರೆ ಅದರೊಳಗಿನ ಆಯವ್ಯಯಗಳ ಅನೇಕ ವಿಷಯಗಳು ವಿಚಾರಪೂರ್ವಕವೇ ನಿರ್ಣಯಿಸಲ್ಪಟ್ಟವೆಯೆಂದೂ ಜನರ ಪ್ರಮುಖ ಆವಶ್ಯಕತೆಗಳಿಗೆ ಚೆನ್ನಾಗಿ ಲಕ್ಷ್ಯಕೊಡಲ್ಪಟ್ಟದೆಯೆಂದೂ ನಾವು ಹೇಳಬಹುದು.

ಆದರೆ ದಿವಾನರು ಬ್ರಿಟಿಷ ಸರಕಾರದಂತೆಯೇ ಅಬಕಾರಿ ಇಲಾಖೆಯ ಆಯದ ಕಡೆಗಿನ ತಮ್ಮ ಲೋಭವನ್ನು ಮುಚ್ಚಿಡಲಾರದೆ ಹೋಗಿರುವರು. ಜನರ ಮದ್ಯಪಾನದಿಂದ ರಾಷ್ಟ್ರಕ್ಕೆ ಲಾಭಮಾಡಿಕೊಳ್ಳಲು ಎಣಿಸುವ ಸರಕಾರವು ಹೆಚ್ಚು ಗೌರವಕ್ಕೆ ಪಾತ್ರವಾಗಲಾರದು. "ಅಬಕಾರಿ ಆಯವು ಕಡಿಮೆಯಾಗುತ್ತಾ ಬರುತ್ತಿದೆ. ಇದು ಜನರ ಮದ್ಯಪಾನ ಸೇವನೆಯು ಕಡಿಮೆಯಾಗುತ್ತಾ ಬರುತ್ತಿದೆಯೆಂಬ ಸಂತೋಷಕರ ಸ್ಥಿತಿಯನ್ನು ತೋರಿಸುತ್ತಿದ್ದರೂ, ಆರ್ಥಿಕ ಸ್ಥಿರತೆಯನ್ನು ಕಡಿಮೆ ಮಾಡುವಂತಹುದುದಾಗಿದೆ." ಎಂದು ದಿವಾನರು ಹೇಳಿದ ಮಾತುಗಳು ಮದ್ಯಪಾನದ ಕಡೆಗಿನ ಅವರ ಭಾವನೆಯು ಸರಿಯಿಲ್ಲವೆಂದು ತೋರಿಸುವುದು.

ಮದ್ಯಪಾನದ ಲಾಭವನ್ನೆಣಿಸಿದ, ಹಿಂದೂರಾಜರಿಂದ ಆಳಲ್ಪಡುವ ಮೈಸೂರಾದರೂ ಹಿಂದೂ ಮತತತ್ವಗಳಿಗೆ ಅನುಸಾರವಾಗಿ ಮದ್ಯಪಾನ ನಿಷೇಧವನ್ನು ಜಾರಿಗೆ ತರುವುದು ಅಗತ್ಯವಿದ್ದಿತು. ಈ ಮೂಲಕ ಮೈಸೂರು ಆದರ್ಶಕರವಾಗುತ್ತಿದ್ದಿತು. ಅಲ್ಲದೆ ಇತರ ರಾಜರುಗಳೂ ಮೈಸೂರನ್ನು ಅನುಸರಿಸಲು ಕಾರಣವಾಗುತ್ತಿದ್ದಿತು. ಅಮೇರಿಕದಂತಹ ಕ್ರಿಸ್ತೀಯ ರಾಜ್ಯಗಳಲ್ಲಿ ಕೂಡ ಮದ್ಯಪಾನ ನಿಷೇಧವು ಚೆನ್ನಾಗಿ ಸಾಧಿಸಲ್ಪಡುತ್ತಿರುವಾಗ, ಹಿಂದೂ ಮತ್ತು ಮುಸಲ್ಮಾನರೇ ಅಧಿಕರಿಸಿದ್ದು ಹಿಂದೂರಾಜರಿಂದ ಆಳಲ್ಪಡುವ ಮೈಸೂರು ಮದ್ಯಪಾನ ನಿಷೇಧದ ಕಡೆಗೆ ಪ್ರಥಮ ಕೈಯನ್ನಿಕ್ಕುವುದು ಆವಶ್ಯವಿದೆ.

ಮೈಸೂರಿನ ಬಜೆಟು ನೋಡಿದರೆ, ಮೈಸೂರಿನ ಆಯವು ಹೆಚ್ಚಾಗುವುದೂ, ಅನಾವಶ್ಯಕ ವ್ಯಯವನ್ನು ಕಡಿಮೆ ಮಾಡುವುದೂ, ಜನತೆಯ ವಿದ್ಯೆ, ಆರೋಗ್ಯ ಕೈಗಾರಿಕೆ ಇತ್ಯಾದಿಗಳಿಗಾಗಿ ಖರ್ಚು ಹೆಚ್ಚು ಮಾಡುವುದೂ ಆವಶ್ಯವಿದೆಯೆಂದು ತೋರುವುದು. ಅನೇಕ ವಿಷಯಗಳಲ್ಲಿ ಖರ್ಚನ್ನು ತಗ್ಗಿಸಲು ಹೊಸ ದಿವನರು ಪ್ರಾರಂಭಿಸಿದ್ದಾರೆ ಎಂದು ತಿಳಿಯಲಿಕ್ಕೂ ನಮಗೆ ಸಂತೋಷವಾಗುತ್ತಿದೆ. ಮಿಕ್ಕ ವಿಷಯಗಳಲ್ಲಿಯೂ ಹಾಗೆಯೇ ಖರ್ಚು ಕಡಿಮೆ ಮಾಡಿ ಇತರ ಉಪಕಾರಿಗಳಾದ ವಿಷಯಗಳಿಗೆ ಆ ಉಳಿತಾಯವನ್ನು ಉಪಯೋಗಿಸುವುದು ಸರಕಾರದ ಕರ್ತವ್ಯವಿದೆ.

ಕಾಫಿ ಸೆಸ್ ಬಿಲ್ಲಿನ ವಿಷಯವಾಗಿ ಮೈಸೂರು ಕಾಫಿ ತೋಟದ ಮ್ಹಾಲೀಕರು ಅನೇಕ ಬಾರಿ ತಮ್ಮ ನಿವೇದವನ್ನು ಪ್ರಕಟಿಸಿದ್ದಾರೆ. ಅಲ್ಲದೆ, ಕಾಫಿ ಬೆಳವಣಿಗೆಯ ಶಾಸ್ತ್ರೀಯ ಶೋಧದ ಬಗ್ಗೆ ಒಂದು ಎಕ್ಸ್‌ಪೆರಿಮೆಂಟಲ್ ಸ್ಟೇಶನ (Experimental Station) ಸರಕಾರವು ತೆರೆದುದು ಅವಶ್ಯವಿದ್ದುದಲ್ಲವೆಂದೂ ಅನೇಕರ ಅಭಿಪ್ರಾಯವಿದ್ದಿತು. ಈ ಎಕ್ಸ್‌ಪೆರಿಮೆಂಟಲ್ ಸ್ಟೇಷನಿನಿಂದ ಪ್ರಯೋಜನವಾಗುವುದಾಗಲಿ ಪ್ರಯೋಜನವಾಗದಿರುವುದು, ಅದನ್ನು ನಡಿಸುವವರ ಮೇಲೆ ಹೊಂದಿದೆ. ಈಗ ಅದು ಹೇಗೆ ನಡಿಯುತ್ತಿದೆ ಎಂದು ನಮಗೆ ತಿಳಿದಿಲ್ಲ. ಆದರೆ ಪ್ರಯೋಜನಕರವಲ್ಲವೆಂದರೂ, ಅದನ್ನು ಮುಚ್ಚಿಬಿಡಬೇಕೆನ್ನುವುದು ವಿಚಾರದ ಮಾತೆಂದು ಹೇಳಲಾಗುವುದಿಲ್ಲ. ಅದನ್ನು ಚೆನ್ನಾಗಿ ನಡಿಸುವಂತೆ ಚಳವಳವನ್ನೆಬ್ಬಿಸುವುದು ಕಾಫಿ ತೋಟಗಳ ಮ್ಹಾಲೀಕರ ಕರ್ತವ್ಯವಿದೆ.

ವಿಶ್ವವಿದ್ಯಾಲಯದ ಅಭಿವೃದ್ಧಿಯ ಬಗ್ಗೆ ದಿವಾನರು ಅನೇಕ ನಿರ್ಣಯಗಳನ್ನು ಕೊಟ್ಟಿರುವರು. ಆದರೆ ಕರ್ನಾಟಕ ಭಾಷೆಯ ಪ್ರಧಾನ್ಯದ ವಿಷಯವಾಗಿ ದಿವಾನರ ಯಾವ ಸೂಚನೆಯೂ ಇರುವುದಿಲ್ಲ. ಕರ್ನಾಟಕ ಭಾಷೆಗೆ ಪ್ರಧಾನ್ಯ ಕೊಡುವ ವಿಷಯವನ್ನು ಕರ್ನಾಟಕ ರಾಜ್ಯವಾದ ಮೈಸೂರೇ ಎತ್ತುವುದು ಅವಶ್ಯವಿದೆ.

ಜನತೆಯ ವಿದ್ಯಾಭ್ಯಾಸದ ವಿಷಯದಲ್ಲಿ ತೃಪ್ತಿಕರವಾದ ಬದಲಾವಣೆಗಳು ತೋರುವುದಿಲ್ಲ. ಕೆಲವು ಮಾಧ್ಯಮಿಕ ಶಾಲೆಗಳು ಹ್ಯಾಸ್ಕೂಲುಗಳಾಗುವುದಾಗಲಿ, ಹ್ಯಾಸ್ಕೂಲು ಲೇಕಾಗುಳಾಜಗುವುದಿಲ್ಲ, ಕಷ್ಟದಿಂದ ಜೀವಿಸಬೇಕಾದ ಅಧಿಕಾಂಶ ಪ್ರಜೆಗಳಿಗೆ ಸಂಬಂಧವಾದ ವಿಷಯಗಳಲ್ಲ. ಈ ಬಡ ಪ್ರಜೆಗಳಿಗೆ ಪ್ರಾಥಮಿಕ ಶಾಲೆಗಳ ಏಕಮಾತ್ರ ಸಂಬಂಧವಿದೆ. ಈ ಪ್ರಾಥಮಿಕ ಶಾಲೆಗಳ ಸಂಖ್ಯೆಯನ್ನು ಅಜದಷ್ಟು ಏರಿಸಿದುದು ಅಭಿನಂದನೀಯ. ಈ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ಕಡ್ಡಾಯವಾಗಿ ಕಲಿಸಲಿಕ್ಕೆ ಕಷ್ಟವಾಗದು. ದಿವಾನರು ಇದರ ಕಡೆಗೂ ಲಕ್ಷ್ಯಕೊಡಬಹುದು.

ನೀರಿನ ಕಾಮಗಾರಿ ಬಗ್ಗೆ ಸರಕಾರವು ಹೆಚ್ಚು ಲಕ್ಷ್ಯಕೊಟ್ಟಿದೆ. ಮೈಸೂರು ಬೆಂಗಳೂರು ಮ್ಯುನಿಸಿಪಾಲಿಟಿಗಳಿಗೆ ಕೊಟ್ಟ ನೀರಿನ ಬಗ್ಗೆ ಸಹಾಯವೂ, ಅಣೆಕಟ್ಟುಗಳ ಬಗ್ಗೆ ಮಾಡುವ ಖರ್ಚು, ಕಾಲುವೆ ಕಡಿಸುವುದೂ, ಇತರ ಸ್ಥಳಗಳಿಗೆ ನೀರಿನ ಬಗ್ಗೆ ಕೊಡುವ ಸಹಾಯವೂ ಈ ವಿಷಯವನ್ನು ಸಮರ್ಥಿಸುವುದು. ಸುತ್ತಲೂ ಬೇರೆ ದೇಶಗಳಿದ್ದು, ಮಧ್ಯದಲ್ಲಿರುವ ಮೈಸೂರಿಗೆ ನೀರಿನ ತೊಂದರೆಯು ಬಹಳವಿದೆ. ಈ ಬಗ್ಗೆ ಸರಕಾರವು ಖರ್ಚುಮಾಡುವುದೂ ಅವಶ್ಯಕವಾದ ವಿಷಯವೇ.

ಇನ್ನು ಭದ್ರಾವತಿ ಕಬ್ಬಿಣ ಕಾರ್ಖಾನೆಯ ಖರ್ಚಿನ ವಿಷಯ ಸ್ವಲ್ಪ ಆಲೋಚಿಸಲಿದೆ. ಕೆಲವರು ಮದ್ರಾಸಿನ ಹಿಂದೂ ಪತ್ರಿಕೆ ಮೂಲಕವೂ, ಬೆಂಗಳೂರಿನ ಕರ್ನಾಟಕ ಪತ್ರಿಕೆಗಳ ಮೂಲಕವೂ ಈ ಕಾರ್ಖಾನೆಯ ನಷ್ಟವನ್ನು ಬಹಳ ಅತಿಶಯೋಕ್ತಿಯಲ್ಲಿ ತೋರಿಸಿ, ಸರಕಾರವು ಈ ಕಾರ್ಖಾನೆಯನ್ನು ಕಟ್ಟಿಕೊಂಡು ಜನರ ಹಣವನ್ನು ದುರ್ವ್ಯಯಮಾಡುತ್ತದೆಯೆಂಬದಾಗಿ ಪ್ರಕಟಿಸುತ್ತಿರುವರು. ಇಂತಹ ದೊಡ್ಡ ಕೈಗಾರಿಕೆ ಸಂಸ್ಥೆಗಳೆಂದರೆ ಸಾಮಾನ್ಯವಲ್ಲ. ಇವುಗಳಿಗೆ ಪ್ರಥಮದಲ್ಲಿ ನಷ್ಟವಾಗದಿರುವುದಿಲ್ಲ. ಬ್ರಿಟಿಷ ಇಂಡಿಯಾದ ಸರಕಾರವು, ಬ್ರಿಟಿಷ ಇಂಡಿಯದ ಕಬ್ಬಿಣದ ಕಾರ್ಖಾನೆಗಳು ಖಾಸಗಿ ಸಂಸ್ಥೆಗಳಾದರೂ ೭೦–೮೦ ಲಕ್ಷ ರೂಪಾಯಿಯನ್ನು ಸರಕಾರವು ಇವುಗಳಿಗೆ ಕೊಡುತ್ತಿದೆ. ಹಾಗಿರುವಾಗ ಮೈಸೂರು ಸರಕಾರವು ವರ್ಷಕ್ಕೆ ಒಂದೆರಡು ಬಾರಿ ನಾಲ್ಕಾರು ಲಕ್ಷ ರೂಪಾಯಿ ನಷ್ಟಹೊಂದುವುದು ವಿಶೇಷವಾಗದು. ಬರೇ ನಷ್ಟವನ್ನೇ ಲೆಕ್ಕಿಸಿದರೆ ಸಾಲದು. ಇದರಿಂದ ರಾಷ್ಟ್ರದ ಸಮಷ್ಟಿದೃಷ್ಟಿಯಲ್ಲಿ ಮೈಸೂರಿಗೆ ಸಂಪತ್ತು ಬರುತ್ತಿದೆಯೇ ವಿನಹ ನಷ್ಟವಿಲ್ಲವೆಂದು ಸರಿಯಾಗಿ ಆಲೋಚಿಸಿದರೆ ತಿಳಿಯುವುದು. ಮೈಸೂರಿನ ಗಣಿಗಳಿಗೆ ಇದರಿಂದ ಕ್ರಯಸಿಕ್ಕಿತಲ್ಲದೆ, ಮೈಸೂರಿನ ಕೂಲಿಕಾರರಿಗೆ ಕೆಲಸವೂ ಸಿಕ್ಕಿತು. ಈ ಲಾಭವನ್ನೆಣಿಸಿದರೆ, ಸರಕಾರದ ನಷ್ಟವು ನಷ್ಟವಲ್ಲವೆಂದೇ ಭಾವಿಸಬಹುದು.

"ವಿಶಾಲವೂ ಉತ್ಕಂಠಿತವೂ ಆದ ಲೋಕವು ನಮ್ಮ ಕೆಲಸವನ್ನು ಲಕ್ಷ್ಯಪೂರ್ವಕವಾಗಿ ನೋಡುತ್ತಿದೆ ಮತ್ತು ನಾವು ಕೆಲಸವನ್ನು ಚೆನ್ನಾಗಿಯಾಗಲಿ ಕೆಟ್ಟರೀತಿಯಲ್ಲಿ ಮಾಡದಂತೆ ನಮ್ಮನ್ನು ಉತ್ತೇಜಿಸಲಿಕ್ಕಾಗಲಿ ಎಚ್ಚರಿಸಲಿಕ್ಕಾಗಿ ನೋಡುತ್ತಿದೆ." ಎಂದು ದಿವಾನರು ತಮ್ಮ ಭಾಷಣದ ಸಮಾಪ್ತಿ ಭಾಗವನ್ನು ಆರಂಭಿಸುವರು. ಎಷ್ಟು ವಿಶಾಲದೃಷ್ಟಿಯಿಂದ, ಎಷ್ಟು ಅನುಭೂತಿಯಿಂದ ದಿವಾನರು ತಮ್ಮ ಜವಾಬ್ದಾರಿಯನ್ನೂ ಜನರ ಜವಾಬ್ದಾರಿಯನ್ನೂ ಅಂಕಿಸುವರು!

ಅವರ ಆಖೈರಿ ಭಾಷಣವು ಯಾವ ರಾಜಕೀಯ ಧುರೀಣನಿಗೂ ಶೋಭಿಸುವಂತಹುದುದಾಗಿದೆ. ಆ ಭಾಷಣದಿಂದ ಮೈಸೂರು ಜನರಿಗೆ ಒಂದು ಕರೆ (call)ಯು ಹೊರಟಿದೆ. "ಇದು ನನ್ನೊಬ್ಬನ ಕೆಲಸವಲ್ಲ, ನಾನು ಬರುತ್ತೇನೆ ಹೋಗುತ್ತೇನೆ. ನೀವು ಇಲ್ಲಿ ಯಾವಾಗಲೂ ಇರುವವರು." ಎಂದು ಎಸೆಂಬ್ಲಿ ಸದಸ್ಯರನ್ನು ಸಹಕಾರಕ್ಕೆ ಕರೆಯುವುದನ್ನು ನೋಡಿದರೆ ಈಗಿನ ದಿವಾನರ ಆಡಳಿತದಲ್ಲಿ ಮೈಸೂರಿಗೆ ಹೆಚ್ಚು ಲಾಭವಾಗುವುದು ನಿಶ್ಚಯವೆಂದು ತೋರುವುದು. ಮೈಸೂರು ಜನತೆ ಚೇತರಿಸಿ ಈ ಕರೆಯನ್ನು ಸ್ವೀಕರಿಸುವುದು ಅವರ ಕರ್ತವ್ಯವಿದೆ.

ಲೋಕವು ಮೈಸೂರಿನ ಹೊಸ ಆಡಳಿತವನ್ನು ನಿರೀಕ್ಷಿಸುವುದು. ಆ ನಿರೀಕ್ಷಣೆಯು ನಿರರ್ಥಕವಾಗದಿರಲಿ.

ಹೊರಗೆ ನಡೆದವರು.

ಸ್ವರಾಜ್ಯ ಪಕ್ಷದವರು ಕಳೆದಬಾರಿ ಕೌನ್ಸಿಲುಗಳಿಂದ ಒಂದೇ ಸವನೆ ಹೊರಗೆ ನಡೆದರು. ಯಾವಾಗ ಹೊರಗೆ ನಡೆದರೊ ಆಗ ಇನ್ನು ಮೇಲೆ ಒಳಗೆ ಪುನಃ ನಡೆಯದಂತೆ, ಅಂದರೆ ಪುನಃ ಚುನಾವಣೆಯಾಗುವ ವರೆಗೆ ಒಳಗೆ ನಡೆಯದಿರುವುದು ಹಿತವಿತ್ತು. ಆದರೆ ಆಗಾಗ ಆಯಾ ಕೌನ್ಸಿಲಿನವರು ಒಂದೊಂದು ಕಾರಣದಿಂದ ಒಂದೊಂದು ಬಾರಿ ಪುನಃ ಕೌನ್ಸಿಲುಗಳನ್ನು ಪ್ರವೇಶಿಸುತ್ತಿರುವರು. ಇದು ಸ್ವರಾಜ್ಯ ಪಕ್ಷಕ್ಕೆ ಗೌರವಕರವಲ್ಲ. ಮಾತ್ರವಲ್ಲದೆ ಪಕ್ಷದ ಧೋರಣದ ಸ್ಥಿರತೆಯ ವಿಷಯ ಉತ್ತಮ ಅಭಿಪ್ರಾಯವನ್ನು ಕೊಡುವುದಿಲ್ಲ. ಒಂದು ಬಾರಿ ಯಾವಾಗ ಹೊರಹೊರಟರೊ, ಮತ್ತೆ ಪುನಃ ಪ್ರವೇಶಿಸುವುದು ಸರಿಯಲ್ಲ. ಹಾಗೆ ಅತೀ ಅವಶ್ಯಕವಾದ ಒಂದೆರಡು ಕಡೆಗಳಲ್ಲಿ ಮಾತ್ರ ಒಂದೆರಡು ಬಾರಿ ಪುನಃ ಪ್ರವೇಶಿಸಬಹುದು. ಆದರೆ ಪ್ರತಿ ಕೌನ್ಸಿಲಿನವರೂ ಪುನಃ ಪ್ರವೇಶಕ್ಕೆ ಒಪ್ಪಿಗೆ ಕೇಳುವುದು ಹೊರಹೊರಟ ಮಾನಸಿಕತೆಯೊಡನೆ ಸರಿಬೀಳುವುದಿಲ್ಲ.

ವಿದೇಶ ವರ್ತಮಾನ.

—ಫ್ರಾನ್ಸದೇಶದ ಮುಖ್ಯಪಟ್ಟಣವಾದ ಪೆರಿಸ್ ಪಟ್ಟಣದಲ್ಲಿಯ ರಿನೋಲ್ಟ್ ಮೋಟರ ವರ್ಕ್ಸಿನ ಇಂಜಿನಿಯರರು ಎರಡು ಮೋಟಾರುಕಾರುಗಳಲ್ಲಿ ಇಜಿಪ್ತದೇಶದಿಂದ ನೆಲದಾರಿಯಾಗಿ ಲಕ್ಸರ್, ಕಾಯರೊ, ಕಂಟಾರಾ, ಜೆರುಸಲೇಮ್, ಬೇರೂಟ್, ಬಗ್ದಾದ, ತೆಹರಾನ್, ಇಸ್ಫಹಾನ, ಕೆರಾಚ್ ಡೆಜ್‌ಡೊಪ್‌ನಿಂದ ಬಲುಚಿಸ್ಥಾನದ ಕೆಟ್ಟಾ ಪಟ್ಟಣಕ್ಕೆ ಬಂದಿರುವರು. ಇವರು ಅಲ್ಲಿಂದ ಸಿಬಿ, ಜಕೊಬಾಬಾದ ದಾರಿಯಾಗಿ ಕರಾಚಿಗೆ ಬರುವರು. ಇವರು ಮೇ ೨೫ಕ್ಕೆ ತೆಹರಾನಿನಿಂದ ಹೊರಟು ಕ್ವೆಟ್ಟೆ ಜೂನ್ ೬ಕ್ಕೆ ಬಂದು ತಲ್ಪಿದರು. ಇವರು ಸೀನಾಯಿ ಮರುಭೂಮಿಯನ್ನು ಕಂಟಾರಾದಿಂದ ಗಾಜ್‌ಪಟ್ಟಣದ ದಾರಿಯಾಗಿ ದಾಟಿದರು. ಇಲ್ಲಿ ಇವರಿಗೆ ದಾರಿಯಲ್ಲಿ ಬಹಳ ಕಷ್ಟವಾಯಿತು. ಯುಫ್ರಾಟಿಸ್ ನದಿಯಲ್ಲಿ ನೆರೆಬಂದುದರಿಂದ ಸಿರಿಯದ ಮರುಭೂಮಿಯನ್ನು ದಾಟುವದೂ ಕಷ್ಟವಾಯಿತು. ನುಶ್ಕಿ ಮತ್ತು ಕ್ವೆಟ್ಟೆ ಮಧ್ಯೆ ಇರುವ ಅಫಗಾನ ಕಣಿವೆಯು ಸಪೂರವಾದ್ದರಿಂದ ಅಲ್ಲಲ್ಲಿ ಗುಡ್ಡವನ್ನು ಅಗೆದು ದಾರಿಬಿಡಿಸಿ ಮೋಟಾರುಕಾರುಗಳನ್ನು ತೆಗೆದುಕೊಂಡು ಬರಬೇಕಾಯಿತು. ಎಂಜಿನಿಯರರ ಜೊತೆ ಕೂಡಿ ೮ ಮಂದಿ ಇದ್ದರು.

—ಇಂಗ್ಲಾಂಡಿನಲ್ಲಿ ಕೂಲಿಕಾರರು ಮುಷ್ಕರ ಹಿಡಿದ ಸಮಯ ರಷ್ಯದ ಸೋವಿಯಟ್ ಸರಕಾರದವರು ಈ ಕೂಲಿಕಾರರ ಸಹಾಯಕ್ಕಾಗಿ ಟ್ರೇಡ್ ಯೂನಿಯನ್ ಕೊಂಗ್ರೆಸ್ಸಿಗೆ ಹಣ ಕಳುಹಿಸಕೂಡದಿತ್ತೆಂದು ಬ್ರಿಟಿಷ ಸರಕಾರದವರು ರಷ್ಯಾ ಸರಕಾರಕ್ಕೆ ಬರೆದಿರುವರು.

—ಲೆಫ್ಟನೆಂಟ ಡ್ಯೂಸಿ ಎಂಬವರು ತನ್ನ ವಿಮಾನದಲ್ಲಿ ಕೂತು ಪೇರಿಸಿನಿಂದ ರಷ್ಯಾ ಸ್ಯಾಬೇರಿಯ ದಾರಿಯಾಗಿ ಟೊಕಿಯೊ ಪಟ್ಟಣಕ್ಕೆ ಹೊರಟಿರುವರು.

—ಸೋವಿಯಟ್ ಟ್ರೇಡಯೂನಿಯನಿನವರು ಗ್ರೇಟಬ್ರಿಟನಿನ ಕೂಲಿಕಾರರ ಸಂಘಕ್ಕೆ ಇತ್ತರ ವರೇಗೆ ೩೬.೫ ರೊಬುಲುಗಳನ್ನು (ರಶ್ಯದ ನಾಣ್ಯ) ಕೊಟ್ಟಿರುವರು.

—ಲೀಗ್ ಕೌನ್ಸಿಲಿನಲ್ಲಿ ಜರ್ಮನಿ, ಸ್ಪೈಯನ್ ಮತ್ತು ಬ್ರೆಜಿಲ್ ರಾಜ್ಯಗಳ ಮೆಂಬರುಗಳು ಇರುವದು ಅತೀ ಅಗತ್ಯವೆಂದು ನಿಶ್ಚಯಿಸಲಾಗಿಯದೆ

—ಲಂಡನ್‌ನಲ್ಲಿ ದರೋಡೆಕಾರರು ಅಲ್ಲಿಯ ನೇಶನಲ್ ಬ್ಯಾಂಕಿನ ಒಂದು ಮೋಟಾರಕಾರನ್ನು ನಿಲ್ಲಿಸಿ ಅದರೊಳಗಿದ್ದ ೩ ಜನರನ್ನು ಕೊಂದು ೪೦,೦೦೦ ಪವನುಗಳನ್ನು ಸುಲಿಗೆಮಾಡಿದರು.

ಒಳದೇಶ ವರ್ತಮಾನ.

—ಪಂಜಾಬ ಸಂಸ್ಥಾನ ಜೈಲು ಆಡಳಿತೆಯ ವಿಷಯ ತನಿಖೆ ಮಾಡಲಿಕ್ಕೆ ಒಂದು ಕಮಿಶನ್ ನೇಮಕವಾಗಿದೆ. ಈ ಕಮಿಶನಿನವರು ತನಿಖೆ ಮಾಡಿ ಸರಕಾರಕ್ಕೆ ಒಂದು ವರದಿಯನ್ನು ಕಳುಹಿಸಿದ್ದರು. ಈ ವರದಿಯ ಪ್ರಕಾರ ಈಗ ೨ ಬಿಲ್ಲುಗಳನ್ನು ತಯಾರಿಸಿರುವರು. ಒಂದರ ಪ್ರಕಾರ ಈಗಿರುವ ಜೈಲರರನ್ನೂ, ಡಿಪ್ಯುಟಿ ಜೈಲರರನ್ನೂ ತೆಗೆದು ಡಿಪ್ಯುಟಿ ಮತ್ತು ಅಸಿಸ್ಟಾಂಟ ಸುಪರಿಂಟೆಂಡೆಂಟರನ್ನು ನೇಮಿಸಲಿಕ್ಕೆ ಆಲೋಚಿಸಲಾಗಿಯದೆ. ಈ ಅಧಿಕಾರಿಗಳು ಹೆಚ್ಚು ವಿದ್ಯಾವಂತರನ್ನು ನೇಮಿಸಿ, ಅವರಿಗೆ ಹೆಚ್ಚು ಸಂಬಳವನ್ನೂ ಕೊಡಬೇಕೆಂದು ನಿಶ್ಚಯಿಸಲಾಗಿಯದೆ. ಇನ್ನೊಂದು ಬಿಲ್ಲಿನ ಪ್ರಕಾರ ಜೈಲಿನಲ್ಲಿರುವವರು ಒಳ್ಳೇ ರೀತಿಯಲ್ಲಿ ನಡೆದರೆ ಅವರನ್ನು ಅವಧಿಯ ಮೊದಲೇ ಬಿಟ್ಟು ಅವರಿಗೆ ನೆಲಿಬಾರಕೊಲೊನಿಯಲ್ಲಿ ಬೇಸಾಯ ಮಾಡಲಿಕ್ಕೆ ಸ್ಥಳವನ್ನು ಕೊಟ್ಟು ಅವರ ಹೆಂಡತಿ ಮಕ್ಕಳೊಡನೆ ಇರುವಂತೆ ಮಾಡುವರು.

—ಇಂಡಿಯಾ ದೇಶದಿಂದ ಅಫೀಮನ್ನು ಮದ್ದಿಗಲ್ಲದೆ ಇತರ ಉಪಯೋಗಕ್ಕಾಗಿ ಪೂರ್ವದೇಶಗಳಿಗೆ ಕಳುಹಿಸುವುದನ್ನು ಕೂಡಲೆ ನಿಲ್ಲಿಸಬೇಕೆಂದು ಕೆಲವು ವರುಷಗಳಿಂದ ಆಲೋಚನೆಯು ನಡಿಯುತ್ತಲೇ ಇತ್ತು. ಈಗ ೧೯೩೫ನೇ ಇಸವಿ ಡಿಶಂಬರ ೩೧ರಲ್ಲಿ ಅಫೀಮನ್ನು ಇಂಡಿಯದಿಂದ ಕಳುಹಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕೆಂದು ಇಂಡಿಯಾ ಸರಕಾರದವರು ನಿಶ್ಚಯಿಸಿರುವರು. ಈ ವರುಷ ಎಪ್ರಿಲ್ ತಿಂಗಳಲ್ಲಿ ಅಫೀಮನ್ನು ಕಲ್ಕತ್ತದಲ್ಲಿ ಏಲಂ ಮಾಡಲಿಲ್ಲ.

—ಬಂಗಾಳದ ಗುರುದಾಸಪುರ ಜಿಲ್ಲೆಯ ಮಧುಪುರ ಎಂಬ ಹಳ್ಳಿಯಲ್ಲಿ ಕಾಶ್ಮೀರದಿಂದ ಬಂದ ಒಬ್ಬ ಕೂಲಿಯವನು ಅವನ ಹೆಂಡತಿ ಮಕ್ಕಳೊಡನೆ ವಾಸಿಸಿಕೊಂಡಿದ್ದನು. ಅವನ ಹೆಂಡತಿಯು ರೂಪವತಿಯಾಗಿದ್ದಳು. ಇವಳನ್ನು ಅಪಹರಿಸಿ ಹಾಳುಮಾಡಬೇಕೆಂದು ಒಬ್ಬ ನೆರೆಕರೆಯವನು ಸಾಧಿಸಿಕೊಂಡಿದ್ದನು. ಸ್ವಲ್ಪ ಸಮಯದಲ್ಲಿ ಅವನ ಎಲ್ಲಾ ಮಕ್ಕಳು ಸತ್ತುಹೋದರು. ಆಗ ಈ ನೆರೆಯವನು ಇನ್ನು ಹುಟ್ಟಿದ ಮಕ್ಕಳು ಸಾಯದಂತೆ ಅವನ ದೇವತೆಗೆ ಒಂದು ಆಡನ್ನು ಬಲಿಕೊಡಬೇಕೆಂದು ಹೇಳಿದನು, ಗಂಡಹೆಂಡರಿಬ್ಬರೂ ಪೂಜಾಸಾಹಿತ್ಯಗಳನ್ನೂ ಸ್ವಲ್ಪ ಹಣವನ್ನೂ ತೆಗೆದುಕೊಂಡು ಇವನೊಡನೆ ಹೊರಟುಹೋಗಿ ಅವನ ದೇವತೆಯ ಗುಡಿಯ ಹತ್ತಿರವಿರುವ ಒಬ್ಬ ಜಾಟನ ಮನೆಯಲ್ಲಿ ಉಳುಕೊಂಡರು. ಈ ನೆರೆಯವನು ಜಾಟನೊಡನೆ ಒಳಸಂಚು ನಡಿಸಿದ್ದನು. ರಾತ್ರಿಯಲ್ಲಿ ಈ ಜಾಟನು ಗಂಡಹೆಂಡರಿಬ್ಬರನ್ನು ಹೊರಗೆ ಹಾಕಿದನು. ಅಷ್ಟರಲ್ಲಿ ಕೆಲವು ದುಷ್ಟಾನರು ಬಂದು ಈ ಕಾಶ್ಮೀರಿಯನ್ನು ಹಿಡಿದು ಅವನ ಹಣವನ್ನು ಎಳಕೊಂಡರು. ಏಳೆಂಟು ಜನರು ಅವನ ಹೆಂಡತಿಯನ್ನು ಹಾಳುಮಾಡಿದರು. ಅವನು ಫಿರ್ಯಾದುಕೊಟ್ಟನು. ಮೆಜಿಸ್ಟ್ರೇಟರು ತನಿಖೆ ನಡಿಸಿ ಇದರಲ್ಲಿ ಸೇರಿದವರೆಲ್ಲರಿಗೂ ೫–೬ ವರುಷದ ಕಠಿಣ ಸಜೆ ವಿಧಿಸಿದರು.

—ಇಂಗ್ಲೆಂಡಿನಿಂದ ಸಾಮ್ರಾಜ್ಯದ ಎಲ್ಲಾ ಭಾಗಗಳಿಗೂ ವಿಮಾನಗಳ ದಾರಿಯನ್ನು ಮಾಡಿ ವಿಮಾನ ಚಲಾವಣೆಗೆ ಕೆಲಸವು ನಡಿಯುತ್ತದೆ. ಈಗ ಇದಕ್ಕೆ ಮೂರು ಮಾರ್ಗಗಳನ್ನು ನಿಶ್ಚಯಿಸಿರುತ್ತಾರೆ. (೧) ಇಂಗ್ಲೆಂಡಿನಿಂದ ಇಂಡಿಯಕ್ಕೆ ೮ ದಿವಸಗಳಲ್ಲಿ ಬರುವ ದಾರಿ. (೨) ಇಂಗ್ಲೆಂಡಿನಿಂದ ಆಸ್ಟ್ರೇಲಿಯಕ್ಕೆ ಹತ್ತು ದಿವಸಗಳ ದಾರಿ, (೩) ಸ್ಯೂಜಿನಿಂದ ಮತ್ತು ಕೇಪ್‌ಟೌನಿಗೆ ಆರು ದಿವಸಗಳ ದಾರಿ, ಕಾಯರೊ ಪಟ್ಟಣವು ಮಧ್ಯಸ್ಥಳವಾಗುವುದು. ಇಲ್ಲಿ ವಿಮಾನಗಳು ನಿಲ್ಲುವ ಸ್ಥಳವು ಡಿಶಂಬರ ಒಳಗೆ ತಯಾರಾಗುವುದು. ಜನವರಿ ೧ನೇ ತಾರೀಕಿಗೆ ಪ್ರಯಾಣಿಕರು ಬಂದು ಕರಾಚಿಗೆ ಇಳಿಯುವರು. ಬರುವವರು ಈಗಲೇ ಟಿಕೇಟು ತೆಗೆದುಕೊಂಡಿರುವರು.

—ಆಗ್ರಾ ಮತ್ತು ಅಯೋಧ್ಯಾ ಸಂಯುಕ್ತ ಸಂಸ್ಥಾನದಲ್ಲಿಯ ಸಬ್ ಜಡ್ಜರಾದ ಅಲಕಮುರಾರಿ ಎಂಬವರೂ ಆಗ್ರಾದ ಸಬ್ ಜಡ್ಜರಾದ ಶಾಬ್ಬಿಯಿನರು ನಂಬ್ರಗಳನ್ನು ತನಿಖೆ ನಡಿಸುವುದರಲ್ಲಿ ಏನೊ ಕುತಂತ್ರ ನಡಿಸಿದ್ದಕ್ಕಾಗಿ ಅಲ್ಲಾಹಾಬಾದಿನ ಚೀಫ್ ಜಸ್ಟಿಸರು ಅವರಿಬ್ಬರನ್ನೂ ಕೆಲಸದಿಂದ ನಿವೃತ್ತಿಪಡಿಸಿರುವರು.

—ಕಡೂರು ಡಿಸ್ಟ್ರಿಕ್ಟ ಬೋರ್ಡಿನವರು ವಿಧಿಸಿದ ವಿದ್ಯಾಕರಿಗೆಯನ್ನು ತೆಗೆದು ಹಾಕಬೇಕೆಂದು ಹೊಸಕೋಟೆ ಕೃಷ್ಣರಾಯರು ದಿವಾನರಿಗೆ ಮನವಿ ಮಾಡಿರುವರು.

—ಹನ್ನಂದನೇ ತಾರೀಕಿಗೆ ಕಲ್ಕತ್ತಕ್ಕೆ ಬಂದ ಮದನಮೋಹನ ಮಾಲವೀಯರು ಪಟ್ಟಣದ ಹಿಂದೂ ಮುಖಂಡರೊಡನೆ ಮಾತಾಡುವುದಕ್ಕಾಗಿ ಒಂದು ಸಭೆಯನ್ನು ಜರಗಿಸಿದರು.

—ಇತ್ತಲಾಗೆ ಪುನಃ ಸೃಷ್ಟಿಸಲ್ಪಟ್ಟ ಕಲ್ಲಿಕೋಟೆ ಮತ್ತು ಚೆರಕಲ ತಾಲೂಕು ಬೋರ್ಡುಗಳಿಗೆ ಪ್ರೆಸಿಡೆಂಟರನ್ನು ಚುನಾಯಿಸುವ ಅಧಿಕಾರವನ್ನು ಸರಕಾರದವರು ಕೊಟ್ಟಿರುವರು.

—ಇಂಡಿಯಾ ಸರಕಾರದವರು ನೇಮಿಸಿದ ಟೆರೀಫ್ ಬೋರ್ಡಿನವರು ಮೊದಲು ಸಿಮ್ಲಾದಿಂಗಿನ ಸಭಾಮಂದಿರದಲ್ಲಿ ಟಾಟಾ ಆಯರ್ನ ಮತ್ತು ಸ್ಟೀಲ್ ಕಂಪೆನಿಯ ಅಧಿಕಾರಿಗಳೊಡನೆ ತನಿಖೆ ನಡಿಸುವರು.

—ಪೂನಾದಲ್ಲಿ ಇತ್ತಲಾಗೆ ಸುಟ್ಟುಹೋದ ಜ್ಞಾನಪ್ರಕಾಶ ಛಾಪಖಾನೆಯ ಪುನರುಜ್ಜೀವನಕ್ಕಾಗಿ ಮಧ್ಯ ಸೀಮೆಗಳ ಮಾಜಿ ಮಂತ್ರಿಗಳಾದ ರಾವ್‌ಬಹದ್ದೂರ್ ನಾರಾಯಣರಾವ್ ಕೇಳಕರರು ರೂ. ೧೦೦೦ವನ್ನೂ, ಹಿಂದೂ ಪತ್ರಿಕೆಯ ಎಡಿಟರರೂ, ನಾಗಪುರದ ಸರ್. ಎಮ್. ಬಿ. ಟ್ಯಾಂಬೆಸರೂ ಪ್ರತಿ ಒಬ್ಬರು ರೂ. ೫೦೦ನ್ನೂ, ಮದರಾಸಿನ ಕೌನ್ಸಿಲ್ ಮೆಂಬರರಾದ ಸಿ. ಗೋಪಾಲ ಮೆನೊನರು ರೂ. ೨೦೦ನ್ನು ಸರ್ವೆಂಟ ಒಫ್ ಇಂಡಿಯಾ ಸೊಸೈಟಿಗೆ ದಾನಮಾಡಿರುವರು.

—ಮದರಾಸು ಲೆಜಿಸ್ಲೇಟಿವ್ ಕೌನ್ಸಿಲಿಗೂ ಇತರ ಸಂಸ್ಥೆಗಳು ಓಟು ಕೊಡುವ ಅಧಿಕಾರವಿರುವ ಪಟ್ಟಾದಾರ್ತಿಯರಾದ ಮಲಬಾರಿನ ಸ್ತ್ರೀಯರು ತಮ್ಮ ಓಟು ಕೊಡುವ ಅಧಿಕಾರವನ್ನು ತಮ್ಮ ಕುಟುಂಬದ ಯೋಗ್ಯರಾದ ಗಂಡಸಿಗೆ ಕೊಡಬಹುದೆಂದು ಇಂಡಿಯಾ ಸರಕಾರದವರು ಕಾನೂನು ಬದಲಾಯಿಸಿರುತ್ತಾರೆ. ಮರ್ಯಾದಸ್ತ ಹೆಂಗಸರು ಓಟುಕೊಡಲಿಕ್ಕಾಗಲೀ ಮೆಂಬರರಾಗಿ ನಿಲ್ಲಲಿಕ್ಕಾಗಿ ಮನಸ್ಸು ಕೊಡುವುದಿಲ್ಲವಂತೆ. ಹೆಂಗಸರು ಬಹಿರಂಗವಾದ ಈ ಕೆಲಸಗಳಿಗೆ ಹೋಗುವುದು ಹಿಂದೂ ಹೆಂಗಸರಿಗೆ ಮರ್ಯಾದೆಗೆ ಯೋಗ್ಯವಾದಲ್ಲವೆಂಬದೇ ಈ ಕಾನೂನು ಬದಲಾವಣೆಗೆ ಕಾರಣವಾಗಿದೆ.

—ಈಸ್ಟ ಇಂಡಿಯಾ ರೈಲುವೇಯಲ್ಲಿ ೩ನೇ ತರಗತಿಯ ಪ್ರಯಾಣಸ್ಥರ ದರವನ್ನು ತಗ್ಗಿಸುವರಂತೆ.

—ಬಿಹಾರ ಸಂಸ್ಥಾನದ ಟಿಪ್ರಾ ಎಂಬಲ್ಲಿ ಹಿಂದೂ ಮತ್ತು ಮುಸಲ್ಮಾನ ಮುಖಂಡರ ಸಭೆಯು ೩ ದಿವಸಗಳ ವರೆಗೆ ಕೂತು ಆಲೋಚಿಸಿ ಎರಡೂ ಮತದವರು ಎಲ್ಲಾ ವೈಷಮ್ಯವನ್ನು ಬಿಟ್ಟು ಪರಸ್ಪರ ಪ್ರೀತಿಯಿಂದ ಇದ್ದು ಯಾವ ತರದ ಜಗಳಕ್ಕೂ ಎಡೆಕೊಡಬಾರದೆಂದು ನಿಶ್ಚಯಿಸಿ ಈ ಮುಖಂಡರು ಬಿಹಾರ ಸಂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ, ಎರಡು ಮತದವರಿಗೂ ಪ್ರೀತಿಯಿಂದ ಇರಬೇಕೆಂದೂ ಅಲ್ಲಲ್ಲಿ ಸಭೆಕೂಡಿಸಿ ಸಾರುತ್ತಿರುವರು.

ರಾಜಮಹೇಂದ್ರ ಮುನಿಸಿಪಾಲ್ ಕೌನ್ಸಿಲಿನವರು ತಮ್ಮ ಮುನಿಸಿಪಾಲಿಟಿಯ ಸರಹದ್ದಿನೊಳಗಿರುವ ತೆಂಗಿನ ಮರಗಳನ್ನು ಮುರ್ತೆಗೆ ಕೊಡಬಾರದೆಂದು ನಿಶ್ಚಯಿಸಿರುವರು.

—ಈ ವರುಷ ಕೊಯಮುತ್ತೂರು ಎಗ್ರಿಕಲ್ಚರ್ ಕೊಲೆಜಿಗೆ ೪೦ ಮಂದಿ ವಿದ್ಯಾರ್ಥಿಗಳನ್ನು ದಾಖಲುಮಾಡುವರು. ಇತ್ತರ ವರೇಗೆ ೨೦ ಮಂದಿಯನ್ನು ಮಾತ್ರವೇ ತೆಗೆದುಕೊಳ್ಳುತ್ತಿದ್ದರು. ಇನ್ನೂರು ಅರ್ಜಿಗಳು ಇವೆಯಂತೆ.

—ರಜೆಯ ಮೇಲೆ ಹೋಗಿದ್ದ ಮುಂಬಾಯಿಯ ಗವರ್ನರರಾದ ಸರ್. ಲೆಸ್ಲಿ ವಿಲ್ಸನರು ಜೂನ್ ೧೧ಕ್ಕೆ ಮುಂಬಾಯಿಗೆ ಬಂದು ತಲಪಿ ಕೂಡಲೇ ಪೂನಕ್ಕೆ ತೆರಳಿದರು. ಆಕ್ಟಿಂಗ್ ಗವರ್ನರರಾಗಿದ್ದ ಸರ್ ಹೆನ್ರಿ ಲೊರೆನ್ಸರು ರಜೆಯ ಮೇಲೆ ವಿಲಾಯತಿಗೆ ತೆರಳಿದರು.

—ಬರ್ಮಾದ ಪೇಗೂ ದೇಶದಲ್ಲಿ ಮೂವರು ಹೆಂಗಸರು ಕೆಲವರ ಮೇಲೆ ಮಜಿಸ್ಟ್ರೇಟರ ಹತ್ತಿರ ಫಿರ್ಯಾದು ಕೊಟ್ಟರು. ಮೆಜಿಸ್ಟ್ರೇಟರು ರುಜುವಾತು ಇಲ್ಲವೆಂದು ಅಪಾದಿತರನ್ನು ಬಿಟ್ಟುಬಿಟ್ಟರು. ಮೆಜಿಸ್ಟ್ರೇಟರು ಅಪಾದಿತರನ್ನು ಬಿಟ್ಟರೆಂದು ಹೆಂಗಸರಿಗೆ ಸಿಟ್ಟುಬಂದು ಅವರು ಮೆಜಿಸ್ಟ್ರೇಟರು ಮಾರ್ಗದಲ್ಲಿ ಬರುವಾಗ ಅವರನ್ನು ಹೊಡೆದರು. ಈ ಹೆಂಗಸರಿಗೆ ಮೂರುಮೂರು ತಿಂಗಳ ಸಜೆಯಾಯಿತು.

—ಮುಂಬಾಯಿ ಸಂಸ್ಥಾನದ ಗವರ್ನಮೆಂಟ ಪ್ರಿಂಟಿಂಗ್ ಮತ್ತು ಸ್ಟೇಶನರಿ ಇಲಾಖೆಯಲ್ಲಿ ಇತ್ತರ ವರೆಗೆ ಹಿಂದೂ ದೇಶದವರು ಇರಲಿಲ್ಲ. ಇನ್ನು ಮುಂದೆ ಇಂಡಿಯದವರನ್ನೇ ಇಡಬೇಕೆಂದು ಆಲೋಚಿಸಿ ೫ ವರುಷಗಳ ವರೇಗೆ ತರಬೇತುಹೊಂದಲಿಕ್ಕೆ ವರುಷಕ್ಕೆ ೨೦೦ ಪೌಂಡು ಸ್ಕೊಲರಶಿಪ್ ಕೊಟ್ಟು ಇಂಗ್ಲಾಂಡಿಗೆ ಕಳುಹಿಸಲಿಕ್ಕೆ ಸೆಂಕ್ಷನ್ ಮಾಡಿರುವರು. ಹೋಗುವವರು ಇಂಟ್ರಮಿಡಿಯೇಟ್ ಪರೀಕ್ಷೆ ಪಾಸಾದವರಾಗಿ ೨೦ ವರುಷ ಪ್ರಾಯದವರಾಗಿರಬೇಕು.

—ಕಡಲೂರು ಎಜ್ಯುಕೇಶನ್ ಕೌನ್ಸಿಲಿನವರು ದಕ್ಷಿಣ ಆರ್ಕಾಡು ಜಿಲ್ಲೆಯಲ್ಲಿರುವ ಎಲ್ಲಾ ಎಲಿಮೆಂಟರಿ ಶಾಲೆಗಳಲ್ಲಿ ಬೇಸಾಯದ ಸೂತ್ರಗಳನ್ನು ಕಲಿಸಬೇಕೆಂದು ನಿಶ್ಚಯಿಸಿರುವರು.

—ಕೊಯಮುತ್ತೂರಿನ ಪರಸ್ಪರ ಸಹಾಯಕ ಸಂಘದ ಪ್ರೆಸಿಡೆಂಟರೂ ಸೆಕ್ರೆಟರಿಯವರೂ ಸೊಸೈಟಿಯಿಂದ ಸಾಲಪಡೆದವರೊಬ್ಬನ ಸಾಲಸಂದಾಯಕ್ಕೆಂದು ತಂದುಕೊಟ್ಟ ರೂ. ೧೧೦ನ್ನು ಲೆಕ್ಕಕ್ಕೆ ದಾಖಲುಮಾಡದೆ ಇದ್ದುದಕ್ಕಾಗಿ ಮೊದಲನೆಯವರಿಗೆ ೬ ತಿಂಗಳ ಸಜೆಯನ್ನೂ ಎರಡನೇಯವರಿಗೆ ಒಂದು ವರುಷದ ಸಜೆಯನ್ನೂ ವಿಧಿಸಿರುವರು.

—ಕೋಲಾರಿನ ನಂದಿದುರ್ಗ ಭಂಗಾರದ ಗಣಿಯಲ್ಲಿ ಒಂದುಬಂಡೆ ಕಲ್ಲು ಒಡೆದು ಇಬ್ಬರು ಕೂಲಿಯವರು ಮರಣಹೊಂದಿದರು.

—ತಿರುಪುರು ಬೋರ್ಡಿನ ಹಾಯರ್ ಎಲಿಮೆಂಟರಿ ಶಾಲೆಯನ್ನು ಹೊಸ ಕ್ರಮಕ್ಕನುಸಾರವಾಗಿ ಅದನ್ನು ಡಿಸ್ಟ್ರಿಕ್ಟಬೋರ್ಡಿನ ಕೈಕೆಳಗೆ ಬಿಡಲ್ಪಟ್ಟದಾಗಿ ಮಾಡಿರುವರು.

—ತಂಜಾವೂರಿನ ತಿರುವಲ್ಲೂರಿನಲ್ಲಿ ರಥೋತ್ಸವದ ಸಮಯ ಶ್ರೀ ತ್ಯಾಗರಾಜ ದೇವರ ರಥಕ್ಕೆ ಬೆಂಕಿಹಿಡಿದು ಸುಟ್ಟುಹೋಯಿತು.

—ನೇಪಲ್ಸಿನಲ್ಲಿ ಒಬ್ಬ ಯಾಜಕನು ಅಲ್ಲಿಯ ಒಂದು ಸ್ಥಳದ ಮಣ್ಣಿನಿಂದ ಕ್ಷಯ, ವಾತ ಮೊದಲಾದ ರೋಗಗಳನ್ನು, ಆ ಮಣ್ಣನ್ನು ದೇಹದೊಳಗೆ ತೆಗೆದುಕೊಳ್ಳುವಿಕೆಯಿಂದಲೂ ಅದನ್ನು ಹೊರಗೆ ಹಾಕುವುದರಿಂದಲೂ ರೋಗಿಗಳನ್ನು ಗುಣಪಡಿಸುತ್ತಾನಂತೆ. ಇಟೇಲಿಯ ಸಾವಿರಾರು ಜನರು ಈ ಯಾಜಕನ ಮನೆಗೆ ಬಂದು ಚಿಕಿತ್ಸೆಪಡಿಯುವರು.

—ಭೂಪಾಲಿನ ಬೇಗಮರ ತನ್ನ ರಾಜ್ಯದ ಗಡಿಯಲ್ಲಿರುವಾಗ ಅವರಿಗೆ ಮೊದಲಿನಂತೆ ೨೧ ಫಿರಂಗಿ ಹಾರಿಸಿಯೂ, ರಾಜ್ಯದ ಹೊರಗೆ ಸಂಚರಿಸುವಾಗ ೧೯ ಫಿರಂಗಿ ಹಾರಿಸಿಯೂ ರಾಜಮರ್ಯಾದೆಯನ್ನು ಕೊಡಬೇಕೆಂದು ನಮ್ಮ ಜೋರ್ಜ ಮಹಾರಾಜರವರು ಅಪ್ಪಣೆಯನ್ನು ಕೊಟ್ಟಿರುವರು,

—ಜನೇವಾದ ಹತ್ತಿರ ಒಂದು ದೊಡ್ಡ ಸುಂಟರಗಾಳಿಯಿಂದ ಮೂವರು ಜನರು ಕೊಲ್ಲಲ್ಪಟ್ಟು ಅನೇಕರು ಗಾಯಹೊಂದಿದರು, ಅನೇಕ ಕಾಡುಗಳು ಜರಿದುಬಿದ್ದವು. ಅಲ್ಲದೆ ಗೋಡೆಗಳು ಬೀಳುವಿಕೆಯಿಂದ ಅನೇಕ ಪಶುಗಳು ಸಹ ನಾಶವಾದವು.

ದಕ್ಷಿಣ ಕನ್ನಡ.

ಕಾಸರಗೋಡು:—ಈ ತಾಲೂಕು ಬೋರ್ಡಿನವರು ತಮ್ಮ ಕೈಕೆಳಗಿರುವ ಶಾಲೆಗಳಲ್ಲಿ ಚರಕಗಳನ್ನು ಒದಗಿಸಿಕೊಳ್ಳುವದಕ್ಕಾಗಿ ೨೦೦ ರೂಪಾಯಿ ಸೆಂಕ್ಷನ್‌ಮಾಡಿರುವರು.

ಬಂಟ್ವಾಳ:—ಇಲ್ಲಿಯ ಅಯ್ಯನಾಯ್ಯರ ಓಣಿಯ ಸಂಕದ ಹತ್ತಿರ ಮಾರ್ಗವು ಜರಿದುಹೋದ್ದರಿಂದಲೂ ತಾಲೂಕು ಬೋರ್ಡಿನವರು ಅದರ ವಿಷಯ ಪ್ರಾಕೊಡದೆ ಇದ್ದುದರಿಂದ ಸೆಕೆಂಡರಿ ಶಾಲಾ ಮೆನೇಜರರು ಆ ಭಾಗವನ್ನು ಕಲ್ಲಿನಿಂದ ಕಟ್ಟಿಸಿದರು. ಕಳೆದ ವರುಷ ಜರಿದುಹೋದ ತುಂಬೆ ಮಾರ್ಗವನ್ನು ಊರಿನವರು ವಂತಿಗೆಯಿಂದ ದುರುಸ್ತಿಮಾಡಿಸಿದರು. ಹೊಸ ಪೇಟೆಯ ತುದಿಯ ಭಾಗವನ್ನು ಊರಿನವರೆ ತುಂಬಿಸಿ ಎತ್ತರ ಮಾಡಿದರು. ಪೇಟೆಯ ಮಾರ್ಗದಲ್ಲಿ ಸಾವಿರಾರು ಹೊಂಡಗಳು ಬಿದ್ದು ಇವುಗಳಲ್ಲಿ ನೀರು ನಿಂತಿರುತ್ತದೆ. ಈ ಹೊಂಡಗಳಲ್ಲಿ ನಿಂತ ನೀರು ಮೋಟಾರ ಬಸ್ಸುಗಳು ಓಡುವಾಗ್ಗೆ ನಡಕೊಂಡು ಹೋಗುವವರಿಗೆ ಚೆಲೊದಾದ ಸ್ನಾನವನ್ನು ಮಾಡಿಸುತ್ತದೆ. ಇನ್ನು ಇದನ್ನು ಯಾವಾಗ ದುರುಸ್ತಿ ಮಾಡಿಸುತ್ತಾರೊ ದೇವರೆ ಬಲ್ಲ. ಮಾರ್ಗದ ಬದಿಯಲ್ಲಿ ಹಾಕಿದ ಕಲ್ಲಿನ ರಾಶಿಗಳಿಗೆ ಎಡವಿ ಅನೇಕರು ರಾತ್ರಿಕಾಲದಲ್ಲಿ ಅವುಗಳಿಗೆ ಸಾಷ್ಟಾಂಗ ಸಮಸ್ಕಾರ ಮಾಡಬೇಕಾಗುವುದು.

ಇಲ್ಲಿಯ ತುಂಬೆಗೆ ಹೋಗುವ ಮಾರ್ಗದಲ್ಲಿ ವಿಪರೀತ ಕೆಸರಾಗಿ ಅದರಲ್ಲಿ ನಡೆದುಹೋಗಲು ಸಾಧ್ಯವಿಲ್ಲ. ಆದರೆ ಹಾರಿಹೋಗಲು ಸಾಧ್ಯ ಉಂಟು ಮಾಡುವುದೇನು? ಮನುಷ್ಯರಿಗೆ ಗರಿಗಳಿಲ್ಲದೆ ಬಹಳ ತೊಂದರೆಯಾಗಿದೆ.

ಇಲ್ಲಿಯ ಟೆಂಪಲ್ ಸೆಕೆಂಡರಿ ಶಾಲೆಯು ಶಿಪಿ ರಜೆ ಕಳೆದು ಪುನಃ ತೆರೆದಿರುತ್ತದೆ ಹೊಸ ಹೆಡ್‌ಮಾಸ್ತರರಾದ ಸುರತ್ಕಲ್ ರಾಮಕಾಮತ್ ಬಿ. ಎ. ಎಲ್. ಟಿ.ಯವರು ಹೆಡ್‌ಮಾಸ್ತರ ಚಾರ್ಜನ್ನು ವಹಿಸಿಕೊಂಡಿರುವರು. ಇಲ್ಲಿಯ ಟೆಂಪಲ್ ಎಲಿಮೆಂಟರಿ ಶಾಲೆಗೂ ಶ್ರೀನಿವಾಸ ಪೈಗಳು ಹೆಡ್‌ಮಾಸ್ತರರಾಗಿ ನೇಮಿಸಲ್ಪಟ್ಟು ಕಳೆದ ಅಮವಾಸೆ ದಿವಸ ಚಾರ್ಜು ವಹಿಸಿಕೊಂಡಿರುವರು.

ಇಲ್ಲಿಯ ಬೋರ್ಡು ಶಾಲೆಯಲ್ಲಿ ಹುಡುಗರ ಸಂಖ್ಯೆಯು ಬಹಳ ಕಡಿಮೆಯಾಗುತ್ತಾ ಬಂದಿದೆ ಇದರ ಹಾಯರ್ ಎಲಿಮೆಂಟರಿ ಕ್ಲಾಸುಗಳು ಕಂಡುಬರುವುದಿಲ್ಲ. ಇದನ್ನು ಮಾಪಿಳ್ಳಾ ಬೋರ್ಡು ಶಾಲೆಯಾಗಿ ಮಾಡಿ ಕುರಾನು ಕಲಿಸಲಿಕ್ಕೆ ಒಬ್ಬ ಉಪಾಧ್ಯಾಯರನ್ನು ನೇಮಿಸಿರುವರಂತೆ. ಇಷ್ಟು ಸ್ವಲ್ಪ ಹುಡುಗರಿಗಾಗಿ ೧೫ ರೂಪಾಯಿ ಬಾಡಿಗೆ ಕೊಟ್ಟು ಈ ಕಟ್ಟೋಣವನ್ನು ವಹಿಸಿಕೊಂಡುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಮಾಪಿಳ್ಳಾ ಶಾಲೆಗಾಗಿ ಕೆಲವು ಸಾವಿರ ರೂಪಾಯಿ ಖರ್ಚುಮಾಡಿ ಕಟ್ಟಿಸಿದ ಕಟ್ಟೋಣ ಇರುವಾಗ ಬಾಡಿಗೆ ಕಟ್ಟೋಣದ ಅಗತ್ಯವೇನೊ ತಿಳಿಯದು.

ಪಾಣೆಮಂಗಳೂರು:—ಇಲ್ಲಿಯ ವಿಠಲಸ್ವಾಮಿ ಎಲಿಮೆಂಟರಿ ಶಾಲೆಯಲ್ಲಿ Iಫೋರ್ಮು ತೆರೆದಿರುತ್ತಾರೆ. ಈ ಶಾಲೆಯಲ್ಲಿ ಕಲಿಸುವ ಉಪಾಧ್ಯಾಯರಲ್ಲಿ ಒಬ್ಬರಾದರೂ ಹಾಯರ್ ಎಲಿಮೆಂಟರಿ ತರಬೇತಾದ ಉಪಾಧ್ಯಾಯರು ಸಹ ಇರುವುದಿಲ್ಲ. ಬಂಟವಾಳದಲ್ಲಿ ಸರಿಯಾಗಿ ನಡಿಯುವ ಸೆಕೆಂಡರಿ ಶಾಲೆಯು ಇರುವುದು. ಊರಿನವರು ಉಪಾಧ್ಯಾಯರ ಮಾಯಜಾಲಕ್ಕೆ ಬಿದ್ದು ತಮ್ಮ ಮಕ್ಕಳನ್ನು Iಫೋರ್ಮಿಗೆ ಬಂಟವಾಳಕ್ಕೆ ಕಳುಹಿಸದೆ ಅವರ ಆಯುಸ್ಸನ್ನು ಹಾಳುಮಾಡುವುದು ಯಾಕೆಂದು ತಿಳಿಯುವುದಿಲ್ಲ. ಈ ಶಾಲೆಯನ್ನು ಬಂಟವಾಳ ಸೆಕೆಂಡರಿ ಶಾಲೆಯ ಬ್ರಾಂಚಾಗಿ ಮಾಡಿದರೆ ಆಗುತ್ತಿತ್ತಲ್ಲವೆ?

ಮಂಜೇಶ್ವರ:—ಕಾಸರಗೋಡು ತಾಲೂಕು ಬೋರ್ಡಿನ ಮೀಟಿಂಗು ಇದೇ ತಿಂಗಳ ತಾ. ೨೩ನೇ ಬುಧವಾರ ೧೨ ಗಂಟೆಗೆ ಕಾಸರಗೋಡಿನಲ್ಲಿ ಜರಗುವದಂತೆ.

ಹೊಸಬೆಟ್ಟು ಪಂಚಾಯತ ಕೋರ್ಟು ಪ್ರೆಸಿಡೆಂಟರವರಾದ ರಾ ನಾರಾಯಣ ಪೈಗಳವರು ಕೊಟ್ಟ ರಾಜಿನಾಮೆ ಅಂಗೀಕರಿಸಲ್ಪಟ್ಟು ಆ ಸ್ಥಾನಕ್ಕೆ ಹೊಸ ಚುನಾವಣೆಯು ಇದೇ ತಿಂಗಳ ತಾ. ೨೨ನೇಗೆ ಜರಗುವದಾಗಿ ಕೇಳಬರುತ್ತದೆ.

ಶ್ರೀ ಮದನಂತೇಶ್ವರ ದೇವಸ್ಥಾನದ ಆಡಳಿತೆಯ ಲೆಕ್ಕಪತ್ರವನ್ನು ಆಡಿಟರುಗಳಿಂದ ಪರಿಶೋಧಿಸಿ, ವರ್ಷಕ್ಕೊಮ್ಮೆ ಜಿಲ್ಲೆಯ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗಿ ಇದ್ದರೂ ಈ ವರೆಗೆ ಆಡಿಟ್ಟು ಆದ್ದಾಗಲೀ, ಪ್ರಕಟಿಸಿದ್ದಾಗಲೀ ಕಂಡುಬರುವುದಿಲ್ಲ. ಮೆಂಬರರಾದರೂ ಈ ಕಡೆ ಲಕ್ಷ್ಯಕೊಟ್ಟು ಕ್ರಯ ವಿಲೆವಾರಿ ಮಾಡಿದರೆ ಚಲೋದಲ್ಲವೇ?

ಮೇಲಣ ದೇವಸ್ಥಾನದ ಆಡಳಿತೆಯಲ್ಲಿ ಬಂಗ್ರಮಂಜೇಶ್ವರದಲ್ಲೊಂದು ಲೋವರ್ ಎಲಿಮೆಂಟರಿ ಶಾಲೆಯು ಜುಲ್ಯಾ ೧ನೇ ತಾರೀಕಿಗೆ ತೆರೆಯಲ್ಪಡುವದಂತೆ. ಇಷ್ಟಾದರೂ ಮಿಶನಿನವರು ತಮ್ಮ ಶಾಲೆಗಳನ್ನು ಮುಚ್ಚುವ ಹಾಗಿಲ್ಲ.

ಸುಬ್ರಹ್ಮಣ್ಯ:—ಶ್ರೀಕ್ಷೇತ್ರ ಸುಬ್ರಹ್ಮಣ್ಯದಲ್ಲಿ ಶ್ರೀ ದೇವಸ್ಥಾನ ಸಂಪುಟ ನರಸಿಂಹ ದೇವರಿಗೆ ಪ್ರತಿವರ್ಷದ ವೈಶಾಖದಲ್ಲಿ ನಿರವೇರಬೇಕಾಗಿದ್ದ ಉತ್ಸವಗಳಿಗೆ ರಥ ಮುಂತಾದ ವಾಹನಗಳು, ಬಿರುದಾವಳಿಗಳು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಿಂದ ಕೊಟ್ಟು ನಡಿಯುವ ಪದ್ಧತಿ ಇತ್ತು. ಬಾಗಿಲೋಡಿ ಭೋಜರಾವರು ಆಡಳಿತೆಗೆ ಬಂದನಂತರ ಸದರಿ ವಾಹನಗಳು ಉತ್ಸವಗಳಿಗೆ ಬಾಡಿಗೆ ಕೊಡದೆ ವಿನಹ ಕಳ್ಳಕಳ್ಳಿಲ್ಲವೆಂದು.

ಹೊರಗಿದ್ದರಿಂದ ಮಠದವರು ಅಲ್ಲಸ್ವಲ್ಪ ಭಾಡಿಗೆ ಕೊಟ್ಟು ಕೆಲಸಗಳನ್ನು ನಡಿಸಿಕೊಂಡು ಇದ್ದರು. ಬಾಗಲೋಡಿ ಅನಂತರಾಮಯ್ಯನವರು ಅಡಳ್ತೆಗೆ ಬಂದನಂತರ ಸದರಿ ಭಾಡಿಗೆಯು ಮಿತಿಮೀರಿ ಕೇಳಿದ್ದರಿಂದಲೂ, ವ ಬೇರೆ ಅನೇಕ ಚರ್ಚೆಗಳಿಂದ ಕಳೆದ ೧೯೨೦ನೇ ಇಸವಿಯಿಂದ ಸದರಿ ನರಸಿಂಹ ಜಯಂತೀ ಉತ್ಸವವು ನಿಂತುಹೋಗಿತ್ತು. ಇದರ ಮೇಲೆ ಮಠದ ಕಡೆಯಿಂದ ಸ್ವತಂತ್ರವಾಗಿ ರಥ ವಾಹನ ಮೊದಲಾದ್ದು ಸಿದ್ಧಪಡಿಸಿಕೊಂಡು ಸದರಿ ನರಸಿಂಹ ಜಯಂತೀ ಉತ್ಸವವನ್ನು ನಡಿಸಲುದ್ಯುಕ್ತರಾಗುವಲ್ಲಿ ಸದರಿ ಅನಂತರಾಮಯ್ಯನವರು ಆಶಂಕಿಸಿದ್ದರ ಮೇಲೆ ಮಠದವರು ಸಿವಿಲ್ ಕೋರ್ಟಿನಲ್ಲಿ ದಾವಾದಾಖಲ್ಮಾಡಿ ಮೂಲ, ಅಪೀಲುಕೋರ್ಟುಗಳಲ್ಲಿ ಮಠದವರು ಅವರ ಸ್ವಂತ ರಥವಾಹನ ಇತ್ಯಾದಿಗಳಲ್ಲಿ ಜಯಂತೀ ಉತ್ಸವಗಳನ್ನು ನಡಿಸುವಾಗ ದೇವಸ್ಥಾನದ ಕಡೆಯಿಂದ ಯಾವ ವಿಧದ ಆಕ್ಷೇಪವೂ ಹೇಳಕೂಡದಾಗಿ ವಗೈರೆ ತೀರ್ಮಾನವಾಗಿರುವದರಿಂದ ಇದೇ ವೈಶಾಖ ಮಾಸದಲ್ಲಿ ಜರಗಬೇಕಾಗಿದ್ದ ನರಸಿಂಹ ಜಯಂತೀ ಉತ್ಸವವು ಶ್ರೀಮಠದ ರಥದಲ್ಲಿ ತೀರ್ಮಾನಕ್ಕನುಸರಿಸಿ ಮಠದ ಕಡೆಯಿಂದಲೇ ಸಾಂಗವಾಗಿ ನೆರವೇರಿರುತ್ತದೆ.

ಮಂಗಳೂರು.

ಲೆಜಿಸ್ಲೇಟಿವ್ ಕೌನ್ಸಿಲ ಮೆಂಬರರಾಗಿದ್ದ ಜೆ. ಎ. ಸಾಲ್ಡಾಂಞಾರು ಹೊಸ ಚುನಾವಣೆಗೂ ಉಮೇದ್ವಾರರಾಗಿ ನಿಂತಿರುವರು.

ಮದರಾಸಿನ ಕೈಗಾರಿಕೆಯ ಡ್ಯಾರೆಕ್ಟರರಾದ ಸರ್ ಟಿ ವಿಜಯರಾಘವಾಚಾರ್ಯರು ಇಲ್ಲಿಗೆ ಬಂದಿರುವರು.

ಇಲ್ಲಿಯ ಡಿಪ್ರೆಸ್ಡ್ ಕ್ಲಾಸಸ್ ಮಿಶ್ಯನಿನವರು ದಕ್ಷಿಣ ಕನ್ನಡ ಜಿಲ್ಲೆಯ ಬಡ ಪಂಚಮ ಮಕ್ಕಳ ವಿದ್ಯೆಗೆ ಪ್ರೋತ್ಸಾಹ ಕೊಡುವ ಉದ್ದೇಶ್ಯ ಕೆಲವು ಸ್ಕೊಲರ್‌ಶಿಪ್‌ಗಳನ್ನು ಕೊಡಲಿರುವರು. ಸದರಿ ಮಿಶ್ಯನಿನ ಸೆಕ್ರೆಟರಿಗಳಿಗೆ ಯುಕ್ತಕಂಡರೆ ಈ ಕುರಿತು ಭಾಷೆ ಮತ್ತು ಗಣಿತ ಎಂಬೆರಡು ವಿಷಯಗಳಲ್ಲಿ ಪರೀಕ್ಷೆಮಾಡುವರು. ಉಮೇದುವಾರರು ಇಂತಹ ಒಂದು ಪರೀಕ್ಷೆಗೆ ತಯಾರಿರುವುದಲ್ಲದೆ, ತಮ್ಮ ಅರ್ಜಿಗಳನ್ನು ಇದೇ ತಿಂಗಳ ತಾ ೩೦ರ ಒಳಗಾಗಿ, ತಾವು ಕಲಿಯುತ್ತಿರುವ ಶಾಲೆಯ ಮುಖ್ಯ ಉಪಾಧ್ಯಾಯರ ಮುಖಾಂತರ ಈ ಸಂಘದ ಸೆಕ್ರೆಟರಿಗಳಿಗೆ ಕಳುಹಿಸಿಕೊಡುವುದು. ಅರ್ಜಿಯ ಫೋರ್ಮುಗಳನ್ನು ಈ ಜಿಲ್ಲೆಯ ಹೈಸ್ಕೂಲುಗಳಿಗೂ ಸೆಕೆಂಡರಿ ಶಾಲೆಗಳಿಗೂ ಕಳುಹಿಸಿಕೊಟ್ಟಿರುತ್ತದೆ. ಅಲ್ಲಿ ಸಿಕ್ಕದಿರುವ ಸಂಗತಿಗಳಲ್ಲಿ ಈ ಸಂಘದ ಸೆಕ್ರೆಟರಿಗಳಿಗೆ ಬರೆದು ಪಡಕೊಳ್ಳಬಹುದು. ಮಂಗಳೂರಲ್ಲಿ ನಿಂತು ಕಲಿಯಲಿಕ್ಕಿರುವ ಪರಊರಿನ ವಿದ್ಯಾರ್ಥಿಗಳು ಈ ಸಂಘದ ಹೊಸ್ಟೆಲಿನಲ್ಲಿ ನಿಲ್ಲಲಿಕ್ಕೆ ಅಪೇಕ್ಷಿಸುವುದಾದರೆ ಆ ಕುರಿತು ಕೂಡಾ ಅರ್ಜಿ ಬರಕೊಳ್ಳಬಹುದು.

ಇದೇ ತಿಂಗಳ ತಾ. ೨೧ನೇ ಸೋಮವಾರ ಮಧ್ಯಾಹ್ನ ಘಂಟೆ ೨ಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಉಪ್ಪಿನಂಗಡಿ ತಾಲೂಕು ಬೋರ್ಡು ಮೆಂಬರರ ಸಭೆಯು ಕನ್ಯಾನ ಮೊಕ್ಕಾಮಿನಲ್ಲಿ ಹೊಸ ಶಾಲೆ ಕಟ್ಟೋಣದಲ್ಲಿ ಕೂಡುವುದು. ೧೯೨೫-೨೬ನೇ ವರ್ಷದ ಬಾಬತು ತಾಲೂಕು ಬೋರ್ಡಿನ ಅಡಳ್ತೆಯ ವರದಿಯನ್ನು ಈ ಸಭೆಯ ಮುಂದೆ ಇಡೋಣಾಗುವುದು.

ಮಿಲಾಗ್ರಿಸಿನ ಸೈಂಟ್ ಅಂತೋನಿ ಚೆಂಟಿ ಇನ್‌ಸ್ಟಿಟ್ಯೂಟಿನವರು ಪುನಃ ಸ್ಟೀಮರಿನಿಂದ ೨೮೦೦ ಗೋಣಿ ಅಕ್ಕಿ ತರಿಸಿರುವರಲ್ಲದೆ ೧೨೦೦ ಗೋಣಿ ಅಕ್ಕಿ ಬಿರುಗಾಳಿಯ ದೆಸೆಯಿಂದ ಮಂಗಳೂರಲ್ಲಿ ಇಳಿಸಲಾಗದೆ ಮುಂಬಾಯಿಗೆ ಒಯ್ಯಲ್ಪಟ್ಟು ಅಲ್ಲಿಂದ ತಲಚೇರಿಗೆ ಪುನಹ ತರಲಾಗುತ್ತದೆ. ತಲಚೇರಿಯಿಂದ ಮಂಗಳೂರಿಗೆ ಉಗಿಬಂಡಿಯಲ್ಲಿ ತರಲ್ಪಡುತ್ತದೆ.

ಎಂಡೋಮೆಂಟ್ ಬೋರ್ಡಿನ ಪ್ರೆಸಿಡೆಂಟರಾದ ದಿವಾನ್ ಬಹದೂರು ಸರ್. ಟಿ. ಸದಾಶಿವ ಐಯ್ಯರರು ಇದೇ ತಿಂಗಳ ತಾ. ೨೬ಕ್ಕೆ ಮಂಗಳೂರಿಗೆ ಬಂದು ೨೬, ೨೮ರ ವರೆಗೆ ನಮ್ಮ ಜಿಲ್ಲೆಯಲ್ಲಿರುವರು, ಹಿಂದೂ ಧಾರ್ಮಿಕ ಉಂಬಳಿಗಳ ಆಡಳಿತದ ವಿಷಯದಲ್ಲಿ ಸಂಬಂಧಪಟ್ಟವರು ಮೇಲ್ಕಾಣಿಸಿದ ದಿವಸಗಳಲ್ಲಿ ಬೆಳಗೆ ೧೧ ಗಂಟೆಯಿಂದ ಸಂಜೆ ೪ ಗಂಟೆಯ ತನಕ ಅವರನ್ನು ಕ್ಯಾಂಪಿನಲ್ಲಿ ನೋಡಿ ಮಾತಾಡಬಹುದು.

ಮಂಗಳೂರು ತಾಲೂಕು ಸುರತಕಲ್ಲು ಸರ್ಕಲಿಗೆ ಮ|| ರಾ|| ಪದ್ಮನಾಭಕಾಮತರ ತಾಲೂಕು ಬೋರ್ಡು ಮೆಂಬರಿಕೆಯ ಅವಧಿಯು ಇದೇ ಬರುವ ಆಗೋಸ್ತು ತಿಂಗಳಲ್ಲಿ ಅಂತ್ಯವಾಗುವದರಿಂದ ಸದರಿ ಖಾಲಿಬೀಳುವ ಸ್ಥಾನಕ್ಕೆ ರಾ|| ಕಳವಾರುಗುತ್ತು ಅಪ್ಪಯಸೆಟ್ರು ಉಮೇದ್ವಾರರಾಗಿ ನಿಂತಿರುತ್ತಾರೆಂಬದಾಗಿ ವದಂತಿ.

ಜಿಲ್ಲಾ ಕಲೆಕ್ಟರವರು ಇದೇ ತಿಂಗಳ ತಾ. ೧೬ರಿಂದ ಬರುವ ತಿಂಗಳ ತಾ. ೧೮ರ ವರೇಗೆ ಈ ಕೆಳಗೆ ವಿವರಿಸಿದಂತೆ ಸರ್ಕೀಟಿಗೆ ಹೋಗುವರು:— ಇದೇ ತಿಂಗಳ ತಾ. ೧೬ಕ್ಕೆ ಉಡುಪಿಗೆ, ಉಡುಪಿಯಲ್ಲಿ ತಾ. ೧೭ರಿಂದ ೨೦ರ ವರೆಗೆ ಉಳಕೊಳ್ಳುವರು. ನಂತರ ತಾ. ೨೧ಕ್ಕೆ ಉಡುಪಿಯಿಂದ ಕಾರ್ಕಳಕ್ಕೆ ತೆರಳುವರು. ಅಲ್ಲಿ ತಾ. ೨೨-೨೪ರ ವರೆಗೆ ಇರುವರು. ಅಲ್ಲಿಂದ ತಾ. ೨೫ಕ್ಕೆ ಮೂಡಬಿದ್ರೆಗೆ ಹೊರಡುವರು; ಅಲ್ಲಿ ತಾ. ೨೭ರ ವರೆಗಿರುವರು. ತಾ. ೨೭ಕ್ಕೆ ಮೂಡಬಿದ್ರೆಯಿಂದ ಮಂಗಳೂರಿಗೆ ಹಿಂತಿರುಗಿ ಬರುವರು; ಇಲ್ಲಿಂದ ತಾ. ೨೮ಕ್ಕೆ ಪುನಹ ಮಂಗಳೂರಿನಿಂದ ಕುಂಬಳೆಗೆ ಹೋಗುವರು. ಅಲ್ಲಿ ತಾ. ೨೮—೩೦ರ ತನಕ ಇರುವರು; ಬರುವ ತಾ. ೧ಕ್ಕೆ ಪುನಹ ಕುಂಬಳೆಯಿಂದ ಮಂಗಳೂರಿಗೆ ಬರುವರು.

ವಿವಿಧ ವಿಷಯಗಳು.

ಕೊಲೊಂಬೊದಲ್ಲಿಯ ಒಬ್ಬ ಮುಹಮ್ಮದಿ ಹುಡುಗನ ಕಾರಣಿಕ.

ಈ ಹುಡುಗನು ತನ್ನ ಮಂತ್ರಬಲದಿಂದ ಟ್ರೇಮುಕಾರುಗಳನ್ನೂ, ಮೋಟರಕಾರುಗಳನ್ನೂ, ಮೋಟರ ಬಸ್ಸುಗಳನ್ನೂ ನಿಲ್ಲಿಸುವನಂತೆ. ಆತನಿಗೆ ಒಂದು ದಿನ ಟ್ರೇಮುಕಾರಿನ ಮಾಲಿಕನು ದಸೊ ಹಣ ಕೊಡದ ಸಬಬಿಂದ ತನ್ನ ಮಂತ್ರಶಕ್ತಿಯಿಂದ ಟ್ರೇಮುಕಾರನ್ನು ಅರ್ಧ ಗಂಟೆ ನಿಲ್ಲಿಸಿದನಂತೆ, ಒಬ್ಬ ಯುರೋಪಿಯಾನನನ್ನು ಮಂತ್ರಿಸಿ ಆತನ ವಶ ಇದ್ದ ಬ್ಯಾಸ್ಕೆಟನ್ನು ಹಿಡಿದು ಹೋದನಂತೆ. ಆ ಊರಿನವರು ಈ ಹುಡುಗನಿಗೆ ಬಹಳ ದಾನವನ್ನು ಕೊಟ್ಟಿರುವರಂತೆ. ಅಲ್ಲಿಯ ಒಬ್ಬ ಮುಸಲ್ಮಾನ ಬಂಗಾರ ವ್ಯಾಪಾರಿಯು ಈ ಹುಡುಗನ ಚಮತ್ಕಾರಗಳನ್ನು ನೋಡಿ ೨೫೦೦ ರೂಪಾಯಿ ಕ್ರಯ ಬಾಳುವ ಒಂದು ಗಡಿಯಾರವನ್ನು ಇನಾಮಾಗಿ ಕೊಟ್ಟಿರುವನು. ಈ ಹುಡುಗನು ಕೊಚ್ಚಿಯ ಒಬ್ಬ ರೈತನ ಮಗನು. ಈತನ ಹೆಸರು ಸಯದ್ ಅಮದ್‌ಕೋಯಾ ತಂಗಲ್. ಅದ್ಭುತ ಶಕ್ತಿ!

ರುಂಡ ಇಲ್ಲದ ಮುಂಡ!

ಅಲಿಪುರದಲ್ಲಿ ಕೆಲವು ಡಕಾಯಿತರು ಒಬ್ಬ ದೊಡ್ಡ ಐಶ್ವರ್ಯವಂತನ ಮನೆಯನ್ನು ನುಗ್ಗಿ ಸುಲಿಗೆ ಮಾಡಿ ಹೋಗುವಷ್ಟರೊಳಗಾಗಿ ಆ ಮನೆಯವರು ಎಚ್ಚರವಾಗಿ ಬೊಬ್ಬೆಯನ್ನು ಹಾಕಲಾಗಿ ಹತ್ತಿರ ಇರುವ ನೆರೆಯವರು ಬಂದು ಡಕಾಯಿತರ ಮೇಲೆ ಗುಂಡುಗಳನ್ನು ಹಾರಿಸಲಾಗಿ ಡಕಾಯಿತರು ಕಾಣಿಸಿಗದೆ ತಪ್ಪಿಸಿ ಓಡಿಹೋದರು. ಮಾರಣೆ ದಿವಸ ಬೆಳಗ್ಗೆ ನೋಡಲಾಗಿ ಆ ಐಶ್ವರ್ಯವಂತನ ಮನೆಯ ಹತ್ತಿರದ ತೋಡಿನಲ್ಲಿ ತಲೆ ಇಲ್ಲದ ಒಂದು ದೇಹವು ಕಾಣಸಿಕ್ಕಿತು, ಆ ದೇಹವನ್ನು ಅಲ್ಲಿಯ ಪೋಲೀಸ ಠಾಣ್ಯಕ್ಕೆ ಒಯ್ದರು. ಪೋಲೀಸಿನವರು ಆ ಮುಂಡವನ್ನು ಗುರ್ತಿಸುವುದಕ್ಕಾಗಿ ಫೊಟೋಗ್ರಾಫನ್ನು ತೆಗೆದಿರುವರು. ಮತ್ತು ಇದರ ತನ್ನಿಯು ನಡಿಯುತ್ತಲಿರುವುದು. ಬಹುಶಃ ಈತನು ಗುಂಡಿನ ಬಾಯಿಗೆ ಬಿದ್ದು ಮೃತಿ ಹೊಂದಿದ್ದರಿಂದ ಕಳ್ಳರು ಈತನ ಗುರುತು ಸಿಕ್ಕದಹಾಗೆ ತಲೆಕಡಿದಿರಬಹುದು. ಕಳ್ಳರ ಚಮತ್ಕಾರವೆ!

—: ಕಾವೇರಿ ನದಿ. :—

ಹಿಂದುಸ್ಥಾನದಲ್ಲಿರುವ ಪವಿತ್ರ ತೀರ್ಥಗಳಲ್ಲಿ ಕಾವೇರಿಯು ಒಂದಾಗಿದೆ. ಕೊಡಗುಸ್ಥಾನವು ಮೈಸೂರು ಸಂಸ್ಥಾನದ ಪಶ್ಚಿಮಕ್ಕಿದೆ. ಮೈಸೂರಿನ ಪಶ್ಚಿಮದಲ್ಲಿ ಕೆಲವು ಪರ್ವತಸಾಲುಗಳಿವೆ. ಅವುಗಳೊಳಗೆ ಬ್ರಹ್ಮಗಿರಿ ಎಂಬುದೇ ಎತ್ತರವಾದ ಶಿಖರ. ಇದು ಸಮುದ್ರ ಮಟ್ಟಕ್ಕಿಂತ ಐದು ಸಾವಿರ ಅಡಿ ಎತ್ತರವಿದೆ. ಶರತ್ಕಾಲದ ಪ್ರಾತಃಕಾಲದಲ್ಲಿದ್ದು ಬ್ರಹ್ಮಗಿರಿಯ ಮೇಲೇರಿ ಸುತ್ತಲೂ ನೋಡಿದರೆ ಒಂದೆಡೆಯಲ್ಲಿ ಹಸುರಾದ ಹುಲ್ಲುಗಳಿಂದ ತುಂಬಿ ಸುಂದರವಾಗಿ ಕಂಗೊಳಿಸುವ ಗುಡ್ಡಬೆಟ್ಟಗಳೂ, ಮತ್ತೊಂದೆಡೆಯಲ್ಲಿ ನೀಲಬಣ್ಣದಿಂದ ರಾಜಿಸುತ್ತಿರುವ ಹಿಂದೂ ಸಾಗರವೂ, ನೋಟಕ್ಕೆ ಬಲು ಅಂದವಾಗಿರುವುದು.

ಬ್ರಹ್ಮಗಿರಿಯ ತುದಿಯಲ್ಲಿ ತಲಕಾವೇರಿ ಎಂಬೊಂದು ಸ್ಥಳವಿರುವುದು. ಈ ಕಾವೇರಿ ನದಿಯು ಅಲ್ಲಿರುವ ಸರೋವರದಿಂದ ಉದ್ಭವಿಸುತ್ತದೆ. ತಲಕಾವೇರಿ ಎಂಬುದು ಪುಣ್ಯಸ್ಥಳವು. ವರುಷ ವರುಷವೂ, ಮಂಗಳೂರು, ಮೈಸೂರು, ಮಲಬಾರು, ಕೊಡಗು ಇತ್ಯಾದಿ ಸ್ಥಳಗಳಿಂದ ಜನರು ಬಂದು ತಲಕಾವೇರಿ ತೀರ್ಥಸ್ನಾನಮಾಡುತ್ತಾರೆ.

ತಲಕಾವೇರಿ ಎಂಬ ಸ್ಥಳದಲ್ಲಿ ಉದ್ಭವಿಸಿ ದೊಡ್ಡ ದೊಡ್ಡ ಕಾಡು ಗುಡ್ಡೆಗಳನ್ನು ದಾಟಿಕೊಂಡು ಸಾಧಾರಣ ಮೂವತ್ತು ಮೈಲುಗಳ ತನಕ ಹರಿದು, ಕೊಡಗನ್ನು ದಾಟಿ ಮೈಸೂರು ಪ್ರಸ್ಥಭೂಮಿಯನ್ನು ಸೇರುವುದು. ಅಲ್ಲಿ ತನಕ ಸಣ್ಣ ಹಳ್ಳದಂತಿದ್ದ ಈ ನದಿಯು ಸ್ವಲ್ಪ ಮಟ್ಟಿಗೆ ಅಗಲವಾಗಿ ಅಲ್ಲಿಂದ ಮುಂದರಿದು ಗಿರಿಶಿಖರಗಳನ್ನು ಹಾದು ಶ್ರೀರಂಗ ಪಟ್ಟಣವನ್ನು ಸುತ್ತುವುದು.

ಶ್ರೀರಂಗ ಪಟ್ಟಣದ ನಾಲ್ಕು ಕಡೆಗಳಲ್ಲೂ ಕಾವೇರಿ ನದಿಯು ಹರಿಯುತ್ತದಾದ ಕಾರಣ ಇದನ್ನೊಂದು ಸಣ್ಣ ದ್ವೀಪವೆಂದು ಹೇಳಬಹುದು. ಅದು ನೋಡುವುದಕ್ಕೆ ಸಣ್ಣ ದ್ವೀಪವಾದರೂ ಚರಿತ್ರೆಯಲ್ಲಿ ಕೀರ್ತಿಪಟ್ಟ ಪಟ್ಟಣವು ಅದು ದೊಡ್ಡ ದೊಡ್ಡ ಕೋಟೆಕೊತ್ತಳಗಳಿಂದ ತುಂಬಿ ತುಳುಕುತ್ತಿರುವುದು. ಅದರಲ್ಲಿರುವ ಕಟ್ಟೋಣಗಳು ಹೊರಗೆ ಅಷ್ಟೊಂದು ಸೊಗಸಾಗಿ ಕಾಣದಿದ್ದರೂ ಒಳಗೆ ಬಲು ಸುಂದರವಾಗಿರುವುದು. ಮೊದಲನೇ ಕಟ್ಟೋಣದ ದಿಡ್ಡೀಬಾಗಿಲಲ್ಲೇ ಟಿಪ್ಪುಸುಲ್ತಾನನು ಕೊನೆಯ ಬಾರಿ ಹೋರಾಡಿ ಮಡಿದನು. ಆ ಕೋಟೆಯಿಂದ ಒಂದೂವರೆ ಮೈಲಿನಾಚೆಗೆ ಒಂದು ತೋಟವಿರುವುದು. ಆ ತೋಟದ ಇಕ್ಕಡೆಗಳಲ್ಲೂ ಎತ್ತರವಾದ ತುರಾಯಿ ವೃಕ್ಷಗಳಿರುವವು. ಅವುಗಳ ನಡುವೆ ಒಂದು ಕಾಲುದಾರಿ ಇದೆ. ಆ ಕಾಲುದಾರಿಯಾಗಿ ಹೋದರೆ ಸ್ವಲ್ಪ ದೂರದಲ್ಲಿ ಸುಂದರವಾದೊಂದು ಸಮಾಧಿಯು ತೋರುವುದು. ಆ ಸಮಾಧಿಗೆ ಮೂರು ದ್ವಾರಗಳಿರುವವು. ಮೊದಲನೆ ದ್ವಾರವನ್ನು ಹೊಕ್ಕು ನೋಡಿದರೆ ಹತ್ತಿರ ಹತ್ತಿರ ಮೂರು ಗೋರಿಗಳು ಕಂಡು ಬರುವವು. ಈ ಗೋರಿಗಳಡಿಯಲ್ಲಿ ಕ್ರಮವಾಗಿ ಹೈದರಾಲಿ, ಅವನ ಹೆಂಡತಿ ಮತ್ತು ಅವನ ಮಗನಾದ ಟಿಪ್ಪುಸುಲ್ತಾನ ಮೊದಲಾದವರನ್ನು ಹುಗಿದಿರುವರು.

ಶ್ರೀರಂಗಪಟ್ಣದಿಂದ ಹೊರಟು ಕಾವೇರಿ ನದಿಯು ಸಾಧಾರಣ ನಾಲ್ವತ್ತು ಮೈಲುಗಳ ತನಕ ಫಲವತ್ತಾದ ಬಯಲುಪ್ರದೇಶಗಳನ್ನೂ, ಸುಂದರವಾದ ಕಟ್ಟಡಗಳಿಂದ ತುಂಬಿ ತುಳುಕುತ್ತಿರುವ ನಗರಗಳನ್ನೂ, ದಾಟಿಕೊಂಡು ಮೈಸೂರಿಗೂ ಕರ್ನಾಟಕಕ್ಕೂ ನಡುವೆ ಇರುವ ಶಿಖರಗಳನ್ನು ಹಾದು ಕರ್ನಾಟಕದ ಸಾನು ಪ್ರದೇಶಕ್ಕೆ ಬೀಳುವುದು. ಅಲ್ಲಿಂದ ಸ್ವಲ್ಪ ದೂರ ಹೋಗುತ್ತಲೆ ಎರಡು ಶಾಖೆಯಾಗಿ ಒಡೆಯುತ್ತದೆ. ಈ ಶಾಖೆಗಳ ನಡುವೆ ಒಂದು ಶಿವ ದೇವಸ್ಥಾನವಿರುವುದು.

ಅಲ್ಲಿಂದ ಸಾಧಾರಣ ಐವತ್ತು ಮೈಲುಗಳ ತನಕ, ಹರಿದು ತರುವಾಯ ಓರೆಕೋರೆಯಾಗಿ ಪೂರ್ವಾಭಿಮುಖವಾಗಿ ದೊಡ್ಡ ದೊಡ್ಡ ಕಾಡುಗಳನ್ನು ದಾಟಿಕೊಂಡು ಮುಂದರಿಯುತ್ತದೆ. ಆ ಪ್ರದೇಶವು ವಾಲಿಜ್ವರಕ್ಕೆ ತವರುಮನೆಯಾದ ಕಾರಣ ಅಲ್ಲಿ ಮನುಷ್ಯರು ವಾಸವಾಗಿರುವುದಿಲ್ಲ. ಆ ಪ್ರದೇಶದಲ್ಲಿ ಕಡವೆ, ಸಾರಂಗ, ಹುಲಿ, ಚಿರತೆ ಮುಂತಾದ ದುಷ್ಟ ಪ್ರಾಣಿಗಳು ವಾಸವಾಗಿರುವವು; ಜ್ವರದ ಭಾದೆಯೂ, ದುಷ್ಟಪ್ರಾಣಿಗಳ ತೊಂದರೆಯೂ ಅಲ್ಲಿ ವಿಪರೀತವಾದುದರಿಂದ ಮನುಷ್ಯರು ಆ ಸ್ಥಳದಲ್ಲಿ ವಾಸವಾಗಿರುವುದು ಇಲ್ಲವಷ್ಟೆ? ಅಲ್ಲಿಗೆ ಕಾಲು ಸಹ ಇಡುವುದಿಲ್ಲ.

ಆ ಭಯಂಕರ ಪ್ರದೇಶವನ್ನು ದಾಟಿ ಹಾದಿಯಲ್ಲಿ ಸಿಕ್ಕಿದ ಬಯಲನ್ನು ಹಾದು ಇಪ್ಪತ್ತು ಮೈಲುಗಳಷ್ಟು ದೂರ ಹರಿದು ತರುವಾಯ ಕಾವೇರಿಪುರವೆಂಬ ಘಾಟಿಯನ್ನು ದಾಟಿ ಹದಿನೆಂಟು ಮೈಲುಗಳ ತನಕ ನಿಧಾನವಾಗಿ ಹರಿಯುತ್ತ ಕೊನೆಗೆ ಒಂದು ಕಣಿವೆಯ ಮುಖಾಂತರ ಇಳಿಜಾರು ಪ್ರದೇಶದಲ್ಲಿ ಹರಿಯುತ್ತದೆ, ಅಲ್ಲಿಂದ ಮುಂದರಿಯುತ್ತಾ ಹಾದಿಯಲ್ಲಿರುವ ಮರದ ತೋಪುಗಳನ್ನು ದಾಟಿಕೊಂಡು ಸ್ವಲ್ಪ ಪಶ್ಚಿಮಕ್ಕೆ ತಿರುಗಿ, ತರುವಾಯ ದಕ್ಷಿಣಾಭಿಮುಖವಾಗಿ ನಾಲ್ವತ್ತು ಮೈಲುಗಳ ತನಕ ನೆಟ್ಟಗೆ ಹರಿಯುತ್ತದೆ. ದಡದಲ್ಲಿರುವ ಪ್ರದೇಶವು ಶಿಲಾಮಯವಾಗಿದೆ.

ಅಲ್ಲಿಂದ ಮುಂದರಿಯುವಾಗ ನೀಲಗಿರಿಯಲ್ಲಿ ಹುಟ್ಟಿ ಹರಿದು ಬರುವ ಭವಾನಿ ಎಂಬ ನದಿಯು ಬಂದು ಕೂಡುವುದು. ಅಲ್ಲಿಂದ ಸ್ವಲ್ಪ ಮುಂದರಿಯುತ್ತಲೇ ಈರೋಡೆಂಬ ಪಟ್ಟಣವು ಕಾಣುವುದು, ಇದೊಂದು ರೈಲ್ವೇ 'ಜಂಕ್ಷನ್' ಇಲ್ಲಿ ಮಂಗಳೂರು, ನೀಲಗಿರಿ ಮದರಾಸು, ತಿರುಚಿನಾಪಳ್ಳಿಯೇ ಮೊದಲಾದ ಸ್ಥಳಗಳಿಂದ ಹೊರಟ ಉಗಿಬಂಡಿಗಳು ಬಂದು ಸೇರುವ ಸ್ಥಳ.

ಅಲ್ಲಿಂದ ಈ ನದಿಯು ಹರಿಯುತ್ತಾ ಮೂವತ್ತು ಮೈಲುಗಳಷ್ಟಕ್ಕೆ ಹೋಗುವಾಗ ತಿರುಚಿನಾಪಳ್ಳಿಯ ಬಂಡೆಯು ಕಾಣುತ್ತದೆ. ಇದರ ಆರು ಮೈಲು ಪಶ್ಚಿಮದಲ್ಲಿ ಈ ನದಿಯು ಎರಡು ಶಾಖೆಯಾಗಿ ಶ್ರೀರಂಗಪಟ್ಣವನ್ನು ಸುತ್ತುವುದು. ತಿರುಚಿನಾಪಳ್ಳಿಯ ಬಂಡೆಯು ನೆಲಮಟ್ಟಕ್ಕಿಂತ ೩೫೦ ಅಡಿಗಳಷ್ಟು ಎತ್ತರವಿದೆ. ನೆಲಮಟ್ಟಕ್ಕಿಂತ ಇನ್ನೂರು ಅಡಿಗಳಷ್ಟು ಎತ್ತರದಲ್ಲಿ ಒಂದು ದೇವಾಲಯವಿದೆ. ಈ ಬಂಡೆಯ ಕೆಳಗಿರುವ ನಗರವೇ ತಿರುಚಿನಾಪಳ್ಳಿ. ಈ ಪಟ್ಟಣವನ್ನು ತಿರುಗಿದರೆ ಪುರಾತನ ಅರಸರ ಕೋಟೆಗಳನ್ನೂ, ಅರಮನೆ, ದೇವಸ್ಥಾನಗಳನ್ನೂ ನೋಡಬಹುದು.

ಅಲ್ಲಿಂದ ಕಾವೇರಿ ನದಿಯ ಉತ್ತರ ಶಾಖೆಯು ಕೊಲಿರೂನ್ ಎಂಬ ಹೆಸರಿನಿಂದ ಅರ್ವತ್ತು ಮೈಲುಗಳ ವರೆಗೆ ಹರಿದು ಚಿದಂಬರ ದೇವಸ್ಥಾನದ ಬಳಿ ಸಮುದ್ರಕ್ಕೆ ಬೀಳುತ್ತದೆ ಮತ್ತೊಂದು ಶಾಖೆಯು ದಕ್ಷಿಣ ಹಿಂದುಸ್ಥಾನದಲ್ಲಿರುವ ಪವಿತ್ರ ಕ್ಷೇತ್ರಗಳಲ್ಲೊಂದಾದ ಕುಂಭಕೋಣವನ್ನು ದಾಟಿ ಎರಡು ಮೂರು ಮೈಲು ಹೋಗುತ್ತಲೇ ಪ್ರವಾಹವು ಕಡಿಮೆಯಾಗಿ, ಮುದುಕರಾದವರಿಗೆ ಅರ್ವತ್ತು ವರುಷಗಳ ತರುವಾಯ ಬಾಲ್ಯಪ್ರಾಪ್ತಿ ಎಂಬಂತೆ ತಿರುಗಿ ಚಿಕ್ಕ ಹಳ್ಳವಾಗಿ ಜನೋಪಕಾರಿಯೂ, ಪವಿತ್ರತೀರ್ಥವೂ ಆದ ಈ ಕಾವೇರಿ ನದಿಯು ಶಾಖೋಪಶಾಖೆಗಳಾಗಿ ಒಡೆದು ಸಣ್ಣ ಸಣ್ಣ ಹಳ್ಳಗಳಂತಾಗಿ ಬಂಗಾಳಕೊಲ್ಲಿಯನ್ನು ಸೇರುತ್ತದೆ.

ಪತ್ರವ್ಯವಹಾರ.

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವದೇ.]

— ದೇಶೀಯ ವೈದ್ಯಸಮಿತಿ. —

ತಾರೀಕು ೧೩-೬-೨೬ ಶ್ಯಾಮ ಘಂಟೆ ೫ಕ್ಕೆ ಡೊಂಗರಕೇರಿಯಲ್ಲಿರುವ ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮದಲ್ಲಿ ಆಯುರ್ವೇದ ವಿದ್ವಾನ್ ಬ್ರಹ್ಮಶ್ರೀ ಕೆ. ಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ ದೇಶೀಯ ವೈದ್ಯ ಸಮಿತಿಯ ಅಸಾಧಾರಣ ಅಧಿವೇಶನವು ಜರಗಿ ಈ ಕೆಳಗಿನ ಪ್ರಸ್ತಾವನೆಗಳು ಸರ್ವಸಮ್ಮತದಿಂದ ಅಂಗೀಕರಿಸಲ್ಪಟ್ಟವು. (೧) ನ್ಯಾಯವಾದ ಉಪಾಯ ಮತ್ತು ಸಾಧನಗಳಿಂದ ಸಮಿತಿಯನ್ನು ಅಭಿವೃದ್ಧಿಗೆ ತರಬೇಕು. (೨) ಅಖಿಲ ಭಾರತ ಆಯುರ್ವೇದ ಮಹಾ ಮಂಡಲ ಮತ್ತು ವಿದ್ಯಾಪೀಠ, ಅಖಿಲ ಕರ್ನಾಟಕ ಆಯುರ್ವೇದ ಮಂಡಲ ಮತ್ತು ವಿದ್ಯಾಪೀಠಗಳ ಧ್ಯೇಯವನ್ನು ಕಾರ್ಯತಃ ಪರಿಣಮಿಸುವಂತೆ ದೇಶೀಯ ವೈದ್ಯ ಸಮಿತಿಯು ಸಹಾಯವನ್ನು ಮಾಡತಕ್ಕದ್ದು. (೩) ಸಮಿತಿಯ ಪ್ರಕೃತದ ಕಾರ್ಯದರ್ಶಿಗಳು ಈ ಮೊದಲಿನ ಅಧಿವೇಶನದಲ್ಲಿ ಪ್ರಸ್ತಾಪಿಸಿದ ಪುಸ್ತಕಾಲಯ ಮತ್ತು ವಾಚನಾಲಯಗಳ ವಿಷಯವನ್ನು ಆದಷ್ಟು ಶೀಘ್ರ, ಅಂದರೆ ಒಂದು ತಿಂಗಳೊಳಗೆ ಕಾರ್ಯರೂಪದಲ್ಲಿ ತರುವಂತೆ ಯೋಗ್ಯವಾದ ಒಂದು ಸ್ಥಳವನ್ನು ಸಮಿತಿಯ ಸಭ್ಯರುಗಳ ಸಹಾಯದಿಂದ ಬಾಡಿಗೆಗೆ ಮಾಡಿಕೊಳ್ಳಬೇಕು ಮತ್ತು ಸ್ವಲ್ಪಕಾಲದಲ್ಲಿಯೇ ಬರುವ ಮುಂದಿನ ಅಧಿವೇಶನವನ್ನು ಆ ಸ್ಥಳದಲ್ಲಿಯೇ ನಡಿಸಿ ವಾಚನಕ್ಕೆ ಬೇಕಾದ ವ್ಯವಸ್ಥೆಗಳನ್ನು ನಡಿಸಬೇಕು. (೪) ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮದ ಸಂಘದವರು ಮಂಗಳೂರು, ಮಂಜೇಶ್ವರ ಮತ್ತು ಮೂಲ್ಕಿಯಲ್ಲಿ ಅನೇಕ ಬಡರೋಗಿಗಳಿಗೆ ಉಚಿತವಾಗಿ ಆಯುರ್ವೇದೌಷಧವನ್ನು ಕೊಟ್ಟು ರೋಗಿಗಳಿಗೆ ಸಹಾಯವನ್ನು ಮಾಡುತ್ತಾ ಆಯುರ್ವೇದದ ಪದ್ಧತಿಯನ್ನು ಕೂಡ ಪ್ರಚಾರಕ್ಕೆ ತರುವಂತೆ ಮಾಡುತ್ತಾರೆ. ಈ ವಿಷಯವನ್ನು ಸಮಿತಿಯು ಹೃತ್ಪೂರ್ವಕ ಕೊಂಡಾಡಿ ಮುಂದಕ್ಕೂ ಸಾಂಗವಾಗಿ ನಡಿಯುವಂತೆ ದೇವರನ್ನು ಪ್ರಾರ್ಥಿಸುತ್ತದೆ. ಈ ಮೇಲಿನ ಪ್ರಸ್ತಾವನೆಗಳನ್ನು ಅಂಗೀಕಾರ ಮಾಡಿದ ತರುವಾಯ ಅಧಿವೇಶನಕ್ಕೆ ಅವಕಾಶವನ್ನು ಕೊಟ್ಟ ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮದ ಸಂಘದವರಿಗೆ ಕೃತಜ್ಞತೆಯನ್ನು ಸಮರ್ಪಿಸಿ ಸಮಿತಿಯು ಮಂಗಲ ಗೀತೆಯನ್ನು ಹಾಡಿತು.

ಒಬ್ಬ ಪ್ರತ್ಯಕ್ಷದರ್ಶಿ.

VACANCIES.

Wanted two Legal medical practitioners for the rural dispensaries at Shankaranaryana and Wandse in Coondapur Taluk.

A monthly Government subsidy of Rs 33-5-4 will be paid and an additional Subsidy of Rs. 100 a year will be given to such of the madical men who engage and mentain a qualified midwife. A free supply of medicines to the value of rupees 360 a year will also be given free of charge.

Applications with full name and address should be sent to the President Taluk Board Coondapur.

V. Narashima Karantha,
(1) *President.*

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. ನಂಬ್ರ 67/1926.

ಗಂಗಮ್ಮ ಕಾಡಮಠ ಮಹಾಬಲ ಶೆಟ್ರ ವಿಧವೆ, ಉಪ್ಪಿನಂಗಡಿ ತಾಲೂಕು ಕೊಲ್ನಾಡು ಗ್ರಾಮದ ಕಾಡಮಠದಲ್ಲಿರುವವರು. } ಅರ್ಜಿದಾರರು

ಮೃತ ಕಾಡಮಠ ಮಹಾಬಲ ಶೆಟ್ರು ಅರ್ಜಿದಾರಳ ಹೆಸರಲ್ಲಿ ಮಾಡಿಟ್ಟ ಇನ್ಸೂರೆನ್ಸ ಹಣವನ್ನು ವಸೂಲುಮಾಡುವ ಬಗ್ಗೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಸದರಿ ಅರ್ಜಿದಾರಳು ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿ ದಾಖಲು ಮಾಡಿರುತ್ತಾಳೆ. ಸದರಿ ಅರ್ಜಿಯು ತಾ. 14—7—1926 ಕ್ಕೆ ತನಿಖೆಗೆ ಇಟ್ಟಿರುತ್ತದೆ.

MANGALORE 10—6—1926. } G. Somashekar Rao. *Vakil for Petitioner.*

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪ್ಯಾ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀರಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗ್ಯರೆ ಬೇರೆ.

ಹೆಚ್ಚಿನ ಮಾಹಿತಿಗೆ "ಅರ್ಕ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. Authorised and fully paid up Capital Rs. 300,000—0—0 Reserve and other sinking Funds „ 288,500—0—0	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸಾಪಿಸಲ್ಪಟ್ಟಿತು. ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0 ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.

For further particulars apply to the Secretary.

ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd., Mangalore, 9th Feb. 1926.

K. Venkat Rao, Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೪ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ. ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:— ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ, ಮಂಗಳೂರು ಟಿವಣಿಗೆ ಮಾತ್ರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬಕ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸ, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—2—0.

ಶಾರದಾ ಛಾಪಖಾನೆ, ತೇರು ಬೀದಿ, ಮಂಗಳೂರು.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ರಥಬೀದಿ, ಮಂಗಳೂರು.

ಬಂದುನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ ಎಸ್. ಪಿ. ಆಚಾರ್ಯ ಇವರಿಂದ ತಯಾರಿಸಲ್ಪಟ್ಟ

ಉಪ್ಪಿನಕಾಯಿಗಳನ್ನು

ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಕುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮಿಟ್ ಮಾರ್ಟ್.

ಮುಸೋಲ್ವಾನಿ ಕಾಫಿ ಕ್ಲಬ್, ಮಾರ್ಕೇಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | **ವಜ್ರಾಂಗ-ಬಿಂದು** | ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವವಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಅಧುನಿಗಿಂತ ಮೊದಲು ಅಥವಾ ಕಡೆಗೆ ಸ್ವಾಭಾವಿಕವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಕಿವಿಯಿಂದ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ರ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಚಿಕ್ಕೋಡಿ, (ಜಿಲ್ಲಾ ಬೆಳಗಾಂವ.)

ಅಪೂರ್ವ ಸಂಧರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ

— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.



ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್‌ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸ

— ಕೀಲಡ್ಡಿಗೆ ಪದಕ. —

ಈ ಅಡ್ಡಿಗೆಯನ್ನು ರೋಲ್ಡ್ ಗೋಲ್ಡ್ ಎಂಬ ಭಂಗಾರದಲ್ಲಿ ಇಮಿಟೇಶನ್ ವಜ್ರದ ಕಲ್ಲುಗಳನ್ನು ಇಟ್ಟುನೋಡಲು ಮುದ್ದಾಗಿರುವಂತೆ ತಯಾರಿಸಿದೆ. ಮತ್ತು ಇದರ ಹರಡನ್ನು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ತಯಾರಿಸಿದೆ. ಇದನ್ನು ಯಾವಾಗಲು ಕಟ್ಟಿಕೊಳ್ಳಲು ಚೆನ್ನಾಗಿರುವದು, ಎಣ್ಣೆ ಮುಂತಾದವು ಸೇರಿದರೂ ಕೆಡದು. ಇದರ ಬಣ್ಣವು ಎಂದಿಗೂ ಕೆಡದಂತೆ ಸವರನ್ ಬಂಗಾರದ ಬಣ್ಣಕೊಟ್ಟಿರುವದು. ಶ್ರೀಮಂತರೂ, ಗರೀಬರೂ ಉಪಯೋಗಿಸಲು ಲಾಯಖಾದದ್ದು. ಕ್ರಯ 1ಕ್ಕೆ 4/8.

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರದ ಗಿಲೀಟಿನ

— ಡಾಬುಗಳು. —

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿ ಹೊಂದಿದ ಕೆಲಸಗಾರರಿಂದ ಬಹುಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಬೆಳ್ಳಿ ಡಾಬುಗಳಂತೆ ಮುಂಬಾಗದಲ್ಲಿ ಕುಣಿಕೆ ಇಟ್ಟು ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ.

ಗೆಜ್ಜೆ ಡಾಬು 1ಕ್ಕೆ 3—0—0.

— ಇಮಿಟೇಶನ್ ವಜ್ರದ ಬೆಂಡೋಲೆಗಳು. —

ಈ ಬೆಂಡೋಲೆಗಳನ್ನು ಬಹು ಹೊಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವುದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7ಕಲ್ಲಿನ ಬಿಳಿಯ ಓಲೆ ಜೊತೆ 3—0—0.
„ „ ಕೆಂಪುಕಲ್ಲಿನ ಓಲೆ ಜೊತೆ 3—8—0.

ವಿಳಾಸ:—ವೈ. ಎಮ್. ಸ್ವಾಮಿ ಅಂಡ್ ಕೊ,
ಪಾರ್ಕ್ ಟೌನ್, ಮದ್ರಾಸು.

Y. M. SWAMY & Co.,
No. 12. Nainiappa Naicken St.,
P. Town, MADRAS

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.
ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಶೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಲಿವರ್ ಮೂವ್‌ಮೆಂಟ್ ವಾಚ್
15 ಮಣಿಗಳಿದ್ದು ರೋಲ್ಡ್‌ಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇಗೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.
ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ 6-0-0.
"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0
ಕಂಬ್ಯಾಂಡ್ ಪೇಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳಿ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತರದ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

Registered No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲುಪಮರತ್ನಗಳು ನಾ । ಗರವ ಮಥಿಸಲು ಸುರರಿಗದರಿಂ । ಪರುಷವಾಯಿತೆ ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಚಳಿತರೆ ತೆರಳ ಬಲ್ಲರೆ! ತೊರೆಯ ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೧೮ನೇ ಶುಕ್ರವಾರ ಜೂನ್ ೧೯೨೬. ಸಂಚಿಕೆ ೨೬.

THE CANARA BANKING CORPORATION,
UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branch:—COONDAPOOR.
ಶಾಖೆ:—ಕುಂದಾಪುರ.

ನಿಯಮಿತ ಮೂಲಧನ ರೂ. 3,50,000.

ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

ತಾ. 28—2—'26ಕ್ಕೆ ತೋರುವ ಸದರಿ ಬ್ಯಾಂಕಿನ ವಹಿವಾಟುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.		ಆಸ್ತಿ ವ ಸೊತ್ತುಗಳು.	
ಬ್ಯಾಂಕು ಹತ್ತ ಮೂಲಧನ	1,80,090—9—11	ಹಿತ್ತಲು ಕಟ್ಟೋಣ ಕಳ್ಳಿಖಾನ ಟ್ರಂಕುಗಳು ವಗೈರೆ	3943—8—0,
ಅಡಿಷ್ನಲ ಇತರ ವಿತ್ತಗಳು	75,875—0—0,	ಯೋಗ್ಯಜವಾಬ್ದಾರಿ ಮೇಲೆ ಸಾಲಕೊಟ್ಟದ್ದು	7,58,851-13-8,
ಠೇವಣಾತಿಗಳು	5,30,003-14-3,	ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	25,800—0—0,
ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು, ಕುಳವಾರಿಗಳಿಗೆ	4,700—0—0,	ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು	4,700—0—0,
ಏವೇಜನ ಮೇಲಿನ ಈ ವರೆಗಿನ ಬಡ್ಡಿ ಕೂಡಿದ ಇತರ ಬಾಬುಗಳು	40,274—3—11,	ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ)	22,795—6—6,
		ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಠೇವಿದಾಗ್ಗೆ ಸಿಕ್ಕತಕ್ಕ ಶಿಲ್ಕು ಹಣ	15,452—15—11,
ಜುಮ್ಲಾ ರೂ.	8,31,543-12-1.	ಜುಮ್ಲಾ ರೂ.	8,31,543-12-1.

ಸಿರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸುಂ ಠೇವಣಾತಿಗಳನ್ನೂ ಕಂತು ಠೇವಣಾತಿಗಳನ್ನೂ ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವದಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನೂ ಸಾಹುಕಾರಿ ಹುಂಡಿಗಳನ್ನೂ ವಸೂಲು ಮಾಡುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮುಂತಾದ ಇತರ ಎಲ್ಲಾ ತರದ ಬ್ಯಾಂಕಿನ ವಹಿವಾಟುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು,
ಉಡುಪಿ, ತಾ. 28—2—'26.

ನಯಂಪಳ್ಳಿ ಆನಂದರಾವ್, ಸೆಕ್ರೆಟರಿ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೋಲಿಕೆ ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧಿ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ,

6, [illegible] ಸ್ಟ್ರೀಟ್,
[illegible] ಟೌನ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—[illegible], [illegible], ಇವರಲ್ಲಿಯೂ ದೊರಕುವುದು.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ಣಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು

— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ಶರೀರವು ಕಬ್ಬಿಣದಂತೆ ಆಗುವದು. ಸ್ವಪ್ನೇಂದ್ರಿಯ ಪಾತದಿಂದ, ಸ್ತ್ರೀ ಸಂಭೋಗ, ಬೊಡಲೆ ಸ್ಥೂಲನ ವಗೈರೆ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನು ದಾರ್ಢ್ಯತೆಯನ್ನು ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು [illegible] ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮ, ಸಿಲೋನ್, ಸಿಂಗಪುರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ಸಿದ್ಧಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ [illegible] ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ಕಂಡುಬರುವುದು. [illegible] ಡಬ್ಬಿಗಳು ಮುಗಿಯುವವರೆಗೂ ಪೂರ್ಣವಾಗಿ ಗುಣವನ್ನು ಮಾಡುವದು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೫—೦. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್,
"ಮಿಸ್ರಿ"
ಬೆಂಗಳೂರು ಸಿಟಿ.

ಡಿ. ವ. ನಾರಾಯಣ್,
[illegible]
ಸಾಲಾಮಿಸ್ರಿ ಮುರಬ್ಬಾ ಡಿಪೋ,
ಬೆಂಗಳೂರು ಸಿಟಿ.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂದ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ದೈಲು ಬೆರ್ಚಪ್ಪ, ಬ್ರಾಹ್ಮಣ ಸ್ವೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಶೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ಚಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲ 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

11 ಮಣಿಗಳಿದ್ದು ಬ್ರಿಜ್ ಮ್ಯೂಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟ್‌ವಾಚ್.

ಈ ವಾಚ್ ಎಂಟಾಣೆ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8
18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0, "ಬಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ			23—0—0.
14 ,,	,,	,,	26—0—0.
14 ,,	15 ಮಣಿ	,,	36—0—0.
9 ,,	,,	,,	32—0—0.

ಚಲೋದಾದ ಲವ್ ನಕ್ಸೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
184 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ, ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕಿಲ್ ಅಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೪.
ಬಾಟ್ಲಿವಾಲರ ಟೈಫಾಯಿಡ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೀನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೩—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦ "AGENTS WANTED"
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

The Canara Pubic Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು —
ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡ್ಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ—ಈ ಪ್ರಾಂತ್ಯಗಳಿಂದ ಈ ಕಂಪೆನಿಯು ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂವತ್ಸರದ ಜ್ಯೇಷ್ಠ ಬ॥ ೧ ಶನಿವಾರದಿಂದ ಕ್ಷಯ ಸಂವತ್ಸರದ ಜ್ಯೇಷ್ಠ ಬ॥ ೭ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮಿಥುನ ಕಾರ್ತೆಲ್.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ಸೂರ್ಯ ಉ.	ಸೂರ್ಯ ಅಸ್ತ.
26	ಶನಿ	೧	೫೦.೧೪	ಮೂಲಾ	೬. ೦	೧೩	6. 8	6.58
27	ರವಿ	೨	೪೫. ೦	ಪೂ. ಷಾ.	೩.೧೪	೧೩	6. 8	6.58
28	ಸೋಮ	೩	೩೯.೩೨	ಶ್ರವಣ	೫೬. ೦	೧೪	6. 9	6.58
29	ಕುಜ	೪	೩೩.೧೪	ಧನಿಷ್ಠಾ	೫೨. ೦	೧೫	6. 9	6.58
30	ಬುಧ	೫	೨೭. ೦	ಶತಭಿಷಾ	೪೭. ೪೫	೧೬	6. 9	6.59
1	ಗುರು	೬	೨೧.೧೬	ಪೂ. ಭಾ.	೪೪. ೦	೧೭	6. 9	6.59
2	ಶುಕ್ರ	೭	೧೫.೧೪	ಉ. ಷಾ.	೪೦.೧೪	೧೮	6.10	6.59

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
18	87—0	74—9	1 66	—
19	82—6	73—6	1—86	—
20	86—7	73—6	1—17	—
21	84—4	74—8	1—54	—
22	86—2	74—1	0—15	—
23	87—8	76—8	--	—
24	87—3	75—0	1—47	24—64

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಸೂರಿ ...	8—12	9—10
ಹೊಸ ಗುಡ್ಡು ...	8—8	8—12
ಸುಗ್ಗಿ ...	8—4	8—10
ಅಮ್ಮಲ್ ಬೆಳ್ತಿಗೆ ...	8—0	9—6
ರಂಗೂನು ಬೆಳ್ತಿಗೆ ಗೋಣಿ ೧ ...	14—8	15—0
ಗೋಧಿ ಗೋಣಿ ೧ಕ್ಕೆ ...	18—0	20—0
ಹುರುಳಿಗೋಣಿ ೧ಕ್ಕೆ ...	8—0	9—12
ಕಡಲೆಗೋಣಿ ೧ಕ್ಕೆ ...	13—0	14—8
ತೊಗರಿಗೋಣಿ ೧ಕ್ಕೆ ...	16—0	16—8
ತೊಗರಿಬೇಳೆ ಗೋಣಿ ೧ಕ್ಕೆ ...	19—0	26—0
ಉದ್ದುಗೋಣಿ ೧ಕ್ಕೆ ...	16—8	17—0
ಹೆಸರುಗೋಣಿ ೧ಕ್ಕೆ ...	16—0	17—8
ಊರು ಬೆಲ್ಲ ಖಂಡಿ ೧ಕ್ಕೆ ...	85—0	—
ಉಪ್ಪು ಗೋಣಿ ೧ಕ್ಕೆ ...	5—4	5—12
ಕೊಬ್ರಿ ಖಂಡಿ ೧ಕ್ಕೆ ...	96—0	100—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	34—8	35—0
ಎಳ್ಳಿಂಡಿ ಖಂಡಿ ೧ಕ್ಕೆ ...	45—0	47—8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	7—8	8—8
ಎಳ್ಳೆಣ್ಣೆ ಮುಡಿ ೧ಕ್ಕೆ ...	7—8	9—0
ಹರಳೆಣ್ಣೆ ಬುಟ್ಟಿಗೆ ೧ಕ್ಕೆ ...	8-12-0	—
ದೋರಿನ ಸಕ್ಕರೆ ಮುಡಿ ೧ಕ್ಕೆ ...	5—12	—
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	7—0	—
ಜಾಸಿವೆ ಮುಡಿ ೧ಕ್ಕೆ ...	9—8	—
ಕೊತ್ತಂಬರಿ ಮುಡಿ ೧ಕ್ಕೆ ...	5—0	5—12
ಕಾಫಿ ಖಂಡಿ ೧ಕ್ಕೆ ...	385—0	460—0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಚಳಕು ...	300—0	310—0
ಹೊಸ ಅಡಿಕೆ ಖಂಡಿ ೧ಕ್ಕೆ ...	195—0	220—0
ಕಾಳುಮೆಣಸು ಖಂಡಿ ೧ಕ್ಕೆ ...	360—0	—
ಹುಣಸೆ ಮುಡಿ ೧ಕ್ಕೆ ...	50—0	64—0
ಗೇರುಬೀಜ ಮುಡಿ ೧ಕ್ಕೆ ...	4—0	—
ಶುಂಠಿ ಖಂಡಿ ೧ಕ್ಕೆ ...	45—0	65—0
ಬೆಂದ್ಲು ಮುಡಿ ೧ಕ್ಕೆ ...	16—4	16—12
ಕಾಮ್ಪ ಹಾಕ್ಕೆಗಳು ಮುಡಿ ೧ಕ್ಕೆ ...	21—0	—
[illegible] ...	18—10	
[illegible] ಮುಡಿ ೧ಕ್ಕೆ ...	16—8	
ತವಸು	13—9	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಚೈನಾ ಬಜಾರ್, ರೋಡ್, ಮದ್ರಾಸು.

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುಧಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆರಾರ್ ಎಸ್‌ಟೇಟ್, ಮುಂಬಯಿ.

ಕೇಳಿರಿ! ಬರಿಯಿರಿ!!

ಎರಡೇ ಎರಡು

1926ನೇ ಕ್ರಯದ ಪಟ್ಟಿ ಮುಫತ್ತು.

ವಿಳಾಸ:— ದಿ. ಊಲನ್ ಮಾರ್ಟ್,
ಮಂಗಳೂರು.

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18 ಮೊಳ ಉದ್ದವೂ, 2½ ಮೊಳ ಅಗಲವು ಇದೆ. ಈ ಸೀರೆಗಳನ್ನು ಹಸನಾದ ಇಮಿಟೇಷನ್ ಸಿಲ್ಕ್ ಗಟ್ಟಿ ದಾರದಿಂದ ತಯಾರಿಸಿದೆ. ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವುದಲ್ಲದೆ ಅಂದವಾದ ಅಂಚೂ, ಸುಂದರವಾದ ಸಾಚಾ ರೇಷ್ಮೆಯ ಸೆರಗೂ ಇರುವದು. ಈ ಮಾದರಿ ಸೀರೆಗಳು ಬೇರೆ ಯಾರಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರದು. ಈ ಸೀರೆಗಳು ಶ್ರೀಮಂತರೂ, ಗರೀಬರೂ, ಉಡಲಿಕ್ಕೆ ಬಹು ಚಲೋದಾದವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಆದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ರೂ. 7—8—0.

ಇಂದ್ರಿಯಸ್ತಂಭನ ಗುಳಿಗೆ.

ಈ ಅದ್ಭುತವಾದ ಮಾತ್ರೆಯನ್ನು ನುಂಗುವುದಕ್ಕೆ ಒಂದು ಗಂಟೆಯ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತುವೃದ್ಧಿಯಾಗಿ ಗಟ್ಟಿಯಾಗುವುದು. ಈ ಔಷಧವನ್ನು ತಿಂದು 1 ಗಂಟೆಯ ಕಾಲ ಕಳೆದು ಸಂಭೋಗ ಮಾಡಿದರೆ, ಬೇಗನೆ ಸ್ಖಲನವಾಗದ ಶಕ್ತಿಯನ್ನು ಕೊಡುವುದು. ತರಿಸಿ ಪರೀಕ್ಷಿಸಿರಿ, ಕ್ರಯ ಡಬ್ಬಿ 1ಕ್ಕೆ ರೂ. 1—6—0.

ವಿಳಾಸ:— ಎಸ್. ಆರ್. ಕೃಷ್ಣ ಅಂಡ್ ಕೋ.,
ನಂ. ೧೪ ತಂಬುಸ್ವಾಮಿನ ಬೀದಿ,
ಸೈ. ಮ. ಮದ್ರಾಸ್

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು—

ಸರ್ವಿಸಿನ ಹೆಸರು.	ತಲಪುವ ಸ್ಥಳ.	ಹೊರಡುವ ಘಂಟೆ.
ಜನರಲ್	ಕಾರ್ಕಳ—ಆಗುಂಬೆ—ತೀರ್ಥಹಳ್ಳಿ	ಪೂ. 6½
ಸಿ. ಪಿ. ಸಿ.	ಉಡುಪಿ—ಕುಂದಾಪುರ—ಬೈಂದೂರು	,, 6¾, 9¾
	ಉಡುಪಿ	ಮ. 12¾
	ಮುಲ್ಕಿ ವರೆಗೆ ಮಾತ್ರ	ಅ. 3¾
	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ.	ಪೂ. 7, ಮ. 1
	ಕಾರ್ಕಳ—ಬೆಳ್ಮಣ್ಣಿನಿಂದ	
	ಬಂಟ್ವಾಳಕ್ಕೆ ಮಾತ್ರ	,, 10½, ಅ. 4¾
	ಪುತ್ತೂರು—ಸಂಪಾಜೆ—ಮಡಿಕೇರಿ	,, 7½
	ಪುತ್ತೂರು	ಪೂ. 10½ ಅ. 2
ಕಾರ್ಕಳ	ಕಾರ್ಕಳ—ಉಡುಪಿ—ಕುಂದಾಪುರ	ಪೂ. 6
	ಕಾರ್ಕಳಕ್ಕೆ ಮಾತ್ರ	ಅ. 1
ಜನುಮಾನ್	ಕಾರ್ಕಳ—ಉಡುಪಿ—ಕುಂದಾಪುರ	ಪೂ. 7
	ಕಾರ್ಕಳಕ್ಕೆ ಮಾತ್ರ.	ಮ. 12
ಕೆಂಕಲ್ ವಿಟ್ಠಲ್	ಪುತ್ತೂರು—ಮಡಿಕೇರಿಗೆ	ಪೂ. 7
	ಪುತ್ತೂರು—ಉಪ್ಪಿನಂಗಡಿ	ಅ. 1½
	ವಿಟ್ಲ ಬಳ್ಳಿ	ಪೂ. 8, ಅ. 2½
	ಉಡುಪಿ	ಪೂ. 7½ ಅ. 1½
ಸ್ಟಾರ್	ಮುಲ್ಕಿ—ಉಡುಪಿ.	,, 7, ಮ. 1
	ಬಂಟ್ವಾಳ	,, 10½, ಅ. 4½
ಇಂಡಿಯನ್	ಮುಲ್ಕಿ—ಉಡುಪಿ.	,, 6½, ಮ. 12½
ಪೊಪ್ಯುಲರ್	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ	ಪೂ. 7½ ಮ. 12½

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ—

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲ್	ಬೆಳಿಗ್ಗೆ 8-5	ಸಂಜೆ 5-35
ಲೋಕಲ್	,, 9-45	ರಾತ್ರಿ 10-40
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-30	ಮಧ್ಯಾಹ್ನ 2-40
ಸೆಟಲ್	ಸಂಜೆ 5-40	ಬೆಳಿಗ್ಗೆ 9-2

ಹೊಸ ಮುದ್ರಣ! ಶುದ್ಧ ಪಾಠ!!

ಶ್ರೀ ಶಂಕರ ಭಗವತ್ಪಾದಾಚಾರ್ಯ ಪ್ರಣೀತವಾದ

ಶಿವಾನಂದಲಹರಿ

ಎಂಬ

ಪರಮಶಿವನ ಸ್ತೋತ್ರವು.

ಪ್ರಶಂಸೆ:—

ಈ ಗ್ರಂಥದಲ್ಲಿ ಅಡಗಿರುವ ೧೦೦ ಶ್ಲೋಕಗಳ ಪೈಕಿ ಪ್ರತಿಯೊಂದು ಶ್ಲೋಕವೂ ಆರಿಸಿ ಪೋಣಿಸಿದ ಆಣಿಮುತ್ತುಗಳಂತೆ ಅತಿ ಶ್ಲಾಘ್ಯಗಳಾಗಿ ಶಬ್ದಾಲಂಕಾರ ಅರ್ಥಾಲಂಕಾರ ಭಾವರಸ ಲಕ್ಷಣಗಳಿಂದ ಕೂಡಿ ಓದುವವರ ಮನಸ್ಸಿನಲ್ಲಿ ಆನಂದವನ್ನು ಹುಟ್ಟಿಸುವುದಲ್ಲದೆ, ಉಪಾಸ್ಯದೇವರಲ್ಲಿ ನಿರತಿಶಯ ಭಕ್ತಿಯನ್ನು ಹುಟ್ಟಿಸುತ್ತದೆ. ಪ್ರತಿಯೊಂದು ಶ್ಲೋಕಕ್ಕೂ ಕೊಟ್ಟಿರುವ ಪ್ರತಿಪದಾರ್ಥಭಾವಾರ್ಥಗಳು ಸ್ತೋತ್ರದ ಅರ್ಥವನ್ನು ಪುಷ್ಟೀಕರಿಸಿ ಶ್ರದ್ಧೆಯನ್ನು ಹೆಚ್ಚಿಸುವುದರೊಡನೆ ಸಂಸ್ಕೃತ ಭಾಷಾಜ್ಞಾನವನ್ನುಂಟುಮಾಡುವುದು.

ಶ್ರೀ ಶಿವಗೀತಾ

ಟೀಕಾಸಹಿತವಾಗಿ ಪಂಡಿತರಿಂದ ಪರಿಶೋಧಿಸಲ್ಪಟ್ಟಿದೆ.

ಇದು ಪದ್ಮಪುರಾಣೋಕ್ತವಾದ ಬ್ರಹ್ಮವಿದ್ಯಾಪ್ರತಿಪಾದಕವಾದ ಉಪನಿಷದ್ರತ್ನವು. ಇದು ಶ್ರೀ ಭಗವದ್ಗೀತೆಯಂತೆ ಪಾರಾಯಣಾರ್ಹವಾದ ಗ್ರಂಥವು. ಗೀತೆಯ ಚರಮೋಪದೇಶವು ಇದರಲ್ಲಿರುವುದು.

ಪ್ರತಿಯೊಂದಕ್ಕೆ ಬೆಲೆ 0—8—0. ಟಪ್ಪಾಲು ಖರ್ಚು 0—2—0.

ಮೂರು ಪುಸ್ತಕಗಳ ಕ್ರಯವನ್ನು ಮುಂಗಡವಾಗಿ ಕಳುಹಿಸಿದರೆ ಟಪ್ಪಾಲುಖರ್ಚಿಲ್ಲದೆ ಕಳುಹಿಸಲ್ಪಡುತ್ತ.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕದ ವ್ಯಾಪಾರಿಗಳು,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಏಲಂ ಇಸ್ತಿಹಾರ.

ಎಮ್. ಸುಬ್ರಾಯ ಕಾಮತರ ದಿವಾಳಿ ಬಾಬಿನಲ್ಲಿ

(1922ನೇ ಇಸವಿಯ ನಂಬ್ರ 14ನೇ ಅರ್ಜಿ)

ಮದ್ರಾಸು ಒಫಿಶಿಯಲ್ ಎಸ್ಸಾನಿಯವರ ಸೂಚನೆ ಅನುಜ್ಞೆಗಳ ಮೇರೆಗೆ, 'ಮೆಸರ್ಸ್ ಡಾವ್ಸನ್ ಮತ್ತು ಕಂಪೆನಿ' ಯವರು ಇದೇ 1926ನೇ ಇಸವಿ ಜುಲೈ ತಾ. 4ನೇ ಆದಿತ್ಯವಾರ ಪ್ರಾತಃಕಾಲ 8-30 ಗಂಟೆಗೆ ಕೆಳಗೆ ಕಾಣಿಸಿದ ಆಸ್ತಿಗಳ ಮೇಲೆ ದಿವಾಳಿದಾರನಿಗೆ ಇರುವ ಹಕ್ಕು, ಅಧಿಕಾರ, ಇತ್ಯಾದಿ ಯಾವತ್ತನ್ನೂ ದಕ್ಷಿಣ ಕನ್ನಡಾ ಜಿಲ್ಲಾ ಕಾಸರಗೋಡು ಪ್ರಯಾಣಿಕರ ಬಂಗ್ಲೆಯಲ್ಲಿ (ಅಸಿಸ್ಟೆಂಟ್ ಇಂಜಿನಿಯರರ ಆಫೀಸು ಬಳಿ) ಬಹಿರಂಗವಾಗಿ ಏಲಂ ಮಾಡುವರು.

ಲೋಟ್ ನಂಬ್ರ 1.

ಕಾಸರಗೋಡು ತಾಲೂಕು ಶೀರಾ ಗ್ರಾಮದ ಸರ್ವೆ ನಂಬ್ರ 10 (1) 6 (8 ಬಿ) 7 (1) ಮತ್ತು 2ಕ್ಕೆ ಸೇರಿದ್ದು 9 ಎಕ್ರೆ 12 ಸೆಂಟ್ಸು ವಿಸ್ತೀರ್ಣವಾಗಿ ಜುಬುಕು, ಗೇರುಹಣ್ಣು, ತೆಂಗಿನಮರ, ಇತ್ಯಾದಿ ಇರುವುದು.

ಲೋಟ್ ನಂಬ್ರ 2.

ಕಾಸರಗೋಡು ತಾಲೂಕು ಕೊಯಿಪಾಡಿ ಗ್ರಾಮದ ಪಟ್ಟಾ ನಂಬ್ರ 140 ಮತ್ತು 371 ಸೇರಿರುವ ಸುಮಾರು ಅರ್ಧ ಎಕ್ರೆ ಸ್ಥಳದ ಮೇಲೆ ಇರುವ ಒಂದು ಮಾಳಿಗೆ ಮನೆ.

ನೋಟೀಸು.

ದಕ್ಷಿಣಕನ್ನಡಾ ಒಫಿಶಿಯಲ್ ರಿಸಿವರ್ ಕೋರ್ಟಿನಲ್ಲಿ

ದಿವಾಳಿ ಅರ್ಜಿ ನಂಬ್ರ 28/1926.

ಎನ್. ಶ್ರೀನಿವಾಸ ರಾವ್—ಟಾಕುರ್ ಸಿಂಗರ ಮಗ, ಮಂಗಳೂರು ಕ್ಯಾಹರ ಪಾಂಡೇಶ್ವರದಲ್ಲಿರುವವ } ಅರ್ಜಿದಾರ.

ಎದ್ರಿ

ಅತ್ತಾವರ ವೆಂಕೋಜಿರಾವ್ ಕೂಡಾ—ಕ್ರೆಡಿಟರರು.

ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ಕೊಟ್ಟ ಮೇಲ್ಕಂಡ ಅರ್ಜಿಯು ತನಿಖೆ ಬಗ್ಗೆ ತಾ. 10-7-'26ಕ್ಕೆ ಇಟ್ಟಿರುವದರಿಂದ ಆ ಬಗ್ಗೆ ಆಕ್ಷೇಪಣೆವುಳ್ಳವರು ತಮ್ಮ ಆಕ್ಷೇಪಗಳನ್ನು ಸದರಿ ತಾರೀಕಿನ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಖುದ್ದಾಗಲಿ ವ ವಕೀಲ ದ್ವಾರವಾಗಲಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂದು ಇದರಿಂದ ತಿಳಿಸೋಣಾಗಿದೆ.

ಮಂಗಳೂರು, ತಾ. 25—6—'26. M. Anuntha Bhatt, *Vakil for Petitioner.*

VACANCIES.

Wanted two Legal medical practitioners for the rural dispensaries at Shankaranaryana and Wandse in Coondapur Taluk.

A monthly Government subsidy of Rs 33-5-4 will be paid and an additional Subsidy of Rs 100 a year will be given to such of the madical men who engage and mentain a qualified midwife. A free supply of medicines to the value of rupees 360 a year will also be given free of charge.

Applications with full name and address should be sent to the President Taluk Board Coondapur.

V. Narashima Karantha,
President

(2)

ನೋಟೀಸು.

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ವೋಟರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಶ್ರೀ ದೇವಸ್ಥಾನದ ಮೊಕ್ತೇಸರರ ಕಾಸ್ಸಿಲಿನ ಖಾಲಿ ಆದ ಸ್ಥಾನಗಳು ಈ ವರೆಗೆ ಭರ್ತಿ ಆಗಲಿಲ್ಲವಾದರಿಂದ ಸದರಿ ಸ್ಥಾನಗಳನ್ನು ಭರ್ತಿಮಾಡುವ ಬಗ್ಗೆ ಇದೇ 1926ನೇ ಇಸವಿ ಜುಲಾಯಿ ತಿಂಗಳ ತಾ. 10ನೇ ಶನಿವಾರ ಶ್ಯಾಮಗಂಟೆ 7ಕ್ಕೆ ಶ್ರೀ ದೇವಸ್ಥಾನದ ವಸಂತ ಮಂಟಪದಲ್ಲಿ ವೋಟರರ ಸಭೆ ಕೂಡಬೇಕಾಗಿ ಅಪೇಕ್ಷಿಸುತ್ತೇನೆ.

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನ, ತಾ. 21-6-26. L. V. Shenai, *Manager.*

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ.

O. P. 57/1926

ಮಹಮ್ಮದ್ ಖಾನ್ ಸಾಹೇಬ್— ಅರ್ಜಿದಾರ

ಮೃತಪಟ್ಟ ಏನೆಮ್ಮನಿಗೆ ಹೊರಗಿನಿಂದ ಬರತಕ್ಕ ಸಾಲ ಮೊಬಲಗನ್ನು ವಸೂಲುಮಾಡುವರೆ ಅರ್ಜಿದಾರನು ವಾರೀಸು ಸರ್ಟಿಫಿಕೇಟು ಅಪೇಕ್ಷಿಸಿ ಮೇಲಿನ ಅರ್ಜಿ ದಾಖಲುಮಾಡಿರುವುದರಿಂದ ಯಾರಾದರೂ ಆ ಕುರಿತು ಆಕ್ಷೇಪಣೆ ಇದ್ದರೆ ತಾ. 3—7—1926ಕ್ಕೆ ಕೋರ್ಟ ಮುಂದೆ ಹಾಜರು ಆಗಿ ತಮ್ಮ ಆಕ್ಷೇಪಣೆಯನ್ನು ಜಾಹೀರುಮಾಡಿಕೊಳ್ಳಬಹುದು.

B. R. Vyasraya Achar,
Vakil for Petitioner

ನೋಟೀಸು.

ಕಾಸರಗೋಡು ತಾಲೂಕು ಅಲವತ್ತನಾಡು ಮಾಗಣೆ ಪುಲ್ಲೂರು ಗ್ರಾಮದ ಇರುಬೈಲಲ್ಲಿರುವ ಉಪೇಂದ್ರ ದೇರಿಂಜೆತಾಯರ ಮಗ ಮಾಧವ ದೇರಿಂಜೆತಾಯನು ಎಲ್ಲಾ ಜನರಿಗೆ ತಿಳಿಯಪಡಿಸುವುದೇನಂದರೆ—ಸದರಿ ಗ್ರಾಮದ ಇರುಬೈಲಲ್ಲಿ ಇರುವ ನನ್ನ ದೊಡ್ಡ ತಂದೆ ಉಪೇಂದ್ರ ದೇರಿಂಜೆತಾಯರ ಮಗ ಕೇಶವ ದೇರಿಂಜೆತಾಯರು ಈಗ ಕೆಲವು ವರುಷಗಳಿಂದ ಕುಟುಂಬದ ಯಜಮಾನರ ನೆಲೆಯಲ್ಲಿ ಎಲ್ಲಾ ಆಡಳಿತೆ ನಡಿಸಿ ಬರುವಲ್ಲಿ ಸದರಿಯವರಿಗೆ ಈಗ ಸುಮಾರು ಒಂದು ವರುಷದ ಲಾಗಾಯಿತು ಪಿತ್ತೋದ್ರೇಕದ ಕಾಯಿಲೆಯಿಂದ ಬುದ್ಧಿಗೆ ಚಂಚಲವಿದ್ದು ಮನಸ್ಸು ಸರಿಯಿಲ್ಲದೆ ಇರುವದರಿಂದ ನಮ್ಮ ಕುಟುಂಬದಲ್ಲಿ ಹೆಚ್ಚು ಆಸ್ತಿಗಳು ಇದ್ದು ಅದರ ಹುಟ್ಟುವಳಿಗಳಿಂದ ಅವರ ಹೆಸರಲ್ಲಿ ಇರುವ ಆಸ್ತಿಗಳ ದಸ್ತೈವೇಜುಗಳು ಮತ್ತು ಕುಟುಂಬಕ್ಕೆ ಬಹ ಕಾಣ ವಸ್ತೈರೆಗಳು ಕುಟುಂಬದ ಆಸ್ತಿಗಳು ವಸ್ತೈರೆಗಳು ನನ್ನ ವಿರೋಧಿಗಳ ದುರ್ಬೋಧನೆಯಿಂದ ಪರಾಧೀನ ಮಾಡಲಿಕ್ಕೂ ಕಾಣ ವಸ್ತೈರೆಗಳು ಪಡಕೊಳ್ಳಲಿಕ್ಕೂ ಆಲೋಚನೆಯಲ್ಲಿರುವುದರಿಂದ ಯಾವ ತರದ ವಿಲೆವಾರಿಗಳು ನನ್ನ ಕೂಡಿಕೆ ವಿನಹ ಮಾಡಿದರೆ ಅದು ನನಗೂ ನನ್ನ ಕುಟುಂಬದ ಹರಸ್ತಿರಪೊತ್ತುಗಳಿಗೂ, ನನಗೂ ಬಾಧಿಸತಕ್ಕದಲ್ಲವೆಂಬುದು ಈ ಮೂಲಕ ತಿಳಿಸಿದ್ದೇನೆ.

ತಾ. 25-6-'26. ಮಾಧವ ದೇರಿಂಜೆತಾಯ.

ಉಟಾಕ್‌ಮಂಡಿನಲ್ಲಿ ಜರಗಿದ ಕಲೆಕ್ಟರರ ಸಭೆ.

ಉಟಾಕಮಂಡಿನಲ್ಲಿರುವ ಸೆಕ್ರಿಟೇರಿಯಟ್ ಕಟ್ಟೋಣದಲ್ಲಿ ಮದರಾಸು ಸಂಸ್ಥಾನದಲ್ಲಿರುವ ಎಲ್ಲಾ ಜಿಲ್ಲೆಗಳ ಕಲೆಕ್ಟರುಗಳ ಸಭೆಯು ಮೇ ತಿಂಗಳ ೩೧ನೇ ತಾರೀಕಿನಿಂದ ಜೂನ ೬ರ ವರೆಗೆ ನಡೆಯಿತು. ಈ ಸಭೆಯಲ್ಲಿ, ಸರಕಾರ ಉದ್ಯೋಗಸ್ಥರು ಲಂಚ ಮುಂತಾದವುಗಳನ್ನು ತೆಗೆದುಕೊಂಡು ಸರಕಾರದ ಗೌರವಕ್ಕೆ ಕಡಿಮೆಯಾಗದಂತೆ ನೋಡಿಕೊಳ್ಳಬೇಕೆಂದೂ ಬ್ರಿಟಿಷ ಇಂಡಿಯಕ್ಕೂ ಆಶ್ರಿತ ರಾಜ್ಯಗಳಿಗೂ ಇರುವ ಗಡಿಗಳನ್ನು ಸರಿಯಾಗಿ ಹಾಕಿಸಿ ಅವುಗಳ ವಿಷಯ ಪ್ರತಿ ವರುಷ ತನಿಖೆ ನಡಿಸಬೇಕೆಂದೂ, ಜಮಾಬಂದಿಯ ಲೆಕ್ಕಗಳನ್ನು ಗ್ರಾಮಗಳ ಗಡಿಗಳನ್ನು ಸರಿಯಾಗಿರುವಂತೆ ನೋಡಬೇಕೆಂದೂ, ರೆವಿನ್ಯೂ ಇನ್ಸಪೆಕ್ಟರರು ಕೆಲಸವನ್ನು ಸರಿಯಾಗಿ ನಡಿಸುವಂತೆ ತಹಶೀಲದಾರರೂ, ಡಿವಿಜನಲ್ ಆಫೀಸರರೂ ಜಾಗ್ರತೆ ತೆಗೆದುಕೊಳ್ಳಬೇಕೆಂದೂ ಆಲೋಚಿಸಲಾಯಿತು. ಲೋಕಲ್ ಬೋರ್ಡು ಮತ್ತು ಮುನಿಸಿಪಾಲಿಟಿಗಳಿಗೆ ಮೆಂಬರರನ್ನು ಚುನಾಯಿಸುವ ಸಮಯ ಸರಕಾರಿ ನೌಕರರು ಅವರಿಗೆ ಸರಿಯಾದ ಸಹಾಯವನ್ನು ಕೊಡುವುದರ ವಿಷಯ ಆಲೋಚಿಸಲಾಯಿತು.

ಪ್ಲೇಗು ಸಮ್ಬಂಧ ಆಡಳಿತವು ಇಷ್ಟರ ವರೆಗೆ ಕಲೆಕ್ಟರರ ಕೈಕೆಳಗಿರುವುದನ್ನು ಇನ್ನು ಮುಂದೆ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರಿಗೂ ಮುನ್ಸಿಪಾಲಿಟಿಯ ಚೇರ್ಮೆನರಿಗೂ ಬಿಟ್ಟುಕೊಟ್ಟು ಅವರು ಪಬ್ಲಿಕ್ ಹೆಲ್ತ ಡಿಪಾರ್ಟಮೆಂಟಿನವರೊಡನೆ ಕೆಲಸಮಾಡುವ ಸಂಗತಿಯ ವಿಷಯ ಆಲೋಚಿಸಲಾಯಿತು. ಗವರ್ನಮೆಂಟ ಕೇಸುಗಳನ್ನು ತಯಾರಿಸಿ ಸಿವಿಲ್ ಕೋರ್ಟುಗಳಿಗೆ ಕೊಡುವುದರಲ್ಲಿ ಸುಧಾರಣೆಯನ್ನು ಮಾಡುವುದರ ವಿಷಯ ಆಲೋಚಿಸಲಾಯಿತು.

ಕೆಲವು ಜಿಲ್ಲೆಗಳಲ್ಲಿ ತನ್ನ ಭೂಮಿಯಲ್ಲಿ ಭತ್ತವನ್ನೂ ಇತರ ಧಾನ್ಯಗಳನ್ನೂ ಅವರ ಸಂತೋಷವಿದ್ದಂತೆ ಬೆಳಸಬಹುದೆಂದು ಆ ಬೆಳೆಗೆ ಅನುಸಾರವಾಗಿ ಕಂದಾಯವನ್ನು ವಸೂಲುಮಾಡುವ ಪದ್ಧತಿ ಇದೆ. ಇದರ ವಿಷಯ ಬದಲಾವಣೆ ಮಾಡುವ ಆಲೋಚನೆಯು ಸೂಚಿಸಲಾಯಿತು.

ಡಿಸ್ಟ್ರಿಕ್ಟ ಆಫೀಸರರಿಗೂ ಲೆಜಿಸ್ಲೇಟಿವ್ ಕೌನ್ಸಿಲು ಮೆಂಬರರೂ ಜಿಲ್ಲೆಯ ಆಡಳಿತೆಯ ವಿಷಯ ಒಬ್ಬರಿಗೊಬ್ಬರು ಸಹಾಯಕರಾಗಿರುವಂತೆ ಉಪಾಯಗಳನ್ನೂ, ಭೂಕಂದಾಯವನ್ನು ಬಾಕಿಬೀಳದಂತೆ ವಸೂಲಾಗುವ ವಿಧಾನದ ವಿಷಯವೂ ಆಲೋಚಿಸಲಾಯಿತು.

ಕ್ರಿಮಿನಲ್ ಟ್ರೈಬ ಎಕ್ಟ ಪ್ರಕಾರ ಆ ಕುಟುಂಬಗಳನ್ನು ಉದ್ಧರಿಸುವ ಆಲೋಚನೆಯೂ, ಜೈಲುಗಳಿಂದ ಶಿಕ್ಷೆಮುಗಿದು ಹೊರಗೆ ಬಂದವರನ್ನು ಉದ್ಧರಿಸುವ ಸಂಘಗಳನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಜ್ಯಾರಿಗೆ ತರುವಂತೆ ಮಾಡುವುದು, ಏಜನ್ಸಿ ಟ್ರೇಕ್ಟುಗಳಲ್ಲಿ ಆಡಳಿತೆಯ ವಿಷಯ ಕೆಲವು ಬದಲಾವಣೆಗಳನ್ನು ಮಾಡುವ ವಿಷಯ ಆಲೋಚಿಸಲಾಯಿತು.

ಚಿಲ್ಲರೆ ನೀರಾವರಿ ಕೆಲಸಗಳಿಗೆ ಕೊಡುವ ಗ್ರೇಂಟಿನ ವಿಷಯ ಇರುವ ಕ್ರಮಗಳನ್ನು ಉದ್ಧರಿಸಬೇಕೆಂದು ಆಲೋಚಿಸಲಾಯಿತು.

—: ಮುಸ್ಲಿಮ್ ಓಟರರಲ್ಲಿ :—

ಈ ವೊದಲು ಜನಾಬ್ ಮಂಗಳೂರು ಸಾಹುಕಾರ್ ಸಿ. ಮಹಮ್ಮದ್ ವೊದಲಾದ ದಕ್ಷಿಣ ಕನ್ನಡ ಜಿಲ್ಲೆಯ ೨೫ ಮುಸ್ಲಿಮ್ ಮುಖಂಡರು ಜನಾಬ್ ಮಹಮ್ಮದ್ ಶಿವನ್ನಾಡರ ದೇಶದ ಮತ್ತು ಸಮುದಾಯಕ್ಕಾಗಿ ಎಸೆಂಬ್ಲಿಯಲ್ಲಿ ನಡೆಸಿದ ಮಾಡಿದ ಸೇವೆಗಳನ್ನು ಸಂಕ್ಷೇಪವಾಗಿ ವಿವರಿಸಿ, ಅವರು ಮದ್ರಾಸ ಕೌನ್ಸಿಲ್ ಮೆಂಬರರಾದರೆ ಇನ್ನೂ ಹೆಚ್ಚಿನ ಪ್ರಯೋಜನ ದೊರಕೀತೆಂತ ಸೂಚಿಸಿ ಕೊಟ್ಟು ವಿನಂತಿಯನ್ನು ನಾವು ನೋಡಿ ಅದನ್ನು ನಾವು ಮನಃಪೂರ್ವಕ ಒಪ್ಪಿಕೊಳ್ಳುತ್ತೇವೆ. ಮಿ. ಶಿವನ್ನಾಡರು ನಮ್ಮ ಕಾರ್ಯಗಳನ್ನು ಅಧಿಕಾರಿಗಳಿಗೆ ಮ ಸಮ್ಬಂಧ ಪಟ್ಟ ಇತರರಿಗೆ ಬೋಧಿಸಲಿಕ್ಕೂ ಒಳ್ಳೇ ಸಮರ್ಥರಾದುದರಿಂದಲೂ ನಮ್ಮ ಪ್ರತಿನಿಧಿಯಾಗಿ ಮದ್ರಾಸು ಕೌನ್ಸಿಲಿಗೆ ಕಳುಹಿಸಲಿಕ್ಕೆ ಇವರಿಗಿಂತ ಯೋಗ್ಯರು ತತ್ಕಾಲ ನಮ್ಮಲ್ಲಿ ಇಲ್ಲವಾದುದರಿಂದಲೂ ಎಲ್ಲಾ ಮುಸ್ಲಿಮ್ ವೋಟರರು ಇವರನ್ನೇ ಪ್ರೋತ್ಸಾಹಿಸಬೇಕೆಂದು ನಾವು ವಿನಯ ಪೂರ್ವಕ ಕೇಳಿಕೊಳ್ಳುತ್ತೇವೆ.

(೧) ಯು. ಎಸ್. ಇಬ್ರಾಹಿಮ್ ಜಮೀನುದಾರ ಮತ್ತು ಉದ್ಯಂತಲೆ ಕರವಾಟಿನ ಎಜಮಾನ, ತ್ರಿಕರಪುರ (೨) ವಿ. ಪಿ. ಕುಂಞ್‌ಮೊಯಿದಿನ ಹಾಜಿ ಜಮೀನುದಾರ, ಕೈಕೋಟಕಡವತ್ತ ತ್ರಿಕರಪುರ. (೩) ಇ. ಕೆ. ಮಹಮ್ಮದ ಪಂಚ್ಯಾತ ಕೋರ್ಟು ಅಧ್ಯಕ್ಷ, ನೀಲೇಶ್ವರ ಸಹಕಾರಿ ಸಂಘದ ಅಧ್ಯಕ್ಷ, ಜಮೀನುದಾರ, ನೀಲೇಶ್ವರ. (೪) ವಿ. ಪಿ. ಮಹಮ್ಮದ ಕುಂಞಿ ಹಾಜಿ ಜಮೀನುದಾರ ಕೈಕೋಟಕಡವತ್ತ, ತ್ರಿಕರಪುರ. ಎಡಕ್ಕಾಡಿಲ್ ಮಹಮ್ಮದ ಹಾಜಿ ಜಮೀನುದಾರ, ಕೋಟಪ್ಪುರ ನೀಲೇಶ್ವರ. (೫) ಕುರ್ಚಿ ಪೇಳಪುರತ್ತ ಅಬ್ದುಲ್ ರೈಮಾನ್ ಜಮೀನುದಾರ ಚೆರ್ವತ್ತೂರು. (೬) ಪೊಂಗ್ಯರ ಮಹಮ್ಮದ ಹಾಜಿ ಜಮೀನುದಾರ, ನೀಲೇಶ್ವರ. (೮) ಚೂರಕೊಟ್ಟಿಲ್ ಕುಂಞ್‌ಮೊಯಿದಿನ್ ಕುಟ್ಟಿ ಜಮೀನುದಾರ ತುರ್ಚಿ ಚೆರ್ವತ್ತೂರು. (೯) ಯು. ಅರಬಿ ಇಸ್ಮಾಯಿಲ್ ಸಾಹುಕಾರ್, ಎರ್ಮಾಳ ಉಡುಪಿ. (೧೦) ಎಂ. ಎ. ಮಾಮಿ ಜಮೀನುದಾರ, ಮೊಗ್ರಾಲು. (೧೧) ಬದಿಮೂಲೆ ಮಮ್ಮದೆ ಬ್ಯಾರಿ ರುಜು ಜಮೀನುದಾರ, ಪೈವಳಿಕೆ. (೧೨) ಸೂಯಿತಿಲ ಇಬ್ರಾಹಿಮ್ ಬ್ಯಾರಿ ಜಮೀನುದಾರ, ಪೈವಳಿಕೆ. (೧೩) ಅವಾಲ ಕಾದ್ರೆಬ್ಯಾರಿ ಜಮೀನುದಾರ ಬಾಯಾರ. (೧೪) ಕೆ. ಎಂ. ಪಿ. ಕುಂಞಾಲಿ ಬ್ಯಾರಿ ಜಮೀನುದಾರ ಕುಡಾಲ ಮೇರ್ಕಳ. (೧೫) ಕಂಬಾರ ದೊಡ್ಡ ಅಬ್ದುಲ್ಲ ಬ್ಯಾರಿ ಜಮೀನುದಾರ, ಕುಡಾಲ, ಮೇರ್ಕಳ. (೧೬) ಕಂಬಾರ ಅಬ್ದುಲ್ಲ ಬ್ಯಾರಿ ಜಮೀನುದಾರ, ಕುಡಾಲ, ಮೇರ್ಕಳ. (೧೭) ಎಂ. ಎ. ಇಬ್ರಾಹಿಂಕುಂಞ ಕುಂಬಳೆ ಪಂಚ್ಯಾತ ಕೋರ್ಟು ಮೆಂಬರ, ಜಮೀನುದಾರ, ಮೊಗ್ರಾಲು. (೧೮) ಮಹಮ್ಮದೆ ಬ್ಯಾರಿ ಸಾಹುಕಾರ, ಜಮೀನುದಾರ ಮೊಗ್ರಾಲು. (೧೯) ಎಂ. ಟಿ. ಮಹಮ್ಮದ ಕುಂಬಳೆ ಪಂಚ್ಯಾತ ಕೋರ್ಟು ಮೆಂಬರ ಮತ್ತು ಅಧಿಕಾರಿ ಮೊಗ್ರಾಲು. (೨೦) ಚೇರಂಗೈ ಕುಂಞ್ ಅಲಿ ಬ್ಯಾರಿ ಜಮೀನುದಾರ, ಕಳ್ನಾಡು. (೨೧) ಕಾಪಿಲ್ ಕುಂಞಾಮ್ಮದ್ ಕುಟ್ಟಿ ಬ್ಯಾರಿ ಜಮೀನುದಾರ, ಉದುರು. (೨೨) ಡಿ. ಎಂ. ಹುಸನಬ್ಬ ಸಾಹುಕಾರ ಮಂಗಳೂರು.



ಹೊಸ ಮುದ್ರಣ! ಶುದ್ಧ ಪಾಠ!!

ಶ್ರೀ ಶಂಕರ ಭಗವತ್ಪಾದಾಚಾರ್ಯ ಪ್ರಣೀತವಾದ

ಶಿವಾನಂದಲಹರಿ

ಎಂಬ

ಪರಮಶಿವನ ಸ್ತೋತ್ರವು.

ಪ್ರಶಂಸೆ:—

ಈ ಗ್ರಂಥದಲ್ಲಿ ಅಡಗಿರುವ ೧೦೦ ಶ್ಲೋಕಗಳ ಪೈಕಿ ಪ್ರತಿಯೊಂದು ಶ್ಲೋಕವೂ ಆರಿಸಿ ಪೋಣಿಸಿದ ಆಣಿಮುತ್ತುಗಳಂತೆ ಅತಿ ಶ್ಲಾಘ್ಯಗಳಾಗಿ ಶಬ್ದಾಲಂಕಾರ ಅರ್ಥಾಲಂಕಾರ ಭಾವರಸ ಲಕ್ಷಣಗಳಿಂದ ಕೂಡಿ ಓದುವವರ ಮನಸ್ಸಿನಲ್ಲಿ ಆನಂದವನ್ನು ಹುಟ್ಟಿಸುವುದಲ್ಲದೆ, ಉಪಾಸ್ಯದೇವರಲ್ಲಿ ನಿರತಿಶಯ ಭಕ್ತಿಯನ್ನು ಹುಟ್ಟಿಸುತ್ತದೆ. ಪ್ರತಿಯೊಂದು ಶ್ಲೋಕಕ್ಕೂ ಕೊಟ್ಟಿರುವ ಪ್ರತಿಪದಾರ್ಥಭಾವಾರ್ಥಗಳು ಸ್ತೋತ್ರದ ಅರ್ಥವನ್ನು ಪುಷ್ಟೀಕರಿಸಿ ಶ್ರದ್ಧೆಯನ್ನು ಹೆಚ್ಚಿಸುವುದರೊಡನೆ ಸಂಸ್ಕೃತ ಭಾಷಾಜ್ಞಾನವನ್ನುಂಟುಮಾಡುವುದು.

ಶ್ರೀ ಶಿವಗೀತಾ

ಟೀಕಾಸಹಿತವಾಗಿ ಪಂಡಿತರಿಂದ ಪರಿಶೋಧಿಸಲ್ಪಟ್ಟಿದೆ.

ಇದು ಪದ್ಮಪುರಾಣೋಕ್ತವಾದ ಬ್ರಹ್ಮವಿದ್ಯಾಪ್ರತಿಪಾದಕವಾದ ಉಪನಿಷದ್ರತ್ನವು. ಇದೂ ಶ್ರೀ ಭಗವದ್ಗೀತೆಯಂತೆ ಪಾರಾಯಣಾರ್ಹವಾದ ಗ್ರಂಥವು. ಗೀತೆಯ ಚರಮೋಪದೇಶವು ಇದರಲ್ಲಿರುವುದು.

ಪ್ರತಿಯೊಂದಕ್ಕೆ ಬೆಲೆ 0-8-0. ಟಪ್ಪಾಲು ಖರ್ಚು 0-2-0.

ಮೂರು ಪುಸ್ತಕಗಳ ಕ್ರಯವನ್ನು ಮುಂಗಡವಾಗಿ ಕಳುಹಿಸಿದರೆ ಟಪ್ಪಾಲುಖರ್ಚಿಲ್ಲದೆ ಕಳುಹಿಸಲ್ಪಡುತ್ತ.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕದ ವ್ಯಾಪಾರಿಗಳು,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಏಲಂ ಇಸ್ತಿಹಾರ.

ಎಮ್. ಸುಬ್ರಾಯ ಕಾಮತರ ದಿವಾಳಿ ಬಾಬಿನಲ್ಲಿ
(1922ನೇ ಇಸವಿಯ ನಂಬ್ರ 74ನೇ ಅರ್ಜಿ)

ಮದ್ರಾಸು ಒಫಿಶಿಯಲ್ ಎಸ್ಸಾಯಿನಿಯವರ ಸೂಚನೆ ಅನುಜ್ಞೆಗಳ ಮೇರೆಗೆ, 'ಮೆಸರ್ಸ ಡಾಸನ್ ಮತ್ತು ಕಂಪೆನಿ'ಯವರು ಇದೇ 1926ನೇ ಇಸವಿ ಜುಲಾಯಿ ತಾ. 4ನೇ ಆದಿತ್ಯವಾರ ಪ್ರಾತಃಕಾಲ 8-30 ಗಂಟೆಗೆ ಕೆಳಗೆ ಕಾಣಿಸಿದ ಆಸ್ತಿಗಳ ಮೇಲೆ ದಿವಾಳಿದಾರನಿಗೆ ಇರುವ ಹಕ್ಕು, ಅಧಿಕಾರ, ಇತ್ಯಾದಿ ಯಾವತ್ತನ್ನೂ ದಕ್ಷಿಣ ಕನ್ನಡಾ ಜಿಲ್ಲಾ ಕಾಸರಗೋಡು ಪ್ರಯಾಣಿಕರ ಬಂಗ್ಲೆಯಲ್ಲಿ (ಅಸಿಟ್ಟಾಂಟ್ ಇಂಜಿನಿಯರರ ಆಫೀಸು ಬಳಿ) ಬಹಿರಂಗವಾಗಿ ಏಲಂ ಮಾಡುವರು.

ಲೋಟ್ ನಂಬ್ರ 1

ಕಾಸರಗೋಡು ತಾಲೂಕು ಶೀರಾ ಗ್ರಾಮದ ಸರ್ವೆ ನಂಬ್ರ 10 (1) 6 (8 ಬಿ) 7 (1) ಮತ್ತು 2ಕ್ಕೆ ಸೇರಿದ್ದು 9 ಎಕ್ರೆ 12 ಸೆಂಟ್ಸು ವಿಸ್ತೀರ್ಣವಾಗಿ ಹುಣಸೆ, ಗೇರು ಹಣ್ಣು, ತೆಂಗಿನಮರ, ಇತ್ಯಾದಿ ಇರುವುದು.

ಲೋಟ್ ನಂಬ್ರ 2.

ಕಾಸರಗೋಡು ತಾಲೂಕು ಕೊಯಿಪಾಡಿ ಗ್ರಾಮದ ಪಟ್ಟಾ ನಂಬ್ರ 140 ಮತ್ತು 371 ಸೇರಿರುವ ಸುಮಾರು ಅರ್ಧ ಎಕ್ರೆ ಸ್ಥಳದ ಮೇಲೆ ಇರುವ ಒಂದು ಮಾಳಿಗೆ ಮನೆ.

ನೋಟೀಸು.

ದಕ್ಷಿಣಕನ್ನಡಾ ಒಫಿಶಿಯಲ್ ರಿಸಿವರ್ ಕೋರ್ಟಿನಲ್ಲಿ
ದಿವಾಳಿ ಅರ್ಜಿ ನಂಬ್ರ 28/1926.

ಎನ್. ಶ್ರೀನಿವಾಸ ರಾವ್-ಟಾಕುರ್
ಸಿಂಗರ ಮಗ, ಮಂಗಳೂರು ಕ್ಯಾಪರ
ಪಾಂಡೇಶ್ವರದಲ್ಲಿರುವವ ... } ಅರ್ಜಿದಾರ.

ವಿರುದ್ಧ

ಅಕ್ಕಾವರ ವೆಂಕೋಜಿರಾವ್ ಕೂಡಾ—ಕ್ರೆಡಿಟರರು.

ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ಕೊಟ್ಟ ಮೇಲ್ಕಂಡ ಅರ್ಜಿಯು ತನಿಖೆ ಬಗ್ಗೆ ತಾ. 10-7-'26ಕ್ಕೆ ಇಟ್ಟಿರುವದರಿಂದ ಆ ಬಗ್ಗೆ ಆಕ್ಷೇಪಣೆವುಳ್ಳವರು ತಮ್ಮ ಆಕ್ಷೇಪಗಳನ್ನು ಸದರಿ ತಾರೀಕಿನ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಖುದ್ದಾಗಲಿ ವ ವಕೀಲ ದ್ವಾರವಾಗಲಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂದು ಇದರಿಂದ ತಿಳಿಸೋಣಾಗಿದೆ.

ಮಂಗಳೂರು;
ತಾ. 25-6-'26. } M. Anantha Bhatt,
Vakil for Petitioner.

VACANCIES.

Wanted two Legal medical practitioners for the rural dispensaries at Shankaranaryana and Wandse in Coondapur Taluk.

A monthly Government subsidy of Rs 33-5-4 will be paid and an additional Subsidy of Rs 100 a year will be given to such of the madical men who engage and mentain a qualified midwife. A free supply of medicines to the value of rupees 360 a year will also be given free of charge.

Applications with full name and address should be sent to the President Taluk Board Coondapur.

V. Narashima Karantha,
President

(2)

ನೋಟೀಸು.

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ವೋಟರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಶ್ರೀ ದೇವಸ್ಥಾನದ ಮೊಕ್ತೇಸರರ ಕಾಲ್ಸಿನ ಖಾಲಿ ಆದ ಸ್ಥಾನಗಳು ಈ ವರೆಗೆ ಭರ್ತಿ ಆಗಲಿಲ್ಲವಾದದರಿಂದ ಸದರಿ ಸ್ಥಾನಗಳನ್ನು ಭರ್ತಿಮಾಡುವ ಬಗ್ಗೆ ಇದೇ 1926ನೇ ಇಸವಿ ಜುಲಾಯಿ ತಿಂಗಳ ತಾ. 10ನೇ ಶನಿವಾರ ಶ್ಯಾಮಗಂಟೆ 7ಕ್ಕೆ ಶ್ರೀ ದೇವಸ್ಥಾನದ ವಸಂತ ಮಂಟಪದಲ್ಲಿ ವೋಟರರ ಸಭೆ ಕೂಡಬೇಕಾಗಿ ಅಪೇಕ್ಷಿಸುತ್ತೇನೆ.

ಮುಲ್ಕಿ ಶ್ರೀ ವೆಂಕಟರಮಣ
ದೇವಸ್ಥಾನ, ತಾ. 21-6-26 } L. V. Shenai,
Manager.

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ.
O. P. 57/1926

ಮಹಮ್ಮದ್ ಖಾನ್ ಸಾಹೇಬ್— ಅರ್ಜಿದಾರ

ಮೃತಪಟ್ಟ ಏಸಮ್ಮನಿಗೆ ಹೊರಗಿನಿಂದ ಬರತಕ್ಕ ಸಾಲ ಮೂಲಗಳನ್ನು ವಸೂಲು ಮಾಡುವರೆ ಅರ್ಜಿದಾರನು ವಾರೀಸು ಸರ್ಟಿಫಿಕೇಟು ಅಪೇಕ್ಷಿಸಿ ಮೇಲಿನ ಅರ್ಜಿ ದಾಖಲು ಮಾಡಿರುವುದರಿಂದ ಯಾರಾದರೂ ಆ ಕುರಿತು ಆಕ್ಷೇಪಣೆ ಇದ್ದರೆ ತಾ. 3—7—1926ಕ್ಕೆ ಕೋರ್ಟು ಮುಂದೆ ಹಾಜರು ಆಗಿ ತಮ್ಮ ಆಕ್ಷೇಪಣೆಯನ್ನು ಜಾಹೀರು ಮಾಡಿಕೊಳ್ಳಬಹುದು.

B. R. Vyasraya Achar,
Vakil for Petitioner

ನೋಟೀಸು.

ಕಾಸರಗೋಡು ತಾಲೂಕು ಅಲವತ್ತನಾಡು ಮಾಗಣೆ ಪುಲ್ಲೂರು ಗ್ರಾಮದ ಇರುಬೈಲಲ್ಲಿರುವ ಉಪೇಂದ್ರ ದೇರಿಂಜೆತಾಯರ ಮಗ ಮಾಧವ ದೇರಿಂಜೆತಾಯನು ಎಲ್ಲಾ ಜನರಿಗೆ ತಿಳಿಯಪಡಿಸುವುದೇನಂದರೆ—ಸದರಿ ಗ್ರಾಮದ ಇರುಬೈಲಲ್ಲಿ ಇರುವ ನನ್ನ ದೊಡ್ಡ ತಂದೆ ಉಪೇಂದ್ರ ದೇರಿಂಜೆತಾಯರ ಮಗ ಕೇಶವ ದೇರಿಂಜೆತಾಯರು ಈಗ ಕೆಲವು ವರುಷಗಳಿಂದ ಕುಟುಂಬದ ಯಜಮಾನರ ನೆಲೆಯಲ್ಲಿ ಎಲ್ಲಾ ಆಡಳಿತೆ ನಡಿಸಿ ಬರುವಲ್ಲಿ ಸದರಿಯವರಿಗೆ ಈಗ ಸುಮಾರು ಒಂದು ವರುಷದ ಲಾಗಾಯಿತು ಪಿತ್ತೋದ್ರೇಕದ ಕಾಯಿಲೆಯಿಂದ ಬುದ್ಧಿಗೆ ಚಂಚಲವಿದ್ದು ಮನಸ್ಸು ಸರಿಯಿಲ್ಲದೆ ಇರುವದರಿಂದ ನಮ್ಮ ಕುಟುಂಬದಲ್ಲಿ ಹೆಚ್ಚು ಆಸ್ತಿಗಳು ಇದ್ದು ಅದರ ಹುಟ್ಟುವಳಿಗಳಿಂದ ಅವರ ಹೆಸರಲ್ಲಿ ಇರುವ ಆಸ್ತಿಗಳ ದಸ್ತೈವೇಜುಗಳು ಮತ್ತು ಕುಟುಂಬಕ್ಕೆ ಬಹ ಕಾಣ ವಗೈರೆಗಳು ಕುಟುಂಬದ ಆಸ್ತಿಗಳು ವಗೈರೆಗಳು ನನ್ನ ವಿರೋಧಿಗಳ ದುರ್ಭೋಧನೆಯಿಂದ ಪರಾಧೀನ ಮಾಡಲಿಕ್ಕೂ ಕಾಣ ವಗೈರೆಗಳು ಪಡಕೊಳ್ಳಲಿಕ್ಕೂ ಆಲೋಚನೆಯಲ್ಲಿರುವುದರಿಂದ ಯಾವ ತರದ ವಿಲೆವಾರಿಗಳು ನನ್ನ ಕೂಡಿಕೆ ವಿನಹ ಮಾಡಿದರೆ ಅದು ನನಗೂ ನನ್ನ ಕುಟುಂಬದ ಚರಸ್ಥಿರಸೊತ್ತುಗಳಿಗೂ, ನನಗೂ ಬಾಧಿಸತಕ್ಕದಲ್ಲವೆಂಬದು ಈ ಮೂಲಕ ತಿಳಿಸಿದ್ದೇನೆ.

ತಾ. 25-6-'26. ಮಾಧವ ದೇರಿಂಜೆತಾಯ.

ಉಟಾಕ್‌ಮಂಡಿನಲ್ಲಿ ಜರಗಿದ ಕಲೆಕ್ಟರರ ಸಭೆ.

ಉಟಾಕಮಂಡಿನಲ್ಲಿರುವ ಸಕ್ರಿಟೇರಿಯಟ್ ಕಟ್ಟೋಣದಲ್ಲಿ ಮದರಾಸು ಸಂಸ್ಥಾನದಲ್ಲಿರುವ ಎಲ್ಲಾ ಜಿಲ್ಲೆಗಳ ಕಲೆಕ್ಟರುಗಳ ಸಭೆಯು ಮೇ ತಿಂಗಳ ೩೧ನೇ ತಾರೀಕಿನಿಂದ ಜೂನ ೭ರ ವರೆಗೆ ನಡೆಯಿತು. ಈ ಸಭೆಯಲ್ಲಿ, ಸರಕಾರ ಉದ್ಯೋಗಸ್ಥರು ಲಂಚ ಮುಂತಾದವುಗಳನ್ನು ತೆಗೆದುಕೊಂಡು ಸರಕಾರದ ಗೌರವಕ್ಕೆ ಕಡಿಮೆಯಾಗದಂತೆ ನೋಡಿಕೊಳ್ಳಬೇಕೆಂದೂ ಬ್ರಿಟಿಷ ಇಂಡಿಯಕ್ಕೂ ಆಶ್ರಿತ ರಾಜ್ಯಗಳಿಗೂ ಇರುವ ಗಡಿಗಳನ್ನು ಸರಿಯಾಗಿ ಹಾಕಿಸಿ ಅವುಗಳ ವಿಷಯ ಪ್ರತಿ ವರುಷ ತನಖಿ ನಡಿಸಬೇಕೆಂದೂ, ಜಮಾಬಂದಿಯ ಲೆಕ್ಕಗಳನ್ನು ಗ್ರಾಮಗಳ ಗಡಿಗಳನ್ನು ಸರಿಯಾಗಿರುವಂತೆ ನೋಡಬೇಕೆಂದೂ, ರೆವಿನ್ಯೂ ಇನ್ಸ್‌ಪೆಕ್ಟರರು ಕೆಲಸವನ್ನು ಸರಿಯಾಗಿ ನಡಿಸುವಂತೆ ತಹಶೀಲದಾರರೂ, ಡಿವಿಜನಲ್ ಆಫೀಸರರೂ ಜಾಗ್ರತೆ ತೆಗೆದುಕೊಳ್ಳಬೇಕೆಂದೂ ಆಲೋಚಿಸಲಾಯಿತು. ಲೋಕಲ್ ಬೋರ್ಡು ಮತ್ತು ಮುನಿಸಿಪಾಲಿಟಿಗಳಿಗೆ ಮೆಂಬರರನ್ನು ಚುನಾಯಿಸುವ ಸಮಯ ಸರಕಾರಿ ನೌಕರರು ಅವರಿಗೆ ಸರಿಯಾದ ಸಹಾಯವನ್ನು ಕೊಡುವುದರ ವಿಷಯ ಆಲೋಚಿಸಲಾಯಿತು.

ಹೀಗು ಸಮ್ಮಂಧ ಆಡಳಿತವು ಇಷ್ಟರ ವರೆಗೆ ಕಲೆಕ್ಟರರ ಕೈಕೆಳಗಿರುವುದನ್ನು ಇನ್ನು ಮುಂದೆ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರಿಗೂ ಮುನ್ಸಿಪಾಲಟಿಯ ಮೇನರಿಗೂ ಬಿಟ್ಟುಕೊಟ್ಟು ಅವರು ಪಬ್ಲಿಕ್ ಹೆಲ್ತ ಡಿಪಾರ್ಟಮೆಂಟಿನವರೊಡನೆ ಕೆಲಸಮಾಡುವ ಸಂಗತಿಯ ವಿಷಯ ಆಲೋಚಿಸಲಾಯಿತು. ಗವರ್ನಮೆಂಟ ಕೇಸುಗಳನ್ನು ತಯಾರಿಸಿ ಸಿವಿಲ್ ಕೋರ್ಟುಗಳಿಗೆ ಕೊಡುವುದರಲ್ಲಿ ಸುಧಾರಣೆಯನ್ನು ಮಾಡುವುದರ ವಿಷಯ ಆಲೋಚಿಸಲಾಯಿತು.

ಕೆಲವು ಜಿಲ್ಲೆಗಳಲ್ಲಿ ತನ್ನ ಭೂಮಿಯಲ್ಲಿ ಭತ್ತವನ್ನೂ ಇತರ ಧಾನ್ಯಗಳನ್ನೂ ಅವರ ಸಂತೋಷವಿದ್ದಂತೆ ಬೆಳಸಬಹುದೆಂದು ಆ ಬೆಳೆಗೆ ಅನುಸಾರವಾಗಿ ಕಂದಾಯವನ್ನು ವಸೂಲುಮಾಡುವ ಪದ್ಧತಿ ಇದೆ. ಇದರ ವಿಷಯ ಬದಲಾವಣೆ ಮಾಡುವ ಆಲೋಚನೆಯು ಸೂಚಿಸಲಾಯಿತು.

ಡಿಸ್ಟ್ರಿಕ್ಟ ಆಫೀಸರರಿಗೂ ಲೆಜಿಸ್ಲೇಟಿವ್ ಕೌನ್ಸಿಲು ಮೆಂಬರರೂ ಜಿಲ್ಲೆಯ ಆಡಳಿತೆಯ ವಿಷಯ ಒಬ್ಬರಿಗೊಬ್ಬರು ಸಹಾಯಕರಾಗಿರುವಂತೆ ಉಪಾಯಗಳನ್ನೂ, ಭೂಕಂದಾಯವನ್ನು ಬಾಕಿಬೀಳದಂತೆ ವಸೂಲಾಗುವ ವಿಧಾನದ ವಿಷಯವೂ ಆಲೋಚಿಸಲಾಯಿತು.

ಕ್ರಿಮಿನಲ್ ಟ್ರೈಬ ಎಕ್ಟ ಪ್ರಕಾರ ಆ ಕುಟುಂಬಗಳನ್ನು ಉದ್ಧರಿಸುವ ಆಲೋಚನೆಯೂ, ಜೈಲುಗಳಿಂದ ಶಿಕ್ಷೆಮುಗಿದು ಹೊರಗೆ ಬಂದವರನ್ನು ಉದ್ಧರಿಸುವ ಸಂಘಗಳನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಜ್ಯಾರಿಗೆ ತರುವಂತೆ ಮಾಡುವದು, ಏಜನ್ಸಿ ಡಿಸ್ಟ್ರಿಕ್ಟುಗಳಲ್ಲಿ ಆಡಳಿತೆಯ ವಿಷಯ ಕೆಲವು ಬದಲಾವಣೆಗಳನ್ನು ಮಾಡುವ ವಿಷಯ ಆಲೋಚಿಸಲಾಯಿತು.

ಚಿಲ್ಲರೆ ನೀರಾವರಿ ಕೆಲಸಗಳಿಗೆ ಕೊಡುವ ಗ್ರೇಂಟಿನ ವಿಷಯ ಇರುವ ಕ್ರಮಗಳನ್ನು ಉದ್ಧರಿಸಬೇಕೆಂದು ಆಲೋಚಿಸಲಾಯಿತು.

—: ಮುಸ್ಲಿಮ್ ಓಟರರಲ್ಲಿ :—

ಈ ಮೊದಲು ಜನಾಬ್ ಮಂಗಳೂರು ಸಾಹುಕಾರ್ ಸಿ. ಮಹಮ್ಮದ್ ಮೊದಲಾದ ದಕ್ಷಿಣ ಕನ್ನಡ ಜಿಲ್ಲೆಯ ೨೫ ಮುಸ್ಲಿಮ್ ಮುಖಂಡರು ಜನಾಬ್ ಮಹಮ್ಮದ್ ಶಿಮ್ಸಾದರ ದೇಶದ ಮತ್ತು ಸಮುದಾಯಕ್ಕಾಗಿ ಎಸೆಂಬ್ಲಿಯಲ್ಲಿ ವಗೈರೆ ಮಾಡಿದ ಸೇವೆಗಳನ್ನು ಸಂಕ್ಷೇಪವಾಗಿ ವಿವರಿಸಿ, ಅವರು ಮದ್ರಾಸ ಕೌನ್ಸಿಲ್ ಮೆಂಬರರಾದರೆ ಇನ್ನೂ ಹೆಚ್ಚಿನ ಪ್ರಯೋಜನ ದೊರಕೀತೆಂತ ಸೂಚಿಸಿ ಕೊಟ್ಟ ವಿಜ್ಞಾಪನೆಯನ್ನು ನಾವು ನೋಡಿ ಅದನ್ನು ನಾವು ಮನಃಪೂರ್ವಕ ಒಪ್ಪಿಕೊಳ್ಳುತ್ತೇವೆ. ಮಿ. ಶಿಮ್ಸಾದರು ನಮ್ಮ ಕಾರ್ಯಗಳನ್ನು ಅಧಿಕಾರಿಗಳಿಗೆ ಮ ಸಮ್ಮಂಧ ಪಟ್ಟ ಇತರರಿಗೆ ಬೋಧಿಸಲಿಕ್ಕೂ ಒಳ್ಳೇ ಸಮರ್ಥರಾಗಿರುವುದರಿಂದಲೂ ನಮ್ಮ ಪ್ರತಿನಿಧಿಯಾಗಿ ಮದ್ರಾಸು ಕೌನ್ಸಿಲಿಗೆ ಕಳುಹಿಸಲಿಕ್ಕೆ ಇವರಿಗಿಂತ ಯೋಗ್ಯರು ತತ್ಕಾಲ ನಮ್ಮಲ್ಲಿ ಇಲ್ಲವಾದುದರಿಂದಲೂ ಎಲ್ಲಾ ಮುಸ್ಲಿಮ್ ವೋಟರರು ಇವರನ್ನೇ ಪ್ರೋತ್ಸಾಹಿಸಬೇಕೆಂದು ನಾವು ವಿನಯ ಪೂರ್ವಕ ಕೇಳಿಕೊಳ್ಳುತ್ತೇವೆ.

(೧) ಯು. ಎಸ್. ಇಬ್ರಾಹಿಮ್ ಜಮಿನುದಾರ ಮತ್ತು ಉದ್ಯಂತಲೆ ಕರವಾಟಿನ ಎಜಮಾನ, ತ್ರಿಕರಪುರ (೨) ವಿ. ಪಿ. ಕುಂಞ್ಞಮ್ಮದಿನ ಹಾಜಿ ಜಮೀನುದಾರ, ಕೈಕೋಟಕಡವತ್ತ ತ್ರಿಕರಪುರ. (೩) ಇ. ಕೆ. ಮಹಮ್ಮದ ಪಂಚ್ಯಾತ ಕೋರ್ಟು ಅಧ್ಯಕ್ಷ, ನೀಲೇಶ್ವರ ಸಹಕಾರಿ ಸಂಘದ ಅಧ್ಯಕ್ಷ, ಜಮೀನುದಾರ, ನೀಲೇಶ್ವರ. (೪) ವಿ. ಪಿ. ಮಹಮ್ಮದ ಕುಂಞ ಹಾಜಿ ಜಮೀನುದಾರ ಕೈಕೋಟಕಡವತ್ತ, ತ್ರಿಕರಪುರ. ಎಡಕ್ಕಾಡಿಲ್ ಮಹಮ್ಮದ ಹಾಜಿ ಜಮೀನುದಾರ, ಕೋಟಪ್ಪುರ ನೀಲೇಶ್ವರ. (೬) ಕುರ್ಕೇಳಪುರತ್ತ ಅಬ್ದುಲ್ ರೈಮಾನ್ ಜಮೀನುದಾರ ಚೆರ್ವತ್ತೂರು. (೭) ಪೊ[illegible]ರ ಮಹಮ್ಮದ ಹಾಜಿ ಜಮೀನುದಾರ, ನೀಲೇಶ್ವರ. (೮) ಚೊರ ಕೊಟ್ಟಿಲ್ ಕುಂಞ ಮ್ಮದಿನ್ ಕುಟ್ಟಿ ಜಮೀನುದಾರ ಕುರ್ಕೆ ಚೆರ್ವತ್ತೂರು. (೯) ಯು. ಅರಬಿ ಇಸ್ಮಾಯಿಲ್ ಸಾಹುಕಾರ್, ಎಮ್ಮೆಗಳ ಉಡುಪಿ. (೧೦) ಎಂ. ಎ. ಮಾಮ್ಮು ಜಮೀನುದಾರ, ಮೊಗ್ರಾಲ. (೧೧) ಬದಿಮೂಲೆ ಮಮ್ಮದೆ ಬ್ಯಾರಿ ರುಜು ಜಮೀನುದಾರ, ಪೈರಳೆ. (೧೨) ನೂಯಿತಿಲ ಇಬ್ರಾಹಿಮ್ ಬ್ಯಾರಿ ಜಮೀನುದಾರ, ಪೈರಳೆ. (೧೩) ಅಮಾಲ ಕಾದ್ರಬ್ಯಾರಿ ಜಮೀನುದಾರ ಬಾಯಾರ. (೧೪) ಕೆ. ಎಂ. ಪಿ. ಕುಂಞಾಲಿ ಬ್ಯಾರಿ ಜಮೀನುದಾರ ಕುಡಾಲ ಮೇರ್ಕಳ. (೧೫) ಕಂಬಾರ ದೊಡ್ಡ ಅಬ್ದುಲ್ಲ ಬ್ಯಾರಿ ಜಮೀನುದಾರ, ಕುಡಾಲ, ಮೇರ್ಕಳ. (೧೬) ಕಂಬಾರ ಅಬ್ದುಲ್ಲ ಬ್ಯಾರಿ ಜಮೀನುದಾರ, ಕುಡಾಲ, ಮೇರ್ಕಳ. (೧೭) ಎಂ. ಎ. ಇದ್ದಿನ್‌ಕುಂಞ ಕುಂಬಳೆ ಪಂಚ್ಯಾತ ಕೋರ್ಟು ಮೆಂಬರ, ಜಮೀನುದಾರ, ಮೊಗ್ರಾಲ. (೧೮) ಮಹಮ್ಮದೆ ಬ್ಯಾರಿ ಸಾಹುಕಾರ, ಜಮೀನುದಾರ ಮೊಗ್ರಾಲ. (೧೯) ಎಂ. ಟಿ. ಮಹಮ್ಮದ ಕುಂಬಳೆ ಪಂಚ್ಯಾತ ಕೋರ್ಟು ಮೆಂಬರ ಮತ್ತು ಅಧಿಕಾರಿ ಮೊಗ್ರಾಲ. (೨೦) ಚೇರಂಗೈ ಕುಂಞ ಆಲಿ ಬ್ಯಾರಿ ಜಮೀನುದಾರ, ಕೊಡ್ಲು. (೨೧) ಕಾಬಿಲ್ ಕುಂಞಮ್ಮಾದ್ ಕುಟ್ಟಿ ಬ್ಯಾರಿ ಜಮೀನುದಾರ, ಉಡುಪು. (೨೨) ಡಿ. ಎಂ. ಹುಸನಬ್ಬ ಸಾಹುಕಾರ ಮಂಗಳೂರು.

Supplement to this issue.

THE BRITISH TRADING Co.,
Post Box No. 1223. Madras.
ಬ್ರಿಟಿಷ್ ಟ್ರೇಡಿಂಗ್ ಕಂಪೆನಿ,
ಪೋಷ್ಟ್ ಬಾಕ್ಸ್, ನಂ 1223, ಮದರಾಸು.

ಈ ನೋಟೀಸಿನಲ್ಲಿ ಇರುವ, ಗಡಿಯಾರಗಳು, ಸ್ಟೇಷನರಿಗಳು, ರೋಲ್ಡ್ ಗೋಲ್ಡ್ ಭಂಗಾರದ ಒಡವೆಗಳು ಬೇಕಾದರೆ, ತಾವಾಗಿಯೆ ಖುದ್ದಾಗಿ ಕೊಳ್ಳುವದಕಿಂತಲು ಹೆಚ್ಚು ಸಂಬಳಯಿಂದ ಕಳುಹಿಸುವೆವು. ಪರಸ್ಥಳದವರು ಒಂದುಸಾರಿ ತರಿಸಿ ಪರಿಕ್ಷಿಸಿದಲ್ಲಿ ಸ್ವತಃ ವೇದ್ಯವಾಗುವದಲ್ಲದೆ ತಾವೇ ತಮ್ಮ ಸ್ನೇಹಿತರಿಗೂ ನಮ್ಮ ಷಾಪಿನ ವಿಷಯದಲ್ಲಿ ಶಿಫಾರಸ್ ಮಾಡುವಿರೆಂದು ಹೇಳಬಲ್ಲೆವು. ಇದರಲ್ಲಿರುವ ಸಾಮಾನುಗಳು ಬೇಕಾದರೆ ಮೇಲೆ ಕಾಣಿಸಿರುವ ವಿಳಾಸಕ್ಕೆ ಬರೆದು, ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು. ಇದಲ್ಲದೆ ನಮ್ಮ ಕಂಪೆನಿಯಲ್ಲಿ ಹಾರ್ಮೋನಿಯಂ, ಗ್ಯಾಸ್‌ಲೈಟ ಮೊದಲಾದವುಗಳು ದೊರಿಯುತ್ತೆ, ಆರ್ಡರು ಮಾಡುವವರು ತಮ್ಮ ವಿಳಾಸವನ್ನು ಚೆನ್ನಾಗಿ ತಿಳಿಯುವಂತೆ ವಿವರವಾಗಿ ಬರೆಯಿರಿ.

ರೋಲ್ಡ್ ಗೋಲ್ಡ್ ರಿಸ್ಟ್‌ಲೆಟ್ ವಾಚ್.

ಈ ಹೊಸನಮೂನೆ ಗಡಿಯಾರಗಳು ವಿಲಾಯತಿಯಲ್ಲಿ ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರು ಮಾಡಲ್ಪಟ್ಟಿರುವದು ಸರಿಯಾದ ಕಾಲವನ್ನು ತೋರಿಸುವದು. ನೋಡುವದಕ್ಕೆ ಅಂದವಾಗಿಯೂ ಚಿಕ್ಕದಾಗಿಯೂ ಇರುತ್ತೆ ಇದನ್ನು ಸ್ತ್ರೀ ಪುರುಷರು ಕೈಯಲ್ಲಿ ಕಟ್ಟಿಕೊಳ್ಳಲು ಬಹು ಅಂದವಾಗಿರುವದು. ನೋಡುವದಕ್ಕೆ ಭಂಗಾರದ ಗಡಿಯಾರದ ಹಾಗೆ ಕಾಣುವದು. ನಾವು ಬಹಳ ತರಿಸಿ ಇರುವದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಒಂದನ್ನು ತರಸಿ ನೋಡಿದರೆ ಸಂತೋಷಪಡುವಿರಿ.

8 ವರುಷಗಳ ಗ್ಯಾರಂಟಿ ಸಹಿತ ರೂ. 7-8-0

ಹೊಸನಮೂನೆಯ ರಿಸ್ಟ್ ವಾಚ್.

ಇವು ಈ ಚಿತ್ರದಲ್ಲಿರುವಂತೆಯೇ ಇರುವವು. ಈ ಗಡಿಯಾರಗಳನ್ನು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿದೆ ಈ ಗಡಿಯಾರಗಳಲ್ಲಿ ರಾತ್ರಿ ವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುತ್ತೆ, ಗಂಟೆತೋರಿಸುವ ಸಂಬರುಗಳಲ್ಲಿ ರೇಡಿಯಂ ಎಂಬ ವಿದ್ಯುಚ್ಛಕ್ತಿ ಬೆಳಕು ಇರುವದು.

ಕ್ರಯ 1ಕ್ಕೆ 6-8-0.

14 ಕ್ಯಾರೆಟ್ಟ ಭಂಗಾರದ ಕೈ ಗಡಿಯಾರ ಇಂಗ್ಲೀಷ್ ನಮೂನೆ ಲೀವರ್ ರಿಷ್ಟವಾಚ್.

ಈ ಗಡಿಯಾರಗಳು ಈ ನಕ್ಷೆಯಲ್ಲಿರುವಂತೆಯೇ ಇರುವದು. ಬಹು ಸುಂದರವಾದದ್ದು. ಲೀವರ್ ಮೂವೆಂಟ್ಸಗಳಿಂದ ತಯಾರಿಸಿ ಕೆಂಪುಗಳ ಕೆತ್ತಿರುವದು ಕೈಯಲ್ಲಿ ಕಟ್ಟಲು ಬಹುಲಾಯಖಾದದ್ದು. ನೋಡಲಿಕ್ಕೆ ಭಾರಿ ಕ್ರಯದ ಗಡಿಯಾರದ ಹಾಗೆ ಕಾಣುವವು. ಕೈಯಲ್ಲಿ ಕಟ್ಟುವ ಮೃದುವಾದ ಪಟ್ಟಿ ಸಹಿತ ರೂ. 7-0

ರೋಲ್ಡ್ ಗೋಲ್ಡ್ ಭಂಗಾರದ ರೇಡಿಯಂ ರಿಸ್ಟ್‌ಲೆಟ್ ವಾಚ್ ನಂ, 75.

ಈ ಗಡಿಯಾರಗಳನ್ನು ಸೀಮೆ ಭಂಗಾರದಿಂದ ಅಮೇರಿಕಾ ದೇಶದಲ್ಲಿ ತಯಾರಿಸಿದ್ದು. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು, ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವವು. ಅಮೇರಿಕಾ ದೇಶದ ಗಡಿಯಾರಗಳು ಬಹುದಿನ ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದಕ್ಕೆ 5 ವರ್ಷ ಗ್ಯಾರಂಟಿ ಕೊಡುವೆವು. ಕೈಯಲ್ಲಿ ಕಟ್ಟುವ ಬೆಳ್ಳಿಯ ಸರಪಣಿ ಸಹಿತ ಗಡಿಯಾರ 1ಕ್ಕೆ ರೂ. 10-8-0

ರೋಲ್ಡ್ ಗೋಲ್ಡ್ ಭಂಗಾರದ 4 ಮೂಲೆಯ ಹ್ಯಾಂಡ್ ವಾಚ್.

ಇದು ಚಿಕ್ಕಸೈಜು ನೋಟಕ್ಕೆ ಬಹು ಲಕ್ಷಣವಾಗಿರುವದು. ದೃಢವಾದ ಲೀವರ್ ಮೂವೆಂಟ್ಸಗಳಿಂದಮಾಡಿ ಒಳಗಡೆ ಕೆಂಪುಗಳು ಕೆತ್ತಲ್ಪಟ್ಟಿರುವದು. ಇಂಡಿಯಾ ದೇಶದಲ್ಲಿ ಎಲ್ಲೋ ಗಡಿಯಾರಗಳು ಬರ್ಮಾಗೆ ಅನೇಕ ಯೋಗ್ಯತಾ ಪತ್ರಗಳು ಬಂದಿರುವದು. ಇವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. [illegible] ಉದ್ಯೋಗಸ್ಥರೂ ದೊಡ್ಡ ಆಫೀಸರುಗಳೂ ಜಮೀನ್ದಾರರೂ ಬಹಳವಾಗಿ ಉಪಯೋಗಿಸುತ್ತಾರೆ. [illegible]

[illegible] ಕ್ರಯ 1ಕ್ಕೆ ರೂ. [illegible]

ರೋಲ್ಡ್ ಗೋಲ್ಡ್ ಭಂಗಾರದ ಬ್ರೇಸ್‌ಲೆಟ್‌ವಾಚ್ ನಂ. 65.

ಈ ಹೊಸನಮೂನೆ ಗಡಿಯಾರಗಳು ಬಹಳ ಬಲಿಷ್ಟವಾದ ಲೀವರ್ ಸಾಮಾನುಗಳಿಂದ ಮಾಡಲ್ಪಟ್ಟಿದೆ, ನೋಡಲಿಕ್ಕೆ ಭಂಗಾರದ ಗಡಿಯಾರದ ಹಾಗೆ ಕಾಣುವುದು. ಚಿಕ್ಕಸೈಜು, ಕೈಯಲ್ಲಿ ಕಟ್ಟಿಕೊಳ್ಳಲು ಬಹು ಅಂದವಾಗಿರುತ್ತೆ. ಇಂಗ್ಲೀಷ್ ನಮೂನೆ ಗಡಿಯಾರ ಗ್ಯಾರಂಟಿ 8 ವರ್ಷಗಳು ಕೊಡಲ್ಪಡುತ್ತೆ. ಬ್ರೇಸ್‌ಲೆಟ್ ಸರಪಣಿಸಹಿತ ಗಡಿಯಾರ 1ಕ್ಕೆ ಕ್ರಯ ರೂ. 8-0-0.



ಅಮೇರಿಕನ್ ರೇಡಿಯಂ ಪಾಕೆಟ್ ವಾಚ್.

ಈ ಗಡಿಯಾರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಒಳ್ಳೆಗಟ್ಟಿ ಸಾಮಾನುಗಳಿಂದ ತಯಾರಿಸಿದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟಿವೆ, ಗಾಳಿಧೂಳು ಸೇರದಂತೆ ಒಳಗಡೆ ಗ್ಲಾಸ್‌ಡೂಮು ಇರುವದು. ಇದರಲ್ಲಿ ಯಾರೇ ಆಗಲಿ ಗಂಟೆಯನ್ನು ಬೇಗನೆ ಗುರುತು ಹಿಡಿಯಬಹುದು. ಸರಿಯಾದ ಕಾಲವನ್ನು ತೋರಿಸುವ ಗ್ಯಾರಂಟಿಯುಳ್ಳ ಗಡಿಯಾರ.

ಕ್ರಯ 1ಕ್ಕೆ ರೂ 6-0-0

8 ದಿನಕ್ಕೆ ಒಂದುಸಲ ಬೀಗಕೊಡುವ ಪಾಕೆಟ್ ಲೀವರ್ ವಾಚ್.

(5 ವರ್ಷಗಳು ಗ್ಯಾರಂಟಿ.)

ಈ ಗಡಿಯಾರಗಳು ಸ್ವಿಜರ್‌ಲ್ಯಾಂಡ್ ದೇಶದಲ್ಲಿ ತಯಾರಿಸಿದ್ದು. ಒಂದಾವರ್ತಿ ಬೀಗಕೊಟ್ಟರೆ 8 ದಿನಗಳವರಿವಗೂ ಒಂದೇ ಸಮನಾಗಿ ನಡಿಯುತ್ತಿರುವಂತೆ ಬಹು ಗಟ್ಟಿಯಾದಲೀವರ್ ಮೋಮೆಂಟ್ಸಗಳಿಂದ ತಯಾರಿಸಿದ್ದು ಮೇಲಗಡೆ ಬೀಗವಿರುವದು ಒಳಗಡೆ ಕೆಂಪುಗಳು ಕೆತ್ತಲ್ಪಟ್ಟಿವೆ.

ಕ್ರಯ ಗಡಿಯಾರ 1ಕ್ಕೆ ರೂ 13-0-0
ಬೆಳ್ಳಿಯದು 1ಕ್ಕೆ ರೂ.16-0-0

ಬೆಸ್ಟ್‌ಲೀವರ್ ಪಾಕೆಟ್ ವಾಚ್.

ಈ ಗಡಿಯಾರವು ಉತ್ತಮ ವಾದ ಸಾಮಾನುಗಳಿಂದ ತಯಾರಿಸಲ್ಪಟ್ಟಿದೆ. ನೋಟಕ್ಕೆ ಬಹು ಗಂಭೀರವಾಗಿಯೂ ಸುಂದರವಾಗಿಯೂ ಉಳ್ಳದ್ದು. ಇದರ ಎಲ್ಲಾ ಸಾಮಾನುಗಳು ಬಹು ನಾಜೂಕವಾದ ಯಂತ್ರಗಳಿಂದ ತಯಾರಿಸಲ್ಪಟ್ಟದ್ದು. ಇದನ್ನು ಜೇಬಿನಲ್ಲಿ ಹಾಕಿಕೊಂಡು ಎಷ್ಟು ದೂರ ಓಡಿದಾಗ್ಯೂ ನಿಲ್ಲದೆ ನಡಿಯುತ್ತಿರುವದು. ಇಷ್ಟು ಸುಲಭಕ್ರಯಕ್ಕೆ ಇತರ ಕಂಪನಿಗಳಲ್ಲಿ ದೊರೆಯಲಾರದು. ಇದರ ಕ್ರಯ ರೂ. 5-4-0

ಅಚ್ಚ ಬೆಳ್ಳಿಯ ಪಾಕೆಟ್ ಗಡಿಯಾರ.

ಈ ಗಡಿಯಾರವು ಬೆಳ್ಳಿಯಿಂದ ತಯಾರಿಸಿದೆ. ಇದು ನೋಡಲಿಕ್ಕೆ ರಮಣೀಯವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ ಸ್ವಿಜರ್‌ಲ್ಯಾಂಡ್ ದೇಶದಲ್ಲಿ ಒಳ್ಳೆ ಲೀವರ್ ಕೆಲಸದಲ್ಲಿ ಮಾಡಿದೆ. ಇದರ ಹಿಂಭಾಗದಲ್ಲಿ ಅಂದವಾದ ಚಿತ್ರಕೆಲಸವಮಾಡಿದೆ. ಸರಿಯಾದಕಾಲವನ್ನು ತೋರಿಸುವದು. ಒಳಗಡೆ ದೂಳು ಗಾಳಿ ಇವುಗಳು ಸೇರದಂತೆ ಗ್ಲಾಸ್ ಡೂಮ್ ಎಂಬ ಮುಚ್ಚಳ ಇರುವದು. ಬೆಲೆ 1ಕ್ಕೆ ರೂ 9-0-0.

ಯೆಲೆಕ್ಟ್ರಿಕ್ ಫೋಟೋ ಉಂಗರವು.

ಈ ಉಂಗರಗಳನ್ನು ಒಂದು ವಿಧವಾದ ಪಂಚಲೋಹದಿಂದ ತಯಾರಿಸಿ ಭಂಗಾರದ ಗಿಲೀಟು ಮಾಡಿದೆ ಅದರ ಮಧ್ಯದಲ್ಲಿ ಒಂದು ಬೂತಕನ್ನಡಿ ಇರುವದು. ಅದರಲ್ಲಿ ನೋಡಿದರೆ ರಾಮ, ಕೃಷ್ಣ, ಮುಂತಾದವರು ಕಾಣುತ್ತಾರೆ. ನೋಡಲು ಬಹು ರಮ್ಯವಾಗಿರುವದು. [illegible] ಕೈಯಲ್ಲಿ ಹಾಕಿಕೊಂಡರೆ ಬಹು [illegible]

ಕ್ರಯ 1ಕ್ಕೆ ರೂ 1-0-0

ಜರ್ಟಲ್‌ವೆರ್ ರೇಡಿಯಂ ಪಾಕೆಟ್ ವಾಚ್.

ಈ ಗಡಿಯಾರಗಳು ಹೊಸದಾಗಿ ಸ್ವಿಜರ್‌ಲ್ಯಾಂಡ್ ದೇಶದಲ್ಲಿ (ಸ್ವಿಸ್ ಮೇಡ್) ತಯಾರಾದವು. ಬಹು ಬಲಿಷ್ಟವಾದ ಲೀವರ್ ಮೂಮೆಂಟ್ಸ ಗಳಿಂದಲೂ, ದೃಢವಾದ ಸಾಮಾನುಗಳಿಂದಲೂ ತಯಾರಿಸಿ ಒಳಗಡೆ ಕೆಂಪುಗಳು ಇಟ್ಟಿರುವದು. ಇದರಲ್ಲಿ ಕತ್ತಲೆಯಲ್ಲಿ ದೀಪದ ಸಹಾಯವಿಲ್ಲದೆ ಗಂಟೆಯನ್ನು ನೋಡಬಹುದು. ಇದರ ಕೈಯಲ್ಲಿನಲ್ಲಿ ರೇಡಿಯಂ ಎಂಬ ಒಂದು ವಿಧವಾದ ವಿದ್ಯುಚ್ಛಕ್ತಿಯನ್ನು ಇಟ್ಟಿರುವದರಿಂದ ಎಲೆಕ್ಟ್ರಿಕ್ ದೀಪದಂತೆ ಪ್ರಕಾಶಿಸುತ್ತಾ ಗಂಟೆಯನ್ನು ತೋರಿಸುವುದು. ಇವುನೋಡಲಿಕ್ಕೆ ಬಹು ಲಕ್ಷಣವಾಗಿಯೂ ಜೇಬಿಗೆ ಅಡಕವಾಗಿಯೂ ಇರುವವು. ಇವಕ್ಕೆ ಖಾತ್ರಿಯಾದ 5 ವರುಷಗಳ ಗ್ಯಾರಂಟಿ ಕೊಡುವವು.

ಕ್ರಯ 1ಕ್ಕೆ ರೂ. 7-8-0.

ಜರ್ಮನ್ ಅಲಾರಂ ಟೈಂಪೀಸ್.

ಈಗಡಿಯಾರಗಳು ಜರ್ಮನ್ ದೇಶದಲ್ಲಿ ತಯಾರಿಸಿದ್ದು. ಮೇಲುಗಡೆ ಎಂದಿಗೂ ಕಪ್ಪಾಗದಂಥ ನಿಕ್ಕಲ್ ಬೆಳ್ಳಿಯ ಮುಚ್ಚಳವಿರುವದು. ಇದಕ್ಕೆ ಒಂದಾವರ್ತಿ ಬೀಗಕೊಟ್ಟರೆ 30 ಗಂಟೆಯ ಕಾಲ ನಡೆಯುವದು. ಮತ್ತು ಖರಾರು ಗಂಟೆಯನ್ನು ತೋರಿಸುವದು. ಗಡಿಯಾರದ ಎತ್ತರ 7 ಅಂಗುಲ ವಿರುವದು. ಗಂಟೆ ತೋರಿಸುವ ಡಯಲು 4 ಅಂಗುಲವಿರುವದು. ಇದರಲ್ಲಿಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು, ಇದು ಅಂಗಡಿ, ಸ್ಕೂಲು, ಮನೆ, ರೀಡಿಂಗ್‌ರೂಂ, ಗುಡಿ, ಮುಂತಾದವುಗಳಲ್ಲಿ ಇಡಲು ಬಹು ಲಾಯಖಾದದ್ದು. ಇವಕ್ಕೆ ಖಾತ್ರಿಯಾದ 5 ವರ್ಷ ಗ್ಯಾರಂಟಿ ಕೊಡುವೆವು.

ಕ್ರಯ 1ಕ್ಕೆ ರೂ. 5-8-0. ಅಲಾರಂ ಇಲ್ಲದ್ದು. 3-0-0

ಲಿಲ್ಲಿ ಆಫ್ ದಿ ವ್ಯಾಲಿ.

ಎಂಬ ಇಂಗ್ಲೀಷ್ ಸುಗಂಧ ದ್ರವ್ಯವು.

ಇದು ಪುಷ್ಪಗಳ ಸಾರದಿಂದ ತಯಾರಾದದ್ದು. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗಳಿಗೆ ಅಥವಾ ಕೈವಸ್ತ್ರಗಳಿಗೆ ಹಾಕಿದರೆ ಒಂದು ವಾರದವರಿಗೂ ವಾಸನೆ ಹೋಗದೆ ಒಂದೇಸರಿಯಾಗಿ ಘಮಘಮಿಸುತ್ತಿರುವದು. ಮತ್ತು ಇದರ ವಾಸನೆಯನ್ನು ಕಂಡವರೆ ಮನಸ್ಸೆಲ್ಲವೂ ಇದರ ಮೇಲೆಯೇ ಸೆಳೆಯುವದಲ್ಲ ಮನೋಹರವಾದ ಸುವಾಸನೆಯನ್ನು ಕೊಡುವದು. ಇದರ ವಾಸನೆಯು ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಬಹಳವಾಗಿ ವರ್ಣಿಸುವುದೇನು? ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ಬಾಟ್ಲಿ 1ಕ್ಕೆ 2-0-0

ರಾಯಲ್ ಪ್ರಾಕ್ಟಿಕೆ ಪೆನ್.

ಈ ಪೇನಾಗಳು ಅಮೇರಿಕಾ ದೇಶದಲ್ಲಿ ತಯಾರಾದವು. ಇದಕ್ಕೆ 14 ಕ್ಯಾರೆಟ್ಟ ಭಂಗಾರದಂಥ ಮುಳ್ಳು ಇರುವದು. ಇದರಲ್ಲಿ ಬರೆಯುವದರಿಂದ ಇತರ ಲೇಖಣಿಗಳಿಂದ ಬರೆಯುವಂತೆ ಹಸ್ತಾಕ್ಷರವಾಗಿ ಕಾಣದೆ ಮುತ್ತಗಳ ಹಾಗೆಮುದ್ದಾಗಿ ಕಾಣುವವು. ಈ ಪೇನವನ್ನು ತರಿಸುವವರಿಗೆ ಇದರಲ್ಲಿ ಕಾಣುವ 10 ಬಹುಮಾನಗಳು ಕೊಡುವೆವು. ಬಹುಮಾನ ಸಹಿತ ಕ್ರಯ 1ಕ್ಕೆ ರೂ 2-0-0

ಬೆಳ್ಳಿ, ಭಂಗಾರ ತೂಗುವ ತಕ್ಕಡಿ.

ಇವುಗಳನ್ನು ಹಿತ್ತಾಳೆಯಿಂದ ತಯಾರಿಸಿದೆ. ಇವುಗಳಲ್ಲಿ ಬೆಳ್ಳಿ, ಭಂಗಾರ, ಔಷಧಿ, ಭಸ್ಮ ಮುಂತಾದವುಗಳನ್ನು ತೂಗಲು ಬಹುಲಾಯಖಾದದ್ದು. ಇದರಲ್ಲಿ ಯಾವ ಪದಾರ್ಥವನ್ನೇ ಆಗಲಿ ತೂಗಬಹುದು. ಒಂದು ಗುರೆಗಂಜಿಯು ತೂಕದಷ್ಟೂ ಹೆಚ್ಚು ಕಡಿಮೆ ಬರಲಾರದು.

ಕ್ರಯ 1ಕ್ಕೆ 1-4-0

ಟಿಗ್ಗಿ ಗ್ರಾಮೋಫೋನ್.

ಎಂಬ ಹಾಡು ಗಾರಿಕೆಯ ಯಂತ್ರವು.

ಹಳಿನ ಕ್ರಯ ರೂ. 35-0-0. ಈಗಿನ ಕ್ರಯ ರೂ. 12-0-0

ಈ ಯಂತ್ರವು ವಿಲಾಯತಿಯಲ್ಲಿ ತಯಾರಾದದ್ದು. ಇಂಗೀಷು ...ಹಿಂದೂಸ್ತಾನಿ, ಇಂಗ್ಲೀಷುವಾದ್ಯ ಮುಂತಾದ ಪದ ...ನ್ನು ಹೇಳುವದು. ಲಗ್ನದಮನೆ, ನಾಟಕಶಾಲೆ ಮುಂತಾ ...ನಕೊಡುವ ಸ್ಥಳದಲ್ಲಿ ಉಪಯೋ... ಬಹು ಚೆನ್ನಾಗಿದೆ ನೋಟಕ್ಕೆ ...ವಾಗಿರುವಂತೆಯೂ, ಕ್ರಯ ಸುಲಭವಾಗಿಯೂ ಇರುವಂತೆ ಬ ...ಬಳಿಷ್ಟವಾದ ಸಾಮಾನುಗಳಿಂದ ಯಂತ್ರವನ್ನು ತಯಾರಿಸಿದೆ ಸುಂ...ವಾದ ಮೆಟಲ್ ಹಾರ್ನ ಎಂಬ ...ಹೇಳುವ ಕೊಳವೆಇದೆ. ನಿದಾನ ...ಗಿಯೂ, ಜಾಗ್ರತೆಯಾಗಿಯೂ ಪದ ...ಳಿಸಲು ಕೀಲುಇದೆ. ಈ ಯಂತ್ರ ...ಎಲ್ಲಿ ಬೇಕಾದರೂ ಕೈಯಲ್ಲಿ ಹಿಡಿದುಕೊಂಡು ಹೋಗಲು ...ಕೂಲವಾದಂಥ ಸುಂದರವಾದ ಕೈ ಪೆಟ್ಟಿಯಲ್ಲಿಟ್ಟಿವೆ.

...ಬಲ್ ಸೈಡ್ ಎರಡು ಕಡೆಯೂ ಪದವಿರುವ

1 ರೆಕಾರ್ಡ್ ಸಹಿತ ಕ್ರಯ ರೂ. 12-0-0.

...ಗೆ ರೆಕಾರ್ಡ್ ಬೇಕಾದರೆ, ಪ್ರತ್ಯೇಕ ರೆಕಾರ್ಡ್ 1ಕ್ಕೆ 2-0-0.

ಅಮೇರಿಕನ್ ಅಲಾರಂ ಟೈಂಪೀಸ್.

ಈ ಗಡಿಯಾರಗಳು ಅಮೇರಿಕಾ ದೇಶದಲ್ಲಿ ತಯಾರಾದವು. ಮೇಲುಗಡೆ ಬೆಳ್ಳಿಯಂತಿರುವ ಮುಚ್ಚಳವಿರವದು. ಎಂದಿಗೂ ಕಪಪ್ಪಗದು, ಕರಾರು ಗಂಟೆಯನ್ನು ಕೊಡುವದು. ಮತ್ತು ಗಂಟೆಯನ್ನು ಸಹ ಬಾರಿಸುವದು. ಬಹು ಬೇಗನೆ ಗಂಟೆಯನ್ನು ಕಂಡು ಹಿಡಿಯಬಹುದು. ಅಂಗಡಿ, ಸ್ಕೂಲ್, ಮನೆ, ಗುಡಿಗಳಲ್ಲಿ ಇಡಲು ಬಹು ಚೆನ್ನಾಗಿರುವದು. ಇದಕ್ಕೆ ಮುಂಚಿತವಾಗಿ ಈಮಾದರಿ ಗಡಿಯಾರಗಳು ಮಾರಾಟಕ್ಕೆ ಬಂದಿಲ್ಲ. ಕ್ರಯ 1ಕ್ಕೆ ರೂ. 5-0-0.

ಅಲಾರಂ ಇಲ್ಲದ್ದು. ರೂ. 3-8-0.

ಟ್ರೆಜರಿ ಎಂಬ ಕಬ್ಬಿಣದ ಪೆಟ್ಟಿಗೆಗಳು.

ಈ ಕಬ್ಬಿಣದ ಪೆಟ್ಟಿಗೆಗಳಿಗೆ ರಿಜಿಸ್ಟರಾದ ಬೀಗಗಳು ಹಾಕಿದೆ. ಈ ನಮ್ಮ ಪೆಟ್ಟಿಗೆಗಳನ್ನು ಕನ್ನಡ ನಾಡಿನ...ಲ್ಲಾ ವರ್ತಕರಲ್ಲಿಯೂ, ಬ್ಯಾಂಕುಗಳಲ್ಲಿಯೂ, ರೈಲ್ವೆ ಡಿಪಾರ್ಟುಮೆಂಟಿನಲ್ಲೂ ಮತ್ತು ಕಲ್ಕತ್ತಾ, ಬೊಂಬಾಯಿ ಮುಂತಾದ ದೊಡ್ಡದೊಡ್ಡ ಪಟ್ಟಣಗಳಲ್ಲಿಯೂ, ಉಪಯೋಗಿಸುತ್ತಿರುವರು. ಈ ನಮ್ಮ ಟ್ರೆಜರಿಯು ಮನೆಯಲ್ಲಿದ್ದರೆ ಬೆಂಕಿಯಭಯ, ಕಳ್ಳರಭಯ, ಇರುವದಿಲ್ಲ. ಮತ್ತು ಲಕ್ಷ್ಮಿಕಳೆಯಾಗಿಯೂ, ಮಂಗಳಕರವಾಗಿಯೂ ಇರುತ್ತೆ.

2 × 1½ × 1½	ಕ್ರಯ	ರೂ.	85-0-0.
2½ × 1¾ × 1¾	,,	,,	130-0.
3 × 2 × 2	,,	,,	160-0-0.
3½ × 2 × 2	,,	,,	270-0-0.

☞ ಪೆಟ್ಟಿಗೆ ಬೇಕಾದವರು ಪೆಟ್ಟಿಗೆ 1 ಕ್ಕೆ 30 ರುಪಾಯಿ ಅಡ್ವಾನ್ಸು ಕಳುಹಿಸಬೇಕು. ಆರ್ಡರು ಬಂದಕೂಡಲೆ ನಾವು ಬರೆಯುವ ರೈಲ್ವೆಸ್ಟೇಷನ್ನಿಗೆ ಪೆಟ್ಟಿಯನ್ನು ಕಳುಹಿಸಿರಸೀದಿಯನ್ನು ಬಾಕಿಹಣಕ್ಕೆ ವಿ. ಪಿ. ಮಾಡುತ್ತೇವೆ

ಹೊಸ ನಮೂನೆ ಕೈ ಗಡಿಯಾರ,

ಹೊಸದಾಗಿ ಕಂಡುಹಿಡಿಯಲ್ಪಟ್ಟ ಈ ಇಂಗ್ಲೀಷು ನಮೂನೆಯ ರಿಸ್ಟ್‌ವಾಚ್‌ಗಳು ಗಟ್ಟಿಸಾಮಾನುಗಳಿಂದಮಾಡಿದೆ. ಒಳಗಡೆ ಕೆಂಪುಗಳು ಇಟ್ಟಿರುವವು. ಗಂಟೆಯನ್ನು ಬಹು ಚೆನ್ನಾಗಿ ತೋರಿಸುವದು. ಗಂಡಸರೂ ಹೆಂಗಸರೂ ಕೈಯಲ್ಲಿ ಕಟ್ಟಲು ಯೋಗ್ಯವಾದವು. ಇವಕ್ಕೆ ಪಟ್ಟಿಯನ್ನಾಗಲೀ ಅಥವಾ ಬೆಳ್ಳಿ ಭಂಗಾರದ ಸರಪಣಿಯನ್ನಾಗಲಿ ಉಪಯೋಗಿಸಲು ಪಕ್ಕದಲ್ಲಿ ಕೊಂಡಿಗಳು ಇರುವವು.

ಬೆಳ್ಳಿಯಕೇಸಿನದು ರೂ. 9-0-0. ಭಂಗಾರದ್ದು ರೂ. 10-8-0.

ಲೇಡಿಸ್ ಗೋಲ್ಡನ್ ಬ್ರೇಸ್‌ಲೆಟ್ ವಾಚ್.

(ಇಂಗ್ಲೀಷ್ ನಮೂನೆಯ ಕೈಗಡಿಯಾರ)

ಈ ಗಡಿಯಾರಗಳು ಸ್ವಿಜರ್‌ಲ್ಯಾಂಡ್ ದೇಶದಲ್ಲಿ ಗಡಿಯಾರಗಳನ್ನು ತಯಾರಿಸುವವರಲ್ಲಿ ಹೆಸರು ವಾಸಿಯನ್ನು ಹೊಂದಿದ ಸ್ವಿಸ್‌ಕಂಪೆನಿಯಲ್ಲಿ ಚಿನ್ನಕ್ಕೆ ಸರಿಸಮಾನವಾದ ಪಂಚಲೋಹದಲ್ಲಿ ತಯಾರಿಸಿ ಸುವರ್ಣ ಭಂಗಾರದ ಗಿಲೀಟು ಕೊಟ್ಟದೆ ಮೇಲುಗಡೆ ಸುತ್ತಲೂ ಕೆಂಪು ಹಸರು ಮುಂತಾದ ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟಿರುವದು. ಇದು ನೋಡಲಿಕ್ಕೆ ಭಾರಿ ಕ್ರಯದ ಗಡಿಯಾರದಂತೆಯೂ, ಕೈಗೆ ಒಂದು ಆಭರಣವಾಗಿಯೂ ಇರುವದು. ಇದನ್ನು ನೋಡಿದವರು ನಿಜವಾದ ಭಂಗಾರವೆಂದೇ ಹೇಳುವರು. ಕಾಲವನ್ನು ವ್ಯತ್ಯಾಸವಿಲ್ಲದೆ ತೋರಿಸುವದು. ಚಿಕ್ಕಸೈಜಿನದು ಇದಕ್ಕೆ ಸ್ಪ್ರಿಂಗಿನ ಸರಪಣಿ ಇರುವದರಿಂದ ದೊಡ್ಡವರೂ ಚಿಕ್ಕವರೂ ಉಪಯೋಗಿಸಬಹುದು. ಕ್ರಯ 1 ಕ್ಕೆ ರೂ. 7-8-0.

18 ಕ್ಯಾರೆಕ್ಟ ರೋಲ್ಡ್ ಗೋಲ್ಡ್ ರೇಡಿಯೋ ಲೈಟ್ ರಿಸ್ಟ್ ವಾಚ್.

ಇವು ಹೊಸದಾಗಿ ಬಂದವು. ಕೈಯಲ್ಲಿ ಕಟ್ಟಲು ಲಾಯಖಾಗಿವೆ. ಇವರ ಮೂವೆಮೆಂಟ್ಸುಗಳು ಬಹು ಬಲವುಳ್ಳದ್ದು. ಸ್ವಿಸ್ ಮೇಡ್. ಸರಿಯಾದ ಕಾಲವನ್ನು ತೋರಿಸುವದು. ಚಿಕ್ಕಸೈಜು, ನೋಡಲಿಕ್ಕೆ ಬಹು ಅಂದವಾಗಿರುವದು. ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕಿಲ್ಲ. ಎಷ್ಟು ಕತ್ತಲಾಗಿದ್ದರೂ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವವು. ಇವಕ್ಕೆ 8 ವರುಷ ಗ್ಯಾರಂಟಿ ಇರುವದು. ಕ್ರಯ ರೂ. 9-0-0.

ಲೇಡಿಸ್ ಬ್ರೇಸ್‌ಲೆಟ್ ವಾಚ್.

ಈ ಚಿತ್ರದಲ್ಲಿ ಕಾಣುತ್ತಿರುವಂತೆಯೇ ಇದನ್ನು ತಯಾರಿಸಿದೆ. ಈ ಗಡಿಯಾರದ ಮೇಲೆ ಚಿತ್ರ ಕೆಲಸವಮಾಡಿ ಮೇಲುಗಡೆ ಬೀಗ ಇರುವುದು ಮತ್ತು ಕೈಯಲ್ಲಿಕಟ್ಟಿಕೊಳ್ಳಲು 14 ಕ್ಯಾರೆಟ್ ಭಂಗಾರದ ಸ್ಪ್ರಿಂಗಿನ ಬೆಲ್ಟು ಇರವುದು. ಇದು ದೊಡ್ಡವರಿಗೂ ಚಿಕ್ಕವರಿಗೂ ಆಗುವಂತೆ ಅಂದವಾಗಿರುವುದು. ಈ ಗಡಿಯಾರವು ಕೈಗೆ ಒಂದು ಆಭರಣವಾಗಿದೆ. ಇದನ್ನು ಗಂಡಸರು ಹೆಂಗಸರು ಸಹ ಕೈಯಲ್ಲಿ ಧರಿಸಬಹುದು. ಇದರಬೆಲೆ ಕೈಯಲ್ಲಿ ಕಟ್ಟಿಕೊಳ್ಳುವ ಬ್ರೇಸಲೆಟ್ ಸಹಿತ ಕ್ರಯ ರೂ. 7-0-0.

ಕಿಂಗ್ ಜಾರ್ಜ್ ಫೌಂಟೇನ್ ಪೆನ್.

ಈ ಪೇನಾಗಳನ್ನು ಲಂಡನ್ ಪಟ್ಟಣದಲ್ಲಿ ಪ್ರಖ್ಯಾತಿಯಾದ ಕಂಪೆನಿಯಲ್ಲಿ ತಯಾರಿಸಿದ್ದು. ಇವಕ್ಕೆ 14 ಕ್ಯಾರೆಕ್ಟ ಭಂಗಾರದಂಥ ಮುಳ್ಳು ಇರುವದು ಇದರಲ್ಲಿ ಬರೆಯುದರಿಂದ ಅಕ್ಷರಗಳು ಹಸಯ್ಯವಾಗಿ ಕಾಣದೆ ಮುತ್ತುಗಳಹಾಗೆ ಮುದ್ದಾಗಿ ಬರೆ ಕಾಣುವದು. ಕ್ರಯ 1 ಕ್ಕೆ ರೂ. 2-4-0

ಎರಡುಹಲಗಿನ ರಾಜರ್ಸ್ ಚಾಕು.

ಇವು ವಿಲಾಯತಿಯಲ್ಲಿ ತಯಾರಿಸಿದ್ದು. ಹಸನಾದ ಸ್ಟೀಲ್ ಎಂಬ ಲೋಹದಿಂದ ಬಹಳ ಹರಿತವಾಗಿ ತಯಾರಿಸಿದೆ. ಬೇಗನೆ ಕೆಡದು ನೋಡಲು ಚೆನ್ನಾಗಿರುವದು ಪೆರಲ್ ಎಂಬ ದಂತದ ಹಿಡಿ ಇರುವದು. ಕ್ರಯ 1 ಕ್ಕೆ 1-8-0.



ನಂ. 2. ರೂ. 1-12-0.

ಟ್ರಾನ್ಸ್‌ಫರ್ ಪಿಕ್ಚರ್ಸ್.

ಈ ಚಿತ್ರಪಟಗಳು ಜರ್ಮನಿ ದೇಶದಲ್ಲಿ ತಯಾರಾದದ್ದು ಈ ಪಟಗಳಲ್ಲಿ ಎಲ್ಲಾ ವಿಧವಾದ ಹುವ್ವುಗಳು, ಅರಮನೆಗಳೂ, ದೇವರಪಟಗಳೂ, ಪ್ರಪಂಚದಲ್ಲಿರುವ ಎಲ್ಲಾ ರಾಜರುಗಳ ಪಟಗಳೂ, ಮೃಗಗಳೂ, ಪಕ್ಷಿಗಳೂ, ಪಲ್ಲಕ್ಕಿಗಳೂ, ಆಕಾಶ ವಿಮಾನಗಳೂ, ಯುದ್ಧದಪಟಗಳೂ ಮುಂತಾದ ಎಲ್ಲಾ ವಿಧವಾದ ಚಿತ್ರಪಟಗಳು ಇರುವವು. ಇವನ್ನ ಸ್ವಲ್ಪನೆನಸಿ ಪುಸ್ತಕಗಳಲ್ಲಿ ಅಂಟಿಸಿಕೊಳ್ಳಬಹುದು. ಕ್ರಯ ಡಜನ್ 1 ಕ್ಕೆ ರೂ. 1-0-0.



ನಿಕ್ಕಲ್ ಬೆಳ್ಳಿಯ ಊದುವ ಪೀಪಿ.

ಇವುಗಳನ್ನು ನಿಕ್ಕಲ್ ಬೆಳ್ಳಿಯಿಂದ ತಯಾರಿಸಿದೆ. ಇದನ್ನು ಊದಿದರೆ ರೈಲು ಬಂಡಿ ಕೂಗುವಂತೆ ಕೂಗುವದು. ಇದರ ಶಬ್ದವು ಸುಮಾರು ಒಂದು ಮೈಲಿಯವರಿವಿಗೂ ಕೇಳಿಸುವದು. ಇದುಯಾವಾಗ್ಯೂ ಬೆಳ್ಳಿಯಂತೆ ಪ್ರಕಾಶವಾಗಿರುವದು: ಪೋಲೀಸ್, ರೈಲು ಕೆಲಸದವರಿಗೂ, ಇತರರಿಗೂ ಬೇಕಾದದ್ದು. ಕ್ರಯ 1ಕ್ಕೆ 1-0-0.

ದುರ್ಬೀನು ಎಂಬ ದೂರದರ್ಶಕ ಯಂತ್ರ.

ಬಹಳ ದೂರದಲ್ಲಿರತಕ್ಕ ವಸ್ತುಗಳನ್ನು ಈ ಯಂತ್ರದಿಂದ ನೋಡಿದರೆ ಅವಸ್ತುಗಳು ಬಹಳ ಸಮೀಪದಲ್ಲಿರುವಂತೆ ತೋರುವುದಲ್ಲದೆ. ಆಕಾರವು ದೊಡ್ಡದಾಗಿಯೂ, ಸ್ಪಷ್ಟವಾಗಿಯೂ ಕಾಣುವುದು.



ಇದರ ಬೆಲೆ 1 ಕ್ಕೆ ರೂ. 4-8-0.

ಯಲಕ್ಟ್ರಿಕ್ ಸಿಗಾರ್ ಲೈಟ್.

ಈ ದೀಪವು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ, ಯಾವುದೂ ಅವಶ್ಯಕವಿಲ್ಲ. ದೀಪದ ಮೇಲಿರುವ ಚಕ್ರವನ್ನು ಸ್ವಲ್ಪತಿರುಗಿಸಿದರೆ ತನ್ನಷ್ಟಕ್ಕೆ ತಾನೇ ಹತ್ತಿಕೊಂಡು ಉರಿಯುವದು. ಇದನ್ನು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಪ್ರಯಾಣಿಕರಿಗೂ ಕತ್ತಲೆಯಲ್ಲಿ ತಿರುಗಾಡುವವರಿಗೂ ಬಹು ಉಪಕಾರಿಯಾದದ್ದು. ಮತ್ತು ಬೀಡಿ, ಸಿಗರೇಟು, ಮುಂತಾದವುಗಳನ್ನು ಅಂಟಿಸಲು ಬಹು ಅನುಕೂಲವಾದದ್ದು. ಇದು ಒಂದಿದ್ದರೆಯಾವಾಗ್ಯೂ ಬೆಂಕಿ ಕಡ್ಡಿಯು ಬೇಕಾಗುವುದಿಲ್ಲ. ಕ್ರಯ 1 ಕ್ಕೆ 1-4-0.

ಕಾಂಬಿನೇಷನ್ ಚಾಕು.

ಇವು ಅಮೆರಿಕಾದೇಶದಲ್ಲಿ ತಯಾರಾದವು. ಇದರಲ್ಲಿ 14 ವಿಧವಾದ ಆಯುಧಗಳು ಇರುವವು. ಈ ಆಯುಧಗಳನ್ನು ಹಸನಾದ ಉಕ್ಕಿನಿಂದ ಬಹು ಹರಿತವಾಗಿ ತಯಾರಿಸಿದೆ. ದಂತದಹಿಡಿ ಇರುವದು, ಇದು ಪ್ರತಿಯೊಬ್ಬರಲ್ಲಿಯೂ ಇರಬೇಕಾದದ್ದು.



ಕ್ರಯ 1 ಕ್ಕೆ 2-4-0.

ಸ್ಪ್ರಿಂಗ್ ಬ್ಯಾಲೆನ್ಸ್ ತಕ್ಕಡಿ.

ಈತಕ್ಕಡಿಗೆ ತೂಕ ಹಾಕುವಂತೆ ತಟ್ಟೆ ಗುಂಡುಗಳ ಅವಶ್ಯಕವಿಲ್ಲ. ಇದು ಪ್ರತಿ ವರ್ತಕರಲ್ಲಿಯೂ ಇರಬೇಕಾದದ್ದು. 1ಪೌಂಡ್ ನಿಂದ 100 ಪೌನುಗಳವರಿವಿಗೂ ತೂಗುವದು.



25 ಪೌನುಗಳ ತಕ್ಕಡಿ	1 ಕ್ಕೆ	2-0-0.
50	,,	,,	4-4-0.
100	,,	,,	4-4-0.

ಹೊಸ ನಮೂನೆಯ ಬೈಯಸ್ಕೋಪ್ ಯಂತ್ರ.

ಇವು ಹೊಸದಾಗಿ ಜರ್ಮನಿ ದೇಶದಲ್ಲಿ ತಯಾರಾಗಿ ಬಂದವು ಇದರ ಕೆಳಭಾಗದಲ್ಲಿ ಕಾಣುವ ಕಂಬಿಯನ್ನು ತಿರುಗಿಸುತ್ತಿದ್ದರೆ ಬಯಸ್ಕೋಪಿನಲ್ಲಿ ಕಂಡಂತೆಯೇ ಬಹು ಆಶ್ಚರ್ಯವಾದ ಚಿತ್ರಪಟಗಳು ಕಾಣುವವು, ಇದರಲ್ಲಿ ಇಂಗ್ಲೀಷ್ ಸ್ತ್ರೀ ಪುರುಷರ (ಡ್ಯಾನ್ಸ್) ಜಹಜುಗಳ ಜಗಳ. ಆಕಾಶವಿಮಾನ ಸಂಚರಿಸುವದು, ಮೋಟೋರ್ ಮತ್ತು ಕುದುರೆಗಳ ಜೂಜು, ಲಂಡನ್ ಮತ್ತು ಪಾರೀಸ್ ದೇಶದಲ್ಲಿರುವ ದೊಡ್ಡದೊಡ್ಡ ರಾಜಬೀದಿಗಳೂ, ಮತ್ತು ಗುಡಿಗಳೂ, ಎಲ್ಲಾರಾಜರುಗಳ ಪಟಗಳೂ ಇನ್ನೂ ಅನೇಕ ವಿಧವಾದ ನಕಲಿ ಚಿತ್ರಪಟಗಳು ಇರುವವು ಇದರಲ್ಲಿ ನೋಡಿದರೆ ಬಯಸ್ಕೋಪಿನಲ್ಲಿ ಪರದೆಮೇಲೆ ನೋಡಿದಂತೆಯೇ ಇರುವದು ಸಂತೆಗಳಲ್ಲಿಯೂ, ಹಬ್ಬ, ಜಾತ್ರೆಗಳಲ್ಲಿಯೂ ಒಂದವರಿಗೆ ತೋರಿಸಿ ಹಣ ಸಂಪಾದಿಸ ಬಹುದು.

ಕ್ರಯ 1 ಕ್ಕೆ 1-8-0:

ಟಾರ್ಚ್‌ಲೈಟ್ ಎಂಬ ವಿದ್ಯುಚ್ಛಕ್ತಿಯ ದೀಪ.

ಈ ದೀಪಗಳು ಅಮೇರಿಕಾ ದೇಶದಲ್ಲಿ ತಯಾರಾದವು. ಇವನ್ನು ಅಂಟಿಸಲಿಕ್ಕೆ ಬೆಂಕಿಕಡ್ಡಿ ಎಣ್ಣೆಯಾವುದೂ ಬೇಕಿಲ್ಲ ಇದರ ಮಧ್ಯದಲ್ಲಿರುವ ಗುಂಡಿಯನ್ನು ಅಮುವಿದರೆ ತನ್ನಷ್ಟಕ್ಕೆ ತಾನೇ ಉರಿಯುವದು, ಬೆಂಗಳೂರು, ಮೈಸೂರು, ಮದರಾಸು, ಬೊಂಬಾಯಿ ಮುಂತಾದ ಪಟ್ಟಣಗಳಲ್ಲಿ ಇರುವ ವಿದ್ಯುಚ್ಛಕ್ತಿಯ ದೀಪಗಳಂತೆಯೇ ಇರುವವು. ಬೇಕಾದಾಗ ಉಪಯೋಗಿಸಿ ನಂತರ ಜೇಬಿನಲ್ಲಿ ಇಟ್ಟುಕೊಳ್ಳಬಹುದು. ರಾತ್ರಿಯಲ್ಲಿ ಸಂಚರಿಸುವವರಿಗೂ ಮತ್ತು ಇತರರಿಗೂ ಬಹು ಪ್ರಯೋಜನವಾದದ್ದು. ಕ್ರಯ 1 ಕ್ಕೆ 5-0-0

ಅಮೇರಿಕನ್ ಪ್ರಿಂಟಿಂಗ್ ಬಾಕ್ಸ್ ಎಂಬ ಇಂಗ್ಲೀಷ್ ರಬ್ಬರಿನ ಅಕ್ಷರಗಳು.

ಈ ಅಕ್ಷರಗಳು ಅಮೇರಿಕಾದಲ್ಲಿ ತಯಾರಾದವು. ಕಾಗದಗಳು ಕಾರಡು ಮುಂತಾದವುಗಳನ್ನು ಕಷ್ಟವಿಲ್ಲದೆ ಬಹು ಅಂದವಾಗಿ ನಾವೇ ಪ್ರಿಂಟುಮಾಡಿಕೊಳ್ಳ ಬಹುದು. ಈ ಪೆಟ್ಟಿಗೆಯೊಂದು ಇದ್ದರೆ ರಬ್ಬರು ಮೋಹರುಗಳ ಅಗತ್ಯವೇ ಬೇಡ, ಇದರಲ್ಲಿ ಇಂಕ್‌ಪ್ಯಾಡ್, ಚಿಮುಟ, ಇಂಕ್‌ಬಾಟಲ್ ಸಹಿತ ಸೇರಿದೆ. ಈ ಪೆಟ್ಟಿಗೆ ಒಂದು ಇದ್ದರೆ ಬೇಕಾದ ಮುದ್ರಣವನ್ನು ನಾವೇಮಾಡಿ ಕೊಳ್ಳಬಹುದು.

,, 170 ಅಕ್ಷರಗಳಪೆಟ್ಟಿ			ರೂ.	1-14-0.
,, 250	,,	,,	,,	2-8-0.
,, 350	,,	,,	,,	3-12-0.

ಯಲೆಕ್ಟ್ರಿಕ್ ಫೋಟೋ ಉಂಗರ,

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ತಯಾರಿಸಿ ಭಂಗಾರದ ಗಿಲೀಟುಮಾಡಿದೆ. ಇದರ ಮಧ್ಯದಲ್ಲಿ ಒಂದು ಭೂತಕನ್ನಡಿ ಇರುವದು. ಅದರಲ್ಲಿ ನೋಡಿದರೆ ಹಿಂದೂ ದೇವರುಗಳು, ದೇವಾಲಯಗಳು, ದೊಡ್ಡದೊಡ್ಡ ಸ್ವಾಮಿಗಳು, ಮೆಕ್ಕಾಮದೀನಾ, ಪ್ರಪಂಚದ ಎಲ್ಲಾ ರಾಜರು ಕಾಣುತ್ತಾರೆ. ನೋಡಲು ಬಲು ರಮ್ಯವಾಗಿರುವದು. ಬಣ್ಣ ಕೆಡದು. ಇದನ್ನು ಕೈಯಲ್ಲಿ ಹಾಕಿಕೊಂಡರೆ ಬಹು ಚೆನ್ನಾಗಿರುವದು. ಕ್ರಯ 1 ಕ್ಕೆ 1-0-0.

ಮೋಟರ್, ರೈಲು ಬಂಡಿಗಳು.

ಇವು ಅಮೆರಿಕಾ ದೇಶದಲ್ಲಿ ತಯಾರಿಸಿದ್ದು, ಇವಕ್ಕೆ ಬೀಗವಿರುವದು, ಅದನ್ನು ತಿರುಗಿಸಿ ನೆಲದಲ್ಲಿ ಬಿಟ್ಟರೆ ನಿಜವಾದ ಮೋಟರ್ ಬಂಡಿಗಳೂ, ರೈಲುಬಂಡಿಗಳೂ, ಎರಡು ಕುದುರೆಯ ಜಟಕಾಗಳಹಾಗೆ ಬಹುಬೇಗನೆ ಓಡುವದು, ಮಕ್ಕಳನ್ನು ಆಡಿಸಲಿಕ್ಕೂ ಬಹು ಪದಾರ್ಥಗಳನ್ನು ಕೊಡಲಿಕ್ಕೂ ಚೆನ್ನಾಗಿರುವದು. ಕ್ರಯ 1 ಕ್ಕೆ 1-12-0.

ಡಿಟೆಕ್ಟರ್‌ಲಾಕ್ ಯೆಂಬ ಹೊಸನಮೂನೆಯ ವಿಲಾಯತಿಯ ಬೀಗ.

ಈಬೀಗವನ್ನು ಅಮೇರಿಕಾದೇಶದಲ್ಲಿ ಹಿತ್ತಾಳೆಯಿಂದ ತಯಾರಿಸಿದ್ದು. ಇವನ್ನು ಹಾಕಲೂ ತೆಗಿಯಲೂ ಬೀಗದ ಕೈ ಬೇಕಾಗಿಲ್ಲ ಇದರಲ್ಲಿ ಕಾಣುವ ಅಕ್ಷರಗಳನ್ನು ಒಂದು ಹೆಸರಿಗೆ ಸರಿಯಾಗಿ ನಿಲ್ಲಿಸಿದರೆ ತನ್ನಷ್ಟಕ್ಕೆ ತಾನೇ ತೆರೆದುಕೊಳ್ಳುವದು. ನಂತರ ಅಕ್ಷರಗಳನ್ನು ಬದಲಾಯಿಸಿದರೆ ತೆಗೆಯಲು ಆಗುವದಿಲ್ಲ ಈ ಬೀಗಗಳನ್ನು ಉಪಯೋಗಿಸುವದರಿಂದ ಕಳ್ಳರ ಭಯವಿರುವದಿಲ್ಲ.

ಕ್ರಯ 1 ಕ್ಕೆ 2-4-0.

ರೇಷ್ಮೆಯ ರೋಜಾ ಹುವ್ವುಗಳು.

ಈ ರೋಜಾಹುವ್ವುಗಳನ್ನು ಹಸರು ರೇಷ್ಮೆಬಟ್ಟೆಯಲ್ಲಿ ತಯಾರಿಸಿ ಮೇಲುಗಡೆ ಬೆಳ್ಳಿ, ಭಂಗಾರದ ಚುಮ್ಕಿಕೆಲಸ ಮಾಡಿರುವದು, ಇವನ್ನು ನೋಡಿದವರು ನಿಜವಾದ ರೋಜಾಹೂವೆಂದೇ ಹೇಳುವರು. ಇವು ಎಷ್ಟುವರುಷಗಳಾದರೂ ಕೆಡದು. ಜಡೆಬಿಲ್ಲೆಗಳಿಗೆ ಬದಲಾಗಿ ಇವನ್ನು ಉಪಯೋಗಿಸ ಬಹುದು.

ಕ್ರಯ 1 ಕ್ಕೆ 0-12-0.

ಬೆಸ್ಟ್‌ರೇಜರ್ ಅಥವಾ ಕ್ಷೌರಕತ್ತಿ.

ಇದು ಸೀಮೆಯಲ್ಲಿ ಹಸನಾದ ಸ್ಟೀಲ್ ಎಂಬ ಲೋಹದಿಂದ ತಯಾರಾದದ್ದು. ಇದನ್ನು ಇಟ್ಟುಕೊಂಡು ಕ್ಷೌರೀಕನ ಕೈಯಲ್ಲಿಕೊಟ್ಟು ಕೆಲಸವನ್ನು ಮಾಡಿಸಿಕೊಂಡಲ್ಲಿ ಶರೀರ ಸಂಬಂಧವಾದ ವ್ಯಾಧಿಗಳು ಬಾರದಂತೆ ಉರಿಯೂ ಇಲ್ಲದಂತೆ ಸುಖವಾಗಿರುವದು. ಸೀಮೆಯಲ್ಲಿ ತಯಾರಿಸಿದ ರಾಜರ್ಸ್ ಕತ್ತಿ. 2-8-0.

ಬ್ಲೌಲೆನ್ನಿಯ ಒಂತಿರುವ ಬನೀಯನ್.

ಈ ಬನಿಯನ್ನುಗಳನ್ನು ಹಸನಾದಗಟ್ಟಿ ದಾರದಿಂದ ಸೀಮೆಯಲ್ಲಿ ತಯಾರಿಸಿದ್ದು ಇದನ್ನು ಬೇಸಗೆಯ ಕಾಲದಲ್ಲಿಉಪಯೋಗಿಸಲು ಚೆನ್ನಾಗಿರುವುದು. ಬೆವರು ತಗಲಿ ಬೇರೆ ಬಟ್ಟೆಗಳು ಕೆಡದಂತೆ ಕಾಪಾಡುವದು. ಮನೆಯಲ್ಲಿರುವಾಗಲೂ ಉಪಯೋಗಿಸಬಹುದು.

ಕ್ರಯ 1 ಕ್ಕೆ 1-8-0.

ಜಾಲರುಪಿನಿನ್ನವಕೈತಾಳ.

ಈ ತಾಳಗಳು ಮೇಲಾದ ಕಂಚಿನಿಂದ ತಯಾರಾದವುಗಳು. ಇವುಗಳನ್ನು ನಾಟಕ, ಹಾಡು ಕಚೇರಿ, ಭಜನೆ, ಮನೆಗಳಲ್ಲಿ ಉಪಯೋಗಿಸ ಬಹುದು. ಚೆನ್ನಾಗಿ ಶಬ್ದವನ್ನು ಕೊಡುತ್ತೆ.

ಕ್ರಯ ಜೊತೆ 1 ಕ್ಕೆ 0-12-0.

ಜ್ವರವನ್ನು ಕಂಡುಹಿಡಿಯುವ ಥರ್ಮಾಮೆಟರ್.

ಇವು ಲಂಡನ್ ಪಟ್ಟಣದಲ್ಲಿ ತಯಾರಿಸಿ ಬಂದವು. ಇವುಗಳಲ್ಲಿ ಜ್ವರವನ್ನು ನೋಡುವದರಿಂದ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಗೊತ್ತಾಗುವುದು ನಿಕ್ಕಲ್ ಬೆಳ್ಳಿಯ ಕೇಸು ಇದೆ.

1 ನಿಮಿಷದಲ್ಲಿ ಜ್ವರವನ್ನು ಕಂಡುಹಿಡಿಯುವದು. 2-4-0.

ಕಲ್ಕತ್ತಾ ದೇಶದ ಸೀರೆಗಳು.

ಈ ಸೀರೆಗಳನ್ನು ಹೆಸರ್ಬಾಸಿ ಹೊಂದಿದ ದೊಡ್ಡ ಕಂಪೆನಿಯವರಿಂದ ತಯಾರಿಸಿದ್ದು. 18 ಮೊಳ ಉದ್ದವೂ, 2½ ಮೊಳ ಅಗಲವೂ ಇರುವದು. ಇವನ್ನು ಲಂಡನ್ ಪಟ್ಟಣದ ಹಸನ್ ಗಟ್ಟಿಯಾದ ನುಣ್ಣನೆನೂಲಿನಿಂದಲೂ, ರೇಷ್ಮೆಯಿಂದಲೂ ತಯಾರಿಸಿದೆ. ಅಂದವಾದ ಅಂಚೂ ಸುಂದರವಾದ ಸೆರಗೂ ಇರುವದು. ಇವು ಯಾವಾಗ್ಯೂ ರೇಷ್ಮೆಯಂತೆ ಇರುವವು. ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು ಮತ್ತು ಎಲ್ಲಾ ಮೈಥಸ್ಥರಿಗೂ ಲಾಯಖಾದದ್ದು. ಕ್ರಯ 1ಕ್ಕೆ 7-8-0.

ವಿಲಾಯತಿ ಕನ್ನಡಕಗಳು.

ಇದನ್ನು ದೊಡ್ಡವರು ಚಿಕ್ಕವರು ಸಹ ಉಪಯೋಗಿಸಬಹುದು, ಇದನ್ನು ಉಪಯೋಗಿಸುವದರಿಂದ ಕಣ್ಣುಗಳು ಯಾವಾಗಲೂ ತಂಪಾಗಿರುವದು. ಮತ್ತು ಗಾಳಿ ಮಣ್ಣು ಮುಂತಾದವುಗಳು ಕಣ್ಣಿಗೆ ಬೀಳದಂತೆ ಪಕ್ಕಗಳಲ್ಲಿ ಬಿಲ್ಲೆಗಳಿರುವದು, ಇದರ ಕಂಬಿಗಳು ಯಾವಾಗೂ ಬೆಳ್ಳಿಯಹಾಗೆ ಇರುವದು, ಇದರಲ್ಲಿ ಹಸರು ಊದಮೋಗವರ್ಣ ಮೊದಲಾದವುಗಳಿರುವದು.

ಕ್ರಯ ನಂ. 1 ಕ್ಕೆ 1-12-0. ನಂ. 2 ಕ್ಕೆ 2-8-0.

ರೋಲ್ಡ್ ಗೋಲ್ಡ್ ಭಂಗಾರದ ಉಂಗರಗಳು.



ಈ ಉಂಗರಗಳನ್ನು ಸೀಮೆಭಂಗಾರದಿಂದ ತಯಾರಿಸಿ ಮೇಲುಗಡೆ ಎಂದಿಗೂಬಣ್ಣ ಹೋಗದಂತೆ ಎಲೆಕ್ಟ್ರಿಕ್ ಶಕ್ತಿಯಿಂದ ಅಪರಂಜಿಭಂಗಾರದ ಗಿಲೀಟುಮಾಡಿದೆ, ಮೇಲು ಭಾಗದಲ್ಲಿ ಕೆಂಪು, ಹಸರೂ ಮುಂತಾದ ಇಮಿಟೇಷನ್ ವಜ್ರದಕಲ್ಲುಗಳು ಇಟ್ಟುಕಟ್ಟಡ ಕಟ್ಟಿರುವದು ನೋಟಕ್ಕೆ ನಿಜವಾದ ವಜ್ರದ ಉಂಗರವೆಂದೇ ಹೇಳಬೇಕು. ಬೇಕಾದವರು ಬೆರಳಿನ ಅಳತೆಯನ್ನು ಕಳುಹಿಸಿರಿ,

ಕ್ರಯ 1ಕ್ಕೆ 0-12-0; ಡಜನ್ 1 ಕ್ಕೆ 5-8-0,

ಜರ್ಮನ್ ವಿದ್ಯುಚ್ಛಕ್ತಿಯ ದೀಪ.

ಬೆಂಗಳೂರು: ಮದರಾಸು, ಬೊಂಬಾಯಿ ಮುಂತಾದ ದೊಡ್ಡದೊಡ್ಡ ಪಟ್ಟಣಗಳಲ್ಲಿರುವ ವಿದ್ಯುಚ್ಛಕ್ತಿಯ ದೀಪಗಳಂತೆಯೇ ಇರುವವು. ಈ ದೀಪವು ಮೇಜಿನ ಮೇಲೆ ಇಡಲೂ, ಗೋಡೆಗೆ ತಗಲಿಸಲೂ ಬಹುದು. ಗುಡಿ, ಲಗ್ನದಮನೆ, ರೀಡಿಂಗ್‌ರೂಂ ಮುಂತಾದವುಗಳಲ್ಲಿ ಉಪಯೋಗಿಸಲೂ ಬಹು ಚೆನ್ನಾಗಿರುವದು. ಮತ್ತು ಮಲಗುವ ಮನೆಗಳಲ್ಲಿ ಹಾಸಿಗೆಯಬಳಿ ಇಟ್ಟುಕೊಂಡು ಬೇಕಾದಾಗ ಅಂಟಿಸಿಕೊಂಡು ಆರಿಸಬಹುದು. ಇದರ ಪ್ರಕಾಶವು ಗ್ಯಾಸ್‌ಲೈಟ್ ದೀಪದ ಪ್ರಕಾಶಕ್ಕೆ ಪರಿಸಮನಾಗಿರುವದು. ಮೊದಲು ಈ ಮಾದರಿ ದೀಪಗಳು ಮಾರಾಟಕ್ಕೆ ಇರಲಿಲ್ಲ. ಹೊಸದಾಗಿ ಬಂದವು.

ಬ್ಯಾಟರಿ ಸಹಿತ ದೀಪ 1 ಕ್ಕೆ ರೂ, 5-0-0.

ಪ್ಯಾರೆಸ್ ದೇಶದ ಲೇಡೀಸ್ ಕಲರ್ ಫೋಟೋಗಳು.

ಇದನ್ನು ಪ್ಯಾರಿಸ್‌ದೇಶದಲ್ಲಿ ತಯಾರುಮಾಡಲ್ಪಟ್ಟಿರುವದು, ಇದರಲ್ಲಿ ಸ್ತ್ರೀಯರು ನಂದವನದಲ್ಲಿ ಪುರುಷರ ಸಂಗಡ ಸರಸ ಸಲ್ಲಾಪವಾಗಿರುವದು, ಡ್ಯಾನ್ಸ್ ಆಡುವದು ಸಮುದ್ರದಲ್ಲಿ ಸ್ನಾನಮಾಡುವದೂ, ಮತ್ತು ದಂಪತಿಗಳು ಅನೋನ್ಯವಾಗಿ ಪ್ರೀತಿಸುವದು, ಅನೇಕ ರಕಂ ಮೋಹಕರದ ಫೋಟೋಗಳು ಇರುತ್ತೆ. ನೋಡುವದಕ್ಕೆ ಬಹು ಆನಂದವಾಗಿಯೂ, ಮನೋಹರವಾಗಿಯೂ ಇರುವದು, ಈಫೋಟೋಗಳನ್ನು ಮಲಗು ಮನೆ (ಬೆಡ್‌ರೂಮು) ಯಲ್ಲಿ ಇಡಲು ಬಹು ಶೃಂಗಾರವಾಗಿರುವದು. ಫೋಟೋಗಳ ವಿಷಯವಾಗಿ ಬಹಳ ಬರೆದು ತಿಳಿಸಲು ಆಗದು, ಇದನ್ನು ಓದುವದರಿಂದಲೇ ಈಪಟಗಳು ಎಂಥವು ಎಂಬುದನ್ನು ತಿಳಿದು ಕೊಳ್ಳಬಹುದು, ತರಸಿ ನೋಡಿದರೆ ಸಂತೋಷಪಡುವಿರಿ.

1 ಡಜನ್ ಫೋಟೋಗಳಿಗೆ ಕ್ರಯ ರೂ. 3-0-0.

ಸ್ಟೀಲ್ ಕ್ಯಾಷ್‌ಬಾಕ್ಸ್ ಯೆಂಬ ಕೈ ಪೆಟ್ಟಿಗೆ.

ಇದು ಸೀಮೆಯ ಉಕ್ಕಿನ ತಗಡಿನಿಂದ ತಯಾರಿಸಿ ಮೇಲುಭಾಗದಲ್ಲಿ ಬಹು ಅಂದವಾದ ಚಿತ್ರ ಕೆಲಸಗಳು ಮಾಡಿ ವಾರ್ನಿಷ್ ಮಾಡಿದೆ. ಇದು ನೋಡುವದಕ್ಕೆ ಬಹು ಚೆನ್ನಾಗಿರುವದು, ಇದರಲ್ಲಿ ಒಡವೆಗಳು ಹಣ ಮುಂತಾದವುಗಳನ್ನು ಇಡಬಹುದು ಬೀಗ ಮತ್ತು ಬೀಗದ ಕೈ ಸಹ ಇರುವದು.

ಕ್ರಯ ನಂ. 1ಕ್ಕೆ 1-0-0. ನಂ. 2 ಕ್ಕೆ 1-8-0.

ಭೂತಕನ್ನಡಿಗಳು.

ಈ ಕನ್ನಡಿಗಳು ಕೆಂಪು ವಜ್ರ ಮೊದಲಾದ ರತ್ನಗಳನ್ನು ಪರೀಕ್ಷಿಸುವದಕ್ಕೂ ಓದಲು ತಿಳಿಯದಿರುವ ಅಕ್ಷರಗಳನ್ನು ಓದುವದಕ್ಕೂ ಉಪಯೋಗವಾದದ್ದು, ಬಹಳ ಸಣ್ಣದಾಗಿ ಇರುವ ವಸ್ತುಗಳು ದೊಡ್ಡದಾಗಿ ತಿಳಿಯುವದು.

ಕ್ರಯ ನಂ. 1 ಕ್ಕೆ 1-4-0.

ಕ್ರಯ ನಂ. 2 ಕ್ಕೆ 1-10-0.

ಗೆಜ್ಜೆಗಳು.

ಈ ಗೆಜ್ಜೆಗಳು ಕಂಚಿನಿಂದ ತಯಾರಿಸಿದೆ. ಇವುಗಳನ್ನು ಪ್ರತಿಯೊಬ್ಬರಿಗೂ, ಅಂದರೆ ನಾಟಕ ಕಂಪನಿ, ದಾಸರು, ದನಕರುಗಳಿಗೆ ಕಟ್ಟಲು ಬಹು ಚೆನ್ನಾಗಿದೆ. ಕ್ರಯ ಅರನೆಲ್ಲಿ ಕಾಯಿ ಗೆಜೆ 100-ಕ್ಕೆ 2-0-0.

,, ಮಂದ್ರಕಪ್ಪೆ ಗೆಜ್ಜೆ ,, 2-8-0.

ಇಮಿಟೇಷನ್ ವಜ್ರದ್ಹಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಜಾಚಾವಜ್ರದ ಕಲ್ಲುಗಳಿಗೆ ಸರಿಯಾಗಿರುವದು, ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಗಿಲೀಟುಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1 ಕ್ಕೆ 7 ಕಲ್ಲಿನ ಬಿಳಿಯ ಓಲೆ ಜೊತೆ 8-0-0.

,, ,, ಕೆಂಪುಕಲ್ಲಿನ ಓಲೆ ಜೊತೆ 8-8-0.

ಸೀಮೆ ಭಂಗಾರದ ಗೆಜ್ಜೆ ಅಡ್ಡಿಗೆ.

ಸುವರ್ಣ ಭಂಗಾರಕ್ಕೆ ಸರಿಸಮನಾದಂಥ ಪಂಚಲೋಹದಿಂದ ಗೆಜ್ಜೆಗಳನ್ನು ಮಾಡಿ ಬಣ್ಣವು ಎಂದಿಗೂ ಹೋಗದಂತೆ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಬಣ್ಣಕೊಟ್ಟಿರುವದು, ಇದನ್ನು ಕತ್ತಿನಲ್ಲಿ ಕಟ್ಟಲು ಬಹು ಚೆನ್ನಾಗಿರುವದು. ಭಾರಿಕ್ರಯದ ಅಡ್ಡಿಗೆ ಗಳಿಗೆ ಬದಲಾಗಿ ಇವನ್ನೇ ಬಳವಾಗಿ ಉಪಯೋಗಿಸುತ್ತಿರುವರು. ಗೆಜ್ಜೆಗಳನ್ನು ರೇಷ್ಮೆಯ ಗಟ್ಟಿದಾರದಿಂದ ಕಟ್ಟಿದೆ.



ಕ್ರಯ 1 ಕ್ಕೆ 2-4-0

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರದ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿಹೊಂದಿದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ, ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು, ಬೆಳ್ಳಿಡಾಬುಗಳಂತೆ ಮುಂಭಾಗದಲ್ಲಿ ಕೊಣಿಕೆ ಇಟ್ಟು ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟತೋರಿಸುವದಿಲ್ಲ. ಇದರಲ್ಲಿ 150 ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾನವ್ಯತ್ಯಾಸವೂ ಇಲ್ಲ. ಒಂದು ಸಲ ತರಿಸಿನೋಡಿರಿ. ಗೆಜ್ಜೆಡಾಬು 1 ಕ್ಕೆ 8-0-0.

ರೋಲ್ಡ್ ಗೋಲ್ಡ್ ಕೈ ಬಳೆಗಳು.

ಇದು ಶುದ್ಧವಾದ ಅಮೇರಿಕನ್ ರೋಲ್ಡ್ ಗೋಲ್ಡ್ ಚಿನ್ನದಿಂದ ಬಹಳ ನಾಜೋಕಾಗಿಯೂ, ಚಮತ್ಕಾರವಾಗಿಯೂ, ಎಂದಿಗೂ ಬಣ್ಣವುಕೆಡದಂತೆ ತಯಾರ್ಮಾಡಲ್ಪಟ್ಟಿರುವದು. ಪ್ರಕಾಶವು ಥಳಥಳಿಸುತ್ತಿರುವದು. ಸುಹಸ್ರಾರು ಹುವ್ವುಗಳು ಆಗತಾನೇ ಅರಳಿದರೆ ಹೇಗೋ ಹಾಗೆ ಈ ಹೂವುಗಳು ನಿರ್ಮಿಸಲ್ಪಟ್ಟಿರುವವು. ಇದರ ಪ್ರಕಾಶ ಕತ್ತಲೆಯಲ್ಲಿ ನೋಡುವವರ ಕಣ್ಣನ್ನು ಮುಚ್ಚುವಂತಿರುವುದು, ಆರ್ಡರೊಡನೆ ಕೈಯ ಅಳತೆಯನ್ನು ತಪ್ಪದೆ ನಮೂದಿಸಬೇಕು. ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆಯಾವ ಆಭರಣಗಳೂ ಬೇಕಾಗುವದಿಲ್ಲ. ಲಿಂಗಾಯತ, ಬ್ರಾಹ್ಮಣ ಹೆಂಗಸರಿಗೆ ಬಹು ಮುದ್ದಾದ ಆಭರಣ. ಜೊತೆ 1 ಕ್ಕೆ 2-8-0,

ಸಾವಂತಿ ಮತ್ತು ರೋಜಾಹುವ್ವಿನ ಜಡೆಬಿಲ್ಲೆಗಳು.

ಈ ಜಡೆಬಿಲ್ಲೆಗಳನ್ನು ಪಂಚಲೋಹದಿಂದ ತಯಾರಿಸಿ ಮೇಲುಗಡೆ ಸುವರ್ಣ ಭಂಗಾರದ ಗಿಲೀಟು ಮಾಡಿರುವದು. ಈ ಜಡೆಬಿಲ್ಲೆಗಳನ್ನು ನೋಡದರೆ ನಿಜವಾದ ರೋಜಾ ಮತ್ತು ಸಾವಂತಿ ಹುವ್ವಿನಂತೆಯೇ ಇರುವದು, ಇವನ್ನು ಚಿಕ್ಕವರೂ ದೊಡ್ಡವರೂ ಸಹ ಉಪಯೋಗಿಸಬಹುದು. ಭಾರಿಕ್ರಯದ ಜಡೆಬಿಲ್ಲೆಗಳಿಗಿಂತಲೂ ಇವು ಬಹು ಲಕ್ಷಣವಾಗಿರುವವು. ಬಣ್ಣವು ಎಂದಿಗೂ ಹೋಗದು, ಕ್ರಯ 1 ಕ್ಕೆ 1-8-0



ಚಂದ್ರಹಾರ.

ಇದನ್ನು ಚಿಕ್ಕವರೂ ದೊಡ್ಡವರೂ ಉಪಯೋಗಿಸು... ಅಚ್ಚಬೆಳ್ಳಿಯಿಂದ ತಯಾರಿಸಿ ಭಂಗಾರದ ಗಿಲೀಟುಮಾಡಿದೆ. ಇದನ್ನು ಪ್ರತಿಯೊಬ್ಬ ...ಯರೂ ಮಕ್ಕಳೂ ಧರಿಸಿಕೊಳ್ಳ ಬಹುದು... ನೋಡಲು ಭಂಗಾರದ ಹಾಗೇ ಇರುವದು, ಬಣ್ಣಕ್ಕೆ 3 ವರ್ಷ ಗ್ಯಾರೆಂಟಿ, ಕೊಡುವೆವು.

3 ಎಳೇ ಸರ	1 ಕ್ಕೆ			3-...
4	,,	,,	,,	4-0-0
5	,,	,,	,,	5-4-0.

ಸ್ಪಿರಿಟ್‌ಸ್ಟೌವ್ ಎಂಬ ಅಡಿಗೆಮಾಡುವ ಒಲೆ.

ಇವುಗಳನ್ನು ಬ್ರಿಟಿಷ್‌ದವರು ಹೊಸ ನಾದ ಹಿತ್ತಾಳೆಯಿಂದ ಮಾಡಿರುವರು. ಇದರಲ್ಲಿ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಬಹುದು. ಬೆರಣಿ, ಸೌದೆ, ಮುಂತಾದವುಗಳು ಹಾಕಿ ಒಲೆಯನ್ನು ಉರಿಸುವದರಿಂದಹೊಗೆ ತುಂಬಿ ಕಣ್ಣುಗಳು ಕೆಟ್ಟು ಹೋಗುವವು. ಆದರೆ ಇದರಿಂದ ಯಾವಕಷ್ಟವೂ ಇಲ್ಲ. ಸ್ವಲ್ಪ ಸೀಮೆ ಎಣ್ಣೆಯನ್ನು ಹಾಕಿ ಪಂಪುಮಾಡಿದರೆ ಸಾಕು. ಇದರಲ್ಲಿ ಎಷ್ಟು ಮಂದಿಗಾದರೂ ಅಡಿಗೆಯನ್ನು ಬಹು ಬೇಗನೆಮಾಡಬಹುದು. ಕ್ರಯ 1ಕ್ಕೆ ರೂ. 3-0-0

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ಬೆಳಕಿನಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ, ಎಣ್ಣೆ ಯಾವುದೂ ಅವಶ್ಯಕವಿಲ್ಲ ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗಲೂ ದೀಪವು ಅವಶ್ಯಕವೇ ಇರುವುದಿಲ್ಲ. ಇದರಪ್ರಕಾಶವು ಗ್ಯಾಸ್ ದೀಪಗಳ ಹಾಗೆ ೩ ಪರ್ಲಾಂಗ್‌ವರಿಗು ಬೆಳಕು ಕಾಣುವುದು. ಕ್ರಯ 1ಕ್ಕೆ ಬ್ಯಾಟ್ರಿಸಹಿತ ರೂ. 3-8-0.

ಟೋಪಾ ಎನ್ನುವ ಕೂದಲು.

ಈ ಕೂದಲು ಮುಖ್ಯವಾಗಿ ನಾಟಕದಲ್ಲಿ ಸ್ತ್ರೀ ವೇಷದಾರಿಗಳಿಗೆ ಬಹಳ ಉಪಕಾರಿಯಾದದ್ದು. ಇದನ್ನು ತಲೆಯಲ್ಲಿ ಇಟ್ಟರೆ ಸ್ತ್ರೀಯರ ತಲೆ ಕೂದಲಿನಂತೆ ಇರುವದು. ನಾಟಕದವರಿಗೆ ಎರಡು ವಿಧವಾದ ಟೋಪಾಗಳಿವೆ. ಅರ್ಧ ಮತ್ತು ಪೂರಾ ಟೋಪಾ ಇರುವವು. ತಲೆಯಲ್ಲಿ ಕೂದಲಿಲ್ಲದೆ ಬೋಡಿ ತಲೆಯುಳ್ಳರುವ ಸ್ತ್ರೀಯರು ಇದನ್ನು ಹಾಕಿಕೊಂಡರೆ ಹುಟ್ಟಿದ ಕೂದಲೆಂದೇ ಹೇಳುವರು.

ಅರ್ಧಟೋಪಾ ಕ್ರಯ 1ಕ್ಕೆ 1-4-0.
ಪೂರಾ ಟೋಪಾ „ „ 1-12-0.
ದಾಡಿ ಮೀಸೆ ಕ್ರಯ „ 1-8-0.
ಗರಿಮೀಸೆ ದಾಡಿ 1-12-0. ರಾಜಮೀಸೆ 0-12-0

ಕ್ರಾಪ್ ಕಟ್ಟರ್ ಎಂಬ ಕೂದಲು ಕತ್ತರಿಸುವ ವಿಲಾಯತಿಯ ಕತ್ತರಿ.



ಈಗಿನ ಕಾಲದಲ್ಲಿ ಪ್ರತಿಯೊಬ್ಬರೂ ಉಪಯೋಗಿಸ ಬಹುದಾದ ಈ ಕತ್ತರಿಯಿಂದ ತಲೆಯ ಕೂದಲನ್ನು ಕತ್ತರಿಸುವುದರಿಂದ ಕತ್ತರಿಯಲ್ಲಿ ಕತ್ತರಿಸಿದ ಹಾಗೆ ಅಸಹ್ಯವಾಗಿ ಕಾಣದೆ ಬಹಳಲಕ್ಷಣವಾಗಿ ಕಾಣುತ್ತೆ. ಮತ್ತು ಬೇರೊಬ್ಬರ ಸಹಾಯವಿಲ್ಲದೆತಾವೇ ಕ್ರಾಪು ಮಾಡಿಕೊಳ್ಳಬಹುದು. ಇವು ಇದಕ್ಕಾಗಿಯೇ ವಿಲಾಯತಿಯಿಂದ ತಯಾರಿಸಿ ಬಂದಿರುವವು.

ಇದರ ಬೆಲೆ ರೂ. 3-8-0.

ಅಲಾರಂ ಕೊಡುವ ಬೀಗ.

ಈ ಬೀಗಗಳು ನೋಡಲಿಕ್ಕೆ ಬೆಳ್ಳಿಯಂತೆ ಇರುವವು. ಈ ಬೀಗವನ್ನು ಹಾಕ ಬೇಕಾದರೂ, ತೆಗಿಯ ಬೇಕಾದರೂ, ಅಲಾರಂ ಶಬ್ದವಾಗುತ್ತೆ. ಕಳ್ಳತನದಿಂದ ಬೀಗ ತೆಗಿಯುವವರನ್ನು ಹಿಡಿದು ಕೊಡುವದು.

ಕ್ರಯ 1ಕ್ಕೆ 1-4-0

ದೇವತಾ ವಿಗ್ರಹಗಳ. ಪ್ರತಿಮೆಗಳು.

ಈ ವಿಗ್ರಹಗಳು ಸೀಮೆಯಲ್ಲಿ ರಬ್ಬರಿನಿಂದ ತಯಾರಿಸಲ್ಪಟ್ಟವು. ಕಾರಡು, ಲೆಟರು, ಲಗ್ನಪತ್ರಿಕೆ ಮುಂತಾದವುಗಳಿಗೆ ಒಬ್ಬರ ಸಹಾಯವಿಲ್ಲದೆ ನಾವೇ ಅಚ್ಚುಮಾಡಿಕೊಳ್ಳಬಹುದು. ಇದರಲ್ಲಿ ಕೃಷ್ಣ, ಗಣೇಶ, ರಾಮ, ಹನುಮಂತ ಮುಂತಾದ ಪ್ರತಿಮೆಗಳ ರೂಪುಗಳು ಇರುವವು. ಇದರ ಸಂಗತ ಇಂಕ್‌ಪ್ಯಾಡ್, ಇಂಕಿಬುಡ್ಡಿ, ಚಿಮ್ಮಟ ಸಹಸೇರಿದ ಸೆಟ್ಟು ಕ್ರಯ 1ಕ್ಕೆ ರೂ. 1-8-0.

ಜ್ವರದ ಮಾತ್ರೆ.

ಪ್ರತಿದಿನವೂ ಬರುವಜ್ವರ, ದಿನಬಿಟ್ಟು ದಿನ ಬರುವಜ್ವರ, ನಾಲ್ಕರಜ್ವರ, ಮಲೇರಿಯಾಜ್ವರ, ಸನ್ನಿಪಾತಜ್ವರ, ಹೊಟ್ಟೆಯಲ್ಲಿ ಜ್ವರದ ಗಡ್ಡೆ ಇರುವದು ಮುಂತಾದ ಎಲ್ಲಾತರದ ವಿಷಜ್ವರಗಳನ್ನು ಗುಣ ಮಾಡುವದು. ಕ್ರಯ ಬುಡ್ಡಿ 1ಕ್ಕೆ 1-0-0

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿ ವಿಲಾಸ ವಟಿ.

ಈ ಅದ್ಭುತವಾದ ಮಾತ್ರೆಯನ್ನು ಮಲಗುವದಕ್ಕೆ ಒಂದು ಗಂಟೆಮುಂಚಿತವಾಗಿ ಹಾಲು ಅಥವ ನೀರಿನಲ್ಲಿ ತೆಗದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವದು. ಔಷಧವನ್ನು ತಿಂದುಗಂಟೆ ಕಾಲತಡೆದು ಹೆಂಗಸಿನಲ್ಲಿ ಮಲಗಿದರೆ ಬೇಗನೆ ಸ್ಖಲನವಾಗದೆ ಶಕ್ತಿಯನ್ನು ಆನಂದವನ್ನು ಕೊಡುವದು. ಇದರ ಅಪಾರವಾದ ಶಕ್ತಿಯನ್ನು ಇಲ್ಲ ವಿವರವಾಗಿ ತಿಳಿಸಲು ಆಗದು, ತರಿಸಿ ಪರೀಕ್ಷಿಸಿದರೆ ಸಂತೋಷಪಡುವಿರಿ.

ಕ್ರಯ 16 ಮಾತ್ರೆ ಡಬ್ಬಿ 1ಕ್ಕೆ 1-8-0

ಸಾಂಡಾಆಯಿಲ್ ನಪುಂಸಕತ್ವಹಾರಿ ತೈಲವು.

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯರ ದೂಷಿತ ವೀರ್ಯವು ಗರ್ಭಕಾರಕವಾಗಲಾರದು. ಅತ್ಯಂತ ಮೈಥುನದಿಂದಲೂ ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕೂತುಕೊಂಡೇ ಇರುವದರಿಂದಲೂ, ಹಸ್ತಪ್ರಯೋಗಾದಿಗಳಿಂದಲೂ, ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು. ಕೆಲವರು ಬಾಲ್ಯದಲ್ಲಿಯೇ ಇಂಥಾವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ವ್ಯಾಧಿಯನ್ನು ಹೆಚ್ಚು ಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಅಸಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗ ಕ್ಷೇಮಸ್ಕರವಾಗಿ ಪ್ರಪಂಚದಲ್ಲಿಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ 7 ದಿನಗಳು ಸವರುವದರಿಂದ ಗುಣವಾಗುವದು ಮತ್ತು ಲಿಂಗವುಬಲಹೀನವಾಗಿದ್ದರೂ ದೃಢವಾಗುವದು.

ಕ್ರಯ ಸೀಸೆ 1ಕ್ಕೆ 1-4-0

ಅಮೃತ ಲೇಹ.

ಮಾನವ ಶರೀರದಲ್ಲಿ ಶುದ್ಧವಾದ ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಯಾವದೂ ಇಲ್ಲ. ವಿಧವಿಧವಾದ ದುರಭ್ಯಾಸಗಳಿಂದಲೂ, ಶಾರೀರಕ ಮತ್ತು ಹಸ್ತಪ್ರಯೋಗಾದಿಗಳಿಂದಲೂ, ಶುದ್ಧವಾದ ಧಾತುವನ್ನು ಚಿಕ್ಕಂದಿನಲ್ಲಿಯೇ ಕೆಡಿಸಿಕೊಂಡು ಅಪಾಯಕ್ಕೆ ಗುರಿಯಾಗುತ್ತಿರುವರು. ಈಲೇಹವನ್ನು ಸೇವಿಸುವದರಿಂದ ದೀರ್ಘಕಾಲದ ನರಗಳ ಅಶಕ್ತಿಯನ್ನು ಹೋಗಲಾಡಿಸಿ ಶರೀರಕ್ಕೆ ಪುಷ್ಟಿಯನ್ನೂ, ಕಾಂತಿಯನ್ನೂ, ಶಕ್ತಿಯನ್ನೂ, ಉಂಟು ಮಾಡುವದು. ಪ್ರಮೇಹ, ಪರಂಗಿರೋಗ, ಜ್ವರ ಮುಂತಾದ ರೋಗಗಳಿಂದ ಆಗಲೇ ಎದ್ದವರು ಇದನ್ನು ಸೇವಿಸಿದರೆ ತುಂಬಾಗುಣ ಕೊಡುವದು ಮತ್ತು ಧಾತುವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈ ಕಾಲು ಮತ್ತು ಸೊಂಟದಲ್ಲ ನೋವು ಇದ್ದರೂ ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವುಕೆಟ್ಟು ಹೋಗಿದ್ದರೂ ಈ ಲೇಹವನ್ನು ಸೇವಿಸುವದರಿಂದ ಗುಣಪಡಿಸಿ ಶರೀರವನ್ನು ಚೆನ್ನಾಗಿಡುವದು. ಮತ್ತು ವಿಶೇಷ ರತಿ ವಿಲಾಸದಿಂದಾಗಲಿ, ಮತ್ಯಾವ ಕಾರಣಗಳಿಂದಾಗಲಿ, ಶುದ್ಧವಾದ ಧಾತುವನ್ನು ಕೆಡಿಸಿಕೊಂಡಿದರೂ ಮತ್ತು ನಪುಂಸಕತ್ವವು ಎಷ್ಟುದಿವಸದ್ದಾದರೂ ಈ ಲೇಹವನ್ನು ಸೇವಿಸುವದರಿಂದ ಬಹು ಶೀಘ್ರವಾಗಿ ಗುಣಪಡಿಸಿ, ಶಾಸ್ವತವಾದ ಪುರುಷತ್ವವುಂಟಾಗುವದು. ಎಲ್ಲರೂ ಸೇವಿಸಬಹುದು. ಬಹು ರುಚಿಯಾಗಿರುವದು. ಈ ಅಮೃತ ಲೇಹಕ್ಕೆ ಬೆಳ್ಳಿ, ಭಂಗಾರ, ಮತ್ತು ತಾಂಬ್ರ ಭಸ್ಮವೂ ಎಷ್ಟು ಮಾತ್ರವೂ ಸಮಾನವಾಗಲಾರವು. ಬಹಳ ಹಳೇವ್ಯಾಧಿಯಾಗಿದ್ದರೆ ಎರಡು ಡಬ್ಬಿಗಳನ್ನು ಸೇವಿಸಿದರೆ ಸಂಪೂರ್ಣ ಗುಣ ಕೊಡುವದು.

ಕ್ರಯ ಡಬ್ಬಿ 1ಕ್ಕೆ ರೂ. 2-0-0

ಪ್ರಮೇಹನಿವಾರಣ ಭಸ್ಮ.

ಅನೇಕರು ಚಿಕ್ಕ ಪ್ರಾಯದಲ್ಲಿ ಕೆಟ್ಟ ಸಹವಾಸಕ್ಕೆ ಸಿಕ್ಕಿ ಮರಣಾಂತರವೂ ಮರೆಯದಂತಿರುವ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಪಸ ನಮ) ಬರುತ್ತಿದ್ದರೂ ಬಿಳುಪು ಹೋಗುತ್ತಿದ್ದರೂ ಉರಿಯುತ್ತಿದ್ದರೂ 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 4, 5 ದಿನಗಳು ಸೇವಿಸುವುದರಿಂದ ಕೆಂತಿತ ಗುಣವಾಗುವದು. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಕ್ರಯ ಡಬ್ಬಿ 1ಕ್ಕೆ 1-4-0

ಇಂಗ್ಲೀಷ್ ಡಾಕ್ಟರುಗಳು ವೃಧುವಾದ ರಬ್ಬರಿನಲ್ಲಿ ತಯಾರಿಸಲ್ಪಟ್ಟ ಸುಖಾನಂದ ಎಂಬ ಮರ್ಮದ ಚೀಲವು.

ಈ ಪ್ರಪಂಚದಲ್ಲಿ ಅನೇಕರು (ಮೋಹ) ಕಾಮಕ್ಕೆ ಸಹಿಸಲಾರದೆ ಕೆಟ್ಟಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ, ಪರ್ಮ, ಮೂಸುಕು, ಭಗೇಂದ್ರಿಯ ಧಾತು ಹೋಗವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥಾವರು ಎಷ್ಟು ಹಣವನ್ನು ಖರ್ಚು ಮಾಡಿದಾಗ್ಯೂ ಪ್ರಯೋಜನವಿಲ್ಲದೆ, ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾವ್ಯಾಧಿಗಳು ಯಾವವೂ ಸೇರದಂತೆಇಂಗ್ಲೀಷ್ ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದಲ್ಲದೆ ಪ್ರಪಂಚದ ಸುಖವನ್ನು ಸಹ ಬಹುಸಂತೋಷದಿಂದ ಕಳೆಯಬಹುದು.

ಗಂಡಸರದು ಚೀಲ 1ಕ್ಕೆ 1-4-0.
ಹೆಂಗಸರದು ಚೀಲ 1ಕ್ಕೆ 3-4-0.

ಇಂಗ್ಲೀಷ್ ಹೇರ್ ಡಿಸ್ಪ್ಯಾಯರ್ ಸೋಪ್.



ಈ ಸೋಪು ವಿಲಾಯತಿಯಲ್ಲಿ ತಯಾರಾದದ್ದು. ಶರೀರದಯಾವ ಭಾಗದಲ್ಲಿ ಯಾದರೂ ಕೂದಲನ್ನು ತೆಗಿಯ ಬೇಕಾದರೆ, ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವತೊಂದರೆಯು ಇಲ್ಲದೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಕೂದಲನ್ನು ಒಂದೇ ಒಂದು ನಿಮಿಷದಲ್ಲಿ ತೆಗದುಬಿಡುವದು.

ಕ್ರಯ 3 ಸಾಬೂನುಗಳ ಪೆಟ್ಟಿ 1ಕ್ಕೆ 1-4-0.

ಮದನ ಕೋಲಾಹಲ ಧಾತುವೃದ್ಧಿ ಮಾತ್ರೆಗಳು.

ಮಾನವ ಶರೀರದಲ್ಲಿ ಶುದ್ಧವಾದರಕ್ತವನ್ನೂ ಮತ್ತು ಧಾತುವನ್ನು ರಕ್ಷಿಸಿಕೊಳ್ಳುವದಕ್ಕಿಂತ ಮೇಲಾದದ್ದು ಬೇರೊಂದಿಲ್ಲ. ಈಗಿನ ಕಾಲದಲ್ಲಿ ಅನೇಕರು ಮೋಹಕ್ಕೆ ತಾಳಲಾರದೆಕೆಟ್ಟ ಸಹವಾಸಕ್ಕೆ ಸಿಕ್ಕಿ ಅಂದರೆ ಹಸ್ತ ಪ್ರಯೋಗದಿಂದಲೂ, ಹೆಂಗಸರ ಸಹವಾಸದಿಂದಲೂ, ಮತ್ತು ಇನ್ನೂ ಅನೇಕತರದ ಕೆಟ್ಟಚಾಲುಗಳಿಂದಲೂ ಶರೀರವನ್ನು ಕೆಡಿಸಿಕೊಂಡು ಪ್ರಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ವ್ಯಸನಕ್ಕೆ ಗುರಿಯಾಗಿರುವರು ಮತ್ತು ಇನ್ನು ಆಗುತ್ತಲೆ ಇರುವರು. ಇವರ ಉಪಯೋಗಕ್ಕಾಗಿ. ಈ ಮದನ ಕೋಲಾಹಲ ಧಾತುವೃದ್ಧಿ ಗುಳಿಗೆಗಳನ್ನು ಸೇವಿಸುವುದರಿಂದ ಸೊಂಟದನೋವನ್ನು ಕೈಕಾಲುಗಳ ನೋವನ್ನು ತಕ್ಷಣದಲ್ಲಿಹೋಗಲಾಡಿಸುವದು. ಧಾತು ಹೋಗುತ್ತಿದ್ದರೂ, ಸ್ವಪ್ನೇಂದ್ರಿಯ ವಾಗುತ್ತಿದ್ದರೂ ಕೂತಲೇ ನಿಲ್ಲಿಸುವದು. ಈಮದನ ಕೋಲಾಹಲ ಮಾತ್ರೆಗಳನ್ನು ಸೇವಿಸುವದರಿಂದ ಮೇಲ್ಕಂಡ ವ್ಯಾಧಿಗಳನ್ನು ಗುಣಮಾಡುವದಲ್ಲದೆ ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೇಖರಿಸುವದು ಮತ್ತು ಮುಖಕ್ಕೆ ಕಾಂತಿಯನ್ನುಂಟುಮಾಡಿ ಹಸನ್ಮುಖಗಳನ್ನಾಗಿ ಮಾಡುವದು. ಈ ಮಾತ್ರೆಗಳನ್ನು ಅನೇಕ ವಿಧವಾದ ವನಸ್ಪತಿಯ ಮೂಲಿಕೆಗಳಿಂದಬೆಳ್ಳಿ ಭಂಗಾರದ ಭಸ್ಮವನ್ನು ಸೇರಿಸಿ ತಯಾರಿಸಿದೆ. ಈ ಮದನ ಕೋಲಾಹಲಮಾತ್ರೆಗಳನ್ನು ಸೇವಿಸಿ ಶರೀರದ ಎಲ್ಲಾವ್ಯಾಧಿಗಳನ್ನು ಹೋಗಲಾಡಿಸಿಕೊಂಡು ನಂತರ ರತಿಸುಖಕ್ಕೆ ಸೇರಿದರೆ ಪ್ರಪಂಚದ ಸುಖವನ್ನು ಬಹು ಚೆನ್ನಾಗಿ ಕಳೆಯುವದಲ್ಲದೆ ಹುಟ್ಟುವ ಮಕ್ಕಳೂ ಬಾಯಪುಷ್ಟವಾಗುವವು. ಈ ಮಾತ್ರೆಗಳ ವಿಷಯದಲ್ಲಿ ಬಹಳವಾಗಿಬರೆದು ತಿಳಿಸಲು ಆಗದು. ಬೆಳ್ಳಿ, ಭಂಗಾರ ಮತ್ತು ಸಾಚಾಮುತ್ತಿನ ಭಸ್ಮಗಳು ಈ ಮಾತ್ರೆಗಳಿಗೆ ಎಷ್ಟುಮಾತ್ರವೂ ಸಮನಾಗಲಾರವು.

ಕ್ರಯ ಡಬ್ಬಿ 1ಕ್ಕೆ ರೂ. 1-8-0.

ಮರ್ಮ ಶಾಸ್ತ್ರ.

ಈಪುಸ್ತಕವು ಹಿಂದೆ ಸಂಸ್ಕೃತ ಪ್ರೆಂಚ್ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಬಹು ಪ್ರಯಾಸದಿಂದ ಸಂಪಾದಿಸಿ ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಕನ್ನಡಭಾಷೆಯಲ್ಲಿ ಚಿತ್ರಪಟಗಳ ಸಹಿತ ಥಳಥಳಿಸುವ ಕಾಗದದಲ್ಲಿ ಮುದ್ರಿಸಿರುತ್ತೆ. ಈಪುಸ್ತಕದಲ್ಲಿ ದಂಪತಿಗಳಿಗೆ ಬೇಕಾದ ಎಲ್ಲಾ ಮರ್ಮರಹಸ್ಯಗಳು, ಸ್ತ್ರೀಧರ್ಮನೀತಿ, ಸ್ತ್ರೀಪುರುಷರ ಭೇದಗಳು, ಸ್ತ್ರೀಯರ ಲಕ್ಷಣಗಳು, ದಂಪತಿಗಳು, ಅನ್ಯೋನ್ಯವಾಗಿರುವದಕ್ಕೆ ಬೇಕಾದ ರಹಸ್ಯಗಳು, ಇನ್ನೂ ಅನೇಕ ಮರ್ಮ ವಿಷಯಗಳು ತುಂಬಿರುವವು. ಇಂಥಾ ಅಪೂರ್ವವಾದ ಪುಸ್ತಕವನ್ನು ಒಬ್ಬರು ತರಿಸಿ ನೋಡಿದರೆ ಅದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವರು ಸಂದೇಹವಿಲ್ಲ.

ಕ್ರಯ ಪುಸ್ತಕ 1ಕ್ಕೆ ರೂ. 1-8-0.

ಬ್ರಿಟಿಷ್ ಟ್ರೇಡಿಂಗ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. 1223 ಮದರಾಸು.

ಸ್ಫುಟ ವಿಚಾರಗಳು.

ಸರಕಾರವೆಲ್ಲಿ?

ದಿನಂಪ್ರತಿಯೂ ಒಂದಲ್ಲ ಒಂದು ಕಡೆಯಲ್ಲಿ ಜಾತೀಯ ಅತ್ಯಾಚಾರಗಳು ಎಡಬಿಡದೆ ಆಗುತ್ತಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತಿದೆ. ರಾಜಕೀಯ ದಂಗೆಗಳನ್ನೂ, ಸಾಮಾನ್ಯ ಕಾರ್ಯಗಳನ್ನೂ ನಿಲ್ಲಿಸಬಲ್ಲ ಈ ಸರಕಾರಕ್ಕೆ ಜಾತೀಯ ಅತ್ಯಾಚಾರಗಳನ್ನು ನಿಲ್ಲಿಸಲಾಗುವುದಿಲ್ಲವೆಂದರೆ ಯಾರೂ ನಂಬಲಾರರು. ಪ್ರತಿ ದಿನವೆಂಬಂತೆ ದೈನಿಕ ಪತ್ರಿಕೆಗಳು ಈ ಅತ್ಯಾಚಾರಗಳ ದುಃಖಮಯ ಘಟನೆಗಳನ್ನು ಕೊಡುತ್ತಿವೆ. ಪಂಜಾಬದ ಸೈದಪೂರ ಎಂಬ ಹಳ್ಳಿಯಲ್ಲಿ ೩೦೦ ಪಠಾಣರು ಕೂಡಿ ೩೫ ಹಿಂದೂ ಅಂಗಡಿ ಮನೆಗಳನ್ನು ಸುಟ್ಟು ಹಾಕಿ ಇಬ್ಬರು ಹಿಂದೂಗಳನ್ನು ಕೊಂದು, ಕಳವುಮಾಡಿ ಹೋದರು. ಲಾಹೋರು ಹಿಂದೂ ಮಹಾಸಭೆಯ ಅಧ್ಯಕ್ಷರು ರಾವಲ್ ಪಿಂಡಿಗೆ ಹೋಗಿ ವಿಚಾರಿಸಿ ಹೀಗೆ ಹೇಳುವರು:—

೧೪ನೇ ತಾರೀಕಿನ ಸಾಯಂಕಾಲಕ್ಕೆ ಕೆಲವು ಮಹಮ್ಮದೀಯರು ಸಿಂಗ್ ಸಭೆಯ ಹೊರಗಡೆ ಬಂದು ಅಲ್ಲಿ ಬರುವವರಿಗೆ ತೊಂದರೆ ಕೊಟ್ಟರು. ಆ ಕಾರಣದಿಂದ ಸಿಖ್ಖರಿಗೂ ಮಹಮ್ಮದೀಯರಿಗೂ ಕಲಹವಾಯಿತು. ಆ ಮೇಲೆ ಆ ಮಹಮ್ಮದೀಯರೂ ಇನ್ನೂ ಕೆಲವು ಮಹಮ್ಮದೀಯರೂ ಕೂಡಿ ಅಂಗಡಿಗಳಿಗೆ ಬೆಂಕಿ ಇಟ್ಟರು. ಪೆಟ್ರೋಲು ಬಹಳ ಉಪಯೋಗಿಸಲ್ಪಟ್ಟಿದ್ದಿತೆಂದು ತೋರುವುದು. ಅಂಗಡಿಗಳ ಮಾಲಿಕರಿಗೆ ಪೋಲೀಸರು ಅವರವರ ಸಾಮಾನುಗಳನ್ನು ತೆಗೆಯಲು ಬಿಡಲಿಲ್ಲ. Fire Brigadeನ್ನು ಯಾರೂ ತರಿಸಲಿಲ್ಲ. ಇದರಿಂದ ಎಲ್ಲವೂ ಸುಟ್ಟುಹೋಗಿ ಬಹಳ ನಷ್ಟವಾಯಿತು. ಕೆಳಪೋಲಿಸಿನವರೂ ಅತ್ಯಾಚಾರಿಗಳೊಡನೆ ಕೂಡಿದ್ದರಾಗಿ ಕೆಲವರು ಹೇಳುತ್ತಿದ್ದರು.

ಇದೇ ರೀತಿಯಲ್ಲಿ ಹಲವು ಕಡೆಗಳಲ್ಲಿ ಪೋಲಿಸರ ವರ್ತನದ ವಿಷಯವಾಗಿ ವರ್ತಮಾನಗಳಿವೆ. ಕೆಲವು ಕಡೆಗಳಲ್ಲಿ ಸರಕಾರಿ ಅಧಿಕಾರಿಗಳಿಗೆ ತತ್ಪೂರ್ವದಲ್ಲಿಯೇ ಕೆಲವರು ಮುಂಜಾಗ್ರತೆ ಕೊಟ್ಟರೂ, ಅತ್ಯಾಚಾರಗಳು ನಡಿಯುವ ವರೆಗೆ ಅಧಿಕಾರಿಗಳು ಪ್ರಯತ್ನಗಳನ್ನು ತೆಗೆದುಕೊಂಡಿಲ್ಲ. ಆದುದರಿಂದ ಸ್ವಭಾವತಃ ಅಧಿಕಾರಿಗಳು ಈ ತರದ ಅತ್ಯಾಚಾರಗಳ ಜವಾಬ್ದಾರಿಯನ್ನು ತೆಗೆದುಕೊಳ್ಳಲೇ ಬೇಕಾಗುವುದು. ಕೋಹತ್ತಿನ ಭಯಂಕರ ಘಟನೆಗಳಿಂದ ಈ ವರೆಗಿನ ಅಸಂಖ್ಯ ಅತ್ಯಾಚಾರಗಳ ಇತಿಹಾಸವನ್ನು ಸೂಕ್ಷ್ಮವಾಗಿ ವಿಚಾರಿಸಿದರೆ ಸರಕಾರದ ಕರ್ತವ್ಯಪರಾಙ್ಮುಖತೆಯನ್ನೇ ಅನುಮಾನಿಸಬೇಕಾಗುತ್ತದೆ.

ಫ್ರಾನ್ಸಿಗೂ ಒಬ್ಬ "ಮುಸ್ಸೊಲೀನಿ"ಯು ಬೇಕೆ?

ಇಟಲಿಯ ರಾಜನೀತಿಯು ಬಹಳ ಹೀನಸ್ಥಿತಿಯಲ್ಲಿದ್ದ ಸಮಯದಲ್ಲಿ ಮುಸ್ಸೊಲೀನಿಯು ಧೈರ್ಯದಿಂದ ಮುಂದೆ ಬಂದು, ಫೆಸಿಸ್ಟ ಪಕ್ಷದ ಮುಖಂಡನಾಗಿ, ರಾಜ್ಯಾಧಿಕಾರವನ್ನು ತನ್ನ ಕೈಯಲ್ಲಿ ತೆಗೆದುಕೊಂಡು, ಪಾರ್ಲಿಮೆಂಟು ತನ್ನ ಮೇಲೆ ಹೊರಿಸಬಹುದಾದ ಎಲ್ಲಾ ನಿರ್ಬಂಧಗಳನ್ನೂ ಕಡಿದುಹಾಕಿ, ಸ್ವತಂತ್ರ ಅಧಿಕಾರದಿಂದಲೂ ಸ್ವೇಚ್ಛೆಯಿಂತೆಯೂ ಸರಕಾರವನ್ನು ರಚಿಸಿದನು. ಈ ದಿನ ಫ್ರಾನ್ಸಿನಲ್ಲಿಯೂ ಮುಸ್ಸೊಲೀನಿಯಂತಹ ಸ್ವೇಚ್ಛಾಪ್ರವರ್ತಕ ಶಕ್ತಿಮಾನನಾದ ಧುರೀಣನ ಆವಶ್ಯಕತೆಯುಂಟಾಗಿದೆ. ಇಟಲಿಯಲ್ಲಿ ಮುಸ್ಸೊಲೀನಿಯು ಬರುವಾಗ ರಾಜಕೀಯ ಪರಿಸ್ಥಿತಿಯು ಅಲ್ಲಿ ಹೇಗಿದ್ದಿತೊ, ಫ್ರಾನ್ಸಿನ ಪರಿಸ್ಥಿತಿಯೂ ಅಷ್ಟಕ್ಕೇನೇ ಬಂದದೆಯಾಗಿ ಫ್ರಾನ್ಸಿನ ಪತ್ರಿಕೆ ಅಭಿಪ್ರಾಯಪಡುತ್ತಿವೆ. ಈಗ ಒಂದು ವರ್ಷದೊಳಗೆ ಐದಾರು ಬಾರಿ ಸರಕಾರಗಳು ಹೋಗಿ ಸರಕಾರಗಳಾದವು. ಫ್ರಾನ್ಸಿನ ಆರ್ಥಿಕ ಪರಿಸ್ಥಿತಿಯು ಬಹಳ ಕೆಟ್ಟುಹೋದುದೇ ಇದಕ್ಕೆ ಕಾರಣವಿದೆ. ಪುನಃ ಸರಕಾರವನ್ನು ರಚಿಸಲೆಂದರೆ, ಬ್ರಿಯಂಡ, ಪೊಯ್ನಕಾರೆ, ಹೆರಿಯಟ್ ಪ್ರಭೃತಿ ಪ್ರತಿಭಾಶಾಲಿಗಳಾದ ಫ್ರೆಂಚ ಧುರೀಣರೇ ಅಸಮರ್ಥತೆಯನ್ನು ಸೂಚಿಸುತ್ತಿರುವರು, ಸರಕಾರದ ಆರ್ಥಿಕ ವಿಭಾಗದ ಮಂತ್ರಿಯಾಗುವವರೇ ಇಲ್ಲವಾಗಿದ್ದಾರೆ. ಒಂದು ಬಾರಿ ಬ್ರಿಯಂಡ್ ಸರಕಾರದಿಂದ ತಿರಸ್ಕೃತರಾಗಿದ್ದ ಕೆಯ್ಲೊ ಎಂಬವರು ಪುನಃ ಈ ಮಂತ್ರಿಪದವಿಗಾಗಿ ಕರೆಯಲ್ಪಟ್ಟಿರುವರು. ಇವರು ಆರ್ಥಿಕ ಶಾಸ್ತ್ರದಲ್ಲಿ, ಮುಸ್ಸೊಲೀನಿಯಂತೆ ಸ್ಥಿರನಿರ್ಧಾರವುಳ್ಳವರಾಗಿದ್ದು, ಪ್ರಾಯಶಃ ಪಾರ್ಲಿಮೆಂಟಿನಲ್ಲಿ ಅಷ್ಟೇ ಪ್ರಬಲತೆಯಿಂದ ಅಧಿಕರಿಸಬಹುದು. ಫ್ರಾನ್ಸಿನ ಒಳಗಿನ ಕಷ್ಟಗಳು ಇನ್ನೂ ತೀರಿದಂತೆ ಕಾಣುವುದಿಲ್ಲ. ಪ್ರಜಾಸತ್ತಾಧಿಕಾರಕ್ಕೂ ಒಂದು ಮೇರೆಯಿದೆ ಎಂಬುದನ್ನು ಈ ಘಟನೆಯು ತೋರಿಸುತ್ತಿದೆ. ಅಲ್ಲದೆ ಪೋಲೆಂಡ್, ಇಟಲಿ, ಪೋರ್ಚುಗಲ್, ಸ್ಪೈಯಿನ್, ಗ್ರೀಸ ಮೊದಲಾದ ರಾಷ್ಟ್ರಗಳ ವರ್ತಮಾನ ಇತಿಹಾಸವೂ ಇದನ್ನೆ ಸುಸ್ಪಷ್ಟವಾಗಿ ತೋರಿಸುವುದು.

ಶಾಂತಿಸಾಧಕರು.

ರಾಷ್ಟ್ರಗಳ ಸ್ವಾರ್ಥವು ಹೆಚ್ಚಾಗುತ್ತಾ ಬಂದು ಯುದ್ಧದ ಸಂಭವವು ಹೆಚ್ಚಾಗುತ್ತಾ ಬಂದ ಹಾಗೆ ಶಾಂತಿಸಾಧಕರೂ ವಿಚಿತ್ರ ವೇಷದಿಂದ ತಮ್ಮ ಆಶಯವನ್ನು ಸಾಧಿಸಲು ಯತ್ನಿಸುವರು. ಇಂಗ್ಲೆಂಡಿನಲ್ಲಿ ಕೆಲವು ಸ್ತ್ರೀಯರು ದೂರದ ಹಳ್ಳಿಗಳಿಂದ ಶಾಂತಿಸಾಧನೆಯ ಹೆಸರಲ್ಲಿ ಕೈಯೊಳಗೆ ಪತಾಕೆ ಹಿಡಿದು ನಡೆಯುತ್ತಾ ಮೆರವಣಿಗೆಯಾಗಿ ಲಂಡನನ್ನು ಸೇರುತ್ತಿರುವರು. ಕೆಲವು ಪುರುಷರು ಮೆಶಿನ್ ಗುಂಡುಗಳನ್ನೂ, ಯುದ್ಧದ ಗಾಡಿಗಳನ್ನೂ ಹತ್ತಿರ ತೆಗೆದುಕೊಂಡು, ಯುದ್ಧದ ಪೋಷಾಕನ್ನು ತೊಟ್ಟುಕೊಂಡು "ಇಟೊರೊಡೊ" ಎಂಬ ಹೆಸರಿನ ಹಡಗಿನಲ್ಲಿ ಪ್ರಯಾಣಮಾಡಿ ಎಲ್ಲೆಲ್ಲಿಯೂ ಸಂಚರಿಸಿ ಶಾಂತಿಸಾಧನೆಯನ್ನು ಮಾಡುತ್ತಿರುವರು. ಇತಿಹಾಸದ ಮತ್ತು ರಾಜನೀತಿಜ್ಞರ ದೃಷ್ಟಿಯಲ್ಲಿ ಇವರ ಈ ಚಳವಳವು ಸಾಮಾನ್ಯವಾಗಿ ತೋರಿ ತಿರಸ್ಕೃತವಾದರೂ, ಲೋಕಹಿತಕರ್ತನ ದೃಷ್ಟಿಯಲ್ಲಿ ಈ ಉದಾರ ಹೃದಯಿಗಳಾದ ಶಾಂತಿಸಾಧಕರು ಪ್ರಮುಖಸ್ಥಾನವನ್ನು ಹೊಂದದಿರರು. ಪ್ರಕೃತ ಲೋಕದಲ್ಲಿ ನ್ಯಾಯವಿಚಾರಣೆಯ ಚಿಹ್ನೆಯು ತೋರುವುದಿಲ್ಲ. ರಾಷ್ಟ್ರಗಳ ಅಸಂಖ್ಯ ಅನ್ಯಾಯಕೃತ್ಯಗಳು ಗೌರವಿತವಾಗಿ ಪುರಸ್ಕರಿಸಲ್ಪಡುತ್ತಿವೆ. ಲೋಕದ ಬಳಲುವಿಕೆಯನ್ನು ನೋಡಿ ದುಃಖಿಸುವ ಮೃದುಹೃದಯವುಳ್ಳವರ ಉಚ್ಚಸ್ವರವು ಲೋಕದ ಕಠಿಣವಾದ ವಾತಾವರಣದಲ್ಲಿ ಅನ್ಯಾಯಗಳ ಗರ್ಜನೆಯಲ್ಲಿ ಮುಳುಗಿಹೋಗುತ್ತಿದೆ.

ಪ್ರಾಥಮಿಕ ಶಾಲೆಗಳಲ್ಲಿ ಕೈಗಾರಿಕೆಯ ಶಿಕ್ಷಣ.

ಈಗಿನ ತರದ ವಿದ್ಯಾಭ್ಯಾಸವು ಮಕ್ಕಳ ಮುಂದಿನ ಜೀವನಕ್ಕೆ ಯಾವ ಉಪಾಯವನ್ನೂ ಕಲ್ಪಿಸುವುದಿಲ್ಲವೆಂದೂ, ಬರೇ ಸಂಖ್ಯೆ ಮತ್ತು ಅಕ್ಷರಗಳ ಜ್ಞಾನವು ಸಂಸಾರ ಯಾತ್ರೆಗೆ ಸಹಕಾರಿಯಾಗದೆಂದೂ, ಪ್ರತಿಯಾಗಿ ಮಕ್ಕಳ ಈ ತರದ ಅಭ್ಯಾಸದಿಂದ ಕೈಗೆಲಸಗಳ ಮೇಲೆ ಅವರಿಗೆ ತಾತ್ಸಾರ ಉಂಟಾಗಿ, ಭಾವೀ ಜೀವನವು ಕಷ್ಟಪ್ರದವಾಗುವುದೆಂದೂ, ಹುಡುಗರಿಗೆ ಆ ಕಾರಣದಿಂದ ಕೈಗಾರಿಕೆ ಶಿಕ್ಷಣವನ್ನು ಕೊಡಬೇಕೆಂದೂ, ಹಲವರ ಅಂಬೋಣವಿದೆ. ಇದರಲ್ಲಿ ಬಹಳ ತಥ್ಯವಿದೆಯೆಂದು ಈಗಿನ ಪ್ರಾಥಮಿಕ ಶಾಲೆಗಳಿಂದ ಹೊರಬಂದ ಹುಡುಗರ ಜೀವನ ಕ್ರಮವನ್ನು ಲಕ್ಷಿಸಿದರೆ ತಿಳಿಯುವುದು. ಈ ಬಗ್ಗೆ ಶಾಲೆಗಳಲ್ಲಿ ಬಡಗಿ, ಕಬ್ಬಿಣ ಕೆಲಸ, ನೇಯುವುದು, ನೂಲುವುದು ಇತ್ಯಾದಿ ಕೈಗಾರಿಕೆಗಳ ಶಿಕ್ಷಣವನ್ನು ಕೊಡುವ ಏರ್ಪಾಡಾಗಬೇಕೆಂದು ಅನೇಕರು ಹೇಳುತ್ತಿರುವರು. ಆ ಅಭಿಪ್ರಾಯಕ್ಕೆ ಸರಿಯಾಗಿ ಮದ್ರಾಸ ಸರಕಾರವೂ ಒಂದು ಶಿಕ್ಷಣ ಕ್ರಮವನ್ನೇರ್ಪಡಿಸಲು ನಿರ್ಣಯಿಸಿದೆ. ಪಂಜಾಬಿನಲ್ಲಿ ಕೃಷಿ, ಬಡಗಿ ಮತ್ತು ಕಮ್ಮಾರ ಕೆಲಸಗಳನ್ನೆಲ್ಲ ಪ್ರಾಥಮಿಕ ಅಥವಾ ಮಾಧ್ಯಮಿಕ ಶಾಲೆಗಳಲ್ಲಿ ಕಲಿಸುವರಾಗಿಯೂ ಅದರ ಕ್ರಮದಂತೆ ಇಲ್ಲಿಯೂ ಆ ತರದ ಶಿಕ್ಷಣವನ್ನು ಕೊಡುವ ಏರ್ಪಾಡಿನ ವಿಷಯ ಆಲೋಚಿಸಲಾಗುವುದೆಂದೂ ಸರಕಾರದ ನಿರ್ಣಯವಿದೆ. ಕೃಷಿ ವಿಷಯದಲ್ಲಿ ಸರಕಾರವು ಹೆಚ್ಚು ಚಿಂತಿಸಿಯದೆ. ಕೃಷಕರೊಳಗಿನಿಂದಲೇ ಕೃಷಿ ಬಗ್ಗೆ ಒಬ್ಬ ಉಪಾಧ್ಯಾಯನನ್ನು ನೇಮಿಸಬೇಕಾಗಿ ಅವರ ಆಲೋಚನೆಯಿದೆ. ಅಲ್ಲದೆ ಇಂತಹ ಶಿಕ್ಷಣಕ್ಕೆ ಪ್ರಾಥಮಿಕ ಶಾಲೆಗಳಿಗಿಂತಲೂ ಮಾಧ್ಯಮಿಕ ಶಾಲೆಗಳೇ ಯೋಗ್ಯವೆಂದು ವಿದ್ಯಾಖಾತೆಯ ಮಂತ್ರಿಗಳ ಅಭಿಪ್ರಾಯವಾಗಿದೆ.

ಆದರೆ ಈ ರೀತಿಯಲ್ಲಿ ಕೈಗೆಲಸದ ಶಿಕ್ಷಣದ ಕ್ರಮವನ್ನು ರಚಿಸಲು ಆಲೋಚಿಸುವಾಗ ಇತರ ಕೆಲವು ವಿಷಯಗಳ ಕಡೆಗೂ ಲಕ್ಷ್ಯಕೊಡುವುದು ಅಗತ್ಯವಿದೆ. ಹಳ್ಳಿಗಳಲ್ಲಾಗಲಿ, ಪಟ್ಟಣಗಳಲ್ಲಾಗಲಿ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಸೇರುವ ವಿದ್ಯಾರ್ಥಿಗಳು ಎಲ್ಲರೂ ಕೃಷಕರಾಗಲಿ, ಬಡಗಿಗಳಾಗಲಿ, ಕಮ್ಮಾರರಾಗಲಿ ಆಗಿರುವುದಿಲ್ಲ. ಇಲ್ಲವೆ ಎಲ್ಲರನ್ನೂ ಕೃಷಕರಾಗಿ ಅಥವಾ ಬಡಗಿಗಳಾಗಲಿ ಅಥವಾ ಕಮ್ಮಾರರಾಗಲಿ ಮಾಡಲಾಗುವುದಿಲ್ಲ. ಅಲ್ಲದೆ, ಇಂತಹ ಪ್ರಾಥಮಿಕ ಶಾಲೆಗಳಲ್ಲಿ ಹುಡುಗರಿಗೆ ಈ ಶಿಕ್ಷಣವನ್ನು ಪೂರ್ಣತೆಯಲ್ಲಿ ಕೊಡಲು ಆಗುವುದಿಲ್ಲ. ಇಂತಹ ಶಾಲೆಗಳಲ್ಲಿ ಪ್ರತ್ಯೇಕ ಕೈಗೆಲಸವನ್ನು ಪ್ರತ್ಯೇಕವಾಗಿ ಕಲಿಸುವುದರಿಂದ ಪ್ರಯೋಜನವಾಗದೆಂದೇ ನಮ್ಮ ಅಭಿಪ್ರಾಯವಿದೆ. ಪ್ರತ್ಯೇಕ ಕೈಗೆಲಸದ ಮೇಲೆ ಕಣ್ಣಿಡದೆ, ಬರೇ ಕೈಯನ್ನು ಕೆಲಸಕ್ಕಾಗಿ ತರ್ಬೇತು ಮಾಡಬಲ್ಲ ಸರ್ವಸಾಮಾನ್ಯ ಶಿಕ್ಷಣ ಕ್ರಮವನ್ನು ರಚಿಸುವುದು ಎಲ್ಲಾ ವಿದ್ಯಾರ್ಥಿಗಳಿಗೂ ಪ್ರಯೋಜನಕರವಾಗುವುದು. ಈಗಿನ ಶಿಕ್ಷಣ ಕ್ರಮದಲ್ಲಿ, ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪೆನ್ಸಿಲಿಗೆ ಮೊನೆ ಮಾಡುವುದು ಕೂಡ ತಿಳಿಯುವುದಿಲ್ಲ. ಆಯಾ ವಿದ್ಯಾರ್ಥಿಯ ಅಭಿರುಚಿಗೆ ಅನುಸಾರವಾಗಿ ಕೈಗೆಲಸವನ್ನು ತೆಗೆದು ಅದರಲ್ಲಿ ಪ್ರತ್ಯೇಕ ಶಿಕ್ಷಣ ಹೊಂದಿ ಆ ಕೈಗೆಲಸದಲ್ಲಿ ಪ್ರವೀಣತೆಯನ್ನು ಹೊಂದಲಾಗುವ ರೀತಿಯ ಕೈಗಾರಿಕೆಯ ಪ್ರಾಥಮಿಕ ಶಿಕ್ಷಣವನ್ನು ರಚಿಸುವುದು ಪ್ರಕೃತದ ಉದ್ದೇಶವಿರಬೇಕು. ಮತ್ತು ಈ ಕೈಗಾರಿಕೆಗಳನ್ನು ಪ್ರತ್ಯೇಕವಾಗಿ ಕಲಿಸಲಿಕ್ಕೆ ಪ್ರತ್ಯೇಕ ಔದ್ಯೋಗಿಕ ಶಾಲೆಗಳಿದ್ದು, ಪ್ರಾಥಮಿಕ ಶಾಲೆಗಳ ವಿದ್ಯಾಭ್ಯಾಸವನ್ನು ಹೊಂದಿದ ವಿದ್ಯಾರ್ಥಿಗಳು ಅವರವರ ಅಭಿರುಚಿಯಂತೆ ಬೇಕಾದ ಕೈಗೆಲಸವನ್ನು ಪ್ರತ್ಯೇಕವಾಗಿ ಈ ಶಾಲೆಗಳಲ್ಲಿ ಕಲಿಯುವಂತಿರಬೇಕು. ಹೀಗೆ ಮಾಡದೆ, ಪ್ರಾಥಮಿಕ ಶಾಲೆಗಳಲ್ಲಿ ಈ ಕೈಗಾರಿಕೆಗಳ ಪ್ರತ್ಯೇಕ ಶಿಕ್ಷಣ ಇಟ್ಟರೆ, ಪ್ರಾಥಮಿಕ ವಿದ್ಯಾಭ್ಯಾಸದ ಪ್ರಯೋಜನವು ಕಡಮೆಯಾಗಬಹುದು.

ಅಸ್ಪೃಶ್ಯರು.

ನೆಲ್ಲೂರಿನಲ್ಲಿ ನೆಲ್ಲೂರು ಜಿಲ್ಲಾ ಆದಿ ಆಂಧ್ರರ ಪರಿಷತ್ತು ನೆರೆಯಿತು. ಆದಿ-ಆಂಧ್ರರು ಮತ್ತು ಆದಿದ್ರಾವಿಡರೆಂದರೆ ಒಂದೇ. ಇವರು ಅಸ್ಪೃಶ್ಯರು ಅರ್ಥಾತ್ ಪಂಚಮರು. ಆದಿ-ಆಂಧ್ರರೊಳಗೂ ಆದಿದ್ರಾವಿಡರೊಳಗೂ ನೂತನ ಜಾಗೃತಿಯಾದ ವಿಷಯವು ಈಗ ಕೆಲವು ಸಮಯದಿಂದ ಅಲ್ಲಲ್ಲಿ ನಡೆಯುತ್ತಿರುವ ಅವರ ಪರಿಷತ್ತುಗಳಿಂದ ತಿಳಿಯುವುದು. ನೆಲ್ಲೂರು ಪರಿಷತ್ತಿಗೆ ಶ್ರೀಯುತ ನಾರಳ ದೇವೇಂದ್ರುಡು ಎಂ. ಎಲ್. ಸಿ. ಎಂಬ ಕೌನ್ಸಿಲ್ ಮೆಂಬರರು ಅಧ್ಯಕ್ಷರಾಗಿದ್ದರು. ಅವರ ಭಾಷಣದ ಒಂದಂಶವನ್ನು ನಮ್ಮ ಹಿಂದೂ ಸಾಂಪ್ರದಾಯವಾದಿ ಬಂಧುಗಳ ವಿಚಾರಕ್ಕಾಗಿ ಕೆಳಗೆ ಕೊಡುವೆವು:—

"ಆದಿ ಆಂಧ್ರರ ಕಡೆಗಿನ ನಿಮ್ಮ ಹೀನವರ್ತನದಿಂದ ಎಷ್ಟು ಜನರು ಕ್ರೈಸ್ತರಾದರೆಂಬುದನ್ನು ನೀವೇ ತಿಳಿಯಿರಿ. ನೆಲ್ಲೂರಿನಲ್ಲಿ ೫೨,೯೪೭, ಕೃಷ್ಣಾ ೯೭,೦೮೭, ಗುಂಟೂರು ೧,೫೩೫,೧೦೦; ಕಡಪಾ ೨೩,೭೩೯; ಕರ್ನೂಲು ೫೩,೬೫೬; ಬೆಳ್ಳಾರಿ ೩,೫೩೨; ಅನಂತಪುರ ೪,೯೬೩; ಗೋಧಾವರಿ ೧೫೪,೨೩೭; ವಿಶಾಖಪಟ್ನ ೫,೬೫೬; ಏಜನ್ಸಿ ೧೭,೬೦೩; ಚೆಂಗಲ್ಪಟ್ಟು ೩೨,೫೩೧; ಚಿತ್ತೂರು ೬,೬೧೦; ಸೇಲಂ ೧೫೫,೨೨೬; ಮದ್ರಾಸು ೪೪,೧೩೭, ನೊರ್ತಆರ್ಕಾಟು ೩೭,೦೧೯; ಮದ್ರಾಸುಪ್ರಾಂತ್ಯ ೧,೩೬೦,೮೭೨."

ಹಿಂದೂಸಮಾಜಕ್ಕೆ ಇಷ್ಟೊಂದು ಜನರು ನಷ್ಟವಾದುದಲ್ಲದೆ ಹಿಂದೂಸಮಾಜವನ್ನು ನಿರೋಧಿಸುವ ಸಮಾಜಗಳು ಇಷ್ಟು ಜನರಿಂದ ಪ್ರಬಲ ಹಿಂದೂ ಸಮಾಜವು ಇಷ್ಟು ಜನರಿಂದ ನಿರ್ಬಲವೂ ಆಯಿತು. ಈ ಮತಾಂತರದ ಪರಿಣಾಮದ ಸ್ಪಷ್ಟಚಿತ್ರವನ್ನು ನಾವು ಉತ್ತರ ಹಿಂದೂಸ್ಥಾನದಲ್ಲಿ ನೋಡುವೆವು. ಮತಾಭಿಮಾನದ ಹುಚ್ಚು ಉದ್ವೇಗ ಮತ್ತು ಉನ್ಮತ್ತತೆಯಿಂದ ಹಿಂದೂಗಳನ್ನು ಪೀಡಿಸಿ, ಅವರ ಮನೆಮಾರನ್ನು ಸುಟ್ಟು ಹಾಕುತ್ತಿರುವವರೊಳಗೆ ಮುಕ್ಕಾಲು ಪಾಲು ಮುಸಲ್ಮಾನರು ಒಂದು ಕಾಲದಲ್ಲಿ ಶ್ರದ್ಧಾವಂತ ಹಿಂದೂಗಳೇ ಆಗಿದ್ದು ಒತ್ತಾಯದಿಂದ ಕಣ್ಣೀರಿನೊಡನೆ ಮತಾಂತರ ಹೊಂದಿದವರಾಗಿರುವರು. ಮಲಬಾರಿನಲ್ಲಿ ದಂಗೆಯೆದ್ದು ಹಿಂದೂಗಳನ್ನೂ ತೊಂದರೆಪಡಿಸಿದ ಮಾಪಿಳ್ಳೆಯವರು ಒಂದು ಬಾರಿ ಹಿಂದೂಗಳೇ ಆಗಿದ್ದರು. ಹಿಂದೂ ಸಮಾಜವನ್ನು ಕ್ಷೀಣಿಸುವುದರ ಪರಿಣಾಮವು ಇಂತಹ ವಸ್ತುಸ್ಥಿತಿಗಳಿಂದ ಸ್ಪಷ್ಟವಾಗುತ್ತಿದೆ.

ಬಂಗಾಳದಲ್ಲಿ ಕಾಂಗ್ರೆಸ್ ರಾಜನೀತಿ.

ಬಂಗಾಳದ ಪ್ರಾಂತಿಕ ಪರಿಷತ್ತಿನಲ್ಲಿ ಶ್ರೀಯುತ ಸೇನಗುಪ್ತರಿಗೆ ವಿಜಯವಾದ ನಂತರ ಅವರ ಪ್ರತಿ ಪಕ್ಷಕ್ಕೆ ಮನಸ್ಸಿನಲ್ಲಿ ಬಹಳ ನೋವಾಗಿರಬೇಕು. ಕೂಡಲೆ ಅವರು "ಕರ್ಮಿಸಂಘ" (workers association) ಎಂದು ರಚಿಸಿ ಪ್ರತ್ಯೇಕವಾಗಿ ಕೆಲಸಮಾಡಲು ನಿರ್ಧರಿಸುವರು. ಹಿಂದೀಯ ಸರ್ವಸಾಮಾನ್ಯ ಮಾನಸಿಕತೆಗೆ ಇದು ಸರಿಯಾಗಿದೆ. ಸಂಘ ಮೂಲಕ ಕೆಲಸಮಾಡಲಿಕ್ಕೆ ಹಿಂದೀಯರಿಗೆ ತಿಳಿಯುವುದಿಲ್ಲವೆಂದು ಇಂತಹ ಅನೇಕ ಘಟನೆಗಳು ತೋರಿಸುವೆವು. ಸಾಂಘಿಕ ಕಾರ್ಯಗಳು ಸಫಲವಾಗಬೇಕಾದರೆ ಅಲ್ಪ ಸಂಖ್ಯಾಕರು ಬಹು ಸಂಖ್ಯಾಕರಿಗಾಗಿ ಸ್ವಲ್ಪವಾದರೂ ಆತ್ಮತ್ಯಾಗವನ್ನು ಮಾಡಬೇಕು. ಅದಿಲ್ಲದೆ ತಾವೇ ಮಾಡಿದ್ದು ಸರಿಯೆಂದು, ಪ್ರತ್ಯೇಕ ಪಕ್ಷಕಟ್ಟಿ ಸಂಘಶಕ್ತಿಯನ್ನು ಈ ಪಕ್ಷವು ವಿಭಕ್ತಗೊಳಿಸಿ ತಮ್ಮನ್ನೂ ತಮ್ಮ ಬಂಧುಗಳನ್ನೂ ಅವರು ನಿರ್ಬಲಗೊಳಿಸಿದರು. ಕಾಂಗ್ರೆಸು ಸ್ವಲ್ಪವಾದರೂ ಶಕ್ತಿಮಾನವಾಗಿದ್ದ ಬಂಗಾಳದಲ್ಲಿಯೂ ಇಂತಹ ಆತ್ಮಘಾತುಕ ಘಟನೆಗಳಾದುದು ವಿಷಾದಕರ.

ಆದರೆ ಶ್ರೀಯುತ ಸೇನಗುಪ್ತರಿಗೆ ತಮ್ಮ ವಿಜಯದೊಡನೆ ದೊರಕಿದ ಜವಾಬ್ದಾರಿಯ ಹೊರೆಯ ಭಾರವನ್ನು ಸರಿಯಾಗಿ ಅವರು ತಿಳಿದುಕೊಂಡಿರುವರು. ಮತ್ತು ಕಾಂಗ್ರೆಸ್ಸಿಗಾಗಿಯೂ, ಸ್ವರಾಜ್ಯ ಪಕ್ಷಕ್ಕಾಗಿಯೂ, ಪ್ರಚಾರ ಕಾರ್ಯವನ್ನು ಶ್ರೀಯುತ ಸೇನಗುಪ್ತರು ಅತ್ಯುತ್ಸಾಹದಿಂದಲೂ ಶಕ್ತಿಯಿಂದಲೂ ಆರಂಭಿಸಿರುವರು. ಶ್ರೀಮತಿ ಸರೋಜಿನಿ ದೇವಿಯೊಡನೆ ಬಂಗಾಳದ ಮುಖ್ಯ ಪಟ್ಟಣಗಳನ್ನು ಸಂಚರಿಸಿ ಸೇನಗುಪ್ತರು ಕಾಂಗ್ರೆಸ್ ಸಂದೇಶವನ್ನು ಪ್ರಚಾರ ಪಡಿಸಿ ಕಾಂಗ್ರೆಸ್ ಗೌರವವನ್ನು ಹೆಚ್ಚಿಸುತ್ತಿರುವರು. ಬಂಗಾಳದ ತರುಣ ಕೆಲಸಗಾರರು ಇಂತಹ ಸಮಯದಲ್ಲಿ ತಮ್ಮ ಭೇದಗಳನ್ನು ಬದಿಗಿಟ್ಟು ದೇಶದ ಸೇವೆಯನ್ನು ಒಗ್ಗಟ್ಟಾಗಿ ಮಾಡುವುದು ಅಗತ್ಯವಿದೆ.

ಅನುಕ್ರಮಣಿಕೆ.

	ಪುಟ.
ಅಗ್ರಲೇಖ	
ರಾಜತಂತ್ರದಲ್ಲಿ ಎಣ್ಣೆಯ ಪ್ರಾಮುಖ್ಯತೆ	೬
ಕರ್ನಾಟಕ ರಂಗಭೂಮಿ	"
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೭–೮
ದಕ್ಷಿಣ ಕನ್ನಡ–ಅಮಟಾಡಿ, ಕುಂಬಳೆ, ಸುರತ್ಕಲ್, ಬಂಟವಾಳ, ಮಂಜೇಶ್ವರ, ಬಂಗ್ರಮಂಜೇಶ್ವರ, ಮುಲ್ಕಿ ಮತ್ತು ಕನ್ಯಾನ	೮
ಮಂಗಳೂರು	"
ಮದರಾಸಿನಲ್ಲಿಯ ಪೆನ್ಸಿಲು ಕಾರ್ಖಾನೆ	"
ಮದರಾಸಿನಲ್ಲಿಯ ಪೆನ್ಸಿಲು ಕಾರ್ಖಾನೆ	"
ಪತ್ರವ್ಯವಹಾರ ೧,	"
ಉಟಾಕಮಂಡಿನಲ್ಲಿ ಜರುಗಿದ ಕಲೆಕ್ಟರರ ಸಭೆ	೯
ಮುಸ್ಲಿಮ್ ಓಟರರಲ್ಲಿ	"

ಸ್ವದೇಶಾಭಿಮಾನಿ.

ಶಕ ೧೮೪೮ ಜ್ಯೇಷ್ಠ ಶು| ೧೫ಯು ಶುಕ್ರವಾರ.

ರಾಜತಂತ್ರದಲ್ಲಿ ಎಣ್ಣೆಯ ಪ್ರಾಮುಖ್ಯತೆ.

ಆಧುನಿಕ ವಿಜ್ಞಾನದ ವಿಕಾಸದೊಡನೆಯೂ, ಆಧುನಿಕ ನೈತಿಕ ಸೂತ್ರಗಳ ವಿಕಾಸದೊಡನೆಯೂ, ಆಧುನಿಕ ರಾಜತಂತ್ರವು ಪೂರ್ವದ ರಾಜತಂತ್ರದಿಂದ ಸಂಪೂರ್ಣವಾಗಿ ಪರಿವರ್ತನವನ್ನು ಹೊಂದಿದೆ. ಪೂರ್ವದಲ್ಲಿದ್ದ ಆ ಅರಸುತನಗಳ ಪ್ರಾಬಲ್ಯವು ನಾಶವಾಗಿ, ಪ್ರಜಾಸಮುದಾಯದ ಸಮಷ್ಟಿ ಶಕ್ತಿಯು ಅಧಿಕರಿಸುತ್ತಿದೆ. ಪೂರ್ವದಲ್ಲಿ ಅರಸರು ವಿಜಯಯಾತ್ರೆಗೆ ಹೋಗುವುದೇ ಭೂಷಣವೆಂದಿದ್ದಿತು. ಒಬ್ಬರೊಡನೊಬ್ಬರು ಕಾದು ಗೆಲ್ಲುವುದು ಕೀರ್ತಿಕರವಾಗಿದ್ದಿತು. ಈಗ ದೇಶದಲ್ಲಿ ಶಾಂತಿಸ್ಥಾಪನೆಯೇ ರಾಜತಂತ್ರಜ್ಞರ ಪ್ರಮುಖ ಕರ್ತವ್ಯವಾಗಿ ತಿಳಿಯಲ್ಪಡುತ್ತಿದೆ. ಮತ್ತು ಪ್ರಮುಖ ಜನಾಂಗಗಳು ಸಣ್ಣ ಸಣ್ಣ ಜನಾಂಗಗಳ ಸ್ವಾತಂತ್ರ್ಯವನ್ನು ಅಪಹರಿಸುವುದರಲ್ಲಿ ಹಿಂದೆಗೆಯದಿದ್ದರೂ, ತಮ್ಮ ತಮ್ಮ ಮಟ್ಟಿಗೆ ಅತ್ಯಂತ ಜಾಗರೂಕತೆಯಿಂದ ವರ್ತಿಸುತ್ತಿವೆ. ಜನಾಂಗಗಳೊಳಗೆ ಯುದ್ಧವಾಗುವುದಾದರೆ, ಅದು ಹೆಚ್ಚಾಗಿ ವಿಜಯಕೀರ್ತಿ ಲಾಭದ ಲೋಭಕ್ಕಿಂತಲೂ, ರಾಷ್ಟ್ರಗಳ ಹಿತಗಳ ಸಂಘರ್ಷಣೆಯ ಕಾರಣದಿಂದ ಆಗುವುದು ಹೆಚ್ಚು. ರಾಷ್ಟ್ರಗಳ ರಾಜತಂತ್ರಜ್ಞರ ಪೈಶಾಚಿಕ ಸ್ವಾರ್ಥವು ಎಂದಿನಂತೆ ಈಗಲೂ ಇರುವುದಾದರೂ, ರಾಷ್ಟ್ರಗಳ ಪರಸ್ಪರ ಸಂಬಂಧವು ಆಧುನಿಕ ಸಂಸ್ಕಾರರಚನೆಯ ವೈಶಿಷ್ಟ್ಯದಿಂದ ವ್ಯವಸ್ಥೆಗೊಳಿಸಲ್ಪಟ್ಟಿದೆ.

ಆಧುನಿಕ ನೈತಿಕ ಸೂತ್ರಗಳ ನೂತನ ವಿಕಾಸವು ಈ ರೀತಿಯಲ್ಲಿ ರಾಜನೀತಿಯನ್ನು ಸ್ಥಾಪಿಸಿರುವಾಗ ಆಧುನಿಕ ವಿಜ್ಞಾನವೂ ಅದೇ ರೀತಿಯಲ್ಲಿ ರಾಜತಂತ್ರದ ಸೂತ್ರಗಳನ್ನು ಪರಿವರ್ತಿಸಿಯದೆ. ಪೂರ್ವದ ಬಾಣಗಳ, ಖಡ್ಗಗಳ, ಈಟಿಗಳ ದಿನಗಳು ಹೋದುವು. ಭೌತಿಕ, ವೈದ್ಯುತಿಕ ಇತ್ಯಾದಿ ವೈಜ್ಞಾನಿಕ ಶೋಧನೆಯೊಡನೆ ನವೀನ ಶಸ್ತ್ರಗಳ ಆವಿಷ್ಕಾರವಾಗಿ ಸಮರಶಾಸ್ತ್ರವೂ ಸಂಪೂರ್ಣವಾಗಿ ಬದಲಾಗಿ ಹೋಗಿಯದೆ. ಸಮರಶಾಸ್ತ್ರದ ಬದಲಾವಣೆಯೊಂದಿಗೆ ಯುದ್ಧಸನ್ನಾಹಗಳ ಅವಶ್ಯಕತೆಗಳೂ ಬದಲಾಗಿ, ಅವುಗಳಿಗೆ ಸರಿಯಾಗಿ ರಾಜತಂತ್ರವೂ ಆ ಅವಶ್ಯಕತೆಗಳ ಹುಡುಕಾಟಕ್ಕಾಗಿ ನಿರತವಾಗಿದೆ.

ತನ್ನ ಆರ್ಥಿಕ ಪರಿಸ್ಥಿತಿಯ ಕಾಠಿಣ್ಯದಲ್ಲಿ ಕೂಡ ಫ್ರಾನ್ಸು ರೀಫ್, ಡ್ರೂಸರಂತಹ ಯುದ್ಧಗಳನ್ನು ಮಾಡಿ ದೇಶಗಳ ಆಕ್ರಮಣವನ್ನು ಮಾಡುತ್ತಿರುವುದನ್ನು ನೋಡಿದರೆ, ಮಿಲಿಯ ಗಟ್ಟಲೆ ಪವನುಗಳನ್ನು ಖರ್ಚುಮಾಡಿಯಾದರೂ ಇಂಗ್ಲೆಂಡು ಮೊಸುಲ್ ಮೆಸೊಪೊಟೆಮಿಯಾಗಳನ್ನು ಸ್ವಾಧೀನ ಇಟ್ಟುಕೊಳ್ಳಲು ಪ್ರಯತ್ನಿಸುವುದನ್ನು ನೋಡಿದರೆ, ತಮ್ಮ ಯುರೋಪಿಯ ಅಭಿಮಾನವನ್ನಾದರೂ ಬದಿಗಿಟ್ಟು ಅಮೇರಿಕಾ ಇಂಗ್ಲೆಂಡು ಮುಂತಾದವರು ಪರ್ಸಿಯಾದಂತಹ ಅಸ್ತು ಖಂಡದ ರಾಜ್ಯದೊಡನೆ ಸ್ನೇಹಕ್ಕಾಗಿ ಹೋರಾಡುವುದನ್ನು ನೋಡಿದರೆ, ಈ ದೇಶದ ಸಾಮಾನ್ಯ ಪರಿಸ್ಥಿತಿಗಿಂತಲೂ ಹೆಚ್ಚಿನ ವೈಶಿಷ್ಟ್ಯಗಳು ಇಲ್ಲಿ ಇರಬೇಕೆಂಬುದು ಸ್ಪಷ್ಟವಿದೆ. ಎಣ್ಣೆಯ ಗಣಿಗಳಿಂದಲೂ ಇತರ ಲೋಹಗಳ ಗಣಿಗಳಿಂದಲೂ ಸಂಬಂಧಪಟ್ಟ ರಾಷ್ಟ್ರಗಳಿಗೆ ಆರ್ಥಿಕ ಲಾಭವಿದೆಯಾದರೂ, ಬರೇ ಆರ್ಥಿಕ ಲಾಭವೇ ಈ ರಾಷ್ಟ್ರಗಳ ಸರಕಾರಗಳನ್ನು ಗಣಿಗಳ ಇಂತಹ ಉತ್ಕಂಠಿತ ಶೋಧಗಳಲ್ಲಿ ಪ್ರೇರಿಸುತ್ತಿದೆಯೆನ್ನಲಾಗುವುದಿಲ್ಲ.

ವೈದ್ಯುತಿಕ ಉತ್ಪಾದನೆ, ವಿಮಾನಗಳ ಸಂಚಲನ, ತಂತಿ ಇಲ್ಲದ ವಿದ್ಯುಚ್ಛಕ್ತಿಯ ಉಪಯೋಗ, ನೌಕಾ ಸಂಚಲನ, ಫಿರಂಗಿಗಳನ್ನು ಹಾರಿಸುವುದು, ಇತ್ಯಾದಿ ಯುದ್ಧದ ಎಲ್ಲಾ ಕೆಲಸಗಳೂ ಎಣ್ಣೆಯಿಂದಲೇ ನಡಿಯತಕ್ಕವುಗಳಾಗಿವೆ. ಇಪ್ಪತ್ತು ವರ್ಷಗಳ ಮೊದಲು ಹಡಗುಗಳೂ, ಹೆಚ್ಚಿನ ಶಕ್ತಿಸಂಗ್ರಹವೂ (Power Generation) ಕಲ್ಲಿದ್ದಲಿನಿಂದಾಗುತ್ತಿದ್ದಿತು. ಇದ್ದಲನ್ನು ಉರಿಸಿ ನೀರನ್ನು ಕಾಯಿಸಿ ಹಬೆಯಿಂದ ಶಕ್ತಿಯನ್ನು ಸಂಗ್ರಹಿಸುತ್ತಿದ್ದರು. ವಿದ್ಯುದ್ಯಂತ್ರಗಳಿಗೂ, ಕಲ್ಲಿದ್ದಲು ಬೇಕಿದ್ದಿತು. ಆದರೆ ಈಗ ಇದ್ದಲಿನ ಬದಲಿಗೆ ಎಣ್ಣೆಯೇ ಉಪಯೋಗಿಸಲ್ಪಡುತ್ತಿದೆ. ಯುದ್ಧದ ನಾವೆಗಳಲ್ಲಿ ಈಗ ಎಣ್ಣೆಯಿಂದ ನಡಿಸಲ್ಪಡುವ ಇಂಜಿನುಗಳೂ, ಇಲ್ಲವೇ ಎಣ್ಣೆಯನ್ನು ಉರಿಸಿ, ನೀರನ್ನು ಕಾಯಿಸಿ, ಹಬೆಯಿಂದ ನಡೆಸಲ್ಪಡುವ ಇಂಜಿನುಗಳೂ ಇಡಲ್ಪಡುತ್ತಿವೆ. ಒಂದು ಪರಿಮಾಣದ ಶಕ್ತಿಗೆ ಇದ್ದಲಿಗಿಂತಲೂ ಎಷ್ಟೋ ಪಾಲು ಕಡಿಮೆ ಎಣ್ಣೆ ಸಾಕಾಗುವದರಿಂದ, ಹೆಚ್ಚು ದಿನಗಳ ವರೆಗೆ ಬಾಳಬಹುದಾದ ಎಣ್ಣೆಯನ್ನು ನಾವೆಗಳಲ್ಲಿ ಒಂದೇ ಬಾರಿ ತುಂಬಿಸಿ ಸಮುದ್ರದಲ್ಲಿ ನಿರ್ಭಯವಾಗಿ ಅನೇಕ ತಿಂಗಳುಗಳ ವರೆಗೆ ಇರಬಹುದಾಗುತ್ತದೆ. ಆದುದರಿಂದ ಎಣ್ಣೆಯನ್ನು ಉಪಯೋಗಿಸುವ ಇಂಜನುಗಳು ಈಗ ಯುದ್ಧನಾವೆಗಳಲ್ಲಿ ಪ್ರಾಧಾನ್ಯವನ್ನು ಹೊಂದಿವೆ.

ವಾಯುವಿಮಾನಗಳೂ ಎಣ್ಣೆಯಿಂದಲೇ ನಡೆಯುವಂತಹವುಗಳಾಗಿವೆ. ಬಾಲ್ಯಾವಸ್ಥೆಯಲ್ಲಿದ್ದಿದ್ದರೂ ಕೂಡ ವಾಯುವಿಮಾನಗಳು ಯುದ್ಧದಲ್ಲಿ ಬಹಳ ಕೆಲಸವನ್ನು ಮಾಡಿವೆ. ಈಗ ನವೀನ ಶೋಧಗಳೊಡನೆಯೂ, ನವೀನ ಅನುಭವದೊಡನೆಯೂ ಅವು ಬೇಗನೇ ಪೂರ್ಣಾವಸ್ಥೆಗೆ ಬರಲಿರುವುವು. ಮುಂದಿನ ಯುದ್ಧದಲ್ಲಿ ಈ ವಾಯುನಾವೆಗಳೂ ಹೆಚ್ಚು ಭಾಗವನ್ನು ತೆಗೆದುಕೊಳ್ಳಲಿರುವುವು. ಇವು ಪೆಟ್ರೋಲಿನಿಂದ ನಡಿಯುವ ಇಂಜಿನುಗಳುಳ್ಳವುಗಳಾಗಿವೆ.

ಅಲ್ಲದೆ ಉದ್ದ ಹಾದಿಗಳಲ್ಲಿ ರೈಲುಮಾರ್ಗವೇ ಶ್ರೇಷ್ಠವಾದುದಾದರೂ, ಯುದ್ಧದ ಕ್ಷಣಿಕ ಮತ್ತು ತತ್ಕಾಲದ ಅವಶ್ಯಕತೆಗಳಿಗೆ ಅವು ಸಾಕಷ್ಟು ಸೌಕರ್ಯಗಳನ್ನು ಕೊಡುವುದಿಲ್ಲ. ಇದಕ್ಕೆ ಮೋಟಾರುಗಾಡಿಗಳೇ ಅವಶ್ಯವಾದವುಗಳಾಗಿವೆ. ಬೇಗನೆ ಯುದ್ಧರಂಗಕ್ಕೆ ಜನರನ್ನೂ ಸನ್ನಾಹವನ್ನೂ ಒಯ್ಯಬೇಕಾದರೆ ಪೆಟ್ರೋಲಿನಿಂದ ಕೆಲಸ ಮಾಡುವ ಮೋಟಾರು ಗಾಡಿಗಳೇ ಅವಶ್ಯವಾಗಿ ಬೇಕಾಗುತ್ತಿವೆ.

ಹಾಗೆಯೇ ಫಿರಂಗಿಗಳನ್ನೂ ಒಯ್ಯಲಿಕ್ಕೂ, ಶತ್ರು ಸೈನ್ಯಗಳ ಮೇಲೆ ಬೆಂಕಿಯ ಸುರಿಮಳೆಯನ್ನು ಹೊಯ್ಯಲಿಕ್ಕೂ, ಇಂತಹ ಇನ್ನೂ ಅನೇಕ ಕೆಲಸಗಳಿಗೂ ಎಣ್ಣೆಯ ಆವಶ್ಯಕತೆಯು ಅವಶ್ಯವಾಗಿ ಬೇಕಾಗಿದೆ.

ಅರ್ಥಾತ್ ಪಾಶ್ಚಾತ್ಯ ಯುದ್ಧಕೌಶಲ್ಯವು ಎಣ್ಣೆಯ ಗನಿಗಳ ಮೇಲೆಯೇ ಹೊಂದಿದೆ. ದಿನಗಳೆದಷ್ಟಕ್ಕೆ ಶಕ್ತಿಸಂಗ್ರಹವು ಕಲ್ಲಿದ್ದಲನ್ನು ಹಿಂದೆ ಹಾಕಿ, ಎಣ್ಣೆಯ ಮೂಲಕವೇ ಉಂಟಾಗುತ್ತಿದೆ. ಮತ್ತು ಈಗಿನ ಯುದ್ಧಕಾರ್ಯಗಳು ಶಕ್ತಿಸಂಗ್ರಹದ ಮೂಲಕವೇ ನಡೆಯುವುದರಿಂದ ಎಣ್ಣೆಯೇ ಯುದ್ಧದ ಎಲ್ಲಾ ಕೆಲಸಗಳಿಗೂ ಕಾರಣವಾಗುತ್ತಿದೆ.

ಎಣ್ಣೆಯ ಈ ಪ್ರಾಮುಖ್ಯತೆಯನ್ನು ನೋಡಿದರೆ ಪಾಶ್ಚಾತ್ಯರಾಷ್ಟ್ರಗಳು ಏಕೆ ಎಣ್ಣೆಗಾಗಿ ಇಷ್ಟು ಕಾದಾಡುತ್ತಿವೆ ಎಂದು ತಿಳಿಯಬರುವುದು. ಶಾಂತಿ ಸಮಯದಲ್ಲಿ ಎಣ್ಣೆಯು ದೇಶಕ್ಕೆ ಸಂಪತ್ತನ್ನು ತರುವುದು. ಯುದ್ಧದ ಸಮಯದಲ್ಲಿ ರಾಷ್ಟ್ರರಕ್ಷಣೆಗೂ ಶತ್ರುಗಳ ಪರಾಜಯಕ್ಕೂ ಎಣ್ಣೆಯು ಬೇಕಾಗುವುದು. ರಾಜನೀತಿಯಲ್ಲಿ ಎಣ್ಣೆಯಿಂದ ಹೀಗೆ ಎರಡು ಪ್ರಯೋಜನಗಳುಂಟಾಗುವುವು.

ಎಂದಿನ ವರೆಗೆ ಶಕ್ತಿಸಂಗ್ರಹವು ಇನ್ನೂ ಸುಲಭವಾದ ಉಪಾಯುಗಳಿಂದಾಗುವಂತಹ ನೂತನ ಆವಿಷ್ಕಾರಗಳಾಗುವುದಿಲ್ಲವೋ, ಅಂದಿನ ವರೆಗೆ ಲೋಕದ ರಾಷ್ಟ್ರಗಳ ರಾಜನೀತಿಯು ಗನಿಗಳ ಎಣ್ಣೆಯಿಂದ ಅಧಿಕರಿಸಲ್ಪಡುತ್ತಿರಲೇ ಬೇಕು. ಸರಕಾರಗಳು ಈ ಎಣ್ಣೆಯ ಅಧೀನತೆಯನ್ನು ದೂರತಳ್ಳಲಾರವು. ಮತ್ತು ಹೇಗೆ ಇದ್ದ ಗನಿಗಳ ಎಣ್ಣೆಯು ಕಡಿಮೆಯಾಗುತ್ತಾ ಬರುತ್ತದೊ ಹಾಗೆ ನೂತನ ಗನಿಗಳನ್ನು ಅವು ಹುಡುಕುತ್ತಾ ಇರಲೇ ಬೇಕಾಗುವುದು.

ಕರ್ನಾಟಕ ರಂಗಭೂಮಿ.

ಲೇಖಾಂಕ ೩.

ನಟವರ್ಗ.

ಹಿಂದೀಯ ಕಾರ್ಯಕ್ಷೇತ್ರಗಳಲ್ಲಿ ಉಂಟಾಗುವ ಹೆಚ್ಚಿನ ಫಲಹೀನತೆಗೆ ಹಿಂದೀಯರೊಳಗಿನ ವ್ಯವಸ್ಥಾಶಕ್ತಿಯ ಅಭಾವವೇ ಪ್ರಮುಖವಾದುದು. ವ್ಯಕ್ತಿ [illegible] ವ್ಯಕ್ತಿಕ ಅಭಿಪ್ರಾಯಗಳೂ, ವೈಯಕ್ತಿಕ ಅಭಿಮಾನವೂ, ವೈಯಕ್ತಿಕ ಪ್ರಾಧಾನ್ಯವೂ ಮುಂದೆ ಬರುತ್ತಿರದೆಯಲ್ಲದೆ, ವರ್ಗೀಯ ಹಿತವು ಜನಪ್ರೀತವಾಗುವುದಾಗಲಿ, ಜನರಿಂದ ಅನುಕರಿಸಲ್ಪಡುವುದಾಗಲಿ ಇರುವುದಿಲ್ಲ. ಆದರೆ ಸಾಂಘಿಕ ಪ್ರಯತ್ನಗಳೂ, ವಿಶಾಲವಾದ ಸಾಂಘಿಕ ಹಿತವೂ ಆ ಕ್ಷಣದ ಮಟ್ಟಿಗೆ ಒಬ್ಬೊಬ್ಬ ವ್ಯಕ್ತಿಯಿಂದ ಆತ್ಮಯಜ್ಞವನ್ನು ಪಡೆಯುವುದಾದರೂ, ಒಬ್ಬೊಬ್ಬರಿಗೆ ಅನ್ಯಾಯದ ಲಾಭವನ್ನು ಕೊಡುವುದಾದರೂ, ಪರಿಣಾಮದಲ್ಲಿ ಎಲ್ಲಾ ವ್ಯಕ್ತಿಗಳಿಗೂ ಸಮಾನಲಾಭವನ್ನು ಉಂಟುಮಾಡಿ ಸಾಂಘಿಕಲಾಭವನ್ನು ವೃದ್ಧಿಗೊಳಿಸುವುದು.

ಈ ವ್ಯವಸ್ಥಾಶಕ್ತಿಯ ಪರಿಣಾಮವನ್ನು ನಾವು ಪಾಶ್ಚಾತ್ಯರ ಪ್ರತಿ ಕಾರ್ಯಸಾಧನೆಯ ಮೂಲಕ ನೋಡುತ್ತಲೇ ಇದ್ದೇವೆ. ಮೊನ್ನೆ ಇಂಗ್ಲೆಂಡಿನಲ್ಲಿ ನಡೆದ "ಜನರಲ್ ಸ್ಟ್ರೈಕ್" ಅಂದರೆ ಎಲ್ಲಾ ಕೂಲಿಕಾರರ ಮುಷ್ಕರವೂ ಈ ಅಗಾಧ ಸಾಂಘಿಕ ವ್ಯವಸ್ಥೆಯ ಪರಿಣಾಮವನ್ನು ತಿಳಿಸುವುದು. ಮುಷ್ಕರವೆಂದರೆ ಎಷ್ಟೊ ವ್ಯಕ್ತಿಗಳೂ, ಮುಖಂಡರೂ ಮುಷ್ಕರದ ನಂತರ ತಮ್ಮ ಮೇಲಧಿಕಾರಿಗಳ ಕೈಯಲ್ಲಿ ಕಷ್ಟವನ್ನನುಭವಿಸಬೇಕಾಗುವುದು. ಆದರೂ ನಿಮಿಷಮಾತ್ರದಲ್ಲಿ, ಎಲ್ಲಾ ಕೆಲಸಗಾರರ ಸಂಘದ ಕಾರ್ಯನಿರ್ವಾಹಕ ಮಂಡಳಿಯ ನಿರ್ಣಯಕ್ಕನುಸಾರವಾಗಿ ಮತಭೇದಗಳನ್ನು ಮೂಲೆಗೊತ್ತಿ ಎಲ್ಲಾ ಕೆಲಸಗಾರರೂ ಕೆಲಸವನ್ನು ಬಿಟ್ಟು ಮುಷ್ಕರಹೂಡುವುದನ್ನೂ, ಅದೇ ಕಾರ್ಯನಿರ್ವಾಹಕ ಮಂಡಳಿಯ ನಿರ್ಣಯಕ್ಕನುಸಾರವಾಗಿ ಪುನಃ ಕೆಲಸಕ್ಕೆ ಸೇರುವುದನ್ನೂ ನೋಡಿದರೆ ಅಲ್ಲಿಯ ಕೆಲಸಗಾರರ ಸಾಂಘಿಕವ್ಯವಸ್ಥೆಯು ಎಷ್ಟು ಪೂರ್ಣತೆಯಲ್ಲಿ ನಡೆದಿದೆ ಎಂಬುದು ತಿಳಿಯುವುದು.

ಹಿಂದೀಯ ಪ್ರತಿ ವರ್ಗವು ಈ ರೀತಿಯಲ್ಲಿ ವ್ಯವಸ್ಥೆಗೊಂಡರೆ ಮಾತ್ರವೇ ಹಿಂದೀಯ ಪ್ರತಿ ಕಾರ್ಯಕ್ಷೇತ್ರವೂ ಉಚ್ಚತೆಯನ್ನು ಸೇರುವುದು. ಕರ್ನಾಟಕದ ನಟವರ್ಗದ ವ್ಯವಸ್ಥೆಯೂ ಹೀಗೆಯೇ ನಡಿಯುವುದು ಅವಶ್ಯವಿದೆ.

ಕರ್ನಾಟಕ ನಟವರ್ಗವು ತಮ್ಮ ವೃತ್ತಿಯಲ್ಲಿ ಅಭಿಮಾನವುಳ್ಳುದಾಗಬೇಕು; ನಟವರ್ಗವು ಅಂತಹ ಅಭಿಮಾನವಿದ್ದುದಂತಾಗಿಲ್ಲ; ನಟವರ್ಗವು ತಮ್ಮ ನಾಟಕಮಂಡಲಿಯೊಡನೆ ಚೆನ್ನಾಗಿ ಸಹಕರಿಸಬೇಕು; ನಾಟಕಮಂಡಲಿಯ ವ್ಯವಸ್ಥಾಪಕರ ಜವಾಬ್ದಾರಿಯನ್ನು ನಟಮಂಡಲಿಯು ತಿಳಿಯಬೇಕು, ಇತ್ಯಾದಿ ಅಭಿಪ್ರಾಯಗಳನ್ನು ಶ್ರೀ. ಸದಾಶಿವರಾವ್ ಗರೂಡರವರು ಮಂಗಳೂರಿನಲ್ಲಿ ವ್ಯಕ್ತಪಡಿಸಿದುದಲ್ಲದೆ, ಮಂಗಳೂರಿನ ಒಂದು ಮಂಡಲಿಯು ಅನೇಕ ನಷ್ಟಗಳನ್ನು ಹಾಕಿಯೂ ವ್ಯರ್ಥವಾಗಿ ಹೋದುದಕ್ಕೆ ನಟಮಂಡಲಿಯ ತಲೆಯ ಮೇಲೆಯೇ ಅವರು ಅದರ ಅಪರಾಧವನ್ನು ಹೊರಿಸಿದರು.

ಆದರೆ ಈ ಅಪರಾಧವನ್ನು ನಟಮಂಡಲಿಯ ಮೇಲೆ ಹೊರಿಸುವ ಮೊದಲು ಇಷ್ಟು ಅನುಭವವಿರುವ ಶ್ರೀ. ಗರೂಡರವರು ಒಂದಿಷ್ಟು ಆಲೋಚಿಸುವುದು ಉತ್ತಮವಿದ್ದಿತು. ನಟರ ಸಹಾನುಭೂತಿಯನ್ನೂ ಮಂಡಲಿಯ ಮೇಲಿನ ನಿಸ್ಸೀಮ ಪ್ರೇಮವನ್ನೂ ವ್ಯವಸ್ಥಾಪಕರು ಯಾವ ರೀತಿಯಲ್ಲಿ ಪುರಸ್ಕರಿಸುತ್ತಾರೆಂಬ ವಿಷಯವನ್ನು ಶ್ರೀ. ಸದಾಶಿವ ಗರೂಡರಿಗೆ ತಿಳಿದಿರಲೇಬೇಕು. ಮತ್ತು ಮಂಗಳೂರಿನ ಒಂದು ಕಂಪೆನಿಯು ವ್ಯರ್ಥವಾದುದಾದರೆ ನಟರ ಸಹಾನುಭೂತಿಯ ಮತ್ತು ಸಹಕಾರದ ಅಭಾವಕ್ಕಿಂತಲೂ ವ್ಯವಸ್ಥಾಪಕರೊಳಗಿನ ಊನತೆಯೇ ಹೆಚ್ಚು ಕಾರಣವಾಗಿತ್ತೆಂದು, ವ್ಯವಸ್ಥಾಪಕರ ದಾಕ್ಷಿಣ್ಯವಿಲ್ಲದ ಸಮಯದಲ್ಲಾದರೆ, ಶ್ರೀ. ಸದಾಶಿವ ರಾವ್ ಗರೂಡರೇ ಹೇಳುತ್ತಿದ್ದರೆಂದು ನಮಗೆ ವಿಶ್ವಾಸವಿದೆ.

ಜೀವನದ ಸುಖಕ್ಕಿಂತಲೂ ವೃತ್ತಿಯ ಪ್ರೇಮವೇ ಈ ಎಲ್ಲಾ ನಟರನ್ನು ಆಯಾ ಮಂಡಳಿಗಳಲ್ಲಿ ಕೇಂದ್ರೀಕರಿಸಿಯದೆ ಎಂದು, ನಾಟಕ ಮಂಡಳಿಗಳೊಳಗಿನ ವೈಯಕ್ತಿಕ ಜೀವನವನ್ನೂ ಅದರ ಭಾವೀ ಪರಿಣಾಮವನ್ನೂ, ಅದು ಕೊಡುವ ಲಾಭವನ್ನೂ ನೋಡಿದರೆ ತಿಳಿಯದಿರದು. ಯಾವಾಗಲೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ತಿರುಗುತ್ತಿದ್ದು, ಸಿಕ್ಕಿದ ಸಂಬಳವನ್ನು ಸಿಕ್ಕಿದ ಕಡೆಯಲ್ಲಿ ವ್ಯಯಿಸಿ, ನಡತೆಯನ್ನು ಕೆಡಿಸಿ, ಸ್ವರವು ಕೆಟ್ಟೊಡನೆ ಅಥವಾ ಪ್ರಾಯವು ಹೆಚ್ಚೊಡನೆ ಮಂಡಳಿಯಿಂದ ಹೊರತಳ್ಳಲ್ಪಡಬಹುದಾದ ರಂಗಭೂಮಿಯು ಯಾರೊಬ್ಬರಿಗೂ ಆಕರ್ಷಕವಾಗಬಹುದೆಂದು ನಿರೀಕ್ಷಿಸಲಾಗುವುದಿಲ್ಲ. ಕೆಲವು ಮಂಡಲಿಗಳಲ್ಲಿ ನಟರು ತಿಂಗಳುಗಟ್ಟಲೆಯಾದರೂ ಸಂಬಳವನ್ನು ಬಾಕಿ ಇಟ್ಟು ಕೈಯಲ್ಲಿ [illegible] ಕಷ್ಟಪಡುವುದನ್ನು ನೋಡಿದ ಮೇಲೂ ನಟರ ಸಹಾನುಭೂತಿಯ ಅಭಾವವನ್ನು ಹೇಳಲಾಗುವುದಿಲ್ಲ. ವೃತ್ತಿಯ ಅಭಿಮಾನವಿಲ್ಲದಿದ್ದರೆ, ಕರ್ನಾಟಕದಲ್ಲಿ ಇಷ್ಟು ನಾಟಕ ಮಂಡಳಿಗಳು ಇರಲು ಸಾಧ್ಯವಿದ್ದಿತೆಂದು ಹೇಳಲಾಗುವುದಿಲ್ಲ.

ಸರಿಯಾಗಿ ವಿಚಾರಿಸಲಿಕ್ಕೆ ಹೋದರೆ ವ್ಯವಸ್ಥಾಪಕರಲ್ಲಿಯೇ ಸಹಾನುಭೂತಿಯ ಅಭಾವವು ಕಾಣುತ್ತಿದೆ. ಚೆನ್ನಾಗಿ ಅಭಿನಯಿಸಬೇಕೆಂದೂ, ಉತ್ತಮವಾಗಿ ಹಾಡಬೇಕೆಂದೂ ಸಾಧಾರಣ ಪ್ರತಿ ಒಬ್ಬ ನಟನಿಗೂ ಉತ್ಸಾಹವಿದ್ದೇ ಇದೆ. ಜನತೆಯಲ್ಲಿ ಹೆಚ್ಚು ಪ್ರಶಂಸೆಗೆ ಪಾತ್ರವಾಗದ ಮಂಡಳಿಯಂತೂ ಈ ನಟವರ್ಗದ ಉತ್ಸಾಹಕ್ಕೆ ಸರಿಯಾಗಿ ಅವರನ್ನು ತರ್ಬೇತು ಮಾಡಲು ಸಾಕಷ್ಟು ಹಣವನ್ನೂ ಶಕ್ತಿಯನ್ನೂ ವ್ಯಯಿಸಲಾರದು. ಜನತೆಯಿಂದ ಪ್ರೋತ್ಸಾಹವು ಸಿಕ್ಕಿ ಹಣ ಮಾಡಿದ ವ್ಯವಸ್ಥಾಪಕರು ಕಂಪೆನಿಯ ದೃಶ್ಯಾವಳಿಯನ್ನು ಹೆಚ್ಚಿಸುವುದರಲ್ಲಿಯೂ, ದ್ರವ್ಯವನ್ನು ಶೇಖರಿಸುವುದರಲ್ಲಿಯೂ ಹೆಚ್ಚು ಚಿಂತಿತರಿರುವರಲ್ಲದೆ. ಶಾಸ್ತ್ರೀಯ ರೀತಿಯ ತರ್ಬೇತನ್ನು ನಟವರ್ಗಕ್ಕೆ ಕೊಡಲು ಅವರು ಉತ್ಸಾಹಿತರಿಲ್ಲ.

ನಾವು ಅನೇಕ ಮಂಡಳಿಗಳ ತರ್ಬೇತು ಕ್ರಮವನ್ನು ನೋಡಿರುವೆವು. ಆದರೆ ಯಾವ ಮಂಡಳಿಯಲ್ಲಿಯೂ ತರ್ಬೇತು ಕ್ರಮದ ಕಡೆಗೆ ವ್ಯವಸ್ಥಾಪಕರು ಪರಿಶ್ರಮ ಪಟ್ಟಂತೆ ತೋರುವುದಿಲ್ಲ. ನಟವರ್ಗದ ತೃಷೆಯು ಬೆಳೆದು ಅಲ್ಲಿಯೇ ಮರವು ಹೋಗುತ್ತಿದೆ. ಮತ್ತು ಅವರ ನೈಸರ್ಗಿಕ ಪ್ರತಿಭೆಯೇ ಅವರಿಗೆ ಪುರಸ್ಕಾರವನ್ನಾಗಲಿ ತಿರಸ್ಕಾರವನ್ನಾಗಲಿ ಉಂಟುಮಾಡುತ್ತಿದೆ. ಕರ್ನಾಟಕ ನಟವರ್ಗದ ಈ ಪರಿಸ್ಥಿತಿಯು ಕರ್ನಾಟಕ ನಾಟಕ ಮಂಡಳಿಗಳ ವ್ಯವಸ್ಥಾಪಕರಿಗೆ ಎಂದೂ ಗೌರವಕರವಲ್ಲ.

ವಿದೇಶ ವರ್ತಮಾನ.

— ಯುನೈಟೆಡ್ ಸ್ಟೇಟಿನ ನ್ಯೂಯೋರ್ಕ ಪಟ್ಟಣಕ್ಕೆ ಭೂಲೋಕದ ಎಲ್ಲಾ ಭಾಗಗಳಿಂದಲೂ ಹುಡುಗರು ವಿದ್ಯಾಭ್ಯಾಸವನ್ನು ಮಾಡುವುದಕ್ಕಾಗಿ ಬರುತ್ತಿರುವರು. ನ್ಯೂಯೋರ್ಕ ಪಟ್ಟಣದಲ್ಲಿ ಜೀವನಕ್ಕೆ ಹೆಚ್ಚು ಖರ್ಚು ಬೇಕಾಗುವದು. ಆದುದರಿಂದ ಪರವೂರಿಂದ ಕಲಿಯಲಿಕ್ಕೆ ಬರುವವರು ಯುನಿವರ್ಸಿಟಿಯ ಸಂಬಳ, ಬರುವ ಖರ್ಚು ಮುಂತಾದ್ದನ್ನು ಕಳದು ಊಟದ ಖರ್ಚಿಗೆ ಅವರ ಹತ್ತರ ೫೦೦ ಡೊಲರಾದರೂ ಇರಬೇಕಾಗುತ್ತದೆ. ಇವರಿಗೆ ಉಳುಕೊಳ್ಳುವುದಕ್ಕೆ ಇಂಟರ್-ನೆಶನಲ್ ಹೌಸ್ ಎಂಬ ಕಟ್ಟೋಣವನ್ನು ಕಟ್ಟಿಸಿರುವರು. ಈ ಕೋಣೆಗಳ ಬಾಡಿಗೆ, ಊಟದ ಖರ್ಚು ಒಬ್ಬನಿಗೆ ೩೬ ವಾರಗಳ ತನಕ ವಿದ್ಯಾಭ್ಯಾಸಕ್ಕೆ ೮೦೦ ಡೊಲರ ಕೊಡಬೇಕಾಗುವದು. ಒಟ್ಟಾರೆ ಕಲಿತು ಬರಲಿಕ್ಕೆ ೧,೫೦೦ ಡೊಲರುಗಳು ಬೇಕಾಗುವವು.

— ಇಂಡಿಯದಲ್ಲಿ ವರುಷಕ್ಕೆ ಉಂಟಾದ ೩೬೦ ಮಿಲಿಯ ಪೌಂಡು [illegible] ೧೬ ಮಿಲಿಯ ಪೌಂಡು [illegible] ಅಮೇರಿಕದ ಯುನೈಟೆಡ್ ಸ್ಟೇಟಿನಲ್ಲಿ ಖರ್ಚಾಗುತ್ತದೆ. ಈ ದೇಶದಲ್ಲಿ ೧೧೭ ಮಿಲಿಯ ಜನರಿರುವರು. ಇವರಲ್ಲಿ ಚಾ ಕುಡಿಯುವದು ಹೆಚ್ಚೆಚ್ಚಾಗುತ್ತಾ ಬರುತ್ತದೆ.

— ಯುನೈಟೆಡ್ ಸ್ಟೇಟ್ಸಿನಲ್ಲಿ ಇಷ್ಟರ ವರೆಗೆ ಭೂಲೋಕದಲ್ಲಿ ಕೂಡದಷ್ಟು ಕೆಥೋಲಿಕರ ಒಂದು ಸಭೆಯು ಚಿಕಾಗೊ ಪಟ್ಟಣದಲ್ಲಿ ಜರಗುವದು. ಭೂಲೋಕದ ಬೇರೆ ಬೇರೆ ಭಾಗಗಳಿಂದ ಈ ಸಭೆಗೆ ಸುಮಾರು ಒಂದು ಮಿಲಿಯ ಕೆಥೋಲಿಕ ಯಾತ್ರಿಕರು ಬಂದು ಕೂಡಿರುವರು. ಹದಿನೈದು ಮಂದಿ ಕಾರ್ಡಿನಲರೂ, ೫೦ ಪೆಟ್ರಿಯಾರ್ಕರೂ ಮತ್ತು ಆರ್ಚಬಿಶೋಪರೂ, ೫೦೦ ಮಂದಿ ಬಿಶೋಪರೂ ಕೂಡಿರುವರು.

— ಕೆನಿಯದಲ್ಲಿ ಯುರೋಪಿಯನ್ ಹೆಂಗಸರನ್ನು ಬಲಾತ್ಕಾರದಿಂದ ಅಫ್ರಿಕ [illegible] ಜನರು [illegible] ಮರಣದಂಡನೆಯು ವಿಧಿಸಲ್ಪಡುವದೆಂಬ ಅಜ್ಞೆಯನ್ನು ಕೆನಿಯ ಸರಕಾರದವರು ಕೊಟ್ಟಿರುವರು.

— ಫ್ರೆಂಚ್ ಪ್ರೆಸಿಡೆಂಟರು ಇಂಗ್ಲಿಷ ಅರಸರ ಭೇಟಿಗೆ ಇಂಗ್ಲೆಂಡಿಗೆ ಹೋಗಬೇಕೆಂದಿದ್ದರು. ಅದನ್ನು ಸದ್ಯಕ್ಕೆ ಮುಂದೆ ಹಾಕಿರುವರು.

— ಡೊಕ್ಟರ ರವೀಂದ್ರನಾಥ ಠಾಗೋರರು ಇಟಲಿ ದೇಶದಲ್ಲಿರುವರು. ಇಟಲಿಯ ಅರಸರೂ ಸಿನ್ಯೋರ್ ಮುಸೊಲಿನಿಯವರೂ ಇವರಿಗೆ ಭೇಟಿಯನ್ನು ಕೊಟ್ಟರು. ರೋಮಿನ ಯುನಿವರ್ಸಿಟಿಯವರು ಇವರು ರೋಮಿನಿಂದ ನೇಪಲ್ಸಿಗೂ ಅಲ್ಲಿಂದ ಟ್ಯುರಿನಿಗೂ ಹೋಗುವರು.

— ಜರ್ಮನ ಕೈಸರರ ಆಸ್ತಿಯನ್ನು ಸರಕಾರ ಸ್ವಾಧೀನ ಪಡದು ಅವರಿಗೆ ಅದರ ಪ್ರತಿಫಲವನ್ನು ಕೊಡಬೇಕೆಂಬ ಆಲೋಚನೆಯು ಜರ್ಮನಿಯಲ್ಲಿ ನಡಿಯುತ್ತದೆ. ಹೀಗೆ ಮಾಡಬೇಕಾದರೆ ಜರ್ಮನಿಯ ಪ್ರಜೆಗಳಾದ [illegible] ಜನರ ಓಟುಗಳು ಬೇಕೆಂತ ಆದರೆ ಇಷ್ಟರ ವರೆಗೆ ೧೫ ಮಿಲಿಯ ಜನರ ಓಟು ಮಾತ್ರವೇ ಸಿಕ್ಕಿಯದೆ.

— ಮೈಸೂರಿನ ಮಾಜಿ ದಿವಾನರಾದ ಸರ್ ಅಲಬಿಯನ್ ಬೆನರ್ಜಿಯವರು ಜಪಾನಿಗೆ ಹೋಗುವುದಕ್ಕಾಗಿ ಸಿಂಗಾಪುರಕ್ಕೆ ಬಂದಿರುವರು. ಇವರು ಜಪಾನಿಂದ ಯುನೈಟೆಡ್ ಸ್ಟೇಟ್ಸಿಗೆ ಹೋಗಿ ಅಲ್ಲಿಂದ ಇಂಗ್ಲಂಡಿಗೆ ಬಂದು ಅಲ್ಲಿ ಹೌಸ್ ಓಫ್ ಕೋಮನ್ಸು ಸಭೆಗೆ ಮೆಂಬರರಾಗಿ ಸೇರಲಿಕ್ಕೆ ಉಮೇದುವಾರರಾಗಿ ನಿಲ್ಲುವರು.

— ನ್ಯೂಯೋರ್ಕ ಪಟ್ಟಣದಲ್ಲಿ ನಡಿಯುವ ಭೂಲೋಕದ ಕೆತೋಲಿಕ್ ಮಹಾಸಭೆಗೆ ಪ್ರತಿನಿಧಿಗಳಾಗಿ ಹೋದ ಇಂಗ್ಲಿಷ ರೋಮನ್ ಕೆತೊಲಿಕರನ್ನು ಅಲ್ಲಿಗೆ ಹೋಗಲು ಬಿಡದೆ ತಡೆಗಟ್ಟಿದ್ದಾರಂತೆ. ಕೆನಡಾ ಸರಕಾರದವರಲ್ಲಿ ಯಾವರೂ ಇವರ [illegible] ಹೋಗದೆ ಇದ್ದದ್ದು ಇದಕ್ಕೆ ಕಾರಣವಂತೆ.

— ಮಕ್ಕದಲ್ಲಿ ಜರಗುವ ಮುಸಲ್ಮಾನರ ಮಹಾ ಸಭೆಗೆ ಇಂಡಿಯದ ಪ್ರತಿನಿಧಿಗಳೂ ಬಹಳ ಸಾಹಸಪಟ್ಟು ಕೆಲಸ ನಡಿಸುತ್ತಿರುವರು. ಅಫಘಾನ [illegible] ಮತ್ತು [illegible] ಪ್ರತಿನಿಧಿಗಳು ಇನ್ನು ಬರುತ್ತಾರಷ್ಟೆಯಂತೆ.

— [illegible] ವೈಸರಾಯರಾಗಿರುವ ಬೆರನ್ [illegible] ರವರ ತಂದೆಯವರಾದ ಲೋರ್ಡ [illegible] ರವರು ಮಗನನ್ನು ನೋಡುವುದಕ್ಕಾಗಿ ಈ ವರ್ಷದ ಅಂತ್ಯದಲ್ಲಿ ಇಂಡಿಯಕ್ಕೆ ಬರಲಿಕ್ಕಿರುವರು. ಇವರಿಗೆ ಈಗ ೮೬ ವರ್ಷ ಪ್ರಾಯದವರೂ ದೃಢಕಾಯರೂಗಿರುವರು.

— [illegible] ಪೆಕಿಂಗ್ ಪಟ್ಟಣದಲ್ಲಿ ಒಬ್ಬ ಅಮೇರಿಕದ ಯುವತಿಯು ರಿಕ್ಷಾದಲ್ಲಿ ಕೂತು ಹೋಗುವಾಗ ಆರಾಯುಧಧಾರಿಯಾದ ಒಬ್ಬ ಚೀನೆಯವನು ಅವಳನ್ನು ಗಾಡಿಯಿಂದ ಎಳದು ಕೆಳಗೆ ಹಾಕಿ ಕೊಲ್ಲುವುದಕ್ಕೆ ಹಿಡಿಕೊಳ್ಳಲು ಪ್ರಯತ್ನಿಸಿದನು. ಅಷ್ಟರಲ್ಲಿ ಅಲ್ಲಿ ಅನೇಕರು ಕೂಡಿ ಅವನು ಜನವಳನ್ನು ಬಿಡಿಸಿದರು. ಅಮೇರಿಕದ ರಾಯಭಾರಿಯು ಈ ಸಂಗತಿಯನ್ನು ಚೀನಾ ಸರಕಾರಕ್ಕೆ ತಿಳಿಸಿದನು. ಸರಕಾರದವರು ಇನ್ನು ಮುಂದೆಯಾದರೂ ಅನ್ಯದೇಶಿಯರಿಗೆ ಹಾನಿಮಾಡಿದರೆ ಅವರನ್ನು ಕೂಡಲೇ ಗುಂಡು ಹೊಡೆದು ಕೊಲ್ಲಲಾಗುವದೆಂದು ಹುಕುಂ ಕೊಟ್ಟಿರುವರು.

— ಫ್ರಾನ್ಸಿನಲ್ಲಿ ಎಮ್. ಬ್ರೂನೆಕೆರೆಯವರು ಹೊಸತಾಗಿ ಚುನಾಯಿಸಿದ ಮಂತ್ರಿ ಸಭೆಗೆ ಮೆಂಬರರಾಗಿ ಬರುವರೆಂದು ಮೊ| ಬ್ರಾಯೆಂಡರವರು ತಿಳಿಸಿರುವರು.

— ಯುನಿಯನ್ ಓಫ್ ಸೌತ್ ಆಫ್ರಿಕಕ್ಕೆ ಪ್ರಜೆಗಳ ಮನಸ್ಸಿಗೆ ಒಪ್ಪುವ ನಮೂನೆಯ ಒಂದು ಹೊಸ ಧ್ವಜವನ್ನು ಮಾಡಬೇಕೆಂದು ಕೌನ್ಸಿಲಿನಲ್ಲಿ ನಿಶ್ಚಯಿಸಿರುವರು.

ಒಳದೇಶ ವರ್ತಮಾನ.

— ಪಂಜಾಬಿನ ರಾವಲಪಿಂಡಿಯಲ್ಲಿ ಉಂಟಾದ ದಂಗೆಯು ಸ್ವಲ್ಪ ಶಾಂತವಾಗಿಯದೆ. ಆದರೆ ಹಿಂದೂ ಅಂಗಡಿಗಳನ್ನು ಇನ್ನೂ ತೆರಿಯಲಿಲ್ಲ. ಮಿಲಿಟೆರಿಯವರು ರಾತ್ರೆ ಕಾಲದಲ್ಲಿ ಲೋರಿಗಳಲ್ಲಿ ಕೂತು ಪಟ್ಟಣವನ್ನು ಕಾಯುತ್ತಿರುವರು. ೧೬ನೇ ತಾರೀಕಿನ ರಾತ್ರೆ ರಾವಲಪಿಂಡಿಯಿಂದ ೯ ಮೈಲು ದೂರವಿರುವ ಗೊಡ್ರಾ ಎಂಬ ಹಳ್ಳಿಯಲ್ಲಿ ಪಠಾನರ ಒಂದು ಗುಂಪು ಬಂದು ಇಬ್ಬರನ್ನು ಕೊಂದು ಹಾಕಿ, ಆರು ಮಂದಿಗೆ ಗಾಯಪಡಿಸಿರುವರು. ಪೋಲೀಸಿನವರು ಈ ಪಠಾನರ ಗುಂಪನ್ನು ಹುಡುಕುತ್ತಿರುವರು. ರಾವಲಪಿಂಡಿಯಿಂದ ೧೨ ಮೈಲು ದೂರವಿರುವ ರಾಮಕಂದ ಎಂಬ ಹಿಂದೂ ಯಾತ್ರೆ ಸ್ಥಳದಲ್ಲಿ ೩ ಹಿಂದು ಮನೆಗಳನ್ನೂ ಒಂದು ಸಿಖ್ ಗುರುದ್ವಾರವನ್ನೂ ಕೆಲವು ಮುಸಲ್ಮಾನರು ಸುಟ್ಟು ಹಾಕಿರುವರು. ಪೋಲೀಸಿನವರೂ ಮಿಲಿಟೆರಿಯವರೂ ಹೋಗಿರುವರು. ರಾವಲಪಿಂಡಿಯ ದಂಗೆಯಾಗಲು ಕಾರಣವು ೧೩ನೇ ತಾರೀಕಿನ ದಿವಸ ಸಿಕ್ಖರ ೫ನೇ ಗುರುಗಳಾದ ಗುರು ಅರ್ಜುನದೇವ ಇವರ ಜನ್ಮದಿನವಾದ್ದರಿಂದ ಸಿಕ್ಖರು ಆ ದಿವಸ ವಾದ್ಯದಿಂದ ಜಮ್ಮಾಮಸೀದಿಯ ಬಾಗಲಿನಿಂದ ಹಾದುಹೋದದ್ದೇ ಕಾರಣವೆಂದು ಹೇಳುತ್ತಾರೆ. ಅನಂತರ ಮರುದಿವಸ ರಾವಲಪಿಂಡಿಯ ಮಂಡಿ ಮತ್ತು ಹೆವಿಲ್ಯನ್ ರೋಡಿನಲ್ಲಿರುವ ಧಾನ್ಯದ ಮಾರ್ಕೆಟನ್ನು ಹಿಂದು ಮತ್ತು ಸಿಕ್ಖರ ಅಂಗಡಿಗಳನ್ನು ಮುಸಲ್ಮಾನರು ಸುಟ್ಟು ಹಾಕಿದರು. ಅನೇಕ ಮರಗಳೂ ಮತ್ತು ೩ ಮೋಟರು ಕಾರುಗಳೂ ಸುಟ್ಟು ಹೋಗಿವೆ; ಇಷ್ಟೆಲ್ಲಾ ಸುಡುವಾಗ ಬೆಂಕಿ ಆರಿಸುವ ಯಂತ್ರಗಳಲ್ಲಿ ಒಂದಾದರೂ ಅಲ್ಲಿ ಇರಲಿಲ್ಲವಂತೆ.

— ಬರ್ಮಾದೇಶದ ಅರಕ್ಕಾನಿನಲ್ಲಿ ಬಂದ ಸ್ಯೈಕ್ಲೋನಿನಿಂದ ಸಾಧಾರಣವಾಗಿ ಕರಾವಳಿಯಲ್ಲಿರುವ ೫೦,೦೦೦ ಜನರಿಗೆ ಮನೆಗಳೂ ಆಹಾರವೂ ಇಲ್ಲದೆ ಕಷ್ಟಪಡುತ್ತಾರೆಂದೂ, ಒಳಗಡೆಯಲ್ಲಿ ಅಲಿಥಾಂಗ್ವಾ ಎಂಬಲ್ಲಿ ನೆರೆ ಬಂದು ಸಾವಿರಾರು ಮನೆಗಳು ನಾಶವಾಗಿ ಅನೇಕರು ಸತ್ತಿರುವರೆಂದೂ ಅರಕಾನ ಡಿವಿಜನಿನ ಕಮಿಶನರು ಸರಕಾರಕ್ಕೆ ಬರೆದಿರುವರು.

— ಕುಥಾನಿಗೆ ಶಿಕ್ಕಿಬಿದ್ದ ಸಿಟಿ ಓಫ್ ನೇಪಲ್ಸ ಎಂಬ ಹಡಗದ ಖಲಾಶಿಗಳನ್ನು ಬಚಾವು ಮಾಡಿರುವರು.

— ಮದುರೆಯ ಮ್ಯುನಿಸಿಪಾಲಿಟಿಯ ಮೀಟಿಂಗಿಗೆ ಸ್ವರಾಜಿಸ್ಟರು ಹೋಗಲಿಲ್ಲವಂತೆ. ಗವರ್ನರರು ಮಧುರೆಗೆ ಬರುವಾಗ ಅವರಿಗೆ ಒಂದು ಮಾನಪತ್ರವನ್ನು ಒಪ್ಪಿಸಬೇಕೆಂಬದಾಗಿ ಈ ಮೀಟಿಂಗಿನ ಉದ್ದಿಶ್ಯವಾಗಿತ್ತು. ಈ ಕೌನ್ಸಿಲಿನಲ್ಲಿ ಗವರ್ನರರಿಗೆ ಒಂದು ಬೆಳ್ಳಿಯ ಕರಡಿಗೆಯನ್ನು ಉಚಿತವಾಗಿ ಕೊಡಲಿಕ್ಕೂ ಛಾಪಾ ಮತ್ತು ಇತರ ಖರ್ಚಿಗಾಗಿ ರೂ. ೭೦೦ ಸೆಂಕ್ಷನ್ ಮಾಡಿದರು. ಸೆಂಕ್ಷನ್ ಮಾಡಿ ಮೀಟಿಂಗು ಮುಗಿಯುವಷ್ಟರಲ್ಲಿ ಸ್ವರಾಜ್ಯಪಾರ್ಟಿಯ ಮುಖ್ಯಸ್ಥರಾದ ತುಳಸಿರಾಮ ಎಂಬವರು ಕೌನ್ಸಿಲಿಗೆ ಬಂದು ಸ್ಪೆಶಿಯಲ್ ಮೀಟಿಂಗು ಆಗಬೇಕಾದರೆ ೧೮ ಮಂದಿ ಮೆಂಬರರು ಇರಬೇಕೆಂದು ಕಾನೂನು ಇರುವಾಗ ೧೩ ಮಂದಿ ಕೂತು ಮೀಟಿಂಗು ಮಾಡಿ ಹಣ ಸೆಂಕ್ಷನ್ ಮಾಡಿದ್ದು ಕಾನೂನಿಗೆ ವಿರೋಧವೆಂದು ಹೇಳಿದರು, ಇತ್ಯರ್ಥವೇನೂ ಆಗಲಿಲ್ಲ.

— ಮಧುರೆಯಲ್ಲಿ ಚಿತ್ತರಂಜನ ದಾಸರ ದಿನವನ್ನು ಬಹಳ ವಿಜೃಂಭಣೆಯಿಂದ ಆಚರಿಸಿದರು.

— ಇಂಗ್ಲಂಡಿನಲ್ಲಿರುವ ಸೆಂಡ ಹರ್ಸ್ಟ ಮಿಲಿಟರಿ ಕೋಲೇಜಿಗೆ ಇಂಡಿಯನರನ್ನು ಕಳುಹಿಸುವುದಕ್ಕಾಗಿ ಪ್ರವೇಶಪರೀಕ್ಷೆಯು ಸಪ್ಟಂಬರ ತಿಂಗಳಿನಲ್ಲಿ ನಡಿಯುವುದು. ಇಂಗ್ಲಂಡಿನಲ್ಲಿ ೧೯೨೭ನೇ ಫೆಬ್ರವರಿ ತಿಂಗಳಲ್ಲಿ ಶುರುವಾಗುವುದು. ಮದರಾಸು ಸಂಸ್ಥಾನದಿಂದ ಮಿಲಿಟರಿ ಕೋಲೇಜಿಗೆ ಹೋಗಲು ಅಪೇಕ್ಷಿಸುವವರು ಮದರಾಸು ಗವರ್ನರರ ಪ್ರ್ಯಾವೇಟ್ ಸೆಕ್ರಿಟರಿಯವರಿಗೆ ತಮ್ಮ ಅರ್ಜಿಗಳನ್ನು ಆಗೋಸ್ತು ೧೮ ಒಳಗೆ ಕಳುಹಿಸಬೇಕಾಗಿದೆ.

ನೈಜಾಮರ ರಾಜ್ಯದಲ್ಲಿ ಖಾಸಗಿ ಶಾಲೆಗಳನ್ನು ತೆರೆದು ಸರಕಾರಿ ರಿಕೊಗ್ನಿಶನ್ ಪಡದು ಸರಿಯಾದ ವಿದ್ಯಾಭ್ಯಾಸವನ್ನು ಕೊಟ್ಟರೆ ಎಲ್ಲಾ ತರದಲ್ಲಿಯೂ ಸರಕಾರಿ ಸಹಾಯವು ದೊರಕುವದೆಂದು ನೈಜಾಮ ಸರಕಾರದವರು ಒಂದು ಸರ್ಕಿಲಾರನ್ನು ಕೊಟ್ಟಿರುವರು.

— ಯಾಕುಬ್ ಹುಸೆನರಿಗೆ ಕೊಂಗ್ರೆಸ ಸಮ್ಮಂಧವಾಗಿ ಶಿಕ್ಷೆಹೊಂದಿದರಿಂದ ಅವರು ಬರುವ ಲೆಜಿಸ್ಲೇಟಿವ್ ಕೌನ್ಸಿಲ್ ಮೀಟಿಂಗಿಗೆ ಉಮೇದ್ವಾರರಾಗಿ ನಿಲ್ಲಕೂಡದೆಂದೂ ಮದರಾಸು ಸರಕಾರದವರು ಕೊಟ್ಟ ಹುಕುಮನ್ನು ಹಿಂತೆಗೆಯಬೇಕೆಂದೂ ಸರಕಾರಕ್ಕೆ ತಿಳಿಸುವುದಕ್ಕಾಗಿ ಟ್ರಿಪ್ಲಿಕೇನಿನಲ್ಲಿರುವ ತಿಲಕಘಾಟಿನಲ್ಲಿ ಒಂದು ಸಭೆಯು ಜರಗಿತು. ಎಸ್. ಶ್ರೀನಿವಾಸ ಅಯ್ಯಂಗಾರರು ಅಧ್ಯಕ್ಷರಾಗಿದ್ದರು.

— ತಿರುವಾಂಕೂರಿನಲ್ಲಿರುವ ಎಲ್ಲಾ ವರ್ತಮಾನ ಪತ್ರಿಕೆಗಳ ಸಂಪಾದಕರು ಸರಕಾರಕ್ಕೆ ಜಾಮೀನುಕೊಟ್ಟ ಬಿನಹ ಪತ್ರಿಕೆಗಳನ್ನು ಹೊರಡಿಸಕೂಡದೆಂದು ಕಾನೂನುಮಾಡಿರುವರು. ತಿರುವಾಂಕೂರು ಸರಕಾರದವರು ಊರಿನ ಜನರಿಗೆ ಅನ್ಯಾಯಮಾಡುತ್ತಾರೆಂದು ಖಂಡಿಸಿ ಬರೆದ ನಾಯರರಿಂದ ನಡಿಸಲ್ಪಡುವ "ಸ್ವರಾಜ್ಯ" ಪೀಪಲ್, ಮಿ| ರಕೇರಳನ್, ಶ್ರೀವಾಜುನ್ ಕೋಡಿ ಮುಂತಾದ ಪತ್ರಿಕೆಗಳು ರೂ. ೫೦೦ ಜಾಮೀನುಕೊಡಬೇಕೆಂದೂ, ಇತರರು ನಡಿಸುವ ಪತ್ರಿಕೆಗಳ ಸಂಪಾದಕರು ರೂ. ೨೫ ಮಾತ್ರವೇ ಜಾಮೀನು ಕೊಟ್ಟರೆ ಸಾಕೆಂದು ತಿಳಿಸಿರುವರು. ಇದನ್ನು ತೆಗಿಸಿಹಾಕಬೇಕೆಂದು ಎಲ್ಲಾ ಪತ್ರಿಕೆಗಳ ವ್ಯಾಲಿಕರ ಒಂದು ಡೆಪ್ಯುಟೇಶನು ಮಹಾರಾಣಿಯವರ ಬಳಿಗೆ ಹೋಯಿತು. ತನಗೆ ಅವರೊಡನೆ ಮಾತಾಡಲು ಮನಸ್ಸಿಲ್ಲವೆಂದು ಮಹಾರಾಣಿಯವರು ತಿಳಿಸಿದರು. ಇದಕ್ಕಾಗಿ ಆ ಸರ್ಕಾರು ಹುಕುಮನ್ನು ಪ್ರಕಟಿಸಿದ ದಿವಸದಲ್ಲಿ ರಾಜ್ಯದಲ್ಲೆಲ್ಲಾ ಪ್ರತಿಭಟನೆ [illegible] ಎಲ್ಲಾ ಕಡೆಗಳಲ್ಲಿಯೂ ಮೀಟಿಂಗುಗಳು ನಡಿಸುವವು. ಸತ್ಯಾಗ್ರಹ ಎಂಬ ಪತ್ರಿಕೆಯು ಜಾಮೀನು ಕೊಡದೆ ಪ್ರಕಟಿಸಬೇಕೆಂದು ನಿಶ್ಚಯಿಸಿರುವರು. ಹೀಗೆ ಮಾಡಿದರೆ ಒಂದು ವರುಷದ ಸಜೆಗೂ ಅಥವಾ ೧,೦೦೦ ರೂ. ಜುರುಮಾನೆಗೂ ಗುರಿಯಾಗುವರು. ಇದಕ್ಕೆ ಒಬ್ಬರ ಹಿಂದೆ ಒಬ್ಬರು ಜೈಲಿಗೆ ಹೋಗುವುದಕ್ಕಾಗಿ ಅನೇಕರು ತಯಾರಾಗಿರುವರು.

— ಬಕ್ರೀದ ಹಬ್ಬದ ಸಮಯ ಯಾವ ತರದ ಗಲಾಟೆಯೂ ಉಂಟಾಗದಂತೆ ಕಲ್ಕತ್ತದ ಪೋಲಿಸ ಕಮಿಷನರು ಬಹಳ ಜಾಗ್ರತೆ ತೆಗೆದುಕೊಂಡಿರುವರು. ೧೦೦ ಮಂದಿ ಯುರೋಪಿಯನ್ ಸಾರ್ಜಂಟರನ್ನು ಮಾರ್ಗಗಳಲ್ಲಿ ಅಲ್ಲಲ್ಲಿ ಇಟ್ಟಿರುವರು. ದನಗಳನ್ನು ಹಿಂದುಗಳ ಮನಸ್ಸಿಗೆ ನೋವಾಗದಂತೆ ಕೊಲ್ಲುವ ರೀತಿ ಜಾಗ್ರತೆ ತೆಗೆದುಕೊಂಡಿರುವರು. ಮಾರ್ಗಗಳಿಂದ ಮಾಂಸವನ್ನು ಕೊಂಡುಹೋಗುವಾಗ ಮುಚ್ಚಿಕೊಂಡು ಹೋಗುವಂತೆಯೂ ಜಾಗ್ರತೆಯನ್ನು ಮಾಡಿರುವರು.

— ಬನಾರಸಿನಲ್ಲಿ ಗಂಗಾ ನದಿಯ ತೀರದಲ್ಲಿ ದೋಬಿಘಾಟ್ ಎಂಬಲ್ಲಿರುವ ಕೇದಾರಜಿ ದೇವಸ್ಥಾನದ ಹತ್ತಿರ ಬೆಳಗ್ಗಿನ ಜಾಮದಲ್ಲಿ ತಲೆಯಿಲ್ಲದ ಒಂದು ಮುಂಡವು ಸಿಕ್ಕಿತು. ಕಡೆಗೆ ಹುಡುಕುವಾಗ ತಲೆಯು ಸಿಕ್ಕಿತು. ತಲೆಯನ್ನು ನೋಡುವಾಗ ೩೦ ವರುಷ ಪ್ರಾಯದ ಬಂಗಾಳಿಯವನದೆಂತ ತಿಳಿಯಲಾಯಿತು. ಅವನು ಯಾರೆಂದೂ ಯಾವ ಊರಿನವನೆಂದೂ ತಿಳಿದು ಬರಲಿಲ್ಲ.

— ಬನಾರಸಿನಲ್ಲಿ ಸೆಖೆಯು ಬಹಳ ವಿಶೇಷವಾಗಿದೆ. ಬಹಳ ಉಷ್ಣ ಗಾಳಿಯು ಬೀಸುತ್ತಿದೆ. ಅನೇಕ ಕುದುರೆಗಳು ಸೆಖೆಯನ್ನು ತಾಳಲಾರದೆ ಮಾರ್ಗದಲ್ಲಿಯೇ ಬಿದ್ದು ಜೀವ ಬಿಟ್ಟವು. ಸಿಡುಬು ರೋಗವು ಬಹಳ ಹೆಚ್ಚಾಗಿದೆ.

— ಕಲ್ಕತ್ತದಲ್ಲಿಯೂ ಸೆಖೆಯು ಬಹಳ ಹೆಚ್ಚಾಗಿ ಅನೇಕರು ಬಹಳ ಕಷ್ಟಪಡುತ್ತಿರುವರು.

— ಬರುವ ಸಪ್ಟಂಬರ ಎರಡನೇ ತಾರೀಕಿನಲ್ಲಿ ಹಿಂದುಸ್ಥಾನದ ಎಲ್ಲಾ ಸಂಸ್ಥಾನದ ಎಕ್ಸೈಜ್ ಮಿನಿಸ್ಟರರ ಒಂದು ಸಭೆಯು ಸಿಮ್ಲಾದಲ್ಲಿ ಕೂಡುವದು. ಇಂಡಿಯದ ಒಳಗಡೆ ಅಫೀಮು ವಿಕ್ರಯ ಕಡಿಮೆ ಮಾಡುವದರ ವಿಷಯ ಆಲೋಚಿಸುವದು ಒಂದು ಮುಖ್ಯ ಉದ್ದೇಶವಾಗಿದೆ.

— ಪಂಜಾಬಿನಲ್ಲಿ ಸಿವಿಲ್ ಸರ್ವಿಸ್ ಆಫೀಸರರಾಗಿದ್ದ ಮಿ| ಜೆ. ಹೆಲಿಫೆಕ್ಸ್, ಸಿ. ಐ. ಇ. ಯವರು ಕೆಲಸದಿಂದ ನಿವೃತ್ತರಾದ ಮೇಲೆ ಸಿಂಧೂದೇಶದಲ್ಲಿಯ ಕೈರಪುರ ಸಂಸ್ಥಾನದ ಫಿನೆನ್ಸಿಯಲ್ ಎಡ್ವೈಸರರಾಗಿ ನೇಮಿಸಲ್ಪಟ್ಟಿರುವರಂತೆ.

— ಬಂಗಾಳದಲ್ಲಿರುವ ಕಲ್ಕತ್ತ ಯುನಿವರ್ಸಿಟಿಯಲ್ಲಿ ಪ್ರತಿ ವರುಷ ಬಿ. ಎ. ಕ್ಲಾಸಿನಲ್ಲಿ ೭೦ ಲೆಕ್ಚರುಗಳು ಬಂಗಾಳಿ ಭಾಷೆಯಲ್ಲಿ ಕೊಡಲ್ಪಡುವವು. ಅದಲ್ಲದೆ ಬರುವ ಜುಲಾಯಿಯಿಂದ ಬಂಗಾಳಿ ಭಾಷೆಯಲ್ಲಿ ಒಂದು ಪ್ರತ್ಯೇಕ ಸವಾಲು ಪತ್ರವು ಇರುವದು.

— ಬಂಗಾಳದ ರಂಗಪುರ ಜಿಲ್ಲೆಯಲ್ಲಿ ವರದಸುಂದರಿ ಎಂಬ ಹೆಂಗಸನ್ನು ತಪ್ಪಿಸಿಕೊಂಡು ಹೋದ ಸಂಗತಿಯಲ್ಲಿ ಪೋಲಿಸ್ ಇನ್ಸ್‌ಪೆಕ್ಟರರಾದ ಹೇಮಚಂದ್ರ ಸೇನರು ಆ ಹೆಂಗಸಿನ ಸಂಗವನ್ನು ಬಲಾತ್ಕಾರದಿಂದ ಮಾಡಿದ್ದರೆಂದೂ, ರುಕ್ನುದ್ದೀನ ಶಿಕದಾರರೆಂಬ ಸಬ್ ಇನ್ಸ್‌ಪೆಕ್ಟರರೂ ಅವಳನ್ನು ಎಬ್ಬಿಸಿಕೊಂಡು ಹೋದವನ ಕಡೆ ಸೇರಿ ನಂಬ್ರವನ್ನು ಹಾಳುಮಾಡಿದ ತಪ್ಪಿಗಾಗಿ ಸರಕಾರದವರು ಈ ಇಬ್ಬರು ಆಫೀಸರರನ್ನು ಡಿಸ್‌ಮಿಸ್ ಮಾಡಿರುವರು. ಅವರು ಮಾಡಿದ ಅಪೀಲನ್ನು ತೆಗೆದುಹಾಕಿರುವರು.

— ಮುಂಬಾಯಿಯ ಬುಚೆರ್ ದ್ವೀಪದ ವಾಯರ್‌ಲೆಸ್ ಸ್ಟೇಶನಿನ ಅಧಿಕಾರಿಯಾದ ರಿಪಿ ಎಂಬ ಯುರೋಪಿಯನ್ ಉದ್ಯೋಗಸ್ಥನು ರೂ. ೧೬೧೧ ನ್ನು ಮೋಸದಿಂದ ಬೇಂಕಿನಿಂದ ತೆಗೆದುಕೊಂಡನೆಂದು ಅವನಿಗೆ ೬ ತಿಂಗಳ ಶಿಕ್ಷೆ ವಿಧಿಸಲಾಯಿತು.

— ಕಲ್ಕತ್ತದ ಹೌರಾ ಬೆಲಿ ಸೆಣಬಿನ ಕಾರ್ಖಾನೆಯ ೭೦೦ ಮಂದಿ ನೇಯಿಗೆಯವರು ಮುಷ್ಕರ ಹಿಡಿದಿರುವರು. ಇವರಿಂದ ಇಡೀ ಮಿಲ್ಲನ್ನು ಮುಚ್ಚಬೇಕಾಯಿತು. ಅದರಲ್ಲಿದ್ದ ೪,೩೦೦ ಕೆಲಸಗಾರರಿಗೆ ಕೆಲಸವಿಲ್ಲದಂತಾಗಿದೆ.

— ಕುಂಭಕೋಣದ ಮುಂಗುಡಿ "ಕೋ-ಒಪರೇಟಿವ್ ಸೊಸೈಟಿಯ" ಕೃಷ್ಣಸ್ವಾಮಿ ಅಯ್ಯರ್ ಎಂಬವರು ಹಣದ ವಿಷಯ ಮೋಸಮಾಡಿ ಲೆಕ್ಕಪತ್ರ ಫೋರ್ಜರಿ ಮಾಡಿದ್ದಕ್ಕಾಗಿ ೧೮ ತಿಂಗಳ ಸಜೆಯಾಯಿತು.

— ಹೊಸತಾಗಿ ಮಾಡಿದ ಪಶ್ಚಿಮ ಗೋದಾವರಿ ಜಿಲ್ಲೆಗೆ ಎಲ್ಲೋರನ್ನು ಮುಖ್ಯ ಪಟ್ಟಣವಾಗಿ ಮಾಡಿಯದೆಂದು ಸರಕಾರಿ ಹುಕುಂ ಹೊರಟಿರುವದು.

— ಡಾಕ್ಕಾ ಕೊಲೆಯಲ್ಲಿ ಮರಣ ದಂಡನೆ ವಿಧಿಸಲ್ಪಟ್ಟ ಭೂಪತಿ ಶಿವರಾವ್ ಫೊಂಡಿ ಎಂಬವನಿಗೆ ಜೈಲಿನಲ್ಲಿ ಹುಚ್ಚು ಹಿಡಿದಿರುವುದರಿಂದ ಅವನಿಗೆ ಮರಣದಂಡನೆಯನ್ನು ವಿಧಿಸಲಿಕ್ಕಾಗಲಿಲ್ಲ. ಸರಕಾರದವರು ಅವನ ಹುಚ್ಚು ನಿಲ್ಲಿಸುವುದಕ್ಕಾಗಿ ಪ್ರತಿ ತಿಂಗಳಿಗೆ ೩೫೦ ಖರ್ಚುಮಾಡುತ್ತಾರಂತೆ. ಆದರೂ ಅವನ ಹುಚ್ಚು ನಿಲ್ಲಲಿಲ್ಲವಂತೆ.

— ಸಿಲೋನ್‌ನಲ್ಲಿರುವ ಇಂಡಿಯದ ಕೂಲಿಯವರ ಸಂಬಳವನ್ನು ಹೆಚ್ಚಿಸುವುದಕ್ಕಾಗಿ ಆ ದ್ವೀಪದಲ್ಲಿರುವ ೧೦,೦೦೦ ತೋಟಗಳನ್ನು ಅಪ್ ಕೆಂಟ್ರಿ, ಮಿಡ್ಲ ಕೆಂಟ್ರಿ, ಲೊ ಕೆಂಟ್ರಿ ಎಂಬ ಮೂರು ವಿಧಗಳಾಗಿ ವಿಭಾಗಿಸಿ ಅವುಗಳನ್ನು ಜಿಲ್ಲೆಗಳಾಗಿ ವಿಭಾಗಿಸಿರುವರು. ಒಂದೊಂದು ಜಿಲ್ಲೆಗೆ ಒಂದೊಂದು ಸಂಬಳ ನಿಶ್ಚಯಿಸುವ ಬೋರ್ಡನ್ನು ಮಾಡಿರುವರು. ಈ ಕ್ರಮ ಇಂಡಿಯದ ಕೂಲಿಗಳಿರುವ ೧೬೫೦ ತೋಟಗಳಿಗೆ ಮಾತ್ರವೇ ಅನ್ವಯವಾಗುವುದು. ಈ ಕ್ರಮವು ಜಾರಿಗೆ ಬರಲಿಕ್ಕೆ ೬ ತಿಂಗಳು ಬೇಕಾಗುವುದು. ಒಂದು ಸಾರಿ ಈ ಕ್ರಮವು ಜಾರಿಗೆ ಬಂದರೆ ನಂತರ ಬಹಳ ಒಳ್ಳೆ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ.

— ತಂಜಾವೂರು ಜಿಲ್ಲೆಯಲ್ಲಿರುವ ಕಳ್ಳರ [illegible] ಉದ್ಧರಿಸಿ ಅವರ ಮಕ್ಕಳಿಗೆ ಶಾಲೆಗಳನ್ನು ಪರಸ್ಪರ ಸಹಾಯಕ [illegible] ಸ್ಥಾಪಿಸಿ, ಅವರಿಂದ ಬೇಸಾಯವನ್ನು ಮಾಡಿಸಲಿಕ್ಕಾಗಿಯೂ ಪೋಲಿಸ ಇನ್ಸ್‌ಪೆಕ್ಟರರನ್ನು ನೇಮಿಸಿರುವರು. ತಂಜಾವೂರು [illegible] ಕೆಲಸಮಾಡುವುದಕ್ಕಾಗಿ ಕಳ್ಳರನ್ನೆ ಹೆಚ್ಚಾಗಿ ಕೂಲಿಯಾಳುಗಳಾಗಿ ನೇಮಿಸಿರುವರು.

— ವೈಜಾಗಿನಲ್ಲಿ ಬೇಸಾಯದ ಕೆಲಸವನ್ನೂ, ಕಬ್ಬರ [illegible] ಕೆಲಸವನ್ನೂ ಮಾಡಲಿಕ್ಕೆ ಹತ್ತು ಸಾವಿರ ಕೂಲಿಯಾಳುಗಳು ಬೇಕೆಂದು ಅಲ್ಲಿಯ ಉದ್ಯೋಗಸ್ಥರೊಬ್ಬರು ಹಮಾಲು ದೇಶಕ್ಕೆ ಬಂದಿರುವರು.

— [illegible] ಮ್ಯಾಜಿಸ್ಟ್ರೇಟರು ೧೮೪೪ನೇ ಕಲಮಿನ ಪ್ರಕಾರ ೧|| ತಿಂಗಳ ವರೆಗೆ [illegible] ಯಾವನೊಂದು ತರದ ಆಯುಧವನ್ನೂ ಹಿಡಿಯಬಾರದಾಗಿ ಅಜ್ಞೆಯನ್ನು ಕೊಟ್ಟಿರುವರು.

—ಒಬ್ಬ ಧೈರ್ಯಶಾಲಿನಿಯಾದ ಮಾರ್ವಾಡಿ ಹೆಂಗಸಿನ ಆಕಾಶೀತ ಹೋರಾಟ; ಈ ಹೆಂಗಸು ತನ್ನ ಒಂದು ಮಗುವನ್ನು ಹಿಡಿದುಕೊಂಡು ರೈಲಿನಲ್ಲಿ ಎಲ್ಲಿಯೊ ಪ್ರಯಾಣವನ್ನು ಬೆಳಸುತ್ತಿದ್ದಳು. ರೈಲು ಬಂಡಿಯು ಹೋಗುತ್ತಿರುವಾಗ ಅವಳು ಕೂತಿರುವ ಬಂಡಿಯಲ್ಲಿ ಮೂರು ಜನ ಕಳ್ಳರು ಥಕ್ಕನೆ ಅವಳಿರುವ ಗಾಡಿಗೆ ಬಂದು ಸೇರಿದರು. ಆದರೆ ಈ ಹೆಂಗಸು ಏನೂ ಭಯವಿಲ್ಲದೆ ಕುಳಿತಿರುವ ಸಮಯದಲ್ಲಿ ಕಳ್ಳರು ಇವಳ ಮೈಮೇಲಿರುವ ಆಭರಣವನ್ನು ಎಳಕೊಳ್ಳಲು ಉಪಕ್ರಮಿಸಿದರು. ಕೂಡಲೇ ಈ ಹೆಂಗಸು ಧೈರ್ಯಗೊಂಡು ಆ ಮೂವರಲ್ಲೊಬ್ಬನನ್ನು ಹಿಡಿದು ಬಹಳ ಹೊತ್ತಿನ ತನಕ ಜಗಳವನ್ನಾಡಿ ಕೊನೆಗೆ ಈ ಹೆಂಗಸೂ ಮತ್ತು ಅವಳ ಒಟ್ಟಿಗೆ ಹೊರಾಡಿದ ಕಳ್ಳನೂ ರೈಲ್ವೆ ಗಾಡಿಯಿಂದ ಹೊರ ಬಿದ್ದು ಆಕ್ಷಣವೇ ಇಬ್ಬರೂ ಮರಣಹೊಂದಿದರು. ನಂತರ ಈ ಎರಡು ಶವಗಳನ್ನೂ ಬುರಡ್ವಾನ ರೈಲ್ವೇ ಸ್ಟೇಶನಿಗೆ ತೆಗೆದುಕೊಂಡು ಹೋಗಿರುವರು. ಇದರ ತನ್ನಿಖೆಯು ನಡಿಯುತ್ತಲಿದೆ.

ದಕ್ಷಿಣ ಕನ್ನಡ.

ಅಮಟಾಡಿ—ಈ ಗ್ರಾಮಕ್ಕೆ ಇಷ್ಟರ ವರೆಗೆ ಒಂದು ಎಲಿಮೆಂಟರಿ ಶಾಲೆಯು ಇಲ್ಲದೆ ಹುಡುಗರು ಬಹಳ ಕಷ್ಟಪಡುತ್ತಿರುವರು. ಹೊಸತಾಗಿ ತೆರೆಯೋಣಾಗುವ ಶಾಲೆಗಳಲ್ಲಿ ಒಂದನ್ನು ಇಲ್ಲಿ ತೆರೆದರೆ ಆಗುತ್ತಿತ್ತಲ್ಲವೆ?

ಕುಂಬಳೆ—ಕೆಲವು ದಿವಸಗಳ ಹಿಂದೆ ಇಲ್ಲಿಗೆ ಸಮೀಪ ಇಚ್ಲಂಪಾಡಿ ಗ್ರಾಮದ ಬಿಲ್ಲ ಸುಬ್ಬುಂಞಯೆಂಬವನು ಅವನ ಸ್ವಜಾತಿಯ ಮೂವರು ಹೆಂಗಸರನ್ನು ಕಡುಕತ್ತಿಯಿಂದ ಕಡಿದು ಗಾಯಪಡಿಸಿದ್ದಾಗಿಯೂ ಇವರೆಲ್ಲರೂ ಕಾಸರಗೋಡು ಆಸ್ಪತ್ರೆಯಲ್ಲಿ ಗುಣಹೊಂದುತ್ತಿರುವರಾಗಿ ವದಂತಿಯಿದೆ.

ಈ ತಾಲೂಕಿನ ಇತರ ಶಾಲೆಗಳಲ್ಲಿ ಜಾರಿಗೆ ತಂದಿರುವಂತೆ ಬೋರ್ಡು ಆಡಳಿತೆಯಲ್ಲಿರುವ ಇಲ್ಲಿಯ ೩ ಶಾಲೆಗಳೂ ಇದೇ ಜೂನ್ ತಾ. ೭ರಿಂದ ಬೆಳಿಗ್ಗೆ ೭ ಗಂಟೆಗೆ ತೆರಿಯೋಣಾಗುವಂತೆ ಆದ ಹುಕುಮಿನಿಂದ ತುಂಬಾ ಕಷ್ಟವುಂಟಾಗಿಯದೆ. ಈ ಶಾಲೆಗಳಲ್ಲಿ ಅಭ್ಯಾಸಿಸುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ನೆರೆಗ್ರಾಮಗಳ ದೂರ ದೂರದ ಚಿಕ್ಕ ಬಾಲಕರಾಗಿರುವದರಿಂದ ತನ್ನಿಂದ ಉಂಟಾಗುವ ಅನಾನುಕೂಲತೆಗಳನ್ನು ಕಾಣಿಸಿ ಗ್ರಾಮಸ್ಥರು ಮಾನ್ಯ ಬೋರ್ಡು ಪ್ರೆಸಿಡೆಂಟರವರಿಗೆ ಮನವಿಮಾಡಿಕೊಂಡಿರುವರು. ಬೋರ್ಡಿನವರು ಇದಕ್ಕೆ ತ್ವರ್ಯ ನಿಗಾಕೊಡಬೇಕಾಗಿದೆ.

ಇಲ್ಲಿಯ ಬೋರ್ಡು ಲವರ್ ಎಲಿಮೆಂಟರಿ ಶಾಲೆಯ ಕಟ್ಟೋಣದ ಮನೆಯಲ್ಲಿ ಒಬ್ಬರಿಗೆ ವ್ಯಾಲಿಗೆಯಾಗಿರುವದರಿಂದ ಇದೇ ತಾ. ೨೭ರ ವರೆಗೆ ಶಾಲೆಯನ್ನು ಮುಚ್ಚುವರೆ ಹುಕುಂ ಆದದ್ದು ಯೋಗ್ಯವಾಗಿದೆ.

ಬಂಟವಾಳ—ಇಲ್ಲಿಯ ಕೊಟ್ರವನಗಂಡಿಯಿಂದ ತುಂಬೆಗೆ ಹೋಗುವ ಮಾರ್ಗದಲ್ಲಿ ಕೆಸರು ಬಹಳ ಹೆಚ್ಚಾಗಿ ಜನರು ಗದ್ದೆಗೆ ಇಳಿದು ಹುಣಿಯಿಂದ ಸಂಕದ ಹತ್ತಿರ ಮೇಲಕ್ಕೇರುವರು. ಗಾಡಿಯ ಚಕ್ರಗಳು ಕೆಸರಿನಲ್ಲಿ ಹೂತುಹೋಗುತ್ತವೆ. ಮಾರ್ಗದಲ್ಲಿ ಉಂಟಾದ ಕೆಸರಿನಲ್ಲಿ ಎಮ್ಮೆಗಳು ಸಂತೋಷದಿಂದ ಹೊರಳಾಡುತ್ತಿವೆ.

ಇಲ್ಲಿಯ ತಾಲೂಕು ಬೋರ್ಡು ಮೆಂಬರರಲ್ಲಿ ಒಬ್ಬರು ಇಲ್ಲಿಯ ಬೋರ್ಡು ಶಾಲೆಯನ್ನು ಸಂದರ್ಶಿಸಿ ಹುಡುಗರು ಸರಿಯಾಗಿ ಶಾಲೆಗೆ ಬರುವಂತೆ ನೋಡಿಕೊಳ್ಳಬೇಕೆಂದೂ ಉಪಾಧ್ಯಾಯರಿಗೆ ಹೇಳಿ ಕೇಳಿದರಂತೆ. ಈ ಶಾಲೆಯ ಒಂದನೇ ಮತ್ತು ಎರಡನೇ ಕ್ಲಾಸುಗಳಿಗೆ ಮಾತ್ರ ಸಂಬಳ ಮಾಫಿಮಾಡಿಯದೆಂದು ಬೋರ್ಡು ಮೀಟಿಂಗಿನಲ್ಲಿ ಪಾಸಾಗಿತು. ಈ ಶಾಲೆಯಲ್ಲಿರುವ ೩, ೪, ೫ನೇ ಕ್ಲಾಸುಗಳಲ್ಲಿಯೂ ಸಂಬಳ ವಸೂಲು ಮಾಡುವದಿಲ್ಲವಂತೆ. ಹೀಗಾಗಲು ಕಾರಣವೇನೋ ತಿಳಿಯದು. ಈ ಶಾಲೆಯ ಹತ್ತಿರ ಮಾರ್ಗವು ಎತ್ತರವಾಗಿ ಮಳೆಯ ನೀರು ಹಿತ್ತಲಿನಿಂದ ಹೊರಗೆ ಹರಿದುಹೋಗಲು ಸಾಧ್ಯವಿಲ್ಲದೆ ನೀರು ಹಿತ್ತಲಲ್ಲಿಯೇ ಜಮೆಯಾಗುತ್ತದೆ. ಇದು ಶಾಲಾ ಮಕ್ಕಳ ಆರೋಗ್ಯಕ್ಕೆ ವಿರೋಧವಲ್ಲವೇ?

ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಯಲ್ಲಿ ೫ನೇ ದರ್ಜೆಯನ್ನು ತೆರೆದಿರುತ್ತಾರೆ. ಇಂಗ್ಲಿಷ ಕಲಿಸುವುದಕ್ಕೆಂದು ಎಟ್ಸಿ ಸೆಕೆಂಡ ರೀಡರ್ ಇಟ್ಟಿರುವರಂತೆ. ಇದನ್ನು ಕಲಿಸುವವರು ಯಾರೆಂದು ತಿಳಿಯುವದಿಲ್ಲ.

ಸುರತಕಲ್—ಮುಲ್ಕಿಗೂ ಮಂಗಳೂರಿಗೂ ಸಮ ಮಧ್ಯದಲ್ಲಿರುವ ಈ ಊರಿಗೆ ವೈದ್ಯ ಸಹಾಯವು ಇಲ್ಲದೆ ಜನರು ಬಹಳ ಕಷ್ಟಪಡುತ್ತಿರುವರು. ಹೊಸತಾಗಿ ಸಂಕಲ್ಪನಾದ ಲೋಕಲ್ ಆಸ್ಪತ್ರೆಯನ್ನು ಇಲ್ಲಿ ತೆರೆದರೆ ಚಲೋದಾಗುತಿತ್ತು. ಇಲ್ಲಿಯ ತಾಲೂಕು ಬೋರ್ಡು ಮೆಂಬರವರು ಈ ಪ್ರಶ್ನೆಯನ್ನು ಬೋರ್ಡಿನ ಮುಂದೆ ತಂದರೆ ಒಳ್ಳೇದಿತ್ತು!

ಶಂಕರನಾರಾಯಣ—ಇಲ್ಲಿರುವ ಲೋಕಲ ಫಂಡು ಡಿಸ್ಪೆನ್ಸರಿಯನ್ನು ಕೆಲವು ವರುಷಗಳ ಹಿಂದೆ ಮುಚ್ಚಿದರು. ಈಗ ತಿರಿಗಿ ಇಲ್ಲಿಯೂ ವಂಡ್ಸೆಯಲ್ಲಿಯೂ ಒಂದೊಂದು ಲೋಕಲ್ ಆಸ್ಪತ್ರೆಯನ್ನು ಬೇಗನೇ ತೆರಿಯುವುದರಲ್ಲಿದ್ದಾರೆ.

ಮಂಜೇಶ್ವರ—ಪಟ್ಟದ ಸೊಸ್ಯಾಟಿಯ ಸೆಕ್ರೆಟರಿಗಳಾದ ರಾ। ಶಂಕರ ಆಳ್ವರು ಸುಮಾರು ೩,೨೫೦ ರೂಪಾಯಿ ದುರುಪಯೋಗ ಪಡಿಸಿರುವರೆಂಬ ತಕ್ಸೀರಿನ ಮೇಲೆ ಸೊಸ್ಯಾಟಿಯ ಇನ್ಸಪೆಕ್ಟರರು ಕೊಟ್ಟ ಫಿರ್ಯಾದಿ ಪ್ರಕಾರ ಕೈದು ಮಾಡಲ್ಪಟ್ಟು ಈಗ ರಿಮಾಂಡಿನಲ್ಲಿರುವರು. ಸುಳ್ಳು ಸಾಲಗಳನ್ನು ಬುಕಿನಲ್ಲಿ ಕಾಣಿಸಿ ಕಡೆಗೆ ಪುಸ್ತಕಗಳೂ ಬೋಂದುಗಳೂ ಕಾಣೆಯಾಗಿಯದಾಗಿ ಸಾಧಿಸಿದರಂತೆ. ವಿಧಿಯು ತಪ್ಪಲಾರದು. ಇಲ್ಲಿಯ ಕೆಲವು ಸಂಘಗಳು ಈಗ ಬಹಳ ಆಲೋಚನೆಯಲ್ಲಿವೆ.

ಮದುವೆ ಆಗಿ ನೆರೆಯುವ ಮುಂಚೆಯೇ, ಅಥವಾ ಮಕ್ಕಳು ಹುಟ್ಟಿದ ನಂತರ ತಮ್ಮ ಹೆಂಡಂದಿರನ್ನು ಬಿಟ್ಟು ಬೇರೆ ಲಗ್ನವಾಗುವ ರೂಢಿಯು ಇತ್ತೀಚೆಗೆ ಬ್ರಾಹ್ಮಣರಲ್ಲೂ ಜ್ಯಾರಿಗೆ ಬಂದದ್ದು ಶೋಚನೀಯ. ಹಾಗೆ ಬಿಟ್ಟು ಬಿಟ್ಟ ಹೆಂಡಂದಿರು ಅದೇ ಲಗ್ನವನ್ನು ನೋಡಿ ಒಂದು ಹೊಸ ಲಗ್ನವನ್ನು ಬೇಗನೆ ದಂಪತಿಗಳ ಹಮೇಶವಾಗಿ ಎದುರುಗೊಳ್ಳುವುದು ಬಹಳ ಲೇಸು.

ಹೊಸ ಬೆಟ್ಟು ಪಂಚಾಯತ ಕೋರ್ಟು ಪ್ರೆಸಿಡೆಂಟರ ಚುನಾವಣೆಯು ತಾ. ೨೨ಕ್ಕೆ ಜರಗುವದಿತ್ತು. ಮೆಂಬರರಿಗೆ ನೋಟೀಸು ಬಾರದೆ ಆ ದಿನ ಜರಗಲಿಲ್ಲ. ಇನ್ನೆಷ್ಟು ಕಾಲ ಹೋಗುವದೆಂದು ತಿಳಿಯಲಿಲ್ಲ.

ಪೋಸ್ಟಲ್ ಸುಪರಿಂಟೆಂಡೆಂಟ ದೊರೆಗಳವರು ಇಲ್ಲಿಗೆ ಚಿಕ್ಕಿಸಿದಾಗ ... ಟಪ್ಪಾಲ ... ಮೈಲು ... ಉಂಟಾಗುವ

... ಕೊಂಡರೆಗಳನ್ನು ಹೇಳಿಕೊಂಡಲ್ಲಿ ಜುಲೈ ತಾ. ೧ರಿಂದ ಅಲ್ಲಿ ಮೈಲು ಥಂಡಿಯು ನಿಲ್ಲುವಂತೆ ತಾನು ಪ್ರಯತ್ನಮಾಡುವೆನಾಗಿ ಭರವಸೆ ಇತ್ತಿರುವರಂತೆ.

ಬಂಗ್ರಮಂಜೇಶ್ವರ:—ಈ ಗ್ರಾಮಕ್ಕೆ ಮೊದಲಿನಂತೆಯೇ ಒಬ್ಬ ಪಟೇಲರು ಬರುವರೆಂಬದನ್ನು ಕೇಳಲು ಸಂತೋಷಪಡುತ್ತೇವೆ.

ಕನ್ಯಾನು:—ಇಲ್ಲಿಯ ಮ। ರಾ। ಶಂಭು ಭಟ್ರ ಮಗ ತಿಮ್ಮಣ್ಣ ಭಟ್ಟರು ತನ್ನ ತನುಮನಧನವನ್ನು ಅರ್ಪಿಸಿ ಹೊಸತಾಗಿ ಕಟ್ಟಿಸಿಕೊಟ್ಟ ಶಾಲೆ ಕಟ್ಟೋಣದ ಪ್ರವೇಶೋತ್ಸವವು ಜೂನು ತಿಂಗಳ ತಾ. ೨೧ನೇ ಸೋಮವಾರ ಊರಪರವೂರ ಮಾನ್ಯಗೃಹಸ್ಥರ ಕೂಡುವಿಕೆಯಿಂದ ಬಹಳ ವಿಜ್ರಂಭಣೆಯಿಂದ ನೆರವೇರಿತು. ಈ ಕಟ್ಟೋಣವನ್ನು ಕಟ್ಟಿಸಿಕೊಟ್ಟ ಮಹನೀಯರಿಗೆ ಭಗವಂತನು ದೀರ್ಘಾಯುರಾರೋಗ್ಯವನ್ನು ದಯಪಾಲಿಸಲಿ.

ಮುಲ್ಕಿ:—ಇಲ್ಲಿಯ ಯೂನಿಯನ್ ಕ್ಲಬ್ಬಿನ ೧೨ನೇ ವರ್ಧಮಂತ್ಯುತ್ಸವವೂ, ದಿವಂಗತ, ಡಾಕ್ಟರ್ ಬೋಳ ಶ್ಯಾಮರಾಯರವರ ಸ್ಮಾರಕ ದಿನಾಚರಣೆಯೂ, ಇದೇ ತಾ. ೧೬—೬—೧೯೨೬ನೇ ಬುಧವಾರ ಶ್ಯಾಮ ಘಂಟೆ ೫ಕ್ಕೆ "ಡಾಕ್ಟರ್ ಬೋಳ ಶ್ಯಾಮರಾವ್ ಹೋಲ್" ನಲ್ಲಿ ಬಹಳ ವಿಜ್ರಂಭಣೆಯಿಂದ ನೆರವೇರಿತು. ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲಾ ಮುಖ್ಯ ಉಪಾಧ್ಯಾಯ, ಮ। ರಾ। ರಾ। ಉಳ್ಳಾಲ ಮಂಗೇಶರಾವ್ ಅವರ್ಗಳ್, ಬಿ. ಎ. ಯಲ್. ಟಿ. ಯವರು ಅಗ್ರಪೀಠವನ್ನು ಅಲಂಕರಿಸಿದ್ದರು. ಕಟ್ಟೋಣವು ತಳಿರು ತೋರಣಗಳಿಂದ ಚಲೋದಾಗಿ ಶೃಂಗರಿಸಲ್ಪಟ್ಟಿತ್ತು. ಮೆಂಬರರ ಹಾಜರಿಯು ಸಾಕಷ್ಟು ವಿಶೇಷವೇ ಇತ್ತು. ಸ್ಕೌಟ್ ಚಳವಳದಲ್ಲಿ ಮುಖ್ಯ ಸೂತ್ರಧಾರಿಗಳಾಗಿರುವ ಮದ್ರಾಸ್ ಹೈಕೋರ್ಟು ವಕೀಲ್, ಮ। ರಾ। ರಾ। ಕೆ. ಸಂಜೀವ ಕಾಮತ್ ಅವರ್ಗಳ್ ಬಿ. ಎ. ಬಿ. ಯಲ್., ರವರು ದಯಮಾಡಿಸಿದ್ದರು. ಪ್ರಥಮದಲ್ಲಿ ರಾ। ಕೆ. ವಾಸುದೇವ ಕಿಣಿ, ಬಿ. ಎ. ಯವರು, ಕೀರ್ತಿಶೇಷ ಡಾಕ್ಟರ್ ಬೋಳ ಶ್ಯಾಮರಾಯರ ಜನ್ಮಚರಿತ್ರೆಯನ್ನು ಮನೋರಂಜಕವಾಗಿ ವಾಚಿಸಿದರು. ಇವನ್ನೇ ಹೆಚ್ಚಿನ ಸ್ವಾರಸ್ಯವುಳ್ಳ ವಾಕ್ಚಾತುರ್ಯದಿಂದ ರಾ. ಟಿ. ನಾರಾಯಣ ಶ್ಯಾನುಭಾಗರು ಸಮರ್ಥಿಸಿ, ಚಲೋದಾಗಿ ಚಿಕ್ಕ ಭಾಷಣವನ್ನಿತ್ತರು. ತರುವಾಯ, ರಾ। ಇ. ಸಾನಂದರವರು ತಮ್ಮ ಹಾಸ್ಯಯುಕ್ತವಾದ ಮತ್ತು ಇಂಪಾದ ಮಾತುಗಳಿಂದ ಕ್ಲಬ್ಬಿನ ಅಭಿನಂದನವನ್ನು ಸೂಚಿಸಿ, ಸಭಿಕರನ್ನು ಆತ್ಮಾನಂದಗೊಳಿಸಿದರು. ಇದಾಗಲು ಕ್ಲಬ್ಬಿನ ಗೌರವ ಕಾರ್ಯದರ್ಶಿಗಳಾದ ರಾ। ಬಿ. ಭೋಜರಾಯರು ೧೯೨೬ನೇ ಇಸವಿ ಮೇ ತಾ. ೩೧ಕ್ಕೆ ಅಂತ್ಯವಾದ ವಾರ್ಷಿಕ ವರದಿಯನ್ನು ಓದಿ ಮಹಾ ಸಭೆಯ ಮುಂದಿಟ್ಟರು. ಇದು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ರಾ. ಬೋಳ ಮಾಧವರಾಯರು ಕ್ಲಬ್ಬಿನ ಜನನ ಮತ್ತು ಬೆಳವಣಿಗೆಯ ಕುರಿತು ಸುರಸವಾದ ಮಾತುಗಳಿಂದ ವಿವರಿಸಿ, ಕ್ಲಬ್ಬಿನ ಶ್ರೇಯೋಭಿವೃದ್ಧಿಗೆ ಸೆಕ್ರೆಟರಿಯವರ ಅವಿಶ್ರಾಂತ ಪರಿಶ್ರಮವೇ ಕಾರಣವೆಂದು ಒತ್ತಿ ಹೇಳಲು ರಾ। ಯಂ. ರಾಮಣ್ಣ ಶೆಟ್ರು ಇದನ್ನು ಸಂತೋಷವಾಗಿ ಅನುಮೋದಿಸಿ, ಕ್ಲಬ್ಬಿನ ಪುಸ್ತಕಾಲಯವನ್ನು ಇನ್ನಷ್ಟು ಮಟ್ಟಿಗೆ ಬಲಪಡಿಸಬೇಕೆಂಬ, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅನಂತರ ಕ್ಲಬ್ಬಿಗೆ ಚಾಲ್ತಿವರ್ಷ ತರಿಸತಕ್ಕ ಪತ್ರಿಕೆಗಳು, ಸಾಮಗ್ರಿಗಳು ಇತ್ಯಾದಿಗಳ ಸೂಚನೆಗಳು ಮುಂದೆ ಬಂದು ಸರ್ವಸಮ್ಮತದಿಂದ ತೀರ್ಮಾನಿಸಲ್ಪಟ್ಟು ಕಟ್ಟೋಣ ವಿಸ್ತರತೆಯ ಬಗ್ಗೆ ಒಂದು ಚಿಕ್ಕ ಉಪಕಮಿಟಿಯು ಏರ್ಪಡಿಸಲ್ಪಟ್ಟು, ಹೊಸ ವರ್ಷದ ಆಡಳಿತ ಸಭೆ, ಕಾರ್ಯನಿರ್ವಾಹಕ ಸಭೆ, ಒಡಿಟರರು ಇತ್ಯಾದಿಗಳ ಚುನಾವಣೆಯು ನಡೆಯಲು, ಸನ್ಮಾನ್ಯ ಅಧ್ಯಕ್ಷರು ತಮ್ಮ ಅರ್ಥಗರ್ಭಿತವಾದ ಮತ್ತು ರಸಭರಿತವಾದ ವಾಕ್ಸರಣಿಯಿಂದ ಅನೇಕ ಹಿತಸೂಚನೆಗಳನ್ನು ಒತ್ತಿ ಹೇಳಿ ಕೂಡಿದ ಸಭಿಕರ ಚಿತ್ತಾಕರ್ಷಣವನ್ನು ಮಾಡಿ ಒಳ್ಳೇ ಗಂಭೀರವಾದ ಶೈಲಿಯಿಂದ ಕ್ಲಬ್ಬಿನ ಶ್ರೇಯೋಭಿವೃದ್ಧಿಯನ್ನು ಬಯಸಿ, ತಮ್ಮ ಸುರಸವಾದ ಭಾಷಣವನ್ನು ಮುಗಿಸಿದರು. ನಂತರ ಕ್ಲಬ್ಬಿನ ಅಧ್ಯಕ್ಷರಾದ ರಾ। ಯಚ್. ವಿಷ್ಣು ಭಟ್ ಬಿ. ಎ., ರವರು, ಅಧ್ಯಕ್ಷ ಮಹಾಶಯರಿಗೂ, ರಾ ಕೆ. ಸಂಜೀವ ಕಾಮತರಿಗೂ ಹೂವಿನ ಹಾರ ಹಾಕಿ, ಕೂಡಿದ ಎಲ್ಲಾ ಮಹನೀಯರ ಉಪಕಾರ ಸ್ಮರಿಸಲು ಸಕಲರನ್ನೂ ಫಲಹಾರ ತಾಂಬೂಲಾದಿಗಳಿಂದ ಸತ್ಕರಿಸಿದಂತಾದ ಮೇಲೆ ಅಂದಿನ ಸಂತೋಷ ಸಮಾರಂಭವು ಕೊನೆಗೊಂಡಿತು.

ಮಂಗಳೂರು.

ಇದೇ ಬರುವ ಜುಲೈ ತಾ. ೩ನೇ ಶನಿವಾರ ಡಿಸ್ಟ್ರಿಕ್ಟ ಬೋರ್ಡು ಮೆಂಬರರ ಇನ್ನೊಂದು ಜನರಲ್ ಮೀಟಿಂಗು ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಸಾಯಂಕಾಲ ೩ ಗಂಟೆಗೆ ಜರಗಲಿಕ್ಕಿರುವದು.

ಮದರಾಸಿನಲ್ಲಿಯ ಪೆನ್ಸಿಲು ಕಾರ್ಖಾನೆ.

ದೇಶದಲ್ಲಿ ಸ್ಥಾಪಿಸಿದ ಕೈಗಾರಿಕೆ ಕಾರ್ಖಾನೆಗಳಲ್ಲಿ ಮದರಾಸಿನ ಪೆನ್ಸಿಲು ಕಾರ್ಖಾನೆಯು ವಿಲಾಯತಿಯ ಪೆನ್ಸಿಲು ಕಾರ್ಖಾನೆಗಳ ರೀತಿಯಲ್ಲಿಯೇ ಉತ್ತಮ ಪೆನ್ಸಿಲುಗಳನ್ನು ತಯಾರಿಸುತ್ತಿದೆ. ಮೊದಲು ಈ ಕಾರ್ಖಾನೆಯನ್ನು ಸರಕಾರದವರು ನಡಿಸುತ್ತಿದ್ದರು. ಅನಂತರ ಇದನ್ನು ಮಿ। ವಿ. ಪೆರುಮಾಳ ಚೆಟ್ಟಿಯವರು ಕೊಂಡುಕೊಂಡರು. ಈಗ ಎಸ್. ಆರ್. ಚೆಟ್ಟಿಯವರು ಇದರ ಮೆನೇಜರರಾಗಿರುವರು.

ಪೆನ್ಸಿಲು ತಯಾರಿಸುವುದರಲ್ಲಿ ಬೇಕಾದ ಮುಖ್ಯವಾದ ವಸ್ತುಗಳಲ್ಲಿ ಗ್ರೆಫ್ಯಾಟನ್ನು ತಯಾರಿಸುವುದು ಮೊದಲನೇದಾಗಿದೆ. ಇವರಿಗೆ ಬೇಕಾದ ಗ್ರೆಫ್ಯಾಟನ್ನು ಇವರು ಪರದೇಶಗಳಿಂದ ತರಿಸದೆ ಇಂಡಿಯದಲ್ಲಿಯೇ ಸಿಕ್ಕುವ ಗ್ರೆಫ್ಯಾಟನ್ನು ಉಪಯೋಗಿಸುವರು. ಈಗ ಇವರು ರಾಜಮಂಡ್ರಿಯಿಂದಲೂ ಸಿಂಹಳದ್ವೀಪದಿಂದಲೂ ಈ ಪದಾರ್ಥವನ್ನು ತರಿಸುತ್ತಾರೆ.

ಇವರಿಗೆ ಬೇಕಾದ ಮರವನ್ನು ಮಲಬಾರು, ಮೈಸೂರು, ಹೈದರಾಬಾದು ಮುಂತಾದ ದೇಶಗಳಿಂದ ತರಿಸುತ್ತಿರುವರು. ಕೆಲವು ಪೆನ್ಸಿಲುಗಳಿಗೆ ಬೇಕಾದ ಸಿಡರ ಮರವನ್ನು ಅಮೇರಿಕದಿಂದ ತರಿಸುತ್ತಿರುವರು. ಆದರೆ ಅದೇ ಜಾತಿಯ ಸೀಡರ್ ಮರವನ್ನು ಇಂಡಿಯದಿಂದಲೇ ಸಿಕ್ಕುವ ಹಾಗೆ ಮಾಡುವ ಪ್ರಯತ್ನವು ನಡಿಯುತ್ತಲಿದೆ. ಅಮೇರಿಕದಿಂದ ಬರುವ ಮರಕ್ಕೆ ಹಡಗದ ಭಾಡಿಗೆ ನಾನಾ ತರದ ಸುಂಕ ತೆರಲಿಕ್ಕಿದ್ದರೂ ಊರಿನ ಮರಕ್ಕಿರುವ ಕ್ರಯಕ್ಕಿಂತಲೂ ಅದರ ಕ್ರಯವು ಕಡಿಮೆ.

ಪೆನ್ಸಿಲು ಮಾಡುವುದರಲ್ಲಿ ಮೊದಲನೇ ಕೆಲಸವು ಗ್ರೆಫ್ಯಾಟನ್ನು, ಅವ ಮಣ್ಣನ್ನು, ಪುಡಿಮಾಡಿ ಶುದ್ಧಮಾಡುವುದೇ. ಇದನ್ನು ಗಾಳಿಸುವ ಸಾಧನಗಳು ಇಂತಿಯದಲ್ಲಿಯೇ ತಯಾರಿಸಿದವುಗಳು. ಇವುಗಳು ಪರದೇಶದ ಗಾಳಿಸುವ ಸಾಧನಗಳಷ್ಟೆ ಒಳ್ಳೇಯವೂ, ಉಪಯುಕ್ತವಾದವೂ ಆಗಿವೆ. ಶುದ್ಧಮಾಡಿದ ನಂತರ ಇದನ್ನು ಇನ್ನೊಂದು ಯಂತ್ರಕ್ಕೆ ಹಾಕಿ ಸಪೂರವಾದ ಕಡ್ಡಿಗಳಾಗಿ ಮಾಡುವರು.

ಮರದ ಹಲಗೆಗಳ ತುಂಡುಗಳನ್ನು ತಯಾರಿಸಿ ಅವುಗಳಲ್ಲಿ ಚಡಿ ಮಾಡುವುದಕ್ಕಾಗಿ ಇನ್ನೊಂದು ಯಂತ್ರಕ್ಕೆ ಕೊಡುವರು. ನಂತರ ಗ್ರೆಫ್ಯಾಟ ಕಡ್ಡಿಯನ್ನೂ ಚಡಿಯನ್ನೂ ಇಟ್ಟು ವಜ್ರಸರಿಗೆಯಿಂದ ಕಡಿಸುವರು. ಅನಂತರ ಇವುಗಳನ್ನು ಯಂತ್ರಕ್ಕೆ ಕೊಟ್ಟು ಉರುಟುಮಾಡುವರು. ಹೀಗೆ ಕೆಳಗೆ ಬೀಳುವಾಗ ಆಕಾರಂತೆ ಬೀಳುತ್ತವೆ. ಇನ್ನು ಕೆಲವು ಸಣ್ಣ ಯಂತ್ರಗಳು ಇವೆ. ಇವುಗಳಲ್ಲಿ ಕೆಲಸ ಮಾಡುವ ಸಮಯ ಜನಸಹಾಯವೇ ಬೇಡ. ಉರುಟಾದ ಮೇಲೆ ನಯಮಾಡಲಿಕ್ಕೆ ಇನ್ನೂ ಕೆಲವು ಯಂತ್ರಗಳಿಗೆ ಕೊಡುವರು. ನಂತರ ವಾರನಿಶ್ ಮತ್ತು ಬಣ್ಣಕೊಡಲಿಕ್ಕೆ ಇನ್ನೊಂದು ಯಂತ್ರಕ್ಕೆ ಕೊಡುವರು. ಇದರಿಂದ ಒಂದೊಂದೇ ಪೆನ್ಸಿಲು ಬಣ್ಣ ಮತ್ತು ವಾರ್ನಿಸ್ ಕೊಡಲ್ಪಟ್ಟು ಕೆಳಗೆ ಬೀಳುವುದು. ಇವುಗಳು ಕೆಳಗೆ ಬೀಳಬೇಕಾದರೆ ಒಣಗಿಯೇ ಬೀಳುವವು.

ಇನ್ನೊಂದು ಯಂತ್ರಕ್ಕೆ ಕೊಡುವಾಗ ಅದಕ್ಕೆ ಬೆಳ್ಳಿಯ ಗಿಲಿಟು ತಾಗಿಸಿ ಬರುವಾಗ ಇನ್ನೊಂದು ಕಡೆಯಿಂದ ಬಿಸಿಯಾದ ಅಕ್ಷರಗಳುಳ್ಳ ಒಂದು ಅಚ್ಚು ಬಂದು ಬೆಳ್ಳಿಯ ಗಿಲಿಟಿನ ಮೇಲೆ ಒತ್ತುವದು. ಇವಾದ ನಂತರ ಈ ಪೆನ್ಸಿಲುಗಳನ್ನು ಇನ್ನೊಂದು ಕೋಣೆಗೆ ಕೊಂಡುಹೋಗುವರು. ಅಲ್ಲಿ ಹೆಂಗಸರು ಇವುಗಳನ್ನು ಕಟ್ಟುಗಳಾಗಿ ಕಟ್ಟಿ ಪೆಟ್ಟಿಗೆಗಳಲ್ಲಿ ತುಂಬಿಸಿ ಮಾರಾಟಕ್ಕೆ ಸಿದ್ಧಮಾಡುವರು. ಈ ಕಾರ್ಖಾನೆಯಲ್ಲಿ ಹೆಚ್ಚಿನ ನ್ಯೌಕರು ಹೆಂಗಸರಾಗಿರುವರು.

ಈ ಕಾರ್ಖಾನೆಯಲ್ಲಿ ೩೦ ನಮೂನೆಯ ಕಪ್ಪು ಪೆನ್ಸಿಲುಗಳೂ, ಬಣ್ಣದ ಪೆನ್ಸಿಲುಗಳೂ, ಕೋಪಿಂಗ್ ಪೆನ್ಸಿಲೂ ತಯಾರಾಗುವವು. ಈ ಕಾರ್ಖಾನೆಯವರಿಗೆ ಅನೇಕ ಎಕ್ಸಿಬೀಶನುಗಳಲ್ಲಿ ಮೆಡಲುಗಳು ಸಿಕ್ಕಿವೆ. ಕಳೆದ ವೆಂಬ್ಲಿ ಎಕ್ಸಿಬೀಶನಿನಲ್ಲಿಯೂ ಮೆಡಲುಗಳು ಸಿಕ್ಕಿವೆ. ಇವುಗಳಲ್ಲಿ ತಯಾರಾಗುವ ಪೆನ್ಸಿಲುಗಳನ್ನು ಬರೋಡಾ, ತಿರುವಾಂಕೂರು, ಜಮ್ಮು ಕಾಶ್ಮೀರ ಮುಂತಾದ ಆಶ್ರಿತ ರಾಜ್ಯಗಳ ಸರಕಾರದವರು ಈ ಪೆನ್ಸಿಲುಗಳನ್ನು ಉಪಯೋಗಿಸುತ್ತಿರುವರು. ನಮ್ಮ ಮದರಾಸು ಸರಕಾರದವರೂ ಈ ಕಂಪೆನಿಯ ಪೆನ್ಸಿಲುಗಳನ್ನೇ ಸರಕಾರ ಆಫೀಸುಗಳಿಗೆ ಉಪಯೋಗಿಸಬೇಕೆಂದು ಹುಕುಂ ಕೊಟ್ಟಿರುವರು.

ಇದೇ ನಮೂನೆಯ ಕಾರ್ಖಾನೆ ಸಾವಿರಾರು ಆಗಲಿ!

ಪತ್ರವ್ಯವಹಾರ.

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವದೇ.]

ಅಯ್ಯಾ,

ಕಳೆದ ನವಯುಗದ ಸಂಚಿಕೆಯಲ್ಲಿ ಬಂಗ್ರಮಂಜೇಶ್ವರ ಪಟೇಲರ ವಿಷಯ ರಾ ಜೆ. ಡಿ. ಸುಚಿತ್ರರು ಒಂದು ಪತ್ರವ್ಯವಹಾರವನ್ನು ಬೆಳೆಸಿದರು. ೧೯೨೫ನೇ ಇಸವಿಯ ದಶಂಬರ ತಿಂಗಳಲ್ಲಿ ಮೊಕ್ತೇಸರರಾದ ರಾ। ಆಳ್ವರಿಗೆ ೬ ವರ್ಷದ ಸರ್ವಿಸಿನ ಕುರಿತು ಬಹಳ ಚಲೋ ಸರ್ಟಿಫಿಕೇಟು ಕೊಟ್ಟರು. ೧೮೮೬ನೇ ಇಸವಿಯಿಂದ ೧೯೦೭ರ ತನಕ ನಿರಾಂತಕವಾಗಿ ಕೆಲಸ ನಿರ್ವಹಿಸಿದ ರಾ। ಶ್ಯಾಮರಾಯರ ಸರ್ವಿಸನ್ನೂ, ನಂತರದ ೮ ವರ್ಷಗಳ ವರೇಗೆ ಕೆಲಸ ನಿರ್ವಹಿಸಿದ ರಾ। ಮಂಗೇಶರಾವ್ ಮತ್ತು ಅವರ ಸಹೋದರರ ಸರ್ವಿಸನ್ನೂ ಸಹಾ ಹೊಗಳಲಿಕ್ಕೆ ಕೈಬಾರದೆ ಇದ್ದದ್ದು ತುಂಬಾ ವ್ಯಸನಕರವಾಗಿದೆ. ಗ್ರಾಮಸ್ಥರಿಗೂ, ಸಕಲ ಸರಕಾರಿ ಉದ್ಯೋಗಸ್ಥರಿಗೂ ಸಕಲ ಕಾರ್ಯಗಳಿಗೆ ಅಗತ್ಯಬೀಳುವ ಪಟೇಲರನ್ನು ತಮ್ಮ ಗ್ರಾಮದಲ್ಲಿಯೇ ಸಂಕಾರದವರು ನೇಮಿಸುವಾಗ ರಾ। ಆಳ್ವರಿಂದ ಕಟಬೂಲು ಪಡೆದ ತಲುಬು ನಿರ್ಣಯಿಸಿ ಅವರನ್ನೇ ಮೊಕ್ತೇಸರರು ಮಾಡಬೇಕಾಗಿ ಸರಕಾರಕ್ಕೆ ಒಂದು ದೊಡ್ಡ ಲಾಭವನ್ನು ಸೂಚಿಸುವ ಸುಚಿತ್ರರ ಚಿತ್ರವು ಯಾವ ಬೈಲಿನಿಂದ ಬಂತೋ ಎಂಬದು ತಿಳಿಯಲಿಲ್ಲ. ಬಂಗ್ರಮಂಜೇಶ್ವರಕ್ಕೆ ಪಟೇಲರ ಬಾಳಿಕೆಯು ಹೆಚ್ಚಾಗಿ ೪ ವರ್ಷದ ಪ್ರಕಾರ ಬಂದಿರುತ್ತದೆಂಬದು ಕೆಳಗಣ ವಾಕ್ಯಗಳಿಂದ ಕಂಡುಬರುವುದು. ೧೮೫೫ನೇ ಇಸವಿಯಿಂದ ೧೮೮೬ರ ತನಕ ೩೧ ವರ್ಷ ಕಾಲದಲ್ಲಿ ಕೃಷ್ಣಯ್ಯ, ಮಂಜಪ್ಪಯ್ಯ, ನರ್ಸಯ್ಯ, ಚಂದ್ರಮ್ಮಶೆಟ್ಟಿ, ಶೇಷಗಿರಿಯಪ್ಪ, ಲಿಂಗಪ್ಪಯ್ಯ, ಪಾಲಶೆಟ್ಟಿ, ಕೃಷ್ಣಯ್ಯ, ಚಂದಪ್ಪಶೆಟ್ಟಿ ಈ ರೀತಿ ೯ ಜನರೂ, ಮಂಗೇಶರಾವ ಮತ್ತು ಇವರ ಸಹೋದರರ ನಂತರ ಪುನಹಾ ಮಂಗೇಶರಾಯರೂ, ನಂತರ ನರಹರಿಕಾಮ್ತಿರೂ, ಅನಂತರ ಪ್ರೊಬೇಶನರಾಗಿ ಶ್ರೀನಿವಾಸರಾಯರೂ, ತದನಂತರ ಅಂತಪ್ಪ ಸೂಲಾಯರೂ ಕೆಲಸ ನಿರ್ವಹಿಸಿದ ನಂತರ ಈ ಆಳ್ವರು ಬಂದದ್ದಾಗಿರುತ್ತದೆ. ರಾ। ಆಳ್ವರ ಇತರ ಹೊಗಳಿಕೆಯ ಕುರಿತು ಇತರ ಸಂಗತಿಗಳು ಮಾನ್ಯ ಸರಕಾರದವರ ಚಿತ್ತಕ್ಕೇನೇ ತಿಳಿದಿರುವಾಗ ಹೆಚ್ಚಿಗೆ ಬರೆಯುವುದಿಲ್ಲ. ಆದುದರಿಂದ ವಿಜ್ಞಾವುಳ್ಳ ಸರಕಾರದವರು ನವಯುಗದ ಪತ್ರವ್ಯವಹಾರವನ್ನೇ ಮನಸ್ಸಿಗೆ ತಾರದೆ ಇದನ್ನು ಸಹಾ ಪರ್ಯಾಲೋಚಿಸಿ ಗ್ರಾಮಸ್ಥರಿಗೂ ಇತರರಿಗೂ ಸೌಕರ್ಯವಾಗುವಂತೆ ಮೊದಲಿನಂತೆಯೇ ಈ ಗ್ರಾಮಕ್ಕೆ ಒಬ್ಬ ಪಟೇಲರನ್ನು ನೇಮಿಸುವರಾಗಿ ಗ್ರಾಮಸ್ಥರೆಲ್ಲರ ಕೋರಿಕೆಯಾಗಿದೆ. ಬಹುಮಾನಪಟ್ಟ ಜಿಲ್ಲಾ ಕಲೆಕ್ಟರವರು ಈ ಕಡೆ ನಿಗಾಕೊಡದಿರಲಾರರೆಂದು ಭಾವನೆ.

ಬಂಗ್ರಮಂಜೇಶ್ವರ, ತಾ. ೨೪—೬—೧೯೨೬. } "ಶೋಧಕ."

ಬೇಕಾಗಿದ್ದಾರೆ.

ಮಂಗಳೂರು ಮತ್ತು ನೆರೆಜಿಲ್ಲೆಗಳಲ್ಲಿ ಜೀವವಿಮೆ ಸಂಘದ ಕೆಲಸವನ್ನು ಉತ್ಸಾಹದಿಂದ ನಿರ್ವಹಿಸುವ ಏಜೆಂಟರರು ಬೇಕಾಗಿದ್ದಾರೆ. ತುಂಬಾ ಕಮಿಷನ್ ಕೊಡಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ಇಂಗ್ಲೀಷಿನಲ್ಲಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

The Secretaries,
The East & West Insurance Co. Ltd.,
65, APOLLO STREET,
FORT BOMBAY.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ—ಇದು ಪುನರ್ವಸು ಅತ್ರೇಯ ಎಂಬ ಮಹರ್ಷಿಯಿಂದ್ಯ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ಫೂರ್ತಿಮಿಶ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. | 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0 | ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 288,500—0—0 | ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪನಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿಂಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸು, ಏಲಂ ಇಶ್ತಿಹಾರು, ಮಾರಾಟವನ್ನು ಕುರಿತು ಇಶ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಶ್ತಿಹಾರು, ಮಾರಾಟವನ್ನು ಕುರಿತು ಇಶ್ತಿಹಾರು 1ರ ಕ್ರಯ 0—3—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ ಪದಕವನ್ನು ಬಹುಮಾನವಾಗಿ ಪಡೆದಿರುವ ಎಸ್. ಪಿ. ಆಚಾರ್ಯ ಇವರಿಂದ ತಯಾರಿಸಲ್ಪಟ್ಟ ಉಪ್ಪಿನಕಾಯಿಗಳನ್ನು ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ತುಂಬಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮಹೋಲ್ಲಾಸಿನಿ ಕಾಫಿ ಕ್ಲಬ್, ಮಾರ್ಕೆಟು ರೋಡು, ಮಂಗಳೂರು. | ಅಥವಾ | ಸದಾನಂದ ಕಾಫಿ ಕ್ಲಬ್, ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ವಜ್ರಾಂಗ-ಬಿಂದು

ರಕ್ತ ಶುದ್ಧಿ | ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡುಕಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಭವಳ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಅದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜೆಂಟರಾಗಲು ಅಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.
ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯು ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಹುಬ್ಬಳ್ಳಿ, (ಜಿಲ್ಲಾ ಧಾರವಾಡ.)

—ಒಬ್ಬ ಧೈರ್ಯಶಾಲಿಯಾದ ಮಾರ್ವಾರಿ ಹೆಂಗಸಿನ ಅಸಾಹಸ ಹೋರಾಟ; ಈ ಹೆಂಗಸು ತನ್ನ ಒಂದು ಮಗುವನ್ನು ಹಿಡಿದುಕೊಂಡು ರೈಲಿನಲ್ಲಿ ಎಲ್ಲಿಯೋ ಪ್ರಯಾಣವನ್ನು ಬೆಳಸುತ್ತಿದ್ದಳು. ರೈಲು ಬಂಡಿಯು ಹೋಗುತ್ತಿರುವಾಗ ಅವಳು ಕೂತಿರುವ ಬಂಡಿಯಲ್ಲಿ ಮೂರು ಜನ ಕಳ್ಳರು ಥಕ್ಕನೆ ಅವಳಿರುವ ಗಾಡಿಗೆ ಬಂದು ಸೇರಿದರು. ಆದರೆ ಈ ಹೆಂಗಸು ಏನೂ ಭಯವಿಲ್ಲದೆ ಕುಳಿತಿರುವ ಸಮಯದಲ್ಲಿ ಕಳ್ಳರು ಇವಳ ಮೈಮೇಲಿರುವ ಆಭರಣವನ್ನು ಎಳಕೊಳ್ಳಲು ಉಪಕ್ರಮಿಸಿದರು. ಕೂಡಲೇ ಈ ಹೆಂಗಸು ಧೈರ್ಯಗೊಂಡು ಆ ಮೂವರಲ್ಲೊಬ್ಬನನ್ನು ಹಿಡಿದು ಬಹಳ ಹೊತ್ತಿನ ತನಕ ಜಗಳವನ್ನಾಡಿ ಕೊನೆಗೆ ಈ ಹೆಂಗಸೂ ಮತ್ತು ಅವಳ ಒಟ್ಟಿಗೆ ಹೋರಾಡಿದ ಕಳ್ಳನೂ ರೈಲ್ವೆ ಗಾಡಿಯಿಂದ ಹೊರ ಬಿದ್ದು ಅಕ್ಷಣವೇ ಇಬ್ಬರೂ ಮರಣಹೊಂದಿದರು. ನಂತರ ಈ ಎರಡು ಶವಗಳನ್ನೂ ಬುರದ್ವಾನ ರೈಲ್ವೇ ಸ್ಟೇಶನಿಗೆ ತೆಗೆದುಕೊಂಡು ಹೋಗಿರುವರು. ಇದರ ತನಿಖೆಯು ನಡಿಯುತ್ತಲಿದೆ.

ದಕ್ಷಿಣ ಕನ್ನಡ.

ಅಮಟಾಡಿ—ಈ ಗ್ರಾಮಕ್ಕೆ ಇಷ್ಟರ ವರೆಗೆ ಒಂದು ಎಲಿಮೆಂಟರಿ ಶಾಲೆಯು ಇಲ್ಲದೆ ಹುಡುಗರು ಬಹಳ ಕಷ್ಟಪಡುತ್ತಿರುವರು. ಹೊಸತಾಗಿ ತೆರೆಯಲಾಗುವ ಶಾಲೆಗಳಲ್ಲಿ ಒಂದನ್ನು ಇಲ್ಲಿ ತೆರೆದರೆ ಆಗುತ್ತಿಲ್ಲವೆ?

ಕೊಂಬಳೆ—ಕೆಲವು ದಿವಸಗಳ ಹಿಂದೆ ಇಲ್ಲಿಗೆ ಸಮೀಪ ಇಚ್ಲಂಪಾಡಿ ಗ್ರಾಮದ ಬಿಲ್ಲ ಸುಬ್ಬಂಞ್ಯೆಂಬವನು ಅವನ ಸ್ವಜಾತಿಯ ಮೂವರು ಹೆಂಗಸರನ್ನು ಕಡುಕತ್ತಿಯಿಂದ ತಿವಿದು ಗಾಯಪಡಿಸಿದ್ದಾಗಿಯೂ ಇವರೆಲ್ಲರೂ ಕಾಸರಗೋಡು ಆಸ್ಪತ್ರೆಯಲ್ಲಿ ಗುಣಹೊಂದುತ್ತಿರುವರಾಗಿ ವದಂತಿಯಿದೆ.

ಈ ತಾಲೂಕಿನ ಇತರ ಶಾಲೆಗಳಲ್ಲಿ ಜಾರಿಗೆ ತಂದಿರುವಂತೆ ಬೋರ್ಡು ಆಡಳಿತೆಯಲ್ಲಿರುವ ಇಲ್ಲಿಯ ೩ ಶಾಲೆಗಳೂ ಇದೇ ಜೂನ್ ತಾ. ೭ರಿಂದ ಬೆಳಿಗ್ಗೆ ೭ ಗಂಟೆಗೆ ತೆರೆಯಲಾಗುವಂತೆ ಆದ ಹುಕುಮಿನಿಂದ ತುಂಬಾ ಕಷ್ಟವುಂಟಾಗಿಯದೆ. ಈ ಶಾಲೆಗಳಲ್ಲಿ ಅಭ್ಯಾಸಿಸುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ನೆರೆಗ್ರಾಮಗಳ ದೂರ ದೂರದ ಚಿಕ್ಕ ಬಾಲಕರಾಗಿರುವದರಿಂದ ತನ್ಮೂಲಕ ಉಂಟಾಗುವ ಅನಾನುಕೂಲತೆಗಳನ್ನು ಕಾಣಿಸಿ ಗ್ರಾಮಸ್ಥರು ಮಾನ್ಯ ಬೋರ್ಡು ಪ್ರೆಸಿಡೆಂಟರವರಿಗೆ ಮನವಿಮಾಡಿಕೊಂಡಿರುವರು. ಬೋರ್ಡಿನವರು ಇದಕ್ಕೆ ತ್ವರ್ಯ ನಿಗಾಕೊಡಬೇಕಾಗಿದೆ.

ಇಲ್ಲಿಯ ಬೋರ್ಡು ಲವರ್ ಎಲಿಮೆಂಟರಿ ಶಾಲೆಯ ಕಟ್ಟೋಣದ ಮನೆಯಲ್ಲಿ ಒಬ್ಬರಿಗೆ ಮೈಲಿಗೆಯಾಗಿರುವದರಿಂದ ಇದೇ ತಾ. ೨೭ರ ವರೆಗೆ ಶಾಲೆಯನ್ನು ಮುಚ್ಚುವರೆ ಹುಕುಂ ಆದದ್ದು ಯೋಗ್ಯವಾಗಿದೆ.

ಬಂಟವಾಳ—ಇಲ್ಲಿಯ ಕೊಟ್ರವನಗಂಡಿಯಿಂದ ತುಂಬೆಗೆ ಹೋಗುವ ಮಾರ್ಗದಲ್ಲಿ ಕೆಸರು ಬಹಳ ಹೆಚ್ಚಾಗಿ ಜನರು ಗದ್ದೆಗೆ ಇಳಿದು ಹುಣಿಯಿಂದ ಸಂಕದ ಹತ್ತಿರ ಮೇಲಕ್ಕೇರುವರು. ಗಾಡಿಯ ಚಕ್ರಗಳು ಕೆಸರಿನಲ್ಲಿ ಹೂತುಹೋಗುತ್ತವೆ. ಮಾರ್ಗದಲ್ಲಿ ಉಂಟಾದ ಕೆಸರಿನಲ್ಲಿ ಎಮ್ಮೆಗಳು ಸಂತೋಷದಿಂದ ಹೊರಳಾಡುತ್ತಿವೆ.

ಇಲ್ಲಿಯ ತಾಲೂಕು ಬೋರ್ಡು ಮೆಂಬರರಲ್ಲಿ ಒಬ್ಬರು ಇಲ್ಲಿಯ ಬೋರ್ಡು ಶಾಲೆಯನ್ನು ಸಂದರ್ಶಿಸಿ ಹುಡುಗರು ಸರಿಯಾಗಿ ಶಾಲೆಗೆ ಬರುವಂತೆ ನೋಡಿಕೊಳ್ಳಬೇಕೆಂದೂ ಉಪಾಧ್ಯಾಯರಿಗೆ ಹೇಳಿ ತೆರಳಿದರಂತೆ. ಈ ಶಾಲೆಯ ಒಂದನೇ ಮತ್ತು ಎರಡನೇ ಕ್ಲಾಸುಗಳಿಗೆ ಮಾತ್ರ ಸಂಬಳ ಮಾಫಿಮಾಡಿಯದೆಂದು ಬೋರ್ಡು ಮೀಟಿಂಗಿನಲ್ಲಿ ಪಾಸಾಗಿತು. ಈ ಶಾಲೆಯಲ್ಲಿರುವ ೩, ೪, ೫ನೇ ಕ್ಲಾಸುಗಳಲ್ಲಿಯೂ ಸಂಬಳ ವಸೂಲು ಮಾಡುವದಿಲ್ಲವಂತೆ. ಹೀಗಾಗಲು ಕಾರಣವೇನೋ ತಿಳಿಯದು. ಈ ಶಾಲೆಯ ಹತ್ತಿರ ಮಾರ್ಗವು ಎತ್ತರರಾಗಿ ಮಳೆಯ ನೀರು ಹಿತ್ತಲಿನಿಂದ ಹೊರಗೆ ಹರಿದುಹೋಗಲು ಸಾಧ್ಯವಿಲ್ಲದೆ ನೀರು ಹಿತ್ತಲಲ್ಲಿಯೇ ಜಮೆಯಾಗುತ್ತದೆ. ಇದು ಶಾಲಾ ಮಕ್ಕಳ ಆರೋಗ್ಯಕ್ಕೆ ವಿರೋಧವಲ್ಲವೇ?

ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಯಲ್ಲಿ ೫ನೇ ದರ್ಜೆಯನ್ನು ತೆರೆದಿರುತ್ತಾರೆ. ಇಂಗ್ಲಿಷ ಕಲಿಸುವುದಕ್ಕೆಂದು ಏಟ್ನ ಸೆಕೆಂಡ ರೀಡರ್ ಇಟ್ಟಿರುವರಂತೆ. ಇದನ್ನು ಕಲಿಸುವವರು ಯಾರೆಂದು ತಿಳಿಯುವದಿಲ್ಲ.

ಸುರತಕಲ್—ಮುಲ್ಕಿಗೂ ಮಂಗಳೂರಿಗೂ ಸಮ ಮಧ್ಯದಲ್ಲಿರುವ ಈ ಊರಿಗೆ ವೈದ್ಯ ಸಹಾಯವು ಇಲ್ಲದೆ ಜನರು ಬಹಳ ಕಷ್ಟಪಡುತ್ತಿರುವರು. ಹೊಸತಾಗಿ ಸಂಕಲ್ಪನಾದ ಲೋಕಲ್ ಆಸ್ಪತ್ರೆಯನ್ನು ಇಲ್ಲಿ ತೆರೆದರೆ ಚಲೋದಾಗುತಿತ್ತು. ಇಲ್ಲಿಯ ತಾಲೂಕು ಬೋರ್ಡು ಮೆಂಬರವರು ಈ ಪ್ರಶ್ನೆಯನ್ನು ಬೋರ್ಡಿನ ಮುಂದೆ ತಂದರೆ ಒಳ್ಳೇದಿತ್ತು!

ಶಂಕರನಾರಾಯಣ—ಇಲ್ಲಿರುವ ಲೋಕಲ ಫಂಡು ಡಿಸ್ಪೆನ್ಸರಿಯನ್ನು ಕೆಲವು ವರುಷಗಳ ಹಿಂದೆ ಮುಚ್ಚಿದರು. ಈಗ ತಿರಿಗಿ ಇಲ್ಲಿಯೂ ವಂಡ್ಸೆಯಲ್ಲಿಯೂ ಒಂದೊಂದು ಲೋಕಲ್ ಆಸ್ಪತ್ರೆಯನ್ನು ಬೇಗನೆ ತೆರಿಯುವುದರಲ್ಲಿದ್ದಾರೆ.

ಮಂಜೇಶ್ವರ—ಪಟ್ಟದ ಸೊಸ್ಯಾಟಿಯ ಸೆಕ್ರೆಟರಿಗಳಾದ ರಾ। ಶಂಕರ ಆಳ್ವರು ಸುಮಾರು ೩,೨೫೦ ರೂಪಾಯಿ ದುರುಪಯೋಗ ಪಡಿಸಿರುವರೆಂಬ ತಕ್ರಾರಿನ ಮೇಲೆ ಸೊಸ್ಯಾಟಿಯ ಇನ್ಸಪೆಕ್ಟರರು ಕೊಟ್ಟ ಫಿರ್ಯಾದಿ ಪ್ರಕಾರ ಕೈದು ಮಾಡಲ್ಪಟ್ಟು ಈಗ ರಿಮಾಂಡಿನಲ್ಲಿರುವರು. ಸುಳ್ಳು ಸಾಲಗಳನ್ನು ಬುಕ್ಕಿನಲ್ಲಿ ಕಾಣಿಸಿ ಕಡೆಗೆ ಪುಸ್ತಕಗಳೂ ಬೋಂಡುಗಳೂ ಕಾಣೆಯಾಗಿಯದಾಗಿ ಸಾಧಿಸಿದರಂತೆ. ವಿಧಿಯು ತಪ್ಪಲಾರದು. ಇಲ್ಲಿಯ ಕೆಲವು ಸಂಘಗಳು ಈಗ ಬಹಳ ಆಲೋಚನೆಯಲ್ಲಿವೆ.

ಮದುವೆ ಆಗಿ ನೆರೆಯುವ ಮುಂಚೆಯೇ, ಅಥವಾ ಮಕ್ಕಳು ಹುಟ್ಟಿದ ನಂತರ ತಮ್ಮ ಹೆಂಡಂದಿರನ್ನು ಬಿಟ್ಟು ಬೇರೆ ಲಗ್ನವಾಗುವ ರೂಢಿಯು ಇತ್ತೀಚೆಗೆ ಬ್ರಾಹ್ಮಣರಲ್ಲೂ ಬ್ಯಾರಿಗೆ ಬಂದದ್ದು ಶೋಚನೀಯ. ಹಾಗೆ ಬಿಟ್ಟು ಬಿಟ್ಟ ಹೆಂಡಂದಿರು ಅದೇ ಲಗ್ನವನ್ನು ನೋಡಿ ಒಂದು ಹೊಸ ಲಗ್ನವನ್ನು ಬೆಳಸಿ ದಂಪತಿಗಳ ಸಮೇತವಾಗಿ ಎದುರುಗೊಳ್ಳುವುದು ಬಹಳ ಲೇಸು.

ಹೊಸ ಬಿಟ್ಟು ಪಂಚ್ಯಾತ ಕೋರ್ಟು ಪ್ರೆಸಿಡೆಂಟರ ಚುನಾವಣೆಯು ತಾ. ೨೨ಕ್ಕೆ ಜರಗುವದಿತ್ತು. ಮೆಂಬರರಿಗೆ ನೋಟೀಸು ಬಾರದೆ ಆ ದಿನ ಜರಗಲಿಲ್ಲ. ಇನ್ನೆಷ್ಟು ಕಾಲ ಹೋಗುವದೆಂದು ತಿಳಿಯಲಿಲ್ಲ.

ಪೋಸ್ಟಲ್ ಸುಪರಿಂಟೆಂಡೆಂಟ ಧೊರೆಗಳವರು ಇಲ್ಲಿಗೆ ಚಿತ್ತೈಸಿದಾಗ ಈಗಿನ ಟಪ್ಪಾಲು ಬಟವಾಡೆಯನ್ನು ಮೈಲು ತಿಳಿದ್ದರಿಂದ ಉಂಟಾಗುವ

ಕೊಂದರೆಗಳನ್ನು ಹೇಳಿಕೊಂಡಲ್ಲಿ ಜುಲೈ ತಾ. ೧ರಿಂದ ಅಲ್ಲಿ ಮೈಲು ಬಂಡಿಯು ನಿಲ್ಲುವಂತೆ ತಾನು ಪ್ರಯತ್ನಮಾಡುವೆನಾಗಿ ಭರವಸೆ ಇತ್ತಿರುವರಂತೆ.

ಬಂಗ್ರಮಂಜೇಶ್ವರ:—ಈ ಗ್ರಾಮಕ್ಕೆ ಮೊದಲಿನಂತೆಯೇ ಒಬ್ಬ ಪಟೇಲರು ಬರುವರೆಂಬದನ್ನು ಕೇಳಲು ಸಂತೋಷಪಡುತ್ತೇವೆ.

ಕನ್ಯಾನ:—ಇಲ್ಲಿಯ ಮ। ರಾ। ಶಂಭು ಭಟ್ರ ಮಗ ತಿಮ್ಮಣ್ಣ ಭಟ್ರು ತನ್ನ ತನುಮನಧನವನ್ನು ಅರ್ಪಿಸಿ ಹೊಸತಾಗಿ ಕಟ್ಟಿಸಿ ಕೊಟ್ಟ ಶಾಲೆ ಕಟ್ಟೋಣದ ಪ್ರವೇಶೋತ್ಸವವು ಜೂನು ತಿಂಗಳ ತಾ. ೨೧ನೇ ಸೋಮವಾರ ಊರಪರವೂರ ಮಾನ್ಯಗೃಹಸ್ಥರ ಕೂಡುವಿಕೆಯಿಂದ ಬಹಳ ವಿಜೃಂಭಣೆಯಿಂದ ನೆರವೇರಿತು. ಈ ಕಟ್ಟೋಣವನ್ನು ಕಟ್ಟಿಸಿಕೊಟ್ಟ ಮಹನೀಯರಿಗೆ ಭಗವಂತನು ದೀರ್ಘಾಯುರಾರೋಗ್ಯವನ್ನು ದಯಪಾಲಿಸಲಿ.

ಮುಲ್ಕಿ:—ಇಲ್ಲಿಯ ಯೂನಿಯನ್ ಕ್ಲಬ್ಬಿನ ೧೨ನೇ ವರ್ಷ ವಂತ್ಸ್ಯೋತ್ಸವವೂ, ದಿವಂಗತ, ಡಾಕ್ಟರ್ ಬೋಳ ಶ್ಯಾಮರಾಯರವರ ಸ್ಮಾರಕ ದಿನಾಚರಣೆಯೂ, ಇದೇ ತಾ. ೧೬—೬—೧೯೨೬ನೇ ಬುಧವಾರ ಶ್ಯಾಮ ಘಂಟೆ ೫ಕ್ಕೆ "ಡಾಕ್ಟರ್ ಬೋಳ ಶ್ಯಾಮರಾವ್ ಹೋಲ್" ನಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲಾ ಮುಖ್ಯ ಉಪಾಧ್ಯಾಯ, ಮ। ರಾ। ರಾ। ಉಳ್ಳಾಲ ಮಂಗೇಶರಾವ್ ಅವರ್ಗಳ್, ಬಿ. ಎ. ಯಲ್. ಟಿ. ಯವರು ಅಗ್ರಪೀಠವನ್ನು ಅಲಂಕರಿಸಿದ್ದರು. ಕಟ್ಟೋಣವು ತಳಿರು ತೋರಣಗಳಿಂದ ಚಲೋದಾಗಿ ಶೃಂಗರಿಸಲ್ಪಟ್ಟಿತ್ತು. ಮೆಂಬರರ ಹಾಜರಿಯು ಸಾಕಷ್ಟು ವಿಶೇಷವೇ ಇತ್ತು. ಸ್ಥಳೀಯ ಚಳವಳದಲ್ಲಿ ಮುಖ್ಯ ಸೂತ್ರಧಾರಿಗಳಾಗಿರುವ ಮದ್ರಾಸ್ ಹೈಕೋರ್ಟು ವಕೀಲ್, ಮ। ರಾ। ರಾ। ಕೆ. ಸಂಜೀವ ಕಾಮತ್ ಅವರ್ಗಳ್ ಬಿ. ಎ. ಬಿ ಯಲ್., ರವರು ದಯಮಾಡಿಸಿದ್ದರು. ಪ್ರಥಮದಲ್ಲಿ ರಾ। ಕೆ. ವಾಸುದೇವ ಕಿಣಿ, ಬಿ. ಎ. ಯವರು, ಕೀರ್ತಿಶೇಷ ಡಾಕ್ಟರ್ ಬೋಳ ಶ್ಯಾಮರಾಯರ ಜನ್ಮಚರಿತ್ರೆಯನ್ನು ಮನೋರಂಜಕವಾಗಿ ವಾಚಿಸಿದರು. ಇವನ್ನೇ ಹೆಚ್ಚಿನ ಸ್ವಾರಸ್ಯವುಳ್ಳ ವಾಕ್ಚಾತುರ್ಯದಿಂದ ರಾ. ಟಿ. ನಾರಾಯಣ ಶ್ಯಾನುಭಾಗರು ಸಮರ್ಥಿಸಿ, ಚಲೋದಾಗಿ ಚಿಕ್ಕ ಭಾಷಣವನ್ನಿತ್ತರು. ತರುವಾಯ, ರಾ। ಇ. ಸಾನಂದರವರು ತಮ್ಮ ಹಾಸ್ಯಯುಕ್ತವಾದ ಮತ್ತು ಇಂಪಾದ ಮಾತುಗಳಿಂದ ಕ್ಲಬ್ಬಿನ ಅಭಿನಂದವನ್ನು ಸೂಚಿಸಿ, ಸಭಿಕರನ್ನು ಅತ್ಯಾನಂದಗೊಳಿಸಿದರು. ಇದಾಗಲು ಕ್ಲಬ್ಬಿನ ಗೌರವ ಕಾರ್ಯದರ್ಶಿಗಳಾದ ರಾ। ಬಿ ಭೋಜರಾಯರು ೧೯೨೬ನೇ ಇಸವಿ ಮೇ ತಾ. ೩೧ಕ್ಕೆ ಅಂತ್ಯವಾದ ವಾರ್ಷಿಕ ವರದಿಯನ್ನು ಓದಿ ಮಹಾ ಸಭೆಯ ಮುಂದಿಟ್ಟರು. ಇದು ಸರ್ವಾನುಮತದಿಂದ ಅಂಗೀಕರಿಸಲ್ಪಾಯಿತು. ರಾ. ಬೋಳ ಮಾಧವರಾಯರು ಕ್ಲಬ್ಬಿನ ಜನನ ಮತ್ತು ಬೆಳವಣಿಗೆಯ ಕುರಿತು ಸುರಸವಾದ ಮಾತುಗಳಿಂದ ವಿವರಿಸಿ, ಕ್ಲಬ್ಬಿನ ಶ್ರೇಯೋಭಿವೃದ್ಧಿಗೆ ಸೆಕ್ರೆಟರಿಯವರ ಅವಿಶ್ರಾಂತ ಪರಿಶ್ರಮವೇ ಕಾರಣವೆಂದು ಒತ್ತಿ ಹೇಳಲು ರಾ। ಯಂ. ರಾಮಣ್ಣ ಶೆಟ್ರು ಇವನ್ನು ಸಂಪೂರ್ಣವಾಗಿ ಅನುಮೋದಿಸಿ, ಕ್ಲಬ್ಬಿನ ಪುಸ್ತಕಾಲಯವನ್ನು ಇನ್ನಷ್ಟು ಮಟ್ಟಿಗೆ ಬಲಪಡಿಸಬೇಕೆಂಬ, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅನಂತರ ಕ್ಲಬ್ಬಿಗೆ ಚಾಲ್ತಿವರ್ಷ ತರಿಸತಕ್ಕ ಪತ್ರಿಕೆಗಳು, ಸಾಮಗ್ರಿಗಳು ಇತ್ಯಾದಿಗಳ ಸೂಚನೆಗಳು ಮುಂದೆ ಬಂದು ಸರ್ವಸಮ್ಮತದಿಂದ ತೀರ್ಮಾನಿಸಲ್ಪಟ್ಟು ಕಟ್ಟೋಣ ವಿಸ್ತರತೆಯ ಬಗ್ಗೆ ಒಂದು ಚಿಕ್ಕ ಉಪಕಮಿಟಿಯು ಏರ್ಪಡಿಸಲ್ಪಟ್ಟು, ಹೊಸ ವರ್ಷದ ಆಡಳಿತ ಸಭೆ, ಕಾರ್ಯನಿರ್ವಾಹಕ ಸಭೆ, ಒಡಿಟರರು ಇತ್ಯಾದಿಗಳ ಚುನಾವಣೆಯು ನಡೆಯಲು, ಸನ್ಮಾನ್ಯ ಅಧ್ಯಕ್ಷರು ತಮ್ಮ ಅರ್ಥಗರ್ಭಿತವಾದ ಮತ್ತು ರಸಭರಿತವಾದ ವಾಕ್ಸರಣಿಯಿಂದ ಅನೇಕ ಹಿತಸೂಚನೆಗಳನ್ನು ಒತ್ತಿ ಹೇಳಿ ಕೂಡಿದ ಸಭಿಕರ ಚಿತ್ತಾಕರ್ಷಣವನ್ನು ಮಾಡಿ ಒಳ್ಳೇ ಗಂಭೀರವಾದ ಶೈಲಿಯಿಂದ ಕ್ಲಬ್ಬಿನ ಶ್ರೇಯೋಭಿವೃದ್ಧಿಯನ್ನು ಬಯಸಿ, ತಮ್ಮ ಸುರಸವಾದ ಭಾಷಣವನ್ನು ಮುಗಿಸಿದರು. ನಂತರ ಕ್ಲಬ್ಬಿನ ಅಧ್ಯಕ್ಷರಾದ ರಾ। ಯಚ್. ವಿಷ್ಣು ಭಟ್ ಬಿ. ಎ., ರವರು, ಅಧ್ಯಕ್ಷಮಹಾಶಯರಿಗೂ, ರಾ ಕೆ. ಸಂಜೀವ ಕಾಮತರಿಗೂ ಹೂವಿನ ಹಾರ ಹಾಕಿ, ಕೂಡಿದ ಎಲ್ಲಾ ಮಹನೀಯರ ಉಪಕಾರ ಸ್ಮರಿಸಲು ಸಕಲರನ್ನೂ ಫಲಹಾರ ತಾಂಬೂಲಾದಿಗಳಿಂದ ಸತ್ಕರಿಸಿದಂತಾದ ಮೇಲೆ ಅಂದಿನ ಸಂತೋಷ ಸಮಾರಂಭವು ಕೊನೆಗೊಂಡಿತು.

ಮಂಗಳೂರು.

ಇದೇ ಬರುವ ಜುಲೈ ತಾ. ೩ನೇ ಶನಿವಾರ ಡಿಸ್ಟ್ರಿಕ್ಟಬೋರ್ಡು ಮೆಂಬರರ ಇನ್ನೊಂದು ಜನರಲ್ ಮೀಟಿಂಗು ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಸಾಯಂಕಾಲ ೩ ಗಂಟೆಗೆ ಜರಗಲಿಕ್ಕಿರುವದು.

ಮದರಾಸಿನಲ್ಲಿಯ ಪೆನ್ಸಿಲು ಕಾರ್ಖಾನೆ.

ದೇಶದಲ್ಲಿ ಸ್ಥಾಪಿಸಿದ ಕೈಗಾರಿಕೆ ಕಾರ್ಖಾನೆಗಳಲ್ಲಿ ಮದರಾಸಿನ ಪೆನ್ಸಿಲು ಕಾರ್ಖಾನೆಯು ವಿಲಾಯತಿಯ ಪೆನ್ಸಿಲು ಕಾರ್ಖಾನೆಗಳ ರೀತಿಯಲ್ಲಿಯೇ ಉತ್ತಮ ಪೆನ್ಸಿಲುಗಳನ್ನು ತಯಾರಿಸುತ್ತಿದೆ ಮೊದಲು ಈ ಕಾರ್ಖಾನೆಯನ್ನು ಸರಕಾರದವರು ನಡಿಸುತ್ತಿದ್ದರು. ಅನಂತರ ಇದನ್ನು ಮಿ। ವಿ. ಪೆರುಮಾಳ ಚೆಟ್ಟಿಯವರು ಕೊಂಡುಕೊಂಡರು. ಈಗ ಎಸ್. ಆರ್. ಚೆಟ್ಟಿಯವರು ಇದರ ಮೆನೇಜರರಾಗಿರುವರು.

ಪೆನ್ಸಿಲು ತಯಾರಿಸುವುದರಲ್ಲಿ ಬೇಕಾದ ಮುಖ್ಯವಾದ ವಸ್ತುಗಳಲ್ಲಿ ಗ್ರ್ಯಾಫೈಟನ್ನು ತಯಾರಿಸುವುದು ಮೊದಲನೇದಾಗಿದೆ. ಇವರಿಗೆ ಬೇಕಾದ ಗ್ರ್ಯಾಫೈಟನ್ನು ಇವರು ಪರದೇಶಗಳಿಂದ ತರಿಸದೆ ಇಂಡಿಯದಲ್ಲಿಯೇ ಸಿಕ್ಕುವ ಗ್ರ್ಯಾಫೈಟನ್ನು ಉಪಯೋಗಿಸುವರು. ಈಗ ಇವರು ರಾಜಮಂಡ್ರಿಯಿಂದಲೂ ಸಿಂಹಳದ್ವೀಪದಿಂದಲೂ ಈ ಪದಾರ್ಥವನ್ನು ತರಿಸುತ್ತಾರೆ.

ಇವರಿಗೆ ಬೇಕಾದ ಮರವನ್ನು ಮಲಬಾರು, ಮೈಸೂರು, ಹೈದರಾಬಾದು ಮುಂತಾದ ದೇಶಗಳಿಂದ ತರಿಸುತ್ತಿರುವರು. ಕೆಲವು ಪೆನ್ಸಿಲುಗಳಿಗೆ ಬೇಕಾದ ಸಿಡರ ಮರವನ್ನು ಅಮೇರಿಕದಿಂದ ತರಿಸುತ್ತಿರುವರು. ಆದರೆ ಅದೇ ಜಾತಿಯ ಸೀಡರ್ ಮರವನ್ನು ಇಂಡಿಯದಿಂದಲೇ ಸಿಕ್ಕುವ ಹಾಗೆ ಮಾಡುವ ಪ್ರಯತ್ನವು ನಡಿಯುತ್ತಲಿದೆ. ಅಮೇರಿಕದಿಂದ ಬರುವ ಮರಕ್ಕೆ ಹಡಗದ ಭಾಡಿಗೆ ನಾನಾ ತರದ ಸುಂಕ ತರಲಿಕ್ಕಿದ್ದರೂ ಊರಿನ ಮರಕ್ಕಿರುವ ಕ್ರಯಕ್ಕಿಂತಲೂ ಅದರ ಕ್ರಯವು ಕಡಿಮೆ.

ಪೆನ್ಸಿಲು ಮಾಡುವುದರಲ್ಲಿ ಮೊದಲನೇ ಕೆಲಸವು ಗ್ರ್ಯಾಫೈಟನ್ನೂ, ಆವೆ ಮಣ್ಣನ್ನೂ, ಪುಡಿಮಾಡಿ ಶುದ್ಧಮಾಡುವುದೇ. ಇದನ್ನು ಗಾಳಿಸುವ ಸಾಧನಗಳು ಇಂಡಿಯದಲ್ಲಿಯೇ ತಯಾರಿಸಿದವುಗಳು. ಇವುಗಳು ಪರದೇಶದ

ಗಾಳಿಸುವ ಸಾಧನಗಳಷ್ಟೆ ಒಳ್ಳೇಯವೂ, ಉಪಯುಕ್ತವಾದವೂ ಆಗಿವೆ. ಶುದ್ಧಮಾಡಿದ ನಂತರ ಇದನ್ನು ಇನ್ನೊಂದು ಯಂತ್ರಕ್ಕೆ ಹಾಕಿ ಸಪೂರವಾದ ಕಡ್ಡಿಗಳಾಗಿ ಮಾಡುವರು.

ಮರದ ಹಲಗೆಗಳ ತುಂಡುಗಳನ್ನು ತಯಾರಿಸಿ ಅವುಗಳಲ್ಲಿ ಚಡಿ ಮಾಡುವುದಕ್ಕಾಗಿ ಇನ್ನೊಂದು ಯಂತ್ರಕ್ಕೆ ಕೊಡುವರು. ನಂತರ ಗ್ರ್ಯಾಫೈಟ ಕಡ್ಡಿಯನ್ನೂ ಚಡಿಯನ್ನೂ ಇಟ್ಟು ವಜ್ರಸರಿಗೆಯಿಂದ ಕಡಿಸುವರು. ಅನಂತರ ಇವುಗಳನ್ನು ಯಂತ್ರಕ್ಕೆ ಕೊಟ್ಟು ಉರುಟುಮಾಡುವರು. ಹೀಗೆ ಕೆಳಗೆ ಬೀಳುವಾಗ ಆರಾರಂತೆ ಬೀಳುತ್ತವೆ. ಇನ್ನು ಕೆಲವು ಸಣ್ಣ ಯಂತ್ರಗಳು ಇವೆ. ಇವುಗಳಲ್ಲಿ ಕೆಲಸ ಮಾಡುವ ಸಮಯ ಜನಸಹಾಯವೇ ಬೇಡ. ಉರುಟಾದ ಮೇಲೆ ನಯಮಾಡಲಿಕ್ಕೆ ಇನ್ನೂ ಕೆಲವು ಯಂತ್ರಗಳಿಗೆ ಕೊಡುವರು. ನಂತರ ವಾರ್ನಿಶ್ ಮತ್ತು ಬಣ್ಣಕೊಡಲಿಕ್ಕೆ ಇನ್ನೊಂದು ಯಂತ್ರಕ್ಕೆ ಕೊಡುವರು. ಇದರಿಂದ ಒಂದೊಂದೇ ಪೆನ್ಸಿಲು ಬಣ್ಣ ಮತ್ತು ವಾರ್ನಿಸ್ ಕೊಡಲ್ಪಟ್ಟು ಕೆಳಗೆ ಬೀಳುವುದು. ಇವುಗಳು ಕೆಳಗೆ ಬೀಳಬೇಕಾದರೆ ಒಣಗಿಯೇ ಬೀಳುವವು.

ಇನ್ನೊಂದು ಯಂತ್ರಕ್ಕೆ ಕೊಡುವಾಗ ಅದಕ್ಕೆ ಬೆಳ್ಳಿಯ ಗಿಲಿಟು ತಾಗಿಸಿ ಬರುವಾಗ ಇನ್ನೊಂದು ಕಡೆಯಿಂದ ಬಿಸಿಯಾದ ಅಕ್ಷರಗಳುಳ್ಳ ಒಂದು ಅಚ್ಚು ಬಂದು ಬೆಳ್ಳಿಯ ಗಿಲಿಟಿನ ಮೇಲೆ ಒತ್ತುವದು. ಇವಾದ ನಂತರ ಈ ಪೆನ್ಸಿಲುಗಳನ್ನು ಇನ್ನೊಂದು ಕೋಣೆಗೆ ಕೊಂಡುಹೋಗುವರು. ಅಲ್ಲಿ ಹೆಂಗಸರು ಇವುಗಳನ್ನು ಕಟ್ಟುಗಳಾಗಿ ಕಟ್ಟಿ ಪೆಟ್ಟಿಗೆಗಳಲ್ಲಿ ತುಂಬಿಸಿ ಮಾರಾಟಕ್ಕೆ ಸಿದ್ಧಮಾಡುವರು. ಈ ಕಾರ್ಖಾನೆಯಲ್ಲಿ ಹೆಚ್ಚಿನ ಸ್ತ್ರೀಯರು ಹೆಂಗಸರಾಗಿರುವರು.

ಈ ಕಾರ್ಖಾನೆಯಲ್ಲಿ ೩೦ ನಮೂನೆಯ ಕಪ್ಪು ಪೆನ್ಸಿಲುಗಳೂ, ಬಣ್ಣದ ಪೆನ್ಸಿಲುಗಳೂ, ಕೋಪಿಂಗ್ ಪೆನ್ಸಿಲೂ ತಯಾರಾಗುವವು. ಈ ಕಾರ್ಖಾನೆಯವರಿಗೆ ಅನೇಕ ಎಕ್ಸಿಬೀಶನುಗಳಲ್ಲಿ ಮೆಡಲುಗಳು ಸಿಕ್ಕಿವೆ. ಕಳೆದ ವೆಂಬ್ಲಿ ಎಕ್ಸಿಬೀಶನಿನಲ್ಲಿಯೂ ಮೆಡಲುಗಳು ಸಿಕ್ಕಿವೆ. ಇವುಗಳಲ್ಲಿ ತಯಾರಾಗುವ ಪೆನ್ಸಿಲುಗಳನ್ನು ಬಡೋದಾ, ತಿರುವಾಂಕೂರು, ಜಮ್ಮು ಕಾಶ್ಮೀರ ಮುಂತಾದ ಆಶ್ರಿತ ರಾಜ್ಯಗಳ ಸರಕಾರದವರು ಈ ಪೆನ್ಸಿಲುಗಳನ್ನು ಉಪಯೋಗಿಸುತ್ತಿರುವರು. ನಮ್ಮ ಮದರಾಸು ಸರಕಾರದವರೂ ಈ ಕಂಪೆನಿಯ ಪೆನ್ಸಿಲುಗಳನ್ನೇ ಸರಕಾರ ಆಫೀಸುಗಳಿಗೆ ಉಪಯೋಗಿಸಬೇಕೆಂದು ಹುಕುಂ ಕೊಟ್ಟಿರುವರು.

ಇದೇ ನಮೂನೆಯ ಕಾರ್ಖಾನೆ ಸಾವಿರಾರು ಆಗಲಿ!

ಪತ್ರವ್ಯವಹಾರ.

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ, ಸ್ವದೇ.]

ಅಯ್ಯಾ,

ಕಳೆದ ನವಯುಗದ ಸಂಚಿಕೆಯಲ್ಲಿ ಬಂಗ್ರಮಂಜೇಶ್ವರ ಪಟೇಲರ ವಿಷಯ ರಾ ಜೆ. ಡಿ. ಸುಚಿತ್ರರು ಒಂದು ಪತ್ರವ್ಯವಹಾರವನ್ನು ಬೆಳಸಿದರು. ೧೯೨೨ನೇ ಇಸವಿಯ ದಶಂಬರ ತಿಂಗಳಲ್ಲಿ ಮೊಕ್ತ್ಯಾರಾದ ರಾ। ಆಳ್ವರಿಗೆ ೬ ವರ್ಷದ ಸರ್ವಿಸಿನ ಕುರಿತು ಬಹಳ ಚಲೋ ಸರ್ಟಿಫಿಕೇಟು ಕೊಟ್ಟರು. ೧೮೮೬ನೇ ಇಸವಿಯಿಂದ ೧೯೦೭ರ ತನಕ ನಿರಾಂತಕವಾಗಿ ಕೆಲಸ ನಿರ್ವಹಿಸಿದ ರಾ। ಶ್ಯಾಮರಾಯರ ಸರ್ವಿಸನ್ನೂ, ನಂತರದ ೮ ವರ್ಷಗಳ ವರೆಗೆ ಕೆಲಸ ನಿರ್ವಹಿಸಿದ ರಾ। ಮಂಗೇಶರಾವ್ ಮತ್ತು ಅವರ ಸಹೋದರರ ಸರ್ವಿಸನ್ನೂ ಸಹಾ ಹೊಗಳಲಿಕ್ಕೆ ಕೈಬಾರದೆ ಇದ್ದದ್ದು ತುಂಬಾ ವ್ಯಸನಕರವಾಗಿದೆ. ಗ್ರಾಮಸ್ಥರಿಗೂ, ಸಕಲ ಸರಕಾರಿ ಉದ್ಯೋಗಸ್ಥರಿಗೂ ಸಕಲ ಕಾರ್ಯಗಳಿಗೆ ಅಗತ್ಯಬೀಳುವ ಪಟೇಲರನ್ನು ತಮ್ಮ ಗ್ರಾಮದಲ್ಲಿಯೇ ಸಂಕಾರದವರು ನೇಮಿಸುವಾಗ ರಾ। ಆಳ್ವರಿಂದ ಕಟಾಯು ಪಡೆದ ಹಲವು ನಿರ್ಣಯಿಸಿ ಅವರನ್ನೇ ಮೊಕ್ತ್ಯಾರು ಮಾಡಬೇಕಾಗಿ ಸರಕಾರಕ್ಕೆ ಒಂದು ದೊಡ್ಡ ಲಾಭವನ್ನು ಸೂಚಿಸುವ ಸುಚಿತ್ರರ ಚಿತ್ರವು ಯಾವ ಬೈಬಲಿನಿಂದ ಬಂತೋ ಎಂಬದು ತಿಳಿಯಲಿಲ್ಲ. ಬಂಗ್ರಮಂಜೇಶ್ವರಕ್ಕೆ ಪಟೇಲರ ಬಾಳ್ವಿಕೆಯು ಹೆಚ್ಚಾಗಿ ೪ ವರ್ಷದ ಪ್ರಕಾರ ಬಂದಿರುತ್ತದೆಂಬದು ಕೆಳಗಣ ವಾಕ್ಯಗಳಿಂದ ಕಂಡುಬರುವುದು. ೧೮೫೫ನೇ ಇಸವಿಯಿಂದ ೧೮೮೬ರ ತನಕ ೩೧ವರ್ಷ ಕಾಲದಲ್ಲಿ ಕೃಷ್ಣಯ್ಯ, ಮಂಜಪ್ಪಯ್ಯ, ನರ್ಸಯ್ಯ, ಚಂದ್ರಮ್ಮಶೆಟ್ಟಿ, ಶೇಷಗಿರಿಯಪ್ಪ, ಲಿಂಗಪ್ಪಯ್ಯ, ಪಾಂಡಶೆಟ್ಟಿ, ಕೃಷ್ಣಯ್ಯ, ಚಂದಪ್ಪಶೆಟ್ಟಿ ಈ ರೀತಿ ೯ ಜನರೂ, ಮಂಗೇಶರಾವ ಮತ್ತು ಇವರ ಸಹೋದರರ ನಂತರ ಪುನಹಾ ಮಂಗೇಶರಾಯರೂ, ನಂತರ ನರಹರಿಆಳ್ವರೂ, ಅನಂತರ ಪ್ರೊಬೇಶನರಾಗಿ ಶ್ರೀನಿವಾಸರಾಯರೂ, ತದನಂತರ ಅಂತಪ್ಪ ಸೂಲಾಯರೂ ಕೆಲಸ ನಿರ್ವಹಿಸಿದ ನಂತರ ಈ ಆಳ್ವರು ಬಂದದ್ದಾಗಿರುತ್ತದೆ. ರಾ। ಆಳ್ವರ ಇತರ ಹೊಗಳಿಕೆಯ ಕುರಿತು ಇತರ ಸಂಗತಿಗಳು ಮಾನ್ಯ ಸರಕಾರದವರ ಚಿತ್ತಕ್ಕೆನೇ ತಿಳಿದಿರುವಾಗ ಹೆಚ್ಚಿಗೆ ಬರೆಯುವುದಿಲ್ಲ. ಅದುದರಿಂದ ವೃಥಾವಳ್ಳಿ ಸರಕಾರದವರು ನವಯುಗದ ಪತ್ರವ್ಯವಹಾರವನ್ನೇ ಮನಸ್ಸಿಗೆ ತಾರದೆ ಇದನ್ನು ಸಹಾ ಪರ್ಯಾಲೋಚಿಸಿ ಗ್ರಾಮಸ್ಥರಿಗೂ ಇತರರಿಗೂ ಸೌಕರ್ಯವಾಗುವಂತೆ ಮೊದಲಿನಂತೆಯೇ ಈ ಗ್ರಾಮಕ್ಕೆ ಒಬ್ಬ ಪಟೇಲರನ್ನು ನೇಮಿಸುವರಾಗಿ ಗ್ರಾಮಸ್ಥರಲ್ಲನೇಕರ ಕೋರಿಕೆಯಾಗಿದೆ. ಬಹುಮಾನಪಟ್ಟ ಜಿಲ್ಲಾ ಕಲೆಕ್ಟರವರು ಈ ಕಡೆ ನಿಗಾಕೊಡದಿರಲಾರರೆಂದು ಭಾವನೆ.

ಬಂಗ್ರಮಂಜೇಶ್ವರ,
ತಾ. ೨೪—೬—೧೯೨೬. } "ಶೋಧಕ."

ಬೇಕಾಗಿದ್ದಾರೆ.

ಮಂಗಳೂರು ಮತ್ತು ನೆರೆಜಿಲ್ಲೆಗಳಲ್ಲಿ ಜೀವವಿಮೆ ಸಂಘದ ಕೆಲಸವನ್ನು ಉತ್ಸಾಹದಿಂದ ನಿರ್ವಹಿಸುವ ಏಜಂಟರರು ಬೇಕಾಗಿದ್ದಾರೆ. ತುಂಬಾ ಕಮಿಷನ್ ಕೊಡಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ಇಂಗ್ಲೀಷಿನಲ್ಲಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

The Secretaries,
The East & West Insurance Co. Ltd.,
65, APOLLO STREET,
FORT BOMBAY.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀರಿಮಿಶ್ರಣ!
ದಶಮೂಲ ಸುಖಪ್ರದಔಷಧ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಚಿಕಿತ್ಸೆ ಮಾಹಿತಿಗೆ "ಆರ್ಷ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds „ 288,500-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.
For further particulars apply to the Secretary.
ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪನಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೪—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷ್ಠಾಸ್ತ್ರೀಯರಿಗೂ ಕುಳಿತಿಂಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೭ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರ್ಯಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ. ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.	ಏಜಂಟರು:— ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ, ಮಂಗಳೂರು ಟವನಿಗೆ ಮಾತ್ರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—3—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಬಂದು ನೋಡಿರಿ! ತಿಂದು ನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದು ನೋಡಿರಿ! ತಿಂದು ನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ಹುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮಹೋದ್ಯಾನಿ ಕಾಫಿ ಕ್ಲಬ್. ಮಾರ್ಕೆಟು ರೋಡು, ಮಂಗಳೂರು.	ಅಥವಾ	ಸದಾನಂದ ಕಾಫಿ ಕ್ಲಬ್ ರಥಬೀದಿ, ಮಂಗಳೂರು

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | **ವಜ್ರಾಂಗ-ಬಿಂದು** | ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವವಲ್ಲದೆ, ಸ್ವಪ್ನಜನ್ಯ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಅಳುವಿನಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ಹಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ತಿರುಗಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦, ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಹಾಕಲಾಗುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಅಥಣಿ, (ಜಿಲ್ಲಾ ಬೆಳಗಾಂವ.)

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ

— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುವಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ತಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.



ಈ ಕೈಗಡಿಯಾರವು ಭಂಗಾರಕ್ಕೆ ಸಂಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುವು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್‌ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸ

ಆಲೆಕ್ಸ್ ಆಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 9 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 5 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಖದ್ದರ್ ರೇಷ್ಮೆ ಮಡಿಗಳು, ಜಾರ್ಮಣಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಸಾಲಿಗ್ರಾಮ, ಬಾಣಲಿಂಗ, ಚಂದನದ ಬಟ್ಟಲು, ಪನ್ನೀರ್‌ದಾನಿ, ಹಿತ್ತಾಳೆಯ ಅಚಿದ ಸಾಮಾನುಗಳು, ಫ್ರೀಮೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವುದಕ್ಕೂ, ಒಂದು ದೇಹದ ಮರ್ಮಶಾಸ್ತ್ರವು ಇರುವುದು. ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಪ್ರಾಡ್ವೇ, ಮದ್ರಾಸ್.

ಆಯುರ್ವೇದ ಶಾಸ್ತ್ರಿ ಅಪ್ಪಾವಧಾನಿ,

ಡಾ. ವೇ. ಸುಬ್ಬರಾವ್, ಯಂ. ಬಿ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ಲಿವರ್ ಮೂವ್‌ಮೆಂಟ್ ವಾಚ್

15 ಮಣಿಗಳಿದ್ದು ರೋಲ್ಡಗೋಲ್ಡ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದ ನಿಜವಾದ ರೋಲ್ಡ ಗೋಲ್ಡ ಬಂಗಾರದಿಂದ ತಯಾರಿಸಲ್ಪಟ್ಟ 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೋ ರೋಲ್ಡ ಗೋಲ್ಡ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.

ಎಲಾರ್ಮ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. „ „ „ 6-0-0.

"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ „ 2—12—0

ಕಂಬ್ಯಾಂಡ್ ಪೆಪರ್ ಕ್ಲಿಪ್ ಟ್ಯಾಮ್‌ಪೀಸ ಹಿತ್ತಾಳೆ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಪ್ಲೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮ ತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	„ 2—8—0
„ ಸ್ಥಳೀಕರಿಗೆ ...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು. ಎಡಿಟರ್,

ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕೆವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೨ನೇ ಶುಕ್ರವಾರ ಜುಲಾಯಿ ೧೯೨೬. ಸಂಚಿಕೆ ೨೭.

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ

Branch:—COONDAPOOR.
ಶಾಖೆ:—ಕುಂದಾಪುರ.

ನಿಯಮಿತ ಮೂಲಧನ ರೂ. 3,50,000

ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

ತಾ. 28—2—'26ಕ್ಕೆ ತೋರುವ ಸದರಿ ಬ್ಯಾಂಕಿನ ವಹಿವಾಟುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.		ಆಸ್ತಿ ವ ಸೊತ್ತುಗಳು.	
ವಸೂಲು ತೆತ್ತ ಮೂಲಧನ	1,80,690—9—11	ಹುತ್ತು ಕಟ್ಟೋಣ ಕಳ್ಳಿದ ಬ್ಯೆಚರಿಗಳು ವಗ್ಯೆರೆ	3943—8—0,
ಅಪದ್ಧನ ವ ಇತರ ನಿಕ್ಷೇಪಗಳು	75,875—0—0,	ಯೋಗ್ಯಜವಾಬ್ದಾರಿ ಮೇಲೆ ಸಾಲಕೊಟ್ಟದ್ದು	7,58,851-13-8,
ಠೇವಣಾತಿಗಳು	5,30,003-14-3,	ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	25,800—0—0,
ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳುವಾರಿಗಳಿಗೆ	4,700—0—0,	ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು	4,700—0—0,
ಐವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು	40,274—3—11,	ಇತರ ಬಾಬುಗಳು (ಠೇವಣಾತಿ ಬಡ್ಡಿ ವಗ್ಯೆರೆ ಕೂಡಿ)	22,795—6—6,
		ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ	15,452—15—11,
ಜುಮ್ಲಾ ರೂ.	8,31,543-12-1	ಜುಮ್ಲಾ ರೂ.	8,31,543-12-1.

ನಿರಖು ಠೇವಣಾತಿಗಳನ್ನು ಕಾಲಕ್ಕನುಸರಿಸಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ; ಮುಸುಂ ಠೇವಣಾತಿಗಳನ್ನೂ, ಕಂತು ಠೇವಣಾತಿಗಳನ್ನೂ, ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನೂ ಸಾವುಕಾರಿ ಹುಂಡಿಗಳನ್ನೂ, ವಜ್ಜಾಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಐವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು,
ಉಡುಪಿ, ತಾ. 28—2—'26.

ನಯಂಪಳ್ಳಿ ಆನಂದರಾವ್, ಸೆಕ್ರಿಟರಿ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಅಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ. ರಕ್ತ ಜರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಅಣೆ.

ಅಮೃತಾಂಜನ ಡಿಪೊ.

6, 7 [illegible] ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.

109 ಪ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—[illegible] ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ಣಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು

— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈ ಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹಾಶಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್, ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರೆಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೮—೦. ಏಜೆಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಬೆಂಗಳೂರು ಆಫೀಸ್, "ಮಿಸ್ರಿ" ಬೆಂಗಳೂರು ಸಿಟಿ.

ಡಿ. ಮನ್ನಾರ್, ಪಿಲ್ಲಿ ಸೇಟರ್ ಹಾಸ್ಪಲ್, ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್ — ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀ ಯುವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂದ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಡತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ಢೈಲು ಬೆರ್ಚಪ್ಪ, ಬ್ರಾಹ್ಮಣ ವೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ದುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ತಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲ 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

11 ಮಣಿಗಳಿದ್ದು ಬ್ರಿಜ್ ಮ್ಯೂವ್ಮೆಂಟ್.

22 ಕೆರೆಟ್ ರೋಲ್ಡಗೋಲ್ಡ ರಿಸ್ಟವಾಚ್.

ಈ ವಾಚ್ ಎಂಟಾಪಿ ಪಾವಲಿಯಷ್ಟು ಸಣ್ಣದಾಗಿ ಬಹು ಚಲೋದಾದ ಇನೆಮಲ್ ಡಾಯಲ್ ಇದ್ದು ಬಹು ಉತ್ತಮವಾಗಿದೆ. 5 ವರ್ಷದಗ್ಯಾರಂಟಿ ಇದೆ. ಕ್ರಯ ರೂ. 12/8

18 ಕೆರೆಟು ಇಲೆಕ್ಟ್ರೊ ರೋಲ್ಡಗೋಲ್ಡ ವಾಚ್ ಕ್ರಯ ರೂ. 7—0—0. "ದಿ" ಟ್ಯಾಮ್‌ಪೀಸ ರೂ. 2-4-0

9 ಕಾರಾಟ್ 8 ಮಣಿಗಳ ವಾಚ್ 1ರ ಕ್ರಯ 23—0—0.
14 ,, ,, ,, 26—0—0.
14 ,, 15 ಮಣಿ ,, 36—0—0
9 ,, ,, ,, 32—0—0.

ಚಲೋದಾದ ಲವ್ ನಕ್ಸೆಗಳು ಡಜನ್ 1ಕ್ಕೆ ರೂ. 2/4.

P. Sambasiva Chetty & Co.,
134 NAINEAPPA NAICKEN ST.
P. T. MADRAS.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್ — ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕೊರ್ ಆಫ್ ಬಾಮ್ — ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಡೈರಿಯಾ ಮಿಕ್ಶ್ಚರ — ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಚೀಟುಗಳು — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು — ಧಾತು ಪುಷ್ಟಿಕರ. ರೂ. ೧—೩—೦. ರೂ, ೧—೪—೦. ೧—೧೩—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ: — ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ, ಮಂಗಳೂರು.

The Canara Pubic Conveyance Co., Ltd, Mangalore.
(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು —

ಮಂಗಳೂರು:
- ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರು
- ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
- ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
- ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
- ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು — ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು — ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು — ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂವತ್ಸರದ ಜ್ಯೇಷ್ಠ ಬ|| ೮ ಶನಿವಾರದಿಂದ ಕ್ಷಯ ಸಂವತ್ಸರದ ಜ್ಯೇಷ್ಠ ಬ|| ೧೫ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮಿಥುನ ಕಾರ್ತೆಲ್.)

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
3	ಶನಿ	೮	೧೦. ೦	ರೇವತೀ	೩೬.೧೬	೧೯	6.10	6.59
4	ರವಿ	೯	೫.೧೪	ಅಶ್ವಿನೀ	೩೫.೧೪	೨೦	6 10	6 59
5	ಸೋಮ	೧೦	೧.೧೬	ಭರಣೀ	೩೩.೨೮	೨೧	6.11	6.59
6	ಮಂಗಳ	೧೨	೫೬.೪೬	ಕೃತ್ತಿಕಾ	೩೩. ೨	೨೨	6.11	6.59
7	ಬುಧ	೧೩	೫೩. ೨	ರೋಹಿಣೀ	೩೩.೪೬	೨೩	6.11	6.59
8	ಗುರು	೧೪	೫೩.೪೨	ಮೃಗಶಿರಾ	೩೫. ೨	೨೪	6.11	6.59
9	ಶುಕ್ರ	●	೫೮.೪೪	ಆರ್ದ್ರಾ	೩೯.೧೪	೨೫	6 12	7. 0

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿವಸದ ಮಳೆ	ಜುಮಲಾ ಮಳೆ.
25	89—0	76—5	—	—
26	88—8	75—2	0—47	—
27	85—0	75—2	1—95	—
28	84—8	75—1	2—37	—
29	84—8	74—3	1—36	—
30	84—0	73—2	1—45	—
1	83—3	74—3	1—81	34—05

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಸಿಕಿ		8—12	9—10
ಹೊಸ ಗುಡ್ಡು	...	8— 8	8—12
ಸುಗ್ಗಿ	...	8— 6	8—12
ಅನ್ವರ್ ಬೆಳ್ತಿಗೆ	...	8— 0	9— 6
ರಂಗೂನು ಬೆಳ್ತಿಗೆ ಗೋಣಿ ೧	...	14— 8	15— 0
ಗೋದಿ ಗೋಣಿ ೧ಕ್ಕೆ	...	18— 0	20— 0
ಹುರುಳಿಗೋಣಿ ೧ಕ್ಕೆ	...	8— 0	9—12
ಕಡಲೆಗೋಣಿ ೧ಕ್ಕೆ	...	13— 0	14— 8
ತೊಗರಿಗೋಣಿ ೧ಕ್ಕೆ	...	16— 0	16— 8
ತೊಗರಿಬೇಳೆ ಗೋಣಿ ೧ಕ್ಕೆ	...	19— 0	26— 0
ಉದ್ದುಗೋಣಿ ೧ಕ್ಕೆ	...	16— 8	17— 0
[illegible]ಗೋಣಿ ೧ಕ್ಕೆ	...	16— 0	17— 8
ಊರು ಬೆಲ್ಲ ಖಂಡಿ ೧ಕ್ಕೆ	...	85— 0	—
ಉಪ್ಪು ಗೋಣಿ ೧ಕ್ಕೆ	...	5— 4	5—12
ಕೊಬ್ರಿ ಖಂಡಿ ೧ಕ್ಕೆ	...	96— 0	100— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	34— 8	35— 0
ಎಳ್ಳಿಂಡಿ ಖಂಡಿ ೧ಕ್ಕೆ	...	45— 0	47— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	7— 8	8—10
ಎಳ್ಳೆಣ್ಣೆ ಮುಡಿ ೧ಕ್ಕೆ	...	7— 8	9— 0
[illegible] ೧ಕ್ಕೆ	...	8-12-0	—
[illegible] ಮುಡಿ ೧ಕ್ಕೆ	...	5—12	—
[illegible] ಮುಡಿ ೧ಕ್ಕೆ	...	7— 0	—
[illegible] ಮುಡಿ ೧ಕ್ಕೆ	...	9— 8	—
[illegible] ಮುಡಿ ೧ಕ್ಕೆ	...	5— 0	5—12
ಕಾಫಿ ಖಂಡಿ ೧ಕ್ಕೆ	...	385— 0	460— 0
[illegible] ಅಡಿಕೆ ಖಂಡಿ ೧ಕ್ಕೆ	...	300— 0	310— 0
ಹೊಸ ಅಡಿಕೆ ಖಂಡಿ ೧ಕ್ಕೆ	...	195— 0	220— 0
[illegible] ಖಂಡಿ ೧ಕ್ಕೆ	...	360— 0	—
[illegible] ಮುಡಿ ೧ಕ್ಕೆ	...	50— 0	64— 0
[illegible] ಮುಡಿ ೧ಕ್ಕೆ	...	4— 0	—
[illegible] ಖಂಡಿ ೧ಕ್ಕೆ	...	45— 0	65— 0
[illegible] ಮುಡಿ ೧ಕ್ಕೆ	...	16— 4	16—12
[illegible] ಮುಡಿ ೧ಕ್ಕೆ	...	21— 0	—
[illegible] ೧ಕ್ಕೆ	...	18—10	
[illegible] ಮುಡಿ ೧ಕ್ಕೆ	...	16— 8	
[illegible]		13— 9	

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

PROPRIETOR RAJVAIDYA NARAYANJI KESHAVJI
NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನ್ಮಾ ಬಜಾರ್, ರೋಡ್, ಮದ್ರಾಸು.

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತ ಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ್ ಎಸ್ಟೇಟ್, ಮುಂಬಯಿ.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು —

ಸರ್ವಿಸಿನ ಹೆಸರು.	ತಲುಪುವ ಸ್ಥಳ.	ಹೊರಡುವ ಘಂಟೆ.
ಜನರಲ್	ಕಾರ್ಕಳ — ಆಗುಂಬೆ — ತೀರ್ಥಹಳ್ಳಿ .	ಪೂ. $6\frac{1}{4}$
ಸಿ. ಪಿ. ಸಿ.	ಉಡುಪಿ — ಕುಂದಾಪುರ — ಬೈಂದೂರು	,, $6\frac{3}{4}$, $9\frac{3}{4}$
	ಉಡುಪಿ .	ಮ. $12\frac{3}{4}$
	ಮುಲ್ಕಿ ವರೆಗೆ ಮಾತ್ರ	ಅ. $3\frac{3}{4}$
	ಬಂಟ್ವಾಳ — ಬೆಳ್ತಂಗಡಿ — ಚಾರ್ಮಾಡಿ	ಪೂ. 7, ಮ. 1
	ಕಾರ್ಕಳ — ಬೆಳ್ಮಣರಿಂದ .	
	ಬಂಟ್ವಾಳಕ್ಕೆ ಮಾತ್ರ	,, $10\frac{3}{4}$, ಅ. $4\frac{3}{4}$
	ಪುತ್ತೂರು — ಸಂಪಾಜೆ — ಮಡಿಕೇರಿ	,, $7\frac{1}{2}$
	ಪುತ್ತೂರು .	ಪೂ. $10\frac{1}{2}$ ಅ. 2
ಕಾರ್ಕಳ	ಕಾರ್ಕಳ — ಉಡುಪಿ — ಕುಂದಾಪುರ	ಪೂ. 6
	ಕಾರ್ಕಳಕ್ಕೆ ಮಾತ್ರ .	ಅ. 1
ಹನುಮಾನ್	ಕಾರ್ಕಳ — ಉಡುಪಿ — ಕುಂದಾಪುರ .	ಪೂ. 7
	ಕಾರ್ಕಳಕ್ಕೆ ಮಾತ್ರ.	ಮ. 12
ಶಂಕರ್ ವಿಟ್ಠಲ್	ಪುತ್ತೂರು — ಮಡಿಕೇರಿಗೆ .	ಪೂ. 7
	ಪುತ್ತೂರು — ಉಪ್ಪಿನಂಗಡಿ .	ಅ. $1\frac{1}{2}$
	ವಿಟ್ಲಕ್ಕೆ	ಪೂ. 8, ಅ. $2\frac{1}{2}$
	ಉಡುಪಿ .	ಪೂ. $7\frac{1}{2}$ ಅ $1\frac{1}{2}$
ಸ್ಟಾರ್	ಮುಲ್ಕಿ — ಉಡುಪಿ.	,, 7, ಮ. 1
	ಬಂಟ್ವಾಳ .	,, $10\frac{1}{2}$, ಅ. $4\frac{1}{2}$
ಇಂಡಿಯನ್	ಮುಲ್ಕಿ — ಉಡುಪಿ.	,, $6\frac{1}{2}$, ಮ. $12\frac{1}{2}$
ಫೊಕ್ಕೆಲರ್	ಬಂಟ್ವಾಳ — ಬೆಳ್ತಂಗಡಿ — ಚಾರ್ಮಾಡಿ	ಪೂ. $7\frac{1}{2}$ ಮ. $12\frac{1}{2}$

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ —

ಗಾಡಿಗಳು	ಹೊರಡುವ ಘಂಟೆ	ತಲುಪುವ ಘಂಟೆ
ಮೈಲ್ .	ಬೆಳಿಗ್ಗೆ 8-5	ಸಂಜೆ 5-25
ಲೋಕಲ್ .	,, 9-45	ರಾತ್ರಿ 10-40
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-30	ಮಧ್ಯಾಹ್ನ 2-40
ಶಟಿಲ್	ಸಂಜೆ 5-40	ಬೆಳಿಗ್ಗೆ 9-2

ಹೊಸ ಮುದ್ರಣ! ಶುದ್ಧ ಪಾಠ!

ಶ್ರೀ ಶಂಕರ ಭಗವತ್ಪಾದಾಚಾರ್ಯ ಪ್ರಣೀತಮಾದ

ಶಿವಾನಂದಲಹರಿ

ಎಂಬ

ಪರಮಶಿವನ ಸ್ತೋತ್ರವು.

ಪ್ರಶಂಸೆ: —

ಈ ಗ್ರಂಥದಲ್ಲಿ ಅಡಗಿರುವ ೧೦೦ ಶ್ಲೋಕಗಳ ಪೈಕಿ ಪ್ರತಿಯೊಂದು ಶ್ಲೋಕವೂ ಆರಿಸಿ ಪೋಣಿಸಿದ ಆಣಿಮುತ್ತುಗಳಂತೆ ಅತಿ ಶ್ಲಾಘ್ಯಗಳಾಗಿ ಶಬ್ದಾಲಂಕಾರ ಅರ್ಥಾಲಂಕಾರ ಭಾವರಸ ಲಕ್ಷಣಗಳಿಂದ ಕೂಡಿ ಓದುವವರ ಮನಸ್ಸಿನಲ್ಲಿ ಆನಂದವನ್ನು ಹುಟ್ಟಿಸುವುದಲ್ಲದೆ, ಉಪಾಸ್ಯದೇವರಲ್ಲಿ ನಿರತಿಶಯ ಭಕ್ತಿಯನ್ನು ಹುಟ್ಟಿಸುತ್ತದೆ. ಪ್ರತಿಯೊಂದು ಶ್ಲೋಕಕ್ಕೂ ಕೊಟ್ಟಿರುವ ಪ್ರತಿಪದಾರ್ಥಭಾವಾರ್ಥಗಳು ಸ್ತೋತ್ರದ ಅರ್ಥವನ್ನು ಸ್ಪಷ್ಟೀಕರಿಸಿ ಶ್ರದ್ಧೆಯನ್ನು ಹೆಚ್ಚಿಸುವುದರೊಡನೆ ಸಂಸ್ಕೃತ ಭಾಷಾಜ್ಞಾನವನ್ನುಂಟುಮಾಡುವುದು.

ಶ್ರೀ ಶಿವಗೀತಾ

ಟೀಕಾಸಹಿತವಾಗಿ ಪಂಡಿತರಿಂದ ಪರಿಶೋಧಿಸಲ್ಪಟ್ಟಿದೆ.

ಇದು ಪದ್ಮಪುರಾಣೋಕ್ತವಾದ ಬ್ರಹ್ಮವಿದ್ಯಾಪ್ರತಿಪಾದಕವಾದ ಉಪನಿಷದ್ರತ್ನವು. ಇದು ಶ್ರೀ ಭಗವದ್ಗೀತೆಯಂತೆ ಪಾರಾಯಣಾರ್ಹವಾದ ಗ್ರಂಥವು. ಗೀತೆಯ ಚರಮೋಪದೇಶವು ಇದರಲ್ಲಿರುವುದು.

ಪ್ರತಿಯೊಂದಕ್ಕೆ ಬೆಲೆ 0-8-0 ಟಪ್ಪಾಲು ಖರ್ಚು 0-2-0.
ಮೂರು ಪುಸ್ತಕಗಳ ಕ್ರಯವನ್ನು ಮುಂಗಡವಾಗಿ ಕಳುಹಿಸಿದರೆ ಟಪ್ಪಾಲುಖರ್ಚಿಲ್ಲದೆ ಕಳುಹಿಸಲ್ಪಡುತ್ತೆ.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕದ ವ್ಯಾಪಾರಿಗಳು,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಪ್ರಕಟಣೆ.

ಮುಂಬಾಯಿಯಲ್ಲಿರುವ ಸಾವುಕಾರ ಲಕ್ಷ್ಮೀದಾಸ ವಿಸಾಂಜಿಯವರ ಮಗ ಸಾವುಕಾರ ಮೂಲ್ಜಿ ಲಕ್ಷ್ಮೀದಾಸ ಶೇಟ್ ಇವರ ಪರವಾಗಿ ಮಂಗಳೂರು ಹ್ಯಾಕೋರ್ಟು ವಕೀಲ್ ಅಮ್ಮೆಂಬಳ ಶ್ರೀನಿವಾಸ ಪೈ ಸರ್ವ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಈ ಕೆಳಗೆ ವಿವರಿಸಿದ ಎಲ್ಲಾ ಸ್ಥಿರಾಸ್ತಿಗಳು ಮೇಲೆ ಹೆಸರುಕಾಣಿಸಿದ ನನ್ನ ಕಕ್ಷಿಗಾರ ರಾ| ಮೂಲ್ಜಿ ಲಕ್ಷ್ಮೀದಾಸ ಶೇಟ್ ಇವರ ಸಂಪೂರ್ಣ ಹಕ್ಕಿನದ್ದಾಗಿರುತ್ತಾವೆ. ವಿನಹ ಬ್ಯೇರೆ ಯಾರೊಬ್ಬರಿಗೂ ಏನೊಂದೂ ಹಕ್ಕು ಇರುವುದಿಲ್ಲ. ಕಾರಣ ಸದರಿ ಆಸ್ತಿಗಳಾಗಲೀ ಯಾ ಅವುಗಳ ಪೈಕಿ ಹಲವು ಯಾವುದೊಂದು ಅಂಶವಾಗಲೀ ವ್ಯಾದೆಗೇಣಿ, ವ ಇತರ ಯಾವ ವಿಧದ ಪರಾಧೀನಗಳ ಮೂಲಕವಾದರೂ ಪರಾಭಾರೆ ಮಾಡುವ ಹಕ್ಕು ನನ್ನ ಕಕ್ಷಿಗಾರರದ್ದು ಆಗಿರುತ್ತದೆ. ವಿನಹಾ ಅನ್ಯರಿಗೆ ಇರುವುದಿಲ್ಲ. ರಾ| ಪುರುಶೋತ್ತಮ ಶೇಟ್ ನಾಂಜೆಯವರಿಂದಾಗಲೀ ಯಾ ಬೇರೆ ಯಾರೊಬ್ಬರಿಂದಲೂ ಪಡೆಯಬಹುದಾದ ವ್ಯಾದೆ ಗೇಣಿ ವಗೈರೆ ಪರಾಧೀನಗಳು ಸಿಂಧಾಗತಕ್ಕವುಗಳಲ್ಲ ಮತ್ತು ನನ್ನ ಕಕ್ಷಿಗಾರರಿಗೆ ಬಾಧಿಸತಕ್ಕವುಗಳಲ್ಲ. ಸದರಿ ಆಸ್ತಿಗಳಲ್ಲಿ ಯಾವುದನ್ನೂ ವ್ಯಾದೆಗೇಣಿಗೆ ಪಡಕೊಳ್ಳಲು ಅಪೇಕ್ಷಿಸುವವರು ಸದರಿ ಮೂಲ್ಜಿ ಲಕ್ಷ್ಮೀದಾಸ ಶೇಟ್ ವ ನನ್ನ ಕೂಡೆ ವಿಚಾರಿಸತಕ್ಕದ್ದು.

ಆಸ್ತಿಯ ತಪಸೀಲು.

ಮಂಗಳೂರು ಶಹರು ಗೋಳಿಕಟ್ಟೆ ವಾರ್ಡು ಕಸಬಾ ಬಜಾರು ಗ್ರಾಮಕ್ಕೆ ಒಪ್ಪಿದ ಆಸ್ತಿಗಳು:—

ಜಂಜ್ರಾ ನಂಬ್ರ	ಟೌನ್ ಸರ್ವೆ ನಂಬ್ರ	ರೆವಿನ್ಯು ಸರ್ವೆ ನಂಬ್ರ	ಕೀರ್ವೆ ರೂಪಾಯಿ	ಕೀರ್ವೆ ಆಣೆ	ಪಟ್ಟಾ ನಂಬ್ರ
1	163	1172	1	9	590
2	174	1186	0	10	713
3	238	1248	1	1	590
4	244/1	1253	0	6	487
–	244/2	–	6	4	118
5	245	1254	0	15	591
6	246	1255	0	10	575
7	356	1366	0	6	288
8	365	1375	0	2	590
9	368	1378	0	12	590
10	369	1379	0	4	590
11	370/B	1380	2	1	586
12	ವರ್ತಕ ವಿಲಾಸ 431	1441	5	1	590
13	454	1463	0	8	590
14	527	1537	0	12	590
15	528	1538	3	7	541

ಮಂಗಳೂರು ಶಹರು ಕೊಡಿಯಾಲ್ ಬೈಲ್ ವೆಸ್ಟ್ ವಾರ್ಡಿಗೆ ಸೇರಿದ ಆಸ್ತಿಗಳು:—

16	199	366	2	12	141

ಮಂಗಳೂರು ತಾಲೂಕು ಮಾನಂಪಾಡಿ ಗ್ರಾಮದ ಬಾಬ್ತು ಆಸ್ತಿಗಳು:—

17	–	11/14	1	7	72

ಮೇಲಿನ ಜಂಜ್ರಾ ನಂಬ್ರ 1ರಿಂದ 17ನೇ ವರೆಗಿನ ಆಸ್ತಿಗಳಲ್ಲಿ ಇರುವ ಮನೆ, ಭಂಡಸಾಲೆ, ಗೋದಾಮು ವ ಇತರ ಕಟ್ಟೋಣ ವಗೈರೆ ಸರ್ವಾಧಿ.

ಮಂಗಳೂರು, 27–6–1926 } *A. Srinivasa Pai,* ಹ್ಯಾಕೋರ್ಟ್ ವಕೀಲ್.

ಬೇಕಾಗಿದ್ದಾರೆ.

ಮಂಗಳೂರು ಮತ್ತು ನೆರೆಜಿಲ್ಲೆಗಳಲ್ಲಿ ಜೀವವಿಮೆ ಸಂಘದ ಕೆಲಸವನ್ನು ಉತ್ಸಾಹದಿಂದ ನಿರ್ವಹಿಸುವ ಏಜಂಟರರು ಬೇಕಾಗಿದ್ದಾರೆ. ತುಂಬಾ ಕಮಿಷನ್ ಕೊಡಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ಇಂಗ್ಲೀಷಿನಲ್ಲಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

The Secretaries,
The East & West Insurance Co. Ltd,
65, APOLLO STREET,
(4) FORT BOMBAY.

ನೋಟೀಸು.

೧೯೨೬ನೇ ಇಸ್ವಿ ಜೂನ್ ತಾರೀಕು ೧೮ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆ ಮಾಡಿದ ಪ್ರಕಾರ ಈ ಕೆಳಗೆ ಕಾಣಿಸಿದ ಅಸಾಮಿಯವರ ಬಾಬ್ತು ಚಿನ್ನಬೆಳ್ಳಿಯ ಆಭರಣಗಳು ಮಿಜಾರ ಗಣೇಶ ಪೈಗಳ ಆಫೀಸಿನ ಎದುರುಗಡೆಯಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಐವೇಜಿನಲ್ಲಿ ಈ ಕೆಳಗೆ ಕಾಣಿಸಿದ ಪ್ರಕಾರ ಅಸ್ಲು ಬಡ್ತಿ ಮತ್ತು ಇತರ ಖರ್ಚು ಸಹಾ ಕಳೆದು ಕಮ್ಮಿ ಬಿದ್ದ ಐವೇಜಿನ ವಿವರವು ಈ ಕೆಳಗೆ ಕಾಣಿಸಿದ ಪ್ರಕಾರ ಆಯಾಯ ಅಸಾಮಿಯವರು ಕಮ್ಮಿ ಬಿದ್ದಿರುವ ಐವೇಜಿನ ವಿಷಯದಲ್ಲಿ ಬಿಟ್ಟ ನೋಟೀಸಿನಲ್ಲಿ ಕಾಣಿಸಿದ ಪ್ರಕಾರ ನೋಟೀಸು ತಲ್ಪಿದ ಒಂದು ವಾರದೊಳಗೆ ಯಾವ ವಿಧದಿಂದಲೂ ಹಣ ಪಾವತಿ ಮಾಡುವರೆ ತಪ್ಪಿದರೆ, ಆ ವಿಷಯದಲ್ಲಿ ನಾನು ಮಾಡುವ ಸಕಲ ದಾವೆಯ ಖರ್ಚಿಗೆ ಆಯಾಯ ಅಸಾಮಿಯವರು ಜವಾಬ್ದಾರರಾಗಿರುತ್ತಾರೆ.

ಅರ್ಕುಳದಲ್ಲಿರುವ ಬೈಲ ಮೂಮ್ಮ ಬ್ಯಾರಿಯ ಮಗ ಮಮ್ಮದ ಸ್ಯಾಬ ಬ್ಯಾರಿಯ. ಆಟಮ್ ೧ ರಾ. ಅಸ್ಲು ಬಡ್ತಿ ಇತರ ಖರ್ಚು ಕೂಡ ರೂ. 47–8–0, ಏಲಮಿನಲ್ಲಿ ಹುಟ್ಟಿ ಬಂದ ಮೊಬಲಗು ರೂ 46–8–0, ಬಾಕಿ ಬರತಕ್ಕ ಮೊಬಲಗು ರೂ. 1–0–0.

ಅರ್ಕುಳದಲ್ಲಿರುವ ಮಮ್ಮದ ಸ್ಯಾಬ ಬ್ಯಾರಿಯ ಮಗ ಬಿ. ಮಾಮ್ಮು ಬ್ಯಾರಿಯ ಆಟಮ್ ೩ ರಾ. ಅಸ್ಲು ಬಡ್ತಿ ಇತರ ಖರ್ಚು ಕೂಡ ರೂ. 85–8–0, ಏಲಮಿನಲ್ಲಿ ಹುಟ್ಟಿ ಬಂದ ಮೊಬಲಗು ರೂ. 57–8–0, ಬಾಕಿ ಬರತಕ್ಕ ಮೊಬಲಗು ರೂ. 28–0–0.

ವಾಮಂಜೂರ ಮಾಗಣೆ ಉಳ್ಯಾಯಿಟ್ಟು ಗ್ರಾಮದ ಮುಡಬಪ್ಪಿನಲ್ಲಿರುವ ಲಕ್ಷ್ಮಣಪ್ಪ ಅಳಿಯ ವೆಂಕಪ್ಪ ರೈಯ ಆಟಮ್ ೧ ರಾ. ಅಸ್ಲು ಬಡ್ತಿ ಇತರ ಖರ್ಚು ಕೂಡ ರೂ. 258–0–0, ಏಲಮಿನಲ್ಲಿ ಹುಟ್ಟಿ ಬಂದ ಮೊಬಲಗು ರೂ. 215–8–0, ಬಾಕಿ ಬರತಕ್ಕ ಮೊಬಲಗು ರೂ. 42–8–0.

ಗೋಳಿಕಟ್ಟೆ ಬಜಾರ ಪೋಕಬ್ಯಾರಿಯ ಮಗ ಅಮದ ಬ್ಯಾರಿಯ ಆಟಮ್ ೪ ರಾ. ಅಸ್ಲು ಬಡ್ತಿ ಇತರ ಖರ್ಚು ಕೂಡ ರೂ. 222–4–0, ಏಲಮಿನಲ್ಲಿ ಹುಟ್ಟಿಬಂದ ಮೊಬಲಗು ರೂ 198–8–0, ಬಾಕಿ ಬರತಕ್ಕ ಮೊಬಲಗು ರೂ. 23–12–0.

ಹರೇಕಳ ಬೈಕಾಡ ತೋಟದಲ್ಲಿರುವ ಹಸನ್ನ ಬ್ಯಾರಿಯ ಮಗ ಹುಸೇನ ಬ್ಯಾರಿಯ ಆಟಮ್ ೧ ರಾ. ಅಸ್ಲು ಬಡ್ತಿ ಇತರ ಖರ್ಚು ಕೂಡ ರೂ. 436–8–0, ಏಲಮಿನಲ್ಲಿ ಹುಟ್ಟಿಬಂದ ಮೊಬಲಗು ರೂ. 434–0–0, ಬಾಕಿ ಬರತಕ್ಕ ಮೊಬಲಗು ರೂ. 2–8–0.

ಮಳವೂರದಲ್ಲಿರುವ ಹಮ್ಮದೆ ಬ್ಯಾರಿಯ ಮಗ ಮೂಸೆ ಬ್ಯಾರಿಯ ಆಟಮ್ ೧ ರಾ ಅಸ್ಲು ಬಡ್ತಿ ಇತರ ಖರ್ಚು ಕೂಡ ರೂ. 22–8–0, ಏಲಮಿನಲ್ಲಿ ಹುಟ್ಟಿಬಂದ ಮೊಬಲಗು ರೂ 18–0–0, ಬಾಕಿ ಬರತಕ್ಕ ಮೊಬಲಗು ರೂ. 4–8–0.

ತಂಟ್ರಬೈಲಿನಲ್ಲಿರುವ ಅಲಿಬ್ಯಾರಿಯ ಮಗ ಚಯ್ಯಬಬ್ಯಾರಿಯ ಆಟಮ್ ೩ ರಾ. ಅಸ್ಲು ಬಡ್ತಿ ಇತರ ಖರ್ಚು ಕೂಡ ರೂ. 208–0–0, ಏಲಮಿನಲ್ಲಿ ಹುಟ್ಟಿಬಂದ ಮೊಬಲಗು ರೂ. 148–0–0, ಬಾಕಿ ಬರತಕ್ಕ ಮೊಬಲಗು ರೂ. 60–0–0.

ಮಿಜಾರ ತಿಮ್ಮಪ್ಪೈ ರುಜು.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ.

O. P. No 69/1926.

ಅರ್ಜಿದಾರರು—ನಗರ ರಾಘವೇಂದ್ರನಾಯ್ಕ ಕೂಡಾ
ಎದ್ರಿ — ನಾರಾಯಣ ನಾಯ್ಕ

ಇತ್ತಲಾಗೆ ಮೃತಪಟ್ಟ ನಗರ ವೆಂಕಪ್ಪ ನ್ಯಾಕರಿಗೆ ಹೊರಗಿನಿಂದ ಬರತಕ್ಕ ಸಾಲಗಳ ವಸೂಲಿ ಬಗ್ಗೆ ಅವರ ಹಿರೇ ವ.ಗ 1ನೇ ಅರ್ಜಿದಾರನು ತನಗೆ ವಾರೀಸ ಸರ್ಟಿಫಿಕೇಟು ಕೊಡಬೇಕಾಗಿ ದಾಖಲುಮಾಡಿದ ಮೇಲಿನ ನಂಬ್ರದ ಅರ್ಜಿ ಸದರಿ ಕೋರ್ಟಿನಲ್ಲಿ ತಾ. 16–7–'26ಕ್ಕೆ ತನ್ನಿಗೆ ಇಟ್ಟಿದ್ದೆಂಬ ಸಂಗತಿ ಈ ಮೂಲಕ ತಿಳಿಸೋಣಾಗುತ್ತದೆ.

Coondapoor, 28–6–'26 } *K. Narasimha Kamath,* *Pleader for Petrs.*

VACANCIES.

Wanted two Legal medical practitioners for the rural dispensaries at Shankaranaryana and Wandse in Coondapur Taluk.

A monthly Government subsidy of Rs 33-5-4 will be paid and an additional Subsidy of Rs. 100 a year will be given to such of the madical men who engage and mentain a qualified midwife. A free supply of medicines to the value of rupees 360 a year will also be given free of charge.

Applications with full name and address should be sent to the President Taluk Board Coondapur.

(3) V. Narashima Karantha, *President.*

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18 ಮೊಳ ಉದ್ದವೂ, 2½ ಮೊಳ ಅಗಲವು ಇದೆ. ಈ ಸೀರೆಗಳನ್ನು ಹಸನಾದ ಇಮಿಟೇಷನ್ ಸಿಲ್ಕ ಗಟ್ಟಿ ದಾರದಿಂದ ತಯಾರಿಸಿದೆ. ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವುದಲ್ಲದೆ ಅಂದವಾದ ಅಂಚೂ, ಸುಂದರವಾದ ಸಾಜಾ ರೇಷ್ಮೆಯ ಸೆರಗೂ ಇರುವದು. ಈ ಮಾದರಿ ಸೀರೆಗಳು ಬೇರೆ ಯಾರಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರದು. ಈ ಸೀರೆಗಳು ಶ್ರೀಮಂತರೂ, ಗರೀಬರೂ, ಉಡಲಿಕ್ಕೆ ಬಹು ಚಲೋದಾದವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಅದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀಸೆ 1ಕ್ಕೆ ರೂ. 7–8–0.

ಇಂದ್ರಿಯಸ್ತಂಭನ ಗುಳಿಗೆ.

ಈ ಅದ್ಭುತವಾದ ಮಾತ್ರೆಯನ್ನು ಮಲಗುವುದಕ್ಕೆ ಒಂದು ಗಂಟೆಯ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತುವೃದ್ಧಿಯಾಗಿ ಗಟ್ಟಿಯಾಗುವುದು. ಈ ಔಷಧವನ್ನು ತಿಂದು 1 ಗಂಟೆಯ ಕಾಲ ತಡೆದು ಸಂಭೋಗ ಮಾಡಿದರೆ, ಬೇಗನೆ ಸ್ಖಲನವಾಗದೆ ಶಕ್ತಿಯನ್ನು ಕೊಡುವುದು. ತರಿಸಿ ಪರೀಕ್ಷಿಸಿರಿ, ಕ್ರಯ ಡಬ್ಬಿ 1ಕ್ಕೆ ರೂ. 1–6–0.

ವಿಳಾಸ:— ಎಸ್. ಆರ್. ಕೃಷ್ಣ ಅಂಡ್ ಕೋ,
ನಂ. ೧, ತಂಬುಸ್ವಾಮಿನ ಬೀದಿ,
ಸೈ. ನು. ಮದ್ರಾಸ್.

ಪತ್ರವ್ಯವಹಾರ.

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವದೇ.]

ಜನಾಬ್ ಮಹಮ್ಮದ್ ಶಮ್ನಾಡ್ ಎಂ. ಎಲ್. ಎ.ಯವರು ದಕ್ಷಿಣ ಕನ್ನಡಜಿಲ್ಲೆಯ ಮುಸ್ಲಿಂ ಪ್ರತಿನಿಧಿಯಾಗಿ ಮದ್ರಾಸು ನ್ಯಾಯವಿಧಾಯಕಸಭೆಗೆ ಮೆಂಬರರಾಗಲು ಬರುವ ನವಂಬರ ಎಂಟನೇ ತಾರೀಕಿಗೆ ಆಗುವ ಚುನಾವಣೆಗೆ ಉಮೇದ್ವಾರರಾಗಿ ನಿಲ್ಲಲು ನಿಶ್ಚೈಸಿರುತ್ತಾರೆ. ಜಿಲ್ಲೆಯ ಎಲ್ಲಾ ಭಾಗಗಳಲ್ಲಿರುವ ಮುಸ್ಲಿಂ ಮುಖಂಡರೂ ಮುಖ್ಯ ಓಟರರೂ ಶಮ್ನಾಡರಿಗೆ ಯಾವ ಅಡ್ಡಿಯೂ ಇಲ್ಲದೆ ಚುನಾವಣೆಯಲ್ಲಿ ಸಹಾಯ ಮಾಡುವರೆಂದು ಒಪ್ಪಿಕೊಂಡಿರುತ್ತಾರೆ. ಇವರಲ್ಲಿ ಸಾಧಾರಣವಾಗಿ ಎಲ್ಲರನ್ನು ಶಮ್ನಾಡರು ಕಂಡು ಮಾತಾಡಿದ್ದಾರೆ. ಕಳೆದ ಸಾರಿ ಶಮ್ನಾಡರು ಉಡುಪಿಗೆ ಹೋದಾಗ ಖಾನ್‌ಬಹದ್ದೂರ್ ಹಾಜಿ ಅಬ್ದುಲ್ಲ ಹಾಜಿ ಕಾಸಿಂ ಸಾಹೇಬರು (ಈಗ ಇರುವ ಎಂ. ಎಲ್. ಸಿ.) ಅವರನ್ನು ಅಲ್ಲಿಯ ಮುಖ್ಯ ಓಟರರ ಹತ್ತಿರ ಕರೆದುಕೊಂಡು ಹೋದರು ಮತ್ತು ಅವರ ಸಮ್ಮಂಧಿಕರಾದ ಹುಸೈನ್ ಸಾಹೇಬ್ ಬಿ. ಎ. ಬಿ. ಎಲ್.ಯವರನ್ನು ಶಮ್ನಾಡರೊಂದಿಗೆ ಕಾರ್ಕಳಕ್ಕೆ ಓಟರರನ್ನು ಕಾಣಲಿಕ್ಕೆ ಕಳುಹಿಸಿದರು. ಅಬ್ದುಲ್ಲ ಸಾಹೇಬರು ಡಿಲ್ಲಿಯ ಲೆಜಿಸ್ಲೇಟಿವ್ ಎಸ್ಸೆಂಬ್ಲಿಗೆ ಉಮೇದ್ವಾರರಾಗಿರುತ್ತಾರೆ. ಅವರು ಶಮ್ನಾಡರಿಗೆ ಸಹಾಯಮಾಡಲು ಈ ಜಿಲ್ಲೆಯ ಉತ್ತರ ಭಾಗದಲ್ಲಿರುವ ತಾಲೂಕುಗಳಲ್ಲಿ ಶಮ್ನಾಡರಿಗೆ ಬೇಕಾದ ಏರ್ಪಾಡುಗಳನ್ನು ಮಾಡುವರು. ಹಾಗೆಯೆ ಶಮ್ನಾಡರು ಅಬ್ದುಲ್ಲ ಸಾಹೇಬರಿಗೆ ಸಹಾಯಮಾಡುವರು.

ಕೆಲವರು ತಮ್ಮ ಸ್ವಂತ ಗುಣಕ್ಕಾಗಿ ಹಬ್ಬಿಸುವ ಸುಳ್ಳುವಾರ್ತೆಗಳನ್ನು ಜಿಲ್ಲೆಯ ಮುಸ್ಲಿಂ ಓಟರರು ಕೇಳಿ ಮೋಸಗೊಳ್ಳಬಾರದು. ಜಿಲ್ಲೆಯ ಎಲ್ಲ ಭಾಗಗಳಲ್ಲಿರುವ ಮುಸ್ಲಿಂ ಓಟರರು ಯಾವ ಅಡ್ಡಿಯೂ ಇಲ್ಲದೆ ಸರ್ವಸಮ್ಮತದಿಂದ ಶಮ್ನಾಡರನ್ನೂ ಮತ್ತು ಅಬ್ದುಲ್ಲ ಸಾಹೇಬರನ್ನೂ ನ್ಯಾಯವಿಧಾಯಕ ಸಭೆಗಳಿಗೆ ಮೆಂಬರರಾಗಿ ಚುನಾಯಿಸುವರೆಂದು ನಾನು ಸಂಪೂರ್ಣ ನಂಬಿರುತ್ತೇನೆ.

Kumbla S. Kanara, 25—6—1926. } *Mahammad Sherule,* *Land-holder,* Member of District Board, and Mahammad Relegious Endowment committee.

ಬಂಟವಾಳ — ಇಲ್ಲಿಯ ಕೊಟ್ರಮ್ಮನಂಗಡಿಯ ಸಂಕದ ಬಳಿಯ ಮಾರ್ಗದ ಅವಸ್ಥೆಯು ವಿಪರೀತ ಸ್ಥಿತಿಯಲ್ಲಿದೆ. ಈ ತರದ ಕಠಿಣ ಅಪಾಯಕರವಾದ ಮತ್ತು ನಿಷ್ಪ್ರಯೋಜನಕರವಾದ ಮಾರ್ಗವು ಇನ್ನು ಯಾವ ಕಡೆಯಲ್ಲಿಯೂ ಇರಲಾರದೆಂದು ಖಂಡಿತ ಹೇಳಬಹುದು. ಮಾರ್ಗ ಅಂದರೆ ಸಾಲದು. ಯಾಕೆಂದರೆ ಸುಮಾರು ಮೂವತ್ತು ನಾಲ್ವತ್ತು ಗಜ ಉದ್ದಕ್ಕೆ ಮತ್ತು ಒಂದು ಆಳು ಪ್ರಮಾಣಕ್ಕಿಂತಲೂ ಎತ್ತರಕ್ಕೆ ಇರುವ ಮಾರ್ಗವು ಕಳೆದ ನೆರೆಯಲ್ಲಿ ಕೊಚ್ಚಿಹೋದದ್ದನ್ನು ಎರಡು ಬದಿಗಳನ್ನು ಕಟ್ಟಿಕೊಂಡು ಮಧ್ಯದಲ್ಲಿ ಗುಡ್ಡೆಯ ಮಣ್ಣು ತಂದು ತುಂಬಿಸಿದ್ದರು. ಒಂದೆರಡು ಮಳೆ ಬಂದಕೂಡ್ಲೆ ಹೂಡಿದ ಗದ್ದೆಗೆ ಸರಿಯಾಗಿ ಬದಿಗಳಿಂದ ಜನರು ಬರಲಿಕ್ಕೆ ಆರಂಭಿಸಿದರು. ಈ ಬದಿಗಳಲ್ಲಿ ಸಹ ಕಾಲು ಜಾರಲಿಕ್ಕೆ ಶುರು ಆಗಿ ಆ ದಾರಿಯಲ್ಲಿ ಹೋಗದಂತಾಯಿತು. ಗಾಡಿಗಳು ಆಚೆ ಕಡೆದ್ದು ಆಚೆಯಲ್ಲಿಯೇ, ಈಚೆ ಕಡೆದ್ದು ಈಚೆಯಲ್ಲಿಯೇ ನಿಲ್ಲಿಸಲ್ಪಟ್ಟವೆ. ಎತ್ತು ಕೋಣಗಳ ಕಾಲುಗಳು ಸಹ ಪೂರಾ ಹೂತುಹೋಗುವುದರಿಂದ ಅವು ನಡಿಯಲಾರವು! ಕಳೆದ ವರ್ಷ ನಾಲ್ಕು ತಿಂಗಳು ಈ ಮಾರ್ಗದಿಂದ ಜನರು ಕಷ್ಟಪಟ್ಟರೂ ಈ ತರದ ಕಷ್ಟ ಬರಲಿಲ್ಲ. ಇವತ್ತು ನಾಳೆ, ನೆರೆತುಂಬಿದರೆ ಇದೇ ದಾರಿಯಿಂದ ಓಡಿಹೋಗಬೇಕಷ್ಟೆ, ಇವಕ್ಕೇನು ಗತಿ, ಎಂತ ಅನೇಕ ಜನ ಬಡ ಬಗ್ಗರು ಗೋಳಾಡುತ್ತಿದ್ದಾರೆ. ಮಾರ್ಗದ ಇಕ್ಕೆಡೆಯಿಂದ ಕೂಡಾ ಬರಬಹುದೆಂದರೆ ತುದಿಯಲ್ಲಿ ಒಂದು ಸಂಕ ಅಡ್ಡಕ್ಕೆ ಇದೆ. ಇಂಥಾ ಮಾರ್ಗಕ್ಕೆ ಮಣ್ಣು ಮಾತ್ರ ತುಂಬಿಸಿ ಜಲ್ಲಿಕಲ್ಲು ಸ್ಯಾಗಲಿ ಮೇಲಕ್ಕೆ ಹಾಸದಿದ್ದರೆ ಮಳೆಗಾಲಕ್ಕೆ ಇಂಥಾ ಅವಸ್ಥೆ ಆಡೀಶಂತ ಇಂಜಿನಿಯರ ಇಲಾಖೆಯವರ ಗಮನಕ್ಕೆ ಬಾರದೆ ಇದ್ದದ್ದು ತುಂಬಾ ವಿಷಾದಕರವಾಗಿದೆ.

ಆದುದರಿಂದ ಕೂಡಲೆ ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರವರ ಸವಾರಿ ಚಿತ್ತೈಸಿ ಕಣ್ಣಾರೆ ಕಂಡು ಪರಾಂಬರಿಸಿ ಇದರ ವಿಷಯದಲ್ಲಿ ತಕ್ಕ ಏರ್ಪಾಡು ಮಾಡಿಸದಿದ್ದರೆ ಜನರು ಪಡುವ ಕಷ್ಟ ಎಷ್ಟೆಂತ ಹೇಳಲಾಗದು. ಇದು ಅರಣ್ಯರೋಧನ ಎಂತ ತಿಳಿಯಲಾಗದು.

ಇನ್ನೊಬ್ಬ ಬಾತ್ಮಿದಾರ.

ಸ್ಫುಟವಿಚಾರಗಳು.

ರಿಸ್ಪೋನ್ಸಿವ್ ಕೊ-ಒಪರೇಟರರು.

ರಿಸ್ಪೋನ್ಸಿವ್ ಕೊ-ಒಪರೇಟರರಿಗೆ ಕಾರ್ಯಾರಂಭದಲ್ಲಿ ಶುಭಚಿಹ್ನೆಗಳು ತೋರಲು ಆರಂಭಿಸಿವೆ. ಸರಕಾರದ ಯುಕ್ತಿಯೊ, ರಿಸ್ಪೋನ್ಸಿವ್ ಕೊ-ಒಪರೇಟರರ ಪಕ್ಷದ ಸಯುಕ್ತಿಕತೆಯೊ, ಅಂತೂ ಸರಕಾರವು ಈ ರಿಸ್ಪೋನ್ಸಿವ್ ಕೊ-ಒಪರೇಟರರ ಮೇಲೆ ಒಮ್ಮಿಂದೊಮ್ಮೆ ಪ್ರೇಮಾಧಿಕಾರವನ್ನು ಈಗಾಗಲೇ ಆರಂಭಿಸಿರುವದೆಂದು ತೋರುತ್ತಿದೆ. ಈ ಪಕ್ಷದ ಪ್ರಮುಖ ಧುರೀಣರಾಗಿರುವ ಜಯಕರರಿಗೇನೇ ಸರಕಾರವು ಹೆಚ್ಚು ಲಾಭಕರವೂ ಸರಕಾರೀ ಗೌರವ ಉಳ್ಳದೂ ಆದ ಜಡ್ಜ ಕೆಲಸವನ್ನು ಕೊಡಲು ಹವಣಿಸಿದಾಗಿಯೂ, ಜಯಕರರು ರಾಜಕೀಯ ಕಾರಣಗಳಿಂದ ನಿರಾಕರಿಸಿದಾಗಿಯೂ ವರ್ತಮಾನವೀಗಾಗಲೇ ಉಂಟಾಗಿಯದೆ. ಶ್ರೀಯುತ ಜಯಕರರ ದೇಶಪ್ರೇಮದ ಮತ್ತು ಕರ್ತವ್ಯ ಜಾಗ್ರತಿಯ ವಿಷಯದಲ್ಲಿ ಯಾರಿಗೂ ಅನುಮಾನವಿರದು. ಅವರು ಯಾವಾಗಲೂ ರಾಷ್ಟ್ರಹಿತವನ್ನು ಚಿಂತಿಸುವವರೇ ಆಗಿರುವರು. ರಿಸ್ಪೋನ್ಸಿವ್ ಕೊ-ಒಪರೇಶನಿನ ದೃಷ್ಟಾರ ತಿಲಕರಿಗೆ ಕಾರಾವಾಸ ಇತ್ಯಾದಿ ಆದ ಅನ್ಯಾಯದ ಶಿಕ್ಷೆಗಳು ಇನ್ನೂ ಆಗದಂತೆ ಈ ನ್ಯಾಯಸ್ಥಾನದ ನೇಮಕವನ್ನು ಸ್ವೀಕರಿಸುವುದು ಧೋರಣದ ವಿರುದ್ಧವಿರಲಿಕ್ಕಿಲ್ಲ. ಅವರದನ್ನು ನಿರಾಕರಿಸಿದುದು ಒಂದು ತರದ ತ್ಯಾಗವೆ ಆಗಿದೆಯೆನ್ನಬಹುದು. ಆದರೆ ರಿಸ್ಪೋನ್ಸಿವ್ ಕೊ-ಒಪರೇಟರರ ಅನುಮಾನಕರವಾದ ಕೆಲವು ಪ್ರಚಾರ ಕಾರ್ಯಗಳನ್ನು ನೋಡಿದರೆ ಹತ್ತಿರ ಬರುವ ಚುನಾವಣೆಗೆ ಇದೂ ಒಂದು ಪೂರ್ವತಯಾರಿಯೊ ಎಂದು ಸಂದೇಹ ಪಡಬೇಕಾಗುತ್ತದೆ. ಅಲ್ಲದೆ ರಿಸ್ಪೋನ್ಸಿವ್ ಕೊ-ಒಪರೇಶನ್ ವಾದಿಗಳಿಗೆ ತಮ್ಮ ಧೋರಣದ ನ್ಯಾಯವನ್ನು ಸಮರ್ಥಿಸಲಿಕ್ಕೆ ಸರಕಾರದ ರಿಸ್ಪೋನ್ಸ ತೋರಿಸಲಿಕ್ಕೆಂದು ಈ ವಾರ್ತೆಯು ಹಬ್ಬಿಯದೊ ಎಂದೂ ಅನುಮಾನಿಸಬೇಕಾಗುತ್ತದೆ. ಆದರೆ ಸರಕಾರವು ತಾಂಬೆಯವರನ್ನು ಒಲಿಸಿದಂತೆ ಜಯಕರರನ್ನು ಒಲಿಸಲು ಈ ಬಲೆಯನ್ನೊಡ್ಡಿರಲೂ ಬಹುದೆಂದೂ, ಜಯಕರರು ತಮ್ಮ ಆತ್ಮಸಂಯಮದಿಂದ ಇದರಿಂದ ತಪ್ಪಿಕೊಂಡರೆಂದೂ ಊಹಿಸಬಹುದಾಗುತ್ತದೆ.

ಚಳವಳವೊ ಕಳವಳವೊ?

ಮದ್ರಾಸು ಹಿಂದುಮತ ಸಂಸ್ಥೆಗಳ ಸಂಬಂಧವಾದ ಕಾನೂನಿಂದ ಎಲ್ಲಾ ಮತಸಂಸ್ಥೆಗಳೂ ತಮ್ಮ ಕುಂಭಕರ್ಣ ನಿದ್ರೆಯಿಂದ ಎಚ್ಚೆತ್ತಿವೆ. ಎಚ್ಚರವಾಗಿಯದೇ ಹೊರತು ಎದ್ದಿವೆ ಎಂದು ಹೇಳಲು ಬರುವಂತಿಲ್ಲ. ಈ ಮತಸಂಸ್ಥೆಗಳಿಂದ ಸಾರ್ವಜನಿಕ ದ್ರವ್ಯವು ಬಹಳ ಹೀನ ರೀತಿಯಿಂದ ದುರ್ವ್ಯಯ ಹೊಂದುತ್ತಿದೆ ಎಂಬುದು ನಿರ್ವಿವಾದದ ಮಾತು. ಇಂತಹವುಗಳನ್ನು ಬರೇ ಹತ್ತು ಜನರ ಅರ್ಥಾತ್ ಸಾರ್ವಜನಿಕ ಜವಾಬ್ದಾರಿಯಿಂದ ಸರಕಾರದ ಕಾನೂನಿನ ಸಹಾಯವಿಲ್ಲದೆ, ಸರಿಯಾಗಿ ನಡಿಸಿ ದುರ್ವ್ಯಯವನ್ನು ನಿಲ್ಲಿಸುವುದು ಸಾಧ್ಯವಿಲ್ಲದ ಮಾತು. ಈಗ ಸದ್ಯಕ್ಕೆ ಮದ್ರಾಸ ಕೌನ್ಸಿಲಿನಲ್ಲಿ ಬಂದ ಈ ಕಾನೂನು ಎಷ್ಟೊ ದೋಷಯುಕ್ತವಾಗಿದ್ದರೂ, ಇದನ್ನು ತೆಗೆದು ಹಾಕಿದರೆ ಹಿಂದೂ ಮತಸಂಸ್ಥೆಗಳು ಧರ್ಮಸ್ಥಾಪನೆಯ ಕೇಂದ್ರವಾಗಿರುವ ಬದಲು ಧರ್ಮಪತನದ ಕಾರಣವಾಗಬಹುದೆಂದು ತೋರುತ್ತಿದೆ. ಅನೇಕ ಮಠಸಂಸ್ಥೆಗಳೊಳಗಿನ ಕಲುಷಿತವಾದ ಚರಿತ್ರೆಯನ್ನು ನೋಡಿದರೆ ಇಂತಹ ಕಾನೂನುಗಳಿಂದ ಅವುಗಳ ಸ್ವಾಯತ್ತವನ್ನಾದರೂ ರಕ್ಷಿಸುವುದು ಅವಶ್ಯವಿದೆಯೆಂದು ತೋರುತ್ತದೆ. ಆದರೂ ಈ ಮಠಸಂಸ್ಥೆಗಳೇ ದಿಗಿಲು ಬಿದ್ದು ಈ ಕಾನೂನಿನ ವಿರುದ್ಧವಾಗಿ ಚಳವಳವನ್ನೊ, ವ್ಯಾಜ್ಯಗಳನ್ನೊ ಹೂಡಿ ಇದನ್ನು ನಾಶಮಾಡಲು ಪ್ರಯತ್ನಿಸುತ್ತಿವೆ. ಮಠಗಳ ಸಾರ್ವಜನಿಕತೆಯ ಸಮಷ್ಟಿ ಭಾವನೆಯು ಈ ವ್ಯಾಜ್ಯಗಳ ಸಾಧನೆಗಳ ಮೂಲಕ ನಾಶಮಾಡಲ್ಪಡಲು ಪ್ರಯತ್ನಗಳು ನಡೆಯುತ್ತಿವೆ. ಇದರಿಂದ ಈ ವಿಶಾಲ ಸಂಸ್ಥೆಗಳು ಹೇಗೆ ಅಪಾರ ಸ್ವಾರ್ಥದಿಂದ ಜಡವಾಗಿ ಹೋಗಿವೆ ಎಂದೂ, ಹೇಗೆ ಜವಾಬ್ದಾರಿಯ ನಿರಾಕರಣೆಯಿಂದ ಸಂಕುಚಿತವಾಗಿವೆ ಎಂದೂ ತಿಳಿಯುವುದು. ಈ ಸಂಸ್ಥೆಗಳು ಪತ್ರಿಕೆಗಳ ಮೂಲಕ ಕಾನೂನಿನ ವಿರುದ್ಧವಾಗಿ ದೊಡ್ಡ ಚಳವಳವಿದೆ ಎಂದು ತೋರಿಸಲು ಪ್ರಯತ್ನಿಸುತ್ತಿವೆ. ಈ ಪತ್ರ ಚಳವಳದ ಕೇಂದ್ರವು ಉಡುಪಿಯಾಗಿದೆ. ಯಾರೂ ಈ ಚಳವಳದಲ್ಲಿ ಉತ್ಸಾಹಕರಿಲ್ಲದಿದ್ದರೂ ಪತ್ರಿಕೆಗಳಲ್ಲಿ ಸಭೆಗಳ ದೊಡ್ಡ ದೊಡ್ಡ ವರದಿಗಳು ಪ್ರಕಟಿಸಲ್ಪಡುತ್ತಿವೆ. ಈ ಚಳವಳಗಾರರ ಕಲ್ಪನಾಶಕ್ತಿಯೂ ಇಷ್ಟರಲ್ಲಿಯೇ ನಿಲ್ಲದೆ, ಹಳ್ಳಿಗಳಲ್ಲಿಯೂ, ಇನ್ನಿತರ ಯಾರಿಗೂ ಗೊತ್ತಿರದ ಸ್ಥಳಗಳಲ್ಲಿಯೂ ಸಭೆಗಳನ್ನು ಕಲ್ಪಿಸಿ, ಹಾಜರಿಯನ್ನು ಕಲ್ಪಿಸಿ, ದೊಡ್ಡ ದೊಡ್ಡವರ ಹೆಸರುಗಳನ್ನು ಹಾಕಿ ವರದಿಯನ್ನು ತಯಾರಿಸಿ ಪತ್ರಿಕೆಗೆ ಕಳಿಸಿ ಬಿಡುತ್ತಿವೆ. ಇವರ ಕಲ್ಪನಾ ಶಕ್ತಿಯು ಅಭಿನಂದನೀಯವಿದೆ! ಆದರೆ ಈ ಕಲ್ಪಿತ ಚಳವಳಕ್ಕಿಂತಲೂ ಮಠಾಧಿಕಾರಿಗಳ ಕಳವಳವೇ ಹೆಚ್ಚಾಗಿರಬೇಕು.

ಕಾಂಗ್ರೆಸ್ ಅಧ್ಯಕ್ಷರು.

ಅಸ್ಸಾಮ ಪ್ರಾಂತದ ಗೌಹಾಟಿ ಎಂಬ ಊರಲ್ಲಿ ಸೇರಲಿರುವ ಬರುವ ದಶಂಬರದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರ ಚುನಾವಣೆಯು ಪ್ರಾಂತಿಕ ಕಮಿಟಿಗಳಿಂದ ಆಗಲಿದೆ. ಕಾಂಗ್ರೆಸ್ ಅಧ್ಯಕ್ಷತನವು ಅತ್ಯಂತ ಜವಾಬ್ದಾರಿಯ ಸ್ಥಾನವಾಗಿದೆ. ಅದು ಕಾಂಗ್ರೆಸಿನ ಮೇಲೆ ಸ್ಥಿರವಾದ ಅಭಿಮಾನವೂ ವಿಶ್ವಾಸವೂ ಉಳ್ಳವರಿಂದಲೇ ಅಲಂಕರಿಸಲ್ಪಡುವುದು ಅಗತ್ಯವಿದೆ. ಅಧ್ಯಕ್ಷರು ಒಂದು ವರ್ಷಕ್ಕೆ ಕಾಂಗ್ರೆಸ್ ಧೋರಣವನ್ನು ಎತ್ತಿ ಹಿಡಿದು ಅದಕ್ಕೆ ಸರಿಯಾದ ಕಾರ್ಯನಿರ್ವಾಹವನ್ನು ಮಾಡುವರಾದುದರಿಂದ ಅಷ್ಟು ಕೆಲಸಕ್ಕೆ ಉತ್ಸಾಹವೂ ಸಮಯವೂ ಇದ್ದವರೇ ಅದಕ್ಕೆ ಚುನಾಯಿಸಲ್ಪಡಬೇಕು. ಒಂದು ಬಾರಿ ಲೋರ್ಡ ಸಿಂಹರು ಚುನಾಯಿಸಲ್ಪಟ್ಟು, ಅವರ ಅಧ್ಯಕ್ಷಭಾಷಣವೇ ಕೊಂಗ್ರೆಸ್ಸಿನ ಧೋರಣಕ್ಕೂ ರಾಷ್ಟ್ರಹಿತಕ್ಕೂ ವಿರೋಧವಿದ್ದಂತೆ ಇನ್ನು ಎಂದಿಗೂ ಆಗಬಾರದು. ಅಂತಹ ಧುರೀಣರು ಯಾರು? ಎಂದು ದೇಶವು ಈ ದಿನ ತನ್ನ ತೀರ್ಮಾನವನ್ನು ಕೊಡಬೇಕು. ಪ್ರತಿ ಪ್ರಾಂತಿಕ ಕಮಿಟಿಗಳಲ್ಲಿ ಚುನಾವಣೆಯು ನಡೆಯುತ್ತಿದೆ. ಆದರೆ ಈ ವರೆಗೆ ಸೂಚಿಸಲ್ಪಟ್ಟ ಹೆಸರುಗಳಲ್ಲಿ ಶ್ರೀಯುತ ಶ್ರೀನಿವಾಸ ಅಯ್ಯಂಗಾರರ ಹೆಸರೇ ಈಗಿನ ಸಂದರ್ಭದಲ್ಲಿ ಅಧ್ಯಕ್ಷಸ್ಥಾನಕ್ಕೆ ಯೋಗ್ಯವಾದುದಾಗಿ ನಮ್ಮ ಅಭಿಪ್ರಾಯವಾಗಿದೆ. ಶ್ರೀಯುತ ಕೇಳ್ಕರರ ಹೆಸರು ಸೂಚಿತವಾಗಿಯದೆ. ಆದರೆ ಶ್ರೀಯುತ ಕೇಳ್ಕರರಿಗೆ ಕಾಂಗ್ರೆಸ್ ಧೋರಣದ ಮೇಲೆ ವಿಶ್ವಾಸವಿಲ್ಲವಲ್ಲದೆ ಈಗವರಿಗೆ ಕಾಂಗ್ರೆಸ್ಸಿನ ಮೇಲಿನ ಅಭಿಮಾನ ಕೂಡ ಇಲ್ಲವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಅವರನ್ನು ಚುನಾಯಿಸಿದರೆ ಕಾಂಗ್ರೆಸ್ಸಿಗೆ ಭಂಗಬರಲಿಕ್ಕೂ ಸಾಧ್ಯವುಂಟು. ಸಂಭವತಃ ಶ್ರೀಯುತ ಶ್ರೀನಿವಾಸ ಅಯ್ಯಂಗಾರರೇ ಅಧ್ಯಕ್ಷರಾಗುವರಾಗಿ ಕಾಣುತ್ತಿದೆ.

ಪಂಡಿತ ಮದನಮೋಹನ ಮಾಲವೀಯರು.

ಬಂಗಾಳದಲ್ಲುಂಟಾದ ಹಿಂದೂ-ಮುಸಲ್ಮಾನ ಅನಾಹುತಗಳ ವಿಚಾರವಾಗಿ ಪಂಡಿತಜಿಯವರು ಬಂಗಾಳಕ್ಕೆ ಹೋಗಿ, ಅಲ್ಲಲ್ಲಿ ಹಿಂದೂಗಳ ಹಕ್ಕಿಗಾಗಿಯೂ ಹಿಂದೂ ಮುಸಲ್ಮಾನ ಐಕ್ಯಕ್ಕಾಗಿಯೂ ಪ್ರಯತ್ನಿಸುತ್ತಿರುವರು. ಪಂಡಿತಜಿಯವರು ಹಿಂದೂಗಳ ಉನ್ನತಿಗಾಗಿಯೂ ಸಂಘಟನೆಗಾಗಿಯೂ ಚಿರಚಿಂತಿತರಿರುವವರಾಗಿರುವರು. ಸ್ವಭಾವತಃ ಅವರ ಹಾಜರಿಯು ಬಂಗಾಳದಲ್ಲಿ ಸಹಾಯಕವಾದುದಾಗಿದೆ. ಪಂಡಿತಜಿಯವರು ಕಲ್ಕತ್ತಾದಲ್ಲಿದ್ದು ಹಲವು ಬಾರಿ ಹಿಂದೂ-ಮುಸಲ್ಮಾನ ಅನ್ಯೋನ್ಯಕ್ಕಾಗಿ ಅನೇಕ ಭಾಷಣಗಳನ್ನು ಕೊಟ್ಟಿರುವರು. ಆದರೆ ಅವರು ಅಷ್ಟರಿಂದಲೇ ತಮ್ಮ ಉತ್ಸಾಹವನ್ನು ಮುಗಿಸಿಲ್ಲ. ತಮ್ಮದೊಂದು ಪ್ರತ್ಯೇಕ ರಾಜಕೀಯ ಪಕ್ಷವನ್ನು ಸ್ಥಾಪಿಸಲು ಪಂಡಿತಜಿಯವರು ಸಿಮ್ಲಾದಲ್ಲಿ ಕೆಲವು ತಿಂಗಳ ಹಿಂದೆ ಪ್ರಯತ್ನಿಸಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ಈಗ ಬಂಗಾಳದಲ್ಲಿ ಅವರು ರಿಸ್ಪೋನ್ಸಿವ್ ಕೊ-ಒಪರೇಶನ್ ಪಕ್ಷವನ್ನು ಸ್ಥಾಪಿಸಲು ಪ್ರಯತ್ನಿಸುತ್ತಾರೆ. ಆದರೆ ಪಂಡಿತಜಿಯವರು ಜಾತೀಯ ಕಾರ್ಯಗಳಲ್ಲಿ ನಿಯುಕ್ತರಿರುವುದರಿಂದ ಅವರು ರಾಜಕೀಯ ಪಕ್ಷಗಳಲ್ಲಿ ಮುಂದುವರಿಯುವುದು ಬಾಧಕಕರವಾಗಿದೆ. ಜಾತೀಯ ಪಕ್ಷಗಳ ಧುರೀಣರು ಜಾತೀಯ ಉನ್ನತಿಗಾಗಿಯೂ, ಜಾತಿಜಾತಿಗಳ ಐಕ್ಯಕ್ಕಾಗಿಯೂ ಮಾತ್ರವೇ ಪ್ರಯತ್ನಿಸಿ ರಾಜಕೀಯ ಧುರೀಣತೆಯನ್ನು ಇತರರಿಗೆ ಬಿಟ್ಟುಕೊಡುವುದು ಅವಶ್ಯವಿದೆ. ಮುಸಲ್ಮಾನರೊಳಗೆ ಡಾ| ಕಿಚ್ಲುರವರ ಧುರೀಣತೆಯು ಸಾಧಾರಣ ಹಿಂದೂಗಳೊಳಗೆ ಪಂಡಿತ ಮಾಲವೀಯರ ಧುರೀಣತೆಯಂತೆಯೇ ಇದೆ. ಡಾ| ಕಿಚ್ಲುರವರ ಬಂಗಾಳ ಪ್ರವಾಸದ ಭಾಷಣಗಳನ್ನು ಓದಿದರೆ, ಡಾ| ಕಿಚ್ಲುರವರೂ ಹಿಂದೂ-ಮುಸಲ್ಮಾನ ಅನ್ಯೋನ್ಯಕ್ಕಾಗಿ ಚಿಂತಿತರಿರುವರೆಂದೂ ಕಾಣುವುದು. ಈ ಧುರೀಣರು ರಾಜಕೀಯ ಪಕ್ಷಗಳ ವಾದಗಳಲ್ಲಿ ಸೇರುವುದಕ್ಕಿಂತಲೂ ಜಾತೀಯ ಹಿತಕ್ಕಾಗಿ ಈ ರೀತಿಯಲ್ಲಿ ಕೆಲಸಮಾಡುವುದೇ ದೇಶಹಿತದಲ್ಲಿ ಒಳ್ಳೇಯದಿದೆ.

ಹಿಂದೀಯ ಸ್ವರಾಜ್ಯವನ್ನು ಹೊಂದುವ ಅರ್ಹತೆಯ ಮಾಪ.

ಉತ್ತರ ಹಿಂದೂಸ್ಥಾನದಲ್ಲಿ ಹಿಂದೂ-ಮುಸಲ್ಮಾನ ಕಲಹಗಳಾದಂದಿನಿಂದ ಆಂಗ್ಲೊ ಇಂಡಿಯನ್ ಮತ್ತು ಇಂಗ್ಲೆಂಡಿನ ಪತ್ರಿಕೆಗಳು ಇದರ ಮಾಪದಿಂದಲೇ ಹಿಂದೀಯರ ಅರ್ಹತೆಯನ್ನು ಅಳೆಯಲು ಆರಂಭಿಸಿವೆ. ಬ್ರಿಟಿಷ ಸರಕಾರವು ನಾಳೆ ಹಿಂದೂಸ್ಥಾನವನ್ನು ಬಿಟ್ಟುಹೋದರೆ ಹಿಂದೂಸ್ಥಾನದಲ್ಲಿ ಎಂತಹ ಪ್ರಚಂಡ ಅನಾಹುತಗಳಾದಾವೆಂದು ಕಲ್ಪಿಸಲು ಕೂಡ ಅವರಿಗೆ ಸಾಧ್ಯವಾಗಿಲ್ಲ. ಕೊಲೆ, ಕಳವು, ಅತ್ಯಾಚಾರ, ಸುಡುವುದು, ಇತ್ಯಾದಿ ಭಯಂಕರ ವಿನಾಶದ ಮೂರ್ತಿಮಂತ ಸ್ವರೂಪವೇ ನಮ್ಮ ಆಳರಸರ ಕರುಣಾಮಯ(?) ಹೃದಯದ ಸಮ್ಮುಖದಲ್ಲಿ ಚಿತ್ರಿತವಾಗುತ್ತದೆ. ಹಿಂದೀಯರ ವಿಲಿಯ ಗಟ್ಟಲೆ ಮೂಕರ—ಉಪವಾಸವಿಟ್ಟಾದರೂ—ರಕ್ಷಿಸುವ ಭಾರವನ್ನು ವಹಿಸಿಕೊಂಡ ಬ್ರಿಟಿಷ ಸರಕಾರಕ್ಕೆ ಇದು ಎಂದಿಗೂ ಸಹನೀಯವಲ್ಲ! ನಿಜ. ಆದರೆ ಹಿಂದೀಯರ ಅಭಿಪ್ರಾಯ ಮಾತ್ರ ತೀರಾ ವಿರುದ್ಧವಿದೆ. ಈ ಜಾತಿಯ ಕಲಹಗಳೇ ಸ್ವರಾಜ್ಯದ ಆವಶ್ಯಕತೆಯನ್ನು ತೋರಿಸುತ್ತಿವೆಯೆಂದೂ, ಸರಕಾರದ ಅಲಕ್ಷ್ಯವೇ ಇಂತಹ ಅನಾಚಾರಗಳಿಗೆ ಕಾರಣವೆಂದೂ, ಜನತೆಯನ್ನು ವಿಭಾಗಿಸಿ ಆಳುವ (Divide and Rule) ಧೋರಣವೇ ಹೆಚ್ಚಾಗಿ ಈ ಕಲಹಗಳಿಗೆ ಕಾರಣವಾಗುತ್ತಿದೆಯೆಂದೂ ಹಿಂದೀಯ ಅಭಿಪ್ರಾಯವಿದೆ.

ಇಂಗ್ಲೆಂಡೂ ರಶ್ಯಾದೇಶವೂ.

ಇಂಗ್ಲೆಂಡಿನ ಸರಕಾರವು ಮುಖ್ಯವಾಗಿ ಶ್ರೀಮಂತರ ಸರಕಾರವಾಗಿದೆ. ಕನ್ಸರ್ವೇಟಿವರೂ ಲಿಬರಲರೂ, ಶ್ರೀಮಂತರೊಳಗಿಂದಲೇ ಬಂದವರಾಗಿರುವರು. ಆದುದರಿಂದ ಬಡವರ ಹಿತದಲ್ಲಿಯೇ ದೀಕ್ಷಾಬದ್ಧವಾದ ರಶ್ಯಾ ಸರಕಾರದ ಕೃತ್ಯಗಳನ್ನು ಬ್ರಿಟಿಷ ಸರಕಾರವು ಸಹಿಸಲಾರದಾಗಿದೆ. ಇಂಗ್ಲೆಂಡಿನಲ್ಲಿ ಮಜೂರ ಸರಕಾರವು ಅಧಿಕಾರಕ್ಕೆ ಬಂದಕಾರಣದಿಂದ ಮಾತ್ರವೇ ಇಂಗ್ಲೆಂಡು—ರಶ್ಯಾದ ವಹಿವಾಟಿನ ಸಂಧಿಯು ಉಂಟಾಯಿತು. ಈ ಸಂಧಿಯಿಂದ ಎರಡೂ ದೇಶಗಳಿಗೆ ಲಾಭವಿದೆಯೆಂಬುದು ನಿರ್ವಿವಾದದ ಮಾತು. ಆದರೆ ಕನ್ಸರ್ವೇಟಿವ್ ಪಕ್ಷದವರು ರಶ್ಯಾದ ಮೇಲಿನ ದ್ವೇಶದ ಮುಂದೆ ಬೇರೆ ಯಾವ ಆಲೋಚನೆಯನ್ನೂ ಮಾಡುವುದಿಲ್ಲ. ರಶ್ಯಾದೊಡನಿದ್ದ ಸಂಮ್ಮಂಧವನ್ನು ಕಡಿದುಹಾಕಬೇಕೆಂದೇ ಅವರ ಸಾಧನೆಯಾಗಿದೆ. ಅಲ್ಲದೆ ಜನರಲ್ ಸ್ಟ್ರೈಕ್ ಬಗ್ಗೆಯೂ ಈಗ ದೀರ್ಘಕಾಲದಿಂದ ಇರುವ ಇದ್ದಲುಗಣಿಗಳ ಕೂಲಿಗಳ ಮುಷ್ಕರ ಬಗ್ಗೆಯೂ ರಶ್ಯಾದೇಶವು ಕಳುಹಿಸಿದ ದ್ರವ್ಯಸಹಾಯವು ಈ ಸಾಮ್ರಾಜ್ಯವಾದಿಗಳನ್ನು ಕೆರಳಿಸಿಯದೆ. ರಶ್ಯಾದೇಶದೊಡನಿದ್ದ ಸಂಬಂಧವನ್ನು ಕಡಿದುಹಾಕಬೇಕಾಗಿ ಕನ್ಸರ್ವೇಟಿವರೊಬ್ಬರು ಪಾರ್ಲಿಮೆಂಟಿನಲ್ಲಿ ಠರಾವನ್ನು ತಂದರು. ಜರ್ಮನಿ, ಫ್ರಾನ್ಸ, ತುರ್ಕಿ ಮೊದಲಾದ ಇತರ ಪ್ರಮುಖ ಜನಾಂಗಗಳು ರಶ್ಯಾದೊಡನೆ ರಾಜಿಮಾಡಿ ವ್ಯಾಪಾರವನ್ನು ಬೆಳೆಸಿ ಇರುವಾಗ ಇಂಗ್ಲೆಂಡು ತನ್ನ ವ್ಯಾಪಾರ ವಹಿವಾಟುಗಳನ್ನು ನಿಲ್ಲಿಸಿದರೆ ಇತರ ರಾಷ್ಟ್ರಗಳಿಗೆ ಲಾಭವಾದಿ ಕೊಟ್ಟಂತಾಗುವುದಲ್ಲದೆ ರಶ್ಯಾಕ್ಕೆ ಬೇರೆ ನಷ್ಟವಿಲ್ಲ. ನಷ್ಟವು ಇಂಗ್ಲೇಡಿಗೆ ಮಾತ್ರವೇ. ಇಂಗ್ಲೆಂಡಿನ ಕನ್ಸರ್ವೇಟಿವ್ ಸರಕಾರವು ಇದನ್ನು ಚೆನ್ನಾಗಿ ತಿಳಿದುಕೊಂಡಿದೆ. ಆದುದರಿಂದಲೇ ಪಾರ್ಲಿಮೆಂಟಿನಲ್ಲಿ ನಡೆದ ವಿವಾದದಲ್ಲಿ ಸರಕಾರವು ರಶ್ಯಾದೊಡನಿದ್ದ ಸಂಬಂಧವನ್ನು ಕಡಿದುಹಾಕಲು ಉತ್ಸುಕತೆಯನ್ನು ತೋರಲಿಲ್ಲ.

ಹುದ್ದೆಗಳನ್ನು ಸ್ವೀಕರಿಸಬೇಕೇ?

ಆಂಧ್ರ ಪ್ರಾಂತಿಕ ಕಮಿಟಿಯು, ಜೂನ್ ೨೬ನೇ ತಾರೀಕಿನಲ್ಲಿ ರಾಜಮಹೇಂದ್ರಿಯಲ್ಲಿ ಕೂಡಿ ಕೊಂಗ್ರೆಸ್ ಅಧ್ಯಕ್ಷರ ಚುನಾವಣೆಯನ್ನು ಆಲೋಚಿಸಿತು. ಚುನಾವಣೆಯು ಯಾರ ಮೇಲೂ ಬೀಳಲಿ, ಆ ವಿಷಯದಲ್ಲಿ ನಮಗೆ ನಿಷೇಧವಿಲ್ಲ. ಆದರೆ ಇದಕ್ಕಾಗಿ ಅಲ್ಲಿ ನಡೆದ ವಾಗ್ಯುದ್ಧವು ಮಾತ್ರ ಕೊಂಗ್ರೆಸ್ಸಿನ ಯಾವ ಸೂತ್ರಗಳಿಗೂ ಸರಿಬೀಳಲಿಕ್ಕಿಲ್ಲವೆಂಬುದನ್ನು ತೋರಿಸದಿರಲಾರೆವು. ಶ್ರೀಯುತ ಶ್ರೀನಿವಾಸ ಅಯ್ಯಂಗಾರರ ಹೆಸರು ಬರುತ್ತಲೇ ಅನೇಕರು ಅವರ ಮೇಲೆ ಹಾರಿ ಬಿದ್ದುದು ಆಶ್ಚರ್ಯಕರವಾಗಿದೆ. ಶ್ರೀಯುತ ಅಯ್ಯಂಗಾರರ ಪೂರ್ವಚರಿತ್ರೆಯನ್ನು ಕೂಡ ಅಲ್ಲಿ ತಂದು ಅವರ ಅಯೋಗ್ಯತೆಯನ್ನು ತೋರಿಸಲಿಕ್ಕೆ ಕೆಲವರು ಹಿಂಜರಿಯಲಿಲ್ಲ. ಒಬ್ಬರ ನಿಷೇಧ, ಅವರು ಪೂರ್ವದಲ್ಲಿ ಅನ್ನಿಬಿಸೆಂಟಮ್ಮನವರನ್ನು ಇಂಟರ್ನ (Intern) ಮಾಡಿದರೆಂಬುದಾಗಿ ಇದೆ! ಕಾಂಗ್ರೆಸ್ಸಿನ ನಿಸ್ಪೃಹ ಸೂತ್ರಗಳನ್ನು ಹಿಡಿದೆತ್ತಲು ಉತ್ಸಾಹಿತರಿರುವ ಈ ಕಾಂಗ್ರೆಸ್ಸಿನ ತಾರ್ಕಿಕರಿಗೆ ಇಂತಹ ತರ್ಕದ ಅಶುದ್ಧತೆಯು ನಿಜ ತಿಳಿಯದೊ!

ಇನ್ನೊಂದು ಅಪವಾದವೆಂದರೆ ಶ್ರೀಯುತ ಅಯ್ಯಂಗಾರರು ಹುದ್ದೆಗಳನ್ನು ಸ್ವೀಕರಿಸಬೇಕಾಗಿ ಸೂಚಿಸಿರುವರೆಂದು ಯಾರೊ ಹೇಳಿದುದು ತನಗೆ ಗೊತ್ತಿದೆಯೆಂದೂ, ಯಾರೊ ಬರೆದುದು ತನಗೆ ಗೊತ್ತಿದೆಯೆಂದೂ ಒಬ್ಬರು ಹೇಳುವರು. ಇದನ್ನು ಚೆನ್ನಾಗಿ ವಿಚಾರಿಸುವುದು ಅವಶ್ಯವಿದೆ. ಈಗಿನ ರಾಜಕೀಯ ಗೊಂದಲದಲ್ಲಿ ಪರಸ್ಪರ ವಿಶ್ವಾಸವೇ ಕಡಿಮೆಯಾಗಿ ಧುರೀಣರು ಹ್ಯಾಗೆ ಆಲೋಚಿಸುತ್ತಾರೆಂದೂ, ಜನತೆಯು ಹ್ಯಾಗೆ ಅನುಸರಿಸುತ್ತಾರೆಂದೂ ಹೇಳುವುದು ಸಾಧ್ಯವಿಲ್ಲ. ಆದುದರಿಂದ ಧುರೀಣರು ಸ್ವಷ್ಟಾಭಿಪ್ರಾಯಗಳನ್ನು ಕೊಟ್ಟು ಜನರ ಸಂಶಯ ನಿವಾರಣ ಮಾಡುವುದು ಅತೀ ಅಗತ್ಯ.

ಅನುಕ್ರಮಣಿಕೆ.

ಅಗ್ರಲೇಖ	ಪುಟ.
ಗೋರಕ್ಷಣ	೬
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೭
ಬಕ್ರೀದ್ ಹಬ್ಬ	,,
ಮಂಗಳೂರು	,,
ದಕ್ಷಿಣ ಕನ್ನಡ-ಮೂಡಬಿದರೆ, ಬಾರ್ಯ, ಮಂಚಿ, ಬಂಟವಾಳ,	೭-೮
ಸ್ವೀಕಾರ ಮತ್ತು ವಿಮರ್ಶೆ	೮
ವಿವಿಧವಿಷಯಗಳು	,,
ಕ್ಷಯರೋಗ	,,
ಪತ್ರವ್ಯವಹಾರ ೧, ೨	೪

ಸ್ವದೇಶಾಭಿಮಾನಿ.

ಶಕ ೧೮೪೮ ಜ್ಯೇಷ್ಠ ಬ॥ ೭ಯು ಶುಕ್ರವಾರ.

ಗೋರಕ್ಷಣ.

ಕೆಲವು ವರ್ಷಗಳ ಮೊದಲು ಉತ್ತರ ಹಿಂದೂಸ್ಥಾನದಲ್ಲಿ ಹಿಂದೂ-ಮುಸಲ್ಮಾನ ಕಲಹಗಳು, ಹೆಚ್ಚಾಗಿ ಮುಸಲ್ಮಾನರು ಮಾಡುತ್ತಿದ್ದ ಗೋವಧೆಯ ಕಾರಣದಿಂದಾಗುತ್ತಿದ್ದುವು. ಈಗಿನ ಕಲಹಗಳು ಇದೇ ಕಾರಣದಿಂದ ಆಗುವುದು ಇದೆಯಾದರೂ ಹೆಚ್ಚಿನವುಗಳು ಮಸೀದಿಯ ಮುಂದೆ ವಾದ್ಯ, ಇಲ್ಲವೆ ವೈಯಕ್ತಿಕ ಜಗಳ, ಅಥವಾ ಇಂತಹ ಇತರ ಕ್ಷುದ್ರಕಾರಣಗಳಿಂದ ಆಗುತ್ತಿವೆ. ಗೋವಧೆಯು ಖಿಲಾಫತ್ ಚಳವಳದ ಸಮಯದಲ್ಲಿ ಹಿಂದೂ-ಮುಸಲ್ಮಾನರೊಳಗೆ ಆಗಿದ್ದ ಅನ್ಯೋನ್ಯದ ಕಾರಣದಿಂದ ಕಡಿಮೆ ಮಾಡಲ್ಪಟ್ಟದ್ದು ಈಗ ಪುನಃ ಹೆಚ್ಚಾಗಲಾರಂಭಿಸಿಯದೆ.

ಹಿಂದೂಗಳಿಗೆ ಗೋವುಗಳು ಪವಿತ್ರವಾದುವು. ಗೋಪ್ರದಕ್ಷಿಣದಿಂದ ಭೂಪ್ರದಕ್ಷಿಣೆಯ ಫಲವುಂಟೆಂದೂ, ಪಂಚಗವ್ಯದಿಂದ ಅಂತಃಶುದ್ಧಿಯುಂಟೆಂದೂ ಇತ್ಯಾದಿ ಮಹತ್ವಗಳು ಗೋದೇವತೆಯಲ್ಲಿ ಹಿಂದುಗಳು ಕಾಣುವರು. ಗೋವು ಅತ್ಯಂತ ಪೂಜ್ಯಾರ್ಹವಾದುದು. ಇಹದ ಆಹಾರಾದಿಗಳ ಬಗ್ಗೆಯೂ, ಪರದ ಸ್ವರ್ಗಸುಖಕ್ಕೂ ಗೋವಿನ ಆಶೀರ್ವಾದವು ಬೇಕೆಂದು ವಿಶ್ವಾಸವುಳ್ಳ ಹಿಂದುಗಳೆಲ್ಲರೂ ತಿಳಿದಿರುವರು. ಆದುದರಿಂದ ಗೋವಧೆಯು ಹಿಂದುಗಳಿಗೆ ಅಸಹ್ಯವಾಗುವುದು ಆಶ್ಚರ್ಯವಲ್ಲ. ಗೋವಿನ ರಕ್ಷಣೆಗಾಗಿ ಎಷ್ಟೋ ಹಿಂದುಗಳು ಪ್ರಾಣ ಕೊಟ್ಟಿರುವರು. ಗೋವಿನ ಪಾಲನೆಗಾಗಿ ಶ್ರೀ ಕೃಷ್ಣನೇ ಅವತರಿಸಿ ಅದರ ಮಹತ್ವವನ್ನು ಪ್ರಜ್ವಲಿಸಿದನು.

ಆದರೆ ಸರ್ವವ್ಯಾಪಕನಾದ ಜಗತ್ಪಾಲಕನಿಗೆ ಇಷ್ಟೆಲ್ಲ ಅಸಂಖ್ಯ ಪ್ರಾಣಿಗಳಲ್ಲಿ ಗೋವೇ ಏಕೆ ಏಕಮಾತ್ರ ಪ್ರತಿಷ್ಠೆಯ ಸ್ಥಾನವಾಗಿರಬೇಕು; ಏಕೆ ಗೋವು ಮಾತ್ರವೇ ಮನುಷ್ಯನ ಇಹ ಜೀವನವನ್ನು ಅನುಸರಿಸಿಯೂ ಅತಿಕ್ರಮಿಸಿ ಪರಮಾರ್ಥವನ್ನು ಕೊಡುವುದು ಎಂಬುದನ್ನು ನಾವು ಇಲ್ಲಿ ವಾದಿಸುವುದಿಲ್ಲ. ಇಹಜೀವನದಲ್ಲಿ ಅದು ಅತೀ ಉಪಯುಕ್ತವಾದ ಪ್ರಾಣಿ; ದೇಹಸುಖ, ಗೃಹಶಾಂತಿ, ಬಾಲಪೋಷಣೆ ಇತ್ಯಾದಿ ಸಂಸಾರದ ಅತ್ಯಗತ್ಯ ಕೆಲಸಗಳಿಗೆ ಅದು ಅತೀವ ಸಹಕಾರಿ ಎಂಬುದು ಪೂರ್ಣ ಪ್ರತ್ಯಕ್ಷವಿದೆ.

ಪರಮಾರ್ಥವಲ್ಲದೆ, ಈ ಕಾರಣವಾದರೂ ಗೋರಕ್ಷಣೆಯ ಪೂರ್ಣತೆಗೆ ಸಾಕಷ್ಟು ಉತ್ಸಾಹವನ್ನು ಕೊಡಬೇಕು. ಹಿಂದೂಗಳಾಗಲಿ ಮಹಮ್ಮದೀಯರಾಗಲಿ, ಗೋವುಗಳ ಸಾಂಸಾರಿಕ ಲಾಭವು ಒಂದೇ ತೆರನಾಗಿದೆ. ಗೋವುಗಳ ಹಾಲು ಮೊಸರಿನಿಂದ ಅವರಿಗೂ ಕೂಡ ದೇಹಸ್ವಾಸ್ಥ್ಯವು ಲಭಿಸುತ್ತಿದೆ. ಅಸ್ವಸ್ಥದ ಸಮಯದಲ್ಲಿ ದನದ ಹಾಲು ಇಲ್ಲದೆ ಆಗುವುದಿಲ್ಲ. ಇಂತಹ ಪ್ರಯೋಜನಗಳನ್ನು ಕೊಡಬಲ್ಲ ದನವು ಹಿಂದುಗಳಿಗೂ ಮಹಮ್ಮದೀಯರಿಗೂ ಏಕ ರೀತಿಯಲ್ಲಿ ಪೋಷಣೀಯವಿರಬೇಕು. ದನಗಳನ್ನು ಮಾಂಸರೂಪವಾಗಿ ಸೇವಿಸುವುದಕ್ಕಿಂತಲೂ ಹಾಲುರೂಪವಾಗಿ ಸೇವಿಸುವುದು ಮಹಮ್ಮದೀಯರಿಗಾದರೂ ಹೆಚ್ಚು ಸುಖಕರವಾಗುವುದು.

ಆದರೆ ದನವನ್ನು ದೇವಿಯೆಂದೇ ಭಾವಿಸುವ, ಅದನ್ನು ಪರಮಾರ್ಥದ ಒಂದು ವಿಷಯವೆಂದು ತಿಳಿಯುವ, ಅದಕ್ಕೆ ವರ್ಷಕ್ಕೊಂದುಬಾರಿಯಾದರೂ ಆರತಿಯೆತ್ತಿ ಪೂಜಿಸುವ, ಅದರ ಒಂದೊಂದು ಕೂದಲಿನಲ್ಲಿ ಹಿಂದೂಗಳ ೩೩ ಕೋಟಿ ದೇವತೆಗಳಲ್ಲಿ ಒಂದೊಂದು ದೇವತೆಯಿದೆಯೆಂದು ವಿಶ್ವಾಸಿಸುವ ಹಿಂದೂಗಳು ಗೋವುಗಳನ್ನು ಸರಿಯಾಗಿ ಪಾಲಿಸುವರೇ? ಅದಕ್ಕಾಗಿ ಹಿಂದೂಗಳು ತಮ್ಮ ಸ್ವಾರ್ಥಲೋಭಗಳನ್ನು ದೂರವಿರಿಸಿರುವರೇ? ಇವುಗಳನ್ನು ಚೆನ್ನಾಗಿ ವಿಚಾರಿಸಬೇಕು. ಹಿಂದೂಗಳ ಪವಿತ್ರ ಪ್ರಾಣಿಯು ಹಿಂದೂಗಳಿಂದಲೇ ಪೀಡಿಸಲ್ಪಡುವುದು ಹಿಂದೂ ಮತಶ್ರದ್ಧೆಗೆ ಕಲಂಕವನ್ನು ತೊಡುವ ವಿಷಯ.

ದನಗಳ ಮೇಲಿನ ನಮ್ಮ ಈ ಭಕ್ತಿಯೂ ಶ್ರದ್ಧೆಯೂ, ಬಾಹ್ಯ ಡಂಬಾಚಾರದ ಪೂಜೆಯಲ್ಲಿಯೇ ಪರಿಣತವಾಗಿದೆಯಲ್ಲದೆ, ನಿಜವಾದ ರೀತಿಯಲ್ಲಿ ದನಗಳನ್ನು ನಾವು ಪೂಜಿಸುವುದಿಲ್ಲ. ವರ್ಷಕ್ಕೊಂದು ಬಾರಿ ಅವುಗಳಿಗೆ ಆರತಿಯೆತ್ತಿ ಮಾಡಿದ ನೈವೇದ್ಯವನ್ನು ಸ್ವಲ್ಪಮಟ್ಟಿಗೆ ಮಾತ್ರ ಇತ್ತು ಬಾಕಿಯದನ್ನು ಮನೆಯೊಳಗೆ ಕೊಂಡುಹೋಗಿ, ದೊಡ್ಡ ಔತಣ ಸಮಯಗಳಲ್ಲಿ ಒಂದಿಷ್ಟು ಗ್ರಾಸವನ್ನಿಟ್ಟು, ಅರ್ಧಹೊಟ್ಟೆಯಲ್ಲಿ ಅವುಗಳನ್ನು ರಕ್ಷಿಸುವ ರೀತಿಯನ್ನು ನೋಡಿದರೆ, ತಿನ್ನದ ದೇವರಿಗೆ ಇಷ್ಟು ಆದರ ಮಾಡಿ ಪಾತ್ರಗಳನ್ನು ಹೇರಿಹೇರಿ ನೈವೇದ್ಯವನ್ನರ್ಪಿಸುವ ನಾವು ತಿನ್ನುವ ದೇವರಿಗೆ ಯಾವ ರೀತಿಯಲ್ಲಿ ನೈವೇದ್ಯವನ್ನರ್ಪಿಸಬಲ್ಲೆವು ಎಂಬುದು ಸ್ಪಷ್ಟವಾಗಿ ತಿಳಿಯುವುದು.

ಕಾರ್ಯತಃ ಯಾವ ಭಕ್ತಿಯನ್ನು ತತ್ವವಿಸ್ತರಣೆಯಲ್ಲಿಯೂ, ಮತಭಾವನೆಗಳಲ್ಲಿಯೂ ನಾವು ತೋರಿಸುವೆವೊ ಆ ಭಕ್ತಿಯು ನಮಗೆ ನಿಜವಾಗಿ ಅವುಗಳ ಮೇಲೆ ಇಲ್ಲ. ಪುಣ್ಯಸಂಗ್ರಹದ ವಹಿವಾಟೀ ಲೆಖ್ಖವನ್ನು ಹಾಕಿ ನಾವು ಈ ಪೂಜೆಗಳನ್ನು ನಡಿಸುತ್ತೇವೆಯೇ ಹೊರತು ಆ ಪ್ರಾಣಿಗಳ ಜೀವನ ಸೌಕರ್ಯಕ್ಕಾಗಿಯೂ, ಅವುಗಳ ಸುಖಕ್ಕಾಗಿಯೂ ಇವುಗಳನ್ನು ನಡಿಸುವುದಿಲ್ಲ.

ಸಂಸಾರದ ಪ್ರಮುಖ ಆವಶ್ಯಕತೆಗಳಲ್ಲೊಂದಾದ ಈ ಗೋವುಗಳ ಕಡೆಗಿನ ನಮ್ಮ ದೈನಿಕ ಕರ್ತವ್ಯವು ಗಾಢತರದ್ದಾಗಿದೆ. ಅವುಗಳು ಪುರಾಣಗಳಲ್ಲಿ ಪವಿತ್ರವೆಂದು ಹೇಳಲ್ಪಟ್ಟವೆಯೆಂಬ ಕಾರಣಬೇಕೆಂತಿಲ್ಲ; ಅವುಗಳಿಗೆ ವೇದಗಳು ಪೂಜಿಸುತ್ತಿವೆಯೆಂಬ ಕಾರಣವು ಬೇಕಿಲ್ಲ. ಅವು ಮನುಷ್ಯ ಜೀವನಕ್ಕೆ ಅತ್ಯಾವಶ್ಯಕವಾಗಿವೆ ಎಂಬುದು ಒಂದೇ ಕಾರಣವು ಗೋರಕ್ಷಣದ ಕಡೆಗಿನ ನಮ್ಮ ಕರ್ತವ್ಯವನ್ನೂ, ಗೋವುಗಳನ್ನು ಪೂಜಿಸುವ ಸರಿಯಾದ ಕ್ರಮವನ್ನೂ ತಿಳಿಸುವುದು.

ಹಿಂದೂದೇಶದಲ್ಲಿ ಸರ್ವಸಾಮಾನ್ಯವಾಗಿ ಗೋವುಗಳ ರಕ್ಷಣೆಯು ಸರಿಯಾದ ರೀತಿಯಲ್ಲಿ ನಡಿಯುವುದಿಲ್ಲ. ಅದರಲ್ಲೂ ಕರ್ನಾಟಕದ ಗೋವುಗಳ ಪರಿಸ್ಥಿತಿಯು ಬಹಳೇ ಕೆಟ್ಟುಹೋಗಿಯದೆ. ನಮ್ಮ ಜಿಲ್ಲೆಯ ದನಗಳೆಂತೂ ಅತೀ ನಿಕೃಷ್ಟಾವಸ್ಥೆಯಲ್ಲಿದ್ದು ಬಹಳ ಹೀನ ಸ್ಥಿತಿಯಲ್ಲಿ ಬೆಳೆಯುತ್ತಿವೆ. ಒಳ್ಳೇ ಹಾಲು ಕೊಡುವಂತಹವುಗಳಿದ್ದರೆ ಮನೆಯವರು, ಹಾಲು ಕೊಡುವ ವರೆಗೆ ಚೆನ್ನಾಗಿ ಆಹಾರವನ್ನು ಹಾಕಿ ಹಾಲು ಮುಗಿದೊಡನೆ ಆಹಾರ ಕಡಿಮೆ ಮಾಡಿ ಅವುಗಳನ್ನು ಉಪವಾಸವಿರಿಸುವರು. ಅನೇಕ ಕಡೆಗಳ ಗೋವುಗಳು ಸ್ವೇಚ್ಛೆಯಂತೆ ತಿರುಗುತ್ತಿದ್ದು, ಬಿಸಿಲು ಗಾಳಿಮಳೆಗಳಲ್ಲಿದ್ದು ತಿಂದು, ತಿನ್ನಬಾರದ ವಸ್ತುಗಳನ್ನು ತಿಂದು ಬೆಳೆಯುವವು.

ಪುಣ್ಯ ಸಂಪಾದನೆಗೆಂದು ಕೆಲವರು ದನಗಳನ್ನು ಕೆಲವು ದೇವಸ್ಥಾನಗಳಿಗೆ ದಾನಮಾಡುವರು. ಇದರಿಂದ ಈ ದಾನಕೂರರಿಗೆ ನಿಜವಾಗಿ ಪುಣ್ಯ ಸಿಕ್ಕುವುದೊ, ಪಾಪ ಲಭಿಸುವುದೊ ಎಂಬುದು ಚಿಂತನೀಯವಿದೆ. ಈ ಮತಭಾವನೆಗಳನ್ನು ಎತರಿಸುವ ಸಂಸ್ಥೆಗಳು ಈ ಗೋದೇವತೆಗಳನ್ನು ಹೇಗೆ ಪಾಲಿಸುತ್ತಿರುವರು? ದಾನಮಾಡಿ ಪುಣ್ಯದ ಜಮೆಯನ್ನು ಲೆಕ್ಕಹಾಕಿಕೊಳ್ಳುವ ಮೊದಲು ಈ ಮಹನೀಯರು ತಾವು ದಾನಕೊಡುವ ದನದ ಮುಂದಿನ ಅವಸ್ಥೆ ಏನಾಗಬಹುದೆಂದು ಮೊದಲು ನೋಡಿಕೊಳ್ಳಬೇಕು. ಒಂದು ದೇವಸ್ಥಾನದ ದನಗಳು ಮಾರ್ಗಗಳಲ್ಲಿ ಮೇಯುತ್ತಾ, ಮಾರ್ಗದ ಬದಿಯ ಕಸದ ಬುಟ್ಟಿಯನ್ನು ಮಗುಚಿಹಾಕಿ ತಿನ್ನುತ್ತಾ, ಕಾಗದ, ಹಗ್ಗ ಇತ್ಯಾದಿ ತಿನ್ನಲಿಕ್ಕಾಗದ ವಸ್ತುಗಳನ್ನು ತಿನ್ನುತ್ತಾ ಇದ್ದ ಸಂಗತಿಯು ಪ್ರತ್ಯಕ್ಷವಿದೆ. ಈ ಗೋವುಗಳು ಹಲವು ಬಾರಿ ರಾತ್ರಿ ಆಶ್ರಯದಲ್ಲಿ ಇರುವುದಿಲ್ಲ. ಈ ರೀತಿಯ ಪಾಲನೆಗೆ ದಾನಕೊಡುವುದರಿಂದ ದಾನಕೊಟ್ಟವರಿಗೆ ಯಾವ ಲಾಭವಾಗಬಹುದೆಂದು ತಿಳಿಯಬಹುದು.

ಜನತೆಗು ಅಸಡ್ಡೆಗೆ ಸರಿಯಾಗಿ ಎಂಬಂತೆ ಸರಕಾರದ ನಿರ್ಬಂಧಗಳು ಗೋರಕ್ಷಣೆಗೆ ಪ್ರತಿಬಂಧಕವಾಗಿ ಬಂದಿವೆ. ಪೂರ್ವಕಾಲದಲ್ಲಿ ಗೋವುಗಳಿಗೆ ಮೇಯಲಿಕ್ಕೆ ಬೇಕಷ್ಟು ಹುಲ್ಲು ಗಾವಲುಗಳು ಇದ್ದುವು. ಈಗ ನಗರಗಳ ನವೀನ ನಿರ್ಮಾಣಗಳಿಂದಲೂ, ಅಧಿಕಾರಿಗಳ ಅನಾದರದಿಂದಲೂ ಹತ್ತಿರದಲ್ಲಿ ಯೋಗ್ಯವಾದ ಹುಲ್ಲುಗಾವಲುಗಳು ಇರುವುದಿಲ್ಲ. ದೂರದಲ್ಲಿ ಇದ್ದರೂ, ಅಲ್ಲಿ ಸರಕಾರದ ಪ್ರತಿಬಂಧಗಳಿದ್ದು ದನವು ತಪ್ಪಿ ಮೇರೆಯನ್ನು ಮೀರಿದರೆ ಜನರು ಜುಲುಮಾನೆ, ವ್ಯಾಜ್ಯ ಇತ್ಯಾದಿ ಕಷ್ಟಗಳಿಗೆ ಗುರಿಯಾಗುತ್ತಾರೆ. ಈ ಕಾರಣದಿಂದ ದನಗಳನ್ನು ಅನಿರ್ಬಂಧವಾಗಿ ಯೋಚನೆಯಿಲ್ಲದೆ ಮೇಯಲಿಕ್ಕೆ ಬಿಡಲು ಸಾಧ್ಯವಾಗುವುದಿಲ್ಲ. ಹೀಗಾಗಿ ಅವುಗಳನ್ನು ಹಟ್ಟಿಯಲ್ಲಿಯೇ ಕಟ್ಟಬೇಕಾಗುತ್ತದೆ. ಮತ್ತು ದನಗಳು ಈ ರೀತಿಯಲ್ಲಿ ಪೋಷಿಸಲ್ಪಟ್ಟು, ನೈಸರ್ಗಿಕ ಆಹಾರವೂ, ಸಂಚಲನೆಯೂ ಇಲ್ಲದೆ ಬಡವಾಗಿ ಬಂದು ಕೆಡುತ್ತಿವೆ.

ಗೋಪಾಲನೆಯಲ್ಲಿ ಮುಖ್ಯವಾದ ಸಮಸ್ಯೆಯು ಹಾಲು ಕೊಡದ ಅಥವಾ ಹಾಲು ಕೊಡುವುದನ್ನು ನಿಲ್ಲಿಸಿದ ಗೋವುಗಳ ಕೆಲವು ಮನೆಗಳಲ್ಲಿನ ಇವುಗಳ ಅವಸ್ಥೆಯನ್ನು ಕಂಡರೆ ಇವುಗಳನ್ನು ಹಟ್ಟಿಯಲ್ಲಿಟ್ಟು ಈ ರೀತಿಯಲ್ಲಿ ಪೋಷಿಸುವುದಕ್ಕಿಂತಲೂ, ಮುಸಲ್ಮಾನ ಕಟುಕರಿಗೆ ಕೊಟ್ಟುಬಿಡುವುದು ಹೆಚ್ಚು ಪುಣ್ಯಕರವೆಂದು ತೋರುತ್ತಿದೆ.

ಗೋವುಗಳು ದೇವತೆಗಳು; ಅವು ಹಾಲು ಕೊಡಲಿ ಕೊಡದಿರಲಿ; ಅವುಗಳನ್ನು ಚೆನ್ನಾಗಿ ರಕ್ಷಿಸಬೇಕು ಎನ್ನುವ ಅನುಭೂತಿಯು ಉಚ್ಚವಾದುದಾದರೂ, ಮಾನವನ ಮಾನಸಿಕತೆಯೂ, ಹಿಂದೀಯ ಸಂಪನ್ನತೆಯೂ ಅಷ್ಟು ಉಚ್ಚವಾದುದಲ್ಲ. ಆದುದರಿಂದ ಮನೆಯ ಜನರೇ ಆಹಾರವನ್ನುಣ್ಣುವುದು ಕಷ್ಟವಾಗಿರುವಾಗ, ಪ್ರಯೋಜನವಿಲ್ಲದ ಗೋವುಗಳನ್ನು ರಕ್ಷಿಸಬೇಕೆನ್ನುವುದನ್ನು ಅರ್ಥಿಕದೃಷ್ಟ್ಯಾ ಸರಿಯೆಂದು ಹೇಳಲಾಗುವುದಿಲ್ಲ. ಆದರೆ ಇಂತಹ ಗೋವುಗಳನ್ನು ಕಟುಕರ ಕೈಯಲ್ಲಿಯೂ ಬಿಡಬಾರದು. ಇದಕ್ಕಾಗಿ, ಒಂದೊಂದು ವಿಸ್ತೀರ್ಣಕ್ಕೆ ಒಂದೊಂದು ಉತ್ತಮ ಹುಲ್ಲುಗಾವಲಿದ್ದ ಸ್ಥಳವನ್ನು ವ್ಯವಸ್ಥೆಗೊಳಿಸಿ ಗೋವುಗಳನ್ನು ಪಾಲಿಸುವ ಉಪಾಯಗಳನ್ನು ಕಲ್ಪಿಸಬೇಕು. ಹೀಗೆ ಮಾಡಿದರೆ, ದನಗಳನ್ನು ಪೋಷಿಸುವವರಿಗೆ ಅನುಕೂಲತೆಯಾಗಿ, ಇನ್ನು ಮುಂದೆಯೂ ಹಾಗೆಯೇ ಪೋಷಿಸಿ, ದನಗಳನ್ನು ಬೆಳೆಸಲು ಉತ್ತೇಜನ ಕೊಟ್ಟಂತಾಗುವುದು.

ಈಗಿನ ದಿವಸಗಳಲ್ಲಿ ಹೋಟೇಲುಗಳ ಸಂಖ್ಯೆಯು ಜಾಸ್ತಿಯಾಗುತ್ತಾ ಬಂದಿದೆ. ಅದೇ ರೀತಿಯಲ್ಲಿ ಕಾಫಿ, ಚಾ ಕುಡಿಯುವವರ ಸಂಖ್ಯೆಯೂ ಜಾಸ್ತಿಯಾಗಿದೆ. ಮತ್ತು ಹಾಗೆಯೆ ಹಾಲಿನ ಖರ್ಚೂ ಹೆಚ್ಚಾಗಿದೆ. ಹೋಟೇಲುಗಳಿಗೆ ಎಮ್ಮೆಹಾಲು ಬೇಕಾದುದರಿಂದಲೂ, ಎಮ್ಮೆ ಹಾಲಿಗೆ ನೀರು ಹೆಚ್ಚು ಹಾಕಬಹುದಾದುದರಿಂದಲೂ, ಮಾರುವವರು ಎಮ್ಮೆಯನ್ನೆ ಪೋಷಿಸುತ್ತಾರಲ್ಲದೆ ದನಗಳನ್ನು ಪೋಷಿಸುವುದಿಲ್ಲ. ದನದ ಹಾಲು ದೇಹಕ್ಕೆ ಸುಖಕರವೂ ಪ್ರಯೋಜನಕರವೂ ಆಗಿರುವುದರಿಂದ ಮನೆ ಖರ್ಚಿಗೆ ದನದ ಹಾಲೇ ಬೇಕಾಗುತ್ತದೆ. ಮುಖ್ಯವಾಗಿ ಪಟ್ಟಣಗಳಲ್ಲಿ, ದನಗಳನ್ನು ಪಾಲಿಸುವ ಮೇಲೆ ಹೇಳಿದ ಕಷ್ಟಗಳ ಕಾರಣದಿಂದ ಸಾಮಾನ್ಯ ಮನೆಗಳು ದನಗಳನ್ನು ಪೋಷಿಸುವುದಿಲ್ಲ. ಮಾರುವವರು, ತಮಗೆ ಲಾಭವಿಲ್ಲದರಿಂದ ದನಗಳನ್ನು ಪೋಷಿಸುವುದಿಲ್ಲ. ಫಲತಃ ಜನತೆಗೆ ಹಾಲಿನ ಆವಶ್ಯಕತೆ ಹೆಚ್ಚಾಗುತ್ತಿದ್ದ ಹಾಗೆ ದನಗಳ ಪೋಷಣೆಯು ಕಡಿಮೆಯಾಗುತ್ತಾ ಬಂದಿದೆ. ಇದರ ಪರಿಣಾಮವು ಕಠಿಣವಿದೆ. ಇದರಿಂದ ಜನರ ದೇಹಸ್ವಾಸ್ಥ್ಯವು ಕೆಡುವುದು. ಶಿಶುಪಾಲನವು ಕೆಟ್ಟು ಮುಂದಿನ ಜನಾಂಗವು ನಿರ್ಬಲವಾಗುವುದು.

ನಮ್ಮ ದೇಶದ, ಅದರಲ್ಲಿಯೂ ನಮ್ಮ ಊರಿನ ಜನರ ಸ್ವಾಸ್ಥ್ಯ ಹೀನತೆಯ ಕಾರಣಗಳಲ್ಲಿ ಇದೊಂದನ್ನು ಪ್ರಮುಖವೆಂದು ಎಣಿಸಬಹುದು. ದಿನ ದಿನವೂ ಜನಜನಿತವಾಗುತ್ತಿರುವ ಹೋಟೇಲು, ಸಿಗರೇಟು, ಇತ್ಯಾದಿ ದುರಭ್ಯಾಸಗಳ ಪ್ರಚಾರದೊಡನೆ ದನದ ಒಳ್ಳೇ ಹಾಲಿನ ಅಭಾವವೂ ಸೇರಿ, ಪ್ರತಿವ್ಯಕ್ತಿಯ ಸ್ವಾಸ್ಥ್ಯವನ್ನು ಅವ್ಯಕ್ತ ವೇದನೆಯ ಸ್ಪರ್ಶದಿಂದ ಕೆಡಿಸಿದೆ. ಜನರು ಅದನ್ನು ಹೊರತೋರಿಸದಿದ್ದರೂ, ಮೆಲ್ಲನೆ ಅದು ಕ್ಷಯರೋಗದಂತೆ, ಜನತೆಯ ಶಕ್ತಿಸಾಮರ್ಥ್ಯವನ್ನು ಕ್ಷಯಿಸುತ್ತಾ ಬರುತ್ತಿದೆ. ಹೋಟೇಲು ಇತ್ಯಾದಿಗಳ ದುರಭ್ಯಾಸಗಳೊಡನೆ ದನದ ಹಾಲಿನ ಸೇವನೆಯು ಉತ್ತಮವಿದ್ದುದಾದರೆ ಈ ದುರಭ್ಯಾಸಗಳ ಪರಿಣಾಮವು ಈಗ ತೋರುವಷ್ಟು ಕೆಡುತ್ತಿರಲಿಲ್ಲ.

ಆದುದರಿಂದ ಪ್ರತಿ ಊರಿನವರು ಗೋರಕ್ಷಣೆಯ ಬಗ್ಗೆ ಉತ್ತಮ ಉಪಾಯಗಳನ್ನು ಆಲೋಚಿಸಿ ನಿರ್ಣಯಿಸುವುದು ಅಗತ್ಯವಿದೆ. ಈಗಿನ ಶಿಶುಗಳ ಹಿತದಲ್ಲಿಯೂ, ಭಾವಿ ಜನಾಂಗದ ಹಿತದಲ್ಲಿ ಇದಕ್ಕಾಗಿ ಪುರಜನರು ಚಿಂತಿಸಬೇಕು. ಅಲ್ಲಲ್ಲಿ ಗೋಶಾಲೆಗಳನ್ನು ವ್ಯವಸ್ಥೆಗೊಳಿಸುವುದು, ಉತ್ತಮ ಹುಲ್ಲುಗಾವಲುಗಳನ್ನು ಕಾಯ್ದಿಡುವುದು, ಗೋರಕ್ಷಣೆಯ ಬಗ್ಗೆ ಯೋಗ್ಯ ಸೂತ್ರಗಳನ್ನು ಪ್ರಚಾರಪಡಿಸುವುದು ಇತ್ಯಾದಿ ಕೆಲಸಗಳನ್ನು ನಿರ್ವಹಿಸುವುದಕ್ಕಾಗಿ ಒಂದು ಗೋರಕ್ಷಣಾ ಕಮಿಟಿಯು ಏರ್ಪಟ್ಟರೆ ಒಂದು ದೊಡ್ಡ ಸಮಾಜ ಸೇವೆಯನ್ನು ಮಾಡಿದಂತಾಗುವುದು. ಉತ್ತರ ಹಿಂದೂಸ್ಥಾನದಲ್ಲಿ ಈ ಕೆಲಸಕ್ಕಾಗಿ ಪ್ರತ್ಯೇಕ ಸಮಿತಿಗಳೂ, ಪತ್ರಿಕೆಗಳೂ ಇವೆ. ಕರ್ನಾಟಕವು ಇದೇ ರೀತಿಯಲ್ಲಿ ಕೆಲಸಮಾಡಬಹುದಾಗಿ ನಮ್ಮ ಸೂಚನೆ.

ವಿದೇಶ ವರ್ತಮಾನ.

—ಇಂಗ್ಲೆಂಡಿನ ಪಾರ್ಲಿಮೆಂಟ ಸಭೆಯ ಒಂದು ಭಾಗವಾದ ಹೌಸ್ ಒಫ್ ಲೋರ್ಡ್ ಸಭೆಗೆ ಲೋರ್ಡರ ಹೆಂಡತಿಯರಾದ ಪಿಯರೆಸುಗಳು ಮೆಂಬರರಾಗಬೇಕೆಂದು ಒಂದು ಠರಾವು ಇತ್ತು. ಆದರೆ ಇದು ಬಹುಮತದಿಂದ ಬಿದ್ದುಹೋಯಿತು.

—ಜನರಲ್ ಹಿಗ್ಗಿನ್ಸ್ ಎಂಬ ಸೇನಾಧಿಪತಿಗೆ ಈಗ ೧೦೦ ವರುಷ ಪ್ರಾಯ, ಆದರೂ ಇವರು ಜನ್ಮದಿನದ ಸಮಯ ವಿಂಡ್ಸ ರಕೆಸ್ಸಲಿಗೆ ನಡೆದು ಬಂದರು. ಆಗ ಡ್ಯೂಕ್ ಒಫ್ ಕೆನ್ನೊಟರು ಇವರಿಗೆ ಉಡಿಗೆರೆ ಕೊಟ್ಟರು ಸೈನಿಕರು ೧೦೦ ಹೂವುಗಳಿರುವ ಒಂದು ಬಾಸ್ಕೆಟನ್ನು ಇನಾಮಾಗಿ ಕೊಟ್ಟರು.

—ಜರ್ಮನಿಯಲ್ಲಿ ಬೀರಿನ ಸುಂಕವನ್ನು ಬರುವ ತಿಂಗಳಿನಿಂದ ಹೆಚ್ಚಿಸುವರು. ಇದರಿಂದ ಸರಕಾರಕ್ಕೆ ೭೫ ಮಿಲಿಯ ಮಾರ್ಕುಗಳು ಹೆಚ್ಚಿಗೆ ಸಿಕ್ಕುವವು.

—ಫ್ರಾನ್ಸ ದೇಶದಲ್ಲಿ ಹೊಸ ಮಂತ್ರಿ ಸಭೆಯು ಚುನಾಯಿಸಲ್ಪಟ್ಟಿದೆ.

—ಎಡೆಯ ಬಂದರದಿಂದ ಸಿಂಗಾಪುರ ಬಂದರಕ್ಕೆ ಕಳ್ಳತನದಿಂದ ೩೦೦೦ ಬೆಲು ಅಫೀಮನ್ನು ಒಂದು ಹಡಗದಲ್ಲಿ ತಂದಿದ್ದರು. ಸರಕಾರದವರು ತಂದವನಿಗೆ ೬ ತಿಂಗಳ ಸಜೆ ವಿಧಿಸಿರುವರು.

—ಮೊರೊಕ್ಕೊದಲ್ಲಿ ನಡೆದ ಯುದ್ಧದಲ್ಲಿ ರೀಫರ ಮುಖ್ಯಸ್ಥನಾದ ಅಬ್ದುಲ್ ಕ್ರಿಮನನ್ನು ಫ್ರೆಂಚರು ಸೆರೆಹಿಡಿದರೂ ಕಾಜರೂ, ರೀಫರೂ ವೆಜಾನ ಎಂಬಲ್ಲಿ ಇನ್ನೂ ಯುದ್ಧಮಾಡುತ್ತಿರುವರು. ಫ್ರೆಂಚರು ಸೆರೆಹಿಡಿದ ಅಬ್ದುಲ್ ಕ್ರಿಮನು ನಿಜವಾದವನಲ್ಲವೆಂದು ಹೇಳುತ್ತಿರುವರು. ಇವರಿಗೆ ಬಹಳ ಗುಟ್ಟಿನಿಂದ ಯುದ್ಧಸಾಮಗ್ರಿಗಳು ಬರುತ್ತಿರುವವು.

—ಕಳೆದ ಯುದ್ಧದಲ್ಲಿ ಮಡಿದುಹೋದ ಸೈನಿಕರ ಪೊರಗ್ರೇವ್ ಎಂಡೌಮೆಂಟ ಫಂಡಿಗೆ ೫ ಮಿಲಿಯ ಪೌಂಡುಗಳು ಬೇಕಾಗಿವೆಯಂತೆ. ಇದರ ಶೇಕಡಾ ೮೧ರ ಪ್ರಕಾರ ಇಂಗ್ಲೆಂಡಿನಿಂದ ಕೊಡುವರಂತೆ ಉಳಿದ ಹಣವನ್ನು ಡೊಮಿನಿಯನುಗಳು ಕೊಡಬೇಕಂತೆ. ಈ ಬಿಲು ಹೌಸ ಒಫ್ ಲೋರ್ಡಿನಲ್ಲಿ ಪಾಸಾಯಿತು. ಗಂಡರು ಹೆಂಡತಿಯನ್ನು ಬಿಟ್ಟರೆ ಅಥವಾ ಹೆಂಡತಿಯು ಗಂಡನನ್ನು ಬಿಟ್ಟರೆ ಅವುಗಳ ವಿಷಯ ಕ್ರಿಶ್ಚನ್ ಮೆರಿಯೇಜ್ ಎಕ್ಟ ಪ್ರಕಾರ ತನಿಖೆನಡಿಸಲಿಕ್ಕೆ ಇಂಡಿಯದ ಕೋರ್ಟುಗಳಿಗೂ ಇತರ ಡೊಮಿನಿಯನುಗಳ ಕೋರ್ಟುಗಳಿಗೂ ಅಧಿಕಾರ ಕೊಡುವ ಡ್ರಾಫ್ಟ ಬಿಲ್ಲು ಮೇಲಿನ ಪಾರ್ಲಿಮೆಂಟ ಸಭೆಯಲ್ಲಿ ಪಾಸಾಯಿತು.

—ರೀಫರ ಅಧಿಪತಿಯಾಗಿದ್ದ ಅಬ್ದುಲ ಕ್ರಿಮನನ್ನು ಮಡಗಾಸ್ಕರ ದ್ವೀಪದಲ್ಲಿ ಇರಿಸುವರಂತೆ.

—ತುರ್ಕಿ ದೇಶದ ಪ್ರೆಸಿಡೆಂಟರಾದ ಕೆಮಲ್ ಪಾಶರನ್ನು ಕೊಲ್ಲಬೇಕೆಂದು ಒಳಸಂಚು ನಡಿಸಿದವರಲ್ಲಿ ೨೦೦ ಮಂದಿಯನ್ನು ಸೆರೆಹಿಡಿದಿರುವರು.

—ಅಫಘಾನಿಸ್ಥಾನದ ಅಮೀರರು ತಮ್ಮ ರಾಜ್ಯದಲ್ಲಿರುವ ಹಿಂದೂ ಪ್ರಜೆಗಳ ವಿವಾದಗಳನ್ನು ಹಿಂದೂ ಧರ್ಮಶಾಸ್ತ್ರಕ್ಕನುಸಾರವಾಗಿಯೇ ತೀರ್ಮಾನಿಸಬೇಕೆಂದು ಕಾನೂನು ಮಾಡಿ ಪ್ರಕಟಿಸಿರುತ್ತಾರೆ.

ಒಳದೇಶ ವರ್ತಮಾನ.

—ಸರೋಜಿನಿ ದೇವಿಯವರು ಬಂಗಾಳದಲ್ಲಿ ಸಂಚರಿಸಿ ಗ್ರಾಮಗಳಲ್ಲೆಲ್ಲಾ ಚರಕವನ್ನು ಪ್ರಚಾರಕ್ಕೆ ತರಬೇಕೆಂದು ಎಲ್ಲಾ ಸ್ತ್ರೀಯರಿಗೂ ಬೋಧಿಸುತ್ತಿರುವರು.

—ಬಂಗಾಳದ ಅಲಿಪುರ ಜೈಲಕೊಲೆ ಸಂಬ್ರದಲ್ಲಿ ಅಪಾದಿತರಾದ ಮೂವರಿಗೆ ಮರಣದಂಡನೆ ಶಿಕ್ಷೆಯಾಯಿತು. ಉಳಿದ ಆರು ಮಂದಿಗೆ ಜನ್ಮಾಂತ ಶಿಕ್ಷೆ ವಿಧಿಸಲಾಯಿತು.

—ಕಲ್ಕತ್ತದಲ್ಲಿ ಈಸ್ಟ ಇಂಡಿಯನ್ ರೈಲುವೆಯವರು ಎರಡುವರೆ ಮಿನಿಟಿಗೊಂದರಂತೆ ಟ್ರೈನು ಬರುತ್ತಾ ಹೋಗುತ್ತಲಿರುವ ಕಲ್ಕತ್ತ ಬಾಲಿಗಂಜ ಜಂಕ್ಷನ್‌ನಲ್ಲಿ ತನ್ನಷ್ಟಕ್ಕೆ ಕೈ ಬೀಳುವ ಸಿಗ್ನಲ್ ಕೈಕಂಬವನ್ನು ಜೂನ್ ೨೦ಕ್ಕೆ ಸ್ಥಾಪಿಸಿದರು. ಈ ತರದ ಕೈಕಂಬ ಸ್ಥಾಪಿಸಿದ್ದು ಇದೇ ಮೊದಲು.

—ಅಸ್ಸಾಮಿನಲ್ಲಿ ಒಬ್ಬ ಮುಂದಾಳುಗಳು ೯೭ ವರ್ಷ ಪ್ರಾಯದ ಮುದುಕರೂ ಸಬ್ ಸಾಗರ ಮುನ್ಸಿಪಾಲಿಟಿಯ ಮೆಂಬರರೂ ಆಗಿದ್ದ ಮಿ। ಜಿ. ಜಿ. ಫುಕಾನ್ ಎಂಬವರು ಮುನ್ಸಿಪಾಲ ಸಭೆಯಲ್ಲಿ ಭಾಷಣ ಮಾಡುವಾಗ ಮರಣ ಹೊಂದಿದರು.

—ಬೆನರಾಸ್ ಡಿಸ್ಟ್ರಿಕ್ಟ ಜೈಲಿನ ಇಂಡಿಯನ್ ಜೈಲರನನ್ನು ಒಬ್ಬ ಕೈದಿಯು ತಿವಿದು ಕೊಂದುಬಿಟ್ಟನು. ಅಪಾದಿತನನ್ನು ಸಿಟಿ ಮ್ಯಾಜಿಸ್ಟ್ರೇಟರು ಸೆಶನ್ ಕೋರ್ಟಿಗೆ ಕಮಿಟಿ ಮಾಡಿರುವರು.

—ಮುಂಬಾಯಿ ಸಂಸ್ಥಾನದಲ್ಲಿ ಪೋಲಿಸ ಇಲಾಖೆ ಹೆಚ್ಚು ಮಂದಿ ನೌಕರರನ್ನು ತೆಗಿಯುವರಂತೆ ಒಬ್ಬ ಮಿನಿಸ್ಟರರನ್ನು ಒಬ್ಬ ಎಕ್ಸಿಕ್ಯೂಟಿವ ಕೌನ್ಸಿಲ ಮೆಂಬರರನ್ನೂ ತೆಗದುಹಾಕುವರಂತೆ.

—ಕಲ್ಕತ್ತದಲ್ಲಿ ಎಲ್ಲಾ ಜಾತಿಯ ಹಿಂದೂಗಳ ಒಂದು ಸಭೆಯು ಬೇಗನೆ ಜರಗುವುದು. ಹಿಂದೂ ಸಮಾಜಕ್ಕೆ ಬಂದಿರುವ ಕಷ್ಟಗಳನ್ನು ನಿವಾರಿಸುವುದೆ ಈ ಸಭೆಯ ಉದ್ದೇಶವಾಗಿದೆ.

—ಆರ್. ಎಫ್. ಲಿಜಮೊರ ಎಂಬ ಪಾರಸಿ ಸಾಹುಕಾರನು ಇಂಡಿಯ ಚಾರ್ಟರ್ಡ ಬೆಂಕಿಗೆ ಸಮ್ಮಂಧಪಟ್ಟ ಗೆಲವೆನ್ನೈಜಡ್ ಕಬ್ಬಿಣದ ತಗಡುಗಳ (ಸುಮಾರು ೨೫೧೦ ಬೌಂಡ್ ಕ್ರಯಬಾಳುವ)ನ್ನು ಮೋಂದ್ದಕ್ಕಾಗಿ ಅವನ ಮೇಲೆ ಚಾರ್ಜ ಮಾಡಿರುತ್ತಾರೆ.

—ಪೂನದಿಂದ ಕಳ್ಳತನದಿಂದ ಅಫೀಮನ್ನು ಕೊಂಡು ಹೋಗಿ ಮುಂಬಯಿ, ರಟಲಮ್, ಬೆಂಗಳೂರು, ಮದರಾಸು ಮುಂತಾದ ಊರುಗಳಲ್ಲಿ ಮಾರುತ್ತಿದ್ದ ಕೆಲವು ಮುಸಲ್ಮಾನರನ್ನು ಪೂನಾ ಮಜಿಸ್ಟ್ರೇಟರು ೩ರಿಂದ ೬ ತಿಂಗಳ ವರೆಗಿನ ಕಠಿಣ ಸಜೆಯನ್ನು ವಿಧಿಸಿದರು.

—ಹಾಜಿ ಇಸಾ ಹಾಜಿ ಸುಮರ ಎಂಬ ಆಫ್ರಿಕದ ಒಬ್ಬ ಬಹಳ ದೊಡ್ಡ ಸಾಹುಕಾರರು ತನ್ನ ೬೨ನೇ ವರುಷ ಪ್ರಾಯದಲ್ಲಿ ಪೂನೆಯಲ್ಲಿ ಮರಣಹೊಂದಿದರು. ಇವರು ಆಫ್ರಿಕದಲ್ಲಿ ಬೂವರರ ಯುದ್ಧದ ಸಮಯ ಬ್ರಿಟಿಶ್ ಸರಕಾರಕ್ಕೆ ಬಹಳ ಸಹಾಯಮಾಡಿದ್ದರು.

—ಜಿನೇವಾದಲ್ಲಿ ನಡೆಯುವ ಲೀಗ ಒಫ್ ನೇಶನ್ಸ ಸಭೆಯ ಕೆಲಸಗಳನ್ನು ಕಲಿತುಕೊಳ್ಳುವಂತೆ ಪ್ರೊಫೆಸರ್ ಎಲ್ಲಾ ಭಾಗಗಳ ಪತ್ರಿಕಾಕರ್ತರನ್ನು ಆಮಂತ್ರಿಸಿರುವರು. ಇಂಡಿಯದಿಂದ ಪ್ರಭಾತಿ ಮತ್ತು ಮೊಡರ್ನ ರಿವ್ಯೂಗಳ ಸಂಪಾದಕರಾದ ರಮಾನಂದ ಚಟರ್ಜಿಯವರನ್ನು ಜಿನೇವಕ್ಕೆ ಆಮಂತ್ರಿಸಿರುವರು. ಇಲ್ಲಿಗೆ ಬಂದು ಒಂದಾವರ್ತಿ ಇದರ ಕಾರ್ಯಕ್ರಮಗಳನ್ನು ತಿಳುಕೊಂಡರೆ ನಂತರ ಇದರ ವಿಷಯ ಪತ್ರಿಕೆಗಳಿಗೆ ಇವುಗಳ ವಿಷಯ ಸರಿಯಾದ ಸಮಾಚಾರವನ್ನು ಬರಿಯಲು ಸುಲಭಸಾಧ್ಯವಾಗುವದಂತೆ.

—ಸಪ್ಟಂಬರದಲ್ಲಿ ಕೂಡಿಬರುವ ಜಿನೇವದ ಲೀಗಿನ ಸಭೆಗೆ ಇಂಡಿಯದ ರಾಜರುಗಳ ತಲೆಯ ಪ್ರತಿನಿಧಿಯಾಗಿ ಕಪುರ್‌ತಲ ಮಹಾರಾಜರು ಹೋಗುವರು.

—ಅಸ್ಸಾಮಿನ ಸ್ವರಾಜ್ಯ ಪಾರ್ಟಿಯ ಲೆಜಿಸ್ಲೇಟಿವ್ ಕೌನ್ಸಿಲ ಮೆಂಬರರು ಅಸ್ಸಾಮು ರಿ-ಸೆಟ್ಲಮೆಂಟ ಬಿಲ್ಲಿನ ವಿಷಯ ಮಾತ್ರ ಮಾತನಾಡಲಿಕ್ಕೆ ಒಲ್ ಇಂಡಿಯಾ ಸ್ವರಾಜ್ಯಪಾರ್ಟಿಯ ಮುಖ್ಯಸ್ಥರಾದ ಎಸ್. ಶ್ರೀನಿವಾಸ ಅಯ್ಯಂಗಾರರಿಂದ ಅಪ್ಪಣೆಪಡೆದಿರುತ್ತಾರೆ. ಮದರಾಸು ಸಂಸ್ಥಾನದ ಮೆಂಬರರು ಮಲಬಾರ ಒಕ್ಕಲುಗಳ ಬಿಲ್ಲು ಮತ್ತು ನೀರಾವರಿ ಕೆಲಸದ ಬಿಲ್ಲಿನ ವಿಷಯ ಮಾತನಾಡಲಿಕ್ಕೂ ಪಂಜಾಬಿನ ಮೆಂಬರರು ಪಂಜಾಬ ಮನಿ ಲೆಂಡರ್ಸ ಬಿಲ್ಲಿನ ವಿಷಯವೂ ಮಾತನಾಡಲಿಕ್ಕೆ ಅಪ್ಪಣೆ ಪಡೆದಿರುವರು.

—ಬರೋಡೆಯ ನ್ಯಾಯವಿಧಾಯಕ ಸಭೆಯ ಮೀಟಿಂಗಿನಲ್ಲಿ ಈ ವರುಷ ೨ ಕೋಟಿ ೨೬ ಲಕ್ಷ ರೂಪಾಯಿ ಆದಾಯವೆಂದೂ ಸುಮಾರು ೨ ಕೋಟಿ ರೂಪಾಯಿ ಖರ್ಚಾಗುವದೆಂದೂ, ಬೇರೆ ಎಲ್ಲಾ ಆಶ್ರಿತ ರಾಜರ ಖರ್ಚಿಗಿಂತಲೂ ಬರೋಡಾ ಅರಸರ ಖರ್ಚು ಬಹಳ ಕಡಿಮೆ ಇದೆಯೆಂದು ಬರುವ ವರುಷ ಸೈನ್ಯದ ಖರ್ಚನ್ನು ಅದಷ್ಟು ಕಡಿಮೆ ಮಾಡಲಾಗುವದೆಂದೂ ಪೋಲಿಸು ಇಲಾಖೆಯಲ್ಲಿ ಸಂಬಳವನ್ನು ಹೆಚ್ಚಿಸಿ ಯೋಗ್ಯರಾದ ಉದ್ಯೋಗಸ್ಥರನ್ನು ನೇಮಿಸುವರೆಂದೂ ದಿವಾನರಾದ ಸರ್ ಮನುಭಾಯಿಯವರು ವಿವರಿಸಿ ಹೇಳಿದರು.

—ಕೊಯಮುತ್ತೂರಿನ ರಾಜುನ್ನಾಡು ಎಂಬವನು ಶಿಕಾರಿಯೂ ತೋಟದ ಎಂಜಿನಿಯರನೂ ಆಗಿದ್ದನು. ಇವನು ಮೆಟ್ಟುಪಾಳಯದಿನಲ್ಲಿ ಹೆಚ್ಚು ಬಾಧೆ ಕೊಡುತ್ತಿದ್ದ ಒಂದು ಆನೆಯನ್ನು ಕೊಂದಿದ್ದನು. ಇವನಿಗೆ ಗೋಬಿಚೆಟ್ಟಿ ಪಾಳಯದ ತಾಲೂಕಿನ ಪುಲಿಯಾನಪಟ್ಟಿ ಎಂಬಲ್ಲಿ ಖೂನಿಯಾಯಿತು. ಇವನನ್ನು ಕೊಲ್ಲುತ್ತೇನೆಂದು ಕೊಯಮುತ್ತೂರಿನ ಮತ್ತು ಸತ್ಯಮಂಗಲದ ಕೆಲವರು ಹೆದರಿಸಿದರಂತೆ. ಇವನು ಮೈಸೂರಿನಿಂದ ಬರುವಾಗ ದಾರಿಯಲ್ಲಿ ಈ ಸಂಗತಿಯನ್ನು ಸತ್ಯಮಂಗಲ ಪೋಲಿಸ ಸ್ಟೇಶನಿಗೆ ತಿಳಿಸಿದನು. ಇವನ ಸಹಾಯಕ್ಕಾಗಿ ಅಲ್ಲಿಂದ ಒಬ್ಬ ಸಬ್ ಇನ್ಸಪೆಕ್ಟರನು ಅದೇ ಗಾಡಿಯಲ್ಲಿ ಬಂದನು. ನ್ಯಾಡು ಮಗನೂ ಅದೇ ಕಾರಿನಲ್ಲಿದ್ದನು. ಸುಮಾರು ಮೂರು ಗಂಟೆಗೆ ಒಂದು ಹಳ್ಳಿಗೆ ಬರುವಾಗ ಒಬ್ಬನು ಒಂದು ಪೊದೆಯೊಳಗಿನಿಂದ ಮಾರ್ಗದಲ್ಲಿ ಬಂದು ಮೋಟಾರಿನ ಎದುರಿಗೆ ನಿಂತು ನಾನು ನಿನಗೆ ದಾರಿ ಬಿಡುವುದಿಲ್ಲ ನನ್ನ ಮೇಲಿನಿಂದ ಮೋಟಾರು ಕೊಂಡು ಹೋಗು ಎಂದು ಹೇಳಿದನಂತೆ. ಅನಂತರ ನ್ಯಾಡುವಿನ ಎದೆಗೆ ತಿವಿದನು ಕೈಗೂ ಗಾಯವಾಯಿತು. ಮಗನು ತಂದೆಯ ಸಹಾಯಕ್ಕೆ ಹೋದಾಗ ಅವನಿಗೂ ಕಠಿಣ ಗಾಯಗಳಾದವು. ಇವರು ಈಗ ಕೊಯಮುತ್ತೂರು ಆಸ್ಪತ್ರೆಯಲ್ಲಿರುವರು. ಪೋಲಿಸ್ ಸುಪರಿಂಟೆಂಡೆಂಟರು ಮರಣವಾಗ್ಮೂಲವನ್ನು ತೆಗೆದುಕೊಂಡಿರುವರು

—ಮದರಾಸಿನಲ್ಲಿರುವ ಸರಕಾರಿ ಛಾಪಖಾನೆಯಲ್ಲಿ ಕೆಲವು ಬದಲಾವಣೆಗಳು ಆಗುವಂತೆ ಪಿಂಟ್ಸ್ಪ್ರೇಟಿನಲ್ಲಿರುವ ಗವರ್ನಮೆಂಟ ಪ್ರೆಸ್ಸನ್ನೂ ಮೌಂಟ ರೋಡಿನಲ್ಲಿರುವ ಪ್ರಿಂಟ್ ಪ್ರೆಸ್ಸನ್ನೂ ಒಟ್ಟುಕೂಡಿಸುವರು. ಈಗಿನ ಕಟ್ಟೋಣವನ್ನು ದೊಡ್ಡದಾಗಿ ಮಾಡಿ ಬಂದಿವಾನರಿಗೆ ಪ್ರಿಂಟಿಂಗ ಕೆಲಸವನ್ನು ಕಲಿಸುವುದಕ್ಕೂ ಅನುಕೂಲಮಾಡುವರು.

—ಈ ವರುಷ ಕೊಯಮುತ್ತೂರು ಎಗ್ರಿಕಲ್ಚರಲ್ ಕೊಲೆಜಿಗೆ ಸಾಮಲಕೋಟಿನಿಂದ ೩೨ ಮಂದಿ ವಿದ್ಯಾರ್ಥಿಗಳನ್ನು ಮದರಾಸು ಸಂಸ್ಥಾನದಿಂದ ೧೨ ಮಂದಿಯನ್ನು ಚುನಾಯಿಸುವರು.

—ಇಂದೋರ ರಾಜ್ಯದಲ್ಲಿ ಹೊಸ ರಾಜರಿಗೆ ಪಟ್ಟವಾದಂದಿನಿಂದ ಅನೇಕ ರೀತಿಯಲ್ಲಿ ಖರ್ಚು ಕಡಿಮೆ ಮಾಡಲಾಗಿಯದೆ. ಶಾಂಗಿ ಡಿಪಾರ್ಟಮೆಂಟ ಅಂದರೆ ಅರಸರ ಮತ್ತು ಅರಸರ ಮನೆ ಖರ್ಚಿನಲ್ಲಿ ಒಂದು ಲಕ್ಷ ರೂಪಾಯಿ ಕಡಿಮೆಯಾಗಿದೆ. ಕಂಟಿನ್‌ಜನ್ಸಿಯಲ್ಲಿ ಐದು ಲಕ್ಷ ಕಡಿಮೆ ಮಾಡಿರುವರು. ನರ್ತಕಿಯರ ಮತ್ತು ಅವರ ಸಂಗೀತಗಾರರ ಸಂಸ್ಥೆಯೇ ತೆಗೆದುಹಾಕಲ್ಪಟ್ಟಿದೆ. ಇದರಿಂದ ಸುಮಾರು ರೂ. ೨೨೦೦೦ ಉಳಿಯುವುದು. ವಿಲಾಯತಿ ನಮೂನೆಯ ಬೋಲ್, ಡೆನ್ಸ, ಸಹ ರಾಜ್ಯದಲ್ಲಿ ಆಗದಂತೆ ಮಾಡಿದರೆ ಮತ್ತು ಬ್ರ್ಯಾಂಡಿ ವಿಸ್ಕಿ ಮುಂತಾದವುಗಳು ರಾಜ್ಯದ ಒಳಗಡೆ ಬಾರದಂತೆ ಮಾಡಿದರೆ ಬಹಳ ಉತ್ತಮವಿತ್ತು.

—ಮದರಾಸಿನಲ್ಲಿ ದಿ ನೆಶನಲ್ ಗ್ಲಾಸ್ ವರ್ಕ್ಸ ಎಂಬ ಒಂದು ಗಾಜಿನ ಕಾರ್ಖಾನೆಯು ಸ್ಥಾಪಿತವಾಗಿದೆ. ಇದರ ಮೂಲಧನವು ಅರ್ಧ ಲಕ್ಷ ರೂಪಾಯಿ. ಕಟ್ಟೋಣವು ತಯಾರಾಗಿ ಕೆಲಸವು ಅಗೋಸ್ತು ತಿಂಗಳಲ್ಲಿ ಶುರುವಾಗುವುದು. ಚಿಮ್ಣಿಗಳು ಬಾಟ್ಲಿಗಳು ಮುಂತಾದ ಕನ್ನಡಿಯ ಕೆಲಸವನ್ನೂ ಕೂಡಲೆ ಶುರುಮಾಡುವರು. ಕಲ್ಕತ್ತದ ಗ್ಲಾಸ್ ಫೆಕ್ಟರಿಯ ಮಿ। ರೋಬರ್ಟ್ಸ, ಜೆ. ಟಾರ್ಡಿವೆಲರ್ ಎಂಬವರಿಬ್ಬರು ಇದರ ಚಾಲಕರಾಗಿರುವರು.

—ಬನಾರಸಿನ ಸೇಟ್ ಗೌರಿಶಂಕರ ಗೋಯೆಂಕಾ ಎಂಬವರು ಸಂಸ್ಕೃತ ವಿದ್ಯೆಯನ್ನು ಅಭಿವೃದ್ಧಿಗೆ ತರುವುದಕ್ಕಾಗಿ ೫॥ ಲಕ್ಷ ರೂಪಾಯಿ ದಾನ ಮಾಡಿರುವರು. ಇದಕ್ಕಾಗಿ ಇವರು ನಾಗದಾಸ ಶ್ರೀ ಜೋತಿರಾಮ ಮತ್ತು ಮಾಲ್‌ಗೊಯನ್‌ಕ್ಕಾ ಸಂಸ್ಕೃತ ಮಹಾ ವಿದ್ಯಾಲಯವನ್ನು ಇವರ ತಂದೆ ಅಜ್ಜನವರ ಹೆಸರಲ್ಲಿ ತೆರೆದಿರುವರು. ಈ ಮಹಾವಿದ್ಯಾಲಯದಲ್ಲಿ ಗವರ್ನಮೆಂಟ ಸಂಸ್ಕೃತ ಕೊಲೇಜಿನಲ್ಲಿ ಕಲಿಸಿದಷ್ಟೇ ವಿದ್ಯೆಯನ್ನು ಕಲಿಸುವರು. ಬೆನಾರಿಸ್ ಯುನಿವರ್ಸಿಟಿಯವರು ಈಗ (೧) ವೇದ, ವೇದಾಂಗ, (೨) ಅದ್ವೈತ ವೇದಾಂತ, (೩) ಧರ್ಮಶಾಸ್ತ್ರ, ಮೀಮಾಂಸ, (೪) ಇತಿಹಾಸ, ಪುರಾಣ ಇವುಗಳನ್ನು ಮಾತ್ರವೇ ಕಲಿಸುವರು. ಇದರಲ್ಲಿ ಸಂಸ್ಕೃತ ಮತ್ತು ಪ್ರಾಕೃತ ಹಳೇ ಗ್ರಂಥಗಳನ್ನು ಶೋಧಿಸಿ ಅವುಗಳನ್ನು ಹಿಂದಿ ಭಾಷೆಯಲ್ಲಿ ಪ್ರಚಾರಮಾಡಲು ಸಾಧನೆಯು ನಡೆಯುವುದು.

—ಈಗ ಲಾಹೋರ ಮತ್ತು ಇತರ ಜೈಲುಗಳಲ್ಲಿ ೧೭೦ ಮಂದಿ ಅಕಾಲಿಗಳು ಮಾತ್ರವೇ ಇರುವರೆಂದು ಸರಕಾರ ರಿಪೋರ್ಟಿನಿಂದ ತಿಳಿಯುತ್ತದೆ.

—ಕಾಶಿಯಲ್ಲಿ, ಕಾಶಿ ಸೇವಾ ಮಂಡಲದವರು ಮೇವಾಡದ ರಾಜನಾಗಿದ್ದ ಮಹಾರಾಣಾ ಪ್ರತಾಪಸಿಂಗರ ಜನ್ಮದಿನವನ್ನು ಆಚರಿಸಿದರು.

ಬಕ್ರೀದ್ ಹಬ್ಬ.

ಒಟ್ಟಾರೆ ಹೇಳುವದಾದರೆ ಈ ವರ್ಷ ಬಕ್ರೀದ ಹಬ್ಬದ ಸಮಯ ಎಲ್ಲಿಯೂ ಗಲಾಟೆಗಳು ಇಲ್ಲವೆಂದೇ ಹೇಳಬಹುದು. ಪ್ರತಿಯೊಂದು ಉತ್ತರಹಿಂದೂ ದೇಶದ ಊರುಗಳಲ್ಲಿಯೂ ಎಷ್ಟು ಗಲಭೆಗಳು ಆಗುವವೊ ಎಂದು ಜನರಲ್ಲಿ ಹೆದರಿಕೆ ಇತ್ತು.

ಹೈದರಾಬಾದ್ ಸಿಂಡ್‌ನಲ್ಲಿ ಬಕ್ರೀದ್ ಹಬ್ಬದ ದಿವಸ ಮುಸಲ್ಮಾನರ ಮೆರವಣಿಗೆಯು ಸಮಾಧಾನದಿಂದ ಆಯಿತು. ಹಿಂದೂ-ಮುಸಲ್ಮಾನರ ಕಡೆಯ ಮುಂದಾಳುಗಳು ಎರಡೂ ಕಡೆಯ ಸಾಧಾರಣ ಜನರು ವಿವಾದರೂ ಗಲಭೆಯನ್ನು ಎಬ್ಬಿಸದಂತೆ ಮುಂಜಾಗ್ರತೆ ತೆಗೆದುಕೊಂಡಿದ್ದರು. ಸರಕಾರದವರು ಬೇಕಾದಷ್ಟು ಬಂದೋಬಸ್ತಿಗಾಗಿ ಪೋಲಿಸ್ ಫೌಜನ್ನು ತಯಾರಿಸಿದ್ದರು.

ಕರಾಚಿಯಲ್ಲಿಯೂ ಏನೊಂದು ಗಲಭೆಯುಂಟಾಗಲಿಲ್ಲ. ಪೋಲಿಸ್ ಮತ್ತು ಮಿಲಿಟರಿ ಅಧಿಕಾರಿಗಳು ಒಂದು ವಾರದ ಮುಂಚೆಯಿಂದಲೇ ಮುಂಜಾಗ್ರತೆಯನ್ನು ತೆಗೆದುಕೊಂಡಿದ್ದರು. ಹಬ್ಬದ ದಿವಸ ಗಲಾಟೆಯಾಗಬಹುದೆಂದು ಹೆದರಿ ಅನೇಕ ಅಂಗಡಿಗಾರರು ಪೋಲಿಸ ಸಹಾಯ ಕೇಳಿದ್ದರು. ಪೇಟೆಯಲ್ಲಿರುವ ಅನೇಕ ಮಹನೀಯರಿಗೆ ಕಠಿಣ ತರದ ದಂಗೆಗಳೂ ಬೆಂಕಿಯ ಅನಾಹುತಗಳೂ ಆಗಲಿವೆಯೆಂದು ಕಳ್ಳಕಾಗದಗಳು ಬಂದಿದ್ದವು. ಸ್ಥಳೀಕ ವಾರ್ತಾ ಪತ್ರಿಕಾಕರ್ತರು ಪೋಲಿ ಜನರ ಮಾತುಗಳಿಗೆ ಯಾರೂ ಕಿವಿಕೊಡಬಾರದೆಂದು ಮೊದಲೇ ಎಚ್ಚರಿಸಿದ್ದರು. ಮಿಲಿಟರಿಯವರು ಬೆರೆಕ್ಸುಗಳಲ್ಲಿ ಸಿದ್ಧರಾಗಿಯೇ ನಿಂತಿದ್ದರು. ಕಳೆದ ಗುರುವಾರದಿಂದ ಎಲ್ಲಿಯಾದರೂ ಸಭೆ ಕೂಡಿದೆಯೊ ಎಂದು ನೋಡುವುದಕ್ಕಾಗಿ ಪಟ್ಟಣದ ಎಲ್ಲಾ ಭಾಗಗಳ ಮೇಲುಗಡೆಯಿಂದಲೂ ವಿಮಾನಗಳು ಸಂಚರಿಸುತ್ತಲೇ ಇದ್ದವು. ಎರಡೂ ಮತದ ಮುಖಂಡರು ಆದಿತ್ಯವಾರದ ದಿನ ಪೇಟೆಯಲ್ಲೆಲ್ಲಾ ತಿರುಗಾಡಿ ಇತ್ತಂಡದವರಿಗೂ ಇರುವ ಹಿಂದಿನ ದ್ವೇಷವನ್ನು ಬಿಟ್ಟುಬಿಡಬೇಕೆಂದು ಜನರಿಗೆ ಸಾರುತ್ತಲೇ ಇದ್ದರು.

ಕಲ್ಕತ್ತದಲ್ಲಿ ಯಾವ ತರದ ಗಲಭೆಯೂ ನಡಿಯದಂತೆ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರಾದ ಯಾಕೂಬಲಿಖಾನ್ ಎಂಬವರು ಪ್ರತಿ ಒಂದು ಮಸೀದಿಗೆ ಹೋಗಿ ಹಿಂದುಗಳ ಮನಸ್ಸಿಗೆ ನೋವಾಗುವಂತೆ ಬಹಿರಂಗವಾಗಿ ದನಗಳನ್ನು ಕೊಲ್ಲಬಾರದೆಂದೂ ಅದಲ್ಲದೆ ಕುರಾನಿನಲ್ಲಿ ಹೇಳಿದ ಸಂಖ್ಯೆಗಿಂತಲೂ ಹೆಚ್ಚಾಗಿ ಕೊಲ್ಲಬಾರದೆಂದೂ ಮೌಲ್ವಿಗಳಿಗೆ ತಿಳಿಸಿದ್ದರು. ಚಿಲ್‌ಪುರ ಮತ್ತು ಹೇರಿಸನ್ ರೋಡಿನಲ್ಲಿ ಅಂಗಡಿಗಳನ್ನೆಲ್ಲಾ ಹಿಂದುಗಳು ಮುಚ್ಚಿದ್ದರು. ಹುಗ್ಲಿ ನದಿಯ ದಡದಲ್ಲಿರುವ ಕಾರ್ಖಾನೆಗಳ ಕೂಲಿಯವರು ದಂಗೆ ಎಬ್ಬಿಸದಂತೆ ಬಂಗಾಳದ ಲೇಬರ್ ಮೆಂಬರರಾಗಿದ್ದ ಕೆ. ಸಿ. ರೋಯಿ ಚೌಧುರಿಯವರು ಅವರಿಗೆ ಸಮಾಧಾನ ಹೇಳುತ್ತಲೇ ಇದ್ದರು.

ಕಲ್ಕತ್ತದ ಮಿಹಿ ಬಜಾರಿನಲ್ಲಿ ಮಾತ್ರ ಪೋಲಿಸಿನವರು ಇಲ್ಲದ ಸಮಯ ಒಬ್ಬ ಇಮಾಮನು ಕಳೆದ ಗಲಾಟೆಯ ನಂತರ ತಿರಿಗಿ ಪ್ರತಿಷ್ಠೆಯಾದ ಒಂದು ದೇವಸ್ಥಾನದ ಬಾಗಲಲ್ಲಿ ಒಂದು ದನವನ್ನು ಕೊಂದುಬಿಟ್ಟನು ಆದ್ದರಿಂದ ಇವನಿಗೆ ಬೇಗನೇ ಶಿಕ್ಷೆಯಾಗುವದು.

ಅಹಮದಾಬಾದಿನಲ್ಲಿ ಹಬ್ಬದ ದಿವಸ ಹಿಂದುಗಳು ಅಂಗಡಿ ಬಾಗಲುಗಳನ್ನು ಮುಚ್ಚಿದ್ದರು. ಪೋಲಿಸಿನವರು ಮಾರ್ಗಗಳ ಕಡುವಲ್ಲಿ ಸಿದ್ಧರಾಗಿ ನಿಂತಿದ್ದರು. ಆದರೆ ಈ ದಿನವು ಸಂತೋಷದಿಂದಲೇ ಕಳೆಯಿತು.

ಲಾಹೋರ್ ಮತ್ತು ಡಿಲ್ಲಿಯಲ್ಲಿಯೂ ಏನೊಂದು ಗಲಭೆಯು ಇಲ್ಲದೆ ಬಕ್ರಿದ್ ಹಬ್ಬವು ಸಾಂಗವಾಗಿ ನಡೆಯಿತು.

ಮುಂಬಾಯಿಯಲ್ಲಿ ಬಕ್ರಿದ್ ಹಬ್ಬದ ದಿವಸವೇ ಏಕಾದಶಿಯಾದ್ದರಿಂದ ಹಿಂದೂ ಜವಳಿ ಅಂಗಡಿಗಳು ಜಾವಂಬಜಾರು ಮುಚ್ಚಲ್ಪಟ್ಟಿತ್ತು. ಜನರಲ್ಲಿದ್ದ ಹೆದರಿಕೆಯೇ ಹೆಚ್ಚಾಗಿದ್ದಿತ್ತಲ್ಲದೆ ಗಲಭೆಗಳು ಉಂಟಾಗಲಿಲ್ಲ.

ಮಂಗಳೂರು.

ಮಂಗಳೂರಿನಲ್ಲೊಂದು ಮದ್ಯಪಾನ ನಿಷೇಧಕ ಸಮಿತಿಯನ್ನು ಸ್ಥಾಪಿಸಲಿಕ್ಕಾಗಿ ಕಳೆದ ಆದಿತ್ಯವಾರ ಸಂಜೆ ೪ ಘಂಟೆಗೆ ಡಿಪ್ರೆಸ್ಡ ಕ್ಲಾಸಸ್ ಮಿಶನಿನ ಹೋಲಿನಲ್ಲಿ ಮದ್ರಾಸಿನಿಂದ ಬಂದ ಸರ್. ಟಿ. ಸದಾಶಿವ ಅಯ್ಯರರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಸೇರಿತು. ಈ ಲೀಗಿಗೆ ಕೆಲ ಮೆಂಬರರನ್ನು ಸೇರಿಸಿ, ಮತ್ತು ಲೀಗಿನ ನಿಬಂಧನೆಗಳನ್ನೂ ಮತ್ತು ಹೆಚ್ಚಿನ ಮೆಂಬರರನ್ನೂ ಸೇರಿಸಲಿಕ್ಕಾಗಿ ಒಂದು ಉಪಕಮಿಟಿಯನ್ನು ಸ್ಥಾಪಿಸಲಾಯಿತು.

ಜೂನ್ ತಾ. ೨೬ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೨೪ ಮರಣಗಳೂ ೪೭ ಜನನಗಳೂ ಆಗಿವೆ; ಮರಣಗಳ ಪೈಕಿ, ಮೂರು ಮೈಲಿಗೆಯಿಂದಾಗಿರುತ್ತವೆ.

ಇಲ್ಲಿಯ ಫೋರೆಸ್ಟ ಅಫೀಸರರಾದ ರಾವ್ ಸಾಹೇಬ ಕೆ. ಜಿ. ಬೆಲಿಯಪ್ಪನವರಿಗೆ ಮೂರು ಹಪ್ತೆಗಳ ರಜೆ ಕೊಟ್ಟಿರುವುದರಿಂದ ಇವರ ಬದಲಿಗೆ ಎಸಿಸ್ಟಾಂಟ ಕನ್‌ಸರ್‌ವೇಟರರಾದ ಎಸ್. ಕೆ. ಬಾಸುರವರಿಗೆ ನೇಮಕ ಮಾಡಿರುವರು.

ಶ್ರೀ ಬೆನಗಲ್ ರಾಮರಾವ್ ಐ. ಸಿ. ಯಸ್.ರವರು ಇಂಡಿಯಾ ಸರಕಾರದ ಡೆಪ್ಯುಟಿ ಫೈನಾನ್ಶಿಯಲ್ ಸೆಕ್ರೆಟರಿಗಳಾಗಿ ಕೆಲಸಮಾಡಲಿರುವರು.

ಕಳೆದ ಮಂಗಳವಾರ ರವಿನ್ಯೂ ಆಫೀಸರನ್ನು ಆರಿಸುವುದಕ್ಕಾಗಿ ಮುನ್ಸಿಫಲ್ ಕೌನ್ಸಿಲಿನ ಅಧಿವೇಶನವು ಜರುಗಿ, ಹಿಂದಿನ ಸಭೆಯೊಂದರಲ್ಲಿ ನಿರ್ಣಯವಾದಂತೆ ಚೆಯರ್ಮೇನರು ತನ್ನ ಕಡೆಗೆ ಬಂದಿದ್ದ ೩೩ ಅರ್ಜಿಗಳನ್ನೂ ಕೌನ್ಸಿಲಿನ ಮುಂದಿಟ್ಟರು. ಅನಂತರ, ಚುನಾಯಿಸಲು ತನಗೇನೇ ಇರುವ ಹಕ್ಕನ್ನು ಕೌನ್ಸಿಲಿನ ಮುಂದೆ ದೃಢೀಕರಿಸಿದರು. ಇದರಿಂದ ತೀವ್ರವಾದಕ್ಕೆ ಮೊದಲಾಗಿ, ಕಟ್ಟಕಡೆಗೆ ಚೆಯರ್ಮೇನರು ಈ ವಿಷಯವನ್ನು ಸರಕಾರದೊಡನೆ ವಿಚಾರಿಸಬೇಕೆಂದೂ, ಆ ತನಕ ಚುನಾವಣೆಯು ಮುಂದುವರಿಸಬೇಕೆಂದೂ ನಿರ್ಧಾರವಾಯಿತು.

ದಕ್ಷಿಣ ಕನ್ನಡ.

ಮೂಡಬಿದರೆ:— ಇಲ್ಲಿಗೆ ರಾ। ಪಿಂಟೋರವರು ಸರ್ಕಲ್ ಇನ್ಸಪೆಕ್ಟರರಾಗಿ ಬಂದು ಚಾರ್ಜು ವಹಿಸಿಕೊಂಡಿರುವರು. ಇಷ್ಟರ ವರೆಗೆ ಸರ್ಕಲ ಇನ್ಸಪೆಕ್ಟರರಾಗಿದ್ದ ರಾ। ಪೇಣನವರಿಗೆ ಉಪ್ಪಿನಂಗಡಿಗೆ ವರ್ಗವಾಗಿಯದೆಂದು ವಾರ್ತೆಯಿದೆ. ಹೊಸಬರು ಬಹಳ ಚಟುವಟಿಕೆಯಿಂದ ಕೆಲಸ ಮಾಡಲು ಪ್ರಾರಂಭಿಸಿರುವರು.

ಬಾರ್ಕೂರ್:— ಇಲ್ಲಿಯ ಒಬ್ಬ ಬ್ರಾಹ್ಮಣನನ್ನು ಯಾರೊ ಕೆಲವು ದುಷ್ಕರ್ಮಿಗಳು ಕಠಿಣ ತರದಲ್ಲಿ ಹೊಡೆದರಂತೆ. ಇವರನ್ನು ಪೊಲೀಸರು ಆಸ್ಪತ್ರೆಗೆ ಒಯ್ದರಂತೆ. ಅವರು ಆಸ್ಪತ್ರೆಯಲ್ಲಿ ಸಾಯುವ, ಸಮಯ ಮರಣ ಹೇಳಿಕೆ ಕೊಡುವಾಗ ೬ ಮಂದಿ ಮಾಪಿಳ್ಳೆಯವರ ಹೆಸರನ್ನು ಹೇಳಿದ್ದಾರಂತೆ. ಇವರಲ್ಲಿ ೫ ಮಂದಿ ಮಾಪಿಳ್ಳೆಯರನ್ನು ಹಿಡಿದು ತಂದು ಬಂಟ್ವಾಳ ಸಬ್‌ಜೈಲಿನಲ್ಲಿ ರಿಮಾಂಡಿನಲ್ಲಿಟ್ಟಿರುವರು.

ಮುಂಬೈ:— ಇಲ್ಲಿ ನಡೆದ ಕರ್ನಾಟಕ ಬ್ರಾಹ್ಮಣ ನರಸಿಂಗ ರಾಯರ ಖೂನಿ ಮೊಕದ್ದಮೆಯಲ್ಲಿ ಅಪಾದಿತನಾದ ಕುಳ್ಕರ್ಣಿ ಬಿಕಪ್ಪನಾಯ್ಕ ನನ್ನು ರುಜುವಾತಿಲ್ಲವೆಂದು ಬಂಟ್ವಾಳ ಸಬ್ ಮೆಜಿಸ್ಟ್ರೇಟರು ಬಿಟ್ಟಿದ್ದರು. ಆದರೆ ಇದು ತಿರಿಗಿ ತನಖಿಯಾಗಬೇಕೆಂದು ಸೆಶನ್‌ಕೋರ್ಟಿನಿಂದ ಬಿಕಪ್ಪ ನಾಯ್ಕನಿಗೆ ಜಡ್ಜರ ಮುಂದೆ ಹಾಜರಾಗಬೇಕೆಂದು ನೋಟಿಸಾಗಿಯದೆಂದು ವಾರ್ತೆಯಿದೆ.

ಬಂಟ್ವಾಳ:—ಆಸ್ಪತ್ರೆಯ ಹತ್ತರವಿರುವ ಮಿಸ್ಸಿನ್ ಸಾಹೇಬರ ಹಿತ್ತಲನ್ನು ಬೋರ್ಡಿನವರು ಕ್ರಯಕ್ಕೆ ಪಡೆದು ಕಂಪೌಂಡರಿಗೆ ಮನೆ ಕಟ್ಟುತ್ತಾರೆಂತ ಒಂದು ವದಂತಿ ಇದೆ. ಇದು ಹೌದಾದರೆ ಆಸ್ಪತ್ರೆ ಹಿತ್ತಲಿನಿಂದ ಮುಸಾಫರ ಬಂಗ್ಲೆ ಹಿತ್ತಲಿಗೆ ಒಂದು ಮಾರ್ಗಮಾಡಿಸಿದರೆ ನೆರೆಯ ಸಮಯ ಜೀವಬಚಾವುಮಾಡಲಿಕ್ಕೆ ಕಡೇಕಾಲಕ್ಕೆ ಓಡುವ ದಾರಿ ಇದೇ ಆದ್ದರಿಂದಲೂ ಸ್ವಲ್ಪ ಕರ್ಚಿನಿಂದ ಸಾಧ್ಯವಾಗುವುದರಿಂದಲೂ ಮಾನ್ಯ ಬೋರ್ಡಿನವರು ಆಲೋಚಿಸುವುದು ಅವಶ್ಯವಾಗಿದೆ

—: ಸ್ವೀಕಾರ ಮತ್ತು ವಿಮರ್ಶೆ. :—

ವೈದ್ಯ ಬಿ. ಆರ್. ಹರಿದಾಸ್, ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ, ಮಂಗಳೂರು, ಇವರಿಂದ ಸಿದ್ಧಗೊಳಿಸಲ್ಪಟ್ಟ—"ಕಲ್ಪತರು"ಎಂಬ ಮಲೇರಿಯಾ ಜ್ವರಕ್ಕೆ ಆಗುವ ಮಿಶ್ರಣ, ಬೆಲೆ ರೂ. ೧—೬—೦. ಇದು ಆರು ಔನ್ಸ್ ಸೀಸೆಯಲ್ಲಿ ತುಂಬಿಸಿರುವ ಔಷಧವಾಗಿದ್ದು, ನೋಡುವವರಿಗೆ ವಿಲಾಯತಿಯಿಂದ ಬರುವ ಪೇಟೆಂಟ್ ಔಷಧಗಳಷ್ಟೆ ಚೊಕ್ಕವಾಗಿ ಕಾಣುತ್ತದೆ. ಆದರೆ ಇದರ ಪ್ರಯೋಜನವು ಆ ಪೇಟೆಂಟುಗಳಿಗಿಂತ ವಿಶೇಷ ಹೆಚ್ಚಿನದ್ದಾಗಿಯೂ, ತೀವ್ರವಾಗಿಯೂ, ಪೂರ್ಣವಾಗಿಯೂ ಇದೆ ಎಂಬದನ್ನು, ಅದನ್ನು ಉಪಯೋಗಿಸಿರುವ ಹಲವು ಮಿತ್ರರ ಹೇಳುವುದು ಕೇಳಿರುವೆವು. ಮಲೇರಿಯಾ ಜ್ವರಕ್ಕೆ ಇಂಥ ಬೇರೆ ರಾಮಬಾಣವಿಲ್ಲ. ಎಂಥ ಜ್ವರವಾದರೂ ಮೂರೇ ದಿನಗಳಲ್ಲಿ ಶಮನಹೊಂದುವುದಲ್ಲದೆ, ಅತಿ ದೀರ್ಘಕಾಲದ ಜ್ವರಗಳು ಸಹ ಹದಿನೆಂಡು ದಿನಗಳಲ್ಲಿ ಸಂಪೂರ್ಣ ಗುಣಹೊಂದುತ್ತವೆ. ಗಟ್ಟದ ಮೇಲಣ ಕಾಫಿತೋಟಗಳಲ್ಲಿ ಈ ಔಷಧದ ಪ್ರಯೋಜನವು ವಿಶೇಷವಾಗಿದೆ. ಇದರ ಉಪಯೋಗವನ್ನು ಅಗತ್ಯವಿರುವ ಸರ್ವರು ಮಾಡಿಕೊಳ್ಳುವರಾಗಿ ನಂಬಿರುತ್ತೇವೆ.

ಗವಾನಂದ ಶ್ರೀಯುತ ಕೆರೋಡಿ ಸುಬ್ಬರಾವ್‌ರವರಿಂದ ರಚಿತವಾದ ಈ ಕೆಳಗಿನ ಪುಸ್ತಕಗಳನ್ನು ನಾವು ನಮ್ಮ ಕೃತಜ್ಞತಾಪೂರ್ವಕವಾದ ವಂದನೆಯೊಂದಿಗೆ ಸ್ವೀಕರಿಸುವೆವು. ಇವುಗಳ ವಿಮರ್ಶೆಯನ್ನು ಮುಂದಣ ಸಂಚಿಕೆಯಲ್ಲಿ ಕೊಡುವೆವು.

ಅನುಕೂಲ ಸಿಂಧು	ಕ್ರಯ:	೦—೪—೦
ದ್ರಾವಿಡ ಉದಯರಾಗ	,,	೦—೨—೦.
ಶ್ರೀ ಕೃಷ್ಣ ಜೋಗುಳ	,,	೦—೧—೦
ಸೌಮೂಲ ಭಾಷಾಂತರ ಪ್ರಥಮ ಭಾಗ	,,	೦—೬—೦.

ವಿವಿಧ ವಿಷಯಗಳು.

ಪ್ರಕೃತಿಯ ಸೂಕ್ಷ್ಮವಾದ ವಿದ್ಯೆಗಳು.

ಆಕಾಶದಲ್ಲಿ ಹಿಂಡುಹಿಂಡಾಗಿ ಚಲಿಸುವ ಪಕ್ಷಿಗಳ ಚಲನೆಯನ್ನು ನೋಡಿದರೆ ಅವುಗಳು ಬೇರೆಬೇರೆ ವಿಧಗಳಲ್ಲಿಯೂ ಒಂದು ಕ್ರಮದಿಂದ ಹಾರ್ಯಾಡುವುದ. ಮನುಷ್ಯನನ್ನು ಆಶ್ಚರ್ಯಗೊಳಿಸುವುದು. ಈ ಪಕ್ಷಿಗಳು ಒಂದೇ ಹಿಂಡಾಗಿ ಸಂಚರಿಸುತ್ತಾ, ಬಲಕ್ಕಾದರೂ ಎಡಕ್ಕಾದರೂ ತಿರುಗುವವು. ಥಕ್ಕನೆ ಇಡೀ ಹಿಂಡು ಮೇಲಕ್ಕೇರುವುದು. ಹಾಗೆಯೇ ಥಕ್ಕನೆ ಕೆಳಗೆ ಇಳಿಯುವದು. ಇನ್ನು ಸ್ವಲ್ಪ ಕಾದುನಿಂತರೆ ಅವುಗಳು ಎರಡು ಹಿಂಡುಗಳಾಗಿ ಹಾರಾಡುವುದನ್ನು ನೋಡಬಹುದು. ಇವುಗಳಲ್ಲಿ ಒಂದು ವೇಗವಾಗಿ ಹಾರಾಡಿ ಗದ್ದೆಗಳಲ್ಲಿ ಕೂತುಕೊಳ್ಳುವುದು. ಇನ್ನೊಂದು ಗುಂಪು ವೃತ್ತಾಕಾರದಲ್ಲಿ ಸಂಚರಿಸಿ ಮರದ ಮೇಲೆ ಕೂತುಕೊಳ್ಳುವುದು. ಅನಂತರ ಎರಡೂ ಗುಂಪುಗಳು ಒಂದಾಗಿ ಕೂಡಿ ಸಮುದ್ರದ ಕಡೆಗೆ ಹಾರಿ ಹೋಗುವವು. ಆ ಮೇಲೆ ಅಲ್ಲಿಂದ ಹಾರಿ ಸುತ್ತುಸುತ್ತು ತಿರುಗುತ್ತಾ ಸಣ್ಣ ಸಣ್ಣ ಚುಕ್ಕೆಗಳಾಗಿ ಕಾಣುವಷ್ಟು ಎತ್ತರಕ್ಕೆ ಹಾರುವವು.

ಈ ರೀತಿಯಲ್ಲಿ ಹಾರಾಡುವಾಗ ಪ್ರತಿ ಒಂದು ಪಕ್ಷಿಯು ಸ್ವಲ್ಪವಾದರೂ ಕ್ರಮತಪ್ಪದೆ ಹಾರುವುದು. ಹೀಗಾಗುವ ಕಾರಣವೇನು? ಹೀಗೆ ನಡಬೇಕಾದರೆ ಒಳ್ಳೇ ಅಭ್ಯಾಸವು ಬೇಕಾಗಿದೆ. ಇದರಲ್ಲಿ ಇನ್ನೊಂದು ವಿಚಿತ್ರವೇನಂದರೆ ಇವುಗಳು ಒಂದೇ ಜಾತಿಯ ಪಕ್ಷಿಗಳೆಂದು ಹೇಳಲು ಸಾಧ್ಯವಿಲ್ಲ. ದಾರಿಯಲ್ಲಿ ಸಿಕ್ಕಿದ ಬೇರೆ ಪಕ್ಷಿಗಳೂ ಇರುವವು. ಇವುಗಳಿಗೆ ನಾಯಕನು ಇರಬೇಕೆಂದು ಊಹಿಸಬೇಕಾಗುತ್ತದೆ. ಮತ್ತು ಈ ನಾಯಕ ಪಕ್ಷಿಗಳು ಬೇರೆಯವುಗಳಿಗೆ ಅಪ್ಪಣೆಕೊಡುತ್ತಿವೆಯೆಂದೂ ಊಹಿಸಬಹುದು. ಆದರೆ ಅಂಥಾ ಶಬ್ದವೇನಾದರೂ ಇಷ್ಟರ ವರೆಗೆ ಕಂಡುಕೊಳ್ಳಲು ಸಾಧ್ಯವಾಗಲಿಲ್ಲ. ಆದುದರಿಂದ ಚೆನ್ನಾಗಿ ತರಬೇತಾದ ಸೈನಿಕರು ಚಲಿಸುವ ರೀತಿಯಲ್ಲಿ ಬೇರೆ ಬೇರೆ ವಿಧದಿಂದ ಈ ಪಕ್ಷಿಗಳು ಯಾವ ಕಾರಣದಿಂದ ಚಲಿಸಲು ಸಾಧ್ಯವಾಗುತ್ತದೆ ಎಂಬದು ಇನ್ನು ಕಂಡುಕೊಳ್ಳಬೇಕಿರುವ ಸಂಗತಿಯಾಗಿದೆ.

∴ ∴ ∴

ಎಷ್ಟು ದೂರಹೋದರೂ ಮನೆಗೆ ಬರುವ ಶಕ್ತಿ.

ಪಾರಿವಾಳಗಳಲ್ಲಿ ಕಂಡುಬಂದ ಒಂದು ವಿಶೇಷ ಸಂಗತಿಯೇನಂದರೆ:- ಅವುಗಳು ನೂರಾರು ಮೈಲು ದೂರಹೋದರೂ ತಿರಿಗಿ ತಮ್ಮ ಮನೆಗೆ ತಪ್ಪದೆ ಬರುವವು. ದೇಶಸಂಚಾರ ಮಾಡುವ ಪಕ್ಷಿಗಳು ರಾತ್ರಿ ಸಂಚರಿಸುವದು ವಾಡಿಕೆಯಾಗಿದೆ. ಈ ರೀತಿಯಲ್ಲಿ ದಾರಿಹುಡುಕಿಕೊಂಡು ಬರುವ ಸ್ವಾಭಾವಿಕ ಶಕ್ತಿಯು ರಾತ್ರಿಯಲ್ಲಿ ವಿಶೇಷವಾಗಿದೆ ಎಂದು ಕಾಣುತ್ತದೆ.

ಪಕ್ಷಿಗಳಿಗೆ ಕಾಣಬರುವ ಕ್ರಿಮಿಗಳು ಇಲ್ಲದೆ ಇದ್ದರೂ ಇವುಗಳ ಕರ್ಣೇಂದ್ರಿಯವು ಇರಬೇಕು. ಇವುಗಳಿಗೆ ಬಹಳ ಸಣ್ಣ ಶಬ್ದ ಕೇಳುವ ಶಕ್ತಿಯು ಇದೆ.

ಗದ್ದೆಯಲ್ಲಿ ಒಂದು ಇಲಿಯು ಮಾಡುವ ಸ್ವರವನ್ನು ಕೇಳುವ ಶಕ್ತಿಯು ಒಂದು ಗೂಬೆಗೆ ಇದೆ. ಅದು ಬಹಳ ದೂರವಿದ್ದರೂ ಚಿಂತಿಲ್ಲ. ಥ್ರಶ್ ಎಂಬ ಪಕ್ಷಿಯು ಒಂದು ಮೈದಾನಿನ ಮೇಲೆ ನಿಂತುಕೊಂಡು ಕುತ್ತಿಗೆಯನ್ನು ಒಂದು ಕಡೆಗೆ ವಾಲಿಸಿಕೊಂಡು ಕ್ರಿಮಿಕೀಟಗಳ ಚಲನೆಯನ್ನು ಕೇಳುತ್ತಿರುವುದು. ಅದು ಒಂದೆರಡು ಸಾರಿ ನೆಗೆದು ಕೀಟಗಳ ಶಬ್ದವನ್ನು ಕೇಳಿ ಥಕ್ಕನೆ ಹಾರಿ ಹುಳವನ್ನು ಬಾಯಿಯಲ್ಲಿ ಹಿಡಕೊಂಡು ಬರುವುದು. ಮರಕುಟ್ಟಿಗನ ಹಕ್ಕಿಯು ಮರದ ತೊಗಟೆಯೊಳಗಿರುವ ಕ್ರಿಮಿಗಳ ಚಲನೆಯ ಶಬ್ದಯನ್ನು ತಿಳಿದು ಆ ಮರದ ತೊಗಟೆಯನ್ನು ಕೊಕ್ಕಿನಿಂದ ಕುಟ್ಟಿ ಹುಳವನ್ನು ಹೊರಗೆ ತೆಗೆಯುವದು. ಚುಕ್ಕೆಗಳುಳ್ಳ ಹುಳ ಹಿಡಿಯುವ ಪಕ್ಷಿಯು ಆಕಾಶದಲ್ಲಿ ಹಾರಾಡುವಾಗ ಹಾರಾಡುವ ಹುಳಗಳ ಚಲನೆಯ ಶಬ್ದಗಳನ್ನು ಕೇಳಿ ಅವುಗಳನ್ನು ಹಿಡಿದು ತಿನ್ನುವುದು. ಪಕ್ಷಿಗಳಿಗೆ ಮನುಷ್ಯರಿಗಿಂತಲೂ ಕೇಳುವ ಶಕ್ತಿಯು ಹೆಚ್ಚಿಗಿದೆ. ಆದರೆ ಮನುಷ್ಯನ ಮಿದುಳು ಅವುಗಳಿಗಿಲ್ಲವೆಂದು ಪ್ರೊಫೆಸರ್ ಲೂ ಎಂಬವರು ಹೇಳುತ್ತಿರುವರು.

∴ ∴ ∴

ಒಟ್ಟುಕೂಡುವ ಶಕ್ತಿ.

ಕ್ರಿಮಿವರ್ಗದಲ್ಲಿ ನೋಡಿದರೆ ಹೆಣ್ಣು ಹುಳಗಳು ಒಂದು ವಿಚಿತ್ರ ಸ್ವರದಿಂದ ಗಂಡುಹುಳವನ್ನು ತನ್ನ ಕಡೆಗೆ ಕರೆಯುವುದು. ಇದು ಯಾವ ರೀತಿಯಲ್ಲಿ ಉಂಟಾಗುತ್ತದೆಂದು ಶೋಧನೆಗಾರರಿಗೆ ಇನ್ನೂ ತಿಳಿದು ಬರಲಿಲ್ಲ.

ಕ್ಷಯರೋಗ.

ಲೇಖಕರು:— ಬಿ. ಜಿ ಪ್ರಭು ಎಲ್. ಎಮ್. ಎಂಡ್.ಎಸ್., ಬಿ. ಎಸ್. ಎಸ್. ಸಿ. ಡಿಸ್ಟ್ರಿಕ್ಟ್ ಹೆಲ್ತ್‌ಆಫೀಸರ್.]

ಕ್ಷಯರೋಗವು ಉಗುಳುವ ದುರಾಭ್ಯಾಸದಿಂದ ಅನೇಕಾವರ್ತಿ ಒಬ್ಬನಿಂದ ಮತ್ತೊಬ್ಬನಿಗೆ ಬರುವ ಅಂಟುರೋಗವಾಗಿದೆ. ಇದು ಲೋಕದ ಎಲ್ಲಾ ಕಡೆಗಳಲ್ಲಿ ಹರಡಿರುವ ವ್ಯಾಧಿ ಮತ್ತು ಮನುಷ್ಯನ ಮಹಾ ವೈರಿಯು ಇದು ಲೋಕದಲ್ಲಿ ಹುಟ್ಟುವ ಪ್ರತಿ ಏಳು ಮಂದಿಗಳಲ್ಲಿ ಒಬ್ಬನನ್ನು ಕೊಲ್ಲುತ್ತಿದೆ. ನಾಗರೀಕ ಪ್ರಪಂಚವನ್ನು ನೋಡಿದರೆ ಪ್ರತಿ ಒಂದು ಕ್ಷಣದಲ್ಲಿಯೂ ಒಬ್ಬೊಬ್ಬನು ಈ ವ್ಯಾಧಿಗೆ ತುತ್ತಾಗುತ್ತಿದ್ದಾನೆಂದು ಲೆಖ್ಖಮಾಡಿ ಕಂಡುಹಿಡಿದಿರುತ್ತಾರೆ. ಇಂಡಿಯಾದೇಶದಲ್ಲಿ ಉಂಟಾಗುವ ಮರಣಗಳ ಪೈಕಿ ಹನ್ನೊಂದರಲ್ಲಿ ಒಂದನೇ ಭಾಗವು ಕ್ಷಯರೋಗದಿಂದಲೇ ಉಂಟಾಗುತ್ತದೆ. ಪ್ರತಿವರ್ಷ ಮದ್ರಾಸು ಸಂಸ್ಥಾನದಲ್ಲಿ ಸಾಧಾರಣ ೨,೦೦,೦೦೦ ಜನರು ಕ್ಷಯರೋಗದಿಂದ ಸಾಯುತ್ತಾರೆ.

ಈ ರೋಗವು ೧/೬೦,೦೦೦ ಅಂಗುಲ ಗಾತ್ರವುಳ್ಳ ಒಂದು ಬಹು ಸೂಕ್ಷ್ಮವಾದ ಕ್ರಿಮಿಯಿಂದ ಉಂಟಾಗುತ್ತದೆ. ಶರೀರದೊಳಗೆ ಪ್ರವೇಶಿಸಿದ ನಂತರ ಎಲ್ಲಾ ಅವಯವಗಳಿಗೂ ಈ ಕ್ರಿಮಿಯು ಪ್ರವೇಶಿಸಿ ವೃದ್ಧಿಸುತ್ತದೆ. ಶ್ವಾಸಕೋಶ, ಎಲುಬುಗಳು, ಕೀಲುಗಳು, ಕರುಳಿನಲ್ಲಿಯೂ, ಕಂಕುಳಲ್ಲಿಯೂ ಇರುವ ಮಾಂಸಗಂಥಿಗಳು, ಮಿದುಳು, ಕರುಳುಗಳು ಮೊದಲಾದ ಯಾವ ಅವಯವಗಳಾದರೂ ಕ್ಷಯರೋಗಕ್ಕೆ ಒಳಪಡಬಹುದು.

ಆದರೆ ಅನೇಕ ಸಂದರ್ಭಗಳಲ್ಲಿ ಇದು ಶ್ವಾಸಕೋಶವನ್ನು ವ್ಯಾಪಿಸುವುದು ಶ್ವಾಸಕೋಶಗಳಿಗೆ ಈ ರೋಗ ತಗಲಿದರೆ, ಅವುಗಳಿಗೆ ಹುಣ್ಣು ಒಡೆದು ಶ್ವಾಸಕೋಶಗಳಲ್ಲಿ ತುಂಬಾ ತೂತುಗಳು ಬೀಳುತ್ತವೆ. ಇದೇ ಕ್ರಿಮಿಗಳು ಗಂಟಲು ಮಣಿಗೆ ವ್ಯಾಪಿಸಿದಾಗ ಅದನ್ನು ನಾವು ಗಂಡಮಾಲೆಯೆಂದು ಕರೆಯುವೆವು. ಒಂದೇ ಕುಟುಂಬಕ್ಕೆ ಸೇರಿದ ಅನೇಕ ಜನರಿಗೆ ಈ ವ್ಯಾಧಿ ಇರಬಹುದಾದರೂ, ಇದು ಜನ್ಮಸಂಬಂಧವಾಗಿ ಬರತಕ್ಕ ವ್ಯಾಧಿಯಲ್ಲ. ರೋಗಿಗಳ ಸಮೀಪ ತಕ್ಕಷ್ಟು ಮುಂಜಾಗ್ರತೆಯನ್ನು ತೆಕೊಳ್ಳದೆ ಯಾವಾಗಲೂ ವಾಸಿಸುವುದರಿಂದ ಈ ರೋಗವು ಬರುವದೇ ಹೊರತು ತಂದೆ ತಾಯಿಗಳಿಂದ ಮಕ್ಕಳಿಗೆ ಬರುವ ವ್ಯಾಧಿಯಲ್ಲ. ಇದೇ ರೋಗದಿಂದ ಬಹುಕಾಲದಿಂದ ನರಳುತ್ತಿರುವವರ ಮಕ್ಕಳಿಗೂ ಹುಟ್ಟುವಾಗ ಆ ರೋಗದ ಸಂಬಂಧವಿರಲಾರದು. ಆದರೆ ಹುಟ್ಟಿದಮೇಲೆ ಅವುಗಳಿಗೆ ಆ ರೋಗಿಗಳ ಸಹವಾಸದಲ್ಲಿಯೇ ಇರಬೇಕಾದುದರಿಂದ, ಆಗ ಅವುಗಳಿಗೂ ರೋಗ ವ್ಯಾಪಿಸುವುದು

ಈ ರೋಗದ ಕ್ರಿಮಿಗಳು ಉಸಿರಾಡುವ ಗಾಳಿ, ಮತ್ತು ತಿನ್ನುವ ಆಹಾರ ಈ ಮೂಲಕವಾಗಿ ದೇಹದೊಳಗೆ ಸೇರುವವು.

ರೋಗಿಗಳು ಕೆಮ್ಮಿ ಉಗುಳುವಾಗ, ಅವರ ಎಂಜಲಿನಲ್ಲಿ ತುಂಬಾ ಕ್ರಿಮಿಗಳಿರುವವು. ಮತ್ತು ಅವರು ಉಗುಳುವಾಗ ಅವರ ಬಾಯಿ, ತುಟಿ, ಮುಂತಾದುವುಗಳೊಳಗೆಲ್ಲಾ ಕ್ರಿಮಿಗಳು ಅಂಟಿರುವವು. ಅಂಥಾ ಸ್ಥಿತಿಯಲ್ಲಿ ಆ ರೋಗಿಗಳು ತಮ್ಮ ಮಕ್ಕಳನ್ನು ಎತ್ತಿಕೊಂಡು ಅವುಗಳ ಬಾಯಿಗೆ ಮುತ್ತಿಟ್ಟರೆ, ಆ ಕ್ರಿಮಿಗಳ ಸೋಂಕು ಮಕ್ಕಳ ದೇಹಕ್ಕೂ ವ್ಯಾಪಿಸುವದು. ಅಷ್ಟೇ ಅಲ್ಲದೆ ದೀರ್ಘಕಾಲದ ರೋಗಿಗಳು ಕೆಮ್ಮುವಾಗಲೂ, ಘಟ್ಟಿಯಾಗಿ ಮಾತಾಡುವಾಗಲೂ, ಸೀನುವಾಗಲೂ ಅವರ ಬಾಯಿಯಿಂದ ಹಾರುವ ನೀರಿನ ಹನಿಗಳಲ್ಲಿ ಎಷ್ಟೋ ಕ್ರಿಮಿಗಳು ಹೊರಕ್ಕೆ ಹಾರಿ ಬೀಳುವವು. ಕ್ಷಯರೋಗಿಗಳು ಅಲಕ್ಷ್ಯದಿಂದ ಸಿಕ್ಕಿದ ಕಡೆಯಲ್ಲಿ ನೆಲದ ಮೇಲೆ ಉಗುಳಿದರೆ ಎಂಜಲು ಒಣಗಿ ಕ್ರಿಮಿಗಳು ಬಹು ಸಣ್ಣ ಧೂಳಿನಂತೆ ವಾಯುವನ್ನು ಸೇರುತ್ತವೆ. ಈ ವಾಯುವನ್ನು ಒಳಕ್ಕೆ ತೆಕೊಳ್ಳುವ ಮನುಷ್ಯನಿಗೆ ಈ ರೋಗವು ತಗಲುವ ಅಪಾಯವಿರದು. ನೊಣಗಳು ಕೂಡಾ ಅಂಥಾ ಎಂಜಲಿನ ಮೇಲೆ ಕುಳಿತು ತಮ್ಮ ಕಾಲುಗಳಿಗೆ ಅಂಟಿಕೊಂಡ ಕ್ರಿಮಿಗಳನ್ನು ನಮ್ಮ ಆಹಾರ ಪದಾರ್ಥಗಳಿಗೂ, ಕೈ, ಕಾಲು, ಮುಖಗಳಿಗೂ, ಮಕ್ಕಳಿಗಾಗಿ ಇಟ್ಟಿರುವ ಹಾಲಿಗೂ ತಂದು ಹತ್ತಿಸುತ್ತವೆ. ಇವುಗಳಿಂದ ಕ್ರಿಮಿಯು ಬಾಯಿಯ ಮೂಲಕ ಹೊಟ್ಟೆಯನ್ನು ಅಥವಾ ಶ್ವಾಸಕೋಶವನ್ನು ಸೇರುತ್ತವೆ. ಕ್ಷಯರೋಗಿಗಳು ಕಫವನ್ನು ಉಗುಳಿದೊಡನೆ, ಕೈಯಿಂದಲೋ ಅಥವಾ ವಸ್ತ್ರದಿಂದಲೋ ಬಾಯನ್ನು ಒರಸಿಕೊಳ್ಳುವದು ಸಹಜವಾದುದರಿಂದ, ಅವರ ಕೈಯಲ್ಲಿ ಅಥವಾ ಕೈವಸ್ತ್ರದಲ್ಲಿ ಕ್ರಿಮಿಗಳು ಅಂಟಿಕೊಂಡಿರುವವು. ಇಂಥವರು ಯಾವುದಾದರೂ ಆಹಾರ ಪದಾರ್ಥವನ್ನು ಮುಟ್ಟಿದರೆ, ಅದರಲ್ಲಿ ವಿಷ ಕ್ರಿಮಿಗಳು ಸೇರಿ, ಅದನ್ನು ತಿಂದವಂಗೆ ರೋಗವು ಬರುವದು. ಈ ಕೆಳಗೆ ಕೊಟ್ಟಿರುವ ಕಾರಣಗಳಿಂದ ತಮ್ಮ ದೇಹವನ್ನು ಅಥವಾ ಶ್ವಾಸಕೋಶವನ್ನು ಕ್ಷೀಣಪಡಿಸಿಕೊಂಡಿರುವದರಿಂದ ಮನುಷ್ಯರು ಈ ವ್ಯಾಧಿಗೆ ಹೆಚ್ಚಾಗಿ ತುತ್ತಾಗುವರು.

(೧) ಕತ್ತಲೆಯಾಗಿಯೂ, ಧೂಳಿನಿಂದ ತುಂಬಿಯೂ, ಹೆಚ್ಚು ಜನರು ವಾಸಮಾಡುವ ಕೊಠಡಿಗಳಲ್ಲಿಯೂ, ಕಾರ್ಖಾನೆಗಳಲ್ಲಿಯೂ, ವಾಸಿಸುವದರಿಂದಲೂ, (೨) ಗೋಷಾದಲ್ಲಿರುವದರಿಂದಲೂ, ಈ ಕಾರಣದಿಂದ ಕ್ಷಯರೋಗಕ್ಕೆ ತುತ್ತಾಗುವ ಗೋಷಾಹೆಂಗಸರ ಸಂಖ್ಯೆಯು ಗಂಡಸರಿಗಿಂತ ಎರಡರಷ್ಟು ಹೆಚ್ಚಾಗುವದು. (೩) ಮಿತಿಮೀರಿ ಮದ್ಯಪಾನಮಾಡುವದರಿಂದಲೂ, (೪) ಮಿತಿಮೀರಿ ಕೆಲಸಮಾಡುವದರಿಂದಲೂ, (೫) ಕ್ಷಯರೋಗಿಯೊಡನೆ ಒಂದೇ ತಟ್ಟೆಯಲ್ಲಿ ಊಟಮಾಡುವದರಿಂದಲೂ, (೬) ಕ್ಷಯರೋಗಿಗಳೊಂದಿಗೆ ಒಂದೇ ಕೊಠಡಿಯಲ್ಲಿರುವುದರಿಂದಲೂ, (೭) ಬಾಲ್ಯವಿವಾಹದಿಂದಲೂ, (೮) ಹೆಂಗಸರು ಬೇಗಬೇಗನೆ ಗರ್ಭಿಣಿಯರಾಗುವದರಿಂದಲೂ, ಮತ್ತು ಮಕ್ಕಳಿಗೆ ಬಹುಕಾಲ ಮೊಲೆಕೊಡುವದರಿಂದಲೂ ಮುಂತಾದ ಕಾರಣಗಳಿಂದ ದೇಹವನ್ನು ಮತ್ತು ಶ್ವಾಸಕೋಶವನ್ನು ಕ್ಷೀಣಪಡಿಸುವವರಿಗೆ ಈ ರೋಗವು ಬೇಗನೆ ತಗಲುವದು. ಈ ರೋಗವನ್ನು ಆರಂಭದಲ್ಲಿಯೇ ಕಂಡುಹಿಡಿದರೆ ಸುಲಭವಾಗಿ ಗುಣಪಡಿಸಬಹುದಾದ್ದರಿಂದ ಪ್ರತಿಯೊಬ್ಬರೂ ಈ ವ್ಯಾಧಿಯ ಆರಂಭಸೂಚನೆಯನ್ನು ತಿಳಿದುಕೊಂಡಿದ್ದರೆ ಆ ಸೂಚನೆಗಳನ್ನು ಕಂಡೊಡನೆ ಡಾಕ್ಟರರ ಬಳಿಗೆ ಹೋಗಿ, ತೋರಿಸಿ ತಕ್ಕ ಚಿಕಿತ್ಸೆಗಳಿಂದ ತಮ್ಮ ಪ್ರಾಣವನ್ನು ಉಳಿಸಿಕೊಳ್ಳಬಹುದು. ಈ ರೋಗದ ಆರಂಭ ಚಿಹ್ನೆಗಳು ಯಾವದೆಂದರೆ—

(೨) ಸಾಧಾರಣವಾಗಿ ಸ್ವಲ್ಪ ಕೆಲಸಮಾಡಿದರೂ ದೇಹಕ್ಕೆ ಶ್ರಮವು ತೋರುವುದು. (೨) ಕಾರಣವಿಲ್ಲದೆ ದೇಹವು ಕೃಶವಾಗುತ್ತ ಬರುವದು. (೩) ಆಗಾಗ್ಗೆ ಚಳಿಹಿಡಿಯುವದು. (೪) ಒಂದು ತಿಂಗಳಿಗಿಂತ ಹೆಚ್ಚು ಕಾಲವಿದ್ದ ಕೆಮ್ಮು, (೫) ಕಫದಲ್ಲಿ ರಕ್ತ ಬೀಳುವುದು. (೬) ಸರಿಯಾದ ಕಾರಣವೇನೂ ತಿಳಿಯದ ಆಹಾರವು ಜೀರ್ಣವಾಗದೆ ಇರುವದು, (೭) ಸ್ವಲ್ಪ ಶ್ರಮವಾದರೂ ಮೇಲುಸಿರು ಬರುವದು. (೮) ಎದೆಯಲ್ಲಿ ಆಗಾಗ್ಗೆ ಬಿಡದೆ ನೋವು ಕಾಣುವದು. (೯) ರಕ್ತಬಲವು ತಗ್ಗುತ್ತಾ ಬರುವದು. (೧೦) ಸಂಜೆಯ ಹೊತ್ತಿನಲ್ಲಿ ಜ್ವರದ ಸೂಚನೆ ಅಥವಾ ಮೈಬೆಚ್ಚಗಾಗುವದು.

ಈ ಮೇಲೆ ಹೇಳಿದ ಸೂಚನೆಗಳಲ್ಲಿ ಒಂದೆರಡು ಕಂಡುಬಂದರೆ ಒಡನೆಯೇ ಡಾಕ್ಟರರ ಬಳಿಗೆ ಹೋಗಿ ಮಕ್ಕಳಿಗೆ ಗಂಟಲಲ್ಲಿ ಅಥವಾ ಕಂಕುಳಲ್ಲಿ ಗಂಟು ಕಟ್ಟಿ ನೋಯುತ್ತಿದ್ದರೆ, ಮೂಳೆಗಳ ಮೇಲೆಯಾಗಲಿ, ಕೀಲುಗಳಲ್ಲಿಯಾಗಲಿ, ಬೆನ್ನೆಲುಬಿನಲ್ಲಾಗಲಿ ನೋವು ಕಂಡು ಆ ಸ್ಥಳವು ಬಾತಿದ್ದರೆ, ಕೆಮ್ಮು, ಹೊಟ್ಟೆಯುಬ್ಬರ ದೇಹಕ್ಷೀಣವಾಗುವದು. ಅಜೀರ್ಣಭೇದಿ, ಈ ಲಕ್ಷಣಗಳು ತೋರಿಬಂದರೆ, ಅಂಥಾ ಮಕ್ಕಳನ್ನು ಒಡನೆಯೇ ಡಾಕ್ಟರರಿಗೆ ತೋರಿಸಬೇಕು.

ಕ್ಷಯರೋಗ ಬಾರದ ಹಾಗೆ ಮಾಡುವ ಉಪಾಯಗಳು.

(೧) ಸಾಧ್ಯವಾದ ಮಟ್ಟಿಗೆ ದೇಹದ ಬಲವೂ ಆರೋಗ್ಯವೂ ಕೆಡದಂತೆ ನೋಡಿಕೊಳ್ಳುವುದು (೨) ಯಾವಾಗಲೂ ಮನೆಯಲ್ಲಿಯೇ ಇರದೆ ಅದಷ್ಟು ಹೆಚ್ಚಾಗಿ ಹೊರಗೆ ಸಂಚಾರ ಮಾಡಿ ಬರುವದು (೩) ಒಣ ನೆಲವನ್ನು ಗುಡಿಸದೆ ಒದ್ದೆ ಬಟ್ಟೆಯಿಂದ ಸಾರಿಸುವುದು. (೪) ಗವಾಕ್ಷಿಗಳನ್ನು ತೆರೆದಿಟ್ಟು ಗಾಳಿಯಾಡುವ ಕೊಠಡಿಗಳಲ್ಲಿಯೂ, ಪಡಸಾಲೆಗಳಲ್ಲೂ ಮಲಗಬೇಕು. ಗಾಳಿಯಾಡುವ ಮತ್ತು ಬೆಳಕು ಚೆನ್ನಾಗಿ ಬೀಳುವ ಕೊಠಡಿಗಳಲ್ಲಿ ಪಾಠ ಕೆಲಸ ಮುಂತಾದ್ದನ್ನು ಮಾಡಬೇಕು. (೫) ಪುಷ್ಟಿಕರವಾದ ಒಳ್ಳೇ ಆಹಾರವನ್ನು ಊಟಮಾಡಬೇಕು. (೬) ಧೂಳು, ನೊಣ ಮುಂತಾದವು ನಿಮ್ಮ ಆಹಾರಗಳ ಮೇಲೆ ಕೂತುಕೊಳ್ಳದ ಹಾಗೆ ಅವನ್ನು ಮುಚ್ಚಿಡಬೇಕು. (೭) ದಣಿಯುವಷ್ಟು ಕೆಲಸ ಮಾಡಬಾರದು. (೮) ಕ್ಷಯರೋಗಿಯೊಂದಿಗೆ ಮಲಗಬಾರದು; ಅಥವಾ ಅವರು ವಾಸಮಾಡುವ ಕೋಣೆಗಳಲ್ಲಿ ವಾಸಿಸಬಾರದು. (೯) ನಿರ್ಮಲವಾದ ಗಾಳಿಯಾಡುವ ಬಯಲಿನಲ್ಲಿ ಆಟವಾಡಬೇಕು. (೧೦) ಮದ್ಯಪಾನ, ವ್ಯಭಿಚಾರ ಮೊದಲಾದ ದುರ್ವ್ಯಸನಗಳಿಗೆ ಒಳಪಡಬಾರದು. (೧೧) ಹೆಚ್ಚು ಜನರು ಸೇರತಕ್ಕ ಮತ್ತು ಒಳ್ಳೇ ಗಾಳಿಗೂ, ಬೆಳಕಿಗೂ ಅವಕಾಶವಿಲ್ಲದ ಸ್ಥಳಗಳಲ್ಲಿ ಸೇರಬಾರದು. (೧೨) ಇನ್‌ಫ್ಲುಯೆಂಜಾ, ಸನ್ನಿಪಾತ ಜ್ವರ, ಸಿಡುಬು ಮುಂತಾದ ಕಠಿಣ ರೋಗಗಳು ಗುಣವಾಗಿ ಆಗಲೇ ಚೇತರಿಸಿಕೊಳ್ಳುತ್ತಿರುವಾಗ ಹೊರಗೆ ಮೈಬಿಟ್ಟು ತಿರುಗಾಡಬಾರದು. (೧೩) ಕೆಲವು ದಿನಗಳ ಹಿಂದೆ ಕ್ಷಯರೋಗಿಗಳು ಮಲಗುತ್ತಿದ್ದ ಕೋಣೆಗಳಲ್ಲಿ ಮಲಗಬಾರದು. (೧೪) ಕ್ಷಯರೋಗಿಗಳು ಉಪಯೋಗಿಸುತ್ತಿದ್ದ ಚಮ್ಚ, ಲೋಟಾ, ಚಟ್ಟಿ ಮೊದಲಾದುವುಗಳನ್ನು ದ್ರಾವಕಗಳಿಂದ ಚೆನ್ನಾಗಿ ಶುಚಿಮಾಡದೆ ಉಪಯೋಗಿಸಬಾರದು. (೧೫) ಸರ್ವ ವಿಷಯಗಳಲ್ಲಿಯೂ ಬಹಳ ಶುಚಿಯಾಗಿರಬೇಕು. (೧೬) ಮನೆಯೊಳಗೆ ಪ್ರವೇಶಿಸುವಾಗ ಕಾಲಿನ ಜೋಡು ಬೂಟ್ಸು, ಚಿತ್ತ ಮುಂತಾದುವುಗಳನ್ನು ಹೊರಗೆಯೇ ಬಿಟ್ಟುಹೋಗಬೇಕು. ರೋಗಿಗಳು ತಮ್ಮ ವ್ಯಾಧಿಯು ಮತ್ತೊಬ್ಬರಿಗೆ ಅಂಟದ ಹಾಗೆ ಎಚ್ಚರ ತೆಗೆದುಕೊಳ್ಳಬೇಕಾದರೆ ಏನು ಮಾಡಬೇಕು?

(೧) ರೋಗಿಗಳು ಸಿಕ್ಕಿದ ಕಡೆಯಲ್ಲಿ ತಮ್ಮ ಎಂಜಲನ್ನು ಉಗುಳಬಾರದು. ಒಂದು ಪಾತ್ರದಲ್ಲಿ ನೀರಿಟ್ಟು (ಸಾಧ್ಯವಾದರೆ ಫಿನ್ನಾಯಿಲ್ ಅಥವಾ ಲ್ಯಾಸೋಲ್ ದ್ರಾವಕವನ್ನು ಅದಕ್ಕೆ ಸೇರಿಸಿ) ಅದರಲ್ಲಿಯೇ ಉಗುಳಬೇಕು. (೨) ಸಾಯಂಕಾಲದಲ್ಲಿ ಅದನ್ನು ದೂರ ತಕ್ಕೊಂಡು ಹೋಗಿ ಹೂಳಬೇಕು. ಮತ್ತು ಪಾತ್ರವನ್ನು ಕುದಿಯುವ ನೀರಿನಲ್ಲಿ ತೊಳೆಯಬೇಕು. (೩) ಕೈವಸ್ತ್ರದಲ್ಲಿಯೇ ಉಗುಳಿ ಅದನ್ನು ಜೇಬಿನಲ್ಲಿಟ್ಟುಕೊಳ್ಳುವ ಅಭ್ಯಾಸವು ಬಹಳ ಕೆಟ್ಟದ್ದು. ಏಕೆಂದರೆ ಸ್ವಲ್ಪ ಹೊತ್ತಿನಲ್ಲಿಯೇ ಆ ಎಂಜಲು ವಸ್ತ್ರದಲ್ಲಿ ಒಣಗಿ ಹೋಗಿ ಜೇಬಿನಿಂದ ವಸ್ತ್ರವನ್ನು ತೆಗಿಯುವಾಗ ಅದರೊಂದಿಗೆ ಎಷ್ಟೋ ಕ್ರಿಮಿಗಳು ಅಲ್ಲಲ್ಲಿ ಉದಿರಿ, ನಾನಾ ಕಡೆಗೆ ಹರಡಿಕೊಳ್ಳುವವು. (೪) ಮನೆಯೊಳಗೆ ನೀವು ಉಗುಳುವುದಕ್ಕೆ ಬಟ್ಟೆಗಳನ್ನು ಉಪಯೋಗಿಸುವ ಪಕ್ಷದಲ್ಲಿ ಯಾವುದಾದರೂ ಚಿಂದಿ ಬಟ್ಟೆಗಳನ್ನು ಉಪಯೋಗಿಸಿ ಅದನ್ನು ಆ ಮೇಲೆ ಸುಟ್ಟು ಹಾಕಿ ಬಿಡಬೇಕು. (೫) ರೋಗಿಗಳು ತಮ್ಮ ಬಾಯಿಯಿಂದ ಮಕ್ಕಳಿಗೆ ಮುತ್ತಿಡಬಾರದು. (೬) ರೋಗಿಗಳಿಗೆ ಮಲಗುವ ಕೋಣೆಯೂ, ಹಾಸಿಗೆಯೂ ಪ್ರತ್ಯೇಕವಾಗಿರಬೇಕು. (೭) ಅವರು ಉಪಯೋಗಿಸುವ ಪಾತ್ರಗಳೆಲ್ಲವೂ ಪ್ರತ್ಯೇಕವಾಗಿರಬೇಕು. (೮) ರೋಗಿಗಳು ಮಾತಾಡುವಾಗಲೂ, ಕೆಮ್ಮುವಾಗಲೂ, ಸೀನುವಾಗಲೂ ಒಂದು ಕಾಗದವನ್ನಾಗಲಿ ವಸ್ತ್ರವನ್ನಾಗಲಿ ಬಾಯಿಗೆ ಮರೆಯಾಗಿ ಇಟ್ಟುಕೊಳ್ಳಬೇಕು. (೯) ರೋಗಿಯು ವಾಸಮಾಡುವ ಸ್ಥಳಗಳಿಗೆ ಗಾಳಿ, ಬೆಳಕು ಧಾರಾಳವಾಗಿ ಬರುವಂತಿರಬೇಕು.

ಈ ರೋಗದ ವಿಷಯ ನೆನಪಿನಲ್ಲಿ ಡತಕ್ಕ ಐದು ವಿಷಯಗಳು.

(೧) ಒಳ್ಳೇ ಗಾಳಿಯೂ ಬೆಳಕೂ ಸಂಚರಿಸುವ ಮನೆಯಲ್ಲಿ ವಾಸಿಸಬೇಕು. (೨) ಬಯಲಿನಲ್ಲಿ ಆಡಬೇಕು. (೩) ದಣಿಯುವಷ್ಟು ಕೆಲಸ ಮಾಡಬಾರದು. (೪) ಕ್ಷಯರೋಗಿಯೊಂದಿಗೆ ಊಟವನ್ನು ನಿದ್ರೆಯನ್ನು ಮಾಡಬಾರದು. (೫) ಬಲಹೀನನಾಗಿ ಯಾ ಸಂಜೆಗೆ ಜ್ವರ ಬರುವಂತೆಯೂ ಕಂಡರೆ ವೈದ್ಯರ ಆಲೋಚನೆಯನ್ನು ಕೇಳಬೇಕು.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅನ್ಯತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮಿದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ಮೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯೆಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds ,, 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಅದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ,
ಮಂಗಳೂರು ಟವನಿಗೆ ಮಾತ್ರ.

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬತ್ತಾ ನೋಟು, ಮೆಮೊ ಒಪ್ ಕೊಸ್ಟ್ಸ್, ಮೆಮೊರಂಡಮ್ ಒಪ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—3—0.

ಶಾರದಾ ಛಾಪಖಾನೆ,
ಕೇರು ಬೀದಿ, ಮಂಗಳೂರು.

ಬಂದು ನೋಡಿರಿ! ತಿಂದುನೋಡಿರಿ!

ದಕ್ಷಿಣ ಕನ್ನಡಾ ಜಿಲ್ಲಾ ವಸ್ತು ಪ್ರದರ್ಶನದಲ್ಲಿ
ಪದಕವನ್ನು
ಬಹುಮಾನವಾಗಿ ಪಡೆದಿರುವ
ಎಸ್. ಪಿ. ಆಚಾರ್ಯ
ಇವರಿಂದ ತಯಾರಿಸಲ್ಪಟ್ಟ
ಉಪ್ಪಿನಕಾಯಿಗಳನ್ನು
ಬಂದುನೋಡಿರಿ! ತಿಂದುನೋಡಿರಿ!

ದೇಶಬಂಧುಗಳೇ,

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸೋಣಾದ ಮಾವಿನಕಾಯಿ, ನಿಂಬೆ, ನೆಲ್ಲಿಕಾಯಿ, ಮೊದಲಾದವುಗಳ ಉಪ್ಪಿನಕಾಯಿಗಳೂ, ಮಸಾಲೆಪುಡಿಗಳೂ ತುಂತಿಮುರಬ್ಬಾಗಳೂ, ಯಾವಾಗಲೂ ಮಾರಾಟಕ್ಕೆ ಸಿದ್ಧವಿರುವವು. ಬ್ರಾಹ್ಮಣಸಂತರ್ಪಣೆ ಹಾಗೂ ವಿಶೇಷ ಭೋಜನ ಸಮಾರಂಭಾದಿಗಳ ಸಂದರ್ಭದಲ್ಲಿ ಅಪೇಕ್ಷಿಸಿದವರಿಗೆ ಸಮಯಕ್ಕೆ ತಕ್ಕಂತೆ ಬೇಕಾದ ಉಪಕರಣಗಳನ್ನು ಶುದ್ಧವಾಗಿ ತಯಾರಿಸಿ ಒದಗಿಸಿ ಕೊಡುವೆವು.

ಅವುಗಳನ್ನು ನಮ್ಮಲ್ಲಿಗೆ
ಬಂದು ನೋಡಿರಿ! ತಿಂದು ನೋಡಿರಿ!

ಇಂಡಿಯನ್ ಸ್ವೀಟ್‌ಮೀಟ್ ಮಾರ್ಟ್.

ಮನೋಲ್ಲಾಸಿನಿ ಕಾಫಿ ಕ್ಲಬ್.
ಮಾರ್ಕೆಟು ರೋಡು,
ಮಂಗಳೂರು.
ಅಥವಾ
ಸದಾನಂದ ಕಾಫಿ ಕ್ಲಬ್
ರಥಬೀದಿ, ಮಂಗಳೂರು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ

ವಜ್ರಾಂಗ-ಬಿಂದು

ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತೂ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬಿಸಳಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦, ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಹೊರತು ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆನ್ನಿಸುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ರೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಚಿಕ್ಕೋಡಿ, (ಜಿಲ್ಲಾ ಬೆಳಗಾಂವ.)

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಲ್ಪಡುವುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು
ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್‌ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸ

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯೂ ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 9 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 5ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜಿಪ್ಪರ್ ರೇಷ್ಮೆ ಮುಡಿಗಳು, ಜಾಮದಾನಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಘಂಟೆ, ಶಾಳ, ಪನ್ನೀರ್‌ದಾನಿ, ಹಿತ್ತಾಳೆಯ ಆಟದ ಸಾಮಾನುಗಳು, ಪ್ರೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಜಾಲಂಧ್ರಾ, ಕಾಶೀ ಕ್ಷೇತ್ರ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವದಕ್ಕೂ ಒಂದು ದೇಹದ ಮರ್ಮಶಾಸ್ತ್ರವು ಇರುವುದು ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—
"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.
ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಕಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, ಮದ್ರಾಸ್.

ಆಯುರ್ವೇದ ಶಾಸ್ತ್ರಿ, ಅಷ್ಟಾವಧಾನಿ,
ರಾ. ವೇ. ಸುಬ್ಬರಾವ್, ಯಂ. ಜಿ. ಯ. ಅವರುಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನರುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಗೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಗೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನೂ ದೂರ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮಾತ್ರೆಯನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾ ಜಿಲ್ಲಾ.

ಲಿವರ್ ಮೂವ್‌ಮೆಂಟ್ ವಾಚ್

15 ಮಣಿಗಳಿದ್ದು ರೋಲ್ಡ್‌ಗೋಲ್ಡ್ ವಾಚ್.

ಈ ಗಡಿಯಾರ ಕೈಗೆ ಕಟ್ಟುವಂಥಾದ್ದಾಗಿ ಸರಿಯಾದ ಸಮಯವನ್ನು ತೋರಿಸಿ ಚಿರಕಾಲ ವರೇಗೆ ಬಾಳುವುದು.

10 ವರುಷದ ವರೆಗೆ ಬಾಳುವ ಗೆರೆಂಟಿ ಇದೆ. ಕ್ರಯ ರೂ. 17—8—0.

11 ಮಣಿಗಳಿದ್ದು ನಿಜವಾದ ರೋಲ್ಡ್ ಗೋಲ್ಡ್ ಬಂಗಾರದಿಂದ ತಯಾರಿಸಲ್ಪಟ್ಟು 5 ವರ್ಷದ ಗೆರೆಂಟಿ ಇರುವ ವಾಚಿಗೆ ಕ್ರಯ ರೂ. 12—8—0.

18 ಕೆರೆಟ್ ಇಲೆಕ್ಟ್ರೊ ರೋಲ್ಡ್ ಗೋಲ್ಡ್ ವಾಚ್ ಕ್ರಯ ರೂ. 7—0—0. ಲಿವರ್ ಮೂವ್‌ಮೆಂಟ್ 10 ಮಣಿಗಳಿದ್ದ ಬಂಗಾರ ಗಿಲ್ಟುವಾಚ್ ಕ್ರಯ ರೂ. 13—8—0.
ಎಲಾರ್ಮ್ ಜರ್ಮನ್ ಟ್ಯಾಮ್‌ಪೀಸ್ ಕ್ರಯ ರೂ. 5-0-0.
ಡಬ್ಬಲ್ ಎ. " " " 6-0-0.
"ಬಿ" ಟ್ಯಾಮ್‌ಪೀಸ್ ಕ್ರಯ ರೂ. 2—4—0
ಟಿಕ್—ಟಾಕ್ ವಾಚ್ 1ರ ಕ್ರಯ " 2—12—0

ಕಂಬ್ಯಾಂಡ್ ಬೆಸರ್ ಕ್ವಿಪ್ ಟ್ಯಾಮ್‌ಪೀಸ ಹಿತ್ತಾಳೆ ಅಥವಾ ನಿಕ್ಕಲ್ ಕ್ರಯ ರೂ. 6—0—0. ಇನೆಮಲ್ ರೂ. 7—0—0. ಫ್ರೆಂಚ್ ಬೆಡ್ ಫೋಟೋಗಳು ಡಜನ್ 1ರ ಕ್ರಯ ರೂ. 2—4—0.

Emarald Watch Co.,
P. T. MADRAS.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3—0—0
ಇತರರಿಗೆ ಪರಸ್ಥಳಕ್ಕೆ ಪೋಸ್ಟೇಜು ಸೇರಿ	" 2—8—0.
" ಸ್ಥಳೀಕರಿಗೆ ...	" 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

Registered: No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೯ನೇ ಶುಕ್ರವಾರ ಜುಲಾಯಿ ೧೯೨೬. ಸಂಚಿಕೆ ೨೮.

THE CANARA BANKING CORPORATION,
UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.	Branch:—COONDAPOOR.
ಹೆಡ್ ಆಫೀಸು:—ಉಡುಪಿ	ಶಾಖೆ:—ಕುಂದಾಪುರ.

ನಿಯಮಿತ ಮೂಲಧನ ರೂ. 3,50,000

ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

ತಾ. 28—2—26ಕ್ಕೆ ತೋರುವ ಸದರಿ ಬ್ಯಾಂಕಿನ ವಹಿವಾಟುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.		ಆಸ್ತಿ ವ ಸೊತ್ತುಗಳು.	
ವಸೂಲು ಕೊಟ್ಟ ಮೂಲಧನ	1,80,690—9—11	ಹಿತ್ತು ಕಟ್ಟೋಣ ಕಚ್ಚಿಣದ ಟ್ರಿಜರಿಗಳು ವಗೈರೆ	3943—8—0,
ರಿಜರ್ವ್ ವ ಇತರ ನಿಧಿಗಳು	75,875—0—0,	ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಟ್ಟದ್ದು	7,58,851-13-8,
ಠೇವಣಾತಿಗಳು	5,30,003-14-3,	ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	25,800—0—0,
ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕುಳವಾರಿಗಳಿಗೆ	4,700—0—0,	ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು	4,700—0—0,
ಐವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು	40,274—3—11,	ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ)	22,795—6—6,
		ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ	16,452—15—11,
ಜುಮ್ಲಾ ರೂ.	8,31,543-12-1	ಜುಮ್ಲಾ ರೂ.	8,31,543-12-1.

ನಿರಖು ಠೇವಣಾತಿಗಳನ್ನು ಕಾಲಕ್ಲೃಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸುಂ ಠೇವಣಾತಿಗಳನ್ನೂ ಕಂತು ಠೇವಣಾತಿಗಳನ್ನೂ ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನೂ ಸಾವುಕಾರಿ ಹುಂಡಿಗಳನ್ನೂ, ವಟ್ಟಾಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಐವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು,
ಉಡುಪಿ, ತಾ. 28—2—'26.

ನಯಂಪಳ್ಳಿ ಆನಂದರಾವ್, ಸೆಕ್ರೆಟರಿ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ಜಾಡ್ಯದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.
ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಚ್ಚುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.
109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಉಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ನಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

೧,೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು
— ತೆಗೆದುಕೊಳ್ಳಿರಿ. —

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ದಾರ್ಢ್ಯತೆಯನ್ನೂ ಉಂಟುಮಾಡುವುದು. ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಾಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್ ಸಿಂಗಪೂರ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿಯನ್ನು ೧೫ ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೪ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನು ಮಾಡುವವು. ಅನುಪಾನ ಪತ್ರಿಕೆಯು ಡಬ್ಬಿಯ ಸಂಗಡವೇ ಇರುತ್ತೆ. ಹೆಸರು ವಿಳಾಸಗಳನ್ನು ಚೆನ್ನಾಗಿ ತಿಳಿಯುವ ಹಾಗೆ ವಿವರವಾಗಿ ಬರಿಯಬೇಕು. ಕ್ರಯ ಡಬ್ಬಿ ೧ಕ್ಕೆ ರೂ. ೨—೦—೦.
ಟಪಾಲು ಖರ್ಚು ೧ ರಿಂದ ೩ ಡಬ್ಬಿಗಳವರೆಗೆ ೦—೫—೦.
ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಿರಿ.

ಟೆಲಿಗ್ರಾಫ್ ಅಡ್ರೆಸ್, "ಮಿಸ್ರಿ" ಬೆಂಗಳೂರು ಸಿಟಿ.
ಡಿ. ಮುನ್ನಾಲಾಲ್, ಹೋಲ್ ಸೇಲ್ ಡೀಲರ್, ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್ — ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀ ಯುವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂದ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ಬೈಲು ಬೆರ್ಚಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ಕಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕ ಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಹೊಸ ಮುದ್ರಣ! ಶುದ್ಧ ಪಾಠ!

ಶ್ರೀ ಶಂಕರ ಭಗವತ್ಪಾದಾಚಾರ್ಯ ಪ್ರಣೀತವಾದ

ಶಿವಾನಂದಲಹರಿ

ಎಂಬ

ಪರಮಶಿವನ ಸ್ತೋತ್ರವು.

ಪ್ರಶಂಸೆ: —

ಈ ಗ್ರಂಥದಲ್ಲಿ ಅಡಗಿರುವ ೧೦೦ ಶ್ಲೋಕಗಳ ಪೈಕಿ ಪ್ರತಿಯೊಂದು ಶ್ಲೋಕವೂ ಆರಿಸಿ ಪೋಣಿಸಿದ ಆಣಿಮುತ್ತುಗಳಂತೆ ಅತಿ ಶ್ಲಾಘ್ಯಗಳಾಗಿ ಶಬ್ದಾಲಂಕಾರ ಅರ್ಥಾಲಂಕಾರ ಭಾವರಸ ಲಕ್ಷಣಗಳಿಂದ ಕೂಡಿ ಓದುವವರ ಮನಸ್ಸಿನಲ್ಲಿ ಆನಂದವನ್ನು ಹುಟ್ಟಿಸುವುದಲ್ಲದೆ, ಉಪಾಸ್ಯದೇವರಲ್ಲಿ ನಿರತಿಶಯ ಭಕ್ತಿಯನ್ನು ಹುಟ್ಟಿಸುತ್ತದೆ. ಪ್ರತಿಯೊಂದು ಶ್ಲೋಕಕ್ಕೂ ಕೊಟ್ಟಿರುವ ಪ್ರತಿಪದಾರ್ಥಭಾವಾರ್ಥಗಳು ಸ್ತೋತ್ರದ ಅರ್ಥವನ್ನು ಪುಷ್ಟೀಕರಿಸಿ ಶ್ರದ್ಧೆಯನ್ನು ಹೆಚ್ಚಿಸುವುದರೊಡನೆ ಸಂಸ್ಕೃತ ಭಾಷಾಜ್ಞಾನವನ್ನುಂಟುಮಾಡುವುದು.

ಶ್ರೀ ಶಿವಗೀತಾ

ಟೀಕಾಸಹಿತವಾಗಿ ಪಂಡಿತರಿಂದ ಪರಿಶೋಧಿಸಲ್ಪಟ್ಟಿದೆ.

ಇದು ಪದ್ಮಪುರಾಣೋಕ್ತವಾದ ಬ್ರಹ್ಮವಿದ್ಯಾಪ್ರತಿಪಾದಕವಾದ ಉಪನಿಷದ್ರತ್ನವು. ಇದು ಶ್ರೀ ಭಗವದ್ಗೀತೆಯಂತೆ ಪಾರಾಯಣಾರ್ಹವಾದ ಗ್ರಂಥವು. ಗೀತೆಯ ಚರಮೋಪದೇಶವು ಇದರಲ್ಲಿರುವುದು.

ಪ್ರತಿಯೊಂದಕ್ಕೆ ಬೆಲೆ 0-8-0. ಟಪ್ಪಾಲು ಖರ್ಚು 0-2-0.

ಮೂರು ಪುಸ್ತಕಗಳ ಕ್ರಯವನ್ನು ಮುಂಗಡವಾಗಿ ಕಳುಹಿಸಿದರೆ ಟಪ್ಪಾಲುಖರ್ಚಿಲ್ಲದೆ ಕಳುಹಿಸಲ್ಪಡುತ್ತ.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕದ ವ್ಯಾಪಾರಿಗಳು,
ಚಿಕ್ಕಪೇಟೆ ಬೆಂಗಳೂರು ಸಿಟಿ.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಎಗ್ಯು ಮಿಕ್ಶ್ಚರ್ ಪಿಲ್ಸ್ — ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.
ಬಾಟ್ಲಿವಾಲರ ಕೆಪ್ ಆಪ್ ಬಾಮ್ — ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಟೈಫಾಯಿಡ ಮಿಕ್ಶ್ಚರ — ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
ಬಾಟ್ಲಿವಾಲರ ಕ್ವಿನೈನ ಚೀಟುಗಳು — ಒಂದು ಗ್ರೈನ ಅಥವಾ ಎರಡು ಗ್ರೈನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು — ಧಾತು ಪುಷ್ಟಿಕರ ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ಕಾರಿನಪತ್ರ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲ್ಯಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟಿ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

The Canara Pubic Conveyance Co., Ltd, Mangalore.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು —

ಮಂಗಳೂರು —
- ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರು
- ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
- ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
- ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
- ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು — ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು — ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು — ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂವತ್ಸರದ ಆಷಾಢ ಶು॥ ೧ ಶನಿವಾರದಿಂದ ಕ್ಷಯ ಸಂವತ್ಸರದ ಆಷಾಢ ಶು॥ ೭ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮಿಥುನ ಕಾರ್ತೆಲ್.)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಯೋಗ	ಸೂರ್ಯ ಉ.	ಸೂರ್ಯ ಅಸ್ತ.
10	ಶನಿ	೧	೬೦. ೦	ಪುನರ್ವಸು	೪೩.೫೯	೩೬	6.12	7. 0
11	ರವಿ	೧	೨. ೧	ಪುಷ್ಯ	೪೮.೪೬	೩೬	6 12	7. 0
12	ಸೋಮ	೨	೬. ೨	ಅಶ್ಲೇಷಾ	೫೫. ೦	೨೮	6.12	7. 0
13	ಕುಜ	೩	೧೦.೪೪	ಮಘಾ	೬೦. ೦	೨೯	6.12	7. 0
14	ಬುಧ	೪	೧೫.೨೮	ಮಘಾ	೧೧೪	೩೦	6.12	7. 0
15	ಗುರು	೫	೨೦.೧೪	ಹುಬ್ಬಾ	೬.೪೪	೩೧	6.13	7. 0
16	ಶುಕ್ರ	೬	೨೪.೩೧	ಉತ್ತರಾ	೧೩.೩೨	೩೨	6 13	7. 0

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿವಸದ ಮಳೆ	ಒಟ್ಟು ಮಳೆ.
2	80—6	74—2	1—03	—
3	82—8	75—2	1—07	—
4	88—1	75—4	0—68	—
5	83—1	74—0	1—25	—
6	84—5	77—2	0—64	—
7	84—8	73—8	3—80	—
8	83—8	73—2	2—91	45—48

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ	8 – 12	9 – 10
ಹೊಸ ಗುಡ್ಡು	8 – 8	8 – 12
ಸುಗ್ಗಿ	8 – 6	8 – 12
ಅವ್ವಲ್ ಬೆಳ್ತಿಗೆ	8 – 0	9 – 6
ರಂಗೂನು ಬೆಳ್ತಿಗೆ ಗೋಣಿ ೧	14 – 8	15 – 0
ಗೋದಿ ಗೋಣಿ ೧ಕ್ಕೆ	18 – 0	20 – 0
ಹುರುಳಿಗೋಣಿ ೧ಕ್ಕೆ	8 – 0	9 – 12
ಕಡಲೆಗೋಣಿ ೧ಕ್ಕೆ	13 – 0	14 – 8
ತೊಗರಿಗೋಣಿ ೧ಕ್ಕೆ	16 – 0	16 – 8
ತೊಗರಿಬೇಳೆ ಗೋಣಿ ೧ಕ್ಕೆ	19 – 0	26 – 0
ಉದ್ದುಗೋಣಿ ೧ಕ್ಕೆ	16 – 8	17 – 0
ಹೆಸರುಗೋಣಿ ೧ಕ್ಕೆ	16 – 0	17 – 8
ಊರು ಬೆಲ್ಲ ಖಂಡಿ ೧ಕ್ಕೆ	85 – 0	–
ಉಪ್ಪು ಗೋಣಿ ೧ಕ್ಕೆ	5 – 4	5 – 12
ಕೊಬ್ರಿ ಖಂಡಿ ೧ಕ್ಕೆ	96 – 0	100 – 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	34 – 8	35 – 0
ಎಳ್ಳಿಂಡಿ ಖಂಡಿ ೧ಕ್ಕೆ	45 – 0	47 – 8
ಕೊಬ್ರಿ ಎಣ್ಣೆ ಮಣ ೧ಕ್ಕೆ	7 – 10	8 – 10
ಎಳ್ಳೆಣ್ಣೆ ಮಣ ೧ಕ್ಕೆ	7 – 8	9 – 0
[illegible] ಎಣ್ಣೆ ಪೆಟ್ಟಿಗೆ ೧ಕ್ಕೆ	8-12-0	–
ಮಾರಿಸ ಸಕ್ಕರೆ ಮಣ ೧ಕ್ಕೆ	5 – 10	–
ಊರ ಮೆಣಸಿನಕಾಯಿ ಮಣ ೧ಕ್ಕೆ	7 – 0	–
ಸಾಸಿವೆ ಮುಡಿ ೧ಕ್ಕೆ	9 – 8	–
ಕೊತ್ತಂಬರಿ ಮುಡಿ ೧ಕ್ಕೆ	5 – 0	5 – 12
ಕಾಫಿ ಖಂಡಿ ೧ಕ್ಕೆ	385 – 0	460 – 0
[illegible] ಅಡಿಕೆ ಖಂಡಿ ೧ಕ್ಕೆ ಹಳತು	300 – 0	310 – 0
ಹೊಸ ಅಡಿಕೆ ಖಂಡಿ ೧ಕ್ಕೆ	195 – 0	220 – 0
ಕಾಳುಮೆಣಸು ಖಂಡಿ ೧ಕ್ಕೆ	360 – 0	–
[illegible] ಮಣ ೧ಕ್ಕೆ	50 – 0	64 – 0
ಗೇರುಬೀಜ ಮುಡಿ ೧ಕ್ಕೆ	4 – 0	–
[illegible] ಖಂಡಿ ೧ಕ್ಕೆ	45 – 0	65 – 0
[illegible] ಮಣ ೧ಕ್ಕೆ	16 – 4	16 – 12
[illegible] ಮಣ ೧ಕ್ಕೆ	21 – 0	–
[illegible] ಬೆಳ್ಳಿ ಸೇರು ೧ಕ್ಕೆ	18 – 10	
[illegible] ಮಣ ೧ಕ್ಕೆ	16 – 8	
ನಗ	13 – 9	

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ — ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ — ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಪ್ಪ, ಸೋಡಾ ಫ್ಯಾಕ್ಟರಿ,
ಮಂಗಳೂರು ಟವರಿಗೆ ಮಾತ್ರ.

ಟೇಬಲ್ ಟೈಂಪೀಸ್ ಮತ್ತು ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚ್ ಇನಾಂ.

ಈ ನಕ್ಷೆಯಲ್ಲಿ ಕಂಡ ರಾಯಲ್‌ಫೌಂಟೆನ್ ಪೇನಾವು ಇಂಗ್ಲಾಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಸ್ ಭಂಗಾರದ ನಿಬ್ಬು ಹಾಕಿದೆ. ಈ ಪೇನಾವಿನಿಂದ ಬರೆಯುವುದರಿಂದ ಅಕ್ಷರಗಳು ಬಹಳ ಚೆನ್ನಾಗಿ ಕಾಣುವವು. ಈ ಪೇನಾವನ್ನು ಬೇಗನೆ ತರಿಸಿಕೊಳ್ಳುವವರಿಗೆ ಮೇಲ್ಕಂಡ ಗಡಿಯಾರಗಳು ಇನಾಂ ಆಗಿ ಕೊಡುವೆವು.

ಗಡಿಯಾರಗಳಿಗೆ ಖಾತ್ರಿಯಾದ 4 ವರುಷಗಳ ಗ್ಯಾರಂಟಿ ಬರೆದುಕೊಡುವೆವು.



ಟೇಬಲ್ ಟೈಂಪೀಸ್ ಸಹಿತ ಪೇನಾ 1ಕ್ಕೆ 3—12—0.
ರೋಲ್ಡ್ ಗೋಲ್ಡ್ ರಿಸ್ಟ್ ವಾಚ್ ಸಹಿತ ಪೇನಾ 1ಕ್ಕೆ 6—4—0.

ವಿಳಾಸ:— ಅಮೇರಿಕನ್ ವಾಚ್ ಕಂಪೆನಿ.
ಪಿ. ಬಿ. ನಂ. 509, ಪಾರ್ಕ್‌ಟೌನ್, ಮದರಾಸು.

The American Watch Co.,
No. 509, Park Town, MADRAS.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲ 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

ಕನ್ನಡ ಪದ್ಯರತ್ನಾವಳಿ.

ಗ್ರಂಥಕರ್ತರು:— ಜಿ. ಎನ್. ಲಕ್ಷ್ಮಣ ಪೈ.

ಎಲ್ಲಾ ವಿದ್ಯಾರ್ಥಿಗಳ ಸಂಗ್ರಹಕ್ಕೆ ಯೋಗ್ಯವಾದ ಪದ್ಯ ಗ್ರಂಥ. ಇದು ಮದರಾಸು ಮತ್ತು ಮೈಸೂರು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಮಂಜೂರಾತಿ ಹೊಂದಿದೆ.

ಬೆಲೆ: 3½ ಆಣೆ.

ಶಾರದಾ ಛಾಪಖಾನೆ,
ಮಂಗಳೂರು.

WANTED.

Applications are invited from Mathematics Graduates for the post of a teacher in Sri Madanantheshwara Temple Higher Elementary School, Manjeshwar. Applications should reach the undersigned on or before the 31st instant. Candidates should apply with testimonials.

Manjeswar, 7th July 1926.

M. Narayana Pai
President,
Educational Board.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. 75/1926.

ದತ್ತಾತ್ರಿಯರಾವ್ ಮಂಜೇಶ್ವರ— ಅರ್ಜಿದಾರ.

ಮೇಲ್ಕಂಡ ಅರ್ಜಿದಾರನು ತನ್ನ ತಂದೆ ಮೃತಪಟ್ಟ ಮಂಜೇಶ್ವರ ನಾರಾಯಣರಾಯರಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಸೂಲುಮಾಡುವ ಬಗ್ಗೆ ತನಗೆ ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಮೇಲ್ಕಂಡ ಅರ್ಜಿ ದಾಖಲುಮಾಡಿರುತ್ತಾನೆ. ಸದರಿ ಅರ್ಜಿಯು ತಾ. 31—7—1926ಕ್ಕೆ ತನ್ನಿಗೆ ಇಟ್ಟಿದೆ. ಆದ್ದರಿಂದ ಈ ಸಮ್ಮಂಧ ಯಾರಾದರೂ ಆಕ್ಷೇಪಿಸುವವರಿದ್ದರೆ ತಮ್ಮ ಆಕ್ಷೇಪಗಳನ್ನು ಮೇಲ್ಕಂಡ ತಾರೀಕಿನ ಒಳಗೆ ಸದರಿ ಮೇಲ್ಕಂಡ ಕೋರ್ಟಿನಲ್ಲಿ ಹ್ಯಾಜೀರು ಮಾಡತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗಿರುತ್ತದೆ.

Mangalore. 7—7—1926.

Sundar Rau Ullal,
Vakil for Petitioner.

ಪ್ರಕಟಣೆ.

ಮುಂಬಾಯಿಯಲ್ಲಿರುವ ಸಾವುಕಾರ ಲಕ್ಷ್ಮೀದಾಸ ವಿಸಾಂಜಿಯವರ ಮಗ ಸಾವುಕಾರ ಮೂಲ್ಜಿ ಲಕ್ಷ್ಮೀದಾಸ ಶೇಟ್ ಇವರ ಪರವಾಗಿ ಮಂಗಳೂರು ಹ್ಯಾಕೋರ್ಟು ವಕೀಲ್ ಅಮ್ಮೆಂಬಳ ಶ್ರೀನಿವಾಸ ಪೈ ಸರ್ವ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಈ ಕೆಳಗೆ ವಿವರಿಸಿದ ಎಲ್ಲಾ ಸ್ಥಿರಾಸ್ತಿಗಳು ಮೇಲೆ ಹೆಸರುಕಾಣಿಸಿದ ನನ್ನ ಕಕ್ಷಿಗಾರ ರಾ| ಮೂಲ್ಜಿ ಲಕ್ಷ್ಮೀದಾಸ ಶೇಟ್ ಇವರ ಸಂಪೂರ್ಣ ಹಕ್ಕಿನದ್ದಾಗಿರುತ್ತಾವೆ. ವಿನಹ ಬೇರೆ ಯಾರೊಬ್ಬರಿಗೂ ಏನೊಂದೂ ಹಕ್ಕು ಇರುವುದಿಲ್ಲ. ಕಾರಣ ಸದರಿ ಆಸ್ತಿಗಳಾಗಲೀ ಯಾ ಅವುಗಳ ಪೈಕಿ ಹಲವು ಯಾವುದೊಂದು ಅಂಶವಾಗಲೀ ವ್ಯಾದೆಗೇಣಿ, ವ ಇತರ ಯಾವ ವಿಧದ ಪರಾಧೀನಗಳ ಮೂಲಕವಾದರೂ ಪರಾಧಾರೆ ಮಾಡುವ ಹಕ್ಕು ನನ್ನ ಕಕ್ಷಿಗಾರರದ್ದು ಆಗಿರುತ್ತದೆ. ವಿನಹಾ ಅನ್ಯರಿಗೆ ಇರುವುದಿಲ್ಲ. ರಾ| ಪುರುಷೋತ್ತಮ ಶೇಟ್ ನಾಂಜಿಯವರಿಂದಾಗಲೀ ಯಾ ಬೇರೆ ಯಾರೊಬ್ಬರಿಂದಲೂ ಪಡೆಯಬಹುದಾದ ವ್ಯಾದೆ ಗೇಣಿ ವಗೈರೆ ಪರಾಧೀನಗಳು ಸಿಂಧಾಗತಕ್ಕವುಗಳಲ್ಲ ಮತ್ತು ನನ್ನ ಕಕ್ಷಿಗಾರರಿಗೆ ಬಾಧಿಸತಕ್ಕವುಗಳಲ್ಲ. ಸದರಿ ಆಸ್ತಿಗಳಲ್ಲಿ ಯಾವುದನ್ನೂ ವ್ಯಾದೆಗೇಣಿಗೆ ಪಡಕೊಳ್ಳಲು ಅಪೇಕ್ಷಿಸುವವರು ಸದರಿ ಮೂಲ್ಜಿ ಲಕ್ಷ್ಮೀದಾಸ ಶೇಟ್ ವ ನನ್ನ ಕೂಡೆ ವಿಚಾರಿಸತಕ್ಕದ್ದು.

ಆಸ್ತಿಯ ತಪಸೀಲು.

ಮಂಗಳೂರು ಶಹರು ಗೋಳಿಕಟ್ಟೆ ವಾರ್ಡು ಕಸಬಾ ಬಜಾರು ಗ್ರಾಮಕ್ಕೆ ಒಪ್ಪಿದ ಆಸ್ತಿಗಳು:—

ಜಂಜ್ಯಾ ನಂಬ್ರ	ಟೌನ್ ಸರ್ವೆ ನಂಬ್ರ	ರೆವಿನ್ಯು ಸರ್ವೆ ನಂಬ್ರ	ಕೀರ್ವೆ ರೂಪಾಯಿ	ಕೀರ್ವೆ ಆಣೆ	ಪಟ್ಟಾ ನಂಬ್ರ
1	163	1172	1	9	590
2	174	1186	0	10	713
3	238	1248	1	1	590
4	244/1	1253	0	6	487
—	244/2	—	6	4	118
5	245	1254	0	15	591
6	246	1255	0	10	575
7	356	1366	0	6	288
8	365	1375	0	2	590
9	368	1378	0	12	59)
10	369	1379	0	4	590
11	370/B	1380	2	1	586
12	ವರ್ತಕ ವಿಲಾಸ 431	1441	5	1	590
13	454	1463	0	8	590
14	527	1537	0	12	590
15	528	1538	3	7	541

ಮಂಗಳೂರು ಶಹರು ಕೊಡಿಯಾಲ್ ಬೈಲ್ ವೆಸ್ಟ್ ವಾರ್ಡಿಗೆ ಸೇರಿದ ಆಸ್ತಿಗಳು:—

16	199	366	2	12	141

ಮಂಗಳೂರು ತಾಲೂಕು ಮಾನಂಪಾಡಿ ಗ್ರಾಮದ ಬಾಬ್ತು ಆಸ್ತಿಗಳು:—

17	—	11/14	1	7	72

ಮೇಲಿನ ಜಂಜ್ಯಾ ನಂಬ್ರ 1ರಿಂದ 17ನೇ ವರೆಗಿನ ಆಸ್ತಿಗಳಲ್ಲಿ ಇರುವ ಮನೆ, ಭಂಡಸಾಲೆ, ಗೋದಾಮು ವ ಇತರ ಕಟ್ಟೋಣ ವಗೈರೆ ಸರ್ವಾಧಿ.

ಮಂಗಳೂರು, 27—6—1926 } *A. Srinivasa Pai,* ಹ್ಯಾ ಕೋರ್ಟ್ ವಕೀಲ್.

ಬೇಕಾಗಿದ್ದಾರೆ.

ಮಂಗಳೂರು ಮತ್ತು ನೆರೆಜಿಲ್ಲೆಗಳಲ್ಲಿ ಜೀವವಿಮೆ ಸಂಘದ ಕೆಲಸವನ್ನು ಉತ್ಸಾಹದಿಂದ ನಿರ್ವಹಿಸುವ ಏಜಂಟರು ಬೇಕಾಗಿದ್ದಾರೆ. ತುಂಬಾ ಕಮಿಷನ್ ಕೊಡಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ಇಂಗ್ಲೀಷಿನಲ್ಲಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

The Secretaries,
The East & West Insurance Co. Ltd.,
65, APOLLO STREET,
FORT BOMBAY.

(8)

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು—

ಸರ್ವಿಸಿನ ಹೆಸರು.	ತಲಪುವ ಸ್ಥಳ.	ಹೊರಡುವ ಘಂಟೆ.
ಜನರಲ್	ಕಾರ್ಕಳ—ಆಗುಂಬೆ—ತೀರ್ಥಹಳ್ಳಿ	ಪೂ. $6\frac{1}{2}$
ಸಿ. ಪಿ. ಸಿ.	ಉಡುಪಿ—ಕುಂದಾಪುರ—ಬೈಂದೂರು	„ $6\frac{3}{4}$, $9\frac{3}{4}$
	ಉಡುಪಿ	ಮ. $1\frac{3}{4}$
	ಮುಲ್ಕಿ ವರೆಗೆ ಮಾತ್ರ	ಅ. $3\frac{3}{4}$
	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ.	ಪೂ. 7, ಮ. 1
	ಕಾರ್ಕಳ—ವೇಣೂರಿನಿಂದ	
	ಬಂಟ್ವಾಳಕ್ಕೆ ಮಾತ್ರ	„ $10\frac{3}{4}$, ಅ. $4\frac{3}{4}$
	ಪುತ್ತೂರು—ಸಂಪಾಜೆ—ಮಡಿಕೇರಿ	„ $7\frac{1}{2}$
	ಪುತ್ತೂರು	ಪೂ. $10\frac{1}{2}$ ಅ. 2
ಕಾರ್ಕಳ	ಕಾರ್ಕಳ—ಉಡುಪಿ—ಕುಂದಾಪುರ	ಪೂ. 6
	ಕಾರ್ಕಳಕ್ಕೆ ಮಾತ್ರ	ಅ. 1
ಹನುಮಾನ್	ಕಾರ್ಕಳ—ಉಡುಪಿ—ಕುಂದಾಪುರ	ಪೂ. 7
	ಕಾರ್ಕಳಕ್ಕೆ ಮಾತ್ರ	ಮ. 12
ಕಂಕರ್ ವಿಟ್ಠಲ್	ಪುತ್ತೂರು—ಮಡಿಕೇರಿಗೆ	ಪೂ. 7
	ಪುತ್ತೂರು—ಉಪ್ಪಿನಂಗಡಿ	ಅ. $1\frac{1}{2}$
	ವಿಟ್ಲಕ್ಕೆ	ಪೂ 8, ಅ. $2\frac{1}{2}$
	ಉಡುಪಿ	ಪೂ. $7\frac{1}{2}$ ಅ. $1\frac{1}{2}$
ಸ್ಟಾರ್	ಮುಲ್ಕಿ—ಉಡುಪಿ	„ 7, ಮ. 1
	ಬಂಟ್ವಾಳ	„ $10\frac{1}{2}$, ಅ. $4\frac{1}{2}$
ಇಂಡಿಯನ್	ಮುಲ್ಕಿ—ಉಡುಪಿ.	„ $6\frac{1}{2}$, ಮ. $12\frac{1}{2}$
ಪೂಕ್ಯೆಲರ್	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ	ಪೂ $7\frac{1}{2}$ ಮ $12\frac{1}{2}$

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ—

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲ್	ಬೆಳಗ್ಗೆ 8-5	ಸಂಜೆ 5-25
ಲೋಕಲ್	„ 9-45	ರಾತ್ರಿ 10-40
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-30	ಮಧ್ಯಾಹ್ನ 2-40
ಶೆಟಲ್	ಸಂಜೆ 5-40	ಬೆಳಗ್ಗೆ 9-2

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟಿನಲ್ಲಿ

I. P. No. 5 of 1924

I. A. No. 38 of 1926

ಪಿ. ರಂಗಪ್ಪ ಕಮ್ತಿ — ಅರ್ಜಿದಾರ

ಮತ್ತು

1. ವೆಂಕಟ್ರಾಯ ಬಾಳಿಗಾ
2. ಪೆರಗುತ್ತು ಶ್ರೀನಿವಾಸ ಪ್ರಭು
3. ಮಾಧವ ಬಾಳಿಗಾ
4. ಚಂದು ಬಾಳಿಗಾ
5. ನರಸಿಂಹ ಭಂಡಾರಿ

} ರಿಸ್ಪೊಂಡೆಂಟರು.

ಮೇಲ್ಕಂಡ ಕೋರ್ಟಿನಲ್ಲಿ ತನಗೆ ಡಿಸ್ಚಾರ್ಜು ಕೊಡಬೇಕೆಂತ ಅರ್ಜಿದಾರನು ದಾಖಲ್ಲು ಮಾಡಿದ I. A. No. 38/26 ರನ್ನು ತನ್ನಿ ಬಗ್ಗೆ ತಾ. 18—8—1926ಕ್ಕೆ ಇಟ್ಟಿದೆ. ಆಕ್ಷೇಪ ಇದ್ದವರು ಅವರವರ ಆಕ್ಷೇಪಣೆಗಳನ್ನು ಸದರಿ ತಾರೀಕಿಗೆ ಸದರಿ ಕೋರ್ಟಿನಲ್ಲಿ ಪೂರ್ವಾಹ್ನ 11 ಘಂಟೆಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

Mangalore, 9—7—1926. } M. Ramakrishnachar, *Vakil for petitioner.*

ವಿವಿಧ ವಿಷಯಗಳು.

ಜರ್ಮನ ಬಣ್ಣಗಳು.

ಈಗ ಮಾರಾಟಕ್ಕಿರುವ ಜರ್ಮನ ಬಣ್ಣಗಳು ೧೯೧೩ರಲ್ಲಿ ಮಾರಾಟಕ್ಕಿರುವ ಬಣ್ಣಕ್ಕಿಂತ ಅನೇಕ ಪಾಲು ಕಡಿಮೆಯಾಗಿದ್ದರೂ ಜರ್ಮನಿಯವರು ತಮ್ಮ ಬಣ್ಣದ ಕೈಗಾರಿಕೆಯ ವ್ಯಾಪಾರವನ್ನು ವೃದ್ಧಿಪಡಿಸಲು ಸಾಧಿಸುತ್ತಿರುವರು. ಯುದ್ಧದ ಸಮಯ ಜರ್ಮನ ಬಣ್ಣದ ವ್ಯಾಪಾರವು ಬ್ರಿಟಿಷ ರಾಜ್ಯದಲ್ಲಿಯೂ ಇತರ ರಾಜ್ಯಗಳಲ್ಲಿಯೂ ಬಿದ್ದು ಹೋಗಿತ್ತು.

ಯುದ್ಧದ ನಂತರ ವ್ಯಾಪಾರವನ್ನು ವೃದ್ಧಿಪಡಿಸುವುದಕ್ಕೆ ಸುಲಭ ಕರ್ಚಿನಿಂದ ಈ ಬಣ್ಣಗಳನ್ನು ಉಂಟುಮಾಡಿ ಗುಣವನ್ನು ಮುಂಚೆಗಿಂತಲೂ ವೃದ್ಧಿಪಡಿಸಿ ಬೇರೆ ಎಲ್ಲಾ ದೇಶಗಳ ಬಣ್ಣಗಳಿರುವ ಕ್ರಯಕ್ಕಿಂತಲೂ ಕಡಿಮೆ ಕ್ರಯಕ್ಕೆ ಮಾರಿ ತಮ್ಮ ವ್ಯಾಪಾರವನ್ನು ವೃದ್ಧಿಪಡಿಸಬೇಕೆಂದು ಸಾಧನೆಯು ಇದೆ. ಯುದ್ಧದ ಮುಂಚೆ ಭೂಲೋಕದಲ್ಲಿ ಖರ್ಚಾಗುವ ಬಣ್ಣದಲ್ಲಿ ಮುಕ್ಕಾಲುಪಾಲು ಬಣ್ಣವು ಜರ್ಮನ ದೇಶದ್ದಾಗಿತ್ತು. ಇನ್ನು ಪರದೇಶಗಳಲ್ಲಿದ್ದ ಜರ್ಮನ ಕಾರ್ಖಾನೆಗಳಲ್ಲಿ ತಯಾರಾಗುತ್ತಿದ್ದ, ಸೇಕಡಾ ೧೩ರ ಪಾಲನ್ನು ಕಡಿದು ೮೭ ಪಾಲು ಬಣ್ಣವು ಜರ್ಮನಿಯದಾಗಿತ್ತು.

೧೯೧೩ರಲ್ಲಿ ೨೬,೩,೦೦೦ ಟನ್ ಬಣ್ಣವು ಹೊರಗೆ ಹೋಗಿತ್ತು. ಇದರ ಕ್ರಯವು ೧೧,೯೦೦,೦೦೦ ಪೌಂಡುಗಳಾಗಿತ್ತು. ಇದರಲ್ಲಿ ಸೇಕಡಾ ೫೦ ಪಾಲು ಬಣ್ಣವು ಬ್ರಿಟನಿಗೂ, ಯುನೈಟೆಡ್ ಸ್ಟೇಟಿಗೂ, ಚೈನಕ್ಕೂ, ಓಸ್ಟ್ರಿಯಾ ಹಂಗೇರಿಗೂ, ಜಪಾನಿಗೂ ಹೋಗಿತ್ತು. ಎನಿಲ್ಯಾನ್, ಸಲ್ಫರ್ ಎಲಿಜರಿನ್ ಮತ್ತು ಇಂಡಿಗೊ ಬಣ್ಣಗಳು. ಹೊರಗೆ ಕಳುಹಿಸಿದ ಬಣ್ಣಗಳಲ್ಲಿ ಸೇಕಡಾ ೯೧ರ ಪ್ರಕಾರ ಇದ್ದವು.

ಮಾರ್ಕೆಟುಗಳು,	ಬಣ್ಣಗಳ ಲೆಕ್ಕವು.	
	ಟನ್,	ಟನ್,
ರಪ್ತಾದ ಬಣ್ಣಗಳು	೧೯೧೩,	೧೯೨೪,
ಗ್ರೇಟ ಬ್ರಿಟನಿಗೆ	೪೫೬,೪೯,	೧೬,೨೨೧.
ಯುನೈಟೆಡ್ ಸ್ಟೇಟ್ಸಿಗೆ	೨೯೯೯೨,	೭೫೮೯.
ಚೈನಾ ದೇಶಕ್ಕೆ	೨೯೮೧೦,	೧೪೧೧೧೬.
ಜಪಾನಿಗೆ	೫೧೦೩,	೨೨೦೬.
ಓಸ್ಟ್ರಿಯಾ ಮತ್ತು ಹಂಗೇರಿ ೨೦೦೯೫,		೧೯೪೦.

ಯುನೈಟೆಡ್ ಸ್ಟೇಟ್ಸಿಗೆ ಹೋಗುವ ಜರ್ಮನ ಬಣ್ಣ ವಿಧಿಸಿದ್ದರೂ ಏನೊಂದೂ ಪ್ರಯೋಜನವಾಗದೆ ಜಪಾನಿನಲ್ಲಿ ಜರ್ಮನ ಬಣ್ಣವೇ ಹೆಚ್ಚಾಗಿ ಖರ್ಚಾಗುತ್ತದೆ.

∴ ∴ ∴

ಎಳೆ ಬಿದುರು ಇಲ್ಲವೆ ಕಳಲೆ.

ನಮ್ಮ ಜಿಲ್ಲೆಯ ಮೂಡುಸೀಮೆಗಳ ಮಲೆಗಳಲ್ಲಿರುವ ಬಿದುರುಗಳಿಗೆ ಸುಮಾರು ೧೦ ವರ್ಷದಿಂದ ಹೂವು ಹೋಗಿ ಒಮ್ಮೆಗೆ ಎಲ್ಲ ಬಿದುರುಗಳು ನಾಶವಾದವು. ಇದು ಸರಕಾರದವರ ಅವಗಾಹನೆಗೆ ಹೋಗಿ ಈಗ ಒಂದು ಸರ್ಕ್ಯುಲಾರು ಹೊರಡಿಸಿರುತ್ತಾರಂತೆ. ಬಿದುರು ಅಥವಾ ಕಳಲೆಯನ್ನು ಸರ್ಕಾರಿ ಸ್ಥಳಗಳಿಂದ ಕಡಿಯಬೇಕಾದರೆ ಉತ್ತಿಕಾಣಿಕೆ ಕಟ್ಟಿ ತೆಗೆಯಬೇಕಂತೆ. ವರ್ಗದಿಂದ ತೆಗೆಯಬೇಕಾದರೆ ಪರವಾನಿಟು ವಿನಹಾ ತೆಗೆದು ಮಾರಾಟಮಾಡಿದರೆ ಫೊರೆಸ್ಟು ಕಾನೂನು ಮೇರೆಗೆ ಶಿಕ್ಷೆಗೆ ಗುರಿಯಾಗುವರೆಂದು ಪ್ರತಿ ಪಟೇಲರ ಚಾವಡಿನಲ್ಲಿ ಉಂಟಂತೆ. ಇಂಥಾ ಕಾನೂನು ಒಮ್ಮೆಗೆ ಕೆಲವು ವರ್ಷಗಳ ಹಿಂದೆ ಇದ್ದದ್ದನ್ನು ಸಡಿಲುಮಾಡಿದ್ದರಿಂದಲೂ ಜನರು ಪೇಟೆ ಪಟ್ಟಣಗಳಿಗೆ ಸಾದೆ ಹೊರೆಗಳಂತೆ ಬಹಿರಂಗವಾಗಿ ಮಾರುತ್ತಿದ್ದದರಿಂದಲೂ ನೂರಕ್ಕೆ ೧೫ರೂಪಾಯಿ ಕ್ರಯದ ಬದಿಗೆ ಈಗ ರೂ. ೫೦ ಆಗಿದೆ. ಆದ್ದರಿಂದ ಈ ಕಾನೂನು ಜಾರಿಗೆ ಬಂದದ್ದು ಸ್ವಸ್ತವೇ ಸರಿ.

∴ ∴ ∴

ಮಂಗಳೂರು ಹಾಸನ ಮತ್ತು ಮಂಗಳೂರು ಮಲ್ಪೆ ರೈಲು ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಸೆಂಕ್ಷನಾಯಿತು.

ಅರಸಿಕೆರೆ ಮಂಗಳೂರು ರೈಲ್ವೆಯನ್ನು ಮಾಡಿಸಬೇಕೆಂಬ ಠರಾವು ೩೫ ವರುಷಗಳ ಹಿಂದೆ ಪಾಸಾಗಿ ಮಂಗಳೂರು ಫರಂಗಿಪೇಟೆ, ಬಂಟ್ವಾಳ, ಉಪ್ಪಿನಂಗಡಿ, ಶಿರಾಡಿ—ಸಕಲೇಶಪುರ ದಾರಿಯಾಗಿ ಹಾಸನಕ್ಕೂ ಅಲ್ಲಿಂದ ಅರಸಿಕೆರೆಗೂ ಮಾರ್ಗವು ಸರ್ವೆಯಾಗಿ ಅಲ್ಲಲ್ಲಿ ಗೂಟಗಳನ್ನು ಹೊಡೆದು ಬಿಟ್ಟರು. ಅನಂತರ ಅದರ ಸುದ್ದಿಯೇ ಹೋಯಿತು. ಅನಂತರ ಯುದ್ಧದ ಮೊದಲಿನ ವರ್ಷ ಮಂಗಳೂರಿನಿಂದ ಪಾಣೆಮಂಗಳೂರು ವರೆಗೆ ಮಾರ್ಗವು ಸೆಂಕ್ಷನಾಗಿ ಅದರ ಸಂಪೂರ್ಣ ಕೆಲಸವು ಮುಗಿಯಿತು. ಯುದ್ಧವು ಶುರುವಾದೊಡನೆ ಈ ಆಲೋಚನೆಯು ಹಣವೆಡಚಣೆಯಿಂದ ಮೂಲೆಗೆ ಬಿತ್ತು. ಯುದ್ಧವು ಮುಗಿದ ಮೇಲೆ ನಮ್ಮ ಡಿಸ್ಟ್ರಿಕ್ಟ ಬೋರ್ಡಿನವರು ಈ ಆಲೋಚನೆಯನ್ನು ಮುಂದಕ್ಕೆ ತಂದರೆ ಈ ಕೆಲಸವು ಇಷ್ಟರೊಳಗೆ ಆಗುತಿತ್ತು. ತಂಜಾವೂರು ದಕ್ಷಿಣಾರ್ಕಾಡು, ಮಧುರೆ ಕೊಯಮುತ್ತೂರು, ಮಲಬಾರು ಜಿಲ್ಲೆಯವರು ಎಷ್ಟೋ ಮಾರ್ಗಗಳನ್ನು ಮಾಡಿಸಿದರು. ನಮ್ಮ ಡಿಸ್ಟ್ರಿಕ್ಟ ಬೋರ್ಡಿನವರು ಈ ರೈಲ್ವೆಯ ಗೋಜಿಗೆ ಹೋಗದಿದ್ದರೂ ಮೈಸೂರು ಸರಕಾರದವರು ಅರಸಿಕೆರೆಯಿಂದ ಹಾಸನ ವರೆಗೆ ರೈಲುವೇ ಲೈನು ಹಾಕಿಸಿದರು ಹಾಸನದಿಂದ ಮೈಸೂರಿಗೆ ಲ್ಯಾನು ಹಾಕಿಸಿದರು.

ಈಗ ನಮ್ಮ ಜಿಲ್ಲೆಯ ಡಿಸ್ಟ್ರಿಕ್ಟ ಬೋರ್ಡಿಗೆ ಹೊಸ ಪ್ರೆಸಿಡೆಂಟರು ಬಂದಿರುವರು. ಇವರು ಬಂದ ಕೂಡಲೇ ಇಷ್ಟರ ವರೆಗೆ ಮೂಲೆಗೆ ಹಾಕಿದ ಈ ಆಲೋಚನೆಯನ್ನು ಮುಂದಕ್ಕೆ ತಂದು ಇದನ್ನು ಸೆಂಕ್ಷನ್ ಮಾಡಿದ್ದು ಸ್ತುತ್ಯವಾಗಿದೆ. ಸೆಂಕ್ಷನ್ ಮಾಡಿದ ಕೂಡಲೇ ರೈಲು ಆಯಿತೆಂದು ಹೇಳಲಿಕ್ಕಾಗುವುದಿಲ್ಲ. ಮನಃಪೂರ್ವಕವಾಗಿ ಸರ್ವೆ ಕೆಲಸವನ್ನು ಸುಸ್ತಿ ಇಲ್ಲದೆ ಶುರುಮಾಡಿ ಮಾರ್ಗಮಾಡಿಸುವ ಕೆಲಸವನ್ನು ಮಾಡಿಸಲಿಕ್ಕೆ ಕೈಹಚ್ಚಬೇಕು. ಸರ್ವೆಯನ್ನು ಮೇಲೆ ಮೇಲೆ ಮಾಡಿದರಾಯಿತು. ಯಾಕೆಂದರೆ ಎರಡು ಸಾರಿ ಸರ್ವೆ ಮಾಡಿ ಸಾವಿರಗಟ್ಲೆ ರೂಪಾಯಿ ಖರ್ಚುಮಾಡಿ ತಯಾರಿಸಿದ ಪ್ಲೇನುಗಳೂ ಎಸ್ಟಿಮೇಟುಗಳೂ ದಫ್ತರಿನೊಳಗೆ ಇವೆ. ಅವುಗಳನ್ನು ಹೊರಗೆ ತೆಗೆದು ಪುನರಾಲೋಚಿಸಿದರಾಯಿತು. ಎಸ್ಟಿಮೇಟು ಸ್ವಲ್ಪ ಹೆಚ್ಚಾಗಲಿಕ್ಕೆ ಸಾಕು.

ಈ ಕೆಲಸವನ್ನು ಬೇಗನೇ ಶುರುಮಾಡಬೇಕೆಂಬದಕ್ಕೆ ಹಲವು ಕಾರಣಗಳಿವೆ. ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರ ಕೆಲಸದ ಅವಧಿಯು ಮೂರು ವರ್ಷಮಾತ್ರವೇ ಇದೆ. ಇಷ್ಟು ಉತ್ತೇಜನವೂ ಹಟಸಾಧನೆಯೂ ಇರುವ ಪ್ರೆಸಿಡೆಂಟರು ಇನ್ನೊಂದಾವರ್ತಿ ಬಂದರಾಯಿತು. ಹೆಸರಿಗೆ ತಕ್ಕ ಕೆಲಸ ಮಾಡುವ ಪ್ರೆಸಿಡೆಂಟರು ಇನ್ನೊಬ್ಬರು ಯಾರಾದರೂ ಬಂದರೆ ಕೆಲಸವು ಮೂಲೆ ತಳ್ಳಲ್ಪಡುವುದು. ಆದುದರಿಂದ ಮಾನ್ಯ ಪ್ರೆಸಿಡೆಂಟರಾದ ರಾವ್‌ಸಾಹೇಬ ಮಹಾಬಲ ಹೆಗ್ಗಡೆಯವರೇ ಈ ಎರಡು ರೈಲುಮಾಡಿಸಿ ಅವರೇ ಈ ರೈಲುಮಾರ್ಗಗಳನ್ನು ತೆರೆಯುವ ಸಮಾರಂಭವನ್ನು ಮಾಡಿ ಕೀರ್ತಿಪಡೆಯಬೇಕೆಂದು ಹಾರೈಸುತ್ತೇವೆ.

∴ ∴ ∴

ಡಿಸ್ಟ್ರಿಕ್ಟ ಬೋರ್ಡಿನವರು ಮಾಡಬೇಕಾದ ಕೆಲಸಗಳು.

(೧) ಒಂದು ಡಿಸ್ಟ್ರಿಕ್ಟ ಬೋರ್ಡಿನ ಸರಹದ್ದಿನೊಳಗಿರುವ ಎಲ್ಲಾ ಹೆದ್ದಾರಿಗಳನ್ನು ಮಾಡಿಸುವುದೂ ಅವುಗಳನ್ನು ದುರುಸ್ತಿಪಡಿಸುವುದೂ, ಆ ಮಾರ್ಗಗಳಲ್ಲಿರುವ ಹೊಳೆಗಳಿಗೂ, ತೋಡುಗಳಿಗೂ, ಸೇತುವೆಗಳನ್ನು, ಕಲ್ವಟ್ಟುಗಳನ್ನು ಮಾಡಿಸುವುದು. ಆ ಮಾರ್ಗಗಳಲ್ಲಿ ಪ್ರಯಾಣಸ್ಥರಿಗಾಗಿ ಬಂಗ್ಲೆಗಳನ್ನು ಕಟ್ಟಿಸಿ ಅವುಗಳ ಮೇಲ್ವಿಚಾರವನ್ನು ನೋಡಿ ಅವುಗಳು ಹಾಳಾಗದಂತೆ ಪ್ರತಿ ವರುಷವೂ ದುರುಸ್ತಿಪಡಿಸುವುದು.

(೨) ಈ ಮಾರ್ಗಗಳಲ್ಲಿ ಸಾಲುಮರಗಳನ್ನಿಟ್ಟು ಅವುಗಳ ನಿಗ್ರಾಣಿ ನೋಡುವುದು.

(೩) ರೈಲುಮಾರ್ಗಗಳನ್ನು, ಟ್ರೇಮ್ ಮಾರ್ಗಗಳನ್ನು, ಮೋಟರ ಬಸ್ ಸರ್ವಿಸ ಮುಂತಾದವುಗಳನ್ನು ಮಾಡಿಸಿ ಪ್ರಯಾಣಕ್ಕೂ ವ್ಯಾಪಾರಕ್ಕೂ ಅನುಕೂಲಮಾಡಿಕೊಡುವುದು.

(೪) ಸೆಕೆಂಡರಿ ಶಾಲೆಗಳನ್ನು, ಟ್ರೈನಿಂಗ್ [illegible] ಸ್ಥಾಪಿಸುವುದು.

(ಇನ್ನೂ ಬೇರೆಗೆ ಮುಂದುವರಿಸಿಯದೆ)

ಸ್ಫುಟ ವಿಚಾರಗಳು.

ಬಂಗಾಳದ ಶುಭವಾರ್ತೆ.

ಬಂಗಾಳದಲ್ಲಿ, ಹಿಂದೂ-ಮುಸಲ್ಮಾನ ಸಂಬಂಧವಾಗಿ ದೇಶಬಂಧು ದಾಸರು ಮಾಡಿದ ರಾಜಿಗೆ, ಈಗಿನ ಹಿಂದೂ-ಮುಸಲ್ಮಾನ ಕಲಹಗಳಿಂದ ನಿರೋಧವುಂಟಾಗಿ, ಬಂಗಾಳದ ಕಾಂಗ್ರೆಸ್ ಕೆಲಸಗಾರರೊಳಗೆ ಇಬ್ಬಣವಾಯಿತು. ಈ ರಾಜಿಯ ಪರವಾಗಿ ಶ್ರೀಯುತ ಸೇನಗುಪ್ತ, ಇದರ ವಿರೋಧವಾಗಿ ಶ್ರೀಯುತ ಗೋಸ್ವಾಮಿಗಳೂ ಧುರೀಣರಾಗಿ ತಮ್ಮ ತಮ್ಮ ಉದ್ದೇಶಕ್ಕಾಗಿ ಕೃಷ್ಣಗರ ಪ್ರಾಂತಿಕ ಪರಿಷತ್ತಿನಲ್ಲಿಯೂ, ಪ್ರಾಂತಿಕ ಕಾಂಗ್ರೆಸ್ ಕಮಿಟಿಯಲ್ಲಿ ವಾದಕಟ್ಟಿ, ಕಡೆಗೆ ಸೇನಗುಪ್ತರೇ ವಿಜಯಿಗಳಾದರು. ಶ್ರೀಯುತ ಗೋಸ್ವಾಮಿಗಳೂ ಇತರ ತರುಣ ಪ್ರಮುಖರೂ ಪ್ರತ್ಯೇಕವಾಗಿ "ಕರ್ಮಿ ಸಂಘ" ಅಥವಾ ಕೆಲಸಗಾರರ ಸಂಘವೆಂದು ಮಾಡಿದರು. ಈ ತರದಲ್ಲಿ ಕಾಂಗ್ರೆಸ್ ಬಂಗಾಳದಲ್ಲಿ ಅಂತಃಕಲಹಗಳಿಂದ ಶಕ್ತಿಗುಂದುತ್ತಿರುವುದನ್ನು ನೋಡಿ, ಶ್ರೀಯುತ ಶ್ರೀನಿವಾಸ ಐಯ್ಯಂಗಾರ, ಶ್ರೀಮತಿ ಸರೋಜಿನಿ ದೇವಿ ಇವರೇ ಕೂಡಿ, ಎರಡು ಬಣಗಳೊಳಗೆ ರಾಜಿಮಾಡಲು ಪ್ರಯತ್ನಿಸಿದರು. ಅವರ ಪ್ರಯತ್ನಗಳು ಬಂಗಾಳದ ಧುರೀಣರ ಮತ್ತು ಕೆಲಸಗಾರರ ಸೌಹಾರ್ದವೂ ಈ ರಾಜಿಯನ್ನು ಸಾಧ್ಯವಾಗಿ ಮಾಡಿದುದು ಅಭಿನಂದನೀಯ. ಈಗ ಎಲ್ಲಾ ಪ್ರಾಂತ್ಯಗಳಲ್ಲಿ ಬಂಗಾಳ ಪ್ರಾಂತ್ಯದಲ್ಲಿಯೇ ಕಾಂಗ್ರೆಸ್ ಬಲವಾಗಿದೆ. ಈ ಪ್ರಾಂತ್ಯದಲ್ಲಿಯೇ ಕಾಂಗ್ರೆಸ್ ಅಂತಃಕಲಹಗಳಿಂದಲೇ ಅಂತಹೀನವಾಗುವುದೆಂದರೆ ಸಹನೀಯವಲ್ಲದ ವಿಷಯ. ಬಂಗಾಳ ಕೆಲಸಗಾರರು ತಮ್ಮ ಹಠ ಪ್ರತಿಪಾದನೆಯಲ್ಲಿಯೇ ಆಸಕ್ತರಿರದೆ, ಕಾಂಗ್ರೆಸಿನ ಅಭಿಮಾನವನ್ನು ತಾಳಿ ತಮ್ಮ ತಮ್ಮ ಭೇದಗಳನ್ನು ಮರೆತುದಕ್ಕಾಗಿ ಕಾಂಗ್ರೆಸ್ ಹಿತಕಾಂಕ್ಷಿಗಳೆಲ್ಲರೂ ಅವರನ್ನು ಪ್ರಶಂಸಿಸಬೇಕು. ನೌಕರಶಾಹಿಯ ಶಕ್ತಿಯು ದಿನೇ ದಿನೇ ಹೆಚ್ಚುತ್ತಲೂ, ಪ್ರಜಾ ಜನತೆಯ ಅಂತಃಕಲಹಗಳಿಂದ ಕುಗ್ಗುತ್ತಲೂ ಬರುತ್ತಿರುವ ಈ ಸಮಯದಲ್ಲಿ ಕಾಂಗ್ರೆಸ್ ತನ್ನನ್ನು ತಾನೇ ವಿಭಾಗಿಸಿಕೊಳ್ಳುವುದು ಅವಿವೇಕದ ಪರಮಾವಧಿಯಾಗಿದೆ. ಬಂಗಾಳ ಕಾಂಗ್ರೆಸ್ ಸದಸ್ಯರು ಈ ವಿಚಾರಕ್ಕೆ ಎಚ್ಚೆತ್ತುದುದೇ ನಮ್ಮ ಸಂತೋಷದ ವಿಷಯ.

ಸ್ವೇಚ್ಛಾ ಸೇವಕರು.

ಪರಸೇವೆಯು ಮನುಷ್ಯ ಸ್ವಭಾವದ ಒಂದಂಶವಾಗಿದೆ. ಪರಸೇವೆಯಲ್ಲಿ, ಪ್ರತಿಫಲವಿಲ್ಲದ ಪರಸೇವೆಯಲ್ಲಿ ಒಂದು ತರದ ಸುಖವಿದೆ. ಆದರೆ ಮನುಷ್ಯನ ಸಂಸಾರದ ತಾಪತ್ರಯಗಳು ಮನಸ್ಸಿನಲ್ಲಿ ತಲೆದೋರುವ ಸ್ವಾರ್ಥವೂ ಮಾತ್ರ ಈ ಭಾವನೆಯನ್ನು ಕಳೆದು ಹಾಕಿ ಸೇವೆಯಿಂದ ಹಿಂದೆ ಸರಿಯುವಂತೆ ಮಾಡುತ್ತಿದೆ. ಆದುದರಿಂದ ಸ್ವಯಂಸೇವಕ ದಳಗಳ ಸಂಘಟನೆಯು ಕಾರ್ಯಕಾರಿಯಾಗಬೇಕಾದರೆ ಜನಾಂಗದ ವ್ಯಕ್ತಿಗಳು ಸಂಸಾರ ಸುಖವುಳ್ಳವರೂ, ಸ್ವಾರ್ಥವನ್ನು ದೂರಮಾಡಬಲ್ಲವರೂ ಆಗಿರಬೇಕು. ಇಂತಹ ವ್ಯಕ್ತಿಗಳ ಅಭಾವವಿದ್ದುದರಿಂದ ಹಿಂದೂಸ್ಥಾನದಲ್ಲಿ ಸ್ವಾರ್ಥತ್ಯಾಗವನ್ನೂ, ಆತ್ಮಯಜ್ಞವನ್ನೂ ಮಾಡಬಲ್ಲ ಸ್ವೇಚ್ಛಾ ಸೇವಕರನ್ನು ಕೂಡಿಸುವುದು ಕಷ್ಟವಾಗಿದೆ. ಕಾಂಗ್ರೆಸ್ಸಿನ ಕೆಲಸಕ್ಕಾಗಿಯೂ ಸಮಾಜ ಕೆಲಸಕ್ಕಾಗಿಯೂ ಶ್ರೀಯುತ ನಾ. ಸು. ಹರ್ಡೀಕರರು ಹಿಂದೂಸ್ಥಾನೀ ಸೇವಾದಳವನ್ನು ರಚಿಸಿ, ಸಂಘಟಿಸಿದರು. ಅಲ್ಲದೆ ಅದಕ್ಕಾಗಿ ಅನವರತವೂ ಕೆಲಸಮಾಡುತ್ತಿರುವರು. ಅದರ ಉದ್ದೇಶ ಮತ್ತು ತತ್ವಗಳನ್ನು ಪ್ರಚಾರ ಮಾಡಲಿಕ್ಕೂ ಸ್ವಯಂಸೇವಕರಲ್ಲಿ ಸ್ಫೂರ್ತಿಯನ್ನು ತುಂಬಿಸಲಿಕ್ಕೂ ಅವರು ವೊಲುಂಟಿಯರ ಎಂಬ ಪತ್ರಿಕೆಯನ್ನು ಹೊರಡಿಸಿದರು. ಆದರೆ ಅವರ ಶ್ರಮಕ್ಕೆ ತಕ್ಕುದಾದ ಫಲವು ದೇಶದಲ್ಲಿಯೂ, ಕರ್ನಾಟಕದಲ್ಲಿ ಅವರಿಗೆ ಲಭಿಸದಂತೆ ತೋರುವುದಿಲ್ಲ. ಸೈನಿಕ ಶಿಸ್ತಿನ ತರಬೇತು ಹೊಂದಲಿಕ್ಕೂ, ಜನಸೇವೆಯ ಉಚ್ಚ ಕಾರ್ಯದಲ್ಲಿ ತತ್ಪರರಾಗಲು ಕಲಿಯಲಿಕ್ಕೂ ಅನುಕೂಲವಾದ ಈ ಸಂಸ್ಥೆಯು ಜನಾಂಗದ ಜಡತೆಯಿಂದಲೂ ಸಂಸಾರಿಕ ತಾಪತ್ರಯಗಳಿಂದಲೂ ಆದರ್ಶದ ಅಭಾವದಿಂದಲೂ ಬಲಗುಂದುತ್ತಿರುವುದು ಜನಾಂಗಕ್ಕೆ ಅತ್ಯಂತ ನಿರುತ್ಸಾಹಕವಾದ ವಿಷಯವಾಗಿದೆ. ಇಂತಹ ಸ್ವೇಚ್ಛಾ ಸೇವಕ ದಳಗಳು ಸ್ಥಿರವಾಗಿ ನೆಲಸಿ ಶಕ್ತಿಮಯ ಕಾರ್ಯಗಳನ್ನು ನಡೆಸಿದರೆ ಜನಾಂಗದ ಸಮಾಜ ಸುಖವು ಅಭಿವರ್ಧಿಸಿ ಜನತೆಯೊಳಗೆ ಜವಾಬ್ದಾರಿಯ ಭಾವನೆಯು ಉಂಟಾಗುವುದು. ಆದರೆ ಸ್ವೇಚ್ಛಾ ಸೇವಕರಾಗಿ ಜನತೆಯ ದಾಸತ್ವವನ್ನು ಸ್ವೀಕರಿಸಲು ಸಿದ್ಧರಿರುವ ವೀರ ಯುವಕರೆಲ್ಲಿ?

ಉಮರಸೋಬಾನಿಯವರ ನಿಧನ

ಉಮರಸೋಬಾನಿಯವರ ಮರಣದ ವಾರ್ತೆಯನ್ನು ಕೇಳಿ ಎಲ್ಲಾ ಕಾಂಗ್ರೆಸ್ ಕೆಲಸಗಾರರೂ, ಶೋಕಾನುಭವವನ್ನು ಮಾಡದಿರರು. ಉಮರಸೋಬಾನಿಯವರು ಅಸಹಕಾರದ ಸಮಯದಲ್ಲಿ ಮಹಾತ್ಮಾ ಗಾಂಧಿಯವರ ಎಡಗೈಯಾಗಿದ್ದರು. ಮುಂಬೈಯಲ್ಲಿ ಶ್ರೀಯುತ ಬೇಂಕರರು, ಬಲಗೈಯಾಗಿಯೂ, ಸೋಬಾನಿಯವರು ಎಡಗೈಯಾಗಿಯೂ ಮಹಾತ್ಮಾ ಗಾಂಧಿಯವರು ತನ್ನ ಅಸಹಕಾರ ಚಳವಳವನ್ನು ಹೂಡಿದ್ದರು. ಆ ಸಮಯದಲ್ಲಿ ಸೊಬಾನಿಯವರು ಮಹಾತ್ಮರೊಡನೆ ಅವಿಶ್ರಾಂತವಾಗಿ ಕೆಲಸ ಮಾಡಿದ್ದರು. ಸೊಬಾನಿಯವರು ಹತ್ತಿಯಲ್ಲಿ ವ್ಯಾಪಾರ ನಡಿಸುವ ಕೋಟ್ಯಾಧೀಶ ಸಾಹುಕಾರರಾಗಿದ್ದರು. ಅಲ್ಲದೆ ಮಹಾತ್ಮರು ಅಸಹಕಾರ ಚಳವಳಕ್ಕಾಗಿ ೧ ಕೋಟಿ ರೂಪಾಯಿ ಕೂಡಿಸಲು ದೀಕ್ಷಾಬದ್ಧರಾಗಿದ್ದಾಗ, ೩೦ ಲಕ್ಷ ರೂಪಾಯಿ ಕಡಿಮೆ ಬೀಳಲು, ತಾನೊಬ್ಬನೇ ಅಷ್ಟನ್ನೂ ಕೊಡುವೆನಾಗಿ ಮುಂದೆ ಬಂದ ಉದಾರ ದಾತ್ರರು ಇವರೇ. ಆ ಮೇಲೆ ೧೯೨೧ನೇ ಇಸವಿಯಲ್ಲಿ ಇವರು ಹತ್ತಿಯನ್ನು ಒಂದೇ ಕೈಯಲ್ಲಿ ತರಲು ಪ್ರಯತ್ನಿಸಿ, ಹತ್ತಿಯ ಕ್ರಯ ಇಳಿದು ನಾಲ್ಕು ಕೋಟಿ ರೂಪಾಯಿಯಷ್ಟು ನಷ್ಟವನ್ನು ಹೊಂದಿದರು. ಈ ನಷ್ಟವನ್ನು ಎದೆಗೆಡದೆ ತುಂಬಿಸಿ, ಇದರ ದುಃಖದಿಂದ ಸುಮ್ಮಗಿದ್ದರು. ಆ ಮೇಲೆ ಇವರು ರಾಜಕೀಯ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡಿಲ್ಲ. ೧೯೨೧ನೇ ಇಸವಿಯಿಂದ ಇವರಿಗೆ ಹಣದ ಅಡಚಣೆ ಇದ್ದಿತೆಂದೂ, ಇದಕ್ಕಿಂತ ಹೆಚ್ಚಿನ ಬೇರೆ ಯಾವ ತೊಂದರೆಯೂ ಇರಲಿಲ್ಲವೆಂದೂ ಇವರ ತಂದೆಯವರು ಈಗ ಹೇಳುತ್ತಾರೆ. ಇವರು ರಾತ್ರಿ ಪೂರ್ಣ ಸ್ವಾಸ್ಥ್ಯವಿದ್ದು ಮಲಗಿದ್ದವರು, ಬೆಳಗ್ಗೆ ಇವರ ಹೆಂಡತಿಯು ಇವರನ್ನು ಎಚ್ಚರಿಸಹೋಗಿದ್ದಾಗ ಮೃತಿಯನ್ನು ಹೊಂದಿದ್ದರು. ಮರಣದ ಕಾರಣವು ಇನ್ನೂ ತಿಳಿದಿಲ್ಲ. ಇವರನ್ನು ಹತ್ತಿ ವ್ಯಾಪಾರಸ್ಥರೆಲ್ಲರೂ ಗೌರವಿಸುತ್ತಿದ್ದರಲ್ಲದೆ, ಹತ್ತಿಯ ವಹಿವಾಟುಗಳಲ್ಲಿ ಇವರ ಅಭಿಪ್ರಾಯಗಳಿಗೆ ಬಹಳ ಮಾನ್ಯತೆಯು ಇರುತ್ತಿತ್ತು. ಇವರ ಮರಣದಿಂದ ಹತ್ತಿಯ ಸಾಹುಕಾರರೆಲ್ಲರಿಗೂ ಅತ್ಯಂತ ದುಃಖವಾಗಿದೆ. ದಾನಶೂರರಾಗಿದ್ದ ಈ ಮಹಾನುಭಾವರ ಮರಣಕ್ಕಾಗಿ ನಾವೂ ಶೋಕಸಂತಪ್ತರಿರುವೆವು.

ಡಾ| ಕಿಚ್ಲೂರವರ ಪ್ರವಾಸ

ಹಿಂದೂಮುಸಲ್ಮಾನ ಕಲಹಗಳಾದಂದಿನಿಂದ ಡಾ| ಕಿಚ್ಲೂರವರು ಮುಸಲ್ಮಾನ ಕಡೆಯಿಂದಲೂ, ಪಂಡಿತ ಮಾಲವೀಯರು ಹಿಂದುಗಳ ಕಡೆಯಿಂದಲೂ ಬಂಗಾಲವನ್ನು ಸಂಚರಿಸಿ ಐಕ್ಯದ ಸಂದೇಶವನ್ನು ಪ್ರಸರಿಸುತ್ತಿರುವರು. ಇಬ್ಬರೂ ಅನೇಕ ಕಡೆಗಳಲ್ಲಿ ಅನೇಕ ಭಾಷಣಗಳನ್ನು ಕೊಟ್ಟಿರುವರು. ಡಾ| ಕಿಚ್ಲೂರವರ ಪ್ರಚಾರಕಾರ್ಯವೂ ಸಾಮಯಿಕವಾಗಿ ಹಿಂದೂಮುಸಲ್ಮಾನ ಐಕ್ಯದ ಅವಶ್ಯಕತೆಯನ್ನು ಚೆನ್ನಾಗಿ ಅಂಕಿಸುವಂತಹುದಾಗಿದ್ದಿತು.

"ಸ್ವಾತಂತ್ರ್ಯದ ಯುದ್ಧವನ್ನು ಕೌನ್ಸಿಲುಗಳ ಹೊರಗೆ ಮಾಡಬೇಕು; ತಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಪಡೆಯಲಿಕ್ಕೆ ಮನಃಪೂರ್ವಕವಾದ ಪ್ರಯತ್ನಗಳನ್ನು ಮಾಡುವುದು ಮುಸಲ್ಮಾನರ ಪಾರಮಾರ್ಥಿಕ ಕರ್ತವ್ಯವಾಗಿದೆ" ಎಂಬ ಡಾ| ಕಿಚ್ಲೂರವರ ಮಾತುಗಳು ಹಿಂದೂಮುಸಲ್ಮಾನ ಅನ್ಯೋನ್ಯದ ವಿಷಯದಲ್ಲಿ ಆಶಾದಾಯಕವಾದುವುಗಳಾಗಿವೆ.

ಆದರೆ ಡಾ| ಕಿಚ್ಲೂರವರ ಮುಸಲ್ಮಾನ ತಾಂಜೀಮ ಚಳವಳದ ಸಮರ್ಥನವೂ, ಹಿಂದೂ ಸಂಘಟನ ಚಳವಳದ ಖಂಡನವೂ ಅವರ ನಿಷ್ಪಕ್ಷಪಾತ ಬುದ್ಧಿಗೆ ನ್ಯಾಯವನ್ನುಂಟುಮಾಡುವುದಿಲ್ಲ.

"ಪಂಡಿತ ಮಾಲವೀಯರು ಮತ್ತಿತರರಿಂದ ಆರಂಭಿಸಲ್ಪಟ್ಟ ಸಂಘಟನ ಚಳವಳವು ಹಿಂದೂಮುಸಲ್ಮಾನ ಐಕ್ಯಕ್ಕೆ ಬಹಳ ಹಾನಿಯನ್ನುಂಟುಮಾಡಿಯದೆ" ಎಂದೂ ಕಿಚ್ಲೂರವರು ಹೇಳುತ್ತಿರುವರು. ಅದು ಹಿಂದೂ ಸಮಾಜ ಸುಧಾರಣೆಗಿಂತಲೂ, ಮುಸಲ್ಮಾನ ದ್ವೇಷದಿಂದ ಆರಂಭಿಸಲ್ಪಟ್ಟಿತೆಂದು ಅವರ ಹೇಳುವಿಕೆ. ಆದರೆ ಮುಸಲ್ಮಾನ ತಾಂಜೀಮ್ ಚಳವಳವು ಮುಸಲ್ಮಾನರ ವಿದ್ಯಾಭ್ಯಾಸ, ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗಾಗಿ ಮಾತ್ರವೇ ಆರಂಭಿಸಲ್ಪಟ್ಟಿದೆಯಲ್ಲದೆ ಹಿಂದೂ ದ್ವೇಷಕ್ಕಲ್ಲವಂತೆ.

ಆದರೆ ತಾಂಜೀಮ್ ಚಳವಳವನ್ನು ಇಷ್ಟು ಉದಾರ ಭಾವನೆಯಿಂದ ನೋಡುವ ಡಾ| ಕಿಚ್ಲೂರವರಂತೆಯೇ ಎಲ್ಲ ಮುಸಲ್ಮಾನರಿರುವುದಿಲ್ಲ; ಮತ್ತು ಎಲ್ಲ ಹಿಂದುಗಳಲ್ಲಿಯೂ ಮುಸಲ್ಮಾನ ದ್ವೇಷವೇ ಇದೆಯೆಂದು ಹೇಳುವುದು ನ್ಯಾಯದ ಮಾತಲ್ಲ. ವಿಚಾರಿಸಿದರೆ, ಎರಡೂ ಸಮಾಜಗಳಲ್ಲಿಯೂ ಪರಸ್ಪರ ದ್ವೇಷದವರೂ ಧಾರಾಳವಾಗಿ ಇರುವರು. ಡಾ| ಕಿಚ್ಲೂರವರು ಹಿಂದುಗಳ ಮೇಲೆ ಮಾತ್ರ ಸಂಶಯ ತಾಳುವುದು ತಪ್ಪಾಗಿದೆ.

ಬಂಗಾಳದಲ್ಲಿ ಹೆಂಗಸರನ್ನು ಕದ್ದೊಯ್ಯುವುದು

ತಮ್ಮ ಪಶುತೃಪ್ತಿಗಾಗಿ ತರುಣಿಯರನ್ನು ಕದ್ದೊಯ್ಯುವುದೂ, ಅದಕ್ಕಾಗಿ ಹತ್ಯೆ ಇತ್ಯಾದಿಗಳನ್ನು ಮಾಡುವುದೂ ಬಂಗಾಳದಲ್ಲಿ ಹೆಚ್ಚಾಗುತ್ತಾ ಬರುತ್ತಿದೆ. ಈ ಅತ್ಯಾಚಾರಗಳಲ್ಲಿ ಹೆಚ್ಚಾಗಿ ಮುಸಲ್ಮಾನ ಪೋಕ್ರಿಗಳೇ ಹೆಚ್ಚು ಭಾಗ ತೆಗೆದುಕೊಳ್ಳುತ್ತಾರೆ. ಆಗಾಗ ಎಂಬಂತೆ ಈ ಅತ್ಯಾಚಾರಗಳ ಸುದ್ದಿಗಳು ಪತ್ರಗಳಲ್ಲಿ ಪ್ರಕಟವಾಗುತ್ತಿವೆ. ಇಷ್ಟು ಪ್ರಬಲವಾದ ಸರಕಾರದ ಕೈಯಡಿಯಲ್ಲಿಯೂ ನಮ್ಮ ಸ್ತ್ರೀಯರ ಪಾವಿತ್ರ್ಯವು ರಕ್ಷಿಸಲ್ಪಡುವುದು ಕಷ್ಟವಾಗಿದೆಯೆನ್ನುವಾಗ ಹಿಂದುಗಳ ಕರ್ತವ್ಯವೇನಿರಬೇಕೆಂದು ಸ್ಪಷ್ಟವಾಗುವುದು. ಹಿಂದುಗಳು ಸಾಮಾನ್ಯವಾಗಿ ಪುಕ್ಕರಾಗಿರುವರೆಂಬ ಭಾವನೆಯಿದೆ. ಹಿಂದೂಮತತತ್ವವೂ, ಜೀವನ ಸಾಂಪ್ರದಾಯಗಳೂ ಸ್ತ್ರೀಪಾವಿತ್ರ್ಯದ ವಿಷಯದಲ್ಲಿ ಸ್ಪಷ್ಟವಾಗಿವೆ. ಹಿಂದುವು ತನ್ನ ಸ್ತ್ರೀಯ ರಕ್ಷಣೆಯ ಭಾರವನ್ನು ವಹಿಸಿರುತ್ತಾನೆ. ಅವಳ ಕೂದಲು ಕೂಡ ಪರಹಸ್ತದಿಂದ ಕಲುಷಿತವಾಗದಂತೆ ನೋಡುವ ಕರ್ತವ್ಯವು ಹಿಂದು ಪುರುಷನದಾಗಿದೆ. ತನ್ನ ಸ್ತ್ರೀಗಾಗಿ ತನ್ನ ಪ್ರಾಣಹಾನಿಯನ್ನು ಕೂಡ ಎದುರಿಸಲಾರದ ಪುರುಷನು ಸಮಾಜದಲ್ಲಿ ಪ್ರವೇಶವನ್ನು ಹೊಂದಲು ಯೋಗ್ಯನಲ್ಲದವನಾಗಿರುವನು. ಪರಮಾರ್ಥವನ್ನು ಹೊಂದಬಲ್ಲನಾಗಿರಲಾರನು. ಆದರೆ ಬಂಗಾಳದಲ್ಲಿ ಇಂತಹ ಹೇಯ ಅತ್ಯಾಚಾರಗಳು ಆಗಾಗ ನಡಿಯುತ್ತಲೇ ಇರುವುದು ಹಿಂದೂಸಮಾಜಕ್ಕೇನೆ ಕಲಂಕವನ್ನು ತರುವ ವಿಷಯವಾಗಿದೆ. ಹಿಂದೂಮಹಾಸಭೆಯು ಈ ವಿಷಯವನ್ನೆತ್ತಿ ಇದಕ್ಕಾಗಿ ಒಂದು ಸ್ವಯಂಸೇವಕ ದಳವನ್ನು ರಚಿಸುವುದು ಅಗತ್ಯವಿದೆ. ಸರಕಾರವು ನಮಗೆ ಇಂತಹ ಅವಮಾನದ ವಿಷಯಗಳಲ್ಲಿ ಸಹಾಯವನ್ನು ಮಾಡಲಾರದು ಎಂಬುದು ಸ್ಪಷ್ಟವಿದೆ. ಆದುದರಿಂದ ಇದರ ಜವಾಬುದಾರಿಯು ಹಿಂದುಗಳ ಮೇಲೆಯೆ ಬೀಳುತ್ತದೆ. ಹಿಂದೂ ಸ್ವಯಂಸೇವಕ ದಳದ ರಚನೆಯಿಂದಲೇ ಈ ಅತ್ಯಾಚಾರಗಳ ಕಥೆಯು ಕೊನೆಗಾಣತಕ್ಕದಿದೆ.

ಮುಂದಿನ ಚುನಾವಣೆಗೆ ಉಮೇದುವಾರರು.

ಬಂಟರ ಯಾನೆ ನಾಡವರ ಜಾತಿಯಲ್ಲಿ ರಾ| ಅತ್ತಾವರ ಬಾಲಕೃಷ್ಣ ಶೆಟ್ಟರು ಉಮೇದುವಾರರಾಗಿ ನಿಲ್ಲುವರಾಗಿ ಬಂಟರ ಯಾನೆ ನಾಡವರ ಅಭಿವೃದ್ಧಿ ಸಂಘದ ಕಾರ್ಯದರ್ಶಿಗಳ ಪ್ರಕಟಣೆಯು ಇದೆ. ರಾ| ಅತ್ತಾವರ ಬಾಲಕೃಷ್ಣ ಶೆಟ್ಟಿಯ ಉಮೇದುವಾರಿಕೆಯ ವಿಷಯದಲ್ಲಿ ಅವರ ಯೋಗ್ಯತೆ ಮತ್ತು ಉತ್ಸಾಹವನ್ನು ಎಲ್ಲರೂ ಅರಿತಿರುವರು ಮತ್ತು ಚುನಾವಣೆಯನ್ನು ಹೊಂದಿದರೆ ಹೆಚ್ಚು ಕೆಲಸಮಾಡಲು ಶಕ್ತಿಯುಳ್ಳವರೆಂದೂ ನಾವು ಬಲ್ಲೆವು. ಆದರೆ ಚುನಾವಣೆಯನ್ನು ಜಾತೀಯವಾಗಿ ಮಾಡುವುದು ಹಿತವೊ ಎಂಬುದು ಈಗಿನ ಪ್ರಶ್ನೆಯಾಗಿದೆ. ಶ್ರೀಯುತ ಶೆಟ್ಟರು ನಾಡವರ ಪರವಾಗಿ ಉಮೇದುವಾರರೊ, ಹಾಗಾದರೆ ಬ್ರಾಹ್ಮಣೇತರರೊಳಗೆ, ಜೈನರು, ಬಿಲ್ಲವರು, ಅಸ್ಪೃಶ್ಯರು, ಕ್ಷತ್ರಿಯರು ಇತ್ಯಾದಿ ಜಾತಿಗೊಬ್ಬರು ನಿಲ್ಲಬೇಕಾಗುವುದೊ, ಇಲ್ಲವೇ ಅಬ್ರಾಹ್ಮಣರೆಲ್ಲರ ಪರವಾಗಿ ಉಮೇದುವಾರರೊ, ಅಥವಾ ನಮ್ಮ ಜಿಲ್ಲೆಯ ಎಲ್ಲರ ಪರವಾಗಿ ಸ್ವತಂತ್ರ ಶಕ್ತಿಯ ಯೋಗ್ಯತೆಯ ಆಕಾರಣದಿಂದ ಉಮೇದುವಾರರೊ ಎಂಬುದನ್ನು ಶ್ರೀಯುತ ಶೆಟ್ರು ಈಗಲೇ ಸ್ಪಷ್ಟಪಡಿಸಬಹುದು. ಜಾತೀಯ ಭಾವನೆಯು ನಮ್ಮ ಜಿಲ್ಲೆಯಲ್ಲಿ ಚುನಾವಣೆಗಳಲ್ಲಿ ಹಾವಳಿಯನ್ನುಂಟು ಮಾಡುತ್ತಿದೆ ನಿಜ. ಆದರೆ ಇದನ್ನು ಹೆಚ್ಚಿಸಬೇಕೊ ಕಡಿಮೆಮಾಡಬೇಕೊ ಎಂಬುದನ್ನು, ಬರೇ ತಮ್ಮ ವಿಜಯದ ಆಶೆಯಿಂದಲೇ ನಿರ್ಣಯಿಸದೆ ವಿದ್ಯಾವಂತ ವಿಚಾರಿ ಉಮೇದುವಾರರು ತೀರ್ಮಾನಿಸಬೇಕು. ಶ್ರೀಯುತ ಶೆಟ್ರು ಒಂದು ಬಾರಿ ರಾಷ್ಟ್ರೀಯ ಕ್ಷೇತ್ರದಲ್ಲಿ ಅತ್ಯುತ್ಸಾಹದಿಂದ ಕೆಲಸಮಾಡಿದವರು; ಒಂದು ಬಾರಿ ಸ್ವರಾಜ್ಯ ಪಕ್ಷೀಯರೊಡನೆ ಸಂಬಂಧ ಕಲ್ಪಿಸಲು ಯೋಚಿಸಿದವರು. ಸ್ವಾನುಭವದಿಂದ ಅಭಿಪ್ರಾಯಗಳು ಬದಲಿಸದೆ ಇರುವುದಿಲ್ಲ. ಆದರೆ ಜಾತೀಯತೆಯ ಭಾವನೆಯನ್ನು ಕೆರಳಿಸಿದರೆ ನಮ್ಮ ಜಿಲ್ಲೆಗೇನೇ ಯಾವ ಕಷ್ಟವಾಗಬಹುದೆಂದು ಅವರು ಚಿಂತಿಸಬಹುದು.

ಅನುಕ್ರಮಣಿಕೆ.

	ಪುಟ.
ಅಗ್ರಲೇಖ	
ಸ್ತ್ರೀ ಸ್ವಾತಂತ್ರ್ಯ	೬-೭
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೭
ದಕ್ಷಿಣ ಕನ್ನಡ— ಮಂಗಳೂರು, ಬಂಟವಾಳ, ಕೊಕ್ಕಡ, ಮೊಗ್ರಾಲ್, ಉಡುಪಿ, ಪಳ್ಳಿಕೆರೆ, ಕಾಸರಗೋಡು .	೮
ಸ್ವೀಕಾರ	೫
ವಿವಿಧವಿಷಯಗಳು	೪-೮

ಸ್ವದೇಶಾಭಿಮಾನಿ.

ಶಕ ೧೮೪೮ ಜ್ಯೇಷ್ಠ ಬ|| ೧೫ಯು ಶುಕ್ರವಾರ.

ಸ್ತ್ರೀ ಸ್ವಾತಂತ್ರ್ಯ.

ಸ್ತ್ರೀಯ ಸಮಾನಾಧಿಕಾರದ ಚಳವಳವು ಹಲವು ವರ್ಷಗಳ ಪೂರ್ವದಿಂದಲೇ ಪಾಶ್ಚಾತ್ಯ ರಾಜ್ಯಗಳಲ್ಲಿ ಆರಂಭವಾಗಿ ಮೆಲ್ಲನೆ ಬಲವಾಗುತ್ತಾ ಬಂದಿದೆ. ಇಂಗ್ಲೆಂಡಿನಲ್ಲಿ, ಕಳೆದ ಮಹಾಯುದ್ಧದ ಪೂರ್ವದಲ್ಲಿ ಸ್ತ್ರೀಯರ ಸಮಾನಾಧಿಕಾರದ ಸಂಬಂಧದ ಸಫ್ರಜೆಟ್ಸ್ ಎಂಬ ಚಳವಳವು ನಡೆದು, ಸ್ತ್ರೀಯರು ಇಂಗ್ಲೆಂಡಿನಲ್ಲಿ ಸಾಮಾನ್ಯವಾಗಿ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತಾರೆ. ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಸ್ತ್ರೀ ಸಭಾಸದರೂ ಇರುವರು. ಈ ಸದಸ್ಯತನದ ಹಕ್ಕು ಇಂಗ್ಲೆಂಡಿನ ಹೌಸ್ ಒಫ್ ಲೋರ್ಡ್ಸಿನ ಬಗ್ಗೆಯೂ ಇರಬೇಕಾಗಿ ಈಗ ಸಾಧನೆ ಇದ್ದು ಹೌಸ್ ಒಫ್ ಲೋರ್ಡ್ಸ್ (House of Lords)ನಲ್ಲಿ ಈ ಬಗ್ಗೆ ಒಂದು ಮಸೂದೆಯು ತರಲ್ಪಟ್ಟು ಚರ್ಚಿಸಲ್ಪಡುತ್ತಿದೆ.

ಇಂಗ್ಲೆಂಡಿನ ಅನೇಕ ಪ್ರಮುಖ ಕೆಲಸಗಳಲ್ಲಿ ಸ್ತ್ರೀಯರು ಸಹಭಾಗಿಗಳಾಗುತ್ತಾರೆ. ಇತ್ತಲಾಗಿನ ಶೋಧವಾಗಿರುವ ವಾಯು ವಿಮಾನಗಳ ವೃತ್ತಿಯಲ್ಲಿ ಕೂಡ ಸ್ತ್ರೀಯರು ಪ್ರವೀಣರಾಗುತ್ತಿರುವುದು ಸ್ತ್ರೀ ಸ್ವಾತಂತ್ರ್ಯದ ಪರಿಮಾಣದ ಚಿಹ್ನೆಯಾಗಿದೆ. ಫ್ರಾನ್ಸಿನಲ್ಲಿ ಮೆಡಾಮ್ ಕರಿ ಎಂಬ ಸ್ತ್ರೀಯು ರಾಸಾಯನಿಕ ಶಾಸ್ತ್ರದ ಅತ್ಯಮೂಲ್ಯ ಧಾತುವಾದ ರೆಡಿಯಮನ್ನು ಕಂಡುಹಿಡಿದವಳಾಗಿರುವಳು. ಈ ರೀತಿಯಲ್ಲಿ ವಿಜ್ಞಾನದಲ್ಲಿಯೂ, ವಾಣಿಜ್ಯದಲ್ಲಿಯೂ, ಅರ್ಜನೆಯ ವೃತ್ತಿಗಳಲ್ಲಿಯೂ ಪಾಶ್ಚಾತ್ಯ ಸ್ತ್ರೀಯು ಸರ್ವ ನಿರೋಧಗಳನ್ನೂ ದುರ್ಲಕ್ಷಿಸಿ ಮುಂದರಿದು ತನ್ನ ಸ್ವಾತಂತ್ರ್ಯವನ್ನೂ ಸಮಾನತೆಯನ್ನೂ ತೋರಿಸುತ್ತಿರುವಳು.

ಸ್ತ್ರೀ ಸ್ವಾತಂತ್ರ್ಯದ ಈ ಮಹದಾಶಯವು ಈಗಲೇ ಆಧುನಿಕತೆಯ ದೆಸೆಯಲ್ಲಿ ಏಳುತ್ತಿರುವ ತುರ್ಕಿಯಲ್ಲಿ ಕೂಡ ಪ್ರಸಾರವಾಗುತ್ತಿದೆ. ತುರ್ಕಿಯ ತರುಣ ಮಂಡಳಿಯ ಧುರೀಣನಾಗಿ ತುರ್ಕಿಗೆ ಸ್ವಾತಂತ್ರ್ಯವನ್ನು ತಂದೊಪ್ಪಿಸಿದ ಕೇಮಲ್ ಪಾಶನು, ಘರದೆ ಅಡಿಯಲ್ಲಿ ನಿರಂತರವೂ ಬಂಧಿಸಲ್ಪಟ್ಟು ತಮ್ಮ ಉಸಿರಿನಿಂದಲೇ ತಮ್ಮನ್ನು ಕಲುಷಿತವಾಗಿ ಮಾಡುತ್ತಿರುವ ತುರ್ಕಿಯ ಹೆಂಗಸರಿಗೂ ಆ ಸ್ವಾತಂತ್ರ್ಯದ ಸುಖವನ್ನು ಕೊಡಲು ಮರೆಯಲಿಲ್ಲ. ತುರ್ಕಿಯ ತರುಣಿಯ ವಿದ್ಯಾಭ್ಯಾಸಕ್ಕಾಗಿ ಆಧುನಿಕ ತುರ್ಕಿಯು ಬಹಳ ಉತ್ಸಾಹದಿಂದ ಕೆಲಸಮಾಡುತ್ತಿದೆಯಲ್ಲದೆ, ತುರ್ಕಿಯ ಹೆಂಗಸರನ್ನು ಘರದೆಯಿಂದ ಹೊರತೆಗೆದು ನವವಾಯುವಿನ ನಿರ್ಮಲತೆಯಲ್ಲಿರಿಸಲು ಪ್ರಯತ್ನಿಸುತ್ತಿದೆ.

ಹಿಂದೂಸ್ಥಾನದಲ್ಲಿಯೂ, ಸಮಾಜಸುಧಾರಕರು ಸ್ತ್ರೀ ಸ್ವಾತಂತ್ರ್ಯದ ಕಡೆಗೆ ಕೆಲಸಮಾಡದೆ ಇಲ್ಲ. ಘರದೆಯ ಕ್ರಮವು ಮುಸಲ್ಮಾನರಲ್ಲಿಯೂ ಹಿಂದೂಗಳಲ್ಲಿಯೂ ಉತ್ತರ ಹಿಂದೂಸ್ಥಾನದಲ್ಲಿ ಈಗಲೂ ಇದೆ. ಬಂಗಾಳದಲ್ಲಿ ಹಿಂದೂಗಳ ಮಟ್ಟಿಗಾದರೂ ಈ ಘರದೆಯ ಕ್ರಮವನ್ನು ತೆಗೆದುಹಾಕಬೇಕಾಗಿ ಚಳವಳವು ನಡೆದು, ಬ್ರಹ್ಮಸಮಾಜ ಮೊದಲಾದ ಸಂಸ್ಥೆಗಳು ಏರ್ಪಟ್ಟು, ಸ್ತ್ರೀಯರೊಳಗೆ ಅನೇಕಾಂಶವು ಘರದೆಯನ್ನು ತೊರೆದಿದೆ.

ಆದರೆ ಹಿಂದೂಸ್ಥಾನದ ಮಟ್ಟಿಗೆ ಪಾಶ್ಚಾತ್ಯ ಕ್ರಮದ ಸ್ತ್ರೀ ಸ್ವಾತಂತ್ರ್ಯವು ಜನಮಾನಿತವಾಗಿದೆ ಎಂದು ಹೇಳಲಾಗುವುದಿಲ್ಲ. ಹೆಚ್ಚಾಗಿ ಈ ಚಳವಳವು ಪಾಶ್ಚಾತ್ಯರ ಅನುಕರಣದಿಂದ ಬಂದುದಾದುದರಿಂದಲೂ, ಹೆಚ್ಚಾಗಿ ಈ ಚಳವಳದಲ್ಲಿ ಸ್ತ್ರೀಯರು ಸಹಭಾಗಿಗಳಾಗದೆ ಇದ್ದುದರಿಂದಲೂ, ಸ್ತ್ರೀಯರು ಸ್ವೇಚ್ಛೆಯಿಂದಲೇ ಪೂರ್ವ ಸಾಂಪ್ರದಾಯಗಳಲ್ಲಿ ಅಭಿಮಾನವುಳ್ಳವರಾದುದರಿಂದಲೂ ಈ ಚಳವಳವು ಹೆಚ್ಚು ಪ್ರಗತಿಯನ್ನು ಹೊಂದಲಿಲ್ಲ.

ಸೀತಾದಮಯಂತಿಯರಾದಿ ಅತ್ಯಂತ ಪತಿವ್ರತೆಯರ ಚರಿತ್ರೆಯನ್ನು ಸದಾಕಾಲವು ಧ್ಯಾನಿಸಿ ಮನನಮಾಡುವ ಹಿಂದೀಯ ಸ್ತ್ರೀಯರು, ಪಾಶ್ಚಾತ್ಯ ಸಮಾನತೆ ಭಾವನೆಗೆ ಸುಲಭವಾಗಿ ಸಮ್ಮತಿಯನ್ನೀಯುವುದು ಸಾಧಾರಣದ ಮಾತಲ್ಲ. ಪುರಾಣದ, ನಿಷ್ಕಲಂಕ ಸೇವೆಯ ಭಾವನೆಯನ್ನು ಬಹ್ವಂಶವಾಗಿ ಸ್ತ್ರೀಯರು ಅನುಕರಿಸಿಯೇ ಇರುವರು. ಆದುದರಿಂದಲೇ ಹಿಂದೀ ಸ್ತ್ರೀಯು ತನ್ನ ಗೃಹಸಾಮ್ರಾಜ್ಯದ ಸೀಮೋಲ್ಲಂಘನ ಮಾಡಲಿಕ್ಕೆ ಉತ್ತೇಜಿಸಲ್ಪಟ್ಟರೂ ಉತ್ಸಾಹಿತಳಾಗಿಲ್ಲ.

ಚೀನಾ, ಜಾಪಾನ ಇತ್ಯಾದಿ ಪೌರ್ವಾತ್ಯ ದೇಶಗಳಲ್ಲೂ ಸ್ತ್ರೀಯು ಈ ಅನಿರ್ಬಂಧಿತ ಸ್ವಾತಂತ್ರ್ಯಕ್ಕಾಗಿ ಉತ್ಕಂಠಿತೆಯಾದಂತೆ ತೋರುವುದಿಲ್ಲ. ಸಮಾಜಾ ಸುಧಾರಕರು ಪ್ರತಿ ದೇಶಗಳಲ್ಲೂ ಇರುವರು. ಅನುಕರಣೆಯಲ್ಲಿಯೇ ಅಭಿಮಾನ ತಾಳುವ ಕ್ಷುದ್ರ ಹೃದಯಿಗಳು ಎಲ್ಲೆಲ್ಲಿಯೂ ಇರುವರು. ಇವರ ಹೊರತು ಈ ಪೌರ್ವಾತ್ಯ ದೇಶಗಳಲ್ಲಿ ಇತರ ಸ್ತ್ರೀಯರು ಪಾಶ್ಚಾತ್ಯರ ಈ ಆದರ್ಶವನ್ನು ಅನುಸರಿಸುವುದರಲ್ಲಿ ದೀಕ್ಷಾಬದ್ಧರಾಗಿಲ್ಲ.

ಬೇರೆ ಬೇರೆ ದೇಶಗಳಲ್ಲಿ ಸ್ತ್ರೀ ಸ್ವಾತಂತ್ರ್ಯವು ಯಾವ ರೀತಿಯಲ್ಲಿ ನಡೆಯುತ್ತಿದೆ ಎಂದು ನಾವು ಮೇಲೆ ಸೂಚಿಸಿರುವೆವು. ಆದರೆ ಸ್ತ್ರೀ ಸ್ವಾತಂತ್ರ್ಯದ ತತ್ವವು ಹೇಗೆ ಈ ದೇಶಗಳಲ್ಲಿ ಮಾನಿತವಾಗುತ್ತಿದೆ, ಸ್ತ್ರೀ ಸ್ವಾತಂತ್ರ್ಯವು ಯಾವ ತರದ್ದಾಗಿದೆ ಎಂಬುದನ್ನೂ ನಾವು ಚರ್ಚಿಸುವುದೂ ಅಗತ್ಯವಿದೆ.

ಹಿಂದೂ ಪುರಾಣಗಳಲ್ಲಿ ಪಾತಿವ್ರತ್ಯದ ಪ್ರಭಾವದ ಅನೇಕ ಆಶ್ಚರ್ಯಕರವಾದ ಕಥೆಗಳಿವೆ. ಇಂತಹ ಕಥೆಗಳು ಸ್ತ್ರೀಯರೊಳಗೆ ಪಾತಿವ್ರತ್ಯದ ಅತೀ ಪವಿತ್ರ ಗುಣವನ್ನು ಪ್ರೇರೇಪಿಸಬಹುದಾದರೂ, ಅದೇ ಸಮಯದಲ್ಲಿ ಅವುಗಳಿಂದ ಸ್ವಲ್ಪ ಮಟ್ಟಿಗೆ ಅವರಲ್ಲಿ ದಾಸ್ಯ ಭಾವವನ್ನೂ ಪ್ರೇರಿಸಿ ಮನೋಧೈರ್ಯವನ್ನು ತಗ್ಗಿಸಿ ಜಡತೆಯನ್ನೂ ಹೆಚ್ಚಿಸಬಹುದಾಗಿಯೂ ತೋರುತ್ತಿದೆ. ಪೌರಾಣಿಕ ಕಥೆಗಳ ಈ ಆದರ್ಶಗಳನ್ನು ಅನುಕರಿಸುವುದರಲ್ಲಿ ಮೇರೆಯಿದೆ ಎಂದು ಹೇಳಬೇಕಾಗುವುದು.

ಹಾಗೆಯೇ ಪಾಶ್ಚಾತ್ಯ ಆದರ್ಶವು ಸ್ತ್ರೀ ಸಮಸ್ಯೆಯ ಇನ್ನೊಂದು ತುದಿಯಾಗಿದೆ. ಸ್ತ್ರೀಯು ಪುರುಷರಂತೆಯೇ ಬುದ್ಧಿ, ಜ್ಞಾನವುಳ್ಳವಳು; ಪುರುಷರಂತೆಯೇ ಅಂಗಶಕ್ತಿಯನ್ನು ಸಂಗ್ರಹಿಸಬಲ್ಲಳು; ಪುರುಷರಂತೆಯೇ ವೈಜ್ಞಾನಿಕ ಶೋಧಗಳನ್ನು ಮಾಡಬಲ್ಲಳು; ಹೀಗೆ ಪುರುಷರಂತೆ ಸಮಾನ ಶಕ್ತಿಯನ್ನು ತೋರಿಸಬಲ್ಲಳಾದರೂ ಅವಳ ನಿಸರ್ಗವು ಸ್ತ್ರೀಯನ್ನು ಈ ಕೆಲಸಗಳಿಗಾಗಿ ಒಪ್ಪಲಾರದೆಂದು ಸ್ತ್ರೀ ಘಟನೆಯನ್ನು ಪರೀಕ್ಷಿಸಿದರೆ ತಿಳಿಯುವುದು.

ಸಮಾನತೆಯ ಪ್ರಶ್ನೆಯು ಸಾಮಾನ್ಯವಲ್ಲ. ಲೋಕದಲ್ಲಿ ದೊಡ್ಡವರೂ ಬಡವರೂ ಇರಬಾರದೆಂದು ಪ್ರಯತ್ನಿಸಿ ರಷ್ಯವು ಕಂಗೆಟ್ಟಿತು. ಒಬ್ಬನ ಮೇಧಾಶಕ್ತಿಯು ಇನ್ನೊಬ್ಬನಂತೆ ಇರುವುದಿಲ್ಲ; ಒಬ್ಬನ ಅರ್ಜನೆ ಶಕ್ತಿಯು ಇನ್ನೊಬ್ಬನ ಅರ್ಜನೆ ಶಕ್ತಿಯಂತೆ ಇಲ್ಲ; ಹೀಗೆ ವೈಯಕ್ತಿಕ ಸಮಾನತೆಯೇ ನಿಸರ್ಗದಲ್ಲಿ ಇಲ್ಲದಿರುವಾಗ, ನಿಸರ್ಗವೇ ರಚಿಸಿರುವ ಈ ಎರಡು ಜಾತಿಗಳೊಳಗೆ ಪೂರ್ಣವನು ಸಮಾನತೆಯನ್ನು ಸ್ಥಾಪಿಸುವುದು ಅಸಾಧ್ಯವೂ, ಹಾನಿಕರವೂ ಆಗಿದೆ. ಸ್ತ್ರೀ ರಚನೆಯೂ, ಸ್ತ್ರೀ ಭಾವವೂ, ಸ್ತ್ರೀಯ ನಡತೆಯೂ ಪುರುಷರವುಗಳಿಗಿಂತ ಸಂಪೂರ್ಣವಾಗಿ ಬೇರೆಯಾಗಿದೆ. ಸ್ತ್ರೀಗೆ ನಿಸರ್ಗದಲ್ಲಿ ಪ್ರತ್ಯೇಕ ಕರ್ತವ್ಯವಿದೆ. ಸ್ತ್ರೀಯನ್ನು ಆ ಕರ್ತವ್ಯಗಳಿಂದ ವಿಮುಖರಾಗಿ ಮಾಡಿದರೆ ಸಮಾಜಕ್ಕೆ ಹಾನಿಯೂ, ಸಂಸಾರದಲ್ಲಿ ಅಸುಖವೂ ಉಂಟಾಗುವುದು.

ಆದರೆ ಸ್ತ್ರೀಯು ಗೃಹದ್ವಾರದ ಹಿಂದೆಯೇ ಇದ್ದು, ಬರುತ್ತಿರುವ ತನ್ನ ಸ್ವಾಮಿಯನ್ನೇ ನಿರೀಕ್ಷಿಸುತ್ತ ಅವನ ಆಜ್ಞಾವಾಹಕಳಾಗಿಯೂ, ಅವನ ಸಂಭೋಗ ಲಾಲಸೆಯ ವಸ್ತುವಾಗಿಯೂ ಅವನಿಂದ ಸಂಜನಿಸಿದ ಮಕ್ಕಳ ಸೇವೆಯಲ್ಲಿಯೇ ನಿರತಳಾಗುವವಳಾಗಿಯೂ ಇರಬೇಕೆಂದು ನಮ್ಮ ಅಭಿಪ್ರಾಯವಲ್ಲ. ಪಾಶ್ಚಾತ್ಯರ ಆದರ್ಶವೂ, ಪೌರ್ವಾತ್ಯರ ಆದರ್ಶವೂ ಸ್ತ್ರೀ ಸಮಸ್ಯೆಯ ತೀರ್ಮಾನದ ಎರಡು ತುದಿಗಳಾಗಿವೆ. ಪೌರ್ವಾತ್ಯದ ಕ್ರಮದಿಂದ ಸ್ತ್ರೀಗೆ ಅನ್ಯಾಯವೂ, ಪಾಶ್ಚಾತ್ಯ ಕ್ರಮದಿಂದ ನಿಸರ್ಗಕ್ಕೂ ಸಂಸಾರಕ್ಕೂ ಅನ್ಯಾಯವೂ ಆಗುತ್ತಿದೆ. ಇದರ ಮಧ್ಯ ಮಾರ್ಗವನ್ನು ಹುಡುಕುವುದೇ ಸ್ತ್ರೀ ಸಮಸ್ಯೆಯ ಸರಿಯಾದ ತೀರ್ಮಾನವಾಗಿದೆ.

ಸಮಾಜದ ಅಂತರಂಗದ ಅನುಭವವನ್ನು ಕಂಡರೂ, ಸ್ತ್ರೀ ಪುರುಷರ ಪತಿಪತ್ನಿ ಸಂಬಂಧಕ್ಕೆ ಸ್ತ್ರೀಯ ಸ್ತ್ರೀತ್ವವೂ ಪುರುಷನ ಪುರುಷತ್ವವೂ ಅತೀ ಅನುಕೂಲವಾಗಿದೆ. ಪುರುಷತ್ವವಿದ್ದ ಸ್ತ್ರೀಯು ಪುರುಷನ ಪ್ರೇಮಕ್ಕೆ ಪಾತ್ರಳಾಗಲಾರಳು; ಹಾಗೆಯೇ ಸ್ತ್ರೀತ್ವವಿದ್ದ ಪುರುಷನೂ ಸ್ತ್ರೀಯ ಪ್ರೇಮಕ್ಕೆ ಪಾತ್ರನಾಗಲಾರನು. ಇಲ್ಲಿಯೂ ನಿಸರ್ಗವು ಸ್ತ್ರೀ ಪುರುಷರ ಭೇದವನ್ನು ಸ್ಪಷ್ಟೀಕರಿಸಲು ಪ್ರಯತ್ನಿಸುತ್ತಿದೆ. ಸಂಸಾರವು ಅವಿರೋಧವಾಗಿಯೂ ಸಹನೀಯವಾಗಿಯೂ ನಡೆಯಬೇಕಾದರೆ, ಈ ಭೇದವು ಇದ್ದೇ ಇರಬೇಕು, ಅಲ್ಲದೆ ವ್ಯಕ್ತಿಯು ಈ ಭೇದದ ಅನುಭವವನ್ನೂ ಅದರ ಸುಖವನ್ನೂ ಪಡೆಯಬೇಕು.

ಪುರುಷನ ಪ್ರಕೃತಿಯು ದೃಢವಾಗಿಯೂ ಛಟ್ಟಿಯಾಗಿಯೂ ಇದ್ದು, ಅದು ಲೋಕದ ಕಷ್ಟವನ್ನು ಅನುಭವಿಸಲು ಶಕ್ತವಾದುದೂ, ಅನವರತವೂ ವಿಶಾಲವಾದ ಕ್ಷೇತ್ರದಲ್ಲಿ ಶ್ರಮಿಸಬಲ್ಲುದೂ ಆಗಿದೆ. ಪುರುಷನ ಪ್ರಕೃತಿಯು ಈ ರೀತಿಯಲ್ಲಿ ಒಂದೇ ತರದ ಗುಣವುಳ್ಳುದಾಗಿ ಅಪೂರ್ಣವಾಗಿದೆ. ಬಾಹ್ಯ ಕಾಠಿಣ್ಯದ ಬಳಲುವಿಕೆಯನ್ನು ಉಪಶಮನ ಮಾಡಲೆಂಬಂತೆ ಸ್ತ್ರೀಯ ಮಾರ್ದವದ ಗೃಹಮೂರ್ತಿಯು ರಚಿತವಾಯಿತು. ಸಂಸಾರದ ಪೂರ್ಣತೆಯು ಈ ಕಾಠಿಣ್ಯದ ಮತ್ತು ಮಾರ್ದವದ ಸಮಾಗಮದಲ್ಲಿದೆ. ಸಮಾಜವು ಸಮಾನತೆಯ ತಪ್ಪು ಗ್ರಹಿಕೆಯಿಂದ ಈ ಮಾರ್ದವದಲ್ಲಿ ಕಾಠಿಣ್ಯವನ್ನು ಪ್ರೇರಿಸಿದರೆ, ಸ್ತ್ರೀ ಪುರುಷ ಸಂಬಂಧವು ಸರಿಯಾಗಿ ಸೇರಲಾರದು.

ಸ್ತ್ರೀಗೆ ಈ ಕಾರಣದಿಂದ ಗೃಹವಲ್ಲದೆ, ಕೆಲಸ ಮಾಡಲು ಬೇರೆ ಕ್ಷೇತ್ರವಿರಲಾರದೆಂದೇ ನಮ್ಮ ಅಭಿಪ್ರಾಯ. ಅರ್ಜನೆಯ ಕಠಿಣವಾದ ಕಾರ್ಯಕ್ಷೇತ್ರವು ಸ್ತ್ರೀಯ ನಿಸರ್ಗಕ್ಕೆ ಸೇರಲಾರದು. ಸ್ತ್ರೀಗೆ ಇಡೀ ಜೀವಮಾನವನ್ನು ತುಂಬಿಸಬಲ್ಲ, ಸಣ್ಣದಾದರೂ ವಿಶಾಲವಾದ ಕಾರ್ಯಕ್ಷೇತ್ರವು ಪ್ರತ್ಯೇಕವಿದೆ. ಗೃಹರಚನೆಯೂ, ಗೃಹರಕ್ಷಣೆಯೂ, ಮಕ್ಕಳ ಪೋಷಣವೂ ಸ್ತ್ರೀಯ ಮುಖ್ಯವಾದ ಕಾರ್ಯಕ್ಷೇತ್ರವಾಗಿದೆ. ಸರಿಯಾದ ಪುರುಷನೊಡನೆ ಸಂಸಾರ ಸಂಬಂಧವೂ ಆ ಮೇಲೆ ಗೃಹಸಂಬಂಧವಾದ ಮೇಲಿನ ಕೆಲಸಗಳಲ್ಲಿ ಪ್ರವೃತ್ತಿಯೂ, ಯಾವ ಕಾಲಕ್ಕೂ ಸ್ತ್ರೀಯ ಮತ್ತು ಪುರುಷನ ಸುಖಕ್ಕೆ ಕಾರಣವಾಗಿದೆ.

ಗೃಹಪಾಲನೆಯ ಕಾರ್ಯಕ್ಷೇತ್ರದಲ್ಲಿ ಪುರುಷನಿಗೆ ಯಾವ ಅನುಭವವೂ ಇರಲಾರದು. ಅದರಲ್ಲಿ ಪುರುಷನಿಗೆ ಕೆಲಸ ಮಾಡಲು ಶಕ್ತಿಯೂ, ತಾಳ್ಮೆಯೂ, ಮನೋಭಾವವೂ ಸಾಕಾಗದು, ಆದುದರಿಂದ ಈ ಕ್ಷೇತ್ರದಲ್ಲಿ ಸ್ತ್ರೀಯು ತನ್ನ ಸಂಪೂರ್ಣ ಸ್ವಾತಂತ್ರ್ಯದಿಂದ ಕೆಲಸ ಮಾಡತಕ್ಕದ್ದು. ಪತಿಯ ಸುಖಸಾಧನೆ ಮಾತ್ರವಲ್ಲ, ತನ್ನ ಮತ್ತು ಮಕ್ಕಳ ಸುಖವನ್ನು ಲಕ್ಷಿಸಿ, ಗೃಹಜೀವನದ ಮೇಲ್ಮೆಗಾಗಿ ಪತಿಯನ್ನು ತಿದ್ದಲಿಕ್ಕೂ ಪತಿಯ ಮೇಲೆ ಅಧಿಕರಿಸಲಿಕ್ಕೂ ಸತಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು.

ಮಾತ್ರವಲ್ಲ, ಈ ಉದ್ದೇಶದಿಂದ ಸ್ತ್ರೀಸಮಾಜವನ್ನು ಸುಸಂಘಟಿಸುವುದು, ಸ್ತ್ರೀಯರ ಗಾರ್ಹ್ಯಕ ಜೀವನದ ಉಜ್ಜೀವನಕ್ಕಾಗಿಯೂ, ಸುಧಾರಣೆಗಾಗಿಯೂ ಸಾಂಘಿಕ ಪ್ರಯತ್ನಗಳನ್ನು ನಡಿಸುವುದು ಇತ್ಯಾದಿ ಸಮಷ್ಟಿ ಸಂಬಂಧದ ಕೆಲಸಗಳನ್ನು ಮಾಡಲಿಕ್ಕೂ ಸ್ತ್ರೀಗೆ ಸ್ವಾತಂತ್ರ್ಯವಿರತಕ್ಕದ್ದು. ಪ್ರತಿಯಾಗಿ ಪುರುಷನು ತನ್ನ ಶಕ್ತಿಗೆ ಸರಿಯಾದ ಆರ್ಥಿಕ ಸಹಾಯವನ್ನು ಕೊಟ್ಟು ಸತಿಯನ್ನು ಯಾವಾಗಲೂ ಆದರಿಸುತ್ತ, ಸಂಸಾರದಲ್ಲಿ ಒದಗುವ ಕೊರತೆಗಳನ್ನು ಹೋಗಲಾಡಿಸತಕ್ಕದ್ದು.

ಆದರೆ ಅನೇಕ ಹಿಂದೂ ಗೃಹಗಳಲ್ಲಿ ತೋರುವಂತೆ, ಸತಿಯ ಮೇಲಿನ ಪತಿಯ ಅತ್ಯಾಚಾರವು ಎಂದೂ ಸಹನೀಯವಾಗಕೂಡದು. ಸತಿಯ ಈ ತರದ ಕಾರ್ಯಕ್ಷೇತ್ರದ ಆವರಣಕ್ಕೆ ಸರಿಯಾಗಿ ಪತಿಯ ಸತಿಯ ಮೇಲಿನ ಅಧಿಕಾರದ ನಿರ್ಬಂಧವೂ ಸ್ಪಷ್ಟವಿರಬೇಕು. ಪತಿಯು ಸ್ವೇಚ್ಛೆಯಂತೆ ಹೊರಗೆ ಸುಖವನ್ನನುಭವಿಸುತ್ತ ಸತಿಯನ್ನು ಜೈಲಿನಲ್ಲಿಟ್ಟಂತೆ ಕಾಯ್ದಿಟ್ಟು ಅವಳ ಸುಖದುಃಖಗಳ ಕಡೆಗೆ ಯಾವ ಲಕ್ಷ್ಯವನ್ನೂ ಕೊಡದೆ, ಒಂದೊಂದು ಕಡೆಗಳಲ್ಲಿ ಸತಿಯನ್ನು ಹೊಡೆದು ಶಿಕ್ಷಿಸುವ ಕ್ರಮವೂ ಇರುತ್ತದೆ. ಇಂತಹ ಪಾಶವಿಕ ವರ್ತನವು ಹಿಂದೂ ಸಮಾಜದಲ್ಲಿ ಸರಿಯಾದ ರೀತಿಯಲ್ಲಿ ಖಂಡಿಸಲ್ಪಡುವುದಿಲ್ಲ.

ನವೀನ ಸುಧಾರಕರ ಪತ್ನಿಯಕ್ಕೆ [illegible] ನವೀನ ಜನಾಂಗಗಳು ಸ್ತ್ರೀಯ ನಿಸರ್ಗಸಿದ್ಧವಾದ ಈ ಕರ್ತವ್ಯಗಳ ಪ್ರಾಮುಖ್ಯತೆಯನ್ನು ಮರೆತು, ಪಾಶ್ಚಾತ್ಯ ಜನಾಂಗಗಳ ಅನುಕರಣೆಯನ್ನು ಮಾಡುವುದು ಅತೀ ದುಃಖದ ಸಂಗತಿಯಾಗಿದೆ. ತುರ್ಕಿಯ ೨೦-೨೫ ತರುಣಿಯರು ತುರ್ಕಿಯ ಒಂದು ಪಡಗದಲ್ಲಿ ದೇಶದಿಂದ ದೇಶಕ್ಕೆ ಹೋಗಿ, ಲಂಡನಿನ ರಾಜಮಾರ್ಗಗಳಲ್ಲಿ ಅಲೆಯುತ್ತ, ಲಂಡನಿನ ಪತ್ರಪ್ರತಿನಿಧಿಗಳೊಡನೆ—ನಾವು ಪೂರ್ವದ ಕುರೀ [illegible] ಅಲ್ಲ; ನಾವು ಈಗ ತಲೆಗೂದಲನ್ನು ಕತ್ತರಿಸುತ್ತೇವೆ; ಇಂಗ್ಲೀಷ ಸ್ತ್ರೀಯರಂತೆ ನಾವು ಜೀವನವನ್ನು ಅನುಭೋಗಿಸುತ್ತೇವೆ; ನಾವು ಸಿಗರೇಟು ಸೇದುತ್ತೇವೆ; ನಾಟ್ಯವಾಡುತ್ತೇವೆ; ಗಂಡನಿಲ್ಲದೆ ಕೂಡ ಪ್ರಯಾಣ ಮಾಡುತ್ತೇವೆ. ರಾಣೀವಾಸವು ಮುರಿದುಹೋದ ಬಂಧನವಾಗಿದೆ, ಈಗ ಅನೇಕ ನಾಟ್ಯಗಳನ್ನು ನಾವು ಕಲಿತಿದ್ದೇವಲ್ಲದೆ ಹೊಸ ನಾಟ್ಯಗಳನ್ನೂ ನಾವು ಕಲಿಯುತ್ತೇವೆ; ನಾವು ಪ್ರತಿದಿವಸವೂ ನಾಟ್ಯವಾಡುತ್ತೇವೆ—ಎಂದು ಹೆಗ್ಗಳಿಸಿಕೊಳ್ಳುವರು. ಸ್ತ್ರೀಸ್ವಾತಂತ್ರ್ಯವೂ, ಸ್ತ್ರೀಯರ ಉದ್ಧರಣೆಯೂ ಇದಾಗಿರುವುದಾದರೆ ಸ್ತ್ರೀ ಸ್ವಾತಂತ್ರ್ಯವು ಎಷ್ಟು ಮಾತ್ರಕ್ಕೂ ಬಯಸತಕ್ಕ ವಿಷಯವಲ್ಲ. ಸಿಗರೇಟು ಸೇದುವುದು, ನಾಟ್ಯವಾಡುವುದು, ಗಂಡನಿಲ್ಲದೆ ನಿರುದ್ದೇಶವಾಗಿ ಸಂಚರಿಸುವುದು, ತಲೆಗೂದಲನ್ನು ಕತ್ತರಿಸುವುದು ಇವುಗಳು ಹೆಚ್ಚಳದ ವಿಷಯಗಳಾದರೆ, ಅಂತಹ ಸ್ವಾತಂತ್ರ್ಯ ಚಳವಳವು ಗರ್ಹಣೀಯವಿರತಕ್ಕದ್ದು.

ಸುಧಾರಕರು ಸ್ತ್ರೀ ಜೀವನದ ವಿಷಯವಾಗಿ ತಪ್ಪುಗ್ರಹಿಕೆಯನ್ನು ಮಾಡುವರು. ಸ್ತ್ರೀಸ್ವಾತಂತ್ರ್ಯವಿಲ್ಲವೆಂದು, ಪುರುಷರು ಸ್ತ್ರೀಯನ್ನು ನಿರ್ಬಂಧಿಸಿ ಮನೆಯಲ್ಲಿಡಲು ಪ್ರಯತ್ನಿಸುತ್ತಾರೆಂದು ಸುಧಾರಕರ ಹೇಳುವಿಕೆಯಾಗಿದೆ. ಆದರೆ ಸಂಸಾರವು ಸ್ತ್ರೀಪುರುಷರ ಸಮಾನತೆಯಿಂದಾಗಲಿ, ಈ ಸುಧಾರಕರು ಹೇಳುವ ತರದ ಸ್ವಾತಂತ್ರ್ಯದಿಂದಾಗಲಿ ಸರಿಯಾಗಿ ನಡೆಯದು. ಸಂಸಾರಕ್ಕೆ ಸ್ವಾತಂತ್ರ್ಯವಲ್ಲ, ನಿರ್ಬಂಧವು ಬೇಕಾದುದು. ಅದು ಪರಸ್ಪರ ನಿರ್ಬಂಧವಾಗಿರಬೇಕು. ಸ್ತ್ರೀಗೆ ತನ್ನ ಕಾರ್ಯಕ್ಷೇತ್ರದಲ್ಲಿ ಪುರುಷನ ಮೇಲೆ ಅಧಿಕಾರವೂ, ಪುರುಷನಿಗೆ ತನ್ನ ಕಾರ್ಯಕ್ಷೇತ್ರದಲ್ಲಿ ಸ್ತ್ರೀಯ ಮೇಲೆ ಅಧಿಕಾರವೂ ಇರುವುದೇ ಸರಿಯಾದ ಸ್ತ್ರೀಸ್ವಾತಂತ್ರ್ಯವಾಗಿದೆ. ಸಮಾಜದಲ್ಲಿ ಇಂತಹ ಸ್ವಾತಂತ್ರ್ಯಕ್ಕೆ ಮಾನ್ಯತೆ ಸಿಕ್ಕಿತೆಂದರೆ ಸಂಸಾರಸುಖವು ವೃದ್ಧಿಯಾಗುವುದರಲ್ಲಿ ಸಂದೇಹವಿರದು.

ವಿದೇಶ ವರ್ತಮಾನ.

—ಪರ್ಶಿಯಾ ರಾಜ್ಯದ ಫ್ಯಾನೆನ್ಸ್ ಸೆಕ್ರಿಟರಿಯನ್ನು ಫ್ಯಾನೆನ್ಸ್ ಆಫೀಸಿನಲ್ಲಿಯೇ ಇಸ್ಪಹಾನಿನ ಮೊದಲಿನ ಫೈನೆನ್ಸ್ ಸೆಕ್ರಿಟರಿಯು ಗುಂಡು ಹೊಡೆದು ಕೊಂದು ಹಾಕಿದನು. ಇವನು ಸರಕಾರದ ಹಣವನ್ನು ದುರುಪಯೋಗ ಮಾಡಿದನೆಂದು ಇವನನ್ನು ರಾಜಧಾನಿಗೆ ಕರೆಸಿದ್ದನು. ಆದರೆ ಘಾತುಕನು ಕೂಡಲೇ ಆತ್ಮಹತ್ಯ ಮಾಡಿಕೊಂಡನು.

—ಕೆನಡದ ಮಂತ್ರಿ ಸಭೆಯವರು ತಮ್ಮ ಕೆಲಸಕ್ಕೆ ರಾಜಿನಾಮೆಯನ್ನು ಕೊಟ್ಟಿರುವರು.

—ಸುಮಾತ್ರಾ ದ್ವೀಪದಲ್ಲಿ ಜೂನ್ ತಾ. ೨೮ಕ್ಕೆ ಅನೇಕ ಕಡೆಗಳಲ್ಲಿ ಭೂಕಂಪವಾಗಿ ಪಡೆಂಗಿನಲ್ಲಿರುವ ಗವರ್ನರರ ಅರಮನೆಯೂ ಅನೇಕ ಮಂದಿ ಯುರೋಪಿಯನರ ಮನೆಗಳು ಹಾಳಾಗಿವೆ. ಈ ದ್ವೀಪದ ನಿವಾಸಿಕರಲ್ಲಿ ಹೆದರಿಕೆಯು ಹುಟ್ಟಿಯದೆ.

—ಸಿಂಗಾಪುರದಲ್ಲಿ ಹೊಸದಾಗಿ ಕಟ್ಟುವ ನೌಕಾ ಬಂದರಕ್ಕೆ ಫೆಡರೇಟೆಡ್ ಮಲೇಸ್ಟೇಟಿನವರು ಎರಡು ಮಿಲಿಯ ಪವನುಗಳನ್ನು ಕೊಟ್ಟಿರುವರು.

—ಎಯರ್ ವ್ಯಾಸ ಮಾರ್ಶಲ ಸರ್ ಜೋನ್ ಹಿಗ್ಗಿನ್ಸರವರನ್ನು ಬರುವ ದಶಂಬರ ತಿಂಗಳಿನಿಂದ ಎಯರ್ ಮೆಂಬರರಾಗಿ ನೇಮಿಸಿರುವರು. ಎಯರ್ ವ್ಯಾಸ್ ಮಾರ್ಶಲ ಸರ್ ಎಡವರ್ಡ ಎಲಿಂಗ್‌ಟನ್‌ರನ್ನು ಬರುವ ನವಂಬರ ತಿಂಗಳಿನಿಂದ ಇರಾಕಿನ ರೋಯಲ್ ಎಯರ್ ಪೋರ್ಸಿಗೆ ಕಮಾಂಡರನಾಗಿ ನೇಮಿಸಿರುವರು. ಎಯರ್‌ವ್ಯಾಸ್ ಮಾರ್ಶಲ ಸರ್ ಜಯೆಫ್ರೆನಾಮಂಡರನ್ನು ಬರುವ ಜನವರಿ ತಿಂಗಳಿನಿಂದ ಇಂಡಿಯದ ಎಯರ್ ಫೋರ್ಸಿನ ಕಮಾಂಡರನಾಗಿ ನೇಮಿಸಿರುವರು.

—ಇಟಲಿಯ ಪರಮಾ ಎಂಬಲ್ಲಿ ಎಗ್ರಿಕೊಲಾ ಬೆಂಕಿನಿಂದ ೬೦ ಮಿಲಿಯ ಲಾಯರುಗಳು (೧ ಲಾಯರ್ =೯ ಆಣೆ) ಕಾಣೆಯಾಗಿವೆ. ಇದರ ಡ್ಯಾರೆಕ್ಟರರು ಪರಮಾದ ಮೆಯೋರರು ರೋಮನ್ ಲೋಯಿದರ ಪ್ರೊಫೆಸರರೂ, ಬ್ಯಾರಿಸ್ಟರರೂ ಆಗಿರುವರು. ಈ ವಿಷಯದಲ್ಲಿ ೧೬ ಮಂದಿಯನ್ನು ಕೈದುಮಾಡಿರುವರು. ಇದರಲ್ಲಿ ಮೇಲಿನ ಡ್ಯಾರೆಕ್ಟರರೂ ಸೇರಿರುವರು.

—ಆರ್ರ್ಯಾಚಾರ್ಸ್ ಎಂಬ ಫ್ರೆಂಚ್ ಸಹೋದರರಿಬ್ಬರು ಈ ತಿಂಗಳ ೨೬ನೇ ತಾರೀಕಿನ ಪ್ರಾತಃಕಾಲ ೫|| ಗಂಟೆಗೆ ಫ್ರಾನ್ಸಿನಲ್ಲಿರುವ ಲಿಬರ್ಗ್ಲೀ ಎಂಬ ಸ್ಥಳದಿಂದ ವಿಮಾನದಲ್ಲಿ ಹಾರಿ ೨೮ನೇ ತಾರೀಕಿನ ದಿನ ೩,೮೭೭ ಮೈಲುಗಳ ದೂರದಲ್ಲಿರುವ ಬಾಸ್ರಾ ಎಂಬಲ್ಲಿ ಸುರಕ್ಷಿತವಾಗಿ ಇಳಿದರು. ಇವರು ೩೬|| ಗಂಟೆಗಳ ಕಾಲ ಅಂತರಿಕ್ಷದಲ್ಲಿ ಒಂದೇ ಸಮನಾಗಿ ಪ್ರಯಾಣ ಮಾಡುತ್ತಿದ್ದರು. ಹೀಗೆ ಮಧ್ಯೆ ಎಲ್ಲಿಯೂ ಇಳಿಯದ ದೂರವಾಗಿ ಪ್ರಯಾಣ ಮಾಡಿದವರಲ್ಲಿ ಇವರೇ ಮೊದಲನೆಯವರು. ದಾರಿಯಲ್ಲಿ ಇಂಜಿನಿಗೆ ಪೆಟ್ರೋಲನ್ನು ಒದಗಿಸುತ್ತಿದ್ದ ಯಂತ್ರವು ಕೆಟ್ಟುಹೋದರೂ ಈ ಸಹೋದರರು ಧೈರ್ಯಗೆಡದೆ ಕೈಯಿಂದಲೇ ಅದನ್ನು ಒದಗಿಸುತ್ತಿದ್ದರಂತೆ. ಪೆಟ್ರೋಲು ಸಹ ಇವರು ಭೂಮಿಗೆ ಇಳಿಯುವ ವರೆಗೆ ಮಾತ್ರ ಸಾಕಾಯಿತಂತೆ. ಇದರಿಂದ ಇವರಿಗೆ ೫೦,೦೦೦ ಫ್ರಾಂಕುಗಳ ಬಹುಮತಿಯು ಸಿಗುವುದು.

—ಭೂಲೋಕದಲ್ಲಿ ಅನೇಕ ಭಾಗಗಳಿಗೆ ವಿಮಾನದಲ್ಲಿ ಸಂಚಾರ ಮಾಡಿದ ಎಲನ್‌ಕೋಬಾಮ ಎಂಬವರು ಲಂಡನಿನಿಂದ [illegible] ಅಲ್ಲಿಂದ ತಿರುಗಿ ಲಂಡನಿಗೂ ಹೋಗಿ ಬರಲಿಕ್ಕಿರುವರು. ಹೋಗಿಬರುವ ದೂರವು ೨೬,೦೦೦ ಮೈಲುಗಳಾಗುತ್ತವೆ. ಇವರು ಡಿಹವಿಲಂಡ್ ಯಂತ್ರವನ್ನು ಉಪಯೋಗಿಸುವರು; ಈ ಯಂತ್ರವು ೩೮೫ ಕುದುರೆಯ ಶಕ್ತಿಯು ಇರುವುದು. ಇವರು ಲಂಡನಿನಿಂದ ಕೇಪ್ ಟೌನಿಗೂ ಅಲ್ಲಿಂದ ಲಂಡನಿಗೂ ೧೬,೦೦೦ ಮೈಲು ಹೋಗಿ ಬಂದಿರುವರು. ವಾಯುವಿಮಾನಗಳ ದಾರಿಯನ್ನು ಸರಿಯಾಗಿ ಗೊತ್ತು ಪಡಿಸುವುದೇ ಇವರ ಉದ್ದಿಷ್ಟ. ಇವರ [illegible] ಇಂಜಿನಿಯರರು ಮಾತ್ರವೇ ಹೋಗುವರು. ಇವರು ಹೆಚ್ಚಾಗಿ ನೆಲದ ಮೇಲಿನಿಂದ ಪ್ರಯಾಣ ಮಾಡುವುದಾದರೂ, ಸಮುದ್ರದಲ್ಲಿ ಇಳಿಯಲಿಕ್ಕೆ ಬೇಕಾದ ಯಂತ್ರಸಾಧನಗಳು ಇದಕ್ಕೆ ಜೋಡಿಸಿಕೊಂಡಿರುವವು. ಇವರು ಉತ್ತರ ಓಸ್ಟ್ರೇಲಿಯದ ಪೋರ್ಟಡಾರ್ವಿನಿಗೆ ಹೋಗಿ ಅಲ್ಲಿ ಇಳಿದು ಈಜಾಡುವ ಯಂತ್ರ ತೆಗೆದು ನೆಲದ ಮೇಲೆ ಹೋಗುವ ಚಕ್ರಗಳನ್ನು ಇದಕ್ಕೆ ಕೂಡಿಸುವರು; ಅಲ್ಲಿಂದ ಮೆಲ್‌ಬೋರ್ನಿಗೆ ಹೋಗುವರು. ಇವರಿಗೆ ಬರುವ ಕಷ್ಟಗಳಾವವೆಂದರೆ ಮೆಸಪೊಟೇಮಿಯದ ಸೆಕೆಯೂ ಇಂಡಿಯದ ಮಳೆಯನ್ನು ಸಹಿಸಿಕೊಂಡುಹೋಗುವುದೇ ಇವರ ಖರ್ಚು ಖಾಸಗಿ ಜನರ ವಂತಿಗೆಯಿಂದ ನಡೆಸಲ್ಪಡುವುದು. ಇವರು ಲಂಡನ್ ಪ್ಯಾರಿಸ್ ಮಾರ್ಸೆಲ್ಸ್, ನೇಪಲ್ಸ್, ಏಥೆನ್ಸ್ ಅಲೆಕ್ಸಾಂಡ್ರಿಯಾ, ಬಗದಾದ್, ಬುಶೆರ್ ಬಂದಾರ ಅಬೆಸ್, ಕರಾಚಿ, ಡಿಲ್ಲಿ, ಅಲ್ಲಹಾಬಾದ, ಕಲ್ಕತ್ತ, ಬರ್ಮಾ, ಪಿನೆಂಗಸಿಂಗಾಪುರ, ಬಟಾವಿಯಾ ಅಲ್ಲಿಂದ ಪೋರ್ಟ ಡಾರುವಿನಿಗೆ.

—ಕೆನಡಾ ದೇಶದಲ್ಲಿ ತಿರಿಗಿ ಪೆನ್ನಿಪೋಸ್ಟೇಜನ್ನು ಶುರುಮಾಡಿರುವರು.

—ಸ್ಪೆಯಿನ್ ದೇಶದ ರಾಜರೂ, ರಾಣಿಯವರೂ ಜುಲ್ಯಾ ೧ಕ್ಕೆ ಖಾಸಗಿಯಾಗಿ ೨ ವಾರ ಇಂಗ್ಲೆಂಡಿನಲ್ಲಿರಲಿಕ್ಕೆ ಬಂದಿರುವರು. ಇವರು ಲಂಡನಿನ ವಿಕ್ಟೋರಿಯಾ ಸ್ಟೇಶನಿಗೆ ಬಂದಿಳಿದಾಗ ಅವರನ್ನು ಕಾಣಲಿಕ್ಕೆ ಮೇರಿ ರಾಣಿಯವರೂ, ಮತ್ತು ಪ್ರಿನ್ಸ್ ಒಫ್ ವೇಲ್ಸರೂ, ಯೋರ್ಕಿನಡ್ಯೂಕ್ ಮತ್ತು ಅವರ ಪತ್ನಿಯವರೂ ರಾಜಕುಮಾರಿ ಬ್ರಿಟಿಷರವರೂ ಬಂದಿದ್ದರು. ಅವಲ್ಲದೆ ಫೋರೆನ್ ಸೆಕ್ರಿಟರಿಯವರಾದ ಸರ್ ಒಸ್ಟಿನ್ ಚೆಂಬರಲೇನರೂ ರಾಯಭಾರಿಗಳೂ ಬಂದಿದ್ದರು. ಇವರು ಒಕ್ಸ್‌ಫೋರ್ಡಿಗೂ ವಿಂಬ್ಲಡೆನ್ನಿಗೂ ಹೋಗಿ ಟೆನ್ನಿಸ್ ಆಟಗಳನ್ನು ನೋಡಿ ಹಿಂತಿರುಗುವರು. ಇವರು ಇಂಗ್ಲೆಂಡಿಗೆ ಬಂದಾಗ ಇವರನ್ನು ಕೊಲ್ಲುವುದಕ್ಕಾಗಿ ದಕ್ಷಿಣ ಅಮೇರಿಕದ ಅರ್ಜೆಂಟ್ಯಾನಿನ ಇಬ್ಬರು ಏನಾರ್ಕಿಷ್ಟರು ಬಂದಿದ್ದರು. ಆದರೆ ಇವರು ಪೋಲೀಸಿನವರ ಕೈಗೆ ಸಿಕ್ಕಿಬಿದ್ದರು. ಸ್ಪೆಯಿನ್ ದೇಶದಲ್ಲಿಯೂ ಅರಸರನ್ನು ಕೊಲ್ಲಲು ಸಾಧಿಸುತ್ತಿದ್ದ ೪೦೦ ಮಂದಿ ಶಿಪಾಯರನ್ನು ಅನೇಕ ಮಂದಿ ಸಿವಿಲಿಯರನ್ನು ಹಿಡಿದು ಸೆರೆಮನೆಯಲ್ಲಿಟ್ಟಿರುವರು.

—ಟರ್ಕಿ ಮತ್ತು ರಷ್ಯ ದೇಶದವರಿಗೆ ಒಪ್ಪಂದ ಕರಾರಾಯಿತು.

—ಚಿಟ್ಟಗೊಂಗ ಪಟ್ಟಣದ ಒಂದು ಪೇಟೆಗೆ ಬೆಂಕಿಬಿದ್ದು ಅಕ್ಕಿ, ಉಪ್ಪು, ಕೆರೊಸಿನ್ ಎಣ್ಣೆ ಮುಂತಾದವುಗಳ ಅಂಗಡಿಗಳು ಸುಟ್ಟುಹೋದವು. ಸುಮಾರು ಒಂದು ಲಕ್ಷ ರೂಪಾಯಿ ನಷ್ಟವಾಗಿದೆ.

—ಸಿಲೋನಿನ ಸರಕಾರದ ಭಂಡಾರದಲ್ಲಿ ಈ ವರ್ಷ ಖರ್ಚು ಕಳೆದು ೧೩೦ ಮಿಲಿಯ ರೂಪಾಯಿ ಉಳಿದಿದೆ.

—ಇಂಗ್ಲೆಂಡಿನಲ್ಲಿ ನೇಶನಲ್ ವಿಮೆನ್ಸ್ ಕ್ಲಬ್ ಎಂಬ ಸ್ತ್ರೀಯರ ಕೂಟಕ್ಕೆ ಪ್ರೆಸಿಡೆಂಟ್ ಆಗಿರುವ ಮಿಸ್ ಗೆರ್ಟ್ರೂಡ್‌ಸ್ಮಿತ್ ಎಂಬಾಕೆಯು ಸ್ಟೆನೋಗ್ರಾಫ್ ಎಂಬ ಯಂತ್ರದ ಸಹಾಯದಿಂದ ತನ್ನ ಕಾಗದಪತ್ರಗಳಿಗೆ ರುಜು ಮಾಡುವಳು. ಈ ಯಂತ್ರದಲ್ಲಿರುವ ೩೦ ಪೇನಾಗಳ ಪೈಕಿ ಒಂದನ್ನು ಮಾತ್ರ ಆಕೆಯು ಹಿಡಿದುಕೊಂಡು ಒಂದು ಕಾಗದಕ್ಕೆ ರುಜು ಮಾಡಿದರೆ, ಉಳಿದ ೨೯ ಪೇನಾಗಳೂ ತಂತಮ್ಮೆದುರಿಗಿರುವ ಕಾಗದಗಳ ಮೇಲೆ ಚಾಚೂ ವ್ಯತ್ಯಾಸವಿಲ್ಲದೆ ರುಜುಮಾಡುವವಂತೆ! ರುಜುವಿಗಾಗಿ ಕಾಗದಗಳನ್ನು ಯಂತ್ರದ ಎದುರಿಗಿಡಲು ಪ್ರತ್ಯೇಕ ಸೆಕ್ರಿಟರಿಯೊಬ್ಬಳು ಇರುವಳು. ಈ ರೀತಿ ಈಕೆಯು ಒಂದು ದಿನ ಎರಡು ಗಂಟೆಗಳ ಕಾಲದಲ್ಲಿ ೧೧,೫೬೪ ಕಾಗದಗಳಿಗೆ ರುಜುಮಾಡಿದಳಂತೆ! ಪಾಶ್ಚಾತ್ಯ ಸ್ತ್ರೀಯರಾದರೂ ಎಷ್ಟರ ಮಟ್ಟಿಗೆ ಕಾರ್ಯತತ್ಪರರಾಗಿರುವರೆಂದೂ, ಶ್ರಮವನ್ನು ಹೋಗಲಾಡಿಸುವ ಯಂತ್ರಗಳನ್ನು ಕಂಡು ಹಿಡಿಯುವುದರಲ್ಲಿ ಅವರು ಸದಾ ಆಸಕ್ತರಾಗಿರುವರೆಂದೂ ಇದರಿಂದ ತಿಳಿಯುವುದು.

—ಸ್ಪೇನದಲ್ಲಿ ಈಗಿರುವ ಸರಕಾರದ ವಿರುದ್ಧ ಭಯಂಕರವಾದ ಒಳಸಂಚು ನಡೆದದು ಪ್ರಕಟವಾಗಿದೆ. ಅದರಲ್ಲಿ ಲಿಬರಲ್ ಮತ್ತು ರ್‍ಯಾಡಿಕಲ್ ಪಕ್ಷಗಳ ಜನರು ಇದ್ದಾರೆ.

—ಶಾಂಘಾಯಿ ಎಂಬಲ್ಲಿ ಅರಿವೆಯ ಗಿರಣಿಗಳಲ್ಲಿಯ ಜಪಾನಿ ಕೂಲಿಕಾರರು ಕಟ್ಟುಮಾಡಿದ್ದರಿಂದ ಬಹಳ ಅಸ್ವಸ್ಥವುಂಟಾಗಿದೆ. ಅರಳೆಯ ಗಂಟುಗಳಿಗೆ ಬೆಂಕಿ ಹಚ್ಚಿ, ಬೆಂಕಿ ಆರಿಸುವ ಯಂತ್ರಕ್ಕೆ ಕಲ್ಲನ್ನೆಸೆದರು. ಈಗ ೩೦ ಜನರು ಹಿಡಿಯಲ್ಪಟ್ಟಿರುವರು. ಪರಿಸ್ಥಿತಿಯು ಭಯಂಕರವಾಗಿದೆ.

ಒಳದೇಶ ವರ್ತಮಾನ.

—ಬಿಹಾರ ಮತ್ತು ಒರಿಸ್ಸಾ ಸಂಸ್ಥಾನದಲ್ಲಿಯ ಎಲ್ಲಾ ಡಿಸ್ಟ್ರಿಕ್ಟ ಮತ್ತು ತಾಲೂಕು ಬೋರ್ಡುಗಳ ಸಭೆಯು ಭಗಲಪುರದಲ್ಲಿ ೪ನೇ ತಾರೀಕಿನಲ್ಲಿ ಜರಗಿ ಸಾಂಕ್ರಾಮಿಕ ರೋಗಗಳನ್ನು ನಿವಾರಿಸುವ ಸಾಧನೆಗಳನ್ನು ಮಾಡುವುದಕ್ಕೆ ಎಂಟಿ ಮಲೆರಿಯಾ ಸೊಸೈಟಿ ಎಂಬ ಸಂಘವನ್ನು ಸ್ಥಾಪಿಸಬೇಕೆಂದೂ ಸಂಸ್ಥಾನದಲ್ಲಿ ಸ್ಥಾಪಿಸಿದ ಆಯುರ್ವೇದಿಕ್ ಆಸ್ಪತ್ರೆಗಳಿಗೆ ಆಯುರ್ವೇದಿಕ್ ಮದ್ದುಗಳನ್ನು ಒದಗಿಸುವುದಕ್ಕಾಗಿ ಒಂದು ಆಯುರ್ವೇದಿಕ್ ಫಾರ್ಮಸಿಯನ್ನು ಎಲ್ಲಾ ಬೋರ್ಡುಗಳ ಧನಸಂಚಯದಿಂದ ಇಡಬೇಕಾಗಿಯೂ, ವೈದ್ಯರಿಗೆ ಧನಸಹಾಯವನ್ನು ಮಾಡಬೇಕಾಗಿಯೂ, ಪ್ರಾಥಮಿಕ ವಿದ್ಯೆಯನ್ನು ಧರ್ಮಾರ್ಥವಾಗಿ ಕೊಡುವುದಕ್ಕಾಗಿ ಹಣ ಒದಗಿಸಬೇಕೆಂದೂ, ಡಿಸ್ಟ್ರಿಕ್ಟ ಬೋರ್ಡುಗಳಿಗೆ ವಹಿಸಿಕೊಡದ ಖಾಸಗಿ ಬಾವಿ, ಕೆರೆಗಳನ್ನು ದುರುಸ್ತಿಪಡಿಸಲಿಕ್ಕೆ ಬೋರ್ಡಿನ ಸ್ವಲ್ಪ ಹಣ ಒದಗಿಸಬೇಕೆಂದೂ, ಮಹಮ್ಮದಿಯರ ಕೊರಾನ್ ಶಾಲೆಗಳ ಮೇಲುಶನಿಖ ನೋಡುವುದಕ್ಕಾಗಿ ಮೌಲವಿಗಳನ್ನು ನೇಮಿಸಿದಂತೆ ಸಂಸ್ಕೃತ ಪಾಠಶಾಲೆಗಳ ಮೇಲ್ವಿಚಾರ ನೋಡುವುದಕ್ಕೆ ಸಂಸ್ಕೃತ ಪಂಡಿತರನ್ನು ನಿಯಮಿಸಬೇಕೆಂದೂ ಆಲೋಚಿಸಲಾಗಿಯದೆ.

—ಬಂಗಾಳದ ಬಾರಿಸಾಲ ಜಿಲ್ಲೆಯ ಗುಜಾರಿಯ ಎಂಬ ಹಳ್ಳಿಯಲ್ಲಿ ಕಡವಾಲಿ ಎಂಬವನು ತನ್ನ ದನಕರುಗಳನ್ನು ಹೊಡಕೊಂಡು ಬರುವಾಗ ಅಬ್ದುಲ ಎಂಬ ಮುಸಲ್ಮಾನನೂ ಇನ್ನು ಐದು ಮಂದಿಯೂ ಅವನ ಮೇಲೆ ಬಿದ್ದು ಅವನನ್ನು ಕೊಂದುಹಾಕಿ ದನಕರುಗಳನ್ನು ತೆಗೆದುಕೊಂಡುಹೋದರು. ಸೆಶ್ಶನ್ ಜಡ್ಜರು ಇವರಲ್ಲಿ ನಾಲ್ವರಿಗೆ ೩ ವರ್ಷದ ಕಠಿಣ ಸಜೆಯನ್ನು ವಿಧಿಸಿರುವರು.

—ಬಂಗಾಳದ ಪಾಟ್ನಾ ಎಂಬಲ್ಲಿರುವ ಕಾಳಿ, ಸರಸ್ವತಿ, ಶಿವ ಎಂಬ ಮೂರು ದೇವಸ್ಥಾನಗಳಲ್ಲಿರುವ ವಿಗ್ರಹಗಳನ್ನು ರಾತ್ರಿಯಲ್ಲಿ ಯಾರೋ ಹೊರಗೆ ತೆಗೆದು ಒಡೆದುಹಾಕಿರುವರು. ಮೇಜಿಸ್ಟ್ರೇಟರೂ, ಪೋಲಿಸ ಅಧಿಕಾರಿಗಳೂ ತನಿಖೆ ನಡಿಸುತ್ತಿರುವರು.

—ಪೂನೆಯ ಹತ್ತಿರ ಮುಳಶಿಪೇಟೆಯಲ್ಲಿ ಟಾಟಾ ಕಂಪೆನಿಯವರು ಕಟ್ಟಿಸಿದ [illegible] ಮಲ್ಲಿಕಾರ್ಜುನ ದೇವಸ್ಥಾನವನ್ನು ಒಡೆದಿಟ್ಟು, ಕಟ್ಟುವಾಗ ತೆಗೆದಿದ್ದರು. ಇದನ್ನು ಒಂದು ಹೊಸ ಸ್ಥಳದಲ್ಲಿ ಕಟ್ಟುವುದಕ್ಕಾಗಿ ಸರಕಾರದ ಮುಖಾಂತರ ಟಾಟಾ ಕಂಪೆನಿಯವರ ಆದನ್ನು ಕಟ್ಟಿಸಲಿಕ್ಕೆ ಬೇಕಾಗುವ ೫೦,೦೦೦ ರೂಪಾಯಿಯನ್ನು ಕೊಡಬೇಕೆಂದು ಮನವಿಮಾಡುವುದಕ್ಕಾಗಿ ಮೂಳಗ್ರಾಮದಲ್ಲಿ ಒಂದು ಸಭೆಯು ಕೂಡಿ ನಿರ್ಧರಿಸಿರುವರು.

—ಡಿಲ್ಲಿಯಲ್ಲಿ ಪ್ರಾಥಮಿಕ ವಿದ್ಯೆಯನ್ನು ಹುಡುಗರಿಗೆ ಕಡ್ಡಾಯವಾಗಿಯೂ ಧರ್ಮಾರ್ಥವಾಗಿಯೂ ಕೊಡುವುದಕ್ಕಾಗಿ ಡಿಲ್ಲಿ ಪಟ್ಟಣವನ್ನು ೯ ವಾರ್ಡುಗಳಾಗಿ ವಿಭಾಗಿಸಿರುವರು. ಇವುಗಳಲ್ಲಿ ಮುಸಲ್ಮಾನರಿರುವ ಎರಡು ವಾರ್ಡುಗಳ ಜನಸಂಖ್ಯೆಯ ಸಂಪೂರ್ಣ ಲೆಕ್ಕತೆಗೆದು ಆ ಎರಡು ವಾರ್ಡುಗಳಲ್ಲಿ ಜುಲ್ಯಾ ೧ನೇ ತಾರೀಕಿನಿಂದ ಪ್ರಾಥಮಿಕ ವಿದ್ಯೆಯನ್ನು ಕಡ್ಡಾಯವಾಗಿಯೂ ಧರ್ಮಾರ್ಥವಾಗಿಯೂ ಕೊಡಲಿಕ್ಕೆ ಆರಂಭಿಸಿರುವರು. ಉಳಿದ ೭ ಹಿಂದೂ ವಾರ್ಡುಗಳಲ್ಲಿ ಎರಡರ ಸಂಪೂರ್ಣ ಲೆಕ್ಕ ತೆಗೆದು ಆಗಿದೆ. ಅಕ್ಟೋಬರ ೧ನೇ ತಾರೀಕಿನಿಂದ ಈ ಎರಡು ವಾರ್ಡುಗಳಲ್ಲಿ ಇದೇ ಕ್ರಮವು ಜಾರಿಗೆ ಬರುವದು. ಉಳಿದ ೫ ವಾರ್ಡುಗಳ ವಿಷಯದಲ್ಲಿಯೂ ಹೀಗೆಯೇ ಮಾಡಲ್ಪಡುವರು. ಹುಡುಗಿಯರಿಗೆ ಪ್ರಾಥಮಿಕ ವಿದ್ಯೆಯನ್ನು ಕೊಡುವುದಕ್ಕಾಗಿ ಈಗಿರುವ ೭ ಹುಡುಗಿಯರ ಶಾಲೆಗಳಲ್ಲದೆ ಇನ್ನು ೫ ಹೊಸ ಹುಡುಗಿಯರ ಶಾಲೆಯನ್ನು ತೆರೆದಿರುವರು.

—ಕಳೆದ ಮಲಬಾರು ಮಾಪಿಳ್ಳಾ ದಂಗೆಯಲ್ಲಿ ಸೇರಿ ಶಿಕ್ಷೆವಿಧಿಸಲ್ಪಟ್ಟು ಈಗ ಕೊಯಮತ್ತೂರು ಸೆಂಟ್ರಲ್ ಜೈಲಿನಲ್ಲಿರುವ ೧೬ ಮಂದಿ ಮಾಪಿಳ್ಳೆಯರು ತಮ್ಮನ್ನು ಸೆರೆಮನೆಯಿಂದ ಬಿಟ್ಟುಬಿಡಬೇಕೆಂದು ಮದರಾಸು ಗವರ್ನರರಿಗೆ ಮನವಿಮಾಡಿರುವರು. ಜೈಲು ಸುಪರಿಂಟೆಂಡೆಂಟರು ಅವರನ್ನು ಬಿಡಬಹುದೆಂದು ಶಿಫಾರಸು ಮಾಡಿರುವರಂತೆ.

—ಮೈಸೂರಿನ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಮೆಂಬರರಾದ ಚಾಯಣ್ಣನವರು, ಮೈಸೂರು ರಾಜ್ಯದಲ್ಲಿ ಮಾಂಸಕ್ಕಾಗಿ ಗೋವುಗಳನ್ನು ಕೊಲ್ಲಬಾರದಾಗಿ ಹುಕುಂ ಕೊಡಬೇಕೆಂದು ಒಂದು ಠರಾವನ್ನು ತಂದರು. ಆಗ ದಿವಾನರು ನಾನು ಮುಸಲ್ಮಾನನಾದಾಗ್ಯೂ ಮಾಂಸಕ್ಕಾಗಿ ಮೃಗಗಳನ್ನು ಕೊಲ್ಲಬಾರದಾಗಿ ನನ್ನ ಮನಸ್ಸು. ಆದರೆ ಮಾಡತಕ್ಕದ್ದೇನು. ನಾನು ದಿವಾನನಾಗಿರುವುದರಿಂದ ನನ್ನ ಕೈಕಟ್ಟಿದಂತಾಗಿದೆ ಎಂದು ಹೇಳಿದರು. ಎಲ್ಲರೂ ನಗಾಡಿದರು. ಅನಂತರ ಈ ಸಂಗತಿಯ ವಿಷಯ ಆಲೋಚಿಸುವುದಕ್ಕಾಗಿ ಒಂದು ಕಮಿಟಿಯು ನಿರ್ಣಯಿಸಲಾಯಿತು.

—ಇಂಗ್ಲೆಂಡಿನಲ್ಲಿರುವ ಸೆಂಡಹರ್ಸ ಮಿಲಿಟರಿ ಕೊಲೇಜಿಗೆ ಎಂಗ್ಲೋ ಇಂಡಿಯನರೂ ಸೇರಬಹುದೆಂದು ಹುಕುಂ ಆಗಿಯದೆ. ಕಳೆದ ಚುನಾವಣೆಯಲ್ಲಿ ಸಪ್ಟಂಬರ ೧ನೇ ತಾರೀಕಿಗೆ ಆ ಕೊಲೇಜಿಗೆ ಸೇರಲಿಕ್ಕೆ ೮ ಮಂದಿ ಇಂಡಿಯನ್ ಹುಡುಗರನ್ನು ಚುನಾಯಿಸಿರುವರು. ಮುಂದಿನ ಚುನಾವಣೆಯು ಸಪ್ಟಂಬರ ೨ರಲ್ಲಿ ನಡಿಯುವುದು.

—ಯುನ್ಯಾಟೆಡ್ ಪ್ರೊವಿನ್ಸಸಿನ ಗವರ್ನರರು ೩½ ತಿಂಗಳ ರಜೆಯ ಮೇಲೆ ಹೋಗುವದರಿಂದ ಸರ್ ಸಾಮುವೇಲ್ ಓಡೊನೆಲ್ ಎಂಬವರು ಆ ಸಮಯದಲ್ಲಿ ಗವರ್ನರರಾಗಿರಬೇಕೆಂದು ಅರಸರ ಅಪ್ಪಣೆಯಾಗಿದೆ.

—ಗುಜರಾಥಿನಲ್ಲಿ ಇತ್ತರ ವರೆಗೆ ಮಳೆಬಾರದೆ ಬಹಳ ಕಷ್ಟವಾಗಿದೆ. ಆಹಾರ ಜಿನಸುಗಳ ಕ್ರಯವು ಏರಿಯದೆ ದನಕರುಗಳಿಗೆ ಬೇಕಾದ ಹುಲ್ಲು ಸಿಗುವದಿಲ್ಲ. ದನಕರುಗಳನ್ನು ಬಹಳ ಕಡಿಮೆಕ್ರಯಕ್ಕೆ ಮಾರುತ್ತಾರೆ. ಕೆಲವರು ಅವುಗಳನ್ನು ತಮ್ಮ ಎದುರಿನಲ್ಲಿ ಸಾಯದಂತೆ ದೂರಪ್ರದೇಶಕ್ಕೆ ಅಟ್ಟಿಬಿಡುತ್ತಲಿದ್ದಾರೆ. ಭಾವನಗರ ರಾಜರು ಸೀರಿಗಾಗಿ ಬಾವಿಗಳನ್ನು ಆಳಮಾಡುತ್ತಿರುವರು.

—ಕಲ್ಕತ್ತದ ಆರಮೇನಿಯನ್ ಸ್ಟ್ರೀಟಿನಲ್ಲಿ ಒಬ್ಬ ಮಾರವಾಡಿ ಸಾಹುಕಾರನ ಭಂಡಸಾಲೆಯಿಂದ ನಾಲ್ಕು ಸಾವಿರ ರೂಪಾಯಿ ಕ್ರಯಬಾಳುವ ಪಟ್ಟೆ ವಸ್ತ್ರಗಳು ಕಳವಾಗಿ ಹೋಗಿವೆ. ಪೋಲಿಸ ತನಿಖೆಯು ನಡಿಯುತ್ತದೆ.

—ಬರುವ ಸಪ್ಟಂಬರ ತಿಂಗಳ ಲೀಗ್ ಒಫ್ ನೇಶನ್ಸಿನ ಸಭೆಗೆ ಇಂಡಿಯದ ಕಡೆಯಿಂದ ಪ್ರತಿನಿಧಿಗಳಾಗಿ ಸರ್ ವಿಲ್ಯಂ ವಿನ್‌ಸೆಂಟರೂ, ಕಪೂರಥಾಲಾ ಮಹಾರಾಜರೂ ಶೇಕ್ ಅಬ್ದುಲಕಾದರರೂ ಇಂಡಿಯಾ ಸರಕಾರದಿಂದ ಚುನಾಯಿಸಲ್ಪಟ್ಟಿರುವರು.

—ಕಲ್ಕತ್ತಾ ಪಟ್ಟಣದ ವೆಲ್ಲೆಸ್ಲಿ ಸ್ಟ್ರೀಟಿನಲ್ಲಿ ಸುಮಾರು ೫ ಲಕ್ಷ ರೂಪಾಯಿ ಖರ್ಚಿನಿಂದ ಕಟ್ಟಿಸಿದ ಗವರ್ನಮೆಂಟ ಇಸ್ಲಾಮಿಯಾ ಕೊಲೇಜಿನ ಪ್ರವೇಶ ಸಮಾರಂಭವು ಜುಲ್ಯಾ ೧ರಲ್ಲಿ ನಡಿಯಿತು. ಇದು ಮುಸಲ್ಮಾನ ಮಕ್ಕಳ ವಿದ್ಯಾಭಿವೃದ್ಧಿಗಾಗಿ ಮಾತ್ರವೇ ಕಟ್ಟಲ್ಪಟ್ಟ ಕೊಲೇಜಾಗಿದೆ. ಇದರಲ್ಲಿ ೪೦೦ ಮಂದಿ ಕೊಲೇಜು ವಿದ್ಯಾರ್ಥಿಗಳಿಗೆ ಸ್ಥಳವಿದೆ. ಸರಕಾರದವರು ಇದಕ್ಕೆ ತಿಂಗಳಿಗೆ ೬೦೦ರೂ. ಗ್ರೇಂಟ್ ಸೆಂಕ್ಷನ್ ಮಾಡಿಯದೆ. ರಿಕ್ಕರಿಂಗ್ ಕರ್ಚಿಗೆ ಒಂದು ವರುಷಕ್ಕೆ ಒಂದು ಲಕ್ಷ ನಾಲ್ವತ್ತೆರಡು ಸಾವಿರ ರೂಪಾಯಿ ಸೆಂಕ್ಷನಾಗಿಯದೆ.

—ಕಳೆದ ಜೂನ ೧೯ಕ್ಕೆ ಅಂತ್ಯವಾಗುವ ವಾರದಲ್ಲಿ ಬಂಗಾಳದಲ್ಲಿ ೨೩ ದರೋಡೆ ಕಳವುಗಳು ಆಗಿವೆ.

—ವ್ಯಾಸರೋಯರಾದ ಲೊರ್ಡ್ ಇರ್ವಿನರು ಬರುವ ೩೦-೩೧ ತಾರೀಕುಗಳಲ್ಲಿ ನಾಗಪುರವನ್ನು ಸಂದರ್ಶಿಸುವರು. ಆಗ ವರ್ಧಾದವರೂ ಬೇಸಾಯಗಾರರೂ ತಮ್ಮ ಹಾಲವಹಾಲೆಗಳನ್ನು ತೋರಿಸುವ ಒಂದು ಮನವಿಯನ್ನು ಅವರ ಮುಂದಿಡುವರು. ಇವರು ಎಗ್ರಿಕಲ್ಚರ ಕೊಲೆಜನ್ನು ಸಂದರ್ಶಿಸಿ ನಂತರ ಸಾಯನ್ಸ ಕೊಲೆಜಿನ ಬುನಾದಿಕಲ್ಲನ್ನು ಹಾಕುವರು. ಅಲ್ಲಿಂದ ರಾಮಟೆಕಾಕಿಗೆ ಹೋಗಿ ಅಲ್ಲಿರುವ ದೊಡ್ಡ ಕೆರೆಯನ್ನು ಸಂದರ್ಶಿಸುವರು.

—ರಾಜರ ಜನ್ಮದಿನದ ಗೌರವಾರ್ಥವಾಗಿ ವ್ಯಾಸರೋಯರ ಕೌನ್ಸಿಲ ಮೆಂಬರರಾದ ಸರ್ ಅಲೆಕ್ಸಾಂಡರ್ ಮದ್ದಿಮೇನರಿಗೆ ಕೆ. ಸಿ. ಎಸ್. ಐ. ಎಂಬ ಬಿರುದೂ, ಮದರಾಸು ಸರಕಾರದ ಮಿನಿಸ್ಟರರಿಗೆ [illegible] ಕೆ. ಸಿ. ಐ. ಇ., ಎಂಬ ಬಿರುದೂ, ಮದರಾಸು [illegible] ಕೆ. ಬಿ. ಇ., ಎಂಬ ಬಿರುದನ್ನೂ, ಮದರಾಸಿನ ಸಿ. ಐ. ಡಿ. [illegible] ಖಾನಬಹದೂರ್ ಗಯಾಸುದ್ದಿನ್ ಸೈಯದ್ [illegible] ಎಂ. ಎ. ಇ., ಎಂಬ ಬಿರುದನ್ನೂ, ಮೈಸೂರು ಯುನಿವರ್ಸಿಟಿಯ ವ್ಯಾಸ ಚೆನ್ಸಲರರಾದ ಡೋಕ್ಟರ್ ಬ್ರಜೇಂದ್ರನಾಥ ಶೀಲರಿಗೆ [illegible] ವಿಯೂ, ಮದರಾಸಿನ ಪಂಡಿತ [illegible] ಮಹಾಮಹೋಪಾಧ್ಯಾಯ ಎಂಬ ಬಿರುದನ್ನೂ ಕೊಟ್ಟಿರುವರು.

—ಕೋಮಿಲ್ಲಾ (ಬಂಗಾಳ) ಎಂಬಲ್ಲಿ ಕಳೆದ ತಾ. ೨೮ಕ್ಕೆ ಭಯಂಕರ ಬಿರುಗಾಳಿ ಬಿಟ್ಟು ದೊಡ್ಡ ಮಳೆಯಾಯಿತು. ಎಷ್ಟೋ ಮನೆಗಳ ಮೇಲಿನ ತಗಡುಗಳು ಗಾಳಿಪಟದಂತೆ ಹಾರಿ ದೂರದಲ್ಲಿ ಹೋಗಿ ಬಿದ್ದವು. ಇಬ್ಬರು ಮುಸಲ್ಮಾನ ಸ್ತ್ರೀಯರ ಮತ್ತು ಮೂವರು ಗಂಡಸರ ಮೇಲೆ ಸಿಡಿಲು ಬಿದ್ದು, ಅವರನ್ನು ಆಸ್ಪತ್ರೆಗೆ ಸಾಗಿಸಿದರು. [illegible]

—ಪೋಲಿಸರು ಮದ್ರಾಸಿನಲ್ಲಿ ಒಂದು ಮನೆಯನ್ನು ಶೋಧಿಸಿ ನೋಡಲು ಎಂಟಾಣೆ ಬೆಳ್ಳಿ ನಾಣ್ಯಗಳನ್ನು ಮಾಡುವ ಸಾಮಾನುಗಳನ್ನು ಕಂಡು ಹಿಡಿದು ಅವುಗಳನ್ನು ಜಪ್ತಿ ಮಾಡಿ, ಆರೋಪಿಗಳನ್ನು ಹಿಡಿದಿರುವರು.

—ಲಾರ್ಡ್ ಬರ್ಕನ್ ಹೆಡ್‌ರವರು ಪಾರ್ಲಿಮೆಂಟಿನ ಶಿಷ್ಟಮಂಡಲದ ಸಂಗಡ ಅಸ್ಟ್ರೇಲಿಯಕ್ಕೆ ಹೋಗಿ, ತಿರುಗಿ ಬರುವಾಗ ಹಿಂದುಸ್ಥಾನಕ್ಕೆ ಬಂದು ಹೋಗುವವರಿದ್ದಾರೆ.

—ಸಂಯುಕ್ತ ಪ್ರಾಂತದೊಳಗಿನ ಹರದೋಯಿ ಜಿಲ್ಲೆಯಲ್ಲಿ ಒಬ್ಬನು ತನ್ನ ಮಗನನ್ನೂ ಮತ್ತೊಂದು ಮಗಳನ್ನೂ ಎತ್ತಿನ ಗಾಡಿಯಲ್ಲಿ ಕುಳ್ಳಿರಿಸಿಕೊಂಡು ಒಂದು ಅಡವಿಯ ಮಾರ್ಗವಾಗಿ ಹೋಗುತ್ತಿರುವಾಗ ಮೂರು ಜನ ಕಳ್ಳರು ಅವನನ್ನು ತಡೆಕಟ್ಟಿದರು; ಆಗ ಅವನು ಸಮೀಪದಲ್ಲಿನ ಹಳ್ಳಿಗೆ ಹೋಗಬೇಕೆಂದು ಅತ್ತಕಡೆಗೆ ಗಾಡಿಯನ್ನು ತಿರುಗಿಸಿದನು. ಆಗ ಮೂವರಲ್ಲೊಬ್ಬನು ಅವನ ಕಡೆಗೆ ಬಂದೂಕು ಗುರಿಯಿಟ್ಟನು. ಮತ್ತೊಬ್ಬನು ಆ ಹುಡುಗಿಯ ಮೈಮೇಲಿನ ಆಭರಣಗಳನ್ನು ಬಿಚ್ಚಿಕೊಂಡನು. ಅಷ್ಟರಲ್ಲಿ ಅವನು ಸಹಾಯಕ್ಕೆ ತಕ್ಕ ಜನ ಬರಲು ಬೊಬ್ಬೆ ಹೊಡೆದನು; ಆಕ್ಷಣವೇ ಹಳ್ಳಿಯ ಜನರು ಓಡಿಬಂದು ಒಬ್ಬ ಕಳ್ಳನನ್ನು ಕೊಂದರು. ನಂತರ ಮತ್ತೊಬ್ಬನನ್ನು ಹಿಡಿದರು; ಅಷ್ಟರಲ್ಲಿ ಮೂರನೆಯವನು ಪಲಾಯನ ಮಾಡಿದನು.'

—ಸುಪ್ರಸಿದ್ಧರಾದ ಫೋರ್ಡ್ ಮೋಟಾರು ಕಂಪೆನಿಯವರು ೧೯೧೬ರ ಲಾಗಾಯತು ೧೯೨೪ರ ವರೆಗೆ ೧೬೦ ಲಕ್ಷ ಸವರಿನ್‌ಗಳ ಲಾಭವನ್ನು ಸಂಪಾದಿಸಿರುತ್ತಾರೆ. ಇದರಲ್ಲಿ ರಿಸರ್‍ವ್ (ಆಪದ್ಧನ) ಫಂಡ್ ಮೊದಲಾದವುಗಳಿಗೆ ಹಣವನ್ನು ಪ್ರತ್ಯೇಕಪಡಿಸಿದ ಮೇಲೆ ೧೧೬೦ ಲಕ್ಷ ಸವರಿನ್‌ಗಳ ನಿವ್ವಳ ನಫೆಯು ಒದಗಿರುವುದು. ಕಂಪೆನಿಯ ಷ್ಯಾರುಗಳಲ್ಲಿ ಹೆಚ್ಚು ಭಾಗವು ಹೆನ್ರಿ ಫೋರ್ಡರು, ಅವರ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿಯೇ ಇರುವುದರಿಂದ, ಪ್ರಪಂಚದಲ್ಲೆಲ್ಲಾ ಅವರ ಆದಾಯವೇ ಅತ್ಯಂತ ಹೆಚ್ಚಿನದೆಂದು ಗಣಿಸಲ್ಪಟ್ಟಿದೆ.

—ಒಬ್ಬ ಹೆಂಗಸನ್ನು ಕೊಲೆ ಮಾಡಿದ ತನ್ನ ಮಗನನ್ನು ಶಿಕ್ಷೆಯಿಂದ ತಪ್ಪಿಸುವುದಕ್ಕಾಗಿ ಒಬ್ಬ ಸಬ್ ಇನ್ಸ್‌ಪೆಕ್ಟರಿಗೂ ಒಬ್ಬ ಡಾಕ್ಟರಿಗೂ ಲಂಚವನ್ನು ಕೊಟ್ಟ ಸಾಹುಕಾರನಿಗೂ, ಅಗತ್ಯವಾದ ಕಾಗದಪತ್ರಗಳನ್ನು ಸೃಷ್ಟಿ ಮಾಡಿ ಶಿಕ್ಷೆಯನ್ನು ತಪ್ಪಿಸಿದ ಸಬ್ ಇನ್ಸ್‌ಪೆಕ್ಟರರಿಗೂ, ಸೂರತ್ ಸೆಷನ್ ಜಡ್ಜರು ಶಿಕ್ಷೆಯನ್ನು ವಿಧಿಸಿದ್ದರು. ಸಬ್ ಇನ್ಸ್‌ಪೆಕ್ಟರಿಗೆ ಆದ ಒಂದು ವರ್ಷದ ಕಠಿಣ ಸಜೆಯೂ ೫೦೦ ರೂಪಾಯಿಗಳ ಜುಲ್ಮಾನೆಯೂ ಸಾಲದೆಂದು ಬೊಂಬಾಯಿ ಗವರ್ನಮೆಂಟಿನವರು ಹೈಕೋರ್ಟಿಗೆ ಅಪೀಲ್ ಮಾಡಿದರು. ಇದರಿಂದ ಸಬ್ ಇನ್ಸ್‌ಪೆಕ್ಟರರ ಶಿಕ್ಷೆಯು ಎರಡು ವರ್ಷ ಕಠಿಣ ಸಜೆಕ್ಕೆ ಹೆಚ್ಚಿಸಲಾಗಿದೆ.

—ಇಂಗ್ಲೆಂಡಿನಲ್ಲಿ ಕಲ್ಲಿದ್ದಲು ಗಣಿಗಳ ಯಜಮಾನರಿಗೂ ಕೂಲಿಕಾರರಿಗೂ ಉಂಟಾಗಿದ್ದ ಮನಸ್ತಾಪವು ಇನ್ನೂ ಸರಿಯಾಗಿ ತೃಪ್ತಿಕರವಾಗಿ ಕೊನೆಗಂಡಿರುವುದಿಲ್ಲ. ಸರಕಾರದವರೂ ಇದರಲ್ಲಿ ಕೈಹಾಕಿ ಈಗ ಕಾನೂನೊಂದನ್ನು ಹಂಗಾಮಿಯಾಗಿ ಜಾರಿಯಲ್ಲಿ ತರಬೇಕೆಂದಿರುವರು. ಈ ಲಾಗಾಯ್ತು ಇನ್ನು ೫ ವರ್ಷಗಳ ಕಾಲ ಗಣಿಕೆಲಸಗಾರರು ಈಗ ದಿನವಹಿ ಮಾಡುತ್ತಿರುವ ೭ ಘಂಟೆಗಳ ಕೆಲಸಕ್ಕೆ ಬದಲಾಗಿ ೮ ಗಂಟೆಗಳ ಕಾಲ ಕೆಲಸ ಮಾಡಬೇಕೆಂಬುದೂ, ಹಾಗೆ ಕೆಲಸ ಮಾಡುವುದಾದರೆ ಮೊದಲಿನ ಕೂಲಿಯ ದರವೇ ಕೊಡಲ್ಪಡುವುದೆಂದೂ ಈ ಕಾನೂನಿನ ಸಾರಾಂಶವಾಗಿದೆ. ಇದಕ್ಕೆ ಕೆಲಸಗಾರರು ಒಪ್ಪುವುದಿಲ್ಲ. ಪುನಹ ದಾಂಧಳೆಗಳೇನಾದರೂ ನಡೆಯಬಹುದೆಂಬ ಶಂಕೆಯಿಂದ, ಪ್ರಜಾನೆಮ್ಮದಿಗೆ ಅವಶ್ಯವಾದ ಕಾನೂನುಗಳು ಇನ್ನೂ ಕೆಲವು ಕಾಲ ಜಾರಿಯಲ್ಲಿರತಕ್ಕದೆಂದು ಸರಕಾರದವರು ಪ್ರಕಟಿಸಿರುವರು.

—ಕಳೆದ ೩-೪ ವರ್ಷಗಳಿಂದಲೂ ಇಂದೂರಲ್ಲಿ ಸ್ಕಾಲುಗಳು ಪತ್ತೆಯಿಲ್ಲದೆ ಕಳವಾಗಿ ಹೋಗುತ್ತಾ ಇವೆ. ಈಗ ಕಳವಾದ ೮೦ ಸ್ಕಾಲುಗಳು ಒಂದು ವ್ಯಾಪಾರಿಯ ಮನೆಯಲ್ಲಿಡಲ್ಪಟ್ಟಿದ್ದು ಅವುಗಳು ಗೊತ್ತಾಗದಂತೆ ಬದಲಾಯಿಸುವ ಕೆಲಸವನ್ನು ಇಬ್ಬರು ಬೋಹರಿ ಜಾತಿಯ ತರುಣರು ಮಾಡುತ್ತಿದ್ದುದನ್ನು ಪೋಲಿಸರು ಶೋಧಿಸಿ, ಅವರನ್ನೂ ಮತ್ತೊಬ್ಬನನ್ನೂ ಹಿಡಿದಿರುವರು.

ದಕ್ಷಿಣ ಕನ್ನಡ.

ಮಂಗಳೂರು:—೧೯೨೫ನೇ ಇಸವಿಯ ನೆರೆಹಾವಳಿಯಿಂದ ಬೆಳೆ ನಷ್ಟವಾದವರಿಗೆ ಮಂಗಳೂರು ತಾಲೂಕಿನಲ್ಲಿ ೧೭೪೯ರೂ ೧೫೮. ಯನ್ನೂ, ಕಾಸರಗೋಡು ತಾಲೂಕಿನಲ್ಲಿ ರೂ. ೩-೩-೦ನ್ನೂ, ಉಪ್ಪಿನಂಗಡಿ ತಾಲೂಕಿನಲ್ಲಿ ರೂ. ೫-೪-೦ನ್ನೂ ಭೂಕಂದಾಯದಲ್ಲಿ ಕಡಿಮೆ ಮಾಡಿಯದೆ.

ಕಂಕನಾಡಿಯಲ್ಲಿ ಕ್ರೈಸ್ತ ಜುಸುಯಿಟ ಮಿಶನಿನವರು ಸ್ಥಾಪಿಸಿದ ಆಸ್ಪತ್ರೆಯ ಕಟ್ಟೋಣವನ್ನು ದೊಡ್ಡದಾಗಿ ಕಟ್ಟಿಸುವುದಕ್ಕಾಗಿ ಸರಕಾರವು ರೂ. ೫೭೮೦ ಸೆಂಕ್ಷನ್ ಮಾಡಿರುವರು. ಆಸ್ಪತ್ರೆಗಳನ್ನು ಕಟ್ಟಿಸಲಿಕ್ಕೆ ತಾಲೂಕು ಬೋರ್ಡುಗಳಿಗೆ ಹಣವಿಲ್ಲವಂತೆ!

ನವಯುಗದ ಎಡಿಟರರಾದ ರಾ ಅತ್ತಾವರ ಬಾಲಕೃಷ್ಣ ಶೆಟ್ರವರಿಗೆ ೨ನೇ ಕ್ಲಾಸ್ ಕೈಸರಿ ಹಿಂದ ಮೆಡಲು ಸಿಕ್ಕಿರುವದು. ಪುತ್ತೂರು ಸೆಂಟ್ರಲ್ ಬೇಂಕಿನ ಸೆಕ್ರಿಟರಿಯವರೂ, ಪುತ್ತೂರು ವಕೀಲರೂ ಆದ ಮಂಜೇಶ್ವರ ಅನಂತರಾಯರಿಗೆ ರಾವ್‌ಸಾಹೇಬ ಎಂಬ ಬಿರುದು ಸಿಕ್ಕಿಯತೆ. ರಾ। ಎಡತರೆ ಅಣ್ಣಪ್ಪ ಶೆಟ್ರಿಗೂ ಇದೇ ಬಿರುದು ಸಿಕ್ಕಿಯದೆ.

ನಾಳೆಯ ದಿವಸ ಇಲ್ಲಿಯ ಕೆನರಾ ಹಾಯ್‌ಸ್ಕೂಲಿನಲ್ಲಿ ಮ। ರಾ। ಅತ್ತಾವರ ಬಾಲಕೃಷ್ಣ ಶೆಟ್ರಿಗೆ ಕೈಸರ್ ಹಿಂದ್ ಎರಡನೇ ತರಗತಿಯ ಮೆಡಲು ದೊರಕಿದ್ದರಿಂದ ಅವರನ್ನು ಸತ್ಕರಿಸುವ ಬಗ್ಗೆ ಕೆನರಾ ಹ್ಯಾಸ್ಕೂಲ ಹಳೆಯ ವಿದ್ಯಾರ್ಥಿಗಳ ಸಂಘದ ಸಭೆಯು ಸಾಯಂಕಾಲ ೫-೩೦ ಘಂಟೆಗೆ ಸೇರಲಿಕ್ಕಿರುವುದು.

ತಾ. ೩-೭-'೨೬ಕ್ಕೆ ಅಂತ್ಯವಾಗುವ ವಾರದಲ್ಲಿ ಇಲ್ಲಿಯ ಮುನ್ಸಿಪಾಲಿಟಿಯ ಸರಹದ್ದಿನೊಳಗೆ ೨೫ ಮರಣಗಳು ಉಂಟಾದವು. ಇವುಗಳ ಪೈಕಿ ೫ ಪ್ಲೈಗಿನಿಂದುಂಟಾಗಿರುತ್ತದೆ.

ದಿವಂಗತ ದೇಶಬಂಧು ಚಿತ್ತರಂಜನ ದಾಸರ ಪುಣ್ಯದಿನವನ್ನು ಆಚರಿಸುವ ಬಗ್ಗೆ ತಾ. ೧೧-೭-'೨೬ನೇ ಆದಿತ್ಯವಾರ ಅಪರಾಹ್ನ ಘಂಟೆ ೪-೩೦ಕ್ಕೆ ಮಂಗಳೂರಲ್ಲಿ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಮಂಟಪದಲ್ಲಿ ಮಹಾಜನರ ಸಭೆಯು ಜರುಗುವುದು. ಸರ್ವರಿಗೂ ಸುಸ್ವಾಗತವಿದೆ.

ಎಲಿಜಬಲ್ ಲಿಸ್ಟಿನ ಪ್ರಕಾರ ಎಸ್. ಎಸ್. ಎಲ್. ಸಿ ಪರೀಕ್ಷೆಯಲ್ಲಿ ಕೆನರಾ ಹ್ಯಾಸ್ಕೂಲಿನಲ್ಲಿ ೭೯ ವಿದ್ಯಾರ್ಥಿಗಳಲ್ಲಿ ೫೮, ಗಣಪತಿ ಹ್ಯಾಸ್ಕೂಲಿನಲ್ಲಿ ೩೧ರಲ್ಲಿ ೧೭ ಮಂದಿ ಪಾಸಾಗಿರುತ್ತಾರೆ.

ಕಳೆದ ಶನಿವಾರ ನಡೆದ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನಲ್ಲಿ ಮಂಗಳೂರಿನ ಅಡ್ವೋಕೇಟ್ ಯುನಿವರ್ಸಿಟಿಯ ಸಬ್ ಕಮಿಟಿಯ ಕಾರ್ಯದರ್ಶಿಯವರ ಪತ್ರದ ಮೇರೆಗೆ ಕರ್ನಾಟಕಕ್ಕೆಂದು ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದೂ, ಪ್ರತ್ಯೇಕ ಪ್ರಾಂತ್ಯವನ್ನು ಸ್ಥಾಪಿಸಬೇಕೆಂದೂ ಮುಂಬಾಯಿ, ಕೊಡಗು, ಮತ್ತು ಮದ್ರಾಸ್ ಸರಕಾರಗಳಿಗೆ ವಿನಂತಿಸುವ ಸೂಚನೆಗಳು ಮಂಜೂರು ಮಾಡಲಾದುವು.

ಮಂಗಳೂರಿನಲ್ಲಿ ಇಂಟರ್‌ನೇಶನಲ್ ಕೋ-ಓಪರೇಟಿವ್ ಡೇ ಸಮಾರಂಭವು ಲೋಕಲ್ ಬೋರ್ಡು ಮತ್ತು ಪಂಚಾಯತ ಕೋರ್ಟುಗಳ ಇನ್ಸ್‌ಪೆಕ್ಟರ್ ಆದರಾದ ಶ್ರೀ. ಎನ್. ಗೋಪಾಲಸ್ವಾಮಿ ಐಯ್ಯಂಗಾರ್, ಬಿ. ಎ ಬಿ. ಎಲ್., ಇವರ ಅಧ್ಯಕ್ಷತೆಯಲ್ಲಿ ಕೊ-ಓಪರೇಟಿವ್ ಬಿಲ್ಡಿಂಗಿನಲ್ಲಿ ಕಳೆದ ಶನಿವಾರ ಸಂಜೆ ನಡಿಸಲ್ಪಟ್ಟಿತು. ಈ ಸಂದರ್ಭದಲ್ಲಿ ರಾಗಗಳಾದ ಪಿ ಎನ್. ಭಂಡಾರ್ಕರ್ ಬಿ. ಎ. ಎಲ್. ಎಲ್. ಬಿ., ಆರ್. ಎಮ್. ರೇ, ಬಾರ್ ಎಟ್. ಲೋ, ಉಳ್ಳಾಲ ಮಂಗೇಶ ರಾವ್ ಬಿ. ಎ. ಯಲ್. ಟಿ. ಇವರು ದಿನಾಚರಣೆಯ ಕುರಿತು ಮಾತಾಡಿದ ನಂತರ ಮಿ. ಸಿ. ಜೆ. ವಾರ್ಕಿ ಬಿ. ಎ. ಇವರು ದಿವಂಗತ ದಿವಾನ್ ಬಹದೂರ್ ಎಲ್. ಡಿ. ಸ್ವಾಮಿಕಣ್ಣುಪಿಳ್ಳೆಯವರ ಗುಣಕಥನವನ್ನು ಮಾಡಿದರು. ಸಹಕಾರಿ ಸಂಘಗಳ ರಿಜಿಸ್ಟ್ರಾರಾಗಿದ್ದ ಇವರ ಕೈಲಚಿತ್ರವು ನಂತರ ಮೂನ್ನ ಅಧ್ಯಕ್ಷರಿಂದ ಅನಾವರಣ ಮಾಡಲಾಯಿತು.

ನಮ್ಮ ಡಿವಿಜನಲ್ ಆಫೀಸರರಾದ ಎ. ಸಿ. ವುಡ್ ಹೌಸ್ ಬಿ. ಎ. ಇವರು ತತ್ಕಾಲಿಕ ಕಲೆಕ್ಟರರಾಗಿ ನೆಲ್ಲೂರಿಗೆ ವರ್ಗಾಯಿಸಲ್ಪಟ್ಟಿರುವರು.

ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿನ ಬರುವ ಚುನಾವಣೆಗೆ ಬಂಟರ ಯಾನೆ ನಾಡವರ ಜಾತಿಯಲ್ಲಿ ಉಮೇದ್ವಾರರಾಗಿ ಎದುರು ಬಂದವರ ಪೈಕಿ ರಾ। ಅತ್ತಾವರ ಬಾಲಕೃಷ್ಣಶೆಟ್ರು ಒಬ್ಬರನ್ನೇ ಈ ಸಲ ಉಮೇದ್ವಾರರಾಗಿ ನಿಲ್ಲಿಸಿ ಸಹಾಯಮಾಡಬೇಕೆಂದು ಕಳೆದ ತಾ. ೪ನೇ ಆದಿತ್ಯವಾರ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಕೂಡಿದ ಬಂಟರ ಯಾನೆ ನಾಡವರ ಅಭಿವೃದ್ಧಿ ಸಂಘದ ಸಭೆಯಲ್ಲಿ ಸರ್ವಸಮ್ಮತದಿಂದ ನಿರ್ಣಯಿಸಿರುತ್ತದೆ.

ಬಂಟವಾಳ:—ಇಲ್ಲಿಂದ ತುಂಬೆಗೆ ಹೋಗುವ ಮಾರ್ಗದಲ್ಲಿದ್ದ ಕೆಸರಿನ ಮಣ್ಣನ್ನು ತೆಗೆದು ಗದ್ದೆಗಳಲ್ಲಿ ಜಮೆಯಾಗಿದ್ದ ಹೊಯಿಗೆಯನ್ನು ಹಾಕಿ ಜನರಿಗೆ ಹೋಗಿ ಬರಲಿಕ್ಕೆ ಅನುಕೂಲಮಾಡಿರುತ್ತಾರೆ. ಗಾಡಿಗಳೂ ಸಾಧಾರಣ ಮಟ್ಟಿಗೆ ಹೋಗಬಹುದು. ಇದರ ಪೂರ್ಣ ದುರುಸ್ತಿಯು ಇನ್ನೂ ಆಗಲಿಕ್ಕಿದೆಯೆಂದು ಕಾಣುತ್ತದೆ.

ಈ ಪೇಟೆಯಲ್ಲಿ ಮಾರ್ಗ ದುರುಸ್ತಿ ಮಾಡುವ ಕೆಲಸ ನಡಿಯುತ್ತಿದೆ. ಈ ವರ್ಷ ಹಾಳಾದ ಭಾಗದಲ್ಲಿ ಬೋರ್ಡರ್ಸ್ ಹಾಕಿ ಅದರ ಮೇಲೆ ಜಲ್ಲಿಕಲ್ಲನ್ನು ಹಾಕಿರುತ್ತಾರೆ. ಆದರೆ ಈ ಬೋರ್ಡರುಗಳನ್ನು ಸರಿಯಾಗಿ ಕೂತುಕೊಳ್ಳಿಸದೆ ಹಾಗೆಯೇ ರೋಲರ್ ಬಳಿಯುತ್ತಾರೆ. ಈ ಪೇಟೆಯಲ್ಲಿ ಮಾರ್ಗ ದುರುಸ್ತಿ ಮಾಡುವ ಕೆಲಸವು ಬರೇ ಪಡ್ಪೋಕಿ ರೀತಿಯಲ್ಲಿ ನಡಿಯುತ್ತದೆ. ಆದುದರಿಂದ ಈ ತರದ ಹಾಳು ರೀತಿಯಲ್ಲಿ ಮಾರ್ಗ ದುರುಸ್ತಿ ಮಾಡದಂತೆ ಡಿಸ್ಟ್ರಿಕ್ಟ್ ಬೋರ್ಡಿನವರು ಜಾಗ್ರತೆ ತೆಗೆದುಕೊಳ್ಳುವುದು ಒಳ್ಳೇದು. ಇಲ್ಲವಾದರೆ ಮಾರ್ಗ ದುರುಸ್ತಿಗೆ ಖರ್ಚು ಮಾಡಿದ ಹಣವು ನೀರಿನ ಮೇಲೆ ಹೋಮ ಮಾಡಿದಂತಾಗುವುದು.

ಇಲ್ಲಿಯ ಅಯ್ಯನಾಯ್ಕರ ಓಣಿಯಲ್ಲಿ ಓಣಿಯನ್ನು ಎತ್ತರ ಮಾಡುವುದಕ್ಕಾಗಿ ಗದ್ದೆಯ ಮಣ್ಣನ್ನು ತುಂಬಿಸಿದ್ದರು. ಇದು ಈಗ ಕೆಸರಾಗಿ ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಗೆ ಹೋಗುವ ಹುಡುಗರೂ, ಟೆಂಪಲ್ ಸೆಕೆಂಡರಿ ಶಾಲೆಗೆ ಹೋಗುವ ಹುಡುಗರೂ ಓಣಿಯ ನಿವಾಸಿಕರೂ, ಬಂಡಾರಬೆಟ್ಟಿಗೆ ಹೋಗುವ ಹೆಂಗಸರೂ, ಗಂಡಸರೂ ಮಕ್ಕಳೂ ಬಹಳ ಕಷ್ಟದಿಂದ ನಡಿಯಬೇಕಾಗುತ್ತದೆ. ಶಾಲಾ ಮಕ್ಕಳು ಅಲ್ಲದೆ ಅನೇಕ ಜನರು ಕಾಲುಜಾರಿ ಬೀಳುತ್ತಿರುವರು. ಬಂಟವಾಳ ಟೌನ್ ರೋಡಿಗೆಂದು ಬಜೆಟಿನಲ್ಲಿಟ್ಟ ಸ್ವಲ್ಪ ಹಣವನ್ನು ಇದಕ್ಕೆ ಖರ್ಚು ಮಾಡಿ ದುರುಸ್ತಿ ಪಡಿಸಿದರೆ ಬಹಳ ಉಪಕಾರವಿತ್ತು.

ಇಲ್ಲಿಯ ವ್ಯಾಪಾರಸ್ಥರ ಪರಸ್ಪರ ಸಹಾಯಕ ಸಂಘದ ಕೆಲಸವು ಇನ್ನೂ ಶುರುವಾಗಲಿಲ್ಲ.

ಈಗಿರುವ ಇಲ್ಲಿಯ ಹುಡುಗಿಯರ ಶಾಲೆಯ ಮಿಸ್ಟ್ರೆಸಾದ ಅಂಜಬಾಯಿಯವರಿಗೆ ಉಳ್ಳಾಲ ಬೋರ್ಡು ಹುಡುಗಿಯರ ಶಾಲೆಗೂ ಅಲ್ಲಿಯ ಮಿಸ್ಟ್ರೆಸಾದ ಅಪ್ಪಿಬಾಯಿಯವರಿಗೆ ಇಲ್ಲಿಯ ಶಾಲೆಗೂ ವರ್ಗವಾಗಿದೆ.

ಇಲ್ಲಿ ಇದೇ ತಿಂಗಳ ೭ಕ್ಕೆ ನೇತ್ರಾವತಿ ಹೊಳೆ ತುಂಬಿ ದಡ ಮಿಕ್ಕಿ ನೆರೆಯು ಪರದೆಯಿಂದ ಮುಖತೋರಿಸಿ ಒಂದು ರಾತ್ರಿಯೊಳಗೆ ಕಾಣದೆ ಹೋಯಿತು. ಅಂಗಡಿಗಾರರು ತಮ್ಮ ತಮ್ಮ ಸಾಮಾನುಗಳನ್ನು ಅಟ್ಟೆ ಎತ್ತರ ಸ್ಥಳದಲ್ಲಿ ಒಯ್ದರು. ಜವಳಿಕಾರರು ತಮ್ಮ ಅಂಗಡಿಯಲ್ಲಿರುವ ಜವಳಿಯನ್ನು ಕಟ್ಟಿ ಮಾಳಿಗೆಯಲ್ಲಿ ಇಟ್ಟುಬಿಟ್ಟರು. ಈ ದಿನ ರಾತ್ರಿ ಪೋಲಿಸ್ ಸಬ್ ಇನ್ಸ್‌ಪೆಕ್ಟರರಾದ ಮ। ರಾ। ಲಕ್ಷ್ಮೀನಾರಾಯಣಯ್ಯನವರು ಪಟ್ಟ ಶ್ರಮವು ಸ್ತುತ್ಯವೇ ಸರಿ.

ಸಿ. ಪಿ. ಸಿ. ಕಂಪೆನಿಯ ಮೆನೇಜರವರು ನೆರೆ ನೀರು ಏರುತ್ತದೆಂದು ಸೂಚನೆ ಇರುವಾಗಲೇ ಎಲ್ಲೆಲ್ಲಿ ನೀರು ಮಾರ್ಗವನ್ನು ಅಡ್ಡಕಟ್ಟುತ್ತದೋ ಅಲ್ಲಲ್ಲಿ ಆಚೆ ಈಚೆ ಕಡೆ ಮೋಟಾರು ಬಸ್ಸುಗಳನ್ನು ಇಡಿಸಿ ಪ್ರಯಾಣಸ್ಥರಿಗೆ ತೊಂದರೆ ಇಲ್ಲದಂತೆ ತಕ್ಕ ಏರ್ಪಾಡು ಮಾಡಿದರು. ಆದರೆ ನೆರೆ ಬಾರದೆ ರಾತ್ರಿಯಲ್ಲಿ ನೀರು ಇಳಿದು ಹೋಯಿತು.

ಕೊಕ್ಕಡ:—ಇದೇ ಜುಲಾಯಿ ೧ನೇ ತಾರೀಕಿನಿಂದ ಕೊಕ್ಕಡದಲ್ಲಿ ಒಂದು ಹೊಸ ಪೋಸ್ಟು ಆಫೀಸು ತೆರೆಯಲ್ಪಟ್ಟಿದೆ. ಅದ್ದರಿಂದ ಇನ್ನು ಮುಂದೆ ಕೊಕ್ಕಡ, ಕೌಕ್ರಾಡಿ, ನೆಲ್ಯಾಡಿ, ಹತ್ಯಡ್ಕ ಮತ್ತು ಆಸ್ಪಾಸು ಗ್ರಾಮಗಳಿಗೆ ಟಪಾಲು, ಮನಿಆರ್ಡರು, ಥಾಂಗಿ, ಭೀಮಾ ಇತ್ಯಾದಿ ಸೀದಾ ಕೊಕ್ಕಡಕ್ಕೆ ಕಳುಹಿಸಬಹುದು.

ಮೊಗ್ರಾಲ್:—ಇದೇ ತಿಂಗಳ ತಾ. ೪ರಲ್ಲಿ ಪೂರ್ವಾಹ್ನ ಘಂಟೆ ೮ಕ್ಕೆ ಮೊಗ್ರಾಲಲ್ಲಿ ಜಮೀನುದಾರರ ಮತ್ತು ಬೆಂಚು ಕೋರ್ಟು ಮೆಂಬರರಾದ ಜನಾಬ್ ಎಂ. ಟಿ. ಮಹಂಮದ ಸಾಹೇಬರ ಅಧ್ಯಕ್ಷತೆಯಲ್ಲಿ ಮುಸ್ಲಿಂ ಯುವಜನ ಸಂಘದ ಒಂದು ವಿಶೇಷ ಯೋಗವು ಜರಗಿ ಅದರಲ್ಲಿ ಕೆಳಗೆ ಸಮೂದಿಸಿರುವ ಠರಾವನ್ನು ಸಂಘದ ಸೆಕ್ರಿಟರಿಯಾದ ಜನಾಬ್ ಎಂ. ಎ. ಇಬ್ರಾಹಿಂಕುಂಞಿ ಸಾಹೇಬರು ತಂದದ್ದಕ್ಕೆ, ಜನಾಬ್ ಬಿ. ಪಿ. ಕುಂಞಾಲಿ ಸಾಹೇಬರು ಅನುಮೋದಿಸಿ ಸರ್ವಸಮ್ಮತದಿಂದ ನಿರ್ಣಯಿಸಲಾಯಿತು.

ನಿರ್ಣಯ:—"ನಮ್ಮ ಪ್ರತಿನಿಧಿ ಮತ್ತು ಮುಂದಾಳಾದ ಲೆಜಿಸ್ಲೇಟಿವ್ ಎಸೆಂಬ್ಲಿ ಮೆಂಬರರಾದ ಜನಾಬ್ ಮಹಮ್ಮದ್ ಶಮ್ನಾಡ್ ಸಾಹೇಬರು ಇಂಡಿಯನ್ ಲೆಜಿಸ್ಲೇಟಿವ್ ಎಸೆಂಬ್ಲಿಯ ತನ್ನ ಮೂರು ವರ್ಷಗಳ ಮುಂಚಿನ ಕಾಲದಲ್ಲಿ ಮಾಡಿದ ಅನುಪಮವಾದ ಸೇವೆಯನ್ನು ಈ ಸಂಘವು ಸ್ತುತಿಸುವದಲ್ಲದೆ ತಾನು ಈಗ ಮದ್ರಾಸು ಲೆಜಿಸ್ಲೇಟಿವ್ ಸಭೆಗೆ ಉಮೇದ್ವಾರರಾಗಿ ನಿಲ್ಲುತ್ತಾರೆಂದು ತಿಳಿಸಿರುವುದರಿಂದಲೂ, ಈ ಸಂಘದ ಮೊದಲಿನ ಒಂದು ಯೋಗದಲ್ಲಿ ಮಂಗಳೂರಿನ ಜನಾಬ್ ಎಚ್. ಎಮ್. ಪುತ್ತೂರು ಸಾಹೇಬರ ಉಮೇದ್ವಾರಿಕೆಗೆ ಸಹಾಯ ಮಾಡಬೇಕೆಂದು ಪಟ್ಟ ಅಭಿಪ್ರಾಯವು ಜನಾಬ್ ಶಮ್ನಾಡ್ ಸಾಹೇಬರು ಉಮೇದ್ವಾರರಾಗಿ ನಿಲ್ಲುತ್ತಾರೆಂದು ತಿಳಿಯದ ಕಾರಣದಿಂದ ಆದ್ದರಿಂದಲೂ, ಮಿ। ಶಮ್ನಾಡರ ಉಮೇದ್ವಾರಿಕೆಯನ್ನು ಮನಃಪೂರ್ವಕವಾಗಿ ಪ್ರೋತ್ಸಾಹಿಸಬೇಕೆಂದೂ, ನಿರ್ಣಯಿಸುತ್ತದೆ." ಸದರಿ ಯೋಗದಲ್ಲಿ, ಈ ವಿಷಯದಲ್ಲಿ ಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡುವರೆ ಸೆಕ್ರಿಟರಿ, ಎಂ. ಎ. ಮಮ್ಮು (ಮಾಜಿ ಪಟೇಲ್) ಹಾಮಿದ್ ಹಸನ್, ಅಹಮ್ಮದ್ ಬೇರಂಗ್ಯ (ಮಾಜಿ ಪಟೇಲ್) ಬಿ. ಪಿ. ಕುಂಞಾಲಿ; ಸಿ. ಬಾವುಕುಂಞಿ ಮುಂತಾದವರಿಂದ ಆಗತ್ಯವಿದ್ದರೆ ಇನ್ನೂ ಹೆಚ್ಚಿಗೆ ಮೆಂಬರರನ್ನು ಸೇರಿಸಿಕೊಳ್ಳುವ ಅಧಿಕಾರದೊಂದಿಗೆ ಕೂಡಿದ ಒಂದು ಬಲವಾದ ಸಬ್ ಕಮಿಟಿಯನ್ನು ನೇಮಿಸಲಾಯಿತು.

ಉಡುಪಿ:—ಇಲ್ಲಿಯ ಶ್ರೀಮನ್ ಮಧ್ವಸಿದ್ಧಾಂತ ಸಂಸ್ಕೃತ ಮಹಾ ಪಾಠಶಾಲೆಯ ಪ್ರಿನ್ಸಿಪಾಲರಾದ ರಾ। ಹನುಮಂತಾಚಾರ್ಯರು ಎಲ್. ಟಿ. ಪರೀಕ್ಷೆ ಕಲಿಯುವುದಕ್ಕೆ ಮದರಾಸಿಗೆ ಹೋಗುವುದರಿಂದ ಇವರ ಕೆಲಸಕ್ಕೆ ರಾ। ಯು. ವೆಂಕಟಕೃಷ್ಣರಾವ್ (B. A. Honr) ರವರು ನೇಮಕವಾಗಿರುವರು.

ಪಳ್ಳಿಕೆರೆ:—ಇಲ್ಲಿಯ ಗ್ರಾಮಪಂಚಾಯತ ಕೋರ್ಟಿನ ಖಾಲಿ ಬಿದ್ದ ಎರಡು ಮೆಂಬರರು ಸ್ಥಾನಗಳಿಗೆ ರಾ। ಕರ್ತಕುಟ್ಟಿ, ಮತ್ತು ನರಹರಿ ಶಾನುಭಾಗರನ್ನು ಮೆಂಬರರಾಗಿ ೨೯-೬-'೨೬ರಲ್ಲಿ ಚುನಾಯಿಸುತ್ತಾರೆ.

ಕಾಸರಗೋಡು:—ಇಲ್ಲಿಯ ಬೋರ್ಡು ಹ್ಯಾಸ್ಕೂಲಿಂದ ಸ್ಕೂಲಫ್ಯಾನಲ್ ಪರೀಕ್ಷೆಗೆ ಹೋದ ಹದಿನಾಲ್ಕು ಮಂದಿ ವಿದ್ಯಾರ್ಥಿಗಳಲ್ಲಿ ಎಲ್ಲರೂ ತೇರ್ಗಡೆಪಟ್ಟಿರುತ್ತಾರೆ.

ಕಾಸರಗೋಡು ತಾಲೂಕು ಬೋರ್ಡು ಮೆಂಬರರಾದ ಕುಂಞ್‌ಕಲಂದನ್ ಸಾಹೇಬರವರು, ಚೆರ್ವತ್ತೂರು ರೈಲುವೆ ಸ್ಟೇಶನಿನಿಂದ ಪಡ್ನೆಗ್ರಾಮಕ್ಕೆ ಒಂದು ರಾಜರಸ್ತೆಯನ್ನೂ, ತಕ್ಕಿಲ ಗ್ರಾಮದ ಬೆಂದಾದ ತೋಡಿಗೆ ಒಂದು ಸೇತುವೆಯನ್ನೂ, ತಕ್ಕಿಲ ಗ್ರಾಮದಲ್ಲಿ ತೋಡಿಗೆ ಒಂದು ಸೇತುವೆಯನ್ನೂ ಚವನ್ನಾಡು ಗ್ರಾಮದ ಮೇಲ್ಪರಂಬು ಎಂಬಲ್ಲಿಗೆ ಹೋಗಲಿಕ್ಕೆ ಒಂದು ರಸ್ತೆಯನ್ನೂ ಮಾಡಿಸಬೇಕೆಂಬ ಠರಾವನ್ನು ಬರುವ ತಾಲೂಕು ಬೋರ್ಡು ಮೀಟಿಂಗಿನಲ್ಲಿ ತರಲಿರುವರು.

—: ಸ್ವೀಕಾರ. :—

ಡಿಸ್ಟ್ರಿಕ್ಟ ಹೆಲ್ತ್ ಎಂಡ್ ವೆಲ್‌ಫೆರ್ ಎಸೋಸಿಯೇಶನಿನವರ ೧೯೨೪-೨೫ನೇ ಇಸವಿಯಲ್ಲಿ ನಡೆದ ಕಾರ್ಯಕ್ರಮಗಳ ವರ್ಷಾವಧಿ ರಿಪೋರ್ಟು.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಪ್ರೊಗ್ರೆಸ್ಸಿವ್ ಪಾರ್ಟಿ ಕಮಿಟಿಯ ವರದಿ. ಇದರ ವಿಮರ್ಶೆಯನ್ನು ಬರುವ ಸಂಚಿಕೆಯಲ್ಲಿ ಕೊಡುವೆವು.

ಮಂಗಳೂರು ಡಿಪ್ರೆಸ್ಡ್ ಕ್ಲಾಸಿಸ್ ಮಿಶನಿನವರ ೨೫ನೇ ಇಸವಿಯ ವರ್ಷಾವಧಿ ರಿಪೋರ್ಟು.

(೪ನೇ ಪೇಜಿಯಿಂದ ಮುಂದುವರಿಯುವುದು.)

(೫) ಜಿಲ್ಲೆಯ ನಿವಾಸಿಕರ ಆರೋಗ್ಯಕ್ಕಾಗಿ ಹೆಲ್ತ ಆಫೀಸರರನ್ನು ನಿಯಮಿಸುವುದು.

(೬) ತಾಲೂಕು ಬೋರ್ಡುಗಳಿಗಾಗಿ ಸೆಂಟ್ರಲ್ ಹೆಲ್ತ ಇಲಾಖೆಗಳನ್ನು ಇಡುವುದು. ಅಂದರೆ ಡಾಕ್ಟರರ, ನರ್ಸುಗಳ, ಮಿಡ್‌ವೈಫುಗಳ ಮತ್ತು ವೆಕ್ಸಿನೇಟರುಗಳ ರಿಜರ್ವ ಸ್ಟಾಫವನ್ನು ಇಡುವುದು.

(೭) ನರ್ಸುಗಳನ್ನು, ಮಿಡ್‌ವೈಫುಗಳನ್ನು ವೆಕ್ಸಿನೇಟರುಗಳನ್ನು ತರಬೇತುಮಾಡಿಸುವುದು.

ಇವುಗಳಲ್ಲಿ ನಮ್ಮ ಡಿಸ್ಟ್ರಿಕ್ಟ ಬೋರ್ಡಿನವರು ಇಷ್ಟರ ವರೆಗೆ ಮಾಡದೆ ಬಾಕಿ ಇರುವ ಕೆಲಸಗಳಲ್ಲಿ ರೈಲುವೇಗಳನ್ನು ಮಾಡಿಸುವ ಕೆಲಸವು ಒಂದಾಗಿದೆ. ರೈಲುವೆಗಳನ್ನು ಮಾಡಿಸಿದರೆ ರೈಲುವೆ ಖರ್ಚು ಕಳೆದು ಉಳಿದ ಹಣವನ್ನು ಜಿಲ್ಲೆಯ ಇತರ ಸೌಕರ್ಯಗಳಿಗೆ ಉಪಯೋಗಿಸಬಹುದು. ಏನೂ ಪ್ರಯೋಜನವಿಲ್ಲದೆ ಹಾಳಾಗಿಹೋಗುವ ಶಿರಾಡಿ ಸುಬ್ರಮಣ್ಯ ಮಳೆಗಳಲ್ಲಿರುವ ಮೋಪಿನ ಮರಗಳನ್ನು ಕಟ್ಟಿಗೆಗೆ ಬೇಕಾದ ಮರಗಳನ್ನು ಕರಾವಳಿಗೆ ತರಬಹುದು. ಬಂಜರುಬಿದ್ದಿರುವ ಉಪ್ಪಿನಂಗಡಿ ತಾಲೂಕಿನ ಭಾಗವನ್ನು ಬೇಸಾಯಕ್ಕೆ ಯೋಗ್ಯವಾಗುವಂತೆ ಮಾಡಿ ಅಭಿವೃದ್ಧಿಪಡಿಸಬಹುದು. ಅನೇಕ ತರದ ಮರದ ಕೈಗಾರಿಕೆಗಳು ಉಪ್ಪಿನಂಗಡಿ ತಾಲೂಕಿನಲ್ಲಿ ಹುಟ್ಟುವವು. ಇದರಿಂದಲೂ ಬೋರ್ಡಿಗೆ ಟೆಕ್ಸುಗಳು ಸಿಕ್ಕುವವು. ಬೇಸಾಯವು ಹೆಚ್ಚಾಗಿ ಸರಕಾರದ ಕಂದಾಯವೂ ಹೆಚ್ಚಾಗಿ ಊಟಕ್ಕೆ ಬೇಕಾದ ಅಕ್ಕಿಯೂ ಈಗಿನಕ್ಕಿಂತಲೂ ಹೆಚ್ಚಾಗಿ ಸಿಕ್ಕುವುದು. ಆದ್ದರಿಂದ ಡಿಸ್ಟ್ರಿಕ್ಟ ಬೋರ್ಡಿನವರು ಇಷ್ಟರ ವರೆಗೆ ಮಾಡದೆ ಬಾಕಿ ಇಟ್ಟಿರುವ ಬೋರ್ಡಿನವರ ಕೆಲಸಗಳಲ್ಲಿ ಒಂದಾದ ರೈಲುಮಾರ್ಗಗಳ ಕೆಲಸವನ್ನು ಮಾಡುವುದು ಡಿಸ್ಟ್ರಿಕ್ಟ ಬೋರ್ಡಿನವರ ಕರ್ತವ್ಯವಾಗಿದೆ.

ವಿಚಿತ್ರ ಇಗರ್ಜಿಯೂ ಅದರ ಪಾದರಿಯೂ.

ಸ್ವಿಜರ್‌ಲೆಂಡಿನ ಸಾಮನಾಂ ಎಂಬ ಹಳ್ಳಿಯಲ್ಲಿ ಒಂದು ಇಗರ್ಜಿ ಇದೆ. ಇದರಲ್ಲಿ ಒಬ್ಬ ಮುದುಕನು ಒಂದು ಆದಿತ್ಯವಾರ ಬಿಟ್ಟು ಇನ್ನೊಂದು ಆದಿತ್ಯವಾರ ಪ್ರಸಂಗ ಮಾಡುವನು. ಪ್ರಸಂಗಮಾಡುವವನೂ ಕೇಳುವವನೂ ಅವನೇ. ಸುಮಾರು ೭೫ ವರುಷಗಳ ಹಿಂದೆ ಈ ಗ್ರಾಮದಲ್ಲಿ ಪ್ರೊಟೆಸ್ಟಾಂಟರೂ ರೋಮನ್ ಕಥೋಲಿಕರೂ ವಾಸಮಾಡಿಕೊಂಡಿದ್ದರು. ಎರಡೂ ಕಡೆಯವರು ಕೂಡಿ ಹಣ ಕೂಡಿಸಿ ಒಂದು ಇಗರ್ಜಿಯನ್ನು ಕಟ್ಟಿಸಿದರು. ಒಂದು ಹಳೆ ಗಂಟೆಯನ್ನು ತೆಗೆದುಕೊಂಡರು. ಒಂದೊಂದು ಆದಿತ್ಯವಾರ ಒಬ್ಬೊಬ್ಬರು ಇಗರ್ಜಿಗೆ ಬರುವದೆಂದು ನಿಶ್ಚಯಿಸಿದರು. ಇಗರ್ಜಿಯ ಹತ್ತಿರ ಒಂದು ಹೂಣಿಯುವ ಸ್ಥಳವನ್ನು ಕಯಿರಿಸಿದರು.

ಕೆಲವು ವರುಷಗಳಲ್ಲಿ ಪ್ರೊಟೆಸ್ಟಾಂಟರಲ್ಲಿ ಕೆಲವರು ಬೇರೆ ಗ್ರಾಮಕ್ಕೆ ಹೋದರು. ಕೆಲವರು ಸತ್ತುಹೋದರು. ಒಬ್ಬ ಪಾದರಿ ಮಾತ್ರವೇ ಉಳಿದನು. ಈಗ ಇವನು ಆದಿತ್ಯವಾರ ಇಗರ್ಜಿಗೆ ಬಂದು ಬಾಗಿಲು ತೆರೆದು ಪ್ರಸಂಗಪೀಠವನ್ನು ಹತ್ತಿ ಪ್ರಸ್ತಾವನೆಮಾಡಿ ಅವನೊಬ್ಬನೇ ಕೇಳುತ್ತಾನೆ. ಪ್ರಾರ್ಥನೆ ಕೆಳಗಿಳಿದು ಬಾಗಿಲು ಹಾಕಿ ಮನೆಗೆ ಹೋಗುತ್ತಾನೆ. ಇವನ ಪ್ರಾಯ ಈಗ ಇಗರ್ಜಿಯ ಪ್ರಾಯವಾಗಿ ೭೫ ವರ್ಷ ಇದೆ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಂಕುಶಮು ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಪ್ರೋಭವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0,- ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀ ಮಿತ್ರನು!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.
For further particulars apply to the Secretary.
ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.
K. Venkat Rao,
Secretary

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For
Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಡೆ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟವೆ. ಇದರವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆರವಾನಿಸಬಹುದು. ಚರ್ಮದ ಅಥವಾ ಸಿಲ್ಕ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ ಎಸ್ಟೇಟ್, ಮುಂಬಯಿ.

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

PROPRIETOR RAJVAIDYA NARAYANJI KESHAVJI
NO PRICE NO POSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರಿವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಚೈನಾ ಬಜಾರ್, ರೋಡ್, ಮದ್ರಾಸು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ

ವಜ್ರಾಂಗ-ಬಿಂದು

ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯೋಗ್ಯವಾದ ಮತ್ತು ಉಚ್ಚ ತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನಸ್ಖಲನ ಧಾತುವಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬವಳಿ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆನ್ನುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಸ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. ಹಿಪ್ಪರಗಿ, (ಜಿಲ್ಲಾ ಬೆಳಗಾಂವ.)

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಠಾರಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಬಜ್ವಾನೋಟು, ಮೆಮೊ ಒಫ್ ಕೊಸ್ಟ್ಸ್, ಮೆಮೊರಂಡಮ್ ಒಫ್ ಎಪ್ಪಿಯರೆನ್ಸ್, ಏಲಂ ಇಶ್ತಿಹಾರು, ಮಾರಾಟವನ್ನು ಕುರಿತು ಇಶ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳ್ ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಶ್ತಿಹಾರು, ಮಾರಾಟವನ್ನು ಕುರಿತು ಇಶ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ತೇರು ಬೀದಿ, ಮಂಗಳೂರು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ

— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಗುಊರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ತಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.



ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್‌ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸ

ಆಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 9 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 5 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜಿಸ್ತರ್ ರೇಶ್ಮೆ ಮಡಿಗಳು, ಪಾರ್ಮಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಪಾಜಲಿಂಗ, ಜಾಘಂಟೆ, ಶಾಳ, ಪನ್ನೀರ್‌ದಾಣಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯಂ. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವುದಕ್ಕೂ ಒಂದು ದೇಶದ ಮರ್ಮಶಾಸ್ತ್ರವು ಇರುವುದು. ಅಂಥಾ ಪುಸ್ತಕವು ನಿಮಗೆ ಗೊತ್ತುಂಟೊ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಬ್ರಾಡ್ವೇ, ಮದ್ರಾಸ್.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜೆ. ಯು. ಅವರ್ಗಳಿಂದ
ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ [illegible]. ಯಾವ ರೀತಿಯಿಂದಲಾಗಲಿ ಹುಟ್ಟಿ ನಷ್ಟ [illegible] ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ [illegible] ಮೂತ್ರಕೋಶದ [illegible] 5 ದಿವಸಗಳಲ್ಲಿ ಗುಣಪಡಿಸುವದು. [illegible] ನರಗಳ ಬಲಹೀನತೆಯನ್ನೂ ದರೂ ಹೋಗಲಾಡಿಸುವದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. [illegible] ವಾಗಿ ನಡಿಸಲ್ಪಡುವದು. ಕ್ರಯ 20 [illegible] 1ಕ್ಕೆ ರೂ. [illegible] ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18 ಮೊಳ ಉದ್ದವೂ, 2½ ಮೊಳ ಅಗಲವು ಇದೆ. ಈ ಸೀರೆಗಳನ್ನು ಹಸನಾದ ಇಮಿಟೇಷನ್ ಸಿಲ್ಕ್ ಗಟ್ಟಿ ದಾರದಿಂದ ತಯಾರಿಸಿದೆ. ಇದು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವುವಲ್ಲದೆ ಅಂದವಾದ ಅಂಚೂ, ಸುಂದರವಾದ ಸಾಚಾ ರೇಷ್ಮೆಯ ಸೆರಗೂ ಇರುವದು. ಈ ಮಾದರಿ ಸೀರೆಗಳು ಬೇರೆ ಯಾರಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರವು. ಈ ಸೀರೆಗಳು ಶ್ರೀಮಂತರೂ, ಗರೀಬರೂ, ಉಡಲಿಕ್ಕೆ ಬಹು ಚಲೋದಾದವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಅದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ರೂ. 7—8—0.

ಇಂದ್ರಿಯಸ್ತಂಭನ ಗುಳಿಗೆ.

ಈ ಅದ್ಭುತವಾದ ಮಾತ್ರೆಯನ್ನು ಮಲಗುವುದಕ್ಕೆ ಒಂದು ಗಂಟೆಯ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತುವೃದ್ಧಿಯಾಗಿ ಗಟ್ಟಿಯಾಗುವುದು. ಈ ಔಷಧವನ್ನು ತಿಂದು 1 ಗಂಟೆಯ ಕಾಲ ಕಳೆದು ಸಂಭೋಗ ಮಾಡಿದರೆ, ಬೇಗನೆ ಸ್ಖಲನವಾಗದೆ ಶಕ್ತಿಯನ್ನು ಕೊಡುವುದು. ತರಿಸಿ ಪರೀಕ್ಷಿಸಿರಿ, ಕ್ರಯ ಡಬ್ಬಿ 1ಕ್ಕೆ ರೂ. 1—6—0.

ವಿಳಾಸ:— ಎಸ್. ಆರ್. ಕೃಷ್ಣ ಅಂಡ್ ಕೋ,
ನಂ ೧, ತಂಬುಸ್ವಾಮಿ ಬೀದಿ,
ಸ್ಟೆ. ಪ. ಮದ್ರಾಸ್.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ವಾಂಸರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸ್ತಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	,, 2—8—0.
,, ಸ್ಥಳೀಕರಿಗೆ ...	,, 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಪ್ರಕಟಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು. ಎಡಿಟರ್,

ಬಿ. ಹನುಮಂತಯ್ಯಂಗಾರ್,
ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು, ಸಿಟಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered No. M. 498.

ಚಂದಾನಿರ್ಣಯ:— ವರ್ಷ ಒಂದಕ್ಕೆ ರೂಪಾಯಿ ೨—೦—೦. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೧೬ನೇ ಶುಕ್ರವಾರ ಜುಲಾಯಿ ೧೯೨೬. ಸಂಚಿಕೆ ೨೯.

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. ಹೆಡ್ ಆಫೀಸು:— ಉಡುಪಿ.	Branch:—COONDAPOOR. ಶಾಖೆ:— ಕುಂದಾಪುರ.
ನಿಯಮಿತ ಮೂಲಧನ ರೂ. 8,50,000.	ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

ತಾ. 28—2—'26ಕ್ಕೆ ತೋರುವ ಸದರಿ ಬ್ಯಾಂಕಿನ ವಹಿವಾಟುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.		ಆಸ್ತಿ ವ ಸೊತ್ತುಗಳು.	
ವಸೂಲು ತೆತ್ತ ಮೂಲಧನ	1,80,690—9—11	ಹಿಸ್ಸೆ ಕಟ್ಟೋಣ ಕಟ್ಟಿದ ಪ್ರಿಜಂಗಳು ವಗೈರೆ	3943—8—0,
ಅಪದ್ಧನ ವ ಇತರ ನಿಕ್ಷೇಪಗಳು	75,875—0—0,	ಯೋಗ್ಯಜವಾಬ್ದಾರಿ ಮೇಲೆ ಸಾಲಕೊಟ್ಟದ್ದು	7,58,851-13-8,
ಠೇವಣಾತಿಗಳು	5,30,003-14-3,	ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	25,800—0—0,
ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕೊಡುವವರಿಗೆ	4,700—0—0,	ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು	4,700—0—0,
ಐವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡ ಇತರ ಬಾಬುಗಳು	40,274—3—11,	ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ)	22,795—6—6,
		ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ	15,452—15—11,
ಜುಮ್ಲಾ ರೂ.	8,31,543-12-1.	ಜುಮ್ಲಾ ರೂ.	8,31,543-12-1.

ನಿರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮುಸುಂ ಠೇವಣಾತಿಗಳನ್ನೂ ಕಂತು ಠೇವಣಾತಿಗಳನ್ನೂ ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ಲಾಭಕರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನೂ ಸಾವುಕಾರಿ ಹುಂಡಿಗಳನ್ನೂ, ವಟ್ಟಾಯಿಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಐವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು,
ಉಡುಪಿ, ತಾ. 28—2—'26.

ನಯಂಪಳ್ಳಿ ಆನಂದರಾವ್, ಸೆಕ್ರೆಟರಿ.

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ವೇದನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ವೇದನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ವೇದನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ತಿದಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ವೇದನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜ್ಹನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯುಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.
109 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ—ಗುಲಾಬ್ ಮಾರ್ಕ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ನಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು —

ಸರ್ವಿಸಿನ ಹೆಸರು.	ತಲಪುವ ಸ್ಥಳ.	ಹೊರಡುವ ಘಂಟೆ.
ಜನರಲ್	ಕಾರ್ಕಳ — ಆಗುಂಬೆ — ತೀರ್ಥಹಳ್ಳಿ	ಪೂ. 6½
ಸಿ. ಪಿ. ಸಿ.	ಉಡುಪಿ — ಕುಂದಾಪುರ — ಬೈಂದೂರು	,, 6½, 9½
	ಉಡುಪಿ	ಮ. 12½
	ಮುಲ್ಕಿ ವರೆಗೆ ಮಾತ್ರ	ಅ. 3½
	ಬಂಟ್ವಾಳ — ಬೆಳ್ತಂಗಡಿ — ಚಾರ್ಮಾಡಿ.	ಪೂ. 7, ಮ. 1
	ಕಾರ್ಕಳ — ಬೆಳ್ಮಣ್ಣಿನಿಂದ	
	ಬಂಟ್ವಾಳಕ್ಕೆ ಮಾತ್ರ	,, 10½, ಅ. 4½
	ಪುತ್ತೂರು — ಸಂಪಾಜೆ — ಮಡಿಕೇರಿ	,, 7½
	ಪುತ್ತೂರು	ಪೂ. 10½ ಅ. 2
ಕಾರ್ಕಳ	ಕಾರ್ಕಳ — ಉಡುಪಿ — ಕುಂದಾಪುರ	ಪೂ. 6
	ಕಾರ್ಕಳಕ್ಕೆ ಮಾತ್ರ.	ಅ. 1
ಹನುಮಾನ್	ಕಾರ್ಕಳ — ಉಡುಪಿ — ಕುಂದಾಪುರ	ಪೂ. 7
	ಕಾರ್ಕಳಕ್ಕೆ ಮಾತ್ರ.	ಮ. 12
ಶಂಕರ್ ವಿಟ್ಠಲ್	ಪುತ್ತೂರು — ಮಡಿಕೇರಿ	ಪೂ. 7
	ಪುತ್ತೂರು — ಉಪ್ಪಿನಂಗಡಿ	ಅ. 1½
	ವಿಟ್ಲಕ್ಕೆ	ಪೂ. 8, ಅ. 2½
	ಉಡುಪಿ	ಪೂ. 7½ ಅ. 1½
ಸ್ವಾನ್	ಮುಲ್ಕಿ — ಉಡುಪಿ.	,, 7, ಮ. 1
	ಬಂಟ್ವಾಳ	,, 10½, ಅ. 4½
ಇಂಡಿಯನ್	ಮುಲ್ಕಿ — ಉಡುಪಿ.	,, 6½, ಮ. 12½
ಪೋಪ್ಯುಲರ್	ಬಂಟ್ವಾಳ — ಬೆಳ್ತಂಗಡಿ — ಚಾರ್ಮಾಡಿ	ಪೂ. 7½ ಮ. 12½

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ—

ಗಾಡಿಗಳು	ಹೊರಡುವ ಘಂಟೆ	ತಲ್ಪುವ ಘಂಟೆ
ಮೈಲ್	ಬೆಳಗ್ಗೆ 8-5	ಸಂಜೆ 5-25
ಲೋಕಲ್	,, 9-45	ರಾತ್ರಿ 10-40
ಪ್ಯಾಸೆಂಜರ್	ಮಧ್ಯಾಹ್ನ 12-30	ಮಧ್ಯಾಹ್ನ 2-40
ಕೆಟಲ್	ಸಂಜೆ 5-40	ಬೆಳಗ್ಗೆ 9-2

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್—ಗ್ರಂಥಕರ್ತರು.

ಇದರಲ್ಲಿ, (ಸಿಂಡೆರೆಲ್ಲ) ಕುಂಟುಕರಿಕಲ್ಲನ್ನು, ಅರಬೀ ಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂದ್ರಿಕ್ಲೆಸ್ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಡತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ದೈಲು ಬೆಡಗಿನ, ಬ್ರಾಹ್ಮಣ ಸ್ಟೈಕಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಜೇಳಾರು ಗುಡ್ಡಿನ ಮಂಜಣ್ಣನ ಕಥೆ, ಯೋಸೇಫನ ಕಥೆ, ಶೋಳೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ನೆಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ತಟಪಟ ಹನಿಯನ್ನು, ನಾಯಿಯೂ ಬೆಕ್ಕೂ, ಹನುಮ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕ ಯನೂ ಅವನ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಹೊಸ ಮುದ್ರಣ! ಶ. ದ್ವ ಪಾಠ!

ಶ್ರೀ ಶಂಕರ ಭಗವತ್ಪಾದಾಚಾರ್ಯ ಪ್ರಣೀತವಾದ

ಶಿವಾನಂದಲಹರಿ

ಎಂಬ

ಪರಮಶಿವನ ಸ್ತೋತ್ರವು.

ಪ್ರಶಂಸೆ:—

ಈ ಗ್ರಂಥದಲ್ಲಿ ಅಡಗಿರುವ ೧೦೦ ಶ್ಲೋಕಗಳ ಪೈಕಿ ಪ್ರತಿಯೊಂದು ಶ್ಲೋಕವೂ ಅರಸಿ ಪೋಣಿಸಿದ ಅನಿಮುತ್ತುಗಳಂತೆ ಅತಿ ಶ್ಲಾಘ್ಯಗಳಾಗಿ ಶಬ್ದಾಲಂಕಾರ ಅರ್ಥಾಲಂಕಾರ ಧ್ವಾವರಸ ಲಕ್ಷಣಗಳಿಂದ ಕೂಡಿ ಓದುವವರ ಮನಸ್ಸಿನಲ್ಲಿ ಆನಂದವನ್ನು ಹುಟ್ಟಿಸುವುದಲ್ಲದೆ, ಉಪಾಸ್ಯದೇವರಲ್ಲಿ ನಿರತಿಶಯ ಭಕ್ತಿಯನ್ನು ಹುಟ್ಟಿಸುತ್ತದೆ. ಪ್ರತಿಯೊಂದು ಶ್ಲೋಕಕ್ಕೂ ಕೊಟ್ಟಿರುವ ಪ್ರತಿಪದಾರ್ಥ ಭಾವಾರ್ಥಗಳು ಸ್ತೋತ್ರದ ಅರ್ಥವನ್ನು ಪುಷ್ಟೀಕರಿಸಿ ಶ್ರದ್ಧೆಯನ್ನು ಹೆಚ್ಚಿಸುವುದರೊಡನೆ ಸಂಸ್ಕೃತ ಭಾಷಾಜ್ಞಾನವನ್ನುಂಟುಮಾಡುವುದು.

ಶ್ರೀ ಶಿವಗೀತಾ

ಟೀಕಾಸಹಿತವಾಗಿ ಪಂಡಿತರಿಂದ ಪರಿಶೋಧಿಸಲ್ಪಟ್ಟಿದೆ.

ಇದು ಪದ್ಮಪುರಾಣೋಕ್ತವಾದ ಬ್ರಹ್ಮವಿದ್ಯಾಪ್ರತಿಪಾದಕವಾದ ಉಪನಿಷತ್ತಾಗಿದೆ. ಇದು ಶ್ರೀ ಭಗವದ್ಗೀತೆಯಂತೆ ಸಾರಾಯುತಾರ್ಥವಾದ ಗ್ರಂಥವು. ಗೀತೆಯ ಚರಮಶ್ಲೋಕವು ಇದರಲ್ಲಿ ರುವುದು.

ಪ್ರತಿಯೊಂದಕ್ಕೆ ಬೆಲೆ 0-8-0. ಟಪ್ಪಾಲು ಖರ್ಚು 0-2-0.

ಮಾರು ಪುಸ್ತಕಗಳ ಕ್ರಯವನ್ನು ಮುಂಗಡವಾಗಿ ಕಳುಹಿಸಿದರೆ ಟಪ್ಪಾಲು ಖರ್ಚಿಲ್ಲದೆ ಕಳುಹಿಸಲ್ಪಡುತ್ತೆ.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕದ ವ್ಯಾಪಾರಿಗಳು,
ಚಿಕ್ಕಪೇಟೆ ಬೆಂಗಳೂರು ಸಿಟಿ.

Fresh Arrivals

Pear's Solid Brilliantine, Evans Lime-juice Glycerine, Tooth powders Rose water, Syrups of all sorts for drinks, Denatured Spirits, etc. etc.

The Mangalore Trading Association,
Car-Street, MANGALORE.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಕ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.
ಬಾಟ್ಲಿವಾಲರ ಟಾನಿಕ್ ಪಿಲ್ಸ್—ಶರೀರವು, ನಾಡಿ ಎಡೆಗೊಡ್ಡಿ, ಈ ಎಲ್ಲಾ ತರದ ನೋವುಗಳಿಗೂ ಒಳ್ಳೆ ಔಷಧ ಆಣೆ ೧೨.
ಬಾಟ್ಲಿವಾಲರ ರಿಂಗ ವರ್ಮ್ ಓಯಿಂಟ್‌ಮೆಂಟ್—ತುರಿಕೆ ಮತ್ತು ಕಜ್ಜಿ, ಇಸಬು ವೈದ್ಯಗಳಿಗೆ ರಾಮಬಾಣದಂತಾದ ಔಷಧ. ಆಣೆ ೪.
ಬಾಟ್ಲಿವಾಲರ ಕ್ವಿನೈನ್ ಟ್ಯಾಬ್ಲೆಟ್ಸ್—೧೦೦ ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೇಬ್ಲೆಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ್ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦

"AGENTS WANTED"
LIBERAL DISCOUNT TO TRADE

ಕಾರಖಾನೆ:—CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ದೊರಕಬಹುದು.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್,
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ, ಮಂಗಳೂರು.

The Canara Pubic Conveyance Co., Ltd, Mangalore.

(ESTABLISHED 1914.)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು—

ಮಂಗಳೂರು
- ಕರಾವಳಿ ಮಾರ್ಗವಾಗಿ—ಮುಲ್ಕಿ—ಉಡುಪಿ—ಕುಂದಾಪುರ—ಗಂಗೊಳ್ಳಿ—ಬೈಂದೂರು
- ಬಂಟವಾಳ—ಬೆಳ್ತಂಗಡಿ—ಚಾರ್ಮಾಡಿ.
- ಪಾಣೆಮಂಗಳೂರು—ಪುತ್ತೂರು—ಸುಳ್ಯ—ಮಡಿಕೇರಿ.
- ಪುತ್ತೂರು—ಉಪ್ಪಿನಂಗಡಿ—ಬೆಳ್ತಂಗಡಿ.
- ಮಡಿಕೇರಿ—ಪುತ್ತೂರು—ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಹಲವಾಣಿಯಾಗುತ್ತವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು—ಮಡಿಕೇರಿ ಸರ್ವಿಸು ಅನುಕೂಲ ವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು—ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ—ಮದ್ರಾಸು—ಕಡೂರು—ಚಿಕ್ಕಮಗಳೂರು—ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು—ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿದಿನವು ಎರಡು ಮೂರಾವರ್ತಿ ಎಲ್ಲಾ ಸರ್ವಿಸು ಸ್ಟೇಶನುಗಳ ಮಧ್ಯ ಹಲವಾಣಿಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂವತ್ಸರದ ಆಶಾಢ ಶು ೭ ಶನಿವಾರದಿಂದ ಕ್ಷಯ ಸಂವತ್ಸರದ ಆಶಾಢ ಶು ೧೩ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಮಿಥುನ ಕಾರ್ತೆಲ್.)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ.
17	ಶನಿ	೭	೨೮. ೦	ಹಸ್ತಾ	೧೮.೪೬	೧	6.13	7. 0
18	ರವಿ	೮	೩೦.೩೧	ಚಿತ್ರಾ	೨೩. ೦	೨	6 14	6.59
19	ಸೋಮ	೯	೩೧.೨೯	ಸ್ವಾತೀ	೨೫.೫೮	೩	6.14	6 59
20	ಕುಜ	೧೦	೩೧.೩೨	ವಿಶಾಖಾ	೨೭.೪೬	೪	6.14	6.59
21	ಬುಧ	೧೧	೩೦. ೧	ಅನುರಾಧಾ	೨೮ ೧೪	೫	6 15	6.59
22	ಗುರು	೧೨	೨೭ ೩೨	ಜ್ಯೇಷ್ಠಾ	೨೭ ೩೨	೬	6.15	6 59
23	ಶುಕ್ರ	೧೩	೨೩.೪೬	ಮೂಲಾ	೨೭. ೦	೭	6 16	6.58

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಅಧಿಕಾಂಶ	Minimum ಅಲ್ಪಾಂಶ	Rainfall. ಮಳೆ ಇವತ್ತ ಮಳೆ	ಇವರೆಗಿನ ಮಳೆ.
9	88—5	75—3	0—44	—
10	88—4	77—0	0—44	—
11	88—5	77—3	0—40	—
12	87—6	78—8	0—49	—
13	88—9	76—0	0—32	—
14	88—4	76—1	0—69	—
15	87—3	76—9	—	47—81

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ		8—12	9—10
ಹೊಸ ಗುಡ್ಡು	...	8—8	8—12
ಸುಗಿ	...	8—2	8—4
ಅವ್ವಲ್ ಬೆಲ್ತಿಗೆ	...	8—0	9—6
ರಂಗೂನು ಬೆಲ್ತಿಗೆ ಗೋಣಿ ೧	...	14—8	15—0
ಗೋಧಿ ಗೋಣಿ ೧ಕ್ಕೆ	...	18—0	20—0
ಹುರುಳಿಗೋಣಿ ೧ಕ್ಕೆ	...	8—0	9—12
ಅಲಸಂಡೆಗೋಣಿ ೧ಕ್ಕೆ	...	13—0	14—8
ಕಡಲೆಗೋಣಿ ೧ಕ್ಕೆ	...	16—0	16—8
ಕಡಲೆಬೇಳೆ ಗೋಣಿ ೧ಕ್ಕೆ	...	19—0	26—0
ಉದ್ದು ಗೋಣಿ ೧ಕ್ಕೆ	...	16—8	17—0
ಹೆಸರುಗೋಣಿ ೧ಕ್ಕೆ	...	16—0	17—8
ಊರು ಬೆಲ್ಲ ಖಂಡಿ ೧ಕ್ಕೆ	...	85—0	—
ಉಪ್ಪು ಗೋಣಿ ೧ಕ್ಕೆ	...	5—4	5—12
ಕೊಬ್ರಿ ಖಂಡಿ ೧ಕ್ಕೆ	...	96—0	100—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	34—8	35—0
ಎಳ್ಳಿಂಡಿ ಖಂಡಿ ೧ಕ್ಕೆ	...	45—0	47—8
ಕೊಬ್ರಿ ಎಣ್ಣೆ ಮಣ ೧ಕ್ಕೆ	...	7—10	8—10
ಎಳ್ಳೆಣ್ಣೆ ಮಣ ೧ಕ್ಕೆ	...	7—8	9—0
ಹರಳೆಣ್ಣೆ ಪೆಟ್ಟಿಗೆ ೧ಕ್ಕೆ	...	8-12-0	—
ತೋರಿನ ಸಕ್ಕರೆ ಮಣ ೧ಕ್ಕೆ	...	5—4	—
ಊರ ಮೆಣಸಿನಕಾಯಿ ಮಣ ೧ಕ್ಕೆ	...	7—0	—
ಸಾಸಿವೆ ಮುಡಿ ೧ಕ್ಕೆ	...	9—8	—
ಕೊತ್ತುಂಬರಿ ಮುಡಿ ೧ಕ್ಕೆ	...	5—0	5—12
ಕಾಫಿ ಖಂಡಿ ೧ಕ್ಕೆ	...	385—0	460—0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ ಹಳೆಯ	...	300—0	310—0
ಹೊಸ ಅಡಿಕೆ ಖಂಡಿ ೧ಕ್ಕೆ	...	195—0	220—0
ಕಾಳುಮೆಣಸು ಖಂಡಿ ೧ಕ್ಕೆ	...	360—0	—
[illegible] ಮಣ ೧ಕ್ಕೆ	...	50—0	64—0
ಗೇರುಬೀಜ ಮುಡಿ ೧ಕ್ಕೆ	...	4—0	—
[illegible] ಖಂಡಿ ೧ಕ್ಕೆ	...	45—0	65—0
[illegible] ಮಣ ೧ಕ್ಕೆ	...	16—4	16—12
[illegible] ಮಣ ೧ಕ್ಕೆ	...	21—0	—
[illegible] ೧ಕ್ಕೆ	...	18—10	
[illegible] ಮಣ ೧ಕ್ಕೆ	...	16—8	
[illegible]		13—9	

‘ಸಾರಸ್ವತಾಸವ.’

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಹಾಲಸ್ಯವಾಗುತ್ತಿದ್ದರೆ, ಬೆನ್ನಿನ ನರಗಳು ಸೆಳೆಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ಶಾಸ್ತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದರೂಪವಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುವುದು. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣವಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಜಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಪ್ಲುಯೆನ್ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಪಾಸ್ತ್ರೀಯರಿಗೂ ಕುಳಿತುಕೊಂಡಿರುವವರಿಗೂ ಜಠರಾಗ್ನಿಯಿಂದುಂಟಾದ ಸಂದೇಹವು. ಅದರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾವಿಲಾಸ ವೈದ್ಯಶಾಲಾ, ಮೈಸೂರು.

ಏಜಂಟರು:— ಅತ್ತಾವರ ಸೋಮಪ್ಪ, ಸೋಡಾ ಫಾಕ್ಟರಿ, ಮಂಗಳೂರು ಟವನ್ ಹಾಲ್.

ಟೇಬಲ್ ಟೈಂಪೀಸ್ ಮತ್ತು ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚ್ ಇನಾಂ.

ಈ ಸಣ್ಣಿಯಲ್ಲಿ ಕಂಡ ರಾಯಲ್‌ಫೌಂಟನ್ ಪೇನಾವು ಇಂಗ್ಲಾಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದೆ. ಈ ಪೇನಾವಿಂದ ಬರೆಯುವುದರಿಂದ ಅಕ್ಷರಗಳು ಬಹಳ ಚೆನ್ನಾಗಿ ಕಾಣುವವು. ಈ ಪೇನಾವನ್ನು ಬೇಗನೆ ತರಿಸಿಕೊಳ್ಳುವವರಿಗೆ ಮೇಲ್ಕಂಡ ಗಡಿಯಾರಗಳು ಇನಾಂ ಆಗಿ ಕೊಡುವವು. ಗಡಿಯಾರಗಳಿಗೆ ಪಾತ್ರಿಯೂ 4 ವರುಷ ಗ್ಯಾರಂಟಿ ಬರೆದುಕೊಡುತ್ತ.



ಟೇಬಲ್ ಟೈಂಪೀಸ್ ಸಹಿತ ಪೇನಾ 1ಕ್ಕೆ 3—12—0.
ರೋಲ್ಡ್ ಗೋಲ್ಡ್ ರಿಸ್ಟ್ ವಾಚ್ ಸಹಿತ ಪೇನಾ 1ಕ್ಕೆ 6—4—0.

ವಿಳಾಸ:— ಅಮೇರಿಕನ್ ವಾಚ್ ಕಂಪೆನಿ.
ಪಿ. ಬಿ. ನಂ. 509, ಪಾರ್ಕ್‌ಟೌನ್, ಮದರಾಸು.

The American Watch Co.,
No 509, Park Town, MADRAS.

ಉತ್ಕೃಷ್ಟವಾದ ನಶ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲು 1ಕ್ಕೆ ರೂ. 3—2—0.
" 2. " " ರೂ. 1—8—0.

— ವ್ಯಾಪಾರಸ್ಥರಿಗೆ ನೇಕಡ 25ರಂತೆ ಕಮಿಷನ್ —
ಪೋಸ್ಟೇಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

WANTED.

Applications are invited from Mathematics Graduates for the post of a teacher in Sri Madanantheshwara Temple Higher Elementary School, Manjeshwar. Applications should reach the undersigned on or before the 31st instant. Candidates should apply with testimonials.

Manjeshwar, 7th July 1926.

M. Narayana Pai
President,
Educational Board.

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ಎಲ್ಲ ವಿದ್ಯಾರ್ಥಿಗಳ ಸಂಗ್ರಹಕ್ಕೆ ಯೋಗ್ಯವಾದ
—: ಪದ್ಯ ಗ್ರಂಥ: —

ಕನ್ನಡ ಪದ್ಯರತ್ನಾವಳಿ.

(ಪ್ರಥಮ ಭಾಗ)

ಗ್ರಂಥಕರ್ತರು:—ಜಿ. ಎನ್. ಲಕ್ಷ್ಮಣ ಪೈ.

ಮದರಾಸು ವಿದ್ಯಾಖಾತೆಯವರಿಂದ ಶಾಲೋಪಯೋಗಕ್ಕಾಗಿಯೂ, ಮುಂಬಯಿ ವಿದ್ಯಾಖಾತೆಯವರಿಂದ ಸೆಕಂಡರಿ ಶಾಲೆಗಳ ಪಠ್ಯಪುಸ್ತಕವಾಗಿಯೂ ಮೈಸೂರು ವಿದ್ಯಾಖಾತೆಯವರಿಂದ ಹೈಸ್ಕೂಲ್, ನಾರ್ಮಲ್ ಮತ್ತು ಪ್ರೈಮರಿ ಶಾಲೆಗಳ ವಾಚನ ಪುಸ್ತಕವಾಗಿಯೂ ಮಂಜೂರಾಗಿದೆ.

ಬೆಲೆ: 3½ ಆಣೆ.

ಶಾರದಾ ಛಾಪಖಾನೆ,
ಮಂಗಳೂರು.

ಈಗ ತಾನೆ ವಿಕ್ರಯವಾಗಲಿದೆ.

ಮಂಗಳೂರು ಪಟ್ಟಣದ ಪ್ರಾಮುಖ್ಯ ಭಾಗದಲ್ಲಿರುವ ಬಿದಿ ಮತ್ತು ವಾಸವಂತ ಜನನಿಬಿಡ ಮಧ್ಯದಲ್ಲಿ ಕಾಲು ಎಕ್ರೆ ಜಾಗೆ ಸುಂದರವಾದ ಸ್ಥಳವು ಮಾರಲು ತಯಾರಿದೆ. ಫಲ ನೀಡುವ ಅನೇಕ ಮರಗಳನ್ನೊಳಗೊಂಡಿದೆ. ಯಾರಾದರೂ ಪ್ರಾಮುಖ್ಯ ಡಾಕ್ಟರ್ ಯಾ ವಕೀಲರಿಗೆ ಸುಖವಾಗಿ ವಾಸಿಸಲು ಯೋಗ್ಯವಾದದೊಂದು ಬಂಗ್ಲೆಯಿದೆ. ಕ್ರಯ ಸುಮಾರು ರೂ. 3000. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಕಾಗದ ಬರೆಯಿರಿ.

Mr. Albert Sequeira,
Santa Cruz (Bombay.)

ಪ್ರಕಟಣೆ.

ಪಲ್ಮಾರು ವಾಸುದೇವ ಪ್ರಭು ವಗೈರೆರು ಕಳೆದ ತಾರೀಕು 29ನೇ ನವಂಬರ 1924ರಲ್ಲು ನಮಗೆ ರಿಜಿಸ್ಟ್ರಿಸಿ ಕೊಟ್ಟ ಕಂಪೋಜಿಶನ ಡೀಡಿನಲ್ಲಿ ತೋರುವ ಆಸ್ತಿಗಳ ಪೈಕಿ ವಿಕ್ರಿತವಾದ ಆಸ್ತಿಗಳು ಹೋಗಲಾಗಿ ಈ ಪರಿಯಂತರ ಸಮರ್ಪಕ ಕ್ರಯಕ್ಕೆ ಯಾರೂ ವಿಚಾರಿಸದೆ ಇದ್ದ ಈ ಕೆಳಗೆ ಕಾಣಿಸಿದ ಆಸ್ತಿಗಳನ್ನು ಇದೇ ಇಸವಿ ಆಗೋಸ್ತು ತಾರೀಕು 16ಲ್ಲು ಮೂಲ್ಕಿ ಸಾಹುಕಾರ ಮೇಗಿನಪೇಟೆ ಮುಕುಂದ ವಾಸುದೇವ ಕಂಮ್ತಿರ ಭಂಡ್ಸಾಲೆಯಲ್ಲು ಮಧ್ಯಾಹ್ನ 2 ಘಂಟೆ ಸಮಯದಲ್ಲಿ ಬಹಿರಂಗವಾಗಿ ಯೇಲಂ ಮಾಡಲಾದೀತು. ಆಕೈರ ದರಖಾಸ್ತುದಾರರು ಸೇಕಡಾ 20ರಂತೆ ಐವೇಜನ್ನು ಕೂಡಲೇ ವಸೂಲು ಕೊಡತಕ್ಕದ್ದು. ಬಾಕಿ ಐವೇಜನ್ನು 8 ದಿವಸಗಳೊಳಗೆ ರಿಜಿಸ್ತ್ರಾರರ ಸಮಕ್ಷಮ ಹಾಜರುಪಡಿಸಿ ಅವರ ಖರ್ಚಿನಿಂದಲೆ ಕ್ರಯಚೀಟು ಬರಸಿಕೊಳ್ಳತಕ್ಕದ್ದು. ಹಾಗೆ 8 ದಿವಸಗಳೊಳಗೆ ಹಣ ಹಾಜರು ಪಡಿಸಿ ಕ್ರಯಚೀಟು ಬರಸಿಕೊಳ್ಳದಿದ್ದರೆ ಪುನಹ ಏಲಂ ಮಾಡಿದ್ದಲ್ಲಿ ಉಂಟಾಗಬಹುದಾದ ಸಕಲ ನಷ್ಟಗಳಿಗೂ ಅವರು ಜವಾಬ್ದಾರರಾಗತಕ್ಕದ್ದು. ಈ ಸಂಬಂಧ ಬೇಕಾದ ಅನುಭವ ವ ರಿಕಾರ್ಡು ವಗೈರೆಯನ್ನು ರಾ। ಸಾಹುಕಾರ ಮೇಗಿನಪೇಟೆ ಮುಕುಂದ ವಾಸುದೇವ ಕಮ್ತಿರ ಕೂಡೆ ವಿಚಾರಿಸಿ ಅನುಭವ ಮಾಡಿಕೊಳ್ಳಬಹುದು.

ಏಲಮಿಗೆ ಇಟ್ಟ ಆಸ್ತಿಗಳ ವಿವರ:—

ಲೋಟ್ ನಂಬ್ರ	ಗ್ರಾಮ	ಸರ್ವೆ ನಂಬ್ರ	ಸಬ್ ಡಿವಿಜನ	ಇಸಂ	ವಿಸ್ತೀರ್ಣ ಎಕ್ರೆ	ವಿಸ್ತೀರ್ಣ ಸೆಂಟ್ಸ್	ತೀರ್ವೆ ರೂ.	ತೀರ್ವೆ ಅ	ತೀರ್ವೆ ಪೈ.	ಪಟ್ಟೆ ತಪಸೀಲು	ಅನುಭೋಗ	ಸಿಕ್ಕುವ ಮುನಾಫೆ.
1.	[illegible]	116	6	ನಂಜ	0	45	2	4	,,	ಪಟ್ಟಾ ನಂಬ್ರ 82ನೇ ಪಲ್ಮಾರ ಮಠದ ರಾಮಚಂದ್ರ ದೇವರು ಮೂಲಗೇಣಿ ವಾಸುದೇವ ಪ್ರಭು.	ಮೂಲಗೇಣಿ ಹಕ್ಕಿನಿಂದ ಅನುಭವಿಸುವಂಥಾದ್ದು, ಮತ್ತು ಮೂಲಗೇಣಿ ರೂ. 4-6-6 ತೆರುವಂಥಾದ್ದು,	ಈ ಎರಡು ಆಸ್ತಿಗಳಲ್ಲಿ ಸೇರು 51ರ ಹೊಲ್ಸಿ ಅಕ್ಕಿ ಮುಡಿ 8 ಮತ್ತು ನಗದು ರೂ. 32—0—0 ಯಂಟಾಣಿ ಕ್ರಯದ ಹಸ್ವಾಣ ಕೋರಿ 1 ಸಹಾ ಸಿಕ್ಕತಕ್ಕ ಚಾಲಗೇಣಿ ಆಸ್ತಿಗಳಾಗಿಯೂ ಮತ್ತು ಜನಾರ್ಧನ ಶ್ಯಾನುಭಾಗರ ಮಕ್ಕಳಿಂದ ಮೂಲಗೇಣಿ ರೂ 3—0—0 ಸಹಾ ಸಿಕ್ಕುತ್ತದೆ. ಹೊರ್ತು ಸದರಿ ಒಕ್ಕಲುಗಳ ಮೇಲೆ ಬಾಕಿಯಿರುವ ಹಿಂದಿನ ಎರಡು ವರ್ಷಗಳ ಗೇಣಿ ಸಮೇತ.
		116	16	ನಂಜ	0	9	0	9	,,	ಪಟ್ಟಾ ನಂಬ್ರ 110 ರಾಜಾರಾಮ ರಾವ್ ಮೂಲಗೇಣಿ ವಾಸುದೇವ ಪ್ರಭು.	ಮೂಲಗೇಣಿ ಹಕ್ಕಿನಿಂದ ಅನುಭವಿಸುವಂಥಾದ್ದು, ಮತ್ತು ಮೂಲಗೇಣಿ ರೂ. 13-0-0 ತೆರುವಂಥಾದ್ದು.	
			17	ನಂಜ	0	25	1	4	,,			
			5	ಬಾಗ್ಯಾತು	0	42	2	8	,,			
		137	3	ನಂಜ	,,	12	,,	6	,,			
2	[illegible]	108	7	ನಂಜ	,,	67	5	,,	,,	ಪಟ್ಟಾ ನಂಬ್ರ 222 ದಾಸಾಚಾರಿ ಹೆಂಡತಿ ಪದ್ಮಾವತಿ.	ಮೂಲಗೇಣಿ ಹಕ್ಕಿನಿಂದ ಅನುಭವಿಸುವ ವಾಸುದೇವ ಪ್ರಭು ಅಂಶಕ್ಕೆ ರೂ. 9 ಮೂಲಗೇಣಿ ತೆರುವಂಥಾದ್ದು.	ಇದರಲ್ಲಿ ಸೇರು 50ರ ಹೊಲ್ಸಿ ಅಕ್ಕಿ ಮುಡಿ 9 ಚಾಲಗೇಣಿ ಸಿಕ್ಕುವದಲ್ಲದೆ ತೀರ್ಕೊಟ್ಟು ಮಾಡಿಂಗ ಸೆಟ್ಟಿಯಿಂದ ಮೂರನೇ ಒಂದಂಶದ ರೂ. 2-5-4 ಮೂಲಗೇಣಿ ಸಿಕ್ಕುತ್ತದೆ. ಮತ್ತು ಒಕ್ಕಲುಗಳಿಂದ ಬರತಕ್ಕ ಹಿಂದಿನ ಎರಡು ವರ್ಷಗಳ ಗೇಣಿ ಸಮೇತ
		,,	10	ನಂಜ	,,	20	1	8	,,			

ಮೂಲ್ಕಿ,
ತಾ. 13—7—'26.

ಮೂಲ್ಕಿ ಮುಕುಂದ ವಾಸುದೇವ ಕಂಮ್ತಿ ರುಜು.
Bola Madhava Rau.

Your Money will Fetch You more than What is Worth?

Cheap! "A NATIONAL CURE" Reliable!!

Why do you suffer from that Killing Malaria. If you want perfect relief, apply to the M. T. A. for a bottle of

M. T. A. MALARIA MIXTURE.

Discount Welcome. **Allowed.**

VISITS ARE SOLICITED TO

THE MANGALORE TRADING ASSOCIATION.

NEW ARRIVALS OF PATENT MEDICINES SUCH AS ALETRIS CORDIAL, ANGIER'S EMULSIONS, MONOLA WINE, WINCARNIS, STEVEN'S WINE & OTHER SORTS ETC., THAT ARE REQUIRED TO SUIT THE PRESENT PRESCRIPTIONS OF UP TO DATE DOCTORS.

Look-Sharp!

FASHIONS.

Kelmeter Color Studs, Pins, Buttons etc., Diamond Batteries, Best Mazda Bulbs American focussing Lamps etc., up to date Sun Gogles, Safty Razors fitting to the fashion of the day.

Always Aim at reduced prices on Fresh Stocks.

The Mangalore Trading Association.
Car-Street, MANGALORE.

NOTICE.

IN THE COURT OF THE DISTRICT MUNSIF OF MANGALORE.

I. A. No. 36/1926 in I. P. No. 23/1926.

John Pinto Son of Antony Pinto Residing at Kudmbi Lane Falnir Mangalore. } Petitioner (debtor)

AND

1. B. Kuppan Shetty
2. Pascal Pinto
3. Peter Souza
4. Gaspar Souza
5. John Antony Pinto

} Respondents (Creditors)

Notice is hereby given that the petitioner abovenamed has applied to this Court in the above I. A. No 36/1926 for his absolute discharge and the same will come on for hearing before this Court at 11 A. M. on 3—8—'26.

Mangalore. 13—7—'26.

P. S. D'Souza,
Vakil for Petitioner.

ನೋಟೀಸು.

ದಕ್ಷಿಣ ಕನ್ನಡಾ ಒಫಿಶಿಯಲ್ ರಿಶೀವರರ

—: ಕೋರ್ಟಿನಲ್ಲಿ :—

ದಿವಾಳಿ ಅರ್ಜಿ ನಂಬ್ರ 28/1926.

ಎನ್. ಶ್ರೀನಿವಾಸ ರಾವ್, ಡಾಕ್ಟರ್ ಸಿಂಗರ ಮಗ ಮಂಗಳೂರು ಶಹಾರ ಪಾಂಡೇಶ್ವರದಲ್ಲಿರುವವ } ಅರ್ಜಿದಾರ.

— ಎದ್ರಿ —

ಅತ್ತಾವರ ವೆಂಕೋಜಿರಾವ್ ಕೂಡಾ —ಕ್ರೆಡಿಟರರು.

ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ಕೊಟ್ಟ ಮೇಲ್ಕಂಡ ಅರ್ಜಿಯು ತನ್ನಿ ಬಗ್ಗೆ ತಾರೀಕು 10—7—1926ಕ್ಕೆ ಇಟ್ಟಿರುವದರಿಂದ ಆ ಬಗ್ಗೆ ಆಕ್ಷೇಪಣೆವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಸದರಿ ತಾರೀಕಿನ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಖುದ್ದಾಗಲಿ ವ ವಕೀಲರ್ದ್ವಾರವಾಗಲಿ ಜ್ಯಾಹೀರು ಮಾಡಿಕೊಳ್ಳತಕ್ಕದೆಂದು ಇದರಿಂದ ತಿಳಿಸಲ್ಪಟ್ಟಾಗಿದೆ.

ಮಂಗಳೂರು, ತಾ. 26—6—'26.

M. Aanantha Shastri
Vakil for Petitioner.

ಪ್ರಕಟಣೆ.

The Empire of India Life Assurance Co. Ltd.

ಕಾರಕಳ ಕೆ. ಎಸ್. ಅಕ್ಬರ್ ಸಾಹೇಬರ ನಂಬ್ರ 38891ನೇ ಜೀವವಿಮೆ ಪೋಲಿಶಿಯು ಕಾಣೆಯಾಗಿರುವದಾಗಿಯೂ ಅಂಥಾ ಕಾಣೆಯಾದ ಪೋಲಿಶಿಯ ಬಗ್ಗೆ ಅವರು ಒಂದು ತಿಂಗಳು ಒಳಗೆ ನಮಗೆ ಆಕ್ಷೇಪಣೆ ಅರ್ಜಿ ಬರಕೊಂಡಲ್ಲಿ ಸದರಿ ಕಳೆದುಹೋದ ಪೋಲಿಶಿಯ ಡ್ಯೂಪ್ಲಿಕೇಟ್ ನಕಲು ಕೊಡಲಾದೀತು ಎಂತಲೂ ಈ ಮೂಲಕ ಸರ್ವರಿಗೂ ತಿಳಿಯಪಡಿಸೋಣಾಗುತ್ತದೆ.

ಬೊಂಬಾಯಿ, ತಾ. 13-7-'26. } **Allum Bharucha & Co.,**
Managers.

ನೋಟೀಸು.

ದಕ್ಷಿಣ ಕನ್ನಡಾ ಒಫಿಶಿಯಲ್ ರಿಶೀವರರ

—: ಕೋರ್ಟಿನಲ್ಲಿ :—

ದಿವಾಳಿ ಅರ್ಜಿ ನಂಬ್ರ 32/26.

ಮುಖ್ಯಪ್ರಾಣ ಭಟ್ಟ —ದಿವಾಳಿ ಅರ್ಜಿದಾರ,

ಮತ್ತು

ಎ. ಗೋವಿಂದಯ್ಯ ಕೂಡಾ —ಕ್ರೆಡಿಟರರು.

ಸದರಿ ದಿವಾಳಿ ಅರ್ಜಿದಾರನು ತನ್ನನ್ನು ದಿವಾಳಿ ಮಾಡಬೇಕಾಗಿ ದಾಖಲು ಮಾಡಿದ ಸದರಿ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾ. 28—7—1926ರಲ್ಲು ತನ್ನಿಗೆ ಇಟ್ಟಿದೆ. ಆಕ್ಷೇಪವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಸದರಿ ತಾರೀಕಿನ ವಳಗೆ ಹಾಜರು ಪಡಿಸತಕ್ಕದ್ದು.

ಮಂಗಳೂರು, ತಾ. 15-7-'26. } ಮುಖ್ಯಪ್ರಾಣ ಭಟ್ಟನ ರುಜು,
ದಿವಾಳಿ ಅರ್ಜಿದಾರ.

ಸ್ಫುಟ ವಿಚಾರಗಳು.

ಡಾ। ರವೀಂದ್ರನಾಥ ಠಾಕೂರರೂ ಫೆಸಿಸ್ಟ ಪಕ್ಷವೂ.

"ರೋಮ ಪಟ್ಟಣಕ್ಕೆ ಹೋದಾಗ ರೋಮಿಯರಂತೆಯೇ ನಡೆ" ಎಂಬ ಒಂದು ಆಂಗ್ಲೋಕ್ತಿ ಇದೆ. ಕವಿ ರವೀಂದ್ರರು ತಮ್ಮ ಕೋಗಿಲೆಯ ಕಂಠದಿಂದ ಹಾಗೆಯೇ ಮಾಡಿರುವರೆಂದು ತೋರುವುದು. ಇಟಲಿಯ ಸಿ। ಮುಸ್ಸೋಲಿನಿಯ ನಿರಂಕುಶ ಪ್ರಭುತ್ವವನ್ನು ಹೊರಗಿನ ಯಾವ ಜನಾಂಗವೂ ಪ್ರಶಂಸಿಸಿದುದನ್ನು ನಾವು ಕಂಡಿಲ್ಲ. ಫೆಸಿಸ್ಟ ಪಕ್ಷದ ಹೆಸರಿನಲ್ಲಿ ಶಕ್ತಿಯೇ ನ್ಯಾಯತೀರ್ಮಾನಕರ್ತನೆಂಬ ಸೂತ್ರದಿಂದ ಸಿ। ಮುಸ್ಸೋಲಿನಿಯು ಇಟಲಿಯಲ್ಲಿ ರಾಜ್ಯಸೂತ್ರವನ್ನು ಎತ್ತಿಹಿಡಿದಿರುವುದನ್ನು ಸಾಧಾರಣ ಎಲ್ಲರೂ ಖಂಡಿಸುವವರೇ ಆಗಿರುವರು. ಆದರೆ ಶ್ರೀ ರವೀಂದ್ರನಾಥರು, ಇಟಲಿಯಿಂದ ತಮಗೆ ಬಂದ ಕಾಣಿಕೆಯ ದಾಕ್ಷಿಣ್ಯದಿಂದಲೊ, ಅಥವಾ ಮುಸ್ಸೋಲಿನಿಯು ತಮಗೆ ಕೊಟ್ಟ ಖಾಸಗಿ ದರ್ಶನದ ಗೌರವಾನುಭವದಿಂದಲೊ, ಡಾ। ಠಾಕೂರರು ಫೆಸಿಸ್ಟ ಕಾರ್ಯಕರ್ತನಾದ ಸಿ। ಮುಸ್ಸೋಲಿನಿಯನ್ನು ಪ್ರಶಂಸಿಸಲಾರಂಭಿಸಲು ಹಿಂದೆಗೆಯಲಿಲ್ಲ. ಲೋಕಕವಿಯಾಗಿ, ಲೋಕ ಸ್ಪರ್ಧೆಯಲ್ಲಿ ಮಾನಿತರಾದ, ತತ್ವವೇತ್ತರಾದ ಡಾ। ರವೀಂದ್ರನಾಥ ಠಾಕೂರರ ಜವಾಬ್ದಾರಿಯು ದೊಡ್ಡದಿದ್ದಿತು. ಸಿ। ಮುಸ್ಸೋಲಿನಿಯ ದಾಕ್ಷಿಣ್ಯಕ್ಕಿಂತಲೂ ಲೋಕಹಿತದ ಸಮಸ್ಯೆಯು ಡಾ। ರವೀಂದ್ರನಾಥರ ಮುಂದಿರಬೇಕಾಗಿದ್ದಿತು. ಆದರೂ ಡಾ। ಠಾಕೂರರು ಫೆಸಿಸ್ಟ ವಿಷಯವಾಗಿಯೂ, ಮುಸ್ಸೋಲಿನಿ ವಿಷಯವಾಗಿಯೂ ವ್ಯಕ್ತಪಡಿಸಿದ ಅಭಿಪ್ರಾಯಗಳು ಅವರ ನಿರ್ದಾಕ್ಷಿಣ್ಯ ಗುಣಕ್ಕೆ ಗೌರವ ತರುವಂತಹವುಗಳಾಗಿಲ್ಲ. ಈ ಕಾರಣದಿಂದ ಅವರು ಅನೇಕರ ಖಂಡನೆಗೆ ಪಾತ್ರರಾದರು. ರೋಮ ಬಿಟ್ಟ ಮೇಲೆ, ಲಂಡನಿನಿಂದ ಈ ವಿಷಯವಾಗಿ ಅವರು ಪ್ರಕಟಿಸಿರುವ ಸಮರ್ಥನವು ಕೂಡ ತೃಪ್ತಿಕರವೆಂದೆಣಿಸಲಾಗುವುದಿಲ್ಲ. ದೇಶ ದೇಶಗಳನ್ನು ಸಂಚರಿಸಿ ಅನೇಕ ಪ್ರಮುಖರನ್ನು ನೋಡಿ ತಕ್ಷಣದಲ್ಲಿಯೇ ಸರಿಯಾದ ಅಭಿಪ್ರಾಯಗಳನ್ನು ಕಟ್ಟಬಲ್ಲ ಡಾ। ರವೀಂದ್ರನಾಥರಿಗೆ ಇಟಲಿಯ ಪ್ರವಾಸದಿಂದ ಫೆಸಿಸ್ಟ ಪಕ್ಷದ ಸರಿಯಾದ ತೂಕವನ್ನು ಕಟ್ಟಲಾಗಲಿಲ್ಲವೆಂದರೆ ಒಮ್ಮೆಗೇನೇ ಯಾರೂ ಈ ಮಾತನ್ನು ಸ್ವೀಕರಿಸಲಿಕ್ಕಿಲ್ಲ. ಸಿ। ಮುಸ್ಸೋಲಿನಿಯ ಸುಗುಣಗಳ ಕಾವ್ಯವನ್ನು ರಚಿಸುವಾಗ ಡಾ। ರವೀಂದ್ರರು ಸಾರ್ವಜನಿಕವಾದ ದೋಷಗಳನ್ನೂ ಎಣಿಸಬಹುದಿತ್ತು.

ಮೈಸೂರು ರಾಜಕೀಯ ಸುಧಾರಣೆಗಳು.

ಶ್ರೀಯುತ ಹೊಸಕೊಪ್ಪ ಕೃಷ್ಣರಾಯರು ನಮ್ಮಲ್ಲಿಗೆ ಕಳುಹಿಸಿರುವ ಮೈಸೂರು ರಾಜಕೀಯ ಸುಧಾರಣೆಗಳ ವಿಷಯವಾದ, ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಪ್ರೊಗ್ರೆಸಿವ್ ಪಕ್ಷದ ಕಮಿಟಿಯ ವರದಿಯು ನಮ್ಮ ಕೈಸೇರಿದೆ. ಮೈಸೂರಿಗೆ ಎರಡು ವರ್ಷಗಳ ಹಿಂದೆ ಶ್ರೀಮನ್ಮಹಾರಾಜರು ಹೊಸ ರಾಜಕೀಯ ಸುಧಾರಣೆಗಳನ್ನು ಕೊಟ್ಟರು. ಆದರೆ ಈ ರಾಜಕೀಯ ಸುಧಾರಣೆಗಳು, ಮಹಾರಾಜರ ಕೇವಲ ಔದಾರ್ಯದಿಂದಲೂ, ಜನತೆಯೊಳಗೆ ಜವಾಬ್ದಾರಿ ಭಾವನೆಯನ್ನು ಉಂಟುಮಾಡುವ ಇಚ್ಛೆಯಿಂದಲೂ ಕೊಡಲ್ಪಟ್ಟವುಗಳೆಂದು ಸರಕಾರವು ಹೇಳುವುದಾದರೂ, ಸರಕಾರದ ಈ ಆಶಯಗಳೇ ಈ ಸುಧಾರಣೆಗಳಿಂದ ಸಾಧಿತವಾಗುವುದಿಲ್ಲವೆಂದೂ, ಇನ್ನೂ ಅವಶ್ಯವಾದ ಬದಲಾವಣೆಗಳು ಅನೇಕವಿವೆಯೆಂದೂ, ಜನತೆಯಲ್ಲಿ ರಾಜಕೀಯ ಜಾಗೃತಿಯುಂಟಾಗಿ ಈಗಿನ ರಾಜಶಾಸನ ಪದ್ಧತಿಯಲ್ಲಿ ಬಹಳ ಅಸಮಾಧಾನವುಂಟಾಗಿಯದೆಂದೂ ಈ ವರದಿಯ ಪೂರ್ವಪೀಠಿಕೆಯಾಗಿದೆ. ದೇಶೀ ಸಂಸ್ಥಾನಗಳಲ್ಲೆಲ್ಲಾ ಮೈಸೂರಿನ ರಾಜಶಾಸನ ಪದ್ಧತಿಯು ತೃಪ್ತಿಕರವಾಗಿದೆನ್ನಬಹುದು. ಆದರೆ ಇಷ್ಟು ವಿಶಾಲವಾದ ಮೈಸೂರು ದೇಶವು ಈ ತೆರದ ರಾಜಶಾಸನ ಪದ್ಧತಿಯಲ್ಲಿಯೇ ತೃಪ್ತಿಗೊಳ್ಳುವುದು ಜನತೆಯ ಜಡತೆಯ ಸೂಚನೆಯಾಗಿದೆ. ಆದುದರಿಂದ ಮೈಸೂರಿನಲಿ ಪ್ರೊಗ್ರೆಸಿವ್ ಪಕ್ಷವೊಂದು ಸ್ಥಾಪಿತವಾದುದೂ, ಆದು ಈ ಸುಧಾರಣೆಗಳ ಸುಧಾರಣೆಗಳಿಗಾಗಿ ಪೇಚಾಡುವುದೂ ಮೈಸೂರಿನ ರಾಜಕೀಯ ಜಾಗೃತಿಯ ಲಕ್ಷಣವಾಗಿದೆ. ಈ ಮೈಸೂರು ರಾಜಕೀಯ ಸುಧಾರಣೆಗಳು ಎಷ್ಟರ ಮಟ್ಟಿಗೆ ಹಿತಕರವಾಗಿವೆ ಮತ್ತು ಎಷ್ಟರ ಮಟ್ಟಿಗೆ ಅಸಮಾಧಾನಕರವಾಗಿವೆ ಎಂಬುದನ್ನೂ, ಈ ವರದಿಯ ವಿಮರ್ಶೆಯ ಸೂಚನೆಗಳು ಎಷ್ಟು ನ್ಯಾಯವಾದುವುಗಳೆಂದೂ ನಾವು ಆಲೋಚಿಸಲಿರುವೆವು. ನಮ್ಮ ಅಭಿಪ್ರಾಯಗಳನ್ನು ಮುಂದಿನ ಸಂಚಿಕೆಯಲ್ಲಿ ವಿಶದವಾಗಿ ಕೊಡುವೆವು.

ಡಾ। ಅನ್ಸಾರಿಯವರ ನಿರ್ಧಾರ

ಢಿಲ್ಲಿಯಲ್ಲಿ ದೇಶಬಂಧು ದಾಸರ ಸ್ಮಾರಕ ದಿನದ ಆಚರಣೆಯ ಭಾಷಣದಲ್ಲಿ ಡಾ। ಅನ್ಸಾರಿಯವರು, ಅತೀ ಮುಖ್ಯವಾದ ತಮ್ಮ ನಿರ್ಧಾರವನ್ನು ಪ್ರಕಟಪಡಿಸಿದರು. ತಾನು ಈ ದಿನದಿಂದ ಖಿಲಾಫತ್ ಕಮಿಟಿ, ಮುಸ್ಲಿಮ್ ಲೀಗ್ ಮುಂತಾದ ಜಾತೀಯ ಸಂಸ್ಥೆಗಳ ಸಂಬಂಧವನ್ನು ಬಿಟ್ಟುಬಿಟ್ಟೆನೆಂದೂ, ಎಲ್ಲವರು ತನ್ನ ಈ ನಿರ್ಧಾರದಲ್ಲಿ ಸೇರಿ ಭಾರತೆಯ ಬಂಧಮುಕ್ತಿಗಾಗಿ ಪ್ರಯತ್ನಿಸಬೇಕಾಗಿಯೂ ಹೇಳಿದರು. ಶ್ರೀ ಲಾಲಾಶಂಕರಲಾಲರು ಅವರ ನಿರ್ಧಾರವನ್ನು ತಾವೂ ಸ್ವೀಕರಿಸಿದರು. ಉತ್ತರಹಿಂದೂಸ್ಥಾನದ ಜಾತೀಯ ವಾತಾವರಣವು ಅಸಹ್ಯವಾಗಿ ಬಂದಿದೆ. ಇಂತಹ ಸಮಯದಲ್ಲಿ ಡಾ। ಅನ್ಸಾರಿಯವರು ಮುಂದೊತ್ತಿದ ಈ ರಾಷ್ಟ್ರೀಯ ನಿರ್ಧಾರವು ಅತ್ಯಂತ ಹಿತಕರವಾದುದಾಗಿದೆ. ಡಾ। ಅನ್ಸಾರಿಯವರ ಈ ಆದರ್ಶವನ್ನು ಹಿಂದೂಮುಸಲ್ಮಾನರು ಸ್ವೀಕರಿಸಿ, ಜಾತೀಯ ಪಂಗಡಗಳ ಪ್ರತಿಯಾಗಿ ಐಕ್ಯದ ಪಂಗಡವೊಂದು ಸ್ಥಾಪಿಸಲ್ಪಟ್ಟರೆ ಈ ಹಿಂದೂ-ಮುಸಲ್ಮಾನ ಅತ್ಯಾಚಾರ ಘಟನೆಗಳು ಕಡಿಮೆಯಾಗಬಹುದೆಂದು ನಮಗೆ ತೋರುತ್ತಿದೆ.

ಹಿಂದೂ ಮುಸಲ್ಮಾನ ಐಕ್ಯವು ಬರೇ ಒಪ್ಪಂದದಿಂದಲೂ, ಧುರೀಣಧುರೀಣರ ಐಕ್ಯದಿಂದಲೂ ಸಾಧಿಸಲ್ಪಡದೆಂದೂ, ರಾಷ್ಟ್ರೀಯ ಭಾವನೆಯ ಸರಿಯಾದ ಪ್ರಚಾರವೇ ಇದಕ್ಕೆ ಅಡ್ಡಿಗಲ್ಲಾಗಬೇಕೆಂದೂ ನಾವು ಈ ಮೊದಲೇ ಸೂಚಿಸಿದ್ದೆವು. ರಾಷ್ಟ್ರೀಯತೆಯ ಪ್ರಚಾರಕ್ಕೆ ಡಾ। ಅನ್ಸಾರಿಯವರ ಈ ಧುರೀಣತ್ವವು ಅತೀ ಅನುಕೂಲವೂ ಪರಿಣಾಮಕಾರಿಯೂ ಆಗಿದೆ.

ಹಿಂದೂ ಮುಸಲ್ಮಾನ ಕಲಹಗಳಲ್ಲಿ, ಸರಕಾರವು ಮುಸಲ್ಮಾನ ಪಕ್ಷವನ್ನು ವಹಿಸಿಕೊಂಡು ಹಿಂದೂ ರಾಷ್ಟ್ರೀಯತ್ವಕ್ಕೆ ವಿರೋಧವನ್ನು ಕಟ್ಟುತ್ತಿದೆಯೆಂದೂ, ಕೆಲವು ಕಡೆಗಳಲ್ಲಿ ಸರಕಾರದ ಅಧಿಕಾರಿಗಳು ಈ ಕಲಹಗಳನ್ನು ಬೆಳೆಸಲಿಕ್ಕೂ ಯತ್ನಿಸುತ್ತಾರೆಂದೂ, ಮಾಜಿ ಹಿಂದೀಯ ಸ್ಟೇಟ್ ಸೆಕ್ರೆಟರಿಗಳಾಗಿರುವ ಲೋರ್ಡ ಒಲಿವಿಯರರೇ ಹೇಳುತ್ತಾರೆಂದ ಮೇಲೆ ಈ ವಿಭಾಗಿಸಿ ಆಳುವ ಯುಕ್ತಿವಾದದ ನಮ್ಮ ಅನುಮಾನವು ಸ್ಥಾಪಿಸಲ್ಪಟ್ಟಂತಾಯಿತು. ಇದರಿಂದ ಈ ಕಲಹಗಳ ನ್ಯಾಯವು ಯಾರಿಗೆ ಲಾಭವಾಗಿ ಪರಿಣಮಿಸಿವೆಯೆಂದು ಎರಡೂ ಜಾತಿಗಳಿಗೂ ತಿಳಿಯತಕ್ಕದ್ದು. ಆದರೆ ಇವೆಲ್ಲ ಭಾವನೆಗಳು ಜಾತೀಯ ಉತ್ತೇಜಕತೆಯಲ್ಲಿ ಮರುಧ್ವನಿಯಾಗಿ ಪರಿಣಮಿಸಿವೆ.

ಮುಸಲ್ಮಾನರ ಜವಾಬ್ದಾರಿ

ಹಿಂದೂಮುಸಲ್ಮಾನ ಕಲಹಗಳ ವಿಷಯವಾಗಿ ನಾವು ಅದೆಷ್ಟೊ ಬಾರಿ ಪ್ರಸ್ತಾಪಿಸಿದ್ದಾಯಿತು. ಆದರೂ ದಿನಂಪ್ರತಿ ಉತ್ತರ ಹಿಂದೂಸ್ಥಾನದಿಂದ ಬರುವ ವಾರ್ತೆಗಳನ್ನು ಕೇಳಿದರೆ ಅದನ್ನು ಪುನಃಪುನಃ ಎತ್ತದಿರಲು ಮನಸ್ಸು ನಿಲ್ಲುವುದಿಲ್ಲ. ಅಲ್ಲದೆ ಕೆಲವು ಕಡೆಗಳಲ್ಲಿ ಹಿಂದುಗಳೂ ಅತ್ಯಾಚಾರಗಳನ್ನು ನಡಿಸಿರುವರಾದರೂ, ಮುಸಲ್ಮಾನ ಪೋಕ್ರಿಗಳ ಪುಂಡಾಟವೇ ಅನೇಕ ಕಡೆಗಳಲ್ಲಿ ಹೆಚ್ಚಾಗಿ ತೋರುತ್ತಿದೆ. ಕೋಹತ್ತಿನಿಂದ ಆರಂಭವಾದ ಈ ಹಿಂದೂ ವಿಧ್ವಂಸಕ ಚಳವಳವು ಮತ್ತೆ ಪುನಃ ಕೋಹತ್ತಿನಲ್ಲಿ ತಳೆದೂರಿ, ಪುನಃ ರಾವಲ್ಪಿಂಡಿಯಲ್ಲಿ ಭಯಂಕರ ರೀತಿಯಲ್ಲಿ ನಡೆದು, ಈಗ ಬಂಗಾಳದ ಪಾಬ್ನಾ ಎಂಬಲ್ಲಿ ಅಮಾನುಷವಾದ ರೀತಿಯಲ್ಲಿ ನಡೆಯುತ್ತಿದೆ. ಮನೆ ಸುಡುವುದು, ಸ್ತ್ರೀಯರನ್ನು ಬಲಾತ್ಕರಿಸುವುದು, ಕೊಲ್ಲುವುದು ಇತ್ಯಾದಿ ಯಾವ ಮತದಲ್ಲಿಯಾದರೂ ನರಕಯಾತನೆಯ ಶಿಕ್ಷೆಯೇ ವಿಧಿಸಲ್ಪಟ್ಟಿರುವ ಪಾಪಕೃತ್ಯಗಳನ್ನು ಈ ಮುಸಲ್ಮಾನರೊಳಗಿನ ಕೆಲವು ಪೋಕ್ರಿಗಳು ಅಲ್ಲಲ್ಲಿ ಮತದ ಹೆಸರಿನಲ್ಲಿ ನಡೆಸಿ, ಇಡೀ ಮುಸಲ್ಮಾನ ಜಾತಿಗೂ, ಮುಸಲ್ಮಾನ ಮತಕ್ಕೂ, ಅವಮಾನವನ್ನು ತಂದಿಕ್ಕುತ್ತಿರುವರು. ಪಾಬ್ನಾದಲ್ಲಿ ಈಗ ನಡೆಯುತ್ತಿರುವ ಘೋರ ಅತ್ಯಾಚಾರಗಳ ಸೂಚನೆಯು ಹತ್ತಿಪ್ಪತ್ತು ದಿನಗಳಿಂದ ಬಹಿರಂಗವಾಗಿಯೇ ತೋರುತ್ತಿದ್ದು ಕೆಲವು ದೂರದರ್ಶಿಗಳು ತಮ್ಮ ಹೆಂಗಸರು ಮಕ್ಕಳನ್ನು ಮೊದಲೇ ದೂರದ ಸಂಬಂಧಿಕರಲ್ಲಿಗೆ ಕಳುಹಿಸಿದ್ದರು. ಇಂತಹ ಪೂರ್ವ ಚಿಹ್ನೆಗಳಿದ್ದರೂ, ಸರಕಾರವೂ ಪ್ರತಿಯಾಗಿ ಯಾವ ಮುಂಜಾಗ್ರತೆಯನ್ನೂ ತೆಗೆದುಕೊಳ್ಳಲಿಲ್ಲ. ಮುಸಲ್ಮಾನ ಪತ್ರಿಕೆಗಳೂ ಇಂತಹ ಸ್ಪಷ್ಟವಾಗಿಯೂ ಮುಸಲ್ಮಾನ ಅತ್ಯಾಚಾರಗಳನ್ನು ಖಂಡಿಸಲು ಮುಂದಾಗಿಲ್ಲ. ಮುಸಲ್ಮಾನ ಧುರೀಣರೂ ಇದಕ್ಕೆ ಕೆಲವು ನೆವಗಳನ್ನಾದರೂ ಕಟ್ಟುವರಲ್ಲದೆ ಖಂಡಿಸಿಲ್ಲ. ಈ ಅತ್ಯಾಚಾರ ಕೃತ್ಯಗಳನ್ನು ಜಾತೀಯತೆಯ ತಪ್ಪಭಿಪ್ರಾಯದಿಂದ ಖಂಡಿಸದಿರುವುದು ಹಿಂದೂಗಳಿಗಲ್ಲದೆ ಮುಸಲ್ಮಾನರಿಗೂ ಬಾಧಕವಿದೆ.

ಸಾಮ್ರಾಜ್ಯವಾದದ ಸೊಕ್ಕು

ನೀತಿಪಾಲಕರಾದ ಬ್ರಿಟಿಷರಿಗೆ ತಮ್ಮ ನೀತಿಯನ್ನು ಸಾಧಿಸಲಿಕ್ಕೆ ಬ್ರಿಟಿಷ್ ಸೈನ್ಯವೂ, ಬ್ರಿಟಿಷ್ ನೌಕೆಯೂ ಹೊರತು ಬೇರಾವ ತರ್ಕವೂ ಇರುವುದಿಲ್ಲ. ನಮ್ಮ ಸಾಮ್ರಾಜ್ಯವೂ ಈ ತರ್ಕದಿಂದಲೇ ಸ್ಥಾಪಿಸಲ್ಪಟ್ಟದ್ದಿತಾದರೂ, ಇತ್ತೀಚೆಗೆ ಅದರ ಉಪಯೋಗವು ಮತ್ತಷ್ಟು ಹೆಚ್ಚಾಗಲಾರಂಭಿಸಿಯದೆ. ಐಗುಪ್ತಕ್ಕೆ ಒಂದು ಸ್ವಾತಂತ್ರ್ಯವನ್ನು ಕೊಟ್ಟು ಇಂಗ್ಲೆಂಡು ಬಹಳ ಪಾಪವನ್ನು ಕಟ್ಟಿಕೊಂಡಿತು. ಅದರ ಪ್ರಾಯಶ್ಚಿತ್ತವು ಗುಂಡು ಪಿರಂಗಿಗಳ ಪ್ರದರ್ಶನದಿಂದಲೂ ಯುದ್ಧನಾವೆಗಳ ಸಂಚಲನದಿಂದಲೂ ನಡೆಯುತ್ತಾ ಇದೆ. ಐಗುಪ್ತ್ಯಕ್ಕೊಂದು ಜವಾಬ್ದಾರಿ ಸರಕಾರವಾಯಿತು. ಅದರ ಪಾರ್ಲಿಮೆಂಟು ಮಾತ್ರ ಬ್ರಿಟಿಷ್ ನಿರಂಕುಶ ರಾಜತಂತ್ರಜ್ಞನ ಕಿರುಬೆರಳಿನಿಂದ ನಡೆಯುವ ಸೂತ್ರದ ಗೊಂಬೆಯಾಗಬೇಕು. ಇದೀಗ ಬ್ರಿಟಿಷರ ಸ್ವಾತಂತ್ರ್ಯದ ಭಾವನೆ! ಬ್ರಿಟಿಷ್ ಪ್ರತಿನಿಧಿಯಾಗಿ ಐಗುಪ್ತ್ಯದಲ್ಲಿದ್ದ ಬೆರನ್ ಲೊಯಿಡನು ಲಂಡನಿಗೆ ಹೋಗಿರುವನು. ಈ ಸೊಕ್ಕಿನ ಧೋರಣವನ್ನು ನಡಿಸಲಿಕ್ಕೆ ಸ್ವತಂತ್ರವನ್ನು ಪಡೆಯುವುದೇ ಅವನ ಮುಖ್ಯೋದ್ದೇಶ. ಝುಗಲೂಲ ಪಕ್ಷದವರನ್ನು ತಮ್ಮ ಆಜ್ಞಾವಾಹಕರಾಗಿ ಮಾಡಲಿಕ್ಕೆ ಬೇಕಾಗುವ ಕೆಲಸಗಳನ್ನು ನಡೆಸಲು ಬೆರನ್ ಲೊಯಿಡನಿಗೆ ಸ್ವತಂತ್ರವಿರುವುದು. ಝುಗಲೂಲರು ಈ ಸಾಮ್ರಾಜ್ಯವಾದಿಗಳ ಸ್ವಾರ್ಥಕ್ಕೆ ತಲೆ ತಗ್ಗಿಸದಿದ್ದರೆ ಪಾರ್ಲಿಮೆಂಟು ಅಧಿಕಾರವನ್ನು ಕಳಕೊಳ್ಳುವುದು. ಎಂತಹ ಸ್ವಾತಂತ್ರ್ಯ!

ನೂತನ ಕ್ರೈಸ್ತ.

ಆಧುನಿಕ ನಾಗರಿಕ ಕ್ರೈಸ್ತನು ಡಾ। ಅನ್ನಿಬಿಸೆಂಟಮ್ಮನವರ ಕೈಯಲ್ಲಿ ಬಹಳ ಬೇಗನೇ ತಯಾರಾಗುತ್ತಿರುವನು. ಪತ್ರಿಕೆಗಳಲ್ಲಿ ಈ ನೂತನ ಕ್ರೈಸ್ತನ ತಯಾರಿಯ ಶಾಸ್ತ್ರೀಯ ಹಿತವು ಆಗಾಗ ಪ್ರಕಟಹೊಂದುತ್ತಿದೆ. ಆಧುನಿಕ ಕ್ರೈಸ್ತನು ಆಧುನಿಕ ವಿದ್ಯೆಯನ್ನು ಹೊಂದಬೇಕು. ಕ್ರೈಸ್ತನ ಪುನರಾಗಮನದ ಕ್ರಮವನ್ನು ಡಾ। ಅನ್ನಿಬಿಸೆಂಟಮ್ಮನವರು ಬಹಳ ಪರಿಶ್ರಮ ಪೂರ್ವಕದ ಶೋಧದಿಂದ ಕಂಡುಹಿಡಿದಿರುವರು, ಮತ್ತು ಈ ಶೋಧದ ತಮ್ಮ ಜ್ಞಾನವನ್ನು ಯುಕ್ತಿ ಯುಕ್ತವಾಗಿಯೇ ಉಪಯೋಗಿಸಿಕೊಳ್ಳುತ್ತಿರುವರು. ಆಧುನಿಕ ಕ್ರೈಸ್ತನು ಕ್ರೈಸ್ತನು ಮಾತ್ರವಾಗಿಲ್ಲ. ಅವನು ಕೃಷ್ಣನೂ ಆಗಿರುವನು; ಬುದ್ಧನೂ ಆಗಿರುವನು; ಮೈತ್ರೇಯನೂ ಆಗಿರುವನು; ಮಹಮ್ಮದ ಪೈಗಂಬರನೂ ಆಗಿರುವನು. ಯಾವ ಮತಗಳು ಯಾವ ಮಹಾಪುರುಷರನ್ನು ಪೂಜಿಸುತ್ತಿರುವುವೊ, ಅವರೆಲ್ಲರೂ ಇವನೇ ಆಗಿರುವರು. ಎಲ್ಲಾ ಮತಗಳ ಎಲ್ಲಾ ಜನರ ಮೂಢಭಕ್ತಿಯನ್ನು ಒಲಿಸಲಿಕ್ಕೆ ಇದಕ್ಕಿಂತ ಸುಲಭವಾದ ಯುಕ್ತಿಯು ಇನ್ನೊಂದಿಲ್ಲ. ಸ್ಕೋಟ್ಲೆಂಡಿನ ಸುಖಮಯ ವಾತಾವರಣದ ಸೊಬಗಿನಲ್ಲಿ ನೂತನ ಕ್ರೈಸ್ತನ ಅರಮನೆಯು ರಚಿಸಲ್ಪಟ್ಟದೆ. ಅದರ ಸುತ್ತಿನಲ್ಲಿ ಅವನ ಭಾವೀ ಹದಿನೆರಡು ಶಿಷ್ಯರ ಕುಟೀರಗಳು ರಚಿತವಾಗಿವೆ. ಮತ್ತು ಈಗ ಈ ಶಿಷ್ಯಾನ್ವೇಷಣವು ನಡೆಯುತ್ತಿದೆ. ಡಾ। ಅನ್ನಿಬಿಸೆಂಟಮ್ಮನವರ ಈ ನೂತನ ಅಭಿನಯದ ರಂಗಭೂಮಿಯನ್ನು ಲೋಕವು ಆನಂದದಿಂದ ಲಕ್ಷಿಸುತ್ತಿದೆ ಡಾ। ಅನ್ನಿಬಿಸೆಂಟಮ್ಮನವರು ತಮ್ಮ ರಚನೆಯ ಪೂರ್ವದಲ್ಲಿ ಚೆನ್ನಾಗಿಯೇ ಆಲೋಚಿಸಿದ್ದಾರೆ. ನೂತನ ಮೆಸ್ಸಾಯನು ಪೌರ್ವಾತ್ಯ ದೇಹದಲ್ಲಿಯೇ ಬರಬೇಕು; ಬಿಳೀ ದೇಹವು ಅವನು ಒಪ್ಪತಕ್ಕ ವಿಷಯವಲ್ಲ. ಏಕೆಂದರೆ ಪೂರ್ವದಲ್ಲಿ ಯಾವನೊಬ್ಬ ಕ್ರೈಸ್ತನೂ ಬಿಳೀ ದೇಹದಲ್ಲಿ ಬರಲಿಲ್ಲ. ಆದರೆ ಡಾ। ಬಿಸೆಂಟಮ್ಮನವರು ಪೂರ್ವಕಾಲಕ್ಕೂ ಈಗಿನ ಕಾಲಕ್ಕೂ ಇರುವ ಒಂದು ತಾರತಮ್ಯವನ್ನು ಮರತಂತೆ ತೋರುತ್ತಿದೆ. ಪೂರ್ವಕಾಲದಲ್ಲಿ ನಾಗರಿಕತೆಯು ಪೂರ್ವ ದೇಶಗಳಲ್ಲಿ ಮಾತ್ರವೇ ಇದ್ದಿತು. ಆದರೆ ಈಗ ನಾಗರಿಕತೆಯು ದಿಕ್ಕನ್ನು ಬದಲಾಯಿಸಿದೆ. ಆದುದರಿಂದ ಆಧುನಿಕ ಸಂಸ್ಥೆಯಿಂದ ರಚಿಸಲ್ಪಟ್ಟ, ಆಧುನಿಕ ವಿದ್ಯಾಭ್ಯಾಸವನ್ನು ಹೊಂದಿದ, ಆಧುನಿಕ ಸೌಕರ್ಯಗಳನ್ನು ಹೊಂದುತ್ತಿರುವ, ಆಧುನಿಕ ನಾಗರಿಕರ ಮಧ್ಯದಲ್ಲಿ ಇರುವ, ಆಧುನಿಕ ಕ್ರೈಸ್ತನು, ಆಧುನಿಕ ಕಾಲಕ್ರಮವನ್ನನುಸರಿಸಿ ಬಿಳೀಯವನಾಗಿರುವುದೇ ಉತ್ತಮವಿತ್ತು. ಆದರೆ ಡಾ। ಬಿಸೆಂಟಮ್ಮನವರ ಯುಕ್ತಿವಾದವು ಏನನ್ನು ಉದ್ದೇಶಿಸುತ್ತಿದೆಯೆಂದು ಯಾರು ಬಲ್ಲರು?

ಶ್ರೀಯುತ ಬಾಲಕೃಷ್ಣ ಶೆಟ್ರಿಗ ಕೈಸರ್-ಇ-ಹಿಂದ್ ಮೆಡಲು

ಸರಕಾರಿ ಬಿರುದುಬಾವಲಿಗಳ ವಿಷಯದಲ್ಲಿ ನಾವು ಗೌರವವನ್ನು ಅನುಭವಿಸಲಾರೆವಾದರೂ, ಶ್ರೀಯುತ ಬಾಲಕೃಷ್ಣ ಶೆಟ್ರಿಗೆ ಲಭಿಸಿರುವ ಬಿರುದಿನ ಅವರ ಮತ್ತು ಅವರ ಸ್ನೇಹಿತರ ಸಂತೋಷದಲ್ಲಿ ನಾವೂ ಸಹಭಾಗಿಗಳಾಗದಿರಲಾರೆವು. ಶ್ರೀಯುತ ಶೆಟ್ರು ಮೊದಲಿನಿಂದಲೂ ಜನಸೇವೆಯಲ್ಲಿ ಉತ್ಸಾಹಿತರಿರುವರು. ಅಲ್ಲದೆ ತಮ್ಮ ಜಾತಿಯ ಉದ್ಧರಣೆಯ ಬಗ್ಗೆ ಬಹಳ ಶ್ರಮಪಟ್ಟಿರುವರು. ಬಂಟರ ಯಾನೆ ನಾಡವರ ಸಂಘವು ಅವರಿಗೆ ಚಿರಋಣಿ ಇರಲು ಕಾರಣವಿದೆ. ಆದರೆ ಈ ಜಾತೀಯ ಪ್ರೇಮದಲ್ಲಿ ಅವರ ರಾಷ್ಟ್ರೀಯತೆಯು ಕಳೆಗುಂದಿರಲಾರದು. ಶ್ರೀಯುತ ಶೆಟ್ರು ಸರಕಾರದ ಈ ಹೊಸ ಬಿರುದಿನ ಲಾಭದಿಂದ ಇತರರಂತೆ ಸರಕಾರೀ ದಾಕ್ಷಿಣ್ಯಕ್ಕೆ ಬಲಿಬೀಳದೆ, ಜನತೆಯ ಸೇವೆಯಲ್ಲಿಯೇ ಮತ್ತಷ್ಟು ಹೆಚ್ಚು ಉತ್ಸಾಹಿತರಾಗುವರಾಗಿ ನಾವು ಭರವಸೆ ಪಡುವೆವು.

ಅನುಕ್ರಮಣಿಕೆ.

ಅಗ್ರಲೇಖ — ಪುಟ.
ವಿದ್ಯಾರ್ಥಿವೇತನಗಳು ೬
ಸ್ಫುಟವಿಚಾರಗಳು ೫
ವರ್ತಮಾನಸಂಗ್ರಹಗಳು—
ವಿದೇಶ, ಒಳದೇಶ ೭
ದಕ್ಷಿಣ ಕನ್ನಡ—ಮಂಗಳೂರು, ಕಿನ್ನಿಕಂಬಳ, ತ್ರಿಕರಪುರ, ಬಾಯಾರು, ಮಂಜೇಶ್ವರ, ಮೂಡಬಿದರೆ ಬಂಟವಾಳ, . . . ೮
ಪತ್ರವ್ಯವಹಾರ ೧ . . . .
ವಿವಿಧವಿಷಯಗಳು ೪-೮

ಸ್ವದೇಶಾಭಿಮಾನಿ.

ಶಕ ೧೮೪೮ ಆಷಾಢ ಶು॥ ೭ಯು ಶುಕ್ರವಾರ.

ವಿದ್ಯಾರ್ಥಿ ವೇತನಗಳು.

ವಿದ್ಯಾಭ್ಯಾಸವು ಹಣವಿದ್ದವರಿಗೆ ಮಾತ್ರವಲ್ಲದೆ ಹಣವಿಲ್ಲದವರಿಗೂ ಸಿಕ್ಕುವಂತಿರಬೇಕೆಂಬುದೇ ವಿದ್ಯಾರ್ಥಿ ವೇತನದ ಮೂಲಸೂತ್ರವಾಗಿದೆ. ಮತ್ತು ದೇಶದಲ್ಲಿ ವಿದ್ಯೆಯು ಹೆಚ್ಚು ಪ್ರಚಾರವಾಗಬೇಕೆಂಬ ಪ್ರಬಲವಾದ ಇಚ್ಛೆಯೊಂದಿಗೆ ವಿದ್ಯಾರ್ಥಿ ವೇತನಗಳ ಸಂಸ್ಥೆಗಳೂ ಹೆಚ್ಚಾಗಿವೆ. ವಿದ್ಯಾಭ್ಯಾಸವು ಜನಜನಿತವಾಗಬೇಕೆಂಬುದು ಜನಾಂಗದ ಉಚ್ಚ ಆಕಾಂಕ್ಷೆ. ಜನತೆಯ ಜೀವನವನ್ನು ಉಚ್ಚವಾಗಿರಿಸಲಿಕ್ಕೂ, ಜನತೆಯ ಆಶಯಗಳನ್ನು ಉಚ್ಚವಾಗಿರಿಸಲಿಕ್ಕೂ ವಿದ್ಯಾಭ್ಯಾಸವು ಅತೀ ಅಗತ್ಯವಾದುದಾಗಿದೆ. ಆದುದರಿಂದ ಸಾರ್ವಜನಿಕ ಹಿತದಲ್ಲಿ ಚಿಂತಿತರಾದ ಹಲವು ವಿದ್ಯಾವಂತ ಮಹನೀಯರುಗಳು, ಬಡವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆಂದು ನಿಧಿಗಳನ್ನು ಸಂಗ್ರಹಿಸಿ ವೇತನಗಳನ್ನು ಕೊಡುವರು. ಕೆಲವು ಜಾತೀಯವಾಗಿಯೂ, ಕೆಲವರು ಸಾರ್ವಜನಿಕವಾಗಿಯೂ ಈ ನಿಧಿಗಳನ್ನು ಕೂಡಿಸಿ ಉಪಯೋಗಿಸುವರು.

ಆದರೆ ಈ ವೇತನಗಳ ವಿಷಯವಾಗಿ ಪುನರಾಲೋಚನೆಯು ಅಗತ್ಯವಿದೆ. ಕೆಲವು ವರ್ಷಗಳ ಹಿಂದಿನ ಇಂತಹ ವೇತನಗಳ ಉಪಯೋಗ ಕ್ರಮವನ್ನು ಈಗಲೂ ಅನುಸರಿಸಿದರೆ ಹಿತವಾದೀತೊ, ಆ ಕ್ರಮವನ್ನು ಬದಲಾಯಿಸುವುದು ಅಗತ್ಯವುಂಟೊ ಎಂಬುದನ್ನು ವಿಚಾರಿಸಬೇಕು.

ಈಗಿನ ಶಾಲೆಗಳಲ್ಲಿ ವಿದ್ಯಾಭ್ಯಾಸ ಹೊಂದಿದ ಮೇಲೆ ಪುನಃ ಸ್ವತಂತ್ರ ಜೀವನವು ಕಷ್ಟವಾಗುತ್ತಿದೆ; ಜೀವನ ಸೌಕರ್ಯಗಳನ್ನು ಅನುಭವಿಸುವ ಅಭ್ಯಾಸವು ಹೆಚ್ಚಿ, ಜೀವನದ ಅರ್ಜನೆಯ ಶಕ್ತಿಯು ಪರಾಧೀನವಾಗುತ್ತಿದೆ: ಎಂದು ಎಲ್ಲರೂ ಒಪ್ಪತಕ್ಕ ಮಾತೇ? ಅಂದ ಮೇಲೆ ಈ ವೇತನಗಳನ್ನು ವಿದ್ಯಾರ್ಥಿಗಳಿಗೆ ಕೊಟ್ಟು ನಿರುದ್ದೇಶಕರವಾದ ವಿದ್ಯಾಭ್ಯಾಸಕ್ಕಾಗಿ ಕೊಟ್ಟು ವಿದ್ಯಾರ್ಥಿಗಳ ಮುಂದಿನ ಜೀವನಕ್ಕೆ ತಡೆಹಾಕಿದಂತಾಗುವುದೇ ಹೊರತು ಬೇರೆ ಇಲ್ಲ.

ಕೊಲೇಜು ತರಗತಿಗಳಲ್ಲಾಗಲಿ, ಹೈಸ್ಕೂಲು ತರಗತಿಗಳಲ್ಲಾಗಲಿ ಉತ್ತೀರ್ಣನಾದವನು, (೧) ಉಪಾಧ್ಯಾಯ ಕೆಲಸ, (೨) ವೈದ್ಯ ಕೆಲಸ, (೩) ಇಂಜಿನಿಯರಿಂಗ್, ಬಿ. ಎ. ಆದರೆ ವಕೀಲ ಕೆಲಸ, ಮುಖ್ಯವಾಗಿ ಇವುಗಳಲ್ಲೊಂದನ್ನೇ ಆಶ್ರಯಿಸಬೇಕಾಗುತ್ತದೆ. ಇವೆಲ್ಲವುಗಳಲ್ಲಿಯೂ ಕಠಿಣವಾದ ಸ್ಪರ್ಧೆಯು ಇದೆ. ನೂರಾರು ವಿದ್ಯಾಭ್ಯಾಸ ಹೊಂದಿದ ಯುವರ ನಿರುತ್ಸಾಹವೂ, ನಿರುತ್ತೇಜಕವೂ ಆದ ಜೀವನದಲ್ಲಿ ಕಾಲಹರಣ ಮಾಡುತ್ತಾರೆ. ವಿದ್ಯಾಭ್ಯಾಸ ಹೊಂದಿದ ಯುವಕರ ಅರ್ಜನೆಯ ಬೆಲೆಯು ಕ್ರಮಾಗತವಾಗಿ ಸಾಮಾನ್ಯ ಕೈಗೆಲಸದವರ ಅರ್ಜನೆಯ ಬೆಲೆಗಿಂತಲೂ ಕಡಿಮೆ ಹೊಂದಿದೆ. ಅಕ್ಷರ ಜ್ಞಾನವಿಲ್ಲದ ಕೂಲಿಯು ದಿನವೊಂದಕ್ಕೆ ಎಳೆಂಟಾಣೆಗಿಂತ ಕಡಿಮೆ ಮಜೂರಿಗೆ ಬಾರದಿರುವಾಗ, ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಯು ಐದಾರು ರೂಪಾಯಿ ತಿಂಗಳ ಸಂಬಳಕ್ಕೆ ಬರುವುದೂ ಇರುತ್ತದೆ. ಇವೆಲ್ಲ ಚಿನ್ಹೆಗಳು, ಈಗಿನ ಶಾಲೆಗಳ ವಿದ್ಯಾಭ್ಯಾಸವು ಯಾವ ರೀತಿಯಲ್ಲಿ ಜನಾಂಗದ ಮೇಲೆ ಪರಿಣಾಮ ಹೊಂದುತ್ತಿದೆ ಎಂದು ತೋರಿಸುತ್ತಿವೆ.

ಪೂರ್ವಕಾಲದಲ್ಲಿ ಹಾಗಿರಲಿಲ್ಲ. ವಕೀಲ ವೃತ್ತಿಯು ಮಹಾ ಗೌರವದ ವೃತ್ತಿಯಾಗಿದ್ದಿತು. ವೈದ್ಯಕೀಯ ವಿದ್ಯಾರ್ಥಿಗಳೂ, ಇತರ ಶಾಖೆಗಳ ವಿದ್ಯಾರ್ಥಿಗಳೂ ತಮ್ಮ ತಮ್ಮ ಪರೀಕ್ಷೆಯನ್ನು ಪಾಸಾಗುವುದೇ ತಡವಿತ್ತು. ಕೂಡಲೇ ಅವರಿಗೆ ಉತ್ತಮ ಅರ್ಜನೆಯ ಉಪಾಯವು ದೊರಕುತ್ತಿತ್ತು.

ಅಲ್ಲದೆ ವಿದ್ಯಾಭ್ಯಾಸಕ್ಕಾಗಿ ತಡವರಿಸುವವರೂ ಆಗಿನ ಕಾಲದಲ್ಲಿ ಕಡಿಮೆ ಇದ್ದರು. ವಿದ್ಯಾರ್ಥಿ ವೇತನಗಳು ಉತ್ತಮ ವಿದ್ಯಾರ್ಥಿಗಳನ್ನು ಉತ್ತೇಜಿಸಲಿಕ್ಕೆ ಅವಶ್ಯವಿದ್ದುವು. ಈಗ ವೇತನವಿರಲಿ ಇಲ್ಲದಿರಲಿ, ಜನರು ಹೇಗಾದರೂ ಮಾಡಿ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕಲಿಸುವರು. ವಿದ್ಯಾಭ್ಯಾಸವು ವಿದ್ಯೆಯ ಆಂತರಿಕ ಬೆಲೆಯ ಮೇಲಿನ ಪ್ರೇಮಕ್ಕಿಂತಲೂ, ಅದರ ಅರ್ಜನೆಯ ಬೆಲೆಯ ಮೋಹದಿಂದ ಬಯಸಲ್ಪಡುತ್ತಿದೆ.

ವಿದ್ಯಾರ್ಥಿಗಳು ಕೂಡ ತಮ್ಮ ಜೀವನದ ಖರ್ಚನ್ನು ಹೆಚ್ಚು ಮಾಡಲು ಆಶಿಸುವರು. ಆಧುನಿಕ ವಿದ್ಯೆಯ ಪರಿಣಾಮವಾದ ಡಂಭದಿಂದಲೂ, ಸಾಮಾನ್ಯ ಜೀವನದ ಮೇಲಿನ ತಿರಸ್ಕಾರದಿಂದಲೂ, ವಿದ್ಯಾರ್ಥಿಗಳು ಬೇಗನೆ ಹೊಟೇಲು ಪ್ರವೇಶ ಸಿನೆಮಾ ಪ್ರದರ್ಶನ, ಉತ್ತಮ ಊಟ, ಫೆಶನಿನ ಭೂಷಣ, ಇತ್ಯಾದಿ ಅನಾವಶ್ಯಕವಾದ ವ್ಯಯಗಳಲ್ಲಿ ಕೈಯಿಕ್ಕುತ್ತಾರೆ. ಮನೆಯಲ್ಲಿ ಪದಾರ್ಥವಿಲ್ಲದೆ ಊಟ ಮಾಡುತ್ತಿದ್ದ ಅತೀ ಬಡವರಲ್ಲಿಯ ವಿದ್ಯಾರ್ಥಿಗಳಾದರೂ, ಹೊಸ್ಟೆಲನ್ನು ಸೇರಿದ ಕೂಡಲೆ ಎರಡುಮೂರು ಪದಾರ್ಥಗಳಿಲ್ಲದೆ ಊಟ ಮಾಡಲಾರರು. ಬೆಳಗ್ಗೆ ಗಂಜಿಯುಣ್ಣುವವರಿಗೆ ಕಾಫಿ, ಫಲಾಹಾರವಿಲ್ಲದೆ ನಡೆಯದು.

ಆದುದರಿಂದ, ಈಗ ಕೊಡಲ್ಪಡುವ ವಿದ್ಯಾರ್ಥಿವೇತನಗಳ ಬಹ್ವಾಂಶವು ವಿದ್ಯಾರ್ಥಿಗಳ ಈ ನಿರಂಕುಶ ವರ್ತನದಲ್ಲಿಯೇ ವ್ಯರ್ಥ ಹೊಂದುತ್ತಿದೆ; ಮತ್ತು ಜನಾಂಗದ ಭಾವೀ ಜೀವನವನ್ನು ಕೆಡಿಸುತ್ತಿದೆ. ಈಗಿನ ವಿದ್ಯಾವಾತಾವರಣವು ಸಾಮಾನ್ಯ ವಿದ್ಯಾವೇತನಗಳ ಅನಾವಶ್ಯಕತೆಯನ್ನು ಸೂಚಿಸುವ ಸ್ಥಿತಿಗೆ ಬಂದಿದೆಯೆಂದು ನಮ್ಮ ಅಭಿಪ್ರಾಯವಿದೆ. ಜನಸಾಮಾನ್ಯರೊಳಗೆ ಪ್ರಾಥಮಿಕ ವಿದ್ಯಾಭ್ಯಾಸವು ಪ್ರಚಾರ ಹೊಂದಿದರೆ ಸಾಕೆಂದೂ, ಪ್ರೌಢ ವಿದ್ಯಾಭ್ಯಾಸದ ಪ್ರಚಾರವು ಕಡಿಮೆಯಾಗುವುದು ಅತ್ಯವಶ್ಯವಿದೆಯೆಂದೂ ನಮಗೆ ಅನ್ನಿಸುತ್ತಿದೆ.

ವಿದ್ಯಾಶಾಖೆಯಲ್ಲಿ ಸಾರ್ವಜನಿಕ ಹಿತಕ್ಕಾಗಿ ಕೆಲಸ ಮಾಡುವ ಅನೇಕರಿಗೆ ಈ ಅಭಿಪ್ರಾಯವು ತೀರಾ ತಪ್ಪಾಗಿಯದೆಂದು ತೋರಬಹುದು. ಆದರೆ ಅವರಾದರೂ, ವಿದ್ಯಾರ್ಥಿ ವೇತನದ ಈಗಿನ ಕ್ರಮದ ನ್ಯೂನತೆಯನ್ನು ಒಪ್ಪದಿರಲಾರರು. ವಿದ್ಯಾರ್ಥಿವೇತನವು ತೀರಾ ಬಡವರಾದ ಹುಡುಗರಿಗೆ ಕೊಡಬೇಕು; ಅವರೊಳಗೆ ವಿದ್ಯಾಭ್ಯಾಸದಲ್ಲಿ ಹೆಚ್ಚು ಪ್ರತಿಭೆಯನ್ನು ತೋರಿಸುವವರಿಗೆ ಮಾತ್ರವೇ ಕೊಡಬೇಕು; ಮತ್ತು ಕೊಡಲ್ಪಡುವ ಐವೇಜು, ವೇತನ ಸಂಖ್ಯೆಯನ್ನು ಬೆಳೆಯುವ ಉದ್ದೇಶದಿಂದಿರದೆ, ವಿದ್ಯಾರ್ಥಿಯ ಸಂಪೂರ್ಣ ಖರ್ಚನ್ನು ನಿರ್ವಹಿಸುವಂತಹುದಿರಬೇಕು. ನೂರು ಹೈಸ್ಕೂಲು ವಿದ್ಯಾರ್ಥಿಗಳಿಗೆ ಎರಡು ರೂಪಾಯಿಯ ಮಾಸಿಕ ವೇತನವನ್ನು ಕೊಟ್ಟು ಕೆಲಸಕ್ಕೆ ಬಾರದ ಯುವಕರ ಸಂಖ್ಯೆಯನ್ನು ಬೆಳೆಸುವುದಕ್ಕಿಂತಲೂ ಇಬ್ಬರು ಅತೀ ಉತ್ತಮವಾದ ವಿದ್ಯಾರ್ಥಿಗಳಿಗೆ ಮಾತ್ರವೇ, ಊಟ, ಪುಸ್ತಕ ಮತ್ತು ಸಂಬಳ ಇವುಗಳ ಪೂರಾ ಖರ್ಚನ್ನು, ನಿರ್ವಹಿಸುವಷ್ಟು ವೇತನ್ನು ಕೊಟ್ಟರೆ ಆ ವೇತನದ ಪ್ರಯೋಜನವು ಸ್ಥಿರವಾಗಿದೆ. ಕೆಲವು ವೇತನ ಸಂಸ್ಥೆಗಳು, ಮದರಾಸಿನಲ್ಲಿ ಕಲಿಯುವ ಬಿ. ಎ., ಹುಡುಗರಿಗೆ ಐದು ರೂಪಾಯಿ ವೇತನವನ್ನು ಕೊಡುತ್ತಾರೆ. ಇಂತಹ ವೇತನಗಳಿಂದ ಪ್ರಯೋಜನವಾಗುವುದಕ್ಕಿಂತಲೂ ಬಾಧಕವೇ ತಪ್ಪುವುದು. ತಮ್ಮ ವಾರ್ಷಿಕ ವರದಿಗಳಲ್ಲಿ ತಾವು ಈ ವರ್ಷ ಇನ್ನೂರು ವೇತನಗಳನ್ನು ಕೊಟ್ಟೆವು ಎಂದಿತ್ಯಾದಿಯಾಗಿ ಹೇಳಿ ತಮ್ಮ ಔದಾರ್ಯವನ್ನೂ, ಕಾರ್ಯಬಾಹುಲ್ಯವನ್ನೂ ತೋರಿಸುವವರ ವಂದಿಯು ಮಾನಿಸಲ್ಪಡಲು ಯೋಗ್ಯವಲ್ಲ.

ವೇತನ ಸಂಸ್ಥೆಗಳು ಇದರ ದೃಷ್ಟ್ಯಾ ವೇತನಗಳನ್ನು ಕೊಡುವುದು ಆವಶ್ಯಕವಿದೆ. ಬಡತನದ ಆಧಾರದ ಮೇಲೆಯೇ ಕೊಡಲ್ಪಡುವ ವೇತನಗಳು ಸಮಾಜದ ಯುವಕರ ಭಾವಿ ಜೀವನವನ್ನು ಕೆಡಿಸುತ್ತಿದೆಯಲ್ಲದೆ, ಸಮಾಜದ ಶಕ್ತಿಯನ್ನೂ ಕುಂದಿಸಿ ಸರ್ವ ಸ್ವಾಧೀನತೆಯನ್ನು ನಷ್ಟಮಾಡಿಕೊಳ್ಳಲು ಕಾರಣವಾಗುತ್ತಿದೆಯೆಂಬುದನ್ನು ಈ ಸಂಸ್ಥೆಗಳು ಆಲೋಚಿಸಿ ತಿಳಿದುಕೊಳ್ಳಬಹುದು.

ವಿದೇಶ ವರ್ತಮಾನ.

—ಇಂಡಿಯದ ಮಾಜಿ ವೈಸರಾಯರಾಗಿದ್ದ ಲೋರ್ಡ ರೀಡಿಂಗರು ಅಸ್ವಸ್ಥದಲ್ಲಿರುವರು ಸ್ವಲ್ಪ ಗಂಟಲುನೋವು. ಭಾಷಣ ಕೊಡಲು ಆಗುವುದಿಲ್ಲ.

—ಇಂಡಿಯದ ಸ್ಟೇಟ್ ಸೆಕ್ರಿಟರಿಯವರಾದ ಲೋರ್ಡ ಬರ್ಕನ್ ಹೆಡ್ಡರು ಬರುವ ಛಳಿಗಾಲದಲ್ಲಿ ಇಂಡಿಯಕ್ಕೆ ಬರುವರೆಂಬ ವಾರ್ತೆಯು ನಿಜವಲ್ಲವೆಂದು ತಿಳಿದುಬಂದದೆ. ಇವರಿಗೆ ಬೇಗನೆ ಬರಲಿಕ್ಕೆ ಮನಸ್ಸಿದೆ ಆದರೆ ಎಲ್ಲಾ ಅನುಕೂಲತೆಗಳು ಇಂಗ್ಲೆಂಡಿನ ರಾಜಕಾರಣಾಂತರಗಳಿಗೆ ಅನುಸಾರವಾಗಿದೆ.

—ಇಂಡಿಯದ ಸೆಂಡರ್ಸ್ಟ್ ಮಿಲಿಟರಿ ಕಮಿಟಿಯ ಮೆಂಬರರಲ್ಲಿ ಒಬ್ಬರಾದ ಮಿ॥ ಜಿನ್ನರವರು ತಾನು ಯುರೋಪ ಮತ್ತು ಅಮೇರಿಕದಲ್ಲಿರುವ ಎಲ್ಲಾ ಮಿಲಿಟರಿ ಕೋಲೇಜುಗಳನ್ನು ನೋಡಿದೆ. ಇವುಗಳಲ್ಲಿ ಫ್ರಾನ್ಸಿನಲ್ಲಿರುವ ಮಿಲಿಟರಿ ಕೋಲೇಜುಗಳಲ್ಲಿ ಕಲಿಯುವ ವಿದ್ಯಾರ್ಥಿಗಳು ಅವರು ಎಷ್ಟೇ ಐಶ್ವರ್ಯವಂತರಾಗಿರಲಿ, ಬಡವರಾಗಿರಲಿ ಶಿಪಾಯಿಗಳ ಆಹಾರವನ್ನೇ ಉಪಯೋಗಿಸುತ್ತಿರುವರು. ಇವರು ೩ ವರುಷ ಈ ರೀತಿಯಲ್ಲಿ ಕಲಿಯಬೇಕು. ಇಂಗ್ಲೆಂಡಿನಲ್ಲಿ ಈ ಕೊಲೇಜಿನಲ್ಲಿ ಹೆಚ್ಚಾಗಿ ಐಶ್ವರ್ಯವಂತರ ಮಕ್ಕಳೇ ಇದ್ದು ಐಶ್ವರ್ಯವಂತರ ಆಹಾರವನ್ನೇ ಉಪಯೋಗಿಸುತ್ತಿರುವರು. ಅಮೇರಿಕದಲ್ಲಿರುವ ವೆಸ್ಟ್‌ಪೋಯಿಂಟ್ ಮಿಲಿಟರಿ ಎಕೆಡೆಮಿಯಷ್ಟು ಉತ್ತಮವಾದ ಮಿಲಿಟರಿ ಕೋಲೆಜು ಎಲ್ಲಿಯೂ ಇಲ್ಲವೆಂದು ಅಭಿಪ್ರಾಯಪಟ್ಟರು.

—ಫ್ರಾನ್ಸಿನ ಮಂತ್ರಿಸಭೆಯಲ್ಲಿ ಎರಡು ತಂಡಗಳಾಗಿ ಒಂದು ತಂಡವು ತಲೆತೆರಿಗೆಯನ್ನು ವಿಧಿಸಬೇಕೆಂದೂ, ಇನ್ನೊಂದು ವಿಧಿಸಕೂಡದೆಂದೂ ಇದೆ. ಆದುದರಿಂದ ಮಂತ್ರಿಸಭೆಯು ಬೇಗನೆ ಬಿದ್ದುಹೋಗುವುದರಲ್ಲಿದೆ.

—ತಿರುಗಾಡಲಿಕ್ಕೆ ಇಂಗ್ಲೆಂಡಿಗೆ ಬಂದಿರುವ ಸ್ಪೈನ್ ದೇಶದ ರಾಜರಾಣಿಯವರಿಗೆ ಲಂಡನ್ ಫೋರಿನ್ ಆಫೀಸಿನಲ್ಲಿ ಒಂದು ಔತಣವಾಯಿತು. ಮುಖ್ಯ ಮಂತ್ರಿಯೂ ಸ್ಪೆನಿಶ್ ರಾಯಭಾರಿಯೂ ಹಾಜರಿದ್ದರು.

—ಪೋರ್ತುಗಲ್ ರಿಪಬ್ಲಿಕಿನ ಪ್ರೆಸಿಡೆಂಟರನ್ನು ಸೆರೆಹಿಡಿದಿರುವರು. ಹೊಸ ಮಂತ್ರಿಸಭೆಯು ಬೇಗನೆ ಆಗುವುದರಲ್ಲಿದೆ.

ಒಸ್ಪೇಲಿಯಕ್ಕೆ ಹಾರಲು ಹೊರಟ ಕೋಬಾಮರ ಮೆಶಿನು ಕೆಳಗೆ ಬಿದ್ದು ಇಂಜಿನಿಯರರಾಗಿದ್ದ ಎಲಿಯಟರು ಸತ್ತುಹೋದರು. ಇವರಿಗೆ ಮೂರ್ ಎಂಬ ಇನ್ನೊಬ್ಬ ಇಂಜಿನಿಯರರು ಸಹಾಯಕ್ಕೆ ಬರುವರು ಕೋಬಾಮರು ಈಗ ಬಸ್ರಾದಲ್ಲಿದ್ದು ತನ್ನ ಪ್ರಯಾಣವನ್ನು ಮುಗಿಸಲಿಕ್ಕೆ ಕೂಡಲೇ ಹೊರಡುವರು.

—ಜರ್ಮನಿಯಲ್ಲಿ ಒಬ್ಬ ಸೇನಾಧಿಪತಿಯು ಯಾವಾಗಲೂ ರಾಜತಂತ್ರಗಳಲ್ಲಿಯೇ ಸೇರಿರುವದರಿಂದ ತನ್ನ ಮದುವೆಯನ್ನು ರದ್ದುಮಾಡಬೇಕೆಂದು ಅವನ ಹೆಂಡತಿಯು ಅರ್ಜಿ ಕೊಟ್ಟಿದ್ದಳು. ಮದುವೆಯು ರದ್ದಾಯಿತು.

—ಸಪ್ಟಂಬರ ತಿಂಗಳಲ್ಲಿ ಜಿನೇವಾದಲ್ಲಿ ಜರಗುವ ಲೀಗಿನ ಸಭೆಗೆ ಇಂಗ್ಲೆಂಡಿನ ಮುಖ್ಯ ಮಂತ್ರಿಗಳು ಹೋಗಲಿಕ್ಕಿರುವರು. ಜರ್ಮನಿಯ ಪ್ರತಿನಿಧಿಗಳು ಲೀಗ್ ಕೌನ್ಸಿಲಿಗೆ ಮೆಂಬರರಾಗಿ ಬಂದು ಸೇರುವರು.

—ಲಂಡನಿನ ಮ್ಯೂಸಿಯಮಿನ ಹತ್ತಿರ ಕ್ಯಾಜಿನ್ ಮತ್ತು ಟ್ರೋಪಿಕಲ್ ಮೆಡಿಸನಿನ ಕೋಲೆಜನ್ನು ಕಟ್ಟುವುದಕ್ಕಾಗಿ ಇಂಗ್ಲೆಂಡಿನ ಆರೋಗ್ಯ ಮಂತ್ರಿಯವರು ಆ ಕಟ್ಟೋಣದ ಬುನಾದಿ ಕಲ್ಲನ್ನು ಹಾಕಿದರು.

—ಇಂಡಿಯದಲ್ಲಿ ವ್ಯಾಪಾರ ಮಾಡುತ್ತಿದ್ದ ಡನ್‌ಲೋಪ್ ರಬ್ಬರ್ ಕಂಪೆನಿಯವರು ತಾವು ಇಂಡಿಯದಲ್ಲಿ ಮಾಡುತ್ತಿರುವ ವ್ಯಾಪಾರವನ್ನು ನಿಲ್ಲಿಸಿ ಕಂಪೆನಿಯನ್ನು ಇನ್ನೊಂದು ಕಂಪೆನಿಗೆ ಮಾರಿರುವರು. ಹೊಸ ಕಂಪೆನಿಗೆ ಹಚ್ಚಿನ ಪಾಲುಗಾರರು ಇಂಡಿಯದವರೇ ಆಗಿರುತ್ತಾರಂತೆ.

ಗ್ರೀಕ್ ಸರಕಾರವು ಇಂಗ್ಲೀಷ ಸರಕಾರದಿಂದ ಯುದ್ಧದ ಸಮಯ ತೆಗೆದುಕೊಂಡ ಸಾಲವನ್ನು ತೀರಿಸುವದಕ್ಕಾಗಿ ಇಂಗ್ಲೀಷ ಮಂತ್ರಿಗಳೊಡನೆ ಗ್ರೀಕ್ ಮಂತ್ರಿಗಳು ಆಲೋಚಿಸುತ್ತಿರುವರು.

ಒಳದೇಶ ವರ್ತಮಾನ.

—ಪದ್ಮನಾಭ ಮೆನೋನ್ ಎಂಬವರು ಕೇರಳ ಚರಿತ್ರೆಯ ಮೊದಲನೇ ಭಾಗವನ್ನು ಬರೆದು ಪ್ರಕಟಿಸಿರುವರು.

—ಮುಂಬಾಯಿಯ ಜೈಲಿನಲ್ಲಿದ್ದ ಎಂಟ ಹದಿನಾರು ವರುಷ ಪ್ರಾಯದ ಹುಡುಗಿಯನ್ನು ಜೈಲಿನಲ್ಲಿ ಹಾಳುಮಾಡಿದರೆಂಬ ಅಪಾದನೆ ಮೇಲೆ ಇಬ್ಬರು ಪೊಲೀಸ್ ಕೊನ್ಸಟೇಬಲರಲ್ಲಿ ಒಬ್ಬನಿಗೆ ೭ ವರುಷದ ಸಜೆಯನ್ನೂ, ಇನ್ನೊಬ್ಬನಿಗೆ ೩ ವರುಷದ ಸಜೆಯನ್ನೂ ಹೈಕೋರ್ಟು ಜಡ್ಜರು ವಿಧಿಸಿದರು.

—ಹಜಾಜಿಗೆ ಯಾತ್ರೆಗೆ ಹೋದ ಯಾತ್ರಿಕರಲ್ಲಿ ೧,೮೧೪ ಮಂದಿ ಬಂಗಾಳಿ ಮುಸಲ್ಮಾನ ಯಾತ್ರಿಕರು ಮುಂಬಾಯಿಗೆ ಬಂದು ತಲಪಿದರು. ಜಡ್ಡಾ ಬಂದರದಲ್ಲಿ ಆಹಾರ ಜೀನಸುಗಳ ಬೆಲೆಯು ಬಹಳ ಹೆಚ್ಚಾಗಿದೆ ಎಂದೂ, ಒಂಟೆಗಳೂ, ನೀರೂ ಬೇಕಾದಷ್ಟು ಸಿಕ್ಕುವುದಿಲ್ಲವೆಂದೂ ಹೇಳುತ್ತಾರೆ. ಇವರಿಗೆ ನೆಜದಿಗಳ ಉಪದ್ರವವೇನೂ ಇರಲಿಲ್ಲವೆಂದು ಹೇಳುತ್ತಿರುವರು.

—ಅರಕೋಣಮ್ ಯೂನಿಯನ್ ಬೋರ್ಡನ್ನು ಉತ್ತರಾರ್ಕಾಡು ಡಿಸ್ಟ್ರಿಕ್ಟ್ ಬೋರ್ಡಿನವರು ರದ್ದುಮಾಡಿರುವರು.

—ಉತ್ತರ ಹಿಂದೂದೇಶದಲ್ಲಿಯೂ, ಮುಂಬಾಯಿ ಪ್ರಾಂತದಲ್ಲಿಯೂ ತಿರುಗಾಡಲಿಕ್ಕೆ ಹೋದ ಮದರಾಸು ಸರಕಾರದ ಮುಖ್ಯ ಮಂತ್ರಿಗಳಾದ ಪನಗಲ್ ರಾಜರು ಮದ್ರಾಸಿಗೆ ಬಂದೊಡನೆ ಅವರಿಗೆ ಜಸ್ಟಿಸ್ ಪಾರ್ಟಿಯವರು ಅವರನ್ನು ಸ್ವಾಗತಮಾಡಿ ವಿಕ್ಟೋರಿಯಾ ಟೌನ್ ಹೋಲಿನಲ್ಲಿ ಒಂದು ಮಾನಪತ್ರವನ್ನು ಓದಿದರು. ಇವರಿಗೆ ನ್ಯಾಟ್ ಪದವಿಯು ಸಿಕ್ಕಿದ ಸಂತೋಷಾರ್ಥವಾಗಿ ಈ ಮಾನಪತ್ರವನ್ನು ಒಪ್ಪಿಸಿದ್ದಾಗಿರುತ್ತದೆ.

—ಕಲ್ಕತ್ತದಲ್ಲಿ ಆದ ದಂಗೆಯ ಸಮ್ಬಂಧ ಕೈದುಮಾಡಲ್ಪಟ್ಟ ಶೇಕ್ ಬಾಬು ಎಂಬವನಿಗೆ ಜನ್ಮಾಂತ ಶಿಕ್ಷೆಯನ್ನು ವಿಧಿಸಲಾಯಿತು. ಇತರ ಐದು ಮಂದಿ ಮಹಮ್ಮದೀಯರಿಗೂ ಶಿಕ್ಷೆಗಳಾದವು.

—ಬರ್ಮಾದೇಶದಲ್ಲಿ ೩ನೇ ತಾರೀಕಿಗೆ ದೊಗೊಂಗ ಎಂಬಲ್ಲಿ ಕಠಿಣ ಮಳೆ ಬಂದು ನೆರೆಯಿಂದ ಪಟ್ಟಣವು ನೆರೆ ಪಾಲಾಗಿ ಹೆಚ್ಚು ನಷ್ಟವಾಯಿತು.

—ಮುಂಬಾಯಿಯ ಸೆಂಟ್ರಲ್ ಬೇಂಕಿನಲ್ಲಿ ಕಳವಾದ ೨ ಲಕ್ಷ ರೂಪಾಯಿ ಸಂಗತಿಯಲ್ಲಿ ದೊರಾಬ್ ಪೆಸ್ತೊನ್‌ಜಿಗೋರಾ ಎಂಬವರನ್ನು ಕೈದುಮಾಡಿರುವರು.

—ಕಲ್ಕತ್ತದ ಹೌರಾ ಬ್ರಿಜನ್ನು ಕಟ್ಟುವ ವಿಷಯದಲ್ಲಿ ತಯಾರಿಸಿದ ಬಿಲ್ಲು ಕಲ್ಕತ್ತಾ ಕೊರ್ಪೊರೇಶನ್ ಮೀಟಿಂಗಿನಲ್ಲಿ ಚರ್ಚೆಗೆ ಬಂದು ಪ್ರೊವಿನ್ಸಿಯಲ್ ರೆವಿನ್ಯು ಅಧಿಕಮಾಡಬಾರದೆಂದೂ, ಕಲ್ಕತ್ತಾ ಮುನ್ಸಿಪಾಲ ಟೆಕ್ಸುಗಳನ್ನು ಹೆಚ್ಚಿಸಬಾರದೆಂದೂ, ಕಲ್ಕತ್ತದ ವ್ಯಾಪಾರದಿಂದ ಹೌರಾ ಬ್ರಿಜ್ಜಿಗೆ ಹಣ ಮದಗಿಸಬೇಕೆಂದೂ, ಪೋರ್ಟ ಕಮಿಶನರನ್ನು ಬ್ರಿಜ್ ಕಮಿಶನರಾಗಿ ನೇಮಿಸಬಾರದೆಂದೂ, ಇಂಡಿಯಾ ಸರಕಾರದವರು ಈ ಸಂಬಂಧ ಖರ್ಚಿಗಾಗಿ ಹಣ ಮದಗಿಸಬೇಕೆಂದೂ ಠರಾವುಗಳು ಪಾಸಾದವು.

—ಪಂಜಾಬಿನಲ್ಲಿ ನೋರ್ತ ವೆಸ್ಟ ರೈಲುವೇಯಲ್ಲಿ ೩೫೪ ಮೈಲು ಹೊಸ ರೈಲು ಮಾರ್ಗವನ್ನು ಸೆಂಕ್ಷನ್ ಮಾಡಿರುವರು.

—ಬರ್ಮಾದೇಶದ ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರೆಸಿಡೆಂಟರ ಕೈಯಲ್ಲಿ ಹಿಡಿಯಲಿಕ್ಕೆ ೫೦೦ ತೊಲೆ ಬೆಳ್ಳಿಯಿಂದ ಒಂದು ರಾಜದಂಡವನ್ನು ತಯಾರಿಸಿರುವರು. ಈ ರಾಜದಂಡವು ಹೌಸ್ ಒಫ್ ಕೋಮನ್ಸಿನ ರಾಜದಂಡದ ನಮೂನೆಯಲ್ಲಿಯೇ ಇದೆ. ಆದರೆ ಸ್ವಲ್ಪ ಸಣ್ಣದು. ಇದರಲ್ಲಿ ಬರ್ಮಾ ನಮೂನೆಯ ನಕ್ಷೆಗಳನ್ನು ಬರ್ಮಾದೇಶದ ಚಿತ್ರಗಾರರಿಂದ ತಯಾರಿಸಲ್ಪಡುವವು. ಇದರ ತಲೆಯಲ್ಲಿ ಕಮಲದ ಮೊಗ್ಗೆಯ ಮೇಲೆ ಗರಿ ಕೆದರಿ ನಿಂತ ನವಿಲು ಇದೆ.

—ವೈಸರಾಯರು ಪೂನಾಪಟ್ಟಣವನ್ನು ಸಂದರ್ಶಿಸಲಿಕ್ಕೆ ಬರುವಾಗ ಅವರಿಗೆ ಒಂದು ಮಾನಪತ್ರವನ್ನು ಅರ್ಪಿಸಬೇಕೆಂದು ಅದರ ನಕಲನ್ನು ತಯಾರಿಸಿ ಮುನ್ಸಿಪಲ್ ಸಭೆಯ ಮುಂದಿಟ್ಟರು. ಇದರಲ್ಲಿ ಹಾಲು ಕರೆಯುವ ಮತ್ತು ಬೇಸಾಯಕ್ಕೆ ಉಪಯೋಗವಾಗುವ ದನಗಳನ್ನೂ ಎತ್ತುಗಳನ್ನೂ ಕೊಲ್ಲದಂತೆ ಅಪ್ಪಣೆ ಕೊಡಬೇಕೆಂದೂ ಬ್ರಿಟಿಷ್ ಕೋಮನ್‌ವೆಲ್ತನಲ್ಲಿ ಇಂಡಿಯಕ್ಕೆ ಸರಿಯಾದ ಹಕ್ಕು ಸ್ವಾತಂತ್ರ್ಯ ಕೊಡಬೇಕೆಂಬುದಕ್ಕೆ ಬದಲಾಗಿ ಸ್ವರಾಜ್ಯ ಕೊಡಬೇಕೆಂದೂ ಈ ಮಾನಪತ್ರವನ್ನು ಕಣಾವರವಾದದಲ್ಲಿ ಒಪ್ಪಿಸಬೇಕೆಂದೂ ನಿರ್ಣಯಿಸಲಾಯಿತು.

—ಇಂಡಿಯನ್ ಒಡಿಟ್ ಮತ್ತು ಎಕೌಂಟ ಸರ್ವಿಸಿನಲ್ಲಿಯೂ ಮಿಲಿಟರಿ ಎಕೌಂಟ ಇಲಾಖೆಯಲ್ಲಿಯೂ ಆರು ಮಂದಿ ಇಂಡಿಯರನ್ನು ನಿಯಮಿಸುವರು. ಚುನಾವಣೆಯ ಪರೀಕ್ಷೆಯು ಬರುವ ದಶಂಬರ ೧೩ನೇ ತಾರೀಕಿಗೆ ಜರಗುವದು.

—ಹೌರಾ ಟೌನ್‌ಹೋಲಿನಲ್ಲಿ ತೂಗುಡಿಸುವುದಕ್ಕಾಗಿ ಚೊರೆದ ಪ್ರಸ್ಸೆ ಎಂಬವರು ಕೊಟ್ಟ ದೇಶಬಂಧು ದಾಸರ ಚಿತ್ರವನ್ನು ಹೌರಾ ಮುನ್ಸಿಪಾಲಿಟಿಯವರು ಅಂಗೀಕರಿಸಿರುವರು.

—ಲಾಹೋರಿನಲ್ಲಿಯ ಸಿಕ್ಕರು, ನಭಾದ ಅರಸರಾದ ಮಹಾರಾಜ ರಿಪುದ ಮನಸಿಂಗರು ತಮ್ಮ ಸಿಂಹಾಸನತ್ಯಾಗ ಮಾಡಿದ ದಿವಸವನ್ನು ಆಚರಿಸುವಾಗ ಮೆರವಣಿಗೆಯನ್ನು ಮಾಡಕೂಡದೆಂದು ೧೪೪ನೇ ಸೆಕ್ಷನ್ ಪ್ರಕಾರ ಹುಕುಂ ಕೊಟ್ಟಿರುವರು.

—ಕಳೆದ ಬಕ್ರಿದ್ ಸಮಯ ದಂಗೆಯಾದಂದಿನಿಂದ ಜುಲ್ಯಾ ೧೧ನೇ ತಾರೀಕಿನಿಂದ ೨೨ನೇ ತಾರೀಕಿನ ವರೆಗೆ ಮಾರ್ಗಗಳಲ್ಲಿ ತಿರುಗಾಡುವಾಗ ಲಾಠಿಗಳನ್ನಾಗಲೀ ಯಾವ ತರದ ಆಯುಧಗಳನ್ನಾಗಲೀ ಅಲ್ಲಾಹಾಬಾದ ಮುನ್ಸಿಪಾಲಿಟಿಯೊಳಗೆ ಹಿಡಿಯಬಾರದೆಂದು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಹುಕುಂ ಕೊಟ್ಟಿರುವರು.

—ಲಕ್ನೌ ಪಟ್ಟಣದಲ್ಲಿರುವ ಮುಸಲ್ಮಾನರು, ಅರಬಿಸ್ಥಾನದ ಹಜಾಜಿನ ವಹಾಬಿಗಳು ಮದೀನದಲ್ಲಿ ಕೊಡುವ ಉಪದ್ರಗಳಿಗಾಗಿ ದೇವರ ಹತ್ತಿರ ಪ್ರಾರ್ಥನೆ ಮಾಡುತ್ತಾ ಒಂದು ಮೆರವಣಿಗೆಯನ್ನು ಮಾಡಿದರು. ಕೆಲವರು ಪ್ರಾರ್ಥನೆ ಮಾಡಿದರು, ಕೆಲವರು ಈ ಅನ್ಯಾಯವನ್ನು ಸಹಿಸಲಾರದೆ ಎದೆ ಬಡಕೊಂಡರು.

—ಕರೆನ್ಸಿ ಕಮಿಶನಿನ ರಿಪೋರ್ಟಿಗೆ ಎಲ್ಲಾ ಮೆಂಬರರು ಸಹಿ ಹಾಕಿರುವರಂತೆ. ಆದರೆ ಸರ್ ಪುರುಷೋತ್ತಮದಾಸರು ಈ ರಿಪೋರ್ಟು ಹಿಂದೂದೇಶಕ್ಕೆ ಸಂಪೂರ್ಣ ವಿರೋಧವಾದುದರಿಂದ ಇದಕ್ಕೆ ವಿರೋಧವಾಗಿ ಬರೆದಿರುವರಂತೆ. ಹಿಂದೂದೇಶಕ್ಕೆ ಭಂಗಾರದ ನಾಣ್ಯ ಒಂದು ಇರಬೇಕೆಂದು ಎಲ್ಲರೂ ಒಪ್ಪಿರುವರಂತೆ. ಆದರೆ ಅದು ಕೂಡಲೇ ಜಾರಿಗೆ ಬಾರದಂತೆ ಅದಕ್ಕೆ ಸ್ವಲ್ಪ ತೊಂದರೆಗಳೂ ಇವೆಯಂತೆ.

—ಉಡುಪಿ ಮಂಡಿನಲ್ಲಿ ಒಂದು ದೈರಿ ಫಾರ್ಮನ್ನು ಮಾಡಲಿಕ್ಕೆ ಮದರಾಸು ಸರಕಾರದ ಹುಕುಂ ಉಡುಪಿಮಂಡ ಮುನ್ಸಿಪಾಲಿಟಿಗೆ ಸಿಕ್ಕಿಯದೆ. ಅದನ್ನು ಕೊಡವುಮಂಡುವಿನಲ್ಲಿ ಮಾಡುವರಂತೆ.

—ರಾಜ್ಯದಾಳಿಕೆಯ ಸಭೆಗಳಲ್ಲಿ ಹೆಂಗಸರಿಗೂ ಸ್ವಾತಂತ್ರ್ಯವನ್ನು ಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವದಕ್ಕಾಗಿ ಮದರಾಸಿನಲ್ಲಿ ಹೆಂಗಸರ ಒಂದು ಸಭೆಯು ಜರಗಿತು.

—ಇಂಡಿಯದಲ್ಲಿ ಈಗ ೭॥ ಲಕ್ಷ ಹಳ್ಳಿಗಳಿವೆ. ಇಂಡಿಯದಲ್ಲಿಯ ಹೆಚ್ಚಿನ ಜನರು ಹಳ್ಳಿಗಳಲ್ಲಿಯೇ ವಾಸಿಸಿಕೊಂಡಿರುವರು. ಪುರಾತನ ಕಾಲದಿಂದಲೂ ಹಳ್ಳಿಗಳೇ ನಾಗರೀಕತೆಯ ಮತ್ತು ವಿದ್ಯೆಯ ಅಡಿಗಲ್ಲುಗಳಾಗಿದ್ದವು. ಆದರೆ ಕಳೆದ ಶತಮಾನದಿಂದ ಹೊರಗಿನ ಮತ್ತು ಒಳಗಿನ ಸ್ಥಿತಿಗತಿಗಳಿಂದ ಅನೇಕ ಬದಲಾವಣೆಗಳು ಆಗಿವೆ. ಕಳೆದ ೫೦ ವರ್ಷಗಳಲ್ಲಿ ದಕ್ಷಿಣ ಇಂಡಿಯದಲ್ಲಿದ್ದ ೧೪ ಮಿಲಿಯ ಜನಸಂಖ್ಯೆಯು ೪೫ ಮಿಲಿಯವಾಯಿತು. ಇಂಡಿಯದ ಇತರ ಭಾಗಗಳ ಅವಸ್ಥೆಯು ಇದೇಯಾಗಿದೆ. ಈಗ ಹಳ್ಳಿಯವರಿಗೆ ಮೊದಲಿನಂತೆ ಸುಖವಿಲ್ಲ. ಅವರಿಗೆ ಬೇಕಾದ ಅನುಕೂಲತೆಗಳು ಕಡಿಮೆಯಾದವು. ಗೇಣಿವಕ್ಕಲುಗಳಿಗೆ ವರ್ಗದಾರರು ಕೊಡುವ ಬಾಧೆಯು ಹೆಚ್ಚಾಗುತ್ತಾ ಬಂತು. ಮತ್ತು ಅನೇಕರು ತಮ್ಮ ಗ್ರಾಮಗಳನ್ನು ಬಿಟ್ಟು ಹೊರಗೆ ಹೋಗಿ ಉಳುಕೊಳ್ಳಲಾರಂಭಿಸಿದರು. ಆದುದರಿಂದ ದೇಶವು ಉದ್ಧಾರವಾಗಬೇಕಾದರೆ ಈಗಿನ ಯೌವನಸ್ಥರು ಹಳ್ಳಿಗಳ ಅಭಿವೃದ್ಧಿಯ ಕಡೆಗೆ ನೋಡಬೇಕೆಂದು ಪ್ರೋಫೆಸರ್ ವೇನ್ ಎಂಬವರು ವೈ. ಎಮ್. ಸಿ. ಎ. ಮೀಟಿಂಗಿನ ಭಾಷಣದಲ್ಲಿ ಹೇಳಿದರು.

—ಭರತಪುರದಿಂದ ೪ ಮೈಲು ದೂರವಿರುವ ಒಂದು ಗ್ರಾಮದಲ್ಲಿ ೮೦ ಮಂದಿ ದರೋಡೆಯವರು ಕಳವು ಮಾಡಿದರು. ಭರತಪುರದ ಮಹಾರಾಜರು ಸೈನ್ಯ ಸಮೇತ ಆ ಗ್ರಾಮಕ್ಕೆ ಮುತ್ತಿಗೆ ಹಾಕಿ ದರೋಡೆ ಕಳ್ಳರನ್ನು ಹಿಡಿಯುವುದಕ್ಕೆ ಸಾಧಿಸಿದರು, ಆದರೆ ದರೋಡೆಯವರು ತಪ್ಪಿಸಿಕೊಂಡು ಓಡಿಹೋದರು.

—ಪಟ್ನದಲ್ಲಿ ಇನ್ನೂ ದಂಗೆಯು ಶಾಂತವಾಗಲಿಲ್ಲ. ಹಿಂದೂ ಜನರು ಹೆದರಿಕೆಯಿಂದ ಕಾಡಿನಲ್ಲಿ ಅವಿತುಕೊಂಡಿರುವರು. ಬಂದೋಬಸ್ತಿಗಾಗಿ ೩೦೦ ಮಂದಿ ಪೋಲೀಸಿನವರನ್ನು ಇಟ್ಟಿರುವರು.

—ಮುಂಬಾಯಿಗೆ ಹಜಾಜಿನಿಂದ ಬಂದಿರುವ ಮುಸಲ್ಮಾನ ಯಾತ್ರಿಕರು ವಹಾಬಿಗಳು ಮಾಡಿದ ಅನಾಹುತಗಳ ವಿಷಯ ಹೀಗಿರುವರು. ಮಕ್ಕಾ ಮತ್ತು ಮದೀನದಲ್ಲಿದ್ದ ಆರು ಮಸೀದಿಗಳನ್ನು ಹಾಳು ಮಾಡಿರುವರು. ಅಲ್ಲದೆ ಹಜರತ್ ಮಹಮ್ಮದರ ಮಗಳಾದ ಹಜರತ್ ಫಾತಿಮಾ, ಮತ್ತು ಹಜರತ್ ಖಾಲಿದ್ ಮಹಮ್ಮದರ ಚಿಕ್ಕತಂದೆಯಾದ ಹಜರತ್ ಇಮಾಮ ಹುಸೇನ, ಹಜರತ್ ಇಮಾಮ್ ಹುಸ್ಸೇನ್, ಹಜರತ್ ಇಮಾಮ್ ಬಕೀರ್, ಹಜರತ್ ಇಮಾಮ್ ಜಾಫ್ರಿ ಇವುಗಳಲ್ಲದೆ ಇನ್ನು ಮಹಮ್ಮದೀಯರಿಗೆ ಸಂಬಂಧಪಟ್ಟ ಇತರ ಅನೇಕ ಸಮಾಧಿಗಳನ್ನು ಹಾಳು ಮಾಡಿರುವರು. ಮಹಮ್ಮದರ ಸಮಾಧಿಯಾದ "ಜನ್ಮತುಲ್ ಅಲ್‌ನಬಿ" ಎಂಬದನ್ನು ಮಾತ್ರವೇ ಇಟ್ಟಿರುತ್ತಾರೆ. ಹಜರತ್ ಮಹಮ್ಮದರ ಜನ್ಮಸ್ಥಳವಾದ ಮೌಲದ್ ಅಲ್-ನಬಿ ಎಂಬ ಸ್ಥಳವನ್ನು, ಫಾತಿಮಾಬೀಬಿಯರ ಜನ್ಮಸ್ಥಾನವಾದ "ಮೌಲದ್-ಅಲ್-ಫಾತಿಮಾ" ಎಂಬ ಸ್ಥಳವನ್ನು ಅಪವಿತ್ರ ಮಾಡಿರುವರು. ಪರಿಶುದ್ಧವಾದ ನೀರಿರುವ "ಜಿಮ್ ಜಿಮಾ" ಎಂಬ ಭಾವಿಯನ್ನು ಅಶುದ್ಧ ಮಾಡಿರುವರು. ಮೊದಲು ಮೊದಲು ವಿಚಾರಿಸುವಾಗ ಇದೆಲ್ಲವೂ ಆಗಲಿಲ್ಲವೆಂಬ ಕಾರಣವನ್ನು ಮುಂದೆ ತಂದರು. ನಂತರ ಯುದ್ಧದ ಸಮಯ ಹೀಗಾಯಿತೆಂದು ಹೇಳಿದರು. ಈಗ ಸಮಾಧಿಗಳಿಗೆ ಪೂಜಿಸುವದು ವಿಗ್ರಹ ಆರಾಧನೆಗೆ ಸರಿಯಾಗಿದೆ. ಇದು ಮಹಮ್ಮದಿ ಮತಕ್ಕೆ ವಿರುದ್ಧವಾದದ್ದು ಎಂದು ವಹಾಬಿಗಳ ಅಧಿಪತಿಯಾದ ಇಬನ್ ಸವುದರು ಹೇಳುತ್ತಿರುವರಂತೆ.

—ಮದರಾಸಿನಲ್ಲಿ ಮದ್ರಾಸು ಮತ್ತು ಸದರ್ನ್‌ಮರಾಟಾ ರೈಲು ಆಫೀಸಿನಲ್ಲಿ ಟೈಪಿಸ್ಟನಾದ ಕಲ್ಯಾಣರಾಮ ಐಯ್ಯರನು ಜೂನ್ ೧೮ರಲ್ಲಿ ತನ್ನ ಹೆಂಡತಿಯನ್ನು ಕೊಂದುದಕ್ಕಾಗಿ ಕೈದುಮಾಡಲ್ಪಟ್ಟಿರುವನು. ಮೃತಳ ತಾಯಿಯನ್ನು ವಿಚಾರಿಸುವಾಗ ಅವನು ಯಾಕೆ ಅವಳ ತಲೆಗೆ ಬೆಂಕಿ ಕೊಟ್ಟು ಕೊಂದನೆಂದು ತನಗೆ ಗೊತ್ತಿಲ್ಲವೆಂದು ಹೇಳಿದಳು. ದೋಕ್ಟರ ಪರಕುಟ್ಟಿ ಅಮ್ಮೊಳು ಹೀಗೆ ಹೇಳಿದಳು. ಮೃತಳ ಎದೆಯಲ್ಲಿಯೂ, ಬೆನ್ನಿನಲ್ಲಿಯೂ ಹೆಗಲುಗಳಲ್ಲಿಯೂ, ಮುಖದ ಮೇಲೂ, ಸುಟ್ಟ ಗಾಯಗಳು ಇದ್ದವು. ಕೂಳಗಳು ಸುಟ್ಟುಹೋಗಿದ್ದವು ಸುಮಾರು ಅರ್ಧ ಬಾಟ್ಲಿ ಚಿಮಿಣಿ ಎಣ್ಣೆಯನ್ನು ಅವಳ ತಲೆಯ ಮೇಲೆ ಹೊಯ್ದು ಸುಟ್ಟಿರಬೇಕೆಂದು ಹೇಳಬಹುದು ಬೆಂಕಿ ಕೊಡುವಾಗ ಇವಳು ಕವಚಿ ಮಲಗಿದ್ದಾಳೆಂದು ಕಾಣುತ್ತದೆ. ಇವಳಿಗೆ ಜೀವ ಬಿಡುವ ಹತ್ತು ಮಿನಿಟುಗಳ ವರೆಗೆ ಭೋದವಿತ್ತು.

ಹುಡುಗಿಯು ಮರಣವಾಗ್ಮೂಲದಲ್ಲಿ ಹೀಗೆ ಹೇಳಿರುವಳು; ನಾನು ಗಂಡನ ಮನೆಗೆ ಬಂದು ೧೪ ದಿವಸಗಳಾದುವು. ಎರಡು ದಿವಸಗಳ ಮುಂಚೆ ನನಗೂ ನನ್ನ ಗಂಡನಿಗೂ ಜಗಳವಾಗಿತ್ತು; ಅವನು ನನ್ನ ಮೇಲೆ ಪಾತ್ರಗಳನ್ನು ಎಸೆದನು. ಮತ್ತು ಮೆಟ್ಟಿನಿಂದ ಹೊಡೆಯಲಿಕ್ಕೂ, ಕತ್ತಿಯಿಂದ ಕಡಿಯಲಿಕ್ಕೂ ಬಂದನು. ನಾನು ನನ್ನ ತಂದೆಯ ಮನೆಗೆ ಹೋದೆ. ಬೆಳಗ್ಗೆ ನನ್ನ ಗಂಡನಿಗಾಗಿ ನಾನು ಅಡಿಗೆ ಮಾಡಲಿಲ್ಲವೆಂಬದಾಗಿ ೪ ಗಂಟೆಗೆ ಗಂಡನ ಮನೆಗೆ ಬಂದೆ, ಗಂಡನು ೭ ಗಂಟೆಗೆ ಬಂದನು ನನಗೆ ನಿನ್ನೆ ಪೆಟ್ಟಿನಿಂದ ಬಹಳ ನೋವಾಗಿದೆ ಅದಕ್ಕಾಗಿ ತಾಯಿಯ ಮನೆಗೆ ಹೋದೆ ಎಂದು ಹೇಳಿದೆನು. ನಂತರ ಅಡಿಗೆ ಮಾಡಿ ನಾವು ಊಟಮಾಡಿದೆವು. ಹಾಸಿಗೆ ಹಾಸಿದೆ ಗಂಡನು ಮಲಗಿದನು; ನಾನು ಹಾಸಿಗೆಯಲ್ಲಿ ಮಲಗುವುದಿಲ್ಲವೆಂದೆ ಆಗ ನೀನು ಇಲ್ಲಿ ನಿಲ್ಲಕೂಡದು ತಾಯಿಯ ಮನೆಗೆ ಹೋಗೆಂದು ನನಗೆ ಹೊಡೆಯಲಿಕ್ಕೆ ಅವನು ಏಳುವಷ್ಟರಲ್ಲಿ ನಾನು ಓಡಿಹೋಗಲಿಕ್ಕೆ ನೋಡಿದೆನು. ಅಷ್ಟರಲ್ಲೇ ಅವನು ನನ್ನನ್ನು ಹಿಡಿದು ನನ್ನ ತಲೆಯ ಮೇಲೆ ಚಿಮಿಣಿಯೆಣ್ಣೆ ಹೊಯ್ದು ಬೆಂಕಿ ಕೊಟ್ಟನು. ಅನಂತರ ಹೊರಗೆ ಹೋಗಿ ಜಗಲಿಯ ಮೇಲೆ ಕೂತನು. ನಾನು ಬೊಬ್ಬೆ ಹೊಡದೆ ಮನೆಯ ನೆರಕರೆಯವರು ಬಂದು ನೋಡಿದರು; ಆಗ ಗಂಡನೂ ಒಳಗೆ ಬಂದನು. ಎಂಥಾ ಅಘೋರ ಕೃತ್ಯ!!!

—ರಂಗೂನಿನಿಂದ ಕಲ್ಕತ್ತ ಟಂಕಸಾಲೆಗೆ ಎಲೆಂಗಾ ಎಂಬ ಹಡಗದಲ್ಲಿ ೭೭ ಪೆಟ್ಟಿಗೆಗಳಲ್ಲಿ ೮೦ ಸಾವಿರ ರೂಪಾಯಿ ಬೆಲೆ ಬಾಳುವ ಬೆಳ್ಳಿಯನ್ನು ತುಂಬಿಸುತ್ತಿದ್ದರು. ಅದರಲ್ಲಿ ರೂ. ೫೩೪೯ ಬೆಲೆ ಬಾಳುವ ಒಂದು ಪೆಟ್ಟಿಗೆಯು ಕೂಲಿಯ ತಲೆಯಿಂದ ಜಾರಿ ನೀರಿಗೆ ಬಿತ್ತು ಕೂಲಿಯೂ ನೀರಿಗೆ ಬಿದ್ದನು ಆದರೆ ಅವನನ್ನು ಮೇಲಕ್ಕೆ ತೆಗೆದರು.

—ಪಿನಾಂಗಿನಿಂದ ನಾಗಪಟ್ಟಕ್ಕೆ ಬರುತ್ತಿದ್ದ ಒಂದು ಹಡಗದಲ್ಲಿರುವ ಇಬ್ಬರು ಕಲಾಸಿಗಳನ್ನು ಒಬ್ಬ ಪ್ರಯಾಣಿಕನು ಕೊಂದುಹಾಕಿರುವನು.

—ಇಂಡಿಯದಲ್ಲಿರುವ ಎಲ್ಲಾ ತರದ ಸುಖರೋಗಗಳ ವಿಶಯ ತನಿಖೆ ನಡಿಸುವುದಕ್ಕಾಗಿ ಬ್ರಿಟಿಷ್ ಸೋಶಿಯಲ್ ಹ್ಯಾಜಿನ್ ಯೆಸೋಸಿಯೇಶನಿನವರು ಕೆಲವು ಪ್ರತಿನಿಧಿಗಳನ್ನು ಇಂಡಿಯಕ್ಕೆ ಕಳುಹಿಸುವರು. ಇವರು ನವಂಬರ ತಿಂಗಳಲ್ಲಿ ಮುಂಬಾಯಿಗೆ ಬಂದು ಅಲ್ಲಿಂದ ಮದರಾಸಿಗೂ, ರಂಗೂನಿಗೂ ಅಲ್ಲಿಂದ ಕಲ್ಕತ್ತಾ, ಡಿಲ್ಲಿ, ಕರಾಚಿಗೆ ಬಂದು ವಿಚಾರಿಸಿ ಮಾರ್ಚ ತಿಂಗಳಲ್ಲಿ ಹಿಂತಿರುಗುವರು.

ದಕ್ಷಿಣ ಕನ್ನಡ.

ಮಂಗಳೂರು:—ಡಿಸ್ಟ್ರಿಕ್ಟ ಸೆಕೆಂಡರಿ ಎಜ್ಯುಕೇಶನಲ್ ಬೋರ್ಡಿನ ಅಧಿವೇಶನವು ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸಿನಲ್ಲಿ ಜರಗಿತು.

ಕದ್ರಿ ದೇವಸ್ಥಾನದ ಸಮೀಪ ಗುರುವಪ್ಪನೆಂಬವನು ಕಳೆದ ಶುಕ್ರವಾರ ಬೊಗ್ಗನೆಂಬವನನ್ನು ಚೂರಿಯಿಂದ ತಿವಿದನು. ಗಾಯಪಟ್ಟವನು ವೆನ್‌ಲೋಕ್ ಆಸ್ಪತ್ರೆಯಲ್ಲಿರುವನು.

ಶ್ರೀಯುತ ಕೆ. ಆರ್. ಕಾರಂತರವರು ಕೊಂಗ್ರೆಸ್ ಪಕ್ಷದ ಪ್ರತಿನಿಧಿಯಾಗಿ ದಕ್ಷಿಣ ಕನ್ನಡ ಜಿಲ್ಲೆಯ ಪರವಾಗಿ ಮದರಾಸು ನ್ಯಾಯವಿಧಾಯಕ ಸಭೆಗೆ ಉಮೇದ್ವಾರರಾಗಿರುವರು.

ಸ್ತ್ರೀಯರು ಮತ್ತು ಮಹಮ್ಮದಿಯರು ವಿದ್ಯೆಯಲ್ಲಿ ಹಿಂದುಳಿದಿರುವುದರಿಂದ ಮಂಗಳೂರು ತಾಲೂಕು ಬೋರ್ಡಿನವರು ಎರಡು ಹುಡುಗಿಯರ ಶಾಲೆಯನ್ನು, ೫ ಮುಸಲ್ಮಾನ ಶಾಲೆಗಳನ್ನು ಸ್ಥಾಪಿಸಬೇಕೆಂದು ನಿರ್ಣಯಿಸಿರುವರು.

ಕೆಲವು ಅನಿವಾರ್ಯ ತೊಂದರೆಗಳಿಗಾಗಿ ಕಳೆದ ಎರಡು ತಿಂಗಳಲ್ಲಿ ಪ್ರಕಟವಾಗದಿದ್ದ ರಂಗಭೂಮಿ ಮಾಸಪತ್ರಿಕೆಯ ೯, ೧೦ ಸಂಚಿಕೆಗಳು ಅನುಕ್ರಮದಿಂದ ಈ ತಿಂಗಳ ೨೦ ಮತ್ತು ೩೦ನೆಯ ತಾರೀಕುಗಳಲ್ಲಿ ಪ್ರಕಟಗೊಳ್ಳುವವೆಂದು ಆ ಪತ್ರಿಕೆಯ ವ್ಯವಸ್ಥಾಪಕರು ತಿಳಿಸುತ್ತಾರೆ.

(ವಿದ್ಯಾರ್ಥಿಭವನ) ೧೧—೭—೨೬ರಲ್ಲು ದಕ್ಷಿಣ ಕನ್ನಡ ಜಿಲ್ಲಾ ದ್ರಾವಿಡ ಬ್ರಾಹ್ಮಣ ಸಂಘದಿಂದ ವಿದ್ಯಾರ್ಥಿವೇತನವನ್ನು ಕೊಡುವ ಸಭೆಯು ಹೈಕೋರ್ಟು ವಕೀಲ ಯು. ಸಿ. ಕೃಷ್ಣ ಭಟ್, ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಸ್ಥಾಯಿಕ ಕಮಿಟಿಗಳ ಪೈಕಿ ಮ॥ ರಾ॥ ಬಿ. ಆರ್. ವ್ಯಾಸರಾಯಾಚಾರ್, ಕೆ. ರಾಮಚಂದ್ರಾಚಾರ್ ಪಿ. ಸೀತಾರಾಮಾಚಾರ್, ಪಿ. ವಾಸುದೇವರಾವ್, ಇದ್ದ ವಾಸುದೇವರಾವ್, ಶೇಷ ಭಟ್ ಭಿಡೆ ಮತ್ತು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರೂ ಹಾಜರಿದ್ದರು. ಬಡ ವಿದ್ಯಾರ್ಥಿಗಳಿಗೂ, ಸಂಸ್ಕೃತ ಶಾಲೆಗಳಿಗೂ ಈ ವರ್ಷಕ್ಕೆ ರೂಪಾಯಿ ೭೫೦ನ್ನು ಮಂಜೂರುಮಾಡಿರುವರು. ಮುಂದಿನ ಭವಿಷ್ಯತ್ತಿನಲ್ಲಿ ಇನ್ನಷ್ಟು ಧನವನ್ನು ಸಂಗ್ರಹಿಸಿ, ಬಡ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ, ವಿದ್ಯಾಭಿವೃದ್ಧಿಯನ್ನು ಬಯಸುವುದು ಅತ್ಯಗತ್ಯವಾಗಿರುತ್ತದೆ.

ಇದೇ ೧೪ನೇ ಬುಧವಾರ ಬೆಳಗ್ಗೆ ೮ ಘಂಟೆಗೆ ಗಣಪತಿದೇವಸ್ಥಾನದ ರಸ್ತೆಯಲ್ಲಿರುವ ಶ್ರೀ ಗೋಪಾಲ ನಾಯ್ಕರ ಸೌಭಾಗ್ಯವತಿ ಸುಮಾರು ೨೪ ವರ್ಷ ಪ್ರಾಯದ ಲಕ್ಷ್ಮಿ ಅಮ್ಮಳು ತನ್ನ ಗಂಡನ ಪ್ರಾಣಾಂತಿಕ ಅಪಕಷ್ಟ ಕಂಡು, ದುಃಖದಿಂದ ಬಾವಿಗೆ ಹಾರಿದಳು. ಅದನ್ನು ಕಂಡು ನೆರೆಮನೆಯ ಒಬ್ಬ ಹುಡುಗನು ಬೊಬ್ಬೆಹಾಕಿದನು. ಕೂಡಲೇ ಹಲವು ಜನರು ಬಾವಿಯ ಬಳಿಗೆ ಬಂದು ನೋಡುತ್ತಾ ನಿಂತರು. ಆದರೆ ಕೆಳಗೆ ಯಾರೂ ಇಳಿಯಲಿಲ್ಲ. ಗಲಭೆಯನ್ನು ಕೇಳಿ ಶ್ರೀಮಾನ್ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು ಅಲ್ಲಿಗೆ ಓಡಿ ಬಂದು, ಆಳವಾಗಿರುವ ಆ ಬಾವಿಗೆ ಹಾರಿ, ನೀರೊಳಗಿದ್ದ ಆಕೆಯನ್ನು ಮೇಲಕ್ಕೆ ತೆಗೆದರು. ಅನಂತರ ಡಾಕ್ಟರ್ ಶೆಟ್ಟಿಯವರು ಬಂದು ಚಿಕಿತ್ಸೆಯನ್ನು ಮಾಡಿದರು. ಆದರೆ ಆಕೆಯು ಮೃತಳಾದಳೆಂಬುದು ವಿಷಾದಕರವಾಗಿದೆ. ಶ್ರೀ॥ ಗೋಪಾಲ ನಾಯ್ಕರು ಈ ದಿವಸವೇ ಪರಲೋಕ ಯಾತ್ರೆಯನ್ನು ಮಾಡಿದರು.

ಕಿನ್ನಿಕಂಬಳ:—ಇಲ್ಲಿರುವ ಬಾಗ್ಲೋಡಿ ಕೊ-ಒಪರೇಟಿವ್ ಮೇಚ್ ವರ್ಕ್ಸ್ ಲಿಮಿಟೆಡ್, ಎಂಬ ಬೆಂಕಿಪೆಟ್ಟಿಗೆ ಕಾರ್ಖಾನೆಯು ಕೊ-ಒಪರೇಟಿವ್ ಆಕ್ಟಿನಂತೆ ರಿಜಿಸ್ತ್ರಿಮಾಡಿರುವರು.

ಪುತ್ತೂರು:—ಇಲ್ಲಿಯ ಬೋರ್ಡ ಹೈಸ್ಕೂಲಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ನಿಂತ ೧೬ ಮಂದಿ ಹುಡುಗರಲ್ಲಿ ಎಲ್ಲರೂ ಪಾಸಾಗಿರುವರು.

ತ್ರಿಕರಪುರ:—ಇಲ್ಲಿಯ ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿದ ನಿವಾಸಿಕರ ಸಭೆಯಲ್ಲಿ ರಾ॥ ಮಹಮ್ಮದ ಶಮ್ನಾಡರವರನ್ನು ಮದರಾಸು ನ್ಯಾಯವಿಧಾಯಕ ಸಭೆಗೆ ಉಮೇದ್ವಾರರಾಗಿ ಚುನಾಯಿಸಿರುವರು. ದಕ್ಷಿಣ ಕನ್ನಡ ಜಿಲ್ಲೆಯ ಪಯಸ್ವಾನಿ ನದಿಯ ದಕ್ಷಿಣಕ್ಕಿರುವ ಭಾಗವನ್ನು ಮಲಬಾರು ಜಿಲ್ಲೆಗೆ ಕೂಡಿಸಬೇಕೆಂದೂ ಠರಾವು ಮಾಡಿರುವರು

ಬಾಯಾರು:—ಕುರ್ಚಿಪಳ್ಳದಿಂದ ಪುತ್ತೂರಿಗೆ ಹೋಗುವ ರಾಜಾರಸ್ತೆಯು ಕುಂಡಚ್ಚ ಕಟ್ಟೆಯಿಂದ ಕನ್ಯಾನ ವರೆಗೆ ಬಹಳ ನಾದುರುಸ್ತಿಯಲ್ಲಿದ್ದು ಮೋಟಾರು ಮುಂತಾದ ವಾಹನಗಳು ಉದ್ದಂಡ ನಮಸ್ಕಾರಗಳನ್ನು ಹಾಕುವ ಸ್ಥಿತಿಗೆ ಬಂದದೆ, ತಾಲೂಕು ಬೋರ್ಡಿನವರು ಈಗ ನಡಿಸುವ ದುರುಸ್ತಿಯನ್ನು ಸರಿಯಾಗಿ ನಡಿಸಿದ್ದಾದರೆ ವಾಹನದಿಂದ ಬಿದ್ದು ಮುರಿದು ಬಿದ್ದ ಒಂದೊಂದು ಕೈಯಿಂದ ಸಲಾಮು ಪಡೆಯುವ ಬದಲಿಗೆ ಎರಡು ಕೈಯಿಂದಲೂ ನಮಸ್ಕಾರಗಳನ್ನು ಪಡೆಯಬಹುದು.

ಮಂಜೇಶ್ವರ:—ಕೆಲವು ದಿನಗಳ ಹಿಂದೆ ಕತ್ತಿಯಿಂದ ತಿವಿಯಲ್ಪಟ್ಟ ರಾ॥ ಕುಣಿಬ್ಬೆಲು ಚಿಕ್ಕಪ್ಪ ಶೆಟ್ರು ಈಗ ಆಸ್ಪತ್ರೆಯಲ್ಲಿದ್ದು ಗುಣ ಹೊಂದುತ್ತಲಿರುವರು.

ಹಾಯರ್ ಎಲಿಮೆಂಟರಿ ಶಾಲೆಗೆ ಬಿ. ಎ. ಪಾಸಾದ (ಗೌಡ ಸಾರಸ್ವತ ಬ್ರಾಹ್ಮಣ) ಉಪಾಧ್ಯಾಯನು ಬೇಕಂತೆ. ಈ ಮಾಲೆಯು ಯಾರ ಕೊರಳಿಗೆ ಬೀಳಲಿಕ್ಕಿದೆಯೆಂದು ನೋಡಲಿಕ್ಕಿದೆ.

ಹೊಸಬೆಟ್ಟು ಪಂಚಾಯತ ಕೋರ್ಟಿಗೆ ಹೊಸ ಪ್ರೆಸಿಡೆಂಟರನ್ನು ಚುನಾಯಿಸುವ ಬಗ್ಗೆ ಡಿವಿಜನಲ್ ಆಫೀಸರರ ಹುಕುಂ ಪ್ರಕಾರ ಸಕಲ ಮೆಂಬರರೂ ಸೇರಿ ಸಭೆಯು ಸೇರಿತು. ಮೆಂಬರರು ಠರಾವು ಮಾಡಿ ಸಭೆಯನ್ನು ಮುಂದರಿಸಿರುವರು.

ಈ ವರ್ಷ ಮಳೆ ಕಾಣಲಿಕ್ಕೆ ಬಹಳ ಅಪರೂಪವಾದರೂ ಇಲ್ಲಿಯ ಕಡವಿನ ಸುಂಕ ಮಾತ್ರ ಏರುತ್ತಾ ಬರುತ್ತದೆ. ಈ ವರ್ಷದ ಮಳೆಗಾಲದೊಂದಿಗೆ ಬಿಸಿಲು ವಿಪರೀತವಾಗಿದ್ದು ಶೆಖೆಯು ಸಹಿಸಲಸಾಧ್ಯವಾಗಿದೆ. ಜಿಲ್ಲಾ ಹೆಲ್ತ ಆಫೀಸರರು ಬಂದು ಕೆಲವು ಗ್ರಾಮಗಳನ್ನು ಸಂದರ್ಶಿಸಿ ಹಿಂತೆರಳಿರುವರು.

ಸಂಪಾಜೆ:—ತಾರೀಕು ೨೬-೬-೨೬ನೇ ಶನಿವಾರ ಹಗಲು ಗಂಟೆ ೩ಕ್ಕೆ ಪುತ್ತೂರಲ್ಲಿ ದಕ್ಷಿಣ ಕನ್ನಡ ಗೌಡ ವಿದ್ಯಾ ಸಂಘದ ೧ನೇ ಆಡಳಿತ ಸಭೆಯು ಜರಗಿತು. ಸಭೆಯಲ್ಲಿ ೮ ಮಂದಿ ಆಡಳಿತ ಮೆಂಬರರೂ ಉಪ್ಪಿನಂಗಡಿ ತಾಲೂಕು ಬೋರ್ಡು ಪ್ರೆಸಿಡೆಂಟ ರಾ॥ ಎಮ್. ಶಿವರಾಯರವರೂ ಮತ್ತು ರಾ॥ ಸಿ. ಕೆ. ಪದ್ಮಯನವರೂ ಸಹ ಹಾಜರಿದ್ದರು. ವಿದ್ಯಾರ್ಥಿವೇತನ ಕೊಡಿಸಬೇಕಾಗಿ ಬಂದ ಅರ್ಜಿಗಳ ಪೈಕಿ ರಾ॥ ಎಸ್. ಎಸ್. ಐತಪ್ಪನವರ ಮಗ ರಾಮಣ್ಣನಿಗೂ, ಎಮ್. ಮುತ್ತಣ್ಣ ಈ ಎರಡು ವಿದ್ಯಾರ್ಥಿಗಳಿಗೆ ರೂಪಾಯಿ ೫೦ರ ಪ್ರಕಾರ ೧೦೦—೦—೦ ಒಂದು ನೂರು ರೂಪಾಯಿಗಳನ್ನು ಇದೇ ಕಳೆದ ಜೂನು ಲಾಗಾಯಿತು ೧೯೨೭ನೇ ಇಸವಿ ಮೇ ಅಂತ್ಯದ ವರೆಗಿನ ಒಂದು ವರ್ಷಕ್ಕೆ ಸಂಘದಿಂದ ವೇತನಕೊಡುವುದಾಗಿ ಮಂಜೂರಾಗಿರುವುದಲ್ಲದೆ ಪುತ್ತೂರು ವಿದ್ಯಾರ್ಥಿಭವನದ ಮೇಲ್ವಿಚಾರ ಕೆಕ್ಕೊಳ್ಳುವರೆ ಗೌಡ ಉಪಾಧ್ಯಾಯರೊಬ್ಬರನ್ನು ಪುತ್ತೂರು ಎಲಿಮೆಂಟರಿ ಶಾಲೆಗಾದರೂ, ನೇಮಕ ಮಾಡುವಂತೆ ಉಪ್ಪಿನಂಗಡಿ ತಾಲೂಕು ಬೋರ್ಡು ಪ್ರೆಸಿಡೆಂಟರವರನ್ನು ಕೇಳಿಕೊಳ್ಳಬೇಕಾಗಿ ಕೂಡ ನಿರ್ಣಯವಾಗಿದೆ.

ಸಭೆಯಲ್ಲಿ ಆಡಳಿತ ಮೆಂಬರರ ಮುಖಾಂತರ ರೂಪಾಯಿ ೧೩೦ ವಸೂಲು ಬಂದದ್ದನ್ನು ಸಂಪಾಜೆ ಸಹಕಾರಿ ಸಂಘದಲ್ಲಿ ಠೇವಣಾತಿ ಇಡುವರೆ ಕಾರ್ಯದರ್ಶಿಯವರ ಸ್ವಾಧೀನ ಕೊಡೋಣಾಗಿದೆ. ಸುಳ್ಯ ಹಾಯರ್ ಎಲಿಮೆಂಟರಿ ಶಾಲೆಯ ಸಮೀಪವಿರುವ ತಾಲೂಕು ಬೋರ್ಡಿನ ಒಂದು ಎಕ್ರೆ ಸ್ಥಳವನ್ನು ಮೂಲಗೇಣಿಗೆ ಪಡೆದು ವಿದ್ಯಾರ್ಥಿಭವನವನ್ನು ಕಟ್ಟಿಸಬೇಕಾಗಿ ಆಲೋಚಿಸಿಯದೆ. ಮುಂದಿನ ಆಡಳ್ತೆ ಸಭೆಯು ತಾ. ೩೧-೭-೨೬ಕ್ಕೆ ಉಬರದ್ಕ ಮಿತ್ತೂರು ಗ್ರಾಮದ . . . ಲ್ಲಿ ಜರಗಿಸುವದೆಂತ ನಿರ್ಣಯಿಸಿಯದೆ.

ಮೂಡಬಿದ್ರೆ:—ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಹಾಯಕ ಫಂಡಿನ ಸಂಘದ ವರ್ಷಾವಧಿ ೩ನೇ ಮಹಾಸಭೆಯು ಮ॥ ರಾ॥ ಕೆ. ಸದಾಶಿವ ಭಟ್ಟ ಅವರ್ಗಳ್ ವಕೀಲ ಇವರ ಅಧ್ಯಕ್ಷತೆಯಿಂದ ಇದೇ ಕಳೆದ ತಾ. ೨೫-೬-೧೯೨೬ರಲ್ಲು ಸದರಿ ಸಂಘದ ಆಫೀಸಿನಲ್ಲಿ ಬಹು ಸಂಭ್ರಮದಿಂದ ಜರಗಿತು. ಈ ದಿನ ಸದಸ್ಯರೂ ಮೆಂಬರರೂ ಪ್ರೇಕ್ಷಕರೂ ಕೂಡಿ ಸುಮಾರು ೧೦೦ ಜನರ ಮೇಲೆ ನೆರೆದಿತ್ತು. ಸಭೆಯಲ್ಲಿ ಕಾರ್ಯದರ್ಶಿಯವರಿಂದ ಸಂಘದ ವರದಿಯು ಓದಲ್ಪಟ್ಟು, ಅಧ್ಯಕ್ಷರಿಗೂ ಸಭಿಕರಿಗೂ ಧನ್ಯವಾದವನ್ನರ್ಪಿಸಿದೊಡನೆ, ಅಧ್ಯಕ್ಷರಿಂದ ಸಂಘದ ಅಭಿವೃದ್ಧಿಯ ಕಾರ್ಯಗಳನ್ನು ಪೋಷಕರೆಲ್ಲರೂ ಸಾಹಸದಿಂದ ಮನಗೊಟ್ಟು ಮಾಡಲ್ಪಡಬೇಕಾಗಿಯೂ, ಮಹಾಜನರೆಲ್ಲರೂ ಧರ್ಮಕಾರ್ಯದಲ್ಲಿ ಹೆಚ್ಚಿನ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿಯೂ ಕಾರ್ಯದರ್ಶಿಯವರು ಈ ವರೆಗಿನಂತೆ ಇನ್ನೂ ಸಾಹಸದಿಂದ ಧೈರ್ಯಗೊಂಡರೆ ಕಾರ್ಯಸಿದ್ಧಿಯಾಗಬೇಕೆಂದು . . .

ಯೋಗ್ಯ ಭಾಷಣಮಾಡಿದೊಡನೆ ಕಾರ್ಯೋತ್ಸಾಹದ ಇನ್ನು ಕೆಲವರ ಭಾಷಣವಾದ ಬಳಿಕ ಸಭೆಯು ಮುಕ್ತಾಯವಾಯಿತು. ಸಭಾಕಾಲದಲ್ಲಿ ಸಾಹಿತ್ಯ ಸಹಿತವಾದ ಸಂಗೀತ ವಿನೋದಗಳಿದ್ದವು. ಸಭಾಂತ್ಯದಲ್ಲಿ ಸಭಿಕರನ್ನು ಫಲ ಹಾರಾದಿಗಳಿಂದ ಸತ್ಕರಿಸಲ್ಪಟ್ಟಿತು. ಅದೇ ದಿನ ರಾತ್ರಿ ಶ್ರೀ ಗೋಪಾಲ ಕೃಷ್ಣ ದೇವರ ಕೃಷ್ಣಲೀಲಾ ಮೇಳದ ದಶಾವತಾರ ಆಟವು ಕೂಡ ಪ್ರೇಕ್ಷಕರ ಮನವನ್ನು ಹರ್ಷಗೊಳಿಸಿತು.

ಇವೆಲ್ಲಕ್ಕೂ ಮುಖ್ಯವಾಗಿ ಈ ಸಭೆಯಲ್ಲಿ ಕಾರ್ಯದರ್ಶಿಯವರಿಂದ ಓದಲ್ಪಟ್ಟ ವರದಿಯಲ್ಲಿ ಮೆಂಬರರ ವಾಗ್ದಾನ ನೊಟಲಗಿನ ಮೊತ್ತವು ನಾಲ್ಕು ಸಾವಿರಕ್ಕೆ ಮಿಕ್ಕಿ ಬಾಕಿ ಇರುವದೆಂಬದು ನೋಡಿದರೆ ದಾನಶೀಲರಾದ ಈ ಮಹನೀಯರು ಧರ್ಮ ಕಾರ್ಯದಲ್ಲಿ ಕೈಹಿಂದಿಕ್ಕಿದುದು ಯೋಗ್ಯವಲ್ಲೆಂದು ಬಹು ವ್ಯಸನದಿಂದ ಹೇಳಬೇಕಾಗುವುದು. ಆದುದರಿಂದ ಸರ್ವರಿಗೂ ಮಾನ್ಯವಾದ ಈ ಸತ್ಕಾರ್ಯದಲ್ಲಿ ಸಕಲರೂ ಮನಗೊಟ್ಟು ಸಂಘದ ಉದ್ದೇಶವನ್ನು ಸಫಲಗೊಳಿಸಬೇಕಾಗಿ ಸಂಘದ ಸಭಾಪ್ರೇಕ್ಷಕರೊಬ್ಬರು ಸಾದರದಿಂದ ಅಪೇಕ್ಷಿಸುತ್ತಾರೆ.

ಬಂಟವಾಳ:— ಇಲ್ಲಿ ಎರಡು ಪರಸ್ಪರ ಸಹಾಯಕ ಸಂಘಗಳು ಇವೆ. ಇವುಗಳಲ್ಲಿ ನಂಬ್ರ ೧೧೧೩ನೇ ಸಂಘದ ಲೆಕ್ಕಪತ್ರಗಳನ್ನು ಓಡಿಟರರು ಕೆಲವು ದಿವಸಗಳ ಹಿಂದೆ ಓಡಿಟ್ ಮಾಡಿದರು. ಸಾಧಾರಣ ಮೂರು ದಿವಸಗಳು ಹಿಡಿದವು. ಈ ಸಂಘವು ಒಳ್ಳೇ ರೀತಿಯಲ್ಲಿ ನಡಿಯುತ್ತದೆ. ಇಲ್ಲಿಯ ವರ್ತಕರ ಸಂಘದ ಲೆಕ್ಕ ಓಡಿಟ್ ಆಗೋಸ್ತು ತಿಂಗಳಲ್ಲಿ ಆಗುವದಂತೆ. ಈ ಸಂಘಗಳನ್ನು ಓಡಿಟ್ ಮಾಡುವ ಓಡಿಟರರಿಗೆ ಬಂಟವಾಳದಿಂದ ಉಪ್ಪಿನಂಗಡಿಗಿರುವ ೫೩ ಸಂಘಗಳಿವೆಯಂತೆ. ಒಂದು ಊರಿಗೆ ಬಂದರೆ ಆ ಊರಿನಲ್ಲಿರುವ ಎಲ್ಲಾ ಸಂಘಗಳನ್ನು ಒಂದೇ ಸಾರಿ ಓಡಿಟ್ ಮಾಡಿದರೆ ಒಳ್ಳೇದಲ್ಲವೆ. ಈ ಕ್ರಮವನ್ನು ಮುಂದೆ ಜಾರಿಗೆ ತಂದರೆ ಭತ್ತೆಗಾಗಿ ಖರ್ಚಾಗುವ ಹಣವು ಇಲಾಖೆಗೆ ಉಳಿಯುವದರಲ್ಲಿ ಸಂದೇಹವಿಲ್ಲ.

ಈಗ ಹೊಳೆಯಲ್ಲಿ ನೀರು ಕಡಿಮೆಯಾಗಿ ಸಣ್ಣ ದೊಡ್ಡ ಕಲ್ಲುಗಳೆಲ್ಲವೂ ಕಾಣಲಾರಂಭಿಸಿಯವೆ. ಸಾಧಾರಣ ನವೆಂಬರ ತಿಂಗಳಲ್ಲಿರುವಷ್ಟು ನೀರು ಇದೆ.

ಮೂಡು ಗ್ರಾಮದ ಜೋಡು ಮಾರ್ಗದ ಹತ್ತಿರ ಕಚೇರಿ, ರಿಜಿಸ್ತ್ರಿ ಆಫೀಸು, ಸಬ್ ರಿಜಿಸ್ತ್ರಾರರಿಗೆ ಮನೆ ಡಿಪ್ಯುಟಿ ತಹಸೀಲದಾರರಿಗೆ ಮನೆ ಮುಂತಾದವುಗಳನ್ನು ಕಟ್ಟಲು ಸ್ಥಳ ನೋಡಿರುವರು. ಪ್ಲೇನು ಎಸ್ಟಿಮೇಟು ತಯಾರಿಸಿರುವರು. ಆದರೆ ನೆರೆ ಬಂದರೆ ಈ ಸ್ಥಳದಲ್ಲಿರುವ ಪಳ್ಳದ ವರೆಗೂ ನೆರೆ ನೀರು ಬರುತ್ತದೆ. ಮುಂದುಗಡೆ ಇರುವ ಗದ್ದೆಗಳು ತುಂಬುತ್ತವೆ, ಅಂದರೆ ಚುನಾಯಿಸಿದ ಸ್ಥಳದ ಮೂರು ಕಡೆಗಳಲ್ಲಿ ನೆರೆನೀರು ಬರುತ್ತದೆ. ಆ ಗುಡ್ಡಸ್ಥಳ ಮುಳುಗುವದಿಲ್ಲವೆಂಬುದು ನಿಜ. ಸಬ್ [illegible]

[illegible]

ವಿವಿಧ ವಿಷಯಗಳು.

[illegible]

ಲಂಡನಿನ ಸೆಂಟ ಪೊಲ ಇಗರ್ಜಿಯ ಫಾಯರ್ ಬ್ರಿಗೇಡ್.

ಲಂಡನಿನಲ್ಲಿರುವ ಬಹಳ ದೊಡ್ಡದಾಗಿಯೂ ಅಂದವಾಗಿಯೂ ಇರುವ ಸೆಂಟ ಪೊಲ ಇಗರ್ಜಿಗೂ ಒಂದು ಫಾಯರ್ ಬ್ರಿಗೇಡ್ ಇದೆ. ಇದನ್ನು ಯುದ್ಧದ ನಂತರ ಕೆನೊನ್ ಅಲೆಕ್ಸಂದರ್ ಎಂಬವನು ಮಾಡಿಸಿದನು.

ಈ ಇಗರ್ಜಿಯು ಕಟ್ಟೋಣವು ಪೂರಾ ಕಲ್ಲಿನಿಂದಲೇ ಕಟ್ಟಿದ್ದರಿಂದ ಇದಕ್ಕೆ ಬೆಂಕಿ ತಾಗುವುದೇ ಅಸಾಧ್ಯವೆಂದು ಹೊರಗಿನಿಂದ ನೋಡುವವರಿಗೆ ಕಂಡುಬರುವುದು. ಆದರೆ ಅದರ ದಪ್ಪವಾದ ಗೋಡೆಗಳ ನಡುವಿನಲ್ಲಿಯೂ ಅನೇಕ ದಾರಿಗಳೂ ಮರದ ಹೆಬ್ಬಾಗಲುಗಳೂ ಕಪಾಟುಗಳೂ ಮರದ ಏಣಿಗಳೂ ಇವೆ. ಅದಲ್ಲದೆ ಹೊರಗೆ ಕಾಣುವ ಡೋಮು ಪೂರಾ ಮರದಿಂದಲೇ ಮಾಡಲ್ಪಟ್ಟಿದೆ. ಈ ಮರವು ಬಹಳ ಪುರಾತನ ಕಾಲ್ದು. ಅದರ ಮೇಲೆ ಸೀಸದ ತಗಡುಗಳನ್ನು ಮುಟ್ಟಿರುತ್ತಾರೆ.

∴ ∴ ∴

ಕ್ರಿಕೆಟ್ ಆಟ ಒಂದು ಕಾಲದಲ್ಲಿ ಕಾನೂನಿಗೆ ವಿರೋಧ.

ಒಂದು ಕಾಲದಲ್ಲಿ ಇಂಗ್ಲೆಂಡಿನಲ್ಲಿ ಕ್ರಿಕೆಟ್ ಆಟವಾಡುವುದು ಕಾನೂನಿಗೆ ವಿರೋಧವಾಗಿತ್ತು. ನಾಲ್ಕನೇ ಎಡ್ವರ್ಡರು ಇಂಗ್ಲೆಂಡನ್ನು ಆಳುವ ಕಾಲದಲ್ಲಿ ಕ್ರಿಕೆಟ್ ಆಟವಾಡುವವರು ರಾಜದ್ರೋಹಿಗಳೆಂದೂ ಆಡಿದವರು ೧೦ ಪೌಂಡು ಜುಲುಮಾನೆ ಕೊಡಬೇಕಿತ್ತು ಅದಲ್ಲದೆ ೩ ವರುಷದ ಸಜೆಯೂ ಆಗುತ್ತಿತ್ತು.

∴ ∴ ∴

ಭೂಲೋಕದಲ್ಲಿ ಅತೀ ದೊಡ್ಡದಾದ ಶಿಲಾಪ್ರತಿಮೆ.

ಇಂಗ್ಲೆಂಡಿನ ಬ್ರಿಟನ್ ಟೌನ್ ಎಂಬಲ್ಲಿ ಬೊಕಿನಲ್ಲಿ ಕೊರೆದು ಮಾಡಿದ ೧೭೦ ಅಡಿ ಉದ್ದವೂ ೧೦೦ ಅಡಿ ಅಗಲವೂ ಇರುವ ಒಂದು ಬಿಳೀ ಕುದುರೆ ಇದೆ. ಆದರೆ ಈಗ ಟರ್ಕಿಯ ಹತ್ತಿರವಿರುವ ಜೋರ್ಜಿಯದಲ್ಲಿ ಜನರಲ್ ರೊಬರ್ಟ ಈ. ಲಿ ಎಂಬವರ ಮತ್ತು ಅವರ ಒಂದು ಸಾವಿರ ಸೈನ್ಯದ ಶಿಲಾಪ್ರತಿಮೆಗಳು ತಯಾರಾಗುತ್ತಿವೆ. ಈ ಪ್ರತಿಮೆಗಳು ಬಹಳ ದೊಡ್ಡದಾಗಿವೆ. ಜನರಲ್ ಲೀಯ ಕುದುರೆಯ ತಲೆಯು ೫ ಅಡಿ ಉದ್ದವಾಗಿದೆ. ಇದು ಸಜೀವ ಪ್ರಾಣಿಯ ೨೫ ಪಾಲಷ್ಟು ದೊಡ್ಡದಾಗಿದೆ. ಇದರ ಮೂಗಿನ ಒಂದು ಸೊಳ್ಳೆಯಲ್ಲಿ ಒಬ್ಬ ಮನುಷ್ಯನು ನಿಂತುಕೊಳ್ಳಬಹುದು. ಇವನ್ನು ಒಂದು ಗುಡ್ಡೆಯ ಬದಿಯಲ್ಲಿರುವ ಶಿಲೆಯಲ್ಲಿ ಕೊರೆದು ಮಾಡಿದುದರಿಂದ ಇದು ಶಾಶ್ವತವಾಗಿ ಉಳಿಯುವುದರಲ್ಲಿ ಸಂದೇಹವಿಲ್ಲ.

∴ ∴ ∴

ಎಪಿಂಡೆಕ್ಸ.

ಎಪಿಂಡೆಕ್ಸ ಎಂಬದು ಒಂದು ಕತ್ತಲಾದ ಚೀಲವಾಗಿದೆ. ಮೊಲ, ದನ, ಕುದುರೆ ಮೊದಲಾದ ಪ್ರಾಣಿಗಳಲ್ಲಿ ಈ ಚೀಲವು ಅವುಗಳು ಜಗಿಯದೆ [illegible]

[illegible] ಯಾವದೂ ಈ ಎಪಿಂಡಿಕ್ಸ ತಿರುವಿದರೆ, ಅಥವಾ ಏನಾದರೆ ತಿಥಿನ ಯಾವ ತರದಲ್ಲಿಯಾವದೂ ನೋಯಿಸಲ್ಪಟ್ಟರೆ, ಈ ಚೀಲದ ಶಕ್ತಿಯು ಕಡಿಮೆಯಾಗಿ ಈ ಬಾಕ್ಟೀರಿಯಗಳು ಎಪಿಂಡಿಕ್ಸನಲ್ಲಿ ಹೆಚ್ಚಿಹೆಚ್ಚಾಗಿ ಸೇರುತ್ತವೆ.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ,

I. A. No. 36/1926, in I. P. No. 40/1923

ವಗ್ಗ ವಾಸ್ದೇವ ಪೈ—ಸೂರ್ಯ ಪೈರ ಮಗ ಹಾಲಿ ಮಂಗಳೂರು ಶಹರದಲ್ಲಿರುವವ, } ಅರ್ಜಿದಾರ.

— ಮತ್ತು —

(1) ಕುಡ್ವಿ ವಾಮನ ಶ್ಯಾನುಭೋಗ ಎಂಡ್-ಕೊ., (2) ಕುಡ್ವಿ ರಘುನಾಥ ಶ್ಯಾನುಭೋಗ, ಹರಿಶ್ಯಾನುಭಾಗ ಎಂಡ್ ಕಂಪೆನಿ; (3) ಗುರ್ಪುರು ನಾರಾಯಣ ಪ್ರಭು; (4) ಗುರ್ಪುರು ಮುಕುಂದ ಪ್ರಭು; (5) ಶಿವಗೂರು ಮಂಜುನಾಥ ಭಂಡಾರಿ; (6) ಅಬ್ದುಲ್ಲಾ ಮಿಠಾಜು ಥಾನಿ ಶೇಟ್; (7) ಪಂಜಮಾಲ ನರಸಿಂಹ ಕಮ್ತಿ; (8) ಬಂಟವಾಳ ಮರ್ಚಂಟ್ಸ್ ಕೊ-ಓಪರೇಟಿವ್ ಸೊಸ್ಯಾಟಿ; (9) ಬಂಟವಾಳ ಅಪ್ಪು ಯಾನೆ ಶ್ರೀನಿವಾಸ ಪ್ರಭು; (10) ಬಿ ವೆಂಕಟ್ರಾವ್ ಶ್ಯಾನುಭಾಗ . } ಕ್ರೆಡಿಟರ್ಸ್ ರಸ್ಪೊಂಡೆಂಟರು,

ಮೇಲ್ಕಂಡ ಅರ್ಜಿದಾರನು ತನ್ನನ್ನು ಡಿಸ್‌ಚಾರ್ಜು ಮಾಡಬೇಕಾಗಿ ಸದರಿ ಅರ್ಜಿ ದಾಖಲು ಮಾಡಿರುತ್ತಾನೆ. ಸದರಿ ಅರ್ಜಿಯು 1926ನೇ ಇಸವಿ ಅಗೋಸ್ತು ತಾ. 8ನೇ ದಿವಸ ತನ್ಕಿಗೆ ಇಟ್ಟಿರುತ್ತದೆ. ಯಾರಾದರೂ ಆಕ್ಷೇಪವುಳ್ಳವರು ಮೇಲ್ಕಂಡ ತಾರೀಕಿಗೆ ಅಪರಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಜ್ಯಾಹೀರು ಮಾಡತಕ್ಕದ್ದು.

ಮಂಗಳೂರು, ತಾ. 13–7–'26. } *K. P. Gopalkrishna Rao,*
Vakil for Petitioner.

ಪತ್ರವ್ಯವಹಾರ.

[ಪತ್ರಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ, ಸ್ವದೇ.]

ಪ್ರಿಯ ಸಂಪಾದಕರೇ,

ನಿಮ್ಮ ಕಳೆದ ವಾರದ ಸಂಚಿಕೆಯ ಸ್ಫುಟವಿಚಾರಗಳಲ್ಲಿ 'ಮುಂದಿನ ಚುನಾವಣೆಗೆ ಉಮೇದ್ವಾರರು' ಎಂಬೀ ಶಿರೋನಾಮದಿಂದ ಪ್ರಕಟಿಸಿದ ವಿಚಾರಗಳ ಕುರಿತು ನಾನು ಈ ಕೆಳಗಿನ ವಿಷಯವನ್ನು ವಿಶದಗೊಳಿಸಬಿಚ್ಛಿಸುತ್ತೇನೆ. ಬಂಟರ ಯಾನೆ ನಾಡವರ ಅಭಿವೃದ್ಧಿ ಸಂಘದವರು ಬರುವ ಚುನಾವಣೆಗೆ ತಮ್ಮ ಜಾತಿಯ ಪರವಾಗಿ ಮಾತ್ರ ಒಬ್ಬ ಪ್ರತಿನಿಧಿಯನ್ನು ಆರಿಸಲು ನೆರೆಯಲಿಲ್ಲ. ಬರುವ ಚುನಾವಣೆಗೆ ನಿಲ್ಲಲೆಂದು ಮುಂದೆ ಬಂದಿರುವ ಬಂಟ ಉಮೇದ್ವಾರರಲ್ಲಿ ಪ್ರತಿಸ್ಪರ್ಧೆಯುಂಟಾಗಿ ಜಾತಿಯಲ್ಲುಂಟಾಗುವ ಒಡಕನ್ನು ನಿವಾರಿಸುವುದಕ್ಕಾಗಿ ಯಾವನಾದರೊಬ್ಬ ಉಮೇದ್ವಾರನೇ ಚುನಾವಣೆಗೆ ನಿಲ್ಲುವಂತೆ ಮಾಡಲು ಸದರಿ ಸಂಘದ ಸಭೆಯು ಸೇರಿದ್ದಿತು. ನಾನು ಇಡೀ ಜಿಲ್ಲೆಯ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಓಟರರ ಪರವಾಗಿ ಮದ್ರಾಸು ಕೌನ್ಸಿಲ್ ಚುನಾವಣೆಗೆ ಉಮೇದ್ವಾರನಾಗಿರುತ್ತೇನೆ. ನನ್ನ ಇಷ್ಟಮಿತ್ರರೂ ನನ್ನ ಉಮೇದ್ವಾರಿಕೆಯಲ್ಲಿ ಪಂಚಿಗೆ ಇರುವ ಮಹಾಜನರೆಲ್ಲರೂ ನನಗೆ ತಮ್ಮ ಸಹಾಯವಿತ್ತು ಪ್ರೋತ್ಸಾಹಿಸಬೇಕಾಗಿ ನನ್ನ ವಿನಂತಿಯಾಗಿರುತ್ತದೆ

A. B. Shetty.

ಪ್ರಕಟಣೆ.

ಮುಂಬಾಯಿಯಲ್ಲಿರುವ ಸಾವುಕಾರ ಲಕ್ಷ್ಮೀದಾಸ ವಿಸಾಂಜಿಯವರ ಮಗ ಸಾವುಕಾರ ಮೂಲ್ಜಿ ಲಕ್ಷ್ಮೀದಾಸ ಶೇಟ್ ಇವರ ಪರವಾಗಿ ಮಂಗಳೂರು ಹ್ಯಾಕೋರ್ಟು ವಕೀಲ್ ಅಮ್ಮೆಂಬಳ ಶ್ರೀನಿವಾಸ ಪೈ ಸರ್ವ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಈ ಕೆಳಗೆ ವಿವರಿಸಿದ ಎಲ್ಲಾ ಸ್ಥಿರಾಸ್ತಿಗಳು ಮೇಲೆ ಹೆಸರುಕಾಣಿಸಿದ ನನ್ನ ಕಕ್ಷಿಗಾರ ರಾ॥ ಮೂಲ್ಜಿ ಲಕ್ಷ್ಮೀದಾಸ ಶೇಟ್ ಇವರ ಸಂಪೂರ್ಣ ಹಕ್ಕಿನದ್ದಾಗಿರುತ್ತಾವೆ. ವಿನಹ ಬೇರೆ ಯಾರೊಬ್ಬರಿಗೂ ಏನೊಂದೂ ಹಕ್ಕು ಇರುವುದಿಲ್ಲ. ಕಾರಣ ಸದರಿ ಆಸ್ತಿಗಳಾಗಲೀ ಯಾ ಅವುಗಳ ಪೈಕಿ ಹಲವು ಯಾವುದೊಂದು ಅಂಶವಾಗಲೀ ವ್ಯಾದೆಗೇಣಿ, ವ ಇತರ ಯಾವ ವಿಧದ ಪರಾಧೀನಗಳ ಮೂಲಕವಾದರೂ ಪರಾಭಾರೆ ಮಾಡುವ ಹಕ್ಕು ನನ್ನ ಕಕ್ಷಿಗಾರರದ್ದು ಆಗಿರುತ್ತದೆ. ವಿನಹಾ ಅನ್ಯರಿಗೆ ಇರುವುದಿಲ್ಲ. ರಾ॥ ಪುರುಶೋತ್ತಮ ಶೇಟ್ ನಾಂಜಿಯವರಿಂದಾಗಲೀ ಯಾ ಬೇರೆ ಯಾರೊಬ್ಬರಿಂದಲೂ ಪಡೆಯಬಹುದಾದ ವ್ಯಾದೆ ಗೇಣಿ ವಗೈರೆ ಪರಾಧೀನಗಳು ಸಿಂಧಾಗತಕ್ಕವುಗಳಲ್ಲ ಮತ್ತು ನನ್ನ ಕಕ್ಷಿಗಾರರಿಗೆ ಬಾಧಿಸತಕ್ಕವುಗಳಲ್ಲ. ಸದರಿ ಆಸ್ತಿಗಳಲ್ಲಿ ಯಾವುದನ್ನೂ ವ್ಯಾದೆಗೇಣಿಗೆ ಪಡಕೊಳ್ಳಲು ಅಪೇಕ್ಷಿಸುವವರು ಸದರಿ ಮೂಲ್ಜಿ ಲಕ್ಷ್ಮೀದಾಸ ಶೇಟ್ ವ ನನ್ನ ಕೂಡೆ ವಿಚಾರಿಸತಕ್ಕದ್ದು.

ಆಸ್ತಿಯ ತಪಸೀಲು.

ಮಂಗಳೂರು ಶಹರು ಗೋಳಿಕಟ್ಟೆ ವಾರ್ಡು ಕಸಬಾ ಬಜಾರು ಗ್ರಾಮಕ್ಕೆ ಒಪ್ಪಿದ ಆಸ್ತಿಗಳು:—

ಜಂಟಿ ನಂಬ್ರು	ಟೌನ್ ಸರ್ವೆ ನಂಬ್ರು	ರೆವಿನ್ಯು ಸರ್ವೆ ನಂಬ್ರು	ತೀರ್ವೆ ರೂಪಾಯಿ	ತೀರ್ವೆ ಆಣೆ	ಪಟ್ಟಾ ನಂಬ್ರು
1	163	1172	1	9	590
2	174	1186	0	10	713
3	238	1248	1	1	590
4	244/1	1253	0	6	487
–	244/2	–	0	4	118
5	245	1254	0	15	591
6	246	1255	0	10	575
7	356	1366	0	6	288
8	365	1375	0	2	590
9	368	1378	0	12	590
10	369	1379	0	4	590
11	370/B	1380	2	1	586
12	ವರ್ತಕ ವಿಲಾಸ 431	1441	5	1	590
13	454	1463	0	8	590
14	527	1537	0	12	590
15	528	1538	3	7	541

ಮಂಗಳೂರು ಶಹರು ಕೊಡಿಯಾಲ್ ಬೈಲ್ ವೆಸ್ ವಾರ್ಡಿಗೆ ಸೇರಿದ ಆಸ್ತಿಗಳು:—

16	199	366	2	12	141

ಮಂಗಳೂರು ತಾಲೂಕು ಮಾನಂಪಾಡಿ ಗ್ರಾಮದ ಬಾಬ್ತು ಆಸ್ತಿಗಳು:—

17	— —	11/14	1	7	72

ಮೇಲಿನ ಜಂಟಿ ನಂಬ್ರ 1ರಿಂದ 17ನೇ ವರೆಗಿನ ಆಸ್ತಿಗಳಲ್ಲಿ ಇರುವ ಮನೆ, ಭಂಡಸಾಲೆ, ಗೋದಾಮು ವ ಇತರ ಕಟ್ಟೋಣ ವಗೈರೆ ಸಮೇತ.

ಮಂಗಳೂರು, 27–6–1926 } *A. Srinivasa Pai,*
ಹ್ಯಾಕೋರ್ಟ ವಕೀಲ್.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕಾಂಕ್ಷಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರುವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತ್ರೀಮಿತ್ರಣ!
ದಶಮೂಲ ಸುಖಪ್ರದಔಷಧಿ!
ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ
1 ಔನ್ಸು ಬಾಟ್ಲಿ 1ರ ಕ್ರಯ 0—4—0.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs. 300,000—0—0
Reserve and other sinking Funds ,, 288,500—0—0

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.
For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಬಲವಾದ ಮತ್ತು ಹೆಸರುಪಡೆದ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುಧಾರಿಕ ಕ್ರಮದಲ್ಲಿ ಮಾಡಲ್ಪಟ್ಟವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾಸಿಸ್ ಎಸ್ಟೇಟ್. ಮುಂಬಯಿ.

ಬಿಟ್ಟಿ! ಇನಾಂ!! ಪುಗಸಟ್ಟೆ!!!

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಡೈನಾ ಬಜಾರ್, ರೋಡ್, ಮದ್ರಾಸು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ — **ವಜ್ರಾಂಗ-ಬಿಂದು** — ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚ ತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ [illegible] ಒಂದೇ ವಾರದಲ್ಲಿ ಗುಣವಾಗುವದು. ಲಘುವಿಗಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. [illegible] ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦, ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

[illegible]

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,
ಮು. ಪೋ. [illegible] (ಜಿಲ್ಲಾ, [illegible].)

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ಸಕಲಿನ ಬಗೆ ನೋಟು, ಲೋಜಮೆಂಟ ಶೈಡ್ಯೂಲ, ಪೇಮೆಂಟ್ ಶೈಡ್ಯೂಲ, ಜತ್ತಾ ನೋಟು, ಮೆಮೊ ಆಫ್ ಕೊಸ್ಟ್ಸ್, ಮೆಮೊರಂಡಮ್ ಆಫ್ ಎಪ್ಪಿಯರೆನ್ಸು, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳು ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—[illegible]—0.

ಶಾರದಾ ಛಾಪಖಾನೆ,
ಕೇರು ಬೀದಿ, ಮಂಗಳೂರು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ

— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ನೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮಾನಾಗಿದೆ. ಖರಾರು ಗುಂಪೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.



ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ	10—0—0
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ	5—0—0.

ಕ್ಯಾಪ್‌ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸ

ಆಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತರದ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.



1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 9 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 5 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ದ್ದರ್ ರೇಷ್ಮೆ ಮಡಿಗಳು, ಜಾಮ್‌ದಾನಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಸಾಳಗ್ರಾಮ, ಶಾಳ, ಪಚ್ಚೇರ್‌ದಾಣಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, ಚೌಕಂಬಾ, ಕಾಶೀ ಕ್ಷೇತ್ರ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವುದಕ್ಕೂ ಒಂದು ದೇಹದ ಮರ್ಮಶಾಸ್ತ್ರವು ಇರುವುದು. ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಜ್ರಾರ್ಜೆಟ್ ಮದ್ರಾಸ್.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಬಿ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರವಿಸರ್ಜನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಬುಡ್ಡಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ಇಮಿಟೇಷನ್ ರೇಷ್ಮೇ ಸೀರೆಗಳು.

ಈ ಸೀರೆಗಳು 18 ಮೊಳ ಉದ್ದವೂ, 2½ ಮೊಳ ಅಗಲವೂ ಇದೆ. ಈ ಸೀರೆಗಳನ್ನು ಹಸನಾದ ಇಮಿಟೇಷನ್ ಸಿಲ್ಕ್ ಗಟ್ಟಿ ದಾರದಿಂದ ತಯಾರಿಸಿದೆ. ಇವು ನೋಡಲಿಕ್ಕೆ ಭಾರಿ ಕ್ರಯದ ಸೀರೆಗಳಂತೆ ಕಾಣುವುವಲ್ಲದೆ ಅಂದವಾದ ಅಂಚೂ, ಸುಂದರವಾದ ಜಾಜು ರೇಷ್ಮೆಯ ಸೆರಗೂ ಇರುವವು. ಈ ಮಾದರಿ ಸೀರೆಗಳು ಬೇರೆ ಯಾಲ್ಲಿಯೂ ಈ ಕ್ರಯಕ್ಕೆ ಸಿಕ್ಕಲಾರವು. ಈ ಸೀರೆಗಳು ಶ್ರೀಮಂತರೂ, ಗರೀಬರೂ, ಉಡಲಿಕ್ಕೆ ಬಹು ಚಲೋದಾದವು. ಮಾದರಿಗಾಗಿ ಕೆಲವನ್ನು ಮಾತ್ರ ತಯಾರಿಸಿರುತ್ತೇವೆ. ಆದ್ದರಿಂದ ಬೇಗನೆ ತರಿಸಿಕೊಳ್ಳುವವರಿಗೆ ಮಾತ್ರ ಸಿಕ್ಕುವವು.

ಕ್ರಯ ಸೀರೆ 1ಕ್ಕೆ ರೂ. 7—8—0.

ಇಂದ್ರಿಯಸ್ತಂಭನ ಗುಳಿಗೆ.

ಈ ಅದ್ಭುತವಾದ ಮಾತ್ರೆಯನ್ನು ಮಲಗುವುದಕ್ಕೆ ಒಂದು ಗಂಟೆಯ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತುವೃದ್ಧಿಯಾಗಿ ಗಟ್ಟಿಯಾಗುವುದು. ಈ ಔಷಧವನ್ನು ತಿಂದು 1 ಗಂಟೆಯ ಕಾಲ ತಡೆದು ಸಂಭೋಗ ಮಾಡಿದರೆ, ಬೇಗನೆ ಸ್ಖಲನವಾಗದೆ ಶಕ್ತಿಯನ್ನು ಕೊಡುವುದು. ತರಿಸಿ ಪರೀಕ್ಷಿಸಿರಿ, ಕ್ರಯ ಡಬ್ಬಿ 1ಕ್ಕೆ ರೂ. 1—6—0.

ವಿಳಾಸ:— ಎಸ್. ಆರ್. ಕೃಷ್ಣ ಅಂಡ್ ಕೋ,
ನಂ ೧, ತಂಬುಸ್ವಾಮಿನ ಬೀದಿ,
ಸ್ಟೆ. ನು. ಮದ್ರಾಸ್.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ಪಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	„ 2—8—0.
„ ಸ್ಥಳೀಕರಿಗೆ ...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಹಾಕಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಡಿಟರ್,
ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಅವೆನ್ಯೂರೋಡ್, ಬೆಂಗಳೂರು, ಸಿಟಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered No. M. 498.

ಚಂದಾನಿರ್ಣಯ:— ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷ್ಯುರ್ಮಹಾರ್ಹಮಸ್ತುತುಷ್ಟುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಮ್ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುಕ ಬರುತಿರುವ ॥
ಗರಲಕವರಂಜಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತಿರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೨೩ನೇ ಶುಕ್ರವಾರ ಜುಲಾಯಿ ೧೯೨೬. ಸಂಚಿಕೆ ೩೦.

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. ಹೆಡ್ ಆಫೀಸು:— ಉಡುಪಿ	Branch:—COONDAPOOR. ಶಾಖೆ:— ಕುಂದಾಪುರ.
ನಿಯಮಿತ ಮೂಲಧನ ರೂ. 8,50,000	ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000.

ತಾ. 28—2—'26ಕ್ಕೆ ತೋರುವ ಸದರಿ ಬ್ಯಾಂಕಿನ ವಹಿವಾಟುಗಳ ಪಟ್ಟಿ.

ಮೂಲಧನ ವ ಜವಾಬ್ದಾರಿಗಳು.		ಆಸ್ತಿ ವ ಸೊತ್ತುಗಳು.	
ವಸೂಲು ಕೆತ್ತ ಮೂಲಧನ	1,83,690—9—11	ಹಿತ್ತಲು ಕಟ್ಟೋಣ ಕಚ್ಚೇರಿದ ಪ್ರಿಮಿಸಗಳು ವಗೈರೆ	3943—8—0,
ಅವಷ್ಟನ ವ ಇತರ ನಿಧಿಗಳು	75,875—0—0,	ಯೋಗ್ಯಜವಾಬ್ದಾರಿ ಮೇಲೆ ಸಾಲಕೊಟ್ಟಿದ್ದು	7,58,851-13-8,
ಠೇವಣಾತಿಗಳು	5,30,003-14-3,	ಸಾ. ಸೇ. 6ರಲ್ಲಿ ಬಡ್ಡಿ ಸಿಕ್ಕತಕ್ಕ ಸರಕಾರಿ ಭದ್ರತೆ ಪತ್ರಗಳ ಮೇಲೆ	25,800—0—0,
ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು ಕಳುಹಿಸಿದವರಿಗೆ	4,700—0—0,	ವಸೂಲಿ ಬಗ್ಗೆ ಪಡೆದ ಹುಂಡಿ ಪತ್ರಗಳ ಬಾಬ್ತು	4,700—0—0,
ಐವೇಜಿನ ಮೇಲಣ ಈ ವರೆಗಿನ ಬಡ್ಡಿ ಕೂಡಿ ಇತರ ಬಾಬುಗಳು	40,274—3—11,	ಇತರ ಬಾಬುಗಳು (ಠೇವಣಾತಿ ಬಡ್ಡಿ ವಗೈರೆ ಕೂಡಿ)	22,795—6—6,
		ಕೈಯಲ್ಲಿರುವ ಮತ್ತು ಬೇಂಕರರ ಕೂಡೆ ಕೇಳಿದಾಗ್ಗೆ ಸಿಕ್ಕತಕ್ಕ ಶಿಲ್ಕು ಸಹಾ	15,452—15—11,
ಜುಮ್ಲಾ ರೂ.	8,31,543-12-1	ಜುಮ್ಲಾ ರೂ.	8,31,543-12-1.

ನಿರಖು ಠೇವಣಾತಿಗಳನ್ನು ಕಾಲಕ್ಲಪ್ತತೆಗೆ ಅನುಗುಣವಾಗಿ ಸಾ. ಸೇ. 7ರಿಂದ 7½ರ ದರದ ಬಡ್ಡಿ ಮೇಲೂ, ಕೊಂಚ ಅವಧಿ ಠೇವಣಾತಿಗಳನ್ನು ಸಾ. ಸೇ. 6½ರ ದರದ ಬಡ್ಡಿ ಮೇಲೂ, ಮಾಮೂಲು ಠೇವಣಾತಿಗಳನ್ನೂ ಸಂಚು ಠೇವಣಾತಿಗಳನ್ನೂ ಚಾಲ್ತಿ ಮತ್ತು ಸೇವಿಂಗ್ಸ ಠೇವಣಾತಿಗಳನ್ನೂ ಅತಿ ರಾಹುತರ ಮತ್ತು ಸೌಲಭ್ಯವಾದ ಶರ್ತಗಳ ಮೇಲೆ ಅಂಗೀಕರಿಸಲ್ಪಡುವವಲ್ಲದೆ ದೇಶೀಯ ಪರದೇಶೀಯ ಬ್ಯಾಂಕುಗಳ ಚೆಕ್ಕು ವ ಡ್ರಾಫ್ಟುಗಳನ್ನೂ ಸಾಹುಕಾರಿ ಹುಂಡಿಗಳನ್ನೂ, ವಟ್ಟಾಯಿಸುವ ಮತ್ತು ಯೋಗ್ಯ ಜವಾಬ್ದಾರಿ ಮೇಲೆ ಸಾಲಕೊಡುವ ಮತ್ತು ಇತರ ಎಲ್ಲಾ ತರದ ಬ್ಯಾಂಕಿನ ಐವೇಜುಗಳು ನಡಿಸಲ್ಪಡುವವು. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಆಫೀಸು,
ಉಡುಪಿ, ತಾ. 28—2—'26.

ನಯಂಪಳ್ಳಿ ಆನಂದರಾವ್, ಸೆಕ್ರೆಟರಿ.

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ದೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ದೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇನೆಯು ಹಿಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿರಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ದೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ, ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋಸೆಫ್ ಹೌಸ್, ಮದ್ರಾಸು.

109 ಫ್ರೇಯರ್ ರೋಡ್
ಮುಂಬಯಿ.

ಮಂಗಳೂರಲ್ಲಿ—ಉಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ಣಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವದು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು —

ಸರ್ವಿಸಿನ ಹೆಸರು.	ತಲುಪುವ ಸ್ಥಳ.	ಹೊರಡುವ ಘಂಟೆ.
ಜನರಲ್	ಕಾರ್ಕಳ — ಆಗುಂಬೆ — ತೀರ್ಥಹಳ್ಳಿ .	ಪ್ರಾ. 6½
ಸಿ. ಪಿ. ಸಿ.	ಉಡುಪಿ — ಕುಂದಾಪುರ — ಬೈಂದೂರು	„ 6½, 9½
	ಉಡುಪಿ .	ಮ. 12½
	ಮುಲ್ಕಿ ವರೆಗೆ ಮಾತ್ರ	ಅ. 3½
	ಬಂಟ್ವಾಳ — ಬೆಳ್ತಂಗಡಿ — ಚಾರ್ಮಾಡಿ.	ಪ್ರಾ. 7, ಮ. 1
	ಕಾರ್ಕಳ — ಬೆಳುವಾಯಿಯಿಂದ .	
	ಬಂಟ್ವಾಳಕ್ಕೆ ಮಾತ್ರ	„ 10½, ಅ. 4½
	ಪುತ್ತೂರು — ಸಂಪಾಜೆ — ಮಡಿಕೇರಿ	„ 7½
	ಪುತ್ತೂರು .	ಪ್ರಾ. 10½ ಅ. 2
ಕಾರ್ಕಳ	ಕಾರ್ಕಳ — ಉಡುಪಿ — ಕುಂದಾಪುರ .	ಪ್ರಾ. 6
	ಕಾರ್ಕಳಕ್ಕೆ ಮಾತ್ರ.	ಅ. 1
ಹನುಮಾನ್	ಕಾರ್ಕಳ — ಉಡುಪಿ — ಕುಂದಾಪುರ .	ಪ್ರಾ. 7
	ಕಾರ್ಕಳಕ್ಕೆ ಮಾತ್ರ.	ಮ. 12
ಶಂಕರ್ ವಿಟ್ಠಲ್	ಪುತ್ತೂರು — ಮಡಿಕೇರಿಗೆ .	ಪ್ರಾ. 7
	ಪುತ್ತೂರು — ಉಪ್ಪಿನಂಗಡಿ .	ಅ. 1½
	ವಿಟ್ಲಕ್ಕೆ .	ಪ್ರಾ. 8, ಅ. 2½
	ಉಡುಪಿ .	ಪ್ರಾ. 7½ ಅ. 1½
ಸ್ಟಾರ್	ಮುಲ್ಕಿ — ಉಡುಪಿ.	„ 7, ಮ. 1
	ಬಂಟ್ವಾಳ .	„ 10½, ಅ. 4½
ಇಂಡಿಯನ್	ಮುಲ್ಕಿ — ಉಡುಪಿ,	„ 6½, ಮ. 12½
ಫೋರ್ಟ್ವಿಲರ್	ಬಂಟ್ವಾಳ — ಬೆಳ್ತಂಗಡಿ — ಚಾರ್ಮಾಡಿ	ಪ್ರಾ. 7½ ಮ. 12½

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ—

ಗಾಡಿಗಳು	ಹೊರಡುವ ಘಂಟೆ	ತಲುಪುವ ಘಂಟೆ
ಮೈಲ್	ಬೆಳಗ್ಗೆ 8-5	ಸಂಜೆ 5-25
ಲೋಕಲ್	„ 9-45	ರಾತ್ರಿ 10-40
ಪ್ಯಾಸೆಂಜರ್	ಮಧ್ಯಾಹ್ನ 12-30	ಮಧ್ಯಾಹ್ನ 2-40
ಲೋಕಲ್	ಸಂಜೆ 5-40	ಬೆಳಗ್ಗೆ 9-2

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್ — ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂದ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ಬೈಲು ಬೆರ್ಚಪ್ಪ, ಬ್ರಾಹ್ಮಣ ವೈರಾಗಿ, ದಮಯಂತಿಯ ಕಥೆ, ಪರಶುರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ಹಟಪಟ ಚನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕ ಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಲ್ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್ — ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೩.
ಬಾಟ್ಲಿವಾಲರ ಕಿಂಗ್ ಆಫ್ ಬಾಮ್ — ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಡೈರಿಯಾ ಮಿಕ್ಶ್ಚರ — ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೩
ಬಾಟ್ಲಿವಾಲರ ಕ್ವಿನೇನ ಚೀಟುಗಳು — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು — ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ಕಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ದೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ಡಿ. ಊಲನ್ ಮಾರ್ಟ್, ಮಂಗಳೂರು.

ಚ್ಯವನಪ್ರಾಶ್ಯಲೇಹ.

ಇದು ಪ್ರಸಿದ್ಧಿ ಹೊಂದಿದ ಆಯುರ್ವೇದೀಯ ರಸಾಯನ. ಪರಿಶುದ್ಧವಾದ ಅನೇಕ ಗಿಡಮೂಲಿಕೆಗಳಿಂದಲೂ ಫಲಗಳಿಂದಲೂ ಶಾಸ್ತ್ರರೀತಿಯಾಗಿ ತಯಾರಿಸಲ್ಪಟ್ಟಿದೆ. ಕ್ಷಯರೋಗ, ಕೆಮ್ಮು ಉಬ್ಬಸಗಳನ್ನೂ ಶ್ವಾಸಕೋಶ ಮತ್ತು ಹೃದಯ ಸಂಬಂಧವಾದ ಇತರ ವಿಕಾರಗಳನ್ನೂ ನಾಶಮಾಡುವುದರಲ್ಲಿ ಅದ್ವಿತೀಯವಾದದ್ದು. ಯಾವ ರೋಗವೂ ಇಲ್ಲದೆ ಇರುವವರು ಸಹ ಅವಶ್ಯವಾಗಿ ಸೇವಿಸತಕ್ಕದು. ಬುದ್ಧಿಶಕ್ತಿ, ಜ್ಞಾಪಕಶಕ್ತಿ, ಧಾತುಪುಷ್ಟಿ, ಮತ್ತು ನರಗಳ ಶಕ್ತಿಗಳನ್ನು ವೃದ್ಧಿಪಡಿಸಿ, ಆರೋಗ್ಯದೃಢಕಾಯರನ್ನಾಗಿಯೂ ದೀರ್ಘಜೀವಿಗಳನ್ನಾಗಿಯೂ ಮಾಡುವುದು. ಬಾಲಕರಿಗೂ, ವೃದ್ಧರಿಗೂ, ಮತ್ತು ಸ್ತ್ರೀಯರಿಗೂ ಹಿತವಾದದ್ದು.

ಕ್ರಯ ೧೦ ತೊಲೆ ರೂ. 1-0-0, 40 ತೊಲೆ ರೂ 3-0-0.

ಸಿದ್ಧ ಮಕರಧ್ವಜ.

ಕ್ಷಯರೋಗ, ಪ್ರಮೇಹ, ಮೊದಲಾದ ಮಹಾ ರೋಗಗಳಿಗೆ ಅದ್ವಿತೀಯವಾದದ್ದು. ಇದನ್ನು ಸುವರ್ಣ ಮೊದಲಾದ ಅಮೂಲ್ಯ ವಸ್ತುಗಳಿಂದ ತಯಾರುಮಾಡಲ್ಪಟ್ಟಿರುವುದರಿಂದ ಯಾವ ವ್ಯಾಧಿಯೂ ಇಲ್ಲದೆ, ಆರೋಗ್ಯ ಪುಂಸ್ತ್ವಶಕ್ತಿ, ರಸಾಯನ ಗುಣ ಮತ್ತು ದೀರ್ಘಾಯುಷ್ಯಗಳನ್ನು ಅಪೇಕ್ಷಿಸುವವರು ನಿತ್ಯ ಸೇವಿಸಬಹುದು.

ಕ್ರಯ 25 ಮಾತ್ರೆ ರೂ. 5-0-0.

ಸೂಚನೆ:— ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಹೆಚ್ಚು ಫೀಸಿನ ಕ್ರಯಕ್ಕೆ ದೊರೆಯುತ್ತವೆ. ಆಯುರ್ವೇದ ಭೂಷಣ ವಿಶಾರದ ಪಂಡಿತ ಕೆ ನಾರಾಯಣರಾವ್ ಎ. ಎಂ. ಎ. ಸಿ.ಯವರು ರೋಗಿಗಳನ್ನು ಪರೀಕ್ಷಿಸಿ ತಕ್ಕ ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ರೋಗಿಗಳು ರೋಗದ ಲಕ್ಷಣಗಳನ್ನು ತಿಳಿಸಿದರೆ, ತಕ್ಕ ಚಿಕಿತ್ಸಾಕ್ರಮವನ್ನು ಸೂಚಿಸಿ, ಸರಿಯಾದ ಔಷಧಗಳನ್ನೂ ಕಳುಹಿಸುತ್ತೇವೆ.

ಆರ್ಡರು ಮಾಡುವಾಗ ಈ ಪತ್ರಿಕೆಯ ಹೆಸರನ್ನು ನಮೂದಿಸಿರಿ.

ಟಿ. ಸಿ. ಎಸ್. ಮಣಿಯಂ ಅಂಡ್ ಕೋ.
ಮ್ಯಾನೇಜಿಂಗ್ ಏಜಂಟ್ಸ್,
ಆಂಧ್ರ ಆಯುರ್ವೇದಿಕ್ ಫಾರ್ಮಸಿ, (ಬ್ರಾಂಚ್)
೬೬ ಚಿಕ್ಕಪೇಟೆ, ಬೆಂಗಳೂರು ಸಿಟಿ

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ಲ 1ಕ್ಕೆ ರೂ. 3—2—0.
" 2. " " ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಅಂಚೆ ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

The Canara Pubic Conveyance Co., Ltd, Mangalore.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ಸ್ ಸರ್ವಿಸುಗಳು —

ಮಂಗಳೂರು
- ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರ
- ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
- ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
- ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
- ಮಡಿಕೇರಿ — ಪುತ್ತೂರು — ಕಾಸರಗೋಡು.

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು — ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಘಟ್ಟಗಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು — ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು — ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸ್ಸು ಸ್ಟೇಶನುಗಳ ಮಧ್ಯೆ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd, Mangalore. S. K.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂವತ್ಸರದ ಆಷಾಢ ಶು|| ೧೪ ಶನಿವಾರದಿಂದ ಕ್ಷಯ ಸಂವತ್ಸರದ ಆಷಾಢ ಬ|| ೬ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಕರ್ಣಾಟಕ ಆಟ.)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಯೋಗ	ಸೂರ್ಯ ಉ.	ಸೂರ್ಯ ಅಸ್ತ.
24	ಶನಿ	೧೪	೧೯.೩೨	ಪೂ. ಷಾ.	೨೩.೧೪	೮	6.16	7.58
25	ರವಿ	○	೧೪.೧೪	ಉ. ಷಾ.	೨೦. ೦	೯	6.16	6.58
26	ಸೋಮ	೧	೮.೪೬	ಶ್ರವಣ	೨೬.೧೪	೧೦	6.16	6.57
27	ಮಂಗಳ	೨	೨.೪೪	ಧನಿಷ್ಠಾ	೧೨.೩೨	೧೧	6.16	6.57
28	ಬುಧ	೪	೫೧.೧೪	ಶತಭಿಷಾ	೮.೧೪	೧೨	6.17	6.57
29	ಗುರು	೫	೪೪.೪೬	ಪೂ. ಭಾ.	೪.೧೬	೧೩	6.17	6.56
30	ಶುಕ್ರ	೬	೩೯.೧೬	ಉ. ಭಾ.	೦.೩೨	೧೪	6.17	6.56

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಅಧಿಕವಾದ	Minimum ಅಲ್ಪವಾದ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
16	87—8	76—2	0—38	—
17	88—8	76—3	0—11	—
18	87—8	75—4	0—03	—
19	87—3	75—5	1—08	—
20	87—6	77—2	0—04	—
21	89—0	77—9	—	—
22	89—4	76—3	0—24	49—79

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ ಆ.	ವರೆಗೆ ರೂ ಆ
ಮಸ್ಕಾ		8—12	9—10
ಹೊಸ ಗುಡ್ಡು	...	8— 8	8—12
ಸುಗ್ಗಿ	...	8— 2	8— 4
ಅವ್ವಲ್ ಬೆಳ್ತಿಗೆ	...	8— 0	9— 6
ರಂಗೂನು ಬೆಳ್ತಿಗೆ ಗೋಣಿ ೧	...	14— 8	15— 0
ಗೋದಿ ಗೋಣಿ ೧ಕ್ಕೆ	...	18— 0	20— 0
ಹುರುಳಿಗೋಣಿ ೧ಕ್ಕೆ	...	8— 0	9—12
ಕಡಲೆಗೋಣಿ ೧ಕ್ಕೆ	...	13— 0	14— 8
ಕೊಂಗರಿಗೋಣಿ ೧ಕ್ಕೆ	...	16— 0	16— 8
ಕೊಂಗರಿಬೇಳೆ ಗೋಣಿ ೧ಕ್ಕೆ	...	19— 0	26— 0
ಉದ್ದು ಗೋಣಿ ೧ಕ್ಕೆ	...	16— 8	17— 0
ಹೆಸರುಗೋಣಿ ೧ಕ್ಕೆ	...	16— 0	17— 8
ಊರು ಬೆಲ್ಲ ಖಂಡಿ ೧ಕ್ಕೆ	...	85— 0	—
ಉಪ್ಪು ಗೋಣಿ ೧ಕ್ಕೆ	...	5— 8	5—12
ಕೊಬ್ರಿ ಖಂಡಿ ೧ಕ್ಕೆ	...	96— 0	100— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	34— 0	34— 8
ಎಳ್ಳಿಂಡಿ ಖಂಡಿ ೧ಕ್ಕೆ	...	42— 8	45— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	7—10	8—10
ಎಳ್ಳೆಣ್ಣೆ ಮುಡಿ ೧ಕ್ಕೆ	...	7— 8	9— 0
[illegible] ಎಣ್ಣೆ ಪೆಟ್ಟಿಗೆ ೧ಕ್ಕೆ	...	8-12-0	—
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	5— 6	5— 8
ಊರ ಮೆಣಸಿನಕಾಯಿ ಮುಡಿ ೧ಕ್ಕೆ	...	7— 0	—
[illegible] ಮುಡಿ ೧ಕ್ಕೆ	...	9— 8	—
ಕೊತ್ತಂಬರಿ ಮುಡಿ ೧ಕ್ಕೆ	...	5— 0	5— 8
[illegible] ಖಂಡಿ ೧ಕ್ಕೆ	...	385— 0	460— 0
[illegible] ಅಡಿಕೆ ಖಂಡಿ ೧ಕ್ಕೆ [illegible]	...	300— 0	310— 0
ಹೊಸ ಅಡಿಕೆ ಖಂಡಿ ೧ಕ್ಕೆ	...	195— 0	220— 0
ಕಾಳುಮೆಣಸು ಖಂಡಿ ೧ಕ್ಕೆ	...	360— 0	—
[illegible] ಮುಡಿ ೧ಕ್ಕೆ	...	50— 0	64— 0
[illegible] ಮುಡಿ ೧ಕ್ಕೆ	...	4— 0	—
[illegible] ಖಂಡಿ ೧ಕ್ಕೆ	...	45— 0	65— 0
[illegible] ಮುಡಿ ೧ಕ್ಕೆ	...	16— 4	16—12
[illegible] ಮುಡಿ ೧ಕ್ಕೆ	...	21— 0	—
[illegible] ೧ಕ್ಕೆ	...	18—10	
[illegible] ಮುಡಿ ೧ಕ್ಕೆ	...	16— 8	
[illegible]		13— 9	

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಪ್ಲೂಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೬ಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ, ಸೋಡಾ ಫಾಕ್ಟರಿ,
ಮಂಗಳೂರು ಟವರಿಗೆ ಸಮೀಪ.

ಟೇಬಲ್ ಟೈಂಪೀಸ್ ಮತ್ತು ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚ್ ಇನಾಂ.

ಈ ನಕ್ಷೆಯಲ್ಲಿ ಕಂಡ ರಾಯಲ್‌ಫೌಂಟನ್ ಪೇನಾವು ಇಂಗ್ಲಾಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಸ್ ಭಂಗಾರದ ನಿಬ್ಬು ಹಾಕಿದೆ. ಈ ಪೇನಾವಿನಿಂದ ಬರೆಯುವುದರಿಂದ ಅಕ್ಷರಗಳು ಬಹಳ ಚೆನ್ನಾಗಿ ಕಾಣುವವು. ಈ ಪೇನಾವನ್ನು ಬೇಗನೆ ತರಿಸಿಕೊಳ್ಳುವವರಿಗೆ ಮೇಲ್ಕಂಡ ಗಡಿಯಾರಗಳು ಇನಾಂ ಆಗಿ ಕೊಡುವೆವು. ಗಡಿಯಾರಗಳಿಗೆ ಖಾತ್ರಿಯಾದ 4 ವರುಷಗಳ ಗ್ಯಾರಂಟಿ ಬರೆದುಕೊಡುವೆವು.



ಟೇಬಲ್ ಟೈಂಪೀಸ್ ಸಹಿತ ಪೇನಾ 1ಕ್ಕೆ 3—12—0.
ರೋಲ್ಡ್ ಗೋಲ್ಡ್ ರಿಸ್ಟ್ ವಾಚ್ ಸಹಿತ ಪೇನಾ 1ಕ್ಕೆ 6—4—0.

ವಿಳಾಸ:— ಅಮೇರಿಕನ್ ವಾಚ್ ಕಂಪೆನಿ.
ಪಿ. ಬಿ. ನಂ. 509, ಪಾರ್ಕ್‌ಟೌನ್, ಮದರಾಸು.

The American Watch Co.,
No. 509, Park Town, MADRAS.

Your Money will Fetch You more than What is Worth?

Cheap! "A NATIONAL CURE" Reliable!!

Why do you suffer from that Killing Malaria. If you want perfect relief, apply to the M. T. A. for a bottle of

M. T. A. MALARIA MIXTURE.

Discount Welcome. Allowed.

VISITS ARE SOLICITED TO

THE MANGALORE TRADING ASSOCIATION.

NEW ARRIVALS OF PATENT MEDICINES SUCH AS ALETRIS CORDIAL, ANGIER'S EMULSIONS, MONOLA WINE, WINCARNIS, STEVEN'S WINE & OTHER SORTS ETC., THAT ARE REQUIRED TO SUIT THE PRESENT PRESCRIPTIONS OF UP TO DATE DOCTORS.

Look-Sharp!

FASHIONS.

eKlmeter Color Studs, Pins, Buttons etc., Diamond Batteries, Best Mazda Bulbs American focussing Lamps etc., up to date Sun Gogles, Safty Razors fitting to the fashion of the day.

Always Aim at reduced priced on Fresh Stocks.

The Mangalore Trading Association,
Car-Street, MANGALORE.

೪೦ ವರ್ಷಗಳಿಂದಲೂ ನಾವು ಪ್ರಸಿದ್ಧಿ ಹೊಂದಿರುವೆವು.

ಬೆಂಗಳೂರಿನ ಪ್ರಖ್ಯಾತವಾದ ಕಸಿ ಮಾಡಿದ (ಕಟ್ಟಿದ) ಹಣ್ಣಿನ ಗಿಡಗಳೂ, ಇಂಗ್ಲಿಷ್ ವ ದೇಶೀಯ ತರಕಾರಿ ಮತ್ತು ಹೂವಿನ ಬೀಜಗಳೂ ನಮ್ಮಲ್ಲಿ ದೊರೆಯುತ್ತವೆ. ಕ್ರಯದ ಪಟ್ಟಿಯನ್ನು ತರಿಸಿ ನೋಡಿ.

ವಿಳಾಸ: —

ಯಂ. ಮುನಿಸ್ವಾಮಿ ಅಂಡ್ ಸನ್ಸ್,
ಲಾಲ್‌ಬಾಗ್ ರೋಡ್,
ಬೆಂಗಳೂರು ಸಿಟಿ.

PLEASE CIRCULATE

ಹೊಸ ಮುದ್ರಣ! ಅಂದವಾದ ಅಕ್ಷರ!!

ಸಂಗೀತ-ಶಾಸ್ತ್ರ-ಪ್ರವೇಶದಾಯಿನಿ

ಎಂಬ ಅಪೂರ್ವ ಗ್ರಂಥವು.

ಇದರಲ್ಲಿ ಸಂಗೀತ ಶಾಸ್ತ್ರಸಂಬಂಧವಾದ ಅನೇಕ ರಹಸ್ಯಗಳು ಸುಲಭ ರೀತಿಯಲ್ಲಿ ವಿವರಿಸಲ್ಪಟ್ಟಿರುವುದಲ್ಲದೆ ಸರಳೆ, ಅಲಂಕಾರ, ಗೀತ, ಸ್ವರಜತಿ, ವರ್ಣಗಳೂ, ತ್ಯಾಗಯ್ಯರು, ಪಟ್ಟಣಂ ಸುಬ್ರಹ್ಮಣ್ಯರು, ದೀಕ್ಷಿತರು ಸದಾಶಿವರಾಯರು, ಶಾಮಶಾಸ್ತ್ರಿಗಳು ಮೊದಲಾದ ಸುಪ್ರಸಿದ್ಧ ಸಂಗೀತ ವಿದ್ವಾಂಸರಿಂದ ರಚಿತವಾದ ೧೦೬ ಕೃತಿಗಳೂ, ಕೆಲವು ಜಾವಡಿಗಳೂ, ಸ್ವರ, ಚಿಹ್ನ ಸಹಿತವಾಗಿ ಕೊಡಲ್ಪಟ್ಟಿವೆ ಸಂಗೀತ ವಿದ್ಯಾರ್ಥಿಗಳಿಗೂ, ಬೋಧಕರಿಗೂ ಪ್ರಯೋಜನಕಾರಿಯಾದ ಪುಸ್ತಕವು ಕನ್ನಡ ಅಕ್ಷರದಲ್ಲಿಯೇ ಮುದ್ರಿತವಾಗಿದೆ.

ಕ್ರೌನ್ ಅಷ್ಟಪತ್ರ 320 ಪುಟಗಳು; ಬೆಲೆ ರೂ. 2—4—0 ಹಾಸಲು ಸಹಿತ ರೂ. 2—9—0. 3 ಪುಸ್ತಕಗಳಿಗೆ ಹಾಸಲು ಸಹಿತ ರೂಪಾಯಿ 6—12—0.

ಕನ್ನಡಾಕ್ಷರ ಗ್ರಂಥಗಳು.

ವಿವೇಕ ಚೂಡಾಮಣಿ ಸಟೀಕ 3—0—0, ಸೌಂದರ್ಯ ಲಹರಿ 1—0—0, ಅನುಭವಾಮೃತ 1—8—0, ಜೈಮಿನಿಭಾರತ ಕಥಾ ಸಂಗ್ರಹ 1—4—0, ಸಟೀಕ ಭಗವದ್ಗೀತ 0—12—0, ಪುಷ್ಪರಚನೆ 0—14—0. ಅಡ್ವಾನ್ಸು ಇಲ್ಲದೆ ವಿ. ಪಿ. ಮಾಡುವುದಿಲ್ಲ. ನಮ್ಮ ಪುಸ್ತಕವನ್ನು ಮಾರುವುದಕ್ಕೆ ಏಜಂಟರುಗಳು ಬೇಕಾಗಿದೆ.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕ ವ್ಯಾಪಾರಿಗಳು, ಬೆಂಗಳೂರು ಸಿಟಿ.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. No. 81/1926.

ಬಿ. ಜೆ. ಎಸ್. ಸಿಕೇರಾ ಕೂಡಾ 5 ಜನರು— ಅರ್ಜಿದಾರರು.

ಮತ್ತು

ಮಾರ್ಸೆಲ ಎಲ್. ಸಿಕೇರಾ— ರೆಸ್‌ಪೊಂಡೆಂಟ,

ಮೇಲ್ಕಂಡ ಕೋರ್ಟಿನಲ್ಲಿ, ಮೃತಪಟ್ಟ ಜೊಕಿಂ ಜೊಸೆಫ ಸಿಕೇರನ ಬಾಬ್ತು ಸೊತ್ತುಗಳಿಗೆ ಸದರಿಯವರ ವಾರಿಸದಾರ ಮಕ್ಕಳ ಪೈಕಿ 1ನೇ ಅರ್ಜಿದಾರಗೆ ಲಟರ್ಸ ಕೊಡಬೇಕಾಗಿ ಸದರಿ ಅರ್ಜಿದಾರರು ದಾಖಲುಮಾಡಿದ ಅರ್ಜಿಯು ಇದೇ ತಾ. 12—8—1926ಕ್ಕೆ ತನ್ಕಿಗೆ ಇಟ್ಟಿರುವದರಿಂದ ಈ ಕುರಿತು ಆಕ್ಷೇಪ ಇರುವವರು ಸದರಿ ತಾರೀಕಿಗೆ ಮೇಲ್ಕಂಡ ಕೋರ್ಟಿನಲ್ಲಿ ಜಾಹೀರುಮಾಡಿಕೊಳ್ಳತಕ್ಕದು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

M. Keshava Pai,
Vakil for Petitioner.

19—7—'26.

ವಿವಿಧ ವಿಷಯಗಳು.

ಎಪಿಂಡಿ ಸ್ಯಾಟಿಸ್ ಎಂಬ ರೋಗವೂ ಹಣ್ಣುಗಳ ಬೀಜಗಳೂ.

ಎಪಿಂಡಿ ಸ್ಯಾಟಿಸ್ ಎಂಬ ರೋಗವು ದ್ರಾಕ್ಷೆಯ ಬೀಜ, ಕಿತ್ತಳೆ ಹಣ್ಣಿನ ಬೀಜ, ಮತ್ತು ಇತರ ಹಣ್ಣುಗಳ ಬೀಜಗಳಿಂದ ಈ ರೋಗವು ಉಂಟಾಗುತ್ತದೆಂದು ಜನರು ಸಾಧಾರಣವಾಗಿ ಹೇಳುತ್ತಿರುವರು. ಹೀಗೆ ಹೇಳಲು ಕಾರಣವೇನಂದರೆ, ದಾಕ್ತಾರರು ಅನೇಕ ಸಾರಿ ಎಪಿಂಡಿ ಸ್ಯಾಟಿಸ್ ಓಪರೇಶನ್ ಮಾಡಿದಾಗ ಅದರಲ್ಲಿ ಗಟ್ಟಿಯಾದ ಹೊರಗಿನ ವಸ್ತುಗಳು ಸಿಕ್ಕಿದ್ದವು. ಈ ಸಂಗತಿಯು ನಿಜವಾದುದಲ್ಲವೆಂದು ನಾವು ತಿಳಿಯಬೇಕಾದರೆ ಎಪಿಂಡಿಕ್ಸ್ ಎಂಬುದು ಏನು? ಅದು ಎಲ್ಲಿದೆ? ಅದು ಬಾತು ಹೋಗಲು ಕಾರಣವೇನು? ಎಂಬುದನ್ನು ನಾವು ತಿಳಿದುಕೊಳ್ಳಬೇಕು.

ಒಂದು ಹುಳದ ಹಾಗಿರುವ ಎಪಿಂಡಿಕ್ಸ್ ಗಿಡ್ಡವಾಗಿಯೂ ಸಪೂರವಾಗಿಯೂ, ಮೂರು ಇಂಚು ಉದ್ದವಾಗಿರುವ ಕತ್ತಲೆಯಿರುವ ಚೀಲವಾಗಿದೆ ಇದು ಸಣ್ಣ ಕರುಳುಗಳು 'ದೊಡ್ಡ ಕರುಳಿಗೆ ಕೂಡುವಲ್ಲಿದೆ. ಇದು ಒಂದು ಎರೆ ಹುಳುವಿನ ಹಾಗಿದೆ ಎಂದು ಹೇಳುವರು. ಆದರೆ ಇದು ಟೊಳ್ಳಾದ ಒಂದು ಚೀಲದಂತಿದೆ. ಇದನ್ನು ಸೂಕ್ಷ್ಮದರ್ಶಕ ಯಂತ್ರದಲ್ಲಿಟ್ಟು ನೋಡಿದರೆ ಇದಕ್ಕೆ ಸ್ನಾಯುಗಳ ಕವಚವಿದೆಯೆಂದೂ, ಕರುಳುಗಳಿಗೆ ಇದ್ದಂತೆಯೇ ಕೆಳ್ಳಗಾದ ಒಂದು ಚರ್ಮವಿದೆಯೆಂದೂ ತಿಳಿಯುಬರುತ್ತದೆ.

∴ ∴ ∴

ಬಾಕ್ಟೀರಿಯಗಳು ಒಳಗೆ ಸೇರುವದು ಹೇಗೆ?

ಸೌಖ್ಯದಲ್ಲಿರುವ ಮನುಷ್ಯರ ಎಪಿಂಡಿಕ್ಸಿನಲ್ಲಿ ಇವುಗಳಿಗೆ ಸೇರಲು ಸಾಧ್ಯವಾಗುವುದಿಲ್ಲ. ಆದರೆ ಬಲಹೀನರಾದ ಮನುಷ್ಯರ ಈ ಅವಯವದಲ್ಲಿ ಇವುಗಳು ತಮ್ಮ ಶಕ್ತಿಯನ್ನು ತೋರಿಸುತ್ತವೆ. ಇವು ಅದರ ಒಳಗೆ ಹೋಗಿ ಕೆಳುವಾದ ಅದರ ಚರ್ಮವನ್ನು ತೂತು ಮಾಡಿ ಅದರ ರಕ್ತವಾಹಿನಿಗಳನ್ನು ಕಚ್ಚುತ್ತವೆ; ಆಗ ಎಪಿಂಡಿಕ್ಸ್ ಬಾತುಹೋಗಲು ಆರಂಭಿಸುತ್ತದೆ. ಅದು ಬಾತುಹೋಗುವಾಗ ಜ್ವರವು ಬರುತ್ತದೆ. ಆದರೆ ಇದರಿಂದಲೂ ಅಪಾಯವಿಲ್ಲ. ಬಾಕ್ಟೀರಿಯವೆಂಬ ಈ ಅಣುಪ್ರಾಣಿಗಳು ಕಠಿಣ ತರದವುಗಳಾದರೆ ಬಾತುಹೋಗುವದು ಮಾತ್ರವಲ್ಲ; ಅದರೊಳಗೆ ಕುರು ಉಂಟಾಗಿ ಕೀವು ಉಂಟಾಗುತ್ತದೆ. ಇದರಿಂದ ಎಪಿಂಡಿಕ್ಸ್ ಹಾಳಾಗುತ್ತದೆ.

ಈ ಎಪಿಂಡಿಕ್ಸಿನೊಳಗೆ ಬಾಕ್ಟೀರಿಯಗಳು ಹೋಗುವುದರಿಂದ ಮಾತ್ರವೆ ಕುರು ಉಂಟಾಗುವದಲ್ಲ; ಆಹಾರದಲ್ಲಿರುವ ಯಾವದಾದರೂ ಗಟ್ಟಿ ಪದಾರ್ಥಗಳು ಇದರಲ್ಲಿ ಪ್ರವೇಶಿಸಿದರೆ ಇದು ಬಾತುಹೋಗುವದು. ದಾಕ್ತಾರರು ಈ ಎಪಿಂಡಿಸ್ಯಾಟಿಸ್ ಒಪರೇಶನ್ ಮಾಡುವಾಗ ದ್ರಾಕ್ಷೆಹಣ್ಣಿನ ಬೀಜಗಳೂ, ಕಿತ್ತಳೇ ಹಣ್ಣಿನ ಬೀಜಗಳೂ, ಮತ್ತು ಇತರ ಗಟ್ಟಿ ಪದಾರ್ಥಗಳೂ ಸಿಕ್ಕಿಯವೆ. ಇವುಗಳ ಸೇರುವಿಕೆಯಿಂದಲೇ ಎಪಿಂಡಿ ಸ್ಯಾಟಿಸ್ ರೋಗವು ಉಂಟಾಗುತ್ತದೆಂದು ಹೇಳಲಾಗುವುದಿಲ್ಲ. ಈ ಬೀಜಗಳು ರೋಗದ ಅಭಿವೃದ್ಧಿಗೆ ಕಾರಣವಾಗುತ್ತವೆ.

∴ ∴ ∴

ಆಗಿನ ಮತ್ತು ಈಗಿನ ಕ್ರಿಕೆಟ್.

ಕ್ರಿಕೆಟ್ ಎಂಬ ಶಬ್ದವನ್ನು ೧೫೫೮ರಲ್ಲಿ ಮೊದಲು ಉಪಯೋಗಿಸಿದರು. ೧೬೭೬ರಲ್ಲಿ ಬ್ರಿಟಿಷ್ ನಾವಿಕರು, ಸಿರಿಯಾದಲ್ಲಿರುವ ಎಂಟಿಯೋಕಿನಲ್ಲಿ ಕ್ರಿಕೆಟ್ ಆಟ ಆಡಿದರು. ಡಬ್ಬಲ್ ವಿಕೆಟ ಕ್ರಿಕೆಟ್ ಆಟವನ್ನು ಸ್ಕಾಟಲಂಡಿನಲ್ಲಿ ೧೭೦೦ರಲ್ಲಿ ಆಡಿದರು. ೧೭೪೬ರಲ್ಲಿ ಇಂಗ್ಲೆಂಡಿನ ಎಲ್ಲಾ ಆಟಗಾರರು ಕೂಡಿ ಕೆಂಟ ಲಂಡನ್ ಮತ್ತು ಫಿನ್ಸಬರಿಯಲ್ಲಿ ಆಡಿದರು. ೧೭೫೦ರಲ್ಲಿ ಹೆಂಪಶಯರಿನಲ್ಲಿ ಹೆಂಬಲಡನ್ ಕ್ರಿಕೆಟ್ ಕ್ಲಬ್ಬನ್ನು ಶುರುಮಾಡಿದರು ೧೭೭೬ರಲ್ಲಿ ಡೆವಿಡ್ ಹೆರಿಸ್ ಎಂಬವನು ಅಂಡರ್ ಆರ್ಮ ಬೌಲಿಂಗ್ ಮಾಡಿದನು. ಈ ಸಮಯದಲ್ಲಿ ಈಗಿನ ನಮೂನೆಯ ಕ್ರಿಕೆಟ್ ಬೇಟನ್ನು ಉಪಯೋಗಿಸಲಾರಂಭಿಸಿದರು. ಅಲ್ಲಿಯ ವರೆಗೆ ಕ್ರಿಕೆಟ್ ಬೇಟ್ ಹೊಕ್ಕಿ ಸ್ಟಿಕ್ಕಿನ ಹಾಗೆ ಇತ್ತು. ೧೭೭೪ರಲ್ಲಿ ವಿಕೆಟಿಗೆ ಬೇಟು ತಾಗಿ ಅವುಟು ಆದ್ದು ಮೊದಲನೇ ಸಾರಿ. ೧೭೭೭ರಲ್ಲಿ ಮೂರು ವಿಕೇಟುಗಳನ್ನು ಉಪಯೋಗಿಸಿದರು. ೧೮೦೦ರಲ್ಲಿ ಹನ್ನೊಂದು ಜನರು ನಿಂತು ಕುದುರೆಯ ಮೇಲೆ ಕೂತು ಕ್ರಿಕೆಟ್ ಆಡಿದರು. ೧೮೨೭ರಲ್ಲಿ ಮೊದಲನೇ ವ್ಯಾಡ್ ಹಿಟ್ ಹೊಡೆದರು. ೧೮೩೦ರಲ್ಲಿ ಮೊದಲನೇ ಸಾರಿ ನೊ ಬೋಲನ್ನು ಗಣಿಸಿದರು. ೧೮೪೯ರಲ್ಲಿ ಮೊದಲನೇ ಲೆಗ್ ಬ್ಯ ಗಣಿಸಿದರು. ೧೮೬೨ರಲ್ಲಿ ಓವರ್ ಆರ್ಮ ಬೌಲಿಂಗ್ ಶುರುಮಾಡಿದರು. ೧೭೭೪ರಲ್ಲಿ ಕ್ರಿಕೆಟ್ ಕ್ರಮಗಳನ್ನು ಈಸ್ಟರ್‌ಗಾರ್ಟರ್ ಎಂಬಲ್ಲಿ ಮೊದಲನೇ ಸಾರಿ ಬರೆದರು, ಬೇಟನ್ನು ಹಿಡಿಯುವ ವಿಷಯ ಕೆಲವು ಕ್ರಮಗಳು ಬರೆಯಲ್ಪಟ್ಟವು. ೧೭೮೭ರಲ್ಲಿ ಎಮ್. ಸಿ. ಸಿ. ಮತ್ತು ಲೋರ್ಡ ಕ್ಲಬ್ಬುಗಳು ಶುರುವಾದವು. ೧೮೧೭ರಲ್ಲಿ ಲಿಂಬರ್ಟ ಎಂಬವನು ಫರ್ಸ್ಟ ಕ್ಲಾಸ್ ಮೇಚಿನಲ್ಲಿ ೨೦೦ ರನ್ಸ್ ತೆಗೆದನು. ೧೮೪೫ರಲ್ಲಿ ಓವಲ್ ಗ್ರೌಂಡಿನಲ್ಲಿ ಮೊದಲನೇ ಮೇಚ್ ಆಡಿದರು. ೧೮೭೬ರಲ್ಲಿ ಒಂದೇ ಸಾರಿ ೩೪೪ ರನ್ಸ್ ತೆಗೆದನು. ಆದರೂ ಅವುಟು ಆಗಲಿಲ್ಲ. ೧೮೯೬ರಲ್ಲಿ ಹರ್ಸ್ಟ ಎಂಬವನು ೨೦೦೦ ರನ್ಸ್ ತೆಗೆದನು. ೧೮೯೩ರಲ್ಲಿ ಟೆಚ್‌ಮಾರ್ಚ ಎಂಬವನು ೪೦೧ ರನ್ಸುಗಳನ್ನು ತೆಗೆದನು. ೧೯೨೪ರಲ್ಲಿ ನಾಲ್ಕು ಚೆಂಡುಗಳಿಂದ ನಾಲ್ಕು ವಿಕೆಟನ್ನು ಪೀಚ್ ಎಂಬವನು ಅವುಟ ಮಾಡಿದನು. ನೂರು ವರುಷಗಳ ಹಿಂದೆ ಒಂದು ಗಂಟೆಗೆ ೩೦ ರನ್ಸ್ ತೆಗಿಯುವುದೆಂದರೆ ಬಹಳ ವಿಶೇಷವಾಗಿತ್ತು ಈಗ ೯೦ ನಿಮಿಷಗಳಲ್ಲಿ ೧೯೦ ರನ್ಸ್ ತೆಗಿಯುತ್ತಾರೆ.

ಕ್ರಿಕೆಟ್ ಚೆಂಡಿಗೆ ಕೆಂಪು ಬಣ್ಣವೇ ಯೋಗ್ಯವಾದುದು ಯಾಕಂದರೆ ಹಸುರಾದ ಮೈದಾನಿನಲ್ಲಿ ಈ ಬಣ್ಣ ಮಾತ್ರವೇ ಸರಿಯಾಗಿ ಕಾಣುವದು. ಒಂದು ಸಾರಿ ಹಸುರು ಬಣ್ಣ ಕೊಟ್ಟು ನೋಡಿದರು. ಆದರೆ ಅದು ಪ್ರಯೋಜನವಾಗಲಿಲ್ಲ. ಅರಸಿನ ಮತ್ತು ನೀಲಿ ಬಣ್ಣವನ್ನು ಉಪಯೋಗಿಸಿ ವ್ಯರ್ಥವೆಂದು ಕಂಡು ಬಂತು.

∴ ∴ ∴

ಹೂ ಕೊಟ್ಟು ಹುಡುಗಿ ನಿಶ್ಚಯಿಸುವುದು.

ಸ್ವಿಜರಲೆಂಡಿನ್ ಬ್ಯಾಸ್ ಒಬರಲೆಂಡಿನ ಕೆಲವು ಪುರಾತನ ಕಾಲದ ಪದ್ಧತಿಗಳು ಇವೆ. ಎಡಲ್‌ವಿಸ್ ಎಂಬ ಹೂವನ್ನು ಹುಡುಕಿ ತರುವದು ಬಹಳ ಕಷ್ಟ. ಇವುಗಳನ್ನು ತಂದು ಒಂದು ಗೊಂಚಲು ಕಟ್ಟಿ ಒಬ್ಬನು ಒಂದು ಹುಡುಗಿಯ ಕೈಯಲ್ಲಿ ಕೊಟ್ಟರೆ ಅವಳು ಅವನನ್ನು ಮದುವೆಯಾಗುವಳು. ಒಂದು ಹೂವಿನ ಚಟ್ಟಿಯಲ್ಲಿ ಒಂದು ಗುಲಾಬಿ ಹೂವನ್ನು ಇಟ್ಟು ಅದರಲ್ಲಿ ಒಂದು ಚೀಟು ಇಟ್ಟು ಹುಡುಗಿಯ ಮನೆಯ ಕಿಟಕಿಯಲ್ಲಿ ಇಟ್ಟು ಹುಡುಗಿಯು ಆ ಹೂವನ್ನು ತೆಗೆದರೆ ಹುಡುಗನು ಅವಳ ಮನೆಗೆ ಹೋಗಿ ಮದುವೆ ನಿಶ್ಚಯಿಸುವನು.

∴ ∴ ∴

ಎಂಟುವರೆ ರಾತ್ಲು ಭಾರವಾದ ಶಿಗಡಿ.

ಇಂಗ್ಲೆಂಡಿನ ಪೂರ್ವ ಕರಾವಳಿಯಲ್ಲಿ ಬಹಳ ದೊಡ್ಡದಾದ ಬೆರಂಗ ಶಿಗಡಿಗಳು ಬಹಳ ಹೆಚ್ಚಾಗಿ ಸಿಕ್ಕುತ್ತವೆ. ನೊರ್‌ಫೋಕಿನಲ್ಲಿ ಮೀನು ಹಿಡಿಯುವ ಕಾಲದಲ್ಲಿ ೪೦,೦೦೦ ಏಡಿಗಳು ಸಿಕ್ಕುತ್ತವೆ. ಲಿಯಾಸ್ ಮತ್ತು ಹೆಂಸ್ ಎಂಬ ಸ್ಕೊಟ್‌ಲಂಡಿನ ತೀರದಲ್ಲಿರುವ ಮೀನು ಹಿಡಿಯುವ ಸ್ಥಳಗಳಲ್ಲಿ ಬಹಳ ದೊಡ್ಡ ಬೆರಂಗ್ ಶಿಗಡಿಗಳು ಸಿಕ್ಕುತ್ತವೆ. ಇಲ್ಲಿ ಬಂಡೆ ಕಲ್ಲುಗಳು ಇರುವುದರಿಂದಲೂ ಸಮುದ್ರದ ಅಲೆಗಳು ಈ ಬಂಡೆ ಕಲ್ಲುಗಳಿಗೆ ಬಡಿಯುವುದರಿಂದಲೂ ಇವುಗಳನ್ನು ಹಿಡಿಯುವುದು ಕಷ್ಟ. ಇವುಗಳಲ್ಲಿ ಕೆಲವು ೮½ ರಾತ್ಲು ಭಾರ ಇರುತ್ತವೆ. ಇವುಗಳನ್ನು ಹಿಡಿದ ಕೂಡಲೆ ಇವುಗಳ ದೊಡ್ಡದಾಗಿರುವ ಮುಂಗಾಲುಗಳನ್ನು ಕಟ್ಟುತ್ತಾರೆ. ಇಲ್ಲದಿದ್ದರೆ ಇವುಗಳು ಇತರ ಶಿಗಡಿಗಳನ್ನು ಕಚ್ಚುವವು.

∴ ∴ ∴

ಆಕಾಶದಲ್ಲಿ ಹಾರ್‍ಯಾಡುವ ಕೋಟೆಗಳು.

ಯುದ್ಧಕ್ಕಾಗಿ ಉಪಯೋಗಿಸುವ ವಿಮಾನಗಳಲ್ಲಿ ಫಿರಂಗಿಗಳನ್ನು ಇಟ್ಟು ಹೊಡಿಯಲಿಕ್ಕೆ ಸಣ್ಣ ಬತ್ತೇರಿಗಳನ್ನು ಕಟ್ಟುವ ಆಲೋಚನೆಯು ನಡಿಯುತ್ತಿದೆ. ಇದರ ಪ್ಲೇನುಗಳು ತಯಾರಾಗಿವೆ. ವಿಮಾನದ ಒಂದೊಂದು ರೆಕ್ಕೆಯಲ್ಲಿ ಒಂದೊಂದು ಬತ್ತೇರಿ ಕಟ್ಟುವರು. ಮೂರನೇ ಬತ್ತೇರಿಯನ್ನು ವಿಮಾನದಲ್ಲಿಯೇ ಕಟ್ಟುವರು. ಈಗಿನ ವಿಮಾನಗಳಲ್ಲಿ ಕೂತು ಫಿರಂಗಿಗಳನ್ನು ಹೊಡಿಯುವಾಗ ವೈರಿಗಳ ವಿಮಾನಗಳಲ್ಲಿರುವವರಿಗೆ ಫಿರಂಗಿ ಹೊಡಿಯುವವರು ಕಾಣುತ್ತಾರೆ. ಹೊಸದಾಗಿ ಬತ್ತೇರಿಗಳನ್ನು ಕಟ್ಟಿದರೆ ಫಿರಂಗಿಗಳ ಬಾಯಿ ಮಾತ್ರವೇ ಕಾಣುವುದು ಒಳಗಿನ ಭಾಗಗಳು ಕಾಣದಂತೆ ಬತ್ತೇರಿಯ ತಗಡುಗಳು ಅಡ್ಡಯಿವೆ. ಇದರಿಂದ ವಿಮಾನಗಳು ಸ್ವಲ್ಪ ಭಾರವಾಗುತ್ತವೆಂಬುದು ನಿಜ ಒಂದು ಸಾವಿರ ಕುದುರೆ ಶಕ್ತಿ ಇರುವ ನೇಪಿಯರ್‌ಲಯ್ ಎಂಜಿನುಗಳಲ್ಲಿ ಇವುಗಳನ್ನು ಉಪಯೋಗಿಸಬಹುದು. ಈಗ ಎಲ್ಲಾ ವಿಮಾನಗಳನ್ನು ಕಬ್ಬಿಣದ ತಗಡುಗಳಿಂದಲೇ ತಯಾರಿಸುವುದರಿಂದ ಇದು ಅಸಾಧ್ಯವಾಗಲಿಕ್ಕಿಲ್ಲ.

∴ ∴ ∴

ಜಾವಾ ದ್ವೀಪದ ಸಕ್ಕರೆ ಕಾರ್ಖಾನೆಗಳು.

ಭೂಲೋಕದ ಹೆಚ್ಚಿನ ಭಾಗಗಳಲ್ಲಿ ಉಪಯೋಗಿಸುವ ಸಕ್ಕರೆಯು ಜಾವಾ, ಕ್ಯೂಬಾ ಮತ್ತು ಬ್ರಿಟಿಷ್ ಇಂಡಿಯಾದಲ್ಲಿ ಉಂಟಾಗುತ್ತದೆ. ಜಾವಾ ದ್ವೀಪವು ಇವುಗಳಲ್ಲಿ ಮೂರನೆಯದಾಗಿದೆ. ಈ ದ್ವೀಪವು ಇಂಗ್ಲೆಂಡಿನಷ್ಟೆ ದೊಡ್ಡದಾಗಿದೆ. ಅದರ ಜನ ಸಂಖ್ಯೆಯೂ ಇಂಗ್ಲೆಂಡಿನಷ್ಟೇ ಅಂದರೆ ೩೬ ಮಿಲಿಯವಾಗಿದೆ. ಕ್ಯೂಬಾ ದ್ವೀಪವು ಇವುಗಳಿಗಿಂತ ಸ್ವಲ್ಪ ಸಣ್ಣದು. ಇದರಲ್ಲಿ ೩ ಮಿಲಿಯ ಜನರು ಮಾತ್ರವೇ ಇರುತ್ತಾರೆ. ಇಂಡಿಯವು ಬಹಳ ದೊಡ್ಡ ದೇಶ ಅದ್ದರಿಂದ ಇಂಡಿಯವು ತನಗೆ ಬೇಕಾದ ಸಕ್ಕರೆಯನ್ನು ಜಾವಾ ದ್ವೀಪದಿಂದ ತರಿಸುತ್ತದೆ.

ಈ ಜಾವಾದ್ವೀಪವು ಹೊಲೆಂಡಿನವರ ಸ್ವಾಧೀನವಿದೆ. ಇವರು ದಕ್ಷಿಣ ಸುಮಾಟ್ರಾದಲ್ಲಿಯೂ ಕಬ್ಬಿನ ಸಾಗುವಳಿಯನ್ನು ಮಾಡಲು ಆರಂಭಿಸಿರುವರು. ಆದುದರಿಂದ ಸದ್ಯಕ್ಕೆ ಹೊಲೆಂಡಿನ ಸ್ವಾಧೀನವಿರುವ ದ್ವೀಪಗಳಲ್ಲಿ ಜಾವಾದ್ವೀಪವೇ ಸಕ್ಕರೆ ಉತ್ಪತ್ತಿಯ ಮೊದಲನೇ ಸ್ಥಳವೆಂದು ಹೇಳಬಹುದು. ಇನ್ನು ಮುಂದೆ ಸುಮಾಟ್ರಾ ದ್ವೀಪದ ಸಕ್ಕರೆಯ ಪೈಪಾಸ್ತು ಎಷ್ಟರಮಟ್ಟಿಗೆ ಅಭಿವೃದ್ಧಿ ಪಡಿಯಲಿಕ್ಕಿದೆಯೋ ನೋಡಲಿಕ್ಕಿದೆ. ಜಾವಾ ದ್ವೀಪದಲ್ಲಿ ತಯಾರಾಗುವಷ್ಟೇ ಸಕ್ಕರೆಯನ್ನು ಬೇರೆ ದ್ವೀಪಗಳಲ್ಲಿ ತಯಾರಾಗಲಿಕ್ಕೆ ಇನ್ನು ಕೆಲವು ವರ್ಷಗಳು ಬೇಕಾಗುವವು. ಜಾವಾದ್ವೀಪದ ಮಧ್ಯಭಾಗ ಮತ್ತು ಪೂರ್ವಭಾಗಗಳಲ್ಲಿ ಮಾತ್ರವೇ ಕಬ್ಬಿನ ಗದ್ದೆಗಳು ಇವೆ. ಒಟ್ಟಾರೆ ಈ ದ್ವೀಪದಲ್ಲಿ ೧೮೦ ಕಬ್ಬಿನ ತೋಟಗಳು ಇವೆ. ಇವುಗಳೆಲ್ಲವೂ ದಕ್ಷರಕ್ಕೆಯಲ್ಲಿಯೇ ಇವೆ. ಎಲ್ಲಾ ತೋಟಗಳ ವಿಸ್ತೀರ್ಣವು ೪೨೨, ೯೨೯ ಎಕ್ರೆಗಳು. ಈ ಸ್ಥಳವನ್ನು ಊರಿನ ಜನರಿಂದ ಸರಕಾರದವರು ವಿಧಿಸಿದ ಶರ್ತಗಳಿಗನುಸಾರವಾಗಿ ಗೇಣಿಗೆ ಪಡೆದಿರುತ್ತಾರೆ.

ಈ ತೋಟಗಳಲ್ಲಿ ಕಬ್ಬನ್ನು ಶಾಸ್ತ್ರೀಯತ್ವಾ ಬೆಳಸುತ್ತಾರೆ. ಸಕ್ಕರೆಯ ವಿಷಯ ಶೋಧನಾಸ್ಥಳಗಳನ್ನು ಎಲ್ಲಾ ತೋಟಗಳ ಮಾಲಿಕರ ವಂತಿಗೆಯಿಂದ ಏರ್ಪಡಿಸಲ್ಪಟ್ಟಿವೆ. ಎಲ್ಲಾ ಆಡಳಿತೆಯ ಕೆಲಸವು ಯುರೋಪಿಯನರ ಕೈಯಲ್ಲಿಯೇ ಇದೆ. ಎಂಜಿನಿಯರರಿಗೆ ಕೆಮಿಸ್ಟ್ರಿಯ ಅನುಭವವು ಬೇಸಾಯ ಸಂಬಂಧವಾದ ಅನುಭವವೂ ಇದೆ. ಎಲ್ಲಾ ಮೇಲುದ್ಯೋಗಸ್ಥರೂ ಈ ಕೆಲಸಗಳನ್ನು ಕಲಿಯಬೇಕಾಗಿದೆ. ಜಾವಾದಲ್ಲಿ ಸಕ್ಕರೆ ಕೈಗಾರಿಕೆ ಕೆಲಸಮಾಡುವ ನಾಲ್ಕು ಸಾವಿರ ಯುರೋಪಿಯನರಿರುವರು. ಇತರ ದೇಶಿಯ ಕೆಲಸಗಾರರು ಒಂದು ಮಿಲಿಯ ಇರುವರು ಇವರ ಸಂಬಳಕ್ಕಾಗಿಯೂ ಇತರ ಖರ್ಚಿಗಾಗಿಯೂ ಹೆಚ್ಚು ಹಣವು ಖರ್ಚಾಗುತ್ತದೆ. ಕಬ್ಬಿನ ರಸ ತೆಗಿಯುವುದಕ್ಕೂ ಸಕ್ಕರೆ ತಯಾರಿಸುವುದಕ್ಕೂ ನವೀನ ಯಂತ್ರಸಾಧನೆಗಳನ್ನೆ ಉಪಯೋಗಿಸುತ್ತಿರುವರು. ಒಂದುಮುಕ್ಕಾಲು ಎಕ್ರೆ ಸ್ಥಳದಲ್ಲಿ ಕಬ್ಬು ಬೆಳಸಲಿಕ್ಕೆ ೧೫ ಪೌಂಡು ಖರ್ಚಿದೆ. ಇನ್ನು ಇದಕ್ಕೆ ಸಕ್ಕರೆ ತಯಾರಿಸುವ ಖರ್ಚ ಕೂಡಿಸಲಿಕ್ಕಿದೆ. ಒಂದೂಮುಕ್ಕಾಲು (1¾) ಎಕ್ರೆ ಸ್ಥಳದಲ್ಲಿ ಏಳು ಅಥವಾ ಎಂಟು ಟನ್ ಸಕ್ಕರೆಯಾಗುವುದು. ಆದರೆ ಪ್ರತಿ ವರುಷವೂ ಅಷ್ಟೆ ಆಗುತ್ತದೆಂದು ಹೇಳಲಿಕ್ಕಾಗುವುದಿಲ್ಲ. ೧೯೨೪ನೇ ಇಸವಿಯಲ್ಲಿ ಜಾವಾದಿಂದ ೧,೮೬೦,೦೩೮ ಟನ್ ಸಕ್ಕರೆಯು ಪರದೇಶಕ್ಕೆ ಹೋಗಿತ್ತು. ಇದರಲ್ಲಿ ೧೦೨,೪೭೨ ಟನ್ ಸಕ್ಕರೆಯು ಗ್ರೇಟ ಬ್ರಿಟನ್ನಿಗೆ ಹೋಗಿಯದೆ. ೧೯೨೪ರಲ್ಲಿ ೧೬೨೧,೬೬೬ ಟನ್ ಸಕ್ಕರೆಯಾಯಿತು. ಇದರಲ್ಲಿ ಶೇಕಡಾ ೩೧ ಪಾಲು ಸಕ್ಕರೆಯನ್ನು ಯುರೋಪಿಯನರು ಕೊಂಡುಕೊಂಡಿರುವರು ಶೇಕಡಾ ೩೮-೯ ಪಾಲನ್ನು ಜಪಾನಿಯರು ಕೊಂಡುಕೊಂಡಿರುವರು. ಚೀನಾ ದೇಶದವರು ಶೇಕಡಾ ೩೦-೫ ಪ್ರಕಾರ ಚೀನಾದೇಶಕ್ಕೆ ಕೊಂಡುಹೋಗುತ್ತಿರುವರು.

ಯುದ್ಧದ ಸಮಯ ಅನೇಕ ತೋಟಗಳು ಕಾಲಿ ಬಿದ್ದಿದ್ದವು. ಈಗ ಅವುಗಳನ್ನು ಅಭಿವೃದ್ಧಿ ಪಡಿಸಲು ಶುರುಮಾಡಿರುವರು. ಈಗ ಇವರು ಹೆಚ್ಚಾಗಿ ಅನೇರಿಕದ ಯಂತ್ರಸಾಧನೆಗಳನ್ನೇ ಉಪಯೋಗಿಸುತ್ತಿರುವರು.

ಪ್ರಕಟಣೆ.

ನಿಯಮ ೧೮ರ ಪ್ರಕಾರ ಜರಗತಕ್ಕ ಮಂಗಳೂರು ತಾಲೂಕು ಕಾಂಗ್ರೆಸ್ ಕಮ್ಮಿಟಿಯ ಬರುವ ಸಾಧಾರಣ ಮಹಾಸಭೆಯು ತಾ. ೬-೮-೨೬ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಮಂಗಳೂರಲ್ಲಿ ಕೊಡಿಯಾಲಬ್ಯಾಲು ಟಪ್ಪಾಲು ಕಟ್ಟೆಯ ಬಳಿಯ ಇರುವ ಜಿಲ್ಲಾ ಕಾಂಗ್ರೆಸು ಕಮಿಟಿಯ ಕಚೇರಿಯ ಮಾಳಿಗೆಯಲ್ಲಿ ಜರಗುವುದು. ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ.

ಕಾರ್ಯಕ್ರಮ.

(೧) ತಾ. ೧೬-೫-'೨೬ರಿಂದ ೩೧-೭-'೨೬ರ ವರೆಗಿನ ಕೆಲಸದ ವರದಿ. (೨) ಬರುವ ಜಿಲ್ಲಾ ಕಮ್ಮಿಟಿಗೂ ಪ್ರಾಂತಿಕ ಕಮ್ಮಿಟಿಗೂ ಪ್ರತಿನಿಧಿಗಳನ್ನು ಆರಿಸುವುದು. (೩) ಅಸ್ಸಾಮು ಕಾಂಗ್ರೆಸ್ಸಿಗೆ ಪ್ರತಿನಿಧಿಗಳನ್ನು ಆರಿಸುವ ವಿಲೇವಾರಿ. (೪) ನಿಯಮಗಳಲ್ಲಿ ಬದಲಾವಣೆ, (೫) ತಾ. ೨೮-೭-'೨೬ರ ವಳಗೆ ಈ ಕಚೇರಿಗೆ ತಲ್ಪಬಹುದಾದ ಸದಸ್ಯರಿಂದ ಬರುವ ಸೂಚನೆಗಳು; ಇವುಗಳು ತಾ. ೨೯-೭-'೨೬ರಿಂದ ಕಚೇರಿಯಲ್ಲಿ ಪ್ರಕಟಿಸಲ್ಪಡುವವು. (೬) ಅಧ್ಯಕ್ಷರ ಅಪ್ಪಣೆಯಿಂದ ಸಭೆಯ ಮುಂದೆ ಬರಬಹುದಾದ ಇತರ ಜರೂರು ವಿಷಯಗಳು.

ವಿ. ಸೂ. ಸದ್ಯಕ್ಕೆ ತಾಲೂಕು ಕಾಂಗ್ರೆಸು ಕಮ್ಮಿಟಿಯ ಕಚೇರಿಯು ಸದರಿ ಜಿಲ್ಲಾ ಕಾಂಗ್ರೆಸು ಕಮ್ಮಿಟಿಯ ಕಚೇರಿಯ ಮಾಳಿಗೆಯಲ್ಲಿಯೇ ಇರುವುದು. ಕಚೇರಿ ಸಮಯ ಆದಿತ್ಯವಾರ ಮತ್ತು ಇತರ ರಜಾದಿನಗಳು ಹೊರತು ಪೂರ್ವಾಹ್ನ ೧೦ರಿಂದ ೧೨ರ ವರೆಗೆ.

ಮಂ. ತಾ. ಕಾ. ಕ. ಕಚೇರಿ,
ಮಂಗಳೂರು, ೨೧-೭-'೨೬.

ಅ. ಭೋಜರಾಯ,
ಕಾರ್ಯದರ್ಶಿ.

ಸ್ಫುಟ ವಿಚಾರಗಳು.

ಫ್ರಾನ್ಸಿನ ಆರ್ಥಿಕ ದುಸ್ಥಿತಿ.

ಫ್ರಾನ್ಸ ದೇಶದ ಚಲಾವಣೆಯ ನಾಣ್ಯವು ದಿನೇ ದಿನೇ ಬೆಲೆಯನ್ನು ಕಳೆಯುತ್ತಾ ಬರುತ್ತಿದೆ. ಫ್ರಾನ್ಸಿನ ಆರ್ಥಿಕ ಪರಿಸ್ಥಿತಿಯು ಎಷ್ಟೊ ರಾಜತಂತ್ರಜ್ಞರ ಯುಕ್ತಿವಾದದಿಂದಾದರೂ ಸುಧಾರಿಸಿಲ್ಲ. ಎಷ್ಟೊ ಸರಕಾರಗಳು ಅಧಿಕಾರಕ್ಕೆ ಬಂದು ಅಧಿಕಾರವನ್ನು ಕಳೆದುಕೊಂಡರು. ಆದರೂ ಫ್ರಾಂಕು ನಾಣ್ಯದ ಬೆಲೆಯ ಇಳಿತವನ್ನು ತಗ್ಗಿಸಲಿಕ್ಕೆ ಯಾರಿಗೂ ಸಾಧ್ಯವಾಗಿಲ್ಲ. ಇದರಿಂದ ದೇಶದೊಳಗಿನ ಜನರಿಗೆ ದ್ರವ್ಯವನ್ನು ಸಂಗ್ರಹಿಸುವುದಕ್ಕಿಂತಲೂ ವಸ್ತುವನ್ನು ಸಂಗ್ರಹಿಸುವುದು ಉತ್ತಮವೆಂದು ಭಾಸವಾಗಿದೆ. ಫ್ರಾನ್ಸಿನ ಪಾರ್ಲಿಮೆಂಟಿನ ಪ್ರತಿನಿಧಿಗಳೊಬ್ಬರಿಗೂ ಈ ಪರಿಸ್ಥಿತಿಯ ಸರಿಯಾದ ಸುಧಾರಣೆಯು ಸೂಚಿಸದಿರುವುದೇ ಈಗಿನ ಈ ಸಂದಿಗ್ಧ ಅವಸ್ಥೆಯ ಕಾರಣವಾಗಿದೆ. ಫ್ರಾಂಕು ನಾಣ್ಯವು ಪವನಿಗೆ, ಕೆಲವು ದಿನಗಳೊಳಗೆಯೇ ೧೯೦ರಿಂದ ೨೩೦ಕ್ಕೆ ಬಂದು ನಿಂತದೆ. ಸರಕಾರ ಖಜಾನೆಯೂ ಬರಿದಾಗಿದೆ. ಅತ್ತ ಅಮೇರಿಕಕ್ಕೆ ಸಲ್ಲಬೇಕಾದ ಸಾಲಕ್ಕಾಗಿ ಅಮೇರಿಕವು ಪತ್ತಾಯವನ್ನು ಮಾಡುತ್ತಿದೆ. ಫಲತಃ ಈಗಿನ ಈ ಪರಿಸ್ಥಿತಿಯಿಂದ ತಪ್ಪಿಕೊಳ್ಳುವುದು ಹೇಗೆಂಬುದೇ ಫ್ರಾನ್ಸಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಆ ಆರ್ಥಿಕ ಸುಧಾರಣೆಗಳ ಬಗ್ಗೆ ಬ್ರ್ಯಾಂಡ್ ಸರಕಾರದಲ್ಲಿ ಆರ್ಥಿಕ ವಿಭಾಗದ ಮಂತ್ರಿಯಾಗಿದ್ದ ಕೈಲೂವಿಗೆ ಸರ್ವಾಧಿಕಾರವನ್ನು ಕೊಡಬೇಕೆಂದು ತಂದಿದ್ದ ಠರಾವು ಬಿದ್ದು ಹೋಗಿ ಸರಕಾರವೂ ರಾಜೀನಾಮೆಯನ್ನು ಕೊಡಬೇಕಾಯಿತು. ಈಗ ಹೆರಿಯಟನು ಸರಕಾರವನ್ನು ನಿರ್ಮಿಸಿರುವನಾದರೂ, ಪ್ರಕೃತದ ಸಮಸ್ಯೆಯು ಅವನಿಂದಲೂ ತೀರ್ಮಾನಿಸಲ್ಪಡುವುದಾಗಿ ಯಾರಿಗೂ ಭರವಸೆಯಿಲ್ಲ. ಇಟಲಿ, ಸ್ಪೈನ್ ಮುಂತಾದ ಕಡೆಗಳಲ್ಲಿ ಇಂತಹ ಸಂದಿಗ್ಧ ಸಮಯದಲ್ಲಿ ಅಧಿಕೃತರಾದಂತೆ, ಫ್ರಾನ್ಸಿನಲ್ಲಿಯೂ ಸರ್ವಾಧಿಕಾರವನ್ನು ಸ್ವಾಧೀನಪಡಿಸಿ ನಿರಂಕುಶ ಪ್ರಭುತ್ವವನ್ನು ನಡಿಸಬಲ್ಲ ಆಜ್ಞಾದಾಯಕ (Dictator)ನ ಆವಶ್ಯಕತೆಯು ಫ್ರಾನ್ಸಿಗೂ ಉಂಟಾಗಿದೆಯೆಂದು ಹಲವರ ಹೇಳಿಕೆಯಾಗಿದೆ. ಇವೆಲ್ಲ ವಿಷಯಗಳನ್ನು ನೋಡಿದರೆ ಪ್ರಜಾಸತ್ತಾತ್ಮಕ ರಾಜ್ಯಾಡಳಿತವೂ ಇಂತಹ ಸಮಯಗಳಲ್ಲಿ ಶಕ್ತಿ ಸಾಲದುದೆಂದು ಸ್ಪಷ್ಟವಾಗುವುದು.

ಸ್ವರಾಜ್ಯ ಪಕ್ಷದ ಭವಿತವ್ಯ.

ಇತರ ಎಲ್ಲಾ ರಾಜಕೀಯ ಪಂಗಡಗಳ ಅಖಂಡ ವಿರೋಧವೂ, ಹಿಂದೂಸ್ಥಾನದಲ್ಲಿ ಪ್ರಚಲಿತವಿರುವ ಜಾತೀಯ ವಿದ್ವೇಷವೂ, ವೈಯಕ್ತಿಕ ಭಾವನೆಗಳ ಭಿನ್ನತೆಯೂ ಹಲವು ಮಟ್ಟಿಗೆ ಸ್ವರಾಜ್ಯಪಕ್ಷದ ವಿಜಯಕ್ಕೆ ಪ್ರತಿರೋಧಗಳಾಗಿ ನಿಂತಿವೆ ಎಂಬುದು ಸ್ಪಷ್ಟವಾಗಿದೆ. ಮತ್ತು ಈಗಿನ ರಾಜಕೀಯ ಜಡತೆಯಲ್ಲಿ ಸ್ವರಾಜ್ಯ ಪಕ್ಷವು ಹಿಂದಿನಂತೆ ಚುನಾವಣೆಯಲ್ಲಿ ಹೆಚ್ಚು ಸಂಖ್ಯೆಯಿಂದ ಕೌನ್ಸಿಲುಗಳನ್ನು ಸೇರುವುದೂ ಎಂಬುದು ಸಂದೇಹದ ವಿಷಯವಾಗಿದೆ. ಸ್ಥಿತಿಯು ಹೀಗಿರುವಾಗ ಸ್ವರಾಜ್ಯ ಪಕ್ಷೀಯರು ಸ್ಪಷ್ಟವೂ, ವಿಶ್ವಾಸವನ್ನುಂಟು ಮಾಡುವಂತಹುದೂ ಆದ ಧೋರಣವನ್ನೇ ಅನುಕರಿಸುವುದು ಅಗತ್ಯವಿತ್ತು. ಆದರೆ ಅವರು ಹಾಗೆ ಮಾಡುವುದರ ಆವಶ್ಯಕತೆಯನ್ನು ತಿಳಿದುಕೊಂಡಂತೆ ತೋರುವುದಿಲ್ಲ. ಕೌನ್ಸಿಲುಗಳಿಂದ ಸ್ವರಾಜ್ಯ ಪಕ್ಷೀಯರು ಹೊರಗೆ ಬಂದುದೂ, ಆ ಮೇಲೆ ಆಗಾಗ ಹೊಸ ಸಂದರ್ಭಗಳ ಕಲ್ಪಿಸಿ ಪುನಃ ಕೌನ್ಸಿಲುಗಳನ್ನು ಸೇರುವುದೂ ಸ್ವರಾಜ್ಯ ಪಕ್ಷದ ಧೋರಣದಲ್ಲಿ ವಿಶ್ವಾಸವನ್ನುಂಟುಮಾಡುವಂತಹ ಕೆಲಸಗಳಾಗಿಲ್ಲ. ಅಲ್ಲದೆ ಸ್ವರಾಜ್ಯ ಪಕ್ಷೀಯರು ಒಂದು ವಿಷಯವನ್ನು ತೀರಾ ಮರೆತಿರುವರು. ಸ್ವರಾಜ್ಯ ಪಕ್ಷದ ಧೋರಣವೂ ತತ್ವವೂ, ಅನುಕರಣೆಯೂ, ಮಹಾತ್ಮಾ ಗಾಂಧಿಗಳ ಅಸಹಕಾರ ಚಳವಳದ ಮೂಲಸೂತ್ರವನ್ನು ಅವಲಂಬಿಸಿ ಉಂಟಾದುವುಗಳಾಗಿವೆ. ಸ್ವರಾಜ್ಯ ಪಕ್ಷದ ಧೋರಣವು ಆ ಅಸಹಕಾರ ತತ್ವದ ಕಾರ್ಯಕಾರಿ ಕಾರ್ಯಕ್ರಮವಾಗಿದ್ದಿತು. ಆದರೆ ಈ ಮುಖ್ಯ ವಿಷಯವನ್ನೇ ಸ್ವರಾಜ್ಯ ಪಕ್ಷೀಯರು ಮರೆತಿರುವರು. ಅಸಹಕಾರ ಚಳವಳವನ್ನೇ ಆಸ್ತಿವಾರವಾಗಿಟ್ಟುಕೊಂಡು ಕಟ್ಟಿರುವ ಆ ಪಕ್ಷದ ಸೂತ್ರಗಳನ್ನು ಸಮಯ ಬಂದಂತೆ ಸ್ವೇಚ್ಛೆಯಾಗಿ ಬದಲಿಸಿ, ರಾಜಕೀಯ ಕ್ಷೇತ್ರದಲ್ಲಿ ಕಲ್ಪಿತ ಲಾಭಗಳನ್ನು ಹೊಂದಲು ಪ್ರಯತ್ನಿಸಿದುದರಿಂದಲೇ ಪ್ರಾಯಶಃ ಸ್ವರಾಜ್ಯ ಪಕ್ಷವು ಹೆಚ್ಚಾಗಿ ನಿರ್ಬಲವಾಗ ತೊಡಗಿತು. ಕೌನ್ಸಿಲು ಮಂದಿರಗಳು ವೇಶ್ಯಾಭವನಗಳಂತೆ ಮೋಹಮಯವಾದುವು ಎಂಬ ಮಹಾತ್ಮರ ವಚನವು, ಅಖಂಡ ದೇಶಪ್ರೇಮದಿಂದಲೂ ಸ್ಥಿರವಾದ ವಿಶ್ವಾಸದಿಂದಲೂ ನಿರಂತರ ವಿರೋಧದ ಧೋರಣಕ್ಕಾಗಿ ಸೇರಿದ ಸ್ವರಾಜ್ಯ ಪಕ್ಷೀಯರ ಈಗಿನ ವರ್ತನವನ್ನು ನೋಡಿದರೆ ಅಕ್ಷರಶಃ ನಿಜವೆನ್ನಬೇಕಾಗುತ್ತದೆ. ಆದರೆ ತಿದ್ದು ಪಡಿಯಾಗಲು ಇನ್ನೂ ಸಮಯವಿದೆ. ಸ್ವರಾಜ್ಯ ಪಕ್ಷೀಯರೇ, ಅಲ್ಪಸಂಖ್ಯಾತರಿರಲಿ, ಬಹುಸಂಖ್ಯಾತರಿರಲಿ ದೇಶದ ಗೌರವವನ್ನು ರಕ್ಷಿಸಬೇಕಾಗಿದೆ. ಇದರಲ್ಲಿ ಅವರು ಎಷ್ಟು ಕೃತಕೃತ್ಯರಾಗುವರೆಂಬುದು ಅವರ ಭಾವಿವರ್ತನವೇ ತೋರುವುದು.

ಮೊಹರಮ್ ವೇಶಗಳು.

ನಮ್ಮ ಜಿಲ್ಲೆಯ ಬಡವರಿಗೆ ಮೋಹರಮ್ ಎಂದರೆ ಬಹಳ ಉತ್ಸವದ ದಿನ. ಹಾಗೆಯೇ ಕೆಲವು ಕಡೆಗಳಲ್ಲಿ ಜಾತಿ ವಿಘ್ನೇಶನ ವಿಸರ್ಜನೆಯ ದಿವವೂ ಒಂದು ಉತ್ಸವದ ದಿನವಾಗಿದೆ. ಈ ದಿನಗಳಲ್ಲಿ ಅನೇಕ ಬಡವರು ಹುಲಿವೇಶವನ್ನೂ, ಇನ್ನಿತರ ಅಭಿನಯದ ವೇಶವನ್ನೂ ಹಾಕಿ ಪೇಟೆಗಳಲ್ಲೆಲ್ಲಾ ಸಂಚರಿಸಿ ಭಿಕ್ಷಾಟನಮಾಡುವರು. ಸಾಮಾನ್ಯವಾಗಿ ಎಲ್ಲರೂ ಈ ವೇಶಗಳನ್ನೂ, ಭಿಕ್ಷಾಟನವನ್ನೂ ಖಂಡಿಸುವರು. ಆದರೆ ಸೌಹಾರ್ದದಿಂದಲೂ ಸಹಾನುಭೂತಿಯಿಂದಲೂ ಆಲೋಚಿಸಿದರೆ, ಇದರಲ್ಲಿ ಖಂಡಿಸುವಂತಹ ವಿಷಯವಿಲ್ಲವೆಂದು ತಿಳಿಯಬಹುದು. ಈ ಮೊಹರಮ್ ವೇಶಗಳು ಕೆಳತರಗತಿಯ ಸಮಾಜದ ಆನಂದಕ್ಕೆ ಎಡೆಕೊಡುವುವು. ಮೇಲ್ತರಗತಿಯವರು ನಾಟಕ ಇತ್ಯಾದಿಗಳಿಂದ ತಮ್ಮ ಮನಸ್ಸಿನೊಳಗಿನ ತಾಪತ್ರಯಗಳ ಸಂತಾಪವನ್ನು ತೀರಿಸಲು ಪ್ರಯತ್ನಿಸುತ್ತಿರುವರು. ಆದರೆ ದಿನನಿತ್ಯವೂ ಗೇಯುವ ಕೆಲಸದಲ್ಲಿಯೇ ಶ್ರಮಿಸಿ ದಾರಿದ್ರ್ಯದಿಂದ ಹೊಟ್ಟೆ ಹಸಿವನ್ನು ತಡೆಸಿ ದಿನಗಳೆಯುವ ನಮ್ಮ ಬಡವರ ಉಲ್ಲಾಸಕರವಾದ ಕಾಲಹರಣಕ್ಕೆ ಅನುಕೂಲ್ಯಗಳು ಕಡಿಮೆ ಇವೆ. ಹಳ್ಳಿಯ ಯಕ್ಷಗಾನ ಆಟಗಳು ಭೂತದ ಪೂಜೆಗಳು ಇವು ಕಾಲಹರಣದ ವಿಷಯಗಳಾದರೂ, ಇವು ಅಷ್ಟೊಂದು ಉಲ್ಲಾಸಕರವಾಗಿ ಇರುವುದಿಲ್ಲ. ಈ ಮೊಹರಮ್ ವೇಶಗಳ ವಿಕಟ ಸ್ವರೂಪವೂ, ಅದರೊಳಗಿನ ಕೆಳತರಗತಿಯ ಹಾಸ್ಯವೂ ಈ ಕೆಳಸಮಾಜಕ್ಕೆ ಸಾಕಷ್ಟು ಮನೋಲ್ಲಾಸವನ್ನು ಕೊಡುತ್ತಿವೆ. ಅಲ್ಲದೆ ವೇಶಹಾಕುವವರೂ ಬರೆ ಹಣದ ಅಭಿಲಾಷೆಯಿಂದಲೇ ವೇಶಹಾಕುವರೆಂದೂ ತಿಳಿಯಬಾರದು. ಹಣಕೂಡಿಸುವ ಎರಡನೇಯ ಉದ್ದೇಶವಲ್ಲದೆ ಬೇರೆಯಲ್ಲ. ಮುಖ್ಯವಾಗಿ ಅಂತಹ ಅಭಿನಯದಿಂದ ಆತ್ಮ ಸಂತೋಷಪಡೆಯುವುದೂ ಅವರ ಪ್ರಥಮ ಅಭಿಲಾಷೆಯೆಂದೂ ನಾವು ತಿಳಿದುಕೊಳ್ಳಬಹುದು.

ಈ ವರ್ಷದ ಮಳೆ.

ಪರ್ಜನ್ಯನ ಕೃಪಾದರ್ಶನವು ಈ ವರ್ಷ ಬಹಳ ವಿಳಂಬವಾಯಿತು. ಕಳೆದ ಎರಡು ವರ್ಷಗಳಲ್ಲಿ ಜುಲೈ ಆರಂಭದಲ್ಲಿ ನಮ್ಮ ಜಿಲ್ಲೆಯ ನದಿಗಳಲ್ಲಿ ಭಯಂಕರ ನೆರೆಗಳು ಬಂದು ಹೋಗಿದ್ದುವು. ಅವುಗಳ ಪ್ರತಿಕ್ರಿಯೆ ಎಂಬಂತೆ ಈ ವರ್ಷ ಮಳೆಯೇ ಇಲ್ಲದೆ ಬೇಸಾಯಗಾರರು ಬಹಳ ಯೋಚನೆಗೆ ಈಡಾಗಿರುವರು. ಜೂನ್ ಎರಡನೇ ವಾರದ ಪ್ರಥಮದಲ್ಲಿ ಆರಂಭವಾಗಬೇಕಿದ್ದ ವರ್ಷಾಕಾಲವು ಜೂನ್ ಅಖೈರಿಯಲ್ಲಿ ಆರಂಭವಾಯಿತು. ಆ ಮೇಲೂ, ಕೆಲವು ದಿನಗಳ ಮಳೆಗಳ ನಂತರ ಜುಲೈ ತಿಂಗಳು ಕಾಯ್ದುಹೋಯಿತು. ಬಯಲು ಗದ್ದೆಗಳಿಗೆ ಈ ತರದ ಮಳೆಯು ಅನುಕೂಲವೇ ಅಹುದು. ಬೆಳೆಗೆ ಪ್ರಥಮತಃ ಸಾಕಷ್ಟೇ ನೀರು ಸಿಕ್ಕಿ, ಆ ಮೇಲೆ ಬಿಸಿಲಿನಲ್ಲಿ ಮೊದಲಿನ ಮಳೆಗಳ ತೇವಿನಲ್ಲಿ ಬೆಳೆದು ಹಸುರಾಗಿ, ಆ ಮೇಲೆ ಪುನಹ ಎಂತಹ ಪ್ರಚಂಡ ದಿರುಗಾಳಿ ಮಳೆಗಳ ಹೊಡೆತಕ್ಕೂ ತಯ್ಯಾರಿರುವ ಈ ವರ್ಷದ ಬೆಳೆಯು ಬಹಳ ಫಲವತ್ತಾಗಿಯೇ ಪರಿಣಮಿಸುವುದು. ಆದರೆ ಬಯಲಿನಲ್ಲಿ ಲಾಭವಾದುದಕ್ಕಿಂತಲೂ ಎರಡು ಪಾಲು ಬೆಟ್ಟದಲ್ಲಿ ಹೋಗುವುದೊ ಎಂಬ ಭಯವಿದೆ. ಬೆಟ್ಟಗದ್ದೆಗಳ ಬೆಳೆಯು ಹಸುರಿದ್ದುದು ಹಳದಿಯಾಗಲಾರಂಭಿಸಿತು. ಅನೇಕ ಕಡೆಗಳಲ್ಲಿ ನೆಡಲೇ ಇಲ್ಲ. ಅನೇಕ ರೈತರು ಆಕಾಶವನ್ನೆ ದಿಟ್ಟಿಸುತ್ತ ನಿಟ್ಟುಸಿರನ್ನು ಬಿಡುತ್ತಿರುವರು. ಆದರೆ ಈ ಒಂದೆರಡು ದಿನಗಳಿಂದ ಆರಂಭವಾದಂತೆ ತೋರುವ ಮಳೆಯು ಬಯಲುಗದ್ದೆಗಳಿಗೆ ಬಹಳ ಹಿತಕರವಾಗಿದ್ದರೂ, ಒಣಗಿಹೋದ ಬೆಟ್ಟಗದ್ದೆಗಳಿಗೆ ಪ್ರಯೋಜನ ಕೊಟ್ಟೀತೊ ಎಂಬುದೇ ಅನುಮಾನಾಸ್ಪದವಿದೆ. ಬೆಳೆಯು ಆಗಲಿ ಆಗದಿರಲಿ, ವ್ಯಾಪಾರದಲ್ಲಿ ಅಕ್ಕಿ ಬೆಲೆಯು ಏರಲಿಕ್ಕೆ ಮಳೆಯು ಒಂದು ಒಳ್ಳೆಯ ನೆವವನ್ನು ಕೊಟ್ಟಿತು. ಈ ಪರಶುರಾಮ ಸೃಷ್ಟಿಯಲ್ಲಿ ಈಶ್ವರನು ಕ್ಷಾಮವನ್ನು ಕೊಡದಂತೆ ಪ್ರತಿಜ್ಞಾಬದ್ಧನಿದ್ದರೂ, ಜನತೆಯ ಸಾಹಸದಿಂದ ಕ್ಷಾಮವು ಬಾರದೆ ನಿಲ್ಲುವುದಿಲ್ಲ. ಜಿಲ್ಲೆಯ ಆರ್ಥಿಕ ಸ್ಥಿತಿಯು ಹೀನಾವಸ್ಥೆಗೆ ಹೋಗಿರುವ ಈ ದಿನಗಳಲ್ಲಿ ಅಕ್ಕಿಯ ಬೆಲೆಯು ಏರಿಹೋದರೆ ಮತ್ತೆ ಧನಿಕರ—ಬಡವರ ಅವಸ್ಥೆಯು ಹೇಳತೀರದು.

ಹೊಸ ವೈಸರಾಯಿಯವರ ಭಾಷಣ

ಬೆಲ್ಲವಿಲ್ಲದಿದ್ದರೂ ಬೆಲ್ಲದಂತಹ ಮಾತಿರಬೇಕು. ಈ ಸುಗುಣವು ನಮ್ಮ ಆಳರಸರಲ್ಲಿ ಚೆನ್ನಾಗಿ ಪ್ರಕಾಶಿಸುತ್ತದೆ. ಅವರೊಡನೆ ಬೆಲ್ಲವು ಇಲ್ಲವೇ ಇಲ್ಲ. ಆದರೆ ಬೆಲ್ಲದಂತಹ ಮಾತು ತುಂಬಾ ಇದೆ. ಕಾರ್ಯತಃ ಅವರು ಬೆಲ್ಲ ಬೇಕಾದ ಎಲ್ಲಾ ಸಂದರ್ಭಗಳನ್ನೂ ಬೆಲ್ಲದಂತಹ ಮಾತುಗಳಿಂದಲೇ ತೀರಿಸಲು ಪ್ರಯತ್ನಿಸುತ್ತಾರೆ. ಲೋರ್ಡ ಇರ್ವಿನರು ಹೊಸ ವೈಸರಾಯಿಗಳಾದರೂ ಈ ಹಳೆ ಡೊಂಬರಾಟದಲ್ಲಿ ಕಡಿಮೆ ನಿಪುಣತೆಯುಳ್ಳವರಲ್ಲ. ದೇಶದಲ್ಲೆಲ್ಲೆಲ್ಲೂ ಇರುತ್ತಿರುವ ಜಾತೀಯ ಕಲಹಗಳ ನಿವಾರಣೆಗಾಗಿ ವೈಸರಾಯಿಯವರು ಯಾವ ತರದ ಕಾರ್ಯಕಾರಿಯಾದ ಕೆಲಸವನ್ನೂ ಕೈಕೊಳ್ಳಲಿಲ್ಲವಾದರೂ, ಚಂದವಾದ ಮಾತುಗಳಿಂದ ಜನತೆಯ ಎದೆಯನ್ನು ವಿಚಲಿಸಲು ಬಹಳ ಚೆನ್ನಾಗಿಯೇ ಪ್ರಯತ್ನಿಸಿದರು. ಸಿಮ್ಲಾದಲ್ಲಿ ಚೆಮ್ಸ್‌ಫೋರ್ಡ ಕ್ಲಬ್ಬೇ ವೈಸರಾಯಿಯವರಿಗೆ ಉತ್ತಮವಾದ ಸಂದರ್ಭವನ್ನು ಕೊಟ್ಟಿತು. ತಲೆಯಲ್ಲಾಡಿಸಿ ಹೌದೆಂದು ಹೇಳಲಿಕ್ಕೆ ಯೋಗ್ಯರಾದವರೇ ಪ್ರೇಕ್ಷಕರು. ಇಡೀ ಉತ್ತರ ಹಿಂದುಸ್ಥಾನವು ಈ ಅಂತಃಕಲಹದ ತೀಕ್ಷ್ಣವೂ, ಭಯಂಕರವೂ ಆದ ವಡಬಾಗ್ನಿಯಲ್ಲಿ ಸುಡುತ್ತಿರಲು ಲೋರ್ಡ ಇರ್ವಿನರು ಈ ಭಸ್ಮಕಾರ್ಯದ ವೈಜ್ಞಾನಿಕ ಸೂತ್ರಗಳನ್ನು ಉದ್ಘಾಟಿಸುವುದರಲ್ಲಿ ನಿರತರಾದುದು ಕಾಲ ಮಹಿಮೆಯಾಗಿದೆ. ಒಂದು ಕಡೆಯಿಂದ ಹಿಂದುಗಳೂ ಇನ್ನೊಂದು ಕಡೆಯಿಂದ ಮುಸಲ್ಮಾನರೂ ಸಿಮ್ಲಾದ ಭಾರತ ಭಾಗ್ಯವಿಧಾತರಿಗೆ ತಂತಿ ಹೊಡೆದುಹೊಡೆದು, ತಂತಿಗಳೆಲ್ಲಾ ಕೆಂಪಾಗಿ ಹೋದುವು. ಆದರೂ ಎಂದಿನಂತೆಯೇ, ಭಯಂಕರ ಹತ್ಯಾ ಕಾಂಡಗಳೂ, ನಾಶಕಾರ್ಯ, ಪೈಶಾಚಿಕ ವರ್ತನಗಳೂ ನಡೆದು ಭೂದೇವಿಯನ್ನು ನಡುಗಿಸುತ್ತಿವೆ. ಯಾವ ವಿನಂತಿಯೂ ಇಲ್ಲದೆ ರಾಜಕೀಯ ಚಳವಳಗಳನ್ನು ಶಾಸನಪದ್ಧತಿಯಿಂದ ನಿಲ್ಲಿಸಲು ಪ್ರಯತ್ನಿಸುವ ಸರಕಾರದ ಅಗ್ರಾಧಿಪತಿಯು ಅನುಭೂತಿಯ ಪ್ರಕಟಣೆಯಿಂದಲೂ, ಪಶ್ಚಾತ್ತಾಪದ ಚೇಷ್ಟೆಗಳಿಂದಲೂ ಈ ಪಶುವರ್ತನಗಳಿಗೆ ತಡೆಯಿಡಲು ಪ್ರಯತ್ನಿಸುವರು! ಆದರೆ ಮನೆಮಾಡುಗಳಿಂದ ಧಗಧಗಿಸುವ ಜ್ವಲಂತ ವಹ್ನಿಯೂ, ಸರ್ವನಾಶದ ಸಂತಾಪದಿಂದ ಬೆಂದು ಬೂದಿಯಾಗುತ್ತಿರುವ ಅಸಂಖ್ಯ ಹೃದಯಗಳಿಂದ ಹೊರಹೊಮ್ಮುವ ಜ್ವಾಲೆಯೂ ಏರಿ ದಿಗಂತವನ್ನು ಮೀರಿ ಅನಧಿಕಾರಿಯ ಶೂನ್ಯತೆಯನ್ನು ಸೇರುತ್ತಿದೆ. ಭಾರತವು ಭಾರತಪುತ್ರರಿಂದಲ್ಲ; ಭಾರತವು ಆಂಗ್ಲನಾಗರಿಕ ಔದಾರ್ಯದಿಂದಲ್ಲ; ಭಾರತವು ಭಾರತ ಕಲ್ಪನೆಯ ಈಶ್ವರನಿಂದಲೇ ರಕ್ಷಿತವಾಗಬೇಕು.

ಸ್ತ್ರೀಯರಿಗೆ ಕೌನ್ಸಿಲು ಮೆಂಬರಿಕೆಯ ಹಕ್ಕು.

ಮದ್ರಾಸ ಕೌನ್ಸಿಲಿನಲ್ಲಿ ಇದೊಂದು ಹಕ್ಕು ಮಂಜೂರಾಯಿತು. ರಾಜಕೀಯ ಕ್ಷೇತ್ರದಲ್ಲಿ ಸ್ತ್ರೀಯಾದರೂ ಉತ್ತಮ ಕೆಲಸ ಮಾಡಬಲ್ಲಳೆಂಬುದಕ್ಕೆ ಇತಿಹಾಸದಲ್ಲಿ ಅನೇಕ ನಿದರ್ಶನಗಳಿವೆ. ರಾಜ್ಯಗಳನ್ನೂ ಸಾಮ್ರಾಜ್ಯಗಳನ್ನೂ ಚೆನ್ನಾಗಿ ಆಳಿದ ರಾಣಿಯರು ಪೂರ್ವಕಾಲದಲ್ಲಿ ಪ್ರತಿ ಜನಾಂಗದಲ್ಲಿಯೂ ಇದ್ದರು. ಇವರು ಪುರುಷರಿಗಿಂತ ಕಡಿಮೆ ಪ್ರತಿಭೆಯನ್ನು ತೋರಿಸಿಲ್ಲ. ಹಾಗೆಯೇ ರಾಜಕೀಯ ಕಾರ್ಯಗಳಲ್ಲಿ ಹೆಚ್ಚು ಉತ್ಸಾಹವಿದ್ದವರೂ ಸ್ವಾತಂತ್ರ್ಯವಿದ್ದವರೂ ಅನುಕೂಲವಿದ್ದಾಗ ಕೌನ್ಸಿಲನ್ನು ಸೇರಲು ಯಾವ ತಡೆಯೂ ಇರಲಿಕ್ಕೆ ಕಾರಣವಿಲ್ಲ. ಶ್ರೀಮತಿ ಸರೋಜಿನಿ ದೇವಿಯವರು, ಸ್ತ್ರೀಯಾದರೂ ಹಿಂದೀ ರಾಷ್ಟ್ರೀಯ ರಾಜಕಾರಣದಲ್ಲಿ ಬಹಳ ವಿಚಕ್ಷಣತೆಯನ್ನೂ ದೂರದರ್ಶಿತೆಯನ್ನೂ ತೋರಿಸಿರುವರು. ರಾಜಕೀಯ ಕಾರಣವು ಅಸಂಖ್ಯ ಜನತೆಯ ಭಾವಿ ಅದೃಷ್ಟವನ್ನು ನಿರ್ಮಿಸತಕ್ಕ ವಿಷಯವಾಗಿದೆ. ಇದನ್ನು ಯುಕ್ತಿಯುಕ್ತವಾಗಿ ನಡಿಸುವುದು ಜನಾಂಗದ ತಾತ್ಕಾಲಿಕ ಮತ್ತು ಭಾವಿ ಉಜ್ಜೀವನಕ್ಕೆ ಅಗತ್ಯವಾಗಿದೆ. ಆದುದರಿಂದ ರಾಜಕೀಯ ಸಮಸ್ಯೆಗಳ ತೀರ್ಮಾನದಲ್ಲಿ ಯಾರ ಅಭಿಪ್ರಾಯವೂ ತಿರಸ್ಕರಿಸಲ್ಪಡತಕ್ಕದ್ದಲ್ಲ. ಫಲತಃ ಸ್ತ್ರೀಯಾದರೂ ಉತ್ತಮ ತರದಲ್ಲಿ ರಾಜಕೀಯ ಸಮಸ್ಯೆಗಳನ್ನು ಕೊಡಲು ಅರ್ಹಳಾದ್ದಲ್ಲಿ, ಅವಳ ಅರ್ಹತೆಯ ಪರಿಮಾಣವನ್ನು ತಿಳಿದು ಮತದಾರರು ಸ್ತ್ರೀಯನ್ನಾದರೂ ತಮ್ಮ ಪ್ರತಿನಿಧಿಯಾಗಿ ಆರಿಸುವುದು ನ್ಯಾಯವೇ. ಆದರೆ ಚುನಾವಣೆಗಳು ಅರ್ಹತೆಗಿಂತಲೂ ದಾಕ್ಷಿಣ್ಯ ಮತ್ತು ಜಾತೀಯತೆಯಿಂದಲೇ ನಡೆಯುವ ಈ ದಿನಗಳಲ್ಲಿ ಸ್ತ್ರೀಯೆಂಬ ಒಂದೇ ಕಾರಣವೇ ಚುನಾವಣೆಯಲ್ಲಿ ಹೆಚ್ಚು ಪ್ರಾಧಾನ್ಯ ಹೊಂದುವುದೂ ಶಕ್ಯವಾಗಿದೆ. ಸಮಾನತೆಯ ಪಂಕ್ತಿಗೆ ಬಂದ ಮೇಲೆ ಸ್ತ್ರೀಯನ್ನು ಪುರುಷರಂತೆಯೇ ತಿಳಿದುಕೊಳ್ಳಬೇಕು. ಅದೇ ಪರಿಮಾಣದಿಂದ ಅವಳನ್ನು ತಿಳಿದುಕೊಳ್ಳಬೇಕು. ಹಕ್ಕಿನಲ್ಲಿ ಸಮಾನತೆಯೂ, ಕೆಲಸದಲ್ಲಿ ಸ್ತ್ರೀಗೌರವದ ಪ್ರತ್ಯೇಕತೆಯೂ ಅವಳಿಗೆ ಕೊಟ್ಟರೆ ನ್ಯಾಯವಾಗದು. ಆದುದರಿಂದ ಸ್ತ್ರೀಯರು ಮೆಂಬರಿಕೆಗೆ ಉಮೇದುವಾರರಾಗಿ ನಿಲ್ಲುವ ಸಂದರ್ಭವಿದ್ದರೆ ಚುನಾವಣೆಗಾಗಿ ಅವಳಿಗೂ ಪುರುಷನಿಗೂ ಯಾವ ತರದ ತಾರತಮ್ಯವನ್ನೂ ಲಕ್ಷಿಸಕೂಡದು.

ಅನುಕ್ರಮಣಿಕೆ.

	ಪುಟ.
ಅಗ್ರಲೇಖ	
ಬಾಲ ವಿಧವೆಯರು	೩
ಮಾಧವ ಮುನಿ	೫
ಸ್ಫುಟವಿಚಾರಗಳು	೫
ವರ್ತಮಾನಸಂಗ್ರಹಗಳು—	
ವಿದೇಶ, ಒಳದೇಶ	೭
ದಕ್ಷಿಣ ಕನ್ನಡ— ಮಂಗಳೂರು, ಬಂಟವಾಳ, ಪಾಣೆಮಂಗಳೂರು, ಕಾಸರಗೋಡು, ಮಂಜೇಶ್ವರ, ನರಿಕೊಂಬು, ಅಮಟಾಡಿ, ಸಿದ್ದಕಟ್ಟೆ, ಬಂಟವಾಳ ಮೂಡು, ಗಂಗೊಳ್ಳಿ	೭–೮
ವಿವಿಧವಿಷಯಗಳು	೮.೮
ಸ್ವೀಕಾರ ಮತ್ತು ವಿಮರ್ಶೆ	೮

ಸ್ವದೇಶಾಭಿಮಾನಿ.

ಶಕ ೧೮೪೮ ಆಷಾಢ ಶು| ೧೩ಯು ಶುಕ್ರವಾರ.

ಬಾಲ ವಿಧವೆಯರು.

ಹಿಂದೂ ಸಮಾಜದೊಳಗಿನ ತಿರಸ್ಕೃತ ಬಾಲ ವಿಧವೆಯ ಸಂಖ್ಯೆಯು ಹಿಂದೂ ಸಮಾಜಕ್ಕೂ ಮತಕ್ಕೂ ಒಂದು ಕಲಂಕವೆಂದು ಪ್ರತಿಯೊಬ್ಬರೂ ತಿಳಿಯಬೇಕು. ಸ್ತ್ರೀಯರಿಗೆ ಪುನರ್ವಿವಾಹವಾಗುವುದೆಂಬುದನ್ನು ಕಲ್ಪಿಸಿದ ಮಾತ್ರದಿಂದಲೇ ಅಸಹ್ಯವನ್ನನುಭವಿಸುವ ಹಿಂದುಗಳು ಇದನ್ನು ನಿವಾರಿಸಲಾಗದ ವಿಷಯವೆಂದು ತಿಳಿದುಕೊಂಡು ಸುಮ್ಮನಿರಬಹುದಾದರೂ ಇದರ ವಿಷಯವಾಗಿ ಹಿಂದೂ ಸಮಾಜದ ಅಂತರ್ಗ್ಲಾನಿಯು ಇನ್ನು ಹೆಚ್ಚಾಗಬಾರದೆಂದು ಮನಃಪೂರ್ವಕವಾಗಿ ಇಚ್ಛಿಸುವ ಪ್ರತಿ ಹಿಂದೂವು ಚೆನ್ನಾಗಿ ಚಿಂತಿಸಿ ನಿರ್ಧರಿಸಿ, ಬಾಲವಿಧವೆಯರ ಸಂಖ್ಯೆಯನ್ನು ಹೇಗೆ ಕಡಿಮೆ ಮಾಡಬಹುದು, ಅಥವಾ ಹಾಗೆ ಇರುವ ವಿಧವೆಯರ ಕಷ್ಟಗಳನ್ನೂ ಸಂತಾಪವನ್ನೂ ಹೇಗೆ ಉಪಶಮನ ಮಾಡಬಹುದು ಇತ್ಯಾದಿ ವಿಷಯಗಳನ್ನು ಸಮಾಲೋಚಿಸಿ ನಿರ್ಧರಿಸಬೇಕು.

ಸ್ತ್ರೀಯು ಮೃತಳಾದ ಮಾರಣೇ ದಿನವೇ ಪುರುಷನು ಪ್ರತ್ಯೇಕ ಸಂಬಂಧವನ್ನು ಮಾಡಿಕೊಳ್ಳುವುದರಲ್ಲಿ ನಿಯುಕ್ತನಾಗುವ ಆ ಕಾಠಿಣ್ಯದ ಕ್ರಮವನ್ನೂ, ಪುರುಷನು ಮೃತಹೊಂದಿದಂದಿನಿಂದ ಸಮಾಜದಿಂದ ಬಹಿಷ್ಕೃತಳಾಗಿ ಮನೆ ಮೂಲೆಯನ್ನು ಸೇರಬೇಕಾದ ಸ್ತ್ರೀಯನುಭವದ ಕ್ರಮವನ್ನು ಹತ್ತಿರ ತಂದು ತಾರತಮ್ಯವನ್ನು ನೋಡಿದರೆ ಮನಸ್ಸಿನಲ್ಲಿ ಇಲ್ಲದ ದುಃಖವು ಉಂಟಾಗುವುದು. ಪುರುಷನ ಈ ಸ್ವೈರಾಚಾರ ವರ್ತನವನ್ನು ಖಂಡಿಸುವ ಸಮಾಜವಿರುವುದಿಲ್ಲ. ತನ್ನ ಪತ್ನಿಯನ್ನು ತಿರಸ್ಕರಿಸಿ, ವ್ಯಭಿಚಾರ ಮಾಡಿಯೂ ಸಮಾಜದಲ್ಲಿ ಗೌರವವನ್ನು ಹೊಂದುವ ಆ ನಿರಂಕುಶ ಪುರುಷನ ಸ್ವೇಚ್ಛಾವರ್ತನವು ಸಮಾಜದಿಂದ ಎಷ್ಟೊ ಮಾನಿತವಾದರೂ ವಿಚಾರಿ ಜನರೊಳಗೆ ಗರ್ಹಣೆಯವಾಗಲೇ ಬೇಕು. ಹಾಗೆಯೆ ಪುರುಷನು ಸ್ತ್ರೀಯು ಮೃತವಾದ ಕೂಡಲೇ ಪುನರ್ವಿವಾಹಕ್ಕೆ ತಡಮಾಡದೆ ಸಮ್ಮತಿಸುವದಾದರೂ ಮಾನವ ಮಾರ್ದವಕ್ಕೆ ಒಪ್ಪದ ವಿಷಯವಿರಬೇಕು.

ಪುರುಷನಿಗೆ ಇಂತಹ ಮಿತಿಯಿಲ್ಲ, ಸ್ವೇಚ್ಛಾವರ್ತನಕ್ಕೆ ಸಮಾಜವೇ ಸಹಕಾರಿಯಾಗುತ್ತದೆ. ಆದರೆ ಅದೇ ಸಮಾಜವು ಸ್ತ್ರೀಗೆ ಕಠಿಣವಾದ ಶಿಕ್ಷೆಯನ್ನು ಕೊಟ್ಟು ಸಹಿಸಲಾಗದ ಸನ್ಯಾಸವನ್ನು ಅವಳ ಮೇಲೆ ಹೊರಿಸುತ್ತಿದೆ. ಇದು ಯಾವ ನ್ಯಾಯವೆಂದು ನಮಗೆ ತಿಳಿಯುವುದಿಲ್ಲ.

ಸಮಾಜದ ಅರಳಿರದ ಹೂವಿನಂತಿದ್ದ, ಉತ್ಸಾಹಿಯೂ ಅವಿಕ್ರಾಂತರೂ ಆಗಿರುವ ಬಾಲಿಕೆಯನ್ನು ಸಂಸಾರಕ್ಕೆ ಶೂನ್ಯಪ್ರಾಯಳಾಗಿ ಮಾಡಿರುವ ಮಾತ್ರವಲ್ಲದೆ, ಸಮಾಜವು ಅವಳ ಜೀವನ ಸ್ವಾತಂತ್ರ್ಯಕ್ಕಾಗಿಯೂ, ಸ್ವಾಭಾವಿಕ ಸರಿಯಾದ ಆಚರಣೆಗಾಗಿಯೂ ಯಾವ ಪ್ರಯತ್ನಗಳನ್ನೂ ತೆಗೆದುಕೊಂಡಿಲ್ಲ. ಸನ್ಯಾಸವನ್ನು ಅವಳ ಮೇಲೆ ಪತ್ನಾ ಯಮದಿಂದ ಹೊರಿಸಿ, ಅದರ ಆಚರಣೆಯಲ್ಲಿ ಭಂಗ ಬಂದರೆ ತಿರಸ್ಕಾರದ ಶಿಕ್ಷೆಯ ಭಯವನ್ನು ಎದುರಿಟ್ಟು ಸಮಾಜವು ಅವಳನ್ನು ಗೃಹಕತ್ತಲೆಯ ಅಂಧಕಾರದಲ್ಲಿ ಆಜೀವನವೂ ಅಳಿಕ್ಕೆ ಬಿಟ್ಟಿರುತ್ತದೆ. ಸಮಾಜದಿಂದ ಬಹಿಷ್ಕೃತಳಾಗಿ ಮನೆಯಿಂದ ತಿರಸ್ಕೃತಳೂ, ಸರ್ವಸಮಾಜದಿಂದ ವಂಚಿತಳೂ ಆದ ಬಾಲಿಕೆಯು ಸಂಸಾರದ ಚಿರಸ್ಥಿಯ ದೃಷ್ಟಿಯು ಸಮ್ಮುಖದಲ್ಲಿ ಭೀತಚಿತ್ತದಿಂದ ಜೀವನರಹಿತಳಾಗಿ ಬಿದ್ದಿರುವಳು. ಸಮಾಜವು ತನ್ನ ಕಾಠಿಣ್ಯದಿಂದ ಇದನ್ನು ಲಕ್ಷಿಸುತ್ತಿದೆಯೇ ವಿನಹ, ಆ ಬಾಲಿಕೆಯನ್ನು ಉದ್ಧರಿಸಿ, ಅವಳ ಜೀವನವನ್ನು ಉಜ್ಜೀವಿಸಿ ಅವಳಿಂದ ಸಮಾಜಸೇವೆಯನ್ನುಂಟುಮಾಡಿಸಿ, ಅವಳಿಗೆ ಪಾರಮಾರ್ಥಿಕ ಲಾಭವನ್ನೂ ಐಹಿಕ ನೆಮ್ಮದಿಯನ್ನೂ ಉಂಟುಮಾಡಲು ತಿಲಾಂಶವಾದರೂ ಪ್ರಯತ್ನಿಸುವುದಿಲ್ಲ!

ಸಮಾಜದಲ್ಲಿ ಪ್ರತ್ಯೇಕ ವಿಭಾಗವಾಗಿಯೇ ಇರುವ ಈ ವಿಧವೆ ತರುಣಿಯರ ನಷ್ಟದಿಂದ ಸಮಾಜದ ಸಮಷ್ಟಿಯ ಹಿತವಾದರೂ ಹೇಗೆ ನಡೆದೀತು? ವರ್ಷವರ್ಷವೂ, ಹಲವು ತರುಣರೂ, ತರುಣಿಯರ ಪತಿಯರೂ ಮೃತಿಯನ್ನು ಹೊಂದುವರು. ಹಾಗೆಯೇ ವರ್ಷವರ್ಷವೂ ಅನೇಕ ತರುಣಿಯರು ತಮ್ಮ ತಿಲಕವನ್ನುಜ್ಜಿ ಸಂತಾಪದಲ್ಲಿ ಹೊರಳಿ ಹೊಸ ಮರುಜೀವನವನ್ನಾರಂಭಿಸುವರು. ಯಾವ ದಯಾರ್ದ್ರ ಹೃದಯವೂ ಅವರ ಕಡೆಗೆ ನೀರಾಗಿ ಹೋಗಿಲ್ಲ! ಯಾವ ಜಾತೀಯ ಹಿತಸಾಧಕನೂ ಅವರ ಉಜ್ಜೀವನದ ಕಡೆಗೆ ತನ್ನ ಅಸಂಖ್ಯ ಕ್ಷಣಗಳಲ್ಲಿ ಒಂದನ್ನಾದರೂ ವಿನಿಯೋಗಿಸಿಲ್ಲ! ಯಾವ ಮತಸಂಸ್ಥೆಯೂ ತನ್ನ ಅಗಣಿತ ದ್ರವ್ಯದಿಂದ ಈ ಮೂಕಸಂತಾಪದ ನಿವಾರಣಕ್ಕಾಗಿ ಮುಂದರಿದಿಲ್ಲ!

ದೇವಸ್ಥಾನಗಳ ಭಂಡಾರಗಳು ಮೊದಲೇ ಸಾಕಷ್ಟು ಪ್ರಚಾರವಿರುವ ವಿದ್ಯಾಲಯಗಳಿಗಾಗಿ ತೆರೆಯಲ್ಪಡುತ್ತಿವೆ; ಕೆಟ್ಟ ವ್ಯಾಜ್ಯಗಳಿಗಾಗಿ ಬರಿದಾಗುತ್ತಿವೆ; ಭಂಗಾರದ ಶೋಭೆಗಳನ್ನು ರಚಿಸುವುದರಲ್ಲಿ ನಿರತವಿರುತ್ತವೆ. ಶ್ರೀಮಂತರ ದ್ರವ್ಯವು ಮೋಟಾರು ಗಾಡಿಗಳಲ್ಲಿ ಉಯ್ಯಾಲೆಯಾಡುತ್ತಿದೆ; ಹಠಸಾಧನೆಗಳಲ್ಲಿ ಔದಾರ್ಯವನ್ನು ತೋರಿಸುತ್ತಿದೆ. ಆದರೆ ಸಮಾಜದ ತಿರುಳಾಗಿ ಒಂದು ಮುಹೂರ್ತದಲ್ಲಿ ಪರಿಗಣಿಸಲ್ಪಟ್ಟ ಈ ನಾರೀವೃಂದಕ್ಕಾಗಿ ಯಾವ ವಿಜ್ಞ ತಲೆಯೂ ಯೋಚಿಸುವುದಿಲ್ಲ; ಯಾವ ಮತಸಂಸ್ಥೆಯೂ ಶ್ರದ್ಧೆಯನ್ನು ವಹಿಸುವುದಿಲ್ಲ; ಯಾವ ಶ್ರೀಮಂತನೂ ಪುಣ್ಯಾರ್ಜನೆಯನ್ನು ಅನುಭವಿಸುವುದಿಲ್ಲ. ಹಿಂದೂ ಸಮಾಜದ ದುರಾದೃಷ್ಟವಲ್ಲದೆ ಮತ್ತೇನೆಂದು ಇದಕ್ಕೆನ್ನಲಿ!

ಪ್ರೇಮವಾಗಲಿ, ಭೋಗವಾಗಲಿ, ಅಭಿಲಾಷೆಯನ್ನು ಸಾಮಾನ್ಯವಾದ ಯಾವ ಹೃದಯವೂ ತಣಿಯಲಾರದು. ಹಿಂದೂ ಸಮಾಜವು ಅಂತಹ ಅಸಾಧ್ಯ ತ್ಯಾಗವನ್ನು ಸಂಸಾರದ ಪ್ರವೇಶ ದ್ವಾರದಲ್ಲಿ ಮಾತ್ರವೇ ಒಟ್ಟುಗೂಡಿದ್ದ ಈ ತರುಣೀವೃಂದದಿಂದ ನಿರೀಕ್ಷಿಸುವುದು ನಿಸರ್ಗಕ್ಕೆ ವಿರೋಧವಾದ ವಿಷಯ. ಹಿಂದೂ ಸಮಾಜವು ಇವರ ಸರಿಯಾದ ಉಜ್ಜೀವನಕ್ಕಾಗಿ ಪ್ರಯತ್ನಿಸಿದ್ದಾದರೂ ದೊಡ್ಡದಿರಲಿಲ್ಲ. ಪ್ರಕೃತ ಪರಿಸ್ಥಿತಿಯಲ್ಲಿ ಯಾವಳೊಬ್ಬ ತರುಣಿಯು ನೈರ್ಮಲ್ಯದ ಹಾದಿಯನ್ನು ಬಿಟ್ಟಿದಾದರೆ ಅದರ ಪಾಪವು ಸಮಗ್ರ ಸಮಾಜದ ಮೇಲಿರಬೇಕಲ್ಲದೆ ಆ ವ್ಯಕ್ತಿಯ ಮೇಲಲ್ಲ.

ಹಿಂದೂ ವಿಧವೆಯು ಧರ್ಮಗ್ರಂಥಗಳು ಎಷ್ಟು ತ್ಯಾಗವನ್ನು ಕೇಳುತ್ತಿವೆಯೊ, ವ್ಯಕ್ತಿಯು ಎಷ್ಟು ತ್ಯಾಗವನ್ನು ಮಾಡಬಲ್ಲನೊ ಅಷ್ಟು ತ್ಯಾಗವನ್ನು [illegible] ಅವರ ಸಂಯಮವು ಮಹತ್ತರವಿದೆ. ಅವರ ಬ್ರಹ್ಮಚರ್ಯವು ಪೂರ್ಣತೆಯದಿದೆ. ಸಮಾಜದ ಮೇಲೆ ಅವರು ಅಷ್ಟು ಪಾರಮಾರ್ಥಿಕ ಪರಿಣಾಮವನ್ನುಂಟುಮಾಡುತ್ತಿರುವಾಗ ಸಮಾಜವು ಅವರಿಗೆ ಪ್ರತ್ಯುಪಕಾರವನ್ನು ಮಾಡುವುದು ಕೇವಲ ಕರ್ತವ್ಯವಿದ್ದಿತು. ಆದರೆ ಹಿಂದೂ ವಿಧವೆಯ ನೀರವ ಸಂತಾಪವನ್ನು ತಿಳಿಯುವವರಾರು? ಅದೇ ಅನುಮಾನಕರ ವರ್ತನದ ಪಾಶ್ಚಿಮಾತ್ಯ ದೇಶದ ಸ್ತ್ರೀಯರು ಒಂದು ಒಂದು (Women's Association) ಎಂದು ಹೂಡಿದರೆ ಧನಿಕರ ರಸಿಕತೆಯು ಬೆಳೆದು ಸಾವಿರಾರು ರೂಪಾಯಿಗಳು ಹೊರ ಹರಿಯುವುವು! ಪಾವಿತ್ರ್ಯಕ್ಕೂ ಧರ್ಮಕ್ಕೂ ಲೋಕದಲ್ಲಿ ಸ್ಥಾನವಿಲ್ಲದಂತಾಗಿದೆ.

ಹಿಂದೂ ಬಾಲವಿಧವೆಯರನ್ನು ಸರಿಯಾದ ವಿದ್ಯಾಭ್ಯಾಸ ಕೊಟ್ಟು ಸಮಾಜದೊಳಗಿನ ಸ್ತ್ರೀಯರು ವಹಿಸಬೇಕಾದ ಕೆಲವು ಕೆಲಸಗಳನ್ನು ಮಾಡಲು ಅವರನ್ನು ತರಬೇತು ಮಾಡುವುದು ಸಮಾಜದ ಈಗಿನ ಅಗತ್ಯದ ಕೆಲಸವಾಗಿದೆ. ಹಿಂದೂ ಮತಕ್ಕೆ, ಹಿಂದೂ ಆಶಯಗಳಿಗೆ ಮತ್ತು ಹಿಂದೂ ಭಾವನೆಗಳಿಗೆ ತಕ್ಕುದಾದ ರೀತಿಯಲ್ಲಿ ಒಂದು ಸಂಸ್ಥೆಯನ್ನು ರಚಿಸಿ ವಿಧವೆಯರ ಉಜ್ಜೀವನಕ್ಕಾಗಿ ಪ್ರಯತ್ನಪಡಬೇಕು. ಹಿಂದೂಗಳೊಳಗಿನ ಈ ತಿರಸ್ಕೃತ ತರುಣಿಯರು ಸುಶಿಕ್ಷಿತರಾದರೆಂದರೆ ಹಿಂದೂ ಮತಪ್ರಚಾರಕ್ಕೂ, ಹಿಂದೂ ಸಂಸಾರ ರಚನೆಗೂ ಉತ್ತಮ ಸಹಕಾರವಾದಂತಾಗುವುದು.

ಮಾಧವ ಮುನಿ!

ಕವಿ:—ಕೃ. ಶ್ರೀ., ಬೆಟಗೇರಿ "[illegible]"

ಹಾಳು ಹಂಪೆಯಲ್ಲಿ ಕತ್ತಲೆ ಮುಸುಕಿದ ಕಿರಿಗುಡಿಯಲ್ಲಿರುವ, ವಿದ್ಯಾರಣ್ಯರ ಮೂರ್ತಿಯನು ಹೊರಗಣ್ಣಿಂದೆ ನೋಡುವ ಭಾವಿಕ ಜೀವಿಗೆ, ಬಗೆಯಲ್ಲಿಂತು ಭಾವನೆಗಳು ಬರುವುದರಲ್ಲಿ ಅರಿದಾದುದೂ ಏನು!

ಕಲ್ಲಾಗಿ ಕುಳಿತೆಯೇಕಯ್ಯ! ಮಾಧವ ಮುನಿಯೆ!
ಕಲ್ಲಾಗಿ ಕುಳಿತೆಯೇಕೆ!
ಹಿಂದೆ ಗೌತಮನು ಹೆಂಡತಿ ಗೈದ ತಪ್ಪಿತಕೆ
ನೊಂದು "ಕಲ್ಲಾಗಿ ಬೀಳೆ"ನುತ ಶಪಿಸಿದನಂತೆ,
ಘನತೆವೆತ್ತಿಹ ನಿನ್ನ ನೋಟದಿಂ ಕಲ್ಲನೂ
ಕನಕವನು ಮಾಡಿದ ಮಹಾಮಹಿಮ! ನೀನಿಂದು
ಕಲ್ಲಾದೆಯೇಕೆ ಯಾರದು ಶಾಪವಿಹುದೊ?
ಅಲ್ಲದೆಯೆ ನನ್ನ ಕಣ್ಣಿನ ಪಾಪವಹುದೊ? ॥ ೧ ॥

"ಬಂಗಾರ ಮಳೆಸುರಿಸಿ, ರಾಜ್ಯವನು ನೆಲೆಗೊಳಿಸಿ
"ಹಿಂಗಿಹೋದುದು ಹಿಂದೆ ಗೈದ ತಪಸಿನ ತಿರುಳು
"ಇನ್ನು ಮುಂದಿನ ನನ್ನ ಗುರಿಯನ್ನು ಸಾಧಿಸಲು
"ಉನ್ನತದ ತಪಗೈದು ಬಲವ ಬೆಳೆಸುವೆನೆ"ಂದು
ಇಲ್ಲಿ ಕುಳಿತಿರುವಿಯೇನೈ? ಸಮಾಧಿಯಲಿ
ಕಲ್ಲಿನೊಲು ಕದಲದಲೆ ಕಠಿನ ತಪಸಿನಲಿ ॥ ೨ ॥

"ನನ್ನ ಕಷ್ಟಗಳನೆಲ್ಲವ ಕಳೆದು ಸೊಗವಿತ್ತು
"ನಿನ್ನ ಕರ್ತವ್ಯ ಮಾಡಿದೆ! ಋಣವ ತೀರಿಸಿದೆ!
"ಇನ್ನುಳಿದ ನನ್ನ ಮಕ್ಕಳು ತಮ್ಮ ಕರ್ತವ್ಯ
"ವನ್ನೆಂತು ಮಾಡುವರೊ! ನೋಡು ಕೆಮ್ಮನೆ ಕುಳಿತು"
ಇಂತು ಕನ್ನಡ ತಾಯಿ ನಿನಗೆ ಹೇಳಿಹಳೆ?
ಎಂತಲೇ ಕುಳಿತಿಹೆಯ? ನೀನು ಕದಲದಲೆ ॥ ೩ ॥

ಕನ್ನಡದ ನಾಡಿನಾ ಕಲ್ಲುಗಳಿಗೂ ಕೂಡ
ಚೆನ್ನಾಗಿ ಜೀವಕಳೆಯನ್ನು ತುಂಬಿಸಿಯಂದು
ಕರ್ನಾಟಕೀರ್ತಿಕೇತುವನಖಿಲ ಲೋಕದಲಿ
ಮುನ್ನ ಮೆರೆಯಿಸಿದೆ! ನೀನೇ ಇಂದು ಕಲ್ಲಾದೆ!
ಇದರಿಂದೆ ನಿನ್ನ ನೆನೆಯುವ ಕನ್ನಡಿಗರ
ಎದೆಯದೂ ತಳೆದಿಹುದು ಕಲ್ಲಿನಾಕಾರ. ॥ ೪ ॥

ಹಿಂದೆ ನೀ ನಮ್ಮವರನೊಳುದಾರಿಗೊಂದಿಸುತೆ
ಹೊಂದಿಕೊಂಡಿರುವ ಸದ್ಧರ್ಮವನು ಬೋಧಿಸುತೆ
ಸಂದ ಸ್ವಾತಂತ್ರ್ಯದಾ ಹಸಿವನ್ನು ಹೆಚ್ಚಿಸುತೆ
ಒಂದಾಗೆ ವೈಭವಕೆ ವೈರಾಗ್ಯ ಬೆರೆಯಿಸುತೆ
ಅಂದು ಎಡೆಯಾಡಿದೆಯೊ ಭರತಭೂಮಿಯಲಿ
ಇಂದೇಕೆ ಕುಳಿತಿಹೆಯೊ? ಗೇಣು ಗುಡಿಯಲ್ಲಿ ॥ ೫ ॥

• • • •

ಇನಿತು ನಾ ಚಿಂತಿಸುತ ನಿಂತುಕೊಂಡಿರಲು
ಇನಿದಾದ ದನಿಯೊಂದು ಜನಿಸಿ ಹೃದಯದೊಳು
ನನ್ನ [illegible] ಇಂತು ಕುಳಿಸಿತು
ನನ್ನನೊಂದರೆಗಳಿಗೆ [illegible] ಮರೆಯಿಸಿತು.

• • • •

ಕೊನೆಯಿಲ್ಲದನಿತು ನಾ ಜನುಮಗಳ ತಳೆದರೂ
ತುಣುಕಾದರೂ ತಪದ ತಿರುಳು ತೀರದೊ! ಮರುಳೆ!
ಬಣಗು ಬಂಗಾರ ಮಳೆಗರೆದ ಕಾರಣದಿಂದೆ
ಘನತಪೋಬಲವಿಂದು ತೊಲಗಿ ಪೋಗುವುದೆಂತು?
ವನನಿಧಿಯು ನೀರನ್ನು ಅಳೆಯೆ ಸೇರಿನಲಿ
ಅನುಗೊಂಡ ನಿನ್ನ ಕಿರಿಹುಚ್ಚಿಗೇನೆನಲಿ? ॥ ೬ ॥

ಕಲ್ಲುಗೊಂಬೆಯು ಆಗಿ ಇಲ್ಲಿಯೂ ಕುಳಿತಿರುವೆ!
ಕಲ್ಲಿನಂತಾದ ನಿನ್ನೆದೆಯಲ್ಲಿಯೂ ಇರುವೆ!
ನನ್ನ ಮೂರ್ತಿಯು ಕಲ್ಲೆ ನಿನ್ನೆದೆಯು ಕಲ್ಲನ್ನು
ಚೆನ್ನಾಗಿ ಬಡೆಬಡೆದು ಜಡೆದು ಹಾಕ್ಕೆ ನೀನು!
ಎರಡು ಕಲ್ಲುಗಳ ಹೊಡೆತಕೆ ಹೊರಡುತಿರುವ
ಮಿಡುಗು ಮಿಂಚಿನಲಿ ನೋಡುವೆ ನನ್ನ ಮೊಗವ ॥ ೭ ॥

ಗೇಣು ಗುಡಿಯಲ್ಲಿಯೇ ಕುಳಿತಿರುವಿಯೇಕೆಂದು
ನಾನಿರುವ ನೆಲೆಯನ್ನು ಕಾಣದಲೆ ನುಡಿಯುವಿಯೊ!
ಬಳಗಕ್ಕೆನಲ್ಲಿ ನೋಡುವವರ ತಿಳಿನೋಟಕ್ಕೆ
ಕಳೆವೆತ್ತ ಕರ್ನಾಟಕದ ಕಣಕಣಗಳಲಿ
ನನ್ನ ಮೂರ್ತಿಗಳನಂತವೆ ಕಾಣುತಿಹವು
ಕನ್ನಡಿಗರಿಗೆ ಸ್ಫೈರ್ಯನಿತ್ತೆಚ್ಚಿಸುವವು. ॥ ೮ ॥

[illegible]

ವಿದೇಶ ವರ್ತಮಾನ.

—ಇಂಗ್ಲೆಂಡಿನ ಹೌಸ್ ಒಫ್ ಕಾಮನ್ಸ್ ಸಭೆಯಲ್ಲಿ ಇಂಡಿಯದ ವಿಷಯದ ಮಾತಾಡಿ ಚರ್ಚಿಸಲಿಕ್ಕೆ ಒಂದು ದಿವಸವನ್ನು ನಿಶ್ಚಯಿಸಿರುವರು. ಹೌಸ್ ಒಫ್ ಲೋರ್ಡ್ಸಿನಲ್ಲಿ [illegible] ತಾರೀಕಿನಲ್ಲಿ ಇಂಡಿಯದ ವಿಷಯ [illegible] ನಡೆದವು.

—ಭೂಲೋಕದ ಎಲ್ಲಾ ಭಾಗಗಳಿಗೂ ವರ್ತಮಾನಗಳನ್ನು ಅದಷ್ಟು ಬೇಗನೆ ಕಳುಹಿಸಲಿಕ್ಕೆ ಸ್ಥಾಪಿಸಿದ ಸಂಘಕ್ಕೆ ಮಾರ್ಕ್ವಿಸ್ ಒಫ್ ರೆಡಿಂಗರು ಚೆಯರ್‌ಮನರಾಗಿ ನೇಮಿಸಲ್ಪಟ್ಟಿರುವರು.

—ಮೊರಕ್ಕೊ ದೇಶದಲ್ಲಿಯೂ ಸೀರಿಯದಲ್ಲಿಯೂ ಆದ ಯುದ್ಧಗಳಲ್ಲಿ ಫ್ರೆಂಚರಿಗೆ ಜಯವಾದುದಕ್ಕಾಗಿ ಪೇರಿಸ್ ನಗರದಲ್ಲಿ ಸಂತೋಷಾರ್ಥವಾಗಿ ಮೆರವಣಿಗೆಗಳು ನಡೆದವು. ಮೊರೊಕ್ಕೊ ದೇಶದ ಸುಲ್ತಾನರ ಪೋಲೀಸರುಗಳೂ, ಸ್ಪೇಯಿನ್ ದೇಶದ ಸೇನಾಧಿಪತಿಯ ಕಾರುಗಳೂ ಮೆರವಣಿಗೆಯಲ್ಲಿ ಬರುವಾಗ ಕೊಮ್ಯುನಿಷ್ಟ ಮತ್ತು ಪೆಟ್ರಿಯಟ್ ಎಂಬ ಎರಡು ತಂಡಗಳೊಳಗೆ ಜಗಳವಾಗಿ ಒಬ್ಬ ಮ್ಯುನ್ಸಿಫಲ್ ಕೌನ್ಸಿಲರನ್ನೂ ಇನ್ನೂ ೨೦ ಮಂದಿಯನ್ನೂ ಕೈದುಮಾಡಿರುವರು.

—ಅಮೇರಿಕದಿಂದ ಇಂಗ್ಲೆಂಡನ್ನು ಸಂಚರಿಸಿ ನೋಡಲಿಕ್ಕೆ ೧೦೦ ಮಂದಿ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಬಂದಿರುವರು. ಇವರು ಹೌಸ್ ಒಫ್ ಕಾಮನ್ಸಿಗೆ ಹೋದಾಗ ಲೇಡಿ ಎಸ್ಟೋರರು ಯುದ್ಧದ ಸಾಲದ [illegible] ಅವರನ್ನು ಸಂತೋಷಪಡಿಸುವುದಕ್ಕಾಗಿ ಒಂದು ಭಾಷಣವನ್ನು ಮಾಡಿದರು.

—ಪರ್ಷಿಯಾದೇಶದ ಅಜರ್‌ಬಾಯಜಾನಿನಲ್ಲಿ ದಂಗೆ ಎಬ್ಬಿಸಿದ ೫೦ ಮಂದಿ ದಂಗೆಗಾರರಿಗೆ ಮರಣದಂಡನೆ ವಿಧಿಸಿದರು.

—ಸ್ಪಿರಿಯದಲ್ಲಿ ಸ್ಥಾಪಿಸಿರುವ ಸರಕಾರವನ್ನು ತೆಗೆದು ಹಾಕುವಂತೆ ಸಾಧಿಸುತ್ತಿದ್ದ ೧೫ ಮಂದಿಗೆ ಮರಣದಂಡನೆ ವಿಧಿಸಿದರು.

—ಕೆನಡಾ ದೇಶದ ಹೊಸ ಮಂತ್ರಿಸಭೆಯವರು ತಮ್ಮ ಕೆಲಸವನ್ನೇ ವಹಿಸಿಕೊಂಡಿರುವರು.

—ಒಸ್ಟ್ರೇಲಿಯಾ ದೇಶಕ್ಕೆ ಹಾರಲಿಕ್ಕೆ ಬಂದಿರುವ ಕೊಬಾಮ ಎಂಬ ವೈಮಾನಿಕರು ಲಂಡನ ಎಬ್ಬಾಸಿಗೆ ಬಂದಿರುವರು.

—ಫ್ರೆಂಚರು ಇಂಗ್ಲೀಷ ಸರಕಾರಕ್ಕೆ ಕೊಡಲಿಕ್ಕಿರುವ ಸಾಲವನ್ನು ಸಂಪೂರ್ಣವಾಗಿ ೧೯೮೭ರ ವರೆಗೆ ತೀರಿಸುವದೆಂದು ೬೦ ವರುಷಗಳ ವಾಯಿದೆಯು ಕೊಡಲಾಯಿತು. ೧೯೨೭ರಲ್ಲಿ ೪ ಮಿಲಿಯ, ೧೯೨೮ರಲ್ಲಿ ೬ ಮಿಲಿಯ, ೨೯ರಲ್ಲಿ ೮ ಮಿಲಿಯ, ೩೦ರಲ್ಲಿ ೧೦ ಮಿಲಿಯ, ೩೧ರಲ್ಲಿ ೧೨॥ ಮಿಲಿಯ, ೧೯೩೨-೧೯೮೭ರ ವರೆಗೆ ವರುಷಕ್ಕೆ ೧೨॥ ಮಿಲಿಯ ಪೌಂಡುಗಳ ಪ್ರಕಾರ ಕೊಟ್ಟು ೧೯೮೭ರಲ್ಲಿ ಸಂಪೂರ್ಣ ಸಾಲತೀರಿಸಬೇಕು.

—ಕೆನಿಯಾ ನ್ಯಾಯವಿಧಾಯಕ ಸಭೆಯ ಮೆಂಬರರೂ ಇಂಡಿಯನ್ ನೆಶನಲ್ ಕೊಂಗ್ರೆಸಿನ ಪ್ರೆಸಿಡೆಂಟರೂ ಆದ ದೇಸಾಯಿಯವರು ಹೃದಯರೋಗದಿಂದ ನಿರೋಬಿಯಲ್ಲಿ ಕಾಲವಾದರು!

—ಯುನ್ಯಾಟೆಡ್ ಸ್ಟೇಟ್ಸಿಗೆ ಅಲ್ಪತನದಿಂದ ಮಾದಕ ದ್ರವ್ಯಗಳನ್ನು ತಾರದಂತೆ ಮಾಡುವುದಕ್ಕಾಗಿ ಅಮೇರಿಕದ ಪ್ರತಿನಿಧಿಗಳು ಇಂಗ್ಲೆಂಡಿಗೆ ಬಂದಿರುವರು.

—ಫ್ರಾನ್ಸಿಗೂ ಸ್ಪೆಯಿನಿಗೂ ಮತ್ತು ಮೊರಕ್ಕೊ ದೇಶಕ್ಕೂ ಆದ ರಾಜಿಯ ಕರಾರು ಪಾಸಾಯಿತು. ಅದರ ಒಂದನೇ ಶರ್ತದಲ್ಲಿ ಈ ಮೂವರಿಗೆ ಮೊರೊಕ್ಕೊದಲ್ಲಿರುವ ಸ್ಥಳಗಳ ಗಡಿ ತೋರಿಸಿಯದೆ. ಎರಡನೇದರಲ್ಲಿ ಕರಾವಳಿಯ ರಕ್ಷಣೆಯ ವಿಷಯವೂ, ಮೂರನೆಯದರಲ್ಲಿ ಒಳಶಾಂತತೆಯ ವಿಷಯದಲ್ಲಿಯೂ, ನಾಲ್ಕನೆಯದರಲ್ಲಿ ರೀಫರ ಅಧಿಪತಿಯಾದ ಅಬ್ದುಲ್‌ಕ್ರೀಮನನ್ನು ಎಲ್ಲಿಡಬೇಕೆಂಬದರ ವಿಷಯದಲ್ಲಿಯೂ ಸ್ಪಷ್ಟವಾಗಿ ಬರೆದಿದೆ.

—ಇಂಡಿಯದ ಕರೆನ್ಸಿ ಕಮಿಶನಿನ ರಿಪೋರ್ಟು ಬೇಗನೆ ಹೊರಬೀಳುವುದರಲ್ಲಿದೆ. ಇದರ ಪ್ರಕಾರ ರೂಪಾಯಿಗೆ ೧ ಶಿಲ್ಲಿಂಗ್ ೬ ಪೆನ್ನಿ ಕ್ರಯವೆಂದು ನಿಶ್ಚಯಿಸಿರುತ್ತಾರೆ.

—ಜಪಾನ್, ಚೈನಾ ಮತ್ತು ಇಂಡಿಯದ ಕೂಲಿಯಾಳುಗಳ ವಿಷಯ ಇಂಡೊ, ಚ್ಯಾನಾ, ಜಪಾನ್ ಕೊನ್ಫರೆನ್ಸಿನವರು ಕೊಟ್ಟ ಕೆಲವು ಸೂಚನೆಗಳನ್ನು ಇಂಡಿಯಾ ಸರಕಾರಕ್ಕೆ ಕಳುಹಿಸುತ್ತೇನೆಂದು ಅರ್ಲ ವಿಂಟರಟನರು ಹೇಳಿರುವರು.

—ಇಜಿಪ್ಟ ದೇಶದ ಕಾಯರೋ ಪಟ್ಟಣದಲ್ಲಿರುವ ವಾಯರ್‌ಲೆಸ್ ಸ್ಟೇಶನ್ ಹಳೆಯ ಸಮೂನೆಯದಾಗಿರುವುದರಿಂದಲೂ ಅದಕ್ಕೆ ಹೆಚ್ಚು ಖರ್ಚು ತಗಲುವುದರಿಂದಲೂ ಅದನ್ನು [illegible].

—ಬ್ರಿಟಿಷ್ ಸಾಮ್ರಾಜ್ಯದ ಕಡೆಯಿಂದ ರಾಯಭಾರಿಯಾಗಿ ಸರ್. ಆರ್. ಲಿಂಡಸೆಯವರನ್ನು ಬರ್ಲಿನ್ನಿನ ರಾಯಭಾರಿಯಾಗಿ ನೇಮಿಸಿರುವರು. ಇವರು ಮೊದಲು ಕೊನ್ಸಟೆಂಟಿನೋಪಲ್‌ನಲ್ಲಿ ರಾಯಭಾರಿಯಾಗಿದ್ದರು.

—ಮೊಸ್ಕೊ ಪಟ್ಟಣದಿಂದ ಪರ್ಷಿಯದ ರಾಜಧಾನಿಯಾದ ತೆಹರಾನಿಗೆ ಒಬ್ಬ ವೈಮಾನಿಕರು ಬರುವುದರಲ್ಲಿದ್ದಾರೆ. ಈ ರೀತಿಯಲ್ಲಿ ಬಂದುದರಲ್ಲಿ ಇದು ಮೂರನೇ ಸಾರಿ.

—ಬರ್ಮಾ, ಸ್ಟ್ರೇಟ್ಸ್, ಚೈನಾ, ಜಪಾನ್ ದೇಶಗಳಿಗೆ ಟಪ್ಪಾಲು ಕೊಂಡುಹೋಗುತ್ತಿದ್ದ ಒಂದು ಟಪ್ಪಾಲು ಹಡಗಕ್ಕೆ ಬೆಂಕಿ ತಗಲಿ ಸುಟ್ಟು ಹೋಯಿತು. ಇದರಲ್ಲಿದ್ದ ಪ್ರಯಾಣಿಕರೂ, ಖಲಾಸಿಗಳೂ ಸ್ವಲ್ಪ ಸಾಮಾನುಗಳೂ ಉಳಿದಿರುವುವು. ಟಪ್ಪಾಲು ಚೀಲಗಳೆಲ್ಲವೂ ಸುಟ್ಟುಹೋದವು.

—ಪೇರಿಸ್ ಪಟ್ಟಣದಲ್ಲಿ ಒಂದು ಮೊಸ್ಲೆಮ್ ಇನ್ಸಟಿಟ್ಯೂಟನ್ನು ತೆರೆದರು. ಈ ಸಮಯದಲ್ಲಿ ಮೊರೊಕ್ಕೊ, ಅಲ್ಜೀರಿಯಾ, ಟ್ಯೂನಿಸ್, ಸೀರಿಯಾ ಮುಂತಾದ ಊರುಗಳ ಮಹಮ್ಮದೀಯ ಪ್ರತಿನಿಧಿಗಳೂ, ಮೊರೊಕ್ಕೊ ಸುಲ್ತಾನರೂ ಬಂದಿದ್ದರು.

—[illegible] ಹೌಸ ಫೀಲ್ಡ ಎಂಬಲ್ಲಿ ಮುಸಲ್ಮಾನರ [illegible] ಒಂದು ಮಸೀದಿಯನ್ನು ಕಟ್ಟುವ ಕೆಲಸವು ಮುಗಿದು ಬಂತು.

—[illegible] ಒಂದು ಹೊಸ ಜನರಲ್ ಬ್ಯಾಂಕಿನ ಕಂಪೆನಿಯನ್ನು ಸ್ಥಾಪಿಸುವುದಕ್ಕಾಗಿ ಹಣವು ಜಮೆಯಾಗುತ್ತಲಿದೆ. ಇದಕ್ಕೆ ಕ್ಯಾಪಿಟಲು [illegible] ಇಂಡಿಯದ ಎಲ್ಲಾ ಬ್ಯಾಂಕುಗಳೊಡನೆ ವ್ಯಾಪಾರ ನಡಸುವರು.

—[illegible] ಮಹಾರಾಜರು ಜಪಾನಿನ ಯುವರಾಜರಿಗೆ ಜಿ. ಸಿ. ಎಸ್. ಐ. ಎಂಬ ಪದವಿಯನ್ನು ಕೊಟ್ಟಿರುವರು.

—ಈಗ ಬಲ್ಗೇರಿಯದ ಅರಸರಾದ [illegible] ಬೊರಿಸರು ತನ್ನ ಸಿಂಹಾಸನದ ತ್ಯಾಗ ಮಾಡಿ ತನ್ನ ತಂದೆಯಾದ [illegible] ತನ್ನ ಸಂದೇಶವರಿಗೆ ಬಿಟ್ಟುಕೊಟ್ಟಿರುವರು. ಇವರು ೧೯೧೮ರಲ್ಲಿ ಸಿಂಹಾಸನವನ್ನು ಮಗನಿಗೆ ಬಿಟ್ಟುಕೊಟ್ಟಿದ್ದರು. ಈಗಿನ ಮಂತ್ರಿಸಭೆಯವರು ತಂದೆಯವರ ಪಕ್ಷದವರಂತೆ.

—ಸಿಲೋನಿನ ಕೊಲೊಂಬೊ ಬಂದರದಲ್ಲಿ ಒಂದು ಜರ್ಮನ ಹಡಗವು ಬಂದು ನೇಟಿವ್ ಹಡಗಗಳ ಒಟ್ಟಿಗೆ ಲಂಗುರಹಾಕಿತು. ಬಂದರಿನ ಅಧಿಕಾರಿಗಳು ಮರುದಿನ ಬೆಳಗ್ಗೆ ವಿಚಾರಿಸುವಾಗ ೩೦೦ ಟನ್ನಿನ ಹಡಗಗಳು ಮಾತ್ರವೇ ಅಪ್ಪಣೆ ಪಡೆದು ಒಳಗೆ ಬರಬೇಕೆಂದಿರುವುದರಿಂದ, ತನ್ನ ಹಡಗವು ೬೬ ಟನ್ ಮಾತ್ರವೇ ಭಾರವಿದೆಯೆಂದೂ ತಿಳಿಸಿದನು! ಬಂದರದ ಅಧಿಕಾರಿಗಳು ಇವನಿಗೆ ಯಾವ ಶಿಕ್ಷೆಯನ್ನೂ ವಿಧಿಸಲಿಲ್ಲ!

ಒಳದೇಶ ವರ್ತಮಾನ.

—ಸರೋಜಿನಿ ದೇವಿಯವರು ಭೋಪಾಲಿಗೆ ಬಂದು ತಲಪಿದಾಗ ಅಲ್ಲಿಯ ನಿವಾಸಿಗರು ಅವರನ್ನು ಆನಂದದಿಂದ ಸ್ವಾಗತಮಾಡಿದರು. ಇವರು ಇಲ್ಲಿ ಹಿಂದೂ-ಮುಸಲ್ಮಾನರ ಸಭೆಕೂಡಿಸಿ ಹಿಂದೂ-ಮುಸಲ್ಮಾನರ ಕಲಹಗಳನ್ನು ನಿಲ್ಲಿಸಲಿಕ್ಕೆ ಸಾಧಿಸಬೇಕೆಂಬುದರ ವಿಷಯ ಭಾಷಣಕೊಟ್ಟರು.

—ಸಿಮ್ಲಾದಲ್ಲಿ ಹೋಮ ಮೆಂಬರರ ಮನೆಯಲ್ಲಿ ೧೩ನೇ ತಾರೀಕಿನ ರಾತ್ರಿ ಕಳ್ಳರು ನುಗ್ಗಿ ಬೆಳ್ಳಿಯ ಪಾತ್ರಗಳನ್ನೂ, ವಿಸ್ಕಿ ಮತ್ತು ಫೋರ್ಟು ವ್ಯಾನಿನ ಕೆಲವು ಬಾಟ್ಲಿಗಳನ್ನು ಕದ್ದುಕೊಂಡು ಹೋಗಿರುವರು.

—ಇಂಗ್ಲೆಂಡಿನಲ್ಲಿ ಕಷ್ಟಪಡುವ ಗಣಿಗಳ ಕೂಲಿಕಾರರ ಸಹಾಯಾರ್ಥವಾಗಿ ಜೆಮಸೆಡ್‌ಪುರ ಕಾರ್ಖಾನೆಯ ಕೂಲಿಕಾರರ ಸಂಘದವರು ೧೦ ಪೌಂಡುಗಳನ್ನು ಕಳುಹಿಸಿರುವರು.

—ಬರುವ ಲೆಜಿಸ್ಲೇಟಿವ್ ಸಭೆಗೆ ಮೆಂಬರರನ್ನು ಉಮೇದ್ವಾರರಾಗಿ ನಿಲ್ಲಿಸುವುದಕ್ಕೆ ಮೆಂಬರರನ್ನು ಚುನಾಯಿಸುವಾಗ ಸ್ವರಾಜಿಸ್ಟರಿಗೂ, ರಿಸ್ಪೊನ್ಸಿವರಿಗೂ ಮುಂಬಾಯಿಯಲ್ಲಿ ಕೂಡಿದ ಸಭೆಯಲ್ಲಿ ಜಗಳಗಳಾದವು.

—ಕಲ್ಕತ್ತದಲ್ಲಿ ರಾಜಮಹೇಶ್ವರಿ ದೇವಿಯ ರಥೋತ್ಸವದ ಓಕಳಿ ವಿಧಿಯುವುದಕ್ಕೆ ಗಂಗಾನದಿಗೆ ಉತ್ಸವವು ಹೋಗುವಾಗ ದಾರಿಯಲ್ಲಿ ಮುಸಲ್ಮಾನರು ಅಡ್ಡಕಟ್ಟಿ ಕಲ್ಲುಗಳಿಂದ ಹೊಡೆದರು. ಪೋಲಿಸಿನವರು ಗುಂಡು ಹಾರಿಸಿ ಅನೇಕ ಮಹಮ್ಮದೀಯರಿಗೆ ಗಾಯವಾಯಿತು. ಮುಸಲ್ಮಾನರಿಂದ ತಿವಿಯಲ್ಪಟ್ಟ ನಾಲ್ಕು ಮಂದಿ ಹಿಂದೂಗಳು ಮೆಡಿಕಲ್ ಕೊಲೇಜ ಆಸ್ಪತ್ರೆಯಲ್ಲಿ ಮರಣಹೊಂದಿದರು.

—ದೇಶಬಂಧು ಚಿತ್ತರಂಜನ ದಾಸರ ಪುಣ್ಯತಿಥಿಯನ್ನು ಫರಿದಪುರ, ಚಂದಪುರ, ಸಿರಾಜಗಂಜ, ಸಿಂದ ಹೈದರಾಬಾದ ಮುಂತಾದ ಕಡೆಗಳಲ್ಲಿ ಆಚರಿಸಿದರು.

—ಪಾಲಘಾಟಿನಲ್ಲಿ ಮಾರಿಚೆಟ್ಟಿ ಎಂಬವನು ತನ್ನ ಮಗಳನ್ನು ತನಗೆ ಸಾಕಲಿಕ್ಕೆ ಸಾಧ್ಯವಿಲ್ಲವೆಂದು ಪೊಳ್ಳಾಚಿಯ ಪೌಲ ಎಂಬ ಕ್ರೈಸ್ತನಿಗೆ ೫ ರೂಪಾಯಿಗೆ ಮಾರಿದನಂತೆ! ಶೋಚನೀಯ!!

—ಬಂಗಾಳ ಮತ್ತು ಬಿಹಾರಿನಲ್ಲಿ ಹಿಂದೂ-ಮುಸಲ್ಮಾನರೊಳಗಿನ ದ್ವೇಷವು ಹೆಚ್ಚುತ್ತಾ ಬಂದು ಗಲಾಟೆಗಳು ಆಗುತ್ತಿರುವುದರಿಂದ ಲೈಸನ್ಸು ಪಡೆಯದೆ ಗಯಾ ಜಿಲ್ಲೆಯಲ್ಲಿ ಮಿಟಿಂಗುಗಳನ್ನು ಮಾಡಬಾರದಾಗಿ ಜಿಲ್ಲಾ ಕಲೆಕ್ಟರರು ಹುಕುಂ ಕೊಟ್ಟಿರುವರು.

—ಶಿವಾಜಿ ಮೆಮೋರಿಯಲ್ ಫಂಡಿಗೆ ಸಾಂಗ್ಲಿಯ ರಾಜರು ೨೦ ಸಾವಿರ ರೂಪಾಯಿ ದಾನಕೊಟ್ಟಿರುವರು.

—ಬಂಗಾಳದ ದಕ್ಷಿಣೇಶ್ವರದಲ್ಲಿ ರಾಮಕೃಷ್ಣ ಸಂಘದವರು ಅನ್ನಪೀಠ ಎಂಬ ಆಶ್ರಮವನ್ನೂ, ಒಂದು ಬಾಲಿಕಾ ಆಶ್ರಮವನ್ನೂ, ಒಂದು ಶಿಲ್ಪಶಿಕ್ಷಾಶ್ರಮವನ್ನೂ, ಒಂದು ಆಸ್ಪತ್ರೆಯನ್ನೂ, ಮತ್ತು ಒಂದು ವಾಚನಾಲಯವನ್ನೂ ಸ್ಥಾಪಿಸಿರುವರು.

—ವಾಯುವ್ಯ ಗಡಿಪ್ರಾಂತ್ಯದಲ್ಲಿ ಹರಿಪುರ ಎಂಬಲ್ಲಿರುವ ಒಂದು ಸಿಕ್ ಗುರುದ್ವಾರದಲ್ಲಿರುವ ಗ್ರಂಥಸಾಹೇಬ ಎಂಬ ಮತಸಂಬಂಧವಾದ ಪುಸ್ತಕವನ್ನು ಸುಟ್ಟುಹಾಕಿರುವರು.

—ಮುಂಬಾಯಿ ಪಟ್ಟಣದ ವ್ಯಾಪಾರದ ಮಧ್ಯಸ್ಥಳದಲ್ಲಿ ಜುಲ್ಯಾ ೧೫ಕ್ಕೆ ಒಂದು ವಿಶೇಷ ತರದ ಕಳವು ನಡೆಯಿತು. ರಾತ್ರೆ ೯ ಗಂಟೆಗೆ ಪ್ರೇಮಜಿ ಭಾನಜಿ ಎಂಬ ಧಾನ್ಯದ ಸಾಹುಕಾರನೊಬ್ಬನು ತನ್ನ ಭಂಡಸಾಲೆಗೆ ಬೀಗಹಾಕಿ ನಾಲ್ವರೊಡನೆ ಮನೆಗೆ ಹೋಗುತ್ತಿದ್ದನು. ಸಾಹುಕಾರನ ಹತ್ತಿರ ೧೧ ಸಾವಿರ ರೂಪಾಯಿಯ ಗಂಟು ಇತ್ತು. ಅಷ್ಟರಲ್ಲಿ ದೊಣ್ಣೆಗಳನ್ನು ಹಿಡಿದ ನಾಲ್ವರು ಬಂದು ಇವರನ್ನು ಹೊಡೆದು ೧೧ ಸಾವಿರ ರೂಪಾಯಿ ಸೆಳೆದುಕೊಂಡು ನಾಲ್ಕು [illegible] ಒಂದು ಮೋಟರಕಾರಿನಲ್ಲಿ ಕುಳಿತು ಓಡಿಹೋದರು. ಸಾಹುಕಾರನೂ ಸೇವಕರೂ ಆಸ್ಪತ್ರೆಯಲ್ಲಿರುವರು.

—ಇದೇ ತಿಂಗಳಲ್ಲಿ ಜರಗಿದ ಮುಂಬಾಯಿಯ ಅಭಿವೃದ್ಧಿಯ ಸಂಘದವರು ಇನ್ನು ಮುಂದೆ ಮುಂಬಾಯಿ ಕೊರ್ಪೋರೇಶನಿನವರ ಯಾವದೊಂದು ಕಟ್ಟೋಣದಲ್ಲಿಯಾಗಲೀ, ಸ್ಥಳದಲ್ಲಿಯಾಗಲೀ, ಅಥವಾ ಅಂಥಾ ಸ್ಥಳಗಳಲ್ಲಿ ಇನ್ನು ಮುಂದೆ ಕಟ್ಟಬಹುದಾದ ಕಟ್ಟಡಗಳಲ್ಲಿಯೂ ಮಾದಕ ಪದಾರ್ಥಗಳ ಅಂಗಡಿಗಳನ್ನು ಇರಿಸಕೂಡದೆಂದು ಠರಾವು ಮಾಡಿರುವರು.

—ಲೀಕಮಿಶನಿನ ರಿಪೋರ್ಟಿನ ಪ್ರಕಾರ, ಸ್ಟೇಟ್ ಸೆಕ್ರೆಟೇರಿಯವರ ಅನುಮತಿ ಪಡೆದು ಇಂಡಿಯಾ ಸರಕಾರದವರು ರೈಲುವೆ ಇಲಾಖೆಯ ಟ್ರೆನ್ಸಪೋರ್ಟ, ಸಿವಿಲ್ ಎಂಜಿನಿಯರಿಂಗ್ ಮತ್ತು ಮೆಕೆನಿಕಲ್ ಇಂಜನಿಯರಿಂಗ್ ಶಾಖೆಗಳಲ್ಲಿ ಮುಖ್ಯಾಧಿಕಾರ ಉದ್ಯೋಗಸ್ಥರನ್ನು ಇಂಡಿಯದಿಂದ ಚುನಾಯಿಸುವರು.

—ಶಿಲ್ಲಾಂಗಿನಲ್ಲಿ ಬಕ್ರಿದ ದಿವಸ ಒಬ್ಬ ಮುಸಲ್ಮಾನ ಕೊನ್ಸಟೇಬಲನು "ಹಜ್" ಇನ್ಸಪೆಕ್ಟರರನ್ನು ಕೊಂದಿರುವನು!

—ಅಜ್ಮೇರ ಎಂಬ ಪಟ್ಟಣದಲ್ಲಿ ಮಕ್ಕತಿಂದ ೧೧೬೧ ಮಂದಿ ಯಾತ್ರಿಗಳು ಬಂದು ಕರಾಚಿಯಲ್ಲಿ ಇಳಿದರು. ಇವರು ಪಂಜಾಬ ಮತ್ತು ಬಂಗಾಳಕ್ಕೆ ಹೋಗುವವರು. ಮಕ್ಕದಲ್ಲಿರುವ ಅನೇಕ ಸಮಾಧಿಗಳನ್ನೂ, ಗುಮ್ಮಟಗಳನ್ನೂ ಅಗಿದು ಹಾಕಿರುವರೆಂದೂ ಕಲೀಫರಾದ ಅಬುಬಕ್ರ, ಉಸ್ಮಾನ, ಬೀಬಿಯೆಶಾ ಇವರ ಸಮಾಧಿಗಳನ್ನು ಸಂಪೂರ್ಣವಾಗಿ ನಾಶಮಾಡಿರುವರೆಂದೂ ಹಾಜಿಗಳು ಹೇಳುತ್ತಾರೆ. ಇಷ್ಟರ ವರೆಗೆ ಅರಬಿಗೆ ಇರುವ ಯಾತ್ರಿಕರು ೪೨೫ ಅದರೂ ಇನ್ನೊಂದು ಹಡಗ ಬರಲಿಕ್ಕಿದೆಯಂತೆ.

—ರಂಗೂನಿನ ಮ್ಯುನ್ಸಿಪಾಲಿಟಿಯವರು [illegible] ದೇವಿಯವರಿಗೆ ಒಂದು ಮಾನಪತ್ರವನ್ನು ಒಪ್ಪಿಸುವರಂತೆ.

—ಸಿಂಧೂದೇಶದಲ್ಲಿ ಸುಕ್ಕೂರು ಎಂಬಲ್ಲಿ ಸಿಂಧೂನದಿಗೆ ಕಟ್ಟುವ ಅಣೆಕಟ್ಟು ಮತ್ತು ಕಾಲುವೆಗಳ ಕೆಲಸದ ವರದಿಯು ಹೊರಬಂದಿದೆ. ಇದರ ಕೆಲಸವು ೧೯೨೩ನೇ ಇಸವಿಯ ಜುಲ್ಯಾ ೧ನೇ ತಾರೀಕಿಗೆ ಸುರುವಾಯಿತು. ಈ ಪ್ರದೇಶದಲ್ಲಿ ಪ್ರಯಾಣದ ಸೌಕರ್ಯ ಮಾಡಿಸುವುದಕ್ಕಾಗಿಯೂ ಯಂತ್ರಸಾಮಗ್ರಿಗಳನ್ನು ವ್ಯಯಿಸುವುದಕ್ಕಾಗಿಯೂ ಒಂದು ಬ್ರೋಡ್ ಗೇಜ್ ರೈಲುವೆ ಲೈನಿನ ಕೆಲಸವು ಮುಗಿಯಿತು. ಎಲ್ಲಾ ಯಂತ್ರಸಾಧನಗಳನ್ನು ನಡಿಸುವುದಕ್ಕೂ ಕೂಲಿಯಾಳುಗಳಿಗೂ ಉದ್ಯೋಗಸ್ಥರಿಗೂ ಬೆಳಕು ಕೊಡುವುದಕ್ಕಾಗಿ ಉಂಟುಮಾಡಿದ ಎರಡು ಪಟ್ಟಣಗಳಿಗೆ ದೀಪಗಳನ್ನು ಒದಗಿಸುವುದಕ್ಕಾಗಿಯೂ, ವಿದ್ಯುಚ್ಛಕ್ತಿಯ ಯಂತ್ರವನ್ನೂ ಅದಕ್ಕೆ ಬೇಕಾದ ಕಟ್ಟೋಣವನ್ನೂ ತಯಾರಿಸಿರುವರು. ಕಾಲಿವೆಯ ಕೆಲಸ ಸ್ವಲ್ಪ ಮಾತ್ರವೆ ಆಗಿಯದೆ. ೧೬೦೦ ಮೈಲು ದೊಡ್ಡ ಕಾಲುವೆಯನ್ನೂ ಅದಕ್ಕೆ ಹಾಗಿ ೩,೭೦೦ ಮೈಲು ಸಣ್ಣ ಕಾಲುವೆಯನ್ನೂ ಮಾಡುವ ಕೆಲಸವು ಬಾಕಿಯದೆ. ಇಷ್ಟರ ವರೆಗೆ ೩॥ ಕೋಟಿ ರೂಪಾಯಿ ಖರ್ಚಾಯಿತು. ಒಟ್ಟಾರೆ ಇದರ ಖರ್ಚು ೧೮॥ ಕೋಟಿ ರೂಪಾಯಿ.

—ಚಂದ್ರನಗರದಲ್ಲಿ ಫ್ರೆಂಚ ರಿಪಬ್ಲಿಕ್ ಸ್ಥಾಪನೆಯು ಜುಲ್ಯಾ ೧೪ನೇ ತಾರೀಕನ್ನು ಬಹಳ ವಿಜೃಂಭಣೆಯಿಂದ ಆಚರಿಸಿದರು.

—ಗುಜರಾಥಿನಲ್ಲಿ ಮಳೆಯು ಸರಿಯಾಗಿ ಬರಲಾರಂಭಿಸಿಯದೆ.

—ಸೋಡಾವೊಟರ್ ಕಾರ್ಖಾನೆಗಳಲ್ಲಿಯೂ, ಕಾಫಿ, ಚಾ ಹೊಟೇಲುಗಳಲ್ಲಿಯೂ ಗುಟ್ಟಿನಿಂದ ಸರಾಯಿಯನ್ನು ಮಾರುತ್ತಾರೆಂಬ ಸಂಗತಿಯು ಸರಕಾರದವರ ತಿಳುವಳಿಕೆಗೆ ಬಂದಿರುವುದರಿಂದ ಮದರಾಸು ಸಂಸ್ಥಾನದಲ್ಲಿರುವ ಎಲ್ಲಾ ಮುನ್ಸಿಪಾಲಿಟಿಯವರು ೧೯೨೦ನೇ ಇಸವಿಯ ಡಿಸ್ಟ್ರಿಕ್ಟ ಮುನ್ಸಿಪಾಲಿಟಿಯ ಆಕ್ಟಿನ ೨೪೯ನೇ ಸೆಕ್ಷನ್ ಪ್ರಕಾರ ಸೋಡಾವೊಟರ ಮತ್ತು ಕಾಫಿ ಚಾ ದುಕಾನುಗಳಿಗೆ ಕೊಡುವ ಲೈಸನ್ಸುಗಳಲ್ಲಿ ಲೈಸನ್ಸುದಾರನಾಗಲೀ ಅದರ ವಠಾರಗಳಲ್ಲಿರುವ ಇತರ ಯಾರೊಬ್ಬರಾಗಲಿ ಅಲ್ಪಾಟಿಕೆಯಿಂದ ಶರಾಬು ವಿಕ್ರಯಿಸಕೂಡದೆಂಬ ಶರ್ತವನ್ನು ಬರಿಯಬೇಕೆಂದು ಸರಕಾರದವರು ಒಂದು ಹುಕುಂಕೊಟ್ಟಿರುವರು. ಅದೇ ಆಕ್ಟಿನ ೧೮೩ನೇ ಸೆಕ್ಷನ್ (೩) ಮತ್ತು ೨೭೨ನೇ ಸೆಕ್ಷನುಗಳ ಪ್ರಕಾರ ಮುನ್ಸಿಪಾಲ ಚೆಯರ್ಮನರು ಈ ಸ್ಥಳಗಳನ್ನು ಜಪ್ತಿಮಾಡುವ ಅಧಿಕಾರವನ್ನು ಎಕ್ಸಯಿಜ್ ಅಫೀಸರರಿಗೆ ಕೊಡಬಹುದು.

ಇನ್ನು ಮುಂದೆ ಸರಕಾರ ಲೆಕ್ಕಗಳಲ್ಲಿ ಪೈಗಳನ್ನು ತೋರಿಸಬಾರದೆಂದು ಒಂದು ಹುಕುಂಕೊಟ್ಟಿರುವರು. ಆರು ಪೈಗಿಂತ ಹೆಚ್ಚಾದರೆ ಒಂದಾಣೆ ಹಿಡಿಯಬೇಕೆಂದೂ ಅರ್ಧ ಆಣೆಗಿಂತ ಕಡಿಮೆ ಇದ್ದರೆ ಅದನ್ನು ಲೆಕ್ಕದಿಂದ ಬಿಟ್ಟುಬಿಡಬೇಕೆಂದೂ ವಿಧಿಸಿರುವರು. ಆದುದರಿಂದ ಎಲ್ಲಾ ಲೋಕಲ್ ಬೋರ್ಡುಗಳು ಮುನ್ಸಿಪಾಲಿಟಿಗಳು ಮತ್ತು ಮೆಡ್ರಾಸ್ ಕೊರ್ಪೊರೇಶನಿನ ಲೆಕ್ಕಗಳಲ್ಲಿ ೧೯೨೬ನೇ ಇಸವಿ ಅಕ್ಟೋಬರ ೧ನೇ ತಾರೀಕಿನಿಂದ ಈ ಪ್ರಕಾರ ಲೆಕ್ಕವಿಡಬೇಕಾಗುವುದು. ಎಲ್ಲಾ ಲೆಂಡಸೆಸ್ಸ, ಬೆಂಕಿನ ವಹಿವಾಟ, ಸಾಲ, ಸಾಲದ ಬಡ್ಡಿ ತೀರಿಸುವಿಕೆ. ಮುಂತಾದವುಗಳಲ್ಲಿ ಈ ರೀತಿಯಲ್ಲಿ ಲೋಕಲ್ ಬೋರ್ಡುಗಳು ಲೆಕ್ಕವಿಡಬೇಕು. ಬೇಂಕುಗಳಿಗೆ ಕೊಡುವ ಹಣದಲ್ಲಿ ಪೈಗಳಿದ್ದರೆ ಅವುಗಳನ್ನು ಆಣೆ ಆಗುವ ವರೆಗೆ ಇಟ್ಟು, ನಂತರ ಬೇಂಕಿಗೆ ಪಾವತಿ ಮಾಡಬೇಕು. ಬೇಂಕುಗಳಲ್ಲಿದ್ದ ಇವರ ಲೆಕ್ಕದ ಪೈಗಳ ವಿಷಯದಲ್ಲಿಯೂ ಇದೇರೀತಿ.

—ಲೋಕಲ್ ಬೋರ್ಡ ಮೆನ್ಯುವಲಿನ ೧೪೯ನೇ ರೂಲುಪ್ರಕಾರ ಪ್ರತಿ ಕಾಲುವರುಷದ ಅಂತ್ಯದಲ್ಲಿ ಕಳುಹಿಸಬೇಕಾದ ಎಲಿಮೆಂಟರಿ ಶಾಲೆಗಳ ಖರ್ಚಿನ ಲೆಕ್ಕಗಳನ್ನು ತಾಲೂಕು ಬೋರ್ಡ ಪ್ರೆಸಿಡೆಂಟರುಗಳು ಡಿಸ್ಟ್ರಿಕ್ಟ ಎಜ್ಯುಕೇಶನಲ್ ಆಫೀಸರರಿಗೆ ಕಳುಹಿಸದಿಲ್ಲವೆಂದೂ ಕೆಲವರು ಕಳುಹಿಸಿದರೂ ತಕ್ಕ ಕಾಲದಲ್ಲಿ ಕಳುಹಿಸುವದಿಲ್ಲವೆಂದೂ ಎಜ್ಯುಕೇಶನಲ್ ಅಫೀಸರರು ಸರಕಾರಕ್ಕೆ ತಿಳಿಸಿರುವುದರಿಂದ ಸರಕಾರದವರು ಒಂದು ಹುಕುಂ ಕಳುಹಿಸಿರುವರು. ಇದರ ಪ್ರಕಾರ ಎಜ್ಯುಕೇಶನಲ್ ಅಫೀಸರರು ಡ್ಯಾರೆಕ್ಟರರಿಗೆ ಕಳುಹಿಸಲಿಕ್ಕೆ ತಯಾರಿಸುವ ಎಲಿಮೆಂಟರಿ ಶಾಲೆಗಳ ಲೆಕ್ಕಗಳು ಸರಿಯಾಗಿ ತಯಾರಿಸಲ್ಪಡುವಂತೆ ತಾಲೂಕು ಬೋರ್ಡ ಪ್ರೆಸಿಡೆಂಟರುಗಳು ಪ್ರತಿ ಕಾಲುವರ್ಷ ಅಂತ್ಯವಾದ ೨೦ನೇ ತಾರೀಕಿನೊಳಗೆ ಆ ಲೆಕ್ಕಗಳನ್ನು ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರ ಮುಖಾಂತರ ಎಜ್ಯುಕೇಶನಲ್ ಆಫೀಸರರಿಗೆ ಕಳುಹಿಸಬೇಕಾಗಿದೆ.

—ಮದರಾಸು ಹಿಂದೂ ರಿಲಿಜಿಯಸ್ ಎಂಡೋಮೆಂಟ ಬೋರ್ಡಿಗೆ ದೇವಸ್ಥಾನಗಳಿಂದಲೂ ಮಠಗಳಿಂದಲೂ ೧೯೨೬ನೇ ಇಸವಿ ಮೇ ೩೧ರ ವರೆಗೆ ೪೦,೮೯೯ ರೂಪಾಯಿ ವಸೂಲಾಗಿಯದಂತೆ. ಖರ್ಚು ಮೇ ೩೧ರ ವರೆಗೆ ೧,೬೨,೮೪೮ ರೂಪಾಯಿ.

ದಕ್ಷಿಣ ಕನ್ನಡ.

ಮಂಗಳೂರು:— ಕಳೆದ ತಾ. ೧೭-೭-'೨೬ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೨೩ ಮರಣಗಳು ೪೦ ಜನನಗಳು ಆಗಿದ್ದವು.

ಇಲ್ಲಿಯ ಕಲೆಕ್ಟರ ಆಫೀಸಿನಲ್ಲಿ ಹೆಡ್‌ಕ್ಲಾರ್ಕರಾಗಿದ್ದ ಎನ್. ಕೃಷ್ಣಪ್ಪನವರು ಹೊಸಮನೆ ಡಿಪುಟಿ ತಹಸೀಲುದಾರರಾಗಿ ವರ್ಗಾಯಿಸಲ್ಪಟ್ಟಿರುವರು.

ಮಂಗಳೂರು ಸ್ಟೇಶನರಿ ಸಬ್ ಮಜಿಸ್ಟ್ರೇಟರಾಗಿದ್ದ ಜಿ. ದತ್ತಾತ್ರೇಯ ರಾಯರು ಈಗ ಕಲೆಕ್ಟರ ಆಫೀಸಿನಲ್ಲಿ ಹೆಡ್‌ಕ್ಲಾರ್ಕರಾಗಿ ನೇಮಕ ಹೊಂದಿರುವರು.

ಕಾಸರಗೋಡಿನಲ್ಲಿ ತಹಸೀಲದಾರರಾಗಿದ್ದ ಮ| ರಾ| ಪಡಾರು ವೆಂಕಟರಾಯರು ಇಲ್ಲಿಯ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾಗಿ ನೇಮಕ ಹೊಂದಿರುವರು.

ಇಲ್ಲಿಯ ಟ್ರೆಜರಿ ಆಫೀಸರರಾಗಿದ್ದ ಎಲ್. ಎ. [illegible] ಇಲ್ಲಿಯ ರೆವಿನ್ಯು ಡಿವಿಜನಲ್ ಆಫೀಸರರಾಗಿ ನೇಮಕವಾಗಿರುವರು.

ದಕ್ಷಿಣ ಕನ್ನಡ ಜಿಲ್ಲಾ ಮೆಡಿಕಲ್ ಆಫೀಸರರು, ಜನರನ್ನು ಸಾಂಕ್ರಾಮಿಕ [illegible] ಮಂಗಳೂರಿನ ವೆನ್‌ಲೋಕ್ ಆಸ್ಪತ್ರೆಯಲ್ಲಿ [illegible] ಇಲ್ಲಿಗೆ ಬಂದ ರೋಗಿಗಳನ್ನು [illegible] ಒಪ್ಪಿಸುವುದು [illegible] ಅದಕ್ಕೆ ಸರಕಾರದ ಒಪ್ಪಿಗೆ ಇದೆಯೇ— [illegible] ಮದ್ರಾಸು ಕೌನ್ಸಿಲಿನಲ್ಲಿ ಪ್ರಶ್ನೆಮಾಡಿದಾಗ [illegible] ಈ ವಿಷಯದಲ್ಲಿ ಸರಕಾರವು [illegible] ಎಂದು ಉತ್ತರ ಬಂತು.

ಗಂಗೊಳ್ಳಿ:— ಇಲ್ಲಿಂದ ಸ್ವಲ್ಪ ದೂರದಲ್ಲಿ ಒಂದು ಸೇತುವೆ ಕಳೆದ ತರುವಾಯ ಮಾರ್ಗದುರುಸ್ತಿಗೆ ಹಿಡಿದದೆ. ಆದರೆ ಈ ದುರುಸ್ತಿಯು ಭಾರ್ಜನಲ್ಲಿದ್ದ ಒವರ್ಸಿಯರರಿಗೆ ತಮ್ಮ ಕೆಲಸವು ಸರಿಯಾಗಿ ತಿಳಿದಿರ ಬಹುದೊ ಎಂಬುದನ್ನು ಆ ದುರುಸ್ತಿಪಡಿಸಿದ ನಮೂನೆ ನೋಡಿದರೆ ಅನುಮಾನಿಸಬೇಕಾಗಿದೆ. ಮಳೆ ಬಂದ ಸಮಯದಲ್ಲಿ ಒಳ್ಳೇದಾದ ಮಾರ್ಗದ ಮೇಲೆ ಮಣ್ಣನ್ನು ಹಾಕಿ ಮೊಣಕಾಲು ಕೆಸರು ಮಾಡಿದರು. ಜನರು ಕೂಡ ನಡೆಯುವುದು ಅಸಾಧ್ಯವಾಯಿತು. ಮಳೆ ನಿಂತು ಬಿಸಿಲು ಬೀಳಲಾರಂಭಿಸುವಾಗ ಅದನ್ನು ಸರಿಯಾಗಿ ಮಾಡಿಸಬಹುದಿತ್ತು. ಆದರೆ ಡಿಪಾರ್ಟ್‌ಮೆಂಟಿನ ಲಕ್ಷ್ಯವು ಅತ್ತಕಡೆ ಹೋಗಲೇ ಇಲ್ಲ. ಈಗ ಮಾರ್ಗವು ಒಂದು ವರೆ ಫರ್ಲಾಂಗು ಉದ್ದಕ್ಕೆ ಪೂರಾ ಹೊಂಡುಗಳಿಂದ ತುಂಬಿದೆ. ಗಾಡಿ ನಡೆಯಲಿಕ್ಕೂ ಮೋಟಾರು ನಡೆಯಲಿಕ್ಕೂ ಕಷ್ಟವಾಗಿದೆಯಲ್ಲದೆ ನಡೆಯುವುದು ಕೂಡಾ ಸಾಧ್ಯವಿಲ್ಲ. ಪುನಹ ಮಳೆ ಬಂದರೆ ಪುನಹ ಮೊಣಕಾಲು ಕೆಸರು ಆಗುವುದರಲ್ಲಿ ಸಂಶಯವಿರದು.

ಪಾಣೆಮಂಗಳೂರು:— ಕಟ್ಟಿ ಆಳಿಯುತ್ತಾನೆ ಸುರಿಯುತ್ತಾನೆ, ಎಂಬ ಗಾದೆಯಂತೆ ಪಾಣೆಮಂಗಳೂರು ಸಂಕದ ಬಳಿ ಪಶ್ಚಿಮ ದಿಕ್ಕಿನಲ್ಲಿ ಇದೇ ಬೇಸಿಗೆ ಕಾಲದಲ್ಲಿ ಕಟ್ಟಿದ ಫಿಟಿಂಗ ಕೆಲಸವು ಮಾರ್ಚ ಅಖೈರಿಗೆ ಲೆಕ್ಕಕ್ಕೆ ಮುಗಿಯಿತೆಂತ ಮಾಡಿ ಎಪ್ರಿಲ್ ತಿಂಗಳಲ್ಲಿ ಹಾಗೂ ಹೀಗೂ ಗಡಬಿಡಿಯಿಂದ ಮುಗಿಯಿತೆಂತಾಯಿತು. ಕಂಟ್ರಾಕ್ಟದಾರರಿಗೆ ಹಣ ಸಿಕ್ಕಿದಂತಾಯಿತು. ದಕ್ಷಿಣ ಕನ್ನಡ ಜಿಲ್ಲಾ ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಮಾರ್ಚ ಅಖೈರಿಗೆ ಉಳಿದ ಹಣ ಖರ್ಚದಂತಾಯಿತು. ಮೇ ತಿಂಗಳಲ್ಲಿ ಒಂದೆರಡು ಮಳೆ ಬಂದೊಡನೆ ಅಡಿಯ ಎರಡು ಮೂರು ಕಲ್ಲುಗಳು ಹೊರ ಕಂಡು ಬಂದವು. ಕೆಲವು ದಿವಸಗಳಲ್ಲಿ ಇವು ಒಳಗೆ ಜಡಿಯಲ್ಪಟ್ಟವು. ಜೂನ ತಿಂಗಳ ಮಳೆಗೆ ಕಟ್ಟೋಣ ಉಬ್ಬಿತು. ಜುಲ್ಯಾ ತಿಂಗಳಲ್ಲಿ ಮಧ್ಯ ಭಾಗ ಹೊಳೆಪಾಲಾಯಿತು. ಕಟ್ಟಿಸಿದವರಿಗೂ ಕಟ್ಟಿದವರಿಗೂ ಅಪಕೀರ್ತಿಯಾಯಿತು. ಜುಲಾಯಿ ತಿಂಗಳಲ್ಲಿ ಹೊಸ ರೀತಿಯಲ್ಲಿ ಕಟ್ಟಲಾರಂಭವಾಯಿತು. ಒಮ್ಮೆ ತಂಬಿಸಿದ ಮಣ್ಣೆಲ್ಲಾ ಹೊಳೆಗೆ ಬಿಸಾಡಲಾಯಿತು. ಸಾವಿರಗಟ್ಲೆ ಹಣ ನೀರುಪಾಲಾಯಿತು. ಇಷ್ಟೆಲ್ಲಾ ನಷ್ಟಕ್ಕೆ ಯಾರ ಕಣ್ಣು ಕಟ್ಟಿತು.

ಈ ಊರಿನ ವ್ಯಾಪಾರವ್ಯವಹಾರಗಳು ಬಹಳ ಹೆಚ್ಚಾಗುತ್ತಾ ಬರುವುದರಿಂದ, ಈ ಊರಿನವ್ಯಾಪಾರಸ್ಥರ ಸೌಕರ್ಯಕ್ಕಾಗಿ ಒಂದು ಕಂಬ್ಯಾಂಡ್ ಸಬ್ ಪೋಸ್ಟ ಆಫೀಸನ್ನು ಇಡಬೇಕೆಂದು ಜನರು ಮನವಿಮಾಡಿಕೊಂಡದ್ದನ್ನು ಇಲಾಖೆಯವರು ಲಕ್ಷಕ್ಕೆ ತಂದು, ಇಲ್ಲಿ ಸಬ್ ಪೋಸ್ಟ ಆಫೀಸನ್ನು ತೆರೆಯುವುದಕ್ಕಾಗಿ ಲೆಕ್ಕಪತ್ರಗಳನ್ನು ತನಿಖೆಮಾಡುತ್ತಾರಾಗಿ ಊರಿನವರು ಸಂತೋಷದಿಂದಿರುತ್ತಾರೆ. ಬರಿಮಾರ, ಕರಿಂಗಾಣ, ನೇರಳಕಟ್ಟೆ ಬ್ರಾಂಚ್ ಆಫೀಸುಗಳನ್ನು ಇದಕ್ಕೆ ಕೂಡಿಸಬಹುದು. ಬಂಟವಾಳ ಪೋಸ್ಟು ಆಫೀಸಿನ ಇಬ್ಬರು ವಿಲೆಜ್ ಪೋಸ್ಟುಮೆನರುಗಳನ್ನು ಈ ಆಫೀಸಿಗೆ ವರ್ಗಮಾಡಿ ಒಬ್ಬ ಟೌನ್ ಪೋಸ್ಟುಮೇನನನ್ನು ಮೊಕ್ರಾರುಮಾಡಿದರಾಯಿತು. ಟೆಲಿಗ್ರಾಫ್ ಕೊಂಡುಬರುವದಾದರೆ ವಿಶೇಷ ಖರ್ಚಿಲ್ಲ. ಲೈನ ಪೇಟೆಯಿಂದಲೇ ಹೋಗಿಯದೆ.

ಇಲ್ಲಿ ಬಂಗ್ಲೆಗೆ ಹೋಗುವ ಮಾರ್ಗದ ಹತ್ತಿರವಿರುವ ಭಾವಿಯ ಕಲ್ಲುಗಳು ಜಾರಿ ಬಿದ್ದಿರುವುದರಿಂದ ಇದನ್ನು ಹೊಸತಾಗಿ ಕಟ್ಟುವ ಆಲೋಚನೆ ಇದೆ ಎಂದು ಕೇಳುತ್ತದೆ. ಈ ಬಾವಿಯಲ್ಲಿ ಕಠಿಣತರದ ಬೇಸಿಗೆಯಲ್ಲಿಯೂ ನೀರಿದೆ. ಈ ಭಾವಿಯ ನೀರನ್ನು ಊರಿನವರೆಲ್ಲರೂ ಕೊಂಡು ಹೋಗುತ್ತಿರುವರು. ಆದುದರಿಂದ ಇದನ್ನು ದುರುಸ್ತಿಮಾಡಿಸುವಾಗ ಇನ್ನೂ ಆಳವಾಗಿಯೂ ಅಗಲವಾಗಿಯೂ ಮಾಡಿಸಿದರೆ ಬಹಳ ಒಳ್ಳೆದಿತ್ತು.

ನರಿಕೊಂಬು:— ಈ ಗ್ರಾಮದ ಮಕ್ಕಳು, ಇಲ್ಲಿ ಒಂದು ಶಾಲೆಯಿಲ್ಲದೆ ಕಷ್ಟಪಡುವುದನ್ನು ತಿಳಿದು ಮಂಗಳೂರು ತಾಲೂಕು ಬೋರ್ಡಿನವರು ಎಲಿಮೆಂಟರಿ ಶಾಲೆಯನ್ನು ಸೆಂಕ್ಷನ್ ಮಾಡಿರುತ್ತಾರೆ. ಮಂಗಳೂರು ತಾಲೂಕು ಬೋರ್ಡ ಪಾಣೆಮಂಗಳೂರು ಸರ್ಕಲಿನ ಮೆಂಬರರಾಗಿರುವ ರಾ। ನಂಕೊಂಬು ರಾಮರಾಯರವರು ಇದೇ ಗ್ರಾಮದಲ್ಲಿ ವಾಸಿಸಿಕೊಂಡಿರುತ್ತಾ ಈ ಶಾಲೆಯನ್ನು ಇಷ್ಟು ವರೆಗೆ ತೆರೆಯುವ ಪ್ರಯತ್ನ ಮಾಡದಿರುವುದನ್ನು ನೋಡುವಾಗ ತುಂಬಾ ಆಶ್ಚರ್ಯವಾಗುತ್ತದೆ.

ಇಲ್ಲಿ ಹಿಂದಿನ ಎರಡು ವರುಷಗಳಲ್ಲಿ ನೆರೆಬಂದು ಬೆಳೆ ಹಾಳಾಯಿತು. ಕಳೆದ ವರುಷ ಕಣೆ ಬಂದು ಬೆಳೆ ಸರಿಯಾಗಿ ಆಗದ ಗೇಣಿವಕ್ಕಲುಗಳಿಗೆ ಗಂಜಿಗೆ ತತ್ವಾರವಾಯಿತು. ಈ ಕಾಲ ಸಾಗ್ವಳಿಯ ಆರಂಭದಲ್ಲಿಯೇ ಮಳೆಯು ಹೋದ್ದರಿಂದ ಮುಂದಿನ ಗತಿ ದೇವರೇ ಬಲ್ಲ.

ಬಂಟವಾಳ:— ಇಲ್ಲಿ ೧೯೨೪ರಲ್ಲಿ ನೆರೆ ಬಂದ ಸಮಯ ಮಾರ್ಗವನ್ನು ಅಗಲಮಾಡಲಿಕ್ಕೆ ಆಲೋಚಿಸಿ ೧೯೨೫ರಲ್ಲಿ ಪ್ಲೇನ್ ಎಸ್ಟಿಮೇಟ್ ತಯಾರಿಸಿ ೧೯೨೫ರಲ್ಲಿ ಲೆಂಡ ಎಕ್ವೈಯರ್ ಮಾಡಿ ೧೯೨೬ನೇ ಇಸವಿ ಜುಲ್ಯಾ ಅಖೈರಿಗೆ ಕೆಲಸ ಶುರುಮಾಡುವರೆಂದು ವರ್ತಮಾನ ಕೇಳಿ ಬರುತ್ತದೆ.

ಇಲ್ಲಿ ಬಡ್ಡೆಕಟ್ಟೆ ಸಂಕದ ಪಶ್ಚಿಮಕ್ಕಿರುವ ಹಿತ್ತಲುಗಳಲ್ಲಿ ಕಟ್ಟೋಣಗಳು ಇರುವುದರಿಂದ ನೆರೆನೀರು ಏರಿದರೆ ನೀರು ಹರಿಯುವುದಕ್ಕೆ ತೊಡಕಾಗುತ್ತದೆಂದು ತಿಳಿದು ಎರಡೂ ಕಡೆಯಲ್ಲಿರುವ ಹಿತ್ತಲುಗಳನ್ನು ಎಕ್ವಾರ್ ಮಾಡಿರುತ್ತಾರೆ. ದುರ್ವಾಸನೆಯಿಂದ ಜನರ ಆರೋಗ್ಯವನ್ನು ಕೆಡಿಸುವ ಪೇಟೆಯ ಮಧ್ಯದಲ್ಲಿರುವ ಮೀನುಮಾರ್ಕೇಟನ್ನು ಈ ಖಾಲಿ ಸ್ಥಳಕ್ಕೆ ಒಯ್ಯುದರೆ ಉತ್ತಮವಿತ್ತು.

ಈ ಸಂಕದ ಬಳಿಯಲ್ಲಿರುವ ಶಿಲೆಕಲ್ಲಿನ ರಾಶಿಯನ್ನು ಅಯ್ಯನಾಯ್ಕರ ಓಣಿ ಸಂಕದ ಹತ್ತರ ಫಿಟಿಂಗ ಕಟ್ಟಲಿಕ್ಕೂ ಅಯ್ಯನಾಯ್ಕರ ಓಣಿಯ ಎರಡು ಬದಿಗಳನ್ನು ಕಟ್ಟಿಸಲಿಕ್ಕೆ ಉಪಯೋಗಿಸಿದರೆ ಹೇರಳ ಹಣ ವೆಚ್ಚಮಾಡಿ ತುಂಬಿಸಿದ ಮಣ್ಣು ನೀರಿನಿಂದ ಕೊಚ್ಚಿ ಹೋಗದಂತೆ ಅಗುತಿತ್ತು.

ರಾ। ಕಬೆಟ್ಟು ವೆಂಕಟ್ರಮಣಯ್ಯನವರು ಹೊಸತಾಗಿ ಕಟ್ಟಿಸಿದ ಪೋಸ್ಟಾಫೀಸು ಕಟ್ಟೋಣದ ಕೆಲಸವು ಸಂಪೂರ್ಣವಾಯಿತು. ಅಗೋಸ್ತು ಒಂದನೇ ತಾರೀಕಿಗೆ ಪೋಸ್ಟು ಆಫೀಸನ್ನು ಇಲ್ಲಿಗೆ ತರುವದೆಂದು ನಿಶ್ಚಯಿಸಿರುತ್ತಾರೆ. ಈ ಕಟ್ಟೋಣಕ್ಕೆ ತಂತಿ ತರುವಾಗ ಮಾರ್ಗದ ಪೂರ್ವದಿಕ್ಕಿನಿಂದ ತಂದರೆ ಇಲ್ಲಿಯ ಸೀತಾರಾಮ, ವೆಂಕಟರಮಣ, ಮಹಾಲಿಂಗೇಶ್ವರ ದೇವರ ರಥೋತ್ಸವದ ಸಮಯ ತಂತಿ ಸರಿಗೆಯನ್ನು ಆಗಾಗ್ಗೆ ತೆಗೆಯಬೇಕಾಗುತ್ತದೆ. ಆದುದರಿಂದ ತಂತಿಯನ್ನು ಮಾರ್ಗದ ಪಶ್ಚಿಮ ದಿಕ್ಕಿನಿಂದ ತಂದು ಪೋಸ್ಟು ಆಫೀಸಿಗೆ ಕೊಡಿಸಬೇಕಾಗಿ ಇಲ್ಲಿಯ ಶ್ರೀ ವೆಂಕಟರಮಣ ತಿರುಮಲ ದೇವರ ದೇವಳದ ಆಡಳಿತದಾರರು ಟೆಲಿಗ್ರಾಫ್ ಇಲಾಖೆಯವರಿಗೆ ಮುಖತಃಮಾಡಿದ್ದರು. ಆದರೆ ಲ್ಯಾನಮೇನ್ ಬಂದು ಸರ್ವೆಮಾಡಿ ಪೂರ್ವದಿಕ್ಕಿನಿಂದಲೇ ತರಬೇಕಲ್ಲದೆ ಬೇರೆ ಉಪಾಯವಿಲ್ಲವೆಂದು ರಿಪೋರ್ಟ ಮಾಡಿರುವುದಾಗಿ ವರ್ತಮಾನವಿದೆ. ಇದರಿಂದ ಲ್ಯಾನಮೇನರಿಗೆ ವರುಷಕ್ಕೆ ನಾಲ್ಕೈದು ಸಾರಿ ಭತ್ತೆ ಸಿಕ್ಕುವುದು ನಿಜ, ಆದರೆ ಲ್ಯಾನನ್ನು ಪಶ್ಚಿಮದಿಕ್ಕಿನಿಂದ ತಂದರೆ ಭತ್ತೆ ಹಣವು ಸರಕಾರಕ್ಕೆ ಉಳಿಯುವುದು. ಮಸೀದಿಯ ಹತ್ತಿರದಿಂದ ಹಿತ್ತಲುಗಳಿಂದ ಅಥವಾ ಮಾರ್ಗದ ಬದಿಯಿಂದಲೇ ತರಲು ಏನೊಂದೂ ಅಡಚಣೆಗಳು ಇರುವುದಿಲ್ಲ. ಆದುದರಿಂದ ಟೆಲಿಗ್ರಾಫ್ ಇಲಾಖಾ ಅಧಿಕಾರಿಗಳು ಮಾರ್ಗದ ಪಶ್ಚಿಮ ದಿಕ್ಕಿನಿಂದಲೇ ಲ್ಯಾನನ್ನು ತಂದು ಪೋಸ್ಟು ಆಫೀಸಿಗೆ ಕೊಡಿಸಿದರೆ ಉತ್ತಮವಿತ್ತು.

ಇಲ್ಲಿಯ ಡಿಪ್ಯುಟಿ ತಹಶೀಲುದಾರರ ಖಚೇರಿಯ ಸಬ್ ಜೈಲಿನಲ್ಲಿ ಗಂಟೆ ಹೊಡಿಯುವ ಪದ್ಧತಿ ಖಚೇರಿ ಕಟ್ಟಿದಂದಿನಿಂದ ಇತ್ತು. ಈಗ ಈ ಪದ್ಧತಿಯನ್ನು ನಿಲ್ಲಿಸಲಿಕ್ಕೆ ಕಾರಣವೇನೋ ತಿಳಿಯದು. ಸೆಂಟ್ರಿಯ ಪಾರೆಯು ಇದೆ. ಒಬ್ಬ ಪೇದೆಯೂ ಅಲ್ಲಿಯೇ ಮಲಗುತ್ತಾನೆ.

ಬಂಟವಾಳ ಮೂಡ:— ಈ ಗ್ರಾಮವು ಬಹಳ ದೊಡ್ಡದಾಗಿ ೩ ಮೈಲು ಉದ್ದವಾಗಿರುವುದರಿಂದ ಇಲ್ಲಿ ಒಂದು ಶಾಲೆಯನ್ನು ಕುಪ್ಪಿಲದಲ್ಲಿ ತೆರೆಯುವುದಕ್ಕೆ ಬೋರ್ಡಿನವರು ಸೆಂಕ್ಷನ್‌ಮಾಡಿರುತ್ತಾರೆ. ಇಲ್ಲಿಯ ಜವಿಾನುದಾರರೊಬ್ಬರು ತತ್ಕಾಲಕ್ಕೆ ಶಾಲಾಕಟ್ಟೋಣ ಮಾಡಿಗಿ ಕೊಡಲಿಕ್ಕೆ ಒಪ್ಪಿರುವರಂತೆ.

ಅಮಟಾಡಿ:— ಇಲ್ಲಿಯ ಹೊಳ್ಳರ ಭಂಡಸಾಲೆಯಲ್ಲಿ ಒಂದು ಬೋರ್ಡು ಶಾಲೆಯನ್ನು ತೆರಿಯುವದೆಂದು ನಿಶ್ಚಯಿಸಿರುತ್ತಾರೆ. ಇಲ್ಲಿಯ ಜವಿಾನುದಾರರಾದ ಎರಿಯ ನಾಂಫ ಪೂಂಜರವರೂ, ಅಮಟಾಡಿ ಪಟೇಲ ವಾಸುದೇವ ಹೊಳ್ಳರವರೂ, ಶಿವಪ್ಪ ಪೂಂಜರವರೂ, ತಡ್ಯಾಲ ಗುತ್ತಿನವರೂ ಈ ಶಾಲೆಯನ್ನೂ ತೆರಿಯುವುದರಲ್ಲಿ ಬಹಳ ಸಾಹಸಪಡುತ್ತಿರುವರು. ಈ ಗ್ರಾಮದಲ್ಲಿ ಶಾಲೆಗೆ ಬರಲಿಕ್ಕಿರುವ ಸುಮಾರು ೧೫೦ ಮಂದಿ ಹುಡುಗರಿರುವರು. ಇದರಲ್ಲಿ ಕೆಳತರಗತಿಯ ಹುಡುಗರು ಸೇರಿರುವುದಿಲ್ಲ.

ಸಿದ್ದಕಟ್ಟೆ:— ಇಲ್ಲಿ ಒಂದು ಬ್ರಾಂಚ್ ಪೋಸ್ಟ್ ಆಫೀಸನ್ನು ತೆರಿಯುವುದಕ್ಕಾಗಿ ಪೋಸ್ಟು ಮಾಸ್ಟರ ಜನರಲಿಗೆ ಮನವಿಮಾಡಿರುತ್ತಾರೆ.

ಮೂಡುಬಿದರೆ:— ಇಲ್ಲಿಗೆ ಕಲ್ಯಾನ, ವಿಟ್ಲ, ಪಾಣೆಮಂಗಳೂರು ಬಂಟವಾಳ ದಾರಿಯಾಗಿ ಪಿ. ಐ. ಮೋಟರ ಸರ್ವಿಸು ತೆರಿಯಲ್ಪಡುವುದೆಂದು ನೋಟಿಸುಗಳು ಹಂಚಲ್ಪಟ್ಟದ್ದೆ ಕಂಡುಬರುವುದು ಹೊರತು ಬಸ್ಸುಗಳ ಚಲಾವಣೆ ಕಂಡುಬರುವುದಿಲ್ಲ.

ಕಾಸರಗೋಡು:— ಇಲ್ಲಿ ಮಳೆಯು ಸುರಿವೇ ಇಲ್ಲದಂತಾಗಿದೆ. ಬೇಸಗೆಯಲ್ಲಿ ಕಾಯುವಂತೆ ಬಿಸಿಲು ಕಾಯುತ್ತದೆ ಗದ್ದೆಗಳಲ್ಲಿ ಬಿತ್ತಿದ ಪೈರು ಈಗಲೇ ಒಣಗಲಿಕ್ಕೆ ಶುರುವಾಗಿಯದೆ. ನೆಲ್ಲಾರು ವಗೈರ ಊರುಗಳಿಂದ ಅಕ್ಕಿ ಬಾರದಿದ್ದರೆ ಈ ವರ್ಷದ ಬಡವರ ಗೋಳು ವರ್ಣಿಸಲಾರದಷ್ಟು ಆಗುತ್ತಿತ್ತು. ಮುಂದಿನ ಸ್ಥಿತಿ ಭಗವಂತನಿಗೆ ಗೊತ್ತು.

ಇಲ್ಲಿಯೇ ಸಮೀಪದ ಹಳ್ಳಿಯಾದ ಪುತ್ತೂರು ಎಂಬಲ್ಲಿ ಕೆಲ ಮಾಪಿಳ್ಳೆಯವರಿಗೆ ಒಂದು ಹುಣಿಯ ವಿಷಯ ಜಗಳವಾಗಿ ೭ ಜನರಿಗೆ ಹೆಚ್ಚಿನ ಜಖಂ ಆಗಿ ಇಲ್ಲಿಯ ಆಸ್ಪತ್ರೆಯಲ್ಲಿರುತ್ತಾನೆ. ಇಬ್ಬರ ಪರಿಸ್ಥಿತಿಯು ಹೆಚ್ಚಿನ ಕಷ್ಟವಾಗಿರುತ್ತದೆಂತ ವರ್ತಮಾನವಿದೆ.

ಲೇಬರ್ ಡಿಪಾರ್ಟಮೆಂಟಿನ ಸಹಕಾರಿ ಸಂಘಗಳ ಇನ್ಸ್‌ಪೆಕ್ಟರರಾದ್ದ ರಾ। ಯು. ಪಾಪೇಶ್ವರಯ್ಯನವರು, ಇಲ್ಲಿಯ ಸಹಕಾರಿ ಸಂಘಗಳ ಆಡಿಟರರಾಗಿ ಚಾರ್ಜ ವಹಿಸಿರುತ್ತಾರೆ.

ಊರಲ್ಲಿ ಅಲ್ಲಲ್ಲಿ ಇನ್‌ಫ್ಲುಯೆಂಜಾ ಜ್ವರ ಮತ್ತು ಅಜೀರ್ಣವ ಉಪ್ಪದ ಹೊರಕಡೆ ಇರುತ್ತದೆ. ಒಟ್ಟಾರೆ ಹವೆಯೇ ಸರಿಯಿಲ್ಲದಂತಾಗಿದೆ.

ಇಲ್ಲಿಯ ಶ್ರೀ ವಸಂತ ಪ್ರಸಾದಿತ ನಾಟಕ ಮಂಡಳಿಯವರು ಮತ್ತು ಮಂಗಳೂರು ಹಳ್ಳಿಗೆ ಬಜಾರಿನ ನಾಟಕ ಮಂಡಳಿಯವರು ಒಟ್ಟು ಕೂಡಿ ಕೆಲ ದಿನಗಳ ಹಿಂದ 'ಕಾಳಿಕಾಸತಿ' ಎಂಬ ಉತ್ಕೃಷ್ಟ ನಾಟಕವನ್ನು ಅಭಿನಯಿಸಿದರು. ಆದರೆ ಈ ನಾಟಕಕ್ಕೆ ಟಿಕೇಟಿನ ದರಗಳು ಸ್ವಲ್ಪ ಹೆಚ್ಚಾಗಿದ್ದ ಪ್ರಯುಕ್ತ ಹೆಚ್ಚಿನ ಪ್ರೋತ್ಸಾಹ ದೊರಕಲಿಲ್ಲವಂತ. ಟಿಕೇಟಿನ ದರಗಳನ್ನು ಕಮ್ಮಿಮಾಡಿ ಇನ್ನೊಂದು ಅಥವಾ ಎರಡು ನಾಟಕಗಳನ್ನು ಅಭಿನಯಿಸಿದರೆ ತಕ್ಕ ಪ್ರಯೋಜನವಾಗಲಿಕ್ಕೆ ಸಾಕು.

ಇಲ್ಲಿಯ ವಿಶ್ವಕ್ರಿಯ ಮೋಟರ್ ಬಸ್ ಕಂಪೆನಿಯ ಮ್ಯಾನೇಜರಲ್ಲಿ ಒಬ್ಬರಾದ ರಾ। ನರಸಿಂಗ ಕ್ಯಾನುಭಾಗರ ಅಣ್ಣ ರಾ. ಪಾಂಡುರಂಗ ಶ್ಯಾನುಭಾಗರ ಒಂದು ಮಗುವು ಬಸ್ ರಿಪೇರಿ ನಡಿಸುವ ಸಮಯ ಪಟ್ರೋಲಿಗೆ ಬೆಂಕಿ ತಾಗಿ ಉಂಟಾದ ಅವಘಡದಿಂದ ಮೈ ಸುಟ್ಟು ನಾಲ್ಕೈದು ದಿವಸಗಳ ತನಕ ಇದ್ದು ಸ್ವರ್ಗಸ್ಥವಾಯಿತೆಂಬುದನ್ನು ತಿಳಿಸಲು ತುಂಬಾ ವಿಷಾದಪಡುತ್ತೇವೆ.

ಇಲ್ಲಿಯ ಕಾಯಂ ತಹಶೀಲ್ದಾರರಾದ ರಾ। ಟಿ ಭವಾನಿಶಂಕರರಾಯರವರು ಇದೇ ಬರುವ ಅಗೋಸ್ತು ತಾ. ೧ಕ್ಕೆ ತಮ್ಮ ಕೆಲಸಕ್ಕೆ ಹಾಜರಾಗುವರು. ಮತ್ತು ಆಕ್ಟಿಂಗ್ ತಹಶೀಲ್ದಾರರಾಗಿದ್ದ ರಾ। ಮಾರ್ಕಂಡ ವೆಂಕಟ್ರಾಯರವರಿಗೆ ಮಂಗಳೂರು ಸಬ್ ಸ್ಟೇಶನ ಮ್ಯಾಜಿಸ್ಟ್ರೇಟರಾಗಿ ನೇಮಕವಾಗಿಯದೆ, ಎಂತ ವರ್ತಮಾನವಿರುತ್ತದೆ.

ಇಲ್ಲಿ ಇತ್ತೀಚೆಗೆ ಸ್ಥಾಪಿಸಲ್ಪಟ್ಟ ಕ್ಷತ್ರಿಯ ಸಮಿತಿಯ ಸಂಘದವರು ಇದೇ ಕಳೆದ ತಾ. ೧೪ರಲ್ಲು ರಾ। ಬಿರಂತಪ್ಪಲು ಸೀತಾಮೆಯ್ಯ ಎಲ್. ಎಂ. ಪಿ. ಇವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿ ೭ ಮಂದಿಯನ್ನು ತಮ್ಮ ಕಮಿಟಿಮೆಂಬರರಾಗಿ ನೇಮಿಸಿ ಕೆಲ ಠರಾವುಗಳನ್ನು ಪಾಸುಮಾಡಿದರು.

ಮಂಜೇಶ್ವರ:— ಟಪ್ಪಾಲ ಇಲಾಖೆಯ ಮೂರಿಆರ್ಡರಿನ ಫೋರ್ಜರಿ ಮೊಕದ್ದಮೆಗಳು ಪೋಲೀಸಿನವರ ಕೈ ಸೇರಿ ತನಿಕೆ ಆಗುತ್ತದಾಗಿ ಕೇಳುತ್ತೇವೆ.

ಕೆಲವಾರು ಒಂದೆರಡು ತಿಂಗಳ ವರೆಗೆ ಪ್ರತೀ ಕೈಪೇಟಿಗೆ ೨ ಆಣೆ ಎಂತಲೂ, ಅಮಲ್‌ಜಾರಿಗೆ ೪-೮ ಆಣೆ ವರೆಗೂ ಹೆಚ್ಚಿನ ಫೀಸು ಆಕ್ಷಿಗಾರರಿಂದ ಇಲ್ಲಿಯ ಪಂಚಾಯತ ಕೋರ್ಟಿನವರು ವಸೂಲುಮಾಡಿ ಕೆಲಸವನ್ನು ಬಹು ಶೀಘ್ರದಿಂದ ನಡಿಸುತ್ತಿದ್ದರು. ಈ ಏರ್ಪಾಡಿನ ಕುರಿತು ಮೇಂಬರರಾರು ಹುಟ್ಟಿಸಿ ಈಗ ಮನಾ ಮಾಡಲ್ಪಟ್ಟಿದೆ. ಒಂದು ತಿಂಗಳ ರಾಗ್ಯಾತು ದಾಖಲಾದ ಅಮಲ್‌ಜಾರಿಗಳು ತೀರಿನಲ್ಲಿ ಮಾಡಿದ ಹೋಮದಂತೆಯೂ, ವ್ಯಾಜ್ಯಗಳು ಬಹು ದೀರ್ಘವಾಗಿ ಮುಂದಕ್ಕೆ ಬರುತ್ತಲಿವೆ. ಹೊ-ಸ-ದ-ರಿ ಕೆಲಸವಂದರೆ ಇದಲ್ಲವೇ? ಅಧ್ಯಕ್ಷರು ರಾಜಕೀಯ್ಯ ಹೊಸ ನೇಮಕವು ಮೊಕ್ರಾರಾಯಿತು.

ದೇವಸ್ಥಾನದ ಮೆಂಬರರಾಗಿ ಮೊಕ್ತೇಸರರು ಆದ ಮಂಜುನಾಥರಾಯ್ಯ ಅವರ ಮೆಂಬರಿಕೆಯನ್ನು ಅಪೀಲಿನಲ್ಲಿಯೇ ಕಾಯಂಮಾಡಲ್ಪಟ್ಟಿತು. ಧರ್ಮಾಧಿಕಾರಿಯ ಒಂದು ವಿಷಯಂಗು ಕರೆಯಲ್ಪಟ್ಟಿದೆ.

ಶ್ರೀಮತ್ ಭುವನೇಂದ್ರ ಸಂಸ್ಕೃತ ಮಹಾವಿದ್ಯಾಲಯ
ಶ್ರೀ ಶ್ರೀನಿವಾಸ ಆಶ್ರಮ ಕಾರ್ಕಳ.

ಆರ್ಯ ಭೂಮಾತೆಯ ಮುಂದಿನ ಅಭಿವೃದ್ಧಿಯು ಜನಾಂಗದಲ್ಲಿ ಯೋಗ್ಯವಾದ ಧಾರ್ಮಿಕವಹಿದಿಕ ವಿದ್ಯಾಭ್ಯಾಸದ ಪ್ರಚಾರದ ಮೇಲೆ ಹೊಂದಿರುವದರಿಂದ ಇಹಪರ ಸಾಧನೆಗಳಿಗೆ ಅನುಕೂಲವಾಗುವ ಶಿಕ್ಷಣೆಯನ್ನು ಕೊಟ್ಟು ಭಾರತಮಾತೆಯ ಸೇವೆಗಾಗಿ ಯೋಗ್ಯ ವಟುಗಳನ್ನು ತಯಾರಿಸುವ ಧ್ಯೇಯವನ್ನು ಮುಂದಿಟ್ಟು ಕಾರ್ಕಳ ಶ್ರೀ ವೆಂಕಟ್ರಮಣ ದೇವಸ್ಥಾನದ ಮೊಕ್ತೇಸರರು ೮ ಹತ್ತು ಸಮಸ್ತರು ಮೇಲಣ ವಿದ್ಯಾಲಯವನ್ನು ಶ್ರೀ ಶ್ರೀನಿವಾಸ ದೇವರ ಪಾವನವಾದ ಸನ್ನಿಧಾನದಿಂದ ಪರಿಶುದ್ಧತೆಯನ್ನು ಹೊಂದಿದ ಶ್ರೀ ಶ್ರೀನಿವಾಸ ಆಶ್ರಮ ಎಂಬ ಬಹು ರಮ್ಯವಾದ ವನ ಶ್ರೀ ವೈಭವದಿಂದ ಕೂಡಿದ ಸ್ಥಳದಲ್ಲಿ ಸ್ಥಾಪಿಸಿರುತ್ತಾರೆ.

ಆಶ್ರಮದ ಈ ಮಹಾವಿದ್ಯಾಲಯದಲ್ಲಿ ಸಾಮಾನ್ಯವಾಗಿ ಮದ್ರಾಸು ಯುನಿವರ್ಸಿಟಿಯ ಓರಿಯಂಟಲ್ ಟೈಟಲ್ ಪರೀಕ್ಷೆ (Oreinatal Title Examinations)ಗಳಲ್ಲಿ ಸಾಹಿತ್ಯ ಶಿರೋಮಣಿಗೆ ಹೋಗಲು ಅನುಕೂಲವಾದ ಸಂಸ್ಕೃತ ಭಾಷಾಜ್ಞಾನ ಇಂಗ್ಲಿಷ್ ಭಾಷಾಪರಿಚಯ, ಹಿಂದುಸ್ಥಾನದ ಇತಿಹಾಸದ ಬೋಧೆ ಇವುಗಳಲ್ಲಿ ಶಿಕ್ಷಣಕೊಡುವ ಏರ್ಪಾಡು ಮಾಡಿರುವುದಲ್ಲದೆ ಇಹದ ಜೀವನಕ್ಕೆ ಅನುಕೂಲವಾಗುವಂತೆ ಕೈಗಾರಿಕೆಗಳಲ್ಲಿ ಸಾಮಾನ್ಯವಾಗಿ ನೂಲುವುದು, ನೇಯುವುದು, ಹೊಲಿಯುವುದು, Typewriting, Shorthand ಇವುಗಳ ಉಪದೇಶ, ಕೃಷಿಶಾಸ್ತ್ರ ಪರಿಚಯ, ಶಿಲ್ಪಶಾಸ್ತ್ರದ ಅಭ್ಯಾಸ ಮತ್ತು All India Ayurveda Mhamandalಕ್ಕೆ ಸಂಬಂಧಪಟ್ಟ ಭಿಷಕ್ ಆಯುರ್ವೇದವಿಶಾರದ ಮುಂತಾದ ಪರೀಕ್ಷೆಗಳಿಗೆ ಹೋಗಲು ಅನುಕೂಲವಾಗುವಂತೆ ಅದರಲ್ಲಿ ಅಭಿರುಚಿ ಉಳ್ಳ ವಿದ್ಯಾರ್ಥಿಗಳಿಗೆ ಆಯುರ್ವೇದ ಪಾಠಗಳು ಕೂಡಾ ಹೇಳಲಾಗುವವು. ಮಾತ್ರವಲ್ಲದೆ ಆಶ್ರಮದಲ್ಲಿ ಉಳಕೊಳ್ಳುವ ವಿದ್ಯಾರ್ಥಿಗಳ ಆಚಾರ ವಿಚಾರ ನಿತ್ಯಕರ್ಮಾದ ಕುರಿತು ವಿಶೇಷ ಲಕ್ಷಕೊಡಲಾಗುವುದು.

ಮೇಲಣ ಎಲ್ಲಾ ಪಾಠಗಳಲ್ಲಿ ದೊರೆಯುವ ಶಿಕ್ಷಣವು ಧರ್ಮಾರ್ಥವಾಗಿಯೇ ಕೊಡಲಾಗುವುದು. ಆಶ್ರಮದಲ್ಲಿ ವಾಸ್ತವ್ಯಮಾಡಿ ಇರಬೇಕೆಂಬ ವಿದ್ಯಾರ್ಥಿಗಳು ಊಟದ ಬಗ್ಗೆ ಮಾತ್ರ ತಿಂಗಳು ೧೧ ರೂಪಾಯಿ ಆರಂತೆ ಮಾಸಿಕವೇತನವನ್ನು ತೆರಬೇಕು. ಪ್ರಕೃತ ಆಶ್ರಮದಲ್ಲಿ ವಾಸ್ತವ್ಯದ ಬಗ್ಗೆ ಗೌಡಸಾರಸ್ವತ ಬ್ರಾಹ್ಮಣ ವಿದ್ಯಾರ್ಥಿಗಳನ್ನು ಮಾತ್ರ ಸೇರಿಸಿಕೊಳ್ಳಲಾದೀತು.

ವಿದ್ಯಾರ್ಥಿಗಳು ಅತಿ ಬಡವರಾಗಿ ಕಲಿಯುವುದರಲ್ಲಿ ಅತಿ ವಿಚಕ್ಷಣರಾದರೆ ಅಂಥವರಿಗೆ ಭೋಜನದ ವೇತನದಲ್ಲಿ ಕೂಡಾ ರಿಯಾಯತಿಮಾಡುವ ಕುರಿತು ಮೇಲಣ ಸಂಸ್ಥೆಯ ಚಾಲಕರಾದ ಶ್ರೀ ವೆಂಕಟರಮಣ ದೇವಸ್ಥಾನದ ವಿದ್ಯಾ ಇಲಾಖಾ ಬೋರ್ಡಿನವರು ಆಲೋಚಿಸುವರು.

ಇತ್ತೀಚೆಗೆನೇ ಈ ವಿದ್ಯಾಲಯವು ಪ್ರಾರಂಭವಾಗಿರುವುದರಿಂದ ಈ ಸಂಸ್ಥೆಯಲ್ಲಿ ಸೇರಬೇಕೆಂಬ ವಿದ್ಯಾರ್ಥಿಗಳು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ಹೆಚ್ಚಿನ ಮಾಹಿತಿ ವ ಪ್ರವೇಶಪ್ರಾರ್ಥನಾ ಪತ್ರಗಳು ಕಳುಹಿಸೋಣಾಗುವವು.

ಅಧ್ಯಕ್ಷ,
ಶ್ರೀ ವೆಂಕಟ್ರಮಣ ವಿದ್ಯಾ ಇಲಾಖಾ ಬೋರ್ಡು,
ಕಾರ್ಕಳ, ದಕ್ಷಿಣ ಕನ್ನಡ.

—: ಸ್ವೀಕಾರ ಮತ್ತು ವಿಮರ್ಶೆ. :—

ಸಂಗೀತ ಶಾಸ್ತ್ರ ಪ್ರವೇಶದಾಯಿನಿ:—ಶ್ರೀಯುತ ಬಿ. ವೆಂಕಟ ಕೃಷ್ಣಪ್ಪ, ಬಿ. ಎ. ಇವರಿಂದ ರಚಿತವಾದುದು. ಎಚ್. ಎಸ್. ರಾವ್ ಎಂಡ್ ಬ್ರದರ್ಸ್, ಚಿಕ್ಕಪೇಟೆ ಬೆಂಗಳೂರುಸಿಟಿ, ಇವರಲ್ಲಿ ದೊರೆಯುತ್ತದೆ. ಪುಟ ಕ್ರಾ. ⅛ ೩೨೦, ಕ್ರಯ ರೂ. ೨-೪-೦.

ಈ ಸಂಗೀತ ಪುಸ್ತಕವು ಮುಖ್ಯವಾಗಿ ಹಾರ್ಮೋನಿಯಮ್ ಮೊದಲಾದ ಸಂಗೀತದ ಉಪಕರಣಗಳನ್ನು ಬಾರಿಸಲಿಕ್ಕೆ ಕಲಿಯಲು ಅತ್ಯಂತ ಉಪಯೋಗಕರವಾಗಿದೆ. ಇದರ ಪೀಠಿಕಾ ಪ್ರಕರಣದಲ್ಲಿ ಸ್ವರಭೇದ, ಶ್ರುತಿ ಸಂಖ್ಯೆ, ಸ್ವರಗಳ ಮೇಳನ, ರಾಗಗಳು, ತಾಳಗಳು ಇತ್ಯಾದಿ ಅನೇಕ ವಿಷಯಗಳ ವಿವರ ಕೊಡಲ್ಪಟ್ಟಿದೆ. ಆ ಮೇಲೆ ಅನೇಕ ರಾಗಗಳ ಮತ್ತು ಪದಗಳ ಸ್ವರಾವಳಿಯು ಕೊಡಲ್ಪಟ್ಟು ಕಲಿಯುವವರಿಗೆ ಬಹಳ ಸುಲಭವಾಗಿ ಮಾಡಲ್ಪಟ್ಟಿದೆ. ಪುಸ್ತಕವು ಸಂಗೀತದಲ್ಲಿ ಅಭಿರುಚಿಯುಳ್ಳ ಪ್ರಾಥಮಿಕರೂ ಸಂಗೀತದಲ್ಲಿ ಅಭ್ಯಾಸವನ್ನು ಕೊಡುವವರೂ ಸಂಗ್ರಹಿಸಲು ಯೋಗ್ಯವಾಗಿದೆ. ಇದರ ಉಪಯೋಗವು ಹೆಚ್ಚುವಂತೆ ಇದರ ಬೆಲೆಯನ್ನು ಸ್ವಲ್ಪ ತಗ್ಗಿಸಬಹುದಿತ್ತು.

ಶಿವಾನಂದಲಹರಿ:—ಶ್ರೀ ಶಂಕರಾಚಾರ್ಯ ವಿರಚಿತ. ಶ್ರೀ ಭಾಷ್ಯಂ ತಿರುಮಲಾಚಾರ್ಯರಿಂದ ಟೀಕಿಸಲ್ಪಟ್ಟುದು. ಎಚ್. ಎಸ್. ರಾವ್ ಎಂಡ್ ಬ್ರದರ್ಸ್, ಇವರಿಂದ ಪ್ರಕಟಿಸಲ್ಪಟ್ಟಿತು. ಪುಟ ಕ್ರಾ. ⅛ರ ೯೬. ಕ್ರಯ ರೂ. ೦-೮-೦.

ಶ್ರೀ ಶಂಕರಾಚಾರ್ಯರಿಂದ ರಚಿತವಾದ ಈ ಸ್ತೋತ್ರಶತಕವು ಅತ್ಯಂತ ಸುಂದರವಾಗಿ ಟೀಕಿಸಲ್ಪಟ್ಟಿದೆ. ಶ್ರೀ ಶಂಕರಾಚಾರ್ಯರ ಕಾವ್ಯ ಮಾಧುರ್ಯವನ್ನು ಅಸ್ವಾದಿಸಲಿಚ್ಛಿಸುವವರು ಇದನ್ನು ಅವಶ್ಯವಾಗಿ ಕೊಳ್ಳಬೇಕು.

ವಿಜ್ಞಾಪನಾ.

ಸರಕಾರದವರು ಕಾಫೀ ಜವಿಾನುಗಳಿಗೆ ಹಾಲಿ ಇರುವ ರೂ. ೧-೦-೦ ಕಂದಾಯವನ್ನು ೧-೪-೦ ರೂಪಾಯಿಗೆ ಹೆಚ್ಚಿಸುವುದಾಗಿ ತಾ. ೪-೭ ನೆಯ್ಯ ಜೂನ್ ೧೯೨೬ನೇ ಮರ್ಹ್ಯಂ ನಂಬರು ೩ಲಂಸೇ ನೋಟಿಫಿಕೇಶನ್ ಪ್ರಾಯಿಷ್ ಮಾಡಿರುವದಲ್ಲದೆ ಕ್ಲಪ್ತ ಕಾಲದಲ್ಲಿ ಜನಗಳು ಆಕ್ಷೇಪಣೆಯನ್ನು ಮಾಡದೆ ಇದ್ದರೆ ವಾಯಿದ ಗತಿಸಿದ ನಂತರ ಬರತಕ್ಕ ಆಕ್ಷೇಪಣೆಗಳನ್ನು ಅಂಗೀಕರಿಸುವುದಿಲ್ಲವಾಗಿಯೂ ಪ್ರಚುರಪಡಿಸಿರುವದು ಸರ್ವರಿಗೂ ತಿಳಿದಿರಬಹುದು. ಈಗಿನ ಸ್ಥಿತಿಯಲ್ಲಿ ಕಾಫಿ ಜವಿಾನುಗಳಿಗೆ ಕಂದಾಯ ಜಾಸ್ತಿ ಆದರೆ ಜನಗಳಿಗೆ ವೃಥಾ ಹೆಚ್ಚು ತೊಂದರೆ ಮತ್ತು ನಷ್ಟಕ್ಕೆ ಆಸ್ಪದವಾಗುವ ಕಾರಣ ಈ ವಿಚಾರದಲ್ಲಿ ತಕ್ಕ ರೀತಿಯಲ್ಲಿ ಸರಕಾರಕ್ಕೆ ಮನವಿ ಮಾಡಿಕೊಳ್ಳತಕ್ಕ ಬಗ್ಗೆ ತಾ. ೩೧-೭-'೨೬ನೇ ಶನಿವಾರ ಮಧ್ಯಾಹ್ನ ೩ ಗಂಟೆಗೆ ಚಿಕ್ಕಮಗಳೂರು ಟವನ್ ಶ್ರೀ ಪರಮಂಜನ ಟವರ್ ಹಾಲಿನಲ್ಲಿ ನಡೆಯುವ ಮೀಟಿಂಗಿಗೆ ಸರ್ವರೂ ದಯಮಾಡಿಸಬೇಕಾಗಿ ಪ್ರಾರ್ಥನೆ.

ತಾ. ೧೯-೭-'೨೬ } ಚಿಕ್ಕಮಗಳೂರು. }
ಬಿ. ಕೇಶವಯ್ಯ,
ಬಿ. ಎನ್. ಹನುಮಂತಪ್ಪ,
ಕಾಫಿ ಪ್ಲಾಂಟರುಗಳು.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅವ್ಯಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ, ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಚಿಕಿತ್ಸೆ ಮಾಹಿತಿಗೆ "ಆರ್ಷ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಪ್ಲುಯೆಂಜಾಜ್ವರ,
ವಾತ, ಇತ್ಯಾದಿ ಎಲ್ಲಾ ರೋಗಗಳ
ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For
Golden Wrist Watch Rs 6-8

ಈ ವಾಚುಗಳು ಬಲವಾದ ಮತ್ತು ಹೆಸರಾದ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುದಾರಿಕ ಕ್ರಮದಲ್ಲಿ ಮಾಡಲ್ಪಟ್ಟವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,
ಬೆಲಾರ್ಡ ಎಸ್ಟೇಟ್, ಮುಂಬಯಿ.

ಬಿಟ್ಟಿ! ಇನಾಂ!! ಪುಗಸಟ್ಟೆ!!!

ವೈದ್ಯವಿದ್ಯ

NOPRICENOPOSTAGE.

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,
57, ಜೈನಾ ಬಜಾರ್, ರೋಡ್, ಮದ್ರಾಸು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ

ವಜ್ರಾಂಗ-ಬಿಂದು

ವೀರ್ಯ ವೃದ್ಧಿ ಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಆಕರದಿಂದ ಉಪಯುಕ್ತವಾದ ಮತ್ತು ಉತ್ಕೃಷ್ಟತರದ ಭಸ್ಮಗಳ ಮಿಶ್ರಣವನ್ನಿಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವವಲ್ಲದೆ, ಸ್ವಪ್ನದೋಷ, ಧಾತುನಾಶ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕೆಡಕಿಯಂತಹ ಒಂದೇ ವಾರದಲ್ಲಿ ಗುಣವಾಗುವದು. ಅಧುದಿಂತ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ತಿಂದ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಕಣ್ಣಿಗೆ ಕತ್ತಲೆ ಬಂದಂತಾಗಿ ಬೆವರು ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲ ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಲಪೇಕ್ಷಿಸುವವರು ಪತ್ರವ್ಯವಹಾರ ನಡಿಸಿ, ಶುರಾಸೆ ತಿಳಕೊಳ್ಳಬಹುದು. ಟಪ್ಪಾಲ ಮತ್ತು ಪ್ಯಾಕಿಂಗ ಖರ್ಚು ಬೇರೆ ಬೀಳುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ತೆ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪನಿ,
ಮು. ಪೋ. ಶಿಗ್ಗಾಂವ, (ಜಿಲ್ಲಾ ಧಾರವಾಡ.)

ಮಾರಾಟಕ್ಕೆ ಸಿದ್ಧವಿದೆ.

ಅಮುಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಟೆಡ್ಯೂಲ, ಪೇಮೆಂಟ್ ಸ್ಟೆಡ್ಯೂಲ, ಜತಾ ನೋಟು, ಮೆಮೊ ಒಫ್ ಕೊಸ್ಟ್ಸ್, ಮೆಮೊರಂಡಮ್ ಒಫ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳ್ ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0,
ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು
1ರ ಕ್ರಯ 0—2—0.

ಶಾರದಾ ಛಾಪಖಾನೆ,
ಹೆರು ಬೀದಿ, ಮಂಗಳೂರು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ

— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ತಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T. MADRAS.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸ

ಆಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1¼ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 4 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2¼ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 5 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್‍ರಿ ರೇಷ್ಮೆ ಮುಡಿಗಳು, ಜಾಮದಾನಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಸಾಳಗ್ರಾಮ, ಶಾಲ, ಪಶ್ಮೀರ್‌ದಾರಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಚೌಕಟ್ಟುಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮತ್ತು ಕಂಪೆನಿ, [illegible], ಕಾಶೀ ಕ್ಷೇತ್ರ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವುದಕ್ಕೂ ಒಂದು ದೇಹದ ಮರ್ಮಶಾಸ್ತ್ರವು ಇರುವುದು. ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 [illegible], ಮದ್ರಾಸ್.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಶಾ. ವೇ. ಸುಬ್ಬರಾವ್, ಯಂ. ಜೆ. ಯು. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲೂ ಗೆಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಶೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ. 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ಎಲ್ಲ ವಿದ್ಯಾರ್ಥಿಗಳ ಸಂಗ್ರಹಕ್ಕೆ ಯೋಗ್ಯವಾದ

—: ಪದ್ಯಗ್ರಂಥ: —

ಕನ್ನಡ ಪದ್ಯರತ್ನಾವಳಿ.

(ಪ್ರಥಮ ಭಾಗ)

ಗ್ರಂಥಕರ್ತರು:—ಜಿ. ಎನ್. ಲಕ್ಷ್ಮಣ ಪೈ.

ಮದರಾಸು ವಿದ್ಯಾಖಾತೆಯವರಿಂದ ಶಾಲೋಪಯೋಗಕ್ಕಾಗಿಯೂ ಮುಂಬಯಿ ವಿದ್ಯಾಖಾತೆಯವರಿಂದ ಸೆಕಂಡರಿ ಶಾಲೆಗಳ ಪಠ್ಯಪುಸ್ತಕವಾಗಿಯೂ ಮೈಸೂರು ವಿದ್ಯಾಖಾತೆಯವರಿಂದ ಹಾಯ್, ನಾರ್ಮಲ್ ಮತ್ತು ಪ್ರೈಮೆರಿ ಶಾಲೆಗಳ ವಾಚನ ಪುಸ್ತಕವಾಗಿಯೂ ಮಂಜೂರಾಗಿದೆ.

ಬೆಲೆ: 3½ ಆಣೆ.

ಶಾರದಾ ಛಾಪಖಾನೆ,
ಮಂಗಳೂರು.

Fresh Arrivals

Pear's Solid Brilliantine, Evans Lime juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಧಾನುವಾರವೂ ಪ್ರಕಟವಾಗುವ ಉತ್ತಮತರದ
ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ವಾಂಸರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ಮಾರ್ಕೆಟ್ ದರಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 5—0—0.
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	„ 2—8—0.
„ ಸ್ಥಳೀಕರಿಗೆ ...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕೆಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು. [illegible]

ಬಿ. [illegible]ಗೌಡ,
ಅರ್ಥಸಾಧಕ ಪತ್ರಿಕೆ,
[illegible], ಬೆಂಗಳೂರು [illegible]

Registered No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೩೦ನೇ ಶುಕ್ರವಾರ ಜುಲಾಯಿ ೧೯೨೬. ಸಂಚಿಕೆ ೩೧.

Applications From Candidates Are Invited

FOR THE FOLLOWING POSTS IN THE BRANCH OF

THE CANARA BANKING CORPORATION, UDIPI, LIMITED.

To be shortly opened at Mangalore.

I.	One Agent on a scale of Rs.		50—5—100.
II.	„ Clerk	„	30—2—60.
III.	„ Peon	„	12—1—20.
IV.	„ Office Boy	„	6—1—15.

The Agent is expected to furnish a security of Rs. 2000/— TWO THOUSAND.

Candidates having a knowledge of accounts, Banking and good Character will be preferred. The Directors reserve to themselves the right to modify the starting pay of Agent.

Applications shall reach the undersigned with testimonials etc., BY THE 7TH AUGUST, 1926.

N. Ananda Rau,
Secretary.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ರೋಗವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೋ.

6, 7 [illegible] ಸ್ಟ್ರೀಟ್,	109 ಫ್ರೇಯರ್ ರೋಡ್
ಜೋರ್ಜ್ ಟೌನ್, ಮದ್ರಾಸು.	ಮುಂಬಯಿ.

ಮಂಗಳೂರಲ್ಲಿ—ಗಾಲಬ್ ಮಾರ್ಕ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ನಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು—

ಸರ್ವಿಸಿನ ಹೆಸರು.	ತಲುಪುವ ಸ್ಥಳ.	ಹೊರಡುವ ಘಂಟೆ.
ಜನರಲ್	[illegible]	ಪೂ. 6½
ಸಿ. ಪಿ. ಸಿ.	[illegible]	„ 6½, 9½
	[illegible]	ಮ. 12½
	[illegible]	ಅ. 3½
	[illegible]	ಪೂ. 7, ಮ. 1
	[illegible]	„ 10½, ಅ. 4½
	[illegible]	„ 7½
	[illegible]	ಪೂ. 10½ ಅ. 3
[illegible]	[illegible]	ಪೂ. 6
	[illegible]	ಅ. 1
[illegible]	[illegible]	ಪೂ. 7
	[illegible]	ಮ. 12
[illegible]	[illegible]	ಪೂ. 7
	[illegible]	ಅ. 1½
	[illegible]	ಪೂ. 8, ಅ. 2½
	[illegible]	ಪೂ. 7½ ಅ. 1½
[illegible]	[illegible]	„ 7, ಮ. 1
	[illegible]	„ 10½, ಅ. 4½
[illegible]	[illegible]	„ 6½, ಮ. 12½
[illegible]	[illegible]	ಪೂ. 7½ ಮ. 12½

☞ ಮೂಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ—

ಗಾಡಿಗಳು	ಹೊರಡುವ ಘಂಟೆ	ತಲುಪುವ ಘಂಟೆ
ಮೈಲ್	ಬೆಳಗ್ಗೆ 8-5	ಸಂಜೆ 5-35
ಲೋಕಲ್	„ 9-45	ರಾತ್ರಿ 10-40
[illegible]	ಮಧ್ಯಾಹ್ನ 12-30	ಮಧ್ಯಾಹ್ನ 2-40
[illegible]	ಸಂಜೆ 5-40	ಬೆಳಗ್ಗೆ 9-2

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ

— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ವಿಸೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P. T MADRAS.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು

ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು. ಇವಕ್ಕೆ 3 ವರ್ಷಗಳ ಗ್ಯಾರಂಟ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್‌ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸ

ಆಲೆಕ್ಸ್ ಆಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತೆರನ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 8 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 5 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜಿಪ್ಸರ್ ರೇಷ್ಮೆ ಮಡಿಗಳು, ಸಾಮಗ್ರಿಗಳು, ಶಾಹೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಬಾಣಲಿಂಗ, ಸಾಳಗ್ರಾಮ, ಶಂಖ, ಕಸ್ತೂರಿ ಮೊದಲಾದ ಅನೇಕ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಇನಾಂ.

ವಿಳಾಸ—

ಶಿರೋಮಣಿ ಯು. ನಾರಾಯಣಾಚಾರ್ಯ

ಮತ್ತು ಕಂಪೆನಿ, [illegible], ಕಾಶೀ ಕ್ಷೇತ್ರ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವುದಕ್ಕೂ ಒಂದು ದೇಶದ ಮರ್ಮಶಾಸ್ತ್ರವು ಇರುವುದು. ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಕಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಜಾರ್ಜ್‌ಟೌನ್, ಮದ್ರಾಸ್.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕಾ. ವೇ. ಸುಬ್ಬರಾವ್, ಯಂ. ಜಿ. ಯು. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಕೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ 5 ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ. 20 ಮಾತ್ರೆಗಳ ಕುಪ್ಪಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ಎಲ್ಲ ವಿದ್ಯಾರ್ಥಿಗಳ ಸಂಗ್ರಹಕ್ಕೆ ಯೋಗ್ಯವಾದ

—: ಪದ್ಯಗ್ರಂಥ: —

ಕನ್ನಡ ಪದ್ಯರತ್ನಾವಳಿ.

(ಪ್ರಥಮ ಭಾಗ)

ಗ್ರಂಥಕರ್ತರು:—ಜಿ. ಎನ್. ಲಕ್ಷ್ಮಣ ಪೈ.

ಮದರಾಸು ವಿದ್ಯಾಖಾತೆಯವರಿಂದ ಶಾಲೋಪಯೋಗಕ್ಕಾಗಿಯೂ ಮುಂಬಯಿ ವಿದ್ಯಾಖಾತೆಯವರಿಂದ ಸೆಕೆಂಡರಿ ಶಾಲೆಗಳ ಪಠ್ಯಪುಸ್ತಕವಾಗಿಯೂ ಮೈಸೂರು ವಿದ್ಯಾಖಾತೆಯವರಿಂದ ಹಾಯ್ಸ್, ನಾರ್ಮಲ್ ಮತ್ತು ಪ್ರೈಮೆರಿ ಶಾಲೆಗಳ ವಾಚನ ಪುಸ್ತಕವಾಗಿಯೂ ಮಂಜೂರಾಗಿದೆ.

ಬೆಲೆ: 3½ ಆಣೆ.

ಶಾರದಾ ಛಾಪಖಾನೆ,
ಮಂಗಳೂರು.

Fresh Arrivals

Pear's Solid Brilliantine, Evans Lime juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car-Street, MANGALORE,

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ
ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ಯಾವಂತರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3—0—0.
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	„ 2—8—0.
„ ಸ್ಥಳೀಕರಿಗೆ ...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಛಾಪಿಸುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಈಗಲೆ [illegible] ಬರೆದು ತಿಳಿಯಬಹುದು. ಎಡಿಟರ್,

ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
[illegible], ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. Sharada Press, Mangalore.

Registered No. M. 498.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ‖ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ‖ ೧ ‖
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ‖
ಗರಳಕವರಂಜಿದರೆ ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ‖ ೧ ‖

ಪುಸ್ತಕ ೨೦. ಮಂಗಳೂರು, ತಾರೀಕು ೩೦ನೇ ಶುಕ್ರವಾರ ಜುಲಾಯಿ ೧೯೨೬. ಸಂಚಿಕೆ ೩೧.

Applications From Candidates Are Invited

FOR THE FOLLOWING POSTS IN THE BRANCH OF

THE CANARA BANKING CORPORATION,
UDIPI, LIMITED.

To be shortly opened at Mangalore.

I.	One Agent on a scale of	Rs.	50—5—100.
II.	„ Clerk	„	30—2—60.
III.	„ Peon	„	12—1—20.
IV.	„ Office Boy	„	6—1—15.

The Agent is expected to furnish a security of Rs. 2000/— TWO THOUSAND.

Candidates having a knowledge of accounts, Banking and good Character will be preferred. The Directors reserve to themselves the right to modify the starting pay of Agent

Applications shall reach the undersigned with testimonials etc., BY THE 7TH AUGUST, 1926.

N. Ananda Rau,
Secretary.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು.

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ಶಾಂತವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 2 ಆಣೆ.

ಅಮೃತಾಂಜನ ಡಿಪೋ.

6, 7 [illegible] ಸ್ಟ್ರೀಟ್,	109 ಫ್ರೇಯರ್ ರೋಡ್
ಜಾರ್ಜ್ ಟೌನ್, ಮದ್ರಾಸು.	ಮುಂಬಯಿ.

ಮಂಗಳೂರಲ್ಲಿ—ಗ್ಲೋಬ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರೆಕುವುದು.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ನಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು —

ಸರ್ವಿಸಿನ ಹೆಸರು.	ತಲಪುವ ಸ್ಥಳ.	ಹೊರಡುವ ಘಂಟೆ.
ಜನರಲ್	ಕಾರ್ಕಳ — ಆಗುಂಬೆ — ತೀರ್ಥಹಳ್ಳಿ	ಪೂ. 6¼
ಸಿ. ಪಿ. ಸಿ.	ಉಡುಪಿ — ಕುಂದಾಪುರ — ಬೈಂದೂರು	„ 6¾, 9¾
	ಉಡುಪಿ	ಮ. 12¾
	ಮುಲ್ಕಿ ವರೆಗೆ ಮಾತ್ರ	ಅ. 3¾
	ಬಂಟ್ವಾಳ — ಬೆಳ್ತಂಗಡಿ — ಚಾರ್ಮಾಡಿ.	ಪೂ. 7, ಮ. 1
	ಕಾರ್ಕಳ — ವೇಣೂರಿನಿಂದ	
	ಬಂಟ್ವಾಳಕ್ಕೆ ಮಾತ್ರ	„ 10¾, ಅ. 4½
	ಪುತ್ತೂರು — ಸಂಪಾಜೆ — ಮಡಿಕೇರಿ	„ 7½
	ಪುತ್ತೂರು	ಪೂ. 10½ ಅ. 3
ಕಾರ್ಕಳ	ಕಾರ್ಕಳ — ಉಡುಪಿ — ಕುಂದಾಪುರ	ಪೂ. 6
	ಕಾರ್ಕಳಕ್ಕೆ ಮಾತ್ರ.	ಅ. 1
ಹನುಮಾನ್	ಕಾರ್ಕಳ — ಉಡುಪಿ — ಕುಂದಾಪುರ	ಪೂ. 7
	ಕಾರ್ಕಳಕ್ಕೆ ಮಾತ್ರ.	ಮ. 12
ಕಂಕರ್ ವಿಟ್ಲರ್	ಪುತ್ತೂರು — ಮಡಿಕೇರಿಗೆ	ಪೂ. 7
	ಪುತ್ತೂರು — ಉಪ್ಪಿನಂಗಡಿ	ಅ. 1½
	ವಿಟ್ಲಕ್ಕೆ	ಪೂ. 8, ಅ. 2½
	ಉಡುಪಿ	ಪೂ. 7½ ಅ. 1½
ಸ್ವಾಂ	ಮುಲ್ಕಿ — ಉಡುಪಿ.	„ 7, ಮ. 1
	ಬಂಟ್ವಾಳ	„ 10½, ಅ. 4½
ಇಂಡಿಯನ್	ಮುಲ್ಕಿ — ಉಡುಪಿ,	„ 6½, ಮ. 12½
ಫುಲ್ಲರ್	ಬಂಟ್ವಾಳ — ಬೆಳ್ತಂಗಡಿ — ಚಾರ್ಮಾಡಿ	ಪೂ. 7½ ಮ. 12½

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ—

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲ್	ಬೆಳಗ್ಗೆ 8-5	ಸಂಜೆ 5-25
ಲೋಕಲ್	„ 9-45	ರಾತ್ರಿ 10-40
ಪ್ಯಾಸ್ಸೆಂಜರ್	ಮಧ್ಯಾಹ್ನ 12-30	ಮಧ್ಯಾಹ್ನ 2-40
[illegible]	ಸಂಜೆ 5-40	ಬೆಳಗ್ಗೆ 9-2

ತ್ವರೆಮಾಡಿರಿ! ತಯಾರಾಗಿದೆ!

ಎರಡನೇ ದರ್ಜೆಯ

ಚರಿತ್ರೆ ಮತ್ತು ಕಥೆಗಳು.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಎಲಿಮೆಂಟರಿ ಶಾಲೆಗಳ ಎರಡನೇ ದರ್ಜೆಯ ಮಕ್ಕಳಿಗಾಗಿ ತಯಾರಿಸಲ್ಪಟ್ಟಿದೆ.

ಎಮ್. ಗಣಪತಿರಾವ್ ಐಗಳ್ — ಗ್ರಂಥಕರ್ತರು.

ಇದರಲ್ಲಿ, (ಸಿಂಡಿರೆಲ್ಲ) ಕುಂಟುಕರಿಕಲ್ಲಮ್ಮ, ಅರಬೀಯವನೂ ಅವನ ಕುದುರೆಯೂ, ಹಳ್ಳಿಯನ್ನು ಕಾಪಾಡಿದ ಹುಡುಗನು, ರಾಮ ಮತ್ತು ಸೀತೆ, ಅಂಡ್ರೊಕ್ಲೆ ಮತ್ತು ಸಿಂಹ, ಎಲ್ಲರನ್ನು ಮೆಚ್ಚಿಸುವುದು ಮೂಢತನ, ಕಾಗೆ ಮತ್ತು ಗುಬ್ಬಚ್ಚಿ, ಬಾ ಪುರಲೆ ಬಾ, ಬೆಲ್ಲದ ಬೈಲು ಬೆರ್ಚಪ್ಪ, ಬ್ರಾಹ್ಮಣ ಬೈರಾಗಿ, ದಮಯಂತಿಯ ಕಥೆ, ಪ[illegible]ರಾಮನ ಕಥೆ, ಚೇಳಾರು ಗುತ್ತಿನ ಮಂಜಣ್ಣನ ಕಥೆ, ಯೊಸೇಫನ ಕಥೆ, ಮೋಸೆಯ ಕಥೆ, ಹಸನ ಹುಸ್ಸೇನರ ಕಥೆ, ಗೋವಿನ ಕಥೆ, ಆನೆಯ ಸೊಂಡಿಲು ಹೇಗೆ ಉದ್ದವಾಯಿತು, ಒಂಟೆಯ ಬೆನ್ನಿನ ಮೇಲೆ ಡುಬ್ಬವು ಹೇಗೆ ಬಂತು, ಕೊ ಕ್ಕೊ ಕೋಳಿ, ಜೋಡು ನಕ್ಷತ್ರ, ಚಟಪಟ ಹನಿಯಪ್ಪ, ನಾಯಿಯೂ ಬೆಕ್ಕೂ, ಹಸುವೂ ಕತ್ತೆಯೂ, ಜೇಡರ ಹುಳವೂ ನೊಣವೂ, ಬಣ್ಣಗಳು, ಜಾಕಯ್ಯನೂ ಅವರೆ ಬಳ್ಳಿಯೂ, ಮೊದಲಾದ ವಿಷಯ ಬರೆದಿದೆ. ಮಕ್ಕಳಿಗೆ ಉಪಯೋಗವಾಗುವಂತೆ ಕಷ್ಟ ಶಬ್ದಗಳಿಲ್ಲದೆ ಸಣ್ಣ ಸಣ್ಣ ವಾಕ್ಯಗಳಿಂದ ರಚಿಸಲ್ಪಟ್ಟಿದೆ. ಎರಡನೇ ದರ್ಜೆಯ ಮಕ್ಕಳ ಬಗ್ಗೆ ಉಪಯುಕ್ತವಾಗಿದೆ. ಕ್ರಯ 4 ಆಣೆ.

ಪುಸ್ತಕ ದೊರಕುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು.

ಚ್ಯವನಪ್ರಾಶ್ಯಲೇಹ.

ಇದು ಪ್ರಸಿದ್ಧಿ ಹೊಂದಿದ ಆಯುರ್ವೇದೀಯ ರಸಾಯನ. ಪರಿಶುದ್ಧವಾದ ಅನೇಕ ಗಿಡಮೂಲಿಕೆಗಳಿಂದಲೂ ಫಲಗಳಿಂದಲೂ ಶಾಸ್ತ್ರೀತಿಯಾಗಿ ತಯಾರಿಸಲ್ಪಟ್ಟಿದೆ. ಕ್ಷಯರೋಗ, ಕೆಮ್ಮು ಉಬ್ಬಸಗಳನ್ನೂ ಶ್ವಾಸಕೋಶ ಮತ್ತು ಹೃದಯ ಸಂಬಂಧವಾದ ಇತರ ವಿಕಾರಗಳನ್ನೂ ನಾಶಮಾಡುವುದರಲ್ಲಿ ಅದ್ವಿತೀಯವಾದದ್ದು. ಯಾವ ರೋಗವೂ ಇಲ್ಲದೆ ಇರುವವರು ಸಹ ಅವಶ್ಯವಾಗಿ ಸೇವಿಸತಕ್ಕದು. ಬುದ್ಧಿಶಕ್ತಿ, ಜ್ಞಾಪಕಶಕ್ತಿ, ಧಾತುಪುಷ್ಟಿ, ಮತ್ತು ನರಗಳ ಶಕ್ತಿಗಳನ್ನು ವೃದ್ಧಿಪಡಿಸಿ, ಆರೋಗ್ಯದೃಢಕಾಯರನ್ನಾಗಿಯೂ ದೀರ್ಘಜೀವಿಗಳನ್ನಾಗಿಯೂ ಮಾಡುವುದು. ಬಾಲಕರಿಗೂ, ವೃದ್ಧರಿಗೂ, ಮತ್ತು ಸ್ತ್ರೀಯರಿಗೂ ಹಿತವಾದದ್ದು.

ಕ್ರಯ ೧೦ ತೊಲೆ ರೂ. 1–0–0, 40 ತೊಲೆ ರೂ. 3–0–0

ಸಿದ್ಧ ಮಕರಧ್ವಜ.

ಕ್ಷಯರೋಗ, ಪ್ರಮೇಹ, ಮೊದಲಾದ ಮಹಾ ರೋಗಗಳಿಗೆ ಅದ್ವಿತೀಯವಾದದ್ದು. ಇದನ್ನು ಸುವರ್ಣ ಮೊದಲಾದ ಅಮೂಲ್ಯ ವಸ್ತುಗಳಿಂದ ತಯಾರುಮಾಡಲ್ಪಟ್ಟಿರುವುದರಿಂದ ಯಾವ ವ್ಯಾಧಿಯೂ ಇಲ್ಲದೆ, ಆರೋಗ್ಯ ಪುಂಸ್ತ್ವಶಕ್ತಿ, ರಸಾಯನ ಗುಣ ಮತ್ತು ದೀರ್ಘಾಯುಸ್ಸುಗಳನ್ನು ಅಪೇಕ್ಷಿಸುವವರು ನಿತ್ಯ ಸೇವಿಸಬಹುದು.

ಕ್ರಯ 25 ಮಾತ್ರೆ ರೂ. 5–0–0.

ಸೂಚನೆ:— ಇಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳೂ ಹೆಡ್ಡಾಫೀಸಿನ ಕ್ರಯಕ್ಕೆ ದೊರೆಯುತ್ತವೆ. ಆಯುರ್ವೇದ ಭೂಷಣ ವಿಶಾರದ ಪಂಡಿತ ಕೆ. ನಾರಾಯಣರಾವ್ ಎ. ಎಂ. ಎ. ಸಿ.ಯವರು ರೋಗಿಗಳನ್ನು ಪರೀಕ್ಷಿಸಿ ತಕ್ಕ ಚಿಕಿತ್ಸೆಯನ್ನು ಪ್ರತಿದಿನವೂ ನಡಿಸುವರು. ರೋಗಿಗಳು ರೋಗದ ಲಕ್ಷಣಗಳನ್ನು ತಿಳಿಸಿದರೆ, ತಕ್ಕ ಚಿಕಿತ್ಸಾಕ್ರಮವನ್ನು ಸೂಚಿಸಿ, ಸರಿಯಾದ ಔಷಧಗಳನ್ನೂ ಕಳುಹಿಸುತ್ತೇವೆ.

ಆರ್ಡರು ಮಾಡುವಾಗ ಈ ಪತ್ರಿಕೆಯ ಹೆಸರನ್ನು ನಮೂದಿಸಿರಿ.

ಟಿ. ಸಿ. ಎಸ್. ಮಣ್ಣಾಯಂ ಅಂಡ್ ಕೋ.
ಮ್ಯಾನೇಜಿಂಗ್ ಏಜಂಟ್ಸ್,
ಆಂಧ್ರ ಆಯುರ್ವೇದಿಕ್ ಫಾರ್ಮಸಿ, (ಬ್ರಾಂಚ್)
೩೩. ಚಿಕ್ಕಪೇಟೆ, ಬೆಂಗಳೂರು ಸಿಟಿ.

ಉತ್ಕೃಷ್ಟವಾದ ನಸ್ಯದ ಪುಡಿ.

ಶ್ರೀಮನ್ ಮೈಸೂರು ಮಹಾರಾಜರಿಂದ ಬಹುಮಾನವನ್ನು ಹೊಂದಿರುತ್ತದೆ.

ನಂಬ್ರ 1. ರಾತ್ತಲ್ 1ಕ್ಕೆ ರೂ. 3—2—0.
,, 2. ,, ,, ರೂ. 1—8—0.

— ವ್ಯಾಪಾರಸ್ಥರಿಗೆ ಸೇಕಡ 25ರಂತೆ ಕಮಿಶನ್ —
ಪೋಸ್ಟೆಜು ಮತ್ತು ಪೇಕಿಂಗ್ ಪ್ರತ್ಯೇಕ.

ಬಿ. ನರಸಿಂಹ ಮಲ್ಯ,
ಪುತ್ತೂರು, ದ. ಕನ್ನಡ.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಏಗ್ಯು ಮಿಕ್ಶ್ಚರ್ ಪಿಲ್ಸ್ — ಮಲೇರಿಯಾ ಜ್ವರ ನಿವಾರಣ. ರೂ. ೧.
ಬಾಟ್ಲಿವಾಲರ ಬಾಲಾಮೃತ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕಾರ್ ಆಲ್ ಬಾಮ್ — ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.
ಬಾಟ್ಲಿವಾಲರ ಟೋನಿಯಾ ಮಿಕ್ಶ್ಚರ — ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೀನ ಚೀಟುಗಳು — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು — ಧಾತು ಪುಷ್ಟಿಕರ ರೂ. ೧—೨—೦. ರೂ. ೧—೪—೦. ೧—೧೨—೦
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦.

"AGENTS WANTED"
LIBERAL DISCOUNT TO TRADE

ಕಾರ್ಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road. P. O. Cadell Road, Bombay. No. 14.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವುದು, ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 14 ಆಣೆ. ಟ. ಖ. 9 ಆಣೆ.

ನಮ್ಮ ವಿಳಾಸ:— ಕೇ. ಟಿ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಏಜಂಟರು:— ದಿ. ಊಲನ್ ಮಾರ್ಟ, ಮಂಗಳೂರು.

The Canara Pubic Conveyance Co., Ltd, Mangalore.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಮೋಟಾರ ಬಸ್ ಸರ್ವಿಸುಗಳು —

ಮಂಗಳೂರು {
ಕರಾವಳಿ ಮಾರ್ಗವಾಗಿ — ಮುಲ್ಕಿ — ಉಡ್ಪಿ — ಕುಂದಾಪುರ — ಗಂಗೊಳ್ಳಿ — ಬೈಂದೂರು
ಬಂಟವಾಳ — ಬೆಳ್ತಂಗಡಿ — ಚಾರ್ಮಾಡಿ.
ಪಾಣೆಮಂಗಳೂರು — ಪುತ್ತೂರು — ಸುಳ್ಯ — ಮಡಿಕೇರಿ.
ಪುತ್ತೂರು — ಉಪ್ಪಿನಂಗಡಿ — ಬೆಳ್ತಂಗಡಿ.
ಮಡಿಕೇರಿ — ಪುತ್ತೂರು — ಕಾಸರಗೋಡು.
}

ಈ ಎಲ್ಲಾ ಊರುಗಳಿಗೆ ಚಲಾವಣೆಯಾಗುತ್ತಿವೆ.

ಮೈಸೂರು ಪಟ್ಟಣ ವ ಇದರ ಹತ್ತರವಿರುವ ಇತರ ಪಟ್ಟಣಗಳಿಂದ ಅಥವಾ ಕೊಡಗುಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಬಂದುಹೋಗುವ ಪ್ರಯಾಣಿಕರಿಗೆ ಕಂಪೆನಿಯ ಮಂಗಳೂರು — ಮಡಿಕೇರಿ ಸರ್ವಿಸು ಅನುಕೂಲವಾಗಿರುವುದು.

ಉತ್ತರ ಕನ್ನಡದಿಂದ ಭಟ್ಕಳ ಮಾರ್ಗವಾಗಿ ದಕ್ಷಿಣಕನ್ನಡಕ್ಕೆ ಬಂದು ಹೋಗುವವರಿಗೆ ಮಂಗಳೂರು — ಬೈಂದೂರು ಸರ್ವಿಸು ಅನುಕೂಲ.

ಮುಂಬಯಿ — ಮದ್ರಾಸು — ಕಡೂರು — ಚಿಕ್ಕಮಗಳೂರು — ಚಾರ್ಮಾಡಿ — ಈ ಪ್ರಾಂತ್ಯಗಳಿಗೆ ಈ ಕಂಪೆನಿಯ ಮಂಗಳೂರು — ಚಾರ್ಮಾಡಿ ಸರ್ವಿಸು ಅನುಕೂಲ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚು ಕಡಿಮೆ ಎಲ್ಲಾ ಮುಖ್ಯವಾದ ಊರುಗಳಿಗೆ ಹೋಗಲು ಈ ಕಂಪೆನಿಯ ಮೋಟಾರು ಬಸ್ಸು ಸರ್ವಿಸುಗಳು ಇವೆ. ಟಿಕೇಟು ದರಗಳು ಮೈಲು ಒಂದಕ್ಕೆ ಒಂದಾಣೆಕ್ಕಿಂತ ಕಡಿಮೆಯಾಗಿರುವವು. ಬಸ್ಸುಗಳು ಪ್ರತಿನಿತ್ಯ ಎರಡು ಮೂರಾವರ್ತಿ ಎಲ್ಲಾ ಸರ್ವಿಸು ಸ್ಟೇಶನುಗಳ ಮಧ್ಯೆ ಚಲಾವಣೆಯಾಗುವವು. ಬಸ್ಸುಗಳು ಆಯಾ ಸ್ಟೇಶನುಗಳಿಂದ ಹೊರಡುವ ಸಮಯ ಇತ್ಯಾದಿಗಳ ಬಗ್ಗೆ ಕಂಪೆನಿಯ ಆಯಾ ಸ್ಟೇಶನುಗಳ ಏಜಂಟರುಗಳಿಗೆ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

Secretary,
The Canara Public Conveyance Co., Ltd., Mangalore. S. K.

ಶಾಲಿವಾಹನಶಕ ೧೮೪೮ನೆಯ ಕ್ಷಯ ಸಂವತ್ಸರದ ಆಷಾಢ ಬ॥ ೭ ಶನಿವಾರದಿಂದ ಕ್ಷಯ ಸಂವತ್ಸರದ ಆಷಾಢ ಬ॥ ೧೩ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೬ನೆಯ ಕರ್ಣಾಟಕ ಆಟಿ.)

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೌರದಿನ	ಸೂರ್ಯ ಉ.	ಸೂರ್ಯ ಅಸ್ತ.
31	ಶನಿ	೭	೩೪.೪೪	ಅಶ್ವಿನೀ	೫೪ ೪೫	೧೫	6.17	7.56
1	ರವಿ	೮	೩೦.೪೬	ಕೃತ್ತಿಕಾ	೫೩.೧೬	೧೬	6.17	6.55
2	ಸೋಮ	೯	೨೭.೪೪	ರೋಹಿಣೀ	೫೨.೩೨	೧೭	6.18	6.55
3	ಕುಜ	೧೦	೨೫.೪೬	ಮೃಗಶಿರಾ	೫೨.೪೬	೧೮	6.18	6.55
4	ಬುಧ	೧೧	೨೫ ೦	ಆರ್ದ್ರಾ	೫೪ ೩೨	೧೯	6 18	6.54
5	ಗುರು	೧೨	೨೫.೪೪	ಪುನರ್ವಸು	೫೭ ೩೧	೨೦	6.18	6.54
6	ಶುಕ್ರ	೧೩	೨೭.೪೬	ಪುನರ್ವಸು	೬೦. ೦	೨೧	6 18	6.54

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
23	87—7	74—1	1—28	—
24	83—8	74—8	1—51	—
25	84—9	74—3	1—05	—
26	85—7	75—2	1—19	—
27	87—2	76—7	0—27	—
28	86—5	73—8	5—70	—
29	80—3	73—3	2—05	62—84

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಅ.	ವರೆಗೆ ರೂ. ಅ.
ಮಸ್ಕತಿ	8–12	9–10
ಹೊಸ ಗುಡ್ಡ ...	8–8	8–12
ಸುಗ್ಗಿ ...	8–2	8–9
ಅವ್ವಲ್ ಬೆಳ್ತಿಗೆ ...	8–0	9–6
ರಂಗೂನು ಬೆಳ್ತಿಗೆ ಗೋಣಿ ೧ ...	14–8	16–0
ಗೋದಿ ಗೋಣಿ ೧ಕ್ಕೆ ...	18–0	20–0
ಹುರುಳಿಗೋಣಿ ೧ಕ್ಕೆ ...	8–0	9–12
ಕಡಲೆಗೋಣಿ ೧ಕ್ಕೆ ...	13–0	14–8
ತೊಗರಿಗೋಣಿ ೧ಕ್ಕೆ ...	16–0	16–8
ತೊಗರಿಬೇಳೆ ಗೋಣಿ ೧ಕ್ಕೆ ...	19–0	26–0
ಉದ್ದು ಗೋಣಿ ೧ಕ್ಕೆ ...	16–8	17–0
ಹೆಸರುಗೋಣಿ ೧ಕ್ಕೆ ...	16–0	17–8
ಊರು ಬೆಲ್ಲ ಕಂಡಿ ೧ಕ್ಕೆ ...	85–0	–
ಉಪ್ಪು ಗೋಣಿ ೧ಕ್ಕೆ ...	5–8	5–12
ಕೊಬ್ಬರಿ ಕಂಡಿ ೧ಕ್ಕೆ ...	96–0	100–0
ಕೊಬ್ಬರಿ ಹಿಂಡಿ ಕಂಡಿ ೧ಕ್ಕೆ ...	33–0	33–8
ಎಳ್ಳಿಂಡಿ ಕಂಡಿ ೧ಕ್ಕೆ ...	42–8	45–0
ಕೊಬ್ಬರಿ ಎಣ್ಣೆ ಮುಡಿ ೧ಕ್ಕೆ ...	7–10	8–10
ಎಳ್ಳೆಣ್ಣೆ ಮುಡಿ ೧ಕ್ಕೆ ...	7–8	9–0
[illegible] ಎಣ್ಣೆ ಪೆಟ್ಟಿಗೆ ೧ಕ್ಕೆ ...	8-12-0	–
ಬೋರಿನ ಸಕ್ಕರೆ ಮುಡಿ ೧ಕ್ಕೆ ...	5–6	5–8
ಊರ ಮೆಣಸಿನಕಾಯಿ ಮುಡಿ ೧ಕ್ಕೆ ...	7–0	–
[illegible] ಮುಡಿ ೧ಕ್ಕೆ ...	9–8	–
ಕೊತ್ತಂಬರಿ ಮುಡಿ ೧ಕ್ಕೆ ...	5–0	5–8
[illegible] ಕಂಡಿ ೧ಕ್ಕೆ ...	385–0	460–0
[illegible] ಅಡಿಕೆ ಕಂಡಿ ೧ಕ್ಕೆ [illegible] ...	300–0	310–0
ಹೊಸ ಅಡಿಕೆ ಕಂಡಿ ೧ಕ್ಕೆ ...	195–0	220–0
[illegible] ಕಂಡಿ ೧ಕ್ಕೆ ...	360–0	–
[illegible] ಮುಡಿ ೧ಕ್ಕೆ ...	50–0	64–0
[illegible] ಮುಡಿ ೧ಕ್ಕೆ ...	4–0	–
[illegible] ಕಂಡಿ ೧ಕ್ಕೆ ...	45–0	65–0
[illegible] ಮುಡಿ ೧ಕ್ಕೆ ...	16–4	16–12
[illegible] ಮುಡಿ ೧ಕ್ಕೆ ...	21–0	–
[illegible] ೧ಕ್ಕೆ ...	18–10	
[illegible] ಮುಡಿ ೧ಕ್ಕೆ ...	16–8	
[illegible]	18–9	

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೪ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

ಪಾಳ್ಯದ ವೆಂಕಟಾಚಲ ಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ, ಸೋಡಾ ಫಾಕ್ಟರಿ,
ಮಂಗಳೂರು ಟವರಿಗೆ ಸಮೀಪ.

ಟೇಬಲ್ ಟೈಂಪೀಸ್ ಮತ್ತು ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚ್ ಇನಾಂ.

ಈ ನಕ್ಷೆಯಲ್ಲಿ ಕಂಡ ರಾಯಲ್‌ಫೌಂಟನ್ ಪೇನಾವು ಇಂಗ್ಲಾಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದೆ. ಈ ಪೇನಾದಿಂದ ಬರೆಯುವುದರಿಂದ ಅಕ್ಷರಗಳು ಬಹಳ ಚೆನ್ನಾಗಿ ಕಾಣುವವು. ಈ ಪೇನಾವನ್ನು ಬೇಗನೆ ತರಿಸಿಕೊಳ್ಳುವವರಿಗೆ ಮೇಲ್ಕಂಡ ಗಡಿಯಾರಗಳು ಇನಾಂ ಆಗಿ ಕೊಡುವೆವು. ಗಡಿಯಾರಗಳಿಗೆ ಖಾತ್ರಿಯಾದ 4 ವರುಷಗಳ ಗ್ಯಾರಂಟಿ ಬರೆದುಕೊಡುವೆವು



ಟೇಬಲ್ ಟೈಂಪೀಸ್ ಸಹಿತ ಪೇನಾ 1ಕ್ಕೆ 3 – 12 – 0.
ರೋಲ್ಡ್ ಗೋಲ್ಡ್ ರಿಸ್ಟ್ ವಾಚ್ ಸಹಿತ ಪೇನಾ 1ಕ್ಕೆ 6 – 4 – 0.

ವಿಳಾಸ:— ಅಮೇರಿಕನ್ ವಾಚ್ ಕಂಪೆನಿ.
ಪಿ. ಬಿ. ನಂ. 509, ಪಾರ್ಕ್‌ಟೌನ್, ಮದರಾಸು.

The American Watch Co.,
No. 509, Park Town, MADRAS.

Your Money will Fetch You more than What is Worth?

Cheap! "A NATIONAL CURE" Reliable!!

Why do you suffer from that Killing Malaria. If you want perfect relief, apply to the M. T. A. for a bottle of

M. T. A. MALARIA MIXTURE.

Discount Welcome. Allowed.

VISITS ARE SOLICITED TO

THE MANGALORE TRADING ASSOCIATION.

NEW ARRIVALS OF PATENT MEDICINES SUCH AS ALETRIS CORDIAL, ANGIER'S EMULSIONS, MONOLA WINE, WINCARNIS, STEVEN'S WINE & OTHER SORTS ETC., THAT ARE REQUIRED TO SUIT THE PRESENT PRESCRIPTIONS OF UP TO DATE DOCTORS.

Look-Sharp! FASHIONS.

eKlmeier Color Studs, Pins, Buttons etc., Diamond Batteries, Best Mazda Bulbs American focussing Lamps etc., up to date Sun Gogles, Safty Razors fitting to the fashion of the day.

Always Aim at reduced prices on Fresh Stocks.

The Mangalore Trading Association.
Car-Street, MANGALORE.

೨೦ ವರ್ಷಗಳಿಂದಲೂ ನಾವು ಪ್ರಸಿದ್ಧಿ ಹೊಂದಿರುವೆವು.

ಬೆಂಗಳೂರಿನ ಪ್ರಖ್ಯಾತವಾದ ಕಸಿ ಮಾಡಿದ (ಕಟ್ಟಿದ) ಹಣ್ಣಿನ ಗಿಡಗಳೂ, ಇಂಗ್ಲಿಷ್ ವ ದೇಶೀಯ ತರಕಾರಿ ಮತ್ತು ಹೂವಿನ ಬೀಜಗಳೂ ನಮ್ಮಲ್ಲಿ ದೊರೆಯುತ್ತವೆ. ಕ್ರಯದ ಪಟ್ಟಿಯನ್ನು ತರಿಸಿ ನೋಡಿ.

ವಿಳಾಸ: —

ಯಂ. ಮುನಿಸ್ವಾಮಿ ಅಂಡ್ ಸನ್ಸ್,
ಲಾಲ್‌ಬಾಗ್ ರೋಡ್,
ಬೆಂಗಳೂರು ಸಿಟಿ.

PLEASE CIRCULATE

ಹೊಸ ಮುದ್ರಣ! ಅಂದವಾದ ಅಕ್ಷರ!!

ಸಂಗೀತ-ಶಾಸ್ತ್ರ-ಪ್ರವೇಶದಾಯಿನಿ

ಎಂಬ ಅಪೂರ್ವ ಗ್ರಂಥವು.

ಇದರಲ್ಲಿ ಸಂಗೀತ ಶಾಸ್ತ್ರಸಂಬಂಧವಾದ ಅನೇಕ ರಹಸ್ಯಗಳು ಸುಲಭ ರೀತಿಯಲ್ಲಿ ವಿವರಿಸಲ್ಪಟ್ಟಿರುವುದಲ್ಲದೆ ಸರಳೆ, ಅಲಂಕಾರ, ಗೀತ, ಸ್ವರಜತಿ, ವರ್ಣಗಳೂ, ತ್ಯಾಗಯ್ಯರು, ಪಟ್ಣಂ ಸುಬ್ರಹ್ಮಣ್ಯರು, ದೀಕ್ಷಿತರು ಸದಾಶಿವರಾಯರು, ಶಾಮಶಾಸ್ತ್ರಿಗಳು ಮೊದಲಾದ ಸುಪ್ರಸಿದ್ಧ ಸಂಗೀತ ವಿದ್ವಾಂಸರಿಂದ ರಚಿತವಾದ [illegible]

[illegible]

0—14—0. ಅಡ್ವಾನ್ಸು ಇಲ್ಲದೆ ವಿ. ಪಿ. ಮಾಡುವುದಿಲ್ಲ. ನಮ್ಮ ಪುಸ್ತಕವನ್ನು ಮಾರುವದಕ್ಕೆ ಏಜಂಟರುಗಳು ಬೇಕಾಗಿದೆ.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕ ವ್ಯಾಪಾರಿಗಳು, ಬೆಂಗಳೂರು ಸಿಟಿ.

ಈಗ ತಾನೆ ವಿಕ್ರಯವಾಗಲಿದೆ.

ಮಂಗಳೂರು ಪಟ್ಟಣದ ಪ್ರಾಮುಖ್ಯ ಭಾಗದಲ್ಲಿ ರಸ್ತೆಯ ಬದಿ ಮತ್ತು ಮಾನವಂತ ಜನವಸತಿ ಮಧ್ಯದಲ್ಲಿ ಕಾಲು ಎಕ್ರೆ ಚಿಕ್ಕ ಸುಂದರವಾದ ಸ್ಥಳವು ಮಾರಲು ತಯಾರಿದೆ. ಫಲ ನೀಡುವ ಅನೇಕ ಮರಗಳನ್ನೊಳಗೊಂಡಿದೆ. ಯಾರಾದರೊಬ್ಬ ಪ್ರಾಮುಖ್ಯ ಡಾಕ್ಟರ್ ಯಾ ವಕೀಲರಿಗೆ ಸುಖವಾಗಿ ವಾಸಿಸಲು ಯೋಗ್ಯವಾದೊಂದು ಬಂಗ್ಲೆಯಿದೆ. ಕ್ರಯ ಸುಮಾರು ರೂ. 8000. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಕೂಡಲೆ ಬರೆಯಿರಿ.

Mr. Albert Sequeira,
Santa Cruz (Bombay.)

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ.

O. P. No. 25 OF 1926.

ಎ. ಎನ್. ಸೀತಾರಾಮಾಚಾರ್ ಕೂಡಾ 2 ಜನರು . . . . } ಅರ್ಜಿದಾರರು.

ಬೋಳ ಕಸಬಾ ಗ್ರಾಮದ ಪಿಲ್ಯಾರು ಎಂಬಲ್ಲಿದ್ದು ಅವಿವಾಹಿತನಾಗಿ ಹಾಲಿ ಮೃತಪಟ್ಟಿರುವ ಎ. ರಂಗಾಚಾರ್ ಯಾನೆ ಎ. ರಂಗಜ್ಯೋತಿ ಯಾನೆ ಎ. ರಂಗಾಚಾರ್ಯರ್ ಯಾನೆ ಅಣ್ಣಯಾಚಾರ್ ರಂಗಾಚಾರ್ಯರ್ ಇವರ ಸೊತ್ತುಗಳಿಗೆ ವಾರಿಸು ಸರ್ಟಿಫಿಕೇಟು ಅಪೇಕ್ಷಿಸಿ ಸದರಿಯವರ ಅಣ್ಣ ನರಸಿಂಹಾಚಾರ್ಯರ ಮಕ್ಕಳಾದ ಎ. ಎನ್. ಸೀತಾರಾಮಾಚಾರ್, ಎ. ಎನ್. ರಾಜೇಂದ್ರಾಚಾರ್, ಕೂಡಾ 2 ಜನರು ಮೇಲ್ಕಂಡ ಕೋರ್ಟಿನಲ್ಲಿ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಸದರಿ ಅರ್ಜಿಯು ಸದರಿ ಕೋರ್ಟಿನಲ್ಲಿ ತಾರೀಕು 18—8—1926ಕ್ಕೆ ತನಿಖೆಗೆ ಇಡೋಣಾಗಿಯದೆ. ಸದರಿ ಅರ್ಜಿದಾರರಿಗೆ ವಾರಿಸು ಸರ್ಟಿಫಿಕೇಟು ಕೊಡುವಲ್ಲಿ ಆಕ್ಷೇಪವುಳ್ಳವರು ಯಾರಾದರೂ ಇರುವದಾದರೆ ಅಂಥವರು ಮೇಲ್ಕಂಡ ಕೋರ್ಟಿನಲ್ಲಿ ಸದರಿ ತಾ. 18—8—1926ನೇ ದಿನ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಜಾಹೀರುಮಾಡಿಕೊಳ್ಳಬಹುದು ಎಂತ ಸಮಸ್ತರಿಗೂ ಇದರಿಂದ ತಿಳಿಸೋಣಾಗುತ್ತದೆ.

Karkal, Dated 23—6—1926. } **I. Shrinivasa Rao,** *Pleader for Petitioners.*

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ,

ಒ. ಪಿ. ನಂಬ್ರ 80/1926.

ಪಿ. ವೆಂಕಪ್ಪಯ್ಯ ಅರ್ಜಿದಾರ.
ಎದ್ರು
ಪಿ. ವಾಸುದೇವರಾವ್ ಕೂಡ ರೆಸ್‌ಪೊಂಡೆಂಟರು.

ಅರ್ಜಿದಾರನು ಪಣಂಬೂರು ವೆಂಕಪ್ಪಯ್ಯನವರ ಮಗ ಮ್ಯಾನರ ಸುಬ್ರಾಯರ ಆಸ್ತಿಯು ವ ದೇಹದ ಗಾರ್ಡಿಯನನ್ನಾಗಿ ತನ್ನನ್ನು ನೇಮಿಸಬೇಕಾಗಿ ವಗೈರೆ ಕಾಣಿಸಿ ದಾಖಲು ಮಾಡಿದ ಮೇಲಿನ ಅರ್ಜಿಯು ತನಿಖೆ ಬಗ್ಯೆ ತಾ. 7—8—1926ರ ಪೂರ್ವಾಹ್ನ ಘಂಟೆ 11ಕ್ಕೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಖುದ್ದಾಗಲಿ ವ ವಕೀಲ್‌ದ್ವಾರವಾಗಲಿ ಮೇಲ್ಕಂಡ ಕೋರ್ಟಿಗೆ ಜ್ಯಾಹೀರು ಮಾಡಿಕೊಳ್ಳತಕ್ಕದೆಂದು ಈ ಮೂಲಕ ತಿಳಿಸೋಣಾಗಿದೆ.

ಮಂಗಳೂರು, ತಾ. 30-7-'26. } M. ANANTHA SHASTRY. *Vakil*

ತೆಂಗಿನಲ್ಲಿ ಹಣವಿದೆ.

(ಕೃಷಿ ಇಲಾಖೆಯ ಓನೇ ಸರ್ಕಲಿನ ಡಿಪ್ಯುಟಿ ಡೈರೆಕ್ಟರ್ ಮ. ರಾ| ಎಮ್. ಗೋವಿಂದ ಕಿಣಿಯವರು.)

ತೆಂಗಿನ ಪೈರಿನ ಸ್ಥಿತಿಗತಿಯನ್ನು ಪರಿಶೋಧಿಸಲಿಕ್ಕೆ ಮದ್ರಾಸ್ ಸರ [illegible]

[illegible]

ಉದ್ದವು ೧೫ ಫೀಟ್‌ಗಳಿಗೆ ಮಿಕ್ಕಿಯೇ ಇರುತ್ತದೆ. ಹೀಗಿರುವುದರಿಂದ ಒಂದು ಗರಿಯಿಂದ ಇನ್ನೊಂದಕ್ಕೆ ಸುಮಾರು ೩೦ ಫೀಟ್ ಆದರೂ ಅನುಕೂಲವಾದ ಅಂತರವೆಂದು ತಿಳಿಯಬಹುದು. ಸರಿಯಾದ ಅಂತರವು ಎಷ್ಟಿರಬೇಕೆಂಬುದು ಇನ್ನೂ ಪರಿಶೋಧನೆಗೆ ಬಾಕಿ ಉಳಿದಿದೆ. (ಸಶೇಷ)

ಕರ್ಣಾಟಕ ಆಯುರ್ವೇದ ಭಿಷಕ್ ಮತ್ತು ವೈದ್ಯ ಪರೀಕ್ಷೆಗೆ ಉಮೇದ್ವಾರರಾಗುವ ವೈದ್ಯ ವಿದ್ಯಾರ್ಥಿಗಳಿಗೆ ಸೂಚನೆ.

ನಿಖಿಲ ಭಾರತ ಆಯುರ್ವೇದ ಮಹಾಮಂಡಲ ಮತ್ತು ವಿದ್ಯಾಪೀಠದ ನಿಯಮಾವಳಿಗನುಸರಿಸಿ ಕರ್ಣಾಟಕದಲ್ಲಿ ೧೯೨೬ನೇ ಇಸವಿ ಮೊದಲ್ಗೊಂಡು "ಭಿಷಕ್" ಮತ್ತು "ವೈದ್ಯ" ಇವೆರಡು ಪರೀಕ್ಷೆಗಳು ದೇಶಭಾಷೆಯಾದ ಕನ್ನಡದಲ್ಲಿ ಕರ್ಣಾಟಕಾಯುರ್ವೇದ ಸಮ್ಮೇಳನದವರಿಂದ ನಡಿಸಲ್ಪಡುತ್ತದೆ. ಇವೆರಡು ಪರೀಕ್ಷೆಗಳಿಗೆ - I ದ್ರವ್ಯ ಗುಣಶಾಸ್ತ್ರ II ರಸಶಾಸ್ತ್ರ III ಶಾರೀರ ಶಾಸ್ತ್ರ IV ಸ್ವಸ್ಥವೃತ್ತ V ರೋಗವಿಜ್ಞಾನ VI ಕಾಯಚಿಕಿತ್ಸಾ VII ಶಲ್ಯತಂತ್ರ VIII ಅಗದ ತಂತ್ರಗಳೆಂಬ ೮ ವೈದ್ಯಕ ವಿಷಯಗಳ ಮೇಲೆ ಪಠ್ಯಪುಸ್ತಕಗಳ ನಿಯಮದಂತೆ ೮ ಪ್ರಶ್ನಾಪತ್ರಿಕೆಗಳು ಕೊಡೋಣಾಗುತ್ತದೆ. ಆಯಾಯ ವಿಷಯಗಳನ್ನು ಪಠ್ಯಪುಸ್ತಕಗಳಾದ ವೈದ್ಯಕ ಗ್ರಂಥಗಳಿಂದ ಯಾ ಅವುಗಳ ಭಾಗಗಳಿಂದ ಕಲಿತುಕೊಳ್ಳಬಹುದು.

ಪತ್ರವ್ಯವಹಾರ.

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ, ಸ್ವದೇ]

ಶ್ರೀ

ಕಾಶಿಕ್ಷೇತ್ರಕ್ಕೆ ಉಡುಪಿಯ ಶ್ರೀಗಳವರ ಆಗಮನ.

ದುಷ್ಟನಿಗ್ರಹ ಶಿಷ್ಟಪರಿಪಾಲನಾರ್ಥವಾಗಿ ಭಗವಂತನು ದೇವಕಿಯ ಅಷ್ಟಮಗರ್ಭದಲ್ಲಿ ಅಷ್ಟಮಾವತಾರವನ್ನೆತ್ತಿದುದು ನಮ್ಮ ಭರತಭೂಮಿಯಲ್ಲಿ ಸರ್ವರಿಗೂ ವಿದಿತವಾಗಿಯೆ ಇರುವುದು. ಅಂಥ ಶ್ರೀಕೃಷ್ಣಪರಮಾತ್ಮನು ಶ್ರೀಮಧ್ವಾಚಾರ್ಯರ ಸ್ವಹಸ್ತದಿಂದ ಭೂಮ್ಯೆಕಾಂತವಾದ ರಜತಪೀಠ ಪುರಿಯಲ್ಲಿ [illegible]

[illegible]

ಕರ್ಣಾಟ ರಂಗಭೂಮಿ.

ಲೇಖಾಂಕ ೫.

ರಂಗರಚನೆ.

ಲಂಡನಿನಲ್ಲಿ—ಒಂದು ನಾಟಕದ ರಂಗರಚನೆಯನ್ನು ಮಾಡುವ ಬಗ್ಯೆ ರಂಗಾಧಿಕಾರಿಯು (Stage Manager) ಲಂಡನಿನ ಮ್ಯುಸಿಯಮ್ (Museum)ನಲ್ಲಿ ಹದಿನೈದು ದಿವಸ ಅಭ್ಯಾಸ ಮಾಡಿದನಂತೆ. ಅಭಿನಯಿಸಲಿಕ್ಕಿದ್ದ ನಾಟಕವು ಯಾವ ಶತಮಾನದ್ದಿರಬಹುದೆಂದು ಕಾಲನಿರ್ಣಯವಾದ ಮೇಲೆ, ಆ ಕಾಲದಲ್ಲಿ ಪದ್ಧತಿಗಳು ಹೇಗಿದ್ದುವು; ದೇಶಭೂಷಣಗಳು ಹೇಗಿದ್ದುವು, ಸಮಾಜದ ಸಂಬಂಧಗಳು ಹೇಗೆ ಕಲ್ಪಿಸಲ್ಪಟ್ಟಿದ್ದವು ಇತ್ಯಾದಿ ವಿಷಯಗಳನ್ನು ಅತಿ ಸೂಕ್ಷ್ಮರೀತಿಯಲ್ಲಿ ರಂಗಾಧಿಕಾರಿಯು ಅಲ್ಲಿ ಕಲಿಯಲಿತ್ತು. ಸರ್ವಸಾಮಾನ್ಯವಾಗಿ ನಾಟಕದ ರಂಗರಚನೆಯು ಲಂಡನಿನಲ್ಲಿ ಇಷ್ಟು ಸೂಕ್ಷ್ಮ ರೀತಿಯಲ್ಲಿಯೇ ನಡಿಯುತ್ತಿದೆ.

ನಮ್ಮ ನಾಟಕ ವ್ಯವಸ್ಥಾಪಕರ ಒಳ್ಳೇ ಅದೃಷ್ಟದಿಂದ ನಮ್ಮ ದೇಶದಲ್ಲಿ ಅಷ್ಟು ವಿಶ್ವವಿಷಯಗಳಿಂದ ತುಂಬಿರುವ ಮ್ಯುಸಿಯಮ್ ಕರ್ನಾಟಕದಲ್ಲಾಗಲೀ ಇಡೀ ಹಿಂದುಸ್ಥಾನದಲ್ಲೇ ಇರುವುದಿಲ್ಲ. ರಾತ್ರಿ ಗಟ್ಟಲೆಯಲ್ಲಿ ರಂಗ ಖರ್ಚು ಮಾಡಿ [illegible]

[illegible]

ಕರ್ನಾಟಕ ನಾಟಕಗಳು ಪ್ರಸಿದ್ಧಿಯನ್ನು ಹೊಂದಬೇಕಾದರೆ, ಕರ್ನಾಟಕ ಜನತೆಯಲ್ಲಿ ನಿಜವಾದ ನಾಟಕದ ಮೇಲಿನ ಅಭಿರುಚಿ ಹುಟ್ಟಬೇಕಾದರೆ, ಕರ್ನಾಟಕದಲ್ಲಿ ಚಿತ್ತರಂಜನೆಯೊಡನೆ ನಿಜವಾದ ಜ್ಞಾನವು ಪ್ರಸಾರವಾಗಬೇಕಾದರೆ, ನಾಟಕಗಳ ಆ ರಂಗರಚನೆಯಲ್ಲಿ ಈ ವಿಷಯಗಳಿಗೆ ಸರಿಯಾದ ಲಕ್ಷ್ಯವನ್ನು ಕೊಡಬೇಕು.

ಇವೆಲ್ಲ ತಿದ್ದುಪಡಿಗಳನ್ನು ಕರ್ನಾಟಕ ಪತ್ರಿಕೆಗಳು ಮಾಡಿಸಬಹುದು. ಪ್ರತಿ ಮಂಡಳಿಯ ಪ್ರತಿ ನಾಟಕದ ನಿರ್ದಾಕ್ಷಿಣ್ಯ ವಿಮರ್ಶೆಯನ್ನು ಪ್ರತಿ ಪತ್ರಿಕೆಗಳು ಸಂದರ್ಭ ಒದಗಿದಾಗ ಮಾಡಬೇಕು. ಆದರೆ ಇಲ್ಲಿ ಕೂಡ ನಾಟಕದ ವ್ಯವಸ್ಥಾಪಕರು ಸಂಪಾದಕರನ್ನೂ, ಸಂಬಂಧಪಟ್ಟ ಜನರನ್ನೂ ದಾಕ್ಷಿಣ್ಯಕ್ಕೆ ಹಾಕುವ ಸಂಭವಿರುತ್ತದೆ. ಕರ್ನಾಟಕ ಪತ್ರಿಕೆಗಳು ಈ ದಾಕ್ಷಿಣ್ಯವನ್ನು ಮೀರಿ ಮೇಲೆ ಬರಬೇಕು. ಅಲ್ಲದೆ ಖಾಸಗಿ ಅಸಮಾಧಾನದಿಂದ ಇವರನ್ನು ಖಂಡಿಸಲೂ ಬಾರದು. ಸರಿಯಾಗಿ ತೂಕ ಮಾಡಿ ವಿಮರ್ಶಿಸಿದರೇನೇ ಆ ವಿಮರ್ಶೆಗೆ ಬೆಲೆ ಬರುವುದು.

ಈ ತಿಂಗಳಲ್ಲಿ ಕೂಡಿದ ಡಿಸ್ಟ್ರಿಕ್ಟ್ ಬೋರ್ಡ್ ಸಭೆಯ ಪ್ರೊಸಿಡಿಂಗ್ಸು

ಯೂನಿವರ್ಸಿಟಿ ಮತ್ತು ಕರ್ನಾಟಕ ಪ್ರಾಂತ್ಯದ ಏಕೀಕರಣದ ವಿಷಯ ಎರಡು ನಿರ್ಣಯಗಳ ಮಸೂದೆಯನ್ನು ಬರೆದೆ. ಇಲ್ಲಿಯ ಕರ್ನಾಟಕ ಯೂನಿವರ್ಸಿಟಿ ಸಬ್ ಕಮಿಟಿಯ [illegible]

[illegible]

ಹಿಂದೊಮ್ಮೆ ಈ ರಸ್ತೆಯ ಕೆಲಸವು ಪ್ರಾರಂಭವಾಗಿ ಅರ್ಧದಲ್ಲಿಯೇ ನಿಲ್ಲಿಸೋಣಾಗಿರುವುದು. ರಸ್ತೆಯನ್ನು ಮುಂದರಿಸಿದರೆ ಪಯನೂರಿನಲ್ಲಿ ಮಲಬಾರ ರಸ್ತೆಗೆ ಇದನ್ನು ಕೂಡಿಸಬಹುದು. ಈ ಸಾರಿಯೂ ಈ ರಸ್ತೆಯ ಕೆಲಸವು ಎಷ್ಟು ಮೀಟಿನಲ್ಲಿಯೇ ಮುಗಿದುಹೋಗದೆಂದು ಅಪೇಕ್ಷಿಸುವ.

∴ ∴ ∴

ಕಾಸರಗೋಡು ಪಟ್ಟಣಕ್ಕೆ ಒಂದು ಯೂನಿಯನ್ ಸ್ಥಾಪನೆಯನ್ನು ಮಾಡುವದು ವಿಹಿತವೆಂತ ಸರಕಾರದ ಹುಕುಮೂ ಮತ್ತು ಕಾಸರಗೋಡು ತಾಲೂಕು ಬೋರ್ಡು ಪ್ರೆಸಿಡೆಂಟರ ಇದಕ್ಕೆ ಬೇಕಾದ ಸೂಚನೆಗಳೂ ಡಿಸ್ಟ್ರಿಕ್ಟ್ ಬೋರ್ಡು ಸಭೆಯ ಮುಂದೆ ಬಂದು ಕಾಸರಗೋಡಿನಲ್ಲಿ ಕಾರ್ಕಳದಲ್ಲಿರುವಂತೆಯೇ ಪಂಚಾಯತವನ್ನು ಸ್ಥಾಪಿಸಬಹುದೆಂತ ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಸಭೆಯಲ್ಲಿ ಸೂಚಿಸಿರುತ್ತಾರೆ. ಕಾಸರಗೋಡು ಪಟ್ಟಣದ ನಿವಾಸಿಕರ ಅಂಬೋಣವು ಈ ವಿಷಯದಲ್ಲಿ ಹೇಗಿರುವುದೆಂಬುದು ಗೊತ್ತಾಗುವದಿಲ್ಲ. ಮತ್ತು ಕಾಸರಗೋಡು ಪಟ್ಟಣದ ಈಗಿನ ಸ್ಥಿತಿಯಲ್ಲಿ ಅಲ್ಲಿ ಮಾರ್ಗಗಳ ದುರುಸ್ತಿ, ಎಲಿಮೆಂಟರಿ ಶಾಲೆಗಳ ಆಡಳಿತೆ, ಆರೋಗ್ಯ ಪಾಲನೆಯ ಬಗ್ಗೆ ಯೂನಿಯನ್ ಆಡಳಿತೆಯು ಅಲ್ಲಿ ಅಗತ್ಯವಿರುವುದೋ ಎಂಬುದು ಅಲ್ಲಿಯ ಊರಜನರಿಂದ ನಿಶ್ಚಯಿಸತಕ್ಕದ್ದಾಗಿದೆ.

∴ ∴ ∴

ಈಚೆಗೆ ಹಾಕಿಸಲ್ಪಟ್ಟ ಕೊಂಚಾಡಿ ಟೋಲಗೇಟನ್ನು ಕೊಂಚಾಡಿ ರಸ್ತೆಯಿಂದ ಐದು ಮೈಲು ದೂರದಲ್ಲಿ ಹಾಕ [illegible]

[illegible]

ಅನುಕ್ರಮಣಿಕೆ.

ಅಗ್ರಲೇಖ — ಪುಟ.
ನಾಗರಿಕರ ಕರ್ತವ್ಯ . . . ೬
ರಂಗಭೂಮಿ . . . ೫
ಸ್ಫುಟವಿಚಾರಗಳು . . . ೬
ಈ ತಿಂಗಳಲ್ಲಿ ಕೂಡಿದ ಡಿಸ್ಟ್ರಿಕ್ಟ್ ಬೋರ್ಡು ಸಭೆಯ ಪ್ರೊಸಿಡಿಂಗ್ಸು ೫
ವರ್ತಮಾನಸಂಗ್ರಹಗಳು—
ವಿದೇಶ, ಒಳದೇಶ . . . ೭
ದಕ್ಷಿಣ ಕನ್ನಡ— ಮಂಗಳೂರು, ತಿಪ್ಪುಪದಿ, ಅಜ್ಜಬೆಟ್ಟು, ವೇಣೂರು, ಕಾಸರಗೋಡು, ದೇವಪ್ಪಪದೂರು, ನೀಲೇಶ್ವರ, ಅಲೆಟ್ಟಿ, ಬಂಟವಾಳ, ಪಾಣೆಮಂಗಳೂರು, ತಲಪಾಡಿ, ಪುಂಜಾಲಕಟ್ಟೆ, ಉಡುಪಿ, ಮಂಜೇಶ್ವರ, ಪುತ್ತೂರು . . . ೮
ತೆಂಗಿನಲ್ಲಿ ಹಣವಿದೆ . . . ೯
ಕರ್ನಾಟಕ ಆಯುರ್ವೇದ ಭಿಷಕ್ ಮತ್ತು ವೈದ್ಯ ಪರೀಕ್ಷೆಗೆ ಉಮೇದ್ವಾರರಾಗುವ ವೈದ್ಯ ವಿದ್ಯಾರ್ಥಿಗಳಿಗೆ ಸೂಚನೆ . . . „
ಪತ್ರವ್ಯವಹಾರ . . . „

ಸ್ವದೇಶಾಭಿಮಾನಿ.

ಶಕ ೧೮೫೮ ಆಷಾಢ ಬ॥ ೬ಯು ಶುಕ್ರವಾರ.

ನಾಗರಿಕರ ಕರ್ತವ್ಯ.

(Civic Duties.)

ಸರ್ವಸಾಧಾರಣವಾಗಿ ಹಿಂದೀಯರಿಗೆ ಸಾಂಘಿಕ ಜೀವನವೆಂದರೇನೆಂದು ಗೊತ್ತಿಲ್ಲ. ಮ್ಯುನಿಸಿಪಾಲಿಟಿ, ಲೋಕಲ್ ಬೋರ್ಡು ಇತ್ಯಾದಿಗಳು, ಜನತೆಯ ಸಂಸಾರದೊಳಗಿನ ಸೈಸರ್ಗಿಕ ಸಂಬಂಧದ ಹೊರಸೂಚನೆಮಾತ್ರವಾಗಿವೆ. ಒಂದು ಮುನ್ಸಿಪಾಲಿಟಿ ಅಥವಾ ಲೋಕಲ್‌ಬೋರ್ಡು ಎಂದರೆ ಚೆನ್ನಾಗಿ ವ್ಯವಸ್ಥೆಗೊಳಿಸಲ್ಪಟ್ಟ ಒಂದು ದೊಡ್ಡ ಅವಿಭಕ್ತ ಕುಟುಂಬವಾಗಿದೆಯೆಂದೂ, ಅದರ ಕಾರ್ಯಗಳೆಲ್ಲವೂ ಸಮಷ್ಟಿಯ ಹಿತದವುಗಳಾಗಿದ್ದು, ಪರಿಣಾಮ ಮೂಲಕವಾಗಿ ವ್ಯಕ್ತಿಯ ಹಿತವನ್ನು ಸಾಧಿಸುತ್ತಿವೆಯೆಂದೂ ನಾವು ತಿಳಿದುಕೊಳ್ಳಬೇಕು. ಸರಕಾರವಾದರೂ ಈ ಅವಿಭಕ್ತ ಕುಟುಂಬದ ಸೂತ್ರದ ಸ್ಥಾನಾಪನ್ನವಾಗಿದೆ. ಒಂದು ದೇಶಕ್ಕೆ ಸರಕಾರವಿಲ್ಲದಿದ್ದರೆ, ಕೆಲವರಿಗೆ ಕಂದಾಯ, ತೀರ್ವೆ ಇತ್ಯಾದಿ ಕೊಡುವ ಅವಶ್ಯವಿಲ್ಲವೆಂಬುದು ನಿಜ. ಆದರೆ ಈ ಕಂದಾಯ ಮತ್ತು ತೀರ್ವೆಯ ಲೆಕ್ಕ ಹಾಕುವ ಮೊದಲೆ ವ್ಯಕ್ತಿಯ ಮೂಲಧನವೇ ಕಾಣೆಯಾಗಿ ವ್ಯಕ್ತಿಯ ಅಸ್ತಿತ್ವವೇ ಅಸಾಧ್ಯವಾಗುವುದು. ಆದುದರಿಂದ ಸಾಂಘಿಕ ಜೀವನದ ಮಹತ್ವವನ್ನು ನಾವು ತಿಳಿದುಕೊಳ್ಳುವುದು ಅವಶ್ಯಕವಿದೆ.

ಈ ಸಾಂಘಿಕ ಅವಶ್ಯಕತೆಗಳಿಗಾಗಿ ವ್ಯಕ್ತಿಯು ಕೆಲ ಮಟ್ಟಿಗೆ ತ್ಯಾಗವಮಾಡುವುದೂ ಅಗತ್ಯವುಂಟು. ಇಂತಹ ತ್ಯಾಗವನ್ನು ಮಾತ್ರ ನಮ್ಮ ಜನರು ಮಾಡಲು ಒಪ್ಪುವುದಿಲ್ಲ, ಆದರೆ ಈ ತ್ಯಾಗವು ಬರೇ ತಾತ್ಕಾಲಿಕವಿದ್ದು, ಇದರ ಲಾಭವು ಸಂಬಂಧಪಟ್ಟ ವ್ಯಕ್ತಿಗೆ ಬೇರೆ ರೂಪದಲ್ಲಿ ಸಿಕ್ಕದೆ ನಿಲ್ಲುವುದಿಲ್ಲ.

ಮ್ಯುನಿಸಿಪಾಲಿಟಿಯಾಗಲಿ, ಲೋಕಲ್‌ಬೋರ್ಡು ಜನರ ದುಡ್ಡನ್ನು ಕೊಳ್ಳೆ ಹೊಡೆಯಲಿಕ್ಕೆ ಸ್ಥಾಪಿಸಲ್ಪಡುತ್ತಿವೆಯೆಂಬುದೆ ಅನೇಕರ ಮನಸ್ಸಿನೊಳಗಿನ ನಿಶ್ಚಿತ ಅಭಿಪ್ರಾಯವಾಗಿದೆ. ಆದರೆ ಈ ಸ್ಥಳೀಕ ಸ್ವರಾಜ್ಯ ಸಂಸ್ಥೆಗಳು ಜನರಿಂದ ಕರದ ರೂಪದಲ್ಲಿ ಬಹಳ ನಷ್ಟವನ್ನು ಮಾಡುವುವಾದರೂ, ನಗರ ರಚನೆಯಲ್ಲಿಯೂ, ನಗರ ರಕ್ಷಣೆಯಲ್ಲಿಯೂ ಈ ಸಂಸ್ಥೆಗಳು ಬಹಳ ಕೆಲಸ ಮಾಡಲು ಸಾಧ್ಯವಿದೆ. ಅಲ್ಲದೆ ಪ್ರಕೃತದ ಸರಕಾರಿ ಕಾನೂನು ಈ ಸಂಸ್ಥೆಗಳಲ್ಲಿ ಅಗತ್ಯವಿರುವಷ್ಟು ಜವಾಬ್ದಾರಿಯನ್ನು ಬಿಟ್ಟುಕೊಡುವುದಿಲ್ಲವಾದರೂ, ಇದ್ದ ಸ್ಥಿತಿಯಲ್ಲಿಯೇ ಜನರು ಈ ಸಂಸ್ಥೆಗಳಿಂದ ಸಾಮಾಜಿಕ ಜೀವನವನ್ನು ಬಹಳವಾಗಿ ಸುಧಾರಿಸಿಕೊಳ್ಳಬಹುದಾಗುತ್ತದೆ.

ಇಂತಹ ಸಂಸ್ಥೆಗಳ ಕಡೆಗೆ ನಮ್ಮ ಕರ್ತವ್ಯವೇನು ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಕೆಲವು ದಿನಗಳ ಹಿಂದೆ ನಾವು ಒಬ್ಬರು ಇಂಜಿನಿಯರಿಂಗ್ ಖಾತೆಯ ಜನರೊಡನೆ ಮಾತನಾಡುತ್ತಿದ್ದೆವು. "ಮಾರ್ಗದಲ್ಲಿ ಕಲ್ಲು ರಾಶಿ ಹಾಕುತ್ತದೆ, ಜನರಿಗೆ ನಡೆಯಲಿಕ್ಕೆ ಸ್ಥಳವಿಲ್ಲ, ಅಪಘಾತಗಳು ಸಂಭವಿಸಲಿಕ್ಕೆ ಈ ರಾಶಿಗಳು ಕಾರಣವಾಗುತ್ತಿವೆ ಎಂದು ನೀವೆಲ್ಲ ನಿಮ್ಮ ಪತ್ರಿಕೆಯಲ್ಲಿ ಬರೆಯುತ್ತೀರಿ ನಿಜ; ಆದರೆ ಆ ಮಾರ್ಗಗಳನ್ನು ಅಗಲ ಮಾಡಿ ಜನರಿಗೆ ಸೌಕರ್ಯವನ್ನು ಒದಗಿಸಲೆಂದರೆ ಜನರು ಎಷ್ಟು ತೊಂದರೆ ಕೊಡುವರೆಂದು ನೀವು ತಿಳಿಯುವುದಿಲ್ಲ"ವೆಂದು ಅವರು ಹೇಳಿದರು. ಅವರ ಉದಾಹರಣೆಯಿಂದ ಅವರ ಮತವು ಸರಿಯಾದದ್ದೆಂದು ನಮಗೆ ತಿಳಿಯಿತು. ಒಂದು ಪಟ್ಟಣದಲ್ಲಿ ಮಾರ್ಗಗಳು ಬರೇ ಅಗಲ ಕಡಿಮೆಯಿದ್ದವುಗಳಾಗಿವೆ. ಅಲ್ಲಿ ಮಾಗಣೆದ ವ್ಯವಹಾರವೇನೊ ತುಂಬಾ ಇದೆ. ಇಂಥಾ ಸ್ಥಳದಲ್ಲಿ ಮಾರ್ಗ ಅಗಲ ಮಾಡಿ ಕಟ್ಟಿಕೊಳ್ಳಲು ಪಾರ್ಶ್ವದ ಸ್ಥಳವನ್ನು ಆಕ್ರಮಣ ಮಾಡಿಕೊಳ್ಳಲೆಂದಿರುವಾಗ, ಸ್ಥಳದ ಮ್ಯಾಲೀಕರು ರಾತ್ರಿರಾತ್ರಿಗೇನೇ ಗೇಸ್‌ಲ್ಯಾಟು ಹಾಕಿ ಕಟ್ಟೋಣ ಕಟ್ಟಿಸಿ ಆಕ್ರಮಣದ ಅಸಾಧ್ಯತೆಯನ್ನು ತೋರಿಸಿದರಂತೆ! ಇಂತಹ ಸ್ಥಿತಿಯಲ್ಲಿ ಮಾರ್ಗ ಅಗಲ ಮಾಡುವುದು ಹೇಗೆ? ಅದರ ರಿಪೇರಿಯ ಬಗ್ಗೆ ಕಲ್ಲುಗಳನ್ನು ರಾಶಿ ಮಾಡುವುದು ಎಲ್ಲಿ? ಕಲ್ಲುಗಳನ್ನು ಜನರಿಗೆ ತೊಂದರೆಯಾಗದ ಹಾಗೆ, ಬದಿಯಲ್ಲಿ ಖಾಸಗಿ ಜನರ ಸ್ಥಳದಲ್ಲಿ ರಾಶಿ ಹಾಕಲೆಂದರೆ ಅದರ ಕಥೆಯನ್ನೂ ಅವರು ಹೇಳಿದರು. ಪಾರ್ಶ್ವದ ಸ್ಥಳದ ಮ್ಯಾಲೀಕರ ಅಪ್ಪಣೆ ಪಡೆದು ಮಾರ್ಗ ದುರುಸ್ತಿಯ ಜಲ್ಲಿರಾಶಿಯನ್ನು ಆ ಸ್ಥಳದಲ್ಲಿ ರಾಶಿಗಟ್ಟಿದರಂತೆ. ಆದರೆ ಬೆಳಗ್ಗೆಯಾಗಬೇಕಾದರೆ ಆ ರಾಶಿಯೆಲ್ಲಾ ಚರಂಡಿಯಲ್ಲಿ ಬಿದ್ದಿತ್ತಂತೆ!

ಈ ಕಥೆಗಳು ವಿಶ್ವಾಸಿಸಲಾರದಷ್ಟು ನಮ್ಮ ಜನರ ಮಾನಸಿಕತೆಯನ್ನು ಮೀರಿಲ್ಲ, ನಮ್ಮ ಜನರ ಮಾನಸಿಕತೆಯು ತುದಿಯಲ್ಲಿ ಕೂತು ಬುಡಕೊಯ್ದು ಬಿದ್ದೆನೆಂದು ಬೊಬ್ಬಿಡುವವನ ಮಾನಸಿಕತೆಯಂತಿದೆ. ಮಾರ್ಗಗಳು ಅಗಲವಾಗಬೇಕು, ಮಾರ್ಗಗಳು ಹೆಚ್ಚಾಗಬೇಕು ಎಂಬುದು ಪ್ರತಿ ನಗರರಚನೆಯ ಮೂಲಸೂತ್ರವೂ ಸಾರ್ವಜನಿಕ ಆರೋಗ್ಯದ ಮೂಲಸೂತ್ರವೂ ಆಗಿದೆ. ಅಂತಹ ಮಾರ್ಗಗಳನ್ನು ಅಗಲ ಬಿಡಗೊಡದೆ, ಹಾದಿಯಲ್ಲಿ ಜಲ್ಲಿ ರಾಶಿಗಟ್ಟಿದ್ದಕ್ಕೆ ಬೊಬ್ಬಿಡುವುದೂ, ಮಾರ್ಗದಲ್ಲಿ ಅಪಘಾತಗಳಾಗಿ ಬೊಬ್ಬಿಡುವುದೂ, ಮನೆಯೆಲ್ಲಾ ಆರೋಗ್ಯ ಕಳಕೊಂಡು ಬೊಬ್ಬಿಡುವುದೂ ಬುಡ ಕೊಯ್ದು ಬಿದ್ದವನಬೊಬ್ಬಾಟದಂತೆಯೇ ಆಗಿದೆ.

ಮ್ಯುನ್ಸಿಪಾಲಿಟಿಗಳೂ, ಲೋಕಲ್ ಬೋರ್ಡುಗಳೂ ಅಂದರೆ ಪ್ರತ್ಯೇಕ ವ್ಯಕ್ತಿಯಾಗಲಿ ನಾವಲ್ಲದ ಪ್ರತ್ಯೇಕ ವಿಷಯವಾಗಲಿ ಆಗಿಲ್ಲ. ಈ ಸಂಸ್ಥೆಗಳೆಂದರೆ ನಾವೇ ಆಗಿರುವೆವು. ಇವುಗಳ ಕೆಲಸಗಳು ನಮ್ಮ ಕೆಲಸಗಳೇ ಆಗಿರುವುವು. ಮನೆಯ ಅಂಗಳದ ನೀರನ್ನು ಹೊರಕಳುಹಿಸಲಿಕ್ಕೆ ನಾವು ಹೇಗೆ ಒಂದು ತೋಡನ್ನು ಕಟ್ಟುತ್ತೇವೆಯೋ ಇಲ್ಲವೆ ಮನೆಯೊಳಗೆ ಪಶೆಯೇರಿ ಆರೋಗ್ಯ ಕೆಡದಂತೆ ನಾವು ಮನೆಯಲ್ಲಿ ವರ್ಷ ವರ್ಷವೂ ಹೇಗೆ ಸುಧಾರಣೆ ಮಾಡುತ್ತೇವೊ, ಇಲ್ಲವೆ ಎಪ್ರಿಲ್, ಮೇ ಎರಡು ತಿಂಗಳ ನೀರಿನ ಅಭಾವಕ್ಕಾಗಿ ನಮ್ಮ ಬಾವಿಗಳನ್ನು ನೂರಾರು ರೂಪಾಯಿ ಖರ್ಚುಮಾಡಿ ಹೇಗೆ ಆಗೆಯುತ್ತೇವೆಯೊ, ಮ್ಯುನಿಸಿಪಾಲಿಟಿ ಲೋಕಲ್ ಬೋರ್ಡುಗಳು, ನಗರ, ತಾಲೂಕು ಜಿಲ್ಲೆಗಳೆಂಬುವುಗಳಿಗಾಗಿ ಇವುಗಳು ಈ ತರದ ಸೌಕರ್ಯಗಳಿಗಾಗಿ ಶ್ರಮಿಸುತ್ತಿವೆ. ನಾವು ನಮ್ಮ ಮನೆಯ ಅಂಗಳವನ್ನು ದೊಡ್ಡದಾಗಿ ಮಾಡಬೇಕೆಂದಿದ್ದರೆ ಹತ್ತಿರದ ಸಣ್ಣ ಹಟ್ಟಿಯಾಗಲಿ ಇತರ ಕಟ್ಟೋಣಗಳನ್ನು ಬೀಳಿಸಲು ಹಿಂದೆಗೆಯುವುದಿಲ್ಲ. ಒಳಮಾರ್ಗ ಒಂದು ಬೇಕಾದರೆ, ಒಳ್ಳೇ ಬೆಳೆಯನ್ನು ಕೊಡುತ್ತಿದ್ದ ಗದ್ದೆಗಳ ಒಂದಂಶವನ್ನು ಪ್ರತ್ಯೇಕಿಸಲು ನಷ್ಟವೆಂದೆಣಿಸುವುದಿಲ್ಲ. ಆದರೆ ಲೋಕಲ್ ಬೋರ್ಡುಗಳ, ನಮ್ಮ ಮತ್ತು ನಮ್ಮೆಲ್ಲರ ಹಿತಕ್ಕಾಗಿ ಕ್ರಯಕೊಟ್ಟು ಸ್ಥಳ ಕೇಳಿದರೆ ನೂರು ಅಡ್ಡಿಗಳನ್ನು ಹೇಳುವೆವು.

ಜನರಿಂದ ಅಧಿಕೃತರಾಗಿ ಸಾವಿರಾರು ಜನರ ಹಿತಗಳನ್ನು ಕೈಯೊಳಗೆ ಮಾಡಿಕೊಂಡಿರುವ ಈ ಸ್ಥಳೀಕ ಸ್ವರಾಜ್ಯ ಸಂಸ್ಥೆಗಳ ಸೂತ್ರಧಾರಿಗಳನ್ನು ಆಗಾಗ ಎಚ್ಚರಿಸಿ, ಅವರ ಕೆಲಸಗಳಲ್ಲಿ ಶ್ರೇಷ್ಠತೆಯನ್ನುಂಟುಮಾಡಿ, ಜನರಿಗೆ ಅವರಿಂದ ಹೆಚ್ಚು ಲಾಭವಾಗುವಂತೆ ನೋಡಿಕೊಳ್ಳುವುದು ಪತ್ರಿಕೆಗಳ ಕರ್ತವ್ಯವಾಗಿದೆ. ಆದರೆ ಅವರ ಎಲ್ಲಾ ಕಾರ್ಯಗಳಲ್ಲಿ ಸಫಲತೆಯು ಇರಬೇಕಾದರೆ ಜನತೆಯು ತಮ್ಮ ಕರ್ತವ್ಯವನ್ನು ತಿಳಿದುಕೊಳ್ಳಬೇಕು. ಜನತೆಯು ತಮ್ಮ ಮುಖ್ಯ ಕರ್ತವ್ಯವೆಂದು ತಿಳಿದುಕೊಳ್ಳಬೇಕಾದ ಕೆಲವು ಕೆಲಸಗಳನ್ನು ಈ ಸಂಸ್ಥೆಗಳು ಸರಕಾರದ ಕಾನೂನಿನ ಸಹಾಯದಿಂದಲೇ ಜನರನ್ನು ಒತ್ತಾಯ ಪಡಿಸಿ ಅವರಿಂದ ಮಾಡಿಸಿಕೊಳ್ಳುವುದು ಕೇವಲ ಹೀನವಾದ ವಿಷಯವಾಗಿದೆ. ಜನರು ತಮ್ಮ ಕರ್ತವ್ಯಗಳನ್ನೂ, ಈ ಸಂಸ್ಥೆಗಳು ತಮ್ಮ ಜವಾಬ್ದಾರಿಯನ್ನೂ ತಿಳಿದುಕೊಂಡರೆಂದರೆ ಸಾಂಘಿಕ ಸಂಸಾರವು ಸುಖಮಯವಾಗಿ ಪರಿಣಮಿಸುವುದರಲ್ಲಿ ಸಂದೇಹವೇನೂ ಇರದು.

ಹಾದಿಯಲ್ಲಿ ಲಾಟಾನು ಕಂಬಗಳನ್ನು ನೆಡಲಿಲ್ಲ; ಮಾರ್ಗವು ಸರಿಯಾಗಿ ದುರುಸ್ತಿ ಹೊಂದುವುದಿಲ್ಲ; ಶಾಲೆಗಳಲ್ಲಿ ವಿದ್ಯಾಭ್ಯಾಸವು ಸರಿ ಸಿಕ್ಕುವುದಿಲ್ಲ; ಸಂತವು ಇನ್ನೂ ರಿಪೇರಿ ಆಗಿಲ್ಲ; ಸಾಂಕ್ರಾಮಿಕ ರೋಗಗಳು ಬಂದರೂ ಎಚ್ಚರವಾಗುವುದೇ ಇಲ್ಲ, ಎಂದಿತ್ಯಾದಿಯಾಗಿ ನಾವು ಈ ಸಂಸ್ಥೆಗಳ ಜಡತೆಯನ್ನು ದೂಷಿಸಬಹುದು. ಆದರೆ ಇವರ ಕಾರ್ಯಗಳಿಗೆ ನಾವು ಯಾವ ರೀತಿಯಲ್ಲಿ ಸಹಕಾರಿಯಾಗಿದ್ದೇವೆ? ಕುಂಟ ಹುಡುಗರು ಲಾಟೀನಿನ ಮೇಲೆ ಪ್ರಶಂಸನೀಯವಾದ ನೆಂಟು ಏಟ್ಟು ಕಲ್ಲು ಹೊಡೆದಿರುವಾಗ ನಾವು ಬಹಳ ಖುಷಿಯಾಗಿ ನಕ್ಕಿರುವೆವಲ್ಲದೆ, ಅವನನ್ನು ಏಕೆ ಗದರಿಸಲಿಲ್ಲ; ಇಲ್ಲವೇ ಈ ಸಂಸ್ಥೆಗಳಲ್ಲಿ ಹಣ ಕಡಿಮೆ ಇದ್ದಾಗ ಒಂದು ಕಟ್ಟೋಣವನ್ನು ಕಟ್ಟಿಸಿ, ಏಕೆ ಒಂದು ಶಾಲೆಯನ್ನು ತೆರೆಯುವಂತೆ ಮಾಡಿಲ್ಲ, ಮನೆಯ ಕೊಳೆತ ತರಕಾರಿಯನ್ನೆಲ್ಲಾ ಮಾರ್ಗದ ಮೇಲೆಯೇ ಏಕೆ ನಾವು ಬಿಸಾಡಬೇಕು; ಕೊಳಕು ನೀರನ್ನು ಸರಿಯಾದ ಸ್ಥಳಕ್ಕೆ ಒಯ್ಯದೆ, ಮಾರ್ಗದಲ್ಲಿ ಬಿಟ್ಟು ಏಕೆ ದುರ್ಗಂಧವಾಗಿ ಮಾಡುವೆವು; ಏಕೆ ಮಾರ್ಗಗಳನ್ನು ಪ್ರತಿ ಮನೆಯವರು ರಾತ್ರಿಕಾಲದ ಅವಸರದ ಪಾಯಿಖಾನೆಯಾಗಿ ಮಾಡುವುದನ್ನು ನಿಲ್ಲಿಸುವುದಿಲ್ಲ; ಇವನ್ನು ನಾವು ಸರಿಯಾಗಿ ವಿಚಾರಿಸಿಕೊಳ್ಳಬೇಕು. ಮ್ಯುನ್ಸಿಪಲ್ ಹೆಲ್ತ ಅಫೀಸರನು ಬಂದು ಈ ನಿಮ್ಮ ಪಾಯಿಖಾನೆಯನ್ನು ತೆಗೆದು ದೂರಕ್ಕೆ ಹಾಕಿಸಿರಿ ಎನ್ನುವುದು ಅವನ ಮನೆಮಕ್ಕಳಿಗೆ ಉಪಯೋಗಕ್ಕೆ ಹತ್ತಿರವಾಗುವುದೆಂದಲ್ಲ, ನಮ್ಮ ಆರೋಗ್ಯಕ್ಕೇನೇ ಬಾಧಕ ತಟ್ಟುವುದೆಂದು.

ನಾಗರಿಕನಾದ ನಗರವಾಸಿಯು ಇವೆಲ್ಲ ವಿಷಯಗಳನ್ನು ಚೆನ್ನಾಗಿ ಆಲೋಚಿಸಬೇಕು. ಇವುಗಳ ಕಡೆಗೆ ಗಮನಕೊಟ್ಟು ತನ್ನ ನಡತೆಯನ್ನು ತಿದ್ದುವುದರಲ್ಲಿ ಅವನು ಯಾವ ಅತ್ಯುಜ್ವವನ್ನೂ ಮಾಡುವುದರಲ್ಲಿ ಮಹತ್ವವೇನೂ ಇಲ್ಲ. ಅದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಒಂದೊಂದು ಬಾರಿ ಒಬ್ಬೊಬ್ಬ ವ್ಯಕ್ತಿಯು ನಷ್ಟಹಾಕಿಕೊಳ್ಳಬೇಕಾಗುತ್ತದೆ. ತನ್ನ ರೋಗಕ್ಕೆ ಮದ್ದು ಕೊಟ್ಟ ದಾಕ್ತರನನ್ನು ಕಹಿಯನ್ನು ತಿನ್ನಿಸಿದನೆಂದು ಯಾರೂ ಬೈಯುವುದಿಲ್ಲ. ಈ ಸಂಸ್ಥೆಗಳನ್ನೂ ಅದೇ ರೀತಿಯಲ್ಲಿ ಲಕ್ಷಿಸಬೇಕು. ಈ ಸಂಸ್ಥೆಗಳು ನಮ್ಮವು; ಇವುಗಳಿಂದ ನಾವು ಲಾಭ ಹೊಂದುವುವು ಎಂದು ನಾವು ತಿಳಿದು ಇವುಗಳೊಡನೆ ಸಹಕರಿಸುವುದು ನಾಗರಿಕನ ಪ್ರಾಥಮಿಕ ಕರ್ತವ್ಯವಾಗಿದೆ.

ಸ್ಫುಟವಿಚಾರಗಳು.

ಮಲೆನಾಡು ಕೂಲಿಗಳು.

ಜುಲಾಯಿ ತಾ. ೨೪ರ ಹಿಂದೂ ಪತ್ರಿಕೆಯಲ್ಲಿ ಮಲೆನಾಡು ಕೂಲಿಗಳ ಸಂಕಷ್ಟಗಳನ್ನು ವಿವರಿಸಿ, ಸರಕಾರವು ಅವರ ಕಡೆಗೆ ಸರಿಯಾಗಿ ಕಣ್ತೆರೆದು ನೋಡುವ ಅವಶ್ಯಕತೆಯನ್ನು ತೋರಿಸಿ, ಅವರ ಈ ಪರಿಸ್ಥಿತಿಯನ್ನು ಚೆನ್ನಾಗಿ ಅವಲೋಕಿಸಿ ಸುಧಾರಿಸುವ ಸೂಚನೆಗಳನ್ನು ಕೊಡುವ ಬಗ್ಗೆ ಒಂದು ಕಮಿಶನ್ನು ನೇಮಕವಾಗಬೇಕೆಂದು ಸೂಚಿಸಿಯದೆ. ಮಲೆನಾಡು, ಮುಖ್ಯವಾಗಿ ಕಾಪಿತೋಟಗಳಿಗೆಲ್ಲಾ ನಮ್ಮ ಜಿಲ್ಲೆಯ ಕೂಲಿಗಳೇ ಹೆಚ್ಚಾಗಿರುವರು. ದಕ್ಷಿಣ ಕನ್ನಡದ ಪೂರ್ವದ ಮೇರೆಯ ಉನ್ನತಶ್ರೇಣಿಯ ಘಟ್ಟಗಳಿಗೆ, ದಕ್ಷಿಣ ಕನ್ನಡದ ಕೂಲಿಯೂ, ದಕ್ಷಿಣ ಕನ್ನಡದ ಸಣ್ಣ ವ್ಯಾಪಾರಸ್ಥನೂ, ದಕ್ಷಿಣ ಕನ್ನಡದ ಕ್ಲಾರ್ಕರೂ ಅಲ್ಲದಿದ್ದರೆ ಮಲೆನಾಡು ಕಾಡಾಗಿಯೇ ಇರಬೇಕಿತ್ತು. ಆದುದರಿಂದ ಕೂಲಿಗಳ ಸಮಸ್ಯೆಯು ನಮ್ಮ ಜಿಲ್ಲೆಗೂ ಅತೀ ಮುಖ್ಯವಾದುದಾಗಿದೆ. ಸಹಜವಾಗಿಯಾದರೆ ಸಮೃದ್ಧಿಯುಳ್ಳ ನಮ್ಮ ಜಿಲ್ಲೆಯ ಕೂಲಿಗಳು ಮಲೆನಾಡಿನಂತಹ ಜ್ವರಪ್ರದೇಶಕ್ಕೆ ಹೋಗಿ ಸಂಕಟಪಡಬೇಕಿರಲಿಲ್ಲ. ವ್ಯವಸಾಯದಲ್ಲಿ ನಿರತರಾದರೆ ಅವರ ಜೀವನವು ಸುಖವಾಗಿ ಅಂದರೆ ಮಲೆನಾಡಿಗಿಂತಲೂ ಸುಖವಾಗಿ ನೀಗುವುದರಲ್ಲಿ ತೊಂದರೆ ಇಲ್ಲ. ಆದರೆ ತೋಟಗಳ ಮ್ಯಾಲಿಕರ ಕಂಟ್ರಾಕ್ಟರರು ಜಿಲ್ಲೆಯಲ್ಲಿ ತಿರುಗಿ ಕೂಲಿಗಳಿಗೆ ಇಲ್ಲದ ಆಶೆಯನ್ನು ತೋರಿಸಿ, ಪುಸಲಾಯಿಸಿ, ಕೊಂಡುಹೋಗಿ ಅವರಿಗೆ ಪ್ಲಾಂಟರರು ಕೊಡುವ ಲಾಭವನ್ನು ತಾವೇ ಅಪಹಾರಮಾಡಿಕೊಳ್ಳುತ್ತಾರೆ. ಹೀಗೆ ನಿಜವಾಗಿ ಕೂಲಿಗಳಿಗೆ ಸಿಕ್ಕಬೇಕಾದ ಹಣವನ್ನು ತಾವೇ ಅಪಹಾರಮಾಡಿಕೊಂಡು ಲಕ್ಷಾಧೀಶರಾಗಿ ಹೋದ ಅನೇಕ ಕಂಟ್ರಾಕ್ಟರರನ್ನು ನಾವು ಈಗಲೂ ಕಾಣಬಹುದು. ಹೀಗೆ ಅನ್ಯಾಯವಾಗಿ ದುರುಪಯೋಗಹೊಂದುತ್ತಿದ್ದ ಹಣವನ್ನು ನಿಲ್ಲಿಸಲೆಂದರೆ ಪ್ಲಾಂಟರರುಗಳಿಗೆ ಈ ಕಂಟ್ರಾಕ್ಟರರಲ್ಲದಿದ್ದರೆ ಕೂಲಿಗಳೇ ಸಾಧ್ಯವಿರುತ್ತಿರಲಿಲ್ಲ. ಆದುದರಿಂದ ಕೂಲಿ ಮತ್ತು ಯಜಮಾನನ ಮಧ್ಯದಲ್ಲಿ ಬಂದು ಕೂಲಿಯ ಎಲ್ಲಾ ಲಾಭವನ್ನೂ ಅಪಹರಿಸುವ ಈ ಮಧ್ಯವರ್ತಿ ಕಂಟ್ರಾಕ್ಟರರ ಸಮಸ್ಯೆಯನ್ನೂ ತೀರಿಸುವುದು ಅಗತ್ಯವಿದೆ. ಮನೆಯಿಂದ ಬಹು ದೂರವಾಗಿ, ಮಲೆನಾಡುಗಳಲ್ಲಿ, ಪೇಟೆಯಿಂದ ದೂರವಿರುವ ತೋಟಗಳಲ್ಲಿ ನೂರಾರು ಕುರುಕ ಕಾಡಿಗಳ ಮಧ್ಯದಲ್ಲಿ ಒಬ್ಬರಾಗಿ ವಾಸಮಾಡಬೇಕಾದ ಪ್ಲಾಂಟರರ ಕಷ್ಟಗಳನ್ನೂ ಚಿಂತಿಸಬೇಕು. ಕಂಟ್ರಾಕ್ಟರರನ್ನು ತಿರಸ್ಕರಿಸಿದರೆ ಅವರೇ ಕೂಲಿಗಳನ್ನು ಪ್ಲಾಂಟರರ ವಿರೋಧವಾಗಿ ದಂಗೆ ಎಬ್ಬಿಸಲು ಶಕ್ತರಿದ್ದಾರೆ. ಇಂತಹ ಕಠಿಣ ಸ್ಥಿತಿಯಲ್ಲಿ ಕೂಲಿವರ್ಗದ ವಿದ್ಯಾಭ್ಯಾಸವು ಕೂಲಿಗಳ ಪ್ರಕೃತ ಅವಸ್ಥೆಯನ್ನು ಸುಧಾರಿಸಬಹುದೆಂದು ತೋರುತ್ತಿದೆ.

ವಿದೇಶ ವರ್ತಮಾನ.

— ಇಂಗ್ಲೀಷ ಪಾರ್ಲಿಮೆಂಟ ಸಭೆಯ ಹೌಸ್ ಒಫ್ ಲೋರ್ಡ ಸಭೆಯ ವಿಷಯ ಕೆಲವು ಹೊಸ ಬದಲಾವಣೆಗಳನ್ನು ಸರಕಾರದವರು ಮಾಡಲಿಕ್ಕಿರುವರು.

— ಇದೇ ತಿಂಗಳ ೨೩ನೇ ತಾರೀಕಿನಲ್ಲಿ ಚಕ್ರವರ್ತಿ ಮಹಾರಾಜರೂ, ರಾಣಿಯವರೂ ಬಕ್ಕಿಂಗಹಾಮು ಅರಮನೆಯಲ್ಲಿ ೧೫ ಸಾವಿರ ಮಂದಿ ಜನರಿಗೆ ಒಂದು ಗಾರ್ಡನ್ ಪಾರ್ಟಿಯನ್ನು ಕೊಟ್ಟರು. ಜನರನ್ನು ತಂದ ೪ ಸಾವಿರ ಮೋಟರುಕಾರುಗಳು ಉದ್ಯಾನವನದಲ್ಲಿಯೇ ನಿಂತಿದ್ದವು. ಮಧ್ಯಾಹ್ನ ಎಲ್ಲರೂ ಉದ್ಯಾನವನದಲ್ಲಿ ಕೂಡಿದ ಮೇಲೆ ರಾಜರೂ ರಾಣಿಯವರೂ ಅವರ ಒಂದು ಸುತ್ತು ತೆಗೆದು ಅತಿಥಿಗಳನ್ನು ನೋಡಿ ಸಂತೋಷಪಟ್ಟರು.

— ಈಗ ಇಂಗ್ಲೀಷ ಪಾರ್ಲಿಮೆಂಟಿನಲ್ಲಿ ೬ ಮಂದಿ ಸ್ತ್ರೀಯರು ಮೆಂಬರರಾಗಿರುವರು. ಇವರಲ್ಲಿ ಮೂವರು ಕೂಲಿಕಾರರ ಸಂಘಗಳ ಕಡೆಯವರಾಗಿರುವರು.

— ಲಂಡನ್ ಬಂದರವನ್ನು ಹೊಸದಾಗಿ ಕಟ್ಟಿಸುವ ಪ್ಲೇನುಗಳು ಆಗಿವೆ. ಬಂದರವನ್ನು ಕಟ್ಟುವ ಕೆಲಸವು ೩–೪ ವರುಷಗಳಲ್ಲಿ ಮುಗಿಯುವದು. ಇದರಷ್ಟು ದೊಡ್ಡ ಬಂದರವು ಭೂಲೋಕದಲ್ಲಿ ಯಾವದೂ ಇರಲಿಕ್ಕಿಲ್ಲ. ೩ ಇಪ್ಪತ್ತೈದು ಮಿಲಿಯ ಪೌಂಡುಗಳು ಬೇಕಾಗುವವು. ಈಗ ಈ ಬಂದರಕ್ಕೆ ಟಿಲ್‌ಬರಿ ಡೋಕನ್ನು ವೃದ್ಧಿಪಡಿಸುವುದಕ್ಕೆ ೨॥ ಮಿಲಿಯ ಪೌಂಡಿನ ಎಸ್ಟಿಮೇಟು ಸಂಕ್ಷನಾಗಿಯದೆ. ಇಲ್ಲಿ ಪ್ರಯಾಣಿಕರಿಗೆ ಹಡಗದಿಂದ ಇಳಿಯಲಿಕ್ಕೆ ಒಂದು ತೇಲಾಡುವ ಇಳಿಯುವ ಸ್ಥಳವನ್ನು ತಯಾರಿಸುವರು. ಈ ಸ್ಥಳಕ್ಕೆ ತಾಗಿ ಭೂಲೋಕದಲ್ಲಿ ಅತೀ ದೊಡ್ಡದಾದ ಹಡಗುಗಳು ಬಂದು ನಿಲ್ಲುವುದಕ್ಕೆ ಅನುಕೂಲವಿರುವುದು. ಇಲ್ಲಿಯೇ ಹಡಗು ದುರುಸ್ತಿಮಾಡುವ ಒಂದು ಡ್ರ್ಯೈ ಡೋಕನ್ನು ಕಟ್ಟುವರು.

— ಬಂಗಾಳದಿಂದ ಇಂಗ್ಲಂಡಿಗೆ ಉಪಾಧ್ಯಾಯಿನಿ ವೃತ್ತಿಯಲ್ಲಿ ತರಬೇತು ಹೊಂದಲಿಕ್ಕೆ ಹೋಗುವ ಬಂಗಾಳಿ ಹೆಂಗಸರಿಗೆ ಸಹಾಯಕ್ಕಾಗಿ ಇಂಗ್ಲಂಡಿನಲ್ಲಿ ಇಂಡಿಯವರ ಹಣದಿಂದಲೇ ಒಂದು ಫಂಡು ತಯಾರಾಗುವುದು.

— ಯುದ್ಧ ಮಾಡುವುದಕ್ಕಾಗಿ ಉಕ್ಕಿನಿಂದಲೇ ತಯಾರಿಸಲ್ಪಡುವ ಒಂದು ಏರೊಪ್ಲೇನನ್ನು ತಯಾರಿಸಿರುವರು. ಏರೊಪ್ಲೇನು ೧೦ ಮೈಲು ಎತ್ತರದ ವರೆಗೆ ಹೋಗುವುದು. ಗಂಟೆಗೆ ೩೦೦ ಮೈಲಿನ ವೇಗವು ಇದೆ. ಇದರಲ್ಲಿ ಕೂತು ಹೋಗುವವರು ವಿದ್ಯುಚ್ಛಕ್ತಿಯಿಂದ ಬಿಸಿಮಾಡಿದ ವಸ್ತ್ರಗಳನ್ನು ಧರಿಸಿಕೊಳ್ಳುವರು. ಇನ್ನು ಮುಂದೆ ಲಂಡನ್ ಪಟ್ಟಣದ ರಕ್ಷಣೆಯ ಏರ್ಪಾಡುಗಳು ೮ ಮೈಲು ಎತ್ತರದಲ್ಲಿ ನಡಿಯುವುದು. ಯುದ್ಧ ಮಾಡುವಾಗ ಭೂಮಿಯಲ್ಲಿದ್ದವರಿಗೆ ಕಾಣಲಿಕ್ಕಿಲ್ಲ.

— ಒಂದು ಜರ್ಮನ ಆರ್ಟಿಲೆರಿಯವರು ವಿಷಕರವಲ್ಲದ ಒಂದು ಗೇಸಿನಿಂದ ಯುದ್ಧಮಾಡಿ ತೋರಿಸಿದರು. ಫಿರಂಗಿಯಿಂದ ಗುಂಡು ಹಾರಿಸಿದೊಡನೆ ಸುತ್ತಲೂ ಮಂಜು ಕವಿಯುವುದು. ಇದರಿಂದ ಎರಡು ಯಾರ್ಡುಗಳಿಗಿಂತ ದೂರ ಕಾಣುವುದಿಲ್ಲ.

— ಫ್ರಾನ್ಸಿನ ಮುಖ್ಯ ಮಂತ್ರಿಯಾಗಿ ಬ್ಲೂಯಿನ್‌ರವರು ಒಂದು ಹೊಸ ಮಂತ್ರಿ ಸಭೆಯನ್ನು ಮಾಡಿರುವರು. ಇದರಲ್ಲಿ ೧೧ ಮಂದಿ ಮಂತ್ರಿಗಳಿರುವರು.

— ಹೊಂಕೊಂಗಿನಲ್ಲಿ ೨೧ನೇ ತಾರೀಕಿನಲ್ಲಿ ಕಠಿಣ ಮಳೆ ಬಂದು ಅನೇಕ ಕಡೆಗಳಲ್ಲಿ ಗುಡ್ಡಗಳು ಜರಿದು ಬಿದ್ದಿವೆ. ಅನೇಕ ಕಡೆಗಳಲ್ಲಿ ನೆರೆಯು ಬಂದು ಒಂದು ಮಿಲಿಯ ಡೊಲರಿನ ನಷ್ಟವಾಗಿದೆ. ಪ್ರಾಣ ಹಾನಿ ವಿಶೇಷವಾಗಿರುವುದಿಲ್ಲ. ವ್ಯಾಪಾರಕ್ಕೂ ಹಡಗುಗಳಿಗೂ ಏನೂ ತೊಂದರೆಯಾಗಲಿಲ್ಲ.

— ಪರ್ಶಿಯದಲ್ಲಿ ದಂಗೆ ಎಬ್ಬಿಸಿ ರಷ್ಯಕ್ಕೆ ಓಡಿ ಹೋದ ೬೦೦ ಮಂದಿಯ ಆಯುಧಗಳನ್ನು ಸ್ವಾಧೀನಪಡಿಸಿ ಸೆರೆಯಲ್ಲಿಟ್ಟಿರುವರು.

— ರೋಮನ್ ಕಥೋಲಿಕರ ಜಗದ್ಗುರುಗಳಿಂದ ಪೋಪ ಸಾಹೇಬರ ಉದ್ಯಾನವನದಲ್ಲಿ ಕೆಲಸಮಾಡುತ್ತಿದ್ದ ಕೂಲಿಯವರು ತಮಗೆ ಹೆಚ್ಚು ಸಂಬಳ ಕೊಡಬೇಕೆಂದು ಮುಷ್ಕರಹಿಡಿದಿರುವರು. ಈ ತರದಲ್ಲಿ ಮುಷ್ಕರ ಹಿಡಿದದ್ದು ಇದೇ ಮೊದಲನೇ ಸಾರಿಯಾಗಿದೆ.

— ಜರ್ಮನ್ ಸೌತ್-ವೆಸ್ಟ ಆಫ್ರಿಕದಲ್ಲಿ ಕೈಸರರ ಒಂದು ಖಾಸಗಿ ಆಸ್ತಿಯು ಇತ್ತು. ಯುದ್ಧದ ಸಮಯ ಅದು ಇಂಗ್ಲೀಷರ ಸ್ವಾಧೀನಕ್ಕೆ ಬಂದದೆ. ಆದರೆ ಅದು ರಾಜ ಕುಟುಂಬದವರ ಪೋಷಣೆಗಾಗಿ ಇದ್ದ ಒಂದು ಖಾಸಗಿ ಆಸ್ತಿಯಾದ್ದರಿಂದ ಯುದ್ಧದ ಕ್ರಮಗಳು ಅದಕ್ಕೆ ಲಗಾವು ಆಗುವುದಿಲ್ಲವೆಂದು ಕೈಸರರ ಕಡೆಯ ವಕೀಲರು ವಾದಿಸುತ್ತಿರುವರು.

— ಸಾಮ್ರಾಜ್ಯ ಸಭೆಗೆ ಕೆನಡದ ಕಡೆಯಿಂದ ಪ್ರತಿನಿಧಿಗಳು ಬರುವದಿಲ್ಲವಾದರೆ ಆಸ್ಟ್ರೇಲಿಯದ ಕಡೆಯಿಂದಲೂ ಯಾವ ಪ್ರತಿನಿಧಿಗಳೂ ಬರುವದಿಲ್ಲವಂತೆ.

— ಇಂಗ್ಲೆಂಡಿಗೆ ಅನ್ಯದೇಶಗಳಿಂದ ೧ನೇ ಮತ್ತು ೧೬ನೇ ತಾರೀಕುಗಳಲ್ಲಿ ೧೩॥ ಲಕ್ಷ ಟನ್ ಕಲ್ಲಿದ್ದಲು ಬಂದದಂತೆ.

— ದಕ್ಷಿಣ ಆಫ್ರಿಕದ ಕೇಪ್ ಕೊಲೋನಿಯಲ್ಲಿ ಅನೇಕ ವಿಧದ ಜಂತುಗಳ ಗುಂಪುಗಳಿದ್ದವು. ಈಗ ಅವುಗಳೆಲ್ಲಾ ನಾಶವಾದವು. ಇಲ್ಲಿರುವ ಕಾಡುಗಳಲ್ಲಿ ಆನೆಗಳ ಹಿಂಡುಗಳು ಇದ್ದವು. ಈಗ ಕಾಡುಗಳನ್ನು ಕಡಿದು ಹೊಲ ಗದ್ದೆಗಳನ್ನು ಮಾಡಿರುವುದರಿಂದ ಒಂದು ಸಣ್ಣ ಕಾಡು ಇದೆ. ಇದರಲ್ಲಿ ೪೦ ಆನೆಗಳು ಮಾತ್ರವೇ ಉಳಿದಿವೆಯಂತೆ.

— ಇಂಪೀರಿಯಲ್ ಕೊನ್ಫರೆನ್ಸನ್ನು ಅಕ್ಟೋಬರ ೧ನೇ ತಾರೀಕಿನಿಂದ ೧೫ ದಿವಸಕ್ಕೆ ಮುಂದರಿಸಿರುತ್ತಾರೆ.

— ಅಫ್ಘಾನ್ ಪಾರ್ಲಿಮೆಂಟ ಸಭೆಯ ಏಳು ಮಂದಿ ಮೆಂಬರರು ಆಸ್ಟ್ರೇಲಿಯವನ್ನು ಸಂಚರಿಸಿ ನೋಡಬರಲಿಕ್ಕೆ ಹೋಗಿರುವರು.

— ಮ್ಯಾಂಚೆಸ್ಟರ್‌ನಲ್ಲಿ ಒಂದು ರೈಲು ಟ್ರೈನಿಗೆ ಬೆಂಕಿ ತಗಲಿ ಕೆಲವು ಗಾಡಿಗಳು ಸುಟ್ಟುಹೋದವು.

— ರಷ್ಯದೇಶದ ಉರಾಲ ಡಿವಿಜನದಲ್ಲಿ ಬ್ಯುಬೊನಿಕ್ ಪ್ಲೇಗ ಮತ್ತು ಕೊಲೆರಾ ವಿಶೇಷ ಹಾವಳಿಯನ್ನು ಮಾಡುತ್ತಿರುವದು. ಸೊವಿಯಟ್ ಸರಕಾರದವರು ಇದನ್ನು ತಡೆಗಟ್ಟಲಿಕ್ಕೆ ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾಗಿವೆ. ಈ ಎರಡು ರೋಗಗಳು ಪಶ್ಚಿಮ ಭಾಗಕ್ಕೆ ಹರಡುವಂತಿವೆ.

— ಚೀನಾದೇಶದಲ್ಲಿ ಹೊಸ ವಿಧದ ಬದಲಾವಣೆಗಳನ್ನು ಮಾಡಲಿಕ್ಕೆ ಅನುಕೂಲವಾಗುವಂತೆ ರಷ್ಯದ ಸೊವಿಯಟ್ ಸರಕಾರದವರು ಆರು ಲಕ್ಷ ಪೌಂಡುಗಳನ್ನು ಚೀನಾ ಸರಕಾರಕ್ಕೆ ಕೊಟ್ಟಿರುವರು.

— ಲೋರ್ಡ ವಿಲ್ಲಿಂಗಡನರು ಕೆನಡದ ಗವರ್ನರ ಜನರಲರಾಗಿ ನೇಮಕಹೊಂದಿ ಹೊರಡುವ ಸಮಯ ಡ್ಯೂಕ್ ಒಫ್ ಕೊನೊಟರು ಸೆವೊಯಿ ಹೊಟೇಲಿನಲ್ಲಿ ಒಂದು ಔತಣ ಕೊಟ್ಟರು.

— ರಷ್ಯಾ ದೇಶದ ಸೊವಿಯಟ್ ಸರಕಾರದ ಬಲಗೈಯಂತಿದ್ದ ಜರ್‌ಜಿನ್‌ಸ್ಕಿಯವರು ಮರಣ ಹೊಂದಿದರು. ಇವರು ಲೆನಿನರ ಉತ್ತರಾಧಿಕಾರಿಯಾಗಿದ್ದರು.

— ಹಂಪ್ರೆಯವರು ಬ್ರಿಟಿಷ್ ಬೋರ್ನಿಯೊದ ಗವರ್ನರರಾಗಿ ನೇಮಿಸಲ್ಪಟ್ಟಿರುವರು.

— ರವೀಂದ್ರನಾಥ ಟಾಗೋರರವರು ಸ್ವಿಜರ್‌ಲೆಂಡಿನ ಜ್ಯೂರಿಚ್ ಮತ್ತು ಲುಸರ್ನ ಯುನಿವರ್ಸಿಟಿಗಳಲ್ಲಿ ಎರಡು ಭಾಷಣಗಳನ್ನು ಕೊಟ್ಟರು.

— ಸಿರಿಯದಲ್ಲಿ ಡಮಸ್ಕಸಿನ ಸುತ್ತಲೂ ಇದ್ದ ಡ್ರೂಸರನ್ನು ಓಡಿಸುವುದರಲ್ಲಿ ಫ್ರೆಂಚರ ಕಡೆಯಿಂದ ೫೦ ಮಂದಿ ಕೊಲ್ಲಲ್ಪಟ್ಟರು. ೧೦೦ ಮಂದಿಗೆ ಗಾಯವಾಯಿತು. ಕೆಲವು ಫ್ರೆಂಚ್ ವೈಮಾನಿಕರು ಹಾರುವಾಗ ವಿಮಾನ ಸಮೇತ ಮರುಭೂಮಿಯಲ್ಲಿ ಬಿದ್ದರು. ಸುಮಾರು ೨೦೦ ಮಂದಿ ಡ್ರೂಸರು ಇವರಿಗೆ ಸುತ್ತುಹಾಕಿ ಇವರನ್ನು ಅರೆಜೀವ ಮಾಡಿ ನಂತರ ಅವರನ್ನು ಆ ವಿಮಾನಗಳಿಗೆ ಕಟ್ಟಿ ಸುಟ್ಟುಹಾಕಿದರು.

— ಡ್ಯೂಕ್ ಮತ್ತು ಡಚೆಸ್ ಆಫ್ ಯೋರ್ಕರವರು ೧೯೨೭ನೆ ಇಸವಿಯಲ್ಲಿ ನ್ಯೂಜಿಲೆಂಡನ್ನು ಸಂಚರಿಸಿ ನೋಡುವುದಕ್ಕಾಗಿ ಹೋಗುವರಂತೆ.

— ಡೋಕ್ಟರ ಎನಿಬಿಸೆಂಟರವರು ಈಗ ಹೊಲೆಂಡಿನಲ್ಲಿರುವರು. ಬರ್ಡಿ ಆಸ್ತಿಯಲ್ಲಿ ಥಿಯೊಸೊಫಿಸ್ಟರ ವರುಷಾವಧಿಯ ಕೊಂಗ್ರೆಸ ಸಭೆಯ ಕಾರ್ಯಗಳು ನಡಿಯುತ್ತವೆ. ಈ ಸಮಯ ಭೂಲೋಕದ ಒಳರಾಜ್ಯ ಭಾರ ಎಂಬುದರ ವಿಷಯ ಡೊ' ಅನ್ನಿಬಿಸೆಂಟ್ ಅಮ್ಮನವರು ಭಾಷಣ ಕೊಟ್ಟರು. ಕೃಷ್ಣಮೂರ್ತಿಯವರು ಮಧ್ಯದಲ್ಲಿರುವ ಆಸನದಲ್ಲಿ ಕುಳಿತಿದ್ದರು; ಆದರೆ ಮಾತಾಡಲಿಲ್ಲ. ಇಲ್ಲಿ ೩೯ ದೇಶಗಳಿಂದ ಬಂದ ಎರಡು ಸಾವಿರ ಥಿಯೊಸೊಫಿಸ್ಟರು ಇದ್ದರು. ಇಂಗ್ಲೆಂಡಿನಿಂದ ೩೪೯, ಇಂಡಿಯದಿಂದ ೫, ಈಜಿಪ್ಟಿನಿಂದ ೧ ಒಸ್ಟ್ರೇಲಿಯದಿಂದ ೪ ದಚ್ ಈಸ್ಟಇಂಡೀಸನಿಂದ ೬. ಈ ಬರ್ಡಿ ಆಸ್ತಿಯು ೫ ಸಾವಿರ ಎಕ್ರೆ ವಿಸ್ತೀರ್ಣವುಳ್ಳದ್ದಾಗಿದೆ; ಈ ಸ್ಥಳವನ್ನು ಹೊಲೆಂಡಿನ ಬೆರನ್ ವೊನ್ ಪೆಲ್ಲಂಡಕ್ ಎಂಬವರು ಉಚಿತಾರ್ಥವಾಗಿ ಸಂಘಕ್ಕೆ ಕೊಟ್ಟಿರುತ್ತಾರೆ.

— ಪರ್ಶಿಯದ ಶಹಾರವರು ಕೊರಾಸನ ಪ್ರಾಂತ್ಯವನ್ನು ಸಂಚರಿಸಲಿಕ್ಕೆ ಹೋಗಿರುವರು.

— ಇಹಾಕಿನಲ್ಲಿ ಒಂದು ವಿಮಾನದಿಂದ ಕೆಳಗೆ ಬಿದ್ದು ೭ ಮಂದಿ ಸತ್ತರು. ಅನೇಕರಿಗೆ ಗಾಯವಾಗಿದೆ. ಕೆಳಗೆ ಬಿದ್ದುದರ ಕಾರಣ ತಿಳಿಯುವುದಿಲ್ಲ.

ಒಳದೇಶ ವರ್ತಮಾನ.

— ಸರ್ ಪಿ ಎಸ್. ಶಿವಸ್ವಾಮಿ ಅಯ್ಯರವರು ತಾನು ಸ್ಥಾಪಿಸಿದ ತಿರುಕಟ್ಟುಪಳ್ಳಿ ಹೈಸ್ಕೂಲ್ ಫಂಡಿಗೆ ಒಂದು ಲಕ್ಷ ರೂಪಾಯಿಯನ್ನು ಕೊಟ್ಟಿರುವರು.

— ಹಾಟ್ಟದ ಅವಸ್ಥೆಯನ್ನು ತಿಳಕೊಳ್ಳುವುದಕ್ಕಾಗಿ ಸರೋಜಿನಿ ನಾಯ್ಡುರವರು ಖಾಬ್ಬಳ್ಳಕ್ಕೆ ಬಂದು ಒಂದು ಮೈಲು ಕೆಸರು ಮಾರ್ಗದಲ್ಲಿ ನಡೆದು ಬಂಗಬಾಡಿ ಎಂಬ ಸ್ಥಳಕ್ಕೆ ಹೋದರು.

— ಮೈಸೂರು ಬಂಗಾರದ ಗಣಿಯಲ್ಲಿ ಒಬ್ಬ ಮೇಸ್ತ್ರಿಯು ೧೩ ಸಾವಿರ ಅಡಿ ಕೆಳಗೆ ಬಿದ್ದು ಸತ್ತುಹೋದನು.

— ಇಂದೋರಿನ ಮಿಲ್ಲುಗಳ ಕೂಲಿಕಾರರು ತಮಗೆ ವರುಷಾವಧಿ ಕೊಡುವ ಬೋನಸ್ ಕೊಡದೆ ಇದ್ದದಕ್ಕೆ ಮುಷ್ಕರ ಹಿಡಿದಿದ್ದರು. ಇನ್ನೂ ಕೆಲಸಕ್ಕೆ ಹೋಗಲಿಲ್ಲ.

— ಬಂಗಾಳದ ಬೋಲಾ ಸಬ್ ಡಿವಿಜನದ ಧಾಸಿಯಾ ಎಂಬಲ್ಲಿ ಕಾಳಿಯ ಮಂದಿರವನ್ನು ಸುಟ್ಟು ಪ್ರತಿಮೆಯನ್ನು ಒಂದು ಮರಕ್ಕೆ ತೂಗಾಡಿಸಿರುವರು. ಇಬ್ಬರು ಮುಸಲ್ಮಾನರನ್ನು ಕೈದುಮಾಡಿರುವರು. ತನಖಿಯು ನಡೆಯುತ್ತದೆ.

— ಪದ್ಮಾ ನದಿಯಲ್ಲಿ ವಿಶ್ರಾಮಪುರದ ಹತ್ತರ ಸುಮಾರು ೧೭ ಮಂದಿಗಳು ದೇವಸ್ಥಾನಕ್ಕೆ ಪೂಜೆಗೆ ಹೋಗಿ ಹಿಂತಿರುಗುವಾಗ ದೋಣಿ ಮುಳುಗಿ ಎಲ್ಲರೂ ನೀರುಪಾಲಾದರು.

— ಪಂಡಿತ ಮೋತಿಲಾಲ ನೆಹರುರವರು ನಾಭಾದ ಮಹಾರಾಜರ ಭೇಟಿಮಾಡಿದರು. ಆಗ ರಾಜರು ಒಂದು ಬೆಳ್ಳಿಯ ಹರಿವಾಣವನ್ನು ಇನಾಮಾಗಿ ಕೊಟ್ಟರು. ಅವರಲ್ಲಿ ಅಜ್ಞಾತವಾಸದಲ್ಲಿರುವವರ ಪ್ರೀತಿಪೂರ್ವಕವಾದ ಬಹುಮಾನ ಎಂದು ಬರೆದಿದೆ.

— ಬೆಂಗಳೂರಿನ ಬಿನ್ನಿ ಕಂಪೆನಿಯ ಕೂಲಿಕಾರರಿಗೆ ಬೋನಸ್ ಕೊಡುತ್ತೇನೆಂದು ವಾಗ್ದತ್ತಮಾಡಿ ಕೊಡದೆ ಇದ್ದುದರಿಂದ ೨೧ನೇ ತಾರೀಕಿನಲ್ಲಿ ಆ ಕಂಪೆನಿಯ ಸುಮಾರು ೫,೭೦೦ ಕೂಲಿಯಾಳುಗಳು ಕಂಪೆನಿಯ ಕಟ್ಟೋಣಕ್ಕೆ ಸುತ್ತುಹಾಕಿ ತಮ್ಮ ಬೋನಸ್ ಕೊಡಬೇಕೆಂದು ಮನೇಜರರನ್ನು ಒತ್ತಾಯಪಡಿಸಿದರು. ಮನೇಜರರು ಪೋಲಿಸ್ ಸಹಾಯವನ್ನು ತರಿಸಿದರು. ೧೦೦ ಮಂದಿ ಪೋಲಿಸಿನವರು ಬಂದರು. ಕೂಲಿಕಾರರು ಉದ್ರಿಕ್ತರಾಗಿ ಕಲ್ಲೆಸೆಯಲಾರಂಭಿಸಿದರು. ಪೋಲಿಸಿನವರು ಗುಂಡು ಹಾರಿಸಿದರು. ನಾಲ್ಕು ಮಂದಿ ಕೂಲಿಕಾರರು ಸತ್ತರು. ೧೪ ಮಂದಿಗೆ ಗಾಯವಾಯಿತು. ಕಂಪೆನಿಯವರು ಸತ್ತವರ ಕುಟುಂಬಕ್ಕೆ ಖರ್ಚಿಗೆ ಕೊಡುತ್ತೇವೆಂದೂ, ಇತರರಿಗೆ ಬೋನಸ್ ಕೊಡುತ್ತೇವೆಂದೂ ಒಪ್ಪಿರುವರು. ಪೋಲೀಸಿನವರು ಮಾಡಿದ ಅನ್ಯಾಯದ ವಿಷಯ ಕೂಲಿಕಾರರ ಕಡೆಯಿಂದ ದಿವಾನರ ಬಳಿಗೆ ಪ್ರತಿನಿಧಿಗಳು ಹೋಗಿದ್ದರು. ತಾನು ಆದರ ವಿಷಯ ವಿಚಾರಿಸುತ್ತೇನಾಗಿ ದಿವಾನರು ಭರವಸೆ ಕೊಟ್ಟಿರುವರು.

— ಸೆಂಟ್ರಲ್ ಪ್ರೊವಿನ್ಸಿನಲ್ಲಿ ಮಾಲವ ವಂಶದ ಅರಸರ ವಂಶ, ಅಹಮದ್‌ಶಾ ಮೊಗಲ್, ೧ನೇ ಶಹಾಲಮ್, ಫೆರುಕ್‌ಸಿಯರ್, ಅಕ್ಬರನಿಂದ ಶಾಜಹಾನ ಕಾಲದ ಕೆಲವು ನಾಣ್ಯಗಳು ಆರ್ಕಿಯೊಲೊಜಿಕಲ್ ಡಿಪಾರ್ಟಮೆಂಟಿನವರಿಗೆ ಸಿಕ್ಕಿಯವೆ. ಇವುಗಳಲ್ಲಿ ಒಂದು ಬಹಾಮನಿ ರಾಜ್ಯದ ಅರಸರಾದ ಗ್ಯಾಸುದ್ದೀನ್‌ಶಾ ಬಿನ್ ಮಹಮ್ಮದ್‌ಶಾ ಕಾಲದ್ದಾಗಿರುತ್ತವೆ. ಇದರಿಂದ ಯುರೋಪಿಯನರ ಆಗಮನಕ್ಕಿಂತ ಮೊದಲು ಇಲ್ಲಿ ಒಳ್ಳೇ ರೀತಿಯ ನಾಣ್ಯಗಳನ್ನು ಮಾಡಲಿಕ್ಕೆ ತಿಳಿಯುತ್ತಿತ್ತೆಂದು ಕಾಣುತ್ತದೆ.

— ವ್ಯಾಸರಾಯರಾದ ಲೋರ್ಡ ಅರ್ವಿನರು ನಾಗಪುರಕ್ಕೆ ಹೋಗಿದ್ದರು. ಆಗ ಅಲ್ಲಿಯ ಬೇಸಾಯಗಾರರಲ್ಲಿ ಮುಖ್ಯಸ್ಥರಿಗೆ ನಾಗಪುರ ಕೌನ್ಸಿಲ್ ಸಭಾ ಮಂದಿರದಲ್ಲಿ ಭೇಟಿ ಕೊಟ್ಟರು. ಆಗ ಬೇಸಾಯಗಾರರು ಒಂದು ಮನವಿಯನ್ನು ಒಪ್ಪಿಸಿ ಒಂದು ಭಕ್ತಿಯ ವಿಜ್ಞಾಪನೆಯನ್ನು ಒಪ್ಪಿಸಿದರು. ಅದಕ್ಕವರು ಬೇಸಾಯಕ್ಕೆ ಸಹಾಯವಾಗುವ ಎಲ್ಲಾ ತರದ ಸಹಾಯವನ್ನು ಕೊಡುವುದಕ್ಕಾಗಿ ತಾನು ಪ್ರಯತ್ನಿಸುತ್ತೇನೆಂದೂ, ಇಂಡಿಯಕ್ಕೆ ಬೇಕಾಗುವ ಎಲ್ಲಾ ತರದ ಕೈಗಾರಿಕೆ ವಸ್ತುಗಳು ಇಂಡಿಯದಲ್ಲಿಯೇ ತಯಾರಾಗುವಂತೆ ಸಾಧಿಸಬೇಕೆಂದು ಉತ್ತರವನ್ನಿತ್ತರು. ಲೇಡಿ ಅರ್ವಿನರು ಮ್ಯುರ್ ಮೆಮೋರಿಯಲ್ ಆಸ್ಪತ್ರೆಯನ್ನು ಸಂದರ್ಶಿಸಿದರು.

— ಬ್ರಿಟಿಷ್ ಇಂಡಿಯದಲ್ಲಿ ಶಾಲೆಗೆ ಹೋಗುವ ಪ್ರಾಯದ ಮಕ್ಕಳಲ್ಲಿ ಶೇಕಡಾ ೩೬॥ರ ಪ್ರಕಾರ ವಿದ್ಯಾಶಾಲೆಗಳಿಗೆ ಹೋಗುತ್ತಾರೆಂದೂ ಅರ್ಲ ವಿಂಟರ್‌ಟನ್ನರು ತಮ್ಮ ಭಾಷಣದಲ್ಲಿ ಹೇಳಿದರಂತೆ. ೧೯೨೧ನೇ ಜನಸಂಖ್ಯೆಯ ಲೆಕ್ಕದ ಪ್ರಕಾರ ಬ್ರಿಟಿಷ್ ಇಂಡಿಯದಲ್ಲಿ ೬ರಿಂದ ೧೫ ವರುಷ ಪ್ರಾಯದೊಳಗಿನ ಮಕ್ಕಳು ೩೯,೬೩,೯೪,೮೧೫ ಇರುತ್ತಾರಂತೆ. ಶಾಲೆಯಲ್ಲಿ ಕಲಿಯುವ ಮಕ್ಕಳು ೬೯,೦೯,೮೬೩ ಅಂದರೆ ಶೇಕಡಾ ೨೦॥ರ ಪ್ರಕಾರ ಇರುತ್ತಾರಂತೆ. ಒಟ್ಟಾರೆ ಜನಸಂಖ್ಯೆಯ ಶೇಕಡಾ ೩ರ ಪ್ರಕಾರ ಮಾತ್ರವೇ ಬರಹ ತಿಳಿದವರಿರುತ್ತಾರಂತೆ. ಟರ್ಕಿಯಲ್ಲಿ ಶಾಲೆಗೆ ಹೋಗುವ ಪ್ರಾಯದ ಮಕ್ಕಳಲ್ಲಿ ಶೇಕಡಾ ೫೩ರ ಪ್ರಕಾರ ಶಾಲೆಗೆ ಹೋಗುತ್ತಾರಂತೆ. ಸೋವಿಯಟ್ ರಷ್ಯದಲ್ಲಿ ೨೩॥ರ ಪ್ರಕಾರ ಇರುತ್ತಾರಂತೆ.

— ಕಲ್ಕತ್ತೆಯಲ್ಲಿ ಮೊಹರಮಿನ ಕಡೆಯ ದಿವಸ ಮಹಮ್ಮದೀಯರು ಬಹಳ ಗಲಭೆಯನ್ನು ಮಾಡಿದರು. ಬೆಳಿಗ್ಗೆ ಬಾರಾಬಜಾರಿನಲ್ಲಿ ಮಾತ್ರವೇ ಗಲಾಟೆಗಳಿದ್ದವು. ಸಾಯಂಕಾಲ ಕಲ್ಕತ್ತದ ಉತ್ತರ ಭಾಗದಲ್ಲಿ ಈ ಗಲಭೆಯು ಹಬ್ಬಿತು. ಪೋಲಿಸಿನವರು ಗುಂಡು ಹಾರಿಸಬೇಕಾಯಿತು. ೬ ಮಂದಿ ಸತ್ತರು. ಅನೇಕರಿಗೆ ಗಾಯಗಳಾಗಿವೆ. ಮಳೆಯು ಕಠಿಣವಾಗಿ ಬರುತ್ತಿದ್ದರೂ ಗಲಭೆಯು ಶಾಂತವಾಗಲಿಲ್ಲ. ಅಂಗಡಿಭಂಡಸಾಲೆಗಳನ್ನು ಮುಚ್ಚಿದ್ದರಿಂದ ವ್ಯಾಪಾರವು ನಿಂತುಹೋಯಿತು.

— ಕಲ್ಕತ್ತದಲ್ಲಿ ಮೊಹರಮಿನ ದಿವಸ ಮರುದಿವಸ ರಾತ್ರಿ ಕಠಿಣತರದ ಗಾಳಿಮಳೆ ಬಂದು ಕಲ್ಕತ್ತದ ಉತ್ತರಭಾಗದ ಮಾರ್ಗಗಳಲ್ಲೆಲ್ಲಾ ಸೊಂಟದಷ್ಟು ನೀರು ತುಂಬಿತ್ತು. ಟ್ರೇಮುಕಾರುಗಳಿಗೂ, ಮೋಟರುಕಾರುಗಳಿಗೂ ಸಂಚರಿಸಲಿಕ್ಕಾಗಲಿಲ್ಲ. ಸರಕಾರಿ ಉದ್ಯೋಗಸ್ಥರಿಗೆ ಕೆಲಸಕ್ಕೆ ಹೋಗಲಿಕ್ಕಾಗದೆ ಮನೆಗಳಲ್ಲಿಯೇ ಇದ್ದರು. ಹೌರಾ ಪಟ್ಟಣದಲ್ಲಿಯೂ ಇದೇ ರೀತಿಯಾಗಿತ್ತು. ಹೌರಕ್ಕೂ, ಕಲ್ಕತ್ತಕ್ಕೂ ಇದ್ದ ಟೆಲಿಫೋನ್ ಸರ್ವಿಸ್ ಹಾಳಾಗಿ ವ್ಯವಹಾರಕ್ಕೆ ತೊಂದರೆಯಾಯಿತು.

ಜುಲ್ಯಾ ೩೨ರ ರಾತ್ರಿ ಡಿಬ್ರುಗಾರಿನ ಹತ್ತಿರ ರೈಲು ಬಂಡಿಯು ಓಡುವಾಗ ಒಂದು ಸಾಧುವಾದಿದ ಆನೆಯು ಅದರ ಅಡಿಯಲ್ಲಿ ಬಿದ್ದು ಸತ್ತುಹೋಯಿತು. ಇಂಜೀನು ಸ್ವಲ್ಪ ಹಾಳಾಗಿಯದೆ. ಆದರೆ ಗಾಡಿಯು ಹಳ್ಳಿಯಿಂದ ತಪ್ಪಲಿಲ್ಲ.

— ಸಿಲೋನಿನ ಸರಕಾರದಲ್ಲಿ ಹೊಸ ಬದಲಾವಣೆಗಳನ್ನು ಮಾಡಬೇಕೆಂದು ಅಲ್ಲಿಯ ಕೊಂಗ್ರೆಸ್ ಪಾರ್ಟಿಯವರು ಸಾಧಿಸುತ್ತಿರುವರು.

— ವೆಲ್ಲೂರಿನಲ್ಲಿ ಪೇಟೆಗೆ ಬೆಂಕಿಬಿದ್ದು ಸುಮಾರು ೨೦ ಸಾವಿರ ರೂಪಾಯಿ ಬೆಲೆ ಬಾಳುವ ಸಾಮಾನುಗಳು ಸುಟ್ಟುಹೋದವು.

— ಉತ್ತರ ತಿರುವಾಂಕೂರಿನ ವಾರೂರಿನ ಬ್ರಾಹ್ಮಣರ ಮಾರ್ಗಗಳಲ್ಲಿ ಎಜುವರು ಹೋಗಬಹುದೆಂದೂ, ಅವುಗಳು ಸಾರ್ವಜನಿಕ ಮಾರ್ಗಗಳಾಗಿವೆ ಎಂದೂ ತಿರುವಾಂಕೂರು ಸರಕಾರದವರು ಅಪ್ಪಣೆಕೊಟ್ಟಿರುವರು. ಬ್ರಾಹ್ಮಣರು, ಸರಕಾರದವರು ಈ ತರದ ಹುಕುಂ ಕೊಟ್ಟದ್ದಕ್ಕಾಗಿ ಸರಕಾರದ ಮೇಲೆ ವ್ಯಾಜ್ಯ ದಾಖಲು ಮಾಡಿರುವರು.

— ಲೋಕಮಾನ್ಯ ತಿಲಕರ ಜನ್ಮ ದಿನದ ದಿವಸ ಪುಣೆಯಲ್ಲಿ ಮಧ್ಯಾಹ್ನ ೧೨ ಗಂಟೆಯಿಂದ ೫ ಗಂಟೆ ವರೆಗೆ ಬಡವರಿಗೆ ಅನ್ನದಾನವು ಕೊಡಲ್ಪಟ್ಟಿತು.

— ಪಂಜಾಬಿನ ಸಿಕ್ಖರಲ್ಲಿ ಬಹಳ ಗುಣಾಢ್ಯರಾದ ಸರದಾರ ತೇಜಸಿಂಗ ಎಂಬವರು ಮರಣ ಹೊಂದಿದರು. ಇವರ ಮರಣವಾರ್ತೆಯನ್ನು ಕೇಳಿ ಪಂಡಿತ ಮಾಲವೀಯರು ತನಗುಂಟಾದ ಶೋಕವನ್ನು ನಿವೇದಿಸುವುದಕ್ಕಾಗಿ ಅವರ ಕುಟುಂಬಕ್ಕೆ ಒಂದು ತಂತಿಯನ್ನು ಬಿಟ್ಟಿರುವರು.

— ಮೈಸರಾಯರು ನಾಗಪುರಕ್ಕೆ ಹೋದಾಗ ಹಳ್ಳಿಯ ರೈತರ ಸ್ಥಿತಿಗತಿಗಳನ್ನು ಕಣ್ಣಾರೆ ನೋಡಿ ವಿಚಾರಿಸುವುದಕ್ಕಾಗಿ ಗವರ್ನರರೊಡನೆ ಹತ್ತು ಮೈಲು ದೂರದಿರುವ ಹಳ್ಳಿಗಳಿಗೆ ಹೋಗಿ ತಿರುಗಾಡಿ ನಿಜಸ್ಥಿತಿಯನ್ನು ತಿಳಿದುಕೊಂಡರು. ನಂತರ ಯಾರಿಗೂ ತಿಳಿಸದೆ ನೊರ್ಮಲ್ ಶಾಲೆಗೆ ಹೋಗಿ ಅಲ್ಲಿ ತರಬೇತು ಹೊಂದುವ ಉಪಾಧ್ಯಾಯರ ಸ್ಥಿತಿಯನ್ನು ಕಣ್ಣಾರೆ ನೋಡಿದರು. ಅಲ್ಲಿಂದ ಎಗ್ರಿಕಲ್ಚರಲ್ ಕೊಲೇಜಿಗೆ ಹೋಗಿ ಬೊಟೆನಿಕಲ್ ಲೆಬೊರೆಟರಿ, ಕೆಮಿಕಲ್ ಲೆಬೊರೆಟರಿ, ಹೊಲಗದ್ದೆಗಳು, ಬೀಜದ ಎತ್ತು ಕೋಣಗಳಿರುವ ಸ್ಥಳ, ಬೇಸಾಯದ ಸಾಹಿತ್ಯಗಳಿರುವ ಸ್ಥಳ ಮುಂತಾದವುಗಳನ್ನು ನೋಡಿ ಸಂತೋಷಪಟ್ಟರು.

— ಬೆಂಗಳೂರಿನ ಬಿನ್ನಿ ಕಂಪೆನಿಯ ಮುಷ್ಕರ ಹಿಡಿದ ಕೂಲಿಯವರು ಕೆಲಸಕ್ಕೆ ಸೇರಿರುವರು. ಮೈಸೂರು ದಿವಾನರು ಸತ್ತವರ ಕುಟುಂಬಗಳಿಗೆ ೨೦೦ ರೂ. ದಾನಮಾಡಿರುವರು. ಈಗ ಈ ಕೂಲಿಕಾರರು ಮದರಾಸು ಲೇಬರ್ ಯೂನಿಯನಿನ ಹಾಗೆಯೇ ಬೆಂಗಳೂರು ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಎಂಬ ಸಂಘವನ್ನು ಸ್ಥಾಪಿಸಿರುವರು.

— ಬೆಂಗಳೂರಿನ ಮಿನರ್ವಾ ಮಿಲ್ಲಿನ ೮೦೦ ಮಂದಿ ಕೂಲಿಕಾರರು ತಮ್ಮ ಸಂಬಳವನ್ನು ಕಂಪೆನಿಯವರು ಹೆಚ್ಚಿಸದೆ ಇದ್ದುದಕ್ಕಾಗಿ ಮುಷ್ಕರ ಹಿಡಿದಿರುವರು.

— ದೇಶಬಂಧು ದಾಸರ ಮಕ್ಕಳು ಮರಣಪಟ್ಟ ವಿಷಯ ಅನೇಕ ಕಡೆಗಳಿಂದ ಬಂದ ಸಮಾಧಾನದ ತಂತಿಗಳಿಗೆ ಅವರ ಪತ್ನಿಯವರಾದ ಶ್ರೀಮತಿ ವಸಂತ ದೇವಿಯವರು ವರ್ತಮಾನ ಪತ್ರಿಕೆಗಳ ಮುಖಾಂತರ ಎಲ್ಲರಿಗೂ ವಂದನೆಯನ್ನು ಮಾಡಿರುವರು.

— ಜಿನೀವಾದಲ್ಲಿ ನಡೆಯುವ ಲೀಗ್ ಒಫ್ ನೇಶನ್ಸ್ ಸಭೆಗೆ ಇಂಡಿಯದ ಕಡೆಯಿಂದ ಮೆಂಬರರಾಗಿ ಚುನಾಯಿಸಲ್ಪಟ್ಟ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರವರು ಮದರಾಸಿನಿಂದ ವಿಲಾಯಿತಿಗೆ ಆಗೋಸ್ತು ೨ನೇ ತಾರೀಕಿನಲ್ಲಿ ಹೊರಡುವರು.

— ಮುಂಬಾಯಿಯ ಬ್ಯಾಕಲೆ ಸಂಕಲಿ ಮಾರ್ಗದಲ್ಲಿ ಒಂದು ಕಟ್ಟೋಣವು ಜರಿದು ಬಿದ್ದು ೬ ಮಂದಿ ಸತ್ತರು. ೧೦ ಮಂದಿಗೆ ಗಾಯವಾಗಿದೆ.

— ಗಂಜಾಮು ಡಿಸ್ಟ್ರಿಕ್ಟ್ ಎಡಿಶನಲ್ ಎಜ್ಯುಕೇಶನಲ್ ಆಫೀಸರರು ಪರ್ಲಾಕಿಮಿಡಿಯಲ್ಲಿ ಒಂದು ಹೆಂಗಸರ ಟ್ರೈನಿಂಗ್ ಶಾಲೆಯನ್ನು ತೆರೆಯಲು ಆಲೋಚಿಸಿರುವರು.

— ಕೊಡಗು ದೇಶದಲ್ಲಿ ಹೆಚ್ಚು ಮಳೆ ಬಂದು ಅನೇಕ ಕಾಫಿ ತೋಟಗಳಿಗೆ ಹಾನಿಯುಂಟಾಗಿಯದೆ.

ದಕ್ಷಿಣ ಕನ್ನಡ.

ಮಂಗಳೂರು:— ಕಳೆದ ಮೊಹರಮಿನ ಮೆರವಣಿಗೆಯು ಏನೊಂದೂ ಗಲಭೆ ಇಲ್ಲದೆ ನಡೆಯಿತು.

ಇಲ್ಲಿಯ ಭಾರತ ಸಂಗೀತ ನಾಟಕ ಮಂಡಳಿಯ ಮಾಲಿಕರಾಗಿದ್ದ ಮೆ| ಅಬ್ದುಲ್ ರಹಿಮಾನ್‌ಅಫಾನ ಸಾಹೇಬರವರು ಕಳೆದ ಬುಧವಾರ ರಾತ್ರಿ ಜಲೋಧರ ರೋಗದಿಂದ ತನ್ನ ೯೬ನೇ ವರುಷ ಪ್ರಾಯದಲ್ಲಿ ಕಾಲವಾದರು. ಇವರು ಇಲ್ಲಿಯ ಮುಖಂಡರಲ್ಲಿ ಒಬ್ಬರೂ ಜಮೀನುದಾರರೂ ಉರ್ಮ ಅಲೆಕ್ಸಂಡ್ರಾ ಥಿಯಟ್ರಿಕಲ್ ಕಂಪೆನಿಯ ಮಾಲಿಕರೂ ಆಗಿದ್ದರು. ಇವರ ಮರಣದಿಂದ ಕರ್ನಾಟಕ ರಂಗಭೂಮಿಯು ಒಬ್ಬ ಸದಸ್ಯರನ್ನು ಕಳ ಕೊಂಡಂತಾಯಿತು.

ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜಿಲ್ಲಾಬುದ್ದೀನ ಸಾಹೇಬರಿಂದ ನಡೆದ ಹಣದ ದುರುಪಯೋಗದ ತನಿಖೆಯು ಜಿಲ್ಲಾ ಕಲೆಕ್ಟರರಿಂದ ಸಂಪೂರ್ಣವಾಗಿ ನಡಿಸಲ್ಪಟ್ಟು ಮದರಾಸು ಸರಕಾರಕ್ಕೆ ಕಳುಹಿಸಲ್ಪಟ್ಟಿದೆ.

ಇಲ್ಲಿಯ ಮಾರ್ಕೆಟು ವಾರ್ಡು ಬಹಳ ಗಲೀಜ ಆಗುತ್ತಾ ಬರುವುದರಿಂದ ಇದರಲ್ಲಿಯ ಕಟ್ಟೋಣಗಳನ್ನು ತೆಗೆದು ಮಾರ್ಗಗಳನ್ನು ಅಗಲ ಮಾಡುವುದು ಅತೀ ಅಗತ್ಯವಾಗಿದೆ. ಇದು ರೋಗಗಳ ತವರುಮನೆಯಾಗಿದೆ. ಇಲ್ಲಿ ವೇಶ್ಯಾಸ್ತ್ರೀಯರ ಮತ್ತು ತುಂಡುಸೂಳೆಯವರ ಮನೆಗಳು ಹೆಚ್ಚಾಗುತ್ತಾ ಬರುತ್ತಿವೆ. ಇವರಿಗಾಗಿ ಸಾಯಂಕಾಲ ಇಲ್ಲಿ ಕೂಡಿ ಬರುವ ಜನರ ಸಂಖ್ಯೆಯೂ ಹೆಚ್ಚಾಗುತ್ತ ಬರುತ್ತದೆ. ಇವರ ಮನೆಗಳಾದರೋ ಕೋಳಿಯ ಗೂಡುಗಳಂತಿವೆ. ಅವರಲ್ಲಿರುವವರು ರೋಗದ ಬೊಂಬೆಗಳಂತಿರುವರು. ಮುನಿಸಿಪಾಲಿಟಿಯವರು ಇದರ ವಿಷಯ ನಿಗಾಕೊಡುವುದು ಉಚಿತವೆಂದು ಎಂದು ಒಬ್ಬ ಪಟ್ಟಣ ನಿವಾಸಿಕರು ಬರೆದಿರುತ್ತಾರೆ.

ಮಂಗಳೂರಿನ ಬಂದರು ಕೆಟ್ಟ ಸ್ಥಿತಿಯಲ್ಲಿರುವುದರಿಂದ ಅದನ್ನು ಸರಿಗೊಳಿಸುವ ಕುರಿತು ವಿಚಾರಿಸಲು ಸರಕಾರವು ಚೀಫ್ ಇಂಜಿನೀಯರ್ ಹಾರ್ಬರ್, ಎಂಜಿನೀಯರ್‌ಪ್ರೆಸಿಡೆನ್ಸಿ ಪೋರ್ಟ್ ಆಫೀಸರ್, ಡಿಸ್ಟ್ರಿಕ್ಟ್ ಕಲೆಕ್ಟರ್, ಸುಪರಿಂಟೆಂಡಿಂಗ್ ಇಂಜಿನೀಯರ್, ಇವರಿಂದ ಕೂಡಿದ ಒಂದು ಕಮಿಟಿಯ ಸ್ಥಾಪನೆಗೆ ಸಮ್ಮತಿಯನ್ನಿತ್ತಿರುವುದಾಗಿ ತಿಳಿದುಬರುತ್ತದೆ.

ಇಲ್ಲಿಯ ಗವರ್ನಮೆಂಟ್ ಕಾಲೇಜಿನ ಇಂಗ್ಲಿಷ್ ಪ್ರೊಫೆಸರರಾಗಿದ್ದ ಶ್ರೀ. ಯಸ್. ನರಸಿಂಹ ಐಯ್ಯಂಗಾರರಿಗೆ ರಾಜಮಹೇಂದ್ರಿಯ ಗವರ್ನಮೆಂಟ್ ಕಾಲೇಜಿಗೆ ಟ್ರಾನ್ಸ್‌ಫರ್ ಆಗಿರುವ ಕಾರಣ ಸದರಿ ಕಾಲೇಜಿನ ಅಧ್ಯಾಪಕರೂ ವಿದ್ಯಾರ್ಥಿಗಳೂ ಕೂಡಿ ಇವರನ್ನು ಬೀಳ್ಕೊಟ್ಟರು.

ರೈಲ್ವೇ ಸಮಯದಲ್ಲಿ ಬದಲಾವಣೆ ಮಾಡುವ ಆಲೋಚನೆ ಮಾಡಲಾಗಿದೆಯೆಂದು ತಿಳಿದುಬರುತ್ತದೆ. ಈ ಹೊಸ ಬದಲಾವಣೆಯಂತೆ ಮಂಗಳೂರಿಂದ ಮೈಲು ಬೆಳಿಗ್ಗೆ ಘಂಟೆ ೯ಕ್ಕೆ ಹೊರಟು ಮರುದಿನ ಅಪರಾಹ್ನ ಘಂಟೆ ೩-೪೫ಕ್ಕೆ ತಿರುಗಿ ಬರುತ್ತದೆ. ಟಪ್ಪಾಲಿನ ಸಮಯವು ಈ ಸಮಯಕ್ಕೆ ಸರಿಗೊಳಿಸಲ್ಪಟ್ಟರೆ ಈಗಿನ ಬದಲಾವಣೆಯು ಬಹಳ ಅನುಕೂಲ ಸಮಯವೆಂದೇ ಹೇಳಬಹುದು.

ತಿದ್ದುಪಡಿ—ನಮ್ಮ ಕಳೆದ ೩೦ನೇ ಸಂಚಿಕೆಯ ೬ನೇ ಪುಟದಲ್ಲಿ ಪ್ರಕಟವಾದ ಪ್ರಕಟಣೆಯಲ್ಲಿ, ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿಯ ಬರುವ ಸಾಧಾರಣ ಮಹಾಸಭೆಯು ತಾ. ೭-೮-'೨೬ನೇ ಆದಿತ್ಯವಾರ ಎಂಬದರ ಬದಲಾಗಿ ತಾ. ೮-೮-'೨೬ನೇ ಆದಿತ್ಯವಾರ ಎಂತ ಓದತಕ್ಕದ್ದು.

ಅಜ್ಜಿಬೆಟ್ಟು:— ಇಲ್ಲಿ ಒಬ್ಬ ಜೈನ ಸ್ತ್ರೀಯನ್ನು ಚೂರಿಯಿಂದ ತಿವಿದು ಕೊಂದು, ಮನೆಯಲ್ಲಿದ್ದ ಚಿನ್ನಾಭರಣಗಳನ್ನು ದೋಚಿಕೊಂಡು ಹೋದ ಮೊಕದ್ದಮೆಯಲ್ಲಿ ೫ ಜನರನ್ನು ಕೈದು ಮಾಡಲಟ್ಟು ಕೆಲವು ದಿನಗಳಲ್ಲಿ ಅವರನ್ನು ಜಾಮೀನಿನ ಮೇಲೆ ಬಿಟ್ಟರಷ್ಟೆ. ಈ ನಂಬರಿನ ಆಪ್ಪೆರು ತೀರ್ಮಾನ ಪತ್ತೆಯೇ ಇಲ್ಲ, ದೋಚಿಕೊಂಡು ಹೋದ ಚಿನ್ನಾಭರಣ ಕಳ್ಳರ ಪಾಲು, ಸತ್ತವಳು ಕೈಲಾಸ ಸೇರಿದಳು. ಹಳ್ಳಿ ನಾಡುಗಳಲ್ಲಿ ಇಂಥಾ ಅವಸ್ಥೆ ಆದರೆ ಇನ್ನು ಮುಂದೆ ಕಾಡುಪ್ರದೇಶದಲ್ಲಿದ್ದವರ ಗತಿ ಹ್ಯಾಗಾದೀತು. ಈ ನಂಬರಿನಲ್ಲಿ ಕೈದುಮಾಡಲ್ಪಟ್ಟ ಕಲ್ಯಾಂಡಿ ನರಸಿಂಹ ಶೆಟ್ಟಿ ಎಂಬ ಆಸಾಮಿಯು ಜಾಮೀನಿನಲ್ಲಿ ಬಿಟ್ಟ ಕೆಲವು ಹಪ್ತೆಗಳಲ್ಲಿ ವೇಣೂರು ಅತ್ತಕಡೆ ಒಂದು ಮನೆಯಲ್ಲಿ ಕಳವುಮಾಡಲ್ಪಟ್ಟ ತಪ್ಪಿನ ಆರೋಪಣೆ ಮೇಲೆ ತಿರಿಗಿ ಕೈದು ಮಾಡಿ ಮಂಗಳೂರಿಗೆ ಕೊಂಡುಹೋಗಿರುತ್ತಾರಂತೆ! ಈಗೀಗ ಕಾನೂನು ಬಿಗಿಯಾಗುತ್ತಾ ಬಂದ ಹಾಗೆ ಖೂನಿ ಮೊಕದ್ದಮೆಯ ಪತ್ತೆಯೇ ಆಗುವುದಿಲ್ಲವೆಂದರೆ ಏನು ತಮಾಷೆ?

ವೇಣೂರು:— ಇಲ್ಲಿ ಒಂದು ಔಟು ಪೋಸ್ಟು ಪೋಲಿಸ್ ಸ್ಟೇಷನನ್ನಾದರೂ ಇಡುತ್ತಿದ್ದರೆ ಆಸುಪಾಸು ಗ್ರಾಮಗಳ ಜನರಿಗೆ ಸ್ವಲ್ಪವಾದರೂ ಕಾಕಪೋಕರ ಬಾಧೆ ತಪ್ಪುತ್ತಿದ್ದಿತು. ಅದಲ್ಲದೆ ಒಂದು ಪೋಸ್ಟು ಆಫೀಸು ಸಹಾ ಇಟ್ಟರೆ, ಈಗ ಒಂದು ಕಾಗದ, ಜನರಿಗೆ ಸಿಕ್ಕಬೇಕಾದರೆ ಒಂದೆರಡು ತಿಂಗಳು ಹಿಡಿಯುವುದರ ಬದಲಿಗೆ ಒಂದೆರಡು ವಾರಗಳೊಳಗೆ ಅದರೂ ಸಿಕ್ಕುತಿತ್ತು.

ಕಾಸರಗೋಡು:— ಈ ತಾಲೂಕಿನ ಪರಪ್ಪ ಎಂಬಲ್ಲಿ ಒಂದು ಮರಕಿಗಿಯುವ ಯಂತ್ರವನ್ನು ಸರಕಾರದವರು ಇಡಲಿಕ್ಕೆ ಸಂಕ್ಷನ್ ಮಾಡಿರುತ್ತಾರೆ. ಈ ಯಂತ್ರಕ್ಕೆ ೨೮,೫೦೦ ರೂಪಾಯಿ ಕ್ರಯವಂತೆ. ಅದು ಮುಂತಾದವುಗಳಿಗಾಗದ ಮರಗಳಿಂದ ರೈಲುವೆ ಸ್ಲಿಪರುಗಳನ್ನು ತಯಾರಿಸುವರಂತೆ.

ದೇವಪ್ಯಪಡೂರು:— ಮಂಗಳೂರು ತಾಲೂಕಿನಲ್ಲಿ ದೇವಪ್ಯಪಡೂರು ಗ್ರಾಮದಲ್ಲಿ ಕೇದಿಗೆ ಶಿವರಾಯರೆಂಬ ಜಮೀನುದಾರ ಮಹಾಶಯರಿರುವರು. ಇವರ ಪ್ರಯತ್ನದಿಂದಲೂ ಬೇರೆ ಕೆಲವು ಜೈನ ಮಹಾಶಯರ ಪ್ರಯತ್ನದಿಂದಲೂ ವಗ್ಗದಿಂದ ಒಂದು ಗಾಡಿ ಹೋಗುವ ರಾಜರಸ್ತೆಯನ್ನು ಸುಮಾರು ಮೂರು ನಾಲ್ಕು ಮೈಲು ದೂರ ಮಾಡಿ ಏಳೆಂಟು ವರ್ಷವಾದರೂ ಅದನ್ನು ಮುಂದರಿಸಿಕೊಂಡು ಹೋದದ್ದು ಕಾಣುವುದಿಲ್ಲ. ಇದೇ ಮಾರ್ಗವನ್ನು ಇಳಿಯೂರು ಚಂದ್ರ ಅರ್ಗರೆಂಬ ಪಟೇಲರು ಖಾಸಗಿಯಿಂದ ಮಾಡಿಸಿದ ಮಾರ್ಗಕ್ಕೆ ಕೂಡಿಸಿಬಿಟ್ಟರೆ ಆ ಗ್ರಾಮಸ್ಥರಿಗೆ ಬಹಳ ಉಪಕಾರವಾಗುತ್ತಿತ್ತು. ಅಷ್ಟಕಡೆಯಿಂದ ಅಕ್ಕಿ ಸೌದೆ ಇತ್ಯಾದಿ ಸಾಮಗ್ರಿಗಳ ಸಾಗಿಸುವುದಕ್ಕೂ ಪಾಸ್ಟಿಸಂಗಡ ಅತ್ತಕಡೆಯಿಂದ ಒಳದಾರಿಯಿಂದ ಬರುವ ಪ್ರಯಾಣಸ್ಥರಿಗೂ ತುಂಬಾ ಅನುಕೂಲ.

ನೀಲೇಶ್ವರ:— ಇಲ್ಲಿಯ ರಾಜಾಸ್ ಹೈಸ್ಕೂಲಿನ ಕಟ್ಟಡವು ಸುಂದರವಾಗಿಯೂ, ಭದ್ರವಾಗಿಯೂ, ಕಟ್ಟಲ್ಪಡುತ್ತದೆ. ಇನ್ನೂ ಕೆಲಸವು ಮುಗಿದಿಲ್ಲ. ಇನ್ನು ಒಂದು ತಿಂಗಳೊಳಗಾಗಿ ಕಟ್ಟೋಣವು ತಯಾರಾಗಬಹುದೆಂಬ ಭರವಸೆಯು ಇದೆ. ಸದರಿ ಶಾಲಾ ಮೆನೇಜರರಾದ ರಾಜಶ್ರೀ ಟಿ. ಸಿ. ರಾಮವರ್ಮ ರಾಜರವರು ವಿದ್ಯಾಭಿವೃದ್ಧಿಗಾಗಿ, ತನ್ನ ಧನ ವ ಮನಸ್ಸನ್ನು ಬೇಕಾದಂತೆ ವಿನಿಯೋಗಿಸುವ ಮಾನ್ಯರಾಗಿರುತ್ತಾರೆಂಬ ಸಂಗತಿಯು ಇಲ್ಲಿ ಪ್ರಸ್ತಾಪಯೋಗ್ಯವೇ ಆಗಿರುತ್ತದೆ.

ನಮ್ಮ 'ಕಲತ್ತೇರ' ಕಡವು ಪಾರಾಗುವ ಪಾಂಥರು ಅದರ ಹತ್ತಿರವೇ ಇರುವ ರೈಲ್ವೇ ಸಂಕವನ್ನು ದಾಟಲು ಸಮರ್ಥರಾಗಿರಬೇಕಾಗುತ್ತದಷ್ಟೆ. ಅಲ್ಲದಿದ್ದರೆ, ಕೆಲವು ದಿನಗಳ ಹಿಂದೆ ಒಬ್ಬ ಹಿಂದೂ ಹೆಂಗಸಿಗೆ ಸಂಭವಿಸಿದಂತೆ ಸಂಕದ ಮೇಲಿಂದ ಕೆಳಗೆ ಬಿದ್ದು ಅಂಗಭಂಗವಾಗಲೀ, ಹೆಚ್ಚೇಕೆ? ಪ್ರಾಣನಾಶವೇ ಆಗಲೀ, ಸಂಭವಿಸುವುದಕ್ಕೆ ಸಂದರ್ಭವಿರುತ್ತದೆಂದು ಹೇಳುವದಾದರೆ, ಅತಿಶಯೋಕ್ತಿಯಾಗಲಾರದು. ಈ ವಿಷಯದಲ್ಲಿ ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ತಕ್ಕ ನಿಗಾಕೊಡುವಂತೆ ಹಾರೈಸುತ್ತೇವೆ

ಕಳೆದ ತಾರೀಕು ೧೯-೭-೧೯೨೬ರಲ್ಲಿ ಮಿ| ವಿ. ಎಂ. ಬ್ಯಾರಿಯವರನ್ನು ಪಂಚಾಯತ ಕೋರ್ಟಿನ ಪ್ರೆಸಿಡೆಂಟರಾಗಿ ಚುನಾಯಿಸಿರುವರು. ಮಿಕ್ಕ ಪಂಚಾಯತ ಕೋರ್ಟ ಪ್ರೆಸಿಡೆಂಟರಂತೆ ಇವರೂ ಕೂಡಾ ತನ್ನ ಯೋಗ್ಯತೆಯನ್ನು ಈ ಕೆಲಸದಲ್ಲಿ ಪ್ರದರ್ಶಿಸಬೇಕಾಗಿರುವುದು.

ಆಲೆಟ್ಟಿ:— ಇಲ್ಲಿ ತಾ. ೨೨-೭-೨೬ರಿಂದ ಬಂದ ಮಳೆಯು ಅತಿರೇಕವಾಗಿ ಸುರಿದು ಮಾರಣೆ ದಿನ ಬೆಳಿಗ್ಗೆ ಹೊಳೆ ತುಂಬಿತ್ತು. ಈ ಸಂದರ್ಭದಲ್ಲಿ ಗ್ರಾಮಸಂಚರಣೆಗೆ ಆಲೆಟ್ಟಿ ಗ್ರಾಮಕ್ಕೆ ಬಂದಿದ್ದ ಸುಳ್ಯ ಡಿವಿಜನ್ ರೆವಿನ್ಯು ಇನ್ಸಪೆಕ್ಟರೂ, ಅವರ ಅಡಿಗೆಭಟ್ಟರೂ, ಒಬ್ಬ ಪೇದೆಯು ಕೂಡಾ ಪಯಸ್ವಿನಿ ಹೊಳೆಯ ಇಕ್ಕಡ್ಕ ಎಂಬಲ್ಲಿ ಬೆಳಿಗ್ಗೆ ೮ ಘಂಟೆಗೆ ಸುಳ್ಯಕ್ಕೆ ದಾಟಲಿಕ್ಕೆಂತಾ ದೋಣಿದಲ್ಲಿ ದಾಟುವಾಗ ಕಡವುದಾರರು ೩ ಮಾಪಿಳ್ಳೆಯರೂ ಈ ಮೂರು ಜನರೂ, ತೆಪ್ಪವು ಕವಚಿಬಿದ್ದದ್ದರಿಂದ ನೀರಲ್ಲಿ ಬಿದ್ದು ಮುಳುಗಿ, ದೈವವಶಾತ್ ಪುನಹ ಮೇಲಕ್ಕೆ ಬರುವಾಗ ತೆಪ್ಪಗಾರರು ತೆಪ್ಪಕ್ಕೆ ಹತ್ತಿ ಆ ಮೂರು ಜನರನ್ನೂ ತೆಪ್ಪಕ್ಕೆ ಎಳೆದುಹಾಕುವಾಗ ನಡು ನೀರಿನಲ್ಲಿ ತೆಪ್ಪವೂ ಈ ೫ ಜನರೂ ಸುಮಾರು ೧ ಮೈಲು ದೂರವಾದ ಕುಂಡಾವು ಎಂಬಲ್ಲಿ ವರೆಗೆ ಹೋದರು. ಆವಾಗ ಈ ತೆಪ್ಪವು ಕವಚಿಯೇ ಇತ್ತು. ಇಷ್ಟರ ಒಳಗೆ ಆ ಗ್ರಾಮದ ಪಟೇಲರು ಜತೆಯಲ್ಲಿ ಬಂದದ್ದರಿಂದ ಆಸುಪಾಸಿನವರನ್ನೂ ಕೂಡಿಸಿಕೊಂಡು ತೆಪ್ಪವನ್ನೂ ಹಿಂಬಾಲಿಸುತ್ತ ಒಳಗಡೆಯಿಂದ ಕುಂಡಾವು ಎಂಬಲ್ಲಿಗೆ ತಲಪುವಾಗ ಹೊಳೆಯ ಆಚೆಗಿದ್ದ ಪದ್ದು ಅಣ್ಣಯ್ಯಗೌಡ ಎಂಬವರು ಈ ಬೊಬ್ಬೆಯನ್ನು ಕೇಳಿ ಓಡಿ ಬಂದರು. ಇಷ್ಟಾಗುವಾಗ ತೆಪ್ಪದಲ್ಲಿದ್ದವರಲ್ಲಿ ೨ ಜನರು ತಳ್ಳಿ ಹೊಳೆಯ ಮಧ್ಯದಲ್ಲಿದ್ದ ಪೊದರನ್ನು ಆಕ್ರಮಿಸಿಕೊಂಡರು. ಬಾಕಿ ಮೂರು ಜನರು ಅಡ್ಡಕ್ಕೆ ಬಿದ್ದಿರುವ ಒಂದು ಮರದ ಅಡಿಗೆ ಸುಮಾರು ೧ ಕೋಲು ನೀರು ಸುರಿದು ಮೇಲಕ್ಕೆ ಪ್ರಳಸುವ ಭಯಂಕರ ಸ್ಥಳದಲ್ಲಿ ರೆವಿನ್ಯೂ ಇನ್ಸಪೆಕ್ಟರು ಮರವನ್ನು ತಬ್ಬಿ ಹಿಡಿದುಕೊಂಡರೂ ಬಲಸಾಲದೆ ಕೈಕಾಲು ಬಿಟ್ಟು ಆ ಭಯಂಕರ ಮಡುವಿನಲ್ಲಿ ಮುಳುಗಿ ಸುಮಾರು ೫ ಮಿನಿಟು ಕಾಣೆಯಾದರೂ ಪುನಃ ದೈವಾನುಕೂಲದಿಂದ ಮೇಲೆ ಬರುವಾಗ ದಯಾಳುವಾದ ಅಣ್ಣಯ್ಯಗೌಡರು ಈಜಾಡುತ್ತಾ ಬಂದು ಇವರನ್ನು ಹೊಳೆ ಮಧ್ಯದ ದಡಕ್ಕೆ ಎತ್ತಿಹಾಕಿ ಇನ್ನೊಬ್ಬನನ್ನು ಸಹ ಅಲ್ಲಿಯೇ ಕುಂಡ್ರಿಸಿ ತೆಪ್ಪ ಸರಿಮಾಡಲಿಕ್ಕೆಂತಾ ಅವರಿಗೆ ಧೈರ್ಯ ಹೇಳಿ ಕೆಳಗೆ ತೆಪ್ಪವನ್ನೂ ಕೊಂಡುಹೋಗಿ ಕರೆಸೇರಿಸಿ, ಪಟೇಲರು ಮತ್ತು ರಾಮಣ್ಣ ಶಗ್ರಿತ್ತಾಯರು ಸಹ ಕರಕೊಂಡು ಹೋದ ಜನರು ಕೂಡಾ ತೆಪ್ಪ ಸರಿಮಾಡಿ, ಪುನಹ ಎಲ್ಲರೂ ಕೂಡಿ ಬಹು ಪ್ರಯಾಸದಿಂದ ಮೇಲಕ್ಕೆ ತೆಗೆದುಕೊಂಡು ಹೋಗಿ, ನೀರಿನಿಂದ ಛಳಿಹಿಡಿದ ಮಣಿಗಾರರನ್ನೂ, ಅಡಿಗೆಯವರನ್ನೂ ಮತ್ತು ಪೇದೆಯನ್ನೂ ತೆಪ್ಪದಲ್ಲಿ ಹಾಕಿಕೊಂಡು ಆಚೆದಡವನ್ನು ಹತ್ತಿಸಿದರು. ಅಂತು ಇದು ಒಂದು ಭಯಂಕರವಾದ ಅಪಾಯವೆಂತಲೇ ಹೇಳಬೇಕು.

ಈ ಅಪಾಯದಿಂದ ಬದುಕಿದ್ದು ಹುಯೋಗವೇ ಸರಿ. ಪದ್ದು ಅಣ್ಣಯ್ಯಗೌಡರು ಬಾರದಿದ್ದರೆ ಈ ನೆರೆನೀರಿನಲ್ಲಿ ರೆವಿನ್ಯು ಇನ್ಸಪೆಕ್ಟರರ ಆಯುರ್ಭಾಗವು ಸಂದುಹೋಗುತ್ತಿತ್ತು. ಆಸಮಯದಲ್ಲಿ ಜೀವದಾನವನ್ನು ಕೊಟ್ಟ ಪದ್ದು ಅಣ್ಣಯ್ಯಗೌಡರ ಹೆಸರು ಚಿರಸ್ಮರಣೀಯವೇ ಸರಿ.

ಒಟ್ಟಾರೆ ಇಕ್ಕಡ್ಕ ಕಡವು ಧರ್ಮಸ್ಥಳಕಿದ್ದು ಸರಿಯಾದ ವ್ಯವಸ್ಥೆ ಇಲ್ಲದೆ ಪ್ರತಿ ವರುಷವೂ ಹೀಗೆ ಅಪಾಯಗಳು ಸಂಭವಿಸುತ್ತವೆ. ಗ್ರಾಮಸ್ಥರಿಗೂ ವ ಪ್ರಯಾಣಿಕರಿಗೂ ಆಲೆಟ್ಟಿ ಬೋರ್ಡು ಶಾಲಾ ಉಪಾಧ್ಯಾಯರಿಗೂ ಅವರ ಸರಕಾರಿ ಕೆಲಸದ ಬಗ್ಗೆ ವ ಮೀಟಿಂಗು ವಗೈರೆಗೆ ಸುಳ್ಯಕ್ಕೆ ಆಗಾಗ್ಗೆ ದಾಟಲಿಕ್ಕೆ ಇದ್ದು ಈ ಕಡವಿನ ದೆಸೆಯಿಂದ ಎಲ್ಲರಿಗೂ ಒಂದು ದೊಡ್ಡ ಆತಂಕವಾಗಿರುವುದು. ಈ ತೆಪ್ಪವನ್ನು ನಂಬಿಕೊಂಡು ದಾಟುವವರು ಪ್ರಾಣವನ್ನು ತೂಗಹಾಕಿ ಹೋಗಬೇಕಷ್ಟೆ. ಆದ್ದರಿಂದ ಮಾನ್ಯ ಸರಕಾರದವರು ವ ತಾಲೂಕು ಬೋರ್ಡಿನವರು ಈ ಕಡವನ್ನು ವಹಿಸಿಕೊಂಡು ಯೋಗ್ಯ ಏಲಿವಾರಿ ಮಾಡುತ್ತಿದ್ದರೆ ಬಹು ಜನರಿಗೆ ಉಪಕಾರವಾಗುತ್ತಿತ್ತು. ಮತ್ತು ಈ ಕಡವಿಗೆ ಸುಮಾರು ೧೦೦ ರೂಪಾಯಿ ಉತ್ಪತ್ತಿ ಇರಬಹುದು. ಆ ಪ್ರಕಾರ ಯೋಗ್ಯ ಏಲಿವಾರಿ ಮಾಡಿಸದಿದ್ದರೆ ಇದರಿಂದ ಖಂಡಿತ ಅಪಾಯ ಸಂಭವಿಸದಿರದು.

ಬಂಟವಾಳ:— ಇಲ್ಲಿಯ ಅಯ್ಯ ನಾಯ್ಕರ ಓಣಿಯ ಸಂಕದ ಹತ್ತಿರ ಪಿಟಿಂಗ ಕಟ್ಟಲಿಕ್ಕೂ ಮಾರ್ಗದ ಎರಡೂ ಬದಿಗಳಲ್ಲಿ ನಾಲೆಗಳನ್ನು ಮುರದ ಕಲ್ಲಿನಿಂದ ಕಟ್ಟುವುದಕ್ಕೂ ಓವರ್‌ಸಿಯರರು ಅಳತೆಮಾಡಿ ಹೋಗಿರುವರು.

ಮಾರ್ಕೆಟಿನ ಮಾರ್ಗದ ಮೇಲೆ ಕಟ್ಟಿದ ಅಂಗಡಿಗಳನ್ನು ತೆಗೆಯಬೇಕೆಂದು ತಾಲೂಕು ಬೋರ್ಡಿನವರು ಹುಕುಂಕೊಟ್ಟಿರುವರು.

ಇಲ್ಲಿಯ ಪೇಟೆಯ ರಸ್ತೆಯಲ್ಲಿ ಕಚೇರಿಭಾಗಲಲ್ಲಿಯೂ ಮಧ್ಯಪೇಟೆಯಲ್ಲಿಯೂ ಮಾರ್ಗ ದುರುಸ್ತಿ ಆಗಿಯದೆ. ಸೀತಾರಾಮ ದೇವಸ್ಥಾನದಿಂದ ಮಧ್ಯಪೇಟೆಯ ಸೊಸೈಟಿಯ ವರೆಗೆ ಇರುವ ಮಾರ್ಗದಲ್ಲಿ ಅನೇಕ ಹೊಂಡಗಳು ಇವೆ, ನಾಲ್ಕೈದು ವರುಷಗಳ ಹಿಂದೆ ಹಾಕಿದ ಜಲ್ಲಿಕಲ್ಲು ಕರಗಿ ಅಡಿಯಲ್ಲಿರುವ ಕೆಂಪು ಮಣ್ಣು ಕಾಣುತ್ತದೆ. ಮೂಡಬಿದರೆಗೆ ಹೋಗುವ ಕೊಟ್ಟಿವನಂಗಡಿಯ ಮಾರ್ಗದಲ್ಲಿ ನಡಿಯುವುದು ಕಷ್ಟ. ಮಾರ್ಗದ ಮೇಲಿನಿಂದ ನೀರು ಹರಿದುಹೋಗುತ್ತದೆ.

ಇಲ್ಲಿಯ ಆಸ್ಪತ್ರೆಯ ಹತ್ತಿರದಿಂದ ಬಂಗ್ಲೆಗುಡ್ಡೆಗೆ ಹೋಗಲಿಕ್ಕೆ ಒಂದು ಸಣ್ಣ ಮಾರ್ಗವಾಗಬೇಕೆಂದು ಜಿಲ್ಲಾ ಕಲೆಕ್ಟರರ ಸಿಪಾಯಿ ಬರದ ವರ್ತಮಾನ ಆಲ್ಲಿಯೇ ಮೂಲೆಯಲ್ಲಿ ಬಿದ್ದಿದೆ. ಕಲೆಕ್ಟರರ ಸಿಪಾರಿಸು ಮೇಲಿಗೆ ಬೀಳುವದಾದರೆ ಉಳಿದವರು ತಾಲೂಕು ಬೋರ್ಡಿಗೆ ಮಾಡುವ ಮನವಿಗಳ ಪಾಡೇನಾದೀತು?

ಇಲ್ಲಿಯ ವರ್ತಕರ ಕೋ-ಒಪರೇಟಿವ್ ಸಂಘದವರು ಸೆಂಟ್ರಲ್ ಬೇಂಕಿನಿಂದ ೮ ಸಾವಿರ ರೂಪಾಯಿ ಸಾಲ ಕೇಳಿದಾಗ ಅದಕ್ಕೆ ಬೇರೆ ಬೇರೆ ನೆವನಗಳನ್ನು ಮುಂದಕ್ಕೆತಂದು ಹಣವನ್ನು ಕೊಡಲಿಲ್ಲವಂತೆ. ಈ ಸಂಘದಿಂದ ರಿಜರ್ವ ಫಂಡಾಗಿ ೪ ಸಾವಿರ ರೂಪಾಯಿ ಸೆಂಟ್ರಲ್ ಬೇಂಕಿನಲ್ಲಿ ಇದೆಯಂತೆ. ಈ ಸಂಘದಿಂದ ಸೆಂಟ್ರಲ್ ಬೇಂಕಿಗೆ ಕೊಡಲಿಕ್ಕಿದ್ದ ೧೩ ಸಾವಿರ ರೂಪಾಯಿಗಳಲ್ಲಿ ಇನ್ನು ಬೇಂಕಿಗೆ ೭೦೦ ರೂಪಾಯಿ ಮಾತ್ರ ಸಲ್ಲಬೇಕಂತೆ. ಈ ಸಂಘದ ೮ ಸಾವಿರ ರೂಪಾಯಿ ಡಿಪೋಜಿಟಾಗಿ ಸೆಂಟ್ರಲ್ ಬೇಂಕಿನಲ್ಲಿ ಇದೆಯಂತೆ. ಹೀಗಿರುತ್ತಾ ರೂಪಾಯಿ ಸಾಲ ಕೊಡುವುದಿಲ್ಲವೆಂದು ನೆವನಗಳನ್ನು ಸೆಂಟ್ರಲ್ ಬೇಂಕಿನವರು ಹೇಳಲು ಕಾರಣವೇನು?

ಪಾಣೆಮಂಗಳೂರು:— ಇಲ್ಲಿಯ ವಿಠಲಸ್ವಾಮಿ ಎಲಿಮೆಂಟರಿ ಶಾಲೆಯು ಹೆಡ್‌ಮಾಸ್ಟರರಾದ ವಾಸುದೇವರಾಯರಿಂದ ಬಹಳ ಒಳ್ಳೇ ರೀತಿಯಿಂದ ನಡಿಸಲ್ಪಡುತ್ತದೆ. ನೆರೆಯು ಬಂದ ಮೇಲೆ ಮುಚ್ಚಲ್ಪಟ್ಟ ಮಿಶನ್‌ಶಾಲೆಯು ಹೋದ ಮೇಲೆ ಈ ಊರಿನ ಮಕ್ಕಳು ವಿದ್ಯಾಹೀನರಾಗದಂತೆ ೫ನೇ ದರ್ಜೆಯ ವರೇಗೆ ಶಾಲೆಯನಿಟ್ಟು, ಶಾಸ್ತ್ರೋಕ್ತದ ಪ್ರಕಾರ ಊರಿನ ಉಪಾಧ್ಯಾಯರನ್ನೇ ನೇಮಿಸಿ, ಈ ಸಹಾಯವನ್ನು ಮಾಡಿದ ರಾ| ವಾಸುದೇವರಾಯರ ಕೀರ್ತಿಯು ಆಚಂದ್ರಾರ್ಕವಾಗಿ ಉಳಿಯುವುದರಲ್ಲಿ ಸಂದೇಹವಿಲ್ಲ. ಸರಕಾರದವರು ಇದಕ್ಕೆ ಅದಷ್ಟು ಹೆಚ್ಚು ಗ್ರೆಂಟು ಕೊಟ್ಟು ಸಹಾಯಮಾಡುವುದು ಒಳ್ಳೇದು.

ಪುಂಜಾಲಕಟ್ಟೆ:— ಈ ಊರಿನವರಿಗೆ ಒಂದು ಹಾಯರ್ ಎಲಿಮೆಂಟರಿ ಶಾಲೆಯು ಇಲ್ಲದೆ ಮಕ್ಕಳು ವಿದ್ಯೆಗಾಗಿ ಕಷ್ಟಪಡುತ್ತಿರುವರು. ಬಂಟವಾಳದಲ್ಲಿ ತೆರೆದ ಹಾಯರ್ ಎಲಿಮೆಂಟರಿ ಕ್ಲಾಸುಗಳು ಖಾಲಿಯಾಗಿವೆ. ಆದುದರಿಂದ ಈ ಶಾಲೆಯ ಖರ್ಚಿಗಾಗಿ ಇಟ್ಟ ಹಣದಿಂದ ಇಲ್ಲಿ ಒಂದು ಹಾಯರ್ ಎಲಿಮೆಂಟರಿ ಶಾಲೆ ತೆರೆದರೆ ಉತ್ತಮವಿತ್ತು.

ಉಡುಪಿ:— ಇಲ್ಲಿಯ ಅನಂತೇಶ್ವರ ದೇವಸ್ಥಾನದಲ್ಲಿ ರಾ| ಹೊಸಕೊಪ್ಪ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿ ಹಿಂದು ಮತ ಸಂಸ್ಥೆಗಳ ಕಾನೂನನ್ನು ಜಾರಿಗೆ ತರಬಾರದೆಂದೂ ತಂದರೆ ಬಹಳ ಅನ್ಯಾಯವಾಗುತ್ತದೆಂದೂ ಠರಾವು ಮಾಡಿ ವ್ಯಾಸರಾಯರಿಗೂ ಹೋಮ ಮೆಂಬರರಿಗೂ ಮದರಾಸು ಗವರ್ನರರಿಗೂ ಟೆಲಿಗ್ರಾಮುಗಳನ್ನು ಕಳುಹಿಸಿರುವರು.

ಇಲ್ಲಿ ಒಂದು ಮುನಿಸಿಪಾಲಿಟಿಯನ್ನು ಸ್ಥಾಪಿಸಬೇಕೆಂದು ಸರಕಾರದಿಂದ ಬಂದ ಹುಕುಮಿಗನುಸಾರವಾಗಿ ಒಂದು ಸಭೆಯು ಕೂಡಿ ಈಗ ಈ ಪಟ್ಟಣಕ್ಕೆ ಮುನಿಸಿಪಾಲಿಟಿಯು ಬೇಡವೆಂದೂ ತೀರ್ಮಾನಿಸಲಾಯಿತು. ಸರಕಾರಿ ಕಟ್ಟೋಣಗಳು ಕೆಲವು ಅರೆ ಜೀವದಿಂದಿರುವ ಬೆಳತಂಗಡಿಗೆ ಯುನಿಯನ್ ಸ್ಥಾಪಿಸಲ್ಪಟ್ಟಿರುವಾಗ ಉಡುಪಿಗೆ ಮುನಿಸಿಪಾಲಿಟಿ ಬೇಡವೆಂಬುದರ ಅರ್ಥ ತಿಳಿಯುವುದಿಲ್ಲ.

ರಾ| ಹೊಸಕೊಪ್ಪ ಕೃಷ್ಣರಾಯರು ನಿಖಿಲ ಕರ್ಣಾಟಕ ಸ್ವಯಂಸೇವಕ ಸಮಿತಿಗೆ ಉಡುಪಿ ತಾಲೂಕಿನಿಂದ ೩೨೫ ಮಂದಿ ಕಾಂಗ್ರೆಸ್ ಸದಸ್ಯರನ್ನು ಸೇರಿಸಿರುವರು.

ಮಂಜೇಶ್ವರ:— ಇಲ್ಲಿ ಒಂದು ಟೆಕ್ನಿಕಲ್ ಸ್ಕೂಲನ್ನು ಸದ್ಯದಲ್ಲಿಯೇ ತೆರಿಯುವುದರಲ್ಲಿದ್ದಾರೆ.

ಇಲ್ಲಿಯ ಶ್ರೀ ಮದನಂತೇಶ್ವರ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಹೆಂಗಸರು ಉಪಾಧ್ಯಾಯಿನಿಯರಾಗುವದಾದರೆ ಯಾವ ಜಾತಿಯವರಾದರೂ ಆಗಬಹುದು. ಗಂಡಸರು ಮಾತ್ರ ಗೌಡಸಾರಸ್ವತರೇ ಆಗಬೇಕೆಂದು ಸ್ಕೀಮಿನಲ್ಲಿ ಇದೆಯಂತೆ! ಈಗಿರುವ ಕಿಂಡರಗಾರ್ಟನ್ ಮಿಸ್ಟ್ರೆಸ್ ಗೌಡ ಸಾರಸ್ವತ ಬ್ರಾಹ್ಮಣ ಹೆಂಗಸಾಗಿರುತ್ತಾಳೆಯೇ?

ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯ ಹೆಡ್‌ಮಾಸ್ಟರರು ಸೆಕೆಂಡರಿ ಗ್ರೇಡಿನವರಾಗಿರುವಾಗ ಅವರ ಸಹಾಯಕ ಉಪಾಧ್ಯಾಯರಾಗಿ ಮೆಟ್ರಿಕ್ಯುಲೇಟ್ ಬಿ. ಎ. ಪಾಸಾದವರನ್ನು ನೇಮಿಸಿರುವರಂತೆ! ಇದು ಯುನಿವರ್ಸಿಟಿಗೆ ಒಂದು ಅವಮಾನವಲ್ಲವೇ? ವಿಚಿತ್ರ ಮಂಜೇಶ್ವರ!

ಪುತ್ತೂರು:— ಇಲ್ಲಿಯ ಪಂಚಾಯತರು ಕೋರ್ಟಿನ ಕಟ್ಟೋಣವು ಸಾಕಾಗದೆ ಅದನ್ನು ಬೇಗನೆ ದೊಡ್ಡದಾಗಿ ಕಟ್ಟಿಸುವುದರಲ್ಲಿದ್ದಾರೆ.

ಪ್ರಕಟಣೆ.

ಲೋಕಮಾನ್ಯ ತಿಲಕರ ಪುಣ್ಯದಿನ.

ತಿಲಕರ ಧ್ಯೇಯ.

"Swaraj is my birthright and I shall have it"

"ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು ಮತ್ತು ನಾನು ಅದನ್ನು ಪಡೆದೇ ತೀರುವೆನು."

ತಾ. ೧-೮-೨೬ನೇ ಆದಿತ್ಯವಾರ ಅಪರಾಹ್ನ ಗಂಟೆ ೪ಕ್ಕೆ ಮಂಗಳೂರಲ್ಲಿ ಬಾಲಿಕಾ ಪಾಠಶಾಲೆಯಲ್ಲಿ (National Girls' School) ಸಾರ್ವಜನಿಕ ಸಭೆಯು ಜರಗುವುದು. ಲೋಕಮಾನ್ಯರ ಉತ್ಸವವನ್ನು ಹಾಗೂ ಅವರ ಸ್ಮಾರಕವಾಗಿ ನಾವು ಮಂಗಳೂರಲ್ಲಿ ನಮ್ಮ ಯಥಾಶಕ್ತಿ ಏನು ಮಾಡತಕ್ಕದ್ದು ಎಂಬ ಘನತರವಾದ ವಿಷಯವನ್ನು ಸದರಿ ಸಭೆಯಲ್ಲಿ ಇತ್ಯರ್ಥಿಸಬೇಕೆಂಬ ಸೂಚನೆಯೂ ಇದೆ. ದೇಶದ ಏಳಿಗೆಯನ್ನು ಬಯಸುವ ಸಮಸ್ತ ಜನರೂ ತಮ್ಮ ಇತರ ಕೆಲಸಗಳನ್ನು ಸ್ವಲ್ಪ ಕಾಲ ಬದಿಗಿಟ್ಟು ಈ ಲೋಕೋಪಕಾರದ ಕೆಲಸದಲ್ಲಿ ಭಾಗಿಯಾಗಬೇಕಾಗಿ ಸವಿನಯ ವಿನಂತಿ.

ಸರ್ವರ ಸೇವಕ,

ಮು. ತಾ. ಕಾ. ಕ. ಕಚೇರಿ, ಮಂಗಳೂರು ತಾ. ೨೮-೭-೨೬ } (Sd) M. Madhava Rau,

ಅಧ್ಯಕ್ಷ.

ಕ. ಧೋಂಡೀರಾಯ,

ಕಾರ್ಯದರ್ಶಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ, ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸ್ತೂರಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,

ಆಯುರ್ವೇದ ಭೂಷಣ,

ಮಂಗಳೂರು ದ. ಕನ್ನಡ.

ಶುದ್ಧವಾದ ನೀಲಗಿರಿ ಎಣ್ಣೆ

ತಲೆನೋವು, ಶೀತ, ಇನ್‌ಫ್ಲುಯಂಜಾಜ್ವರ, ವಾತ, ಇತ್ಯಾದಿ ಎಲ್ಲಾ ರೋಗಗಳ ಮೇಲೆ ಸಿದ್ಧೌಷಧ.

1 ಔನ್ಸು ಬಾಟ್ಲಿ 1ರ ಕ್ರಯ 0—4—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

ರಥಬೀದಿ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 288,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 288,500—0—0

THE BANK RECEIVES FIXED, CURRENT ACCOUNT, & SAVINGS BANK DEPOSIT

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರಕೊಳ್ಳುವದು.

Canara Bank Ltd.,
Mangalore, 9th Feb. 1926.

K. Venkat Rao,
Secretary

ಅಪೂರ್ವ ಸಂದರ್ಭ.

ಉತ್ತಮ ಮ್ಹಾಲು! ತ್ವರೆ ಮಾಡಿರಿ!! ದರ ಸುಲಭ!!!

WORLD'S MARVELLOUS OFFER
A Golden Opportunity For Golden Wrist Watch Rs 6-8



ಈ ವಾಚುಗಳು ಶ್ರೇಷ್ಠವಾದ ಮತ್ತು ಹೊಸರೀತಿಯ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಈಗಿನ ಸುಧಾರಿಕ ಕ್ರಮದಲ್ಲಿ ಮಾಡಲ್ಪಟ್ಟಿವೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಬಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ಮೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ಥಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪ್‌ಗಳು ಉಚಿತಕೊಡುವೆವು.

ವಿಲ್ಸನ್ ವಾಚ್ ಕೊ.,

ಬೆಲಾರ್ಡ್ ಎಸ್ಟೇಟ್, ಮುಂಬಯಿ.

ಬಿಟ್ಟಿ! ಇನಾಂ!! ಪುಗಸಟ್ಟೆ!!!

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನುಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆವಿಗೂ ನೀವು ಓದದೆ ಇದ್ದರೆ ಖರೀದು, ಅಂಚೆ ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ!

ರಾಜವೈದ್ಯ ನಾರಾಯಣಜೀ ಕೇಶವಜೀ,

57, ಚೈನಾಬಜಾರ್, ರೋಡ್, ಮದ್ರಾಸು.

"ಬಹು ದಿವಸಗಳಿಂದ ಪ್ರಸಿದ್ಧವಾಗುತ್ತಿರುವ ಔಷಧ!"

ರಕ್ತ ಶುದ್ಧಿ | ವಜ್ರಾಂಗ-ಬಿಂದು | ವೀರ್ಯ ವೃದ್ಧಿಕಾರಕ

ವಜ್ರಾಂಗಬಿಂದುವೆಂಬ ಈ ಮಹೌಷಧಿಯನ್ನು ಅನೇಕ ಪರ್ವತಗಳಲ್ಲಿ ಉತ್ತಮೋತ್ತಮವಾದ ಮತ್ತು ಅವಶ್ಯವಾಗಿ ಗುಣ ಕೊಡುವಂತಹ ವನಸ್ಪತಿಗಳ ಅರ್ಕದಿಂದ ಉಪಯುಕ್ತವಾದ ಮತ್ತು ಉಚ್ಚತರದ ಭಸ್ಮಗಳ ಮಿಶ್ರಣಮಾಡಿ ಯಾಂತ್ರಿಕ ಸಹಾಯದಿಂದ ಸಿದ್ಧಪಡಿಸಿರುತ್ತದೆ. ಈ ವಜ್ರಾಂಗಬಿಂದುವಿನ ಸೇವನೆಯಿಂದ ಕೆಳಗೆ ಬರೆದ ರೋಗಗಳು ಗುಣವಾಗಿ ಹೊಸ ಮನುಷ್ಯನಾಗುತ್ತಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಮಹೌಷಧಿಯ ಸೇವನೆಯಿಂದ, ವಾತ, ಪಿತ್ತ, ಕಫ ಈ ಮೂರು ದೋಷಗಳಿಂದ ಉತ್ಪನ್ನವಾಗುವ ರೋಗಗಳು ಗುಣವಾಗುವದಲ್ಲದೆ, ಸ್ವಪ್ನದೋಷ, ಧಾತುಪಾತ ನಪುಂಸಕತ್ವ, ಪರಮಾ ಮತ್ತು ಗರಮಿ ಇವುಗಳ ಸಮೂಲ ನಾಶವಾಗುತ್ತದೆ. ಬಹು ದಿವಸದಿಂದ ಮೈಯಲ್ಲಿ ಅಂಟಿಕೊಂಡ ಕಠಿಣರೋಗ ಕೂಡ ಒಂದೇ ವಾರದಲ್ಲಿ ಗುಣವಾಗುವದು. ಲಘುಶಂಕೆ ಮೊದಲು ಅಥವಾ ಕಡೆಗೆ ಸ್ರಾವವಾಗಿ ಹೋಗುವ ಧಾತು ಬಂದಾಗುತ್ತದೆ. ಹಿಂದೆ ಅನ್ನವು ಜೀರ್ಣವಾಗಿ ಮಲವು ಸರಿಯಾಗಿ ಹೋಗುವದು ಯಾವದೇ ಕಾರಣದಿಂದ ಬಂದ ಅಶಕ್ತತೆಯೂ ಅಲ್ಪಕಾಲದಲ್ಲಿ ಬಂದಂತಾಗಿ ಜೀವ ಬರುವದು, ಕೈಕಾಲುಗಳು ಉರಿಯುವದು, ಮುಂತಾದ ಸಕಲ ವಿಕಾರಗಳೂ ನಾಶಹೊಂದುತ್ತವೆ. ವೀರ್ಯವೃದ್ಧಿ, ರಕ್ತಶುದ್ಧಿಗಳಾಗಿ ಮನುಷ್ಯನು ಬಲವಂತನಾಗುತ್ತಾನೆ. ಪೂರ್ಣ ಗುಣ ಬರಬೇಕಾದರೆ ಮೂರು ಬಾಟ್ಲಿಗಳು ಬೇಕು.

೧ ಬಾಟ್ಲಿಗೆ ರೂ. ೧—೪—೦. ೩ ಬಾಟ್ಲಿಗಳಿಗೆ ರೂ. ೩—೪—೦. ೧೨ ಬಾಟ್ಲಿಗಳಿಗೆ ರೂ. ೧೦—೦—೦.

ಇದರ ಜೊತೆಗೆ ಒಂದು ಬಾಟ್ಲಿಯು ಉಚಿತ. ಟಪ್ಪಾಲು ಪ್ಯಾಕಿಂಗ ಖರ್ಚು ಪ್ರತ್ಯೇಕ. ಒಮ್ಮೆಯೇ ಹೆಚ್ಚಿಗೆ ಬಾಟ್ಲಿಗಳನ್ನು ತರಿಸಿಕೊಂಡರೆ ಟಪ್ಪಾಲು ಖರ್ಚು ಹೆಚ್ಚಿಗೆ ಬೀಳಲಾರದು. ಏಜಂಟರಾಗಬೇಕೆನ್ನುವವರು ಪತ್ರವ್ಯವಹಾರ ನಡಿಸಿ, ಖುಲಾಸೆ ತಿಳಕೊಳ್ಳಬಹುದು.

ಟಪ್ಪಾಲು ಮತ್ತು ಪ್ಯಾಕಿಂಗ ಖರ್ಚು ಬೇರೆ ಕೊಡುವುದು. ಅನುಪಾನ ಪತ್ರವು ಬಾಟ್ಲಿಯ ಸಂಗಡಲೇ ಕಳಿಸಲ್ಪಡುವುದು.

ಪತ್ರ. ಮ್ಯಾನೇಜರ, ಕೆ. ಎಮ್. ಹನುಮಾನ ಪ್ರಸಾದಿಕ ಕಂಪೆನಿ,

ಮು. ಪೋ. ಹುಬ್ಬಳ್ಳಿ. (ಜಿಲ್ಲಾ ಧಾರವಾಡ.)

ಮಾರಾಟಕ್ಕೆ ಸಿದ್ಧವಿದೆ.

ಅಮಲ್ದಾರಿ, ವಕಾಲತು, ನಕಲಿನ ಬಗ್ಗೆ ನೋಟು, ಲೋಜಮೆಂಟ ಸ್ಕೆಡ್ಯೂಲ, ಪೇಮೆಂಟ್ ಸ್ಕೆಡ್ಯೂಲ, ಜಪ್ತಾ ನೋಟು, ಮೆಮೊ ಒಫ್ ಕೊಸ್ಟ್ಸ್, ಮೆಮೊರಂಡಮ್ ಒಫ್ ಎಪ್ಪಿಯರೆನ್ಸ್, ಏಲಂ ಇಸ್ತಿಹಾರು, ಮಾರಾಟವನು ಕುರಿತು ಇಸ್ತಿಹಾರ, ವಗೈರೆ ಎಲ್ಲಾ ಫೋರ್ಮುಗಳ್ ನಮ್ಮಲ್ಲಿ ದೊರೆಯುತ್ತವೆ.

100 ಫೋರ್ಮುಗಳ ಕ್ರಯ 0—10—0

ಏಲಂ ಇಸ್ತಿಹಾರು, ಮಾರಾಟವನ್ನು ಕುರಿತು ಇಸ್ತಿಹಾರು 1ರ ಕ್ರಯ 0—3—0.

ಶಾರದಾ ಛಾಪಖಾನೆ,

ಕೇರು ಬೀದಿ, ಮಂಗಳೂರು.

ಅಪೂರ್ವ ಸಂದರ್ಭ!

ಉತ್ತಮ ಮಾಲು! ತ್ವರೆ ಮಾಡಿರಿ!! ದರ ಸುಲಭ!!!

ಭಂಗಾರದ ರಿಸ್ಟ್ ವಾಚ್‌ಗಳು ಅರೆವಾಸಿ ಬೆಲೆಗೆ ಕೊಂಚ ಸಮಯದ ವರೆಗೆ
— ಮಾರಲ್ಪಡುವವು. —

ರೂ. 14—0—0ರ ವಾಚು ರೂ. 7—0—0 ಕೊಡಲ್ಪಡುವುದು.



ಈ ವಾಚುಗಳು ಬಲವಾದ ಮತ್ತು ಹೆಸರುಪಟ್ಟ swiss made ಸಾಮಾನುಗಳಿಂದ ಫಿಟ್ ಮಾಡಿರುತ್ತವೆ. ಇವುಗಳ ಆಕಾರವು ಮತ್ತು ಕೆಲಸಗಾರಿಕೆಯು ಬಹು ಚೆನ್ನಾಗಿದೆ. ಇದರ ವಿಷಯ ಎಷ್ಟು ಹೊಗಳಿದರೂ ಸಾಲದು. ಇವುಗಳು ಪವನಿನ ಭಂಗಾರದ ಹಾಗೆ ಮಿಂಚುವವು. ಮತ್ತು ಏನೂ ವ್ಯತ್ಯಾಸವಿಲ್ಲದೆ ಸರಿಯಾದ ಘಂಟೆಯನ್ನು ತೋರಿಸುವವು.

ನಮ್ಮ ವಾಚುಗಳಿಗೆ ನೂರು ವರ್ಷದ ಗ್ಯಾರಂಟಿಯನ್ನು ಕೊಡುವೆವು. ವಿ. ಪಿ. ಪಿ. ಮೂಲಕ ಹಿಂದೂಸ್ತಾನದ ಎಲ್ಲಾ ಕಡೆಗಳಿಗೆ ರವಾನಿಸಬಹುದು. ಚರ್ಮದ ಅಥವಾ ಸಿಲ್ಕ್ ಸ್ಟ್ರಾಪುಗಳು ಉಚಿತ ಕೊಡುವೆವು.

Write to:— SWAN HOUSE,
P. B. 508, P T MADRAS.

18 ಕ್ಯಾರೆಕ್ಟ್ ರೋಲ್ಡ್‌ಗೋಲ್ಡ್ ಭಂಗಾರದ ಕೈಗಡಿಯಾರವನ್ನು
ಕೊಳ್ಳುವವರಿಗೆ

ಮೋಡರ್ನ್ ರೆಗ್ಯುಲೇಟರ್

ಎಂಬ ಗೋಡೆಗೆ ತಗಲಿರುವ ಗಡಿಯಾರವು ಮುಫತ್ತಾಗಿ ಸಿಕ್ಕುವುದು.

ಈ ಕೈಗಡಿಯಾರವು ಭಂಗಾರಕ್ಕೆ ಸರಿಸಮನಾಗಿದೆ. ಖರಾರು ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ 3 ವರ್ಷಗಳ ಗ್ಯಾರಂಟಿ ಕೊಡುವೆವು.

ರೆಗ್ಯುಲೇಟರ್ ಮತ್ತು ಕೈಗಡಿಯಾರ ರೂ.	10—0—0.
ಕೈಗಡಿಯಾರ ಮಾತ್ರ ರೂ.	7—0—0.
ರೆಗ್ಯುಲೇಟರ್ ಗಡಿಯಾರ ರೂ.	5—0—0.

ಕ್ಯಾಪ್ಟನ್ ವಾಚ್ ಕಂಪೆನಿ,
ನಂ. 265 ಮದ್ರಾಸ.

ಅಲೆಕ್ಸ್ ಅಲ್ವಾರಿಸ್

ದಂತವೈದ್ಯರು.

ಫಳ್ನೀರು ರಸ್ತೆ, ಮಂಗಳೂರು.

ಇಲ್ಲಿ ಎಲ್ಲಾ ತರಹ ದಂತ ಚಿಕಿತ್ಸೆಯು ಮಾಡಲ್ಪಡುವುದು.

ದಂತ ಪರೀಕ್ಷೆ ಮಾಫಿ.

ದಕ್ಷಿಣ ಕನ್ನಡ ಜಿಲ್ಲೆಯ

ಪ್ರಾಚೀನ ಇತಿಹಾಸ

450 ಪುಟಗಳು ಕ್ರಯ ರೂ. 2—4—0

ಪುಸ್ತಕಗಳು ಸಿಕ್ಕುವ ವಿಳಾಸ:—
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಶುದ್ಧ ರೋಮದ ಧಾವಳಿಗಳು.

1 ಮಳ ಉದ್ದ 1¼ ಮಳ ಅಗಲ ರೂ. 1½ರಿಂದ 2 ವರೆಗೆ, 5 ಮಳ ಉದ್ದ 1½ ಮಳ ಅಗಲ ರೂ. 1½ ರಿಂದ 9 ವರೆಗೆ, 6 ಮಳ ಉದ್ದ 1½ ಮಳ ಅಗಲ ರೂ. 2½ರಿಂದ 6 ವರೆಗೆ, 8 ಮಳ ಉದ್ದ 2 ಮಳ ಅಗಲ ರೂ. 3½ರಿಂದ 10 ವರೆಗೆ, 12 ಮಳ ಉದ್ದ 2¼ ಮಳ ಅಗಲ ರೂ. 6ರಿಂದ 12 ವರೆಗೆ, 16 ಮಳ ಉದ್ದ 2¼ ಮಳ ಅಗಲ ರೂ. 5 ರಿಂದ 16 ವರೆಗೆ. ಇವುಗಳಲ್ಲದೆ ಶುದ್ಧ ಜರ್ಮನ್ ರೇಷ್ಮೆ ಮಡಿಗಳು, ಜಮಖಾನೆಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಸಾಲಿಗ್ರಾಮ, ಜಾಘಂಟೆ, ಶಂಖ, ಕಾಶ್ಮೀರ್ ದಾಸಿ, ಹಿತ್ತಾಳೆಯ ಆಟದ ಸಾಮಾನುಗಳು, ಫೋಟೋ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಕ್ಯಾಟಲಾಗ್ ಇನಾಂ.

ವಿಳಾಸ—
ಶಿರೋಮಣಿ ಯು. ನಾರಾಯಣಾಚಾರ್ಯ
ಮೆಸ್ತ್ರಿ, ಕಂಪೆನಿ, ಜೌಕಂಬಾ, ಕಾಶೀ ಕ್ಷೇತ್ರ.

ಇನಾಮು! ಇನಾಮು!! ಇನಾಮು!!!

ಮುಖ್ಯವಾಗಿಯೂ ಎಲ್ಲರ ಸುಖಾಭಿವೃದ್ಧಿಯನ್ನು ತಿಳಿಸತಕ್ಕದ್ದಾಗಿಯೂ, ಪ್ರತಿಯೊಂದು ಕುಟುಂಬಕ್ಕೆ ಬೇಕಾದ ಸುಖಾನುಭವಗಳನ್ನು ಓದಿ ತಿಳಿದು ನಡೆದುಕೊಳ್ಳುವದಕ್ಕೂ ಒಂದು ದೇಹದ ಮರ್ಮಶಾಸ್ತ್ರವು ಇರುವುದು. ಅಂಥಾ ಪುಸ್ತಕವು ನಿಮಗೆ ಗೊತ್ತುಂಟೋ?

ಅದೇ—

"ಕಾಮಶಾಸ್ತ್ರವೆಂಬುವುದು"

ಈಗಲೆ ತಯಾರಾಗಿದೆ.

ಸುಪ್ರಸಿದ್ಧವಾದದ್ದು.

ಜರೂರಾಗಿ ಬರೆಯುವಲ್ಲಿ ಅಂಚೆಹಾಸಲು ಇಲ್ಲದೆ ಕಳುಹಿಸುವೆವು.

ಆತಂಕನಿಗ್ರಹ ಔಷಧಾಲಯ,
26 ಮ್ಯಾಡ್ಲೆ, ಮದ್ರಾಸ್.

ಆಯುರ್ವೇದ ಶಾಸ್ತ್ರಿ ಅಷ್ಟಾವಧಾನಿ,
ಕ. ವೇ. ಸುಬ್ಬರಾವ್, ಯು. ಜೆ. ಯ. ಅವರ್ಗಳಿಂದ ತಯಾರಿಸಲ್ಪಟ್ಟದ್ದು.

ಒಂದು ಮಾತ್ರೆ! ಒಂದು ಘಂಟೆಯೊಳಗೆ ಗುಣ!

ಕಾಮಾಮೃತ.

ಈ ಔಷಧವು ಧಾತುಪುಷ್ಟಿಗಾಗಿಯೇ ತಯಾರಿಸಲ್ಪಟ್ಟದ್ದು. ಒಂದು ಮಾತ್ರೆಯನ್ನು ಸೇವಿಸಿದ ಒಂದು ಘಂಟೆಯೊಳಗೆ ಶಕ್ತಿಯನ್ನು ವೃದ್ಧಿಗೊಳಿಸಿ ಎಷ್ಟು ಬಲಹೀನವುಳ್ಳವರನ್ನೂ ಬಲವಂತರನ್ನಾಗಿ ಮಾಡುವದು. ಯಾವ ರೀತಿಯಿಂದಲಾಗಲಿ ಶುಕ್ಲ ನಷ್ಟವಾದಾಗ್ಯೂ ಅಥವಾ ಸ್ವಪ್ನದಲ್ಲಿ ಇಂದ್ರಿಯ ಸ್ಖಲಿತವಾದಾಗ್ಯೂ ಇಲ್ಲವೆ ಮೂತ್ರದೊಂದಿಗೆ ಸೇರಿಯೋ ವ ಮೂತ್ರಚಲನೆಯ ಹಿಂದೋ ಮುಂದೋ ಹೊರಬೀಳುವ ಧಾತುನಷ್ಟವನ್ನಾದರೂ ೩ ದಿವಸಗಳಲ್ಲಿ ಗುಣಪಡಿಸುವದು. ಯಾವ ಬಗೆಯ ನರಗಳ ಬಲಹೀನತೆಯನ್ನಾದರೂ ಹೋಗಲಾಡಿಸುವುದು. ಶಕ್ತಿಯಿಲ್ಲದವರು ಈ ಮದ್ದನ್ನು 20 ದಿನ ಸೇವಿಸಿದಲ್ಲಿ ಶಕ್ತಿವಂತರಾಗಿ ಸಂಸಾರ ಸುಖವನ್ನೂ ಸಂತತಿ ಲಾಭವನ್ನೂ ಹೊಂದುವರು; ಇದು ನಿಶ್ಚಯ. ಪತ್ರವ್ಯವಹಾರವು ರಹಸ್ಯವಾಗಿ ನಡಿಸಲ್ಪಡುವದು. ಕ್ರಯ 20 ಮಾತ್ರೆಗಳ ಡಬ್ಬಿ 1ಕ್ಕೆ ರೂ. 2—0—0. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ ನಡಿಸತಕ್ಕದ್ದು.

ಅಮೃತಾಶ್ರಮ,
28 ಎಲ್ಲೂರು, ಕೃಷ್ಣಾಜಿಲ್ಲಾ.

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ಎಲ್ಲ ವಿದ್ಯಾರ್ಥಿಗಳ ಸಂಗ್ರಹಕ್ಕೆ ಯೋಗ್ಯವಾದ
—: ಪದ್ಯಗ್ರಂಥ: —

ಕನ್ನಡ ಪದ್ಯರತ್ನಾವಳಿ.

(ಪ್ರಥಮ ಭಾಗ)

ಗ್ರಂಥಕರ್ತರು:—ಜಿ. ಎನ್. ಲಕ್ಷ್ಮಣ ಪೈ.

ಮದರಾಸು ವಿದ್ಯಾಇಲಾಖೆಯವರಿಂದ ಕಾಲೇಜುಪಯೋಗಕ್ಕಾಗಿಯೂ ಮುಂಬಯಿ ವಿದ್ಯಾಖಾತೆಯವರಿಂದ ಸೆಕಂಡರಿ ಶಾಲೆಗಳ ಪಠ್ಯಪುಸ್ತಕವಾಗಿಯೂ ಮೈಸೂರು ವಿದ್ಯಾಖಾತೆಯವ ರಿಂದ ಹಾಯ್, ನಾರ್ಮಲ್ ಮತ್ತು ಪ್ರೈಮರಿ ಶಾಲೆಗಳ ವಾಚನ ಪುಸ್ತಕವಾಗಿಯೂ ಮಂಜೂರಾಗಿದೆ.

ಬೆಲೆ: 3½ ಆಣೆ.

ಶಾರದಾ ಛಾಪಖಾನೆ,
ಮಂಗಳೂರು.

Fresh Arrivals

Pear's Solid Brilliantine, Evans Lime juice Glycerine, Tooth powders Rose water, Syrups of all sorts for drinks, Denatured Spirits, etc., etc.

The Mangalore Trading Association,
Car Street, MANGALORE.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರಕಾರದವರ ಉದಾರಾಶ್ರಯದಲ್ಲಿ ಪ್ರತಿ ಭಾನುವಾರವೂ ಪ್ರಕಟವಾಗುವ ಉತ್ತಮತರದ

ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಪರಸ್ಪರ ಸಹಾಯ, ಪೌರಸಾಮಾಜಿಕ ವಿಷಯಗಳು ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನಕೊಡಲ್ಪಡುವುದು. ವಿದ್ವಾಂಸರೂ ತಾವು ಬರೆಯುವ ವಿಚಾರಗಳಲ್ಲಿ ಪೂರ್ಣ ಪರಿಶ್ರಮವುಳ್ಳವರೂ ಆದ ದೊಡ್ಡ ಮನುಷ್ಯರಿಂದ ಲೇಖನಗಳು ಪ್ರತಿ ವಾರದಲ್ಲಿಯೂ ಬರೆಯಲ್ಪಡುವವು. ಇವುಗಳಲ್ಲದೆ ಆಯಾ ವಾರದಲ್ಲಿ ಆಗುವ ಸರಕಾರಿ ಆರ್ಡರುಗಳೂ, ವರ್ತಮಾನಗಳೂ, ಪ್ರಕಟನೆಗಳೂ ಈ ಪತ್ರಿಕೆಯಲ್ಲಿ ಪ್ರಚುರವಾಗುವವು. ಬೆಂಗಳೂರು ನಗರದ ಧಾರಣೆ ವಾಸಿಗಳೂ, ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ, ಪ್ರತಿ ವಾರವೂ ಪ್ರಕಟಿಸಲ್ಪಡುತ್ತವೆ. ಅಧಿಕಾರಿಗಳೂ, ವರ್ತಕರೂ, ಸರ್ವರೂ ಓದತಕ್ಕ ವಾರಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ	ರೂ. 3—0—0
ಇತರರಿಗೆ, ಪರಸ್ಥಳಕ್ಕೆ, ಪೋಸ್ಟೇಜು ಸೇರಿ	„ 2—8—0.
„ ಸ್ಥಳೀಕರಿಗೆ ...	„ 1—8—0.

ಸರಕಾರದಲ್ಲಿಯೂ ಪ್ರಜೆಗಳಲ್ಲಿಯೂ ಈ ಪತ್ರಿಕೆಯು ವಿಶೇಷವಾಗಿ ಪ್ರಚಾರದಲ್ಲಿರುವುದರಿಂದ, ಇದರಲ್ಲಿ ಪ್ರಕಟನೆಗಳನ್ನು ಹಾಕುವವರಿಗೆ ತುಂಬಾ ಅನುಕೂಲ. ಪ್ರಕಟನೆಯ ದರಗಳನ್ನು ಕಳಗೆ ಕಂಡ ವಿಳಾಸಕ್ಕೆ ಬರೆದು ತಿಳಿಯಬಹುದು. ಏಜೆಂಟ್,

ಬಿ. ಹನುಮಂತಯ್ಯಗೌಡ,
ಅರ್ಥಸಾಧಕ ಪತ್ರಿಕೆ,
ಬಸವನಗುಡಿ, ಬೆಂಗಳೂರು ಸಿಟಿ.

Edited, Printed & Published by V. S. Kamath at the M. T. A. SHARADA PRESS, MANGALORE.

Registered No. M. 498

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ | ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೦. ಮಂಗಳೂರು, ತಾರೀಕು ೬ನೇ ಶುಕ್ರವಾರ ಆಗೋಸ್ತು ೧೯೨೬. ಸಂಚಿಕೆ ೩೨.

Applications From Candidates Are Invited

FOR THE FOLLOWING POSTS IN THE BRANCH OF

THE CANARA BANKING CORPORATION, UDIPI, LIMITED.

To be shortly opened at Mangalore.

I.	One Agent on a scale of	Rs.	50—5—100.
II.	„ Clerk	„	30—2—60.
III.	„ Peon	„	12—1—20.
IV.	„ Office Boy	„	6—1—15.

The Agent is expected to furnish a security of Rs. 2000/— TWO THOUSAND.

Candidates having a knowledge of accounts, Banking and good Character will be preferred. The Directors reserve to themselves the right to modify the starting pay of Agent.

Applications shall reach the undersigned with testimonials etc.,
BY THE 7TH AUGUST, 1926.

N. Ananda Rau,
Secretary.

ಸ್ವದೇಶಾಭಿಮಾನಿ.

ಕಳೆದ ೨೦ ವರುಷಗಳಿಂದ ಪ್ರತಿ ಶುಕ್ರವಾರವೂ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುತ್ತಿರುವ ವಾರಪತ್ರಿಕೆ.

ಕರ್ನಾಟಕ ಪ್ರಾಂತದಲ್ಲೆಲ್ಲಾ ಮುಖ್ಯವಾಗಿ ಹೆಚ್ಚಿನ ಚಂದಾದಾರರಿರುವರು.

ವ್ಯಾಪಾರಿಗಳಿಗೆ ತಮ್ಮ ಜಾಹೀರಾತುಗಳನ್ನು ಅತಿ ಸುಲಭ ದರಗಳಲ್ಲಿ ಪ್ರಕಟಿಸುವ ಬಗ್ಗೆ ಅನುಕೂಲವಾದ ವಾರಪತ್ರಿಕೆ.

ಜಾಹೀರಾತಿನ ದರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

ಪ್ರಯಾಣಿಕರಿಗೆ ಮಾಹಿತಿ.

ಮೋಟರ್ ಬಸ್ಸುಗಳು—

ಸರ್ವಿಸಿನ ಹೆಸರು.	ಹೊರಡುವ ಸ್ಥಳ.	ಹೊರಡುವ ಘಂಟೆ.
ಜನರಲ್	ಕಾರ್ಕಳ—ಆಗುಂಬೆ—ತೀರ್ಥಹಳ್ಳಿ.	ಪೂ. 6½
ಸಿ. ಪಿ. ಸಿ.	ಉಡುಪಿ—ಕುಂದಾಪುರ—ಬೈಂದೂರು	„ 6½, 9½
	ಉಡುಪಿ.	ಮ. 12½
	ಮುಲ್ಕಿ ವರೆಗೆ ಮಾತ್ರ	ಅ. 3½
	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ.	ಪೂ. 7, ಮ. 1
	ಕಾರ್ಕಳ—ಬೆಳ್ಮಣ್‌ರಿಂದ.	
	ಬಂಟ್ವಾಳಕ್ಕೆ ಮಾತ್ರ	„ 10½, ಅ. 4½
	ಪುತ್ತೂರು—ಸಂಪಾಜೆ—ಮಡಿಕೇರಿ	„ 7½
	ಪುತ್ತೂರು.	ಪೂ. 10½ ಅ. 2
ಕಾರ್ಕಳ	ಕಾರ್ಕಳ—ಉಡುಪಿ—ಕುಂದಾಪುರ.	ಪೂ. 6
	ಕಾರ್ಕಳಕ್ಕೆ ಮಾತ್ರ.	ಅ. 1
ಹನುಮಾನ್	ಕಾರ್ಕಳ—ಉಡುಪಿ—ಕುಂದಾಪುರ.	ಪೂ. 7
	ಕಾರ್ಕಳಕ್ಕೆ ಮಾತ್ರ.	ಮ. 12
ಕಂಕರ್ ವಿಟ್ಠಲ್	ಪುತ್ತೂರು—ಮಡಿಕೇರಿಗೆ	ಪೂ. 7
	ಪುತ್ತೂರು—ಉಪ್ಪಿನಂಗಡಿ	ಅ. 1½
	ವಿಟ್ಲಕ್ಕೆ	ಪೂ. 8, ಅ. 2½
	ಉಡುಪಿ	ಪೂ. 7½ ಅ. 1½
ಸ್ಟಾರ್	ಮುಲ್ಕಿ—ಉಡುಪಿ.	„ 7, ಮ. 1
	ಬಂಟ್ವಾಳ	„ 10½, ಅ. 4½
ಇಂಡಿಯನ್	ಮುಲ್ಕಿ—ಉಡುಪಿ.	„ 6½, ಮ. 12½
ಪೋರ್ಟ್ಯುಬರ್	ಬಂಟ್ವಾಳ—ಬೆಳ್ತಂಗಡಿ—ಚಾರ್ಮಾಡಿ	ಪೂ. 7½ ಮ. 12½

☞ ಮುಲ್ಕಿ, ಉಡುಪಿ, ಕುಂದಾಪುರ, ಕಾರ್ಕಳಕ್ಕೆ ಹೋಗುವ ಬಸ್ಸುಗಳು ರಥಬೀದಿಯಿಂದಲೂ, ಬಂಟ್ವಾಳ, ಪುತ್ತೂರು, ಮಡಿಕೇರಿ ಮಾರ್ಗವಾಗಿ ಹೋಗುವ ಬಸ್ಸುಗಳು ಹಂಪನಕಟ್ಟೆಯಿಂದಲೂ ಹೊರಡುವವು.

ರೈಲುಮಾರ್ಗವಾಗಿ—

ಗಾಡಿ	ಹೊರಡುವ ವೇಳೆ	ಮುಟ್ಟುವ ವೇಳೆ
ಮೈಲ್	ಬೆಳಿಗ್ಗೆ 8-5	ಸಂಜೆ 5-25
ಲೋಕಲ್	„ 9-45	ಸಂಜೆ 10-40
[illegible]	[illegible] 12-30	[illegible]
[illegible]	ಸಂಜೆ 5-40	[illegible] 9-2

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು.

ಅಂಥಾ ಬೇನೆಯನ್ನು ನಿವಾರಣೆಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೆ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ತಿವಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ಕ್ಕೆ 10 ಆಣೆ. ಡಜನ್ 1ಕ್ಕೆ ರೂ. 6—4—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಕುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ 1ರ ರೂ. 0—9—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧವಾಗುತ್ತವೆ, ರಕ್ತ ಬರುವುದು ನಿಲ್ಲುತ್ತದೆ, ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ 1ರ ಕ್ರಯ 3 ಆಣೆ.

ಅಮೃತಾಂಜನ ಡಿಪೊ.

6, 7 [illegible] ಸ್ಟ್ರೀಟ್, 109 ಫ್ರೇಯರ್ ರೋಡ್
[illegible], ಮದ್ರಾಸು: ಮುಂಬಯಿ.

ಮಂಗಳೂರಲ್ಲಿ [illegible] ಮಾರ್ಕೆಟ್, ಹಂಪನಕಟ್ಟೆ ಇವರಲ್ಲಿಯೂ ದೊರೆಕುವುದು.

ROLL No. 8

CONTD

FROM
1924

TO 1926

CONTD IN NEXT
REEL No. 9

P.K.G
20.3.80

SWADESHABHIMANI
KANNADA WEEKLY
PUBLISHED FROM
MANGALORE

MICROFILMED BY
NEHRU MEMORIAL MUSEUM
AND LIBRARY
TEEN MURTI HOUSE
NEW DELHI